FLASH NO:1







Licenced to Post
Reg. M

1952 Jan 30 Dec

ಸಂಪಾದಕರು

ಸಂಪುಟ ೩೦ ... ೩೦

ಕೊಡಗು ಸ ... ನ್.
ಸಿ. ೨

ಪ್ರಕಟಿಸಿದ ಸಂದೇಶ.

೧೯೫೨ನೇ ಇಸವಿ ಜನವರಿ ತಿಂಗಳ ಮೂರನೇ ವಾರದಲ್ಲಿ ಪ್ರಾರಂಭವಾಗಲಿರುವ ಸಾರ್ವತ್ರಿಕ ಚುನಾವಣೆಯ ವಿಚಾರದಲ್ಲಿ ಜನಸಾಮಾನ್ಯರೆಲ್ಲಾ ಅವಶ್ಯವಾದ ತಿಳುವಳಿಕೆಯನ್ನು ಹೊಂದಲು ನಾನು ದೇಶದ ಅನೇಕ ಭಾಗಗಳಲ್ಲಿ ನಡೆಸಿದ ಆ ಅಳು ಚುನಾವಣೆಗಳಲ್ಲಿ ವಿವೇಚಿಸುತ್ತಿರುವಂತೆ, ಈ ಮಹಾ ಚುನಾವಣೆಗಾಗಿ ಇರುವ ಏರ್ಪಾಡುಗಳನ್ನು ಸಂಕ್ಷಿಪ್ತವಾಗಿ ಪ್ರಕಟಿಸುತ್ತೇನೆ.

ಈಗಲೇ ಪ್ರತಿಯೊಂದು ಕ್ಷೇತ್ರದಲ್ಲಿಯೂ ಅಲ್ಲಿಯ ಉಮೇದುವಾರರುಗಳು ಅವರ ಅರ್ಜಿಗಳನ್ನು ಸಲ್ಲಿಸಿ, ಅವುಗಳೆಲ್ಲಾ ರಿಟರ್ನಿಂಗ್ ಆಫೀಸರುಗಳಿಂದ ವಿಮರ್ಶಿಸಲ್ಪಟ್ಟು, ಕೊನೆಯದಾಗಿ ಯಾವ ಕ್ಷೇತ್ರದಿಂದ ಯಾರು ಸ್ಪರ್ಧಿಸುತ್ತಿದ್ದಾರೆಂಬ ವಿಚಾರ ನಿರ್ಣಯವಾಗಿ ಹೆಸರುಗಳೆಲ್ಲಾ ಪ್ರಕಟವಾಗಿವೆ.

ಪ್ರತಿಯೊಂದು ಚುನಾವಣೆ ಕ್ಷೇತ್ರದಲ್ಲಿಯೂ ಸಾಮಾನ್ಯವಾಗಿ ೧೦೦೦ ವೋಟರುಗಳಿಗೆ ಒಂದರಂತೆ ಪೋಲಿಂಗ್ ಸ್ಟೇಷನುಗಳನ್ನು ಏರ್ಪಾಡು ಮಾಡಬೇಕೆಂದು ಹಿಂದೆಯೇ ತೀರ್ಮಾನವಾಗಿತ್ತಷ್ಟೆ. ಆ ಸ್ಟೇಷನುಗಳನ್ನು ಎಲ್ಲೆಲ್ಲಿ ಸರ್ಕಾರದವರು ಏರ್ಪಾಡು ಮಾಡುವರೆಂಬುದು ಎಲ್ಲರಿಗೂ ತಿಳಿಯಲು ಈ ಪಟ್ಟಿಗಳನ್ನು ತಯಾರಿಸಿ ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಿಸಲಾಗಿತ್ತು. ಇದರಲ್ಲಿ ಆಗಬೇಕಾಗಿರುವ ಮಾರ್ಪಾಡುಗಳ ವಿಚಾರದಲ್ಲಿ ಬಂದಿರುವ ಸಲಹೆಗಳನ್ನೆಲ್ಲಾ ಪರಿಶೀಲಿಸಿ ಈ ಪೋಲಿಂಗ್ ಸ್ಟೇಷನುಗಳ ಪಟ್ಟಿಗಳನ್ನು ಅಂತ್ಯವಾಗಿ ನಿರ್ಣಯಿಸಲಾಗಿ ಆ ಪಟ್ಟಿಗಳನ್ನು ಭಾರತದ ಎಲೆಕ್ಷನ್ ಕಮಿಷನರ ಒಪ್ಪಿಗೆಯನ್ನು ಪಡೆದು ಈ ... ಪ್ರಕಟಿಸಲಾಗಿದೆ. ಕೊಡಗಿನ ... ೧೫೧ ಪೋಲಿಂಗ್ ಸ್ಟೇಷನು ... ಏರ್ಪಾಡು ಮಾಡಲಾಗಿದೆ. ... ಮಂದಿ ವೋಟರುಗಳಿಗೆ ಹೆಚ್ಚು ... ಲಿಂಗ್ ಸ್ಟೇಷನ್‌ಗಳಲ್ಲಿ ಹೆಚ್ಚಿನ ... ಗಳನ್ನು ಒದಗಿಸಿಕೊಡಲಾಗಿ ಒ ... ದಲ್ಲಿ ವಿಧಾನ ಸಭೆಗೆ (ಎಸೆಂಬ್ಲಿಗೆ) ೧೫೧ ಮತ್ತು ಲೋಕಸಭೆಗೆ (ಪಾರ್ಲಿಮೆಂಟಿಗೆ) ೧೫೧ ಬೂತುಗಳಂತೆ ನಿರ್ಧರಿಸಲಾಗಿದೆ. ಇಷ್ಟು ಸ್ಟೇಷನ್ನುಗಳಲ್ಲಿಯೂ ಚುನಾವಣೆ ನಡೆಯಲಿದೆ.

ಈ ಸ್ಟೇಷನುಗಳಲ್ಲಿ ಚುನಾವಣೆಯನ್ನು ಕಾನೂನು ಪ್ರಕಾರ ನಡೆಸಲು ಒಬ್ಬ ಪ್ರಿಸೈಡಿಂಗ್ ಆಫೀಸರು, ಸಂಸ್ಥಾನದ ವಿಧಾನ ಸಭೆಗೆ ಇಬ್ಬರು ಮತ್ತು ಭಾರತದ ಲೋಕಸಭೆಗೆ ಒಬ್ಬರಂತೆ ಮೂವರು ಪೋಲಿಂಗ್ ಆಫೀಸರುಗಳು, ಮಹಿಳಾ ವೋಟರುಗಳಿಗೆ ಅವಶ್ಯವಾದ ಸಹಾಯವನ್ನು ಕೊಡಲು ಉಚಿತ ತೋರಿದ ಸ್ಥಳಗಳಲ್ಲಿ ಒಬ್ಬ ಲೇಡಿ ಅಸಿಸ್ಟೆಂಟ್ ಮತ್ತು ತಕ್ಕ ಪೋಲಿಸ್ ಬಂದೋಬಸ್ತು ಮತ್ತು ಅನೆ ಕರಗಳ ಆಫೀಸರುಗಳು ಇವರುಗಳನ್ನು ಒದಗಿಸಿ, ಈ ಅಧಿಕಾರಿಗಳನ್ನೆಲ್ಲಾ ಈಗಾಗಲೇ ನಿಶ್ಚಯಿಸಲಾಗಿದೆ. ದೇಶದ ಸಂಪೂರ್ಣ ಚುನಾವಣೆಗಳನ್ನು ಒಂದೇ ದಿನ ನಡೆಸಲು ಬೇಕಾದ ಅಧಿಕಾರಿಗಳ ಸಿಬ್ಬಂದಿಯನ್ನು ಒದಗಿಸಲು ಸರ್ಕಾರಕ್ಕೆ ಸಾಧ್ಯವೇ ಇಲ್ಲದಿರುವದರಿಂದ ಕೊಡಗಿನಲ್ಲಿ ಈ ಮಹಾ ಚುನಾವಣೆಯು ಎರಡು ದಿನ ಜರಗುವಂತೆ ನಿಶ್ಚಯಿಸಲಾಗಿದೆ. ಅಂದರೆ ೧೯೫೨ನೇ ಜನವರಿ ೧೮ನೇ ತಾರೀಕಿನಲ್ಲಿ ಉತ್ತರ ಕೊಡಗಿನ ಎಂಟು ಚುನಾವಣಾ ಕ್ಷೇತ್ರಗಳ ಎಲ್ಲಾ ಪೋಲಿಂಗ್ ಸ್ಟೇಷನುಗಳಲ್ಲೂ ಮತ್ತು ಮೂರು ದಿನ ಬಿಟ್ಟು ೨೨ನೇ ತಾರೀಕಿನಲ್ಲಿ ದಕ್ಷಿಣ ಕೊಡಗಿನ ಚುನಾವಣಾ ಕ್ಷೇತ್ರಗಳ ಎಲ್ಲಾ ಪೋಲಿಂಗ್ ಸ್ಟೇಷನುಗಳಲ್ಲೂ ನಡೆಸುವಂತೆ ಪ್ರಕಟಿಸಲಾಗಿದೆ. ಈಗ ನೇಮಕ ಮಾಡಲ್ಪಟ್ಟಿರುವ ಪೋಲಿಂಗ್ ಪಾರ್ಟಿಯವರು ಉತ್ತರ ಕೊಡಗಿನ ಎಂಟು ಚುನಾವಣಾ ಎಲ್ಲಾ ಪೋಲಿಂಗ್ ಸ್ಟೇಷನುಗಳಲ್ಲಿಯೂ ೧೮-೧-೫೨ ನೆ ತಾರೀಕಿನಲ್ಲಿ ಚುನಾವಣೆಯನ್ನು ಮುಗಿಸಿಕೊಂಡು ದಕ್ಷಿಣ ಕೊಡಗು ತಾಲೋಕಿನ ಹತ್ತು ಚುನಾವಣೆ ಕ್ಷೇತ್ರಗಳ ಸ್ಟೇಷನುಗಳಿಗೆ ಪ್ರಯಾಣ ಮಾಡಿ ಆ ವೇಳೆ ಅಲ್ಲಿನ ಚುನಾವಣೆಗಳನ್ನು ೨೨-೧-೫೨ರಲ್ಲಿ ನಡೆಸುತ್ತಾರೆ. ಈ ಎಲೆಕ್ಷನ್ ಪ್ರೋಗ್ರಾಂ ಆಗಲೇ ಪ್ರಕಟವಾಗಿ ಎಲ್ಲರಿಗೂ ಗೊತ್ತಾಗಿದೆ. ಹೀಗೆ ಚುನಾವಣೆಗಳ ಕೆಲಸವನ್ನು ವಿಭಾಗಿಸಿಕೊಂಡರೂ ಕೂಡ ೭೫ ಜನ ಪ್ರಿಸೈಡಿಂಗ್ ಆಫೀಸರುಗಳೂ ೪೦೦ ಜನ ಪೋಲಿಂಗ್ ಆಫೀಸರುಗಳೂ ಮತ್ತು ಇವರಿಗೆ ಬೇಕಾದ ಇತರ ಸಿಬ್ಬಂದಿಯೂ ಕೂಡ ಅಗತ್ಯವಾಗಿ ಬೇಕಾಗುತ್ತದೆ. ಇಷ್ಟು ಜನ ಅಧಿಕಾರಿಗಳನ್ನೂ ಮತ್ತು ಸಿಬ್ಬಂದಿಯನ್ನೂ ಈಗ ಒದಗಿಸಲಾಗಿದೆ.

ಚುನಾವಣೆಯು ನಿಗದಿಯಾಗಿರುವ ದಿನಗಳಲ್ಲಿ ಬೆಳಿಗ್ಗೆ ೭-೩೦ರಿಂದ ೧೨-೩೦ರ ವರೆಗೂ ಮತ್ತು ಮಧ್ಯಾಹ್ನ ೧ರಿಂದ ೪-೩೦ರ ವರೆಗೂ ನಡೆಯುತ್ತದೆ.

ಪೋಲಿಂಗ್ ಸ್ಟೇಷನುಗಳಲ್ಲಿ ಆಯಾ ಕ್ಷೇತ್ರದಲ್ಲಿ ಚುನಾವಣೆಗಾಗಿ ಸ್ಪರ್ಧಿಸಿರುವ ಪ್ರತಿಯೊಬ್ಬ ಉಮೇದುವಾರರಿಗೂ ಒಂದೊಂದು ಪ್ರತ್ಯೇಕವಾದ ಪೆಟ್ಟಿಗೆಯನ್ನು ಇಡಲಾಗುತ್ತದೆ. ಲೋಕಸಭೆಯ ಉಮೇದುವಾರರಿಗೆ ಹಸುರು ಬಣ್ಣದ ಪೆಟ್ಟಿಗೆಯನ್ನೂ ವಿಧಾನ ಸಭೆಯ ಉಮೇದುವಾರರಿಗೆ ಚಾಕೊಲೇಟ್ ಬಣ್ಣದ ಪೆಟ್ಟಿಗೆಯನ್ನೂ ಇಡಲಾಗುತ್ತದೆ. ಈ ಪೆಟ್ಟಿಗೆಗಳ ಮೇಲೆ ಉಮೇದುವಾರರ ಹೆಸರನ್ನು ಚೆನ್ನಾಗಿ ಕಾಣುವಂತೆ ಬರೆದಿರುವದಲ್ಲದೆ ಅನಕ್ಷರಸ್ಥರಿಗೂ ಕೂಡ ಯಾವ ಪೆಟ್ಟಿಗೆ ಯಾರದೆಂದು ತಿಳಿಯಲು ಅನುಕೂಲವಾಗುವಂತೆ ಆಯಾ ಉಮೇದುವಾರರ ಚಿಹ್ನೆಯನ್ನು ಅಂಟಿಸಿರುತ್ತಾರೆ. ಅಲ್ಲದೆ ಪೋಲಿಂಗ್ ಸ್ಟೇಷನಿನ ಬಾಗಿಲಲ್ಲಿಯೇ ಉಮೇದುವಾರರುಗಳ ಪಟ್ಟಿ ಮತ್ತು ಅವರ ಚಿಹ್ನೆಯನ್ನು ತೋರಿಸುವ ಪಟವನ್ನು ಹಾಕಿರುತ್ತದೆ. ಓದಲು ಬಾರದಿರುವವರು ಸ್ಟೇಷನಿನ ಅಧಿಕಾರಿಗಳಿಂದಾಗಲೀ ಬೇರೆ ಯಾರಿಂದಾಗಲೀ ಉಮೇದುವಾರರ ಚಿಹ್ನೆಗಳ ವಿಚಾರವಾಗಿ ಬೇಕಾದ ತಿಳುವಳಿಕೆಯನ್ನು ಪಡೆಯಬಹುದು.

ಚುನಾವಣೆಯ ದಿವಸ ಓಟರುಗಳ ಪಟ್ಟಿಯಲ್ಲಿರುವ ಪ್ರತಿಯೊಬ್ಬರನ್ನೂ ಗುರ್ತಿಸಿ ಅವರಿಗೆ ಬ್ಯಾಲೆಟ್ ಪೇಪರನ್ನು ಪಡೆಯಲು ಗುರ್ತಿನ ಚೀಟಿಯನ್ನು ಕೊಡುವದಕ್ಕಾಗಿ ಪೋಲಿಂಗ್ ಸ್ಟೇಷನ್ನಿನ ಬಳಿ ಆ ಸ್ಟೇಷನ್ನಿಗೆ ಸಂಬಂಧಪಟ್ಟ ಎಲ್ಲ ಹಳ್ಳಿಗಳ ಪಟೇಲರುಗಳೂ ಹಾಜರಿರುತ್ತಾರೆ. ಗುರುತಿನ ಚೀಟಿಯನ್ನು ಕೊಡುವ ಬಗ್ಗೆ ಒಬ್ಬ ಆಫೀಸರು ಕೂಡ ನೇಮಕವಾಗಿರುತ್ತಾರೆ. ಅವರಿಂದ ಈ ಗುರುತಿನ ಚೀಟಿಯನ್ನು ಪಡೆದು ಸ್ಟೇಷನ್ನಿನ ಒಳಕ್ಕೆ ಹೋಗಿ ಅದನ್ನು ವಿಧಾನ ಸಭೆಯ ಪ್ರಥಮ ಪೋಲಿಂಗ್ ಆಫೀಸರಿಗೆ ತೋರಿಸಬೇಕು. ಅವರು ನಿಮ್ಮ ಹೆಸರನ್ನು ಗುರುತು ಚೀಟಿಯ ಆಧಾರದಿಂದ ತಮ್ಮ ಹಸ್ತದಲ್ಲಿರುವ ಮತದಾರರ ಪಟ್ಟಿಯಲ್ಲಿ ಜಾಗ್ರತೆ ಕಂಡು ಹಿಡಿದು ನಿಮ್ಮ ಹೆಸರು ಮತ್ತು ಸಂಪೂರ್ಣ ವಿವರವನ್ನು ಗಟ್ಟಿಯಾಗಿ ಓದುತ್ತಾರೆ. ಅನಂತರ ಆ ಓಟರನ ಎಡಗೈ ತರ್ಜನಿಯ ಮೇಲೆ ೧ ವಾರದ ವರೆಗೆ ಅಳಿಸಲಾರದ ಒಂದು ತರಹ ಕಪ್ಪು ಮಸಿಯಿಂದ ಗುರುತು ಮಾಡುವರು. ಒಂದು ಸಾರಿ ಒಂದು ಕ್ಷೇತ್ರದಲ್ಲಿ ಓಟು ಮಾಡಿದವರು ಬೇರೆ ಊರಿಗೆ ಹೋಗಿ ಅಲ್ಲಿ ಬೇರೆ ಹೆಸರಿನಿಂದ ಓಟಿಗೆ ಅವಕಾಶವಿಲ್ಲದೆ ಇರಲೆಂಬುದೇ ಈ ಗುರುತನ್ನು ಮಾಡುವ ಉದ್ದೇಶ. ಅಲ್ಲಿಂದ ಅವರ ಜತೆಯಲ್ಲಿ ಕುಳಿತ ವಿಧಾನ ಸಭೆಯ ಎರಡನೇ ಪೋಲಿಂಗ್ ಆಫೀಸರ ಬಳಿ ವಿಧಾನ ಬ್ಯಾಲೆಟ್ ಪೇಪರನ್ನು ಪಡೆಯಬೇಕು. ಈ ಬ್ಯಾಲೆಟ್ ಪೇಪರನ್ನು ತೆಗೆದುಕೊಂಡು ವಿಧಾನ ಸಭೆಯ ಪೋಲಿಂಗ್ ಕೊಠಡಿ ಬಳಿ ಹೋಗಿ ವಿಧಾನ ಸಭೆಗೆ ಸ್ಪರ್ಧಿಸಿರುವ ಉಮೇದುವಾರರ ವ್ಯಕ್ತಿಯಾರಿಗೆ ನಿಮ್ಮ ವೋಟನ್ನು ಕೊಡಬೇಕೆಂದು ಅಭಿಲಾಷೆಯಿರುವುದೋ ಅವರ ಪೆಟ್ಟಿಗೆಯಲ್ಲಿ ಬ್ಯಾಲೆಟ್ ಪೇಪರನ್ನು ಹಾಕಬೇಕು. ಈ ಸಂದರ್ಭದಲ್ಲಿ ಎಲ್ಲರೂ ಹುಷಾರಾಗಿ ಗಮನಿಸಬೇಕಾದ ಒಂದೆರಡು ಅಂಶಗಳಿವೆ. ಬ್ಯಾಲೆಟ್ ಪೆಟ್ಟಿಗೆಯಲ್ಲಿ ಬ್ಯಾಲೆಟ್ ಪೇಪರನ್ನು ಮಡಚದೆಯೂ ಮತ್ತು ಪೆಟ್ಟಿಗೆಯೊಳಗೆ ಪೂರ್ತಿಯಾಗಿ ಹೋಗುವಂತೆಯೂ ಹಾಕಬೇಕು. ಇದನ್ನು ಒಳಕ್ಕೆ ಹಾಕುವುದಕ್ಕಾಗಿ ಮಾಡಿರುವ ತೂತು ಚನ್ನಾಗಿ ಕಾಣಲೆಂದು ಅದರ ಸುತ್ತಲೂ ಬಿಳಿಯ ಬಣ್ಣವನ್ನು ಬಳಿಯಲಾಗಿದೆ. ಈ ಜಾಗ ಇನ್ನೂ ಚೆನ್ನಾಗಿ ಗೊತ್ತಾಗಲೆಂಬ ಉದ್ದೇಶದಿಂದ ಗುರುತಿನ ಚೀಟಿ ಕೊಡುವ ಆಫೀಸರವರ ಬಳಿ ಎಲ್ಲರೂ ನೋಡಿ ತಿಳಿದುಕೊಳ್ಳಲು ಒಂದು ಖಾಲಿ ಬ್ಯಾಲೆಟ್ ಪೆಟ್ಟಿಗೆಯನ್ನು ಆದರ್ಶಕ್ಕಾಗಿ ಇಟ್ಟಿರುತ್ತದೆ. ಇದನ್ನು ನೋಡಿ ಈ ಪೆಟ್ಟಿಗೆಯ ವಿಚಾರವನ್ನೆಲ್ಲಾ ತಿಳಿದುಕೊಳ್ಳಬಹುದು. ಈ ರೀತಿ ವಿಧಾನ ಸಭೆಯ ವೋಟಿಂಗನ್ನು ಮುಗಿಸಿ ಪೋಲಿಂಗ್ ಕೊಟ

ಕೊಡಗಿನ ಮತದಾರರಲ್ಲಿ ವಿನಂತಿ.

ಮುಂಬರುವ ಕೇಂದ್ರ ಜನತಾ (ಪಾರ್ಲಿಮೆಂಟ್) ಸಭೆಗೆ ಪ್ರತ್ಯೇಕ ಪಕ್ಷದ ಪರ ನಾನೊಬ್ಬ ಉಮೇದುವಾರನಾಗಿ ನಿಂತಿರುವೆನು. ಕೊಡಗನ್ನು ಪ್ರತ್ಯೇಕವಾಗಿ ಇಟ್ಟುಕೊಂಡು ಈಗ ದೊರೆತಿರುವ ಜವಾಬ್ದಾರಿ ಸರಕಾರವನ್ನು ಇಲ್ಲಿಯ ಸಮಸ್ತ ಜನರ ಹಿತಕ್ಕಾಗಿ ಜಯಪ್ರದವಾಗಿ ನಡೆಸುವ ಸಂಪೂರ್ಣ ವಿಶ್ವಾಸವಿರುವ ನನಗೆ ಕೊಡಗಿನ ಓಟರುಗಳೆಲ್ಲರು ತಮ್ಮ ಅಮೂಲ್ಯವಾದ ಓಟನ್ನು ಕೊಟ್ಟು ಜಯಶೀಲನಾಗಿ ಮಾಡಬೇಕಾಗಿ ವಿನಂತಿ. ನನ್ನ ಚುನಾವಣಾ ನಿಶ್ಚೆ ತಕ್ಕಡಿಯಾಗಿದೆ.

ಕೆ. ಟಿ. ಉತ್ತಪ್ಪ.

Licence No. 60.
Licenced to Post without Prepayment

Reg. No. M. 1680.
'KODAGU' MERCARA. (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦ | ತಾರೀಕು ೪-೧-೧೯೫೨ನೇ ಶುಕ್ರವಾರ | ಸಂಚಿಕೆ ೩೦

ಕೊಡಗು ಸರಕಾರದ ಇಲೆಕ್ಟರಲ್ ಆಫೀಸರಾದ ಶ್ರೀ ಎನ್. ಸಿ. ಸುಬ್ಬಯ್ಯ ಬಿ. ಎ., ಅವರು ಕೊಡಗಿನ ಸಾರ್ವತ್ರಿಕ ಚುನಾವಣೆಯು ಬಗ್ಗೆ

ಪ್ರಕಟಿಸಿದ ಸಂದೇಶ.

೧೯೫೨ನೇ ಇಸವಿ ಜನವರಿ ತಿಂಗಳ ಮೂರನೇ ವಾರದಲ್ಲಿ ಪ್ರಾರಂಭವಾಗಲಿರುವ ಸಾರ್ವತ್ರಿಕ ಚುನಾವಣೆಯ ವಿಚಾರದಲ್ಲಿ ಜನಸಾಮಾನ್ಯರೆಲ್ಲಾ ಅವಶ್ಯವಾದ ತಿಳುವಳಿಕೆಯನ್ನು ಹೊಂದಲು ನಾನು ದೇಶದ ಅನೇಕ ಭಾಗಗಳಲ್ಲಿ ನಡೆಸಿದ ಆ ಕಾಲದ ಚುನಾವಣೆಗಳಲ್ಲಿ ವಿವರಿಸುತ್ತಿರುವಂತೆ, ಈ ಮಹಾ ಚುನಾವಣೆಗಾಗಿ ... ರುವ ಏರ್ಪಾಡುಗಳನ್ನು ಸಂಕ್ಷಿಪ್ತವಾಗಿ ಪ್ರಕಟಿಸುತ್ತೇನೆ

ಈಗಲೇ ಪ್ರತಿಯೊಂದು ಕ್ಷೇತ್ರದಲ್ಲಿಯೂ ಅಲ್ಲಿಯ ಉಮೇದುವಾರರುಗಳು ಅವರ ಅರ್ಜಿಗಳನ್ನು ಸಲ್ಲಿಸಿ, ಅವುಗಳೆಲ್ಲಾ ರಿಟರ್ನಿಂಗ್ ಆಫೀಸರುಗಳಿಂದ ವಿಮರ್ಶಿಸಲ್ಪಟ್ಟು, ಕೊನೆಯದಾಗಿ ಯಾವ ಕ್ಷೇತ್ರದಿಂದ ಯಾರು ಸ್ಪರ್ಧಿಸುತ್ತಿದ್ದಾರೆಂಬ ವಿಚಾರ ನಿರ್ಣಯವಾಗಿ ಹೆಸರುಗಳೆಲ್ಲಾ ಪ್ರಕಟವಾಗಿವೆ.

ಪ್ರತಿಯೊಂದು ಚುನಾವಣೆ ಕ್ಷೇತ್ರದಲ್ಲಿಯೂ ಸಾಮಾನ್ಯವಾಗಿ ೧೦೦೦ ವೋಟರುಗಳಿಗೆ ಒಂದರಂತೆ ಪೋಲಿಂಗ್ ಸ್ಟೇಷನುಗಳನ್ನು ಏರ್ಪಾಡು ಮಾಡಬೇಕೆಂಬ ಸೂಚನೆಯೇ ಕೇಂದ್ರ ಸರ್ಕಾರವಾಗಿತ್ತಷ್ಟೆ. ಆ ಸ್ಟೇಷನುಗಳನ್ನು ಎಲ್ಲೆಲ್ಲಿ ಸರ್ಕಾರದವರು ಏರ್ಪಾಡು ಮಾಡುವರೆಂಬುದು ಎಲ್ಲರಿಗೂ ತಿಳಿಯಲು ಈ ಪಟ್ಟಿಗಳನ್ನು ತಯಾರಿಸಿ ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಿಸಲಾಗಿತ್ತು. ಇದರಲ್ಲಿ ಆಗಬೇಕಾಗಿರುವ ಮಾರ್ಪಾಡುಗಳ ವಿಚಾರದಲ್ಲಿ ಬಂದಿರುವ ಸಲಹೆಗಳನ್ನೆಲ್ಲಾ ಪರಿಶೀಲಿಸಿ ಈ ಪೋಲಿಂಗ್ ಸ್ಟೇಷನುಗಳ ಪಟ್ಟಿಗಳನ್ನು ಅಖೈರಾಗಿ ನಿರ್ಣಯಿಸಲಾಗಿ ಆ ಪಟ್ಟಿಗಳನ್ನು ಭಾರತದ ಎಲೆಕ್ಷನ್ ಕಮಿಷನರ ಒಪ್ಪಿಗೆಯನ್ನು ಪಡೆದು ಈಗ ... ಪ್ರಕಟಿಸಲಾಗಿದೆ. ಕೊಡಗಿನಲ್ಲಿ ೧೯೩ ಪೋಲಿಂಗ್ ಸ್ಟೇಷನುಗಳನ್ನು ಏರ್ಪಾಡು ಮಾಡಲಾಗಿದೆ. ... ಹೆಂಗಸು ವೋಟರುಗಳಿಗೆ ಹೆಚ್ಚು ... ಲಿಂಗ್ ಸ್ಟೇಷನ್‌ಗಳಲ್ಲಿ ಹೆಚ್ಚಿನ ... ಗಳನ್ನು ಒದಗಿಸಿಕೊಡಲಾಗಿ ಒ... ದಲ್ಲಿ ವಿಧಾನ ಸಭೆಗೆ (ಎಸೆಂಬ್ಲಿಗೆ) ೧೨ ಮತ್ತು ಲೋಕಸಭೆಗೆ (ಪಾರ್ಲಿಮೆಂಟಿಗೆ) ೧೨ ಮೆಂಬರುಗಳಂತೆ ನಿರ್ಧರಿಸಲಾಗಿದೆ ಇಷ್ಟು ಸ್ಟೇಷನ್ನುಗಳಲ್ಲಿಯೂ ಚುನಾವಣೆ ನಡೆಯಲಿದೆ.

ಈ ಸ್ಟೇಷನುಗಳಲ್ಲಿ ಚುನಾವಣೆಯನ್ನು ಕಾನೂನು ಪ್ರಕಾರ ನಡೆಸಲು ಒಬ್ಬ ಪ್ರಿಸೈಡಿಂಗ್ ಆಫೀಸರು, ಸಂಸ್ಥಾನದ ವಿಧಾನ ಸಭೆಗೆ ಇಬ್ಬರು ಮತ್ತು ಭಾರತದ ಲೋಕಸಭೆಗೆ ಒಬ್ಬರಂತೆ ಮೂವರು ಪೋಲಿಂಗ್ ಆಫೀಸರುಗಳು, ಮಹಿಳಾ ವೋಟರುಗಳಿಗೆ ಆವಶ್ಯವಾದ ಸಹಾಯವನ್ನು ಕೊಡಲು ಉಚಿತ ತೋರಿದ ಸ್ಥಳಗಳಲ್ಲಿ ಒಬ್ಬ ಲೇಡಿ ಅಸಿಸ್ಟೆಂಟ್ ಮತ್ತು ತಕ್ಕ ಪೋಲಿಸ್ ಬಂದೋಬಸ್ತು ಮತ್ತು ಇನ್ನಿತರ ಆಫೀಸರುಗಳು ಇವರುಗಳನ್ನು ಒದಗಿಸಿ, ಈ ಅಧಿಕಾರಿಗಳನ್ನೆಲ್ಲಾ ಈಗಾಗಲೇ ನಿಶ್ಚಯಿಸಲಾಗಿದೆ. ದೇಶದ ಸಂಪೂರ್ಣ ಚುನಾವಣೆಗಳನ್ನು ಒಂದೇ ದಿನ ನಡೆಸಲು ಬೇಕಾದ ಅಧಿಕಾರಿಗಳ ಸಿಬ್ಬಂದಿಯನ್ನು ಒದಗಿಸಲು ಸರ್ಕಾರಕ್ಕೆ ಸಾಧ್ಯವೇ ಇಲ್ಲದಿರುವದರಿಂದ ಕೊಡಗಿನಲ್ಲಿ ಈ ಮಹಾ ಚುನಾವಣೆಯು ಎರಡು ದಿನ ಜರಗುವಂತೆ ನಿಶ್ಚಯಿಸಲಾಗಿದೆ ಅಂದರೆ ೧೯೫೨ನೇ ಜನವರಿ ೧೮ನೇ ತಾರೀಕಿನಲ್ಲಿ ಉತ್ತರ ಕೊಡಗಿನ ಎಂಟು ಚುನಾವಣಾ ಕ್ಷೇತ್ರಗಳ ಎಲ್ಲಾ ಪೋಲಿಂಗ್ ಸ್ಟೇಷನುಗಳಲ್ಲೂ ಮತ್ತು ಮಾರನೇ ದಿನ ಬಿಟ್ಟು ೨೨ನೇ ತಾರೀಕಿನಲ್ಲಿ ದಕ್ಷಿಣ ಕೊಡಗಿನ ಚುನಾವಣಾ ಕ್ಷೇತ್ರಗಳ ಎಲ್ಲಾ ಪೋಲಿಂಗ್ ಸ್ಟೇಷನುಗಳಲ್ಲೂ ನಡೆಸುವಂತೆ ಪ್ರಕಟಿಸಲಾಗಿದೆ. ಈಗ ನೇಮಕ ಮಾಡಲ್ಪಟ್ಟಿರುವ ಪೋಲಿಂಗ್ ಪಾರ್ಟಿಯವರು ಉತ್ತರ ಕೊಡಗಿನ ಎಂಟು ಚುನಾವಣಾ ಎಲ್ಲಾ ಪೋಲಿಂಗ್ ಸ್ಟೇಷನುಗಳಲ್ಲಿಯೂ ೧೮-೧-೫೨ನೇ ತಾರೀಕಿನಲ್ಲಿ ಚುನಾವಣೆಯನ್ನು ಮುಗಿಸಿಕೊಂಡು ದಕ್ಷಿಣ ಕೊಡಗು ತಾಲೋಕಿನ ಹತ್ತು ಚುನಾವಣೆ ಕ್ಷೇತ್ರಗಳ ಸ್ಟೇಷನುಗಳಿಗೆ ಪ್ರಯಾಣ ಮಾಡಿ ಆ ವೇಳೆ ಅಲ್ಲಿನ ಚುನಾವಣೆಗಳನ್ನು ೨೨-೧-೫೨ರಲ್ಲಿ ನಡೆಸುತ್ತಾರೆ ಈ ಎಲೆಕ್ಷನ್ ಪ್ರೋಗ್ರಾಂ ಆಗಲೇ ಪ್ರಕಟವಾಗಿ ಎಲ್ಲರಿಗೂ ಗೊತ್ತಾಗಿದೆ. ಹೀಗೆ ಚುನಾವಣೆಗಳ ಕೆಲಸವನ್ನು ವಿಭಾಗಿಸಿಕೊಂಡರೂ ಕೂಡ ೭೫ ಜನ ಪ್ರಿಸೈಡಿಂಗ್ ಆಫೀಸರುಗಳೂ ೪೦೦ ಜನ ಪೋಲಿಂಗ್ ಆಫೀಸರುಗಳು ಮತ್ತು ಇವರಿಗೆ ಬೇಕಾದ ಇತರ ಸಿಬ್ಬಂದಿಯೂ ಕೂಡ ಅಗತ್ಯವಾಗಿ ಬೇಕಾಗುತ್ತದೆ. ಇಷ್ಟು ಜನ ಅಧಿಕಾರಿಗಳನ್ನೂ ಮತ್ತು ಸಿಬ್ಬಂದಿಯನ್ನೂ ಈಗ ಒದಗಿಸಲಾಗಿದೆ.

ಚುನಾವಣೆಯು ನಿಗದಿಯಾಗಿರುವ ದಿನಗಳಲ್ಲಿ ಬೆಳಗ್ಗೆ ೭-೩೦ರಿಂದ ೧೨-೩೦ರ ವರೆಗೂ ಮತ್ತು ಮಧ್ಯಾಹ್ನ ೧ರಿಂದ ೪-೩೦ರ ವರೆಗೂ ನಡೆಯುತ್ತದೆ.

ಪೋಲಿಂಗ್ ಸ್ಟೇಷನುಗಳಲ್ಲಿ ಆಯಾ ಕ್ಷೇತ್ರದಲ್ಲಿ ಚುನಾವಣೆಗಾಗಿ ಸ್ಪರ್ಧಿಸಿರುವ ಪ್ರತಿಯೊಬ್ಬ ಉಮೇದುವಾರರಿಗೂ ಒಂದೊಂದು ಪ್ರತ್ಯೇಕವಾದ ಪೆಟ್ಟಿಗೆಯನ್ನು ಇಡಲಾಗುತ್ತದೆ. ಲೋಕಸಭೆಯ ಉಮೇದುವಾರರಿಗೆ ಹಸುರು ಬಣ್ಣದ ಪೆಟ್ಟಿಗೆಯನ್ನೂ ವಿಧಾನ ಸಭೆಯ ಉಮೇದುವಾರರಿಗೆ ಚಾಕೊಲೇಟ್ ಬಣ್ಣದ ಪೆಟ್ಟಿಗೆಯನ್ನೂ ಇಡಲಾಗುತ್ತದೆ. ಈ ಪೆಟ್ಟಿಗೆಗಳ ಮೇಲೆ ಉಮೇದುವಾರರ ಹೆಸರನ್ನು ಚೆನ್ನಾಗಿ ಕಾಣುವಂತೆ ಬರೆದಿರುವದಲ್ಲದೆ ಅನಕ್ಷರಸ್ಥರಿಗೂ ಕೂಡ ಯಾವ ಪೆಟ್ಟಿಗೆ ಯಾರದೆಂದು ತಿಳಿಯಲು ಅನುಕೂಲವಾಗುವಂತೆ ಆಯಾ ಉಮೇದುವಾರರ ಚಿಹ್ನೆಯನ್ನು ಅಂಟಿಸಿರುತ್ತಾರೆ. ಅಲ್ಲದೆ ಪೋಲಿಂಗ್ ಸ್ಟೇಷನಿನ ಬಾಗಿಲಲ್ಲಿಯೇ ಉಮೇದುವಾರರುಗಳ ಪಟ್ಟಿ ಮತ್ತು ಅವರ ಚಿಹ್ನೆಯನ್ನು ತೋರಿಸುವ ಪಟವನ್ನು ಹಾಕಿರುತ್ತದೆ. ಓದಲು ಬಾರದಿರುವವರು ಸ್ಟೇಷನಿನ ಅಧಿಕಾರಿಗಳಿಂದಾಗಲೀ ಬೇರೆ ಯಾರಿಂದಾಗಲೀ ಉಮೇದುವಾರರ ಚಿಹ್ನೆಗಳ ವಿಚಾರವಾಗಿ ಬೇಕಾದ ತಿಳುವಳಿಕೆಯನ್ನು ಪಡೆಯಬಹುದು.

ಚುನಾವಣೆಯ ದಿವಸ ಓಟರುಗಳ ಪಟ್ಟಿಯಲ್ಲಿರುವ ಪ್ರತಿಯೊಬ್ಬರನ್ನೂ ಗುರ್ತಿಸಿ ಅವರಿಗೆ ಬ್ಯಾಲೆಟ್ ಪೇಪರನ್ನು ಪಡೆಯಲು ಗುರ್ತಿನ ಚೀಟಿಯನ್ನು ಕೊಡುವದಕ್ಕಾಗಿ ಪೋಲಿಂಗ್ ಸ್ಟೇಷನ್ನಿನ ಬಳಿ ಆ ಸ್ಟೇಷನ್ನಿಗೆ ಸಂಬಂಧಪಟ್ಟ ಎಲ್ಲ ಹಳ್ಳಿಗಳ ಪಟೇಲರುಗಳೂ ಹಾಜರಿರುತ್ತಾರೆ. ಗುರುತಿನ ಚೀಟಿಯನ್ನು ಕೊಡುವ ಬಗ್ಗೆ ಒಬ್ಬ ಆಫೀಸರು ಕೂಡ ನೇಮಕವಾಗಿರುತ್ತಾರೆ. ಅವರಿಂದ ಈ ಗುರುತಿನ ಚೀಟಿಯನ್ನು ಪಡೆದು ಸ್ಟೇಷನ್ನಿನ ಒಳಕ್ಕೆ ಹೋಗಿ ಅದನ್ನು ವಿಧಾನ ಸಭೆಯ ಪ್ರಥಮ ಪೋಲಿಂಗ್ ಆಫೀಸರಿಗೆ ತೋರಿಸಬೇಕು. ಅವರು ನಿಮ್ಮ ಹೆಸರನ್ನು ಗುರುತಿನ ಚೀಟಿಯ ಆಧಾರದಿಂದ ತಮ್ಮ ಹತ್ತಿರವಿರುವ ಮತದಾರರ ಪಟ್ಟಿಯಲ್ಲಿ ಜಾಗ್ರತೆ ಕಂಡು ಹಿಡಿದು ನಿಮ್ಮ ಹೆಸರು ಮತ್ತು ಸಂಪೂರ್ಣ ವಿವರವನ್ನು ಗಟ್ಟಿಯಾಗಿ ಓದುತ್ತಾರೆ. ಅನಂತರ ಅವರು ಓಟರನ ಎಡಗೈ ತರ್ಜನಿಯ ಮೇಲೆ ೧ ವಾರದ ವರೆಗೆ ಅಳಿಸಲಾರದ ಒಂದು ತರಹ ಕಪ್ಪು ಮಸಿಯಿಂದ ಗುರುತು ಮಾಡುವರು. ಒಂದು ಸಾರಿ ಒಂದು ಕ್ಷೇತ್ರದಲ್ಲಿ ಓಟು ಮಾಡಿದವರು ಬೇರೆ ಊರಿಗೆ ಹೋಗಿ ಅಲ್ಲಿ ಬೇರೆ ಹೆಸರಿನಿಂದ ಓಟಿಗೆ ಅವಕಾಶವಿಲ್ಲದೆ ಇರಲೆಂಬುದೇ ಈ ಗುರುತನ್ನು ಮಾಡುವ ಉದ್ದೇಶ. ಅಲ್ಲಿಂದ ಅವರ ಜತೆಯಲ್ಲಿ ಕುಳಿತ ವಿಧಾನ ಸಭೆಯ ಎರಡನೇ ಪೋಲಿಂಗ್ ಆಫೀಸರ ಬಳಿ ವಿಧಾನ ಬ್ಯಾಲೆಟ್ ಪೇಪರನ್ನು ಪಡೆಯಬೇಕು. ಈ ಬ್ಯಾಲೆಟ್ ಪೇಪರನ್ನು ತೆಗೆದುಕೊಂಡು ವಿಧಾನ ಸಭೆಯ ಪೋಲಿಂಗ್ ಕೊಠಡಿ ಬಳಿ ಹೋಗಿ ವಿಧಾನ ಸಭೆಗೆ ಸ್ಪರ್ಧಿಸಿರುವ ಉಮೇದುವಾರರ ಪೈಕಿ ಯಾರಿಗೆ ನಿಮ್ಮ ವೋಟನ್ನು ಕೊಡಬೇಕೆಂದು ಅಭಿಲಾಷೆಯಿದೆಯೋ ಅವರ ಪೆಟ್ಟಿಗೆಯಲ್ಲಿ ಬ್ಯಾಲೆಟ್ ಪೇಪರನ್ನು ಹಾಕಬೇಕು. ಈ ಸಂದರ್ಭದಲ್ಲಿ ಎಲ್ಲರೂ ಹುಷಾರಾಗಿ ಗಮನಿಸಬೇಕಾದ ಒಂದೆರಡು ಅಂಶಗಳಿವೆ. ಬ್ಯಾಲೆಟ್ ಪೆಟ್ಟಿಗೆಯಲ್ಲಿ ಬ್ಯಾಲೆಟ್ ಪೇಪರನ್ನು ಮಡಚದೆಯೂ ಮತ್ತು ಪೆಟ್ಟಿಗೆಯೊಳಗೆ ಪೂರ್ತಿಯಾಗಿ ಹೋಗುವಂತೆಯೂ ಹಾಕಬೇಕು. ಇದನ್ನು ಒಳಕ್ಕೆ ಹಾಕುವುದಕ್ಕಾಗಿ ಮಾಡಿರುವ ತೂತು ಚೆನ್ನಾಗಿ ಕಾಣಲೆಂದು ಅದರ ಸುತ್ತಲೂ ಬಿಳಿಯ ಬಣ್ಣವನ್ನು ಬಳಿಯಲಾಗಿದೆ ಈ ಜಾಗ ಇನ್ನೂ ಚೆನ್ನಾಗಿ ಗೊತ್ತಾಗಲೆಂಬ ಉದ್ದೇಶದಿಂದ ಗುರುತಿನ ಚೀಟಿ ಕೊಡುವ ಆಫೀಸರರ ಬಳಿ ಎಲ್ಲರೂ ನೋಡಿ ತಿಳಿದುಕೊಳ್ಳಲು ಒಂದು ಖಾಲಿ ಬ್ಯಾಲೆಟ್ ಪೆಟ್ಟಿಗೆಯನ್ನು ಅದರಾಯಿಂದಾ ಇಟ್ಟಿರುತ್ತದೆ ಇದನ್ನು ನೋಡಿ ಈ ಪೆಟ್ಟಿಗೆಯ ವಿಚಾರವನ್ನೆಲ್ಲಾ ತಿಳಿದುಕೊಳ್ಳಬಹುದು. ಈ ರೀತಿ ವಿಧಾನ ಸಭೆಯ ವೋಟಿಂಗನ್ನು ಮುಗಿಸಿ ಪೋಲಿಂಗ್ ಕೊಟ

ಕೊಡಗಿನ ಮತದಾರರಲ್ಲಿ ವಿನಂತಿ.

ಮುಂಬರುವ ಕೇಂದ್ರ ಜನತಾ (ಪಾರ್ಲಿಮೆಂಟ್) ಸಭೆಗೆ ಪ್ರತ್ಯೇಕ ಪಕ್ಷದ ಪರ ನಾನೊಬ್ಬ ಉಮೇದುವಾರನಾಗಿ ನಿಂತಿರುವೆನು. ಕೊಡಗನ್ನು ಪ್ರತ್ಯೇಕವಾಗಿ ಇಟ್ಟುಕೊಂಡು ಈಗ ದೊರೆತಿರುವ ಜವಾಬ್ದಾರಿ ಸರಕಾರವನ್ನು ಇಲ್ಲಿಯ ಸಮಸ್ತ ಜನರ ಹಿತಕ್ಕಾಗಿ ಜಯಪ್ರದವಾಗಿ ನಡೆಸುವ ಸಂಪೂರ್ಣ ವಿಶ್ವಾಸವಿರುವ ನನಗೆ ಕೊಡಗಿನ ಓಟರುಗಳೆಲ್ಲರು ತಮ್ಮ ಅಮೂಲ್ಯವಾದ ಓಟನ್ನು ಕೊಟ್ಟು ಜಯಶೀಲನಾಗಿ ಮಾಡಬೇಕಾಗಿ ವಿನಂತಿ. ನನ್ನ ಚುನಾವಣಾ ಪೆಟ್ಟಿ ತಕ್ಕಡಿಯಾಗಿದೆ.

ಕೆ. ಟಿ. ಉತ್ತಪ್ಪ.

ಬಳಿ ಇರುವ ಮೇಲೆ ಹೇಳಿದ ಆಫೀಸರಿಂದ ಗುರುತಿನ ಚೀಟಿಯನ್ನು ವಾಪಾಸು ತೆಗೆದುಕೊಂಡು ಲೋಕಸಭೆಯ ಪೋಲಿಂಗ್ ಆಫೀಸರ ಬಳಿ ಹೋಗಿ ಗುರುತಿನ ಚೀಟಿಯನ್ನು ಅವರಿಗೆ ಕೊಟ್ಟು ಅವರಿಂದ ಲೋಕ ಸಭೆಯ ಹೆಸರು ಪಟ್ಟಿಯಿರುವ ಬ್ಯಾಲೆಟ್ ಪೇಪರನ್ನು ಪಡೆಯಬೇಕು. ಇಲ್ಲಿಂದ ಮುಂದೆ ಗುರುತಿನ ಚೀಟಿಯು ಅವಶ್ಯವಿಲ್ಲ. ಈ ಬ್ಯಾಲೆಟ್ ಪೇಪರನ್ನು ತೆಗೆದುಕೊಂಡು ಲೋಕಸಭೆಯ ಪೋಲಿಂಗ್ ಕೊಟಡಿಯೊಳಗೆ ಹಿಂದೆಯೇ ವಿವರಿಸಿರುವ ರೀತಿಯಲ್ಲಿ ನಿಮ್ಮ ವೋಟಿಂಗ್ ಹಕ್ಕನ್ನು ಚಲಾಯಿಸಿ ಹೊರಕ್ಕೆ ಬರುವುದು.

೪. ಈ ಬ್ಯಾಲೆಟ್ ಪೇಪರನ್ನು ಬಳಸುವ ವಿಚಾರದಲ್ಲಿ ಪದೇ ಪದೇ ಒತ್ತಿ ಹೇಳಿ ಜನಗಳಿಗೆ ತಿಳುವಳಿಕೆ ಕೊಡಬೇಕಾದ ಒಂದೆರಡು ಅಂಶಗಳಿವೆ. ಬ್ಯಾಲೆಟ್ ಪೇಪರನ್ನು ಪ್ರತಿಯೊಬ್ಬ ಚುನಾವಣಾದಾರನೂ ತನ್ನ ಸ್ವಂತ ವೋಟಿನ ಹಕ್ಕನ್ನು ಚಲಾಯಿಸಲು ಬ್ಯಾಲೆಟ್ ಪೆಟ್ಟಿಗೆಯಲ್ಲಿಯೇ ಹಾಕಬೇಕೇ ವಿನಃ ಅದನ್ನು ಪೋಲಿಂಗ್ ಸ್ಟೇಷನಿನಲ್ಲಿ ಎಲ್ಲಿಯೂ ಬಿಟ್ಟು ಹೋಗಕೂಡದು. (ಇದರಿಂದ ಆ ವೋಟಿನ ಕಾಗದ ದುರುಪಯೋಗವಾಗಲು ಅವಕಾಶ ಕೊಟ್ಟಂತಾಗುತ್ತದೆ) ಮತ್ತು ಖಂಡಿತವಾಗಿಯೂ ಸ್ಟೇಷನ್ನಿನ ಹೊರಗೆ ತೆಗೆದುಕೊಂಡು ಹೋಗಕೂಡದು. ಹಾಗೆ ಮಾಡುವುದು ಒಂದು ದೊಡ್ಡ ಅಪರಾಧವಾಗುತ್ತೆ. ಮತ್ತು ಹಾಗೆ ಮಾಡಿದವರು ಒಂದು ವರ್ಷದ ಕಠಿಣ ಶಿಕ್ಷೆಗಾಗಲೀ ಅಥವ ರೂ. ೫೦೦ ಜುಲ್ಮಾನೆಗಾಗಲೀ ಗುರಿಯಾಗುತ್ತಾರೆ. ಯಾರಾದರೂ ಹೀಗೆ ವೋಟಿಂಗ್ ಪೇಪರನ್ನು ಹೊರಕ್ಕೆ ತೆಗೆದುಕೊಂಡು ಹೋಗಬಹುದೆಂಬ ಅನುಮಾನ ಬಂದರೆ ಅವರನ್ನು ನಿಲ್ಲಿಸಿ ಜಪ್ತಿ ಮಾಡಲು ಪೋಲಿಂಗ್ ಸ್ಟೇಷನಿನ ಆಫೀಸರುಗಳಿಗೆ ಅಧಿಕಾರ ಕೊಡಲಾಗಿದೆ. ಮಹಿಳೆಯರು ಯಾರಾದರೂ ಇಂತಹ ಕೆಲಸ ಮಾಡಿದಲ್ಲಿ ಪೋಲಿಂಗ್ ಸ್ಟೇಷನ್ನಿನಲ್ಲಿರುವ ಲೇಡಿ ಅಸಿಸ್ಟೆಂಟ್ ಮೂಲಕ ಅವರನ್ನು ಪರೀಕ್ಷಿಸಲು ಅವಕಾಶವಿದೆ. ಯಾವುದಾದರೂ ವೋಟನ್ನು ಚಲಾಯಿಸಲು ಇಷ್ಟವಿಲ್ಲದಿರುವವರು ಆ ಬ್ಯಾಲೆಟ್ ಪೇಪರನ್ನು ಪ್ರಿಸೈಡಿಂಗ್ ಆಫೀಸರವರಿಗೆ ವಾಪಾಸು ಮಾಡಬೇಕು.

ಎರಡನೆಯದಾಗಿ, ನಮ್ಮಲ್ಲಿ ಶನಿವಾರಸಂತೆ, ಸುಂಟಿಕೊಪ್ಪ, ಶ್ರೀಮಂಗಲ, ಪೊನ್ನಂಪೇಟೆ, ವೀರಾಜಪೇಟೆ ಮತ್ತು ಸಿದ್ದಾಪುರ ಈ ಆರು ಕ್ಷೇತ್ರಗಳಲ್ಲಿ ಪ್ರತಿಯೊಬ್ಬ ವೋಟರಿಗೂ ಎರಡು ವೋಟುಗಳನ್ನು ಚಲಾಯಿಸುವ ಹಕ್ಕಿದೆ. ಈ ಎರಡು ವೋಟುಗಳನ್ನು ಅವರವರ ಇಚ್ಛೆಯಂತೆ ಒಂದನ್ನು ಜನರಲ್ ಸೀಟಿಗೆ ಸ್ಪರ್ಧಿಸಿರುವ ಉಮೇದುವಾರರಿಗೂ ಇನ್ನೊಂದು ರಿಸರ್ವ್ಡ್ ಸೀಟಿಗೆ ಸ್ಪರ್ಧಿಸಿರುವ ಉಮೇದುವಾರರಿಗೂ ಕೊಡಬಹುದು. ಎರಡನ್ನೂ ಒಂದೇ ತರಹ ಸೀಟಿಗೆ ಸ್ಪರ್ಧಿಸಿರುವ ಇಬ್ಬರು ಬೇರೆ ಬೇರೆ ಉಮೇದುವಾರರಿಗೆ ಕೊಡಬಹುದು. ಆದರೆ ಎರಡು ಓಟುಗಳನ್ನು ಒಬ್ಬರೆ ಉಮೇದುವಾರರಿಗೆ ಕೊಡಕೂಡದು. ಒಂದೇ ಪೆಟ್ಟಿಗೆಯಲ್ಲಿ ಈ ಎರಡು ಓಟುಗಳು ಸಿಕ್ಕಿದ್ದಾದರೆ ಅವರಲ್ಲಿ ಒಂದು ವ್ಯರ್ಥವಾಗುತ್ತದೆ.

ಹಿಂದೆಯೇ ಹೇಳಿದಂತೆ ವೋಟಿಂಗಿಗೆ ಗೊತ್ತಾಗಿರುವ ಕಾಲ ಸಾಯಂಕಾಲ ೪-೩೦ ಘಂಟೆಗೆ ಮುಗಿಯುತ್ತದೆ. ಈ ಕಾಲದೊಳಗೆ ಇನ್ನೂ ಬ್ಯಾಲೆಟ್ ಪೇಪರನ್ನು ಪಡೆಯಬೇಕಾದ ವೋಟರುಗಳಿದ್ದಲ್ಲಿ ಅಂತಹವರನ್ನು ಇತರ ಜನಗಳಿಂದ ಬೇರ್ಪಡಿಸಿ ಅವರಿಗೆಲ್ಲಾ ತಕ್ಷಣ ಗುರುತಿನ ಚೀಟಿಯನ್ನು ಹಂಚಿ ಆ ಚೀಟಿ ಉಳ್ಳವರನ್ನು ಮಾತ್ರ ವೋಟು ಮಾಡಲು ಪೋಲಿಂಗ್ ಸ್ಟೇಷನಿನ ಬಳಿ ಇರದೆ ಆ ವೇಳೆ ಬಂದಲ್ಲಿ ಅಂಥವನಿಗೆ ಓಟು ಮಾಡಲು ಅವಕಾಶವಿರುವುದಿಲ್ಲ. ಎಲ್ಲರೂ ಓಟು ಮಾಡಿ ಮುಗಿಸಿದ ಮೇಲೆಯೂ ಕೂಡ ಪೋಲಿಂಗ್ ಸ್ಟೇಷನ್ನಿನ ಅಧಿಕಾರಿಗಳಿಗೆ ಸಾಮಾನ್ಯವಾಗಿ ಒಂದುವರೆ ಗಂಟೆಯ ಕೆಲಸವಿರುವುದರಿಂದ ಜನಗಳೆಲ್ಲಾ ಆದಷ್ಟು ಮುಂಚಿತವಾಗಿಯೇ ಒಂದು ಓಟಿಂಗ್ ಮುಗಿಸಿಕೊಂಡು ಅಧಿಕಾರಿಗಳ ಕೆಲಸದಲ್ಲಿ ಸಹಕರಿಸಿ ಸಹಾಯಮಾಡಬೇಕೆಂದು ಸೂಚಿಸಲಿಚ್ಛಿಸುತ್ತೇನೆ.

ಉಮೇದುವಾರರಾಗಲೀ ಅಥವಾ ಅವರ ಏಜಂಟರುಗಳಾಗಲೀ ಪೋಲಿಂಗ್ ಸ್ಟೇಷನ್ನಿನಲ್ಲಿದ್ದು ಅಲ್ಲಿನ ಓಟಿಂಗ್ ಕ್ರಮ ಬದ್ಧವಾಗಿಯೂ ನಿಷ್ಪಕ್ಷಪಾತವಾಗಿಯೂ ನಡೆಯುವುದನ್ನು ನೋಡುವ ಅವಕಾಶವನ್ನು ಅವರಿಗೆ ಕೊಟ್ಟಿರುತ್ತದೆ. ಆದರೆ ಅವರುಗಳು ಪ್ರಿಸೈಡಿಂಗ್ ಆಫೀಸರ ಬಳಿ ಇರಬೇಕು ವಿನಃ ಪೋಲಿಂಗ್ ಆಫೀಸರುಗಳ ಹತ್ತಿರ ಹೋಗಕೂಡದು. ಪೋಲಿಂಗ್ ಸ್ಟೇಷನ್ನಿನಲ್ಲಿ ನಡೆಯುವ ಕಾರ್ಯಕಲಾಪಗಳೆಲ್ಲಾ ರಹಸ್ಯವಾಗಿಯೇ ನಡೆಯಬೇಕಾದ್ದರಿಂದ ಈ ವಿಚಾರದಲ್ಲಿ ಎಲ್ಲರೂ ಸಹಕರಿಸಬೇಕು.

ಮಹಿಳೆಯರು ಓಟು ಮಾಡುವ ವಿಷಯದಲ್ಲಿ ಒಂದು ವಿಚಾರವನ್ನು ವಿಶೇಷವಾಗಿ ಸೂಚಿಸಬೇಕಾಗಿದೆ. ಈಗ ನಮ್ಮ ದೇಶದಲ್ಲಿ ಎಲ್ಲರಿಗೂ ದೊರೆತಿರುವ ವಯಸ್ಕರ ಮತದಾನ ಪದ್ಧತಿಯು ಓಟಿಂಗ್ ಏರ್ಪಾಡು ಗಂಡಸರಿಗೂ, ಹೆಂಗಸರಿಗೂ ಎಲ್ಲಾ ವಿಧಾನದಲ್ಲಿಯೂ ಸಮಾನವಾಗಿ ಅನ್ವಯಿಸುತ್ತದೆ. ಆದ್ದರಿಂದ ನಮ್ಮ ದೇಶದ ಮಹಿಳೆಯರೆಲ್ಲರೂ ಸಂಕೋಚವಿಲ್ಲದೆ ಹೆಚ್ಚಾಗಿ ಬಂದು ಈ ಚುನಾವಣೆಯಲ್ಲಿ ಓಟು ಮಾಡಿ ಸರ್ಕಾರ ನಡೆಸುವ ವಿಚಾರದಲ್ಲಿ ಅವರ ಅಭಿಮತವೇನೆಂಬುದನ್ನು ವ್ಯಕ್ತಗೊಳಿಸಬೇಕು. ಯಾರಿಗಾಗಲೀ ಈ ವಿಚಾರದಲ್ಲಿ ತಿಳುವಳಿಕೆ ಅಥವಾ ಅನುಭವ ಕಡಿಮೆಯಿದ್ದಲ್ಲಿ ಅವರಿಗೆ ಬೇಕಾದ ವಿಚಾರವನ್ನು ತಿಳಿಸಲು ಪೋಲಿಂಗ್ ಸ್ಟೇಷನ್ನಿನ ಅಧಿಕಾರಿಗಳಿಗೂ ಮತ್ತು ಅಲ್ಲಿರುವ ಲೇಡಿ ಅಸಿಸ್ಟೆಂಟರಿಗೂ ತಕ್ಕ ಸೂಚನೆಗಳನ್ನು ಕೊಡಲಾಗಿದೆ.

ಇಲ್ಲದೆ ಕಣ್ಣು ಕಾಣದಿರುವ ಇತರ ಅಂಗಗಳು ಉಪಯೋಗಿಸಲ್ಲದೆ ಅಶಕ್ತರಾದ ಓಟರುಗಳು ಇದ್ದಲ್ಲಿ ಅವರು ಪ್ರಿಸೈಡಿಂಗ್ ಆಫೀಸರಿಂದ ಬೇಕಾದ ಸಹಾಯವನ್ನು ಪಡೆಯಲು ಅವಕಾಶವಿದೆ. ಇಂಥ ಪೆಟ್ಟಿಗೆಗೆ ತಮ್ಮ ಓಟನ್ನು ಹಾಕಬೇಕೆಂದು ಅವರಿಗೆ ತಿಳಿಸಿದಲ್ಲಿ ಅವರು ಅದಕ್ಕೆ ತಕ್ಕ ಏರ್ಪಾಡು ಮಾಡಿ ಆ ವಿಷಯವನ್ನು ರಹಸ್ಯವಾಗಿಟ್ಟಿರುತ್ತಾರೆ.

ಪ್ರತಿಯೊಬ್ಬ ಓಟುದಾರರೂ ಹೆಂಗಸಾಗಲೀ ಗಂಡಸಾಗಲೀ ಕಾಲ್ನಡಿಗೆಯಿಂದಾಗಲೀ ಅಥವಾ ತನ್ನದೇ ಆದ ಎತ್ತಿನಗಾಡಿ ಮೊದಲಾದ ಯಂತ್ರದ ಮೂಲಕ ಚಲಿಸದ ವಾಹನಗಳಲ್ಲಾಗಲೀ ಅಥವಾ ಸಾರ್ವಜನಿಕವಾದ ಚಲನೆಯಲ್ಲಿರುವ ಮೋಟಾರು ಬಸ್ಸುಗಳಲ್ಲಿ ತನ್ನ ಸ್ವಂತ ಖರ್ಚಿನಿಂದ ಪೋಲಿಂಗ್ ಸ್ಟೇಷನ್‌ಗಳಿಗೆ ಹೋಗಬೇಕು. ಈ ಉದ್ದೇಶದಿಂದಲೇ ಪೋಲಿಂಗ್ ಸ್ಟೇಷನ್‌ಗಳನ್ನು ಸರ್ವಸಾಧಾರಣವಾಗಿ ಮೂರು ಮೈಲಿ ಅಥವಾ ಅದಕ್ಕೆ ಕಮ್ಮಿ ದೂರದಲ್ಲಿ ನೇಮಿಸಲಾಗಿದೆ. ಉಮೇದುವಾರರ ಅಥವಾ ಅದರ ಏಜಂಟರುಗಳ ಖರ್ಚಿನಿಂದಾಗಲೀ ಮತ್ತು ಅವರು ಒದಗಿಸುವ ವಾಹನಗಳಲ್ಲಿಯಾಗಲೀ ಅಥವಾ ಖಾಸಗಿಯೇ ಬಾಡಿಗೆ ಮಾಡಿ [illegible] ಯಂತ್ರ ಚಲನೆಯ, ಮೋಟಾರು ಕಾರು ಇತ್ಯಾದಿ ವಾಹನಗಳಲ್ಲಾಗಲೀ ಓಟು ಕೊಡಲು ಮತ ಕಟ್ಟೆಗೆ ಹೋಗುವದು ಅಪರಾಧವೆಂದು ಗ್ರಹಿಸಲಾಗಿದೆ; ಈ ಸಂಬಂಧ ಅಪರಾಧಿಯೆಂದು ಕಂಡು ಬಂದಲ್ಲಿ ರೂ. ೨೫೦/- ಜುಲ್ಮಾನೆ ವಿಧಿಸುವ ಅಧಿಕಾರ ಸರಕಾರದವರಿಗೆ ಕೊಡಲ್ಪಟ್ಟಿದೆ.

ಚುನಾವಣೆಯೆಂಬುದು ನಮ್ಮ ದೇಶಕ್ಕೆ ಹೊಸದಲ್ಲ. ಈಗ ೩೦ ವರ್ಷಗಳಿಂದಲೂ ನಮ್ಮ ಜನರಿಗೆ ಚುನಾವಣೆಯ ಕಾರ್ಯಕಲಾಪಗಳ ಮಾಹಿತಿ ಇದೆ. ಆದರೆ ಪ್ರೌಢ ಮತದಾನದ ರೀತಿ ಚುನಾವಣೆ ನಡೆಯುವ ಸ್ವತಂತ್ರ ಭಾರತದ ಈ ಸಾರ್ವತ್ರಿಕ ಚುನಾವಣೆಯು ತುಂಬಾ ದೊಡ್ಡದು, ಮತ್ತು ಘನವಾದದ್ದಾಗಿದೆ. ವ್ಯಕ್ತಿ ವ್ಯತ್ಯಾಸವಿಲ್ಲದೆ ಅತಿ ಧನಿಕನಿಂದ ಅತೀ ಬಡವನ ವರೆಗೂ ಜಾತಿ, ಮತ, ಸಂಪತ್ತು, ಜನಾಂಗ ಬೇಧವಿಲ್ಲದೆ ಪ್ರತಿಯೊಬ್ಬರಿಗೂ ಒಂದೇ ಓಟಿನ ಹಕ್ಕು ದೊರೆತಿದೆ. ಕೊಡಗಿನಲ್ಲಿ ಈ ವರೆಗೆ ಮತದಾರರು ವರ್ತಿಸಿದ ರೀತಿ ಸ್ತುತ್ಯಾರ್ಹವಾಗಿದೆ. ಇನ್ನು ಮುಂದಕ್ಕೂ ಹೀಗೆಯೇ ವರ್ತಿಸಿ ಭಾರತದ ಪ್ರಜೆಯೆಂಬ ಕೀರ್ತಿಯನ್ನು ಕಾಪಾಡಲು ಪ್ರತಿಯೊಬ್ಬನೂ ಮತದಾನ ಮಾಡುವ ಕಾರ್ಯದಲ್ಲಿ ಸಹಕರಿಸಿ ಈ ದೊಡ್ಡ ಕೆಲಸವನ್ನು ಜಯಪ್ರದವಾಗಿ ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಪ್ರತಿಯೊಂದು ಪೋಲಿಂಗ್ ಸ್ಟೇಷನ್ನಿನಲ್ಲಿಯೂ ಅಲ್ಲಿನ ಕಾರ್ಯಕಲಾಪಗಳು ಕ್ರಮಬದ್ಧವಾಗಿಯೂ ಗಲಭೆ ತೊಂದರೆಗಳಿಲ್ಲದೆ ಶಾಸನೋಕ್ತ ಪ್ರಕಾರವಾಗಿಯೂ ನಡೆಸುವುದು ಪ್ರಿಸೈಡಿಂಗ್ ಆಫೀಸರವರ ಜವಾಬ್ದಾರಿಯಾಗಿರುತ್ತದೆ. ಇದನ್ನು ನಿರ್ವಹಿಸಲು ಬೇಕಾದ ಅಧಿಕಾರವನ್ನೂ ಕೂಡ ಅವರಿಗೆ ಕೊಡಲಾಗಿದೆ. ಪೋಲಿಂಗ್ ಸ್ಟೇಷನ್ನಿನ ಒಳಗಡೆಯಾಗಲೀ ಅಥವಾ ಹತ್ತಿರದಲ್ಲಿಯಾಗಲೀ ಯಾರಾದರೂ ಗಲಾಟೆ ಅಥವಾ ತೊಂದರೆ ಮಾಡುತ್ತಿದ್ದು ಅದರಿಂದ ಚುನಾವಣೆಗೆ ತೊಂದರೆಯಾದಲ್ಲಿ ಅಂತವರನ್ನು ಅವರು ಹೊರಗೆ ಕಳುಹಿಸಬಹುದು. ಯಾರಾದರೂ ಉಮೇದುವಾರರಿಗಾಗಿ ಕ್ಯಾನ್ವಾಸು ಮಾಡುತ್ತಿದ್ದರೆ ಅದನ್ನು ಪೋಲೀಸಿನವರ ಮುಖಾಂತರ ನಿಲ್ಲಿಸಬಹುದು. ಬಹಳ ಗಲಾಟೆಯಾಗಿ ಚುನಾವಣೆ ಸರಿಯಾಗಿ ನಡೆಯಲು ಅವಕಾಶವಿಲ್ಲದ ಪಕ್ಷದಲ್ಲಿ ಚುನಾವಣೆಯನ್ನು ಮುಂದುವರಿಸಲು ಕೂಡ ಅವರಿಗೆ ಅಧಿಕಾರವಿದೆ. ಆದರೆ ಚುನಾವಣೆಗಳು ನಡೆಸುವುದು ಸಾರ್ವಜನಿಕರ ಹಿತಕ್ಕೇ ಆಗಿರುವುದರಿಂದ ಈ ಪ್ರಾಮುಖ್ಯವಾದ ಉದ್ಯಮದಲ್ಲಿ ಉಮೇದುವಾರರು, ಅವರ ಏಜಂಟರುಗಳು ಮತ್ತು ಸಾರ್ವಜನಿಕರು ಎಲ್ಲರೂ ಬೇಕಾದ ಸಹಾಯ ಮತ್ತು ಸಹಕಾರವನ್ನು ನೀಡಿ ಕೊಡಗಿನ ಚುನಾವಣೆಗಳು ನಮ್ಮ ನೆರೆ ಪ್ರಾಂತ್ಯಗಳಿಗೆ ಮಾದರಿಯಾಗುವಂತೆ ಮಾಡಬೇಕೆಂದು ಸರ್ಕಾರದವರ ಆಶಯವಾಗಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆಲ್ಲಾ ನಿಷ್ಪಕ್ಷಪಾತವಾಗಿಯೂ, ದೇಶದ ಹಿತದೃಷ್ಟಿಯಿಂದಲೂ ಆಸಕ್ತಿಯಿಂದಲೂ ಕೆಲಸ ಮಾಡಬೇಕೆಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಎಲ್ಲರ ಸಹಕಾರದಿಂದ ನಮ್ಮ ಚುನಾವಣೆಗಳು ಬಹಳ ಯಶಸ್ವಿಯಾಗಿ ನಡೆಯುವುವೆಂದು ನಿರೀಕ್ಷಿಸಲಾಗಿದೆ.

ಎನ್. ಸಿ. ಸುಬ್ಬಯ್ಯ,
ಚೀಫ್ ಇಲೆಕ್ಟೊರಲ್ ಆಫೀಸರು.

ಜನರಲ್ ಕಾರ್ಯಪ್ಪನವರ ಉಪದೇಶ.

ಡೆಹರಾಡೂನಿನ ನ್ಯಾಷನಲ್ ಡಿಫೆನ್ಸ್ ಎಕೆಡೆಮಿಯಿಂದ ಉತ್ತೀರ್ಣರಾಗಿ ಹೋಗುತ್ತಿರುವ ಮಿಲಿಟರಿ ಜೆಂಟಲ್ ಕ್ಯಾಡೆಟ್‌ಗಳನ್ನುದ್ದೇಶಿಸಿ ಮಾತನಾಡುತ್ತಾ ಭಾರತದ ಸೇನಾಪತಿ ಜನರಲ್ ಕಾರ್ಯಪ್ಪನವರು "ಸಿಗರೇಟು ಸೇದುವದು ಮತ್ತು ಕುಡಿಯುವದು ಆಫೀಸರಿಗೆ ಅವಶ್ಯವೆಂದು ತಿಳಿಯಬೇಡಿರಿ. ಇವೆರಡರ ಮೇಲಿನ ಹಣವನ್ನು ಉಳಿಸಿ ಉಳಿದ ಲಾಭದಾಯಕ ವಸ್ತುಗಳ ಮೇಲೆ ಖರ್ಚು ಮಾಡಿರಿ. ನಾನು ಕುಡಿಯುವದೂ ಇಲ್ಲ, ಸಿಗರೇಟು ಸೇದುವದೂ ಇಲ್ಲ. ಒಂದು ವೇಳೆ ಈ ಅಭ್ಯಾಸಗಳು ಬೇಕೆಂದೆನಿಸಿದರೆ ಅದನ್ನು ಅಂಕೆಯಲ್ಲಿಟ್ಟುಕೊಳ್ಳಿರಿ. ಇಂದಿನ ತರುಣರು ಬಹಳ ಮೃದು ಸ್ವಭಾವದವರಾಗಿರುವರೆಂದು ಕಾಣುತ್ತದೆ. ನೀವು ಸಿನೇಮಾ ನಾಟ್ಯಗೃಹಗಳಿಗೆ ಹೋಗಬಹುದು. ಆದರೆ ಬಂದೂಕು ಹೊಡೆಯುವದು, ಶಿಕಾರಿ ಮತ್ತು ಮೀನು ಹಿಡಿಯುವುದು ಮುಂತಾದವುಗಳಲ್ಲಿ ಹೆಚ್ಚಾಗಿ ಭಾಗವಹಿಸಿರಿ." ಎಂದು ಹೇಳಿದರು.

ಶ್ರೀ ಕೆ. ಯಂ. ಪೊನ್ನಪ್ಪನವರು
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಮಡಿಕೇರಿ ಮತದಾರರಲ್ಲಿ

ಶ್ರೀ ಎಸ್. ಆರ್. ಗೋಪಾಲಕೃಷ್ಣನ

ವಿನಂತಿಗಳು.

ನಾನು ಮಡಿಕೇರಿ ಕ್ಷೇತ್ರದಿಂದ ಕೊಡಗು ಶಾಸನ ಸಭೆಗೆ ಪ್ರತ್ಯೇಕ ಪಕ್ಷದ ಪರ ಉಮೇದುವಾರನಾಗಿ ನಿಂತ ಸಂಗತಿ ನನ್ನ ಮಿತ್ರರಿಗೆ ತಿಳಿದ ನಂತರ ಅನೇಕರು ನನ್ನ ಸಂಗಡ ನನಗೆ ಕಾಂಗ್ರೆಸು ಮಹಾಸಂಸ್ಥೆಯಲ್ಲಿ ಈ ವರೆವಿಗೂ ಇರುವ ಅಭಿಮಾನ ನನಗೆ ಚೆನ್ನಾಗಿ ಗೊತ್ತಿದೆ. ಆದರೂ ಕಾಂಗ್ರೆಸು ಸಂಸ್ಥೆಯ ಪರ ಉಮೇದುವಾರರಾಗಿ ನಿಲ್ಲುವುದರ ಬದಲು ಪ್ರತ್ಯೇಕ ಪಕ್ಷದ ಪರ ಏತಕ್ಕಾಗಿ ನಿಂತಿದ್ದೀರಿಯೆಂದು ಪ್ರಶ್ನಿಸಿರುತ್ತಾರೆ. ಈ ಪ್ರಶ್ನೆಗೆ ನಾನು ಅವರಿಗೆ ನನ್ನ ವಿಷಯವನ್ನು ಹೇಳಿ ಸಮಾಧಾನಪಡಿಸಿರುತ್ತೇನೆ. ಈ ಪ್ರಶ್ನೆಯು ಪದೇ ಪದೇ ಬರುತ್ತಿರುವುದರಿಂದ ನಿಮಗೆ ಎಲ್ಲಾ ವಿಷಯವನ್ನು ವಿಶದವಾಗಿ ತಿಳಿಸುವುದು ನನ್ನ ಕರ್ತವ್ಯವೆಂದು ನಂಬಿ ಇದನ್ನು ನಿಮ್ಮ ಮುಂದಿಟ್ಟಿದ್ದೇನೆ.

ಈ ಪಟ್ಟಣದ ಬಗ್ಗೆ ಉಮೇದುವಾರನಾಗಿ ನಿಲ್ಲುವ ಅಭಿಪ್ರಾಯವು ನನ್ನಲ್ಲಿ ಹುಟ್ಟಿದ್ದು ನನಗೆ ತುಂಬಾ ಅಭಿಮಾನವಿರುವ ಈಗ ಕೊಡಗು ಕಾಂಗ್ರೆಸು ಸಂಸ್ಥೆಯಲ್ಲಿ ಇರುವ ನನ್ನ ಒಬ್ಬರು ಮಿತ್ರರು ಮಡಿಕೇರಿಯಿಂದ ಕಾಂಗ್ರೆಸು ಸಂಸ್ಥೆಯ ಉಮೇದುವಾರರಾಗಿ ನೀವು ನಿಲ್ಲಬೇಕೆಂದು ನನಗೆ ಸೂಚಿಸಿದಾಗ. ಅವರ ಸೂಚನೆಗೆ ನಾನು ಒಪ್ಪಿದೆ. ಕೊಡಗು ಡಿಸ್ಟ್ರಿಕ್ಟ್ ಕಾಂಗ್ರೆಸು ಕಮಿಟಿಯ ವೈಸ್ ಪ್ರೆಸಿಡೆಂಟರೂ ನನ್ನನ್ನು ಕಾಂಗ್ರೆಸು ಪರ ನಿಲ್ಲುವಂತೆ [illegible] ಕೊಳ್ಳುವರೆಂದು ಅವರು ನನ್ನಲ್ಲಿ ಹೇಳಿದರು. ಅವರು ಮತ್ತು ಕಾಂಗ್ರೆಸು ಸಂಸ್ಥೆಯಲ್ಲಿ ಅಭಿಮಾನವಿರುವ ಇನ್ನಿತರರು ಸಹ ಈ ಪಟ್ಟಣದ ಬಗ್ಗೆ ನನ್ನನ್ನು ಕಾಂಗ್ರೆಸು ಉಮೇದುವಾರನಾಗಿ ಚುನಾಯಿಸಬೇಕೆಂದು ಡಿ. ಸಿ. ಸಿ. ವೈಸ್ ಪ್ರೆಸಿಡೆಂಟರವರಿಗೆ ಸೂಚಿಸಿದ್ದು ನನಗೆ ತಿಳಿಯಬಂತು. ಆದರೆ ನನಗೆ ತಿಳಿಸಿದ ಪ್ರಕಾರ ಡಿ. ಸಿ. ಸಿ. ವೈಸ್ ಪ್ರೆಸಿಡೆಂಟರಿಂದ ಕೆಲವು ದಿನಗಳವರೆಗೆ ನಾನು ಕಾಂಗ್ರೆಸು ಸಂಸ್ಥೆಯ ಪರ ಉಮೇದುವಾರನಾಗಿ ನಿಲ್ಲಬೇಕೆಂಬ ಹೇಳಿಕೆ ಬರಲಿಲ್ಲ. ಆಗ ನಾನಾಗಿಯೇ ಅವರಲ್ಲಿ ಈ ವಿಷಯ ಪ್ರಸ್ತಾಪಿಸಿದೆ. ನಾನು ಕಾಂಗ್ರೆಸು ಪರ ಈ ಕ್ಷೇತ್ರದಿಂದ ಉಮೇದುವಾರನಾಗಿ ನಿಲ್ಲುವುದು ತನಗೂ ಒಪ್ಪಿಗೆಯೇ ಎಂದೂ, ಆದರೆ ಕಾಂಗ್ರೆಸು ಉಮೇದುವಾರರಾಗಿ ಡಾಕ್ಟರ್ ನಂಜುಂಡೇಶ್ವರನವರು ನಿಲ್ಲುವ ಅಪೇಕ್ಷೆಯುಳ್ಳವರಾಗಿದ್ದಾರೆ; ಇವರು ಈ ಮೊದಲು ಕಾಂಗ್ರೆಸು ಸಂಸ್ಥೆಗಾಗಿ ದುಡಿದವರಾದರೂ ಇವರಿಗೆ ಕಾಂಗ್ರೆಸು ತತ್ವಗಳಲ್ಲಿ ನಂಬಿಕೆ ಇಲ್ಲವೆ, ಇವರು ಹೆಚ್ಚಿನ ಮಟ್ಟಿಗೆ ಸಮತಾವಾದಿಗಳೇ ಆಗಿರುವುದರಿಂದ ಇವರು ಕಾಂಗ್ರೆಸು ಪರ ಉಮೇದುವಾರರಾಗಲು ತನಗೆ ತೃಪ್ತಿಯಿಲ್ಲದಿದ್ದರೂ ಸಹ ಇವರನ್ನು ಇವರು ಹಿಂದೆ ಮಾಡಿದ ಕಾಂಗ್ರೆಸು ಕೆಲಸಕ್ಕಾಗಿ ಪ್ರದೇಶ ಕಾಂಗ್ರೆಸು ಕಮಿಟಿಯವರು ಚುನಾಯಿಸುವ ಸಂದರ್ಭವಿರುವುದರಿಂದ ನನ್ನನ್ನು ಕಾಂಗ್ರೆಸು ಉಮೇದುವಾರನಾಗಿ ನಿಲ್ಲಲು ತಾನು ಕೇಳಿಕೊಳ್ಳಲಿಲ್ಲವೆಂದೂ, ನಾನು ಸ್ವತಂತ್ರವಾಗಿ ನಿಲ್ಲುವುದು ಉತ್ತಮವೆಂದೂ ಅವರು ನನ್ನಲ್ಲಿ ಹೇಳಿದರು. ಇವರ ಸಲಹೆಯಿಂದ ಡಾಕ್ಟರ್ ನಂಜುಂಡೇಶ್ವರನವರಿಗೆ ಪ್ರದೇಶ ಕಾಂಗ್ರೆಸು ಕಮಿಟಿಯವರು ಸ್ಥಾನ ಕೊಡಬಹುದೆಂಬುದೇ ಒಂದು ಕಾರಣ ವಿನಹ ನನ್ನನ್ನು ಕಾಂಗ್ರೆಸು ಉಮೇದುವಾರನಾಗಿ ಚುನಾಯಿಸಲು ಇವರ ಮಟ್ಟಿಗೆ ಬೇರೆ ಯಾವ ಅಭ್ಯಂತರವೂ ಇರಲಿಲ್ಲವೆಂದು ನನಗೆ ಕಂಡುಬಂತು. ಆ ನಂತರ ಕಾಂಗ್ರೆಸು ಪರ ಉಮೇದುವಾರರನ್ನು ಚುನಾಯಿಸುವ ಬಗ್ಗೆ ಮಡಿಕೇರಿಗೆ ಕರ್ನಾಟಕ ಪ್ರದೇಶ ಕಾಂಗ್ರೆಸು ಕಮಿಟಿಯ ಪ್ರೆಸಿಡೆಂಟರಾದ ಶ್ರೀ ನಿಜಲಿಂಗಪ್ಪನವರು ಬಂದದ್ದು ನಿಮಗೆ ತಿಳಿದ ವಿಷಯ. ಇವರು ಬಂದಾಗ ಡಾಕ್ಟರ್ ನಂಜುಂಡೇಶ್ವರನವರನ್ನು ಚುನಾಯಿಸಲಿಲ್ಲ. ಇಲ್ಲಿಯ ಕಾಂಗ್ರೆಸು [illegible] ಸಭೆಯ ಮೇರೆ ಕಾಂಗ್ರೆಸು ಉಮೇದುವಾರನಾಗಿ ನಿಲ್ಲಲು ನನ್ನನ್ನು ಶ್ರೀ ನಿಜಲಿಂಗಪ್ಪನವರು ಕೇಳಬಹುದೆಂದು ನಂಬಿದ್ದೆ. ಆ ವೇಳೆ ನನಗೆ ಯಾವ ಕರೆಯೂ ಬರಲಿಲ್ಲ. ಆ ನಂತರ ಸುಂಟಿಕೊಪ್ಪಲಿನ ಕಾಫಿ ಪ್ಲಾಂಟರು ಶ್ರೀ ಕೆ. ಕೆ. ನಂಜಪ್ಪನವರನ್ನು ಈ ಪಟ್ಟಣದ ಪರ ಕಾಂಗ್ರೆಸು ಉಮೇದುವಾರರಾಗಿ ನಿಲ್ಲಿಸಿದ ಸುದ್ದಿ ತಿಳಿದೆ. ಕೆಲವು ದಿವಸ ಕಳೆದ ನಂತರ ಶ್ರೀ. ಕೆ. ಕೆ. ನಂಜಪ್ಪನವರು ರಾಜೀನಾಮೆ ಕೊಟ್ಟು ಇವರ ಬದಲಿಗೆ ಶ್ರೀ. ಬಿ. ಎಸ್. ಕುಶಾಲಪ್ಪನವರನ್ನು ಕಾಂಗ್ರೆಸು ಉಮೇದುವಾರರನ್ನಾಗಿ ನಿಲ್ಲಿಸಿದರೆಂದೂ ಸಹ ತಿಳಿದೆ. ಯಾವ ಕಾರಣದಿಂದ ನನ್ನ ಹೆಸರನ್ನು ಸೂಚಿಸಲಿಲ್ಲ, ಶ್ರೀ. ಕೆ. ಕೆ. ನಂಜಪ್ಪನವರನ್ನು ಕಾಂಗ್ರೆಸು ಬಗ್ಗೆ ಉಮೇದುವಾರರಾಗಿ ನಿಲ್ಲಿಸಿದರು, ಅನಂತರ ಇವರು ರಾಜೀನಾಮೆ ಕೊಟ್ಟು ಶ್ರೀ. ಬಿ. ಎಸ್. ಕುಶಾಲಪ್ಪನವರು ಕಾಂಗ್ರೆಸು ಉಮೇದುವಾರರಾದರು ಎಂಬುದು ನನಗೆ ತಿಳಿಯದ ವಿಷಯ.

ಕರ್ನಾಟಕ ಪ್ರದೇಶ ಕಾಂಗ್ರೆಸು ಕಮಿಟಿಯವರು ನನಗೆ ಸ್ಥಾನ ಕೊಡದಿರುವ ವಿಷಯ ತಿಳಿದು ನನ್ನ ಕೆಲವು ಮಿತ್ರರು ನಾನು ಪ್ರತ್ಯೇಕ ಪಕ್ಷದ ಪರ ಉಮೇದುವಾರನಾಗಿ ನಿಲ್ಲಬೇಕೆಂದು ನನ್ನನ್ನು ಕೇಳಿಕೊಂಡರು. ತತ್ವಗಳ ಮಟ್ಟಿಗೆ ಕೊಡಗು ಕಾಂಗ್ರೆಸು ಪಕ್ಷಕ್ಕೂ ಪ್ರತ್ಯೇಕ ಪಕ್ಷಕ್ಕೂ ಯಾವ ವ್ಯತ್ಯಾಸವೂ ನನಗೆ ಕಂಡುಬರಲಿಲ್ಲ. ಪ್ರತ್ಯೇಕ ಪಕ್ಷದ ಗುರಿಯು ನಮಗೆ ಸಿಕ್ಕುವ ಶಾಸನ ಸಭೆಯ ಮೂಲಕ ದೇಶದ ಕಲ್ಯಾಣವನ್ನು ಸಾಧಿಸುವುದೇ ಆಗಿದೆಯೆಂದು ನನಗೆ ತಿಳಿಯಿತು. ಪ್ರದೇಶ ಕಾಂಗ್ರೆಸು ಕಮಿಟಿಯ ಗುರಿಯು ಕರ್ನಾಟಕ ಏಕೀಕರಣವನ್ನು ಸಾಧಿಸುವುದು ಎಂದು ಸಹ ತಿಳಿಯಿತು. ನನಗೆ ಕರ್ನಾಟಕ ಏಕೀಕರಣ ತತ್ವದಲ್ಲಿ ನಂಬಿಕೆ ಇಲ್ಲ. ಕಾಂಗ್ರೆಸು ಸಂಸ್ಥೆಯಲ್ಲಿ ಕಾಂಗ್ರೆಸು ತತ್ವಗಳಲ್ಲಿ ನಂಬಿಕೆಯುಂಟು. ಆದರೆ ಕರ್ನಾಟಕ ಏಕೀಕರಣ ತತ್ವದಲ್ಲಿ ನಂಬಿಕೆಯಿರುವುದು ಅವಶ್ಯವೆಂದು ನನಗೆ ಯಾವತ್ತೂ ಕಂಡುಬರಲಿಲ್ಲ. ಈಗಲೂ ಕರ್ನಾಟಕ ಏಕೀಕರಣ ಅವಶ್ಯವೆಂದು ನನಗೆ ಕಂಡುಬರುವುದಿಲ್ಲ. ಕರ್ನಾಟಕ ಪ್ರದೇಶ ಕಾಂಗ್ರೆಸು ಕಮಿಟಿಯವರು ಕರ್ನಾಟಕ ಏಕೀಕರಣದ ಗುರಿಯನ್ನಿಟ್ಟುಕೊಂಡು ಕೆಲಸ ಮಾಡುವುದು ನಮ್ಮ ದೇಶದ ಅಥವಾ ಭಾರತದ ದೃಷ್ಟಿಯಿಂದ ಸರಿಯಲ್ಲವೆಂದೇ ನನ್ನ ಭಾವನೆ. ಕರ್ನಾಟಕ ಪ್ರದೇಶ ಕಾಂಗ್ರೆಸು ಕಮಿಟಿಯವರು ತಮ್ಮ ಚುನಾವಣೆಯ ಘೋಷಣೆಯಲ್ಲಿ ಕರ್ನಾಟಕ ಏಕೀಕರಣವು ತಮ್ಮ ಮುಖ್ಯವಾದ ಗುರಿಗಳಲ್ಲಿ ಒಂದೆಂದು ಹೇಳಿ ಕೆಲಸ ಮಾಡುತ್ತಿದ್ದರೂ ಸಹ ಕರ್ನಾಟಕ ಪ್ರದೇಶ ಕಾಂಗ್ರೆಸು ಕಮಿಟಿಯ ಈ ಗುರಿಗೂ ಕಾಂಗ್ರೆಸು ಸಂಸ್ಥೆಯ ಧ್ಯೇಯಕ್ಕೂ ಯಾವ ಸಂಬಂಧವೂ ಇಲ್ಲವೆಂದು ನನ್ನ ಭಾವನೆ. ಪಂಡಿತ್ ನೆಹರೂರವರೂ ಸಹ ಭಾಷಾವಾರು ಪ್ರಾಂತರಚನೆಯು ಭಾರತದ ದೃಷ್ಟಿಯಿಂದ ತುಂಬಾ ಹಾನಿಕರವೆಂದೂ ತಾ. ೨೭-೧೨-೫೧ ರಲ್ಲಿ ವಿಜಯವಾಡದಲ್ಲಿ ಮಾಡಿದ ಭಾಷಣದಲ್ಲಿ ಸಾರಿರುತ್ತಾರೆ. ನನ್ನ ಅಭಿಪ್ರಾಯವು ಕಾಂಗ್ರೆಸು ತತ್ವಕ್ಕೆ ಯಾವ ರೀತಿಯಲ್ಲಿಯೂ ವಿರೋಧವಿಲ್ಲ. ಕರ್ನಾಟಕ ಏಕೀಕರಣ ಒಂದು ಬಿಟ್ಟು ಎಲ್ಲಾ ವಿಷಯಗಳಲ್ಲಿ ನಾನು ಕಾಂಗ್ರೆಸು ತತ್ವವನ್ನು ನಂಬಿದವನಾಗಿದ್ದೇನೆ. ಈ ವರೆಗೆ ನಾನು ರಾಜಕೀಯ ಕ್ಷೇತ್ರದಲ್ಲಿ ಯಾವ ಭಾಗ ವಹಿಸದಿದ್ದರೂ ಈಗ ಕಾಂಗ್ರೆಸಿನ ಪರ ನಿಂತಿರುವ ಕೆಲವು ಉಮೇದುವಾರರಂತೆ ಕಾಂಗ್ರೆಸು ಅಧಿಕಾರಕ್ಕೆ ಬರುವ ಮೊದಲು ನಾನು ಕಾಂಗ್ರೆಸು ಸಂಸ್ಥೆಗೆ ವಿರೋಧವಾದ ಯಾವ ಕೆಲಸವನ್ನೂ ಮಾಡಿದವನಲ್ಲ. ಪ್ರತಿ ಒಬ್ಬ ಮನುಷ್ಯನು ಅವನವನ ಕ್ಷೇತ್ರದಲ್ಲಿ ಅವನವನು ಮಾಡಬೇಕಾದ ಕೆಲಸಗಳನ್ನು ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಮಾಡಿದರೆ ಅವನೂ ಸಹ ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡಿದವರಂತೆ ದೇಶದ ಕಲ್ಯಾಣ ಮತ್ತು ಉತ್ಕರ್ಷಕ್ಕೆ ದುಡಿದ ವ್ಯಕ್ತಿಯೆಂದು ನಾನು ತಿಳಿದಿದ್ದೆ. ಈ ತಿಳುವಳಿಕೆಯಂತೆ ಈ ವರೆಗೂ ನಾನು ನನ್ನ ಅಲ್ಪ ರೀತಿಯಲ್ಲಿ ಕೆಲಸ ಮಾಡಿದ್ದೇನೆ. ಪ್ರತ್ಯೇಕ ಪಕ್ಷದವರು ನಾನು ಅವರ ಪರ ಉಮೇದುವಾರನಾಗಿ ನಿಲ್ಲಬೇಕೆಂದು ಕೇಳಿಕೊಂಡಾಗ, ಕರ್ನಾಟಕ ಏಕೀಕರಣದ ವಿಷಯದ ವಿನಾ ಎಲ್ಲಾ ವಿಷಯಗಳಲ್ಲಿ ಪ್ರತ್ಯೇಕ ಪಕ್ಷದವರ ಗುರಿಯೂ ಕಾಂಗ್ರೆಸು ತನ್ನ ಮುಂದೆ ಇಟ್ಟುಕೊಂಡ ಗುರಿಯೂ ಒಂದೇ ಆದ್ದರಿಂದಲೂ, ಪ್ರಜಾಪ್ರತಿನಿಧಿ ಸರಕಾರವು ಸಮರ್ಪಕವಾಗಿ ಸಾಗಬೇಕಾದರೆ ಪಾರ್ಟಿ ಮುಖಾಂತರ ಸಾಧ್ಯವೇ ವಿನಹ ಸ್ವತಂತ್ರರಾಗಿ ಶಾಸನ ಸಭೆಗೆ ಹೋದವರಿಗೆ ಸಾಧ್ಯವಿಲ್ಲವೆಂತಲೂ ನನಗೆ ಮನದಟ್ಟಾದ ಕಾರಣ ನಾನು ಪ್ರತ್ಯೇಕ ಪಕ್ಷದ ಪರ ಉಮೇದುವಾರನಾಗಿ ನಿಂತಿದ್ದೇನೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯವರು ನನ್ನನ್ನು ಕಾಂಗ್ರೆಸು ಉಮೇದುವಾರನಾಗಿ ನಿಲ್ಲಲು ಆರಿಸದಿರುವುದು, ಪ್ರದೇಶ ಕಾಂಗ್ರೆಸ್ ಕಮಿಟಿಯ ಕರ್ನಾಟಕ ಏಕೀಕರಣ ತತ್ವಕ್ಕೆ ನನ್ನ ಒಪ್ಪಿಗೆ ಇಲ್ಲದಿರುವುದೇ ಕಾರಣವೆಂದು ನಾನು ನಂಬುತ್ತೇನೆ. ಅಂದ ಮಾತ್ರಕ್ಕೆ ಕಾಂಗ್ರೆಸ್ ಸಂಸ್ಥೆಯಲ್ಲಿ, ಕಾಂಗ್ರೆಸ್ ತತ್ವಗಳಲ್ಲಿ ಪಂಡಿತ ನೆಹರೂರವರ ನಾಯಕತ್ವದಲ್ಲಿ ನನಗೆ ನಂಬಿಕೆಯಿಲ್ಲವೆಂದು ತಿಳಿಯಬಾರದೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಕಾಂಗ್ರೆಸಿನಲ್ಲಿ ಯಾವತ್ತೂ ನನಗೆ ನಂಬಿಕೆಯಿದೆ, ಪಂಡಿತ ನೆಹರೂರವರು ಭಾರತದ ಕಲ್ಯಾಣವನ್ನು ಸಾಧಿಸಲು ಮುಖ್ಯ ಮಂತ್ರಿಯಾಗಿರಬೇಕು. ಇವರಿಗೆ ಅವಶ್ಯ ಬೆಂಬಲ ಕೊಡಬೇಕು ಎಂಬುದೇ ನನ್ನ ಮತ್ತು ಪ್ರತ್ಯೇಕ ಪಕ್ಷದವರೆಲ್ಲರ ಅಭಿಪ್ರಾಯ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯವರು ಕಾಂಗ್ರೆಸ್ ಮತ್ತು ದೇಶದ ಕಲ್ಯಾಣಕ್ಕೆ ಅವಶ್ಯವಿಲ್ಲದಂತಹ, ಬಹಳ ಮಟ್ಟಿಗೆ ವಿರೋಧವಾದ ಕರ್ನಾಟಕ ಏಕೀಕರಣ ತತ್ವಕ್ಕೆ ನನ್ನ ಒಪ್ಪಿಗೆ ಇಲ್ಲವೆಂಬ ಏಕಮಾತ್ರ ಕಾರಣದಿಂದ ನನ್ನನ್ನು ಕಾಂಗ್ರೆಸು ಪರ ಉಮೇದುವಾರನಾಗಿ ಚುನಾಯಿಸದೆ ಇರುವ ಮಾತ್ರಕ್ಕೆ ನಾನು ಕಾಂಗ್ರೆಸು ಸಂಸ್ಥೆಗೆ ವಿರೋಧವಾಗಿ ನಡೆದುಕೊಳ್ಳುವವನೆಂದು ನೀವು ಭಾವಿಸಬಾರದೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಈ ಕಾಂಗ್ರೆಸು ಉಮೇದುವಾರರ ಚುನಾವಣೆಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯವರು ಪಂಡಿತ ನೆಹರೂರವರು ಹೇಳಿರುವಂತೆ ನಡೆದುಕೊಂಡಿಲ್ಲ. ಕಾಂಗ್ರೆಸ್ ಮುಂದಾಳುಗಳಾದ ಶ್ರೀ ದಿವಾಕರ್, ಶ್ರೀ ಕರಮರಕರ್ ಇವರಿಗೆ ಸ್ಥಾನ ಕೊಟ್ಟಿಲ್ಲ. ಪಂಡಿತ ನೆಹರೂರವರಿಗೂ ಕೇಂದ್ರ ಕಾಂಗ್ರೆಸು ಪಾರ್ಲಿಮೆಂಟರಿ ಸಮಿತಿಯವರಿಗೂ ಈ ಮಹನೀಯರ ವಿಷಯ ಗೊತ್ತಿದ್ದ ಕಾರಣ ಅವರು ಕರ್ನಾಟಕ ಪ್ರದೇಶ ಕಾಂಗ್ರೆಸು ಕಮಿಟಿಯ ಶಿಫಾರಸಿಗೆ ವಿರೋಧವಾಗಿ ಚುನಾಯಿಸಲ್ಪಟ್ಟರು. ಕೊಡಗಿನಲ್ಲಿ ಶಾಸನ ಸಭೆಗೆ ಕಾಂಗ್ರೆಸು ಪರ ಉಮೇದುವಾರರನ್ನು ಆಯ್ಕೆ ಮಾಡುವ ವಿಷಯದಲ್ಲಿ ಈ ರೀತಿ ಕಾಂಗ್ರೆಸ್ ಕೇಂದ್ರ ಪಾರ್ಲಿಮೆಂಟರಿ ಸಮಿತಿಯವರು ಕೈ ಹಾಕುವುದಾದರೂ ಸಾಧ್ಯವಿಲ್ಲ. ಏಕೆಂದರೆ ಅವರಿಗೆ ಇಲ್ಲಿನ ಉಮೇದುವಾರರ ವಿಷಯದಲ್ಲಿ ಏನೂ ಗೊತ್ತಿರುವುದಿಲ್ಲ. ಅವರು ಡಿಸ್ಟ್ರಿಕ್ಟ್ ಮತ್ತು ಪ್ರದೇಶ ಕಾಂಗ್ರೆಸ್ ಕಮಿಟಿಗಳ ಅಭಿಪ್ರಾಯಗಳನ್ನೇ ಒಪ್ಪಬೇಕಾಗಿದೆ.

ಕಾಂಗ್ರೆಸ್ ಸಂಸ್ಥೆಯಿಂದ ಆರಿಸಲ್ಪಟ್ಟ ಕಾಂಗ್ರೆಸ್ ಉಮೇದುವಾರನಾಗಿ ನಿಂತು ನನ್ನ ಅಲ್ಪ ಸೇವೆಯನ್ನು ನಡೆಸುವದಕ್ಕೆ ಕೊಡಗು ಡಿಸ್ಟ್ರಿಕ್ಟ್ ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿಯವರು ಅವಕಾಶ ಕೊಡದ್ದರಿಂದ ಅದೇ ಗುರಿಯನ್ನು ಸಾಧಿಸಲು ಪ್ರತ್ಯೇಕ ಪಕ್ಷದ ಪರ ಉಮೇದುವಾರನಾಗಿ ನಿಂತಿರುವ ನನಗೆ ನೀವು ನಿಮ್ಮ ಅಮೂಲ್ಯವಾದ ಓಟನ್ನು ಕೊಟ್ಟು ನಿಮ್ಮ ಸೇವೆ ಮಾಡಲು ಅವಕಾಶ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಬಳಿ ಇರುವ ಮೇಲೆ ಹೇಳಿದ ಆಫೀಸರಿಂದ ಗುರುತಿನ ಚೀಟಿಯನ್ನು ವಾಪಾಸು ತೆಗೆದುಕೊಂಡು ಲೋಕಸಭೆಯ ಪೋಲಿಂಗ್ ಆಫೀಸರ ಬಳಿ ಹೋಗಿ ಗುರುತಿನ ಚೀಟಿಯನ್ನು ಅವರಿಗೆ ಕೊಟ್ಟು ಅವರಿಂದ ಲೋಕ ಸಭೆಯ ಹೆಸರು ಪಟ್ಟಿಯಿರುವ ಬ್ಯಾಲೆಟ್ ಪೇಪರನ್ನು ಪಡೆಯಬೇಕು. ಇಲ್ಲಿಂದ ಮುಂದೆ ಗುರುತಿನ ಚೀಟಿಯು ಅವಶ್ಯವಿಲ್ಲ. ಆ ಬ್ಯಾಲೆಟ್ ಪೇಪರನ್ನು ತೆಗೆದುಕೊಂಡು ಲೋಕಸಭೆಯ ಪೋಲಿಂಗ್ ಕೊಟಡಿಯೊಳಗೆ ಹಿಂದೆಯೇ ವಿವರಿಸಿರುವ ರೀತಿಯಲ್ಲಿ ನಿಮ್ಮ ವೋಟಿಂಗ್ ಹಕ್ಕನ್ನು ಚಲಾಯಿಸಿ ಹೊರಕ್ಕೆ ಬರುವುದು.

೬. ಈ ಬ್ಯಾಲಟ್ ಪೇಪರನ್ನು ಬಳಸುವ ವಿಚಾರದಲ್ಲಿ ಪದೇ ಪದೇ ಒತ್ತಿ ಹೇಳಿ ಜನಗಳಿಗೆ ತಿಳುವಳಿಕೆ ಕೊಡಬೇಕಾದ ಒಂದೆರಡು ಅಂಶಗಳಿವೆ. ಬ್ಯಾಲಟ್ ಪೇಪರನ್ನು ಪ್ರತಿಯೊಬ್ಬ ಚುನಾವಣಾದಾರನೂ ತನ್ನ ಸ್ವಂತ ವೋಟಿನ ಹಕ್ಕನ್ನು ಚಲಾಯಿಸಲು ಬ್ಯಾಲಟ್ ಪೆಟ್ಟಿಗೆಯಲ್ಲಿಯೇ ಹಾಕಬೇಕೇ ವಿನಃ ಅದನ್ನು ಪೋಲಿಂಗ್ ಸ್ಟೇಷನಿನಲ್ಲಿ ಎಲ್ಲಿಯೂ ಬಿಟ್ಟು ಹೋಗಕೂಡದು. (ಇದರಿಂದ ಆ ವೋಟಿನ ಕಾಗದ ದುರುಪಯೋಗವಾಗಲು ಅವಕಾಶ ಕೊಟ್ಟಂತಾಗುತ್ತದೆ) ಮತ್ತು ಖಂಡಿತವಾಗಿಯೂ ಸ್ಟೇಷನ್ನಿನ ಹೊರಗೆ ತೆಗೆದುಕೊಂಡು ಹೋಗಕೂಡದು. ಹಾಗೆ ಮಾಡುವುದು ಒಂದು ದೊಡ್ಡ ಅಪರಾಧವಾಗುತ್ತೆ. ಮತ್ತು ಹಾಗೆ ಮಾಡಿದವರು ಒಂದು ವರ್ಷದ ಕಠಿಣ ಶಿಕ್ಷೆಗಾಗಲೀ ಅಥವ ರೂ. ೫೦೦ ಜುಲ್ಮಾನೆಗಾಗಲೀ ಗುರಿಯಾಗುತ್ತಾರೆ. ಯಾರಾದರೂ ಹೀಗೆ ವೋಟಿಂಗ್ ಪೇಪರನ್ನು ಹೊರಕ್ಕೆ ತೆಗೆದುಕೊಂಡು ಹೋಗಬಹುದೆಂಬ ಅನುಮಾನ ಬಂದರೆ ಅವರನ್ನು ನಿಲ್ಲಿಸಿ ಜಪ್ತಿ ಮಾಡಲು ಪೋಲಿಂಗ್ ಸ್ಟೇಷನಿನ ಆಫೀಸರುಗಳಿಗೆ ಅಧಿಕಾರ ಕೊಡಲಾಗಿದೆ. ಮಹಿಳೆಯರು ಯಾರಾದರೂ ಇಂತಹ ಕೆಲಸ ಮಾಡಿದಲ್ಲಿ ಪೋಲಿಂಗ್ ಸ್ಟೇಷನ್ನಿನಲ್ಲಿರುವ ಲೇಡಿ ಅಸಿಸ್ಟೆಂಟ್ ಮೂಲಕ ಅವರನ್ನು ಪರೀಕ್ಷಿಸಲು ಅವಕಾಶವಿದೆ. ಯಾವುದಾದರೂ ವೋಟನ್ನು ಚಲಾಯಿಸಲು ಇಷ್ಟವಿಲ್ಲದಿರುವವರು ಆ ಬ್ಯಾಲಟ್ ಪೇಪರನ್ನು ಪ್ರಿಸೈಡಿಂಗ್ ಆಫೀಸರವರಿಗೆ ವಾಪಸು ಮಾಡಬೇಕು.

ಎರಡನೆಯದಾಗಿ, ನಮ್ಮಲ್ಲಿ ಶನಿವಾರ ಸಂತೆ, ಸುಂಟಿಕೊಪ್ಪ, ಶ್ರೀಮಂಗಲ, ಪೊನ್ನಂಪೇಟೆ, ವೀರಾಜಪೇಟೆ ಮತ್ತು ಸಿದ್ಧಾಪುರ ಈ ಆರು ಕ್ಷೇತ್ರಗಳಲ್ಲಿ ಪ್ರತಿಯೊಬ್ಬ ವೋಟರಿಗೂ ಎರಡು ವೋಟುಗಳನ್ನು ಚಲಾಯಿಸುವ ಹಕ್ಕಿದೆ. ಈ ಎರಡು ವೋಟುಗಳನ್ನು ಅವರವರ ಇಚ್ಛೆಯಂತೆ ಒಂದನ್ನು ಜನರಲ್ ಸೀಟಿಗೆ ಸ್ಪರ್ಧಿಸಿರುವ ಉಮೇದುವಾರರಿಗೂ ಇನ್ನೊಂದನ್ನು ರಿಸರ್ವ್ ಸೀಟಿಗೆ ಸ್ಪರ್ಧಿಸಿರುವ ಉಮೇದುವಾರರಿಗೂ ಕೊಡಬಹುದು. ಎರಡನ್ನೂ ಒಂದೇ ತರಹ ಸೀಟಿಗೆ ಸ್ಪರ್ಧಿಸಿರುವ ಇಬ್ಬರು ಬೇರೆ ಬೇರೆ ಉಮೇದುವಾರರಿಗೆ ಕೊಡಬಹುದು. ಆದರೆ ಎರಡು ಓಟುಗಳನ್ನು ಒಬ್ಬರೆ ಉಮೇದುವಾರರಿಗೆ ಕೊಡಕೂಡದು. ಒಂದೇ ಪೆಟ್ಟಿಗೆಯಲ್ಲಿ ಈ ಎರಡೂ ಓಟುಗಳು ಸಿಕ್ಕಿದ್ದಾದರೆ ಅದರಲ್ಲಿ ಒಂದು ವ್ಯರ್ಥವಾಗುತ್ತದೆ.

ಹಿಂದೆಯೇ ಹೇಳಿದಂತೆ ವೋಟಿಂಗಿಗೆ ಗೊತ್ತಾಗಿರುವ ಕಾಲ ಸಾಯಂಕಾಲ ೪-೩೦ ಘಂಟೆಗೆ ಮುಗಿಯುತ್ತದೆ. ಈ ಕಾಲದೊಳಗೆ ಇನ್ನೂ ಬ್ಯಾಲಟ್ ಪೇಪರನ್ನು ಪಡೆಯಬೇಕಾದ ವೋಟರುಗಳಿದ್ದಲ್ಲಿ ಅಂತಹವರನ್ನು ಇತರ ಜನಗಳಿಂದ ಬೇರ್ಪಡಿಸಿ ಅವರಿಗೆಲ್ಲಾ ತಕ್ಷಣ ಗುರುತಿನ ಚೀಟಿಯನ್ನು ಹಂಚಿ ಆ ಚೀಟಿ ಉಳ್ಳವರನ್ನು ಮಾತ್ರ ವೋಟು ಮಾಡಲು ಪೋಲಿಂಗ್ ಸ್ಟೇಷನಿನ ಬಳಿ ಇರದೆ ಆ ವೇಳೆ ಬಂದಲ್ಲಿ ಅಂಥವನಿಗೆ ಓಟು ಮಾಡಲು ಅವಕಾಶವಿರುವುದಿಲ್ಲ. ಎಲ್ಲರೂ ಓಟು ಮಾಡಿ ಮುಗಿಸಿದ ಮೇಲೆಯೂ ಕೂಡ ಪೋಲಿಂಗ್ ಸ್ಟೇಷನ್ನಿನ ಅಧಿಕಾರಿಗಳಿಗೆ ಸಾಮಾನ್ಯವಾಗಿ ಒಂದುವರೆ ಗಂಟೆಯ ಕೆಲಸವಿರುವುದರಿಂದ ಜನಗಳೆಲ್ಲಾ ಆದಷ್ಟು ಮುಂಚಿತವಾಗಿಯೇ ಬಂದು ಓಟಿಂಗ್ ಮುಗಿಸಿಕೊಂಡು ಅಧಿಕಾರಿಗಳ ಕೆಲಸದಲ್ಲಿ ಸಹಕರಿಸಿ ಸಹಾಯಮಾಡಬೇಕೆಂದು ಸೂಚಿಸಲಿಚ್ಛಿಸುತ್ತೇನೆ.

ಉಮೇದುವಾರರಾಗಲೀ ಅಥವಾ ಅವರ ಏಜಂಟರುಗಳಾಗಲೀ ಪೋಲಿಂಗ್ ಸ್ಟೇಷನ್ನಿನಲ್ಲಿದ್ದು ಅಲ್ಲಿನ ಓಟಿಂಗ್ ಕ್ರಮ ಬದ್ಧವಾಗಿಯೂ ನಿಷ್ಪಕ್ಷಪಾತವಾಗಿಯೂ ನಡೆಯುವುದನ್ನು ನೋಡುವ ಅವಕಾಶವನ್ನು ಅವರಿಗೆ ಕೊಟ್ಟಿರುತ್ತದೆ. ಆದರೆ ಅವರುಗಳು ಪ್ರಿಸೈಡಿಂಗ್ ಆಫೀಸರ ಬಳಿ ಇರಬೇಕು ವಿನಃ ಪೋಲಿಂಗ್ ಆಫೀಸರುಗಳ ಹತ್ತಿರ ಹೋಗಕೂಡದು. ಪೋಲಿಂಗ್ ಸ್ಟೇಷನ್ನಿನಲ್ಲಿ ನಡೆಯುವ ಕಾರ್ಯಕಲಾಪಗಳೆಲ್ಲಾ ರಹಸ್ಯವಾಗಿಯೇ ನಡೆಯಬೇಕಾದ್ದರಿಂದ ಈ ವಿಚಾರದಲ್ಲಿ ಎಲ್ಲರೂ ಸಹಕರಿಸಬೇಕು.

ಮಹಿಳೆಯರು ಓಟು ಮಾಡುವ ವಿಷಯದಲ್ಲಿ ಒಂದು ವಿಚಾರವನ್ನು ವಿಶೇಷವಾಗಿ ಸೂಚಿಸಬೇಕಾಗಿದೆ. ಈಗ ನಮ್ಮ ದೇಶದಲ್ಲಿ ಎಲ್ಲರಿಗೂ ದೊರೆತಿರುವ ವಯಸ್ಕರ ಮತದಾನ ಪದ್ಧತಿಯು ಓಟಿಂಗ್ ಏರ್ಪಾಡು ಗಂಡಸರಿಗೂ, ಹೆಂಗಸರಿಗೂ ಎಲ್ಲಾ ವಿಧಾನದಲ್ಲಿಯೂ ಸಮಾನವಾಗಿ ಅನ್ವಯಿಸುತ್ತದೆ. ಆದ್ದರಿಂದ ನಮ್ಮ ದೇಶದ ಮಹಿಳೆಯರೆಲ್ಲರೂ ಸಂಕೋಚವಿಲ್ಲದೆ ಹೆಚ್ಚಾಗಿ ಬಂದು ಈ ಚುನಾವಣೆಯಲ್ಲಿ ಓಟು ಮಾಡಿ ಸರ್ಕಾರ ನಡೆಸುವ ವಿಚಾರದಲ್ಲಿ ಅವರ ಅಭಿಮತವೇನೆಂಬುದನ್ನು ವ್ಯಕ್ತಗೊಳಿಸಬೇಕು. ಯಾರಿಗಾಗಲೀ ಈ ವಿಚಾರದಲ್ಲಿ ತಿಳುವಳಿಕೆ ಅಥವಾ ಅನುಭವ ಕಡಿಮೆ ಇದ್ದಲ್ಲಿ ಅವರಿಗೆ ಬೇಕಾದ ವಿಚಾರವನ್ನು ತಿಳಿಸಲು ಪೋಲಿಂಗ್ ಸ್ಟೇಷನ್ನಿನ ಅಧಿಕಾರಿಗಳಿಗೂ ಮತ್ತು ಅಲ್ಲಿರುವ ಲೇಡಿ ಅಸಿಸ್ಟೆಂಟರಿಗೂ ತಕ್ಕ ಸೂಚನೆಗಳನ್ನು ಕೊಡಲಾಗಿದೆ.

ಅಲ್ಲದೆ ಕಣ್ಣು ಕಾಣದೇ ಇರುವ ಇತರ ಅಂಗಗಳು ಉಪಯೋಗವಿಲ್ಲದ ಅಶಕ್ತರಾದ ಓಟರುಗಳು ಇದ್ದಲ್ಲಿ ಅವರು ಪ್ರಿಸೈಡಿಂಗ್ ಆಫೀಸರಿಂದ ಬೇಕಾದ ಸಹಾಯವನ್ನು ಪಡೆಯಲು ಅವಕಾಶವಿದೆ. ಇಂಥ ಪೆಟ್ಟಿಗೆಗೆ ತಮ್ಮ ಓಟನ್ನು ಹಾಕಬೇಕೆಂದು ಅವರಿಗೆ ತಿಳಿಸಿದಲ್ಲಿ ಅವರು ಅದಕ್ಕೆ ತಕ್ಕ ಏರ್ಪಾಡು ಮಾಡಿ ಆ ವಿಷಯವನ್ನು ರಹಸ್ಯವಾಗಿಟ್ಟಿರುತ್ತಾರೆ.

ಪ್ರತಿಯೊಬ್ಬ ಓಟರರೂ ಹೆಂಗಸಾಗಲೀ ಗಂಡಸಾಗಲೀ ಕಾಲ್ನಡಿಗೆಯಿಂದಾಗಲೀ ಅಥವಾ ತನ್ನದೇ ಆದ ಎತ್ತಿನಗಾಡಿ ಮೊದಲಾದ ಯಂತ್ರದ ಮೂಲಕ ಚಲಿಸದ ವಾಹನಗಳಲ್ಲಾಗಲೀ ಅಥವಾ ಸಾರ್ವಜನಿಕವಾದ ಚಲಿಸುತ್ತಿರುವ ಮೋಟಾರು ಬಸ್ಸುಗಳಲ್ಲಿ ತನ್ನ ಸ್ವಂತ ಖರ್ಚಿನಿಂದ ಪೋಲಿಂಗ್ ಸ್ಟೇಷನ್‌ಗಳಿಗೆ ಹೋಗಬೇಕು. ಈ ಉದ್ದೇಶದಿಂದಲೇ ಪೋಲಿಂಗ್ ಸ್ಟೇಷನ್‌ಗಳನ್ನು ಸರ್ವಸಾಧಾರಣವಾಗಿ ಮೂರು ಮೈಲಿ ಅಥವಾ ಅದಕ್ಕೆ ಕಮ್ಮಿ ದೂರದಲ್ಲಿ ನೇಮಿಸಲಾಗಿದೆ. ಉಮೇದುವಾರರ ಅಥವಾ ಅದರ ಏಜಂಟರುಗಳ ಖರ್ಚಿನಿಂದಾಗಲೀ ಮತ್ತು ಅವರು ಒದಗಿಸುವ ವಾಹನಗಳಲ್ಲಿಯಾಗಲೀ ಅಥವಾ ತಾವಾಗಿಯೇ ಬಾಡಿಗೆ ಮಾಡಿಕೊಳ್ಳಬಹುದಾದ ಯಂತ್ರ ಚಲನೆಯ, ಮೋಟಾರು ಕಾರು ಇತ್ಯಾದಿ ವಾಹನಗಳಲ್ಲಾಗಲೀ ಓಟು ಕೊಡಲು ಮತ ಪೆಟ್ಟಿಗೆಗೆ ಹೋಗುವುದು ಅಪರಾಧವೆಂದು ಗ್ರಹಿಸಲಾಗಿದೆ; ಈ ಸಂಬಂಧ ಅಪರಾಧಿಯೆಂದು ಕಂಡು ಬಂದಲ್ಲಿ ರೂ. ೨೫೦|- ಜುಲ್ಮಾನೆ ವಿಧಿಸುವ ಅಧಿಕಾರ ಸರಕಾರದವರಿಗೆ ಕೊಡಲ್ಪಟ್ಟಿದೆ.

ಚುನಾವಣೆಯೆಂಬುದು ನಮ್ಮ ದೇಶಕ್ಕೆ ಹೊಸದಲ್ಲ. ಈಗ ೨೫ ವರ್ಷಗಳಿಂದಲೂ ನಮ್ಮ ಜನರಿಗೆ ಚುನಾವಣೆಯ ಕಾರ್ಯಕಲಾಪಗಳ ಮಾಹಿತಿ ಇದೆ. ಆದರೆ ಪ್ರೌಢ ಮತದಾನದ ರೀತಿ ಚುನಾವಣೆ ನಡೆಯುವ ಸ್ವತಂತ್ರ ಭಾರತದ ಈ ಸಾರ್ವತ್ರಿಕ ಚುನಾವಣೆಯು ತುಂಬಾ ದೊಡ್ಡದು, ಮತ್ತು ಘನವಾದದ್ದಾಗಿದೆ. ವ್ಯಕ್ತಿವ್ಯತ್ಯಾಸವಿಲ್ಲದೆ ಅತಿ ಧನಿಕನಿಂದ ಅತೀ ಬಡವನ ವರೆಗೂ ಜಾತಿ, ಮತ, ಸಂಪತ್ತು ಜನಾಂಗ ಬೇಧವಿಲ್ಲದೆ ಪ್ರತಿಯೊಬ್ಬರಿಗೂ ಒಂದೇ ಓಟಿನ ಹಕ್ಕು ದೊರೆತಿದೆ. ಕೊಡಗಿನಲ್ಲಿ ಈ ವರೆಗೆ ಮತದಾರರು ವರ್ತಿಸಿದ ರೀತಿ ಸ್ತುತ್ಯಾರ್ಹವಾಗಿದೆ. ಇನ್ನು ಮುಂದಕ್ಕೂ ಹೀಗೆಯೇ ವರ್ತಿಸಿ ಭಾರತದ ಪ್ರಜೆಯೆಂಬ ಕೀರ್ತಿಯನ್ನು ಕಾಪಾಡಲು ಪ್ರತಿಯೊಬ್ಬನೂ ಮತದಾನ ಮಾಡುವ ಕಾರ್ಯದಲ್ಲಿ ಸಹಕರಿಸಿ ಈ ದೊಡ್ಡ ಕೆಲಸವನ್ನು ಜಯಪ್ರದವಾಗಿ ಪೂರೈಸಬೇಕೆಂದು ನಾನು ಹಾರೈಸುತ್ತೇನೆ.

ಪ್ರತಿಯೊಂದು ಪೋಲಿಂಗ್ ಸ್ಟೇಷನ್ನಿನಲ್ಲಿಯೂ ಅಲ್ಲಿನ ಕಾರ್ಯಕಲಾಪಗಳು ಕ್ರಮಬದ್ಧವಾಗಿಯೂ ಗಲಭೆ ತೊಂದರೆಗಳಿಲ್ಲದೆ ಶಾಸನೋಕ್ತ ಪ್ರಕಾರವಾಗಿಯೂ ನಡೆಸುವುದು ಪ್ರಿಸೈಡಿಂಗ್ ಆಫೀಸರವರ ಜವಾಬ್ದಾರಿಯಾಗಿರುತ್ತದೆ. ಇದನ್ನು ನಿರ್ವಹಿಸಲು ಬೇಕಾದ ಅಧಿಕಾರ ಪೂರ್ತಿ ಅವರಿಗೆ ಕೊಡಲಾಗಿದೆ. ಪೋಲಿಂಗ್ ಸ್ಟೇಷನ್ನಿನ ಒಳಗಡೆಯಾಗಲೀ ಅಥವಾ ಹತ್ತಿರದಲ್ಲಿಯಾಗಲೀ ಯಾರಾದರೂ ಗಲಾಟೆ ಅಥವಾ ತೊಂದರೆ ಮಾಡುತ್ತಿದ್ದು ಅದರಿಂದ ಚುನಾವಣೆಗೆ ತೊಂದರೆಯಾದಲ್ಲಿ ಅಂತವರನ್ನು ಅವರು ಹೊರಗೆ ಕಳುಹಿಸಬಹುದು. ಯಾರಾದರೂ ಉಮೇದುವಾರರಿಗಾಗಿ ಕ್ಯಾನ್ವಾಸ್ ಮಾಡುತ್ತಿದ್ದರೆ ಅದನ್ನು ಪೋಲೀಸಿನವರ ಮುಖಾಂತರ ನಿಲ್ಲಿಸಬಹುದು. ಬಹಳ ಗಲಾಟೆಯಾಗಿ ಚುನಾವಣೆ ಸರಿಯಾಗಿ ನಡೆಯಲು ಅವಕಾಶವಿಲ್ಲದ ಪಕ್ಷದಲ್ಲಿ ಚುನಾವಣೆಯನ್ನು ಮುಂದುವರಿಸಲು ಕೂಡ ಅವರಿಗೆ ಅಧಿಕಾರವಿದೆ. ಆದರೆ ಚುನಾವಣೆಗಳು ನಡೆಯುವದು ಸಾರ್ವಜನಿಕರ ಹಿತಕ್ಕೇ ಆಗಿರುವುದರಿಂದ ಈ ಪ್ರಾಮುಖ್ಯವಾದ ಉದ್ಯಮದಲ್ಲಿ ಉಮೇದುವಾರರು, ಅವರ ಏಜಂಟರುಗಳು ಮತ್ತು ಸಾರ್ವಜನಿಕರು ಎಲ್ಲರೂ ಬೇಕಾದ ಸಹಾಯ ಮತ್ತು ಸಹಕಾರವನ್ನು ನೀಡಿ ಕೊಡಗಿನ ಚುನಾವಣೆಗಳು ನಮ್ಮ ನೆರೆ ಪ್ರಾಂತ್ಯಗಳಿಗೆ ಮಾದರಿಯಾಗುವಂತೆ ಮಾಡಬೇಕೆಂದು ಸರ್ಕಾರದವರ ಆಶಯವಾಗಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆಲ್ಲಾ ನಿಷ್ಪಕ್ಷಪಾತವಾಗಿಯೂ, ದೇಶದ ಹಿತದೃಷ್ಟಿಯಿಂದಲೂ ಆಸಕ್ತಿಯಿಂದಲೂ ಕೆಲಸಮಾಡಬೇಕೆಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಎಲ್ಲರ ಸಹಕಾರದಿಂದ ನಮ್ಮ ಚುನಾವಣೆಗಳು ಬಹಳ ಯಶಸ್ವಿಯಾಗಿ ನಡೆಯುವುವೆಂದು ನಿರೀಕ್ಷಿಸಲಾಗಿದೆ.

ಎನ್. ಸಿ. ಸುಬ್ಬಯ್ಯ,
ಚೀಫ್ ಇಲೆಕ್ಟೋರಲ್ ಆಫೀಸರು.

ಜನರಲ್ ಕಾರ್ಯಪ್ಪನವರ ಉಪದೇಶ.

ಡೆಹರಾಡೂನಿನ ನ್ಯಾಷನಲ್ ಡಿಫೆನ್ಸ್ ಎಕೆಡೆಮಿಯಿಂದ ಉತ್ತೀರ್ಣರಾಗಿ ಹೋಗುತ್ತಿರುವ ಮಿಲಿಟರಿ ವಿಂಗ್ ಕ್ಯಾಡೆಟ್‌ಗಳನ್ನುದ್ದೇಶಿಸಿ ಮಾತನಾಡುತ್ತಾ ಭಾರತದ ಸೇನಾಪತಿ ಜನರಲ್ ಕಾರ್ಯಪ್ಪನವರು "ಸಿಗರೇಟು ಸೇದುವದು ಮತ್ತು ಕುಡಿಯುವದು ಆಫೀಸರಿಗೆ ಅವಶ್ಯವೆಂದು ತಿಳಿಯಬೇಡಿರಿ. ಇವೆರಡರ ಮೇಲಿನ ಹಣವನ್ನು ಉಳಿಸಿ ಉಳಿದ ಲಾಭದಾಯಕ ವಸ್ತುಗಳ ಮೇಲೆ ಖರ್ಚು ಮಾಡಿರಿ. ನಾನು ಕುಡಿಯುವದೂ ಇಲ್ಲ, ಸಿಗರೇಟು ಸೇದುವದೂ ಇಲ್ಲ. ಒಂದು ವೇಳೆ ಈ ಅಭ್ಯಾಸಗಳು ಬೇಕೆಂದೆನಿಸಿದರೆ ಅದನ್ನು ಹತೋಟಿಯಲ್ಲಿಟ್ಟುಕೊಳ್ಳಿರಿ. ಇಂದಿನ ತರುಣರು ಬಹಳ ಸ್ವಲ್ಪ ದುಃಸ್ವಭಾವದವರಾಗಿರುವರೆಂದು ಕಾಣುತ್ತದೆ. ನೀವು ಸಿನೇಮಾ ನಾಟ್ಯಗೃಹಗಳಿಗೆ ಹೋಗಬಹುದು. ಆದರೆ ಬಂದೂಕು ಹೊಡೆಯುವದು, ಶಿಕಾರಿ ಮತ್ತು ಮೀನು ಹಿಡಿಯುವುದು ವ[...] ಕಾರ್ಯಗಳಲ್ಲಿ ಹೆಚ್ಚಾಗಿ ಭಾಗವಹಿ[...]ಕು." ಎಂದು ಹೇಳಿದರು.

ಶ್ರೀ ಕೆ. ಯಂ. ನೊಣಗಪ್ಪ[...]
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಮಡಿಕೇರಿ ಮತದಾರರಲ್ಲಿ

ಶ್ರೀ ಎಸ್. ಆರ್. ಗೋಪಾಲಕೃಷ್ಣನ

ವಿನಂತಿಗಳು.

ನಾನು ಮಡಿಕೇರಿ ಕ್ಷೇತ್ರದಿಂದ ಕೊಡಗು ಶಾಸನ ಸಭೆಗೆ ಪ್ರತ್ಯೇಕ ಪಕ್ಷದ ಪರ ಉಮೇದುವಾರನಾಗಿ ನಿಂತ ಸಂಗತಿ ನನ್ನ ಮಿತ್ರರಿಗೆ ತಿಳಿದ ನಂತರ ಅನೇಕರು ನನ್ನ ಸಂಗಡ ನನಗೆ ಕಾಂಗ್ರೆಸು ಮಹಾ ಸಂಸ್ಥೆಯಲ್ಲಿ ಈ ವರೆವಿಗೂ ಇರುವ ಅಭಿಮಾನ ನನಗೆ ಚೆನ್ನಾಗಿ ಗೊತ್ತಿದೆ. ಆದರೂ ಕಾಂಗ್ರೆಸು ಸಂಸ್ಥೆಯ ಪರ ಉಮೇದುವಾರನಾಗಿ ನಿಲ್ಲುವುದರ ಬದಲು ಪ್ರತ್ಯೇಕ ಪಕ್ಷದ ಪರ ಏತಕ್ಕಾಗಿ ನಿಂತಿದ್ದೀರಿಯೆಂದು ಪ್ರಶ್ನಿಸಿರುತ್ತಾರೆ. ಈ ಪ್ರಶ್ನೆಗೆ ನಾನು ಅವರಿಗೆ ನನ್ನ ವಿಷಯವನ್ನು ಹೇಳಿ ಸಮಾಧಾನಪಡಿಸಿರುತ್ತೇನೆ. ಈ ಪ್ರಶ್ನೆಯು ಪದೇ ಪದೇ ಬರುತ್ತಿರುವುದರಿಂದ ನಿಮಗೆ ಎಲ್ಲಾ ವಿಷಯವನ್ನು ವಿಷದವಾಗಿ ತಿಳಿಸುವುದು ನನ್ನ ಕರ್ತವ್ಯವೆಂದು ನಂಬಿ ಇದನ್ನು ನಿಮ್ಮ ಮುಂದಿಟ್ಟಿದ್ದೇನೆ.

ಈ ಪಟ್ಟಣದ ಬಗ್ಗೆ ಉಮೇದುವಾರನಾಗಿ ನಿಲ್ಲುವ ಅಭಿಪ್ರಾಯವು ನನ್ನಲ್ಲಿ ಹುಟ್ಟಿದ್ದು ನನಗೆ ತುಂಬಾ ಅಭಿಮಾನವಿರುವ ಈಗ ಕೊಡಗು ಕಾಂಗ್ರೆಸು ಸಂಸ್ಥೆಯಲ್ಲಿ ಇರುವ ನನ್ನ ಒಬ್ಬರು ಮಿತ್ರರು ಮಡಿಕೇರಿಯಿಂದ ಕಾಂಗ್ರೆಸು ಸಂಸ್ಥೆಯ ಉಮೇದುವಾರರಾಗಿ ನೀವು ನಿಲ್ಲಬೇಕೆಂದು ನನಗೆ ಸೂಚಿಸಿದಾಗ. ಅವರ ಸೂಚನೆಗೆ ನಾನು ಒಪ್ಪಿದೆ. ಕೊಡಗು ಡಿಸ್ಟ್ರಿಕ್ಟ್ ಕಾಂಗ್ರೆಸು ಕಮಿಟಿಯ ವೈಸ್‌ಪ್ರೆಸಿಡೆಂಟರು ನನ್ನನ್ನು ಕಾಂಗ್ರೆಸು ಪರ ನಿಲ್ಲುವಂತೆ ... ಕೊಳ್ಳುವರೆಂದು ಅವರು ನನ್ನಲ್ಲಿ ಹೇಳಿದರು. ಅವರು ಮತ್ತು ಕಾಂಗ್ರೆಸು ಸಂಸ್ಥೆಯಲ್ಲಿ ಅಭಿಮಾನವಿರುವ ಇನ್ನಿತರರು ಸಹ ಈ ಪಟ್ಟಣದ ಬಗ್ಗೆ ನನ್ನನ್ನು ಕಾಂಗ್ರೆಸು ಉಮೇದುವಾರನಾಗಿ ಚುನಾಯಿಸಬೇಕೆಂದು ಡಿ. ಸಿ. ಸಿ. ವೈಸ್‌ಪ್ರೆಸಿಡೆಂಟರವರಿಗೆ ಸೂಚಿಸಿದ್ದು ನನಗೆ ತಿಳಿಯಬಂತು. ಆದರೆ ನನಗೆ ತಿಳಿಸಿದ ಪ್ರಕಾರ ಡಿ. ಸಿ. ಸಿ. ವೈಸ್ ಪ್ರೆಸಿಡೆಂಟರಿಂದ ಕೆಲವು ದಿನಗಳವರೆಗೆ ನಾನು ಕಾಂಗ್ರೆಸು ಸಂಸ್ಥೆಯ ಪರ ಉಮೇದುವಾರನಾಗಿ ನಿಲ್ಲಬೇಕೆಂಬ ಕೇಳಿಕೆ ಬರಲಿಲ್ಲ. ಆಗ ನಾನಾಗಿಯೇ ಅವರಲ್ಲಿ ಈ ವಿಷಯ ಪ್ರಸ್ತಾಪಿಸಿದೆ. ನಾನು ಕಾಂಗ್ರೆಸು ಪರ ಈ ಕ್ಷೇತ್ರದಿಂದ ಉಮೇದುವಾರನಾಗಿ ನಿಲ್ಲುವುದು ತನಗೂ ಒಪ್ಪಿಗೆಯೇ ಎಂದೂ, ಆದರೆ ಕಾಂಗ್ರೆಸು ಉಮೇದುವಾರರಾಗಿ ಡಾಕ್ಟರ್ ನಂಜುಂಡೇಶ್ವರನವರು ನಿಲ್ಲುವ ಅಪೇಕ್ಷೆಯುಳ್ಳವರಾಗಿದ್ದಾರೆ; ಇವರು ಈ ಮೊದಲು ಕಾಂಗ್ರೆಸು ಸಂಸ್ಥೆಗಾಗಿ ದುಡಿದವರಾದರೂ ಇವರಿಗೆ ಕಾಂಗ್ರೆಸು ತತ್ವಗಳಲ್ಲಿ ನಂಬಿಕೆ ಇಲ್ಲವೆ, ಇವರು ಹೆಚ್ಚಿನ ಮಟ್ಟಿಗೆ ಸಮತಾವಾದಿಗಳೇ ಆಗಿರುವುದರಿಂದ ಇವರು ಕಾಂಗ್ರೆಸು ಪರ ಉಮೇದುವಾರರಾಗಲು ತನಗೆ ತೃಪ್ತಿಯಿಲ್ಲದಿದ್ದರೂ ಸಹ ಇವರನ್ನು ಇವರು ಹಿಂದೆ ಮಾಡಿದ ಕಾಂಗ್ರೆಸು ಕೆಲಸಕ್ಕಾಗಿ ಪ್ರದೇಶ ಕಾಂಗ್ರೆಸು ಕಮಿಟಿಯವರು ಚುನಾಯಿಸುವ ಸಂದರ್ಭವಿರುವುದರಿಂದ ನನ್ನನ್ನು ಕಾಂಗ್ರೆಸು ಉಮೇದುವಾರನಾಗಿ ನಿಲ್ಲಲು ತಾನು ಕೇಳಿಕೊಳ್ಳಲಿಲ್ಲವೆಂದೂ, ನಾನು ಸ್ವತಂತ್ರವಾಗಿ ನಿಲ್ಲುವುದು ಉತ್ತಮವೆಂದೂ ಅವರು ನನ್ನಲ್ಲಿ ಹೇಳಿದರು. ಇವರ ಮಾತಿನಿಂದ ಡಾಕ್ಟರ್ ನಂಜುಂಡೇಶ್ವರನವರಿಗೆ ಪ್ರದೇಶ ಕಾಂಗ್ರೆಸು ಕಮಿಟಿಯವರು ಸ್ಥಾನ ಕೊಡಬಹುದೆಂಬುದೇ ಒಂದು ಕಾರಣ ವಿನಹ ನನ್ನನ್ನು ಕಾಂಗ್ರೆಸು ಉಮೇದುವಾರನಾಗಿ ಚುನಾಯಿಸಲು ಇವರ ಮಟ್ಟಿಗೆ ಬೇರೆ ಯಾವ ಅಭ್ಯಂತರವೂ ಇರಲಿಲ್ಲವೆಂದು ನನಗೆ ಕಂಡು ಬಂತು. ಆ ನಂತರ ಕಾಂಗ್ರೆಸು ಪರ ಉಮೇದುವಾರರನ್ನು ಚುನಾಯಿಸುವ ಬಗ್ಗೆ ಮಡಿಕೇರಿಗೆ ಕರ್ನಾಟಕ ಪ್ರದೇಶ ಕಾಂಗ್ರೆಸು ಕಮಿಟಿಯ ಪ್ರೆಸಿಡೆಂಟರಾದ ಶ್ರೀ ನಿಜಲಿಂಗಪ್ಪನವರು ಬಂದದ್ದು ನಿಮಗೆ ತಿಳಿದ ವಿಷಯ. ಇವರು ಬಂದಾಗ ಡಾಕ್ಟರ್ ನಂಜುಂಡೇಶ್ವರನವರನ್ನು ಚುನಾಯಿಸಲಿಲ್ಲ. ಇಲ್ಲಿ ಕಾಂಗ್ರೆಸು ನ ಪಕ್ಷೀಯರ ಸೂಚನೆ ಮೇರೆ ಕಾಂಗ್ರೆಸು ಉಮೇದುವಾರನಾಗಿ ನಿಲ್ಲಲು ನನ್ನನ್ನು ಶ್ರೀ ನಿಜಲಿಂಗಪ್ಪನವರು ಕೇಳಬಹುದೆಂದು ನಂಬಿದ್ದೆ. ಆ ಮೇರೆ ನನಗೆ ಯಾವ ಕರೆಯೂ ಬರಲಿಲ್ಲ. ಆ ನಂತರ ಸಂಟಿಕೊಪ್ಪಲಲ್ಲಿರುವ ಕಾಫಿ ಪ್ಲಾಂಟರು ಶ್ರೀ ಕೆ. ಕೆ. ನಂಜಪ್ಪನವರನ್ನು ಈ ಪಟ್ಟಣದ ಪರ ಕಾಂಗ್ರೆಸು ಉಮೇದುವಾರರಾಗಿ ನಿಲ್ಲಿಸಿದ ಸಂಗತಿ ತಿಳಿದೆ. ಕೆಲವು ದಿವಸ ಕಳೆದ ನಂತರ ಶ್ರೀ. ಕೆ. ಕೆ. ನಂಜಪ್ಪನವರು ರಾಜಿನಾಮೆ ಕೊಟ್ಟು ಇವರ ಬದಲಿಗೆ ಶ್ರೀ. ಬಿ. ಎಸ್. ಕುಶಾಲಪ್ಪನವರನ್ನು ಕಾಂಗ್ರೆಸು ಉಮೇದುವಾರರಾಗಿ ನಿಲ್ಲಿಸಿದರೆಂದೂ ಸಹ ತಿಳಿದೆ. ಯಾವ ಕಾರಣದಿಂದ ನನ್ನ ಹೆಸರನ್ನು ಸೂಚಿಸಲಿಲ್ಲ, ಶ್ರೀ. ಕೆ. ಕೆ. ನಂಜಪ್ಪನವರನ್ನು ಕಾಂಗ್ರೆಸು ಬಗ್ಗೆ ಉಮೇದುವಾರರಾಗಿ ನಿಲ್ಲಿಸಿದರು, ಅನಂತರ ಇವರು ರಾಜಿನಾಮೆ ಕೊಟ್ಟು ಶ್ರೀ. ಬಿ. ಎಸ್. ಕುಶಾಲಪ್ಪನವರು ಕಾಂಗ್ರೆಸು ಉಮೇದುವಾರರಾದರು ಎಂಬುದು ನನಗೆ ತಿಳಿಯದ ವಿಷಯ.

ಕರ್ನಾಟಕ ಪ್ರದೇಶ ಕಾಂಗ್ರೆಸು ಕಮಿಟಿಯವರು ನನಗೆ ಸ್ಥಾನ ಕೊಡದೆ ಇರುವ ವಿಷಯ ತಿಳಿದು ನನ್ನ ಕೆಲವು ಮಿತ್ರರು ನಾನು ಪ್ರತ್ಯೇಕ ಪಕ್ಷದ ಪರ ಉಮೇದುವಾರನಾಗಿ ನಿಲ್ಲಬೇಕೆಂದು ನನ್ನನ್ನು ಕೇಳಿಕೊಂಡರು. ತತ್ವಗಳ ಮಟ್ಟಿಗೆ ಕೊಡಗು ಕಾಂಗ್ರೆಸು ಪಕ್ಷಕ್ಕೂ ಪ್ರತ್ಯೇಕ ಪಕ್ಷಕ್ಕೂ ಯಾವ ವ್ಯತ್ಯಾಸವೂ ನನಗೆ ಕಂಡು ಬರಲಿಲ್ಲ. ಪ್ರತ್ಯೇಕ ಪಕ್ಷದ ಗುರಿಯು ನಮಗೆ ಸಿಕ್ಕಿನ ರಾಜ್ಯ ಸಭೆಯ ಮೂಲಕ ದೇಶದ ಕಲ್ಯಾಣವನ್ನು ಸಾಧಿಸುವುದೇ ಆಗಿದೆಯೆಂದು ನನಗೆ ತಿಳಿಯಿತು. ಪ್ರದೇಶ ಕಾಂಗ್ರೆಸು ಕಮಿಟಿಯ ಗುರಿಯು ಕರ್ನಾಟಕ ಏಕೀಕರಣವನ್ನು ಸಾಧಿಸುವುದು ಎಂದು ಸಹ ತಿಳಿಯಿತು. ನನಗೆ ಕರ್ನಾಟಕ ಏಕೀಕರಣ ತತ್ವದಲ್ಲಿ ನಂಬಿಕೆ ಇಲ್ಲ. ಕಾಂಗ್ರೆಸು ಸಂಸ್ಥೆಯಲ್ಲಿ ಕಾಂಗ್ರೆಸು ತತ್ವಗಳಲ್ಲಿ ನಂಬಿಕೆಯಿರಬೇಕಾದರೆ ಕರ್ನಾಟಕ ಏಕೀಕರಣ ತತ್ವದಲ್ಲಿ ನಂಬಿಕೆಯಿರುವುದು ಅವಶ್ಯವೆಂದು ನನಗೆ ಯಾವತ್ತೂ ಕಂಡುಬರಲಿಲ್ಲ. ಈಗಲೂ ಕರ್ನಾಟಕ ಏಕೀಕರಣ ಅವಶ್ಯವೆಂದು ನನಗೆ ಕಂಡುಬರುವುದಿಲ್ಲ. ಕರ್ನಾಟಕ ಪ್ರದೇಶ ಕಾಂಗ್ರೆಸು ಕಮಿಟಿಯವರು ಕರ್ನಾಟಕ ಏಕೀಕರಣದ ಗುರಿಯನ್ನಿಟ್ಟುಕೊಂಡು ಕೆಲಸ ಮಾಡುವುದು ನಮ್ಮ ದೇಶದ ಅಥವಾ ಭಾರತದ ದೃಷ್ಟಿಯಿಂದ ಸರಿಯಲ್ಲವೆಂದೇ ನನ್ನ ಭಾವನೆ. ಕರ್ನಾಟಕ ಪ್ರದೇಶ ಕಾಂಗ್ರೆಸು ಕಮಿಟಿಯವರು ತಮ್ಮ ಚುನಾವಣೆಯ ಘೋಷಣೆಯಲ್ಲಿ ಕರ್ನಾಟಕ ಏಕೀಕರಣವು ತಮ್ಮ ಮುಖ್ಯವಾದ ಗುರಿಗಳಲ್ಲಿ ಒಂದೆಂದು ಹೇಳಿ ಕೆಲಸ ಮಾಡುತ್ತಿದ್ದರೂ ಸಹ ಕರ್ನಾಟಕ ಪ್ರದೇಶ ಕಾಂಗ್ರೆಸು ಕಮಿಟಿಯ ಈ ಗುರಿಗೂ ಕಾಂಗ್ರೆಸು ಸಂಸ್ಥೆಯ ಧ್ಯೇಯಕ್ಕೂ ಯಾವ ಸಂಬಂಧವೂ ಇಲ್ಲವೆಂದು ನನ್ನ ಭಾವನೆ. ಪಂಡಿತ್ ನೆಹರೂರವರೂ ಸಹ ಭಾಷಾವಾರು ಪ್ರಾಂತರಚನೆಯು ಭಾರತದ ದೃಷ್ಟಿಯಿಂದ ತುಂಬಾ ಹಾನಿಕರವೆಂದು ತಾ. ೨೭-೧೨-೫೧ ರಲ್ಲಿ ವಿಜಯವಾಡದಲ್ಲಿ ಮಾಡಿದ ಭಾಷಣದಲ್ಲಿ ಸಾರಿರುತ್ತಾರೆ. ನನ್ನ ಅಭಿಪ್ರಾಯವು ಕಾಂಗ್ರೆಸು ತತ್ವಕ್ಕೆ ಯಾವ ರೀತಿಯಲ್ಲಿಯೂ ವಿರೋಧವಿಲ್ಲ. ಕರ್ನಾಟಕ ಏಕೀಕರಣ ಒಂದು ಬಿಟ್ಟು ಎಲ್ಲಾ ವಿಷಯಗಳಲ್ಲಿ ನಾನು ಕಾಂಗ್ರೆಸು ತತ್ವವನ್ನು ನಂಬಿದವನಾಗಿದ್ದೇನೆ. ಈ ವರೆವಿಗೆ ನಾನು ರಾಜಕೀಯ ಕ್ಷೇತ್ರದಲ್ಲಿ ಯಾವ ಭಾಗ ವಹಿಸದಿದ್ದರೂ ಈಗ ಕಾಂಗ್ರೆಸಿನ ಪರ ನಿಂತಿರುವ ಕೆಲವು ಉಮೇದುವಾರರಂತೆ ಕಾಂಗ್ರೆಸು ಅಧಿಕಾರಕ್ಕೆ ಬರುವ ಮೊದಲು ನಾನು ಕಾಂಗ್ರೆಸು ಸಂಸ್ಥೆಗೆ ವಿರೋಧವಾದ ಯಾವ ಕೆಲಸವನ್ನು ಮಾಡಿದವನಲ್ಲ. ಪ್ರತಿಯೊಬ್ಬ ಮನುಷ್ಯನು ಅವನವನ ಕ್ಷೇತ್ರದಲ್ಲಿ ಅವನವನು ಮಾಡಬೇಕಾದ ಕೆಲಸಗಳನ್ನು ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಮಾಡಿದರೆ ಅವನೂ ಸಹ ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡಿದವರಂತೆ ದೇಶದ ಕಲ್ಯಾಣ ಮತ್ತು ಏಳಿಗೆಗೆ ದುಡಿದ ವ್ಯಕ್ತಿಯೆಂದು ನಾನು ತಿಳಿದಿದ್ದೇನೆ. ಈ ತಿಳುವಳಿಕೆಯಂತೆ ಈ ವರೆಗೂ ನಾನು ನನ್ನ ಅಲ್ಪ ರೀತಿಯಲ್ಲಿ ಕೆಲಸ ಮಾಡಿದ್ದೇನೆ. ಪ್ರತ್ಯೇಕ ಪಕ್ಷದವರು ನಾನು ಅವರ ಪರ ಉಮೇದುವಾರನಾಗಿ ನಿಲ್ಲಬೇಕೆಂದು ಕೇಳಿಕೊಂಡಾಗ, ಕರ್ನಾಟಕ ಏಕೀಕರಣದ ವಿಷಯದ ವಿನಃ ಎಲ್ಲಾ ವಿಷಯಗಳಲ್ಲಿ ಪ್ರತ್ಯೇಕ ಪಕ್ಷದವರ ಗುರಿಯೂ ಕಾಂಗ್ರೆಸು ತನ್ನ ಮುಂದೆ ಇಟ್ಟುಕೊಂಡ ಗುರಿಯೂ ಒಂದೇ ಆದ್ದರಿಂದಲೂ, ಪ್ರಜಾಪ್ರತಿನಿಧಿ ಸರಕಾರವು ಸಮಂಜಸವಾಗಿ ಸಾಗಬೇಕಾದರೆ ಪಾರ್ಟಿ ಮುಖಾಂತರ ಸಾಧ್ಯವೇ ವಿನಹ ಸ್ವತಂತ್ರರಾಗಿ ಶಾಸನ ಸಭೆಗೆ ಹೋದವರಿಗೆ ಸಾಧ್ಯವಿಲ್ಲವೆಂತಲೂ ನನಗೆ ಮಂದಟ್ಟಾದ ಕಾರಣ ನಾನು ಪ್ರತ್ಯೇಕ ಪಕ್ಷದ ಪರ ಉಮೇದುವಾರನಾಗಿ ನಿಂತಿದ್ದೇನೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯವರು ನನ್ನನ್ನು ಕಾಂಗ್ರೆಸು ಉಮೇದುವಾರನಾಗಿ ನಿಲ್ಲಲು ಆರಿಸದಿರುವುದು, ಪ್ರದೇಶ ಕಾಂಗ್ರೆಸ್ ಕಮಿಟಿಯ ಕರ್ನಾಟಕ ಏಕೀಕರಣ ತತ್ವಕ್ಕೆ ನನ್ನ ಒಪ್ಪಿಗೆ ಇಲ್ಲದಿರುವುದೇ ಕಾರಣವೆಂದು ನಾನು ನಂಬುತ್ತೇನೆ. ಅಂದ ಮಾತ್ರಕ್ಕೆ ಕಾಂಗ್ರೆಸ್ ಸಂಸ್ಥೆಯಲ್ಲಿ, ಕಾಂಗ್ರೆಸ್ ತತ್ವಗಳಲ್ಲಿ ಪಂಡಿತ ನೆಹರೂರವರ ನಾಯಕತ್ವದಲ್ಲಿ ನನಗೆ ನಂಬಿಕೆಯಿಲ್ಲವೆಂದು ತಿಳಿಯಬಾರದೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಕಾಂಗ್ರೆಸಿನಲ್ಲಿ ಯಾವತ್ತೂ ನನಗೆ ನಂಬಿಕೆಯಿದೆ, ಪಂಡಿತ ನೆಹರೂರವರು ಭಾರತದ ಕಲ್ಯಾಣವನ್ನು ಸಾಧಿಸಲು ಮುಖ್ಯ ಮಂತ್ರಿಯಾಗಿರಬೇಕು. ಇವರಿಗೆ ಅವಷ್ಟು ಬೆಂಬಲ ಕೊಡಬೇಕು ಎಂಬುದೇ ನನ್ನ ಮತ್ತು ಪ್ರತ್ಯೇಕ ಪಕ್ಷದವರೆಲ್ಲರ ಅಭಿಪ್ರಾಯ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯವರು ಕಾಂಗ್ರೆಸ್ ಮತ್ತು ದೇಶದ ಕಲ್ಯಾಣಕ್ಕೆ ಅವಶ್ಯವಿಲ್ಲವಂತಹ, ಬಹಳ ಮಟ್ಟಿಗೆ ವಿರೋಧವಾದ ಕರ್ನಾಟಕ ಏಕೀಕರಣ ತತ್ವಕ್ಕೆ ನನ್ನ ಒಪ್ಪಿಗೆ ಇಲ್ಲವೆಂಬ ಏಕಮಾತ್ರ ಕಾರಣದಿಂದ ನನ್ನನ್ನು ಕಾಂಗ್ರೆಸು ಪರ ಉಮೇದುವಾರನಾಗಿ ಚುನಾಯಿಸದೆ ಇರುವ ಮಾತ್ರಕ್ಕೆ ನಾನು ಕಾಂಗ್ರೆಸು ಸಂಸ್ಥೆಗೆ ವಿರೋಧವಾಗಿ ನಡೆದುಕೊಳ್ಳುವವನೆಂದು ನೀವು ಭಾವಿಸಕೂಡದೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಕಾಂಗ್ರೆಸು ಉಮೇದುವಾರರ ಚುನಾವಣೆಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯವರು ಪಂಡಿತ ನೆಹರೂರವರು ಹೇಳಿರುವಂತೆ ನಡೆದುಕೊಂಡಿಲ್ಲ. ಕಾಂಗ್ರೆಸ್ ಮುಂದಾಳುಗಳಾದ ಶ್ರೀ ದಿವಾಕರ್, ಶ್ರೀ ಕರಮರಕರ್ ಇವರಿಗೆ ಸ್ಥಾನ ಕೊಟ್ಟಿಲ್ಲ. ಪಂಡಿತ ನೆಹರೂರವರಿಗೂ ಕೇಂದ್ರ ಕಾಂಗ್ರೆಸು ಪಾರ್ಲಿಮೆಂಟರಿ ಸಮಿತಿಯವರಿಗೂ ಈ ಮಹತ್ವದ ವಿಷಯ ಗೊತ್ತಿದ್ದ ಕಾರಣ ಅವರು ಕರ್ನಾಟಕ ಪ್ರದೇಶ ಕಾಂಗ್ರೆಸು ಕಮಿಟಿಯ ಶಿಫಾರಸಿಗೆ ವಿರೋಧವಾಗಿ ಚುನಾಯಿಸಿದ್ದಾರೆ. ಕೊಡಗಿನಲ್ಲಿ ಶಾಸನ ಸಭೆಗೆ ಕಾಂಗ್ರೆಸು ಪರ ಉಮೇದುವಾರರನ್ನು ಆಯ್ಕೆ ಮಾಡುವ ವಿಷಯದಲ್ಲಿ ಈ ಮೇರೆ ಕಾಂಗ್ರೆಸ್ ಕೇಂದ್ರ ಪಾರ್ಲಿಮೆಂಟರಿ ಸಮಿತಿಯವರು ಕೈ ಹಾಕುವುದಾದರೂ ಸಾಧ್ಯವಿಲ್ಲ. ಏಕೆಂದರೆ ಅವರಿಗೆ ಇಲ್ಲಿನ ಉಮೇದುವಾರರ ವಿಷಯದಲ್ಲಿ ಏನೂ ಗೊತ್ತಿರುವದಿಲ್ಲ. ಅವರು ಡಿಸ್ಟ್ರಿಕ್ಟ್ ಮತ್ತು ಪ್ರದೇಶ ಕಾಂಗ್ರೆಸ್ ಕಮಿಟಿಗಳ ಅಭಿಪ್ರಾಯಗಳನ್ನೇ ಒಪ್ಪಬೇಕಾಗಿದೆ.

ಕಾಂಗ್ರೆಸ್ ಸಂಸ್ಥೆಯಿಂದ ಆರಿಸಲ್ಪಟ್ಟ ಕಾಂಗ್ರೆಸ್ ಉಮೇದುವಾರನಾಗಿ ನಿಂತು ನನ್ನ ಅಲ್ಪ ಸೇವೆಯನ್ನು ಮಾಡುವದಕ್ಕೆ ಕೊಡಗು ಡಿಸ್ಟ್ರಿಕ್ಟ್ ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿಯವರು ಅವಕಾಶ ಕೊಡದ್ದರಿಂದ ಅದೇ ಗುರಿಯನ್ನು ಸಾಧಿಸಲು ಪ್ರತ್ಯೇಕ ಪಕ್ಷದ ಪರ ಉಮೇದುವಾರನಾಗಿ ನಿಂತಿರುವ ನನಗೆ ನೀವು ನಿಮ್ಮ ಅಮೂಲ್ಯವಾದ ಓಟನ್ನು ಕೊಟ್ಟು ನಿಮ್ಮ ಸೇವೆ ಮಾಡಲು ಅವಕಾಶ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಕೊಡಗು

ತಾ. ೪-೧-೧೯೫೨ನೇ ಶುಕ್ರವಾರ

ಮುಂಬರುವ ಚುನಾವಣೆ.

ಕೊಡಗಿನಲ್ಲಿ ಮುಂಬರುವ ಚುನಾವಣೆಯು ಬಹು ಪ್ರಾಮುಖ್ಯವಾದದ್ದು. ಈ ಮೊದಲು ನಡೆದ ಚುನಾವಣೆಗಳಂತಲ್ಲ. ಮೊದಲಿದ್ದ ೧೭,೦೦೦ ಓಟರುಗಳ ಬದಲು ಈಗ ೯೫೦೦೦ ಜನರಿಗೆ ಓಟಿನ ಹಕ್ಕಿದೆ. ಇಷ್ಟರವರೆಗಿದ್ದ ಸಿಫಾರಸ್ಸಿನ ಕೌನ್ಸಿಲಿನ ಬದಲು ಜವಾಬ್ದಾರಿ ಸರ್ಕಾರದ ಎಸೆಂಬ್ಲಿಗೆ ಪ್ರತಿನಿಧಿಗಳನ್ನು ಆರಿಸುವದಾಗಿದೆ. ಇದೆಲ್ಲದಕ್ಕಿಂತಲೂ ಮುಖ್ಯವಾಗಿ ಕೊಡಗಿನ ಭವಿಷ್ಯತ್ತನ್ನು ನಿರ್ಣಯಿಸುವ ಚುನಾವಣೆ ಇದಾಗಿದೆ. ಈ ಪ್ರಶ್ನೆಯ ಮೇಲೆಯೇ ಇಂದು ಚುನಾವಣೆಗೆ ನಿಂತಿರುವ ಎರಡು ಮುಖ್ಯ ಪಾರ್ಟಿಗಳು ಸ್ಪರ್ಧಿಸುವದಾಗಿದೆ. ಪ್ರತ್ಯೇಕ ಪಕ್ಷದವರು ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿಯೇ ಇಟ್ಟುಕೊಳ್ಳಬೇಕೆಂಬ ತಮ್ಮ ಗುರಿಯನ್ನು ಬಹಿರಂಗವಾಗಿ ಎಲ್ಲಾ ಕಡೆಗಳಲ್ಲಿಯೂ ಒಂದೇ ರೀತಿಯಲ್ಲಿ ಸಾರುತ್ತಿರುವರು. ಆದರೆ ಕಾಂಗ್ರೆಸಿನ ಹೆಸರಿನಲ್ಲಿ ನಿಂತಿರುವ ಸಂಯೋಜನವಾದಿಗಳು ತಮ್ಮ ಗುರಿಯನ್ನು ಸ್ಪಷ್ಟವಾಗಿ ಹೇಳದೆ, ಕೊಡಗಿನ ಭವಿಷ್ಯತ್ತಿನ ಪ್ರಶ್ನೆಯು ಇಂದು ನಮ್ಮ ಮುಂದಿಲ್ಲವೆನುತಿದ್ದಾರೆ. ಈ ಪ್ರಶ್ನೆಯನ್ನು ಯಾರೂ ಹೊರಗಿನಿಂದ ನಮ್ಮ ಮುಂದೆ ತಂದು ಹಾಕಬೇಕಾಗಿಲ್ಲ. ಈ ಸಮಸ್ಯೆಯು ಕಳೆದ ೩೦ ವರ್ಷಗಳಿಂದಲೇ ನಮ್ಮ ದೇಶೀಯರನ್ನು ಕಳವಳಗೊಳಿಸಿದೆ. ಮೊನ್ನೆಯವರೆಗೆ ತೀವ್ರ ಚಳವಳವು ನಡೆದು ತುಂಬಾ ಘರ್ಷಣೆ ಮತ್ತು ವೈಮನಸ್ಯ ಉಂಟುಮಾಡಿದೆ. ಇದರಿಂದ ದೇಶಹಿತಕಾರ್ಯಗಳನ್ನು ಸರಕಾರದ ಒಳಗೂ ಹೊರಗೂ ಮಾಡಲು ಸಾಧ್ಯವಾಗಲಿಲ್ಲ. ಇದನ್ನು ಈಗ ಬಗೆಹರಿಸದಿದ್ದರೆ ಮುಂದೆ ರೂಪಿತಗೊಳ್ಳಲಿರುವ ಜವಾಬ್ದಾರಿ ಸರ್ಕಾರವನ್ನು ಭದ್ರವಾದ ತಳಹದಿಯ ಮೇಲೆ ಕಟ್ಟಲಿಕ್ಕಾಗುವುದೂ ಇಲ್ಲ ಮತ್ತು ಅನೇಕ ಹಿತಕಾರದ ಕಾರ್ಯಗಳನ್ನು ಮಾಡಲು ಸಾಧ್ಯವೂ ಇಲ್ಲ. ಒಂದಲ್ಲ ಒಂದು ದಿನ ತೀರ್ಮಾನಿಸಬೇಕಾದ ಈ ವಿಷಯವನ್ನು ಮುಂದಕ್ಕೆ ತಳ್ಳದೆ ಈ ಚುನಾವಣೆಯಲ್ಲಿಯೇ ಇತ್ಯರ್ಥ ಮಾಡುವುದು ಅತ್ಯಾವಶ್ಯಕ.

ಹೊಸ ಘಟನೆಯ ಪ್ರಕಾರ ಮತ್ತು ಕಾಂಗ್ರೆಸಿನ ಅಧ್ಯಕ್ಷರಾದ ಪಂಡಿತ ನೆಹರೂರವರ ಪತ್ರದ ಪ್ರಕಾರ ಕೊಡಗಿನ ಹೊಸ ಎಸೆಂಬ್ಲಿಗೆ ಯಾವ ವಿಚಾರದಲ್ಲೂ ದೇಶಜನರ ಪರ ಅಭಿಪ್ರಾಯಕೊಡುವ ಅಧಿಕಾರವಿದೆ. ಅಲ್ಲದೆ ಸ್ಟೇಟ್ಸ್ ಮಂತ್ರಿಗಳಾದ ಶ್ರೀ. ಗೋಪಾಲಸ್ವಾಮಿ ಅಯ್ಯಂಗಾರ್ಯರವರ ಪಾರ್ಲಿಮೆಂಟಿನಲ್ಲಿ ಹೇಳಿದಂತೆ ಯಾ... ಪ್ರಾಂತ್ಯದ ಭವಿಷ್ಯತ್ತಿನ ವಿಚಾರ ಜನಾಭಿಪ್ರಾಯ ವನ್ನು ಅಲ್ಲಿಯ ಎಸೆಂಬ್ಲಿಯ ಮೂಲಕವೇ ತಿಳಿಯಲಾಗುವುದು. ಆಂದ ಮೇಲೆ ಕೊಡಗಿನ ಭವಿಷ್ಯತ್ತಿನ ವಿಚಾರ ಅಭಿಪ್ರಾಯ ಕೊಡುವ ಅವಕಾಶ ಚುನಾವಣೆ ಕಳೆದ ಮೇಲೆ ಎಸೆಂಬ್ಲಿಯ ಮೆಂಬರುಗಳಿಗೇ ಇದೆಯೆಂಬುದು ಸ್ಪಷ್ಟವಾಗಿದೆ. ಆದಕಾರಣವೇ ಓಟರುಗಳು ಮುಂಬರುವ ಚುನಾವಣೆಯಲ್ಲಿ ತಮ್ಮ ತಮ್ಮ ಮನೋ... ಯಂತೆ ಅಂದರೆ ಕೊಡಗನ್ನು ಇಟ್ಟುಕೊಂಡು ಜನಹಿತವಾದ ... ರಿ ಸರ್ಕಾರವನ್ನು ನಡೆಸಬೇಕೆ... ಪ್ರತ್ಯೇಕ ಪಕ್ಷದ ಉದ್ದೇಶವು ... ಗೂ, ಮೈಸೂರು ಪ್ರಾಂತ್ಯಕ್ಕೆ ... ಸೇರಿಸಬೇಕೆಂಬ ನಂಬಿದವ...

...ರೆ ಸಂಯೋಜನೆ ಪಕ್ಷದವರಿಗೂ ಓಟು ಕೊಡುವುದು ಯೋಗ್ಯ, ನ್ಯಾಯ ಮತ್ತು ಅವಶ್ಯವೆಂದು ಒತ್ತಿ ಹೇಳುವುದಾಗಿದೆ. ಈ ಪತ್ರಿಕೆ ಸುದ್ದಿಯನ್ನು ಓಟು ಕೊಡುವಾಗ್ಯೆ ಎಲ್ಲರೂ ಗಮನಿಸುವರಾಗಿ ಆಶಿಸುತ್ತೇವೆ.

ವರ್ತಮಾನ.

೨೭-೧೨-೫೧ ರಲ್ಲಿ ಶಂತ್ತಿನಾಡು ತಿಟ್ಟಗೇರಿ ಗ್ರಾಮದ ಕಡೇಮಾಡ ಜಿ ಉತ್ತಯ್ಯನವರ ಈ ವರ್ಷದ ಬೆಳೆಯ ಬಾಪ್ತು ಎರಡು ಮೆದೆಗೆಗಳಿಗೆ ಅಕಸ್ಮಾತಾಗಿ ಬೆಂಕಿಹತ್ತಿ ಪೂರ್ಣ ಬೆಂದುಹೋಗಿ, ಸುಮಾರು ೧೦೦೦ ರೂ. ಗಳ ನಷ್ಟವಾಗಿದೆಯೆಂದು ವರ್ತಮಾನ.

ಕಳೆದ ಡಿಸೆಂಬರು ೧೭ರ ವರೆಗೆ 'ಒಂದೂಟವನ್ನು ಬಿಡಿ' ಎಂಬ ಯೋಜನೆಯಲ್ಲಿ ಕೊಡಗಿನಲ್ಲಿ ೧೩,೯೫೩ ಸೇರು ಅಕ್ಕಿ ಜಮೆಯಾಗಿ, ೯೬೮೦ ಸೇರು ರವಾನಿಸಲ್ಪಟ್ಟು, ೩೯೩೩ಸೇರು ಅಕ್ಕಿಯೂ, ೨೪೧ಕ್ಕೆ ಸೇರು ರಾಗಿಯೂ ಉಳಿಕೆ ಇರುವುದಲ್ಲದೆ, ಜಮೆಯಾದ ರೂ ೧೭೧-೪-೧ ಯಲ್ಲಿ ರೂ. ೭೮-೧೨-೮ ಅಕ್ಕಿ ಸಾಗಿಸಿದ ಖರ್ಚು ಮಜಾ ರೂ ೯೨-೮-೧ ಪ್ರಧಾನ ಮಂತ್ರಿಯವರ ನೇಶನಲ್ ರಿಲೀಫ್ ಫಂಡಿಗೆ ಕಳುಹಿಸಲಾಗಿದೆಯೆಂದು ತಿಳಿಯಬರುತ್ತದೆ.

ಮೈಸೂರು ಯೂನಿವರ್ಸಿಟಿಯ ಇಂಜಿನಿಯರಿಂಗ್ ಕೋರ್ಸಿನ ಕಳೆದ ಅಕ್ಟೋಬರಿನಲ್ಲಿ ನಡೆದ ಪ್ರಥಮ ವರ್ಷದ ಪರೀಕ್ಷೆಯಲ್ಲಿ ಶ್ರೀ ಮಾದಂಡ ಪಿ ಕರುಂಬಯ್ಯನವರು ತೇರ್ಗಡೆಯಾಗಿರುವರೆಂದು ತಿಳಿಯಬರುತ್ತದೆ.

ಮಡಿಕೇರಿಯಲ್ಲಿ ಕಾಫಿ ಪ್ಲಾಂಟರು ಮತ್ತು ಬಟ್ಟೆ ವ್ಯಾಪಾರಿಯೂ ಆಗಿದ್ದ ಕಾಸರಗೋಡಿನ ಶ್ರೀ ಮಹಮ್ಮದ್ ಹುಸೇನ್‌ರವರು ಅವರ ಊರಿನಲ್ಲಿ ತಾ. ೩೦-೧೨-೫೧ರಲ್ಲಿ ಶಿವಾಧೀನರಾದರೆಂದು ವರ್ತಮಾನ.

ಬೊಂಬಾಯಿ ಕೊಲಾಬಾದಲ್ಲಿರುವ ಕೊಡಗರು ಶ್ರೀ ಚೇಂದಂಡ ತಿಮ್ಮಯ್ಯನವರು ವಾಸವಿರುವ ಹರಿಬಿಲ್ಡಿಂಗ್‌ನಲ್ಲಿ ಕಳೆದ ಡಿಸೆಂಬರ್ ತಾರೀಕು ೧೫ ರಲ್ಲಿ ಬಲ್ಯಮಾಡ ಕಾಶಿಲಪ್ಪನವರ ಅಧ್ಯಕ್ಷತೆಯಲ್ಲಿ ಹುತ್ತರಿ ಹಬ್ಬವನ್ನು ವಿಜೃಂಭಣೆಯಿಂದ ನಡೆಸಿದರು. ನಂತರ ಕೊಡವ ಪದ್ಧತಿ ಪ್ರಕಾರ ಏಳಕ್ಕಿ ಪುಟ್ಟ್ ಊಟ ಉಪಚಾರವಾಗಿ ಸಭೆ ಬರಖಾಸ್ತು ಮಾಡಿದರೆಂದು ತಿಳಿದು ಬರುತ್ತದೆ.

ಕೆಲವು ದಿವಸಗಳಿಗೆ ಹಿಂದೆ ವೀರಾಜಪೇಟೆ ತಾಲು ತಾಲ್ಕೇರಿ ಗ್ರಾಮದ ಶ್ರೀ ಮೂಕೆರ ಮುಂದಣ್ಣನವರನ್ನು ಕೊಂದರೆಂಬ ಕೇಸು ಮಡಿಕೇರಿ ಸೆಷನ್ಸ್ ಕೋರ್ಟಿನಲ್ಲಿ ವಿಚಾರವಾಗಿ ಅಪರಾಧಿಗಳು ಮೂಕೆರ ಪೊನ್ನಪ್ಪ, ಕುಂಜಾರ ಚಿಣ್ಣಪ್ಪ ಮತ್ತು ಮಾಚೆಟಿರ ಉತ್ತಪ್ಪ ಇವರಿಗೆ ಹೈಕೋರ್ಟಿನ ಮಂಜೂರಾತಿಗೆ ಒಳಪಟ್ಟು ಫಾಸಿ ಶಿಕ್ಷೆಯನ್ನೂ ಮತ್ತು ನಾಲ್ಕನೇ ಅಪರಾಧಿ ಮಾಲೆಯಂಡ ಕೇಶವನಿಗೆ ಜೀವಾವಧಿ ಶಿಕ್ಷೆಯನ್ನೂ ೬-೧೨-೫೧ರಲ್ಲಿ ವಿಧಿಸಲಾಗಿದೆ.

ಪ್ರತ್ಯೇಕ ಪಕ್ಷಕ್ಕೆ ಓಟು ಕೊಟ್ಟು

ದೇಶವನ್ನು ಉಳಿಸಿರಿ.

ಕೋಳಿ ಮತ್ತು ತಕ್ಕಡಿ ಪೆಟ್ಟಿಗೆಗಳಿಗೆ ಮತವನ್ನುಹಾಕಿರಿ

ಯೋಚಿಸಿ ಓಟು ಕೊಡಿ.

ಯೋಚಿಸಿರೀ । ಯೋಚಿಸಿರೀ । ಓಟನು ಕೊಡುವಾಗ ಯೋಚಿಸಿರಿ ॥ಯೋ॥

ದೇಶ ಭವಿಷ್ಯವ । ತೀರ್ಮಾನಿಸಲು । ಬಂದಿಹುದೀಗ ಚುನಾವಣೆ ನಮಗೆ ॥
ಪ್ರತ್ಯೇಕ ಪಕ್ಷಕ್ಕೆ । ಜಯವನು ಗಳಿಸಲು । ಪ್ರಮಾಣದಿಂದಲಿ । ಓಟು ಕೊಡಿ ॥
ಪ್ರಮಾಣದಿಂದಲಿ ಓಟು ಕೊಡೀ ॥ಯೋ॥

ಗೊತ್ತು ನಿಮಗೆ ಪ್ರತ್ಯೇಕವೆಂದರೆ । ನಿತ್ಯವು ದೇಶದ ಹಿತವನೆ ಗೈವುದು ;
ಎತ್ತಲಿಂದ ತರುವರಿ ಇವರೀಗಾ । ಉತ್ತಮ ಜನರನೆ ಆರಿಸಿರೀ ।
ಉತ್ತಮ ಜನರನೆ ಆರಿಸಿರೀ ॥ಯೋ॥

ಸಂಯೋಜನೆಯೆಂಬ ಮತ್ತೊಂದು ಪಕ್ಷವು । ಗೋಮುಖವ್ಯಾಘ್ರನ ಅವತಾರದಿಂದ ।
ಕಾಂಗ್ರೆಸೆಂಬ ನಾಮವ ಬಡಿದು । ಓಟಿನ ಬೇಟೆಗೆ ಓಡುವರೈ ।
ಓಟಿನ ಬೇಟೆಗೆ ಓಡುವರೈ ॥ಯೋ॥

ಭಾಷಾವಾರು ಪ್ರಾಂತ್ಯ ರಚನೆ । ಕಾಂಗ್ರೆಸ್ಸಿನ ಘೋಷಣೆ ।
ಆ ಮಂತ್ರವ ಜಪಿಸಿ ಅವರು । ಸಂಯೋಜನೆಗೆ ಸಮರ್ಥಿಸುವರು ।
ಸಂಯೋಜನೆಗೆ ಸಮರ್ಥಿಸುವರು ॥ಯೋ॥

ಸ್ವತಂತ್ರರೆಂಬ ಮೂರನೆ ಜನರು । ಕುತಂತ್ರದಿಂದ ಓಟನು ಪಡೆವರು ।
ಚುನಾವಣೆಯಲ್ಲಿ ಜಯಗಳಿಸಿದರೆ । ಬಾವಲಿಯಂತೆ ತೂಗುವರೈ ॥
ಬಾವಲಿಯಂತೆ ತೂಗುವರೈ ॥ಯೋ॥

— ದೇಶ ಪ್ರೇಮಿ

ಅಯ್ಯೊ, ಕೋರನ ದೇವಯ್ಯನವರೇ,

ನೀವು ತಾರೀಕು ೨-೧೨-೫೧ ರಲ್ಲು ಕಡಿಯತ್ತೂರ್ ಕ್ಷೇತ್ರದ ಮದುವೆಗೆ ಬಂದಲ್ಲಿ ನೀವು ವಾಲಗ ಮಾಡುವ ಸ್ಥಳಕ್ಕೆ ನೀವು ಮತ್ತು ಕೇದಂಬಾಡಿ ಗಣಪತಿಯವರು ಬಂದು ಗಣಪತಿಯವರು ನನ್ನ ಜೊತೆಯಲ್ಲಿ: ಇದು ಇವರು ಯಾರೆಂತಗೊತ್ತಿದೆಯೇ? ಇವರೇ ಕೋರನ ದೇವಯ್ಯನವರು. ಇವರೇ ನಿಮಗೆ ಹರಿಜನರೆಂದು ಹೆಸರು ತಂದು ದೇವಸ್ಥಾನಗಳಿಗೆ ಕರೆದಿರುವವರು. ಇವರನ್ನು ಚೆನ್ನಾಗಿ ಗೊತ್ತುಮಾಡಿಕೊಳ್ಳಿರೆಂದು ಪರಿಚಯಮಾಡಿಕೊಟ್ಟ ನಂತರ, ಶ್ರೀ ಕೋರನ ದೇವಯ್ಯನವರು—"ನೀವು ನನಗೆ ಈ ಮೊದಲು ಓಟು ಕೊಟ್ಟದರಿಂದ ನಾನು ನಿಮಗೆ ಹರಿಜನ ಎಂದು ಹೆಸರು ಕೊಟ್ಟಿದ್ದೇನೆ, ಅಲ್ಲದೆ ದೇವಸ್ಥಾನಗಳಿಗೆ ಸೇರಿಸಿದ್ದೇನೆ ಈ ವರ್ಷವೂ ನಿಮ್ಮ ಕಡೆ ಓಟಿಗ ನಿಂತಿದ್ದೇನೆ, ಆದ್ದರಿಂದ ಈ ವರ್ಷ ನೀವು ನನಗೆ ಓಟು ಕೊಡಬೇಕು. ನಿಮಗಳಿಗೆ ಪ್ರತಿಯೊಬ್ಬನಿಗೂ ೩ ಎಕರೆ ಜಮ್ಮ ಭೂಮಿ ಮತ್ತು ೨೦೦ ರೂಪಾಯಿ ಕೊಡಿಸುತ್ತೇನೆ"ಂದು ಮಾಗ್ಗನ ಮಾಡಿ ಬಿಟ್ಟಗೇರಿ, ಪಾಲೂರು, ಶಾಗರ್ಡಂದ, ಬೇಗೂರು ಮತ್ತು ಕೊಳಗದಾಳು ಗ್ರಾಮದ ಹರಿಜನರು ಕೇರಿ ಮೀಟಿಂಗು ಮಾಡಿ ತಿಳಿಸಿ ಎಂದು ಹೇಳಿದ್ದು ಸರಿಯಷ್ಟೆ. ಆದೇ ಮೇರೆ ನಮ್ಮ ಎಲ್ಲಾ ಕೇಲಸಗಳು ತೀರಿಸಿದಕ್ಕೆ ಅದರಿಂದ ನೀವು ಪ್ರತಿ ಒಬ್ಬರಿಗೂ ಕೊಡುವ ಜಮ್ಮ ಭೂಮಿ ಯಾರದು? ಎಲ್ಲಿ ಇದೆಯೆಂದೂ, ಅಲ್ಲದೆ ನೀವು ಕೊಡುವ ತಲೆ ಒಂದರ ೧೦೦ ರೂಪಾಯಿ ಯಾವ ಬ್ಯಾಂಕಿನಲ್ಲಿ ಇದೆಯೆಂದೂ ತಿಳಿಸಿ. ನಮ್ಮ ಅಂದಾಜು ೨೫೦ ಓಟರುಗಳು ಇದ್ದಾರೆ. ಈ ಮೇಲ್ಕಂಡ ಪ್ರಶ್ನೆಗಳಿಗೆ ಓಟು ಕೊಡಲಿಕ್ಕೆ ಮೊದಲು ಕೊಡುತ್ತೀರೊ ಯಾ ಅನಂತರ ಕೊಡುತ್ತೀರೋ ಎಂದು ಪತ್ರಿಕೆಯ ಮೂಲಕ ತಿಳಿಸಿ, ಅಲ್ಲದೆ ಇದರ ಮೇಲೆ ಹೆಚ್ಚಿನ ಬಹುಮಾನ ಕೊಡುವ ಹಾಗಿದ್ದಲ್ಲಿ ಅದನ್ನು ಸಹ ತಿಳಿಸಿ.

ಹರಿಜನ ಕ್ಷೈರ ಮತ್ತು ಇತರರು.

'ಕೊಡಗು' ಪತ್ರಿಕೆಯ ಏಜೆಂಟರು ಶ್ರೀ ಜೋಕೀರ ಪೊಣ್ಣಪ್ಪನವರು ನಾಪೋಕ್ಲು

ಚುನಾವಣೆಯ ದಿವಸವು ಹತ್ತಿರ ಬರುತ್ತಿದೆ. ಎರಡು ಕಡೆಯ ಮುಂದಾಳುಗಳೂ, ಅವರ ಕಡೆಯ ಏಜೆಂಟರುಗಳೂ ಬಹು ಬಿರುಸಿನಿಂದ ಜನರ ಬೆಂಬಲ ಪಡೆಯಲು ಕೆಲಸ ಮಾಡಲು ತೊಡಗಿದ್ದಾರೆ. ಒಂದು ಪಂಗಡದವರು ಇನ್ನೊಂದು ಪಡೆಯ ಮುಂದಾಳುಗಳ ಕುಂದು ಕೊರತೆಗಳನ್ನು ಜನರ ಮುಂದೆ ವಿವರಿಸುವುದೇ ಪಬ್ಲಿಕ್ ಮೀಟಿಂಗುಗಳಲ್ಲಿ ನಡೆಯುವ ಪ್ರಾಮುಖ್ಯ ವಿಷಯವಾದರೆ, ಈ ಮುಂದಾಳುಗಳೂ, ಅವರ ಏಜೆಂಟರುಗಳೂ, ಖಾಸಗಿಯಾಗಿ ವ್ಯಕ್ತಿಗಳನ್ನು ಸಂದರ್ಶಿಸಿ, ಮಾತಾಡುವಾಗ್ಯೂ, ಅನೇಕ ಅಸಹ್ಯವಾದ ರೀತಿ ನೀತಿಗಳನ್ನು ಅನುಸರಿಸುವುದು ಬಹು ಶೋಚನೀಯ ರೀತಿಯಾಗಿ ಕಾಣುತ್ತದೆ. ಅವರಲ್ಲೂ ಕಾಂಗ್ರೆಸ್ ಪ್ರೆಸಿಡೆಂಟರಾದ ಶ್ರೀ ನೆಹರೂರವರು ಹೇಳಿದಲ್ಲೆಲ್ಲಾ 'ಕೋಮುವಾರು ಭ್ರಾಂತಿಯು ಹಿಂದೂ ಮಹೇಶನ ಮುಂದುವರಿಕೆಗೆ ಹಿಂದೆಯೂ ಈಗಲೂ ಮತ್ತು ಮುಂದಕ್ಕೂ ಮಹತ್ತರವಾದ ಹಾನಿಯನ್ನು ತರುವ ಅಂಟು ಜಾಡ್ಯವಾದುದರಿಂದ ಅದನ್ನು ಬೇರು ಸಹಿತ ಕಿತ್ತೊಗೆಯುವುದೇ ಕಾಂಗ್ರೆಸ್ಸಿನ ಮುಖ್ಯ ಧ್ಯೇಯವೆಂದು' ಕೂಗುತ್ತಿರುವಾಗ ಕೊಡಗಿನಲ್ಲಿನ ಕೆಲವು ಕಾಂಗ್ರೆಸ್ ಮುಂದಾಳುಗಳು ಮತ್ತು ಅವರ ಏಜೆಂಟರುಗಳು ಕೋಮುವಾರು ತತ್ವವನ್ನೇ ಅವರ ಮುಖ್ಯ ಉಪಕ್ರಮವಾಗಿಟ್ಟು ... ದು ಬಡಗ್ರಾಮಸ್ಥರ ಓಟುಗಳನ್ನು ಸಂಪಾದಿಸಲು ಪ್ರಯತ್ನಿಸುತ್ತಿರುವುದನ್ನು ನೋಡಿದರೆ ಇವರು ಸತ್ಯ ಮತ್ತು ನೀತಿಯುಕ್ತವಾದ ದಾರಿಯನ್ನು ಬಿಟ್ಟು, ಯಾವ ರೀತಿಯಿಂದಲಾದರೂ ಚುನಾವಣೆಯಲ್ಲಿ ಜಯಶೀಲರಾಗಬೇಕೆಂಬುದನ್ನೇ ಮುಖ್ಯ ಗುರಿಯಾಗಿಟ್ಟುಕೊಂಡಂತೆ ಕಾಣುತ್ತದೆ. ಹೇಗಾದರೂ ಸರಿಯೇ, ನಾವು ಮಾತ್ರ ಈ ಚುನಾವಣೆಯಲ್ಲಿ ಜಯಶೀಲರಾಗಲೇಬೇಕೆಂದು ನಿರ್ಧರಿಸಿರುವರು. ಒಬ್ಬೊಬ್ಬರಿಗೆ ಒಂದೊಂದು ರೀತಿಯ ಬೋಧನೆ ಕೊಟ್ಟು ಅವರ ಓಟು ಸಂಪಾದಿಸುವಂತೆ ಕಾಣುತ್ತದೆ. ಹಾಗೆಂದರೆ ಇವರ ಈಗಿನ ಮುಖ್ಯ ಗುರಿಯೆಂದರೆ ಓಟಿನಲ್ಲಿ ಗೆಲುವುದು ಮಾತ್ರವೇ. ಹಾಗೆಂದ ಮೇಲೆ ಇವರು ಜಯಶೀಲರಾದ ಮೇಲೆ ಏನು ಮಾಡುವರು ಎಂಬ ವಿಷಯವನ್ನು ನಿಶ್ಚಯಿಸಿದಂತೆ ಕಾಣುವುದಿಲ್ಲ. ಕೊಡಗಿಗೆ ಈಗ ತಾನೆ ಸ್ವಾತಂತ್ರ್ಯದ ಸರಕಾರ ಬರುವುದರಿಂದ ಅನೇಕ ಓಟರುಗಳಿಗೆ ಇದಕ್ಕೆ ಮೊದಲು ಇದ್ದ ಚುನಾವಣೆಗೂ, ಈಗ ಬರಲಿಕ್ಕಿರುವ ಚುನಾವಣೆಗೂ ಇರುವ ಮಹತ್ತರವಾದ ವ್ಯತ್ಯಾಸದ ತಿಳುವಳಿಕೆ ಇರಲಿಕ್ಕಿಲ್ಲ. ಇಂತಹ ಸಂದರ್ಭದಲ್ಲಿ ಈಗ ಹುರಿಯಾಳುಗಳಾಗಿ ನಿಂತಿರುವ ಮುಂದಾಳುಗಳು, ಜನರಿಗೆ ಈ ವಿಷಯದಲ್ಲಿ ನಿಜವಾದ ಪರಿಜ್ಞಾನವನ್ನು ಕೊಟ್ಟು ಅವರ ಓಟುಗಳನ್ನು ಪಡೆಯುವರ ಬದಲು ಅವರ ಅಜ್ಞಾನವನ್ನು ಕೊಳ್ಳೆ ಹೊಡೆಯಲು ಪ್ರಯತ್ನಿಸುವುದು (trying to exploit their ignorance) ಶೋಚನೀಯ. ಪಂಡಿತ ನೆಹರೂರವರು ಒಂದು ಕಡೆ ಭಾಷಣ ಮಾಡುತ್ತಿದ್ದಾಗ

ಇಕ್ಕಡೆಯ ಮುಂದಾಳುಗಳು.

ಲೇ:—ಶ್ರೀ ಪಿ. ಜಿ. ಐಯ್ಯಪ್ಪ, ಮಡಿಕೇರಿ.

ಕಾಂಗ್ರೆಸಿಗೆ ವಿರೋಧವಾಗಿ ನಿಂತಿದ್ದ ಹಿಂದೂ ಮಹಾ ಸಭೆಯ ಒಬ್ಬ ಉಮೇದುವಾರರು ಮುಂದೆ ಬಂದು 'ನೀವು ಹಿಂದೂ ಕೋಡ್ ಬಿಲ್ಲನ್ನು ಪಾರ್ಲಿಮೆಂಟಿನಲ್ಲಿ ತರುವುದಿಲ್ಲವೆಂದು ಮಾತು ಕೊಟ್ಟರೆ ನಾನು ನನ್ನ ಮೆಂಬರುತನವನ್ನು ವಾಪಸು ತೆಗೆದುಕೊಳ್ಳುತ್ತೇನೆ'ಂದು ಹೇಳಿದಾಗ ನೆಹರೂರವರು 'ಹಿಂದೂ ಕೋಡನ್ನು ಆಗುವಷ್ಟು ಬೇಗನೆ ಜಾರಿಗೆ ತರುವುದೇ ಕಾಂಗ್ರೆಸ್ ಪಾರ್ಟಿಯ ಮುಖ್ಯ ಗುರಿ. ಇದರಿಂದ ನೀವು ವಿರೋಧಿಸಿದರೂ ಸರಿಯೆ. ನಾವು ಮಾತ್ರ ನಮ್ಮ ಧ್ಯೇಯವನ್ನು ಚುನಾವಣೆಯಲ್ಲಿ ಗೆಲ್ಲಬೇಕೆಂಬ ಕಿಂಚಿತ್ ಭಾವನೆಯ ದೃಷ್ಟಿಯಿಂದ ಬಿಟ್ಟುಬಿಡುವವರಲ್ಲ' ಎಂಬುದಾಗಿ ಹೇಳಿದರು.

ಇದೀಗ ಸೀದಾ ದಾರಿಯ ರಾಜಮಾರ್ಗ. ಅದನ್ನು ಬಿಟ್ಟು ಕೊಡಗಿನ ಕಾಂಗ್ರೆಸ್ ಪಾರ್ಟಿಯವರ ವರ್ತನೆಯನ್ನು ನಾವು ಸ್ವಲ್ಪ ಅಜಮಾಯಿಸುವ.

ತಾ. ೧೦-೯-೫೧ರಲ್ಲಿ ಗೋಣಿಕೊಪ್ಪಲಲ್ಲಿ ನಡೆದ ಸಂಯೋಜನಾ ಪಾರ್ಟಿಯವರ ಮೀಟಿಂಗಿನಲ್ಲಿ 'ಕೊಡಗಿಗೆ ಪ್ರಜಾ ಜವಾಬುದಾರಿ ಸರಕಾರ ಕೊಟ್ಟುದಕ್ಕೆ ಈ ಸಭೆಯು ಇಂಡಿಯಾ ಸರಕಾರವನ್ನು ವಂದಿಸುತ್ತದೆ' ಎಂಬ ಠರಾವನ್ನು ಅಧ್ಯಕ್ಷರು ಸೂಚಿಸುವಾಗ್ಗೆ ಶ್ರೀಗಳಾದ ಡಾ. ನಂಜುಂಡೇಶ್ವರನವರು 'ಆದಿಯಿಂದಲೂ ನಾವೆಲ್ಲರೂ ಸಂಯೋಜನಾವಾದಿಗಳು, ಅದಕ್ಕಾಗಿ ೬ ಸಲ ಇಲ್ಲಿ ಮಾತ್ರವಲ್ಲದೆ ಡೆಲ್ಲಿಯ ವರೆಗೆ ಹೋಗಿದ್ದೇವೆ. ನಾವು ಕೇಳಿದ್ದೇನು? ಸರ್ಕಾರವು ಕೊಟ್ಟದ್ದೇನು? ನಾವು ಕೇಳಿದ್ದಕ್ಕೆ ಸರಕಾರವು ಕೊಟ್ಟಿಲ್ಲ. ಬೇಡದನ್ನು ಕೊಟ್ಟಿದ್ದಾರೆ.... ಇಂತಹದನ್ನು ಕೊಟ್ಟದ್ದಕ್ಕೆ ವಂದಿಸುವುದೇ? ಎಂಬುದಾಗಿ ಹೇಳಿರುವರು.

ಡಾ. ಅಶ್ವತ್ಥನವರು ಶ್ರೀ ನಂಜುಂಡೇಶ್ವರನವರ ಮಾತನ್ನು ಅನುಮೋದಿಸುತ್ತಾ 'ನಾವು ಕರ್ನಾಟಕದ ಏಕೀಕರಣಕ್ಕಾಗಿ ಮೊದಲಿನಿಂದಲೇ ಹೆಣಗಾಡುತ್ತಿದ್ದೇವೆ. ಈ ಹೋರಾಟದ ಗುರಿಯನ್ನು ಸಾಧಿಸುವ ವರೆಗೆ ಸುಮ್ಮನಿರಲು ಸಾಧ್ಯವಿಲ್ಲ. ಕೊಡಗಿನ ಆರ್ಥಿಕ ಸ್ಥಿತಿಯು ತೃಪ್ತಿಕರವಿಲ್ಲ.... ನಾಳೆ ನಾಡಿದ್ದಾಗಿ ಕೊಡಗು ಕರ್ನಾಟಕದೊಡನೆ ಸೇರಲೇಬೇಕು. ಇಂತಹ ಸ್ಥಿತಿಯಲ್ಲಿರುವ ಕೊಡಗಿಗೆ ಜವಾಬ್ದಾರಿ ಸರಕಾರ ಕೊಟ್ಟುದಕ್ಕೆ ಅರ್ಥವಿಲ್ಲ. ಆದುದರಿಂದ ಠರಾವನ್ನು ವಿರೋಧಿಸುತ್ತೇನೆ' ಎಂದು ಹೇಳಿದರು. ಅಲ್ಲದೆ ಶ್ರೀಗಳಾದ ಕೆ. ಮಲ್ಲಪ್ಪನವರೂ, ಎನ್. ಸೋಮಣ್ಣನವರೂ, ಕೃಷ್ಣಮೂರ್ತಿಯವರೂ, ನಂಜಪ್ಪನವರೂ ಮತ್ತು ಗೋಪಾಲದಾಸರವರೂ ವಿರೋಧಿಸಿರುವರು. ಆಗ್ಗೆ ಶ್ರೀ ಸಿ. ಪೂಣಚ್ಚನವರು ಎಲ್ಲರನ್ನೂ ಸಮಾಧಾನ ಮಾಡಿ 'ಈ ಠರಾವನ್ನು ಪಾಸು ಮಾಡಲೇಬೇಕೆಂದು' ಕೇಳಿಕೊಂಡರು. ವಿರೋಧಿಸಿದವರು ಅದಕ್ಕೆ ಒಪ್ಪಲಿಲ್ಲ. ಆ ಬಿಕ್ಕಟ್ಟಿನ ಸಮಯದಲ್ಲಿ ಶ್ರೀ ಎನ್. ಸೋಮಣ್ಣನವರು ಮೇಲ್ಕಂಡ ಠರಾವನ್ನು ಸ್ವಲ್ಪ ಬದಲಾಯಿಸಿ, ಸಭೆಯವರಿಗೆ ಸಮಾಧಾನ ಹೇಳಿ, ಅವರ ಠರಾವನ್ನು ಪಾಸು ಮಾಡಿಸಿರುವರು.

ಆ ವೇಳೆ ಡಾ. ಅಶ್ವತ್ಥನವರು 'ಕೊಡಗಿಗೆ ಜವಾಬುದಾರಿ ಸರಕಾರ ದೊರೆತದಕ್ಕಾಗಿ, ತತ್ಕಾಲ ದೊಡ್ಡ ಪ್ರಾಂತ್ಯದೊಡನೆ ಸೇರಲು ಈ ಸಭೆಯು ವಿರೋಧಿಸುತ್ತದೆ. ಆದರೆ ಕರ್ನಾಟಕ ಏಕೀಕರಣದ ವಿಷಯ ಬರುವಾಗ ನಮ್ಮ ಗುರಿಯನ್ನು ಸಾಧಿಸಲು ಎಲ್ಲರೂ ಸಿದ್ಧರಿರಬೇಕು' ಎಂಬ ಠರಾವನ್ನು ತಂದರು. ಅದನ್ನು ಅನುಮೋದಿಸಿದ ನಂತರ ಶ್ರೀಗಳಾದ ಎನ್. ಸೋಮಣ್ಣನವರೂ ಮತ್ತು ಕೆ. ಮಲ್ಲಪ್ಪನವರೂ ಇದನ್ನು ಮುಂದುವರಿಸಬೇಕೆಂದು ಸೂಚಿಸಿ ಅದನ್ನು ಮುಂದಕ್ಕಿಟ್ಟರು. ಆ ಮೇಲೆ ಡಾ. ಅಶ್ವತ್ಥನವರು, ಚುನಾವಣೆಯ ಪ್ರಸಿದ್ಧ ಪತ್ರಿಕೆಯಲ್ಲಿ ನಮ್ಮ ಗುರಿಯನ್ನು ನಮೂದಿಸಿ ಮತದಾರರಿಗೆ ತಿಳಿಸುವುದು. ಎಂಬ ಠರಾವನ್ನು ತಂದಾಗ್ಯೂ ಶ್ರೀಗಳಾದ ಎನ್. ಸೋಮಣ್ಣನವರು ಮತ್ತು ಕೆಲವರೂ ಚುನಾವಣೆಗೆ ಈ ಠರಾವು ತೊಂದರೆಯನ್ನು ತರುವುದಲ್ಲದೆ ಈ ಪಂಗಡಕ್ಕೆ ಚುನಾವಣೆಯಲ್ಲಿ ಗೆಲ್ಲುವುದು ಕಷ್ಟವಾದೀತು. ಆದುದರಿಂದ ಡಾಕ್ಟರವರು ನಮ್ಮ ಹಿತದೃಷ್ಟಿಯಿಂದ ಇದನ್ನು ವಾಪಾಸು ತೆಗೆದುಕೊಳ್ಳಬೇಕೆಂದು ಕೇಳಿ ಡಾಕ್ಟರವರಿಂದ ಅದನ್ನು ವಾಪಾಸು ತೆಗೆಸಿರುವರು.

ಆ ವೇಳೆ, ಅದೇ ಡಾಕ್ಟರರು 'ಕೊಡಗಿನಲ್ಲಿರುವ ಎರಡು ಪಂಗಡಗಳನ್ನು ಒಂದುಗೂಡಿಸಲು ಒಂದು ಉಪಸಮಿತಿಯನ್ನು ನೇಮಿಸಬೇಕೆಂಬ ಠರಾವನ್ನು ತಂದರು. ಆಗ್ಗೆ ಆ ಪಾರ್ಟಿಯವರು 'ಈ ರಾಜಿಯ ಮಾತು ನಡೆಯುವುದಿಲ್ಲ. ಶ್ರೀ. ಪಂದ್ಯಂಡ ಬೆಳ್ಯಪ್ಪನವರು ಈ ದೇಶವನ್ನು ಸೂರ್ಯಚಂದ್ರರು ಇರುವ ವರೆಗೆ ಪ್ರತ್ಯೇಕವಾಗಿ ಇಡಬೇಕೆನ್ನುವವರು, ನಾವಾದರೋ ಸಮಯವರಿತು ಸಂಯೋಜನೆ ಮಾಡಬೇಕೆನ್ನುವವರು ಹೀಗಿರುವಲ್ಲಿ ರಾಜಿಯಾಗುವುದು ಹೇಗೆ? ಇದು ಕೃಷ್ಣಸಂಧಾನವಾಗುವುದು ಖಂಡಿತ'ವೆಂದು ವಿವರಿಸಿದ ನಂತರ ಠರಾವನ್ನು ಡಾಕ್ಟರರು ವಾಪಾಸು ತೆಗೆದುಕೊಂಡರು.

ಕೊಡಗು ಕಾಂಗ್ರೆಸ್ ಪಾರ್ಟಿಯವರು ತಮ್ಮ ಧ್ಯೇಯ ಮತ್ತು ಗುರಿಗಳನ್ನು ಇಷ್ಟು ಬಹಿರಂಗವಾಗಿ ಸಾರ್ವಜನಿಕ ಸಭೆಯಲ್ಲಿ ಕಳೆದ ಸೆಪ್ಟಂಬರ್ ತಿಂಗಳಲ್ಲಿ ಗೋಣಿಕೊಪ್ಪಲಲ್ಲಿ ಪ್ರಕಟಿಸಿ, ಈಗ ಬರೇ ಓಟರರನ್ನು ವಂಚಿಸುವ ದೃಷ್ಟಿಯಿಂದ, 'ನಾವೂ ಪ್ರತ್ಯೇಕವಾದಿಗಳೇ, ನಾವೂ ಸಹ ಕೊಡಗಿಗೆ ಸ್ವಾತಂತ್ರ್ಯದ ಸರಕಾರ ಪಡೆಯಲು ದುಡಿದವರು' ಎಂದು ಹೇಳುವುದರಲ್ಲಿ ಏನು ಹುರುಳಿದೆ? ಇವರ ಮೇಲ್ಕಂಡ ನಡವಳಿಯಿಂದ ಜನತೆಗೆ ಇಷ್ಟು ಸಂಪೂರ್ಣ ಮನದಟ್ಟಾಗುತ್ತೆ. (೧) ಇವರ ಗುರಿ ಮೊದಲಿದ್ದುದು, ಈಗ ಇರುವುದು ಮತ್ತು ಮುಂದಕ್ಕೆ ಇರುವುದು ಸಹ, ಕೊಡಗನ್ನು ಭಾವೀ ಕರ್ನಾಟಕದ ಒಂದು ಭಾಗವಾಗಿ ಮಾಡುವುದು ಈ ಅಭಿಪ್ರಾಯವನ್ನು ಜನರು ಈ ಕಾಲಕ್ಕೆ ಬಚ್ಚಿಟ್ಟಿರುವುದು ಬರೇ ಓಟರರಿಗೆ ಹೆದರಿ. ಈ ಧ್ಯೇಯದ ಮೇಲೆ ತಮ್ಮ ಉಮೇದುವಾರಿಕೆಯನ್ನು ನಡೆಸಿದರೆ, ದೇಶದಲ್ಲಿ ಇವರಿಗೆ ಬೆಂಬಲವಿರಲಿಕ್ಕಿಲ್ಲವೆಂಬುವುದು ಇವರಿಗೆ ಸಂಪೂರ್ಣ ಮನವರಿಕೆ ಇರುವುದರಿಂದಲೇ ಇವರು ಈ ತರದ ವೇಷ ಬದಲಾವಣೆಯನ್ನು ಮಾಡಿರುವುದು ಎಂಬುವುದು. ಮೇಲ್ಕಂಡ ಡಾ. ಅಶ್ವತ್ಥನವರು ತಮ್ಮ ಪಾರ್ಟಿಯ ಪ್ರಸಿದ್ಧ ಪತ್ರಿಕೆಯಲ್ಲಿ 'ನಮ್ಮ ಗುರಿ ಕೊಡಗನ್ನು ಸಮಯವರಿತು ಕರ್ನಾಟಕಕ್ಕೆ ಸೇರಿಸುವುದು' ಎಂಬದನ್ನು ಪ್ರಕಟಿಸಿ ಜನತೆಯ ಮುಂದೆ ಇಡುವುದು ಎಂಬದಕ್ಕೆ ಶ್ರೀ. ಸೋಮಣ್ಣನವರು ಇತರರು ಕೊಟ್ಟ ಸಮಾಧಾನವೇ ಸಾಕ್ಷಿ.' ಇವರ ಅಭಿಪ್ರಾಯದಲ್ಲೇ ಈ ಕಾರ್ಯವು ಎಂದರೆ, ಇವರ ನಿಜವಾದ ಗುರಿಯನ್ನು ಪ್ರಕಟಿಸುವುದು, ಚುನಾವಣೆಯಲ್ಲಿ ಇವರಿಗೆ ತೊಂದರೆಯನ್ನು ತರು...

Happy New-Year Greetings.

We are glad to announce that 12,000 shares of our Bank of the total value of Rs. 3 lacs recently floated have been over-subscribed. We are grateful to the public for the increased confidence they have reposed in us. We assure that we will do our utmost to desrve this wellplaced confidence.

VIJAYA BANK Ltd.,

ESTD. 1931.

H. O. MANGALORE,

B. M. SHETTY, B. A., B. L. — Secretary.

P. J. SHETTY, M. A., B. L., C. A. I. I. B., — Superintendent.

B. MANJAYA HEGDE, Advocate.
(President, District Board S. K.)
Chairman of the Board of Directors.

M. S. ALVA,
AGENT
Mercara Office.

ರ ಸಂಗಡಕ್ಕೆ ಗೆಲುಸಿಕ್ಕುವುದನ್ನು ಸಹ ಅಸಾಧ್ಯವಾಗಿ ಮಾಡುವುದು ಎಂಬುವುದು ಇವರಿಗೆ ಗೊತ್ತಿದೆ. ಅದುದರಿಂದಲೇ, ಅಖಿಲ ಕಾಂಗ್ರೆಸಿನ ಧ್ಯೇಯವು ಭಾಷಾವಾರು ಪ್ರಾಂತ್ಯವನ್ನು ಆಗುವಷ್ಟು ಬೇಗನೆ ರಚಿಸುವುದೆಂದಿದ್ದರೂ, ಸಹ ಈ ಪಾರ್ಟಿಯವರು ಹೊರಡಿಸಿರುವ ಇವರ ಪ್ರಸಿದ್ಧ ಪತ್ರಿಕೆಯಲ್ಲಿ ಈ ವಿಷಯ ಏನೂ ಹೇಳಿರುವುದಿಲ್ಲ. ಇದರ ಅಭಿಪ್ರಾಯವೆಂದರೆ, ಇವರು ಭಾಷಾವಾರು ಪ್ರಾಂತರಚನೆಗೆ ವಿರೋಧವಿದ್ದಾರೆಂದಲ್ಲ. ಅದನ್ನು ಪ್ರಕಟಿಸಿದರೆ, ಇವರ ಗೆಲುವಿಕೆಗೆ ತೊಂದರೆಯೂ ಗುತ್ತ್ ಎಂಬ ದೃಷ್ಟಿಯಿಂದ ಎಂಬುವುದು ವ್ಯಕ್ತವಾದಂತಾಯಿತು. ಈ ರೀತಿಯ ನಡಾವಳಿಕೆಯಲ್ಲಿ ನಮ್ಮ ಕಾಂಗ್ರೆಸ್ ಮುಂದಾಳುಗಳಿಗೂ ಇವರ ಮುಖ್ಯ ನಾಯಕರಾದ ಶ್ರೀ. ನೆಹರೂರವರಿಗೂ ಎಂತಹ ವ್ಯತ್ಯಾಸವಿದೆ ಎಂಬುವುದನ್ನು ಮತದಾರರೇ ಊಹಿಸಿಕೊಳ್ಳಲಿ.

(೨) ಎರಡನೆಯದಾಗಿ ಇವರು ಸಹ 'ಕೊಡಗಿಗೆ ಸ್ವಾತಂತ್ರ್ಯ ಸರಕಾರ ಸಿಕ್ಕಲು ದುಡಿದಿದ್ದೇವೆ' ಎಂಬುವುದು ಎಷ್ಟರ ಮಟ್ಟಿಗೆ ನಿಜವಲ್ಲ ಎಂಬುವುದಕ್ಕೆ ಇದೇ ಸಾಕ್ಷಿ.

ಇವರ ಹೇಳಿಕೆ ಪ್ರಕಾರ, ಇವರು ದುಡಿದದ್ದು ಮತ್ತು ಇಲ್ಲಿಂದ ಡೆಲ್ಲಿ ವರೆಗೆ ಹೋರಾಡಿದ್ದು ಕೊಡಗನ್ನು ಬೇರೆ ಪ್ರಾಂತ್ಯಕ್ಕೆ ಸೇರಿಸಲು ಅಲ್ಲದೆ ಕೊಡಗಿಗೆ ಸುಧಾರಣೆ ಪಡೆಯಲು ಅಲ್ಲ. ಆದರೆ ಇಂಡಿಯಾ ಸರಕಾರದವರು ಅದನ್ನು ಗಮನಿಸದೆ, ಕೊಡಗಿಗೆ ಸ್ವಾತಂತ್ರ್ಯ ಸರಕಾರ ಕೊಟ್ಟದಕ್ಕೆ ಇವರಿಗೆ ಎಷ್ಟರ ಮಟ್ಟಿಗೆ ಸಿಟ್ಟುಬಂದಿತ್ತೆಂದರೆ, ಅಂತಹ ಸರಕಾರವನ್ನು ವಂದಿಸುವ ಒಂದು ಠರಾವನ್ನು ಪಾಸುಮಾಡುವುದು ಸಹ ಅಯೋಗ್ಯವೆಂದು ಅಧ್ಯಕ್ಷರು ತಂದ ವಂದನಾರ್ಪಣೆಯ ಠರಾವನ್ನು ಸಹ ವಿರೋಧಿಸಿ ಇವರು ತಿರಸ್ಕರಿಸಿದ್ದಾರೆ. ಇಂತಿದ್ದರೂ, ಈಗ ಇವರು 'ನಾವೂ ಸ್ವಾತಂತ್ರ್ಯಕ್ಕೆ ಹೋರಾಡಿದ್ದೇವೆ'ಂಬುವುದು ಎಷ್ಟರ ಮಟ್ಟಿಗೆ ನಂಬತಕ್ಕ ವಿಷಯವಲ್ಲ ಎಂಬದನ್ನು ಓಟರುಗಳಾದ ನಾವು ತಿಳಿಯಬೇಕಾಗಿದೆ.

ಇದೆಲ್ಲದಕ್ಕಿಂತಲೂ ವ್ಯಸನಕರವಾದ ಸಂಗತಿ ಎಂದರೆ, ಇವರು ಕೋಮುವಾರು ಭಾವನೆಯನ್ನು ಜನರಲ್ಲಿ ಹರಡುವುದು. ಇವರು ಪೂಜ್ಯ ಕಾಂಗ್ರೆಸ್ ಪಾರ್ಟಿಯವರಾಗಿ ಉಮೇದುವಾರರನ್ನು ನಿಲ್ಲಿಸಿರುವ ರೀತಿಯೇ ಇದಕ್ಕೆ ನಿದರ್ಶನವಾಗಿದೆ. ಮಡಿಕೇರಿಯಲ್ಲೇ ವಾಸವಿದ್ದು, ಅಲ್ಲೇ ಜೀವನ ನಡೆಸುತ್ತಿರುವವರನ್ನು ಶನಿವಾರಸಂತೆ ಹೋಬಳಿಗೂ ವೀರರಾಜಪೇಟೆ ನಾಡಿಗೂ, ಮೂರ್ನಾಡಿನವರನ್ನು, ಭಾಗಮಂಡಲ ನಾಡಿಗೂ ನಿಲ್ಲಿಸಿದ್ದು ಆಯಾ ಸ್ಥಳದಲ್ಲಿ ಇದರ ಉಮೇದುವಾರರ ಕೋಮಿನವರ ಓಟರುಗಳ ಸಂಖ್ಯೆಯನ್ನನುಸರಿಸಿಯಲ್ಲದೆ ಬೇರೆ ದೃಷ್ಟಿಯಿಂದಲ್ಲವೆಂಬುವುದು ಎಲ್ಲರಿಗೂ ಮನವರಿಕೆಯಾಗದಿರದು. ಅಷ್ಟೇ ಅಲ್ಲ; ಕಾಂಗ್ರೆಸ್ ಹುರಿಯಾಳುಗಳು ಈಗ ದೇಶಸ್ಥರನ್ನು ಓಟು ಕೇಳುತ್ತಿರುವವರಲ್ಲಿ ಅನೇಕರು ಕಾಂಗ್ರೆಸಿನಲ್ಲಿ ಇರಲಿಲ್ಲವಷ್ಟೆ? ನಾನು ತಿಳಿದಂತೆ ೧೯೪೭ರಿಂದ ಈಚೆ ವರೆಗೆ ಕಾಂಗ್ರೆಸಿನವರು ಯುದ್ಧಕ್ಕೆ ಸಹಾಯಕರಾಗದೆ ಜೈಲಿನಲ್ಲಿ ಕೊಳೆಯುತ್ತಿದ್ದಾಗ ಇವರ ಪೈಕಿ ಅನೇಕರು ಸರಕಾರದವರ ಬಾಲ ಹಿಡಿದು ಯುದ್ಧ ನಿಧಿಗೆ ಹಣ ಸಂಗ್ರಹಿಸುತ್ತ ಮಹಾತ್ಮಾ ಗಾಂಧೀಜಿಯವರನ್ನೂ ನೆಹರೂರವರನ್ನೂ ಹೀಯಾಳಿಸುತ್ತಿದ್ದರು. ಅಂಥವರಲ್ಲಿ ಅನೇಕರು ಈಗ ನೆಹರೂ ಗಾಂಧೀಜಿಯವರಿಗಿಂತ ಹೆಚ್ಚಾಗಿ ಕಾಂಗ್ರೆಸಿನ ಹೆಸರೇಳಿಕೊಂಡು ಓಟು ಕೇಳುವುದನ್ನು ಕಂಡರೆ ನಮಗೇ ಆಶ್ಚರ್ಯವಾಗುತ್ತದೆ.

ಇದು ಹೇಗೇ ಇರಲಿ! ಶ್ರೀ ನೆಹರೂರವರಿಗೆ ಹಿಂದೂಕೋಡ್ ಬಿಲ್ಲನ್ನು ಕಾನೂನಾಗಿ ಮಾಡಲು ಎಷ್ಟು ನಿಗವಿದೆಯೋ ಅಷ್ಟೇ ನಿಗ ನಮ್ಮ ಕಾಂಗ್ರೆಸ್ ಉಮೇದುವಾರರಲ್ಲಿ ಅನೇಕರಿಗೆ ಕೊಡಗನ್ನು ಬೇರೆ ಪ್ರಾಂತ್ಯಕ್ಕೆ ಸೇರಿಸುವುದರಲ್ಲಿದೆ ಎಂಬುವುದು ಅವರ ಪೂರ್ವದ ನಡಾವಳಿಕೆಯಿಂದಲೂ ಮತ್ತು ತಾ ೧೦-೯-೫೧ರಲ್ಲಿ ಗೋಣಿಕೊಪ್ಪಲಲ್ಲಿ ನಡೆದ ಮೀಟಿಂಗಿನ ಪ್ರೊಸೀಡಿಂಗ್ಸಿನಿಂದಲೂ ಮತ್ತು ಇವರೂ ಇವರ ಏಜಂಟರುಗಳೂ ಖಾಸಗಿ ಓಟರುಗಳೊಡನೆ ಹೇಳುತ್ತಿರುವ ಮಾತುಗಳಿಂದಲೂ ಎಲ್ಲರಿಗೂ ಗೊತ್ತಾಗಿದೆ. ಆದರೆ ನೆಹರೂರವರಿಗೆ ಅವರ ನಡಾವಳಿಕೆಯಲ್ಲೂ ಯೋಗ್ಯತೆಯಲ್ಲೂ ಭರವಸೆಯಿರುವದರಿಂದ ಅವರ ಗುರಿಯನ್ನು ಬಿಚ್ಚಿ ಹೇಳಿರುತ್ತಾರೆ. ಅಲ್ಲದೆ 'ಓಟರಿಗೆ ಅವರ ಮೇಲೆ ಭರವಸೆ ಇದ್ದರೆ, ಓಟು ಕೊಡಲಿ ಇಲ್ಲವಾದರೆ ಬೇಡ ಎಂದು' ಅವರ ಧ್ಯೇಯ. ಆದರೆ ಇವರ ಧ್ಯೇಯ ಹಾಗಲ್ಲ. ಇವರಿಗೆ ನಿಜವಾಗಿಯೂ ಗೊತ್ತಿದೆ. 'ನಮ್ಮ ನಿಜವಾದ ಗುರಿಯನ್ನು ಬಹಿರಂಗಪಡಿಸಿದರೆ, ನಮಗೆ ಜಯ ಸಿಕ್ಕಲಾರದೆಂಬುದು' ಅಲ್ಲದೆ 'ಈ ಚುನಾವಣೆಯಲ್ಲಿ ಹೇಗಾದರೂ ಸೋಲಬಾರದು' ಎಂಬ ಹಟವೂ ಇದೆ. ಆದುದರಿಂದಲೇ ಈ ಆತ್ಮವಿರುದ್ಧದ ನಾಟಕವನ್ನು ಆರಂಭಿಸಿದ್ದಾರೆ.

ಈ ಪಾರ್ಟಿಯವರು, ಪ್ರತ್ಯೇಕ ಪಾರ್ಟಿಯವರನ್ನು ಕುರಿತು 'ಅವರು ಕಾಂಗ್ರೆಸಿಗೆ ರಾಜಿನಾಮೆ ಕೊಟ್ಟು 'ನಾವು ಕಾಂಗ್ರೆಸ್ಸಿಗೆ ವಿರೋಧವಿಲ್ಲ'ವೆಂದು ಹೇಳುವುದು ಮಾತ್ರ ಯೋಗ್ಯವೋ' ಎಂದು ಕೇಳುತ್ತಾರೆ. ಆ ಪಾರ್ಟಿಯವರು ಹೀಗೆ ಬರೇ ಬಾಯಿಯಲ್ಲಿ ಮಾತ್ರ ಹೇಳುವುದಲ್ಲ, ಮತ್ತು ಓಟು ಸಂಪಾದನೆಗಾಗಿ ಹೇಳುವುದೂ ಅಲ್ಲ. ಇವರು ಕೊಟ್ಟಿರುವ ರಾಜಿನಾಮೆಯಲ್ಲೇ ಇದನ್ನು ಬರೆದಿದ್ದಾರೆ. ಆದರೆ ಈಗಿನ ಕಾಂಗ್ರೆಸ್ ಪಾರ್ಟಿಯವರು ಮಾತ್ರ ಅವರು ಎಷ್ಟೇ 'ನಾವು ಪ್ರತ್ಯೇಕವಾದಿಗಳೇ' ಹೇಳಿದರೂ ಮೇಲ್ಕಂಡ ಕಾರಣಗಳಿಗಾಗಿ ಅವರ ಮಾತಿನಲ್ಲಿ ಓಟರಿಗೆ ತತ್ಕಾಲಕ್ಕೆ ಭರವಸೆ ಇಡಲು ಸಾಧ್ಯವಿಲ್ಲ.

ಕಡೆಯದಾಗಿ, ಈ ಕಾಂಗ್ರೆಸ್ ಪಕ್ಷದವರು ಕಳೆದ ಸೆಪ್ಟೆಂಬರ್ ವರೆಗೆ ಕೊಡಗನ್ನು ಬೇರೆ ಪ್ರಾಂತ್ಯಕ್ಕೆ ಸೇರಿಸಿ ಬಿಡಬೇಕೆಂಬ ಒಂದೇ ನಿರ್ಧಾರದಿಂದ ಕೆಲಸ ಮಾಡುತ್ತಿದ್ದುದರಿಂದಲೂ, ಮತ್ತು ಅವರಿಗೆ ಕೊಡಗಿಗೆ ಸುಧಾರಣೆ ಸಿಕ್ಕುವ ಭರವಸೆಯೂ ಸಹ ಹೆಚ್ಚಾಗಿರಲಿಲ್ಲವಾದ ಕಾರಣದಿಂದಲೂ, ಇವರು ಸ್ವತಂತ್ರ ಕೊಡಗು ದೇಶಸ್ಥರ ಏಳಿಗೆಗೆ ಯಾವ ತರದ ಸರಕಾರವನ್ನೂ, ಯೋಜನೆಗಳನ್ನೂ ಕೈಕೊಳ್ಳಬೇಕೆಂಬುವುದನ್ನು ಕುರಿತು ಯೋಜನೆ ಮಾಡಿರಲಿಕ್ಕಿಲ್ಲ. ಮತ್ತು ಯೋಚನೆ ಮಾಡುವ ಆವಶ್ಯಕತೆಯೂ ಇವರಿಗೆ ಇರಲಿಲ್ಲ. ಇಂಡಿಯಾ ಸರಕಾರವು ಕೊಡಗಿಗೆ, ಸುಧಾರಣೆಯನ್ನು ಕೊಡಲು ಮನಸು ಮಾಡಿದ್ದು ಇವರಿಗೆ ಸಿಟ್ಟನ್ನೂ ಆಶ್ಚರ್ಯವನ್ನೂ ಉಂಟು ಮಾಡಿರುವಾಗ್ಯೂ, ಇವರಿಗೆ ಮುಂದಿನ ಯೋಜನೆಗಳನ್ನು ಆಲೋಚಿಸುವ ಎಡೆ ಎಲ್ಲಿಂದ ಬರಬೇಕು. ಆದುದರಿಂದ ಇವರು ಈ ವಿಷಯದಲ್ಲಿ ಇನ್ನೂ ಕತ್ತಲೆಯಲ್ಲೇ ಇದ್ದಾರೆ. ಆದರ ಬದಲು ಕೊಡಗನ್ನು ಕರ್ನಾಟಕಕ್ಕೆ ಸೇರಿಸಿಬಿಡಲು ನಿರ್ಧರಿಸಿರುವ ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಧೀನತೆಯನ್ನು ತಪ್ಪಿಸಿ, (ಮೈಸೂರಿನಂತೆ) ಕೊಡಗಿಗೂ ಪ್ರತ್ಯೇಕ ಪ್ರಾಂತೀಕ ಕಾಂಗ್ರೆಸ್ ಸಮಿತಿಯು ದೊರೆಯುವದಾದರೆ ಕೊಡಗಿನಲ್ಲಿ ಪ್ರತ್ಯೇಕವಾದಿಗಳಾಗಿರುವ ಕಾಂಗ್ರೆಸ್ಸಿಗರು ಕಾಂಗ್ರೆಸ್ಸಿಗೆ ಪುನಹ ಸೇರುವುದರಲ್ಲಿ ಏನೊಂದೂ ತೊಂದರೆ ಇಲ್ಲ. ಪ್ರತ್ಯೇಕ ಪಾರ್ಟಿಯವರಿಗ ದರೋ, ಈ ಅಮಾಲ್ಗಮೇಶನ್ ಪಾರ್ಟಿಯ ಪರ, ಕೆ. ಪಿ. ಸಿ. ಸಿ. ಯವರೂ ಮತ್ತು ಇಂಡಿಯಾ ಸರಕಾರದ ಮುಂದಾಳುಗಳೂ ಈ ಸಾಲ್ವ ಪ್ರಶ್ನೆಗಳಿಂದ 'ನಿಮಗೆ ಸ್ವಾತಂತ್ರ್ಯ ಕೊಟ್ಟರೆ, ನೀವು ಹೇಗೆ ರಾಜ್ಯವಾಳುತ್ತೀರಿ. ನಿಮ್ಮ ಆರ್ಥಿಕ ಸ್ಥಿತಿಯನ್ನು ಹೇಗೆ ಸುಧಾರಿಸುತ್ತೀರಿ, ಮತ್ತು ಕೊಡಗಿನ ರಾಜ್ಯಾಡಳಿತವನ್ನು ಹೇಗೆ ನಡೆಸುತ್ತೀರಿ, ಎಂಬತಾಗಿ ಆಗಿಂದಾಗ್ಯೆ ಕೇಳುತ್ತಿದ್ದದರಿಂದ, ಅವರು ಈ ವಿಶಯದಲ್ಲಿ ಬಹುವಾಗಿ ಯೋಚಿಸಿರುವುದಲ್ಲದೆ ಮುಂದಿನ ಎಲ್ಲಾ ವಿವರವನ್ನೂ, ಯೋಜನೆಗಳನ್ನೂ ತಯಾರಿಸಿ ಇವನ್ನು ಇಂಡಿಯಾ ಸರಕಾರಕ್ಕೂ ತಿಳಿಸಿರುತ್ತಾರೆ ಹೀಗಿರುವಾಗ್ಯೆ ಈಗ, ಏನೂ ಯೋಚನೆ ಮಾಡದೆ ಇದ್ದು, ಮತ್ತು ಕೊಡಗಿನ ಸುಧಾರಿತ ಸರಕಾರವನ್ನು ನಡಿಸಲಿಕ್ಕೆ ಸಾಧ್ಯವೇ ಇಲ್ಲ'ವೆಂಬುದಾಗಿ ಹೇಳುತ್ತಿದ್ದ ಈ ಕಾಂಗ್ರೆಸ್ ಪಾರ್ಟಿಯವರಿಗೆ ನಾವು ಓಟು ಕೊಟ್ಟು ಅವರನ್ನು ಜಯಶೀಲರಾಗಿ ಮಾಡಿದ್ದರೆ ಆ ಮುಂದಾಳುಗಳು ಆ ಮೇಲೆ ತಮ್ಮ ಕಾರ್ಯಕಲಾಪಗಳನ್ನು ಕುರಿತು ಯೋಚಿಸಬೇಕಾದೀತು. ಅವರು ಕತ್ತಲೆಯಲ್ಲಿ ದಾರಿ ಹುಡುಕುವಂತೆ ಆಗಬಹುದು. ಅಷ್ಟೇ ಅಲ್ಲ ಇಲ್ಲದ ಸಲ್ಲದ ಯೋಜನೆಗಳನ್ನು ಕೈಕೊಂಡು ಇರುವ ಉಳುವಾ ಹಣವನ್ನು ಖರ್ಚು ಮಾಡಿ, ಮುಂದಕ್ಕೆ ಯಾವ ದಾರಿಯೂ ಇಲ್ಲದ ಹಾಗೆ ಮಾಡಿಬಿಡಲಿಕ್ಕೂ ಸಾಕು.

ಆದರ ಬದಲು ಇದೇ ವಿಶಯದಲ್ಲಿ ಹಗಲಿರುಳು ಯೋಚಿಸುತ್ತಾ, ಮುಂದಿನ ಕಾರ್ಯಕಲಾಪಗಳನ್ನೂ, ಯೋಜನೆಗಳನ್ನೂ ಈಗಾಗಲೇ ತಯಾರಿಸಿಟ್ಟಿರುವ ಪ್ರತ್ಯೇಕವಾದಿಗಳನ್ನೇ ಓಟರುಗಳು ಆರಿಸಿದಾದರೆ ಅವರು ಈ ಐದು ವರ್ಷಗಳಲ್ಲಿ ಕೊಡಗು ಪ್ರತ್ಯೇಕ ಪ್ರಾಂತ್ಯವಾಗಿ ನಿಲ್ಲಲು ಸಾಧ್ಯವಿದೆ ಎಂಬದನ್ನು, ಎದ್ರಿ ಪಾರ್ಟಿಯವರಿಗೂ, ದೇಶಸ್ಥರಿಗೂ, ಮತ್ತು ಇಂಡಿಯಾ ಸರಕಾರಕ್ಕೂ ಮನದಟ್ಟು ಮಾಡಬೇಕಾದ ಕಾರಣ, ಬಹುಮುತುವರ್ಜಿಯಿಂದ ಕೆಲಸ ಮಾಡುವರು ಆದರೆ ಕಾಂಗ್ರೆಸ್ ಪಾರ್ಟಿಯವರಿಗೆ ಹಾಗೆ ನಿಗವಿಟ್ಟು ದೇಶದ ಏಳಿಗೆಗೆ ಕೆಲಸ ಮಾಡಬೇಕಾದ ಆವಶ್ಯವೂ ಇರುವುದಿಲ್ಲ. ಈ ಐದು ವರ್ಷಗಳಲ್ಲಿ ಏನೂ ಮಾಡಲಾಗಲಿಲ್ಲವೆಂದಾದರೆ, ಕೊಡಗನ್ನು ಬೇರೆ ಪ್ರಾಂತ್ಯಕ್ಕೆ ಸೇರಿಸಿದರಾಯಿತು. ಅದೇ ಇವರ ಗುರಿಯೂ ಆಗಿರುವುದರಿಂದ ಅವರು ಹಾಗೆ ಮಾಡಲಿಕ್ಕಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಪಾರ್ಟಿಯನ್ನು ರಾಜಿ ಮಾಡಲು ಒಂದು ಉಪಕಮಿಟಿಮಾಡಬೇಕೆಂದು ಠರಾವು ತಂದಾಗ್ಯೂ ಇವರ ಪಾರ್ಟಿಯವರು ಒಂದು ತುಚ್ಛರೀತಿಯಲ್ಲಿ ಅಂತಹ ಠರಾವನ್ನು ನಿರಾಕರಿಸಿದ ಮಾತನ್ನು ನಾನು ಪುನಃ ಇಲ್ಲಿ ಉತ್ತರಿಸುತ್ತೇನೆ, 'ಪಂದ್ಯಂಡ ಬೆಳ್ಳಿಯಪ್ಪನವರು ದೇಶವನ್ನು ಸೂರ್ಯ ಚಂದ್ರರು ಇರುವ ವರೆಗೆ ಪ್ರತ್ಯೇಕವಾಗಿಟ್ಟುಕೊಳ್ಳಬೇಕೆನ್ನುವವರು. ನಾವಾದರೋ [illegible] ಯೋಜನೆ ಮಾಡಬೇಕೆನ್ನುವವರು'

ಆದ್ದರಿಂದ ಈ ಚುನಾವಣೆಯು ಕೊಡಗು ಪ್ರಾಂತ್ಯದ ಮುಂದಿನ ಏಳಿಗೆ, ಅಧೋಗತಿಯನ್ನು ನಿರ್ಣಯಿಸುವ ಚುನಾವಣೆ ಎಂದರೆ ಅದು ಎಂದೂ ಅತಿಶಯೋಕ್ತಿ ಆಗಲಾರದು. ಕೊಡಗು ಮುಂದಕ್ಕೆ ಬರಬೇಕಾದರೆ, ಇಲ್ಲಿ ಗಾಂಧಿಜಿಯವರ ಮನಸ್ಸಿನಲ್ಲಿದ್ದ ರಾಮರಾಜ್ಯ ಸ್ಥಾಪನೆಯಾಗಬೇಕಾಗಿದ್ದರೆ, ನಾವು ಓಟರುಗಳು, ಕೋಮುವಾರು ಭ್ರಾಂತಿಗಳನ್ನು, ಸ್ವಹಿತ, ನೆಂಟು, ಜಾತಿಯತ್ವ ಎಂಬ ಭಾವನೆಗಳನ್ನೂ ಗಮನಿಸದೆ, ಕೊಡಗನ್ನು ಪ್ರತ್ಯೇಕವಿಡಲು ಯಾರು ದುಡಿದಿದ್ದಾರೆ, ಅವರಿಗೇ ಓಟು ಕೊಟ್ಟು ಅವರನ್ನು ಜಯಶೀಲರಾಗಿ ಮಾಡುವುದು ನಮ್ಮ ಕರ್ತವ್ಯವಾಗಿದೆ ಎಂದು ನನಗೆ ತೋರುತ್ತದೆ

ವಿನಂತಿ.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಶ್ರೀ ಯಂ. ಪುತ್ತಣ್ಣನವರ ಜೀವದ ಮೇಲೆ ವಿಮೆ ಮಾಡಿದ ಪಾಲಿಸಿ ನಂ. 305283 ಕಾಣದೆಯಾಗಿದೆ ಇಂದಿನಿಂದ ಒಂದು ತಿಂಗಳೊಳಗೆ ಆಕ್ಷೇಪ ಬಾರದಿದ್ದರೆ ಈ ಪಾಲಿಸಿಯ ಪೂರ್ಣ ವಜಾ ಬಗ್ಗೆ ದೊರೆಯುವ ಸರ್ರೆಂಡರ್ ಬೆಲೆಯನ್ನು ವಿಮೆದಾರರಿಗೆ ಕೊಡಲಾಗುವುದು. ಈ ಒಂದು ತಿಂಗಳ ಅವಧಿಯ ನಂತರ ಬರುವ ಹಕ್ಕುಗಳನ್ನು ಗಮನಿಸಲಾಗುವುದಿಲ್ಲ.

ಎಸ್. ಎಲ್. ವೈದ್ಯನಾಥನ್,
ಮ್ಯಾನೇಜರ್.

ಪಾರ್ಲಿಮೆಂಟಿಗೂ, ಕೊಡಗು ಎಸೆಂಬ್ಲಿಗೂ

ಪ್ರತ್ಯೇಕ ಪಕ್ಷದ ಪರ

ಚುನಾವಣೆಗೆ ನಿಂತಿರುವ ಉಮೇದ್ವಾರರು.

ಕೇಂದ್ರ ಪಾರ್ಲಿಮೆಂಟಿಗೆ—

ಶ್ರೀ ಕೆ. ಟಿ. ಉತ್ತಪ್ಪ, ಸಿದ್ದಾಪುರ.

ಉತ್ತರ ಕೊಡಗು

ಶನಿವಾರಸಂತೆ ಕ್ಷೇತ್ರಕ್ಕೆ.

ಶ್ರೀ ಹೆಚ್. ಎಂ. ಮಲ್ಲಪ್ಪ, ಸೋಮವಾರಪೇಟೆ

ಶ್ರೀ ಬಿ ಚಿಕ್ಕ, ನಿತ್ತ, ಶನಿವಾರಸಂತೆ

ಸೋಮವಾರಪೇಟೆ ಉತ್ತರ ಕ್ಷೇತ್ರಕ್ಕೆ

ಶ್ರೀ ಹೆಚ್. ಟಿ. ಚಂಗಪ್ಪ, ಸೋಮವಾರಪೇಟೆ

ಸೋಮವಾರಪೇಟೆ ದಕ್ಷಿಣ ಕ್ಷೇತ್ರಕ್ಕೆ

ಶ್ರೀ ಎಚ್. ಟಿ. ಮುತ್ತಣ್ಣ, ಸೋಮವಾರಪೇಟೆ

ಫ್ರೇಜರ್‌ಪೇಟೆ ಕ್ಷೇತ್ರಕ್ಕೆ

ಶ್ರೀ ಎಸ್. ಎ. ರಾಮಶೆಟ್ಟಿ, ಫ್ರೇಜರ್‌ಪೇಟೆ

ಸುಂಟಿಕೊಪ್ಪ ಕ್ಷೇತ್ರಕ್ಕೆ

ಶ್ರೀ ಪಾಂಡಂಡ ಚಂಗಪ್ಪ ಮಡಿಕೇರಿ

[illegible] ಸುಂಟಿಕೊಪ್ಪ

ಮಾಣಿ[illegible] ಕ್ಷೇತ್ರಕ್ಕೆ

ಗು ಕಾಂಗ್ರೆಸ್. ಗೋಪಾಲ[illegible]

[illegible] ಬಿ. ಎ., ಬಿ. ಎಲ್,

[illegible] ಮಡಿಕೇರಿ

ನ ದೇಶ ಕ್ಷೇತ್ರಕ್ಕೆ

[illegible] ಬಿ. ಪೊನ್ನಪ್ಪ, ಮೂರ್ನಾಡು

[illegible] ಕ್ಷೇತ್ರಕ್ಕೆ

[illegible] ಟಿ. ಅಯ್ಯಪ್ಪ, ಮಡಿಕೇರಿ

ದಕ್ಷಿಣ ಕೊಡಗು

[illegible]ಂಗಲ ಕ್ಷೇತ್ರಕ್ಕೆ

ಶ್ರೀ ಕೋಳೆರ ಕರುಂಬಯ್ಯ, [illegible]ರಾಜಪೇಟೆ

ಶ್ರೀ ಜಿ. ಸುಬ್ಬಯ್ಯ, ಕೈಕೊಡ್ಲೂರು

ಕೇರಿ ಕ್ಷೇತ್ರಕ್ಕೆ

ಶ್ರೀ ಕಾಕಮಾಡ ಗಣಪತಿ, ಬೇಗೂರು

[illegible]ನಾಡು ಕ್ಷೇತ್ರಕ್ಕೆ

[illegible] ಚೇಂದಿರ ತಮ್ಮಯ್ಯ, ಪೊನ್ನಂಪೇಟೆ

[illegible]ಗೇಟೆ ಕ್ಷೇತ್ರಕ್ಕೆ

[illegible] ಬಿ. ಡಿ. ಗಣಪತಿ, ಮಡಿಕೇರಿ

[illegible] ಪಂಜ್ರಿ ಯರವರ, ನೆಗಬ್ಬಿ ಗ್ರಾಮ

[illegible] ಟೌನ್ ಕ್ಷೇತ್ರಕ್ಕೆ

ಕೊಂಡಿರ್ ಎನ್. ಜಿ. ಆಹಮದ್, ವೀರಾಜಪೇಟೆ

[illegible]ರಾಜಪೇಟೆ ನಾಡು ಕ್ಷೇತ್ರಕ್ಕೆ

ಶ್ರೀ ಪಿ. ಸಿ. ಉತ್ತಯ್ಯ, ವೀರಾಜಪೇಟೆ

ಶ್ರೀ ನಂಜ ಹರಿಜನ, ಬಿಳುಗುಂದ ಗ್ರಾಮ

ಅಮ್ಮತ್ತಿ ಕ್ಷೇತ್ರಕ್ಕೆ

ಶ್ರೀ ಪಿ. ಐ. ಬೆಳ್ಯಪ್ಪ, ಮಡಿಕೇರಿ

ಸಿದ್ದಾಪುರ ಕ್ಷೇತ್ರಕ್ಕೆ

ಶ್ರೀ ಕೂತಂಡ ಪೂವಯ್ಯ, ಪೊಳ್ಳಿಬೆಟ್ಟ

ಶ್ರೀ ಮಾರ ಎರವರ, ಪೊಳ್ಳಿಬೆಟ್ಟ

ಹಾಪೋಕ್ಲು ಕ್ಷೇತ್ರಕ್ಕೆ

ಶ್ರೀ ಎ. ಸಿ. ತಿಮ್ಮಯ್ಯ, 'ಗ್ರೀನ್ ಹಿಲ್ಸ್' ವೀರಾಜಪೇಟೆ

ಭಾಗಮಂಡಲ ಕ್ಷೇತ್ರಕ್ಕೆ

ಶ್ರೀ ಪಟ್ಟಮಾಡ ಪೊನ್ನಪ್ಪ, ಬೇಂಗೂರು.

ಇವರು ಕಾಂಗ್ರೆಸ್ಸಿಗರಲ್ಲ; ಪೂರ್ಣ ಸಂಯೋಜನಾವಾದಿಗಳು.

ಕೊಡಗನ್ನು ಬೇರೆ ಪ್ರಾಂತದೊಡನೆ ಸೇರಿಸಿಬಿಡಬೇಕೆಂದು ಈ ವರೆಗೆ ಶತ ಪ್ರಯತ್ನ ಮಾಡಿದ ಸಂಯೋಜನಾವಾದಿಗಳು ಇಂದು ತಾವು ಕಾಂಗ್ರೆಸಿನ ಹೆಸರಿನಿಂದ ಚುನಾವಣೆಗೆ ನಿಂತಿದ್ದೇವೆ. ತಾವು ಸಂಯೋಜನಾವಾದಿಗಳಲ್ಲವೆಂದು ಹೇಳುತ್ತಿದ್ದಾರೆ. ಇವರ ಈ ಸುಳ್ಳು ವಾದವನ್ನು ಪ್ರತಿಯೊಬ್ಬನೂ ಅರಿಯಬೇಕೆಂದು ಅವರವರು ಬರೆದ ಪುಸ್ತಕ, ಮಾಡಿದ ಭಾಷಣಗಳಿಂದ ಈ ಕೆಳಗಿನ ಅಂಶಗಳನ್ನು ಕೊಡಲಾಗಿದೆ.

1. 'The smallness of the province with its inelastic sources of revenue, make it impossible to adopt any form of responsible Government ಅಂದರೆ ಕೊಡಗಿನ ಚಿಕ್ಕತನ, ಹೆಚ್ಚಾಗಲು ಸಾಧ್ಯವಿಲ್ಲದ ಉತ್ಪತ್ತಿ ಇವುಗಳಿಂದಾಗಿ ಕೊಡಗಿನಲ್ಲಿ ಯಾವುದೇ ರೀತಿಯ ಜವಾಬ್ದಾರಿ ಸರಕಾರವನ್ನು ನಡೆಸುವದು ಅಸಾಧ್ಯವಾಗಿದೆ.

2. We have, therefore, presented this memorandum with the fervent hope that Coorg may be deleted from the second part of the first schedule of the draft constitution and that it may be formed part of the State of Mysore. ಅಂದರೆ ಕೊಡಗಿನ ಹೆಸರನ್ನು ಕರಡು ರಾಜ್ಯಘಟನೆಯ ಪ್ರಥಮ ಶೆಡ್ಯೂಲಿನ ಎರಡನೇ ಭಾಗದಿಂದ ವಜಾ ಮಾಡಿ ಅದು ಮೈಸೂರಿನ ಒಂದು ಭಾಗವಾಗುವ ಅನುಮೋದಿಸಬೇಕೆಂಬ ಅನನ್ಯ ನಂಬಿಕೆಯಿಂದ ಈ ಮೆಮೊರಾಂಡಂನ್ನು ಒಪ್ಪಿಸಿರುವೆವು.

3 On behalf of the people of Coorg, we make an earnest appeal to bestow your serious consideration to our problem and decide once for all in favour of a merger of this province with the Mysore State retaining its entity as a seperate District. ಅಂದರೆ ನೀವೆಲ್ಲರೂ ಆಳವಾಗಿ ನಮ್ಮ (ದೇಶದ ಭವಿಷ್ಯದ) ಪ್ರಶ್ನೆಯನ್ನು ಆಲೋಚಿಸಿ ಕೊಡಗನ್ನು ಮೈಸೂರಿಗೆ ಸೇರಿಸಿ, ಒಂದು ಪ್ರತ್ಯೇಕ ಜಿಲ್ಲೆಯಾಗಿ ಇಡುವ ಬಗ್ಗೆ ಕಡೇ ತೀರ್ಮಾನವನ್ನು ಕೊಡಬೇಕೆಂದು ಕೊಡಗಿನ ಜನರ ಪರವಾಗಿ ಈ ಅಪೀಲನ್ನು ಮಾಡುತ್ತೇವೆ.'

೧೯೪೮ರಲ್ಲಿ ಕೊಡಗಿನ ಸಂಯೋಜನಾ ಪಕ್ಷದ ಮುಂದಾಳುಗಳಾದ, ಇಂದು ಕಾಂಗ್ರೆಸ್ಸಿನ ಚುನಾವಣೆಗೆ ನಿಂತಿರುವ ಶ್ರೀ ಗಳಾದ ಕೆ. ಮಲ್ಲಪ್ಪ, ಚೌರಿರ ಮಂದಣ್ಣ, ಕೋರನ ದೇವಯ್ಯ, ಬಲ್ಲಚಂಡ ಬೆಳ್ಯಪ್ಪ, ಎಸ್. ಎಸ್. ರಾಮಮೂರ್ತಿ, ನಿಡ್ಡೆಮನೆ ಸೋಮಣ್ಣ, ಚೆಕ್ಕೆರ ಮಾಚಯ್ಯ, ಮಾಚಿಮಾಡ ನಂಜುಂಡ ಇವರುಗಳೂ, ಕಾಂಗ್ರೆಸ್ಸಿಗಾಗಿ ಇಂದು ಕೆಲಸ ಮಾಡುತ್ತಿರುವ ಶ್ರೀ ಗಳಾದ ಚೆರಿಯಪಂಡ ಕುಶಾಲಪ್ಪ, ಅಜ್ಜಿಕುಟ್ಟಿರ ತಮ್ಮಯ್ಯ, ಕೊ[illegible] ಗಣಪತಿ, ಕೊಡಂದೇರ ಕಾರ್ಯಪ್ಪ, ಎಸ್. ಎಂ. ಚೆನ್ನಬಸಪ್ಪ, ಡಿ. ವಿ ಬಾಸಪ್ಪ ಮೊದಲಾದ ಇಪ್ಪತ್ತೇಳು [illegible]ರೂ ಕೊಡಗಿನ ಜನತೆಗೆ ತಿಳಿಸದೆ ತಾವೇ ಜನರ ಪ್ರತಿನಿಧಿಗಳೆಂದುಕೊಂಡು ರಾಜ್ಯಘಟನಾ ಸಭೆಯ ಪ್ರೆಸಿಡೆಂಟರಿಗೂ [illegible] ಸದಸ್ಯರಿಗೂ ಒಪ್ಪಿಸಿದ ಮೆಮೋರಾಂಡಮಿನಿಂದ ಈ ಮೇಲಿನ ಮೂರು ಉದಾಹರಣೆಗಳನ್ನು ಎತ್ತಿ ಕೊಡಲಾಗಿದೆ.

4. 'ಮೈಸೂರಿಗೆ ಈಗಲೇ ಸೇರುವದು ಉತ್ತಮವೆಂಬುದು ಸ್ಪಷ್ಟವಾಗಿದೆ. ಮೈಸೂರಿನ ರಾಜ್ಯಾಂಗ ರಚನೆ ಇನ್ನೂ ತಯಾರಾಗಿಲ್ಲ. ಈಗ ಸೇರಿದರೆ ರಚನೆಯ ಕಾರ್ಯದಲ್ಲಿ ನಾವು ಭಾಗವಹಿಸಬಹುದಲ್ಲದೆ ನಮ್ಮ ಹಕ್ಕು ಬಾಧ್ಯತೆಗಳನ್ನು ಖಾನೂನುಬದ್ಧವಾಗಿ ಕಾಯ್ದುಕೊಳ್ಳುವ ಇದೀಗ ಸುಸಮಯ' ಎಂದು ತಾ. ೫-೧-೪೯ ರಲ್ಲಿ ಕೇಂದ್ರ ಜನತಾ ಸಭೆಗೆ ಇಂದು ಕಾಂಗ್ರೆಸಿನ ಹೆಸರಿನಲ್ಲಿ ನಿಂತಿರುವ ಶ್ರೀ ಎಸ್. ಸೋಮಣ್ಣನವರು ಬರೆದಿದ್ದಾರೆ.

5. 'ಕೊಡಗಿನಂಥಾ ಚಿಕ್ಕ ಘಟಕಗಳಿಗೆ ಪ್ರಾಂತೀಯ ಜವಾಬುದಾರಿ ಸರಕಾರ ಕೊಡುವ ಅಭಿಪ್ರಾಯ [illegible] ಕೇಂದ್ರ ಸರಕಾರಕ್ಕೆ ಇದ್ದಿದ್ದರೆ ತಾ. ೨೬-೧-೫೦ ರಲ್ಲಿ ಜಾರಿಗೆ ಬಂದ ಇಂಡಿಯಾದ ರಾಜ್ಯಘಟನೆಯಲ್ಲಿ ಕೊಡಗ[illegible]ವನ್ನು 'ಎ' ಸ್ಟೇಟ್‌ಗಳ ತರಗತಿಯಲ್ಲಿ ಸೇರಿಸುತ್ತಿದ್ದರು. ತಾ. ೧೭-೧೦-೪೯ ರಲ್ಲಿ ಡೆಲ್ಲಿಯಲ್ಲಿ ನಡೆದ ಕುರ್ಗ್ [illegible] ಕಾನ್ಫರೆನ್ಸಿನಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಪ್ರತಿನಿಧಿಗೂ ಕೊಡಗಿಗೆ ಪ್ರಜಾಜವಾಬ್ದಾರಿ ಸರಕಾರ ಕೊಡುವದಿಲ್ಲ[illegible] [illegible] ಮನವರಿಕೆಯಾಗಿದೆ. ಕೊಡಗನ್ನು ಸಂಯೋಜನೆ ಮಾಡುವದಾದರೆ ಇಂಡಿಯಾ ಸರಕಾರವು ಕೊಡಗಿನ ಜನರ [illegible]ಯವನ್ನು ತೆಗೆಯುವದಿಲ್ಲವೆಂದೂ ಸ್ಪಷ್ಟವಾಗಿ ತಿಳಿದುಬಂದಿದೆ. ಕೊಡಗು ಪ್ರತ್ಯೇಕವಾಗಿದ್ದು ಪ್ರಜಾಜವಾಬ್ದಾರಿ [illegible] ನಡೆಸಲು ಸಾಧ್ಯವಿಲ್ಲವೆಂದು ಸಂಯೋಜನಾವಾದಿ ಮುಂದಾಳುಗಳು (ಡೆಲ್ಲಿಗೆ ಹೋದ ಸಂಯೋಜನಾವಾದಿ [illegible]ಳುಗಳೆಂದರೆ ಶ್ರೀಗಳಾದ ನಿಡ್ಡೆಮನೆ ಸೋಮಣ್ಣ, ಬಲ್ಲಚಂಡ ಬೆಳ್ಯಪ್ಪ, ಸಿ. ಯಂ. ಪೂಣಚ್ಚ, ಕೊಳ್ಳಿಮಾ[illegible]ಬಯ್ಯ ಇವರುಗಳು) ಇಂಡಿಯಾ ಸರಕಾರದ ಮಂತ್ರಿಗಳನ್ನು ಭೇಟಿಮಾಡಿದಾಗ ಹೇಳಿರುವರು. ರಾಜ್ಯ[illegible] ಸಭೆಯ ಮೆಂಬರುಗಳಿಗೂ ಮೆಮೊರಾಂಡಂ ಕಳುಹಿಸಿರುವರು. ತನ್ಮಧ್ಯೆ ಕೊಡಗಿಗೆ ಜವಾಬ್ದಾರಿ ಸರಕಾ[illegible]ಶಲಿ, ಪರೀಕ್ಷೆ ಮಾಡಿ ನೋಡುವಾ ಎಂದು ಹೇಳುವದು ತಿಳಿಗೇಡಿತನ. ಜವಾಬ್ದಾರಿ ಸರಕಾರ ಸಿಕ್ಕುವದಿಲ್ಲ; [illegible]ಬು ಸಾಧ್ಯವಿಲ್ಲ' ಎಂದು ಇಂದು ಕಾಂಗ್ರೆಸಿನ ಹೆಸರಿನಲ್ಲಿ ಚುನಾವಣೆಗೆ ನಿಂತಿರುವ ಶ್ರೀ ಬಲ್ಲಚಂಡ ಬೆಳ್ಯಪ್ಪನ[illegible] ತಮ್ಮ "ಜನ್ಮಭೂಮಿ" ಪತ್ರಿಕೆಯ ತಾ. ೬-೫-೫೧ರ ಸಂಚಿಕೆಯ ಅಗ್ರಲೇಖನದಲ್ಲಿ ಬರೆದಿರುವರು.

If there has been this defference of opinion persisting very [st]rongly I should say it is because of your (Govt. of india's) hesitancy to give a clear cut decision on this. ಅಂದರೆ ಕೊಡಗಿನ ಭವಿಷ್ಯದ ವಿಚಾರದಲ್ಲಿ ಬಲವಾದ ಭಿನ್ನಾಭಿಪ್ರಾಯಗಳು ಕೊಡಗಿನಲ್ಲಿ ಇರುವದಾದರೆ ನೀವು (ಕೇಂದ್ರ ಸರಕಾರವು) ಒಂದು ನಿರ್ದಿಷ್ಟ ತೀರ್ಮಾನ ಕೊಡಲು ಹಿಂಜರಿದ ಕಾರಣ' ಎಂದು ರಾಜ್ಯಘಟನಾ ಸಭೆಗೆ ಕೊಡಗಿನಿಂದ ಆರಿಸಲ್ಪಟ್ಟಾಗ ಕೊಡಗಿನ ಭವಿಷ್ಯದ ವಿಚಾರದಲ್ಲಿ ತನ್ನ ಸ್ವಂತ ಅಭಿಪ್ರಾಯವನ್ನು ಕೊಡಲಾರೆನೆಂದೂ ಬೇರೆಯವರ ಅಭಿಪ್ರಾಯವೇ ತನ್ನ ಅಭಿಪ್ರಾಯವೆಂದು ಭರವಸೆ ಕೊಟ್ಟ ಶ್ರೀ ಸಿ. ಎಂ. ಪೂಣಚ್ಚನವರು ತಾ. ೧೬-೩-೫೧ರಲ್ಲಿ ಕೇಂದ್ರ ಪಾರ್ಲಿಮೆಂಟಿನಲ್ಲಿ ಕೇಂದ ಸರಕಾರವೇ ಕೊಡಗಿನ ಭವಿಷ್ಯವನ್ನು ಜನರನ್ನು ಕೇಳದೆ ತೀರ್ಮಾನಿಸಿ ಬಿಡಬೇಕೆಂದು ಮಾಡಿದ ಭಾಷಣದಿಂದ ಇದನ್ನು ಎತ್ತಿ ಕೊಡಲಾಗಿದೆ.

7. The future of Coorg is thus not a matter to be decided by plebicite or referendum as it is essentially a matter for the Constitutional experts to decide and not for the layman who may cast his vote on personal or sentimental grounds. Hence we appeal to the Govt. of India to decide this question once for all for the lasting good of the people of Coorg. ಅಂದರೆ ಕೊಡಗಿನ ಭವಿಷ್ಯದ ವಿಚಾರವು ಜನರಿಂದ ತೀರ್ಮಾನವಾಗಬೇಕಾದ್ದಲ್ಲ. ಡೆಲ್ಲಿಯಲ್ಲಿರುವ ರಾಜಕೀಯ ತಜ್ಞರು ಇದನ್ನು ತೀರ್ಮಾನಿಸಬೇಕೇ ವಿನಹ ಕೇವಲ ವ್ಯಕ್ತಿಗತ ಹಾಗೂ ಇತರ/

ಕಾರಣಗಳಿಂದ ಓಟು ಮಾಡುವ ಏನೂ ತಿಳಿಯದ ಜನರಲ್ಲ. ಆದ್ದರಿಂದ ಕೊಡಗಿನ ಶಾಶ್ವತ ಹಿತದೃಷ್ಟಿಯಿಂದ ಈ ಪ್ರಶ್ನೆಯ ನಿರ್ಣಯವನ್ನು ಇಂಡಿಯಾ ಸರಕಾರವೇ ಮಾಡಬೇಕೆಂದು ನಾವು ಅಪೀಲು ಮಾಡುತ್ತೇವೆ. ಕೊಡಗು ಕಾಂಗ್ರೆಸ್ಸಿಗರನ್ನೊಳಗೊಂಡಿರುವ ಕರ್ನಾಟಕ ಏಕೀಕರಣ ಸಮಿತಿಯ ಕೊಡಗಿನ ಶಾಖೆಯವರು ೧೯೪೮ರಲ್ಲಿ ಧಾರ್ ಸಮಿತಿಗೂ ಕೇಂದ್ರ ಸರಕಾರಕ್ಕೂ ಮಾಡಿದ ವರದಿಯಿಂದ ಇದನ್ನು ಕೊಡಲಾಗಿದೆ.

ಇಂಥಾ ನೂರಾರು ನಿದರ್ಶನಗಳನ್ನು ಕೊಡಬಹುದು. ಕಾಂಗ್ರೆಸಿನ ಹೆಸರಿನಲ್ಲಿ ನಿಂತಿರುವ ಉಮೇದುವಾರರಲ್ಲಿ ಇಬ್ಬರನ್ನು ಬಿಟ್ಟು ಎಲ್ಲರೂ ಸಂಯೋಜನಾವಾದಿಗಳು. ಕೊಡಗು ಮೈಸೂರಿಗೆ ಸೇರಿ ಹೋಗುತ್ತದೆಂದು ಗಾಬರಿಹುಟ್ಟಿದ್ದಾಗ ಮ.ಖದಿಂದ ದೇಶವಿಡೀ ಸಾರ್ವಜನಿಕ ಸಭೆಗಳೂ ಪ್ರಾರ್ಥನೆಗಳೂ ನಡೆದಾಗ ಇವರಾರೂ ಒಂದೇ ಸಭೆಗೆ ಬಂದದ್ದಿಲ್ಲ. ಕೊಡಗು ಪ್ರತ್ಯೇಕವಿರಬೇಕೆಂದು ಹೇಳಿದ್ದಿಲ್ಲ. ಬದಲು ಸಂಯೋಜನೆಗೆ ಮಡಿಕೇರಿಯಿಂದ ಹಿಡಿದು ಡೆಲ್ಲಿಯ ವರೆಗೆ ಪ್ರಯತ್ನಿಸಿದವರಿವರು ಇಂದು ಇವರು ಓಟು ಪಡೆದು ಅಧಿಕಾರಕ್ಕೆ ಏರುವ ದೃಷ್ಟಿಯಿಂದ 'ನಾವೂ ಪ್ರತ್ಯೇಕವಾದಿಗಳು,' 'ನಾವೂ ಕಾಂಗ್ರೆಸ್ಸು,' 'ಕೊಡಗಿನ ಭವಿಷ್ಯದ ಪ್ರಶ್ನೆ ಇಂದು ಇಲ್ಲ' ಎಂದು ಮುಂತಾಗಿ ಹಲವು ವೇಷಗಳನ್ನು ತಾಳಿದ್ದಾರೆ. ಆದರೆ ಕೊಡಗಿನ ಮತದಾರರು ಇವರ ಈ ಮೋಸಕ್ಕೆ ಬಲಿಯಾಗಬಾರದು. ಇಂಥಾ ಅಸತ್ಯ ರಾಜಕಾರಣಿಗಳಿಂದ ಕಾಂಗ್ರೆಸು ಹಾಳಾಗಿದೆ. ಇವರಿಗೆ ಕೊಡುವ ಪ್ರತಿ ಓಟೂ ಕೊಡಗಿನ ಸಂಯೋಜನೆಗೆ ಸಹಾಯಕವಾಗುವದೆಂಬುದರಲ್ಲಿ ಲವಲೇಶ ಸಂಶಯವಿಲ್ಲ. ಆದ್ದರಿಂದ ಮತದಾರರು ಎಚ್ಚರಿಕೆಯಿಂದ ವರ್ತಿಸಬೇಕು. ಕೊಡಗಿನ ಉದ್ಧಾರಕ್ಕಾಗಿ ಚಲಾಯಿಸಬೇಕಾದ ಓಟು ಕೊಡಗಿನ ವಿನಾಶಕ್ಕೆ ಕಾರಣವಾಗದಿರಲಿ.

ಕಾರ್ಯದರ್ಶಿ, ಪ್ರತ್ಯೇಕವಾದಿ ಪಕ್ಷ.

ಹೊಸ ಮಂತ್ರಿ ಮಂಡಲದ ರಚನೆ

ಮಹಾ ಚುನಾವಣೆಗಳು ಮುಗಿದನಂತರ ಕೇಂದ್ರ ಮತ್ತು ಎಲ್ಲಾ ಸಂಸ್ಥಾನಗಳಲ್ಲೂ ೧೯೫೨ನೇ ಏಪ್ರಿಲ್ ವೇಳೆಗೆ ಹೊಸ ಮಂತ್ರಿ ಮಂಡಲ ರಚಿತವಾಗುವುದೆಂದು ಗೊತ್ತಾಗಿದೆ. ಅಲ್ಲಿಯವರೆಗೂ ಹಳೆಯ ಸಚಿವ ಸಂಪುಟವೇ ಮುಂದುವರಿಯುವುದು. ೧೯೫೨ನೇ ಜನವರಿ ಅಂತ್ಯದೊಳಗೆ ಚುನಾವಣೆಗಳು ಮುಗಿದು ಹೋಗುವುವು. ಫೆಬ್ರವರಿ ೧೫ರೊಳಗೆ ಎಲ್ಲಾ ಸಂಸ್ಥಾನಗಳೂ ಚುನಾಯಿತರಾದ ಶಾಸನ ಸಭಾ ಸದಸ್ಯರುಗಳ ಹೆಸರು ಪಟ್ಟಿಯನ್ನು ಕೇಂದ್ರಕ್ಕೆ ಕಳುಹಿಸುತ್ತವೆ.

ಸ್ಥಾನಬದ್ಧರ ಉಪವಾಸ ವ್ರತ

ವಿವಿಧ ಪಕ್ಷಗಳಿಗೆ ಸೇರಿದ ಮತ್ತು ವಿಧಾನ ಸಭೆ ಹಾಗೂ ಲೋಕ ಸಭೆಗೆ ಸ್ಪರ್ಧಿಸಿರುವ ೪೦ ಜನ ಉಮೇದುವಾರರು ಬಿಹಾರದ ಜೈಲುಗಳಲ್ಲಿರುವ ಎಲ್ಲಾ ರಾಜಕೀಯ ಸ್ಥಾನಬದ್ಧರ ಬಿಡುಗಡೆ ಮಾಡಬೇಕೆಂದು ಒತ್ತಾಯಪಡಿಸುವ ಹೇಳಿಕೆಯೊಂದನ್ನು ಪ್ರಕಟಿಸಿದ್ದಾರೆ. ಈ ಸ್ಥಾನಬದ್ಧರೆಲ್ಲಾ ಡಿ. ೧೫ರಿಂದ ಉಪವಾಸಕ್ಕೆಗೊಂಡಿದ್ದಾರೆಂದು ವರದಿಯಾಗಿದೆ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[illegible] ಪ್ರಕಾರ ರಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿಸಲಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,05,500
ಕ್ಷೇಮನಿಧಿ	ರೂ.	69.000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86.000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಗೊಳ್ಳಲಾಗುವುದು. ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುತ್ತಿದ್ದರೂ ಪಡೆಯುತ್ತಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಜೋಡಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ [illegible]

ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಕೋವಿಗಳು, ವ್ಯವಸಾಯದ ಹತ್ಯಾರುಗಳು ಮತ್ತು ಕಬ್ಬಿಣದ ಸಲಾಕೆ ವಗೈರೆಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು ಮತ್ತು ರಿವಾಲ್ವರುಗಳು.
2. ·12ನೇ ನಂಬರಿನ ಒಂಟಿ ಹೊಳವಿನ ಕೋವಿಗಳು.
3. 12ನೇ ನಂಬರಿನ ಜೋಡು ಹೊಳವಿನ ಕೋವಿಗಳು.
4. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
5. 2", 1", ⅜", ½", ¼" ಕಬ್ಬಿಣದ ಸಲಾಕೆಗಳು.
6. 9"×4" ಮತ್ತು 8"×4" ಕಬ್ಬಿಣದ ಬೀಮ್ಸ್ (Beams).
7. 8'×3'×12 (Gage)ನ ಕಬ್ಬಿಣದ ತಗಡುಗಳು.
8. 3"×3"×¼"ನ (Angles) ಎಂಗ್ಯೂಲ್ಸ್ ಅವಶ್ಯವಿದ್ದವರು ಇಂಡೆಂಟ್ ಕೊಟ್ಟಲ್ಲಿ ತರಿಸಿ ಕೊಡಬಹುದು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೆ ಜಿಲ್ಲಾ ಮೇಜಿಸ್ಟ್ರೇಟರ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವವು)

ಎಂ. ಎಸ್. ಸೋಮಯ್ಯ, [illegible] ಕಾರ್ಯದರ್ಶಿ.

ಚುನಾವಣಾ ವಾರ್ತೆಗಳು.

ತಮ್ಮವರನ್ನು ತಾವೇ ಬಂಧಿಸಿದರು

ಒಬ್ಬ ರಾಜಕೀಯ ಕಾರ್ಯಕರ್ತನನ್ನು ಅವನ ಪಕ್ಷದ ಸದಸ್ಯರೇ ಬಂಧನದಲ್ಲಿ ಇಟ್ಟ ಪ್ರಸಂಗವೊಂದು ವರದಿಯಾಗಿದೆ. ನವ್ಯ ಕ್ಷೇತ್ರದಿಂದ ಬಂಗಾಲ ಶಾಸನ ಸಭೆಗೆ ತಮ್ಮ ಪಕ್ಷದ ಉಮೇದುವಾರನ ಆಯ್ಕೆಯ ಬಗ್ಗೆ ಶ್ರೀ ನಿತಲ್ ಮಂಡಲ್ ಅವರು ಭಿನ್ನಾಭಿಪ್ರಾಯ ತೋರಿಸಿದ್ದರಿಂದ ಪಕ್ಷದ ಸದಸ್ಯರು ಅವನನ್ನು ಬಲವಂತದಿಂದ ಒಂದು ಕೋಣೆಯಲ್ಲಿ ೮ ದಿನ ಕೂಡಿ[illegible]ಕಿ, ಚುನಾವಣೆಗೆ ಉಮೇದ[illegible]ಹಾರಿಕೆ ಅರ್ಜಿ ಸಲ್ಲಿಸುವ ತಾರೀಖು ವ್ಯವಧಾನ[illegible]ಗಿದ ಮೇಲೆ ಬಿಟ್ಟರೆಂದು ಶ್ರೀ ಮಂಡಲ್[illegible]ನ್ನು [illegible]ರೇ ಪೋಲೀಸರಲ್ಲಿ ದೂರುಕೊಟ್ಟಿದ್ದಾರೆ. [illegible] ಈ ಸಂಗರ್ಭದಲ್ಲಿ ನಾಲ್ವರನ್ನು [illegible] ನಡೆ[illegible]ದಸ್ತಗಿರಿ ಮಾಡಲಾಗಿದೆ.

—೦()೦—

ಓಟಿಗೆ ಚಿಕ್ಕಮ್ಮ[illegible]ದಲ್ಲಿ [illegible]ಮಗನ ಸ್ಪರ್ಧೆ

ಪಾಟ್ನಾ ದಕ್ಷಿಣ[illegible]ಯ [illegible]ಂಗ[illegible] ಜಿಲ್ಲೆ[illegible] ಕಾಂಗ್ರೆಸ್ [illegible]ನ್ನು ಇಂ[illegible]ಕ ಮಾರರಸ್[illegible] ಕತೆಗರುವ ಬಗ್ಗೆ [illegible] ಕಾಂಗ್ರೆಸ್ ಹಸ್ಟ್[illegible] [illegible] ನಿಂತಿರುವ ಸ್ಥಾನಸ್ ಟಿಕೆಟ್ಟಿನ [illegible] ಬಲವಂತನು ಸಹಸ್ಪರ್ಧಿಕ್ಕೇ ತನ್ನ [illegible] ವಿಚಾರ ಮಾತ್ರ ಸಿದ್ಧಾಂತ [illegible] ಜನಸ್ತ ಗಿ[illegible] ಆಲ್ಲಿನ ಸಾಮಾನ್ಯ[illegible] ಉತ್ಸಾಹ ಸ್ಪರ್ಧೆಗಳು [illegible] ಇಬ್ಬರು [illegible] ಗಿರುವುದರಿಂದ [illegible]ರೊಬ್ಬರ ಪರವಾಗಿಲ್ಲೂ ಯಾರು [illegible] ಉಮೇದ[illegible] [illegible] ತೆಗೆದು [illegible]

—೦()೦—

ಹೆಚ್ಚು ಮತ[illegible] [illegible] ನೀಡುವ [illegible]ಹುಮಾನ

ಹಳ್ಳಿಗೆ ಬಹಳ ಅತ್ಯಂತ ಹೆಚ್ಚಿನ ಯಾವ ಹಳ್ಳಿಯಲ್ಲಿ ನಡೆಯುವ [illegible] ಸಂಖ್ಯೆಯಲ್ಲಿ ಮತದಾನ[illegible] ಕೊಡ[illegible]ವಾಗಿ ಆ ಹಳ್ಳಿಗೆ ಬಹುಮಾನ [illegible] ಕೊಡಲ್ಪಡುವದ [illegible] ಕಮಿಟಿಯು ಪ್ರತಾಪ್ಗಡ ಕಾಂಗ್ರೆಸ್ಸಿನ [illegible] ಘೋಷಿಸಿದೆ. ಇದರಿಂದ [illegible] ಹಳ್ಳಿಗಳಲ್ಲಿ ಮತದಾನ [illegible] ಉತ್ಸಾಹ[illegible]

ಪೋಲಿಂಗ್ ಬೂತ್‌ಗಳಲ್ಲಿ ನಾಯಕರ ಚಿತ್ರ

ಪೋಲಿಂಗ್ ಬೂತುಗಳಲ್ಲಿ ಮಹಾತ್ಮಗಾಂಧಿ, ನೆಹರೂ ಪಟೇಲ್ ಮುಂತಾದವರ ನಾಯಕರ ಚಿತ್ರಗಳಿರಕೂಡದೆಂದು ಮದರಾಸ್ ಸರ್ಕಾರ ಆಜ್ಞೆಯೊಂದನ್ನು ಹೊರಡಿ[illegible]ಸಿದೆ. [illegible] — [illegible]

ವಿಚಿ[illegible] [illegible]ಮೂಗ ರೀತಿಯ ಮವರು.[illegible] [illegible] ಪ್ರಚಾರ[illegible] [illegible] ನವದೆಹಲಿ ಚುನಾವಣೆಯ ಎಳಿಗೆ, [illegible]ತ್ತಿರ ಬಂದಂತೆಲ್ಲಾ [illegible] ಪ್ರಚಾರ ಬಿರುಸಾಗು[illegible] ಆಕಿಶ[illegible] ಮೇದುವಾರರು [illegible] ನಡೆಸುತ್ತಿದ್ದಾರೆ. [illegible] ಓರ್ವ ಉಮೇ[illegible] ಹ್ನಿಯಾದ ಪ್ಲ್ಯಾಕಿ[illegible] [illegible]ವೊಂದ[illegible]ನ್ನು ಹಿಡಿದು ದ[illegible] ಗುತ್ತಾ ಪ್ರಚಾರ ನ[illegible] [illegible] ಕ್ಟ್ರಿಕ್ಟ್ ಉಮೇದುವಾರರು [illegible] ಒಂಟೆಯೊಂದರಿಂದ [illegible] ಯೊಂದನ್ನೇ ತಂದು ಅದಕ್ಕೆ ಓಟು [illegible] ಬೇಕೆಂದು ಪ್ರಚಾರ ನಡೆಸುತ್ತಿ[illegible] [illegible] ಮತ್ತೊಬ್ಬ ಉಮೇದುವಾರರು [illegible] ಸೈಕಲ್ ಸವಾರಿಯೇ ಪ್ರಚಾರ ನಡೆಸುತ್ತಿದ್ದಾರೆ.

[illegible]ಟ್ ಓಟು ಮಾಡದಿದ್ದರೆ ಜುಲ್ಮಾನ್

ಚುನಾವಣೆಗಳಲ್ಲಿ ಓಟು ಮಾಡದೇ ಇರುವ ಮತದಾರರಿಗೆ ೫ ಪೌಂಡ್ ಜುಲ್ಮಾನೆ ವಿಧಿಸಲಾಗುವುದೆಂದು ಈಜಿಪ್ಟ್ ಸರ್ಕಾರ ಚುನಾವಣಾ ಕಾನೂನನ್ನು ಮಾಡಿದೆ. ಈ ಕಾನೂನು ವಿಧಿಸಲು ಕಾರಣವೆಂದರೆ ಹೆಚ್ಚಿನ ಮತದಾನ ಪದ್ಧತಿ ಯಶಸ್ವಿಯಾಗಲೆಂದು.

'ಜನವಾಣಿ'

Edited Printed & Published by P. I. Belliappa at 'Kodagu' Press, Mercara, for 'Kodagu' Ltd.

Licence No. 60.
Licenced to Post without Prepayment

Reg. No. M. 1850,
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ಬಿ. ಬೆಳ್ಳಿಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦ | ತಾರೀಕು [illegible]ನೇ ಶುಕ್ರವಾರ | ಸಂಚಿಕೆ [illegible]

ಕೊಡಗಿನ ಮತದಾರರಲ್ಲಿ ವಿನಂತಿ.

ಮುಂಬರುವ ಕೇಂದ್ರ ಜನತಾ (ಪಾರ್ಲಿಮೆಂಟ್) ಸಭೆಗೆ ಪ್ರತ್ಯೇಕ ಪಕ್ಷದ ಪರ ನಾನೊಬ್ಬ ಉಮೇದುವಾರನಾಗಿ ನಿಂತಿರುವೆನು. ಕೊಡಗನ್ನು ಪ್ರತ್ಯೇಕವಾಗಿ ಇಟ್ಟುಕೊಂಡು ಈಗ ದೊರೆತಿರುವ ಜವಾಬ್ದಾರಿ ಸರಕಾರವನ್ನು ಇಲ್ಲಿಯ ಸಮಸ್ತ ಜನರ ಹಿತಕ್ಕಾಗಿ ಜಯಪ್ರದವಾಗಿ ನಡೆಸುವ ಸಂಪೂರ್ಣ ವಿಶ್ವಾಸವಿರುವ ನನಗೆ ಕೊಡಗಿನ ಓಟರುಗಳೆಲ್ಲರೂ ತಮ್ಮ ಅಮೂಲ್ಯವಾದ ಓಟನ್ನು ಕೊಟ್ಟು ಜಯಶೀಲನಾಗಿ ಮಾಡಬೇಕಾಗಿ ವಿನಂತಿ. ನನ್ನ ಚುನಾವಣಾ ನಕ್ಷೆ ತಕ್ಕಡಿಯಾಗಿದೆ.



ಕೆ. ಟಿ. ಉತ್ತಪ್ಪ.

ಕೊಡಗು ಪ್ರತ್ಯೇಕ ಇರಬೇಕು.

ಆರು ಜನ ಕೊಡಗಿನ ಕೊಡವರು 'ಕೊಡಗ' ಪತ್ರಿಕೆಯಲ್ಲಿ ಬರೆದ ಲೇಖನಕ್ಕೆ 'ಜನ್ಮಭೂಮಿ'ಯಲ್ಲಿ ಬರೆದ ಉತ್ತರವನ್ನು ನೋಡಿದೆನು. ಸತ್ಯವನ್ನು ಎಷ್ಟು ಅಲ್ಲಗಳೆಯಲು ಸಾಧ್ಯವಾಗದೆ, ದೇಶದ ದ್ರೋಹಿಗಳು ಕೊಡಗರು [illegible] ಸಂಯೋಜನೆಯಿಂದ ಎದುರು ಹೋರಾಡಬೇಕೆಂದು ಕಷ್ಟಗಳಿಗೆ ಈಡಾಗುವ ವಾಣಿಯಿಂದ ಕೂಡಿದೆ. ಆದರೆ ಕೊಡಗು ಕಾಂಗ್ರೆಸಿನ ಸಂಯೋಜನೆ ಮುಂದಾಳುಗಳು ತಮ್ಮ [illegible] ರವಾದ ಈ ಪರೆಗಿನ ದೇಶಸೇವೆಯಿಂದ ದೇಶದ ಅಸ್ತಿತ್ವಕ್ಕೆ ಧಕ್ಕೆ ಬರುವಂತೆ ಮಾಡಿರುವುದರಿಂದ, ಬೇರೆಯವರನ್ನೂ ಅವರೊಡನೆ [illegible] ಆಹ್ವಾನಿಸಿದ್ದು ಏನೂ ಆಶ್ಚರ್ಯವಲ್ಲ. ಕೊಡಗಿನ ಯಾವನೊಬ್ಬನೂ ತನ್ನ ದೇಶವನ್ನು ಬಿಟ್ಟು ವಿದ್ಯಾಭ್ಯಾಸಕ್ಕಾಗಲೀ, ವ್ಯಾಪಾರಕ್ಕಾಗಲೀ, ಸೈನ್ಯದಲ್ಲಾಗಲೀ ಅಥವಾ ಇನ್ಯಾವ ಉದ್ಯೋಗಕ್ಕಾಗಲೀ ಹೋಗಬಾರದೆಂಬುದರಲ್ಲಿ [illegible] ಅರ್ಥವಿದೆಂದು ಅವರು ಭಾವಿಸಿರುವರು. ಸಾವಿರಾರು ಅಮೇರಿಕದ ಮತ್ತು ಇನ್ನಿತರ ಮುಂದುವರಿದ ಪಾಶ್ಚಿಮಾತ್ಯ ರಾಷ್ಟ್ರದವರ ಹೊರದೇಶಗಳಲ್ಲಿ ಉದ್ಯೋಗ ಅಥವಾ ಜೀವನ ಮಾಡುವುದು ತಮ್ಮ ದೇಶದಲ್ಲಿ ಅವರಿಗೆ ಜೀವನೋಪಾಯಕ್ಕೆ ಅನುವಿಲ್ಲವೆಂಬ ಅರ್ಥವೇ? ಇಂದಿನ ನಮ್ಮ ರಾಷ್ಟ್ರದ ಮುಂದಾಳುಗಳು ತಮ್ಮ ಕಾರ್ಯಕ್ಷೇತ್ರವನ್ನು ತಮ್ಮ ತಮ್ಮ ಪ್ರಾಂತಗಳಲ್ಲಿ ನಿರ್ಧರಿಸಿಕೊಂಡಿರುವರೆ?

ಪ್ರತ್ಯೇಕವಾದದಲ್ಲಿ ಕೋಮುವಾರು ಗುರಿ ಇದೆಯೇ?

ಕೆಲವಾರು ಮಂದಿ ಕೊಡಗಿನ ನಿವಾಸಿಗಳು ಮುಂದೆ ಕೊಡಗು ಪ್ರತ್ಯೇಕವುಳಿದರೆ ಕೊಡಗರ ರಾಜ್ಯಾಡಳಿತ ನೆಲಸಿ ಕೊಡಗೇತರರಿಗೆ ಹಾನಿಯಾಗುವದೆಂದು ತಿಳಿದುಕೊಂಡಿದ್ದಾರೆ. ಇದು ಬರೇ ತಪ್ಪಭಿಪ್ರಾಯ. ಕೊಡಗು ಮುಂದಕ್ಕೆ ಪ್ರಜಾಪ್ರಭುತ್ವದಿಂದ ಆಳಲ್ಪಡುವುದು, ಜನರೇ ಸರಕಾರವನ್ನು ಸ್ಥಾಪಿಸುವದಲ್ಲದೆ ಅವರಿಂದ ಆರಿಸಲ್ಪಟ್ಟ ಮುಂದಾಳುಗಳು ತಾವು ಇಚ್ಛಿಸಿದ ತನಕ ಅಧಿಕಾರ ವಹಿಸಬಲ್ಲರು. ಹಾಗಾದರೆ ಕೊಡಗರು ದಬ್ಬಾಳಿಕೆ ನಡೆಸುವ ಸಂದರ್ಭ ಎಲ್ಲಿದೆ? ಕೇವಲ ದೇಶದ ಜನ ಸರ್ವರ ಹಿತಸಾಧಿಸುವ, ಜನಶಕ್ತಿಯನ್ನು [illegible]ಡು ಅಧಿಕಾರ ವಹಿಸಲು ಯೋಗ್ಯರಾದ [illegible] ಕೋರುವವರು ಭೇದವಿಲ್ಲದೆ [illegible] ಅಲ್ಲಿ ಜನರಿಗೆ [illegible]ವಿಲ್ಲವೆ? ಕೊಡಗಿನಲ್ಲಿ ಕೊಡವರ ಜನಸಂಖ್ಯೆ ಎಷ್ಟು ಮತ್ತಿತರರ ಸಂಖ್ಯೆ ಎಷ್ಟು? ಇದನ್ನು ಪರಿಶೀಲಿಸಿದರೆ, ಕೊಡಗು ಒಮ್ಮೆ ಪ್ರತ್ಯೇಕವಾಗಿ ಉಳಿದರೆ ಕೊಡಗೇತರರ ಸರಕಾರವನ್ನೇ ಸ್ಥಾಪಿಸಲು ಪ್ರಜಾಪ್ರಭುತ್ವದಲ್ಲಿ ಅನುವಿಲ್ಲವೇ? ಅಥವಾ ಒಮ್ಮೆ ಅಧಿಕಾರ [illegible] ಮುಂದಾಳುಗಳ ಕೋಮುವಾರು ಬೋಧವನ್ನು ಕಲ್ಪಿಸಿ ಅಥವಾ ಇನ್ಯಾವುದೇ ರೀತಿಯಿಂದ ದೇಶಾಭಿವೃದ್ಧಿಗೆ ಬೇಕಾದ ಕಾರ್ಯ ಮಾಡದಿದ್ದರೆ ಆ ಸರಕಾರವನ್ನು [illegible] ತಮಗೆ ಬೇಕಾದ ಪ್ರತಿನಿಧಿಗಳನ್ನು ಅಧಿಕಾರಕ್ಕೆ ಕಳುಹಿಸುವ ಜನ್ಮಸಿದ್ಧ ಹಕ್ಕು ನಮಗೆಲ್ಲರಿಗೂ ಒದಗಿಲ್ಲವೆ? ಅಂದ ಮೇಲೆ ಕೇವಲ ಕೊಡಗರ ಅಥವಾ ಒಂದು ಕೋಮಿನ ದಬ್ಬಾಳಿಕೆ ನಡೆಯುವದೆಂಬ ತಪ್ಪಭಿಪ್ರಾಯವನ್ನು ಚೆನ್ನಾಗಿ ಪರಿಶೀಲಿಸದೆ, ದೇಶದ ಅಸ್ತಿತ್ವವನ್ನೇ ಹಾಳುಮಾಡುವದರಿಂದ ನಮ್ಮ ಮನೆಗೆ ನಾವೇ ಬೆಂಕಿ ಹಚ್ಚಿದಂತಾಗುವುದಿಲ್ಲವೇ? ಆದ್ದರಿಂದ ನಮ್ಮ ದೇಶದಲ್ಲಿ ಮುಂದಕ್ಕೆ ಸರ್ವ ಪ್ರಜೆಗಳ ಹಿತವನ್ನು ಸಾಧಿಸಬಲ್ಲ ಸರಕಾರವನ್ನು ಸ್ಥಾಪಿಸುವ ಶಕ್ತಿ ನಮ್ಮಲ್ಲಿಯೇ ಇದೆ; ಒಂದು ವೇಳೆ ನಮ್ಮ ಪ್ರತಿನಿಧಿಗಳು ತಪ್ಪುದಾರಿ ಹಿಡಿದರೆ ಅವರನ್ನು ಸರಿದಾರಿಗೆ ಎಳೆಯುವ ಅಥವಾ ಅಧಿಕಾರ ಚ್ಯುತಿಮಾಡುವ ವಿಶೇಷ ಹಕ್ಕು ಸಹ ಜನಸಾಮಾನ್ಯರಲ್ಲಿದೆ. ಇದರ ನಿದರ್ಶನವು ಇಂದಿನ ಸಾರ್ವತ್ರಿಕ ಚುನಾವಣೆಯಿಂದ ಮದ್ರಾಸು ಮತ್ತು ತಿರುವಾಂಕೂರಿನಲ್ಲಿ ನಾವು ನೋಡಬಹುದು.

ಕೊಡಗು ಕಾಂಗ್ರೆಸಿನೊಳಗೆ ವ್ಯಕ್ತಿರಾಜಕೀಯ,

ಸ್ವಾರ್ಥಸಾಧನೆಯೇ ತಮ್ಮ ಪ್ರಧಮ ಧ್ಯೇಯವೆಂದು ನಂಬಿರುವ ವ್ಯಕ್ತಿಗಳ ತಂಡವು ಇಂದು ಕೊಡಗು ಕಾಂಗ್ರೆಸಿನಲ್ಲಿ ತೋರಿಬರುತ್ತದೆ. ತಮ್ಮ ಸ್ವಂತ ರೀತಿಯ ರಾಜಕೀಯದಿಂದ, ಸರ್ವಜನರ ಹಿತಸಾಧಿಸಿ ಹಾಗೂ ದೇಶದ ಉನ್ನತಿಯನ್ನು ಬಯಸುವ ಗಂಭೀರ ಮಾರ್ಗವನ್ನು ಬಿಟ್ಟು ತಮ್ಮ [illegible] ಕರ್ನಾಟಕ ಕಾಂಗ್ರೆಸಿನವರ [illegible] ಶ್ರೀ [illegible]ಬಟ್ಟು, [illegible] ಕೆಲವು ಮಂದಿ [illegible] ರೊಟ್ಟಿ ಚೂರಿಗಾಗಿ ಹೆಣಗಾಡುತ್ತಿರುವ ಈ ತಂಡವನ್ನು ನೋಡಲು ಯಾವ ದೇಶಪ್ರೇಮಿಗೂ [illegible] ಮತ್ತು ವ್ಯಸನವೂ ಆಗದಿರದು. [illegible] ತಮ್ಮೊಳಗೆ ನ್ಯಾಯ, ಪರಸ್ಪರ ವಿಶ್ವಾಸ ಮತ್ತು ನಂಬಿಕೆ ಇರುವುದು. ಆದರೆ ಕೊಡಗು ಕಾಂಗ್ರೆಸು ಧುರೀಣರಲ್ಲಿ ಯಾವುದೊಂದು ಶಿಸ್ತು ಕಾಣುವದಿಲ್ಲ. ದೇಶದ ಸ್ವಾತಂತ್ರ್ಯಕ್ಕಾಗಿ ಬಹಳ ವರ್ಷದಿಂದ ದುಡಿದ, ಕರ್ನಾಟಕ ಕಾಂಗ್ರೆಸಿನ [illegible]ಯಾಗಿ ಕೊಡಗು ಕಾಂಗ್ರೆಸಿನ ಅಧ್ಯಕ್ಷರಾಗಿ ಈ ತಂಡದ ಜವಾಬ್ದಾರಿಕೆಯನ್ನು ಹೊತ್ತುಕೊಂಡಿರುವರನ್ನು ಮುಂದಿನ ಜವಾಬ್ದಾರಿ ಸರಕಾರ ಒದಗುವಂತ ಚುನಾವಣೆಯಲ್ಲಿ ರಾಜಕೀಯ ರಂಗದಿಂದ ಮಾಯವಾಗುವಂತೆ ಕುಯುಕ್ತಿಗಳನ್ನು ನಡೆಸಿದ ಈ ನಮ್ಮ ಧೀರರ ತಂಡ ಕೇವಲ [illegible] ಮೇಲೆ ಹಿಟ್ಟಿನ ಬುತ್ತಿಯನ್ನು ಕಟ್ಟಿಕೊಂಡು, ಗಂಟಲೊಣಗುವಂತೆ ಅನವಶ್ಯ ಯಾವ ತತ್ವವೂ ಸಾರವಿಲ್ಲದೆ ಕೂಗುವವರಂತೆ ಸ್ಪಷ್ಟ!

ಪ್ರತ್ಯೇಕತೆ ಭಾವನೆ ಇದೆಯೇ?

ಕಾಂಗ್ರೆಸು ಭಾಷಾವಾರು ಪ್ರಾಂತರಚನೆಯನ್ನು ಹಿಂದೆಯೇ ಒಪ್ಪಿದೆ. ಅಲ್ಲದೆ ಅದರ ಚುನಾವಣೆಯ ಪ್ರಣಾಳಿಕೆಯಲ್ಲಿ ಅದು ಒಂದು ಅಂಶವಾಗಿದೆ. ಆದರೆ ಕೊಡಗು ಕಾಂಗ್ರೆಸು ಧುರೀಣರು ಅದರ ಮಾತು ಎತ್ತುವದಿಲ್ಲ. ಬಹುಶ ಜನರು ಅದನ್ನು ಸಹಿಸಲಾರರೆಂಬ ಹೆದರಿಕೆ ಇರಬಹುದು. ಅಂತು ಜನ ಸಾಮಾನ್ಯರ, ಇದರಿಂದ ಮೋಸ ಹೋಗಬಾರದು. ಆದರೂ ಮುಂದೆ ಯಾವ ಪಾರ್ಟಿ ಅಧಿಕಾರ ವಹಿಸಿದರೂ ಭಾಷಾವಾರು ಪ್ರಾಂತ ಆಗಿಯೇ ಆಗುವದಂತೆ, ಅದರಿಂದ ಇಂದಲ್ಲ ನಾಳೆಯಾದರೂ ಕೊಡಗು ಕರ್ನಾಟಕದಲ್ಲಿ ವಿಲೀನವಾಗಬೇಕೆಂಬುದೇ ಇವರ ಆಶಪ್ರಕಾರ, ಬಹುಶ ಇವರಿಗೆ ಭಾಷಾವಾರು ಪ್ರಾಂತರಚನೆಯ ವಿಧಾನ ಇನ್ನೂ ತಿಳಿದಿಲ್ಲ. ಕನ್ನಡ ಮಾತಾಡುವ ಎಲ್ಲಾ ಪ್ರದೇಶವನ್ನು ಒಂದು ಪ್ರಾಂತವನ್ನಾಗಿ ಮಾಡಿದರೆ ಅದು ಈಗಿರುವ ಎಲ್ಲಾ ಪ್ರಾಂತಗಳಿಗಿಂತಲೂ ಅತೀ ವಿಶಾಲವಾದದಾಗುವುದು. ಪಾಶ್ಚಿಮಾತ್ಯದ ಅನೇಕ ರಾಷ್ಟ್ರಗಳಿಗಿಂತಲೂ ಎಷ್ಟೋ ಪಾಲು ದೊಡ್ಡದಾಗುವುದು. ಇದಕ್ಕಿಂತಲೂ ಸಣ್ಣದಾದ ಹಲವು ಚಿಕ್ಕ ರಾಷ್ಟ್ರಗಳು ಅನೇಕ ಮಹಾಯುದ್ಧಗಳನ್ನು ಎದುರಿಸಿದ್ದಲ್ಲದೆ ಅಂತರ್‌ರಾಷ್ಟ್ರಗಳೊಡನೆ ಸಂಪೂರ್ಣ ಸ್ವಾತಂತ್ರ್ಯದಿಂದ ತಮ್ಮದೇ ರಾಷ್ಟ್ರವನ್ನು ಕಟ್ಟಿಕೊಂಡಿವೆ. ಇಂತಹ ರಾಷ್ಟ್ರಗಳು ಸಹ ತಮ್ಮ ಒಳಗಿನ ರಾಜ್ಯಭಾರಕ್ಕಾಗಿ ತಮ್ಮ ರಾಷ್ಟ್ರವನ್ನು ಪ್ರಾಂತಗಳನ್ನಾಗಿ ವಿಭಾಗಿಸಿಕೊಂಡಿವೆ. ಹಾಗಿರುವಲ್ಲಿ ಮೊಗಲ ಸಾಮ್ರಾಜ್ಯದಷ್ಟು ವಿಶಾಲವಾದ ಕರ್ನಾಟಕದಲ್ಲಿ ರಾಜ್ಯಭಾರ [illegible]? ಈ ರಾಜ್ಯಭಾರದಿಂದ ಯಾವನೊಂದು [illegible]ಕ್ಯಬಾಧ್ಯತೆಗಳನ್ನು ಸಮರ್ಪಕವಾಗಿ [illegible]ಡೆಯಲಾರ[illegible] ನಮ್ಮ ಕೊಡಗು [illegible] ಅಥವಾ ನಮ್ಮ ಜನರಿಗೆ ಏನ ಪ್ರಯೋಜನವಾದೀತು? ಪ್ರತಿಯೊಬ್ಬರೂ ಆಲೋಚನೆ ಮಾಡತಕ್ಕಂಥಾ ವಿಷಯ. ಅಧಿಕಾರಕ್ಕೆ ಬಂದ ವ್ಯಕ್ತಿಗಳು [illegible] ಬಲಿಪೀಳುವದು ಸಾಮಾನ್ಯವಾಗಿದೆ. ಕಾರಣವೇನೆಂದರೆ ಅಧಿಕಾರದಲ್ಲಿರುವವರ ಒಳಪರಿಚಯವು ಪ್ರಾಂತದ ಸರ್ವ ದಿಕ್ಕಿನ ಜನರಿಗಿರುವುದು ಅಸಾಧ್ಯ. ಕೊಡಗು ಕಾಂಗ್ರೆಸಿನ ಕೆಲವು ಧುರೀಣರು ಈ ಸಂದರ್ಭವನ್ನು ಉಪಯೋಗಿಸಿಕೊಳ್ಳಲು ಹೆಣಗಾಡುತ್ತಿದ್ದಾರೆಯೇ? ಕೇವಲ ವಿಮಾನವೇರಿ ಪ್ರಾಂತದ ಒಂದು ಕಡೆಯಿಂದ ಮತ್ತೊಂದೆಡೆ ಹಾರಿ ಮಿಲಿಯಾಂತರ ಜನರ ನಾಯಕನೂ ಅಧಿಕಾರಿಯೂ ಎಂದೆನಿಸಿಕೊಳ್ಳುವುದು ಇವರಿಗೆ ಸ್ವಭಾವಿಕವಲ್ಲವೇ? ಕೊಡಗು ಪ್ರತ್ಯೇಕವಿದ್ದರೆ ಇವರಿಗೆ ಈ ಸಣ್ಣ ಪ್ರಾಂತದಲ್ಲಿ ಮಾಡಲು ಹೆಚ್ಚು ಕೆಲಸವಿರುವುದಿಲ್ಲ; ಹಾಗೂ ಇವರ ಅಪಾರ ಬುದ್ಧಿಶಕ್ತಿ ಮತ್ತು ರಾಜನೀತಿ[illegible] ಮಿಲಿಯಾಂತರ ಜನರಿಗೆ ಲಭಿಸದು. ·ಆ

ದ್ದರಿಂದಲೇ ಕೊಡಗು ಕರ್ನಾಟಕದೊಡನೆ ಸೇರಿದರೆ ಆ ಮೂಲಕ ನಮ್ಮ ಕಾಂಗ್ರೆಸು ಧುರೀಣರಿಗೆ ದೊಡ್ಡ ಕಾರ್ಯಕ್ಷೇತ್ರವನ್ನು ಕಲ್ಪಿಸಿಕೊಟ್ಟಂತಾಗುವುದು. ಮತ್ತು ಇವರು ಆ ದೊಡ್ಡ ಪ್ರಾಂತದ ಗೌರವಪೂರಿತ ಮಂತ್ರಿಗಳು, ಹೆಚ್ಚಾಗಿ ಕರ್ನಾಟಕ ಧುರೀಣ ಮುಂದಾಳುಗಳ ಕಾರ್ಯದರ್ಶಿಗಳೆಂದೆನಿಸಿಕೊಳ್ಳುವ ಸಂದರ್ಭ ಒದಗಿಸಿಕೊಟ್ಟಂತಾಗುವುದು. ಇದೇ ಇವರ ಕರ್ನಾಟಕ ಪ್ರಾಂತದ ಅಭಿಮಾನದ ಸಾರ ಮತ್ತು ಇದರಿಂದ ಕೊಡಗಿಗೆ ಒಳ್ಳೆಯದಾಗುವದೆಂದು ಇವರು ಎಳ್ಳಷ್ಟೂ ಬಯಸಿಲ್ಲ.

ಈ ಮೇಲೆ ಹೇಳಿದ ರೀತಿಯಿಂದ ಕನ್ನಡ ಭಾಗವೆಲ್ಲವನ್ನು ಒಂದೇ ಪ್ರಾಂತದಲ್ಲಿ ಅಡಗಿಸಿದರೆ ನಮಗೆ ಅನುಕೂಲವಾಗುವ ಸರಕಾರ ದೊರೆಯಲಾರದು. ಮತ್ತು ಅಂತಹ ಸರಕಾರವನ್ನು ತಿದ್ದುವ ಮತ್ತು ಬದಲಾಯಿಸುವ ಶಕ್ತಿ ನಮ್ಮ ಕೈಯಿಂದ ಪಾರಾಗುವುದು. ಕೊಡಗು ಪ್ರತ್ಯೇಕವಿದ್ದಲ್ಲಿ ನಾವು ಕನ್ನಡವನ್ನು ತೆಗೆದು ಹಾಕುವದಿಲ್ಲ; ಭಾರತಕ್ಕೆ ವಿರೋಧವಾಗಿ ನಿಂತು ನಮ್ಮದೇ ಬೇರೆ ರಾಜ್ಯವೆಂದು ಹೇಳುವುದಿಲ್ಲ. ಬದಲು ನಮ್ಮ ದೇಶದ ಹಾಗೂ ಸರ್ವ ಜನರ ಉನ್ನತಿಗೆ ಯೋಗ್ಯವಾದ ಪ್ರತಿನಿಧಿಗಳನ್ನು ಅಧಿಕಾರಕ್ಕೆ ಆರಿಸಿ ಉತ್ತಮ ಸರಕಾರವನ್ನು ನಡೆಸಲು ಕೊಡಗು ಪ್ರತ್ಯೇಕ ಉಳಿಯುವದರಿಂದಲೇ ಸಾಧ್ಯ. ಆದ್ದರಿಂದ ಪ್ರತ್ಯೇಕತೆಯಲ್ಲಿ ಸಂಕೀರ್ಣತೆ ಇದೆಯೆಂಬುದು ತಪ್ಪು. ಸರ್ವ ಜನರ ಹಿತಕ್ಕಾಗಿ ಕೊಡಗು ಪ್ರತ್ಯೇಕ ಉಳಿಯಬೇಕೆಂಬುದು ಸಂಕೀರ್ಣಭಾವವಾದರೂ ಇದರಲ್ಲಿ ಅರ್ಥವಿದೆ. ಬದಲು ಮೇಲೆ ಹೇಳಿದ ಕಾರಣದಿಂದ ಕೊಡಗು ಕರ್ನಾಟಕಕ್ಕೆ ಸೇರಬೇಕೆಂಬುದು ಕೇವಲ ವ್ಯಕ್ತಿಗಳ ಸ್ವಾರ್ಥಸಾಧನೆಗೆಂದು ಬೇರೆ ಹೇಳಬೇಕಾಗಿಲ್ಲ.

ಜಾತೀಯತೆಯನ್ನು ವಹಿಸುವ ಕಾಂಗ್ರೆಸು ಮುಂದಾಳುಗಳಿಗೆ ಒಂದು ಮಾತು.

ನಮ್ಮ ಕೊಡಗಿನಲ್ಲಿ ಈ ಮುಂಚೆ ನ್ಯಾಯವಿಧಾಯಕ ಸಭೆಗೆ ಚುನಾವಣೆಗಳು ನಡೆದಿವೆ. ಆ ಸಮಯದಲ್ಲಿ ಕೆಲವು ಕಿರುಕುಳಗಳು ಎಲ್ಲರ ಅವಗಾಹನೆಗೆ ಬಂದಿದೆ. ನಮ್ಮ ದೇಶದಲ್ಲಿ ಕೆಲವಾರು ಜಾತಿಯ ಪಂಗಡಗಳು ಅನ್ಯೋನ್ಯತೆಯಿಂದ ದಿನನಿತ್ಯ ಜೀವನದಲ್ಲಿ ಬಾಳುತ್ತಾರೆ. ಆದರೆ ಚುನಾವಣೆ ಸಮಯದಲ್ಲಿ ಜಾತೀಯತೆಯು ತಲೆದೋರುತ್ತದೆ. ಕಳೆದ ಸಾರಿ ನ್ಯಾಯವಿಧಾಯಕ ಸಭೆಗೆ ಒಂದು ಕೋಮಿನವರು ತಮಗಿದ್ದ ಎರಡು ಓಟುಗಳಲ್ಲಿ ಒಂದನ್ನು ಮಾತ್ರ ತಮ್ಮ ಕೋಮಿನ ಹುರಿಯಾಳಿಗೆ ಕೊಟ್ಟು ಮತ್ತೊಂದು ಓಟನ್ನು ಯಾರಿಗೂ ಕೊಡದೆ ವರ್ತಿಸಿದ್ದಾರೆ. ಇವರ ಕೋಮು ಅತಿ ಚಿಕ್ಕದಾದರೂ ಇಂತಹ ವೈಶಮ್ಯ ಯಾವ ಕೋಮಿನಲ್ಲಿಯೂ ಇರಬಾರದು. ಮತದಾನದಲ್ಲಿ ಜಾತಿ, ಮತ್ತು ನೇಟಿವ್ ಮತ್ತು ಮನೆಯವನೆಂಬ ಬೇಧವಿಲ್ಲದೆ ಪ್ರತಿಯೊಬ್ಬನಿಗೆ ಯುಕ್ತ ತೋರಿದಂತೆ ಯಾವ ಬಲಾತ್ಕಾರಕ್ಕೂ ಒಳಗಾಗದೆ ತಮ್ಮ ಓಟು ಕೊಡುವುದು ಪ್ರತಿಯೊಬ್ಬನ ಧರ್ಮ.

ಕೊಡಗು ಕಾಂಗ್ರೆಸಿಗೆ ಏಕೆ ಓಟು ಕೊಡಬಾರದು?

ಅಖಿಲಭಾರತ ಕಾಂಗ್ರೆಸು ರಾಜಕೀಯ ಪಕ್ಷವಲ್ಲವೆಂದು ಈಗ ಅವರ ಮುಂದಾಳುಗಳಿಗೆ ತಿಳಿದಿದೆ. ಕೇವಲ ದಾಸ್ಯದ ಸಂಕೋಲೆಯನ್ನು ಕಿತ್ತೊಗೆದು ಭಾರತವನ್ನು ಸ್ವತಂತ್ರ ಮಾಡುವ ದೃಷ್ಟಿಯಿಂದಲೂ ಮತ್ತು ಭಾರತದ ಐಶ್ವರ್ಯವನ್ನು ಸೂರೆಗೊಂಡು ನಿರಂಕುಶ ರಾಜ್ಯಭಾರವನ್ನು ನಡೆಸುತ್ತಿದ್ದ ಆಂಗ್ಲರನ್ನು ದೇಶದ ಹೊರಹಾಕುವ ಕಾರ್ಯವನ್ನು ಕಾಂಗ್ರೆಸು ಈ ಹಿಂದೆ ಮಾಡಿತ್ತು. ಇಂತಹ ಒಂದು ರಾಷ್ಟ್ರದ ಅಧಿಕೃತ ಕಾರ್ಯದಲ್ಲಿ ದೇಶದ ಎಲ್ಲಾ ಜನರು ಕಾಂಗ್ರೆಸನ್ನು ಹೊಕ್ಕಿ ಸ್ವರಾಜ್ಯ ಸಾಧನೆಯ ಏಕ ಮಾತ್ರ ಧ್ಯೇಯಕ್ಕೆ ಸರ್ವತ್ಯಾಗ ಮಾಡಿ ಬೆಂಬಲ ಕೊಟ್ಟಿದ್ದಾರೆ. ಆದರೆ ಬೇರೆ ದೇಶಗಳಲ್ಲಿ ರಾಜ್ಯಾಧಿಕಾರ ವಹಿಸಲಿರುವ ಪಕ್ಷಗಳಂತೆ ಕಾಂಗ್ರೆಸು ಒಂದು ರಾಜಕೀಯ ಪಕ್ಷವೆಂದು ಹೇಳಲಾಗುವದಿಲ್ಲ.

ಸ್ವರಾಜ್ಯ ಲಭಿಸಿದೊಡನೆ ಕಾಂಗ್ರೆಸಿನೊಳಗಿದ್ದ ಹಲವಾರು ಆರ್ಥಿಕ ಹಾಗೂ ರಾಜಕೀಯ ಅಭಿಪ್ರಾಯದ ಕಾರ್ಯಕರ್ತರು ಹೊರಬಂದು ಕಮ್ಯೂನಿಸ್ಟ್, ಸೋಷಿಯಲಿಸ್ಟ್, ಇನ್ನಿತರ ಪಕ್ಷಗಳನ್ನು ಸೇರಿದರು. ಇಂತಹ ಪಕ್ಷಗಳು ತಮ್ಮಲ್ಲಿ ನೇರವಾದ ಧ್ಯೇಯಗಳನ್ನು ಇಟ್ಟುಕೊಂಡು ಬೇರೆ ದೇಶಗಳಲ್ಲಿ ತಮ್ಮಂತಹ ಪಕ್ಷಗಳ ನೀತಿಗನುಸಾರವಾಗಿ ವರ್ತಿಸುತ್ತವೆ. ಕಾಂಗ್ರೆಸು ಸ್ವರಾಜ್ಯ ಪಡೆದ ಮೇಲೆ ರಾಜ್ಯಭಾರ ನಡೆಸುವ ಆಸೆ ಇರಬಾರದಿತ್ತು. ಆ ಆಸೆಯನ್ನಿಟ್ಟದ್ದರಿಂದ ಪುಂಡರು ಇದರ ಒಳಹೊಕ್ಕು ಪಕ್ಷವನ್ನು ಕೆಡಿಸಿದಲ್ಲದೆ ತಮ್ಮ ಸ್ವಾರ್ಥಸಾಧನೆಯಿಂದ ಜನರಿಗೆ ತುಂಬಾ ಹಾನಿಯನ್ನುಂಟುಮಾಡಿತು. ಇದನ್ನು ತಿಳಿದ ಜನರು ಈಗ ನಡೆಯುತ್ತಿರುವ ಚುನಾವಣೆಯಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸು ಮುಂದಾಳುಗಳನ್ನೇ ಕೆಳಕ್ಕುರುಳಿಸುತ್ತಿದ್ದಾರೆ.

ಕೊಡಗು ಕಾಂಗ್ರೆಸು ಮತ್ತು ಪ್ರತ್ಯೇಕ ಪಕ್ಷಗಳಿಗಿರುವ ವ್ಯತ್ಯಾಸ.

ಅಖಿಲಭಾರತ ಕಾಂಗ್ರೆಸಿನ ಸ್ಥಿತಿ ಹಾಗಾದರೆ ಕೊಡಗು ಕಾಂಗ್ರೆಸಿನ ಪಾಡೇನು? ಆದರೆ ಈ ಕಾಂಗ್ರೆಸು ಧುರೀಣರಿಗೆ ಅಧಿಕಾರ ಇನ್ನೂ ದೊರಕಿಲ್ಲ. ಇದು ಅವರ ಭಾಗ್ಯವೇ! ಅಲ್ಲದಿದ್ದರೆ ಇಷ್ಟರ ವರೆಗೆ ತಮ್ಮ ಅಧಿಕಾರದ ದುರುಪಯೋಗ ಮಾಡಿ ಜನರಿಗೆ ಇಲ್ಲದ ಹಾನಿಯನ್ನು ತಂದು ಕೊಡಗನ್ನು ಕರ್ನಾಟಕಕ್ಕೋ ಮದ್ರಾಸ ಪ್ರಾಂತಕ್ಕೋ ಸೇರಿಸುವಂತೆ ಮಾಡಿಬಿಡುತ್ತಿದ್ದರು.

ಬಹುಶಃ ಕೊಡಗು ಕಾಂಗ್ರೆಸು ಅಧಿಕಾರಕ್ಕೆ ಬಂದಲ್ಲಿ, ಇವರ ರಾಜ್ಯಭಾರ ಕ್ರಮ ಮತ್ತು ಅದಕ್ಕಿರುವ ಸಲಹೆಗಳನ್ನು ಕೊಡುವವರು ಯಾರು ಮತ್ತು ಇವರನ್ನು ಶಿಸ್ತಿನಲ್ಲಿಡುವವರು ಯಾರೆಂದು ಸ್ವಲ್ಪ ಆಲೋಚನೆ ಮಾಡಿ. ಈ ಹಕ್ಕು ಕೊಡಗಿನ ಜನರಿಗಿರುವುದೆಂದು ಹೇಳಿದಲ್ಲಿ ಅದು ದೊಡ್ಡ ತಪ್ಪಾಗುವುದು. ಬದಲು ಇವರ ಸರದಾರರು ಹುಬ್ಬಳ್ಳಿಯಲ್ಲಿ ಕೂತು ದರ್ಬಾರ ನಡೆಸುವ ಚಾಟಿಗೆ ಸರಿಯಾಗಿ ಕಾಂಗ್ರೆಸು ಧುರೀಣರ ಮೇಲೆ ಇಂದಿನ ವರೆಗೆ ಚಲಾಯಿಸಿದಂತೆ ಮುಂದಕ್ಕೂ ನಿರ್ಭೀತಿಯಿಂದ ಚಲಾಯಿಸುವರು. ಹಾಗಾದರೆ ಮುಂದಿನ ಚುನಾವಣೆಯಲ್ಲಿ ಅವರನ್ನು ತೆಗೆದು ಹಾಕುವ ಹಕ್ಕು ಜನರಿಗಿದೆ ಎಂದು ಕೆಲವರು ಹೇಳಬಹುದು. ಎರಡನೆ ಸಾರಿ ಇವರನ್ನು ಬೇಡುವುದೂ ನೆಹರೂರವರಿಗೆ ಓಟುಕೊಡಿ ಎಂದಲ್ಲದೆ, ತಮ್ಮ ಯೋಗ್ಯತೆಯ ವಿಷಯ ಮಾತೆತ್ತುವವರಲ್ಲ. ಆದ್ದರಿಂದ ಓಟರರೆಲ್ಲರೂ ಎಚ್ಚರಿಕೆ ವಹಿಸಬೇಕು.

ಇದಕ್ಕೆ ವಿರೋಧವಾಗಿ ಪ್ರತ್ಯೇಕ ಪಕ್ಷದವರು ತಮ್ಮೊಡಗೂಡಿ ಸಂಪೂರ್ಣ ಅಧಿಕಾರವನ್ನು ತಮ್ಮ ಜನರಿಂದಲೇ ಪಡೆಯುವರು. ಜನರಿಗೆ ಹಾಗೂ ದೇಶಕ್ಕೆ ಒಳ್ಳೆಯದೆನ್ನುವ ಕಾರ್ಯಗಳನ್ನು ಕೈಕೊಳ್ಳುವದಲ್ಲದೆ, ದೇಶದ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುವರು. ಇವರನ್ನು ಅಧಿಕಾರಕ್ಕೆ ಹೆಚ್ಚು ಸಂಖ್ಯೆಯಿಂದ ಆರಿಸಿದರೆ ಕೊಡಗು ದೇಶವು ಪ್ರತ್ಯೇಕ ಉಳಿಯುವದಲ್ಲದೆ, ಜನರು ಸರಕಾರದೊಡನೆ ಸಹಕರಿಸಿ ತಮಗೆ ಯೋಗ್ಯವಾದ ರಾಜ್ಯಭಾರ ನಡೆಸುವ ಅನುವನ್ನು ಇಟ್ಟುಕೊಳ್ಳಬಲ್ಲರು. ಆದ್ದರಿಂದ ದೇಶಹಿತಚಿಂತಕರಾದ ಪ್ರತಿಯೊಬ್ಬ ಓಟರನೂ ತಮ್ಮೆಲ್ಲರ ಸುಖಾಭಿವೃದ್ಧಿಗಾಗಿ ಮುಂದಿನ ಪ್ರಾಂತೀಯ ನ್ಯಾಯವಿಧಾಯಕ ಸಭೆಗೂ ಮತ್ತು ಇಂಡಿಯಾದ ಪಾರ್ಲಿಮೆಂಟಿಗೂ ಪ್ರತ್ಯೇಕವಾದಿಗಳನ್ನೇ ಅಧಿಕ ಸಂಖ್ಯೆಯಿಂದಲೂ ಮತ್ತು ದೊಡ್ಡ ಮೆಜಾರಿಟಿಯಿಂದಲೂ ಆರಿಸತಕ್ಕದ್ದು. ಕಾಂಗ್ರೆಸು ಹುರಿಯಾಳುಗಳೆಲ್ಲಾ ತಾವು ಕಟ್ಟಿದ ಡಿಪಾಜಿಟ್ಟು ಸರಕಾರಕ್ಕಾಗುವಂತೆ ನೀವೆಲ್ಲರೂ ವರ್ತಿಸಿದರೆ ನಿಮ್ಮ ದೇಶಪ್ರೇಮದ ಬಲ ತಿಳಿದಂತಾಗುವುದು.

ದೇಶದ ಹಿತಚಿಂತಕ.

ಜವಾಹರಲಾಲರ ಹೇಳಿಕೆ

“ಜಾತಿಭಾವನೆಯನ್ನು ಮನಸಿನಲ್ಲಿಟ್ಟುಕೊಂಡು ಕೆಲಸ ಮಾಡುವವರನ್ನು ಕಾಂಗ್ರೆಸ್ಸಿನಿಂದ ಹೊರಗೆ ಅಟ್ಟಬೇಕು. ನಾನು ಕೆಲವು ಕಡೆ ಸಂಚರಿಸಿದಲ್ಲಿ ಜಾತಿ ಭಾವನೆ ಇದೆಯೆಂದು ಕೇಳಿ ನನಗೆ ವ್ಯಾಕುಲವಾಗಿದೆ. ಇದು ಬಹಳ ಕೆಟ್ಟ ಸೂಚನೆ. ನಾವು ವಿದೇಶಗಳಿಗೆ ಹೋದರೆ ಆ ಜಾತಿ ಈ ಜಾತಿ ಎಂದು ಅವರು ಗೌರವಿಸುವುದಿಲ್ಲ. ಸ್ವತಂತ್ರ ಭಾರತದ ಪ್ರಜೆಯೆಂದು ಅವರು ಗೌರವಿಸುತ್ತಾರೆ. ಜಾತೀಯತೆಗೆ ಕಾಂಗ್ರೆಸ್ಸಿನಲ್ಲಿ ಸ್ಥಾನವಿಲ್ಲ. ಕಾಂಗ್ರೆಸ್ಸಿನ ಮಾರ್ಗದರ್ಶಕತ್ವದಲ್ಲಿ ನನಗೆ ಇನ್ನು ಮುಂದೆಯೂ ಸ್ಥಾನವಿರುವುದಾದರೆ ಜಾತೀಯಭಾವನೆ ಇರುವವರನ್ನೆಲ್ಲಾ ಕಾಂಗ್ರೆಸ್ಸಿನಿಂದ ಹೊರಗೆ ಹಾಕುತ್ತೇನೆ” ಎಂಬುದಾಗಿ ತಾರೀಕು ೩ ರಲ್ಲಿ ರಾಂಚಿಯಲ್ಲಿ ತಮ್ಮ ಭಾಷಣದಲ್ಲಿ ಹೇಳಿರುವರು.

ಭಾರತದ ಮಾಜಿ ವೈಸರಾಯರ ನಿಧನ

೧೯೩೬ ರಿಂದ ೧೯೪೩ ರ ವರೆಗೆ ಭಾರತದ ವೈಸರಾಯರಾಗಿದ್ದ ಲಾರ್ಡ್ ಲಿನ್‌ಲಿತ್ಗೋರವರು ತಮ್ಮ ೬೪ ನೇ ವಯಸ್ಸಿನಲ್ಲಿ ತಾರೀಕು ೫ ರಲ್ಲಿ ನಿಧನರಾದರು. ಇವರು ಶೂಟಿಂಗ್ ಪಾರ್ಟಿಯೊಂದರ ಜೊತೆಯಲ್ಲಿ ತೆರಳಿದ್ದಾಗ ನಿಶ್ಶಕ್ತರಾಗಿ ಮೃತಿ ಹೊಂದಿದರು. ಇವರು ೧೯೪೨ ರ “ಕ್ವಿಟ್ ಇಂಡಿಯಾ” ಚಳವಳಿಕಾಲದಲ್ಲಿ ವೈಸರಾಯರಾಗಿದ್ದು ೧೯೪೩ ರಲ್ಲಿ ನಿವೃತ್ತಿ ಹೊಂದಿದರು.

ಶ್ರೀ ಪಿ. ಪೀತಾಂಬರರವರು,
“ಕೊಡಗು” ಏಜೆಂಟರು,
ಕೊಡ್ಲಿಪೇಟೆ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಹುಂಡಿಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ನರ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

ಕಾಂಗ್ರೆಸ್ ಉಮೇದುವಾರರೂ ಚುನಾವಣಾ ಪ್ರಚಾರವೂ.

ನಮ್ಮ ಕೊಡಗು ದೇಶದಲ್ಲಿ ಚುನಾವಣೆಯು ಇದೀಗ ಬಹಳ ಹತ್ತಿರ ಬಂದಿದೆ. ಅದಕ್ಕಾಗಿ ಪ್ರಚಾರ ಕಾರ್ಯವೂ ಬಹಳ ಬಿರುಸಿನಿಂದ ನಡೆಯುತ್ತಿದೆ. ಪಾರ್ಟಿಗಳ ಪತ್ರಿಕೆಗಳಿಂದಲೂ ಬಹಳವಾಗಿದೆ. 'ಜನ್ಮಭೂಮಿ' ಪತ್ರಿಕೆಯಲ್ಲಿ ಶ್ರೀ ಬಿ. ಎ. ಬೆಳ್ಯಪ್ಪನವರು ಶ್ರೀ ನೆಹರೂರವರ ಮಾತನ್ನು ತಪ್ಪಾಗಿ ಅರ್ಥೈಸಿದರೆಂಬುದಾಗಿ ಅವರನ್ನು ದೂಷಿಸಿ ಬರೆಯುತ್ತಾರೆ. ಆದರೆ ಅದೇ ಪತ್ರಿಕೆಯ ಸಂಪಾದಕರೇ ತಮ್ಮನ್ನು ತಾವೇ ಮರೆತುಬಿಟ್ಟಿದ್ದಾರೆ.

ತಾ. ೨೬-೧೨-೫೧ರ 'ಜನ್ಮಭೂಮಿ'ಪತ್ರಿಕೆಯ ಸಂಪಾದಕೀಯ ಲೇಖನವನ್ನು ಓದಿದರೆ ಯಾವನಿಗಾದರೂ ಶ್ರೀ ಬಿ. ಎ. ಬೆಳ್ಯಪ್ಪನವರ ಹೀನ ಮನೋಭಾವನೆಯು ವ್ಯಕ್ತವಾಗದಿರದು. ಅವರು ಕೊಡಗಿನವರಾದ ಶ್ರೀ ಕೆ. ಎಂ. ಕಾರ್ಯಪ್ಪನವರನ್ನು ಮುಖ್ಯ ಸೇನಾಪತಿಯಾಗಿ ನೆಹರು ಸರ್ಕಾರವು ನೇಮಿಸಿರುವಾಗ, ಅಂಥಾ ಕೊಡಗಿನ ಕಾಂಗ್ರೆಸ್ಸಿಗೆ ಜಯವಾಗದಿದ್ದರೆ ಶ್ರೀ ನೆಹರೂರವರಿಗೆ ಆಶಾಭಂಗವಾದೀತೆಂದು ಬರೆದಿದ್ದಾರೆ. ಇದು ನಿಜವಾದರೆ ಶ್ರೀ ನೆಹರೂರವರು ಕೊಡಗಿನ ಜನರನ್ನು ತನ್ನ ಬಲೆಯಲ್ಲಿ ಹಾಕಿಕೊಳ್ಳಬೇಕೆಂಬ ಆಸೆಯಿಂದ ಶ್ರೀ ಕಾರ್ಯಪ್ಪನವರನ್ನು ಮುಖ್ಯ ಸೇನಾನಿಯಾಗಿ ನೇಮಿಸಿದರೆಂಬುದೂ ಮತ್ತು ಕಾಂಗ್ರೆಸ್ಸಿಗೆ ಜಯವಾಗದಿದ್ದಲ್ಲಿ ಅವರ ಈ ಆಶೆಯು ಭಂಗವಾಗುವದೆಂಬುದೂ ಸ್ಪಷ್ಟವಾಗುತ್ತದೆ. ಶ್ರೀ ಬಿ. ಎ. ಬೆಳ್ಯಪ್ಪನವರು ಶ್ರೀ ಜವಾಹರ್‌ಲಾಲ್‌ನೆಹರೂರವರನ್ನು ಇಂತಹ ಕೀಳುಮನೋಭಾವನೆಯುಳ್ಳವರೆಂಬುದಾಗಿ ತಿಳಿದುಕೊಂಡಿದ್ದರೆ ಇದು ಶ್ರೀ ಬೆಳ್ಯಪ್ಪನವರ ತಿಳಿಗೇಡಿತನವಲ್ಲದೆ ಮತ್ತೇನು? ಇದಕ್ಕಾಗಿ ಅವರು ಅಷ್ಟೊಂದು ಸುದೀರ್ಘ ಸಂಪಾದಕೀಯ ಲೇಖನವನ್ನು ಬರೆದ ಬೇಕಾಗಿತ್ತೇ? ಶ್ರೀ ನೆಹರೂರವರ ಹೆಸರಿಗೆ ಕಳಂಕ ತರುವಂಥ ಇವರೂ ನಹ ಮುಂಬರಲಿರುವ ಕೊಡಗು ಶಾಸನ ಸಭೆಗೆ ಕಾಂಗ್ರೆಸ್ ಪರ ಉಮೇದುವಾರರಾಗಿ ನಿಂತಿದ್ದಾರೆ. ಇಂತಹ ಮಹನೀಯರಿಗೆ ನಮ್ಮ ಅಮೂಲ್ಯವಾದ ಓಟನ್ನು ಕೊಟ್ಟು ಇವರ ಕೈಗೆ ಅಧಿಕಾರ ಕೊಟ್ಟರೆ ನಮಗಿನ ಕೈಲಿ ನಾವೇ ಚಿಕ್ಕ ಕೊಟ್ಟಂತೆ!

ಈ ಕೊಡಗಿನ ಕಾಂಗ್ರೆಸಿಗರೆಂದು ಹೇಳಿಕೊಳ್ಳುವ ಸಂಯೋಜನವಾದಿ ಉಮೇದುವಾರರಲ್ಲಿ ಬಹು ಸಂಖ್ಯಾತರು ಮೊನ್ನೆ ಮೊನ್ನೆ ಕಾಂಗ್ರೆಸ್ಸಿಗೆ ಸೇರಿದವರು. ರಾಜಕೀಯದ ಪಂಚ್ಯಾನವೂ ಅಲ್ಲವೂ ಇಲ್ಲದವರನ್ನು ಸಹ ಕಾಂಗ್ರೆಸ್ಸಿನ ಉಮೇದ್ವಾರರಾಗಿ ನಿಲ್ಲಿಸಿದ್ದಾರೆ. ಕೆಲ ಸಮಯದ ಹಿಂದೆ ಕೊಡಗು ಸರಕಾರಿ ಕಾಲೇಜಿನ ಕ್ಕೆ ಕಾಂಗ್ರೆಸಿನ ಪ್ರತಿಯ ಮಕ್ಕಳು ವಾದಿಸುತ್ತಿದ್ದಾಗ 'ಬೀದಿ ಭಿಕಾರಿಗಳ ಉಡುಪು' ಎಂದು ಹೇಳಿದವರು ಇಂದು ಅದೇ ಕಾಂಗ್ರೆಸ್ ಪರ ಶಾಸನ ಸಭೆಗೆ ಮತ್ತೀಗ ಟಿಕೆಟ್ಟಿನಿಂದ ಉಮೇದುವಾರರಾಗಿ ನಿಂತಿದ್ದಾರೆ. ಇದಕ್ಕೇನನ್ನ ಬೇಕು? ಅದೇ ಕಾಂಗ್ರೆಸಿನ ಪರ ಲೋಕಸಭೆಗೆ (ಪಾರ್ಲಿಮೆಂಟಿಗೆ) ಉಮೇದುವಾರರಾಗಿ ನಿಂತಿರುವ ಶ್ರೀ ಎನ್. ಸೋಮಣ್ಣನವರಾದರೋ ಮೊದಲು ಕಾಂಗ್ರೆಸ್ಸಿನಲ್ಲಿದ್ದು, ಆದು ಒಳ್ಳೆ ಸಂಸ್ಥೆಯಲ್ಲವೆಂದು ಅದೇಗಿನಿಂದ ಕಾಂಗ್ರೆಸ್ಸನ್ನು ಬಲಗೊಳಿಸಿ ಅವರ ಸಹವಾಸಿಗಳೊಂದಿಗೆ ಕೈಕೊಟ್ಟ ವ ಜನರಿಗೆ ಕಮ್ಯೂನಿಸ್ಟ್ ಪಕ್ಷವನ್ನು ಬೋಧಿಸಲು ಯತ್ನಿಸಿ, ಅಲ್ಲದೆ ಕೋರ್ಟುಗಳಲ್ಲಿ ಗಲಭೆ ಎಳಲು ಸಹ ಅನೇಕರ ಮಾಡಿದವರಲ್ಲವೇ? ಕೋಮುವಾರು ಪಕ್ಷದ ಮಹಾ ಮಹಾಕೀಯರೇ ಇವರು. ಹಿಂಸೆಯೇ ಧ್ಯೇಯವಾಗಿರುವ ಇವರನ್ನು ಅಹಿಂಸಾ ತತ್ವದ ಕಾಂಗ್ರೆಸ್ಸಿನ ಪರ ಉಮೇದುವಾರನ್ನಾಗಿ ಆರಿಸುವಂತಹ ಮಹಾನ ಭಾಗ್ಯವಂತರೋ ಯಾರು? ಆದುದರಿಂದ, ಕೊಡಗಿನ ಮಾನ್ಯ ಓಟರುಗಳೇ ಇವರಿಗೆ ಓಟನ್ನು ಕೊಟ್ಟು ನಿಮ್ಮ ಓಟಿನ ಬೆಲೆಯನ್ನು ಕಳೆದುಕೊಳ್ಳಬೇಕೆನ್ನುವಿರ! ಎಚ್ಚರಿಕೆ!!

ಇಂತ ಈ ಕಾಂಗ್ರೆಸ್ ಉಮೇದುವಾರರು ಈ ಚುನಾವಣೆಯಲ್ಲಿ ಸೋಲದಂತಿರಲೆಂದು ಪಾರಾಗುವುದಕ್ಕಾಗಿ ಏನು ಕಳೆದುಕೊಂಡರು, ಈಗ ಅಪಪ್ರಚಾರಕ್ಕೆ ತೊಡಗಿದ್ದಾರೆ. ಇಲ್ಲಿನ ಕಾಫಿತೋಟದ ಮಾಲೀಕರಾದ ಅನಕ್ಷರಸ್ಥರನ್ನೂ ಬಡವರನ್ನೂ ಇವರು 'ನೀವು ಸೋಲಿಗರೆ ನಿಮ್ಮ ಎರಡು ವಿಷಯಗಳಲ್ಲಿ ಅನ್ಯಾಯ ಮಾಡುತ್ತೇವೆ' ಎಂದು ಓಟು ಮಾಡದವರಿಗೆ ಬೆದರಿಕೆ ಹಾಕುತ್ತಿದ್ದಾರೆ. ಇದು ಸತ್ಯ ಮತ್ತು ಅಹಿಂಸೆಗೆ ನೆಲೆವೀಡಾದ ಕಾಂಗ್ರೆಸ್ಸಿನವರು ಶ್ರೀ ನೆಹರೂರವರ ನಾಯಕತ್ವದಲ್ಲಿ ಮಾಡುವ ಚುನಾವಣಾ ಪ್ರಚಾರವೇ? ಇದು ನವಿತ ಪೆಸಿಸಿದ ಕಾಂಗ್ರೆಸ್ಸನ್ನು ಕಾಣಿಗೆಡಿಸಲು ಎಂದು ವ ಪ್ರಚಾರವಲ್ಲವೇ? ಇವರುಗಳು ಈ ಪವಿತ್ರವನಿಸಿದ ಕಾಂಗ್ರೆಸಿನ ಪರ ಉಮೇದ್ವಾರರಾಗಿ ನಿಲ್ಲಲು ಮಾತ್ರವಲ್ಲ, ಕಾಂಗ್ರೆಸಿನ ಸದಸ್ಯರಾಗಲು ಸಹ ಯೋಗ್ಯರೋ?

ಹಿಂದೂದೇಶದಲ್ಲಿ ಕಾಂಗ್ರೆಸ್ಸೇ ಜಯಗಳಿಸುತ್ತದೆ, ಮಾತ್ರವಲ್ಲ ಜಯಗಳಿಸಬೇಕು. ಆದರೆ ಕೊಡಗಿನ ಕಾಂಗ್ರೆಸಿಗರಾದ ಸಂಯೋಜನವಾದಿಗಳು ನಿಜವಾಗಿಯೂ ಅಖಿಲಭಾರತ ಕಾಂಗ್ರೆಸಿನ ಪರ ಉಮೇದ್ವಾರರೋ ಎಂಬ ಸಂಶಯವುಂಟಾಗುತ್ತದೆ. ಕಾಂಗ್ರೆಸು ತನ್ನ ಚುನಾವಣಾ ಪ್ರಸಿದ್ಧ ಪತ್ರಿಕೆಯಲ್ಲಿ ಭಾಷಾವಾರು ಪ್ರಾಂತರಚನೆಗೆ ಸಮ್ಮತಿಸಿದೆ ಎಂದು ಹೇಳಿದೆ. ಆದರೆ ಕೊಡಗಿನ ಕಾಂಗ್ರೆಸಿಗರು ಕೆಲವು ಕಡೆಗಳಲ್ಲಿ ಬಡ ಜನರನ್ನು ವಂಚಿಸಿ ಓಟನ್ನು ಪಡೆಯುವುದಕ್ಕಾಗಿ ನಾವು ಪ್ರತ್ಯೇಕವಾದಿಗಳೆನ್ನುತ್ತಾರೆ. ಆದರೆ ಇವರು ಕೆಲವು ಕಾಫಿಪ್ಲಾಂಟರುಗಳಲ್ಲಿ ಹೋಗಿ 'ನಾವು ಸಂಯೋಜನವಾದಿಗಳು ನಮಗೆ ಓಟನ್ನು ಕೊಡಿರಿ, ಪ್ರತ್ಯೇಕವಾದಿಗಳಿಗೆ ಕೊಟ್ಟರೆ ಅವರು ಕಂದಾಯ ಜಾಸ್ತಿ ಮಾಡುತ್ತಾರೆ' ಎಂದು ವಂಚನೆಗಾಗಿ ಹೇಳುತ್ತಾರೆ. ಪ್ರತ್ಯೇಕ ಪಕ್ಷದವರಲ್ಲಿ ಪ್ಲಾಂಟರುಗಳೂ, ಜಮೀನ್ದಾರರೂ ಯಾರೂ ಇಲ್ಲವೋ? ತಾ ಕಾಂಗ್ರೆಸ್ಸಿಗರು ತಮ್ಮ ಧ್ಯೇಯಕ್ಕೆ ವಿರೋಧವಾಗಿ ಬಡವರಿಗೆ 'ನಾವು ಸಹ ಪ್ರತ್ಯೇಕವಾದಿಗಳೆಂದೂ, ಧನವಂತರಿಗೆ 'ನಾವು ಸಂಯೋಜನವಾದಿಗಳೆಂದೂ ಹೇಳುತ್ತಿರುವುದು ಯಾವ ರೀತಿಯ ಚುನಾವಣಾ ಪ್ರಚಾರ! ಬಡವನನ್ನು ವಂಚಿಸಲು ಹೂಡುತ್ತಿರುವ ಕಪಟ ನಾಟಕವಲ್ಲವೇ? ಇವರು ಜನರ ಒಲವು ಸಂಪಾದಿಸಲು ಆಗಿಂದಾಗ್ಗೆ ಶ್ರೀ ನೆಹರೂರವರ ಹೆಸರನ್ನು ಉಚ್ಚರಿಸುತ್ತಾ ಅವರ ಛಾಯಾಚಿತ್ರಗಳನ್ನೊಳಗೊಂಡ ಚುನಾವಣಾ ಪ್ರಚಾರ ಮಾಡುತ್ತಿದ್ದಾರೆ. ಆದರೆ ಅವರ ಧ್ಯೇಯಗಳನ್ನೇನೂ ಪಾಲಿಸುತ್ತಿಲ್ಲ.

ಶ್ರೀ ನೆಹರೂರವರು 'ಕೋಮುವಾದಿಗಳು ತಮ್ಮ ಪಕ್ಷ ಬೆಂಕಿಯಲ್ಲಿ ಸುಡಿ, ಅವರನ್ನು ಚುನಾವಣೆಯಲ್ಲಿ ಸೋಲಿಸಬೇಕು, ಅಂತಹವರಿಗೆ ಕಾಂಗ್ರೆಸಿನಲ್ಲಿ ಎಡೆಯಿಲ್ಲ' ಎಂದು ಮದರಾಸ್ ಎಕ್ಸ್ಪ್ರೆಸ್ ಹೇಳಿದರೂ, ದೇಶದ ಎರಡು ಕಿವಿಕೊಟ್ಟರೂ ಇವರು ಬರೇ ಕಿವಿಗಳನ್ನು, ಮತ್ತೆ ತನ್ನ ಕೀಳವಿದ್ದ ಕಾಂಗ್ರೆಸಿಗರ ಸಂಯೋಜನವಾದಿಗಳು ಶ್ರೀ ನೆಹರೂರವರ ಆದೇಶವನ್ನು ಬದಿಗೊತ್ತಿ, ಕೋಮುವಾದಿ ಪಕ್ಷಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡುತ್ತಿರುವುದನ್ನು, ಇನ್ನೂ ಅನೇಕ ತರದ ಇಂಥದೇ ಒಂದು ವಿಚಿತ್ರವಾದ ಕಾರ್ಯಕ್ರಮಗಳನ್ನು ನೋಡಿದರೆ, ಇಂಥಾ ಪಕ್ಷವು ಶ್ರೀ ಜವಾಹಿರಲಾಲ್ ನೆಹರೂರವರ ನಾಯಕತ್ವದಲ್ಲಿರುವ ಕಾಂಗ್ರೆಸ್ಸಿನದೇನ, ಇವರಿಗೆ ಓಟ್ ಕೊಟ್ಟು ನಮ್ಮ ಓಟಿನ ಬೆಲೆಯನ್ನು ಕಳೆದುಕೊಳ್ಳುವುದಕ್ಕಿಂತಾ ಪೂಜ್ಯ ಗಾಂಧೀಜಿಯವರ ಸರ್ವೋದಯ ತತ್ವದಿಂದ ಬೆಳಗುತ್ತಿರುವ ಪ್ರತ್ಯೇಕ ಪಕ್ಷದವರಿಗೆ ಓಟು ಕೊಡುವುದೇ ಲೇಸೆನ್ನಿಸುವುದಿಲ್ಲವೇ?

ಓಟರು.

ಕೊಡಗು ಕಾಂಗ್ರೆಸಿನ ಶಿಸ್ತು?

ತಾ. ೮-೧-೫೨ರಲ್ಲಿ ಶ್ರೀಮಂಗಲ ನಾಡಿನ ಕುಟ್ಟ ಸಂತೆಯಲ್ಲಿ ಕಾಂಗ್ರೆಸು ಎಂದು ಹೇಳಿಕೊಳ್ಳುವವರು ಒಂದು ಮೀಟಿಂಗು ಮಾಡಿದರು. ಸಭೆಯ ಅಧ್ಯಕ್ಷರು ತಮ್ಮ ಎರಡು ಕಿವಿಗಳಿಗೂ ಹತ್ತಿಯನ್ನು ತುಂಬಿಸಿಕೊಂಡು ಕೂತಿದ್ದರು. ಶ್ರೀಗಳಾದ ಎನ್. ಸೋಮಣ್ಣ (ಹೊಸ ಪಾರ್ಲಿಮೆಂಟಿನ ಉಮೇದ್ವಾರರು) ಸಿ. ಯಂ. ಪೂಣಚ್ಚ ಎಕ್ಸ್ ಗಿರಿಜೆ ಸಾಲಿಸಿಟರಾದ ಸಿ. ಪಿ. ಕೆ. ಶಾಲಪ್ಪ, ಎ. ಎಸ್. ತಮ್ಮಯ್ಯ, ಸಿ. ಪಿ. ಮಾಚಯ್ಯ, ಡಾ. ಪಿ. ಯಂ. ಸೋಮಯ್ಯ ಇವರುಗಳಲ್ಲದೆ ಮತ್ತು ಇವರ ಭಾಷಣಕ್ಕೆ ಚಪ್ಪಾಳೆ ಹೊಡೆಯಲಿಕ್ಕಾಗಿ ಅನೇಕರ ಟೌನಿನ ಸ್ನೇಹಿತರುಗಳು ಸಭೆಯಲ್ಲಿ ಬಂಗಿಗಳಾಗಿದ್ದರು. ಕಾಂಗ್ರೆಸಿನ ಪಾರ್ಟಿಯವರ ಭಾಷಣ ಮುಗಿದ ನಂತರ ಕಾಫಿ ತೋಟದ ನಾಲ್ಕೈದು ಪ್ರಮುಖ ವಿಗಳನ್ನು ಕರಕೊಂಡು ಗಂಡಸರನ್ನು ಹೆಂಗಸರನ್ನಾಗಿಯೂ, ಹೆಂಗಸರನ್ನು ಗಂಡಸರನ್ನಾಗಿಯೂ ವೇಷ ಮಾಡ್ಸಿ ಬನ್ನಿ ಹಾಕಿ ಸಂತೆಗಳಲ್ಲಿ ಆಟವಾಡಿಸಿ ತಮಗೆ ಓಟು ಕೇಳುತ್ತಿದ್ದರು. ಈ ರೀತಿ ವೇಷ ಬದಲಾಯಿಸಲಿಕ್ಕೆ ಇವರ ಕುಟುಂಬಸ್ಥರಾಗಲಿ ಯಾ ಇವರ ಸಹಪಾಠಿಗಳ ಕುಟುಂಬ ವರ್ಗದವರಾಗಲಿ ಯಾರೂ ಇರಲಿಲ್ಲವೋ? ವೇಷಧಾರಿ ಕರೆತಂದ ಪ್ರಮುಖರನ್ನು ಸಿನಿಮಾ ನಟ ನಟಿಯರು? ಕಾಂಗ್ರೆಸಿನ ಶಿಸ್ತನ್ನು ಪಾಲಿಸಿ, ರಾಜ್ಯಭಾರ ನಡೆಯಿಸಲಿಕ್ಕೆ ನೆಹರು ಸರಕಾರವನ್ನು ಕೊಡಗು ದಲ್ಲಿ ಇವರು ಹಸ್ತಾಂತರಿಸುವ ಪ್ರಥಮ ಹೆಜ್ಜೆಯಲ್ಲಿ ಇದೆಯೇ? ಕಾಲೇಜುಗಳಲ್ಲಿ ಮೆಂಬರರಾಗಿರುವ ಕಾಂಗ್ರೆಸು ಪಾರ್ಟಿಯವರೆನಿಸಿಕೊಳ್ಳುವವರನ್ನು ಗುರ್ತಿಸಿಕೊಳ್ಳಿ. ಅದೇ ದಿನ ರಾತ್ರಿ ಕಾಂಗ್ರೆಸ್ ಪಾರ್ಟಿ ಎಂದುಕೊಳ್ಳುವವರು ಅವರ ಪರವಾಗಿ ಒಂದು ಹರಿಕಥೆಯನ್ನು ಏರ್ಪಡಿಸಿ ಪಾರ್ಲಿಮೆಂಟಿನ ಉಮೇದ್ವಾರರಾದ ಶ್ರೀ ಎನ್. ಸೋಮಣ್ಣನವರೂ ಮತ್ತು ಪಾರ್ಲಿಮೆಂಟಿನ ಮೆಂಬರರಾದ ಶ್ರೀ. ಸಿ. ಎಂ. ಪೂಣಚ್ಚನವರೂ ಹರಿಕಥೆಗೆ ರಾತ್ರಿ ಟೌನಿನಿಂದ ಜನರನ್ನು ಒಟ್ಟುಗೂಡಿಸಿ ಸೇರಿಸುತ್ತಿದ್ದರು. ಇವರ ಉದ್ದೇಶವು ದೇವ ಹರಿಕಥೆಯ ನೆಪದಿಂದ ಜನರ ಓಟ ಪಡೆಯುವದಾಗಿದೆ. ಅದರಿಂದ ಓಟನ್ನು ಒಂದೇ ಗುರಿ ಇಟ್ಟುಕೊಂಡು ಪ್ರತ್ಯೇಕ ಪಕ್ಷಕ್ಕೆ ಕೊಟ್ಟು ದೇಶವನ್ನು ಉಳಿಸಿ.

'ಹಂಚಿದ್ದವ.'

CAUVERY MAHAL, MERCARA.
Daily at 6-15 & 9-15.
DONT FAIL TO SEE,
FROM 18th JANUARY 1952.
"SAMSON and DELILAH"
(in Technicolour)
Saturday 19th Matinee at 3-15 P. M.
Sunday 20th Morning Show at 10-45 A. M.
—: ADMISSION RATES :—
Box Rs. 6, Bal Rs. 2, 1st class Re. 1, 2nd class As. 8
Reserve your seats in advance.
Advance Booking Daily 10 to 12.
(Free and complymentary passes are strictly suspended

ಕೊಡಗು

ತಾ. ೧೧-೧-೧೯೪೬ನೇ ಶುಕ್ರವಾರ

ಕೋಮುವಾರು ವಿಷ ಯಾರಲ್ಲಿದೆ?

"ಜಾತಿ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡುವವರನ್ನು ಕಾಂಗ್ರೆಸಿನಿಂದ ಹೊರಗೆ ಅಟ್ಟಬೇಕು. ಜಾತೀಯತೆಗೆ ಕಾಂಗ್ರೆಸ್ಸಿನಲ್ಲಿ ಸ್ಥಾನವಿಲ್ಲ. ಕಾಂಗ್ರೆಸ್ಸಿನ ಮಾರ್ಗದರ್ಶಕತ್ವದಲ್ಲಿ ನನಗೆ ಇನ್ನು ಮುಂದೆಯೂ ಸ್ಥಾನವಿರುವದಾದರೆ ಜಾತೀಯ ಭಾವನೆ ಇರುವವರನ್ನೆಲ್ಲಾ ಕಾಂಗ್ರೆಸಿನಿಂದ ಹೊರಗೆ ಹಾಕುತ್ತೇನೆ" ಎಂದು ಪಂಡಿತ ನೆಹರೂರವರು ಹೇಳಿರುವರು. ಕೊಡಗಿನಲ್ಲಿ ಕಾಂಗ್ರೆಸ್ಸಿನ ಹೆಸರಿನಲ್ಲಿ ಚುನಾವಣೆಗೆ ನಿಂತಿರುವ ಸಂಯೋಜನೆಯ ಉಮೇದುವಾರರಲ್ಲಿ ಎಷ್ಟು ಜನರು ಪಂಡಿತಜಿಯವರು ಹೇಳಿರುವ ಆ ಅರ್ಹತೆ ಉಳ್ಳವರೆಂಬುದನ್ನು ಜನತೆಯು ಚೆನ್ನಾಗಿ ಪರಿಶೀಲಿಸಬೇಕಾಗಿದೆ.

ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡುತ್ತಾ ಕಾಂಗ್ರೆಸ್ ಉಮೇದುವಾರರು—ಪ್ರತ್ಯೇಕ ಪಕ್ಷವು ಕಟ್ಟಲ್ಪಟ್ಟಿರುವದೇ ಕೋಮುವಾರು ತತ್ವದ ಮೇಲೆನ್ನುತ್ತಾ, ತಾವು ಖಾಸಗಿಯಾಗಿ ಓಟು ಕೇಳುವಾಗ್ಗೆ ತಮ್ಮ ತಮ್ಮ ಕೋಮುವಾರು ಹಿತಗಳನ್ನೇ ಮುಂದಿಟ್ಟುಕೊಂಡು ಪ್ರಚಾರ ನಡೆಸುತ್ತಿದ್ದಾರೆಂದು ತಿಳಿದುಬರುತ್ತದೆ. ಅಲ್ಲದೆ ಕೋಮುವಾರು ಸಂಸ್ಥೆಗಳಲ್ಲಿ ಪ್ರಮುಖ ಭಾಗವಹಿಸಿರುವ ಕೆಲವರೂ ಉಮೇದುವಾರರಾಗಿ ನಿಂತಿದ್ದಾರೆ. ಅಂಥವರು ಕೋಮುವಾರು ಭಾವನೆಯ ಮೇಲೆಯೇ ಚುನಾವಣೆಯಲ್ಲಿ ಜಯಿಸಬೇಕೆಂದು ಹೊರಟಿರುವರು. ಇವರು ಹೀಗೆ ಕೋಮುವಾರು ವಿಷವನ್ನು ದೇಶದಲ್ಲಿ ಹರಡಿ, ಕೊಡಗು ಪ್ರತ್ಯೇಕವಿದ್ದರೆ ಬಲವಾದ ಕೋಮಿನವರು ಉಳಿದವರನ್ನು ಕೊಡಗಿನಿಂದ ಓಡಿಸಿಬಿಡುತ್ತಾರೆ, ಇಲ್ಲವೇ ಹಿಂಸಿಸುತ್ತಾರೆಂದು ಅಪಪ್ರಚಾರ ಮಾಡಿ, ದೇಶದವರಲ್ಲಿ ಅಶಾಂತಿ ಹುಟ್ಟಿಸಿ ಕೊಡಗನ್ನು ಬೇರೆ ಪ್ರಾಂತ್ಯದೊಂದಿಗೆ ಸೇರಿಸಬೇಕೆಂದಿರುವ ತಮ್ಮ ಗುರಿಯನ್ನು ಸಾಧಿಸಿಕೊಳ್ಳಲು ಯತ್ನಿಸುತ್ತಿರುವರು. ಇದು ದೇಶದ ಮುಂದಿನ ಏಳಿಗೆಯ ದೃಷ್ಟಿಯಿಂದ ಬಹು ಹಾನಿಕಾರಕವೆಂದು ಎಷ್ಟು ಹೇಳಿದರೂ ಸಾಲದು.

ಪ್ರತ್ಯೇಕ ಪಕ್ಷದವರ ಗುರಿಯಾದರೋ—ಕೊಡಗನ್ನು ಹೀಗೆಯೇ ಮುಂದಕ್ಕೂ ಪ್ರತ್ಯೇಕ ಪ್ರಾಂತ್ಯವಾಗಿಟ್ಟುಕೊಳ್ಳಬೇಕೆಂಬುದಾಗಿದೆ. ಇದನ್ನು ಸಾಧಿಸಬೇಕಾದರೆ ಕೊಡಗಿನಲ್ಲಿರುವ ಎಲ್ಲಾ ಕೋಮುಗಳ ಜನರ ಹಿತವನ್ನು ಬಯಸಿ, ಇಲ್ಲಿಯ ಎಲ್ಲಾ ನಿವಾಸಿಗರಿಗೂ ಉಪಯುಕ್ತವಾದ ಸರ್ಕಾರವನ್ನು ನಡೆಸಿ, ಎಲ್ಲರಲ್ಲಿಯೂ ಶಾಂತಿ ಸಮಾಧಾನವು ನೆಲಸುವಂತೆ ಮಾಡಬೇಕಾಗಿದೆ. ಈ ದೃಷ್ಟಿಯಿಂದಲೇ ಈ ಪಕ್ಷವು ಮುಂಬರುವ ಚುನಾವಣೆಗೆ ತಮ್ಮ ಪರ ಹರಿಜನರು, ಅಮ್ಮ ಕೊಡವರು, ಲಿಂಗಾಯತರು, ವೈಶ್ಯರು, ಬ್ರಾಹ್ಮಣರು, ಯರವ ಕುರುಬರು, ಗೌಡುಗಳು, ಮುಸಲ್ಮಾನರು ಮತು ಕೊಡವರು ಇವೇ ಮೊದಲಾದ ಕೊಡಗಿನ ಎಲ್ಲಾ ಮುಖ್ಯ ಕೋಮುಗಳ ಪ್ರತಿನಿಧಿಗಳನ್ನು ಉಮೇದುವಾರರಾಗಿ ನಿಲ್ಲಿಸುವುದಾಗಿದೆ. ಅಲ್ಲದೆ ಕೊಡಗಿನ ಯಾವದೇ ಒಂದು ಕೋಮಿಗೆ ಓಟರುಗಳ ಬಹುಮತವಿಲ್ಲ ಮಾತ್ರವಲ್ಲ, ಒಟ್ಟಿನಲ್ಲಿ ಕಾಲು ಭಾಗವೂ ಕೂಡ ಇಲ್ಲ. ಆದುದರಿಂದ ಯಾವ ಕೋಮಿಗೂ ಕೂಡ ತಮ್ಮ ಕೋಮಿನವರ ಬೆಂಬಲದಿಂದಲೇ ಶಾಸನಸಭೆಯಲ್ಲಿ ಬಹುಮತ ಸಿಕ್ಕಲಾರದು. ಆದುದರಿಂದ ಒಂದು ಕೋಮಿನವರಿಗೆ ತಮ್ಮ ಜಾತೀಯ ಹಿತಕ್ಕಾಗಿ ಬೇರೆಯವರ ಮೇಲೆ ದಬ್ಬಾಳಿಕೆ ನಡಿಸಲು ಸಾಧ್ಯವೂ ಇಲ್ಲ ಮತ್ತು ಹಾಗೆ ಮಾಡಿದ್ದೇ ಆದರೆ ಪ್ರತ್ಯೇಕ ಪಕ್ಷದ ಗುರಿಯಾದ ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳುವ ಪ್ರಶ್ನೆಯು ಸೋಲಿಸಲ್ಪಡುವುದರಲ್ಲಿ ಸಂಶಯವಿಲ್ಲ.

ಕೊಡಗಿನಲ್ಲಿ ಹಿಂದಿನ ವರ್ಷಗಳ ಶಾಂತಿಮಯ ವಾತಾವರಣವನ್ನು ಅವಲೋಕಿಸಿ ನೋಡಿದರೆ ಈ ಪ್ರಾಂತ್ಯವು ಹಿಂದೂ ದೇಶದ ಇತರ ಪ್ರಾಂತ್ಯಗಳಲ್ಲಿ ಎದ್ದು ಕಾಣುತ್ತದೆ. ಹಲವು ವರ್ಷಗಳಿಂದ ಇಲ್ಲಿ ಹಿಂದೂಮತದ ಹಲವು ಕೋಮುಗಳೊಳಗೆ ಮಾತ್ರವಲ್ಲ, ಹಿಂದೂ—ಮುಸ್ಲಿಂ—ಕ್ರೈಸ್ತ ಮತಸ್ಥರೊಳಗೂ ಕೂಡ ಕಲಹ ಜಗಳಗಳಿಲ್ಲದೆ ಸಹೋದರ ಭಾವದಿಂದ ಜೀವಿಸುತ್ತಾ ಬಂದಿರುವರು. ಹಲವರು ಹೊರ ಪ್ರಾಂತ್ಯಗಳಿಂದ ಇಲ್ಲಿ ಬಂದು ನೆಲಸಿದ್ದರೂ ಇಲ್ಲಿಗೆ ಬಂದು ಸ್ವಲ್ಪ ಸಮಯದಲ್ಲೇ ಕೊಡಗು ತಮ್ಮ ದೇಶವೆನ್ನುವಷ್ಟು ಪ್ರೀತಿಯೂ, ಭಕ್ತಿಯೂ ಅವರಲ್ಲಿ ಉಂಟಾಗಿದೆ. ಕೊಡಗಿನಲ್ಲಿ ಕೋಮುವಾರು ವಿಷವು ಇಷ್ಟರವರೆಗೆ ಇದ್ದಿಲ್ಲವೆಂಬುದಕ್ಕೆ ಇದೇ ಸಾಕ್ಷಿ. ಇಂಥಾ ವಿಷವನ್ನು ಸುಡಬೇಕೆಂದು ನೆಹರೂರವರು ಕೂಗಿಕೊಳ್ಳುತ್ತಿರುವಾಗ್ಗೆ ಅವರ ಹೆಸರಿನಲ್ಲಿ ಓಟು ಕೇಳುತ್ತಿರುವವರು ಇಂದು ಇದರ ಬೀಜವನ್ನು ಇಲ್ಲಿ ಬಿತ್ತುತ್ತಿರುವುದು ದೇಶದ ದುರ್ದೆಶೆಯಾಗಿದೆ. ಆದರೆ ಕೊಡಗಿನ ಓಟರುಗಳು ಇದನ್ನು ತಿಳಕೊಳ್ಳಲಾರದಷ್ಟು ದಡ್ಡರಲ್ಲ. ಅವರೆಲ್ಲರೂ ವಿದ್ಯಾವಂತರಲ್ಲದಿದ್ದರೂ ಜ್ಞಾನಹೀನರಲ್ಲ. ಆದುದರಿಂದ ದೇಶೀಯರ ಸರ್ದಾರ್ ಪಟೇಲರವರು ಪ್ರಶಂಸಿಸಿದಂತೆ ಕೊಡಗಿನ ಶಾಂತಿಮಯ ರಾಮರಾಜ್ಯದ ಕೀರ್ತಿಯನ್ನು ಉಳಿಸಿಕೊಳ್ಳಲು ಬದ್ಧಕಂಕಣರಾಗಿ, ಆ ರೀತಿಯ ಕೋಮುವಾರು ವಿಷಪ್ರಯೋಗಕ್ಕೆ ಬಲಿಬೀಳದೆ, ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳಲು ಪಣತೊಟ್ಟಿರುವ ಪ್ರತ್ಯೇಕ ಪಕ್ಷದವರಿಗೆ ಬೆಂಬಲ ಕೊಡುವರಾಗಿ ಆಶಿಸುತ್ತೇವೆ.

ವರ್ತಮಾನ.

ವೈನಾಡು ಪೆರಂಗೋಡ ಟೀ ತೋಟದಲ್ಲು ಕಂಪೌಂಡರಾಗಿದ್ದ ಕುಂಬುಗೌಡರ ಮುದ್ದಪ್ಪನವರು ತಾ. ೧೯-೧೨-೪೫ರಲ್ಲು ಶಿವಾಧೀನರಾದರು.

ಜವಾನ (ಪ್ಯೂನ್) ಕೆಲಸಕ್ಕೆ ಜನರೂ ಬೇಕಾಗಿದ್ದಾರೆ. ಎಂಟನೇ ತರಗತಿ ಪಾಸಾದ ಸರ್ಟಿಫಿಕೇಟುಳ್ಳವರು ಮಡಿಕೇರಿಯ ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಆಫೀಸಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಸಿಕೊಳ್ಳತಕ್ಕದ್ದು.

ಕೊಡ್ಲಿಪೇಟೆ ನೋಟಿಫೈಡ್ ಏರ್ಯದ ಆಶ್ರಯದಲ್ಲಿ ಗೌಂಡಳ್ಳಿ ಬಾಣೆಯಲ್ಲಿ ೧೯೪೬ ನೇ ಇಸವಿ ಜನವರಿ ತಾರೀಕು ೩೦ ನೇ ಬುಧವಾರದಿಂದ ಫೆಬ್ರವರಿ ತಾರೀಕು ೬ ನೇ ಬುಧವಾರದ ವರೆಗೆ ಜಾನುವಾರುಗಳ ಜಾತ್ರೆಯು ನಡೆಸಲ್ಪಡುತ್ತದೆ. ಜಾತ್ರೆಯಲ್ಲಿ ದನಗಳಿಗೆ ಹುಲ್ಲು ನೀರಿನ ಸೌಕರ್ಯವಿರುತ್ತೆ. ಪ್ರಯಾಣಿಕರಿಗೆ ಬಸ್ಸಿನ ಅನುಕೂಲತೆ ಇದೆ ಎಂದು ತಿಳಿಯಬರುತ್ತದೆ.

ಈ ತಾ. ೧೮ ನೇ ಶುಕ್ರವಾರ ಉತ್ತರ ಕೊಡಗಿನಲ್ಲೂ, ತಾ. ೨೨ ನೇ ಮಂಗಳವಾರ ದಕ್ಷಿಣ ಕೊಡಗಿನಲ್ಲೂ ಚುನಾವಣೆಗಳು ನಡೆಯುವುದರಿಂದ ಇವೆರಡು ದಿನಗಳನ್ನು ಸಾರ್ವಜನಿಕ ರಜೆ ದಿನಗಳೆಂದು ಚೀಫ್ ಕಮಿಷನರು ಪ್ರಕಟಿಸಿರುವರು.

ಚುನಾವಣಾ ದಿನಗಳಲ್ಲಿ ಯಜಮಾನರುಗಳ ಸ್ವತ್ತು ಸಂಸ್ಥೆಗಳು ಅವರಲ್ಲಿ ಕೆಲಸ ಮಾಡುವವರಿಗೆ ಓಟು ಕೊಡಲು ಅನುಕೂಲ ಮಾಡಿಕೊಡಬೇಕೆಂದೂ, ಅದಕ್ಕಾಗಿ ಅವರಿಗೆ ಸಂಬಳ ಕೊಡದೆ ನಷ್ಟಪಡಿಸಬಾರದೆಂದೂ, ಬೇರೆ ದಿನ ಕೆಲಸ ಮಾಡುವ ಶರತ್ತಿನಿಂದ ಆ ದಿನ ರಜೆ ಕೊಡಲು ಅಡ್ಡಿ ಮಾಡಬಾರದೆಂದೂ ಇಂಡಿಯಾ ಸರಕಾರವು ಪ್ರಕಟಿಸಿರುವರು.

ಮಡಿಕೇರಿ ಚೀಫ್ ಕಮಿಷನರ ಆಫೀಸಿನ ಶ್ರೀ. ಎನ್. ಎಸ್. ರಾಮದಾಸರನ್ನು ಪೊನ್ನಂಪೇಟೆ ಪಾರುಪತ್ಯಗಾರರಾಗಿಯೂ, ಶ್ರೀ. ಮಾತಂಡ ನಾಣಯ್ಯನವರನ್ನು ಮಡಿಕೇರಿಗೂ ವರ್ಗಾಯಿಸಿರುವರು.

ಮದ್ರಾಸು ಮಂತ್ರಿಗಳ ಸೋಲು.

ಮದ್ರಾಸು ಸರ್ಕಾರದ ಫೈನಾನ್ಸ್ ಮಂತ್ರಿಯಾಗಿದ್ದ ಶ್ರೀ. ಗೋಪಾಲರೆಡ್ಡಿಯವರೂ, ಕಾಂಗ್ರೆಸಿನ ಕಳೆದ ಜನರಲ್ ಸೆಕ್ರೆಟರಿಯವರೂ, ಮದ್ರಾಸಿನ ಪಬ್ಲಿಕ್ ಹೆಲ್ತ್ ಮಂತ್ರಿಯವರೂ ಆದ ಶ್ರೀ ಕಳಾ ವೆಂಕಟರಾಯರೂ ಮದ್ರಾಸ್ ಎಸೆಂಬ್ಲಿಯ ಚುನಾವಣೆಯಲ್ಲಿ ಅಪಜಯವನ್ನು ಹೊಂದಿದರು.

ಪ್ರತ್ಯೇಕ ಪಕ್ಷಕ್ಕೆ ಓಟು ಕೊಟ್ಟು ದೇಶವನ್ನು ಉಳಿಸಿರಿ.

ಕೋಳಿ ಮತ್ತು ತಕ್ಕಡಿ ಪೆಟ್ಟಿಗೆಗಳಿಗೆ ಮತವನ್ನು ಹಾಕಿರಿ

ಪ್ರತ್ಯೇಕ ಪಕ್ಷಕ್ಕೆ ಕೊಡುವ ಓಟು ಗಾಂಧೀವಾದಕ್ಕೆ ಕೊಟ್ಟಂತೆ.

Happy New-Year Greetings.

We are glad to announce that 12,000 shares of our Bank of the total value of Rs. 3 lacs recently floated have been over-subscribed. We are grateful to the public for the increased confidence they have reposed in us.. We assure that we will do our utmost to desrve this wellplaced confidence.

VIJAYA BANK Ltd.,

ESTD. 1931.

H. O. MANGALORE,

B. M. SHETTY, B. A., B. L. Secretary.

P. J. SHETTY, M. A., B. L. C. A. I. I. B., Superintendent.

B. MANJAYA HEGDE, Advocate.

(President, District Board S. K.)

Chairman of the Board of Directors.

M. S. ALVA,
AGENT
Mercara Office.

4-2

ಓಟಿನ ಮಹತ್ವ

ಲೇಖಕ:—ಶ್ರೀ ಪಿ. ಜಿ. ಐಯ್ಯಪ್ಪ, ಮಡಿಕೇರಿ.

೧೯೪೭ನೇ ಇಸವಿಯಲ್ಲಿ ಹಿಂದೂದೇಶದ ಉದ್ದಗಲಕ್ಕೂ ಸ್ವಾತಂತ್ರ್ಯದ ಗದ್ದಲವು ಹರಡಿದ್ದಾಗ ನಮ್ಮ ಮಾತೋಶ್ರೀಯವರಿಗೆ ಇದರ ಸಂಪೂರ್ಣ ಅರ್ಥವಾಗಲಿಲ್ಲ. ಅವರು ನನ್ನನ್ನು ಕುರಿತು ಹೀಗೆ ಪ್ರಶ್ನಿಸಿದರು. "ನೀವು ಈಗ ಸ್ವರಾಜ್ಯ ಸಿಕ್ಕಿತು. ನಮಗೆ ಸ್ವತಂತ್ರ ಬಂತು." ಎಂತ ಹೇಳುತ್ತೀರಲ್ಲ, ಹಾಗಾದರೆ ಇನ್ನು ಮುಂದಕ್ಕೆ ನಮಗೆ ಯಾರು ರಾಜ? ಗಾಂಧೀಜಿಯವರೋ ಎಂದು. ಆಗ್ಗೆ ನಾನು 'ರಾಜ' ಎಂದರೆ ಯಾರು, 'ಸ್ವರಾಜ್ಯ' ಎಂದರೆ ಏನು, 'ಪ್ರಜಾಪ್ರತಿನಿಧಿ ಸರಕಾರ' ಏನು ಎಂಬುದನ್ನು ಕೂಲಂಕಷವಾಗಿ ವಿವರಿಸಬೇಕಾಯಿತು. ನನ್ನ ತಾಯಿಯವರ ಹಾಗೆ 'ಓಟು' ಎಂದರೇನು ಮಂತ್ರಿಗಳೆಂದರೆ ಯಾರು, 'ಚುನಾವಣೆ' ಎಂದರೇನು ಇವರಲ್ಲಿ ಪ್ರತಿಯೊಬ್ಬನ ಜವಾಬುದಾರಿ ಏನಿದೆ ಎಂಬುದನ್ನು ಸರಿಯಾಗಿ ತಿಳಿಯದಿರುವವರು ನಮ್ಮ ದೇಶದಲ್ಲಿ ಎಷ್ಟೋ ಮಂದಿ ಇದ್ದಾರೆ. ಶೇಕಡ ಐವತ್ತಕ್ಕಿಂತಲೂ ಹೆಚ್ಚೇ ಎಂದರೂ ಅತಿಶಯೋಕ್ತಿಯಾಗಲಾರದು. ಇವರಿಗೆ ರಾಮಾಯಣ ಮಹಾಭಾರತದ ಕಥೆಗಳೂ ನಮ್ಮ ಇತರ ಪುರಾಣಗಳೂ ಓದು ಬರಹ ಬಾರದಿದ್ದರೂ ಇಷ್ಟು ಚೆನ್ನಾಗಿ ಗೊತ್ತಿದೆಯಾದರೂ ರಾಜಕೀಯ ವಿಷಯದಲ್ಲಿ ಮಾತ್ರ ಇವರಿಗಿರುವ ಪರಿಜ್ಞಾನವೇನೆಂದರೆ ಯಾರು ಆಳಿದರೇನು, ನಮಗೆ ಮಾತ್ರ ರಾಗಿ ಬೀಸುವುದು ತಪ್ಪದು. ಎಂಬುದಿಷ್ಟೆ. ಇಷ್ಟು ಮುಗ್ಧತನವಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಪೂರ್ವದಿಂದಲೂ ನಮ್ಮ ದೇಶದಲ್ಲಿದ್ದದ್ದು ನಿರಂಕುಶ ಪ್ರಭುತ್ವ. ರಾಜನ ಸೇವಕನವನು ಆಗಿದ್ದಾಗ್ಗೆ ಬದಲಾಗಿದ್ದರೂ ಆಳ್ವಿಕೆಯಲ್ಲಿ ಮಾತ್ರ ಯಾವ ತರದ ಬದಲಾವಣೆಗಳೂ ಆಗಲಿಲ್ಲ. ಮಹಾತ್ಮ ಗಾಂಧೀಜಿಯವರೂ, ಇತರ ಮುಂದಾಳುಗಳೂ ಸ್ವಾತಂತ್ರ್ಯಕ್ಕೆ ಹೋರಾಡುತ್ತಿದ್ದಾಗ ದೇಶಸ್ಥರೆಲ್ಲ ಅವರಿಗೆ ಬೆಂಬಲ ಕೊಟ್ಟಿದ್ದರೂ ಸಹ ಅವರಲ್ಲನೇಕರಿಗೆ ರಾಜಕೀಯ ಪರಿಜ್ಞಾನ ಹೆಚ್ಚಾಗಿತ್ತೆಂದು ಹೇಳಲು ಸಾಧ್ಯವಿಲ್ಲ. ಎಲ್ಲರೂ ಹೇಳುತ್ತಾರೆ ಮಹಾತ್ಮಾ ಗಾಂಧೀಜಿಯವರಂಥ ಪೂಜ್ಯ ಮನುಷ್ಯರೂ, ಅದರಲ್ಲೂ ೨೧ ದಿವಸ ಉಪವಾಸ ಮಾಡಿದವರು ಮತ್ತು ಏನೊಂದು ಸ್ವಾರ್ಥ ಲಾಭದಾಸೆ ಇಲ್ಲದವರ ಇವರು ಹೇಳುವುದರಿಂದ ನಾವೂ ಅವರ ಹಿಂಬಾಲಕರಾಗಿ ಹೋಗಬೇಕೆಂದು ಹಿಂಬಾಲಿಸಿದರೇ ವಿನಹ ಇವರಲ್ಲಿ ಅನೇಕರಿಗೆ ಇವರ ಆಗುಹೋಗುಗಳ ಯಾ ಇತರ ಫಲಿತಾಂಶಗಳ ನಿಜವಾದ ಜ್ಞಾನವಿರಲಿಲ್ಲ. ಆದುದರಿಂದಲೇ 'ಕುಂಪಣಿ ಸರಕಾರ (ಇವರ ತಿಳುವಳಿಕೆಯಲ್ಲಿ ಈಗಿನ ಬ್ರಿಟಿಷ್ ರಾಜ್ಯಭಾರವೂ ಕುಂಪಣಿ ಸರಕಾರವೇ) ಹೋಯಿತು.' ಎಂದ ಕೂಡಲೇ 'ಇನ್ನು ನಮಗೆ ಯಾರು ರಾಜ? ಮಹಾತ್ಮಾ ಗಾಂಧಿಯವರೋ' ಎಂದು ಕೇಳಲು ಕಾರಣವಾಯಿತು. ಇವರ ದೃಷ್ಟಿಯಲ್ಲಿ 'ಸರಕಾರ'ವೆಂದರೆ 'ರಾಜ' ಎಂದರ್ಥ.

ಈ ತರದ ರಾಜರು ಮಾತ್ರ ದೇಶವನ್ನು ಆಳುವದಕ್ಕೆ ಹಕ್ಕುದಾರರಲ್ಲವೆ ಬೇರೆಯವರಿಗೆ ಆ ಹಕ್ಕು ಇರುವದಿಲ್ಲ' ಎಂಬ ಅಭಿಪ್ರಾಯದ ವ್ಯಕ್ತಿಗಳು ನಮ್ಮ ದೇಶದಲ್ಲಿ ಹೆಚ್ಚಿರಲಿಕ್ಕಿಲ್ಲವೆಂದಾದರೂ ಇನ್ನು ಮುಂದಕ್ಕೆ ಜನರ ಪ್ರತಿನಿಧಿಗಳಿಂದ ಆಳಲ್ಪಡುವ ರಾಜ್ಯಭಾರಕ್ಕೂ ಈಗ ಶಿಫಾರಸ್ಸು ಕೌನ್ಸಿಲಿನಿಂದ ಚೀಫ್ ಕಮೀಷನರವರ ಮುಖೇನ ಆಳಲ್ಪಡುತ್ತಿರುವ ರಾಜ್ಯಭಾರಕ್ಕೂ ಇರುವ ವ್ಯತ್ಯಾಸವನ್ನು ಸರಿಯಾಗಿ ತಿಳಿದವರು ನಮ್ಮ ಈ ದೇಶದಲ್ಲಿ ಹೆಚ್ಚು ಜನರಿದ್ದಾರೆಂದು ಖಂಡಿತವಾಗಿ ಧೈರ್ಯದಿಂದ ಹೇಳಲು ಸಾಧ್ಯವಿಲ್ಲ. ಯಾಕೆಂದರೆ ನನ್ನಲ್ಲಿಗೆ ಆಗಿಂದಾಗ್ಗೆ ಬರುವ ಅನೇಕ ಜನರನ್ನು ಕುರಿತು ನಾನು ದೇಶದಲ್ಲಿ ಚುನಾವಣೆಯ ವಿಚಾರ ಹೇಗೆ? ನಿಮ್ಮ ಓಟನ್ನು ಯಾರಿಗೆ ಕೊಡಲು ನಿರ್ಧರಿಸಿರುವಿರಿ ಎಂದು ಕೇಳುವುದುಂಟು. ಅದಕ್ಕೆ ಅವರು 'ಓ ಬಾಸ್ರ! ನಾನಿನ್ನೂ ಯೋಚಿಸಿಲ್ಲ. ಆ ಸಮಯದಲ್ಲಿ ಹೇಗೆ ಮನಸ್ಸು ಬರುತ್ತದೆ ಹಾಗೆ ಮಾಡುವುದು' ಎಂದು ಹೇಳಿರುವವರೇ ಹೆಚ್ಚು. ಇವರಲ್ಲಿ ಅನೇಕರು ವಿದ್ಯಾವಂತರು, ಕೆಲವರು ಸರಕಾರಿ ಉದ್ಯೋಗ ಮಾಡಿ ಪೆನ್ಶನ್ ಪಡೆದವರು.

ಈ ಚುನಾವಣೆ ಎಂದರೆ ನಮ್ಮ ಮೇಲೆ ಐದು ವರ್ಷಗಳ ವರೆಗೆ ಆಳುವವರನ್ನು ನಾವೇ ನೇಮಿಸುವಂತ ಚುನಾವಣೆ ನಮ್ಮ ಪ್ರತಿಯೊಬ್ಬರ ಒಂದೊಂದು ಓಟೂ ನಮ್ಮ ಈ ಬರುವ ಐದು ವರ್ಷದ ರಾಜ್ಯಭಾರವನ್ನು ನಿರ್ಣಯಿಸುವುದಲ್ಲದೆ, ನಮ್ಮ ದೇಶದ ಭವಿಷ್ಯವು ಈ ಐದು ವರ್ಷದ ಆಡಳಿತೆಯ ಮೇಲೆ ನಿಂತಿರುವುದರಿಂದ ಒಂದು ವಿಧದಲ್ಲಿ ನಮ್ಮ ದೇಶದ ಭವಿಷ್ಯವನ್ನೇ ನಿರ್ಣಯಿಸುವ ಚುನಾವಣೆ ಎಂದರೂ ಎನ್ನಬಹುದು. ಇಂತಹ ಮಹತ್ತರವಾದ ನಿರ್ಣಯವನ್ನು ಮಾಡುವ ಈ ಚುನಾವಣೆಯನ್ನು ನಮ್ಮ ಓಟರುಗಳು ಇಷ್ಟೊಂದು ಹಗುರವಾಗಿ ಪರಿಗಣಿಸುವುದನ್ನು ನೋಡಿದರೆ ಶ್ರೀ ಸ್ವಾಮಿ ವಿವೇಕಾನಂದಜಿಯವರು ಶ್ರೀ ರಾಮಕೃಷ್ಣ ಮಿಶನನ್ನು ಸ್ಥಾಪನೆ ಮಾಡುವಾಗ್ಗೆ ಹೇಳಿದ ಮಾತುಗಳು ಜ್ಞಾಪಕಕ್ಕೆ ಬರುತ್ತವೆ. ಈ ಮಿಶನನ್ನು ಯಾವ ಧಾಟಿಯಲ್ಲಿ ನಡೆಸಬೇಕೆಂದು ಸ್ವಾಮಿಜಿಯವರು ಕೇಳುವಾಗ್ಗೆ ಒಬ್ಬ ಸದಸ್ಯರು ಎದ್ದು ನಿಂತು 'ಅಮೆರಿಕದವರ ಹಾಗೆ ಡಿಮೊಕ್ರಾಟಿಕ್ ರೀತಿಯಲ್ಲಿ ಸ್ಥಾಪಿಸುವುದು ಒಳ್ಳೆಯದೆಂದು ಸೂಚಿಸಿದರಂತೆ. ಅದಕ್ಕೆ ಸ್ವಾಮಿಜಿಯವರು ಸಿಟ್ಟಿನಿಂದೆದ್ದು ಸಿಡಿದು 'ಏನು ಓದಲು ಅರಿಯಲು ಬರದ ನಿರಕ್ಷರ ಕುಕ್ಷಿಗಳಾದ, ನಮ್ಮ ಇಂಡಿಯಾದವರಿಗೆ ಡಿಮೋಕ್ರಸಿಯೇ? ತಿಳುವಳಿಕೆ ಇಲ್ಲದ ಅಜ್ಞಾನಿಗಳಿಗೆ ಓಟಿನ ಹಕ್ಕು ಕೊಟ್ಟರೆ ಅವರೇನು ಮಾಡಿಯಾರು? ಮೊದಲು ಅವರಿಗೆ ಅನ್ನ ಬಟ್ಟೆ ಕೊಡಿ. ಆ ಮೇಲೆ ವಿದ್ಯೆ ಕೊಡಿ, ಕಡೆಯಿಂದ 'ಓಟು' ಕೊಡುವ ಹಕ್ಕು ಕೊಡಿ' ಎಂದರಂತೆ.

ಸ್ವಾಮಿಜೀಯವರ ಈ ಮಾತುಗಳು ಎಷ್ಟು ಸತ್ಯವೆಂಬುದು ಈಗ ನಮ್ಮ ಅನುಭವಕ್ಕೆ ಬಂದಿದೆ. ಆದರೆ ನವನಾಗರೀಕತೆಯು ಈ ಕಾಲದಲ್ಲಿ ಎಲ್ಲಾ ಜನರಿಗೂ ಓಟಿನ ಹಕ್ಕು ಕೊಡಬಾರದೆಂದು ಹೇಳಿದರೆ ಅವರನ್ನು ಅಜ್ಞಾನಿಗಳೆಂದೂ, ಅನಾಗರಿಕರೆಂದೂ ಹೇಳಿಯಾರು. ಆದುದರಿಂದ ನಾವು ಹಿಂದಕ್ಕೆ ಹೋಗುವುದು ಬೇಡ. ಆದರೆ ಈಗ ನಮಗೆ ದೊರಕಿರುವ ಸುಧಾರಣೆಗಳನ್ನೂ ಓಟಿನ ಹಕ್ಕನ್ನೂ ಆಗುವಷ್ಟು ಸದುಪಯೋಗ ಮಾಡುವಂತೆ ಪ್ರಯತ್ನಿಸಬೇಕಾಗಿದೆ.

೧೮೮೫ರಿಂದ ಅಧಿಕಾರದಲ್ಲಿದ್ದ ಕಾಂಗ್ರೆಸು ಸಂಸ್ಥೆಯೂ, ಸರಕಾರವೂ, ಈ ನಾಲ್ಕು ವರ್ಷಗಳಲ್ಲಿ ಹರಿಜನರನ್ನು ದೇವಸ್ಥಾನಗಳಿಗೆ ಸೇರಿಸಲು ಮತ್ತು ವಯಸ್ಕರನ್ನು ದಸ್ಕತ್ತು ಹಾಕಿಸಲಿಕ್ಕೆ ಕಲಿಸಲು ಪ್ರಯತ್ನಪಟ್ಟ ಹಾಗೆ ಹಳ್ಳಿಯ ಜನರಿಗೆ 'ಪ್ರಜಾಪ್ರತಿನಿಧಿ ಸರಕಾರವೆಂದರೇನು. ಪ್ರಬುದ್ಧರಿಗೆಲ್ಲಾ ಓಟಿನ ಹಕ್ಕು ಎಂದರೇನು. ಇನ್ನು ಬರುವ ಸರಕಾರದಲ್ಲಿ 'ರಾಜರು' ಯಾರು. ಇವರನ್ನು ನೇಮಿಸುವವರಾರು. ಸರಕಾರದ ಹಣ ಕಾಸು ಯಾರದು ಮತ್ತು ಅದನ್ನು ಜನರ ಉಪಯೋಗಕ್ಕೆ ವಿನಿಯೋಗಿಸುವ ರೀತಿ ನೀತಿಗಳನ್ನು ತೀರ್ಮಾನಿಸುವ ಹಕ್ಕು 'ರಾಜರ'ದಲ್ಲ ಸರಕಾರಕ್ಕೆ ಇದನ್ನು ಕೊಡುತ್ತಿರುವ ಪ್ರತಿಯೊಬ್ಬನ ಹಕ್ಕು ಎಂಬಿವುಗಳನ್ನು ಕುರಿತು ನ್ಯಾಯವಾದ ಶಿಕ್ಷಣ ಮತ್ತು ತರಬೇತು ಕೊಟ್ಟಿದ್ದರೆ, ಅದರಿಂದ ದೇಶಕ್ಕೆ ಎಷ್ಟೋ ಪ್ರಯೋಜನವಾಗುತಿತ್ತು. ಅವರು ಹಾಗೆ ಮಾಡಲಿಲ್ಲ. ಆದುದರಿಂದ ಶ್ರೀಯುತ ನೆಹರೂರವರು ಸಹ ಕೆಲವು ದಿವಸಗಳ ಹಿಂದೆ ಒಂದೆಡೆ ಭಾಷಣ ಮಾಡುವಾಗ 'ಈಗಿನ ರೀತಿಯ ಚುನಾವಣೆಯಲ್ಲಿ ಎಲ್ಲಾ ಯೋಗ್ಯ ಮುಂದಾಳುಗಳೇ ಆರಿಸಬರುತ್ತಾರೆಂದು ಹೇಳಲು ಸಾಧ್ಯವಿಲ್ಲ' ಎಂದಿದ್ದಾರೆ. ಅಡಚಣೆಗಳು ಹೀಗಿರುವಾಗ್ಯೂ, ನಾವು ಓಟರುಗಳು ಎಚ್ಚತ್ತು ನಮ್ಮ ಹಕ್ಕನ್ನು ಸರಿಯಾಗಿ ಉಪಯೋಗಿಸದಿದ್ದರೆ, ನಾವು ದೇಶಕ್ಕೇ ಅಲ್ಲ, ನಮ್ಮ ಮುಂದಿನ ಜನಾಂಗಕ್ಕೂ ಮಹತ್ತರವಾದ ಅನ್ಯಾಯವನ್ನು ಮಾಡಿದಂತೆ ಆಗಬಹುದು.

ಈ ವರೆಗೆ ನಮ್ಮಲ್ಲಿದ್ದ ಕೌನ್ಸಿಲ್ ಎಂದರೆ, ಅದು ಬರೀ ಶಿಫಾರಸಿನ ಕೌನ್ಸಿಲ್ ಆಗಿತ್ತು. ಅದಕ್ಕೆ ಮೆಂಬರುಗಳನ್ನಾಗಿ ನಾವು ಕಳುಹಿಸುತಿದ್ದ ನಮ್ಮ ಮುಂದಾಳುಗಳಿಗೆ ಸರಕಾರದ ನಡಾವಳಿಕೆಯನ್ನು ಬದಲಾಯಿಸುವ ಅಧಿಕಾರವಿರಲಿಲ್ಲ. ಆದುದರಿಂದ ಈ ವರೆವಿಗೆ, ನಾವು ನಮ್ಮ ಓಟುಗಳನ್ನು ಯಾವ ರೀತಿಯಲ್ಲಿ ಉಪಯೋಗಿಸಿದ್ದರೂ, ಅದರಿಂದ ದೇಶಕ್ಕೆ ಅಷ್ಟೊಂದು ಅನ್ಯಾಯವಾಗಲು ಸಾಧ್ಯವಿರಲಿಲ್ಲ. ಈಗ ಬಂದಿರುವ ಕ್ರಮವಾದರೋ ಬೇರೆ. ಇಷ್ಟರ ವರೆಗೆ ಇದ್ದದ್ದು 'ರಾಜರ' ಆಳಿಕೆ. ಅದರಲ್ಲಿ ದೇಶಸ್ಥರಿಗೆ ಹೆಚ್ಚಿನ ಅಧಿಕಾರವಿರಲಿಲ್ಲ. ಇನ್ನು ಮುಂದಕ್ಕೆ ಬರುವುದು 'ಜನರ ಆಳಿಕೆ' ಇಷ್ಟರ ವರೆಗೆ ಇದ್ದದ್ದು 'ನಿರಂಕುಶ ಪ್ರಭುತ್ವ' ಯಾ 'ಬೇಜವಾಬುದಾರಿಯ ಸರಕಾರ' ಇನ್ನು ಬರುವುದು 'ಪ್ರಜಾಪ್ರಭುತ್ವದ ಸರಕಾರ' ಎಂದರೆ ಪ್ರಜೆಗಳು, ಪ್ರಜೆಗಳ ಕ್ಷೇಮಕ್ಕೆ, ಪ್ರಜೆಗಳಿಂದಲೇ ಆರಿಸಿ ಬಂದ ಮುಂದಾಳುಗಳ ಮುಖೇನ ಆಳಿಸಿಕೊಳ್ಳುವಂತ ಸರಕಾರ.

ನಮಗೆ ಈ ವರೆಗೆ ಇದ್ದ ಕೌನ್ಸಿಲಿನಲ್ಲಿ ಮೆಂಬರುಗಳು ಒಟ್ಟೊಂದಾಗಿ ಸರಕಾರದ ನಡಾವಳಿಕೆಗಳನ್ನು ಟೀಕಿಸಿ, ಜನರಿಗೆ ಬೇಕಾದ ವಿಷಯಗಳನ್ನು ಶಿಫಾರಸ್ಸು ಮಾಡುತ್ತಿದ್ದರು. ಆದರೆ ಚೀಫ್ ಕಮಿಷನರವರು ತಮಗೆ ಬೇಕಾದುದನ್ನು ನಡೆಸುತ್ತಿದ್ದರು. ಬೇಡದುದನ್ನು ಬಿಡುತ್ತಿದ್ದರು. ಆದರೆ ಈಗ ನಾವು ಚುನಾಯಿಸುವ ಮೆಂಬರುಗಳಾದರೋ ಅವರ ಮಂತ್ರಿ ಮಂಡಳಿಯನ್ನು ಸ್ಥಾಪಿಸಿ, ಅವರು ನಮ್ಮನ್ನು ೫ ವರ್ಷಗಳ ವರೆಗೆ ಆಳುವವರಾಗುತ್ತಾರೆ. ಹಾಗೆ ಮಂತ್ರಿಮಂಡಳಿಯನ್ನು ಸ್ಥಾಪಿಸುವ ಅಧಿಕಾರವು, ಈ ಬರುವ ಚುನಾವಣೆಯಲ್ಲಿ ಯಾವ ಪಂಗಡಕ್ಕೆ ಹೆಚ್ಚಿನ ಜನರು ಆರಿಸಿ ಬರುತ್ತಾರೆ, ಆ ಪಂಗಡಕ್ಕಿರುತ್ತದೆ. ಅದರ ಅರ್ಥವೇನೆಂದರೆ "ಎಸೆಂಬ್ಲಿಯಲ್ಲಿ ಹೆಚ್ಚು ಜನಸಂಖ್ಯೆಯ ಬೆಂಬಲವಿರುವ ಪಾರ್ಟಿಗೆ, ದೇಶದ ಓಟರುಗಳ ಪೈಕಿ ಹೆಚ್ಚಿನ ಜನರ ಒತ್ತಾಸೆ ಇದೆ' ಎಂಬುವುದು. ಆದುದರಿಂದ ನಾವು ಈಗ ಕೊಡುವ ಪ್ರತಿ ಒಂದು ಓಟಿಗೂ ನಮ್ಮನ್ನು ಮುಂದಕ್ಕೆ ಐದು ವರ್ಷಗಳ ವರೆಗೆ ಆಳುವಂತಹ ಸರಕಾರವನ್ನು ಸ್ಥಾಪಿಸುವ ಅಧಿಕಾರವಿದೆ. ಆದುದರಿಂದ ಅಂತಹ ಶಕ್ತಿಯಿರುವ 'ಓಟನ್ನು' ಇಷ್ಟೊಂದು ಹಗುರವಾದ ರೀತಿಯಲ್ಲಿ ಭಾವಿಸುವುದಾಗಲೀ ಯಾ ಚಲಾಯಿಸುವುದಾಗಲೀ ಮಹಾ ತಪ್ಪು.

ಈಗ ನಮ್ಮ ಮುಂದೆ ನಿಂತು ನಮ್ಮ ಓಟುಗಳನ್ನು ಕೇಳುವವರನ್ನು ಮೂರು ಭಾಗವಾಗಿ ವಿಂಗಡಿಸಬಹುದು.

(೧) ಕೊಡಗು ಪ್ರತ್ಯೇಕ ಪಾರ್ಟಿಯವರು, ಇವರ ಚಿನ್ಹೆ ತಕ್ಕಡಿ, ಹುಂಜ ಮತ್ತು ದೋಣಿ

(೨) ಕೊಡಗು ಸಂಯೋಜನಾ ಪಾರ್ಟಿಯವರ, ಇವರು ಈಗ ಕೊಡಗು ಕಾಂಗ್ರೆಸ್ ಪಾರ್ಟಿ ಎಂದು ಓಟು ಕೇಳುವವರಾಗಿದ್ದಾರೆ ಇವರ ಚಿನ್ಹೆ ನೊಗ ಕಟ್ಟಿದ ಎತ್ತು

(೩) ಬೇರೆ ಸ್ವತಂತ್ರವಾಗಿ ನಿಂತವರು. ಇವರಿಗೆ ಒಬ್ಬೊಬ್ಬರಿಗೆ ಒಂದೊಂದು ಚಿನ್ಹೆಗಳಿವೆ.

"ಪ್ರಜಾಪ್ರತಿನಿಧಿ ಸರಕಾರದಲ್ಲಿ, ಎಸೆಂಬ್ಲಿ ಯಾ ಪಾರ್ಲಿಮೆಂಟಿನಲ್ಲಿ ಹೆಚ್ಚಿನ ಬೆಂಬಲವಿರುವ ಪಾರ್ಟಿಯವರು ಮಾತ್ರ ಮಂತ್ರಿಮಂಡಲವನ್ನು ರಚಿಸಿ, ದೇಶವನ್ನು ಆಳುವುದು" ಎಂದ ಮೇಲೆ ಈ ಸ್ವತಂತ್ರವಾಗಿ ನಿಂತವರಿಗೆ ಇವರೆಲ್ಲಾ ಜಯಶೀಲರಾಗಿ ಬಂದರೂ ಸಹ ಅಂತಹ ಮಂತ್ರಿ ಮಂಡಳವನ್ನು ಸ್ಥಾಪಿಸುವ ಸಾಧ್ಯತೆ ಇರುವುದಿಲ್ಲ. ಇವರೊಳಗೆ ಒಬ್ಬ ನಾಯಕನಿಲ್ಲ. ಮತ್ತು ಇವರಲ್ಲಿ ಒಂದು ಐಕಮತ್ಯದ ಧ್ಯೇಯವಾಗಲೀ ಯಾ ಗುರಿಯಾಗಲೀ ಇರುವದಲ್ಲ. ಇವರಲ್ಲಿ ಯಾರಾದರೂ ಜೈಸಿ ಬಂದರೆ, ಅವರು ಬೇರೆ ಇರುವ ಎರಡು ಪಾರ್ಟಿಗಳ ಪೈಕಿ ಒಂದಲ್ಲ ಒಂದಕ್ಕೆ ಸೇರಿಕೊಳ್ಳಬೇಕಾಗುತ್ತದೆ. ಅಂದ ಮೇಲೆ ಇವರ ಗುರಿ 'ಎಡೆಗೊಡ್ಡಿಗಳ' ಹಾಗೆ ಗೆದ್ದ ಕಡೆ ಸೇರುವುದೆಂದಾಯಿತು. ಹಾಗಿರುವಾಗ ಓಟರುಗಳಾದ ನಮಗೆ ನಮ್ಮ ಮುಂದಿನ ರಾಜ್ಯಭಾರ ಕ್ರಮವು ಇದೇ ರೀತಿಯಿಂದಿರಬೇಕೆಂಬ ಒಂದು ನಿರ್ಧಾರವಿರುವದಾದರೆ, ಆ ರೀತಿಯ ಗುರಿಯ ಯೋಜನೆಯೇ ಇಲ್ಲದ ಒಂದು ರೀತಿಯ ರಂಗುರಹಿತವಾದ ಈ ರಾಜಕೀಯ ಪಟುಗಳಿಗೆ ಓಟು ಕೊಡುವುದೆಂದರೆ ಅದು ಒಂದು ರೀತಿಯಲ್ಲಿ ನೀರಿಗೆ ಮಾಡಿದ ಹೋಮವೆಂದೇ ತಿಳಿಯಬೇಕಾಗಿದೆ. ಇಂತಹ ಸ್ವತಂತ್ರಿಗಳಾಗಿ ನಿಂತಿರುವ ವ್ಯಕ್ತಿಗಳು ಎಷ್ಟೇ ವಿದ್ಯಾವಂತರಾಗಲಿ [illegible] ಮಹಾನುಭಾವರೇ ಇರಲಿ, ಪಾರ್ಟಿ [illegible]

ಮೇಲೆ ನಡೆಯಬೇಕಾದ ಪ್ರಜಾಪ್ರತಿನಿಧಿ ಸರಕಾರದಲ್ಲಿ ಅವರಿಗೆ ಯಾವ ಸ್ಥಳವೂ ಇಲ್ಲ. ಹೇಗೆ ಒಂದು ಮರವು ಎಷ್ಟೇ ದೊಡ್ಡದಾದರೂ ಒಂದು ಕಾಡಾಗಲಾರದೋ ಹಾಗೆಯೇ ಒಬ್ಬ ವ್ಯಕ್ತಿಯು ಎಷ್ಟು ದೊಡ್ಡ ಮಹನೀಯನಾದರೂ ಒಂದು ಸರಕಾರವನ್ನು ಸ್ಥಾಪಿಸಲಾರ.

ಈ 'ಸ್ವತಂತ್ರ'ಗಳನ್ನು ಕಳೆದ ಬಳಿಕ ಇರುವುದು ಇನ್ನೆರಡು ಪಾರ್ಟಿ. ಈ ಎರಡು ಪಾರ್ಟಿಯವರೂ ಕಾಂಗ್ರೆಸ್ ಪಾರ್ಟಿಯವರೇ. ಇಕ್ಕಡೆಯವರೂ ಶ್ರೀಯುತ ಪಂಡಿತ ನೆಹರೂರವರ ಅನುಯಾಯಿಗಳು. ಅಖಿಲ ಕಾಂಗ್ರೆಸ್ ಪಾರ್ಟಿಯವರ ಧೋರಣೆಗಳ ಪೈಕಿ ಭಾಷಾವಾರು ಪ್ರಾಂತ್ಯ ರಚನೆಯ ತತ್ವವೊಂದರಲ್ಲಿಲ್ಲದೆ ಬಾಕಿ ಎಲ್ಲದರಲ್ಲೂ ಇವೆರಡು ಪಾರ್ಟಿಯವರಿಗೂ ಐಕ್ಯಮತ್ಯವಿದೆ. ಕೊಡಗು ದೇಶದ ಭವಿಷ್ಯದ ನಿರ್ಣಯದಲ್ಲಿ ಮಾತ್ರ ಈ ಎರಡು ಪಾರ್ಟಿಗಳು ಒಬ್ಬೊಬ್ಬರು ಒಂದೊಂದು ಕಡೆ ಇದ್ದಾರೆ. ಕೊಡಗಿನ ಪ್ರತ್ಯೇಕ ಪಾರ್ಟಿಯವರು ಎಂದರೆ ಈಗ ಚುನಾವಣೆಯಲ್ಲಿ ತಕ್ಕಡಿ, ಕುಂಜ ಮತ್ತು ದೋಣಿ (ಹುಂಜನ ಮತ್ತು ದೋಣಿಯ ಚಿನ್ಹೆ ಈ ಪಾರ್ಟಿಯವರ ಹಿಂದುಳಿದ ಪಕ್ಷದವರದು) ಚಿನ್ಹೆ ಇರುವವರು. ಆದಿಯಿಂದಲೇ ಈ ಗುಂಪಿನ ಮಂತ್ರವು 'ಕೊಡಗನ್ನು ಪ್ರತ್ಯೇಕವಾಗಿಟ್ಟುಕೊಂಡು ಇಲ್ಲಿಯ ರಾಜ್ಯಭಾರವನ್ನು ಕೊಡಗಿನ ಎಲ್ಲಾ ನಿವಾಸಿಗಳ ಮುಂದುವರಿಕೆಗೆ ಸಹಾಯವಾಗುವ ರೀತಿಯಲ್ಲಿ ನಡೆಸಿ, ಈ ಸಣ್ಣ ಪ್ರಾಂತ್ಯದಲ್ಲಿ ರಾಮರಾಜ್ಯ ಸ್ಥಾಪನೆ ಮಾಡಬೇಕೆಂದು' ಹೊರಟವರು. ಈ ತತ್ವವನ್ನು ಗುರಿ ಮುಟ್ಟಿಸುವದರ ಸಲುವಾಗಿ ಇವರು ಈ ವರೆಗೆ ನಿರ್ವಹಿಸದೆ ಬಿಟ್ಟ ಒಂದು ಕೆಲಸವೂ ಬಾಕಿ ಇಲ್ಲ. ಇದಕ್ಕೋಸ್ಕರವಾಗಿಯೇ ಇವರು ಕಾಂಗ್ರೆಸ್ಸಿಗೂ ತತ್ಕಾಲಕ್ಕೆ ರಾಜಿನಾಮೆ ಕೊಟ್ಟಿದ್ದಾಗಿದೆ. ಇವರು ಆದಿಯಿಂದಲೂ 'ಕೊಡಗು' ಪ್ರತ್ಯೇಕವಿರಲು ಸಾಧ್ಯವಿದೆ, ಇಲ್ಲಿಯ ಸರಕಾರ ಮತ್ತು ನಿವಾಸಿಗಳ ಉತ್ಪತ್ತಿಯನ್ನು ನಾಲ್ಕರಷ್ಟು ಹೆಚ್ಚಿಸಲು ಸಾಧನವಿದೆ. ಆದುದರಿಂದ ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿಟ್ಟುಕೊಂಡು ಇಲ್ಲಿಯ ಜನರ ಉದ್ಧಾರಕ್ಕೆ ಸಹಾಯಕವಾಗುವ ಸರಕಾರವನ್ನು ಜನರು ಸ್ಥಾಪಿಸಲು ಅನುಕೂಲವನ್ನು ಕಲ್ಪಿಸಿ ಕೊಡಬೇಕೆಂದು ಇಲ್ಲಿಂದ ಡೆಲ್ಲಿಯವರೆಗೆ ಹೋಗಿ, ಇವರ ಕೋರಿಕೆಯನ್ನು ಇಂಡಿಯಾ ಸರಕಾರದವರು ನಡೆಸಿಕೊಟ್ಟಾಗ ಇವರು ಸಂತೋಷಪಟ್ಟುದಲ್ಲದೆ ಇಂಡಿಯಾ ಸರಕಾರವನ್ನು ಹೃತ್ಪೂರ್ವಕವಾಗಿ ದೇಶದ ಉಪ್ಪಗಳಲ್ಲಿ ಮೀಟಿಂಗು ಮಾಡಿಸಿ ವಂದಿಸಿರುತ್ತಾರೆ. ಇವರ ನಿಡಾವಳಿಯು ಆದಿಯಿಂದ ಈ ವರೆಗೆ ಒಂದೇ ರೀತಿಯಲ್ಲಿದೆ.

ಆದರೆ ಇವರ ಎದುರು ಪಾರ್ಟಿಯಾದ ಕೊಡಗಿನ ಕಾಂಗ್ರೆಸ್ ಪಾರ್ಟಿ ಎಂದೆನ್ನಿಸಿಕೊಳ್ಳುವ, ನೊಗ ಹಾಕಿದ ಎತ್ತುಗಳ ಚಿನ್ಹೆ ಇರುವ ಇವರ ನಡವಳಿಯಾದರೂ, ಓಟಿಂದ ನಮ್ಮಲ್ಲಿ ಸಂಶಯ ಹುಟ್ಟಿಸುವಂತಾಗಿದೆ. ಇವರು ಈವರೆಗೆ 'ಕೊಡಗಿನ ಉತ್ಪತ್ತಿಯು ಸಾಲದ್ದರಿಂದ ಸ್ವಾತಂತ್ರ್ಯದ ಸರಕಾರ ನಡೆಸಲು ಸಾಧ್ಯವಿಲ್ಲ. ಇದರ ವಿಸ್ತೀರ್ಣವು ಬಹು ಸಣ್ಣದಿದ್ದು, ಮುಂದಿನ ಆರ್ಥಿಕ ಬೆಳವಣಿಗೆಗೂ ಸಾಧ್ಯತೆ ಇಲ್ಲದಿರುವುದರಿಂದ ಇದನ್ನು ಬೇರೆ ಪ್ರಾಂತ್ಯದೊಡನೆ ಸೇರಿಸಿಯೇ ಬಿಡಬೇಕೆಂದು" ಇಲ್ಲಿಂದ ಹಿಡಿದು ಡೆಲ್ಲಿಯ ವರೆಗೆ ಮೊರೆಯಿಡಿದವರು. ಆದರೂ ಇಂಡಿಯಾ ಸರಕಾರದವರು ಇವರ ಕೋರಿಕೆಯನ್ನು ನಿರಾಕರಿಸಿ, ಇಲ್ಲಿಗೆ ಸ್ವಾತಂತ್ರ್ಯ ಸರಕಾರ ಕೊಟ್ಟಾಗ, ಇವರು ಸಿಟ್ಟಿನಿಂದ ಸಿಡಿದೆದ್ದುದಲ್ಲದೆ ಅಂತಹ ಸರಕಾರವನ್ನು ವಂದಿಸುವುದೂ ಸಹ ತಪ್ಪೆಂದು ಇವರ ಮನಸ್ಸಿನ ನಿಜವಾದ ಇಂಗಿತವನ್ನು ಕಳೆದ ಸೆಪ್ಟಂಬರಿನಲ್ಲಿ ಬಹಿರಂಗವಾಗಿ, ಗೋಣಿಕೊಪ್ಪಲಿನಲ್ಲಿ ನಡೆದ ಸಂಯೋಜನಾವಾದಿಗಳ ಸಾರ್ವಜನಿಕ ಸಭೆಯಲ್ಲಿ ಘೋಷಿಸಿದ್ದಾರೆ. ಅಷ್ಟೇ ಅಲ್ಲ. ಸದ್ರಿ ಮೀಟಿಂಗಿನಲ್ಲಿ ಇವರ ನಿಜವಾದ ಗುರಿಯನ್ನು ಸದಂಬಿಯನ್ನು ವಿಧದೆ ಪಡಿಸಿ, ಅದನ್ನು ಹೊಂದಿಸಿದರೆ ಇವರಿಗೆ ಮುಂಬರುವ ಚುನಾವಣೆಯಲ್ಲಿ ತೊಂದರೆಯಾಗಬಹುದೆಂದ ಕಾರಣ, ಅದನ್ನು ಬಚ್ಚಿಡಬೇಕೆಂದೂ, ಹೇಳಿರುತ್ತಾರೆ. ಆದುದರಿಂದ, ಇವರು ದೇಶಸ್ಥರ ಓಟನ್ನು ಸಂಪಾದಿಸುವ ಒಂದೇ ಒಂದು ದೃಷ್ಟಿಯಿಂದ ತಮ್ಮ ನಿಜವಾದ ಮೋರೆ ತೆರೆಯನ್ನು ಬಚ್ಚಿಟ್ಟಿರುವ ಇವರಿಗೆ ಸಮ್ಮತಿಂಬಲ ಕೊಡುವುದು ದೇಶದ ಹಿತದೃಷ್ಟಿಯಿಂದ ಸರಿಯೋ ಎಂಬುದನ್ನು ನಾವು ಬಹಳವಾಗಿ ಯೋಚಿಸಬೇಕಾಗಿದೆ. ಇವರ ನಿಜವಾದ ಅಭಿಪ್ರಾಯವೆಂದರೆ 'ಪಂಡ್ಯಂಡ ಬೆಳ್ಯಪ್ಪನವರೂ, ಅವರ ಅನುಯಾಯಿಗಳೂ, ಕೊಡಗನ್ನು ಸೂರ್ಯ ಚಂದ್ರರು ಇರುವ ವರೆಗೆ ಪ್ರತ್ಯೇಕವಿಟ್ಟುಕೊಳ್ಳಬೇಕೆನ್ನುವವರು.' ಇವರಾದರೋ 'ಸಮಯವರಿತು ಕೊಡಗನ್ನು ಬೇರೆ ಪ್ರಾಂತ್ಯದೊಡನೆ ಸೇರಿಸಿ ಬಿಡಬೇಕೆನ್ನುವವರು' ಅಂತವರಿಗೂ, ಶ್ರೀ ಬೆಳ್ಯಪ್ಪನವರ ಪಾರ್ಟಿಯವರಿಗೂ ಎಂದೂ ರಾಜಿಯಾಗುವ ಸಂದರ್ಭವಿಲ್ಲವೆಂಬುವುದು. ಇವರ ಖಚಿತವಾದ ಅಭಿಪ್ರಾಯವೆಂದಾದ ಮೇಲೆ 'ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಬೇಕೆಂಬ ಅಭಿಪ್ರಾಯವಿರುವ ಪ್ರತಿಯೊಬ್ಬ ಓಟರನಿಗೂ, ಸಮಯವರಿತು ಕೊಡಗನ್ನು ಬೇರೆ ಪ್ರಾಂತ್ಯದೊಡನೆ ಸೇರಿಸಿಬಿಡಬೇಕೆಂಬ ಗುರಿ ಇರುವ ಈ ಮುಂದಾಳುಗಳಿಗೂ' ಮಾತ್ರ ರಾಜಿಯಾಗುವ ಸಂಭವ ಹೇಗೆ ಬಂದೀತು? ಆದುದರಿಂದ 'ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಬೇಕೆಂಬ ಅಭಿಪ್ರಾಯವಿರುವವರು ಯಾರು ಈ ತತ್ವಕ್ಕೆ ವಿರೋಧವಿರುವವರಿಗೆ ಓಟು ಕೊಡಬಾರದು' ಎಂಬುದಾಗಿ ಮತ್ತೆ ಹೇಳಬೇಕಾದ ಆವಶ್ಯಕತೆ ಇಲ್ಲ. ಇಂದು ಈ ಕಾಂಗ್ರೆಸ್ ಮುಂದಾಳುಗಳಿಗೂ ಪ ನವರಿಗೆ ಇದೆ. ಆದುದರಿಂದಲೇ ಅವರು ತಮ್ಮ ನಿಜವಾದ ಗುರಿಯನ್ನು ಮರೆ ಮಾಚಿ 'ನಾವು ಸಹ ಪ್ರತ್ಯೇಕವಾದಿಗಳು' ಎಂದು ಹೇಳುತ್ತಿದ್ದಾರೆ. ಆದರೆ ಇವರು ಪ್ರತ್ಯೇಕವಾದಿಗಳಲ್ಲ ಎಂಬುದಕ್ಕೆ ಸಾವಿರಾರು ನಿದರ್ಶನಗಳು ಈಗಾಗಲೇ ಹೊರಬಂದಿವೆ. ಅದರ ಜೊತೆಗೆ ಕಳೆದ 'ಕೊಡಗು' ಪತ್ರಿಕೆಯಲ್ಲಿ ಶ್ರೀ ಎಸ್ ಆರ್ ಗೋಪಾಲಕೃಷ್ಣನವರು ಹೊರಡಿಸಿರುವ ಹೇಳಿಕೆಯಿಂದಲೂ ಇವರ ತಾ. ೧೦-೮-೫೧ರ ರಲ್ಲು ಗೋಣಿಕೊಪ್ಪಲು ಮೀಟಿಂಗಿನ ಪ್ರೊಸೀಡಿಂಗ್ಸ್‌ನಿಂದಲೂ ಸಂಪೂರ್ಣ ವ್ಯಕ್ತವಾಗಿದೆ.

ಇವರ ಮೇಲೂ, ನಮ್ಮ ಮೇಲೆ ಅಧಿಕಾರ ಮಾಡಬೇಕಾದ ಮುಂದಾಳುಗಳನ್ನು ಹೆಕ್ಕಿ ತೆಗೆಯುವ ಕೆಲಸವು ನಮ್ಮದೋ, ಅಲ್ಲ ನಮ್ಮ ದೇಶದ ಸ್ಥಿತಿಗತಿ ತಿಳಿಯದ ಮತ್ತು ಹೇಗಾದರೂ ಮಾಡಿ ಈ ಪ್ರಾಂತ್ಯವನ್ನು ಕರ್ಣಾಟಕಕ್ಕೆ ಸೇರಿಸಿಬಿಡಬೇಕೆಂದು ಪ್ರಯತ್ನ ಮಾಡುವ ಕೆ. ಪಿ. ಸಿ. ಸಿ. ಪ್ರೆಸಿಡೆಂಟರದ್ದೋ? ಪಾರ್ಟಿ ಸಂಪ್ರದಾಯದ ದೃಷ್ಟಿಯಿಂದ ಇವರು ಇಂತಹ ಕೆಲಸಗಳಲ್ಲಿ ಭಾಗವಹಿಸಬಹುದಾದರೂ, ಇವರು ವಿದೇಶಿಯರಾದುದರಿಂದ, ಈ ದೇಶದ ಎಸೆಂಬ್ಲಿಗೆ, ಹುರಿಯಾಳುಗಳನ್ನು ಆರಿಸುವಾಗ್ಯ, ಅಲ್ಲಲ್ಲಿ ಮೀಟಿಂಗುಗಳನ್ನು ನಡೆಸಿ ದೇಶಸ್ಥರ, ಮುಖ್ಯ ಮುಂದಾಳುಗಳ ಅಭಿಪ್ರಾಯವನ್ನು ಕೇಳಿ ಅವರ ಶಿಫಾರಸಿನನುಸರಿಸಿ ಹುರಿಯಾಳುಗಳನ್ನು ಆರಿಸಬೇಕಾಗಿತ್ತು. ಇದರ ಬದಲು ಅವರು ತಮ್ಮ ಗುರಿಗೆ ಯಾರು ಒತ್ತಾಸೆ ಕೊಡುತ್ತಾರೋ ಅವರನ್ನು ಮಾತ್ರ ನಿಲ್ಲಿಸಿದ್ದು ನೋಡಿದರೆ ಓಟರಾದ ನಮಗೆ ಇವರು ಈ ಪ್ರಜಾಸ್ವಾತಂತ್ರ್ಯದ ದಿನಗಳಲ್ಲೂ ಸಹ ಎಂದೂ ಕಂಡು ಕೇಳದ ನಿರಂಕುಶ ಪ್ರಭುತ್ವವನ್ನು ಸಾಧಿಸಿದಂತೆ ಕಾಣುತ್ತದೆ. ಕೊಡಗಿನ ಸರಕಾರದ ಲಗಾಮನ್ನು ಹಿಡಿದು ಕೊಡಗಿನ ರಾಜ್ಯಭಾರ ನಡೆಸಬೇಕಾದ ಮುಂದಾಳುಗಳನ್ನು ಧಾರವಾಡದ ಯಾ ಬೆಂಗಳೂರಿನ ಒಬ್ಬ ವ್ಯಕ್ತಿಯು ಬಂದು, ದೇಶಸ್ಥರನ್ನೂ ಕೇಳದೆ ಒಂದು ರಾತ್ರಿಯಲ್ಲಿ ಅವರ ಮನಸೋ ಇಚ್ಛೆ ಆರಿಸುವುದೆಂದರೆ, ಅದು ನಮ್ಮ ಘನತೆಗೂ ವ್ಯಕ್ತಿತ್ವಕ್ಕೂ ಕುಂದೆಂದೇ ಭಾವಿಸಬೇಕಾಗಿದೆ. ನಮಗೆ ಬೇಕಾದ ಮುಂದಾಳುಗಳನ್ನು ನಾವು ನಾಮಕರಣ ಮಾಡಿ ಆರಿಸಬೇಕಲ್ಲದೆ ಬೇರೆಯವರು ನಿಲ್ಲಿಸಿದ ಜನರನ್ನು ನಾವು ಒಪ್ಪಬೇಕಾದ ಆವಶ್ಯಕತೆಯಿಲ್ಲ.

ಅದೂ ಅಲ್ಲದೆ, 'ಈ ಎರಡು ಪಾರ್ಟಿಗಳ ಪೈಕಿ, ಯಾವ ಪಾರ್ಟಿಯು ನಮ್ಮ ಹಿತವನ್ನು ಎಂದರೆ ದೇಶದ ಪ್ರತಿಯೊಬ್ಬ ಓಟಗನ ಹಿತದೃಷ್ಟಿಯನ್ನು ಮುಖ್ಯವಾಗಿ ಗಣಿಸಿ, ಮುಂದಿನ ರಾಜ್ಯಭಾರವನ್ನು ನಮ್ಮ ದೇಶವು ಉದ್ಧಾರವಾಗುವ ರೀತಿಯಲ್ಲಿ ರಾಜ್ಯಭಾರ ನಡೆಸಿಯಾರು' ಎಂಬುದನ್ನು ನಾವು ಕೂಲಂಕುಶವಾಗಿ ಪರಿಶೀಲಿಸುವ.

ಈಗಿನ ಕಾಂಗ್ರೆಸ್ ಪಾರ್ಟಿ ಎಂದೆನಿಸಿಕೊಂಡಿರುವವರು ಇಂಡಿಯಾ ಸರಕಾರವು ನಮ್ಮ ಈ ಪ್ರಾಂತ್ಯಕ್ಕೆ ಸುಧಾರಿತ ಸರಕಾರವನ್ನು ಕೊಡುವ ವರೆಗೆ ಹೇಳುತ್ತಿದ್ದು ನಮಗೆ ಸುಧಾರಣೆ ಬೇಡ. ಸಿಕ್ಕಿದರೆ ಅದನ್ನು ನಡೆಸುವ ತಜ್ಞರಾದ ಮುಂದಾಳು ನಮ್ಮಲ್ಲಿಲ್ಲ. ಮತ್ತು ನಮ್ಮ ಈ ಕಿಂಚಿತ ಉತ್ಪತ್ತಿಯಿಂದ ಸ್ವಾತಂತ್ರ್ಯ ಸರಕಾರವನ್ನು, ಇತರ ಏಳಿಗೆಯನ್ನು ಮುಂದುವರಿಸುವ ರೀತಿಯಲ್ಲಿ ನಡೆಸಲು ಸಾಧ್ಯವಿಲ್ಲವೆಂದು" ಅಂದರೆ 'ಪ್ರತ್ಯೇಕ ಕೊಡಗು ಸ್ವತಂತ್ರ್ಯ ರಾಜ್ಯಭಾರ ನಡೆಸಲು ಯೋಗ್ಯವಲ್ಲದ ಪ್ರದೇಶವೆಂಬುವುದೇ ಇವರ ಖಚಿತವಾದ ಭಾವನೆ' ಹಾಗಿದ್ದವರು ಈಗ ಅಂಥ ರಾಜ್ಯಭಾರವನ್ನು ನಾವು ಕೈಕೊಳ್ಳುತ್ತೇವೆ' ಎಂದರೆ, ಅವರ ಮೇಲೆ ಅಂತಹ ಎಂದರೆ ಈ ವರೆಗೆ ಅಸಾಧ್ಯವೆಂದು ಹೇಳುತ್ತಿದ್ದ ಜವಾಬುದಾರಿಕೆಯನ್ನು ನಾವು ಹೊರಿಸಬೇಕೋ ಅಲ್ಲ, 'ಅದು ಸಾಧ್ಯವಿದೆ, ನಾವು ಅಂತಹ ಜವಾಬುದಾರಿಕೆಯನ್ನು ಹೊರಲು ತಯಾರಿದ್ದೇವೆ' ಎಂದು ಆದಿಯಿಂದಲೇ ಹೇಳುತ್ತಿದ್ದದಲ್ಲದೆ, ಈ ಸ್ವಾತಂತ್ರ್ಯವನ್ನು ಗಳಿಸಲು ಇಲ್ಲಿಂದ ಡೆಲ್ಲಿವರೆಗೆ ಓಡಿಯಾಡಿ ದುಡಿದ ಪ್ರತ್ಯೇಕವಾದಿ ಮುಂದಾಳುಗಳಿಗೆ ವಹಿಸಬೇಕೋ ಎಂಬುದನ್ನು ಓಟರರೇ ತೀರ್ಮಾನಿಸಿ. ಉದಾಹರಣೆಯಾಗಿ ಹೇಳುವುದಾದರೆ ಒಂದು ತುಂಡು ಬಟ್ಟೆಯಿಂದ ಒಬ್ಬ ದರ್ಜಿಯು ಹೇಳುತ್ತಾನೆ ಒಂದು ಸೂಟು ಕತ್ತರಿಸಿ ಹೊಲಿಯಲು ಆಗುವುದಿಲ್ಲವೆಂದು. ಮತ್ತೊಬ್ಬನು ಹೇಳುತ್ತಾನೆ ನಾನು ಖಂಡಿತವಾಗಿಯೂ ಈ ಬಟ್ಟೆಯಿಂದ ಒಂದು ಸೂಟು ಹೊಲಿಯುತ್ತೇನೆಂದು. ಕಡೆಗೆ ಅದೇ ಬಟ್ಟೆಯಿಂದ ಸೂಟು ಹೊಲಿಯುವುದೇ ನಿಶ್ಚಯವಾದರೆ, ಸೂಟಿನ ಕೆಲಸವನ್ನು ಒಂದನೆಯ ದರ್ಜಿಗೆ ಕೊಡಬೇಕೋ ಯಾ ಎರಡನೆಯವರಿಗೆ ಕೊಡಬೇಕೋ? ಈ ಸಂದರ್ಭದ ಕಾಂಗ್ರೆಸ್ ಪಾರ್ಟಿಯವರು ಒಂದನೇ ದರ್ಜಿಯ ಹಾಗಿದ್ದಾರೆ. ಪ್ರತ್ಯೇಕ ಪಾರ್ಟಿಯವರು ಎರಡನೇ ದರ್ಜಿಯ ಹಾಗಿದ್ದಾರೆ.

ಇನ್ನೊಂದು ಉದಾಹರಣೆ ಬೇಕಾದರೆ ಒಬ್ಬ ತಂದೆಗೆ ಇಬ್ಬರು ಮಕ್ಕಳಿದ್ದರೆಂದು ಭಾವಿಸುವ. ತಂದೆ ಇಟ್ಟ ಸ್ವಲ್ಪ ಹಣವಿದೆ ಇವರಿಗೆ ಒಂದು ಮನೆ ಕಟ್ಟಬೇಕೆಂದು ಹಿರಿಯವನು ಮನೆ ಬೇಕೆಂಬ ಉಳಿವೆಲ್ಲ ಕಂಡು ಹಿಡಿದು, ಅವಶ್ಯವಿರುವ ಪ್ಲಾನನ್ನು ತಕ್ಕಷ್ಟು ಸಾಮಗ್ರಿಗಳನ್ನು ಸಂಪಾದಿಸುತ್ತಾನೆ. ಎರಡನೆಯವನು ನನಗೆ ಸ್ವಂತ ಮನೆ ಬೇಡ, ಈ ಹಣದಿಂದ ಬೇಕಾದ ಮನೆ ಕಟ್ಟಲು ಸಾಧ್ಯವಿಲ್ಲ. ಆದುದರಿಂದ ಬೇರೆ ಒಬ್ಬನಿಗೆ ನಮ್ಮ ಇರುವ ಹಣವನ್ನು ಕೊಟ್ಟು ಅವರ ಮನೆಯ ಒಂದು ಭಾಗದಲ್ಲಿ ನಾವು ಇದ್ದು ಬಿಡುವ ಎಂದು ಹೇಳುವುದಲ್ಲದೆ, ಅವರ ಮನೆಯ ಭಾಗವನ್ನು ಹಿಡಿಯಲು ಯಾವಾಗಲು ಹಾತೊರೆಯುತ್ತಿದ್ದಾನೆ. ಕಡೆಗೆ ಹೊಸ ಮನೆ ಕಟ್ಟುವುದೆ ಒಳ್ಳೆಯದೆಂದು ತಂದೆಯವರು ನಿಶ್ಚಯ ಮಾಡಿದ ಕೂಡಲೇ ಎರಡನೆಯವನು ನಾನೇ ಮನೆ ಕಟ್ಟುವ ಭಾರವನ್ನು ವಹಿಸಿಕೊಳ್ಳುತ್ತೇನೆಂದು ಮುಂದೆ ಬಂದರೆ ಅವನಿಗೆ ಈ ಜವಾಬುದಾರಿಕೆಯನ್ನು ವಹಿಸಬೇಕೋ ಅಲ್ಲ ಇದೇ ಆಧಾರದಲ್ಲಿದ್ದು ಮನೆ ಕಟ್ಟಲು ತಕ್ಕದಳ ಮತ್ತು ಪ್ಲಾನು ಮಾಡಿಟ್ಟ ಹಿರಿಮಗನಿಗೆ ಈ ಕಾರುಬಾರನ್ನು ವಹಿಸಬೇಕೋ? ಇದೇ ರೀತಿಯಲ್ಲಿಯೆ ಈಗ ನಮ್ಮನ್ನು ಓಟು ಕೇಳುತ್ತಿರುವ ಪ್ರತ್ಯೇಕ ಸಂಗಡಿಗರು ಮತ್ತು ಕಾಂಗ್ರೆಸ್ ಸಂಗಡದವರು. ಆದುದರಿಂದ ಈ ಚುನಾವಣೆಯಲ್ಲಿ ನಾವು ಪ್ರತ್ಯೇಕವಾದಿಗಳಿಗೆ ಓಟು ಕೊಟ್ಟು ಅವರನ್ನು ಜಯಶೀಲರಾಗಿ ಮಾಡಿದರೆ ನಮಗೆ ಯಾವ ಅನಾಹುತವೂ, ಅಪಾಯಕ್ಕೂ ಆಸ್ಪದವಿರಲಿಕ್ಕಿಲ್ಲವೆಂಬುದೇ ನನ್ನ ಅಭಿಪ್ರಾಯವಾಗಿದೆ

UNBAISED COMENT.

by

BIDANDA KARUBIA.

Pandit Nehru's letter to Mr. P. I. Belliapa, as published in the 'Janmabhumi' weekly, has created a stir and great interest in the minds of the people of Coorg. The Coorg 'Amalgamationists' seem to think that the statement made in that letter by the Prime-minister of India, is a victory in their favour-otherwise the contents of that letter would not have been given such wide publicity, in an organ which has wholely anti-separationist tendencies. But in truth it turned out to be a real triumph for Mr. P. I. Belliapa, in that he has achieved what he desired-a declaration in the form of a statement, from no less a person than the Prime-minister himself, as to whether any decision on the merger issue by the new Coorg Assembly would carry weight, when that question comes for consideration before the new Parliament at Delhi. An answer to this question appears in his letter, which I quote presently.

It is evident to all that only the parliament has the power to decide this question in accordance to the wishes of the people and about this no one need tell us. No thinking man in Coorg is in delusion about it. But the vital question arising out of it is, how best to ascertain the wishes of the people whether by a plebiscite or through the representatives of the people in the new Assembly. The question of holding a plebicite has been repeatedly ruled out by many responsible Ministers of the Union Government. On a vital question concerning the destiny of a country, no Government would be so foolish as to give any weight to the views of a few Tom, Dick and Harries for deciding the issue. So then, the only reasonable course that would be adopted by the Parliament, would be to accept the views of the new Assembly. Therefore any resolution passed by the Coorg Assembly, where the merger issue had been made an issue in the election, which has brought the new Assembly into existance, would most certainly carry not only much weight-but tremendous weight. The most important statement in Nehur's letter that goes to satisfy Mr. P. I. Belliapa's longings is that "Even an expression of views on merger issue would be without much weight, if this issue has been by force of circumstances postponed and not made an issue in the elections". Therefore it logically follows that when the question of merger is made an issue in the elections it would carry great weight. That is what Mr. Belliapa desired to be assured of and he has achieved what he wanted.

Coming again to the question of merger-with great respect for Pandit Nehru's assurance that the merger issue is shelved to a distant future, I most humbly beg to submit that, if in the New Parliament the mejority happens to be linguistic minded and that the people of Tamil and Karnataka districts should esort to 'Sathyagraha' for achieving their object, then the formation of Linguistic Provinces would immediately take effect-upsetting Nehru's hopes. On such an event, the Congress party in the New Assembly which is pledged to the K. P. C. C. on the merger issue, would be compelled to vote in favour of Coorg merging with Karnataka. On this score the stand taken by Mr. Bellipa by making the merger issue as an issue in the election is thoroughly justified. I congratulate Mr. Belliapa on his farsighted policy and so extend to this Hero of many battles, my great admiration for his political sagacity, perseverance and love for his country.

The question of keeping Coorg as a separate unit, is becoming more and more important as months and years pass by. For we have before our eyes two glaring instances, where the intigration of one State with the other has resulted in bringing utter misery and confusion to those States of Cochin and Puducota. Cochin once the Model State in india, which had a high Standard of administration with a contented and happy lot of people, is now reduced to the position of a fourth rate country, oppressed by the Travencoreans. The people are discontented and wish to get back to the old order; but that is impossible now. The case of Puducota is still wrose. It was brought under Madras Adminstration two years ago-but no sooner, the Government began to lose all interest in the welfare of its people, with the result that the contry has become desperate now and however hoarse they may cry, the voice never reaches the Gods in Madras. It is only a cry in the wilderness.

Similar would be the fate of Coorg when merged with the Karnataka and it might soon fall a prey to the machinations of some of our half-crazy politians and stump orators, if the people do not beware. These wily leaders are trying to cast away this beautiful land into the wide jaws of that Monster, who with half closed eyes patiently waits to receive the 'Bait'. The state of affairs in Karnataka is miserable indeed-half starvation and perpetual famine conditions exist in some parts of that Province. We do not wish to be experimented upon with their 'Linguistic Ideology. What we desire is peace, plenty and prosperity which we do not care to barter for their plague, famine and pestilence. We refuge to lie behind their bare backs, thirsting for water and starving for food and there after raise a cry for mercy, which shall not be heeded by the Great Gods that preside over our destiny in distant Karnataka. Therefore ye sons of our beloved Land, beware! Fight this Green eyed Monster and be saved from eternal damnation. Let not posterity say we blundered.

ಓಟಿನ ಪೆಟ್ಟಿಗೆಯೊಂದಿಗೆ ಓಟರ —ಬೆಂಗಳೂರು ಜಿಲ್ಲೆಯ ಹಳ್ಳಿಯೊಂದರಲ್ಲಿ ಓಟು ನಡೆಯುತ್ತಿರುವಾಗ ಓಟರೊಬ್ಬನು ಮತಪೆಟ್ಟಿಗೆಯೊಡನೆ ಶಬ್ದ ಮಾಡುತ್ತಿರುವುದನ್ನು ಪ್ರೋಲಿಂಗ್ ಆಫೀಸರು ಒಳಗೆ ನೋಡಲಾಗಿ ಬ್ಯಾಲಟ್ ಪೇಪರನ್ನು ಪೆಟ್ಟಿಗೆಯೊಳಗೆ ಹಾಕುವುದಕ್ಕಾಗಿ ಪೆಟ್ಟಿಗೆಯ ಬಾಯನ್ನು ತೆರೆಯಲು ಪ್ರಯತ್ನಿಸುತ್ತಿದ್ದನು. ಅಧಿಕಾರಿಯು ಆ ಹಳ್ಳಿಗನನ್ನು ಹೊರಗೆ ಕರೆದು ಓಟು ಮಾಡುವ ವಿಧಾನವನ್ನು ತೋರಿಸಬೇಕಾಯಿತು.

॥ ಚುನಾವಣಾ ವಾರ್ತೆಗಳು ॥

೧೦೭ ವರ್ಷದ ಮುದುಕ ಓಟು ಮಾಡಿದ

ಹುಬ್ಬಳ್ಳಿ ನಗರದಲ್ಲಿ ನಡೆದ ಚುನಾವಣೆಯಲ್ಲಿ ಒಂದು ಬೂತಿಗೆ ೧೦೭ ವರ್ಷದ ವೃದ್ಧನೊಬ್ಬ ನಡೆದುಬಂದು ತನ್ನ ಮತ ಚಲಾಯಿಸಿದ. ಅದೇ ಬೂತಿಗೆ ೭೫ ವರ್ಷ ವಯಸ್ಸಿನ ಖಾಯಿಲೆ ಮುದುಕಿಯೊಬ್ಬಳು ಅಂಬ್ಯುಲೆನ್ಸ್ ವ್ಯಾನಿನಲ್ಲಿ ಬಂದು ಸ್ಟ್ರೆಚರ್‌ನಲ್ಲಿ ಮಲಗಿ ಓಟು ಮಾಡಿದಳು.

ಯಾರಿಗೆ ಓಟು ಮಾಡಲಿ ?

ಬೊಂಬಾಯಿ ನಗರದ ಕೋಟೆ ಪ್ರದೇಶದಲ್ಲಿನ ಬೂತ್ ಒಂದರಲ್ಲಿ ಓಟುಮಾಡಲು ಬಂದ ಮಧ್ಯವಯಸ್ಸಿನ ಅನಕ್ಷರಸ್ಥನೊಬ್ಬನು ಬ್ಯಾಲಟ್ ಪೇಪರ್ ಪಡೆದು ಪ್ರಿಸೈಡಿಂಗ್ ಅಧಿಕಾರಿಗಳ ಬಳಿ ತೆರಳಿ "ಸಾರ್ ನಾನು ಯಾರಿಗೆ ಓಟು ಮಾಡಲಿ ಹೇಳಿ?" ಎಂದು ಕೇಳಿದನಂತೆ.

—oOo—

ಕೋತಿಯೂ ಓಟುಮಾಡಲು ಬಂತು

ಬೊಂಬಾಯಿ ನಗರದ ಪೋಲಿಂಗ್ ಬೂತ್ ಒಂದರಲ್ಲಿ ಓಟು ಆರಂಭವಾದೊಡನೆ ಕೋತಿಯೊಂದು ಪ್ರಿಸೈಡಿಂಗ್ ಆಫೀಸರವರ ಮೇಜಿನ ಮೇಲೆ ಬಂದು ಕುಳಿತು ಅವರ ಮೇಲಿದ್ದ ಬ್ಯಾಲಟ್ ಪೇಪರ್‌ಗಳನ್ನು ಚಲ್ಲಾಪಿಲ್ಲಿ ಮಾಡಿತು. ಅಲ್ಲಿಂದ ಓಡಿಸಲಾಗಿ ಆ ಕೋತಿಯು ಬ್ಯಾಲಟ್ ಬಾಕ್ಸ್‌ಗಳಿಟ್ಟಿರುವ ಕಡೆ ಹೋಯಿತು. ಅದನ್ನು ಹೊರಗೆ ಓಡಿಸಲು ಪೋಲೀಸ್ ಅಧಿಕಾರಿಗಳಿಗೆ ೧೦ ನಿಮಿಷಗಳ ಕಾಲ ಹಿಡಿಯಿತು.

—oOo—

ನೂರು ಮಂದಿ ಕುರುಡರು ಓಟು ಮಾಡಿದರು

ಬೊಂಬಾಯಿಯ ಕಾರ್ಡಿಯೋ ಕ್ಷೇತ್ರದಲ್ಲಿನ ವಿಕ್ಟೋರಿಯಾ ಕುರುಡರ ಶಾಲೆಯ ೧೦೦ ಮಂದಿ ವಿದ್ಯಾರ್ಥಿಗಳು ಸಾಲಾಗಿ ಕ್ಯೂನಲ್ಲಿ ನಿಂತು ಹಾಡುಗಳನ್ನು ಹಾಡುತ್ತಾ ತಮ್ಮ ಮತ ಚಲಾಯಿಸಿದರು. ಕೇಂದ್ರ ಬೊಂಬಾಯಿಯ ಮಹಾಜಯವಾಡಿಯ ಬೂತಿನಲ್ಲಿ ಮೊದಲು ಓಟು ಮಾಡಿದವನು ಕುರುಡ ವೃದ್ಧನೊಬ್ಬ.

ಸಚಿವರು ಹುಲಿಯ ಕೈಗೆ ಸಿಕ್ಕಿದರು.

ಬರಿಸ್ಸಾದ ರೆವಿನ್ಯೂ ಸಚಿವರು ಕಳೆದ ವಾರ ರಾತ್ರಿ ಚುನಾವಣೆ ಪ್ರಚಾರಕ್ಕಾಗಿ ಕಾರಿನಲ್ಲಿ ಹೋಗುತ್ತಿದ್ದಾಗ ಎರಡು ಭಾರಿದೊಡ್ಡ ಹುಲಿಗಳು ರಸ್ತೆಯಲ್ಲಿ ಮಲಗಿದ್ದುವು. ಕಾರಿನ ದೀಪವನ್ನು ಕಂಡು ಒಂದು ಹುಲಿಯು ಕಾರಿನೆಡೆಗೆ ನೆಗೆಯಿತು. ಆಗ ಚಳಿಗಾಗಿದ್ದುದರಿಂದ ಗಾಜಿನ ಕಿಟಕಿಗಳನ್ನೆಲ್ಲಾ ಮುಚ್ಚಿತ್ತು. ಹುಲಿಯು ಕಾಲು ಫೆಂಟಿಯ ಪರಿಗೆ ಕಾರಿನ ಛತ್ರಮೇಲ್ಮೈ ಮೇಲೆ ಪಗಗೆ ಗುರುತು ಮಾಡಿ ಓಟು ಹೋಯಿತು.

ಶತ್ರುವನ್ನೂ ಬಂದು ಓಟುಮಾಡಿದ್ದ!

ಬೊಂಬಾಯಿಯ ಕೋಲಿವಾಡ್ ಕ್ಷೇತ್ರದ ಒಂದು ಬೂತಿಗೆ ಓಟು ಮಾಡಲು ಬಂದ ಶ್ರೀ ವ ಣಿಲಾಲ್ ಎಂಬುವರು ಓಟಿನ ಪಟ್ಟಿ ಪ್ರಕಾರ 'ಸತ್ತು ಹೋಗಿದ್ದರೆಂದು ಘೋಷಿಸಲಾಗಿತ್ತು. ಅವರೇ ಖುದ್ದಾಗಿ ಬಂದು "ನಾನ ಸತ್ತಿಲ್ಲ ಬದುಕಿದ್ದೇನೆ ನನಗೆ ಓಟಿನ ಹಕ್ಕು ಕೊಡಿ" ಎಂದು ಹೇಳಿ ಮತ ಚಲಾಯಿಸಿದರು.

ಹೆಂಡತಿಯ ಓಟಿಗೆ ಗಂಡನ ಹಕ್ಕು

ಹೌಲಕ್ಷೇತ್ರವೊಂದರಲ್ಲಿ ನಡೆದ ಚುನಾವಣೆಯ ಬೂತಿಗೆ ಓಟು ಮಾಡಲು ಬಂದ ಅನಕ್ಷರಸ್ಥ ಯುವಕನೊಬ್ಬನು ಪ್ರಿಸೈಡಿಂಗ್ ಅಧಿಕಾರಿಗಳ ಬಳಿಗೆ ತೆರಳಿ "ಸ್ವಾಮಿ ನನ್ನ ಹೆಂಡತಿ ಮೊನ್ನೆ ಪ್ರಸವಿಸಿದ್ದಾಳೆ. ಅವಳ ಓಟನ್ನು ನಾನೇ ಚಲಾಯಿಸುವೆ. ಬ್ಯಾಲಟ್ ಪೇಪರ್ ಕೊಡಿ' ಎಂದು ಕೇಳಿದಾಗ ಅಲ್ಲಿದ್ದವರೆಲ್ಲ "ಗೊಳ್" ಎಂದು ನಕ್ಕರು.

ಓಟು ಮಾಡಿದೊಡನೆ ಸತ್ತ

ಪೂನಾ ನಗರದ ಓರ್ವ ಮತದಾರನು ತೀವ್ರ ಖಾಯಿಲೆಯಿಂದ ನರಳುತ್ತಿದ್ದಾಗಲೂ ಓಟು ಮಾಡಲು ಇಚ್ಛೆಪಟ್ಟ. ಅವನನ್ನು ಕಾರಿನಲ್ಲಿ ಕರೆತರಲು ಅವನು ಓಟು ಮಾಡಿ ಮನೆಗೆ ಹಿಂತಿರುಗಿದ ಕೊಂಚ ಹೊತ್ತಿನಲ್ಲೇ ಮೃತಿಹೊಂದಿದ. ಸಾಂಗ್ಲಿಯ ಖಾಹಿಲೆ ಮಹಿಳೆಯೊಬ್ಬಳು ಕೂಡಾ ಓಟು ಮಾಡಲು ಹೊರಟು ಶಕ್ತಳಾಗದೇ ಅರ್ಧ ದಾರಿಯಲ್ಲೇ ಮನೆಗೆ ಹಿಂತಿರುಗಿ ಮೃತಪಟ್ಟಳು.

ಓಟು ಮಾಡಲು ಅಧಿಕಾರಿಯೊಬ್ಬರ ನಿರಾಕರಣೆ.

ಬೆಂಗಳೂರಿನಲ್ಲಿ ನಿವೃತ್ತ ಸರಕಾರಿ ಅಧಿಕಾರಿಯೊಬ್ಬರು ಓಟು ಮಾಡಲು ಪೋಲಿಂಗ್ ಬೂತ್‌ಗೆ ಹೋದಾಗ ಪೋಲಿಂಗ್ ಅಧಿಕಾರಿಗಳು ಅವರ ಹೆಬ್ಬೆರಳಿಗೆ ಅಳಿಸಿಹೋಗದ ಮಸಿಬಳಿಯಲು ಹೋದಾಗ ನಿವೃತ್ತ ಉದ್ಯೋಗಸ್ಥರು ಪೋಲಿಂಗ್ ಅಧಿಕಾರಿಗಳೊಡನೆ ವಾಗ್ವಾದ ನಡೆಸಿ ಗುರುತಿನ ಚೀಟಿಗಳೇ ಸಾಕೆಂದೂ, ಮಸಿ ಬಳಿಯುವದು ಅನಾವಶ್ಯಕವೆಂದೂ ಹೇಳಿದರು. ಪೋಲಿಂಗ್ ಅಧಿಕಾರಿಗಳು ಚುನಾವಣೆ ನಿಯಮ ಪ್ರಕಾರ ಮಸಿ ಬಳಿಯದೆ ಓಟು ಮಾಡುವುದು ನಿಯಮವಿರುದ್ಧವೆಂದು ತಿಳಿಸಿದೊಡನೆ ಅವರು ಓಟುಮಾಡದೆ ಹೊರಟು ಹೋದರು. ಹಾಗೆಯೇ ಬೊಂಬಾಯಿಯಲ್ಲಿ ಸುಂದರ ಯುವತಿ ಯೋರ್ವಳು ಓಟು ಕೊಡುವ ಮೊದಲು ಮಸಿಯಲ್ಲಿ ಗುರುತು ಹಾಕಲು ಬರುವಾಗ "ತನ್ನ ಸೌಂದರ್ಯಕ್ಕೆ ಕುಂದೊದಗುವುದರಿಂದ ನಾನು ಓಟು ಮಾಡುವುದಿಲ್ಲ" ಎಂದು ಹೊರಟು ಹೋದಳು.

ಬ್ಯಾಲಟ್ ಬಾಕ್ಸಿನಲ್ಲಿ ಹಣ

ಬೊಂಬಾಯಿ ನಗರದ ಉತ್ತರ ಕ್ಷೇತ್ರದ ಬೂತ್ ಒಂದರಲ್ಲಿ ಬ್ಯಾಲಟ್ ಪೆಟ್ಟಿಗೆಗಳಲ್ಲಿ ಮತದಾರರು ನಾಣ್ಯಗಳನ್ನು ಹಾಕಿರುವುದು ಕಂಡು ಬಂತು. ಬ್ಯಾಲಟ್ ಪೆಟ್ಟಿಗೆ ಒಡೆದನಂತರ ಆ ಹಣವನ್ನು ಚುನಾವಣಾ ಕಮಿಷನರಿಗೆ ಕಳುಹಿಸಲಾಯಿತು.

ಬ್ಯಾಲಟ್ ಪೆಟ್ಟಿಗೆಗಳು ಖಾಲಿ

ಜಯಪುರದಲ್ಲಿ ನಡೆದ ಚುನಾವಣೆಯಲ್ಲಿ ನಡೆದ ಸ್ವಾರಸ್ಯ ಪ್ರಸಂಗ ಒಂದು ವರದಿಯಾಗಿದೆ. ಕೆಲವು ಪೋಲಿಂಗ್ ಬೂತ್‌ಗಳಲ್ಲಿ ಒಬ್ಬ ಮತದಾರನೂ ಓಟು ಮಾಡಲು ಬರಲಿಲ್ಲವಾದುದರಿಂದ ಓಟಿಂಗ್ ಅವಧಿ ಮುಗಿದ ಮೇಲೆ ಖಾಲಿ ಪೆಟ್ಟಿಗೆಗಳನ್ನೇ ಮೊಹರು ಮಾಡಲಾಯಿತು.

ದಸ್ತಗಿರಿಗಳು

ಕೊತ್ತನ್ನ ಹೇಬಳ ಹೊಸೂರು ಚುನಾವಣಾ ಕೇಂದ್ರದಲ್ಲಿ ಪಾರ್ಲಿಮೆಂಟ್ ಬ್ಯಾಲಟ್ ರೂಮಿನಲ್ಲಿ ಓಟುಕೊಟ್ಟನು ಕೆಳಗೆ ಬಿದ್ದಿದ್ದ ಬ್ಯಾಲಟ್ ಪೇಪರುಗಳನ್ನು ತೆಗೆದು ಪೆಟ್ಟಿಗೆಗೆ ಹಾಕಲು ಪ್ರಯತ್ನ ಪಡುತ್ತಿರುವಾಗ ಸಿಕ್ಕಿಬಿದ್ದನು. ಆತನನ್ನು ದಸ್ತಗಿರಿ ಮಾಡಿ ಸಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಇದೇ ರೀತಿ ನಗರ ವಾಡಿ ಕೇಂದ್ರದಲ್ಲಿ ಕೆಳಗೆ ಬಿದ್ದಿದ್ದ ಬ್ಯಾಲಟ್ ಪೇಪರುಗಳನ್ನು ಹೊರತಂದ ಗಟನನ್ನು ದಸ್ತಗಿರಿ ಮಾಡಿ ಪೋಲೀಸರ ವಶಕ್ಕೆ ಒಪ್ಪಿಸಲಾಯಿತು. ಹೀಗೆ ಬ್ಯಾಲಟ್ ಪೇಪರು ಕೆಳಗೆ ಬೀಳಲು ಮತಪೆಟ್ಟಿಗೆಗಳು ತುಂಬಿ ಹೋದದ್ದೇ ಕಾರಣವಂತೆ.

ವ ತವೆಂದರೇನು ?

ನಿಮ್ಮ ಮಂಗಳಸೂತ್ರವನ್ನು ಯಾಗ ವರೆಗೆ ಪೂರೈಸ್ಕ ಬರುವದೊ? ಇಲ್ಲ. ನೀವು ಏನು ಕೊಟ್ಟರೂ ಅದನ್ನು ಕೊಡಲಾರಿರಿ. ನಿಮ್ಮ ಮತವೂ ಅಷ್ಟೇ ಪವಿತ್ರವಾದದ್ದು. ಅದನ್ನು ಹಣದ ಆಸೆಗಾಗಲೀ ಯಾವ ತರ ಯಾವುದೇ ಪ್ರಲೋಭನಗಳಿಗೋ ಮಾರಾಟಮಾಡಬೇಡಿ ಎಂದು ಓರ್ವ ಸ್ತ್ರೀಯು ಅಜ್ಞಾತ ಮಹಿಳೆಯೋರ್ವಳು ಸ್ಪೀಕರಿನಿಂದ ಗುಜರಾತಿನಲ್ಲಿ ನಡೆದ ಚುನಾವಣೆಯಲ್ಲಿ ಒಳ್ಳೆ ಕಳಕಳಿಯಿಂದ ಭಾಷಣಮಾಡಿದಳು.

ವಿಶ್ವದ ಅತ್ಯಂತ ಚೆಲುವಿನ ಮಹಿಳೆ

ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರವರು ವಿಶ್ವದ ಅತ್ಯಂತ ೧೨ ಚಲುವಿನ ಮಹಿಳೆಯರಲ್ಲಿ ಒಬ್ಬರೆಂದು ಘೋಷಿಸಲಾಗಿದೆ. ಇವರಲ್ಲಿ ಅತಿ ಚಲುವೆಯರೆಂದರೆ ಸ್ಪರ್ಧಿಸಿದವರು. ಕಳೆದ ನ್ಯೂಯಾರ್ಕ್‌ನಲ್ಲಿ ನಡೆದ ಸ್ಪರ್ಧೆಯೊಂದರಲ್ಲಿ ಈ ಆಯ್ಕೆ ನಡೆಯಿತು.

ಈಜಿಪ್ಟ್ ಪ್ರಕರಣದಲ್ಲಿ ಮೌಂಟ್ ಬೇಟನರ ಮಧ್ಯಸ್ತಿಕೆ.

ಲಾರ್ಡ್ ಮೌಂಟ್ ಬೇಟನರು ಅರಸ ಫರೂಕ್ ಹಾಗೂ ಅನೇಕ ಈಜಿಪ್ಟಿಯನ್ನರ ಮಿತ್ರರಾಗಿದ್ದು ಪೂರ್ವ ದೇಶಗಳ ಜನರ ರಾಷ್ಟ್ರೀಯ ಆಕಾಂಕ್ಷೆಗಳಲ್ಲಿ ಸಹಾನುಭೂತಿಯುಳ್ಳವರಾಗಿರುವುದರಿಂದಲೂ, ಇಂಗ್ಲೋ ಈಜಿಪ್ಷಿಯನ್ ತಂಟೆಯಲ್ಲಿ ಮಧ್ಯಸ್ತಿಕೆ ಮಾಡಲು ಬ್ರಿಟಿಷ್ ಸರಕಾರವು ಲಾರ್ಡ್ ಮೌಂಟ್ ಬೇಟನರನ್ನು ನೇಮಿಸಲಾಗುವದೆಂದು ತಿಳಿದಿದೆ.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್, ವೀರಾಜಪೇಟೆ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಕೋವಿಗಳು, ವ್ಯವಸಾಯದ ಸಾಮಾನುಗಳು ಮತ್ತು ಕಬ್ಬಿಣದ ಸಲಾಕೆ ವಗೈರೆಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು ಮತ್ತು ರಿವಾಲ್ವರುಗಳು.
2. ·12ನೇ ನಂಬರಿನ ಒಂಟಿ ನಳಿಗೆಯ ಕೋವಿಗಳು.
3. 12ನೇ ನಂಬರಿನ ಜೋಡು ನಳಿಗೆಯ ಕೋವಿಗಳು.
4. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
5. 2", 1", ⅝", ½", ⅜" ಕಬ್ಬಿಣದ ಸಲಾಕೆಗಳು.
6. 9"×4" ಮತ್ತು 8"×4" ಕಬ್ಬಿಣದ ಬೀಮ್ಸ್ (Beams).
7. 8'×3'×12 (Gage)ನ ಕಬ್ಬಿಣದ ತಗಡುಗಳು.
8. 3"×3"×¼"ನ (Angles) ಎಂಗ್ಯಾಲ್ಸ್ ಅವಶ್ಯವಿರುವವರು ಇಂಡೆಂಟ್ ಕೊಟ್ಟಲ್ಲಿ ತರಿಸಿ ಕೊಡಬಹುದು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೆ ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

Edited, Printed and Published by P. I. Belliappa 'Kodagu' Press, Mercara, for 'Kodagu' Ltd.

Licence No. 60.
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦ | ತಾರೀಕು [illegible] ಶುಕ್ರವಾರ | ಸಂಚಿಕೆ [illegible]

ಕೊಡಗಿನ ಮತದಾರರಲ್ಲಿ ವಿನಂತಿ.

ಮುಂಬರುವ ಕೇಂದ್ರ ಜನತಾ (ಪಾರ್ಲಿಮೆಂಟ್) ಸಭೆಗೆ ಪ್ರತ್ಯೇಕ ಪಕ್ಷದ ಪರ ನಾನೊಬ್ಬ ಉಮೇದುವಾರನಾಗಿ ನಿಂತಿರುವೆನು. ಕೊಡಗನ್ನು ಪ್ರತ್ಯೇಕವಾಗಿ ಇಟ್ಟುಕೊಂಡು ಈಗ ದೊರೆತಿರುವ ಜವಾಬ್ದಾರಿ ಸರಕಾರವನ್ನು ಇಲ್ಲಿಯ ಸಮಸ್ತ ಜನರ ಹಿತಕ್ಕಾಗಿ ಜಯಪ್ರದವಾಗಿ ನಡೆಸುವ ಸಂಪೂರ್ಣ ವಿಶ್ವಾಸವಿರುವ ನನಗೆ ಕೊಡಗಿನ ಓಟರುಗಳೆಲ್ಲರೂ



ತಮ್ಮ ಅಮೂಲ್ಯವಾದ ಓಟನ್ನು ಕೊಟ್ಟು ಜಯಶೀಲನಾಗಿ ಮಾಡಬೇಕಾಗಿ ವಿನಂತಿ. ನನ್ನ ಚುನಾವಣಾ ನಿಶ್ಶಾನೆ ತಕ್ಕಡಿಯಾಗಿದೆ.

ಕೆ. ಟಿ. ಉತ್ತಪ್ಪ.

ಕಾಂಗ್ರೆಸ್ ಮತ್ತು ಪ್ರತ್ಯೇಕ ಪಕ್ಷ.

ಲೇಖಕ:—ಶ್ರೀ ಪಿ. ಜಿ. ಐಯ್ಯಪ್ಪ, ಮಡಿಕೇರಿ

ನಮ್ಮ ದೇಶದಲ್ಲಿ ಈಗ ಚುನಾವಣೆಗೆ ನಿಂತಿರುವ ಪಾರ್ಟಿಗಳಲ್ಲಿ ಪ್ರಾಮುಖ್ಯವಾದವು ಕಾಂಗ್ರೆಸ್ ಮತ್ತು ಪ್ರತ್ಯೇಕ ಪಾರ್ಟಿಗಳು. ಇವರ ಗುರಿಗಳಲ್ಲಿರುವ ಪ್ರಾಮುಖ್ಯವಾದ ವ್ಯತ್ಯಾಸವೆಂದರೆ, ಕೊಡಗಿನ ಭವಿತವ್ಯದ ನಿರ್ಣಯವನ್ನು ಕುರಿತ ಈಗ ನಾಲ್ಕೈದು ವರ್ಷಗಳಿಂದ ಆಗಿನ ಕಾಂಗ್ರೆಸ್ ಪಾರ್ಟಿಯ ಮುಂದಾಳುಗಳು ಬಹಿರಂಗವಾಗಿ ತಮ್ಮ ಧ್ಯೇಯ, ಯಾ ಗುರಿಯನ್ನು ಪ್ರಕಟಿಸುತ್ತಿದ್ದರಷ್ಟೆ. ಇವರ ಗುರಿಯಾದ ಕೊಡಗಿನ ಸಂಯೋಜನೆಯನ್ನು ಕೊನೆಮುಟ್ಟಿಸಲು ಆಕಾಶಭೂಮಿಗಳನ್ನು ಅಲ್ಲಾಡಿಸಿದ ರೀತಿಯಲ್ಲಿ, ಈ ಚುನಾವಣೆಯಲ್ಲೂ ನಡೆಸತಕ್ಕ ಗುರಿಯನ್ನು ಇವರು ನೇರವಾಗಿ ಪ್ರಕಟಿಸಿದ್ದರೆ ಓಟರುಗಳಾದ ನಮಗೆ ನಮ್ಮ ಘನವಾದ ಓಟನ್ನು ಈ ಪಾರ್ಟಿಗೆ ಯಾ ಆ ಪಾರ್ಟಿಗೆ ಕೊಡಲು ನಿರ್ಣಯಿಸುವಲ್ಲಿ ಯಾವ ತೊಂದರೆಯೂ ಇರಲಿಲ್ಲ. ಆದರೆ ಕೊಡಗಿಗೆ ಜವಾಬ್ದಾರಿ ಸರಕಾರ ದೊರೆಯುವ ವರೆಗೆ, ಅಷ್ಟೇ ಅಲ್ಲ, ದೊರೆತ ಕೆಲವು ದಿವಸಗಳ ವರೆಗೂ ಸಹ ಎಂದರೆ ತಾ. ೧೦-೯-೫೧ ರ ವರೆಗೆ ನಮ್ಮ ಪ್ರಾಂತ್ಯಕ್ಕೆ ಸುಧಾರಣೆ ಬೇಡ, ನಮ್ಮನ್ನು ಬೇರೆ ಪ್ರಾಂತ್ಯಕ್ಕೆ ಸೇರಿಸಿಬಿಡಬೇಕೆಂದು ಹೇಳುತ್ತಿದ್ದವರು, ಏಕಾಏಕಿ, ನಾವೂ ಪ್ರತ್ಯೇಕವಾದಿಗಳೇ ಎಂದು ತಮ್ಮ ವೇಷವನ್ನು ಬದಲಾಯಿಸಿದರಿಂದ ನಮಗೆ ಸತ್ಯ ಮುಂದಾಳುಗಳ ಚುನಾವಣೆಯು ಸ್ವಲ್ಪ ಕಷ್ಟವಾಗಿದೆ. ಯಾತಕ್ಕೆಂದರೆ, ಒಂದು ಕಡೆಯವರು 'ನಾವು ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳಬೇಕೆನ್ನುವವರು.' ಇನ್ನೊಂದು ಕಡೆಯವರು 'ನಾವು ಕೊಡಗನ್ನು ಮೈಸೂರಿಗೋ ಯಾ ಕರ್ನಾಟಕ್ಕೋ ಸೇರಿಸಿಬಿಡಬೇಕೆನ್ನುವವರು' ಎಂಬದಾಗಿ ಅವರವರ ನಿಜವಾದ ಗುರಿಯನ್ನು ಬಿಚ್ಚಿ ಹೇಳಿದರೆ ಓಟರುಗಳು ಈ ಕಡೆಗೆ ಯಾ ಆ ಕಡೆಗೆ ತಮ್ಮ ಓಟನ್ನು ನಿರ್ಧರಿಸುವದು ಸುಲಭವಾಗುತ್ತಿತ್ತು. ಆದರೆ ಈ ಎರಡು ಪಕ್ಷದವರೂ, ನಾವೆಲ್ಲಾ ಪ್ರತ್ಯೇಕವಾದಿಗಳೇ ಎನ್ನುವುದರಿಂದ [illegible] ಓಟರುಗಳು [illegible] ಧಾರಣೆ ಮಾಡುವುದು ಸ್ವಲ್ಪ ಕಷ್ಟಕರವಾದ ಕೆಲಸವಾಗಿದೆ.

ಶೇಕ್ಸ್‌ಪಿಯರ್ ಮಹಾಕವಿಯು ಹೇಳಿದಂತೆ "The vilest devil in hell cant read the heart of a man" ಎಂಬ ವಾಕ್ಯದಲ್ಲಿರುವ ಎಂತಹ ಕೆಟ್ಟ ದೆವ್ವದ ಸೈತಾನನಿಗೂ ಮನುಷ್ಯನ ಮನಸ್ಸನ್ನು ತಿಳಿವ ಶಕ್ತಿ ಇರುವುದಿಲ್ಲ. ಹಾಗಿರುವಾಗ್ಯೆ ಸಾಮಾನ್ಯ ಓಟರುಗಳಾಗಿರುವ ನಮಗೆ ಈ ಕಾಂಗ್ರೆಸ್ ಮುಂದಾಳುಗಳ ಮನಸಿನ ನಿಜವಾದ ಭಾವನೆಯನ್ನು ತಿಳಿಯುವುದು ಹೇಗೆ? ಹೇಳಿದ ಹಾಗೆ ಮಾಡದಿರುವುದು, ಮನಸ್ಸಿನಲ್ಲಿ ಒಂದು ಇಟ್ಟು ಹೊರಗೆ ಅದಕ್ಕೆ ವಿರೋಧವಾಗಿ ವರ್ತಿಸುವುದು ಮನುಷ್ಯ ಸ್ವಭಾವಕ್ಕೆ ಅಸಾಧ್ಯವಾದ ನಡಾವಳಿಗಳೇನೂ ಅಲ್ಲ. ಹಾಗಿರುವಾಗ್ಯೆ ಇವರ ಈಗಿನ ಹೇಳಿಕೆಯಂತೆ ಇವರು ನಿಜವಾಗಿಯೂ ಪ್ರತ್ಯೇಕವಾದಿಗಳೆ ಯಾ ಬರೀ ಈ ಚುನಾವಣೆಯಲ್ಲಿ ಪ್ರತ್ಯೇಕವಾದಿ ಓಟರುಗಳ ಓಟುಗಳನ್ನು ಸಂಪಾದಿಸಲು ತತ್ಕಾಲಕ್ಕೆ ಮಾಡಿದ ವೇಷ ಬದಲಾವಣೆಯೋ ಎಂಬುದನ್ನು ತಿಳಿಯಬೇಕಾದರೆ, ಇವರ ಪೂರ್ವದ ನಡಾವಳಿಕೆಗಳನ್ನೇ ನಾವು ಅಜಮಾಯಿಷಬೇಕಾಗಿದೆ. ಹಾಗೆ ಅಜಮಾಯಿಸಲು ಹೊರಟರೆ, ಅದರಿಂದ ಎಂತವನಿಗಾದರೂ ಇವರ ನಿಜವಾದ ಗುರಿಯನ್ನು ಕುರಿತು ಸಂಶಯ ಹುಟ್ಟದೆ ಇರಲಿಕ್ಕಿಲ್ಲ. ಒಬ್ಬರ ಮಾತಿನ ಮೇಲೆ ಸಂಶಯಕ್ಕೆ ಆಸ್ಪದವಿದ್ದು ಇನ್ನೊಬ್ಬರ ನಡಾವಳಿಕೆಯಲ್ಲಿ ಅಂತಹ ಸಂಶಯಕ್ಕೆ ಎಡೆಯೇ ಇಲ್ಲದಿದ್ದಾಗ, ಓಟರುಗಳಾದ ನಾವು ಸಂಶಯಕ್ಕೆ ಆಸ್ಪದವಿರುವವರಿಗೆ ಏಕೆ ನಮ್ಮ ಬೆಂಬಲವನ್ನು ಕೊಡಬೇಕು? ಅಂಥ ಸಂಶಯಾಸ್ಪದ ಸಂದರ್ಭಗಳಲ್ಲಿ, ನಾವು ಜಡ್ಜಿಗಳು ಕೇಸುಗಳನ್ನು ತೀರ್ಮಾನಿಸುವಾಗ್ಯೆ ಅನುಸರಿಸುವಂತ ಮಾರ್ಗವನ್ನು ಎಂದರೆ ಸಂಶಯ ಬಂದರೆ ಅಂಥ ವ್ಯಕ್ತಿಗಳನ್ನೇ ಪಡಮಾಡುವ ರೀತಿಯಲ್ಲಿ ನಾವೂ ಸಹ ಕಾಂಗ್ರೆಸ್ ಪಾರ್ಟಿಯವರಿಗೆ ಓಟು ಕೊಟ್ಟು ಅವರು ಅದರ ಮಾತಿನಂತೆ ನಡೆಯದಿದ್ದರೆ, ಇಲ್ಲ ಮಾತಿಗೆ ತಪ್ಪಿ ಕೊಡಗಿನ ಸಂಯೋಜನೆ [illegible] ಬೆಂಬಲಿಸಿ [illegible] ಪ್ರತ್ಯೇಕವಾದಿ [illegible] ಗಳಿಗೇ ನಮ್ಮ ಓಟನ್ನು ಕೊಟ್ಟಿದ್ದಾದರೆ ನಮಗೆ ಸಂಶಯಕ್ಕೆ ಯಾವಾಗಲೂ ಎಡೆಯೇ ಇರಲಾರದು. ಅಷ್ಟೇ ಅಲ್ಲ. ಈ ಚುನಾವಣೆಯಾದ ನಂತರ ಕಾಂಗ್ರೆಸು ಮುಂದಾಳುಗಳ ಮನಸ್ಸು ಮತ್ತು ಗುರಿಯೂ ನಿಜವಾಗಿಯೂ ಬದಲಾಗಿದೆಯೋ ಎಂಬುದನ್ನು ಬರುವ ಐದು ವರ್ಷಗಳ ವರೆಗೆ ಪರೀಕ್ಷಿಸಲಿಕ್ಕೆ ನಮಗೆ ಅವಕಾಶ ದೊರೆತಂತಾಗುತ್ತದೆ.

ಎರಡನೆಯದಾಗಿ ನಾವು ಎಂದರೆ ಕೊಡಗು ಪ್ರತ್ಯೇಕವಾಗಿಯೇ ಇರಬೇಕೆಂದು ಅಪೇಕ್ಷಿಸುವವರು, ಪ್ರತ್ಯೇಕವಾದಿಗಳಿಗೇ ಓಟು ಕೊಡದೆ ಕಾಂಗ್ರೆಸು ಮುಂದಾಳುಗಳಿಗೆ ಓಟು ಕೊಟ್ಟರೆ ನಾವು ಪ್ರತ್ಯೇಕವಾದಿ ಮುಂದಾಳುಗಳಿಗೆ ಅನ್ಯಾಯ ಮಾಡಿದಂತೆ ಆಗಬಹುದು. ಯಾಕೆಂದರೆ ಪ್ರತ್ಯೇಕವಾದಿ ಮುಂದಾಳುಗಳು ಈ ವರೆಗೆ ಅಷ್ಟು ಬಲವತ್ತರವಾದ ತೊಂದರೆಗಳೂ, ಅಡಚಣೆಗಳೂ ಇದ್ದರೂ ಸಹ ಎದೆಗುಂದದೆ ಕೊಡಗನ್ನು ಪ್ರತ್ಯೇಕ ಉಳಿಸಲು ಮತ್ತು ಕೊಡಗಿನ ಸುಧಾರಣೆ ಗಳಿಸಲು ನಾಲ್ಕೈದು ವರ್ಷಗಳಿಂದ ಹಗಲು ರಾತ್ರಿ ಕಷ್ಟಪಟ್ಟಿದ್ದಾರೆ. ಅವರು ಇಲ್ಲಿಂದ ಹಿಡಿದು ಡೆಲ್ಲಿ ವರೆಗೆ ಪಟ್ಟ ಕಷ್ಟದ ಫಲಿತಾಂಶವಾಗಿ ಈಗ ಕೊಡಗಿಗೆ ಸಿಕ್ಕಿರುವ ಸುಧಾರಣೆಯಲ್ಲಿ ನಾವು ಇವರಿಗೆ ಅಡಚಣೆಯಾಗಿದ್ದ ಪಾರ್ಟಿಯವರಿಗೆ ಒಪ್ಪಿಸಿಕೊಟ್ಟು ಅವರ ಮುಂದಿನ ಅಧಿಕಾರವನ್ನು ವಹಿಸಿಕೊಟ್ಟರೆ, ನಮ್ಮ ಅಂಥ ನಡಾವಳಿಕೆಯು '[illegible] ಸಕ್ಕರೆ [illegible] ತಿಂಬರು' ಎಂಬ ನಾಣ್ಣುಡಿಗೆ ಸರಿಯಾಗಿ ಕಷ್ಟಪಟ್ಟವರನ್ನು ಮೂಲೆಗೆ ಹಾಕಿ ಅವರಿಗೆ ಅಡಚಣೆ ಮಾಡಿದವರಿಗೆ ಪಟ್ಟಕಟ್ಟಿದಂತೆ ಆಗಬಹುದು. ನನಗೆ ವ್ಯಕ್ತಿಶಃ ಕಾಂಗ್ರೆಸಿನ ಮೇಲೆ ಯಾವ ವಿರೋಧವೂ ಇಲ್ಲ. ಮತ್ತು ಕಾಂಗ್ರೆಸ್ ಮುಂದಾಳುಗಳ ಮೇಲೆ ಯಾವುದೊಂದು ವ್ಯಕ್ತಿಗತವಾದ ವೈಮನಸ್ಯ ಇರುವುದಿಲ್ಲ. [illegible] ಕಾಂಗ್ರೆಸ್ ಪಾರ್ಟಿಗೆ [illegible] ಕೊಡಲು [illegible] ನಂತರ, ಬ್ರೂಟಸ್ ಹೇಳಿದ ಹಾಗೆ 'I love not Ceaser less-but Rome more' (ನನಗೆ ಸೀಜರನ ಮೇಲೆ ಪ್ರೀತಿ ಕಡಮೆ ಇರಲಿಲ್ಲ. ಆದರೆ ರೋಮ್ ದೇಶದ ಮೇಲೆ ಹೆಚ್ಚಿನ ಪ್ರೀತಿ ಇದ್ದುದರಿಂದ ಅವನನ್ನು ಕೊಲೆ ಮಾಡಬೇಕಾಯಿತು) ಎಂದ ಹಾಗೆ ನನ್ನ ಸ್ಥಿತಿಯೂ ಆಗಿದೆ. ನನಗೆ ಕಾಂಗ್ರೆಸಿನ ಮೇಲೆ ವಿರೋಧವಿಲ್ಲ. ಆದರೆ ಕೊಡಗು ದೇಶದ ಮೇಲೆ ಹೆಚ್ಚಿನ ಪ್ರೀತಿ ಇರುವುದರಿಂದ ಕೊಡಗನ್ನು ಬೇರೆ ಪ್ರಾಂತ್ಯಕ್ಕೆ ಸೇರಿಸಲು, ಈ ವರೆಗೆ ಪ್ರಯತ್ನಪಟ್ಟ ಮತ್ತು ಇನ್ನು ಮುಂದಕ್ಕೂ ಸಮಯವರಿತು ಕೊಡಗನ್ನು ಬೇರೆ ಪ್ರಾಂತ್ಯದೊಡನೆ ಸಂಯೋಜನೆ ಮಾಡಲೆಳಸುವ ಕಾಂಗ್ರೆಸ್ ಪಾರ್ಟಿಗೆ ಒತ್ತಾಸೆ ಕೊಡಲು ಈ ಚುನಾವಣೆಯಲ್ಲಿ ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಬೇಕೆಂದು ಆಶಿಸುವ ವ್ಯಕ್ತಿಯೊಬ್ಬನಿಗೂ ಸಾಧ್ಯವಿಲ್ಲವೆಂಬುದೇ ನನ್ನ ಭಾವನೆ.

'ಕಂಡದ್ದು ಆಡಿದರೆ ಕೆಂಡದಂಥಾ ಕೋಪ' ಎಂಬ ಮಾತನ್ನು ಎಲ್ಲರೂ ಕೇಳಿದ್ದೇವೆ. ನಾನು ಈ ಬರುವ ಚುನಾವಣೆಯನ್ನು ಕುರಿತು ನಾಲ್ಕೈದು ಬರಹಗಳನ್ನು ಬರೆದಿರುತ್ತೇನೆ. ಇವೆಲ್ಲದರಲ್ಲಿ ಕೊಡಗನ್ನು ಪ್ರತ್ಯೇಕ ಇಟ್ಟುಕೊಂಡು, ನಮ್ಮ ದೇಶದ ಸ್ಥಿತಿಗತಿಗಳನ್ನು ಆಗುವಷ್ಟು ಮುಂದುವರಿಸಲು ಆಸ್ಪದ ಕಲ್ಪಿಸಿಕೊಡಬೇಕೆಂಬ ಒಂದು ತತ್ವವಲ್ಲದೆ ಬೇರೆ ಯಾವ ಅಭಿಲಾಷೆಯಾಗಲೀ, ಸ್ವಾರ್ಥತೆಯಾಗಲೀ ಇಲ್ಲವೆಂಬುದನ್ನು ನಿಷ್ಪಕ್ಷಪಾತದಿಂದ ಆ ಬರಹಗಳನ್ನು ಓದಿದ ಎಲ್ಲರಿಗೂ ಮನವರಿಕೆಯಾಗಬೇಕು. ಅಲ್ಲದೆ ನಾನೊಬ್ಬ ಓಟರನಲ್ಲದೆ ಉಮೇದುವಾರನೂ ಅಲ್ಲ. ಇಂತಿದ್ದರೂ ಯಾರೋ ಒಬ್ಬರು ನನ್ನ ಬರಹಗಳನ್ನು ಖಂಡಿಸಿ ನನ್ನನ್ನೂ ಶ್ರೀಮಾನ್ ಪಿ. ಬಿ. ಬೆಳ್ಯಪ್ಪನವರನ್ನೂ ನಾನಾ ರೀತಿಯಲ್ಲಿ ಬೈದು ವಿನೋದ ಕಂಡುಕೊಟ್ಟು ಬಾಯಿಗೆ ಬಂದಂತೆ 'ಜನ್ಮಭೂಮಿ' ಪತ್ರಿಕೆಯಲ್ಲಿ ಬರೆದಿದ್ದಾರೆ. [illegible] ಇಂಗ್ಲಿಷಿನಲ್ಲಿ ಒಂದು ಮಾತಿದೆ.

'Scurrility and bad temper in an argument betrays bad cause' ಯಾವಾಗ ಒಬ್ಬನ ವಾದದಲ್ಲಿ ನ್ಯಾಯವಿರುವುದಿಲ್ಲವೋ ಆಗ್ಯೆ ಅವನು ಕೂಗಲು ಬೈಯಲು ಮೊದಲು ಮಾಡುತ್ತಾನೆಂದು. ಆದುದರಿಂದ ಆ ಬಾತ್ಮಿದಾರನ ಸಿಟ್ಟಿಗೂ ಕೂಗಿಗೂ ಅವನ ಪಾರ್ಟಿಯವರ ವಾದದಲ್ಲಿ ನ್ಯಾಯವಿಲ್ಲದಿರುವಿಕೆಯೇ ಕಾರಣವಾದುದರಿಂದ ತಿರಸ್ಕರಿಸುವವನೇ ಬುದ್ಧಿವಂತನು ಎಂದು ಹೇಳಬೇಕಾಗಿಲ್ಲ.

ಶ್ರೀಯುತ ನೆಹರೂರವರು ಮಂಗಳೂರಿಗೆ ಬಂದಿದ್ದಾಗ್ಗೆ ಅವರನ್ನು ಕೊಡಗಿಗೂ ಬರಬೇಕೆಂದು ಕರೆಯಲು ಕಾಂಗ್ರೆಸ್ ಪಾರ್ಟಿಯ ಮುಂದಾಳುಗಳು ಹೋಗಿದ್ದರಂತೆ. ಆದರೆ ನೆಹರೂರವರು ಕೊಡಗಿಗೆ ಬರಲಿಲ್ಲ. ಅವರ ದೃಷ್ಟಿಯಲ್ಲಿ ಇಲ್ಲಿಗೆ ಅವರು ಚುನಾವಣೆಯ ಸಂಬಂಧವಾಗಿ ಬರಬೇಕಾದ ಅವಶ್ಯಕತೆ ಬಂದಿರಲಿಕ್ಕಿಲ್ಲ. ಯಾತಕ್ಕೆಂದರೆ ಶ್ರೀ ಪಿ. ಐ. ಬೆಳ್ಯಪ್ಪನವರ ಪಾರ್ಟಿಯವರು ಕಾಂಗ್ರೆಸ್ ಯಾ ನೆಹರೂರವರ ತತ್ವಕ್ಕೆ ವಿರೋಧವಾಗಿ ನಿಂತ ಪಾರ್ಟಿಯಲ್ಲ ಎಂಬುದು ಅವರಿಗೆ ಸಂಪೂರ್ಣ ಮನವರಿಕೆ ಇರುವುದರಿಂದ ಅವರಿಗೆ ಇಲ್ಲಿ ಕಾಂಗ್ರೆಸ್ ಪಾರ್ಟಿ ಜೈಸಿದರೂ ಸರಿಯೇ, ಅಲ್ಲ ಪ್ರತ್ಯೇಕ ಪಾರ್ಟಿ ಜೈಸಿದರೂ ಸರಿಯೇ. ಆದುದರಿಂದಲೇ ಅವರು ಮಂಗಳೂರಿಗೂ, ಕಣ್ಣಾನೂರಿಗೂ, ಬೆಂಗಳೂರಿಗೂ ಬಂದಿದ್ದರೂ ಸಹ ಇಲ್ಲಿಗೆ ಬರಲಿಲ್ಲ. ಹೀಗಿರುವಾಗ ಕಾಂಗ್ರೆಸ್ ಪಾರ್ಟಿ ಮುಂದಾಳುಗಳು ಓಟರನ್ನು ಕುರಿತು 'ನೆಹರೂರವರ ಮೇಲೆ ಅಭಿಮಾನವಿದ್ದರೆ ಮತ್ತು ಮಹಾತ್ಮ ಗಾಂಧೀಜಿಯವರ ಮೇಲೆ ಅಭಿಮಾನವಿದ್ದರೆ ಕಾಂಗ್ರೆಸ್ ಪಾರ್ಟಿಗೇ 'ಓಟು ಕೊಡಿ' ಎಂದು ಓಟರರನ್ನು ಕೇಳುವುದು ನಿಜವಾಗಿಯೂ ನ್ಯಾಯವಾದ ದಾರಿಯಲ್ಲ. ಓಟರುಗಳು ಶ್ರೀ ಪಿ. ಐ. ಬೆಳ್ಯಪ್ಪನವರ ಪಾರ್ಟಿಯವರಿಗೆ ಓಟು ಕೊಟ್ಟರೆ ಇದರಿಂದ ನೆಹರೂರವರಿಗಾಗಲೀ, ಕಾಂಗ್ರೆಸ್ಸಿಗಾಗಲೀ ಯಾ ಗಾಂಧೀಜಿಯವರಿಗಾಗಲೀ ಅಭಿಮಾನ ಕೊರತೆಯಿಲ್ಲವೆಂದು ಹೇಳಲು ಎಂದೂ ಆಗುವುದಿಲ್ಲ. ಅದರ ಬದಲು ನಾವು ಪ್ರತ್ಯೇಕಪಾರ್ಟಿಯವರಿಗೇ ಓಟು ಕೊಟ್ಟರೆ ಇವರಿಂದ ನೆಹರೂರವರಿಗೂ ನಮ್ಮ ಸ್ವಾತಂತ್ರ್ಯಕ್ಕೂ ಒತ್ತಡೆಯಲ್ಲೇ ಸೇವೆ ಸಲ್ಲಿಸುವಂತೆ ಆಗುತ್ತದೆ. ಆದುದರಿಂದ ಎಲ್ಲರೂ ಪ್ರತ್ಯೇಕ ಪಾರ್ಟಿಯವರಿಗೆ ಓಟು ಕೊಟ್ಟು ಅವರನ್ನು ಈ ಚುನಾವಣೆಯಲ್ಲಿ ಜಯಶೀಲರಾಗಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಮಥುರೆಯಲ್ಲಿ ಅರುವೊಗಂ ಒಕ್ಕಿ ...ಬ ೧೧೧೦ ವರ್ಷದ ಮುದುಕನೊಬ್ಬ ...ನ್ನ ಇಬ್ಬರು ಮಕ್ಕಳ ಮೇಲೆ ಆಧಾರದಿಂದು ತನ್ನ ಮತದಾನದ ಹಕ್ಕನ್ನು ಚಲಾಯಿಸುತ್ತ ಎರಡು ತಾಸಿನವರೆಗೆ ಸಹನೆಯಿಂದ ನಿಂತಿದ್ದ. ಬಳ್ಳಾರಿಯಲ್ಲಿ ಇನ್ನೊಬ್ಬಳು ಹದಿನೇಳು ತಾಸುಗಳ ವರೆಗೂ ಕಾ

ನನ್ನ ಓಟು ಯಾರಿಗೆ? ಕಾಂಗ್ರೆಸ್ಸಿಗೋ? ಯಾ ಪ್ರತ್ಯೇಕ ಪಕ್ಷಕ್ಕೋ?

ಲೇಖಕ:—ಬೋವಂಡ ದೇವಯ್ಯ, ಮಗ್ಗುಲ, ವೀರಾಜಪೇಟೆ.

ಇತರ ದೇಶಗಳಂತೆ ಕೊಡಗಿನಲ್ಲಿ ಸಹ ಓಟುಗಳ ಪ್ರಚಾರವು ರಭಸದಿಂದ ನಡೆಯುತ್ತಿದೆ. ಒಂದು ಕಡೆ ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳಬೇಕೆಂದು ಕೂಗುತ್ತಾರೆ. ಇನ್ನೊಂದು ಕಡೆ ಕಾಂಗ್ರೆಸ್ಸಿಗೆ ಓಟು ಕೊಡಿರಿ! ಎಂದು ಸಾರುತ್ತಿದ್ದಾರೆ. ನನ್ನ ಮನಸ್ಸಿನಲ್ಲಿ ಎರಡು ಪಾರ್ಟಿಗಳ ತತ್ವವನ್ನು ಚರ್ಚಿಸಲಾರಂಭಿಸಿದೆನು. ಯಾವ ಕಡೆಗೆ ಓಟು ಕೊಡಬೇಕು? ಕಾಂಗ್ರೆಸ್ಸಿಗೆ ಓಟು ಕೊಡಬೇಕೇ? ಹೌದು. ಕಾಂಗ್ರೆಸ್ಸಿಗೆ ಓಟು ಕೊಡಬೇಕು. ಆದಾವ ಕಾಂಗ್ರೆಸ್ಸಿಗೆ? ಇಂಡಿಯಾ ದೇಶದ ಗುಲಾಮಗಿರಿಯನ್ನು ಬಿಡಿಸಲು ಅಹೋರಾತ್ರಿ ಹೋರಾಡಿದ ಕಾಂಗ್ರೆಸ್ಸಿಗೆ! ಗುಲಾಮಗಿರಿಯನ್ನು ಬೇರು ಸಹಿತ ಕಿತ್ತೊಗೆದ ಕಾಂಗ್ರೆಸ್ಸಿಗೆ! ಒಂದು ಜನಾಂಗವು ಇನ್ನೊಂದು ಜನಾಂಗವನ್ನು ದಬ್ಬಾಳಿಕೆಯಿಂದ ಆಳುತ್ತಿದ್ದರೆ ಅದನ್ನು ಬಿಡಿಸುವ ಕಾಂಗ್ರೆಸ್ಸಿಗೆ, ದೇವರು ನಿರ್ಮಿಸಿದ ಮನುಷ್ಯನು ಸ್ವಾತಂತ್ರ್ಯದಿಂದಲೇ ಬಾಳಬೇಕಲ್ಲದೆ, ಇನ್ನೊಬ್ಬನ ಅಧಿಕಾರ ವರ್ಗಕ್ಕೆ ಬಲಿ ಬೀಳಬಾರದೆಂದು ಸಾರುವ ಕಾಂಗ್ರೆಸ್ಸಿಗೆ! ಕಾಂಗ್ರೆಸ್ಸೇ ನಿನ್ನ ಮೂಲ ತತ್ವ "ಗುಲಾಮಗಿರಿಯಲ್ಲ, ಸ್ವಾತಂತ್ರ್ಯ" 'ಸ್ವತಂತ್ರ ಜೀವನ, ಇಂತಹ ತತ್ವಕ್ಕೆ ಕಂಕಣಬದ್ಧರಾದ ಸ್ವಾತಂತ್ರ್ಯಪ್ರಿಯ ಉಮೇದುವಾರರಿಗಲ್ಲವೇ ನನ್ನ ಓಟು!!

ಸರಿ. ಕೊಡಗಿನಲ್ಲಿ ಮೊನ್ನೆ ತಾನೆ ಪ್ರಕಟಿಸಿದ ಉಮೇದುವಾರರ ಪಟ್ಟಿಯನ್ನು ನೋಡಿದೆನು. ಕಾಂಗ್ರೆಸ್ ಪಕ್ಷ, ಪ್ರತ್ಯೇಕ ಪಕ್ಷ, ಎಂದು ಬರೆದಿತ್ತು. ಕಾಂಗ್ರೆಸ್ ಪಕ್ಷದ ಪಟ್ಟಿ ಓದಿದೆನು. ಆಶ್ಚರ್ಯವಾಯಿತು. ಇದೇನು ಕಾಂಗ್ರೆಸ್ ಪಕ್ಷದಲ್ಲಿರುವ ಹೆಸರನ್ನು ನೋಡಿದರೆ ಒಂದೆರಡನ್ನು ಬಿಟ್ಟರೆ ಉಳಿದವರೆಲ್ಲ ಬ್ರಿಟಿಷರ ಗುಲಾಮಗಿರಿಯನ್ನು ಬಿಡಿಸುವ ಕೋಲಾಹಲದಲ್ಲಿ ಬಾಯಿಯಲ್ಲಿ ಪಿಟ್ ಅನ್ನದೆ ಆರಾಮ ಕುರ್ಚಿಯಲ್ಲಿ ಕೂತವರು! ಅದೇನೇ ಇರಲಿ, ಇವರ ತತ್ವವೇನೆಂದು ನೋಡಿದರೆ ಕಾಂಗ್ರೆಸ್ಸಿನ ಪವಿತ್ರ ತತ್ವವಾದ ಸ್ವಾತಂತ್ರ್ಯವಲ್ಲ! ಬದಲು ಗುಲಾಮಗಿರಿ! ಇವರಿಗೆ ಬ್ರಿಟಿಷರ ಆಡಳಿತ ತಪ್ಪಿದ ಒಡನೆ 'ಪಿತ್ತ ತಲೆಗೇರಿದವನು ಹಾಸಿಗೆ ಬಿಟ್ಟು ಎದ್ದರೆ ತಲೆ ತಿರುಗುವಾಗ ಒಂದೋ ಯಾರನ್ನಾದರೂ ಹಿಡಿದುಕೊಳ್ಳಬೇಕು ಯಾ ಪುನಃ ಹಾಸಿಗೆಯಲ್ಲೇ ಮಲಗಬೇಕು'. ಹಾಗೆ ಇವರ ಕಾಲಿನಲ್ಲಿ ಇವರಿಗೆ ನಿಲ್ಲಲಾರದೆ ಬ್ರಿಟಿಷರಿಂದ ಗುಲಾಮಗಿರಿಯನ್ನು ತಪ್ಪಿಸಿದ ಮೊದಲಿನ ಕಾಂಗ್ರೆಸ್ಸನ್ನು ಬಯ್ಯುತ್ತಾ, ತಡವರಿಸಿಕೊಂಡು ಹೋಗುತ್ತಾ ದೊಡ್ಡ ರಾಜ್ಯವಾದ ಮೈಸೂರನ್ನು ಕಂಡು ಆನಂದದಿಂದ 'ಬದುಕಿದೆವು, ಬ್ರಿಟಿಷರು ಹೋಗಲಿ, ಮೈಸೂರಿನ ಅಧೀನಕ್ಕೆ ನಮ್ಮ ದೇಶವನ್ನು ಒಪ್ಪಿಸಿ ಅವರ ಅಧೀನದಲ್ಲಿ ಬಾಳೋಣ' ಎಂದು ಅಂಗಲಾಚಿ ಬೇಡಿಕೊಂಡ ಹೊಸ ಗುಲಾಮಗಿರಿ ಬಯಸುವ ಕಾಂಗ್ರೆಸ್! ಇವರಿಗೆ ನಮ್ಮ ಓಟೇ! ಎಲ್ಲಿಯವರೆಗೆ ಬೇಡಿಕೊಂಡರು? ಇಲ್ಲಿಂದ ಡೆಲ್ಲಿ ನಗರದವರೆಗೆ; ಯಾರೊಡನೆ? ಯಾವ ಗುಲಾಮಗಿರಿಯನ್ನು ತನ್ನ ಕನಸು ಮನಸ್ಸಿನಲ್ಲಿ ಎಣಿಸನೋ, ಒಂದು ಜನಾಂಗವು ಇನ್ನೊಂದು ಜನಾಂಗವನ್ನು ಆಳಲ್ಪಡುವುದನ್ನು ಕಂಡರೆ ರೇಗಿಬೀಳುವನೋ! ಯಾವ ಚೀನಾ ರಾಜ್ಯದ ಒಂದು ಭಾಗಕ್ಕೆ ಪ್ರಪಂಚ ಭದ್ರತಾ ಸಮ್ಮೇಳನದಲ್ಲಿ ಸ್ಥಳ ಕೊಡದಿರಲು ಪರರಾಷ್ಟ್ರಗಳ ಬೆದರಿಕೆಗೆ ಬಗ್ಗದೆ ಸ್ಥಳ ಕೊಡಲು ವಾದಿಸಿದನೋ, ಯಾವ ಕಾಶ್ಮೀರವು ಪಾಕಿಸ್ಥಾನಕ್ಕೂ ಅಲ್ಲ, ಇಂಡಿಯಾ ದೇಶದ್ದೂ ಅಲ್ಲ, ಅವರ ಸ್ವಾತಂತ್ರ್ಯ ಜೀವನದ ಅವರದೇ ಆಗಬೇಕೆಂದು ತೀರ್ಪು ಕೊಡುತ್ತಿರುವನೋ ಆ ಸ್ವಾತಂತ್ರ್ಯ ಮೂರ್ತಿಯಾದ ಜವಾಹರ್‌ಲಾಲ್ ನೆಹರೂರವರಿಗೆ ಈ ಕಾಂಗ್ರೆಸಿಗರೆನಿಸಿಕೊಂಡ ದೇಶತ್ಯಾಗ ಮೂರ್ತಿಗಳು ಪುಸ್ತಕ ಮೂಲಕವೂ ಮೆಮೋರಿಯಲ್ ಮೂಲಕವೂ, ಕೊಡಗಿನಲ್ಲಿರುವ ಮೂಕ ಜನರ ಮತ ಕೇಳದೆ ಈ ಕೊಡಗು ದೇಶವನ್ನು ಬೇರೆ ಪ್ರಾಂತ್ಯಗಳೊಡನೆ ಸೇರಿಸಿಬಿಡಬೇಕೆಂದು ಅಂಗಲಾಚಿ ಬೇಡಿಕೊಂಡ ಧೀರರು. ಗುಲಾಮಗಿರಿಯನ್ನೇ ಬೇಡುವ ನಿಮಗಲ್ಲವೇ ರೈತರಾದ ನಮ್ಮ ಓಟು! ಮೈಸೂರಿಗೆ ಸೇರಿಸಿ ಸ್ವರ್ಗದ ಸೋಪಾನವನ್ನು ಕಾವೇರಿ ಮಾತೆಯ ವೀರ ಪುತ್ರರಾದ ನಮಗಲ್ಲವೇ ನೀವು ಕಟ್ಟಿಕೊಡುವವರು. ಈ ಶತಮಾನದಲ್ಲಿ ಸಹ ಇನ್ನೂ ಪರರ ಆಳಿಕೆಯನ್ನು ಬಯಸುವ ಜನರಿದ್ದಾರಲ್ಲಾ ಎಂದು ಆ ಸ್ವಾತಂತ್ರ್ಯಮೂರ್ತಿ ನೆಹರೂರವರಿಗೆ ನಗು ಬಂದಿದ್ದರಿಂದಲೇ ಇವರ ಪಿತ್ತ ಬಿಡಿಸಲು ಸಮಯ ಕೊಟ್ಟಿರುವರು. ನೆಹರೂರವರ ಚಿತ್ರ ಹಾಕಿ ಅದಕ್ಕೆ ಅವರ ಸರಕಾರಕ್ಕೆ ಓಟು ಕೊಡಿರಿ ಎಂದು ಕೇಳುವರು. ಹೌದು, ಇವರು ಸ್ವಾತಂತ್ರ್ಯಪ್ರೇಮಿಗಳಲ್ಲವೆಂದು ಅವರಿಗೆ ಪೂರ್ತಿ ತಿಳಿದೇ ನೆಹರೂವಿನ ಹೆಸರಿನಲ್ಲಿ ಓಟು ಕೇಳುತ್ತಿದ್ದಾರೆ. ಮಹನೀಯರೇ ನೆಹರೂರವರು ಕೊಡಗಿನ ಜನರ ಓಟು ಕೇಳುವುದಿಲ್ಲ. ಅವರು ಕೊಡಗಿಗೆ ನಿಂತ ಉಮೇದುವಾರರಲ್ಲ. ಅವರ ಸ್ವಾತಂತ್ರ್ಯ ಪ್ರಿಯ ಛಾಯೆ ಸಹ ನಿಮ್ಮಲ್ಲಿ ಇಲ್ಲದ್ದರಿಂದ ಕಾಂಗ್ರೆಸ್ ಎಂಬ ಹೆಸರನ್ನು ನಿಮ್ಮ ಕಂಠದಿಂದ ತೆಗೆದು ಹಾಕಿ ನೆಹರೂವಿನ ಹೆಸರನ್ನು ಉಳಿಸಿ. ತಲೆಗೆಟ್ಟರೂ ಸುಖಪಡಬೇಕೆಂದು ಸಾಕುವ ನಿಮ್ಮ ಸಂಗಡಕ್ಕೆ ನಮ್ಮ ಓಟೇ! 'ಪಟ್ಟೆಣೆ ಬುದ್ಧಂಡ ತಂಗಿಯೂ ಬೋರೆ ಬೋಡಿ ತಿಂಬುಲ್' ಎಂಬ ಕೊಡಗರ ವೀರವಾಣಿಯು ಇಂದು ಎಲ್ಲರ ಮನೆ ಮಾತಾಗಿರುವಾಗ ಪೂರ್ವದ ವೀರಸಿಂಹದ ಮರಿಗಳಾದ ಇಂದಿನ ನಮ್ಮಂತಹ ನರಕೇಸರಿಗಳನ್ನು ಪರರ ಗುಲಾಮಗಿರಿಗೆ ಹೇಳದೆ ಕೇಳದೆ ಬಲಿ ಬೀಳಿಸುವ ನಿಮಗೆ! ಗುಲಾಮಗಿರಿಯನ್ನು ಬಯಸುವ ಕಾಂಗ್ರೆಸ್ಸಿಗೆ ನಮ್ಮ ಓಟು! ಪರಕಾಲಿಂಗನ ಮೂಟೆ ಹೊರುವ ನಿಮಗೆ ನಮ್ಮ ಓಟೇ. ಇಷ್ಟು ೫ ವರ್ಷಗಳವರೆಗೆ ಕೊಡಗನ್ನು ಸೇರಿಸುವ ಯೋಜನೆಯೇ ಇಲ್ಲವೆಂದು ನೀವು ಹೇಳಿದರೆ ಕಳೆದ ೩ ವರ್ಷದಲ್ಲಿ ನೀವು ಮಾಡಿದ ಪ್ರಯತ್ನ ಮರೆತುಬಿಟ್ಟಿರಲ್ಲೇ? ರೈತರಾದ ನಾವು ಮರೆತಿಲ್ಲ. ಈಗಿನ ರೈತರಾದ ನಾವು ಬಹು ಮುಂದುವರಿದ್ದೇವೆ. 'ಕಾಗೆ ಕೋಗಿಲೆಯ ಹಾಗೆ ಇದ್ದರೂ ರಾಗದಲ್ಲಿ ಭೇದವಿದೆ' ಎಂಬಂತೆ ನಿಮ್ಮ ರಾಗವು ನಮಗೆ ತಿಳಿಯುತ್ತೆ. ಆದುದರಿಂದ ವೀರಯೋಧರ ಮಕ್ಕಳಾದ ಸ್ವಾತಂತ್ರ್ಯಪ್ರಿಯರ ಮಕ್ಕಳಾದ ನಮ್ಮ ಓಟು ಈ ಹೊಸ ಮಾದರಿ ಕಾಂಗ್ರೆಸ್ಸಿಗೆ ಸಿಕ್ಕಲಾರದು.

ಹಾಗಾದರೆ ಈ ಅಮೂಲ್ಯವಾದ ಓಟನ್ನು ಯಾರಿಗೆ ಕೊಡಬೇಕು. ಪ್ರತ್ಯೇಕ ಪಕ್ಷದ ಪಟ್ಟಿ ನೋಡಿದೆನು. ಇವರೆಲ್ಲ ನೇತಾರರು ಬ್ರಿಟಿಷರನ್ನು ದಂಗು ಬಡಿದು ಗುಲಾಮಗಿರಿಯನ್ನು ಬಿಡಿಸಿದವರು ಅಲ್ಲದೆ ಕೊಡಗು ಪ್ರತ್ಯೇಕವಿರಬೇಕೆಂದೂ ಸಹ ಸಾರುತ್ತಿರುವರು. ಇವರ್ಯಾಕೆ ಕಾಂಗ್ರೆಸ್ಸನ್ನು ಬಿಟ್ಟರು? ಓಹೋ! ಒಂದು ಗುಲಾಮಗಿರಿ ಬಿಡಿಸಿ ಇನ್ನೂ ೫ ವರ್ಷ ತುಂಬಿಲ್ಲ. ಆಗಲೇ ಕಾಂಗ್ರೆಸಿನ ಹೆಸರಿನಿಂದ ಪರರಾಡಳಿತವನ್ನು ಅಂಗಲಾಚಿ ಬೇಡುವುದನ್ನು ಕಂಡು ಮನನೊಂದು ಕಾಂಗ್ರೆಸ್ ಪರರಾಡಳಿತವನ್ನು ನಿರ್ಮೂಲ ಮಾಡುವ ಸಂಸ್ಥೆ. ಇದಾದರೋ ಗುಲಾಮಗಿರಿ ಬೇಡುತ್ತಿದೆ. ಪೂರ್ವದವರು ನೆಟ್ಟ ವಿಷದ ಬೀಜವನ್ನು ಪುನಃ ಕಂಡೂ ಹೋರಾಡಿ ಸೋತರೂ ಸಹ ನಮ್ಮ ಮುಂದಿನ ಪೀಳಿಗೆಗೆ ನೆಡಬಾರದೆಂದು ಹೊರ ಬಂದಿರುವರು. ಪ್ರತ್ಯೇಕವಾದಿಗಳೆಂದೆನ್ನಿಸಿಕೊಂಡಿರುವರು. ವೀರಕೇಸರಿಗಳ ರಕ್ತದಿಂದ ಹುಟ್ಟಿದ ನಮಗಳ, ದಕ್ಷಿಣ ಕಾಶಿ ಎಂಬ ಹೆಸರಿನಿಂದ ಮೆರೆಯುವ ಕೊಡಗಿನ ಎಲ್ಲಾ ಜಾತಿಮತಗಳ ಹಕ್ಕು ಬಾಧ್ಯತೆಗಳನ್ನು ಪರರಾಜ್ಯದಿಂದ ಬಂದರೂ ಅನ್ಯಕ್ಕೆ ಮುಟ್ಟುಗೋಲುಗಳಿಲ್ಲದೆ ತಿನ್ನುವ ನಮ್ಮೆಲ್ಲರ ಓಟು ನಿಮ್ಮ ಪಕ್ಷದ ಗುರುತಾದ, ನ್ಯಾಯ ತೀರ್ಪಿನ ಕೋರ್ಟಿನಲ್ಲಿ ಸಹ ಕಾಣುವ 'ತಕ್ಕಡಿ ಮಾರ್ಕಿಗೆ' ನಮ್ಮ ಓಟನ್ನು ಕೊಟ್ಟು ಅವರನ್ನು ಜಯಶೀಲರನ್ನಾಗಿ ಮಾಡಿ ವೀರರಾಗಿ, ಸ್ವತಂತ್ರರಾಗಿ ಬಾಳಲು ಎಲ್ಲಾ ಜಾತಿ ಪಂಗಡಗಳು ಸಹಾಯ ಮಾಡುವಿರಾಗಿ ಆಶಿಸುತ್ತೇನೆ.

ಜಯ್ ಹಿಂದ್!

ಬೊಂಬಾಯಿಯ ಸಾಮ್ಯವಾದಿ ಪುರಿಯಾಳು ಜಿ. ಪಿ. ಹಥೀಸಿಂಗರ ಹೆಂಡತಿಯೂ ಪಂ. ನೆಹರೂ ಅವರ ತಂಗಿಯೂ ಆದ ಕೃಷ್ಣಾ ಹಥೀಸಿಂಗರು ತಮ್ಮ ಗಂಡನ ಪರವಾಗಿ ಮನೆ ಮನೆಗೆ ಪ್ರಚಾರ ಮಾಡುತ್ತ ಹೊರಟಾಗ ಕಾಂಗ್ರೆಸ್ ಬೆಂಬಲಿಗರ ಜನ ಜಂಗುಳಿ ಅಡ್ಡಗಟ್ಟಿದ್ದರಿಂದ ಅವರು ದಾರಿಬಿಡುವ ವರೆಗೆ ತಾವು ಕದಲುವುದಿಲ್ಲೆಂದು ಐದು ತಾಸುಗಳ ವರೆಗೆ ಶ್ರೀಮತಿಯವರು ಸತ್ಯಾಗ್ರಹ ಮಾಡುತ್ತ ಕುಳಿತುಬಿಟ್ಟರು.

ರೈತನ ಚಿತ್ರ

ಲೇ:- ಶ್ರೀ ಎಂ. ಎಸ್. ನೊಣ್ಣಪ್ಪ, ಶಾನೂರು.

ಭಾರತಮಾತೆಯು ಬ್ರಿಟಿಷರ ಬಂಧನದಿಂದ [illegible] ವರ್ಷಗಳು ಕಳೆದು ಹೋದವು. ನಮ್ಮ [illegible] ಸರಕಾರವನ್ನು ಸ್ಥಾಪಿಸಿ ರಾಜ್ಯಘಟನೆಯ ಕರಡನ್ನು ಬರೆದಿರುವುದು [illegible]

[illegible]

ಇನ್ನು ಮುಂದಕ್ಕೆ ನಡೆ ಬೇಕಾಗಿರುವ [illegible] ನಮ್ಮ ಕೊಡಗು ದೇಶದ ರೈತರ [illegible] ಸ್ಥಿತಿಗತಿಗಳನ್ನು ಚಿತ್ರಿಸುವುದೇ ಈ ಲೇಖನದ ಉದ್ದೇಶವಾಗಿದೆ.

ಕೊಡಗು ದೇಶವು ಪರಾಧೀನತೆಯಲ್ಲಿ ದ್ದಿದ್ದರೂ ಪ್ರತ್ಯೇಕ ಸ್ವಾತಂತ್ರ್ಯವಾಗಿ ಚೀಫ್ ಕಮಿಷನರುಳ್ಳವರಲ್ಲಿ [illegible] ಚೀಫ್ ಕಮಿಷನರಿಗೆ [illegible] ಲೆಜಿಸ್ಲೆಟಿವ್ ಕೌನ್ಸಿಲೂ ಇದ್ದು ಅದು [illegible] ಜನ ಪ್ರತಿನಿಧಿಯನ್ನು ಸಿಕೊಂಡ [illegible] ವರ್ಷಗಳ ವರೆಗೆ ರಾಜ್ಯಾಡಳಿತ ನಡೆಸಿತು. ಆದರೆ ಈ ವರೆಗೆ ಕೃಷಿಯ ದೇಶವಾದ ಇಲ್ಲಿಯ ರೈತರ ಪ್ರತಿನಿಧಿಗಳು ಆ ಕೌನ್ಸಿಲಿನಲ್ಲಿ ತಮ್ಮ [illegible] ಘನತೆಯನ್ನು [illegible] ಕೊಂಡು ಬಂದಿದ್ದರೂ ಅವರಲ್ಲಿ ಯಾರೂ ತನ್ನ ಠರಾವು ಪಾಸಾಗಲಿಲ್ಲ. ಪಾಸಾದ ಠರಾವು ಜಾರಿಗೆ ಬರಲಿಲ್ಲವೆಂದು ಆ ಸಿಫಾರಸ್ಸು ಕೌನ್ಸಿಲಿಗೆ ರಾಜೀನಾಮೆಯನ್ನಿತ್ತು ಹೊರಬರಲಿಲ್ಲ. ಅಂತರ ಈ ಜನಪ್ರತಿನಿಧಿಗಳಿಗೆ ಸರಕಾರಿ ಅಧಿಕಾರಿಗಳ ಠಕ್ಕಬಾಜಿಗಿರಿಯು ಬೇಕಿದ್ದಿತಲ್ಲದೆ ಜನಹಿತ ಬೇಕಾಗಿರಲಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ರೈತರ ತೊಂದರೆಯನ್ನು ಎತ್ತಿ ಹೇಳಿ ಚೀಫ್ ಕಮಿಷನರನ್ನು ವಿರೋಧಿಸಿ ಅವರ ವಿರುದ್ಧ ಶ್ರಮಪಡುವ [illegible] ಜನಹಿತ [illegible] ಬರೀ ಹೊಟ್ಟೆಭತ್ಯೆಗಾಗಿ ಚೀಫ್ ಕಮಿಷನರ ಗುಡ್ ಒಪೀನಿಯನ್ ಅವರ ಮೇಲಿರಬೇಕೆಂದೇ ಸಾಧಿಸುವವರಾಗಿ ಈ ವರೆಗೆ ಕೊಡಗಿನ ಆಡಳಿತದಲ್ಲಿ ರೈತರ ಹಿತಸಾಧನೆಯಾಗಲಿಲ್ಲ. ಮುಂದಿನ [illegible] ರೈತರ ಹಿತಸಾಧನೆಯಾಗಬಹುದೆಂದು ಭಾವಿಸಲಾಗಿದೆ.

ನಮ್ಮ ಕೊಡಗು ಸಂಸಾರದ ಒಟ್ಟು ಸರಕಾರಿ ನೌಕರರಿಗೂ ಈ ದೇಶದ ಒಟ್ಟು ರೈತರ ಜೀವನ ಮಟ್ಟಕ್ಕೂ ಅಜಗಜಾಂತರವಿದೆ. ಈ ಸರಕಾರದಲ್ಲಿರುವ ಒಬ್ಬ ರೈತ ಗುಮಾಸ್ತನ ಮಟ್ಟಕ್ಕಿಂತ [illegible] ವಿದ್ಯೆಯಿಲ್ಲದೆಯೆಂದು ಭಾವಿಸುವ. ಆತನಿಗೆ ಬರುವ ಜನರ ಸಂಬಳವೂ ಇದೆ. ಬಾಡಿಗೆಯಿಲ್ಲದ ಮನೆಯೂ ಇದೆ [illegible]

[illegible]

[illegible] ಒಬ್ಬ ರೈತನ ಜೀವನ ಮಟ್ಟವನ್ನು ಎತ್ತರಿಸಿ [illegible] ನೌಕರನಾದ [illegible] ಬಲೆ [illegible] ಸಂಖ್ಯೆ [illegible] ಆದರೆ ನೌಕರನ ಉತ್ಪತ್ತಿಯು ರೈತನ ಉತ್ಪನ್ನಕ್ಕಿಂತ ಮಿಗಿಲು [illegible] ಎಂದರೆ ತಾನು ಬೆಳೆಸಿದ ಹುಟ್ಟುವಳಿ [illegible] ಬೇಕಾದಷ್ಟು ಉಳಿಸಿಕೊಳ್ಳಲು [illegible] 4½ ಬಟ್ಟೆ ಬತ್ತದ ಸೀದಾ ಪದ್ಧತಿಗೆ ತಲೆಬಾಗಿ ಬಡಕಲು ಶರೀರ, ಗುಳಿಬಿದ್ದ ಕಣ್ಣಿನ, ಒಬ್ಬಿದ ದವಡೆಯ, ಬೆಳೆದ ಗಡ್ಡ, ಹರಕಲು ಬಟ್ಟೆಯ ಸಂಪೋಕಲನಾದ ರೈತನ ಚಿತ್ರವನ್ನೂ ಸರಕಾರಿ ನೌಕರನ ಚಿತ್ರವನ್ನೂ ವಾಚಕರೇ ಊಹಿಸಿ.

ಬ್ರಿಟಿಷರ ದಬ್ಬಾಳಿಕೆಯು ರೈತನ ಭಾಗಕ್ಕೆ ಇಷ್ಟು ಅಳಿದಂತಿಲ್ಲ. ಬ್ರಿಟಿಷರ ಕಾಲದಲ್ಲಿ ಅಧಿಕಾರದಲ್ಲಿದ್ದ ವ್ಯಕ್ತಿಗಳೇ ಇಂದೂ ಅಧಿಕಾರ ಸ್ಥಾನದಲ್ಲಿರುವುದರಿಂದಲೋ ಅಥವಾ ಬ್ರಿಟಿಷ್ ಮನೋವೃತ್ತಿ ಅವರಲ್ಲಿ ಬಲಗೊಂಡಿರುವುದರಿಂದಲೋ ರೈತನ ಸ್ಥಿತಿ ಅಂದಿನಂತೆ ಇಂದೂ ಇದೆ. ದೇಶಕ್ಕೆ ಅನ್ನವನ್ನೀಯುವ ಈ ಬಡ ರೈತನ ಏಳಿಗೆಗೆ ಯಾರೂ ಪ್ರಯತ್ನಿಸುವಂತೆ ಭಾಸವಾಗುವುದಿಲ್ಲ. ಕಳೆದ ಯುದ್ಧ ಪ್ರಾರಂಭದಿಂದಲೇ ಆತನ ಸ್ಥಿತಿಯು ಶೋಚನೀಯವಾಗಿ [illegible] ಜೀವನಾವಶ್ಯಕ ವಸ್ತುಗಳು ದೊರೆಯದ ಕಾರಣ ಕಷ್ಟಗಳಿಗೆ ಗುರಿಯಾಗಿದ್ದಾನೆ. ಕಷ್ಟಸಂಕಟಗಳ [illegible] ಕಾಳಸಂತೆಯಿಂದ ಅವನು ಬಳಲಿದ್ದಾನೆ. ಆತನು ಗದ್ದೆಗಳಲ್ಲಿ ದುಡಿಯುವ ಎತ್ತುಗಳ ಮಟ್ಟಕ್ಕೇ ಆತನ ಜೀವನ ಮಟ್ಟವಿಳಿಯುತ್ತಲಿದೆ. ಹೊಟ್ಟೆಗೆ ಬೇಕಾದಷ್ಟು [illegible]

[illegible]

ಸರಕಾರವು ಗಮನಿಸುತ್ತಿಲ್ಲ. ಆಹಾರ [illegible] ನೌಕರ [illegible] ಜೀವನ [illegible] ನೀಡಿಲ್ಲ [illegible] ವಾದ್ಯದಲ್ಲಿ [illegible] ಸರಕಾರದ ನೌಕರರು ರೈತರ ಬೆನ್ನೇರಿ ಸ್ವರ್ಗದ ಕಲ್ಪವೃಕ್ಷಕ್ಕೆ ಉಟಿಕಿಸುತ್ತಿದ್ದಾರೆ.

ಇಂದು ಕೊಡಗಿನ ರೈತರಲ್ಲಿ ಬಡತನವು ಪ್ರಬಲಿಸುತ್ತಿದೆ. ಇದಕ್ಕೆ ದೃಷ್ಟಾಂತ [illegible] ಸಂಸ್ಥೆಗಳಲ್ಲಿಯ ಸಾಲಗಾರರ ಸಂಖ್ಯೆ, ಬ್ಯಾಂಕಿನಲ್ಲಿ ಅಡವಿಟ್ಟ ಒಡವೆಗಳ ಸಂಖ್ಯೆಯನ್ನು ಪರಿಶೀಲಿಸಿದರೆ ತಿಳಿಯುವುದು. ರೈತನ ಹಿತಕ್ಕಾಗಿಯೆಂದು ಹೇಳುತ್ತಿರುವ ನಿರಾವರಿ ಯೋಜನೆಗಳು, ರಸ್ತೆಗಳ ತಯಾರಿ, ವಿದ್ಯುತ್ [illegible] ಅಭಿವೃದ್ಧಿಗಳೆಲ್ಲಾ ಗಾಳಿಗೋಪುರಗಳಾಗಿವೆ. [illegible] ಯೋಜನೆ ಎಂಬ ಹೆಸರಿನಲ್ಲಿ ರಸ್ತೆಗಳ ಚಿತ್ರವನ್ನು ಬಿಡಿಸಿ ಒಟ್ಟು ಬಳದದ್ದು ನೋಡಿದರೆ ನಮ್ಮ ಕೊಡಗಿನಲ್ಲಿ ಅಂತಹ ರಸ್ತೆಗಳ ಯಾವ ಕಾಲಕ್ಕೂ ತಯಾರಾಗಲಿಕ್ಕಿಲ್ಲವೆಂಬ ಸಂದೇಹವುಂಟಾಗುತ್ತಲಿದೆ. ನಮ್ಮ ಇಲ್ಲಿಯ ಯೋಜನೆಗಳು ಕಷ್ಟಬಡಿಸುವುದರಲ್ಲೇ ಲಕ್ಷ ರೂಪಾಯಿಗಳು ನೌಕರರಿಗೆ ವ್ಯಯವಾಗಿ ಯೋಜನೆಗಳು ಕೊನೆಗಾಣುತ್ತವೆ.

ರೈತನು ಸರ್ಕಾರಕ್ಕೆ ಅರ್ಜಿ ಬರೆದುಕೊಂಡು ಎಷ್ಟೋ ವರ್ಷಗಳ ನಂತರ [illegible] ಆಗುವುದು ಇದೆ, ಆಗದಿರುವುದೂ ಇದೆ. [illegible]

ದೇ [illegible] ರೈತರು [illegible]

[illegible]

ರೈತನ [illegible] ವಿದ್ಯಾ [illegible] (?) [illegible] ನೌಕರ [illegible] ರೈತನ [illegible] ಭೂಮಿ [illegible] ನೌಕರರ [illegible] ರೈತರು [illegible]! ತಾಯಿಯು ತನ್ನ ಯಜಮಾನನನ್ನು ನಂಬಿ ಹೊರಗೆ ಮಲಗಿ ಕೊಟ್ಟಿಸಿದ್ದು [illegible] ನೆಮ್ಮದಿ ಕಾಯುತ್ತಿದ್ದರೆ, ಬೆಕ್ಕು ಒಳಗೇ ಇದ್ದುಕೊಂಡು ತನ್ನ ಆಹಾರಕ್ಕಾಗಿ ಇಲಿಗಳನ್ನು ಹಿಡಿದು ಹಾಲನ್ನು ಕಣ್ಣುಮುಚ್ಚಿ, ಕದ್ದು ಕುಡಿದು ಬೆಚ್ಚಗೆ ಮಲಗಿ ನಿದ್ರಿಸುತ್ತದೆ. ಹಾಲು ಕದ್ದು ಕುಡಿಯುವುದನ್ನು ಎಬ್ಬಿಸಿದ್ದೇ ಆದರೆ ಇನ್ನು ಕತೆ ಯೇನಾಗುತ್ತಿ!

ಈ ರೀತಿ ಅಧಿಕಾರಿ, ಅಧಿಕಾರೇತರರು ಎಂಬ ಅಂತರವು ಜನತೆಯಲ್ಲಿ ಬೆಳೆಯಗೊಡಬಾರದು. ತಾವು ಪರರಿಗೆ ಪರರು ತನಗೆಯೆಂಬ ತತ್ವವೇ ನೌಕರರಿಗೂ ನವಾಬಿ ನೌಕರರಿಗೂ ಮಾಡಿಬರಬೇಕು. ಈ ತರದ ಅಂತರವು ಈ ವರೆಗೆ ಬ್ರಿಟಿಷರ ದಬ್ಬಾಳಿಕೆಯಿಂದಲೂ ನದನಂತರ [illegible] ಅಭ್ಯಾಸದಿಂದಲೂ ನಡೆವ ಭಾವನೆಯು ಹುಟ್ಟಿರಬಹುದು. ಇನ್ನು ಮುಂದಾದರೂ [illegible] ರೈತರ ಹಿತಸಾಧಿಸಿ ದೊರೆತ ಸ್ವರಾಜ್ಯ ನೆಲೆಗೊಳಿಸಬೇಕಾದುದು [illegible] ಆಗಿದೆ.

ಪ್ರತ್ಯೇಕವಾದಿಗಳು ಕಾಂಗ್ರೆಸ್ಸನ್ನು ಬಿಟ್ಟದ್ದೇಕೆ?

ಕೊಡಗು ಕಾಂಗ್ರೆಸಿಗರಲ್ಲಿ ಕೊಡಗಿನ ಭವಿಷ್ಯದ ಬಗ್ಗೆ ಭಿನ್ನಾಭಿಪ್ರಾಯವು ೧೯೪೫ ರ ಚುನಾವಣೆಗೆ ಮುಂಚೆ ಇತ್ತು. ಆದರೆ ಅಂದು ಕಾಂಗ್ರೆಸ್ಸಿಗರ ಗುರಿಯು ದೇಶದ ಸ್ವಾತಂತ್ರ್ಯ ಸಂಪಾದನೆಯಾಗಿದ್ದು ಅಂದಿನ ಬ್ರಿಟಿಷ್ ಸರಕಾರದೊಡನೆ ಹೋರಾಡಬೇಕಿದ್ದ ಕಾರಣ ಕೊಡಗು ಕಾಂಗ್ರೆಸ್ಸಿಗರು ಆ ಭಿನ್ನಾಭಿಪ್ರಾಯವನ್ನು ಮರೆತು ದೇಶದ ಬಿಡುಗಡೆಗಾಗಿ ಹೋರಾಡಿದರು. ೧೯೪೭ ರ ಆಗಸ್ಟ್ ೧೫ ರಲ್ಲಿ ಸ್ವರಾಜ್ಯ ದೊರೆತನಂತರ ಕಾಂಗ್ರೆಸ್ಸಿಗರೊಳಗಿನ ಆ ಭಿನ್ನಾಭಿಪ್ರಾಯವು ಹೆಚ್ಚು ಸ್ಪಷ್ಟವಾಗಿ ತೋರತೊಡಗಿತು. ಸ್ವಾತಂತ್ರ್ಯದನಂತರ ಭಾಷಾವಾರು ಪ್ರಾಂತ ರಚನೆಯ ಕೂಗು ಹೆಚ್ಚಾಯಿತು. ಕರ್ನಾಟಕ ಏಕೀಕರಣದ ಚಳವಳಿ ಪ್ರಾರಂಭವಾಯಿತು. ಕನ್ನಡ ನಾಡು ಹಲವಾರು ಆಡಳಿತಕ್ಕೆ ಹರಿದು ಹಂಚಿಹೋಗಿದೆ. ಬೊಂಬಾಯಿ ಶಾಸನ ಸಭೆಯಲ್ಲಿ ಕನ್ನಡ ನಾಡಿನ ಪ್ರತಿನಿಧಿಗಳು ಅಲ್ಪ ಸಂಖ್ಯೆಯವರಾದ ಕಾರಣ ಅವರ ಕೂಗು ಪರಿಣಾಮಕಾರಿಯಾಗಿಲ್ಲ. ಇದ್ದರಿಂದ ತಮ್ಮದೇ ಆದ ಪ್ರಾಂತವನ್ನು ರಚಿಸಲು ಕನ್ನಡಿಗರು ಹೆಚ್ಚಾಗಿ ಹೋರಾಡುತ್ತ, ಬೆಳಗಾವಿಯವರು ಯತ್ನಿಸುತ್ತಿದ್ದಾರೆ. ಈ ಪ್ರಯತ್ನವನ್ನೇ ತನ್ನ ಪೂರ್ಣ ಗುರಿಯಾಗಿ ಇಟ್ಟುಕೊಂಡಿರುವ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಆದಿಯಿಂದಲೇ ಕೊಡಗನ್ನು ಬೇರೆ ಕನ್ನಡ ಭಾಗಗಳೊಡನೆ ಸೇರಿಸುವ ಪ್ರಯತ್ನವನ್ನು ಮಾಡುತ್ತಿದೆ. ಆದರೆ ಅವರ ಈ ಪ್ರಯತ್ನವನ್ನು ಕೊಡಗಿನ ಪ್ರತ್ಯೇಕವಾದಿ ಕಾಂಗ್ರೆಸಿಗರು ವಿರೋಧಿಸಿದ್ದಾರೆ. ಇಂದೂ ವಿರೋಧಿಸುತ್ತಿದ್ದಾರೆ. ಇಂದು ಬೊಂಬಾಯಿ ಶಾಸನ ಸಭೆಯಲ್ಲಿ ಕನ್ನಡ ಭಾಗಗಳಿಗಾಗುತ್ತಿರುವ ಅಹಿತವೇ ನಾಳೆ ಕನ್ನಡ ನಾಡಿನ ಶಾಸನ ಸಭೆಯಲ್ಲಿ ಕೊಡಗಿಗಾಗುವುದರಿಂದ ಅಂಥಾ ಪರಿಸ್ಥಿತಿ ತಮಗೆ ಬಾರದಂತೆ ಪ್ರತ್ಯೇಕವಾದಿಗಳು ಎಚ್ಚರಿಕೆ ವಹಿಸಿ ವರ್ತಿಸುತ್ತಿದ್ದಾರೆ. ಆದರೆ ಆ ವಿರೋಧವನ್ನು ಮುರಿಯಲು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸು ಮಹಾ ಪ್ರಯತ್ನಪಟ್ಟು ಕಲಹ ಹಚ್ಚುತ್ತಿದೆ. ಕೊಡಗು ಕಾಂಗ್ರೆಸ್ಸಿನಲ್ಲಿ ಪ್ರತ್ಯೇಕ ಮತ್ತು ಸಂಯೋಜನಾ ಪಕ್ಷಗಳಲ್ಲಿ ಘರ್ಷಣೆ ಹುಟ್ಟಿದಂತೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸಿನವರು ಸಂಯೋಜನಾ ಪಕ್ಷವನ್ನು ಬಹಿರಂಗವಾಗಿ ಸಮರ್ಥಿಸತೊಡಗಿದರು. ಅಷ್ಟರಿಂದ ಪ್ರತ್ಯೇಕವಾದಿಗಳ ಬಹುಮತವಿದ್ದ ಜಿಲ್ಲಾ ಕಾಂಗ್ರೆಸ್ಸನ್ನು ವಜಾ ಮಾಡಿ ಸಂಯೋಜನಾವಾದಿಗಳ ಬಹುಮತವುಳ್ಳ ಎಡ್ ಹಾಕ್ ಕಾಂಗ್ರೆಸ್ಸನ್ನು ರಚಿಸಿದರು. ಈ ಎಡ್ ಹಾಕ್ ಸಮಿತಿಯನ್ನು ಹಿಡಿದುಕೊಂಡು [illegible] ಉದ್ದೇಶವಾಗಿತ್ತು. [illegible] ಮುಂದಿರಿಸಿದರು. ನಂತರ ಕಾಂಗ್ರೆಸ್ ಸಮಿತಿಗೆ ಚುನಾವಣೆ ನಡೆಯುವ ಸಂದರ್ಭದಲ್ಲಿ ಅಧಿಕಾರದಲ್ಲಿದ್ದ ಎಡ್ ಹಾಕ್

[ಬರೆದು ಬಂದದ್ದು]

ಸಮಿತಿಯವರು ಯೋಗ್ಯ ಚುನಾವಣೆಗೆ ಅವಕಾಶ ಕೊಡದ್ದರಿಂದ ಪ್ರತ್ಯೇಕವಾದಿಗಳು ಆ ಚುನಾವಣೆಯಲ್ಲಿ ಭಾಗವಹಿಸದೆ ಪ್ರಾಂತೀಯ ಕಾಂಗ್ರೆಸ್ಸಿಗೆ ಅಪೀಲು ಮಾಡಿದರು. ಆದರೆ ಕರ್ನಾಟಕ ಪ್ರಾಂತೀಯ ಸಮಿತಿಯವರು ಯೋಗ್ಯ ನಿರ್ಣಯ ಕೊಡದ ಕಾರಣ ಇಂದಿಗೂ ಕೂಡ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯಲ್ಲಿ ಪ್ರತ್ಯೇಕವಾದಿಗಳಿಲ್ಲ. ಕಾಂಗ್ರೆಸ್ಸಿನೊಳಗಿನ ಈ ಗೊಂದಲದ ಮಧ್ಯೆ ದೇಶದ ಭವಿಷ್ಯದ ಪ್ರಶ್ನೆಯು ಮಹತ್ವವನ್ನು ಪಡೆಯಿತು. ಹಿಂದಿನ ವರ್ಷದಲ್ಲಿ ಸಂಸ್ಥಾನಗಳ ವಿಲೀನವಾಗುತ್ತಿದ್ದ ಆ ಕಾಲದಲ್ಲಿ ಕೊಡಗಿನ ವಿಲೀನೀಕರಣಕ್ಕೆ ಕೊಡಗಿನ ಸಂಯೋಜನಾವಾದಿಗಳೂ, ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರೂ ಹಿರಿ ಪ್ರಯತ್ನ ಮಾಡಿದರು. ಈ ಕಾರಣಕ್ಕಾಗಿ ಕೊಡಗಿನ ಹಿರಿಯ ಮುಂದಾಳುಗಳನ್ನು ದೆಹಲಿಗೆ ಕರೆದು ಡೆಲ್ಲಿ ದರ್ಬಾರೊಂದು ನಡೆಯಿತು. ಅದರಲ್ಲಿ ಸಂಯೋಜನಾವಾದಿಗಳು ಕೊಡಗನ್ನು ಯಾವುದೇ ವಿಚಾರವಿಲ್ಲದೆ ಕೇಂದ್ರ ಸರಕಾರವು ವಿಲೀನಗೊಳಿಸಬೇಕೆಂದೂ ಕೊಡಗು ತನ್ನ ಆರ್ಥಿಕ ನಿರ್ಬಲತೆ, ಭೌಗೋಳಿಕ ಸ್ಥಾನ ಹಾಗೂ ಚಿಕ್ಕತನಗಳ ಕಾರಣ ಪ್ರತ್ಯೇಕವಿರಲಾರದೆಂದೂ ವಾದಿಸಿದರು. ಪ್ರತ್ಯೇಕವಾದ ಪಕ್ಷದವರು ಕೊಡಗು ತನ್ನ ಕಾಲ ಮೇಲೆ ನಿಲ್ಲಬಲ್ಲುದೆಂದೂ ಶತಮಾನಗಳಿಂದ ಅದು ಹಾಗೆ ಬಾಳಿದೆಯೆಂದೂ ಕೊಡಗಿನ ಭವಿಷ್ಯವು ಕೊಡಗಿನ ಜನರಿಂದ ನಿರ್ಣಯಿಸಲ್ಪಡಬೇಕೆಂದೂ ವಾದಿಸಿದರು. ಪ್ರತ್ಯೇಕವಾದಿಗಳು ಸತತವಾಗಿ ನಡೆಸಿದ ಹೋರಾಟ, ಅದಕ್ಕೆ ಬೆಂಬಲವಾಗಿ ದೇಶೀಯರು ಸಾರ್ವಜನಿಕ ಸಭೆ ನಡೆಸಿಯೂ ಡೆಲ್ಲಿಗೆ ತಂತಿ ಮೂಲಕ ತಮ್ಮ ಅಭಿಪ್ರಾಯ ತಿಳಿಸಿಯೂ ಮಾಡಿದ ಹೋರಾಟ ಪ್ರಯತ್ನದ ಕಾರಣ ಕೇಂದ್ರ ಸರಕಾರವು ಕೊಡಗನ್ನು ಪ್ರತ್ಯೇಕವಿರಿಸಿ ಅದಕ್ಕೆ ಸುಧಾರಣೆಗಳನ್ನು ಕೊಡಲೊಪ್ಪಿತು.

ಇತ್ತಲ್ಲಿ ಕೊಡಗಿನ ಹೊಸ ಶಾಸನ ಸಭೆಗೆ ಚುನಾವಣೆಯು ಹತ್ತಿರ ಬಂತು. ಆ ಸಂದರ್ಭದಲ್ಲಿ ಕೊಡಗಿನ ಕಾಂಗ್ರೆಸ್ಸಿನೊಳಗೇ ಮೇಲೆ ವಿವರಿಸಿದಂತೆ ಎರಡು ಪಕ್ಷಗಳಿದ್ದ ಕಾರಣ ಕಾಂಗ್ರೆಸ್ಸು ಯಾವ ರೀತಿ ಹುರಿಯಾಳುಗಳನ್ನು ನಿಲ್ಲಿಸುವುದೆಂಬ ಪ್ರಶ್ನೆ ಬಂದಿತು. ಈಗ ಚುನಾಯಿತರಾಗುವ ಪ್ರತಿನಿಧಿಗಳೇ ದೇಶದ ಭವಿಷ್ಯ ನಿರ್ಣಯ ಮಾಡಲಿರುವುದು. ಕೇಂದ್ರ ಸಭೆಯು ವಿಶದಪಡಿಸಿರುವ ಕಾರಣ ಈ ಚುನಾವಣೆಯಲ್ಲಿ ಮತದಾರರ ಮುಂದೆ ಕೊಡಗಿನ ಭವಿಷ್ಯದ ಪ್ರಶ್ನೆಯನ್ನಿಟ್ಟು ಆ ಬಗ್ಗೆ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಅವಕಾಶ ಕೊಡಬೇಕಾದುದು ಅಗತ್ಯವೆಂದು ಪ್ರತ್ಯೇಕ ಪಕ್ಷದವರು ಅಭಿಪ್ರಾಯಪಟ್ಟು ಆ ಪಕ್ಷದ ವೇದಿಕೆ ಪ್ರತ್ಯೇಕವಾದ ಪಕ್ಷವು ಚುನಾವಣೆಯಲ್ಲಿ ಕಾಂಗ್ರೆಸಿನ ಹೆಸರಿನಿಂದಲೇ ಸ್ಪರ್ಧಿಸಬೇಕೆಂದು ಕೋರಿದರೆಂದು ಕೆ. ಪಿ. ಸಿ. ಸಿ. ಯವರನ್ನು, ಆ ಮೂಲಕ ಕಾಂಗ್ರೆಸಿನ ಹಿರಿಯ ಅಧಿಕಾರಿಗಳನ್ನು ಕೇಳಲಾಯಿತು. ಆದರೆ ಕಾಂಗ್ರೆಸ್ಸಿನೊಳಗೇ ಎರಡು ಅಭಿಪ್ರಾಯದ ಉಮೇದುವಾರರುಗಳನ್ನು ಪರಸ್ಪರ ವಿರೋಧವಾಗಿ ನಿಲ್ಲಿಸಲು ಅನುಕೂಲವಿರದ ಕಾರಣ ಕೊಡಗು ಕಾಂಗ್ರೆಸ್ಸಿನ ಪ್ರತ್ಯೇಕ ಪಕ್ಷದವರು ಕಾಂಗ್ರೆಸ್ಸಿಗೆ ರಾಜಿನಾಮೆ ಕೊಟ್ಟಿರುವರು. ಏಕೆಂದರೆ ಕಾಂಗ್ರೆಸ್ಸಿನೊಳಗೆ ಇದ್ದು ಕಾಂಗ್ರೆಸ್ ಉಮೇದುವಾರರಿಗೆ ಎದುರಾಗಿ ಸ್ಪರ್ಧಿಸುವುದು ಕಾಂಗ್ರೆಸ್ ಶಿಸ್ತಿಗೆ ಭಂಗವಾದ ಕಾರಣ ಪ್ರತ್ಯೇಕವಾದಿಗಳು ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳುವ ಕಾರಣಕ್ಕಾಗಿ ಕಾಂಗ್ರೆಸನ್ನು ತ್ಯಜಿಸಿರುವರು.

ಇಂದು ಕೊಡಗಿನ ಪ್ರತ್ಯೇಕ ಅಸ್ತಿತ್ವಕ್ಕಾಗಿ ಕಾಂಗ್ರೆಸ್ಸಿನ ಹೊರಗಿರುವುದು ಪ್ರತ್ಯೇಕವಾದಿಗಳಿಗೆ ತುಂಬಾ ದುಃಖದ ವಿಚಾರವಾದರೂ ಕೊಡಗಿನ ಜನತೆಯ ಹಿತವು ಅದಕ್ಕಿಂತಲೂ ದೊಡ್ಡದು. ಕೊಡಗು ಪ್ರತ್ಯೇಕವಿರುವುದರಲ್ಲೇ ಕೊಡಗಿನ ಜನರ ಹಿತವಿದೆ. ಆ ವಿಶ್ವಾಸವಿರುವ ಪ್ರತ್ಯೇಕವಾದಿಗಳಲ್ಲಿ ಹಲವರು ತಮ್ಮ ಜೀವಮಾನವಿಡೀ ಕಾಂಗ್ರೆಸ್ಸಿಗಾಗಿ ದುಡಿದವರೂ, ಜನತೆಯ ಹಿತಕ್ಕಾಗಿ ಇಂದು ಕಾಂಗ್ರೆಸ್ಸಿಗೆ ರಾಜಿನಾಮೆ ಇತ್ತಿರುವರು. ಪ್ರತ್ಯೇಕವಾದಿಗಳೂ ನಿಷ್ಠಾವಂತ ಕಾಂಗ್ರೆಸ್ಸಿಗರೆಂಬುದು ದೇಶಕ್ಕೇ ಗೊತ್ತಿದೆ. ಅವರು ದೇಶದ ಬಿಡುಗಡೆಗಾಗಿ ಜೈಲಿಗೆ ಹೋಗಿ ತ್ಯಾಗ ಮಾಡಿದವರು. ಕಾಂಗ್ರೆಸ್ ಉಮೇದುವಾರರಾಗಿ ಸಂಯೋಜನಾವಾದಿಗಳನ್ನೇ ಕಾಂಗ್ರೆಸ್ಸು ಕೊಡಗಿನಲ್ಲಿ ನಿಲ್ಲಿಸಿದೆ. ಪ್ರತ್ಯೇಕವಾದಿಗಳು ಇವರನ್ನು ವಿರೋಧಿಸಿ ಚುನಾವಣೆಗೆ ನಿಂತಿರುವರು. ಈ ಕಾಲಕ್ಕೆ ದೇಶೀಯರು ಕೊಡಗಿನ ಸರ್ವರ ಹಿತದೃಷ್ಟಿಯಿಂದ ಪ್ರತ್ಯೇಕವಾದಿಗಳಿಗೆ ಬೆಂಬಲ ಕೊಡಬೇಕು. ಏಕೆಂದರೆ ಕೊಡಗು ಪ್ರತ್ಯೇಕವಿದ್ದರೆ ಮಾತ್ರ ನಮಗೆ ಕೌನ್ಸಿಲು ಯಾ ಇಂದು ಕೇಳಿರಿರುವ ಸುಧಾರಣೆಗಳು! ಸಂಯೋಜನೆಯಾದರೆ ಸರ್ವನಾಶವಾಗುವದಲ್ಲದೆ ಇಂದು ಬೊಂಬಾಯಿ ಕರ್ನಾಟಕ ಜಿಲ್ಲೆಗಳು ಧಾರವಾಡ ಹಾಗೂ ಮದ್ರಾಸಿನಲ್ಲಿ ಸಿಕ್ಕಿರುವ ದಕ್ಷಿಣ ಕನ್ನಡದಂತೆ ಕೊಡಗು ಕಡೆಗಣಿಸಲ್ಪಟ್ಟು ಕಷ್ಟಪಡಬೇಕಾಗುವದು. ಈಗ ಬಾರಲಿರುವ ಚುನಾವಣೆಯಲ್ಲಿ ತಮ್ಮ ಮತವನ್ನು [illegible] ಪ್ರತ್ಯೇಕವಾದಿಗಳಿಗೆ ಕೊಡುವದು ಪ್ರತಿಯೊಬ್ಬನ ಕರ್ತವ್ಯ.

ಸರಕಾರಿ ಉದ್ಯೋಗಸ್ಥರು ಕಾಂಗ್ರೆಸಿಗರೇ?

ತಾ. ೧೩-೧-೫೨ ರಲ್ಲಿ ಶ್ರೀ ಮಾನ್ ಕಿರ್ಲೋಸ್ಕರ [illegible] ದೇಶದ [illegible] ಕೊಡುವವರಾರು [illegible] ಕಾಂಗ್ರೆಸ್ಸಿಗರೇ [illegible].

[illegible] ನೌಕರರೂ [illegible] ಕೊಡಗಿನಲ್ಲಿ ಕಾಂಗ್ರೆಸ್ ಉಮೇದುವಾರರ [illegible] ಪ್ರಚಾರ [illegible] ಶ್ರೀಮಾನ್ [illegible] ಅವರನ್ನು ಕಳುಹಿಸಿತೇಕೆ?

ಜನರಲ್ ತಿಮ್ಮಯ್ಯನವರು ಮುಂದಿ ಸರಕಾರಿ ಕಾಂಗ್ರೆಸಿಗರಲ್ಲ. ಅವರು ಅಧಿಕ [illegible] ಸಂಗಡ [illegible] ಅಂದು ಯಾವ [illegible] ಆಡಳಿತವನ್ನು [illegible] ಸರಕಾರದ ನೌಕರರೂ, ಅಧೀನದಲ್ಲಿರುವವರಲ್ಲದೆ ಅವರು ಯಾವ ಸಂಘಕ್ಕೂ ಸೇರದವರೆಂದು ಮಾಡಿ ಕಾಂಗ್ರೆಸ್ಸಿನ ಸೇವೆಗೆ ಬೆಳೆದು ಕೊಡಗಿನಲ್ಲಿರುವ ಕಾಂಗ್ರೆಸ್ಸಿಗರಿಗೆ ನೆರವು ಕೊಡುವುದು ಬೋಧಪ್ರದವಾಗಿರುವ ಶ್ರೀ. ತಿಮ್ಮಯ್ಯನವರಿಗೆ ತಿಳಿಯದಿರುವುದು ಶೋಚನೀಯ.

ಕೆ. ಯಂ. ಪೂವಯ್ಯ

BIRTH CONTROL.

ಮಿತ ಸಂತಾನ.

ಮಾನವ ಜನಾಂಗದ ಸಮೃದ್ಧಿ, ಸ್ವಾಸ್ಥ್ಯಗಳಿಗಾಗಿ ಅನೇಕ ಸಂದರ್ಭಗಳಲ್ಲಿ ಗರ್ಭ ನಿರೋಧವು (BIRTH CONTROL) ಅವಶ್ಯಕವೆನಿಸುತ್ತದೆ. ದಂಪತಿಗಳ ಆರೋಗ್ಯ ಕೆಡದಂತೆ ಬೆರೆಯುವ ಆಶೆಗೆ ಅಡ್ಡ ಬಾರದಂತೆ ನವೀನ ಶಾಸ್ತ್ರೀಯ ರೀತಿಯ ಔಷಧಿ ಮತ್ತು ಪ್ರಯೋಗಗಳಿಂದ ಬಹು ಸುಲಭ ರೀತಿಯಲ್ಲಿ ಮಿತ ಸಂತಾನದ ಕಾರ್ಯವನ್ನು ಸಾಧಿಸಲು ನಾವು ನಮ್ಮ ಔಷಧಾಲಯದಲ್ಲಿ ಶಕ್ಯ ಚಿಕಿತ್ಸೆ ಏರ್ಪಡಿಸಿದ್ದೇವೆ. ಈ ವಿಷಯದಲ್ಲಿ ಹೆಚ್ಚು ವಿಚಾರ ತಿಳಿಯಬಯಸುವವರು ಹಾಲ್ಕಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಡಾಕ್ಟರ್ ಪಿ. ಎಂ. ಗಣಪತಿ,
(ರಿಟೈರ್ಡ್ ಮೆಡಿಕಲ್ ಆಫೀಸರ್)
ಮಿತಸಂತಾನ ಚಿಕಿತ್ಸಾಲಯ.
BIRTH CONTROL CLINIC.
ಸೋಮವಾರಪೇಟೆ, ಉ. ಕೊಡಗು.

4-1

॥ ಚುನಾವಣಾ ಸಿಂಹಾವಲೋಕನ ॥

ಭಾರತದ ವಿವಿಧ ಸಂಸ್ಥಾನಗಳ ಶಾಸನ ಸಭೆಗಳ ಒಟ್ಟು ೪೦೦೦ ಸ್ಥಾನಗಳ ಪೈಕಿ ಅವರೆವಿಗೂ ಸುಮಾರು ೩೫೦ ಸ್ಥಾನಗಳ ಫಲಿತಾಂಶಗಳು ಹೊರಬಿದ್ದಿವೆ. ಇಲ್ಲಿಗೆ ಚುನಾವಣೆಯು ಅರ್ಧ ಸಂಪೂರ್ಣವಾಗಿದೆ. ಅವರೆವಿಗೂ ಭಾರತದ ವಿವಿಧ ಸಂಸ್ಥಾನಗಳಲ್ಲಿನ ಸರಾಸರಿಯನ್ನು ತೆಗೆದುಕೊಂಡರೆ ಸುಮಾರು ಶೇ. ೪೮ ರಷ್ಟು ಮಂದಿ ಮತ ಚಲಾಯಿಸಿದ್ದಾರೆಂದು ಗೊತ್ತಾಗಿದೆ. ಭಾರತದಲ್ಲಿ ವಯಸ್ಕರ ಮತದಾನ ಪದ್ಧತಿಯ ಮೇಲೆ ನಡೆಸಲ್ಪಡುವ ಮೊಟ್ಟ ಮೊದಲನೆಯ ಚುನಾವಣೆಗಳಲ್ಲಿ ಶೇ. ೪೮ ಮಂದಿ ಚಲಾಯಿಸಿದ್ದಾರೆಂದರೆ ಭಾರತದ ಪ್ರಜೆಗಳಲ್ಲಿ ರಾಜಕೀಯ ಜಾಗೃತಿಯುಂಟಾಗಿದೆಂಬುದು ನಿಸ್ಸಂದೇಹವಾದುದು.

ಭಾರತದಲ್ಲಿನ ೧೪ ಪಕ್ಷಗಳು, ೬ ಸ್ಥಳೀಯ ಪಕ್ಷಗಳೂ ಚುನಾವಣೆಗಳಲ್ಲಿ ಸ್ಪರ್ಧಿಸಿವೆ. ಎಲ್ಲ ಪಕ್ಷಗಳೂ ಚುನಾವಣೆಗೆ ಪೂರ್ವಭಾವಿಯಾಗಿ ವಿವಿಧ ರೀತಿ ಪ್ರಚಾರ ರೀತಿಯ ವೈಶಿಷ್ಟ್ಯದಿಂದ ಕೂಡಿ ಮಾರ್ಗದರ್ಶವಾಗಿದ್ದುವು. ಸ್ವತಂತ್ರಭಾರತದ ಪ್ರಥಮ ಸಾರ್ವತ್ರಿಕ ಚುನಾವಣೆಗಳಲ್ಲೇ ಪಕ್ಷಗಳೂ ಸ್ಪರ್ಧಿಗಳೂ, ಬೆಂಬಲಿಗರೂ ತೋರಿಸಿರುವ ಆಸಕ್ತಿ, ಉತ್ಸಾಹಗಳು ಗಮನಾರ್ಹವಾದುವು.

ಭಾರತದ ವಿವಿಧ ಸಂಸ್ಥಾನಗಳಲ್ಲಿನ ಅಕ್ಷರಸ್ಥರೂ, ಅನಕ್ಷರಸ್ಥರೂ, ಶಾಸ್ತ್ರೀಯರೂ ಅವಿದ್ಯಾವಂತ ಅಶಕ್ತರುಗಳಿಂದ ಮತ ಚಲಾಯಿಸಿರುದೂ ಅದರಲ್ಲೂ ಹಲವೆಡೆಗಳಲ್ಲಿ ಮಹಿಳೆಯರೇ ಹೆಚ್ಚು ಮಂದಿ ಓಟು ಮಾಡಿರುದೂ ನೋಡಿದರೆ ತಮಗಿರುವ ಹಕ್ಕನ್ನು ಚಲಾಯಿಸಬೇಕೆಂಬ ಜಾಗೃತಿ ಜನರಲ್ಲಿ ಉಂಟಾಗಿದೆಂಬುದು ವೇದ್ಯವಾಗಿದೆ. ಈ ಜಾಗೃತಿಯುಂಟಾಗಲು ಹೆಚ್ಚಾಗಿ ಉಮೇದುವಾರರುಗಳು ನಡೆಸಿದ ಪ್ರಚಾರಗಳ ವೈಖರಿಯೇ ಕಾರಣವೆಂದು ಧಾರಾಳವಾಗಿ ಹೇಳಬಹುದು. ಒಟ್ಟು ಮತ ಚಲಾಯಿಸಿದವರಲ್ಲಿ ಶೇ. ೪೫ ಮಹಿಳೆಯರೇ ಎಂದರೆ ಆಶ್ಚರ್ಯವಾಗದಿರದು.

ದಕ್ಷಿಣ ಭಾರತದ ತಿರುವಾಂಕೂರ್-ಕೊಚ್ಚಿನ್ ಸಂಸ್ಥಾನವೇ ಇಡೀ ಭಾರತದಲ್ಲಿ ಹೆಚ್ಚು ಮಂದಿ ಮತ ಚಲಾಯಿಸಿದ ಸಂಸ್ಥಾನ. ಈ ಸಂಸ್ಥಾನದಲ್ಲಿ ಗಂಡಸರಿಗಿಂತ ಎರಡರಷ್ಟು ಹೆಚ್ಚು ಮಂದಿ ಮಹಿಳೆಯರು ಮತ ಚಲಾಯಿಸಿದ್ದಾರೆ. ತಿರುವಾಂಕೂರ್-ಕೊಚ್ಚಿನ್ನ ಪಟ್ಟಾಸಿ ಎಂಬಲ್ಲಿನ ೩೭,೬೭೩ ಮತದಾರರ, ಪೈಕಿ ೩೩,೯೬೯ ಮಂದಿ ತಮ್ಮ ಮತ ಚಲಾಯಿಸಿದ್ದಾರೆ. ಭಾರತದಲ್ಲಿ ಅವರೆವಿಗಿನ ಫಲಿತಾಂಶ ಪ್ರಕಾರ ಇದೇ ಶೇಕಡ ಹೆಚ್ಚಿನ ಪ್ರಮಾಣದಿಂದ ಓಟು ಚಲಾಯಿಸಿದ ಕ್ಷೇತ್ರ ನೆಟ್ಟಿಲ್ ನವುದು.

ದಕ್ಷಿಣ ಭಾರತದಲ್ಲಿ ತಿರುವಾಂಕೂರ್-ಕೊಚ್ಚಿನ್ ಮತ್ತು ಮದ್ರಾಸ್ ಪ್ರಾಂತಗಳ ಚುನಾವಣಾ ಫಲಿತಾಂಶಗಳು ಇಡೀ ಭಾರತದಲ್ಲೇ ಹೆಚ್ಚಿನ ಕುತೂಹಲಾಸಕ್ತಿಗಳನ್ನು ಎಬ್ಬಿಸಿದೆ. ಈ ಸಂಸ್ಥಾನಗಳಲ್ಲಿ ಕಾಂಗ್ರೆಸ್ ವಿರೋಧ ಪಕ್ಷಗಳ ತೀವ್ರ ಪ್ರತಿಭಟನೆಯನ್ನೆದುರಿಸುತ್ತಿದೆ. ತಿರುವಾಂಕೂರ್-ಕೊಚ್ಚಿನ್ ಸಲ್ಲಂತರ ಕಮ್ಯೂನಿಸ್ಟರಿಗೆ ಜಯವಾಗಿದೆ. ಹೆಚ್ಚಿನ ಅಕ್ಷರಸ್ಥರಿಂದ ಕೂಡಿರುವ ಈ ಸಂಸ್ಥಾನದಲ್ಲಿ ಚುನಾವಣಾ ಫಲಿತಾಂಶಗಳು ನಿರೀಕ್ಷಣೆಯಂತಾಗದೆ ವಿರುದ್ಧವಾಗಿರುವುದು ನಿಜವಾಗಿಯೂ ಎಲ್ಲರಿಗೂ ಆಶ್ಚರ್ಯವಾಗಿದೆ.

ಇಲ್ಲಿಯ ಚುನಾವಣಾ ಫಲಿತಾಂಶವನ್ನು ವೀಕ್ಷಿಸಿದಲ್ಲಿ ಸಂಸ್ಥಾನದಲ್ಲಿ ಇನ್ನಾರು ತಿಂಗಳೊಳಗೆ ಮತ್ತೆ ಚುನಾವಣೆ ನಡೆಯುವ ಸಂಭವ ಒದಗಬಹುದೆಂದು ಅಲ್ಲಿಯ ನಾಯಕರು ಅಭಿಪ್ರಾಯಪಡುತ್ತಾರೆ. ಶಾಸನ ಸಭೆಯ ೧೦೮ ಸ್ಥಾನಗಳಿಗೆ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ೪೪ ಸ್ಥಾನಗಳೂ ಇತರ ಪಕ್ಷಗಳಿಗೆ ೬೪ ಸ್ಥಾನಗಳೂ ದೊರೆತಿವೆ.

ಮದ್ರಾಸ್ ಪ್ರಾಂತ್ಯದಲ್ಲಿ ಆಂಧ್ರ ಪ್ರದೇಶದ ಪ್ರಶ್ನೆಯಿಂದ ಚುನಾವಣೆಯು ಪ್ರಜಾ-ಕಾಂಗ್ರೆಸ್ ವಿರುದ್ಧ ಪಕ್ಷಗಳಿಗೆ ಹೆಚ್ಚಿನ ಜಯಲಭಿಸಿದೆ. ಮದ್ರಾಸ್ ಪ್ರಾಂತ್ಯದ ಮೂವರು ಸಚಿವರು ಪರಾಜಿತರಾದುದು ಇನ್ನೂ ಹೆಚ್ಚಿನ ಕುತೂಹಲಕ್ಕೆಡೆಕೊಟ್ಟಿದೆ.

ಮತದಾನದ ಚೋದ್ಯಗಳು.

ದಕ್ಷಿಣ ಸತಾರಾದ ವಾಲ್ವಾತಾಲ್ಲೂಕಿನ ಗಾಟ್ಕಂಡಿ ಎಂಬ ಕ್ಷೇತ್ರದ ಪೋಲಿಂಗ್‌ಬೂತ್ ಒಂದಕ್ಕೆ ಓಟುಮಾಡಲು ಬಂದ ೯೦ ವರ್ಷ ವಯಸ್ಸಿನ ಶ್ರೀ ಬಾಬ್ಲಾ ಅಪ್ಪಾ ಪಠಾಣ್ ಎಂಬಾತನು ಬ್ಯಾಲಟ್ ಪೇಪರ್ ಪಡೆದು ಓಟು ಮಾಡಲು ಒಳಗೆ ಹೋಗುವಾಗ ಕುಸಿದು ಬಿದ್ದು ಮೃತಪಟ್ಟನೆಂದು ವರದಿಯಾಗಿದೆ.

ಬೋಲ್ಹಾಂ ಎಂಬಲ್ಲಿನ ಪೋಲಿಂಗ್ ಬೂತ್ ಒಂದು ಅಗ್ನಿಗಾಹುತಿಯಾಯಿತೆಂದು ವರದಿಯಾಗಿದೆ. ಕಡಿಕಿಯ ಚಪ್ಪರದಲ್ಲಿ ಏರ್ಪಡಿಸಿದ್ದ ಬೂತ್ ಒಂದಕ್ಕೆ ಆಕಸ್ಮಿಕ ಬೆಂಕಿ ಬಿದ್ದಿತೆಂದು ಹೇಳಲಾಗಿದೆ.

ಖರಗಪುರದಲ್ಲಿ ಪಂ. ನೆಹರು ಅವರು ೫೦೦೦೦ ಜನರ ಸಭೆಯಲ್ಲಿ ಭಾಷಣ ಮಾಡುತ್ತಿದ್ದಾಗ ಬಸಿರಿ ಹೆಂಗಸೊಬ್ಬಳು ಗಂಡು ಶಿಶುವನ್ನು ಹಡೆದಳು.

ಕಲ್ಯಾಣ ಪಶ್ಚಿಮ ಮತದಾರ ಸಂಘದ ಮತದಾರ ಯಾದಿಯಲ್ಲಿ ಒಂದು ನಾಯಿಯ ಹೆಸರೂ ಸೇರಿದೆ. ಚುನಾವಣೆ ಪ್ರಚಾರಕರು "ಚಂಪಾಬಾಯಿ" ಯೆಂಬುವರನ್ನು ಹುಡುಕುತ್ತ, ಹೋದಾಗ ಅದು ಒಂದು ನಾಯಿಯ ಹೆಸರೆಂದು ತಿಳಿಯಿತು. ರೇಶನ್ ಕಾರ್ಡುಗಳ ಆಧಾರದಿಂದ ಮತದಾರಯಾದಿಗಳನ್ನು ರಚಿಸಿದ್ದುದರಿಂದಲೂ ಆ ನಾಯಿಗಾಗಿ ಅದರ ಒಡೆಯನು ಒಂದು ಕಾರ್ಡು ಮಾಡಿಸಿದ್ದರಿಂದಲೂ ನಾಲ್ಕು ಕಾಲಿನ ಜಂತುಗೆ ರಾಷ್ಟ್ರದಲ್ಲಿ ಮತಾಧಿಕಾರ ಪ್ರಾಪ್ತವಾಯಿತು.

ಉತ್ತರ ಬೊಂಬಾಯಿಂದ ಚುನಾವಣೆಗೆ ಸ್ವತಂತ್ರವಾಗಿ ನಿಂತ ಎಸ್. ಬಿ. ಪರುಳೇಕರರ ಕೈಯಲ್ಲಿ, ತಮ್ಮ ಭಾಗದ ೪೦೦೦೦ ಮತದಾರರಿಗೆ ಹಂಚಲು ೧೫೦೦೦ ಹಸ್ತಪತ್ರಿಕೆಗಳನ್ನು ಮುದ್ರಿಸಿ ೧೫೦ ರೂ. ಖರ್ಚು ಮಾಡಿದ ನಂತರ ಹಣವೇ ಇಲ್ಲದ್ದರಿಂದ ಅವರು ಮತದಾರ ಮತವನ್ನು ಪ್ರೇರಿಸಲು ಅಂತರ್ಯಾಮಿಯನ್ನು ಒಲಿಸುವುದಕ್ಕಾಗಿ ಮೂರು ದಿನಗಳ ಉಪವಾಸ ಮೌನವನ್ನಾಚರಿಸಿದರು. ಅದರ ಪರಿಣಾಮದ ಬಗ್ಗೆ ಅವರಿಗೆ ತುಂಬ ಭರವಸೆಯಿದೆ.

ಶಹಜಹಾನಪುರದ ೩,೦೦೦ ಕೌರಿಕರು ತಮ್ಮ ಮನೆಗಳ ಪಾಯಖಾನೆಗಳನ್ನು ಸ್ವಚ್ಛ ಮಾಡುವಂತೆ ಊರ ಭಂಗಿಗಳ ಮನವೊಲಿಸುವವರಿಗೇ ಮತ ಕೊಡುವುದಾಗಿ ಗಟ್ಟಿಮಾಡಿಕೊಂಡಿದ್ದಾರೆ, ಕೌರಿಕರು ಭಂಗಿಗಳ ಕ್ಷೌರ ಮಾಡಲೊಪ್ಪದ ಕಾರಣ ಅವರು ಇವರ ಪಾಯಖಾನೆಗಳ ಮೇಲೆ ಬಹಿಷ್ಕಾರ ಹಾಕಿದ್ದಾರೆ. ಭಂಗಿಗಳ ಕ್ಷೌರ ಮಾಡಿದರೆ ಮೇಲ್ಜಾತಿಯ ಗಿರಾಕಿಗಳನ್ನು ಕಳೆದುಕೊಳ್ಳಬೇಕಾಗುವುದೆಂದು ಕ್ಷೌರಿಕರ ಭಯವಂತೆ.

ಕಾನಪುರದ ಒಬ್ಬ ಸ್ವತಂತ್ರ ಹುರಿಯಾಳ. ತನ್ನ ಯಶಸ್ಸಿಗೆ ಗ್ರಹಬಲ ಅನುಕೂಲವಿಲ್ಲೆಂದು ಜೋಯಿಸರಿಂದ ತಿಳಿದು ಗ್ರಹಶಾಂತಿಗಾಗಿ ಶಾಂತಿ ಮಾಡಲು ಬ್ರಾಹ್ಮಣರನ್ನು ಕೇಳಿಕೊಂಡಿದ್ದಾನೆ.

ಬೊಂಬಾಯಿಯಲ್ಲಿ ೬೦ ವರ್ಷದ ಹರಿಜನ ಮುದುಕನೊಬ್ಬನು ಸಾಯುವ ಮೊದಲು ಮತದಾನ ಮಾಡಿಬಿಡಬೇಕೆಂದು ಹಟದಿಂದ್ದನು. ಅವನನ್ನು ಮಂಚದ ಮೇಲೆ ಮಲಗಿಸಿ ಹೊತ್ತುಕೊಂಡು ಬರಲಾಗಿತ್ತು. ಅವನು ಗಟ್ಟಿಯಾಗಿ ತಾನು ಮತ ಕೊಡಬಯಸಿದ ಹುರಿಯಾಳುಗಳ ಹೆಸರುಗಳನ್ನು ಚುನಾವಣೆಯ ಅಧಿಕಾರಿಯ ಕಿವಿಯಲ್ಲಿ ಪಿಸುಗುಟ್ಟಿ ತನ್ನ ಮತ ಪತ್ರಿಕೆಗಳನ್ನು ಅವರ ಪೆಟ್ಟಿಗೆಗಳಲ್ಲಿ ಹಾಕಿಸಿದರು.

ಅಸಾಮದಲ್ಲೊಬ್ಬ ಮುದುಕ, ಪಂಜಾಬದಲ್ಲಿ ಮೂವರು ಕುರುಡರು ಪಂ. ನೆಹರು ಅವರಿಗೆ ಹೊರತು ಮತ್ತಾರಿಗೂ ಮತಹಾಕಲು ಒಲ್ಲದೆ ಹಾಗೇ ಹೊರಟು ಹೋದರು. "ನೆಹರೂ ಪೆಟ್ಟಿಗೆ ಯಾವುದು?" ಎಂದು ಅವರು ಅಧಿಕಾರಿಗಳನ್ನು ಕೇಳಿದಾಗ "ಇಲ್ಲಿ ನೆಹರೂ ಚುನಾವಣೆಗೆ ನಿಂತಿಲ್ಲ" ಎಂದು ಉತ್ತರ ಕೊಡಲಾಯಿತು. ಪಾಪ, ಅವರು ನಿರಾಶರಾಗಿ ಮತಹಾಕದೇ ಹೊರಟುಹೋದರು.

ಅಂಬಾಲದಲ್ಲಿ ಒಬ್ಬ ಮತದಾರನು ಉರಿಯುತ್ತಿರುವ ದೀಪಕ್ಕೆ ಮತ ಹಾಕಬೇಕೆಂದು ಮತಗಟ್ಟೆಯಲ್ಲಿ ಹುಡುಕಿ ಅದು ಸಿಗದ್ದರಿಂದ ಕೊನೆಗೆ ಒಲ್ಲೇ ಮೇಜಿನ ಮೇಲಿನ್ದ ಉರಿಹೋದ ಟೇಬಲ್ ಲ್ಯಾಂಪಿನಲ್ಲಿ ತನ್ನ ಮತ ಹಾಕಿ ಹೋದನು. ಉರಿಯುತ್ತಿರುವ ದೀಪದ ಚಿತ್ರ ಹಚ್ಚಿದ ಪೆಟ್ಟಿಗೆಗೆ ಮತಹಾಕಬೇಕೆಂದು ಅವನಿಗೆ ತಿಳಿದಿಲ್ಲ ಪಾಪ!

ಕಲ್ಕತ್ತೆಯ ಹಾಬ್ರಾ ಎಂಬಲ್ಲಿನ ಪೋಲಿಂಗ್ ಬೂತ್ ಒಂದಕ್ಕೆ ಓಟು ಮಾಡಲು ಬಂದ ದಂಪತಿಗಳಿಬ್ಬರೂ ಬಾಗಿಲಲ್ಲೇ ಘೋರ ಜಗಳಕ್ಕೆ ಆರಂಭಿಸಿದರು. ಗಂಡ ಓರ್ವ ಉಮೇದುವಾರನಿಗೆ ಓಟು ಮಾಡಬೇಕೆಂದು ಹೆಂಡತಿಗೆ ಹೇಳಿದ. ಹೆಂಡತಿ ತಾನು ಬೇರೊಬ್ಬ ಉಮೇದುವಾರನಿಗೆ ಓಟು ಮಾಡುವುದಾಗಿ ಹಠಹಿಡಿದಳು. ಇಬ್ಬರಿಗೂ ಜಗಳವಾಗಿ ಕೊನೆಗೆ ಇಬ್ಬರೂ ಯಾರಿಗೂ ಓಟು ಮಾಡದೆ ಮನೆಗೆ ಹೊರಟು ನಡೆದರು.

ಔರಂಗಾಬಾದಿನ ಅಂಬಡ್ ಗ್ರಾಮದಲ್ಲಿ ಒಬ್ಬನು ಆಗತಾನೆ ತನ್ನ ತಂದೆ ಸತ್ತಿದ್ದು ಅಂತ್ಯಕ್ರಿಯೆಗಳು ನಡೆಯಬೇಕಿದ್ದರೂ ಅದನ್ನು ಲೆಕ್ಕಿಸದೆ ಪೋಲಿಂಗ್‌ಬೂತಿಗೆ ಹೋಗಿ ತನ್ನ ಓಟನ್ನು ಚಲಾಯಿಸಿದನು. ಅದರಂತೆ ೩೫ ವರ್ಷದ ಹೆಂಗಸೊಬ್ಬಳು ಅಳುತ್ತ ಮಾಹೀಯಾಂಜ್ ಪೋಲಿಂಗ್ ಬೂತಿಗೆ ಬಂದಳು. ಅಧಿಕಾರಿಗಳು ಏಕೆಂದು ಕೇಳಲು 'ನನ್ನ ತಾಯಿ ಈಗ ಕೆಲವು ಗಂಟೆಗಳ ಹಿಂದೆ ತಾನೇ ಸತ್ತಳು. ಆದುದರಿಂದ ನನ್ನ ದುಃಖ. ನನ್ನ ಓಟು ಚಲಾವಣೆ ತಪ್ಪಿಸ ಬಾರದೆಂದು ಇಲ್ಲಿಗೆ ಬಂದಿದ್ದೇನೆ' ಎಂದಳು.

ಅಂಬಾಲ ಪೋಲಿಂಗ್ ಒಂದಕ್ಕೆ ಓಟು ಮಾಡಲು ಬಂದ ಕುರುಡಿಯೊಬ್ಬಳನ್ನು ಪ್ರಿಸೈಡಿಂಗ್ ಆಫೀಸರು ಓಟು ಚಲಾಯಿಸುವ ಕೋಣೆಗೆ ಬಿಟ್ಟು ಹೊರಗೆ ಬಂದರು. ಓಟು ಮಾಡಿ ಮುದುಕಿ ಹೊರಬಂದಾಗ ಪಿ. ಟಿ. ಐ. ಪ್ರತಿನಿಧಿಗಳು ಯಾರಿಗೆ ಓಟು ಮಾಡಿದಿರಿ ಎಂದು ಕೇಳಲಾಗಿ ಎಲ್ಲಾ ಪೆಟ್ಟಿಗೆಗಳನ್ನು ಎತ್ತಿನೋಡಿ ಭಾರವಾದ ಪೆಟ್ಟಿಗೆಗೆ ಓಟು ಹಾಕಿದೆ ಎಂದಳು.

ಹಜಾರಿಬಾಗ್ ಹಾಗೂ ರಾಮಘರ್ ಕ್ಷೇತ್ರದ ಪೂರ್ನಿ ಪೋಲಿಂಗ್‌ಬೂತ್ ಬಳಿ ಮತದಾನಮಾಡಲು ಬಂದಿದ್ದ ಇಬ್ಬರು ಮುದುಕರು ತಾವು ಬ್ರಿಟಿಷರಿಗೆ ಓಟು ಮಾಡುವುದಾಗಿ ಹೇಳಿದರು. ಬ್ರಿಟಿಷರ ರಾಜ್ಯಭಾರ ಮುಗಿದುಹೋಗಿ ವರ್ಷಗಳಾಯಿತೆಂದು ಅವರಿಗೆ ಹೇಳಿದರೂ ನಂಬದೆ ಕೊನೆಗೆ ಬೇರೆಯವರಿಗೆ ಓಟು ಮಾಡುವುದೇ ಇಲ್ಲವೆಂದು ಹೇಳಿ ಹಿಂದಕ್ಕೆ ಹೊರಟುಹೋದರು.

ಹಜಾರಿಬಾಗ್, ಅಸೆಂಬ್ಲಿ ಚುನಾವಣೆಗೆ ಉಮೇದುವಾರರೊಬ್ಬರು ಪೋಲಿಂಗ್ ಸ್ಟೇಷನ್ನಿಗೆ ಓಟರುಗಳನ್ನು ಕರೆದೊಯ್ದ ಅಪಾದನೆ ಮೇಲೆ ದಸ್ತಗಿ ಮಾಡಿ ೪೦೦೦ ರೂ. ಗಳ ಜಾಮೀನಿ ಮೇಲೆ ಬಿಡುಗಡೆ ಮಾಡಿದ್ದಾರೆ.

ಧರ್ಮಪುರಿಯಲ್ಲಿ ಪಾಚಿಕೆಯ ಫಲವಾಗಿ ಹಲವು ಸ್ತ್ರೀಯರು ತಮ್ಮ ಓಟುಗಳನ್ನು ಕಳೆದುಕೊಂಡರು. ಓಟು ಮಾಡಲು ಬಂದಾಗ ಅವರು ತಮ್ಮ ಗಂಡಂದಿರ ಹೆಸರನ್ನು ಹೇಳಲು ನಾಚಿಕೆಪಟ್ಟುಕೊಂಡಿದ್ದರಿಂದ ಅವರು ಓಟು ಚಲಾಯಿಸಲು ಅಧಿಕಾರಿಗಳು ಅವಕಾಶಕೊಡಲಿಲ್ಲ.

ಶ್ರೀ ಪಿ. ಪೀತಾಂಬರರವರು,
"ಕೊಡಗು" ಏಜೆಂಟರು,
ಕೊಪ್ಪ ಪೇಟೆ.

ಬೆಂಗಳೂರು ನಿವಾಸಿಗಳ ಕೋರಿಕೆ.

ಕೊಡಗಿನ ಮಹಾ ಜನರಲ್ಲಿ ನಮ್ಮ ವಿಜ್ಞಾಪನೆ. ಕೊಡಗಿನಲ್ಲಿ ನಡೆಯುವ ಚುನಾವಣೆಯಲ್ಲಿ ಯಾವ್ಯಾವ ಪಾರ್ಟಿಯವರು ಯಾವ ಯಾವ ಉದ್ದೇಶದಿಂದ ಸ್ಪರ್ಧಿಸುತ್ತಿರುವರೆಂಬುದನ್ನು ನಾವು ಬೆಂಗಳೂರಿನಲ್ಲಿ ಇದ್ದರೂ ಬಹು ಕುತೂಹಲದಿಂದ ನೋಡುತ್ತಿದ್ದೇವೆ. ನಾವುಗಳು ಒಂದಲ್ಲ ಎರಡಾವರ್ತಿ ಬೆಂಗಳೂರಿನ ಕಾಂಗ್ರೆಸ್ ಎಸೋಸಿಯೇಷನಿನಲ್ಲಿ ಕೊಡಗನ್ನು ಮೈಸೂರಿನೊಡನೆ ಸೇರಿಸಕೂಡದೆಂದು ಬಹುಮತದಿಂದ ತೀರ್ಮಾನಿಸಿದ್ದೇವೆ.

ನಾವು ಬೆಂಗಳೂರಿನಲ್ಲಿದ್ದು ಮೈಸೂರು ದೇಶದ ಎಲ್ಲಾ ವಿಷಯ ಅಂದರೆ ಮೈಸೂರು ರೈತಾಪಿ ಜನರ ಜೀವನ ಮಟ್ಟಕ್ಕೂ ಕೊಡಗಿನ ರೈತಾಪಿ ಜನರ ಜೀವನ ಮಟ್ಟಕ್ಕೂ ಇರುವ ವ್ಯತ್ಯಾಸ, ಮೈಸೂರು ಹಳ್ಳಿಗಳಲ್ಲಿರುವ ವಿದ್ಯಾ ಸೌಕರ್ಯಕ್ಕೂ ಕೊಡಗಿನ ಹಳ್ಳಿಗಳಲ್ಲಿರುವ ವಿದ್ಯಾ ಸೌಕರ್ಯಕ್ಕೂ, ವೈದ್ಯಸೌಕರ್ಯಕ್ಕೂ ಅವರಿಗೂ ನಮಗೂ ಇರುವ ನಡವಳಿಕೆಗಳ ವ್ಯತ್ಯಾಸವನ್ನು ಕೂಲಂಕಷವಾಗಿ ವಿಮರ್ಶಿಸಿ ಈ ಮೇಲ್ಕಂಡ ತೀರ್ಮಾನಕ್ಕೆ ಬಂದಿದ್ದೇವೆ. ಆದ್ದರಿಂದ ನಮಗಿಂತಲೂ ಮೇಧಾವಿಗಳಾದ ಕೊಡಗಿನ ಓಟರುಗಳು ಯಾರ ಕುತಂತ್ರಕ್ಕೂ ಮೋಸ ಹೋಗದೆ ತಮ್ಮ ಘನವಾದ ಓಟುಗಳನ್ನು ಪ್ರತ್ಯೇಕ ಪಕ್ಷಕ್ಕೆ ಕೊಟ್ಟು ಕೊಡಗಿನ ಮತ್ತು ಕೊಡಗಿನ ನಿವಾಸಿಗಳ ಘನತೆಯನ್ನು ಉಳಿಸಬೇಕಾಗಿ ಪ್ರಾರ್ಥನೆ.

ಕೊಡಗಿನ ಪರ ಕೇಂದ್ರ ಪಾರ್ಲಿಮೆಂಟಿನಲ್ಲಿ ಮೆಂಬರಾದ ನಮ್ಮ ಶ್ರೀ ಸಿ. ಎಂ. ಪೂಣಚ್ಚನವರು ನಮ್ಮನ್ನೆಲ್ಲಾ ಪರದಾಸ್ಯಕ್ಕೆ ತಳ್ಳಲು ಯತ್ನಿಸುತ್ತಿರುವುದು ನಮ್ಮ ದೌರ್ಭಾಗ್ಯ. ಇವರು ಕಾಂಗ್ರೆಸ್ಸಿನ ಹೆಸರಿನಲ್ಲಿ ನಮ್ಮನ್ನು ಪರರ ಅಧೀನಕ್ಕೆ ತಳ್ಳುತ್ತಿರುವುದು ವ್ಯಸನಕರ. ಇವರ ಕುಟುಂಬದವರಾದರೂ ಈ ಪರದಾಸ್ಯಕ್ಕೆ ಒಪ್ಪಿಕೊಳ್ಳುವರೇ? ಸ್ವಾಮಿ ಸೀತಾರಾಮರವರು ಪ್ರತ್ಯೇಕ ಆಂಧ್ರ ದೇಶ ರಚನೆಗಾಗಿ ಉಪವಾಸ ಮಾಡುತ್ತಿರುವಾಗ ನಮ್ಮ ಆ ಮಹಾ ಧೀರ ಪುತ್ರನು ನಮ್ಮನ್ನು ಪರದಾಸ್ಯಕ್ಕೆ ತಳ್ಳಲು ಭಗೀರಥ ಪ್ರಯತ್ನ ನಡಸುತ್ತಿರುವರಲ್ಲವೆ?

ಮಹನೀಯರೇ ಎಚ್ಚರಿಕೆ! ಕಳೆದ ಸಾರಿ ಇವರನ್ನು ಪಾರ್ಲಿಮೆಂಟಿಗೆ ಚುನಾಯಿಸಿ ಕಳುಹಿಸಿದ ಹಾಗೆ ಈ ಸಾರಿ ಮೋಸ ಹೋಗಬೇಡಿ. ಇವರು ಪಾರ್ಲಿಮೆಂಟಿನಲ್ಲಿ ಎಷ್ಟರ ಮಟ್ಟಿಗಿನ ಪಾತ್ರ ವಹಿಸಿದ್ದರೆಂಬುದನ್ನು ನಾವು ಕಣ್ಣಾರೆ ನೋಡಿದ್ದೇವೆ. ನಮ್ಮ ಪವಿತ್ರ ನಾಡನ್ನು ಪರರ ದಾಸ್ಯಕ್ಕೆ ತಳ್ಳಲಿಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಮಾಡಿದ್ದಾರಲ್ಲದೆ ಬೇರೆ ಯಾವ ವಿಷಯದಲ್ಲೂ ಇವರ ಹೆಸರೇ ಕೇಳಿಬರುತ್ತಿರಲಿಲ್ಲ. ನಮ್ಮ ಕಾವೇರಿ ಮಾತೆಯ ಪುತ್ರರಾದ ಜನರಲ್ ಕಾರ್ಯಪ್ಪನವರ ಮತ್ತು ತಿಮ್ಮಯ್ಯನವರುಗಳು ನಮ್ಮ ನಾಡಿಗೆ ತಂದ ಕೀರ್ತಿಯನ್ನು ನೀಚನ ಮೇರೆ ಕೋನು ಮಾಡಲು ಇವರು ಜನ್ಮವೆತ್ತಿರುವರೆಂದರೆ ತಪ್ಪಾಗುವುದೇ? ಇವರು ನಾನೇ ಬುದ್ಧಿವಂತ ನನಗಿಂತಲೂ ಬುದ್ಧಿವಂತರಿಲ್ಲವೆನ್ನುವುದು ತಪ್ಪು ತಿಳುವಳಿಕೆ. ಹಿರಿಯವರ ಬುದ್ಧಿಯನ್ನು ಸ್ವಲ್ಪವಾದರೂ ಕೇಳಬೇಕೆನ್ನುವುದು ಇನ್ನಾದರೂ ಅರಿತುಕೊಳ್ಳಲಿ.

ಇವರು ಕೊಡಗನ್ನು ಮೈಸೂರಿಗೆ ಸೇರಿಸಿ ಒಬ್ಬ ಮಂತ್ರಿಯಾಗಿ ಬೆಂಗಳೂರಿನಲ್ಲಿ ವಾಸಿಸಬಹುದೆಂಬ ಒಂದು ಉದ್ದೇಶದಿಂದ ಹೋರಾಡುತ್ತಾರಲ್ಲದೆ ತನ್ನ ಹುಟ್ಟಿದ ದೇಶಕ್ಕೆ ಕ್ಷೇಮವಾಗಬೇಕೆಂದಲ್ಲ. ಹಾಗೆ ಮೈಸೂರು ರೈತಾಪಿ ಜನರ ಜೀವನಮಟ್ಟವನ್ನು ನಮ್ಮವರ ಜೀವನ ಮಟ್ಟಕ್ಕೆ ತರಲು ಮೈಸೂರು ಸರಕಾರವು ಇನ್ನೂ ಇಪ್ಪತ್ತು ವರ್ಷ ದುಡಿಯಬೇಕು ಅಂದ ಮೇಲೆ ನಮಗೆ ಅವರಿಂದ ದೊರಕುವ ಕ್ಷೇಮವೇನು? ಮತ್ತು ನಮಗೆ ಅವರ ಎಸೆಂಬ್ಲಿಯಲ್ಲಿ ಸಿಕ್ಕುವ ಸ್ಥಳವೆಷ್ಟು. ಮೈಸೂರಿನ ಒಂದು ಜಿಲ್ಲೆಯನ್ನು ಇರುವ ಕೊಡಗು ಅಲ್ಲಿಯ ಎಂಟು ಜಿಲ್ಲೆಗಳ ಪೈಕಿ ನಮಗೆ ಬಹುಮತವೆಲ್ಲಿದೆ. ಅವರ ಎಸೆಂಬ್ಲಿಯಲ್ಲಿ ನಮ್ಮ ಕೂಗು ಅರಣ್ಯರೋದನವಾಗಲಿಕ್ಕಿಲ್ಲವೇ. ಅವರ ಎಂಟು ಜಿಲ್ಲೆಗಳಿಗೂ ಮತ್ತೆ ನಮ್ಮ ಜಿಲ್ಲೆಗೂ ಒಬ್ಬ ಡೆಪ್ಯುಟಿ ಕಮಿಷನರನ್ನು ಕಳುಹಿಸುತ್ತಾರೆಂಬುದೇ ಲಿ ನ ರ ಂ ಕು ಶ ಆ ಡ ಳ ತ ದ ಗತಿಯೇ ನಮಗುಂಟಾಗುವುದು.

ಸಂದಿಗ್ಧ ಪರಿಸ್ಥಿತಿಯಲ್ಲಿ ಚುನಾವಣೆಗೂ ದೇಶದ ಭವಿಷ್ಯದ ವಿಚಾರಕ್ಕೂ ಸಂಬಂಧವಿಲ್ಲವೆಂದು ಹೇಳಿ ಜಯಗಳಿಸುವ ಕಾಂಗ್ರೆಸ್ ದಲ್ಲಿರುವ ಇವರ ಕುಟಿಲನೀತಿಯನ್ನು ಓಟರುಗಳು ನಾಡಿನ ಜನತೆಯು ಬಹುಮತ ಹೇಗಿದೆಯೆಂಬುದನ್ನು ಈ ಚುನಾವಣೆಯಲ್ಲಿ ತೋರಿಸದಿದ್ದರೆ ಕಡೆಗೆ ಮಿಂಚಿ ಹೋದ ಕೆಲಸಕ್ಕೆ ಚಿಂತಿಸಿ ಫಲವಿಲ್ಲ. ತಮ್ಮ ಸ್ವಂತ ಮನಸಿನಿಂದ ಕೊಡಗಿನ ಕಾಂಗ್ರೆಸ್ ಉಮೇದುವಾರರನ್ನು ಶಿಫಾರಸ್ಸು ಮಾಡಿದ ಕೆ. ಪಿ. ಸಿ. ಸಿ. ಯ ಪ್ರೆಸಿಡೆಂಟ್ ಸಿದ್ದವನಹಳ್ಳಿ ನಿಜಲಿಂಗಪ್ಪನವರ ರಾಜ್ಯದಲ್ಲಿ ಅವರ ರೈತಾಪಿ ಜನರ ಜೀವನಮಟ್ಟವನ್ನು ನಮ್ಮ ಮಟ್ಟಕ್ಕೆ ತರಲು ಇನ್ನು ಅನೇಕ ವರ್ಷಗಳು ಬೇಕು. ಅವರ ಬೆಂಗಳೂರು ಮತ್ತು ಮೈಸೂರು ಎರಡು ನಗರಗಳನ್ನು ನೋಡಿ ಮರುಳಾಗದೆ ಅಲ್ಲಿಯ ಹಳ್ಳಿಗಳನ್ನು ಹೊಕ್ಕು ನೋಡಿ ಸ್ಥಿತಿಯನ್ನು ತಿಳಿದುಕೊಳ್ಳಬೇಕು. ಆದ ಕಾರಣ ಕೊಡಗಿನ ಹಿತಕ್ಕಾಗಿ ಈ ಮೊದಲು ಕಾಂಗ್ರೆಸ್ಸಿನಲ್ಲಿ ದುಡಿದು ಈಗ ಹೊರಗೆ ಬಂದಿರುವ ಪ್ರತ್ಯೇಕ ಪಕ್ಷದವರಿಗೇ ಹೆಚ್ಚಿನ ಮತ ಚಲಾಯಿಸಿ ನಾಡಿನ ಘನತೆ ಗೆದ್ದು ಬರುವ ಹಾಗೆ ಮಾಡಬೇಕೆಂಬುದೇ ನಮ್ಮ ಭರವಸೆ.

ಶ್ರೀ ... [illegible]

ಆಂಧ್ರ ಪ್ರಾಂತ್ಯ ಸ್ಥಾಪನೆ.

ಆಂಧ್ರ ರಾಷ್ಟ್ರ ಸ್ಥಾಪನೆ ಸತ್ಯಾಗ್ರಹ ಸಂಘಟನ ಸಮ್ಮೇಳನವು ಸೇರಿ ಆಂಧ್ರ ಪ್ರಾಂತ್ಯ ಸ್ಥಾಪನೆಗಾಗಿ ಸತ್ಯಾಗ್ರಹ ಹೂಡಬೇಕೆಂದು ನಿರ್ಧರಿಸಿದರು. ಗಾಂಧೀಜೀಯವರ ಚಿತಾಭಸ್ಮವನ್ನು ಗಂಗೆಗೆ ಅರ್ಪಿಸಿದ ದಿನದಂದು ಸಮಾರಂಭದಿಂದ ಮೇಲ್ಕಂಡ ತೀರ್ಮಾನಮಾಯಿತು. ಸ್ವಾಮಿ ಸೀತಾರಾಮರವರು ಅಧ್ಯಕ್ಷತೆ ವಹಿಸಿದ್ದರು. ನಾನಾ ಜಿಲ್ಲೆಗಳಿಂದ ೩೦ ಕ್ಕಿಂತ ಹೆಚ್ಚು ಮಂದಿ ಪ್ರತಿನಿಧಿಗಳು ಆಗಮಿಸಿದರು. ಈ ಸತ್ಯಾಗ್ರಹ ಚಳುವಳಿಗೆ ಸ್ವಾಮಿ ಸೀತಾರಾಮರವರ ನಾಯಕತ್ವವನ್ನು ಒಪ್ಪಲಾಯಿತು. ಆಂಧ್ರ ಪ್ರಾಂತ್ಯ ಸ್ಥಾಪನೆಗೆ ತಕ್ಕ ಕಾರ್ಯಕ್ರಮ ಕೈಗೊಳ್ಳಲೋಸುಗ ಆಂಧ್ರ ಪ್ರಾಂತ್ಯ ಶಾಸನ ಸಭಾಸದಸ್ಯರ ಸಮ್ಮೇಳನವನ್ನು ಫೆಬ್ರವರಿ ೧೭ ರಂದು ಕರೆಯುವ ತೀರ್ಮಾನವಾಗಿದೆ. ಸತ್ಯಾಗ್ರಹಿಗಳಿಗೆ ೧೫ ದಿನಗಳ ಕಾಲ ತರಬೇತು ಕೊಡಬೇಕೆಂದು ಸಹ ನಿರ್ಧರಿಸಲಾಗಿದೆ. ಸತ್ಯಾಗ್ರಹ ಚಳುವಳಿ ಪ್ರಚಾರಕ್ಕಾಗಿ ಸ್ವಾಮಿ ಸೀತಾರಾಮರು ಇಷ್ಟರಲ್ಲಿಯೇ ಆಂಧ್ರದಲ್ಲಿ ಸಂಚರಿಸಲಿದ್ದಾರೆ.

ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ಸೋಮವಾರಪೇಟೆ

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಕೋವಿಗಳು, ವ್ಯವಸಾಯದ ಹತ್ಯಾರುಗಳು ಮತ್ತು ಕಬ್ಬಿಣದ ಸಲಾಕೆ ವಗೈರೆಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು ಮತ್ತು ರಿವಾಲ್ವರುಗಳು.
2. ·12ನೇ ನಂಬರಿನ ಒಂಟಿ ಕೊಳವಿನ ಕೋವಿಗಳು.
3. 12ನೇ ನಂಬರಿನ ಜೋಡು ಕೊಳವಿನ ಕೋವಿಗಳು.
4. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
5. 2", 1", ⅝", ½", ¼" ಕಬ್ಬಿಣದ ಸಲಾಕೆಗಳು
6. 9"×4" ಮತ್ತು 8"×4" ಕಬ್ಬಿಣದ ಬೀಮ್ಸ್ (Beams).
7. 8'×3'×12 (Gage)ನ ಕಬ್ಬಿಣದ ತಗಡುಗಳು.
8. 3"×3"×¼"ನ (Angles) ಎಂಗ್ಯುಲರ್ಸ್ ಆವಶ್ಯವಿರುವವರು ಇಂಡೆಂಟ್ ಕೊಟ್ಟಲ್ಲಿ ತರಿಸಿ ಕೊಡಬಹುದು

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಪಿಸ್ತೂಲುಗಳು ಕೋವಿಗಳಿಗೆ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವುದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ರಿಸರ್ವ್ ಬ್ಯಾಂಕ್ ... [illegible] (1921ರಲ್ಲಿ ಸ್ಥಾಪಿಸಲ್ಪಟ್ಟಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ನಡೆಸಿಕೊಡಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರಿ ಸಂಘಗಳಿಗೇನೇ ಸಾಲ ಕೊಡಲ್ಪಡುತ್ತದೆ. ಚಿನ್ನ ಮತ್ತು ಚಿನ್ನದ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಮತ್ತು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುತ್ತದೆ. ಟ್ರಿನಿಟಿ, ನಾರ್ದರ್ನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ತೆಗೆದುಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಾಲದ ಸಾಲದ ಶಾಖೆಯು ಸಹ ದೀರ್ಘ ಕಾಲದ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿ ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ, — ಕೆ. ಬಿ. ಅಪ್ಪಯ್ಯ, ಬಿ. ಎ. ... ವ್ಯವಸ್ಥಾಪಕ ... [illegible]

Edited Printed and Published by P. I. Bellippa at 'Kodagu' Press, Mercara, for "Kodagu" Ltd.

Licence No. 60.
Licenced to Post without Prepayment

Reg. No. M. 1550.
'KODAGU' MERCARA. (Coorg)

ಕೊಡಗು

ಸಂಪಾದಕರು—ಬಿ. ಡಿ. ಗಣಪತಿ | ವಾರ್ಷಿಕ ಚಂದಾ ರೂ 5-0-0

ಸಂಪುಟ | ತಾರೀಕು —೨ ೧೯೪೮ನೇ ಶುಕ್ರವಾರ | ಸಂಚಿಕೆ ೩೩

ಜನವರಿ ೩೦ರಲ್ಲಿ ಕೊನೆಗೊಂಡ ಅಮರ ಜೀವನದ ವಿಮಲ ಸ್ಮೃತಿಗಳು.

ಬಾಲಕ ಗಾಂಧಿ. (೧೮೬೯–೧೮೮೮)

ಕಾಥೇವಾಡದ ಪೋರಬಂದರಲ್ಲಿ ಅಕ್ಟೋಬರ್ ೨ರಂದು ಕರಮಚಂದ್ ಗಾಂಧಿಯವರ ಕಡೆಯ ಪುತ್ರನಾಗಿ ಜನಿಸಿದರು. ೧೮೮೩ರಲ್ಲಿ ಗೋಕುಲದಾಸ್ ಮಾಕನ್ಜಿಯವರ ಪುತ್ರಿ ಕಸ್ತೂರಿ ಬಾಯಿಯೊಡನೆ ವಿವಾಹವೆಸಗಿತು. ೧೮೮೫ರಲ್ಲಿ ಮದುವೆಯಾದಾಗ ೧೫ನೇ ವರ್ಷ ವಯಸ್ಸಿನಲ್ಲಿ ತಂದೆಯವರ ಜೇಬಿನಿಂದ ನಾಣ್ಯದ ಚೂರೊಂದನ್ನು ಕದ್ದ ತಪ್ಪನ್ನು ಒಪ್ಪಿ ತನಗೆ ಶಿಕ್ಷೆಯಾಗಬೇಕೆಂದು ತಂದೆಗೆ ಪತ್ರ ಬರೆದರು. ಪತ್ರ ಓದಿದ ತಂದೆಯವರ ಕಣ್ಣಲ್ಲಿ ಕಂಬನಿ ತುಂಬಿದ್ದನ್ನು ಕಂಡಿತು. ಆ ತಂದೆಯವರ ಕಣ್ಣಿನಲ್ಲಿ ತುಂಬಿದ ಆ ಪ್ರೇಮದ ಮುತ್ತಿನ ಮಣಿಗಳು ನನ್ನ ತಪ್ಪನ್ನು ತೊಳೆದು ಪಾವನಗೊಳಿಸಿದವು ಅದು. ನಂತರ ನನಗೆ ಅಹಿಂಸೆಯ ಪ್ರಥಮ ಸೋಪಾನವಾಯಿತು. ಆದರೆ ಅಂದು ಮಗುವಾಗಿದ್ದಾಗ ಅದು ಕೇವಲ ತಂದೆಯ ಪ್ರೀತಿಯ ಸಂಕೇತವಾಗಿ ನನಗೆ ತೋರಿತ" ಎಂದು ತನ್ನ ಆತ್ಮಕಥೆಯಲ್ಲಿ ಬರೆದಿದ್ದಾರೆ. ೧೮೮೫ರಲ್ಲಿ ತಂದೆಯವರ ನಿಧನ.

ಯುವಕ ಗಾಂಧಿ (೧೮೮೮–೧೯೦೦)

೧೮೮೮ನೇ ಸಪ್ಟಂಬರ್ ೪ರಲ್ಲಿ ಹೆಚ್ಚಿನ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ ಮಾಡಿದರು. ಪ್ರಥಮ ದಿವಸಗಳಲ್ಲಿ ಯುವಕರ ಬೆಡಂಬಡಿಕೆಗೆ ಸೋತು ರೂಪಾಯಿಯ ಸೂಟ್ ಹೊಲಿಸಿದರು. ನೃತ್ಯ, ಸಂಗೀತದ ಅಭ್ಯಾಸ ಮಾಡಿದರು. ಆದರೆ ಆತ್ಮಶಕ್ತಿಗೊಂಡು ಈ ಆಡಂಬರಗಳನ್ನು ತಿರಸ್ಕಾರ ಮಾಡಿದರು. ಪ್ರತಿ ಪದಿನಂಗಿನ ಲೆಕ್ಕವಿಡುವ ನಿರ್ಧಾರ ಮಾಡಿದರು. ಜೀವನವನ್ನು ಸರಳಗೊಳಿಸುವ ಪ್ರತಿಜ್ಞೆ ಮಾಡಿದರು. ಅನ್ನ ಅಡಿಗೆ ತಾನೇ ಮಾಡಿಕೊಂಡು ವ್ಯಾಸಂಗ ಮಾಡುವ ಏರ್ಪಾಡು ಮಾಡಿಕೊಂಡರು. ದಿನಕ್ಕೆ ೧ ಶಿಲಿಂಗ್ ೩ ಪೆನ್ನಿನ ಖರ್ಚಿನಲ್ಲಿ ಜೀವನ ನಡೆಸಿದರು. ೧೮೯೧ರಲ್ಲಿ ಬ್ಯಾರಿಸ್ಟರ್–ಎಟ್–ಲಾ ಆಗಿ ಜೂನ್ ೧೨ರಲ್ಲಿ ಭಾರತಕ್ಕೆ ಮರಳಿಬಂದರು. ತಾಯಿಯ ನಿಧನ ವಾರ್ತೆ ತಿಳಿಯಿತು. ಬೊಂಬಾಯಿಯಲ್ಲಿ ಲಾಯರ್ ವೃತ್ತಿ ಪ್ರಾರಂಭ ಮಾಡಿದರು. ೧೮೯೩ರಲ್ಲಿ ದಾದಾ ಅಬ್ದುಲ್ಲಾ ಕಂಪನಿಯವರ ಕೇಸಿನ ಸಂಬಂಧ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ ಬೆಳಸಿದರು. ಆಫ್ರಿಕಾದಲ್ಲಿಯ ಕೂಲಿಗಳ ದುಃಸ್ಥಿತಿಯಿಂದ ಮರುಗಿದರು. "ಕೂಲಿ ಬ್ಯಾರಿಸ್ಟರ್" ಗಾಂಧಿಯವರು ಬಿಳಿಜನರ ದರ್ಪ, ಪ್ರಿಟೋರಿಯಾದ ಸಭೆ ಭಾರತೀಯರಿಗೆ ಮತದಾನದ ಹಕ್ಕು ಕೊಡದೆ ಮಾಡಿದ ತೊಂದರೆ ಮೊದಲಾದುವನ್ನು ಎದುರಿಸಿ ನೆಟಾಲ್‌ನಲ್ಲೇ ಎರಡು ವರ್ಷಗಳ ರಾಜಕೀಯ ಕೆಲಸ ಮಾಡಿದರು. ೧೮೯೬ರಲ್ಲಿ ಭಾರತಕ್ಕೆ ಬಂದು ಹೆಂಗಸು ಮಕ್ಕಳನ್ನು ಕರೆದುಕೊಂಡು ಹೋದರು. ಫಿರೋಜ್ ಶಾ ಮೆಹತಾ, ಬದ್ರುದ್ದೀನ ತಯಾಬ್ಜಿ, ರಾನಡೆ, ಲೋಕಮಾನ್ಯ ತಿಲಕ, ಗೋಖ

ಲೆ ಮೊದಲಾದವರನ್ನು ಭೇಟಿ ನಡೆಸಿದರು. ... ಡರ್ಬಾನ್ ಬಂದರದಲ್ಲಿ ... ಬಿಳಿಜನರ ವಿರೋಧ ... ಸಭೆ ನಡೆಯಿತು ... ಅವರ ... ದಾಳಿಗೆ ... ೧೮೯೭ ... ಪ್ರಯತ್ನದಿಂದ ... ಗಾಂಧಿಯವರು ... ನಾಲ್ಕು ತಿಂಗಳ ...

ಪೋಲೀಸ್ ಸೂಪರಿಂಟೆಂಡೆಂಟರ ಪತ್ನಿಯವರಿಂದ ಅವರ ರಕ್ಷಣೆಯಾಯಿತು. ಬೋಯರ್ ಯುದ್ಧದಲ್ಲಿ ಸ್ವಯಂಸೇವಕರಾಗಿ ...

ಸ್ವಯಂಸೇವಕ ಗಾಂಧಿ
(೧೯೦೦–೧೯೧೮)

೧೯೦೦ರಲ್ಲಿ ಭಾರತಕ್ಕೆ ಹಿಂತಿರುಗಿದಾಗ ಅಲ್ಲಿಯ ಭಾರತೀಯ ನಿವಾಸಿಗಳು ಕೊಟ್ಟ ಬಹುಮಾನ ಉಡುಗೊರೆಗಳ ಒಂದೆರಡನ್ನೂ ಗಾಂಧೀಜಿ ಒಂದನ್ನೂ ಮುಟ್ಟದೆ ಅವುಗಳನ್ನು ಸಾರ್ವಜನಿಕ ಹಿತಕ್ಕಾಗಿ ಉಪಯೋಗಿಸಲು ಏರ್ಪಾಡು ಮಾಡಿದರು. ಸಾರ್ವಜನಿಕ ಸೇವಕನು ಯಾರಿಂದಲೂ ಯಾವ ಬಹುಮಾನವನ್ನೂ ಸ್ವೀಕರಿಸಬಾರದೆಂಬ ನಿರ್ಧಾರ ಮಾಡಿದರು. ೧೯೦೧ರ ಅಖಿಲ ಭಾರತ ಕಾಂಗ್ರೆಸ್ಸಿನ ... ದಕ್ಷಿಣ ಆಫ್ರಿಕಾದಿಂದ ಕರೆಬಂತು. ... 'ಇಂಡಿಯನ್ ಒಪೀನಿಯನ್' ಪತ್ರಿಕೆಯ ಸಂಪಾದಕರಾದರು. ... ೧೯೦೬ರಲ್ಲಿ ಜುಲು ದಂಗೆ ... ಗಾಂಧೀಜಿಯವರು ... ಏಶ್ಯಾಟಿಕ್ ರಿಜಿಸ್ಟ್ರೇಶನ್ ಆರ್ಡಿನೆನ್ಸ್ ... ಗಾಂಧೀಜಿಯವರ ಪ್ರತಿಭಟನೆ ... ಗಾಂಧೀಜಿಯವರ ... ೨೦೦ ಜನರ ... ೧೯೦೮ರಲ್ಲಿ ಸೆರೆಮನೆ ... ೧೯೦೮ರಲ್ಲಿ ಒಪ್ಪಂದ ... ಉಲ್ಲಂಘನೆ, ಪುನಃ ಸತ್ಯಾಗ್ರಹ ಪುನಃ ... ೧೯೧೩ರಲ್ಲಿ ನ್ಯಾಯ ... ಲ್‌ನಿಂದ ಟ್ರಾನ್ಸ್‌ವಾಲ್ ಎಂಬಲ್ಲಿಗೆ ೩,೦೦೦ ಜನರ ಮೆರವಣಿಗೆ, ೬,೦೦೦ ಜನರ ಗಣಿ ಕೆಲಸಗಾರರ ಮುಷ್ಕರ. ಗಾಂಧೀಜಿಯವರ ಬಿಡುಗಡೆ ೧೯೧೪ರಲ್ಲಿ ಗಾಂಧಿ–ಸ್ಮಟ್ಸ್ ಒಪ್ಪಂದ ಭಾರತೀಯರ ಬೇಳಿಕೆಯನ್ನು ಸಲ್ಲಿಸಿ ತಲೆಗಂದಾಯವನ್ನು ವಜಾ ಮಾಡಲಾಯಿತು.

ಬ್ರಿಟಿಷ್ ಮಿತ್ರ ಗಾಂಧಿ
(೧೯೧೪–೧೯೧೯)

ಜಗತ್ತಿನ ಪ್ರಥಮ ಯುದ್ಧ ೧೯೧೪ರಲ್ಲಿ ಪ್ರಾರಂಭವಾಯಿತು. ಆಗ ಗಾಂಧೀಜಿ ಲಂಡನಿನಲ್ಲಿದ್ದರು. ಅಲ್ಲಿದ್ದ ಭಾರತೀಯರನ್ನು ಸೇರಿಸಿ ಯುದ್ಧದಲ್ಲಿ ಬ್ರಿಟಿಷರಿಗೆ ಸಹಾಯ ಮಾಡಬೇಕೆಂದು ಬೋಧಿಸಿದರು. ತಾನೇ ಪ್ರಥಮ ಚಿಕಿತ್ಸೆಯ ಪರೀಕ್ಷೆಯಲ್ಲಿ ಕೇರ್‌ಟೇಕರಾಗಿ ಸೇರಿದರು. ಕಸ್ತೂರಬಾಯಿಯವರೂ ಸೇರಿದರು. ಆಗ ಇಂಗ್ಲೆಂಡಿನಲ್ಲಿದ್ದ ಶ್ರೀ ಸರೋಜಿನಿದೇವಿಯವರೂ ಗಾಂಧೀಜಿಯವರೊಡನೆ ಕೆಲಸ ಕೈಗೊಂಡರು. ೧೯೧೪ರ ಡಿಸಂಬರಿನಲ್ಲಿ ಕಾಯಿಲೆಯ ನಿಮಿತ್ತ ಗಾಂಧೀಜಿಯವರು ಭಾರತಕ್ಕೆ ಹಿಂತಿರುಗಿದರು. ಗಾಂಧೀಜಿಯವರಿಗೆ ಬ್ರಿಟಿಷ್ ಸರಕಾರವು 'ಕೈಸರ್–ಇ–ಹಿಂದ' ಪದಕ ಕೊಟ್ಟರು. ೧೯೧೫ನೇ ಜನವರಿ ತಾರೀಕು ೧೮ರಲ್ಲಿ ರವೀಂದ್ರನಾಥ ಟಾಗೋರರವರು ಗಾಂಧೀಜಿಯವರನ್ನು ಪ್ರಥಮವಾಗಿ 'ಮಹಾತ್ಮ' ಎಂದು ಕರೆದರು. ಗಾಂಧೀಜಿಯವರು ಸಮಾಜ ಸುಧಾರಣೆಯಲ್ಲಿ ನಿರತರಾದರು. ಅಸ್ಪೃಶ್ಯರ ದೀನ ದಲಿತರ ಉದ್ಧಾರಕ್ಕಾಗಿ ಹೋರಾಡತೊಡಗಿದರು. ಅಹಮದಾಬಾದಿನ ಹತ್ತಿರದ ಕೊಚರಬ್ ಎಂಬಲ್ಲಿ ಸತ್ಯಾಗ್ರಹ ಆಶ್ರಮವನ್ನು ಅದೇ ವರ್ಷ ಮೇ ೨೫ಕ್ಕೆ ತೆರೆದರು. ಪ್ರತಿ ಸದಸ್ಯರು, ಸತ್ಯ, ಅಹಿಂಸ, ಬ್ರಹ್ಮಚರ್ಯ, ಅಸಂಗ್ರಹ, ಸ್ವದೇಶಿ, ನಿರ್ಭಯತೆ, ಅಸ್ಪೃಶ್ಯತಾ ನಿವಾರಣ, ಹಿಂದೀ ಮಾತಿನಲ್ಲಿ ಪ್ರತಿಜ್ಞೆ ತೆಗೆದುಕೊಂಡರು. ೧೯೧೬ರಲ್ಲಿ ಪ್ರಥಮ ಗಾಂಧಿ–ನೆಹರು ಭೇಟಿಯಾಯಿತು. ೧೯೧೭ನೇ ಏಪ್ರಿಲ್ ೧೭ರಲ್ಲಿ ಮಹಾತ್ಮರು ಸರಕಾರದ ಆಜ್ಞೆಯನ್ನು ನಿರಾಕರಿಸಿ ಮೋತಿಹಾರಿ ಜಿಲ್ಲೆಯ 'ಚಂಪಾರಣ'ಕ್ಕೆ ಹೋದರು. ಅಲ್ಲಿಯ ಬ್ರಿಟಿಷ್ ಪ್ಲಾಂಟರರ ದಬ್ಬಾಳಿಕೆ ಮತ್ತು ಭಾರತೀಯ ಕೆಲಸಗಾರರ ತೊಂದರೆಯನ್ನು ವಿಚಾರಿಸಿದರು. ೧೯೧೮ರಲ್ಲಿ ಡೆಲ್ಲಿಯಲ್ಲಿ ನಡೆದ ಯುದ್ಧ ಸಮ್ಮೇಳನಕ್ಕೆ ಗಾಂಧೀಜಿಯವರು ಆಹ್ವಾನಿಸಲ್ಪಟ್ಟರು. ಯುದ್ಧಕ್ಕೆ ಸಹಾಯ ಕೊಡುವ ಠರಾವು ಮಂಡಿಸಲ್ಪಟ್ಟಿತು. ಗಾಂಧಿಯವರು ಒಂದೇ ವಾಕ್ಯವನ್ನು ಹಿಂದಿಯಲ್ಲಿ ಆಡಿ ಠರಾವಿಗೆ ಬೆಂಬಲವಿತ್ತರು. ವೈಸರಾಯರು ಅಧ್ಯಕ್ಷರಾಗಿರುವ ಸಭೆಯಲ್ಲಿ ಹಿಂದೀಯಲ್ಲಿ ಮಾತಾಡಿದುದು ಭಾರತೀಯ ಇತಿಹಾಸದಲ್ಲಿ ಇದೇ ಮೊದಲು. ಹಿಂದೂದೇಶವು ಯುದ್ಧಕ್ಕೆ ೯೮೫,೦೦೦ ಜನರನ್ನು ಒದಗಿಸಿತು.

ಅನ್ಯಾಯ ವಿರೋಧಿ ಗಾಂಧಿ
(೧೯೧೯–೧೯೩೨)

ಯುದ್ಧದಲ್ಲಿ ಶಕ್ತಿ ಮೀರಿ ಸಹಾಯ

ಯು ಮಾಡಿದ ಭಾರತದಲ್ಲಿ ಸುಧಾರಣೆ ತರುವ ಬದಲು ಬ್ರಿಟಿಷ್ ಸರಕಾರವು ರೌಲಟ್ ಅಕ್ಟನ್ನು ತಂದಿತು. ಪ್ರೆಸ್ ಸ್ವಾತಂತ್ರ್ಯವು ತೆಗೆದು ಹಾಕಲ್ಪಟ್ಟಿತು. ಪ್ರಥಮ ಅಖಿಲ ಭಾರತ ಸತ್ಯಾಗ್ರಹ ಪ್ರಾರಂಭವಾಯಿತು. ಜಾಲಿಯನ್ ವಾಲಾಬಾಗಿನ ಕೊಲೆ ನಡೆಯಿತು. ೨೦,೦೦೦ ಜನರ ಮೇಲೆ ಗುಂಡು ಹಾರಿಸಲಾಯಿತು. ೪೦೦ ಜನರು ಮೃತರಾದರು. ಗಾಂಧೀಜಿಯವರ ಸತ್ಯಾಗ್ರಹವನ್ನು ಹಿಂಸೆಯ ಕಾರಣಕ್ಕಾಗಿ ನಿಲ್ಲಿಸಿದರು. ೧೯೨೦ರಲ್ಲಿ ಖಿಲಾಫತ್ ಚಳವಳಿ ಪ್ರಾರಂಭವಾಯಿತು. ಗಾಂಧೀಜಿಯವರು ತಮ್ಮ 'ಕೈಸರ್-ಇ-ಹಿಂದ್' ಮೆಡಲನ್ನು ವಾಪಾಸು ಮಾಡಿದರು. ೧೯೨೨ನೇ ಫೆಬ್ರವರಿ ಒಂದನೇ ತಾರೀಖಿನಲ್ಲಿ ಬಾರ್ಡೋಲಿ ಸತ್ಯಾಗ್ರಹ ಪ್ರಾರಂಭವಾಯಿತು. ಫೆಬ್ರವರಿ ೫. ೫ರಲ್ಲಿ ಸಂಯುಕ್ತ ಪ್ರಾಂತದ ಚೌರಿಚಾರಾದಲ್ಲಿ ೨೧ ಪೋಲೀಸರು ಮತ್ತು ಒಬ್ಬ ಸ. ಇನ್ಸ್‌ಪೆಕ್ಟರನ್ನು ಕೋಣೆಗೆ ಸೇರಿಸಿ ಜನರು ಬೆಂಕಿ ಹಚ್ಚಿದರು. ಗಾಂಧೀಜಿಯವರು ಈ ಹಿಂಸಾಕೃತ್ಯದಿಂದ ನೊಂದು ಫೆಬ್ರವರಿ ೧೨ರಲ್ಲಿ ಸತ್ಯಾಗ್ರಹವನ್ನು ನಿಲ್ಲಿಸಿದರು. ಇದೇ ದೇಶವೇ ಗಾಂಧೀಜಿಯವರನ್ನು ಇದಕ್ಕಾಗಿ ನಿಷೇಧಿಸಿದರು. ೧೯೨೨ರಲ್ಲಿ ಮಹಾತ್ಮರ ದಸ್ತಗಿರಿಯಾಯಿತು. ಚರಿತ್ರಾರ್ಹ ವಿಚಾರಣೆಯು ಪ್ರಾರಂಭವಾಯಿತು. ಮಹಾತ್ಮರಿಗೆ ಆರು ವರ್ಷಗಳ ಸಜೆ ವಿಧಿಸಲ್ಪಟ್ಟಿತು.

ಸತ್ಯಾರ್ಥಿ ಗಾಂಧಿ (೧೯೨೨–೧೯೩೭)

ಜೈಲಿನಲ್ಲಿದ್ದಾಗ ಮಹಾತ್ಮರು ತಮ್ಮ ಆತ್ಮ ಚರಿತ್ರೆಯನ್ನು ಬರೆದರು. ಅದಕ್ಕೆ ಸತ್ಯಶೋಧನೆಯೆಂಬ ಹೆಸರಿತ್ತು. ೧೯೨೪ರಲ್ಲಿ ಗಾಂಧಿಯವರ ಬಿಡುಗಡೆಯಾಯಿತು. ಹಿಂದೂದೇಶದ ರಾಜಕೀಯವು ಆಗ ಬದಲಾಗಿತ್ತು. ಸ್ವರಾಜ್ಯ ಪಾರ್ಟಿಯು ಶಾಸನ ಸಭಾ ಪ್ರವೇಶ ಕಾರ್ಯಕ್ರಮವನ್ನು ಕೈಕೊಂಡಿತ್ತು. ಮಹಾತ್ಮರು ವಿಧಾಯಕ ಕಾರ್ಯಗಳಲ್ಲಿ ಮಗ್ನರಾದರು. ೧೯೨೪ ನೇ ಇಸವಿಯಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಭೆಯ ಅಧ್ಯಕ್ಷತೆಯನ್ನು ಅವರು ವಹಿಸಿದರು. ಕ್ರಮೇಣ ದೇಶದಲ್ಲಿ ಕೋಮುವಾರು ಭಾವನೆಯು ಅಂಕುರಿಸಲಾಗಿತು. ಇದನ್ನು ವಿರೋಧಿಸಿ ೧೯೨೪ರಲ್ಲಿ ಮಹಾತ್ಮರು ೨೧ ದಿನಗಳ ಉಪವಾಸ ವ್ರತ ಮಾಡಿದರು. ೧೯೩೦ರಲ್ಲಿ ಭಾರತದ ಗುರಿ ಪೂರ್ಣ ಸ್ವಾತಂತ್ರ್ಯವೆಂದು ನಿರ್ಣಯವಾಯಿತು. ಗಾಂಧಿ-ಇರ್ವಿನ್ ಮಾತುಕತೆ ನಡೆದು ಫಲಕಾರಿಯಾಗಲಿಲ್ಲ. ೧೯೩೦ನೇ ಮಾರ್ಚ್ ೧೨ರಲ್ಲಿ ಮಹಾತ್ಮರು ಉಪ್ಪಿನ ಸತ್ಯಾಗ್ರಹ ಹೂಡಿ, ತಮ್ಮ ೭೯ ಆಶ್ರಮವಾಸಿಗಳನ್ನು ಕರೆದುಕೊಂಡು ೨೦೦ ಮೈಲಿನ ದಂಡೀಯಾತ್ರೆ ಪ್ರಾರಂಭಿಸಿದರು. ಗಾಂಧೀಜಿಯವರ ದಸ್ತಗಿರಿಯಾಯಿತು. ದೇಶದ ಉದ್ದಗಲಕ್ಕೂ ಚಳವಳಿ ನಡೆಯಿತು. ಗಾಂಧೀಜಿಯವರ ಬಿಡುಗಡೆಯು ೧೯೩೧ರಲ್ಲಿ ಆಗಿ ಗಾಂಧಿ-ಇರ್ವಿನ್ ಒಪ್ಪಂದವಾಯಿತು. ದುಂಡು ಮೇಜಿನ ಪರಿಷತ್ತು ನಡೆದು ಗಾಂಧಿಯವರು ಪ್ರತಿನಿಧಿಯಾಗಿ ಹೋಗಿದ್ದರು. ಫಲಕಾರಿಯಾಗಲಿಲ್ಲ. ೧೯೩೨ರಲ್ಲಿ ವಿಸ್ತೃತ ಚಳವಳಿ ನಡೆಯಿತು. ಮುಂದಾಳುಗಳೆಲ್ಲರ ದಸ್ತಗಿರಿಯಾಯಿತು. ೧೯೩೩ರಲ್ಲಿ 'ಹರಿಜನ' ಪತ್ರಿಕೆಯನ್ನು ಸ್ಥಾಪಿಸಿದರು. ಆತ್ಮ ಶುದ್ಧಿಗಾಗಿ ೨೧ ದಿನಗಳ ಉಪವಾಸ ಮಾಡಿದರು. ೧೯೩೩ರಲ್ಲಿ ಹರಿಜನರ ಹಿತಕ್ಕಾಗಿ ಅಖಿಲ ಭಾರತವನ್ನು ೧೦ ತಿಂಗಳುಗಳ ವರೆಗೆ ಸುತ್ತಿದರು. ಆಗ ಕೊಡಗಿಗೂ ಬಂದಿದ್ದರು. ೧೯೩೪ನೇ ಜೂನ್ ೨೫ರಲ್ಲಿ ಮಹಾತ್ಮರನ್ನು ಕೊಲ್ಲುವ ಪ್ರಥಮ ಪ್ರಯತ್ನವು ಪೂನಾದಲ್ಲಿ ನಡೆಯಿತು. ೧೯೩೪ರಲ್ಲಿ ಅವರು ಕಾಂಗ್ರೆಸಿಗೆ ರಾಜಿನಾಮೆ ಕೊಟ್ಟು ಹೊರಗಿನಿಂತರು. ೧೯೩೬ನೇ ಅಕ್ಟೋಬರ್ ೨೨ರಲ್ಲಿ ಅವರು ವಾರ್ಧಾದ ಸೇವಾಗ್ರಾಮದಲ್ಲಿ ತಮ್ಮ ಆಶ್ರಮವನ್ನು ಸ್ಥಾಪಿಸಿದರು.

ಶಾಂತಿಪ್ರಿಯ ಗಾಂಧಿ
(೧೯೩೭–೧೯೪೨)

ಹಿಂದೂಸ್ಥಾನದಲ್ಲಿ ೧೯೩೭ರ ಚುನಾವಣೆಯ ನಂತರ ಕಾಂಗ್ರೆಸ್ ಅಧಿಕಾರ ಸ್ವೀಕರಿಸಿತು. ಗಾಂಧೀಜಿಯವರು ಕಾಂಗ್ರೆಸ್ಸಿನ ಹೊರಗಿದ್ದರೂ ಕಾಂಗ್ರೆಸ್ಸಿನ ಸರ್ವಸ್ವನಾಗಿದ್ದರು. ಅಂತರ್ರಾಷ್ಟ್ರೀಯ ರಾಜಕೀಯವು ಯುದ್ಧದ ಕಡೆಗೆ ಸಾಗತೊಡಗಿ ಮಹಾ ಯುದ್ಧದ ಚಿಹ್ನೆಗಳು ತೋರತೊಡಗಿದವು. ಹಿಟ್ಲರ್-ಮುಸೊಲೀನಿಗಳ ಆರ್ಭಟವು ಎಲ್ಲಾ ದಿಕ್ಕುಗಳಲ್ಲಿಯೂ ಕೇಳಿ ಬರುತ್ತಿತ್ತು. ಗಾಂಧೀಜಿಯವರು ವಿಶ್ವಶಾಂತಿಯ ದೃಷ್ಟಿಯಿಂದ ಯುದ್ಧವನ್ನು ನಿಲ್ಲಿಸಲು ಯತ್ನಿಸಿದರು. ೧೯೩೯ನೇ ಆಗಸ್ಟ್ ತಿಂಗಳಲ್ಲಿ ಜರ್ಮನಿಯ ಹಿಟ್ಲರನಿಗೆ ಒಂದು ಪತ್ರ ಬರೆದು ಜಗತ್ತನ್ನು ಯುದ್ಧಕೂಪದಲ್ಲಿ ಹಾಕಬಾರದೆಂದು ಕೇಳಿಕೊಂಡರು. ಗಾಂಧೀಜಿಯವರು ಮಿತ್ರ ಪಕ್ಷದವರೊಡನೆ ತಮ್ಮ ಸಹಾನುಭೂತಿಯನ್ನು ವ್ಯಕ್ತಮಾಡಿದರೂ ಯುದ್ಧದಲ್ಲಿ ಸಹಾಯಕ್ಕೆ ತಯಾರಾಗಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಪ್ರಥಮ ದೊರೆಯಬೇಕಾದುದು ಧರ್ಮವೆಂದರು. ಆ ಕಾರಣಕ್ಕಾಗಿ ತಮ್ಮ ನಿಷೇಧವನ್ನು ವ್ಯಕ್ತಪಡಿಸಲು ೧೯೪೦ರಲ್ಲಿ ವ್ಯಕ್ತಿಗತ ಸತ್ಯಾಗ್ರಹದ ಚಳವಳಿ ಹೂಡಿದರು. ಸಹಸ್ರ ಸಂಖ್ಯೆಯಲ್ಲಿ ಸತ್ಯಾಗ್ರಹಿಗಳು ಜೈಲಿಗೆ ತೆರಳಿದರು.

ಅಹಿಂಸಾ ನಾಯಕ ಗಾಂಧಿ
(೧೯೪೨–೧೯೪೮)

ಹಿಂದೂದೇಶದ ಸಮಸ್ಯೆಯನ್ನು ಬಗೆಹರಿಸಲು ಸರಕಾರದ ಪ್ರಯತ್ನ ನಡೆಯಿತು. ಕ್ರಿಪ್ಸರು ಭಾರತಕ್ಕೆ ಬಂದರು. ಸಂಯೋಜನವಾಗಲಿಲ್ಲ. ಮಹಾತ್ಮರ ಮುಂಬಯಿಯಲ್ಲಿ ಪುನಹ ಚಳವಳಿಯ ವಿಚಾರವಾಯಿತು. ಆಗ್ಗಲ್ಲಿ ಭಾರತ ರಾಜಕೀಯ ಮುಂದಾಳುಗಳೆಲ್ಲರನ್ನು ಸರಕಾರವು ಬಂಧಿಸಿತು. ದೇಶದಲ್ಲಿ ಕೋಲಾಹಲವಾಯಿತು. ಅಮಾನುಷ ರೀತಿಯ ಅತ್ಯಾಚಾರ ನಡೆಯಿತು. ಜೈಲಿನಲ್ಲಿ ಕಸ್ತೂರಬಾರವರು ಮತ್ತು ಮಹಾದೇವ ದೇಸಾಯಿಯವರು ಮೃತರಾದರು. ಮಹಾತ್ಮರು ಸ್ಥಿತ ಪ್ರಜ್ಞನಂತೆ ವರ್ತಿಸಿದರು. ೧೯೪೬ರಲ್ಲಿ ಲೇಬರ್ ಸರಕಾರದ ಅಭಿಮತದಂತೆ ಕೇಬಿನೆಟ್ ಮಿಶನ್ ಭಾರತಕ್ಕೆ ಬಂತು. ೧೯೪೭ರಲ್ಲಿ ಹಿಂದೂದೇಶದ ವಿಭಜನೆಯಾಯಿತು. ದೇಶಕ್ಕೆ ಸ್ವಾತಂತ್ರ್ಯ ದೊರೆಯಿತು. ಗಾಂಧೀಜಿಯವರು ಸಂತುಷ್ಟರಾಗಲಿಲ್ಲ. ದೇಶ ವಿಭಜನೆಗೆ ನೊಂದುಕೊಂಡರು. ನಂತರ ಹಿಂದೂ ಮುಸ್ಲಿಂ ಹತ್ಯಾಕಾಂಡ ನಡೆಯಿತು. ಮಹಾತ್ಮರು ಪಾದಚಾರಿಯಾಗಿ ನವಖಾಲಿ ಮೊದಲಾದೆಡೆ ಸುತ್ತಿ ಬೋಧಿಸಿದರು. ಮಾನವನ ಅಖಂಡತೆಯನ್ನು ಬೋಧಿಸಿದರು. ಈಶ್ವರ್ ಅಲ್ಲಾ ಇಬ್ಬರೂ ಒಂದೇ ಎಂದು ತಿಳಿಸಿದರು. ಮುಸ್ಲಿಮರಿಗೆ ಧೈರ್ಯ ಕೊಟ್ಟರು. ಈ ಸಮಯವು ಗಾಂಧೀಜಿಯವರ ಜೀವನದ ಪರೀಕ್ಷಾ ಸಮಯವಾಗಿತ್ತು. ಅವರು ಹಿಂದೂ ಮುಸ್ಲಿಂ ಐಕ್ಯತೆಗಾಗಿ ಉಪವಾಸ ಮಾಡಿದರು. ಅವರ ಉಪವಾಸದಿಂದಾಗಿ ಪರಿಸ್ಥಿತಿ ಸುಧಾರಿಸಿತು. ಮಹಾತ್ಮರ ಅಹಿಂಸೆಯು ಅಸಾಧ್ಯವನ್ನು ಸಾಧಿಸಿತು.

ಅಮೃತ ಆತ್ಮಗಾಂಧಿ (೧೮೬೯–೧೯೪೮)

ಆತ್ಮದ ಅನುಸಂಧಾನದಿಂದ ಪರಮಪದವನ್ನು ಪಡೆದ ಗಾಂಧೀಜಿಯವರು ಸಾಮೂಹಿಕ ಪ್ರಾರ್ಥನೆಯನ್ನು ಪ್ರಾರಂಭಿಸಿದರು. ಪ್ರತಿ ದಿನ ಸಾಯಂಕಾಲ ನೂರಾರು ಜನರು ಕಿಕ್ಕಿರಿದು ಈ ಮಹಾತ್ಮನ ವಾಣಿಯಿಂದ ಪುನೀತರಾಗುತ್ತಿದ್ದರು. ಯುಗಪುರುಷ ಬಾಪುವಿನ ಸ್ಫಟಿಕ ಹೃದಯದ ಚಿನ್ನದ ಕಿರಣಗಳು ಪಾಮರರ ಪರಿತಾಪವನ್ನು ಪರಿಹರಿಸುತ್ತಿತ್ತು. ಜಗದ್ವಂದ್ಯ ಗಾಂಧೀಜಿಯವರು ಜಗತ್ತಿನ ದೃಷ್ಟಿಯನ್ನು ತಮ್ಮ ನವೀನ ಹಾಗೂ ಪರಿಣಾಮಕಾರಕ ಅಹಿಂಸಾಶಕ್ತಿಯ ಕಡೆಗೆ ಆಕರ್ಷಿಸಿಕೊಂಡಿದ್ದರು. ಅವರ ದೇಶದಲ್ಲಿ ಆಗುತ್ತಿರುವ ಕೋಮುವಾರು ವೈರತ್ವ, ಪ್ರಸ್ತಾಪಿಸಲ್ಪಡುತ್ತಿರುವ ಶಾಂತಿಮಾರ್ಗ ಕೆಲವು ಜಾತೀಯವಾದಿಗಳಿಗೆ ಸರಿದೋರಲಿಲ್ಲ. ೧೯೪೮ ನೇ ಜನವರಿ ೩೦ ನೇ ಶುಕ್ರವಾರ ದಿನ, ಬಿರ್ಲಾಭವನದ ಆವರಣದಲ್ಲಿ ಪ್ರಾರ್ಥನೆಗೆ ಬರುತ್ತಿದ್ದ ಮಹಾತ್ಮರಿಗೆ ಹಿಂದೂ ಯುವಕನೊಬ್ಬನು ಗುಂಡಿಟ್ಟುಕೊಂದನು. ಮಹಾತ್ಮರು ಶಾಂತನವಾದ ನಗುಮುಖವನ್ನು, 'ಹೇ ರಾಮ್' ಧ್ಯಾನಪೂರ್ವಕ ಪರಂಧಾಮವನ್ನೈದಿದರು. ಮಹಾತ್ಮರ ಕೊಲೆಯಾಗಿ ಇಂದಿಗೆ ನಾಲ್ಕು ವರ್ಷಗಳು ತುಂಬಿದವು. ಈ ದುಃಖ ಪೂರಿತ ದಿನದಲ್ಲಿ ಅಮರಬಾಪುವಿನ ಪಾವನ ಜೀವನದ ನೆನಹುಗಳನ್ನು ತಂದುಕೊಂಡು ನಮ್ಮ ಜೀವನವನ್ನು ಪವಿತ್ರವನ್ನಾಗಿಸಲು ಪ್ರಯತ್ನಿಸುವುದು ಸಾಯದೆ ಉಳಿದಿರುವ ನಮ್ಮ ಕರ್ತವ್ಯವಾಗಿದೆ.

ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಕೋವಿಗಳು, ವ್ಯವಸಾಯದ ಹತ್ಯಾರುಗಳು ಮತ್ತು ಕಬ್ಬಿಣದ ಸಲಾಕೆ ವಗೈರೆಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು ಮತ್ತು ರಿವಾಲ್ವರುಗಳು.
2. ·12ನೇ ನಂಬರಿನ ಒಂಟಿ ಕೊಳವಿನ ಕೋವಿಗಳು.
3. 12ನೇ ನಂಬರಿನ ಜೋಡು ಕೊಳವಿನ ಕೋವಿಗಳು.
4. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
5. 2", 1", ¾", ½", ¼" ಕಬ್ಬಿಣದ ಸಲಾಕೆಗಳು.
6. 9"×4" ಮತ್ತು 8"×4" ಕಬ್ಬಿಣದ ಬೀಮ್ಸ್ (Beams).
7. 8'×3'×12 (Gage)ನ ಕಬ್ಬಿಣದ ತಗಡುಗಳು.
8. 3"×3"×¼"ನ (Angles) ಎಂಗ್ಲ್ಯೂರ್ಸ್ ಆವಶ್ಯವಿರುವವರು ಇಂಡೆಂಟ್ ಕೊಟ್ಟಲ್ಲಿ ತರಿಸಿ ಕೊಡಬಹುದು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಆವಶ್ಯವಿರುವ ಕೋವಿಗಳಿಗೆ ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ಕೊಡಲಾಗುವುದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

ಬಹುಮಾನ

ತಾರೀಕು 18-1-52 ರಲ್ಲಿ ನನ್ನ ಬಾಬ್ತು ಈ ಕೆಳಗೆ ಕಾಣಿಸಿದ ಚಹರೆಯ ಎರಡು ಗೊಡ್ಡು ಎಮ್ಮೆಗಳು ಕಾಣೆಯಾಗಿವೆ. ಮಹನೀಯರು ಯಾರಾದರೂ ಪತ್ತೆ ಹಚ್ಚಿ ಈ ಕೆಳಗಿನ ಅಡ್ರೆಸಿನವರಿಗೆ ಒಪ್ಪಿಸಿದರೆ 10/-ರೂ. ಬಹುಮಾನ ಕೊಡಲಾಗುವುದು.

(1) ಸಾಧಾರಣ 4½ ಎತ್ತರದ, ಕರಿವರ್ಣದ, ತುದಿಕೂಯಿದ ಅಂದಾಜು ಒಂದೂವರೆ ಅಡಿ ಉದ್ದದ ಹಿಂಗೋಡಿನ ಎಮ್ಮೆ.

(2) ಅಂದಾಜು 4½ ಅಡಿ ಎತ್ತರದ ಸಾಧಾರಣ ಬಿಳಿವರ್ಣದ ತುದಿಕೂಯದ ಹಾಗೂ 1½ ಅಡಿ ಉದ್ದದ ಹಿಂಗೋಡಿನ ಎಮ್ಮೆ.

ಪೊನ್ನಚಂಡ ಪೂವಪ್ಪ,
ಬಲಮುರಿ ಗ್ರಾಮ
[illegible]

ಕೊಡಗಿನ ಸಾರ್ವತ್ರಿಕ ಚುನಾವಣೆಯ ಫಲಿತಾಂಶಗಳು.

ಕಾಂಗ್ರೆಸ್ಸಿಗೆ ೧೫ ಪ್ರತ್ಯೇಕ ಪಕ್ಷಕ್ಕೆ ೯ ಸ್ಥಾನಗಳು.

ಉತ್ತರ ಕೊಡಗು ಶನಿವಾರಸಂತೆಯ ರಿಸರ್ವ್ ಮತ್ತು ಜನರಲ್ ೨ ಸ್ಥಾನಗಳಿಗೆ.

ಶ್ರೀ ಕೆ. ಮಲ್ಲಪ್ಪನವರು, (ಕಾಂಗ್ರೆಸ್) ೪೨೦೩ ಓಟುಗಳು
,, ಹೆಚ್. ಎಂ ಮಲ್ಲಪ್ಪನವರು (ಪ್ರತ್ಯೇಕ ಪಕ್ಷ) ೬೫೦ ,,
,, ಪಿ. ಕೆ. ಚೆನ್ನಯ್ಯನವರು, (ಕಾಂ) (ರಿಸರ್ವ್) ೪೨೬೧ ,,
,, ಬಿ. ಚಿಕ್ಕನವರು. (ಪ್ರ) ,, ೬೦೭ ,,

ಸೋಮವಾರಪೇಟೆನಾಡಿನ (ಉತ್ತರ) ೧ ಸ್ಥಾನಕ್ಕೆ.

,, ಚೌಡ್ಲು ಕಾಳಪ್ಪನವರು, (ಕಾಂ) ೨೧೦೧ ,,
,, ಹಂಚೆಟ್ಟಿ ಚಂಗಪ್ಪನವರು, (ಪ್ರ) ೬೧೭ ,,
+,, ಡಿ ಹೆಚ್. ದಾಸಪ್ಪನವರು (ಸ್ವ) ೬೦೩ ,,

ಸೋಮವಾರಪೇಟೆನಾಡಿನ (ದಕ್ಷಿಣ) ೧ ಸ್ಥಾನಕ್ಕೆ.

,, ಹೆಚ್ ಟಿ. ಮುತ್ತಣ್ಣನವರು, (ಪ್ರ) ೧೨೯೩ ,,
,, ಕೆ. ಹನುಮರಾಯಯ್ಯನವರು (ಕಾಂ) ೯೨೮ ,,
+,, ಬಿ. ರುದ್ರಪ್ಪನವರು (ಸ್ವ) ೬೨ ,,

ಫ್ರೇಜರ್‌ಪೇಟೆ ಹೋಬಳಿಯ ೧ ಸ್ಥಾನಕ್ಕೆ.

,, ಜಿ. ಎಂ. ಲಿಂಗರಾಜನವರು (ಕಾಂ) ೨೩೭೫ ,,
,, ಎಸ್. ಎನ್. ರಾಮಶೆಟ್ಟಿಯವರು (ಪ್ರ) ೭೮೨ ,,
+,, ಬಿ. ಸಿ. ಮಲ್ಲಪ್ಪನವರು (ಸ್ವ) ೧೫೪ ,,

ಸುಂಟಿಕೊಪ್ಪದ ರಿಸರ್ವ್ ಮತ್ತು ಜನರಲ್ ೨ ಸ್ಥಾನಗಳಿಗೆ

,, ಜಿ. ಎಂ. ಮಂಜುನಾಥಯ್ಯನವರು (ಕಾಂ) ೨೫೩೮ ,,
,, ಪಾಂಡಂಡ ಚಂಗಪ್ಪನವರು (ಪ್ರ) ೧೩೩೬ ,,
,, ಶಿ. ಅಕ್ಕನವರು (ರಿಸರ್ವ್) (ಕಾಂ) ೨೮೩೨ ,,
,, ಬಿ. ಬಸವನವರು ,, (ಪ್ರ) ೧೯೯೬ ,,

ಮಡಿಕೇರಿ ಪಟ್ಟಣದ ೧ ಸ್ಥಾನಕ್ಕೆ.

,, ಬಿ ಎಸ್. ಕುಶಾಲಪ್ಪನವರು (ಕಾಂ) ೧೨೦೮ ,,
ಡಾ. ಬಿ. ಕೆ. ನಂಜುಂಡೇಶ್ವರನವರು (ಸ್ವ) ೫೪೨ ,,
ಶ್ರೀ ಎಸ್. ಆರ್. ಗೋಪಾಲಕೃಷ್ಣನವರು (ಪ್ರ) ೪೯೯ ,,
+,, ಸಿ. ಎಂ. ತಿಮ್ಮಯ್ಯನವರು (ಸ್ವ) ೨೪೬ ,,

ಮೂರ್ನಾಡಿನ ೧ ಸ್ಥಾನಕ್ಕೆ.

,, ಚೌರಿರ ಎ ಮಂದಣ್ಣನವರು (ಕಾಂ) ೨೧೧೫ ,,
,, ಕೆ. ಎಂ. ಪೊಣ್ಣಪ್ಪನವರು (ಪ್ರ) ೧೪೮೯ ,,

ಮಡಿಕೇರಿ ನಾಡಿನ ೧ ಸ್ಥಾನಕ್ಕೆ.

,, ಪಿ. ಡಿ ಸುಬ್ಬಯ್ಯನವರು (ಕಾಂ) ೨೦೬೫ ,,
,, ವೈ ಟಿ. ಐಯ್ಯಪ್ಪನವರು (ಪ್ರ) ೧೪೦೭ ,,

ದಕ್ಷಿಣಕೊಡಗಿನ ಶ್ರೀಮಂಗಲನಾಡು ಜನರಲ್ ಮತ್ತು ರಿಸರ್ವ್ ೨ ಸ್ಥಾನಗಳಿಗೆ.

,, ಕೆ. ಪಿ. ಕರುಂಬಯ್ಯನವರು (ಪ್ರ) ೧೯೩೨ ,,
,, ಎಂ. ಎ. ಕರುಂಬಯ್ಯನವರು (ಕಾಂ) ೧೩೩೨ ,,
ವ್ಯರ್ಥವಾದ ಓಟುಗಳು ೨೧೫ ,,
,, ಕುರುಬರ ಸುಬ್ಬಯ್ಯನವರು (ಪ್ರ) (ರಿಸರ್ವ್) ೧೭೦೪ ,,
,, ಕುರುಬರ ಮೊರನವರು (ಕಾಂ) ,, ೧೩೭೧ ,,
ವ್ಯರ್ಥವಾದದ್ದು ೧೪೦ ,,

ಹುದಿಕೇರಿಯ ೧ ಸ್ಥಾನಕ್ಕೆ.

,, ಕಾಳಮಾಡ ಗಣಪತಿಯವರು (ಪ್ರ) ೧೫೯೬ ,,
,, ಚೆಕ್ಕೆರ ಮಾಚಯ್ಯನವರು (ಕಾಂ) ೬೫೪ ,,
+,, ಚೆಕ್ಕೆರ ಪೊಣ್ಣಯ್ಯನವರು (ಕಮ್ಯೂನಿಸ್ಟ್) ೨೪೯ ,,

ಬೆಟ್ಟತ್‌ನಾಡಿನ ೧ ಸ್ಥಾನಕ್ಕೆ.

ಶ್ರೀ ಚೆ[illegible] ಡಿರ ಪೂಣಚ್ಚನವರು (ಕಾಂ) ೧೯೬೯ ,,
,, ಚೆಂದುರ ತಮ್ಮಯ್ಯನವರು (ಪ್ರ) ೭೯೦ ,,

ಪೊನ್ನಂಪೇಟೆಯ ಜನರಲ್ ಮತ್ತು ರಿಸರ್ವ್ ೨ ಸ್ಥಾನಗಳಿಗೆ

,, ಸಿ. ಎಂ ನಾಣಮ್ಮಯ್ಯನವರು (ಕಾಂ) ೩೨೮೭ ,,
,, ಬಿ. ಬಿ. ಗಣಪತಿಯವರು (ಪ್ರ) ೧೦೮೪ ,,
,, ಎಂ ಎಂ ಮುತ್ತಣ್ಣನವರು (ಕಮ್ಯೂನಿಸ್ಟ್) ೪೩೩ ,,
+,, [illegible]ನಂದ ಮಾದಯ್ಯನವರು (ಸ್ವ) ೧೩೫ ,,
,, ಪಣಿ[illegible]ರವರ ಬೆಳ್ಳಿಯಮ್ಮರು (ಕಾಂ) (ರಿಸರ್ವ್) ೩೨೧೦ ,,
,, ಪಂಜ್ರಿಯರವರ ಪಾಕನವರು (ಪ್ರ) ,, ೭೬೮ ,,

ವೀರಾಜಪೇಟೆ ಟೌನಿನ ೧ ಸ್ಥಾನಕ್ಕೆ.

,, ಎಸ್. ಜಿ. ಅಹಮದ್ ಅವರು (ಪ್ರ) ೧೩೪೭ ,,
,, ಎಸ್. ಎಸ್. ರಾಮಮೂರ್ತಿಯವರು (ಕಾಂ) ೧೨೯೯ ,,

ವೀರಾಜಪೇಟೆನಾಡಿನ ಜನರಲ್ ಮತ್ತು ರಿಸರ್ವ್ ೨ ಸ್ಥಾನಗಳಿಗೆ.

,, ಪಿ. ಸಿ ಮುತ್ತಯ್ಯನವರು (ಪ್ರ) ೩೬೬೮ ,,
,, ಬಿ. ಎ. ಬೆಳ್ಳಿಯಪ್ಪನವರು (ಕಾಂ) ೧೫೯೯ ,,
,, ಕಂಬೀರಂಡ ಬೆಳ್ಯಪ್ಪನವರು (ಸ್ವ) ೬೫೫ ,,
,, ಪಾಲೇಕಂಡ ಐಯ್ಯಮ್ಮನವರು (ಸ್ವ) ೪೯೯ ,,
,, ಹರಿಜನ ನಂಜನವರು (ಪ್ರ) (ರಿಸರ್ವ್) ೩೫೩೫ ,,
,, ಕೆಂಬಟ್ಟಿ ಕರುಂಬನವರು (ಕಾಂ) ,, ೧೦೮೪ ,,
ವ್ಯರ್ಥವಾದದ್ದು ೨೪೩

ಅಮ್ಮತ್ತಿನಾಡಿನ ೧ ಸ್ಥಾನಕ್ಕೆ.

,, ಪಿ. ಐ. ಬೆಳ್ಯಪ್ಪನವರು (ಪ್ರ) ೧೬೬೭ ,,
,, ಮಾಚಿಮಂಡ ನಂಜುಂಡನವರು (ಕಾಂ) ೧೨೪೫ ,,

ಸಿದ್ದಾಪುರ ಕ್ಷೇತ್ರದ ಜನರಲ್ ಮತ್ತು ರಿಸರ್ವ್ ೨ ಸ್ಥಾನಕ್ಕೆ

,, ಮುರುವಂಡ ಮಾಚಯ್ಯನವರು (ಕಾಂ) ೧೫೩೦ ,,
,, ಬಿ. ಎನ್. ಕುಟ್ಟಪ್ಪನವರು (ಕಮ್ಯೂನಿಸ್ಟ್) ೧೦೯೭ ,,
,, ಕೊತಂಡ ಪೂವಯ್ಯನವರು (ಪ್ರ) ೯೯೧ ,,
,, ಬೆಟ್ಟಕುರುಬರ ಕಾಳನವರು (ಕಾಂ) (ರಿಸರ್ವ್) ೨೨೮೯ ,,
,, ಯರವರ ಮಾರನವರು (ಪ್ರ) ,, ೮೪೦ ,,
ವ್ಯರ್ಥವಾದದ್ದು ೧೯೮ ,,

ನಾಪೋಕ್ಲುನಾಡಿನ ೧ ಸ್ಥಾನಕ್ಕೆ

,, ಎ. ಸಿ. ತಿಮ್ಮಯ್ಯನವರು (ಪ್ರ) ೩೦೭೩ ,,
,, ಎನ್. ಎನ್. ನಾರಾಯಣಮೂರ್ತಿಯವರು (ಕಾಂ) ೯೮೧ ,,

ಭಾಗಮಂಡಲನಾಡಿನ ೧ ಸ್ಥಾನಕ್ಕೆ.

,, ಕೋರನ ದೇವಯ್ಯನವರು (ಕಾಂ) ೨೩೪೭ ,,
,, ಪಟ್ಟಮಾಡ ಪೊನ್ನಪ್ಪನವರು (ಪ್ರ) ೧೩೮೨ ,,
+,, ಆರ್. ಜಯರಾಮ್ ಸಿಂಗ್‌ರವರು (ಸ್ವ) ೨೭೩ ,,

ಸೂಚನೆ:– + ಈ ಗುರ್ತಿನವರು ತಮ್ಮ ಠೇವಣಿಯನ್ನು ಕಳೆದುಕೊಂಡರು.

ಕೊಡಗು

ತಾ. ೧-೨-೧೯೫೨ನೇ ಶುಕ್ರವಾರ

ಪ್ರಶಂಶನೀಯ

ಕೊಡಗಿನ ಸಾರ್ವತ್ರಿಕ ಚುನಾವಣೆಯು ತಾ. ೧ ಜನವರಿ ೨೫ ರಲ್ಲಿ ಮುಕ್ತಾಯವಾಯಿತು. ಕೊಡಗಿನ ೯೫,೦೦೦ ಮತದಾರರಲ್ಲಿ ೬೩,೦೦೦ ಜನರು ಚುನಾವಣೆಯಲ್ಲಿ ಭಾಗ ವಹಿಸಿದ್ದರು. ಇದು ಶೇಕಡ ೬೫ ರಷ್ಟಾಗುವದು. ಕೊಡಗಿನ ಮತದಾರ ಪಟ್ಟಿಯಲ್ಲಿ ೯೫,೦೦೦ ಜನರ ಹೆಸರಿದ್ದರೂ ಕೂಡ ಆ ಪಟ್ಟಿಯು ಯೋಗ್ಯರೀತಿ ತಯಾರಿಸಲ್ಪಡದ ಕಾರಣ ಸಾವಿರಾರು ಜನರಿಗೆ ಓಟಿನ ಹಕ್ಕು ದೊರೆಯಲಿಲ್ಲ. ಮುಖ್ಯವಾಗಿ ಎರವರು ಕುರುಬರು ಮುತ್ತಿತರರು ವರ್ಷ ವರ್ಷ ಸ್ಥಳ ಬದಲಾಯಿಸುವ ಕಾರಣ ಆಯಾಯ ಸ್ಥಳಗಳಲ್ಲಿ ಅವರ ಹೆಸರು ಸೇರಿಸಲ್ಪಡದೆ ಅನೇಕರು ಓಟು ಮಾಡಲಿಲ್ಲ. ಈ ಮತದಾರರ ಪಟ್ಟಿಯು ೧೯೪೭-೪೮ರಲ್ಲಿ ತಯಾರಿಸಿದ ಪಟ್ಟಿಯಂತೆ ಇತ್ತು. ೧೯೪೮ ರಲ್ಲಿ ಬಂದವರು ಇಂದಿನ ವರೆಗೂ ಅಲ್ಲಿಯೇ ಇದ್ದರೂ ಅವರಲ್ಲಿ ಅನೇಕರ ಹೆಸರುಗಳು ಬಿಟ್ಟು ಹೋಗಿರುವ ನ್ಯೂನತೆ ಇತ್ತು. ಅನೇಕ ಕುರುಬರ ಎರವರ ಮತ್ತು ಕೆಲವು ಇತರ ವರ್ಗದವರ ಹೆಸರುಗಳೇ ಬಿಟ್ಟು ಹೋದ ದೂರೂ ಕೇಳಿಬಂದಿದೆ. ಆದ್ದರಿಂದ ಮತದಾರರ ಪಟ್ಟಿಯು ಅತಿವಿಶ್ವಾಸಾರ್ಹವಾಗಿರಲಿಲ್ಲ. ಪಟ್ಟಿಯಲ್ಲಿ ೯೫,೦೦೦ ಜನರಿದ್ದರೂ ನಿಜವಾಗಿ ಓಟು ಮಾಡಲು ಹಕ್ಕಿದ್ದವರು ಸುಮಾರು ೮೦,೦೦೦ ಇದ್ದಿರಬೇಕು. ಈ ಸಂಖ್ಯೆಯನ್ನು ತೆಗೆದು ಕೊಂಡು ಓಟು ಮಾಡಿದವರ ಲೆಕ್ಕನೋಡಿದರೆ ನೂರಕ್ಕೆ ೭೫ ರಷ್ಟು ಜನರು ಓಟುಮಾಡಿರುವರೆಂದು ಹೇಳಬಹುದಾಗಿದೆ. ಕೊಡಗಿನ ಮತದಾರರು ತಮಗೆ ದೊರೆತ ನಾಗರಿಕ ಜವಾಬ್ದಾರಿಯನ್ನು ಯೋಗ್ಯರೀತಿ ನಿರ್ವಹಿಸಿರುವರೆಂಬುದು ಸಂತೋಷದಾಯಕ ವಾದುದು. ಮತದಾರರನ್ನು ಹುರಿದುಂಬಿಸಿ ಸರಿಯಾಗಿ ಮುಂದಾಳುಗಳಿಂದ ಪ್ರೋತ್ಸಾಹ ದೊರೆಯಲಿಲ್ಲವೆನ್ನಬೇಕಾಗಿದೆ. ರಾಜಕೀಯ ಪ್ರಚಾರ ಮಾಡುತ್ತಾ ಓಟು ಕೇಳಲು ಹೊರಟ ಮುಂದಾಳುಗಳು ಜನಜಾಗೃತಿಯ ದೃಷ್ಟಿಯಿಂದ ಮಾಡಬೇಕಾಗಿದ್ದ ಕೆಲಸವನ್ನು ಸರಿಯಾಗಿ ಮಾಡಿಲ್ಲ. ಓಟಿನ ಮಹತ್ವ, ಪ್ರತಿಯೊಬ್ಬನೂ ಮಾಡಬೇಕಾದ ಅವಶ್ಯಕತೆ ಈ ವಿಚಾರಗಳನ್ನು ಸರಿಯಾಗಿ ತಿಳಿಸಿದ್ದರೆ ಇನ್ನೂ ಹೆಚ್ಚಾಗಿ ಜನರು ಭಾಗವಹಿಸುತ್ತಿದ್ದರು. ಆದರೆ ಕೆಲವೆಡೆ ಆಯಾ ಪ್ರಚಾರಕರು ತಮಗೆ ಸಹಾಯಕವಲ್ಲದವರು ಓಟು ಮಾಡಲು ಬರದಂತೆ ಪ್ರಯತ್ನಿಸಿದ ವಾರ್ತೆಗಳೂ ಕೇಳಬಂದಿವೆ. ಇದು ನಿಜವಾದರೆ ಈ ನೀತಿಯು ಪ್ರಜಾಪ್ರಭುತ್ವಾತ್ಮಕವೆಂದು ಹೇಳಲಿಕ್ಕಿಲ್ಲ. ಆದರೂ ಮತದಾರರು ತಮ್ಮ ಜವಾಬ್ದಾರಿಯನ್ನರಿತು ವರ್ತಿಸಿದ್ದಾರೆ. ನೂರು ವರ್ಷದ ಕಣ್ಣು ಕಾಣದ ಮುದುಕಿಯೂ, ಹೆತ್ತು ವಾರವಾಗದ ಬಾಣಂತಿಯೂ, ನಡೆಯಲಾರದ ರೋಗಿಯೂ ಬಿದ್ದವರೂ ಕೂಡ ಬಂದು ಮತವಿತ್ತ ನಿದರ್ಶನಗಳಿವೆ. ಇದು ನಿಜವಾಗಿಯೂ ಪ್ರಶಂಸನಾರ್ಹವಾಗಿದೆ.

ಕೊಡಗಿನ ಮತದಾರರಿಗೆ ತಮ್ಮ ಜವಾಬ್ದಾರಿ ತಿಳಿದಿದೆಯೆಂಬುದು ಇದರಿಂದ ಸ್ಪಷ್ಟವಾಯಿತು. ಕೆಲವು ಗ್ರಾಮಗಳಲ್ಲಿ ೧೦೦ಕ್ಕೆ ನೂರರಂತೆ ಬಂದು ಮತವಿತ್ತಿದ್ದಾರೆ. ಈ ಜನರು ಹುಮ್ಮಸ್ಸುಗಳನ್ನು ಮತದಾರರನು ಇಟ್ಟುಕೊಳ್ಳಬೇಕು. ತಾವು ಮತವಿತ್ತು ಆರಿಸಿದ ತಮ್ಮ ಪ್ರತಿನಿಧಿಯ ಮೂಲಕ ತಮಗೆ ಹಿತಕರವಾಗ ಕೆಲಸ ಆಗುವಂತೆ ನೋಡಲು ಸಂಘಟಿತರಾಗಬೇಕು. ಮತದಾರರು ಜಾಗ್ರತರಾಗಿದ್ದರೆ ಪ್ರತಿನಿಧಿಯೂ ಯೋಗ್ಯರೀತಿ ಕೆಲಸ ಮಾಡಿಯೇ ಮಾಡಬೇಕಾಗುತ್ತದೆ. ಆದ್ದರಿಂದ ಮತದಾರರು ಎಚ್ಚರಿಕೆಯಿಂದ ವರ್ತಿಸಬೇಕು. ದೇಶದ ಕಾರ್ಯಕಲಾಪಗಳ ಜವಾಬ್ದಾರಿ ನಡೆಸುವ ಹುರುಪು, ಹುಮ್ಮಸ್ಸುಗಳು ಅಳಿಯದೆ ಉಳಿಯಬೇಕಾಗಿದೆ.

ವರ್ತಮಾನ.

ಇಂಟರ್ ಸ್ಕೂಲ್ ಆಟ ಓಟಗಳ ಸ್ಪರ್ಧೆಯು ತಾ. ೫-೨-೫೨ ರಿಂದ ೧೦-೨-೫೨ರ ವರೆಗೆ ಮಡಿಕೇರಿ ಸೆಂಟ್ರಲ್ ಸ್ಕೂಲಿನಲ್ಲಿ ಜರಗುವವು.

ಶ್ರೀ ಪಳೆಯಂಡ ಗ. ಕಾರ್ಯಪ್ಪನವರನ್ನು ಮತ್ತು ಚೇಂದಿರ ಎಸ್. ಸಂಜಪ್ಪನವರನ್ನು ೨೬-೧-೫೨ ರಲ್ಲಿ ಡಿಲ್ಲಿಯಲ್ಲಿ ನಡೆದ ರಿಪಬ್ಲಿಕ್ ದಿನಾಚರಣೆಗೆ ನ್ಯಾಶನಲ್ [illegible] ಕೆಡೆಟ್ ಕೋರ್ ವಿಮಾನ ಶಾಖೆಯ ಪರ ಭಾಗವಹಿಸಲು ಕಳುಹಿಸಿದ್ದರೆಂದು ತಿಳಿಯುತ್ತೇವೆ.

ಶ್ರೀ. ಚೆಕ್ಕೆರ ಎನ್. ಗಣಪತಿಯವರನ್ನು ಮಡಿಕೇರಿ ಡೆಮಾನ್ಸ್ಟ್ರೇಶನ್ ಡೈರಿ ಫಾರಂನಲ್ಲಿ ವೆಟರ್ನರಿ ಡಾಕ್ಟರಾಗಿ ನೇಮಿಸಲಾಗಿದೆ.

ಕೊಡಗು ಸರಕಾರಿ ಕಾಲೇಜಿನ [illegible]ನೇ ವಾರ್ಷಿಕೋತ್ಸವದ ಸಂಬಂಧ ಆಟೋಟಗಳ ಸ್ಪರ್ಧೆಯು ತಾ ೧ ನೇ ಶುಕ್ರವಾರ ಮಧ್ಯಾಹ್ನ [illegible] ಬ್ರಿಗೇಡಿಯರ್ ಚೆಪ್ಪುಡೀರ ಪೊನ್ನಪ್ಪನವರ ಅಧ್ಯಕ್ಷತೆಯಲ್ಲೂ, ಕಾಲೇಜ್ ದಿನಾಚರಣೆಯು ತಾ. ೨ನೇ ಶನಿವಾರ ಕೊಡಗಿನ ಚೀಫ್ ಕಮಿಶನರ ಅಧ್ಯಕ್ಷತೆಯಲ್ಲೂ ನಡೆಯುವದು.

೧-೨-೫೨ರಂದು ಕೇಂದ್ರ ಸರಕಾರದ ಅಧೀನದಲ್ಲಿ [illegible]ಯಲ್ಲಿ ನಡೆಸಲ್ಪಟ್ಟಿರುವ ಔದ್ಯೋಗಿಕ ತರಬೇತು ಶಾಲೆಯಲ್ಲಿ ಟೆಕ್ನಿಕಲ್ ತರಗತಿಯಲ್ಲಿ ತರಬೇತು ಹೊಂದುತ್ತಿದ್ದ ವಿದ್ಯಾರ್ಥಿಗಳ ಅಖೈರು ವರ್ಷದ ಪರೀಕ್ಷೆಯಲ್ಲಿ ಈ ಕೆಳಗಿನ ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುವರು.

ಇಂಜನಿಯರಿಂಗ್ ತರಗತಿಯಲ್ಲಿ ಶ್ರೀಗಳಾದ ಯಂ. ಎನ್. ಪೂವಯ್ಯ, ಎನ್. ಸಿ. ತಿಮ್ಮಯ್ಯ, ಕೆ. ಬಿ. ನಂಜಪ್ಪ, ಸಿ. ಎ ದೇವಯ್ಯ, ಟಿ. ಎ ಉತ್ತಯ್ಯ, ಕೆ. ಎ. ರಾಮು, ಸಿ. ಪಿ. ತಿಮ್ಮಯ್ಯ, ಸಿ. ಸಿ ಗಣಪತಿ, ಪಿ ಯು. ತಮ್ಮಪ್ಪ ಮತ್ತು ಸಿ. ಎಂ. ಅಪ್ಪಯ್ಯ, ಇವರುಗಳು.

ಮರ ಕೆಲಸ ತರಬೇತಿನಲ್ಲಿ ಶ್ರೀಗಳಾದ ಕೆ. ಡಿ. ತಿಮ್ಮಯ್ಯ, ಕೆ. ಪಿ ಬೋಜಪ್ಪ, ಎ. ಸಿ. ಮಾದಪ್ಪ, ಎಂ. ಪಿ ಕೃಷ್ಣಮೂರ್ತಿ, ಕೆ. ಸಿ. ಸುಬ್ಬಯ್ಯ, ಟಿ. ಎಲ್. ಮರಿಯಪ್ಪ, ಎ. ಎಂ. ಗಣಪತಿ, ಎ ಪಿ ತಿಮ್ಮಯ್ಯ, ಕೆ ಸಿ ಸೋಮಯ್ಯ ಇವರುಗಳು.

ಕಮ್ಮಾರ ತರಬೇತಿನಲ್ಲಿ, ಶ್ರೀಗಳಾದ ಯಂ ಎ ಅಯ್ಯಪ್ಪ, ಬಿ ಸುಂದರ, ಬಿ. ಜಿ. ಅಪ್ಪಯ್ಯ ಮತ್ತು ಎ ಜಿ. ಗೋಪಾಲ, ಇವರುಗಳು.

ಶ್ರೀ ತ್ಯಾಗರಾಜ ಜಯಂತಿ

ಇದೇ ತಾ ೧೯ನೇ ಸಂಜೆ ವೀರಾಜಪೇಟೆಯ ಡಾ. ಪಾಂಡುರಂಗ ಸೋಮಪ್ಪನವರ ಮನೆಯಲ್ಲಿ ಶ್ರೀ. ತ್ಯಾಗರಾಜ ಜಯಂತಿಯನ್ನು ಆಚರಿಸಲಾಯಿತು. [illegible] ವೆಟರ್ನರಿ ಡಾಕ್ಟರ ಕುಮಾರಿ ಇಂದಿರಾ ಅವರು ಮೊದಲು ದಕ್ಷಿಣಾದಿ ಗೀತವನ್ನು [illegible] ಹಾಡಿದರು. ಆ ನಂತರ [illegible] ಯ್ಯನವರ ಕುಮಾರಿ [illegible] ಹಿಂದಿ ಮತ್ತು ಕನ್ನಡ ಗೀತಗಳನ್ನು ಸುಶ್ರಾವ್ಯವಾಗಿ ಹಾಡಿದರು. ತರುವಾಯ ಡಾ. ಸೋಮಪ್ಪನವರ ಕೊಳಲುವಾದನ ವಾಯಿತು. ಮಾಸ್ಟರ್ ಎಸ್. ಎಸ್. ಕೃಷ್ಣರಾವ್ ಮತ್ತು ಶ್ರೀ. [illegible] ರಿಂದ [illegible] ಮಂಗಳವಾಯಿತು. ಕಡೆಯದಾಗಿ ಸಂಧ್ಯಾ: ಶ್ರೀ. ಬಿ ಎಸ್. ರಾಮಾನುಜಾಚಾರ್ಯರು ತ್ಯಾಗರಾಜ ಸ್ವಾಮಿ ಅವರ ಕೃತಿಗಳನ್ನು ಭಾವಪೂರ್ಣವಾಗಿ ಹಾಡಿ ಮಂಗಳ ಮಾಡಿದರು. ಸಭೆಗೆ ಸಂಗೀತ ಪ್ರೇಮಿಗಳೆಲ್ಲ ಬಂದಿದ್ದರು. ಡಾ. ಸೋಮಪ್ಪನವರು ವಂದನಾರ್ಪಣೆ ಮಾಡಿದರು.

ನೋಟೀಸ್

ಇದರಿಂದ ಸರ್ವತ್ರ ಜನರಿಗೆ ತಿಳಿಯಪಡಿಸುವದೇನೆಂದರೆ, ಈ ಕೆಳಗೆ ಕಾಣಿಸಿದ ಕೋವಿಗಳನ್ನು ಮತ್ತು ತೋಟೆಗಳನ್ನು 1952ನೇ ಇಸವಿ ಮಾರ್ಚ್ ತಿಂಗಳ 7 ನೇ ತಾ. ಶುಕ್ರವಾರ ದಿನ ಬೆಳಗ್ಗೆ 11 ಗಂಟೆಗೆ ಡಿ|| ಸು|| ರವರ ಆಫೀಸಿನ ಎದುರಿಗೆ [illegible] ಮೂಲಕ ಬಹಿರಂಗವಾಗಿ ಹರಾಜು ಮಾಡಲ್ಪಡುವವು. ಹರಾಜಿನಲ್ಲಿ ಕೂಡಕೊಂಡವರು ಪೂರ್ತಿ ಮೊಬಲಗನ್ನು ಆ ಕೂಡಲೇ ಪಾವತಿ ಮಾಡತಕ್ಕದ್ದು. ಹರಾಜು ಚೀಫ್ ಕಮಿಶನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿದೆ.

1. ಒಂಟಿ ಹೊಳವಿನ ತೋಟೆದ ಕೋವಿಗಳು ಮತ್ತು ಜೋಡು ಹೊಳವಿನ ತೋಟೆದ ಕೋವಿಗಳು 14
2. ಚಲ್ಲು ತೋಟೆಗಳು 25.
3. ತೋಟೆಗಳು 1188.

ಯಂ. ಪಿ. ಮುತ್ತಣ್ಣ,
ಕೊಡಗು ಡಿ|| ಸು|| ಆಫ್ ಪೋಲಿಸ್

3-1

ಪ್ರಕಟಣೆ.

ಕಸಿ ಮಾಡಿದ ಹಣ್ಣು ಗಿಡಗಳನ್ನು ಒದಗಿಸಿ ಮಾರಾಟ ಮಾಡುವ ವಿಭಾಗವನ್ನು ಕೊಡಗು ವ್ಯವಸಾಯ ಇಲಾಖೆಯು ಈ ವರ್ಷ ವಹಿಸಿಕೊಳ್ಳುವುದು. ಜೂನ್ ತಿಂಗಳ ಆಖೈರಿನ ಒಳಗೆ ಗಿಡಗಳನ್ನು ಒದಗಿಸಲಾಗುವುದು. ಬೇಕಾಗುವವರು ತಮಗೆ ಬೇಕಾದ ಗಿಡಗಳು ಮತ್ತು ಅವುಗಳ ಸಂಖ್ಯೆಯನ್ನು ತಮ್ಮ ಹತ್ತಿರದ ವ್ಯವಸಾಯ ಇಲಾಖೆಯ ಸಿಬ್ಬಂದಿಗಳಿಗೆ ತಿಳಿಸುವುದು. ಗಿಡಗಳನ್ನು ಮಾರಾಟ ಮಾಡುವ ನೊಡಲು ಕೊಂಡುಕೊಳ್ಳುವವರು ಶೇಕಡ ೧೫ ರಷ್ಟು ಬೆಲೆಯನ್ನು ಮುಂಗಡವಾಗಿ ಕೊಡಲು ಬದ್ಧರಾಗಿದ್ದು ಮತ್ತು ಬಾಕಿ ಕ್ರಮವನ್ನು ಗಿಡಗಳನ್ನು ತೆಗೆದುಕೊಳ್ಳುವಾಗ ಕೊಡುವದು.

ಜಿ. ಯಂ. ವರದರಾಜನ್
ವ್ಯವಸಾಯ ಇಲಾಖಾ ಅಧಿಕಾರಿ.

ವಾರ್ತೆ.

ಜನವರಿ [illegible] ನಗರದಲ್ಲಿ ಕಾಂಗ್ರೆಸಿಗೆ ಅಪೂರ್ವ ವಿಜಯವನ್ನು ದೊರಕಿಸಿಕೊಟ್ಟ ಶ್ರೀ ಎಸ್. ಕೆ. ಪಾಟೀಲರನ್ನು [illegible] ಅಭಿನಂದಿಸಿ [illegible].

ಭಾರತದ ಆಹಾರೋತ್ಪಾದನೆಯನ್ನು ಹೆಚ್ಚಿಸಲು ಅಮೇರಿಕದಿಂದ ೯ ಜನ ತಜ್ಞರು ಡಿಲ್ಲಿಗೆ ಆಗಮಿಸಿದ್ದಾರೆ. ನಾಗಪುರ್, ಬೆಳಗಾಂ, ಕಲಕತ್ತಾ, ಗುಂಟೂರು, ಲಖ್ನೋ, ಗ್ವಾಲಿಯರ್, ಹೈದರಾಬಾದ್ ಗಳಲ್ಲಿ ಈ ತಜ್ಞರನ್ನು ನೇಮಿಸಲಾಗುವದು. [illegible] ಇಲ್ಲಿ ಎರಡು ವರ್ಷ [illegible] ಬೆಳೆ ಬೆಳೆಯುವ ಹೊಸ ವಿಧಾನಗಳನ್ನು ಇಲ್ಲಿಯ ರೈತರಿಗೆ ಕಲಿಸಲಿದ್ದಾರೆ.

ಭಾರತಕ್ಕೆ ಈಗ ಇರಾಣದಿಂದ ಎಣ್ಣೆ ಬರುವದನ್ನು ನಿಂತುಬಿಟ್ಟಿದ್ದರಿಂದ ಭಾರತವು ತನಗೆ ಬೇಕಾಗುವ ಎಣ್ಣೆಯನ್ನು ಈಗ ಅಮೇರಿಕದಿಂದ ತರಿಸಬೇಕಾಗುವದು. ಆದ್ದರಿಂದ ಸೀಮೆ ಎಣ್ಣೆ ಬೆಲೆಯನ್ನು ಒಂದು ಗ್ಯಾಲನ್ನಿಗೆ ಒಂದಾಣೆ ಅಲ್ಲದೆ ಒಂದು ಬಾಟಲಿಗೆ ಒಂದು ಬಿಲ್ಲೆಯನ್ನು ಹೆಚ್ಚಿಸಲಾಗಿದೆ. ಮೋಟಾರು ಪೆಟ್ರೋಲು ದರವನ್ನು ಗ್ಯಾಲನ್ನಿಗೆ ಅರ್ಧಾಣೆಯಷ್ಟು, ವಿಮಾನ ಪೆಟ್ರೋಲು ದರವನ್ನು ಗ್ಯಾಲನ್ನಿಗೆ ನಾಲ್ಕಾಣೆಯಂತೆ ಹೆಚ್ಚಿಸಲಾಗಿದೆ.

ಹತ್ತು ಕೋಟಿ ರೂಪಾಯಿಗಳ ಬಂಡವಾಳದ ಹಿಂದೂಸ್ಥಾನ ಶಿಪ್‌ಯಾರ್ಡ್ ಕಂಪೆನಿಯು ೩ ನೇ ತಾರೀಕಿಗೆ ನೋಂದಾಯಿಸಲ್ಪಟ್ಟಿತು. ಈ ಕಂಪೆನಿಯಲ್ಲಿ ಮೂರರಲ್ಲಿ ಎರಡು ಪಾಲು ಶೇರುಗಳನ್ನು ಭಾರತ ಸರಕಾರವೂ ಉಳಿದ ಒಂದು ಪಾಲನ್ನು ಸಿಂಧ್ಯಾ ಹಡಗು ಕಟ್ಟುವ ಕಂಪೆನಿಯವರೂ ಪಡೆದುಕೊಂಡಿದ್ದಾರೆ.

ಖಾನ ಅಬ್ದುಲ್ ಗಫಾರ್ ಖಾನರನ್ನು ಜೈಲಿನಿಂದ ಕೂಡಲೇ ಬಿಡುಗಡೆ ಮಾಡಬೇಕು.. ಎಂದು ಪಾಕ್ ಸಂಸ್ಥಾನದಲ್ಲಿ ಅರ್ಜಿಯು ಪಡೆದಿರುವ ಗಡಿನಾಡಿನ ಪ್ರಾಂತದ ಆವಾಮಿ ಲೀಗಿನ ಧುರೀಣರಾದ ಖಾನ ಗುಲಾಮ ಮಹಮ್ಮದ ಖಾನರು ಕೇಳಿಕೊಂಡಿದ್ದಾರೆ.

॥ ಕೊಡಗಿನ ಚುನಾವಣೆಯ ಹಿನ್ನುಡಿ. ॥

ಲೇಖಕ:—ಶ್ರೀ ಮಂದಣ್ಣ.

ಅಪೂರ್ವ ಉತ್ಸಾಹ

ಹಿಂದೂದೇಶದ ಇತರ ಭಾಗಗಳಲ್ಲಿ ನಡೆದ ರೀತಿಯಲ್ಲಿಯೇ ಕೊಡಗಿನಲ್ಲಿಯೂ ಸಾರ್ವತ್ರಿಕ ಚುನಾವಣೆ ನಡೆಯಿತು. ಕಳೆದ ಎರಡು ತಿಂಗಳುಗಳಲ್ಲಿ ಕೊಡಗಿನ ಜನಜೀವನದಲ್ಲಿ ಒಂದು ರೀತಿ ಹೊಸ ಚೇತನ, ಉತ್ಸಾಹ, ಕುತೂಹಲಗಳು ತಲೆದೋರಿ ಬಂದವು. ಪ್ರತಿ ಮನೆಯಲ್ಲಿಯೂ ರಾಜಕೀಯ ಮಾತು ನಡೆಯುತ್ತಿತ್ತು. ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಿರಲಿ; ಹೊಟ್ಟೆಲುಗಳಲ್ಲಿ ಕುಳಿತಿರಲಿ ಎಲ್ಲೆಲ್ಲೂ ಚುನಾವಣೆಯ ಮಾತೇ! ಸಂತಾಪ ಸಭೆಗಳಲ್ಲಿ [illegible] ಅಪೂರ್ವ ಜೀವವನ್ನು ಕಳೆದುಕೊಂಡವು. ಜನರು ರಾಜಕೀಯ ವಿಚಾರಗಳನ್ನು [illegible] ತಿಳಿದುಕೊಳ್ಳುವುದಕ್ಕಾಗಿ [illegible] [illegible] ಬರೆದರು. [illegible] ಕೇಳಲು [illegible] ಸೇರಿದರು. [illegible] ನ [illegible] ಜನತೆ [illegible] ಕೊಟ್ಟಾಗಿದೆ. [illegible] ತಿಂಗಳ ಹಿಂದೆ ಇದ್ದ ಕೊಡಗು ಇಂದಿಲ್ಲ. [illegible] ಎರಡು ತಿಂಗಳುಗಳಲ್ಲಿ ಅಪೂರ್ವ [illegible] ಬದಲಾಯಿಸಿದೆ. ಕೊಡಗು ಪ್ರಜಾಪ್ರಭುತ್ವದ ಪಥದಲ್ಲಿ ಈ ಕಳೆದ ಎರಡು ತಿಂಗಳುಗಳಲ್ಲಿ ನಡೆದು ಬಂದ ದೂರವನ್ನು ಈ ಎರಡು ತಿಂಗಳುಗಳಲ್ಲಿ ನಡೆದಿದೆ. ಒಂದು ಹೊಸ ಜೀವದ ನಾಡಿ ನರನಾಡಿಗಳನ್ನು ತುಂಬಿ ಹರಿಯುತ್ತಾ ಇದೆ. ಮಂದಗತಿ [illegible] ಬಿಡುಗಡೆ [illegible] ಕೊಡಗಿನ ರಾಜಕೀಯ [illegible] ಗಳನ್ನು [illegible] ಸ್ಪಷ್ಟ [illegible] ಬರುತ್ತಿದೆ.

ನೂತನ ಅನುಭವ

ಈ ಬಾರಿಯ ಚುನಾವಣೆಯು ಜನತೆಗೆ ಒಂದು ನೂತನ ಅನುಭವ. [illegible] ಚುನಾವಣೆಗಳಿಗೂ ಈ ಚುನಾವಣೆಗೂ ಎಷ್ಟೋ ವ್ಯತ್ಯಾಸ. ಪ್ರಾಯಕ್ಕೆ ಬಂದ ಪ್ರತಿ ಒಬ್ಬನಿಗೂ ಓಟು ಮಾಡುವ ಹಕ್ಕಿತ್ತು. ಆದರೆ ಬಹಳ ಮಂದಿಗೆ ಮತದಾರರಾಗಿರಲಿಲ್ಲ. [illegible] ಹೆಸರುಗಳು ಪಟ್ಟಿಯಲ್ಲಿ ಬಿಟ್ಟುಹೋಗಿದ್ದವು. ತಮ್ಮ ಹೆಸರು ಪಟ್ಟಿಯಲ್ಲಿ ಇದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಿ ಸಕಾಲದಲ್ಲಿ ಸೇರಿಸಿಕೊಳ್ಳುವ ಜಾಗ್ರತೆ ಎಲ್ಲರಿಗೂ ಇರಲಿಲ್ಲ. ಏಕೆಂದರೆ ಇದು ಪ್ರಜಾಪ್ರಭುತ್ವದ ಪ್ರಥಮ ಪ್ರಯೋಗ. ಅದ್ದರಿಂದ ನ್ಯೂನತೆ, ತಪ್ಪು [illegible] ಅವಕಾಶ ಇದ್ದೇ ಇದೆ. [illegible] ಪರ್ ಪರ್ ಓಡಾಡಿ [illegible] ಮತದಾರರಿಗೆ ಸಂಬಂಧಪಟ್ಟಿರುವ ಕೆಲಸಗಾರರು, ಏಜಂಟರು, ಅವರ ಬಗ್ಗೆ ಮಾತ್ರ ಆ ಹಿಂದುಳಿದವರ [illegible] ಓಟು ಹಾಕುವ ಕಷ್ಟವಾಯಿತು. ಕೊಡಗಿನಲ್ಲಿ [illegible] ವಿದ್ಯಾವಂತರಲ್ಲದವರು ಕೂಡ [illegible] ಸರಿಯಾಗಿ ಬಹುಮಟ್ಟಿಗೆ ಈ ಕಾರಣಗಳಿಂದ ಓಟು ಹಾಕಲಿಲ್ಲವೆಂದು ತಿಳಿದು ಬರುತ್ತದೆ. ಬೋಗಸ್ ಓಟು ಹಾಕಿದವರು [illegible] ಕೆಲವರು ಕೊಡಬೇಕಾದವರ ಓಟುಗಳನ್ನು ಕೂಡ ಹಾಕಿಬಿಟ್ಟು ಅನೇಕರಿಂದ ಅನೇಕರು ತಮ್ಮ ಓಟನ್ನು ಕಳೆದುಕೊಂಡರು.

ಓಟಿಗೆ ಬಂದವರಲ್ಲಿ ಕೂಡ ಹಲವರು ಓಟು ಮಾಡುವಾಗ ಗಾಬರಿಗೊಂಡು ಸಿಕ್ಕಾಪಟ್ಟೆ ಓಟು ಮಾಡಿದ್ದಾರೆ. ಯಾರಿಗೋ ನಿಶ್ಚಯಿಸಿದ್ದ ಓಟು ಯಾರಿಗೋ ಬಿದ್ದಿದೆ. ತಮ್ಮ ಜೀವಮಾನದಲ್ಲಿ ಪ್ರಥಮ ಬಾರಿಗೆ ಓಟು ನೀಡುವ ಅವಕಾಶ ಪಡೆದ ಜನರು ಈ ರೀತಿ ಗಾಬರಿಗೊಂಡದ್ದರಲ್ಲಿ ಆಶ್ಚರ್ಯವಿಲ್ಲ. ಚುನಾವಣೆಯಲ್ಲಿ, ಮತದಾನದಲ್ಲಿ ಯಾವ ಸ್ಥಾನಕ್ಕೆ ಇದ್ದೇ ಬೇಕಾದರೂ ಕೂಡ ಒಂದು ವಿಚಾರವನ್ನು [illegible] ಮರೆಯಬಾರದು. ಜನತೆಯು ಇಷ್ಟು [illegible] ಹಕ್ಕನ್ನು ಚಲಾಯಿಸಲು ಅಪೂರ್ವ ಉತ್ಸಾಹದಿಂದ ಬಂದರು. [illegible] ಗಳಲ್ಲಿ ಜೀವನವನ್ನು [illegible] ಮತದಾರರು ಅಂದರೆ [illegible] ಓಟು ಮಾಡಲು ಬಂದಿದ್ದಾರೆ. [illegible] ಜನರು [illegible] ಹಂಗಿಗೆ ಒಳಗಾಗದೆ [illegible] ಸಿದ್ಧರಾಗಿದ್ದರೆ. ಈ ಜಾಗೃತಿಗೆ ಕೊಡಗಿನ [illegible] ಮನವರಿಕೆಯಾಗಿದೆ.

ವಿರೋಧಿ ಪಕ್ಷಗಳು.

ಈ ಬಾರಿ ಸ್ಪರ್ಧಿಸಿದವರ ಪ್ರಮಾಣ [illegible] ಹೆಚ್ಚು. ಚುನಾವಣೆಗೆ ನಿಂತ ಉಮೇದುವಾರರಲ್ಲಿ ಸಾಕಷ್ಟು ಇತ್ತು. ಈ ಮೊದಲು ಕಾಂಗ್ರೆಸ್ ತನ್ನ ಉಮೇದುವಾರರನ್ನು ಆರಿಸಿ ನಿಲ್ಲಿಸಿತೆಂದರೆ ಅವರಿಗೆ [illegible] ನಿಲ್ಲುವವರು ಇರುತ್ತಿರಲಿಲ್ಲ. ಸವಾಗಿತ್ತು. ವಿರೋಧವಾಗಿ ನಿಂತರೂ ಚುನಾಯಿಸಲ್ಪಡುವವರು ಬಹಳ ಕಡಿಮೆಯಾಗಿತ್ತು. ಆ ಕಾಲ ಹೋಗಿದೆ. ಕಾಂಗ್ರೆಸನ್ನು ವಿರೋಧಿಸುವವರಿಗೆ ಲೆಕ್ಕವಿಲ್ಲ. ಹಿಂದೂಸ್ಥಾನದ ವಿವಿಧ ಪ್ರಾಂತಗಳಲ್ಲಿಯೂ ವಿವಿಧ ಪಕ್ಷಗಳು ಕಾಂಗ್ರೆಸಿಗೆ ಎದುರಾಗಿ ನಿಂತವು. ಜೀವರಾಶ್ಶಿಯ ಚುನಾವಣೆಯ ಫಲಿತಾಂಶವು [illegible] ನೋಡಿದ್ದಲ್ಲಿ [illegible] ಕಾಂಗ್ರೆಸಿಗೆ ಬಹುಮತ ಪ್ರಾಂತಗಳಲ್ಲಿ ಸಾಕಷ್ಟು ಬೆಂಬಲ ದೊರೆಯಲಿಲ್ಲ. [illegible] ಮಧ್ಯಪ್ರಾಂತಗಳಲ್ಲಿ ಕಾಂಗ್ರೆಸಿಗೆ ಪೂರ್ಣ ಬೆಂಬಲ ದೊರೆತಿದೆ. ಬಂಗಾಳದಲ್ಲಿ ತುಂಬಾ ಅನುಮಾನವಿತ್ತಾದರೂ ಆ ಅನುಮಾನ ಹೋಗಿದೆ. ಮದ್ರಾಸು, ತಿರುವಾಂಕೂರು ಕೊಚ್ಚಿನ್‌ಗಳಲ್ಲಿ ಸಾಕಷ್ಟು ಬೆಂಬಲ ದೊರೆತಿಲ್ಲವೆನ್ನಬಹುದು. ಹೇಗೂ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವೇ ಆಗಬಹುದಲ್ಲದೆ ಬಹು ಕೇಕ ಪ್ರಾಂತಗಳಲ್ಲೂ ಕಾಂಗ್ರೆಸ್ಸೇ ಅಧಿಕಾರರೂಢವಾಗಬಹುದು.

ಕೊಡಗಿನ ಚುನಾವಣಾರಂಗದಲ್ಲಿ ಹತ್ತಾರು ಪಕ್ಷಗಳು ಭಾಗವಹಿಸದಿದ್ದರೂ ಪ್ರಮುಖವಾಗಿ ಮೂರು ಪಕ್ಷಗಳು ಭಾಗವಹಿಸಿದ್ದವು. (೧) ಕಾಂಗ್ರೆಸು. (೨) ಪ್ರತ್ಯೇಕ ಪಕ್ಷ (೩) ಕಮ್ಯೂನಿಸ್ಟ್ ಪಕ್ಷ. ಈ ಮೂರು ಪಕ್ಷಗಳಲ್ಲದೆ ಕೆಲವು ವ್ಯಕ್ತಿಗಳು ಸ್ವತಂತ್ರರಾಗಿ ಸ್ಪರ್ಧಿಸಿದ್ದರು. ಚುನಾವಣೆಯಲ್ಲಿ ಭಾಗವಹಿಸಿದ ಈ ಮೂರು ಪಕ್ಷಗಳ ಕಾರ್ಯಕಲಾಪಗಳ ನಿಷ್ಪಕ್ಷಪಾತ ದೃಷ್ಟಿಯಿಂದ ಕೆಲವು ಮಾತುಗಳನ್ನು ಹೇಳುವುದು ಶಕ್ಯವಾಗಿದೆ.

ಕಾಂಗ್ರೆಸು.

ಕಾಂಗ್ರೆಸಿನ ಚರಿತ್ರೆ ಈ ಚುನಾವಣೆ ಕಾಲಕ್ಕೆ ಹಿಂದಿನಂತೆ ಪವಿತ್ರವಿರಲಿಲ್ಲ. ಸ್ವಾರ್ಥತ್ಯಾಗಿ, ಸ್ವತಂತ್ರ್ಯಸಾಧಕ ಕಾಂಗ್ರೆಸು ಅಧಿಕಾರಕ್ಕೆ ಬಂದ ಆ ಪರಿವರ್ತನೆಯ ಕಾಲದಲ್ಲಿ ಕಾಂಗ್ರೆಸಿಗರಲ್ಲಿ ಆದ ಬದಲಾವಣೆ ಪ್ರಚಂಡ ತರದ್ದಾಗಿತ್ತು. ಕಾಂಗ್ರೆಸಿಗರು ಅಧಿಕಾರಕ್ಕೆ ಬಂದು ಪೂರ್ವತರದ ಲಂಚಗರು [illegible] ಎಬ್ಬಿಸಿದಾಗ ಅನ್ಯಾಯಗಳ ನ್ಯಾಯಾನ್ಯಾಯ ಕೇಳನ್ನು ನೋಡುವ ಶಕ್ತಿ ಇಲ್ಲದ ಕಾಂಗ್ರೆಸಿಗರು ಅತ್ಯಲ್ಪವಾಯಿತು. ಪರಿಣಾಮವಾಗಿ ಕಾಂಗ್ರೆಸು ಸ್ವಾರ್ಥತ್ಯಾಗಿಗಳ ಸಂಸ್ಥೆ ಎಂಬುದನ್ನು ಸಮರ್ಥಿಸುವುದು ಅಸಾಧ್ಯವಾಗಿತ್ತು. ಈ ರೀತಿಯ ಅಪನಂಬಿಕೆಯ ಆಚಾರಶೀಲರಿಂದ ಕಾಂಗ್ರೆಸು ಚುನಾವಣೆಗೆ ಇಳಿದು ಗೆಲ್ಲುವಷ್ಟು ಸುಲಭದ ವಿಚಾರವಾಗಿರಲಿಲ್ಲ. ಜೊತೆಗೆ ಕೊಡಗಿನ ಕಾಂಗ್ರೆಸಿಗರಿಗೆ ಮತ್ತೊಂದು ಗಂಡಾಂತರ ಕಾದಿತ್ತು. ಕೊಡಗಿನ ಭವಿಷ್ಯದ ಪ್ರಶ್ನೆಯೊಂದನ್ನು ಜನತೆಯು ಮುಂದಿಟ್ಟು ಪ್ರತ್ಯೇಕ ಪಕ್ಷವೊಂದು ಚುನಾವಣಾರಂಗಕ್ಕಿಳಿಯಿತು. ದೇಶದ ಭವಿಷ್ಯದ ವಿಚಾರ ಸ್ಪಷ್ಟವಾಗಿ ಮಾಡಬಹುದಾದ ಎದೆಗಾರಿಕೆ ಕೊಡಗು ಕಾಂಗ್ರೆಸಿನವರಿಗಿರಲಿಲ್ಲ. ಅದ ಕಾರಣ ಕೊಡಗಿನ ಭವಿಷ್ಯದ ಪ್ರಶ್ನೆ ಅಸಲ್ಲವೆಂಬ ನೀತಿನಿಂದ ಅವರು ಚುನಾವಣಾರಂಗಕ್ಕಿಳಿದರು. ದೇಶದ ಇತರ ಭಾಗಗಳಲ್ಲಿ ಆದಂತೆ ಕೊಡಗಿನಲ್ಲಿಯೂ ಕಾಂಗ್ರೆಸು ಉಮೇದುವಾರರನ್ನು ಆರಿಸುವ ಕಠಿಣ ಪ್ರಶ್ನೆಯನ್ನು ಎದುರಿಸಬೇಕಾಗಿತ್ತು. ಕಾಂಗ್ರೆಸಿನೊಳಗೆ ಹಲವು ಜನರ ಅಭ್ಯರ್ಥಿತನ ಆಕಾಂಕ್ಷೆ ಇದ್ದಿತು. [illegible] ಕಡೆಗೂ, ಸಾಂಪ್ರದಾಯಿಕ ಕಡೆಗೂ ತುಚ್ಛವಾಗಿ ಹೋಗಿದ್ದರು. [illegible] ಸಾಧಿಸಲು ಜಾತೀಯವಾದವನ್ನು, [illegible] ಮುಖವಾಡ ತೊಡಿಸಿ [illegible] ಸಾಕಷ್ಟು ಕಾರಣಗಳಾಗಿ ಕಂಡು ಬಂದವು. ಪಂಡಿತ ನೆಹರೂರವರು ಕಾಂಗ್ರೆಸಿನ ಜಾತ್ಯತೀತತೆಯನ್ನು ಕಾಯುವುದಕ್ಕಾಗಿ ಕಡೆಯವರೆಗೂ ಶ್ರಮಿಸಿದರು. ಪ್ರಯೋಜನವಾಗಲಿಲ್ಲ. ಜಾತಿವಾದಿಗಳನ್ನು ಹೊರದಬ್ಬಿದ್ದು ಕತ್ತೆಗೆ ಕಟ್ಟಿದಂತಿದ್ದಾಗ ಕಾಂಗ್ರೆಸಿನ ಉಮೇದುವಾರರ ಆಯ್ಕೆಯು ಆ ಜಾತ್ಯತೀತತೆಯ ವಿವೇಚನೆಯಿಂದಲೇ ನಡೆಯಬೇಕಾಗಿತ್ತು. ಯೋಗ್ಯ ಉಮೇದುವಾರರು ದೊರೆಯದಿದ್ದರೆ ನೆಹರೂರವರ ಆದರ್ಶಗಳಿಗೆ ಹಿಡಿದ ಪ್ರತಿಸ್ಪರ್ಧಿಗಳನ್ನು ಕಾಂಗ್ರೆಸಿನೊಳಗೆ ಅವಕಾಶ ಕೊಡಬೇಕಿತ್ತು. ಆದರೆ ಹಾಗೆ ನಡೆಯಲಿಲ್ಲ. ಕಾಂಗ್ರೆಸು ಉಮೇದುವಾರರನ್ನು ಆರಿಸಿತು. ಆರಿಸಲ್ಪಟ್ಟವರು ಕಾಂಗ್ರೆಸಿಗರಾದರು!

ಈ ಚುನಾವಣೆಯಲ್ಲಿ ರಾಜಕೀಯ ಯುಕ್ತಿಯ ಕೌಶಲ್ಯಕ್ಕೆ ಕಾಂಗ್ರೆಸ್ ಪಕ್ಷಕ್ಕೇನೇ ಪ್ರಶಸ್ತಿಯು ದೊರೆಯುತ್ತಿದ್ದು. ಅವರ ಕೆಲವು ಉಮೇದುವಾರರು ಗೆಲ್ಲಲಿಲ್ಲವೆಂದರೆ ಅದು ಅವರ ಕೌಶಲ್ಯದ ಅಭಾವದಿಂದಲ್ಲ. ಬದಲು ಅನೀತಿಯನ್ನು ಸಹಿಸಲಾರದ ಮತದಾರರ ಮನೋಧರ್ಮದಿಂದ. ಕಾಂಗ್ರೆಸು ನಾನಾರೀತಿಯ ಪ್ರಚಾರ (?) ನಡೆಸಿತು. ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರವಾಗುವಾಗ ಕೊಡಗಿನಲ್ಲಿ ಬೇರೆ ಸರಕಾರವಾದರೆ ಅದನ್ನು ಡಿಸ್‌ಮಿಸ್ ಮಾಡುತ್ತಾರೆ ಎಂದಿತು. ಕಾಂಗ್ರೆಸ್ಸು ಸರಕಾರ ಪಕ್ಷ, ಅದ್ದರಿಂದ ಸರಕಾರ ಪಕ್ಷಕ್ಕೆ ವಿರೋಧಮಾಡಿದರೆ ಸಾಧ್ಯವಾಗಲಿಕ್ಕಿಲ್ಲವೆಂದಿತು. ಮತದಾರನ ಅಭಿಪ್ರಾಯವನ್ನು ತಿಳಿದು ಅತನಿಗೆ ಸರಿಹೋಗುವಂತೆ ಮಾತು ಅತನಿಗೆ ಹಿತವಾಗುವಂತೆ ಭರವಸೆ ಕಾಂಗ್ರೆಸು ಕೊಟ್ಟಿತು. ಕೆಲವೆಡೆ ಕೊಡವರಿಗೆ ತತ್ವಹರಿದು ಕೊಡಗರ ನೊಕ್ಕ ಮುರಿಯಬೇಕೆಂದಿದ್ದರೆ ಕೆಲವೆಡೆ ಕೊಡಗನ್ನು ಪ್ರತ್ಯೇಕವಿಡುವುದು ಹಿತವೆಂದಿತು. ಹೇಗೂ ಮತದಾರನ ಓಟಿನ ಗುರಿಯೊಂದನ್ನಿಟ್ಟು ಅದನ್ನು ಪಡೆಯಲು ಬೇಕಾದ ಪ್ರಚಾರ ಮಾಡಿತು. ಆದಕ್ಕಾಗಿ ಇತರ [illegible] ಕಳೆಮುಟ್ಟಿತ್ತು. ಮೂಲಭೂತವಾದ ಕಾರ್ಯ ಮಾಡಿತು. ಅವಕಾಶವಾದದ ನೀತಿ ಅನುಸರಿಸಿತು. ಈ ಕಥೆಯೇ ಒಂದು ಗ್ರಂಥವಾಗಬಹುದು. ಅದನ್ನು ಸಮಯ ಅವಕಾಶವಿರುವವರು ಬರೆಯಬಹುದು.

ಪ್ರತ್ಯೇಕ ಪಕ್ಷ

ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಬೇಕೆನ್ನುವ ಕಾಂಗ್ರೆಸ್ಸಿಗರು ಕಾಂಗ್ರೆಸಿನಲ್ಲಿ ಕೊಡಗನ್ನು ಪ್ರತ್ಯೇಕವಿಡಬೇಕೆನ್ನುವವರಿಗೆ ಎಡೆ ತಪ್ಪಿದ ಕಾರಣ ಕಾಂಗ್ರೆಸ್ಸಿಗೆ ರಾಜೀನಾಮೆ ಕೊಟ್ಟು ಚುನಾವಣೆಗೆ ನಿಂತರು. ಕೊಡಗಿನಲ್ಲಿ ಗಾಂಧೀ ರಾಜ್ಯ ಯೋಜನೆಯನ್ನು ಜಾರಿಗೆ ತರುವುದಕ್ಕಾಗಿ ಕೊಡಗು ಪ್ರತ್ಯೇಕವಿರಬೇಕೆಂದು ವಾದಿಸಿದರು. ಆ ಪಕ್ಷದ ವಾದದಲ್ಲಿ [illegible] ಅವರು [illegible] ಆ ಪಕ್ಷದಲ್ಲೂ ಕೆಲವು ಅಯೋಗ್ಯ ವ್ಯಕ್ತಿಗಳಿದ್ದರೂ ಪಕ್ಷದ ನಿಷ್ಠೆ ಹೆಚ್ಚಾಗಿತ್ತು. ಆದರೆ ಅವರ [illegible] ಪ್ರತಿ ಓಟರನಿಗೂ ತಮ್ಮ ತತ್ವವನ್ನು ತಿಳಿಸಿ ಹೇಳುವ ಕಾರ್ಯವನ್ನು ವ್ಯವಸ್ಥಿತವಾಗಿ ಅವರು ಮಾಡಲಿಲ್ಲ. ಪ್ರತ್ಯೇಕ ಪಕ್ಷದವರು ರಾಜಕೀಯ ಪ್ರಚಾರ ಕಾರ್ಯದಲ್ಲಿ ನೇರವಾದ ದಸ್ತು ಹಿಡಿದು ವಾದಿಸಿದರೇ ವಿನಾ ಅಡ್ಡದಾರಿಯ ಕಾರ್ಯ ಕೈಗೊಳ್ಳಲಿಲ್ಲ. ಅವರು ಉಮೇದುವಾರರನ್ನು ಆರಿಸುವಾಗಲೂ ಕಾಂಗ್ರೆಸಿಗಿಂತ ಯೋಗ್ಯರನ್ನು ಆರಿಸಿದ್ದರು. ಆದರೆ ಪ್ರಾತಿನಿಧ್ಯದ ಹಿಂದಿನ ಚುನಾವಣೆಯಲ್ಲಿ ಯೋಗ್ಯತೆ ಮತ್ತು ದಕ್ಷತೆಯನ್ನು ಆರಿಸುವ [illegible] ದೃಷ್ಟಿಯಿಂದ ನ್ಯಾಯ ಸಮರ್ಥವಾಗಿ ನಡೆಯಲಿಲ್ಲವೆನ್ನಬಹುದು. ಆದ್ದರಿಂದ [illegible] ರಿವರು ಆರಿಸಿದ ಪಕ್ಷದ ಯೋಗ್ಯರೂ ಆರಿಸಿ ಬರಲಿಲ್ಲ. ಬದಲು [illegible] [illegible] ಅವರ [illegible] ಆರಿಸಿ ಬರುವಂತಾಯಿತು.

ಕಮ್ಯೂನಿಸ್ಟ್ ಪಕ್ಷ.

ಕೊಡಗಿನಲ್ಲಿ ಕಮ್ಯೂನಿಸ್ಟ್ ಪಕ್ಷ

(ಹಿಂದಿನ ಪುಟದಿಂದ)

ರೂಪು ಗೊಂಡುದು ಈ ಚುನಾವಣೆಗೆ ಸ್ವಲ್ಪ ದಿನಗಳಿಗೆ ಹಿಂದೆ. ಕಮ್ಯೂನಿಷ್ಟ ಪಕ್ಷವು ಇನ್ನೂ ಬಲಗೊಳ್ಳುವ ಮೊದಲೇ ಚುನಾವಣೆ ಬಂದ ಕಾರಣ ಅವರಿಗೆ ಸಿದ್ಧತೆ ಮಾಡಿಕೊಳ್ಳಲಾಗಲಿಲ್ಲ. ಹಣದ ಅಭಾವವೂ, ಯೋಗ್ಯ ಉಮೇದುವಾರರ ಅಲಭ್ಯತೆಯೂ ಅವರಿಗೆ ಕಷ್ಟವಾಯಿತು. ಆದರೂ ಕೆಲವು ಜನರನ್ನು ಚುನಾವಣೆಗೆ ನಿಲ್ಲಿಸಿದರು. ಅವರಿಗೆ ದೊರೆತ ಪ್ರೋತ್ಸಾಹವು ಊಹಿಸಿದ್ದಕ್ಕಿಂತ ಉತ್ತಮವಾಗಿದೆ. ಕಮ್ಯೂನಿಸ್ಟ ತತ್ವವು ಕೊಡಗಿನಲ್ಲಿ ಬೇರು ಬಿಡುವ ಸಾಧ್ಯತೆ ಇದೆಯೆಂಬುದು ಇದರಿಂದ ವ್ಯಕ್ತವಾಗಿದೆ. ಅವರ ಪ್ರಚಾರ ವಿಧಾನ ಕಾರ್ಯನೀತಿಯು ಟೀಕಾರ್ಹವಾಗಿರಲಿಲ್ಲವೆನ್ನಬಹುದು.

ಈ ರೀತಿ ಕೊಡಗಿನ ರಾಜಕೀಯ ರಂಗದಲ್ಲಿ ಮೂರು ಪಕ್ಷಗಳು ಚುನಾವಣೆಗೆ ನಿಂತು ಕೆಲಸ ಮಾಡಿವೆ. ಅದರಲ್ಲಿ ಕಾಂಗ್ರೆಸಿನ ಪ್ರಚಾರವು ಧ್ಯೇಯಕ್ಕಾಗಿಯಾಗಲೀ, ಆದರ್ಶದ ಬಗ್ಗೆಯಾಗಲೀ ನಡೆದಿಲ್ಲ. ಅಧಿಕಾರ ಪಡೆಯಬೇಕು; ಜನರನ್ನು ಆಳಬೇಕು; ಅಧಿಕಾರದಲ್ಲಿರುವ ಕಾಂಗ್ರೆಸ್ ಸರಕಾರವೇ ಮುಂದೆ ನಡೆಯಬೇಕೆಂಬುದೇ ಅವರ ಗುರಿಯಾಗಿತ್ತು. ಕೊಡಗಿನಲ್ಲಿ ಕಾಂಗ್ರೆಸು ಜಯ ಪಡೆಯಬಹುದಾದರೂ ಕಾಂಗ್ರೆಸ್ಸಿನ ಕಾರ್ಯಕಲಾಪವು ಲಜ್ಜಾಸ್ಪದವಾದುದಾಗಿದೆಯೆನ್ನಬಹುದು. ಏಕೆಂದರೆ ಕಾಂಗ್ರೆಸು ಓಟು ಪಡೆಯಲು ಹಣ ಚೆಲ್ಲಿದೆ ಎಂಬ ವಾರ್ತೆಯೂ ಇದೆ. ಇದು ನಿಜವಾಗಿದ್ದರೆ ಕಾಂಗ್ರೆಸಿನ ಅಧಃಪತನಕ್ಕೆ ಹೆಚ್ಚು ಕಾಲವಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಈ ಪರಿಸ್ಥಿತಿ ಕೊಡಗಿನಲ್ಲೇ ಅಲ್ಲ; ಇಡೀ ಭರತ ಖಂಡದಲ್ಲೇ ಇದೆ. ಅದಕ್ಕಾಗಿಯೇ ಪಂಡಿತ ನೆಹರೂರವರು ಅಪ್ರಾಮಾಣಿಕರನ್ನು ಕಾಂಗ್ರೆಸಿನಿಂದ ಹೊರ ಹಾಕಲಾಗುವುದೆಂದು ಹೇಳುತ್ತಿದ್ದಾರೆ. ಕಾಂಗ್ರೆಸ್ಸಿನ ಅನೀತಿಯು ಅವರಿಗೂ ಪರಿಚಯವಾಗಿದೆ. ಆದರೆ ಈ ಅಪ್ರಾಮಾಣಿಕತೆಯನ್ನು ಅಡಗಿಸಲು ನೆಹರೂರವರಿಗೂ ಸಾಧ್ಯವಾಗಲಾರದು. ಈ ರೀತಿ ಕೊಡಗಿನಲ್ಲಿ ಕಾಂಗ್ರೆಸ್ಸು ದಾರಿ ತಪ್ಪಿ ವರ್ತಿಸಿದ ಕಾರಣ ಮತದಾರರ ಜಾಗೃತಿಯು ಯೋಗ್ಯ ದೃಷ್ಟಿಯಿಂದ ಆಗಲಿಲ್ಲ. ಶುದ್ಧ ರಾಜಕೀಯದ ಚೇತನಕಾರಿ ಗಾಳಿಯ ಬದಲು ಪಕ್ಷ ರಾಜಕೀಯದ ಹಾಗೂ ವ್ಯಕ್ತಿ ದೂಷಣೆಯ ಹೊಲಸಿನ ಬಿಸಿ ಗಾಳಿಯೇ ಕೊಡಗಿನಲ್ಲಿ ಬೀಸಿದ ಕಾರಣ ಮತದಾರನು ತಬ್ಬಿಬ್ಬಾದನು. ಯಾರಿಂದು ಸತ್ಯ ಯಾವುದು ಸುಳ್ಳು ಎಂಬುದನ್ನು ಅರಿಯಲು ಅವನಿಗೆ ಕಷ್ಟವಾಯಿತು. ಒಟ್ಟಾರೆ ಹೇಳುವದಾದರೆ ಕೊಡಗಿನ ರಾಜಕೀಯ ಪಕ್ಷಗಳು ಮತದಾರನ ಜ್ಞಾನವಿಕಾಸಕ್ಕಾಗಿಯೂ, ಓಟಿನ ಸದುಪಯೋಗವಾಗುವಂತೆಯೂ, ಸುವ್ಯವಸ್ಥೆ ಪ್ರಜಾಪ್ರಭುತ್ವದ ರಚನೆಗಾಗಿಯೂ ದುಡಿಯುವ ಕೇವಲ ಜಯದ ಕಾಂಕ್ಷೆಯಿಂದ ಹೋರಾಡಿದರೆಂದು ಹೇಳದರೆ ತಪ್ಪಾಗದು.

ಕಾಂಗ್ರೆಸ್ಸಿಗರು ಮತ್ತು ಕಮ್ಯೂನಿಷ್ಟರು.

ಕೆಲವು ದಿನಗಳಿಗೆ ಹಿಂದೆ ಕಮ್ಯೂನಿಷ್ಟ ಸ್ನೇಹಿತರೊಬ್ಬರು ಬಂದಿದ್ದಾಗ ನಮ್ಮಲ್ಲಿ ನಡೆದ ಚರ್ಚೆ ಈ ಕಾಲಕ್ಕೆ ‘ಕಮ್ಯೂನಿಷ್ಟರ ಗುರಿಯನ್ನು ಒಪ್ಪುವೆನಾದರೂ ಅವರ ಮಾರ್ಗವನ್ನು ಒಪ್ಪಲಾರೆ. ಅವರ ಕೈ ರಕ್ತಸಿಕ್ತವಾದುದು. ಅವರು ಹಿಂಸೆಗೆ ಹೆದರುವವರಲ್ಲವೆಂದೆ.’ ಫಕ್ಕನೆ ಮಿತ್ರರು ಬಿಗಿಯಾಗಿ ನುಡಿದರು. ‘ಕಮ್ಯೂನಿಷ್ಟರನ್ನು ನೀವು [illegible] ಕಾಂಗ್ರೆಸಿಗರು ಇದರಿಂದ ಭಿನ್ನವಾಗಿಲ್ಲ. ಕಾಂಗ್ರೆಸ್ಸಿನವರೂ ಹಿಂಸಾಪಥದಲ್ಲಿ ನಡೆದಿದ್ದಾರೆ. ಆ ಕಾಲಕ್ಕಿಲ್ಲದೆ ತಮಗೆ ವಿರುದ್ಧರಿರುವವರನ್ನು ಬಗ್ಗುಬಡಿದಿದ್ದಾರೆ. ಬ್ರಿಟಿಷರ ರೀತಿಯಲ್ಲಿಯೇ ಆಡಳಿತ ನಡೆಸಿ ತಮಗೆ ವಿರೋಧಿಗಳಾದ ಕೋರಿದ ಕಮ್ಯೂನಿಷ್ಟರನ್ನು ಗುಂಡಿಕ್ಕಿ ಕೊಂದಿದ್ದಾರೆ. ಹಾಗಾದರೆ ಕಾಂಗ್ರೆಸಿನ ಅಹಿಂಸೆ ಎಲ್ಲಿ ಉಳಿದಿದೆ? ಇದರಿಂದ ಗಾಂಧಿ ಮಹಾತ್ಮರ ಅಹಿಂಸೆ ಖಂಡಿತವಾಗಿಯೂ ಉಳಿದಿಲ್ಲ’ ಎಂದರು.

ಈ ಚರ್ಚೆಯ ನಂತರ ಹಲವು ಬಾರಿ ಈ ವಿಚಾರ ಆಲೋಚನೆ ಮಾಡಿದ್ದೇನೆ. ಕಾಂಗ್ರೆಸಿನವರು ಅಧಿಕಾರ ಪೀಠದಿಂದ ಹಿಂಸೆ ಮಾಡಿದ್ದಾರೆಂಬುದು ನನಗೆ ಗೊತ್ತಿದೆ. ಆದರೆ ಈ ಎರಡು ಪಕ್ಷಗಳ ಹಿಂಸೆಯು ಕಾರಣವೇನು? ಕಾಂಗ್ರೆಸು ನಿಜವಾಗಿಯೂ ಹಿಂಸಾತತ್ವಕ್ಕೆ ಒಪ್ಪಿದ ಸಂಸ್ಥೆಯಲ್ಲ. ಅಹಿಂಸಾಪಥವೇ ಅದರ ಮಾರ್ಗ ನಿಜ. ಆದರೆ ಅಧಿಕಾರಕ್ಕೇರಿದ ಕಾಂಗ್ರೆಸಿಗರು ಅಧಿಕಾರ ಉಳಿಸಿಕೊಳ್ಳಲಿಕ್ಕಾಗಿ ವಿರೋಧವಿರುವವರಿಗೆ ಗುಂಡಿಕ್ಕಿದ್ದಾರೆ. ಕಾಂಗ್ರೆಸಿನ ಮೂಲ ತತ್ವವನ್ನು ಬಿಟ್ಟು ಬ್ರಿಟಿಷರ ಹಳೇ ಪದ್ಧತಿಯಂತೆ ವರ್ತಿಸಿದ್ದಾರೆ. ತೆಲಂಗಣ, ಮಲಬಾರು ಮತ್ತಿತರ ಕಡೆಯಲ್ಲಿ ಗುಂಡಿಕ್ಕಿ ಜನರನ್ನು ಕೊಂದುದು ನಿಜವಾಗಿಯೂ ಕಾಂಗ್ರೆಸ್ ತತ್ವಕ್ಕೆ ಸರಿಹೋಗಲಾರದು. ಆದ್ದರಿಂದ ಹಿಂಸಾಪಥವನ್ನು ಒಪ್ಪಿದ ಕಮ್ಯೂನಿಷ್ಟರಿಗೂ, ಅಹಿಂಸಾ ತತ್ವವನ್ನು ಹೇಳುತ್ತಾ, ಹಿಂಸಾಕೃತ್ಯ ನಡೆಸುವ ಕಾಂಗ್ರೆಸಿನವರಿಗೂ ಹೆಚ್ಚಿನ ವ್ಯತ್ಯಾಸ ನನಗೆ ತೋರಿಬರಲಿಲ್ಲ. ಇವೆರಡರಲ್ಲಿ ಕಮ್ಯೂನಿಷ್ಟರೇ ಉತ್ತಮರು ಎಂದು ನನಗನಿಸಿತು. ಏಕೆಂದರೆ ಕಮ್ಯೂನಿಷ್ಟರು ಹಿಂಸೆಯನ್ನು ಅನುಸರಿಸಿ ಮಂತ್ರಿಗಳಿಗೆ ಅನ್ಯಾಯ ಮಾಡಿದರೆ ತಮ್ಮ ಸ್ವಾರ್ಥಕ್ಕಾಗಿ ಅಲ್ಲ; ತಾವು ಸುಖಪಡಬೇಕೆಂದು ಅಲ್ಲ; ಬದಲು ನೂರಾರು ಬಡವರ ಹಿತಕ್ಕಾಗಿ. ನೂರು ಬಡ ಜನರ ಉದ್ಧಾರಕ್ಕಾಗಿ ಒಬ್ಬ ಶೋಷಕನ ಪ್ರಾಣಾಹುತಿ ಧರ್ಮವೆಂದು ಯಾರಿಗೂ ಅನಿಸಬಹುದು. ಆದರೆ ಕಾಂಗ್ರೆಸಿನ ಹಿಂಸೆ ಈ ವಿಶಾಲದೃಷ್ಟಿಯಿಂದಲ್ಲ; ಬದಲು ತಮ್ಮ ಸ್ವಾರ್ಥಕ್ಕಾಗಿ ತಾವು ಏರಿರುವ ಗದ್ದುಗೆಯನ್ನು ತಮಗಾಗಿ ಉಳಿಸಿಕೊಳ್ಳಲಿಕ್ಕಾಗಿ!

ಈ ರೀತಿಯ ಒಂದು ಮನಸ್ಥಿತಿ ನನ್ನದಾಗಿರುವ ಕಾಲದಲ್ಲಿ ಸಾರ್ವತ್ರಿಕ ಚುನಾವಣೆ ಬಂತು. ಕೊಡಗಿನಲ್ಲಿಯೂ ಚುನಾವಣಾ ಪ್ರಚಾರ ಪ್ರಾರಂಭವಾಯಿತು. ಅಹಿಂಸಾ ವಾದಿಗಳೆನಿಸುವ ಕಾಂಗ್ರೆಸಿನವರೂ ಚುನಾವಣೆಗಾಗಿ ಪ್ರಚಾರ ಪ್ರಾರಂಭಿಸಿದರು. ಒಂದೆರಡು ಕಮ್ಯೂನಿಷ್ಟರೂ ಚುನಾವಣೆಗೆ ನಿಂತು ಅವರ ಪ್ರಚಾರವೂ ಪ್ರಾರಂಭವಾಯಿತು. ಕೊಡಗಿನಲ್ಲಿ ಕಳೆದ ಎರಡು ತಿಂಗಳುಗಳಿಂದ [illegible] ಚುನಾವಣಾ ಪ್ರಚಾರದ ವಾರ್ತೆಗಳನ್ನು ಕೇಳಿ ನನ್ನ ಹಿಂದಿನ ಮನಸ್ಥಿತಿಯು ಇನ್ನೂ ಗಟ್ಟಿಯಾಗಿ ಕಾಂಗ್ರೆಸು [illegible] ಹಿಂಬಾಲಿ ಅಹಿಂಸಾ ತತ್ವಬದ್ಧವಾದ ಸಂಸ್ಥೆಯಲ್ಲ; ನ್ಯಾಯನೀತಿ, ಧರ್ಮ [illegible] [illegible] ಕಾಂಗ್ರೆಸಿನಲ್ಲಿ [illegible] [illegible] ನನಗೆ ತೋರಿಬಂದ ಕೆಲವು [illegible] ತಿಳಿಸಿಕೊಟ್ಟಿದ್ದೇನೆ. [illegible] ದರೂ [illegible] ತಪ್ಪನ್ನು [illegible] ಎಂ [illegible] ಗೆ [illegible].

(೧) [illegible] ಕಾಂಗ್ರೆಸ್ಸಿಗರು ಕೊಡಗಿನ ಭವಿಷ್ಯದ ಪ್ರಶ್ನೆ ಇಂದಿಲ್ಲವೆಂದು ತಮ್ಮ ಘೋಷಣಾ ಪತ್ರದಲ್ಲಿ [illegible] ದರೂ ದಕ್ಷಿಣ ಕೊಡಗಿನಲ್ಲಿ ತಾವು ಪ್ರತ್ಯೇಕವಾದಿಗಳೆಂದೂ, ಉತ್ತರ ಕೊಡಗಿನಲ್ಲಿ ತಾವು ಸಂಯೋಜನಾವಾದಿಗಳೆಂದೂ ಪ್ರಚಾರ ಮಾಡಿದರು. [illegible] ಸತ್ಯದ ತಳಹದಿಯಲ್ಲಿ [illegible] ಕೀಯ.

(೨) ಕೊಡಗಿನ [illegible] ಯಬೇಕಾದರೆ ಕಾಂಗ್ರೆಸ್ಸಿಗೆ ಓಟು ಕೊಡಿ ಎಂದು ಸಾರಿ ಕೋಮುವಾರು ಭಾವನೆ ಉದ್ರೇಕಿಸಿದ್ದು ಕಾಂಗ್ರೆಸ್ಸಿನ ಯಾವ ಜಾತ್ಯಾತೀತ ತತ್ವ?

(೩) ಪ್ರತ್ಯೇಕವಾದಿಗಳು ಪಕ್ಕದ ಹಟ್ಟಿ ಕೊಂಡಿರುವದು ನಿಮ್ಮನ್ನು ಕೂಗಿ ಭಾರನೋಡಿ ಭಾರ ಹೆಚ್ಚಿರುವವರನ್ನು ಮಿಲಿಟರಿಗೆ ಸೇರಿಸಲಿಕ್ಕಾಗಿ ಎಂದು ಏನೂ ತಿಳಿಯದ ತಮ್ಮ ಪರ ಇಲ್ಲದ ಕುರುಬ ಮತ್ತಿತರ ಜನಾಂಗಕ್ಕೆ ಬೋಧಿಸಿ ಅವರನ್ನು ಓಟು ಕೊಡಲು ಬಾರದಂತೆ ಮಾಡಿದ್ದು ಯಾವ ಪ್ರಗತಿಶೀಲ ಕಾರ್ಯ?

(೪) ಓಟು ಕೊಡಲಿಕ್ಕೆ ಹೋದರೆ ಕೈಗೆ ಸೀಲು ಹಾಕುತ್ತಾರೆ. ಸೀಲು ಹಾಕಿದ ಮೇಲೆ ನೀವು ಇಂದು ಕೆಲಸ ಮಾಡುತ್ತಿರುವ ಮನೆಯಲ್ಲಿಯೇ ಸಾಯುವವರೆಗೆ ಕರಾರು ಕೂಲಿಗಳಾಗಿ ದುಡಿಯಬೇಕು. ಆದ್ದರಿಂದ ಓಟು ಮಾಡಲು ಹೋಗಬೇಡವೆಂದು ತಮಗೆ ಓಟು ದೊರೆಯದ ಕಡೆ ಬೆದರಿಸಿರುವದು ಯಾವ ಜನಹಿತ ದೃಷ್ಟಿ?

(೫) ಕೇಂದ್ರದಲ್ಲಿ ನೆಹರೂ ಸರಕಾರವಿರುವದರಿಂದ ಕೊಡಗಿನಲ್ಲಿ ಪ್ರತ್ಯೇಕವಾದಿ ಸರಕಾರ ಬಂದರೆ ಕೇಂದ್ರ ಸರಕಾರದಿಂದ ಕೊಡಗಿಗೆ ಯಾವ ಸಹಾಯವೂ ದೊರೆಯುವದಿಲ್ಲ. ಪ್ರತ್ಯೇಕವಾದಿ ಸರಕಾರವನ್ನು ನೆಹರೂ ಸರಕಾರವು ಡಿಸ್‌ಮಿಸ್ ಮಾಡಿಬಿಡುತ್ತದೆ. ಆದ್ದರಿಂದ ಪ್ರತ್ಯೇಕವಾದಿಗಳಿಗೆ ಓಟು ಕೊಡುವದು ವ್ಯರ್ಥವೆಂಬ ಪ್ರಚಾರವು ಯಾವ ರಾಜಕೀಯ ಗುರಿಗಾಗಿ?

(೬) ಕಾಂಗ್ರೆಸ್ ಉಮೇದುವಾರರಿಗೆ ವಿರುದ್ಧ ನಿಂತವರಿಗೆ ದುಡ್ಡು [illegible] ಟ್ಟು ನಾಮಪತ್ರ ತೆಗೆಸಿದ ವಾರ್ತೆ ಇದೆ. ಗ್ರಾಮ ಗ್ರಾಮಗಳಲ್ಲಿ ಮತದಾರರಿಗೆ ಏಜಂಟರ ಮೂಲಕ ಹಣ ಚೆಲ್ಲಿದ ವರ್ತಮಾನವಿದೆ. ಇದಲ್ಲಿ ಯಾವ ಸತ್ಯ ಪಥ? ಯಾವ ಅಹಿಂಸಾ ಗುರಿ?

ಈ ವರ್ತಮಾನಗಳನ್ನು ಕೇಳಿದ ಮೇಲೆ ನಾನು ಇದೇ ದೃಷ್ಟಿಯಿಂದ ಕಮ್ಯೂನಿಷ್ಟರ ಪ್ರಚಾರ ಕಾರ್ಯ ಅವರು ಅನುಸರಿಸಿದ ನೀತಿಯನ್ನು ಪರಿಶೀಲಿಸಿದ್ದೇನೆ. ಕಾಂಗ್ರೆಸ್ ಸಂಸ್ಥೆಯು ಅಹಿಂಸಾವಾದಿ, ಸತ್ಯವಾದಿ ಎಂಬ ಕೊಂಡರೂ [illegible] ಅದು ಅನುಸರಿಸಿದ ಮಾರ್ಗವು ಆ ರೀತಿ ಇಲ್ಲ. ಕಮ್ಯೂನಿಷ್ಟ ಪಕ್ಷವು ಹಿಂಸಾವಾದಿ ಎನಿಸಿ [illegible] ಅನುಸರಿಸಿದ ರೀತಿ ನೀತಿಗಳು ಕಾಂಗ್ರೆಸ್ಸಿಗರ ಆದರ್ಶವಂ [illegible] ಲ್ಲವೆ, ಎನಿಸಿ ಹಿತಕ್ಕೆ ಪ್ರೋತ್ಸಾಹವಾಗಿದೆ. ಈ ಮಾತುಗಳನ್ನು ಕೊಡು [illegible] [illegible] [illegible] [illegible] [illegible]

—“ಕಮ್ಯೂನಿಷ್ಟ ತತ್ವಪ್ರೇಮಿ.”

Land For Sale.

A compact plot of 104 acres of freehold land most conveniently situated in Coffee Zone on the Ammatti-Murnad road known as Cauvery Estate is for sale. The description of the land is as detailed in the schedule mentioned below:

1. 80 acres land, sloping towards East, North and West is most suitable for coffee, orange, cardamom, pepper and tea.
2. 19 acres is suitable for grazing ground.
3. 5 acres wetland in good condition.
4. One big tiled cattle shed.
5. One tiled two roomed tenmats house.
6. 10 acres 9 years old orange plants interplanted recently with robusta coffee.
7. 11 acres tea.
8. 1 tank with permanent water supply.
9. In one spot good. uality Mica is also foanb

This land is surrounded by metaled all weather motor road and also by a big perenial stream.

Intending purchasers may please communicate with— "X"

C/o The "Kodagu" Ltd.,
3–2 *Mercara, Coorg.*

ಬಾಪೂಜಿಯ ಪಟ್ಟ ಶಿಷ್ಯ

ಆಚಾರ್ಯ ವಿನೋಬಾ ಭಾವೆ.

ಮಹಾಕ್ರಾಂತಿಗಳು ಅಥವಾ ಮಹಾನ್ ಸುಧಾರಣೆಗಳು ನಡೆದ ಇತಿಹಾಸವನ್ನು ಅವಲೋಕಿಸಿದರೆ ಅವು ಹಿಂಸಾರಹಿತ ಅಥವಾ ರಕ್ತರಹಿತವಾಗಿಲ್ಲವೆಂಬ ಬಹುಶಃ ಕಂಡು ಬರುವದು. ಮಧ್ಯಯುಗೀನಧಾರ್ಮಿಕ ಸುಧಾರಣೆಗಳು ಕೂಡ ಜನೋಪದ್ರವ ಸಾಮಗ್ರೀಕ ಯುದ್ಧಗಳಿಂದ ತುಂಬಿ ತುಳುಕಿದ್ದುವು. ಫ್ರೆಂಚ್ ಕ್ರಾಂತಿಯಲ್ಲಿಯೂ ರಕ್ತ ಹೋಳಿ ಚೆಲ್ಲಿತು. ರಶಿಯನ್ ಕ್ರಾಂತಿಯಲ್ಲಿಯೂ ಹಿಂಸೆ ಪ್ರತಿಹಿಂಸೆ ರಕ್ತದ ಹೊಳೆಯೇ ಹರಿಯಿತು.

ಇತಿಹಾಸದಲ್ಲಿಯೇ ಅಚ್ಚರಿ ಜನಕವಾದ ಶಾಂತಿಯುತ ಅಹಿಂಸಾಮಯ ಹೋರಾಟವು ಇಂದಿಗಷ್ಟೇ ಭಾರತಕ್ಕೆ ಸೇರಿದ್ದಾಗಿದೆ. ಇತಿಹಾಸ ಪ್ರಸಿದ್ಧವಾದ ಸ್ವಾತಂತ್ರ್ಯದ ಮಹಾ ಹೋರಾಟದಲ್ಲಿ ಭಾರತವು ಅಹಿಂಸಾಮಯ ಶಾಂತಿಯುತ ರೀತಿಯಲ್ಲಿ ಹೋರಾಡಿ ಸ್ವಾತಂತ್ರ್ಯವನ್ನು ಪಡೆಯಿತು. ಇದಕ್ಕೆ ಮಹಾತ್ಮಾ ಗಾಂಧಿಯವರ ಅಲೌಕಿಕ ಧೋರಣೆ ಹಾಗೂ ಅವರು ಭಾರತಕ್ಕೆ ಕೊಡಮಾಡಿದ ಸತ್ಯಾಗ್ರಹ, ಅಹಿಂಸೆಗಳೆಂಬ ಅಮೋಘ ಆಯುಧಗಳೇ ಕಾರಣ; ಆ ಬಲದಿಂದಲೇ ಬ್ರಿಟಿಷ್ ಸಾಮ್ರಾಜ್ಯದಂತಹ ಬಲಾಢ್ಯ ಆತತಾಯಿಯನ್ನು, ಒಂದು ಬಂದೂಕು ಗುಂಡುಗಳ ಸದ್ದಿಲ್ಲದೆ, ರಕ್ತಪಾತವಿಲ್ಲದೆ, ತೆತ್ತಗೆದು ಸ್ವತಂತ್ರವಾಯಿತು. ಅದಕ್ಕಾಗಿ ಮಹಾತ್ಮರ ಧೋರಣೆಗೆ ಭಾರತವು ಎಂದೆಂದಿಗೂ ಕೃತಜ್ಞವಾಗಿರಬೇಕಾಗಿದೆ.

ಇಂದಿಗೂ ಕೂಡ, ಸ್ವತಂತ್ರಭಾರತವು ಗಾಂಧೀಜಿಯವರ ಆ ತಂತ್ರಗಳನ್ನು ತನ್ನ ನಾನಾ ಬಗೆಯ ಸಮಸ್ಯಾ ಪರಿಹಾರಗಳಿಗೂ, ಹಾಗೂ ತನ್ನಲ್ಲಿಯ ರಾಜಕೀಯ ಸಾಮಾಜಿಕ ಹಣಕಿಯ ಪ್ರವೃತ್ತಿಗೂ ಉಪಯೋಗಿಸಿಕೊಳ್ಳುತ್ತಲೇ ಇದೆ. ಇತ್ತೀಚೆಗೆ ಭಾರತದಲ್ಲಿ ನಡೆದ ಇಂತಹ ಒಂದು ಮಹಾ ಪ್ರಯತ್ನವೆಂದರೆ ಮಹಾತ್ಮಾಜಿಯವರ ನಂಬಿಗೆಯ ನಿಜ ಶಿಷ್ಯರಾದ ಆಚಾರ್ಯ ವಿನೋಬಾ ಭಾವೆಯವರು ಕೈಕೊಂಡ 'ಭೂದಾನ' ಕಾರ್ಯ.

ಭೂಸುಧಾರಣೆ ಇಂದು ರಾಷ್ಟ್ರವನ್ನೇ ಪರಿಸುತ್ತಿದ್ದ-ಪೀಡಿಸುತ್ತಿದ್ದ ಮಹಾಸಮಸ್ಯೆಯಾಗಿರುತ್ತದೆ. ಗೇಣಿ ಭೂಮಿ ಕೂಡ ಇಲ್ಲದ ಕೋಟಿಗಟ್ಟಲೆ ಜನರಿಗೆ ಭೂಮಿಯು ದೊರೆಯುವಂತೆ ಮಾಡುವುದು ಸರಕಾರಕ್ಕಂದು ತಲೆಶೂಲೆಯೊಡ್ಡುವ ಜಟಿಲವಾದ ಕಾರ್ಯವಾಗಿರುತ್ತದೆ. ಇನ್ನೊಂದು ಕಡೆಗೆ ತಮಗೆ ಅವಶ್ಯವಿದ್ದುದಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಭೂಮಿಯ ಒಡೆತನವನ್ನು ಪಡೆದಿದ್ದ ಭೂಒಡೆಯರು, ಜಮೀನುದಾರರು ಇದ್ದಾರೆ. ಸರ್ಕಾರಕ್ಕೂ ಈ ಭೂವಿತರಣೆಯು ಕ್ರಮವಾಗಿ ನಡೆಯಬೇಕಾದುದು ಅವಶ್ಯದ ಕಾರ್ಯವಾಗಿದೆ. ಆಚಾರ್ಯ ವಿನೋಬಾ ಭಾವೆಯವರು ಈ ಮಹಾ ಕಾರ್ಯವನ್ನೇ ಕೈಕೊಂಡಿದ್ದಾರೆ.

ಅವರು ನಿಸ್ಪೃಹರಂತೆ, ಪೂರ್ವ ಸೂಚನೆಯಿಲ್ಲದೆ ಅಪ್ರಯಾಸ ನಡೆಸಿ ಜಮೀನುದಾರರಿಂದ ಭೂದಾನ ಸ್ವೀಕರಿಸುವ ಕಾರ್ಯ ಕೈಕೊಂಡರು. ಶ್ರೀ. ವಿನೋಬಾಜೀಯವರು ಇಲ್ಲಿ ಗಾಂಧೀಜಿಯವರನ್ನು ಅನುಸರಿಸುತ್ತಿದ್ದಾರೆ. ಸರಿಯಾದ ಆಚರಣವನ್ನು ಸರಿಯಾದ ರೀತಿಯಲ್ಲಿ ತಿಳಿಸಿ ಹೇಳಿ ಜನರ ಒಲಿಸಿ ಪ್ರೀತಿಯಿಂದ ಕಾರ್ಯಮಾಡಿಸಿಕೊಳ್ಳುವ ಗಾಂಧೀತಂತ್ರದಿಂದಲೇ ವಿನೋಬಾ ಅವರು ಜಮೀನುದಾರರ ಹೃದಯ ಪರಿವರ್ತನಮಾಡಿ, ಅವರಿಂದಲೇ ಅವರಲ್ಲಿಯ ಹೆಚ್ಚಿನ ಭೂಮಿಯನ್ನು ಭೂಮಿಯಿಲ್ಲದವರಿಗೆ ಸ್ವಯಂಪ್ರೇರಣೆಯಿಂದ ಕೊಡಲು ಹಚ್ಚಿದ್ದಾರೆ. ಈ ಮಹಾಕಾರ್ಯ ಸಾಧನೆಗಾಗಿಯೇ ಅವರು ಸಮಗ್ರ ಉತ್ತರ ಭಾರತದ ಪ್ರವಾಸವನ್ನು ಕೈಕೊಂಡಿದ್ದು ಈಗಾಗಲೇ ಅವರಿಗೆ ಸಾಕಷ್ಟು ಯಶಸ್ಸು ಆ ಕಾರ್ಯದಲ್ಲಿ ದೊರೆಯುತ್ತಲಿದೆ.

[illegible] ಈ ಮೊದಲು ಇದೇ ರೀತಿ ಶ್ರೀ ವಿನೋಬಾಜೀಯವರು ಪ್ರವಾಸ ಕೈಕೊಂಡು, ಕಮ್ಯೂನಿಸ್ಟ ಪೀಡಿತವಾದ ಆ ಪ್ರದೇಶದಲ್ಲಿ ಪ್ರೀತಿ ಮಾರ್ಗದಿಂದ ಸಂತೋಷದಿಂದ ಕೊಡುವವರಿಂದ ಭೂಮಿಯನ್ನು ಪಡೆದು ಭೂಮಿಯಿಲ್ಲದವರಿಗೆ ಅದನ್ನು ವಿತರಣ ಮಾಡಿದಾಗ ಪ್ರಪಂಚದ ಎಲ್ಲ ಪತ್ರಿಕೆಗಳೂ ಅವರನ್ನು ಕೊಂಡಾಡಿದವು. ಆ ಸಿದ್ಧಿಯು [illegible] ಮನಗೊಂಡು ಅನುಪಮ ಆತ್ಮಿಕ ಚಾರಿತ್ರ್ಯದ ವಿನೋಬಾಜೀಯವರು ಏಕಾಂತವಾಗಿ ಅಪ್ರಸಿದ್ಧರೋ ಎಂಬ ರೀತಿಯಲ್ಲೇ ತಮ್ಮ ನಿಜವಾದ ಕೆಲಸವೇ ಜನ [illegible] ದೇಶಸೇವಾ [illegible]ನಲ್ಲಿ ಇದ್ದು ಬಿಟ್ಟಿದ್ದರು. ಆ ತೆಲಂಗಾಣ ಪ್ರದೇಶದಲ್ಲಿ ಇವರೊಡನೆ ಸಂಪರ್ಕವಿದ್ದ ಕೆಲವು ಜನರು ಇವರ ನಿಜವಾದ ಆಚರಣವನ್ನು ಅಲೌಕಿಕ ಕ್ರಿಯಾಶಕ್ತಿಯನ್ನು ಅರಿತು ಇವರನ್ನು 'ಪೂಜ್ಯ' ರೆನ್ನುತ್ತಿದ್ದರು. ನಿಜವಿದ್ದರೂ ಇವರು ಮಾತ್ರ ಆ ಪ್ರಸಿದ್ಧಿ, ಆ ಕೀರ್ತಿಗಳಿಂದ ಅಲಿಪ್ತರಾಗಿ ಏನೂ ಮಹತ್ವದಿಂದಲೇ ಸುಮ್ಮನಿದ್ದು ಬಿಟ್ಟರು.

ವಿನೋಬಾಜೀಯವರಿಗೆ ಈಗ ೫೬ ವರ್ಷಗಳಾಗಿವೆ. ಆದರೂ ಇವರು ಸಾವಿರಾರು ಮೈಲು ಕಾಲ್ನಡಿಗೆಯ ಪ್ರವಾಸ ಮಾಡಿ, ಜನತೆಗೆ ಹಿತವಾತು ಹೇಳಿ, ಭೂದಾನ ಭೂವಿತರಣೆ—ಕಾರ್ಯವನ್ನು ಕೈಕೊಂಡು [illegible] ನೋಡಿದರೆ ಇವರು ಹುಟ್ಟು ಆಶಾವಾದಿಗಳೂ, ಕಾರ್ಯದಲ್ಲಿ ಸಂಪೂರ್ಣ [illegible] ಎಂದೇ ಹೇಳಬೇಕಾಗುತ್ತದೆ. ಇಷ್ಟಿದ್ದರೂ ಅವರು ತಾವೆ ಒಬ್ಬ ಸರ್ವಸಾಮಾನ್ಯನೆಂದೇ ತಿಳಿದುಕೊಳ್ಳುತ್ತಿದ್ದವರೂ ಒಂದು ಹೆಚ್ಚಿನ ಮಹತಿಯೇ. ಈ ರೀತಿ ಇದ್ದರೂ ತೆಲಂಗಾಣದ ಜನತೆಯಂತೂ ಇವರು ಶ್ರೀ ರಾಮನ ಅವತಾರವೆಂದು ನಂಬುತ್ತಾರೆ, ಪೂಜಿಸುತ್ತಾರೆ.

ಶ್ರೀ. ವಿನೋಬಾಜೀಯವರು ಉಪನಿಷತ್ತಿನ ತತ್ವಜ್ಞಾನದ ಪ್ರತಿಭಾಯುಕ್ತ ಪಂಡಿತರು. ಇವರು ಅನೇಕ ಭಾಷೆಗಳಲ್ಲಿ, ಕನ್ನಡ ತೆಲುಗುಗಳಲ್ಲಿ ಕೂಡ ಪಂಡಿತರಾದವರು. ಗಾಂಧೀಜಿಯವರು ಕೂಡ ಹಲವು ವಿಷಯಗಳಲ್ಲಿ, ಇವರ ಪಾಂಡಿತ್ಯ ಪ್ರತಿಭೆ, ಸಿದ್ಧಜ್ಞಾನಗಳನ್ನು ಅರಿತಿದ್ದರಿಂದ, ಇವರ ಸಲಹೆಗಳನ್ನು ಕೇಳುತ್ತಿದ್ದರಂತೆ. ಇಂಥವರು ತಮ್ಮ ಸರಳ ಹಾಗೂ ನಿರಾಡಂಬರ ಮಾತುಗಳಿಂದ ಜನಸಾಮಾನ್ಯರ ಮನವನ್ನು ಸೂರೆಗೊಳ್ಳುತ್ತಿದ್ದಾರೆ. ಸಂಕ್ಷಿಪ್ತ ಅತಿಕ್ಷಿಪ್ರರಿಗೂ ಅರ್ಥವಾಗುವ ರೀತಿ ಇವರ ಮಾತಿನದು. ಆದರೂ ಇವರು ಮಾತಿನಲ್ಲಿ ಬಹಳ ಸಂಯಮಿಗಳು. '[illegible] ವಿವರಿಸಲಿ' ಎಂದು ಇವರ ಸಾಯಿ ಇವರಿಗೆ ಯಾವಾಗಲೂ ಹೇಳುತ್ತಿದ್ದರಂತೆ. ಅವಶ್ಯವಿಲ್ಲದೆ ಒಂದು ಮಾತನ್ನೂ ಇವರು ಆಡುವದಿಲ್ಲ. ಗ್ರಂ

ನೋಟೀಸು.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್. ಮಡಿಕೇರಿ (ಕೊಡಗು)

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗುಗಳನ್ನಾಗಲಿ ಅವುಗಳ ಬಡ್ಡಿಯನ್ನಾಗಲಿ ವಾಯಿದೆಗೆ ಸರಿಯಾಗಿ ಕೊಡದಿರುವುದರಿಂದ ಸದರಿಯವರಿಗೆ ಕ್ರಮಪ್ರಕಾರವಾದ ರಿಜಿಸ್ಟ್ರೀ ನೋಟೀಸುಗಳನ್ನು ಕಳುಹಿಸಿದ್ದಲ್ಲು ಈ ಪೈಕಿ ಕೆಲವರು ನೋಟೀಸು ಪಡೆದು ವ ಬಾಕಿಯವರು ನೋಟೀಸು ಡೆಲಿವರಿ ಸಿಕ್ಕದೆ ಸದರಿ ಸಾಲಗಳ ಅಸಲು ಬಡ್ಡಿ ವಗೈರೆಗಳನ್ನು ಇನ್ನೂ ಬಾಕಿ ಇಟ್ಟುಕೊಂಡಿರುವುದರಿಂದ ಸದರಿಯವರೆಲ್ಲರಿಗೂ ಈ ಮೂಲಕ ತಿಳಿಸುವುದೇನಂದರೆ:—

ಸದರಿ ಸಾಲಗಾರರು ಅವರಿಂದ ಮೇಲ್ಕಾಣಿಸಿದ ಬ್ಯಾಂಕಿಗೆ ಸಲ್ಲಲಿಕ್ಕಿರುವ ಅಸಲು ಬಡ್ಡಿ ವಗೈರೆ ಯೂ ನೋಟೀಸಿನ ಖರ್ಚು ಸಮೇತ ಐವೇಜನ್ನು ತಾ. 9-2-1952ರ ಒಳಗೆ ಪಾವತಿ ಮಾಡದೆ ಇದ್ದಲ್ಲಿ, 1952ನೇ ಫೆಬ್ರವರಿ ತಾರೀಕು. 16ನೇ ಶನಿವಾರ ಅಪರಾಹ್ನ 3 ಗಂಟೆಗೆ ಸರಿಯಾಗಿ ವ ಬ್ಯಾಂಕಿಗೆ ಯುಕ್ತ ಕಂಡು ಬರುವ ಇನ್ನಿತರ ದಿವಸ ವ ಸಮಯಕ್ಕೆ ನಮ್ಮ ಬ್ಯಾಂಕಿನಲ್ಲಿ ಬಹಿರಂಗವಾಗಿ ಏಲಂ ಮಾಡಿ, ಬ್ಯಾಂಕಿಗೆ ಸಲ್ಲತಕ್ಕ ಮೊಬಲಗನ್ನು ಬರಮಾಡಿಕೊಳ್ಳಲಾಗುತ್ತೆ. ತಿಳಿದಿರಲಿ.

ಜ್ಯುವೆಲ್ ಲೋನ್ ನಂ	ತಾರೀಕು	ಹೆಸರು ಮತ್ತು ವಿಳಾಸ	31-12-51ಕ್ಕೆ ಸಾಲದ ಅಸಲು ವಗೈರೆ ಬಾಕಿ ರೂ.	ಆ.	ಪೈ.
319/48.9	14-4-49	ಕೆ. ಕೆ. ಸುಬ್ಬಯ್ಯ, ಓರೇಂಜ್ ಸೊಸೈಟಿ ಪ್ರೊಕ್ಕೆಬೆಟ್ಟ	164	7	0
394/18.9	26-5-49	ಬಿ. ಜಿ ಅಪ್ಪಣ್ಣ, ಕೋಳಕೇರಿ ಗ್ರಾಮ, ನಾಪೋಕ್ಲು	243	4	0
448/48.9	16-6-49	ಅಬ್ದುಲ್ ರಹಿಮಾನ್, ನಾಭಿಸಾಹೇಬರ ಮಗ, ಮರ್ಚೆಂಟ್. ಮಡಿಕೇರಿ	111	15	0
516/48.9	15-7-49	ಕೆ. ಪಿ. ಉತ್ತಪ್ಪ, ಪೊನ್ನಪ್ಪನವರ ಮಗ, ಕಂಪೌಂಡರ್, ಸಿವಿಲ್ ಆಸ್ಪತ್ರೆ, ಮಡಿಕೇರಿ	38	4	0
669/48.9	26-9-49	ಯನ್. ಎಂ. ಸುಬ್ಬಯ್ಯ, ಮುತ್ತಣ್ಣನವರ ಮಗ, ಅಂದಗೋವೆ ಗ್ರಾಮ, ಸುಂಟಿಕೊಪ್ಪ	139	12	0
69/49.50	31-10-49	ಕೆ. ಪಿ. ಪೋಕರ್ ಬ್ಯಾರಿ, ಟಿಂಬರ್ ಮರ್ಚೆಂಟ್, ಮಡಿಕೇರಿ	50	0	0
141/50	2-3-50	ಕೆ. ಪಿ. ಪೋಕರ್ ಬ್ಯಾರಿ, ಟಿಂಬರ್ ಮರ್ಚೆಂಟ್, ಮಡಿಕೇರಿ	202	2	0
228/50	3-4-50	ಶೇಕ್ ಅಹಮ್ಮದ್, ಹಸನ್‌ರವರ ಮಗ ಹೊದವಾಡ ಗ್ರಾಮ, ಬೆಟ್ಟಕೇರಿ	40	6	0
246/50	14-4-50	ಖಾದರ್, ಮಹಮ್ಮದ್‌ನವರ ಮಗ, ಗಣಪತಿ ಬೀದಿ, ಮಡಿಕೇರಿ	117	9	0
284/50	28-4-50	ಕೆ. ಪಿ. ಪೋಕರ್ ಬ್ಯಾರಿ, ಟಿಂಬರ್ ಮರ್ಚೆಂಟ್, ಮಡಿಕೇರಿ	191	4	0
286/50	28-4-50	ಕೆ. ಪಿ. ಪೋಕರ್ ಬ್ಯಾರಿ, ಟಿಂಬರ್ ಮರ್ಚೆಂಟ್, ಮಡಿಕೇರಿ	28	0	0

ದಿ ವಿಜಯಾ ಬೇಂಕ್ ಲಿಮಿಟೆಡ್, ಮಡಿಕೇರಿ. ಎಂ. ಎಸ್. ಅಲ್ವ,

21—1—1952. ಏಜೆಂಟ್,

ಧರ್ಮಾಚರಣವನ್ನು ಇವರು ಹೆಚ್ಚಾಗಿ ಮಾಡುತ್ತಿಲ್ಲ. ಅವರು ಕೇವಲ ಮೂರೇ ಪುಸ್ತಕಗಳನ್ನು ಮಾತ್ರ ಓದುತ್ತಿರುತ್ತಾರೆ. ಮೊದಲನೆಯದು 'ಭಗವದ್ಗೀತೆ' ಆತ್ಮಿಕ ಆನಂದಕ್ಕಾಗಿ. ಎರಡನೆಯದು ಯುಕ್ಲಿಡನ ಭೂಮಿತಿ, ಬುದ್ಧಿ ಬೆಳವಣಿಗೆಗಾಗಿ; ಮೂರನೆಯದು ಇಸೋಪನ ನೀತಿಕತೆಗಳು, ಪ್ರಾಯೋಗಿಕ ಜ್ಞಾನಕ್ಕಾಗಿ. ಅವರ ಉಪಯುಕ್ತ ಹಾಗೂ ಕಾರ್ಯಕ್ರಮ ಜೀವನ ಸಿದ್ಧಿಗೆ ಇವು ಮೂರು ಸಾಧನಗಳೆಂದು ಹೇಳಬಹುದು. ವಿನೋಬಾಜೀಯವರ ತೀಕ್ಷ್ಣ ಬುದ್ಧಿಶಕ್ತಿ, ಪ್ರಶಾಂತ ಮನಸ್ಸಿನಿಂದ ಹಾಗೂ ದಲಿತ ಜೀವಿಗಳಿಗಾಗಿ ಮಿಡಿಯುವ ಹೃದಯ ಇವೇ ಅವರ ಜೀವನ ಸಿದ್ಧಿಯ ರಹಸ್ಯವಾಗಿವೆ

ವಿನೋಬಾಜೀಯವರ ಜೀವನ, ವಂಶಗಳ ಬಗ್ಗೆ ಹೆಚ್ಚು ಪ್ರಸಿದ್ಧಿಯಿಲ್ಲ. ಇವರ ಜನ್ಮಸ್ಥಳ ಬರೋಡ. ನಾಲ್ಕು ಜನ ಸಹೋದರರಲ್ಲಿ ಇವರೊಬ್ಬರು. ಇವರ ತಂದೆ ಬರೋಡ ಸಂಸ್ಥಾನದ ನೌಕರರು, ಹಾಗೂ ಲೋಕಮಾನ್ಯ ತಿಲಕರ ಅನುಯಾಯಿಗಳು. ವಿನೋಬಾಜಿಯವರ ಸಹೋದರರೂ ಆಶ್ರಮದಲ್ಲಿಯೇ ಇದ್ದುಕೊಂಡು ವಿಧಾಯಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ಬಾಲ್ಯದಲ್ಲಿ ಇವರು ಬಹಳ ಓದುತ್ತಿದ್ದರು. ಯಾರೋ ಒಬ್ಬರು ಇವರಿಗೆ ಸಂಸ್ಕೃತ ಓದಲು ಹೇಳಿದರಂತೆ. ವೇದವೇದಾಂತ, ಉಪನಿಷತ್ತಿನ ವೇದಾಂತದ ಅಧ್ಯಯನ [illegible] ಇವರು ಆಗಲೆ ಅಭ್ಯಾಸಮಾಡಿದರು. ಸಂಸ್ಕೃತದಲ್ಲಿ "ನಾಟಕ" ಬಹಳ ಪ್ರಸಿದ್ಧಿಯನ್ನು ಪಡೆದದ್ದು ಎಂದು ಯಾರೋ ಇವರಿಗೆ ಹೇಳಿದಾಗ ಇವರು "ನನಗೆ ಅಧ್ಯಾತ್ಮ ಗ್ರಂಥಗಳಿದ್ದರೂ ಉಪನಿಷತ್ತುಗಳಲ್ಲ ನಾಟಕಗಳಲ್ಲ" ಎಂದು ಸ್ಪಷ್ಟವಾಗಿ ಹೇಳಿಬಿಟ್ಟರಂತೆ.

ಹಾಗಾದರೆ ವಿನೋಭಾ ಭಾವೆಯವರು ಜನಸಾಮಾನ್ಯರ ಹೃದಯವನ್ನು ಆಕರ್ಷಿಸುವದರ ಗುಟ್ಟಾದರೂ ಏನು? ತೆಲಂಗಾಣದ ಬಡ ರೈತರು, ಅಲ್ಲಿಯ ಗಟ್ಟಿಯಾಗಿ ತಮ್ಮ ಮತಕ್ಕೆ ಅಂಟಿಕೊಳ್ಳುವ ಕಮ್ಯೂನಿಸ್ಟರು, ಕೂಡ ಇವರತ್ತ ಒಲಿಯುವದರ ರಹಸ್ಯವೇನು? ಇವರ ಉತ್ತರ ಸರಳವಿದೆ. ಅದೇನೆಂದರೆ ಅವರಲ್ಲಿರುವ ಮಾನವತೆ, ಸಂಪೂರ್ಣ ಮಾನವತೆ! ಸರಳ ಹೃದಯ, ಅಧಿಕಾರ, ಕೀರ್ತಿ, ಧನ ಮೊದಲಾದ ಯಾವುದೂ ವ್ಯಾಮೋಹವಿಲ್ಲದೆ ಪಾವನಾರಿನಂಥ ಹಳ್ಳಿಯಲ್ಲಿ ಒಂದು ಚಿಕ್ಕ ಭೂಮಿಯಲ್ಲಿ ಒಂದು ಚಿಕ್ಕ ಗುಡಿಸಲಲ್ಲಿ ವಾಸಿಸುತ್ತ ಅಲ್ಲಿ ಗ್ರಾಮೋದ್ಯೋಗದ ಪ್ರಯೋಗ ನಡೆಸುತ್ತಲಿದ್ದ ವಿನೋಬಾಜೀಗೆ ಹಳ್ಳಿಗರ ಹೃದಯದ ಪರಿಚಯವಿದೆ, ಅವರೊಡನೆ ಯಾವ ರೀತಿಯಲ್ಲಿ ವ್ಯವಹರಿಸಬೇಕೆಂಬುವದರ ಅರಿವಿದೆ, ಅವರನ್ನು ತಿಳಿಯುವ ಹೃದಯವಿದೆ; ಇದೇ ಶ್ರೀ ವಿನೋಬಾಜಿ ಹಳ್ಳಿಗರ ಹೃದಯವನ್ನು ಗೆಲ್ಲುವ ಗುಟ್ಟು!

ಶ್ರೀ ವಿನೋಬಾಜಿಯವರಲ್ಲಿ ಅತ್ಯ ಘನವಂತಿಕೆಯೊಡನೆ, 'ದರ್ಶನ'ದ ಸಂಪೂರ್ಣ ಸ್ಪಷ್ಟತೆಯೂ ಇದೆ. "ಶೀಘ್ರ ಸಂಗ್ರಹಮೂಲಕ [illegible] ಭೂಮಿಯನ್ನು ನೀವಿಟ್ಟುಕೊಂಡು ಮಾಡುವುದೇನು?" ಎಂದವರು ತೆಲಂಗಾಣದ ಭೂಒಡೆಯರಿಗೆ ಕೇಳಿದರು. "ಈ ಸಾಮಾಜಿಕ ಕ್ರಾಂತಿಯಲ್ಲಿ ನಿಮ್ಮ ಭೂಮಿ, ಬಿರುಗಾಳಿಗೆ ಸಿಕ್ಕ ತರಗೆಲೆಯಂತಾಗುವುದೆಂಬುದು ನಿಮಗೆ ಗೊತ್ತಿದೆ. ಸರಕಾರದಿಂದಾಗಲಿ, ಆ ಭಯೋತ್ಪಾದಕ ಕಮ್ಯೂನಿಸ್ಟರಿಂದಾಗಲಿ, ನಿಮ್ಮ ಭೂಮಿಯನ್ನು ಮರಳಿ ಪಡೆದುಕೊಳ್ಳುವದೆಂದೂ ಸಾಧ್ಯವಿಲ್ಲ. ಹೀಗಿರಲು ಪಾಪ, ಆ ಭೂರಹಿತ ಬಡ ರೈತರಿಗೆ ನೀವೇ ಸ್ವತಃ ಬುದ್ಧಿಯಿಂದ ಭೂದಾನ ಮಾಡಿ ಅವರ ಹಸಿವು ಹಿಂಗಿಸಿದ ಪುಣ್ಯ ಕಟ್ಟಿಕೊಳ್ಳಬಾರದು? ಬಂಧುಗಳೇ ಹೀಗೆ ಮಾಡುವುದು ಜಾಣತನವಲ್ಲವೇ? ವಿನೋಬಾಜಿಯವರು ಈ ಕರೆ ಹಾಗೂ ಕರ್ತವ್ಯ ಪ್ರಜ್ಞೆಗೆ ಮಣಿದು ಓಗೊಡದಿರುವ ಹೃದಯವುಂಟೆ?

"ನಾನೊಬ್ಬ ಬಡ ಬ್ರಾಹ್ಮಣ! ಪುರಾಣದಲ್ಲಿಯ 'ವಾಮನ'ನಂತೆ ಭೂದಾನ ಬೇಡಲು ನಿಮ್ಮೆಡೆಗೆ ಬಂದಿರುವೆನು!! ಬಂದ ಬಿಕ್ಷೆ, ಅರ್ಧ ಬಿಕ್ಷೆ, ಕೊನೆಗೆ ತಿಳಿದಷ್ಟು ಭೂದಾನ ಮಾಡಿ ಬಡವರಿಗಾಗಿ, ಹಸಿದವರಿಗಾಗಿ, ದಾನ ಮಾಡಿರಿ!" ಎಂದು ವಿನೋಬಾಜಿ ಸಾವಿರಗಟ್ಟಲೆ ಎಕರೆ ಭೂದಾನ ಪಡೆದರು. [illegible]

[illegible] ವಿನೋಬಾಜಿ, [illegible] ರೀತಿಯಲ್ಲಿ [illegible] ಪಡೆದಿದ್ದಾರೆ [illegible] ತಮ್ಮದೇ ಆದ [illegible] ಪದ್ಧತಿಯಲ್ಲಿ [illegible] ಕ್ರಿಯಾಶಕ್ತಿ [illegible] ಕಾರ್ಯದಕ್ಷತೆ [illegible] ಇವರು [illegible] ಕೆಲವಷ್ಟಾಗಿ [illegible].

ಸರ್ವ [illegible] ಭೂದಾನ ಸ್ವೀಕಾರ: [illegible] ಇವರ ಕಾರ್ಯವನ್ನು [illegible] ಜಗತ್ತೇ ಆಶ್ಚರ್ಯದಿಂದ ವೀಕ್ಷಿಸುತ್ತಲಿದೆ. ಅವಶ್ಯಕ್ಕಿಂತ ಹೆಚ್ಚಿದ ಭೂಮಿಯನ್ನು ಅವುಗಳ ಒಡೆಯರಿಂದ ದಾನವಾಗಿ ಪಡೆದು ನಿರ್ಗತಿಕ ಭೂರಹಿತರಲ್ಲಿ ಅದರ ವಿತರಣಾಕಾರ್ಯವನ್ನು—ಶಾಂತಿ ನ್ಯಾಯ [illegible] ನೀತಿಯಿಂದಲ್ಲ; ಆದರೆ ಮನವೊಲಿಸಿ ಪ್ರೀತಿಯಿಂದ ಪಡೆಯುವುದನ್ನು ಕೈಕೊಂಡ ಶ್ರೀ ವಿನೋಬಾಜಿಯವರು ಅದರಲ್ಲಿ ಸಿದ್ಧಿಯನ್ನು ಪಡೆಯುತ್ತಿದ್ದಾರೆ.

ಜೈ ಹಿಂದ್

Edited Printed & Published by P. I. Belliappa at 'Kodagu' Press, Mercara, for 'Kodagu' Ltd.

Happy New-Year Greetings.

We are glad to announce that 12,000 shares of our Bank of the total value of Rs. 3 lacs recently floated have been over subscribed. We are grateful to the public for the increased confidence they have reposed in us. We assure that we will do our utmost to deserve this wellplaced confidence.

VIJAYA BANK Ltd.,

ESTD 1931.

H. O. MANGALORE,

B. M. SHETTY, B. A., B. L. — Secretary.

P. J. SHETTY, M. A., B. L., C. A. I. I. B., — Superintendent.

B. MANJAYA HEGDE, Advocate.

(President, District Board S. K.)

Chairman of the Board of Directors.

M. S. ALVA,

AGENT

Mercara Office.

4–4

BIRTH CONTROL.

ಮಿತ ಸಂತಾನ.

ಮಾನವ ಜನಾಂಗದ ನೆಮ್ಮದಿ, ಸ್ವಾಸ್ಥ್ಯಗಳಿಗಾಗಿ ಅನೇಕ ಸಂದರ್ಭಗಳಲ್ಲಿ ಗರ್ಭ ನಿರೋಧವು (BIRTH CONTROL) ಅವಶ್ಯಕವೆನಿಸುತ್ತದೆ ನಂಜಾರಿಗಳ ಆರೋಗ್ಯ ಕೆಡದಂತ ಜರಿಯುವ ಆರೆಗೆ ಅಚ್ಚ ಬಾರದಂತೆ ನವೀನ ಶಾಸ್ತ್ರೀಯ ರೀತಿಯ ವಿಧಿ ಮತ್ತು ಪ್ರಯೋಗಗಳಿಂದ ಬಹು ಸುಲಭ ರೀತಿಯಲ್ಲಿ ಮಿತ ಸಂತಾನದ ಕಾರ್ಯವನ್ನು ಸಾಧಿಸಲು ನಾವು ನಮ್ಮ ಔಷಧಾಲಯದಲ್ಲಿ ತಕ್ಕ ಚಿಕಿತ್ಸೆ ಏನು ಡಿಸಿದ್ದೇವೆ. ಈ ವಿಷಯದಲ್ಲಿ ಹೆಚ್ಚು ವಿಚಾರ ತಿಳಿಯಬಯಸುವವರು ನಾಲ್ಕಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಡಾಕ್ಟರ್ ಸಿ. ಎಂ. ಗಣಪತಿ,

(ರಿಟಾಯರ್ಡ್ ಮೆಡಿಕಲ್ ಆಫೀಸರ್)

ಮಿತಸಂತಾನ ಔಷಧಾಲಯ

4–2

BIRTH CONTROL CLINIC

ಸೋಮವಾರಪೇಟೆ, ಉ. ಕೊಡಗು.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್,

ಲಿಮಿಟೆಡ್, ಮಡಿಕೇರಿ.

[illegible] (1921ರಲ್ಲಿ ಸ್ಥಾಪಿತವಾಗಿದೆ)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ಒಡವೆಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಸೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಅವಧಿಯ ಸಾಲದ ಶಾಖೆಯ ಮೂಲಕ ದೀರ್ಘ ಅವಧಿಯ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, ಬಿ. ಎ. — ಮ್ಯಾನೇಜಿಂಗ್ ಡೈರೆಕ್ಟರ್.

Licence No. 60.
Licenced to Post without Prepayment

Reg. No. M. 1880.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦ | ತಾರೀಕು ೮-೨-೧೯೫೨ನೇ ಶುಕ್ರವಾರ | ಸಂಚಿಕೆ ೩೪

ಚುನಾವಣಾ ಅನುಭವಗಳು.

ಲೇ:—ಶ್ರೀ ಬಿ. ಡಿ. ಗಣಪತಿ.

Doctrines held in the brain are like bread simply held in the hand. It may be very good bread but it is not doing any body any good. It is the doctrine which is put into practice that feeds the soul, builds up the life and gives strength for all. ಮೆದುಳಿನಲ್ಲಿ ತುಂಬಿಕೊಂಡ ತತ್ವಗಳು ಕಾರ್ಯರೂಪದಲ್ಲಿ ಬಾರದಿದ್ದರೆ ಅವು ಕೈಯ್ಯಲ್ಲಿ ಹಿಡಿದುಕೊಂಡ ರೊಟ್ಟಿಯ ಹಾಗೆ. ರೊಟ್ಟಿ ಅತ್ಯುತ್ತಮವಾಗಿರಬಹುದು. ಅದರಿಂದ ಯಾರಿಗೂ ಪ್ರಯೋಜನವಾಗಲಾರದು. ಆದ್ದರಿಂದ ರೊಟ್ಟಿಯಿಂದ ಪ್ರಯೋಜನವಾಗಬೇಕಾದರೆ ಅದು ಹೊಟ್ಟೆಗೆ ಸೇರಬೇಕು. ಅದೇ ರೀತಿ ತತ್ವಗಳಿಂದ ಹಿತವಾಗಬೇಕಾದರೆ ಅವು ಜಾರಿಯಲ್ಲಿ ಬರಬೇಕು. ತತ್ವಗಳು ಜಾರಿಯಲ್ಲಿ ಬಂದಾಗ ಅವು ಆತ್ಮವನ್ನು ಚೇತನಗೊಳಿಸಿ ಹೊಸ ಜೀವನವನ್ನು ರಚಿಸಿ ಸರ್ವರ ಉದಯಕ್ಕೆ ಕಾರಣವಾಗುವುವು.

ನನ್ನ ವಿದ್ಯಾಭ್ಯಾಸದ ನಂತರದ ಹತ್ತು ವರ್ಷಗಳ ಜೀವನದಲ್ಲಿ ನನ್ನ ಮೆದುಳನ್ನು ಬೆಳೆಸಿಕೊಳ್ಳಲು ಸತತ ಪ್ರಯತ್ನ ಮಾಡಿರುವೆನು. ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸಾಕಷ್ಟು ನಿಷ್ಠೆಯಿಂದ ದುಡಿದಿರುವೆನು. ಆದರೆ ಒಬ್ಬ ವ್ಯಕ್ತಿಯು ಎಷ್ಟೇ ಜ್ಞಾನ ಸಂಪಾದಿಸಿ ಬುದ್ಧಿವಂತನೆನಿಸಿದರೂ ಆತನ ಜ್ಞಾನ, ಆತನು ಸಂಗ್ರಹಿಸಿದ ಒಳ್ಳೆಯ ವಿಚಾರಗಳು ಕಾರ್ಯರೂಪದಲ್ಲಿ ಬಾರದಿದ್ದರೆ ಆ ತತ್ವಗಳಂತೆ ಆತನು ವರ್ತಿಸದಿದ್ದರೆ ತಿಳಿದ ತತ್ವಗಳನ್ನು ಅರಗಿಸಿಕೊಂಡು ಅದರಂತೆ ನಡೆಯದಿದ್ದರೆ ಆತನ ಜ್ಞಾನವು ಕೇವಲ ಕೈಯಲ್ಲಿ ಹಿಡಿದುಕೊಂಡ ರೊಟ್ಟಿಯಂತೆ ಮಾತ್ರ. ಅದರಿಂದ ಯಾರಿಗೂ ಹಿತವಾಗಲಾರದು. ಇದೇ ವಿಚಾರವನ್ನು "ಮೇರುವಿನಷ್ಟು ಮಾತಿಗಿಂಥಾ ಸಾಸಿವೆಯಷ್ಟು ಕೃತಿ ಲೇಸು" ಎಂದು ಹೇಳಿದ್ದಾರೆ.

ಹತ್ತು ವರ್ಷಗಳ ಈ ನನ್ನ ಜೀವನದಲ್ಲಿ ಹಲವು ಅಭಿಪ್ರಾಯಗಳನ್ನು ವ್ಯಕ್ತ ಮಾಡಿದರೂ ಎಲ್ಲವೂ ಆಗದದ ಮೇಲೆ. ಕಾರ್ಯತಃ ಮಾಡಿದ್ದೇನೂ ಇಲ್ಲ. ಇನ್ನೊಬ್ಬರನ್ನು ಟೀಕಿಸುವದು, ಇನ್ನೊಬ್ಬರ ನ್ಯೂನತೆಯನ್ನು ಎತ್ತಿ ಹೇಳುವದು ಇದರಿಂದ ಹೆಚ್ಚಿನ ಪ್ರಯೋಜನವಿಲ್ಲವೆಂಬ ಅರಿವು ನನಗಾಗಿದೆ. ಬೇರೊಬ್ಬರಿಗೆ ಹಿತ ಮಾಡುವದಾದರೆ ಬೋಧನೆ ಮಾಡಿದರಾಗದು. ತಾನು ಆದರ್ಶವಾಗಿ ನಡೆದರೆ ಅದೇ ಪರಿಣಾಮಕಾರಕ ಬೋಧನೆಯಾಗುವದು. ನಮ್ಮ ದೇಶ ಈ ರೀತಿ ಆಗಬೇಕು; ಮಹಾತ್ಮರು ಹೀಗೆ ಹೇಳಿದ್ದಾರೆ. ನಮ್ಮ ಆಡಳಿತ ಹೀಗೆ ನಡೆಯಬೇಕು. ಜನತೆಯ ವರ್ತನೆ ಹೀಗಿರಬೇಕು ಎಂದು ಹೇಳುವ ಕಾಲ ಮುಗಿಯಿತೆಂಬುದು ನನ್ನ ಅಭಿಪ್ರಾಯ. ಹೇಳುವದಕ್ಕಿಂಥಾ ಕಾರ್ಯತಃ ಮಾಡುವದು ಪ್ರತಿಯೊಬ್ಬನ ಧರ್ಮವಾಗಿದೆ! ಈ ದೃಷ್ಟಿಯಿಂದ ಪ್ರದೇಶದ ಹಿತವಾಗಬೇಕಾದರೆ ಉದ್ದುದ ಲೇಖನ ಬರೆಯುವದರಿಂದ ಆಗಲಾರದು. ಪತ್ರಿಕೆಯಲ್ಲಿ ಸರ್ವೋದಯ ತತ್ವ ಕೇಳಿದರಾಗದು. ಇಲ್ಲವೇ ಮಹಾತ್ಮರ ಹೆಸರನ್ನು ಹೇಳಿಕೊಂಡು ತಿರುಗಿದರಾಗದು ಎಂಬ ಕಲ್ಪನೆ ನನಗೆ ಬಂದಿದೆ. ಈ ಕಲ್ಪನೆಯ ಕಾರಣದಿಂದಲೇ ಮಡಿಕೇರಿಯಲ್ಲಿ ಕುಳಿತು ಬರೆಯುತ್ತಿದ್ದದಾಗದು; ಬದಲು ಜನತೆಯ ಒಡನಾಡಿ ಸಾಧ್ಯವಾದ್ದನ್ನು ಕಾರ್ಯತಃ ಮಾಡಿ ತೋರಿಸಬೇಕೆಂದು ನಿರ್ಧರಿಸಿ ರಾಜಕೀಯ ರಂಗಕ್ಕೆ ಪ್ರವೇಶಿಸಿದ್ದಾಗಿದೆ.

ಹಾಗೆನ್ನುವಾಗ ಜನತೆಯ ಹಿತಸಾಧಿಸಿ ಬಿಡುವ ನಂಬಿಗೆ ನನ್ನಲ್ಲಿದೆಯೆಂದು ತಿಳಿಯಲಾಗದು. ನನಗಿಂಥಾ ತ್ಯಾಗಿಗಳು, ಕಾರ್ಯ ಕುಶಲರು, ದೃಢ ವಿಶ್ವಾಸಿಗಳು ಅನೇಕರು ಜಯಶೀಲರಾಗದಿದ್ದಲ್ಲಿ ನಾನು ಜಯಶೀಲನಾಗುವೆನೆಂಬ ವಿಶ್ವಾಸ ನನಗಿಲ್ಲ. ಆದರೆ The men who try to do something and fail are infinitely better than those who try to do nothing and succeed. ಏನಾದರೊಂದನ್ನು ಕಾರ್ಯತಃ ಜಾರಿಗೆ ತರಲು ಯತ್ನಿಸಿ ಸೋಲುವವರು ಏನೊಂದನ್ನೂ ಮಾಡದೆ ಜಯಪಡೆಯುವವರಿಗಿಂತಲೂ ಸಹಸ್ರ ಪಾಲು ಉತ್ತಮರು ಎಂಬ ವಿಶ್ವಾಸದಿಂದ ಸಕ್ರಿಯ ರಾಜಕೀಯಕ್ಕೆ ಇಳಿದುದಾಗಿದೆ. ಈ ಪ್ರಯತ್ನದಲ್ಲಿ ನಾನು ಸೋಲಬಹುದು. ಆದರೆ ಪ್ರಯತ್ನಿಸಿದ ತೃಪ್ತಿಯು ನನಗಿದೆ; ಈ ಪ್ರಯತ್ನದಲ್ಲಿ ದೊರೆಯುವ ಅಮೂಲ್ಯ ಅನುಭವವು ನನ್ನದಾಗಿಯೇ ಉಳಿಯುವದು.

ಮಹಾತ್ಮಾ ಗಾಂಧೀಜಿಯವರ ಗ್ರಾಮ ಆಡಳಿತ ತತ್ವವನ್ನು ಜಾರಿಗೆ ತಂದು ಸರ್ವೋದಯ ಸಮಾಜ ರಚನೆ ಮಾಡುವದು ಒಬ್ಬನಿಂದ ಆಗುವ ಕೆಲಸವಲ್ಲ; ಅದು ಸುಲಭದ ಕೆಲಸವೂ ಅಲ್ಲ. ಗ್ರಾಮವನ್ನು ಕುಟುಂಬವಾಗಿ ಭಾವಿಸಿ ಸರ್ವರೂ ಪರಸ್ಪರ ಹೊಂದಿಕೊಂಡು ಸಹೋದರ ಭಾವದಿಂದ ಜೀವನ ಸಾಗಿಸುವ ಕಲ್ಪನೆಯು ಸುಂದರವಾದುದಾದರೂ ಅದನ್ನು ಜಾರಿಗೆ ತರುವ ಕಾರ್ಯವು ಬಹು ತೊಡಕಿನದು ಎಂದು ನನಗೆ ಗೊತ್ತಿದೆ. ಇಂದಿನ ಸಮಾಜದಲ್ಲಿ ಹಬ್ಬಿರುವ ಸ್ವಾರ್ಥ, ಈರ್ಷೆ, ಅಸೂಯೆ, ಅಸಹನೆಗಳು ಮನುಷ್ಯ ಮನುಷ್ಯರನ್ನು, ಅಣ್ಣತಮ್ಮಂದಿಯರನ್ನೇ ಛಿದ್ರವಿಛಿದ್ರವಾಗಿ ವಿಂಗಡಿಸಿರುವಾಗ ಸರ್ವಸಖ್ಯತೆಯ ವಾತಾವರಣವನ್ನೇರ್ಪಡಿಸುವದು ಸುಲಭದ ಕೆಲಸವಲ್ಲ. ಆದರೆ ಇಂದಿನ ಜಗತ್ತಿನಲ್ಲಿ ಇದಕ್ಕಿಂಥಾ ಉತ್ತಮ ತತ್ವ ಯಾ ಆದರ್ಶ ಬೇರಿಲ್ಲ. ಸತ್ಯಧರ್ಮದ ತಳಹದಿಯಲ್ಲಿ ನಿಂತು, ಪ್ರೇಮದ ಬಂಧನದಿಂದ ಬಿಗಿಯಲ್ಪಟ್ಟು ಬೆಳೆಯಬೇಕಾದ ಈ ಸರ್ವೋದಯ ಸಮಾಜರಚನೆಯು ಉತ್ತಮೋತ್ತಮವೆಂದು ತಿಳಿದ ಮೇಲೆ ಅದಕ್ಕಾಗಿ ಪ್ರಯತ್ನಿಸುವದು ಪ್ರತಿಯೊಬ್ಬನ ಕರ್ತವ್ಯ. ಈ ಕರ್ತವ್ಯದಲ್ಲಿ ಜಯಾಪಜಯಗಳ ಪರಿವೆ ಬೇಕಿಲ್ಲ. ಇಂದು ನಾವು ಜಯಶೀಲರಾಗದಿದ್ದರೂ ಈ ತತ್ವಕ್ಕೆ ಚ್ಯುತಿ ಇಲ್ಲ. ನಾಳೆಯಾದರೂ ಅದು ಬೆಳೆದು ಸರ್ವರ ಉದಯಕ್ಕೆ ಕಾರಣವಾಗಬಹುದು. ಈ ದೃಷ್ಟಿಯಿಂದ ಮಹಾತ್ಮರ ತತ್ವವನ್ನು ಬಾರಿಯಲ್ಲಿ ತರುವ ಪ್ರಯತ್ನಕ್ಕಾಗಿ ಚುನಾವಣೆಗೆ ನಿಲ್ಲುವಂತಾಯಿತು.

ಈ ತತ್ವವನ್ನು ಸಾಧಿಸಲು ಎಂ. ಎಲ್. ಎ ಆಗಬೇಕೆಂದಿಲ್ಲ. ಆದರೆ ಕೊಡಗಿನಲ್ಲಿ ಸರಕಾರಿ ಆಡಳಿತವು ಜನರ ಕೈಗೆ ಬರುತ್ತಿರುವಾಗ ಎಂ. ಎಲ್. ಎ ಆಗದ್ದರೆ ಸರಕಾರದ ಮೂಲಕವಾಗಿಯೇ ಈ ಆಡಳಿತ ಕ್ರಮವನ್ನು ಜಾರಿಗೆ ತರುವ ಯತ್ನ ಮಾಡಬಹುದೆಂಬ ಅಭಿಪ್ರಾಯದಿಂದ ಶಾಸನ ಸಭಾ ಸದಸ್ಯನಾಗಲು ಇಚ್ಛಿಸಿದೆ. ಏಕೆಂದರೆ ಗ್ರಾಮ ಆಡಳಿತ ಯೋಜನೆಯು ತೀರಾ ಜನತೆಯ ಚಳವಳಿವಾದರೂ ಕೂಡ ಇಂಥಾ ಒಂದು ಉನ್ನತ ಸಮಾಜ ರಚನಾ ಕಾರ್ಯದಲ್ಲಿ ಮಹಾತ್ಮಾ ಗಾಂಧಿ, ವಿನೋಬಾ ಮೊದಲಾದವರಿಗೇ ದೊರೆಯಬೇಕಿದ್ದಷ್ಟು ಜಯದೊರೆತಿರುವದಿಲ್ಲ. ಆದ್ದರಿಂದ ಸರಕಾರದ ಅಪ್ರತ್ಯಕ್ಷ ಬೆಂಬಲವಿದ್ದರೆ ಇದು ಸುಲಭ ಸಾಧ್ಯವಾಗಬಹುದೆಂಬ ಭಾವನೆ ನನಗಿತ್ತು. ಔಷಧಿ ಗುಣಕಾರಿಯಾದರೂ ಕಾಯಿಲೆಯವನು ಅದನ್ನು ಕುಡಿಯಲು ಸ್ವಲ್ಪ ಒತ್ತಾಯ ಬೇಕಾಗುವಂತೆ ಈ ಉತ್ತಮ ಕಾರ್ಯಕ್ರಮವು ಸರಕಾರದ ಬೆಂಬಲದಿಂದಲೇ ನಡೆಯುವದು ಹಿತವೆಂದು ನನಗನಿಸಿತ್ತು.

ಕೊಡಗಿನ ರಾಜಕೀಯ ರಂಗದಲ್ಲಿ ಎರಡು ಭಾಗವಾಗಿ ಎರಡು ಪಕ್ಷದ ಅಭ್ಯರ್ಥಿಗಳು ಉಮೇದುವಾರರು ಚುನಾವಣೆಗೆ ನಿಂತರು. ಕಾಂಗ್ರೆಸ್ ಪಕ್ಷವು ಮಹಾತ್ಮರ ಗ್ರಾಮ ಆಡಳಿತ ಯೋಜನೆಗೆ ಆಗ ಸಾಕಷ್ಟು ಬೆಂಬಲ ಕೊಡದ ಕಾರಣವೂ ಮತ್ತು ಕಾಂಗ್ರೆಸ್ಸ ಧಾಷಾವಾರು ಪ್ರಾಂತರಚನಾ ತತ್ವಕ್ಕೆ ಒಪ್ಪಿರುವ ಕಾರಣವೂ ಕಾಂಗ್ರೆಸ್ ಪಕ್ಷದಿಂದ ಉಮೇದುವಾರನಾಗಿ ನಿಲ್ಲುವದು ನನಗೆ ಸಾಧ್ಯವಿರಲಿಲ್ಲ. ಏಕೆಂದರೆ ನಾನು ನಂಬಿದ ಗ್ರಾಮ ಆಡಳಿತ ಯೋಜನೆಯನ್ನು ಪ್ರಥಮ ಬಾರಿಗೆ ಜಾರಿಯಲ್ಲಿ ತರಬೇಕಿದ್ದರೆ ಕೊಡಗಿನಂಥಾ ಚಿಕ್ಕ ಪ್ರದೇಶವು ಪ್ರತ್ಯೇಕವಿರುವದು ಅವಶ್ಯ. ಮೈಸೂರಿಗೋ ಬೇರೆಯಾವುದಾದರೂ ದೊಡ್ಡ ಪ್ರಾಂತ್ಯಕ್ಕೋ ಕೊಡಗು ಸೇರಿಹೋದರೆ ಈ ಕೆಲಸವನ್ನು ಸರಕಾರದ ಬೆಂಬಲದಿಂದ ನಡೆಸುವದು ಅಶಕ್ಯವೆಂದು ನನಗನಿಸಿತ್ತು. ದೊಡ್ಡ ಪ್ರಾಂತ್ಯದ ಶಾಸನ ಸಭೆಯಲ್ಲಿ ಎಲ್ಲರನ್ನೂ ಒಪ್ಪಿಸುವದು ಸುಲಭ ಸಾಧ್ಯವಲ್ಲವೆಂಬುದು ನನಗೆ ತಿಳಿದಿತ್ತು. ಕೊಡಗಿನ ಪ್ರತ್ಯೇಕ ಪಕ್ಷವು ಕೊಡಗನ್ನು ಪ್ರತ್ಯೇಕವಿಟ್ಟು ಕೊಡಗಿನಲ್ಲಿ ಗಾಂಧೀಜಿಯವರ ವಿಕೇಂದ್ರೀಕೃತ ಗ್ರಾಮ ಆಡಳಿತ ಯೋಜನೆಯನ್ನು ಜಾರಿಗೆ ತರುವ ನಿರ್ಧಾರ ಮಾಡಿ ತಮ್ಮ ಚುನಾವಣಾ ಘೋಷಣೆಯಲ್ಲಿ ಅದನ್ನು ಪ್ರಕಟಿಸಿದ ನಂತರ ಅವರೊಡನೆ ಸೇರಿ ನನ್ನ ಗುರಿಗಾಗಿ ದುಡಿಯಲು ನಿಶ್ಚಯಿಸಿದೆನು. ಏಕೆಂದರೆ ಕೆಲವರು ಸೂಚಿಸಿದಂತೆ ಸ್ವತಂತ್ರವಾಗಿ ನಿಂತು ಒಂದು ವೇಳೆ ಆರಿಸಿ ಬಂದಿದ್ದರೂ ಶಾಸನ ಸಭೆಯ ಇತರ ಸದಸ್ಯರ ಬೆಂಬಲವಿಲ್ಲದೆ ಏನೂ ಸಾಧಿಸುವಂತಿರಲಿಲ್ಲ.

ಆದರೆ ಈ ನನ್ನ ನಿರ್ಧಾರವೇ ಅನೇಕ ಮತದಾರರಿಗೆ ವಿರೋಧ ತೋರಿದೆಯೆಂದು ನನಗೆ ತಿಳಿಯಿತು. "ನೀವು ಪ್ರತ್ಯೇಕ ಪಕ್ಷವನ್ನು ಬಿಟ್ಟು ಬಂದರೆ ನಿಮಗೆ ನಮ್ಮ ಓಟು" ಎಂದು ಮತದಾರರಲ್ಲಿ ಹಲವರು ಹೇಳತೊಡಗಿದರು! ಪೊನ್ನಂಪೇಟೆ ಕ್ಷೇತ್ರದ ಮತದಾರರಲ್ಲಿ ಹಲವರು ಈ ಅಭಿಪ್ರಾಯ ವ್ಯಕ್ತಮಾಡಲು ಕಾರಣವೇನೆಂದು ನಾನು ಪರಿಶೀಲಿಸಿದ್ದೇನೆ. ಇದಕ್ಕೆ ಹಲವಾರು ಕಾರಣಗಳು ದೊರಕಿವೆ. ಅವುಗಳಲ್ಲಿ ಕೆಲವನ್ನು ಹೇಳುವದು ಸೂಕ್ತ. ಈ ನಾಡಿನವರಲ್ಲಿ "ಮೇಂದಲೆ" ನಾಡಿನವರು ತಮ್ಮ ಮೇಲೆ ಅಧಿಕಾರ ಚಲಾಯಿಸಿದ್ದಾರೆ ಈಗಲೂ ಅವರು ದಬ್ಬಾಳಿಕೆ ನಡೆಸುತ್ತಿದ್ದಾರೆ. ಆದ್ದರಿಂದ 'ಮೇಂದಲೆ' ನಾಡಿನವರಾದ ಶ್ರೀ ಪಿ. ಐ. ಬೆಳ್ಯಪ್ಪ, ಕೆ. ಟಿ. ಉತ್ತಪ್ಪ ಮೊದಲಾದವರ ಮುಂದಾಳತನವನ್ನು ಒಪ್ಪಬಾರದು. ಬದಲು ಕಿಗ್ಗಟ್ಟನಾಡಿನವರಾದ ಶ್ರೀ ಪೂಣಚ್ಚನವರ ಮುಂದಾಳತನವು ಯೋಗ್ಯವೆಂಬ ಭಾವನೆ ಇದ್ದಂತೆ ನನಗೆ ತೋರಿತು. ಆದ್ದರಿಂದ ಪ್ರತ್ಯೇಕ ಪಕ್ಷದಲ್ಲಿ ಚುನಾವಣೆಗೆ ನಿಂತ ನಾನು "ಶ್ರೀ. ಪಿ. ಐ. ಬೆಳ್ಯಪ್ಪನವರ ಜೇಬಿನಲ್ಲಿರುವವ" ನೆಂದು ತೀರ್ಮಾನಿಸಿಬಿಟ್ಟರು. ಈ ಕಾರಣ ನಾನು ಹೇಳಿದ ತತ್ವ, ನಾನು ಚುನಾವಣೆಗೆ ನಿಂತ ಗುರಿಯ ವಿಚಾರ ಹೆಚ್ಚಾಗಿ ಮತದಾರರು ಆಲೋಚಿಸಲಿಲ್ಲ. ಏಕೆಂದರೆ ನಾನು ನಾಳೆಯ ಸುಂದರ ಸ

ಪ್ರೌಢದ ಕಲ್ಪನೆಯನ್ನು ಚಿತ್ರಿಸಿದರೂ ಜನತೆಯು ನಿನ್ನೆಯ ಅನುಭವದ ಅಳತೆಗೋಲಿನಿಂದ ಪ್ರತ್ಯೇಕ ಪಕ್ಷವನ್ನು ಅಳೆಯ ತೊಡಗಿದರು. ಕೊಡಗಿನಂಥಾ ಚಿಕ್ಕ ಪ್ರದೇಶದಲ್ಲಿ "ಮೇಂದಲೆ" "ಕಿಗ್ಗಟ್ಟು" ಭಾವನೆಯು ಬಂದದ್ದು ದುಃಖದ ವಿಚಾರ. ಉತ್ತರ ಕೊಡಗಿನಿಂದ ಚುನಾವಣಾ ಪ್ರಚಾರಕ್ಕೆಂದು ಪೊನ್ನಂಪೇಟೆ ನಾಡಿಗೆ ಬಂದಿದ್ದ ಹಳೆಯ ರಾಜಕೀಯ ಕೆಲಸಗಾರರನ್ನು ಕುರಿತು ಒಬ್ಬರು ಹೀಗೆ ಹೇಳುವವರು. "ನಾವು ದಕ್ಷಿಣ ಕೊಡಗಿನವರು ಏನೂ ತಿಳಿಯದ ಮೂಢರೆಂದು ಉಪದೇಶ ಮಾಡಲು ಬಂದಿರುವಿರಾ? ಸಾಕು ನಿಮ್ಮ ಉಪದೇಶ. ಇನ್ನಾದರೂ ನಮ್ಮ ಮೇಲೆ ದಬ್ಬಾಳಿಕೆ ನಡೆಸುವ ಆಸೆ ನಿಮಗಿರಬಹುದು. ಆದರೆ ನಮಗೆ ತಿಳಿದಿದೆ" ಈ ಮಾತನು, ಹೇಳುವಾಗ ದುಃಖವಾಗುತ್ತದೆ. ಇಂಥಾ ಒಂದು ಚಿಕ್ಕದೃಷ್ಟಿ ಬೆಳೆಯಲು ಕೆಲವು ಪಂಗಡದೃಷ್ಟಿಯು ಇಲ್ಲದ ಹಾಗೂ ಅಧಿಕಾರ ಲಾಲಸೆಯ ಮುಂದಾಳುಗಳ ಅಪಪ್ರಚಾರವೇ ಕಾರಣ. ಆದರೆ ಅಂದಿನ ಆ ಅಪಪ್ರಚಾರದ ಫಲವನ್ನು ಇಂದು ನಾವು ಉಣ್ಣಬೇಕಾಗಿ ಬಂದಿದೆ. ಇದೇ ರೀತಿ ಹಲವೆಡೆ ಕೋಮುವಾರು ಭಾವನೆಯೂ ಉದ್ರೇಕಗೊಂಡಿದೆ. "ಕೊಡಗರ ಸೊಕ್ಕು ಮುರಿಯಬೇಕು" ಎಂಬ ಮಾತು ಹಲವೆಡೆ ಕೇಳಬಂದಿದೆ. ಇದು ನಿಜವಾಗಿಯೂ ಕಾಳಜಿ ತರುವ ವಿಚಾರ. ಅದು ಕಾಂಗ್ರೆಸ್ ಪಕ್ಷವೇ ಇರಲಿ, ಪ್ರತ್ಯೇಕ ಪಕ್ಷವೇ ಇರಲಿ ಆ ಪಕ್ಷಗಳಲ್ಲಿ ಮುಂದಾಳುಗಳಾಗಿ ನಿಂತ ಹಲವರು ತಮ್ಮ ಜಯದ ಆಸೆಯಿಂದ ಸಂದರ್ಭ ದೊರೆತಲ್ಲಿ ತಮಗೆ ಅನುಕೂಲವಾಗುವ ಅಪಪ್ರಚಾರ ಮಾಡಿದ್ದಾರೆ. ಕೆಲವೆಡೆ ಜಾತೀಯವಾದವನ್ನು ಹಬ್ಬಿಸಿದ್ದಾರೆ. ಕೆಲವೆಡೆ ಅಧಿಕಾರದ ಆಸೆಯನ್ನು ಬಿತ್ತಿದ್ದಾರೆ. ಈ ರೀತಿ ವಿವಿಧ ವಿಷ ಬೀಜಗಳಿಂದಾಗಿ ಕೊಡಗಿನ ರಾಜಕೀಯ ರಂಗವು ಕಲುಷಿತವಾಗಿರುವದು ದುಃಖದ ವಿಷಯ. ಇನ್ನಾದರೂ ಸಾರ್ವಜನಿಕ ಜವಾಬ್ದಾರಿ ಹೊತ್ತ ಮುಂದಾಳುಗಳು ಎಚ್ಚರದಿಂದ ವರ್ತಿಸದಿದ್ದರೆ ಅನಾಹುತವಾಗದಿರದು.

ಪ್ರತ್ಯೇಕ ಪಕ್ಷದವರೆಲ್ಲರೂ ಒಂದೇ ಕಂಠದಿಂದ ಕೊಡಗು ಪ್ರತ್ಯೇಕವಿರಬೇಕೆನ್ನುವದು ಗಾಂಧೀಜಿಯವರ ಗ್ರಾಮ ಆಡಳಿತ ಯೋಜನೆಯನ್ನು ಜಾರಿಗೆ ತರಲಿಕ್ಕಾಗಿ ಎಂಬ ಪ್ರಚಾರ ಮಾಡಿದ್ದರೆ ಪಕ್ಷದ ಗುರಿಯು ಸ್ಪಷ್ಟವಾಗುತ್ತಿತ್ತೇನೋ. ಬದಲು ಪ್ರತ್ಯೇಕವಾದಿಗಳಲ್ಲಿ ಕೆಲವರು ಚಿಕ್ಕ ದೃಷ್ಟಿಯವರಿದ್ದಿರಬೇಕು. ಕೊಡಗು ಪ್ರತ್ಯೇಕವಿರಬೇಕಾದುದು ಕೊಡಗಿನವರ ಸುಖಕ್ಕಾಗಿ ಎಂಬ ಅಭಿಪ್ರಾಯದವರು ಹಲವರು ಇದ್ದಿರಬೇಕು. ಆದ್ದರಿಂದ ಒಕ್ಕೊರಲಿನ ವಾದದ ಬದಲು ಹಲವು ಕೊರಳಿನ ನಾದ ಹುಟ್ಟಿದ್ದರಿಂದ ಜನತೆಗೂ ತಪ್ಪಾಭಿಪ್ರಾಯವಾಗಿರಬೇಕು.

People remember a lie ten years when they forget the truth in ten minutes ಜನತೆ ಒಂದು ಸುಳ್ಳನ್ನು ಹತ್ತು ವರ್ಷ ಮನಸ್ಸಿನಲ್ಲಿಟ್ಟಿರುತ್ತದೆ. ಆದರೆ ಸತ್ಯವನ್ನು ಹತ್ತು ನಿಮಿಷಗಳಲ್ಲಿ ಮರೆಯುತ್ತದೆ. ಎಂಬ ಮಾತಿನ ಸತ್ಯತೆ ಈ ಚುನಾವಣೆಯಲ್ಲಿ ಮಾರ್ಮಿಕವಾಗಿ ಗೋಚರವಾಯಿತು. ಶ್ರೀ ಕೆ. ಪಿ. ಉತ್ತಪ್ಪನವರು ತಮ್ಮ ಅಧಿಕಾರವಧಿಯಲ್ಲಿ ಮಾಡಿದ ಕಾರ್ಯದಿಂದ ನೊಂದವರು ಅದನ್ನು ಮರುವಿನಷ್ಟು ಮಾಡಿ ಸೇಡು ತೀರಿಸುವ ಮನೋಭಾವದಿಂದ ದುಡಿದ ಉದಾಹರಣೆ ಇದೆ. ಆದರೆ ಅವರಿಂದ ಲಾಭ ಪಡೆದವರು ಅಷ್ಟೇ ಆಸ್ಥೆಯಿಂದ ಯತ್ನಿಸಿಲ್ಲ. ಜನರು ಅವರು ಯಾವ ಸತ್ಕಾರ್ಯಕ್ಕಾಗಿ ಪ್ರಯತ್ನಿಸುತ್ತಿದ್ದಾರೆಂಬುದನ್ನು ಪರಿಶೀಲಿಸಿದ್ದು ಕಡಿಮೆ. ಬದಲು ಹಿಂದೆ ಅವರು ಯಾವ ಅನ್ಯಾಯ ಮಾಡಿದ್ದಾರೆಂಬುದರ ಮೇಲೆಯೇ ಅವರಿಗೆ ಓಟು ಕೊಟ್ಟರೆಂತೆ ತೋರುತ್ತದೆ!

ಕೊಡಗಿನ ಈ ಚುನಾವಣೆಯ ಕಾಲಕ್ಕೆ ಹಲವರು ಧಾರ್ಮಿಕ ಭಾವನೆ, ವಿಶ್ವಾಸಗಳನ್ನು ರಾಜಕೀಯದಲ್ಲಿ ತುಂಬಿದ್ದರು. "ಕೆಲವರು ಕಾವೇರಿ ಮಾತೆಯನ್ನು ಮಾರಲು ಹೊರಟಿದ್ದಾರೆ" ಎಂದು ಒಂದು ಮಾತಾದರೆ "ಕಾವೇರಮ್ಮ ಇದ್ದರೆ ಪ್ರತ್ಯೇಕ ಪಕ್ಷ ಗೆಲ್ಲದಿರುವದೇ?" ಎಂದು ಇನ್ನೊಂದು ಮಾತೂ ಇತ್ತು. ಮನುಷ್ಯ ಮನುಷ್ಯರೊಳಗಿನ ಈ ರಾಜಕೀಯದಲ್ಲಿ ದೇವರ ಪಕ್ಷದ ಪುಷ್ಟಿಯೇ! ಮತ ಧರ್ಮದ ಕ್ಷೇತ್ರ ವ್ಯಕ್ತಿಗತವಾದದು, ರಾಜಕೀಯ ಕ್ಷೇತ್ರ ಸಾರ್ವಜನಿಕವಾದುದು. ರಾಜಕೀಯದಲ್ಲಿ ಅನ್ಯಾಯ ಮಾಡಿದವರಿಗೆ ಶಿಕ್ಷೆಯನ್ನು ದೇವರು ಕೊಡಬೇಕೆಂದು ಪ್ರಾರ್ಥಿಸಿದರೆ ಅರ್ಥವೇನು? ಕೊಡಗಿನ ವಿಲೀನೀಕರಣವು ಕೊಡಗಿನವರಿಗೆ ಅಹಿತವಾದರೆ ಇತರರಿಗೆ ಹಿತವಾಗುವದಿಲ್ಲವೇ? ಹಾಗಾದರೆ ಸರ್ವ ಜಗತ್ತಿನ ಜನರನ್ನ ಏಕದೃಷ್ಟಿಯಿಂದ ನೋಡಬೇಕಾದ ದೇವರು ಯಾ ಕಾವೇರಿ ಮಾತೆಯು ಕೊಡಗಿನವರಿಗೆ ಮಾತ್ರ ಹಿತಮಾಡಬೇಕೆ? ಕೊಡಗಿನ ಹೊರಗಿರುವವರು ಕೊಡಗಿನವರಂತೆ ದೇವರ ಮಕ್ಕಳಲ್ಲವೇ? ಇಂದಿನ ರಾಜಕೀಯದಲ್ಲಿ ದೇವರ ಹೆಸರಿಗೆ ಸ್ಥಾನವಿಲ್ಲ It never rains on the unjust if he can get hold of an umbrella belonging to the just. ನ್ಯಾಯದಿಂದ ನಡೆಯುವವನ ಕೊಡೆಯನ್ನು ಅಪಹರಿಸಿ ಅನ್ಯಾಯ ಮಾಡುವವನು ಹಿಡಿದು ಕೊಂಡರೂ ಆ ಕೊಡೆಯು ಮಳೆಯಿಂದ ಆತನನ್ನು ರಕ್ಷಿಸದೇ? ಆದ್ದರಿಂದ ಪ್ರತಿಯೊಬ್ಬನೂ ದೇವರಂತೆ ವರ್ತಿಸಬೇಕೆಂದು ಅತಿಶಯವು ತಪ್ಪು. ಆದರೆ ಪ್ರತಿಯೊಬ್ಬನೂ ದೇವರ ಅಂಶವೆಂಬುದನ್ನು ಅರಿಯುವದು ಮಾತ್ರ ಧರ್ಮವಾಗಿದೆ. ಆದ್ದರಿಂದಲೇ—

'ಆದಮ್ ಕೋ ಖುದಾ ಮತ್ ಕಹೋ
ಆದಮ್ ಖುದಾ ನಹೀಂ
ಲೇಕಿನ್ ಖುದಾಕೆ ನೂರ್‌ಸೆ
ಆದಮ್ ಜುದಾ ನಹೀ" ಎಂದು

ಬಲ್ಲವರು ಹೇಳಿದ್ದಾರೆ.

ಚುನಾವಣಾ ಪ್ರಚಾರ ಸಭೆಗಳಲ್ಲಿ ಮನೋರಂಜನೆಯೂ ಇತ್ತು. ಅಪಪ್ರಚಾರಗಳೂ, ಅನಾವಶ್ಯಕ ಟೀಕೆಗಳೂ, ವ್ಯಕ್ತಿದೂಷಣೆಗಳೂ ತುಂಬಾ ಇದ್ದವು. ದೇಶದ ರಾಜಕೀಯದಲ್ಲಿ ಬಿಸಿ ಏರಿ ಇಡೀ ವಾತಾವರಣವೇ ವಿದ್ಯುತ್ ಪ್ರವಾಹದಲ್ಲಿ ಅದ್ದಿದಂತಿರುವಾಗ ಅಲ್ಪಸ್ವಲ್ಪ ನ್ಯೂನತೆಗಳು ಬಂದರೂ ಸಹಿಸಬಹುದು. ಆದರೆ ಪೂರ್ಣ ಪ್ರಚಾರವನ್ನು ಸುಳ್ಳಿನ ಕಂತೆಗಳ ಮೇಲೂ, ಇಲ್ಲದ ಬೊಂಕೆಗಳ ಮೇಲೂ ನಿಲ್ಲಿಸಿ ಬಾಯ್ಬಡಿದರೆ ಮತದಾರರನ್ನು ನೆನೆದು ವಿಷಾದಪಡಬೇಕಾಗುತ್ತದೆ. ದೊಡ್ಡ ದೊಡ್ಡ ಗ್ರಂಥಗಳನ್ನು ಅದೂ ಇಂಗ್ಲಿಸಿನಲ್ಲಿ ಓದಿದರೆ ಸಹಿಹಾಕಲು ಬಾರದ ಮತದಾರನ ಗತಿ ಏನಾಗಿರಬೇಕು!

In the Election game how you played is important and your score is secondary ಚುನಾವಣೆಯ ಈ ಆಟದಲ್ಲಿ ಆಟವನ್ನು ಹೇಗೆ ಆಡಿದೆವೆಂಬುದು ಪ್ರಾಮುಖ್ಯವಲ್ಲದೆ ಜಯವು ಪ್ರಾಮುಖ್ಯವಲ್ಲವೆಂಬ ಕಲ್ಪನೆ ಇದ್ದವರು ವಿರಳ. ಜಯವೇ ಸರ್ವಸ್ವವೆಂದು ಪಕ್ಷಗಳು ಭಾವಿಸಿ ಇಲ್ಲದ ಅಡ್ಡದಾರಿಯಿಂದ ಗುರಿಯನ್ನು ಸೇರಲು ಯತ್ನಿಸಿ ಜಯಶಾಲಿಗಳಾಗಿದ್ದರೂ ಅಂಥಾ ಜಯ ಚಿರಕಾಲ ಬಾಳುವಂಥಾದಲ್ಲ. ಸತ್ಯದ ತಳಹದಿಯಲ್ಲಿ ನಿಲ್ಲದ ಜಯವು ಜಯವೆನಿಸದು. ಆದ್ದರಿಂದಲೇ Keep you face allways towards the sunshine of truth and the shadows must naturally fall behind. ಸತ್ಯದ ಕಡೆ ಮುಖಮಾಡಿ ಆ ಬೆಳಕಿನಲ್ಲಿ ನಡೆದುದಾದರೆ ಸ್ವಾಭಾವಿಕವಾಗಿ ಅಸತ್ಯವೆಂಬ ನೆಳಲು ಬೆನ್ನಿಗೆ ಬೀಳಲೇ ಬೇಕು.

ಚುನಾವಣಾ ಪ್ರಚಾರದ ಕಾಲಕ್ಕೆ ವ್ಯಕ್ತಿದೂಷಣೆ ತುಂಬಾ ನಡೆಯಿತು. ಈ ಪ್ರಪಂಚದಲ್ಲಿ ನ್ಯೂನತೆ ಇಲ್ಲದ ವ್ಯಕ್ತಿ ಯಾರೂ ಇರಲಾರರು. ಹಾಗಿರುವಾಗ ಇನ್ನೊಬ್ಬನನ್ನು ದೂಷಿಸುವದು ಸರಿಯಲ್ಲ. ಒಬ್ಬಾತನ ತಪ್ಪು ಹತ್ತು ಜನರಿಗೆ ಗೊತ್ತಾಗಿದೆಯೆಂದಾಕ್ಷಣ ಆತನು ಹಾಳಲ್ಲ, ತನ್ನ ತಪ್ಪು ಯಾರಿಗೂ ತಿಳಿದಿಲ್ಲವಾದ್ದರಿಂದ ಯಾರೂ ಸಾಚಾಗನಲ್ಲ. ಆದ್ದರಿಂದ ಇಂದಿನ ರಾಜಕೀಯದಲ್ಲಿ ಹೋರಾಡುತ್ತಿರುವ ನಾವಾರೂ ಪರಿಪೂರ್ಣರಲ್ಲ. Every house has its black spot ಪ್ರತಿ ಮನೆಗೂ ಅದರದರ ನ್ಯೂನತೆ ಇದ್ದೇ ಇದೆ. ಆದರೆ ಅವನ್ನು ಮರೆತು ತಾವು ಪರಿಪೂರ್ಣರಂತೆ ವರ್ತಿಸಿದವರೇ ಹೆಚ್ಚು. Remember when you point an accusing finger at some one you have three fingers pointing back at yourself ಎಂಬಂತೆ ಇನ್ನೊಬ್ಬನನ್ನು ಟೀಕಿಸಲು ನಾವು ಬೆರಳೆತ್ತಿ 'ನೀನು' ಎಂದಾಗ ಮೂರು ಬೆರಳುಗಳು ನಮ್ಮೆಡೆಗೆ ಗುರಿಯಿಟ್ಟು ನಮ್ಮನ್ನು "ನೀನು" ಎಂದು ಎಚ್ಚರಿಸುವದನ್ನು ಯಾರೂ ಮರೆಯಬಾರದು. ನಮ್ಮ ರಾಜಕೀಯದಲ್ಲಿ ಈ ಆತ್ಮಶೋಧನೆಯ ಅಭಾವವಿತ್ತು. ನಾವು ರಾಜಕೀಯ ರಂಗದಲ್ಲೇ ಇರಲಿ, ಬೇರೆಲ್ಲಿಯೇ ಇರಲಿ ನಾವು ಮನುಷ್ಯರೆಂಬುದನ್ನು ಮರೆಯಲಾಗುವದೇ? ಮನುಷ್ಯನಾಗಿ ಹುಟ್ಟಿದವನಿಗೂ ಒಂದು ಕರ್ತವ್ಯವಿದೆ. ಸತ್ಯ, ಧರ್ಮದ ಕೊಲೆ ಮಾಡಿ, ನ್ಯಾಯ ನೀತಿಗಳನ್ನು ದೂರತಳ್ಳಿ ಬದುಕಿದ್ದೇ ಬಂತೆಂದು ಎರಡು ದಿನ ಜೀವಿಸುವದಾದರೆ ಮನುಷ್ಯನಿಗೂ ಪ್ರಾಣಿಗಳಿಗೂ ವ್ಯತ್ಯಾಸವೆಲ್ಲಿ? ಆದ್ದರಿಂದಲೇ ಒಬ್ಬ ಕವಿ ಹೇಳಿದ್ದಾನೆ-The true fulfilling of your heavenly calling is the doing of earthly things in a heavenly manner ನಾವು ಈ ಲೋಕದಲ್ಲಿ ಜನಿಸಿದ ಸ್ವರ್ಗೀಯ ಸಂಕಲ್ಪವನ್ನು ಸಾಧಿಸುವದಾದರೆ ಐಹಿಕವಾದ ಕಾರ್ಯಗಳನ್ನು ಸ್ವರ್ಗೀಯ ರೀತಿಯಿಂದ ನಡೆಸುವದಾಗಿದೆ. ನಾವು ಎಲ್ಲರೂ ಪಾವನರಲ್ಲ ಸ್ವಾರ್ಥತೆ ಇದೆ; ಆದರೆ ಅದಕ್ಕೊಂದು ಮಿತಿಬೇಕು. ಇನ್ನೊಬ್ಬನನ್ನು ಅಳೆಯ ತೊಡಗಿದರೆ ತನ್ನನ್ನು ಮೊದಲು ಅಳೆದು ತೂಗಿಕೊಂಡಿರಬೇಕು! ಈ ರೀತಿಯ ಭಾವನೆಯೂ ನಮ್ಮ ಹಲವು ಪ್ರಚಾರಕರಲ್ಲಿಯೂ ಮುಂದಾಳುಗಳಲ್ಲಿಯೂ ಇಲ್ಲದ ಕಾರಣ ನಮ್ಮ ರಾಜಕೀಯವು ಜಾತೀಯವಾದಕ್ಕೂ, ಅಹಿತ ಬೋಧನೆಗೂ ಬಲಿಬೀಳಬೇಕಾಯಿತು.

ಒಂದೆಡೆ ಗೆಳೆಯರೊಬ್ಬರು ನನಗೆ ಈ ಪ್ರಶ್ನೆ ಹಾಕಿದರು. 'ನೀವು ಸಾಹಿತಿಗಳು. ನೀವು ರಾಜಾಸೀಟಿನ ಸುಂದರ ದೃಶ್ಯಗಳನ್ನೂ, ಕೊಡಗಿನ ನಿಸರ್ಗ ಸೌಂದರ್ಯವನ್ನೂ ನೋಡುತ್ತಿರದೆ, ನಿಮ್ಮ ಭಾವನೆ ಕಲ್ಪನೆಗಳನ್ನು ಬರೆಯುತ್ತಿರದೆ ಸಕ್ರಿಯ ರಾಜಕೀಯಕ್ಕೆ ಏಕೆ ಇಳಿದಿರಿ? ಸಾಹಿತ್ಯಕ್ಕೂ ರಾಜಕೀಯಕ್ಕೂ ಸಂಬಂಧವೇನು?' ನನ್ನ ಗೆಳೆಯರ ಈ ಪ್ರಶ್ನೆಗೆ ಅರ್ಥವಿದೆ. ಏಕೆಂದರೆ ಇಂದು ರಾಜಕೀಯವು ಒಂದು ಕಲೆಯಂತಿಲ್ಲ. ಅದರಲ್ಲಿ ಸೌಂದರ್ಯವಿಲ್ಲ. Politics is the last resort of a scoundrel ರಾಜಕೀಯವು ತತ್ವನೀತಿ ಇಲ್ಲದವನ ಕಡೆಯ ಆಶ್ರಯಸ್ಥಾನವಾಗಿದೆ. ರಾಜಕೀಯದಲ್ಲಿ ನ್ಯಾಯ, ನೀತಿ, ಉತ್ತಮ ಆದರ್ಶಗಳಿಗೆ ಎಡೆ ಇಲ್ಲದಾಗಿದೆ. ಒಂದು ವಸ್ತುವು ಕಲಾಪೂರ್ಣವಾದುದೆಂದು ಹೇಳಬೇಕಾದರೆ ಅದರಲ್ಲಿ ನೈಜತೆಬೇಕು; ಸತ್ಯಬೇಕು, ಹೊಸ ಸಂದೇಶಬೇಕು. ಉತ್ತಮ ಭಾವನೆಯನ್ನೂ ಪ್ರಚೋದಿಸುವಂತಿರಬೇಕು. ಆದರೆ ಇಂದಿನ ರಾಜಕೀಯದಲ್ಲಿ ಇದಾವುದೂ ಇಲ್ಲ. ಆದ್ದರಿಂದ ರಾಜಕೀಯಕ್ಕೆ ಒಬ್ಬ ಸಾಹಿತಿಯು, ಒಬ್ಬ ಕಲಾಪ್ರೇಮಿಯು ಇಳಿಯಬಾರದೆಂಬ ನನ್ನ ಗೆಳೆಯರ ಮಾತಿನಲ್ಲಿ ತಿರುಳಿದೆ. ರಾಜಕೀಯದಲ್ಲಿ ಸತ್ಯ, ಪ್ರೇಮ, ಮೌಲ್ಯಗಳನ್ನು ಉಪಯೋಗಿಸದಿದ್ದರೆ ಅದನು ಮೇಲೇರಲಾರದೆಂಬುವರಲ್ಲಿ ಸ್ವಲ್ಪ ಸತ್ಯಾಂಶವಿದೆ. ಆದರೆ ಸಾಹಿತಿಯು ಇಂದಿನ ಪ್ರಪಂಚದಲ್ಲಿ ಮರೆಯಾಗಿಯೇ ಕುಳಿತು ಕನಸು ಕಾಣುತ್ತಿದ್ದರೆ ಸಾಲದು. ಅಪ್ರತಿಮ ಸಾಹಿತಿಗಳೆನಿಸಿದ ಸರೋಜಿನಿದೇವಿ, ಪಂಡಿತ ನೆಹರೂ ಮೊದಲಾದವರು ಸಾಹಿತ್ಯವನ್ನು ರಾಜಕೀಯಕ್ಕಾಗಿ ತ್ಯಜಿಸಿದ್ದಾರೆ. ಹಾಗೆಂದಾಗ ಸಾಹಿತ್ಯಕ್ಕಾಗಲೀ ಕಲೆಗಾಗಲೀ ಬೆಲೆ ಇಲ್ಲವೆಂದಲ್ಲ. ಮಹಾತ್ಮಗಾಂಧೀಜಿಯವರು ಹೇಳಿದಂತೆ Life is greater than all art and

literature. True Art can only be expressed not through inanimate things but by the living touch of the hands of men and women. ಎಲ್ಲಾ ಕಲೆ ಸಾಹಿತ್ಯಗಳಿಗಿಂತ ಜೀವನವು ದೊಡ್ಡದು. ಜೀವಂತವಿರುವ ಮಾನವ ಗಣದ ನಡುವಿನಲ್ಲಿ ದುಡಿಯುವ, ಬದುಕುವ ಕಲೆಗಿಂತ ಹಿರಿದಾದ ಕಲೆ ಬೇರಿಲ್ಲದಿರದು. ಜಡವಾದ ಪುಸ್ತಕದೊಳಗಿನ ಸಾಹಿತ್ಯಕ್ಕಿಂತ ಚೇತನಾಯುಕ್ತವಾದ ಪ್ರತ್ಯಕ್ಷ ಮಾತು ಕೃತಿಗಳು ಸಹಸ್ರ ಪಾಲು ಹೆಚ್ಚಿನವು. ಅಸ್ತರಿಂಗ್—

'ಸುಂದರ ನೋಟದ ಕಂಪು ಗುಲಾಬಿಯೆ,
ಕವಿಗಳ ಗುಂಡಿಯಲ್ಲ.
ಬಾರದೆ ಸೋದರ ವರ್ಗದ ನೆರವಿಗೆ
ಕಲೆಗದು ತಿರುಳಿಲ್ಲ' ಎಂಬಂತೆ

ಪ್ರತ್ಯಕ್ಷ ಮಾನವ ಸಮಾಜದಲ್ಲಿ ಕಾಯಕತಃ ಬದುಕುವ, ದುಡಿಯುವ ಸೇವೆ ಸಲ್ಲಿಸುವ ಸಹಜ ಕಲೆಯೇ ಎಲ್ಲಾ ಕಲೆಗಳಿಗಿಂತ ಮಿಗಿಲಾದುದು. ಇದೇ ವಿಚಾರವನ್ನು ಪ್ರಸಿದ್ಧ ಇಂಗ್ಲಿಷ್ ಲೇಖಕರಾದ ಸೋಮರ್‌ಸೆಟ್ ಮಾಮ್‌ರವರು ತಮ್ಮ ಅಮರ ಕೃತಿ 'ರೇಜರ್ಸ್ ಎಡ್ಜ್'ನಲ್ಲಿ ಹೇಳಿದ್ದಾರೆ. ಪುಸ್ತಕದ ಜ್ಞಾನದಿಂದ ಮೆದುಳು ಬೆಳೆಯಬಹುದು. ಆದರೆ ಜನತೆಯೊಡನೆ ಮಿಳಿತರಾಗಿ ಅವರ ಕಷ್ಟ ಸುಖಗಳಲ್ಲಿ ಭಾಗಿ ಆಗುವವರಿಂದ ಹೃದಯ ಬೆಳೆಯುತ್ತದೆ. ತಲೆ ಬೆಳೆದಂತೆ ಅದಕ್ಕನುಸಾರವಾಗಿ ಹೃದಯ ಬೆಳೆಯದಿದ್ದರೆ ವ್ಯಕ್ತಿಯ ಬೆಳವಣಿಗೆ ಸಂಪೂರ್ಣವಾಗದು. ಆದ್ದರಿಂದ ಜ್ಞಾನ ಪಡೆದವರು ಪ್ರತ್ಯಕ್ಷ ಕಾರ್ಯ ಮಾಡುವವರೂ ಆಗಬೇಕು.

ಇದೆಲ್ಲಾ ಚುನಾವಣೆಯಲ್ಲಿ ಸೋತು ಹೋದುದಕ್ಕೆ ಇಲ್ಲದ ವೇದಾಂತವೆಂದು ಕೆಲವರು ಹೇಳಬಹುದು. ನನಗೆ ಚುನಾವಣೆಯಲ್ಲಿ ಸೋಲಾದರೂ ನಾನು ನಂಬಿದ ತತ್ವಕ್ಕೆ ಸೋಲಾಗಲಿಲ್ಲ. ನನ್ನ ತತ್ವವನ್ನು ಸರಿಯಾಗಿ ಜಾರಿಯಲ್ಲಿ ತರಲು ನಾನು ಸಮರ್ಥನಾಗಲಿಕ್ಕಿಲ್ಲ. ಆದರೆ Ideals are like stars. You will not succeed in touching them. But like the Sea faring men in the desert of waters you choose them as yours guides and following them you reach you destiny ತತ್ವಗಳು ಆಕಾಶದ ನಕ್ಷತ್ರಗಳಂತೆ. ಅವುಗಳನ್ನು ಮುಟ್ಟಿ ಕರಗತಮಾಡಿಕೊಳ್ಳಲಾಗುವದಿಲ್ಲ. ಆದರೆ ನೀರಿನ ಮರುಭೂಮಿಯಲ್ಲಿ ಸಂಚರಿಸುವ ನಾವಿಕರು ಆ ನಕ್ಷತ್ರಗಳ ಕಡೆಗೆ ಕಣ್ಣಿಟ್ಟು ಆ ಕಡೆ ಗುರಿಯಿಟ್ಟು ನಡೆಸುವ ದಾರಿಯಂತೆ ಉತ್ತಮವಾದ ತತ್ವವನ್ನು ತಿಳಿದು ಅದನ್ನು ಸಾಧಿಸುವ ಗುರಿ ಇಟ್ಟು ಈ ಮಾನವ ಸಾಗರದಲ್ಲಿ ನಡೆಯುವದು ಪ್ರತಿಯೊಬ್ಬನ ಕರ್ತವ್ಯ.

ಆದರೆ ಒಂದು ವಿಚಾರ ಮಾತ್ರ ಸ್ಪಷ್ಟವಾಗಿ ಬರೆಯಬೇಕು. ರಾಜಕೀಯ ಮುಂದಾಳುಗಳಾದವರಲ್ಲಿ ಎಷ್ಟು ಚತುರತೆ ಇದೆಯೋ ಮತದಾರರಲ್ಲೂ ಅಷ್ಟೇ ಚತುರತೆ ಇದೆ. ಆದರೆ ಇದು ಸಾಧುವಾದ, ನ್ಯಾಯ ಸಮರ್ಥಕವಾದ ಚತುರತೆ ಅಲ್ಲ. ಬದಲು ಮೆರುಗಿನ ವರ್ತನೆ. ಮೋಸಗಾರ ಭರವಸೆಯ ಆಶ್ವಾಸನೆ. ಮತಕೇಳಲು ಬಂದವರಿಗೆ ಸ್ಪಷ್ಟವಾಗಿ ತಮ್ಮ ಅಭಿಪ್ರಾಯವನ್ನು ಹೇಳುವವರು ವಿರಳ. ಬದಲು ಕಲ್ಲಿಗೆ ಪ್ರತಿಜ್ಞೆ, ಭರವಸೆಗಳನ್ನು ಕೊಟ್ಟು ಹಿಂದೆ ಕಾಲುಜಾರುವವರೇ ಹೆಚ್ಚು. ಈ ಮಾರ್ಗ ಸರಿಯಲ್ಲ. ತಮಗೆ ಇಷ್ಟವಿಲ್ಲದವರಿಗೆ ಮತಕೊಡುವದಿಲ್ಲವೆಂದು ಸ್ಪಷ್ಟವಾಗಿ ಹೇಳುವ ಧೈರ್ಯ ಬರಬೇಕು. ಪ್ರೌಢ ಮತದಾನ ಪದ್ಧತಿಯ ಪ್ರಥಮ ಚುನಾವಣೆ ಇದಾದ ಕಾರಣ ಮುಂದಿನ ಚುನಾವಣೆಗಳಲ್ಲಿ ಉಮೇದವಾರರನ್ನು ಮೆಚ್ಚಿಸುವ ಮಾತಿನ ಪರದೆಯು ಎತ್ತಲ್ಪಡುವದೆಂದು ನಂಬಬಹುದು. ಏಕೆಂದರೆ ಪ್ರತಿ ವ್ಯಕ್ತಿಗೂ ತನ್ನ ಮತದಾನದ ಪೂರ್ಣ ಸ್ವಾತಂತ್ರ್ಯವಿದೆ. ಈ ವ್ಯಕ್ತಿಗತ ಹಕ್ಕನ್ನು ಉಲ್ಲಂಘಿಸಿ ಯಾವ ಸಮಾಜವನ್ನೂ ಕಟ್ಟುವದು ಸಾಧ್ಯವಿಲ್ಲ. ಅದು ಮಾನವ ಪ್ರಕೃತಿಗೇ ವಿರೋಧ. Just as a man will not grow horns or a tail so he will not exist as man if he has no mind of his own. ಮನುಷ್ಯನಿಗೆ ಕೊಂಬು, ಬಾಲಗಳು ಹೇಗೆ ಬರಲಾರವೋ ಅದೇ ರೀತಿಯಲ್ಲಿ ತನ್ನ ಸ್ವಂತ ಮನಸ್ಸು, ಅಭಿಪ್ರಾಯವಿಲ್ಲದ ಮನುಷ್ಯನು ಮನುಷ್ಯನಾಗಿ ಬಾಳಲಾರ. ಈ ದೃಷ್ಟಿಯಿಂದ ಪ್ರತಿ ವ್ಯಕ್ತಿಯೂ ತನ್ನ ಮತ ಕೊಡಲು ಸ್ವತಂತ್ರನಿರುವಾಗ ಇತರನನ್ನು ತನಗೆ ಮತಕೊಡಬೇಕೆಂದು ಕೇಳುವದೇ ವಿಸಂಗತವಾದುದು.

ಪ್ರೌಢ ಮತದಾನ ಪದ್ಧತಿಯ ಮೇರೆ ನಡೆದ ಕೊಡಗಿನ ಈ ಪ್ರಥಮ ಚುನಾವಣೆಯು ಜಯಪ್ರದವಾಗಿ ನಡೆಯಿತೆನ್ನಲು ಅಭ್ಯಂತರವಿಲ್ಲ. ಅಲ್ಲಲ್ಲಿ ತೋರಿಬಂದ ನ್ಯೂನತೆಗಳು ಸಾಧಾರಣದವು. ಕೊಡಗಿನ ಮತದಾರರು ಪಕ್ಷ ಪಕ್ಷಗಳ ಪ್ರಚಾರದ ಕೋಲಾಹಲದಲ್ಲಿ ಅತಿಮಾತ್ರ ಹೋರಾಡಲ್ಪಟ್ಟರೂ ಇಂದಿನ ಜನ ಜಾಗೃತಿಯಿಂದ ಮುಂದೆ ಅವರನ್ನು ಯೋಗ್ಯ ಪಥದಲ್ಲಿ ನಡೆಸಿ, ಅವರಿಗೆ ಬಂದ ಮತದಾನದ ಹಕ್ಕು ಯೋಗ್ಯರೀತಿ ಚಲಾಯಿಸಲ್ಪಡಬಹುದೆಂದು ಯಾರಾದರೂ ನಂಬಬಹುದಾಗಿದೆ. ಚುನಾವಣೆ ಎಂಬುದು ಒಂದು ಪರೀಕ್ಷೆ. ಮತದಾರರ ಕ್ಷೇತ್ರವು ಒಂದು ವಿಶ್ವವಿದ್ಯಾಲಯ. ಈ ಮಾನವ ವಿದ್ಯಾಲಯದಲ್ಲಿ ಈ ಎರಡು ತಿಂಗಳುಗಳಲ್ಲಿ ದೊರೆತ ಅನುಭವಗಳೂ, ಜ್ಞಾನವೂ ಐದು ವರ್ಷಗಳ ಸತತ ವ್ಯಾಸಂಗದಿಂದ ಕೂಡ ದೊರೆಯದಷ್ಟು ಆಳವೂ, ಪರಿಣಾಮಕಾರಕವೂ ಆಗಿವೆ. ಆದ್ದರಿಂದಲೇ Work without an eye towards success does not know itself and never calculates. It brings its own joy which surpasses all other joys. ಜಯದ ಕಡೆಗೆ ದೃಷ್ಟಿ ಇಡದೆ ಮಾಡುವ ಕೆಲಸದಲ್ಲಿ ತನ್ಮಯತೆ ಇದೆ. ಲಾಭಾಲಾಭದ ಲೆಕ್ಕಾಚಾರವಿಲ್ಲ. ಇಂಥಾ ಕೆಲಸವು ತನ್ನದೇ ಆದ ಆನಂದವನ್ನು ತರುತ್ತದೆ. ಈ ಆನಂದವು ಇತರ ಎಲ್ಲಾ ಆನಂದಗಳಿಗಿಂತ ಮಿಗಿಲಾದುದು.

ಪುಸ್ತಕ ವಿಮರ್ಶೆ.

ವ್ಯವಸಾಯ ವಿಜ್ಞಾನ—ಲೇಖಕ:- ಶ್ರೀ ವಿ. ಎಸ್. ರಾಮಕೃಷ್ಣ, ಬಿ ಎಸ್. ಸಿ, (ಆನರ್ಸ್). ಪುಸ್ತಕ ದೊರೆಯುವ ಸ್ಥಳ, ಶ್ರೀ ಕಾವೇರಿ ಪ್ರಕಟಣಾಲಯ, ಮಡಿಕೇರಿ ಬೆಲೆ:—ರೂ. ೨-೦-೦.

ಶ್ರೀ ವಿ. ಎಸ್. ರಾಮಕೃಷ್ಣ ಇವರು ಸೆಂಟ್ರಲ್ ಹೈಸ್ಕೂಲಿನ ಅಧ್ಯಾಪಕರು. ಪ್ರೌಢ ಶಾಲೆಗಳ ಉಪಯೋಗಕ್ಕಾಗಿ ವ್ಯವಸಾಯ ವಿಜ್ಞಾನವನ್ನು ವಿವರಿಸಿ ಈ ಪುಸ್ತಕವನ್ನು ಬರೆದಿದ್ದಾರೆ. ಕೊಡಗಿನಂಥಾ ವ್ಯವಸಾಯಗಾರರ ದೇಶದಲ್ಲಿ ಪ್ರತಿ ಶಾಲೆಗಳಲ್ಲಿ ಮಕ್ಕಳಿಗೆ ವ್ಯವಸಾಯ ವಿಚಾರ ಬೋಧಿಸಬೇಕಾದುದು ತೀರಾ ಅವಶ್ಯ. ಹಿಂದಿನ ಶಿಕ್ಷಣ ಕ್ರಮವು ಬದಲಾಗಿ ಇಂದು ಶಿಕ್ಷಣದಲ್ಲಿ ವೃತ್ತಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡಲಾಗುತ್ತಿರುವ ಈ ಸಂದರ್ಭದಲ್ಲಿ ಸ್ಕೂಲ್ ಫೈನಲ್ ಸಿಲೆಬಸನ್ನು ಅನುಸರಿಸಿ ನಾಲ್ಕನೇ ಐದನೇ ಮತ್ತು ಆರನೇ ಫಾರಂಗಳಿಗೆ ಅವಶ್ಯವಿರುವಂತೆ ವ್ಯವಸಾಯ ವಿಜ್ಞಾನವನ್ನು ಬೋಧಿಸಲು ಬರೆಯಲ್ಪಟ್ಟ ಈ ಪುಸ್ತಕವು ಸಮಯೋಚಿತವಾಗಿದೆ. ಕೊಡಗಿನ ಪ್ರತಿ ಶಾಲೆಗಳಿಗೂ ಸಾಕಷ್ಟು ಭೂಮಿ, ಜಾಗಗಳನ್ನಿತ್ತು ಪ್ರತಿ ಶಾಲೆಯಲ್ಲಿಯೂ ವ್ಯವಸಾಯ ವೃತ್ತಿಯನ್ನು ಶಾಸ್ತ್ರೀಯವಾಗಿ ಕಲಿಸುವ ಸಾಧನ ಶೀಘ್ರ ಬರಬೇಕಾಗಿದೆ. ಇಂಥಾ ಒಂದು ಗರಜಿಗಾಗಿ ಶ್ರೀ ರಾಮಕೃಷ್ಣರವರ ಪುಸ್ತಕವು ಸಹಾಯಕವಾಗಿದೆ. ಸುಮಾರು ೨೦೦ ಪುಟಗಳುಳ್ಳ ಈ ಪುಸ್ತಕದಲ್ಲಿ ಮಣ್ಣಿನ ವಿಜ್ಞಾನ, ಭೂಮಿ ಹದಗೊಳಿಸಿ ಉತ್ತಮಗೊಳಿಸುವ ವಿಧಾನ, ಕೃಷಿ ವಿಧಾನ, ಮಿಶ್ರ ಬೆಳೆಗಳ ಉಪಭಾಗಗಳು, ಸಸ್ಯಗಳ ಪರಿಚಯ, ಗೊಬ್ಬರ ವರ್ಗೀಕರಣ, ಕೃಷಿ ಉಪಕರಣಗಳು, ನೀರು ಹಾಯಿಸುವ ವಿಧಾನಗಳು, ಕಳೆ, ಹುಳ, ಬೆಳೆಗೆ ಬರುವ ವಿವಿಧ ರೋಗಗಳು, ಜೇನು ವ್ಯವಸಾಯ, ಪಶು ಪಾಲನೆ ಮೊದಲಾದ ವಿಚಾರಗಳನ್ನು ಕೊಟ್ಟಿದ್ದಾರೆ. ಈ ಪುಸ್ತಕವು ಶಾಲೆಗಳಿಗೆ ತುಂಬಾ ಉಪಯುಕ್ತವಾಗಿದೆ.

ಪಾರ್ಲಿಮೆಂಟಿಗೆ ಶ್ರೀ ಎನ್. ಸೋಮಣ್ಣನವರ ಆಯ್ಕೆ.

ಕೊಡಗಿಗೆ ಪಾರ್ಲಿಮೆಂಟಿನಲ್ಲಿರುವ ಒಂದು ಸ್ಥಳಕ್ಕೆ ಉಮೇದ್ವಾರರಾಗಿ ನಿಂತಿದ್ದ ಶ್ರೀ ಎನ್ ಸೋಮಣ್ಣ (ಕಾಂಗ್ರೆಸ್) ಮತ್ತು ಶ್ರೀ ಕೆ. ಟಿ. ಉತ್ತಪ್ಪ (ಪ್ರತ್ಯೇಕವಾದಿ) ಇವರಲ್ಲಿ ಶ್ರೀ ಎನ್. ಸೋಮಣ್ಣನವರು ಆರಿಸಿ ಬಂದರು. ಅವರಿಗೆ ದೊರೆತ ಓಟುಗಳ ಲೆಕ್ಕ ಹೀಗಿದೆ—

ಶ್ರೀ ಎನ್. ಸೋಮಣ್ಣನವರು ೩೪,೦೬೩
„ ಕೆ. ಟಿ. ಉತ್ತಪ್ಪನವರು ೨೫,೭೮೦

ಶ್ರೀ ಟಿ. ಎನ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

ನೋಟೀಸ್

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಕಾಣಿಸಿದ ಕೋವಿಗಳನ್ನು ಮತ್ತು ತೋಟೆಗಳನ್ನು 1952ನೇ ಇಸವಿ ಮಾರ್ಚ್ ತಿಂಗಳ 7 ನೇ ತಾ. ಶುಕ್ರವಾರ ದಿನ ಬೆಳಗ್ಗೆ 11 ಗಂಟೆಗೆ ಡಿ|| ಸು|| ರವರ ಆಫೀಸಿನ ಎದುರಿಗೆ ಚಡ ದರಕಾಸ್ತು ಮೂಲಕ ಬಹಿರಂಗವಾಗಿ ಹರಾಜು ಮಾಡಲ್ಪಡುವವು. ಹರಾಜಿನಲ್ಲಿ ಪಡಕೊಂಡವರು ಪೂರ್ತಿ ಮೊಬಲಗನ್ನು ಆ ಕೂಡಲೇ ಪಾವತಿ ಮಾಡತಕ್ಕದ್ದು. ಹರಾಜು ಚೀಫ್ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿದೆ.

1 ಒಂಟಿ ಹೋಳಿನ ತೋಟೆದ ಕೋವಿಗಳು ಮತ್ತು ಜೋಡು ಹೋಳಿನ ತೋಟೆದ ಕೋವಿಗಳು. 14
2. ಚಿಲ್ಲ ತೋಟೆಗಳು 25
3 ತೋಟೆಗಳು 1188.

ಯಂ ಪಿ ನಂಜಣ್ಣ,
ಕೊಡಗು ಡಿ|| ಸು|| ಆಫ್ ಪೋಲಿಸ್
3–2

Land For Sale.

A compact plot of 104 acres of freehold land most conveniently situated in Coffee Zone on the Ammatti-Murnad road known as Cauvery Estate is for sale. The description of the land is as detailed in the schedule mentioned below:

1. 80 acres land, sloping towards East, North and West is most suitable for coffee, orange, cardamom, pepper and tea.
2. 19 acres is suitable for grazing ground.
3. 5 acres wetland in good condition.
4. One big tiled cattle shed.
5. One tiled two roomed tenanats house.
6. 10 acres 9 years old orange plants interplanted recently with robusta coffee,
7. 11 acres tea.
8. 1 tank with permanent water supply.
9. In one spot good. uality Mica is also founb

This land is surrounded by metaled all weather motor road and also by a big perenial stream.

Intending purchasers may please communicate with— "X"

C/o The "Kodagu" Ltd.,
3–3 Mercara, Coorg.

ಕೊಡಗು

ತಾ. ೮-೩-೧೯೫೨ನೇ ಶುಕ್ರವಾರ

ಕೊಡಗಿನ ಭವಿಷ್ಯ.

ಕೊಡಗಿನ ಭವಿಷ್ಯದ ವಿಚಾರದಲ್ಲಿ ನಾವು ಹಲವಾರು ಲೇಖನಗಳನ್ನು ಆಗಿಂದಾಗ್ಯೆ ಬರೆದಿರುವೆವು. ಕೊಡಗಿನ ಭವಿಷ್ಯವು ಕೆಲವೊಂದು ಜನರಿಂದ ತೀರ್ಮಾನಿಸಲ್ಪಡತಕ್ಕದಲ್ಲ; ಬದಲು ದೇಶದ ಪ್ರಜೆಗಳ ಬಹುಮತ ಅಭಿಪ್ರಾಯದಂತೆ ತೀರ್ಮಾನಿಸಲ್ಪಡಬೇಕೆಂಬ ವಾದವನ್ನು ಅಂದಿನಿಂದ ಇಂದಿನ ವರೆಗೂ ಹೂಡಿದ್ದೇವೆ. ಕೊಡಗಿನ ಸಾರ್ವತ್ರಿಕ ಚುನಾವಣೆಯು ಬಂದಾಗ ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಬೇಕೆನ್ನುವವರು ಪ್ರತ್ಯೇಕ ಪಕ್ಷವನ್ನು ಕಟ್ಟಿ ಕೊಡಗಿನ ಭವಿಷ್ಯದ ಪ್ರಶ್ನೆ ಇಂದೇ ಜನತೆಯಿಂದ ತೀರ್ಮಾನವಾಗಬೇಕೆಂಬ ಅಭಿಪ್ರಾಯಟ್ಟು ಆ ತತ್ವದ ಮೇಲೆಯೇ ಚುನಾವಣೆಗೆ ನಿಂತರು. ಆದರೆ ಈ ಸಂದರ್ಭದಲ್ಲಿ ಪಂಡಿತ ಜವಾಹರ್‌ಲಾಲ್ ನೆಹರೂರವರು ಒಂದು ಪತ್ರ ಬರೆದು ಕೊಡಗಿನ ಭವಿಷ್ಯದ ಪ್ರಶ್ನೆ ಈಗ ಬರುವದಿಲ್ಲವೆಂದು ಮತದಾರರಿಗೆ ಹೇಳಿದದ್ದರಿಂದ ಮತದಾರರು ಓಟು ಮಾಡುವಾಗ ಕೇವಲ ಕೊಡಗಿನ ಭವಿಷ್ಯದ ಪ್ರಶ್ನೆಯನ್ನು ಮುಂದಿಟ್ಟು ಓಟು ಮಾಡಿದರೆಂದು ಹೇಳಲಾಗುವದಿಲ್ಲ. ನೆಹರೂರವರ ಈ ಪತ್ರವು ಒಳ್ಳೆ ಪರಿಣಾಮಕಾರಿಯಾಗಿತ್ತೆಂದು ನಮಗನಿಸಿದೆ. ಆದ್ದರಿಂದ ಚುನಾವಣೆಯಲ್ಲಿ ಕೊಡಗಿನಲ್ಲಿ ಕಾಂಗ್ರೆಸ್ ಪಕ್ಷವು ಬಹುಮತದಿಂದ ಆರಿಸಿ ಬಂದಿತು. ಈ ಜಯವು ಪಂಡಿತ ಜವಾಹರರ ಜಯವೆಂದು ಬೇರೆ ಹೇಳಬೇಕಾಗಿಲ್ಲ. ಕೊಡಗಿನ ಮತದಾರರು ಜವಾಹರರ ಮೇಲೆ ಎಷ್ಟು ವಿಶ್ವಾಸವಿಟ್ಟಿರುವರೆಂಬುದನ್ನು-ಕಾಂಗ್ರೆಸಿನ ತತ್ವನೀತಿಗಳನ್ನು ಸ್ವಲ್ಪವೂ ಅನುಸರಿಸದ, ಬೇರೆ ವಿಶೇಷ ಯೋಗ್ಯತೆಯೂ ಇಲ್ಲದ ಜನರನ್ನು ಅವರು ಕಾಂಗ್ರೆಸಿನ ಹೆಸರಿನಲ್ಲಿ ನಿಂತಿದ್ದಾರೆಂಬ ಕಾರಣಕ್ಕಾಗಿ ಬಹುಮತದಿಂದ ಆರಿಸಿದ್ದರಿಂದ ತಿಳಿಯಬಹುದು.

ಪಂಡಿತ ನೆಹರೂರವರ ಈ ಮಹಾ ವರ್ಚಸ್ಸಿನ ಎದುರು ನಿಂತು ಹೋರಾಡಿ ೨೪ರಲ್ಲಿ ೯ ಸ್ಥಾನಗಳನ್ನು ಪಡೆದ ಪ್ರತ್ಯೇಕ ಪಕ್ಷದ ಜಯವನ್ನು ಕಡಿಮೆಯೆನ್ನಲಾಗುವದಿಲ್ಲ. ಮತದಾರರು ಅವರನ್ನು ಬಹುಮತ ಸಂಖ್ಯೆಯಲ್ಲಿ ಆರಿಸದಿದ್ದರೂ ಬಹುಮತ ಪಡೆದು ಬಂದಿರುವವರ ಮೇಲೆ ಪರಿಣಾಮಕಾರಕ ಪ್ರಭಾವ ಬೀರುವ ಸಂಖ್ಯೆಯಲ್ಲಿ ಆರಿಸಿದ್ದು ಹಿತವೇ ಆಯಿತು. ಕೊಡಗಿನ ಪ್ರತ್ಯೇಕ ಪಕ್ಷವು ಚುನಾವಣೆಯಲ್ಲಿ ಗೆಲ್ಲದಿದ್ದರೂ ತನ್ನ ಗುರಿಯಾದ ಕೊಡಗನ್ನು ಪ್ರತ್ಯೇಕವಿಡುವ ವಿಚಾರದಲ್ಲಿ ಜಯವನ್ನು ಪಡೆದಿದೆಯೆನ್ನಬಹುದು. ಏಕೆಂದರೆ ಕೊಡಗಿನ ಕಾಂಗ್ರೆಸ್ ಪಕ್ಷವು ಕೊಡಗಿನ ಭವಿಷ್ಯದ ಬಗ್ಗೆ ಜನತೆಯ ಅಭಿಪ್ರಾಯದಂತೆ ವರ್ತಿಸುವ ಭರವಸೆಯನ್ನು ಕೊಡುವಂತೆ ಮಾಡಿದೆ. ಕಾಂಗ್ರೆಸ್ ಪಕ್ಷವು ತನ್ನ ಚುನಾವಣಾ ಘೋಷಣೆಯಲ್ಲಿ "ನ್ಯಾಯ ವಿಧಾಯಕ ಸಭೆಯು ಈ (ಕೊಡಗಿನ ಭವಿಷ್ಯ) ವಿಚಾರದಲ್ಲಿ ಅಭಿಪ್ರಾಯ ಕೊಡಬೇಕಾಗಿ ಬಂದರೆ ಹಾಗೆ ಅಭಿಪ್ರಾಯ ಕೊಡಲು ಅಧಿಕೃತರಾಗಿ ನಾವು ಚುನಾಯಿತರಾಗಿಲ್ಲವೆಂದೂ, ಜನರ ಅಭಿಪ್ರಾಯವನ್ನು ಪ್ಲೆಬಿಸೈಟ್ ಮೂಲಕ ತೆಗೆಯಬೇಕೆಂದೂ ತೀರ್ಮಾನಿಸುತ್ತೇವೆ. ಯಾವದಾದರೂ ಕಾರಣದಿಂದ ಆ ತರದಲ್ಲಿ ಜನರ ಅಭಿಪ್ರಾಯವನ್ನು ತೆಗೆಯಲು ಸಾಧ್ಯವಾಗದಿದ್ದಲ್ಲಿ ಹೊಸ ಚುನಾವಣೆಯಾಗಬೇಕೆಂದು ಅಭಿಪ್ರಾಯಕೊಟ್ಟು ಚುನಾವಣೆ ಆಗತಕ್ಕ ಬಗ್ಗೆ ಎಸೆಂಬ್ಲಿ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟು ಹೊರಬರಲು ತಯಾರಿದ್ದೇವೆ" ಎಂದು ಭರವಸೆ ಕೊಟ್ಟಿದಾದರೂ ಪ್ರತ್ಯೇಕ ಪಕ್ಷದ ನಿಲುಮೆಯ ಕಾರಣದಿಂದಾಗಿದೆ. ಪ್ರತ್ಯೇಕವಾದಿ ಪಕ್ಷವು ಆದಿಯಿಂದ ಹೋರಾಡುತ್ತಿದ್ದ ರೀತಿಯಲ್ಲಿ ಕೊಡಗಿನ ಭವಿಷ್ಯ ನಿರ್ಣಯವು ಕೊಡಗಿನ ಜನತೆಯ ಮೂಲಭೂತ ಹಕ್ಕು ಎಂಬ ವಿಚಾರವನ್ನು ಕಾಂಗ್ರೆಸ್ಸು ಒಪ್ಪಿದೆ. ಹೀಗೆ ಒಪ್ಪಲು ಕಾರಣವಾದರೂ ಪ್ರತ್ಯೇಕ ಪಕ್ಷವು ಕೊಡಗಿನ ಭವಿಷ್ಯವು ಈಗಲೇ ನಿರ್ಣಯವಾಗಿ ಹೋಗಬೇಕೆಂದು ಆ ತತ್ವದ ಮೇಲೆ ಚುನಾವಣೆಗೆ ನಿಂತದ್ದರಿಂದಾಗಿದೆ. ಆದರೆ ಈ ಸಂದರ್ಭದಲ್ಲಿ ಪಂಡಿತ ನೆಹರೂರವರು ಕೊಡಗಿನ ಭವಿಷ್ಯದ ಪ್ರಶ್ನೆ ಈ ಚುನಾವಣೆಯಲ್ಲಿ ಬರುವದಿಲ್ಲ. ಅಂಥಾ ಭವಿಷ್ಯ ತೀರ್ಮಾನದ ಸಮಯದಲ್ಲಿ ಕೊಡಗಿನ ಜನರ ಅಭಿಪ್ರಾಯವನ್ನು ತೆಗೆದು ಬೇರೆ ಇತರ ಕಾರಣಗಳನ್ನೂ ಪರಿಶೀಲಿಸಿ ನಿರ್ಣಯ ಕೊಡಲಾಗುವದೆಂದು ಆಶ್ವಾಸನವಿತ್ತುದರಿಂದ ಪ್ರತ್ಯೇಕ ಪಕ್ಷದ ಪ್ರಚಾರ ದೋಣಿಯ ಹಾಯಿಯಿಂದ ಗಾಳಿ ತೆಗೆದಂತಾಯಿತು! ಪಂಡಿತ ನೆಹರೂರವರ ವರ್ಚಸ್ಸು, ಪ್ರಭಾವವು ಜನತೆಯನ್ನು ತಿರುಗಿಸಿ ಜಯವನ್ನು ಪಡೆಯಿತು. ಕಾಂಗ್ರೆಸ್ ಪಕ್ಷವು ಜಯಪಡೆದರೂ ಪ್ರತ್ಯೇಕ ಪಕ್ಷದ ಗುರಿ ಸಾಧಿಸಿದಂತಾಯಿತು. ಕೊಡಗಿನ ಭವಿಷ್ಯದ ನಿರ್ಣಯವು ಜನತೆಯ ಅಭಿಮತ ಕೆಗೆಡೇ ಆಗುವದೆಂಬ ಭರವಸೆ ನೆಹರೂರವರಿಂದಲೇ ದೊರೆತಂತಾಯಿತು.

ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳುವ ತತ್ವದ ಮೇಲೆ ಚುನಾವಣೆಗೆ ನಿಂತವರಲ್ಲಿ ಒಂಭತ್ತು ಜನರು ಶಾಸನ ಸಭೆಯಲ್ಲಿದ್ದಾರೆ. ಶಾಸನ ಸಭೆಯಲ್ಲಿ ಕೇವಲ ಒಂಭತ್ತೆ ಜನರಾದರೂ ಕೊಡಗಿನ ಮತದಾರರಲ್ಲಿ ಬಹುಮತೀಯರು ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಬೇಕೆನ್ನುವ ಅಭಿಪ್ರಾಯದವರೆಂಬುದರಲ್ಲಿ ಸಂಶಯವಿಲ್ಲ. ಇಂದಲ್ಲ; ನಾಳೆಯಾದರೂ ಕೊಡಗಿನ ಭವಿಷ್ಯದ ಪ್ರಶ್ನೆಯು ಶಾಸನ ಸಭೆಯಲ್ಲಿ ಬಂದೇ ಬರುತ್ತದೆ. ಅಂಥಾ ಕಾಲಕ್ಕೆ ತಮ್ಮ ನಿಶ್ಚಿತ ಅಭಿಪ್ರಾಯವನ್ನು ಒಕ್ಕೊರಲಿನಿಂದ ಕೊಡಲು ಕೊಡಗು ಪ್ರತ್ಯೇಕವಿರಬೇಕೆನ್ನುವವರೆಲ್ಲರೂ ಸಂಘಟಿತರಾಗಬೇಕು. ಈ ದೃಷ್ಟಿಯಿಂದ ಸಂಘಟನಾ ಕಾರ್ಯವು ನಡೆಯಬೇಕಿದೆ. ಇಂದಿನಿಂದಲೇ ಈ ಕಾರ್ಯಕ್ಕಾಗಿ ಕಟಿಬದ್ಧರಾಗಿ ದುಡಿಯಬೇಕಿದೆ. ಕೊಡಗಿನ ಭವಿಷ್ಯ ನಿರ್ಣಯದ ಜವಾಬ್ದಾರಿಯು ಕೆಲವೊಂದು ಮುಂದಾಳುಗಳ ಕೈಗೆ ಹೋಗದೆ ಇಂದು ಕೊಡಗಿನ ಜನತೆಯ ಕೈಗೆ ಬಂದಿದೆ. ಅದನ್ನು ನಿರ್ಣಯ ಮಾಡುವ ಸಮಯ ಬಂದಾಗ ಜನತೆಯು ಸ್ಪಷ್ಟವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಮಾಡಿ ಪ್ರತ್ಯೇಕವಿರುವ ಕೊಡಗು ಸರ್ವರ ಹಿತಕ್ಕಾಗಿ ಚಿರಂತನ ಪ್ರತ್ಯೇಕವಾಗಿರುವಂತೆ ಮಾಡುವದು ಧರ್ಮವಾಗಿದೆ.

ಭೇಷ್ !

ಕೊಡಗು ಸರಕಾರಿ ಕಾಲೇಜಿನ ಹಾಕಿ ಟೀಮು ಮದ್ರಾಸು ವಿಶ್ವ ವಿದ್ಯಾಲಯ ಅಂತರ್ಕಾಲೇಜು ಹಾಕಿ ಪಂದ್ಯಾಟದಲ್ಲಿ ಜಯಶೀಲವಾಗಿ ಮದ್ರಾಸು ವಿಶ್ವವಿದ್ಯಾಲಯದ ಹಾಕಿ ಕಪ್ಪನ್ನು ಪಡೆದ ವರ್ತಮಾನವು ಕೊಡಗಿನವರಿಗೆಲ್ಲರಿಗೂ ಒಂದು ಹೆಮ್ಮೆಯ ವಾರ್ತೆಯಾಗಿದೆ. ನಮ್ಮ ಕಾಲೇಜು ಇನ್ನೂ ಪ್ರಥಮಸ್ಥಾಯಿ ಕಾಲೇಜಾಗಿಲ್ಲ. ಆದರೂ ಕೂಡ ಈ ದ್ವಿತೀಯ ಸ್ಥಾಯಿ ಕಾಲೇಜು ಮದ್ರಾಸು ವಿಶ್ವ ವಿದ್ಯಾಲಯದ ಎಲ್ಲಾ ಕಾಲೇಜು ಟೀಮುಗಳನ್ನು ಸೋಲಿಸಿದ್ದು ಸ್ತುತ್ಯಾರ್ಹವಾಗಿದೆ. ಕಳೆದ ವರ್ಷವೂ ಕೂಡ ನಮ್ಮ ಕಾಲೇಜು ಎಲ್ಲಾ ಕಾಲೇಜುಗಳನ್ನು ಸೋಲಿಸಿ ಕಡೇ ಆಟದಲ್ಲಿ ಮದ್ರಾಸು ಲಾಯೋಲಾ ಕಾಲೇಜಿಗೆ ಸೋತಿತು. ಆದರೆ ಈ ವರ್ಷ ಅಂದರೆ ತಾರೀಕು ೬ರಲ್ಲಿ ಅನಂತಪುರ ಕಾಲೇಜ್ ಟೀಮನ್ನು ಮೂರು ಗೋಲುಗಳಿಂದ ಸೋಲಿಸಿ ತಾರೀಕು ೭ರಲ್ಲಿ ಫೈನಲ್ಸ್ ಆಟದಲ್ಲಿ ಮದ್ರಾಸಿನ ಲಾಯೋಲಾ ಕಾಲೇಜಿನ ಟೀಮನ್ನು ಒಂದು ಗೋಲಿನಿಂದ ಸೋಲಿಸಿ ವಿಜಯಿಯಾಯಿತು. ದ್ವಿತೀಯ ಸ್ಥಾಯೀ ಕಾಲೇಜೊಂದು ಈ ರೀತಿಯ ಜಯವನ್ನು ಪಡೆದದ್ದು ಪ್ರಸಂಶನೀಯವಿದೆ. ಮುಂದೆ ನಮ್ಮ ಕಾಲೇಜು ಪ್ರಥಮ ದರ್ಜೆಯ ಕಾಲೇಜಾದಾಗ ಇದಕ್ಕಿಂತಲೂ ಉತ್ತಮ ರೀತಿಯ ಟೀಮು ಕಟ್ಟಿ ಕೊಡಗಿಗೆ ಎಂದೂ ಅಳಿಯದ ಕೀರ್ತಿಯನ್ನು ತರುವದೆಂಬದರಲ್ಲಿ ಸಂಶಯವಿಲ್ಲ. ಹಾಗೆಂದಾಗ ನಮ್ಮ ಕಾಲೇಜು ಕೇವಲ ಆಟೋಟಗಳಲ್ಲಿ ಮಾತ್ರ ಮುಂದೆ ಎಂದು ಯಾರೂ ಭಾವಿಸದಿರಲಿ. ಪಾಠ ಪ್ರವಚನಗಳಲ್ಲೂ ಅದು ಸರಿ ದಾರಿಯಲ್ಲಿ ನಡೆಯುತ್ತಿದೆ. ವಿಶ್ವ ವಿದ್ಯಾಲಯದ ಪರೀಕ್ಷೆಗೆ ಪ್ರಥಮವಾಗಿ ಅದು ಕೂತದ್ದು ಕಳೆದ ವರ್ಷ. ಅದರಲ್ಲಿ ಫಲಿತಾಂಶವು ನೂರಕ್ಕೆ ೭೦ರ ವರೆಗೆ ಬಂದದ್ದು ಹೆಮ್ಮೆಯ ವಿಚಾರವೇ ಆಗಿದೆ. ಈ ವರ್ಷವೂ ಉತ್ತಮ ಫಲಿತಾಂಶವನ್ನು ಹೊರಡಿಸಿ ದಿನದಿಂದ ದಿನಕ್ಕೆ ನಮ್ಮ ಈ ಕಾಲೇಜು ಪ್ರಗತಿಯ ಮೆಟ್ಟಲುಗಳನ್ನು ಏರುತ್ತಾ ಇತರ ಕಾಲೇಜುಗಳಿಗೆ ಆದರ್ಶವಾಗಲೀ ಎಂಬುವುದೇ ನಮ್ಮ ಬಯಕೆ.

ಆರನೇ ಜಾರ್ಜರ ನಿಧನ.

ಇಂಗ್ಲೆಂಡಿನ ಅರಸರಾದ ಆರನೆ ಜಾರ್ಜರವರು ತಾ. ೬ ರಲ್ಲಿ ಸ್ವರ್ಗಸ್ಥರಾದರು.

ವರ್ತಮಾನ.

ಕೊಡಗು ಜೇನು ಮತ್ತು ಮೇಣ ಕೃಷಿಕರ ಸಹಕಾರ ಸಂಘದ ವಾರ್ಷಿಕ ಮಹಾ ಸಭೆಯು ತಾ. ತಾ. ೯-೩-೫೨ನೇ ಶನಿವಾರ ಪೂರ್ವಾಹ್ನ ೧೦-೩೦ ಗಂಟೆಗೆ ರಾ. ಬ. ಕೆ. ಟಿ. ಉತ್ತಪ್ಪ, ರಿಟಯರ್ಡ್ ಅಸಿಸ್ಟೆಂಟ್ ಕಮಿಶನರವರ ಅಧ್ಯಕ್ಷತೆಯಲ್ಲಿ ಜರಗುವುದು.

ಬೋದಿನಾಯಕನೂರಿನಲ್ಲಿ ಕಾಫಿ ಇನ್ಸ್‌ಪೆಕ್ಟರಾಗಿದ್ದ ಶ್ರೀ ನಡಿಕೇರಿಯಂಡ ಎಂ. ಪೊನ್ನಪ್ಪನವರು ಮಾಡಿದ ಉತ್ತಮ ಕೆಲಸಕ್ಕಾಗಿ ಇಲಾಖೆಯಿಂದ ಬಹುಮಾನಿಸಲ್ಪಟ್ಟಿದ್ದಾರೆ.

ಸಂಯುಕ್ತ ರಾಷ್ಟ್ರ ಸಂಘದ ಆಶ್ರಯದಲ್ಲಿ ಏರ್ಪಡಿಸಿದ ಮಕ್ಕಳ ಸಹಾಯಕ್ಕಾಗಿ ಹೂವುಗಳನ್ನು ಮಾರುವ ಚಳವಳದ ಅವಧಿಯನ್ನು ಜೂನ್ ೧ರ ವರೆಗೆ ಮುಂದರಿಸಲಾಗಿದೆ.

ಅಖಿಲಭಾರತ ಕ್ಷಯರೋಗ ನಿವಾರಣಾ ಸೀಲುಗಳನ್ನು ಮಾರಾಟ ಮಾಡುವ ಅವಧಿಯನ್ನು ಮಾರ್ಚಿ ೧೫ರ ವರೆಗೆ ಮುಂದರಿಸಲಾಗಿದೆ.

ತಾರೀಕು ೩೧ರ ಹಗಲು ಟಿ. ಶೆಟ್ಟಿಗೇರಿ ಗ್ರಾಮದಲ್ಲಿ ಒಂದು ಹುಲಿಯು ಮೂರು ಎತ್ತುಗಳನ್ನು ಕೊಂದು ಹಾಕಿ ತುಂಬಾ ತೊಂದರೆ ಕೊಡುತ್ತಿದ್ದುದನ್ನು ತಾರೀಕು ೧-೩-೫೨ರಲ್ಲಿ ಶ್ರೀ ಚಂಗುಲಂಡ ನಂಜಪ್ಪನವರು ಗುಂಡಿಕ್ಕಿ ಕೊಂದರು.

ಮಡಿಕೇರಿ ಹಿಂದೂಸ್ಥಾನೀ ಪ್ರಚಾರ ಸಭೆಯ ನಾಲ್ಕನೇ ವಾರ್ಷಿಕೋತ್ಸವವು ತಾ. ೧೦ರಲ್ಲಿ ಕೊಡಗಿನ ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ನಡೆಯುವದು. ಈ ಸಂದರ್ಭದಲ್ಲಿ ಶ್ರೀ ವಾಸುದೇವ ಪದಕ್ಕಣ್ಣಾಯ ಇವರು ಭಾಷಣ ಮಾಡುವರಲ್ಲದೆ ತಾ. ೯ರಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ವರ್ಗದವರಿಗೂ ತಾ. ೧೦ರಲ್ಲಿ ರಾಷ್ಟ್ರಭಾಷಾ ಮತ್ತು ಮೇಲಿನ ವರ್ಗದವರಿಗೂ ಭಾಷಣ ಸ್ಪರ್ಧೆಯ ಏರ್ಪಾಡಿದೆ.

ಕೊಡಗಿನಲ್ಲಿ ಮೂರು ಮಂದಿ ಜನರಿರುವ ಮಂತ್ರಿ ಮಂಡಲದ ರಚನೆಯಾಗಲಿದೆಯೆಂದೂ, ಮೈಸೂರಿನಲ್ಲಿರುವಂತೆ ಮಂತ್ರಿಗಳಿಗೆ ಮಾಸಿಕ ರೂ. ೭೫೦/-ವೇತನ ಕೊಡಬಹುದೆಂಬ ಮಾತುಕತೆಯಾಗಿದೆಯೆಂದೂ, ಸರಕಾರಕ್ಕೆ ಹೊರಗಿನಿಂದ ಎರಡು ಸೆಕ್ರೆಟರಿಗಳನ್ನು ತರಿಸಲಾಗುವದೆಂದೂ ಫೈನಾನ್ಸ್ ಸುಪರಿಂಟೆಂಡೆಂಟರ ನೇಮಕ ಒಂದು ಆಗುವದೆಂದೂ ವಾರ್ತೆ ಇದೆ. ಮಂತ್ರಿಗಳ ನಿವಾಸಕ್ಕಾಗಿ ಈಗಾಗಲೇ ಸುಮಾರು ಒಂದು ಲಕ್ಷ ರೂ. ಮೌಲ್ಯದ ಮೂರು ಮನೆಗಳನ್ನು ಮಡಿಕೇರಿಯಲ್ಲಿ ನಿಶ್ಚಯಿಸಲಾಗಿದೆಯೆಂದೂ ತಿಳಿಯಬಂದಿದೆ.

ಮದ್ರಾಸು ವಿಶ್ವ ವಿದ್ಯಾಲಯದ ಇಂಟರ್ ಕಾಲೇಜ್ ಹಾಕಿ ಪಂದ್ಯಾಟದ ಸೆಮಿಫೈನಲ್ ಆಟದಲ್ಲಿ ಕೊಡಗು ಸರಕಾರಿ ಕಾಲೇಜಿನ ಟೀಮು ಅನಂತಪುರ ಗವರ್ನ್‌ಮೆಂಟ್ ಕಾಲೇಜ್ ಟೀಮನ್ನು ಮೂರು ಗೋಲುಗಳಿಂದ ಸೋಲಿಸಿತು. ತಾ. ೭ರಲ್ಲಿ ಕಡೇ ಆಟವು ಕೊಡಗು ಸರಕಾರಿ ಕಾಲೇಜ್ ಟೀಮಿಗೂ, ಮದ್ರಾಸು ಲಾಯೋಲಾ ಕಾಲೇಜು ಟೀಮಿಗೂ ನಡೆದು ಮ

ಕೇರಿ ಗವರ್ನ್‌ಮೆಂಟ್ ಟೀಮು ಒಂದು ಗೋಲಿನಿಂದ ಜಯ ಪಡೆಯಿತು.

ಹೊಸ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರು ಶ್ರೀ ಸಿ ಎಂ. ಪೂಣಚ್ಚ ನವರನ್ನು ತಮ್ಮ ಪಕ್ಷದ ಲೀಡರಾಗಿ ಆರಿಸಿರುವರು. ಶ್ರೀ ಸಿ. ಎಂ. ಪೂಣಚ್ಚನವರೇ ಮುಖ್ಯ ಮಂತ್ರಿಯಾಗಬಹುದೆಂಬ ವಾರ್ತೆ ಇದೆ.

ತಿದ್ದುಪಡಿ

ಕಳೆದ ವಾರ ಪ್ರಕಟವಾಗಿದ್ದ ವ್ಯವಸಾಯ ಇಲಾಖೆಯಲ್ಲಿ ಹಣ್ಣು ಹಂಪಲಿನ ಗಿಡಗಳು ದೊರೆಯುವವೆಂಬ ನೋಟೀಸಿನಲ್ಲಿ ಬೆಲೆಯ ಶೇಕಡ ೭೫ರಷ್ಟು ಮುಂಗಡವಾಗಿ ವಸೂಲು ಮಾಡಲ್ಪಡುವದೆಂಬುದು ಬೆಲೆಯ ಶೇಕಡ ೧೫ರಷ್ಟು ಎಂದು ಅಚ್ಚಾಗಿದೆ. ದಯವಿಟ್ಟು ವಾಚಕರು ತಿದ್ದಿ ಓದಿಕೊಳ್ಳಬೇಕಾಗಿ ಸೂಚನೆ. ಸಂ.]

ಮತದಾರರಿಗೆ ವಂದನೆ.

ಕೊಡಗಿನ ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಕೊಡಗಿನ ಪ್ರತ್ಯೇಕ ಪಕ್ಷದ ಉಮೇದುವಾರರಿಗೆ ತಮ್ಮ ಅಮೂಲ್ಯವಾದ ಓಟನ್ನು ಕೊಟ್ಟು ಪ್ರೋತ್ಸಾಹಿಸಿದ ಮತದಾರರೆಲ್ಲರಿಗೂ ಕೊಡಗು ಪ್ರತ್ಯೇಕ ಪಕ್ಷದ ಪರ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ. ಪ್ರತ್ಯೇಕ ಪಕ್ಷದ ಮೇಲೆ ಮತದಾರರು ಇಟ್ಟ ವಿಶ್ವಾಸಕ್ಕೆ ಅನುಗುಣವಾದ ತಮ್ಮ ಕೈಯಲ್ಲಿ ಸಾಧ್ಯವಾಗುವ ಸೇವೆಯನ್ನು ಶಕ್ತಿಮೀರಿ ಮಾಡುವದೆಂದು ಪ್ರತ್ಯೇಕ ಪಕ್ಷವು ಹೃತ್ಪೂರ್ವಕ ಭರವಸೆ ಕೊಡುತ್ತದೆ.

ಕೆ. ಪಿ. ಕರುಂಬಯ್ಯ
ಕಾರ್ಯದರ್ಶಿ
ಕೊಡಗು ಪ್ರತ್ಯೇಕ ಪಕ್ಷ.

ಸರಕಾರೀ ಸಂಬಳ ಮತ್ತು ರಚನಾತ್ಮಕ ಕಾರ್ಯಕರ್ತರು.

ಗಾಂಧೀಜಿಯವರು ಪ್ರಸಿದ್ಧ ಉಪ್ಪಿನ ಸತ್ಯಾಗ್ರಹದ ಕಾಲಕ್ಕೆ ಆಗಿನ ವೈಸರಾಯರಿಗೆ ಬರೆದ ಪತ್ರದಲ್ಲಿ ಭಾರತೀಯನ ಸರಾಸರಿ ಉತ್ಪನ್ನದ ಅಂಕಿಗಳನ್ನು ವೈಸರಾಯರ ಸಂಬಳವನ್ನು ಉಲ್ಲೇಖಿಸಿ ಅವೆರಡರಲ್ಲಿಯ ಮಹದಂತರವನ್ನು ಮತ್ತು ಅನ್ಯಾಯವನ್ನು ತೋರಿಸಿ ಕೊಟ್ಟಿದ್ದರು. ಕಾಂಗ್ರೆಸಿನ ಪ್ರತಿನಿಧಿಯೆಂದು ಅವರು ಆ ಪತ್ರವನ್ನು ಬರೆದಿದ್ದರು. ಇದೀಗ ಭಾರತದಲ್ಲೆಲ್ಲ ಕಾಂಗ್ರೆಸ್ ಸರಕಾರಗಳೇ ಆಡಳಿತವನ್ನು ನಡೆಸುತ್ತಿವೆ. ಆಗಿನ ಬ್ರಿಟಿಷ್ ಸರಕಾರಕ್ಕಿದ್ದ ಗಾಂಧೀಜಿಯ ಆಕ್ಷೇಪ ಅನ್ವಯಿಸುತ್ತು. ಸದ್ಯದ ಕಾಂಗ್ರೆಸ್ ಸರಕಾರಗಳಿಗೆ ಅದು ಅನ್ವಯಿಸುವದಿಲ್ಲವೆ? ಸದ್ಯದಲ್ಲಿ ಭಾರತೀಯನ ಸರಾಸರಿ ಉತ್ಪನ್ನ ಮತ್ತು ವೈಸರಾಯನ ಸಂಬಳದ ಲ್ಲಿಯ ಅಂತರ ಮೊದಲಿನಷ್ಟು ಭಾರಿ ಉಳಿದಿಲ್ಲೆಂಬುದು ನಿಜ. ಆದರೂ ಸದ್ಯದ ಅಂತರವೇನು ವಿಚಾರಣೆ ಮಾಡುವಂತಹದಾಗಿಲ್ಲೆಂದು ಹೇಳಲಾಗದು. ಅದು ೨೫೦ ರಿಂದ ೩೦೦ ಪಟ್ಟು ಇರುವದು. ರಾಜ್ಯಘಟನೆಯು ಕಲವುಗಳಲ್ಲಿಯೇ ಸಂಬಳದ ಮಿತಿಯನ್ನು ಗೊತ್ತುಪಡಿಸಿದ್ದು ಪುದ್ಯೆವದ ಸಂಗತಿಯು. ಸರಕಾರದ ಕೆಲ ಪ್ರಮುಖ ಅಧಿಕಾರಿಗಳ ಸಂಬಳವನ್ನು ಅದ ನಿಶ್ಚಿತಗೊಳಿಸಿದೆ. ದೇಶದ ಪರಿಸ್ಥಿತಿಯಂತೇ ಅವರೂ ದೇಶದ ದಾರಿದ್ರ್ಯ ಹೆಚ್ಚು ಕಡಿಮೆಯಾದರೂ ಆ ಸಂಬಳಕ್ಕೆ ಕೈ ಹಚ್ಚತಕ್ಕದ್ದಲ್ಲೆಂದು ಘಟನೆ ಸಾರುತ್ತದೆ. ಯಾವನೊಬ್ಬ ಅಧಿಕಾರಿಯು ಕೆಲ ಸಮಯದ ವರೆಗೆ ಹೆಚ್ಚಿನ ಗ್ರೇಡಿನ ಅಧಿಕಾರಿಯು ಕೆಲಸಕ್ಕೆ ಹೋದರೆ ಆ ವನಿಗೆ ಆ ಗ್ರೇಡಿನ ಸಂಬಳ ಸಿಕ್ಕಬೇಕು ಎಂಬ ವಿಚಾರವೂ ಎಲ್ಲ ಸರಕಾರಿ ಶಾಖೆಗಳಲ್ಲಿ ಇದೆ. ಘಟನೆಯೂ ಈ ಬಗ್ಗೆ ಆಶ್ವಾಸನವೀಯುತ್ತದೆ. ಕೆಲವು ದಿನಗಳಿಗೆ ಹಿಂದೆ ಪಂಡಿತ ಜವಾಹರರು ಒಂದು ಭಾಷಣದಲ್ಲಿ ಹೀಗೆ ಹೇಳಿದರು.

೧) ಕಾಂಗ್ರೆಸು ಹಿಂದೆ ಗೊತ್ತುಪಡಿಸಿದ್ದ ೫೦೦ ರೂ. ಎಂದರೆ ಸದ್ಯದ ಲೆಕ್ಕದಂತೆ ೧೫೦೦ರಿಂದ ೨೦೦೦ ರೂಪಾಯಿಗಳ ವರೆಗಾಗುವದು. ಆದಾಯಕರ ಮೊದಲಾದವನ್ನು ಮುರಿದುಕೊಂಡ ನಂತರ ಪ್ರಧಾನ ಮಂತ್ರಿಗಳ ಸಂಬಳ ತಿಂಗಳಿಗೆ ೧೫೫೦ ರೂಪಾಯಿ ಮಾತ್ರ ಆಗುವದು. ಅತ್ಯುಚ್ಚ ಅಧಿಕಾರಿಯ ಸಂಬಳ ತಿಂಗಳಿಗೆ ೩೦೦೦ ರೂಪಾಯಿಗಳಿರಬೇಕೆಂದು ಪಬ್ಲಿಕ್ ಸರ್ವೀಸ್ ಕಮಿಶನು ಹೇಳಿದೆ.

೨) ರಾಷ್ಟ್ರಾಧ್ಯಕ್ಷರಿಗೆ ತಿಂಗಳಿಗೆ ೫೦೦೦ ರೂ ಸಂಬಳ ಮತ್ತು ಕೆಲ ಭತ್ತೆ ಸಿಕ್ಕುತ್ತದೆ. ಅವರಿಗೆ ಆದಾಯಕರವಿರುವದಿಲ್ಲ. ರಾಷ್ಟ್ರಾಧ್ಯಕ್ಷರೆಂದರೆ ರಾಷ್ಟ್ರದ ಮರ್ಯಾದೆ, ಗೌರವದ ಪ್ರತೀಕ. ಈ ಗೌರವ ಮತ್ತು ಮರ್ಯಾದೆಯನ್ನು ರಕ್ಷಿಸಿಕೊಳ್ಳಲು ಹೆಚ್ಚಿನ ಸಂಬಳ ಅವಶ್ಯವಾಗಿರದಿದ್ದರೂ ಅವರು ಅನೇಕ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಧರ್ಮಾದಾಯವೆಂದು ಬಹಳಷ್ಟು ಹಣವನ್ನು ಕೊಡಬೇಕಾಗುತ್ತದೆ. ರಾಷ್ಟ್ರದ ಮುಖ್ಯಸ್ಥರ ದರ್ಜೆ ಪ್ರತಿಷ್ಠೆಗೆ ತಕ್ಕಂತೆ ಅವರು ಜೀವನವನ್ನು ನಡೆಸಬೇಕಾಗುತ್ತದೆ. ಜನರ ಮನಸ್ಸಿಗೆ ಬಂದರೆ ಅವರ ಸಂಬಳವನ್ನು ಕಡಿಮೆ ಮಾಡಬಹುದು. ಆದರೆ ಅದರಿಂದ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯಲ್ಲಿ ವಿಶೇಷ ಬದಲಾವಣೆಯನ್ನೇನು ಸಾಧಿಸಲಾಗದು.'

ಶ್ರೀ. ಜವಾಹರಲಾಲಜಿಯವರು ರಾಷ್ಟ್ರದ ಅತಿ ಪ್ರಮುಖ ಧುರೀಣರು; ಅಂತೆಯೇ ಅವರ ಅಭಿಪ್ರಾಯಕ್ಕೆ ಹೆಚ್ಚು ಬೆಲೆ, ಅವರಂದುಕೆಯೇ ಕಾರ್ಯಕಲಾಪ ನಡೆಯುವವು. ಆದರೂ ಈ ಪ್ರಶ್ನೆಯನ್ನು ಇನ್ನೊಂದು ದೃಷ್ಟಿಯಿಂದ ವಿಚಾರಿಸುವದು ಅವಶ್ಯವಾಗಿದೆ.

ಸರಕಾರಿ ಸಂಬಳ ಪದ್ಧತಿಯ ದೊಡ್ಡ ದೋಷವೆಂದರೆ, ಮೇಲಿನ ಸ್ಥಾನಕ್ಕೆ ಹೋಗದೆಯೂ ದಿನೆಲ್ಲ ಸಂಬಳವೂ ಹೆಚ್ಚುತ್ತ ಹೋಗುವುದು. ಒಂದು ಹಂತಕ್ಕಿಂತ ಮುಂದೆ ವಿವಿಧ ತರಗತಿಗಳ ಸರಕಾರಿ ಮೇಲಧಿಕಾರಿಗಳ ಅವಶ್ಯಕತೆಗಳಲ್ಲಿ ಅಂಥ ಅಂತರವೇನೂ ಇರುವುದಿಲ್ಲ. ಮೇಲಿನ ಅಧಿಕಾರಕ್ಕೆ ಹೆಚ್ಚಿನ ಸಂಬಳವೆಂಬ ನಿಯಮಕ್ಕೆ ನೀತಿಯಲ್ಲಾಗಲಿ ನ್ಯಾಯದಲ್ಲಾಗಲಿ ಆಧಾರವಿಲ್ಲ. ಮೇಲಿನ ಅಧಿಕಾರದ ಗುರುತರವಾದ ಹೊಣೆಗಾಗಿ ಹೆಚ್ಚಿನ ಸಂಬಳ ಕೊಡಬೇಕೆಂದು ಹೇಳುವುದಾದರೆ, ಯಾವ ಮನುಷ್ಯನೂ ತನ್ನ ಸಾಮರ್ಥ್ಯದ ಮಿತಿಯೊಳಗೇ ದುಡಿಯಬಲ್ಲನೆಂದಲ್ಲಿ ಪ್ರತಿಯೊಬ್ಬನೂ ತಾನು ವಹಿಸಿಕೊಂಡ ಕಾರ್ಯದಲ್ಲಿ ಪೂರ್ಣ ಶಕ್ತಿಯನ್ನು ಪ್ರಯೋಗಿಸಿ ದುಡಿಯಲು ಬದ್ಧನಾಗಿದ್ದಾನೆಂದೂ ಮರೆಯದಿರೋಣ. ಹೆಚ್ಚಿನ ಸಂಬಳ ಆ ಅಧಿಕಾರಿಯ ಹೆಚ್ಚಿನ ಬುದ್ಧಿಶಕ್ತಿಗೆ ಕೊಟ್ಟ ಮನ್ನಣೆಯೆಂಬುದೂ ಸುಳ್ಳು; ಏಕೆಂದರೆ ಹೆಚ್ಚಾಗಿ ಮೇಲಿನ ಸ್ಥಾನಕ್ಕೆ ತೇರ್ಗಡೆಗಳು ನಡೆಯುವುದು ನೌಕರಿಯಲ್ಲಿ ಹಿರಿತನದ ಆಧಾರದ ಮೇಲೆಯೇ ಹೊರತು ಬುದ್ಧಿಯ ಹಿರಿಮೆಯ ಮೇಲಲ್ಲ. ಆಡಳಿತೆಯ ಅಧಿಕಾರವೂ ಕ್ಷೇತ್ರವೂ ಹೆಚ್ಚು ವಿಶಾಲವಾಗಿರುವ ಸ್ಥಾನಕ್ಕೆ ತೇರ್ಗಡೆ ಮಾಡುವುದೇ ಅಧಿಕಾರಿಯ ಕಾರ್ಯದಕ್ಷತೆಗೆ ಸಾಕಷ್ಟು ಮನ್ನಣೆಯೆಂದು ಬಗೆಯಬೇಕು. ಮೇಲಿನ ಅಧಿಕಾರದಲ್ಲಿರುವವನು ತನ್ನ ಸ್ಥಾನದ ಕರ್ತವ್ಯವನ್ನು ನಿರ್ವಹಿಸುವುದಲ್ಲದೆ ದೇಶಸೇವೆಯಲ್ಲಿ ಕೈಕೆಳಗಿನವರಿಗೆ ಉತ್ಸಾಹ ಬರುವಂತೆ ಮಾಡುವವನಿರಬೇಕು. ಸೇವೆ ಮತ್ತು ಸ್ವಾರ್ಥತ್ಯಾಗದಲ್ಲಿ ತಾನೇ ಮೇಲ್ಪಂಕ್ತಿಯಾದರೆ ಮಾತ್ರ ಇದು ಸಾಧ್ಯವಿದೆ. ಆದ್ದರಿಂದ, ನಮ್ಮ ದೇಶದ ಬಡತನವನ್ನು ಗಮನಿಸಿ, ಉಚ್ಚ ಅಧಿಕಾರಿಗಳ ಸಂಬಳವನ್ನು ಮಿತಿಯಲ್ಲಿರಿಸುವುದು ವಿಹಿತವಾದದ್ದು.

ಸರಕಾರಿ ನೌಕರರಿಗೆ ಹೆಚ್ಚು ಸಂಬಳ ವಿರಬೇಕೆಂಬುದರಲ್ಲಿ ಏನಾದರೂ ನ್ಯಾಯವಿದ್ದರೂ ಅದನ್ನು ಗವರ್ನರರಿಗೆ, ಮಂತ್ರಿಗಳಿಗೆ, ಶಾಸನ ಸಭಾಸದರಿಗೆ ಮತ್ತು ಅಂಥಾ ವಿಶೇಷ ಪದಸ್ಥರಿಗೆ ಅನ್ವಯಿಸುವುದು ಸರಿಯಲ್ಲ. ಅವರ ವರ್ಗವೇ ಬೇರೆ, ಅವರು ಜನಪ್ರತಿನಿಧಿಗಳು; ಜನಸೇವಾದೀಕ್ಷೆ ಹೊಂದಿಯೇ ಅವರು ಅಲ್ಲಿ ಹೋಗುವರು. ಜನರಿಗೆ ಮಾರ್ಗದರ್ಶನ ಮಾಡುವುದು ಅವರ ಕರ್ತವ್ಯ. ಅವರು ಜೀವನದ ಮಟ್ಟವನ್ನು ಏಕೆ ಹೆಚ್ಚಿಸಿಕೊಳ್ಳಬೇಕು? ಅಧಿಕಾರ ಸ್ಥಾನದ ಗೌರವ ಗಾಂಭೀರ್ಯಗಳ ರಕ್ಷಣೆಗಾಗಿ ಹೆಚ್ಚು ಸಂಬಳ ಭತ್ತೆಗಳು ಅವಶ್ಯವೆಂದು ಶ್ರೀ. ಜವಾಹರಲಾಲ ನೆಹರು ಹೇಳುತ್ತಾರೆ. ಆದರೆ ಸ್ಥಾನ ಗೌರವ ಗಾಂಭೀರ್ಯಗಳು ನಿಶ್ಕಲ್ಮಷ ಸರಳತೆಯಿಂದ ಉಳಿದಾವೋ ಆಡಂಬರದಿಂದಲೋ? ಬ್ರಿಟಿಷರು ಈ ದೇಶವನ್ನು ಶೋಷಿಸಲು ಬಂದವರು; ತಮ್ಮ ಆಳಿಕೆಯನ್ನು ಸ್ಥಿರಗೊಳಿಸಬೇಕಾದರೆ ಜನರಲ್ಲಿ ಒಂದು ಬಗೆಯ ಭಯವನ್ನುಂಟುಮಾಡಬೇಕೆಂದು ಅವರು ಆಡಂಬರದ ಜೀವನವನ್ನು ಉಪಕ್ರಮಿಸಿದರು. ಆದರೆ ಇಂದಿನ ಪ್ರಜಾತಂತ್ರದಲ್ಲಿಯೂ ದೇಶದ ಸಂಪ್ರದಾಯದ ದೃಷ್ಟಿಯಿಂದಲೂ ಈ ಆಡಂಬರ ಕ್ಷಮ್ಯವಾದೀತೆ? ಈ ದೇಶದಲ್ಲಿ ಅರಸು ಅಮೀರರಿಗಿಂತ ಋಷಿ ಫಕೀರರಿಗೆ ಎಂದಿನಿಂದಲೂ ಹೆಚ್ಚು ಗೌರವ ಸಲ್ಲುತ್ತಿದೆ. ರಾಜ, ಶ್ರೀಮಂತರಲ್ಲಿ ಕೂಡ ಸರಳ ಪರಿಶುದ್ಧ ಜೀವನ ಮಾಡಿದವರೇ ವೈಭವ ಪ್ರದರ್ಶನ ಮಾಡಿದವರಿಗಿಂತ ಹೆಚ್ಚು ಆದರ ಪಾತ್ರರಾಗಿದ್ದಾರೆ. ಗೌರವ ಗಾಂಭೀರ್ಯಗಳಿಗೂ ಧನ ವೈಭವಗಳಿಗೂ ಕಳಕು ಹಾಕುವುದು ಈ ಬಡ ದೇಶಕ್ಕೆ ಭೂಷಣವಾದೀತೇ?

ಈಗಿನ ಮಂತ್ರಿಗಳಲ್ಲಿ ಅನೇಕರು ಸಾಮಾನ್ಯ ಮಧ್ಯಮ ವರ್ಗದವರು. ಅಧಿಕಾರಕ್ಕೆ ಬರುವ ಮೊದಲು ಸರಳ ಜೀವನ ನಡೆಸುತ್ತಿದ್ದರು. ಹಳ್ಳಿಗಳಲ್ಲಿ ನಡೆಯಲು ಇಲ್ಲವೆ ಮೋಟರಿನಲ್ಲಿ ನಗರದಲ್ಲಿ ಸಂಚರಿಸಲು ಅವರು ನಾಚುತ್ತಿರಲಿಲ್ಲ. ಮಂತ್ರಿಗಳಾದೊಡನೆ ಆ ರೀತಿ ಜೀವನಪಥವನ್ನು ಬದಲಿಸಬೇಕು? ಅನೇಕರು ಸ್ವರಾಜ್ಯ ಸಂಗ್ರಾಮದಲ್ಲಿ ಬಹುಕಾಲ ಬಹಳ ಸ್ವಾರ್ಥತ್ಯಾಗ ಮಾಡಿದವರು. ದೀರ್ಘಾವಧಿಯ ಸೆರೆಮನೆ ವಾಸ ಮಾಡುವಾಗ ಅವರಿಗೆ ಏನೂ ತಾಪವೆನಿಸಲಿಲ್ಲ. ಈಗ ದೊಡ್ಡ ಸಂಬಳವಿಲ್ಲದೆ ಅವರ ಕಾಲಕ್ಷೇಪವಾಗುವದಿಲ್ಲವೆಂದರೇನು? ಆಗ ಸ್ವಾರ್ಥತ್ಯಾಗ ಅಗತ್ಯವಿತ್ತು; ಈಗ ಇಲ್ಲವೆಂದೇ? ನಮ್ಮ ಆಡಳಿತೆಯಲ್ಲಿಯೂ ಕಾಂಗ್ರೆಸಿನಲ್ಲಿಯೂ ಎಲ್ಲ ಹಂತದಲ್ಲಿಯೂ ಭ್ರಷ್ಟಾಚಾರ ಹೆಚ್ಚಿದೆಂದು ಮುಂದಾಳುಗಳಿಗೆ ಚಿಂತೆಯಾಗಿದೆ. ಅದರ ನಿವಾರಣೆಗೆ ಅವರು ಅತಿಶಯ ಪ್ರಯತ್ನವನ್ನು ಮಾಡುತ್ತಾರೆ. ಆದರೆ ಸ್ವಾರ್ಥತ್ಯಾಗದ ಗರಿಯನ್ನೇರದೆ ಇದು ಸಾಧಿಸೀತೇ ಎಂದು ನಾನು ಕೇಳುವೆ? ಜನರಿಗೆ ದಾರಿತೋರಿಸಬೇಕಾದ ಮುಂದಾಳುಗಳು ಮುಂದೆ ಬಂದು ತ್ಯಾಗದ ಮೇಲ್ಪಂಕ್ತಿ ಹಾಕಿದ ಹೊರತು ಸಾಮಾನ್ಯ ಜನರ ಶುದ್ಧೀಕರಣ ಎಂದಾದರೂ ಕೈಗೂಡಬಹುದೆ? ಗವರ್ನರರು, ಮಂತ್ರಿಗಳೇ ಮೊದಲಾದವರು ಆದರ್ಶರೆಂದು ಜನರ ಭಾವನೆ. ಅವರು ತಮ್ಮ ಆರಾಮ ಜೀವನವನ್ನು ಕಡಿಮೆ ಮಾಡಿ ಕಡಿಮೆ ಸಂಬಳದಿಂದ ಸರಳ ಜೀವನ ಕೈಕೊಳ್ಳುವುದು ಜನಹಿತಕ್ಕೆ ಅವಶ್ಯ.

ಸಂಬಳ ಕಡಿಮೆ ಮಾಡಿದ್ದರಿಂದ ದೇಶದ ಆರ್ಥಿಕ ಸ್ಥಿತಿಯಲ್ಲೇನೂ ಬದಲಾವಣೆಯಾಗದೆಂದು ನೆಹರು ಹೇಳುತ್ತಾರೆ. ಇದು ಬಹಳ ಮಟ್ಟಿಗೆ ನಿಜ. ಆದರೆ ಖರ್ಚು ಉಳಿಸುವುದು ಇದರಲ್ಲಿ ಮುಖ್ಯವಲ್ಲ; ದೇಶದಲ್ಲಿ ಹಬ್ಬಿರುವ ಬಡತನ–ಕಂಗಾಲತನದ ಸನ್ನಿವೇಶದಲ್ಲಿ ಇದೆಷ್ಟು ಮಟ್ಟಿಗೆ ಸಮಂಜಸವಾಗಿ ಕಾಣುವುದೆಂಬುದೀಗ ಪ್ರಶ್ನೆ. ಜನರು ತಮಗಿಂತ ಶ್ರೀಮಂತರೆನಿಸಿದವರನ್ನು ಅನುಕರಿಸುತ್ತಾರೆ. ಶ್ರೇಷ್ಠರೆನಿಸಿದವರೇ ದೊಡ್ಡ ಸಂಬಳದ ಗೌರವ ಗಾಂಭೀರ್ಯಗಳನ್ನು ಕಂಡರೆ ಇತರರೂ ಹಣಗಳಿಸುವುದಕ್ಕೇ ಎಲ್ಲ ಚಾತುರ್ಯ ಚೈತನ್ಯಗಳನ್ನು ವಿನಿಯೋಗಿಸುವುದು ಸಹಜ. ಜನರಲ್ಲಿ ನಿಸ್ವಾರ್ಥ ಜೀವನದ ಇಚ್ಛೆಯನ್ನು ಹುಟ್ಟಿಸಬೇಕಾಗಿದೆ. ಇದು ಕೈಗೂಡಬೇಕಾದರೆ, ಜನರಲ್ಲಿ ಉದಾತ್ತ ಆಕಾಂಕ್ಷೆಗಳನ್ನು ಪ್ರೇರಿಸುವಂತೆ ಹಿರಿಯರ ನಡಾವಳಿ ಇರುವುದವಶ್ಯ.

ವಾದಕ್ಕಾಗಿ, ಈಗಿನ ಪ್ರಮಾಣದ ಸಂಬಳಗಳು ಅಧಿಕಾರಿಗಳ ಕ್ಷಮತೆಯನ್ನು ಕಾಯ್ದುಕೊಳ್ಳಲು ಅಗತ್ಯವೆಂದೊಪ್ಪಿದರೂ ಅಷ್ಟು ಹಣದ ಅವಶ್ಯವಿಲ್ಲದವನೂ ಅದನ್ನು ಸ್ವೀಕರಿಸಬೇಕೆ? ಎಂಬ ಪ್ರಶ್ನೆ ಏಳುತ್ತದೆ. ಅವರಲ್ಲನೇಕರಿಗೆ ಒಳ್ಳೇ ವರಮಾನ ಕೊಡುವ ಆಸ್ತಿಗಳುಂಟು; ಅಥವಾ ಸ್ವಂತ ಸಂಪಾದನೆಯಿಂದ ಕುಟುಂಬ ಪೋಷಣೆ ಮಾಡಬಲ್ಲ ಮಕ್ಕಳೋ ಅಣ್ಣತಮ್ಮಂದಿರೋ ಉಂಟು. ಹಳೇ ಪರಿಭಾಷೆಯಲ್ಲಿ ಹೇಳಬಹುದಾದರೆ ಅವರೀಗ ವಾನಪ್ರಸ್ಥಾಶ್ರಮವನ್ನು ಪ್ರವೇಶಿಸಲು ಯೋಗ್ಯರಿದ್ದಾರೆ. ಸರಕಾರ ಕೊಟ್ಟರೂ ಅಂಥವರು ಏಕೆ ತೆಗೆದುಕೊಳ್ಳಬೇಕು? ಜನರಿಗೆ ಮೇಲ್ಪಂಕ್ತಿ ಹಾಕಲು ಅವರು ಅಷ್ಟು ಸ್ವಾರ್ಥತ್ಯಾಗವನ್ನೂ ಮಾಡಲಾರರೇ? ತಮಗೆ ಬರಬಹುದಾದುದಕ್ಕಿಂತ ಬಹಳ ಕಡಿಮೆ ಸಂಬಳ ತೆಗೆದುಕೊಳ್ಳುವವರೂ ಕೆಲವರಿದ್ದಾರೆ ನಿಜ; ಆದರೆ ಅವರ ಸಂಖ್ಯೆ ತೀರ ಕಡಿಮೆಯಾಗಿರುವುದರಿಂದ ಜನರ ಮೇಲೆ ಇಲ್ಲವೆ ಇತರ ಅಧಿಕಾರಿಗಳ ಮೇಲೆ ಅದರಿಂದ ಏನೂ ಪ್ರಭಾವ ಬೀಳುವದಿಲ್ಲ. ಅಂಥ ಉದಾಹರಣೆಗಳಿಗೆ ಸಾಕಷ್ಟು ಪ್ರಸಿದ್ಧಿಯೂ ದೊರೆಯದಂತೆ ನೋಡಿಕೊಳ್ಳುತ್ತಿದ್ದಾರೆಂದು ತೋರುತ್ತದೆ. ಇನ್ನು ಕೆಲವರು ಕಡಿಮೆ ಸಂಬಳದಿಂದ ತೃಪ್ತರಾಗುವ ಮನಸಿದ್ದರೂ ಸಹ ಕಾರ್ಯಕರ್ತರು ಸಿಟ್ಟುಗೊಳ್ಳಬಹುದೆಂಬ ಹೆದರಿಕೆಯಿಂದ ಹಿಂಜರಿಯುತ್ತಿರುವಂತೆಯೂ ಕಾಣುತ್ತದೆ. ಸರಕಾರಿ ನೌಕರರ ವಾತಾವರಣವೇ ದೋಷಯುಕ್ತವಾಗಿದೆ. ಬೇಕಾದವರು ಪೂರ್ಣ ಸಂಬಳ ತೆಗೆದುಕೊಂಡರೂ ಬೇರೆ ಬೇರೆ ಉತ್ಪನ್ನವಿದ್ದವರು ಸಂಬಳವಿಲ್ಲದೆ ಅಥವಾ ಕಡಿಮೆ ಸಂಬಳಕ್ಕೆ ಕೆಲಸ ಮಾಡಲು ಅವಕಾಶವಿರುವಂತೆ ಬದಲಾವಣೆ ಮಾಡಬೇಕಾಗಿದೆ.

ವಿನೋಬಾಜಿಯವರು ದೇಶದ ರಾಜಕೀಯ ವ್ಯವಸ್ಥೆ ಸಾಧಾರಣವಾಗಿ ಮೂರು ಭಾಗಗಳಿಂದ ಕೂಡಿರಬೇಕೆಂದಿದ್ದಾರೆ: ಆಡಳಿತೆ ನಡೆಸುವ ಅಧಿಕಾರಸ್ಥ ಪಕ್ಷ; ಸಮಾನ ಭೂಮಿಕರ ಸಹಕಾರ ಮತ್ತು ರಚನಾತ್ಮಕ ವಿರೋಧದ ಧೋರಣೆಯನ್ನನುಸರಿಸುವ ವಿರೋಧಿ ಪಕ್ಷ; ಇವೆರಡಲ್ಲದೆ ಅಧಿಕಾರ ಸಂಪಾದನೆಯ ರಾಜಕಾರಣದಲ್ಲಿ ಪ್ರವೇಶಿಸದೆ ಜನಸೇವೆಯಲ್ಲಿ ತೊಡಗಿದ ಪಕ್ಷಾತೀತ ಕಾರ್ಯಕರ್ತರ ಗುಂಪು. ಈ ನಿಸ್ವಾರ್ಥ ಕಾರ್ಯಕರ್ತರ ಗುಂಪು ಎಷ್ಟು ದೊಡ್ಡದೂ ಬಲಿಷ್ಠವೂ ಇದೆಯೋ ಅಷ್ಟರಮಟ್ಟಿಗೆ ಆಡಳಿತೆಯೂ ಪ್ರಜಾತಂತ್ರಾತ್ಮಕ ಶಕ್ತಿಗಳೂ ಪ್ರಾಮಾಣಿಕವೂ ಭ್ರಷ್ಟಾಚಾರವಿಲ್ಲದ್ದೂ ಆಗುವವು; ಈ ತ್ರಿಕೋಣದ ಮೂರನೇ ಭುಜವನ್ನು ರಚನಾತ್ಮಕ ಕಾರ್ಯಕರ್ತರು ಮಾತ್ರವೇ ನಿರ್ಮಿಸಬಲ್ಲರೆಂದು ಸ್ವಲ್ಪ ವಿಚಾರಿಸಿದರೆ ತಿಳಿಯುವುದು. ಒಂದು ರೀತಿಯಲ್ಲಿ ದೇಶಹಿತಕಾರಕವಾದ್ದೆಲ್ಲವೂ ರಚನಾತ್ಮಕವೇ. ಆದರೆ ಸಾಮಾನ್ಯವಾಗಿ ಅಹಿಂಸಾ ಭಾವದಿಂದ ಗಾಂಧೀ ಕಾರ್ಯಕ್ರಮದ ಪ್ರಗತಿಗಾಗಿ ಕೈಕೊಂಡ ಕಾರ್ಯವನ್ನೇ ರಚನಾತ್ಮಕವೆಂದು ನಿರ್ದೇಶಿಸಲಾಗುವುದು. ಇತರ ವಿಷಯಗಳನ್ನಲ್ಲದೆ ರಚನಾತ್ಮಕ ಕಾರ್ಯಕರ್ತರು ಅಪರಿಗ್ರಹ ವ್ರತವನ್ನೂ ಸ್ವೀಕರಿಸಬೇಕು. ಅವರ ಜೀವನದಲ್ಲಿ ಆ ಗುಣಕ್ಕೆ ಪ್ರಮುಖ ಸ್ಥಾನವಿರಬೇಕು. ಆರ್ಥಿಕ ಸಮಾನತೆ ಸರ್ವೋದಯ ಸಮಾಜದ ಒಂದು ಮುಖ್ಯ ಲಕ್ಷಣ. ಹೀಗಿರುವಾಗ ದೊಡ್ಡ ಸಂಬಳಕ್ಕೆ ಅವರು ಹೇಗೆ ಕೈಹಾಕುವರು? ಸರಕಾರವೆಷ್ಟೇ ಸಂಬಳ ಕೊಡಲಿ, ತಮ್ಮ ವೆಚ್ಚಕ್ಕೆ ಬೇಕಾದಷ್ಟನ್ನು ಮಾತ್ರ ಅವರು ಪರಿಗ್ರಹಿಸಬೇಕು.

—ಹರಿಜನ

ಕೊಡಗು ಸರಕಾರಿ ಕಾಲೇಜಿನ

ತೃತೀಯ ವಾರ್ಷಿಕೋತ್ಸವ.

ಕೊಡಗು ಸರಕಾರಿ ಕಾಲೇಜಿನ ತೃತೀಯ ವಾರ್ಷಿಕೋತ್ಸವವು ದಿನಾಂಕ ೨ ರಂದು ನಡೆಯಿತು. ವಾರ್ಷಿಕೋತ್ಸವಕ್ಕೆ ಪುರವಣಿಯಾಗಿ ತಾರೀಕು ೧ ರಲ್ಲಿ ಆಟೋಟಗಳ ಸ್ಪರ್ಧೆಯು ಜರಗಿತು. ಆಟೋಟಗಳಲ್ಲಿ ಕಾಲೇಜು ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು. ವಿದ್ಯಾರ್ಥಿನಿಯರಲ್ಲಿ ಶ್ರೀಮತಿ ಚೆನ್ನಿರ ಚಂಗಮ್ಮನವರೂ, ವಿದ್ಯಾರ್ಥಿಗಳಲ್ಲಿ ಶ್ರೀ. ಕಬ್ಬಚ್ಚೀರ ಅಪ್ಪಯ್ಯನವರೂ ಪೆಂಟಾತ್ಲನ್ ಸ್ಪರ್ಧೆಯಲ್ಲಿ ಶ್ರೀ ಮಾಪಂಗಡ ಸಿ ಅಪ್ಪಯ್ಯನವರೂ, ಛಾಂಪಿಯನ್ ಶಿಪ್ ಕಪ್ಪನ್ನು ಗೆದ್ದರು. ಈ ವರ್ಷದ ಆಟೋಟಗಳಲ್ಲಿ ಹೊಸ ಏರ್ಪಾಡೊಂದನ್ನು ಮಾಡಲಾಗಿದ್ದು ಕಾಲೇಜು ವಿದ್ಯಾರ್ಥಿಗಳನ್ನು ಅಶೋಕ ನಿವಾಸ್, ಅಕ್ಬರ್ ನಿವಾಸ್, ಶಿವಾಜಿ ನಿವಾಸ್ ಮತ್ತು ಪ್ರತಾಪ್ ನಿವಾಸ್ ಎಂಬದಾಗಿ ನಾಲ್ಕು ತಂಡವಾಗಿ ವಿಭಾಗಿಸಿ ಒಲಂಪಿಕ್ ಪದ್ಧತಿಯ ಮಾಸ್ ಡ್ರಿಲ್ ಏರ್ಪಡಿಸಲಾಗಿತ್ತು. ಸಮವಸ್ತ್ರದಲ್ಲಿ ಏಕರೀತಿಯಲ್ಲಿದ್ದ ಈ ತಂಡವು ಕಣ್ಣಿಗೆ ಸೊಗಸಾಗಿತ್ತು. ಈ ಆದರ್ಶ ರೀತಿಯ ಏರ್ಪಾಡನ್ನು ಮಾಡಿದ ಇನ್ಸ್ಟ್ರಕ್ಟರಾದ ಶ್ರೀ ಕೋದಂಡ ಪೂವಯ್ಯನವರು ವಂದನಾರ್ಹರು. ಆಟೋಟಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ "ಮಾರ್ಚ್ ಪಾಸ್ಟ್" ಸೆಲ್ಯೂಟನ್ನು ಬ್ರಿಗೇಡಿಯರ್ ಚಪ್ಪುಡೀರ ಪೊನ್ನಪ್ಪನವರು ಸ್ವೀಕರಿಸಿದರು. ಆಟೋಟಗಳನಂತರ ಅಧ್ಯಕ್ಷರಾದ ಪೊನ್ನಪ್ಪನವರು ಶಾರೀರಿಕ ಶಿಕ್ಷಣದ ಮಹತ್ವ, ಜೀವನದಲ್ಲಿ ಶಿಸ್ತು ಮತ್ತು ಸಂಘಟನೆಯ ಪ್ರಾಮುಖ್ಯತೆಗಳನ್ನು ಕುರಿತು ಮಾತಾಡಿದರು. ಮಿಸೆಸ್ ಪೊನ್ನಪ್ಪನವರು ಜಯಶೀಲರಾದವರಿಗೆ ಬಹುಮಾನಗಳನ್ನು ಹಂಚಿದರು. ಕಾಲೇಜಿಗಾಗಿ ಶ್ರೀ ಕೋಟೇರ ಐಯ್ಯಪ್ಪನವರು ದಿವಂಗತ ತಮ್ಮ ಪುತ್ರ ಮೇಜರ್ ಅಪ್ಪಣ್ಣನವರ ಜ್ಞಾಪಕಾರ್ಥವಾಗಿ ಕೊಟ್ಟ ಅತ್ಯುತ್ತಮವಾದ ಶೀಲ್ಡು ಒಂದು ವೈಶಿಷ್ಟ್ಯವಾಗಿತ್ತು.

ಮರುದಿನ ಕೊಡಗಿನ ಚೀಫ್ ಕಮಿಷನರಾದ ಶ್ರೀ. ಕ. ದಯಾಸಿಂಗ್ ಬೇಡಿಯವರ ಅಧ್ಯಕ್ಷತೆಯಲ್ಲಿ ಕಾಲೇಜು ದಿನಾಚರಣೆಯು ನಡೆಯಿತು. ಪ್ರಾರ್ಥನೆಯನಂತರ ತಾತ್ಕಾಲಿಕ ಪ್ರಿನ್ಸಿಪಾಲರಾದ ಶ್ರೀ. ವಿ. ವೆಂಕಟರಮಣ ರಾಯರು ಕಾಲೇಜ್ ವರದಿಯನ್ನು ಓದಿದರು. ವರದಿಯಲ್ಲಿ ಕಾಲೇಜಿನ ಕಾರ್ಯಕಲಾಪಗಳ ವಿವರವನ್ನು ಕೊಟ್ಟದಲ್ಲದೆ ಬಿರುಸಾಗಿ ಕಟ್ಟಲ್ಪಡುತ್ತಿರುವ ಕಾಲೇಜು ಕಟ್ಟಡವು ಶೀಘ್ರ ಮುಗಿದು ಹೆಚ್ಚಿನ ತರಗತಿಗಳು ಬೇಗನೆ ತೆರೆಯಲ್ಪಡಲೆಂದು ಆಶಿಸಿದರು. ನಂತರ ಕಾಲೇಜಿನ ಪಾಠಪ್ರವಚನಗಳಲ್ಲಿಯೂ, ವಾಕ್‌ಸ್ಪರ್ಧೆ, ಪ್ರಬಂಧ ಸ್ಪರ್ಧೆಗಳಲ್ಲಿಯೂ ಜಯಶೀಲರಾದವರಿಗೆ ಬಹುಮಾನ ಹಂಚಲ್ಪಟ್ಟಿತು.

ಶ್ರೀ. ಐಚೆಟ್ಟಿರ ಸುಬ್ಬಯ್ಯನವರು ಕಾಲೇಜಿನ ಶುಭವನ್ನು ಕೋರಿ ಮಾತಾಡಿದರು. ಈ ಕಾಲೇಜಿನ ಸ್ಥಾಪನೆಗೆ ತಾನೂ ಬಹು ಪ್ರಯತ್ನ ಪಟ್ಟಿರುವದಾಗಿಯೂ ಕೊಡಗಿನಂಥಾ ಚಿಕ್ಕ ಪ್ರದೇಶದ ಈ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಸಂಕೀರ್ಣ ಮನೋಭಾವ ಹಾಗೂ ಚಿಕ್ಕ ದೃಷ್ಟಿ ಹೆಚ್ಚಾಗುವ ಅನುವಿರುವದರಿಂದ ವಿದ್ಯಾರ್ಥಿಗಳು ಎಚ್ಚರಿಕೆ ವಹಿಸಿ ವಿಶಾಲ ಮನೋಭಾವವನ್ನು ಹೆಚ್ಚಿಸಿಕೊಳ್ಳಬೇಕೆಂದೂ ಹೇಳಿದರು. ಜಾತೀಯ ಭಾವನೆಯು ಇಂದು ಬಹುಮಟ್ಟಿಗೆ ಹೆಚ್ಚುತ್ತಿರುವದರಿಂದ ವಿದ್ಯಾರ್ಥಿಗಳು ಅಂಥಾದ್ದಕ್ಕೆಡೆ ಕೊಡದೆ ವರ್ತಿಸುವದು ಅವಶ್ಯವೆಂದು ಸೂಚಿಸಿದರು.

ಕಾಲೇಜ್ ಯೂನಿಯನ್ನಿನ ಕಾರ್ಯದರ್ಶಿ ಶ್ರೀ. ಎಂ. ಎಂ. ದೇವಯ್ಯನವರು ಮಾತಾಡುತ್ತಾ ೧೯೫೨ ರಲ್ಲೇ ಬಿ. ಎ ತರಗತಿ ತೆರೆಯಲ್ಪಡಬೇಕೆಂದೂ ಅನೇಕ ವಿದ್ಯಾರ್ಥಿಗಳು ಹೊರಗೆ ಓದಲು ಹೋಗಲಾರದೆ ಕಾದಿರುವರೆಂದೂ ಆದ್ದರಿಂದ ಚೀಫ್ ಕಮಿಷನರು ಆದಷ್ಟು ಬೇಗ ಇದನ್ನು ಸಾಧಿಸಿಕೊಡಬೇಕೆಂದೂ ಹೇಳಿದರು.

ಅಧ್ಯಕ್ಷರಾದ ಬೇಡಿಯವರು ಮಾತಾಡುತ್ತಾ ಕಾಲೇಜಿನ ಕಾರ್ಯಕಲಾಪಗಳಿಂದ ಸಂತೋಷವಾಯಿತೆಂದೂ, ಕಾಲೇಜು ದಿನೇ ದಿನೇ ಅಭಿವೃದ್ಧಿಗೊಳ್ಳುತ್ತಿರುವದು ಶುಭಚಿಹ್ನೆಯೆಂದೂ ಹೇಳಿದರು. ಆದರೆ ಇಂದಿನ ವಿದ್ಯಾಭ್ಯಾಸದಲ್ಲಿ ಡಿಗ್ರಿಪಡೆದು ನಿರುದ್ಯೋಗಿಗಳಾಗುವ ಸ್ಥಿತಿಯೇ ಹೆಚ್ಚಿರುವ ಕಾರಣ ಈ ಮಾರ್ಗದಿಂದ ದೇಶದ ಹಿತ ಆಗುತ್ತಿಲ್ಲವೆಂದರು. ಕೊಡಗು ಕಾಲೇಜಿನ ವಿದ್ಯಾರ್ಥಿಗಳು ವ್ಯವಸಾಯವನ್ನು ಕಲಿಯಬೇಕು. ಕಾಲೇಜು ಆವರಣದಲ್ಲಿ ಉತ್ತಮ ಹೂತೋಟ, ತರಕಾರಿ ತೋಟಗಳನ್ನು ಮಾಡಬೇಕು. ಪೇಟೆಬೀದಿಗಳಲ್ಲಿ ಬೇಕಾಬಿಟ್ಟಿಯಾಗಿ ವಿದ್ಯಾರ್ಥಿಗಳು ಸುತ್ತುತ್ತಿರದೆ ಆದರ್ಶರೀತಿಯಿಂದ ವರ್ತಿಸಿ ಕಾಲೇಜಿಗೆ ಗೌರವ ತರಬೇಕು ಎಂದರು.

ನಂತರ ಭಾಷಣವಿತ್ತವರಿಗೂ, ಅಧ್ಯಕ್ಷರಿಗೂ, ಸಭಿಕರಿಗೂ ಯೂನಿಯನ್ನಿನ ಜತೆ ಕಾರ್ಯದರ್ಶಿನಿಯಾದ ಶ್ರೀ ಅಜ್ಜಾಮಾಡ ದೇಚಮ್ಮನವರು ವಂದನೆಯನ್ನರ್ಪಿಸಿದರು. "ಜನ ಮನ ಗಣ" ಹಾಡಿದನಂತರ ಸಭೆಯು ಮುಕ್ತಾಯಗೊಂಡಿತು.

ಇದಾದ ಮೇಲೆ ಮೂರು ನಾಟಕಗಳು ಕಾಲೇಜು ವಿದ್ಯಾರ್ಥಿಗಳಿಂದ ಅಭಿನಯಿಸಲ್ಪಟ್ಟವು. ಇಂಗ್ಲಿಷ್, ಹಿಂದೀ ಮತ್ತು ಕನ್ನಡ ನಾಟಕಗಳಲ್ಲಿ ಹಿಂದೀ ನಾಟಕವೇ ಚೆನ್ನಾಗಿತ್ತು. ಉಳಿದ ನಾಟಕಗಳು ಅಷ್ಟು ಉತ್ತಮವಾಗಿರಲಿಲ್ಲ. ಮನೋರಂಜನೆಗಾಗಿ ಹಾಡು ಹಾಡಿದವರಲ್ಲಿ ಶ್ರೀಮತಿ ಕೆ. ಕೆ. ಮಂಜುಳ ಇವರು ಸುಶ್ರಾವ್ಯವಾಗಿ ಹಾಡಿ ಎಲ್ಲರನ್ನು ಆನಂದಗೊಳಿಸಿದರು. ನಾಟಕಗಳಲ್ಲಿ ಉತ್ತಮವಾಗಿ ನಟಿಸಿದವರಿಗೆ ಬಹುಮಾನ ವಿತರಣೆಯಿಂದ ಯಶಸ್ವಿಯಾಗಿ ಸಮಾರಂಭವು ಕೊನೆಗೊಂಡಿತು.

BIRTH CONTROL.

ಮಿತ ಸಂತಾನ.

ಮಾನವ ಜನಾಂಗದ ನೆಮ್ಮದಿ ಸ್ವಾಸ್ಥ್ಯಗಳಿಗಾಗಿ ಅನೇಕ ಸಂದರ್ಭಗಳಲ್ಲಿ ಗರ್ಭ ನಿರೋಧವು (BIRTH CONTROL) ಅವಶ್ಯಕವೆನಿಸುತ್ತದೆ ದಂಪತಿಗಳ ಆರೋಗ್ಯ ಕೆಡದಂತೆ ಬೆರೆಯುವ ಆಸೆಗೆ ಅಡ್ಡ ಬಾರದಂತೆ ನವೀನ ಶಾಸ್ತ್ರೀಯ ರೀತಿಯ ಔಷಧಿ ಮತ್ತು ಪ್ರಯೋಗಗಳಿಂದ ಬಹು ಸುಲಭ ರೀತಿಯಲ್ಲಿ ಮಿತ ಸಂತಾನದ ಕಾರ್ಯವನ್ನು ಸಾಧಿಸಲು ನಾವು ನಮ್ಮ ಔಷಧಾಲಯದಲ್ಲಿ ತಕ್ಕ ಚಿಕಿತ್ಸೆ ಏರ್ಪಡಿಸಿದ್ದೇವೆ. ಈ ವಿಷಯದಲ್ಲಿ ಹೆಚ್ಚು ವಿಚಾರ ತಿಳಿಯಬಯಸುವವರು ನಾಣ್ಯಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಡಾಕ್ಟರ್ ಪಿ. ಎಂ. ಗಣಪತಿ,
(ರಿಟಯರ್ಡ್ ಮೆಡಿಕಲ್ ಆಫೀಸರ್)
ಮಿತಸಂತಾನ ಔಷಧಾಲಯ.
BIRTH CONTROL CLINIC.
ಸೋಮವಾರಪೇಟೆ, ಉ. ಕೊಡಗು.

ಎಲ್ಲವೂ ಮತ ಪಡೆಯಲಿಕ್ಕೆ!

ದುಡ್ಡು ಸೂರೆ ಮಾಡುವವ ಮಾತ್ರ ಚುನಾವಣೆಗೆ ಹೋರಾಡಬೇಕು!

ಸಂಧ್ಯ, ಭೋಜನ ಸಮಾರಂಭ, ಊಟ, ತಿಂಡಿ, ತಿನಸುಗಳಿಂದ ಮಾತ್ರ ಮತಗಳು ದೊರೆಯುತ್ತಿದ್ದಿಲ್ಲ; ಹಣವನ್ನೂ ಕೊಡಬೇಕಾಗುತ್ತಿತ್ತು. ಒಮ್ಮೊಮ್ಮೆ ಸುಂದರ ಸ್ತ್ರೀಯರಿಂದ ಆಲಿಂಗನ ಚುಂಬನಗಳನ್ನೂ ಕೊಡಿಸಬೇಕಾಗುತ್ತಿತ್ತು. ಇಂಥಾ ಅನೇಕ ಅಕ್ರಮ, ಅವ್ಯಾಪಾರ ನಡೆಯದಿದ್ದರೂ ಕೆಲವು ರೀತಿಯ ದುರ್ವ್ಯಾಪಾರವು ಕೊಡಗಿನಲ್ಲಿಯೂ ನಡೆದಿಲ್ಲವೇ?

'ಗರಡೀಮನೆ ಕಟ್ಟಿಸಲಿಕ್ಕೆ ಎರಡು ಸಾವಿರರೂಪಾಯಿ ಕೊಟ್ಟವರಿಗೆ ನಮ್ಮೂರ ಓಟು'

'ನಮ್ಮ ಹೊಳೆಗೆ ಕಟ್ಟೆ ಕಟ್ಟಿಸುವವರಿಗೆ ನಮ್ಮ ಓಟು.'

ಇವೇ ಮೊದಲಾದವು ಮೊನ್ನಿನವರೆಗೆ ನಮ್ಮ ಮತದಾರರ ಸಾಮೂಹಿಕ ಬೇಡಿಕೆಗಳಿದ್ದರೆ ವೈಯಕ್ತಿಕ ಕಟ್ಟು ಕರಾರುಗಳು ನಾನಾವಿಧವಾಗಿದ್ದವು. ಊಟ, ತಿಂಡಿ, ತಿನಿಸುಗಳಂತೂ ಸರಿಯೇ. ದುಡ್ಡು, ಕುಡಿತಗಳ ಹಾವಳಿಗೇನೂ ಕಡಿಮೆ ಇದ್ದಿಲ್ಲ. ಆದರಲ್ಲಿಯೂ ಹಳ್ಳಿಯ ಭಾಗಗಳಲ್ಲಿ ಮತ ಕೇಳುವುದು ಸಾಮಾನ್ಯರಿಗೆ ನೀಗದ ಮಾತಾಗಿತ್ತು. ಮತಹಾಕಿಸಿ ಅವರಿಗೆ ಊಟ, ತಿಂಡಿ, ಕುಡಿತಗಳನ್ನು ಕೊಟ್ಟು ಕಳಿಸಲಾಗುತ್ತಿತ್ತು. ಸ್ಥಾನಿಕ ಪರಿಸ್ಥಿತಿಗನುಸರಿಸಿ ಸ್ವಲ್ಪ ಹೆಚ್ಚು ಕಡಿಮೆ ಇದೇ ರೀತಿ ಸಾಧಾರಣವಾಗಿ ಎಲ್ಲಿಡೆಗೂ ಕಾಣುತ್ತಿತ್ತು. ಮತಕ್ಕೆರಡು ರೂಪಾಯಿ ಇದ್ದ ದರ ಮತದಾನದ ದಿನ ಹೊತ್ತೇರುತ್ತ ಹೋದಂತೆ ಏರುತ್ತ ಒಂದೊಂದು ಮತದ ಬೆಲೆ ಐವತ್ತರಿಂದ ಎಪ್ಪತ್ತೈದು ರೂಪಾಯಿಗಳಿಗೇರಿದ ಉದಾಹರಣೆಗಳಿಗೆ ಕೊರತೆ ಇಲ್ಲ

ಮತದಾನದ ಮುನ್ನ ಎದುರಾಳಿಗಳ ಸಭೆಗಳನ್ನು ಮುರಿಯುವದು, ಅವರ ಸಭೆಗಳಲ್ಲಿ ಗಲಭೆಯನ್ನೆಬ್ಬಿಸುವದು, ಆ ಸಭೆಗಳಲ್ಲಿ ನಡುವೆ ಎದ್ದು ಪ್ರಶ್ನೆ ಕೇಳುವದು, ಅಥವಾ ತಮ್ಮ ಸಭೆಯಲ್ಲಿ ಪ್ರಶ್ನೆ ಕೇಳುವವರನ್ನು ಹಣಬೀಳ ಹೊಡೆಯುವದು ಈ ಪ್ರಕಾರಗಳೂ ನಡೆದೇ ಇದ್ದವು. ಅಲ್ಲದೆ ಎದುರಾಳಿಯು ಮತದಾರರಿಗೆ ಹೆದರಿಕೆ ಹಾಕುವದಕ್ಕಾಗಿ ವಿವಿಧ ಕಾರ್ಯವೂ ನಡೆಯುತ್ತಿತ್ತು.

ಮತದಾರರಿಗೆ ತಿಂಡಿ ತಿನಿಸುಗಳನ್ನು ಕೊಡುವದು, ವಾಹನಗಳನ್ನು ಒದಗಿಸುವದು, ಇವೇ ಮೊದಲಾದವು ಈಗ ಅಕ್ರಮವೆಂದು ಸಾರಲ್ಪಟ್ಟದ್ದರೂ ೧೯೨೦-೨೧ರ ವರೆಗೆ ಕಾಂಗ್ರೆಸ್ ಬಹಿರಂಗದಲ್ಲಿಯೇ ಮತದಾರರಿಗೆ ತಿಂಡಿ, ಬಾಳೆಹಣ್ಣು, ಚಹಾ ಕೊಡುತ್ತಿದ್ದುದೂ ಅನಂತರ ಮೊನ್ನೆ ಮೊನ್ನಿನ ವರೆಗೆ, ಸ್ವಲ್ಪ ಮರೆಯಲ್ಲಿ, ಬೇಕಾದ ಹಾಗೆ ಮತದಾರರನ್ನು ಪೋಷಿಸುತ್ತಿದ್ದುದೂ ಎಲ್ಲರೂ ತಿಳಿದ ಮಾತು. ಆದರೆ ಇದಕ್ಕಿಂತಲೂ ಹೊಸ ಮಾತಲ್ಲ ಈ ಚುನಾವಣೆ ಪದ್ಧತಿಯನ್ನು ನಮಗೆ ಕಲಿಸಿದ ಇಂಗ್ಲೆಂಡಿನಲ್ಲಿಯೂ ಇದೇ ಹಾಡು ಹಿಂದಿನ ಶತಮಾನದಲ್ಲಿತ್ತು.

ಈಗ ಇಂಗ್ಲೆಂಡಿನ ಪಾರ್ಲಿಮೆಂಟು ಒಂದು ಆದರ್ಶಸಂಸ್ಥೆಯಾಗಿದೆ. ಅದರ ಘಟನೆ, ಕಾರ್ಯ ಪದ್ಧತಿ, ನಿಯಮ ನಿಬಂಧನೆಗಳನ್ನು ಅನೇಕ ರಾಷ್ಟ್ರಗಳು ಮಾದರಿಯನ್ನಾಗಿರಿಸಿಕೊಂಡು ಅನುಕರಿಸಿವೆ. ಆದರೆ ಅದು ಇನ್ನೊಂದು ಪ್ರಗತಿ ಪೂರ್ಣವಾದುದು ಒಂದೆರಡು ದಿನಗಳಲ್ಲಲ್ಲ. ಅನೇಕ ವರ್ಷಗಳ ಅನುಭವದಿಂದ ಅದರಲ್ಲಿ ಕಾಲ ಕಾಲಕ್ಕೆ ಸುಧಾರಣೆಯಾಗುತ್ತ ಬಂದು ಈಗ ಅದು ಒಂದು ಮಟ್ಟಕ್ಕೆ ಬಂದಿದೆ.

೧೮ ಮತ್ತು ೧೯ನೇ ಶತಮಾನಗಳಲ್ಲಿ, ಪಾರ್ಲಿಮೆಂಟಿನ ಆಯ್ಕೆಗಳೆಂದರೆ ಅವು ಅಗಾಧವಾದ ಘಟನೆಗಳಂತಿರುತ್ತಿದ್ದವು. ಜ್ಞಾನ, ವಿದ್ಯೆ, ಬುದ್ಧಿ ಇವುಗಳಿಗೆ ಆಗ ಬೆಲೆ ಇದ್ದಿಲ್ಲ. ಹಡಿಗೆತುಂಬ ಹಣ ವೆಚ್ಚ ಮಾಡಲು ಮುಂದಾದವನು ಪಾರ್ಲಿಮೆಂಟಿನ ಸದಸ್ಯನಾಗುತ್ತಿದ್ದ.

ಲಾರ್ಡ್ ಆ್ಯಕ್ಲೆ ಎಂಬವರು ಡಾರ್ಸೆಟ್ ಶಾಯರ ಮತದಾರ ಸಂಘಕ್ಕೆ ಆರಿಸಿ ಬರುವದಕ್ಕಾಗಿ ಮದ್ಯ ಮತ್ತು ಭೋಜನ ಸಮಾರಂಭಗಳಿಗಾಗಿ ೧೫,೦೦೦ ಪೌಂಡು ಹಣ ಸುರಿಯಬೇಕಾಯಿತು.

ಆ ಕಾಲಕ್ಕೆ ಚುನಾವಣೆಗಳನ್ನು ಗೆಲಿಯಲಿಕ್ಕೆ ಅನುಸರಿಸಲಾಗುತ್ತಿದ್ದ ಮಾರ್ಗಗಳಲ್ಲಿ ವಿಧಿನಿಷೇಧಗಳಿದ್ದಿಲ್ಲ. ನಗದು ಹಣದ ಲಂಚವಂತೆ, ಇತರ ಅನೀತಿಕಾರಕ ವ್ಯವಹಾರಗಳೂ ಮತ ಪಡೆಯುವಲ್ಲಿ ಅನಿರ್ಬಂಧವಾಗಿ ನಡೆಯುತ್ತಿದ್ದವು. ಹಣ ಕೊಡಬೇಕಾಗುತ್ತಿತ್ತು, ಆಹಾರ, ತಿಂಡಿ, ತಿನಿಸು, ಗಾಯನ, ನೃತ್ಯ, ಉಚ್ಚತರಗತಿಯ ಮದ್ಯ ಇವೆಲ್ಲವೂ ಮಗ್ಗಲವಾಗಿ ಹರಿಯುತ್ತಿದ್ದವು. ಅವಶ್ಯವಿದ್ದವರಿಗೆ ನೌಕರಿಗಳೂ ದೊರೆಯುತ್ತಿದ್ದವು.

ಚಾರ್ಲ್ಸ ಜೇಮ್ಸ ಫಾಕ್ಸನೆಂಬ ಪ್ರಖ್ಯಾತ ಮುತ್ಸದ್ದಿ ಇಂಗ್ಲೆಂಡಿನಲ್ಲಿ ಆಗಿ ಹೋದ. ಅವನು ೧೭೮೪ರಲ್ಲಿ ಕನ್ವೆಂಟ್ ಗಾರ್ಡನ್ ಮತದಾರ ಸಂಘದಿಂದ ಪಾರ್ಲಿಮೆಂಟಿನ ಆಯ್ಕೆಗೆ ನಿಂತಿದ್ದ. ಅವನ ಉಮೇದವಾರಿಗೆ ಬೆಂಬಲ ಕೊಟ್ಟು ಅವನನ್ನು ಆರಿಸಿ ತರಲಿಕ್ಕೆ ಕಟಿಬದ್ಧರಾದವರಲ್ಲಿ ಡೆವ್ಹನ್‌ಶಾಯರದ ಡಚೆಸ್ ಆದ ೨೮ ವರ್ಷದ ಲೇಡಿ ಜಾರ್ಜಿಯಾನಾ ಅವಳೂ ಪ್ರಮುಖಳಿದ್ದಳು. ಅವಳು ಅತ್ಯಂತ ಮನೋಹರ ಸುಂದರಿಯೆಂದು ಖ್ಯಾತಿ ಪಡೆದಿದ್ದಳು. ಫಾಕ್ಸನಿಗೆ ಮತ ಪಡೆಯುವಲ್ಲಿ ಅವಳು ಹೊಸದೊಂದು ಮತಯಾಚನಾ ಪದ್ಧತಿ ಪ್ರಾರಂಭಿಸಿದಳು. ಅದೇನೆಂದರೆ ಮತದಾರರನ್ನು ಚುಂಬಿಸುವದು. ಹೀಗೆ ಅವಳು ಮತಯಾಚನೆ ಮಾಡುತ್ತಿರುವಾಗ ಕಟುಕನೊಬ್ಬನನ್ನು ಸಂಧಿಸಿ ಫಾಕ್ಸನಿಗೆ ಮತಕೊಡಲು ಕೇಳಿಕೊಂಡಳು, ಆ ಕಟುಕನು ನಿರಾಕರಿಸಿದ. ಆದರೆ ಜಾರ್ಜಿಯಾನಾಳಿಗೆ ಆ ಮತ ಬಿಡುವ ಇಚ್ಛೆ ಇದ್ದಿಲ್ಲ. 'ಏನು ಕೊಟ್ಟರೆ ನೀನು ಮತಕೊಡುವೆ?' ಎಂದು ಅವಳು ಕೇಳಿದಾಗ 'ನಿಮ್ಮ ಒಂದು ಚುಂಬನ ಬೇಕ' ಎಂದು ಅವನು ಉತ್ತರಿಸಿದ. 'ಒಂದೇಕೆ ಮನಸೋಕ್ತ ಚುಂಬಿಸು ಫಾಕ್ಸನಿಗಾಗಿ ನಾನು ಏನು ಬೇಕಾದುದನ್ನು ಕೊಡುವೆ' ಎಂದು ಹೇಳಿ ಅವನನ್ನಪ್ಪಿ ಚುಂಬಿಸಿದಳು.

ಕನ್ವೆಂಟ ಗಾರ್ಡನದಲ್ಲಿ ಈ ರೀತಿಯಾಗಿ ಚುಂಬನಕ್ಕೆ ಮತಗಳು ದೊರೆಯಲಾರಂಭಿಸಿದ್ದರಿಂದ ಹುರಿಯಾಳುಗಳ ಯಶಾಪಯಶದ ಬಣ್ಣವೇ ಬದಲಾಯಿತು. ಫಾಕ್ಸನ ವಿರೋಧಿಯಾದ ಕಾನ್‌ಸರ್ವೇಟಿವ್ ಹುರಿಯಾಳುವು ಈ ಹೊಸ ಉಪಕ್ರಮ ಕೇಳಿ ಸಂತಪ್ತನಾದ. ಇದು ತೀರ ಕೀಳ್ಮಟ್ಟದ್ದೆಂದು ಅವನು ಸಾರಿದ ಅಕ್ಷಮ್ಯ ಅಪರಾಧವೆಂದು ಅವನ ಬೆಂಬಲಿಗರು ಕೂಗಿಕೊಂಡರು. ವೃತ್ತಪತ್ರಿಕೆಗಳಲ್ಲಿಯೂ ಈ ಬಗ್ಗೆ ತೀವ್ರ ಚರ್ಚೆ ನಡೆಯಿತು. ಆದರೆ ಕಾನ್‌ಸರ್ವೇಟಿವ್ ಹುರಿಯಾಳುವಿಗೆ ಇದೇ ಪದ್ಧತಿಯನ್ನನುಸರಿಸದೆ ಅನ್ಯಮಾರ್ಗ ಕಾಣಲಿಲ್ಲ. ಅವನು ತನ್ನ ಸ್ನೇಹಿತಳಾದ ಲೇಡಿ ಸ್ಯಾಲಿಸ್‌ಬರಿಯನ್ನು ತನ್ನ ನೆರವಿಗೆ ಕರೆದ. ಅವಳೂ ಆತ್ಯಾದರದಿಂದ ಕನ್ವೆಂಟ ಗಾರ್ಡನ ಮತದಾರ ಸಂಘದಲ್ಲಿ ಚುಂಬನ ಪ್ರಚಾರ ಮಾಡಿದಳು. ಆದರೆ ಕೊನೆಗೆ ಚಾರ್ಲ್ಸ ಜೇಮ್ಸ ಫಾಕ್ಸನೇ ಗೆದ್ದ.

ಚುನಾವಣೆಯ ಕಲೆಯಲ್ಲಿ ಅತ್ಯಂತ ನಿಪುಣತನೆಂದು ವಿಗ್ ಪಕ್ಷದ ಟಾಮ್ ವ್ಯಾರ್ಟನನು ೧೮ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಪ್ರಖ್ಯಾತನಾಗಿ ಹೋದ. ಚುನಾವಣೆಯಲ್ಲಿ ಆರಿಸಿ ಬರುವದಕ್ಕಾಗಿ ಬೇಕಾದ ಕೀಳು ಪದ್ಧತಿಯನ್ನನುಸರಿಸಲು ಅವನು ಹಿಂದು ಮುಂದು ನೋಡುತ್ತಿದ್ದಿಲ್ಲ. ಚುನಾವಣೆಯಲ್ಲಿ ಅವನನ್ನು ಸೋಲಿಸಬೇಕೆಂದು ಒಮ್ಮೆ ಅವನ ವಿರೋಧಿ ಪಕ್ಷದವರ ನಿರ್ಧರಿಸಿದರು. ಐಲ್ಸ್‌ಬರಿ ಎಂಬುದು ಮತದಾನ ಕೇಂದ್ರವಾಗಿತ್ತು. ಸುತ್ತುಮುತ್ತಲಿನ ಮತದಾರರು ಮತದಾನಕ್ಕೆ ಬಂದಾಗ ಅವರಿಗೆಲ್ಲ ಊಟ, ಉಪಚಾರ ಮೊದಲಾದ ಎಲ್ಲ ವ್ಯವಸ್ಥೆಯನ್ನು ವ್ಯಾರ್ಟನ್ ಉತ್ಕೃಷ್ಟವಾಗಿ ಮಾಡಿದ್ದ. ಮತದಾನಕ್ಕೆ ಸ್ವಲ್ಪೇ ಕಾಲ ಮೊದಲು ಅವನ ವಿರೋಧಿ ಪಕ್ಷದ ಹುರಿಯಾಳುವು ಶರೀಫನಿಗೆ ಲಂಚಕೊಟ್ಟು ಮತದಾನ ಕೇಂದ್ರವನ್ನು ನ್ಯೂಪೋರ್ಟಕ್ಕೆ ಸ್ಥಳಾಂತರಿಸಿದ. ವ್ಯಾರ್ಟನ್ನನ ಮತದಾರರು ಮತ ಕೊಡಲು ನ್ಯೂಪೋರ್ಟಕ್ಕೆ ಹೋದಾಗ ಅಲ್ಲಿ ಅವರಿಗೆ ವಸತಿಗೆ ಅನುಕೂಲತೆ ದೊರಕಲಿಲ್ಲ, ಕೂಳು ದೊರೆಯಲಿಲ್ಲ. ಯಾಕೆಂದರೆ ವಿರೋಧಿ ಹುರಿಯಾಳುವು ಅಲ್ಲಿಯ ಎಲ್ಲ ವಸತಿ ಗೃಹಗಳನ್ನೂ, ಊಟದ ಮನೆಗಳನ್ನೂ ತನಗಾಗಿ ಕಾಯ್ದಿರಿಸಿಕೊಂಡಿದ್ದ. ಮತದಾನವು ಇನ್ನು ಎರಡು ದಿನ ಮುಂದೆ ಇದ್ದುದರಿಂದಲೂ ಚಳಿಗಾಳಿ ಅತಿಯಾಗಿದ್ದುದರಿಂದಲೂ ವ್ಯಾರ್ಟನ್ನನ ಮತದಾರರಿಗೆ ಯಾವ ಅನುಕೂಲತೆಗಳೂ ಇಲ್ಲದ್ದರಿಂದಲೂ ಬಂದವರೆಲ್ಲ ತಿರುಗಿ ಹೊರಟರು. ಇದನ್ನು ಕಂಡು ವ್ಯಾರ್ಟನ್ನನು ೧೫೦೦ ಚಿನ್ನದ ಪವನುಗಳನ್ನು ತೆಗೆದು ಅವುಗಳನ್ನು ತನ್ನ ಮತದಾರರಲ್ಲಿ ಹಂಚಿದ. ಮತದಾರರು ಹರ್ಷಭರಿತರಾಗಿ ಕೊನೆಯವರೆಗೆ ಅಲ್ಲಿ ಉಳಿದು ಮತದಾನ ಮಾಡಿಹೋದರು. ಪ್ರಚಂಡ ಬಹುಮತದಿಂದ ವ್ಯಾರ್ಟನ್ ಆರಿಸಲ್ಪಟ್ಟನು.

ಸ್ಟ್ಯಾಫರ್ಡ್ ಮತದಾರ ಸಂಘದಿಂದ ಕ್ಯಾಪ್ಟನ್ ಗ್ರೋನೋ ಎಂಬವನು ಆಯ್ಕೆಗೆ ನಿಂತಿದ್ದ. ತನ್ನ ಚುನಾವಣೆ ಪ್ರಚಾರ ಪ್ರಾರಂಭಿಸಬೇಕೆಂದು ಅವನು ತನ್ನ ಮತದಾರ ಸಂಘದಲ್ಲಿಯ ಒಂದು ಹಳ್ಳಿಗೆ ಹೋಗಿದ್ದ. ಅಲ್ಲಿಯ ಜನರು ಅವನನ್ನು ನೋಡಿ, ಕೂಗಾಡುತ್ತ ಜೇಬು ಚಪ್ಪರಿಸುತ್ತ ಬೀದಿಯಲ್ಲಿ ಗುಂಪುಗಟ್ಟಿ ನಿಂತಿದ್ದರು. ಅವರ ಅಭಿಪ್ರಾಯ ತಿಳಿದುಕೊಂಡು ಕೂಡಲೇ ಅವನು ಹೋಗಿ ಮತದಾರರಿಗೆ ಬೇಡಿದಷ್ಟು ಹಣ ಕೊಟ್ಟು, ಅವರಿಗೆ ತಿಂಡಿ, ತಿನಿಸು, ಮದ್ಯಗಳನ್ನು ಯಥೇಚ್ಛ ಕೊಟ್ಟು ಆರಿಸಿಬಂದ. ಲಿವರ್ಪೂಲದಲ್ಲಂತೂ ಒಮ್ಮೆ ಮತಗಳ ಹರಾಜು ನಡೆಯಿತು. ಪ್ರಾರಂಭದಲ್ಲಿ ೧೫ ಪವನಗಳಷ್ಟು ಇದ್ದ ಪ್ರತಿ ಮತದ ಬೆಲೆ ಹೊತ್ತೇರಿದಂತೆ ಏರುತ್ತ ೧೦೦ ಪವನುಗಳಿಗೊಂದರಂತಾಗಿತ್ತು!

ಈ ರೀತಿಯಾಗಿ ಅಲ್ಲಿ ಮತಗಳು ಮೊದಲು ತತ್ವದಮೇಲೆ ದೊರೆಯುತ್ತಿರದೆ ಅನೇಕ ಬಗೆಯ ದುರ್ವ್ಯಾಪಾರಗಳಿಂದ ಬರುತ್ತಿದ್ದವು. ಆದರೆ ಈಗ ಇಂಗ್ಲೆಂಡದಲ್ಲಿ ಆಯ್ಕೆಗಳು ಒಂದು ಆದರ್ಶ ಪದ್ಧತಿಯಂತೆ ನಡೆದಿವೆ.

ಭಾರತದಲ್ಲಿ ಅಶಿಕ್ಷಿತರ ಸಂಖ್ಯೆ ತೀರ ಹೆಚ್ಚು, ಸುಶಿಕ್ಷಿತರ ಪ್ರಮಾಣ ಅತ್ಯಲ್ಪ. ಆರ್ಥಿಕ ದೃಷ್ಟಿಯಿಂದ ನೋಡಿದರೆ ಇದ್ದುಳ್ಳವರು ವಿರಳ, ಇಲ್ಲದವರೆ ಹೆಚ್ಚು. ಹೀಗಿರುವದರಿಂದ ಈಗ ಎಷ್ಟೋ ಉಗ್ರಕಾಯಿದೆ ಕಾನೂನುಗಳಿದ್ದರೂ ಚುನಾವಣೆಯಲ್ಲಿ ದುರ್ವ್ಯಾಪಾರಗಳು ನಡೆದೇ ನಡೆದಿವೆ. ಜನತೆ ಸುಶಿಕ್ಷಿತವಾಗಿ ತನ್ನ ಹಕ್ಕು ಜವಾಬ್ದಾರಿಗಳನ್ನರಿತುಕೊಳ್ಳುವಷ್ಟು ಜಾಣ್ಮೆ ಅದಕ್ಕೆ ಬರುವ ವರೆಗೆ ಜನತೆಯ ಹೆಸರಿನಲ್ಲಿ ತಮ್ಮ ಸ್ವಾರ್ಥಕ್ಕೆ ಹಾತೊರೆಯುವವರ ಲೀಲೆ ನಡೆಯುತ್ತದೆ.

ಆದುದರಿಂದ ಈ ಎಲ್ಲ ದುರ್ವ್ಯಾಪಾರಗಳು ಇಲ್ಲವಂತಾಗಿ ಪ್ರಜಾರಾಜ್ಯ ಪದ್ಧತಿಯು ಬೇರೂರಿ ನಿಲ್ಲಬೇಕಾದರೆ, ಪ್ರಜಾರಾಜ್ಯ ಪದ್ಧತಿಯ ಮೂಲ ತತ್ವವಾದ ಚುನಾವಣೆಯು ನಿರ್ದೋಷವಾಗಬೇಕು. ಅದಾಗಬೇಕಾದರೆ ಮತ್ತಗಳ ಪ್ರಭುಗಳಾದ ಮತದಾರರು ಸುಶಿಕ್ಷಿತರಾಗಬೇಕು. ತಮ್ಮ ಹಕ್ಕು ಬಾಧ್ಯತೆಗಳನ್ನರಿತುಕೊಂಡವರಾಗಬೇಕು. ಆಗ ಸಾರ್ವಜನಿಕ ಕಾರ್ಯಕರ್ತರ ಮುಂದಿರುವ ಮಹತ್ವ ಜನಸೇವೆ ಕೈಗೊಳ್ಳುವ ಕಾರ್ಯಕರ್ತರಲ್ಲಿ ಎಷ್ಟು ಜನರು ಈ ಜವಾಬ್ದಾರಿಯನ್ನು ತಿಳಿದು ವರ್ತಿಸಿರುವರು?

ಜೈ ಹಿಂದ್.

ವಿನೋಬಾ ಭಾವೆಗೆ ೫೦೦೦ ಎಕ್ರೆ ಜಮೀನಿನ ದಾನ

ಹೈದರಾಬಾದ್ ಮಾಜಿ ಮುಖ್ಯ ಮಂತ್ರಿ ಕೀರ್ತಿಶೇಷ ಮಹಾರಾಜಾ ಕಿಶನ್ ಪ್ರಸಾದರ ಕುಮಾರಿ ಶ್ರೀಮತಿ ಕೃಷ್ಣ ಕುಮಾರಿ ಅವರು ತಮ್ಮ ಸಪ್ತಪುರಂ ಆಸ್ತಿಯ ಅರ್ಧದಷ್ಟು ಜಮೀನನ್ನು ಆಚಾರ್ಯ ವಿನೋಬಾ ಭಾವೆಯವರಿಗೆ ಉದಾರ ದಾನವಾಗಿ ಕೊಟ್ಟಿರುವರು. ಸಪ್ತಪುರಂ ಆಸ್ತಿಯು ವಿಸ್ತೀರ್ಣ ಹತ್ತು ಸಾವಿರ ಎಕ್ರೆಗಳಷ್ಟಿದೆ.

ನೈಜಾಮರ ಮೊದಲ ವಿಮಾನ ಪ್ರಯಾಣ

ಹೈದರಾಬಾದಿನ ರಾಜಪ್ರಮುಖ ನೈಜಾಮರು ಕಳೆದ ತಾ. ೨೭ನೇ ರವಿವಾರ ಬೆಳಗ್ಗೆ ಡಕೋಟಾ ವಿಮಾನವೊಂದರಲ್ಲಿ ಕುಳಿತು ಸಂಸ್ಥಾನದ ರಾಜಧಾನಿಯ ಮೇಲೆ ಸುಮಾರು ಅರ್ಧ ತಾಸು ಹಾರಾಡಿದರು. ತಮ್ಮ ೬೫ ವರ್ಷ ಪ್ರಾಯದಲ್ಲಿ ನೈಜಾಮರು ವಿಮಾನದಲ್ಲಿ ಕುಳಿತುದು ಇದು ಮೊದಲ ಬಾರಿ.

ಅಮೇರಿಕಾ ಚುನಾವಣೆಗಳು

ಸಂಯುಕ್ತ ಅಮೇರಿಕದ ಮಹಾ ಚುನಾವಣೆಗಳು ಇದೇ ವರ್ಷದ ನವಂಬರ್ ತಿಂಗಳಲ್ಲಿ ಜರಗುವವು. ಅಧ್ಯಕ್ಷ ಟ್ರೂಮನರು, ಈ ಚುನಾವಣೆಗಳಲ್ಲಿ ಗೆಲ್ಲುವವರು "ಶಾಂತಿ–ಪ್ರಗತಿ–ಸಮೃದ್ಧಿ"ಯ ಯೋಜನೆಗಳನ್ನು ಮುಂದಿಡಬೇಕೆಂದು ತಮ್ಮ ಪಕ್ಷದ ಸಭೆಯಲ್ಲಿ ಭಾಷಣ ಮಾಡುತ್ತ ವಿವರಿಸಿದರು. ರಾಷ್ಟ್ರೀಯ ಭದ್ರತೆಯ ವಿಷಯವಾಗಿ ತಮ್ಮ ಪಕ್ಷವು (ಡೆಮಾಕ್ರಟಿಕ್) ರಾಜಕೀಯ ಆಟವಾಡದು ಎಂದಪೆನ್ನುತ್ತ ಟ್ರೂಮನರು, ಇತರ ಚಿಕ್ಕ ಸ್ವತಂತ್ರ ರಾಷ್ಟ್ರಗಳನ್ನು ಸಶಕ್ತವಾಗಿ ಮಾಡುವರೆ ಅಮೇರಿಕವು ಕೊಡುತ್ತಿರುವ ಸಹಾಯವನ್ನೂ ಈಗ ಕೈಕೊಂಡಿರುವ ಕಾರ್ಯ ಕ್ರಮವನ್ನೂ ಮುಂದೊತ್ತುವ ನಿರ್ಧಾರವನ್ನು ಪ್ರಕಟಿಸಿರುವರು.

ಎವರೆಸ್ಟ್ ಶಿಖರದ ಆರೋಹಣ ಪ್ರಯತ್ನ

ಬರುವ ವರ್ಷ ಎವರೆಸ್ಟ್ ಶಿಖರದ ಆರೋಹಣಕ್ಕಾಗಿ ಬ್ರಿಟಿಷ್ ಏರ್ಪಡಿಸಿರುವ ಯೋಜನೆಯ ಸಂಬಂಧವಾಗಿ ಈ ವರ್ಷ ಹಿಮಾಲಯ ಪರ್ವತಗಳಲ್ಲಿ ಒಂಭತ್ತು ಜನ ಪರ್ವತಾರೋಹಿಗಳಿಗೆ ವಿಶೇಷ ಶಿಕ್ಷಣ ಕೊಡಲಾಗುವುದೆಂದು ರಾಯಲ್ ಜಿಯಾಗ್ರಫಿಕಲ್ ಸೊಸೈಟಿ ಪ್ರಕಟಿಸಿದೆ.

ಈ ಒಂಭತ್ತು ಮಂದಿಯೂ ಮಿ|| ಎರಿಕ್ ಶಿಪ್ಟನ್‌ರ ನೇತೃತ್ವದಲ್ಲಿ ಬರುವ ಮಾರ್ಚ ತಿಂಗಳಲ್ಲಿ ಇಲ್ಲಿಂದ ಪ್ರಯಾಣ ಬೆಳೆಸುವರು. ಮಿ|| ಶಿಪ್ಟನ್‌ರವರು ಕಳೆದ ವರ್ಷ ಹಿಮಾಲಯಗಳಲ್ಲಿ ಸಂಶೋಧನೆ ನಡೆಸಿ ಎವರೆಸ್ಟ್ ಶಿಖರಕ್ಕೆ ದಕ್ಷಿಣದಿಂದ ಹೊಸ ಮಾರ್ಗವೊಂದನ್ನು ಕಂಡು ಹಿಡಿದ ಬ್ರಿಟಿಷ್ ಪರ್ವತಾರೋಹಿಗಳ ತಂಡದ ನಾಯಕರಾಗಿದ್ದರು.

ಮತದಾನ ಪೆಟ್ಟಿಗೆಯ ಮೇಲೆ ಅರಸಿನ ಹಚ್ಚಿದನು

ತಿರುಚಿ ಪಟ್ಟಣದ ತೆಪ್ಪಕುಲಂ ಮತದಾನ ಕಟ್ಟೆಯಲ್ಲಿ ಮತದಾನ ಮಾಡಲು ಬಂದವನೊಬ್ಬನು ಅಲ್ಲಿಯ ಅಧಿಕಾರಿಗಳ ಪ್ರಶ್ನೆಗಳನ್ನು ಉತ್ತರಿಸಬೇಕಾಯಿತು. ಎಸೆಂಬ್ಲಿ ಮತದಾನ ಪತ್ರವನ್ನು ಹಿಡಿದುಕೊಂಡು ಮತದಾನ ಕೊಡಲು ಒಳಗೆ ಹೋಗಿದ್ದನು. ಕೂಡಲೇ ಹೊರಗೆ ಬಾರದಿದ್ದುದನ್ನು ಕಂಡು ಸಂದೇಹಗೊಂಡು ಪ್ರಿಸೈಡಿಂಗ್ ಆಫೀಸರು ಒಳಗೆ ಇಣಕಿ ನೋಡಿದಾಗ, ಆ ಮನುಷ್ಯ ಕಾಂಗ್ರೆಸ್ ಉಮೇದುವಾರರ ಪೆಟ್ಟಿಗೆಯ ಮೇಲೆ ಅರಸಿನ ಹುಡಿ ಚಿಮುಕಿಸುತ್ತಿದ್ದನು.

ವಯೋವೃದ್ಧೆಯೋರ್ವಳ ತಿರಸ್ಕಾರ ಸೂಚನೆ

ಉಲಗಿಯ ಅಭಿಷೇಕ ಪುರಂ ಮತದಾನ ಕಟ್ಟೆಗೆ ಓರ್ವ ೮೫ ವರ್ಷ ಪ್ರಾಯದ ಮುದುಕಿಯು ಮತದಾನ ಮಾಡಲು ಬಂದಿದ್ದಳು. ಎಸೆಂಬ್ಲಿ ಓಟನ್ನು ಕೊಟ್ಟು ಆಕೆ ಹೊರ ಬಂದಾಗ, ಪಾರ್ಲಿಮೆಂಟ್ ಮತದಾನ ಪತ್ರವನ್ನು ಆಕೆಗೆ ಕೊಡಲಾಯಿತು. ಆಗ ಅದು ಪೀಡೆಯಂತೆ ಕಂಡು ಬಂದು, 'ನೀವು ಏಕೆ ಈ ರೀತಿ ನನ್ನನ್ನು ಪೀಡಿಸುತ್ತೀರಿ? ನಾನು ಈಗಾಗಲೇ ಮತ ಕೊಟ್ಟಾಗಿದೆ, ಇನ್ನು ಮತ ಕೊಡಲು ನನ್ನಿಂದ ಸಾಧ್ಯವಿಲ್ಲ" ಎನ್ನುತ್ತ ಸಟ್ಟನೆ ಮನೆಗೆ ನಡೆದು ಬಿಟ್ಟಳು.

ಶ್ರೀ. ಎ. ಕೆ. ಗೋಪಾಲನ್ ಚುನಾಯಿತರಾದರು

ಮಲಬಾರ್ ಜಿಲ್ಲೆಯ ಕಣ್ಣನೂರು ಕ್ಷೇತ್ರದಿಂದ ಕಮ್ಯೂನಿಸ್ಟ ನಾಯಕ ಶ್ರೀ ಎ. ಕೆ. ಗೋಪಾಲನ್‌ರು ಸೌತ್ ಮಲಬಾರ್ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಸಿ. ಕೆ. ಗೋವಿಂದನ್ ನಾಯರನ್ನು ೭೭ ಸಾವಿರ ಓಟುಗಳ ಬಹುಮತದಿಂದ ಸೋಲಿಸಿ ಲೋಕ ಸಭೆಗೆ ಆರಿಸಲ್ಪಟ್ಟರು.

ಭಾರತದ ಬಹುಸಂಖ್ಯೆ ಪ್ರಾಂತಗಳಲ್ಲಿ ಕಾಂಗ್ರೆಸ್ಸಿಗೆ ಬಹುಮತ

ಭಾರತದಲ್ಲಿರುವ ಒಟ್ಟು ೨೭ ಪ್ರಾಂತಗಳಲ್ಲಿ ಈಗಾಗಲೇ ೧೩ ಪ್ರಾಂತಗಳಲ್ಲಿ ಕಾಂಗ್ರೆಸ್ಸಿಗೆ ಸ್ಪಷ್ಟ ಬಹುಮತ ದೊರೆತಿದ್ದು ಇನ್ನೂ ಅನೇಕ ಪ್ರಾಂತಗಳಲ್ಲಿ ಬಹುಮತ ಬರಲಿದೆ.

ಮೈಸೂರು, ಹಿಮಾಚಲ ಪ್ರದೇಶ, ಮಧ್ಯ ಪ್ರದೇಶ, ಬೊಂಬಾಯಿ, ಹೈದರಾಬಾದ್, ದೆಹಲಿ, ಕಚ್, ಅಜ್ಮೀರ್, ಭೋಪಾಲ್, ಕೊಡಗು, ಸೌರಾಷ್ಟ್ರ, ಮಧ್ಯ ಭಾರತ, ಮತ್ತು ಬಂಗಾಳಗಳಲ್ಲಿ ಈಗಾಗಲೇ ಬಹು ಮತಬಂದಿದೆ.

ಆಸ್ಸಾಮಿನಲ್ಲಿ ಇನ್ನೊಂದು ಸ್ಥಾನ ಬಂದರೆ ಬಹುಮತ ದೊರಕಲಿದೆ; ಬಿಹಾರಿನಲ್ಲಿ ೧೧೧ ಸ್ಥಾನಗಳೂ, ಒರಿಸ್ಸಾದಲ್ಲಿ ೧೫ ಸ್ಥಾನಗಳೂ ಬಂದಲ್ಲಿ ಕಾಂಗ್ರೆಸ್ಸಿಗೆ ಅಲ್ಲೂ ಬಹುಮತ ಏರ್ಪಡಲಿದೆ

ಶ್ರೀ ಎಂ. ಬಿ. ಹೊನ್ನಾವರ್‌ರ ನೇಮಕ

ಬೊಂಬಾಯಿಯ ಜಡ್ಜ್ ಶ್ರೀ ಹೊನ್ನಾವರ್‌ರನ್ನು ಮೈಸೂರು ಸರ್ಕಾರದ ನ್ಯಾಯಾಂಗ ಇಲಾಖೆಯ ಸ್ಪೆಷಲ್ ಆಫೀಸರಾಗಿ ನೇಮಿಸಲಾಗಿದೆ. ಈ ಬಗ್ಗೆ ಹೊರಬಿದ್ದ ಸರ್ಕಾರಿ ಪ್ರಕಟಣೆ ಈ ರೀತಿ ತಿಳಿಸುವುದು:–

"ಬೊಂಬಾಯಿ ಸಿಟಿ ಸಿವಿಲ್ ಕೋರ್ಟಿನ ಪ್ರಿನ್ಸಿಪಲ್ ಜಡ್ಜರೂ ಬೃಹತ್ ಬೊಂಬಾಯಿಯ ಸೆಷನ್ಸ್ ಜಡ್ಜರೂ ಆದ ಶ್ರೀ ಎಂ. ಬಿ ಹೊನ್ನಾವರ್, ಬಿ. ಎ., ಬಿ. ಎಸ್ ಸಿ., ಎಲ್. ಎಲ್. ಬಿ., ಇವರ ಸರ್ವಿಸನ್ನು ಮೈಸೂರು ಸರಕಾರಕ್ಕೆ ಎರವಲು ಕೊಡಲಾಗಿದ್ದು, ಅವರನ್ನು ಮೈಸೂರು ಸರಕಾರದ ನ್ಯಾಯಾಂಗ ಇಲಾಖೆಯ ಸ್ಪೆಷಲ್ ಆಫೀಸರಾಗಿ ನೇಮಕ ಮಾಡಲಾಗಿದೆ.

ಎತ್ತುಗಳಿಗೆ ಮೇವು

ಅಲ್ಲಹಾಬಾದದಲ್ಲಿ ಒಬ್ಬ ಮತದಾರನು ಮತದಾನ ಮಾಡಲು ಹೋದಾಗ ತಲೆಯಲ್ಲಿ ಒಂದು ಕಟ್ಟನ್ನು ಹಿಡಕೊಂಡು ಹೋಗಿದ್ದನು. ಆ ಕಟ್ಟು ಸಹಿತ ತನ್ನನ್ನು ಮತದಾನದ ಕೋಣೆಯೊಳಗೆ ಬಿಡಬೇಕೆಂದು ಹಠ ಹಿಡಿದನು. ಪೋಲೀಸ್ ಆಫೀಸರರು ಕೂಡದೆಂದು ನಿರಾಕರಿಸಿದಾಗ ಮತದಾನ ಮಾಡದೆ ಮನೆಗೆ ಹಿಂತೆರಳಿದನು. ದಾರಿಯಲ್ಲಿ ಕೆಲವು ಮಂದಿ ಪೋಲಿಂಗ್ ಏಜಂಟರರು ಕುತೂಹಲದಿಂದ 'ಆ ಕಟ್ಟಿನೊಳಗೆ ಏನಿದೆ?' ಎಂದು ಪ್ರಶ್ನಿಸಿದಾಗ 'ಎತ್ತುಗಳಿಗೆ ಕೊಡಲು (ಎತ್ತುಗಳು ಕಾಂಗ್ರೆಸ್ಸಿನ ಚಿಹ್ನೆ) ಎಂದು ಸ್ವಲ್ಪ ಹುಲ್ಲು ಹಿಡಿದಿದ್ದೆ' ಎಂದನು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಕೋವಿಗಳು, ವ್ಯವಸಾಯದ ಹತ್ಯಾರುಗಳು ಮತ್ತು ಕಬ್ಬಿಣದ ಸಲಾಕೆ ವಗೈರೆಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು ಮತ್ತು ರಿವಾಲ್ವರುಗಳು.
2. ·12ನೇ ನಂಬರಿನ ಒಂಟಿ ಹೊಳವಿನ ಕೋವಿಗಳು.
3. 12ನೇ ನಂಬರಿನ ಜೋಡು ಹೊಳವಿನ ಕೋವಿಗಳು.
4. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
5. 2", 1", ⅝", ½", ¼" ಕಬ್ಬಿಣದ ಸಲಾಕೆಗಳು.
6. 9"×4" ಮತ್ತು 8"×4" ಕಬ್ಬಿಣದ ಬೀಮ್ಸ್ (Beams).
7. 8'×3'×12 (Gage)ನ ಕಬ್ಬಿಣದ ತಗಡುಗಳು.
8. 3"×3"×¼"ನ (Angles) ಎಂಗ್ಲ್ಯಾಲರ್ಸ್ ಅವಶ್ಯವಿರುವವರು ಇಂಡೆಂಟ್ ಕೊಟ್ಟಲ್ಲಿ ತರಿಸಿ ಕೊಡಬಹುದು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೆ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದಮೇಲೆ ಮಾತ್ರ ದೊರೆಯುವುದು.)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿಸಲಾಗಿದೆ)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಸಹಕಾರಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಮತ್ತು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಸೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಾಲಿನ ಸಾಲದ ಶಾಖೆಯ ಮೂಲಕ ದೀರ್ಘ ಕಾಲಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಡಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಡೈರೆಕ್ಟರ್ ಬೋರ್ಡ್.

Edited, Printed and Published by P. I. Bellimappa at 'Kodagu' Press, Mercara, for 'Kodagu' Ltd.

Licence No. 60.
Licenced to Post without Prepayment

Reg. No. M. 1050.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಳಿಯಪ್ಪನವರು. | ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦ | ತಾರೀಖು ೧೫-೨-೧೯೫೨ನೇ ಶುಕ್ರವಾರ | ಸಂಚಿಕೆ ೩೫

ಜಂಭ ಬಿಟ್ಟು ದುಡಿಯಲು ಸಿದ್ಧರಾಗಬೇಕು.

ಮಧ್ಯಮ ವರ್ಗಕ್ಕೆ ಏಕಮಾತ್ರ ತಾರಣೋಪಾಯ
ದುಡಿಯಲೊಲ್ಲದವರು ದುಡಿಯುವವರ ಆಳುಗಳು!

[ಚಕ್ರವರ್ತಿ ರಾಜಗೋಪಾಲಾಚಾರ್ಯರವರಿಂದ]

ಮಧ್ಯಮ ವರ್ಗದ ದುರವಸ್ಥೆಯ ಬಗ್ಗೆ ಆಶಿಕರದ ಮಾತು ಈಚೆಗೆ ಬಹಳವಾಗಿ ಕೇಳಿಸುತ್ತಿದೆ. ಗತಕಾಲದಲ್ಲಿ ಮಧ್ಯಮ ವರ್ಗ ನಾಗರಿಕತೆಯ ಪ್ರಗತಿಯಲ್ಲಿ ಮಹತ್ವದ ಪಾತ್ರ ವಹಿಸಿತ್ತು. ಇನ್ನಾದರೂ ಮಧ್ಯಮ ವರ್ಗವು ದೊಡ್ಡ ಪಾತ್ರವನ್ನೇ ವಹಿಸುವುದು; ಆದರೆ ಆ ಮಧ್ಯಮ ವರ್ಗ ವಂಶಪಾರಂಪರ್ಯವಾಗಿ ಬಂದ ಮಧ್ಯಮ ವರ್ಗವಾಗಿರದೆ ಹೊಸದೊಂದು ವರ್ಗವಾಗಿರುವುದು. ಆದರೆ ನಾನೀಗ ಈ ಮಾತುಗಳನ್ನು ಹೇಳುತ್ತಿರುವುದು ಹಳೇ ಪರಂಪರಾಗತ ಮಧ್ಯಮ ವರ್ಗಕ್ಕೆ.

ಪ್ರಿಯವನ್ನು ನುಡಿಯುವ ಪ್ರಯತ್ನ ಬಿಟ್ಟು ಸತ್ಯವೆಂದು ನನಗನಿಸಿದ್ದನ್ನೇ ಹೇಳುವೆ. ನಾನು ಸಹಾನುಭೂತಿಶೂನ್ಯನೆಂದು ತೋರಬಹುದು; ಆದರೆ ಜಂಬವನ್ನು ಚಪ್ಪರಿಸಿದರೇನು ಬಂತು? ಸತ್ಯ ಅಪ್ರಿಯವಾಗಿದ್ದರೂ ಅದರಿಂದ ಪ್ರಯೋಜನವಾಗುವ ಸಂಭವವಿದೆ. ಕಷ್ಟ ಕಾರ್ಪಣ್ಯಗಳು ಮನುಷ್ಯನಲ್ಲಿ ಕ್ರೋಧವನ್ನು ಕೆರಳಿಸಿ, ಸ್ಮರಣೆಯನ್ನು ಅಳಿಸಿ, ಅವಿವೇಕಕ್ಕೂ ಅದರ ಫಲವಾದ ವಿಪತ್ತಿಗೂ ದಾರಿ ಮಾಡಬಹುದು. ಇದು ತ್ರಿಕಾಲ ಸತ್ಯ; ಅನುಭವದಿಂದ ಸಿದ್ಧವಾದ ಸತ್ಯ. ಆದ್ದರಿಂದ ಸಹನೆ ಬೇಕು, ತಿಳಿವಳಿಕೆ ಬೇಕು, ಕೃತಿಯಲ್ಲಿ ವಿವೇಕ ಬೇಕು, ಎಂದು ನಾನು ಮಧ್ಯಮ ವರ್ಗಕ್ಕೆ ಸಾರಿ ಹೇಳುವೆ.

ಪ್ರಜಾತಂತ್ರದ ಇತಿಮಿತಿ.

ಬಲಿಷ್ಠವಾದ ಸರಕಾರ ಅಸ್ತಿತ್ವದಲ್ಲಿದ್ದಷ್ಟು ದಿನ, ಅಂದರೆ ಜನರಲ್ಲಿ ಪ್ರತಿಷ್ಠೆಯೂ ಮುಲ್ಕಿ ಮತ್ತು ಸೈನಿಕ ಅಧಿಕಾರಿಗಳ ವಿಧೇಯತೆಯೂ ಇರುವ ಸರಕಾರ ಅಧಿಕಾರದಲ್ಲಿರುವ ವರೆಗೆ, ಮತಗಳಿಗೆ ಬೆಲೆಯುಂಟು, ಮತಗಳಿಂದ ಜನವುಂಟು; ಮತ್ತು ಸರ್ವಾಧಿಕಾರ, ದಬ್ಬಾಳಿಕೆಗಳ ಆಡಳಿತೆಯಿಂದ ಸಾಧಿಸಬಹುದಾದಷ್ಟು ವೇಗವಾಗಿ ಅಲ್ಲದಿದ್ದರೂ ಏಕಪ್ರಕಾರವಾದ ಪ್ರಗತಿ ಪ್ರಜಾತಂತ್ರದಿಂದ ಸಾಧ್ಯವಾದೀತು. ಆದರೆ ಆ ಸಂಮೋಹಿನಿ ಮಾಯವಾಗಿ ಪ್ರತಿಷ್ಠೆ ಹೋಗಿಬಿಟ್ಟಿತೆಂದರೆ, ಸಂಕುಚಿತ ಮತಾಧಿಕಾರದ ಪದ್ಧತಿಯಲ್ಲೇ ಆಗಲಿ ಅತ್ಯಂತ ವಿಸ್ತಾರವಾದ ಮತಾಧಿಕಾರದಲ್ಲೇ ಆಗಲಿ, ಮತದಾರರಿಗೆ ಬೆಲೆಯಿಲ್ಲ.

ಅನೇಕ ವರ್ಗಗಳು ಇತರ ವರ್ಗಗಳ ದೈಹಿಕ ಶ್ರಮದ ಮೇಲೆ ಅವಲಂಬಿಸಿರುವಷ್ಟು ಕಾಲ, ಮತ್ತು ಆ ಅವಲಂಬನೆ ಜೀವನಕ್ಕೆ ಅತ್ಯಾವಶ್ಯವೆನಿಸಿದ ವಿಷಯಗಳಲ್ಲಿಯೇ ಇರುವಷ್ಟು ಕಾಲ, ಮತಗಳಿಗೆ ನಿಜವಾದ ಸ್ವಂತ ಬಲವಿಲ್ಲ. ಅವಶ್ಯಕ ನೌಕರಿಗಳಲ್ಲಿ ದುಡಿಯುತ್ತಿರುವ ಜನರು, ಸಾರ್ವತ್ರಿಕ ಹಿತಕ್ಕೇ ಇರಲಿ ಸ್ವಾರ್ಥಕ್ಕೇ ಇರಲಿ, ಕ್ರೋಧದಿಂದಲೇ ಆಗಲಿ ವಿವೇಕದಿಂದಲೇ ಆಗಲಿ, ಚೆನ್ನಾಗಿ ಸಂಘಟಿತರಾಗಿರುವಷ್ಟು ಕಾಲ, ಅವರೇ ನಿಜವಾಗಿ ಆಳುವವರು ಹೊರತು ಮತಗಳೂ ಅಲ್ಲ, ಪ್ರಜಾಸತ್ತೆಯೂ ಅಲ್ಲ. ಕಾಯಿದೆಯಲ್ಲಿ



ಹೇಳಿದಂತೆಯೇ ಮತದಾನ ನಡೆದರೂ ಪ್ರಕಟ ಅಥವಾ ಗುಪ್ತ ಭಯ ಮೂಲಕವಾಗಿ ಸಂಘಟಿತ ಶ್ರಮಜೀವಿ ವರ್ಗವು ಅಪ್ಪಣೆ ಮಾಡಿದವರಿಗೇ ಮತ ಕೊಡುವುದು. ರಾಜಾಜ್ಞೆ ಹೇಗೋ ಹಾಗೆಯೇ ಪ್ರಜಾಸತ್ತೆಯ ಆಜ್ಞೆಯೂ ಯಾವುದೊಂದೂ ದೈವೀ ಹಕ್ಕಿನ ಮೇರೆಗೆ ನಡೆಯುವುದಿಲ್ಲ; ಆರ್ಥಿಕ ಮತ್ತು ಸಾಮಾಜಿಕ ಸಂಘಟನೆಯ ಬಲದಿಂದಲೇ ಅದು ನಡೆಯಬೇಕಾಗುವುದು. ಜನರು ಅತ್ಯಾವಶ್ಯ ವಿಷಯಗಳಿಗಾಗಿ ಅನ್ಯರ ಶ್ರಮದ ಮೇಲೆ ನಿರ್ಭರರಾಗಿರುವಷ್ಟು, ಮತ್ತು ಆ ಶ್ರಮಿಕರು ತಮ್ಮ ಇಚ್ಛೆಯಂತೆ ಸಾಧಿಸಿಕೊಳ್ಳುವ ರೀತಿಯನ್ನು ಕಲಿತಿರುವಷ್ಟು, ಪ್ರಜಾಸತ್ತೆಯು ಪಾರ್ಲಿಮೆಂಟಿನ ಅಪ್ಪಣೆಗಳನ್ನು ಅನುಸರಿಸಿ ಸಾಗುವುದಿಲ್ಲ; ಕೇವಲ ಅವಶ್ಯಕ ಶ್ರಮಜೀವಿಗಳ ಇಚ್ಛೆಯಂತೆ ಸಾಗಿ ನಡೆಯುವುದು.

ಕೂಲಿಕಾರರ ಕ್ರಾಂತಿ.

ಬ್ರಿಟಿಷ್ ಪಾರ್ಲಿಮೆಂಟಿನ ಇತಿಹಾಸಾರಂಭದಲ್ಲಿ ಘಟನೆಯು. ರಾಜ ಮತ್ತು ಲಾರ್ಡ್ಸ್ ಸಭೆಯಲ್ಲಿ ಕೇಂದ್ರಿತ ಅಧಿಕಾರವನ್ನು ಇಷ್ಟಿಷ್ಟೇ ಕಸಿದುಕೊಂಡು ಕಾಮನ್ಸ್ ಮೂಲಕ ಕೆಳಗಿನವರೇ ಎಲ್ಲವನ್ನೂ ನಿಯಂತ್ರಿಸಕೊಂಡಿದ್ದನ್ನು ಕಾಣುತ್ತೇವೆ. ಅದೇ ಪ್ರಕಾರ, ಇಂದು ದೇಹಶ್ರಮ ಮತ್ತು ಅವಶ್ಯಕ ನೌಕರಿಗಳು ತೆರಿಗೆಯ ಸಂಗ್ರಹ ಮತ್ತು ವಿನಿಯೋಗಗಳಿಗಿಂತಲೂ ಹೆಚ್ಚು ಮಹತ್ವದ್ದಾಗಿರುವುದರಿಂದ ನಿಜವಾದ ಶಕ್ತಿ ಪಾರ್ಲಿಮೆಂಟಿನಿಂದ ಕೂಲಿಕಾರರ ಸಂಘಗಳ ಕೈಗೆ ಸದ್ದಿಲ್ಲದಂತೆ ಸರಿದುಹೋಗಿದೆ. ಕೆಲ ದೇಶಗಳಲ್ಲಿ ಈ ಕ್ರಾಂತಿ ಬಹಿರಂಗವಾಗಿ ನಡೆದರೆ ಇತರ ರಾಜ್ಯಗಳಲ್ಲಿ ನಿಶ್ಶಬ್ದವಾಗಿ ನಡೆಯಿತು. ಇದಕ್ಕಿಂತಲೂ ಬಿಡಿಸಿ ಹೇಳುವುದು ಸಾಧ್ಯವಿದ್ದರೂ ಅವಶ್ಯವಿಲ್ಲ.

ಕುರ್ಚಿಮೇಜಿನ ಮೋಹ.

ರೈತರ ಅಥವಾ ಇತರ ಶ್ರಮಜೀವಿಗಳ ಹುಡುಗ-ಹುಡುಗಿಯರು, ತಮ್ಮ ಹೆತ್ತವರಿಗೆ ದೊರೆತ ಮಟ್ಟಗಳಲ್ಲಿ ತಮಗೆ ಅವಕಾಶ ದೊರೆಯದಿದ್ದರೆ ಏನೂ ಸಂಕೋಚಪಟ್ಟುಕೊಳ್ಳದೆ ಕೆಳಗಿನ ಮಟ್ಟಕ್ಕಿಳಿದು ಸಿಕ್ಕಿದ ಕೆಲಸ ಕೈಗೊಳ್ಳುವರೇ ಹೊರತು ಪರೋಪಜೀವಿಗಳಾಗಿ ಬಾಳಲು ಪ್ರಯತ್ನಿಸುವುದಿಲ್ಲ. ಇತರರ ಕೈಕೆಳಗೆ ದುಡಿಯಲು ಅವರು ನಾಚುವುದಿಲ್ಲ. ವ್ಯವಸಾಯದ ಮುಡಿಸು ಪುನಃ ತಲೆಗೆತ್ತಲು ಸ್ವಯಃ ಸಿದ್ಧರು. ಆದರೆ ಪರಂಪರಾಗತ ಮಧ್ಯಮ ವರ್ಗದ ಹುಡುಗರು, ತಮಗೆ ಕುರ್ಚಿ ಮೇಜಿನ ಕೆಲಸ ಸಿಗದಿದ್ದರೇನು ಮಾಡುವರು? ಉಪವಾಸ ಬಿದ್ದಾರು, ಸಾಲ ಮಾಡಿಯಾರು, ಬೀಡಿ ಸೇದಿಯಾರು, ಗೌರವ ಹಾನಿಯನ್ನು ಸಹಿಸಿಯಾರು; ಹೆಚ್ಚು ಭಾಗ್ಯವಂತರಾದ ಬಂಧುಗಳು ನೆರವಾದರೆ ಮಾತ್ರ ಹೇಗೋ ಅವರ ಕಷ್ಟ ದೂರವಾಗುವುದು. ಮಧ್ಯಮ ವರ್ಗದ ಹೆಣ್ಣುಮಕ್ಕಳಿಗೆ ಮದುವೆಯು ಅನಿವಾರ್ಯ ಅವಶ್ಯಕತೆಯಾದುದರಿಂದ ಈ ಬಗೆಯ ನೆರವು ಹುಡುಗರಿಗೆ ದೊರೆಯಲು ಸ್ವಲ್ಪ ಮಟ್ಟಿಗೆ ದಾರಿಯಾಗಿದೆ. ಆದರೆ ಇದು ಕಡೆತನಕ ಸಾಗುವ ಮಾತಲ್ಲ; ಸಾಗುವಷ್ಟು ಕಾಲವೂ ಅದು ಅತ್ಯಂತ ಕ್ಲೇಶದ ಸ್ಥಿತಿ.

ಮಧ್ಯಮ ವರ್ಗದಲ್ಲಿ ನಿರುದ್ಯೋಗಿ ಯುವಜನನಿಗೆ ದೈಹಿಕ ಶ್ರಮದಿಂದ ಹೊಟ್ಟೆ ಹೊರೆದುಕೊಳ್ಳಲು ನಮ್ಮ ಸಂಪ್ರದಾಯದಲ್ಲಿ ಎಡೆಯೇ ಇಲ್ಲ. ಈಚೆಗೆ ಈ ಭಾಗದಲ್ಲಿ ತುಸು ಸುಧಾರಣೆಯಾಗಿದೆ. ಆಗದೆ ವಿಧಿಯಿಲ್ಲ; ಏಕೆಂದರೆ ನಿಸರ್ಗದಲ್ಲಿ ಕ್ಲೇಶಕ್ಕೆ ಹೆಚ್ಚು ಉಳಿಗಾಲವಿಲ್ಲ. ಹಿಂದೆ ಯಾವುದು ಅಬ್ರಾಹ್ಮಣ್ಯವೆನಿಸಿತ್ತೋ ಅಂಥ ವೃತ್ತಿಗಳನ್ನು ಕೈಕೊಳ್ಳಲು ಇಂದು ಯುವಕರು ಸಿದ್ಧರಾಗಿದ್ದಾರೆ. ಆದರೂ ಕುರ್ಚಿಮೇಜಿನ ಮೋಹ ಇನ್ನೂ ಹಿಂಗಿಲ್ಲ; ಹೊಸ ನೌಕರಿಗಳಲ್ಲಿಯೂ ಆದಷ್ಟು ಮಟ್ಟಿಗೆ ದೈಹಿಕ ಶ್ರಮದ ಅಂಶ ಕಡಿಮೆ. ಮೇಲ್ವಿಚಾರಣೆ ಮತ್ತು ಆಡಳಿತೆಯ ಅಂಶ ಹೆಚ್ಚಾಗಿರುವ ಕೆಲಸಗಳನ್ನೇ ಅವರು ಹುಡುಕುತ್ತಾರೆ. ಅಂಥವು ಸಿಗದಿದ್ದರೆ ಕ್ಲೇಶಗಳನ್ನು ಅನುಭವಿಸಲು ಮತ್ತು ಮಂದಿಗೆ ಭಾರವಾಗಿ ಬಾಳಲು ಅವರು ಸಿದ್ಧರಾಗುವರೇ ಹೊರತು ಸಾಮಾನ್ಯ ಕೂಲಿ ಮಾಡಿ ಆ ಕೆಲಸಕ್ಕೆ ಸರಿಯಾದ ಜೀವನದ ಮಟ್ಟವನ್ನು ಅಂಗೀಕರಿಸಲು ಅವರು ಸಂತೋಷದ ಮನಸ್ಸು ಮಾಡುವು

ವಿಲ್ಲ. ರಾಷ್ಟ್ರದಲ್ಲಿ ಸುಭಿಕ್ಷೆ ಹೆಚ್ಚಿತೆಂದರೆ ಮಧ್ಯಮ ವರ್ಗದವರಿಗೆ ಹೆಚ್ಚು ಹೆಚ್ಚು ಸೌಕರ್ಯಗಳು ದೊರೆಯುವವೆಂಬುದು ನಿಜ; ಆದರೆ ಮಧ್ಯಮ ವರ್ಗದ ದುರವಸ್ಥೆಯಿಂದ ಆ ಸುಭಿಕ್ಷೆಯೂ ವಿಲಂಬಿತವಾಗುತ್ತಿದೆ.

ಪರಾವಲಂಬಿಕೆ ಸಾಕು.

ಇತರರ ಶ್ರಮದ ಮೇಲಿನ ಅವಲಂಬನೆಯನ್ನು ಆದಷ್ಟು ಕಡಿಮೆ ಮಾಡಲು ಕೂಡಲೆ ಗಟ್ಟಿ ಮನಸ್ಸಿನ ಪ್ರಯತ್ನಗಳಾಗಬೇಕು. ಜೀವನವನ್ನು ಸರಳಗೊಳಿಸಿ ಎಲ್ಲವನ್ನೂ ಸ್ವತಃ ಮಾಡಿಕೊಳ್ಳಲು ಕಲಿಯಿರಿ. ಸ್ತ್ರೀಪುರುಷರಿಬ್ಬರೂ ಮನೆವಾರ್ತೆಯಲ್ಲಿ ಈ ಅರುಚಿಕರ ಪಥ್ಯವನ್ನು ಅನುಸರಿಸಬೇಕು. ಈ ಬದಲಾವಣೆಯನ್ನು ಕೇವಲ ನಿಮಿತ್ತ ಮಾತ್ರವಾಗಿ ಸ್ವೀಕರಿಸದೆ ಮನಃಪೂರ್ವಕವಾಗಿ ಕೈಕೊಂಡರೆ, ಮೊದಲು ಎಷ್ಟೋ ಕ್ಲೇಶವಾಗಬಹುದು. ಆದರೆ ಈ ಹೊಸ ಜೀವನ ಪಥದಲ್ಲಿ ಮುಂಬರಿದಂತೆಲ್ಲ ಈ ವರೆಗೆ ಕಾಣದಂಥ ಸುಖಸಂತೋಷಗಳು ಅದರಲ್ಲಿ ಗೋಚರಕ್ಕೆ ಬರತೊಡಗುವವು. ಪಾಶ್ಚಾತ್ಯ ದೇಶಗಳಲ್ಲಿ ಮಧ್ಯಮ ವರ್ಗದವರು ಈಗಲೂ ಈ ಪಥವನ್ನು ಸಂತೋಷದಿಂದಲೂ ಹೆಮ್ಮೆಯಿಂದಲೂ ಅನುಸರಿಸುತ್ತಿದ್ದಾರೆ.

ಸಮಾನತೆಯೇ ಸುಖದ ಸಾರ.

ರಾಜಕೀಯ ಸ್ವಾತಂತ್ರ್ಯವಾಗಲಿ ರಾಜಕೀಯ ಪ್ರಜಾಸತ್ತೆಯಾಗಲಿ ನೈಜಸುಖಕ್ಕೆ ಸಾಲದು. ಎಲ್ಲ ರೀತಿಯಿಂದಲೂ ನಾವು ಸಮಾನತೆಯನ್ನು ಸಾಧಿಸಬೇಕು. ನಾವೆಲ್ಲರೂ ದೇಹಶ್ರಮಕ್ಕೆ ಅನುವಾದಲ್ಲದೆ ಪ್ರಜಾಸತ್ತೆಗೆ ಸ್ಥೈರ್ಯ ಬಾರದು. ಕೆಲಸದಲ್ಲಿ ಗೌರವ ತಾರತಮ್ಯವಿರಕೂಡದು. ಎಲ್ಲ ಕೆಲಸಗಳಿಗೂ ಸಮಗೌರವವಿರಬೇಕು; ಅವೆಲ್ಲ ಸಂಸಾರ ದೇವತೆಯ ಅರ್ಚನೆಯಲ್ಲಿ ವಿಧಾಂಗಗಳೆಂದು ಬಗೆಯಬೇಕು. ಇಲ್ಲದಿದ್ದರೆ ದುಡಿಯಲು ಮನವುಳ್ಳವರ ಆಳಿಕೆಗೆ ನಾವು ಬಗ್ಗಬೇಕು. ಆಗ ನಮ್ಮ ಜೀವನವೇ ಪರವಶವಾಗುತ್ತದೆ.

ಕರ್ಮಮೂಲ ಮಧ್ಯಮ ವರ್ಗ.

ಭಾವಿ ಮಧ್ಯಮ ವರ್ಗವು ಜನ್ಮಮೂಲಕ ಸಿದ್ಧವಾಗದೆ ಕರ್ಮಮೂಲಕ ಸಿದ್ಧವಾಗಲಿದೆ. ದೇಹಶ್ರಮ ಮಾಡುವವರಲ್ಲಿಯೇ ನೈಪುಣ್ಯದಿಂದ ಸ್ಥಾನಗೌರವವನ್ನು ಹೊಂದಿದವರು, ಜ್ಞಾನಸಂಪಾದನೆ ಮಾಡಿದವರು, ಯೋಚಿಸಿ, ದಾರಿತೋರಿಸಿ, ಕಲಿಸಬಲ್ಲವರು ಮುಂದಿನ ಮಧ್ಯಮವರ್ಗ; ತಮ್ಮ ಸ್ವಂತ ಯೋಗ್ಯತಾನ ಗುಣಗಳಿಂದ, ಪ್ರಯತ್ನಫಲವಾಗಿ ಅವರು ಮೇಲೇರಬಹುದು, ಕೆಳಗಿಳಿಯಬಹುದು: ಆದರೆ ಜನ್ಮದಿಂದಲೇ ಸ್ಥಾನಗೌರವವನ್ನು ಸಂಪಾದಿಸುವುದು ಇನ್ನು ಸಾಧ್ಯವಿಲ್ಲ.

ಜನ್ಮಮೂಲವಾದ ಇಂದಿನ ಮಧ್ಯಮ ವರ್ಗದ ರಚನೆ ಹೋಗಬೇಕು. ಇದನ್ನು ಸ್ವೇಚ್ಛೆಯಿಂದ ಸಾಧಿಸಲು ಸಾಧ್ಯವಿದೆ; ಅದು ಅನಿಷ್ಟವೂ ಹೌದು. ಇದು ನಮ್ಮ ಶಾಲೆ ಕಾಲೇಜುಗಳಲ್ಲಿ ಅಧ್ಯಾಪಕರ ನೇತೃತ್ವದಲ್ಲಿ ಪ್ರಾರಂಭವಾಗಲಿ. ದಂಭ ಮತ್ತು ದುರಹಂಕಾರಕ್ಕೆ ಅವರು ತಡೆಹಾಕಲಿ.

(ಕರ್ಮವೀರ ಪತ್ರಿಕೆಯಿಂದ.)

ಮಹಾಜನರಲ್ಲಿ ನಮ್ರ ವಿನಂತಿ

ಕೊಡಗಿನಲ್ಲಿ ಚುನಾವಣೆಗಳು ಮುಗಿದವು. ಚುನಾವಣೆಯಲ್ಲಿ ತಮ್ಮ ತಮ್ಮ ಪಕ್ಷಗಳು ಜಯ ಹೊಂದಲೆಂತ ಉಮೇದವಾರ ಏಜಂಟರುಗಳು ಉತ್ಸಾಹಭರದಲ್ಲಿ ತಮ್ಮ ಪಕ್ಷದ ಮೂಲ ತತ್ವಗಳನ್ನೂ ಚುನಾವಣೆಯ ನಿಯಮಗಳನ್ನೂ ಕೊಂಚ ಮಟ್ಟಿಗೆ ಅಲ್ಲಿ ಇಲ್ಲಿ ಹಲ ಕೆಲವರು ಬದಿಗೊತ್ತಿರಬಹುದು. ಒಂದು ಪಕ್ಷದವರು ಇನ್ನೊಂದು ಪಕ್ಷದವರನ್ನು ತಮ್ಮ ಪತ್ರಿಕೆಯಲ್ಲಿ ಕ್ರಮವಾಗಿ ಟೀಕಿಸಿರಬಹುದು. ಕೆಲವರು ತಮ್ಮ ಗುರಿಯನ್ನು ಮೀರಿರಬಹುದು. ಆಶಾಭಂಗದ ಮನೋಭಾವನೆಯಿಂದ ತಮ್ಮ ಮೇರೆಯನ್ನು ಮೀರಿರಬಹುದು. ಜನಸಾಮಾನ್ಯರು ಎಲ್ಲೆಡೆಯಲ್ಲಿಯೂ ಈ ರೀತಿ ವರ್ತಿಸುವುದುಂಟು. [illegible] ಆದರ್ಶವನ್ನು ಮುಂದಿಟ್ಟು ಚುನಾವಣಾ ಪ್ರಚಾರ ಮಾಡುವವರು ವಿರಳ.

ಚುನಾವಣೆ ಮುಗಿದ ಮೇಲೆ ಮುಂದಿನ ಕರ್ತವ್ಯವೇನು? ಉಮೇದವಾರರು, ಏಜೆಂಟರುಗಳು ಮತ್ತು ಜನಸಾಮಾನ್ಯರು ಯಾವ ರೀತಿ ವರ್ತಿಸಬೇಕು? ಈ ವಿಚಾರವನ್ನು ಒಂದೆರಡು ಮಾತುಗಳಿಂದ ಜನತೆಯ ಮುಂದಿಟ್ಟು ಪ್ರಾರ್ಥಿಸಿಕೊಳ್ಳಬೇಕಾದ ಸಂದರ್ಭವೊದಗಿದೆ. ಚುನಾವಣೆ ಮುಗಿದ ನಂತರ ಉಮೇದವಾರರಾಗಲಿ ಅವರ ಏಜಂಟರುಗಳಾಗಲಿ ಅಥವ ಇನ್ನು ಯಾರೇ ಆಗಲಿ, ತಮ್ಮ ಮತಗಳನ್ನು ಯಾವ ಪಕ್ಷಕ್ಕೆ ಕೊಟ್ಟಿರುವರೆಂತ ಮತದಾರರನ್ನು ಕೇಳಬಾರದು. ಕೇಳಿದರೂ ಮತದಾರರು, ತಮ್ಮ ಕರ್ತವ್ಯವನ್ನು ವಿವೇಕವರಿತು ಮಾಡಿರುವದಾಗಿಯೂ, ಕಳೆದು ಹೋದ ವಿಚಾರ ಬಿಟ್ಟು ಮುಂದಿನ ಕರ್ತವ್ಯದ ಕಡೆ ಮನಸ್ಸನ್ನೀಯುವರೆಂತಲೂ, ಉಚಿತವಾಗಿ ತಿಳಿಸಬೇಕು. ಚುನಾವಣೆಯಲ್ಲಿ ಜಯ ಹೊಂದಿರುವ ಪಕ್ಷವು, ಎಲ್ಲಾ ಪಕ್ಷಗಳ ಜನರ ಪ್ರೇಮವನ್ನಿರಿಸಿ ಆದರವನ್ನು ಕೈಗೊಳ್ಳಬೇಕೇ ಹೊರತು, ತಮ್ಮ ಪಕ್ಷದ ಜನರ ಪ್ರೇಮಚಿಂತನೆಯನ್ನೇ ಎಂದೂ ಗಮನಿಸಬಾರದು. ದೇಶದ ಸರ್ವತೋಮುಖ ಹಿತದೃಷ್ಟಿಯೇ ಜಯ ಹೊಂದಿದ ಪಕ್ಷದ ಗುರಿಯಾಗದಿದ್ದಲ್ಲಿ ಆ ಪಕ್ಷಕ್ಕೆ ಯಶಸ್ಸು ದೊರೆಯಲಾರದು. ಸತ್ಯಾಂಶ ಹೀಗಿರುವಾಗ ಚುನಾವಣೆಯ ಸಂದರ್ಭದಲ್ಲಿ ವಿವಿಧ ಪಕ್ಷ ಸಂಘಗಳ ಜನರಲ್ಲಿ ಬೇರೂರಬಹುದಾದ ವೈಮನಸ್ಯಗಳು, ಕಲ್ಮಷಗಳು, ಮತ್ಸರಗಳು ಅರುಣೋದಯವಾದ ಕೂಡಲೇ ಕತ್ತಲೆಯು ದೂರವಾಗುವಂತೆ ಭಕ್ತಿಪೂರ್ವಕವಾದ ಪ್ರಾರ್ಥನೆಯಿಂದ ನಿರ್ಮೂಲಗೊಳಿಸಿ, ಮನಸ್ಸನ್ನು ಶುಚಿಗೊಳಿಸಬೇಕಾದದ್ದೆ ಪ್ರತಿಯೊಬ್ಬರ ಪ್ರಥಮ ಕರ್ತವ್ಯವಾಗಿದೆ.

ಚುನಾವಣೆಯ ಮಧ್ಯದಲ್ಲಿಯೂ ಸಹ ತಂತಮ್ಮ ಪಕ್ಷಗಳ ತತ್ವಗಳನ್ನು ಬಿರುಸಾಗಿ ಹರಡುವಾಗಲೂ, ಪ್ರೀತಿ, ವಿಶ್ವಾಸ, ಸಹೋದರ ಭಾವನೆಯನ್ನು ವಿವೇಕಿಗಳಾದವರು ತ್ಯಜಿಸುವುದಿಲ್ಲ. ರಾಜಕೀಯ ವಿಚಾರದಲ್ಲಿ ಎಷ್ಟೇ ಮತಭೇದವಿದ್ದರೂ ಆಚಾರ್ಯ ವಿನೋಬಾ ಭಾವೆಯವರೂ ಜಯಪ್ರಕಾಶ ನಾರಾಯಣರೂ, ಪ್ರಾರ್ಥನಾ ಸಭೆಗಳಲ್ಲಿ ಸಹೋದರ ಪ್ರೇಮದಿಂದ ಮಿಲನ ಹೊಂದಿದ ಆದರ್ಶವನ್ನು ನೋಡಿ ತಿಳಿದು, ಜನತೆಯು ಆ ರೀತಿ ಅನುಸರಿಸಬೇಕಾದ್ದು ಅಗತ್ಯವಾಗಿದೆ. ಜನಹಿತಕರವಾದ ಯಾವ ಕಾರ್ಯವನ್ನು ಜಯ ಹೊಂದಿದ ಪಕ್ಷವು ದೇಶದ ಮುಂದಿಡುವುದೋ, ಆಗ ಎಲ್ಲಾ ಪಕ್ಷದ ಜನರೂ ಸಹಕರಿಸಲೇ ಬೇಕು. ಹೀಗೆ ಸಹಕರಿಸದೇ ಹೋದರೆ ದೇಶಕ್ಕೆ ಹಾನಿಯಾಗುವದರಲ್ಲಿ ಸಂಶಯವಿಲ್ಲ. ದೇಶಕ್ಕೆ ಹಾನಿಕರವಾದ ಕಾರ್ಯಕ್ರಮಗಳೇನಾದರೂ, ಇನ್ನು ಮುಂದೆ ಕೈಗೊಳ್ಳುವ ಕಾಂಗ್ರೆಸು ಸರ್ಕಾರದಲ್ಲಿ ಕಂಡು ಬಂದರೆ, ಸಮಯೋಚಿತವಾಗಿ, ವಿಶಾಲ ಮನೋಭಾವನೆಯಿಂದ ಟೀಕಿಸಬೇಕೇ ವಿನಃ ದ್ವೇಷಾಸೂಯೆಗಳಿಂದ ಎಲ್ಲಾ ಕಾರ್ಯಗಳಲ್ಲಿಯೂ ಹೆಜ್ಜೆ ಹೆಜ್ಜೆಗೂ ಅಡ್ಡಿ ಬಂದರೆ ಕೊಡಗಿನ ಅಭಿವೃದ್ಧಿಗೆ ಧಕ್ಕೆ ತಗಲುವುದರಲ್ಲಿ ಸಂದೇಹವಿಲ್ಲ.

ಇನ್ನೊಂದು ವಿಷಾದಕರವಾದ ಪ್ರಶ್ನೆಯನ್ನು ಶೀಘ್ರದಲ್ಲಿ ಬಗೆಹರಿಸಬೇಕಿದೆ. ಹಿರಿಯರಲ್ಲಿ ಮೂಡಿದ ಪಕ್ಷ ಪಂಗಡಗಳ ಮತಭೇದವೂ, ಜಾತಿ ಮತಗಳ ಮತ್ಸರವೂ, ಶಾಲಾ ಕಾಲೇಜು ಬಾಲಕರಲ್ಲಿಯೂ ಎದ್ದು ಕಾಣುತ್ತಿದೆ. ಇದನ್ನು ತ್ವರಿತದಲ್ಲಿ ಬೇರು ಸಹಿತ ಕಿತ್ತು ಬಿಸಾಡದೆ ಹೋದರೆ ಮುಂದಿನ ಜನಾಂಗಕ್ಕೂ ಕ್ಷೇಮವಿಲ್ಲ. ಆದ್ದರಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಸಹೋದರ ಪ್ರೇಮವು ಉದ್ಭವಿಸಿ ಜಾತಿ ಮಾತ್ಸರ್ಯವು ಬೆಳೆಯದಂತೆ ನೋಡಿಕೊಳ್ಳುವುದು ಹಿರಿಯರ ಮತ್ತು ಕೊಡಗಿನ ಮುಖಂಡರ ಕರ್ತವ್ಯಗಳಲ್ಲೊಂದಾಗಿದೆ.

ಚುನಾವಣೆಯ ಮಧ್ಯದಲ್ಲಿ ಬರೆಯುತ್ತಿದ್ದಂತೆ ಕೊಡಗಿನಲ್ಲಿರುವ ಎರಡು ಪಕ್ಷಗಳ ಪತ್ರಿಕೆಗಳೂ ವಿರೋಧ ಪಕ್ಷದವರನ್ನು ಟೀಕಿಸಿ ಮನನೋಯುವಂತ ಲೇಖನಗಳನ್ನು ಇನ್ನು ಮುಂದೆ ಬರೆಯುವದನ್ನು ಬಿಟ್ಟು ಜನತೆಯ ಸುಖ ಪ್ರಗತಿಗಳನ್ನೂ, ಬಂಧುತ್ವವನ್ನೂ ಸಾಧಿಸಲು ಸಹಾಯಕವಾಗುವಂತಹ ಲೇಖನಗಳನ್ನು ಬರೆಯುತ್ತಿರಬೇಕು. ಪತ್ರಿಕೆಗಳ ಜವಾಬ್ದಾರಿಯು ಬಹು ದೊಡ್ಡದು. ಈ ಬಹು ದೊಡ್ಡ ಜವಾಬ್ದಾರಿಯನ್ನು ಎರಡು ಪತ್ರಿಕೆಗಳ ಸಂಪಾದಕರೂ ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕೆಂದರೆ ಲೇಖನಗಳನ್ನು ತುಲನೆ ಮಾಡಿ ಪ್ರಕಟಿಸಬೇಕು.

ದೇಶದ ಬಹುಮತದಿಂದ ಆರಿಸಲ್ಪಟ್ಟ ಕಾಂಗ್ರೆಸ್ ಪಕ್ಷವು ಜನಸೇವೆಗಾಗಿ ಆಡಳಿತೆಯನ್ನು ಕೈಗೊಳ್ಳುವ ಸಂದರ್ಭದಲ್ಲಿ ಅಧಿಕಾರ ವರ್ಗದಲ್ಲಿರುವವರೆಲ್ಲರೂ ತಮ್ಮ ಜವಾಬ್ದಾರಿಯನ್ನರಿತು ಎಂದಿಗಿಂತಲೂ ಹೆಚ್ಚಾಗಿ ನಿಷ್ಪಕ್ಷಪಾತದಿಂದ ದೇಶಸೇವೆಯನ್ನು ಸಹಕಾರಭಾವದಿಂದ ಮಾಡಬೇಕಾದದ್ದು ಮುಖ್ಯವಾಗಿದೆ. ಅಧಿಕಾರ ವರ್ಗದಲ್ಲಿ ಲೋಪದೋಷಗಳೇನಾದರೂ ಕಂಡುಬಂದಲ್ಲಿ ಜನತೆಯಿಂದ ಆರಿಸಿ ಬಂದ ಜನಪ್ರತಿನಿಧಿಗಳಾದ ಮಂತ್ರಿಗಳು ತಕ್ಕ ಕ್ರಮಗಳನ್ನು ಕೈಗೊಳ್ಳುವರೆಂಬುದರಲ್ಲಿ ಅಡ್ಡಿಯಿಲ್ಲ.

ಕೊಡಗಿಗೆ ಕೊಟ್ಟಿರುವ ಸುಧಾರಣೆಗಳನ್ನು ಜನಹಿತಕ್ಕೋಸ್ಕರ ನಿರ್ವಹಿಸುವುದರಲ್ಲಿ ಜನತೆಯು ಸರ್ಕಾರಕ್ಕೆ ಸರ್ವಜನರ ಬೆಂಬಲವೂ ಸಹಕಾರವೂ ಶೀಘ್ರದಲ್ಲಿಯೇ ನೀಡಲು ಕೊಡಗಿನ ಜನರೆಲ್ಲರೂ ಮುಂದೆ ಬರುವರೆಂತ ಆಶಿಸಲಾಗಿದೆ.

—ಸರ್ವೋದಯ.

BIRTH CONTROL.

ಮಿತ ಸಂತಾನ.

ಮಾನವ ಜನಾಂಗದ ನೆಮ್ಮದಿ, ಸ್ವಾಸ್ಥ್ಯಗಳಿಗಾಗಿ ಅನೇಕ ಸಂದರ್ಭಗಳಲ್ಲಿ ಗರ್ಭ ನಿರೋಧವು (BIRTH CONTROL) ಅವಶ್ಯಕವೆನಿಸುತ್ತದೆ ದಂಪತಿಗಳ ಆರೋಗ್ಯ ಕೆಡದಂತೆ ಬೆರೆಯುವ ಆಸೆಗೆ ಅಡ್ಡ ಬಾರದಂತೆ ನವೀನ ಶಾಸ್ತ್ರೀಯ ರೀತಿಯ ಔಷಧಿ ಮತ್ತು ಪ್ರಯೋಗಗಳಿಂದ ಬಹು ಸುಲಭ ರೀತಿಯಲ್ಲಿ ಮಿತ ಸಂತಾನದ ಕಾರ್ಯವನ್ನು ಸಾಧಿಸಲು ನಾವು ನಮ್ಮ ಔಷಧಾಲಯದಲ್ಲಿ ತಕ್ಕ ಚಿಕಿತ್ಸೆ ಏರ್ಪಡಿಸಿದ್ದೇವೆ. ಈ ವಿಷಯದಲ್ಲಿ ಹೆಚ್ಚು ವಿಚಾರ ತಿಳಿಯಬಯಸುವವರು ನಾಲ್ಕಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಡಾಕ್ಟರ್ ಸಿ. ಎಂ. ಗಣಪತಿ,
(ರಿಟೈಯರ್ಡ್ ಮೆಡಿಕಲ್ ಆಫೀಸರ್)
ಮಿತಸಂತಾನ ಔಷಧಾಲಯ.
BIRTH CONTROL CLINIC.
ಸೋಮವಾರಪೇಟೆ, ಉ. ಕೊಡಗು.

4-4

ಶ್ರೀ ಪಿ. ಸೀತಾರಾಮರವರು,
"ಕೊಡಗು" ಏಜೆಂಟರು,
ಕೊಡ್ಲಿಪೇಟೆ.

ಭಾವೆಯವರ ಗಮನಾರ್ಹ ಪದ್ಧತಿ.

"ಭಾರತದಲ್ಲಿ ಶಾಂತಿಯುತ ಕ್ರಾಂತಿ ಸಂಭವವೇ?" ಎಂಬ ಅಗ್ರಲೇಖನದಲ್ಲಿ ಬ್ರಿಟನ್ನಿನ ಅರಾಜಕತಾವಾದಿ ಪತ್ರಿಕೆಯಾದ "Freedom" ೧೫-೧೨-೫೧ರಲ್ಲಿ ಹೀಗೆ ಬರೆದಿದೆ:—

ಔದ್ಯೋಗಿಕ ಬಂಡವಾಳಶಾಹಿಯಲ್ಲಿ ಸಾಮಾಜಿಕ ಅಧಃಪಾತವು ಸಂಘಟನೆಯಾ ಅತಿಶಯವಾಗಿದೆಯೆಂದು ಹೇಳುವದು ಸುಲಭ. ಆದರೆ ಸಂಕಷ್ಟ ಮತ್ತು ಸಾಮೂಹಿಕ ನಿರ್ಗತಿಕತೆಗಳ ಕಾರಣವಾದ ಚಿತ್ರ ಭಾರತದಷ್ಟು ಕಾಣುವಷ್ಟು ಸ್ಪಷ್ಟವಾಗಿ ಬೇರೆಲ್ಲಿಯೂ ಕಾಣುವದಿಲ್ಲ. ಅಲ್ಲಿನ ಸಂಪತ್ತು ಅಪ್ರಕಟಿತ ಹಾಗೆಯೇ ಸಲಕರಣೆಗಳ ಅಭಾವ, ಬಂಡವಾಳದ ಅಭಾವ ನಿರ್ದಯಿ ಸ್ವಾರ್ಥಿಕ ತೊಡಕುಗಳು ಮತ್ತು ಸಾಲ ಇವುಗಳ ವಿರುದ್ಧ ಅಲ್ಲಿನ ಬಟ್ಟ ದಾರಿದ್ರ್ಯ ಪೀಡಿತರು ನಡೆಸುವ ಅನಂತ, ನಿರಾಶಮಯ ಸಂಗ್ರಾಮದ ಸ್ವರೂಪವನ್ನು ಮನಸ್ಸು ಮನಸ್ಸಾಗಿಯಾದರೂ ಕಲ್ಪಿಸಿಕೊಳ್ಳುವದು ಯುರೋಪಿಯನ್ನರಿಗೆ ಸಾಧ್ಯವಿಲ್ಲ. ಈ ಸಂಪತ್ತು, ದಾರಿದ್ರ್ಯವೂ ಭೂಮಿಯ ಅಸಮ ವಿಭಜನೆಯ ಬಳಲೇ ಹುಟ್ಟಿದ ಅವಸ್ಥೆಗಳು. ಭಾರತದ ಕ್ರಾಂತಿಯಲ್ಲಿ ಅಡಕವಾದ ಮುಖ್ಯ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಯೆಂದರೆ ಈ ಮೂಲಭೂತ ಅಸಮಾನತೆಯೇ ಎಂದು ಅರಾಜಕತಾವಾದಿಗಳು ಒತ್ತಿ ಹೇಳುತ್ತ ಬಂದಿದ್ದಾರೆ. ಈ ಅಸಮಾನತೆಯ ನಿವಾರಣೆಯು ನ್ಯಾಯವಾದ ಸಾಮಾಜಿಕ ಸಂಘಟನೆಗೆ ಅನಿವಾರ್ಯವಾಗಿದೆ.

ಆದ್ದರಿಂದ ಭೂಮಿಯಿಲ್ಲದ ಒಕ್ಕಲಿಗರಿಗೆ ಹಂಚುವುದಕ್ಕಾಗಿ ಭೂಮಿಯುಳ್ಳವರಿಂದ ಭೂದಾನವನ್ನು ಬೇಡುವ ಆಚಾರ್ಯ ವಿನೋಬಾ ಭಾವೆಯವರ ಉಪಾಯವು ಗಮನಾರ್ಹ ಘಟನೆಯಾಗಿದೆ.

ತೀರ ಸರಳ ಜೀವನ ನಡೆಸುವ ಭಾವೆಯವರು ಬಡವರ ಗುಡಿಸಲುಗಳಲ್ಲಿ ರಾತ್ರಿಗಳನ್ನು ಕಳೆಯುತ್ತ ತೆಲಂಗಾಣದಿಂದ ಆರಂಭಿಸಿ ದಕ್ಷಿಣ ಭಾರತದಲ್ಲಿ ಪಾದಸಂಚಾರವನ್ನು ಕೈಕೊಂಡರು. ಈ ಸಂಚಾರದಲ್ಲಿ ಭೂಮಾಲಿಕರು ಅವರಿಗೆ ೧೨ ಸಾವಿರ ಎಕರೆ ಭೂದಾನ ಮಾಡಿದರು. ಸೆಪ್ಟೆಂಬರ್ ಪ್ರಾರಂಭದಿಂದ ಅವರು ದಿಲ್ಲಿ ಯಾತ್ರೆ ಹೊರಟರು. ಈ ಯಾತ್ರೆಯಲ್ಲಿ ಅವರಿಗೆ ೨೦ ಸಾವಿರ ಎಕರೆ ದಾನ ಬಂತು. ಹೊಸ ದಿಲ್ಲಿಯಲ್ಲಿ ಭಾರತದ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಅವರ ವಸತಿಗೆ ಹೋಗಿ ಬಿಹಾರದಲ್ಲಿಯ ತಮ್ಮ ಭೂಮಿಗಳಲ್ಲಿ ಎಷ್ಟು ಬೇಕಾದರೂ ತೆಗೆದುಕೊಳ್ಳಿರೆಂದು ಹೇಳಿದರು. ಇದರ ಪರಿಣಾಮವು ಭಾರತದಲ್ಲೆಲ್ಲಾ ಭೂಮಾಲಿಕರ ಮೇಲೆ ಆಗಿಯೇ ತೀರುವುದು.

ಮಾರ್ಕ್ಸನ ವಿಚಾರಗಳಿಂದಲೂ ಬಂಡವಳಗಾರರ ಸ್ವಾಮಿತ್ವ ಮತ್ತು ವರ್ಗಕಲಹದ ನೈಜ ಸ್ಥಿತಿಗಳಿಂದಲೂ ಪ್ರಭಾವಿತವಾದ ಪಾಶ್ಚಿಮಾತ್ಯ ಬುದ್ಧಿಗೆ ಕೇವಲ ದಾನಮೂಲಕವಾಗಿ ಸ್ವಲ್ಪ ಮಟ್ಟಿಗೆ ಭೂಮಿಯ ಪುನರ್ವಿತರಣೆಯಾದೀತೆಂಬುದು ವಿಚಿತ್ರವಾಗಿ ತೋರಬಹುದು. ಶಾವೆ ಪುನರ್ವಿತರಣೆಯಾಗಬಯಸುವ ೫,೦೦,೦೦,೦೦೦ ಎಕರೆಗಳಲ್ಲಿ ಈ ವರೆಗೆ ಅವರಿಗೆ ದೊರೆತದ್ದು ಕೇವಲ ೩೫,೦೦೦ ಎಕರೆಯೆಂದು ಹೇಳಬಹುದು; ಅವರು ಭಾರತದ ಕೃಷಿಯೋಗ್ಯ ಭೂಮಿಯಲ್ಲಿ ಷಷ್ಠಾಂಶವನ್ನು ಹೀಗೆ ಹಂಚುವ ಗುರಿ ಇಟ್ಟುಕೊಂಡಿದ್ದಾರೆ. ಇಷ್ಟೆಂದು ಭೂಮಿಯ ದಾನದಿಂದ ಬಡಕಲಾದರೆ ರೈತರು ಭೂಮಿಯನ್ನು ತಾವೇ ಕಸಿದುಕೊಳ್ಳಲು ಹವಣಿಸುವ ದಿನವನ್ನು ಸ್ವಲ್ಪ ಮುಂದೆ ತಳ್ಳಬಹುದೆಂದೂ ಕೆಲವರು ಹೇಳಬಹುದು. ಆದರೆ ಪ್ರಯತ್ನದ ಪ್ರಾರಂಭದಲ್ಲಿಯೇ ೩೫,೦೦೦ ಎಕರೆಯೆಂದರೆ ದೊಡ್ಡ ಸಾಧನೆಯೇ ಸೈ.

ಅದಕ್ಕಿಂತಲೂ ಅರ್ಥವತ್ತಾದುದು ಅವಾರೀತಿ. ಅವರು ಭೂಮಾಲಿಕರ ಸಾಮಾಜಿಕ ನ್ಯಾಯಪ್ರಜ್ಞೆಯನ್ನು ಪ್ರಚೋದಿಸುತ್ತಿದ್ದಾರೆ. ಭೂಮಾಲಿಕರು ತಮ್ಮ ಕಲ ಭೂಮಿಯನ್ನು ಪುನರ್ವಿತರಣೆಗಾಗಿ ದಾನಕೊಡುವ ಮೂಲಕ ಅಸಮಾನ ಭೂವಿತರಣೆಯ ಅನ್ಯಾಯವನ್ನು ಒಪ್ಪಿಕೊಂಡಂತಾಗಿದೆ. ಹೀಗೆ ಒಪ್ಪಿಕೊಳ್ಳುವುದರಿಂದ ಆಳುವ ವರ್ಗವು ತನಗಿರುವ ಸಾಮಾಜಿಕ ಹಕ್ಕುಬಾಧ್ಯತೆಗಳು ನ್ಯಾಯವಾದ ಹಕ್ಕುಬಾಧ್ಯತೆಗಳೆಂಬ ನಂಬಿಕೆಯನ್ನು ಕಳೆದುಕೊಳ್ಳುತ್ತಿದೆ. ಇಂಥ ವಿಶ್ವಾಸಚ್ಯುತಿಯೇ ಇತಿಹಾಸದಲ್ಲಿ ಯಾವಾಗಲೂ ಮಹಾಕ್ರಾಂತಿಗಳಿಗೆ ದಾರಿ ಮಾಡಿಕೊಟ್ಟಿದೆ.

ಈ ಪ್ರಕಾರ ಇದೊಂದು ಸುಧಾರಣಾ ಪ್ರಯತ್ನವೆಂಬ ಆಕ್ಷೇಪಕ್ಕೆ ಆಧಾರವಿದೆ. ಸ್ವತಃ ಭಾವೆಯವರೂ ತೀವ್ರಗಾಮಿ ಅಥವಾ ಕ್ರಾಂತಿಕಾರಿ ಉದ್ದೇಶವಿಟ್ಟುಕೊಂಡಿರಲಿಕ್ಕಿಲ್ಲ. ಆದರೆ ಅವರ ರೀತಿಯಲ್ಲಿ ಕ್ರಾಂತಿಕಾರಿ ಅಂಶವಿದೆ. ಏಕೆಂದರೆ ಅದು ಸಾಮಾಜಿಕ ನ್ಯಾಯದ ಮುಖ್ಯ ತಾತ್ವಿಕ ವಿಚಾರಗಳಿಗೆ ಸಂಬಂಧಿಸಿದ್ದು.

ಭಾರತದಲ್ಲಿ ಹೊರತು ಮತ್ತೆಲ್ಲಾದರೂ ಈ ಬಗೆಯ ಪ್ರಯತ್ನವು ಯಶಸ್ವಿಯಾಗುತ್ತಿತ್ತೆಂಬುದರಲ್ಲಿ ಸಂಶಯವಿಲ್ಲ. ಹೀಗಿದ್ದರೂ ಎಲ್ಲ ತರದ ಆಕ್ಷೇಪಗಳನ್ನೆತ್ತಿಯೂ ಭಾರತದ ಮುಖ್ಯ ಕ್ರಾಂತಿಕಾರಿ ಸಮಸ್ಯೆಯಾದ ಭೂಮಿಯನ್ನು ಕುರಿತು ಈ ಹೊಸ ಪ್ರಯೋಗದ ಫಲಿತಾಂಶವನ್ನು ನಾವು ಕುತೂಹಲದಿಂದ ನಿರೀಕ್ಷಿಸುವುದೊಳಿತು.

'ಕ ವಿ.'

ಇಂಟರ್ ಹೈಸ್ಕೂಲು ಆಟೋಟಗಳ ಸ್ಪರ್ಧೆ.

ತಾರೀಕು ೧೦-೨-೫೨ರಲ್ಲಿ ಅಂತರ್ ಹೈಸ್ಕೂಲು ಆಟೋಟಗಳ ಸ್ಪರ್ಧೆಯು ಮಡಿಕೇರಿಯಲ್ಲಿ ನಡೆಯಿತು. ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ 'ಮಾರ್ಚ್ ಫಾಸ್ಟ'ನ್ನು ಶ್ರೀ. ಐ. ಸಿ ಸುಬ್ಬಯ್ಯನವರು ಸ್ವೀಕರಿಸಿದರು. ನಂತರ ಆಟೋಟಗಳು ಪ್ರಾರಂಭವಾದವು. ಸಾಮೂಹಿಕ ಮಾಸ ಹಾಕಿ ಮೊದಲಾದ ಆಟಗಳಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಪ್ರಥಮ ಸ್ಥಾನವನ್ನು ಪಡೆಯಿತು. ಇತರ ಆಟೋಟಗಳಲ್ಲಿ ವೀರಾಜಪೇಟೆ ಹೈಸ್ಕೂಲು ಛಾಂಪಿಯನ್ ಶಿಪ್ಪನ್ನು ಗೆದ್ದಿತು. ಹುಡುಗಿಯರ ಛಾಂಪಿಯನ್ ಶಿಪ್ ಕಪ್ಪನ್ನು ಮಡಿಕೇರಿ ಹುಡುಗಿಯರ ಹೈಸ್ಕೂಲು ಗೆದ್ದಿತು. ವಿದ್ಯಾರ್ಥಿಗಳಲ್ಲಿ ಸೀನಿಯರ್ ಛಾಂಪಿಯನ್ ಶಿಪ್ಪು ಶ್ರೀ. ಎಂ. ಎಂ. ಉತ್ತಪ್ಪನವರಿಗೂ, ಹುಡುಗಿಯರ ಛಾಂಪಿಯನ್ ಶಿಪ್ಪು ಮಿಸ್. ಬಿ ಜಿ. ಗಾರವ್ವನವರಿಗೂ, ಜೂನಿಯರ್ಸ್ ಛಾಂಪಿಯನ್ ಶಿಪ್ಪು ಶ್ರೀ ಬಿ ಎ. ಸೋಮಣ್ಣ ಮತ್ತು ಎ ಎಂ. ಪೊನ್ನಪ್ಪನವರಿಗೂ ದೊರೆತವು. ಮಿಸೆಸ್. ಐ ಸಿ ಸುಬ್ಬಯ್ಯನವರು ಗೆದ್ದವರಿಗೆ ಬಹುಮಾನಗಳನ್ನು ಕೊಟ್ಟರು. ಇಂಟರ್ ಹೈಸ್ಕೂಲ ಸಂಘದ ಪ್ರೆಸಿಡೆಂಟರಾದ ಶ್ರೀ. ಗಣೇಶರಾಯರು ಸ್ವಾಗತ ಭಾಷಣ ಮಾಡಿದರು. ಸಂಘದ ಸೆಕ್ರೆಟರಿಯವರಾದ ಶ್ರೀ ಭಗವಾನ್ ಸಿಂಗ್‌ರವರು ವರದಿಯನ್ನು ಓದಿದರು. ಅಧ್ಯಕ್ಷರಾದ ಶ್ರೀ ಐ ಸಿ ಸುಬ್ಬಯ್ಯನವರು ಆಟೋಟಗಳ ವಿಚಾರವಾಗಿ ನಾಲ್ಕು ಮಾತಾಡಿ ಕೊಡಗು ಅಂತರಾಷ್ಟ್ರೀಯ ಆಟೋಟಗಳಲ್ಲಿ ಭಾಗವಹಿಸುವ ಸುದಿನ ಬರಲೆಂದು ಆಶಿಸಿದರು. ಶ್ರೀ ಪಿ ಎಂ ಉತ್ತಪ್ಪನವರು ಎಲ್ಲರಿಗೂ ವಂದನೆಗಳನ್ನರ್ಪಿಸಿದ ನಂತರ ಸಮಾರಂಭ ಕೊನೆಗೊಂಡಿತು.

ಓದುಗರ ಓಲೆಗಳು—

ಯಾರಿಗೆ ಉಪದೇಶ?

ಕೊಡಗಿನ ಚೀಫ್ ಕಮಿಷನರಾದ ದಯಾಸಿಂಗ್ ಬೇಡಿಯವರು 'ತಾಲೋಕು ಜಿಲ್ಲಾ ಬೋರ್ಡು ಕೊಡಗಿನ ಎಲ್ಲಾ ಸರಕಾರಿ ಉದ್ಯೋಗಿಗಳನ್ನು ಕರೆಸಿ ಮೊನ್ನೆ ಮಂತ್ರಿಮಂಡಳಿಗಳು ಬಂದಾಗ ಯಾವ ರೀತಿ ವರ್ತಿಸಬೇಕು; ಯಾವುದೇ ಪಕ್ಷವನ್ನು ವಹಿಸಿಕೊಳ್ಳದೆ ಸರಕಾರದ ಕರ್ತವ್ಯವನ್ನು ಹೇಗೆ ನಡೆಸಬೇಕು ಎಂಬುದನ್ನು ವಿವರಿಸಿ, ಇದೊಂದು ಪ್ರಜಾಧಿಕಾರ್‍ಯ ಒದರೆ ನಾಳೆ ಮತ್ತೊಂದು ಪಕ್ಷ ಬರಬಹುದೆಂದೂ ಆದ್ದರಿಂದ ಸರಕಾರಿ ಉದ್ಯೋಗಿಗಳು ಪಕ್ಷಾತೀತರಾಗಿ ಸೇವೆ ಸಲ್ಲಿಸಬೇಕೆಂದೂ ಬೋಧಿಸಿದರಂತೆ. ಆದರೆ ಅದೇ ದಿನ ಸಾಯಂಕಾಲ ಮಡಿಕೇರಿ ಮಾರ್ಕೆಟ್ಟಿನಲ್ಲಿ ಕಾಂಗ್ರೆಸ್ ಪಕ್ಷದವರು ತಮ್ಮ ಮಂತ್ರಿದಾರರನ್ನು ಮಂದಿಸಲು ಸೇರಿಸಿದ್ದ ಸಾರ್ವಜನಿಕ ಸಭೆಯಲ್ಲಿ ಕೊಡಗು ಸರಕಾರದ ಕೆಲವು ಗಜೆಟೆಡ್ ಮತ್ತಿತರ ಉದ್ಯೋಗಿಗಳು ಪ್ರಮುಖ ಪಾತ್ರ ವಹಿಸಿದ್ದರು. ಇದು ಚೀಫ್ ಕಮಿಷನರ ಗಮನಕ್ಕೆ ಬಂದಿಲ್ಲವೇ? ಅಲ್ಲ "ಹೇಳುವದು ಪುರಾಣ ಹಾಕುವದು ಗಾಣ" ಎಂಬ ನಾಣ್ಣುಡಿಯಂತೆ ಇವರ ವರ್ತನೆಯೋ?

'ಪ್ರೇಕ್ಷಕ.'

ಕೊಡಗಿನ ಆ ಕಮಿಷನರ್ ಸಾಹೇಬರ ಮತ್ತು ರಿಜಿಸ್ಟ್ರಾರ್ ಸಾಹೇಬರವರ ಅವಗಾಹನೆ ಬಗ್ಗೆ—

ಕುತ್ತನಾಡು ಸಹಕಾರ ಸಂಘದ ಪ್ರೆಸಿಡೆಂಟರು ಈ ಮೂಲಕ ಬರೆದು ಕೊಳ್ಳುವುದೇನೆಂದರೆ ತಾ. ೩೦-೧-೫೨ 'ಜನ್ಮ ಭೂಮಿ' ಪೇಪರಿನಲ್ಲಿ ಪೊನ್ನಂಪೇಟೆ ಕುತ್ತನಾಡು ಸಂಘದ ರಸ್ತೆ ದುರಸ್ತು ಪಡಿಸಿದ ವಿಷಯ ಪೇಪರಿನಲ್ಲಿ ಆರ್ಟಿಕಲ್ ಹಾಕಿದನ್ನು ನೋಡಿದೆನು ಕುತ್ತನಾಡು ಸಹಕಾರ ಸಂಘ ಮೆಂಬರುಗಳು ಸಂಘದ ತತ್ವಕ್ಕನುಗುಣವಾಗಿ ಈ ರಸ್ತೆಯನ್ನು ದುರಸ್ತು ಪಡಿಸಿದ ಮಹನೀಯರು ಬಿ. ಬಿ. ರಸ್ತೆಯ ಬಾಪ್ತು ಹಣವನ್ನು ಹೊಂದಿಕೊಂಡು ಹಂಚಿಕೊಂಡಿರುತ್ತಾರೆಯೇ ವಿನಹ ಸಂಘದ ಪ್ರೆಸಿಡೆಂಟರಾಗಲಿ ಯಾ ಕಾರ್ಯಕಾರಿ ಮಂಡಳಿಯ ಮಂದಾಗಲಿ ನಮಗಳಿಗೆ ಯಾವ ಸಮ್ಮಂದವು ಈ ವರ್ಷದ ಕೆಲಸದ ಮಟ್ಟಿಗೆ ಇರಲಿಲ್ಲ. ಪೇಪರಿನಲ್ಲಿ ಪ್ರಕಟಿಸಿದ ಮಹ ವ್ಯಕ್ತಿಯು ನಾಡಿನೊಳಗೆ ಜೀವಸಹಿತವಾಗಿದ್ದಿದ್ದರೆ ಇಂಥಾ ಅಪಪ್ರಚಾರಕ್ಕೆ ಎಡೆಯಾಗುತ್ತಿರಲಿಲ್ಲ. ಸಂಘದ ಮೆಂಬರುಗಳಲ್ಲಿರುವ ಭಿನ್ನಾಭಿಪ್ರಾಯಗಳಿಗಾಗಿ ಸಂಘದ ಕಾರ್ಯಕಾರಿ ಮಂಡಳಿಯವರನ್ನು ದೂಷಿಸುವುದು ನ್ಯಾಯವಲ್ಲ ಈ ಮೊದಲು ಒಂದು ನರ್ಸ ಪಾರ್ಟಿಗಳಿಗನುಸರಿಸಿ ಹುಕ್ಕಿಸಾಲ ಹಾಕಿರುವರೆಂದು ಪ್ರಕಟಿಸಿದರು. ಆಗಿ ದಾಗೈ ತಮ್ಮಲ್ಲಿರುವ ವೈಮನಸ್ಯವನ್ನು ಸಂಘಕ್ಕೆ ವ್ಯಾಪಿಸುವುದು ಯೋಗ್ಯ ಮೆಂಬರುಗಳಿಗೆ ಸರಿಯಲ್ಲ ಎಂಬುದನ್ನು ಸಾರ್ವಜನಿಕರು ನಾಡಿನವರ ಮತ್ತು ಅಧಿಕಾರಿಗಳು ಸಹ ತಿಳಿದಿರುವದು.

ಬಿ ಪಿ. ನಂಜುಮಮ್ಮಯ್ಯ

ಶ್ರೀರಾಮಮಂದಿರ ಭಾಗಮಂಡಲ

ಈ ಮಂದಿರದಲ್ಲಿ ಯಾತ್ರಿಕರು ಉಳಕೊಳ್ಳಲು ಅನುಕೂಲತೆಯಿರುತ್ತೆ. ಆದರೆ ಅಡಿಗೆಮಾಡಲು ಅನುಕೂಲವಿಲ್ಲದ ಕಾರಣ ಅಡಿಗೆಗೆ ಬೇರೆ ಕಟ್ಟಡ ಮಾಡಬೇಕೆಂದು ದಳಹಾಕಿ ಮರ ಸಹ ಕಡಿಸಿ ಮತ್ತೆ ಹಣದ ತಾಪತ್ರೆಯಿಂದ ಅಡಿಗೆಮನೆ ಕಟ್ಟಲು ಬಾಕಿಯಾಗಿರುತ್ತೆ. ಹಣ ಸಹಾಯ ಮಾಡುತ್ತೇವೆಯಾಗಿ ವಾಗ್ದಾನ ಮಾಡಿದ ಅನೇಕ ಮಹನಿಯರು ಹಣಕೊಡದೆ ಬಾಕಿಮಾಡಿದ್ದರಿಂದ ಅಡಿಗೆಮನೆ ಕಟ್ಟದೆ ಬಾಕಿಯಾಗಿರುತ್ತೆ ಆದುದರಿಂದ ಶ್ರೀರಾಮ ಮಂದಿರಕ್ಕೆ ಧನ ಸಹಾಯ ಮಾಡುತ್ತೇವೆಯಾಗಿ ವಾಗ್ದಾನ ಮಾಡಿರುವವರು ವಾಗ್ದಾನ ಮಾಡಿದಂತೆ ಸಹಾಯ ಮಾಡಿ ಅಡಿಗೆ ಮನೆ ಕಟ್ಟಿಸಿ ಯಾತ್ರಿಕರಿಗೆ ಅಡಿಗೆಗೆ ಅನುಕೂಲತೆ ಮಾಡಿ ಶ್ರೀರಾಮನ ಕೃಪೆಗೆ ಪಾತ್ರರಾಗಬೇಕಾಗಿ ಕೋರಿಕೆ

ಚೆರುಮಂದಂಡ ದೇವಯ್ಯ
ಪ್ರೆಸಿಡೆಂಟರು, ಶ್ರೀರಾಮಮಂದಿರ,
ಭಾಗಮಂಡಲ.

ಮೈನರ್ ಇರಿಗೇಷನ್ ಸಮಿತಿ.

ಪೊನ್ನಂಪೇಟೆ ನ ಡಿಸಿ ಈ ಸಮಿತಿಯ ಚುನಾಯಿತ ಸದಸ್ಯರಿಗೆ ಮೀಟಿಂಗು ನಡೆಸುವರೆ ಸಮಯವೇ ದೊರೆಯುವುದಿಲ್ಲವೆಂದು ತೋರುತ್ತೆ ಇಷ್ಟು ದಿನ ಚುನಾವಣೆ ಗಲಾಟೆ. ಕೋರಂ ಇಲ್ಲದೆ ಮೀಟಿಂಗು ನಡೆಯುವದೇ ಇಲ್ಲ. ಇನ್ನಾದರೂ ಸಮಯ ದೊರಕುವದೇ? ಸಾಧ್ಯವಿಲ್ಲದಿದ್ದರೆ ಸ್ಥಳ ಬಿಡಬಾರದೇ? ಇಲ್ಲಿಯ ಸೆಕ್ಷನ್ ಆಫೀಸರಿಗೆ ತಿಂಗಳಿಗೆ ರೂ. ೨೦೦-೩೫೦ ಸಂಬಳವಿರಬಹುದು. ಕೊಡಗಿನಲ್ಲಿ ಇಷ್ಟು ಸುಖಪ್ರದಾಯಕ ಉದ್ಯೋಗ ಬೇರೆ ದೇಶದವರಿಗೆ ಸಿಕ್ಕಿದ್ದು ಅವರ ಭಾಗ್ಯ. ನಾಡಿನಲ್ಲಿ ಅನೇಕ ಕಟ್ಟೆ, ಕೆರೆ ರಿಪೇರಿ ಕೆಲಸವನ್ನು ಇನ್ನು ೩-೪ ತಿಂಗಳಲ್ಲಿ ಪೂರೈಸಬೇಕಿದೆ. ನಾಮಕಾವಸ್ತೆ ಸಮಿತಿಯಿದ್ದು ಸರಿಯಾದ ಕಾರ್ಯತತ್ಪರತೆಯಿಂದ ವರ್ತಿಸದೆಯಿದ್ದಲ್ಲಿ ಇಂಥಾ ಸಮಿತಿಯಿಂದ ಯಾವ ಪ್ರಯೋಜನವೂ ಜನತೆಗೆ ದೊರೆಯಲಾರದು. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಪರ್‍ಯಾಲೋಚಿಸಿ ಮೈನರ್ ಇರಿಗೇಶನ್ ಕೆಲಸಗಳನ್ನು ಸರಿಯಾಗಿ ಕೈಗೊಳ್ಳುವರೇ?

ಯಂ. ಬಿ. ಯಸ್.

ಕೊಡಗು

ತಾ. ೧೫-೨-೧೯೫೨ನೇ ಶುಕ್ರವಾರ

ಜನವರಿ ೨೬ ಮತ್ತು ೩೦.

ಮೇಲಿನ ಈ ಎರಡು ದಿನಾಂಕಗಳು ಕಳೆದು ಹದಿನೈದು ದಿನಗಳಾಗಿ ಹೋದವು. ಅವುಗಳ ವಿಚಾರ ಅಂದೇ ಬರೆಯುವ ಮನಸ್ಸಿದ್ದರೂ ಕೊಡಗಿನ ಚುನಾವಣೆಯ ವಿಚಾರಗಳ ಒತ್ತಡದಿಂದ ಈಗ ಬರೆಯುತ್ತಿರುವೆವು ದಿನಾಂಕ ೨೬ ಎಂದರೆ ನಮ್ಮ ಗಣತಂತ್ರ (ರಿಪಬ್ಲಿಕ್) ದಿನ. ಆ ದಿನ ನಡೆದ ಕಾರ್ಯಕಲಾಪಗಳ ವರದಿಯನ್ನು ಪತ್ರಿಕೆಯಲ್ಲಿ ನೋಡಿರುವೆವು. ಮಡಿಕೇರಿಯಲ್ಲಿ ನಡೆದುದನ್ನು ಕಣ್ಣಾರೆ ಕಂಡಿರುವೆವು ಈ ಗಣತಂತ್ರ ದಿನದಂದು ಆಗುವ ಕಾರ್ಯಕ್ರಮವನ್ನು ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿದರೆ ಭಾರತೀಯರಾದ ನಾವು ಎತ್ತ ಸಾಗುತ್ತಿರುವೆವೆಂದು ಆಶ್ಚರ್ಯಪಡಬೇಕಾಗುತ್ತದೆ. ರಿಪಬ್ಲಿಕ್ ದಿನವೆಂದರೆ ಆ ದಿನ ಮಿಲಿಟರಿ ಪೆರೇಡು, ತೋಪುಗಳ ಮರ್ಯಾದೆ, ಸೆಲ್ಯೂಟಿನ ಸ್ವೀಕಾರ ಇವೇ ಆಗಿದೆ. ಮಡಿಕೇರಿಯಂಥಾ ಚಿಕ್ಕ ಹಳ್ಳಿಯಲ್ಲೂ ಕೂಡ ಗಣತಂತ್ರ ದಿನದ ಕಾರ್ಯಕ್ರಮವೆಂದರೆ ಪೋಲೀಸರ 'ಮಾರ್ಚ್‌ಪಾಸ್ಟ್' ಮತ್ತು ಚೀಫ್ ಕಮಿಷನರಿಂದ ಸೆಲ್ಯೂಟ್ ಸ್ವೀಕಾರ! ಪೂರ್ಣ ಅಹಿಂಸಾ ಪಥದಿಂದ ಸ್ವಾತಂತ್ರ್ಯವನ್ನು ಪಡೆದು, ಇಡೀ ಜಗತ್ತಿಗೇ ಹೊಸ ಪಾಠ ಕಲಿಸಲು ಹೊರಟ ಭರತಖಂಡವು ಇಂಥಾ ರಾಷ್ಟ್ರೀಯ ಉತ್ಸವದ ದಿನಗಳಲ್ಲಿ ಕೇವಲ ಮಿಲಿಟರಿ ಪೆರೇಡ್ ಮಾಡುವದು ಅಸಂಗತವಾದುದು. ನಮ್ಮ ದೇಶದ ಆಳಿಷತ, ನಮ್ಮ ದೇಶದ ಜವಾಬ್ದಾರಿಯನ್ನು ಹೊತ್ತ ಕಾಂಗ್ರೆಸಿಗರ ಮನೋಭಾವ ಮತ್ತು ಕಾರ್ಯಕಲಾಪಗಳು ಭಾರತೀಯ ವೈಶಿಷ್ಟ್ಯ ಹಾಗೂ ಗಾಂಧೀ ಪರಂಪರೆಯಂತೆ ನಡೆಯದೆ ಜಗತ್ತಿನ ಇತರ ರಾಷ್ಟ್ರಗಳ ಸಂಪ್ರದಾಯದಂತೆ ನಡೆಯುತ್ತಿದೆ ಯೆಂದು ಇದರಿಂದ ಸ್ಪಷ್ಟವಾಗುತ್ತದೆ. ಮಹಾತ್ಮಾ ಗಾಂಧೀಜಿಯವರ ಕೊಲೆಯಾಗಿ ಅವರ ಶವ ಸಂಸ್ಕಾರದ ಕಾಲಕ್ಕೆ ಮಿಲಿಟರಿ ಪೆರೇಡಿನಿಂದ ಶಸ್ತ್ರಸಜ್ಜಿತ, ಆರ್ಮರ್ಡ್ ಕಾರಿನಲ್ಲಿ ಶವ ಸಾಗಿಸಿದ ಕಾಲಕ್ಕೆ ಪ್ರಸಿದ್ಧ ಪಾಶ್ಚಾತ್ಯ ಲೇಖಕರಾದ ಮಿ. ಆಲ್ಡಸ್ ಹಕ್ಸ್ಲೀಯವರು ಮಾರ್ಮಿಕವಾಗಿ ಮಹಾತ್ಮರ ಅಹಿಂಸೆಯ ಪರ್ಯವಸಾನ ಇಲ್ಲಿಗೆ ಆಯಿತೆಂದು ನುಡಿದಿದ್ದರು. ಆ ನುಡಿಯು ನೂರಕ್ಕೆ ನೂರು ಸತ್ಯವೋ ಎಂಬಂತೆ ಭಾರತದಲ್ಲಿಯ ಕಾರ್ಯಕಲಾಪಗಳು ನಡೆಯುತ್ತಿವೆ.

ಅವರ ಜೊತೆಗೆ ಈಗ ಮುಗಿದ ಚುನಾವಣೆಯೂ ಗಾಂಧಿ ತತ್ವ ಪ್ರಚೋದನೆಗೆ ಆತಂಕವಾಗಿಯೇ ಪರಿಣಮಿಸಿತು. ಗಾಂಧೀತತ್ವ ರೀತಿಯ ಜೀವನವನ್ನೂ ಆಚರಣೆಯನ್ನೂ ಕಾಂಗ್ರೆಸಿಗರೇ ಮರೆತು ಕೇವಲ ಜಯದ ಆಸೆಯೊಂದನ್ನು ಮುಂದಿಟ್ಟು ವರ್ತಿಸಿರುವಾಗ ಉಳಿದ ಪಕ್ಷಗಳ ವಿಚಾರ ಹೇಳುವದು ಬೇಡ. ನಾನಾ ರೀತಿಯ ದುಷ್ಟ ಭಾವನೆಗಳು ಚುನಾವಣಾ ಕಾಲಕ್ಕೆ ಉದ್ರೇಕಗೊಂಡಿವೆ. ವಾತಾವರಣದಲ್ಲಿ ಬಿಸಿ, ಶೆಕೆ ಹೆಚ್ಚಾಯಿತೇ ವಿನಾ ಬೆಳಕು ತೋರಿಬಂದುದು ಬಹು ಕಡಿಮೆ. ಬೌದ್ಧಿಕವಾಗಿಯಾಗಲೀ, ನೈತಿಕವಾಗಿಯಾಗಲೀ ಚುನಾವಣೆಗಳು ಕಲ್ಮಶವನ್ನು ತೊಳೆಯುವದರ ಬದಲು ಅಳಿಸಲಾರದ ಕೊಳೆಯನ್ನೇ ಹಚ್ಚಿವೆ.

ಈ ರೀತಿಯ ಪರಿಸ್ಥಿತಿಯಲ್ಲೇ ಜನವರಿ ೩೦ ನಮ್ಮ ಮುಂದೆ ಬಂದು ಅನೇಕ ನೆನಪುಗಳನ್ನು ಬಲಾತ್ಕಾರವಾಗಿ ನಮ್ಮ ಮುಂದೆ ತಂದಿತ್ತು. ದಿನಾಂಕ ೨೬ ರ ಸೈನಿಕ ಪೆರೇಡಿನಿಂದ ಮನವನ್ನು ಬದಲು ಮಾಡಿ ತಾರೀಕು ೩೦ ರ ಸರ್ವೋದಯ ಭಾವನೆಗೆ ಅಳವಡಿಸಿಕೊಳ್ಳುವದು ಬಹು ಪ್ರಯಾಸದ ಕೆಲಸವೇ ಸರಿ. ಅನೇಕರು ದಿನಾಂಕ ೩೦ನ್ನು ಗಮನಿಸದಿರಬಹುದಾದರೂ ಕೆಲವರ ಮಾನಸಿಕ ಭಾವನೆಯನ್ನು ಬಡಿದೆಬ್ಬಿಸಿ ಎಚ್ಚರಿಸುವ ಕಾರ್ಯವನ್ನು ಈ ದಿನವು ಮಾಡಿತು. ಗಾಂಧೀಜಿಯವರ ಜೀವನವನ್ನೂ, ಅವರ ತತ್ವಗಳನ್ನೂ, ಭಾವಿಸಿಕೊಂಡು ದೇಶವು ಇಳಿಯುತ್ತಿರುವ ಅಧಃಪಾತವನ್ನು ನೋಡಿ ಎಚ್ಚರಿಸುವ ಒಬ್ಬಿಬ್ಬರಾದರೂ ದೇಶದಲ್ಲಿ ಇದ್ದಾರೆ. ಭಾರತದ ಇಂದಿನ ಪರಿಸ್ಥಿತಿಯಲ್ಲಿ ಈ ಗಾಂಧಿ ಭಾವನೆಯು ಒಳಗಿಂದೊಳಗೆ ಹೊರಹೊಮ್ಮಿ ಹರಡಬೇಕಾಗಿದ್ದು ಪರಿಸ್ಥಿತಿಯನ್ನು ಸುಧಾರಿಸಬೇಕಾದ ಆವಶ್ಯಕತೆ ತುಂಬಾ ಇದೆ. ಈ ಗುರಿಗಾಗಿಯೇ ಸರ್ವೋದಯ ಪತಾಕೆಯಡಿಯಲ್ಲಿ ವಿನೋಬಾ, ಆಗರವಾಲಾ, ಕುಮಾರಪ್ಪ ಮೊದಲಾದವರು ಸತತ ದುಡಿಯುತ್ತಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಪಾಶ್ಚಾತ್ಯರಂತೆ ಸೈನ್ಯ ಸಿದ್ಧತೆ ಮಾಡಿಕೊಂಡು ಆ ಮಾರ್ಗದಲ್ಲಿ ಜನಜೀವನವನ್ನು ಸುಧಾರಿಸುವ ಹಾಗೂ ಶಾಂತಿಯನ್ನು ಪ್ರಸ್ಥಾಪಿಸುವ ನೆಹರೂ ಸರಕಾರದ ಕಲ್ಪನೆ ನಿಜವಾಗಿ ಮರಳಿನ ಮನೆಯಂತಾಗುವದರಲ್ಲಿ ಸಂಶಯವಿಲ್ಲ ಏಕೆಂದರೆ ಜಗತ್ತಿನ ರಾಷ್ಟ್ರಗಳೆಲ್ಲ ಈ ಮಾರ್ಗದಿಂದಲೇ ನಡೆದು ಇಂದು ಶಾಂತಿ ಪ್ರಗತಿಗಳನ್ನು ಕಾಣದೆ ಯುದ್ಧ ಭಯದಿಂದ ತತ್ತರಿಸುತ್ತಿವೆ. ಹಾಗಿರುವಾಗ ಗಾಂಧೀಜಿಯವರ ಸರ್ವೋದಯ ಮಾರ್ಗವೇ ಜಗತ್ತಿನ ಸರ್ವ ದುಃಖ ನಿವಾರಣೆಗೆ ರಾಜಮಾರ್ಗ. ಈ ದೃಷ್ಟಿಯಿಂದ ನಮ್ಮ ದೇಶೀಯರು ಪರಿವರ್ತನೆಗೊಂಡು ಜನವರಿ ೩೦ ರಂಥಾ ಪವಿತ್ರ ದಿನದಂದು ಆತ್ಮಶುದ್ಧಿ ಮಾಡಿಕೊಂಡು ದೃಢ ಭಾವಧಾರಿಗಳಾಗಿ ಸತ್ಯ, ನೀತಿ, ಧರ್ಮ, ಸಹೋದರತೆಯ ತಳಹದಿಯಲ್ಲಿ, ಕಟ್ಟಿದ ಸಮಾಜ ರಚನೆಗಾಗಿ ಹೋರಾಡುವದು ಕರ್ತವ್ಯವಾಗಿದೆ.

ವರ್ತಮಾನ.

ಎಸ್. ಎಸ್. ಎಲ್. ಸಿ. ಪಾಸಾದ ಪ್ರಾಯ ೧೮ ರಿಂದ ೨೫ ವರ್ಷದವರು ರೈಲ್ವೆಯಲ್ಲಿ ಟಿಲಿಕ್ಲಾರ್ಕ್ ಮತ್ತು ಟಿಕೆಟ್ ಕಲೆಕ್ಟರುಗಳ ಕೆಲಸಕ್ಕೆ ಬೇಕಾಗಿದ್ದಾರೆ. ಸೇರಲು ಕುತೂಹಲವುಳ್ಳವರು ಕೂಡಲೇ ಹೆಚ್ಚಿನ ವಿಷಯಗಳನ್ನು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಮೆಂಟ್ ಆಫೀಸಿನಿಂದ ತಿಳಿದುಕೊಳ್ಳಬಹುದು.

ಅಮ್ಮತ್ತಿ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಂದ ಸ್ಥಾಪಿತವಾದ ನೇತಾಜಿ ಕಪ್ಪು ಹಾಕಿ ಟೂರ್ನಮೆಂಟಿನ ಪಂದ್ಯಾಟವು ತಾ. ೮ರಲ್ಲು ಪ್ರಾರಂಭವಾಗಿ ತಾ. ೮ರಲ್ಲು ಅಮ್ಮತ್ತಿ ಶಾಲಾ ಟೀಮಿನವರು ಮರಗೋಡು ಶಾಲೆಯ ಟೀಮಿನವರನ್ನು ಗೆದ್ದು ಕಪ್ಪನ್ನು ಪಡೆದರು ಗೆದ್ದವರಿಗೆ ಶ್ರೀ ಯಂ. ಯಂ. ಅಪ್ಪಚ್ಚನವರು ಕಪ್ಪನ್ನು ಕೊಟ್ಟರು.

ತಾರೀಕು ೨೩-೨-೫೨ನೇ ಶನಿವಾರ ದಿನ ರಾತೆ. ನಾಪೋಕ್ಲು ಬೇತು ಗ್ರಾಮದ ಮಕ್ಕಿ ಸಾಸ್ತಾವು ದೇವರ ದೀಪೋತ್ಸವ ಮತ್ತು ಅಂದಿ ಬೆಳಕು ಹಬ್ಬವು ನಡೆಯುವುದೆಂದು ತಿಳಿಯುತ್ತೇವೆ.

ಗುಡೂರಿನಲ್ಲಿರುವ ಸರಕಾರಿ ಶಾಲೆಯ ಮಣ್ಣು, ಗಾಜಿನ ಪಾತ್ರೆ, ಮುಂತಾದುವುಗಳನ್ನು ತಯಾರಿಸುವ ಕೆಲಸದಲ್ಲಿ ಸೂಪರ್‌ವೈಸರ್‌ಗಳಾಗಿ ತರಬೇತು ಹೊಂದಲು ಎಸ್. ಎಸ್. ಎಲ್. ಸಿ. ಪಾಸಾದ ೧೮ ರಿಂದ ೨೦ ವರ್ಷ ಪ್ರಾಯದವರೂ ಮತ್ತು ಆರ್ಟಿಸನ್‌ಗಳಾಗಿ ತರಬೇತು ಹೊಂದಲು ಸ್ವತಃ ಮಣ್ಣು ಪಾತ್ರೆಗಳ ಕೆಲಸಗಾರರಾಗಿ ಕಡಿಮೆ ಪಕ್ಷ ೫ ವರ್ಷ ಅನುಭವವಿದ್ದು ೧೬ರಿಂದ ೩೯ ವರ್ಷ ಪ್ರಾಯದವರೂ ಬೇಕಾಗಿದ್ದಾರೆ. ಸೂಪರ್‌ವೈಸರ್ ತರಬೇತಿಯು ೨ ವರ್ಷ ಕಾಲವೂ ಮತ್ತು ಆರ್ಟಿಸನ್ ತರಬೇತಿಯು ಒಂದು ವರ್ಷ ಕಾಲವೂ ಇರುವದು. ಈ ತರಬೇತಿಗೆ ಸೇರಲು ಇಚ್ಛೆಯುಳ್ಳವರು ಹೆಚ್ಚಿನ ಮಾಹಿತಿಯನ್ನು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಮೆಂಟ್ ಆಫೀಸಿನಿಂದ ತಿಳಿದುಕೊಳ್ಳಬಹುದು.

ತಾ. ೨೧ರಿಂದ ೨೫ರ ವರೆಗೆ ಮದರಾಸಿನಲ್ಲಿ ನಡೆಯುವ ಅಖಿಲ ಭಾರತ ಒಲಿಂಪಿಕ್ಸ್ ಸ್ಪರ್ಧೆಯಲ್ಲಿ ಭಾಗವಹಿಸಲು ಶ್ರೀಗಳಾದ ಕೋದಂಡ ಬೋಪಯ್ಯ ಮತ್ತು ಪಿ. ಎಂ. ಮುತ್ತಯ್ಯ ಇವರುಗಳನ್ನು ಮೈಸೂರು ಸರಕಾರವು ಆರಿಸಿರುವುದಾಗಿ ತಿಳಿಯಬರುತ್ತದೆ

ಹುದಿಹರ ಗ್ರಾಮದ ಶ್ರೀ ಮನ್ನೆರ ಬಿದ್ದಪ್ಪನವರ ನೂರಿಪ್ಪತ್ತು ಒಟ್ಟೆ ಭೂಮಿಯ ಮೇದೆಯು ಅಕಸ್ಮಾತು ಬೆಂದುಹೋಯಿತೆಂದು ವರ್ತಮಾನ.

ಮೈಸೂರಿನಲ್ಲಿರುವ ಕೊಡಗಿನ ವಿದ್ಯಾರ್ಥಿಗಳು ತಾ. ೧೦ರಲ್ಲಿ ದಿ ಮೈಸೂರು ಸಿಟಿ ಕಾಲೇಜಸ್ ಕೂರ್ಗ್ ಸ್ಟೂಡೆಂಟ್ಸ್ ಸೋಶಿಯಲ್'ನ್ನು ಶ್ರೀ ಪಂದಿಕುತ್ತಿರ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಇಂದ್ರಭವನದಲ್ಲಿ ನಡೆಸಿದರು. ಉಪಯುಕ್ತ ಭಾಷಣಗಳಾದನಂತರ ಮೈಸೂರಿನಲ್ಲಿರುವ ವಿದ್ಯಾರ್ಥಿಗಳ ಹಿತಚಿಂತಕರಾಗಿದ್ದ ಶ್ರೀ ಕರವಂಡ ಚಂಗಪ್ಪನವರ ಆತ್ಮಕ್ಕೆ ಶಾಂತಿಯನ್ನು ಬಯಸಿ ಪ್ರಾರ್ಥಿಸಿದರು.

ಕೊಡಗು ಸರಕಾರಿ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕವಾಗಿರುವ ಶ್ರೀ ಅಚ್ಯುತ ಪಿಳ್ಳೆಯವರು ತಾ. ೧೧ ರಲ್ಲಿ ತಮ್ಮ ಕೆಲಸದ ಚಾರ್ಜನ್ನು ವಹಿಸಿಕೊಂಡಿರುವರು.

ಮನೆ ಬಾಡಿಗೆ ನಿಯಂತ್ರಣ ಮಾಡುವ ಮಸೂದೆಯು ತಾ. ೧-೩-೫೨ ರಿಂದ ಕೊಡಗಿನಲ್ಲಿ ಜಾರಿಗೆ ಬರುವದು.

ಕೆಲವು ದಿನಗಳಿಂದ ಹುದಿಕೇರಿ ದೊಡ್ಡಿಯಲ್ಲಿ ಒಂದು ಎಮ್ಮೆ ಇರುವದಾಗಿಯೂ, ತೂಚಮಕೇರಿ ಗ್ರಾಮದ ಶ್ರೀ ಚಿಂಡಾಮಾಡ ಬೆಳ್ಯಪ್ಪನವರ ದನಗಳ ಜೊತೆಯಲ್ಲಿ ಒಂದು ಹಸು ಮತ್ತು ಮೂರು ಎಮ್ಮೆಗಳು ಸೇರಿಕೊಂಡಿವೆಯೆಂದೂ ಮಾಲೀಕರು ತಕ್ಕ ರುಜುವಾತಿನಿಂದ ಇವುಗಳನ್ನು ಹೊಡೆದುಕೊಂಡು ಹೋಗಬಹುದಾಗಿಯೂ ಹುದಿಕೇರಿಯ ಜ॥ ಸತ್ತಾರ್ ಸಾಹೇಬರು ತಿಳಿಸುತ್ತಾರೆ.

ಬೆಂಗಳೂರಿನ ಅಸಿಸ್ಟೆಂಟ್ ರಿಕ್ರೂಟಿಂಗ್ ಆಫೀಸರವರು ತಾರೀಕು ೧೯ರಲ್ಲಿ ಶ್ರೀಮಂಗಲದಲ್ಲೂ, ೨೦ ರಲ್ಲಿ ಹುದಿಕೇರಿಯಲ್ಲೂ ೨೧ರಲ್ಲಿ ಪೊನ್ನಂಪೇಟೆಯಲ್ಲೂ, ೨೩ ಮತ್ತು ೨೪ರಲ್ಲಿ ಮಡಿಕೇರಿಯಲ್ಲೂ ೨೫ರಲ್ಲಿ ಭಾಗಮಂಡಲದಲ್ಲೂ, ೨೬ರಲ್ಲಿ ನಾಪೋಕ್ಲಿನಲ್ಲೂ, ೨೭ರಲ್ಲಿ ಸೋಮವಾರಪೇಟೆಯಲ್ಲೂ ಮತ್ತು ೨೮ರಿಂದ ೨೯ರ ವರೆಗೆ ಸುಂಟಿಕೊಪ್ಪದಲ್ಲೂ ಮೊಕ್ಕಾಂ ಮಾಡುವರು. ಸೈನ್ಯಕ್ಕೆ ಸೇರಲಿಚ್ಛಿಸುವವರೂ ಮತ್ತು ಅವರನ್ನು ಕಾಣಬಯಸುವ ಮಾಜಿ ಸಿಪಾಯಿಗಳೂ ಮೇಲ್ಕಂಡ ಸ್ಥಳಗಳಲ್ಲಿ ಆಯಾಯಾ ತಾರೀಕುಗಳಲ್ಲಿ ಅವರನ್ನು ಭೇಟಿ ಮಾಡಿಕೊಳ್ಳಬಹುದಾಗಿ ಈ ಮೂಲಕ ತಿಳಿಸಿದೆ.

ಶ್ರೀ ಕೋರನ ದೇವಯ್ಯನವರನ್ನು ಸಹಕಾರಿ ಒಕ್ಕಲುತನ (ಕೋ-ಆಪರೇಟಿವ್ ಫಾರ್ಮಿಂಗ್) ತರಬೇತಿಗಾಗಿ ೪ ತಿಂಗಳ ವರೆಗೆ ಇಸ್ರೇಲ್ ದೇಶಕ್ಕೆ ಸರಕಾರದ ಖರ್ಚಿನಿಂದ ಕಳುಹಿಸಲು ಏರ್ಪಾಡಾಗಿದೆ ಯೆಂದು ತಿಳಿಯಬರುತ್ತದೆ.

ಹಿಂದೂ ವಿಮಾನ ದಳಕ್ಕೆ ಎಸ್. ಎಸ್. ಎಲ್ ಸಿ. ಪಾಸಾದ ಯುವಕರು ಬೇಕಾಗಿದ್ದಾರೆ. ಸೇರಲಿಚ್ಛಿಸುವವರು ಈ ವಿಷಯಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಫೆಬ್ರವರಿ ತಿಂಗಳ ಅಂತ್ಯದೊಳಗೆ ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಮೆಂಟ್ ಆಫೀಸಿನಿಂದ ತಿಳಿದುಕೊಳ್ಳಬಹುದು.

ಮಾರಾಟಕ್ಕಿದೆ.

ಯೂಲಕ್ಟಿ, ಕಾಫಿ ಮತ್ತು ಅಡಿಕೆ ವ್ಯವಸಾಯಕ್ಕೆ ಲಾಯಕ್ಕಾದ 300 ಎಕ್ರೆ ರಿಡೀಮ್ಡ್ ಕಾಡು ಮಾರಾಟಕ್ಕಿದೆ. ಖಾಯಿಸ್‌ದಾರರು ಕೆಳಗಿನ ಪತ್ತೆಗೆ ಬರೆಯಿರಿ.

ಪಿ. ಜಿ. ಬಿಂದು ಪ್ಪ,
ಮಡಿಕೇರಿ, ಕೊಡಗು.

1–1

WANTED

One experienced Inspector to take up our old organisation in Coorg and to create new organisation and get business in Coorg and Hassan on very attractive terms. Gentlemen with good connections who can guarantee business may apply to:-

SHRI RAMACHANDRA SINHJI,
CRESCENT INSURANCE COMPANY LIMITED,
113 B. BRIGADE ROAD, BANGALORE 1.

ಚೀಫ್ ಕಮಿಷನರ್ ಪ್ರಾಂತಗಳ ಭವಿಷ್ಯ.

(ಫೆಬ್ರವರಿ ತಿಂಗಳ "ಮೋಡರ್ನ್ ರಿವ್ಯೂ" ಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಸಾರಾಂಶವನ್ನು ನಮ್ಮ ವಾಚಕರ ಅವಗಾಹನೆಗೆ ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಸಂ.)

ರಾಜ್ಯಘಟನೆಯಲ್ಲಿ ಪ್ರತ್ಯೇಕವಾಗಿ ವಿಂಗಡಿಸಲ್ಪಟ್ಟಿರುವ 'ಸಿ' ಭಾಗದ ಪ್ರಾಂತಗಳಿಗೆ ಇಂದಿನ ಪರಿಸ್ಥಿತಿಯಲ್ಲಿ ಸಾಧ್ಯವಾದ ರೀತಿಯ ಜವಾಬ್ದಾರಿ ಸರಕಾರವನ್ನು ಕೊಡುವ 'ಸಿ' ಭಾಗದ ಸಂಸ್ಥಾನಗಳ ಮಸೂದೆಯನ್ನು ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಲ್ಲಿ ಕೇಂದ್ರ ಪಾರ್ಲಿಮೆಂಟ್ ಮಂಜೂರು ಮಾಡಿತು. 'ಸಿ' ಭಾಗದ ಸಂಸ್ಥಾನಗಳೆಲ್ಲವೂ ನೇರವಾಗಿ ಕೇಂದ್ರದಿಂದ ಆಳಲ್ಪಡುವಂಥವಾಗಿವೆ. ಅಜಮೀರ್, ಬೋಪಾಲ್, ಬಿಲಾಸಪುರ, ಕೊಡಗು, ಡೆಲ್ಲಿ, ಹಿಮಾಚಲ ಪ್ರದೇಶ, ಕಚ್, ಮಣಿಪುರ, ತ್ರಿಪುರ ಮತ್ತು ವಿಂಧ್ಯಪ್ರದೇಶ ಹೀಗೆ ಹನ್ನೊಂದು ಚೀಫ್ ಕಮಿಷನರ ಪ್ರಾಂತಗಳಿದ್ದು ಇವುಗಳ ಒಟ್ಟು ವಿಸ್ತೀರ್ಣವು ೬೭,೦೦೦ ಚದರ ಮೈಲಿಗಳಾಗಿ ಜನಸಂಖ್ಯೆಯು ಎಂಟು ಮಿಲಿಯವಿದೆ.

ಚರಿತ್ರೆ

ಬ್ರಿಟಿಷರಿಂದ ಅಧಿಕಾರವು ಕಾಂಗ್ರೆಸ್ಸಿಗೆ ವರ್ಗಾಯಿಸಲ್ಪಟ್ಟು ಹಿಂದೂಸ್ಥಾನದ ೫೬೨ ಸಂಸ್ಥಾನಗಳ ವಿಲೀನೀಕರಣವು ನಡೆದಾಗ ಕೆಲವು ನಿಶ್ಚಿತ ಕಾರಣಗಳಿಗಾಗಿ ಮತ್ತು ಹಿಂದೂದೇಶದ ಆಯಕಟ್ಟಿನ ಸ್ಥಳದಲ್ಲಿ ಈ ಕೆಲವು ಸಂಸ್ಥಾನಗಳು ಇರುವ ಕಾರಣಕ್ಕಾಗಿ ಈ ಭಾಗಗಳ ಆಡಳಿತವನ್ನು ಕೇಂದ್ರ ಸರಕಾರವೇ ತನ್ನ ಹಿಡಿತದಲ್ಲಿಟ್ಟುಕೊಂಡಿತು. ಹಿಂದೂದೇಶದ ರಾಜ್ಯಘಟನೆಯು ಜಾರಿಗೆ ಬರುವ ಮೊದಲು ಕೇವಲ ಅಜಮೀರ್, ಕೊಡಗು ಮತ್ತು ಡೆಲ್ಲಿ ಇವು ಮೂರೇ ಕೇಂದ್ರದಿಂದ ನೇರವಾಗಿ ಆಳಲ್ಪಡುವ ಚೀಫ್ ಕಮಿಷನರ ಪ್ರಾಂತಗಳಾಗಿದ್ದವು.

ಅಜಮೀರವು ಮೆರ್ವಾರವನ್ನೊಳಗೊಂಡು ೧೮೭೮ರಲ್ಲಿ ಹಿಂದೂದೇಶದ ಅರಶ್ಯಾ ಇಲಾಖೆಯ ಆಶ್ರಯದಲ್ಲಿ ಒಂದು ಚೀಫ್ ಕಮಿಷನರ ಪ್ರಾಂತವಾಗಿ ಏರ್ಪಟ್ಟಿತು. ರಜಪುತಾನದ ಗವರ್ನರ್ ಜನರಲ್ಲರ ಏಜಂಟರು ಈ ಭಾಗದ ಚೀಫ್ ಕಮಿಷನರಾಗಿರುತ್ತಿದ್ದರು. ೧೮೩೪ರಲ್ಲಿ ಮೈಸೂರಿನ ರೆಸಿಡೆಂಟರು ಕೊಡಗಿನ ಚೀಫ್ ಕಮಿಷನರಾಗಿ ಏರ್ಪಟ್ಟರು. ೧೯೧೨ಕ್ಕೆ ಮೊದಲು ಡೆಲ್ಲಿ ಪ್ರಾಂತ್ಯವು ಪಂಜಾಬಿನ ಒಂದು ಭಾಗವಾಗಿತ್ತು. ೧೯೧೨ರಲ್ಲಿ ಡೆಲ್ಲಿಯು ಚೀಫ್ ಕಮಿಷನರ್ ಪ್ರಾಂತವಾಯಿತು. ೧೯೧೫ರಲ್ಲಿ ಸಂಯುಕ್ತ ಪ್ರಾಂತದ ೬೫ ಗ್ರಾಮಗಳು ಡೆಲ್ಲಿಗೆ ಸೇರಿಸಲ್ಪಟ್ಟವು. ಹಿಂದೂದೇಶದ ರಾಜ್ಯಘಟನೆಯ ಪ್ರಕಾರ ಅಜಮೀರ್, ಕೊಡಗು ಮತ್ತು ಡೆಲ್ಲಿಗಳು ಚೀಫ್ ಕಮಿಷನರ್ ಪ್ರಾಂತಗಳಾಗಿಯೇ ಉಳಿದಿವೆ. ಏಕೆಂದರೆ ಅಜಮೀರ್, ಕೊಡಗು ಇವೆರಡರಲ್ಲಿ ಹತ್ತಿರದ ಭಾಗಗಳೊಡನೆ ಇವುಗಳನ್ನು ವಿಲೀನಗೊಳಿಸಲು ಒಮ್ಮತದ ಅಭಿಪ್ರಾಯವು ಅಲ್ಲಿಯ ಜನರಲ್ಲಿಲ್ಲ. ಡೆಲ್ಲಿಯು ಕೇಂದ್ರ ಸರಕಾರದ ಸ್ಥಾನವಾಗಿರುವದರಿಂದ ಆಡಳಿತ ಕಾರಣಕ್ಕಾಗಿ ಬೇರೆ ಪ್ರಾಂತದ ಅಧೀನಗೊಳಿಸುವುದು ಕೇಂದ್ರ ಸರಕಾರಕ್ಕೆ ಬೇಕಿಲ್ಲ.

ಇನ್ನುಳಿದ 'ಸಿ' ಭಾಗದ ಪ್ರಾಂತಗಳಾದ ಬೋಪಾಲ್, ಬಿಲಾಸಪುರ, ಹಿಮಾಚಲ ಪ್ರದೇಶ, ಕಚ್, ಮಣಿಪುರ, ತ್ರಿಪುರ ಮತ್ತು ವಿಂಧ್ಯ ಪ್ರದೇಶ ಇವುಗಳು ಕೆಲವು ವಿಶೇಷ ಕಾರಣಗಳಿಗಾಗಿ ಸರದಾರ್ ಪಟೇಲರಿಂದ ಚೀಫ್ ಕಮಿಷನರ್ ಪ್ರಾಂತಗಳಾಗಿ ನಿರ್ಮಿಸಲ್ಪಟ್ಟವುಗಳು.

ಸಂಯುಕ್ತ ಸಂಸ್ಥಾನವಾದ ವಿಂಧ್ಯಪ್ರದೇಶವು ೩೫ ಸಂಸ್ಥಾನಗಳಿಂದ ಕೂಡಿದ್ದಾಗಿದ್ದು ಚೀಫ್ ಕಮಿಷನರ ಪ್ರಾಂತಗಳಲ್ಲೆಲ್ಲ ವಿಸ್ತಾರದಲ್ಲೂ ಜನಸಂಖ್ಯೆಯಲ್ಲೂ ದೊಡ್ಡದಾಗಿದೆ. ಈ ಸಂಸ್ಥಾನದ ಒಟ್ಟು ವಿಸ್ತೀರ್ಣದಲ್ಲಿ ಅರ್ಧ ಭಾಗವು ಅರಣ್ಯವಾಗಿದ್ದು ಈ ಅರಣ್ಯ ಉತ್ಪತ್ತಿ ರೂ. ೬೦ ಲಕ್ಷವನ್ನು ಈ ಸಂಸ್ಥಾನಕ್ಕೆ ತರುತ್ತಿದೆ. ಈ ಸಂಸ್ಥಾನದ ಒಟ್ಟು ಆದಾಯದ ಮೂರರಲ್ಲೊಂದಂಶ ಈ ಫಾರೆಸ್ಟ್ ಉತ್ಪತ್ತಿಯಾಗಿದೆ. ಇಲ್ಲಿಯ ಆಡಳಿತವು ಚೆನ್ನಾಗಿಲ್ಲ. ಫಾರೆಸ್ಟ್ ವ್ಯವಸ್ಥೆಯೂ ಸುಗಮವಾಗಿಲ್ಲ. ವಿಂಧ್ಯ ಪ್ರದೇಶವು ಉತ್ತಮ ಮಧ್ಯ ರಾಜ್ಯವಾಗಿದೆ. ವ್ಯವಸಾಯ ಯೋಗ್ಯವಾದ ದೊಡ್ಡ ಭಾಗದಲ್ಲಿ ಸುಮಾರು ಕಾಡುಕಾಡಾಗಿದೆ. ಖನಿಜ ಸಂಪತ್ತು ಹೆಚ್ಚಿದ್ದರೂ ಅದರ ಉಪಯೋಗವಾಗಿಲ್ಲ. ಮಧ್ಯ ಭಾರತದಲ್ಲಿ ಇದರಷ್ಟು ಹಿಂದೆ ಬಿದ್ದಿರುವ ಪ್ರಾಂತ ಬೇರಿಲ್ಲ. ಉತ್ತಮ ರೈಲ್ವೆಯ ವ್ಯವಸ್ಥೆಯಿಲ್ಲ. ಎಲ್ಲಾ ದೆಸೆಗಳ ಸಾಮಾನ್ಯ ಹಳ್ಳಿ ರಸ್ತೆಗಳಂತಿವೆ. ಮಳೆಗಾಲದಲ್ಲಿ ಕೆಲವೆಡೆ ಮಹಾ ಪಟ್ಟಣಗಳಿಗೆ ಹೋಗುವಂತಿಲ್ಲ. ಈ ಪ್ರಾಂತವು 'ಬಿ' ಪ್ರಾಂತವೆಂದು ವರ್ಗೀಕರಿಸಲ್ಪಟ್ಟಿದ್ದರೂ ಅಲ್ಲಿಯ ರಾಜಕೀಯ ಮುಂದಾಳುಗಳ ಪರಸ್ಪರ ಜಗಳ ಮತ್ತು ಅಯೋಗ್ಯ ಆಡಳಿತದ ಕಾರಣ ಕೇಂದ್ರ ಸರಕಾರವು ಇದನ್ನು ೧೯೫೦ನೇ ಜನವರಿ ಒಂದರಿಂದ ಚೀಫ್ ಕಮಿಷನರ್ ಪ್ರಾಂತವಾಗಿ ತನ್ನ ಆಡಳಿತಕ್ಕೆ ತೆಗೆದುಕೊಂಡಿದೆ.

ಏಳು ಸಾವಿರ ಚದರ ಮೈಲುಗಳ ವಿಸ್ತೀರ್ಣವಿದ್ದು ೮ ಲಕ್ಷ ಜನಸಂಖ್ಯೆ ಇರುವ ಬೋಪಾಲ್ ಆಶ್ರಿತ ಸಂಸ್ಥಾನವು ೧೯೪೯ನೇ ಜೂನ್ ಒಂದರಲ್ಲಿ ಕೇಂದ್ರದ ಆಡಳಿತಕ್ಕೆ ಬಂತು. ಇದನ್ನು ನೆರೆಯ ಪ್ರಾಂತಗಳಲ್ಲಿ ಸೇರಿಸಲು ಅಲ್ಲಿಯ ಬಹುಮತ ಜನರು ಅಭಿಪ್ರಾಯಪಟ್ಟರೂ ಅಲ್ಲಿಯ ಅರಸರೊಂದಿಗೆ ಮಾಡಿಕೊಂಡ ಒಂದು ಒಪ್ಪಂದದಂತೆ ಮುಂದಿನ ೫ ವರುಷಗಳ ವರೆಗೆ ಈ ಸಂಸ್ಥಾನವು ಚೀಫ್ ಕಮಿಷನರ್ ಪ್ರಾಂತವಾಗಿಯೇ ಉಳಿಯುವುದು.

ಪೂರ್ವ ಪಂಜಾಬಿನ ಬೆಟ್ಟಗಳ ಬಳಿ ಇರುವ ಬಿಲಾಸಪುರವು ೪೫೩ ಚದರ ಮೈಲಿನ ಒಂದು ಲಕ್ಷ ಜನಸಂಖ್ಯೆಯ ಚಿಕ್ಕ ದೇಶ. ೧೯೪೮ರಲ್ಲಿ ಇದು ಕೇಂದ್ರ ಸರಕಾರದ ಆಡಳಿತಕ್ಕೆ ಬಂತು. ಆದರೆ ಇಂಡಿಯಾ ಸರಕಾರದವರು ಕೈಕೊಂಡಿರುವ ಭಕ್ರಾ ಅಣೆಕಟ್ಟನ್ನು ಈ ಸಂಸ್ಥಾನದಲ್ಲಿ ಕಟ್ಟುವಾಗ ಈ ಸಂಸ್ಥಾನವು ಪೂರ್ಣವಾಗಿ ಮುಳುಗಿ ಹೋಗುವುದರಿಂದ ಇದರ ಆಡಳಿತ ಹಾಗೂ ಭವಿಷ್ಯದ ಪ್ರಶ್ನೆ ಅಣೆ ಕಟ್ಟು ಕಟ್ಟಿದ ನಂತರ ಬಾರದು.

೨೧ ಪಂಜಾಬಿನ ಬೆಟ್ಟ ಸಂಸ್ಥಾನಗಳನ್ನು ಸೇರಿಸಿ ರಚಿತವಾಗಿರುವ ಹಿಮಾಚಲ ಪ್ರದೇಶವು ೧೧ ಸಾವಿರ ಚದರ ಮೈಲಿ ವಿಸ್ತಾರವಿದ್ದು ಇದರ ಮೂರರಲ್ಲೊಂದಂಶವು ಅರಣ್ಯವಾಗಿದೆ. ವ್ಯವಸಾಯಿಕ ಸುಧಾರಣೆಗಳು ಅತ್ಯವಶ್ಯ ಇಲ್ಲಿ ಬರಬೇಕಿದೆ. ಇಲ್ಲಿ ಯೋಗ್ಯ ರಸ್ತೆಗಳಾಗಲೀ ಬೇರೆ ವ್ಯವಸ್ಥೆಗಳಾಗಲೀ ಇಲ್ಲ. ಜನರು ಬಹು ಅನಾಗರಿಕ ಸ್ಥಿತಿಯಲ್ಲಿರುವರು.

ಗಡಿ ಪ್ರದೇಶಗಳಾದ ತ್ರಿಪುರ, ಮಣಿಪುರ ಮತ್ತು ಕಚ್ ಸಂಸ್ಥಾನಗಳು ತಮ್ಮ ಆಯಕಟ್ಟಿನ ಸ್ಥಾನದ ಕಾರಣ ಚೀಫ್ ಕಮಿಷನರ್ ಪ್ರಾಂತಗಳಾಗಿ ವಿಂಗಡಿಸಲ್ಪಟ್ಟು ಕೇಂದ್ರದ ನೇರವಾದ ಹಿಡಿತದಲ್ಲಿವೆ. ಹಿಂದೂದೇಶದ ರಕ್ಷಣೆಯ ದೃಷ್ಟಿಯಿಂದ ಈ ಭಾಗಗಳು ಭದ್ರವಾಗಿರಬೇಕಾದುದು ಅವಶ್ಯವಿದೆ. ಮುಂದೆ ಕೇಂದ್ರ ಸರಕಾರದ ನೇತೃತ್ವದಲ್ಲಿ ಈ ಭಾಗದಲ್ಲಿ ಅಭಿವೃದ್ಧಿಯ ಕಾರ್ಯಗಳಾಗಬೇಕಿದೆ.

ಘಟನಾತ್ಮಕ ಪ್ರಗತಿ

ಹಿಂದೂದೇಶದಲ್ಲಿ ಬ್ರಿಟಿಷರ ಆಳ್ವಿಕೆಯ ಪ್ರಾರಂಭದಲ್ಲಿ ಈ ಚೀಫ್ ಕಮಿಷನರ್ ಪ್ರಾಂತಗಳನ್ನು "ನಾನ್ ರೆಗ್ಯುಲೇಷನ್" ಜಿಲ್ಲೆಗಳೆಂದು ಕರೆಯುತ್ತಿದ್ದರು. ಏಕೆಂದರೆ ಆಗಿನ ಅಧಿಪಕ್ಷಗಳ ಸರಕಾರಗಳ ಶಾಸನಗಳು ಕಾಯಿದೆಗಳು ಈ ಭಾಗಗಳಿಗೆ ಅನ್ವಯಿಸುತ್ತಿರಲಿಲ್ಲ. ೧೮೭೪ರಲ್ಲಿ ಜಾರಿಗೆ ಬಂದ ಶೆಡ್ಯೂಲ್ಡ್ ಡಿಸ್ಟ್ರಿಕ್ಟ್ ಆಕ್ಟ್ ಪ್ರಕಾರ ಈ ಭಾಗದ ಸರಕಾರಗಳು ಪ್ರತ್ಯೇಕವಾಗಿ ಸಂದರ್ಭ ಯೋಗ್ಯ ಕಾನೂನು ಜಾರಿಗೆ ತರುವಂತಿರಲಿಲ್ಲ. ೧೯೩೫ನೇ ಇಂಡಿಯಾ ಆಕ್ಟ್ ಪ್ರಕಾರ ಈಗಿರುವ ಅಜಮೀರ್, ಕೊಡಗು ಮತ್ತು ಡೆಲ್ಲಿ ಇವು ಮೂರು ಮಾತ್ರ ಚೀಫ್ ಕಮಿಷನರ್ ಪ್ರಾಂತಗಳಾಗಿದ್ದವು. ಆ ಅಧಿಕಾರವು ೧೯೪೭ರಲ್ಲಿ ವರ್ಗಾಯಿಸಲ್ಪಟ್ಟು ಇತರ ಹೊಸ 'ಸಿ' ಪ್ರಾಂತಗಳ ರಚನೆಯಾದಾಗ ೧೯೪೭ರ ಎಕ್ಸ್ಟ್ರಾ ಪ್ರಾವಿನ್ಶಿಯಲ್ ಜ್ಯೂರಿಸ್‌ಡಿಕ್ಷನ್ ಕಾಯಿದೆಯು ಇವುಗಳಿಗೂ ಅನ್ವಯಿಸುವಂತಾಗಿ ಕೇಂದ್ರವು ಈ ಭಾಗಗಳ ಸರಕಾರದ ಮೇಲೆ ತನ್ನ ಹಿಡಿತವಿಟ್ಟುಕೊಳ್ಳುವ ಅನಿವಾರ್ಯತೆ. ೧೯೫೧ರಲ್ಲಿ ಪಾರ್ಲಿಮೆಂಟು ಈ ಹೊಸ ಚೀಫ್ ಕಮಿಷನರ್ ಪ್ರಾಂತಗಳಿಗೆ ತನ್ನ ಪ್ರಾಮುಖ್ಯ ಕಾಯಿದೆಗಳನ್ನು ಜಾರಿಯಲ್ಲಿ ತಂದಿತು.

ಹಿಂದೂ ದೇಶದ ರಾಜ್ಯಘಟನೆಯಲ್ಲಿ ೧೦ ಚೀಫ್ ಕಮಿಷನರ ಪ್ರಾಂತ್ಯಗಳಿದ್ದು ೧೯೫೧ನೇ ಸೆಪ್ಟೆಂಬರಿನಲ್ಲಿ ಪಾರ್ಲಿಮೆಂಟ್ ಪಾಸುಮಾಡಿದ 'ಸಿ' ಸಂಸ್ಥಾನಗಳ ಮಸೂದೆಯು ಈ ಭಾಗಗಳ ಪ್ರಜಾಪ್ರಭುತ್ವ ಸರಕಾರದ ಮಾರ್ಗದಲ್ಲಿ ಪ್ರಾಮುಖ್ಯ ಮೈಲುಗಲ್ಲಾಗಿದೆ. ಈ ಮಸೂದೆಯು ಪೂರ್ಣ ಜವಾಬ್ದಾರಿ ಸರಕಾರದ ನಿರ್ಮಾಣವನ್ನು ಮಾಡದಿದ್ದರೂ ಈ ಭಾಗಗಳ ಆಡಳಿತದಲ್ಲಿ ಉದ್ಯೋಗಸ್ಥರಲ್ಲದವರಿಗೆ ಹೆಚ್ಚಿನ ಭಾಗವಹಿಸುವ ಅನುಕೂಲ ಕೊಟ್ಟು ಪ್ರಜಾ ಜವಾಬ್ದಾರಿ ಸರಕಾರದ ರಚನೆಗೆ ಸಹಾಯಕವಾಗಿದೆ. ಈ ಮಸೂದೆಯು ಗಡಿಪ್ರದೇಶಗಳಾದ ತ್ರಿಪುರ ಮಣಿಪುರ ಮತ್ತು ಕಚ್ ಸಂಸ್ಥಾನಗಳಿಗೆ ಸಲಹೆಗಾರರ ಆಡಳಿತವನ್ನು ನಿರ್ಮಿಸಿದೆ. ಉಳಿದ 'ಸಿ' ಪ್ರಾಂತಗಳಿಗೆ ಶಾಸನ ಸಭೆ ಮತ್ತು ಮಂತ್ರಿಮಂಡಳಗಳ ನಿರ್ಮಾಣ ಮಾಡಿದೆ.

ಈ ಆರು ಸಂಸ್ಥಾನಗಳಲ್ಲಿರುವ ಶಾಸನ ಸಭೆಗಳಿಗೆ ತಮ್ಮ ಸಂಸ್ಥಾನಗಳಿಗೊಳಪಟ್ಟ ಕಾನೂನು ಮಾಡುವ ಹಕ್ಕಿದೆ. ಸ್ಟೇಟ್ ಲಿಸ್ಟ್ ಹಾಗೂ ಕನ್‌ಕರೆಂಟ್ ಲಿಸ್ಟಿನ ವಿಷಯಗಳ ಮೇಲೆ ಕಾನೂನು ಮಾಡಬಹುದಾಗಿದೆ. ಆದರೆ ಡೆಲ್ಲಿಯ ಮಟ್ಟಿಗೆ ಕೆಲವು ಪ್ರಾಮುಖ್ಯ ವಿಷಯಗಳು ಚೀಫ್‌ಕಮಿಷನರಿಗೆ ಕೊಡಲ್ಪಟ್ಟಿವೆ. ಸಭೆಯಲ್ಲಿ ಮಂಡಿಸಲ್ಪಡುವ ಪ್ರತಿ ಮಸೂದೆಗೂ ಯೂನಿಯನ್ ಪ್ರೆಸಿಡೆಂಟರ ಅನುಮತಿ ಬೇಕಾಗಿದೆ.

ಚೀಫ್ ಕಮಿಷನರ ಅಧಿಕಾರ.

'ಸಿ' ಭಾಗದ ಸಂಸ್ಥಾನಗಳ ಆಡಳಿತದ ಬಗ್ಗೆ ರಾಜ್ಯ ಘಟನೆಯ ೨೩೯ (೧) ನೇ ಆರ್ಟಿಕಲ್ ಹೀಗೆ ಹೇಳುತ್ತದೆ:—

'ರಾಜ್ಯ ಘಟನೆಯ ಪ್ರಥಮ ಶೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಒಂದು ಸಂಸ್ಥಾನವು ಪ್ರೆಸಿಡೆಂಟರಿಗೆ ಉಚಿತ ತೋರಿದ ರೀತಿಯಲ್ಲಿ ಅಂದರೆ ಪ್ರೆಸಿಡೆಂಟರಿಂದ ನೇಮಿಸಲ್ಪಡುವ ಒಬ್ಬ ಚೀಫ್ ಕಮಿಷನರ ಮೂಲಕ, ಇಲ್ಲವೇ ಲೆ. ಗವರ್ನರ ಮೂಲಕ ಇಲ್ಲವೆ ನೆರೆಯ ರಾಜ್ಯದ ಸರಕಾರದ ಮೂಲಕ ಆಳಲ್ಪಡಬಹುದು.'

ಈ ಪ್ರಾಂತಗಳ ಚೀಫ್ ಕಮಿಷನರು ಒಕ್ಕೂಟದ ಪ್ರೆಸಿಡೆಂಟರ ಪ್ರತಿನಿಧಿ. ಅವರಿಗೆ ವಿಶಾಲವಾದ ಮತ್ತು ವಿವಿಧವಾದ ಅಧಿಕಾರಗಳಿವೆ. ಈ ಭಾಗಗಳು ಕೇಂದ್ರದಿಂದ ಆಳಲ್ಪಡುವ ಪ್ರತ್ಯೇಕ ಪ್ರಾಂತಗಳಾಗಿದ್ದು, ಇಲ್ಲಿಯ ಒಳ್ಳೆ ಆಡಳಿತದ ಜವಾಬ್ದಾರಿಯು ಕೇಂದ್ರ ಸರಕಾರದ್ದಾಗಿರುವ ಸಲುವಾಗಿ ಚೀಫ್ ಕಮಿಷನರು ಪೂರ್ಣ ಗವರ್ನರರ ಹೆಚ್ಚು ಜವಾಬ್ದಾರಿಯಿಂದ ಮರೆಯಾಗುವದಲ್ಲದೆ ಗವರ್ನರ್ ರಾಜಪ್ರಮುಖರುಗಳಿಗಿಂತಲೂ ಹೆಚ್ಚಿನ ಅಧಿಕಾರ ಪಡೆದವರಾಗಿರುವರು. ಚೀಫ್ ಕಮಿಷನರೂ ಮಂತ್ರಿಮಂಡಳದಲ್ಲಿರುವರು. ಮಂತ್ರಿಮಂಡಳದ ಮೀಟಿಂಗುಗಳಲ್ಲಿ ಅಧ್ಯಕ್ಷತೆ ವಹಿಸುವರು. ಸಂಸ್ಥಾನದ ಮುಖ್ಯ ಅಧಿಕಾರಿಯೆಂದು ಪರಿಗಣಿಸುವರು ಮಾತ್ರವಲ್ಲ; ಜವಾಬ್ದಾರಿಯುತ ಮಂತ್ರಿಯ ರೀತಿ ಕಾರ್ಯ ನಿರ್ವಹಿಸುವರು. ಅವರು ಶಾಸನ ಸಭೆಯಲ್ಲಿ ಭಾಷಣ ಮಾಡಬಹುದಲ್ಲದೆ ಸಭೆಗೆ ಸಂದೇಶಗಳನ್ನು ಕಳುಹಿಸಬಹುದು. ಶಾಸನ ಸಭೆಯ ಚರ್ಚೆಗಳಲ್ಲಿ ಭಾಗವಹಿಸಬ

ಹುದು. ಪ್ರತಿ ಆರ್ಥಿಕ ವರ್ಷದಲ್ಲಿ ಆಯಾ ವರ್ಷದ ಸರಕಾರದ ಆಯವ್ಯಯಗಳ ಪಟ್ಟಿಯನ್ನು ಶಾಸನ ಸಭೆಯ ಮುಂದಿಡುವರು. ನ್ಯಾಯಾಂಗ ಶಾಖೆಯು ಅಧಿಕಾರ ಚಲಾಯಿಸುವ ವಿಷಯವಲ್ಲಿ ಅಲ್ಲದೆ ಉಳಿದ ವಿಷಯಗಳಲ್ಲಿ ಮಂತ್ರಿಮಂಡಳವು ಅವರಿಗೆ ಸಹಾಯ, ಸಲಹೆಗಳನ್ನು ಕೊಡುವದು. ಚೀಫ್ ಕಮಿಷನರಿಗೂ, ಮಂತ್ರಿಮಂಡಳಕ್ಕೂ ಬರುವ ಅಭಿಪ್ರಾಯ ವ್ಯತ್ಯಾಸದ ಬಗ್ಗೆ ಒಕ್ಕೂಟದ ಪ್ರೆಸಿಡೆಂಟರ ನಿರ್ಣಯವೇ ಕಡೆಯದ್ದು. ಮಂತ್ರಿಮಂಡಳವು ಸಾಮೂಹಿಕವಾಗಿ ಶಾಸನ ಸಭೆಗೆ ಜವಾಬ್ದಾರವಾಗಿರತಕ್ಕದ್ದು.

ಭವಿಷ್ಯ.

ಜನಸಂಖ್ಯೆ ಮತ್ತು ವಿಸ್ತೀರ್ಣದಲ್ಲಿ ಚೀಫ್ ಕಮಿಷನರ ಪ್ರಾಂತಗಳು ಒಂದರಿಂದೊಂದು ಭಿನ್ನವಾಗಿವೆ. ಅವುಗಳ ಆರ್ಥಿಕ ಪ್ರಗತಿಯಲ್ಲೂ ಪ್ರಾಮುಖ್ಯ ಭಿನ್ನತೆ ಇದೆ. ಕೆಲವಕ್ಕೆ ವಿಶೇಷ ಸಮಸ್ಯೆಗಳೂ ಇವೆ. ಸಾಮಾನ್ಯವಾಗಿ ಎಲ್ಲವೂ ಕೂಡ ಪೂರ್ಣ ಹಿಂದುಳಿದ ಭಾಗಗಳೆನ್ನಬಹುದು. ಈ ಭಾಗದ ಜನರು ಚಿಕ್ಕ ಹಾಗೂ ಹಿಂದುಳಿದ ಪ್ರದೇಶಗಳಿಗೆ ಸೇರಿದವರೆಂಬ ಕಾರಣಕ್ಕಾಗಿಯೂ, ಆಡಳಿತ ಖರ್ಚು ವಿಪರೀತವಾಗುವದೆಂಬುದಕ್ಕಾಗಿಯೂ ಅವರಿಗೆ ಪ್ರಜಾ ಜವಾಬ್ದಾರಿಯ ಆಡಳಿತ ಹಕ್ಕನ್ನು ಕ್ರಮಶಃ ಕೊಡದಿರುವದು ಸೂಕ್ತವಲ್ಲವೆಂದು ಕೇಂದ್ರವು ಅಭಿಪ್ರಾಯಪಟ್ಟಿದೆ. 'ಸಿ' ಭಾಗಗಳ ಮಸೂದೆಯ ವಿಚಾರ ಪಾರ್ಲಿಮೆಂಟಿನಲ್ಲಿ ಸಂಸ್ಥಾನ ಮಂತ್ರಿಗಳು ಸೂಚಿಸುತ್ತಾ ಸ್ಟೇಟ್ ಲಿಸ್ಟಿನಲ್ಲಿರುವ ವಿಚಾರಗಳ ಬಗ್ಗೆ ಈ ಹತ್ತು 'ಸಿ' ಪ್ರಾಂತಗಳಲ್ಲಿ ಬರುವ ಆಯವ್ಯಯವನ್ನು ಪರಿಶೀಲಿಸಿ ನೋಡಿದರೆ ಈ ಹತ್ತು ಪ್ರಾಂತಗಳಲ್ಲಿ ಸುಮಾರು ೫ ಕೋಟಿ ರೂಪಾಯಿಗಳ ಕೊರತೆ ಕಂಡುಬರುವದೆಂದು ಹೇಳಿದ್ದಾರೆ. ಈ ಪ್ರಾಂತಗಳಲ್ಲಿ ಶಾಸನ ಸಭೆಗಳನ್ನು ಜಾರಿಯಲ್ಲಿ ತರುವದರಿಂದ ೫೦ ಲಕ್ಷ ರೂಪಾಯಿ ಇನ್ನೂ ಹೆಚ್ಚು ವ್ಯಯವಾಗುವದೆಂದಿದ್ದಾರೆ. ಆದರೆ 'ಸಿ' ಭಾಗದ ಸಂಸ್ಥಾನದ ಜನರೂ ಆಡಳಿತದಲ್ಲಿ ಭಾಗವಹಿಸಬೇಕಾದರೆ, ತಮ್ಮ ಮೂಲಭೂತ ಹಕ್ಕುಗಳನ್ನು ಪಡೆಯಬೇಕಾದರೆ ಈ ಖರ್ಚು ಅವಶ್ಯಕ. ಈ ಭಾಗಗಳು ರಾಜ್ಯಘಟನೆಯಲ್ಲಿ ಪ್ರತ್ಯೇಕ ಪ್ರಾಂತಗಳಾಗಿರುವವರೆಗೆ ಈ ಭಾಗಗಳು ಕ್ರಮಶಃ 'ಎ' ಮತ್ತು 'ಬಿ' ಭಾಗಗಳಲ್ಲಿರುವ ರೀತಿಯ ಜವಾಬ್ದಾರಿ ಸರಕಾರವನ್ನು ಪಡೆಯಬೇಕಲ್ಲವೆ. ಈ ಬಗ್ಗೆ ಆಗುವ ಆರ್ಥಿಕ ಅಭಾವವನ್ನು ಈ ಭಾಗಗಳ ಸಮಸ್ಯೆಗಳ ನಿವಾರಣೆಯ ದೂರದೃಷ್ಟಿಯನ್ನಿಟ್ಟು ನೀಗಿಸುವದು ಕರ್ತವ್ಯವಾಗಿದೆ.

ಈ ಭಾಗಗಳು ಕೇಂದ್ರ ಸರಕಾರದ ಆಡಳಿತ ಜವಾಬ್ದಾರಿಯಿಂದ ವರ್ಗೀಕರಿಸಲ್ಪಟ್ಟ ಮೇಲೆ ಕೇಂದ್ರ ಸರಕಾರವು ಈ ಮುಂದಿನ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. (೧) ನ್ಯಾಯ ಮತ್ತು ಶಿಸ್ತಿನ ಪಾಲನೆ (೨) ಆಡಳಿತದ ಪುನರ್ವ್ಯವಸ್ಥೆ (೩) ಸ್ವತಂತ್ರ ನ್ಯಾಯ ಇಲಾಖೆಯ ಸ್ಥಾಪನೆ (೪) ಆರ್ಥಿಕ ಅಭಿವೃದ್ಧಿ ಮತ್ತು (೫) ಪ್ರಜಾಸತ್ತಾತ್ಮಕ ಸಂಸ್ಥೆಗಳ ಅಭಿವೃದ್ಧಿ. ಅದರಂತೆ ಆಡಳಿತ ಬದಲಾವಣೆಯಾಗಿದೆ. ಜ್ಯುಡಿಶಿಯಲ್ ಕಮಿಷನರುಗಳ ಕೋರ್ಟಿನ ನಿರ್ಮಾಣವಾಗುವದು. ಬೋಪಾಲಿನ ಪಾಳುಭೂಮಿಯನ್ನು ವ್ಯವಸಾಯಕ್ಕೆ ತರುವ, ಕಚ್‌ನಲ್ಲಿರುವ ಕಾಂಡ್ಲಾ ಬಂದರನ್ನು ರೂಪಿಸುವ, ರಸ್ತೆ, ಸೇತುವೆ, ಮತ್ತು ವಿಂದ್ಯಾ ಹಿಮಾಚಲ ಪ್ರದೇಶಗಳಲ್ಲಿ ರೈಲ್ವೆ ನಿರ್ಮಾಣ, ಹಿಂದುಳಿದ ಭಾಗಗಳಲ್ಲಿ ವೈದ್ಯಕೀಯ, ವಿದ್ಯಾ ಮತ್ತಿತರ ನಿರ್ಮಾಣಗಳು ಕೇಂದ್ರ ಸರಕಾರದ ನೇತೃತ್ವದಲ್ಲಿ ನಡೆಯುತ್ತಿವೆ. ಈ ಸಂಸ್ಥಾನಗಳ ಸ್ಥಿತಿಯನ್ನು 'ಎ' ಮತ್ತು 'ಬಿ' ಭಾಗದ ಸಂಸ್ಥಾನಗಳ ಸ್ಥಿತಿಗೆ ತರಲು ಕೇಂದ್ರವು ಸಕಲ ಪ್ರಯತ್ನ ಮಾಡುತ್ತಿದೆ.

ಈ ಸಂಸ್ಥಾನಗಳ ಈ ವಿವಿಧ ಸಮಸ್ಯೆಗಳಿಗೆ ಸಮರ್ಪಕ ಮತ್ತು ಕಡೆಯ ಉತ್ತರವು ಅವುಗಳ ಪ್ರತ್ಯೇಕ ಜೀವನವಲ್ಲ. ಏಕೆಂದರೆ ಆರ್ಥಿಕ ದೃಷ್ಟಿಯಿಂದ, ದೇಶದ ವಿಶಾಲ ಹಿತದೃಷ್ಟಿಯಿಂದ, ಚಿಕ್ಕ ಚಿಕ್ಕ ಭಾಗಗಳಲ್ಲಿ ಜವಾಬ್ದಾರಿ ಸರಕಾರವು ಆಯಾ ಭಾಗಗಳಲ್ಲಿ ಪ್ರತ್ಯೇಕ ಮನೋಭಾವನೆಯನ್ನು ತಂದು ಸಂಕೀರ್ಣ ಮನೋವೃತ್ತಿಯನ್ನು ಹೆಚ್ಚಿಸುವದು. ಆದ್ದರಿಂದ ಭೌಗೋಳಿಕ ಮತ್ತಿತರ ಸಂಬಂಧವಿರುವ ಭಾಗಗಳೊಡನೆ ವಿಲಯನಗೊಳಿಸುವದರಲ್ಲಿ ಆಯಾ ಪ್ರಾಂತಗಳ ಸಮಸ್ಯೆಗಳ ಪರಿಹಾರವಿದೆ. ಡೆಲ್ಲಿಯ ವಿಚಾರದಲ್ಲಿ ವಿಲಯನದ ವಿಚಾರ ಬರಲಾರದು. ಏಕೆಂದರೆ ಭಾರತ ಸರಕಾರದ ಕೇಂದ್ರವಾದುದರಿಂದ ಅದು ಪ್ರತ್ಯೇಕ ಪ್ರಾಂತವಾಗಿರುವದು ಹಿತವಾಗಿದೆ. 'ಸಿ' ಭಾಗದ ಸಂಸ್ಥಾನಗಳ ವಿಲೀನೀಕರಣ ಮತ್ತು ಗಡಿ ಬದಲಾವಣೆಯ ವಿಚಾರದಲ್ಲಿ ರಾಜ್ಯಘಟನೆಯ ೩ನೇ ಆರ್ಟಿಕಲು ಹೀಗೆ ಹೇಳುತ್ತದೆ.

'ಮಸೂದೆಯಲ್ಲಿ ಸೂಚಿತವಾಗಿರುವ ಸಲಹೆಗಳು 'ಎ' ಮತ್ತು 'ಬಿ' ಭಾಗದ ಪ್ರಾಂತಗಳ ಗಡಿಯನ್ನು ಇಲ್ಲವೇ ಆ ಭಾಗದ ಸಂಸ್ಥಾನ ಯಾ ಸಂಸ್ಥಾನಗಳ ಹೆಸರನ್ನು ಬದಲು ಮಾಡುವಂತಿದ್ದರೆ ಅಂಥಾ ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸುವ ಮೊದಲು ಸಂಬಂಧಿಸಿದ ಸಂಸ್ಥಾನದ ಯಾ ಸಂಸ್ಥಾನಗಳ ಶಾಸನ ಸಭೆಯ ಪ್ರತಿನಿಧಿಗಳ ಅಭಿಪ್ರಾಯವನ್ನು ಮಸೂದೆಯನ್ನು ಮಂಡಿಸಲಿಕ್ಕೂ ಅದರೊಳಗಿರುವ ಸೂಚನೆಗಳ ಬಗ್ಗೂ ಪ್ರೆಸಿಡೆಂಟರು ತೆಗೆಯದೆ ಮತ್ತು ತೆಗೆದ ನಂತರ ತಮ್ಮ ಶಿಫಾರಸನ್ನು ಮಾಡದೆ ವಿಲಯನ ಕಾರಣಕ್ಕಾಗಿ ಯಾವದೇ ರೀತಿಯ ಮಸೂದೆಯನ್ನು ಜನತಾ ಸಭೆಯಲ್ಲಾಗಲೀ, ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಾಗಲೀ ತರಕೂಡದು.

'ಸಿ' ಭಾಗದ ಪ್ರಾಂತಗಳ ಜನರ ಅಭಿಪ್ರಾಯವನ್ನು ಪ್ರೌಢಮತದಾನ ಪದ್ಧತಿಯಿಂದ ಚುನಾಯಿತರಾಗುವ ಶಾಸನ ಸಭೆಗಳ ರಚನೆಯಾದ ನಂತರ ಮಾತ್ರ ತೆಗೆಯಲು ಅನುಕೂಲವಾಗುವದು.

ಶ್ರೀ ಕೆ. ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಬ್ರಿಟಿಷ್ ದೊರೆ ಆರನೆ ಜಾರ್ಜರ ನಿಧನ

ಪ್ರಿನ್ಸೆಸ್ ಎಲಿಜಬೆತ್ ಹೊಸ ರಾಣಿಯಾದರು

ಬ್ರಿಟನ್ನಿನ ದೊರೆ ಆರನೆ ಜಾರ್ಜ್‌ರವರು ತಾ. ೬ ರಲ್ಲಿ ಮುಂಜಾವ ನಿದ್ರೆಯಲ್ಲೇ ಮೃತರಾದರು. ೧೯೩೬ರಲ್ಲಿ ಎಡ್ವರ್ಡ್ ದೊರೆಗಳು ಪದತ್ಯಾಗ ಮಾಡಿದಂದಿನಿಂದ ಜಾರ್ಜ್‌ರವರು ಬ್ರಿಟನ್ನಿನ ಅರಸರಾಗಿದ್ದರು. ಕಳೆದ ಡಿಸೆಂಬರ್‌ನಲ್ಲಿ ಅವರಿಗೆ ೫೬ ವರ್ಷ ತುಂಬಿತ್ತು. ಕಳೆದ ಸೆಪ್ಟೆಂಬರ್‌ನಲ್ಲಿ ತಾನೇ ಅವರ ಶ್ವಾಸಕೋಶದ ಶಸ್ತ್ರಚಿಕಿತ್ಸೆ ನಡೆದು, ಅವರು ಚೇತರಿಸಿಕೊಳ್ಳುತ್ತಿದ್ದಾರೆಂದು ಊಹಿಸಲಾಗಿತ್ತು. ಆದರೆ ಹಠಾತ್ತಾಗಿ ಮೃತ್ಯು ಅವರನ್ನು ಕೊಂಡೊಯ್ದಿತು.

ಜಾರ್ಜ್‌ರವರ ಜ್ಯೇಷ್ಠ ಪುತ್ರಿ ರಾಜಕುಮಾರಿ ಎಲಿಜಬೆತ್‌ರವರು ಈಗ ಬ್ರಿಟನ್ನಿನ ರಾಣಿಯಾಗಿದ್ದಾರೆ. ಜಾರ್ಜ್ ದೊರೆ ನಿಧನರಾದಾಗ, ೨೬ ವರ್ಷ ವಯಸ್ಸಿನ ರಾಜಕುಮಾರಿ ಎಲಿಜಬೆತ್ ಕಾಮನ್‌ವೆಲ್ತ್ ಪ್ರವಾಸಕ್ಕಾಗಿ ಹೊರಟವರು, ಕೆನ್ಯಾದಲ್ಲಿದ್ದರು.

ನಿದ್ರೆಯಲ್ಲಿ ಶಾಂತವಾಗಿ ನಿಧನರಾದರೆಂಬುದನ್ನು ಮಾತ್ರ ಪ್ರಕಟನೆ ತಿಳಿಸಿತೇ ವಿನಾ, ಹೆಚ್ಚಿನ ವಿವರವೇನೂ ಅದರಲ್ಲಿರಲಿಲ್ಲ. ತಾ. ೬ರ ರಾತ್ರಿ ಅವರು ಮಲಗಲು ಹೋದಾಗ ಆರೋಗ್ಯವಾಗಿಯೇ ಇದ್ದರು.

ಕ್ರಿಸ್ಮಸ್ ದಿನದಂದು ಜಾರ್ಜ್‌ರು ರಾಷ್ಟ್ರವನ್ನುದ್ದೇಶಿಸಿ ಬ್ರಾಡ್‌ಕಾಸ್ಟ್ ಭಾಷಣ ಮಾಡಿದಾಗಲೇ, ಅವರ ಧ್ವನಿ ಕುಗ್ಗಿದ್ದುದನ್ನು ಬ್ರಿಟನಿನ ಜನ ಗಮನಿಸಿತ್ತು.

ಜಾರ್ಜ್ ದೊರೆಗಳ ನಿಧನದ ಸುದ್ದಿ ಬಂದೊಡನೆ ಪ್ರಧಾನಿ ಚರ್ಚಿಲ್ ಮಂತ್ರಿಮಂಡಲದ ಸಭೆಯನ್ನು ಕರೆದರು.

ಜಾರ್ಜ್ ದೊರೆಗಳು ೧೯೧೪ ರಿಂದೀಚೆಗೆ ಒಟ್ಟು ಐದು ಸಲ ಶಸ್ತ್ರಚಿಕಿತ್ಸೆ ಪಡೆದಿದ್ದರು. ಕಳೆದ ಸೆಪ್ಟೆಂಬರ್‌ನಲ್ಲಿ ಅವರ ಶ್ವಾಸಕೋಶಕ್ಕೆ ಕಡೆಯ ಶಸ್ತ್ರಚಿಕಿತ್ಸೆಯೇ ಐದನೆಯದು. ಆಗ ಅವರ ಶ್ವಾಸಕೋಶದ ಒಂದು ಭಾಗವನ್ನು ತೆಗೆದು ಹಾಕಲಾಯಿತು. ೧೯೧೪ ರಲ್ಲಿ ಅವರಿಗೆ ಅಪೆಂಡಿಸೈಟಿಸ್‌ಗಾಗಿ ಶಸ್ತ್ರಚಿಕಿತ್ಸೆ ನಡೆಸಲಾಯಿತು. ರಾಜರಾದನಂತರ ಅವರು ಮೊದಲು ಶಸ್ತ್ರಚಿಕಿತ್ಸೆ ಪಡೆದುದು ೧೯೪೯ ರಲ್ಲಿ. ಆಗ ಅವರ ಬಲಗಾಲಿನಲ್ಲಿ ಸರಿಯಾಗಿ ರಕ್ತಚಲನೆಯಾಗುವದಿಲ್ಲವೆಂದು, ಅದನ್ನು ಸರಿಪಡಿಸಲು ಶಸ್ತ್ರಚಿಕಿತ್ಸೆ ನಡೆಯಿತು.

ಸಾಧಾರಣವಾಗಿ ಬ್ರಿಟನ್ನಿನಲ್ಲಿ ಹೊಸ ರಾಜರ ಅಥವಾ ರಾಣಿಯರ ಪಟ್ಟಾಭಿಷೇಕ ನಡೆಯುವುದು ಅವರು ಪಟ್ಟಕ್ಕೆ ಬಂದ ಒಂದು ವರ್ಷ ಅಥವಾ ೧೮ ತಿಂಗಳ ನಂತರ. ಆರನೆ ಜಾರ್ಜ್‌ರವರು ಪಟ್ಟಕ್ಕೆ ಬಂದ ೧೬ ತಿಂಗಳನಂತರ ಅವರ ಪಟ್ಟಾಭಿಷೇಕ ಸಮಾರಂಭವು ನಡೆಯಿತು. ಹೊಸ ರಾಣಿಯ ಮೂರು ವರ್ಷ ವಯಸ್ಸಿನ ಪ್ರಿನ್ಸ್ ಚಾರ್ಲ್‌ಸ್ ಈಗ ಸಿಂಹಾಸನಕ್ಕೆ ಉತ್ತರಾಧಿಕಾರ.

Coorg Forest Department.

TIMBER SALE

Mercara the 12th Feb, 1952

About 50,000 cft of teak and 50,000 cft of rosewood, honne and other hard woods will be sold by auction at the Coorg Timber Depot, Hunsur, on Thursday the 6th March 1952 at 10 A. M.

For further particulars apply to the Chief Forest Officer, Coorg, Mercara.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಕೋವಿಗಳು, ವ್ಯವಸಾಯದ ಹತ್ಯಾರುಗಳು ಮತ್ತು ಕಬ್ಬಿಣದ ಸಲಾಕೆ ಪಟ್ಟಿಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು ಮತ್ತು ರಿವಾಲ್ವರುಗಳು.
2. ·12ನೇ ನಂಬರಿನ ಒಂಟಿ ಕೊಳವಿನ ಕೋವಿಗಳು.
3. 12ನೇ ನಂಬರಿನ ಜೋಡು ಕೊಳವಿನ ಕೋವಿಗಳು.
4. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
5. 2", 1", ⅝", ½", ¼" ಕಬ್ಬಿಣದ ಸಲಾಕೆಗಳು.
6. 9"×4" ಮತ್ತು 8"×4" ಕಬ್ಬಿಣದ ಬೀಮ್ಸ್ (Beams).
7. 8'×3'×12 (Gage)ನ ಕಬ್ಬಿಣದ ತಗಡುಗಳು.
8. 3"×3"×¼"ನ (Angles) ಎಂಗ್ಯೂಲರ್ಸ್ ಅವಶ್ಯವಿರುವವರು ಇಂಡೆಂಟ್ ಕೊಟ್ಟಲ್ಲಿ ತರಿಸಿ ಕೊಡಬಹುದು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೆ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

॥ ಜರ್ಮನಿಯಲ್ಲಿ ಮತ್ತೆ ನಾಜೀ ಸಂಘಟನೆ ॥

ರಷ್ಯಾದಲ್ಲಿ ರಾಜ್ಯ ಕ್ರಾಂತಿಯಾಗಿ ಲೆನಿನನು ಕಮ್ಯೂನಿಸಂ ಪ್ರಸ್ಥಾಪಿಸಲು ಜರ್ಮನಿಯ ಮುಖಂಡರುಗಳು ಕಾರಣೀಭೂತರಾಗಿದ್ದರಷ್ಟೇ. ಈಗ ಆಕ್ರಮಿತ ಜರ್ಮನಿಯಲ್ಲಿ ರಾಜಕೀಯ ಕ್ರಾಂತಿಯನ್ನು ಮಾಡಿಸುವಲ್ಲಿ ರಶಿಯಾದ ಕಮ್ಯೂನಿಸ್ಟ್ ರಾಜಕಾರಣಿಗಳ ಕೈವಾಡ ನಡೆದಿದೆಯೆಂದು ಸುಪ್ರಸಿದ್ಧ ಪತ್ರಿಕೋದ್ಯೋಗಿಯೊಬ್ಬರು ಬಯಲಿಗೆಳೆದಿದ್ದಾರೆ

ಆಶ್ಚರ್ಯದ ಸಂಗತಿಯೆಂದರೆ, ಹಿಟ್ಲರನ ನಾಜೀ ಜರ್ಮನಿ ಮತ್ತು ಸ್ಟಾಲಿನ್ನನ ಕಮ್ಯೂನಿಸ್ಟ್ ರಷ್ಯಾ ಇವೆರಡರ ನಡುವೆ ದ್ವಿತೀಯ ಮಹಾ ಯುದ್ಧದಲ್ಲಿ ಘೋರ ಕದನವಾಗಿ ರಷ್ಯಾಕ್ಕೆ ಅಮಿತ ಹಾನಿಯಾಗಿದ್ದರೂ ಇದೀಗ ಅದೇ ಕಮ್ಯೂನಿಸ್ಟರು ಅದೇ ನಾಜೀ ಪಕ್ಷದ ಕಾರ್ಯಕರ್ತರಿಗೆ ಗುಪ್ತ ರೀತಿಯಿಂದ ನೆರವಾಗುತ್ತಿದ್ದಾರೆ. ಮತ್ತು ರಷ್ಯಾದ ಕಮ್ಯೂನಿಸ್ಟರ ನೆರವಿನಿಂದ ಜರ್ಮನಿಯ ನಾಜಿಗಳು ಗುಪ್ತ ಸಂಘಟನೆ ಮಾಡಲಾರಂಭಿಸಿದ್ದಾರೆ. ಹಿಟ್ಲರನ ಕಾಲದಲ್ಲಿ ಇಡೀ ಜರ್ಮನಿಯನ್ನು ತನ್ನ ಹಿಡಿತದಲ್ಲಿರಿಸಿಕೊಂಡಿದ್ದ ಎಸ್. ಎಸ್. ದಳದ ನಾಯಕರು ಈ ಸಂಸ್ಥೆಯ ಸೂತ್ರಧಾರರಾಗಿದ್ದಾರೆ. ಈ ಸಂಸ್ಥೆಯ ಸದಸ್ಯರಾಗಿರುವ ನಾಜೀ ಕಾರ್ಯಕರ್ತರಿಗೆ ವಿಪುಲವಾದ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ರಷ್ಯವು ಪೂರೈಸುತ್ತಿದೆ. ಈ ಎಲ್ಲ ಸಹಾಯದಿಂದ ಪಶ್ಚಿಮ ಜರ್ಮನಿಯಲ್ಲಿ ಬರುವ ಅಕ್ಟೋಬರ್ ಅಥವ ನವಂಬರ್ ತಿಂಗಳಲ್ಲಿ ರಾಷ್ಟ್ರೀಯ ಕ್ರಾಂತಿಯನ್ನು ಹೂಡುವ ಸಿದ್ಧತೆ ಈಗ ನಡೆದಿದೆಯಂತೆ.

ಇಷ್ಟೆಲ್ಲವೂ ಪರಿಯ ಸಿದ್ಧತೆ ಸರಾಗವಾಗಿ ಸಾಗಿದ್ದರೂ ಪಶ್ಚಿಮ ಜರ್ಮನಿಯನ್ನು ಆಕ್ರಮಿಸಿರುವ ಫ್ರಾನ್ಸ್-ಇಂಗ್ಲೆಂಡ್, ಅಮೇರಿಕೆಯ ಅಧಿಕಾರಿಗಳಿಗೆ ಈ ಯೋಜನೆಯ ಸುಳಿವೆ ಕೂಡ ಬಡಿದಿಲ್ಲ. ಪಶ್ಚಿಮ ಜರ್ಮನಿಯ ಮೇಲಿರುವ ಬ್ರಿಟಿಷ್ ಮತ್ತು ಫ್ರೆಂಚ್ ವರ್ಚಸ್ಸನ್ನು ಉಧ್ವಸ್ತ ಮಾಡುವುದಕ್ಕಾಗಿ ಪಶ್ಚಿಮ ಜರ್ಮನಿಯ ಶೀಘ್ರದಲ್ಲಿ ಸಶಸ್ತ್ರ ಆಂದೋಲನ ಹೂಡುವ ಬಗ್ಗೆ ವಿಚಾರ ವಿನಿಮಯ ಮಾಡಲು ಪೂರ್ವ ಬರ್ಲಿನಿನಲ್ಲಿ ಕಳೆದ ವಾರ ಈ ಜನರು ಗುಪ್ತವಾಗಿ ಸಭೆಗೂಡಿದ್ದರಂತೆ. ಮತ್ತು ರಾಷ್ಟ್ರೀಯ ವಿಮೋಚಕ ಸಮಿತಿಯೊಂದನ್ನು ರಚಿಸುವ ಏರ್ಪಾಡೂ ಆ ಸಭೆಯಲ್ಲಾಯಿತಂತೆ.

ಈ ವೇಳೆ ಜರ್ಮನಿಯಲ್ಲಿ ನಡೆದ ಚುನಾವಣೆಯಲ್ಲಿ ಮೇಜರ್ ಜ|| ಅರ್ನ್ಸ್ಟ್ ರೇಮಾರನು 'ರೀಚ್ ಪಕ್ಷ' ಸ್ಥಾಪಿಸುವದಕ್ಕೆ ಬೆಂಬಲ ಕೊಟ್ಟ ೩೭,೦೦೦ ಜನರಲ್ಲದೆ ಆ ಪಕ್ಷ ಸಂಘಟನೆಗೆ ಮೊದಲಿನ ಲಕ್ಷಾವಧಿ ನಾಜೀ ಸದಸ್ಯರು ಮರು ನೋಂದಣಿ ಸಹಾಯ ಮಾಡಲು ಸಿದ್ಧರಿದ್ದಾರೆ. ಕಳೆದ ಎರಡು ವರ್ಷಗಳಿಂದ ಅವರಿಗೆ ಪೂರ್ವ ಪಶ್ಚಿಮ ಗಡಿ ಪ್ರದೇಶದಲ್ಲಿ ರಷ್ಯನ್ನರು ಹೇರಳ ಶಸ್ತ್ರಾಸ್ತ್ರಗಳ ಸಂಗ್ರಹವನ್ನೊದಗಿಸಿ ಕೊಟ್ಟಿದ್ದಾರೆ. ಕಳೆದ ಅಕ್ಟೋಬರ್ ನವಂಬರ್ ತಿಂಗಳಲ್ಲಿ ಪಶ್ಚಿಮ ಬರ್ಲಿನದ ಒಂದು ಕಾರಖಾನೆಯಿಂದ ೫ ಟನ್ ಭಾರ ಹೊರುವ ಶಕ್ತಿಯುಳ್ಳ ೫೦ ಮೋಟಾರು ಟ್ರಕ್ಕುಗಳಲ್ಲಿ ೩೨೮ ಟನ್ ಶಸ್ತ್ರಾಸ್ತ್ರಗಳು ಆಯಾತವಾಗಿವೆಯೆಂದು ಪೂರ್ಣ ವಿವರಗಳೊಂದಿಗೆ ಗುಪ್ತ ಹೇರರು ವರದಿ ಮಾಡಿದರೂ ಆ ಬಗ್ಗೆ ಅಧಿಕಾರಿಗಳು ಯಾವ ಕ್ರಮವನ್ನೂ ಕೈಕೊಳ್ಳಲಿಲ್ಲವಂತೆ

ಈ ಶಸ್ತ್ರಾಸ್ತ್ರಗಳ ಮೇಲೆ ಪೂರ್ವ ಬರ್ಲಿನದಲ್ಲಿರುವ ರಷ್ಯದ ಸೂಲ್ ಮತ್ತು ರೈಷ ಲಾ-ಸೇಹಲಿಗ ಶಸ್ತ್ರಾಸ್ತ್ರ ಕಾರಖಾನೆಗಳ ಮುದ್ರೆ ಇರುವದಂತೆ. ಮೋಟಾರ ಟ್ರಕ್ಕುಗಳು ಸಂಶಯಾತೀತವಾಗಿ ಕಾಣುವ ಒಕ್ಕಲುತನದ ಚಕ್ಕಡಿಗಳಲ್ಲಿ ಬೊಬ್ಬಾಟವಿಲ್ಲದೆ ತಮ್ಮ ಒಜ್ಜೆಯನ್ನು ಇಳಿಸಿ ಹೋಗುವವು. ಆ ಚಕ್ಕಡಿಗಳು ಮುಂದಿನ ಕೆಲಸ ಮಾಡುವವು. ಗಡಿಕಾದ ಅಧಿಕಾರಿಗಳಿಗೆ ಲಂಚ ಕೊಟ್ಟರೆ ಬೇಕಾದ ಸಾಧನ ಸಾಮಗ್ರಿಗಳನ್ನು ಅಡೆ ತಡೆಯಿಲ್ಲದೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಾಗಿಸಲು 'ಪರ್ಮಿಟ್'ಗಳು ದೊರಕುವದರಿಂದ ಕಳ್ಳಸಾಗಾಟ ನಿರಾತಂಕವಾಗಿ ಸಾಗುತ್ತಿದೆ. ಬ್ರಿಟಿಷರು ಆಕ್ರಮಿಸಿದ ಜರ್ಮನಿಯ ಭಾಗದಲ್ಲಿ ಈ ಶಸ್ತ್ರಾಸ್ತ್ರಗಳ ಸಂಗ್ರಹವು ಮೇ|| ಜ|| ರೇಮರನ 'ರೀಚ್' ಪಕ್ಷದ ಕಡೆಗೂ, ಅಮೇರಿಕೆಯು ಆಕ್ರಮಿಸಿದ ದಕ್ಷಿಣ ಜರ್ಮನಿ ಭಾಗದಲ್ಲಿ 'ನಾರ್ಡಿಕ್ ಲೀಜನ್' ಎಂಬ ನಾಜೀ ಸಂಸ್ಥೆಗೂ ಹೋಗುವವು. ಆದರೆ ಅಮೇರಿಕನ್ನರು ಆಕ್ರಮಿಸಿರುವ ದಕ್ಷಿಣ ಜರ್ಮನಿಯಲ್ಲಿ ನಾಜೀ ಸಂಘಟನೆ ಇನ್ನೂ ಅಷ್ಟು ಪ್ರಬಲವಾಗಿಲ್ಲ. ಶಸ್ತ್ರಾಸ್ತ್ರಗಳ ಈ ಚಲನವಲನವು ಪೂರ್ವ ಜರ್ಮನಿಯ ಗಡಿ ಪ್ರದೇಶದಲ್ಲಿ ವಾಸಿಸುತ್ತಿರುವ ಈಗಿನ ಭೂಗತ ನಾಜೀ ಉಪನಾಯಕನಾದ ಅರ್ನೆಸ್ಟ್ ಗ್ರೇಗರನ ನಿರ್ವಹಣೆಯಿಂದ ಸಾಗುತ್ತದೆ. ಮೇಲೆ ಹೇಳಿದ ಮಾರ್ಗದಿಂದ ೩೧ನೇ ಡಿಸೆಂಬರದ ರಾತ್ರಿ ಶಸ್ತ್ರ ಸಾಮಗ್ರಿಗಳ ದೊಡ್ಡ ಸಂಗ್ರಹವು ಸದ್ದಿಲ್ಲದೆ ಸಾಗಿಸಲ್ಪಟ್ಟಿತು.

ಸೋವಿಯಟ್ ಆಕ್ರಮಿತ ಬರ್ಲಿನದ ಪ್ರದೇಶದಿಂದ, ಸೆಲ್ಫೋಸ್ಕ್ರೂಜ್ ಮತ್ತು ಬನೇಕಸ್ಟನ ಎಂಬ ಇಬ್ಬರು ಪೂರ್ವ ಬರ್ಲಿನದ ಜನತಾ ಪೋಲೀಸ್ ಅಧಿಕಾರಿಗಳು, ಸೋವಿಯಟ್ ಪ್ರದೇಶದಲ್ಲಿಯ ಜರ್ಮನಿ ಗುಪ್ತ ಪೋಲೀಸ್ ಪಡೆಯ ಅಧಿಕಾರಿಯಾದ ಹರ್ ಟಿಂಗ್ಲರ ಇವರ ನಾಯಕತ್ವದಲ್ಲಿ ೨೦೦ ಸೈನಿಕರ ಪಿಸ್ತೂಲುಗಳನ್ನೂ ಅವುಗಳ ಕಾಡತೂಸುಗಳನ್ನೂ, ಹಸ್ತ ಸಾವಿರ ಗುಂಡುಗಳ ಎರಡು ಪೆಟ್ಟಿಗೆಗಳನ್ನೂ, ೪೮ ಮಿಷಿನ್ ಗನ್‌ಗಳನ್ನೂ, ೧೫೦೦೦ ಕಾಡತೂಸುಗಳನ್ನೂ, ಬರ್ಲಿನದ ಹೊರವಲಯದಲ್ಲಿರುವ ನ್ಯೂ ಎನ್ ಫೆಲ್ಡ ವಿಮಾನ ಗೃಹದಿಂದ ತುರುಗೇಗರನಿಗೆ ಒಪ್ಪಿಸಿದರು. ಎರಡು ದಿನಗಳಲ್ಲಿ ಅದೆಲ್ಲವೂ ಪಶ್ಚಿಮ ಜರ್ಮನಿಯ ನಾಜೀ ಸ್ವಯಂಸೇವಕರ ಕೈಗೆ ಹೋಯಿತು.

ಇಷ್ಟೆಲ್ಲಾ ಅಕ್ರಮ ಚಟುವಟಿಕೆಗಳು ನಿರಾತಂಕವಾಗಿ ಸಾಗಿದುದು ಹೇಗೆ?

ಹಿಂದಕ್ಕೆ ನಾಜೀ ಸಂಸ್ಥೆಯಲ್ಲಿ ವರ್ಚಸ್ವೀ ಪ್ರಮುಖರಿದ್ದವರೆಲ್ಲರೂ ಈಗ ಪಶ್ಚಿಮ ಜರ್ಮನ್ ಆಡಳಿತದ ಆಯಮೆಂಟ್ನ ಅಧಿಕಾರ ಸ್ಥಾನದಲ್ಲಿದ್ದಾರೆ. ಪಶ್ಚಿಮ ಜರ್ಮನಿ ಸರಕಾರವು ಹೊಸದಾಗಿ ಸ್ಥಾಪಿಸಿದ 'ಎಮ್ ಐ ಜ' ಎಂಬ ಗುಪ್ತ ಹೇರರ ಸಂಸ್ಥೆಯ ಮೇಲೆ ಕೂಡ ಆ ಅಧಿಕಾರಿಗಳ ವರ್ಚಸ್ಸಿದೆ

ನಾಜೀ ಆಂದೋಲನಕ್ಕೆ ಅನುಕೂಲವಿರುವವರನ್ನೂ ಅದರ ಗುಪ್ತ ಚಟುವಟಿಕೆಗಳ ಬಗ್ಗೆ ಆಸ್ಥೆ ವಹಿಸುವವರನ್ನೂ ಕಳ್ಳಸಾಗಾಟ ಮಾಡುವುದಕ್ಕೆ ಅನುಕೂಲವಿರುವವರನ್ನೂ ಅಧಿಕಾರ ಸ್ಥಾನದಿಂದ ಕಿತ್ತೊಗೆದು ಬಾನ್ ಸರಕಾರದ ಸಾಂಪ್ರದಾಯವಾದಿಗಳು ತಮ್ಮ ಬೆಂಬಲಿಗರನ್ನು ಈ ಗುಪ್ತಕಾರಸ್ಥಾನದ ಆ ಸ್ಥಳಗಳಿಗೆ ನೇಮಿಸುತ್ತಿದ್ದಾರೆ. ಆದರೆ ನಾಜೀ ಜನರ ಭೀತಿ ಅವರಿಗೂ ಇತರ ಜರ್ಮನರಿಗೂ ಬಹುವಾಗಿ ಬಾಧಿಸುತ್ತಿದೆ.

ಈ ನಾಜೀ ಪಕ್ಷದವರ ಗುಪ್ತ ಚಟುವಟಿಕೆಗಳನ್ನರಿತುಕೊಂಡು ವರದಿ ಮಾಡುವದಕ್ಕಾಗಿ ಬಾನ್ ಸರಕಾರದ 'ಎಂ. ಐ. ಜ' ರ ಗುಪ್ತ ಹೇರರಿಗೆ ಆಜ್ಞಾಪಿಸಲಾಗಿತ್ತು. ಅವರು ಅತ್ತ ತಮ್ಮ ಕಾರ್ಯದಲ್ಲಿ ತೊಡಗಿದಾಗ, ಇತ್ತ ಆ 'ಎಂ. ಐ. ಜ'ರ ಮುಖ್ಯಾಧಿಕಾರಿಯು 'ರೀಚ್' ಪಕ್ಷದ ಪ್ರಮುಖನನ್ನು ಕರೆ ಕಳುಹಿಸಿ ಅವನಿಗೆ ತನ್ನ ಎಲ್ಲ ಗುಪ್ತ ಹೇರರ ಸಂಪೂರ್ಣ ವಿವರಗಳನ್ನು ಕೊಟ್ಟನಲ್ಲದೆ ನಾಜೀ ಕಾರ್ಯಕರ್ತರಿಗೆ ಎಚ್ಚರಿಕೆ ಕೊಡಲು ತಿಳಿಸಿದ. ಮುಂದೆ ಕೇವಲ ೨೪ ಗಂಟೆಗಳಲ್ಲಿ ಎಲ್ಲ ನಾಜೀ ಕಾರ್ಯಕರ್ತರಿಗೆ ಎಚ್ಚರಿಕೆ ಮುಟ್ಟಿತು. ಅವರೆಲ್ಲರೂ ಕೂಡಲೇ ಅದೃಶ್ಯರಾದರು.

ರಷ್ಯಾವು ಜರ್ಮನಿಯ ನಾಜೀ ಪಕ್ಷದ ಬಗ್ಗೆ ಇಷ್ಟೊಂದು ಸಕ್ರಿಯ ಸಹಾನುಭೂತಿ ತೋರಿಸುವದಕ್ಕೆ ಕಾರಣವಿಲ್ಲದಿಲ್ಲ. ರಷ್ಯವು ಜರ್ಮನಿಯ ಈ ಗುಪ್ತ ಸಂಸ್ಥೆಗೆ ಅವಶ್ಯಕ ಯುದ್ಧ ಸಾಮಾಗ್ರಿಗಳನ್ನು ಗುಪ್ತವಾಗಿ ಒದಗಿಸಿ ಕೊಡಬೇಕು. ಅದಕ್ಕೆ ಪ್ರತಿಯಾಗಿ ಬ್ರಿಟನ್-ಫ್ರಾನ್ಸ್-ಅಮೇರಿಕೆಗಳು ಜರ್ಮನಿಯನ್ನು ಶಸ್ತ್ರಸನ್ನದ್ಧವನ್ನಾಗಿ ಮಾಡುವದನ್ನೂ ಶೂಮನ್ನರ ಯೋಜನೆಯಂತೆ ಪಶ್ಚಿಮ ಯೂರೋಪದಲ್ಲಾಗಲಿರುವ ಉಕ್ಕು, ಕಲ್ಲಿದ್ದಲಿಗಳ ಕ್ರೋಢೀಕರಣವನ್ನೂ, ಜರ್ಮನರು ವಿರೋಧಿಸಬೇಕು. ಎಂದು ಮೊನ್ನೆ ಬರ್ಲಿನದಲ್ಲಿ ಕೂಡಿದ್ದ ನಾಜೀ ಪಕ್ಷದ ಗುಪ್ತ ಸಭೆಯಲ್ಲಿ ನಿರ್ಧರಿಸಲ್ಪಟ್ಟಿದೆಯಂತೆ.

ಈ ರೀತಿಯಾಗಿ ನಾಜೀ ಪಕ್ಷದ ಪುನಃ ಸಂಘಟನೆ ಈಗ ಮತ್ತೆ ಪ್ರಾರಂಭವಾಗಿದೆ. ಈ ನಾಜೀ ಕಾರ್ಯಕರ್ತರಿಗೆ ಜರ್ಮನ ಜನತೆಯ ಮನೋಭಾವನೆಯ ಪೂರ್ಣ ಬೆಂಬಲವಿದೆ. ಇಂತಹದೊಂದು ಸಂಘಟನೆ ಈಗ ಮತ್ತೆ ಪ್ರಾರಂಭಿಸಲ್ಪಟ್ಟರೆ ಪ್ರತಿಯೊಬ್ಬ ಜರ್ಮನನೂ ಅದಕ್ಕೆ ಸಂಪೂರ್ಣ ಬೆಂಬಲ ಕೊಡುವನೆಂದು ಅವರಿಗೆ ಮನವರಿಕೆಯಾಗಿದೆ. ಇಂದೊಮ್ಮೆ ಹಾಗೆ ಬೆಂಬಲ ಕೊಡಲು ನಿರಾಕರಿಸಿದರೆ ಅದರ ಪರಿಣಾಮವೇನಾಗುವದೆಂಬುದನ್ನು ಪ್ರತಿಯೊಬ್ಬ ಜರ್ಮನನು ಹಿಂದಿನ ಕಾಲದ ಗೆಸ್ಟಪೋ ದಳದ ಚಟುವಟಿಕೆಗಳಿಂದ ಪಾಠ ಕಲಿತಿದ್ದಾನೆ.

ಇತ್ತ ಬ್ರಿಟನ್ ಮತ್ತು ಅಮೇರಿಕೆಯ ಗುಪ್ತ ಹೇರರು ದುಡಿದು ದುಡಿದು ಬಳಲಿದ್ದಾರೆ. ಅವರಲ್ಲಿ ದುಡಿಯಲು ಹುರುಪು ಉಳಿದಿಲ್ಲ. ಪಶ್ಚಿಮ ಜರ್ಮನಿಯಲ್ಲಿ ನುಸುಳಿಕೊಂಡಿರುವ ಕಮ್ಯೂನಿಸ್ಟರನ್ನು ಹುಡುಕಿ ತೆಗೆದು ಅವರನ್ನು ಬಂಧಿಸುವದರಲ್ಲಿಯೇ ಆ ಹೇರರಿಗೆ ಸಾಕುಬೇಕಾಗಿ ಹೋಗಿದೆ, 'ನಾಜೀ ಪಕ್ಷ? ಅದೆಲ್ಲಿದೆ? ಏನೋ ಕೆಲವರು ಹುಚ್ಚರು ಆ ರೀತಿ ಮಾತನಾಡುತಿದ್ದಾರೆ, ಅಷ್ಟೆ. ಆ ಜನರಿಂದೇನಾಗಬೇಕಾಗಿದೆ? ಅವರಲ್ಲಿ ಈಗ ಶಕ್ತಿಯೇ ಉಳಿದಿಲ್ಲ'ವೆಂದು ಹೇಳಿದ ಕೂಡಲೆ ಈ ಜನರು ನಂಬುತ್ತಾರೆ.

ಈಗಾಗಲೇ ಅವರ ಗೆಸ್ಟಪೋ ಪಡೆ, ತಿಡಿಲು ಪಡೆ, ಮೊದಲಾದ ಪಡೆಗಳ ಸಂಘಟನೆ ಮುಗಿದಿದೆ. ಹೊಸ ಸಂಸ್ಥೆಗೆ ದ್ರೋಹ ಬಗೆದವರು ನಿರ್ನಾಮವಾಗಿ ಹೋಗಿದ್ದಾರೆ. ಅಂಥ ದ್ರೋಹಿಗಳನ್ನು ಈ ನಾಜೀ ಸ್ವಯಂಸೇವಕರು ಒರೆಸಿ ಒಗೆಯುತ್ತಿದ್ದಾರೆ ಮೇಜರ್ ಜನರಲ್ ರೇಮರನು ಈಗಿನ ಪಶ್ಚಿಮ ಜರ್ಮನ್ ಸರಕಾರದ ಅಧ್ಯಕ್ಷರಾದ ಡಾ. ಅಡೆನೋರವರನ್ನು ತೆಗಳಿದ್ದಕ್ಕಾಗಿ ಸೆರೆಮನೆಯಲ್ಲಿ ನಾಲ್ಕು ತಿಂಗಳ ಶಿಕ್ಷೆ ಅನುಭವಿಸುತ್ತಿದ್ದಾನೆ.

ಈ ನವಸಂಘಟಿತ ನಾಜೀ ಪಕ್ಷಕ್ಕೆ ಈಗ ಅತ್ಯವಶ್ಯವಿರುವುದು ಒಂದೇ. ಹಿಟ್ಲರನಂಥ ಧುರೀಣನ ಆವಶ್ಯಕತೆ ಆ ಸಂಸ್ಥೆಗಿದೆ. ಆದರೆ ಅಂಥ ಧುರೀಣ ದೊರೆಯಲಿ, ಬಿಡಲಿ, ಬರಲಿರುವ ಶರದೃತುವಿನಲ್ಲಿ ಪಶ್ಚಿಮ ಜರ್ಮನಿಯಲ್ಲಿ ಈ ನಾಜೀ ಪ್ರಚೋದಿತ ಕ್ರಾಂತಿ ಖಂಡಿತವೆಂದು ಆ ಪತ್ರಿಕೋದ್ಯಮಿ ಹೇಳಿದ್ದಾನೆ.

["ಸ್ವೈ ಹಿಂದ"]

ನೋಟೀಸ್

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಕಾಣಿಸಿದ ಕೋವಿಗಳನ್ನು ಮತ್ತು ತೋಟಗಳನ್ನು 1952ನೇ ಇಸವಿ ಮಾರ್ಚ್ ತಿಂಗಳ 7 ನೇ ತಾ. ಶುಕ್ರವಾರ ದಿನ ಬೆಳಗ್ಗೆ 11 ಗಂಟೆಗ ಡಿ|| ಸು|| ದವರ ಆಫೀಸಿನ ಎದುರಿಗೆ ಟೆಂಡರ ದರಖಾಸ್ತು ಮೂಲಕ ಬಹಿರಂಗವಾಗಿ ಹರಾಜು ಮಾಡಲ್ಪಡುವವು. ಹರಾಜಿನಲ್ಲಿ ಖರೀದಿಸಿಕೊಂಡವರು ಪೂರಾ ಮೊಬಲಗನ್ನು ಆ ಕೂಡಲೇ ಪಾವತಿ ಮಾಡತಕ್ಕದ್ದು. ಹರಾಜು ಚೀಫ್ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿದೆ.

1. ಒಂಟಿ ಹೊಳವಿನ ತೋಟದ ಕೋವಿಗಳು ಮತ್ತು ಜೋಡು ಹೊಳವಿನ ತೋಟದ ಕೋವಿಗಳು 14.
2. ಚಿಲ್ಲ ತೋಟಗಳು 25.
3. ತೋಟಗಳು 1188.

ಯಂ. ಪಿ. ಮಂಜಣ್ಣ.
ಕೊಡಗು ಡಿ|| ಸು|| ಆಫ್ ಪೋಲೀಸ್

ನಮ್ಮ ಮಂತ್ರಿಮಂಡಳ ಮತ್ತು ಮುಂದಿನ ಆಡಳಿತ

ಲೇ:—ಶ್ರೀ ಬಿ: ಎಂ ಕಾರ್ಯಪ್ಪ, 'ಬಟ್ಟಿಮಕ್ಕಿವಿಲ್ಲ' ಪಾರಾಣೆ.

ಕೊಡಗಿನ ಸಾರ್ವತ್ರಿಕ ಚುನಾವಣೆ ಮುಗಿದು ಕಾಂಗ್ರೆಸು ಪಕ್ಷವು ಬಹುಮತವನ್ನು ಪಡೆದು ಆರಿಸಿಬಂದಿದೆ. ಮುಂಬರುವ ಏಪ್ರಿಲ್ ತಿಂಗಳಲ್ಲಿ ಕೊಡಗಿನಲ್ಲಿ ಮಂತ್ರಿಮಂಡಳದ ರಚನೆಯಾಗಿ ಜನ ಪ್ರತಿನಿಧಿಗಳು ದೇಶದ ಆಡಳಿತದ ಜವಾಬ್ದಾರಿಯನ್ನು ಹೊರುವರು. ಈ ಮಂತ್ರಿಮಂಡಳದ ರಚನೆ, ಅವರ ವೇತನದ ಪಟ್ಟಿ, ವಸತಿಯ ಏರ್ಪಾಡುಗಳ ಬಗ್ಗೆ ಮಾತುಕತೆ ನಡೆಯುತ್ತಿದೆ. ಈ ಸಂಭರ್ಭದಲ್ಲಿ ನಾನು ಕೆಲವು ವಿಚಾರಗಳನ್ನು ಜನಪ್ರತಿನಿಧಿಗಳ ಹಾಗೂ ಕೊಡಗಿನ ಜನರ ಮುಂದಿಡಲು ಈ ಲೇಖನ [illegible]ರುವದಾಗಿದೆ.

ಶತಮಾನಗಳ ಪರಕೀಯ ಆಡಳಿತೆಯಿಂದ ತೊಂದರೆ ಪಟ್ಟು ಬದುಕಿದ ಕೊಡಗಿಗೆ ಇಂದು ಜನತಾ ಜವಾಬ್ದಾರಿಯುಳ್ಳ ಸರಕಾರ ದೊರೆಯುತ್ತಿದೆ. ಆದ್ದರಿಂದ ಕೊಡಗಿನ ಜನರು ಈ ಸರಕಾರವು ಈವರೆಗೆ ಯಾರೂ ಸಾಧಿಸದ ಜನಹಿತವನ್ನೂ ದೇಶದ ಪ್ರಗತಿಯನ್ನೂ ಸಾಧಿಸಿ ಕೊಡಗಿನ ಜನಜೀವನವು ಸುಖಮಯವೂ, ಪ್ರಗತಿಶೀಲವೂ ಆಗುವಂತೆ ಮಾಡುವದೆಂದು ನಂಬಿರುವರು. ಈ ನಂಬಿಕೆಯನ್ನು ಕಾರ್ಯತಃ ನಡೆಸಿಕೊಡುವ ಜವಾಬ್ದಾರಿ ಶಾಸನ ಸಭೆಯ ಸದಸ್ಯರ ಮೇಲೂ, ಅವರಿಂದ ಆರಿಸಲ್ಪಡುವ ಮಂತ್ರಿ ಮಂಡಳದ ಮೇಲೂ ಇದೆ. ಇಂಥಾ ಜವಾಬ್ದಾರಿಯನ್ನು ನಿರ್ವಹಿಸುವ ಕಾಲಕ್ಕೆ ಈ ಪ್ರತಿನಿಧಿಗಳು ಎಚ್ಚರಿಕೆಯಿಂದ ವರ್ತಿಸಬೇಕಿದೆ. ಈ ಕಾರ್ಯಕರ್ತರು ಕಳೆದ ವಾರದ 'ಹರಿಜನ' ಪತ್ರಿಕೆಯಲ್ಲಿ ಪ್ರಕಟವಾಗಿದ್ದ "ಸರಕಾರಿ ಸಂಬಳ ಮತ್ತು ರಚನಾತ್ಮಕ ಕಾರ್ಯಕರ್ತರು" ಎಂಬ ಲೇಖನವನ್ನು ಒಮ್ಮೆ ಅವಲೋಕಿಸಬೇಕು. ಸಾಮಾನ್ಯ ಜನರ ಒಡನಾಡಿಯಾಗಿದ್ದು ಸರಳ ಜೀವನ ನಡೆಸುತ್ತಿದ್ದವರು ಅಧಿಕಾರ ಕೈಗೆ ಬಂದಾಗ ತಲೆಕೆಟ್ಟಿದವರಂತೆ ವರ್ತಿಸಬಾರದು. ಮಂತ್ರಿ ಪದವು ದೊರೆತರೂ ತಾನೂ ಸಾಮಾನ್ಯ ಜನರಿಂದ ಭಿನ್ನನಲ್ಲವೆಂಬ ಭಾವನೆಯನ್ನಿಟ್ಟು ಜನರ ಸೇವೆಯಲ್ಲಿಯೇ ತನ್ನ ಘನತೆ [illegible] ಪಡೆಯುವ ವೇತನದ ಯಾ [illegible]ಲ್ಲಿ ಅಲ್ಲವೆಂಬುದನ್ನು ಅರಿಯಬೇಕು. ಕೊಡಗಿನಲ್ಲಿ ಮಂತ್ರಿಗಳಿಗೆ ಮಾಸಿಕ ೭೫೦ ವೇತನ ಕೊಡುವ ಏರ್ಪಾಡಾಗಿದೆಯೆಂಬ ವಾರ್ತೆ [illegible] ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಈ ವಾರ್ತೆ ನಿಜವಿದ್ದರೆ ಕೊಡಗಿನಂಥಾ ಚಿಕ್ಕ ಪ್ರಾಂತದಲ್ಲಿ [illegible] ಈ ವೇತನ ಹೆಚ್ಚಾಯಿತೆಂದು ಹೇಳಬೇಕು. ಕೊಡಗಿನ [illegible] ಚೀಫ್ ಕಮಿಷನರು, ಫಾರೆಸ್ಟ್ ಆಫೀಸರು, [illegible]ವಸಾಯ ಅಧಿಕಾರಿ [illegible] ಇವರುಗಳ ವೇತನವು [illegible] ಪರಿಮಾಣದ್ದಾಗಿದೆ. ಕೊಡಗಿನಂಥಾ ಚಿಕ್ಕ ಪ್ರಾಂತಕ್ಕೆ ಈ ತಲೆಭಾರ ಆಫೀಸರರ ಅಗತ್ಯವಿಲ್ಲ. ಈ ಬಾಬಿನಲ್ಲಿ ವೇತನ ಕಡಿಮೆ ಮಾಡುವದು ಅತ್ಯಾವಶ್ಯವಿರುವಾಗ ಮಂತ್ರಿಗಳ ವೇತನವನ್ನು ಅದೇ ರೀತಿ ಏರಿಸುವದು ಯೋಗ್ಯವಲ್ಲ. ಸರಕಾರದ ಅಧಿಕಾರಿಗಳ ವೇತನ ದೇಶದ ರೈತನ ವಾರ್ಷಿಕ ಸರಾಸರಿ ಆದಾಯದ ದಾಮಾಶಾಯಿ ಮೇರೆ ನಿಶ್ಚೈಯಿಸಲ್ಪಡಬೇಕೇ ವಿನಾ ಬೇರೆ ರೀತಿಯಲ್ಲಿ ಕೂಡದು. ಇಂದು ಕೊಡಗಿನ ರೈತನಾಗಿದ್ದು, ಐಕ್ಯಯನ್ನು ಹೊಂದಿ ಮಂತ್ರಿಯಾಗುವ ರೈತನ ಮಗನ. ಹೊಂದಿಕೊಳ್ಳುವ ವೇತನವು ಕೊಡಗಿನ ರೈತನ ವಾರ್ಷಿಕ ಆದಾಯದ ತಳಹದಿಯಲ್ಲಿಯೇ ನಿಶ್ಚಯಿಸಲ್ಪಡಬೇಕು. ಮಂತ್ರಿಪದವು ಲಾಭ ಮಾಡಿಕೊಳ್ಳುವ ಹಾದಿಯಲ್ಲ. ಬದಲು ಸೇವಾ ಮಾರ್ಗ. ಅದ್ದರಿಂದ ಮಂತ್ರಿಯಾದ ಕ್ಷಣ ಹದ್ದು ಮೀರಿದ ರೀತಿ ವೇತನ ಹೊಂದುವದು ನ್ಯಾಯವಾಗದು.

ಕೊಡಗಿನಲ್ಲಿ ಮಂತ್ರಿಗಳಿಗೆ ಮಡಿಕೇರಿಯಲ್ಲಿ ಉಳಿದುಕೊಳ್ಳಲು ಯೋಗ್ಯ ಮನೆಗಳ ಏರ್ಪಾಡನ್ನು ಸರಕಾರ ಮಾಡುತ್ತಿದೆಯಂತೆ. ಇದಕ್ಕಾಗಿ ಸುಮಾರು ಒಂದು ಲಕ್ಷ ರೂಪಾಯಿಯ ಮೂರು ಮನೆಗಳನ್ನು ಪಡೆಯುವ ಮಾತುಕತೆ ನಡೆದಿದೆಯೆಂದು ವರ್ತಮಾನವಿದೆ. ಇದು ನಿಜವಿದ್ದರೆ ಇದು ಅಹಿತ ಮತ್ತು ಅತುರದ ಖರ್ಚು ಎಂದು ಹೇಳದಿರಲಾಗುವದಿಲ್ಲ. ಕೊಡಗಿನ ರೈತನ ದೃಷ್ಟಿಯಿಂದ ನೋಡುವದಾದರೆ ಒಂದು ಲಕ್ಷ ರೂಪಾಯಿ ಕಡಿಮೆ ಏನಲ್ಲ. ರೈತರ ಪ್ರತಿನಿಧಿಗಳಾದ ಮಂತ್ರಿಗಳು ತಮ್ಮ ಸಹೋದರ ವರ್ಗದ ಹಿತಸಾಧಿಸುವದನ್ನು ಗುರಿಯಾಗಿಟ್ಟು ವರ್ತಿಸುವ ಬಯಕೆಯವರಾದ ಕಾರಣ ಅವರಿಗೆ ಇಂಥಾ ದೊಡ್ಡ ಮನೆಗಳ ಅಗತ್ಯ ಸದ್ಯಕ್ಕೆ ಇರಲಿಲ್ಲ. ರೈತನ ಹಿತಸಾಧಿಸುವ ಇತರ ಅನೇಕ ತುರ್ತಿನ ಕೆಲಸಗಳಿರುವಾಗ ಈ ರೀತಿ ಲಕ್ಷಗಟ್ಟಲೆ ಖರ್ಚು ಈಗ ಬೇಕಿರಲಿಲ್ಲ. ಮಂತ್ರಿಗಳಿಗೆ ಒಂದೊಂದು ಕಾರು ಕೊಡುವ ಸೂಚನೆ ಇದೆ. ಅತ್ಯಗತ್ಯ ತಿರುಗಲು ಮಂತ್ರಿಗಳಿಗೆ ವಾಹನದ ಆವಶ್ಯಕತೆ ಇದೆ. ಆದರೆ ಕೊಡಗಿನಲ್ಲಿ ಕಾರುಗಳ ಅಗತ್ಯವಿಲ್ಲ. ಕಾರುಗಳು ಕೊಡಗಿನ ಎಲ್ಲಾ ಮೂಲೆಗಳಿಗೆ ಹೋಗಲಾರವು. ಅದ್ದರಿಂದ ಪ್ರತಿ ಮಂತ್ರಿಗಳಿಗೆ ಉತ್ತಮವಾದ ಜೀಪ್‌ಗಳನ್ನು ಒದಗಿಸಿಕೊಡುವದು ಯೋಗ್ಯವಾಗಿದೆ. ಮಂತ್ರಿ ಸಂಬಳದ ವಿಚಾರದಲ್ಲಿ ಕೊಡಗಿನ ಯಾವ ಮಂತ್ರಿಯೂ [illegible], ಚೀಫ್ [illegible]ಗಳನ್ನು ಕಳೆದು ಮಾಸಿಕ ರೂ. ೩೦೦ ಕ್ಕಿಂತ ಹೆಚ್ಚು ಹೊಂದಿಕೊಳ್ಳದಿರಲಿ. ಪ್ರಥಮವಾಗಿ ಆಡಳಿತ ಜವಾಬ್ದಾರಿ ಹೊಂದಲು ಬರುತ್ತಿರುವ ಈ ಜನಪ್ರತಿನಿಧಿಗಳು ಆ ರೀತಿಯ ಒಂದು ಆದರ್ಶವನ್ನು ಮುಂದಿಟ್ಟು ನಿಜವಾಗಿಯೂ ಜನತಾಸೇವೆಯ ದೃಷ್ಟಿಯಿಂದ ದುಡಿಯಬೇಕಾದುದು ಅತ್ಯವಶ್ಯವಿದೆ. ನಾನು ಬರೆದ ಈ ವಿಚಾರವನ್ನು ಓದಿ ಪ್ರತ್ಯೇಕಪಕ್ಷದವನಾದ ನಾನು ಚುನಾವಣೆಯಲ್ಲಿ ನನ್ನ ಪಕ್ಷ ಅಪಜಯ ಪಡೆದುದರಿಂದ ಈಗ ಇತರರಿಗೆ ಬೋಧನೆ ಮಾಡುತ್ತಿರುವದೆಂದು ಯಾರೂ ಭಾವಿಸದಿರಲಿ. ಈ ಚುನಾವಣೆಗೆ ಮೊದಲೇ ಈ ವಿಚಾರವನ್ನು ಚೀಫ್ ಕಮಿಷನರೊಂದಿಗೆ ನಾನು ಪ್ರಸ್ತಾಪಿಸಿದ್ದೆನು. ಆದ್ದರಿಂದ ದೇಶದ [illegible] ಈ ವಿಚಾರದಲ್ಲಿ ಆಲೋಚಿಸಬೇಕಲ್ಲದೆ ಪ್ರತಿನಿಧಿಗಳು ನಿಜವಾಗಿಯೂ ಜನತಾ ಸೇವಕರಾಗಿ ವರ್ತಿಸಬೇಕಿದೆ.

ಈ ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ಹೇಳಬೇಕಿದೆ. ಮಂತ್ರಿಗಳನ್ನು ಆರಿಸುವಾಗ ಅವರ ದಕ್ಷತೆ, ಕಾರ್ಯಕುಶಲತೆ, ಯೋಗ್ಯತೆಗಳನ್ನು [illegible] ಆರಿಸಬೇಕಲ್ಲದೆ ವ್ಯಕ್ತಿಗಳ ಪ್ರೋತ್ಸಾಹ ದೃಷ್ಟಿಯಿಂದಾಗಲೀ ಇತರ ರಾಜಕೀಯ ಕಾರಣಗಳನ್ನಾಗಲೀ [illegible] ಅದಕ್ಕನುಗುಣ [illegible]ರೇ ಮಂತ್ರಿಮಂಡಲಕ್ಕೆ ಬಂದರೂ ದೇಶದ ಆಡಳಿತ ಚೆನ್ನಾಗಿ ನಡೆದು ಬಡ ರೈತನ ಹಿತಸಾಧನೆಯಾಗ [illegible] ಬೇಕಿದೆ. [illegible]ನ್ನೂ ಸತ್ಯಶೀಲತನ್ನು, ಸೇವಾತತ್ಪರತೆಗಳನ್ನೂ ಆರಿಸಬೇಕಾದುದು ಪ್ರತಿನಿಧಿಗಳ ಕರ್ತವ್ಯವಾಗಿದೆ. ಈ ಮಂತ್ರಿಮಂಡಳವು ಐದು ವರ್ಷಗಳಲ್ಲಿ [illegible] ದ್ಧಾರಕ್ಕಾಗಿ ಏನು [illegible] ಅದರ ಯೋಗ್ಯತೆಯನ್ನು [illegible] ತೆ ಕೊಡಲಾಗುವದು [illegible] ಮಂತ್ರಿಗಳ ಆಯ್ಕೆಯಾಗಬೇಕಿದೆ. ಅದ್ದರಿಂದ [illegible] ನಾನು ಸೂಚಿಸುವ ವಿಚಾರವೆಂದರೆ [illegible] ತ್ರಿಗಳ, ತಮ್ಮ ಇಂದಿನ [illegible] ಹಾಗೆಯೇ ಉಳಿಸಿಕೊಂಡು ಮಂತ್ರಿಪದವು ಲಾಭದ ಮಾರ್ಗವಲ್ಲ, ಸೇವಾದೀಕ್ಷೆಯ ಪಥವೆಂಬುದನ್ನು ಕಾರ್ಯತಃ ಮಾಡಿ ತೋರಿಸಿ ಕೊಡಗಿನ ಮುಂದಿನ ಪೀಳಿಗೆಗೆ ಮಾತ್ರವಲ್ಲ; ಇತರ ಪ್ರಾಂತಗಳಿಗೂ ಆದರ್ಶರೀತಿಯಲ್ಲಿ ವರ್ತಿಸಬೇಕಾಗಿ ನನ್ನ ಅಭಿಲಾಷೆಯಾಗಿದೆ.

ಮದ್ರಾಸಿನಲ್ಲಿ ಕೇರ್-ಟೇಕರ್ ಸರಕಾರ

ಮದ್ರಾಸ್ ಮಂತ್ರಿಮಂಡಲ [illegible] ರಾಜಿನಾಮೆ ಕೊಟ್ಟನಂತರ, ಶ್ರೀ ಪಿ. ಎಸ್. ಕುಮಾರಸ್ವಾಮಿರಾಜರವರ ನೇತೃತ್ವದಲ್ಲಿ [illegible] ಮಂದಿ ಸದಸ್ಯರುಳ್ಳ 'ಕೇರ್-ಟೇಕರ್' ಮಂತ್ರಿ ಮಂಡಲವನ್ನು (ಉಸ್ತುವಾರಿ ಸರಕಾರ) ರಚಿಸಲಾಯಿತು. ಮದ್ರಾಸಿನ ಮಂತ್ರಿಗಳಲ್ಲಿ ಆರು ಮಂದಿ ಚುನಾವಣೆಯಲ್ಲಿ ಸೋತ ಪ್ರಯುಕ್ತ ಮಂತ್ರಿಮಂಡಲ ರಾಜಿನಾಮೆ ಕೊಡಬೇಕಾಯಿತು.

ಶ್ರೀ ಕುಮಾರಸ್ವಾಮಿರಾಜರವರೂ ಚುನಾವಣೆಗಳಲ್ಲಿ ಸೋತಿರುವರು. ಅವರ ರಾಜಿನಾಮೆಯನ್ನು ಗವರ್ನರರು ಅಂಗೀಕರಿಸಿದೆ, ಸದ್ಯಕ್ಕೆ 'ಕೇರ್-ಟೇಕರ್' ಮಂತ್ರಿ [illegible].

ಸದ್ಯಕ್ಕೆ [illegible] ಮಂತ್ರಿಮಂಡಲದ ರಚನೆ [illegible] ಸಾಧ್ಯವಿಲ್ಲೆಂದು [illegible] ಈ ವಿಚಾರ [illegible] ರಾಷ್ಟ್ರಪತಿ[illegible]ವರ ಗಮ[illegible] ಪ್ರಕಟಣೆಯೆಂದು [illegible].

ಮಂತ್ರಿಮಂಡಲದ ಇತರ ಸದಸ್ಯರು ಶ್ರೀಗಳಾದ [illegible] ಸುಬ್ಬರೆಡ್ಡಿ, ಸಿ. ಪೆರುಮಾಳ್‌ಸ್ವಾಮಿರೆಡ್ಡಿ, ಎ. ಬಿ. ಶೆಟ್ಟಿ, ಜೆ. ಎಲ್. ಪಿ. ರೋಚೆ-ವಿಕ್ಟೋರಿಯಾ ಮತ್ತು ಬಿ. ಪರಮೇಶ್ವರನ್.

ಕೊಡಗು ಡಿಸ್ಟ್ರಿಕ್ಟ್ ಕೋಆಪರೇಟಿವ್ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[illegible] 1921ರಲ್ಲಿ [illegible]

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೆ [illegible] ಹೊರತಾಗಿ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟ್ ಮಾಡಲ್ಪಡುವುವು. [illegible], ನ್ಯಾಷನಲ್ ಮತ್ತು ವಿಶ್ವಭಾರತಿ ಇನ್ಶ್ಯೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಕೊಡಿಸಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಅವಧಿನ ಕಾಲದ ಶಾಖೆಯ ಮೂಲಕ ದೀರ್ಘ ಅವಧಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ [illegible]

Edited, Printed and Published by P. I. Belliappa 'Kodagu' Press, Mercara, for 'Kodagu' Ltd.

Licence No. 60.
Licenced to Post without Prepayment

Reg. ನಂ. ಮ. 1000.
'KODAGU' MERCARA, (Coorg).

ಕೊಡಗು

[ಸಂಪಾದಕರು—[illegible]] [ವಾರ್ಷಿಕ ಚಂದಾ ರೂ 5-0-0.

ಸಂಪುಟ ೩೦ | ತಾರೀಕು ೨೩ ೧೯೪೯ನೇ ಶುಕ್ರವಾರ | ಸಂಚಿಕೆ ೩೭

ಶ್ರೀಮತಿ ಸರೋಜಿನಿ ನಾಯ್ಡು

(ಲೇ—ಶ್ರೀ. ಟಿ. ಎಸ್. ಕೃಷ್ಣಮೂರ್ತಿ, ಅಧ್ಯಾಪಕ, ಶಿಂಕೆರೆ)

ಹೆಣ್ಣಿನ ಅಧಿಕಾರ ಕೇವಲ ಅಡಿಗೆಯ ಮನೆಯಿಂದ ಗಡಿಗೆ ಮಡಿಕೆಗಳವರೆಗೆ ಅಲ್ಲವೆ? ಅವುಗಳ ವ್ಯವಹಾರಿಕ ಉಪಯೋಗದ ಮಟ್ಟಿಗೆ ಮಾತ್ರ ಅವಳ ಬುದ್ಧಿ ಕುಶಲತೆಯು ಅಲ್ಲವೆ? ಅವುಗಳನ್ನು ರಕ್ಷಿಸುವುದೇ ಅವಳ ಪರಮಾವಧಿಯು ಪರಮ ಕರ್ತವ್ಯವಲ್ಲವೆ? ಇಷ್ಟಲ್ಲದೆ ಇನ್ನೂ ಹಲವು ಬಗೆಯಾಗಿ ಅವಳ ಕಾರ್ಯಕ್ಷೇತ್ರವನ್ನು ಕಡಿಮೆಗೊಳಿಸಿ ತನ್ನ ಪೌರುಷವನ್ನು ಮೆರೆಯಿಸುತ್ತಾ ತಿರುಗುವ ಅಹಂಭಾವ ವೃತ್ತಿ ಭಾರತೀಯ ಜನಾಂಗದಲ್ಲಿ ಬೇರೂರಿ ಬೆಳೆಯುತ್ತಾ ಬಂದಿದೆಯಲ್ಲವೆ? ಆದರೆ ಒಂದು ವ್ಯಕ್ತಿಯ ನಿಜವಾದ ಗುಣಗಳು ಬೆಳಕಿಗೆ ಬರಲು ರಾಜಸಭೆಯಾದರೇನು? ಸಾಧಾರಣ ಮನೆಯಾದರೇನು? ಪಾಠಶಾಲೆಯಾದರೇನು? ಪಾಂಡಿತ್ಯ ಲೀಲೆಯಾದರೇನು? ಅನುವು ಆಪತ್ತುಗಳಲ್ಲಿಯೂ, ಕರ್ತವ್ಯವೇ ಉಸಿರಾಗಿ ಬಾಳುವ ಮಹಿಳೆಯರನೇಕರೂ ತಮ್ಮ ತಾಯ್ನಾಡಿನೇಳಿಗೆಗಾಗಿ ದೇಹವನ್ನೇ ಧಾರೆಯೆರೆದ ಉದಾಹರಣೆಗಳಿಲ್ಲವೆ? ಅಂಥವರಲ್ಲಿ ಶ್ರೀಮತಿ ಸರೋಜಿನಿನಾಯ್ಡುರವರು ಉಜ್ವಲರತ್ನ.

ಮನೆತನ

ಡಾಕ್ಟರ್ ಅಘೋರನಾಥ ಚಟ್ಟೋಪಾಧ್ಯಾಯರು ಹೆಚ್ಚು ವಿದ್ಯಾವಂತರಾಗಿದ್ದುದಲ್ಲದೆ ಭಾರತದ ಒಬ್ಬ ದೊಡ್ಡ ವೈಜ್ಞಾನಿಕರಾಗಿದ್ದರು. ಇವರ ಧರ್ಮಪತ್ನಿ ವರದಾಸುಂದರೀ ದೇವಿಯವರು. ಇವರು ಚಿಕ್ಕ ವಯಸ್ಸಿನಲ್ಲಿಯೇ ಬಂಗಾಳೀ ಭಾಷೆಯಲ್ಲಿ ಕವನಗಳನ್ನು ಬರೆಯುತ್ತಿದ್ದರು. ಅಘೋರನಾಥ ಚಟ್ಟೋಪಾಧ್ಯಾಯರು ಪೂರ್ವ ಬಂಗಾಳಿ ಬ್ರಾಹ್ಮಣರು. ಎಡಿನ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಮೊದಲನೆ ಬಿ ಎಸ್ ಸಿ ವಿದ್ಯಾರ್ಥಿಯಾಗಿದ್ದರು. ಮುಂದೆ ಜರ್ಮನಿಯಲ್ಲಿ ವ್ಯಾಸಂಗ ಮಾಡಿ ಪುನಃ ಎಡಿನ್‌ಬರ್ಗ್‌ನಲ್ಲಿಯೇ ಡಾಕ್ಟರೇಟ್ ಪ್ರಶಸ್ತಿಯನ್ನು ಪಡೆದರು. ವ್ಯಾಸಂಗ ಮುಗಿಸಿಕೊಂಡು ಇಂಡಿಯಾಕ್ಕೆ ಬಂದ ಮೇಲೆ ನಿಜಾಮರು ತಮ್ಮ ಸಂಸ್ಥಾನದಲ್ಲಿ ವಿದ್ಯೆಯನ್ನು ಬೋಧಿಸುವಂತೆ ಕೇಳಿಕೊಂಡರು. ಅದರಂತೆ ತಮ್ಮ ಮನೆಯಲ್ಲಿ ಚಿಕ್ಕ ಚಿಕ್ಕ ಹುಡುಗರಿಗೂ, ವಯಸ್ಕರಿಗೂ, ಅಯೋಗ್ಯರಿಗೂ, ನವಾಬರಿಗೂ, ಬಡವರಿಗೂ ಪಾಠ ಹೇಳಿ ಕೊಟ್ಟರು. ಇವರು ಫ್ರೆಂಚ್, ಹೀಬ್ರ್ಯೂ, ಜರ್ಮನ್, ಗ್ರೀಕ್, ಸಂಸ್ಕೃತ, ಉರ್ದು, ಮುಂತಾದ ಅನೇಕ ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದರು. ಮನೆಯಲ್ಲಿಯೂ ಎಷ್ಟು ಜಾತಿ, ಮತ, ಕುಲ, ಗೋತ್ರಗಳ ಸೋಂಕಿಗೆ ಸಿಕ್ಕದ, ಸರ್ವರನ್ನೂ, ಸೋದರ ಸೋದರಿಯಂತೆ ಕಾಣುತ್ತಿದ್ದರು. ಇಂತಹ ಸದ್ಗುಣ ಸಂಪನ್ನ ಪರಿವಾರದಲ್ಲಿ ತಮ್ಮ ಊರಾದ ಹೈದರಾಬಾದಿನ ದುರ್ಗದಲ್ಲಿ ೧೮೭೯ನೇ ಇಸವಿ ಫೆಬ್ರುವರಿ ೧೩ನೇ ತಾರೀಕಿನ ದಿನ ಶ್ರೀಮತಿ ನಾಯ್ಡುರವರ ಜನ್ನವಾಯಿತು.

ಬಾಲ್ಯ ಮತ್ತು ವಿದ್ಯಾಭ್ಯಾಸ

ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಚಿಕ್ಕಂದಿನಲ್ಲಿಯೇ ಇವರಲ್ಲಿ ಅಸಾಧಾರಣವಾದ ಧೈರ್ಯವೂ ಅನುಪಮವಾದ ಶೌರ್ಯವೂ ಬುದ್ಧಿಯೂ 'ಕಂಗೊಳಿಸುತಿತ್ತು. ವಿದ್ಯಾರ್ಥಿಗಳಲ್ಲಿ ಬುದ್ಧಿಶಾಲಿನಿಯಾಗಿ ಇವರೇ ಮೊದಲಿಗರಾಗಿದ್ದರು. [illegible] ತಮ್ಮ ಹನ್ನೆರಡನೇ ವಯಸ್ಸಿನಲ್ಲಿಯೇ ಮದರಾಸ್ ವಿಶ್ವವಿದ್ಯಾನಿಲಯದ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಪ್ಯಾಸಿಸಿದರು. ಬಾಲ್ಯದಲ್ಲಿಯೇ ಸಾಹಿತ್ಯದಲ್ಲಿಯೂ ಕಲೆಯಲ್ಲಿಯೂ ಅಭಿರುಚಿ ಇತ್ತು. [illegible] ಹನ್ನೊಂದನೆಯ ವಯಸ್ಸಿನಲ್ಲಿ ಒಮ್ಮೆ ಕಠಿಣವಾದ ಬೀಜಗಣಿತವನ್ನು ಮಾಡುವ ಸಂದರ್ಭದಲ್ಲಿ ಹೀಗೆ ಹೇಳಿದಂತೆ "This would not come right but instead a whole peom came to me suddenly" ಈ [illegible] ಕಾವ್ಯದ ಅಭಿರುಚಿ ಚಿಕ್ಕಂದಿನಲ್ಲಿ ಎಷ್ಟರ ಮಟ್ಟಿಗೆ ಅಳವಡಿಸಿತ್ತು ಎಂಬುದು ವ್ಯಕ್ತವಾಗುವುದು. ತಮ್ಮ ಹದಿಮೂರನೇ ವರ್ಷದಲ್ಲಿಯೇ "ದಿ ಲೇಡಿ ಆಫ್ ದಿ ಲೇಕ್" ಎಂಬ ಕಾವ್ಯವನ್ನು ೬ ದಿನ[illegible] ಮುಗಿಸಿದ್ದರು. [illegible] ಎರಡು ಸಾವಿರ ಸಾಲುಗಳುಳ್ಳ ಒಂದು ನಾಟಕವನ್ನು ಬರೆದರು.

ಅಂದಿನ ಕೊರವಂಜಿಯ ಭವಿಷ್ಯ

ಆದೊಂದು ಶುಭದಿನ ಹೈದರಾಬಾದಿನ ಓವರ್ ಕಾಲೇಜು ಪ್ರಿನ್ಸಿಪಾಲರ ಮನೆಯ ಮುಂದೆ ಚಿಣ್ಣ ಮಕ್ಕಳೆಲ್ಲ ಆಟವಾಡುತ್ತಿದ್ದರು. ಆ ಕಡೆಯಿಂದ ಪ್ರಿನ್ಸಿಪಾಲರ ಮಗಳು ಸರೋಜಿನಿ ಅಲ್ಲಿಗೆ [illegible] ಬಂದಳು. ಸರೋಜಿನಿಯನ್ನು ಚೆನ್ನಾಗಿ [illegible] ಕೊರವಂಜಿಯು ಬಂದಳು. ಅವಳು [illegible] ಹಸ್ತವನ್ನು ಕರೆದು ಆ ಮಗುವನ್ನು ಪರೀಕ್ಷಿಸಿ "ಯಹ್ ಲಡಕೀ, ಏಕ್ ದಿನ್ ಸಂಸಾರ್ ಕೀ ಸಿರ್ [illegible]" ಎಂದು [illegible]ದು. ಈ ಸೂಚನೆ ನಂಬುವಂತಹುದೇ ಅಥವಾ ನಂಬದಿರುವುದೇ ಖಂಡಿತಾ ಸತ್ಯ ಸಿಂಹಾಸನವೇನು ಕಾದಿರುವುದೆ? ಎಂಬುದು [illegible] ಆ ಹುಡುಗಿ ಮುಂದೆ ಗವರ್ನರ್ ಆದರು. ಅವರೇ "ಹರ್ ಎಕ್ಸಲೆನ್ಸಿ ಸರೋಜಿನಿ ನಾಯ್ಡು, ದಿ ಗವರ್ನರ್"! ಲಕ್ನೋವಿನ ಗವರ್ನರ ಭವನದ ಮನೆಯಲ್ಲಿ ಒಂದು ಚಿನ್ನದ ಸಿಂಹಾಸನವಿದೆ. ಅದರಲ್ಲಿ ಗವರ್ನರರು ವಿಶೇಷ ಸಂದರ್ಭಗಳಲ್ಲಿ ಕುಳಿತುಕೊಳ್ಳುತ್ತಾರೆ. ಅಲ್ಲಿಂದ ಆ ದಿನದ ಕೊರವಂಜಿಯ ಭವಿಷ್ಯ ನಿಜವಾಯಿತು. ಚಿನ್ನದ ಸಿಂಹಾಸನವನ್ನು ಏರಿಯೇ ಬಿಟ್ಟರು.

ವಿದೇಶ ಸಂಚಾರ ಮತ್ತು ಕಾವ್ಯರಚನೆ

೧೮೯೫ನೇ ಇಸವಿ ನಾಯ್ಡುರವರ ಹದಿನಾರನೇ ವರ್ಷ. ಹೈದರಾಬಾದಿನ ಹಿಂದಿನ ನಿಜಾಮರು ಇವರ ಕವಿತಾಶಕ್ತಿಯನ್ನು ಕಂಡು ಮೆಚ್ಚಿ ವಿದೇಶದಲ್ಲಿ ವ್ಯಾಸಂಗ ಮಾಡುವ ಸಲುವಾಗಿ ವರ್ಷಕ್ಕೆ ಮುನ್ನೂರು ಪೌಂಡು ವೇತನವನ್ನು (Scholarship) ಕೊಡಲೊಪ್ಪಿದರು. ಈ ಹಣದ ಸಹಾಯದಿಂದ ಇಂಗ್ಲಂಡಿಗೆ ತೆರಳಿದರು. ಅಲ್ಲಿ ಅನೇಕ ಕಾವ್ಯಗಳನ್ನು ರಚಿಸಿದರು. ಕಿಂಗ್ಸ್ ಕಾಲೇಜು, ಗಿರ್ಟನ್ ಕಾಲೇಜು, ಕೇಂಬ್ರಿಜ್‌ಗಳಲ್ಲಿ ವ್ಯಾಸಂಗ ಮಾಡಿದರು. ಎಡ್ಮಂಡ್ ಗೋಸ್ಸೆ, ವಿಲಿಯಂ ಆರ್ಚರ್ ಮತ್ತು ಹೈನೇಮನ್ ಮುಂತಾದ ಪ್ರಸಿದ್ಧ ಪ್ರಕಟಣಕಾರರನ್ನು (Publishers) ಸಂಧಿಸಿದರು. ಭಾರತದ ಸಾಧಾರಣ ಹೆಂಗಸು, ಅದರಲ್ಲಿಯೂ ಇಂಗ್ಲೀಷಿನಲ್ಲಿ, ಇಷ್ಟೊಂದು ಚೆನ್ನಾಗಿ ಕಾವ್ಯ ರಚಿಸುವುದನ್ನು ಕಂಡು ಮುಗ್ಧರಾದರು. ಅವರ ಸಲಹೆಯ ಮೇರೆ ಜಗತ್ಪ್ರಸಿದ್ಧರಾದರು. ಮೂರು ಮಹಾಕಾವ್ಯಗಳನ್ನು ರಚಿಸಿದರು. ಅವುಗಳಾವುವೆಂದರೆ ೧. ದಿ ಗೋಲ್ಡನ್ ಥ್ರೆಷೋಲ್ಡ್ (೧೯೦೫) ೨. ದಿ ಬರ್ಡ್ ಆಫ್ ಟೈಮ್ (೧೯೧೨) ಮತ್ತು ೩. ದಿ ಬ್ರೋಕನ್ ವಿಂಗ್ (೧೯೧೭). ಕೆಲವು ತಿಂಗಳುಗಳು ಸ್ವಿಟ್ಜರ್ಲೆಂಡ್ ಮತ್ತು ಇಟಲಿಗಳಲ್ಲಿದ್ದು ಭಾರತಕ್ಕೆ ಹಿಂತಿರುಗಿದರು.

ವಿವಾಹ ಮತ್ತು ರಾಜಕೀಯ ರಂಗ

ಹೈದರಾಬಾದಿನ ನಿಜಾಮರ ಪ್ರಾಮುಖ್ಯ ವೈದ್ಯರಾಗಿದ್ದ ಡಾ|| ಎಂ. ಗೋವಿಂದರಾಜುಲು ನಾಯುಡುರವರನ್ನು ತಮ್ಮ ಇಷ್ಟದಂತೆ ವಿವಾಹವಾದರು. ಇವರು ಸಂಸಾರದಲ್ಲಿಯೇ ತಮ್ಮ ಜೀವನವನ್ನು ಸವೆಸಲು ಇಷ್ಟಪಡಲಿಲ್ಲ. ದೇಶಕ್ಕಾಗಿ ದುಡಿಯಲು ಇಚ್ಛೆಪಟ್ಟವರಾಗಿ ೧೯೧೯ ರಲ್ಲಿ ನಡೆದ ಅಸಹಕಾರ ಚಳವಳಿಯಲ್ಲಿ ಮಹಾತ್ಮರ ನೇತೃತ್ವದಲ್ಲಿ ರಾಜಕೀಯ ರಂಗದಲ್ಲಿ ರಾರಾಜಿಸಿದರು. ಆಕೆಯನ್ನು ಎಲ್ಲರಿಗೂ ಗೊತ್ತಾದುದು ೧೯೧೩ನೇ ಇಸವಿಯಲ್ಲಿ ಲಕ್ನೋದಲ್ಲಿ. ಹಿಂದೂ ಮುಸ್ಲಿಂ ಸಂಘದ ರಾಯಭಾರಿಯಾಗಿದ್ದಾಗ. ೧೯೨೫ ರಲ್ಲಿ ಇವರಿಗೆ ಕಲ್ಕತ್ತಾ ಕಾಂಗ್ರೆಸ್ ಉತ್ಸಾಹಪೂರಿತ ಸ್ವಾಗತ ಕೊಟ್ಟಿತು.

ಮಿ|| ಮಾಂಟೆಗ್ಯೂ ಭೇಟಿ ಕಾಲತ್ತಾಗ ಭಾರತೀಯ ಸ್ತ್ರೀಯರ ನಿಯೋಗವನ್ನು ಹೊರಡಿಸಿ ಭಾರತದ ರಾಜ್ಯಾಂಗದ ವಿಚಾರದಲ್ಲಿ ಸಂಭಾಷಣೆ ಮಾಡಿ ಓಟು ಕೊಡುವ ಹಕ್ಕನ್ನು ಕೇಳಿದರು. ಸ್ತ್ರೀಯರ ಸ್ವಾತಂತ್ರ್ಯಕ್ಕಾಗಿ ಏಕಸ್ವರವಾಗಿ ನುಡಿದರು.

ದೇಶ ಸೇವೆ.

೧೯೧೯ ರಲ್ಲಿ ಆಲ್ ಇಂಡಿಯಾ ಹೋಮ್ ರೂಲ್ ಲೀಗಿನ ಪ್ರತಿನಿಧಿಯಾಗಿ ಇಂಗ್ಲೆಂಡಿನ ಪಾರ್ಲಿಮೆಂಟಿನ ಜಾಯಿಂಟ್ ಸೆಲೆಕ್ಟ್ ಕಮಿಟಿಯ ಮುಂದೆ ಮಾಂಟೆಗ್ಯೂ ಸುಧಾರಣೆಯ ವಿಚಾರದಲ್ಲಿ ವಾದಿಸಲು ತೆರಳಿದರು. ಇವರ ನಿವೇದನಾಪತ್ರಿಕೆಯು ಅಧ್ಯಕ್ಷರಿಂದ ಹೆಚ್ಚಿನ ಪ್ರಶಂಸೆಯ

(೭ ನೇ ಪುಟದಿಂದ ಸಾಗಿದನ್ನು.)

‘ಕೊಡಗು ರಾಮರಾಜ್ಯವಾಗಬೇಕು.’

ಲೇಖಕ—ಶಾ. ಭಗವಾನ್‌ದಾಸ್ ಬಿ. ಎ., ಬಿ. ಟಿ.

ಕೊಡಗಿಗೆ ಜವಾಬ್ದಾರಿ ಸರಕಾರ ದೊರೆತಿದೆ. ಇಷ್ಟರವರೆಗೆ ಚುನಾವಣೆಯ ಗೊಂದಲವಿತ್ತು. ಎರಡು ದೊಡ್ಡ ಪಕ್ಷಗಳು ಸ್ಥಾನಗಳಿಗಾಗಿ ಹೋರಾಡಿದವು. ಕಾಂಗ್ರೆಸ್ಸಿಗೇನೇ ಹೆಚ್ಚಿನ ಸ್ಥಾನ ದೊರಕಿದ್ದರೂ, ಸೋತ ಉಮೇದುವಾರರುಗಳೇ, ಪ್ರತ್ಯೇಕವಾದಿಗಳುಗಳೇ, ದೇಶದ ಹಿತವನ್ನು ಸಾಧಿಸಲಿಕ್ಕಾಗಿಯೇ ಚುನಾವಣಾ ಕ್ಷೇತ್ರದಲ್ಲಿ ನಿಂತಿದ್ದರೆಂದು ಹೇಳಲೇನೂ ಅಭ್ಯಂತರವಿಲ್ಲ. ಆದರೆ ಪ್ರತ್ಯೇಕವಾದಿಗಳ ಘೋಷಣಾ ಪತ್ರದಿಂದಾಗಲೀ, ಕಾಂಗ್ರೆಸ್ಸಿನ ಘೋಷಣೆಯಿಂದಾಗಲೀ, ಕೊಡಗಿನ ಉನ್ನತಿಗೆ ಬೇಕಾಗುವ ಪ್ರಾಮುಖ್ಯವಾದ ಕೆಲವು ವಿಷಯಗಳ ಸಂಪೂರ್ಣ ಅಭಾವವಿದ್ದುದರಿಂದ ಈ ಪಂಕ್ತಿಗಳನ್ನು ಬರೆಯಲಾಗಿದೆ.

ಮೊದಲನೇ ಪ್ರಶ್ನೆಯೆಂದರೆ, ನಿಯಂತ್ರಣ ಪದ್ಧತಿಯ ಪ್ರಶ್ನೆ. ಎಂದಿನ ವರೆಗೆ ಜನರು ಸಂಪೂರ್ಣವಾಗಿ ಸರಕಾರದೊಡನೆ ಸಹಕರಿಸುವದಿಲ್ಲವೋ ಅಂದಿನ ವರೆಗೆ ನಿಯಂತ್ರಣವು ಎಂದೂ ಸಫಲವಾಗುವದಿಲ್ಲ. ಕೊಡಗಿನ ಸಂಗತಿಯನ್ನೇ ವಿಚಾರಿಸಿದರೂ ಕೂಡ, ಈ ಪದ್ಧತಿಯ ದೆಸೆಯಿಂದ ಗಾಂಧೀಜಿಯವರ ಸತ್ಯ ಮತ್ತು ಅಹಿಂಸೆಗೇ ಧಕ್ಕೆ ಬಂದಿದೆ. ರೇಷನ್ ಕಾರ್ಡು ಪಡೆಯುವವರಲ್ಲಿ ಅಧಿಕಾಂಶ ಜನರು ಸುಳ್ಳು ಸಂಖ್ಯೆಯನ್ನು ಕೊಟ್ಟು ಅಸತ್ಯದ ಅಭ್ಯಾಸವನ್ನು ಮಾಡುತಿದ್ದಾರೆ. ಉದ್ಯೋಗಸ್ಥರಲ್ಲಿ ಹಲವರು ಲಂಚಕೋರತನಕ್ಕೊಳಗಾಗುತ್ತಿದ್ದಾರೆ. ವಿದ್ಯಾವಂತರೆನಿಸಿಕೊಂಡವರೂ ಸಹ ಕಪ್ಪು ಸಂತೆಯಿಂದ ಸಾಮಾನು ಕೊಳ್ಳುತಿದ್ದಾರೆ. ತಾನು ಸಂಪಾದಿಸಿದ ಹಣ ಖರ್ಚು ಮಾಡಲಿಕ್ಕೂ ಸರಕಾರದ ಕಣ್ಣು ತಪ್ಪಿಸಿ ಮಾಡಬೇಕೆಂದರೆ ಎಂಥಾ ದುಸ್ಥಿತಿ! ತಾನು ಬೆಳೆಸಿದ ಅನ್ನವನ್ನು ಊಟ ಮಾಡುತ್ತಿರುವಾಗಲೂ ರೇಷನ್ ಆಫೀಸರನು ಬಂದು ಮನೆಯ ಅನ್ನವನ್ನು ಪರೀಕ್ಷಿಸಲು ಎಲ್ಲಿ ಬರುವನೋ ಎಂಬ ಭಯ. ಸ್ವತಂತ್ರ ಭಾರತದಲ್ಲೂ ರೈತನು ತನ್ನ ಶ್ರಮದ ಫಲಕ್ಕೆ ಸ್ವಾಮಿಯಲ್ಲ. ಇನ್ನೂ ಆತನು ನೌಕರ್ ಶಾಹಿಯ ದಬ್ಬಾಳಿಕೆಗೆ ಒಳಗಾಗಬೇಕೆಂಬುದು ಶೋಚನೀಯವಾದ ಸಂಗತಿ. ನಿಯಂತ್ರಣದ ದೆಸೆಯಿಂದ ಹಲವು ಮಿಲ್ಲು ಮಾಲಿಕರು ಇನ್ನಷ್ಟು ಶ್ರೀಮಂತರಾದರೇ ಹೊರತು ಬಡವನಿಗೆ ಕಷ್ಟ ಪರಂಪರೆಗಳನ್ನು ಎದುರಿಸಬೇಕಾಗಿ ಬಂದಿದೆ. ಏತದಲ್ಲಿ ಬತ್ತ ಕುಟ್ಟುವ ಗೃಹ ಕೈಗಾರಿಕೆಯು ಅಳಿಯುತ್ತಾ ಬಂದಿದೆ. ಬಡತನದ ದೆಸೆಯಿಂದ ಶಾರೀರಕ ಶ್ರಮ ವಹಿಸಿ ತಾನು ಬೆಳೆಸಿದ ಭತ್ತವನ್ನು ತಾನೇ ಕುಟ್ಟಿ ತಾನೇ ಹೊತ್ತು ತಂದು ಮಾರುವಂತಿಲ್ಲ. ಮಾರಿದರೆ ಪೋಲೀಸರ ವಶವಾಗಬೇಕು. ಇದೇ ಏನು ಗಾಂಧೀಜಿಯವರ ಸರ್ವೋದಯ? ಇದೇ ಏನು ಬಡವರ ರಾಜ್ಯ? ಹೊರಗಿನಿಂದ ಬರುವ ವಸ್ತುಗಳ ನಿಯಂತ್ರಣವನ್ನು ತೆಗೆಯುವುದು ನಮ್ಮ ಕೈಯಲ್ಲಿಲ್ಲವೆಂಬುದು ನಿಜ. ಆದರೆ ಬೇಕಾದ್ದಕ್ಕಿಂತ ಹೆಚ್ಚು ಬತ್ತ ಬೆಳೆಯುವ ಕೊಡಗಿನಲ್ಲಿ ಬತ್ತದ ನಿಯಂತ್ರಣವನ್ನು ತೆಗೆದು ಹಾಕಿದರೆ ಹಾನಿಯ ಬದಲು ಲಾಭವೇ ಆಗುವುದು. ಹೊರಗೆ ಕಳುಹಿಸಬೇಕಾಗುವ ಬತ್ತವನ್ನು ಇಲ್ಲಿಯ ರೈತನಿಂದ ಬಲಾತ್ಕಾರದಿಂದ ಕೇಳದೆ ಚಂದಾ ವಸೂಲು ಮಾಡುವ ಪದ್ಧತಿಯಲ್ಲಿಯೇ ಅಧಿಕಾರಿಯು ಗ್ರಾಮದ ಮುಂದಾಳು ಮತ್ತು ರೈತನ ಸಹಕಾರದೊಂದಿಗೆ ವಸೂಲಾತಿಯನ್ನೇಕೆ ಮಾಡಬಾರದು. ಧಾರ್ಮಿಕ ಮನೋವೃತ್ತಿಯ ಧರ್ಮದ ಹೆಸರಿನಲ್ಲಿ ಉಪವಾಸವನ್ನು ಸಹವಾಸವನ್ನು ಸಹ ಮಾಡುವ ನಮ್ಮ ಜನರಿಂದ ದವಸ ಧಾನ್ಯವನ್ನು ಪಡೆದುಕೊಳ್ಳುವದು ಕಷ್ಟವಲ್ಲ. ಅಂಥಾ ಬತ್ತಕ್ಕೆ ಮಾತ್ರ ಒಂದು ರೀತಿಯ ನಿಯಂತ್ರಿತ ಬೆಲೆ ಇದ್ದರೆ ಅಡ್ಡಿಯಿಲ್ಲ. ಸರ್ವೋದಯ ಆದರ್ಶವಿರುವ ಸರಕಾರವಾದರೆ ಬತ್ತಕ್ಕೆ ಬದಲು ಅಕ್ಕಿಯನ್ನು, ಮಿಲ್ಲಿನ ಅಕ್ಕಿಯ ಬದಲು ಏತದಲ್ಲಿ ಕುಟ್ಟಿದ ಅಕ್ಕಿಯನ್ನು, ಏಜಂಟರುಗಳ ಮೂಲಕ ಸಂಗ್ರಹಿಸುವದ ಬದಲು ಸಹಕಾರ ಸಂಘಗಳ ಮೂಲಕ ಸಂಗ್ರಹ ಮಾಡಿ ಅಗತ್ಯವಿದ್ದಲ್ಲಿ ಕಳುಹಿಸಬೇಕು

ಈ ಸಂದರ್ಭದಲ್ಲಿ ಗ್ರಾಮೋದ್ಯೋಗದ ಪ್ರಶ್ನೆ ಬರುತ್ತದೆ. ಕೊಡಗು ಕಾಂಗ್ರೆಸ್ಸಿನ ಘೋಷಣೆಯಲ್ಲಿ ಗ್ರಾಮೋದ್ಯೋಗದ ಅಭಿವೃದ್ಧಿಯನ್ನು ಮಾಡುವ ಮಾತಿದೆ. ಆದರೆ ಜತೆಯಲ್ಲಿಯೇ ಕಾರ್ಖಾನೆಗಳನ್ನು ತೆರೆಯುವ ಮಾತಿದೆ. ಅಕ್ಕಿ ಮಿಲ್ಲಿನ ಉದಯದಿಂದಲೇ ಅನೇಕ ಬಡವರ ಏತಗಳು ಕೆಲಸವಿಲ್ಲದೆ ಬಿದ್ದಿರುವಾಗ, ಬಡವನ ಹೊಟ್ಟೆಗೆ ಪೆಟ್ಟು ಬೀಳುತ್ತಿರುವಾಗ ದೊಡ್ಡ ದೊಡ್ಡ ಕಾರ್ಖಾನೆಗಳು ಬಂದರೆ ಇನ್ನೇನು ಗತಿ? ಕಾರ್ಖಾನೆಯ ಸ್ಥಾಪನೆಯಿಂದ ಧನವು ಕೆಲವರ ಕೈಯನ್ನು ಸೇರುವದೇ ಹೊರತು ಹಂಚಿ ಹೋಗುವದಿಲ್ಲ. ಕಮ್ಯೂನಿಸ್ಟರಿಗೆ ಫಲವತ್ತಾದ ಕ್ಷೇತ್ರವನ್ನು ಕಲ್ಪಿಸಿ ಕೊಟ್ಟಂತಾಗದ ಕಲ್ಪನೆಯು ಹುಟ್ಟಬೇಕೆಂದಿದ್ದರೆ, ಈ ತರಹದ ಕೇಂದ್ರೀಕೃತ ಉದ್ಯೋಗ ಪದ್ಧತಿಯನ್ನು ಜಾರಿಗೆ ತರಬಾರದು. ಇದಾದರೆ ಗ್ರಾಮೋದ್ಯೋಗಗಳನ್ನು ಅಭಿವೃದ್ಧಿಗೊಳಿಸಿ ಉದ್ಯೋಗದ ವಿಕೇಂದ್ರೀಕೃತ ಪದ್ಧತಿಯನ್ನು ತಂದು ಸಮಾಜದಲ್ಲಿ ಸಮತೆಯನ್ನುಂಟುಮಾಡಬಹುದು. ಗ್ರಾಮೋದ್ಯೋಗದಿಂದ ಸಾಧ್ಯವಾಗದ ಕೆಲಸಗಳನ್ನು ಯಂತ್ರ ಕಾರ್ಖಾನೆಗಳ ಮೂಲಕ ಮಾಡಿಸುವದರಲ್ಲಿಯೇ ವಿಜ್ಞಾನದ ಸದುಪಯೋಗವಿರುತ್ತೆ. ಇನ್ನೂ ಕೊಡಗಿನಲ್ಲಿ ಖಾದೀ ಕೇಂದ್ರವಿಲ್ಲದಿರುವದು ಅಪಮಾನಜನಕವಾದ ಸಂಗತಿ. ಕಾಂಗ್ರೆಸ್ಸಿನ ಅಗ್ರಣಿಗಳಲ್ಲಿ ಎಷ್ಟು ಮಂದಿಗೆ ಖಾದಿಯಲ್ಲಿ ಶ್ರದ್ಧಾ ವಿಶ್ವಾಸಗಳಿವೆ? ನೂಲುವವರೆಷ್ಟು ಮಂದಿ? ದೇಶದ ಮುಂದಾಳುಗಳಲ್ಲಿ ಅಂದರೆ ಅವರು ಕಾಂಗ್ರೆಸ್ಸಿಗರೇ ಇರಲಿ ಯಾ ಪ್ರತ್ಯೇಕವಾದಿಗಳೇ ಇರಲಿ, ನನ್ನ ಪ್ರಾರ್ಥನೆ ಏನೆಂದರೆ—ಗೃಹ ಕೈಗಾರಿಕೆಯಿಂದ ನಿರ್ಮಿತವಾದ ವಸ್ತುಗಳನ್ನು ಅವರು ಮೊದಲು ಉಪಯೋಗಿಸತೊಡಗಿ, ಇತರರೂ ಉಪಯೋಗಿಸುವಂತೆ ಮಾಡುವದಲ್ಲದೆ ತಾವೂ ಒಂದಲ್ಲ ಒಂದು ಉತ್ಪಾದನೆಯ ಕಾರ್ಯದಲ್ಲಿ ಕಿಂಚಿತ್ತಾದರೂ ಸಮಯವನ್ನು ಕಳೆಯುತ್ತಾ ಜನರಲ್ಲಿ ಆ ರೀತಿ ಮಾಡುವಂತೆ ಪ್ರೇರಣೆಯನ್ನು ಕೊಡಬೇಕು. ಶ್ರಮದ ಮಹಿಮೆಯನ್ನು ನಾಡಿನ ಮೂಲೆ ಮೂಲೆಗಳಲ್ಲಿ ಸಾರಬೇಕು. ಸರಕಾರದ ಉಚ್ಚ ಆಸನದಲ್ಲಿದ್ದರೂ ವರ್ಷದಲ್ಲಿ ಕೆಲವು ದಿನಗಳಾದರೂ ನೇಗಿಲು ಹಿಡಿಯಬೇಕು. ದಿನಂಪ್ರತಿ ಚರಖಾ ನಡೆಸಬೇಕು. ಗಾಂಧಿ ಜಯಂತಿ, ಸರ್ವೋದಯ ದಿನದಂಥ ಪುಣ್ಯ ದಿನಗಳಲ್ಲಾದರೂ ಕಸಬರಿಕೆ ಹಿಡಿದು ಕೊಳಕು ಕೇರಿಗಳನ್ನು ಶುಚಿ ಮಾಡಬೇಕು. ಕೆಲವರಂತೂ ಇಂಥ ಕಾರ್ಯಗಳನ್ನು ತಮ್ಮ ಜೀವನದ ಕಾರ್ಯಕ್ರಮಗಳನ್ನಾಗಿ ಮಾಡಿಕೊಳ್ಳಬೇಕು. ಅದಕ್ಕಾಗಿ ಸಂಬಳ ತೆಗೆದುಕೊಂಡರೆ ಕೆಡುಕೇನೂ ಇಲ್ಲ. ಈ ರೀತಿ ವಿದ್ಯಾವಂತರು ಮತ್ತು ಸಮಾಜದ ಮುಂದಾಳುಗಳು ಶ್ರಮದ ಮಹತ್ವವನ್ನು ತೋರಿಸಿ ಕೊಟ್ಟರೇನೇ ಹರಿಜನನು ತನ್ನ ಕಸಬಿನ ಶ್ರೇಷ್ಠತೆಯನ್ನು ಅರಿಯಬಲ್ಲನು. ಈಗ ಹರಿಜನರ ಉದ್ಧಾರಕ್ಕೆ ನಾವೇನು ಮಾಡಬಹುದೆಂಬುದನ್ನು ವಿಚಾರಿಸುವ. ದೊಡ್ಡ ಸಭೆಗಳನ್ನು ಮಾಡಿ ಠರಾವುಗಳನ್ನು ಪಾಸು ಮಾಡಿಯಾಯಿತು. ಶಾಸನ ಸಭೆಯಲ್ಲಿಯೂ ಹರಿಜನರಿಗೆ ಸ್ಥಾನವು ದೊರೆತಾಯಿತು. ಆದರೆ ಆತನ ನಿಜವಾದ ಉದ್ಧಾರವಾಗಿದೆಯೇ? ಆತನು ಆರ್ಥಿಕ ದೃಷ್ಟಿಯಲ್ಲಿ ಎಲ್ಲರ ಸಮಾನನೂ ಮತ್ತು ಸ್ವತಂತ್ರನೂ ಆಗಿರುವನೇನು? ಆತನಿಗೆ ತನ್ನದೆಂಬ ವ್ಯವಸಾಯ ಯೋಗ್ಯವಾದ ಭೂಮಿಯು ದೊರೆಯದೆ ಉದ್ಧಾರವಿಲ್ಲ. ತಾನು ಕೀಳೆಂಬ ಭಾವನೆಯು ದೂರವಾಗುವಂತಿಲ್ಲ. ಆದುದರಿಂದ ಆತನಿಗೆ ಭೂದಾನ ಮಾಡುವುದು, ವ್ಯವಸಾಯಕ್ಕೆ ಬೇಕಾದ ಸಾಧನಗಳನ್ನು ಕಲ್ಪಿಸಿ ಕೊಡುವದು ಶ್ರೀಮಂತ ಹಾಗೂ ಜಮೀನ್ದಾರರ ಆದ್ಯ ಕರ್ತವ್ಯವಾಗಿದೆ. ಪ್ರೇಮದಿಂದ ಆ ಭೂದಾನವನ್ನು ಮಾಡಿದರೆ ಸರ್ವರ ಕ್ಷೇಮವಿದೆ. ಇಲ್ಲವಾದರೆ ಇಂದಲ್ಲ ಒಂದು ದಿನ ತಮ್ಮ ಸಂಪತ್ತಿನ ಜೊತೆಯಲ್ಲೇ ತಮ್ಮ ಪ್ರಾಣಗಳನ್ನೂ ಕಳೆಕೊಳ್ಳಬೇಕಾಗಬಹುದು. ಏಕೆಂದರೆ ವಾತಾವರಣ ಹಾಗಾಗುತ್ತಿದೆ. ಸಮಾಜದಲ್ಲಿ ಸಮತೆಯನ್ನು ಸ್ಥಾಪಿಸದೆ ಗತ್ಯಂತರವಿಲ್ಲವೆಂಬ ಮಾತನ್ನು ಎಲ್ಲರೂ ತಿಳಿದುಕೊಳ್ಳಬೇಕು. ಈಗಾಗಲೇ ಪೂಜ್ಯ ವಿನೋಬಾ ಭಾವೆಯವರು ಭೂದಾನ ಯಜ್ಞವನ್ನು ಪ್ರಾರಂಭಿಸಿದ್ದಾರೆ. ಸರ್ವೋದಯ ಹೆಸರಿನಲ್ಲಿ ನಿಂತವರೆಲ್ಲಾ ಮತ್ತು ರೈತನ ಎತ್ತುಗಳನ್ನು ಮುಂದಿಟ್ಟುಕೊಂಡು ನಿಂತವರೆಲ್ಲಾ ಸವಿನಯ ಪ್ರಾರ್ಥನೆ ಏನೆಂದರೆ ಈ ಯಜ್ಞದಲ್ಲಿ ಕೊಡಗಿನಿಂದ ಅವರೇ ಮೊದಲು ಹವಿಸ್ಸನ್ನು ಹಾಕಬೇಕು. ತಮ್ಮ ತ್ಯಾಗದಿಂದ ತಾವು ಬಡವರ ಕಡೆಗಿರುವೆವು ಎಂಬುದನ್ನು ತೋರಿಸಬೇಕು ಮಾತಿನಂತೆ ಆಚರಣೆಯಲ್ಲಿ ತೋರಿಸಬೇಕು.

ಕೊಡಗನ್ನು ಹೊರಗಿನ ಪ್ರಾಂತಕ್ಕೆ ಸೇರಿಸಬಾರದು ಮತ್ತು ಸೇರಿಸಬೇಕು ಎಂಬ ವಿಷಯವನ್ನೆತ್ತಿಕೊಂಡು ಕೆಲವರು ಹೊಡೆದಾಡಲಿಕ್ಕೂ ಹಿಂಜರಿಯುವುದಿಲ್ಲ. ಆದರೆ ಈ ಸಮಸ್ಯೆಯು ದೊಣ್ಣೆಯಿಂದ ಬಗೆ ಹರಿಯುವುದಿಲ್ಲ. ಪ್ರತ್ಯೇಕವಾದಿಗಳು ಕೊಡಗನ್ನು ಪ್ರತ್ಯೇಕವಾಗಿಡಬೇಕೆಂದು ಹೇಳಿದರೆ ನಾನು ಕೊಡಗನ್ನು ಹೊರ ಪ್ರಾಂತ್ಯಗಳ ಆಶ್ರಯದಿಂದ ಮುಕ್ತಗೊಳಿಸುವದಲ್ಲದೆ ಪ್ರತಿಯೊಂದು ಗ್ರಾಮವನ್ನು ಕೂಡ ಪಟ್ಟಣಗಳ ಆಶ್ರಯದಿಂದ ಬಿಡುಗಡೆ ಮಾಡಿ, ತಾನು ಸ್ವಾವಲಂಬಿಯೂ, ತನ್ನ ಜವಾಬ್ದಾರಿಯ ಅರಿವುಳ್ಳದ್ದೂ ಆಗಬೇಕೆಂದು ಬಯಸುತ್ತೇನೆ. ಈಗ ಕೊಡಗು ಬತ್ತದ ವಿನಾ ಉಳಿದ ಎಲ್ಲಾ ಆವಶ್ಯಕ ವಸ್ತುಗಳ ಸಂಬಂಧದಲ್ಲಿ ಪರಾವಲಂಬಿಯಾಗಿದೆ. ಗ್ರಾಮಸ್ಥರೂ ಪಟ್ಟಣದ ಆಶ್ರಯವಿಲ್ಲದೆ ಬದುಕಲಾರರು. ತಮ್ಮ ವ್ಯಾಜ್ಯಗಳನ್ನು ತೀರಿಸಬೇಕಾದರೂ ಪಟ್ಟಣಗಳಲ್ಲಿ ಹಣ ಸುರಿಯುವರು. ಶಿಕ್ಷಣ ರಕ್ಷಣೆಗಳಿಗೂ ಸರಕಾರದ ಆಶ್ರಯ ಬೇಕು. ಈ ಸ್ಥಿತಿಯು ಮಾಯವಾದಾಗಲೇ ಸಂಪೂರ್ಣ ಅರ್ಥದಲ್ಲಿ ಜನರಿಗೆ ಸ್ವರಾಜ್ಯ ಸಿಕ್ಕಿದಂತಾಗುವುದು. ಇದಕ್ಕಾಗಿ ಇಂದಿನಿಂದಲೇ ದುಡಿಯಬೇಕು. ವರ್ಧಾದಲ್ಲಿ ಸರಿಯಾಗಿ ತರಬೇತು ಹೊಂದಿದ ಕಾರ್ಯಕರ್ತರನ್ನು ತರಿಸಿ ಗ್ರಾಮೋದ್ಧಾರಕ್ಕೆ ಆರಂಭಿಸಬೇಕು. ಗ್ರಾಮಸೇವಕರನ್ನು ತರಬೇತಿಗಾಗಿ ವರ್ಧಾಕ್ಕೆ ಕಳುಹಿಸಬೇಕು. ಗ್ರಾಮೋದ್ಯೋಗಗಳ ಪುನರುದ್ಧಾರ, ವ್ಯವಸಾಯದ ಸುಧಾರಣೆ, ಮುಂತಾದವುಗಳಿಂದ ಗ್ರಾಮದ ಸಂಪತ್ತನ್ನು ಹೆಚ್ಚಿಸಬೇಕು. ಗ್ರಾಮ ಪಂಚಾಯಿತ ಸರಕಾರವನ್ನು ಸ್ಥಾಪಿಸಿ, ನ್ಯಾಯ ತೀರ್ಮಾನ, ಶಿಕ್ಷಣ ಪ್ರಸಾರ, ಆರೋಗ್ಯ ಪ್ರಚಾರ ಮೊದಲಾದ ಕೆಲಸ ಕಾರ್ಯಗಳನ್ನು ಅದಕ್ಕೊಪ್ಪಿಸಬೇಕು. ಇದಕ್ಕಾಗಿ ಧನಿಕರು ಮತ್ತು ಸರಕಾರವು ಮುಂದೆ ಬರಬೇಕು. ಕೊಡಗಿನಲ್ಲಿ ಇಪ್ಪತ್ತನಾಲ್ಕು ಜನರಿಗೆ ಕೊಡಗಿನ ಭಾಗ್ಯರಚನೆಯಲ್ಲಿ ಅಧಿಕಾರ ದೊರೆತಂತೆ ಗ್ರಾಮಸ್ಥರಿಗೂ ತಮ್ಮ ಗ್ರಾಮದ ಉನ್ನತಿಯನ್ನುಂಟು ಮಾಡುವ ಅಧಿಕಾರವು ದೊರೆಯಬೇಕು.

ಈ ರೀತಿಯ ಸುಧಾರಣೆ ತರುವ ಮಾರ್ಗದಲ್ಲಿ ಮದ್ಯಪಾನವು ದೊಡ್ಡ ಅಡಚಣೆಯಾಗಿದೆ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿಯೂ ಸಹ ಯಾವುದು ಮುಖ್ಯ ಕಾರ್ಯಕ್ರಮವಾಗಿತ್ತೋ ಅಂಥಾ ಮದ್ಯಪಾನ ನಿಷೇಧ ಚಳವಳಿಯು ಇಂದು ಇಲ್ಲದಿರುವದು ವಿಷಾದಕರವಾದ ಸಂಗತಿ. ಸ್ವರಾಜ್ಯ ದೊರೆತ ಮೇಲೂ ಅಂಥ ಕಾನೂನು ಏಕೆ ಬರಲಿಲ್ಲ? ಸರಕಾರದ ಉತ್ಪತ್ತಿಗೆ ಭಂಗ ಬರುವುದೆಂಬ ಭಯವೇನು? ಸಂಪತ್ತು ಇಲ್ಲದಿದ್ದರೂ ಚಿಂತೆಯಿಲ್ಲ. ಪ್ರಾಣ ಉಳಿದರೆ ಸಾಕು ಎಂದು ಲಕ್ಷಾಂತರ ಜನರು ಪಾಕಿಸ್ತಾನದಿಂದ ಭಾರತಕ್ಕೆ

(೭ನೇ ಪುಟಕ್ಕೆ ಸಾಗಿದೆ.)

ಓದುಗರ ಓಲೆಗಳು

ನಿಯಂತ್ರಣ ಬೇಕಿಲ್ಲ.

ಆಹಾರ ಪದಾರ್ಥಗಳ ಬಗ್ಗೆ ಕೊಡಗು ಉಳುವರಿ ಪ್ರಾಂತವಾದರೂ ಇಲ್ಲಿ ಕಂಟ್ರೋಲ್ ಜಾರಿಗೆ ತಂದಿರುವದರಿಂದ ರೈತರಿಗೆ ವಿಪರೀತ ತೊಂದರೆ ಇದೆ. ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಆಳುಗಳು ಕೂಲಿ ಮಾಡಿ ತಮ್ಮ ಸಂಬಳವನ್ನು ಬತ್ತದ ರೂಪದಲ್ಲಿ ತರಲಾಗುವದಿಲ್ಲ. ಮಿಲ್ಲಿನಲ್ಲಿ ಅಕ್ಕಿ ಮಾಡಬೇಕಾದರೂ ಪರ್ಮಿಟು ಪಡೆಯದೆ ಸಾಧ್ಯವಿಲ್ಲ. ಈ ರೀತಿಯಲ್ಲಿ ನಿಯಂತ್ರಣವಿರುವದರಿಂದ ಬಡರೈತನಿಗೆ ಬಹಳ ತೊಂದರೆ ಇದೆ. ಕೆಲಸ ಮಾಡಿ ಜೀವಿಸುವ ಬಡ ಮಜೂರರಿಗೆ ಕಷ್ಟವಿದೆ. ಇದಕ್ಕಾಗಿ ದೇಶದ ಒಳಗಿನ ಈ ಕಂಟ್ರೋಲನ್ನು ತೆಗೆದು ಹಾಕುವದು ಅವಶ್ಯ. ಅಲ್ಲದೆ ದೇಶದೊಳಗೆ ಹುರಿಯಕ್ಕಿ, ಅವಲಕ್ಕಿ, ಮಾಡಲು ಬಿಡಬೇಕು. ಅವಲಕ್ಕಿ, ಹುರಿಗಾಳು ಮಾಡುವದರಿಂದ ಆಹಾರ ಪದಾರ್ಥಗಳು ನಷ್ಟವಾಗುವದೇನು? ಅರ್ಧ ಸಾವು ಅವಲಕ್ಕಿ ಇದ್ದರೆ ಬಡವನೊಬ್ಬನ ಊಟ ಮುಗಿದಂತಾಗುವದು. ಅಲ್ಲದೆ ಅವಲಕ್ಕಿ ಕುಟ್ಟಿ ಹುರಿಗಾಳು ಮಾರಿ ಜೀವಿಸುವ ಅನೇಕ ಜನರಿದ್ದಾರೆ ಅವರಿಗೆ ಜೀವನದ ಒಂದು ದಾರಿಯನ್ನು ಒದಗಿಸಿಕೊಟ್ಟಂತೆಯೂ ಆಗುವದು. ಆದ್ದರಿಂದ ಮುಂಬರುವ ನಮ್ಮ ಸರಕಾರವು ಈ ಕಾರ್ಯವನ್ನು ಪ್ರಥಮವಾಗಿ ಮಾಡಬೇಕು ನಿಯಂತ್ರಣವನ್ನು ತೆಗೆದು ಹಾಕಿದ ಕಡೆಯಲ್ಲೆಲ್ಲಾ ಬೆಲೆ ಇಳಿದು ಜೀವನ ಹಗುರವಾಗಿದೆ. ಹಾಗಿರುವದರಿಂದ ಈ ನಿಯಂತ್ರಣವನ್ನು ತೆಗೆದು ಹಾಕುವ ಬಗ್ಗೆ ಈಗಲೇ ಜನರು ಒತ್ತಾಯಪಡಿಸಬೇಕಿದೆ.

'ನಿಯಂತ್ರಣ ವಿರೋಧಿ'

ರೂಪಾಯಿಗೆ ೬ ಸೇರು ಅಕ್ಕಿ ಬೇಕು.

ಕೊಡಗಿನಲ್ಲಿ ಬತ್ತದ ಬೆಲೆಯನ್ನು ಗಾಡಿಗೆ ರೂ. ೨೦೩ ಎಂದು ನಿಶ್ಚಯಿಸಿದ ಕಾರಣ ಅಕ್ಕಿಯನ್ನು ರೂಪಾಯಿಗೆ ೨½ ಸೇರಿನಂತೆ ಮಾರಬೇಕೆಂದು ಸರಕಾರವು ಆಜ್ಞೆ ಮಾಡಿದೆ. ಇದು ತೀರಾ ಅನ್ಯಾಯವೆನ್ನಬೇಕಾಗಿದೆ. ಏಕೆಂದರೆ ಒಂದು ಗಾಡಿ ಬತ್ತಕ್ಕೆ ಆರೂವರೆ ಪಲ್ಲ ಅಕ್ಕಿ ಆಗುತ್ತದೆ. ಆರು ಪಲ್ಲವೆಂದು ಲೆಕ್ಕ ಹಾಕಿದರೂ ರೂಪಾಯಿಗೆ ೨½ ಸೇರಿನಂತೆ ಗಾಡಿಗೆ ರೂ. ೨೮೦ ಆಗುತ್ತದೆ. ಇದರಲ್ಲಿ ಮಿಲ್ಲಿಂಗ್ ಚಾರ್ಜ್ ಮತ್ತು ಬಾಡಿಗೆಯೆಂದು ಗಾಡಿಗೆ ೩೦ ರೂ. ಕಳೆದರೂ ಪುನಹ ರೂ. ೨೦ ಮಿಲ್ಲಿನವರಿಗೆ ಲಾಭವಾಗುತ್ತಿದೆ. ಆದ್ದರಿಂದ ಸರಕಾರದವರು ರೂಪಾಯಿಗೆ ೨½ ಸೇರು ಎಂದು ನಿಶ್ಚಯಿಸಿ ಬಡವನ ಹೊಟ್ಟೆಗೆ ಹೊಡೆದು ಮಿಲ್ಲಿನವರನ್ನು ಪೋಷಿಸುವ ತತ್ವವನ್ನು ಬಿಟ್ಟು ರೂಪಾಯಿಗೆ ೩ ಸೇರಿನಂತೆ ಅಕ್ಕಿ ಮಾರಾಟವಾಗುವಂತೆ ಮಾಡಬೇಕು. ಇದರಿಂದ ಒಂದು ವೇಳೆ ಮಿಲ್ಲಿನವರಿಗೆ ನಷ್ಟಬರುತ್ತದೆಂದು ಖಚಿತವಾದರೆ ಸರಕಾರವೇ ಅಂಥಾ ನಷ್ಟವನ್ನು ಭರ್ತಿಮಾಡಿ ಕೊಡಲಿ. ಅದರಲ್ಲೂ ಸರಕಾರವು ಇನ್ನೊಂದು ವಿಚಾರ ಗಮನವಿಡಬೇಕು. ರೇಶನ್ ಡಿಪೋಗಳಲ್ಲಿ ರೂಪಾಯಿ ೨½ ಸೇರು ಅಕ್ಕಿ ತಂದು ಅವನ್ನು ಸರಿಪಡಿಸಿದನಂತರ ಉಳಿಯುವದು ಕೇವಲ ೨ ಸೇರು. ಆದ್ದರಿಂದ ಸರಕಾರವು ರೂಪಾಯಿಗೆ ೨½ ಎಂದರೂ ಡಿಪೋಗಳಲ್ಲಿ ಕಲ್ಲು, ಬತ್ತ ಮಿಶ್ರಿತ ಹಾಳು ಅಕ್ಕಿಯ ಕಾರಣ, ಕೊಂಡುಕೊಳ್ಳುವವನಿಗೆ ಬರೀ ೨ ಸೇರು ಅಕ್ಕಿ ದೊರೆತಂತಾಗುವದು. ಆದ್ದರಿಂದ ಸರಕಾರವು ಡಿಪೋಗಳಲ್ಲಿ ರೂಪಾಯಿಗೆ ೨½ ಸೇರು ಶುದ್ಧ ಅಕ್ಕಿ ದೊರೆಯುವಂತಾದರೂ ಮಾಡಬೇಕಾಗಿದೆ.

'ರೇಶನ್ ಕಾರ್ಡುದಾರ'

ಈ ನೀತಿಯನ್ನು ನಿಲ್ಲಿಸಬೇಕು

ಪವಿತ್ರ ಕೊಡಗಿನ ಚುನಾವಣೆ ನಡೆದ ನಂತರ ಸೋಮವಾರಪೇಟೆ ನಾಡಿನ ಕಾಂಗ್ರೆಸ್ ಪಾರ್ಟಿಯ ಕೆಲವು ಏಜಂಟರು ಗ್ರಾಮಗಳಲ್ಲಿ ಸ್ವತಂತ್ರರಾದ ಉಮೇದುವಾರರಿಗೆ ಓಟು ಕೊಟ್ಟದ್ದಕ್ಕಾಗಿ ಮತದಾರರನ್ನು ಹೀಯಾಳಿಸಿ ಅಪಹಾಸ್ಯವನ್ನು ಮಾಡುತ್ತಾ ತೊಂದರೆ ಕೊಡುತ್ತಿದ್ದಾರೆ. ತಾ ೪ ರಲ್ಲಿ ಸೋಮವಾರಪೇಟೆಯಲ್ಲಿ ಅಲ್ಲಿಯ ಕಾಂಗ್ರೆಸ್ ಉಮೇದುವಾರರಾದ ಶ್ರೀ ಕಾಳಪ್ಪನವರಿಗೆ ಜಯವಾದುದಕ್ಕಾಗಿ ಮೆರವಣಿಗೆ ಮಾಡಿದರು

ಈ ಸಮಯದಲ್ಲಿ ಸಂತೆ ವ್ಯಾಪಾರಕ್ಕಾಗಿ ಹೋದ ಅನೇಕರನ್ನು ಕೈ ಬೀಸಿ ಕರೆದು ಮೆರವಣಿಗೆಗೆ ಬನ್ನಿ ಎಂದು ತಮಾಷೆ ಮಾಡಿ 'ನೀವು ತಕ್ಕಡಿ ಗೌಡ! ತಕ್ಕಡಿ ಹಿಡಿದು ವ್ಯಾಪಾರ ಮಾಡಲು ಹೊರಡಬೇಕು' ಎಂದು ಮುಂತಾಗಿ ಜರಿದು ನಾಚಿಸಿರುತ್ತಾರೆ. ಇದು ಕಾಂಗ್ರೆಸ್ ತತ್ವವೆ? ಇವರಿಗೆ ಕಾಂಗ್ರೆಸ್ ಪಾರ್ಟಿಯ ಮುಂದಾಳುಗಳು ಬುದ್ಧಿ ಹೇಳಬೇಡವೇ? ಹೀಗೇ ಮುಂದಕ್ಕೂ ನಡೆಯುತ್ತಾ ಬಂದರೆ ದೇಶದಲ್ಲಿ ಅಶಾಂತಿ ಹರಡಿ ಬಹಳ ಅನರ್ಥಗಳಿಗೆ ಕಾರಣವಾಗಬಹುದು. ಈ ನೀತಿಯಿಂದ ದೇಶಕ್ಕೆ ಯಾವ ಹಿತವೂ ಆಗಲಾರದು. ಸತ್ಕೃತ ಕೆಲಸಗಳನ್ನು ಮಾಡಿ ಜನರಲ್ಲಿ ನಂಬಿಕೆ ಹುಟ್ಟಿಸಬೇಕು. ಈಗ ಚುನಾವಣೆಯಲ್ಲಿ ಗೆದ್ದಿರುವ ಕಾಂಗ್ರೆಸ್ ಮೆಂಬರರು ನಾಡುಗಳಲ್ಲಿ ತಿರುಗಿ ನಿಜವಾದ ಗಾಂಧಿ ತತ್ವವನ್ನು ಹರಡಿ ಜನರನ್ನು ಸನ್ಮಾರ್ಗಕ್ಕೆ ತರಬೇಕಾಗಿದೆ.

ಮನನೊಂದ ನಾಡಿನವ.

ದಳಿತ ವರ್ಗದವರ ಮನವಿ

ಮಹಾಶಯರೆ ಮತ್ತು ಕೊಡಗಿನಲ್ಲಿ ಕಾಂಗ್ರೆಸ್ ಟಿಕೆಟಿನಲ್ಲಿ ಗೆದ್ದಿರುವ ಶಾಸನ ಸಭಾ ಸದಸ್ಯರೇ—ಕೊಡಗಿನಲ್ಲಿ ದಳಿತ ವರ್ಗದವರಿಗೆಂದು ೬ ಸ್ಥಾನಗಳನ್ನು ಸರಕಾರವು ಕಲ್ಪಿಸಿ ಕೊಟ್ಟಿರುವದು ಸರಿ. ಆದರೆ ಕೊಡಗಿನಲ್ಲಿ ಎರಡು ದೊಡ್ಡ ಪಾರ್ಟಿಗಳು ಎಂದರೆ ಪ್ರತ್ಯೇಕ ಪಾರ್ಟಿ ಮತ್ತೊಂದು ಸಂಯೋಜನಾ ಪಾರ್ಟಿ ಅಥವಾ ಕಾಂಗ್ರೆಸ್ ಪಾರ್ಟಿ. ಈ ಪಾರ್ಟಿಗಳೆಂದಾಗಿ ಮಳೆಯನ್ನು ಹಂಬಲಿಸುವ ರೈತನಂತಿದ್ದ ಹರಿಜನರು ಸಹ ವಿಭಾಗವಾಗಬೇಕಾಯಿತು. ಈ ಎರಡು ಪಾರ್ಟಿಗಳು ತಮ್ಮ ತಮ್ಮ ಮೂಗಿನ ನೇರಕ್ಕೆ ಹೋರಾಡಿಕೊಂಡು ಕೆಲವು ಕಡೆ ಪ್ರತ್ಯೇಕ ಪಕ್ಷದವರು ಕೆಲವೆಡೆಗಳಲ್ಲಿ ಕಾಂಗ್ರೆಸ್ಸಿಗರು ಗೆದ್ದಿರುವರು. ಹೇಗೂ ಎರಡು ಪಾರ್ಟಿಗಳಲ್ಲಿಯೂ ಹರಿಜನರಿಗೆ ಸ್ಥಾನವಿದೆ. ಹರಿಜನರು ಯಾವ ಪಾರ್ಟಿಯಲ್ಲಿದ್ದರೂ ಅವರು ಕೇಳುವ ವಿಚಾರ ಒಂದೇ. ಹರಿಜನರ ಹಿತಸಾಧನೆಯಾಗಬೇಕೆಂಬುದೇ ಅವರ ಕೂಗು. ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ.

ಕೊಡಗಿನಲ್ಲಿ ಹಿಂದುಳಿದವರಿಗೆ ೬ ಸ್ಥಾನಗಳನ್ನು ಕೊಟ್ಟಿರುವ ಉದ್ದೇಶ್ಯ ಬರೇ ಸಂಬಳವನ್ನು ತೆಗೆದುಕೊಂಡು ಕೌನ್ಸಿಲ್ ವೋಟಿಂಗ್ ಇದ್ದಾಗ ಮಾತ್ರ ಬಂದು ಹಾಜರಾಗಿ ಸಭೆಯಲ್ಲಿ ಕೈಯೆತ್ತಿ ಎಂದು ಕಣ್ಣು ಸನ್ನೆ ಮಾಡಿದಾಗ ಎತ್ತುವದಕ್ಕಲ್ಲ ಬದಲು ದಳಿತ ವರ್ಗದವರ ಹಿತಕ್ಕಾಗಿ ದುಡಿಯಬೇಕು. ಒಗ್ಗಟ್ಟಿನಿಂದ ವರ್ತಿಸಬೇಕು.

ಕೊಡಗಿನಲ್ಲಿ ಮೂರು ಜನ ಮಂತ್ರಿಗಳಾಗಿರುತ್ತಾರೆ ಎಂಬ ಮಾತು ಕೇಳಿದೆ. ಹಾಗಿದ್ದರೆ ನೀವು ಆರು ಜನರು ಸೇರಿ ಒಂದು ಮಂತ್ರಿ ಸ್ಥಾನವನ್ನು ಕೇಳಿದರೆ ಅನ್ಯಾಯವಲ್ಲ ನಿಮ್ಮೊಳಗೆ ಜಿದ್ದು ಇರಬಾರದು. ಅಲ್ಲದೆ ಯಾವ ಕಾಲಕ್ಕೂ ಹೀಗೆ ದಳಿತ ವರ್ಗದವರಿಗೆಂದು ಕಾಯ್ದಿಟ್ಟ ಸ್ಥಾನಗಳಿರುವದಿಲ್ಲ ಈ ಅನುಕೂಲತೆ ಕೇವಲ ಹತ್ತು ವರ್ಷಗಳ ವರೆಗೆ ಮಾತ್ರ. ದಳಿತರೂ ನಿಮ್ನ ವರ್ಗದವರ ಪ್ರತಿನಿಧಿಗಳಲ್ಲಿ ಶ್ರೀ ಪಿ ಕೆ ಚೆನ್ನಯ್ಯನವರು ಅನುಭವಸ್ಥರು. ಕೊಡಗಿನಲ್ಲಿ ೨೮ ಸಾವಿರ ಹರಿಜನರಿರುವಾಗ ಒಬ್ಬ ಮಂತ್ರಿ ಪದ ಇವರಿಗೆ ಬರಬೇಕೆಂದು ನನ್ನ ಅಭಿಪ್ರಾಯ. ಹರಿಜನರ ಮಂತ್ರಿ ಬಂದು ಮಾಡುವ ಕೆಲಸವನ್ನು ನಾವೇ ಮಾಡುತ್ತೇವೆ ಎಂದು ಬೇರೆಯವರು ಹೇಳಬಹುದು. ಆದರೆ ಅವರವರಿಂದಲೇ ಅವರಿಗೆ ಹಿತವಾಗುವದಲ್ಲದೆ ಬೇರೆಯವರಿಂದಲ್ಲ. ಆದ್ದರಿಂದ ದಳಿತ ವರ್ಗದವರಿಗೆ ಒಂದು ಗಣ್ಯ ಸ್ಥಾನ ಕೊಡುವದರಿಂದ ಆ ವರ್ಗದ ಜನರಲ್ಲಿ ಒಂದು ಹುಮ್ಮಸ್ಸೂ ಆತ್ಮಾಭಿಮಾನವೂ ಹುಟ್ಟುವದು. ಆದ್ದರಿಂದ ಮಂತ್ರಿ ಮಂಡಳದ ರಚನೆಯ ಕಾಲಕ್ಕೆ ಇದನ್ನು ಗಮನಿಸಿ ವರ್ತಿಸುವದು ಮುಂದಾಳುಗಳ ಕರ್ತವ್ಯವಾಗಿದೆ.

ಎಚ್ ಪಿ. ಕಾಳಪ್ಪ.

ಮಂತ್ರಿಗಳ ವೇತನ.

ಕಳೆದ ವಾರದ ಪತ್ರಿಕೆಯಲ್ಲಿ ಈ ವಿಚಾರವಾಗಿ ಬರೆಯುತ್ತಾ ಶ್ರೀ. ಬಿ. ಎಂ. ಕಾರ್ಯಪ್ಪನವರು ಮುಂಬರುವ ಮಂತ್ರಿಗಳಿಗೆ ತಿಂಗಳಿಗೆ ರೂ ೩೦೦ ವೇತನ ಸಾಕೆಂದು ಬರೆದಿದ್ದರು. ಈಗಿನ ಕಾಲದಲ್ಲಿ ಮುನ್ನೂರು ರೂಪಾಯಿಗಳೆಂದರೆ ಹಿಂದಿನ ನೂರು ರೂಪಾಯಿಗಳ ಬೆಲೆಯೂ ಕೂಡ ಇಲ್ಲ. ಆದ್ದರಿಂದ ಕೊಡಗಿನ ಮಂತ್ರಿಗಳ ವೇತನವು ಮಾಸಿಕ ರೂ. ೫೦೦ ಕ್ಕೆ ಮೀರದೆ ಇರಲೆಂದು ನಿಶ್ಚಯಿಸಬಹುದಾಗಿದೆ. ಕೇವಲವಾಗಿ ನಾವು ಈ ಮಂತ್ರಿಗಳ ವೇತನದ ವಿಚಾರದಲ್ಲಿ ಮಾತ್ರ ನಿಗಾ ಇಟ್ಟರೆ ಪ್ರಯೋಜನವಿಲ್ಲ. ಕೊಡಗಿನಂಥಾ ಚಿಕ್ಕ ಪ್ರಾಂತಕ್ಕೆ ಸಾವಿರಗಟ್ಟಲೆ ವೇತನ ಪಡೆಯುವ ಚೀಫ್ ಫಾರೆಸ್ಟರಾಗಲೀ, ವ್ಯವಸಾಯ ಆದಾಯ ತೆರಿಗೆಯ ಆಫೀಸರಾಗಲೀ ಬೇಕಿಲ್ಲ. ಈಗಿನ ಚೀಫ್ ಕಮಿಷನರಿಗೆ ಸುಮಾರು ಮೂರು ಸಾವಿರದ ಹತ್ತಿರ ತಿಂಗಳಿಗೆ ಖರ್ಚಾಗುತ್ತಿದೆ. ಮುಂದೆ ಲೆ. ಗವರ್ನರರಾದರೆ ಕಡಿಮೆ ತಿಂಗಳಿಗೆ ೩೫೦೦ ಆಗಬಹುದು. ಏಕೆಂದರೆ ಮೊನ್ನೆಯಾಗಿ ನೇಮಕವಾದ ಒಬ್ಬ ಲೆ. ಗವರ್ನರರಿಗೆ ಮಾಸಿಕ ರೂ. ೩೫೦೦ ವೇತನ ನಿಶ್ಚಯಿಸಲಾಗಿದೆ. ಹೀಗಿರುವದರಿಂದ ಕೊಡಗಿಗೆ ಇಷ್ಟು ದೊಡ್ಡ ವೇತನದ ಅಧಿಕಾರಿಗಳು ಬೇಕಿಲ್ಲ. ಇದಕ್ಕಾಗಿ ಜನರು ಚಳವಳ ಮಾಡಬೇಕಲ್ಲದೆ ಮುಂಬರುವ ಮಂತ್ರಿಮಂಡಳ ಹಾಗೂ ಶಾಸನ ಸಭೆಯವರು ತಕ್ಕ ಏರ್ಪಾಡು ಮಾಡುವದು ಅತ್ಯಾವಶ್ಯವಾಗಿದೆ.

'ರೈತ.'

೧೦೦೦ ಎಕರೆ ಭೂದಾನ.

ಪ್ರೆಸಿಡೆಂಟ್ ರಾಜೇಂದ್ರ ಪ್ರಸಾದರವರ ಜನ್ಮದಿನದಂದು ಬೆಂಗಳೂರಿನ ಶ್ರೀ. ಸಯ್ಯದ್ ಹುಸೇನ್ ಎಂಬುವವರು ತಮ್ಮ ೪೦೦ ಎಕರೆ ಭೂಮಿ ಮತ್ತು ೬೦೨ ಎಕರೆ ಬಾಣೆಜಾಗವನ್ನು ಶ್ರೀ. ವಿನೋಬಾಭಾವೆಯವರ ಭೂಮಿದಾನ ಚಳವಳಕ್ಕಾಗಿ ಕೊಡುವದಾಗಿ ವಿನೋಬಾರವರಿಗೆ ಪತ್ರ ಬರೆದಿದ್ದಾರೆ. 'ದಕ್ಷಿಣ ಭಾರತದಲ್ಲಿ ಭೂದಾನ ಚಳವಳ ಪ್ರಾರಂಭವಾಗಬೇಕೆಂಬ ಆಸೆಯಿಂದ ಪ್ರಥಮ ಪೀಠಿಕೆಯಾಗಿ ಈ ಸಾವಿರ ಎಕರೆಗಳ ದಾನವನ್ನು ಮಾಡಿರುವೆನು' ಎಂದು ಅವರು ಹೇಳಿದ್ದಾರೆ. ತಾನು ಈ ಭೂಮಿಯನ್ನು ಪಡೆಯುವ ಬಡಜನರಲ್ಲಿ ಒಬ್ಬರಾಗಿ ದುಡಿದು ಜೀವಿಸುವ ನಿರ್ಧಾರವನ್ನು ಮಾಡಿರುವದಾಗಿಯೂ ತಿಳಿಸಿದ್ದಾರೆ.

ವಿನೋಬಾರವರು ಈಗ ಉತ್ತರ ಪ್ರದೇಶದಲ್ಲಿ ಸುತ್ತುತ್ತಿದ್ದಾರೆ. ಅಲ್ಲಿ ಬಡರೈತರು ಒಂದು ಎಕ್ರೆ, ಅರ್ಧ ಎಕರೆಯಂತೆ ಕೂಡ ಭೂಮಿ ಕೊಡುತ್ತಿದ್ದಾರಂತೆ. ಆಚಾರ್ಯರ ಈ ಭೂದಾನ ಯಜ್ಞವು ಇಡೀ ರಾಷ್ಟ್ರದ ಅರ್ಥಾತ್ ಬಡವ ಬಲ್ಲಿದರೆಲ್ಲರ ಉದ್ಧಾರಕ್ಕಾಗಿ ಪ್ರಾರಂಭಿಸಲ್ಪಟ್ಟಿದೆ. ವಿನೋಬಾರು ಕೊಡಲಿಚ್ಛಿಸುವ ಪ್ರತಿಯೊಬ್ಬರಿಂದ ಈ ಭೂದಾನವನ್ನು ಹೃತ್ಪೂರ್ವಕವಾಗಿ ಸ್ವೀಕರಿಸುತ್ತಾರೆ. ಉತ್ತರ ಪ್ರದೇಶವನ್ನು ಸುತ್ತಿ ಆದನಂತರ ಅವರು ದಕ್ಷಿಣದ ಪ್ರವಾಸ ಕೈಕೊಳ್ಳಬಹುದೆಂದು ಗೊತ್ತಾಗಿದೆ.

ಅಂಗಡಿ ಮನೆ

ಮಾರಾಟಕ್ಕಿದೆ.

ಮಡಿಕೇರಿ ಮಹದೇವ ಪೇಟೆಯ ಬ್ಲಾಕ್ ನಂಬರ್ 4 ರಲ್ಲಿರುವ ತಿಂಗಳೊಂದರ 50|– ರೂಪಾಯಿ ಬಾಡಿಗೆ ಸಿಕ್ಕಬಹುದಾದ ಮಹಡಿ ಮನೆ ಮಾರಾಟಕ್ಕಿದೆ. ಬೆಲೆ ರೂ. 12500|– ಅಥವಾ ಸಮೀಪದ ಬೆಲೆ. ಹೆಚ್ಚು ಮಾಹಿತಿಯನ್ನು ಕೆಳಗಿನ ಅತ್ರಸಿಂದ ಪತ್ರದ ಅಥವಾ ಕುದ್ದಾಗಿ ತಿಳಿದುಕೊಳ್ಳಬಹುದು

"K"
C/o Manager
Kodagu Press
2–1 Mercara

ಬೇಕಾಗಿದ್ದಾರೆ.

ಡ್ರೈವರುಗಳು ನೌಕರಿಗೆ ಬೇಕಾಗಿರುವದರಿಂದ ನೌಕರಿಗೆ ಸೇರಲು ಇಚ್ಛೆಯುಳ್ಳವರು ತಾ. 3–3–52 ರೊಳಗಾಗಿ ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಆಫೀಸಿಗೆ ಹಾಜರಾಗತಕ್ಕದ್ದು.

ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್
2–1 ಆಫೀಸರು.

ಕೊಡಗು

ತಾ. ೨೨-೨-೧೯೫೨ನೇ ಶುಕ್ರವಾರ

ವಯಸ್ಕರ ಶಿಕ್ಷಣ.

ನಮ್ಮ ಹಿಂದೂದೇಶದ ಜನತೆಯಲ್ಲಿ ಅವಿದ್ಯಾವಂತರು ಹೆಚ್ಚು. ನೂರಕ್ಕೆ ಎಂಭತ್ತಕ್ಕಿಂಥಾ ಹೆಚ್ಚು ಜನರು ಓದು ಬರಹ ತಿಳಿಯದವರು. ಇಂಥಾ ಅವಿದ್ಯಾವಂತರ ನಾಡಿನಲ್ಲಿ ಯೋಗ್ಯ ರೀತಿಯಿಂದ ಪ್ರಜಾಸತ್ತಾತ್ಮಕ ಆಡಳಿತವು ನಡೆಯಲಾರದು. ಇಂಥಾ ಅವಿದ್ಯಾವಂತರ ನಾಡಿನಲ್ಲಿ ಸಾಮಾಜಿಕ ಪ್ರಗತಿಯೂ, ಜೀವನದ ಮಟ್ಟದ ಏರುವಿಕೆಯೂ ಆಗಲಾರದು. ಹಿಂದೂದೇಶಕ್ಕೆ ಸ್ವಾತಂತ್ರ್ಯ ದೊರಕಿದ ಮೇಲೆ ಸ್ವತಂತ್ರ ದೇಶದ ಪ್ರಜೆಗಳಾದ ನಮ್ಮ ಮೇಲೆ ಅನೇಕ ನಾಗರೀಕ ಜವಾಬ್ದಾರಿಗಳು ಬಂದಿವೆ. ಆ ಜವಾಬ್ದಾರಿಗಳನ್ನು ಸರಿಯಾಗಿ ಅರಿತುಕೊಂಡು ನಮ್ಮ ಕರ್ತವ್ಯವನ್ನು ಯೋಗ್ಯ ರೀತಿ ಮಾಡಬೇಕಿದ್ದರೆ ವಿದ್ಯೆಯು ಅವಶ್ಯಕ. ನಾಲ್ಕಕ್ಷರ ಓದಲು, ಬರೆಯಲು ಗೊತ್ತಿದ್ದರೆ ಮಾತ್ರ ಒಬ್ಬನು ವಿದ್ಯಾವಂತನಲ್ಲವೆಂಬುದು ನಿಜ. ಆದರೆ ಇಂದಿನ ಅಕ್ಷರ ಯುಗದಲ್ಲಿ ಓದು ಬರೆಯಲು ತಿಳಿಯದಿದ್ದರೆ ಸರಕಾರದ ನೀತಿ, ಜಗತ್ತಿನ ಕಾರ್ಯಕಲಾಪಗಳನ್ನು ಕೂಡ ತಿಳಿದುಕೊಳ್ಳುವದು ಪ್ರಯಾಸವಾಗುತ್ತದೆ. ಈ ಕಾರಣದಿಂದ ಸರಕಾರವು ವಯಸ್ಕರ ಶಿಕ್ಷಣ ಪದ್ಧತಿಯೂ ಸಮಾಜ ಶಿಕ್ಷಣ ಪದ್ಧತಿಯನ್ನು ಆದಷ್ಟು ಬೇಗ ಜಾರಿಗೆ ತರಬೇಕೆಂದು ಏರ್ಪಾಡು ಮಾಡಿದೆ.

ಕೊಡಗು ವಿದ್ಯೆಯಲ್ಲಿ ಸ್ವಲ್ಪ ಮಟ್ಟಿಗೆ ಮುಂದರಿದಿದೆಯೆಂದರೂ ಇಲ್ಲಿಯೂ ನೂರಕ್ಕೆ ಎಂಭತ್ತರಷ್ಟು ಅವಿದ್ಯಾವಂತರಿದ್ದಾರೆ. ಇವರ ಶಿಕ್ಷಣವು ಅತೀ ಉಚಿತದ ವಿಚಾರವಾಗಿದೆ. ಕೇವಲ ನಾಲ್ಕಕ್ಷರ ಕಲಿಸುವದು ಮಾತ್ರವಲ್ಲ, ಸಮಾಜದಲ್ಲಿ ಯಾವ ರೀತಿ ವರ್ತಿಸಬೇಕು, ತಮ್ಮೆಲ್ಲರ ಸಾಮೂಹಿಕ ಅಭಿವೃದ್ಧಿಗೆ ಪ್ರತಿಯೊಬ್ಬನೂ ಯಾವ ರೀತಿ ದುಡಿಯಬೇಕು, ಸರಕಾರದೊಡನೆ ಯಾವ ರೀತಿ ಸಹಕರಿಸಬೇಕು ಎಂಬಿತ್ಯಾದಿ ವಿಚಾರಗಳನ್ನು ಜನತೆಗೆ ಅರುಹುವುದಲ್ಲದೆ ಅವರಿಗೆ ದೈನಂದಿನ ಪತ್ರಿಕೆಗಳನ್ನೂ, ಸರಕಾರದ ಕಾನೂನು ಕಾಯಿದೆಗಳನ್ನೂ ಓದಿ ತಿಳಿದುಕೊಳ್ಳುವಷ್ಟು ಅಕ್ಷರ ಜ್ಞಾನವನ್ನು ಮಾಡಿ ಕೊಡುವದು ಅತೀ ಅವಶ್ಯ. ಈ ತುರಿತದ ಕೆಲಸವನ್ನು ಜಾರಿಯಲ್ಲಿ ತರಲು ಕೊಡಗು ಸರಕಾರವೂ ಒಂದು ಯೋಜನೆಯನ್ನು ಮಾಡಿದೆ. ಈ ಯೋಜನೆಯ ಪ್ರಕಾರ ಕೊಡಗಿನ ವಿವಿಧ ಕೇಂದ್ರಗಳಲ್ಲಿ ಸಮಾಜ ಶಿಕ್ಷಣ ಕೇಂದ್ರಗಳನ್ನು ಶೀಘ್ರ ತೆರೆಯಲಿದ್ದಾರೆ. ಇದಕ್ಕೆ ಪೂರ್ವಸಿದ್ಧತೆಯಾಗಿ ಮಡಿಕೇರಿಯಲ್ಲಿ ೨೦ ಜನ ಅಧ್ಯಾಪಕರ ತರಬೇತು ತಾ. ೧೮ರಿಂದ ಪ್ರಾರಂಭವಾಗಿದೆ. ಒಂದು ವಾರದ ವರೆಗೆ ಇವರಿಗೆ ಸಮಾಜ ಶಿಕ್ಷಣವನ್ನು ಕೊಡುವ ರೀತಿ ನೀತಿಗಳನ್ನು ವಿವರಿಸಿ, ತಿಳಿಸಿ ಈ ಅಧ್ಯಾಪಕರ ನೇತೃತ್ವದಲ್ಲಿ ಶಿಕ್ಷಣ ಕೇಂದ್ರಗಳನ್ನು ತೆರೆಯಲಾಗುವದು.

ಕೊಡಗು ಸರಕಾರದ ಈ ಯೋಜನೆ ಯೋಗ್ಯವಾದ ದೆನ್ನಬಹುದಾದರೂ ಇದರ ಬಗ್ಗೆ ಸಾಕಷ್ಟು ಪ್ರಚಾರವೂ, ವ್ಯವಸ್ಥಿತ ಕಾರ್ಯಕ್ರಮವೂ ಇದ್ದಂತೆ ತೋರುವದಿಲ್ಲ. ಹಳ್ಳಿಯಲ್ಲಿರುವ ನಿರಕ್ಷರಸ್ಥರನ್ನು ಸಂಗ್ರಹಿಸಿ ಅವರಿಗೆ ಅಕ್ಷರಾಭ್ಯಾಸ ಮಾಡಿಸುವಲ್ಲದೆ ಇತರ ವಿಷಯಗಳ ಬೋಧನೆ ಮಾಡುವದಾದರೆ ಕಾರ್ಯಕ್ರಮದಲ್ಲಿ ಒಂದು ರೀತಿಯ ಆಕರ್ಷಣೆ ಬೇಕು. ಹಳ್ಳಿಯಲ್ಲಿ ಒಂದು ಕೇಂದ್ರವನ್ನು ತೆರೆದು ಒಬ್ಬ ಅಧ್ಯಾಪಕರನ್ನು ನೇಮಿಸಿದರೆ ಹಳ್ಳಿಯ ವಯಸ್ಕರು ಅಲ್ಲಿಗೆ ಬಂದು ಅಕ್ಷರಾಭ್ಯಾಸಕ್ಕೆ ಕೂಡಲಾರರು. ಈ ಕಾರ್ಯಕ್ಕೆ ಸ್ವಲ್ಪ ಮಟ್ಟಿಗಿನ ಪ್ರದರ್ಶನ ಬೇಕು. ಕ್ರಮಶಃ ಧ್ವನಿವಾಹಕ ಯಂತ್ರಗಳು, ರೇಡಿಯೋಗಳು ಗ್ರಾಮಗಳಲ್ಲಿ ಬೇಕಾಗಬಹುದು. ಇದೇ ಅಲ್ಲದೆ ಉತ್ಸವ ಹಾಡು, ನಾಟಕ ಮೊದಲಾದುವುಗಳ ಏರ್ಪಾಡೂ ಯೋಗ್ಯ ಭಾಷಣಗಳ ವ್ಯವಸ್ಥೆಯೂ ಬೇಕಾಗುತ್ತದೆ. ಗ್ರಾಮೀಣ ಸಮಾಜ ಶಿಕ್ಷಣ ಕೇಂದ್ರವು ಒಂದು ಆಕರ್ಷಣೀಯ ಸ್ಥಳವಾಗಬೇಕು. ಹಳ್ಳಿಯಲ್ಲಿ ದುಡಿಯುವ ಜನರು ದುಡಿಮೆಯನಂತರ ತೊಂದರೆ ಇಲ್ಲದೆ ಅಲ್ಲಿಗೆ ಬರುವಂತೆಯೂ ಮನೋರಂಜನೆಯ ಜೊತೆಯಲ್ಲಿ ಅಕ್ಷರಾಭ್ಯಾಸ ಮಾಡುವಂತೆಯೂ ಏರ್ಪಾಡು ಮಾಡಬೇಕು. ಈ ಮೊದಲೊಮ್ಮೆ ಕೊಡಗಿನ ಹಲವೆಡೆ ರಾತ್ರಿಶಾಲೆಗಳನ್ನು ಪ್ರಯೋಗಕ್ಕಾಗಿ ತೆರೆದು ಅವು ಸೋಲಿಗೊಂಡಂತೆ ಈ ಯೋಜನೆ ಆಗಬಾರದು.

ನಮ್ಮ ಸಮಾಜದ ಅಭ್ಯುದಯಕ್ಕಾಗಿ ಎಷ್ಟೋ ಪ್ರಯತ್ನಗಳಾಗಿವೆ. ಎಷ್ಟೋ ಯೋಜನೆಗಳಾಗುತ್ತವೆ. ಭಾಷಣಗಳು, ಲೇಖನಗಳೂ ಬೇಕಾದಷ್ಟು ಆಗುತ್ತವೆ. ಇಷ್ಟೆಲ್ಲಾ ನಡೆದರೂ ಫಲ ದೊರಕಿದ್ದು ಅತ್ಯಲ್ಪ. ಸಮಾಜೋದ್ಧಾರ, ಜನಜಾಗೃತಿ ಎಂದು ಹೇಳುವವರು ಹೆಚ್ಚು. ಇದನ್ನು ಕೇಳುವವರು ಕಡಿಮೆ. ದೇಶದಲ್ಲಿ ಕಾಯಿದೆಗಳಾಗಿವೆ. ಶೋಧನೆಗಳಾಗಿವೆ, ಸಾಹಿತ್ಯಗ್ರಂಥಗಳಾಗಿ ಉತ್ತಮ ತತ್ವಗಳನ್ನು ಅವು ಹೇಳುತ್ತಿವೆ. ಆದರೆ ಇದನ್ನೆಲ್ಲಾ ಅರಿತು ಆ ರೀತಿ ವರ್ತಿಸಬೇಕಾದ ಜನತೆಗೆ ವಿದ್ಯೆ ಇಲ್ಲದಿದ್ದರೆ ಏನಾದಂತಾಯಿತು. ವಿದ್ಯೆ ಇದ್ದರಲ್ಲವೆ ಸಭೆ, ಇತಿಹಾಸ? ವಿದ್ಯೆ ಇದ್ದರಲ್ಲವೇ ಸುದ್ದಿ ಪತ್ರಿಕೆಗಳು!

ಪತ್ರ ಬರೆಯಲು, ಬರೆದುದನ್ನು ಓದಿ ತಿಳಿದುಕೊಳ್ಳಲು, ಲೆಕ್ಕ ಪತ್ರವಿಡಲು ವಿದ್ಯೆ ಬೇಡವೇ? ಆದ್ದರಿಂದ ಪ್ರಜಾಪ್ರಭುತ್ವವು ನಿಜವಾಗಿಯೂ ಕಾರ್ಯರೂಪದಲ್ಲಿ ಬಂದು ಸರ್ವರ ಹಿತವಾಗಬೇಕಾದರೆ ಸರ್ವರೂ ವಿದ್ಯಾವಂತರಾಗಬೇಕು. ಸಮಾಜದ ಬಗ್ಗೆ, ದೇಶದ ಬಗ್ಗೆ ವ್ಯಕ್ತಿ ವ್ಯಕ್ತಿಯ ಬಗ್ಗೆ ಅನುಸರಿಸಬೇಕಾದ ನೀತಿಯೇನ, ಅನುಸರಿಸಬೇಕಾದ ರೀತಿ ಏನು ಎಂಬುದನ್ನು ತಿಳಿದುಕೊಳ್ಳುವ ಶಕ್ತಿ ಬರಬೇಕು.

ಇಂಥಾ ಮಹತ್ತರವಾದ ಕಾರ್ಯ ಕೈಗೂಡಬೇಕಿದ್ದರೆ ಇದಕ್ಕಾಗಿ ನೇಮಿಸಲಾದ ಒಂದೆರಡು ಉದ್ಯೋಗಸ್ಥರಿಂದ ಅಥವಾ ಆಗುವ ಕೆಲಸವಲ್ಲ. ದೇಶದ ಪ್ರತಿ ವಿದ್ಯಾವಂತನಿಗೂ ಈ ವಿಚಾರದಲ್ಲಿ ದೊಡ್ಡ ಜವಾಬ್ದಾರಿ ಇದೆ. ತಮ್ಮ ನೆರೆಹೊರೆಯವರಿಗೆ ವಿಚಾರಗಳನ್ನು ತಿಳಿಸಿ ಪ್ರತಿಯೊಬ್ಬನೂ ಸುಶಿಕ್ಷಿತ ನಾಗರಿಕನಾಗುವಂತೆ ಮಾಡುವ ಕೆಲಸವು ಇಂದಿನ ಭಾರತದಲ್ಲಿ ಅವಶ್ಯವಾದ ರಾಷ್ಟ್ರಕಾರ್ಯವಾಗಿದೆ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಜೈಲಿಗೆ ಹೋದಷ್ಟೇ ಘನತೆ ಈ ಸಮಾಜ ಪುನರ್ರಚನಾ ಕಾರ್ಯಕ್ಕೂ ಇದೆ. ಆದ್ದರಿಂದ ಎಲ್ಲರೂ ಸಹಕರಿಸಬೇಕು. ಶಕ್ತಿ ಮೀರಿದ ಸಹಾಯ ಕೊಟ್ಟು ಕೊಡಗಿನಲ್ಲಿಯ ಈ ಸಮಾಜಶಿಕ್ಷಣಾ ಯೋಜನೆಯು ಜಯಪ್ರದವಾಗುವಂತೆ ಮಾಡಬೇಕು.

ವರ್ತಮಾನ.

ಹಿಂದೂಸ್ತಾನಿ ಪ್ರಚಾರ ಸಮಿತಿ, ಮಡಿಕೇರಿ, ಇದರ ತಾ ೯-೨-೫೨ರಲ್ಲಿ ನಡೆದ ಮಹಾ ಅಧಿವೇಶನದಲ್ಲಿ ಈ ಸಂಸ್ಥೆಗೆ "ಕೊಡಗು ಜಿಲ್ಲಾ ಹಿಂದೀ ಪ್ರಚಾರ ಸಭಾ ಮಡಿಕೇರಿ" ಎಂದು ಹೆಸರು ಬದಲಾಯಿಸಲಾಗಿದೆ.

ಭಾರತ ಸರಕಾರದ ಆದೇಶಾನುಸಾರವಾಗಿ ರಚಿತವಾಗುವ ದಕ್ಷಿಣ ಪ್ರಾದೇಶಿಕ ಶಿಕ್ಷಾ ಸಮಿತಿಗೆ 'ಕೊಡಗು ಜಿಲ್ಲಾ ಹಿಂದೀ ಪ್ರಚಾರ ಸಭಾ, ಮಡಿಕೇರಿ' ಈ ಸಂಸ್ಥೆಯಿಂದ ಶ್ರೀ ಸಿ ಎನ್. ವೆಂಕಪ್ಪಯ್ಯ ಮತ್ತು ಶ್ರೀಮತಿ ಎಂ ರಾಜೀವಿಬಾಯಿ ಇವರುಗಳನ್ನು ಪ್ರತಿನಿಧಿಗಳಾಗಿ ಆರಿಸಲಾಗಿದೆ.

'ಬೆಸಗೂರು' ಮಾಧ್ಯಮಿಕ ಶಾಲಾ ಆಶ್ರಯದಲ್ಲಿ ಶ್ರೀಗಳಾದ ಪಾರುವಂಗಡ ಕೆ. ಅಚ್ಚಯ್ಯ, ಮುತ್ತಪ್ಪನವರ ಇಟ್ಟಿರುವ ಹಾಕಿ ಕಪ್ಪಿನ ಪಂದ್ಯಾಟದ ಫೈನಲ್ ಆಟವು ಬೆಸಗೂರಿಗೂ ಬಿರುನಾಣಿಗೂ ತಾ. ೯-೨-೫೨ರಲ್ಲಿ ನಡೆದು ಬೆಸಗೂರು ಶಾಲೆ ಜಯಹೊಂದಿತು. ಗೆದ್ದವರಿಗೆ ಬಟ್ಟಲನ್ನು ಶ್ರೀ ಕೆ ಸಿ ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ಕೊಡಲಾಯಿತು. ಈ ಶಾಲಾ ಟೀಮು ಈ ಮೊದಲು (ಇದೇ ವರ್ಷದಲ್ಲಿ) ಟಿ ಶೆಟ್ಟಿಗೇರಿ ಮತ್ತು ಹುದಿಕೇರಿ ಶಾಲಾ ಆಶ್ರಯಗಳಲ್ಲಿಟ್ಟಿದ್ದ ಎರಡು ಕಪ್ಪುಗಳನ್ನೂ ಗೆದ್ದಿರುತ್ತದೆ.

ತಾ. ೧೮-೨-೫೨ ರಿಂದ ೨೩-೨-೫೨ ವರೆಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ವಯಸ್ಕರ (ಸಮಾಜ) ಶಿಕ್ಷಣ ತರಬೇತಿ ಕ್ಲಾಸು ನಡೆಯುತ್ತಿದೆ.

ಅಂಡರ್ ಆಫೀಸರ್ ಶ್ರೀ. ಬೊಳ್ಳಚೆಟ್ಟಿರ ಎಂ. ಪೂವಯ್ಯ ಮತ್ತು ಬಲ್ಲಚಂಡ ಎ ನಾಣಯ್ಯ ಇವರುಗಳನ್ನು ಡೆಲ್ಲಿಯಲ್ಲಿ ತಾರೀಕು ೨೬-೧-೫೨ರಲ್ಲಿ ನಡೆದ ರಿಪಬ್ಲಿಕ್ ದಿನಾಚರಣೆಯಲ್ಲಿ ಭಾಗವಹಿಸಲು ಮೈಸೂರು ವಿಶ್ವವಿದ್ಯಾಲಯದ ನ್ಯಾಶನಲ್ ಕೆಡೆಟ್ ಕೋರಿನ ಪರವಾಗಿ ಕಳುಹಿಸಿದ್ದರು.

ಲೋಕ ಸಭೆಗೂ ಕೊಡಗಿನ ವಿಧಾನ ಸಭೆಗೂ ಸಹ ಆರಿಸಿ ಬಂದಿರತಕ್ಕ ಎಲ್ಲಾ ಮಹಾಶಯರುಗಳನ್ನೂ ಫ್ರೇಜರ್‌ಪೇಟೆ ಪುರ ನಿವಾಸಿಗಳು ಬರಮಾಡಿಕೊಂಡು ಅವರಿಗೆ ಬಿನ್ನವತ್ತಳೆಯನ್ನರ್ಪಿಸುವದಲ್ಲದೆ ಶ್ರೀ ಗಣಪತಿ ದೇವರ ಪೂಜೆ ಮತ್ತು ಸತ್ಕಾರ ಕೂಟ ಸಹ ತಾ ೨೭ನೇ ಬುಧವಾರ ಅಪರಾಹ್ನ ೪-೩೦ಕ್ಕೆ ನಡೆಸಬೇಕೆಂದು ನಿಶ್ಚಯಿಸಿಕೊಂಡಿರುತ್ತಾರೆಂದು ತಿಳಿಯಬರುತ್ತದೆ.

ಸೋಮವಾರಪೇಟೆಯ ಕಾಫಿ ಪ್ಲಾಂಟರರಾದ ದೊಡ್ಡಮನೆ ಚೆನ್ನಬಸಪ್ಪನವರ ಮಗ ಚೆನ್ನಬಸಪ್ಪನವರು ತಾ. ೧೫ರಲ್ಲಿ ಬೆಂಗಳೂರಿನಲ್ಲಿ ಶ್ರೀ ಬಿಟ್ಟಿಯಂಡ ಮುತ್ತಣ್ಣನವರ ಪುತ್ರಿಯನ್ನು ವಿವಾಹವಾದರು. ಈ ಅಂತರ್ಜಾತಿ ವಿವಾಹಕ್ಕೆ ಮೈಸೂರಿನ ಚೀಫ್ ಜಸ್ಟೀಸ್ ಪಿ ಮೇದಪ್ಪ, ಜಸ್ಟೀಸ್ ಬಾಲಕೃಷ್ಣ, ಕೋದಂಡ ಕಾರ್ಯಪ್ಪ, ಅಪ್ಪಾರಂಡ ತಿಮ್ಮಯ್ಯ ಮೊದಲಾದವರು ಹಾಜರಿದ್ದರು.

ಶ್ರೀ ಚೋನಿರ ನಾಣಯ್ಯ ಹಾಕಿ ಕಪ್ಪಿನ ಕಡೆ ಆಟವು ತಾ ೧೮ರಲ್ಲಿ ಹುದಿಕೇರಿ ಕ್ರೈಸ್ತರು ಮತ್ತು ಗೋಣಿಕೊಪ್ಪಲ ಟೀಮುಗಳೊಳಗೆ ನಡೆದು ಹುದಿಕೇರಿ ಟೀಮು ಜಯಶೀಲನಾಗಿ ಕಪ್ಪನ್ನು ಗೆದ್ದಿತು.

ತೂಚಮಕೇರಿ ಪ್ರೈಮರಿ ಎಲಿಮೆಂಟರಿ ಶಾಲಾ ಹೊಸ ಕಟ್ಟಡದ ಪ್ರವೇಶೋತ್ಸವವು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಗಣೇಶರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಡಿ. ಸುಬ್ರಾಯ, ಕೆ. ಗಣಪತಿ ಎ ಮಾದಪ್ಪ, ಎ. ಎ ಮುಬಯ್ಯ ಇವರುಗಳು ಭಾಷಣಮಾಡಿದರು. ಸುಮಾರು ಸಾವಿರ ಜನರು ಹಾಜರಿದ್ದರು. ಶಾಲಾ ಬಾಲಕರು 'ವೀರರಾಜ ವಿಜಯ'ವೆಂಬ ನಾಟಕವನ್ನು ಪ್ರದರ್ಶಿಸಿದರು.

ಬೇಕಾಗಿದ್ದಾರೆ.

ಪ್ಯೂನ್ (ಜವಾನ) ಕೆಲಸಕ್ಕೆ ಎಂಟನೇ ತರಗತಿ ಪಾಸಾದವರು ಬೇಕಾಗಿದ್ದಾರೆ. ಸೇರಬಿಚ್ಛಿಸುವವರು ತಮ್ಮ ಹೆಸರನ್ನು ಮಡಿಕೇರಿಯ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಲ್ಲಿ ರಿಜಿಸ್ಟರ್ ಮಾಡಿಸಿಕೊಳ್ಳಬೇಕಾಗಿದೆ.

ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್
2-1 ಆಫೀಸರ್.

ಸ್ಥಳ ಬದಲಾವಣೆ

ವೀರರಾಜಪೇಟೆಯ ಕೆಳಗೆ ಬಂದರೆ ಗೋಣಿಕೊಪ್ಪಲಿಗೆ ಹೋಗುವ ರಸ್ತೆ ಬಳಿ ಇದ್ದ ನಮ್ಮ ಮನ್ನಾ ಸ್ಟೋರ್ ಅಂಗಡಿಯನ್ನು ಗ್ರಾಹಕರ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಗಡಿಯಾರ ಕಂಬದ ಬಳಿ ಗಣಪತಿ ದೇವಸ್ಥಾನದ ಎದುರಿನ ಅಂಗಡಿಗೆ ಬದಲಾಯಿಸಿದ್ದೇವೆ ಎಂದಿನಂತೆ ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಎಸ್. ಎ. ಮನ್ನಾ & ಬ್ರದರ್ಸ್,
8-1 ವೀರರಾಜಪೇಟೆ.

ಸರ್ವೋದಯವೆಂದರೇನು ?

೧೯೪೮ರಲ್ಲಿ ಮಹಾತ್ಮಾಗಾಂಧೀಜಿಯವರ ಕೊಲೆಯಾದ ನಂತರ ಮಹಾತ್ಮಾಗಾಂಧೀಯವರ ಜೀವನ ಮತ್ತು ತತ್ವಗಳ ವಿಚಾರದಲ್ಲಿ ಕ್ರಮಶಃ ಭಾರತದಲ್ಲಿ ಆಸಕ್ತಿ ಕಡಿಮೆಯಾಗುತ್ತಿರುವಂತೆ ತೋರುತ್ತಿದ್ದರೂ ಹೊರಗಿನ ರಾಷ್ಟ್ರಗಳು ದಿನೇ ದಿನೇ ಈ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿವೆ. ಯುದ್ಧಕ್ಕೆ ಈಡಾಗಿ ಬಹಳ ದ ನಷ್ಟಕಷ್ಟಗಳನ್ನು ಅನುಭವಿಸಿ ಶಾಂತಿಗಾಗಿ ದಿನ ರಾತ್ರಿ ಹಾತೊರೆಯುವ ಹೊರ ರಾಷ್ಟ್ರಗಳ ಜನರು ಹಿಂಸಾವಾದದಿಂದ ಪ್ರಯೋಜನವಿಲ್ಲವೆಂದೂ, ಯುದ್ಧವು ಎಂದೂ ಶಾಂತಿಯನ್ನು ಸಂಸ್ಥಾಪಿಸಲಾರದೆಂದೂ ಮನಗಂಡು ಮಹಾತ್ಮಾಗಾಂಧೀಜಿಯವರ ಅಹಿಂಸಾ ತತ್ವದ ಕಡೆ ಆಸಕ್ತಿಯಿಂದ ನೋಡುತ್ತಿದ್ದಾರೆ. ಜಗತ್ತಿನಲ್ಲಿ ಶಾಶ್ವತವಾದ ಶಾಂತಿಯು ಹಿಂಸೆ ದ್ವೇಷಗಳಿಂದ ಸ್ಥಾಪಿತವಾಗಲಾರದು. ಬದಲು ಅಹಿಂಸೆ, ಸತ್ಯ, ಧರ್ಮ, ನೀತಿಗಳ ತಳಹದಿಯಲ್ಲಿ ರಚಿತವಾದ ಸಮಾಜ, ಸರಕಾರಗಳಿಂದಲೇ ಜಗತ್ತಿನ ಶಾಶ್ವತವಾದ ಶಾಂತಿ ಸಾಧ್ಯವೆಂದು ಅವರು ಮನಗಾಣತೊಡಗಿದ್ದಾರೆ. ಇಂಥಾ ಒಂದು ತತ್ವವನ್ನು ಮಹಾತ್ಮರು ಬೋಧಿಸಿದರು. ಬೋಧಿಸಿದುದು ಮಾತ್ರವಲ್ಲ; ಆಚರಣೆಯಲ್ಲಿ ತಂದು ತೋರಿಸಿದರು.

ಮಹಾತ್ಮಾ ಗಾಂಧಿಯವರು ತಮ್ಮ ಆತ್ಮಕಥೆಯಲ್ಲಿ ಹೀಗೆ ಹೇಳುತ್ತಾರೆ: "ನಾನು ವಿದ್ಯಾರ್ಥಿಯಾಗಿದ್ದಾಗ ಪಾಠಪುಸ್ತಕಗಳನ್ನಲ್ಲದೆ ಬೇರೆ ಓದಿದ್ದು ಕಡಿಮೆ. ಸಕ್ರಿಯ ಜೀವನದ ಕಾಲದಲ್ಲಿ ಓದಲು ಬಿಡುವೂ ದೊರೆಯುತ್ತಿರಲಿಲ್ಲ. ಆದ್ದರಿಂದ ನಾನು ಓದಿದ್ದು ಬಹು ಕಡಿಮೆ. ಇದು ಹಿತವೇ ಆಗಿರಬಹುದು. ಏಕೆಂದರೆ ಓದಿದ್ದನ್ನು ಚೆನ್ನಾಗಿ ಅರಗಿಸಿಕೊಳ್ಳುವ ಅವಕಾಶ ದೊರೆಯಿತು. ನನ್ನ ಜೀವನವನ್ನು ಸಂಪೂರ್ಣವಾಗಿ ಪರಿವರ್ತನಗೊಳಿಸಿದ ಪುಸ್ತಕವೆಂದರೆ ರಸ್ಕಿನರ 'ಅನ್ ಟು ದಿಸ್ ಲಾಸ್ಟ್' ಇದೇ ಪುಸ್ತಕವನ್ನು ಗುಜರಾಥಿಯಲ್ಲಿ 'ಸರ್ವೋದಯ' ಅಂದರೆ ಸರ್ವರ ಉದಯ ಯಾ ಎಲ್ಲರ ಅಭಿವೃದ್ಧಿ ಎಂಬ ಹೆಸರಿನಿಂದ ಭಾಷಾಂತರಿಸಿದೆ. ಆ ಪುಸ್ತಕದ ಪ್ರಕಾರ ನಾನು ತಿಳಿದುಕೊಂಡ ಮುಖ್ಯ ವಿಚಾರಗಳೆಂದರೆ—

(೧) ವ್ಯಕ್ತಿಯ ಹಿತ ಯಾ ಅಭಿವೃದ್ಧಿಯು ಸರ್ವರ ಹಿತ ಮತ್ತು ಅಭಿವೃದ್ಧಿಯಲ್ಲಿ ಅಡಗಿದೆ.

(೨) ಒಬ್ಬ ವಕೀಲನ ಕೆಲಸಕ್ಕೂ ಕ್ಷೌರಿಕನ ಕೆಲಸಕ್ಕೂ ವ್ಯತ್ಯಾಸವಿಲ್ಲ. ಏಕೆಂದರೆ ಪ್ರತಿಯೊಬ್ಬನೂ ತನ್ನ ತನ್ನ ಕೆಲಸದಿಂದ ತಮ್ಮ ಜೀವನ ನಿರ್ವಹಿಸಲು ಹಕ್ಕುದಾರರು. ಆಯಾಯ ಕೆಲಸ ಕೈಗೊಂಡಾಕ್ಷಣ ಒಬ್ಬರು ಕೀಳು ಮತ್ತೊಬ್ಬರು ಮೇಲಲ್ಲ.

(೩) ಶ್ರಮಜೀವನವು ಅರ್ಥಾತ್ ಭೂಮಿ ಉಳುವವನ ಹಾಗೂ ಕೈಗಾರಿಕೆ ಮಾಡುವವನ ಜೀವನವು ಶ್ರೇಷ್ಠವಾದುದು. ದುಡಿದು ಊಟ ಮಾಡುವ ಜೀವನವು ಆರಾಧ್ಯವಾದುದು.

ಈ ತತ್ವಗಳನ್ನು ತಿಳಿದುಕೊಂಡಕೂಡಲೆ

ಸರ್ವೋದಯ ಪರಿಚಯ.

॥ ನಿಜವಾದ ನಾಗರೀಕತೆ ॥

[ಲೇಖಾಂಕ ೧]

[ಕಳೆದ ಚುನಾವಣೆಯ ಕಾಲಕ್ಕೆ ಕೊಡಗಿನಲ್ಲಿ ಗಾಂಧೀಜಿಯವರ ಗ್ರಾಮ ಪಂಚಾಯಿತ ಆಳಿಕೆಯನ್ನು ಜಾರಿಗೆ ತರಬೇಕೆನ್ನುವ ನಮ್ಮ ರಾಜಕೀಯ ಗುರಿಯನ್ನೂ, ಸರ್ವೋದಯ ಸಮಾಜರಚನೆಯ ನಮ್ಮ ವಿಶ್ವಾಸವನ್ನೂ ಜನತೆಯ ಮುಂದೆ ಹೇಳಿದ್ದೇವೆ. ಆದರೆ ಆ ಕಾಲದಲ್ಲಿ ಆ ತತ್ವಗಳನ್ನು ವಿವರವಾಗಿ ಜನತೆಗೆ ಮುಂದಿಟ್ಟು ಮಾತಾಡುವ ಅವಕಾಶವಿರಲಿಲ್ಲ. ಏಕೆಂದರೆ ಆ ತತ್ವವನ್ನು ಕೇವಲ ಓಟು ಪಡೆಯುವ ದೃಷ್ಟಿಯಿಂದ ಹೇಳುತ್ತಿದ್ದೇವೆಂದು ಅಪಪ್ರಚಾರ ನಡೆಯುವ ಸಾಧ್ಯತೆ ಇತ್ತು. ಕಾರಣ ಆ ಕಾಲ ತತ್ವ [illegible] ಅಲ್ಲಗಳೆಯಲ್ಪಟ್ಟುದರಿಂದ ಸರ್ವೋದಯ ತತ್ವಚಿಂತನೆಗಳನ್ನು ವಿವರವಾಗಿ ಜನತೆಯ ಮುಂದಿಡಲಿಲ್ಲ. ಆದರೆ ಈಗ ಚುನಾವಣೆ ಕಳೆದಿರುವುದರಿಂದ ಆ ತತ್ವಗಳನ್ನು ವಿವರವಾಗಿ ಜನತೆಯ ಮುಂದಿಡುವ ಜನತೆಯ ಸಹಕಾರದಿಂದ ಕ್ರಮಶಃ ಆ ತತ್ವಗಳು ಜಾರಿಯಲ್ಲಿ ಬರುವಂತೆ ಯತ್ನಿಸುವುದು ಕರ್ತವ್ಯವೆಂದು ಬಗೆದು ಪ್ರಥಮ ಹೆಜ್ಜೆಯಾಗಿ ಈ ಲೇಖನದ ಮಾಲೆಯನ್ನು ಪ್ರಾರಂಭಿಸಲಾಗಿದೆ. ಈ ಲೇಖನದಲ್ಲಿ ಬರುವ ವಿಚಾರಗಳು ನನ್ನ ಸ್ವಂತದಲ್ಲ. ಮಹಾತ್ಮಾಗಾಂಧಿ, ವಿನೋಬಾ ಭಾವೆ, ನೆಹರೂ, ಪ್ರಸಾದ್, ಮಶ್ರೂವಾಲಾ, ಕಲೇಲ್ಕರ್ ಮೊದಲಾದವರ ಲೇಖನ, ಭಾಷಣಗಳಿಂದ ಸಂಗ್ರಹಿಸಿದ್ದಾಗಿವೆ.

ಬಿ. ಡಿ. ಗಣಪತಿ]

ದ ಅವನ್ನು ಕಾರ್ಯತಃ ಜಾರಿಗೆ ತರಲು ಕಂಕಣಬದ್ಧನಾಗಿ ಇಳಿದೆ."

ಆದ್ದರಿಂದ ಸರ್ವೋದಯ ತತ್ವವು ಸರ್ವಗ್ರಾಹಿಯೂ, ಸರ್ವಹಿತಾಕಾಂಕ್ಷಿಯೂ ಆದುದು. ಅತನು ಇನ್ನೊಬ್ಬನ ದುಡಿಮೆಯ ಲಾಭದಿಂದ ತಾನು ಸುಖಪಡಲಾರ. ಅನೀತಿಯ ಮಾರ್ಗವನ್ನು ಅನುಸರಿಸಲಾರ. ಇನ್ನೊಬ್ಬರಿಗೆ ಅನ್ಯಾಯ, ಹಿಂಸೆಗಳನ್ನು ಮಾಡಲಾರ. ಆತನ ಗುರಿ ಸರ್ವರ ಉದಯ. ಜಗತ್ತಿನಲ್ಲಿ ಸರ್ವರೂ ಸಮಾನರಾಗಿ ಬದುಕಿ ಬಾಳಬೇಕೆಂಬುದೇ ಆತನ ಇಚ್ಛೆ. ಆತನು ಬಹುಸಂಖ್ಯಾತರ ಹಿತವನ್ನು ಮಾತ್ರ ಬಯಸುವವನಲ್ಲ. ಹೆಚ್ಚು ಜನರ ಹಿತಕ್ಕಾಗಿ ಕೆಲ ಜನರನ್ನು ಬಲಿಕೊಡಲಾರ. ಆದರೆ ಎಲ್ಲರ ಹಿತಕ್ಕಾಗಿ ತನ್ನ ಬಲಿದಾನಕ್ಕೆ ಆತನು ಸಿದ್ಧನು. ತಾನು ಕೊಂದರೆ ಗೋಳಾದರೂ, ತಾನು ಪ್ರಾಣಕೊಡಬೇಕಾಗಿ ಬಂದರೂ ಇತರರು ಕೊಂದರೆಸಬಾರದು. ಇತರರು ಬಾಳುವಂತಾಗಬೇಕು ಎಂಬುದೇ ಆತನ ಗುರಿ.

ಗುರಿ ಮತ್ತು ದಾರಿ

ಕೆಲವರು ಹೇಳುತ್ತಾರೆ. "ಗುರಿ ಮುಟ್ಟುವದು ಪ್ರಾಮುಖ್ಯವೇ ಹೊರತು ದಾರಿ ಪ್ರಾಮುಖ್ಯವಲ್ಲ"ವೆಂದು. ಸಮತಾವಾದಿಗಳೂ ಇದೇ ಮಾತು ಹೇಳುತ್ತಾರೆ. ಆದರೆ ಅನೀತಿಯ ಅಡ್ಡದಾರಿಯಿಂದ ಗುರಿ ಸೇರಿದರೂ, ಜಯವನ್ನು ಹೊಂದಿದರೂ ಅದು ನಿಜವಾದ ಜಯವಾಗಲಾರದು. ಆದ್ದರಿಂದ ಗುರಿಯಷ್ಟೇ ಅದನ್ನು ಮುಟ್ಟಲು ನಾವು ಕೈಕೊಳ್ಳುವ ರೀತಿ ನೀತಿಯೂ ಪ್ರಾಮುಖ್ಯವಾದುದು. ಮಹಾತ್ಮ ಗಾಂಧೀಜಿಯವರು ಒಂದು ಹೆಜ್ಜೆ ಮುಂದೆ ಹೋಗಿ ಗುರಿಗಿಂತಲೂ ದಾರಿಯೇ ಪ್ರಾಮುಖ್ಯವೆನ್ನುತ್ತಾರೆ. ಸರಿಯಾದ ಸತ್ಯವಾದ ದಾರಿ ಹಿಡಿದರೆ ಅದು ಗುರಿಯತ್ತ ನಮ್ಮನ್ನು ಕೊಂಡೊಯ್ಯಲೇಬೇಕು. ಆದ್ದರಿಂದ ಗುರಿಯು ಸಾಧನೆ ಶಾಶ್ವತವಾಗಬೇಕಾದರೆ ನಾವು ಅನುಸರಿಸುವ ಮಾರ್ಗದಲ್ಲಿ ನೀತಿ ಇರಬೇಕು. ಅನೀತಿಯ ಮಾರ್ಗ ಹಿಡಿದು ಹಿತವಾಗಬೇಕೆಂಬುದು ಬೇವಿನ ಬೀಜವನ್ನು ನೆಟ್ಟು ಮಾವಿನ ಹಣ್ಣುಗಳೇಕೆ ಬಯಸಿದಂತೆ! ಆದ್ದರಿಂದ ಗುರಿಗಿಂತಲೂ ದಾರಿಯೇ ಪ್ರಾಮುಖ್ಯ. ಸರ್ವೋದಯ [illegible] ತಳಹದಿ ಇದು. ಇದರಲ್ಲಿ ಜನರಿಗೆ ಮೇಲು ಕೀಳು ಎಂಬುದಕ್ಕೆ ಪ್ರವೇಶವಿಲ್ಲ. ಅನೀತಿಗೆ ಅನ್ಯಾಯ ಧರ್ಮಕ್ಕೆ ಕೊಡುವ ಅವಕಾಶವಿಲ್ಲ. ಏಕೆಂದರೆ ಸರ್ವೋದಯವು ಒಬ್ಬನ ಹಿತಕ್ಕಾಗಿ ಇರುವ ಒಬ್ಬನಿಂದ ಸಾಧ್ಯವಾಗುವ ತತ್ವವಲ್ಲ. ಅದೊಂದು ಹೊಸ ನಾಗರೀಕತೆ. ಅದು ಎಲ್ಲರ ಹಿತಕ್ಕಾಗಿ ಎಲ್ಲರಿಂದ ನಡೆಯುವ ಸಾಮೂಹಿಕ ಕಾರ್ಯ.

ನಿಜವಾದ ನಾಗರಿಕತೆ.

ಆದ್ದರಿಂದ ವಿದ್ಯಾವಂತರು ವಿದ್ಯೆ ಇಲ್ಲದವರ ಮೇಲಿಗೆ ಮಾಡಿ ದೊಡ್ಡವರೆನಿಸಿಕೊಳ್ಳುವರು, ಆಧುನಿಕ ಯಂತ್ರ ತಂತ್ರಗಳಿಂದ ತಿಳಿಯದವರನ್ನು ವಂಚಿಸಿ ತಾವು ಮುಂದುವರಿದವರೆಂದು, ಕೆಲವರು ನಾಗರಿಕತೆಯಾಗಲಾರದು. ನಾಗರೀಕತೆಯೆಂದರೆ ವೈಭವದ ಪ್ರದರ್ಶನಗಳೇ, ಆಡಂಬರದ ಜೀವನವಾಗಲೀ ಅಲ್ಲ. ಅದ್ದದಾರಿಯ ಐಶ್ವರ್ಯವಾಗಲೀ ಮೋಸದ ಹಾದಿಯ ಗೌರವಗಳಾಗಲೀ ನಾಗರೀಕತೆಯಲ್ಲ. ಮಹಾತ್ಮಾ ಗಾಂಧಿಯವರು ಹೇಳಿದಂತೆ, "ಮಾನವನಿಗೆ ಆತನ ಕರ್ತವ್ಯದ ಪಥವನ್ನು ತೋರಿಸುವುದೇ ನಾಗರೀಕತೆ. ಕರ್ತವ್ಯವನ್ನು ಮಾಡುವುದೂ ನೀತಿಯನ್ನು ಅನುಸರಿಸುವುದೂ ಒಂದೇ [illegible] ಒಂದಿಲ್ಲದೆ ಹೊಂದಿಕೊಂಡಿರಬೇಕು. ನೀತಿಯನ್ನನುಸರಿಸುವುದೆಂದರೆ ನಮ್ಮ ಆಸೆ ಬೇಡಿಕೆಗಳನ್ನು ಮೇರೆಯಲ್ಲಿಟ್ಟು ನಮ್ಮನ್ನು ಕುರಿತು ಅರಿಯುವುದು ಹಿಡಿತದಲ್ಲಿಡಬೇಕು. ಗುಜರಾತಿಯಲ್ಲಿ ನಾಗರೀಕತೆಯೆಂದರೆ "ಸದ್ವರ್ತನೆ" ಎಂದರ್ಥವಿದೆ.

ನಾಗರೀಕತೆಯೆಂಬ ಶಬ್ದಕ್ಕೆ ಕೊಟ್ಟ ಈ ಅರ್ಥವು ಸರಿಯೆಂದಾದರೆ ಭರತಖಂಡವು ಈ ವಿಚಾರದಲ್ಲಿ ಬೇರೆಯವರಿಂದಲೂ ಕಲಿಯುತಕ್ಕದೇನಿಲ್ಲ. ಮಾನವನೆಂಬುದು ಮರ್ಕಟದ ಹಾಗೆ. ಸಿಕ್ಕಿದಷ್ಟೂ ಅದಕ್ಕೆ ಸಾಲದು. ನೋಡಿದಷ್ಟೂ ತೃಪ್ತಿಯಾಗದು. ಸಂಗ್ರಹಿಸಿದಷ್ಟೂ ಆಸೆ ಹಿಂಗದು. ನಮ್ಮ ಬಯಕೆಗಳನ್ನು ಸಲ್ಲಿಸಿಕೊಂಡಷ್ಟೂ ಅವು ಪ್ರಜ್ವಲಿಸಿ ಮೇರೆಯಿಲ್ಲದ ಬೇಡಿಕೆಗಳನ್ನು ಮುಂದಿಡುತ್ತವೆ. ಆದ್ದರಿಂದ ನಮ್ಮ ಹಿರಿಯರಿಂದಿರು, ಆಚಾರ್ಯರು ಈ ನಮ್ಮ ಬಯಕೆಗಳಿಗೆ ಒಂದು ಮಿತಿಬೇಕೆಂದು ಹೇಳಿದ್ದರು. ಸುಖ, ಆನಂದವೆಂಬುದು ಒಂದು ಮಾನಸಿಕ ಸ್ಥಿತಿ. ಬೇಕಾದಷ್ಟು ಹಣವಿದೆಯೆಂದು ಅವಶ್ಯವಾಗಿ ಒಬ್ಬನನ್ನು ಸುಖಿಯನ್ನಲಾಗುವುದಿಲ್ಲ. ಬಡತನವಿದೆಯೆಂದು ಇನ್ನೊಬ್ಬನಿಗೆ ಸುಖ ಶಾಂತಿದೊರೆಯದೆಂದಿಲ್ಲ. ವಾಸ್ತವವಾಗಿ ಶ್ರೀಮಂತರೇ ಹೆಚ್ಚಾಗಿ ಅಸುಖಿಗಳೂ ಅಶಾಂತರು! ಬಡವರೇ ಹೆಚ್ಚಾಗಿ ಶಾಂತರೂ ಸುಖಿಗಳೂ! ಇನ್ನೆಲ್ಲಾ ಪರಿಶೀಲಿಸಿಯೇ ಆಡಂಬರದ ಸುಖ ಭೋಗಗಳಿಂದ ದೂರವಿರಬೇಕೆಂದು ನಮ್ಮ ಹಿರಿಯರು ನಮಗೆ ಬೋಧಿಸಿದ್ದರು.

ಸುಖವೆಲ್ಲಿದೆ ?

ಈ ಯುಗದ ನಾಗರಿಕರಾದ ನಾವು ನಮ್ಮ ಪಾಶ್ಚಿಮಾತ್ಯ ನಾಗರೀಕತೆಗೆ ಅನುಸಾರವಾಗಿ ನಮ್ಮ ಜೀವನವನ್ನೂ ಬದಲು ಮಾಡಿದೆವು. ಹಿಂದಿನ ಚಿಕ್ಕ ಗುಡಿಸಲುಗಳ ಬದಲು ದೊಡ್ಡ ಸಿಮೆಂಟು ಕಲ್ಲಿನ ಮಹಲುಗಳನ್ನು ಕಟ್ಟಿ ಅದರಲ್ಲಿ ಸುಖವಿದೆ ಎಂದೆವು. ಕಾಲ್ನಡಿಗೆಯನ್ನು ಬಿಟ್ಟು ಮೋಟಾರು, ವಿಮಾನಗಳಲ್ಲಿ ತಿರುಗಿದೆವು. ಪಾಶ್ಚಿಮಾತ್ಯ ರಾಷ್ಟ್ರಗಳು ಇನ್ನೂ ಒಂದು ಹೆಜ್ಜೆ ಮುಂದೆ ನಡೆದು ಮಾನವನಿಗೆ ಯಂತ್ರವೇ ಜಗತ್ತನ್ನು ನಿರ್ಮಿಸಿ ಅದರಿಂದಲೇ ಮನುಷ್ಯನಿಗೆ ಸುಖ ಸಂಪತ್ತು ಎಂದು ಸಾರಿದವು. ಆದರೆ ಸುಖಶಾಂತಿ ದೊರೆಯಿತೆ? ಸುಖದ ಬಯಕೆಗಾಗಿ ನಾಗರೀಕತೆಯ ಮುನ್ನಡೆಯೆಂದು ಮಾನವನು ಮುಂದೆ ನಡೆಯತೊಡಗಿ ತನ್ನ ಮಾನವೀಯತೆಯನ್ನು ಕಳೆಕೊಂಡನು. ನ್ಯಾಯ ನೀತಿ ಧರ್ಮಗಳ ಕೊಲೆ ಮಾಡಿದನು. ಹಿಂದಿನ ಸುಖ ಜೀವನ ಮಾಡಬೇಕೆಂಬ ನೆರೆಕರೆಯವರನ್ನು, ಸುಲಿಗೆಯ ವಸ್ತುವಾಗಿ ಕಂಡನು. ಪರಿಣಾಮವಾಗಿ ಪರಸ್ಪರರಲ್ಲಿ ಅಸೂಯೆ, ಅಪನಂಬಿಕೆ, ದ್ವೇಷ, ಕಚ್ಚಾಟಗಳು ಹೆಚ್ಚಾಗಿ ಸುಖ ಶಾಂತಿಗಳಿಗೆ ಇಂದು ಎಲ್ಲಿಯೂ ನೆಲೆ ಇಲ್ಲದಾಗಿದೆ. ಎಲ್ಲಿ ಈ ಆಧುನಿಕ ನಾಗರೀಕತೆಯು ಹರಡಿದೆಯೋ ಅಲ್ಲೆಲ್ಲಾ ಅಶಾಂತಿ ತುಂಬಿದೆ. ಭೌತಿಕವಾದದ ಈ ಆಧುನಿಕ ಸುಖದ ಛಾಯೆಯು ಮಾನವನ ಹಿಂದಿನ ಶಾಂತಿಯನ್ನು ನಾಶಗೊಳಿಸಿ ಪರಸ್ಪರ ಗುದ್ದಾಡುವ ಪರಿಸ್ಥಿತಿಯನ್ನು ನಿರ್ಮಿಸಿದೆ. ನಾವು ಈ ಆಧುನಿಕ ನಾಗರೀಕತೆಯ ಹೆಸರಿನಲ್ಲಿ ಆಕಾಶದಲ್ಲಿ ಹಾರಬಹುದು. ಭೂಗರ್ಭವನ್ನು ಪ್ರವೇಶಿಸಬಹುದು. ಸಮುದ್ರದೊಳಗೆ ಜೀವಿಸಬಹುದು. ಅತ್ಯುತ್ಕೃಷ್ಟವಾದ ಶೋಧನೆಗಳನ್ನು, ಯಂತ್ರಗಳನ್ನು ಕಂಡು ಹಿಡಿದಿರಬಹುದು. ಆದರೆ ನೆರೆಕರೆಯವನೊಡನೆ, ಸಮಾಜದ ಸಹೋದರ ಸಹೋದರಿಯರೊಡನೆ, ಹೇಗೆ ಬದುಕಬೇ

ಕೇಳುವುದು ಇಂದು ನಮಗೆ ತಿಳಿಯದಾಗಿದೆ. ಎಲ್ಲಿ ನೋಡಿದರೂ ಪೈಪೋಟಿ, ಮೋಸ, ಅಸತ್ಯಗಳಿಂದಾಗಿ ಸೌಹಾರ್ದತೆ ಪ್ರೀತಿ ವಿಶ್ವಾಸಗಳು ಮಾಯವಾಗಿವೆ.

ಬದಲು ಈ ಆಧುನಿಕ ನಾಗರಿಕತೆಯು ಹೆಚ್ಚಾಗಿ ಏಕರಸದ ಕೃತಿಗಳನ್ನು ಪರಿಶೀಲಿಸಿ ನೋಡುವ. ಇಂದು ನಾವು ಸಾವಿರ ವರ್ಷಗಳ ಹಿಂದಿನ ನೇಗಿಲನ್ನೇ ಉಪಯೋಗಿಸುತ್ತಿದ್ದೇವೆ. ಅಂದಿನ ಕಾಲದಂತೆಯೇ ಚಿಕ್ಕ ಮನೆಗಳಲ್ಲಿ ವಾಸಿಸುತ್ತಿದ್ದೇವೆ. ನಮ್ಮ ವಿದ್ಯಾಭ್ಯಾಸವೂ ಹೆಚ್ಚಿನ ಬದಲಾವಣೆ ಹೊಂದಿಲ್ಲ. ಪ್ರತಿಯೊಬ್ಬನೂ ಆತನ ವ್ಯಾಪಾರ, ವ್ಯವಸಾಯಗಳನ್ನು ಅನುಸರಿಸುತ್ತಿದ್ದೇವೆ. ಇಂಥಾ ಕಡೆಗಳಲ್ಲಿ ಆ ಹಿಂದಿನ ಪ್ರೇಮ, ಪರಸ್ಪರ ಹೊಂದಿಕೊಂಡು ಬಾಳುವ ಆ ಸೌಹಾರ್ದತೆ, ಸತ್ಯ, ನೀತಿ, ಧರ್ಮಗಳ ಪರಿಪಾಲನೆ ಹೆಚ್ಚಾಗಿ ಇಂದೂ ಇದೆ. ಪಾಶ್ಚಿಮಾತ್ಯ ರಾಷ್ಟ್ರಗಳೊಡನೆ ಹೋಲಿಸುವದಾದರೆ ಹಳ್ಳಿಗಳ ನಾಡಾದ ಭಾರತದಲ್ಲಿ ನಾಗರಿಕ ದೇಶಗಳಿಗಿಂಥಾ ನ್ಯಾಯ, ನೀತಿಗಳಿವೆಯೆನ್ನಬಹುದು. ಅದಕ್ಕೆ ಕಾರಣವಿಷ್ಟೆ, ನಾವು ಆವರಂತೆ ಆಧುನಿಕ ನಾಗರಿಕತೆಗೆ ಬಲಿಯಾಗಲಿಲ್ಲ. ನಮ್ಮಲ್ಲಿ ಬಡತನವಿದೆ. ಮೂಢತೆ ಇದೆ. ಎಲ್ಲಾ ನ್ಯೂನತೆ ಇದೆ. ಆದರೂ ಕೂಡ ಜೀವನದಲ್ಲಿ ಒಂದು ಆಸ್ಥೆ ಇದೆ. ಗುರಿ ಇದೆ. ಶಾಂತಿ ಇದೆ. ಆಧುನಿಕ ನಾಗರಿಕ ರಾಷ್ಟ್ರಗಳಲ್ಲಿ ದುಡ್ಡಿದೆ. ಆಧುನಿಕ ಸಾಹಿತ್ಯಗಳಿವೆ. ಬೇಕುಬೇಕಾದ ವಸ್ತುಗಳಿವೆ. ಇವುಗಳೊಂದಿಗೇ ಅಶಾಂತಿ, ರೋಗ ರುಜಿನಗಳು ಹೆಚ್ಚಾಗಿವೆ. ಮನುಷ್ಯನು ಸುಖದ ಆಸೆಯಿಂದ ಶಾರೀರಿಕ ಕೆಲಸವನ್ನು ಬಿಟ್ಟನು. ಅಡಿಗೆ ಮಾಡುವದು ಪ್ರಯಾಸವೆಂದು ಹೋಟೆಲನ್ನು ನಂಬಿದನು. ಪರಿಣಾಮವಾಗಿ ನೂರಾರು ಕಾಯಿಲೆಗಳು ಬಂದವು. ಕುಟ್ಟುವದು ಪ್ರಯಾಸವೆಂದು ಮಿಲ್ಲುಗಳನ್ನು ನಂಬಿದನು. ಪರಿಣಾಮವಾಗಿ ಆರೋಗ್ಯ ಕೆಡಿಸಿಕೊಂಡನು. ನಡೆಯುವದು ಪ್ರಯಾಸವೆಂದು ಕಾರಿನಲ್ಲಿ ಕೂತನು, ಕಾಲುಗಳು ನಿಷ್ಪ್ರಯೋಜಕವಾಗಿ ಬಾಳುವೆ ಕಡಿಮೆಯಾಯಿತು!

ಭಾರತೀಯರಿಗೆ ಆಧುನಿಕ ನಾಗರೀಕತೆಯ ವಿಚಾರಗಳು ತಿಳಿದಿಲ್ಲವೆಂದಿಲ್ಲ. ರಾಮನ ಕಾಲದಲ್ಲೇ ವಿಮಾನ ರಚಿಸಿದ ಭಾರತೀಯರು ಅವರಲ್ಲಿ ಹಿಂದಿಲ್ಲ ಆದರೆ ಆಧುನಿಕ ಹೃದಯರಹಿತ ನಾಗರೀಕತೆಯ ಪರಿಣಾಮ ಅವರಿಗೆ ತಿಳಿದಿತ್ತು. ಆದ್ದರಿಂದಲೇ ನಮ್ಮ ಹಿರಿಯರಾದ ಋಷಿ ಮುನಿಗಳು ಸಾರಿ ಸಾರಿ ಎಚ್ಚರಿಸಿದರು, ಐಹಿಕ ಸುಖ ಭೋಗಗಳಿಂದಾಗಿ ನೀತಿಯು ಪತನವಾಗುತ್ತದೆ ಎಂದರು. ಸಿರಿಯ ಸುಖಕ್ಕಿಂಥಾ ಸತ್ಯದ ತಳಹದಿಯ ಬಡತನ ಹಿರಿದೆಂದರು. ನಾನು, ನನ್ನದು ಎಂಬುದನ್ನು ಬಿಟ್ಟು ಸರ್ವರ ಹಿತವನ್ನು ಬಯಸಬೇಕೆಂದರು. ವಿವಿಧತೆಯಲ್ಲಿ ಐಕ್ಯತೆಯನ್ನು ಕಂಡು ಸರ್ವರೂ ಒಂದು ಎಂಬುದನ್ನು ಕಾರ್ಯತಃ ಅಡಿ ಮಾಡಬೇಕೆಂದರು. ಹೌದು, ಅಂದು ಗ್ರಾಮದಲ್ಲಿ ಹಲವಾರು ವಿಧದ ಜನರಿದ್ದರೂ ಗ್ರಾಮ ಒಂದು ಕುಟುಂಬದಂತಿತ್ತು. ತಮ್ಮ ಶರೀರದ ಪ್ರತಿ ಅವಯವಗಳ ಸದ್ವಿನಿಯೋಗವೇ ಹೇಗೆ ಶಾರೀರಿಕ ಆರೋಗ್ಯಕ್ಕೆ ಹಿತಕ್ಕೆ ಅತ್ಯಾವಶ್ಯವೋ ಅದೇ ರೀತಿ ಗ್ರಾಮದ ಪ್ರತಿ ವ್ಯಕ್ತಿಯೂ ಆತನವನ ಕರ್ತವ್ಯ ಮಾಡುವದರಲ್ಲೇ ಗ್ರಾಮದ ಹಿತವೆಂದು ನಂಬಲಾಗಿತ್ತು. ಅಂದು ನೀತಿ ನಡತೆಗೆ ಬೆಲೆ ಇತ್ತು. ಅರಸನಾದರೂ ಸತ್ಯಕ್ಕೆ ಶಿರಬಾಗಿ ವರ್ತಿಸುತ್ತಿದ್ದನು. ಋಷಿಗಳು, ಫಕೀರರು ಗೌರವಾರ್ಹರಾಗಿದ್ದರು. ಆದ್ದರಿಂದ ಅಂದು ಪರಸ್ಪರ ಪ್ರೇಮವಿತ್ತು. ವಿಶ್ವಾಸವಿತ್ತು. ಸರ್ವರೂ ಒಂದೆಂಬ ಭಾವನೆ ಇತ್ತು.

ಆದರೆ ಅನಿಷ್ಟ ಆಧುನಿಕ ನಾಗರಿಕತೆಯಿಂದಾಗಿ ಈ ಹಳೆ ಪದ್ಧತಿಯು ಮೂಲೆಗುಂಪಾಯಿತು. ಬ್ರಿಟಿಷರು ಭಾರತದಲ್ಲಿ ಆಡಳಿತ ಪ್ರಾರಂಭಿಸಿ ಇಲ್ಲದ ಆಡಂಬರವನ್ನು ಬಿತ್ತಿದರು. ಬಡ ರೈತರಿಗೆ ಭಯ ಹುಟ್ಟಿಸುವ ರೀತಿ ಬದುಕತೊಡಗಿದರು. ಪರಸ್ಪರರ ಐಕ್ಯತೆಯನ್ನು ಕತ್ತರಿಸಿ ಇಡಿಯಾಗಿದ್ದ ಸಮಾಜವನ್ನು ಬಿಡಿ ಬಿಡಿಯಾಗಿ ಮಾಡಿದರು. ಕೆಲವರಿಗೆ ಬಿರುದು ಕೊಟ್ಟು ಸನ್ಮಾನಿಸಿದ್ದರೆ, ಕೆಲವರಿಗೆ ನೌಕರಿ ಕೊಟ್ಟು ಮಂಗಡಿಸಿದರು. ಹೀಗೆ ಸಮಾಜವನ್ನು ಛಿದ್ರಗೊಳಿಸಿ ಒಬ್ಬರನ್ನು ಮತ್ತೊಬ್ಬರಿಗೆ ವಿರುದ್ಧವಾಗಿ ಎತ್ತಿ ಕಟ್ಟಿದರು. ಈ ಬ್ರಿಟಿಷರ ವ್ಯಾಪಾರ ಮತ್ತು ಮೋಹಕ ವಸ್ತುಗಳಿಗಾಗಿ ಜನರು ಆತ್ರಪಡತೊಡಗಿದರು. ಬ್ರಿಟಿಷರು ಠಾಣೆ ಹಾಕಿದಲ್ಲೆಲ್ಲಾ ಪಟ್ಟಣಗಳು ಬೆಳೆಯತೊಡಗಿದವು. ದಿನ ದಿನಕ್ಕೆ ಗ್ರಾಮಗಳ ಬಲಿಗೆಯಾಗಿ ನಗರಗಳು ಬೆಳೆಯತೊಡಗಿದವು. ಭಾರತೀಯ ಸಮರಸ ಜೀವನವು ನಿರ್ನಾಮವಾಗಿ ವಿಷಯ ಲೋಲುಪ್ತ ಜೀವನವು ಆದರ್ಶವೆನಿಸಿತು. ಇದಕ್ಕಾಗಿ ಪರಸ್ಪರರ ಸುಲಿಗೆ ಪ್ರಾರಂಭವಾಯಿತು. ಪರಿಣಾಮವಾಗಿ ಸುಖ, ಶಾಂತಿಗಳು ನಿರ್ಮೂಲವಾದವು. ತತ್ವ ಸಿದ್ಧಾಂತಗಳು ಗಾಳಿಗೆ ಚೆಲ್ಲಲ್ಪಟ್ಟವು.

ಆದ್ದರಿಂದ ಇಂದು ಭರತಖಂಡವು ಈ ವಿಚಾರದಲ್ಲಿ ಬೇರೆಯವರಿಂದ ಕಲಿಯಬೇಕಾದುದೇನೂ ಇಲ್ಲ. ಭಾರತೀಯರ ಹಿಂದಿನ ವಿಕೇಂದ್ರೀಕೃತ ಜೀವನ ಕ್ರಮವು ಪುನಹ ಜಾರಿಗೆ ಬರಬೇಕಿದೆ. ಈ ವಿಚಾರಕ್ಕಾಗಿಯೇ ಮಹಾತ್ಮಾ ಗಾಂಧಿಜಿಯವರು ನೂತನ ಚಳವಳವನ್ನು ಪ್ರಾರಂಭಿಸಿದರು. ಮಾಯವಾಗಿದ್ದ ಸತ್ಯ, ನೀತಿ, ಅಹಿಂಸೆಗಳನ್ನು ಎತ್ತಿ ಸಮ್ಮುಂದಿರಿಸಿದರು. ಈ ತಳಹದಿಯಿಂದಲೇ ದುಡಿದು ಭಾರತಕ್ಕೆ ಸ್ವಾತಂತ್ರ್ಯ ಒದಗಿಸಿದರು, ಸ್ವತಂತ್ರ ಭಾರತದಲ್ಲಿ ಚಿರಂತನವಾದ ಶಾಂತಿ, ಸೌಹಾರ್ದತೆಯು ನೆಲೆಸಬೇಕಾದರೆ ಈ ಸತ್ಯ, ಧರ್ಮ, ನೀತಿಯ ಅಹಿಂಸಾ ಮಾರ್ಗವಲ್ಲದೆ ಬೇರೆ ಮಾರ್ಗವಿಲ್ಲ. ಈ ಮಾರ್ಗವೇ ಸರ್ವೋದಯ ಮಾರ್ಗ, ಈ ಮಾರ್ಗದಲ್ಲಿ ಶಾಂತಿ ಇದೆ. ಪ್ರಗತಿ ಇದೆ. ಐಕ್ಯತೆ ಇದೆ. ಸತ್ಯವಿದೆ. ಜಗತ್ತಿನ ಇಂದಿನ ಸರ್ವ ಸಮಸ್ಯೆಗಳಿಗೂ ಉತ್ತರವಿದೆ. ಆದ್ದರಿಂದಲೇ ಇದು ಸರ್ವಮಂಗಳಕರವಾದ 'ಸರ್ವೋದಯ.'ವೆನಿಸಿದೆ.

ಆಯಾ ರಾಜ್ಯಗಳಲ್ಲಿ ಭೂ ದಾನ.

ಶ್ರೀ ವಿನೋಬಾ ಭಾವೆಯವರು ಜನವರಿ ೨೫ರ ವರೆಗೆ ಆಯಾ ರಾಜ್ಯಗಳಲ್ಲಿ ಭೂದಾನದಲ್ಲಿ ಪಡೆದ ಭೂಮಿಯ ಅಂಕೆಗಳನ್ನು ಇಲ್ಲಿ ಕೊಟ್ಟಿದೆ.

ರಾಜ್ಯ	ಎಕರೆ
೧ ತೆಲಂಗಾಣ	೧೫೦೦೦
೨ ಮಧ್ಯ ಪ್ರದೇಶ	೬೦೦೦
೩ ರಾಜಸ್ಥಾನ–ಮಧ್ಯಭಾರತ	೧೪೦೦
೪ ವಿಂಧ್ಯ ಪ್ರದೇಶ	೧೦೦೦
೫ ದಿಲ್ಲಿ	೧೦೦೦
೬ ಉತ್ತರ ಪ್ರದೇಶ	೩೬೦೦೦
ಅಂತೂ	೬೧೦೦೦

೩೬೬೦ ಜನರು ಈ ಭೂದಾನ ಯಜ್ಞದಲ್ಲಿ ಭಾಗ ವಹಿಸಿರುವರು. ಅವರಲ್ಲಿ ಶ್ರೀಮಂತರೂ ಇರುವರು, ಬಡವರೂ ಇರುವರು. ಭೂದಾನ ಯಜ್ಞದ ಏಳು ತಿಂಗಳ ಅಂಕಿಗಳಿವು. ಸರಾಸರಿ ಪ್ರತಿಯೊಬ್ಬ ದಾನಿಗೆ ೧೬ ಏಕ್ರೆಯಂತೆ ಮತ್ತು ದಿನವೂ ೩೦೦ ಏಕರೆಗಳಂತೆ ಬೀಳುವುದು. ವಿನೋಬಾ ಇವರು ತಮ್ಮ ಸಂಚಾರದಲ್ಲಿ ೧೮೦ ಸ್ಥಳಗಳಲ್ಲಿ ಬಿಡಾರ ಮಾಡಿದ್ದರು. ಮೇಲೆ ಹೇಳಿದ ರಾಜ್ಯದ ಎಲ್ಲ ಭಾಗದಲ್ಲಿ ಅವರು ಸಂಚರಿಸಿಲ್ಲ. ವಿನೋಬಾ ಇವರು ಸಂಚಾರ ಮಾಡಿದ ಪ್ರದೇಶವನ್ನಷ್ಟೇ ಇದು ವ್ಯಾಪಿಸಿದೆ. ಮಹಾರಾಷ್ಟ್ರ, ಖಾನದೇಶ, ಸೌರಾಷ್ಟ್ರ, ಆಂಧ್ರ ಮೊದಲಾದ ದೇಶಗಳಿಂದ ಪತ್ರ ಮುಖೇನ ದೊರೆತ ಭೂದಾನದ ಅಂಕೆಗಳು ಇದರಲ್ಲಿ ಕೂಡಿಲ್ಲ.

(ಎಲ್ ಬಿ)

ಮಡಿಕೇರಿ ಪುರನಿವಾಸಿಗಳ 'ಜನಹಿತ ಸಂಘ.'

ತಾ. ೧೬–೨–೫೩ನೇ ಆದಿತ್ಯವಾರ ಶ್ರೀ. ಪಿ ಸಿ. ಕಾಳಪ್ಪನವರ ಅಧ್ಯಕ್ಷತೆಯಲ್ಲಿ ಕೋಹಿನೂರು ಸಿನೇಮ ಥಿಯೇಟರಿನಲ್ಲಿ ಮಡಿಕೇರಿ ಪುರನಿವಾಸಿಗಳ ಒಂದು ಸಭೆಯು ಸೇರಿತು. ತಮ್ಮ ದಿನ ನಿತ್ಯದ ಜೀವನದಲ್ಲಿ ಸಂಭವಿಸುವ ತೊಂದರೆಗಳನ್ನು ನಿವಾರಿಸಲು 'ಜನಹಿತ ಸಂಘ'ವೆಂಬ ಸಂಸ್ಥೆಯನ್ನು ಸ್ಥಾಪಿಸಬೇಕೆಂದೂ ಇದನ್ನು ರಿಜಿಸ್ಟರ್ ಮಾಡಿಸಬೇಕೆಂದೂ ತೀರ್ಮಾನಿಸಲಾಯಿತು. ಇದರ ವಿಚಾರವಾಗಿ ಶ್ರೀ ಕೆ ಕೆ. ತಿಮ್ಮಯ್ಯನವರು ಅಲ್ಲಿ ಸೇರಿದ್ದವರಿಗೆ ಸವಿಸ್ತಾರವಾಗಿ ವಿವರಿಸಿಕೊಟ್ಟರು. ಇದರ ಮುಖ್ಯ ಧ್ಯೇಯವಾದರೂ ಮಡಿಕೇರಿಯಲ್ಲಿ ವಾಸಿಸುವವರಿಗೆ ಮನೆಬಾಡಿಗೆ, ಅಕ್ಕಿ ರೇಶನ್ ಇತ್ಯಾದಿಗಳ ಸರಿಯಾದ ವ್ಯವಸ್ಥೆ ಮತ್ತು ವಿತರಣೆಯಾಗುವಂತೆ ಮಾಡುವುದಲ್ಲದೆ ಇನ್ನಿತರ ತೆರಿಗೆ, ವಿದ್ಯುಚ್ಛಕ್ತಿ ಇತ್ಯಾದಿಗಳ ವಿಚಾರವನ್ನು ವಿಮರ್ಶಿಸುವಂತೆ ತೀರ್ಮಾನಿಸಲಾಯಿತು. ಈ ಬಗ್ಗೆ ಒಂದು ಕಾರ್ಯಕಾರಿಮಂಡಳಿಯನ್ನು ಚುನಾಯಿಸಿ ಇದರ ಅಧ್ಯಕ್ಷತೆಗೆ ಶ್ರೀ. ಪೂವಯ್ಯನವರನ್ನು ನೇಮಿಸಲಾಯಿತು. ಈಗ ದೊರೆಯುವ ಅಕ್ಕಿಯನ್ನು ರೂಪಾಯಿಗೆ ಮೂರು ಸೇರು ಸಿಕ್ಕುವಂತೆ ಮಾಡಲೋಸುಗ ಸಂಬಂಧಪಟ್ಟ ಅಧಿಕಾರಿಗಳೊಡನೆ ವ್ಯವಹಾರ ಮಾಡಲು ನಿಶ್ಚಯಿಸಲಾಯಿತು. ಆ ಸಂಘಕ್ಕೆ ಮಡಿಕೇರಿ ಪುರನಿವಾಸಿಗಳು ಆದಷ್ಟು ಹೆಚ್ಚಿನ ಸಹಕಾರ ಕೊಟ್ಟು ಸದಸ್ಯರಾಗುವಂತೆಯೂ, ಆ ಸದಸ್ಯರನ್ನು ಸೇರಿಸುವುದಕ್ಕೂ, ರಿಜಿಸ್ಟರು ಮಾಡುವ ಸಂಬಂಧ ವ್ಯವಸ್ಥೆ ಮಾಡಲಿಕ್ಕೂ ಕಾರ್ಯಕಾರಿ ಮಂಡಳಿಯವರನ್ನು ಕೇಳಿಕೊಳ್ಳಲಾಯಿತು. ಅಧ್ಯಕ್ಷರ ಭಾಷಣದ ನಂತರ ಅಧ್ಯಕ್ಷರಿಗೆ ವಂದನೆ ಸಮರ್ಪಣೆಯೊಡನೆ ಸಭೆಯನ್ನು ಬರಖಾಸ್ತು ಮಾಡಲಾಯಿ.

ವೈ. ಟಿ. ವಿಶ್ವೇಶ್ವ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ. ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17.000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಮತ್ತು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಸೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಾಲಿನ ಸಾಲದ ಶಾಖೆಯ ಮೂಲಕ ದೀರ್ಘ ಕಾಲಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮೆನೇಜರ್.

'ಕೊಡಗು ರಾಮರಾಜ್ಯವಾಗಬೇಕು'

(೨ನೇ ಪುಟದಿಂದ ಸಾಗಿದ್ದು)

ಬಂದರು. ಹಣ ಪ್ರಾಣಗಳಿಗಿಂತಲೂ ನೀತಿಯೇ ಹೆಚ್ಚಿನದೆಂದು ತಿಳಿದವರು ಹೇಳತಕ್ಕ ರೀತಿ ನೀತಿಯು ಬದಿಕ್ಕೆ ಪಟ್ಟುಕೊಳ್ಳುವ ಈ ಮದ್ಯಪಾನವನ್ನು ನಿಲ್ಲಿಸಲು ಹೆಣಗಬೇಕಲ್ಲವೇ? ಬೇರೆ ಜೀವನೋಪಾಯವು ಸಾಕಷ್ಟಿರುವ ಮಂತ್ರಿಗಳಾಗಲಿರುವವರು ತಮ್ಮ ಸಂಬಳವನ್ನು ದೇಶದ ಹಿತಕ್ಕಾಗಿ ಏಕೆ ತ್ಯಾಗ ಮಾಡಬಾರದು. ಗ್ರಾಮೋದ್ಯೋಗದ ಸ್ಥಾಪನೆಯಿಂದ ಮತ್ತು ಮದ್ಯ ಸೇವನೆಯ ಅಭಾವದಿಂದ ಜನರ ಸಂಪತ್ತು ಹೆಚ್ಚಿದಾಗ ಸರಕಾರಕ್ಕೆ ಹಣ ಸಿಗದೇನು? ಪಂಡಿತ ನೆಹರೂರವರು ಈ ಸುಧಾರಣೆಯನ್ನು ನಿಧಾನವಾಗಿ ತರಬೇಕೆಂದು ಹೇಳುವವರೇನೋ ನಿಜ. ಜನರ ಸಹಕಾರವಿಲ್ಲದೆ ಯಾವ ಕಾನೂನೂ ಶಕ್ತಿಯುತವಾಗಲಾರದೆಂದು ಅವರಿಗೆ ಗೊತ್ತು. ಆದುದರಿಂದ ಜನರಲ್ಲಿ ಆ ಕಾನೂನಿನ ಅವಶ್ಯಕತೆಯನ್ನು ತೋರಿಸಿ ಅದಕ್ಕೆ ಬೇಗನೆ ಮದ್ಯಪಾನ ವಿರೋಧ ಕಾನೂನನ್ನು ತರಬೇಕು. ಈ ಮದ್ಯಪಾನದಿಂದಾಗಿ ಜನರ ಆರ್ಥಿಕ ಮತ್ತು ನೈತಿಕ ಹಾನಿಯಾಗುವುದು ಮಾತ್ರವಲ್ಲದೆ, ಮದ್ಯಪಾನ ಮಾಡುವವರಿಗೂ ಬಹಳ ಹಾನಿಯುಂಟಾಗುತ್ತದೆ. ಬಡವರ ಧಾರಣೆಯು ಏರಲಿಕ್ಕೂ, ಕೂಲಿಯು ತನ್ನ ದರವನ್ನು ಏರಿಸಲಿಕ್ಕೂ ಈ ಮದ್ಯಪಾನದ ಚಟವೇ ಕಾರಣವಾಗಿರುತ್ತದೆ. ಈ ಸುರಾದೇವಿಯು ಬಲೆಯನ್ನು ಬೀಸಿ ಓಟುಗಳನ್ನು ಸಹ ಹಿಡಿಯಬಹುದೆಂಬುದನ್ನು ನಾವು ಈಗ ತಾನೇ ಮನಗಂಡಿರುವೆವು. ಹೀಗಿರುವಾಗ ಕರಿಯಾದ ಚುನಾವಣೆಗಳಾದರೂ ಹೇಗಾಗಬೇಕು? ಸರಕಾರವನ್ನೇ ಕೆಡಿಸುವ ಈ ಪಿಡುಗನ್ನು ನಾಶ ಮಾಡುವುದು ಸರಕಾರದ ಆದ್ಯ ಕರ್ತವ್ಯವಲ್ಲವೇ?

ವಸ್ತುಗಳ ಬೆಲೆಯು ಏರುತ್ತಾ ಹೋಗಲು ಮದ್ಯಪಾನವು ಒಂದು ಕಾರಣವೆಂದು ಹೇಳಿದೆವಷ್ಟೆ. ಇದರಿಂದ ಕೂಲಿಗಾರನು ಸಂಬಳವನ್ನು ಹೆಚ್ಚಿಸಬೇಕೆಂಬ ಚಳವಳವನ್ನು ಮಾಡುವನು. ಅವನಿಗೆ ಕಮ್ಯೂನಿಸ್ಟರ ಬೆಂಬಲ ದೊರೆಯುವುದು. ಯಜಮಾನನು ನಿರುಪಾಯನಾಗಿ ಸ್ವಲ್ಪ ಮಟ್ಟಿಗೆ ಸಂಬಳವನ್ನೇರಿಸಿದರೂ ತನ್ನ ಗದ್ದೆ, ತೋಟ ಅಥವಾ ಕಾರ್ಖಾನೆಯಲ್ಲಿ ಉತ್ಪನ್ನವಾದ ವಸ್ತುಗಳ ಬೆಲೆಯನ್ನು ಏರಿಸಿಯೇ ಏರಿಸುವನು. ಆ ರೀತಿಗಳಲ್ಲಿ ಕೂಲಿಯವನೂ ಒಬ್ಬನಾಗಿರುವುದರಿಂದ ಬೆಲೆ ಏರಿದ ವಸ್ತುಗಳನ್ನು ಕೊಂಡುಕೊಳ್ಳಲಿಕ್ಕೋಸ್ಕರ ಇನ್ನೂ ಹೆಚ್ಚು ಸಂಬಳ ಕೊಡಬೇಕೆಂದು ಚಳವಳ ಹೂಡುವನು. ಈ ಚಕ್ರವು ತಿರುಗುತ್ತಲೇ ಇರುವುದು. ಆದುದರಿಂದ ದೇಶದಲ್ಲಿ ಸುಭಿಕ್ಷವಾಗಬೇಕಾದರೆ ಕೂಲಿಗಾರನ ಸಂಬಳವನ್ನು ಹೆಚ್ಚಿಸುವ ಗೊಡವೆಗೆ ಹೋಗದೆ ಅತನನ್ನೇ ಪಾಲುದಾರನನ್ನಾಗಿ ಮಾಡಿಕೊಳ್ಳಬೇಕು. ಇಲ್ಲವೇ ಅತನು ಕೂಡಾ ಸ್ವತಂತ್ರನಾದ ಭೂಸ್ವಾಮಿ ಮತ್ತು ವ್ಯಾಪಾರದಾರರೊಂದು ಗೃಹಕೈಗಾರಿಕೆಯನ್ನು ಸ್ವತಂತ್ರನಾಗಿ ಕೈಗೊಳ್ಳುವವನಾಗಬೇಕು. ಜಮೀನ್ದಾರರೂ, ತೋಟದ ಒಡೆಯರೂ, ಮಿಲ್ ಕಾರ್ಖಾನೆಗಳ ಮಾಲೀಕರೂ ಮತ್ತು ದೊಡ್ಡ ದೊಡ್ಡ ವ್ಯಾಪಾರಿಗಳೂ ಪ್ರೇಮದಿಂದ ಈ ಕ್ರಾಂತಿಯನ್ನು ತರಬೇಕು. ಇಲ್ಲವಾದರೆ ಹಿಂಸಾಮಯವಾದ ಕ್ರಾಂತಿಯು ಆಗದಿರದು. ಗಾಳಿ, ನೀರು ಮತ್ತು ಬೆಳಕು ಇವುಗಳ ಪ್ರಯೋಜನವನ್ನು ತೆಗೆದುಕೊಳ್ಳಲು ಸರ್ವರಿಗೂ ಅಧಿಕಾರವಿರುವಂತೆ ಭೂಮಿಯಲ್ಲಿ ಕೆಲಸ ಮಾಡಿ ಅದರ ಲಾಭವನ್ನು ಪಡೆಯುವ ಅಧಿಕಾರವು ಎಲ್ಲರಿಗೂ ಇದೆ. ಯಾವುದಾದರೊಂದು ಉತ್ಪಾದಕ ಕಾರ್ಯವನ್ನು ಪ್ರತಿಯೊಬ್ಬನೂ ಮಾಡಬೇಕು. ಅನೇಕರು ಶ್ರಮಪಟ್ಟು ಕೆಲವರು ಮಾತ್ರ ಕುಳಿತುಕೊಂಡು ಸುಖಪಡುವುದು ಪ್ರಾಕೃತಿಕ ನಿಯಮಕ್ಕೆ ವಿರುದ್ಧವಾದ ಸಂಗತಿ. ಹೀನ ಸ್ಥಿತಿಯಲ್ಲಿರುವ ನೆರೆಯವನನ್ನು ನಿಂದಕ್ಕೆ ತರುವುದು ಮನುಷ್ಯನ ಕರ್ತವ್ಯವೆಂಬ ವಿಚಾರಗಳನ್ನು ಎಲ್ಲರೂ ಮನಗಾಣದೆ ಗತ್ಯಂತರವಿಲ್ಲ.

ಈ ತರದ ಭಾವನೆಗಳು ಒಂದು ಸರ್ವೋದಯ ಸಮಾಜವು ನೆಲೆಗೊಳ್ಳಬೇಕಾದರೆ ಮುಂದಿನ ಜನಾಂಗವಾದ ಮಕ್ಕಳ ಶಿಕ್ಷಣವು ಅದಕ್ಕನುಕೂಲವಾಗಿರಬೇಕು. ಶಾರೀರಿಕ ಶ್ರಮವನ್ನು ಹೀನದೃಷ್ಟಿಯಿಂದ ನೋಡುವ ಅಭ್ಯಾಸವು ಹೋಗುವುದಕ್ಕಾಗಿ ಬಾಲಕರು ಗೃಹ ಕೈಗಾರಿಕೆಗಳನ್ನು ಅಭ್ಯಸಿಸುವ ಮೂಲಕವೇ ಜ್ಞಾನಾರ್ಜನೆಯನ್ನು ಮಾಡಬೇಕು. ವರ್ಧಾದಂಥಾ ಕೇಂದ್ರಗಳಲ್ಲಿ ಹಲವು ವರ್ಷ ಅಲ್ಲಿ ಶಿಕ್ಷೆಗೆ ಒಳಪಟ್ಟು ಸರಿಯಾದ ಶಿಕ್ಷಣವನ್ನು ಪಡೆದ ವ್ಯಕ್ತಿಗಳಿಂದಲೇ ಕೊಡಗಿನಲ್ಲಿ ಶಿಕ್ಷಾ ಕೇಂದ್ರಗಳನ್ನು ತೆರೆದು ಇಲ್ಲಿಯೂ "ಹಿಂದೂಸ್ಥಾನೀ ತಾಲೀಮೀ ಸಂಘ" ಅಥವಾ ಸೇವಾ ಗ್ರಾಮದ ವಾತಾವರಣವನ್ನೇ ಕಲ್ಪಿಸಿ, ಉಪಾಧ್ಯಾಯರನ್ನು ತರಬೇತು ಮಾಡಿ ಶಾಲೆಗಳನ್ನು ನಡೆಸುವಂತಾಗಬೇಕು.

ಮೇಲಿನ ಪಂಕ್ತಿಗಳಲ್ಲಿ ಕೊಡಗಿನಲ್ಲಿ ನಾವು ಮಾಡಬಹುದಾದ ಕೆಲಸಗಳ ದಿಗ್ದರ್ಶನ ಮಾತ್ರ ಕೊಡಲಾಗಿದೆ. ಬುದ್ಧಿವಂತರಾದ ಮುಂದಾಳುಗಳು ಈ ವಿಷಯಗಳಿಗೆ ಮನಸ್ಸು ಕೊಟ್ಟು ಕೊಡಗನ್ನು ನಿಜವಾಗಿಯೂ "ರಾಮರಾಜ್ಯ"ವನ್ನಾಗಿ ಮಾಡುವರೆಂದು ಆಶಿಸುತ್ತೇನೆ. ಮುಂದಾಳುಗಳು ಮನಸ್ಸು ಕೊಡದಿದ್ದರೆ ಉಳಿದವರಾದರೂ ಮಾಡಲೇಬೇಕು. ಸರಕಾರದ ಪಕ್ಷ ವಿರುದ್ಧ ಪಕ್ಷವೆಂದು ಮುಂದಾಳುಗಳು ಒಬ್ಬರೊಡನೊಬ್ಬರು ಮಲ್ಲಯುದ್ಧ ಮಾಡುತ್ತಿದ್ದರೆ, ಆ ಎರಡೂ ಪಕ್ಷಗಳಿಗೆ ಸೇರದ ನ್ಯಾಯಕ್ಕೆ ಬೆಂಬಲವೀಯುವ ಅನ್ಯಾಯವನ್ನು ಸತ್ಯಾಗ್ರಹದ ಮೂಲಕ ಎದುರಿಸುವ ಮೂರನೆಯದೊಂದು ಪಕ್ಷದ ಸ್ಥಾಪನೆಯಾಗಬೇಕಾದೀತು.

ಶ್ರೀ ಪಿ. ಪೀತಾಂಬರರವರು,
"ಕೊಡಗು" ಏಜೆಂಟರು,
ಕೊಡ್ಲಿಪೇಟೆ.

(೧ನೇ ಪುಟದಿಂದ ಸಾಗಿದದ್ದು.)

ನ್ನು ಪಡೆಯಿತು. ಮೂರನೆ ವರ್ಷವೂ ಪುನಃ ಇಂಗ್ಲೆಂಡಿಗೆ ಭೇಟಿ ಕೊಟ್ಟಾಗ ಪಂಜಾಬಿನಲ್ಲಿ ಬ್ರಿಟಿಷರು ನಡೆಸಿದ ಕ್ರೂರತ್ವವನ್ನು ಖಂಡಿಸಿ ಅನೇಕ ಭಾಷಣಗಳನ್ನು ಮಾಡಿದರು. ಆಗ ಇಂಡಿಯಾದ ಸ್ಟೇಟ್ ಸೆಕ್ರೆಟರಿಯಾಗಿದ್ದ ಮಾಂಟೆಗ್ಯೂ ಇವರ ಹೇಳಿಕೆಗಳನ್ನು ವಿರೋಧಿಸಿದರು. ಮಾಂಟೆಗ್ಯೂ ಪರಿಸ್ಥಿತಿಯನ್ನು ಎದುರಿಸಲಾರದೆ ಹಿಂತಿರುಗಿದರು. ೧೯೨೪ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ತೆರಳಿದರು. ಮರುವರ್ಷ ಕಾನ್‌ಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷಿಣಿಯಾಗಿ ಚುನಾಯಿತರಾದರು. ೧೯೨೮ರಲ್ಲಿ ಪ್ರಚಾರಕ್ಕಾಗಿ ಅಮೇರಿಕಾಕ್ಕೆ ಪ್ರಯಾಣ ಮಾಡಿದರು. ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆಗೆ ಒಪ್ಪಿಸಲ್ಪಟ್ಟರು. ೧೯೩೧ರಲ್ಲಿ ಲಂಡನಿಗೆ ಎರಡನೆ ದುಂಡು ಮೇಜಿನ ಸಭೆಗೆ ಭಾರತದ ಪ್ರತಿನಿಧಿಯಾಗಿ ಮಹಾತ್ಮ ಗಾಂಧಿಯವರ ಸಂಗಡ ತೆರಳಿದರು. ೧೯೪೨ರಲ್ಲಿ ಸೆರೆಮನೆಗೆ ಹೋಗಿ ಪುನಃ ೧೯೪೩ರಲ್ಲಿ ಅನಾರೋಗ್ಯ ನಿಮಿತ್ತ ಬಿಡುಗಡೆಯಾದರು.

ಗೌವರ್ನರ್ ಆದುದು.

೧೯೪೭ನೇ ಆಗಸ್ಟಿನಲ್ಲಿ ಯು. ಪಿ. ಗೌವರ್ನರ್ ಆದರು. ಮಹಿಳೆಯರ ಪೈಕಿ ಇಂತಹ ಒಂದು ಉತ್ಕೃಷ್ಟವಾದ ಪದವಿಯನ್ನು ಪಡೆದವರು ನಮ್ಮ ದೇಶದಲ್ಲಿಯೇ ಏ ಯಾವ ದೇಶದಲ್ಲಿಯೂ ಇರಲಿಲ್ಲವೆಂದರೆ ಅತಿಶಯೋಕ್ತಿ ಆಗಲಾರದು. ದೇಶಕ್ಕಾಗಿ ತಮ್ಮ ದೇಹವನ್ನೇ ಧಾರೆಯೆರೆದರು. ಮನೆಯ ಕೆಲಸದಲ್ಲೂ ಅಷ್ಟೆ ಪಟುತೆಯೊಡನೆ ಸಂತೋಷದಿಂದ ಮನೆಗೆಲಸ ಮಾಡುತ್ತಿದ್ದರು. ಸ್ವತಃ ಅಡಿಗೆಯನ್ನು ಮಾಡುತ್ತಿದ್ದರು. ಇಂತಹ ಮಹಾ ಭೂತಿ, ಗಾಂಧೀಜಿಯ ಶಿಷ್ಯೆ, ಕಾಂಗ್ರೆಸಿನ ಒಂದು ಸ್ತಂಭ, ಸ್ವತಂತ್ರ ಭಾರತದ ಪೂರ್ವ ನಿರ್ಮಾತೃ, ರಾಜ್ಯ ಪರಿಪಾಲನಾ ಪಾರಂಗತೆ, ಪ್ರಜಾನಿಧಿ, ಭಾರತದ ಪೂರ್ವ ವೀರನಾರಿ, ಇಂಡಿಯಾದ ನೈಟಿಂಗೇಲ್, ೧೯೪೯ನೇ ಇಸವಿ ಮಾರ್ಚಿ ಎರಡನೇ ತಾರೀಕು ತಮ್ಮ ಭೌತಿಕ ಶರೀರವನ್ನು ತ್ಯಜಿಸಿದರು. ಪ್ರಯತ್ನಪಟ್ಟಿದ್ದರೆ ತಮ್ಮದೇ ಆದ ಒಂದು ರಾಜ್ಯವನ್ನು ಕಟ್ಟಬಹುದಿತ್ತು. ತಮಗಾಗಿ ಒಂದು ಹೆಜ್ಜೆ ನೆಲವನ್ನು ಗಳಿಸಲಿಲ್ಲ. ಶ್ರೀಮತಿ ನಾಯ್ಡು ಇಂದು ಕಣ್ಮರೆಯಾಗಿದ್ದಾರೆ ಹೌದು. ಆದರೆ ಅವರ ಹೆಸರು ಸುವರ್ಣಾಕ್ಷರಗಳಿಂದ ಎಲ್ಲರ ಹೃದಯದಲ್ಲೂ ಕೆತ್ತಲ್ಪಟ್ಟಿದೆ. ಈ ಹೆಸರನ್ನು ಯಾರೂ, ಎಂದಿಗೂ ಅಳಿಸಲಾರರು. ೧೯೧೯ರಲ್ಲಿ ಕಾಂಚೀವರಂ ಕಾಂಗ್ರೆಸ್ ಅಧ್ಯಕ್ಷ ಗದ್ದುಗೆಯಿಂದ ಮಾಡಿದ ಭಾಷಣವು ಗಮನಾರ್ಹವಾಗಿದೆ. ಇಂತಹ ಮಹಾವಿಭೂತಿಗಳು ನಮ್ಮ ಭಾರತದಲ್ಲಿ ಅವತರಿಸಲೆಂದು ಅನನ್ಯ ಸದ್ಭಕ್ತಿಯಿಂದ ಆ ದೇವನಲ್ಲಿ ಪ್ರಾರ್ಥಿಸುವ.

ತಾ. ನಾ.

ಶ್ರೀಮತಿ ರೂಸ್‍ವೆಲ್ಟರು ಅಜಂತ, ಎಲ್ಲೋರಾ ಗುಹೆಗಳನ್ನು ಸಂದರ್ಶಿಸುವರು.

ಮುಂಬರುವ ತಮ್ಮ ಭಾರತ ಸಂಚಾರ ಕಾಲದಲ್ಲಿ ಅಮೇರಿಕದ ಮಾಜಿ ಅಧ್ಯಕ್ಷ ರೂಸ್‍ವೆಲ್ಟರ ವಿಧವೆ ಶ್ರೀಮತಿ ಎಲೀನರ್ ರೂಸ್‍ವೆಲ್ಟರು ಜಗತ್ಪ್ರಸಿದ್ಧ ಎಲ್ಲೋರಾ ಮತ್ತು ಅಜಂತ ಗುಹೆಗಳನ್ನು ಸಂದರ್ಶಿಸಲಿರುವರೆಂದು ಅಖಿಲ ಭಾರತ ಸ್ತ್ರೀ ಪರಿಷತ್ತಿನ ಅಧ್ಯಕ್ಷೆ ಇತ್ತೀಚೆಗೆ ಪ್ರಕಟಿಸಿರುವರು. ವಿದ್ಯಮಾನಗಳೆಲ್ಲಾ ಅನುಕೂಲವಾಗಿದ್ದರೆ ಮುಂದಿನ ಅಖಿಲ ಆಸ್ಯ ಮಹಿಳಾ ಪರಿಷತ್ತನ್ನು ಭಾರತದಲ್ಲೇ ಕೂಡಿಸುವ ಪ್ರಯತ್ನವಿದೆಯಾಗಿಯೂ ಅವರು ತಿಳಿಸಿರುವರು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಕೋವಿಗಳು, ವ್ಯವಸಾಯದ ಹತ್ಯಾರುಗಳು ಮತ್ತು ಕಬ್ಬಿಣದ ಸಲಾಕೆ ವಗೈರೆಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು ಮತ್ತು ರಿವಾಲ್ವರುಗಳು.
2. ·12ನೇ ನಂಬರಿನ ಒಂಟಿ ನಳಿಗೆಯ ಕೋವಿಗಳು.
3. 12ನೇ ನಂಬರಿನ ಜೋಡು ನಳಿಗೆಯ ಕೋವಿಗಳು.
4. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
5. 2", 1", ⅝", ½", ¼" ಕಬ್ಬಿಣದ ಸಲಾಕೆಗಳು
6. 9"×4" ಮತ್ತು 8"×4" ಕಬ್ಬಿಣದ ಬೀಮ್ಸ್ (Beams).
7. 8'×3'×12 (Gage)ನ ಕಬ್ಬಿಣದ ತಗಡುಗಳು.
8. 3"×3"×¼"ನ (Angles) ಎಂಗ್ಯೆಲ್ಸ್ ಅವಶ್ಯವಿರುವವರು ಇಂಡೆಂಟ್ ಕೊಟ್ಟಲ್ಲಿ ತರಿಸಿ ಕೊಡಬಹುದು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೆ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವವು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

Edited Printed and Published by P. I. Belliappa at 'Kodagu' Press, Mercara, for 'Kodagu' Ltd.

CA)AR 1952 ಕೊಡಗು ಕೇಲೆಂಡರ್ ೧೯೫೨

ದಿನಗಳು	ಜನವರಿ	ಫೆಬ್ರವರಿ	ಮಾರ್ಚಿ	ಏಪ್ರಿಲ್	ಮೇ	ಜೂನ್	ಜುಲೈ	ಆಗೊಸ್ತು	ಸೆಪ್ಟೆಂಬರ್	ಅಕ್ಟೋಬರ್	ನವೆಂಬರ್	ಡಿಶೆಂಬರ್
ಆದಿತ್ಯವಾರ	....	....	....	....	....	1	....	...	...	....	....	....
ಸೋಮವಾರ	..	....	....	....	....	2	....	....	1 ಜ ಬಕ್ರೀದ್	....	....	1○ ಜ. ಮಿಲಾದಿ ನಾಬಿ
ಮಂಗಳವಾರ	1 ಜ. ಹೊಸ ವರ್ಷಾರಂಭ	....	....	1	..	3	1	..	2	....	....	2 } ಜ ಹುತ್ತರಿ
ಬುಧವಾರ	2	....	....	2	....	4	2	....	3 ಜ. ಕೈಲ್ ಮುಹೂರ್ತ	1	....	3 }
ಗುರುವಾರ	3	....	...	3 ಶ್ರೀರಾಮ ನವಮಿ	1	5	3	...	4○	2 ಜ ಗಾಂಧಿ ಜಯಂತಿ	....	4
ಶುಕ್ರವಾರ	4	1	....	4	2	6	4	1	5	3○	..	5
ಶನಿವಾರ	5	2 ರಥ ಸಪ್ತಮಿ	1	5	3	7	5	2	6	4	1○ ಗುರು ನಾನಕನ ಜನ್ಮ ದಿನ	6
ಆದಿತ್ಯವಾರ	6	3	2	6	4	8○	6	3	7	5	2	7
ಸೋಮವಾರ	7	4	3	7	5	9	7○	4	8	6	3	8
ಮಂಗಳವಾರ	8	5	4	8	6	10	8	5○ ಚಂದ್ರ ಗ್ರಹಣ	9	7	4	9
ಬುಧವಾರ	9	6	5	9	7	11	9	6 ಜ. ಉಪಾಕರ್ಮ	10	8	5	10
ಗುರುವಾರ	10	7	6	10○	8	12	10	7	11	9	6	11
ಶುಕ್ರವಾರ	11	8	7	11 ಜ. ಗುಡ್ ಫ್ರೈಡೆ	9○	13	11	8	12	10	7	12
ಶನಿವಾರ	12○	9	8	12	10	14	12	9	13	11	8	13
ಆದಿತ್ಯವಾರ	13	10○ ಚಂದ್ರ ಗ್ರಹಣ	9	13	11	15	13	10	14	12	9	14
ಸೋಮವಾರ	14 ಜ ಮಕರ ಸಂಕ್ರಮಣ	11	10	14 ಜ ಸೌರಮಾನ ಯುಗಾದಿ	12	16	14	11	15	13	10	15
ಮಂಗಳವಾರ	15	12	11○ ಹೋಳಿ ಹಬ್ಬ	15	13	17	15	12 ಜ ಶ್ರೀಕೃಷ್ಣ ಜಯಂತಿ	16	14	11	16
ಬುಧವಾರ	16	13	12	16	14	18	16	13	17	15 } ಜ ಕಾವೇರಿ ಸಂಕ್ರಮಣ	12	17●
ಗುರುವಾರ	17	14	13	17	15	19	17	14	18● ಜ ಮಹಾಲಯ ಅಮಾವಾಸ್ಯೆ	16 }	13	18
ಶುಕ್ರವಾರ	18	15	14	18	16	20	18	15 ಜ ಸ್ವಾತಂತ್ರ್ಯ ದಿನ	19	17 ಜ. ದೀಪಾವಳಿ	14	19
ಶನಿವಾರ	19	16	15	19	17	21	19	16	20	18	15	20
ಆದಿತ್ಯವಾರ	20	17	16	20	18	22●	20	17	21	19	16	21
ಸೋಮವಾರ	21	18	17	21	19	23	21	18	22	20	17●	22
ಮಂಗಳವಾರ	22	19	18	22	20	24 ಜ ರಮ್ಜಾನ್	22	19	23	21	18	23
ಬುಧವಾರ	23	20	19	23	21	25	23	20●	24	22	19	24
ಗುರುವಾರ	24	21	20	24●	22	26	24	21	25	23	20	25 ಜ. ಕ್ರಿಸ್ ಮಸ್
ಶುಕ್ರವಾರ	25	22	21	25	23●	27	25	22	26 ಜ ಆಯುಧ ಪೂಜೆ	24	21	26
ಶನಿವಾರ	26● ರಿಪಬ್ಲಿಕ್ ದಿನ	23 ಜ. ಮಹಾಶಿವರಾತ್ರಿ ಕಡೇ ಶನಿವಾರ	22	26 ಕಡೇ ಶನಿವಾರ	24	28 ಕಡೇ ಶನಿವಾರ	26 ಕಡೇ ಶನಿವಾರ	23 ಜ ವಿನಾಯಕ ಚತುರ್ಥಿ	27 ಕಡೇ ಶನಿವಾರ	25 ಕಡೇ ಶನಿವಾರ	22 ಜ. ಸುಬ್ರಹ್ಮಣ್ಯ ಷಷ್ಠಿ	27 ಕಡೇ ಶನಿವಾರ
ಆದಿತ್ಯವಾರ	27	24	23	27	25	29	27	24	28	26	23	28
ಸೋಮವಾರ	28	25● ಸೂರ್ಯ ಗ್ರಹಣ	24	28	26	30 ಜ ಅರ್ಧ ವರ್ಷದ ಬ್ಯಾಂಕಿನ ಲೆಕ್ಕ	28	25	29	27	24	29
ಮಂಗಳವಾರ	29	26	25●	29 ಶಂಕರ ಜಯಂತಿ	27	....	29	26	30 ಜ. ಮೊಹರಂ	28	25	30
ಬುಧವಾರ	30	27	26 ತೆಲುಗು ವರ್ಷಾರಂಭ	30	28	....	30	27	....	29	26	31○ ಜ. ವರ್ಷದ ಬ್ಯಾಂಕಿನ ಲೆಕ್ಕ
ಗುರುವಾರ	31	28	27	....	29	....	31	28	....	30	27 ಗೀತಾ ಜಯಂತಿ	....
ಶುಕ್ರವಾರ	....	29	28	....	30	...	....	29	....	31	28	....
ಶನಿವಾರ	....	....	29 ಕಡೇ ಶನಿವಾರ	....	31 ಕಡೇ ಶನಿವಾರ	....	....	30 ಕಡೇ ಶನಿವಾರ	....	....	29 ಕಡೇ ಶನಿವಾರ	....
...ತ್ಯವಾರ	....	....	30	....	....	....	....	31	....	....	30	....
...ವಾರ	...	...	31	....	....	....	....	....	....	....	....	....

Licence No. 60.
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಕು ೭-೫-೧೯೪೮ನೇ ಶುಕ್ರವಾರ | ಸಂಚಿಕೆ ೩೮

ಸರ್ವೋದಯ ಪರಿಚಯ.

॥ ಸೇವಾಗ್ರಾಮ ಸಮ್ಮೇಳನ ॥

ಲೇ —ಡಾ. ರಾಜೇಂದ್ರ ಪ್ರಸಾದ.

[೧೯೪೮ನೇ ಮಾರ್ಚ್ ತಾರೀಕು ೧೩, ೧೪ ಮತ್ತು ೧೫ರಲ್ಲಿ ಸೇವಾಗ್ರಾಮದಲ್ಲಿ ಹಿಂದೂದೇಶದ ಪ್ರಮುಖ ವಿಧಾಯಕ ಕೆಲಸಗಾರರ ಸಮ್ಮೇಳನ ಒಂದು ನಡೆಯಿತು. ಜವಾಹರ ಲಾಲ್ ನೆಹರೂ ಮೊದಲಾದವರು ಹಾಜರಿದ್ದರು. ಆ ಸಮ್ಮೇಳನದಲ್ಲೇ ಸರ್ವೋದಯ ಸಮಾಜ ರಚನೆಯ ರೂಪರೇಖೆಗಳು ತಯಾರಾದವು. ಆ ಸಮ್ಮೇಳನದ ವಿಚಾರ ಡಾ|| ರಾಜೇಂದ್ರ ಪ್ರಸಾದರು ಬರೆದುದರ ಸಾರಾಂಶವಿದು]

ಗಾಂಧೀಜಿಯವರು ಕಳೆದ ೫೦ ವರ್ಷಗಳಿಂದ ದಕ್ಷಿಣ ಆಫ್ರಿಕಾ ಮತ್ತು ಭಾರತಗಳಲ್ಲಿ ಅವಿರತ ದುಡಿದಿದ್ದಾರೆ. ಅವರ ದುಡಿಮೆಗೆ ಒಂದು ಗುರಿ ಇದೆ, ಒಂದು ತತ್ವವಿದೆ ಒಂದು ಹೊಸ ಜೀವನ ಕ್ರಮದ ಚಿತ್ರವಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಅವರು ಒಂದು ಚಳವಳವನ್ನು ಆ ಹೊಸಬಗೆಯ ಪದ್ಧತಿ ಹಾಗೂ ತತ್ವಗಳ ಮೂಲಕ ನಡೆಸಿದರು, ಅನೇಕ ಹೊಸ ತತ್ವ ಸಿದ್ಧಾಂತಗಳ ಮೂಲಕ ಸಾಗಿಸಿದರು. ಅಧಿಕಾರ ರೂಢರಾಗಿದ್ದ ಬ್ರಿಟಿಷ್ ಸರಕಾರದ ಭೌತಿಕ ಶಕ್ತಿಯನ್ನು ಸತ್ಯ ಅಹಿಂಸೆಯ ತಳಹದಿಯಲ್ಲಿ ನಿಂತ ನೈತಿಕ ಶಕ್ತಿಯಿಂದ ಅವರು ಎದುರಿಸಿದರು.

ಅವರ ಪ್ರಚಾರವಾಗಲೀ ಯಾ ಬೋಧನೆಯಾಗಲೀ ಸನ್ಯಾಸಿಯ ರೀತಿಯದ್ದಲ್ಲ. ಸರ್ವಸ್ವವನ್ನೂ ತೊರೆದು ಅಡವಿ ಸೇರುವ ಉಪದೇಶ ಅವರದಲ್ಲ. ಸಕ್ರಿಯವಾಗಿ ಪ್ರತಿ ದಿನದ ಜೀವನದಲ್ಲಿ ಆಚರಣೆಗೆ ತರಬಹುದಾದ ತತ್ವಗಳನ್ನು ಅವರು ಬೋಧಿಸಿದರು. ಬೋಧಿಸಿದುದಲ್ಲ; ಸ್ವತಃ ಮಾಡಿ ತೋರಿಸಿದರು. ಅವರು ಇಂದು ಇಲ್ಲದಿದ್ದರೂ ಕೂಡ ಅವರು ಹೇಳಿದ ತತ್ವಗಳೂ, ಮಾಡಿದ ಕೃತಿಗಳೂ ನಮಗೆ ಮಾರ್ಗದರ್ಶನಕ್ಕಾಗಿ ಇವೆ. ನಮ್ಮ ದೇಶದಲ್ಲಿ ಗಾಂಧೀಜಿಯವರ ತತ್ವಗಳನ್ನು ಅರಿತುಕೊಳ್ಳಲಿಕ್ಕಾಗಿ, ಆ ತತ್ವಗಳಿಗಾಗಿ ದುಡಿಯಲಿಕ್ಕಾಗಿ ಪ್ರಯತ್ನಿಸಿದವರು, ಇಂದೂ ಕೂಡ ಪ್ರಯತ್ನಿಸುವವರು ಹಲವರಿದ್ದಾರೆ. ಗಾಂಧೀಜಿಯವರು ಅಪೇಕ್ಷಿಸಿದಂಥಾ ಒಂದು ಸಮಾಜ ರಚನೆಗಾಗಿ ದುಡಿಯುವ ಕಾಂಕ್ಷೆಯವರೂ ಇದ್ದಾರೆ. ಅಂಥಾ ಜನರನ್ನು ಸೇರಿಸಿ ಒಂದು ಸಂಸ್ಥೆಯನ್ನು ರಚಿಸಿ ಪರಿಣಾಮಕಾರಕವಾಗಿ ಗಾಂಧೀಜಿಯವರ ತತ್ವಗಳು ಆಚರಣೆಯಲ್ಲಿ ಬರುವಂತೆ ತಕ್ಕ ವ್ಯವಸ್ಥೆ ಮಾಡುವುದು ಈ ಸಮ್ಮೇಳನದ ಗುರಿಯಾಗಿತ್ತು. ಅಲ್ಲದೆ ಗಾಂಧೀಜಿಯವರ ನೇತೃತ್ವದಲ್ಲಿ ಸ್ಥಾಪಿತವಾಗಿ ಕೆಲಸ ಮಾಡುತ್ತಿರುವ ವಿವಿಧ ಗ್ರಾಮೋದ್ಯೋಗ ಸಂಸ್ಥೆಗಳು ಮುಂದೆ ಯಾವ ರೀತಿ ಕೆಲಸ ಮಾಡಬೇಕೆಂಬುದನ್ನು ರೂಪಿಸುವುದೂ ಈ ಸಮ್ಮೇಳನದ ಗುರಿಯಾಗಿತ್ತು.

ಈ ಸಮ್ಮೇಳನ ಕೂಡುವದಕ್ಕೆ ಮೊದಲೇ ಹಲವು ವಿಧಾಯಕ ಕಾರ್ಯಕರ್ತರು ಗಾಂಧೀಜಿಯವರೊಡನೆ ಈ ವಿಚಾರದಲ್ಲಿ ಚರ್ಚಿಸಿ ಒಂದು ರೀತಿಯ ಕಾರ್ಯಕ್ರಮವನ್ನು ತಯಾರಿಸಿದ್ದರು. ಆದರೆ ಈ ಸಮ್ಮೇಳನದಲ್ಲಿ ಗಾಂಧೀಜಿಯವರನ್ನು ಇಟ್ಟುಕೊಳ್ಳುವ ಭಾಗ್ಯ ನಮಗೊದಗಲಿಲ್ಲ.

ಗಾಂಧೀಜಿಯವರ ತತ್ವಗಳನ್ನು ಜಾರಿಯಲ್ಲಿ ತರಲು ಒಂದು ಪ್ರತ್ಯೇಕ ಸಂಸ್ಥೆ ಬೇಕೇ, ಆ ಸಂಸ್ಥೆಯ ಗುರಿ, ಶಿಸ್ತು, ಸಂಘಟನೆ ಹೇಗಾಗಬೇಕು ಎಂಬ ವಿಚಾರ ಚರ್ಚೆ ನಡೆಯಿತು. ಇದರ ನಿರ್ಣಯವು ಬಹು ಕಠಿಣ ಪ್ರಶ್ನೆಯಾಗಿತ್ತು. ಏಕೆಂದರೆ ಅನೇಕ ಎಂಥಾ ಮಹಾ ಮಹಿಮರ, ಪ್ರಖ್ಯಾತ ಪುರುಷರ ನಂತರ ಅವರ ಹಿಂಬಾಲಕರು ಅನೇಕ ಸಂಘ ಸಂಸ್ಥೆಗಳನ್ನು ರಚಿಸಿಕೊಂಡು ಆ ಮಹಾ ಪುರುಷರ ತತ್ವಗಳ ಕೊಲೆ ಮಾಡಿದ ನಿದರ್ಶನಗಳು ಚರಿತ್ರೆಯಲ್ಲಿ ಬೇಕಾದಷ್ಟಿವೆ. ಆದ್ದರಿಂದ ಗಾಂಧೀಜಿಯವರ ನಂತರ ಅವರ ತತ್ವ ಸಿದ್ಧಾಂತಗಳಿಗೂ ಇದೇ ಪರಿಸ್ಥಿತಿ ಬಾರದೆಂದು ಎಲ್ಲಾ ಕಾರ್ಯಕರ್ತರೂ ಜಾಗರೂಕರಾಗಿದ್ದರು.

ಗಾಂಧೀಜಿಯವರು ತಮ್ಮ ಜೀವನದಲ್ಲಿ ವಿಚಾರಿಸದ ವಿಷಯವಿಲ್ಲ. ಧಾರ್ಮಿಕ ವಿಚಾರವಿರಲಿ, ರಾಜಕೀಯ ವಿರಲಿ, ಸಾಮಾಜಿಕ ವಿರಲಿ, ಕೌಟುಂಬಿಕ ವ್ಯವಹಾರವಿರಲಿ ಪ್ರತಿಯೊಂದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಮಾಡಿದ್ದಾರೆ. ಅವರ ಕ್ಷೇತ್ರವು ಅಡಿಗೆ ಮನೆಯಿಂದ ಹಿಡಿದು ಅರಮನೆಯವರೆಗೆ ಆವರಿಸಿತ್ತು. ಏಕೆ? ಇಡೀ ಪ್ರಪಂಚದ ವಿಚಾರಗಳೆಲ್ಲವೂ ಅವರ ದೃಷ್ಟಿಗೆ ಬಂದಂತಿದೆ. ಅವರ ಜೀವನವೇ ಒಂದು ಸಂಶೋಧನೆ. ಈ ದೃಷ್ಟಿಯಿಂದಲೇ ತಮ್ಮ ಆತ್ಮ ಕಥೆಗೆ ಸತ್ಯ ಶೋಧನೆಯೆಂದು ಹೆಸರಿಟ್ಟರು. ಗಾಂಧೀಜಿಯವರ ನಂತರ ಅವರ ಅನುಯಾಯಿಗಳಿಗೆ ಉಪಯೋಗವಾಗುವಂತೆ ಅವರ ತತ್ವ ಸಿದ್ಧಾಂತಗಳ ಒಂದು ಪುಸ್ತಕವನ್ನು ಬರೆದಿಡಬೇಕೆಂದು ಅವರನ್ನು ಎಷ್ಟು ಒತ್ತಾಯ ಮಾಡಿದರೂ ಅವರು ಹಾಗೆ ಮಾಡಲಿಲ್ಲ. ಎಲ್ಲರಿಗೂ ಹಿತವಾದುವೆಂದು ತಿಳಿದಿರುವ ತತ್ವಗಳೇ ತಮ್ಮವೆಂದೂ ಅವುಗಳಿಗಾಗಿ ಒಂದು ಪುಸ್ತಕ ಬರೆಯಬೇಕಾದ ಅಗತ್ಯವಿಲ್ಲವೆಂದೂ ತಮ್ಮ ದೈನಂದಿನ ಜೀವನದಲ್ಲಿ ಆ ತತ್ವಗಳನ್ನು ಜಾರಿಯಲ್ಲಿ ತರುವುದೇ ಮುಖ್ಯವೆಂದೂ ಅವರು ಹೇಳುತ್ತಿದ್ದರು. ಆ ತತ್ವದ ಪ್ರಚಾರ ನಾವು ಮಾಡಬೇಕಾದುದು. ಸಮ್ಮೇಳನದ ಕಾರ್ಯಕರ್ತರ ಜವಾಬ್ದಾರಿಯಾಗಿದೆ. ಗಾಂಧೀಜಿಯವರು ತಮ್ಮ ತತ್ವಗಳ ಬಗ್ಗೆ ನಿರ್ದಿಷ್ಟ ಪುಸ್ತಕ ಬರೆಯುವುದನ್ನು ನಿರಾಕರಿಸಿದಂತೆ ಅವರ ತತ್ವಗಳಿಗಾಗಿ ನಿರ್ದಿಷ್ಟ ಕಾನೂನು ನಿಯಮಗಳನ್ನೊಳಗೊಂಡ ಒಂದು ಸಂಸ್ಥೆಯನ್ನು ಸ್ಥಾಪಿಸುವುದೂ ಅಹಿತವೆಂದು ತೋರುತ್ತದೆ. ಏಕೆಂದರೆ ಅದು ಕ್ರಮಶಃ ಆ ದೋಷಗಳಿಂದ ಚರಿತ್ರೆಯಲ್ಲಿ ಅಂಕಿತವಾಗಿರುವ ಮಹಾ ಪುರುಷರ ತತ್ವ ಸಿದ್ಧಾಂತಗಳಿಗೊದಗಿದ ಗತಿಯೇ ಇದಕ್ಕೂ ಒದಗೀತು. ಈ ರೀತಿಯಾದರೆ ಗಾಂಧೀ ವಾದವು ಒಂದು ಸಂಪ್ರದಾಯ, ಇಲ್ಲವೇ ಒಂದು ಪಂಗಡವಾಗುವುದೆಂಬುದನ್ನು ಮನಗಂಡು ಗಾಂಧೀ ತತ್ವ ಪ್ರಚಾರದ ಸಂಸ್ಥೆಯ ಸ್ಥಾಪನೆ ಬೇಕಿಲ್ಲವೆಂದು ಅಭಿಪ್ರಾಯವಾಯಿತು.

ಗಾಂಧೀಜಿಯವರ ತತ್ವಗಳು ಒಂದು ದೇಶಕ್ಕೆ ಅನ್ವಯಿಸುವವುಗಳಲ್ಲ. ಕೆಲವು ವ್ಯಕ್ತಿಗಳ ಸೊತ್ತೂ ಅಲ್ಲ. ಅಂಥಾ ತತ್ವಗಳಿಗಾಗಿ ಒಂದು ಸಂಸ್ಥೆಯನ್ನು ರಚಿಸಿದರೆ ಕ್ರಮಶಃ ಆ ಸಂಸ್ಥೆಯೇ ಒಂದು ಪಂಗಡವಾಗಿ ಗಾಂಧೀಜಿಯವರ ಸಾರ್ವತ್ರಿಕ ಹಾಗೂ ಸಮಗ್ರ ದೃಷ್ಟಿಗೆ ಆತಂಕ ಬರುವ ಸಂದರ್ಭವಿರುವ ಕಾರಣ ವಿಧಾಯಕವಾಗಿ ಗಾಂಧೀಜಿಯವರ ತತ್ವಗಳು ಜಾರಿಗೆ ಬರುವಂತೆ ನೋಡುವುದು ಮುಖ್ಯವಲ್ಲದೆ ಅದಕ್ಕಾಗಿ ಸಂಸ್ಥೆ ಕಟ್ಟುವುದು ಅಹಿತವಾಗಿದೆ. ಮಹಾತ್ಮಾ ಗಾಂಧಿಯವರ ಸರ್ವ ತತ್ವ ಸಿದ್ಧಾಂತಗಳಿಗೆ ತಳಹದಿಯೆಂದರೆ ಸತ್ಯ. ಸತ್ಯವೇ ಅವರಿಗೆ ದೇವರು. ಆ ತಳಹದಿಯ ಮೇಲೆ ಅವರ ವಿಧಾಯಕ ಕಾರ್ಯ ಕ್ರಮಗಳೆಲ್ಲವೂ ಈ ಚರಮ ಗುರಿಗೆ ತಲುಪುವ ವಿವಿಧ ಮಾರ್ಗಗಳು. ಆದ್ದರಿಂದ ಗಾಂಧೀಜಿಯವರು ಆ ವಿಧಾಯಕ ಕಾರ್ಯಕ್ರಮಗಳ ಮೂಲಕ ಸತ್ಯದ ತಳಹದಿಯಲ್ಲಿ ನಿಂತ ಸಮಾಜ ರಚನೆಗಾಗಿ ಆಶಿಸಿದ್ದರು.

ಗಾಂಧೀಜಿಯವರಿಗೆ ಹೊರಗಿನ ಆಡಂಬರದ ಮೇಲೆ ವಿಶ್ವಾಸವಿರಲಿಲ್ಲ. ಆದರೆ ಅಂತರಿಕ ಭಾವನೆಗೆ ಬೆಲೆ ಅವರಲ್ಲಿತ್ತು. ಅದಕ್ಕೆ ಸರಿಯಾಗಿ ವರ್ತಿಸುವದೇ ಸರಿಯಾದ ವರ್ತನೆಯಲ್ಲದೆ ತೋರಿಕೆಗಾಗಲೀ, ಹೆಸರು, ಘನತೆಗಳಿಗಾಗಲೀ ವರ್ತಿಸುವದು ಅವರಿಗೆ ಬೇಕಿರಲಿಲ್ಲ. ಆದ್ದರಿಂದ ಗಾಂಧೀಜಿಯವರ ತತ್ವ ಪ್ರಚಾರ ಮತ್ತು ತತ್ವಗಳನ್ನು ಆಚರಣೆಯಲ್ಲಿ ತರಲು ಹೊರಗಿನ ಸಂಸ್ಥೆಯೊಂದು ಬೇಕೆಂದು ವಾದಿಸುವವರು ಆ ತತ್ವಗಳನ್ನು ಅರಿಯಲ್ಲವೆನ್ನಬೇಕು. ಹೀಗೆನ್ನುವಾಗ ಗಾಂಧೀಜಿಯವರ ತತ್ವಗಳನ್ನು ಜಾರಿಯಲ್ಲಿ ತರಲು ಯತ್ನಿಸುತ್ತಿದ್ದವರೆಲ್ಲರೂ ಗಾಂಧೀಜಿಯವರ ವ್ಯಕ್ತಿತ್ವವೆಂಬ ಕೇಂದ್ರದ ಸುತ್ತ ಒಂದಾಗಿ ಒಂದು ಕುಟುಂಬದಂತಿದ್ದರು. ಈಗ ಅವರು ಇಲ್ಲದ ಕಾರಣ ಆ ಕೆಲಸಗಾರರನ್ನು ಒಂದು ಕಡೆ ಸೇರಿಸುವ ಒಂದು ಸಂಸ್ಥೆ ಇಲ್ಲದಿದ್ದರೆ ಇವರೆಲ್ಲರೂ ನೂಲು ಹರಿದ ಮುತ್ತಿನ ಮಾಲೆಯಂತೆ ದಿಕ್ಕು ದಿಕ್ಕಿಗೆ ಹಂಚಿಹೋಗುವ ಸಂಭವವಿದ್ದು ಪರಸ್ಪರ ಸೇರುವ ಸಾಧ್ಯತೆ ತಪ್ಪುವದೆಂಬ ಕಲ್ಪನೆ ಇತ್ತು. ಆದ್ದರಿಂದ ಸೇವಾಗ್ರಾಮದಲ್ಲಿ ಸೇರಿದ ಸಮ್ಮೇಳನವು ಒಂದು ಮಧ್ಯಮಾರ್ಗವನ್ನು ಅನುಸರಿಸಿ ಒಂದು ಕಟ್ಟುನಿಟ್ಟಾದ ಕಾನೂನಿಲ್ಲದ ಸಡಿಲವಾದ ಒಂದು ಸಂಸ್ಥೆಯನ್ನು ನಿರ್ಮಿಸುವ ನಿರ್ಣಯ ಮಾಡಿತು. ಗಾಂಧೀಜಿಯವರ ತತ್ವಗಳಲ್ಲಿ ವಿಶ್ವಾಸವಿದ್ದು, ಅದರಂತೆ ಜೀವನ ಮಾಡಲು ಯತ್ನಿಸುವವರೆಲ್ಲರೂ, ಆ ಸಂಸ್ಥೆಯ ಸದಸ್ಯರೆನಿಸುವರು.

ಇಂಥಾ ಒಂದು ಸಂಸ್ಥೆಗೆ ಸದಸ್ಯತನವಿರಬೇಕೇ, ಸದಸ್ಯತನಕ್ಕೆ ಅರ್ಹರಾಗಲು ಯೋಗ್ಯತೆಯೇನು? ಬೇರೆ ಶರತುಗಳನ್ನು ಹಾಕಬೇಕೇ ಎಂಬೀ ವಿಚಾರ ಚರ್ಚೆ ನಡೆಯಿತು. ಯಾವದೇ ರೀತಿಯ ಸದಸ್ಯತನದ ಪಟ್ಟಿ ಇರಬಾರದೆಂದೂ ಸದಸ್ಯರನ್ನು ಸೇರಿಸುವಾಗ ಯಾರು ಸದಸ್ಯರಾಗಲು ಅರ್ಹರೆಂದು ಪರಿಶೀಲಿಸುವ ಕೆಲವರಿರಬೇಕಾಗುವದೆಂದೂ, ಆದರಲ್ಲಿ ಕೆಲವರನ್ನು ಆರಿಸಿ ಕೆಲವರನ್ನು ವಿನಾಯಿಸುವ ಪರಿಸ್ಥಿತಿ ಬರುವದೆಂದೂ ಮನಗಾಣಲಾಯಿತು. ಕಡೆಗೆ ಯಾರಿಗೆ ಗಾಂಧೀಜಿಯವರ ತತ್ವಸಿದ್ಧಾಂತಗಳಲ್ಲಿ ವಿಶ್ವಾಸವಿದೆಯೋ, ಅವನ್ನು ಜಾರಿಯಲ್ಲಿ ತರಲು ಯಾರು ಶಕ್ತ್ಯಾನುಸಾರ ಪ್ರಯತ್ನ ಮಾಡುತ್ತಿರುವರೋ, ವಿಧಾಯಕ ಕಾರ್ಯಕ್ರಮಗಳಲ್ಲಿ ವಿಶ್ವಾಸವಿದ್ದು ಒಂದಿಲ್ಲೊಂದನ್ನು ಯಾರು ಅನುಸರಿಸುತ್ತಿರುವರೋ ಅಂಥವರು ಈ ಸಹಯೋಗದ ಕೂಟದ ಸದಸ್ಯರೆಂದು ಭಾವಿಸಿಕೊಳ್ಳಬಹುದಾಗಿದೆ. ತಾವು ಸದಸ್ಯರು ಹೌದೋ ಅಲ್ಲವೋ ಎಂಬವನ್ನು ನಿಶ್ಚಯಿಸುವದು ಅವರವರಿಗೆ ಬಿಟ್ಟ ಮಾತಾಗಿದೆ. ಆದ್ದರಿಂದ ಯಾರೇ ಆದರೂ ತನ್ನ ಮಟ್ಟಿಗೆ ತಾನು ಗಾಂಧೀಜಿಯವರ ತತ್ವಗಳನ್ನು ಅನುಸರಿಸುವವನೆಂಬ ವಿಶ್ವಾಸವಿದ್ದವನು ಈ ಸಮಾಜದ ಸದಸ್ಯನೆನಿಸುವನು. ಸದಸ್ಯನಾಗಲು ಚಂದಾ ಹಣವಿಲ್ಲ. ಸದಸ್ಯರ ಹೆಸರನ್ನಿಡುವ ಯಾವ ಕಚೇರಿಯೂ ಇಲ್ಲ. ಸದಸ್ಯನೆಂದು ಯಾರಿಗೂ ಯಾರೂ ಸರ್ಟಿಫಿಕೇಟು ಕೊಡುವಂತಿಲ್ಲ. ಅವರವರ ಆತ್ಮನೇ ಅವರವರನ್ನು ತೂಗಿ ಅಳೆಯುವ ವಸ್ತು. ಅವರ ಆತ್ಮದಲ್ಲಿ ತಾನು ಸದಸ್ಯನು ಹೌದೆಂದೆನಿಸಿದರೆ ಯಾರೂ ವಿರೋಧಿಸುವವರಿಲ್ಲ. ಆದ್ದರಿಂ

(೬ನೇ ಪುಟ ನೋಡಿ)

ಕೊಡಗಿನ ಆಡಳಿತ ರಚನೆ.

[ತಾರೀಕು ೨೧ರಲ್ಲಿ ಡೆಲ್ಲಿಯಿಂದ 'ಫ್ರೀ ಪ್ರೆಸ್ ಆಫ್ ಇಂಡಿಯಾ'ದವರಿಂದ ಕೊಡಲ್ಪಟ್ಟ ಲೇಖನವೊಂದು ತಾರೀಕು ೨೩ ರ ಬೊಂಬಾಯಿಯ 'ಫ್ರೀ ಪ್ರೆಸ್ ಜರ್ನಲಿ'ನಲ್ಲಿ ಪ್ರಕಟವಾಗಿದೆ. 'ಫ್ರೀ ಪ್ರೆಸ್ ಆಫ್ ಇಂಡಿಯಾ'ದವರಿಗೆ ಈ ಲೇಖನವನ್ನು ಯಾರು ಕೊಟ್ಟರೆಂಬುದು ಸ್ಪಷ್ಟವಿಲ್ಲ. ಆದರೂ ಕೊಡಗಿನ ಮುಂದಿನ ಆಡಳಿತದ ಬಗ್ಗೆ ಕೆಲವು ರೂಪರೇಖೆಗಳು ಅದರಲ್ಲಡಕವಾಗಿರುವದರಿಂದ ವಾಚಕರ ಅವಗಾಹನೆಗಾಗಿ ಅದನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಸಂ.]

ಕೊಡಗಿನ ಕಾಂಗ್ರೆಸ್ ಪಕ್ಷದ ಮುಂದಾಳು ಶ್ರೀ ಸಿ. ಎಂ. ಪೂಣಚ್ಚನವರು ಡೆಲ್ಲಿಯಲ್ಲಿ ಕಾಂಗ್ರೆಸ್ ಪ್ರೆಸಿಡೆಂಟ್, ಸಂಸ್ಥಾನ ಮಂತ್ರಿ ಗೋಪಾಲಸ್ವಾಮಿ ಅಯ್ಯಂಗಾರ್ ಮುಂತಾದವರೊಡನೆ ನಡೆಸಿದ ಮಾತುಕತೆಯಂತೆ 'ಸಿ' ವರ್ಗದ ಈ ಚಿಕ್ಕ ಪ್ರಾಂತಕ್ಕೆ ಮುಖ್ಯ ಮಂತ್ರಿಯನ್ನೊಳಗೊಂಡು ಮೂರು ಜನ ಮಂತ್ರಿಗಳಿರುವ ಜವಾಬ್ದಾರಿ ಮಂತ್ರಿ ಮಂಡಳವಿರಬೇಕೆಂದು ನಿರ್ಣಯವಾಗಿದೆ. ಹಿಂದುಳಿದ ಪಂಗಡದವರ ಪ್ರಾತಿನಿಧ್ಯಕ್ಕೆ ಅವಕಾಶ ಕೊಡಲಿಕ್ಕಾಗಿ ಒಬ್ಬ ಪಾರ್ಲಿಮೆಂಟರಿ ಸೆಕ್ರೆಟರಿಯನ್ನು ನೇಮಿಸುವ ವ್ಯವಸ್ಥೆಯಾಗಿದೆ. 'ಸಿ' ವರ್ಗದ ಪ್ರಾಂತಗಳಲ್ಲಿ ಮಂತ್ರಿಗಳು ಮಾಹೆಯಾನ ರೂ ೭೫೦ ವರೆಗೆ ಸಂಬಳ ತೆಗೆದುಕೊಳ್ಳಬಹುದೆಂದಿದ್ದರೂ ಶ್ರೀ ಪೂಣಚ್ಚನವರು ತಮ್ಮ ಮಿತ್ರರೊಡನೆ ಆಲೋಚಿಸಿದಂತೆ ರೂ ೫೦೦|- ವೇತನದಂತೆ ನಿಶ್ಚಯಿಸಬಹುದಾಗಿದೆ. ಮಂತ್ರಿಗಳಿಗೆ ಪ್ರಯಾಣದ ಬತ್ಯ ವಿಶೇಷ ಮಾಡುವದಿಲ್ಲವಂತೆ. ಪೆಟ್ರೋಲ್ ಖರ್ಚು ಅದನ್ನು ಕೊಡಲಾಗುವದು. ಮಂತ್ರಿಯಾಗುವ ವ್ಯಕ್ತಿಯೊಬ್ಬನಿಗೂ ನಾಡಿನಲ್ಲಿ ಮನೆ ಆಸ್ತಿಗಳಿರುವದರಿಂದ ವಾರಾಂತ್ಯದಲ್ಲಿ ಅವರು ತಮ್ಮ ನಾಡುಗಳಿಗೆ ಹೋಗುವ ಕಾರಣ ಪ್ರಯಾಣ ಬತ್ಯ ಕೊಡುವ ಪದ್ಧತಿ ಇದ್ದರೆ ಅದರ ದುರುಪಯೋಗವಾಗಬಹುದೆಂದು ಸಂಸ್ಥಾನ ಇಲಾಖೆಗೆ ಸೂಚಿಸಿ ಕೊಡಲಾಗಿದೆಯಂತೆ. ಶಾಸನ ಸಭೆಯ ಸದಸ್ಯರುಗಳಿಗೆ ಮಾಹೆಯಾನ ರೂ. ೧೦೦/-ರಿಂದ ೧೫೦/-ರ ವರೆಗೆ ವೇತನ ದೊರೆಯುವದು. ಈ ವಿಚಾರ ವಿನಿಮಯಕ್ಕಾಗಿ ಡೆಲ್ಲಿಗೆ ಹೋಗಿದ್ದ ಕರ್ನಲ್ ದಯಾಸಿಂಗ್ ಬೇಡಿಯವರೇ ತಾತ್ಕಾಲಿಕವಾಗಿ ಚೀಫ್ ಕಮಿಷನರಾಗಿರುವರು.

ಕೊಡಗಿನ ಸಂಪತ್ತು

೧೫೮೬ ಚದರ ಮೈಲು ವಿಸ್ತೀರ್ಣವಿದ್ದು ೨,೨೯,೦೦೦ ಜನ ಸಂಖ್ಯೆಯಿಂದ ಕೂಡಿರುವ ಈ ಚಿಕ್ಕ ಸಂಸ್ಥಾನವು ಕಾಫಿಗಾಗಿ ಹೆಸರುವಾಸಿಯಾಗಿದೆ. ಹಿಂದೂದೇಶದ ಒಟ್ಟು ಕಾಫಿ ಉತ್ಪತ್ತಿಯ ಮೂರನೆ ಒಂದಂಶವು ಕೊಡಗಿನಿಂದ ಬರುತ್ತದೆ. ಈಗ ಉತ್ಪಾದನೆಯಾಗುತ್ತಿರುವ ಆರೇಳು ಸಾವಿರ ಟನ್ ಕಾಫಿಯನ್ನು ಸ್ವಾಭಾವಿಕವಾಗಿ ೧೦ ಸಾವಿರ ಟನ್ನಿಗೆ ಏರಿಸಬಹುದು. ಜಗತ್ತಿನ ಪೇಟೆಗಳಲ್ಲೂ ಹಿಂದೂದೇಶದಲ್ಲೂ ಕಾಫಿಗಾಗಿ ಬೇಡಿಕೆ ತುಂಬಾ ಇದೆ.

ಪೌಂಡಿಗೆ ಎಂಟಾಣೆಯಂತೆ ಹಾಕುವ ಎಕ್ಸೈಸ್ ಕಂದಾಯವು ಒಳ್ಳೆ ಆದಾಯದ ದಾರಿ. ಕೊಡಗಿನಲ್ಲಿ ಸುಮಾರು ೧೦೦ ಜನರ ಪ್ಲಾಂಟರಾಗಿದ್ದು ಅವರಲ್ಲಿ ಶೇಕಡ ೬೦ರಷ್ಟು ಬ್ರಿಟಿಷರಾಗಿದ್ದಾರೆ. ಕಾಫಿ ವ್ಯವಸಾಯದ ವಿಸ್ತೀರ್ಣವು ೪೨,೦೦೦ ಎಕರೆಗಳಷ್ಟಿದೆ.

ಕೊಡಗಿನಲ್ಲಿ ಬೆಳೆಯುವ ಒಂದು ವಿಧದ ಕಿತ್ತಳೆಯು ಇಡೀ ಹಿಂದೂದೇಶದಲ್ಲಿ ಉತ್ತಮವಾದುದೆಂದು ಪರಿಗಣಿಸಲ್ಪಟ್ಟಿದೆ. ಆದರೆ ಕಿತ್ತಳೆಯು ಕೆಲವು ಎಂಟು ಹತ್ತು ದಿನಗಳಲ್ಲೇ ಹಾಳಾಗುವದರಿಂದ ದೂರದ ಪ್ರದೇಶಗಳಿಗೆ ಮಾರಾಟಕ್ಕೆ ಸಾಗಿಸಲಾಗುವದಿಲ್ಲ. ಆದ್ದರಿಂದ ಮೈಸೂರು, ದ. ಕನ್ನಡ ಮಲ್ನಾಡಿನ ಹತ್ತಿರದ ಪ್ರದೇಶಗಳಲ್ಲಿ ಇದು ಮಾರಾಟವಾಗುತ್ತದೆ. ಏಲಕ್ಕಿ, ಒಳ್ಳೆ ಮೆಣಸು, ಕಾಡು ಉತ್ಪತ್ತಿಗಳಾದ ಗಂಧ, ತೇಗ, ಬೀಟೆ ಮೊದಲಾದವುಗಳಿಂದ ಸರಕಾರಕ್ಕೆ ಗಣನೀಯ ಆದಾಯ ಬರುತ್ತದೆ. ವ್ಯವಸಾಯ ಆದಾಯ ತೆರಿಗೆಯು ಇನ್ನೂ ಹಾಕಲ್ಪಡದಿದ್ದರೂ ಈ ಬಗ್ಗೆ ಮಸೂದೆಯು ಈಗಾಗಲೇ ಪಾಸಾಗಿದೆ. ಈ ಪ್ರಾಂತದ ವಾರ್ಷಿಕ ಉತ್ಪತ್ತಿಯು ಸುಮಾರು ೭೦ ಲಕ್ಷವಿದೆ. ಈ ಸಂಸ್ಥಾನದ ಉಳುವರಿಯು ೭೫ ಲಕ್ಷವಿದೆ. ಇದರಲ್ಲಿ ಸ್ವಲ್ಪ ಭಾಗವನ್ನೂ ಪ್ಲಾನಿಂಗ್ ಕಮಿಷನ್ ಬರುವ ಐದು ವರ್ಷಗಳಿಗಾಗಿ ಕೊಡಗಿಗಾಗಿ ಇಟ್ಟಿರುವ ೭೫ ಲಕ್ಷವನ್ನೂ ಸೇರಿಸಿ ಇವರಿಂದ ಕೊಡಗಿನಲ್ಲಿ ಕೆಲವು ಸಣ್ಣ ಯೋಜನೆಗಳನ್ನು ಕೈಕೊಳ್ಳಲಾಗುವದು. ಕೊಡಗಿಗೆ ಕೇಂದ್ರದಿಂದ ಹೆಚ್ಚಿನ ಹಣ ಸಹಾಯ ಪಡೆಯುವ ಬಗ್ಗೆ ಮುಂದಾಳುಗಳು ಮಾಡಿದ ಪ್ರಯತ್ನ ಫಲಕಾರಿಯಾಗಿಲ್ಲ. ಅ[illegible] ಕೊಡಗಿನ ಆಳುವರ ಪ್ರಾಂತವಾಗಿ[illegible] ಮುಖ್ಯ ಬೆಳೆ ಬತ್ತವಾಗಿದೆ.

ರಾಜಕೀಯ ಹಿನ್ನೆಲೆ

ಕೇಂದ್ರದ ಆಡಳಿತದಲ್ಲಿರುವ ಪ್ರಾಂತಗಳಲ್ಲಿ ಪರಿಮಿತ ಜವಾಬ್ದಾರಿಯಿಂದ ಕೂಡಿದ ಶಾಸನ ಸಭೆಯನ್ನು ೧೯೨೪ ರಲ್ಲೇ ಪಡೆದ ಕೊಡಗು ಪ್ರಥಮ ಸಂಸ್ಥಾನವೆನಿಸಿದೆ. ಆ ಸಭೆಯು ಕೇವಲ ಶಿಫಾರಸ್ಸಿನದಾಗಿತ್ತು. ಇಲ್ಲಿ ಚೀಫ್ ಕಮಿಷನರನಿಂದಲೇ ಆಡಳಿತವು ನಡೆಯುತ್ತಿತ್ತು. ಈ ಸಭೆಯ ೨೦ ಸದಸ್ಯರಲ್ಲಿ ೧೫ ಜನರು ಚುನಾಯಿತರಾಗಿದ್ದರು. ೧೯೪೭ ರಿಂದ ಯುರೋಪಿಯನರ ಪ್ರಾತಿನಿಧ್ಯ ನಿಂತಿತು. ಆಗ ಚುನಾವಣೆಗೆ ಓಟು ಕೊಡುವ ಅಧಿಕಾರವು ರೂ ೫ ಕ್ಕಿಂತ ಹೆಚ್ಚು ಕಂದಾಯ ಕೊಡುವ ಯಾ ಸ್ಕೂಲ್ ಫೈನಲ್ ಪಾಸಾದವರಿಗೆ ಮಾತ್ರ ಇತ್ತು.

ಕೊಡಗಿನಲ್ಲಿ [illegible] ಸುಮಾರು ೪೩೦೦೦ ಜನರಿದ್ದಾರೆ. ಇವರು ಮುಖ್ಯವಾಗಿ ದಕ್ಷಿಣ ಕನ್ನಡ, ಮೈಸೂರಿನಿಂದ ಬಂದವರು. ಕಂಗಾನಿಯಾಗಿ ತೋಟ ಕೆಲಸಕ್ಕೆ [illegible]ಗಿ ತಮಿಳುನಾಡಿನಿಂದ ಕೆಲಸಗಾರರು ಬರುತ್ತಾರೆ. ಹೊರಗಿನವರಲ್ಲಿ ಗೌಡರು, ಒಕ್ಕಲಿಗರು ಮಾತ್ರ ನೆಲೆಸಿದ್ದಾರೆ. ಬಹುಮತದ ಜನರು ಇನ್ನೂ ಬಡವರಾಗಿದ್ದಾರೆ. ಅದಲ್ಲದೆ ಇಲ್ಲಿಯ ಮೂಲನಿವಾಸಿಗಳು ಸುಮಾರು ೪೫,೦೦೦ ಜನರಿದ್ದಾರೆ. ಇವರಲ್ಲರೂ ಜಮ್ಮ ಹಿಡುವಳಿದಾರರು. ಇಲ್ಲಿಯ ಭೂಮಿಯ ಹಿಡುವಳಿಯು ಜಮ್ಮಾ (ಅದಾವ 'ಟೆಸ್ಟ್ ಲೇಂಡ್' ಅಂದರೆ ದ. ಹಿಂದೂಸ್ಥಾನದ 'ಇನಾಮು' ಭೂಮಿಯಂತಾದ್ದು) ಮತ್ತು ಸಾಗ ಎಂಬದಾಗಿ ಎರಡು ಗಳಾಗಿವೆ. ಕೊಡಗರು ಹಿಂದೂದೇಶಕ್ಕಾಗಿ ಪ್ರಾಮುಖ್ಯವಾಗಿ ಸಂರಕ್ಷಣಾ ಸೇನೆಗಳಿಗೆ ಕೆಲವು ಉನ್ನತ ವ್ಯಕ್ತಿಗಳನ್ನು ಕೊಟ್ಟಿದೆ. [illegible] ಮುಖ್ಯರಾದ ಜನರಲ್ ಕಾರಿಯಪ್ಪನವರಲ್ಲದೆ ಜನರಲ್ ತಿಮ್ಮಯ್ಯ ಮತ್ತು ಇತರ ಅನೇಕ ಕೆಳದರ್ಜೆಯ ಅಧಿಕಾರಿಗಳಿದ್ದಾರೆ.

ರಾಜಕೀಯ ರಚನೆ

ಈ ಸಂಸ್ಥಾನದ ಚುನಾವಣೆಯಲ್ಲಿ ಕಾಂಗ್ರೆಸ್ ಜಯಶಾಲಿಯಾಗುವದೋ ಎಂಬ ಬಗ್ಗೆ ಕಾಂಗ್ರೆಸ್ ವತಿಯಲ್ಲೇ ದೊಡ್ಡ ಸಂಶಯವಿತ್ತು. ಇದು ಈ ಸಂಸ್ಥಾನದ ಪರಿಸ್ಥಿತಿಯ ಸರಿಯಾದ ಮಾಹಿತಿ ಇಲ್ಲದ ಕೆಲವು ಮೇಲ್ದರ್ಜೆಯವರು ಕೊಟ್ಟ ತಪ್ಪು ಅಭಿಪ್ರಾಯದ ಕಾರಣವಾಗಿತ್ತು. ಕಾಂಗ್ರೆಸ್ ಒಂದು ರಾಜಕೀಯ ಸಂಸ್ಥೆಯಾಗಿ ಉಪೇಕ್ಷಣೀಯರಾದರೂ ನಿಷ್ಠಾವಂತ ವ್ಯಕ್ತಿಗಳ ಸ್ವಂತ ಜವಾಬ್ದಾರಿ ಮೇಲೆ ಚುನಾವಣೆ ನಡೆಯಲೆಂದೂ ಸೂಚಿಸಲ್ಪಟ್ಟಿತ್ತು. ಫಲಿತಾಂಶವು ಗೊತ್ತಾದ ನಂತರ ಚುನಾಯಿತರಾದ ಸದಸ್ಯರಿಂದ ಕೂಡಿ ಪುನಃ ಕಾಂಗ್ರೆಸ್ಸು ಅಸ್ತಿತ್ವಕ್ಕೆ ಬರಬೇಕೆಂದೂ ಸೂಚಿಸಲಾಗಿತ್ತು. ಕೊಡಗಿನ ಕಾಂಗ್ರೆಸ್ ಮುಂದಾಳುಗಳಾದ ಶ್ರೀ ಪೂಣಚ್ಚ ಮುಂತಾದವರು ಮತ್ತು ಕೆಲವು ಕರ್ನಾಟಕ ಪ್ರಾಂತದವರು ಕೊಡಗು ಕಾಂಗ್ರೆಸ್ಸು ಚುನಾವಣೆಯಲ್ಲಿ ಹೋರಾಡಬೇಕೆಂದೂ ಅದು ಗೆಲ್ಲುವ ಸಂಭವವಿದೆಯೆಂದೂ ಭರವಸೆ ಕೊಟ್ಟರು.

ಕೊಡಗಿಗೆ ಎರಡು ಜನರ ಮಂತ್ರಿಮಂಡಳ.

ಕೊಡಗಿನಲ್ಲಿ ಹೊಸ ಮಂತ್ರಿಮಂಡಳ ರಚನೆಯ ಕುರಿತು ತಾರೀಕು ೧೮ಕ್ಕೆ ಕಾಂಗ್ರೆಸ್ ಪಕ್ಷದ ಶಾಸನ ಸಭಾಸದಸ್ಯರ ಮತ್ತು ಇತರ ಕೆಲವು ಆಹ್ವಾನಿತರ ಸಭೆಯು ತಾ. ೧೯ರಲ್ಲಿ ನಡೆಯಿತು. ಅಖಿಲಭಾರತ ಕಾಂಗ್ರೆಸಿನ ಕಾರ್ಯದರ್ಶಿಗಳಾದ ಶ್ರೀ. ಶ್ರೀನಿವಾಸಮಲ್ಯರೂ ಮಂಗಳೂರಿನ ಶ್ರೀ. ಎನ್. ಎಸ್. ಕಿಲ್ಲೆಯವರೂ ಮೀಟಿಂಗಿಗೆ ಬಂದಿದ್ದರು.

ಮಂತ್ರಿಮಂಡಳ ರಚನೆಯ ವಿಚಾರವಾಗಿ ಈ ಸಭೆಯಲ್ಲಿ ಚರ್ಚೆ ನಡೆದು ಮಂತ್ರಿಮಂಡಳದಲ್ಲಿ ಎರಡು ಜನ ಮಂತ್ರಿಗಳಿರಬೇಕೆಂದು ನಿರ್ಣಯಿಸಿ ಶ್ರೀ ಸಿ. ಎಂ. ಪೂಣಚ್ಚ ಮತ್ತು ಶ್ರೀ. ಕೆ. ಮಲ್ಲಪ್ಪನವರ ಹೆಸರುಗಳನ್ನು ಬಹುಮತದಿಂದ ಅಂಗೀಕರಿಸಲಾಯಿತು. ಶ್ರೀ. ಸಿ. ಎಂ. ಪೂಣಚ್ಚನವರು ಮುಖ್ಯಮಂತ್ರಿಯಾಗುವರು. ಈ ನಿರ್ಣಯಕ್ಕೆ ಬರುವ ಮೊದಲು ಸುಮಾರು ಮೂರು ಗಂಟೆಗಳ ವರೆಗೆ ತೀವ್ರ ಚರ್ಚೆ ನಡೆಯಿತು. ಮೊದಲಾಗಿ ಮಂತ್ರಿಮಂಡಳದಲ್ಲಿ ಮೂರು ಮಂತ್ರಿಗಳಿರಬೇಕೆಂದು ಸೂಚನೆ ಇತ್ತಾದರೂ ಮೂರನೆ ಮಂತ್ರಿ ಯಾರಾಗಬೇಕೆಂಬ ಬಗ್ಗೆ ತೀವ್ರ ಪೈಪೋಟಿ ನಡೆಯಿತು. ನಾಲ್ಕು ಜನರು ತಮ್ಮ ಬೇಡಿಕೆಯನ್ನು ಮುಂದಿಟ್ಟಿದ್ದರು. ಇದನ್ನು ಸಮರ್ಪಕವಾಗಿ ತೀರ್ಮಾನಿಸುವದು ಕಷ್ಟವಾಯಿತು. ಒಬ್ಬರಿಗೆ ಕೊಟ್ಟರೆ ಉಳಿದವರು ಕೋಪಿಸಿಕೊಳ್ಳುವ ಪರಿಸ್ಥಿತಿ ಇದ್ದ ಕಾರಣ ಶ್ರೀ. ಶ್ರೀನಿವಾಸಮಲ್ಯರ ಸೂಚನೆಯಂತೆ ಎರಡೇ ಜನ ಮಂತ್ರಿಗಳಿದ್ದರೆ ಸಾಕೆಂದು ತೀರ್ಮಾನಿಸಲಾಯಿತು. ಮೂರು ಜನ ಮಂತ್ರಿಗಳನ್ನು ನೇಮಿಸಬೇಕೆಂಬ ಪ್ರಥಮ ಸೂಚನೆಯಲ್ಲಿ ಶ್ರೀ. ಮಂಜುನಾಥಯ್ಯನವರ ಹೆಸರು ಇತ್ತು. ಆದರೆ ಕಡೆಯತನಕ ಒಬ್ಬ ಮೆಂಬರು ತಾನು ಮಂತ್ರಿಯಾಗಬೇಕೆಂಬ ಹಠ ಹಿಡಿದ ಕಾರಣ ಈ ಮೂರನೆ ಮಂತ್ರಿಸ್ಥಾನವನ್ನು ಸದ್ಯಕ್ಕೆ ರದ್ದು ಮಾಡಲಾಗಿದೆ. ಮುಂದೆ ಅವಶ್ಯ ತೋರಿದರೆ ಒಬ್ಬ ಮಂತ್ರಿಯನ್ನು ನೇಮಿಸಿಕೊಳ್ಳಬಹುದೆಂದೂ ಇವರು ತೀರ್ಮಾನಿಸಿರುವರು.

ಎಸೆಂಬ್ಲಿಯ ಸ್ಪೀಕರರಾಗಿ ಶ್ರೀ ಬಿದ್ದಂಡ ಕುಶಾಲಪ್ಪನವರನ್ನು ನಿಶ್ಚಯಿಸಲಾಗಿದೆ. ಡೆಪ್ಯೂಟಿ ಸ್ಪೀಕರರ ಸ್ಥಾನವನ್ನು ಇನ್ನೂ ತುಂಬಿಲ್ಲ. ಹಿಂದುಳಿದ ಪಂಗಡದವರಿಗೆ ಒಂದು ಸ್ಥಾನ ಕೊಡುವ ಸಾಧ್ಯತೆ ಇದೆ.

ಮಂತ್ರಿಗಳಿಗೆ ಮಾಹೆಯಾನ ರೂ ೬೫೦ ವೇತನ ನಿಶ್ಚಯಿಸಲಾಗಿದೆ. ಸ್ಪೀಕರಿಗೂ ಇದೇ ವೇತನ ಕೊಡಲ್ಪಡುವದು. ಶಾಸನ ಸಭೆಯ ಸದಸ್ಯರಿಗೆ ಮಾಹೆಯಾನ ರೂ. ೧೨೫ ವೇತನ ಕೊಡಲ್ಪಡಬೇಕೆಂದು ಇವರು ನಿರ್ಣಯಿಸಿರುವರು.

ಮಲ್ಯರವರು ೨೨ ರಲ್ಲಿ ಬೆಂಗಳೂರಿಗೆ ಹೋದರು. ಸೂಚಿತವಾದ ಎರಡು ಮಂತ್ರಿಗಳ ಹೆಸರುಗಳನ್ನು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಒಪ್ಪಿಗೆಗಾಗಿ ಇವರು ತೆಗೆದುಕೊಂಡು ಹೋಗಿರುವರು. ಶ್ರೀ ಪೂಣಚ್ಚನವರು ಮಂತ್ರಿಗಳ ಹೆಸರನ್ನು ಚೀಫ್ ಕಮಿಷನರಿಗೆ ಶೀಘ್ರ ಒಪ್ಪಿಸಲಿದ್ದಾರೆ. ಮಾರ್ಚ್ ಮೂರನೆ ವಾರದಲ್ಲಿ ಮಂತ್ರಿಮಂಡಳದ ರಚನೆಯಾಗಬಹುದೆಂದೂ ಈ ಹೊಸ ಕಾಂಗ್ರೆಸ್ ಮಂತ್ರಿಮಂಡಳದ ಉದ್ಘಾಟನೆಗೆ ಹೊರಗಿನಿಂದ ಪ್ರಮುಖರೊಬ್ಬರನ್ನು ಕರೆಸಬಹುದೆಂದೂ ಗೊತ್ತಾಗಿದೆ.

ಬಿರುಸಾದ ಹೋರಾಟ

ಕೊಡಗಿನ ಮುಂದಾಳುಗಳಲ್ಲೊಬ್ಬರಾದ ಶ್ರೀ ಸಿ. ಬಿ. ಪೊನ್ನಪ್ಪನವರು ಕಾಂಗ್ರೆಸ್ಸಿನ ಮುಂದಾಳ್ತನವನ್ನು ಕಳೆದುಕೊಳ್ಳಬೇಕೆಂದು ಪ್ರಾರಂಭಿಸಿದ ವ್ಯಕ್ತಿಗತ ವಿರೋಧವು ಚುನಾವಣೆಯ ಕಾಲಕ್ಕೆ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಉಂಟು ಮಾಡಿತು. ಶ್ರೀ ಪೊನ್ನಪ್ಪನವರು ರಂಗದಲ್ಲಿರುವ ವರೆಗೆ ತನಗೆ [illegible] ದೊರೆಯುವುದಿಲ್ಲವೆಂದು ಅವರಿಗೆ ಗೊತ್ತಿತ್ತು. ೧೯೪೧ರಿಂದ ಈಚೆಗೆ ಸಂಸ್ಥಾನದ ರಾಜಕೀಯದಲ್ಲಿ ಮೇಲ್ಮೈಯನ್ನು ಪಡೆಯಲು ಅವರು ಯತ್ನಿಸಿದರೂ ಜಯಶಾಲಿಗಳಾಗಲಿಲ್ಲ. ೧೯೫೧ನೇ ನವೆಂಬರ್ ತಿಂಗಳಲ್ಲಿ ಅವರು ಕಾಂಗ್ರೆಸ್ಸಿಗೆ ರಾಜಿನಾಮೆ ಇತ್ತು ಸಂಯೋಜನಾ ವಿರೋಧಿ ಪಕ್ಷವೊಂದನ್ನು ಕಟ್ಟಿ ಜನತೆಯ ಬೆಂಬಲಕ್ಕಾಗಿ ಯತ್ನಿಸಿದರು.

ಆಡಳಿತ ಚಕ್ರ

ಕೊಡಗಿನ ಆಡಳಿತ ಚಕ್ರವು ಒಂದು ವಿಷಮ ಪರಿಸ್ಥಿತಿಯಲ್ಲಿದೆಯೆಂದು ಹೇಳಬಹುದು. ಅಧಿಕಾರದಲ್ಲಿರುವವರು ಕಾಂಗ್ರೆಸ್ ಸ್ವಭಾವಿಕವಾಗಿ ವಿರೋಧವಿರುವಂತೆ ತೋರುತ್ತದೆ. [illegible] ಚೀಫ್ ಕಮಿಷನರ್ ಆಫೀಸರ್ [illegible] ಕಾಂಗ್ರೆಸ್ ಮಂತ್ರಿಮಂಡಳದ [illegible] ಕರ್ತವ್ಯವೆಂಬಂತೆ [illegible] ವ್ಯವಸ್ಥೆ [illegible] ಒಬ್ಬ ಚೀಫ್ ಸೆಕ್ರೆಟರಿಯನ್ನು [illegible] ಸೆಕ್ರೆಟರಿಯವರನ್ನೂ ತರಲಿದ್ದಾರೆ.

ಹೀಗಾದರೂ ಕೊಡಗಿನ ಮಂತ್ರಿಯು ಹೆಚ್ಚಿನ ದೊಡ್ಡ ಪ್ರಾಂತದೊಡನೆ ವಿಲೀನವಾಗುವವರಲ್ಲ [illegible]. ಈ ಸಂಸ್ಥಾನದ [illegible] ಅಭಿವೃದ್ಧಿಯಲ್ಲಿ ವ್ಯವಸಾಯವು [illegible] ಅಭಿವೃದ್ಧಿಯಾಗಬೇಕಾದರೆ ಪ್ರಥಮ [illegible] ಭವಿಷ್ಯದಲ್ಲಿ ಕರ್ನಾಟಕದಲ್ಲಿ ವಿಲೀನಗೊಳ್ಳ [illegible] ಸಾಧ್ಯ [illegible].

ಇಸ್ರೇಲಿನ ಆದರ್ಶ

ಸಾಮೂಹಿಕ ಒಕ್ಕಲುತನ.

ಇಸ್ರೇಲ್ ದೇಶದ ಸಾಮೂಹಿಕ ವ್ಯವಸಾಯ ಮತ್ತು ಒಕ್ಕಲುತನ ಪ್ರಗತಿಯನ್ನು ನೋಡಿಕೊಂಡು ಬರಲು ಒಬ್ಬರನ್ನು ಕೊಡಗಿನಿಂದ ಆಹ್ವಾನಿಸುವಷ್ಟು ಆ ಇಸ್ರೇಲ್ ದೇಶದ ಒಂದು ಸೂಕ್ಷ್ಮ ಪರಿಚಯವನ್ನು ಹೇರಿಯಟ್ ಬೆಂಟ್ಲೀ ಎಂಬವರು ಹಿಂದೂ ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಅದರ ಸಾರಾಂಶವನ್ನಿಲ್ಲಿ ಕೊಡಲಾಗಿದೆ. (ಸಂ

೧೯೧೦ರಲ್ಲಿ ಪಾಲೇಸ್ತೀನದಲ್ಲಿ ಸಾಮೂಹಿಕ ವ್ಯವಸಾಯದ ಪ್ರಥಮ ಪ್ರಯತ್ನ ನಡೆದಾಗ ಹೆಂಗಸರು ಇದನ್ನು ಒಪ್ಪುವರೇ? ಮಕ್ಕಳಿಗೆ ತೊಂದರೆಯಾಗುವದಿಲ್ಲವೇ? ಎಂಬ ಪ್ರಶ್ನೆ ಎಲ್ಲೆಡೆಗಳಿಂದಲೂ ಕೇಳಿ ಬರುತಿತ್ತು. ಸಾಮೂಹಿಕ ಜೀವನವು ಅನಾಗರಿಕ ಸ್ಥಿತಿಯಲ್ಲಿ ಗಂಡಸರಿಗೆ ಸರಿ ಎನಿಸಬಹುದು. ಆದರೆ ಹೆಂಗಸರು ತಮ್ಮ ಮಕ್ಕಳು ಮನೆಗಳನ್ನು ಬಿಟ್ಟು ಹೊರಗಿರಲು ಒಪ್ಪುವರೇ? ಕುಟುಂಬ ಜೀವನದ ಗತಿ ಏನಾಗಬೇಕು? ಮಕ್ಕಳನ್ನು ಯಾರೋ ಸಾಕುವರು; ತಾಯಿಂದಿರು ಎಲ್ಲಿಯೋ ಇರುವದು ಹೀಗಾದರೆ ದೊಡ್ಡವರಾದಾಗ ಮಕ್ಕಳು ತಾಯಿ ತಂದೆಯವರನ್ನು ಗುರ್ತಿಸುವರೆ? ತಂದೆ ತಾಯಿ ಎಂಬ ಪ್ರೀತಿ ಎಲ್ಲಿ ಉಳಿಯುವದು. ಈ ರೀತಿ ನಾನಾ ರೀತಿಯ ಪ್ರಶ್ನೆ, ಟೀಕೆಗಳಿಗೆ ಆಗ ಬಿಡುವಿರುವದಿಲ್ಲ.

ಗೇಲಿಲಿಯ ಕರಾವಳಿಯಲ್ಲಿ ಪ್ರಥಮ ಸಾಮೂಹಿಕ ವ್ಯವಸಾಯ ಕ್ಷೇತ್ರವಾಗಿ ಈಗ ೪೦ ವರ್ಷಗಳು ದಾಟಿದವು. ಇಂದು ಇಂಥಾ ೨೦೦ ಸಾಮೂಹಿಕ ವ್ಯವಸಾಯ ಕ್ಷೇತ್ರಗಳಲ್ಲಿ ಸುಮಾರು ೬೦,೦೦೦ ಜನರು ಅಲ್ಲಿ ಜೀವಿಸುತ್ತಿದ್ದಾರೆ. ಹಿಂದೆ ಮರಳು ರಾಶಿಯಾಗಿ, ಮಲೇರಿಯಾ ಪೀಡಿತವಾಗಿದ್ದ ಪ್ರದೇಶಗಳು ಇಂದು ಆರೋಗ್ಯಧಾಮಗಳಂತಿವೆ. ಪ್ರತಿ ವರ್ಷ ಈ ಸಾಮೂಹಿಕ ವ್ಯವಸಾಯ ಕ್ಷೇತ್ರಗಳ ಸಂಖ್ಯೆ ಹೆಚ್ಚಾಗುತ್ತಿದೆ.

ಈ ಸಾಮೂಹಿಕ ವ್ಯವಸಾಯ ಕ್ಷೇತ್ರದಲ್ಲಿರುವ ಹೆಂಗಸರು ಈ ವಿಚಾರದಲ್ಲಿ ತೃಪ್ತಿಯುಳ್ಳವರಾಗಿದ್ದಾರೆ. ಒಬ್ಬಳು ಹೇಳುವದು: "ಈ ವ್ಯವಸಾಯ ಕ್ಷೇತ್ರದಲ್ಲಿ ನಾನು ಐದು ಮಕ್ಕಳನ್ನು ಹೆತ್ತಿರುವೆನು. ಒಂದೇ ಒಂದು ಸಂದರ್ಭದಲ್ಲಿ ಮಕ್ಕಳೊಡನೆ ಸಿಟ್ಟಾಗಿ ನಾನು ವರ್ತಿಸಿಲ್ಲ. ಹಿಂದಿನ ನನ್ನ ಖಾಸಗಿ ಮನೆಯ ಜೀವನಕ್ಕೂ ಈ ಸಾಮೂಹಿಕ ಜೀವನಕ್ಕೂ ಆಜಗಜಾಂತರವಿದೆ. ಈ ಸಾಮೂಹಿಕ ಜೀವನವೇ ಉತ್ತಮವಾದುದು. ಮಕ್ಕಳು ಆದ ಕಷ್ಟವೂ ಕಡಿಮೆಯಾಗಿದೆ. ಪ್ರಾರಂಭದ ದಿನಗಳಲ್ಲಿ ನಿಜವಾಗಿಯೂ ಈ ಶಿಬಿರದ ಜೀವನ ಕಷ್ಟವೆಂದು ತೋರುತಿತ್ತು. ಆಗ ನಮಗೆ ಅನ್ನವಿಲ್ಲ. ಕೇವಲ ಮೊಟ್ಟೆ ಮತ್ತು ರೊಟ್ಟಿಗಳು ಮಾತ್ರ ದೊರಕುತಿದ್ದವು. ದಿನಕ್ಕೆ ೧೦, ೧೨ ಗಂಟೆಗಳಂತೆ ಆಗ ದುಡಿಯುತ್ತಿದ್ದೆವು. ನಮ್ಮ ಬಟ್ಟೆ ಬರೆಗಳು ಹರಕು ಮುರುಕಾಗಿದ್ದವು. ಆದರೆ ನಾವೆಲ್ಲರೂ ಜೊತೆಗೂಡಿ ದುಡಿದೆವು. ಒಂದನ್ನೊಂದು ಹಂಚಿಕೊಂಡೆವು. ಆದರೆ ನಮ್ಮ ಮಕ್ಕಳನ್ನು ಎಚ್ಚರಿಕೆಯಿಂದ ನೋಡುತ್ತಿರುವರೆಂಬುದು ನಮಗೆ ಗೊತ್ತಿತ್ತು."

ಮತ್ತೊಬ್ಬಳು ಹೀಗೆ ಹೇಳಿದಳು: "ನಾನು ಖಾಸಗಿ ಮನೆಯಲ್ಲೂ, ನಂತರ ಸಾಮೂಹಿಕ ವ್ಯವಸಾಯ ಕೇಂದ್ರದಲ್ಲೂ ತಾಯಾಗಿ ಬದುಕಿದವಳು. ಒಂದನ್ನೊಂದಕ್ಕೆ ಇಂದು ಹೋಲಿಸಿಕೊಳ್ಳಬಲ್ಲೆ. ಕೆಲಸದ ನಂತರ ಮಕ್ಕಳೊಡನೆ ನಿಶ್ಚಿಂತರಾಗಿ ನಮಯ ಕಳೆಯುವಾಗ ಅತ್ಯಾನಂದಕರವಾಗಿದೆ. ಈ ಸಾಮೂಹಿಕ ವ್ಯವಸಾಯ ಪದ್ಧತಿಯು ಅತ್ಯುತ್ತಮವಾದುದು. ನಾವು ಮಕ್ಕಳೊಡನಿರುವ ಕಾಲ ಸ್ವಲ್ಪ ಗಂಟೆಯು ಸ್ವಲ್ಪವೆಂದು ತೋರಬಹುದು. ಆದರೆ ದಿನದ ೨೪ ಗಂಟೆ ಜೊತೆಯಲ್ಲಿ [illegible] ಈ ವಿಚಾರದ ಹೆಚ್ಚು [illegible] ಪ್ರೀತಿ ಪ್ರದರ್ಶನವಾದೀತು ಎನ್ನಬಹುದಲ್ಲವೇ?"

ಪ್ರಾರಂಭದಿಂದಲೂ ಕೂಡ ಈ ಸಾಮೂಹಿಕ ವ್ಯವಸಾಯ ಕ್ಷೇತ್ರಗಳಲ್ಲಿ ಮಕ್ಕಳಿಗೇ ಅಗ್ರಪೂಜೆ. ಅವರ ಹಿತ ರಕ್ಷಣೆಗಳಿಗೇ ಮುಖ್ಯ ಗಮನ. ಪ್ರಥಮವಾಗಿ ಕಟ್ಟಲ್ಪಟ್ಟ ಮನೆಗಳೆಂದರೆ ಮಕ್ಕಳ ಕೋಣೆಗಳು, ಊಟದ ಮನೆ, ಓದುವ ಕೊಠಡಿ [illegible]. ತಂದೆ ತಾಯಿ [illegible] ಹಿಂದಿನ ಚಿಕ್ಕ ಗುಡಿಸಲುಗಳಲ್ಲಿ ಜೀವಿಸುತ್ತಿರುವಾಗ ಮಕ್ಕಳಿಗೆ ಅತಿ ಉತ್ತಮ ಶಿಕ್ಷಣ, ಔಷಧೋಪಚಾರ [illegible] ಮನೆಗಳಿವೆ. ಅನೇಕ ವ್ಯವಸಾಯ ಕೇಂದ್ರಗಳಲ್ಲಿ ಮಕ್ಕಳು [illegible] ಹುಟ್ಟಿದ ದಿನದಿಂದ ಆ ಮಕ್ಕಳ ಮನೆಯಲ್ಲಿಯೇ ಜೀವಿಸುತ್ತಾರೆ. ಆದರೆ ಪ್ರತಿ ದಿನ ಕೆಲಸ ಮುಗಿದ ನಂತರ, ರಜೆಯ ದಿನಗಳಲ್ಲಿ, ಶನಿವಾರಗಳಲ್ಲಿ ಅವರ ತಂದೆ ತಾಯಿಯರೊಡನೆ ಕಳೆಯುವರು.

[illegible] ಒಬ್ಬ ನರ್ಸ್ [illegible] ನೋಡಿಕೊಳ್ಳುತ್ತಾಳೆ [illegible]. ಮಕ್ಕಳಿಗೆ ಆಹಾರ ಊಟಗಳಿಗಾಗಿ ವಿಶೇಷ ತರಬೇತಿ ಪಡೆದ [illegible] ರುವರು. [illegible] ಮಕ್ಕಳ ಮನೆಗಳನ್ನು [illegible] ಬೇಕಾದ [illegible].

ಸ್ವಲ್ಪ ಬೆಳೆದ ಮಕ್ಕಳಿಗೆ ಚಿಕ್ಕ ಚಿಕ್ಕ ಪರಿಮಾಣದ ಆದರೆ ಸಾಮೂಹಿಕ ವ್ಯವಸಾಯ ಕ್ರಮದ ಕೇಂದ್ರಗಳಿರುವವು. ಮಕ್ಕಳು ಅಲ್ಲಿ ಸಾಮೂಹಿಕವಾಗಿ ಜೀವಿಸುವರು. ಮಲಗುವ ಮನೆಗಳು, ಊಟದ ಕೋಣೆಗಳು, ತೋಟ ಉದ್ಯಾನಗಳು ಇರುವವು. ಅವರಿಗೆ ಅನುಕೂಲವಾದ ಮೋಜು ಕುಚೇಷ್ಟೆ ಸರ್ವ ವಿಷಯಗಳೂ ಅವರಿಗಿದೆ.

ಮಕ್ಕಳ ಮನೆಯಲ್ಲೇ ಶಾಲೆಯೂ ಏರ್ಪಾಡಾಗಿರುವದು. ಮಕ್ಕಳ ವಯಸ್ಸಿನ ಮೇರೆ ವಿದ್ಯಾಕ್ರಮದಲ್ಲಿ ವ್ಯತ್ಯಾಸವಿದೆ. ಅಲ್ಲಿ ಅಧ್ಯಾಪಕ ವೃತ್ತಿಯು ಎಲ್ಲಾ ವೃತ್ತಿಗಳಿಗಿಂಥಾ ಗೌರವಯುತವಾದುದೆಂದು ಪರಿಗಣಿಸಲ್ಪಟ್ಟಿದೆ. ಆರಿಸಲ್ಪಟ್ಟ ಅಧ್ಯಾಪಕರಿಗೆ ಅತ್ಯುತ್ತಮ ತರಬೇತು ಕೊಟ್ಟ ನಂತರ ಉದ್ಯೋಗಕ್ಕೆ ನೇಮಿಸುವರು. ಎರಡು ವರ್ಷಕ್ಕೊಮ್ಮೆ ಹೊರ ಪ್ರದೇಶಗಳಿಗೆ "ರಿಫ್ರೆಷರ್ ಕೋರ್ಸಿಗೆ" ಅವರನ್ನು ಕಳುಹಿಸುವ ಪದ್ಧತಿ ಇದೆ. ಅಧ್ಯಾಪಕರ ಕೆಲಸವೆಂದರೆ ಪುಸ್ತಕಗಳ ಉಪಯೋಗವನ್ನು ತಿಳಿಸುವದು. ಕ್ರಮವಿಲ್ಲದೆ ವಿಚಾರಗಳನ್ನು ಕಲಿಸುವದು. ಪ್ರತಿ ಬಾಲಕನಿಗೂ ಪ್ರತ್ಯೇಕ ಶಿಕ್ಷಣ ಕೊಡುವರು. ಮಕ್ಕಳೇ ತಮ್ಮ ಬಹು ಮತದ ಅಭಿಪ್ರಾಯದಂತೆ ಶಾಲೆಯ ಶಿಸ್ತು, ಶಿಕ್ಷೆ ಮೊದಲಾದುವನ್ನು ನಿಶ್ಚಯಿಸಿಕೊಳ್ಳುವರು. ಹಲವು ವ್ಯವಸಾಯ ಕ್ಷೇತ್ರಗಳಲ್ಲಿ ಶಾರೀರಿಕವಾಗಿ ಕೊಡುವ ದಂಡ ಶಿಕ್ಷೆಯೂ ಮನ್ನಾವೂ ರದ್ದಾಗಿದೆ.

ಕಲಿಕೆ ಕಡಿಮೆ ತರಗತಿಯಲ್ಲೂ ಕೂಡ ಇತರ ವಿಷಯಗಳೊಡನೆ ಸಂಗೀತ, ಕಲೆ, ಸಾಹಿತ್ಯ, ಶೃಂಗಾರಕಲೆಗಳು ಪ್ರಾಮುಖ್ಯ ಅಂಗಗಳು. ಈ ಎಲ್ಲಾ ವಿಷಯಗಳನ್ನು ಕಲಿಸುವದರ ಈ ವಿದ್ಯಾರ್ಥಿಗಳು ವ್ಯವಸಾಯ ಗಾರರ ಮಕ್ಕಳೆಂಬುದನ್ನು ಮರೆಯದೆ ಅವರೆಲ್ಲರಿಗೂ ವ್ಯವಸಾಯ ವಿಚಾರವನ್ನು ಪೂರ್ಣ ತರಬೇತು ಕೊಡುವರು. ವಿದ್ಯಾರ್ಥಿಗಳು ತಮ್ಮದೇ ಆದ ಗದ್ದೆಗಳಲ್ಲಿ ದುಡಿಯುವರು. ವಯಸ್ಸಾದಂತೆ ಹೆಚ್ಚು ಹೆಚ್ಚು ದುಡಿಮೆಯನ್ನು ಗದ್ದೆಗಳಲ್ಲಿಯೇ ಕಳೆದು ಕ್ರಮಶಃ ವ್ಯವಸಾಯಗಾರರಾಗುವರು.

ಈ ಕ್ರಮವು ಮಕ್ಕಳಿಗೆ ಎರಡು ಜಗತ್ತಿನ ಅಂದರೆ ವ್ಯವಸಾಯ ಮತ್ತು ವಿದ್ಯೆಯ ಪೂರ್ಣ ಅನುಭವವನ್ನು ಕೊಡುತ್ತದೆಂದು ಅನುಭವಿಗಳ ಅಭಿಪ್ರಾಯ. ಹೇಳುತ್ತಾರೆ ಮಕ್ಕಳು ಶಾಲೆಗಳಲ್ಲಿ ಪರಸ್ಪರ ವಿಚಾರವಾಗಿ ಜೀವಿಸುವವನ್ನು ಕಲಿಯುವದಲ್ಲದೆ ಸಾಯಂಕಾಲ ಹಾಗೂ ರಜೆ ದಿನಗಳಲ್ಲಿ ತಂದೆ ತಾಯಿಯರೊಡನಿರುವದರಿಂದ ಕುಟುಂಬ ಜೀವನದ ವಿಚಾರವನ್ನೂ ತಿಳಿದುಕೊಳ್ಳುವರು. ಈ ಸಾಮೂಹಿಕ ವ್ಯವಸಾಯದ ಜೀವನಾಗರಿಕತೆಯಲ್ಲಿ ಒಂದು ಪೀಳಿಗೆಯನ್ನು ಮಾತ್ರ ತಯಾರಿಸಲಾಗಿದೆ. ಇದು ಸ್ಥಾಪನೆಯಾಗಿ ಕೇವಲ ೪೦ ವರ್ಷಗಳು ಮಾತ್ರ ಆಗಿವೆ. ಆದ್ದರಿಂದ ಇದು ಇನ್ನೂ ಒಂದು ಸಾಮಾಜಿಕ ಪರಿಶೋಧನೆಯಾಗಿಯೇ ಇದೆ.

ಪ್ರಾರಂಭದ ಕಾಲಕ್ಕೆ ಕೇಳಲ್ಪಡುತ್ತಿದ್ದ ಪ್ರಶ್ನೆಗಳೆಲ್ಲದಕ್ಕೂ ಸಮರ್ಪಕ ಉತ್ತರವನ್ನು ಈ ಸಾಮೂಹಿಕ ವ್ಯವಸಾಯ ಕೇಂದ್ರಗಳು ಪರಿಣಾಮಕಾರಕವಾಗಿ ಕೊಟ್ಟಿವೆ. ತಾಯಿಂದಿರು ಆರೋಗ್ಯದಿಂದಿರುವದಲ್ಲದೆ ಸುಖಿಗಳಾಗಿದ್ದಾರೆ. ಆದರೆ ಮುಂದಿನ ಪೀಳಿಗೆ ಹೇಗಾಗುವದೆಂದು ಈಗಲೇ ಹೇಳಲಾಗುವದಿಲ್ಲ. ಈ ಸಾಮೂಹಿಕ ವ್ಯವಸಾಯ ಕೇಂದ್ರಗಳಲ್ಲಿ ತರಬೇತಾದ ಯುವಕ ಯುವತಿಯರ ಮನೋಭಾವ ಹೇಗಿರುವದೆಂಬುದನ್ನು ಪರಿಶೀಲಿಸಿ ತಿಳಿಯಲು ಇಸ್ರೇಲಿನ ಮಾನಸಿಕ ಆರೋಗ್ಯ ಇಲಾಖೆಯು ಸಂಖ್ಯಾಸ್ತರು ಜೊತೆ ಸಂಸ್ಥೆಯೊಂದನ್ನು ರಚಿಸಿದ್ದಾರೆ. ಇವರು ಈ ಕೇಂದ್ರಗಳಲ್ಲಿ ಹುಟ್ಟಿ, ಬೆಳೆದ ಯುವ ಜನಾಂಗದ ಮಾನಸಿಕ, ನೈತಿಕ ಮತ್ತಿತರ ವಿಷಯಗಳ ಪರೀಕ್ಷೆ ನಡೆಸಿ ಆದರ ಸ್ವಭಾವ ಗುಣಗಳು ಯಾವ ರೀತಿ ಪರಿಪೂರ್ಣವಾಗಿವೆ ಎಂಬುದನ್ನು ತಿಳಿಯಲೆತ್ನಿಸುತ್ತಿದ್ದಾರೆ. ಈ ಪರಿಶೋಧನೆಯ ಫಲಿತಾಂಶ ತಿಳಿಯಲು ಜಗತ್ತಿನ ಅನೇಕ ರಾಷ್ಟ್ರಗಳು ಇಸ್ರೇಲಿನತ್ತ ನೋಡುತ್ತಿವೆ.

ಕೊಡಗು

ತಾ. ೬-೩-೧೯೫೩ನೇ ಶುಕ್ರವಾರ

ಈ ತೊಡಕುಗಳು ನಿವಾರಣೆಯಾಗಬೇಕು.

ಜೀವನವು ಸುಖಮಯವೆನಿಸಬೇಕಾಗಿದ್ದರೆ ನಿರ್ಬಂಧಕವಾದ ಸ್ವಾತಂತ್ರ್ಯವಿರಬೇಕು. ನಿರ್ಬಂಧಕವಾದ ಸ್ವಾತಂತ್ರ್ಯವೆಂದರೆ ಮನಸ್ಸಿಗೆ ಬಂದುದನ್ನು ಮಾಡುವದಲ್ಲ. ನಮ್ಮ ದಿನ ನಿತ್ಯದ ಜೀವನದಲ್ಲಿ ಎಷ್ಟರ ತೊಡಕುಗಳು ಕಡಿಮೆ ಇರಬೇಕು "ಆಡಳಿತದ ಕಾನೂನುಗಳು ಎಷ್ಟು ಮಟ್ಟಿನ ಕಡಿಮೆ ಪ್ರಮಾಣದಲ್ಲಿ ಜನರ ಮೇಲೆ ಹೇರಲ್ಪಡುವವೋ ಆ ರಾಜ್ಯವು ಅಷ್ಟು ಮಟ್ಟಿನ ಪ್ರಮಾಣದಲ್ಲಿ ಉತ್ತಮ ರಾಜ್ಯ" ಎಂಬುದಾಗಿ ರಾಜಕಾರಣಿಗಳು ಹೇಳಿದ್ದಾರೆ. ಆದ್ದರಿಂದ ಯಾವುದೇ ಸರಕಾರವಾದರೂ ಪ್ರಜೆಗಳನ್ನು ಹೆಜ್ಜೆ ಹೆಜ್ಜೆಗೆ ತಡೆದು ನಿಲ್ಲಿಸುವಂಥ ಕಾನೂನುಗಳಿರಬಾರದು. ದೈನಂದಿನ ಜೀವನದಲ್ಲಿ ಸರ್ವ ಸಾಮಾನ್ಯ ನಿತ್ಯ ವ್ಯವಹಾರದಲ್ಲಿ ನಿಯಮ ನಿರ್ಬಂಧಗಳು ಹೆಚ್ಚಿದಷ್ಟು ಜೀವನವು ಅಸಹ್ಯವಾಗುವದು.

ನಮ್ಮ ಇಂದಿನ ಜೀವನವನ್ನು ಈ ದೃಷ್ಟಿಯಿಂದ ಪರಿಶೀಲಿಸಿದರೆ ನಮ್ಮ ಜೀವನವು ಸುಖಮಯವೂ ಅಲ್ಲ; ಪ್ರಗತಿದಾಯಕವೂ ಆಗಿಲ್ಲ. ಜೀವನದ ಪ್ರತಿ ಹೆಜ್ಜೆಗೆ ಅಡ್ಡಿ ಆತಂಕಗಳು ತುಂಬಿವೆ. ದೈನಂದಿನ ಅತ್ಯಾವಶ್ಯಕ ಬೇಡಿಕೆಗಳು ದೊರೆಯುವದೇ ಪ್ರಯಾಸವಾಗಿರುವದು ಮಾತ್ರವಲ್ಲ; ದೊರೆಯಬೇಕಾದರೆ ನಾನಾ ರೀತಿಯ ಕಷ್ಟಗಳಿಗೊಳಗಾಗಬೇಕಾದುದು ನಮ್ಮ ಪಾಲಿಗೆ ಇಂದು ಇದೆ. ನಾವು ಬೆಳೆ ಬೆಳೆಸುವೆವು. ಕೊಡಗು ಉಳುವರಿ ಪ್ರಾಂತ. ನಮ್ಮ ನೆರೆಕರೆಯವರಿಗೆ ಆದಷ್ಟು ಉಳಿಸಿ ಕಳುಹಿಸಬೇಕಾದುದು ನಮ್ಮ ಕರ್ತವ್ಯ. ಇದನ್ನು ಸಾಧಿಸುವ ಸದಿಚ್ಛೆಯಿಂದ ಸರಕಾರ ನಿಯಂತ್ರಣಾಕಾನೂನನ್ನು ಜಾರಿಗೆ ತಂದಿರಬಹುದು. ಆದರೆ ಈ ಕಾನೂನಿನಿಂದ ಆಗುತ್ತಿರುವದೇನು? ರೈತನು ಅರೆ ಹೊಟ್ಟೆಯಲ್ಲಿರಲು ಯಾರೂ ಒಪ್ಪಲಾರರು. ಆದ್ದರಿಂದ ನಿಯಂತ್ರಣ ನಿಯಮವನ್ನು ಮುರಿದು ಅನ್ಯತ್ರದಿಂದ ವರ್ತಿಸುವ ಸಂದರ್ಭ ಅನೇಕರಿಗೆ ಬಂದಿದೆ. ಕೊಡಗಿನಲ್ಲಿ ಪ್ರತಿಯೊಬ್ಬ ರೈತನೂ ಸರಕಾರ ನಿಯಮದಂತೆ ನಿಶ್ಚಯಿಸಿದ ರೀತಿಯನ್ನೇ ಊಟ ಮಾಡುತ್ತಿಲ್ಲ. ಈ ಊಟಕ್ಕೆಂದು ಕ್ಲುಪ್ತಗೊಳಿಸಿದ ಬತ್ತ, ಅಕ್ಕಿಯನ್ನಾದರೂ ಗ್ರಾಮದಿಂದ ಗ್ರಾಮಕ್ಕೆ ಸಾಗಿಸಲಾಗುತ್ತಿಲ್ಲ. ಮಿಲ್ಲಿನಿಂದ ಅಕ್ಕಿ ಮಾಡಿಸಿ ತರಬೇಕಾದರೆ ಸರಕಾರಿ ಅಧಿಕಾರಿಯಿಂದ ಪರ್ಮಿಟ್ ಹೊಂದಿರಲೇಬೇಕೆಂದರೆ ನಮ್ಮ ಜೀವನವು ಎಷ್ಟರ ಮಟ್ಟಿಗೆ ಬಂಧನಕ್ಕೊಳಗಾಗಿದೆಯೆಂದು ಹೇಳಬೇಕಾಗಿಲ್ಲ. ಗ್ರಾಮಾಂತರದೊಳಗಿನ ಈ ನಿಯಂತ್ರಣವು ಕೇವಲ ರೈತರಿಗೆ ಕಿರುಕುಳದ ಒಂದು ಮಾರ್ಗವಾಗಿದೆಯೇ ವಿನಹ ಸರಕಾರದ ಆಶಯದಂತೆ ಹೊರಗೆ ಕಳುಹಿಸಲಿಕ್ಕಾಗಿ ಈ ನಿಯಮದಿಂದ ಹೆಚ್ಚಿನ ಉಳಿತಾಯವೇನೂ ಆಗುತ್ತಿಲ್ಲ. ಆದ್ದರಿಂದ ಇದನ್ನು ಆದಷ್ಟು ಬೇಗ ತೆಗೆದು ಹಾಕಬೇಕಾದುದು ಅತ್ಯವಶ್ಯ. ರೈತನು ತನ್ನ ಕಾಲಿನ ಬತ್ತವನ್ನು ಅನ್ನ ಮಾಡಿಯೇ ಊಟ ಮಾಡಲೀ ಯಾ ಅವಲಕ್ಕಿ ಹುರಿಗಾಳಾಗಿ ತಿನ್ನಲೀ ಹೇಗಾದರೂ ಈ ಬಗ್ಗೆ ನಿರ್ಬಂಧವಿರಕೂಡದು.

ಯಾವದೇ ವಸ್ತುವಿನ ಮೇಲೆ ನಿಯಂತ್ರಣ, ಹತೋಟಿಯಿದ್ದರೆ ಅದರಿಂದ ಜನರಿಗೆ ಅಹಿತ ವಿನಾ ಹಿತವಾಗಲಾರದೆಂಬುದು ಈ ಹತ್ತು ವರ್ಷಗಳ ನಿಯಂತ್ರಣ ಅನುಭವದಿಂದ ತಿಳಿದು ಬಂದ ಮಾತಾಗಿದೆ. ಒಂದು ವಸ್ತುವಿನ ಮೇಲೆ ನಿಯಂತ್ರಣ ಹಾಯಿತೆಂದರೆ ಮಾರಣೆ ದಿನ ಸಂತೆಯಲ್ಲಿ ಆ ವಸ್ತು ಕಾಣಲಿಕ್ಕೆ ದೊರೆಯದೆ ಕಳ್ಳಸಂತೆ ಸೇರುವದು. ಕಳ್ಳಸಂತೆಯಲ್ಲಿ ವಿಪರೀತ ಬೆಲೆಗೆ ಅದು ಮಾರಲ್ಪಡುವದು. ಈ ರೀತಿಯಾಗಿ ಬಟ್ಟೆ, ಸಕ್ಕರೆ, ಸೀಮೆಎಣ್ಣೆ ಮೊದಲಾದುವಕ್ಕೆ ಪಡುತ್ತಿದ್ದ ಕಷ್ಟ ಅಷ್ಟಿಷ್ಟಲ್ಲ. ಆದರೆ ಅವುಗಳ ನಿಯಂತ್ರಣ ತೆಗೆದು ಹಾಕಿದಂತೆ ಅವು ಎಂದಿನಂತೆ ಸಂತೆಯಲ್ಲಿ ದೊರೆಯತೊಡಗಿದವು. ಆದ್ದರಿಂದ ನಿಯಂತ್ರಣವು ಕೃತ್ರಿಮ ಬೇಡಿಕೆಯನ್ನುಂಟುಮಾಡಿ ಕಳ್ಳಸಂತೆಗೂ, ಲಾಭಬಡಕತನಕ್ಕೂ ಆಸ್ಪದಕೊಡುವದೆಂಬುದು ಸಿದ್ಧಾಂತವಾಗಿದೆ. ಕೊಡಗಿನಲ್ಲಿ ಜನಜೀವನಕ್ಕೆ ಅವಶ್ಯವಾದ ಇತರ ಜಿನಸುಗಳ ಕ್ರಯದ ವಿಚಾರದಲ್ಲಿ ನಿಯಂತ್ರಣದ ಹೆಸರಿದ್ದರೂ ಅದು ಕಪ್ಪುಸಂತೆಗೆ ಅವಕಾಶ ಕೊಡುತ್ತಿದೆ ವಿನಾ ನ್ಯಾಯವಾಗಿ ಜಾರಿಯಲ್ಲಿ ಬಾರಲೇ ಇಲ್ಲ. ಇಂದೂ ಕೂಡ ಈ ನಿಯಂತ್ರಣವೆಲ್ಲವೂ ವೈಶ್ಯರಿಂದ ಸಾಮಾನುತರುವ ವ್ಯಾಪಾರಿಗಳ ಅಭಿಪ್ರಾಯಕ್ಕೆ ಮಂತಾಗಿದೆ. ಅವರ ಹೇಳಿಕೆಯಂತೆಯೇ ಧಾರಣೆ ನಿಶ್ಚಯಿಸಲ್ಪಡುತ್ತಿದೆ. ನಿಯಂತ್ರಣಾಧಿಕಾರಿಗಳು ತಮ್ಮ ನಿಶ್ಚಿತ ಬೆಲೆ ಹೇರಲು ಹೋದರೆ ಮಾರಣೆ ವಾರದಿಂದ ಆ ವಸ್ತುಗಳೇ ಸಂತೆಗೆ ಬಾರದಂತೆ ಮಾಡಿ ಅಧಿಕಾರಿಗಳನ್ನು ಬಗ್ಗಿಸುವ ನೀತಿಯನ್ನೂ ವ್ಯಾಪಾರಿಗಳು ತಿಳಿದಿದ್ದಾರೆ. ಈ ರೀತಿಯಾಗಿ ಬಡ ಜನರ ಜೀವನದ ವಿಚಾರ ಹೆಚ್ಚಿಗೆ ವಿವರಿಸಬೇಕಿಲ್ಲ. ತಾನು ಬೆಳೆಸಿದನ್ನು ಉಪಯೋಗಿಸಲು ನಿಯಂತ್ರಣವಿದೆ. ತಾನು ಕೊಂಡುಕೊಳ್ಳಲು ಇಚ್ಛಿಸುವ ಜೀವನಾವಶ್ಯಕ ಸಾಧನಕ್ಕೆ ನಿಯಂತ್ರಣವಿದ್ದರೂ ಕರಾಗವಾದ ಸರಬರಾಯಿ ಇಲ್ಲ; ಸರಾಗವಾದ ಸರಬರಾಯಿ ಇದ್ದರೂ ವಿಧದ ಬೆಲೆ! ಈ ಪರಿಸ್ಥಿತಿಯಿಂದಾಗಿ ರೈತನ ಜೀವನವು ಸಾಕುಸಾಕಾಗಿದೆ. ಜನಪ್ರತಿನಿಧಿಗಳು ಶೀಘ್ರ ಆಡಳಿತ ಜವಾಬ್ದಾರಿಯನ್ನು ಹೊರಲಿರುವದರಿಂದ ಅವರು ಕ್ರಮಶಃ ಈ ತೊಂದರೆಗಳನ್ನು ನಿವಾರಿಸಿ ಜೀವನವು ಸುಖಮಯವಾಗುವಂತೆ ಮಾಡುವರೆಂದು ರೈತನು ಮಾತ್ರವಲ್ಲ ಬಡ ಜನರೂ ಅನನ್ಯನಂಬಿಕೆಯಿಂದಿರುವರು.

ವರ್ತಮಾನ.

ತಾರೀಕು ೨೫ ರಂದು ಭಾಗಮಂಡಲ ರಾಮಮಂದಿರ ಕಮಿಟಿಯವರು ಶಬರೀ ನವಮಿ ಅಂದರೆ ತಾ. ೩-೪-೫೩ರಲ್ಲಿ ದೊಡ್ಡ ಉತ್ಸವವನ್ನು ಕೊಡಗಿನ ಪೋಲೀಸ್ ಸುಪರಿಂಟೆಂಡೆಂಟರಾದ ಶ್ರೀ. ಎ. ಪಿ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ನಡೆಸುವಂತೆಯೂ, ಶಟ್ಟಡಕ್ಕೆ ಸಹಾಯವಾದಲು ವಾಗ್ದಾನ ಮಾಡಿದವರು ಕೂಡಲೆ ಸಹಾಯಕೊಟ್ಟು ಶಿಲಾಶಾಸನವನ್ನು ಸಿದ್ಧಪಡಿಸಲು ಸಹಾಯಮಾಡಬೇಕೆಂದೂ ಕೇಳಿಕೊಳ್ಳಲು ನಿರ್ಣಯಿಸಿರುವರು.

ಅಸಿಸ್ಟೆಂಟ್ ಕಮಿಷನರವರು ಮಡಿಕೇರಿಯಲ್ಲಿ ಹಾಜರಿದ್ದ ದಿನಗಳಲ್ಲಿ ಕೋಟೆಯಲ್ಲಿಯ ತಮ್ಮ ಖಚೇರಿಯಲ್ಲಿ ಬೆಳಗೆ ೧೧ ಗಂಟೆಯಿಂದ ಮಧ್ಯಾಹ್ನ ಒಂದು ಗಂಟೆಯ ವರೆಗೆ ಮಾತ್ರ ಅರ್ಜಿಗಳನ್ನು ಸ್ವೀಕರಿಸುವ ವ್ಯವಸ್ಥೆ ಮಾಡಿರುವರು.

ರೈತರು ತಮ್ಮ ಭೂಮಿಗೆ ನೀರು ಹಾಯಿಸಲು ೧೯೫೧-೫೨ರಲ್ಲಿ ಕೆರೆ, ಕಾಲುವೆ, ಕಟ್ಟೆ ಮೊದಲಾದವನ್ನು ಪರಸ್ಪರ ಸಹಕರಿಸಿ ತಾವೇ ದುರಸ್ತಿ ಮಾಡಿಕೊಂಡು ಹೆಚ್ಚು ಬೆಳೆ ಬೆಳೆಯಲು ಸಹಾಯಕವಾದುದಕ್ಕೆ ಅಂಥಾವರಿಗೆ ಕೊಡಗಿನಲ್ಲಿ ಒಟ್ಟು ೯೦೦೦ ರೂಪಾಯಿಗಳನ್ನು ಬಹುಮಾನವಾಗಿ ಕೊಡಲಾಗುವದೆಂದೂ, ಇದರಲ್ಲಿ ಕೊಡಗಿನ ಒಂಭತ್ತು ನಾಡುಗಳಲ್ಲಿ ಪ್ರತಿ ನಾಡಿಗೆ ರೂ. ೨೦೦/ರ ಎರಡು ಬಹುಮಾನಗಳೂ, ರೂ. ೧೦೦/- ಮೂರು ಬಹುಮಾನಗಳೂ, ರೂ ೫೦/ರ ಆರು ಬಹುಮಾನಗಳೂ ಕೊಡಲ್ಪಡುವವೆಂದು ತಿಳಿದುಬಂದಿದೆ.

ಕಳೆದ ವಾರ ಡೆಲ್ಲಿಯಲ್ಲಿ ನಡೆದ ಅಖಿಲಭಾರತ ಜಾನುವಾರು ಸಮ್ಮೇಳನಕ್ಕೆ ಆಹ್ವಾನಿತರಾಗಿದ್ದ ಶ್ರೀ. ಮಾಚಯ್ಯನವರು ಆ ಸಮ್ಮೇಳನಕ್ಕೆ ಹೋಗಿ ತಾ ೬ರಲ್ಲಿ ವಾಪಾಸು ಬಂದರು.

ತಾ. ೨೮-೩-೫೩ ರಿಂದ ೫-೪-೫೩ರ ವರೆಗೆ ಮೂರ್ನಾಡಿನ ಶ್ರೀ. ರಾಮಮಂದಿರದಲ್ಲಿ ಶ್ರೀರಾಮೋತ್ಸವವು ಜರಗುವದು.

ತಾ. ೨೫-೩-೫೩ನೇ ಸೋಮವಾರ ಸಾಪೋಕ್ಲು ಸರಕಾರಿ ಪ್ರೌಢ ಶಾಲೆಯಲ್ಲಿ ಹಿಂದೀ ದಿನಾಚರಣೆಯು ನಡೆಯಿತು. ಮಡಿಕೇರಿಯ ಸರಕಾರಿ ಕಾಲೇಜಿನ ಹಿಂದಿ ಪ್ರಾಧ್ಯಾಪಕಿ ಶ್ರೀಮತಿ ರಾಜೀವಿಬಾಯಿ, ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಭಗವಾನ್‌ದಾಸರೂ, ಎ ಸಿ ಮುಂದಪ್ಪನವರೂ ಮತ್ತು ಎಂ. ಎ ತಿಂಗಪ್ಪನವರೂ ಹಿಂದೀ ಭಾಷೆಯ ಪ್ರಚಾರ ಪ್ರಾಮುಖ್ಯತೆ, ಸ್ವತಂತ್ರ ಭಾರತದಲ್ಲಿ ಹಿಂದೀ ಭಾಷೆಯ ಸ್ಥಾನ ಇತ್ಯಾದಿ ವಿಷಯಗಳನ್ನು ಕುರಿತು ಭಾಷಣ ಮಾಡಿದರು. ಹಿಂದೀ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಸರ್ಟಿಫಿಕೇಟುಗಳನ್ನೂ, ಉತ್ತಮ ಶ್ರೇಣಿಯನ್ನು ಪಡೆದವರಿಗೆ ಬಹುಮಾನಗಳನ್ನೂ ಹಂಚಲಾಯಿತು.

ಬೊಂಬಾಯಿಯಲ್ಲಿಯ ಮಾತುಂಗಾ ಜಂಖಾನದಲ್ಲಿ ನಡೆದ ಓಪನ್ ಬ್ಯಾಡ್ಮಿಂಟನ್ ಪಂದ್ಯಾಟದಲ್ಲಿ ಮಿ|| ಚೋಕಿರ ಕಾಳಪ್ಪನವರು ಸಿಂಗಲ್ಸ್ ಮತ್ತು ಡಬ್ಬಲ್ಸ್ ಆಟಗಳಲ್ಲಿ ಜಯಶೀಲರಾಗಿ ಬೆಳ್ಳಿಯ ಬಟ್ಟಲುಗಳನ್ನು ಪಡೆದಿರುವರು. ಡಬ್ಬಲ್ಸ್ ಆಟದಲ್ಲಿ ಇವರು ಇವರು ಏಳನೇ ಸಾರಿಯ ಜಯಶೀಲವಾಗಿದೆ.

ಶ್ರೀ ಪಾಡಿ ಇಗ್ಗುತ್ತಪ್ಪ ದೇವರ ಕಲಾದ್ಚ ಹಬ್ಬವು ಈ ತಾರೀಕು ೧೧ನೇ ಮಂಗಳವಾರ ದಿವಸ ಜರುಗುತ್ತೆ. ಭಕ್ತರ ತುಲಾಭಾರ ಪೂಜೆ ವಗೈರೆ ಸದರಿ ದಿವಸ ನಡೆಸಲಾಗುತೆ.

ಈ ವರೆಗೆ ಇದ್ದಂತೆಯೇ ೧೯೫೩-೫೪ರಲ್ಲೂ ಸಾರಾಯಿಯ ನಿಯಂತ್ರಣವನ್ನು ಮುಂದರಿಸಲಾಗುವದೆಂದೂ ಸಾರಾಯಿ ಕುಪ್ಪಿಗೆ ರೂ. ೪ ರಂತೆ ಹರಾಜು ಮಾಡಲಾಗುವದೆಂದೂ ಲೈಸೆನ್ಸ್ ಬೇಕಾದವರು ಎರಡು ರೂಪಾಯಿ ಫೀಸು ಕಟ್ಟಿ ತಾರೀಕು ೧೫-೩-೫೩ರೊಳಗೆ ಒಂದನೇ ಕ್ಲಾಸ್ ಸ್ಟಾಂಪಿನೊಡನೆ ಅರ್ಜಿ ಬರೆದುಕೊಳ್ಳಬೇಕೆಂದೂ ತಿಳಿಸಲಾಗಿದೆ.

ರುದ್ರಗುಪ್ಪೆ ಬಾಡಗ ಗ್ರಾಮದ ಸುತ್ತುಮುತ್ತಲಿನ ರೈತರ ದನಗಳಿಗೆ ತೊಂದರೆ ಕೊಡುತ್ತಿದ್ದ ಹುಲಿಯೊಂದನ್ನು ಶ್ರೀ ಕೊಕ್ಕೇರ ಐಯ್ಯಪ್ಪನವರು ತಾ. ೧೮ರಲ್ಲಿ ಗುಂಡಿಕ್ಕಿ ಕೊಂದು ಊರಿನ ಜನರಿಗೆ ಉಪಕಾರ ಮಾಡಿದ್ದಾರೆ. ಇದುವರೆಗೆ ಇವರು ಮೂರು ಹುಲಿಗಳನ್ನು ಕೊಂದಿರುವರು.

ಕೊಡಗಿನ ಸಿವಿಲ್ ಸರ್ಜನರಾದ ಶ್ರೀ. ಟಿ ಬಿ ವೆಂಕಟಪ್ಪನವರು ಇರುವ ಬಂಗ್ಲೆಯನ್ನು ಮಂತ್ರಿಗಳ ಉಪಯೋಗಾರ್ಥವಾಗಿ ಶೀಘ್ರ ಖಾಲಿ ಮಾಡಬೇಕೆಂದು ಅವರಿಗೆ ನೋಟೀಸು ಕೊಟ್ಟಿರುವದಾಗಿ ತಿಳಿಯ ಬಂದಿದೆ.

ಕೇಂದ್ರ ಸರಕಾರದ ಆಹಾರ ಇಲಾಖೆಯ ಮಂತ್ರಿಯಾಗಿರುವ ಶ್ರೀ ಮುನ್ಷಿಯವರಿಂದ ತೆರೆಯಲ್ಪಟ್ಟ ಅಖಿಲ ಭಾರತ ಸಹಕಾರ ಯೂನಿಯನ್ನಿನ ಅಧ್ಯಕ್ಷರಾದ ಪ್ರೊ ಎಚ್. ಎಲ್. ಕಾಜಿಯವರ ಅಧ್ಯಕ್ಷತೆಯಲ್ಲಿ ಕಳೆದ ತಾ. ೨೫ರಿಂದ ೨೭ರ ವರೆಗೆ ಬೊಂಬಾಯಿಯಲ್ಲಿ ನಡೆದ ಅಖಿಲ ಭಾರತ ಪ್ರಥಮ ಸಹಕಾರಿ ಕಾಂಗ್ರೆಸಿಗೆ ಪ್ರತಿನಿಧಿಗಳಾಗಿ ಕೊಡಗಿನಿಂದ ಹೋಗಿದ್ದ ಪ್ರಾಂತೀಯ ಬ್ಯಾಂಕಿನ ಮತ್ತು ಸಹಕಾರಿ ಫೆಡರೇಶನಿನ ಅಧ್ಯಕ್ಷರು ವಾಪಾಸು ಬಂದಿರುವರು. ಅಲ್ಲದೆ ಅಖಿಲ ಭಾರತ ಸಹಕಾರಿ ಯೂನಿಯನಿನ ೨೦ ಸದಸ್ಯರುಳ್ಳ ಕಾರ್ಯಕಾರಿ ಮಂಡಳಿಗೆ ಒಬ್ಬ ಮೆಂಬರಾಗಿ ಶ್ರೀ ಪಿ ಐ ಬೆಳ್ಯಪ್ಪನವರು ಪುನಃ ಆರಿಸಲ್ಪಟ್ಟಿರುವರು.

ಬೇಕಾಗಿದೆ.

ದೊಡ್ಡದಾಗಿ ಬೆಳೆದ ಕಾಡು ಹಂದಿಗಳ ಕುತ್ತಿಗೆಯಲ್ಲಿರುವ ಮಿನುಗುವ ಗಡಿಗಳಿಂದ ಕೂಡಿದ ಭಾಗವನ್ನು ಚರ್ಮ ಸಹಿತ ತೆಗೆದು ಒಣಗಿಸಿ ಕಳುಹಿಸಿದರೆ ಪ್ರತಿಯೊಂದಕ್ಕೆ ರೂ. 1-8-0 ದರದಲ್ಲಿ ಕೊಂಡುಕೊಳ್ಳಲಾಗುವುದು. ಹೆಚ್ಚಿನ ವಿವರಗಳಿಗೆ ಈ ಪತ್ತೆಗೆ ಬರೆಯಿರಿ.

D. H. THANGAM & CO.,
Kunda Bridge P. O.
Nilgiris.

ಮಾರಾಟಕ್ಕಿದೆ.

ವೀರಾಜಪೇಟೆ ದೇವಾಂಗ ಬೀದಿಯಲ್ಲಿ ಬಾವಿ ಇರುವ ಒಂದು ಹಂಚಿನ ಮನೆ, ಕೊಟ್ಟಿಗೆ, ಹಿತ್ಲು ವಗೈರೆಯಿಂದ 0,16 ಎಕ್ರೆ ವಿಸ್ತೀರ್ಣದ ಆಸ್ತಿಯು 6000/- ರೂಪಾಯಿಗಳಿಗೆ ವಿಕ್ರಯಿಸಲ್ಪಡುವುದು. ಖಾಯಿಸ್‌ದಾರರು ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ಯಸ್. ಯಸ್. ರಾಮಮೂರ್ತಿ,
ಮಾಲೀಕರ ಪರ ಅಡ್ವೊಕೇಟ್,
ವೀರಾಜಪೇಟೆ.

2-1

ಓದುಗರ ಓಲೆಗಳು

ಅಧ್ಯಾಪಕರನ್ನಾದರೂ ಕೊಡಿ.

೮-೧೧-೫೧ರಲ್ಲಿ ಹಿಂದೂ ಪತ್ರಿಕೆಯಲ್ಲಿ ಸಂಪಾದಕರು ಧಾರವಾಡದಲ್ಲಿ ಊರವರೇ ಸೇರಿ ಒಂದು ವಾರದಲ್ಲಿ ಕಟ್ಟಿದ ಶಾಲೆಯ ವಿಷಯ ಕುರಿತು ಹೀಗೆ ಹೇಳಿರುವರು. ಶಾಲೆಗಳನ್ನು ಸರಕಾರದವರಾಗಲೀ ಅಥವಾ ಅವರ ಸಹಾಯದಿಂದಾಗಲೀ ಕಟ್ಟಬೇಕೆಂದು ಕಾದರೆ ಎಲ್ಲಾ ಗ್ರಾಮಗಳಿಗೂ ಶಾಲೆಗಳಾಗಬೇಕಾದರೆ ೪೦ ವರ್ಷಗಳು ಹಿಡಿಯಬಹುದು. ಆದರೆ ಊರವರೇ ಕಟ್ಟಿಸಿದರೆ ೧೫ ದಿನಗಳಲ್ಲೇ ಕಟ್ಟಿಸಬಹುದು.

ಈ ಪತ್ರಿಕೆಯನ್ನು ಓದಿ ಕೊಡಗಿಗೆ ಈ ಸಂಗತಿ ಎಷ್ಟರ ಮಟ್ಟಿಗೆ ಅನ್ವಯಿಸುತ್ತದೆ ಎಂದು ಆಲೋಚಿಸಿದರೆ ಕೊಡಗಿನಲ್ಲಿ ೫ನೇ ತರಗತಿ ವರೆಗೆ ಸ್ಥಳೀಯ ಸಂಸ್ಥೆಗಳೇ ವಿದ್ಯೆ ಕಲಿಸುತ್ತಿರುವರು. ಅದರ ಮೇಲೆ ಹೈಸ್ಕೂಲಿನ ವರೆಗೆ ಸಹ ಶಾಲಾ ಫೀಜು ದೊಡ್ಡದಿರುವದರಿಂದ ಉಪಾಧ್ಯಾಯರ ಸಂಬಳವನ್ನು ಫೀಜಿನಿಂದಲೇ ಕೊಡಬಹುದಿದ್ದು ಸರಕಾರಕ್ಕೆ ಹೆಚ್ಚಿನ ಭಾರವಿಲ್ಲ. ಹಾಗಾದರೆ ವಿದ್ಯೆಗಾಗಿ ಕೊಡಗು ಸರಕಾರ ಕೊಟ್ಟ ಖರ್ಚು ನೂರು ಇಲ್ಲವೆನ್ನಬಹುದು. ಕೊಡಗಿನಲ್ಲಿರುವ ಈ ಶತಮಾನದ ಆದಿಯಿಂದ ಕಟ್ಟಿಸಿದ ಕಟ್ಟಡಗಳೆಲ್ಲಾ ಖಾಸಗಿ ಕಟ್ಟಡಗಳೇ! ಸರಕಾರದ ಸಹಾಯವಿದೆ. ಎಷ್ಟು ೫ನೇ ತರಗತಿಯ ಮತ್ತು ೮ನೇ ತರಗತಿಯ ಶಾಲೆಗಳು ಪೂರ್ತಿಯಾದ ಮೇಲೆ ಸರಕಾರದ ಬೇರೆ ಬೇರೆ ಉದ್ಯೋಗಸ್ಥರ ಮನೆಗೆ ಹೋಗಿದವು! ಇನ್ನು ಕಟ್ಟು ಕಟ್ಟಳೆ ಇದ್ದರೂ ಅದನ್ನು ಅನುಸರಿಸುವುದಿಲ್ಲ.

ಇಷ್ಟೆ ಅಲ್ಲ ಸರಕಾರದವರು ಕಾಲೇಜಿಗೂ ಹೈಸ್ಕೂಲುಗಳಿಗೂ ಲಕ್ಷಗಟ್ಟಲೆ ಖರ್ಚ ಮಾಡುತ್ತಿರುವರು. ಆದರೆ ಬಡ ಗ್ರಾಮದಲ್ಲಿ ಊರವರೇ ಕಟ್ಟಿಸಿದ ಶಾಲೆಗಳಿಗೆ ಒಬ್ಬ ನ್ಯಾಯವಾದ ಉಪಾಧ್ಯಾಯರಿಗೆ ಗತಿಯಿಲ್ಲ! ಕೆಲವು ಬುದ್ಧಿವಂತ ಕಮಿಟಿಗಳು ಚೀಫ್ ಕಮಿಷನರ್ ಸಾಹೇಬರನ್ನೇ ಕರೆದು ಶಾಲೆ ತೆರೆಸಿದರು. ಆದರೂ ಯೋಗ್ಯ ಉಪಾಧ್ಯಾಯರ ಸುಳಿವೇ ಇಲ್ಲ. ಚೀಫ್ ಕಮಿಷನರು ಹೋದರೆ ಕೆಲವು ಬಾರಿ ಆ ಶಾಲೆಗೆ ಉಪಾಧ್ಯಾಯರು ದೊರಕಿ ಹೋಗುವುದಿದೆಯೆಂದು ನಂಬಿ ಮಾಡಿದ ಪ್ರಯತ್ನವೂ ಫಲಕಾರಿಯಾಗಿಲ್ಲ.

ಪ್ರಜಾಪ್ರತಿನಿಧಿಗಳಾದ ಮಂತ್ರಿಗಳು ಬರುವವರೆಗೆ ಕಾಯದೆ ನಾವೇ ಕಟ್ಟಿಸಿದ ಶಾಲೆಗೆ ಸರಿಯಾದ ಉಪಾಧ್ಯಾಯರನ್ನು ಕೊಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಬೇಡುವೆವು. ನಮಗೆ ಗ್ರಾಂಟು ಕೊಟ್ಟರೆ ಸಾಲದು ನ್ಯಾಯವಾದ ಉಪಾಧ್ಯಾಯರೇ ಬೇಕು. ಹಾಗಾದರೆ ಮಾತ್ರ ಪ್ರೈಮರಿ ಶಿಕ್ಷಣವು ಧರ್ಮಾರ್ಥವೆಂದು ನಾವು ತಿಳಿಕೊಳ್ಳುವದು ಸರಿ. ಇಲ್ಲದಿದ್ದರೆ ಅನುಕೂಲಸ್ಥರ ಪಟ್ಟಣವಾಸಿಗಳ ಮಕ್ಕಳ ಪ್ರಯೋಜನಕ್ಕೆ ಈ ನಷ್ಟ ಬಡವ ಮಾತ್ರ ಸಹಿಸಬೇಕೆಂದು ತೋರುತ್ತೆ. ನಾವೂ ಕಂದಾಯ ಕೊಡುವೆವು. ನಮಗೂ ಮತದಾನದ ಹಕ್ಕಿದೆ!

ಗ್ರಾಂಟು ಶಾಲೆಯ ಪಂಚಾಯತದಾರರು.

ಈ ವರ್ತನೆ ಸರಿಯೇ?

ಕಳೆದ ವಾರ ಒಬ್ಬರ ಮನೆಯಿಂದ ಅವರ ಆಳು ಅಕ್ಕಿ ಹುಡಿಮಾಡಲು ಪರ್ಮಿಟಿಲ್ಲದೆ ಮಿಲ್ಲಿಗೆ ತರುತ್ತಿದ್ದನು. ಇದನ್ನು ಕಂಡ ಪೋಲೀಸರೊಬ್ಬರು ಆತನನ್ನು ಸ್ಟೇಷನಿಗೆ ಕರೆದೊಯ್ದರು. ಅಲ್ಲಿ ಆತನ ವಿಚಾರಣೆಯಾಯಿತು. ವಿಚಾರಣೆಯಾದದ್ದು ಏನು? ಪೋಲೀಸರು 'ಏನೋ ನಿನ್ನ ಯಜಮಾನನ ಮನೆಯ ಹೆಂಗಸರಿಲ್ಲವೇ ಕೈಗೆ ಚಿನ್ನದ ಕಟ್ಟಬಳೆ ಹಾಕಿಕೊಂಡು ಕೂತಿದ್ದಾರೋ. ಅವರಿಗೆ ಬೀಸುವುದಕ್ಕೇನು ಬಂದಿದೆ' ಎಂದು ಕೇಳಿದರೆ ಇನ್ಸ್‌ಪೆಕ್ಟರು 'ಏನೋ ನಿನ್ನ ಯಜಮಾನನ ಮನೆಯಲ್ಲಿ ತಿಥಿಗೀಗಿಯೋ ಅಕ್ಕಿ ಹುಡಿಮಾಡಿಸೋದು?' ಎಂದು ಕೇಳಿದರಂತೆ! ಬೇರೊಬ್ಬರ ಮನೆಯಲ್ಲಿ ತಿಥಿ ಮಾಡೋದು ಅಥವಾ ಇನ್ಸ್‌ಪೆಕ್ಟರ ಮನೆಯಲ್ಲಿಯೇ ತಿಥಿಯಾದರೂ ಪರ್ಮಿಟಿಲ್ಲದೆ ಅಕ್ಕಿ ತಂದುದಕ್ಕೆ ಸಂಬಂಧವೇನಿದೆ? ಪೋಲೀಸರು ತಪ್ಪು ಮಾಡಿದರೆ ತಿದ್ದುವುದು ಇನ್ಸ್‌ಪೆಕ್ಟರ ಕೆಲಸ. ಇದನ್ನು ಬಿಟ್ಟು ಪೋಲೀಸರು ಕಾಳಹಾಕಿದಕ್ಕೆ ಇನ್ಸ್‌ಪೆಕ್ಟರು ಮೇಳಕೂಡಿಸಿ ಕಣಿಸರಿ 'ಬೇಲಿಯೇ ಹೊಲನೆಲ್ಲ ಮೇಯ್ದರೆ' ಎಂದಂತಾಗುತ್ತದೆ. ತಮ್ಮ ಕೆಲಸವೆಷ್ಟಿದೆ ಅಷ್ಟನ್ನು ಮಾಡುವುದು ಬಿಟ್ಟು ಈ ರೀತಿಯ ಅಸಭ್ಯವರ್ತನೆಗೆ ನ್ಯಾಯಪಾಲನಾ ಸಂಸ್ಥೆಯವರು ಇಳಿಯುವುದು ವಿಷಾದಕರ ಸಂಗತಿಯಾಗಿದೆ.

ಇಷ್ಟಲ್ಲದೆ ಮತ್ತೊಂದು ಸಂಗತಿಯೆಂದರೆ ಎರಡು ವಾರಗಳಿಗೆ ಹಿಂದೆ ತನ್ನ ಯಜಮಾನನ ಕೈಯಿಂದ ನಿಷ್ಕಾರಣವಾಗಿ ಪೆಟ್ಟು ತಿಂದು, ಸಂಬಳ ಕೊಡದೆ ಓಡಿಸಲ್ಪಟ್ಟ ಒಬ್ಬ ಮಲೆಯಾಳಿಯೂ, ಮತ್ತು ವಾರಕ್ಕೆ ಸಿಕ್ಕಿದ್ದ ಬೇರೊಬ್ಬ ಹರಿಜನನೂ ಕಾರಣಾಂತರದಿಂದ ತನ್ನ ಯಜಮಾನನಿಂದ ಪೆಟ್ಟು ತಿಂದು ಆಸ್ಪತ್ರೆಗೆ ಸೇರಿಸಲ್ಪಟ್ಟವನೂ ಸ್ಟೇಷನಿಗೆ ದೂರು ತಂದರಂತೆ. ಮೊದಲು ಇವರನ್ನೇ ವಿಚಾರಣೆಯಿಲ್ಲದೆ ಗದರಿಸಿ ಓಡಿಸಲಾಯಿತಂತೆ. ಮತ್ತೊಮ್ಮೆ ಅರ್ಜಿಯೊಡನೆ ದೂರುಕೊಟ್ಟಾಗ ಬರುವ ವಾರ ಬನ್ನಿಯೆಂದು ಕಳುಹಿಸಿದರಂತೆ. ಆ ವಾರ ಹೋದಾಗ ಮತ್ತೊಂದು ವಾರ ಎಂದರೆ ನಿನ್ನ ಸಂಬಳ ಕೇಳಿಕೊಡುತ್ತೇವೆಂದು ವಿಚಾರಣೆಯಾದ ನಂತರ ಮಲೆಯಾಳಿಗೆ ಹೇಳಿದರಂತೆ. ಆದರೆ ಇಂದಿಗೂ ಮಲೆಯಾಳಿಗೆ ಸಂಬಳವೂ ಇಲ್ಲ, ಹರಿಜನನಿಗೆ ರಿಪೋರ್ಟ್ ಇಲ್ಲ. ಮಲೆಯಾಳಿ ಮತ್ತು ಹರಿಜನರು ಈ ದೇಶದ ಪ್ರಜೆಗಳಲ್ಲವೆಂದು ತಿಳಕೊಂಡ ಹಾಗಿದೆ. ಮುಖನೋಡಿ ಮಣೆಹಾಕುವ ಹವ್ಯಾಸ ಸಮಾಜದ ನ್ಯಾಯ, ನಿಯಮಗಳನ್ನು ರಕ್ಷಣೆಮಾಡತಕ್ಕಂತಹ ಇಂತಹ ಸಂಸ್ಥೆಗಳಲ್ಲಿಯೇ ನಡೆದರೆ ಬಡಜನತೆಯ ಪಾಡೇನೆಂದು ತಿಳಿಸುವಿರಾ? ಓಟು ಕೊಡುವ ಸಮಯದಲ್ಲಿಯಾದರೂ ಹರಿಜನರಿಗೂ ಮಲೆಯಾಳಿಗೂ ಓಟಿನ ಹಕ್ಕಿತ್ತೆಂದು ಗೊತ್ತಿದ್ದರೂ ಈ ರೀತಿಯ ವರ್ತನೆ ಸರಿಯೇ? ದಯಮಾಡಿ ಇನ್ನು ಮುಂದಕ್ಕಾದರೂ ಜನತೆಯೊಡನೆ ಈ ರೀತಿಯ ಅಸಭ್ಯವರ್ತನೆಯಾಗದಂತೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ನಿಗವಹಿಸಬೇಕು.

(ಕ್ರಾಂತಿ ಕುಮಾರ್)

ಕೊಡಗಿನ ಹುಡುಗಿಯರು

ನಮ್ಮ ದೇಶದ ಹೆಣ್ಣು ಮಕ್ಕಳು ಎಲ್ಲಾ ರೀತಿಯಲ್ಲಿಯೂ ಮುಂಬರುತ್ತಿರುವರು. ಐ. ಎ. ಎಸ್. ಪರೀಕ್ಷೆಯಲ್ಲಿ ಪಾಸಾದವರಿದ್ದಾರೆ. ಕಾಲೇಜಿನ ಹುಡುಗಿಯರು ಅನೇಕ ಪಂದ್ಯಾಟಗಳಲ್ಲಿ ಗೆದ್ದಿದ್ದಾರೆ. ನಮ್ಮ ಸರಕಾರದವರ ಪ್ರೋತ್ಸಾಹ ಇರುವದರಿಂದ ಎಲ್ಲಾ ಆಫೀಸುಗಳಲ್ಲಿ ಅವರು ಕೆಲಸ ಮಾಡುತ್ತಿರುವರು. ಇನ್ನು ಕೆಲವು ವರ್ಷಗಳಲ್ಲಿ ಎಲ್ಲಾ ಶಾಲೆಗಳಲ್ಲಿಯೂ ಅವರ ಸಂಖ್ಯೆ ಹೆಚ್ಚುವುದು. ಇನ್ನು ಹತ್ತು ವರ್ಷಗಳಲ್ಲಿ ಹೈಯರ್ ಎಲಿಮೆಂಟರಿ ಮತ್ತು ಪ್ರೈಮರಿ ಶಾಲೆಗಳೆಲ್ಲಾ ಇವರಿಂದಲೇ ನಡೆಸಲ್ಪಡುವದೆಂದರೆ ಅತಿಶಯೋಕ್ತಿಯಾಗಲಾರದು.

ಕೆಲವು ದಿನಗಳಿಗೆ ಹಿಂದೆ ಬಸ್ಸಿನಲ್ಲಿ ಹೋಗುವಾಗ ರಾಕೋಟುಪರಂಬಿನಲ್ಲಿ ಹುಡುಗಿಯರು ಹರಿಜನರ ವಾದ್ಯಕ್ಕೆ ಕುಣಿಯುವುದನ್ನು ಕಂಡು ಖಂಡಿತವಾಗಿಯೂ ಈ ಮಕ್ಕಳು ಮುಂದೆ ಬಂದರೆ ಸರಿಯಾಗಿ ತಯಾರು ಮಾಡಿದರೆ ಇವರು ಹಾಕಿ ಆಟದಲ್ಲಿ ಮದರಾಸು ಕಲ್ಕತ್ತೆಗಳೊಡನೆ ಪಂದ್ಯಾಟವಾಡಿ ಗೆಲ್ಲುವರೆಂದು ನನಗೆ ನಿಶ್ಚಿತ.

ಆದ್ದರಿಂದ ಶಾಲೆಗಳಲ್ಲಿ ಈ ರೀತಿಯ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡುವಿರಾ? ಹುಡುಗಿಯರಿಗೆ ಹಾಕಿ ಮುಂತಾದ ಆಟಗಳನ್ನು ಏರ್ಪಡಿಸುವಿರಾ? ಕೆಲವು ಸಣ್ಣ ಹುಡುಗಿಯರು ಚೆನ್ನಾಗಿ ಆಡುತ್ತಿರುವರು! ಹುಡುಗರಿಗೆ ಆಡಲು ಪಂದ್ಯಾಟ, ಕಪ್ಪು ಏರ್ಪಾಡು ಮಾಡುವಂತೆ ಹುಡುಗಿಯರಿಗೆ ಮಾಡಲು ಬಾಲಕಿಯರ ಮೇಲೆ ಅಭಿಮಾನ ಇರುವವರು ಮುಂದೆ ಬರುವಿರಾ? ಸರಸ್ವತಿ

ವಾರ್ತೆ.

ಮಾರ್ಚಿ ತಿಂಗಳ ೪ನೆಯ ದಿನಾಂಕ ಮುಂಬಯಿಯಲ್ಲಿ ಮುಂಬಯಿ ರಾಜ್ಯದ ಮಹಿಳಾ ಮಂಡಳದ ವಾರ್ಷಿಕಾಧಿವೇಶನವು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಅಧ್ಯಕ್ಷತೆಯಲ್ಲಿ ಸೇರಲಿದ್ದು ಅದರ ಉದ್ಘಾಟನೆಯನ್ನು ಅಮೇರಿಕದ ಹಿಂದಿನ ಅಧ್ಯಕ್ಷ ರೂಜವೆಲ್ಟರ ಪತ್ನಿ ಶ್ರೀಮತಿ ರೂಜವೆಲ್ಟರು ನೆರವೇರಿಸುವರು.

ಮಲೇರಿಯಾ ನಿಯಂತ್ರಣ, ಕ್ಷಯರೋಗ ಪ್ರತಿಬಂಧ, ಬಿ. ಸಿ. ಜಿ. ವ್ಯಾಕ್ಸಿನೇಶನ ಡಿ. ಡಿ. ಟಿ. ತಯಾರಿಕೆ ಮತ್ತು ಪೆನ್ಸಿಲಿನ್ ತಯಾರಿಕೆ ಕಾರಖಾನೆಗಳಿಗಾಗಿ ಭಾರತದಲ್ಲಿ ೧೯೫೨ರಲ್ಲಿ ೧೭,೦೦,೦೦೦ ಡಾಲರುಗಳನ್ನು ವೆಚ್ಚ ಮಾಡಲು ಜಾಗತಿಕ ಆರೋಗ್ಯ ಸಂಸ್ಥೆಯ ಡೈರೆಕ್ಟರ್ ಜನರಲ್‌ರು ಹೊಸ ದಿಲ್ಲಿಯ ಪತ್ರಿಕಾ ಪರಿಷತ್ತೊಂದರಲ್ಲಿ ತಿಳಿಸಿರುವರು.

ಸಾರ್ವತ್ರಿಕ ಚುನಾವಣೆಗಳು ನಡೆದಾಗ ಅಧಿಕಾರಿಗಳು ನಡೆದುಕೊಂಡ ರೀತಿ, ಕಾಂಗ್ರೆಸ್ ಹುರಿಯಾಳುಗಳ ಸೋಲಿನ ಕಾರಣ, ಕಾಂಗ್ರೆಸ್ಸಿನಲ್ಲಿರುವ ಶಿಸ್ತಿನ ಅಭಾವ ಮೊದಲಾದವುಗಳ ವಿಚಾರವನ್ನು ಮಹಾಕೋಸಲದಲ್ಲಿ ಸಂಚರಿಸಿ ತಿಳಿದುಕೊಂಡು ವರದಿ ಮಾಡಲು ಮಹಾಕೋಸಲ ಕಾಂಗ್ರೆಸ್ ಸಮಿತಿಯು ಒಂದು ಚಿಕ್ಕ ಸಮಿತಿಯನ್ನು ನೇಮಿಸಿದೆ.

ಮದ್ರಾಸಿನಲ್ಲಿ ಸಮ್ಮಿಶ್ರ ಸರಕಾರ ರಚಿಸಲು ಕಾಂಗ್ರೆಸ್ಸಿಗೆ ಸಹಾಯ ನೀಡಲು ೭೦ ಜನ ಸ್ವತಂತ್ರ ಹಾಗೂ ಪ್ರಾಂತಿಕ ಪಕ್ಷಗಳ ಸದಸ್ಯರು ಸಿದ್ಧರಿದ್ದಾರೆ. ಆದರೆ ಇವರಾರೂ ಕಾಂಗ್ರೆಸ್ ಪ್ರತಿಜ್ಞೆಗೆ ಅಂಕಿತ ಹಾಕಲು ಒಪ್ಪುವದಿಲ್ಲ. ಹಾಗೆ ಮಾಡಲು ಹೇಳುವವರಿಂದ ಸರಕಾರ ರಚಿಸುವದು ಸಾಧ್ಯವಾಗದೆ ಅದರಿಂದ ಜನತೆಗೆ ಅಹಿತ ಬಗೆದಂತಾಗುವದು ಎಂದು ಮದರಾಸು ಶಾಸನ ಸಭೆಯ ಸ್ವತಂತ್ರ ಸದಸ್ಯರ ಸಂಯುಕ್ತ ಪ್ರಜಾ ಪಕ್ಷದ ಧುರೀಣರಾದ ಶ್ರೀ ಎಂ. ಎ. ಮುತ್ತಯ್ಯ ಚೆಟ್ಟಿಯಾರರು ಕುಂಭಕೋಣದ ಸಭೆಯೊಂದರಲ್ಲಿ ಹೇಳಿರುವರು.

ಮದರಾಸು, ಮುಂಬಯಿ, ಮೈಸೂರು, ಕೊಡಗು ಮತ್ತು ಹೈದರಾಬಾದ್ ಶಾಸನ ಸಭೆಗಳಿಗೆ ಆರಿಸಿ ಬಂದಿರುವ ಕನ್ನಡ ನಾಡಿನ ಸದಸ್ಯರ ಪರಿಚಯಾತ್ಮಕ ಪುಸ್ತಕವೊಂದನ್ನು ಪ್ರಕಟಿಸಲು ಮದರಾಸು ಕನ್ನಡ ಸಾಹಿತ್ಯ ಸಂಘವು ನಿರ್ಧರಿಸಿದೆ.

In the matter of Indian Companies Act 1913, and of the Coorg Cloth Merchants Co. Ltd.,

(In V. Liquidation)

TO.

Share Holders,

(For Information)

Dividends have been declared and paid as follows:–

1st Dividend	0–10–0	in the Rupee
2nd ,,	0–1–6	,,
3 rd ,,	0–1–0	,,
4 th ,,	0–0–9	,,
5 th & final devidend	0–0–1½	,,

Mercara,
28-2-52.

K. V. GIRI,
VOLUNTARY LIQUIDATOR.

ಆಸ್ಟ್ರೇಲಿಯಾ ಮತ್ತು ನ್ಯೂಜಿಲೇಂಡುಗಳಲ್ಲಿ ಜೇನಿನ ಕೈಗಾರಿಕೆ.

[ರೂರಲ್ ಇಂಡಿಯಾ (Rural India) ಮಾಸ ಪತ್ರಿಕೆಯಲ್ಲಿ ಬರೆದು ಬಂದ ಶ್ರೀ ಹೆಚ್. ವಿಶ್ವನಾಥನ್‌ರವರ ಇಂಗ್ಲಿಷ್ ಲೇಖನದ ಅನುವಾದ]

ಈ ಕಳೆದ ಶತಮಾನದಲ್ಲಿ ಆಸ್ಟ್ರೇಲಿಯಾ ಮತ್ತು ನ್ಯೂಜಿಲೇಂಡ್‌ಗಳಲ್ಲಿ ಜೇನಿನ ಕೈಗಾರಿಕೆಯು ಬಹಳವಾಗಿ ಮುಂದರಿಯಿತು. ಆ ದೇಶಗಳಲ್ಲಿಯ ಜೇನು ಉತ್ಪಾದನೆಯನ್ನು ಟನ್ನು ಮತ್ತು ಟನ್ನುಗಳಲ್ಲಿ ಲೆಕ್ಕ ಹಾಕಲಾಗುತ್ತಿದೆ. ಆಸ್ಟ್ರೇಲಿಯಾದಲ್ಲಿ ಸಾಲಿಯಾನ ಅಂದಾಜು ಇಪ್ಪತ್ತರಿಂದ ಇಪ್ಪತ್ತೈದು ಸಾವಿರ ಟನ್ನು ಜೇನು ಉತ್ಪಾದನೆಯಾಗುತ್ತದೆ (ಒಂದು ಟನ್ನಿಗೆ 2240 ರಾತಲಿನ ಲೆಕ್ಕ.) ನ್ಯೂಜಿಲೇಂಡಿನಲ್ಲಿ ಸಾಲಿಯಾನ ಜೇನು ಉತ್ಪತ್ತಿಯು ಐದರಿಂದ ಆರು ಸಾವಿರ ಟನ್ನು ಆಗಿರುತ್ತದೆ. ಈ ಎರಡು ರಾಷ್ಟ್ರಗಳಲ್ಲಿಯೂ ಜೇನು ಉತ್ಪಾದನೆಯ ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ಸಂಯುಕ್ತ ರಾಷ್ಟ್ರ ಮೊದಲಾದ ಇತರ ಪರದೇಶಗಳಿಗೆ ಕಳುಹಿಸುತ್ತವೆ. ಜೇನಿನ ಉತ್ಪತ್ತಿಯ ಜೊತೆಗೆ ಆಸ್ಟ್ರೇಲಿಯಾದಲ್ಲಿ ಅಂದಾಜು ನೂರಿಪ್ಪತ್ತು ಟನ್ನುಗಳಷ್ಟು ಜೇನು ಮೇಣ ಉತ್ಪಾದನೆಯಾಗುತ್ತದೆ. ಇಲ್ಲಿ ರಖಂ ದರದಲ್ಲಿ ಜೇನು ರಾತಲೊಂದರ 0–8–0 ಯಿಂದಲೂ ಮೇಣ ರಾತಲೊಂದು ರೂ. 3–0–0 ಕ್ಕೆ ಸಿಗುತ್ತದೆ ದೊರೆಯುತ್ತವೆ. ಈ ದೇಶಗಳಲ್ಲಿ ಜೇನು ಉತ್ಪನ್ನಕ್ಕೆ ಅಷ್ಟು ಕಡಿಮೆ ಬೆಲೆ ದೊರೆತರೂ ಅಲ್ಲಿನ ಜೇನು ಕೃಷಿಕರು ಹೆಚ್ಚು ಜೇನು ಸಂಗ್ರಹಿಸಬಲ್ಲರು. ಇಟಲಿ ಮತ್ತಿತರ ಸ್ಥಳಗಳ ಉತ್ತಮ ತರದ ಜೇನುನೊಣಗಳ ತಳಿಗಳನ್ನು ತರಿಸಿಕೊಂಡು ತಕ್ಕ ನವೀನ ಮತ್ತು ಶಾಸ್ತ್ರೀಯ ರೀತಿಯ ಜೇನು ಸಾಕಾಣಿಕೆಯಿಂದ ಕಡಿಮೆ ಬೆಲೆ ಬಾಳುವಷ್ಟು ಜೇನು ತುಪ್ಪವನ್ನು ಪರ್ಯಾಪ್ತ ಸಂಪಾದಿಸುತ್ತಾರೆ. ದೇಶಕ್ಕೆ ಅಷ್ಟು ಐಶ್ವರ್ಯವನ್ನು ತರುವ ಜೇನು ನೊಣವು ಪೂರ್ವದಲ್ಲಿ ಅಲ್ಲಿರಲಿಲ್ಲ. ಇಂಗ್ಲೆಂಡ್ ಮತ್ತಿತರ ರಾಜ್ಯಗಳಿಂದ ಬಂದು ನೆಲಸಿದ ವಸಾಹತುಗಳು ತಂದ ಜೇನು ತಳಿಗಳನ್ನು [illegible] ಸಾಕಾಣಿಕೆಯಲ್ಲಿ ಅವುಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡರು. ಇತ್ತೀಚೆಗೆ ಸಾವಿರಾರು ಜನರ ದೃಷ್ಟಿಯನ್ನು ಆ ಕಡೆ ಸೆಳೆದ ಈ ಕೈಗಾರಿಕೆಯನ್ನು ಈಗಿರುವ ಸ್ಥಿತಿಗೆ ತರಲು ದುಡಿದ ಸಾಹಸಿಗರು ಪಟ್ಟ ಕಷ್ಟನಷ್ಟಗಳ ಪರಂಪರೆಯ ಚರಿತ್ರೆಯು ಬಹಳ ದೀರ್ಘವಾಗಿಯೂ, ತುಂಬಾ ಶೋಚನೀಯವಾಗಿಯೂ ಇದೆ. ಆದರೆ ಪರಿಸಾಧನೆ ಲಾಭದಾಯಕವಾಯಿತು.

ಆ ರಾಷ್ಟ್ರಗಳಲ್ಲಿ ಆಹಾರದ ಬೆಳೆ ಮತ್ತು ಹಣ್ಣುಹಂಪಲುಗಳ ಬೆಳೆಗಳನ್ನು ಹಲವು ಪಾಲು ಹೆಚ್ಚಿಸಿಕೊಳ್ಳಲು ಮತ್ತು ಇತರ ಕೆಲವು ಬೆಳೆಗಳಲ್ಲಿ ಸರಿಯಾಗಿ ಬೀಜ ಉತ್ಪಾದನೆಯಾಗಲು ಜೇನು ಸಾಕುವಿಕೆಯು ಮುಖ್ಯವೆಂದು ತನ್ಮೂಲಕ ರಾಷ್ಟ್ರಸೇವೆಯನ್ನು ಮಾಡಿದಂತಾಗುವುದೆಂದೂ ಪರಿಗಣಿಸಲಾಗಿದೆ. ಜೇನು ಸಾಕುವಿಕೆಯಿಂದ ಉತ್ಪತ್ತಿಯಾದ ಜೇನು ಮತ್ತು ಮೇಣದ ಬೆಲೆಗಿಂತ ಅದರಿಂದಾಗುವ ಬೀಜಪ್ರಸಾರದ ಫಲದ ಬೆಲೆಯು ಹತ್ತರಿಂದ ಇಪ್ಪತ್ತೈದು ಪಾಲಿನಷ್ಟು ಹೆಚ್ಚೆಂದು ಲೆಕ್ಕ ಹಾಕಲಾಗಿದೆ. ಈ ಕೃಷಿಯನ್ನು ಯಾ ಕೈಗಾರಿಕೆಯನ್ನು ದೊಡ್ಡ ಪರಿಮಾಣದಲ್ಲಿ ಕೈಗೊಂಡದ್ದರಿಂದ ಜೇನು ವ್ಯವಸಾಯಗಾರರಿಗೆ ಹೆಚ್ಚು ಜೇನನ್ನು ಬೆಳೆಸಿ ಕಡಿಮೆ ದರದಲ್ಲಿ ಮಾರಿಯೂ ಸಾಕಷ್ಟು ಲಾಭವನ್ನು ಪಡೆಯಲು ಸಾಧ್ಯವಾಗಿದೆ. ಆ ರಾಷ್ಟ್ರಗಳ ಬೇರೆ ಬೇರೆ ಪ್ರದೇಶಗಳಲ್ಲಿ ಸಾವಿರಾರು ಒಕ್ಕಲುಗಳು ಈ ಜೇನು ವ್ಯವಸಾಯವನ್ನೇ ಮುಖ್ಯ ಉತ್ಪನ್ನವನ್ನಾಗಿ ಜೀವನವನ್ನು ಸಾಗಿಸುತ್ತಿದ್ದಾರೆ. ಈ ಕೈಗಾರಿಕೆಯು ಸರಿಯಾದ ರೀತಿಯಲ್ಲಿ ವ್ಯವಸ್ಥಾಪಿಸಲ್ಪಟ್ಟಿದೆ. ಆ ರಾಷ್ಟ್ರಗಳ ಪ್ರತಿಯೊಂದು ಪ್ರದೇಶಗಳಲ್ಲಿ ಹೆಚ್ಚು ಸದಸ್ಯರಿಂದ ಕೂಡಿದ ಜೇನು ಕೃಷಿಕರ ಸಂಘ ಮತ್ತು ಸಂಸ್ಥೆಗಳು ಸ್ಥಾಪನೆಯಾಗಿವೆ. ಆಸ್ಟ್ರೇಲಿಯಾದಲ್ಲಿ ಅಲ್ಲಿಯ ಸರಕಾರದ ರಿಜಿಸ್ಟರಿಯಲ್ಲಿ ದಾಖಲೆಯಾದ ಜೇನು ವ್ಯವಸಾಯಗಾರರ ಸಂಖ್ಯೆ 8 000. ನ್ಯೂಜಿಲೇಂಡಿನಲ್ಲಿ ರಿಜಿಸ್ಟರಿಯಲ್ಲಿ ದಾಖಲೆಯಾದ ಜೇನು ವ್ಯವಸಾಯಗಾರರ ಸಂಖ್ಯೆಯು 7,000. ಆಸ್ಟ್ರೇಲಿಯಾದಲ್ಲಿರುವ ಜೇನು ಮನೆಗಳ ಸಂಖ್ಯೆ 500,000. ನ್ಯೂಜಿಲೇಂಡಿನಲ್ಲಿರುವ ಜೇನು ಮನೆಗಳ ಸಂಖ್ಯೆಯು 160 000. ಬೇರೆ ಬೇರೆ ಪ್ರದೇಶಗಳಲ್ಲಿ ಜೇನು ವ್ಯವಸಾಯದ ಭದ್ರತೆಯನ್ನು ಕಾಯಲು, ಅವುಗಳಿಗೆ ಬರುವ ಖಾಯಿಲೆ ಕಸಾಲೆಗಳನ್ನು ತಡೆಗಟ್ಟಲು, ಮಧುವನಗಳ ಮೇಲೆ ರೋಗ ಹಬ್ಬಿದರೆ ಅದರ ಆತಂಕಗಳು ಬಾರದಂತೆ ತಡೆಯಲು ಮತ್ತು ಆ ರೋಗ [illegible] ಸರಕಾರದ ಸಮ್ಮಂದಪಟ್ಟ ಶಾಖೆಯ ರಿಜಿಸ್ಟರಿಯಲ್ಲಿ ದಾಖಲೆ ಮಾಡಿಕೊಳ್ಳಲು ಸರಕಾರದ ಕಡೆಯಿಂದ ಕಟ್ಟು ಶಾಸನಗಳಿವೆ. ಆಸ್ಟ್ರೇಲಿಯಾದ ಪ್ರತಿಯೊಂದು ಪ್ರದೇಶದಲ್ಲಿ ಅಲ್ಲಿಯ ವ್ಯವಸಾಯ ಇಲಾಖೆಯ ಆಶ್ರಯದಲ್ಲಿ ಜೇನು ಕೃಷಿಕರಿಗೆ ವಿವಿಧ ಜೇನು ಸಾಕಣೆಯ ಕ್ರಮ, ಖಾಯಿಲೆ ಕಸಾಲೆಗಳು ಬಂದಲ್ಲಿ ತಡೆಗಟ್ಟುವ ವಿಧಾನ, ಮಧುವನಗಳನ್ನು ಸ್ಥಾಪಿಸುವ ಬಗ್ಗೆ ತಕ್ಕ ಸಲಹೆ ಇವೇ ಮೊದಲಾದ ಅನೇಕ ವಿಷಯಗಳಲ್ಲಿ ಆಗಿಂದಾಗ್ಗೆ ಮಾಹಿತಿಯನ್ನು ಕೊಡಲು ಮಧುವನ ಸಂಶೋಧಕರ ತಂಡಗಳಿವೆ. ಹಾಕ್ಸ್‌ಬರಿಯ ವ್ಯವಸಾಯ ವಿಶ್ವವಿದ್ಯಾಲಯದಲ್ಲಿ ಜೇನು ಕೃಷಿಕರಿಗೂ ಮತ್ತು ಇದರಲ್ಲಿಯ ಕೆಲಸಗಾರರಿಗೂ ತರಬೇತು ಕೊಡಲು ಮತ್ತು ಈ ವಿಷಯದಲ್ಲಿ ಪರಿಶೋಧನೆ ನಡೆಸಲು ಪ್ರತಿಯೊಬ್ಬರೂ ನೋಡಲೇಬೇಕಾಗಿರುವ ಒಂದು ಮಧುವನ (Model apiary) ವಿದೆ. ಬೇರೆ ಪ್ರದೇಶಗಳಲ್ಲಿಯೂ ಜನರಿಗೆ ತೋರಿಸಲು ಮತ್ತು ಬೋಧಿಸಲು ಅಲ್ಲಲ್ಲಿ ಮಧುವನಗಳಿವೆ. ಹಾಗೆಯೇ ನ್ಯೂಜಿಲೇಂಡ್‌ನಲ್ಲಿಯೂ ಸಹ ಅಲ್ಲಿಯ ವ್ಯವಸಾಯ ಇಲಾಖೆಯ ಆಶ್ರಯದಲ್ಲಿ ಮಧುವನ ಬೋಧಕರಿದ್ದಾರೆ. ಇವರ ಸೇವೆಯು ಜೇನು ವ್ಯವಸಾಯಿಗರಿಗೆ ದೊರೆಯುತ್ತದೆ. ವೇಲ್ಸ್ ವಿಲ್ಲೆಯ ಜಾನ ವಾರು ಪರಿಶೋಧನೆ ಕ್ಷೇತ್ರದ ಅಂಗವಾಗಿ ಒಂದು ವೈಜ್ಞಾನಿಕ ಸಂಶೋಧನೆ ಕ್ಷೇತ್ರದ ಪ್ರಯೋಗ ಶಾಲೆ (Bee Research Laboratory) ಇದೆ. ಇಲ್ಲಿ ಇತರ ಕ್ರಿಯೆಗಳ ಜೊತೆಗೆ ರಾಣಿ ನೊಣ್ ಕೃತಕ ಗರ್ಭಧಾರಣೆ ಮಾಡುವ ಕಾರ್ಯವನ್ನು ಕೈಗೊಂಡಿದ್ದಾರೆ. ಈ ಎರಡು ರಾಷ್ಟ್ರಗಳಲ್ಲೂ ವ್ಯವಸಾಯ ಇಲಾಖೆಯ ಆಶ್ರಯದಲ್ಲಿ ಜೇನು ವ್ಯವಸಾಯಗಾರರ ಉಪಯೋಗಾರ್ಥವಾಗಿ ಈ ಕೈಗಾರಿಕೆಯ ಎಲ್ಲಾ ವಿಷಯಗಳಲ್ಲಿ ಬೇರೆ ಬೇರೆಯಾಗಿಯೂ ಮತ್ತು ಒಟ್ಟಿಗೆಯೂ ರಚಿಸಲ್ಪಟ್ಟ ಅನೇಕಾನೇಕ ಪುಸ್ತಕಗಳು ಪ್ರಕಟಿಸಲ್ಪಟ್ಟಿವೆ.

ಆಸ್ಟ್ರೇಲಿಯದ ಜೇನು ಕೃಷಿಕ ಮತ್ತು ಜೇನು ಕೃಷಿಕರೆಂಬ ಮಾಸ ಪತ್ರಿಕೆಗಳು ಆಸ್ಟ್ರೇಲಿಯಾದಲ್ಲಿ ಹೊರಡುತ್ತವೆ. ನ್ಯೂಜಿಲೇಂಡಿನ ಜೇನು ಕೃಷಿಕನೆಂಬ ಮಾಸ ಪತ್ರಿಕೆಯು ನ್ಯೂಜಿಲೇಂಡಿನಲ್ಲಿ ಪ್ರಕಟವಾಗುತ್ತದೆ. ಜೇನು ಮತ್ತು ಮೇಣದ ವಿಷಯವಾಗಿಯೂ, ಜೇನು ನೊಣ ಸಾಕುವಿಕೆಯಲ್ಲಿಯ ಬೋಧಪ್ರದವಾದ ಲೇಖನಗಳನ್ನು ಈ ಎರಡು ರಾಷ್ಟ್ರಗಳಲ್ಲಿಯ ವ್ಯವಸಾಯದ ಮಾಸ ಪತ್ರಿಕೆಗಳಲ್ಲಿಯೂ ಮತ್ತು ಇತರ ಅನೇಕ ಪ್ರಕಟಣೆಗಳಲ್ಲಿಯೂ ಆಗಾಗ್ಗೆ ಪ್ರಕಟಿಸುತ್ತಾರೆ. ಆಸ್ಟ್ರೇಲಿಯದ ಜೇನು ತುಪ್ಪವನ್ನು ಒಳನಾಡಿನಲ್ಲಿ ಮತ್ತು ಸಂಯುಕ್ತ ರಾಷ್ಟ್ರ ಮೊದಲಾದ ಇತರ ಹೊರ ದೇಶಗಳಲ್ಲೂ ಸಾಕಷ್ಟು ಪ್ರಚುರ ಪಡಿಸಲು ಮತ್ತು ಪ್ರಚಾರ ಮಾಡುತ್ತಿರಲು ಆಸ್ಟ್ರೇಲಿಯಾದ ಜೇನು ಸಂಸ್ಥೆಯು ಸರಕಾರದಿಂದ ಪಡೆದ ಹತ್ತು ಸಾವಿರ ಪೌಂಡು ಧನ ಸಹಾಯದ ಜತೆಗೆ ಪಟ್ಟ ಹಣವನ್ನು ಆ ಸಂಸ್ಥೆಯು [illegible] ಜೇನು ವ್ಯವಸಾಯದಲ್ಲಿ ಪ್ರವೀಣರಾದ ಇನ್ನಿತರರಿಂದಲೂ [illegible] ಕಾಲ ಪ್ರಚಾರ ಕಾರ್ಯವನ್ನು ನಡೆಸುತ್ತಾರೆ. ಜೇನು ಸಾಕುವವರು ಬೆಳೆಸಿದ ಜೇನನ್ನು ಜೇನು ಕೃಷಿಕರ ಸಹಕಾರ ಮಾರಾಟ ಸಂಘದ ಮೂಲಕ ಎಲ್ಲಾ ನಗರ ಮತ್ತು ಪಟ್ಟಣಗಳಲ್ಲಿ ಮಾರಾಟ ಮಾಡುವ ಏರ್ಪಾಡಿದೆ. ನ್ಯೂಜಿಲೇಂಡಿನಲ್ಲಿ ಸರಕಾರದ ವ್ಯವಸಾಯ ಇಲಾಖೆಯ ಒಂದು ಅಂಗವಾಗಿ ಜೇನು ಮಾರಾಟದ ವ್ಯವಸ್ಥೆಯಿದೆ. ಇಲ್ಲಿ ಜೇನನ್ನು ಮಾರಾಟಕ್ಕೆ ತಯಾರು ಮಾಡುವ ಯಂತ್ರಗಳು, ಗ್ರೇಡು ಮಾಡುವ ಏರ್ಪಾಡು ಮತ್ತು ದಾಸ್ತಾನು ಮನೆಗಳೂ ಇವೆ. ಈ ಎರಡು ರಾಷ್ಟ್ರಗಳಲ್ಲಿ ಜೇನು ಕೈಗಾರಿಕೆಗೆ ಸರಕಾರದ ಕಡೆಯಿಂದ ಸಾಕಷ್ಟು ರಕ್ಷಣೆಯಿಂದೆ.

ಈ ಎರಡು ರಾಷ್ಟ್ರಗಳಲ್ಲಿ ಎಂಟು ಮತ್ತು ಹತ್ತು ಚೌಕಟ್ಟುಗಳನ್ನೊಳಗೊಂಡ ಪೂರ್ತಿ ಮತ್ತು ಅರ್ಧ ಆಳತೆಯ ಗೂಡಿನ ಮೇಲ್ಮೋಣೆಗಳುಳ್ಳ 'ಲ್ಯಾಂಗ್‌ಸ್ಟ್ರತ್' ಆಕೃತಿಯ ಜೇನು ಗೂಡೇ ಉಪಯೋಗದಲ್ಲಿರುತ್ತದೆ. ಎರಡು ರಾಷ್ಟ್ರಗಳಲ್ಲೂ ನೊಣಗಳಿಗೆ ಯಥೇಚ್ಛವಾಗಿ ಪುಷ್ಪರಸವು ದೊರಕ ಬೇಕಾದರೂ ಸ್ಥಳದಿಂದ ಸ್ಥಳಕ್ಕೆ ತುಂಬಾ ವ್ಯತ್ಯಾಸವಿದೆ. ಆಸ್ಟ್ರೇಲಿಯಾದಲ್ಲಿ ಹೆಚ್ಚು ಜೇನನ್ನು ಕೊಡುವ ಮರವೆಂದರೆ ಯೂಕಲಿಪ್ಟಸ್ (ನೀಲಗಿರಿ ಎಣ್ಣೆ ಇಳಿಸುವ ಮರ) ಅಲ್ಲದೆ ಕಿತ್ತಳೆ, ಏಪಲ್, ದ್ರಾಕ್ಷಿ ಮತ್ತು ಎಥೇಚ್ಛವಾಗಿ ಕಳೆಯಾಗಿ ಬೆಳೆದ ಕುಂಚಲು ಮತ್ತಿತರ [illegible] ತುಂಬಾ ಜೇನನ್ನು ಕೊಡುತ್ತವೆ. ನ್ಯೂಜಿಲೇಂಡ್‌ನಲ್ಲಿ ಆಸ್ಟ್ರೇಲಿಯಾಕ್ಕಿಂತ ಹೆಚ್ಚು ಪುಷ್ಪರಸವನ್ನು ದೊರಕಿಸುವ ಪುಷ್ಪವರ್ಗ [illegible] ದೊಡ್ಡ ದೊಡ್ಡ [illegible] ಗಳು, ಮಧುಭಾಂಡವೂ [illegible] ಆಸ್ಟ್ರೇಲಿಯಾದಲ್ಲಿ ಹಲವು ತರದ ಯೂಕಲಿಪ್ಟಸ್ ಮರಗಳ ಪುಷ್ಪರಸವೇ ಮುಖ್ಯವಾಗಿರುವುದರಿಂದ ಅಲ್ಲಿಯ ಜೇನು ಸಾಕುವವರು ಜೇನು ಹೇರಳವಾಗಿ ದೊರಕಬಹುದಾದ ಹೊಲಗಳನ್ನು ಹುಡುಕುತ್ತಾ ಸ್ಥಳದಿಂದ ಸ್ಥಳಕ್ಕೆ ತಮ್ಮ ಜೇನು ಗೂಡುಗಳನ್ನು ಸಾಗಿಸುವರು.

ಹೆಚ್ಚು ಜೇನು ದೊರಕಬಹುದಾದ ಹೊಸ ಹೊಸ ಹೊಲಗಳನ್ನು ಹುಡುಕುತ್ತಾ ತಮ್ಮ ಜೇನು ಗೂಡುಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸುತ್ತಿರುವರು. ಆಸ್ಟ್ರೇಲಿಯಾದಲ್ಲಿ ಒಂದು [illegible] ಜೇನು ಸಾಕುವ [illegible] ಬೇರೆ ಬೇರೆ ತರದ ಯೂಕಲಿಪ್ಟಸ್ ಮರಗಳು ಬೇರೆ ಬೇರೆ ಕಾಲಗಳಲ್ಲಿ ಹೂ ಬಿಡುವುದರಿಂದ ಹೆಚ್ಚು ಜೇನನ್ನು ಸಂಪಾದಿಸಿಕೊಳ್ಳುವ ದೃಷ್ಟಿಯಿಂದ ತಮ್ಮ [illegible] ಗಳನ್ನು ಸ್ಥಳಾಂತರಿಸಿ [illegible] ಜೇನನ್ನು ಸಂಪಾದಿಸಿ [illegible] ವರು. ವಿದ್ಯುಚ್ಛಕ್ತಿ [illegible] ದಿಂದ ಜೇನು ತೆಗೆಯುವರು. ಮೋಟಾರೇ ಮೊದಲಾದ [illegible] ಯಂತ್ರಗಳ ಉಪಯೋಗದಿಂದ ಇವರು ಜೇನಿನ ಕೃಷಿಯನ್ನು [illegible] ಹೆಚ್ಚು ಲಾಭದಾಯಕ [illegible] ವಂತೆ ಮಾರ್ಪಡಿಸಿಕೊಂಡಿರುವರು.

ಹೀಗೆ ಜೇನು ಗೂಡುಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸುತ್ತಾ ಹೋಗುವವರು, ತಮಗೆ ಅವಶ್ಯಕವೆನಿಸುವ ಸರ್ವಸ್ವವನ್ನೂ ತಮ್ಮ ಜತೆಯಲ್ಲೇ ತೆಗೆದುಕೊಂಡು ಹೋಗುವುದರಿಂದ ಇವರ ಜೀವನವು ಒಂದು ಹೊರಿಯಾಟವಾಗದೆ ಒಂದು ವಿಧದ ವಿನೋದ ಯಾತ್ರೆ ಎಂದೆನಿಸುವುದು. ಇವರು ೩೦೦ರಿಂದ ೮೦೦ರಷ್ಟು ಗೂಡುಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸಿ ಬರೀ ಮೂರು ತಿಂಗಳ ಕಾಲದಲ್ಲಿ ೩೦,೦೦೦ದಿಂದ ೮೦,೦೦೦ ಬೆಲೆ ಬಾಳುವಷ್ಟು ಜೇನನ್ನು ಸಂಪಾದಿಸುವರು. ಅನು.

ಭವ ಪಡೆದು ಇವರು ೧೦೦ ರಿಂದ ೨೦೦ರ ವರೆಗೆ ಜೇನು ಗೂಡುಗಳನ್ನು ಇಡುವರು. ಅವರು ಹೆಚ್ಚು ಪುಷ್ಪರಸವಿರುವೆಡೆಗೆ ತಮ್ಮ ಮೋಟಾರು ಲಾರಿಗಳಲ್ಲಿ ಸುಮಾರು ೫೦೦ ಮೈಲುಗಳ ದೂರದ ವರೆಗೆ ತಮ್ಮ ಜೇನು ಗೂಡುಗಳನ್ನು ಅತೀ ಸುಲಭವಾಗಿ ಸಾಗಿಸಲು ಸಾಧ್ಯವಾಗುವಂತೆ ತಕ್ಕ ನ್ಯಾಯೋಚಿತ ಸೌಕರ್ಯಗಳನ್ನು ಕಲ್ಪಿಸಿಕೊಂಡಿರುವರು. ಹೀಗೆ ಮೋಟಾರುಗಳ ಸಹಾಯದಿಂದ ಜೇನು ಗೂಡುಗಳನ್ನು ಸಾಗಿಸುವ ಕ್ರಮವನ್ನು ಜಾರಿಗೆ ತಂದುಕೊಂಡದ್ದರಿಂದ ಹೂವಿದ್ದ ಕಡೆಗೆ ತಕ್ಷಣ ಹೋಗಲು ಅವರಿಗೆ ಕಷ್ಟವೆನಿಸದು. ಹೂವಿದ್ದೆಡೆಯಲ್ಲಿ ತಮ್ಮ ಜೇನು ಗೂಡುಗಳನ್ನು ಇಟ್ಟು ತಮ್ಮ ನಿವಾಸ ಗೃಹಗಳನ್ನು ನಿರ್ಮಿಸಿಕೊಳ್ಳಲು ಕಡಿಮೆ ಬಾಡಿಗೆಗೆ ತಕ್ಕಷ್ಟು ಜಾಗವು ಸರಕಾರದ ಸಹಾಯದಿಂದಲೇ ದೊರಕುವುದು. ೧೯೫೫ನೇ ಇಸವಿ ಜನವರಿ ತಿಂಗಳಿಂದ ಮಾರ್ಚಿಯ ವರೆಗೆ ಮೂರು ತಿಂಗಳ ಕಾಲದಲ್ಲಿ ಈ ರಾಷ್ಟ್ರದ ವಿಕ್ಟೋರಿಯಾ ಪ್ರದೇಶದ ಇಚೂಕದಲ್ಲಿರುವ ಒಂದು ಚಿಕ್ಕ ಕುಟುಂಬ ೩೬೦ ಜೇನು ಗೂಡುಗಳಿಂದ ೩೦ ಟನ್ನುಗಳಷ್ಟು ಜೇನನ್ನು ತೆಗೆದರು. ಆ ಸಮಯದಲ್ಲಿ ನಾನು ಅವರೊಡನೆ ಹತ್ತು ದಿವಸಗಳ ಕಾಲ ಇದ್ದು ಅವರ ಜೇನು ತೆಗೆಯುವ ಕೆಲಸದಲ್ಲಿ ಸುಮಾರು ೩೦೦ ಟನ್ನು ತೆಗೆಯುವ ವರೆಗೆ ಸಹಾಯಕನಾಗಿದ್ದೆ. ಅಲ್ಲದೆ ನಾನು ಬೇರೆ ಬೇರೆ ಪ್ರದೇಶ ಸಂದರ್ಶಿಸಿ ೫೦೦ರಿಂದ ೨೦೦೦ ವರೆಗೆ ಜೇನು ಗೂಡುಗಳನ್ನಿಟ್ಟುಕೊಂಡು ಒಂದರಿಂದ ಒಂದು ದೂರದಲ್ಲಿರುವ ಹಲವು ಜೇನು ಕೃಷಿಕರನ್ನು ಭೇಟಿ ಮಾಡಿರುವೆನು. ಒಬ್ಬ ಅನುಭವಸ್ಥನಾದ ಜೇನು ವ್ಯವಸಾಯಗಾರನು ತನ್ನ ಸಂಘಟನೆಯನ್ನು ಸ್ಥಳಾಂತರಿಸುತ್ತಿರುವ ಕ್ರಮವನ್ನು ಅನುಸರಿಸುವುದರಿಂದ ಗೂಡಿಗೊಂದರ ಸರಾಸರಿ ೨೫೦ ರಾತಲಿನಷ್ಟು ಜೇನನ್ನು ಆ ಕಾಲಕ್ಕೆ ಸಂಪಾದಿಸಬಲ್ಲನು. ಅಲ್ಲಿಯ ಜೇನಿನ ೧೩೦ ಬೆಲೆ ಮೇಲೆ ಹೇಳಿದಂತೆ ರಾತಲಿಗೆ ಎಂಟಾಣೆ ಮಾತ್ರ. ಈ ಧಾರಣೆಯಲ್ಲಿ ಒಬ್ಬ ಮನುಷ್ಯನಿಗೆ ಉತ್ತಮ ಜೀವನವನ್ನು ಇದರ ಆಧಾರದಿಂದಲೇ ನಡೆಸಲು ಸಾಧ್ಯವಾಗಲು ಕಡಿಮೆ ಪಕ್ಷ ೨೦೦ ಜೇನು ಗೂಡುಗಳಿದ್ದರೆ ಸಾಕೆಂದು ಅಂದಾಜು ಮಾಡಲಾಗಿದೆ. ಇದರಿಂದ ಆ ರಾಷ್ಟ್ರದ ಜೇನು ವ್ಯವಸಾಯಗಾರರ ಜೀವನ ಮಟ್ಟವು ಎಷ್ಟರ ಮಟ್ಟಿಗೆ ಸುಧಾರಿಸಿದೆ ಎಂಬುದಾಗಿ ನಮಗೆ ತಿಳಿಯುವುದು. ಹಲವರಿಗೆ ಅವರದೇ ಆದ ಮೋಟಾರು ಪ್ರತ್ಯೇಕ ಕಾರು ಉತ್ತಮ ತರದ ಸ್ವಂತ ಮನೆ ಮೊದಲಾದ ಇನ್ನೂ ಅನೇಕ ಸೌಕರ್ಯಗಳಿವೆ. ಜೇನು ಸಾಕುವುದರಲ್ಲಿ ಹೆಚ್ಚಿನವರು ಇಂಜಿನಿಯರುಗಳೂ, ನಿವೃತ್ತ ಸ್ವಾಸ್ಥ್ಯಾಧಿಕಾರಿಗಳೂ, ಸಿಪಾಯಿಗಳೂ ಆದುದರಿಂದ ತಮ್ಮ ಮನೆ, ಜೇನು ಮನೆ ಮತ್ತು ಇತರ ಸಾಹಿತ್ಯ ಮತ್ತು ಸಾಧನಗಳನ್ನು ಅವರು ತಾವಾಗಿಯೇ ರಚಿಸಿಕೊಂಡಿರುವರು. ವಿವಿಧ ಕೈಗಾರಿಕೆಗಳನ್ನು ಸಂಪೂರ್ಣವಾಗಿ ಕಲಿತುಕೊಳ್ಳುವುದೇ ಅಲ್ಲಿ ವಿದ್ಯೆಯೆನಿಸುವುದರಿಂದ ಅವರು ಕಲಿತ ಕೈಗಾರಿಕೆಗೆ ಅವಶ್ಯವಿರುವ ಸಕಲ ಉಪಕರಣಗಳನ್ನೂ ಅವರು ತಮ್ಮ ಸ್ವತಃ ಕೈಯಿಂದಲೇ ಮಾಡಲಾಪರು. ಅಲ್ಲಿ ಕೆಲಸಕ್ಕೆ ಜನರು ದೊರಕುವುದು ಕಷ್ಟವಾದುದರಿಂದ ತಾವು ಕೆಲಸ ಕಡಮೆಯಾಗುವ ಉಪಕರಣ ಮತ್ತು ಯಂತ್ರಗಳನ್ನು ಉಪಯೋಗಿಸಿಯೂ ತಾವೇ ಹಗಲಿರುಳೂ ದುಡಿದೂ ಉತ್ತಮ ಜೀವನ ನಡೆಸಲು ಬೇಕಾಗುವ ದ್ರವ್ಯ ಸಂಪಾದನೆಯನ್ನು ಮಾಡುವರು. ಜೇನು ಕೈಗಾರಿಕೆಯನ್ನು ದೊಡ್ಡ ಪರಿಮಾಣದಲ್ಲಿ ಶುರು ಮಾಡಲು ತುಂಬಾ ಹಣದ ಅವಶ್ಯಕತೆಯಿದೆ. ಆದರೆ ಅದಕ್ಕೆ ಲಾಭದ ರೂಪದಲ್ಲಿ ತಕ್ಕ ಪ್ರತಿಫಲ ಮತ್ತು ಮನೋಲ್ಲಾಸ ದೊರೆಯುವುದು. ಈ ವ್ಯವಸಾಯವನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳಲು ಒಂದೆರಡು ಏಕ್ರೆಯಷ್ಟು ಜಾಗ, ಒಂದು ಮನೆ, ಒಂದು ಮೋಟರು ಲಾರಿ, ಸ್ಥಳದಿಂದ ಸ್ಥಳಕ್ಕೆ ಸಾಗಿಸಲು ಸಾಧ್ಯವಾಗುವಂತೆ ಜೇನು ತೆಗೆಯುವ ಯಂತ್ರ, ಜೇನು ಶೇಖರಿಸಿಡಲು ತಕ್ಕ ಗುದಾಮುಗಳು, ಮೇಣ ತೆಗೆಯುವ ಸಾಹಿತ್ಯ, ಜೇನು ಗೂಡುಗಳು ಮತ್ತು ಅವುಗಳ ಉಪಕರಣಗಳು ಅವಶ್ಯವಾಗಿಯೂ ಬೇಕು. ಇವುಗಳ ಬೆಲೆಯು ಅಂದಾಜು ೩೦,೦೦೦ ರೂಪಾಯಿಗಳಷ್ಟಾಗಬಹುದು. ಇಷ್ಟು ಹಣ ವೆಚ್ಚ ಮಾಡಿ ಒಂದು ಸರ್ತಿ ಶುರು ಮಾಡಿದ್ದೇ ಆದರೆ ಇದಕ್ಕೆ ಮತ್ತೆ ಖರ್ಚಿಲ್ಲ. ಸ್ಥಳದ ಬಾಡಿಗೆ ಮತ್ತು ಇತರ ಖರ್ಚು ಸ್ವಲ್ಪ. ಖರ್ಚು ಮಾಡಿದ ಹಣವು ಒಂದೆರಡು ವರ್ಷಗಳಲ್ಲೇ ಮರಳಿ ಬರಬಹುದು. ನಂತರ ಸಿಗುವುದೆಲ್ಲಾ ಆದಾಯವೇ. ಆದುದರಿಂದ ಜೇನು ಕೃಷಿಯನ್ನು ಸರಿಯಾದ ಸ್ಥಳದಲ್ಲಿ ಕೈಗೊಂಡು ಸಾಕಷ್ಟು ಉತ್ಸಾಹದಿಂದ ಕೆಲಸವನ್ನು ನಡೆಸಿದರೆ ಇದು ಇತರ ಹೆಚ್ಚು ಲಾಭದಾಯಕವಾದ ಕೈಗಾರಿಕೆಗಳಿಗೆ ಸರಿ ಹೋಲುತ್ತದೆ.

ನಾನು ಆಸ್ಟ್ರೇಲಿಯಾದ ಮತ್ತು ನ್ಯೂಜಿಲೆಂಡಿನ ಜೇನು ಕೃಷಿಕರನ್ನು ತುಂಬಾ ಹೊಗಳುವವನಾಗಿದ್ದೇನೆ. ಅವರಲ್ಲಿ ಹೆಚ್ಚಿನವರು ಮದ್ಯ ಮತ್ತು ಧೂಮಪಾನ ಮಾಡುವುದೇ ಇಲ್ಲ. ಅದು ತುಂಬಾ ಆಶ್ಚರ್ಯ. ಆ ರಾಷ್ಟ್ರಗಳಲ್ಲಿ ಜೇನು ಕೃಷಿಕರಲ್ಲದವರು ತುಂಬಾ ಕುಡಿದು, ಸಿಗರೇಟು ಮತ್ತು ಚುಟ್ಟಗಳನ್ನು ಸೇದುತ್ತಾರೆ. ಜೇನು ಕೃಷಿಕರಲ್ಲಿಯ ನಡತೆ ನೀತಿಗಳಲ್ಲಿ ಈ ತರದ ಬದಲಾವಣೆ ಬರಲು ಕರ್ತವ್ಯ ನಿಷ್ಠೆಯ ವಿಶೇಷವಾದ ಶಿಸ್ತಿನ ಜೀವನ ನಡೆಸುತ್ತಿರುವ ಮಧುಕರದ ಸಹವಾಸವೇ ಮುಖ್ಯ ಕಾರಣವಿರಬೇಕೆಂದು ನನ್ನ ನಂಬಿಕೆ. ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡಿನ ಜೇನು ಕೃಷಿಕರಲ್ಲಿ ನಿಜವಾದ ಸಹೋದರ ಭಾವ ಇದೆ. ಪ್ರಪಂಚದ ನಾನಾ ಕಡೆಗಳ ಜೇನು ಕೃಷಿಕರು ಭೇಟಿಯಾಗಿ ಪರಸ್ಪರ ಅರಿತುಕೊಂಡಲ್ಲಿ ಜೇನು ಕೈಗಾರಿಕೆಯು ಕಲ್ಯಾಣವಾಗುವುದರಲ್ಲಿ ಮತ್ತು ಜೇನುಹುಳಗಳ ಉತ್ತಮ ತರದ ಶಿಸ್ತಿನ ಜೀವನ ಕ್ರಮವನ್ನು ಚಾಚೂ ಬಿಡದೆ ಅರಿತುಕೊಳ್ಳಲು ಅನುಭವವಿರುವ ಜೇನು ಕೃಷಿಕರು ಅಂತರಾಷ್ಟ್ರೀಯ ಮಟ್ಟದಲ್ಲಿ ಸಂಬಂಧ ಮತ್ತು ಅಭಿಪ್ರಾಯಗಳನ್ನು ಬೆಳೆಸಲು ಸಹಾಯಕರಾಗುವುದರಲ್ಲಿ ಸಂದೇಹವಿಲ್ಲ.

ಜೇನಿನ ಕೃಷಿಯನ್ನು ನವೀನ ಮಟ್ಟದಲ್ಲಿ, ಧಾರಾಳವಾಗಿ ಸೌಕರ್ಯಗಳು ದೊರೆಯುವ ಭಾರತದಲ್ಲಿ ಸಾರ್ವತ್ರಿಕವಾಗಿ ಬೆಳೆಸಿ ಮುಂದುವರಿಸಿ ಸ್ವಾವಲಂಬಿಗಳಾಗಲು ನಾವು ಮೇಲೆ ಹೇಳಿದ ಎರಡು ರಾಷ್ಟ್ರಗಳಿಂದ ಪಾಠವನ್ನು ಕಲಿಯಬೇಕು. ಜೇನು ಕೃಷಿಯು ಶೀಘ್ರವಾದ ಗಾಳಿಯಲ್ಲಿ ನಡೆಸಲ್ಪಡಬೇಕಾದ ಕೃಷಿ. ಇದು ಯಾರಿಗೂ ದೊರೆಯದೆ ನಿಷ್ಫಲವಾಗಿ ಹೋಗುತ್ತಿರುವ ಕಾಡು ಮತ್ತು ಆದಾಯವಿಲ್ಲದ ಹೊಲಗಳಲ್ಲಿನ ಪುಷ್ಪರಸದಿಂದ ಅತ್ಯುತ್ತಮವಾದ ಸಿಹಿ ಆಹಾರ ಪದಾರ್ಥವನ್ನು ದೊರಕಿಸಿಕೊಳ್ಳುವ ವೃತ್ತಿ. ಒಂದಾನೊಂದು ಕಾಲಕ್ಕೆ ಭಾರತವು ಜೇನು ಮತ್ತು ಹಾಲು ತುಂಬಿಹರಿಯುವ ದೇಶವಾಗಿತ್ತು. ಅದು ಈಗ ಅನೇಕ ಕಾರಣಗಳಿಂದ ಬತ್ತಿ ಹೋಗಿದೆ. ಈ ನಮ್ಮ ದೇಶದಲ್ಲಿ ಮರಳಿ ಜೇನು ಮತ್ತು ಹಾಲನ್ನು ಹರಿಸಿ, ಸುಖ, ಶಾಂತಿ, ಸಮೃದ್ಧಿ ಸರ್ವದಾ ನೆಲಸುವಂತೆ ಮಾಡಲು ನಾವೆಲ್ಲರೂ ಯಥೋಚಿತವಾಗಿ ಸಾಧಿಸುವ.

ಶ್ರೀ ಟಿ. ಎನ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಕೋವಿಗಳು, ವ್ಯವಸಾಯದ ಹತ್ಯಾರುಗಳು ಮತ್ತು ಕಬ್ಬಿಣದ ಸಲಾಕೆ ವಗೈರೆಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು ಮತ್ತು ರಿವಾಲ್ವರುಗಳು.
2. ·12ನೇ ನಂಬರಿನ ಒಂಟಿ ಕೊಳವಿನ ಕೋವಿಗಳು.
3. 12ನೇ ನಂಬರಿನ ಜೋಡು ಕೊಳವಿನ ಕೋವಿಗಳು.
4. ಕಾಫಿ ಮತ್ತು ಏಲಕ್ಕಿ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
5. 2″, 1″, ⅝″, ½″, ¼″ ಕಬ್ಬಿಣದ ಸಲಾಕೆಗಳು.
6. 9″×4″ ಮತ್ತು 8″×4″ ಕಬ್ಬಿಣದ ಬೀಮ್ಸ್ (Beams).
7. 8′×3′×12 (Gage)ನ ಕಬ್ಬಿಣದ ತಗಡುಗಳು.
8. 3″×3″×¼″ನ (Angles) ಎಂಗ್ಯೂಲರ್ಸ್ ಅವಶ್ಯವಿರುವವರು ಇಂಡೆಂಟ್ ಕೊಟ್ಟಲ್ಲಿ ತರಿಸಿ ಕೊಡಬಹುದು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೆ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ತರುವವರಿಗೆ ಮಾತ್ರ ದೊರೆಯುವುದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿಸಲಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರಿ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಈಡಿನ ಮೇಲೆಯೂ ಸಾಲ ಕೊಡಲಾಗುವುದು. ಚೆಕ್ ಯಾ ಬಿಲ್ಲುಗಳ ಡಿಸ್ಕೌಂಟು ಮಾಡಲ್ಪಡುವುದು. ಪ್ರಿವಿಟಿ, ಪಾರ್ಸೆಲ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಾಲಿನ ಸಾಲದ ಶಾಖೆಯ ಮೂಲಕ ದೀರ್ಘ ಕಾಲಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ, — ಕೆ. ಸಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

Edited Printed and Published by P. I. Belliappa at 'Kodagu' Press, Mercara, for 'Kodagu' Ltd.

Licence No. 60.
Licenced to Post without Prepayment

Reg. No. M. 1090.
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ಬಿ. ಚೆಕ್ಕಪ್ಪನವರು | ವಾರ್ಷಿಕ ಚಂದಾ ರೂ. 6-0-0.

ಸಂಪುಟ ೩೦ | ತಾರೀಖು ೧೪-೩-೧೯೫೧ನೇ ಶುಕ್ರವಾರ | ಸಂಚಿಕೆ ೩೯

ಸರ್ವೋದಯ ಪರಿಚಯ.

ಐಕ್ಯ ಜೀವನವೇ ಸೌಖ್ಯ ಜೀವನ

ಲೇ:—ಆಚಾರ್ಯ ವಿನೋಬ ಭಾವೆ.

ಜಗತ್ತಿನ ಇಂದಿನ ಸ್ಥಿತಿಯನ್ನು ದೃಷ್ಟಿಯಿಂದ ಪರಿಶೀಲಿಸಿದರೆ ಎಲ್ಲಿ ನೋಡಿದರೂ ಹಿಂಸಾತ್ಮಕ ಘರ್ಷಣೆಯೇ ತೋರಿಬರುತ್ತಿದೆ. ಪ್ಯಾಲೆಸ್ಟೀನಿನಲ್ಲಿ ಎಹೂದಿಯರಿಗೂ, ಅರಬರಿಗೂ ಘರ್ಷಣೆ ನಡೆದಿದೆ. ಚೈನಾದ ಘರ್ಷಣೆ [illegible] ಯಾದರೂ ಇಂಡೋನೇಶಿಯಾದಲ್ಲಿ ಕದನ ನಡೆದಿದೆ. ಗ್ರೀಸಿನಲ್ಲಿ ಯುದ್ಧ ನಿಂತಿದೆಯೆಂದರೂ ಜಗತ್ತಿನ ಹಲವೆಡೆಗಳಲ್ಲಿ ಯುದ್ಧವು ನಡೆಯುತ್ತಲೇ ಇದೆ. ಜಗತ್ತಿನಲ್ಲಿ ಇನ್ನು ಯುದ್ಧವಾಗಬಾರದೆಂದು ಕಳೆದ ಯುದ್ಧಕ್ಕೆ ಕಾರಣರೆಂದು ಹಲವು ಜರ್ಮನ್ ಮತ್ತು ಜಪಾನ್ ಯೋಧರನ್ನು ಯುದ್ಧ ಕೈದಿಗಳೆಂದು ವಿಚಾರಣೆಗೆ ಗುರಿಪಡಿಸಿ ಶಿಕ್ಷೆ ಕೊಡಲಾಯಿತು. ಕೇವಲ ಜರ್ಮನಿ ಮತ್ತು ಜಪಾನು ಯುದ್ಧಕ್ಕೆ ಕಾರಣ ಎಂಬಂತೆ ಅವರನ್ನು ಹಣಿಗೆಯಿಸಿ ಮುಂದೆ ಜಗತ್ತಿನಲ್ಲಿ ಶಾಂತಿ ಬಂದೀತೆಂದು ಭಾವಿಸಿದಂತಿದೆ. ಆದರೆ ಪರಿಸ್ಥಿತಿ ಹಾಗಿಲ್ಲ. ಯುದ್ಧಕ್ಕೆ ಸಮರ್ಪಕವಾದ ಉತ್ತರ ಇಲ್ಲ.

ಭಾರತದಲ್ಲೂ ಕೂಡ ಕಾಶ್ಮೀರದಲ್ಲಿ ಯುದ್ಧ ನಡೆಯಿತು. ಈ ಯುದ್ಧಕ್ಕೆ ಕಾರಣರಾರು ಎಂಬುದನ್ನು ಹುಡುಕುವ ವಿಚಾರ ಈಗ ಬೇಡ. ಆದರೆ ಕಾಶ್ಮೀರ ಸಮಸ್ಯೆಯನ್ನು ಅಹಿಂಸಾತ್ಮಕ ರೀತಿಯಲ್ಲಿ ಬಿಡಿಸಲು ನಮ್ಮಿಂದಾಗಲಿಲ್ಲವೆಂಬುದನ್ನು ನಾವು ಒಪ್ಪಬೇಕಾಗಿದೆ. ಹಿಂದೂದೇಶದಲ್ಲಿ ರಾಜಕೀಯ ಐಕ್ಯತೆಯು ಹೆಚ್ಚುತ್ತಿದೆಯೆಂದು ತೋರುತ್ತಿದೆ. ಅನೇಕ ಚಿಕ್ಕ ಸಂಸ್ಥಾನಗಳು ದೊಡ್ಡದಾಗಿ ಹಿಂದೂದೇಶದೊಳಗೆ ವಿಭಾಗೀಕರಣವು ಕಡಿಮೆಯಾಗುತ್ತಿದೆ. ಆದರೆ ಅದರಂತೆ ಮಾನಸಿಕ ಐಕ್ಯತೆಯು ಆಗುತ್ತಿಲ್ಲ. ಒಂದೆರಡು ಉದಾಹರಣೆಗಳನ್ನು ಇಲ್ಲಿ ಕೊಡಬಹುದು. ಮಧ್ಯಭಾರತ ಒಕ್ಕೂಟದ ರಚನೆಯಾಯಿತು. ಆದರೆ ಅದರೊಳಗೆ ಎರಡು ಗುಂಪುಗಳು ತಲೆ ಎತ್ತಿವೆ. ಇಂದೋರು ಮತ್ತು ಗ್ವಾಲಿಯರ್ ಸಂಸ್ಥಾನಗಳನ್ನು ಒಂದುಗೂಡಿಸಿದರೂ, ಭಾಗೋಳಿಕವಾಗಿ ಈ ಎರಡು ಸಂಸ್ಥಾನಗಳು ಒಂದಾಗಿ [illegible] ಗ್ವಾಲಿಯರ್ [illegible] ಜನತೆ ಭಿನ್ನ ಭಿನ್ನವಾಗಿಯೇ ಇದೆ. [illegible] ದೇಶದ [illegible] ಇದೇ ದೃಷ್ಟಿ [illegible] ಸ್ವಾರ್ಥಿಗಳನ್ನು [illegible] ಪ್ರಾಂತಗಳು, ಜಾತಿ [illegible] ಹೀಗೆ ಎಲ್ಲರನ್ನು [illegible] ಸ್ಪರ್ಧೆ ನಡೆಯುತ್ತಿದೆ. ಈ ಕಿತ್ತಾಟದಿಂದ ದೇಶದ ಜನರು ವಿವಿಧ ಪಕ್ಷಗಳಾಗಿ ಹರಿದು ಹಂಚಿ ಹೋಗುತ್ತಿದ್ದಾರೆ. ಈ ರೀತಿಯಾಗಿ ಜನತೆ ಇಡಿಯಾಗಿ ಐಕ್ಯವಾಗುವ ಬದಲು ಬಿಡಿ ಬಿಡಿಯಾಗುವ ಚಿಹ್ನೆಗಳೇ ಹೆಚ್ಚಾಗಿವೆ.

ಇದರಿಂದ ಯಾರೂ ನಿರಾಶರಾಗಬಾರದು. ಏಕೆಂದರೆ ಎಷ್ಟೇ ಮನುಷ್ಯರು ಭಿನ್ನ ಭಿನ್ನರೆಂದು ತೋರಿದರೂ ಪ್ರತಿಯೊಬ್ಬನಲ್ಲಿಯೂ ಆ ಅಖಂಡವಾದ ಆತ್ಮವೇ ಇರುವದರಿಂದ ಬಾಹ್ಯವಾಗಿ ತೋರುವ ಈ ಭೇದ ವಿಭಾಗಗಳು ಶಾಶ್ವತ[illegible]. ಅಲ್ಲದೆ ಹುಡುಕಿದರೆ ಒಟ್ಟಿನಲ್ಲಿ ಮೇಲಿನ ಚಿಕ್ಕ ಕಲಹ ಯಾವ ರೀತಿ ದೃಷ್ಟಿಯನ್ನು ಶೀಘ್ರ ಅತ್ತ ಎಳೆಯುತ್ತವೋ ಅದೇ ರೀತಿ ಜಗತ್ತಿನ ಈ ಅನೈಕ್ಯತೆಗಳು ನಮ್ಮ ಕಡೆಗೆ ಜನತಾ ದೃಷ್ಟಿಯನ್ನು ಬೇಗ ಎಳೆಯುತ್ತವೆ. ಜಗತ್ತಿನ ಯುದ್ಧ ನಡೆಯುತ್ತಿದ್ದರೂ ಜನರು ವಿವಿಧ ಸಂಗಡಗಳಾಗಿ ಸಹಕರಿಸಿ ಕಟ್ಟಿದ್ದ ಕಾಲದಲ್ಲೂ ಕೂಡ ನಾವು ನಿರಾಶರಾಗಲಿಲ್ಲ. ನನ್ನ ಭಾವನೆಯಲ್ಲಿ ಯುದ್ಧಗಳು ನಿಜವಾಗಿಯೂ ದಾರಿ ತಪ್ಪಿದ ಮನುಷ್ಯನಿಗೆ ದೈವೀ ಶಿಕ್ಷೆಯಂತೆ. ಈ ಶಿಕ್ಷೆ ಅತ್ಯುಗ್ರವಾದೀತಾದರೂ ಯುದ್ಧಗಳಿಂದ ಮಾನವನು ಕಣ್ಣು ತೆರೆಯುತ್ತಾನೆ. ಶಾಂತಿಗಾಗಿ ಹಾತೊರೆದು ಹುಡುಕುತ್ತಾನೆ. ಮಾನವ ಪ್ರೇಮಕ್ಕೆ ಕಾತರನಾಗುತ್ತಾನೆ. ಯುದ್ಧವು ಮಾನವನ ಪ್ರಗತಿಗೆ ಕಾರಣ. ಈ ಪ್ರಗತಿಯು ಎಷ್ಟೇ ಅಲ್ಪ ಪ್ರಮಾಣದ್ದಾಗಲಿ ಅದರಲ್ಲಿ ಸ್ಪಷ್ಟತೆ ಇದೆ. ಜಗತ್ತಿನ ಜೀವನದಲ್ಲಿ ಯುದ್ಧ ಅನೈಕ್ಯತೆ [illegible]. ಇಂದಿಷ್ಟು ನಾಳೆ ನೂತನ [illegible] ಘಟನೆಗಳು. ಐಕ್ಯತೆ ಪರಸ್ಪರ ಹೊಂದಿಕೆಗಳು [illegible]. ಇದಕ್ಕೆ ಕಾರಣವೇ ಮಾನವನ ಹಂಬಲ ಬಯಕೆ [illegible]. ಈ ವಿಚಾರಗಳನ್ನು ಇಲ್ಲಿ ಎತ್ತಿ ಹೇಳುವದು ಏಕೆಂದರೆ ಓದುಗರನ್ನು ನಿರಾಶರನ್ನಾಗಿ ಮಾಡಲಿಕ್ಕಲ್ಲ; ಬದಲು ಈ ವಿಚಾರಗಳ ಬಗ್ಗೆ ಗಮನ ಕೊಡಬೇಕೆಂದು.

ಇಂಥಾ ಒಂದು ಪರಿಸ್ಥಿತಿಯಲ್ಲಿರುವ ಈ ಜಗತ್ತಿನ ಈ ಅನೈಕ್ಯತೆ, ಸಂಕೀರ್ಣತೆಗಳಿಗೆ ಉತ್ತರವೆಂದರೆ ಸರ್ವೋದಯ ಸಮಾಜ. ಸರ್ವೋದಯ ಸಮಾಜ ರಚನೆಗೋಸ್ಕರ [illegible] ಅದ [illegible] ಅಲೆಯುತ್ತಿ [illegible].

ವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚು ಜನರ ಹೆಚ್ಚಿನ ಹಿತವೆಂಬ [illegible] ಉತ್ತಮ ಮಾರ್ಗವೆಂಬ ತತ್ವದಲ್ಲಿ [illegible] ಭಗವದ್ಗೀತೆಯಲ್ಲಿ ಹೇಳಲ್ಪಟ್ಟ ಸರ್ವೋದಯ [illegible] ಎಲ್ಲಾ ಜೀವಿಗಳಲ್ಲಿ ತನ್ನನ್ನು [illegible] ಎಲ್ಲಾ [illegible] ತತ್ವದ ಸಾಧನೆಯು ವ್ಯಕ್ತಿ ಮತ್ತು ಸಮಾಜಗಳಲ್ಲಿ [illegible] ಸರ್ವೋದಯದ [illegible] ಜೀವನದಲ್ಲಿ ಹಿಂಸೆಗೆ ಸ್ಥಳವಿಲ್ಲದಂತೆ ಆತನು ಯತ್ನಿಸುವನು. ಸಮಾಜದ ಹಿತ ಮತ್ತು ಉನ್ನತಿಗೆ [illegible] ವಿಧಾಯಕ ಕಾರ್ಯಕ್ರಮಗಳನ್ನು ಆತನು ಕೈಗೊಳ್ಳುವನು. ಈ ಕಾರ್ಯಗಳಲ್ಲಿ ಸ್ನೇಹದ [illegible] ಕೇಂದ್ರಗಳನ್ನು ರಚಿಸುವನು. ಈ ಪ್ರಗತಿಯೊಂದರ ಹಿನ್ನೆಲೆಯಲ್ಲಿರುವ ಆ ಅಖಂಡತೆಯನ್ನರಿತು ಅದು ಬೆಳಕಿಗೆ ಬಂದು ಸರ್ವರೂ ಸಮಾನರು, ಯಾವ ಕಾಲಕ್ಕೂ ಯಾರೂ ಇನ್ನೊಬ್ಬರಿಗಿಂಥಾ ಹೆಚ್ಚಿಲ್ಲ ಎಂಬ ಭಾವನೆಯು ಜಗತ್ತಿನ ಜೀವಾಳವಾಗುವಂತೆ ಮಾಡುವದು ಕರ್ತವ್ಯವಾಗಿದೆ.

ಇಂಥಾ ಒಂದು ಗುರಿಯ ಕಡೆಗೆ ದೇಶದ ಯುವಕ ಯುವತಿಯರನ್ನೂ, ಬಾಲ ವೃದ್ಧರನ್ನೂ ನೋಡುವಂತೆ ಮಾಡಿ ಆ ಬಗ್ಗೆ ಜನಜಾಗೃತಿಗೊಳಿಸಿದರೆ ಜಗತ್ತಿನ ಸರ್ವ ಸಮಸ್ಯೆಗಳಿಗೂ ಉತ್ತರವು ಸುಲಭದಲ್ಲಿ ದೊರೆಯುವದು. ಜಗತ್ತಿನ ಶಾಂತಿಗಾಗಿ, ಜನತೆಯ ಅಭಿವೃದ್ಧಿಗಾಗಿ ಜಗತ್ತಿನ ಉದ್ದಗಲಕ್ಕೆ ಅನುಸರಿಸುತ್ತಿರುವ ಮಾರ್ಗಗಳು ಅಪೂರ್ಣವಾಗಿದ್ದಾವು. ಆ ಮಾರ್ಗಗಳಿಂದ ಜಗತ್ತಿನ ಶಾಂತಿಯೂ, ಮಾನವಗಣದ ಏಕತ್ವವೂ ಸಾಧ್ಯವಾಗಲಾರದು.

ಸರ್ವೋದಯವೆಂದಾಗ ಎಲ್ಲರ ಉದಯ [illegible]. ಎಲ್ಲರ ಉದಯದ ಪ್ರಾರಂಭವು ವ್ಯಕ್ತಿಯಿಂದಂತೆ ಅಂತಃಕರಣದಿಂದ ಪ್ರಾರಂಭವಾಗಬೇಕು. ಯಾರು [illegible] ಕಡೆಯವರಿಗೆ [illegible] ಪ್ರಾರಂಭವಾಗಬೇಕು. [illegible] ಜಗತ್ತಿನಲ್ಲಿ ಕೇವಲ ಹಿಂದುಳಿದ ದಲಿತ ವರ್ಗದವರ ಉದಯವೇ [illegible] ಉತ್ತಮ [illegible]. ಇಂದಿನ ಈ [illegible] ಒಬ್ಬರೂ ಒಬ್ಬರಿಗೆ [illegible] ಧನ [illegible] ಎಲ್ಲರೂ ಒಂದಿಲ್ಲೊಂದು ದೃಷ್ಟಿಯಿಂದ ಕೆಳಗೆ ಬಿದ್ದವರು! ಆದ್ದರಿಂದ ಎಲ್ಲರ ಉದಯವಾಗಬೇಕು. [illegible] ಈ ಸರ್ವೋದಯ ಸಮಾಜ. ಶ್ರೀ [illegible] ಕೆಳಗೆ ಬಿದ್ದಿದ್ದಾರೆ. [illegible] ಎದ್ದಿರಬಹುದು. [illegible] ಎಲ್ಲರನ್ನು ಮೇಲೆತ್ತಬೇಕು. [illegible] ಹೇಳಿದಂತೆ "Lord, Thou alone knowest the right method of Orase. Thou takest away the smallness of the small and the greatness of the great" 'ಓ ಪ್ರಭು, ದಯದ ವಿಧಿವಿಧಾನಗಳನ್ನು ನಿನಗೇ ಗೊತ್ತು. ನೀನೇ ಚಿಕ್ಕವರ ಚಿಕ್ಕತನವನ್ನು ದೊಡ್ಡವರ ದೊಡ್ಡತನವನ್ನು ತೆಗೆದುಹಾಕುವ ಶಕ್ತನು ನೀನು' ಎಲ್ಲರೂ ಸರಿಸಮಾನರಾಗುವ ಕಲ್ಪನೆಯು ಈ ಚಳವಳಿಯು ಸರ್ವರದಾಗಬೇಕು. [illegible] ಸಾಧ್ಯವಾಗಬೇಕಾದರೆ ಅದಕ್ಕೆ ಕೆಲವು ಸಾಧನೆಯೂ ಅಗತ್ಯ. ಪ್ರತಿಯೊಬ್ಬ ಸರ್ವೋದಯ ಪ್ರೇಮಿಯೂ ಶರೀರ ಪರಿಶ್ರಮದಲ್ಲಿ ವಿಶ್ವಾಸವಿಟ್ಟು ಕನಿಷ್ಠ ತನ್ನ ಜೀವನಕ್ಕೆ ಬೇಕಾದುದನ್ನಾದರೂ ತಾನು ಸಂಪಾದಿಸಬೇಕು. ಎರಡನೆಯದು ಅಪರಿಗ್ರಹವನ್ನು ಅಂದರೆ ತನಗಾಗಿ ಬಚ್ಚಿಡುವ, ತನಗೆ ಬೇಕೆಂದು ಇನ್ನೊಬ್ಬರ ಹಿತವನ್ನು [illegible] ಕೂಡಿ ಹಾಕುವ ಬುದ್ಧಿಯನ್ನು ಬಿಡಬೇಕು. ಕೂಡಿಹಾಕುವ ಸಂಗ್ರಹ ಬುದ್ಧಿಯು ನಾನಾ ಬಗೆಯದು. ಕೆಲವರು ಹಣ ಸಂಗ್ರಹಿಸಿದರೆ ಕೆಲವರು ಮನೆ, ಮಠ, ಭೂಮಿ ಸಂಗ್ರಹಿಸುತ್ತಾರೆ. ಕೆಲವರು ಪುಸ್ತಕ ಮತ್ತಿತರ ವಸ್ತುಗಳನ್ನು ಸಂಗ್ರಹಿಸುತ್ತಾರೆ. ಇವೆಲ್ಲವೂ ಸಮಾಜದ ದೃಷ್ಟಿಯಿಂದ ಹಿತಕರವಲ್ಲ. ಸರ್ವೋದಯದ ತತ್ವ ಪ್ರಕಾರ ಪ್ರತಿಯೊಂದಕ್ಕೂ ಒಂದು ಮಿತಿ ಇದೆ. ಬ್ಯಾಂಕಿನಲ್ಲಿ ಹಣವಿಟ್ಟು ಅದರ ಬಡ್ಡಿಯಿಂದ ಜೀವನವೂ ಡುವದೂ, ಇನ್ನೊಬ್ಬರಿಂದ ದುಡಿಸಿ ಅತ

ರ ಪ್ರತಿಫಲ ಹೊಂದುವುದು, ಸಮರ್ಪಕ ವಲ್ಲ. ಜಗತ್ತಿನಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಭಗವಂತನು ಪ್ರತ್ಯೇಕ ಶಕ್ತಿ, ಶಕ್ತಿಗಳನ್ನು ಕೊಟ್ಟಿರುವನು ಅವರವರು ಸ್ವತಹ ದುಡಿದು ಜೀವಿಸಬೇಕೆಂದು. ಹಾಗಿರುವಾಗ ಪ್ರತಿಯೊಬ್ಬನೂ ದುಡಿಯಲೇ ಬೇಕು. ದುಡಿಯದವನಿಗೆ ಉಣ್ಣುವ ಅಧಿಕಾರವಿಲ್ಲ. ಸಮಾಜದಲ್ಲೂ ಆತನು ಗೌರವಿತನಾಗಬಾರದು. ಕೃಷಿಕ ಶ್ರಮದಿಂದ ಉಳುವ ಧಾನ್ಯದವನಿಗೆ, ವಿದ್ಯಾದಾನ ಮಾಡುವವನಿಗೆ, ಕಾರ್ಖಾನೆಗಳಲ್ಲಿ ಓಡಾಡುವವನಿಗೆ, ಅರಮನೆಯಲ್ಲಿ ಜೀವಿಸುವವನಿಗೆ ಇಂದು ನಮ್ಮ ಸಮಾಜವು ಮಾನ್ಯತೆಯನ್ನು ಕೊಡುತ್ತಿದೆ. ಅವರೇ ಹಿರಿಯರು, ತಿಳಿದವರು ಎನ್ನಲಾಗುತ್ತಿದೆ. ಅವರು ಸಮಾಜದ ಹಿತಕ್ಕಾಗಿ, ಸರ್ವರ ಹಿತಕ್ಕಾಗಿ ಕಿರುಬೆರಳನ್ನಾದರೂ ಆಡಿಸದಿರಬಹುದು. ಆದರೂ ಇಂದಿನ ಸಮಾಜ ದುಡ್ಡು ಪೋಷಾಕುಗಳಿಗೆ ಬೆಲೆ ಕೊಡುತ್ತಿದೆ. ಇದು ತಪ್ಪು ದೃಷ್ಟಿ. ಇದು ಬದಲಾಗಬೇಕು. ಬದಲು ಸಮಾಜದಲ್ಲಿ ದುಡಿಯುವ ಕೃಷಿಕನಿಗೂ, ಶ್ರಮಿಸುವ ಮಜದೂರನಿಗೂ ಗೌರವ ದೊರೆಯುವಂತಾಗಬೇಕು. work is worship ಕೆಲಸವೇ ಪ್ರಾರ್ಥನೆ ಎಂದಂತೆ ಕೆಲಸಗಾರನೇ ಪೂಜಾರ್ಹನಾಗಬೇಕು. ಈ ರೀತಿಯ ಒಂದು ಸಾಮಾಜಿಕ ಕ್ರಾಂತಿಯೂ ಸತ್ಯ, ನೀತಿ, ಅಹಿಂಸೆಗಳ ತಳಹದಿಯ ಮೇಲೆ ದುಡಿಮೆಯ ಸಿಮೆಂಟಿನಿಂದ ಕಟ್ಟಲ್ಪಟ್ಟ ಸಮಾಜವು ಆದರ್ಶವೆನಿಸುವುದು. ಇದು ಸುಲಭದ ಕಾರ್ಯವಲ್ಲ. ಆದರೆ ಸರ್ವರ ಹಿತಕ್ಕೆ ಅದೇ ಏಕಮಾರ್ಗ. ಕಷ್ಟವಾದರೂ ಅದಕ್ಕಾಗಿ ದುಡಿಯುವುದು ಸರ್ವರ ಕರ್ತವ್ಯ.

ಧಾರಣೆ ಇಳಿಮುಖವಾಗಿದೆ.

ಸಟ್ಟಾ ವ್ಯಾಪಾರಿಗಳಿಗೆ ಕೋಟ್ಯಾಂತರ ರೂ. ನಷ್ಟ.

ಸರಕಾರದ ಅತಿಪ್ರಸರಣ ವಿರೋಧಿ ಹೋರಾಟ ಹಾಗೂ ಧಾರಣೆ ಇಳಿಸುವ ಉದ್ದೇಶಗಳಿಗೆ ಅನುಗುಣವಾಗಿ ಇತ್ತೀಚೆಗೆ ಧಾರಣೆಗಳು ಇಳಿಯ ತೊಡಗಿದ್ದರಿಂದ ಸದ್ಯದ ಪರಿಸ್ಥಿತಿಯ ಬಗ್ಗೆ ಸರಕಾರವು ಅಷ್ಟೊಂದು ಕಳವಳಗೊಂಡಿಲ್ಲವೆಂದು ತೋರುವುದು.

ಪೇಟೆಯು ಇಳಿಮುಖವಾಗತೊಡಗಿದ್ದರಿಂದ ಭಾರತದ ತಂಬೆಲ್ಲ ವಸ್ತುಗಳ ಧಾರಣೆಗಳು ಇಳಿಯತೊಡಗಿದೆ. ಈ ಬಗೆಯ ಧಾರಣೆ ಸ್ಥಿತ್ಯಂತರವು ಮುಂಬರುವ ೧೫ ದಿನಗಳಲ್ಲಿ ಸ್ಥಿರತೆಗೆ ಬರಬಹುದೆಂದು ಹಣಕಾಸಿನ ವೃತ್ತಗಳು ಊಹಿಸಿವೆ. ಕೊರಿಯಾ ಯುದ್ಧದ ಮೊದಲಿನ ಧಾರಣೆ ಮಟ್ಟ ಸಮೀಪಕ್ಕೆ ಸದ್ಯದ ಧಾರಣೆಗಳು ಹೋಗಿ ಮುಟ್ಟುವ ನಿರೀಕ್ಷಣೆ ಇದೆ.

ಮುಗ್ಗಟ್ಟಿನ ಕಾರಣಗಳು.

ಸದ್ಯದ ಪೇಟೆಯ ಇಳಿಮುಖವು 'ಆರ್ಥಿಕ ಮುಗ್ಗಟ್ಟಿರಡೆ ಹಣಕಾಸಿನ ಬಿಕ್ಕಟ್ಟಾಗಿದೆ'ಯೆಂದು ಅರಿತ ವರ್ಗಗಳು ಅಭಿಪ್ರಾಯಪಟ್ಟಿವೆ. ಈ ಬಗೆಯ ಮುಗ್ಗಟ್ಟಿಗೆ ಸಟ್ಟಾ, ಅಧಿಕ ವ್ಯಾಪಾರ, ಅಧಿಕ ಸಂಗ್ರಹ, ಖರೀದಿಯಲ್ಲಿ ಇಳಿಮುಖ ಮೊದಲಾದವುಗಳು ಕಾರಣಗಳಾಗಿವೆಯೆಂದೂ ಈ ವರ್ಗಗಳು ಹೇಳಿದವು. ಹಿಂದೀ ವಸ್ತುಗಳಿಗೆ ವಿದೇಶ ಪೇಟೆಗಳಲ್ಲಿ ಬೇಡಿಕೆಯ ಅಭಾವ ಹಾಗೂ ಕೊರಿಯಾದಲ್ಲಿ ಶಾಂತಿ ಒಪ್ಪಂದದ ಅಶೆಗಳು ಪೇಟೆಯು ಕುಸಿಯಲು ಕಾರಣಗಳಾದುವೆಂದು ಹೇಳಲಾಗುತ್ತಿದೆ.

ಕೋಟ್ಯಾಂತರ ರೂ. ಹಾನಿ

ಕಳೆದ ಕೆಲವು ದಿನಗಳಲ್ಲಿ ಬೊಂಬಾಯಿ ಹಾಗೂ ಕಲ್ಕತ್ತೆಯ ಸಟ್ಟಾ ವ್ಯಾಪಾರಿಗಳು ಕೋಟ್ಯಾಂತರ ರೂಗಳನ್ನು ಕಳೆದುಕೊಂಡರೆಂದು ಅಂದಾಜಾಗಿದೆ. ಪೇಟೆಯು ಸಟ್ಟಾ ವ್ಯಾಪಾರದಿಂದ ಇನ್ನೂ ಮುಕ್ತವಾಗಿಯೇ ಉಳಿದಿದೆ. ಧಾರಣೆಗಳನ್ನು ಏರಿಸುವ ಪ್ರಯತ್ನಗಳು ಇನ್ನೂ ನಡೆದಿವೆ. ಪೇಟೆಯು ಇಳಿಮುಖದ ಪರಿಸ್ಥಿತಿಯಿಂದ ಧಕ್ಕೆಗೊಂಡ ವಸ್ತುಗಳ ಕಿರುಕುಳ ಧಾರಣೆಗಳು ಕೆಲವು ಅಣೆಗಳಷ್ಟು ಮಾತ್ರ ಕಡಿಮೆಯಾಗಿವೆ.

ಪೇಟೆಯು ಇಳಿಮುಖದಿಂದ ನಿಜವಾಗಿ ಹಾನಿಗೀಡಾದ ವ್ಯಾಪಾರಿಗಳು ತಮ್ಮ ಸರಕುಗಳನ್ನು ವಿದೇಶಗಳಿಗೆ ಕಳುಹಿಸಿಕೊಡುವುದಕ್ಕಾಗಿ, ಸರಕಾರವು ನಿರ್ಯಾತ ನಿರ್ಬಂಧಗಳನ್ನು ಬೇಗನೆ ತೆಗೆದೊಗೆಯಬಹುದೆಂದು ಹೇಳಲಾಗುತ್ತಿದೆ.

ಅರಳೆಯ ಕನಿಷ್ಠ ಧಾರಣೆ ವಿಷಯ.

ಕಳೆದ ವಾರ ಹಣಕಾಸಿನ ಮಂತ್ರಿ ಸಿ. ಡಿ. ದೇಶಮುಖರು ಪಾರ್ಲಿಮೆಂಟಿನಲ್ಲಿ ಅರಳೆಯ ಕನಿಷ್ಠ ಧಾರಣೆಯ ಸಂಬಂಧದಲ್ಲಿ ಮಾತನಾಡುತ್ತಾ—'ಸರಕಾರವು ಅರಳೆಯನ್ನು ಸಮಾನ ದ ಧಾರಣೆಗೆ ಕೊಳ್ಳುವುದು. ಈ ಕ್ರಮಕ್ಕನುಗುಣವಾಗಿ ೧೯೪೯ ಹಾಗೂ ೧೯೫೦ರಲ್ಲಿ ಸರಕಾರವು ಅರಳೆಯನ್ನು ಖರೀದಿ ಮಾಡಿತು. ಸರಕಾರವು ಈ ಕ್ರಮಕ್ಕೆ ಅಂಟಿಕೊಂಡಿದೆ, ಅದು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಿದೆ' ಎಂದಿದ್ದರು.

ಚಿನ್ನ-ಬೆಳ್ಳಿಯ ಪೇಟೆ.

ಬೆಳ್ಳಿಯ ಧಾರಣೆಗಳು ವಿಶೇಷವಾಗಿ ಚಿನ್ನದ ಧಾರಣೆಯು ಈಗ ಇಳಿದಷ್ಟು ಕಳೆದ ಆರು ವರ್ಷಗಳಲ್ಲಿ ಇಳಿದಿರಲಿಲ್ಲ. ತಾ 6ರಲ್ಲಿ ಇತರ ವಸ್ತುಗಳ ಪೇಟೆಯಲ್ಲಿ ಧಾರಣೆ ಶೇಕಡಾ ೫ರಷ್ಟು ಇಳಿದಿವೆ. ಕೊಬ್ಬರಿ ಹಾಗೂ ಎಣ್ಣೆಕಾಳುಗಳಲ್ಲಿ ಕೊಬರಿ ಎಣ್ಣೆ, ನೆಲಗಡಲೆ ಎಣ್ಣೆ, ಹತ್ತಿಕಾಳು, ಕಡಲೆ ಹಾಗೂ ಅಕ್ಕಿ, ಡಿಕಾಳುಗಳ ಕಿರುಕುಳ ಧಾರಣೆಗಳು ಒಂದೇ ಒಂದು ವಾರದಲ್ಲಿ ನೂರಕ್ಕೆ ೩೦ರಿಂದ ೪೦ರಷ್ಟು ಇಳಿದಿದೆ.

ಮದ್ರಾಸಿನಲ್ಲಿ ಕಾಳುಗಳ ಧಾರಣೆ ನೂರಕ್ಕೆ ೩೫ರಿಂದ ೩೭ರ ವರೆಗೆ, ಬೆಲ್ಲದ ಧಾರಣೆ ನೂರಕ್ಕೆ ೫೦ರಷ್ಟು ಇಳಿದಿದೆ. ಪೇಟೆಯು ಇಳಿಮುಖದಿಂದ ಗಾಬರಿ ಪರಿಸ್ಥಿತಿಯು ಉಂಟಾದ್ದರಿಂದ ಧಾರಣೆ ಇಳಿತವನ್ನು ತಡೆಯಲು ತೀವ್ರ ಕ್ರಮ ಕೈಕೊಳ್ಳ ಬೇಕೆಂದು ದಕ್ಷಿಣ ಭಾರತ ವಣಿಕ ಸಂಘವು ಹಣಕಾಸಿನ ಮಂತ್ರಿ ಶ್ರೀ ದೇಶಮುಖರಿಗೆ ತಂತಿಮೂಲಕ ಬಿನ್ನವಿಸಿಕೊಂಡಿದೆ.

ಮಂಗಳೂರಿನಲ್ಲಿ ವ್ಯಾಪಾರವು ಪೂರ್ಣ ನಿಂತಿದೆಯೆಂದರೂ ಅಡ್ಡಿ ಇಲ್ಲ. ಕಡಲೆ ಹಾಗೂ ಇತರ ವಸ್ತುಗಳ ಧಾರಣೆಗಳು ನೂರಕ್ಕೆ ೨೦ರಿಂದ ೩೦ರಷ್ಟು ಇಳಿದಿವೆ, ರೂ. ಕಿರುಕುಳ ಧಾರಣೆ ಅಷ್ಟೊಂದು ಇಳಿದಿಲ್ಲ. ಕಾಫಿ ಬೀಜವು ಕಳೆದ ವಾರ ೧ ಹಂಡ್ರೆಡ್‌ವೇಟಿಗೆ ೨೩೦ ರೂ. ಇದ್ದದ್ದು ಈಗ ೨೧೮ ರೂ. ಆಗಿದೆ. ಅನ್ಯತ್ರಗಳಲ್ಲಿ ವಸ್ತುಗಳ ಕಿರುಕುಳ ಧಾರಣೆಗಳು ನೂರಕ್ಕೆ ೨೦ರಿಂದ ೫೦ರಷ್ಟು ಇಳಿದಿವೆ. ಕಾನ್‌ಪೂರದಲ್ಲಿ ಕಿರುಕುಳ (retail) ಧಾರಣೆಗಳು ಸಗಟು (wholesale) ಧಾರಣೆಗಳ ಪ್ರಮಾಣದಲ್ಲಿ ಇಳಿದಿಲ್ಲ.

ಚಿನ್ನ-ಬೆಳ್ಳಿ ಪೇಟೆಯಲ್ಲಿ ಗಂಭೀರ ಪರಿಸ್ಥಿತಿ

ಬೊಂಬಾಯಿ: ಚಿನ್ನ-ಬೆಳ್ಳಿ ವ್ಯಾಪಾರಿಗಳ ಸಂಸ್ಥೆಯ ಸಾಮಾನ್ಯ ಸಭೆಯು ತಾ ೭ರಲ್ಲಿ ತನ್ನ ಮಂಡಳವು ಪೇಟೆಯಲ್ಲಿ ಗಂಭೀರ ಪರಿಸ್ಥಿತಿಯನ್ನು ಸಾರಬೇಕೆಂಬುವುದಾಗಿ ಮಾಡಿದ ನಿರ್ಣಯಕ್ಕೆ ಒಪ್ಪಿಗೆಯಿತ್ತಿತು. ಬೊಂಬಾಯಿ ಚಿನ್ನ-ಬೆಳ್ಳಿ ವ್ಯಾಪಾರಿ ಸಂಸ್ಥೆಯ ನಿರ್ಣಯದ ನಿರೀಕ್ಷಣೆಗಾಗಿ ಕಲ್ಕತ್ತಾ ಹಾಗೂ ಜಯಪುರದ ಚಿನ್ನ-ಬೆಳ್ಳಿ ಪೇಟೆಗಳು ಮುಚ್ಚಿದ್ದವು. ಮದ್ರಾಸು ಪೇಟೆಯಲ್ಲಿ ಚಿನ್ನ-ಬೆಳ್ಳಿಯ ಧಾರಣೆಗಳಲ್ಲಿ ಬದಲಾವಣೆಯಾಗಲಿಲ್ಲ.

ಫ್ರೆಂಚ್-ಭಾರತದ ಚಿನ್ನದ ಪೇಟೆ.

ಬೊಂಬಾಯಿಯ ಚಿನ್ನ ಬೆಳ್ಳಿಯ ಪೇಟೆಯು ಮುಚ್ಚಿದ್ದರಿಂದ ಫ್ರೆಂಚ್ ಭಾರತದ ಚಿನ್ನದ ಧಾರಣೆಯು ನಿರ್ದಿಷ್ಟವಾಗಿಲ್ಲ. ಕಳೆದ ವಾರ ಪಾಂಡಿಚೇರಿಗೆ ೧ ಲಕ್ಷ ತೊಲೆ ಬಂಗಾರ ಬಂದಿದ್ದರೂ ವ್ಯಾಪಾರಸ್ಥರು ಚಿನ್ನವನ್ನು ೧ ತೊಲೆಗೆ ೯೨ ರೂ. ಗಳಂತೆ ಮಾರಲು ಹಿಂಜರಿದಿದ್ದಾರೆ. ಕೊಳ್ಳುವವರು ಜಾಗರೂಕರಾಗಿದ್ದಾರೆ.

ಬೊಂಬಾಯಿ ಸ್ಟಾಕ್ ಪೇಟೆ ಮುಚ್ಚಿದೆ.

ಬೊಂಬಾಯಿ ಸ್ಟಾಕ್ ಪೇಟೆಯು ತಾ. ೭ರಲ್ಲಿ ಮುಚ್ಚಿದ್ದಿತು. ಮದ್ರಾಸು ಹಾಗೂ ಕಲ್ಕತ್ತಾದ ಸ್ಟಾಕ್ ಪೇಟೆಗಳಲ್ಲಿ ಗಾಬರಿ ಪರಿಸ್ಥಿತಿಯುಂಟಾಗಿದೆ. ಅರಳೆ ಪೇಟೆಯಲ್ಲಿ ಬಿಕ್ಕಟ್ಟುಂಟಾದ್ದರಿಂದ ಅರಳೆಯ ವ್ಯಾಪಾರವನ್ನು ಮಾರ್ಚ ೧೩ರ ವರೆಗೆ ನಿಲ್ಲಿಸಲು ಬೊಂಬಾಯಿಯ ಬಟ್ಟೆ ವ್ಯಾಪಾರಸ್ಥರು ಹಾಗೂ ಮುಕದ್ದಂ ಸಂಸ್ಥೆಯವರು ನಿರ್ಣಯಿಸಿರುವರು.

ಗಿರಣಿಯೊಡೆಯರ ವಿಮರ್ಶನೆ.

'ಧಾರಣೆಗಳನ್ನು ಕ್ರಮೇಣವಾಗಿ ಇಳಿಸುವದು ಯಾವಾಗಲೂ ಸ್ವಾಗತಾರ್ಹವಾದುದಾಗಿದೆ. ಆದರೆ ಹಣದ ಅಭಾವದಿಂದ ತಲೆಯೆತ್ತಿದ ಸದ್ಯದ ಬಿಕ್ಕಟ್ಟನ್ನು ಸಕಾಲಕ್ಕೆ ಎದುರಿಸದಿದ್ದರೆ ಆರ್ಥಿಕ ಸ್ಥಿತಿಯೇ ಕೆಟ್ಟು ಹೋಗುವುದು' ಎಂದು ಅಹ್ಮದಾಬಾದ್ ಗಿರಣಿಯೊಡೆಯರ ಸಂಸ್ಥೆಯ ಉಪಾಧ್ಯಕ್ಷ ಶ್ರೀ ನಂದಲಾಲ ಶೋದಾನರು ಹೇಳಿದರು.

'ಆರು ತಿಂಗಳಲ್ಲಿ ಅಮೇರಿಕದ ೪ ಲಕ್ಷ ಅರಳೆ ಗಂಟುಗಳ ಆಯಾತದಿಂದ ದುರ್ಬಲ ಸಂಗ್ರಹಕಾರರು ಸಂಗ್ರಹಿಸಿಡಲು ಸಾಧ್ಯವಾಗದೆ ಹೋಗಿ ಅವರು ಸಿಕ್ಕಿದ ಬೆಲೆಗೆ ಅರಳೆಯನ್ನು ಮಾರಲು ತೊಡಗಿದ್ದಾರೆ. ಧಾರಣೆ ಇಳಿತಕ್ಕೆ ಇದು ಯೋಗ್ಯ ಕ್ರಮವಲ್ಲ. ಮುಂದಿನ ತಿಂಗಳಲ್ಲಿ ಅಮೇರಿಕಾದಿಂದ ಬರುವ ೫ ಲಕ್ಷ ಅರಳೆ ಗಂಟುಗಳಿಗಾಗಿ ಸಾಲವನ್ನೊದಗಿಸಲು ಸರಕಾರವು ರಿಜರ್ವ್ ಬ್ಯಾಂಕಿಗೆ ತಿಳಿಸಬೇಕು. ಒಂದು ವಸ್ತುವಿನ ಧಾರಣೆ ಇಳಿತವನ್ನು ತಡೆದರೆ ಇತರ ವಸ್ತುಗಳ ಧಾರಣೆ ಇಳಿತವೂ ನಿಲ್ಲುವುದು. ಸದ್ಯದ ನಿರ್ಯಾತ ವಸ್ತುಗಳ ಪ್ರಮಾಣವನ್ನೇ ಉಳಿಸಿಕೊಂಡು ಹಿಂದೀ ವಸ್ತುಗಳು ವಿದೇಶಿ ಪೇಟೆಯಲ್ಲಿ ಮೇಲಾಟವನ್ನು ಎದುರಿಸಲು ಯೋಗ್ಯವಾಗುವಂತೆ ನಿರ್ಯಾತ ಸುಂಕವನ್ನು ಕಡಿಮೆ ಮಾಡಬೇಕು' ಎಂದು ಅವರು ನುಡಿದರು.

ಅಹ್ಮದಾಬಾದಿನಲ್ಲಿ ೪ ಕೋಟಿ ರೂ. ಬೆಲೆಯ ಬಟ್ಟೆ ಸಂಗ್ರಹ.

ಇಲ್ಲಿಯ ಬಟ್ಟೆಯ ಸ್ಟಾಕ್ ವ್ಯಾಪಾರಸ್ಥರ ಬಳಿ ೪ ಕೋಟಿ ರೂ. ಬೆಲೆಯ ಸುಮಾರು ೨೦ ಸಾವಿರ ಬಟ್ಟೆ ಗಂಟುಗಳ ಸಂಗ್ರಹವಿದೆಯೆಂದು ಬಟ್ಟೆ ಸ್ಟಾಕ್ ವ್ಯಾಪಾರಿಗಳ ಸಂಸ್ಥೆಯ ಅಧ್ಯಕ್ಷ ಶ್ರೀ ಭೋಗಿಲಾಲ್ ಗಾಂಧಿಯಾ ಅವರು ಹೇಳಿದರು.

ಸ್ಥಳ ಬದಲಾವಣೆ

ವೀರಾಜಪೇಟೆಯ ಕೆಳಗೆ ಅಂದರೆ ಗೋಣಿಕೊಪ್ಪಲಿಗೆ ಹೋಗುವ ರಸ್ತೆ ಬಳಿ ಇದ್ದ ನಮ್ಮ ಮನ್ನಾ ಸ್ಟೋರ್ ಅಂಗಡಿಯನ್ನು ಗ್ರಾಹಕರ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಗಡಿಯಾರ ಕಂಬದ ಬಳಿ ಗಣಪತಿ ದೇವಸ್ಥಾನದ ಎದುರಿನ ಅಂಗಡಿಗೆ ಬದಲಾಯಿಸಿದ್ದೇವೆ ಎಂದಿನಂತೆ ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಎಸ್. ಎ. ಮನ್ನಾ & ಬ್ರದರ್ಸ್,

೫-4 ವೀರಾಜಪೇಟೆ

ಮಾರಾಟಕ್ಕಿದೆ.

ವೀರಾಜಪೇಟೆ ದೇವಾಂಗ ಬೀದಿಯಲ್ಲಿ ಬಾವಿ ಇರುವ ಒಂದು ಹಂಚಿನ ಮನೆ, ಕೊಟ್ಟಿಗೆ, ಹಿತ್ತಲು ವಗೈರೆಯಿಂದ 0.16 ಎಕ್ರೆ ವಿಸ್ತೀರ್ಣದ ಆಸ್ತಿಯು 6000/- ರೂಪಾಯಿಗಳಿಗೆ ವಿಕ್ರಯಿಸಲ್ಪಡುವುದು. ಖಾಯಿಸ್‌ದಾರರು ಈ ಕೆಳಗಿನ ವಿಳಾಸಕ್ಕೆ ಬರೆಯುವುದು

ಯುಸ್ ಯುಸ್. ರಾಮಮೂರ್ತಿ,

ಮಾಲೀಕರ ಪರ ಅಡ್ವೊಕೇಟ್,

ವೀರಾಜಪೇಟೆ

2-2

ವಯಸ್ಕರ ಶಿಕ್ಷಣ ವಿಭಾಗ

ಸಮಾಜ ಶಿಕ್ಷಣದ ವಿಷಯ ತರಬೇತಾದ ಅಧ್ಯಾಪಕರು [illegible] ಕೇಂದ್ರಗಳಲ್ಲಿ ಪ್ರಚಾರ ಕಾರ್ಯ ನಡೆಸಿ, ವಯಸ್ಕರ ಶಿಕ್ಷಣ ಶಾಲೆಗಳನ್ನು ಪ್ರಾರಂಭಿಸಿದ್ದಾರೆ. ಇದುವರೆಗೆ ಬಂದಿರುವ ರಿಪೋರ್ಟುಗಳ ವಿವರ:

ಶನಿವಾರಸಂತೆ

ಪೇಟೆಯಲ್ಲಿ ಪ್ರಚಾರ ಕಾರ್ಯ ನಡೆಸಿ, ತಾರೀಕು ೨೯-೨-೫೨ರಲ್ಲಿ ಶ್ರೀಮಾನ್ ಕರ್ಣೇರ್ [illegible] ಇವರ ಅಧ್ಯಕ್ಷತೆಯಲ್ಲಿ ಶಾಲೆಯ ಪ್ರಾರಂಭೋತ್ಸವವನ್ನು ನೆರವೇರಿಸಲಾಯಿತು. ಡಿ.ಬಿ. ಶಾಲೆಯ ಮುಖ್ಯೋಪಾಧ್ಯಾಯರು ಸಮಾಜ ಶಿಕ್ಷಣದ ಪ್ರಾಮುಖ್ಯತೆಯನ್ನು ವಿವರಿಸಿದರು. ಶಾಲೆಯ ಬಾಲಕರು ಮಹಾತ್ಮಾಗಾಂಧಿಯವರ ಬಲ್ಯದ ಒಂದು ಚಿಕ್ಕ ನಾಟಕವನ್ನು ಸ್ವಾರಸ್ಯವಾಗಿ ಓದಿ [illegible] ಗಣ್ಯಮಹನೀಯರ ಉತ್ಸಾಹಕ್ಕೆ ದಯಮಾಡಿದ್ದರು. ಶಾಲೆಗೆ ೩೦ ವಯಸ್ಕರು ಸೇರಿದ್ದಾರೆ. ವಾರದ ರಜಾ ದಿನವನ್ನು ಶನಿವಾರ ಬದಲು ಸೋಮವಾರ ಎಂದು ನಿರ್ಧರಿಸಲಾಯಿತು. ಭಜನೆ ಮತ್ತು ಪ್ರಸಾದ ವಿನಿಯೋಗವಾದನಂತರ ಅಂದಿನ ಉತ್ಸವವು ಮುಕ್ತಾಯವಾಯಿತು.

ತಿರಂಗಾಲ

ತಾರೀಕ ೨೭-೨-೫೨ ನೇ ಬುಧವಾರ ಪೇಟೆ, ಕೋಟೆ, ಕೊಪ್ಪಲು ಜನರೆಲ್ಲರನ್ನೂ ಗ್ರಾಮಪಂಚಾಯತ್ ಹಾಲಿನಲ್ಲಿ ಸೇರಿಸಿ ಒಂದು ಮೀಟಿಂಗನ್ನು ಏರ್ಪಡಿಸಲಾಯಿತು. ವಯಸ್ಕರ ಶಿಕ್ಷಣ ಶಾಲೆಯ ಉಪಾಧ್ಯಾಯರು ಈ ಯೋಜನೆಯ ಕುರಿತು ಸವಿಸ್ತಾರವಾಗಿ ವಿವರಿಸಿದರು. ಶ್ರೀಮಾನ್ ತಿಮ್ಮಲಪ್ಪನವರು ಅದನ್ನು ಪುಷ್ಟೀಕರಿಸಿ ಮಾತನಾಡಿದರು. ಮೊದಲು ಮಾದಳ್ಳಿ ಕೊಪ್ಪಲಲ್ಲಿ ಶಾಲೆಯನ್ನು ತೆರೆದು, ನಂತರ ೨ನೇ ಸಂಗಡಕ್ಕೆ ಇನ್ನೊಂದು ಸ್ಥಳದಲ್ಲಿ ಶಾಲೆಯನ್ನು ತೆರೆಯುವಂತೆಯೂ ಸಭಿಕರು ಒಪ್ಪಿಗೆ ಕೊಟ್ಟರು. ಕಾಳಮ್ಮನವರ ದೇವಸ್ಥಾನದಲ್ಲಿ ತಾರೀಕು ೧-೩-೫೨ ರಿಂದ ಶಾಲೆಯನ್ನು ಪ್ರಾರಂಭಿಸಿದ್ದಾರೆ. ೨೫ ಮಂದಿ ವಯಸ್ಕರು ಹಾಜರಿದ್ದಾರೆ.

ಕಣಿವೆ

ತಾ. ೧-೩-೫೨ ನೇ ಶನಿವಾರ ಸಾಯಂಕಾಲ ವಯಸ್ಕರ ಶಿಕ್ಷಣ ಶಾಲಾ ಪ್ರಾರಂಭೋತ್ಸವವು ಕಣಿವೆ ಶಾಲೆಯಲ್ಲಿ ನಡೆಯಿತು. ಶ್ರೀಮಾನ್ ಅಪ್ಪೇಗೌಡರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ವಯಸ್ಕರಲ್ಲೊಬ್ಬರಾದ ಶ್ರೀ. ಜವರಪ್ಪನವರಿಂದ ಪ್ರಾರ್ಥನೆ ನಡೆಸಲಾಯಿತು. ವಯಸ್ಕರ ಶಿಕ್ಷಣದ ವಿಷಯ ಶ್ರೀ. ಲಕ್ಷ್ಮೀಕಾಂತಯ್ಯನವರು ಮಾತನಾಡಿದರು. ಪ್ರತಿ ಬುಧವಾರ ರಜವಿರುವಂತೆಯೂ ಶಾಲೆಯನ್ನು ರಾತ್ರಿ ೮ ಗಂಟೆಗೆ ಪ್ರಾರಂಭಿಸುವಂತೆಯೂ ಒಪ್ಪಿಕೊಂಡರು. ವಂದನಾರ್ಪಣೆಯಾದ ನಂತರ ಅಂದಿನ ಸಭೆ ಮುಗಿಯಿತು.

ಕೂಡಿಗೆ

ತರಬೇತಿ ಶಾಲೆಯಿಂದ ಬಿಡುಗಡೆಯಾಗಿ ಬಂದ ನೌಕರ [illegible] ೨೯-೨-೫೨ನೇ ದಿನ ಕೂಡಿಗೆ ಗ್ರಾಮಸ್ಥರನ್ನು ಸೇರಿಸಿ ಮೀಟಿಂಗ್ ನಡೆಸಿ ೧-೩-೫೨ ರಿಂದ ಶಾಲೆ ತೆರೆದಿದ್ದಾರೆ. ಸೇವಾದಳ [illegible] ಅಲ್ಲಿಯ ಅಧ್ಯಾಪಕರು ಬರೆಯುತ್ತಾರೆ.

ತೊರೆನೂರು

[illegible] ಗ್ರಾಮದ ಸಹಕಾರ ಸಂಘ [illegible] ೧-೩-೫೨ ನೇ [illegible] ಶಿಕ್ಷಣ ಶಾಲೆಯನ್ನು [illegible] ಪಟೇಲ್ ಕೆಂಪೇಗೌಡರ ಅಧ್ಯಕ್ಷತೆಯಲ್ಲಿ [illegible]. ೨೫ ಮಂದಿ [illegible] ಇನ್ನೂ ಸೇರುವವರಿದ್ದಾರೆ.

ಜನಾರ್ಧನ ಹಳ್ಳಿ

[illegible] ೧-೩-೫೨ [illegible] ವಯಸ್ಕರ ಶಾಲೆ [illegible]. ೨೫ ಮಂದಿ ದಾಖಲು [illegible] ಇನ್ನೂ ಹಲವರು [illegible] ಅಧ್ಯಾಪಕರು ತಿಳಿಸುತ್ತಾರೆ.

ಹೆಬ್ಬಾಲೆ

೬-೩-೫೨ನೇ ಗುರುವಾರ ಸಾಯಂಕಾಲ ೭ ಗಂಟೆಗೆ, ಹೆಬ್ಬಾಲೆ ಹಾಯರ್ ಎಲಿಮೆಂಟ್ರಿ [illegible] ಶ್ರೀಮಾನ್ ಜಿ. ಎಮ್. [illegible] ಇವರ ಅಧ್ಯಕ್ಷತೆಯಲ್ಲಿ ಶಾಲೆಯನ್ನು ತೆರೆದಿರುತ್ತೇನೆಂದು ಸಂಗಡ ಆ ಶಾಲೆಯ ಅಧ್ಯಾಪಕರು ವರದಿ ಮಾಡಿಕೊಂಡಿದ್ದಾರೆ.

ಫ್ರೇಜರ್‌ಪೇಟೆ

೬-೩-೫೨ ನೇ ಸಾಯಂಕಾಲ ೭ ಗಂಟೆಗೆ ಬೈಚನಹಳ್ಳಿ ಗ್ರಾಮದ ಪಟೇಲ್ ಶ್ರೀ [illegible] ಅವರ ಹಸ್ತದಲ್ಲಿ ಶಾಲಾಪ್ರವೇಶೋತ್ಸವವನ್ನು ನೆರವೇರಿಸಲಾಯಿತು. ಸರಸ್ವತಿ ಪೂಜೆ ಮಾಡಲಾಯಿತು. ಶಾಲಾ ಉಪಾಧ್ಯಾಯರು ಈ ಯೋಜನೆಯ ಕುರಿತು ಮಾತನಾಡಿದರು. ಶ್ರೀಮಾನ್ ಐ. ಕೆ. ಬೆಳ್ಳಪ್ಪನವರು ಅದನ್ನು ಸಮರ್ಥಿಸಿ ಮಾತನಾಡಿದುದಲ್ಲದೆ ಅವರು ಇದರ ಮೇಲ್ಮೆಯ ಬಗ್ಗೆ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ವಯಸ್ಕರ ಶಿಕ್ಷಣವೆಂದರೆ ಬರೇ ಅಕ್ಷರ ಜ್ಞಾನವಲ್ಲ, ಗ್ರಾಮೋದ್ಧಾರಕ್ಕೆ ಸಂಬಂಧಿಸಿದ ಕೆಲಸಗಳನ್ನೂ ಮಾಡಬೇಕೆಂಬ ವಿಷಯ ತಿಳಿದ ನಂತರ ಗ್ರಾಮಸ್ಥರಲ್ಲಿ ಒಂದು ತರದ ಆಸೆಯುಂಟಾಗಿ ಪ್ರತಿ ಪ್ರಜೆಯೂ ಇದರ ಉಪಯೋಗ ಪಡೆಯಬೇಕೆಂದು ಆಶಿಸುತ್ತಿರುವರು. ಅಧ್ಯಕ್ಷರು ಸರ್ಕಾರದವರು ಈ ಅನುಕೂಲ ಮಾಡಿಕೊಟ್ಟಿದ್ದಕ್ಕೆ ವಂದಿಸಿ ಪ್ರತಿಯೊಬ್ಬರು ಇದರ ಪ್ರಯೋಜನ ಪಡೆಯಬೇಕೆಂದು ತಿಳಿಸಿದರು.

ಹೇರೂರು

೧-೩-೫೨ ನೇ ದಿವಸ ವಯಸ್ಕರ ಶಿಕ್ಷಣ ಶಾಲೆಯನ್ನು ತೆರೆಯುವ ಪ್ರಾರಂಭೋತ್ಸವವನ್ನು ಆ ಗ್ರಾಮದ ಸಹಕಾರ ಸಂಘದ ಪ್ರೆಸಿಡೆಂಟರಾದ ಮು. ರಾ. ಮೊಟ್ಟನ ಬಿದ್ದಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು. ವಯಸ್ಕರು ವಿದ್ಯೆ ಕಲಿಯಲು ತುಂಬಾ ಕುತೂಹಲವುಳ್ಳವರಾಗಿದ್ದಾರೆಂಬುದಾಗಿ ಅಲ್ಲಿಯ ಉಪಾಧ್ಯಾಯರು ತಿಳಿಸುತ್ತಾರೆ.

ಇನ್ನೂ ಕೆಲವು ಶಾಲೆಗಳಿಂದ ವರದಿ ಬಂದಿರುವುದಿಲ್ಲ. ಅವುಗಳ ಅವುಗಳ ವಿಷಯ ಬಂದ ಕೂಡಲೇ ಪ್ರಕಟಿಸಲಾಗುವುದು.

ಒಂದು ಸ್ಥಳದಲ್ಲಿ ಶಾಲೆಯನ್ನು ತೆರೆದ ನಂತರ ಆ ಸ್ಥಳದಲ್ಲಿ ೨೫ ಯಾ ೩೦ ವಯಸ್ಕರಿಗೆ ಅಕ್ಷರಾಭ್ಯಾಸ ಹಾಗೂ ಓದುಗಾರಿಕೆ ತರಗತಿಯನ್ನು ೫ ತಿಂಗಳ ಕಾಲ ನಡೆಸಲಾಗುವುದು. ಐದು ತಿಂಗಳಲ್ಲಿ ಒಂದು ಪರೀಕ್ಷೆ ನಡೆಸಿ ಪಾಸಾದವರಿಗೆ ಯೋಗ್ಯತಾ ಪತ್ರ ಕೊಡಲಾಗುವುದು. ಹೀಗೆ ಓದು ಕಲಿತವರು ಮರೆಯದ ರೀತಿ ಅಲ್ಲಿಯೇ ಒಂದು ಪುಸ್ತಕ ಭಂಡಾರವನ್ನೇರ್ಪಡಿಸಲಾಗುವುದು. ಅವರು ವಿರಾಮ ಕಾಲದಲ್ಲಿ ಬಂದು ಓದುವ ಅನುಕೂಲತೆ ಮಾಡಲಾಗುವುದು. ಐದು ತಿಂಗಳ ನಂತರ ಬೇರೊಂದು ಅವಿದ್ಯಾವಂತರ ಸಂಗಡವನ್ನು ದಾಖಲೆ ಮಾಡಿಕೊಳ್ಳಲಾಗುವುದು. ಹೀಗೆ ಒಂದು ಕೇಂದ್ರದಲ್ಲಿರುವ ಎಲ್ಲಾ ಅವಿದ್ಯಾವಂತರನ್ನು ವಿದ್ಯಾವಂತರನ್ನಾಗಿ ಮಾಡಲಾಗುವುದು. ಬರೇ ಅಕ್ಷರಾಭ್ಯಾಸವೆಂದರೆ ದುಡಿವ ವಯಸ್ಕರು ಕಲಿಯಲಿಕ್ಕೆ ಬರುವುದು ಅಸಾಧ್ಯ. ಆದ ಕಾರಣ ಮನೋರಂಜನೆ ಮತ್ತು ಲಾಭದಾಯಕ ಕಾರ್ಯಚಟುವಟಿಕೆಗಳನ್ನು ಈ ಯೋಜನೆಗೆ ಅಳವಡಿಸಿಕೊಂಡಿದ್ದೇವೆ. ಆಗಿಂದಾಗ್ಗೆ ಇದರ ವಿಷಯ ವಿವರವನ್ನು ಪ್ರಕಟಿಸಲಾಗುವುದು. ಸರ್ವರ ಸಹಾನುಭೂತಿಯನ್ನು ಅಪೇಕ್ಷಿಸುತ್ತೇವೆ.

ವಿದ್ಯಾ ಇಲಾಖೆ.

ಹದಿನೇಳುವರೆ ಕೋಟಿ

ಜಾನುವಾರುಗಳು!

ಆದರೆ, ಭಾರತೀಯನಿಗೆ ಸಾಕಷ್ಟು ಹಾಲು ದೊರೆಯುತ್ತಿಲ್ಲ

'ಮೊಸರು ಕ್ಷೀರಸಾಗರ ಘಟ್ಟ—ಮಜ್ಜಿಗೆಗೆ ತತ್ವಾರ' ಎಂಬೊಂದು ಗಾದೆಯಿದೆ. ಭಾರತದ ಗೋವುಗಳ ಸಂಖ್ಯೆ, ಜಗತ್ತಿನ ಗೋವುಗಳ ಸಂಖ್ಯೆಯ ಕಾಲುಭಾಗದಷ್ಟಿದ್ದರೂ, ಕ್ಷೀರಕ್ಷಾಮವು ಇಲ್ಲಿದ್ದಂತೆ ಬೇರೆ ಎಲ್ಲಿಯೂ ಇಲ್ಲ. ಶುದ್ಧ ಹಾಲು ದೊರೆಯದೆ, ಪರದೇಶದಿಂದ ಪುಡಿ ಹಾಲು ತರಿಸಿಕೊಳ್ಳುತ್ತಿದ್ದೇವೆ. ಇದ್ದ ಗೋವುಗಳನ್ನು ಸಾಕುವ ಜ್ಞಾನವಿಲ್ಲದೆ ಈ ದೈನ್ಯವನ್ನು ಹೊಂದುತ್ತಿದ್ದೇವೆ.

ಅಹಿಂಸೆಯೆಂದರೆ ಕೊಲ್ಲದಿರುವುದು ಎಂದು ಮಾತ್ರ ಅರ್ಥವಾಗುವುದಿಲ್ಲ. ಬದುಕಿದ್ದಾಗ ಪಾಲನೆಯಿಂದ, ಯೋಗ್ಯ ಆಹಾರ ಪಾಲನೆಗಳಿಂದ ನೋಡಿಕೊಳ್ಳುವುದು ಮುಖ್ಯ.

'ಪಶುವಧೆಯನ್ನು ನಿಲ್ಲಿಸಿ!' ಎಂದು ನಾವು ಕೂಗುತ್ತಿದ್ದೇವೆ. ಪಶುಗಳ ಬೆಳವಣಿಗೆಯಲ್ಲಿ ತಕ್ಕ ಲಕ್ಷ್ಯವಿತ್ತು, ಅವುಗಳನ್ನು ಸಾಕುವತಿಷ್ಟು? ನಮ್ಮ ದನಗಳನ್ನೂ ಎತ್ತುಗಳನ್ನೂ, ಪೋಷಿಸುವ ರೀತಿ ಎಷ್ಟು ಶೋಚನೀಯವಾಗಿದೆ!

ಭಾರತದಲ್ಲಿ ಹದಿನೇಳು ಕೋಟಿ, ಅರುವತ್ತು ಲಕ್ಷ ಜಾನುವಾರುಗಳಿವೆ; ಜಗತ್ತಿನಲ್ಲಿರುವ ಗೋವುಗಳ ನಾಲ್ಕನೇ ಒಂದಂಶ! ಆದರೂ, ಭಾರತೀಯನಿಗೆ ಸಾಕಷ್ಟು ಹಾಲು ದೊರೆಯುತ್ತಿಲ್ಲ. ಕಾರಣವೇನು? ನಮ್ಮ ದನಗಳು ಪುಷ್ಟಿಕರವಾಗಿಲ್ಲ; ಸಾಕಷ್ಟು ಹಾಲು ಕೊಡುವಂತೆ ಬೆಳೆದಿಲ್ಲ.

ಭಾರತದಲ್ಲಿನ ಗೋವುಗಳಲ್ಲಿ ಉತ್ತಮ ಜಾತಿಗಳಿವೆ. ಆದರೆ ಹಲವು ಕಡೆಗಳಲ್ಲಿ ತಕ್ಕ ಬೀಜದ ಹೋರಿಗಳಿಲ್ಲ. ತಕ್ಕ ಮೇವು ಇಲ್ಲ, ಗೋಪಾಲನೆಯಲ್ಲಿ ಜನರ ಜ್ಞಾನವೂ ಅಲ್ಪವಾಗಿದೆ. ಇನ್ನೂ ಕೆಲವು ಬೀಜದ ಹೋರಿಗಳಿರಬೇಕಾದಲ್ಲಿ ನಮ್ಮಲ್ಲಿ ಒಂದೇ ಇರುತ್ತದೆ. ಜನರ ಅಜಾಗರೂಕತೆ—ಅಜ್ಞಾನಗಳಿಂದ, ದನದ ರೋಗಗಳು ಅಪಾರ ಹಾನಿಯನ್ನುಂಟು ಮಾಡುತ್ತಿವೆ.

ಗೋವುಗಳಿಗೆ ಕೊಡಬೇಕಾದ ಆಹಾರ ಯಾವುದು, ಅವುಗಳ ಆರೈಕೆ ಹೇಗೆ ಎಂಬುವುದನ್ನು ಪ್ರತಿಯೊಬ್ಬರೂ ಚೆನ್ನಾಗಿ ತಿಳಿದುಕೊಳ್ಳುವಂತೆ ಶಿಕ್ಷಣವು ಹರಡಬೇಕು.

ದನಗಳನ್ನು, ಹೊಲಗಳಲ್ಲಿ ಉಳಲು ಉಪಯೋಗಿಸಿಕೊಳ್ಳುವುದರಲ್ಲಿ ಹಾನಿಯಿಲ್ಲ. ಅವುಗಳಿಗೆ ವ್ಯಾಯಾಮ ದೊರೆತಂತಾಗುವುದು. ವ್ಯಾಯಾಮವಿಲ್ಲದಿದ್ದರೆ ದನಗಳ ಆಯುಷ್ಯವು ಕಡಿಮೆಯಾಗುವುದು.

ಅನೇಕ ಕಡೆಗಳಲ್ಲಿ ಪುಣ್ಯ ಸಂಚಯಕ್ಕಾಗಿಯೂ ಶಾಸ್ತ್ರವಿಧಿಪೂರ್ತಿಗಾಗಿಯೂ ಹಾಲು ಬತ್ತಿದ ದನಗಳನ್ನು ಬ್ರಾಹ್ಮಣರಿಗೆ ದಾನವಾಗಿ ಕೊಡುವುದುಂಟು. ಈ ಬಡ ಬ್ರಾಹ್ಮಣರು, ಅವುಗಳನ್ನು ಸಾಕಲಾರದೆ ಕಟುಕರಿಗೆ ವಿಕ್ರಯಿಸುವುದುಂಟು. ಇಂತಹ ದಾನಗಳನ್ನು ನಿಲ್ಲಿಸುವುದರಿಂದ ಕ್ಷೇಮವಿದೆ.

ರಾಜ್ಯಹಾರಿಗಳಿಗೆ, ದೇಹ ಬೆಳವಣಿಗೆ ಹಾಲಿನಷ್ಟು ಮುಖ್ಯವಾದ ಆಹಾರ ಇನ್ನೊಂದಿಲ್ಲ.

(ದಿಲ್ಲಿಯ ರಾಜಘಾಟಿನಲ್ಲಿ ತಾ. ೨೨-೨-೫೨ರಲ್ಲಿ ಹನ್ನೊಂದನೇ ಅಖಿಲ ಭಾರತ ಗೋಪ್ರದರ್ಶನದ ಉದ್ಘಾಟನೆ ಮಾಡುತ್ತಾ, ಭಾರತದ ನೈಸರ್ಗಿಕ ಆಸರೆಗಳು ಹಾಗೂ ವೈಜ್ಞಾನಿಕ ಸಂಶೋಧನಾ ಖಾತಾ ಮಂತ್ರಿ ಶ್ರೀ [illegible] ಪ್ರಕಾಶರವರು ಮಾಡಿದ ಭಾಷಣ ಸಾರಾಂಶ.)

Edited Printed & Published by P. I. Belliappa at 'Kodagu' Press, Mercara, for 'Kodagu' Ltd.

ಕೊಡಗು

ತಾ. ೧೪-೩-೧೯೫೨ನೇ ಶುಕ್ರವಾರ

ಬತ್ತದ ಬೆಲೆ.

ಕಳೆದ ತಿಂಗಳು ಡೆಲ್ಲಿಯಲ್ಲಿ ಆಹಾರ ಮಂತ್ರಿಗಳ ಸಮ್ಮೇಳನವೊಂದು ನಡೆಯಿತು. ಈ ಸಮ್ಮೇಳನದಲ್ಲಿ ಕೆಲವು ಪ್ರಾಮುಖ್ಯ ನಿರ್ಣಯಗಳಾಗಿವೆ. ಇವುಗಳಲ್ಲಿ ಬತ್ತದ ಕ್ರಯ ಹೆಚ್ಚಿಸುವದೊಂದಾಗಿದೆ. ಬತ್ತದ ಕ್ರಯ ಹೆಚ್ಚಿಸುವುದರಿಂದ ಕ್ರಯಕ್ಕೆ ಪಡೆದು ಉಪಯೋಗಿಸುವವರಿಗೆ ಅನ್ಯಾಯವಾಗದಂತೆ ಸರಕಾರವು ಸುಲಭ ದರದಲ್ಲಿ ಅಕ್ಕಿ ದೊರೆಯುವಂತೆ ಏರ್ಪಡಿಸಿ ಇದರಿಂದ ಬರುವ ನಷ್ಟವನ್ನು ತಾನು ನಿರ್ವಹಿಸಬೇಕೆಂದೂ ಸಮ್ಮೇಳನ ಅಭಿಪ್ರಾಯ ಪಟ್ಟಿದೆ. ಈ ತೀರ್ಮಾನದಂತೆ ಮದ್ರಾಸಿನವರು ಬತ್ತದ ಬೆಲೆಯನ್ನು ಮಣಕ್ಕೆ ರೂ ೧|-ರಂತೆ ಹೆಚ್ಚಿಸಿರುವರು. ಅದೇ ರೀತಿ ಕೊಡಗಿನಲ್ಲಿಯೂ ಬತ್ತದ ಬೆಲೆಯನ್ನು ಹೆಚ್ಚಿಸಬೇಕಾಗಿದೆ. ಬತ್ತದ ಬೆಳೆ ಹೆಚ್ಚಾಗಬೇಕಾದರೆ ಬೆಳೆಯುವ ರೈತನಿಗೆ ಪ್ರೋತ್ಸಾಹಕರವಾದ ಧಾರಣೆ ದೊರೆಯಲೇಬೇಕೆಂಬುದು ಸತ್ಯವಾದ ಕಾರಣ ಆ ತತ್ವವನ್ನು ಅರಿತು ಆಹಾರ ಮಂತ್ರಿಗಳು ಈ ನಿರ್ಣಯಕ್ಕೆ ಬಂದಿರುವುದು. ಆದ್ದರಿಂದ ಕೊಡಗು ಸರಕಾರವು ಈ ವಿಚಾರದಲ್ಲಿ ಪರಿಶೀಲಿಸಿ ಮದ್ರಾಸ್ ಸರಕಾರ ಮಾಡಿರುವಂತೆಯೇ ಕೊಡಗಿನಲ್ಲೂ ಬತ್ತದ ಬೆಲೆ ಏರುವಂತೆ ಪ್ರಯತ್ನಿಸಬೇಕಾಗಿದೆ.

ಬತ್ತದ ಬೆಲೆ ಏರಿಸುವದರಿಂದ ಬತ್ತ ಬೆಳೆಯದ ಜನರಿಗೆ ತೊಂದರೆ ಇದೆ. ಕ್ರಯಕ್ಕೆ ತೆಗೆದು ಉಪಯೋಗಿಸುವವರು ತೊಂದರೆ ಪಡಬೇಕಾಗುತ್ತದೆ. ಆದ್ದರಿಂದ ಇವರಿಗೆ ಹಿತವಾಗುವಂತೆ ಕಡಿಮೆ ಬೆಲೆಯಲ್ಲಿ ಅಕ್ಕಿ ದೊರೆಯುವಂತೆ ಮಾಡುವದು ಸರಕಾರದ ಕರ್ತವ್ಯವಾಗಿದೆ. ಈ ಮೊದಲು ಹಲವಾರು ಬಾರಿ ನಾವು ಈ ವಿಚಾರದಲ್ಲಿ ಸ್ಪಷ್ಟ ಸಲಹೆಯನ್ನು ಮಾಡಿದ್ದೆವು. ಕೊಂಡು ಉಪಯೋಗಿಸುವವರಿಗೆ ಕಡಿಮೆ ಬೆಲೆಯಲ್ಲಿ ಒಳ್ಳೆ ಅಕ್ಕಿಯು ರೇಶನ್ ಡಿಪೋಗಳಲ್ಲಿ ದೊರೆಯುವಂತೆ ಮಾಡಬೇಕೆಂದು ಸೂಚಿಸಿದ್ದೆವು. ಹೆಚ್ಚಿನ ಬೆಲೆ ಕೊಟ್ಟು ಉಪಯೋಗಿಸುವ ರೇಶನ್ ಕಾರ್ಡದಾರನಿಗೆ ಕಡಿಮೆ ಬೆಲೆಯಲ್ಲಿ ಅಕ್ಕಿ ಒದಗಿಸಬೇಕೆಂದು ಆಗ್ರಹ ಪಡಿಸಿದ್ದೆವು. ಸ್ಥಳೀಯ ಸರಕಾರವು ಈ ವಿಚಾರಗಳ ಕಡೆಗೆ ಗಮನವೀಯದೆ ರೇಶನ ಕಾರ್ಡುದಾರರ ಹಿತಸಂರಕ್ಷಣೆ ತನ್ನ ಪಾಲಿನದಲ್ಲವೆಂಬಂತೆ ವರ್ತಿಸಿದೆ. ನೊನ್ನೆ ಡೆಲ್ಲಿ ಸಮ್ಮೇಳನದಲ್ಲಿ ಆಹಾರ ಮಂತ್ರಿಗಳು ಈ ತತ್ವವನ್ನು ಒಪ್ಪಿ ನಿರ್ಣಯಿಸಿದ್ದಾರೆ. ಹಾಗಿರುವಾಗ ಇನ್ನಾದರೂ ಕೊಡಗಿನ ಆಡಳಿತ ಜವಾಬ್ದಾರಿ ಹೊತ್ತವರು ಈ ಬಗ್ಗೆ ಆಲೋಚನೆ ಮಾಡಿ ಕೊಡಗಿನ ಬತ್ತದ ಕ್ರಯವನ್ನು ಏರಿಸುವಂತೆಯೂ ಇದರಿಂದ ಕೊಂಡು ಊಟ ಮಾಡುವವರಿಗೆ ತೊಂದರೆಯಾಗದಂತೆ ಸುಲಭ ದರದಲ್ಲಿ ರೇಶನ್ ಡಿಪೋಗಳಲ್ಲಿ ಒಳ್ಳೆ ಅಕ್ಕಿ ದೊರೆಯುವಂತೆಯೂ ಮಾಡುವದು ಕರ್ತವ್ಯವಿದೆ

ವರ್ತಮಾನ.

ಹಾತೂರು ಪ್ರೌಢಶಾಲೆಯ ದ್ವಿತಿಯ ವಾರ್ಷಿಕೋತ್ಸವವು ತಾ. ೨೩-೨-೫೨ ರಲ್ಲಿ ಶ್ರೀ. ಬಿ. ಸೂರ್ಯನಾರಾಯಣರಾವ್ ಇವರ ಅಧ್ಯಕ್ಷತೆಯಲ್ಲಿ ನಡೆದು ಮುಂದಿನ ಮೇ ತಿಂಗಳಲ್ಲಿ ಆರನೇ ಫಾರಂ ತೆರೆಯುವಂತೆ ನಿಶ್ಚಯಿಸಲಾಯಿತು. ಶ್ರೀ. ವಿ. ಎಸ್. ರಾಮಕೃಷ್ಣ ಇವರು 'ಜ್ಞಾನದ ಅವಶ್ಯಕತೆ' ಎಂಬ ವಿಚಾರ ಭಾಷಣ ಮಾಡಿದರು.

ತಾ. ೧-೩-೫೨ ರಲ್ಲಿ ಟಿ. ಶೆಟ್ಟಿಗೇರಿಯಲ್ಲಿ ಒಂದು ಸಾರ್ವಜನಿಕ ಸಭೆಯು ಶ್ರೀ. ಕೊಡಂದೆರ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಟಿ. ಶೆಟ್ಟಿಗೇರಿ ಶಾಲೆಯನ್ನು ಹೈಸ್ಕೂಲಾಗಿ ಮಾಡುವ ಬಗ್ಗೆ ನಿರ್ಣಯ ಮಾಡಿ ನಿಧಿಸಂಗ್ರಹಕ್ಕೂ, ಕಾರ್ಯನಿರ್ವಹಿಸಲಿಕ್ಕೂ ೧೪ ಜನರಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಿರುವರು.

ಶ್ರೀ. ಕಡೇಮಾಡ ಬೆಳ್ಯಪ್ಪನವರು ಟಿ. ಶೆಟ್ಟಿಗೇರಿ ಶಾಲೆಗೆ ಕೊಟ್ಟಿರುವ ಹಾಕಿಕಪ್ಪಿನ ಕಡೇ ಪಂದ್ಯಾಟವು ಜನವರಿ ಕಡೇ ವಾರದಲ್ಲಿ ಪೊನ್ನಂಪೇಟೆ ಮಾಧ್ಯಮಿಕ ಶಾಲಾ ಟೀಮಿಗೂ, ಟಿ. ಶೆಟ್ಟಿಗೇರಿ ಟೀಮಿಗೂ ನಡೆದು ಪೊನ್ನಂಪೇಟೆ ಟೀಮಿನವರು ಜಯಶೀಲರಾಗಿ ಕಪ್ಪನ್ನು ಗೆದ್ದರು. ಗೆದ್ದವರಿಗೆ ಶ್ರೀ. ಕೆ. ಜಿ. ಬೆಳ್ಯಪ್ಪನವರು ಕಪ್ಪನ್ನು ಕೊಟ್ಟರು.

ಮಗ್ಗುಲ ಗ್ರಾಮದ ಶ್ರೀ. ಚೋಕಂಡ ಮಾಚಯ್ಯನವರಲ್ಲಿ ಕಳೆದ ಮೂರುವಾರಗಳಿಂದ ಒಂದು ಬೀಜ ಒಡೆಯದ ಎತ್ತು ಬಂದು ಸೇರಿಕೊಂಡಿರುವದೆಂದೂ ವಾರೀಸುದಾರರು ತಕ್ಕ ರುಜುವಾತಿನಿಂದ ಹೊಡೆದುಕೊಂಡು ಹೋಗಬೇಕೆಂದೂ ತಿಳಿಸುತ್ತಾರೆ.

ಹಿಂದೂದೇಶದ ನೌಕಾಪಡೆಯ ಮುಖ್ಯಾಧಿಕಾರಿಗಳಾದ ಎಡ್ಮಿರಲ್ ಫ್ಲೈಜಿಯವರು ತಾ. ೧೦ ರಲ್ಲಿ ಬಂದು ತಾ. ೧೩ ರವರೆಗೆ ಮಡಿಕೇರಿಯಲ್ಲಿ ಇದ್ದರು. ತಾ. ೧೧ ರಲ್ಲಿ ಅರಮನೆಯ ಎದುರುಗಡೆ ಕೊಡಗಿನ ಬೊಳಕಾಟ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಮೂರನೇ ಅಖಿಲ ಕೊಡಗು ಕೋಳಿಗಳ ಪ್ರದರ್ಶನವು ತಾ. ೨೮-೩-೫೨ ನೇ ಶುಕ್ರವಾರ ಬೆಳಿಗ್ಗೆ ೯ ಗಂಟೆಯಿಂದ ೫-೩೦ ಗಂಟೆಯ ವರೆಗೆ ಮಡಿಕೇರಿಯಲ್ಲಿ ನಡೆಯುವದು. ತರಕಾರಿ ಮತ್ತು ಇತರ ವ್ಯವಸಾಯ ಉತ್ಪತ್ತಿಗಳ ಪ್ರದರ್ಶನವೂ ನಡೆಯುವದು. ಈ ಸಂಭಂದ ಮೈಸೂರು ಜಾನುವಾರು ಇಲಾಖೆಯ ಡೈರೆಕ್ಟರಾದ ಡಾ. ಟಿ. ಎಂ. ನಾರಾಯಣಸ್ವಾಮಿನಾಯುಡುರವರು ಬರುವರು.

ಕೊಡಗಿನ ಹೊಸ ಶಾಸನ ಸಭೆಯ ಉದ್ಘಾಟನೆಯು ಈ ತಿಂಗಳ ಕಡೇ ವಾರದಲ್ಲಿ ನಡೆಯುವದೆಂದೂ ಉದ್ಘಾಟನೆ ಮಾಡಲು ಕೇಂದ್ರ ಸರಕಾರದ ಗೃಹಮಂತ್ರಿಗಳಾದ ಶ್ರೀ. ಕೈಲಾಸನಾಥ ಖಟ್ಜೂರವರು ಬರುವರೆಂದೂ ವಾರ್ತೆ.

ಕೊಡಗಿನ ಬಾಡಿಗೆ ನಿಯಂತ್ರಣ ಕಾನೂನು ೧೫-೩-೫೨ರಿಂದ ಕೊಡಗಿನಲ್ಲಿ ಜಾರಿಗೆ ಬರುವುದು. ಟ್ರೆಜರಿ ಆಫೀಸರರನ್ನು ಕಂಟ್ರೋಲರು ಆಗಿಯೂ, ಅಸಿಸ್ಟೆಂಟ್ ಕಮಿಷನರನ್ನು ಅಪೀಲು ಅಧಿಕಾರಿಯಾಗಿಯೂ ನೇಮಕ ಮಾಡಿರುವರು.

ಡೆರಾಡೂನಿನ ಪ್ರಿನ್ಸ್ ಆಫ್ ವೇಲ್ಸ್ ಮಿಲಿಟರಿ ಕಾಲೇಜಿನ ೧೯೫೨ ಆಗೋಸ್ಟ್ ಟರ್ಮಿನ ತರಬೇತಿಗೆ ಪ್ರವೇಶ ಪರೀಕ್ಷೆಯು ೫-೫-೫೨ರಲ್ಲಿ ಮಡಿಕೇರಿಯಲ್ಲಿ ನಡೆಯುವದು. ೧-೫-೫೨ಕ್ಕೆ ಉಮೇದುವಾರರ ಪ್ರಾಯವು ೧೧ ವರುಷಕ್ಕೆ ಕಡಿಮೆ ಇರಕೂಡದು. ಮತ್ತು ಹನ್ನೆರಡು ವರ್ಷ ವಯಸ್ಸು ಆಗಿರ ಕೂಡದು. ಅರ್ಜಿಯು ೧-೪-೫೨ರ ಒಳಗೆ ಚೀಫ್ ಕಮಿಷನರಿಗೆ ತಲಪಬೇಕು. ಅರ್ಜಿ ಫಾರಂ ಚೀಫ್ ಕಮಿಷನರ ಆಫೀಸಿನಲ್ಲಿ ದೊರಕುವದು. ಹೆಚ್ಚಿನ ವಿಷಯಗಳನ್ನು ಚೀಫ್ ಕಮಿಷನರ ಆಫೀಸಿನಿಂದ ತಿಳಿದು ಕೊಳ್ಳಬಹುದು.

ಡೆಲ್ಲಿ ಸೆಕ್ರಟೆರಿಯೇಟಿನಲ್ಲಿದ್ದ ಶ್ರೀ. ವರ್ಮಾ ಇವರನ್ನು ಚೀಫ್ ಕಮಿಷನರ ಖಾಸಗಿ ಕಾರ್ಯದರ್ಶಿಯಾಗಿಯೂ, ಮದರಾಸಿನ ಹಣಕಾಸಿನ ಇಲಾಖೆಯಲ್ಲಿದ್ದ ಶ್ರೀ ಡೇವಿಸ್ ಎಂಬವರನ್ನು ಕೊಡಗಿನ ಹಣಕಾಸಿನ ಸೆಕ್ರೆಟರಿಯಾಗಿಯೂ ನೇಮಿಸಿದ್ದು ಇವರಿಬ್ಬರೂ ಮಡಿಕೇರಿಗೆ ಬಂದಿರುವರು. ಶೀಘ್ರ ತಮ್ಮ ಕೆಲಸದ ಚಾರ್ಜನ್ನು ವಹಿಸಿಕೊಳ್ಳಲಿದ್ದಾರೆ.

ಹಿಂದೆ ಮೈಸೂರು ಸಿವಿಲ್ ಸರ್ವಿಸಿನವರಾಗಿದ್ದು ಈಗ ಐ. ಎ. ಎಸ್‌ಗೆ ತೆಗೆದುಕೊಳ್ಳಲ್ಪಟ್ಟು ಮಂಡ್ಯ ಜಿಲ್ಲೆಯ ಡಿಪ್ಯೂಟಿ ಕಮಿಷನರಾಗಿರುವ ಶ್ರೀ ನರಸಿಂಹ ಮೂರ್ತಿ ಇವರನ್ನು ಕೊಡಗಿನ ಚೀಫ್ ಸೆಕ್ರೆಟರಿಯಾಗಿ ನೇಮಿಸಲಾಗಿದೆ.

ಕೊಡಗಿನ ಒಬ್ಬ ಮಂತ್ರಿಯಾಗಲಿರುವ ಶ್ರೀ ಕೆ. ಮಲ್ಲಪ್ಪನವರು ಮಡಿಕೇರಿ ಪುರಸಭೆಯ ಅಧ್ಯಕ್ಷತನಕ್ಕೆ ರಾಜಿನಾಮೆ ಕೊಟ್ಟ ಕಾರಣ ಉಪಾಧ್ಯಕ್ಷರಾಗಿದ್ದ ಶ್ರೀ ಮೊಯಿದ್ದೀನ್ ಇವರನ್ನು ಅಧ್ಯಕ್ಷರಾಗಿಯೂ, ಶ್ರೀ ಕೊಡಂದೆರ ಅಪ್ಪಚ್ಚು ಇವರನ್ನು ಉಪಾಧ್ಯಕ್ಷರಾಗಿಯೂ ಆರಿಸಲಾಗಿದೆ.

ಮದ್ರಾಸು ವಿಶ್ವವಿದ್ಯಾಲಯದ ಅಂತರ್ ಕಾಲೇಜು ಹಾಕಿ ಪಂದ್ಯಾಟದಲ್ಲಿ ಜಯಶೀಲರಾದ ಕೊಡಗಿನ ಸರಕಾರಿ ಕಾಲೇಜಿನ ಟೀಮಿನವರಿಗೆ ಮಡಿಕೇರಿ ಪುರ ನಿವಾಸಿಗಳು ತಾ. ೯-೩-೫೨ರಲ್ಲಿ ಒಂದು ಚಹ ಕೂಟವನ್ನೇರ್ಪಡಿಸಿ ಸತ್ಕರಿಸಿದರು.

ಗೌರಮ್ಮ ಮೆಮೋರಿಯಲ್ ಟ್ರಸ್ಟ್.

ಸುಪ್ರಸಿದ್ಧ ಕತೆಗಾರ್ತಿ ದಿವಂಗತ ಶ್ರೀ. ಗೌರಮ್ಮ (ಶ್ರೀಮತಿ ಬಿ. ಟಿ. ಜಿ. ಕೃಷ್ಣ) ರವರ ಜ್ಞಾಪಕಾರ್ಥವಾಗಿ ಮೆಮೋರಿಯಲ್ ಸಮಿತಿಯು ಹಿಂದಿನ ವರ್ಷದಂತೆ ಈ ವರ್ಷವೂ ಒಂದು ಕಥಾ ಸ್ಪರ್ಧೆಯನ್ನೇರ್ಪಡಿಸಿದೆ. ಈ ಸ್ಪರ್ಧೆಗೆ ಕನ್ನಡ ನಾಡಿನ ಎಲ್ಲಾ ಭಾಗಗಳಿಂದ ಸ್ಪರ್ಧೆಗಾರರು ತಮ್ಮ ಕಥೆಗಳನ್ನು ಕಳುಹಿಸಬಹುದು.

ಸ್ಪರ್ಧೆಗಾಗಿ ಮೂರು ಬಹುಮಾನಗಳನ್ನಿಡಲಾಗಿದೆ. ಮೊದಲನೇ ಬಹುಮಾನವು ೨೦ ರೂ., ಎರಡನೇ ಬಹುಮಾನವು ೧೦ ರೂ., ಮೂರನೇ ಬಹುಮಾನವು ೧೦ ರೂ. ಬೆಲೆಯ ಕನ್ನಡ ಪುಸ್ತಕಗಳು. (ಒಂದು ಬಹುಮಾನ ಸ್ತ್ರೀಯರಿಗಾಗಿ ಮೀಸಲಿಡಲಾಗಿದೆ) ಬಹುಮಾನವನ್ನು ಪಡೆದ ಕಥೆಗಳು ಸಮಿತಿಯವರ ಸ್ವತ್ತಾಗುವುವು. ಮೂವರು ಪ್ರಸಿದ್ಧ ಸಾಹಿತಿಗಳಿಂದ ಕೂಡಿದ ಮಂಡಳಿಯೊಂದು ಕಥೆಗಳನ್ನು ಪರೀಕ್ಷಿಸುವುದು.

ಕಥೆಗಳು ಚಿಕ್ಕದಾಗಿದ್ದು ಫುಲ್ಸ್‌ಕೇಪ್ ಕಾಗದದ ಎಂಟು ಪುಟಗಳನ್ನು ಮೀರಕೂಡದು. ಕಾಗದದ ಒಂದೇ ಪಕ್ಕದಲ್ಲಿ ಬರೆದು ಕಳುಹಿಸಬೇಕು. ಸ್ಪರ್ಧೆಗೆ ಬಂದ ಕಥೆಗಳ ಪ್ರತಿಗಳನ್ನು ಹಿಂತಿರುಗಿ ಕಳುಹಿಸಲಾಗುವುದಿಲ್ಲ. ಫಲಿತಾಂಶಗಳನ್ನು ಬಹುಮಾನ ಪಡೆದವರಿಗೆ ಮಾತ್ರ ಕಳುಹಿಸಲಾಗುವುದು. ಉತ್ತರ ಬಯಸುವವರು ಪ್ರತ್ಯೇಕ ಸ್ಟಾಂಪುಗಳನ್ನು ಕಳುಹಿಸಬೇಕು.

ಕಥೆಗಳು ಸ್ವತಂತ್ರವಾಗಿದ್ದು ಇದುವರೆಗೆ ಎಲ್ಲಿಯೂ ಪ್ರಕಟವಾಗಿರಕೂಡದು. ಪರೀಕ್ಷಕರ ನಿರ್ಣಯವೇ ಕಡೆಯದು. ಸಮಿತಿಯವರ ಅಭಿಪ್ರಾಯದಲ್ಲಿ ಕಥೆಗಳು ಬಹುಮಾನ ಪಡೆಯಲು ಅನರ್ಹವಾಗಿದ್ದಲ್ಲಿ ಬಹುಮಾನ ಕೊಡುವುದನ್ನು ನಿಲ್ಲಿಸಲಾಗುವುದು.

ಕಥೆಗಳು ಸಮಿತಿಯ ಕಛೇರಿಗೆ ಇದೇ ಮಾರ್ಚ ತಿಂಗಳ ಅಂತ್ಯದೊಳಗಾಗಿ ತಲಪಬೇಕು. ಕಥೆ ಬರೆದ ಕಾಗದದ ಯಾವ ಭಾಗದಲ್ಲೂ ಲೇಖಕ/ಲೇಖಕಿಯರ ಹೆಸರು ಇರಕೂಡದು. ಪ್ರತ್ಯೇಕ ಕಾಗದದಲ್ಲಿ ಹೆಸರು ವಿಳಾಸಗಳನ್ನು ಕಳುಹಿಸಬೇಕು. ಹೆಚ್ಚಿನ ವಿವರಗಳನ್ನು ಸೆಕ್ರೆಟರಿಯವರ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಗೌರಮ್ಮ ಸ್ಮಾರಕ ಸಮಿತಿ,
C/o ಕಾವೇರಿ ಪ್ರಕಟಣಾಲಯ
ಮಡಿಕೇರಿ, ಕೊಡಗು

ಗ್ರಾಮಾಂತರ ವಿಶ್ವವಿದ್ಯಾಲಯ

ಅಮೇರಿಕೆಯ ಲ್ಯಾಂಡ-ಗ್ರ್ಯಾಂಟ್ ಕಾಲೇಜಿನ ಮಾದರಿಯಲ್ಲಿ ಉತ್ತರ ಪ್ರದೇಶದಲ್ಲಿ ಗ್ರಾಮಾಂತರದ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸಬೇಕೆಂದು ರಾಜ್ಯ ಸರಕಾರವು ವಿಚಾರಿಸುತ್ತಿದೆ. ಅಂಥ ವಿಶ್ವವಿದ್ಯಾಲಯದ ಸ್ಥಾಪನೆಯ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಲು ರಾಜ್ಯ ಸರಕಾರದ ಒಕ್ಕಲುತನ ಶಾಖೆಯ ಕಾರ್ಯದರ್ಶಿಯ ಅಧ್ಯಕ್ಷತೆಯಲ್ಲಿ ಸರಕಾರವು ಐವರ ಸಮಿತಿಯೊಂದನ್ನು ರಚಿಸಿದೆ.

In the matter of Indian Companies Act 1913, and of the Coorg Cloth Merchants Co., Ltd., (In V. Liquidation)

TO.

The Share Holders,

Please take notice that owing to unavoidable reasons the meeting posted to 1-4-'52 is postponed to 1-5-'52.

K. V. GIRI.
V. LIQUIDATOR.

ಓದುಗರ ಓಲೆಗಳು

ಎಂ ಎಲ್. ಎ. ಗಳಿಗೆ ವೇತನ

ಕೊಡಗಿನ ಶಾಸನ ಸಭೆಗೆ ಚುನಾಯಿತರಾದ ಮೆಂಬರುಗಳಿಗೆ ತಿಂಗಳಿಗೆ ರೂ. ೧೨೫ ಕೊಡಬಹುದೆಂದು ಕೊಡಗು ಶಾಸನ ಸಭೆಯಲ್ಲಿ ಬಹುಮತದಲ್ಲಿರುವ ಕಾಂಗ್ರೆಸ್ ಪಕ್ಷದವರು ತಮ್ಮ ಪಾರ್ಟಿ ಮೀಟಿಂಗಿನಲ್ಲಿ ನಿರ್ಣಯಿಸಿರುವರೆಂದು ತಿಳಿದು ಬಂದಿದೆ. ಶಾಸನ ಸಭಾ ಸದಸ್ಯರಿಗೆ ವೇತನ ಕೊಡುವ ಪದ್ಧತಿ ಹೊಸದಲ್ಲ. ಹೊರ ಪ್ರಾಂತಗಳಲ್ಲಿ ಇದು ಜಾರಿಯಲ್ಲಿ ಇದೆ. ಅದರಂತೆಯೇ ಇಲ್ಲಿಯೂ ವೇತನವನ್ನು ನಿಶ್ಚಯಿಸುವ ವಿಚಾರವಾಗಿದೆ. ಆದರೆ ಕೊಡಗಿನಂಥಾ ಚಿಕ್ಕ ಪ್ರದೇಶದಲ್ಲಿ ಈ ವೇತನದ ಆವಶ್ಯಕತೆ ಇದೆಯೇ ಎಂಬ ವಿಚಾರವನ್ನು ಪರಿಶೀಲಿಸಬೇಕು. ಕೊಡಗಿನ ಶಾಸನ ಸಭಾ ಸದಸ್ಯರೆಲ್ಲರೂ ಭೂಮಿ ಕಾಣಿ ಇರುವ ರೈತರ ಮಕ್ಕಳೆನ್ನಬಹುದು. ಆದ್ದರಿಂದ ಅವರ ಜೀವನವು ಈ ವೇತನದಿಂದ ನಡೆಯಬೇಕಾಗಿಲ್ಲ. ಕೊಡಗಿನಲ್ಲಿ ಇತರ ಕಡೆಗಳ ಎಂ. ಎಲ್. ಎ. ಗಳ (ಹೋಂ ರೂಲ್ ಟ್ರಿಬ್ಯೂನ್) ಕಲಹಗಳಂತಾಗಿರ ಬಲ್ಲ. ಏಕೆಂದರೆ ಕೊಡಗು ಶಾಸನ ಸಭೆಯು ಮೀಟಿಂಗು ವರ್ಷಕ್ಕೆ ಎರಡು ಮೂರಕ್ಕಿಂತಾ ಹೆಚ್ಚು ಸೇರದು. ಮೀಟಿಂಗು ಸೇರುವ ಅಧಿಕಾರ ಚೀಫ್ ಕಮಿಷನರಿಗಿದ್ದು ಆರು ತಿಂಗಳುಗಳ ಎಡೆ ಮೀಟಿಂಗು ಮಾಡದೆ ಇರಬಹುದು. ಅಂತರ್ ಶಾಸನ ಧಾರಣಾ ಮಾಡದೆ ಇದ್ದರೆ ಪ್ರಾಂತ ಕೊಡಗು ಶಾಸನ ಸಭೆಯು ವರ್ಷಕ್ಕೆ ಹೆಚ್ಚೆಂದರೆ ನಾಲ್ಕು ಸಲ ಸೇರಬಹುದು. ಪ್ರತಿ ಸಾರಿಯು ಮೀಟಿಂಗು ೧೦. ೧೫ ದಿನಗಳಂತೆ ನಡೆದರೆ ವರ್ಷಕ್ಕೆ ೧೫ ದಿನ ಸಭೆ ನಡೆಯಬಹುದು. ಇದಕ್ಕಾಗಿ ೧೨ ತಿಂಗಳು ವೇತನ ತೆಗೆದುಕೊಳ್ಳುವದು ಸರಿಯಲ್ಲ. ಮೇಲಾಗಿ ಪ್ರತಿನಿಧಿಗಳು ಗ್ರಾಮ ಸುತ್ತುವವರಲ್ಲದೆ ಬೇರೆ ಹಿತಕಾರ್ಯಗಳ ಲ್ಲಿ ನಿರತರಾಗಿಲ್ಲ. ಹಣ ಖರ್ಚುಗಳಂತೂ ಇಲ್ಲ. ಈ ವೇತನವಲ್ಲದೆ ಮೀಟಿಂಗಿಗೆ ಬಂದು ಹೋಗುವ ಪ್ರಯಾಣ ಭತ್ಯ, ದಿನಭತ್ಯ ಇವನ್ನು ಸರಕಾರವು ಕೊಡುವದರಿಂದ ಈ ವೇತನವು ಅನಾವಶ್ಯಕ ಎನಿಸಿಕೊಳ್ಳುವದು. ನಮ್ಮ ಕೊಡಗು ದೇಶದ ರೈತರ ಸ್ಥಿತಿ ಉತ್ತಮವಿಲ್ಲ. ಆದ್ದರಿಂದ ಹೊಸ ಮಂತ್ರಿ ಮಂಡಳವು, ಶಾಸನ ಸಭೆಯೂ ಕೃಷಿ ಕಾರ್ಯವನ್ನು ಉಳಿಸಿ ರೈತರ ಹಿತಕ್ಕಾಗಿ ವಿನಿಯೋಗಿಸಬೇಕು. ಮಂತ್ರಿಗಳು ಮಡಿಕೇರಿಯಲ್ಲೇ ಇರಬೇಕಾದುದರಿಂದ ಅವರಿಗೆ ವೇತನ ಕೊಡುವದು ಯುಕ್ತವಿದೆ. ಆದರೆ ಇತರರು ಜನಹಿತ ದೃಷ್ಟಿಯಿಂದ ವೇತನ ಹೊಂದಿಕೊಳ್ಳಬಾರದು. ವೇತನ ನಿಶ್ಚಯಿಸುವ ಅಧಿಕಾರ ಪ್ರತಿನಿಧಿಗಳ ಕೈಯಲ್ಲೇ ಇರುವದರಿಂದ ಕೊಡಗಿನ ರೈತಾಪಿ ಜನರ ಹಿತ ದೃಷ್ಟಿಯಿಂದ ಪ್ರತಿನಿಧಿಗಳು ಸಂಬಳ ಹೊಂದಿಕೊಳ್ಳದೆ ಜನರ ಸೇವೆ ಮಾಡಿ ಹೊಸ ಆದರ್ಶವನ್ನು ಹಾಕಬೇಕು. ವರ್ಷಕ್ಕೆ ಹತ್ತು ಹದಿನೈದು ದಿನ ಮಡಿಕೇರಿಯಲ್ಲಿ ಕುಳಿತು ತಾವು ಮಾಡುವ ಸೇವೆಯು ದೇಶದ ಹಿತಕ್ಕೆಂದು ಮಾಡಬೇಕು. ಪ್ರತಿನಿಧಿಗಳು ಈ ವಿಚಾರದಲ್ಲಿ ತಗಲುವ ಖರ್ಚನ್ನು ಬಿಟ್ಟುವಾಗಿ ಕೊಡುವ ವಿಚಾರದಿರುವದರಿಂದ ಜನಪ್ರತಿನಿಧಿಗಳು ತಮ್ಮ ಮುಂಬರುವ ಮೀಟಿಂಗಿನಲ್ಲಿ ಸಂಬಳ ಬೇಡವೆಂದು ನಿರ್ಣಯ ಮಾಡಿ ಕೊಡಗಿನ ಬಡ ರೈತರ ಕೃತಜ್ಞತೆಗೆ ಪಾತ್ರರಾಗುವರೆಂದು ನಂಬಲಾಗಿದೆ. ಹಾಗೆ ಮಾಡಿದರೆ ವರ್ಷಕ್ಕೆ ೩೦ ಸಾವಿರ ಹಂದರೆ ೫ ವರ್ಷಗಳಿಗೆ ೧೫೦ ಸಾವಿರ ರೂ. ಉಳಿದು ಇದರಿಂದ ಈ ಪ್ರತಿನಿಧಿಗಳ ಹೆಸರಿನಲ್ಲಿ ದೇಶದ ಹಿತದ ಕೆಲ ಕಾರ್ಯವೊಂದನ್ನು ಸಾಧಿಸಬಹುದಾಗಿದೆ. ನಮ್ಮ ಪ್ರತಿನಿಧಿಗಳು ಈ ವಿಚಾರವಾಗಿ ಆಲೋಚನೆ ಮಾಡುವರೇ?

"ಹಿತೈಷಿ"

ಜನತಾ ಹಿತ ಇಲಾಖೆಗಳಿಗೇ ಈ ನಿರ್ಬಂಧನೇ?

ಹೊಸ ಮಂತ್ರಿ ಮಂಡಳದ ರಚನೆಯಾಗುವ ಕಾರಣಕ್ಕಾಗಿ ಸಾರ್ವಜನಿಕರಲ್ಲಿ ಗೆಜೆಟೆಡ್ ಉದ್ಯೋಗಿಗಳು ಮನೆ ತೆರವು ಮಾಡಬೇಕೆಂದು ನೋಟೀಸು ಕೊಡಲಾಗಿದೆಯೆಂದು ತಿಳಿದು ಬಂದಿದೆ. ಪ್ರಥಮ ನೋಟೀಸು ಸಹಕಾರ ಸಂಘಗಳ ರಿಜಿಸ್ಟ್ರಾರರಿಗೆ ಕೊಡಲ್ಪಟ್ಟಿತು. ಅವರಿರುವ ಮನೆಯನ್ನು ಶೀಘ್ರ ಖಾಲಿ ಮಾಡಬೇಕೆಂದು ಮಡಿಕೇರಿಯಲ್ಲಿ ಮನೆಯೊಂದು ದೊರೆಯದಿರುವಾಗ ಎಲ್ಲಿಗೆ ಹೋಗಬೇಕು? ರಿಜಿಸ್ಟ್ರಾರರು ಮನೆ ಬಿಟ್ಟು ತಮ್ಮ ಮನೆಯ ಸಾಮಾನುಗಳನ್ನೆಲ್ಲಾ ಒಂದು ಮನೆಯ ವರಾಂಡದಲ್ಲಿಟ್ಟು ಒಂದು ಕೋಣೆಯಲ್ಲಿ ಜೀವಿಸುತ್ತಿರುವರೆಂದು ಹೇಳುವವರ ಬಾಯಿಂದ ಕೇಳಿ ಬಹುದು.

ಗೆಜೆಟೆಡ್ ಉದ್ಯೋಗಿಗಳಲ್ಲಿ ಸಿವಿಲ್ ಸರ್ಜನರಿಗೂ ನೋಟೀಸು ಕೊಡಲಾಗಿದೆ. ಅವರು ಇನ್ನೂ ಮನೆ ಬಿಟ್ಟಿಲ್ಲ. ಅನೇಕ ವರ್ಷಗಳಿಂದಲೂ ಅದೇ ಮನೆ ಸಿವಿಲ್ ಸರ್ಜನರುಗಳಿಗೆ ಮೀಸಲು. ಅದಕ್ಕೆ ಸಿವಿಲ್ ಸರ್ಜನರ ಬಂಗ್ಲೆ ಎಂದೇ ಹೆಸರಿದೆ. ಅದನ್ನು ಈಗ ತೆರವು ಮಾಡಬೇಕಂತೆ! ಮತ್ತೆ ಅ. ಕಮೀಷನರೂ ತಮ್ಮ ಮನೆಯನ್ನು ತೆರವು ಮಾಡಬೇಕೆಂದೂ ನೋಟೀಸು ಕೊಡಲಾಗಿದೆಯಂತೆ. ಈ ಮನೆಯಲ್ಲಿ ಸ್ಪೀಕರ್ ಇರುವರಂತೆ! ಮತ್ತೆ ಟ್ರಾಫಿಕ್ ಇನ್ಸ್‌ಪೆಕ್ಟರಿರುವ ಮನೆಗೂ ನೋಟೀಸು ಕೊಟ್ಟಿರುವರು.

ಸರಕಾರದ ಈ ವರ್ತನೆಯನ್ನು ನೋಡುವಾಗ ಜನತಾ ಹಿತವನ್ನು ಸಾಧಿಸುವ ಇಲಾಖಾಧಿಕಾರಿಗಳಿಗೆ ಈ ನೋಟೀಸು ಕೊಟ್ಟಂತೆ ತೋರುತ್ತದೆ. ಸಹಕಾರವು ಜನತಾ ಚಳುವಳಿ. ಅದಕ್ಕೆ ಸಂಬಂಧಿಸಿದ ಅಧಿಕಾರಿಗೆ ಸರಕಾರದ ಕಟ್ಟಡದ ಆವಶ್ಯಕತೆಯಿಲ್ಲ! ಮತ್ತೆ ಸಿವಿಲ್ ಸರ್ಜನರೂ ಜನತಾ ಹಿತ ಸಾಧಿಸುವ ಇಲಾಖಾಧಿಕಾರಿ. ಅವರಿಗೂ ಸರಕಾರಿ ಕಟ್ಟಡ ಬೇಕಿಲ್ಲ! ಅ. ಕಮೀಷನರ ಬಂಗ್ಲೆಯೂ ಸ್ಪೀಕರರಿಗೆ ಬೇಕು. ಈ ಕಟ್ಟಡಗಳಿಗೆ ಜನಪ್ರತಿನಿಧಿಗಳಾದ ಮಂತ್ರಿಗಳೇ ಬರಬಹುದೆಂದು ಹೇಳಿದರೂ ಸ್ಪೀಕರರಿಗೆ ಸರಕಾರಿ ಭವನ ಕೊಡಬೇಕೆಂದು ಎಲ್ಲಿ ಬರೆದಿದೆಯೋ ತಿಳಿಯದು. ಏನಿದ್ದರೂ ಕೂಡ ಕೊಡಗಿನಲ್ಲಿ ಗೆಜೆಟೆಡ್ ಉದ್ಯೋಗಸ್ಥರು ಇವರು ಮೂರು ಜನರೇ. ಫಾರೆಸ್ಟ್ ಅಧಿಕಾರಿ ಇಲ್ಲವೇ? ಇಂಜಿನಿಯರಿಲ್ಲವೇ? ಪೋಲೀಸ್ ಸುಪರಿಂಟೆಂಡೆಂಟರಿಲ್ಲವೇ? ಇವರಿರುವ ಮನೆಗಳ ಮಂತ್ರಿಗಳ ವಾಸಕ್ಕೆ ಸರಿಯಾಗಿಲ್ಲವೇ? ಹಾಗಿದ್ದರೆ ಇವರಲ್ಲಿ ಯಾರಿಗೂ ನೋಟೀಸು ಕೊಡದಿರಲು ಕಾರಣವೇನು? ಸ್ವಲ್ಪ ರಾಜಕೀಯ ಗಾಳಿ ಓಡಾಡುವ ರೈತರೆಲ್ಲರಿಗೂ ಈ ವಿಚಾರವು ಏನೇನೋ ಹೊಳೆಯುತ್ತಿದೆ. ಈ ಪ್ರತೀಕಾರ ಭಾವನೆಯು ಪ್ರಾರಂಭದಲ್ಲೇ ಕಂಡು ಬಂದರೆ ಮುಂದೆ ಹೇಗೆ ಎಂಬ ಸಂಶಯ ತೋರುತ್ತಿದೆ. ಹೇಗೂ ಈಗಲೇ ನಿರ್ಣಯ ಕೊಡುವ ಸ್ಥಿತಿ ಬಂದಿಲ್ಲ. ಇನ್ನೂ ಇವರ ವರ್ತನೆಯನ್ನು ಕಾದು ಪರಿಶೀಲಿಸುತ್ತಿರಬೇಕಾಗಿದೆ.

'C. N.'

"ಸ್ಟೇಟಸಿ"ಗಾಗಿ

ಕೊಡಗಿನ ಮುಂಬರುವ ಮಂತ್ರಿ ಮಂಡಳದಲ್ಲಿ ಸ್ಥಾನ ದೊರೆಯುವ ಭರವಸೆ ಇದ್ದವರೊಬ್ಬರು ತಾನು ವಾಸ ಇರಲು ಇದೇ ಬಂಗ್ಲೆ ಬೇಕೆಂದು ಕೇಳಿ ತ್ತಿದ್ದರಂತೆ. ಆ ಬಂಗ್ಲೆಯನ್ನು ತೆರವು ಮಾಡಲು ಆಜ್ಞೆ ಆಗಿದೆ. ಈ ವರ್ತನೆಯು ಮಂತ್ರಿಯಾಗುವ ನಿಜವಿರಲೀ ಇರದಿರಲಿ ಅಥವ ಆಶ್ಚರ್ಯಕರ ಯಿತು. ಏಕೆಂದರೆ ಕೊಡಗಿನಲ್ಲಿ ಬಹು ಮಂದಿಗೆ ನಿಂತ ಬಂಗ್ಲೆ ಬಂಗ ಪ್ರತಿನಿಧಿಗಳಲ್ಲಿ ಬಹುತೇಕ ಎಲ್ಲರೂ ಸ್ವಂತ ರ ಮಕ್ಕಳೇ. ಅವರು ಯಾವ ರೀತಿ ಜೀವಿಸುತ್ತಿದ್ದರೆಂಬುದು ಎಲ್ಲರಿಗೂ ತಿಳಿದ ವಿಚಾರವೆ. ಮಂತ್ರಿಗಳು ಜೀವನ ನಡೆಸಲು ಮನೆ ದೊರೆಯದು ಎಂಬುದು ಅಸಾಧ್ಯ ಮಾತು. ಅವರು ಭಾಗಗಳಲ್ಲಿ ದೊರೆತ ವ್ಯಾಪಾರವಲ್ಲ.

ಆದ್ದರಿಂದ ಚುನಾಯಿತರಾದವರು ಜನತೆಗೆ ಸೇವೆ ಸಲ್ಲಿಸುವ ದೃಷ್ಟಿಯಿಂದ ವರ್ತಿಸಬೇಕು. ಈ ದೃಷ್ಟಿಯಿಂದ ಒಂದು ವೇಳೆ ಅವರು ಮಡಿಕೇರಿಯಲ್ಲಿರಬೇಕಾದರೂ ಆವಶ್ಯವಾದರೂ ಇಂಥಾದ್ದೇ ಬಂಗ್ಲೆ ಆಗಬೇಕೆನ್ನುವುದರ ಅರ್ಥವೇನು? ಮಂತ್ರಿಯಾಗುವವನೂ ಜನತೆಯೊಳಗಿನ ಒಬ್ಬ ಮನುಷ್ಯನೇ ಅಲ್ಲವೇ? ಅವನಿಗೆ ಸರಕಾರಿ ಬಂಗ್ಲೆ ಏಕೆ? ನಿನ್ನೆಯ ವರೆಗೆ ಹಳ್ಳಿಯಲ್ಲಿ ಎಲ್ಲರಂತೆ ಜೀವಿಸುತ್ತಿದ್ದವರು ಇಂದು ಸಾಹೇಬರುಗಳು ಯುಕ್ತವಲ್ಲವೇ? ಮಂತ್ರಿಗಳು ಇಂಥಾ ಬಂಗ್ಲೆಯಲ್ಲೇ ಇರಬೇಕೆಂಬ ನಿಯಮ ಮಾಡಿದೆಯೇನು? ಬ್ರಿಟಿಷ್ ಕಾಲದ ಈ ಆಡಂಬರದ ಪದ್ಧತಿ ಇನ್ನೂ ಬಿಡದಿರುವುದಕ್ಕೆ ವಿಷಾದಿಸಬೇಕಾಗಿದೆ. ಮಂತ್ರಿಗಳಿಗೂ ದೇಶದ ಸಾಮಾನ್ಯ ಪ್ರಜೆಗೂ ಅಂತರವಿಲ್ಲವೆಂಬುದನ್ನು ಈ ಜನಪ್ರತಿನಿಧಿಗಳು ತೋರಿಸಬೇಕಲ್ಲದೆ ಜನತೆ ಮತ್ತು ತಮ್ಮೊಳಗೆ ಅಂತರವನ್ನು ಕಲ್ಪಿಸುವುದಲ್ಲ. ಆಡಂಬರದ ಬಂಗ್ಲೆ, ಕಾರು, ನೌಕರ ವರ್ಗದ ಸೇವಕರು ಈ ಹಳೇ ಪದ್ಧತಿಯನ್ನು ಮಂತ್ರಿಗಳು ಅನುಸರಿಸಿದರೆ ರೈತನು ಸರಾಗವಾಗಿ ಮಂತ್ರಿಗಳನ್ನು ಕಾಣಲಾರ. ಮಂತ್ರಿಗಳೂ ನಮ್ಮವರಲ್ಲಿ ಒಬ್ಬರು ಎಂಬ ಭಾವನೆಯನ್ನು ತಂದುಕೊಳ್ಳಲಾರ. ಆದ್ದರಿಂದ ಈ ಪ್ರಥಮ ಕಾಂಗ್ರೆಸ್ ಮಂತ್ರಿ ಮಂಡಲವೂ ಪ್ರತಿನಿಧಿಗಳೂ ಉತ್ತಮ ಆದರ್ಶವನ್ನು ಹಾಕುವರಾಗಿ ಆಶಿಸಲಾಗಿದೆ.

M. J.

ಯಾರಿರಬಹುದು?

ಕೊಡಗಿನ ವಿಚಾರದಲ್ಲಿ ಬೊಂಬಾಯಿಯ ಪತ್ರಿಕೆಯೊಂದರಲ್ಲಿ ಪ್ರಕಟವಾದ ಲೇಖನದ ಸಾರಾಂಶವನ್ನು ಒಂದು ವಾರದ ಪತ್ರಿಕೆಯಲ್ಲಿ ಓದಿದೆನು. ಈ ಲೇಖನವು ದೆಹಲಿಯಿಂದ ಸಂಗ್ರಹಿತವಾದುದೆಂದೂ ತಿಳಿದೆನು. ಈ ಲೇಖನದಲ್ಲಿ ಅಡಕವಾಗಿರುವ ವಿಚಾರಗಳನ್ನು ಕೊಡಗಿನವರೇ ಯಾರಾದರೂ ಕೊಟ್ಟಿರಬೇಕು. ದೆಹಲಿಯಲ್ಲಿ ನೆಹರೂ, ಗೋಪಾಲಸ್ವಾಮಿ ಐಯ್ಯಂಗಾರರನ್ನು ಕಂಡು ಕೊಡಗಿನ ಮಂತ್ರಿ ಮಂಡಳದ ರಚನೆಯ ವಿಚಾರದಲ್ಲಿ ಆದ ತೀರ್ಮಾನವೂ ಆ ಬಳಿಕ ನಡೆದ ಘಟನೆಗಳು ಇನ್ನಷ್ಟು ಆಶ್ಚರ್ಯಕ್ಕೆ ಕಾರಣವಾಗಿದೆ. ಕಳೆದ ಸಾರಿ ದೆಹಲಿಯಲ್ಲಿದ್ದ ಕೊಡಗಿನವರೆಂದರೆ ಶ್ರೀ ಚೇರಿಯಮಾಡ ಸಿ. ಎಂ. ಪೂಣಚ್ಚನವರು. ಸರಕಾರದ ಅಧಿಕಾರಿಯಾದ ಚೇರಿಯಮಾಡ ಪೂಣಚ್ಚನವರ ಭೇಟಿಯ ವಿಚಾರವಾಗಲೀ ಕೊಡಗಿನ ಭವಿಷ್ಯದ ವಿಚಾರವಾಗಲೀ ವರ್ತಮಾನ ಪತ್ರಿಕೆಗಳಲ್ಲಿ ಇಲ್ಲ. ಆದ್ದರಿಂದ ಆ ಲೇಖನವು ಶ್ರೀ ಪೂಣಚ್ಚನವರಿಂದಲೇ ಕೊಡಲ್ಪಟ್ಟಿರಬೇಕೆಂದು ಊಹಿಸಬಹುದಾಗಿದೆ. ದೆಹಲಿಯ ಪತ್ರಿಕೆಯವರಿಗೆ ಶ್ರೀ ಪೂಣಚ್ಚನವರು ಇಲ್ಲಿಯ ಮಾಹಿತಿಗಳನ್ನು ಕೊಟ್ಟರು, ಮಂತ್ರಿಮಂಡಳದ ರಚನೆ, ಸಿ. ಐ. ಬೆಳ್ಳಿಯಪ್ಪನವರ ರಾಜಕೀಯ, ಕೊಡಗಿನ ಆಡಳಿತ ವ್ಯವಸ್ಥೆಗೊಳಿಸುವ ವಿಚಾರ ತಿಳಿಸಿರಬಹುದು. ಅವರಿಗೆ ತಿಳಿಸಲು ಅಲ್ಲಿ ಬೇರೆ ಆ ಕ್ಷಣ ಯಾರೂ ಇರಲಾರರು. ಆದ್ದರಿಂದ ಈ ಲೇಖನವು ಶ್ರೀ ಸಿ. ಎಂ. ಪೂಣಚ್ಚನವರಿಂದ ಬಂದುದಾಗಿದೆಯೆಂದು ನಂಬಲು ಅವಕಾಶವಿದೆ. ಹಾಗಿಲ್ಲವಿದ್ದರೆ ಅವರು ಸ್ಪಷ್ಟವಾಗಿ ತಿಳಿಸಬೇಕಿದೆ.

ಆ ಲೇಖನದಲ್ಲಿ ಇರುವ ಎಲ್ಲಾ ವಿಚಾರಗಳ ಬಗ್ಗೆ ಬರೆಯಬೇಕೆನಿಸುತ್ತದೆ. ಕೊಡಗಿನ ಸರಕಾರಿ ಉದ್ಯೋಗಿಗಳು ಕಾಂಗ್ರೆಸಿಗೆ ವಿರುದ್ಧವಿದ್ದಾರೆ. ಆದ್ದರಿಂದ ಕೊಡಗಿನ ಆಡಳಿತ ವ್ಯವಸ್ಥೆಗಾಗಿ ಹೊರಗಿನಿಂದ ಸೆಕ್ರೆಟರಿಗಳನ್ನು ತರಬೇಕಾಗುವದು ಎಂದು ಲೇಖನದಲ್ಲಿದೆ. ಅದರಂತೆ ಈಗಾಗಲೇ ಹೊರಗಿನಿಂದ ಸೆಕ್ರೆಟರಿಗಳ ನೇಮಕವಾದ ವಾರ್ತೆ 'ಹಿಂದೂ' ಪತ್ರಿಕೆಯಲ್ಲಿತ್ತು. ಕೊಡಗಿನ ಸರಕಾರಿ ನೌಕರರು ಕಾಂಗ್ರೆಸ್ಸಿಗೆ ವಿರುದ್ಧ ಮೇದು ಅಭಿಪ್ರಾಯವಿರುವ [illegible] ಹೊರಗಿನಿಂದ ಬರುವ ನಾಲ್ಕು [illegible] ಕೊಡಗಿನ ಆ

ಳಿಕ ನಡೆಸುವರೇ? ಕೊಡಗಿನ ಉದ್ಯೋಗಿಗಳ ಸಹಕಾರವಿಲ್ಲದೆ ಪೂರಾ ಬಂದು ಬಿಡ ಮಾಡಬಹುದು. ಆದ್ದರಿಂದ ಇಂಥ ಒಂದು ಅಭಿಪ್ರಾಯವು ಕೇವಲ ಚಿಕ್ಕ ದೃಷ್ಟಿಯದು. ಕಾಂಗ್ರೆಸ್ ಮಂತ್ರಿಮಂಡಲವು ಕಾರ್ಯ ಪ್ರಾರಂಭಿಸುವಾಗ ಅಧಿಕಾರಿಗಳ ಮೇಲೆ ಅವಿಶ್ವಾಸವಿಟ್ಟುಕೊಂಡು ಮುಂದರಿಯಲು ಸಾಧ್ಯವೇ?

ಮತ್ತೆ ಕೊಡಗಿನ ಮುಖ್ಯಮಂತ್ರಿ ಪೃಥಕ ಹೆಜ್ಜೆಯಾಗಿ ಮೈಸೂರಿನೊಡನೆ ಸೇರಿ ನಂತರ ಕರ್ನಾಟಕದೊಡನೆ ವಿಲೀನವಾಗುವುದರಲ್ಲಿಯೇ ಇದೆಯೆಂದು ಆ ಲೇಖನದಲ್ಲಿ ಹೇಳಲಾಗಿದೆ. ಹಾಗಿದ್ದರೆ ಇವರು ಇಂದಲ್ಲ ನಾಳೆ ಕೊಡಗನ್ನು ಮೈಸೂರಿಗೆ ಸೇರಿಸಲು ತಯಾರಿರುವರೆಂದೂ ಅದಕ್ಕಾಗಿ ಪ್ರಯತ್ನಿಸುವರೆಂಬುದೂ ಸ್ಪಷ್ಟವಾಯಿತಲ್ಲವೇ? P. A. N.

ಕೊಂಡಂಗೇರಿ ದೋಣಿ ಕಡು.

ಕೊಂಡಂಗೇರಿಯಲ್ಲಿ ಕಾವೇರಿ ಹೊಳೆಯ ಎರಡು ದಡಕ್ಕೂ ಇಂಪೀರಿಯಲ್ ರಸ್ತೆಗಳು ಬಂದು ಮುಟ್ಟಿ ಈ ದಾರಿಯು ಪ್ರಾಮುಖ್ಯವಾಗಿದೆ. ಇಲ್ಲಿಗಾಗಿ ಅನೇಕ ಪ್ರಯಾಣಿಕರು, ಶಾಲಾ ಮಕ್ಕಳು, ಸೈಕಲ್‌ಗಳು ದಿನವೂ ದಾಟಬೇಕಾಗಿರುವುದು. ಆದರೆ ಈ ವರ್ಷ ಇಲ್ಲಿಗಾಗಿ ದಾಟುವವರ ಪಾಡೇನಾಯಿತೆಂಬ ಇಲ್ಲಿ ಬರೆಯಲು ವ್ಯವಧಾನವೂ ನಾಚಿಕೆಯೂ ಆಗುವದಲ್ಲದೆ ನಮಗೆ ಸ್ವಾತಂತ್ರ್ಯ ಬಂದಿರುವ ಈ ವೇಳೆಯಲ್ಲಿ ನಮ್ಮ ಸರಕಾರವು ಸಬ ಬಡ ಜನರ ಮೇಲೆ ಇಷ್ಟು ನಿಗವಿಡದಂತೆ ಆಯಿತೇ ಎಂದು ದುಃಖವೂ ಬರುವುದು.

ಪ್ರತಿ ವರ್ಷ ದೋಣಿಯನ್ನು ಕರೆಗೆ ಹಾಕುವ ಸಮಯದಲ್ಲಿ ನದಿಯಲ್ಲಿ ಬರೇ ಒಂದು ಅಡಿಗಿಂತ ಕಡಿಮೆ ನೀರು ಇಳಿದು ದಾಟುವ ಕಡೆಯಲ್ಲಿ ಇರುತಿತ್ತು. ಈ ವರ್ಷವಾದರೋ ಹೊಳೆಯು ದಾರಿ ಬದಲಾಯಿಸಿ ಒಂದೇ ಕಡೆ ಹರಿಯುವದರಿಂದ ಬಹು ಆಳವಾಗಿ ಹರಿಯುವುದಾದರೂ ದೋಣಿಯನ್ನು ಬೂವಾ ಕಾಲಿನಂತೆ ದಡಕ್ಕೆ ಏರಿಸಲಾಯಿತು. ಇಳಿದು ದಾಟುವ ಕಡೆಯಲ್ಲಿ ಒಂದು ಸ್ಥಳದಲ್ಲಿ ಮಾತ್ರ ಸೊಂಟದ ವರೆಗೆ ನೀರು ಇದ್ದುದರಿಂದ ಜನರು ತಮ್ಮ ಬಟ್ಟೆ ಬಿಚ್ಚಿ ಇಲ್ಲಿಗಾಗಿ ದಾಟತೊಡಗಿದರು. ಗಂಡಸರಾದರೂ ಹೀಗೆ ದಾಟಬಹುದು. ಆದರೆ ಮಹಿಳೆಯರು ಸೊಂಟದ ವರೆಗೆ ನೀರಿನಲ್ಲಿ ದಾಟಬೇಕಾದುದು ಕಷ್ಟಕರ. ದೋಣಿ ಕಡುವಿನಲ್ಲಿ ಜನರು ಇರುವ ಸಂದರ್ಭವೇ ಹೆಚ್ಚಾದುದರಿಂದ ಬಟ್ಟೆ ಎತ್ತಿ ಹೋಗಲು ನಾಚಿಕೆಯಿಂದ, ಸರಕಾರದವರನ್ನು ದೂಷಿಸುತ್ತ ಅನೇಕ ಮಹಿಳೆಯರು ಉಟ್ಟ ಬಟ್ಟೆ ಸಮೇತ ನದಿಯನ್ನು ದಾಟುತ್ತಿದ್ದರು. ಶಾಲಾ ಮಕ್ಕಳ ಬಾಧೆಯಂತಿರಲಿ, ಸರಕಾರದವರು ಜನವರಿ ತಿಂಗಳ ೧೫ ರಿಂದ ಮಾರ್ಚ ತಿಂಗಳ ವರೆಗೆ ಏನೊಂದು ಈ ವಿಷಯದಲ್ಲಿ ನಿಗವಿಡದೆ ಕಂಡು ಬಂದದ್ದರಿಂದ ಇದನ್ನು ಸಹಿಸಲಾರದೆ ಮತ್ತು ಮಹಿಳೆಯರ ಮೇಲೆ ಕನಿಕರವಿಟ್ಟು ಕೆಲವು ಹೆಚ್ಚಿನ ಪ್ರಯಾಣಿಕರು ಚಂದಾ ಹಾಕಿ ಹೊಳೆಯ ಮಧ್ಯಕ್ಕಾಗಿ ಬದಿರಿನಿಂದ ಒಂದು ತಾತ್ಕಾಲಿಕ ಸೇತುವೆಯನ್ನು ಮೊನ್ನೆ ತಾನೆ ಹಾಕಿರುವರು. ಇದರ ಮೇಲೆ ಸೈಕಲುಗಳು ಸಹ ಸರಾಗವಾಗಿ ಹೋಗಬಹುದು. ಈ ವ್ಯವಸ್ಥೆ ಮಾಡಲು ತೊಂದರೆ ತೆಗೆದವರಿಗೆಲ್ಲಾ ಭಗವಂತನು ಸಹಾಯ ಮಾಡುವದರಲ್ಲಿ ಏನೊಂದೂ ಸಂದೇಹವಿಲ್ಲ. ಇದನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಬಂದು ನೋಡಿ ವರಿ? ಅನ್ನಾದರೂ ಸರಕಾರದವರು ಇತ್ತ ಕಡೆ ಗಮನ ಕೊಟ್ಟು ಕಾಲವು ಹಾಳಾಗದಂತೆ ಪ್ರೋತ್ಸಾಹಿಸುವರೇ? ಮುಂದಿನ ವರ್ಷಕ್ಕಾದರೂ ಸಮಯಕ್ಕೆ ಸರಿಯಾಗಿ ಸರಿಯಾದ ವ್ಯವಸ್ಥೆ ಮಾಡಲು ಸರಕಾರವು ಮರೆಯದಿರಲಿ 'ಪ್ರಯಾಣಿಕ'

ಮಾಜಿ ಸಿಪಾಯಿಗಳ ವಿವಿಧೋದ್ದೇಶ ಸಹಕಾರ ಸಂಘ.

ಕೊಡಗಿನ ಮಾಜಿ ಸಿಪಾಯಿಗಳು ತಮ್ಮ ಅಭಿವೃದ್ಧಿ ಸಾಧನೆಗಾಗಿ ಬಹು ಉತ್ಸಾಹದಿಂದ ಒಂದು ವಿವಿಧೋದ್ದೇಶ ಸಹಕಾರ ಸಂಘವನ್ನು ಸ್ಥಾಪಿಸಿದರು. ಮೊದಲಿಗೆ ಒಂದು ಬಸ್ಸು ಲೈನನ್ನು ಪ್ರಾರಂಭಿಸಿ, ನಂತರ ಹೆಚ್ಚು ಬಸ್ಸು ಲೈನುಗಳ ನ್ನು ನಡೆಸುವುದು ಹಾಗೂ ಇತರ ಕಾರ್ಯಗಳನ್ನು ನಡೆಸುವುದನ್ನು ಸಂಘವು ಕೈಗೊಳ್ಳಬೇಕೆಂದು ತೀರ್ಮಾನಿಸಿ ಹೆಚ್ಚ ... ಯಾವಾಗಲೂ, ಒಂದು ಬಸ್ಸು ಲೈನಲ್ಲದೆ, ಸಂಘವು ಹೆಚ್ಚಿನ ಯಾವುದೇ ಕಾರ್ಯದಲ್ಲಿ ತೊಡಗಲು ಸಾಧ್ಯವಾಗುವುದಿಲ್ಲ. ಒಂದು ಬಸ್ಸಿನ ಮೇಲ್ವಿಚಾರಣೆಗೆ ಕಾರ್ಯದರ್ಶಿ ಮತ್ತು ಮ್ಯಾನೇಜರೆಂದಿಬ್ಬರಿದ್ದರೂ ಕೆಲಸವು ತೃಪ್ತಿಕರವಾಗಿರುವುದಿಲ್ಲ. ವಿಪರೀತ ಹಣ ಉಳಿದಿದ್ದರೂ ಯೋಗ್ಯವಾದ ಬಸ್ಸನ್ನು ಕೊಂಡುಕೊಳ್ಳಲಾಗಲಿಲ್ಲ. ಬಸ್ಸಿಗೆ ಆಗಿಂದಾಗ್ಗೆ ರಿಪೇರಿಯ ಆವಶ್ಯಕತೆ ಬೀಳುವುದರಿಂದ ಹಣ ನಷ್ಟವಾಗುತ್ತಿದೆ. ಮಾಜಿ ಸಿಪಾಯಿಗಳಿಗೆ ನೌಕರಿಯನ್ನು ದಗಿಸುವುದು ಸಂಘದ ಮುಖ್ಯ ಉದ್ದೇಶವಾದರಿಂದ, ಸಂಘದ ನೌಕರರೆಲ್ಲಾ ಮಾಜಿ ಸಿಪಾಯಿಗಳಾಗಿರಬೇಕಾದದು ಆವಶ್ಯಕ. ತಲಚೇರಿಯಲ್ಲಿ ಏಜೆಂಟಾಗಿದ್ದ ಮಾಜಿ ಸಿಪಾಯಿಯೊಬ್ಬರನ್ನು ಯಾವುದೇ ಕಾರಣವನ್ನು ಕೊಡದೆ ಕೆಲಸದಿಂದ ತೆಗೆದುಹಾಕಿ, ಮಾಜಿ ಸಿಪಾಯಿ ಅಲ್ಲದವರೊಬ್ಬರನ್ನು ನೇಮಕ ಮಾಡಿದ್ದು ಬೊಡ್ಡ ಅನ್ಯಾಯವಾಗಿದೆ. ಮಡಿಕೇರಿಯ ಏಜೆಂಟರನ್ನು ಸಾಕಷ್ಟು ಕಾರಣವಿಲ್ಲದೆ ತೆಗೆದು ಹಾಕಿ ಇನ್ನೊಬ್ಬರನ್ನು ನೇಮಿಸಲಾಗಿದೆ. ನೌಕರಿ ಖಾಲಿಯಿದ್ದರೆ ಅರ್ಜಿ ಮಾಡುವ ಮೊದಲು, ಜಾಹಿರಾತು ಪಡಿಸುವುದು ಅಡಳಿತ ಮಂಡಳಿಯವರ ಆವಶ್ಯಕ ತರ್ತವ್ಯ. ಮೇಲ್ವಿಚಾರಕರೊಬ್ಬರು ಬಸ್ಸು ನೌಕರರೊಡನೆ ಬಹು ಕ್ರೂರ ರೀತಿಯಿಂದ ವರ್ತನೆ ಮಾಡುವರೆಂದೂ ಮತ್ತು ಮೇಲ್ವಿಚಾರಕರಿಂದ ನ್ಯಾಯದೊರಕುವ ಭರವಸೆಯಿಲ್ಲವೆಂದೂ, ನೌಕರರು ನಿರುತ್ಸಾಹದಿಂದ ಉದ್ಯೋಗ ಮಾಡುವುದು ಕಂಡುಬರುತ್ತಿದೆ.

ಸಂಘವನ್ನು ಸುವ್ಯವಸ್ಥೆಯಿಂದ ಹಾಗೂ ನ್ಯಾಯಪೂರ್ವಕವಾಗಿ ನಡೆಸುವ ಜವಾಬ್ದಾರಿ ಎಲ್ಲಾ ಮಾಜಿ ಸಿಪಾಯಿಗಳ ದ್ದಾಗಿರುತ್ತದೆ. ಕಾರ್ಯಕಾರಿ ಮಂಡಳಿಯವರು ಬಹು ಬೇಗನೆ ಸಂಘದ ಮಹಾಸಭೆಯನ್ನು ಕರೆಸಿ ಸರಿಯಾದ ತೀರ್ಮಾನಕ್ಕೆ ಬರಲು ಸಹಾಯಕರಾಗುವರೆಂದು ನಂಬುತ್ತೇನೆ. 'ಒಬ್ಬ ಮಾಜಿ ಸಿಪಾಯಿ.'

ಕಳೆದ ಚುನಾವಣೆಯ

॥ ವಿಹಂಗಮ ನೋಟ. ॥

ಭಾರತದಲ್ಲಿ ಪ್ರೌಢ ಮತದಾನ ಪದ್ಧತಿಯ ಪ್ರಯೋಗ ನಡೆದ ಪ್ರಥಮ ಚುನಾವಣೆಗಳು ಈಗ ಮುಗಿದಿವೆ. ಈ ಚುನಾವಣೆಯಲ್ಲಿ ಸುಮಾರು ಹದಿನೇಳು ಕೋಟಿ ಎಂಭತ್ತು ಲಕ್ಷ ಮತದಾರರು ಭಾಗವಹಿಸ್ಸಿದ್ದರೆಂದೆಣಿಸಲಾಗಿದೆ. ಇಷ್ಟು ದೊಡ್ಡ ಚುನಾವಣೆಯು ಜಗತ್ತಿನ ಬೇರಾವ ರಾಷ್ಟ್ರದಲ್ಲೂ ಇಷ್ಟರ ವರೆಗೆ ನಡೆದಿಲ್ಲ. ಆದ್ದರಿಂದ ಈ ಚುನಾವಣೆಯ ಕಡೆಗೆ ಇಡೀ ಜಗತ್ತಿನ ದೃಷ್ಟಿಯು ಹರಿದಿತ್ತು.

ಈ ಚುನಾವಣೆಯಲ್ಲಿ ೩೫ ಬೇರೆ ಬೇರೆ ರಾಜಕೀಯ ಪಕ್ಷಗಳು ೧೭ ಸಾವಿರ ಹುರಿಯಾಳುಗಳನ್ನು ೨೨ ಪ್ರಾಂತಗಳಲ್ಲಿ ನಿಲ್ಲಿಸಿದ್ದು, ಅವರಲ್ಲಿ ೩,೨೮೩ ಸದಸ್ಯರನ್ನು ಪ್ರಾಂತೀಯ ಶಾಸನ ಸಭೆಗಳಿಗೂ, ೪೮೯ ಸದಸ್ಯರನ್ನು ಪ್ರಜಾ ಪ್ರತಿನಿಧಿ ಸಭೆಗೂ ಆರಿಸಿ ಕಳುಹಿಸುವರು. ಈ ದೃಷ್ಟಿಯಿಂದ ನೋಡಿದರೆ ಜಗತ್ತಿನಲ್ಲಿ ಈ ವರೆಗೆ ನಡೆದ ಚುನಾವಣೆಗಳಲ್ಲಿ ಇಂತಹ ಚುನಾವಣೆಯು ಎಲ್ಲಿಯೂ ನಡೆದಿಲ್ಲವೆಂದು ಹೇಳುವುದರಲ್ಲಿ ಅತಿಶಯೋಕ್ತಿಯಿಲ್ಲ.

೧೯೫೧ ನೇ ಅಕ್ಟೋಬರದಿಂದ ಈ ಚುನಾವಣೆಗಳು ಪ್ರಾರಂಭವಾದವು. ಪ್ರಥಮವಾಗಿ ಅತ್ಯುನ್ನತ ಪರ್ವತ ಶಿಖರವೆಂದು ಖ್ಯಾತಿಗಳಿಸಿದ ಹಿಮಾಲಯದ ಹಿಮಾಚಲ ಪ್ರದೇಶದಿಂದ ಪ್ರಾರಂಭವಾದ ಈ ಚುನಾವಣೆಗಳು ನವೆಂಬರದಲ್ಲಿ ದಕ್ಷಿಣ ಭಾರತದ ಕರಾವಳಿ ಪ್ರಾಂತವಾದ ತಿರುವಾಂಕೂರು-ಕೊಚಿನ್ ಪ್ರಾಂತ್ಯಕ್ಕೆ ಸರಿದು ಆ ಮೇಲೆ ಕ್ರಮವಾಗಿ ವಿಸ್ತಾರ ಹೊಂದುತ್ತ ಜನವರಿ ಸುಮಾರಿಗೆ ಭಾರತದಾದ್ಯಂತ ವಿಸ್ತರಿಸಿಕೊಂಡು ಫೆಬ್ರವರಿ ಅಂತ್ಯದೊಳಗೆ ೧೭,೬೦,೦೦,೦೦೦ ಸ್ತ್ರೀ ಪುರುಷರು ಮತದಾನ ಮಾಡಿದರು. ಅಂತೂ ಈ ಚುನಾವಣೆಗಳು ಸುಮಾರು ೪ ತಿಂಗಳು ಚಿಲ್ಲರೆ ಕಾಲ ನಡೆದುವು.

ಭಾರತದ ೨೨ ಪ್ರಾಂತಗಳ ಶಾಸನ ಸಭೆಗಳ ೩,೨೮೩ ಸ್ಥಾನಗಳಿಗೆ ಹೆಚ್ಚು ಕಡಿಮೆ ಸುಮಾರು ೧೬,೦೦೦ ಹುರಿಯಾಳುಗಳು ಸ್ಪರ್ಧಿಸಿರುವರು. ಅವರಲ್ಲಿ ೩,೨೪೪ ಕಾಂಗ್ರೆಸ್ಸಿಗರು, ೩,೦೦ ಕಮ್ಯೂನಿಸ್ಟರು ಮತ್ತು ಅವರ ಅನುಯಾಯಿ ಪಕ್ಷಗಳ, ೧೩೭ ಸಮಾಜವಾದಿಗಳು, ೭೮ ಪ್ರಜಾ ಪಕ್ಷದವರು, ೩೫ ಜನಸಂಘ, ೧೨ ಪರಿಶಿಷ್ಟ ವರ್ಗಗಳ ಸಂಘ ಮಂಡಳ, ೨೪೩೫ ಸ್ವತಂತ್ರರು, ೨೦೭ ಇತರ ಪಕ್ಷಗಳು ಚುನಾಯಿಸಲ್ಪಟ್ಟಿರುವರು. ಇತರ ಪಕ್ಷಗಳ ವಿವರ ಇಂತಿದೆ. ಬಿಹಾರದಲ್ಲಿರುವ ಝಾರಖಂಡ ಪಕ್ಷ ೩೨, ಜನತಾ ಪಕ್ಷ ೧೩, ಲೋಕ ಸೇವಕ ಸಂಘ ೭, ಮಾರ್ಕ್ಸಿಸ್ಟ್ ಫಾರ್ವರ್ಡ್ ಬ್ಲಾಕ್ ಪಕ್ಷ ೨೨, ಅಕಾಲಿ ಪಕ್ಷ ೩೨, ಕೃಷಿ ಮತ್ತು ಕಾರ್ಮಿಕರ ಪಕ್ಷ ೨೬, ತಮಿಳುನಾಡು ಟಾಯಿಲರ್ಸ್ ಪಕ್ಷ ೧೯, ಸಂಯುಕ್ತ ಸಮಾಜವಾದೀ ಪಕ್ಷ ೮, ಮುಸ್ಲಿಂ ಲೀಗ್ ೫, ಕಾಮನ್‌ವೀಲ್ ಪಕ್ಷ (ಮದರಾಸ) ೬, ತಿರುವಾಂಕೂರು-ತಮಿಳುನಾಡು ಕಾಂಗ್ರೆಸ್ ೮ ಮತ್ತು ಕೊಡಗಿನ ವಿಲಯನ ವಿರೋಧಿ ಗುಂಪು ೯.

ಸುಮಾರು ೪ ತಿಂಗಳೂ ಮಿಕ್ಕಿ ನಡೆದ ಈ ಚುನಾವಣೆಗಳಲ್ಲಿ ೫,೬೦,೦೦೦ ನೌಕರರು ದುಡಿದರು. ಈ ನೌಕರರಲ್ಲಿ ಕೆಲವರು ಮಾತ್ರ ವಿಶೇಷ ತರಬೇತಿ ಪಡೆದವರಿದ್ದು, ಹೆಚ್ಚಿನವರು ಖಾಸಗೀ ಶಾಲಾ ಶಿಕ್ಷಕರು, ಸರಕಾರಿ ನೌಕರರು, ಸ್ಥಾನಿಕ ಸಂಸ್ಥೆಗಳ ನೌಕರರಿದ್ದರು. ಇವರು ೨,೨೪,೦೦೦ ಮತಗಟ್ಟೆಗಳಲ್ಲಿ ಕೆಲಸ ಮಾಡಿರುವರು. ಅವರಲ್ಲಿ ಹೆಚ್ಚಿನವರು ಶಾಸನ ಸಭೆಗಳ ೧೦೩೪೯ ಲಕ್ಷ ಮತಗಳನ್ನು ಪ್ರಜಾಪ್ರತಿನಿಧಿ ಸಭೆಯ ೧೦೭ ೫೭೪ ಲಕ್ಷ ಮತಗಳನ್ನೂ ಎಣಿಸಿದರು.

ಬೇರೆ ಬೇರೆ ಬೇರೆ ಪ್ರಾಂತಗಳ ವಿವಿಧ ಪಕ್ಷದ ಬಲವನ್ನು ಲಕ್ಷಿಸಿದರೆ ಕಾಂಗ್ರೆಸ್ಸಿನ ನಾಯಕ ಪಕ್ಷ ದೊರಕಿ ಸರಕಾರವು ಶಾಸನ ಸಭೆಗೆ ಬಹುಮತವರು ಕನ್ಯಾ ... ಇವರಿಗೆ ... ಕೂರು, ಕೊಚ್ಚಿ, ಮದ್ರಾಸು, ಹೈದರಾಬಾದು ಮತ್ತು ಉತ್ತರ ದೇಶದ ಗಡಿಯಲ್ಲಿಯ 'ಕ' ಪ್ರಾಂತವಾದ ತ್ರಿಪುರಾದಲ್ಲಿ ವಿಶೇಷ ಬಲವು ದೊರೆಯದು. ... ಕೊಚ್ಚಿಯಲ್ಲಿ ಕಮ್ಯೂನಿಸ್ಟರು ಕ್ರಾಂತಿಕಾರೀ ಸಮಾಜವಾದಿ ಪಕ್ಷವೇ ಮೊದಲಾದ ಎಡ ಪಕ್ಷಗಳೊಡನೆ ಸೇರಿ ಕೂಡಿದ ಎಡ ಪಕ್ಷಗಳ ಸಂಯುಕ್ತ ರಂಗವನ್ನು ಏರ್ಪಡಿಸಿ, ೩೨ ಸ್ಥಾನಗಳನ್ನು ... ಮದ್ರಾಸು ಪ್ರಾಂತ್ಯದಲ್ಲಿ ಕಮ್ಯೂನಿಸ್ಟರು ೬೧ ಸ್ಥಾನಗಳನ್ನು ಹೊಂದಿಸಿಕೊಂಡರು. ಹೈದರಾಬಾದಿನಲ್ಲಿ ಸರ್ವತ್ರ ಪ್ರಜಾತಾಂತ್ರಿಕ ರಂಗದ ಸದಸ್ಯರಾಗಿ ಸ್ಪರ್ಧಿಸಿ ೪೨ ಸ್ಥಾನಗಳನ್ನು, ಪಶ್ಚಿಮ ಬಂಗಾಳದಲ್ಲಿ ೩೮ ಸ್ಥಾನಗಳನ್ನು ಹಿಡಿದಿರುವರು.

ಭಾರತ ಸಮಾಜವಾದೀ ಪಕ್ಷವು ಕಾಂಗ್ರೆಸ್ ಹೊರತು ಉಳಿದ ಎಲ್ಲಾ ಪಕ್ಷಗಳಿಗಿಂತ ಹೆಚ್ಚಿಗೆ ಹುರಿಯಾಳುಗಳನ್ನು ನಿಲ್ಲಿಸಿದ್ದು ತೀರಾ ದುರ್ಬಲವಾಯಿತೆಂದು ಕಂಡಿತು. ಈ ಪಕ್ಷವು ಸುಮಾರು ೧೭೨೫ ಹುರಿಯಾಳುಗಳನ್ನು ಪ್ರಾಂತೀಕ ಶಾಸನ ಸಭೆ ಹಾಗೂ ಪ್ರಜಾಪ್ರತಿನಿಧಿ ಸಭೆಗೆ ನಿಲ್ಲಿಸಿದ್ದು ಅವರಲ್ಲಿ ಬರೇ ೧೩೭ ಜನರು ಯಶಸ್ಸನ್ನು ಗಳಿಸಿರುವರು. ಸಮಾಜವಾದಿ ಪಕ್ಷದ ಸರ್ವಸೇನಾನಿಯಾದ ಶ್ರೀ ಜಯಪ್ರಕಾಶರ ಊರು ಮನೆಯಾದ ಬಿಹಾರದಲ್ಲಿ ಸಮಾಜವಾದಿಗಳು ಹೆಚ್ಚಿನ ಸ್ಥಾನಗಳನ್ನು ಗಳಿಸಲು ಸಮರ್ಥರಾದರು. ಅಲ್ಲಿಯ ಶಾಸನಸಭೆಯ ೩೩೦ ಸ್ಥಳಗಳಲ್ಲಿ ಸಮಾಜವಾದಿಗಳು ೨೬೪ ಸ್ಥಳಗಳಿಗೆ ಸ್ಪರ್ಧಿಸಿದ್ದು ಅವರಲ್ಲಿ ೨೩ ಸ್ಥಳಗಳನ್ನು ಗಳಿಸಿರುವರು. ಅವರಿಗೆ ಉಳಿದ ಪ್ರಾಂತಗಳಲ್ಲಿ ದೊರಕಿದ ಸ್ಥಳಗಳು ಇಂತಿವೆ: ಉತ್ತರ ಪ್ರದೇಶ ೧೯, ಮದ್ರಾಸು ೧೩, ತಿರುವಾಂಕೂರ್-ಕೊಚಿನ್ ೧೨, ಮಧ್ಯಪ್ರದೇಶ ೧೨, ಹೈದರಾಬಾದು ೧, ಒರಿಸ್ಸಾ ೧೦ ಮತ್ತು ಮುಂಬಯಿ ೯.

ಆಚಾರ್ಯ ಕೃಪಲಾನಿಯವರ ಪ್ರಜಾ ಪಕ್ಷವು ೯೪೫ ಸ್ಥಾನಗಳಿಗೆ ಸ್ಪರ್ಧಿಸಿದ್ದು ೭೮ ಸ್ಥಾನಗಳನ್ನು ಪಡೆಯಿತು. ಡಾ. ಶ್ಯಾಮ ಪ್ರಸಾದ ಮುಖರ್ಜಿಯವರ ಜನಸಂಘವು ೭೪೩ ಸ್ಥಳಗಳಿಗೆಸ್ಪರ್ಧಿಸಿ ೩೫ ಸ್ಥಳಗಳನ್ನು ಪಡೆದುಕೊಂಡಿತು.

ಅಂಚೆ ಇಲಾಖೆಯ ವ್ಯವಸ್ಥೆ.

ಅದರ ನಾನಾ ಬಗೆಯ ಕೆಲಸ ಕಾರ್ಯಗಳು.

ಲೇ:—ಮೇಜರ್ ಸಿ. ವಿ. ರಾಜನ್, ಪೋಸ್ಟ್‌ಮಾಸ್ಟರ್–ಜನರಲ್, ಮದರಾಸು.

ಅಂಚೆ ಮತ್ತು ತಂತಿ ಇಲಾಖೆಯ ಮುಖ್ಯಸ್ಥರು ಅಂಚೆ ಮತ್ತು ತಂತಿ ಡೈರೆಕ್ಟರ್ ಜನರಲ್‌ರು. ಅವರಿಗೆ ಸಹಾಯಕವಾಗಿ ಅಂಚೆ ಮತ್ತು ತಂತಿ ಬೋರ್ಡೊಂದಿದೆ. ಅವರೇ ಅದರ ಅಧ್ಯಕ್ಷರು. ಅಲ್ಲದೆ ಈ ಬೋರ್ಡಿನಲ್ಲಿ ಹಣಕಾಸಿನ ಇಲಾಖೆ ಪ್ರತಿನಿಧಿಯಾಗಿ ಜಾಯಿಂಟ್ ಸೆಕ್ರೆಟರಿಯೂ ಪೋಸ್ಟಲ್ ವಿಭಾಗದ ಪ್ರತಿನಿಧಿಯಾಗಿ ಡೆಪ್ಯುಟಿ ಡೈರೆಕ್ಟರೂ, ಟೆಲಿಗ್ರಾಫ್ ಮತ್ತು ಟೆಲಿಫೋನ್ ಶಾಖೆಗಳ ಪರ ಚೀಫ್ ಎಂಜಿನಿಯರೂ ಇದ್ದಾರೆ.

ಆಯವ್ಯಯ.

ಈ ವಿಭಾಗದ ಪ್ರಕೃತ ವರ್ಷದ ಒಟ್ಟು ಆದಾಯ ೨೬.೪೬ ಕೋಟಿ ರೂ. ಮತ್ತು ಕಾರ್ಯನಿರತ ವೆಚ್ಚ ೨೪.೪೬ ಕೋಟಿ ರೂ ಗಳು. ಇದರಿಂದ ಈ ಬಾರಿ ಸುಮಾರು ೨ ಕೋಟಿ ರೂ. ನಫೆ ಬರುವ ಸಂಭವವಿದೆ. ಮದ್ರಾಸ್ ಸರ್ಕಲಿನಲ್ಲೇ ಈ ವರ್ಷ ೬.೬ ಕೋಟಿ ರೂ. ಆದಾಯ ಮತ್ತು ೫.೮ ಕೋಟಿ ರೂ. ಗಳ ಖರ್ಚು ಇವೆ. ಇಲಾಖೆಯ ಹಣಕಾಸು ಭಾರತ ಸರ್ಕಾರದ ಜನರಲ್ ರೆವಿನ್ಯೂವಿನ ಒಂದು ಭಾಗವಾಗಿದೆ. ನಫೆಯಲ್ಲಿ ಶೇ|೫೦ ರಷ್ಟನ್ನು ಈ ಜನರಲ್ ರೆವಿನ್ಯೂಗೆ ಕೊಟ್ಟು ಉಳಿದುದನ್ನು ಇಲಾಖೆಯ ಕಾದಿರಿಸಲ್ಪಟ್ಟಿರಲಾಗುವುದು.

ಆಡಳಿತ.

ದೇಶವನ್ನು ೯ ಸರ್ಕಲ್ಲುಗಳಾಗಿ ಮತ್ತು ೪ ಟೆಲಿಫೋನ್ ಜಿಲ್ಲೆಗಳಾಗಿ ವಿಂಗಡಿಸಲಾಗಿದೆ. ಪ್ರಾಂತಗಳಿಗನುಗುಣವಾಗಿ ಸರ್ಕಲ್ಲುಗಳನ್ನು ವ್ಯವಸ್ಥೆಮಾಡಲಾಗಿದೆ. ಬೊಂಬಾಯಿ, ಮದರಾಸ್, ಕಲ್ಕತ್ತ ಮತ್ತು ದೆಹಲಿಗಳಲ್ಲಿರುವ ಟೆಲಿಫೋನ್ ವ್ಯವಸ್ಥೆಗಳಿಗೆ ಟೆಲಿಫೋನ್ ಜಿಲ್ಲೆಗಳೆಂದು ಕರೆಯಲಾಗಿದ್ದು ಅವುಗಳ ಆಡಳಿತ ನೇರವಾಗಿ ಅಂಚೆ ಮತ್ತು ಟೆಲಿಗ್ರಾಫ್ಸ್ ಡೈರೆಕ್ಟರ್ ಜನರಲ್‌ರಿಗೇ ಸೇರಿದೆ. ಮದ್ರಾಸ್ ಸರ್ಕಲಿನಲ್ಲಿ ಮದ್ರಾಸ್, ಮೈಸೂರು, ಮಡಿಕೇರಿ ಮತ್ತು ತಿರುವಾಂಕೂರು–ಕೊಚ್ಚಿನ್ ಪ್ರಾಂತಗಳು ಸೇರಿವೆ. ಇವುಗಳಲ್ಲಿ ಹೈದರಾಬಾದಿಗೆ ತುಸು ಹೆಚ್ಚು ಸ್ವಾತಂತ್ರ್ಯವಿದೆ. ಮದರಾಸ್, ಮೈಸೂರು, ತಿರುವಾಂಕೂರು ಕೊಚ್ಚಿ ಮತ್ತು ಮಡಿಕೇರಿ ಇವನ್ನು ೨೭ ಯುನಿಟ್ಟುಗಳಾಗಿ ವಿಂಗಡಿಸಿದ್ದು ಒಟ್ಟು ೪೪ ಸಾವಿರ ಮಂದಿ ನೌಕರರಿದ್ದಾರೆ. ಈ ಸರ್ಕಲಿನ ಆಡಳಿತ ೯೮ ಮಂದಿ ಗೆಜೆಟೆಡ್ ಅಧಿಕಾರಿಗಳಿಗಿದೆ. ಭಾರತದಲ್ಲಿ ಒಟ್ಟು ಅಂಚೆ ನೌಕರರ ಸಂಖ್ಯೆ ೧,೬೫,೦೦೦. ಅವರಲ್ಲಿ ೮೩೬ ಮಂದಿ ಗೆಜೆಟೆಡ್ ಅಧಿಕಾರಿಗಳು.

ವರ್ಷಕ್ಕೆ ೨೨೦ ಕೋಟಿ ಅಂಚೆ ವಸ್ತುಗಳು.

ಭಾರತದಲ್ಲಿ ವರ್ಷಕ್ಕೆ ಸುಮಾರು ೨೨೦ ಕೋಟಿ ಅಂಚೆ ವಸ್ತುಗಳು ನಿರ್ವಹಿಸಲ್ಪಡುತ್ತವೆ. ಮದ್ರಾಸ್ ಸರ್ಕಲಿನಲ್ಲಿ ಅದು ಸುಮಾರು ದಿನಕ್ಕೆ ೧೫ ಲಕ್ಷ.

ಬೆಂಗಳೂರಿನಲ್ಲಿ.

ಬೆಂಗಳೂರು ನಗರದಲ್ಲೇ ಪ್ರತಿ ದಿನವೂ ಡೆಲಿವರಿಗಾಗಿ ೯ ಲಕ್ಷ ಕಾಗದಗಳೂ 'ಡಿಸ್ಪೆಚ್'ಗಾಗಿ ೧ ಲಕ್ಷ ಕಾಗದಗಳೂ ಬರುತ್ತವೆ. ಸ್ವೀಕೃತ ಕಾಗದಗಳಲ್ಲಿ ೧೫ ಸಾವಿರ ವಿಮಾನದಲ್ಲಿ ಬರುವುವು. ಇಲ್ಲಿಂದ ಪೋಸ್ಟ್ ಮಾಡಿದ ಕಾಗದಗಳಲ್ಲಿ ೨೩ ಸಾವಿರ ವಿಮಾನದಲ್ಲಿ ಹೋಗುವುವು. ಬೆಂಗಳೂರಿನಲ್ಲಿ ಪ್ರತಿ ದಿನವೂ ೪ ಸಾವಿರ ರಿಜಿಸ್ಟರ್ಡ್ ವಸ್ತುಗಳು ಸ್ವೀಕರಿಸಲ್ಪಟ್ಟು, ೨,೬೦೦ ಮನಿಯಾರ್ಡರ್‌ಗಳ ಹಣ ಕೊಡಲಾಗುತ್ತೆ. ೭೫ ಸಾವಿರ ರೂ. ಬೆಲೆಯ ೩ ಸಾವಿರ ಮನಿಯಾರ್ಡರುಗಳು 'ಬುಕ್' ಆಗುವುವು. ವಾರದ ದಿನಗಳಲ್ಲಿ ೨೫೦ ಎಕ್ಸ್‌ಪ್ರೆಸ್ ಡೆಲಿವರಿ ಕಾಗದಗಳನ್ನು ಡೆಲಿವರಿ ಮಾಡಲಾಗುವುದು. ಭಾನುವಾರಗಳಲ್ಲಿ ಈ ಸಂಖ್ಯೆ ೧ ಸಾವಿರಕ್ಕೇರುವುದು. ಪ್ರತಿ ದಿನವೂ ಸರಾಸರಿ ೪,೫೦೦ ರೂ ಬೆಲೆಯ ಸ್ಟ್ಯಾಂಪುಗಳ ಮಾರಾಟವಾಗುವುದು.

ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವ ನೌಕರರು ಒಟ್ಟು ೧೫೪೮ ಮಂದಿ. ಅವರಲ್ಲಿ ೧೦೩೨ ಮಂದಿ ಅಂಚೆ ವಿಭಾಗದಲ್ಲೂ ೩೨೩ ಮಂದಿ ಟೆಲಿಫೋನ್ ವಿಭಾಗದಲ್ಲೂ ಕೆಲಸ ಮಾಡುವರು.

ಬೆಂಗಳೂರಿನಲ್ಲಿ ಪ್ರತಿ ದಿನ ಸುಮಾರು ೮೦೦ ಟೆಲಿಗ್ರಾಂಗಳನ್ನು ಸ್ವೀಕರಿಸಿ, ೭೦೦ ಟೆಲಿಗ್ರಾಂಗಳನ್ನು ಇಲ್ಲಿಂದ ಕಳಿಸಲಾಗುವುದು. ಒಟ್ಟು ಅಂಚೆ ಕಾಗದ ಪತ್ರ ವಸ್ತುಗಳಲ್ಲಿ ಶೇಕಡ ೨೭ ರಷ್ಟನ್ನು ವಿಮಾನ ಸರ್ವಿಸ್ ಮೂಲಕ ತೆಗೆದುಕೊಂಡು ಹೋಗಲಾಗುವುದು.

ಭಾರತದಲ್ಲಿ ೩೨ ಸಾವಿರ ಪೋಸ್ಟಾಫೀಸುಗಳು.

ಭಾರತದ ದ್ಯಂತ ೩೨ ಸಾವಿರಕ್ಕೂ ಹೆಚ್ಚು ಪೋಸ್ಟಾಫೀಸುಗಳಿವೆ. ಮದರಾಸ್ ಪ್ರಾಂತದಲ್ಲಿ ೧೦,೫೬೩ ಇವೆ. ಭಾರತದಲ್ಲಿನ ಟೆಲಿಗ್ರಾಫ್ ಆಫೀಸುಗಳ ಸಂಖ್ಯೆ ೩೪೦೦. ಮೈಸೂರು ಸಂಸ್ಥಾನದಲ್ಲೇ ೭೯೬ ಪೋಸ್ಟಾಫೀಸುಗಳೂ, ೧೨೦ ಟೆಲಿಗ್ರಾಫ್ ಆಫೀಸುಗಳೂ ಇವೆ. ಇನ್ನೂ ೧೭ ಟೆಲಿಗ್ರಾಫ್ ಆಫೀಸುಗಳನ್ನು ತೆರೆಯುವ ನಿರೀಕ್ಷೆಯಿದೆ. ಬೆಂಗಳೂರಿನಲ್ಲಿ ೩೫ ಪೋಸ್ಟಾಫೀಸುಗಳಿವೆ.

ಟೆಲಿಫೋನ್‌ಗಳು.

ಭಾರತದಲ್ಲಿ ಸುಮಾರು ೪೦೦ ಟೆಲಿಫೋನ್ ಎಕ್ಸ್‌ಚೇಂಜ್‌ಗಳಿದ್ದು, ೧,೫೦,೦೦೦ ಕನೆಕ್ಷನ್‌ಗಳಿವೆ. ಮದರಾಸ್ ಪ್ರಾಂತ್ಯದಲ್ಲೇ ೧೦೪ ಎಕ್ಸ್‌ಚೇಂಜ್‌ಗಳಿವೆ.

ಬೆಂಗಳೂರಿನಲ್ಲಿನ ೨ ಎಕ್ಸ್‌ಚೇಂಜ್‌ಗಳಲ್ಲಿ ೨,೯೦೦ ಕನೆಕ್ಷನ್‌ಗಳಿವೆ. ಅಲ್ಲದೆ ಈ ವ್ಯವಸ್ಥೆಯ ವಿಸ್ತರಣಕಾರ್ಯವೂ ಜರುಗುತ್ತಿದೆ.

ಮೈಸೂರಿನಲ್ಲಿ ೮೦೦ ಲೈನ್‌ಗಳ ಎಕ್ಸ್‌ಚೇಂಜೊಂದಿದೆ. ೬೦೦ ಲೈನ್‌ಗಳ ನೂತನ ಎಕ್ಸ್‌ಚೇಂಜೊಂದನ್ನು ಕಟ್ಟಲಾಗುತ್ತಿದೆ. ಇನ್ನು ಕೆಲವೇ ತಿಂಗಳುಗಳಲ್ಲಿ ಅದೂ ಸಿದ್ಧವಾಗುವುದು.

ಬೆಂಗಳೂರು, ಮೈಸೂರುಗಳಲ್ಲಿನ ಈ ವ್ಯವಸ್ಥೆಯ ಜೊತೆಗೆ, ಇನ್ನೂ ೧೫೦೦ ಕನೆಕ್ಷನ್‌ಗಳ ನೂತನ ಎಕ್ಸ್‌ಚೇಂಜ್‌ಗಳನ್ನು ತೆರೆಯುವ ಆಲೋಚನೆಯೂ ಇದೆ.

ಕೆಲ ತಿಂಗಳುಗಳ ಹಿಂದೆ ಸಂಗ್ರಹವಾದ ಅಂಕಿ ಅಂಶಗಳಂತೆ ಭಾರತದಾದ್ಯಂತ ಒಟ್ಟು ೮೭೦ 'ಪಬ್ಲಿಕ್ ಕಾಲ್' ಆಫೀಸುಗಳಿವೆಯೆಂದು ಗೊತ್ತಾಗಿದೆ. ಮದ್ರಾಸ್ ಸರ್ಕಲಿನಲ್ಲಿ ೧೬೨ 'ಲಾಂಗ್ ಡಿಸ್ಟನ್ಸ್ ಪಬ್ಲಿಕ್ ಕಾಲ್ ಆಫೀಸ್'ಗಳೂ ೧೫೫ ಲೋಕಲ್ ಪಬ್ಲಿಕ್ ಕಾಲ್ ಆಫೀಸುಗಳೂ ಇವೆ. ಇನ್ನೂ ಕೆಲವನ್ನು ತೆರೆಯುವ ನಿರೀಕ್ಷೆಯಿದೆ.

ಬೆಂಗಳೂರಿನಲ್ಲಿ ೧೧ ಲೋಕಲ್ ಪಬ್ಲಿಕ್ ಕಾಲ್ ಆಫೀಸುಗಳಿವೆ. ಮೈಸೂರಿನಲ್ಲಿ ಒಂದಿದೆ; ಚಿತ್ರದುರ್ಗ, ಮಂಡ್ಯ, ತುಮಕೂರು, ಮತ್ತು ಕೋಲಾರಗಳಲ್ಲೂ ತೆರೆಯುವ ಸಂಭವವಿದೆ.

ಡಿ. ಎಲ್. ಓ. ಗಳು.

'ಡೆಡ್ ಲೆಟರ್' ಆಫೀಸುಗಳ ಬಗ್ಗೆ ಸಾರ್ವಜನಿಕರಿಗೆ ಹೆಚ್ಚಾಗಿ ತಿಳಿಯದೆಂದೇ ಹೇಳಬೇಕು. ಹೆಸರೇನೋ ತುಸು ಅಪಲಕ್ಷಣವಾಗಿ ಕಂಡರೂ, ಈ ಆಫೀಸು ಜನರಿಗೆ ಅತಿ ಉಪಯುಕ್ತ ಸೇವೆಯೆಸಗುತ್ತಿದೆ. ಅಮೃತಸರ, ಬೊಂಬಾಯಿ, ಕಲ್ಕತ್ತ, ಲಕ್ನೋ, ನಾಗಪುರ, ಪಾಟ್ನಾ, ಹೈದರಾಬಾದ್ ಮತ್ತು ಮದ್ರಾಸ್‌ಗಳಲ್ಲಿ ೮ ಡೆಡ್‌ಲೆಟರ್ ಆಫೀಸುಗಳಿವೆ. ಇವುಗಳಲ್ಲಿ ಮದ್ರಾಸ್ ಡಿ. ಎಲ್. ಓ. ಒಂದೇ ದಿನಕ್ಕೆ ೬ ಸಾವಿರ ಕಾಗದ ಪತ್ರಗಳೊಡನೆ ವ್ಯವಹರಿಸುತ್ತದೆ. ಈ ಆಫೀಸಿಗೆ ತಲುಪುವ ವಿಳಾಸಗಳಂತೂ ತುಂಬಾ ವಿಚಿತ್ರವಾಗಿರುತ್ತೆ! ೭೦ ಮಂದಿ ಗುಮಾಸ್ತರು ಈ ಕಚೇರಿಯಲ್ಲಿ ಕಾರ್ಯನಿರತರಾಗಿದ್ದು, ಸಾಧ್ಯವಾದಷ್ಟು ಮಟ್ಟಿಗೆ ಕಾಗದಗಳು ವಿಳಾಸದಾರರಿಗೆ ತಲುಪುವಂತೆ ಯತ್ನಿಸುತ್ತಾರೆ. ಈ ಕಚೇರಿಯಲ್ಲಿ ೫ ಲಕ್ಷ ರೂ. ಗಳ ಬೆಲೆಯ ಸಾಮಾನುಗಳನ್ನೂ ನಿರ್ವಹಿಸಲಾಗುವುದೆಂದರೆ ಆಶ್ಚರ್ಯವಾಗುವುದು.

ಇದಲ್ಲದೆ, ನಾನಾ ಭಾಷೆಗಳಲ್ಲಿನ ವಿಳಾಸಗಳ ಕಾಗದಗಳೊಡನೆ ವ್ಯವಹರಿಸಲು ಮದರಾಸಿನಲ್ಲಿ ಒಂದು 'ಟ್ರಾನ್ಸ್‌ಕ್ರಿಪ್ಷನ್' ಕೇಂದ್ರವೂ ಇದ್ದು, ಅಲ್ಲಿಗೆ ದಿನವೂ ಸುಮಾರು ೨೫೦೦ ಕಾಗದಗಳು ಬರುವುವು.

ವಂಚನೆ ನಷ್ಟ....

ಅಂಚೆ ಇಲಾಖೆ ಕಾರ್ಯಕ್ಷೇತ್ರಗಳು, ನಷ್ಟಗಳಿಂದಲೂ ವಿಮುಕ್ತವಾಗಿಲ್ಲ. ಒಟ್ಟು ಭಾರತದಲ್ಲಿ ಈ ಇಲಾಖೆಯ ವ್ಯವಹಾರ ಸುಮಾರು ೫೦೦ ಕೋಟಿ ರೂ. ಗಳನ್ನೊಳಗೊಂಡಿದೆ, ಮದರಾಸಿನದೇ ೧೫೦ ಕೋಟಿ ರೂ. ಕಳೆದ ವರ್ಷ ಭಾರತದಾದ್ಯಂತ ೫೩೮ ಮಂದಿಯನ್ನೊಳಗೊಂಡು, ೭ ಲಕ್ಷ ರೂ. ಈ ರೀತಿ ನಷ್ಟಗೊಳಗಾಗಿದೆ. ಮದರಾಸಿನಲ್ಲಿ ಈ ರೀತಿಯ ನಷ್ಟ ೩೨ ಸಾವಿರ ರೂ. ಗಳು.

ಸರ್ಕಾರದ ನೀತಿಯಂತೆ ೨ ಸಾವಿರಕ್ಕೂ ಹೆಚ್ಚು ಪ್ರಜಾ ಸಂಖ್ಯೆಯಿರುವ ಎಲ್ಲಾ ಹಳ್ಳಿಗಳಿಗೂ ಒಂದೊಂದು ಪೋಸ್ಟಾಫೀಸನ್ನು ಕೊಡಬೇಕು. ಈ ರೀತಿ ಈಗಾಗಲೇ ೧೯೪೧ ರ ಜನಗಣತಿಯಂತೆ ೪೫೬೦ ಪೋಸ್ಟಾಫೀಸುಗಳನ್ನು ತೆರೆದಿದೆ. ೧೯೫೧ ಜನಗಣತಿಯ ಮೇರೆ ಈ ಸೌಕರ್ಯವನ್ನು ಇನ್ನೂ ೧೮೦೭ ಹಳ್ಳಿಗಳಿಗೆ ದೊರಕುವುವು. ಅಲ್ಲದೆ ಈ ಯೋಜನೆ ಮೇರೆ ಮೈಸೂರು ಸಂಸ್ಥಾನಕ್ಕೆ ೫೪ ಪೋಸ್ಟಾಫೀಸುಗಳು ಹೆಚ್ಚಿಗೆ ದೊರೆಯುವುವು.

ಕೆಲವು ಅಪರಿಚಿತ ಸೌಕರ್ಯಗಳು!

ಅಂಚೆ ಇಲಾಖೆಯ ಕೆಲವೊಂದು ಸೌಕರ್ಯಗಳ ಪರಿಚಯ ಸಾರ್ವಜನಿಕರಿಗೆ ಅಷ್ಟಾಗಿ ಇದ್ದಂತೆ ತೋರುವುದಿಲ್ಲ. 'ಲಕ್ಸುರಿ' ಟೆಲಿಗ್ರಾಂಗಳು ಜನರಿಗೆ ಅಪರಿಚಿತವೇನೋ ಹೇಳಬೇಕು. ಅಕ್ಷರಗಳ, ಮರಣ ಮುಂತಾದ ಮಾನವ ಜೀವನಕ್ಕೆ ಸಂಬಂಧಿಸಿದಂತಹ ಖಾಸಗಿ ಟೆಲಿಗ್ರಾಂಗಳು ಜನರಿಗೆ ದೊರೆಯುವುವು. ಅದಕ್ಕೂ 'ಇನ್‌ಲ್ಯಾಂಡ್ ಎಕ್ಸ್‌ಪ್ರೆಸ್' ದರಗಳೇ. ಅಲ್ಲದೆ ಅವುಗಳನ್ನು ಕಳಿಸುವುದರಲ್ಲೂ ಪ್ರಾಮುಖ್ಯತೆ ಕೊಟ್ಟು ಶೀಘ್ರವಾಗಿ ತಲುಪುವಂತೆ ಮಾಡಲಾಗುವುದು.

ಇನ್ನೊಂದು ಸೌಕರ್ಯವೆಂದರೆ 'ಪರಿಚಯ' (ಐಡೆಂಟಿಟಿ) ಕಾರ್ಡುಗಳು, ಯಾತ್ರೆ ಹೋಗುವವರಿಗೂ ಸದಾ ಸ್ಥಳಾಂತರ ಹೊಂದುವವರಿಗೂ ಇದು ಬಹು ಉಪಯುಕ್ತವಾಗಿರುತ್ತದೆ. ಈ ಕಾರ್ಡು ಹೊಂದಿರುವವರು ಒಂದು ಪೋಸ್ಟಾಫೀಸಿನಲ್ಲಿ ಆ ಕಚೇರಿಗೆ ಗುರುತಿರುವವರೊಬ್ಬರಿಂದ ಗುರುತಿಸಲ್ಪಡುವ ತೊಂದರೆಯಿಲ್ಲದೆ ವ್ಯವಹರಿಸಬಹುದು. ಈ ಕಾರ್ಡುಗಳಿಗೆ ಫೀ ಒಂದು ರೂ. ಮಾತ್ರ. ಅಂತಹ ಕಾರ್ಡುಗಳು ಮೂರು ವರ್ಷಗಳವರೆಗೆ ಮಾನ್ಯತೆಯನ್ನು ಹೊಂದಿರುವುವು.

ಇದಲ್ಲದೆ ನಿಶ್ಚಿತ ವೇಳೆಗಳಲ್ಲಿ ಅರ್ಧ ದರದ ಟ್ರಂಕ್ ಕಾಲ್‌ಗಳ ಮತ್ತು ಕೆಲವೊಂದು ಕಡೆ 'ಮೆಸೆಂಜರ್' ಸರ್ವಿಸಿನ ಸೌಕರ್ಯಗಳೂ ಇವೆ.

ಸಾರ್ವಜನಿಕರ ಸಹಕಾರ ಅಗತ್ಯ.

ಸಾರ್ವಜನಿಕರು ತಮ್ಮ ಕಾಗದ ಪತ್ರಗಳ ವಿಳಾಸ ಬರೆಯುವುದರಲ್ಲಿ ಕೆಲವೊಂದು ಅಂಶಗಳಲ್ಲಿ ಇಲಾಖೆಯೊಡನೆ ಸಹಕರಿಸಿದರೆ, ಪೋಸ್ಟಾಫೀಸು ಇನ್ನೂ ಹೆಚ್ಚು ದಕ್ಷತೆಯಿಂದ ಕೆಲಸ ಮಾಡಬಹುದು. ಸಾಮಾನ್ಯವಾಗಿ ಆದಷ್ಟೂ ಪರಭಾಷೆ ಪ್ರದೇಶಕ್ಕೆ ಹೋಗುವಂತಹ ಕಾಗದಗಳಿಗೆ ವಿಳಾಸವನ್ನು ಇಂಗ್ಲೀಷಿನಲ್ಲಿ ಬರೆಯುವುದು ಒಳ್ಳೆಯದು. ಕಾಗದ ತಲುಪಬೇಕಾದ ಸ್ಥಳ ಬಹು ಸ್ಪಷ್ಟವಾಗಿರಬೇಕು. ಬೆಂಗಳೂರಿನಲ್ಲಿ ತಪ್ಪು ತಪ್ಪಾಗಿ ವಿಳಾಸ ಬರೆದ ಸುಮಾರು ೧೨ ಸಾವಿರ ಕಾಗದಗಳು ಬರುತ್ತವೆ! ಕಡೆಯ ಅಂಚೆ ಕ್ಲಿಯರೆನ್ಸ್ ವೇಳೆಗೆ ಸಾಕಷ್ಟು ಮುಂಚೆ ಪೋಸ್ಟ್ ಮಾಡುವುದರಿಂದ ಅನಾವಶ್ಯಕ ವಿಳಂಬ ತಡೆದಂತಾಗುವುದು.

ಭಾನುವಾರದ ಕೆಲಸ.

ಪೋಸ್ಟಾಫೀಸು ಭಾನುವಾರ ಕೆಲಸ ಮಾಡದಿರುವುದಕ್ಕೆ ಅನೇಕ ಟೀಕೆಗ

॥ ಚುನಾವಣೆಗಳು ॥

ಚುನಾವಣೆಗಳೀಗ ಮುಗಿದಿವೆಯಾದ್ದರಿಂದ ಸಂಕ್ಷೇಪವಾಗಿ ಅವುಗಳ ವಿಮರ್ಶೆಯನ್ನು ಮಾಡುವದೇನೂ ಅಪ್ರಸ್ತುತವಾಗಲಾರದು.

ಚುನಾವಣೆ ಶಾಖೆಯು ಸಾಮಾನ್ಯವಾಗಿ ಸಮಾಧಾನಕರವಾಗಿ ತನ್ನ ಕೆಲಸವನ್ನು ನಿರ್ವಹಿಸಿತೆಂದು ಹೇಳಬಹುದು. ಕೆಲವು ಕಡೆ ಪ್ರಿಸಾಯಿಡಿಂಗ್ ಅಧಿಕಾರಿಗಳು ಇಲ್ಲವೆ ಅವರ ಕೈಕೆಳಗಿನವರು ಕೆಲವೊಂದು ದುರ್ವ್ಯವಹಾರಗಳನ್ನು ಮಾಡಿದರೆಂಬ ದೂರುಗಳಿದ್ದರೂ ಅವು ಬಹಳ ಕಡಿಮೆಯಿದ್ದುದರಿಂದ ಅಪವಾದವೆಂದೇ ಗ್ರಹಿಸಬೇಕಾಗುವದು. ಇವೆಲ್ಲ ದೂರುಗಳ ಬಗ್ಗೆ ಯೋಗ್ಯ ವಿಚಾರಣೆ ನಡೆಯುವದೆಂದೂ ಅಪರಾಧಿಗಳು ಸಿಕ್ಕಿಬಿದ್ದರೆ ಯೋಗ್ಯ ಕ್ರಮ ಕೈಗೊಳ್ಳಲಾಗುವದೆಂದೂ ನಾನು ನಂಬುತ್ತೇನೆ.

ಆದರೆ ಆಯಾ ಪಕ್ಷಗಳು ಮತ್ತು ಸ್ವತಂತ್ರರು ತಮ್ಮ ಪಕ್ಷಗಳಿಗೆ, ತಮಗೆ ಮತಗಳನ್ನು ದೊರಕಿಸಿಕೊಳ್ಳುವದಕ್ಕಾಗಿ ಉಪಯೋಗಿಸಿದ ಸಾಧನಗಳ ಬಗ್ಗೆ ಮಾತ್ರ ಇದೇ ಬಗೆಯ ಸಮಾಧಾನಕರ ಪ್ರಶಸ್ತಿ ಪತ್ರವನ್ನು ಕೊಡಲಾರೆ. ಕೆಲ ಸಂದರ್ಭಗಳಲ್ಲಿ ಉಚ್ಚ ನಿರ್ಣಾಯಕ ನೇತೃತ್ವವನ್ನು ವಹಿಸಿದ್ದರೂ ಜಾತಿ ಧರ್ಮಗಳ ಹೆಸರಿನಿಂದ ಮತಯಾಚನೆ ಮಾಡಿದ್ದೇನು ಇಂಥ ಅಪರಾಧಗಳಲ್ಲಿ ಅಷ್ಟೊಂದು ಮಹತ್ವದ ಅಪರಾಧವಲ್ಲ ಎಂದು ಹೇಳಬಹುದು. ಇದಕ್ಕೂ ಹೆಚ್ಚು ಹೀನ ಅಪರಾಧವೆಂದರೆ ಹಣ ಕೊಟ್ಟು ಮತಗಳನ್ನು ಕೊಂಡದ್ದು ಇಲ್ಲವೇ ಮದ್ಯ ಮಾದಕಪೇಯಗಳನ್ನು ಕುಡಿಸಿ, ತಿಂಡಿ ತಿನಸುಗಳನ್ನು ಕೊಟ್ಟು ಮತಗಳನ್ನು ಸಂಪಾದಿಸಿದ್ದು; ಅದೇ ರೀತಿಯಾಗಿ ಒತ್ತಾಯ, ಬೆದರಿಕೆ, ವಿರೋಧಿಗಳ ಬಗ್ಗೆ ಇಲ್ಲವೇ ವಿರೋಧಿ ಪಕ್ಷಗಳ ಬಗ್ಗೆ ಅಪಪ್ರಚಾರ ಮಾಡಿ ಅಜ್ಞ ಜನಸಾಮಾನ್ಯರಲ್ಲಿನ ಅಂಧಶ್ರದ್ಧೆಯನ್ನೊಳಗೊಂಡು ಬೇರೆ ಬೇರೆ ಸಾಧನಗಳನ್ನು ಪ್ರಯೋಗಿಸಿ ತಮಗೆ ಅಜ್ಞಾನದ ದುರ್ಲಾಭ ಪಡೆದದ್ದು ಮೊದಲಾದವುಗಳು. ಎಲ್ಲ ಹುರಿಯಾಳುಗಳೂ ಇಂಥ ಮಾರ್ಗಗಳನ್ನು ಅವಲಂಬಿಸಿರುವರೆಂದು ಹೇಳಲಾಗದು. ಆದರೆ ಏಜೆಂಟರು ಮತ್ತು ಕಾರ್ಯಕರ್ತರು ಈ ಬಗೆಯ ಉಪಾಯಗಳನ್ನು ಕೈಕೊಂಡದ್ದುಂಟು. ಇಂಥ ದುರ್ವ್ಯವಹಾರ ಮಾಡಿದ ಅಪರಾಧಿಗಳಿಂದ ಯಾವುದೊಂದು ಪಕ್ಷವು ಸಂಪೂರ್ಣ ಅಲಿಪ್ತವಾಗಿದೆಯೆಂದು ಸಿದ್ಧವಾದರೆ ಅದೊಂದು ಆಶ್ಚರ್ಯಕರ ಘಟನೆಯೆಂದು ನಾನು ಭಾವಿಸಿ ಅದನ್ನೊಪ್ಪಿಕೊಳ್ಳುವೆ. ಬಹುಶಃ ಎಲ್ಲ ಪಕ್ಷಗಳ—ಎಲ್ಲ ಹುರಿಯಾಳುಗಳೆಂದು ನಾನು ಹೇಳಲಾರೆ. ಸಾರ್ವಜನಿಕ ನೀತಿಮತ್ತೆಯ ಕೆಳಮಟ್ಟವನ್ನು ಜನತೆಯ ಮುಂದಿಟ್ಟು ಅಪರಾಧ ಮಾಡಿದರೆಂದು ಹೇಳಬಹುದು. ಮತದಾರರಿಗೆ ಅನೇಕ ಸಲ ಸರಿಯಾದ ಶಿಕ್ಷಣವನ್ನು ಕೊಡಲಿಲ್ಲ.

ಆಯಾ ಪಕ್ಷಗಳು ಪ್ರಚಾರಕ್ಕಾಗಿ ಮಾಡಿದ ವೆಚ್ಚವಲ್ಲದೆ ಆಯಾ ಹುರಿಯಾಳುಗಳು ನೀರಿನಂತೆ ಹೆಚ್ಚು ಹಣವನ್ನು ವ್ಯಯ ಮಾಡಿದ್ದುಂಟು. ಕಾಯಿದೆಯು ಹಾಕಿಕೊಟ್ಟ ವೆಚ್ಚದ ಮಂಜೂರಿಯನ್ನು ಮೀರಿ ಅನೇಕರು ಹಣವನ್ನು ಸೂರೆ ಮಾಡಿದ್ದುಂಟು. ಸಾರ್ವಜನಿಕವಾಗಿ ಜನರು ಇದನ್ನೊಪ್ಪಲಿಕ್ಕಿಲ್ಲ. ಕಾಯಿದೆಯ ಕಕ್ಷೆಯಲ್ಲಿ ಬರುವಂತೆಯೇ ಅವರು ತಮ್ಮ ಲೆಕ್ಕವನ್ನು ತೋರಿಸಬಹುದು. ಆ ಮಾತು ಬೇರೆ.

ಈ ಬಗೆಯ ಪ್ರತ್ಯಕ್ಷ ಚುನಾವಣೆಯ ಪದ್ಧತಿಯು ತೀರ ಹೆಚ್ಚು ವೆಚ್ಚದ್ದು ಮತ್ತು ನಮ್ಮ ದೇಶಕ್ಕೆ ಒಗ್ಗದಂಥದ್ದು ಎಂಬ ಅಭಿಪ್ರಾಯವು ಸಾಮಾನ್ಯವಾಗಿ ವ್ಯಕ್ತಪಡಿಸಲಾಗುತ್ತದೆಂದು ತೋರುತ್ತದೆ. ಗಾಂಧೀಜಿಯವರು ಅಪ್ರತ್ಯಕ್ಷ ಚುನಾವಣೆ ಪದ್ಧತಿಯನ್ನು ಪುರಸ್ಕರಿಸುತ್ತಿದ್ದರೆಂಬುದು ಸ್ಪಷ್ಟವಿದೆ. ಪ್ರತ್ಯಕ್ಷ ಅಪ್ರತ್ಯಕ್ಷ ಎರಡೂ ಚುನಾವಣೆ ಪದ್ಧತಿಗಳಲ್ಲಿ ಕೆಲವು ನ್ಯೂನತೆಗಳಿವೆ. ಅಂತೆಯೇ ಇವೆರಡು ಕೆಡುಕುಗಳಲ್ಲಿ ಯಾವುದನ್ನು ಆರಿಸಿಕೊಳ್ಳಬೇಕೆಂಬುದು ಮಹತ್ವದ ಪ್ರಶ್ನೆಯಾಗಿದೆ. ಮತಗಳನ್ನೆಣಿಸಿ ಸಾರ್ವಜನಿಕ ಅಭಿಪ್ರಾಯಗಳನ್ನು ತಿಳಿದುಕೊಳ್ಳುವ ಪ್ರಜಾಪ್ರಭುತ್ವ ಮಾರ್ಗವೇ ತೀರ ಹಳೆಯ ಮತ್ತು ಅಶಾಸ್ತ್ರೀಯ ಪದ್ಧತಿಯೆಂದು ಹೇಳಬಹುದು. ಯಾವದೊಂದು ಪ್ರಶ್ನೆಯ ನಿರ್ಣಯವನ್ನು ಇತ್ಯರ್ಥ ಪಡಿಸುವದಕ್ಕೆ ಅದು ಸರಿಯಾದ ಮಾರ್ಗವಲ್ಲವೆಂಬುದು ನಿಶ್ಚಿತ. ಆದರೆ ಮೂಲಭೂತ ಪ್ರಶ್ನೆಯಾಗಿದ್ದರಿಂದ ಇದರ ವಿಚಾರವನ್ನು ಇಲ್ಲಿ ಮಾಡಲಿಕ್ಕಾಗದು. ನಮ್ಮಲ್ಲಿ ನಾವು ಮತಗಳಿಂದ ನಿರ್ಣಯ ಕೈಕೊಳ್ಳುವ ಪ್ರಜಾಪ್ರಭುತ್ವದ ಮೆಟ್ಟಿಲಲ್ಲಿ ಇರುವೆವು.

ಕಾಂಗ್ರೆಸ್ಸು ಸಾಮಾನ್ಯವಾಗಿ ಮತ್ತೆ ಅಧಿಕಾರಕ್ಕೆ ಬರುವದೆಂಬುದೇನೂ ಆಕಸ್ಮಿಕವಾಗಿರಲಿಲ್ಲ. ಆದರೆ ಕೆಲ ರಾಜ್ಯಗಳಲ್ಲಿ ನಿಶ್ಚಿತ ಬಹುಮತವನ್ನು ಪಡೆಯಲು ಸಮರ್ಥವಾಗಲಿಲ್ಲೆಂಬುದು ಆಶ್ಚರ್ಯಕರವಾಗಿರದಿದ್ದರೂ ಮಹತ್ವದ ಸಂಗತಿಯಾಗಿದೆ. ಇದಕ್ಕೂ ಹೆಚ್ಚು ಮಹತ್ವದ್ದೆಂದರೆ ನಿಶ್ಚಿತ ಬಹುಮತವನ್ನು ಪಡೆದರೂ ಕೂಡ ಅದು ಒಟ್ಟಾರೆ [illegible] ಮತಗಳನ್ನು ಪಡೆದಿರುವದಿಲ್ಲ. ಹೆಚ್ಚು ಸಂಘಟಿತ ಮತ್ತು ಬಲಿಷ್ಠ ಒಂದೆರಡು ಪಕ್ಷಗಳು ಕಾಂಗ್ರೆಸ್ಸನ್ನು ವಿರೋಧಿಸಿದ್ದರೆ, ಎಲ್ಲ ರಾಜ್ಯಗಳಲ್ಲಿ ಅಲ್ಲದಿದ್ದರೂ ಅನೇಕ ರಾಜ್ಯಗಳಲ್ಲಿ ಅದು ಸೋಲಬಹುದಾಗಿತ್ತೆಂಬುದು ಇದರಿಂದ ಸ್ಪಷ್ಟವಾಗುವದು. ಈ ಬಗ್ಗೆ ವಿಚಾರ ಮಾಡುವದು ಅತ್ಯವಶ್ಯವಾಗಿದೆ.

ಇನ್ನೊಂದು ಮಹತ್ವದ ಸಂಗತಿಯೆಂದರೆ ಬೇರೆ ಬೇರೆ ಪಕ್ಷಗಳಲ್ಲಿಯ ಪ್ರಮುಖರು ಈ ಚುನಾವಣೆಗಳಲ್ಲಿ ಪರಾಭವ ಹೊಂದಿದ್ದಾಗಿದೆ. ಕಾಂಗ್ರೆಸ್ಸಿನಲ್ಲಿಯು ಮತ್ತು ವಿರೋಧಿ ಪಕ್ಷಗಳಲ್ಲಿಯೂ ಅನೇಕ ಪ್ರಮುಖರು ಮತ್ತು ಅಧಿಕಾರಿ ವರ್ಗದಲ್ಲಿ ಇದ್ದವರು ಪರಾಜಯ ಹೊಂದಿರುವರು. ಅವರನ್ನು ಸೋಲಿಸಿದವರು ಸಾಮಾನ್ಯವಾಗಿ ಅಷ್ಟೊಂದು ಸಮರ್ಥರು ಇಲ್ಲವೆ ಕೀರ್ತಿವಂತರಾಗಿರಲಿಲ್ಲ. ಕೆಲವರು ಅಪಮಾರ್ಗಗಳನ್ನನುಸರಿಸಿ ಆರಿಸಿ ಬಂದಿರಬಹುದು. ವಿರೋಧಿ ಪಕ್ಷದವರ ಎಷ್ಟೇ ಆಮಿಷ ಮೊದಲಾದವುಗಳನ್ನು ತೋರಿಸಿದರೂ ಅವುಗಳಿಗೆ ಬಲಿ ಬೀಳದೆ ತಮಗೇ ಮತ ಹಾಕುವಷ್ಟು ಮತದಾರರ ವಿಶ್ವಾಸವನ್ನು ಪರಾಜಿತ ಮತದಾರರು ಸಂಪಾದಿಸಿಲ್ಲವೆಂದು ಇದರಿಂದ ಸುಸ್ಪಷ್ಟವಾಗುವುದು. ಅಷ್ಟೊಂದು ಕೀರ್ತಿವಂತರಾಗಿದ್ದ ಹಲವಾರು ಉಮೇದವಾರರು ಪ್ರಚಂಡ ಬಹುಮತದಿಂದ ಆರಿಸಿ ಬಂದದ್ದನ್ನು ನೋಡಿದರೆ ಅವರ ಲೋಕಪ್ರಿಯತೆಯು ಸಿದ್ಧವಾಗುತ್ತದಲ್ಲದೆ ಆಮಿಷಗಳು ಎಲ್ಲ ಸಂದರ್ಭಗಳಲ್ಲಿಯೂ ಫಲಕಾರಿಯಾಗಲಿಲ್ಲೆಂದು ಸ್ಪಷ್ಟವಾಗುತ್ತದೆ. ಹಳೆಯ ಧುರೀಣರನೇಕರಲ್ಲಿ ಜನತೆಯು ವಿಶ್ವಾಸ ಉಳಿದಿಲ್ಲೆಂಬುದೇ ಈ ಪರಾಜಯದ ಅರ್ಥವೆಂದು ನನಗೆ ಮನವರಿಕೆಯಾಗಿದೆ. ಲೋಕಪ್ರಿಯರೆಂದು ಅವರು ಅಧಿಕಾರದಲ್ಲಿರಲಿಲ್ಲ; ಆದರೆ ಕಾಂಗ್ರೆಸ್ ಇಲ್ಲವೆ ಬೇರೆ ಪಕ್ಷಗಳ ಪಕ್ಷಪಾತಿ ಜನರಿಂದ ಇಲ್ಲವೆ ಸ್ವಯಂ ನಾಮಕರಣ ಹೊಂದಿದ ಧುರೀಣರಾಗಿದ್ದರಿಂದ ಆಯಾ ಅಧಿಕಾರ ಸ್ಥಾನಗಳಲ್ಲಿ ಉಳಿದಿದ್ದರು. ದೇಶದ ಪರಿಸ್ಥಿತಿಯಿಂದ ಅವರು ಉಚ್ಚ ಸ್ಥಾನದಲ್ಲಿ ಇದ್ದ ಕೆಲವು ಜನರಿಗೆ ಬೇಕಿರಲಿಲ್ಲವೆಂಬುದು ಸುಸ್ಪಷ್ಟ. ಈ ಚುನಾವಣೆಗಳಲ್ಲಿ ಕೆಲವು ನ್ಯೂನತೆಗಳೂ ಇಲ್ಲದಿಲ್ಲ. ಕೆಲ ಸಂದರ್ಭಗಳಲ್ಲಿ ಕಾಂಗ್ರೆಸ್ಸಿನಲ್ಲಷ್ಟೇ ಅಲ್ಲ; ವಿರೋಧಿ ಪಕ್ಷಗಳಲ್ಲಿ ನಿಜವಾಗಿ ಸಮರ್ಥರಾಗಿದ್ದವರೂ ಪರಾಜಯ ಹೊಂದಿರುವರು.

ಬೇರೆ ಬೇರೆ ರಾಜ್ಯಗಳಲ್ಲಿಯು ಹಲವರು ಮಂತ್ರಿಗಳು ಪರಾಜಯ ಹೊಂದಿದ್ದು ಅತ್ಯಂತ ಮಹತ್ವದ ಸಂಗತಿಯಾಗಿದೆ. ಹೊಸ ಮಂತ್ರಿ ಮಂಡಳಗಳ ರಚನೆಯಾಗುವ ವರೆಗೆ ಅವರು ಅಧಿಕಾರದಲ್ಲಿ ಉಳಿಯಬೇಕೇ? ಸದ್ಯಕ್ಕಿರುವ ಆಯಾ ಶಾಸನ ಸಭೆಯ ಸದಸ್ಯರ ವಿಶ್ವಾಸಕ್ಕೆ ಅವರು ಈಗಲೂ ಪಾತ್ರರಾಗಿರಬಹುದು. ಆದರೆ ಮತದಾರರು ನಿಶ್ಚಿತವಾಗಿ ಅವರನ್ನು ನಿರಾಕರಿಸಿರುವರು. ಇಂಥ ಸಂದರ್ಭದಲ್ಲಿ ನಿರ್ಣಾಯಕ ತತ್ವವೇನಾಗಿರಬೇಕು? ಆಯಾ ಮತದಾನ ಸಂಘಗಳು ತಮ್ಮ ಪ್ರತಿನಿಧಿಗಳನ್ನು ಹಿಂದಕ್ಕೆ ಕರೆಸಿಕೊಳ್ಳಬಹುದೆಂದು ಘಟನೆಯಲ್ಲಿ ಹೇಳಿದ್ದರೆ ಯಾವ ಪರಿಸ್ಥಿತಿಯುಂಟಾಗುತ್ತಿತ್ತೋ ಆ ಬಗೆಯ ಪರಿಸ್ಥಿತಿ ಈ ಸಂದರ್ಭದಲ್ಲಿ ಉಂಟಾಗಿದೆಯೆಂದು ಹೇಳಬಹುದು. ಹಿಂದಕ್ಕೆ ಕರೆಸಿಕೊಂಡ ಸದಸ್ಯನು ತನ್ನ ಸ್ಥಳದಲ್ಲಿ ಉಳಿಯಲಾರನು; ಅಧಿಕಾರ ಸ್ಥಾನದಲ್ಲಿ ಉಳಿಯುವದಂತೂ ಅಸಾಧ್ಯವೇ ಎಂದು ನನಗೆ ಎನಿಸುತ್ತದೆ.

ಭಾರತ ರಾಜ್ಯ ಘಟನೆಯಲ್ಲಿ ಸದಸ್ಯರನ್ನು ಹಿಂದಕ್ಕೆ ಕರೆಯಿಸಿಕೊಳ್ಳಬೇಕೆಂಬ ಕಲಮು ಇಲ್ಲದಿದ್ದರೂ ಸರಕಾರದವರು ಗೊತ್ತುಪಡಿಸಿದ ಚುನಾವಣೆ ವೇಳಾಪತ್ರಿಕೆಯಿಂದ ಹಿಂದಕ್ಕೆ ಕರೆಯಿಸಿಕೊಳ್ಳುವ ಸೌಕರ್ಯವನ್ನು ಜನತೆಗೆ ಕೊಟ್ಟಂತಾಗಿದೆ. ಈ ವಿಚಾರಸರಣಿಯು ಸಮಂಜಸವಾಗಿದ್ದರೆ, ಸದ್ಯದ ಚುನಾವಣೆಗಳನ್ನು ಸ್ಪರ್ಧಿಸಿ ಪರಾಜಯ ಹೊಂದಿದ ಯಾವ ಸದಸ್ಯರೂ ಇನ್ನು ವಿಸರ್ಜನೆ ಹೊಂದಲಿದ್ದ ಸದ್ಯದ ಶಾಸನ ಸಭೆಗಳಲ್ಲಿ ವಿರಾಜಮಾನರಾಗಲಾರರು.

ಕಿ. ಘ. ಮಶ್ರೂವಾಲಾ.

...ಳು ಬಂದಿವೆ. ಭಾರತದಲ್ಲೆಲ್ಲಾ ಭಾನುವಾರದ ಕೆಲಸಕ್ಕೆ ಸರಕಾರಕ್ಕೆ ೧ ಕೋಟಿ ರೂ. ಹೆಚ್ಚಿಗೆ ಖರ್ಚಾಗುವುದು. ಅಲ್ಲದೆ ಖಾಸಗೀ ವ್ಯಾಪಾರ ಸಂಸ್ಥೆ, ಕಚೇರಿಗಳಿಗೆ ಭಾನುವಾರ ರಜಾ. ಇದನ್ನೆಲ್ಲಾ ಯೋಚಿಸಿಯೋ ಭಾನುವಾರ ಪೋಸ್ಟಾಫೀಸು ಮುಚ್ಚುವುದು.

ಇದಲ್ಲದೆ ಎಕ್ಸ್‌ಪ್ರೆಸ್ ಡೆಲಿವರಿ, ಸ್ಟ್ಯಾಂಪುಗಳ ಮಾರಾಟ, ಪೋಸ್ಟಾಫೀಸುಗಳ ಸ್ವಚ್ಛತೆ ಇವುಗಳ ಬಗ್ಗೆಯೂ ಆಗಾಗ್ಗೆ ಟೀಕೆಗಳು ಬಂದಿವೆ. ಅವಕಾಶ ದೊರೆತಲ್ಲಿ ಈ ಲೋಪದೋಷಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

'ಜೀವನ'

[illegible] ಪ್ರಾಂತೀಯ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

[illegible] ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1931ರಲ್ಲಿ ಸ್ಥಾಪಿತವಾದ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಮುಖ್ಯವಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುತ್ತಿದ್ದರೂ ಈಗ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಶೇರ್ ಯಾ ಟ್ರಸ್ಟ್‌ಗಳ ಡಿಪಾಜಿಟು ಮಾಡಲ್ಪಡುವುದು. ಟ್ರೈನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಸೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯು ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.
ಕೆ. ಕೆ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಖಜಾಂಚಿ.

Licence No. 60.
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು:—ಟಿ. ಬಿ. ಬೆಳ್ಳಿಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦ | ತಾರೀಕು ೨೧-೩-೧೯೫೨ನೇ ಶುಕ್ರವಾರ | ಸಂಚಿಕೆ ೪೦

ಸರ್ವೋದಯ ಪರಿಚಯ.

॥ ನಾಳೆಯ ನವ ಸಂಸ್ಕೃತಿ ॥

ಲೇ:—ಶ್ರೀ ಕಾಕಾ ಕಾಲೇಲ್ಕರ್.

ಸಮಾಜದ ಸರ್ವ ಅಂಗಗಳಿಗೂ ಮಾರ್ಗದರ್ಶನ ಕೊಟ್ಟು ಬೆಳೆದು ಮುಂಬರುವಂತೆ ಮಾಡತಕ್ಕದಾದ ಒಂದು ಸಂಸ್ಕೃತಿಯು ಯಾವುದೇ ಆತಂಕ, ಸಂಕೀರ್ಣತೆಗಳ ದೆಸೆಯಿಂದ ಇತರ ಸಂಸ್ಕೃತಿ, ಕಲೆಗಳೊಡನೆ ವಿಮುಕ್ತವಾಗಿಯೇ ಹೋಗಿಯಲಾರದು. ಕಲೆ ಸಂಸ್ಕೃತಿಗಳು ಅಖಂಡವಾದುವು. ಅವುಗಳ ಇತಿಮಿತಿಗೆ ನಿರ್ಬಂಧವಿಲ್ಲ. ಅವುಗಳ ನಿಯಮವು ಸರ್ವಂಕಷವಾದುದು. ಪ್ರತಿಯೊಂದು ವಸ್ತುವಿಗೂ ಒಂದು ವಿಶಿಷ್ಟತೆ ಇದ್ದರೂ ಹೇಗೆ ಒಂದು ವಸ್ತುವು ಮತ್ತೊಂದರಿಂದ ಭಿನ್ನವೆಂದು ತೋರಿದರೂ ಅವುಗಳಲ್ಲಿ ಸಾಮರಸ್ಯವಿದ್ದೇ ಇದೆಯೋ ಅದರಂತೆಯೇ ಸಂಸ್ಕೃತಿಯೂ ಕೂಡ. ಒಂದು ಉದಾಹರಣೆಯನ್ನು ಕೊಟ್ಟು ಹೇಳುವದಾದರೆ ಕಲ್ಕತ್ತ, ಮತ್ತು ಡೆಲ್ಲಿ ಇವು ಎರಡು ನಗರಗಳು. ಪ್ರತಿಯೊಂದಕ್ಕೂ ಒಂದೊಂದು ವೈಶಿಷ್ಟ್ಯವಿದೆ. ಪ್ರತಿಯೊಂದರ ಜೀವನದಲ್ಲೂ ವೈವಿಧ್ಯತೆ ಇದೆ. ಕಲ್ಕತ್ತಾದ ಜನರ ಜೀವನ, ನಡತೆ, ನೀತಿಯಲ್ಲೂ ಡೆಲ್ಲಿಯ ಜನರ ಜೀವನ ನಡತೆಯಲ್ಲೂ ವ್ಯತ್ಯಾಸವಿದೆ. ಹೀಗೆ ಎರಡು ನಗರಗಳಲ್ಲಿ ಭಿನ್ನತೆ ಇದ್ದರೂ ವಾಯುವು ಎರಡು ನಗರಗಳಲ್ಲೂ ನಿರ್ಭಾಧಕವಾಗಿ ಹೇಗೆ ಬೀಸುವುದೋ, ಸೂರ್ಯನ ಬೆಳಕು ಎರಡು ನಗರಗಳಿಗೂ ಯಾವ ರೀತಿ ಆತಂಕವಿಲ್ಲದೆ ಬೀಳುವದೋ ಅದೇ ರೀತಿ ಸಂಸ್ಕೃತಿಯೂ ಕೂಡ. ಸಂಸ್ಕೃತಿಯು ಹಿಡಿದು ಒಂದೆಡೆ ಕಟ್ಟಿಡಲು ಸಾಧ್ಯವಾದ ವಸ್ತುವಲ್ಲ. ಯಾವ ರೀತಿ ಗೋಡೆಗಳನ್ನು ನಿರ್ಮಿಸಿ ಗಾಳಿಯನ್ನು ತಡೆದು ನಿಲ್ಲಿಸಲು ಯತ್ನಿಸಿದರೆ ಗಾಳಿಯು ತನ್ನಿಂದ ತಾನೇ ಕೆಟ್ಟು ಹೋಗಿ ತನ್ನ ಪವಿತ್ರತೆಯನ್ನೂ ಜೀವದಾಯಕ ಶಕ್ತಿಯನ್ನೂ ಕಳೆದುಕೊಳ್ಳುವದೋ ಅದೇ ರೀತಿ ವಿಶಾಲದೃಷ್ಟಿಯಿಂದ ಸಂಸ್ಕೃತಿಯು ಅವನತಿಯನ್ನು ಹೊಂದಬಾರದು. ನಿಂತ ನೀರು ಕೆಡುವದು. ಬೀಸದ ಗಾಳಿಯು ಹಾಳೆನಿಸುವದು. ಅದರಂತೆ ಪ್ರಗತಿಶೀಲವಲ್ಲದ ಸರ್ವಾಂಗೀಣವಲ್ಲದ, ಗಡಿ, ಗೋಡೆಗಳನ್ನು ಮೀರದ ಸಂಸ್ಕೃತಿಯೂ ಕೆಲವು ಕಾಲದಲ್ಲಿ ಕಳೆಗುಂದುವದು. ಅಂತರ್ ವಿವಾಹದಿಂದ, ಅಂತರ್ಭೋಜನದಿಂದ ನಮ್ಮ ಸಂಸ್ಕೃತಿ ಹಾಳಾಗುವದೆಂದು ಹೇಳುವದು ತಪ್ಪು ಭಾವನೆಯು. ಇಂಥಾ ಮಿಲನದಿಂದ ಹೊಸ ಚೇತನ ಸ್ಫುರಿಸುತ್ತದೆ. ಪರಸ್ಪರ ಮಿಲನ, ಪರಸ್ಪರ ಸಹಕಾರ, ಪರಸ್ಪರ ಕೂಡಿ ನಡೆಯುವ ವೃದ್ಧಿಯಿಂದ ಸಂಸ್ಕೃತಿಗಳ ಕಳೆ ಹುಟ್ಟಿ, ಪ್ರಕೃತಿ ಪ್ರಾಣಿಗಳನ್ನು ಸುಂದರಗೊಳಿಸಿ ಜೀವನವನ್ನು ಅರ್ಥಪೂರ್ಣವನ್ನಾಗಿ ಮಾಡುತ್ತದೆ. ಭಾರತೀಯ ವೈದಿಕ ಧರ್ಮವು ಇತರ ಧರ್ಮಗಳಿಗೂ ಆಸರೆಯಾಗಿ ಸರ್ವ ಮತಗಳ ಜನನಿ ಎನಿಸುವುದರಿಂದಲೇ ಇಂದೂ ಅದು ರಕ್ತಿಶಾಲಿಯಾಗಿದೆ.

ಸಂಗೀತದ ಒಂದು ಉದಾಹರಣೆಯನ್ನು ಕೊಡುತ್ತೇನೆ. ಮಾನವ ಹೃದಯದ ಉತ್ಕೃಷ್ಟ ಭಾವನೆಗಳು ಹೊರಬೀಳಬೇಕಾದರೆ ಸಂಗೀತವೇ ಸಹಾಯಕವಾದ ಸಾಧನ. ಮೊಗಲ ಬಾದಶಹರ ಕಾಲದಲ್ಲಿ ಭಾರತೀಯ ಮತ್ತು ಪರ್ಶಿಯ ಸಂಗೀತದಲ್ಲಿ ಪರಸ್ಪರ ವಿನಿಮಯವಾಯಿತು. ಅಂಥಾ ಪರಸ್ಪರ ವಿನಿಮಯವು ಮುಸ್ಲಿಂ ಯಾ ಹಿಂದೂ ಸಂಸ್ಕೃತಿಗೆ ಅಹಿತವಾಗಲಿಲ್ಲ. ನಿರ್ಬಂಧಕವಾದ ಈ ಮಿಲನ ಯಾ ಸಹವಾಸವು ಅತೀ ಸೂಕ್ಷ್ಮವಾದುದೂ ಭಾವನೆಯ. ಮೇಲೆ ನಿಂತದ್ದೂ ಆದ ಸಂಗೀತವನ್ನು ಹಾಳುಮಾಡಿಲ್ಲವೆಂದರೆ ಆಹಾರ ವಿಹಾರ, ಮತ್ತಿತರ ಸ್ಥೂಲವಾದ ವಿಚಾರಗಳಲ್ಲಿ ಅಹಿತವಾಗುವದೆಂದು ಹೇಳುವದು ಅರ್ಥರಹಿತವಾದುದು. ಸಸ್ಯಾಹಾರ ಮತ್ತು ಮಾಂಸಾಹಾರದಲ್ಲಿನ ವ್ಯತ್ಯಾಸವು ದೊಡ್ಡದಾದುದಾದರೂ ಅದರಲ್ಲಿ ತಮ್ಮ ತಮ್ಮ ಇಚ್ಛೆಯಂತೆ ವರ್ತಿಸಲು ಅಂತರ್ಭೋಜನವು ಆತಂಕವಾಗದು. ಮಾಂಸಾಹಾರಿಯೂ, ಸಸ್ಯಾಹಾರಿಯೂ ಒಂದೇ ಸ್ಥಳದಲ್ಲಿ ಕೂತು ಊಟಮಾಡಬಹುದು. ಇದರಿಂದ ಒಬ್ಬರೊಬ್ಬರಿಗೆ ಕೀಳಾಗಲೀ ಮೇಲಾಗಲೀ ಅಲ್ಲ.

ದಬ್ಬಾಳಿಕೆಯ ಕಾಲ ಮುಗಿಯಿತು. ಜಯಿಸಿ ಹಿಡಿತದಲ್ಲಿಟ್ಟು ತನ್ನಿಚ್ಛೆಯಂತೆ ನಡೆಸುವ ಆ ಕಾಲವೂ ಮುಗಿಯಿತು. ಇದೀಗ ಸೇವೆಯ ಕಾಲ. ಮಾನವ ಗಣದ ಸೇವೆಯೇ ಇಂದಿನ ಯೋಗ್ಯಾಯೋಗ್ಯತೆಯನ್ನು ಅಳೆಯುವ ಅಳತೆ ಕೋಲು. ಅನಾದಿ ಕಾಲದ ಸಂಪ್ರದಾಯಗಳನ್ನೇ ಹಿಡಿದು ಅವೇ ಪರಮ ಪೂಜ್ಯವೆಂದೂ, ಓ ಭೀರುಯಿನ ಕಾಲದ ಪದ್ಧತಿಗಳೇ ಸರ್ವಮಾನ್ಯವಾಗಬೇಕೆಂದೂ ವಾದಿಸುವ ಸನಾತನಿಗಳ ಹಾಗೂ ನಿನ್ನೆಯ ವೈಭವವನ್ನು ನೆನಸಿ ಅದರ ಹೆಗ್ಗಳಿಕೆಯನ್ನ ಕೊಚ್ಚುತ್ತ ಇಂದಿನ ಪರಿಸ್ಥಿತಿಯನ್ನು ಮರೆಯುವ ಭ್ರಮಿಗಳ ಕಣ್ತೆರೆ ಮಾಡಬೇಕು. ಗತ ಕಾಲದ ವಿಚಾರಗಳು ಆ ಕಾಲಕ್ಕೆ ಯೋಗ್ಯವಾಗಿದ್ದರೆ ಮಾತ್ರ ಅವುಗಳಿಗೆ ಮಾನ್ಯತೆ. ಅದ್ದರಿಂದ ಗತಕಾಲದ ಪದ್ಧತಿ ಸಿದ್ಧಾಂತಗಳನ್ನು ಪರಿಶೀಲಿಸಿ ಯೋಗ್ಯವಾದುವನ್ನು ಎತ್ತಿಕೊಂಡು ಅಯೋಗ್ಯವಾದುವುಗಳನ್ನು ತಿರಸ್ಕರಿಸಬೇಕು. ಇಂದಿನ ಯುಗದ ವಾಣಿಯ ಮಂತ್ರವೆಂದರೆ 'ಮಾನವತೆ ಮತ್ತು ಸೇವೆ'. ವಿವಿಧ ಶಕ್ತಿಗಳು, ವಿವಿಧ ನಂಬಿಕೆಗಳು, ವಿವಿಧ ಪದ್ಧತಿಗಳು, ವಿವಿಧ ಆಸೆ, ಆಕಾಂಕ್ಷೆಗಳು ಮಾನವ ಸಮಾಜವನ್ನು ವಿವಿಧ ದಿಕ್ಕುಗಳಿಗೆ ಎಳೆದು ಐಕ್ಯತೆಯನ್ನು ಕೆಡಿಸಿ ಹೊಡೆದು ಹಂಚಿ ಹಾಕುತ್ತಿರುವ ಇಂದಿನ ಸಮಯದಲ್ಲಿ ಐಕ್ಯತೆಯನ್ನು ಸಾಧಿಸುವುದೇ ಸರ್ವರ ಗುರಿಯಾಗಬೇಕು. ಚರಿತ್ರೆಯಲ್ಲಿ ಹರಡಿ ಹಂಚಿರುವ ವಿವಿಧ ಜಾತಿಗಳ ಅನುಭವವನ್ನ ಪಡೆದು ಅವುಗಳನ್ನು ಮಾನವ ಜೀವನದಲ್ಲಿ ಹೆಣೆದು ಸರ್ವೋದಯ ಸಂಸ್ಕೃತಿಯ ರಚನೆ ಮಾಡಬೇಕು.

ಇದನ್ನು ಸಾಧಿಸಲು ಮಿತಿ ಇಲ್ಲದ ಸಹನೆ, ಸತತ ಪ್ರಯತ್ನ ಮತ್ತು ನೀರೆಯಾದ ಶಾಶ್ವತವಾದ ಪ್ರೇಮವು ಅಗತ್ಯ. ಇಂದು ಸರ್ವೋದಯ ಸಂಸ್ಕೃತಿಯು ಪೂರ್ಣ ಅರಿವು ಜನರಿಗಾಗದಿದ್ದರೂ, ಆ ದಿವ್ಯ ಬೆಳಕು ಇದು ಸಾಧ್ಯವೇ ಎಂದು ಇಂದಿನ ಕೃತ್ರಿಮ ನಾಗರೀಕತೆಯನ್ನೇ ನಂಬಿರುವವರು ಹೇಳಬಹುದು. ಆದರೆ ಪೂರ್ಣವಾದ ನಾಳೆ ಜಗತ್ತಿನ ನೂತನ ಹೊಸ ಸಂಸ್ಕೃತಿ. ಯಾರು ದೀನರಲ್ಲಿ, ದಲಿತರಲ್ಲಿ, ಶೋಷಿತರಲ್ಲಿ ತನ್ನ ಸಹೋದರತೆಯನ್ನು ಕಂಡು ಅವರ ಹಿತಕ್ಕಾಗಿ ದುಡಿಯುವ ಎದೆಗಾರಿಕೆಯನ್ನು ಹೊಂದಿರುವರೋ ಅಂಥವರು ನಾಳೆಯ ಈ ನವ ಸಂಸ್ಕೃತಿಯ ಪಥಪ್ರದರ್ಶಕರಾಗುವರು. ಅಂಥವರ ಪಥಪ್ರದರ್ಶನವನ್ನು ಒಪ್ಪಿ ಅದನ್ನು ಜಗತ್ತು ಅನುಸರಿಸುವದು. ಯಾರು ನಮ್ಮ ಹಿಂದಿನ ಚರಿತ್ರೆಯನ್ನು ಚೆನ್ನಾಗಿ ಅಭ್ಯಸಿಸಿರುವನೋ ಅವನೇ ವರ್ತಮಾನ ಪರಿಸ್ಥಿತಿಯನ್ನು ಚೆನ್ನಾಗಿ ಅರಿಯಬಲ್ಲನಲ್ಲದೆ ನಾಳೆಯ ಭವ್ಯ ಭವಿಷ್ಯದ ದೃಷ್ಟಿಯಿಟ್ಟು ಆ ಬಗ್ಗೆ ಮುಂದಾಳ್ತನದ ಭಾರವನ್ನು ಹೊತ್ತು ದುಡಿಯುವನು. ಧೈರ್ಯದಿಂದ ವಿಶ್ವಾಸದಿಂದ ತನ್ನ ಜೀವನವನ್ನು ಮಾನವ ಗಣದ ಸೇವೆಗೆ ಮುಡಿಪಿಟ್ಟು ದುಡಿದು, ಸಾಮಾನ್ಯ ಜನಜಂಗುಳಿಯ ಹರ ನಾಡಿಗಳಲ್ಲೂ ಆಶಾಮಯ ಚೇತನದನ್ನು ತುಂಬಿ ಗಾಢನಿದ್ರೆಯಿಂದ ಅಳಿಯುವನ್ನು ಸಾಧಿಸುವನು.

ಇಂಥಾ ಮಹಾಕಾರ್ಯದಲ್ಲಿ ನಮ್ಮ ನಿಮ್ಮಂಥ ಸಾಮಾನ್ಯ ಜನರ ಕರ್ತವ್ಯವೇನು? ನಮ್ಮ ಕರ್ತವ್ಯವೆಂದರೆ ಈ ನವಯುಗದ ಈ ನವಕರ್ತವ್ಯದ ಈ ನವಸಂದೇಶವನ್ನು ಅರಿತು ನಮ್ಮಲ್ಲಿ ಸುಪ್ತವಾಗಿರುವ ಶಕ್ತಿಯನ್ನು ತಿಳಿದುಕೊಂಡು ಈ ನವ ಸಂಸ್ಕೃತಿಯನ್ನು ಸ್ಥಾಪಿಸಿ ಜಗತ್ತಿಗೆ ಪಥದರ್ಶನ ಮಾಡುವ ಜವಾಬ್ದಾರಿಯನ್ನು ಕಾಲಮಹಿಮೆಯು ಯಾರ ಹೆಗಲ ಮೇಲೆ ಹೊರಿಸುವದೋ ಆ ಭಾರತ ಭಾಗ್ಯವಿಧಾತನನ್ನು ಕಂಡುಕೊಂಡು ಅವನ ಪ್ರಯತ್ನಕ್ಕೆ ಬೆಂಬಲ ಕೊಡುವುದಾಗಿದೆ.

ಇದಕ್ಕಾಗಿ ನಮ್ಮ ಹಿಂದಿನ ಸಂಪ್ರದಾಯ, ನಂಬಿಕೆ, ವಿಶ್ವಾಸಗಳನ್ನು ಪರಿಶೀಲಿಸಿ ಅಹಿತವಾದುವನ್ನು ದೂರಕ್ಕೆ ಹೊಸ ವಿಚಾರಗಳಿಗೆ ಆಸ್ಪದ ಮಾಡಬೇಕು. ಹೊಸ ವಿಚಾರಗಳನ್ನು ಅರಿತು, ಅವುಗಳಂತೆ ಕಾರ್ಯಮಾಡಲು ತಯಾರಾಗಬೇಕು. ಗಾಂಧೀಜಿಯವರು ಇಂಥಾ ಒಂದು ಕಾರ್ಯಕ್ಕಾಗಿ ನಮಗೆಲ್ಲರಿಗೂ ದೀಕ್ಷೆ ಕೊಟ್ಟಿದ್ದಾರೆ. ಅನೇಕರಲ್ಲಿ ಸತತದುಡಿಯುವ ಛಲವನ್ನೂ ಹುಟ್ಟಿಸಿದ್ದಾರೆ. ಆ ಛಲವು ಸರ್ವ ಎಡೆ ಹಬ್ಬಬೇಕು. ಸರ್ವ ಮೂಲೆಮೂಲೆಗಳಲ್ಲೂ ಪ್ರಸರಿಸಬೇಕು. ಏಕೆಂದರೆ ಇದು ಹೊಸ ಯುಗ. ಬ್ರಾಹ್ಮಣರ ಪ್ರಭುತ್ವ ಯುಗ ಮುಗಿಯಿತು. ಕ್ಷತ್ರಿಯರ ತೋಳ್ಬಲದ ಯುಗವೂ ಮುಗಿಯಿತು. ವೈಶ್ಯರ ವಾಣಿಜ್ಯ ಯುಗವೂ ಮುಗಿಯಿತು. ದರ್ಪದ, ದಬ್ಬಾಳಿಕೆಯ ಯುಗಗಳ ಮಾತೇ ಇಲ್ಲ. ಇದೀಗ ಸರ್ವೋದಯದ ಯುಗ. ಈ ಯುಗವೇ ಸರ್ವರ ನೆಮ್ಮದಿಯನ್ನು ಸರ್ವರಿಗೆ ಶಾಂತಿಯನ್ನು ತರಬಲ್ಲುದು. ಅಂಥಾ ಯುಗ ರಚನೆಯಲ್ಲಿ ಭಾಗಿಯಾಗುವದು ಸರ್ವರ ಕರ್ತವ್ಯವಾಗಿದೆ.

ಕ್ರಿಮಿ ಯುದ್ಧ ನಡೆಸಿದ ಅಪಾದನೆ.

ಕೊರಿಯಾದಲ್ಲಿಯ ಯುನೈಟೆಡ್ ನೇಷನ್ಸ್ ಸೈನಿಕರು ಕೊರಿಯಾದಲ್ಲಿ ಕ್ರಿಮಿಯುದ್ಧವನ್ನು ಪ್ರಾರಂಭಿಸಿರುವರೆಂದು ಕಮ್ಯೂನಿಸ್ಟರು ಹೊರಿಸಿದ ಆರೋಪದ ವಿಚಾರಣೆ ಮಾಡುವದಕ್ಕಾಗಿ ಕೊರಿಯಾಕ್ಕೆ ಸಮಿತಿಯೊಂದನ್ನು ಕಳಿಸಬೇಕೆಂದು ಅಮೇರಿಕೆಯು ಸೂಚಿಸಿದ ಮಾತಿಗೆ ಒಪ್ಪಿದುದರಿಂದ ಅಂತರ್ರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಯವರು ಒಪ್ಪಿದ್ದಾರೆ.

ಇಂತಹ ಒಂದು ಸಮಿತಿಯನ್ನು ಕಳಿಸುವದಕ್ಕಾಗಿ ಎರಡೂ ಕಡೆಗಳವರ ಒಪ್ಪಿಗೆಯನ್ನು ಪಡೆಯಲು ರೆಡ್ ಕ್ರಾಸ್ ಸಂಸ್ಥೆಯು ಪ್ರಯತ್ನಿಸುತ್ತಿದೆ

ಚೀನಾಕ್ಕೆ ಭಾರತದ ಸೌಹಾರ್ದ ಶಿಷ್ಟಮಂಡಲ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರವರು ಚೀನಾಕ್ಕೆ ಹೋಗಲಿರುವ ಭಾರತ ಸೌಹಾರ್ದ ಸಂಸ್ಕೃತಿ ಸಾಂಸ್ಕೃತಿಕ ಶಿಷ್ಟಮಂಡಲದ ನೇತೃತ್ವವನ್ನು ವಹಿಸಲಿರುವರೆಂದು ತಿಳಿದುಬಂದಿದೆ.

ಏಪ್ರಿಲ್ ಮಧ್ಯದಲ್ಲಿ ಚೀನಾಕ್ಕೆ ಹೋಗಲಿರುವ ಈ ಶಿಷ್ಟ ಮಂಡಲದ ಸದಸ್ಯರಾರೆಂಬುದು ಇನ್ನೂ ನಿಶ್ಚಿತವಾಗಿ ತಿಳಿದುಬಂದಿಲ್ಲ. ಈ ಶಿಷ್ಟ ಮಂಡಲವು ಚೀನಾದಲ್ಲಿ ೪ ವಾರಗಳ ಪ್ರವಾಸ ಕೈಕೊಳ್ಳಲಿದೆ

ಧಾರಣೆವಾಸಿಗಳು

ಇಳಿಮುಖವಾಗುತ್ತಿವೆ.

'ಮಾರುವವನ ದಿನವು ಹೋಯಿತು. ಕೊಂಡುಕೊಳ್ಳುವವನ ದಿನ ಬಂತು!' ಎಂಬ ಮಾತು ಎದ್ದು ನಿಂತಿದೆ.

ಫೆಬ್ರವರಿ ತಿಂಗಳಿಂದ ಇಳಿಮುಖವಾಗುತ್ತ ಬಂದಿರುವ ಧಾರಣೆಗಳು, ಈ ತಿಂಗಳಲ್ಲಿ ಹೊಸ ಆಳಕ್ಕೆ ಇಳಿದಿವೆ. ವಾಣಿಜ್ಯ ಕ್ಷೇತ್ರಗಳಲ್ಲಿ ದಿಗಿಲುಂಟಾಗಿದೆ.

ಗಿರಣಿ ಮಾಲೀಕರು, ಬಟ್ಟೆಗಳ ಧಾರಣೆಗಳನ್ನು ಏರಿಸಬೇಕೆಂಬ ಹೊಸ ಕೋರಿಕೆಯನ್ನು ಮುಂದಿಡುತ್ತಿರುವಾಗ, ಅಹಮದಾಬಾದದಲ್ಲಿ, ಬಟ್ಟೆಯ ಮಾರ್ಕೆಟುಗಳಲ್ಲಿ ಸೇಕಡ ೩೦ ರಷ್ಟು ಇಳಿತವಾಗಿದೆ. ಈ ಧಾರಣೆಗಳು ಇನ್ನೂ ಇಳಿಮುಖವಹುದೆಂದೂ ಹೇಳುವರು. ಫೆಬ್ರವರಿ ತಿಂಗಳಲ್ಲಿ ಮೂಟೆ ಕಟ್ಟಲ್ಪಟ್ಟ ಬಟ್ಟೆಗಳನ್ನು, ಪರ್ಮಿಟು ಇದ್ದವರು ಕೊಂಡುಕೊಳ್ಳುವರೋ ಎಂಬ ಸಂದೇಹವೂ ಎದ್ದಿದೆ. ಅಲ್ಲಿಯ ರಖಂ ಬಟ್ಟೆ ವ್ಯಾಪಾರಸ್ಥರು, ಗಿರಣಿಗಳಿಂದ ಹೊಸ ಸ್ಟಾಕುಗಳನ್ನು ಸದ್ಯಃ ಕೊಂಡುಕೊಳ್ಳುವುದೂ ಅನುಮಾನಕರವಿದೆ.

ಮುಂಬಯಿಯಲ್ಲಿ, ಧಾನ್ಯದವಸ ಮೊದಲಾಗಿ ಯಾವತ್ತೂ ವಸ್ತುಗಳ ಧಾರಣೆಗಳು, ಜನವರಿ ಮಟ್ಟದಿಂದ ಸೇಕಡ ೭೦ರಷ್ಟು ಬಿದ್ದುಹೋಗಿವೆ. ಬೆಲ್ಲ, ಸಕ್ಕರೆಗಳ ಧಾರಣೆಗಳು, ಅರ್ಧಕ್ಕರ್ಧ ಇಳಿದಿವೆ, ಮೆಣಸಿನ ಧಾರಣೆ ಸೇಕಡ ೫೦ ರಷ್ಟು, ಬಿದ್ದುಹೋದ ವಾರ್ತೆಗಳಿವೆ.

ಮುಂಬಯಿಯಲ್ಲಿ ಲಕ್ಷಾಂತರ ರೂಪಾಯಿಯ ನಷ್ಟ ಸಂಭವಿಸಿ, ಹಲವು ಸಂಸ್ಥೆಗಳು ಗಟಬಹುದೆಂದು ನಿರೀಕ್ಷಿಸಲಾಗಿದೆ.

ಬಂಗಾರದ ಬೆಲೆಯು ತೊಲೆಗೆ ೧೦೭ ರಷ್ಟಿದ್ದುದು, ರೂ. ೯೦ಕ್ಕೆ ಇಳಿದಿದೆ. ಬುಲಿಯನ್ ಮಾರ್ಕೆಟು ಕಳೆದ ವಾರ, ವಹಿವಾಟು ನಡೆಸದೆ, ಮುಚ್ಚಲ್ಪಟ್ಟಿತ್ತು.

ಜಬ್ಬಲ್ಪುರದಲ್ಲಿ ಕೆಲವು ಧಾನ್ಯಗಳ ಮತ್ತು ಬೀಜಗಳ ರಖಂ ವ್ಯಾಪಾರವನ್ನು ಎರಡು ವಾರಗಳಿಗೆ ನಿಲ್ಲಿಸಲಾಗಿದೆ.

ಕರಿಮೆಣಸಿನ ಧಾರಣೆಯು ಮಣಕ್ಕೆ ನೂರು ರೂಪಾಯಿಯಷ್ಟು ಬಿದ್ದುಹೋಗಿದೆ.

ಕೆಲವೊಂದು ಧಾರಣೆಗಳು, ಯುದ್ಧ ಪೂರ್ವದ ಮಟ್ಟಕ್ಕಿಳಿದಿವೆ.

ರಿಸರ್ವ್ ಬ್ಯಾಂಕು, ವಾಣಿಜ್ಯಕ್ಷೇತ್ರಕ್ಕೆ ದೊರೆವ ಸಾಲಗಳ ವಿಷಯಕವಾದ ಧೋರಣೆಯನ್ನು ಬದಲಾಯಿಸಬೇಕೆಂದೂ, ಶೆಡ್ಯೂಲ್ಡ್ ಮತ್ತು ಇತರ ಬ್ಯಾಂಕುಗಳು ತಮ್ಮಲ್ಲಿಯ ವ್ಯಾಪಾರಿಗಳಿಗೆ ಕೊಡುವ ಸಾಲಗಳನ್ನು ಹೆಚ್ಚಿಸುವಂತಾಗಬೇಕೆಂದೂ, ಮುಂಬಯಿಯ ಇಂಡಿಯನ್ ಮರ್ಚಂಟ್ಸ್ ಎಸೋಸಿಯೇಶನಿನ ಕಮಿಟಿಯವರು ಸರಕಾರಕ್ಕೆ ವಿನಂತಿಸಿರುವರು.

ತೈಲ ಬೀಜ ಮೊದಲಾದ ಕೆಲವೊಂದು ಸರಕುಗಳ ಮೇಲಿನ ನಿರ್ಯಾತಕರವನ್ನು ತಗ್ಗಿಸಿ, ಪರದೇಶಗಳಿಂದ ಆ ಸರಕುಗಳಿಗೆ ಹೆಚ್ಚಿನ ಬೇಡಿಕೆ ಬರುವಂತೆ ಸಾಧಿಸಿಕೊಡಬೇಕೆಂದೂ ಸೂಚಿಸಲಾಗಿದೆ.

ದೇಶದ ವಾಣಿಜ್ಯ ಕ್ಷೇತ್ರದಲ್ಲಿ ಪತನಗಳುಂಟಾದರೆ, ದೇಶದ ಆರ್ಥಿಕ ವ್ಯಾಪಾರವು ಕುಸಿದು ಬಿದ್ದಂತೇ ಎಂದೂ ತಿಳಿಸಿರುವರು.

ಇಂದು ಸಂಭವಿಸಿರುವ ಈ ಆರ್ಥಿಕ ಮುಗ್ಗಟ್ಟು-ದಿಗಿಲುಗಳು, ಇಪ್ಪತ್ತೆರಡು ವರ್ಷಗಳ ಹಿಂದೆ ಉಂಟಾದ ಮುಗ್ಗಟ್ಟಿನ ನೆನಪು ತರುತ್ತಿದೆ; ಆದರಷ್ಟೆ ಭೀಕರವೂ ಆಗಿದೆ—ಎಂದು ತಜ್ಞರು ಅಭಿಪ್ರಾಯಪಡುತ್ತಾರೆ.

ಕೊಬ್ಬರಿಯ ಧಾರಣೆಯು ಸೇಕಡ ೫೦ ರಷ್ಟು ಇಳಿಮುಖವಾದುದರಿಂದ, ಕಲ್ಲಿಕೋಟೆಯಲ್ಲಿ ಅಡಿಕೆ ಮತ್ತು ತೆಂಗು ಮಾರ್ಕೆಟಿಂಗ್ ಕಮಿಟಿಯ ಸಭೆ ಸೇರಿ, ಈ ವಿಶೇಷ ಪತನವನ್ನು ಸರಕಾರದ ಗಮನಕ್ಕೆ ತಂದು, ಪರಿಹಾರೋಪಾಯಕ್ಕೆ ವಿನಂತಿಸಬೇಕೆಂದು ಠರಾಯಿಸಲಾಯಿತು. ಧಾರಣೆಗಳು ಹೀಗೆ, ನಾಲ್ಕೈದು ವಾರಗಳಲ್ಲಿ, ತಡೆಯಿಲ್ಲದೆ ಬೀಳುತ್ತಲೇ ಹೋದುದರಿಂದ ಹಲವು ರಖಂ ಹಾಗು ಚಿಲ್ಲರೆ ವ್ಯಾಪಾರಿಗಳಿಗೆ ಹೇರಳ ನಷ್ಟವಿದೆ ಎನ್ನಲಾಗಿದೆ.

ಈ ಸ್ಥಿತಿಯು ಇನ್ನೆಷ್ಟು ಕಾಲ ನಿಲ್ಲಬಹುದು ಎಂದು ಧೈರ್ಯವಾಗಿ ಯಾರೂ ಹೇಳಲಾರರು.

ಧಾರಣೆಗಳು ಇಳಿಮುಖವಾಗಿ, ಕೊಂಡುಕೊಳ್ಳುವವರ ಸಂಖ್ಯೆಯೂ ಕಡಿಮೆಯಾಗುತ್ತ ಹೋಗುವುದು ಸಹಜವಿದೆ. ಬಜಾರು ಧಾರಣೆಗಿಂತ ಕಡಿಮೆ ದರದಲ್ಲಿ ಕೊಡುವೆವೆಂದರೂ, ಕೊಂಡುಕೊಳ್ಳುವವರಿಲ್ಲ.

ಯಾರೂ ಸ್ಟಾಕನ್ನು ಇಟ್ಟುಕೊಂಡು ಕುಳ್ಳಿರಲಾಗುವುದಿಲ್ಲ. ಈ ಬಿಕ್ಕಟ್ಟು ಭಯಾನಕವಹುದು.

ವ್ಯಾಪಾರ ಮುಗ್ಗಟ್ಟಿನಿಂದ ಹಣ ಕಾಸುಗಳ ಓಡಾಟವೂ ತಟಸ್ಥವಾಗಬಹುದು.

ಇಂದು ಹಣವು ಕೈಗಳಲ್ಲಿ ಹಲವು ಜಮೀನ್ದಾರರೊಡನೆ ಮಾತ್ರ ಭದ್ರವಾಗಿರುವಂತಿದೆ.

ಇತರ ಧಾರಣೆಗಳು ಬೀಳುವಾಗ ಈಗ ಅಕ್ಕಿ ಮತ್ತು ಬೆಲ್ಲಗಳ ಧಾರಣೆಗಳೂ ಬೀಳುತ್ತಿರುವುದರಿಂದ ಮಧ್ಯಮ ಮತ್ತು ಮಜೂರ ವರ್ಗದವರ ಪಾಡು ಸುಧಾರಿಸುವಂತಿದೆ. ಪ್ರಭಾತ.

ಕೆ. ಹನುಮಂತಯ್ಯನವರು

ಮೈಸೂರು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿರುವ ಶ್ರೀ ಕೆಂಗಲ್ ಹನುಮಂತಯ್ಯನವರನ್ನು ಮೈಸೂರು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರನ್ನಾಗಿ ಆರಿಸಬೇಕೆಂದು ಕಾಂಗ್ರೆಸ್ ಮೇಲ್ವರಿಷ್ಠರು ಆದೇಶ ಕೊಟ್ಟಂತೆ ಅವರು ಧುರೀಣರಾಗಿ ಆರಿಸಲ್ಪಟ್ಟಿದ್ದಾರೆ.

ಕೆಂಗಲ್ ಹನುಮಂತಯ್ಯನವರು ೧೯೦೮ರಲ್ಲಿ ಜನಿಸಿದರು. ಶ್ರೀ ವೀರಭದ್ರ[illegible]ನ್ ಗೌಡರು ಅವರ ತಂದೆಯವರು. ಶ್ರೀ. ಹನುಮಂತಯ್ಯನವರು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಅಭ್ಯಾಸ ಮಾಡಿ ೧೯೩೦ರಲ್ಲಿ ಬಿ. ಎ. ಪದವಿಯನ್ನು ಸಂಪಾದಿಸಿದರು. ಅನಂತರ ಪುಣೆಯ ಲಾ ಕಾಲೇಜನ್ನು ಪ್ರವೇಶಿಸಿ ೧೯೩೨ರಲ್ಲಿ ಎಲ್. ಎಲ್. ಬಿ. ಪರೀಕ್ಷೆಯನ್ನು ಪಾಸಾಗಿ ವಕೀಲಿಯನ್ನು ಪ್ರಾರಂಭಿಸಿದರು. ಇವರು ೧೯೪೦ರಲ್ಲಿ ಬೆಂಗಳೂರು ಪೌರ ಸಭೆಯ ಅಧ್ಯಕ್ಷರಾಗಿದ್ದರು. ೧೯೪೦ರಿಂದ ೧೯೪೮ರ ವರೆಗೆ ಇವರು ಮೈಸೂರು ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯಾಗಿಯೂ ೧೯೪೫ರಿಂದ ೧೯೪೮ರ ವರೆಗೆ ಆ ಪಕ್ಷದ ಧುರೀಣರಾಗಿಯೂ ಇದ್ದರು. ಹತ್ತು ವರ್ಷ ಅವರು ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ ಇದ್ದರು. ಅಲ್ಲದೆ ಅವರು ನ್ಯಾಶನಲ್ ಕೆಡೆಟ್ ಕೋರ್ ಸಮಿತಿಯ ಸದಸ್ಯರಿರುವರು. ಇವರು ಮೈಸೂರಿನಿಂದ ಈಗ ಪಾರ್ಲಿಮೆಂಟಿನ ಸದಸ್ಯರಾಗಿದ್ದು, ಪಾರ್ಲಿಮೆಂಟಿನಲ್ಲಿಯ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿರುವರು. ಸ್ಟಾಕ್‌ಹಾಮ್‌ದಲ್ಲಿ ೧೯೪೯ರಲ್ಲಿ ಡಬ್ಲಿನಲ್ಲಿ ೧೯೫೦ರಲ್ಲಿ ನಡೆದ ವಿವಿಧ ಪಾರ್ಲಿಮೆಂಟುಗಳ ಪ್ರತಿನಿಧಿಗಳ ಸಮ್ಮೇಳನಗಳಲ್ಲಿ ಶ್ರೀ ಹನುಮಂತಯ್ಯನವರು ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದುಂಟು.

ಈ ಸಲದ ಸಾರ್ವತ್ರಿಕ ಚುನಾವಣೆಗಳಲ್ಲಿ ಇವರು ರಾಮನಗರ ಮತದಾರ ಸಂಘದಿಂದ ಪ್ರತಿಸ್ಪರ್ಧಿಗಳೆಲ್ಲರನ್ನೂ ಸೋಲಿಸಿ ಆರಿಸಿ ಬಂದಿರುವರು. ನೆಹರೂರವರು ಎಲ್ಲರನ್ನೂ ವಿಚಾರಿಸಿ ಈ ಸಲಕ್ಕೆ ಹನುಮಂತಯ್ಯನವರೇ ಪಕ್ಷದ ಧುರೀಣರಾಗಬೇಕೆಂದು ಸೂಚಿಸಿ ಈ ಆಯ್ಕೆಯು ಸರ್ವಾನುಮತದಿಂದ ಆಗಬೇಕೆಂದು ವಿಧಿಸಿದ್ದಾರೆ. ಇತ್ತಲಾಗಿ ಅವರು ಧುರೀಣರಾಗಿ ಆರಿಸಲ್ಪಟ್ಟಿದ್ದು ಅವರು ಮೈಸೂರಿನ ಮುಂದಿನ ಮುಖ್ಯ ಮಂತ್ರಿಗಳಾಗುವರು.

ಸುಭಾಸ್‌ಬಾಬುಗಳು ಮರಣಪಟ್ಟಿದ್ದು ನಿಜ.

ಪಾರ್ಲಿಮೆಂಟಿನಲ್ಲಿ ಪಂಡಿತ ನೆಹರೂಗಳ ಹೇಳಿಕೆ

ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಡಾ. ಎಚ್. ವಿ. ಕಾಮತರು ನೇತಾಜಿ ಸುಭಾಷ ಚಂದ್ರಬೋಸರ ನಿಧನದ ಕುರಿತು ಪ್ರಶ್ನಿಸಿದಲ್ಲಿ ಪ್ರಧಾನ ಮಂತ್ರಿ ಶ್ರೀ. ನೆಹರೂರವರು ಉತ್ತರ ಕೊಡುತ್ತಾ, ೧೯೪೫ನೇ ಆಗೋಸ್ಟ್ ೧೮ಕ್ಕೆ ವಿಮಾನ ಅಪಘಾತ ಸಂಭವಿಸಿ ಸುಭಾಷ ಬಾಬುಗಳು ನಿಧನ ಹೊಂದಿದರೆಂಬ ಸತ್ಯಾಸತ್ಯತೆಯನ್ನು ಪರಿಶೀಲಿಸುವದಕ್ಕಾಗಿ ಡಾ. ಎಸ್. ಎ. ಅಯ್ಯರರು ಕಳೆದ ವರ್ಷ ಮೇ ತಿಂಗಳಿನ ಅಂತ್ಯಕ್ಕೆ ಜಪಾನಿಗೆ ಹೋಗಿದ್ದರೆಂದೂ ಅವರು ಒಪ್ಪಿಸಿರುವ ವರದಿಯಲ್ಲಿ ಟೋಕಿಯೊದಲ್ಲಿಯ ರೆ. ಕೋಜಿ ದೇವಾಲಯದಲ್ಲಿ ಇರಿಸಲ್ಪಟ್ಟಿರುವ ಚಿತಾಭಸ್ಮವು ನೇತಾಜಿಯವರದೇ ಎಂಬುದಕ್ಕೆ ಸಾಗಿ ಎಳ್ಳಷ್ಟು ಸಂಶಯವಿಲ್ಲವೆಂದು ಹೇಳಿರುವರೆಂದೂ ನುಡಿದರು. ಅಲ್ಲದೆ ವಿಮಾನ ಅಪಘಾತದ ಬಗ್ಗೆ ಈ ವರೆಗೆ ದೊರೆತ ವರದಿಗಳಲ್ಲೆಲ್ಲಾ ಇದು ತೀರ ಇತ್ತೀಚಿನದೂ ಹೆಚ್ಚು ವಿವರಗಳುಳ್ಳದ್ದೂ ಆಗಿದೆ. ಕ್ಯಾಂಟನವನ್ನು ತಲಪಿದಾಗ ಅಯ್ಯರರ ಬೆಂಗಾವಲಿಗೆ ಬಂದಿದ್ದ ಕರ್ನಲ್ ಟಾಡಾ ಅವರು ಅವರನ್ನು ಒಂದೆಡೆ ಕರೆದು ಮೊದಲನೆಯ ಸಲ ನೇತಾಜಿಯವರ ವಿಮಾನವು ಅಪ್ಪಳಿಸಿ ಅಪಘಾತಕ್ಕೀಡಾಯಿತು, ಫೋರ್ಮೋಸಾ ಬಳಿಯಲ್ಲಿ ಈ ಅಪಘಾತ ಸಂಭವಿಸಿತು, ನೇತಾಜಿಯವರಿಗೆ ತೀವ್ರ ಗಾಯಗಳಾಗಿದ್ದರಿಂದ ಅಂದೇ ರಾತ್ರಿ ಅವರು ಮರಣಹೊಂದಿದರು. ಕರ್ನಲ ರಹಮಾನರು ವಿಶೇಷ ಗಾಯಗಳಾಗಿದ್ದರಿಂದ ಆಸ್ಪತ್ರೆಯಲ್ಲಿರುವರೆಂದೂ ತಿಳಿಸಿದರು. ಕರ್ನಲ ರಹಮಾನರು ಕೊಟ್ಟ ವಿಮಾನ ಅಪಘಾತದ ವರ್ಣನೆಯು ಅಯ್ಯರರ ವರದಿಯಲ್ಲಿ ಈ ರೀತಿ ಹೇಳಲಾಗಿದೆ 'ನೇತಾಜಿ ಮತ್ತು ನಾವು ಉರಿಯುತ್ತಿರುವ ವಿಮಾನದಿಂದ ಹೊರಬಿದ್ದು ಬಂದರೆಂದೂ ನೇತಾಜಿಯವರು ಬಹಳ ಸುಟ್ಟಿತೆಂದೂ ಹೇಳಲಾಗಿದೆ. ಆ ದಿನ ರಾತ್ರಿ (೧೯೪೫ ಆಗೋಸ್ಟು ೧೮) ಒಂಭತ್ತು ತಾಸಿಗೆ ನೇತಾಜಿಯವರ ಅಂತ್ಯಕ್ರಿಯೆ ಜರಗಿತು. ಮೂರು ವಾರಗಳ ನಂತರ ಅವರ ಅವಶೇಷಗಳನ್ನು ತನ್ನ ವಶಕ್ಕೆ ಕೊಡಲಾಯಿತೆಂದೂ ಬಳಿಕ ೧೯೪೫ ಸಪ್ಟಂಬರ ೬ಕ್ಕೆ ಅಂಬ್ಯುಲನ್ಸ್ ವಿಮಾನದಲ್ಲಿ ಟೋಕಿಯೋಕ್ಕೆ ಬಂದದಾಗಿಯೂ ಕರ್ನಲ್ ರಹಮಾನರು ಹೇಳಿರುವರು. ಇನ್ನೂ ಕೆಲವು ವಿವರಗಳನ್ನು ಕೊಟ್ಟು ಪ್ರಧಾನ ಮಂತ್ರಿಗಳು ಶ್ರೀ ಅಯ್ಯರರ ವರದಿಯು ನಂಬಲರ್ಹತೆಯುಳ್ಳದ್ದೆಂದೂ ನೇತಾಜಿಯವರು ಮರಣಹೊಂದಿದ ಬಗ್ಗೆ ಇನ್ನು ಸಂಶಯಪಡಲು ಕಾರಣವಿಲ್ಲವೆಂದೂ ಹೇಳಿದರು.

ಕೊರಿಯಾ ಯುದ್ಧ.

ಹಾರ್ಟ್‌ಬ್ರೇಕ್ ರಿಜದ ಪೂರ್ವಭಾಗದಲ್ಲಿ ಅರ್ಧ ಮೈಲುದ್ದದ ರಂಗದಲ್ಲಿ ಕಮ್ಯುನಿಸ್ಟರು ಅತ್ಯಂತ ದೊಡ್ಡ ದಾಳಿಯನ್ನು ಪ್ರಾರಂಭಿಸಿದರೆಂದು ತಿಳಿದುಬಂದಿದೆ. ಅವರಿಗೆ ಸಾಕಷ್ಟು ಹಾನಿಯೂ ಆಗಿದೆ ಎಂದು ಯು. ಎಸ್. ರಾಷ್ಟ್ರದ ಎಂಟನೇ ಸೈನ್ಯದಳದ ಕೇಂದ್ರದಿಂದ ತಿಳಿದುಬಂದಿದೆ.

ಉತ್ತರ ಕೊರಿಯಾದ ರಾಜಧಾನಿಯಾದ ಪಿಯೋಂಗ್ಯಾಂಗಿನ ವಿಮಾನ ನಿಲ್ದಾಣಗಳನ್ನು ನಾಶಗೊಳಿಸಲು ಅಮೇರಿಕನ್ ಬಾಂಬರಗಳು ತಾ ೧೭ರ ರಾತ್ರಿ ಉತ್ತರ ಕೊರಿಯಾದ ಮೇಲೆ ಹಾರಾಡಿದವು. ಅಮೇರಿಕನ್ ವಿಮಾನಗಳು ನಿಲ್ದಾಣದ ಮೇಲೆ ೨೦ ಟನ್ ಭಾರದ ಬಾಂಬುಗಳನ್ನು ಒಗೆದವು.

ಬಾಂಬು ಹಾಕಿದುದರ ಪರಿಣಾಮವೇನಾಯಿತೆಂಬುದನ್ನು ನೋಡಲು ಅವಕಾಶವಿಲ್ಲವೆಂದು ತಿಳಿದುಬಂದಿದೆ. ಹಿಮವು ಸುರಿಯುತ್ತಿರುವುದೇ ಇದಕ್ಕೆ ಕಾರಣವೆಂದು ಗೊತ್ತಾಗಿದೆ. ಒಕಿನಾವಾ ದ್ವೀಪದಿಂದ ಅಮೇರಿಕನ್ ವಿಮಾನಗಳು ಸುಮಾರು ೧೦೦೦ ಮೈಲು ಪ್ರಯಾಣಮಾಡಬೇಕಾಯಿತು.

ಕೊಡಗಿನ ಹೊಸ ಮಂತ್ರಿಮಂಡಲ.

ಮಂತ್ರಿಗಳ ಅಧಿಕಾರ ಸ್ವೀಕಾರ.

ತಾರೀಕು ೧೭-೩-೧೯೫೨ರಲ್ಲಿ ಕೊಡಗಿನ ಪ್ರಥಮ ಪ್ರಜಾಪ್ರಭುತ್ವದ್ವಾರಿ ಮಂತ್ರಿಮಂಡಲವು ಅಧಿಕಾರ ಸ್ವೀಕಾರ ಮಾಡಿತು. ಬೆಳಗ್ಗೆ ೧೦-೪೫ ಗಂಟೆಗೇ ಶಾಸನ ಸಭಾಂಗಣವು ಆಹ್ವಾನಿತರಿಂದ ತುಂಬಿತ್ತು. ಶಾಸನ ಸಭಾ ಸದಸ್ಯರೂ ಇತರ ಗಣ್ಯರೂ ಮಹನೀಯರೂ, ಮಹಿಳೆಯರೂ ಇದ್ದರು. ಪ್ರತ್ಯೇಕ ಪಕ್ಷದ ಶಾಸನ ಸಭಾ ಸದಸ್ಯರಲ್ಲಿ ಒಬ್ಬಿಬ್ಬರು ವಿನಾ ಬೇರೆಯವರು ಬಂದಿರಲಿಲ್ಲ. ಹನ್ನೊಂದು ಗಂಟೆಗೆ ಸರಿಯಾಗಿ ಚೀಫ್ ಕಮಿಷನರಿಂದ ಬೇಡಿಯವರು ಶ್ರೀ ಸಿ. ಎಂ. ಪೂಣಚ್ಚ ಮತ್ತು ಶ್ರೀ ಕೆ. ಮಲ್ಲಪ್ಪ ಇವರುಗಳ ನೇಮಕವನ್ನು ಒಪ್ಪಿದ ಒಕ್ಕೂಟದ ಪ್ರೆಸಿಡೆಂಟರ ಆಜ್ಞೆಯನ್ನು ಓದಿದರು. ನಂತರ ಚೀಫ್ ಕಮಿಷನರ ಸಮ್ಮುಖದಲ್ಲಿ ಒಂದನೇ ಮಂತ್ರಿ ಪೂಣಚ್ಚನವರೂ, ಎರಡನೇ ಮಂತ್ರಿ ಮಲ್ಲಪ್ಪನವರೂ ಪ್ರತಿಜ್ಞಾ ವಿಧಿಯನ್ನು ಮುಗಿಸಿದರು. ನಂತರ ಚೀಫ್ ಕಮಿಷನರು ಹೊಸ ಮಂತ್ರಿಗಳನ್ನು ಕರೆದುಕೊಂಡು ಪ್ರತಿ ಆಫೀಸಿಗೆ ಭೇಟಿ ಇತ್ತು ಅಧಿಕಾರಿಗಳ ಪರಿಚಯ ಮಾಡಿ ಕೊಟ್ಟರು. ಹಿಂದೆ ಸಹಕಾರ ಸಂಘಗಳ ರಿಜಿಸ್ಟ್ರಾರರಿದ್ದ ಮನೆಯಲ್ಲಿ ಮಂತ್ರಿಗಳ ಆಫೀಸನ್ನಿಡಲಾಗಿದೆ.

ಮಂತ್ರಿಗಳ ಸೂಕ್ಷ್ಮ ಪರಿಚಯ.

ತಾರೀಕು ೧೭ರಿಂದ ಕೊಡಗಿನಲ್ಲಿ ಪ್ರಜಾಪ್ರಭುತ್ವದ್ವಾರಿ ಮಂತ್ರಿಮಂಡಳದ ರಚನೆಯಾಗಿದೆ. ಮಂತ್ರಿಮಂಡಳದಲ್ಲಿ ಎರಡು ಜನ ಮಂತ್ರಿಗಳಾಗಿದ್ದಾರೆ. ಶ್ರೀ. ಸಿ. ಎಂ. ಪೂಣಚ್ಚನವರು ಪ್ರಧಾನ ಮಂತ್ರಿಗಳಾಗಿದ್ದಾರೆ. ಶ್ರೀ. ಮಲ್ಲಪ್ಪನವರು ಎರಡನೆ ಮಂತ್ರಿಗಳಾಗಿದ್ದಾರೆ. ಇವರಿಬ್ಬರ ಸೂಕ್ಷ್ಮ ಪರಿಚಯವನ್ನು ವಾಚಕರಿಗಾಗಿ ಇಲ್ಲಿ ಕೊಡಲಾಗಿದೆ.

ಶ್ರೀ ಸಿ. ಎಂ. ಪೂಣಚ್ಚನವರು.

ನಲುವತ್ತೆರಡು ವಯಸ್ಸಿನ ಪೂಣಚ್ಚನವರು ದಕ್ಷಿಣ ಕೊಡಗಿನ ಹೊಸೂರು ಗ್ರಾಮಸ್ಥರು. ಇವರು ಮಡಿಕೇರಿ ಹೈಸ್ಕೂಲಲ್ಲಿ ವಿದ್ಯಾಭ್ಯಾಸ ಮುಗಿಸಿ ಮಂಗಳೂರಿಗೆ ಕಾಲೇಜಿಗೆ ಹೋದರು. ಶಾಲಾ ಜೀವನದಲ್ಲಿ ಅಪ್ರತಿಮ ಪ್ರಭೆಯೇನೂ ತೋರಿಬರದಿದ್ದರೂ ಸಾಮಾನ್ಯ ವಿದ್ಯಾರ್ಥಿಯಾಗಿದ್ದರು. ವಿದ್ಯಾಭ್ಯಾಸವನ್ನು ಅರ್ಧದಲ್ಲಿ ಮುಗಿಸಿ ಮನೆಗೆ ಬಂದ ಇವರು 'ಕೊಡಗು' ಪತ್ರಿಕೆಯ ಉಪಸಂಪಾದಕರಾಗಿ ಸೇರಿದರು. ಆಗಲೇ ಅಖಿಲ ಭಾರತ ಕಾಂಗ್ರೆಸಿಗೂ ಸೇರಿ ಕಾಂಗ್ರೆಸ್ ಚಳವಳಿಯಲ್ಲಿ ಭಾಗವಹಿಸಿದರು. ಇವರು ೧೯೩೨-೩೪ರಲ್ಲಿ ಮತ್ತು ೧೯೪೨ರಲ್ಲಿ ಕಾಂಗ್ರೆಸ್ ಚಳವಳಿಯ ಸಂಬಂಧ ಜೈಲಿಗೆ ಹೋದರು. ಕೊಡಗು ಜಿಲ್ಲಾ ಕಾಂಗ್ರೆಸ್ಸಿನ ಕಾರ್ಯದರ್ಶಿಯಾಗಿ ಅನಂತರ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸದಸ್ಯರಾಗಿ ಕೆಲಸ ಮಾಡಿದರು. ಕೊಡಗಿನ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿದ್ದರು. ಅನಂತರ ಶಾಸನ ಸಭೆಯ ಸದಸ್ಯರಾಗಿದ್ದರು. ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಮುಂದಾಳಾಗಿಯೂ ಶ್ರೀಯುತರು ಕೆಲಸ ಮಾಡಿದ್ದಾರೆ. ೧೯೪೬ರಲ್ಲಿ ಇವರು ರಾಜ್ಯಘಟನಾ ಸಭೆಗೆ ಕೊಡಗಿನ ಪ್ರತಿನಿಧಿಯಾಗಿ ಆರಿಸಲ್ಪಟ್ಟರು. ರಾಜ್ಯಘಟನಾ ಸಭೆಯು ವಿಸರ್ಜಿಸಲ್ಪಟ್ಟ ನಂತರ ಕೇಂದ್ರ ಶಾಸನ ಸಭೆಯ ಸದಸ್ಯರಾಗಿದ್ದರು. ಇವರು ಕೇಂದ್ರ ಶಾಸನ ಸಭೆಯಲ್ಲಿದ್ದಾಗ ಡಿಫೆನ್ಸ್ ಕಮಿಟಿ ಮತ್ತು ಟೀ ಸೆಸ್ ಕಮಿಟಿಗಳಲ್ಲಿ ಕೆಲಸ ಮಾಡಿದರು. ೧೯೫೨ರ ಸಾರ್ವತ್ರಿಕ ಚುನಾವಣೆಯಲ್ಲಿ ಇವರು ಶಾಸನ ಸಭೆಗೆ ಆರಿಸಿ ಬಂದರು. ಕೊಡಗಿನಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಇವರನ್ನು ಮುಂದಾಳಾಗಿ ಆರಿಸಿದರು. ಈಗ ಇವರು ಕೊಡಗಿನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ಶ್ರೀ. ಪೂಣಚ್ಚನವರು ಆದರ್ಶ ರೈತರ ಮಕ್ಕಳು. ರೈತರ ಸ್ವಭಾವ ಸಿದ್ಧವಾದ ಅನೇಕ ಗುಣಗಳು ಇವರಲ್ಲಿವೆ. ಇವರು ಸರಳ ಜೀವಿಗಳಿದ್ದಾರೆ. ರೈತರ ಹಿತಕ್ಕಾಗಿ ಇವರು ತುಂಬಾ ಶ್ರಮಿಸಬಹುದಾಗಿ ನಂಬಬಹುದಾಗಿದೆ.

ಶ್ರೀ. ಕೆ. ಮಲ್ಲಪ್ಪನವರು.

ಶ್ರೀಯುತರು ಶನಿವಾರಸಂತೆ ಹೋಬಳಿಯ ಕಿತ್ತೂರು ಗ್ರಾಮದವರು. ಇವರೂ ರೈತರ ಮಕ್ಕಳೇ. ಶ್ರೀಯುತರು ೧೯೦೯ರಲ್ಲಿ ಜನಿಸಿದರು. ತಮ್ಮ ಪ್ರಾಥಮಿಕ ಮತ್ತು ಹೈಸ್ಕೂಲು ವಿದ್ಯಾಭ್ಯಾಸವನ್ನು ಕೊಡಗಿನಲ್ಲಿ ಮುಗಿಸಿ ಇವರು ಕಾಲೇಜು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಹೋಗಿ ಸೆಂಟ್ರಲ್ ಕಾಲೇಜಿನಲ್ಲಿ ಬಿ. ಎ. ಡಿಗ್ರಿ ಪಡೆದು ಮತ್ತೆ ಮದ್ರಾಸಿನಲ್ಲಿ ಲಾ ಡಿಗ್ರಿ ಪಡೆದರು. ೧೯೪೫ರ ಚುನಾವಣೆಯ ಕಾಲಕ್ಕೆ ಇವರು ಕಾಂಗ್ರೆಸಿಗೆ ಸೇರಿದರು. ಇದಕ್ಕೆ ಮೊದಲು ಇವರು ಕೊಡಗು ಶಾಸನ ಸಭೆಯಲ್ಲಿ ಸ್ವತಂತ್ರ ಸದಸ್ಯರಾಗಿದ್ದರು. ಇವರು ಮಡಿಕೇರಿ ಪುರಸಭೆಯ ಅಧ್ಯಕ್ಷರಾಗಿ ೧೯೪೭ರಿಂದ ಈ ವರೆಗೆ ಕೆಲಸ ಮಾಡಿದ್ದಾರೆ. ಕಳೆದ ಚುನಾವಣೆಯಲ್ಲಿ ಶನಿವಾರಸಂತೆ ಹೋಬಳಿಯಿಂದ ಆರಿಸಿಬಂದಿದ್ದಾರೆ.

ಶ್ರೀಯುತರು ಸ್ವಲ್ಪ ಸಿಡುಕು ಸ್ವಭಾವದವರಾದರೂ ಹೃದಯ ಒಳ್ಳೆಯದು. ಜನರಿಗೆ ಹಿತಮಾಡಬೇಕೆಂಬ ಕಾಂಕ್ಷೆ ಇರುವವರು. ಇವರಿಬ್ಬರ ಈ ಕಾಂಗ್ರೆಸ್ ಮಂತ್ರಿಮಂಡಳವು ಶಕ್ತಿಮೀರಿ ದುಡಿದು ಕೊಡಗಿನ ಹಿತವನ್ನು ಸಾಧಿಸಲೆಂಬುದೇ ಎಲ್ಲರ ಬಯಕೆ.

ಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದ ನಂತರ ಇವರಿಬ್ಬರೂ ಒಂದು ಪ್ರಕಟಣೆಯನ್ನು ಹೊರಡಿಸಿ ಕೊಡಗಿನ ಜನತೆಯ ಸಹಕಾರವನ್ನು ಬಯಸಿದ್ದಾರೆ. ಅವರ ಹೇಳಿಕೆ ಹೀಗಿದೆ. 'ಕೊಡಗು ರಾಜ್ಯದ ಮಂತ್ರಿಪದದ ಮಹಾಜವಾಬ್ದಾರಿಯನ್ನು ನಾವು ಈ ದಿನ ವಹಿಸಿಕೊಂಡಿದ್ದೇವೆ. ನಮ್ಮ ಮುಂದಿರುವ ಕಾರ್ಯ ಮತ್ತು ಜವಾಬ್ದಾರಿಯು ಗಹನತರವಾದುದೆಂದೂ ಕೊಡಗಿನ ಜನತೆಯ ಸಹಾಯ್ಯ ಸಹಕಾರದಿಂದ ಮಾತ್ರ ಅದನ್ನು ಸಾಧಿಸಲು ಸಾಧ್ಯವಾಗುವುದೆಂದೂ ತಿಳಿದಿರುವೆವು. ಕೊಡಗಿನ ಎಲ್ಲಾ ಅಭಿಪ್ರಾಯದ ಜನರು ನಮಗೆ ತಮ್ಮ ಹೃತ್ಪೂರ್ವಕ ಸಹಾಯ ಸಹಕಾರಗಳನ್ನು ಕೊಡುವರೆಂದು ನಂಬಿರುವೆವು. ಕೊಡಗಿನ ಜನರು ನಮ್ಮ ಮೇಲಿರಿಸಿ 'ವಿಶ್ವಾಸ ಮತ್ತು ನಂಬಿಕೆಗೆ ಯೋಗ್ಯವಾಗಿ ದುಡಿಯುವ ಶಕ್ತಿ ಮನ್ನು ಬುದ್ಧಿಯನ್ನೂ ಭಗವಂತನು ಕೊಡಲೆಂದು ಪ್ರಾರ್ಥಿಸುತ್ತೇವೆ.'

ಜನರು ಸಹಕರಿಸಬೇಕು.

ಕೊಡಗಿನ ಜನರು ತಮ್ಮ ಮತಭೇದಗಳನ್ನು ಮರೆತು ಒಗ್ಗಟ್ಟಾಗಬೇಕೆಂದು ಭಾರತದ ಸರ್ವ ಸೇನಾಪತಿ ಜನರಲ್ ಕೆ. ಎಂ. ಕಾರ್ಯಪ್ಪನವರ ಪಿತರಾದ ಶ್ರೀ ಮಾದಪ್ಪನವರು ಕೊಡಗಿನ ಜನರಿಗೆ ಅಪೀಲು ಮಾಡಿಕೊಂಡಿರುವರು.

ಕೊಡಗಿನಲ್ಲಿ ಪ್ರಥಮ ಜನಪ್ರಿಯ ಮಂತ್ರಿಮಂಡಲವು ಸ್ಥಾಪನೆಯಾದ ಬಗ್ಗೆ ಈ ವೃದ್ಧ ಪಿತಾಮಹರು ಕೊಡಗಿನ ಮಂತ್ರಿಮಂಡಲಕ್ಕೆ ವಿಶೇಷ ಸಂದೇಶವನ್ನು ಕಳಿಸಿದ್ದು ವಿಶಾಲ ಭಾವನೆಯನ್ನಿಟ್ಟುಕೊಳ್ಳಲು ಮತ್ತು ಬಡ ಸಹೋದರ ಜನತೆಯ ಮೇಲೆ ಕೃಪಾ ದೃಷ್ಟಿಯನ್ನಿಡಲು ಅವರನ್ನು ಕೇಳಿಕೊಂಡಿರುವರು. ಕೊಡಗಿನ ಜನತೆಯು ಭಾರತದ ಒಳಗೆ ಮತ್ತು ಹೊರಗೆ ತೋರಿಸಿದ ಶೌರ್ಯ ಮತ್ತು ಸೇವಾ ಭಾವನೆಯಿಂದ ದೊರಕಿದ ಗೌರವವನ್ನು ಇದೊಂದೇ ರೀತಿಯಿಂದ ಕಾಪಾಡಲು ಸಾಧ್ಯವೆಂದು ಅವರು ಮುಂದುವರಿಯುತ್ತಾ ಹೇಳಿದರು.

ಶ್ರೀ ಮಾದಪ್ಪನವರು ದಿಲ್ಲಿಯಲ್ಲಿ ಜವಾಹರಲಾಲರನ್ನು ಭೇಟಿಯಾದುದನ್ನು ಪ್ರಸ್ತಾಪಿಸಿ ಕೊಡಗಿನ ಜನತೆಯ ಬಗ್ಗೆ ನೆಹರೂರವರಿಗೆ ಪ್ರೀತಿ ಗೌರವಗಳಿರುವವೆಂದು ಹೇಳಿರುವರು. ಕೊಡಗಿನ ಅಭಿವೃದ್ಧಿಯು ಭಾರತದ ಉಳಿದ ಭಾಗದೊಡನೆ ಸಮೀಪದ ಬಾಂಧವ್ಯವನ್ನಿಟ್ಟುಕೊಳ್ಳುವುದರಲ್ಲಿರುವದೆಂದು ಅವರು ನುಡಿದಿರುವರು.

ಮಂತ್ರಿಮಂಡಳದ ಬಗ್ಗೆ ಪ್ರಸ್ತಾಪಿಸುತ್ತಾ ಶ್ರೀ ಮಾದಪ್ಪನವರು ಶ್ರೀ ಸಿ. ಎಂ. ಪೂಣಚ್ಚ ಮತ್ತು ಕೆ. ಮಲ್ಲಪ್ಪನವರು ಹಳಗಿದವರಿದ್ದು ಸಮರ್ಥ ರೀತಿಯಿಂದ ಆಡಳಿತ ನಡೆಸುವರೆಂದು ಅಭಿಪ್ರಾಯ ವ್ಯಕ್ತಗೊಳಿಸಿರುವರು. ಕೊನೆಯಲ್ಲಿ ಅವರು ಕೊಡಗಿನ ಜನತೆಗೆ ವಿನಂತಿ ಮಾಡಿಕೊಳ್ಳುತ್ತಾ—"ಹಿಂದಿನವರಿಂದ ಬಂದ ಮಹಾ ಪರಂಪರೆಯನ್ನು ಕಾಯ್ದುಕೊಳ್ಳ" ಬೇಕೆಂದು ಕೇಳಿಕೊಂಡಿರುವರು.

ಕೇಂದ್ರ ಮಂತ್ರಿಮಂಡಲ

ಹೊಸದಾಗಿ ರಚಿತವಾಗಿರುವ ಕೇಂದ್ರ ಮಂತ್ರಿ ಮಂಡಳದಲ್ಲಿ ೧೫ ಜನ ಮಂತ್ರಿಗಳಿರುವರೆಂದು ನಂಬಲಾಗಿದೆ. ಈಗಿರುವ ಮಂತ್ರಿಗಳ ಪೈಕಿ ಅಜಾದ್, ಸರದಾರ ಬಲದೇವ ಸಿಂಗ್, ಜಗಜೀವನ್ ರಾಮ್, ಎನ್. ವಿ. ಗಾಡ್ಗಿಲ್, ಎನ್. ಗೋಪಾಲಸ್ವಾಮಿ ಅಯ್ಯಂಗಾರ್, ಚಿಂತಾಮಣಿ ದೇಶಮುಖ್, ಡಾ. ಕೈಲಾಸನಾಥ ಖಟ್ಜು ಇವರು ಹೊಸ ಮಂತ್ರಿಮಂಡಳದಲ್ಲೂ ಉಳಿಯುವರು. ರಾಜಕುಮಾರಿ ಅಮೃತಕೌರ್, ಮೆಹತಾಬ, ಮುನಷಿ ಈ ಮೂವರಿಗೂ ಗವರ್ನರ ಪದವಿ ಸಿಗುವ ಸಂಭವ ಕಾಣುವುದು. ರಾಫಿ ಅಹಮದ್ ಕಿದ್ವಾಯಿಯವರು ಹೊಸ ಮಂತ್ರಿ ಮಂಡಳದ ಒಬ್ಬ ಸದಸ್ಯರಾಗುವದು ಅಸ ಭವವಲ್ಲ. ಟಿ. ಟಿ ಕೃಷ್ಣಮಾಚಾರಿ, ಅಜಿತ ಪ್ರಸಾದ್ ಜೈನ, ಇವರು ಮಂತ್ರಿ ಮಂಡಲಕ್ಕೆ ಬರಬಹುದಾದ ಹೊಸಬರೆಂದು ಅಂದಾಜು ಮಾಡಲಾಗುತ್ತಿದೆ.

ವಿಜಯಲಕ್ಷ್ಮಿ ಪಂಡಿತರು ಮಂತ್ರಿ ಮಂಡಳದ ರಚನೆಯ ಕಾಲಕ್ಕೆ ಚೀನಾಕ್ಕೆ ಹೋಗಿಬಿಡುವದರಿಂದ ಅವರ ಹೆಸರು ಮಂತ್ರಿಮಂಡಳದಲ್ಲಿ ಸೇರುವ ಸಂಭವ ಬಹಳ ಕಡಿಮೆ ಎಂದು ಗೊತ್ತಾಗಿದೆ

ಹೊಸ ಪಾರ್ಲಿಮೆಂಟು ಎಂದು ಕೂಡುವುದು?

ಬರುವ ಮೇ ತಿಂಗಳ ೧೩ನೇ ತಾರೀಕಿನ ಹೊತ್ತಿಗೆ ಹೊಸ ಪಾರ್ಲಿಮೆಂಟು ಆರಂಭವಾಗಬಹುದೆಂದು ನಿರೀಕ್ಷಿಸಲಾಗಿದೆ. ಎಪ್ರಿಲ್ ತಿಂಗಳ ಮಧ್ಯ ಭಾಗದ ಹೊತ್ತಿಗೆ ಹೊಸ ಪಾರ್ಲಿಮೆಂಟಿನ ಅಧಿವೇಶನದ ಆಮಂತ್ರಣ ಕೊಡಬಹುದು. ಈ ಆಮಂತ್ರಣ ಕೊಟ್ಟ ಕೂಡಲೇ ಹಳೆಯ ಪಾರ್ಲಿಮೆಂಟು ವಿಸರ್ಜಿತವಾದಂತೆಯೇ. ರಾಷ್ಟ್ರಾಧ್ಯಕ್ಷರ ಆಯ್ಕೆಯು ಒಮ್ಮತದಿಂದ ನಡೆದುದಾದರೆ, ಅದರ ಫಲಿತಾಂಶದ ಘೋಷಣೆಯು ಎಪ್ರಿಲ್ ಮಧ್ಯ ಭಾಗದಲ್ಲೇ ಹೊರಬೀಳಬಹುದು. ಸ್ಪರ್ಧೆ ಇದ್ದರೆ ಮೇ ತಿಂಗಳ ಮೊದಲ ವಾರದಲ್ಲಿ ಈ ಬಗ್ಗೆ ಮತದಾನ ನಡೆಯಬಹುದು. ರಾಜ್ಯ ವಿಧಾನ ಸಭೆಯ ಸದಸ್ಯರುಗಳು ತಮ್ಮ ರಾಜ್ಯದ ಮುಖ್ಯ ಕೇಂದ್ರದಲ್ಲಿ ಸಭೆಗೂಡಿ ಮತದಾನ ನಡೆಸುವರು. ಪಾರ್ಲಿಮೆಂಟ್ ಸದಸ್ಯರು ಮಾತ್ರ ದಿಲ್ಲಿಗೆ ಬಂದು ತಮ್ಮ ಮತ ಹಾಕಬೇಕು.

ಅಧಿವೇಶನ ಆರಂಭವಾಗುವ ಮೂರು ದಿನಗಳ ಮೊದಲೇ ಪಾರ್ಲಿಮೆಂಟಿನ ಸದಸ್ಯರು ದಿಲ್ಲಿಗೆ ಹೋಗಬೇಕು. ಈ ಮೂರು ದಿವಸಗಳ ಅವಧಿಯಲ್ಲಿ ಉಪಾಧ್ಯಕ್ಷರ ಆಯ್ಕೆ ಮಾಡಬೇಕಾಗುವುದು. ಪಾರ್ಲಿಮೆಂಟಿನ ಹೊಸ ಅಧ್ಯಕ್ಷರನ್ನು ಆರಿಸಿದ ನಂತರ ಸದಸ್ಯರ ಪ್ರತಿಜ್ಞಾವಿಧಿ ಎರಡು ದಿವಸಗಳು ನಡೆಯುವುದು. ಅಷ್ಟು ಹೊತ್ತಿಗಾಗಲೇ ಕೇಂದ್ರದ ಹೊಸ ಮಂತ್ರಿ ಮಂಡಲವೂ ಪ್ರತಿಜ್ಞಾವಿಧಿ ಕೈಕೊಂಡು ಕಾರ್ಯಾರಂಭಿಸುವದೆಂದು ನಿರೀಕ್ಷಿಸಿದೆ. ಅಷ್ಟೇ ಅಲ್ಲ ಹೊಸ ಪಾರ್ಲಿಮೆಂಟನ್ನುದ್ದೇಶಿಸಿ ಮಾಡುವ ಹೊಸ ರಾಷ್ಟ್ರಾಧ್ಯಕ್ಷರ ಭಾಷಣದಲ್ಲಿ ಹೊಸ ಸರಕಾರದ ಧ್ಯೇಯ ಘೋಷಣೆಯೂ ಒಳಗೊಂಡಿರುವುದು.

ಕೊಡಗು

ತಾ. ೨೧-೩-೧೯೫೦ನೇ ಶುಕ್ರವಾರ

ಬಡವನ ಹಿತವಾಗುವದೇ ?

ಕಳೆದ ಕೆಲವು ದಿನಗಳಿಂದ ಸಾಮಾನುಗಳ ಬೆಲೆಯು ತೀವ್ರವಾಗಿ ಕೆಳಗಿಳಿಯತೊಡಗಿ ಮಾಲುಗಳು ಅಗ್ಗವಾಗಿವೆ. ಬೆಲೆಯು ಈ ರೀತಿ ಇಳಿಯ ತೊಡಗಿದುದರಿಂದ ವ್ಯಾಪಾರಿಗಳೆಲ್ಲರೂ ಗಾಬರಿಗೊಂಡಿದ್ದಾರೆ. ಬೆಲೆ ಇಳಿಯದಂತೆ ಮಾಡಲು ಅನೇಕ ಯತ್ನಗಳನ್ನೂ ಅವರು ಮಾಡುತ್ತಿದ್ದಾರೆ. ಆದರೆ ಈ ವರೆಗೆ ಬೆಲೆಯ ಏರುವಿಕೆಯಿಂದ ತೊಂದರೆಪಟ್ಟ ಸಾಮಾನ್ಯ ಜನರು ಈ ಇಳಿತವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಿದ್ದಾರೆ. ಇನ್ನೂ ಬೆಲೆ ಇಳಿಯಬೇಕೆಂಬ ಇಚ್ಛೆಯನ್ನು ವ್ಯಕ್ತಮಾಡುತ್ತಿದ್ದಾರೆ. ಇದು ಸ್ವಾಭಾವಿಕವಾದುದು. ಏರಿಕೆಯ ಬೆಲೆಯ ಕಾಲವಲ್ಲಿ, ವಸ್ತುಗಳು ಸರಿಯಾಗಿದೊರೆಯದ ಕಾಲದಲ್ಲಿ ಸಾಮಾನ್ಯ ಜನರು ಕಷ್ಟಪಡುತ್ತಿದ್ದಾಗ ಆ ಕಷ್ಟದ ಸಂದರ್ಭವನ್ನು ತಮ್ಮ ಲಾಭದ ಮಾರ್ಗವಾಗಿ ಅನೇಕ ವ್ಯಾಪಾರಸ್ಥರು ಮಾಡಿಕೊಂಡು ಕಳ್ಳ ಸಂತೆ, ಲಾಭ ಬಡಕತನದಿಂದ ವಿಪುಲ ಹಣ ಮಾಡಿ ಶೀಘ್ರ ಧನಾಢ್ಯರಾದರು. ಇಂದು ಅಂಥಾ ಸಂದರ್ಭವು ತಪ್ಪಿ ವಸ್ತುಗಳ ಬೆಲೆ ಇಳಿದು ಮಾಲುಗಳನ್ನು ಶೇಕರಿಸಿ ಇಟ್ಟುಕೊಂಡವರು ವಿಪರೀತ ನಷ್ಟಕ್ಕೊಳಗಾಗುವ ಸಂದರ್ಭ ಬಂದಿರುವಾಗ ಅಂಥಾ ಪರಿಸ್ಥಿತಿಯನ್ನು ನಿವಾರಿಸಿ ಹೆಚ್ಚಿನ ತೊಂದರೆ ತಮಗಾಗದಂತೆ ಅವರು ಪ್ರಯತ್ನಿಸುವದು ಸಾಮಾನ್ಯವಾದುದು. ಅದರಂತೆಯೇ ಲಾಭ ಬಡಕರ ಹಾಗೂ ಕಳ್ಳಸಂತೆಯವರ ಕೋಟಲೆಗೆ ಸಿಕ್ಕಿ ವಿಪರೀತ ಕಷ್ಟಪಟ್ಟ ಜನರು ಇನ್ನೂ ಬೆಲೆ ಇಳಿದು ಜೀವನವು ಸುಖಮಯವಾಗಲೆಂದು ಆಶಿಸುವದೂ ಸ್ವಾಭಾವಿಕವಾದುದು. ಆದರೆ ಇವರಿಬ್ಬರ ಇಚ್ಛೆಯು ಅವರು ಆಶಿಸಿದಂತೆ ಆದರೆ ದೇಶಕ್ಕೆ ಹಾನಿಯಾಗುವದು. ನಾಣ್ಯದ ಉಬ್ಬರವಾಗಿ ವಸ್ತುಗಳ ಬೆಲೆ ಏರಿ, ವಸ್ತುಗಳೇ ದೊರೆಯದಾಗುವದು ಎಷ್ಟು ಹಾನಿಕಾರಕವೋ ಅದೇ ರೀತಿ ಬೆಲೆ ಇಳಿದು ಉತ್ಪಾದಿಸಲ್ಪಟ್ಟ ವಸ್ತುಗಳನ್ನು ಕೊಂಡುಕೊಳ್ಳುವವರೇ ಇಲ್ಲದಿದ್ದರೆ ಅದರಿಂದಲೂ ಹಾನಿಯುಂಟು. ಆದ್ದರಿಂದ ದೇಶದಲ್ಲಿ ಉತ್ಪಾದನೆಯಾಗುವ ವಸ್ತುಗಳಿಗೂ, ಪ್ರಚಾರದಲ್ಲಿರುವ ಹಣಕ್ಕೂ ಒಂದು ಸಂಬಂಧವಿರಬೇಕು. ಆ ತೂಕ ತಪ್ಪಿ ಯಾವುದಾದರೊಂದು ಹೆಚ್ಚಾದರೆ ಆರ್ಥಿಕ ಅವ್ಯವಸ್ಥೆಯಾಗಿ ಉಬ್ಬರ ಮತ್ತು ಇಳಿತಕ್ಕೆ ಕಾರಣವಾಗುವದು.

ನಮ್ಮದ ಪರಿಸ್ಥಿತಿಯಲ್ಲಿ ಉಂಟಾಗಿರುವ ವಸ್ತುಗಳ ಇಳಿಮುಖ ಧಾರಣೆಯು ಅವಶ್ಯವೂ ಶುಭ ಚಿಹ್ನೆಯೂ ಎಂದು ಹೇಳುವದರಲ್ಲಿ ಸಂಶಯವಿಲ್ಲ. ಈ ಇಳಿಮುಖಕ್ಕೆ ಕಾರಣವನ್ನು ಹಲವರು ಹಲವು ರೀತಿ ಹೇಳುತ್ತಾರೆ. ಜಗತ್ತಿನ 'ಮಾನಿಟರಿ ಫಂಡು', ಚಿನ್ನ ಉತ್ಪಾದಿಸುವ ದೇಶಗಳು ತಮ್ಮ ಚಿನ್ನವನ್ನು ನಿರ್ಬಾಧಕವಾಗಿ 'ಫ್ರೀ ಮಾರ್ಕೆಟ'ನಲ್ಲಿ ಮಾರಾಟ ಮಾಡುವುದೆಂದು ನಿರ್ಣಯಿಸಿದ್ದರಿಂದ ಪೇಟೆಯಲ್ಲಿ ಚಿನ್ನದ ವಹಿವಾಟ ಹೆಚ್ಚಾದುದಲ್ಲದೆ ಕಳ್ಳಾಟಿಕೆಯಲ್ಲಿ ಚಿನ್ನವು ಬೇರೆ ಕಡೆಗಳಿಂದ ಮಾರ್ಕೆಟಿಗೆ ಬರಲು ಮಾರ್ಗವಾಯಿತು. ಇದರಿಂದ ಚಿನ್ನದ ಬೆಲೆ ಇಳಿದು ಪೌನಿನ ಕ್ರಯ ಕಡಿಮೆಯಾಯಿತು. ಮತ್ತೊಂದು ಕಾರಣವೆಂದರೆ ಪಾಕಿಸ್ತಾನ ಮತ್ತು ಇಂಡಿಯಾಗಳಲ್ಲಿ ಸೆಣಬಿನ ಬೆಳೆ ಬಹು ಉತ್ತಮವಿದ್ದು ಸ್ಟಾಕು ಹೆಚ್ಚಾದ ಕಾರಣ ಬೆಲೆ ಇಳಿಯಲೇ ಬೇಕಾಯಿತು. ವಿದೇಶಗಳಿಂದ ಆರಳೆಯು ಈ ಹಲವು ವಾರಗಳಲ್ಲಿ ವಿಪರೀತವಾಗಿ ಬಂದಿದೆ. ಇಳಿತಕ್ಕೆ ಇದೂ ಒಂದು ಕಾರಣ. ಹೊರಗೆ ಹೋಗುವ ವಸ್ತುಗಳಿಗೆ ಹೆಚ್ಚಿನ ರಫ್ತು ಕಂದಾಯ ಹಾಕಿರುವದರಿಂದ ಅವು ಹೆಚ್ಚಾಗಿ ದೇಶದಲ್ಲೇ ಉಳಿಯಬೇಕಾಗಿ ಬಂದು ಬೆಲೆ ಇಳಿಯಲು ಮತ್ತೊಂದು ಕಾರಣವಾಯಿತು. ಈ ಕಾರಣಗಳಲ್ಲದೆ ವಿದೇಶಗಳ ಸಂತೆಯೂ ಈ ಬೆಲೆ ಇಳಿತಕ್ಕೆ ಒಂದು ಪ್ರಾಮುಖ್ಯ ಕಾರಣವಾಗಿದೆ. ಕೊರಿಯಾದ ಯುದ್ಧ ಪರಿಸ್ಥಿತಿಯಿಂದ ಹಿಂದು ರಾಷ್ಟ್ರಗಳೆಲ್ಲಾ ಸಾಧನ ಸಾಹಿತ್ಯ ಸಂಗ್ರಹಕ್ಕೆ ತೊಡಗಿದ್ದು ವಸ್ತುಗಳ ಬೆಲೆ ಏರಲು ಕಾರಣವಾಗಿತ್ತು. ಆದರೆ ಈಗ ಪರಿಸ್ಥಿತಿ ಹಾಗಿಲ್ಲ. ಈ ಹಲವಾರು ಕಾರಣಗಳಿಂದ ಬೆಲೆ ಇಳಿಯತೊಡಗಿದೆ. ಬೆಲೆಯು ಇಳಿದು ಕೊರಿಯಾ ಯುದ್ಧದ ಮೊದಲಿದ್ದ ಅಂತಸ್ತಿನಲ್ಲಿ ನಿಲ್ಲಬಹುದೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಹೇಗಿದ್ದರೂ ಜೀವನಾವಶ್ಯಕ ಸಾಧನ ಸಾಹಿತ್ಯಗಳ ಬೆಲೆ ಕೆಳಗಿಳಿಯಬೇಕೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಹಾಗೆ ಕೆಳಗಿಳಿದರೆ ಮಾತ್ರ ಬಡಜನರ ಜೀವನ ಸುಖಮಯವಾದೀತು.

ಈ ಇಳಿತದಿಂದ ಜನತೆಗೆ ಹಿತವಾಗಬೇಕಿದ್ದರೆ ತರಗೆಲೆಯಂತೆ ಹಾರಾಡುತ್ತಿದ್ದ ರೂಪಾಯಿಯ ಬೆಲೆ ಏರಲಿದೆಯೆಂಬುದನ್ನು ತಿಳಿದು ಸರ್ವರೂ ಜಾಗರೂಕರಾಗಬೇಕು. ವಸ್ತುಗಳು ಅಗ್ಗವಾಗುವ ಸಂದರ್ಭವಿರುವದರಿಂದ ಜನರು ಕೂಡಿಹಾಕುವ ಮನೋವೃತ್ತಿಯನ್ನು ಬಿಟ್ಟು ವರ್ತಿಸಬೇಕು. ತಮಗುಂಟಾದ ನಷ್ಟವನ್ನು, ಆಘಾತವನ್ನು ತಪ್ಪಿಸಲು ವ್ಯಾಪಾರಿಗಳು ಸಂತೆಗಳಲ್ಲಿ ಕೃತಕ ಅಭಾವವನ್ನು ತೋರಿ ಬೆಲೆ ಏರಿಸುವ ಯತ್ನ ಮಾಡಬಹುದು. ಕೆಲವು ಪಾಶ್ಚಾತ್ಯ ರಾಷ್ಟ್ರಗಳು ಮಾಡುವಂತೆ ಸಂತೆಯ ವಸ್ತುಗಳನ್ನು ನಿರ್ಮೂಲ ಮಾಡಿ ಬೆಲೆ ಏರಿಸುವ ಯತ್ನ ಮಾಡಬಹುದು. ಆದರೆ ಕೊಂಡುಕೊಳ್ಳುವವರು ಈ ಕೃತ್ರಿಮ ಅಭಾವದಿಂದ ಗಾಬರಿಗೊಂಡು ಕೂಡಿಹಾಕುವ ಪ್ರಯತ್ನ ಮಾಡದಿದ್ದರೆ ಅವರ ಯತ್ನವು ಸಫಲವಾಗಲಾರದು. ಹೇಗೂ ಸದ್ಯದ ವಾತಾವರಣದಿಂದ ಹೇಳುವದಾದರೆ ಭವಿಷ್ಯವು ಶುಭದಾಯಕವಾಗಿರುವಂತೆ ತೋರುತ್ತಿದೆ.

ವರ್ತಮಾನ.

ಗೋಣಿಕೊಪ್ಪಲು ಹೈಯರ್ ಎಲಿಮೆಂಟರಿ ಶಾಲಾ ಹೊಸ ಕಟ್ಟಡ ಕಟ್ಟುವ ಸಮಾರಂಭವೂ, ಪೋಷಕರ ದಿನಾಚರಣೆಯೂ ತಾ. ೮ರಲ್ಲಿ ಕೊಡಗಿನ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯಿತು.

ಎಂದಿನಂತೆ ಆನಂದೂರು ಗ್ರಾಮದಲ್ಲಿ ಮೇ ೨೮ರಲ್ಲಿ ನಡೆಯುತ್ತಿದ್ದ ಸಾರ್ಥಾವ್ ದೇವರ ಹಬ್ಬವನ್ನು ಆ ಸಮಯದಲ್ಲಿ ನಡೆಸಿದರೆ ಮಳೆಯಿಂದ ತೊಂದರೆಯಾಗುವ ಕಾರಣ ಇನ್ನು ಮುಂದಕ್ಕೆ ಮಾರ್ಚ ತಾ. ೩೦ ರಲ್ಲಿ ನಡೆಸುವಂತೆ ಭಕ್ತಾದಿ ಜನರು ನಿಶ್ಚಯಿಸಿರುತ್ತಾರೆ.

ಭಾಗಮಂಡಲ ಶ್ರೀ ರಾಮ ಮಂದಿರದಲ್ಲಿ ಈ ವರೆಗೆ ಕೇವಲ ಒಂದು ದಿನ ನಡೆಸುತಿದ್ದ ರಾಮನವಮಿ ಉತ್ಸವವನ್ನು ೯ ದಿನಗಳ ವರೆಗೆ ನಡೆಸುವಂತೆಯೂ ತಾರೀಕು ೩-೪-೫೦ರಲ್ಲಿ ಶ್ರೀ ಯಂ. ಸಿ. ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಕಟ್ಟಡಕ್ಕೆ ಧನ ಸಹಾಯ ಮಾಡಿದವರ ಶಿಲಾ ಶಾಸನ ಇಡುವಂತೆಯೂ ನಿರ್ಣಯವಾಗಿದೆ

ಕೊಡಗಿನ ಹೊಸ ಶಾಸನ ಸಭೆಯ ಉದ್ಘಾಟನೆಯು ತಾ. ೨೭ರ ಬೆಳಿಗ್ಗೆ ೧೧ ಗಂಟೆಗೆ ನಡೆಯುವದು ಕೇಂದ್ರ ಸರಕಾರದ ಗೃಹ ಮಂತ್ರಿಗಳಾದ ಡಾ॥ ಕೈಲಾಸನಾಥ ಖಟ್ಜೂರವರು ಉದ್ಘಾಟನೆಯನ್ನು ಮಾಡುವರು.

ಸೈನ್ಯಕ್ಕೆ ೧೮ ಮತ್ತು ೧೫ ವಯಸ್ಸಿನ ಸೆಕೆಂಡ್ ಫಾರಂ ಓದಿದ ಮಕ್ಕಳನ್ನೂ, ೪೦ ವಯಸ್ಸಿನೊಳಗಿನ ಎಕ್ಸ್ ಸರ್ವಿಸ್ ಮೆನ್‌ರನ್ನೂ ತೆಗೆದುಕೊಳ್ಳಲು ತಾ. ೨೪ರಲ್ಲಿ ಹುದಿಕೇರಿ ಮತ್ತು ಪೊನ್ನಂಪೇಟೆಗಳಲ್ಲೂ, ತಾ. ೨೫ ರಲ್ಲಿ ವೀರಾಜಪೇಟೆ ಮತ್ತು ಭಾಗಮಂಡಲದಲ್ಲೂ, ತಾ. ೨೭ರಲ್ಲಿ ನಾಪೋಕ್ಲಿನಲ್ಲೂ, ತಾ. ೨೭ರಲ್ಲಿ ಮಡಿಕೇರಿಯಲ್ಲೂ ರಿಕ್ರೂಟಿಂಗ್ ನಡೆಯುವದು.

ಕೊಡಗಿನ ಶಾಸನ ಸಭೆಗೆ ಸ್ಪೀಕರರನ್ನು ಆರಿಸುವ ವರೆಗೆ ಶ್ರೀ ಚೌರಿರ ಮಂದಣ್ಣನವರನ್ನು ತತ್ಕಾಲ ಸ್ಪೀಕರನಾಗಿ ಚೀಫ್ ಕಮಿಶನರು ನೇಮಕ ಮಾಡಿರುವರು.

ಶೀಘ್ರ ನಿವೃತ್ತರಾಗಲಿರುವ ಶ್ರೀ ಕಂಡ್ರತಂಡ ಪೊನ್ನಪ್ಪನವರು ತಾರೀಕು. ೧೬-೩-೫೦ರಿಂದ ರಜೆಯಲ್ಲಿರುವರು.

ಕೇಂದ್ರ ಸರಕಾರದ ಗೃಹಮಂತ್ರಿ ಡಾ ಕಾಟ್ಜೂರವರು ತಾ. ೨೬ರಲ್ಲಿ ಮಡಿಕೇರಿಗೆ ಬರುವಾಗ್ಯೆ ಅವರಿಗೆ ಒಂದು ಬಿನ್ನವತ್ತಳೆಯನ್ನು ಕೊಡಗು ಜಿಲ್ಲಾ ಕಾಂಗ್ರೆಸಿನವರು ಕೊಡುವರೆಂದು ತಿಳಿಯ ಬರುತ್ತದೆ

ಅನೇಕ ವರ್ಷಗಳಿಂದ ಮೈಸೂರಿನಲ್ಲಿದ್ದು ಅಲ್ಲಿಯ ವಾಣಿಜ್ಯ ಪ್ರಪಂಚದಲ್ಲಿ ಗಣ್ಯ ವ್ಯಕ್ತಿಗಳಾಗಿದ್ದ ಮೈಸೂರಿನಲ್ಲಿರುವ ಕುರ್ಗ್ ಇಂಡ್ರಸ್ಟ್ರೀಸ್ ಮತ್ತು ಸಾಮಿಲ್ಸ್‌ನ ಮಾಲೀಕರಾದ ಶ್ರೀ ಅಪ್ಪನೆರವಂಡ ಕಾಳಪ್ಪನವರು ತಾ ೧೭-೩-೫೦ರಲ್ಲಿ ಶಿವಾಧೀನರಾದರು.

ವೀರಾಜಪೇಟೆನಾಡು ಅರಮೇರಿ ಗ್ರಾಮದ ಹರಿಜನರ ಮೊಣ್ಣನೆಂಬವರ ಮನೆಗೆ ರಾತ್ರಿ ಬಾಗಿಲಿಗೆ ಚಿಲುಕು ಹಾಕಿ ಬೆಂಕಿ ಕೊಟ್ಟು ಸುಟ್ಟರೆಂದೂ, ಬಾಗಿಲು ಮುರಿದು ಒಳಗಿದ್ದವರು ಹೊರಗೆ ಬಂದುದರಿಂದ ಪ್ರಾಣ ನಷ್ಟ ಆಗಲಿಲ್ಲವೆಂದೂ ಈ ಸಮ್ಬಂಧ ಶ್ರೀ ಪಳಂಗೇಟ ಕಾಳಯ್ಯನವರನ್ನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆಯೆಂದೂ ಪೋಲೀಸು ತನಿಖೆ ನಡೆಯುತ್ತಿದೆಯೆಂದೂ ವಾರ್ತೆ

ಇಂಡಿಯಾ ಸರಕಾರದ ಅಂಕೆ ಸಂಖೆಗಳ ಅಧಿಕಾರಿ ಶ್ರೀ ಎಸ್. ಪಿ. ಜೆಯಿನ್‌ರವ ತಾ. ೧೮-೩-೫೦ರಲ್ಲಿ ಮಡಿಕೇರಿಗೆ ಬಂದಿರುವರು.

ಬಾವಿ ನೀರಾವರಿ ಧನ ಸಹಾಯ.

ಒಕ್ಕಲಿಗರಿಗೆ ಹೊಸ ಬಾವಿಗಳನ್ನು ತೋಡಲು ಹಾಗೂ ಹಳೆಯ ಬಾವಿಗಳನು ದುರಸ್ತಿ ಮಾಡಲು ಧನ ಸಹಾಯ ಕೊಡುವ ಯೋಜನೆಯನ್ನು ಮುಂಬಯಿ ಸರಕಾರವು ಈಏಪ್ರಿಲ್ ಒಂದರಿಂದ ಮತ್ತೆ ೫ವರ್ಷಗಳ ವರೆಗೆ ಮುಂದುವರಿಸಿದೆ.

ಯೋಜನೆಯ ಮೊದಲನೆ ನಾಲ್ಕು ವರ್ಷಗಳ ಅವಧಿಯಲ್ಲಿ ಅಂದರೆ ೧೯೪೭-೪೮ರಿಂದ ೧೯೫೦-೫೧ರ ವರೆಗೆ ೧೫೫೩೫ ಹೊಸ ಬಾವಿಗಳು ತೋಡಲ್ಪಟ್ಟವು. ಹಾಗೂ ೭೮೫೦ ಹಳೆ ಬಾವಿಗಳು ದುರಸ್ತುಮಾಡಲ್ಪಟ್ಟವು. ಇದರಿಂದ ೩೧೦೦೦ ಟನ್ನಿನಷ್ಟು ಹೆಚ್ಚು ಆಹಾರ ಹುಟ್ಟುವಳಿ ಬಂದಿತು

ಆಡಳಿತೆಯ ಕೊಳೆ ನಿರ್ಮೂಲನ.

ಮುಂಬೈ ಲಂಚ ನಿರ್ಮೂಲನ ಪೋಲಿಸ್ ಪಡೆಯವರು ಜನವರಿ ತಿಂಗಳಲ್ಲಿ ಲಂಚ ಇತ್ಯಾದಿ ಅಪರಾಧಗಳಿಗಾಗಿ ೭ ಜನರ ವಿರುದ್ಧ ಕ್ರಮ ಕೈಕೊಂಡರು. ಆ ತಿಂಗಳಲ್ಲಿ ಮೂವರು ಸರಕಾರಿ ನೌಕರರನ್ನು, ಅವರ ವಿರುದ್ಧ ಲಂಚದ ಆರೋಪದ ಬಗ್ಗೆ ವಿಚಾರಣೆ ನಡೆದುದರಿಂದ ಸಸ್ಪೆಂಡ್ ಇಡಲಾಯಿತು. ಲಂಚ ಸ್ವೀಕರಿಸಿದ್ದಕ್ಕಾಗಿ ಸೊಲ್ಲಾಪುರದ ಪೋಲಿಸನೊಬ್ಬನನ್ನು ಕೆಲಸದಿಂದ ತಳ್ಳಲಾಯಿತು. ಕರ್ತವ್ಯ ಚ್ಯುತಿಯ ಬಗ್ಗೆ ನಾಲ್ವರು ಸರಕಾರಿ ನೌಕರರಿಗೆ ದಂಡ ವಿಧಿಸಲಾಯಿತು. ಇಂಥವೇ ಆರೋಪಗಳಿಗಾಗಿ ಇಬ್ಬರು ಸರಕಾರಿ ನೌಕರರಿಗ ಹಿಂಬಡತಿಯಾಯಿತು.

ಲಂಚದ ಪ್ರಕರಣಗಳ ಶೋಧನೆಯಲ್ಲದೆ ಇತರ ಬಗೆಯ ಅಪರಾಧಗಳನ್ನು ಗೊತ್ತು ಹಚ್ಚುವಲ್ಲಿ ಈ ಪಡೆಯು ಪೋಲಿಸ್ ಪಡೆಗೆ ನೆರವೀಯುತ್ತದೆ. ಈ ರೀತಿ ಇತರ ಅಪರಾಧಗಳಿಗಾಗಿ ೩೫ ಜನರ ವಿರುದ್ಧ ಕ್ರಮ ಕೈಕೊಳ್ಳಲಾಗಿದೆ.

FOR SALE.

16 H. P. 1948 Austin car. Delivery-About April 15th. Phillips Radio-Battery set.

WEBB.
Sidapur.

—:0:—

ಓದುಗರ ಓಲೆಗಳು

ಕಾಕೋಟುಪರಂಬು ಶಾಲೆ.

ಕಾಕೋಟುಪರಂಬು ಶಾಲೆಯು ಸುತ್ತ ೩ ಮೈಲು ದೂರದ ಗ್ರಾಮಗಳಿಂದ ಈ ಶಾಲೆಗೆ ಸುಮಾರು ೫೦೦ ಮಕ್ಕಳು ಹಾಜರಾಗುತ್ತಿದ್ದಾರೆ. ಇಲ್ಲಿ ಹೈಯರ್ ಎಲಿಮೆಂಟರಿ ತರಗತಿ ತೆರೆದು ಸುಮಾರು ೨೭ ವರ್ಷಗಳಾಯಿತು. ಇಲ್ಲಿ ಮೂರನೇ ಫಾರಂನಲ್ಲಿ ವರ್ಷಂಪ್ರತಿ ೩೫–೪೦ ಮಕ್ಕಳು ಪಾಸಾಗಿ ವೀರರಾಜಪೇಟೆಗೆ ೬–೭ ಮೈಲು ದೂರದಿಂದ ನಡೆದು ಹೋಗಿ ವಿದ್ಯಾಭ್ಯಾಸ ಮಾಡುವುದಾದರೂ ಕೂಡ ಈ ವರೆಗೆ ಗ್ರಾಮಸ್ಥರಿಗೆ ಇಲ್ಲಿ ನಾಲ್ಕನೇ ಫಾರಂ ತೆರೆಯಬೇಕೆಂಬ ಕಳಕಳಿ ಹುಟ್ಟಲಿಲ್ಲ. ಇದಕ್ಕೆ ಕಾರಣ ಪ್ರಯತ್ನಪಡದೆ ಇದ್ದುದು. ಹೇಗೂ ಮಕ್ಕಳ ಕಷ್ಟವನ್ನು ನೋಡಿ ೧೯೫೧ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಸುತ್ತಮುತ್ತಲಿನ ೬ ಗ್ರಾಮಸ್ಥರು ಸೇರಿ ೧೯೫೨ರಲ್ಲಿ ನಾಲ್ಕನೇ ಫಾರಂ ತೆರೆಯಲೇ ಬೇಕೆಂಬುದಾಗಿ ನಿಶ್ಚಯಿಸಿ ತೆರೆಗೆಎತ್ತಿ ವಸೂಲು ಮಾಡುತ್ತಿದ್ದೇವೆ. ಇಂಥ ಧರ್ಮ ಕೆಲಸಕ್ಕೆ ನಾವ್ಯಾರೂ ವಿರೋಧ ಮಾಡಲಿಕ್ಕಿಲ್ಲವೆಂಬ ನಂಬಿಕೆ ಎಲ್ಲರಲ್ಲಿಯೂ ಇತ್ತು. ಆದರೆ ಇದೇ ಊರಿಗೆ ಕೇವಲ ನಮ್ಮಂಥ ಪಟ್ಟವರು ಇದಕ್ಕೆ ವಿರೋಧವಾಗಿ ವರ್ತಿಸಲು ಆರಿಸಬೇಕಾದ್ದಕ್ಕೆ ನಾನು ಖಂಡಿಸುತ್ತೇನೆ. ಅವರು ಕಳೆದ ಚುನಾವಣೆಗೆ ನಿಂತು ಜಯಶೀಲರಾಗದೆ ಹೋದ ಮಾತ್ರಕ್ಕೆ ತನ್ನ ಪ್ರಾಣ ಇರುವ ವರೆಗೆ ಕಾಕೋಟುಪರಂಬಿನಲ್ಲಿ ನಾಲ್ಕನೇ ಫಾರಂ ತೆರೆಯಲಿಕ್ಕೆ ಬಿಡುವುದಿಲ್ಲವೆಂಬುದಾಗಿ ಬಹಿರಂಗವಾಗಿ ಹೇಳುವರಂತೆ! ಇದಕ್ಕೆ ಏನೆನ್ನಬೇಕು? ದೇಶವು ಅವರ ಸ್ವಂತವಲ್ಲ. ಶಾಲೆ ಇರುವ ನಾಡು ಅವರ ಸ್ವಾಧೀನದಲ್ಲಿಲ್ಲ. ಅವರು ಪ್ರಜಾತಂತ್ರವನ್ನು ಮತ್ತು ಸೇವೆಯನ್ನು ಏನು ತಿಳಿದಿದ್ದಾರೆ? ಮುಂಬರುವ ಮಂತ್ರಿಮಂಡಳವು ತನ್ನ ಸಂಗಡವಿಂದ ಆರಿಸಿಬಂದವರು ತಾನು ಇದಾದ ಪಟ್ಟಂತೆ ವರ್ತಿಸಬಹುದು; ಮತ್ತು ಚೀಫ್ ಕಮಿಷನರವರು ತಾವು ಹೇಳಿದಂತೆ ನಡೆಯುವರು ಎಂಬ ಟೋಳ್ಳುಭಾವನೆಯಲ್ಲಿ ಇವರು ಇರಬಹುದು. ಆದರೆ ಅವರ ಈ ನೀತಿ ಒಳ್ಳೆಯದಲ್ಲ.

ನಾವು ಗ್ರಾಮಸ್ಥರು ಪ್ರಯತ್ನಪಡುತ್ತಿದ್ದೇವೆ. ನಮ್ಮ ಪ್ರಯತ್ನವನ್ನು ಶ್ರೀಯುತರಾಗಿ ನಿಲ್ಲಿಸಲಿಕ್ಕೆ ಸಾಧ್ಯವಾಗಲಿಕ್ಕಿಲ್ಲವೆಂದು ಗ್ರಾಮಸ್ಥರು ನಂಬಬೇಕು. ಒಂದು ವೇಳೆ ಸರಕಾರವು ಗ್ರಾಮಸ್ಥರ ಪ್ರಯತ್ನಕ್ಕೆ ಉತ್ತೇಜನಕೊಟ್ಟು ಕಾಕೋಟುಪರಂಬಿನಲ್ಲಿ ನಾಲ್ಕನೇ ಫಾರಂ ತೆರೆಯಲು ಅನುಮತಿ ಕೊಟ್ಟರೆ ನಮ್ಮ ಸರಕಾರವು ಈಗಿನ ಪ್ರಜಾಹಿತ ಸರಕಾರದ ತತ್ವದಲ್ಲಿ ನಡೆಯುವುದಲ್ಲದೆ ಒಬ್ಬೊಬ್ಬ ಈ ತರದ ಮನುಷ್ಯರ ಹಿತದಲ್ಲಿ ಇದೆ ಎಂಬುದಾಗಿ ತಿಳಿಯಬೇಕು. ಹೇಗೂ ಗ್ರಾಮಸ್ಥರು ತಮ್ಮ ಕೆಲಸವನ್ನು ಮಾಡುತ್ತಿದ್ದೇವೆ. ಮತ್ತು ಸರಕಾರವು ಇದಕ್ಕೆ ಬೆಂಬಲ ಕೊಡಬೇಕು.

'ಶಾಲಾಭಿಮಾನಿ.'

ಇದಾವ ಜ್ವರ?

ತಲೆಬರಹವನ್ನು ಓದಿ ಡಾಕ್ಟರುಗಳಲ್ಲವೇ ಎಂದು ಕೇಳಬೇಡಿ. ಅವ್ವರಿಂದಲೇ ಡಾಕ್ಟರನ್ನು ಮನೆ ಮನೆ ಬಿಡುವಂತೆ ಮಾಡಿ ಕೊಟ್ಟಿರುವ್ವಾನೆ! ಇದು ಪಿಕಾಕಿಗಾರರ ಮಟ್ಟ ಬಹಳ ಮೇಲೇರಿದೆ. ಪಿಕಾರಿಗರನೇ ಈ ದಿವಸ ಮೇಲಿನ ಮಟ್ಟಕ್ಕೆ ಏರುತ್ತಿರುವುದು. ಏನೇ ಬರಲಿ ತನಗೆ ಮಾತ್ರ ಕೊಂದರೆಯಾಗದಿರಲಿ ಎಂಬುದೇ ಇವರ ತತ್ವ. ಎಲ್ಲರೂ ಪಾಲಿಷ್ ಮಾಡದ ಅಕ್ಕಿ ಊಟ ಮಾಡಬೇಕಂತೆ. ಇದು ಆರೋಗ್ಯ ಇಲಾಖೆ ಅಧಿಕಾರಿಗಳ ಹುಕುಂ. ಆದರೆ ಅವರು ಪಾಲಿಷ್ ಮಾಡದ ಅಕ್ಕಿ ಊಟ ಮಾಡುತ್ತಾರೋ ನೋಡಬೇಕು. ಈ ಬಾರಿ ನಿಂದ ಹಾಸ್ಟೆಲ್ ವಿದ್ಯಾರ್ಥಿಗಳು ದಿವಸಕ್ಕೆ ಒಂದು ಊಟ ಮಾಡುವುದೇ ಕಷ್ಟವಂತೆ. ಅವರ ತಿಂಗಳಿಗೆ ಮಾತ್ರ ೧೨, ೧೦ ಖರ್ಚು! ಸರಿಯಾದ ಉಪಚಾರ ಇಲ್ಲದೆ ಮಕ್ಕಳ ನಿತ್ರಾಣರಾಗಿ ಆಸ್ಪತ್ರೆಗೆ ಸಾಗಿಸಿದ ಹಲವಾರು ಉದಾಹರಣೆಗಳಿವೆ. ಆಸ್ಪತ್ರೆ ಎಂದರೆ ನಲ್ಲವೇ? ಆಸ್ಪತ್ರೆ ವಾರ್ಡುಗಳ ಗತಿಯೋ ಸ್ವಲ್ಪ ತಾವೇ ಹೋಗಿ ಅಜಮಾಯಿಸಬೇಕು! ಮಡಿಕೇರಿ ಆಸ್ಪತ್ರೆಯಲ್ಲಿ ಜನರಲ್ ವಾರ್ಡಿನಲ್ಲಿರುವ ಪಾಯಿಲಕ್ಷರು ನಿದ್ರೆ ಮಾಡುವುದನ್ನು ನೋಡಿಯೇ ತೀರಬೇಕು. ಎರಡು ಹಟ್ಟಿಗನ್ನು ನಾರಿನಲ್ಲಿ ನಾಲ್ಕು ಅವರ ಕೂಗಿನಿಂದಾಗಿ ನಿದ್ರೆ ಬಂದರೂ ದಹ ಬಿಟ್ಟು ಬೀಳುವರು! ಹುಚ್ಚರ ವಾರ್ಡಿನಲ್ಲಿ ಸ್ಥಳವಿಲ್ಲದ್ದರಿಂದ ಇಲ್ಲಿ ಮಲಗಿಸಿರುವುದೆಂದು ತಿಳಿಯಬಂತು!

ನಮ್ಮ ಪ್ರಭುಗಳೀ ಈ ಕಡೆ ದೃಷ್ಟಿ ಹೊರಳಲಾರದು. ಕಾಂಗ್ರೆಸಿನ ಮೇಲೆ ವಿಶ್ವಾಸ ಈಗ ಹಲವರಿಗೆ ಹೆಚ್ಚಿದೆ! ಆದ್ದರಿಂದಲೇ ಕಾಂಗ್ರೆಸ್ ಟಿಕೆಟ್ಟು ಪಡೆದಂಥ ಉದ್ಯೋಗಸ್ಥರು ಮೇಲೇರುತ್ತಿದ್ದಾರೆ. ಕಾಂಗ್ರೆಸ್ಸಿಗೆ ವಿರೋಧಪಕ್ಷದವರಿಗೆ ತಿರುಕರ ಹೆಚ್ಚುತ್ತಿದೆ. ಹೇಗೂ ಪರಿಸ್ಥಿತಿ ಅಶಾದಾಯಕವಾಗಿ ತೋರುತ್ತಿಲ್ಲ.

'ನೊಂದವ'

ಗ್ರಾಮಾಂತರ ರಸ್ತೆಗಳು.

ಅನೇಕ ಗ್ರಾಮಾಂತರ ರಸ್ತೆಗಳನ್ನು ನೆರೆಕರೆಯವರು ಉಪಯೋಗಿಸಿಕೊಂಡು ರಸ್ತೆಯಲ್ಲಿ ಅಚೆ ಈಚೆ ಗಾಡಿ ವಾಹನ ಪ್ರಯಾಣಕ್ಕೆ ಸ್ಪೇಸ್ ಇಲ್ಲದೆ ಆತಂಕವಾಗಿದೆ. ಅವರಲ್ಲಿ ಕೆಲವರು ಇದ್ದ ಏನೂ ಇದಾಗಿದ್ದು ಕೂಡ ಇಂಥಾ ಉಪಾಯಿಸಿ ಕೆಲಸದಿಂದ ಸ್ಥಳವಿಲ್ಲದೆ ಕೋರ್ಟಿಗೆ ಸೇರಬೇಕಾದದ್ದು ಇದೆ. ಈಗ ಸೆಟ್ಲ್‌ಮೆಂಟ್ ಸರ್ವೆ ನಡೆಯುತ್ತಿರುವಾಗ ಇಂಥಾ ಸ್ಥಳಗಳೆಲ್ಲಾ ಚೌಕಟ್ಟಿ ಕಲ್ಲು ಹಾಕಿ ಸರಿ ಮಾಡಿಕೊಟ್ಟು ಅಂಥವರಿಂದ ಬಿಡಿಸಲು ಸಾಧ್ಯವು. ಅದುದರಿಂದ ಸರಕಾರದವರು ಡಿ. ಬೇರ್ಟಿ ನವರು ಇಂಥಾ ಸುಸಮಯ

ವನ್ನು ಬಿಟ್ಟು ಬಿಡದೆ ಸರಿಮಾಡಿಸಿಕೊಂಡು ಪಬ್ಲಿಕಿನ ಹಿತವನ್ನು ಕಾಯ್ದುಕೊಳ್ಳಬೇಕಾಗಿ ಸೂಚನೆ.

'ರೈತ'

ಅನ್ಯಾಯದ ಆರೋಪ.

ಮೊನ್ನೆ ದಿನ ಮಡಿಕೇರಿ ಮುನ್ಸಿಪಾಲಿಟಿಯ ಎ. ವಿ. ಶಾಲೆಯಲ್ಲಿ ಚುನಾವಣೆಯಲ್ಲಿ ಜಯಶೀಲರಾದವರಿಗೆ ಮಡಿಕೇರಿಯ ವಾಣಿಜ್ಯ ಸಂಘದವರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಆ ಕೂಟದ ಅಧ್ಯಕ್ಷತೆ ವಹಿಸಿದ್ದ ಮಹಾಶಯರು ಪ್ರತ್ಯೇಕ ಪಕ್ಷದವರು ಈ ಸಮಾರಂಭದಲ್ಲಿ ಭಾಗವಹಿಸದ್ದು ವಿಷಾದಕರವೆಂದೂ ಇನ್ನೂ ಅವರು ಒಂದು ಭಿನ್ನಅಭಿಪ್ರಾಯ ಇಟ್ಟುಕೊಂಡಿರುವದು ಸಮಂಜಸವಲ್ಲವೆಂದೂ ಹೇಳಿದರು. ಸಭೆಯಲ್ಲಿ ಹಾಜರಿದ್ದ ಒಬ್ಬ ಪ್ರತ್ಯೇಕ ಪಕ್ಷದವರ ಹೆಸರೆತ್ತಿ ಅವರು ಮಾತ್ರ ಬಂದಿರುವರೆಂದರು. ವಾಣಿಜ್ಯ ಸಂಘದವರು ಯಾರನ್ನು ಆಮಂತ್ರಿಸಿರುವರೆಂದು ಈ ಅಧ್ಯಕ್ಷಸ್ಥಾನ ವಹಿಸಿದವರಿಗೇನು ಗೊತ್ತು? ಜಯಶೀಲರಾದ ಪ್ರತ್ಯೇಕವಾದಿಗಳಿಗೆ ಇವರು ಆಮಂತ್ರಣ ಪತ್ರ ಕಳುಹಿಸಿರಬಹುದು. ಆದರೆ ಆ ಸಭೆಯಲ್ಲಿ ಹಾಜರಿದ್ದಂಥಾ ಪ್ರತ್ಯೇಕವಾದಿಗಳು ಹಲವಾರು ಜನರು ಮಡಿಕೇರಿಯಲ್ಲೇ ಇದ್ದಾರೆ. ಚುನಾವಣೆಗೆ ನಿಂತವರೂ ಇದ್ದಾರೆ. ಅವರಿಗೆಲ್ಲ ಆಮಂತ್ರಣವಿತ್ತಿರುವರೇ? ಹಾಗಿಲ್ಲದಿರುವಾಗ ಪ್ರತ್ಯೇಕ ಪಕ್ಷದವರು ಸಹಕರಿಸಲಿಲ್ಲವೆಂದು ಹೇಳಲೇಕೆ? ಎಲ್ಲಾ ಎತ್ತಿನ ಬಾಲ ಹಿಡಿದು ಪ್ರತಿ ಜನರ ಇನ್ನೊಬ್ಬರನ್ನು ತೆಗಳಿ ಮಾದರೂ ಮೇಲೆದ್ದಿರುವವರ ಕೃಪೆಗೆ ಪಾತ್ರರಾಗಬೇಕೆಂದು ಪ್ರಯತ್ನಿಸುವದಿದೆ. ಈ ಸಂದರ್ಭದಲ್ಲಿ ಹಾಗೆ ಆಗಿರಬಹುದೇ?

'ಪಟ್ಟಣಿಗ.'

ಹಳ್ಳಿಯ ಶಾಲೆಗಳು.

ಅನೇಕ ಹಳ್ಳಿಯ ಶಾಲೆಗಳಲ್ಲಿ ಬೆಂಚು ಕುರ್ಚಿ ಮತ್ತು ಹಳೆ ಕಟ್ಟಡ ರಿಪೇರಿಗಳಿಗೆ ಹಣ ಬೇಕಾಗುವಾಗ ಹೆ. ಮಾಸ್ತರು ಶಾಲಾ ಪಂಚಾಯಿತಿದಾರರನ್ನು ಕರೆಸಿ ಕೊಂಡು ಪಂಚಾಯಿತಿದಾರ ಪುಸ್ತಕದಲ್ಲಿ ಬರೆಸಿ ಅದನ್ನು ಸರ್ಕಾರಕ್ಕೆ ಕಳುಹಿಸಿ ಮಂಜೂರು ಮಾಡಿಸಿಕೊಳ್ಳುತ್ತಾರೆ. ಆ ಮೇಲೆ ಕಂಟ್ರಾಕ್ಟುದಾರರನ್ನು ಕರೆಸಿಯೂ ತಾನು ಸ್ವಂತ ಕೆಲಸಗಾರರಿಂದ ಆ ಕೆಲಸವನ್ನು ಮಂಜೂರಾದ ಮೊಬಲಗಿಗಿಂತ ಕಡಿಮೆ ವೆಚ್ಚದಲ್ಲಿ ಕಡಿಮೆ ದರದ ಕೆಲಸವನ್ನು ಮಾಡಿಸಿ ಪುನಃ ಒಂದಾವರ್ತಿ ಪಂಚಾಯಿತಿಗಾರರಿಂದ ಅದನ್ನು ಮುಗಿದಿದೆ ಎಂಬುದಾಗಿ ಸಾಕ್ಷ್ಯ (completion certificate) ಬರೆಸಿಕೊಂಡು ಕೆಲಸಗಾರರಿಂದ ನಿಜವಾಗಿಯೂ ಕೊಟ್ಟ ಹಣಕ್ಕಿಂತ ಹೆಚ್ಚಿನ ಹಣಕ್ಕೆ ಅಂದರೆ ಸರಕಾರ ಮಂಜೂರು ಮಾಡಿದ ಹಣಕ್ಕೆ ಸರಿಯಾಗಿ ಓಚರು ಬರೆಸಿಕೊಂಡು ಸರಕಾರಕ್ಕೆ ಬರೆದು ಹಣ ತರಿಸಿಕೊಂಡು ಲಾಭ ಹೊಂದುತ್ತಾರೆ! ಶಾಲೆಯ ಗುದ್ದಲಿ, ಪಿಕ್ಕಾಸು, ಪಗ್ಗರಿ ಸಾಮಾನುಗಳು ಮಾಸ್ತರುಗಳ ತೋಟ ಕೆಲಸಕ್ಕಾಗಿ ಎಷ್ಟೋ ಜನರು ಉಪಯೋಗಿಸುತ್ತಾರೆ. ಇಂಥಾ ಕೃತ್ಯಗಳನ್ನು ನಿಲ್ಲಿಸುವ ಕಾಲ ಇನ್ನೂ ಬಂದಿಲ್ಲವೇ?

—ಗ್ರಾಮಸ್ಥ

ಇದು ನ್ಯಾಯವೇ?

ತಾ. ೧೧–೩–೫೨ರಲ್ಲಿ ನಾಲ್ಕುನಾಡಿನಲ್ಲಿ ಇಗ್ಗುತಪ್ಪದೇವರ ಹಬ್ಬ ನಡೆಯಿತು. ಆ ಹಬ್ಬಕ್ಕೆ ಬಹು ಜನರು ಬಸ್ಸಿನಲ್ಲೂ ಕಾಲುನಡತೆಯಲ್ಲೂ ಹೋದರು. ನಾಪೋಕ್ಲು ಪೇಟೆಯಿಂದ ಹೊರಡುವ ಟ್ರಾನ್ಸ್‌ಪೋರ್ಟ್ ಬಸ್ಸಿನಲ್ಲೂ ತುಂಬಾ ಜನರು ಹಬ್ಬಕ್ಕೆ ಹೊರಟಿದ್ದರು. ಬಸ್ಸು ತುಂಬಾ ಜನರಾಗಿ ಅಂದರೆ ಮೂವತ್ತು ಜನರು ಇದ್ದು ಬಸ್ಸು ಟೌನಿನ ಮಧ್ಯೆ ನಿಂತಿತ್ತು. ಅಲ್ಲಿಗೆ ಪೋಲಿಸ್ ಸಬ್ ಇನ್ಸ್‌ಪೆಕ್ಟರರೊಬ್ಬರು ಬಂದರು. ಅವರಿಗೆ ಒಂದು ಸೀಟು ಬೇಕಿತ್ತು. ಅದಕ್ಕಾಗಿ ಅವರು 'ಇದೇನು' ಎಂದು ಬಿಗುಮಾನದಿಂದ ಡ್ರೈವರನನ್ನು ಕೇಳಲು ಬಸ್ಸಿನ ಕಂಡಕ್ಟರು ಹಬ್ಬಕ್ಕೆ ಹೋಗಲು ಕುಳಿತಿದ್ದ ಗ್ರಾಮದಿಂದ ಬಂದ ಮೂರು ಹೆಂಗಸರನ್ನು ಬಸ್ಸಿನಿಂದ ಇಳಿಸಿದನು. ಆ ಹೆಂಗಸರು ಇಳಿದ ನಂತರ ಪೋಲಿಸ್ ಇನ್ಸ್‌ಪೆಕ್ಟರವರು ಬಸ್ಸು ಹತ್ತಿ ಕೂತರು. ಆ ನಂತರ ಬಸ್ಸು ಹೊರಟಿತು. ಟೌನು ದಾಟಿ ಹೋಗುವ ಸಮಯದಲ್ಲಿ ಪುನಃ ೪ ಗಂಡಸರನ್ನು ಹತ್ತಿಸಿ ಬಸ್ಸಿನೊಳಗೆ ೩೭ ಜನರಾದರು. ಮೊದಲು ಅಂದರೆ ಆಫೀಸರವರಿಗೆ ಸೀಟು ಸಿಕ್ಕುವ ಮೊದಲು ೩೦ ಜನರು ಜಾಸ್ತಿ ಎಂದು ಕಂಡು ಬಂದದ್ದು ಅವರಿಗೆ ಸೀಟು ಸಿಕ್ಕಿದ ಮೇಲೆ ೩೭ ಇದ್ದರೂ ಅದು ಓವರ್‌ಲೋಡಾಗಿ ಕಂಡು ಬರಲಿಲ್ಲ! ಹೆಂಗಸರನ್ನು ಇಳಿಸಿ ತಾನು ಕೂತು ಅದರ ಮೇಲೆ ಬೇರೆ ಗಂಡಸರನ್ನು ಕೂರಿಸುವರೂ ಇದು ನ್ಯಾಯವೇ?

ಬಸಿನಲ್ಲಿ ಪ್ರಯಾಣ ಮಾಡಿದವ.

ದಿಲ್ಲಿ ರಾಜ್ಯದ ಮಂತ್ರಿಗಳ ಪ್ರತಿಜ್ಞಾ ವಿಧಿ.

ದಿಲ್ಲಿ ರಾಜ್ಯದ ಪ್ರಥಮ ಜನಪ್ರಿಯ ಮಂತ್ರಿಮಂಡಲದ ಪ್ರತಿಜ್ಞಾವಿಧಿಯು ತಾ. ೧೭ರಲ್ಲಿ ನಡೆಯಿತು.

ಈ ಸಮಾರಂಭಕ್ಕೆ ಶಾಸನ ಸಭಾಸದರೂ, ಪ್ರತಿಷ್ಠಿತ ನಾಗರಿಕರೂ ಆಗಮಿಸಿದ್ದರು. ಈ ಮಂತ್ರಿಮಂಡಲವು ಚೌಧರಿ ಬ್ರಹ್ಮಪ್ರಕಾಶರ ನೇತೃತ್ವದಲ್ಲಿದೆ. ಇದರಲ್ಲಿ ಮಹಿಳಾ ಶಫೀಕ್ ಉರ್ ರೆಹಮಾನ ಹಾಗೂ ಡಾ. ಸುಶೀಲಾ ನಯ್ಯರರಿದ್ದಾರೆ. ಪ್ರಾರಂಭದಲ್ಲಿ ಮಂತ್ರಿಗಳು ರಾಜಘಾಟದಲ್ಲಿಯ ಮಹಾತ್ಮಾ ಗಾಂಧಿಯವರ ಸಮಾಧಿಗೆ ಹೋಗಿ ಪ್ರಾರ್ಥನೆ ಸಲ್ಲಿಸಿದರು. ಆ ನಂತರ ಅವರನ್ನು ಸೆಕ್ರೆಟೆರಿಯೇಟ್‌ಗೆ ಮೆರವಣಿಗೆಯಲ್ಲಿ ಕರೆತರಲಾಯಿತು.

ಮಾನಿನಿಯರ ಕಾರ್ಯಕ್ಷೇತ್ರ.

ಸ್ತ್ರೀಸುಧಾರಣೆ ಎಂಬ ಮಾತು ಇಪ್ಪತ್ತನೆಯ ಶತಮಾನದ ಮೊದಲ ಕಾಲುಭಾಗದಿಂದ ಈಚೆಗೆ ಎಲ್ಲ ಕಡೆಯಿಂದಲೂ ಕೇಳಬರುತ್ತದೆ. ಸುಧಾರಣೆ ಸುಧಾರಣೆಯೆಂದು ಸುಧಾರಣೆಯ ನಿಜವಾದ ತಿರುಳನ್ನು ತಿಳಿದುಕೊಳ್ಳದೆ ಬರೀ ಹೊರಹೊಳಪಿನ ಮೋಹಕ್ಕೆ ಬಿದ್ದು ಸಮಾನಾಧಿಕಾರ, ಮನೆಹೊರಗಿನ ಚಟುವಟಿಕೆ, ರಾಜಕೀಯ, ಸಾಮಾಜಿಕ, ಕ್ಷೇತ್ರದಲ್ಲಿ ಸ್ಥಾನಮಾನ ಮೊದಲಾದವುಗಳ ಬಗ್ಗೆ ತಮಗೂ ಕಾರ್ಯಮಾಡಲು ಅವಕಾಶವಿರಬೇಕೆಂದು ಆಂದೋಲನವನ್ನೇ ನಡೆಸಿದ್ದಾರೆ, ನಡೆಸುತ್ತಿದ್ದಾರೆ.

ಸುಧಾರಣೆಯೆಂದರೆ, ಉಡುಪು ತೊಡುಪು ರೂಪ ರಂಗಗಳಲ್ಲ; ಸಮಾನಾಧಿಕಾರವೆಂದರೆ, ಹಣ ವೆಚ್ಚಮಾಡುವುದರಲ್ಲಿ, ಮನೆಹೊರಗಿನ ಚಟುವಟಿಕೆಯೆಂದರೆ ಮನರಂಜನ ಕಾರ್ಯಕ್ರಮಗಳಲ್ಲ, ಶಿಕ್ಷಣವೆಂದರೆ ಕೇವಲ ಅಕ್ಷರ ಶಿಕ್ಷಣವಲ್ಲ, ಸಾಮಾಜಿಕ ಹಾಗೂ ರಾಜಕೀಯವೆಂದರೆ ಮೊದಲು ಹೇಳಿದ ಎಲ್ಲ ಸೌಲಭ್ಯಗಳನ್ನು ದೊರಕಿಸುವ ಕುರಿತು ಪ್ರಚಾರ ಹಾಗೂ ಸ್ಥಾನಮಾನಗಳನ್ನು ದೊರಕಿಸುವುದು ಮಾತ್ರವಾಗಿದೆಯೆಂದು ಈಗಿನ ಬಹಳಷ್ಟು ಮಹಿಳೆಯರ ಚಳುವಳಿಗಳನ್ನು ಸಂಕ್ಷೇಪಿಸಿದರೆ ಕಂಡುಬರುವುದೆಂದರೆ ತಪ್ಪಾಗದು. ಹಲಕೆಲವರು ಯೋಗ್ಯತೆಯುಳ್ಳ ಮಹಿಳೆಯರೂ ಇಲ್ಲದಿಲ್ಲ; ಇಂಥವರು ಪುರುಷರ ಸಮವಾಗಿ ಅಷ್ಟೇ ಏಕೆ ಹಲ ಕೆಲವು ಸಲ ಹೆಚ್ಚಿನ ಸಾಮರ್ಥ್ಯದಿಂದ ಕಾರ್ಯಮಾಡುವವರೂ ಇದ್ದಾರೆ. ಆದರೆ ಇಂಥವರ ಸಂಖ್ಯೆ ತೀರ ವಿರಳವಾಗಿರುತ್ತದೆ.

ಹಳೆಯ ಬದ್ಧ ರೂಢಿಗಳನ್ನಲ್ಲ, ಅವುಗಳ ತಿರುಳು ಉದ್ದೇಶ್ಯ ಪರಿಣಾಮಗಳ ಬಗ್ಗೆ ಕೂಲಂಕಷವಾಗಿ ತಿಳಿದುಕೊಳ್ಳದೆ, ಹಳಿಯುವುದು, ಪಾಶ್ಚಿಮಾತ್ಯರ ಹೊರಹೊಳಪಿನ ಅಂಧಾನುಕರಣ ಮಾಡುವುದು, ದುಡಿಯುವುದರಲ್ಲಿ ಹಿಂಜರಿದು ಪಡೆಯುವುದರಲ್ಲಿ ಸಮಾನಾಧಿಕಾರವನ್ನು ಬೇಡುವುದು, ಮನೆ ಹಾಗೂ ಮಗುಗಳನ್ನು ಪರಿಚಾರಿಕ ಪರಿಚಾರಕರ ವಶಕ್ಕೆ ಬಿಟ್ಟುಕೊಟ್ಟು ಕ್ಲಬ್ಬು ಪಾರ್ಟಿಗಳು ಎಂದು ಸುತ್ತಾಡಿ ಹೊತ್ತು ಬಿಡುವುದು ಇವೇ ಸಾಮಾನ್ಯವಾಗಿ ಎಲ್ಲೆಲ್ಲಿಯೂ ನಡೆಯುವದನ್ನು ಕಾಣಬಹುದು.

ಇಂಥವರಿಗಾಗಿ—ಏಕೆಂದರೆ ಪಾಶ್ಚಿಮಾತ್ಯರಿಂದ ಬಂದಮಾತು ಇವರಿಗೆ ವೇದವಾಕ್ಯ—ಅಮೇರಿಕೆಯಲ್ಲಿ ಕೂಡಿದ ಒಂದು ಮಹಿಳಾಪರಿಷತ್ತಿನ ನಿರ್ಣಯಗಳನ್ನು ಇಲ್ಲಿ ಬರೆದು ಪ್ರಕಟಿಸುವದು ಯೋಗ್ಯವೆನಿಸುತ್ತದೆ. ಮೊನ್ನೆ ಮೊನ್ನೆ ಯುನಾಯಟೆಡ್ ಸ್ಟೇಟ್ಸ್ ಆಫ್ ಅಮೇರಿಕೆಯ ಕ್ಯಾಲಿಫೋರ್ನಿಯಾ ಪ್ರಾಂತದ ಸಾನ್ ಫ್ರಾನ್ಸಿಸ್ಕೋದಲ್ಲಿ 'ಜಗತ್ತನ್ನು ಸುಧಾರಿಸುವ ಬಗೆ ಯಾವಾಗ?' ಎಂದು ಒಂದು ಮಹಿಳಾಪರಿಷತ್ತು ಕೂಡಿತ್ತು.

ಆ ಪರಿಷತ್ತಿನಲ್ಲಿ ಕುಮಾರಿ ಮಾರ್ಗರೆಟ್ ಎಂಬವಳು ಯುನೈಟೆಡ್ ಸ್ಟೇಟ್ಸಿನ ಸುಪ್ರಸಿದ್ಧ ಮಹಿಳೆ ಹಾಗೂ ಸಂಪಾದಕಿ ಭಾಷಣ ಮಾಡಿ ಆ ಮಹಿಳೆಯರ 'ಸುಧಾರಣೆ' ಎಂಬ ಭ್ರಮೆಯನ್ನು ಹೊಡೆದೋಡಿಸಿ ಬಿಟ್ಟಿದ್ದಾಳೆ. 'ಮಹಿಳೆಯರು ತಮ್ಮ ಮನೆಯನ್ನು ತಮ್ಮ ಕಾರ್ಯಕ್ಷೇತ್ರವನ್ನು ಮಾಡಿಕೊಂಡರೇ ಹೆಚ್ಚು ಪ್ರಯೋಜನ. ಮಕ್ಕಳ ಆರೈಕೆ, ಗೃಹಕೃತ್ಯದಲ್ಲಿ ನಿಪುಣತೆ, ಆಸಮಾಸಾರಿಯನ್ನು ತಿಳಿಯುವದು, ಪತಿಗಳಿಗೆ ಬಿಸಿಯೂಟ ಒದಗಿಸುವದು, ಇವೇ ಮಾನಿನಿಯರ ಮುಖ್ಯ ಕಾರ್ಯ, ಇವುಗಳಿಂದಲೇ ಆಕೆಯ ಉದ್ಧಾರ' ಎಂದು ಖಡಾಖಂಡಿತವಾಗಿ ಹೇಳಿದ್ದಾಳೆ.

'ಮಹಿಳೆಯರು ಶಿಕ್ಷಕಿಯರೆಂದು, ರಾಜಕಾರಣಿಗಳೆಂದು, ನರ್ಸ್ ಎಂದು ಎಷ್ಟೇ ಕಾರ್ಯಕ್ಷಮತೆ ಕುಶಲತೆ ಸಾಮರ್ಥ್ಯಗಳನ್ನು ಪಡೆದಿದ್ದರೂ, ಮನೆಯ ಅಳಗೆ ಒಲೆ, ಮುಸುರಿ ಪಾತ್ರೆಗಳತ್ತ ಅಳಗೆ, ಲಕ್ಷ್ಯವಿರದಿದ್ದರೆ ಆಕೆ ಅಪೂರ್ಣಳೇ. ಆರ್ಥಿಕ ಹಾಗೂ ಮನಶಾಸ್ತ್ರ ರೀತ್ಯಾ ಶಿಕ್ಷಣ ಪಡೆದ ಮಹಿಳೆ ಅವುಗಳನ್ನು ತನ್ನ ಮನೆಯ ಏಳ್ಗೆಗಾಗಿ ಉಪಯೋಗಿಸದಿದ್ದರೆ ಅದೆಲ್ಲವೂ ವ್ಯರ್ಥ!' ಎಂದು ಕುಮಾರಿ ಮಾರ್ಗರೆಟಳು ಹೇಳಿದ್ದಾಳೆ.

ಈಗಿನ ಮಹಿಳೆಯರು, ಅಥವಾ ಮಹಿಳಾ ಸಮಾಜ ಸುಧಾರಕರು, 'ಮಹಿಳೆಯರನ್ನು ತೀರ ಕೆಳಪಟ್ಟದಲ್ಲಿ ನೋಡುತ್ತಾರೆ' ಎಂದು ಸಹಜವಾಗಿಯೇ ಸಾರಿ ಬಿಟ್ಟು ಮನುಮಹರ್ಷಿಯು 'ನ ಸ್ತ್ರೀಸ್ವಾತಂತ್ರ್ಯಮರ್ಹತಿ' ಎಂದು ಹೇಳಿದ್ದಾನೆಂದು ನುಡಿದುಬಿಡುತ್ತಾರೆ. ಮುಂದೆ ಅದೇ ಮನುಮಹರ್ಷಿಯು ಹೇಳಿದ 'ಯತ್ರನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾ' ಎಂದು ಹೇಳಿದ್ದನ್ನು ಬಿಟ್ಟುಬಿಡುತ್ತಾರೆ.

ಶಾರೀರಿಕವಾಗಿ, ಮಾನಸಿಕವಾಗಿ, ಮಾನಿನಿಗೆ ಮನೆಯೇ ತಕ್ಕ ಕಾರ್ಯಕ್ಷೇತ್ರ. ಮನೆಯಲ್ಲಿ ಹೊರಗೆ ಕಾಣುವ ಬಣ್ಣದ ಗೋಡೆ, ಗಾಜಿನ ಕಿಡಿಕಿ, ಕೆಂಪು ಹಂಚು, ಚಿತ್ರವಿಚಿತ್ರ ಕಟಾಂಜನ ಆಕೆಯಲ್ಲ! ಆಕೆ ಮನೆಯ ಸುಭದ್ರವಾದ ನೆಲೆಗಟ್ಟು! ಮಾನಿನಿಯಿಂದಲೇ ಮನೆ; ಮನೆಯೇ ಮಾನಿನಿಯರ ಕಾರ್ಯಕ್ಷೇತ್ರ!!

(ಜೈ ಹಿಂದ್)

ಜಪಾನದ ಭೂಕಂಪ.

ಜಪಾನದ ಮುಖ್ಯ ದ್ವೀಪಗಳಾದ ಹೊನಶು ಹಾಗೂ ಹೋಕಾಯಡೊಗಳಲ್ಲಿ ಮಾರ್ಚ ಮೂರನೆಯ ದಿನಾಂಕ ಗಂಭೀರ ಸ್ವರೂಪದ ಭೂಕಂಪವಾಗಿದೆ. ಅಲ್ಲದೆ ಈ ಭೂಕಂಪದ ಪರಿಣಾಮವಾಗಿ ಸಾಗರವೂ ಕ್ಷೋಭೆಗೊಂಡು ಪೆರ್ದೆರೆಗಳಿಂದ ತನ್ನ ಹಾವಳಿಯನ್ನು ನಡೆಸಿತ್ತು. ಇವುಗಳ ಪರಿಣಾಮವಾಗಿ ನೂರಾರು ಜನರು ಮರಣ ಹೊಂದಿದ್ದಾರೆ. ಸಾವಿರಾರು ಜನರು ಗಾಯಗೊಂಡಿದ್ದಾರೆ. ಮೇಲೆ ಅಲ್ಲಿಯ ಒಂದು ಜಾಗೃತ ಜ್ವಾಲಾಮುಖಿಯೂ ಈ ಪರಿಣಾಮವಾಗಿ ತನ್ನ ಲಾವಾರಸವನ್ನು ಚಿಮ್ಮುವ ಲಕ್ಷಣಗಳು ತೋರಿಬರುತ್ತವೆ.

ಜಪಾನ ದ್ವೀಪ ಸಮೂಹದಲ್ಲಿ ಹೊನಶು ಮುಖ್ಯ ದ್ವೀಪವಾಗಿರುವುದಲ್ಲದೆ ಟೋಕಿಯೊ ಮತ್ತು ಮಹತ್ವದ ಮುಖ್ಯ ಮುಖ್ಯ ಪಟ್ಟಣಗಳು ಈ ದ್ವೀಪದಲ್ಲಿಯೇ ಇವೆ. ಹೋಕಾಯಿಡೊ ದ್ವೀಪವು ಆಕಾರದಲ್ಲಿ ಎರಡನೆಯ ದೊಡ್ಡ ದ್ವೀಪವಾಗಿರುತ್ತ ಭೂಕಂಪದ ಭಯದಿಂದ 'ಹೆಚ್ಚು' ಪರ್ವತದ ಕಡೆಗೆ ಓಡಿಹೋಗಿ ಆಶ್ರಯ ಪಡೆದ ಸಾವಿರಗಟ್ಟಲೆ ಜಪಾನೀಯರು ಭೂಕಂಪ ಶಾಂತವಾದ ಬಳಿಕ ತಿರುಗಿ ಬಂದಾಗ ಭೂಶಯ್ಯೆಗೊರಗಿದ, ಮುರಿದು ಬಿದ್ದ, ಸುಟ್ಟು ಹೋದ ತಮ್ಮ ತಮ್ಮ ಮನೆಗಳನ್ನು ನೋಡಬೇಕಾಯಿತು.

ಗಡಗಡ ನಡುಗುತ್ತ, ದೊಡ್ಡ ದನಿ ತೆಗೆದು ಅಳುತ್ತ, ನಿಂತ ಸಾವಿರಗಟ್ಟಲೆ ಜಪಾನೀಯರು ತಮ್ಮ ತಮ್ಮ ಮನೆ ಮಾರಗಳ ಕಡೆ ಕಣ್ಣು ಹಾಗೂ ನಿರಾಶೆಯ ದೃಷ್ಟಿಯಿಂದ ನೋಡುತ್ತ ನಿಂತುಕೊಂಡಿದ್ದ ದೃಶ್ಯವು ನಿಜವಾಗಿಯೂ ಹೃದಯದ್ರಾವಕವಾಗಿತ್ತು. ರೇಲ್ವೆ ಹಳಿಗಳೂ ಮುರಿದು ಚಿಲ್ಲಾಪಿಲ್ಲಿಯಾಗಿವೆ. ಹಲ ಕೆಲವು ಕಟ್ಟಡಗಳಿಗೆ ಬೆಂಕಿ ಬಿದ್ದು ಅವೂ ಧ್ವಂಸವಾಗಿ ಸುತ್ತು ಮುತ್ತ ಬರ್ಫಾಚ್ಛಾದಿತ ಬಿಳಿ ಪ್ರದೇಶದ ಮಧ್ಯ ತಮ್ಮ ಕರಿ ಶೇಷಗಳಿಂದ ಅತ್ಯಂತ ವಿಕಾರವಾಗಿ ಕಾಣಿಸುತ್ತವೆ.

ಗುಡ್ಡಗಳಿದ್ದ ಸಮುದ್ರವು ಎರಡು ಫರ್ಲಾಂಗು ದೂರದವರೆಗೆ ದಂಡೆಯಲ್ಲಿ ಒಳನುಗ್ಗಿದೆ; ಅನೇಕ ಬರ್ಫದ ಬಂಡೆಗಳು (ಸಮುದ್ರದಲ್ಲಿ ತೇಲುತ್ತಿದ್ದವು) ಭೂಮಿಯ ಮೇಲೆ ಭರತಿಯ ಕಾರಣವಾಗಿ ನುಗ್ಗಿ ಬಂದು ಬಡಿದು ಸುಮಾರು ನಾಲ್ಕು ನೂರರಷ್ಟು ಮನೆಗಳನ್ನು ಧ್ವಂಸ ಮಾಡಿವೆ. ಹೋಕಾಯಿಡೊ ಭೂಶಿರದ ಭೂಪೃಷ್ಠವು ಈ ಭೂಕಂಪದ ಪರಿಣಾಮವಾಗಿ ಮೇಲಕ್ಕೆದ್ದಿದೆ. ಅಲ್ಲಿ ಮನೆಗಳು ಧ್ವಂಸವಾಗಿವೆ; ತಂತಿ–ಹಳಿ ಮೊದಲಾದವು ಕತ್ತರಿಸಿ ಹೋಗಿವೆ. ೧೯೨೩ರಲ್ಲಿ ಹೀಗೆಯೇ ಭೂಕಂಪವಾಗಿ ಇಡೀ ಟೋಕಿಯೊ ನಗರವೇ ಧ್ವಂಸವಾದುದನ್ನು, ಈಗಿನ ಭೂಕಂಪವನ್ನು ಕಂಡು ಜನ ನೆನಸಿಕೊಂಡು ಉಸಿರಿಡುತ್ತಿದ್ದಾರೆ.

ನಾಲ್ಕುನೂರು ಮನೆಗಳಿದ್ದ ಕಿರಟಪ್ಪು ಎಂಬ ಹಳ್ಳಿ ನೆಲಸಮವಾಗಿ ಹೋಗಿದೆ. ಕುಶಿರೋದಿಂದ ಹದಿನೈದು ಮೈಲುಗಳ ಮೇಲಿರುವ ಸಪ್ರೊರೊ ಎಂಬ ಪಟ್ಟಣದ ಸಾವಿರ ಮನೆಗಳು ಧ್ವಂಸವಾಗಿವೆ. ಒಂದು ಕಲ್ಲಿದ್ದಲಿ ಕಣಿ ಕುಸಿದು ಬಿದ್ದು ಹದಿನೈದು ಜನರನ್ನು ಆಹುತಿ ತೆಗೆದುಕೊಂಡಿದೆ. ಒಂದು ರೇಲ್ವೆಗಾಡಿ ಹಳಿಬಿಟ್ಟು ಅನೇಕರಿಗೆ ಗಾಯ ಸಾವು ನೋವುಗಳಾಗಿವೆ.

ಜಪಾನಿಯರೂ, ಜಪಾನದಲ್ಲಿದ್ದ ಅಮೇರಿಕನರೂ ಕೂಡಿಕೊಂಡು ಶಕ್ಯವಿದ್ದ ಎಲ್ಲ ಪರಿಹಾರ ಕಾರ್ಯವನ್ನು ಕೈಕೊಂಡಿದ್ದಾರೆ. 'ಜೈ ಹಿಂದ್'

ಬಟ್ಟೆ ಹಂಚಿಕೆ ನಿಯಂತ್ರಣ ರದ್ದಾಗಬೇಕು

ಶ್ರೀ ಬಿ. ಕೆ. ಬಿರ್ಲಾರವರ ಸೂಚನೆ.

ಅರವೆಗಳ ಬೆಲೆಗಳಲ್ಲಿ ಇಳಿತ ಕಂಡು ಬಂದಿರುವುದರಿಂದ ಈಗಾಗಲೇ ದೆಲ್ಲಿಯಲ್ಲಿ ಕೈಕೊಳ್ಳಲಾಗಿರುವ ಕ್ರಮದಂತೆಯೇ ದೇಶಾದ್ಯಂತ ಬಟ್ಟೆ ಹಂಚಿಕೆಯ ಮೇಲಿನ ನಿಯಂತ್ರಣವನ್ನು ಅಧಿಕಾರಿಗಳು ರದ್ದುಗೊಳಿಸಬೇಕೆಂದು ಬಂಗಾಳ ಗಿರಣಿ ಮಾಲೀಕರ ಸಂಘದ ಅಧ್ಯಕ್ಷರಾದ ಶ್ರೀ ಬಿ ಕೆ ಬಿರ್ಲಾರವರು ತಿಳಿಸಿದರು.

ಸರ್ಕಾರವು ಸಕಾಲದಲ್ಲಿ ಕ್ರಮ ತೆಗೆದುಕೊಳ್ಳುವದರಿಂದ ಮಾತ್ರ ಗಂಭೀರತರ ಪರಿಸ್ಥಿತಿಯನ್ನು ನಿವಾರಿಸಬಹುದು. ಸಕ್ಕರೆಯ ಬಗ್ಗೆ ಕ್ರಮೇಣ ನಿಯಂತ್ರಣ ತೆಗೆದುಹಾಕಲು ಒಪ್ಪಿಕೊಂಡಿರುವಂತೆಯೇ ಇತರ ಉದ್ಯಮಗಳಿಗೂ ಅದು ಅನ್ವಯಿಸುವಂತೆ ಮಾಡಬೇಕೆಂದು ಶ್ರೀ ಬಿರ್ಲಾರವರು ಹೇಳಿದರು.

ಸಂಘದ ೧೮ನೆಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾತನಾಡುತ್ತಾ ಅಹ್ಮದಾಬಾದ ಮುಂತಾದ ಮುಖ್ಯ ಜವಳಿ ಕೇಂದ್ರಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಬಟ್ಟೆಯ ದಾಸ್ತಾನು ಸಂಗ್ರಹವಾಗಿದೆಯೆಂಬ ವರದಿಗಳು ಕಳವಳಕ್ಕೆಡೆ ಕೊಟ್ಟಿವೆಯೆಂದು ಅವರು ನುಡಿದರು.

ಭಾರತಾದ್ಯಂತ ಸರಕುಗಳ ಬೆಲೆ ಇಳಿದಿರುವದನ್ನು ಪ್ರಸ್ತಾಪಿಸಿ ಬೆಲೆಗಳು ಹಠಾತ್ತನೆ ಇಳಿದಿರುವುದರಿಂದ ದೇಶದ ಸಮಗ್ರ ಆರ್ಥಿಕ ವ್ಯವಸ್ಥೆಗೆ ಹಾನಿ ತಟ್ಟುವ ಸಂಭವವೊದಗಿದೆ. ಬೆಲೆಗಳು ಕ್ರಮೇಣ ಇಳಿಯುವದು ಸ್ವಾಗತಾರ್ಹವಾಗಿತ್ತೆಂದೂ ಅವರ ಜೊತೆಗೆ ಉತ್ಪಾದನಾ ವೆಚ್ಚ ಇಳಿಯದಿರುವದನ್ನು ಗಮನಿಸಬೇಕಾಗಿದೆಯೆಂದೂ ಅವರು ನುಡಿದರು.

ಸೆಣಬು, ಬಂಗಾರ ಮತ್ತು ಎಣ್ಣೆಗಳ ಬೆಲೆಯು ಕೊರಿಯ ಯುದ್ಧದಲ್ಲಿ ಇದ್ದ ಬೆಲೆಗಳಿಗಿಂತ ಕಡಿಮೆಯಾಗಿದೆಯೆಂದು ಅವರು ಅಂಕಿ ಅಂಶಗಳೊಡನೆ ವಿವರಿಸಿದರು.

ದೇಶದಲ್ಲಿ ಅರಳೆ ಪರಿಸ್ಥಿತಿಯನ್ನು ಅವಲೋಕಿಸುತ್ತ ಸರಕಾರದ ಅಂದಾಜುಗಳು ಸರಿಯಾಗಿದ್ದರೆ ಅರಳೆ ಪರಿಸ್ಥಿತಿಯು ಕಳೆದ ಕೆಲವು ವರ್ಷಗಳಿಗಿಂತ ಸುಧಾರಿಸಿದ್ದು ಕಳವಳಕ್ಕೆಡೆಯಾಗದೆನ್ನಬಹುದು ಎಂದು ಬಿರ್ಲಾರವರು ತಿಳಿಸಿದರು.

ವ್ಯವಸಾಯಕ್ಕೆ ಗೊಬ್ಬರ.

ಹೆಚ್ಚು ಆಹಾರ ಬೆಳೆಯುವ ಯೋಜನೆಯಲ್ಲಿ, ಆಹಾರ ಪದಾರ್ಥಗಳ ಬೆಳೆಗೆ ಬೇಕಾದ ಹಿಂಡಿ ಗೊಬ್ಬರ, ಮೂಳೆ ಗೊಬ್ಬರ ಮತ್ತು ಮಿಶ್ರಿತ ಗೊಬ್ಬರಗಳನ್ನು ತರಿಸಿ ಬಟವಾಡೆ ಮಾಡುವ ಏರ್ಪಾಡು ಮಾಡಲಾಗಿದೆಯೆಂದೂ, ಮೇಲಿನ ಗೊಬ್ಬರಗಳ ಅವಶ್ಯಕತೆಯಿರುವವರು ಒಡನೆ ಆಯಾಯ ಸೆಂಟರಿನ ವ್ಯವಸಾಯ ಇಲಾಖಾ ಡೆಮಾನ್‌ಸ್ಟ್ರೇಟರುಗಳಿಗೆ ಅರ್ಜಿ ಹಾಕಿಕೊಂಡು ತಮಗೆ ಬೇಕಾದ ಗೊಬ್ಬರಗಳನ್ನು ಹೊಂದಿಕೊಳ್ಳಬಹುದೆಂದೂ, ಕೊಡಗು ವ್ಯವಸಾಯ ಇಲಾಖೆಯು ಕೊಡಗಿನ ಸರ್ವ ರೈತರಿಗೆ ಈ ಮೂಲಕ ತಿಳಿಯಪಡಿಸುತ್ತದೆ. ಹಿಂಡಿ ಗೊಬ್ಬರದ ಕ್ರಯ ಚೀಲಕ್ಕೆ ರೂ. ೧೧-೦-೦, ಮೂಳೆಗೊಬ್ಬರ ಚೀಲಕ್ಕೆ ರೂ. ೧೬-೦-೦, ಮತ್ತು ಮಿಶ್ರಿತ ಗೊಬ್ಬರ ಚೀಲಕ್ಕೆ ರೂ. ೧೩-೦-೦. ಕೋ-ಆಪರೇಟಿವ್ ಯೂನಿಯನ್ ಮತ್ತು ಸೊಸೈಟಿಗಳಿಗೆ ಪ್ರತ್ಯೇಕ ಎಲಾಟ್‌ಮೆಂಟ್‌ಗಳಿವೆಯೆಂದೂ ಮತ್ತು ಸಂಘದ ಮೆಂಬರುಗಳು ಆಯಾಯ ಸಂಘಗಳ ಮೂಲಕ ತಮಗೆ ಬೇಕಾದ ಗೊಬ್ಬರಗಳನ್ನು ಹೊಂದಿಕೊಳ್ಳಬಹುದೆಂತಲೂ ತಿಳಿಯಪಡಿಸಿದೆ. ಮೇಲೆ ತೋರಿಸಿದ ಗೊಬ್ಬರಗಳನ್ನು ಕಾಫಿ, ಕಿತ್ತಳೆ ಮೊದಲಾದ ಬೆಳೆಗಳಿಗೆ ಉಪಯೋಗಿಸಕೂಡದೆಂದೂ ವ್ಯವಸಾಯ ಇಲಾಖೆಯು ಈ ಮೂಲಕ ತಿಳಿಯಪಡಿಸುತ್ತದೆ.

—೦೦—

ಅಮೇರಿಕದ ಅಧ್ಯಕ್ಷ ಟ್ರೂಮನರ ಪರಾಭವ.

ಅಮೇರಿಕದ ಅಧ್ಯಕ್ಷ ಸ್ಥಾನಕ್ಕೆ ರಿಪಬ್ಲಿಕನ್ ಪಕ್ಷದ ಉಮೇದುವಾರಿಕೆ ಪಡೆಯಲು ೧೧ ನೇ ತಾರೀಖು ನಡೆದ ಹ್ಯಾಂಪ್‌ಶೈರ್ ಪ್ರಾಥಮಿಕ ಚುನಾವಣೆಯಲ್ಲಿ ಜ. ಐಸೆನ್ ಹೋವರರು ತಮ್ಮ ಮುಖ್ಯ ಸ್ಪರ್ಧಿಗಳಾದ ಸಿನೇಟರ ಟಾಫ್ಟರವರನ್ನು ಸೋಲಿಸಿದರು.

ಡೆಮೋಕ್ರಟಿಕ್ ಪಕ್ಷದ ಕಡೆ ಸಿನೇಟರ ಕೆಫಾವರರು ಅಧ್ಯಕ್ಷ ಟ್ರೂಮನರಿಗಿಂತ ಹೆಚ್ಚಿನ ಮತ ಗಳಿಸಿರುವರೆಂದೂ ತಿಳಿದು ಬಂದಿದೆ.

ಅಮೇರಿಕಾದ ಅಧ್ಯಕ್ಷ ಸ್ಥಾನಕ್ಕೆ ರಿಪಬ್ಲಿಕನ್ ಪಕ್ಷದ ಉಮೇದುವಾರಿಕೆ ಪಡೆಯಲು ನಡೆದ ಪ್ರಾಥಮಿಕ ಚುನಾವಣೆಯಲ್ಲಿ ಜ. ಡ್ವೈಟ್ ಐಸೆನ್ ಹೋವರರು ಸಿನೇಟರ ಟಾಫ್ಟರವರಿಗಿಂತ ಹೆಚ್ಚಿನ ಮತಗಳಿಸಿ ಗೆದ್ದರೆಂದು ಇಂದು ತಿಳಿದು ಬಂದಿದೆ. ನ್ಯೂ ಹ್ಯಾಂಪ್‌ಶೈರ್ ರಾಜ್ಯದ ೩೫೨ ಮತಗಳಿಂದ ಬಂದಿರುವಂತೆ ಜ. ಐಸೆನ್ ಹೋವರರಿಗೆ ೩೫,೨೦೮ ಮತಗಳೂ ಸಿನೇಟರ ಟ್ಯಾಫ್ಟರವರಿಗೆ ೩೭,೩೧೧ ಮತಗಳೂ ಬಂದಿವೆಯೆಂದು ತಿಳಿದು ಬಂದಿದೆ.

ಡೆಮೋಕ್ರೆಟಿಕ್ ಪಕ್ಷದ ಉಮೇದುವಾರಿಕೆಗೆ ಸ್ಪರ್ಧಿಸಿದವರಲ್ಲಿ ಒಟ್ಟು ೨೬೬ ಮತಕ್ಷೇತ್ರಗಳ ಮತಗಳೆಣಿಕೆ ನಡೆದು ಸೆನೇಟರು ಕೆಫಾವರರಿಗೇ ಅಧ್ಯಕ್ಷ ಟ್ರೂಮನನರಿಗಿಂತ ಹೆಚ್ಚಿನ ಮತ ಬಿದ್ದಿವೆಯೆಂದು ತಿಳಿದು ಬಂದಿದೆ. ಟ್ರೂಮನ್ನರಿಗೆ ೧೪,೭೩೫ ಮತಗಳೂ, ಕೆಫಾವರರಿಗೆ ೧೭,೭೫೨ ಮತಗಳೂ ಬಿದ್ದಿವೆಯೆಂದು ಹೇಳಲಾಗಿದೆ.

ರಿಪಬ್ಲಿಕನ್ ಪಕ್ಷದಲ್ಲಿ ಜ. ಐಸೆನ್ ಹೋವರರು, ಸಿನೇಟರ ಟ್ಯಾಫ್ಟನ್ನಲ್ಲದೆ ಮಿನೆಸೋಟಾದ ಮಾಜಿ ಗವರ್ನರ್ ಹೆರಾಲ್ಡ್ ಸ್ಟ್ಯಾಸನ್ ಮತ್ತು ಸೈಂಟ್ ಲೂಯಿಯ ವಕೀಲರಾದ ವಿಲಿಯಂ ಶೀಫರ್ ಇವರು ಅಧ್ಯಕ್ಷಸ್ಥಾನದ ಉಮೇದ್ವಾರಿಕೆ ಪಡೆಯಲು ಸ್ಪರ್ಧಿಸಿದ್ದರು. ರಿಪಬ್ಲಿಕನ್ ರಾಷ್ಟ್ರೀಯ ಪರಿಷತ್ತಿನ ಎಲ್ಲಾ ೧೪ ಪ್ರತಿನಿಧಿಗಳೂ ಇದೀಗ ಜ. ಐಸೆನ್ ಹೋವರರಿಗೆ ಬೆಂಬಲ ನೀಡುವರೆಂದೂ ಹೇಳಲಾಗಿದೆ

ಡಾ|| ಅಮಲ್ ದೇಸಾಯರ ಚುನಾವಣೆ ರದ್ದಾಗುವದೆ?

ಬೊಂಬಾಯಿ ಹೋಂ ಮಂತ್ರಿ ಶ್ರೀ ಮೊರಾರ್ಜಿ ದೇಸಾಯರನ್ನು ಬುಲ್ಸಾರ್ ಕ್ಷೇತ್ರದ ಅಸೆಂಬ್ಲಿ ಸ್ಪರ್ಧೆಯಲ್ಲಿ ೧೯ ಓಟುಗಳಿಂದ ಸೋಲಿಸಿದ ಸೋಷಲಿಸ್ಟ್ ಉಮೇದುವಾರ ಡಾ ಅಮಲ್ ದೇಸಾಯರ ಚುನಾವಣೆಯು ರದ್ದಾಗುವ ಸಂಭವವಿದೆಯೆಂದು ಹೇಳಲಾಗಿದೆ

ಎಲ್ಲಾ ಉಮೇದುವಾರರುಗಳೂ ಫಲಿತಾಂಶ ಪ್ರಕಟವಾದ ಒಂದೂವರೆ ತಿಂಗಳೊಳಗಾಗಿ ತಮ್ಮ ಚುನಾವಣಾ ಖರ್ಚಿನ ಲೆಕ್ಕ ಪತ್ರಗಳನ್ನು ಒಪ್ಪಿಸಬೇಕಾಗಿದ್ದು, ಡಾ. ದೇಸಾಯರು ಎರಡು ದಿನ ತಡವಾಗಿ ತಮ್ಮ ಲೆಕ್ಕ ಪತ್ರಗಳನ್ನು ಒಪ್ಪಿಸಿದರೆಂದು ಗೊತ್ತಾಗಿದೆ. ಈ ವಿಷಯವನ್ನೀಗ ರಿಟರ್ನಿಂಗ್ ಆಫೀಸರ್ ಶ್ರೀ ಕೆ. ಯು. ಭಟ್‌ರವರು ಚೀಫ್ ಎಲೆಕ್ಷನ್ ಕಮಿಷನರಿಗೆ ತಿಳಿಸಿದ್ದಾರೆ. ಶ್ರೀ ಮೊರಾರ್ಜಿಯವರು ಮಾತ್ರ ತಮ್ಮ ಲೆಕ್ಕ ಪತ್ರವನ್ನು ಇನ್ನೂ ನಾಲ್ಕು ದಿನ ಮುಂಚಿತವಾಗಿಯೇ ಒಪ್ಪಿಸಿದ್ದಾರೆ. ಇದೇ ಕ್ಷೇತ್ರದ ಪಾರ್ಲಿಮೆಂಟ್ ಸ್ಥಾನಕ್ಕೆ ಸ್ಪರ್ಧಿಸಿದ್ದ ಪರಾಜಿತರಾದ ಸೋಷಲಿಸ್ಟ್ ಸ್ಪರ್ಧಿ ಶ್ರೀ ನಾನುಭಾಯಿ ದೇಸಾಯಿಯೂ ಕೂಡ ತಮ್ಮ ಲೆಕ್ಕಪತ್ರವನ್ನು ಎರಡು ದಿನ ತಡವಾಗಿ ಒಪ್ಪಿಸಿದ್ದಾರೆ. ಕಾನೂನು ಪ್ರಕಾರ ತಡವಾಗಿ ಲೆಕ್ಕಪತ್ರ ಒಪ್ಪಿಸಿದವರ ಉಮೇದುವಾರಿಕೆ ಅನರ್ಹವೆಂದು ಘೋಷಿಸಲ್ಪಡುತ್ತದೆ. ಆದರೆ ಈ ನಿರ್ಬಂಧವನ್ನು ಎಲೆಕ್ಷನ್ ಕಮಿಷನನ್ನು ಇಷ್ಟಪಟ್ಟರೆ ಮನ್ನಿಸಬಹುದು.

ಧಾರಣೆಗಳ ಇಳಿತದಿಂದ ಜನಾಂಗಕ್ಕೆ ಹಾನಿಯಾಗದು

ಪ್ರಕೃತ ಕೆಲವು ಆರ್ಥಿಕ ಸಾಮಗ್ರಿಗಳ ಧಾರಣೆಗಳು ಒಮ್ಮೆಲೆ ಇಳಿದು ಹೋಗಿರುವುದರಿಂದ ವಾಣಿಜ್ಯ ಪ್ರಪಂಚ ಕ್ಷೋಭೆಗೊಳಗಾಗಿದೆ. ಆದರೆ ದೇಶದ ಸಾರ್ವಜನಿಕ ಜನಾಂಗದ ಸಾಮಾನ್ಯ ಹಿತಗಳಿಗೆ ಹಾನಿ ತರುವಷ್ಟರ ಮಟ್ಟಿಗೆ ಈ ಸ್ಥಿತಿ ಮುಂದುವರಿಯಲು ನಾವು ಬಿಡುವುದಿಲ್ಲ. ಈ ಕಠಿಣತೆ ವಾಣಿಜ್ಯ ಪ್ರಪಂಚವು ಭರಿಸಬೇಕಾಗಬಹುದು ಎಂಬುದಾಗಿ ಭಾರತದ ವಾಣಿಜ್ಯ ಹಾಗೂ ಕೈಗಾರಿಕಾ ಮಂತ್ರಿ ಶ್ರೀ ಹರೇಕೃಷ್ಣ ಮೆಹತಾಬರು ತಿಳಿಸಿರುವರು.

ಕ್ಷಾಮ ನಿವಾರಣಾ ನಿಧಿಗೆ ಪ್ರಧಾನರ ಉದಾರ ದಾನ

ರಾಷ್ಟ್ರೀಯ ಆಹಾರ ಆಶ್ರಯ ನಿಧಿಗೆ ಭಾರತ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ್ ನೆಹರೂರವರು ೨೫ ಸಾವಿರ ರೂಪಾಯಿಗಳ ಉದಾರ ದಾನ ಕೊಟ್ಟು, ಸೀಡೆಡ್ ಡಿಸ್ಟ್ರಿಕ್ಟ್‌ಗಳಲ್ಲಿ ಕ್ಷಾಮ ನಿವಾರಣೆಯ ಬಗ್ಗೆ ಮದರಾಸು ಸರಕಾರ ಕೈಕೊಂಡಿರುವ ಪ್ರಯತ್ನಗಳಿಗೆ ಆ ಹಣ ವಿನಿಯೋಗವಾಗಲೆಂದು ಸೂಚಿಸಿರುವರು. ಕ್ಷಾಮ ಪೀಡಿತ ಪ್ರದೇಶಗಳ ಸಂಚಾರ ಕೈಕೊಂಡಿರುವ ಶ್ರೀಮತಿ ದುರ್ಗಾಬಾಯಿಯವರೊಡನೆ ಆ ಹಣವನ್ನು ಒಪ್ಪಿಸಲಾಗಿದೆ.

ಆಂಧ್ರ ಪ್ರಾಂತ ರಚನೆ ಕೊಂಚ ಕಾಯಬಹುದು

ಆಂಧ್ರರಿಗೆ ಪ್ರತ್ಯೇಕ ಪ್ರಾಂತ್ಯವನ್ನು ರಚಿಸುವ ಕಾರ್ಯವನ್ನು ಕೊಂಚ ಕಾಯಬಹುದಾಗಿದೆ. ಆದರ ರಚನೆಯ ಬಗ್ಗೆ ಯಾವಾಗ ನಿರ್ಧಾರವಾಗಿದೆಯೋ ಇಂದಲ್ಲ ನಾಳೆ ಆದು ಆಗಿಯೇ ತೀರುವುದು. ಸರ್ಕಾರ ಬಹುಮತ ಪಕ್ಷದ ಭದ್ರತೆಯ ಸಮಸ್ಯೆಗಳ ಭಾರದವಾಗಿ ನ್ಯಗೆಲ್ಪಡುತ್ತಿವೆ. ಆದುದರಿಂದ ಆ ಅವಸರದ ಪ್ರಶ್ನೆಗಳ ಕಡೆಗೆ ಶೀಘ್ರ ಲಕ್ಷ್ಯ ಕೊಡುವ ದವಶ್ಯವಿದೆ' ಎಂಬುದಾಗಿ ಮದರಾಸಿನ ಗವರ್ನರ್' ಹೊಸತಾಗಿ ನಿಯೋಜಿತರಾದ ಮೂನ್ನ ಶ್ರೀ ಪ್ರಕಾಶರವರು ವಿಜಯವಾಡಾದಲ್ಲಿ ಪತ್ರಿಕಾ ಕರ್ತರ ಭೇಟಿ ಕಾಲದಲ್ಲಿ ಹೇಳಿದರು

ವಾರ್ತೆ.

ಮುಂಬಯಿ ರಾಜ್ಯದಲ್ಲಿಯ ರಸ್ತೆಗಳ ಸುಧಾರಣೆಗಾಗಿ ಹೆಚ್ಚಿಗೆ ಹಣ ಒದಗಿಸುವ ಉದ್ದೇಶದಿಂದ ಮೋಟಾರ ವಾಹನಗಳ ಮೇಲಿನ ಕರವನ್ನು ಹೆಚ್ಚಿಸಬೇಕೆಂದಿದ್ದು ಆ ಬಗ್ಗೆ ಕಾಯಿದೆಯಲ್ಲಿ ಮಾಡುವ ತಿದ್ದುಪಡಿ ಮಸೂದೆ ಗೆಜೆಟ್ಟಿನಲ್ಲಿ ಪ್ರಸಿದ್ಧಿಗೊಳಿಸಲಾಗಿದೆ

ಉತ್ತರ ಪ್ರದೇಶ ಶಾಸನ ಸಭೆಯ ಸ್ಪೀಕರರು ಹೊರಡಿಸಿದ ಬಂದಿವಾರಂಟಿನನ್ವಯ ಬ್ಲಿಟ್ಜ್ ಪತ್ರಿಕೆಯ ಸಹಾಯಕ ಸಂಪಾದಕರಾದ ಶ್ರೀ ಎಚ್. ಡಿ. ಮಾಳವೀಯವರನ್ನು ಮುಂಬಯಿಯಲ್ಲಿ ಬಂಧಿಸಿ ವಿಮಾನದಲ್ಲಿ ಲಖ್ನೋಗೆ ಒಯ್ಯಲಾಯಿತು. ಶ್ರೀ ಮಾಳವೀಯವರು ಉತ್ತರ ಪ್ರದೇಶ ಶಾಸನ ಸಭೆಯ ಹಕ್ಕು ಬಾಧ್ಯತೆಗಳಿಗೆ ಭಂಗ ತರುವವರಿಂದ ಅವರನ್ನು ಶಾಸನ ಸಭೆಯ ಮುಂದೆ ನಿಲ್ಲಿಸಬೇಕಾಗಿದೆಯೆಂದು ವಾರಂಟಿನಲ್ಲಿ ಹೇಳಿದೆ.

ಚಲಚ್ಚಿತ್ರ ತಾರೆಯಾದ ಕುಮಾರಿ ಟಿ. ಸೂರ್ಯಕುಮಾರಿ ಇವಳು ಮದರಾಸಿನ ಸುಂದರ ಕುಮಾರಿಯರ ಸ್ಪರ್ಧೆಯಲ್ಲಿ ಮೊದಲನೇ ನಂಬರು ಮತ್ತು ಕುಮಾರಿ ಹೇಮಾಮಾಲಿನಿ ಇವಳು ಎರಡನೇ ನಂಬರು ಬಂದಿರುವರು. ಇವರನ್ನು ಮುಂಬಯಿಯಲ್ಲಿ ನಡೆಸಲಿರುವ ಅ. ಭಾ. ಕುಮಾರಿಯರ ಸ್ಪರ್ಧೆಗೆ ಕಳಿಸಲಾಗುವರು.

ಸಾರ್ವಜನಿಕ ಸತ್ಕಾರ ಕೂಟಗಳಲ್ಲಿ ಮಂತ್ರಿಗಳನು ಅಥವಾ ಉಚ್ಚ ಅಧಿಕಾರಿಗಳನ್ನು ಟೀಕಿಸಬಾರದೆಂದು ಮದರಾಸು ಸರಕಾರದವರು ತಮ್ಮ ಅಧಿಕಾರಿಗಳಿಗೆ ವಿಧಿಸಿದ್ದಾರೆಂದು ತಿಳಿಯುತ್ತದೆ. ಇಂಥ ಸತ್ಕಾರ ಕೂಟಗಳಿಗೆ ಸರಕಾರಿ ಅಧಿಕಾರಿಗಳು ಹೋಗಬಾರದೆಂದೂ ತಿಳಿಸಲಾಗಿದೆಯಂತೆ.

ಮೈಸೂರಿನ ಹಿಂದಿನ ಹೈಕೋರ್ಟ ನ್ಯಾಯಾಧೀಶರಾದ ಶ್ರೀ ಪುಟ್ಟರಾಜ ಅರಸರು ಬೆಂಗಳೂರು ಹೈಕೋರ್ಟಿನಲ್ಲಿ ಮುಂಬಯಿಯ ಬ್ಲಿಟ್ಜ್ ವಾರ ಪತ್ರಿಕೆಯ ವಿರುದ್ಧ ಕೋರ್ಟಿನ ಅಪಮಾನ ಮಾಡಿದ ಬಗ್ಗೆ ಅರ್ಜಿಯನ್ನು ಸಲ್ಲಿಸಿದ್ದಾರೆ. ಮೈಸೂರು ಮುಖ್ಯ ನ್ಯಾಯಾಧೀಶ ಮೇದಪ್ಪನವರ ಸಂಬಂಧದಲ್ಲಿ ಮತ್ತು ಪುಟ್ಟರಾಜ ಅರಸರ ಅರ್ಜಿಯನ್ನು ಪರಿಸ್ತ ನ್ಯಾಯಾಲಯವು ಕಿತ್ತು ಹಾಕಿತೆಂದು ಎರಡು ಲೇಖನಗಳನ್ನು ಬರೆದ ಬಗ್ಗೆ ಈ ಅರ್ಜಿಯನ್ನು ಕೊಡಲಾಗಿದೆ.

ಉತ್ತರ ಪ್ರದೇಶದ ಹೊಸ ಶಾಸನ ಸಭೆಯ ಸದಸ್ಯರ ಸಭೆ ಸೇರಿ, ಈಗ ಆ ರಾಜ್ಯದಲ್ಲಿ ಸಂಚರಿಸುತ್ತಿರುವ ಶ್ರೀ ವಿನೋಬಾ ಭಾವೆಯವರಿಗೆ ೫ ಲಕ್ಷ ಎಕರೆ ಭೂಮಿಯನ್ನು ಸಂಗ್ರಹಿಸಿ ಕೊಡಲು ೧೫ ದಿನಗಳ ಕಾರ್ಯಕ್ರಮವನ್ನು ಇಟ್ಟುಕೊಳ್ಳಬೇಕೆಂಬ ನಿರ್ಣಯವು ಸ್ವೀಕೃತವಾಯಿತು.

ಮಾಣಿಕಪುರದ ರಾಜಾರವರು ತಮ್ಮ ೪೦೦೦ ಎಕರೆ ಭೂಮಿಯಲ್ಲಿ ೩೦೦ ಎಕರೆ ಭೂಮಿಯನ್ನು ಆಚಾರ್ಯ ಭಾವೆಯವರಿಗೆ ದಾನ ಮಾಡಿರುವರು ಅಲ್ಲದೆ ತಮಗೆ ದೊರಕಿರುವ ಪರಿಹಾರ ದ್ರವ್ಯದಲ್ಲಿ ನೂರಕ್ಕೆ ೫ರಷ್ಟು ಅಂದರೆ ೨೦ ಸಾವಿರ ರೂ. ಕಾಣಿಕೆ ಕೊಡುವದಾಗಿ ಸಾರಿದ್ದಾರೆ

ಬೇಗಂ ಲಿಯಾಖತ ಅಲೀಖಾನರು ಪೈಗಂಬರವಾಸಿ ಲಿಯಾಖತ್ ಅಲೀಖಾನರ ಚರಿತ್ರೆಯನ್ನು ಬರೆಯುತ್ತಿರುವರು. ಈ ಚರಿತ್ರೆ ಯಾವಾಗ ಮುಗಿಯಬಹುದೆಂಬುದನ್ನು ಹೇಳಲಾಗುವದಿಲ್ಲ. ಲಿಯಾಖತರ ಚಿರಪರಿಚಿತರಿಂದ ವಿಷಯ ಸಂಗ್ರಹಿಸಬೇಕಾಗಿದೆ. ಆಕೆಯು ಭಾರತದಲ್ಲಿಯು ಅನೇಕರನ್ನು ಕಾಣಬೇಕಾಗಿದೆ ಎಂದು ಮುಂತಾಗಿ ಬೇಗಂ ಸಾಹೇಬರು ಹೇಳಿದ್ದಾರೆ

ನದಿ ದಾಟುವಾಗ ಅಮೇರಿಕನರಿಗೆ ಕಾಣಿಸಬಾರದೆಂದು, ಕೊರಿಯಾದಲ್ಲಿ ಕಮ್ಯೂನಿಸ್ಟರು ನೀರಿನೊಳಗೇ ಸಂಕ ಕಟ್ಟುತ್ತಿರುವದೆನ್ನಲಾಗಿದೆ. ಇಂಥ ಒಂದು ಸಂಕವನ್ನು ಅಮೇರಿಕದವರು ಒಡೆದಿರುವರು.

ಕೊರಿಯಾ ಯುದ್ಧವು ಇದೇ ಜೂನ್ ತಿಂಗಳೊಳಗೆ ಕೊನೆಗೊಳ್ಳಬಹುದೆಂದು ಅಮೇರಿಕದ ತಜ್ಞರ ಅಭಿಪ್ರಾಯ

ಉತ್ತರ ಜಪಾನಿನಲ್ಲಿ, ತಾ. ೪ರಲ್ಲಿ ಭೂಕಂಪವುಂಟಾಗಿ, ಸುಮಾರು ಇಪ್ಪತ್ತು ನೂರಾರು ಜನರು ಬಲಿಯಾದರು. ತೊಂಭತ್ತು ಸಾವಿರ ಜನಸಂಖ್ಯೆಯು ಕುಶಿರೋ ಎಂಬ ನಗರದಲ್ಲಿ ೧೬ ಕಡೆಗಳಲ್ಲಿ ಬೆಂಕಿಯೆದ್ದಿತು. ಒಂದು ಗ್ರಾಮದಲ್ಲಿ ೫೬೦ ಗುಡಿಸಲುಗಳು ಕೊಚ್ಚಿ ಹೋಗಿವೆ. (೧೮೨೩ರ ಜಪಾನ್ ಭೂಕಂಪದಲ್ಲಿ ೩೦,೦೦೦ ಜನರೂ ೧೯೨೩ರ ಭೂಕಂಪದಲ್ಲಿ ೧೪೩,೦೦೦ ಜನರೂ ಬಲಿಯಾಗಿದ್ದರು.

ಸ್ಥಳ ಬದಲಾವಣೆ

ಮಾರ್ಚ್ ತಿಂಗಳು ೪ನೇ ತಾರೀಖಿನಿಂದ ಗೋಣಿಕೊಪ್ಪಲಿನ ಹೋಟೆಲ್ ಬಳಿ ಇದ್ದ ನಮ್ಮ ಮನಾ ಸ್ಟೋರ್ ಅಂಗಡಿಯನ್ನು ಗ್ರಾಹಕರ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಗಡಿಯಾರ ಕಂಬದ ಬಳಿ ಗಣಪತಿ ದೇವಸ್ಥಾನದ ಎದುರಿನ ಅಂಗಡಿಗೆ ಬದಲಾಯಿಸಿದ್ದೇವೆ. ಎಂದಿನಂತೆ ಸಹಕಾರ ಪ್ರೋತ್ಸಾಹ ನೀಡಬೇಕಾಗಿ ವಿನಂತಿ

ಎನ್. ಎ. ಮನ್ನಾ & ಬ್ರದರ್ಸ್,
೫-೫ ವೀರಾಜಪೇಟೆ

Edited Printed & Published by P. I. Belliappa at 'Kodagu' Press, Mercara, for 'Kodagu' Ltd.

ಪ್ರಜಾತಂತ್ರಾತ್ಮಕ ಅಧಿಕಾರಧಾರಣೆ.

[ಹರಿಜನ ಪತ್ರಿಕೆಯಿಂದ]

ಜನವರಿ ತಿಂಗಳ ೨೦ರಿಂದ ೨೨ನೆಯ ದಿನಾಂಕದ ವರೆಗೆ ಸೇರಿದ್ದ ಚರಖಾ ಸಂಘ (ಅಖಿಲ ಭಾರತ ನೂಲುವವರ ಸಂಘ)ದ ವಾರ್ಷಿಕ ಸಭೆಯಲ್ಲಿ ಅದರ ಮುಖ್ಯಾಧಿಕಾರಿ ಸ್ಥಳಗಳಿಗೆ ಹೊಸಬರ ಆಯ್ಕೆ ಮತ್ತು ನೇಮಕವಾದುದೇ ಮುಖ್ಯ ವಿಷಯವಾಗಿದೆ. ಈ ವಿಷಯದಲ್ಲಿ ಮುಖ್ಯ ಸೂತ್ರ ಧೋರಣ ಮತ್ತು ನಿಲುವುಗಳ ಬಗ್ಗೆ ಚರಖಾ ಸಂಘದ ಸಹಾಯಕ ಕಾರ್ಯದರ್ಶಿ ಶ್ರೀ ಡಿ. ವಿ. ಲೇಲೆಯವರು ಹಿಂದೀ ಸರ್ವೋದಯದ ಫೆಬ್ರವರಿ ಸಂಚಿಕೆಯಲ್ಲಿ ಈ ರೀತಿ ಬರೆದಿದ್ದಾರೆ:—

"ಪ್ರಾಂತಗಳ ಶಾಖಾ ಕಾರ್ಯದರ್ಶಿಗಳ ಅಧಿಕಾರಾವಧಿಯ ಬಗ್ಗೆ ಅನೇಕ ವರ್ಷಗಳ ವರೆಗೆ ಕಾಲ ನಿರ್ಬಂಧವಿರಲಿಲ್ಲ. ೧೯೪೫ರಲ್ಲಿ ಶಾಖಾ ಕಾರ್ಯದರ್ಶಿಯ ಅಧಿಕಾರಾವಧಿ ಐದು ವರ್ಷಗಳಿಗಿಂತ ಹೆಚ್ಚಿಗಿರಕೂಡದೆಂದು ನಿರ್ಧರಿಸಲಾಯಿತು. ಮೊದಲಿನವನೇ ಪುನಃ ನೇಮಕ ಹೊಂದಲಾರನು ಎಂದು ಇದರ ಅರ್ಥ.

ಸಂಘದ ಘಟನೆಯಂತೆ ಪ್ರಧಾನ ಕಾರ್ಯದರ್ಶಿಯ ಅಧಿಕಾರಾವಧಿ ಮೂರು ವರ್ಷ. ಆದರೆ ಮೊದಲಿನವನು ಪುನಃ ಎಷ್ಟು ಸಲ ಬೇಕಾದರೂ ಚುನಾವಣೆಗೆ ನಿಲ್ಲಬಹುದು. ಶ್ರೀ ಶ್ರೀಕೃಷ್ಣದಾಸ ಜಾಜೂರವರು ಪ್ರಧಾನ ಕಾರ್ಯದರ್ಶಿಗಳಾದಾಗ ಅವರು ಪ್ರಧಾನ ಕಾರ್ಯದರ್ಶಿಗಳ ಅಧಿಕಾರಾವಧಿ ಕೂಡ ಐದು ವರ್ಷಕ್ಕೆ ಮಿತವಾಗಬೇಕು ಎಂದು ಸೂಚಿಸಿದರು. ಮತ್ತು ಐದು ವರ್ಷಗಳ ನಂತರ ತಮ್ಮ ರಾಜೀನಾಮೆಯನ್ನು ಒಪ್ಪಿಸಿದರು. ಈ ವಿಷಯವನ್ನು ಅವರು ಪೃಥಕ ನಿರ್ಧಾರ ಮಾಡಿಕೊಂಡಿದ್ದರಿಂದ ಅವರ ರಾಜೀನಾಮೆಯನ್ನು ಸ್ವೀಕರಿಸಲೇ ಬೇಕಾಯಿತು. ಅವರ ಸ್ಥಾನದಲ್ಲಿ ಶ್ರೀ ಕೃಷ್ಣದಾಸ ಗಾಂಧಿಯವರು ಆಯ್ಕೆಯಾಗಿ ನೇಮಕ ಹೊಂದಿದರು. ಶ್ರೀ ಜಾಜೂರವರ ಅಭಿಪ್ರಾಯವನ್ನು ಶ್ರೀ ಕೃಷ್ಣದಾಸ ಗಾಂಧಿಯವರೂ ಅನುಮೋದಿಸಿ, ಇದ್ದ ಐದು ವರ್ಷಗಳಾದ ಮೇಲೆ ತಮ್ಮ ರಾಜೀನಾಮೆ ಸಲ್ಲಿಸಿದರು. ಅವರ ಸ್ಥಳದಲ್ಲಿ ಶ್ರೀ ಅಣ್ಣಾಸಾಹೇಬ ಸಹಸ್ರಬುದ್ಧೆಯವರು ಆರಿಸಲ್ಪಟ್ಟಿದ್ದಾರೆ. ಶ್ರೀ ಸಹಸ್ರಬುದ್ಧೆಯವರು ಚರಖಾ ಸಂಘದ ಹಿರಿಯ ಕಾರ್ಯಕರ್ತರಲ್ಲೊಬ್ಬರಾಗಿದ್ದು ಸಂಘ ಮತ್ತು ಮುಂಬಯಿ ರಾಜ್ಯದ ವಿಶೇಷ [illegible] ವಿಧಾಯಕ [illegible] ಯೋಜನೆಗಾರರಾಗಿಯೂ [illegible]ದ್ದಾರೆ. ಕಳೆದ ವರ್ಷ ಅವರು ಗ್ರಾಮೋದ್ಯೋಗಗಳ ಅಭ್ಯಾಸಕ್ಕಾಗಿ ಜಪಾನಿಗೆ ಹೋಗಿ ವಿಶೇಷ ಅನುಭವ ಪಡೆದು ಬಂದಿದ್ದಾರೆ.

ಚರಖಾ ಸಂಘದ ಧುರೀಣರು ಅಧಿಕಾರ [illegible] ಸೇವೆಗೆ ಹೆಚ್ಚು ಮಹತ್ವ ಕೊಡುತ್ತಾರೆ. ಐದು ವರ್ಷಗಳ ನಂತರ ನಿವೃತ್ತನಾಗುವ ಶಾಖಾ ಕಾರ್ಯದರ್ಶಿಯು ಸಂಘದೊಡನೆ ತನ್ನ ಸಂಬಂಧವನ್ನು ಕಳೆದುಕೊಳ್ಳುವದಿಲ್ಲ. ಮುಂದೆ ಅವನು ಯಾವದೇ ಅಧಿಕಾರ ಸ್ಥಾನದಲ್ಲಿರಲಿಕ್ಕಿಲ್ಲ ಅಥವಾ ಮೊದಲಿಗಿಂತ ಕಡಿಮೆ ದರ್ಜೆಯ ಸ್ಥಾನದಲ್ಲಿರಬಹುದು. ಆದರೆ ಅವನು ಸಂಘದ ಸೇವೆಯನ್ನು ನಿಲ್ಲಿಸುವುದಿಲ್ಲ.

ಶ್ರೀ ಜಾಜೂರವರು ರಾಜೀನಾಮೆ ಇತ್ತೊಡನೆ ಶ್ರೀ ಗಾಂಧಿಯವರ ಕೈ ಕೆಳಗೆ ಸಹಾಯಕ ಕಾರ್ಯದರ್ಶಿಗಳಾಗಿ ಕೆಲಸ ಮಾಡಲು ಮುಂದೆ ಬಂದರು. ಆದರೆ ಅವರ ವಯಸ್ಸು ಮತ್ತು ಆರೋಗ್ಯ ವಿಚಾರಗಳನ್ನು ಗಮನಿಸಿ ವಿಶ್ವಸ್ತರು ಅವರ ಸೂಚನೆಯನ್ನು ಮನ್ನಿಸಲಿಲ್ಲ. ಅಂದಿನಿಂದ ಇದುವರೆಗೆ ಶ್ರೀ ಜಾಜೂರವರು ಯಾವ ಅಧಿಕಾರ ಸ್ಥಾನದಲ್ಲಿಲ್ಲದಿದ್ದರೂ ಸಂಘಕ್ಕೆ ಸಹಾಯ ಮಾಡುತ್ತ ಬಂದಿದ್ದಾರೆ. ಶ್ರೀ ಸಹಸ್ರಬುದ್ಧೆಯವರ ಕೈ ಕೆಳಗೆ ಶ್ರೀ ಕೃಷ್ಣದಾಸ ಗಾಂಧಿಯವರು ಲೆಕ್ಕವಿಡುವ ಕಾರ್ಯವನ್ನು ಕೈಕೊಂಡಿದ್ದಾರೆ.

ಸಾಮಾನ್ಯವಾದ ರೀತಿಯಲ್ಲಿ ಇದು ಶ್ರೀ ಕೃಷ್ಣದಾಸ ಗಾಂಧಿಯವರನ್ನು ಕೆಳದರ್ಜೆಗೆ ಇಳಿಸಿದಂತೆ ಕಾಣಬಹುದು. ಶ್ರೀ ಗಾಂಧಿಯವರ ಯೋಗ್ಯತೆ, ಅನುಭವ ಮತ್ತು ಅವರು ತಾವು ವಹಿಸಿದ ಹೊಣೆಯನ್ನು ನಿರ್ವಹಿಸುವ ಬಗೆ ಹಾಗೂ ಅದರ ಸಿದ್ಧಾಂತ ಮಹತ್ತಾದವುಗಳನ್ನು ಅರಿತವರಾರೂ ಈ ರೀತಿ ಯೋಚಿಸಲಾರರು. ಆದರೆ ಇತರ ಸಾಮಾನ್ಯ ಸಂಸ್ಥೆಗಳಿಗಿಂತ ಚರಖಾ ಸಂಘದ ಸಂಪ್ರದಾಯ ಭಿನ್ನವಾಗಿರುವದರಿಂದ ಹಾಗೆ ಭಾವಿಸುವ ಸಂಭವವಿದೆ. ಮೊಟ್ಟ ಮೊದಲನೆಯದಾಗಿ ಸಂಘದ ಅಧಿಕಾರ ಸ್ಥಾನಕ್ಕೆ ಸಂಬಳವಿಲ್ಲ. ಉದಾಹರಣಾರ್ಥ ಸಹಾಯಕ ಖಜಾನೆದಾರನು ಆತನಿಗೆ ಮೇಲಿನ ಸ್ಥಾನ ದೊರೆಯಿತೆಂದು ಹೆಚ್ಚಿನ ಸಂಬಳ ಪಡೆಯುವದಿಲ್ಲ. ಕೆಲವೊಮ್ಮೆ ಸಹಾಯಕ ಅಧಿಕಾರಿಯು ತನ್ನ ಮೇಲಿನವರಿಗಿಂತ ಹೆಚ್ಚು ಸಂಬಳ ಪಡೆಯುತ್ತಿರಬಹುದು. ಎರಡನೆಯದಾಗಿ ಸದಸ್ಯರು ಸಂಘದಲ್ಲಿಯ ವಿಶಿಷ್ಟ ಕಾರ್ಯಗಳನ್ನು ಕೂಡ [illegible]. ಆಡಳಿತ ವಿಭಾಗದಲ್ಲಿ ಒಬ್ಬ ಕೆಲಸಗಾರನು ಇನ್ನೊಬ್ಬನ ಆಜ್ಞೆಯನ್ನು ಪಾಲಿಸಬೇಕಾಗುವದಾದರೂ ನಿಜವಾಗಿ ಎಲ್ಲರೂ ಸಮಾನ ದರ್ಜೆಯ ಕಾರ್ಯಕರ್ತರಾಗಿದ್ದಾರೆ. ಅವರ ಜೀವನಮಟ್ಟ ಒಂದೇ ಮಾದರಿಯದು. ವಿಶಿಷ್ಟ ಕಾರ್ಯವೊಂದನ್ನು ಮಾಡಬಲ್ಲ ಸಾಮರ್ಥ್ಯವನ್ನು ಪ್ರದರ್ಶಿಸಿದವನಿಗೆ ಯಾವ ಸಮಯದಲ್ಲಾದರೂ ಆ ಕಾರ್ಯ ಮಾಡಿಕೊಳ್ಳಲು ಕೇಳಿಕೊಳ್ಳಬಹುದು. ಆ ಸಮಯದಲ್ಲಿ ಆತನ ಸಂಬಳ ಅಥವಾ ಸ್ಥಾನಾದಿಗಳ ವಿಚಾರ ಮಾಡುವದಿಲ್ಲ. ಇದರಿಂದ ಪ್ರತಿಯೊಬ್ಬ ಕಾರ್ಯಕರ್ತನ ಯೋಗ್ಯತೆಯು ಪರೀಕ್ಷೆ ಮಾಡುವ ಅವಕಾಶ ಮತ್ತು ಸೇವಾ ಮಾರ್ಗಗಳು ದೊರೆಯುತ್ತವೆ.

ಪ್ರಜಾತಂತ್ರವೆಂದರೆ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಸ್ಥಾನವೆಂದು ಅರ್ಥವಾಗಿದ್ದರೆ ಈ ಪದ್ಧತಿಯು ಒಂದು ವ್ಯವಹಾರಿಕ ನಿದರ್ಶನವೇ ಸೈ. ಇದರ ಮೂಲಕ ಪ್ರತಿಯೊಬ್ಬನೂ ತನ್ನ ದೈಹಿಕ ಮಾನಸಿಕ ಯೋಗ್ಯತೆಗಳ ಅತ್ಯಂತ ಶ್ರೇಷ್ಠಾಂಶವನ್ನು—ಆ ಶ್ರೇಷ್ಠಾಂಶವು ತತ್ಕಾಲದಲ್ಲಿ ಯಾವುದೇ ಇರಲಿ, ಸಂಸ್ಥೆಗೆ ಕೊಡಲು ಸಾಧ್ಯವಾಗುವದು. ವಯಸ್ಸು ಮತ್ತು ಆರೋಗ್ಯಗಳಿಗನುಗುಣವಾಗಿ ದೈಹಿಕ ಮತ್ತು ಮಾನಸಿಕ ಯೋಗ್ಯತೆಗಳು ಬದಲಾಗಬಹುದು. ಮನುಷ್ಯನಲ್ಲಿ [illegible] ಬೆಳೆಯುತ್ತಿರುವಾಗ ಆತನಿಗೆ ದೈಹಿಕ ಮತ್ತು ಮಾನಸಿಕ ಶ್ರಮಗಳು ಅವಶ್ಯಕವಾಗಿರುವ ಮತ್ತು ಆತನ ಸ್ವಬುದ್ಧಿ ಮತ್ತು ನಿರ್ಣಯಗಳಿಗೆ ಮಿತವಾದ ಅವಕಾಶ [illegible] ಗುರುತರವಾದ ಆದರೆ ದ್ವಿತೀಯ ತರಗತಿಯ ಕೆಲಸಗಳನ್ನು ವಹಿಸಿ ಕೊಡುವುದು ಅಗತ್ಯವಿದೆ. ಆತನು ತನ್ನ ಯೋಗ್ಯತೆಯ ಪರಾಕಾಷ್ಠೆಯನ್ನು ಮುಟ್ಟಿದಾಗ ಆತನಿಗೆ ಪೂರ್ಣ ಸ್ವಾತಂತ್ರ್ಯವಿರುವ ಮತ್ತು ಆತನ ಶಕ್ತಿಯ ಉಪಯೋಗಕ್ಕೆ ಪೂರ್ಣಾವಕಾಶವಿರುವ ಗುರುತರ ಕಾರ್ಯಗಳನ್ನು ವಹಿಸಿ ಕೊಡಬೇಕು. ಆತನಿಗೆ ವಯಸ್ಸಾದಾಗ ಆತನ ಬುದ್ಧಿ ಮತ್ತು ಅನುಭವಗಳು ಅಮೂಲ್ಯವಾದವುಗಳಾಗಬಹುದು. ಆದರೆ ಕಠಿಣ ಕಾರ್ಯಗಳ ನಿರ್ವಹಣಕ್ಕೆ ಬೇಕಾಗುವ ದೈಹಿಕ ಮತ್ತು ಮಾನಸಿಕ ಶ್ರಮ ವಹಿಸುವದು ಆತನಿಗೆ ಅಸಾಧ್ಯವಾಗಬಹುದು. ಅಂಥ ಸಮಯದಲ್ಲಿ ಅಧಿಕಾರಸ್ಥಾನ ಪರಂಪರಾಗತ ದರ್ಜೆಗಳ ಪ್ರಕಾರ ಅಟ್ಟ ಬಡಬೇಕೆ? ಅಥವಾ ಆತನು ಪೂರ್ತಿಯಾಗಿ ನಿವೃತ್ತಿ ಹೊಂದಬೇಕೇ ಅಥವಾ ಗೌರವಯುತವಾದ ಆದರೆ ಕಾರ್ಯಭಾರ ಕಡಿಮೆಯಿರುವ ಸ್ಥಾನಕ್ಕೆ ನೇಮಿಸಲ್ಪಡಬೇಕೇ? ಸಾಮಾನ್ಯದ ಪದ್ಧತಿಯಂತೆ ಸ್ಥಾನ ಹೆಚ್ಚಿದಂತೆ ಕಾರ್ಯ ಮತ್ತು ಹೊಣೆ ಕಡಿಮೆಯಾಗುವದು. ಆದರೆ ಸಂಬಳ ಮತ್ತು ಗೌರವ ಹೆಚ್ಚಿರುತ್ತವೆ. ಇದರ ಪರಿಣಾಮವಾಗಿ [illegible] ಪ್ರತಿ [illegible]ಯೊಬ್ಬನೂ ಆ ಸ್ಥಾನಕ್ಕೆ ಅಯೋಗ್ಯನಾಗಿದ್ದರೂ ಆ ಸ್ಥಾನಕ್ಕೆ [illegible] ಹಾರೈಸುವನು. ಆತನು ಅಯೋಗ್ಯನಾಗಿದ್ದರೂ ಆ ಸ್ಥಾನದಿಂದ ಇಳಿಸಲು ಆತನಿಗೆ ಹೇಳಿಕೊಳ್ಳಲು ಬರುವುದಿಲ್ಲ. ಈ ಸತ್ಯಾಂಶವನ್ನು ಎದುರಿಸುವದನ್ನು ತಪ್ಪಿಸಿಕೊಳ್ಳಲು ಆತನನ್ನು ಕಮಾನರ ಜಾಗೆಗೆ [illegible]. ಅಥವಾ ಆತನಿಗಾಗಿ ಹೊಸ ಸ್ಥಾನವೊಂದನ್ನು ಕಲ್ಪಿಸುವರು. ಇದು ಪ್ರಜಾಪ್ರಭುತ್ವವಲ್ಲ. ಆದರೆ ಕಾರ್ಯಶಕ್ತಿಗಿಂತಲೂ ವ್ಯಕ್ತಿ ಗೌರವಕ್ಕೆ ಮಹತ್ವಕೊಡುವ [illegible] ಮೇಲು ಮತ್ತು ಕೀಳು ದರ್ಜೆಗಳ ಪರಂಪರಾಗತ ನೀತಿ.

ಮೇಲು-ಕೀಳು ಭಾವನೆಯನ್ನು ಹುಟ್ಟಿಸಲು [illegible] ಪ್ರತಿಯೊಬ್ಬನಿಗೂ ಕೂಡಿ [illegible] ಅವಕಾಶವಿರುವಂತೆ ಚರಖಾ ಸಂಘ ಸಂಪ್ರದಾಯ [illegible] ನಿರ್ದಿಷ್ಟ ಅವಧಿ [illegible] ಅಧಿಕಾರ [illegible] ಬಿಟ್ಟು ಕೊಡಬೇಕು [illegible] ಅಧಿಕಾರದಲ್ಲಿ [illegible] ಹೊಸಬರು [illegible] ಅಧಿಕಾರಿಯ ವಿಚಾರವನ್ನು [illegible] ಬೇಕಾಗಿದೆ. ಮೊದಲಿನವನೇ ಪುನಃ ಅಧಿಕಾರ ಹೊಂದದಿರುವುದು ಅನಿವಾರ್ಯ. ಆತನ ಸ್ಥಳದಲ್ಲಿ ಇನ್ನಾರೂ ಯೋಗ್ಯರು ದೊರೆಯದಿದ್ದರೆ ಎಂಬ ಭಾವನೆ ಹುಟ್ಟುತ್ತದೆ. ಈ ಹೊಸ ನೇಮಕವನ್ನು [illegible] ಹೊರಟದ್ದು ಎಲ್ಲ ಸಾಧ್ಯವಿದ್ದ ಯಾವನೊಬ್ಬನನ್ನೇ ಅವಲಂಬಿಸಿಕೊಂಡಿರುವದಿಲ್ಲ ಎಂಬುದು ಚರಖಾ ಸಂಘದ ಅನುಭವಕ್ಕೆ ಬಂದಿದೆ. [illegible] ಕಾರ್ಯಶಕ್ತಿಯು [illegible] ಜೀವನದಲ್ಲಿ ಶ್ರೀ ಕೃಷ್ಣದಾಸ ಗಾಂಧಿಯವರು ಶ್ರೀ ಜಾಜೂರವರು ಹಾಕಿಕೊಟ್ಟ ಮಾದರಿಯನ್ನು ಸಾಗಿಸಿ ಉತ್ತಮ [illegible] ಪ್ರಭುತ್ವಕ್ಕೆ ಮಾದರಿ ಹಾಕಿಕೊಟ್ಟರು." ಕೆ. ವಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

[illegible] (೧೯೨೧ರಲ್ಲಿ ಸ್ಥಾಪಿತವಾದುದು)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2 00 000
ಕ್ಷೇಮನಿಧಿ	ರೂ.	63.000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಜಿಲ್ಲಾದ ಸಹಕಾರಿ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಜನರಿಗೆ ಚಿನ್ನ ಮತ್ತು ಬೆಳ್ಳಿಯ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಮತ್ತು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿ, ವಾರ್ಡ್ಸ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಟಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು [illegible].

Licence No. 60.
Licenced to Post without Prepayment

Reg. No. M. 1000.
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ಬಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦ | ತಾರೀಕು ೨೮-೩-೧೯೫೨ನೇ ಶುಕ್ರವಾರ | ಸಂಚಿಕೆ ೪೧

ಸರ್ವೋದಯ ಪರಿಚಯ.

ಸರ್ವೋದಯವೂ, ಇತರ "ಇಝಂ"ಗಳೂ.

ಲೇ:—ಶ್ರೀ ನರಹರಿ ಪಾರೀಖ್.

೧೯೩೪ರಲ್ಲಿ ಗಾಂಧೀಜಿಯವರು ಹರಿಜನ ಆಶ್ರಮದ ವಿಚಾರದಲ್ಲಿ ಅದರ ಆಡಳಿತ ಮಂಡಳಿಯವರೊಡನೆ ಮಾತಾಡುತ್ತಿದ್ದರು. ನಾನೂ ಕೂಡ ಆ ಕೂಟವನ್ನು ಕೂಡಿಕೊಂಡು ಮಹಾತ್ಮರ ಮಾತುಗಳನ್ನು ಕೇಳುತ್ತಿದ್ದೆ. ಅವರು ಹೇಳಿದ ಕೆಲವು ವಿಚಾರಗಳನ್ನು ಇಲ್ಲಿ ಕೊಡಲಾಗಿದೆ.

'ಗ್ರಾಮದ ಹಿತ ಆಗಬೇಕು, ಗ್ರಾಮದ ಉದ್ಧಾರವಾಗಬೇಕು, ಗ್ರಾಮಕ್ಕಾಗಿ ದುಡಿಯಬೇಕೆನ್ನುವವರು ಹೀಗೆ ಮಾಡುವಂತೆ ಬೇರೆಯವರಿಂದ ಅಪ್ಪಣೆ ಬರಲೀ ಎಂದು ಕಾಯಬಾರದು. ಅವರು ಗ್ರಾಮದ ಹಿತಕ್ಕಾಗಿ ತಾನು ಮಾಡಬೇಕೆಂದು ತೋರಿದ ಕೆಲಸವನ್ನು ಪ್ರಾರಂಭಿಸಬೇಕು. ಗ್ರಾಮದ ಜನರಿಗೆ ಆತನ ಉಪಯುಕ್ತತೆಯು ಅರಿವಾಗಿ ಗ್ರಾಮದವರೇ ಆತನ ಜೀವನ ಭಾರವನ್ನು ಸಂತೋಷದಿಂದ ಹೊರುವಂಥಾ ಸ್ಥಿತಿ ಬರುವಂತೆ ಮಾಡಬೇಕು. ಗ್ರಾಮವು ಆ ರೀತಿ ಆತನ ಪೋಷಣೆಯ ಜವಾಬ್ದಾರಿಯನ್ನು ವಹಿಸದಿದ್ದರೆ ಆತನು ತನಗೆ ತಿಳಿದಿರುವ ಯಾವುದಾದರೂ ಒಂದು ಕೈಗಾರಿಕೆಯನ್ನು ಯಾ ಉದ್ಯಮವನ್ನು ಮಾಡಿ ಹೊಟ್ಟೆ ತುಂಬಿಸಿಕೊಳ್ಳಬೇಕು. ಬೇರೆ ಯಾವುದೇ ಕೆಲಸ ತಿಳಿಯದವರು ನೂಲು ಮಾಡಲು ಕಲಿಯಬಹುದು. ಸಮಾಜಕ್ಕೆ ಹಿತಕರವಾದ ಕೆಲಸವನ್ನು ಪ್ರತಿ ದಿನ ಎಂಟು ಗಂಟೆಗಳ ವರೆಗೆ ಮಾಡುವವನ ರಕ್ಷಣಾಭಾರವನ್ನು ಹೊರುವದು ಸಮಾಜದ ಕರ್ತವ್ಯ.

ಸಮಾಜವಾದವೆಂಬರೆ ನನ್ನ ಅಭಿಪ್ರಾಯದಲ್ಲಿ ಪ್ರತಿಯೊಬ್ಬನಿಗೂ ಸಮಾನವಾದ ಕೂಲಿ ಸಿಗಬೇಕು. ಲಾಯರಿಗಿರಲಿ, ವೈದ್ಯನಿಗಿರಲಿ, ಉಪಾಧ್ಯಾಯನಿಗಿರಲಿ, ಮಜೂರನಿಗಿರಲಿ, ಬೀದಿಗುಡಿಸುವವನಿಗಿರಲಿ ಎಲ್ಲರಿಗೂ ಸಮಾನ ದರದ ವೇತನ ದೊರೆಯಬೇಕು. ಆದರೆ ಇಂದು ಪರಿಸ್ಥಿತಿ ಹಾಗಿಲ್ಲ. ಇಂದು ವೇತನವು ಸರಿಸಮಾನವಾಗಿಲ್ಲದಿರುವುದು ಮಾತ್ರವಲ್ಲ. ಹೆಚ್ಚಿಗೆ ದುಡಿಯುವವನ ವೇತನಕ್ಕೂ ಕಡಿಮೆ ದೊರೆಯುವವನ ವೇತನಕ್ಕೂ ಆಕಾಶ, ಭೂಮಿಯಷ್ಟು ಅಂತರ ಇದೆ. ಇಂಥ ಪರಿಸ್ಥಿತಿಯಲ್ಲಿ ಒಬ್ಬ ಆಳು ದಿನಕ್ಕೆ ಸಾವಿರ ರೂಪಾಯಿ ಪಡೆಯುವದಾದರೆ ಬೀದಿ ಗುಡಿಸುವವನೊಬ್ಬನಿಗೆ ಎಂಟು ಕಾಸೂ ದೊರೆಯಲಾರದು.

ಬಾಪೂಜಿಯವರು ಈ ರೀತಿ ಗ್ರಾಮ ಕೆಲಸದ ಮೂಲದಿಂದ ಪ್ರಾರಂಭಿಸಿ ಸಮಾಜವಾದದ ತತ್ತ್ವ ಧ್ವನಿಸಿದರು. ಆಗ ನಾನು ಈ ರೀತಿ ಕೇಳಿದೆ. ರಷ್ಯಾದಲ್ಲಿ ಕಮ್ಯೂನಿಸ್ಟರೂ ಇದೇ ತತ್ತ್ವ ಅನುಸರಿಸುವರೆಂದು ನಾನು ಕೇಳಿದ್ದೇನೆ. ಅಲ್ಲಿ ಯಾರು ಯಾವ ಕೆಲಸ ಮಾಡಿದರೂ ಒಂದೇ ರೀತಿಯ ವೇತನ ತೆಗೆದುಕೊಳ್ಳುವರಂತೆ. ಬಾಪೂ ಮುಗುಳ್ನಗೆಯಿಂದ ಹೀಗೆ ಹೇಳಿದರು — ರಾಮ ಮತ್ತು ರಾವಣ ಇಬ್ಬರೂ ಕೂಡ ಒಂದೇ ರೀತಿ ಒಂದೇ ದೇವರನ್ನು ಪೂಜಿಸಿದ್ದಾರೆ. ಆದರೆ ರಾಮನ ಪಥವೇ ಬೇರೆ ರಾವಣನದೇ ಬೇರೆ.

ಕಮ್ಯೂನಿಸ್ಟ್ ಪಕ್ಷದಲ್ಲಿ ಶಿಸ್ತಿದೆ. ಪ್ರತಿಯೊಬ್ಬನಿಗೂ ನಿಶ್ಚಿತ ಕೆಲಸವಿದೆ. ತತ್ತ್ವಗಳನ್ನು ಕುರಿತು ಆ ರೀತಿ ಪ್ರಚಾರ ಮಾಡಬೇಕೆಂಬ ಛಲಾಗ್ರಹವಿದೆ. ಸ್ವಲ್ಪ ತಪ್ಪಿದರೂ ಶಿಕ್ಷೆ ಇದೆ. ತಪ್ಪಿಗಾಗಿ ಪಕ್ಷದಿಂದ ತೆಗೆದುಹಾಕುವರು. ಎಂದು ನಾನು ಹೇಳಿದೆ. ಗಾಂಧೀಜಿಯವರು ಆ ವಿಚಾರ ತನಗೆ ಇನ್ನೂ ತಿಳಿಯಬೇಕೆಂದೂ, ತನಗೆ ಓದಲು ಸಮಯ ದೊರೆಯುವದಿಲ್ಲವೆಂದೂ ಹೇಳಿದರು. ಗಾಂಧೀಜಿಯವರಲ್ಲಿ ಓದುವ ಹವ್ಯಾಸ ಕಡಿಮೆಯಾಗಿಲ್ಲ. ಪುಸ್ತಕಗಳನ್ನು ಕಂಡಾಗ ಎಲ್ಲವನ್ನೂ ತೆಗೆದುಕೊಂಡು ಓದುವ ಅಭಿಲಾಷೆ ವ್ಯಕ್ತಪಡಿಸುತ್ತಾರೆ. ಆದರೆ ಅವರ ಕರ್ತವ್ಯದ ಕರೆಯು ಅವರಿಗೆ ಪುಸ್ತಕ ಓದಲು ಸಾಕಷ್ಟು ಬಿಡುವನ್ನು ಕೊಡುತ್ತಿಲ್ಲ.

ಮಾತು ಮುಂದುವರಿಯಿತು. ಬಾಪೂವು, ಗ್ರಾಮದ ಜನತೆಯ ಸಾಲದ ವಿಚಾರದಲ್ಲಿ ಅದನ್ನು ನೀಗುವ ಮಾರ್ಗವಾವುದೆಂದು ಹೇಳಬೇಕೆಂದು ನಾನು ಸೂಚಿಸಿದೆ. ಅಲ್ಲದೆ ಶ್ರೀಮಂತರು ಅವರ ಸಂಪತ್ತಿನ ಟ್ರಸ್ಟಿಗಳಾಗಿರಬೇಕೆಂದು ಗಾಂಧೀಜಿ ಹೇಳುವದಾದರೆ ಅವರ ಕರ್ತವ್ಯವೇನೆಂದು ವಿವರಿಸಬೇಕೆಂದೂ ಹೇಳಿದೆ. "ಇದೆಲ್ಲ ಸಾಧ್ಯವಾಗಬೇಕಾದರೆ ದೇಶದ ಜನತೆಗೆ ಆಡಳಿತದ ಅಧಿಕಾರ ಬರಬೇಕು. ಅಂಥಾ ಅಧಿಕಾರವು ಶೀಘ್ರ ಬಂದೇ ಬರುತ್ತದೆ. ಅಂಥಾ ಆಡಳಿತ ಅಧಿಕಾರ ಬಂದರೂ ಕೂಡ ಅವರು ಸರಿಯಾದ ರಾಜಕೀಯವನ್ನು ಅರಿತುಕೊಳ್ಳಲಾರದೆ ಹೋಗಬಹುದು. ಅವರೂ ಆಡಳಿತ ನಡೆಸುವ ಮುಂದಾಳುಗಳನ್ನು ಆರಿಸುವವರು ಅವರು. ಅಂಥಾ ಸಂದರ್ಭದಲ್ಲಿ ಮುಂದಾಳ್ತನವು ಜನರ ಸೇವೆ ಮಾಡುವವರಿಗೆ ಬಂದೇ ಬರಬೇಕು. ತನ್ನ ಕರ್ತವ್ಯವೆಂದರೆ ನನ್ನ ಮಟ್ಟಿ ಯೋಗ್ಯ ಪಥದಿಂದ ಜನಸೇವೆ ಮಾಡುವದು. ಫಲದ ಅಪೇಕ್ಷೆ ನನ್ನಲ್ಲಿಲ್ಲ. ಸಮಾಜವಾದಿಗಳೂ ಸಾಮ್ಯವಾದಿಗಳೂ ಗುರಿಯನ್ನು ಲಕ್ಷಿಸಿ ದುಡಿಯುವವರು. ಅವರಿಗೆ ವಿಧಾನದ ಮೇಲೆ ಗಮನವಿಲ್ಲ. ಯಾವ ವಿಧಾನವಾದರೂ ಗುರಿ ಮುಟ್ಟಬೇಕು. ಅಷ್ಟೇ ಅವರ ಕಲ್ಪನೆ. ಆದರೆ ನನ್ನ ಮಾರ್ಗ ಬೇರೆ ರೀತಿ. ನನಗೆ ಗುರಿಯ ದೃಷ್ಟಿಯಿಲ್ಲ. ಗುರಿಯೆಡೆಗೆ ಸಾಗುವ ಮಾರ್ಗವು ಯೋಗ್ಯವಾಗಿದ್ದರೆ ಗುರಿಯನ್ನು ಸೇರುವದರಲ್ಲಿ ಸಂಶಯವಿರಲಾರದು. ಆದ್ದರಿಂದ ನನ್ನ ಕಾರ್ಯಕ್ರಮದ ಪವಿತ್ರತೆಯನ್ನು ಉಳಿಸಿಕೊಂಡರೆ ಕ್ರಮೇಣ ಜನತೆಯು ನನ್ನೊಡನೆ ಬರದಿರದು. ಸಮತಾವಾದಿಗಳಿಗೆ ಅಧಿಕಾರ ದೊರೆತರೆ ಅವರು ಹಿಂಸಾ ಮಾರ್ಗವನ್ನವಲಂಬಿಸದಿರರು. ಅವರು ಭೂಮಿಗೆ ಮಟ್ಟಗೋಲು ಹಾಕುವರು. ಸಾಲ ಮನ್ನಾ ಮಾಡುವರು. ಇದೇ ಮೊದಲಾದ ಹಿಂಸಾ ಮಾರ್ಗವನ್ನವಲಂಬಿಸುವರು. ಸಿರಿವಂತರ ಮೇಲೆ ಬಲಾತ್ಕಾರ ಮಾಡುವರು. ಆದ್ದರಿಂದ ಹಲವರಿಗೆ ಸುಖವಾದರೂ ಕೆಲವರಿಂದರೂ ಪ್ರತೀಕಾರ ಭಾವನೆಯನ್ನು ತಳೆದು ವಿರೋಧ ಕೆಲಸ ಮಾಡದಿರರು. ಆದರೆ ನನ್ನ ಮಾರ್ಗ ಹಾಗಲ್ಲ. ಸದ್ಯದ ಮಟ್ಟಿಗೆ ಸಮಾಲೋಚನೆ ಮಾಡಿದರೆ ಸಮತಾವಾದಿಗಳಿಂದ ಏನೂ ಸಾಧ್ಯವಾಗದು. ಕೆಲವು ಸಿರಿವಂತರನ್ನು ತಮ್ಮ ಅಶ್ಲೀಲ ಅರ್ಭಟದಿಂದ ಅವರು ಗಾಬರಿಗೊಳಿಸಬಹುದು.

ಆದರೆ ಅವರನ್ನು ಗಾಬರಿಗೊಳಿಸುವದು ನನಗೆ ಬೇಕಿಲ್ಲ. ಅವರನ್ನು ಪರಿವರ್ತನೆಗೊಳಿಸುವದೇ ನನ್ನ ಗುರಿ.

ಆದರೆ ಈ ಗುರಿಗಾಗಿ ನಾವು ಹೆಚ್ಚಿನದೇನನ್ನೂ ಈ ವರೆಗೆ ಮಾಡಿಲ್ಲ. ಆದರೂ ನನ್ನ ಈ ವರೆಗಿನ ಯತ್ನದಿಂದ ಅನೇಕರಲ್ಲಿ ಒಂದು ಪರಿವರ್ತನೆಯನ್ನು ಮಾಡಿರುವೆನು. ಈ ಪರಿವರ್ತನೆ ಸ್ವಲ್ಪವೆಂದು ತೋರಿದರೂ ಒಂದೆರಡು ಜಮೀನ್ದಾರರೂ ಪರಿವರ್ತಿತರಾಗಿದ್ದಾರೆಂಬುದನ್ನು ಒಪ್ಪಲೇ ಬೇಕು. ಟ್ರಸ್ಟಿಗಳಾಗಿದ್ದು ಅವರು ತಮಗಾಗಿ ಉಪಯೋಗಿಸಿಕೊಳ್ಳುವ ಧನವು ಬಹು ಹೆಚ್ಚೆನ್ನುವದರಲ್ಲಿ ಅಭ್ಯಂತರವಿರಲಿಲ್ಲ. ಇದನ್ನು ಕೂಡ ಕಡಿಮೆ ಮಾಡುವದು ಸಾಧ್ಯವಿದೆ. ಸತತ ಪ್ರಯತ್ನದಿಂದ ಸಿರಿವಂತರು ನಿಜವಾದ ಟ್ರಸ್ಟಿಯಾಗುವಂತೆ ಮಾಡಬಹುದು. ಆಡಳಿತ ಅಧಿಕಾರವು ಜನತೆಗೆ ಬಂದಾಗ ಎಲ್ಲ ಶ್ರೀಮಂತರೂ ಇದನ್ನು ಒಪ್ಪಿಯೇ ಒಪ್ಪುವರು. ಆದರೆ ಸಮಯವರಿಯದೆ ನಾವು ಬಾಯಿ ಬಡಿದುಕೊಂಡರೆ ಪ್ರಯೋಜನವಿಲ್ಲ. ಇಂಥಾ ಕೂಗಾಟದಿಂದ ದೇಶದಲ್ಲಿ ಅರಾಜಕತ್ವವಾಗಿ ಫೇಜಿಜಂ ತಲೆದೋರೀ ಒಬ್ಬ ಮುಸಲೋನಿ ಯಾ ಹಿಟ್ಲರನ ಉದಯವಾಗುವದೇ ವಿನಾ ಬೇರಿಲ್ಲ. ದೇಶದಲ್ಲಿ ಒಬ್ಬ ಮುಸಲೋನಿ ಹುಟ್ಟಿ ಕೆಲವು ಒಳ್ಳೆಯ ಕೆಲಸ ಮಾಡಬಹುದು. ದೇಶದ ಜನರ ಜೀವನ ಮಟ್ಟವು ಸ್ವಲ್ಪ ಮಟ್ಟಿಗೆ ಉತ್ತಮವಾಗಬಹುದು. ಆದರೆ ಪ್ರಯೋಜನವೇನು? ಅಲ್ಲಿ ಸ್ವಾತಂತ್ರ್ಯವೆಲ್ಲಿದೆ? ಮುಸಲೋನಿಯು ತನ್ನನ್ನು ಯಾರೂ ವಿರೋಧಿಸದಂತೆ ಅಂಥ ಮಹತ್ವವನ್ನು ಆವಿಷ್ಕರಿಸಿದಂತೆ. ಮುಸಲೋನಿ ಸರಕಾರ ಜೀವಿಸಿಯಾಗಿದ್ದ. ಆದರೆ ಆತನು ಜನರನ್ನು ಭಯಗೊಳಿಸಿ ತನ್ನ ಅಧಿಕಾರ ಚಲಾಯಿಸುತ್ತಿದ್ದ. ಆತನು ಬೆಕ್ಕಿನ ಕಣ್ಣು ನಾನು ಕಂಡಿದ್ದೇನೆ. ಆತನು ಸುತ್ತ ಮುತ್ತ ಗಂಭೀರ ವಸ್ತುಗಳನ್ನಿಟ್ಟು ಆತನನ್ನು ಕಾಣಲು ಹೋಗುವವರಲ್ಲಿ ಭಯ ಉತ್ಪನ್ನ ಮಾಡುವಂತೆ ಏರ್ಪಡಿಸುತ್ತಿದ್ದನು. ಆದರೆ ನನಗೆ ಅದರ ಟೊಳ್ಳುತನ ತಿಳಿದಿತ್ತು. ಸುತ್ತ ಮುತ್ತ ಕತ್ತಿ, ಕೋವಿ, ಮತ್ತಿತರ ಆಯುಧಗಳು ತೂಗಾಡುತ್ತಿದ್ದವು. ಆತನ ಖೋಲಿಯ ಗೋಡೆಯ ಮೇಲಿದ್ದ ಕೂಡ ಚಿತ್ರಪಟಗಳಾವುವೂ ಇಂತಹ ಕೇವಲ ಭಯಾನಕ ಆಯುಧಗಳಿಂದ ಇದ್ದವು. ಈ ರೀತಿ ಏರ್ಪಡಿಸಿದ್ದರ ಪ್ರಯುಕ್ತ ಯಾವ ಸಂದರ್ಶಕನಿಗೂ ಆತನನ್ನು ವಿರೋಧಿಸಲಾಗುತ್ತಿರಲಿಲ್ಲ.

ಇಂದು ನಮ್ಮ ದೇಶದಲ್ಲೂ ಹಾಗೆಯೇ ಆಗುತ್ತಿದೆ. ಅನೇಕ ಕಡೆ ಹಿಂಸಾತ್ಯಾಚಾರಗಳು ಆಗುತ್ತಿವೆ. ಅನೇಕರು ದಬ್ಬಾಳಿಕೆಯ ಆಡಳಿತದಡಿಯಲ್ಲಿ ಜೀವಿಸಿ ಭಯಾದ ದುರ್ಭಿಕ್ಷವನ್ನು ನಚ್ಚುತ್ತಾರೆ. ಅಂಥವರಿಗೆ ಅದೇ ಉತ್ತಮವೆನಿಸಿ ಹೋಗುವದುಂಟು. ಬ್ರಿಟಿಷರು ಅದೇ ರೀತಿಯ ಆಡಳಿತ ನಡೆಸುತ್ತಾರೆ. ಅವರ ಪೋಲೀಸರು, ಸೈನಿಕ, ಪೈಲಟುಗಳನ್ನು ಇಂಥಾ ಚಾರ ಹೆಚ್ಚು ತೋರಿಸಿ ಉಳಿದವರು ಭಯದಿಂದ ನೋಡುವಂತೆ ಮಾಡುತ್ತಾರೆ. ಡಾರ್ಜಿಲಿಂಗ್ ಒಮ್ಮೆ ಬಂಗಾಳಿಗಳ ನಗರವಾಗಿತ್ತು. ಆದರೆ ಅದರಲ್ಲಿ ಈಗ ಬ್ರಿಟಿಷರ ವಿನಾ ಬೇರೆ ಜನರಲ್ಲಿ ಪಾಸ್ ಪೋರ್ಟ್ ಇಲ್ಲದೆ ಅಲ್ಲಿಗೆ ಹೋಗಲು ಬಿಡುವುದಿಲ್ಲ. ಅದೇ ರೀತಿ ಭಾರತದ ಇತರ ಕಡೆಗಳಲ್ಲೂ ಇದೆ. (ಇದೇ ತತ್ತ್ವದಂತೆ ಜನ ಪ್ರತಿನಿಧಿಗಳಾಗಿ ಅಧಿಕಾರಕ್ಕೆ ಬಂದ ಜನರೂ ಕೂಡ ತಮಗೆ ಅರಮನೆಯಂಥಾ ಮನೆ ಬೇಕು; ಕಾರು ಬೇಕು. ಆಳುಗಳ ಸಮೂಹ ಬೇಕು. ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಸಾಮಾನ್ಯ ಜನರು ಅವರ ಹತ್ತಿರ ಸುಳಿಯಲು ಹೆದರುವಂತೆ ಮಾಡುತ್ತಾರೆ!) ಈ ರೀತಿಯ ಮಾರ್ಗದಿಂದ ಸರ್ವರ ಅಹಿತವಾಗುವದು. ಇಂಥಾ ಪರಿಸ್ಥಿತಿ ಬಾರದಂತೆ ಮಾಡಿ ಶ್ರೀಮಂತರನ್ನು, ಬಡವರನ್ನು ಪರಸ್ಪರ ಪ್ರೀತಿ ವಿಶ್ವಾಸದಿಂದ ಬದುಕುವಂತೆ ಮಾಡಿ ಒಬ್ಬರು ಇನ್ನೊಬ್ಬರ ಹಿತಕ್ಕಾಗಿ ದುಡಿಯುವಂತೆ ಮಾಡುವದು ಕರ್ತವ್ಯವಾಗಿದೆ.

ಆದ್ದರಿಂದ ನಮ್ಮ ಈ ಸಾರ್ವಜನಿಕ ಹಿತಪ್ರಯತ್ನದಲ್ಲಿ ನಮ್ಮ ದಾರಿಯನ್ನು ಪರಿಶುದ್ಧವಾಗಿರಿಸುವದು ಅತ್ಯವಶ್ಯ. ಜನತೆಯ ಕೈಗೆ ಆಡಳಿತ ಜವಾಬ್ದಾರಿ ಬಂದು ಮುಂದಾಳ್ತನವು ನಮ್ಮ ಕೈಗೆ ಬಂದಾಗ ಗ್ರಾಮದ ಜನರ ಮೇಲಿರುವ ಸಾಲದ ನಿವಾರಣಾ ಕೆಲಸವು ಕಷ್ಟವಲ್ಲ. ಆ ಸಂದರ್ಭದಲ್ಲಿ ಹಣವಿರುವವರು ಯಾವುದೇ ಸಂಕೋಚವಿಲ್ಲದೆ ಟ್ರಸ್ಟಿಗಳಾಗುವರು. ಆಗ ನಮ್ಮ ಸಂಪತ್ತು ಮತ್ತು ಜೀವನವನ್ನು ದುರ್ವಿನಿಯೋಗ ಮಾಡದೆ ಇದ್ದರೆ ಇಡೀ ಜಗತ್ತಿನ ರಾಷ್ಟ್ರಗಳಿಗೆ ಅಸೂಯೆ ಹುಟ್ಟಿಸುವಂಥಾ ಪ್ರಾಕೃತಿಕ ವೈಭವ ಮತ್ತು ವಾತಾವರಣ ನಮ್ಮ ದೇಶದಲ್ಲಿದೆ.

॥ ಗಾಂಧೀಜಿ: ವ್ಯಾವಹಾರಿಕ ಧ್ಯೇಯವಾದಿ ॥

[ಶ್ರೀ ಪ್ಯಾರೇಲಾಲರ ಒಂದು ಭಾಷಣದಿಂದ]

ಪಂಡಿತ ಜವಾಹರಲಾಲರು ಈಚೆಗೆ ತಮ್ಮ ಸ್ವಾಭಾವಿಕ ಉಜ್ವಲವಾಣಿಯಿಂದ ವರ್ಣಿಸಿದಂತೆ ಗಾಂಧೀಜಿ ಜನಜಂಗುಳಿಯ ಗೌರವಕ್ಕೆ ಮಾತ್ರ ಪಾತ್ರರಾಗಿರದೆ ಅನೇಕ ವಿಚಿತ್ರ ಜನರ ಶಿಷ್ಯಕೋಟಿಯ ಭಕ್ತಿಯನ್ನು ಸಂಪಾದಿಸಿದ್ದರು. 'ನಾವು ಬಗೆಬಗೆಯ ಜನರು ಸೇರಿದ್ದೆವು. ಆ ಮೇಲೆಯಂತೂ ನಾವು ಪ್ರತಿಯೊಬ್ಬರೂ ಭಿನ್ನ ಭಿನ್ನ ಪ್ರಕೃತಿಯ, ಭಿನ್ನ ಭಿನ್ನ ಸಂಸ್ಕಾರದ, ಭಿನ್ನ ಭಿನ್ನ ಜೀವನ ಮಾರ್ಗದ, ಭಿನ್ನ ಭಿನ್ನ ವಿಚಾರದ ಜನರಾಗಿದ್ದೆವು. ಆದರೆ ನಮ್ಮ ಭಿನ್ನ ಭಿನ್ನ ದೃಷ್ಟಿಕೋಣಗಳಿಂದ ನಾನಾ ಅವರನ್ನು ಭಿನ್ನ ಭಿನ್ನವಾಗಿಯೇ ನೋಡಿ ಅವರು ಮಹಾ ಭವ್ಯ ಪುರುಷರೆಂದುಕೊಳ್ಳುತ್ತಿದ್ದೆವು' ಎಂದು ಅವರು ಹೇಳಿದ್ದಾರೆ.

ಅವರ ಶಿಷ್ಯಕೋಟಿಯಲ್ಲಿ ಕೆಲವರನ್ನು ತೆಗೆದುಕೊಳ್ಳೋಣ. ಅವರ ಅಕ್ಕೀಜು ವೃತ್ತದಲ್ಲಿ ಘನಶ್ಯಾಮದಾಸ ಬಿರ್ಲಾ ಮತ್ತು ಶೇಠ್ ಜಮುನಲಾಲ ಬಜಾಜರಂಥ ವರ್ತಕರು, ಆಚಾರ್ಯ ಕೃಪಲಾನಿಯವರಂಥ ವೈತಂಡಿಕರು, ಪಂಡಿತ ನೆಹರೂರಂಥ ಬುದ್ಧಿವಾದಿ-ಕ್ರಾಂತಿಕಾರರು, ಪಂ. ಮೋತಿಲಾಲ ನೆಹರೂ ಮತ್ತು ವಿಠ್ಠಲಭಾಯಿ ಪಟೇಲರಂಥ ಮುತ್ಸದ್ದಿಗಳು ಮತ್ತು ಧೂರ್ತ ರಾಜಕಾರಣಿಗಳು, ವಿನೋಬಾ ಭಾವೆಯವರಂಥ ಭೂತದಯಾಪರರು, ಮೌಲಾನ ಆಜಾದರಂಥ ಮಹಾ ವಿದ್ವಾಂಸರು ಮತ್ತು ಧರ್ಮೋಪದೇಶಿಗಳು, ತಂತಮ್ಮ ವೃತ್ತಿಯಲ್ಲಿ ಪ್ರತಿಭಾಶಾಲಿ ನಿಪುಣ ವೈದ್ಯರಾದ ಡಾ. ಅನ್ಸಾರಿ ಮತ್ತು ಹಕೀಮ ಅಜಮಲ ಖಾನರು, ಭಾರತ ಕೋಕಿಲೆ ಶ್ರೀಮತಿ ಸರೋಜಿನಿ ನಾಯಡು ಅವರಂಥ ಅವಿನೀತ ಆದರೂ ಮಾತೃವಾತ್ಸಲ್ಯಭರಿತ ವ್ಯಕ್ತಿಗಳು, ಮೀರಾಬೆನ್ನಳಂಥ ಶ್ರೀಮಂತ ಕುಲದ ಸ್ತ್ರೀಯರು ಮತ್ತು ಕೊನೆಯದಾಗಿ, ದುರ್ದೈವದಿಂದ ಈಗ ಉರುಳಿರುವ ಭಾರತದ ಆಧಾರಸ್ತಂಭ, ಉಕ್ಕಿನ ಮನುಷ್ಯ, ಸರದಾರ ಪಟೇಲರಂಥವರೂ ಇದ್ದರು. ಇದು ಕೇವಲ ನಿದರ್ಶನಾತ್ಮಕ ಪಟ್ಟಿ.

ಹೀಗೆ ನಾನಾ ಜನರ ಮನಸನ್ನೂ ಭಕ್ತಿಯನ್ನೂ ಸೆರೆಹಿಡಿಯುವ ಅದ್ಭುತ ಗಹನವೇನಿರಬಹುದು? ಸ್ವತಃ ಮಹಾ ಶೂರರೆನಿಸಿದ ಈ ಪ್ರಸಿದ್ಧ ಜನರ ಕೂಟವು ಈ ಮನುಷ್ಯನನ್ನು ತಮ್ಮಲ್ಲಿ ಅತ್ಯಂತ ಶ್ರೇಷ್ಠನೆಂದೂ ತಮ್ಮಲ್ಲಿ ಪ್ರತಿಯೊಬ್ಬನ ಸದ್ಗುಣಗಳ ಪಾಠ ಕ್ರಮಗುರುವೆಂದೂ ಏಕೆ ಬಗೆಯುತ್ತಿತ್ತು? ಗಾಂಧೀಜಿಯಲ್ಲಿದ್ದ ಬಹುಮುಖವಾದ ವ್ಯಕ್ತಿತ್ವವೇ ಈ ಜನರನ್ನು ಅವರ ಕಡೆ ಆಕರ್ಷಿಸಿತು. ತಮ್ಮ ಚಾತುರ್ಯ, ಸರಿಯಾದ ತಿಳುವಳಿಕೆ ಆವಶ್ಯವಾದ ಆಳವಾದ ಸಹಾನುಭೂತಿ ಮತ್ತು ಅಹಿಂಸೆಯ ಪ್ರಧಾನ ಲಕ್ಷಣಗಳಾದ ಪಾವಿತ್ರ್ಯ ಮತ್ತು ಮೋಹಕ ವ್ಯಕ್ತಿತ್ವ ಇವುಗಳಿಂದ ಗಾಂಧೀಜಿ ಅವರನ್ನೆಲ್ಲಾ ಒಟ್ಟಾಗಿ ಹಿಡಿದಿದ್ದರು.

ಉದಾಹರಣೆಗೆ ಘನಶ್ಯಾಮದಾಸ ಬಿರ್ಲಾ ಮತ್ತು ಶೇಟ್ ಜಮುನಲಾಲರು ವ್ಯಾವಹಾರಿಕ ವಿಷಯಗಳಲ್ಲಿ ಗಾಂಧೀಜಿ ತೋರುತ್ತಿದ್ದ ಜಾಗರೂಕತೆ, ಪ್ರಾಮಾಣಿಕತೆ ಮತ್ತು ದಿಟ್ಟತನಕ್ಕೆ ಮುಗ್ಧರಾಗಿದ್ದರು; ಆಚಾರ್ಯ ಕೃಪಲಾನಿಯವರಾದರೋ ತಾವು ಸ್ವತಃ ಆಗಬೇಕೆಂದು ಬಯಸಿದ ಕ್ರಾಂತಿಕಾರಿ, ಬಂಡುಗಾರನನ್ನು ಗಾಂಧೀಜಿಯಲ್ಲಿ ಕಂಡು ಅವರಿಗೆ ಮನವನ್ನು ಮಾರಿದರು; ಸುಸಂಸ್ಕೃತ ಬುದ್ಧಿವಾದಿ ಜವಾಹರಲಾಲರು ಅವರ ಅದ್ಭುತ ಚೈತನ್ಯವನ್ನೂ, ಅವರ ಜೀವನದಲ್ಲಿದ್ದ ನಿದರ್ಶನ ಕಲಾಪೂರ್ಣತೆಯನ್ನೂ ಕಂಡು ಮನಸೋತರು. ಒಂದು ಸಲ ತುಂಬ ಬಿಸಿ ಚರ್ಚೆ ನಡೆದಾಗ ಪಂಡಿತಜೀಯವರು ತಾಳ್ಮೆಗೆಟ್ಟು 'ನನಗೆ ಕ್ರಾಂತಿ ಬೇಕು, ಇದು ಬರೀ ಸುಧಾರಣೆ' ಎಂದು ಸಿಡಿದದ್ದು ನನಗೆ ನೆನಪಿದೆ. ಅದಕ್ಕೆ ತಕ್ಷಣ ಗಾಂಧೀಜಿ ಪ್ರತಿನುಡಿದರು: 'ಉಳಿದವರು ಕ್ರಾಂತಿಯ ಮಾತಾಡುತ್ತಿದ್ದಾಗ ನಾನು ಸಂಕ್ರಾಂತಿಗಳನ್ನು ಮಾಡಿದವನಿದ್ದೇನೆ. ನಿಮ್ಮ ಹುರುಪು ಆರಿ, ಗಂಟಲು ಒಣಗಿದಾಗ ನಿಜವಾಗಿ ಕ್ರಾಂತಿ ಬೇಕಾಗಿದ್ದರೆ ನನ್ನಲ್ಲಿಗೆ ಬರುವಿರಿ.' ವಾದ ಅಲ್ಲಿಗೇ ನಿಂತು ಹೋಯಿತು. ಕುಲದರ್ಪ, ಶ್ರೀಮದ್ದಾಂಭೀರ್ಯಗಳಿಂದ ತುಂಬಿದ ಪಂಡಿತ ಮೋತಿಲಾಲರು ಗಾಂಧೀಜಿಯಲ್ಲಿದ್ದ ರಾಜಕೀಯ ನೈಪುಣ್ಯವನ್ನೂ ಮುತ್ಸದ್ದಿತನವನ್ನೂ ಕಂಡು ಆಶ್ಚರ್ಯಪಡುತ್ತಿದ್ದರು. ಒಮ್ಮೆ ಗಾಂಧೀಜಿಯ ಭೆಟ್ಟಿಗೆ ಬಂದಿದ್ದ ವೃದ್ಧ ಪಂಡಿತಜಿಯನ್ನು ತಿರುಗಿ ಅವರ ಮನೆಗೆ ಬಿಟ್ಟು ಬರುವ ಸರತಿ ನನ್ನ ಪಾಲಿಗೆ ಬಂದಿತು. ಆಗ ಗಾಂಧೀಜಿ ಜುಹುವಿನಲ್ಲಿ ಕರುಳಿನ ಶಸ್ತ್ರಕ್ರಿಯೆಯ ನಂತರ ಚೇತರಿಸಿಕೊಳ್ಳುತ್ತಿದ್ದರು. ನಾವಿಬ್ಬರೂ ಮೌನವಾಗಿ ಜುಹುವಿನ ಮಳಲ ರಾಶಿಯ ಮೇಲೆ ನಡೆಯುತ್ತಿದ್ದೆವು. ಒಮ್ಮೆಲೇ ವೃದ್ಧ ಪಂಡಿತರು ಒಂದು ಎತ್ತರದ ತಾಳವೃಕ್ಷದತ್ತ ಬೆಟ್ಟು ಮಾಡಿ ನುಡಿದರು— 'ಗಿಡಗಳಲ್ಲಿ ಅದು ಮಹಾತ್ಮ, ಉಳಿದವುಗಳಿಗಿಂತ ಎಷ್ಟೋ ಎತ್ತರಕ್ಕೆ ತಲೆನೆಗ್ಗಿ ನಿಂತಿದೆ.' ಆ ಮೇಲೆ ಅವರು ಹೀಗೆ ಸ್ಮೃತಿಗಳನ್ನು ಬಿಚ್ಚಿದರೆ —'ನಾನು ನಿಮ್ಮ ಮಹಾತ್ಮಾಜಿಗೆ ಹೇಳಿಬಿಟ್ಟಿದ್ದೇನೆ. 'ನನಗೆ ನಿಮ್ಮ ಆಧ್ಯಾತ್ಮದಲ್ಲಿ ವಿಶ್ವಾಸವಿಲ್ಲ. ಈ ಜನ್ಮದಲ್ಲಿಯಂತೂ ದೇವರಲ್ಲಿ ನನಗೆ ನಂಬಿಕೆಯಿಲ್ಲ. ನಾನು ಶುದ್ಧ ನಾಸ್ತಿಕ; ಆದರೆ ನನಗೆ ಬಂದಿರುವ ಪೇಚೆಂದರೆ, ರಾಜಕಾರಣದ ನಮ್ಮ ಆಟದಲ್ಲಿ ನೀವು ನಮ್ಮನ್ನೇ ಸೋಲಿಸುತ್ತೀರಿ' ಎಂದೆ. ನಾನು "ಅವರೇನೆಂದರು ಅವರು?" ಎಂದು ಕೇಳಿದೆ. ಪಂಡಿತ ಮೋತಿಲಾಲರು ಉತ್ತರವಿತ್ತರು. 'ಅವರು ಬರಿ ನಕ್ಕರು. ಆ ಮೇಲೆ ಗಂಭೀರ ಭಾವದಿಂದ ಹೇಳಿದರು 'ಮಹಾ ಪ್ರಬಲ ಬ್ರಿಟಿಶ ಸಾಮ್ರಾಜ್ಯವನ್ನು ಪ್ರತಿಭಟಿಸ ಹೊರಟ ನನ್ನ ಬಂಡುಗಾರ ದಿಟ್ಟತನಕ್ಕಾಗಿ ಜನ ನನ್ನನ್ನು ಮೆಚ್ಚುತ್ತಾರೆ. ಆದರೆ ನನ್ನೀ ಅಭಿಯೋಗ ಶಕ್ತಿಯ ಉಗಮ ನನ್ನ ಸಂತತ ಆತ್ಮಶೋಧನ ಪ್ರಯತ್ನಗಳಿಂದಲೇ ಆಗುತ್ತಿದೆಯೆಂದು ಅವರು ಅರಿಯರು!' ಮೌಲಾನಾ ಸಾಹೇಬರು ತಮ್ಮ ಕುರಾಣದ ಗಂಭೀರ ಅಧ್ಯಾಯದಿಂದ ಸ್ವತಃ ಆಚರಣೆಗೆ ತರಲು ಹವಣಿಸುತ್ತಿದ್ದ ಧಾರ್ಮಿಕ ನಿಷ್ಠೆಗೆ ಸರಿದೂಗುವ ಧರ್ಮೋಪದೇಶಕನನ್ನು ಗಾಂಧೀಜಿಯಲ್ಲಿ ಕಂಡರು. ವಿನೋಬಾ ಭಾವೆಯವರ ಪಾಲಿಗೆ ಅವರ ಸತ್ಯಸಾಧನೆ, ಭಗವದ್ಭಕ್ತಿ, ಮತ್ತು ತಪಶ್ಚರ್ಯೆ ಪ್ರಾಚೀನ ವೈದಿಕ ಋಷಿಗಳ ಸ್ಮರಣೆಯನ್ನು ತಂದು ಕೊಡುತ್ತಿತ್ತು. ಅವರಲ್ಲಿದ್ದ ಸ್ಫುಟ ವಿಚಾರ ಶಕ್ತಿ, ಕುಶಾಗ್ರ ಬುದ್ಧಿ ವಿರೋಧಿಯ ಅಭಿಪ್ರಾಯವನ್ನು ಥಟ್ಟನೆ ತಿಳಿದುಕೊಳ್ಳುವ ಸಾಮರ್ಥ್ಯ ಮತ್ತು ಕಾಯಿದೆಯ ಪರಿಜ್ಞಾನ ಇವು ಪ್ರಸಿದ್ಧ ವಕೀಲರು ನ್ಯಾಯಸ್ಥಾನದಲ್ಲಿ ನಡೆಸುವ ಕಾಯಿದೆಯ ಡೊಂಬರಾಟವನ್ನು ನಾಚಿಸುವಂತಿದ್ದುದನ್ನು ನೋಡಿ ಗಾಂಧೀಜಿ ಮುಗ್ಧರಾದರು. ಡಾ. ರಾಜೇಂದ್ರ ಪ್ರಸಾದರೋ ತಮ್ಮ ಹೃದಯವು ಎಂದಿನಿಂದ ಹಂಬಲಿಸುತ್ತಿದ್ದ ದರಿದ್ರ ನಾರಾಯಣ ಸೇವೆಯ ಮೂರ್ತಿಮಂತ ಸ್ವರೂಪವನ್ನೇ ಗಾಂಧೀಜಿಯಲ್ಲಿ ಕಂಡರು. ಡಾ. ಅನ್ಸಾರಿಯವರು ತಮ್ಮ ಇತರ ಸಮಕಾಲೀನ ವೈದ್ಯ ಶ್ರೇಷ್ಠರಂತೆ—ಅವರನ್ನು ಇಲ್ಲಿ ಹೆಸರಿಸುವದು ಅನವಶ್ಯಕ—ಆರೋಗ್ಯ ಮತ್ತು ರೋಗರುಜೆಗಳ ವಿಚಾರದಲ್ಲಿ ಗಾಂಧೀಜಿ ವೈಜ್ಞಾನಿಕ ದೃಷ್ಟಿ ಮತ್ತು ಕಾರ್ಯ ಪದ್ಧತಿಯನ್ನಿಟ್ಟುಕೊಂಡಿದ್ದುದನ್ನು ನೋಡಿ ಅವರೆಡೆ ಆಕರ್ಷಿತರಾಗಲ್ಪಟ್ಟರು. ಗಾಂಧೀಜಿ ವಿನೋದದಿಂದ ತಮ್ಮ ಹುಚ್ಚು ಲೋಕದ ಪಾಂಡಿತ್ಯವೆಂದು ಕರೆಯುತ್ತಿದ್ದ ನೈಸರ್ಗಿಕ ಚಿಕಿತ್ಸೆಯ ವಿಷಯದಲ್ಲಿ ಅವರಿಟ್ಟುಕೊಂಡಿದ್ದ ಶುದ್ಧ ವಸ್ತುನಿಷ್ಠ ಪ್ರಯೋಗಗಳು ಈ ವೈದ್ಯ ಜನರು ಕಲಿಸಿದ್ದ 'ವೈಜ್ಞಾನಿಕ ನಿಯಮ'ಗಳನ್ನೂ ವೈದ್ಯಕೀಯ ಸಿದ್ಧಾಂತಗಳನ್ನೂ ತಲೆಕೆಳಗು ಮಾಡಿಬಿಡುತ್ತಿದ್ದವು. ಶ್ರೀಮತಿ ನಾಯುಡು ಅವರ ಕವಿಸಹಜ ಇಂಗಿತಜ್ಞತೆ ಗಾಂಧೀಜಿಯಲ್ಲಿ ಒಬ್ಬ 'ಕ್ರಿಯಾತ್ಮಕ ಕವಿ'ಯನ್ನು ಕಾಣಿಸಿದರೆ; ಪ್ರಾಚೀನ ಸ್ವಭಾವಾನಿಜ ಜ್ಞಾನಾಂಗವೊಂದನ್ನು ಪರಾಧೀನತೆಯ ಪಾಶದಿಂದ ವಿಮೋಚನೆಗೊಳಿಸಹೊರಟ ಅವರ ಹೃದಯವು ತಮ್ಮ ಸ್ತ್ರೀ ಹೃದಯದಷ್ಟೇ ಸ್ಪಂದನವಾಗಿದ್ದುದನ್ನು ಅವರು ಕಂಡರು. ಕುಬೇರಾರಾಧಕ ಶುಷ್ಕ ಪಾಶ್ಚಾತ್ಯ ಹೃದಯವು ಹಾರೈಸುತ್ತಿದ್ದ ಅಧ್ಯಾತ್ಮಿಕ ಅಮೃತದ ಸೆಲೆಯನ್ನು ಮೀರಾಬೆನ್ನಳು ಗಾಂಧೀಜಿಯಂತ ಕಡೆ ಕಂಡಳು. ಬ್ರಿಜ್ ಆಟ, ಸದಾ ಸಿಗರೇಟ್ ಮತ್ತು ಬ್ಯಾರಿಸ್ಟರ್ ಪಟೇಲರು, ಅಹಮದಾಬಾದಿನ ತಮ್ಮ ಭಾಜಿಯಾ ಕ್ಲಬ್ಬಿನಲ್ಲಿ ಕುಳಿತು ಧೂರ್ತ ದೃಷ್ಟಿಯಿಂದ ಭಾರತೀಯ ರಾಜಕೀಯಾಕಾಶವನ್ನು ಅವಲೋಕಿಸುತ್ತ, ಕೊನೆಗೊಮ್ಮೆ ಗಾಂಧೀಜಿಯಲ್ಲಿ ಬರಿ ಮಾತಿನ ಮಲ್ಲನಲ್ಲದ, ಆದರೆ ಒಮ್ಮೆ ಹಿಡಿದದ್ದನ್ನು ಸಾಧಿಸಿಯೇ ಬಿಡುವ ರಾಜಕೀಯ ನಾಯಕನನ್ನು ಕಂಡು ಹಿಡಿದರು.

ಹೀಗೆ ಅವರೆಲ್ಲರೂ ಗಾಂಧೀಜಿಯ ಕ್ರೀತ ದಾಸರಾಗಿಬಿಟ್ಟರು. ಮುಂದೆ ತಂತಮ್ಮ ಭಿನ್ನ ಭಿನ್ನ ಸ್ವಭಾವ ಮತ್ತು ತಾವು ಇದ್ದ ಭಿನ್ನ ಭಿನ್ನ ಸನ್ನಿವೇಶಗಳಲ್ಲಿ ಅವರ ಧ್ಯೇಯಗಳನ್ನು ಆಚರಣೆಯಲ್ಲಿ ತರುವುದು ತಮಗೆ ದಿನೇ ದಿನೇ ಕಠಿನತರವಾಗುತ್ತ ಬಂದರೂ ಈ ಜನರಿಗೆ ಅವರ ಸರಳು ಹರಿದುಕೊಂಡು ಹೋಗುವುದು ಕಠಿಣ, ಏಕೆ, ಅಸಾಧ್ಯವೇ ಆಯಿತು.

ಅವರ ಮೋಹಕ ಶಕ್ತಿ ಸರ್ವವ್ಯಾಪಿಯಾಗಲು ಕಾರಣವೇನೆಂದರೆ ಅವರು ತಮ್ಮ ಸಾಧನಭೂತರಾದವರನ್ನು ಎಂದೂ ದುರುಪಯೋಗಪಡಿಸುತ್ತಿದ್ದಿಲ್ಲ. ಹಿಟ್ಲರ ಸರ್ವಾಧಿಕಾರಿಯಾದವನು ತನ್ನ ಸೈನಿಕರನ್ನು ಶತ್ರುಗಳ ಗುಂಡಿನ ಬಾಯಿಗೆ ಬಲಿಗೊಟ್ಟು ತಾನು ಕೀರ್ತಿ ಪಡೆಯುತ್ತಾನೆ. ಗಾಂಧೀಜಿ ಎಂದೂ ಯಾರನ್ನೂ ಅವನವನಿಗೆ ಹಿತಕರವಾದ ರೀತಿಯಲ್ಲಲ್ಲದೆ ಬೇರೆ ರೀತಿಯಲ್ಲಿ ಉಪಯೋಗಿಸಲಿಲ್ಲ. ಅವರು ತಮ್ಮ ಸಾಧನ ಭೂತರಾದವರನ್ನು ಉಪಯೋಗಿಸುತ್ತಿದ್ದ ರೀತಿಯಿಂದ ಆ ಜನರಲ್ಲಿದ್ದ ಅತ್ಯುತ್ತಮ ಗುಣಗಳು ಪ್ರಕಾಶಕ್ಕೆ ಬಂದು ಅವರ ಶಕ್ತಿ ದಿನ ದಿನಕ್ಕೆ ಪ್ರವರ್ಧಮಾನವಾಗುತ್ತಿತ್ತು.

ತಾವು ಮಾಡಲೊಲ್ಲದ ತ್ಯಾಗಗಳನ್ನು ಇತರರಿಂದ ಅವರು ಯಾವಾಗಲೂ ಅಪೇಕ್ಷಿಸಲಿಲ್ಲ. ತಮ್ಮ ಸ್ವಂತ ದೌರ್ಬಲ್ಯಗಳ ಬಗ್ಗೆ ಅವರೆಷ್ಟು ಅಸಹನೆಯನ್ನು ತೋರುತ್ತಿದ್ದರೋ ಅಷ್ಟೆ ಸಹನೆಯನ್ನು ಪರರ ದೌರ್ಬಲ್ಯಗಳ ಬಗ್ಗೆ ತೋರುತ್ತಿದ್ದರು. ಆತ್ಮಪ್ರಭುತ್ವವನ್ನು ಸಂಪಾದಿಸಬೇಕಾದರೆ ತಮಗೆಷ್ಟು ಕಠಿಣ ಆಯಿತೆಂಬುದರ ನೆನಪು ಅವರಿಗಿದ್ದುದರಿಂದ ಅನ್ಯರ ತಪ್ಪು ತಡೆಗಳನ್ನು ಸಹನೆಯಿಂದ ಪರಾಮರ್ಶಿಸಲು ಅವರಿಗೆ ಸಾಧ್ಯವಾಯಿತು. 'ನಮ್ಮ ತಪ್ಪುಗಳ ಕಡ್ಡಿಯನ್ನು ಗುಡ್ಡ ಮಾಡಬೇಕು, ಇತರರ ತಪ್ಪುಗಳ ಗುಡ್ಡವನ್ನು ಕಡ್ಡಿ ಮಾಡಬೇಕು' ಎಂದು ಅವರು ಆಗಾಗ್ಗೆ ಹೇಳುತ್ತಿದ್ದರು. ಇದನ್ನು ಅವರು 'ಅಹಿಂಸೆಯ ಕರ್ತವ್ಯ' ಎಂದು ಕರೆಯುತ್ತಿದ್ದರು. ಮನುಷ್ಯ ಸ್ವಭಾವ ಯಾವಾಗಲೂ ಆತ್ಮ ಸಮರ್ಥನೆ ಮಾಡಿಕೊಳ್ಳಲು ಹವಣಿಸುವುದೆಂದು ಚೆನ್ನಾಗಿ ಬಲ್ಲ ಅವರು, ತಮ್ಮ ವಿರೋಧಿಗಳಿಗೆ, ತಮ್ಮ ಮಾತನ್ನು ಒಪ್ಪದವರಿಗೆ ನ್ಯಾಯ ದೊರಕಬೇಕೆಂಬ ಅಪೇಕ್ಷೆಯಿಂದ, ಯಾವಾಗಲೂ ವಿರೋಧಿಗಳಿಗೆ ಪಕ್ಷಪಾತ ಮಾಡುತ್ತಿರಲು ಪ್ರಯತ್ನಪೂರ್ವಕ ಯತ್ನಿಸುತ್ತಿದ್ದರು. ವಾದದಲ್ಲಿ ವಿರೋಧಿಯನ್ನು ತಮ್ಮ ಬೌದ್ಧಿಕ ಪ್ರಹಾರದಿಂದ ಬೆಪ್ಪುಗೊಳಿಸಲು ಇಲ್ಲವೇ ಸೋಲಿಸಲು ಅವರೆಂದೂ ಪ್ರಯತ್ನಿಸಲಿಲ್ಲ. ವಿರೋಧಿಯನ್ನೂ ತಮ್ಮಂತೆ ಸತ್ಯಾನ್ವೇಷಿಯಾಗಿ ಮಾಡಿ ಅವರು ಅವರ ವಾದಸರಣಿಯಲ್ಲಿರುವ ದೋಷಗಳನ್ನು ತೋರಿಸಿಕೊಡುತ್ತ, ಹಾಗೆ ಮಾಡುವಾಗ ಒಮ್ಮೊಮ್ಮೆ ತಮ್ಮ ಸ್ವಂತ ವಾದಸರಣಿಯಲ್ಲಿರುವ ಲೋಪಗಳನ್ನು ಕಂಡು ಹಿಡಿಯು

ಕೊಡಗಿನಲ್ಲಿ ಕೇಂದ್ರದ ಗೃಹ ಮಂತ್ರಿ ಡಾ. ಕಾಟ್ಜೂರವರು.

ಭಾರತ ಸರಕಾರದ ಗೃಹ ಮಂತ್ರಿಗಳಾದ ಡಾ. ಕೈಲಾಸನಾಥ ಕಾಟ್ಜೂರವರು ತಾ. ೨೫ರ ಬೆಳಗ್ಗೆ ಮೈಸೂರಿನಿಂದ ಕೊಡಗಿಗೆ ಬಂದರು. ಸುಮಾರು ೧೧ ಗಂಟೆಗೆ ಮೈಸೂರಿನ ಮುಖ್ಯ ಮಂತ್ರಿಗಳಾಗಿರುವ ಶ್ರೀ ಕೆ. ಹನುಮಂತಯ್ಯನವರೊಡನೆ ಬಂದು ಫ್ರೇಜರ್‌ಪೇಟೆಯಲ್ಲಿಳಿದರು. ಫ್ರೇಜರ್‌ಪೇಟೆಯಲ್ಲಿ ಜನರೂ ಚೀಫ್ ಕಮೀಷನರೊಳಗೊಂಡು ಅಧಿಕಾರಿಗಳೂ ಅವರನ್ನು ಸ್ವಾಗತಿಸಿದರು. ಆ ಹೋಬಳಿಯ ಜನರು ಮಾನ್ಯ ಮಂತ್ರಿಗಳಿಗೆ ಒಂದು ಬಿನ್ನಹ ಪತ್ರವನ್ನು ಅರ್ಪಿಸಿದರು.

ಶ್ರೀ. ಲಕ್ಷ್ಮಣ ಶೆಟ್ಟಿಯವರು ಬಿನ್ನ ಪತ್ರವನ್ನು ಓದಿದರು.

ನಮ್ಮನ್ನು ಪ್ರಥಮವಾಗಿ ಸ್ವಾಗತಿಸುವ ಸೌಭಾಗ್ಯ ದೊರೆತುದಕ್ಕೆ ನಾವು ಧನ್ಯರು. ಸ್ವಾತಂತ್ರ್ಯ ದೊರೆತ ಮೇಲೆ ಇಂಡಿಯಾ ಸರಕಾರದ ಗೃಹ ಮಂತ್ರಿಗಳು ಕೊಡಗನ್ನು ಸಂದರ್ಶಿಸುವುದು ಇದೇ ಮೊದಲು. ನೀವು ಆಧುನಿಕ ಭಾರತದ ನಿರ್ಮಾಪಕರಲ್ಲಿ ಒಬ್ಬರು. ದೇಶಕ್ಕಾಗಿ ನೀವು ಮಾಡಿರುವ ತ್ಯಾಗದ ಅರಿವು ನಮಗಿದೆ. ಆದರ್ಶ ಲಾಯರಾಗಿ ಧನ ಸಂಪಾದನೆಯನ್ನು ಮಾಡಿದರೂ ದೇಶದ ಕರೆ ಬಂದಾಗ ಯಾವುದನ್ನೂ ಲೆಕ್ಕಿಸದೆ ಮಾತೃಭೂಮಿಗಾಗಿ ತ್ಯಾಗಮಾಡಿರುವಿರಿ.

ಒರಿಸ್ಸಾ ಗವರ್ನರರಾಗಿ ಆ ಪ್ರಾಂತಕ್ಕೆ ಒಂದು ರೂಪ ಕೊಟ್ಟಿರಿ. ರಾಜಗೋಪಾಲಾಚಾರಿಯವರ ನಂತರ ಪಶ್ಚಿಮ ಬಂಗಾಳದ ಗವರ್ನರರಾಗಿ ಆದರ್ಶ ರೀತಿ ದುಡಿದಿರಿ. ನಂತರ ರಾಜಗೋಪಾಲಾಚಾರಿಯವರ ಬದಲು ಕೇಂದ್ರದ ಗೃಹ ಮಂತ್ರಿಗಳ ಜವಾಬ್ದಾರಿಯನ್ನು ವಹಿಸಿಕೊಂಡಿರಿ. ನೀವು ನಮ್ಮ ಮಂತ್ರಿಗಳಲ್ಲಿ ಅತ್ಯಂತ ದಕ್ಷತೆ ಇರುವವರಲ್ಲಿ ಒಬ್ಬರಾಗಿರುವಿರಿ.

ನಮಗೆ ಕರ್ನಲ್ ಬೇಡಿಯವರು ಚೀಫ್ ಕಮೀಷನರಾಗಿರುವುದು ನಮ್ಮ ಭಾಗ್ಯ. ಅವರು ಕಳೆದ ಚುನಾವಣೆಯನ್ನು ಬಹು ನಿಷ್ಪಕ್ಷಪಾತದಿಂದ ನಡೆಸಿದರು. ಅವರ ಆದರ್ಶ ಆಡಳಿತದಲ್ಲಿ ನಮ್ಮ ಹೋಬಳಿ ಮುಂದುವರಿಯುತ್ತಿದೆ. ನೀವು ಮಡಿಕೇರಿಗೆ ಪ್ರಯಾಣ ಮಾಡಲಿರುವ ರಸ್ತೆಯು ಇಷ್ಟು ಉತ್ತಮವಾದುದು ಅವರ ಯತ್ನದಿಂದ! ಅವರು ವಯಸ್ಕರ ಶಿಕ್ಷಣ, ವ್ಯವಸಾಯ ಮೊದಲಾದುವುಗಳ ಬಗ್ಗೆ ತುಂಬಾ ಆಸ್ಥೆ ವಹಿಸುತ್ತಿದ್ದಾರೆ. ಕೊಡಗಿನಲ್ಲಿ ಈಗ ರಚಿತವಾಗಿರುವ ಮಂತ್ರಿ ಮಂಡಲಕ್ಕೆ ಯೋಗ್ಯ ಪಥದರ್ಶನ ಮಾಡಿ ಕೊಡಲು ಅವರು ಸ್ವಲ್ಪ ಸಮಯ ಇಲ್ಲೇ ಇರಬೇಕೆಂಬುದು ನಮ್ಮ ಅಭಿಪ್ರಾಯ.

ಕೊಡಗಿನಲ್ಲಿ ಜಾರಿಗೆ ಬಂದಿರುವ ಮಂತ್ರಿ ಮಂಡಳವು ಕೇಂದ್ರದಲ್ಲಿರುವ ನಿಮ್ಮ ಸಹಾಯದಿಂದ ಚೆನ್ನಾಗಿ ಕೆಲಸ ಮಾಡಿ ನಮ್ಮ ಈ ಚಿಕ್ಕ ಪ್ರಾಂತವು ದಿನದಿನಕ್ಕೆ ಅಭಿವೃದ್ಧಿಯಾಗಿ ಭಾರತದ ಒಂದು ಭಾಗವಾಗಿ ಬದುಕಲೆಂದು. ನಮ್ಮ ಬಯಕೆ. ಈ ಕಡೆಗೆ ಮಳೆ ಕಡಿಮೆಯಾಗಿರುವುದರಿಂದ ಇಲ್ಲಿಯ ಹಾರಂಗಿ ನೀರಾವರಿ ಯೋಜನೆ ಜಾರಿಯಲ್ಲಿ ಬರುವಂತೆ ಆಗಬೇಕು. ಫ್ರೇಜರ್‌ಪೇಟೆಯು ಕೊಡಗಿನ ಕೈಗಾರಿಕಾ ನಗರವಾಗುವ ಸಾಧ್ಯತೆ ಇದೆ. ವಿದ್ಯುಚ್ಛಕ್ತಿ ದೊರೆಯಬೇಕು. ನಿಮ್ಮ ಸಹನೆಗೆ ವಂದಿಸುವೆವು. ನಮ್ಮ ಹೊಸ ಶಾಸನ ಸಭೆಯ ಉದ್ಘಾಟನೆ ಮಾಡಲಿರುವ ನಿಮ್ಮಿಂದ ಪ್ರಾರಂಭವಾಗುವ ಈ ಆಡಳಿತವು ಭದ್ರ ತಳಹದಿಯಲ್ಲಿ ನಿಂತು ಬೆಳೆಯಲಿ". ಮಾನ್ಯ ಮಂತ್ರಿಗಳು ಯಥೋಚಿತವಾಗಿ ಬಿನ್ನವತ್ತಳೆಗೆ ಉತ್ತರವಿತ್ತರು.

ಮಡಿಕೇರಿಗೆ.

ಸುಂಟಿಕೊಪ್ಪದಲ್ಲಿ ಮಂತ್ರಿಗಳಿಗೆ ಸ್ವಾಗತವನ್ನು ಒಸಗೆ ಶುಭವನ್ನು ಕೋರಲಾಯಿತು. ಶ್ರೀ. ಜಿ. ಎಂ. ಮಂಜನಾಥಯ್ಯನವರು ಬಿನ್ನವತ್ತಳೆಯನ್ನು ಒಪ್ಪಿಸಿದರು. ಮಂತ್ರಿಯವರು ಮಡಿಕೇರಿಗೆ ೧–೧೦ ಗಂಟೆಗೆ ಬಂದರು. ಬೋರ್ಡಿಂಗ್ ಶಾಲೆಯ ಹತ್ತಿರದ ಚಾಕಿಯಲ್ಲಿ ಮಡಿಕೇರಿಯ ಪುರಜನರೂ, ಸರಕಾರಿ ಅಧಿಕಾರಿಗಳೂ ಮಂತ್ರಿಯವರನ್ನು ಎದುರುಗೊಂಡು ಹೂ ಮಾಲೆ ಹಾಕಿ ಸ್ವಾಗತಿಸಿದ ನಂತರ ಚೀಫ್ ಕಮೀಷನರು ಪ್ರಮುಖ ಜನರ ಪರಿಚಯ ಮಾಡಿ[illegible] ಚೀಫ್ ಕಮೀಷನರ [illegible] ಬೋರ್ಡ್ ಬಂಗ್ಲೆಗೆ ಹೋ[illegible]

[illegible] ೩–೩೦ ಗಂಟೆಗೆ ಗೃಹ ಮಂತ್ರಿ [illegible] ಶ್ರೀ ಕೆ. ಹನುಮಂತ[illegible] ಚೀಫ್ ಕಮಿಷನರೊಡನೆ ಕೋ[illegible] ಕೋಟೆಯ ಬಾಗಿಲಿನ[illegible] ಪುರಸಭೆಯವರು ಅವರಿಗೆ ಸ್ವಾಗತವಿತ್ತರು. ನಂತರ ಎಸೆಂಬ್ಲಿ ಹಾಲ್‌ನಲ್ಲಿ ಸಭೆ ಸೇರಲಾಯಿತು. ಜನರು ಕಿಕ್ಕಿರಿದು ನೆರೆದಿದ್ದರು. ಕೇಂದ್ರ ಮಂತ್ರಿ ಕಟ್ಜೂರವರಿಗೂ, ಮೈಸೂರಿನ ಹನುಮಂತಯ್ಯನವರಿಗೂ, ಸ್ಥಳೀಯ ಮಂತ್ರಿಗಳಿಗೂ ಹೂಮಾಲೆ ಹಾಕಿ ಸತ್ಕರಿಸಲಾಯಿತು. ವಂದೇ ಮಾತರಂ ಹಾಡಿದ ನಂತರ ಮಡಿಕೇರಿ ಪುರಸಭೆಯ ಅಧ್ಯಕ್ಷರಾದ ಶ್ರೀ ಮೊಯಿದೀನ್‌ರವರು ಬಿನ್ನವತ್ತಳೆಯನ್ನು ಓದಿ ಗಂಧದ ಕರಂಡಿಕೆಯಲ್ಲಿ ಅದನ್ನು ಮಂತ್ರಿಗಳಿಗೆ ಅರ್ಪಿಸಿದರು. ಅವರು ಅರ್ಪಿಸಿದ ಬಿನ್ನವತ್ತಳೆಯ ಸಾರಾಂಶ ಹೀಗಿದೆ:–

ಪುರಜನರ ಬಿನ್ನವತ್ತಳೆ.

ಮಡಿಕೇರಿ ಪುರಸಭೆಯವರಾದ ನಾವು ನಿಮಗೆ ಸ್ವಾಗತ ಬಯಸುತ್ತೇವೆ. ನಿಮ್ಮ ಆಗಮನದಿಂದ ತುಂಬಾ ಸಂತೋಷವಾಗಿದೆ. ನಿಮ್ಮ ಸಾರ್ವಜನಿಕ ಸೇವೆಯು ಅಪ್ರತಿಮವಾದುದು. ನೀವು ನ್ಯಾಯದಿಂದ ಪಡೆದವರು ಮಾತ್ರವಲ್ಲ, ನ್ಯಾಯಶಾಸ್ತ್ರ ಪ್ರವೀಣರು. ಮಹಾತ್ಮಗಾಂಧೀಜಿಯವರ ಕರೆಬಂದಾಗ ನೀವು ರಾಷ್ಟ್ರೀಯ ಚಳವಳಿಕ್ಕೆ ಇಳಿದು ಅನೇಕ ಬಾರಿ ಜೈಲಿಗೆ ಹೋದಿರಿ. ೧೯೩೭ರಲ್ಲಿ ಕಾಂಗ್ರೆಸು ಅಧಿಕಾರ ಗ್ರಹಣ ಮಾಡಿದಾಗ ಉತ್ತರ ಪ್ರದೇಶದ ನ್ಯಾಯ ಮಂತ್ರಿಗಳಾದಿರಿ. ನಂತರ ವಿವಿಧ ಜವಾಬ್ದಾರಿಯಲ್ಲಿ ಈ ವರೆಗೂ ದುಡಿಯುತ್ತಿರುವಿರಿ.

ನಮ್ಮ ಪುರಸಭೆಯು ೧೯೧೦ರಿಂದಲೇ ಅಧಿಕಾರಿಗಳಿಲ್ಲದ ಜನ ಪ್ರತಿನಿಧಿಗಳ ಆಡಳಿತದಲ್ಲಿದ್ದು ಸಂಪೂರ್ಣ ಸ್ವಾಯತ್ತಾಧಿಕಾರ ಉಳ್ಳದಾಗಿದೆ. ಈಗ ಮಂತ್ರಿಗಳಾಗಿರುವ ಶ್ರೀ. ಕೆ. ಮಲ್ಲಪ್ಪನವರು ಪುರಸಭೆಯ ಪ್ರೆಸಿಡೆಂಟರಾಗಿದ್ದರು. ಅವರು ಈ ಪಟ್ಟಣಕ್ಕಾಗಿ ಉಪಯುಕ್ತ ಕೆಲಸ ಮಾಡಿದ್ದಾರೆ. ಆದರೆ ಆಗಬೇಕಾದುದು ಇನ್ನೂ ಇದೆ. ನಮಗೆ ಒಂದು ಟೌನ್‌ಹಾಲ್ ಬೇಕಿದೆ. ಬಸ್ ಸ್ಟ್ಯಾಂಡನ್ನು ಉತ್ತಮಗೊಳಿಸಬೇಕಿದೆ. ಪ್ರಯಾಣಿಕರಿಗೆ ಯೋಗ್ಯ ಅನುಕೂಲತೆ ಮಾಡಿಕೊಡಬೇಕಿದೆ. ಇವಕ್ಕಾಗಿ ಇಂಡಿಯಾ ಸರಕಾರವು ೩ ಲಕ್ಷ ಸಾಲಕೊಡಲೊಪ್ಪಿದುದಕ್ಕೆ ನಾವು ವಂದಿಸುತ್ತೇವೆ. ಆದರೆ ಈ ಪಟ್ಟದ ವಿದ್ಯುಚ್ಛಕ್ತಿ ಬೆಳಕಿನ ಏರ್ಪಾಡು ತೃಪ್ತಿಕರವಾಗಿಲ್ಲ. ಖಾಸಗಿ ಕಂಪೆನಿಯೊಂದು ನಡೆಸುತ್ತಿರುವ ಈ ಯೋಜನೆಯು ಇಂದೋ ನಾಳೆ ನಿಂತುಹೋಗಬಹುದು. ಮೈಸೂರಿನಿಂದ ವಿದ್ಯುಚ್ಛಕ್ತಿ ತರುವುದೊಂದೇ ನಮಗಿರುವ ದಾರಿ. ೩೫ ಲಕ್ಷ ರೂಪಾಯಿಗಳ ವೆಚ್ಚಕ್ಕಾಗಿ ಕೊಡಗಿಗೆ ವಿದ್ಯುತ್ ಪದಗಿಸಲು ಮೈಸೂರು ಸರಕಾರ ಒಪ್ಪಿದೆ. ಇಷ್ಟು ಹಣ ಕೊಡಲು ಸ್ಥಳೀಯ ಸರಕಾರಕ್ಕೆ ಚೇತನವಿಲ್ಲದ ಕಾರಣ ಕೇಂದ್ರ ಸರಕಾರದ ಸಹಾಯ ಕೇಳಲಾಯಿತು. ಕೇಂದ್ರ ಸರಕಾರವು ಈ ಸಹಾಯ ಮಾಡುವಂತೆ ನೀವು ಮನಸಿಡಬೇಕಾಗಿ ಆಶಿಸುತ್ತೇವೆ. ನಮ್ಮ ಪಟ್ಟಣವು ಚಿಕ್ಕದಾದರೂ ಮನೆಗಳ ಅಭಾವವಿದೆ. ಅನೇಕರು ಯೋಗ್ಯ ಮನೆ ಇಲ್ಲದೆ ತೊಂದರೆ ಪಡುತ್ತಾರೆ. ಆದ್ದರಿಂದ ಮನೆ ಕಟ್ಟುವ ಯೋಜನೆಯೊಂದನ್ನು ಆಲೋಚಿಸಲಾಗಿದೆ. ಕೇಂದ್ರ ಸರಕಾರಕ್ಕೆ ಈ ವಿಚಾರದಲ್ಲಿ ನಾವು ಬಗೆಗೊಂಡಾಗ ನೀವು ಸಹಾಯ ಮಾಡುವಿರಾಗಿ ನಂಬುತ್ತೇವೆ. ಮಡಿಕೇರಿಯು ಕೊಡಗಿನ ಮುಖ್ಯ ಪಟ್ಟಣವಾದ್ದರಿಂದ ಅದನ್ನು ಸುಂದರ ಪಟ್ಟಣವಾಗಿ ಮಾಡುವುದಲ್ಲದೆ ಇಲ್ಲಿಯ ಸುಂದರ ದೃಶ್ಯಗಳನ್ನು ನೋಡಲು ಹೊರಗಿನಿಂದ ಜನರನ್ನು ಆಕರ್ಷಿಸುವಂತೆ ಮಾಡಬೇಕಿದೆ. ಇದಕ್ಕಾಗಿ ನಿಮ್ಮ ಸಹಕಾರಬೇಕು.

ಈ ಸಂದರ್ಭದಲ್ಲಿ ನಮ್ಮ ದೇಶದ ಅಭಿವೃದ್ಧಿಗಾಗಿ ದುಡಿಯುತ್ತಿರುವ ಚೀಫ್ ಕಮಿಷನರ್ ಬೇಡಿಯವರ ಬಗ್ಗೆ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಬೇಕು. ಅವರ ಪ್ರಯತ್ನದಿಂದಾಗಿ ನಮಗೆ ಮೈಸೂರಿನಿಂದ ವಿದ್ಯುತ್ ದೊರೆಯಲಿದೆ. ನಮ್ಮ ಪುರಸಭೆಗೆ ಅವರು ಸರ್ವಸಹಾಯ ಕೊಡುತ್ತಿದ್ದಾರೆ.

ನಾವು ನಮ್ಮ ಈ ದೇಶದ ಚರಿತ್ರೆಯಲ್ಲಿ ಹೊಸ ಅಧ್ಯಾಯ ಪ್ರಾರಂಭಿಸಿರುವೆವು. ಜನಪ್ರಿಯ ಸರಕಾರವಾಗಿ ಜನಪ್ರತಿನಿಧಿಗಳಲ್ಲಿ ಇಬ್ಬರು ಆಡಳಿತದ ಜವಾಬ್ದಾರಿ ಹೊತ್ತಿದ್ದಾರೆ. ಶ್ರೀ. ಸಿ. ಎಂ. ಪೂಣಚ್ಚನವರು ಮುಖ್ಯ ಮಂತ್ರಿಯಾಗಿಯೂ ಶ್ರೀ ಕೆ. ಮಲ್ಲಪ್ಪನವರು [illegible] ಮಂತ್ರಿಯಾಗಿಯೂ ಆರಿಸಲ್ಪಟ್ಟಿದ್ದಾರೆ. ಅವರು ದಕ್ಷರೂ, ಯೋಗ್ಯರೂ ಇದ್ದಾರೆ. ಚೀಫ್ ಕಮಿಷನರ ಮಾರ್ಗದರ್ಶನ ಅವರಿಗಿದೆ. ಗೃಹ ಮಂತ್ರಿಗಳಾದ ನೀವು ನಮಗೆ ಸಹಾಯವನ್ನು ಕೊಟ್ಟು ಈ ಪ್ರಾಂತವನ್ನು ಹಿಂದೂದೇಶದ ಆದರ್ಶ ಪ್ರಾಂತವಾಗಿ ಮಾಡಲು ನೆರವೀಯುವಿರಾಗಿ ಆಶಿಸಿದ್ದೇವೆ.

ಗೃಹ ಮಂತ್ರಿಗಳ ಉತ್ತರ.

ನಿಮ್ಮ ಸ್ವಾಗತಕ್ಕಾಗಿ ವಂದನೆ. ಕೊಡಗನ್ನು ಸಂದರ್ಶಿಸಬೇಕೆಂಬ ಬಯಕೆ ತುಂಬಾ ಇತ್ತು. ಏಕೆಂದರೆ ಕೊಡಗೂ ಭಾರತ ಮಾತೆಯ ಒಂದು ಅಂಗ. ಈಗ ಹಾಡಿದ 'ವಂದೇ ಮಾತರಂ' ಗೀತೆಯ ಅರ್ಥವು ನಮಗೆ ಸರಿಯಾಗಿ ತಿಳಿಯಬೇಕು. ಈ ಗೀತೆಯು ಬಂಗಾಳದ ಪ್ರತಿ ಮನೆಯ ಹಾಡು. ಆದರೆ ದೇಶದ ಅಧ್ಯಂತಕ್ಕೂ ಹಾಡಲ್ಪಡುವ ಈ ಹಾಡಿನ ಅರ್ಥ ಎಲ್ಲರಿಗೂ ತಿಳಿದಿರಲಾರದು. ಜಗತ್ತಿನಲ್ಲಿ ಪ್ರ

ತ್ತಿದ್ದರು. ಯಾರ ಉದ್ದೇಶ ಯಾವಾಗಲೂ ವಿರೋಧಿಯ ಮನಃಪರಿವರ್ತನೆ ಮಾಡುವುದಿತ್ತೇ ಹೊರತು ಅವನನ್ನು ಭಂಗಿಸುವುದಾಗಲಿ ಹತ್ತಿಕ್ಕುವುದಾಗಲಿ ಆಗಿರಲಿಲ್ಲ. ವಿರೋಧಿಗೆ ಎಂದೂ ಸೋಲಿನ ಅವಮಾನದ ಅನುಭವವಾಗುತ್ತಿದ್ದಿಲ್ಲ; ಬದಲಿಗೆ ಸತ್ಯದರ್ಶನದ ಅಪೂರ್ವಾನಂದದಲ್ಲಿ ಭಾಗಿಯಾಗಿ ಅವನು ಆ ಸತ್ಯವನ್ನು ಗಾಂಧೀಜಿಯವರಷ್ಟೇ ತನ್ನದೂ ಎಂದು ಬಗೆಯುವಂತಾಗುತ್ತಿತ್ತು. ಇದರಿಂದ ವಿರೋಧಿಯ ಮನಸ್ಸು ಪ್ರತಿಘಟನಾಶೀಲವಾಗುವ ಬದಲು ಗ್ರಹಣಶೀಲವಾಗುತ್ತಿತ್ತು.

ಈ ಪ್ರಕಾರ ಅವರು ವಿರೋಧಿಯೊಡನೆ ತಾದಾತ್ಮ್ಯ ಹೊಂದುತ್ತಿದ್ದುದರಿಂದ ಅವರು ನಿರ್ದಾಕ್ಷಿಣ್ಯವಾಗಿ ಸತ್ಯ ಹೇಳಬಾಗಲೂ ಅದರಿಂದ ಅವನಿಗೆ ನೋವಾಗುತ್ತಿದ್ದಿಲ್ಲ; ರೋಗಿಯ ಪೂರ್ಣ ಸಂತೋಷದ ಪೂರ್ಣ ಸಹಕಾರದೊಂದಿಗೆ ಮಾಡುವ ಆಧ್ಯಾತ್ಮಿಕ ಶಸ್ತ್ರಕ್ರಿಯೆಯಾಗುತ್ತಿತ್ತು. ಅದು. ಇಲ್ಲಿ 'ರೋಗಿ' ಶಬ್ದವನ್ನು ನಾನು ಸೂಕ್ತವಾಗಿಯೇ ಪ್ರಯೋಗಿಸಿದ್ದೇನೆ; ಏಕೆಂದರೆ ಗಾಂಧೀಜಿ ಸಾಮಾನ್ಯ ವರ್ತನೆಯಿಂದ ವಿಚಲಿತವಾದ ಎಲ್ಲಾ ಕೃತಿಗಳನ್ನೂ ವ್ಯರ್ತಿಗಳನ್ನೂ ಅಭ್ಯಂತರ ರೋಗಿಯೆಂದು ಬಗೆಯುತ್ತಿದ್ದರು. ಶಾಲೆಯಲ್ಲಿ ಆ ಮಲ್ಲಿಕಾರ್ಜುನ 'ಮಾಡಿ ಇಲ್ಲವೆ ಮಡಿ' ಸಂಚಾರದಲ್ಲಿ ಪ್ರತಿ ದಿನವೂ ಗಲಭೆಗಳಲ್ಲಿ ಭಾಗವಹಿಸಿದ ಜನರು ಬಂದು ಭಾಷಣ ಮಾಡುವ ಪ್ರಸಂಗ ಬಂದಾಗ ಇದಕ್ಕೆ ಉದಾಹರಣೆ. ಮಾರಿಯುತ್ತಿದ್ದವು ಆ ಎಲ್ಲ ಆ ಜನರ ಮುಂದೆ ಸತ್ಯವನ್ನು ನಿರ್ದಾಕ್ಷಿಣ್ಯವಾಗಿ ನುಡಿದರು. ಯಾರನ್ನೂ ಸುಮ್ಮನೆ ಬಿಡಲಿಲ್ಲ; ಏನನ್ನೂ ಮುಚ್ಚಿಟ್ಟುಕೊಳ್ಳಲಿಲ್ಲ; ಯಾವುದಕ್ಕೂ ಬಣ್ಣ ಬಳಿದು ಹೇಳಲಿಲ್ಲ. ಆದರೂ ಅದು ಯಾರನ್ನೂ ನೋಯಿಸಲಿಲ್ಲ. ಸಭಿಕರಲ್ಲಿ ಪ್ರತಿಯೊಬ್ಬನಿಗೂ ತನ್ನೊಳಗಿನ ವಿವೇಕದ ನುಡಿಯನ್ನೇ ಕೇಳಿದಂತೆ ಭಾಸವಾಗುತ್ತಿತ್ತು. ಅವರು ಕೇಳಿದ ಕ್ಲೇಶದ ದನಿ ಪೀಡಕರನ್ನೊಳಗೊಂಡು ಎಲ್ಲರನ್ನೂ ಕಲಕುತ್ತಿತ್ತು. ಅವರು ಎಲ್ಲಾಗೋಸ್ಕರವೂ ಸಮಾನವಾದ ಕ್ಲೇಶವನ್ನು ಅನುಭವಿಸಿದರು. ಹೃದಯದಿಂದ ಬಂದುದು ನೇರವಾಗಿ ಹೃದಯವನ್ನೇ ಸೇರುತ್ತಿತ್ತು.

ಶ. ವಿ.

ತಿಯೊಂದು ವಸ್ತುವನ್ನೂ ಮಾತೆಯ ದೃಷ್ಟಿಯಲ್ಲಿ ನೋಡುವದು ಭಾರತೀಯರಾದ ನಮ್ಮ ವೈಶಿಷ್ಟ್ಯ. ಪರ್ವತಗಳನ್ನು, ನದಿಗಳನ್ನು, ಮಾತೆ ಎಂದು ನಾವು ಪೂಜಿಸುತ್ತೇವೆ. ಇಡೀ ದೇಶವನ್ನು ಮಾತೆ ಎನ್ನುತ್ತೇವೆ. ಈ ನಮ್ಮ ಮಾತೃದೇಶ ಭಾರತಖಂಡವು ನಮ್ಮೆಲ್ಲರದು. ಈ ಗೀತೆಯು ಪ್ರತಿ ಮೂಲೆ ಮೂಲೆಗಳಲ್ಲಿ ಹೇಗೆ ಹಾಡಲ್ಪಡುತ್ತಿದೆಯೋ ಅದರಂತೆಯೇ ನಮ್ಮ ಮಾತೃದೇಶದ ಅನುಭವವೂ ಆಗಬೇಕು.

ನಿಮ್ಮದು ಸುಂದರ ನಾಡು. ಪ್ರಾಕೃತಿಕ ಸೌಂದರ್ಯದೊಂದಿಗೆ ಪ್ರಾಕೃತಿಕ ಸಂಪತ್ತನ್ನು ಹೊಂದಿರುವ ದೇಶ. ಈ ದೇಶವು ಹೊರಗಿನ ಪ್ರಯಾಣಿಕರನ್ನು ತಂಡ ತಂಡವಾಗಿ ಆಕರ್ಷಿಸುವಂತೆ ನೀವು ಮಾಡಬೇಕು. ಇಂಡಿಯಾ ಸರಕಾರವು ಪರದೇಶದ ಪ್ರಯಾಣಿಕರನ್ನು ಆಕರ್ಷಿಸಲು 'ಟೂರಿಸ್ಟ್ ಬ್ಯೂರೊ' ಸ್ಥಾಪಿಸಿದೆ. ಕಲ್ಕತ್ತಾ, ಬೊಂಬಾಯಿಗಳಲ್ಲಿ ಅದು ಕೆಲಸ ಮಾಡುತ್ತಿದೆ. ಕೊಡಗಿನಂಥಾ ಉತ್ತಮ ಹವಾಗುಣದ ದೇಶಕ್ಕೆ ಪ್ರಯಾಣಿಕರು ಬರುವಂತೆ ಮಾಡಬೇಕು. ಕೊಡಗಿನ ಭೀಕರ ಮಳೆಗಾಲದ ವಿಚಾರ ತಿಳಿಯಬಂತು. ಆದರೆ ಕೊಡಗು ಮಳೆಗಾಲದಲ್ಲಿಯೂ ಸುಂದರ ನಾಡಾಗಿ ಜನರನ್ನು ಆಕರ್ಷಿಸಬಹುದು. ಅದ್ದರಿಂದ ಕೇಂದ್ರ ಸರಕಾರದ 'ಟೂರಿಸ್ಟ್ ಬ್ಯೂರೋ'ದ ಸಹಾಯ ಕೇಳಿದರೆ ದೊರೆಯಬಹುದು.

ಕೊಡಗು ಚಿಕ್ಕದಾದರೂ ಕೂಡ ಹಿಂದೂ ದೇಶಕ್ಕೆ ಉತ್ತಮ ಜನರನ್ನು ಕೊಟ್ಟಿದೆ. ಸಾಮಾಜಿಕ ಕ್ಷೇತ್ರದಲ್ಲೂ ಕೂಡ ಅನೇಕ ಪ್ರಮುಖ ವ್ಯಕ್ತಿಗಳಿದ್ದಾರೆ. ಅಖಿಲಭಾರತ ಸಾಮಾಜಿಕ ಜೀವನದಲ್ಲಿ ಹೊಸ ಚೇತನವಾಗಿ ಕೊಡಗಿನ ಮಹಿಳೆ ಒಬ್ಬಳಿದ್ದಾಳೆ. ಅಲ್ಲದೆ ಎಲ್ಲ ಪ್ರಾಮುಖ್ಯ ವ್ಯಕ್ತಿಗಳ ಸ್ನೇಹಗಳಿಗೆ ಆದರ್ಶಳಾಗಿದ್ದಾಳೆ. ಭಾರತದ ಸೇನೆಯಲ್ಲಿರುವ ಮುಖ್ಯ ಸೇನಾಪತಿ, ಮೇಜರ್ ಜನರಲ್‌ಗಳ ಮಾತಲ್ಲ; ವಿವಿಧ ಇತರ ಸ್ಥಾನಗಳಲ್ಲಿಯೂ ಅನೇಕರಿದ್ದಾರೆ. ಕೊಡಗು ಸಂಪತ್ತಿನ ನಾಡು, ಉಳುವರಿ ದೇಶ. ಇಲ್ಲಿಯ ಹವಾಗುಣವು ಆರೋಗ್ಯಕರವಾದುದು. ಇದು ಸೌಭಾಗ್ಯದ ನಾಡು. ಆದರೆ ಅನೇಕ ಕಡೆಗಳಲ್ಲಿ ಪರಿಸ್ಥಿತಿ ಹಾಗಿಲ್ಲ. ಬಂಗಾಳದಲ್ಲಿ ಗ್ರಾಮಜನರಿಗೆ ಏನು ಬೇಕೆಂದು ಕೇಳಿದರೆ 'ನೀರು' ಎನ್ನುತ್ತಾರೆ. ಊಟದ ಪ್ರಶ್ನೆ ಇರಲಿ. ಕುಡಿಯುವ ನೀರಿಗೇ ತೊಂದರೆ ಇರುವ ಭಾಗಗಳಿವೆ. ಹತ್ತು ಹದಿನಾರು ಮೈಲುಗಳ ವರೆಗೆ ನೀರಿಲ್ಲದ, ಆಸ್ಪತ್ರೆ ಇಲ್ಲದ ಪ್ರದೇಶಗಳಿವೆ. ಅಂಥಾ ಪರಿಸ್ಥಿತಿ ಇರುವಾಗ ಅಲ್ಲಿಯ ಜನರ ಬೇಡಿಕೆಯನ್ನು ಗಮನಿಸಬೇಕಾದುದು ಯಾವುದೇ ಸರಕಾರದ ಪ್ರಥಮ ಕರ್ತವ್ಯ. ಕೇಂದ್ರ ಸರಕಾರವು ಪ್ರತಿಯೊಂದಕ್ಕೂ ಸಹಾಯ ಕೊಡಲಾರದು. ಕೊಡಗಿನಂತೆ ಸುಖದಿಂದ ಎಲ್ಲಾ ಪ್ರಾಂತಗಳಿಲ್ಲ. ಆ ಪ್ರಾಂತಗಳ ಹಿತಕ್ಕಾಗಿ ಮೊದಲು ವೆಚ್ಚಮಾಡಬೇಕು. ನೀವು ಇಲ್ಲಿಯವರು ಸಂಪನ್ನರು. ನೆಟ್ಟದ್ದೆಲ್ಲ ಬೆಳೆಯುತ್ತದೆ. ಕಾಫಿ ಇದೆ, ಏಲಕ್ಕಿ ಇದೆ, ಹಾಗಿರುವಾಗ ಹೆಚ್ಚಿನ ಕಂದಾಯ ಹಾಕಿ ದೇಶಕ್ಕೆ ಬೇಕಿರುವ ಉಪಯುಕ್ತ ಕೆಲಸ ಮಾಡಬೇಕು. ಹೆಚ್ಚಿಗೆ ಕಂದಾಯ ನಿಮ್ಮನ್ನಾಗ ಬಲಾತ್ಕಾರದ ಕೇದಾಯುವಲ್ಲ. ಒಂದು ಉದಾಹರಣೆ ಹೇಳುತ್ತೇನೆ.

ಪಶ್ಚಿಮ ಬಂಗಾಳದಲ್ಲಿ ಎರಡು ಮೈಲುಗಳಿಗೆ ಒಂದರಂತೆ ಪ್ರಾಥಮಿಕ ಶಾಲೆಗಳಿವೆ. ಅಲ್ಲಿ ಬೇಕಾದಷ್ಟು ಆಸ್ಪತ್ರೆಗಳಿವೆ. ಇದು ಹೇಗೆಂದು ನನಗೇ ಆಶ್ಚರ್ಯವಾಗಿತ್ತು. ನಾನು ವಿಚಾರಿಸಿ ತಿಳಿದು ಬಂದುದನ್ನು ಹೇಳುತ್ತಿದ್ದೇನೆ. ಉದಾಹರಣೆಗೆ ಮುಖರ್ಜಿ ಎಂಬವರಿದ್ದರು. ಅವರು ಮುಖ್ಯ ನ್ಯಾಯಾಧೀಶರಾಗಿದ್ದರು. ಅವರು ಸಂಪಾದಿಸಿದ ಹಣದಲ್ಲಿ ಕೆಲವಂಶವನ್ನು ಗ್ರಾಮದ ಜನರಿಗಾಗಿ ಖರ್ಚು ಮಾಡುತ್ತಿದ್ದರು. ಗ್ರಾಮದ ಜನರು ಬಂದು ಕೇಳಿದಾಗ ಶಾಲೆಗೆ, ಆಸ್ಪತ್ರೆಗೆ ಮತ್ತು ಇತರ ಕೆಲಸಗಳಿಗೆಂದು ಸಾವಿರ ಸಾವಿರವಾಗಿ ಹಣ ಕೊಡುತ್ತಿದ್ದರು. ಅದೇ ರೀತಿ ಬಂಗಾಳದ ಪ್ರತಿ ಶ್ರೀಮಂತನೂ ತನ್ನ ನಾಡಿಗಾಗಿ ಸಂಪಾದನೆಯನ್ನು ಸುರಿಯುತ್ತಾನೆ. ಈ ರೀತಿ ಶ್ರೀಮಂತರು ಹಣವನ್ನು ಯಾ ಮಾಡುವುದರಿಂದ ಬೇಕಾದಷ್ಟು ಶಾಲೆ, ಆಸ್ಪತ್ರೆಗಳಾಗಿ ನಾಡಿನ ಅಭ್ಯುದಯವಾಗುತ್ತದೆ. ಅದೇ ರೀತಿ ಕೊಡಗಿನ ಪುತ್ರ ಪುತ್ರಿಯರಲ್ಲಿ ಅನೇಕರು ದೇಶದ ಹೊರಗಿದ್ದಾರೆ. ಅನೇಕರು ಒಳಗಿದ್ದಾರೆ. ಹಲವರು ಶ್ರೀಮಂತರಾಗಿದ್ದಾರೆ. ಇವರೆಲ್ಲರ ಆಸೆಯು ತಮ್ಮ ಹುಟ್ಟಿದ ನಾಡಾದ ಕೊಡಗನ್ನು ಸುಂದರವೂ, ಆದರ್ಶವೂ ಮಾಡಬೇಕೆಂದಿರಬೇಕಿದೆ. ಆದ್ದರಿಂದ ಧನವಂತರು ಆಸ್ಪತ್ರೆ, ಶಾಲೆ, ರಸ್ತೆ, ಪಟ್ಟಣ ಬಡಾವಣೆ, ಪಾರ್ಕು ಮೊದಲಾದುವಕ್ಕೆ ಸಹಾಯ ನೀಡಬೇಕು. ಕೊಡಗಿನ ಪುತ್ರ ಪುತ್ರಿಯರು ಎಲ್ಲಿ ಎಷ್ಟು ವರ್ಷಗಳ ವರೆಗಿದ್ದರೂ ಅವರ ಆತ್ಮೀಕ ಪ್ರೀತಿಯ ಸ್ಥಾನ ಈ ಕೊಡಗು ನಾಡೇ ಆಗಿದೆ.

ಹಿಂದೂದೇಶದ ಪಟ್ಟಣಗಳಲ್ಲಿ ಜನಸಂಖ್ಯೆ ಬಹುವಾಗಿ ಹೆಚ್ಚುತ್ತಿದೆ. ವಸತಿಗಾಗಿ ಮನೆ ಮಠಗಳ ಸಮಸ್ಯೆ ಬಹು ಬಿಗುವಾಗಿದೆ. ಅನೇಕರು ಮನೆಗಳಿಲ್ಲದೆ ಕಷ್ಟಪಡುತ್ತಾರೆ. ಕೊಡಗಿನಲ್ಲಿ ಆ ಪ್ರಶ್ನೆ ಅಷ್ಟು ದೊಡ್ಡದಾಗಿಲ್ಲದಿದ್ದರೂ ಮಡಿಕೇರಿ ಪಟ್ಟಣದ ವಿಸ್ತಾರಕ್ಕೆ ಯೋಜನೆಯು ಸ್ವಾಗತಾರ್ಹವಾದುದು. ಆದರೆ ಪ್ರತಿಯೊಂದಕ್ಕೂ ಕೇಂದ್ರದ ಸಹಾಯ ಅಪೇಕ್ಷಿಸುವದು ಯೋಗ್ಯವಲ್ಲ. ಕೇಂದ್ರ ಸರಕಾರ ಬೇರೆ, ಪ್ರಾಂತ ಸರಕಾರ ಬೇರೆಯಲ್ಲ. ಹಿಂದಿನಂತೆ ದಿಲ್ಲಿಯಲ್ಲಿ ಒಬ್ಬ ರಾಮಚಂದ್ರ ಇಲ್ಲವೇ ಅಶೋಕ ರಾಜ್ಯಭಾರ ಮಾಡುತ್ತಿಲ್ಲ. ಹಿಂದಿನ ಅರಸರ ಕಾಲದಲ್ಲಿ ಜನರಿಗೆ ಏನಾದರೂ ಬೇಕಾದರೆ ಅರಸರನ್ನು ಹೋಗಿ ಬೇಡುವ ಪರಿಸ್ಥಿತಿ ಇತ್ತು. ಆದರೆ ಇಂದು ಜನತಾ ಸರಕಾರ. ಕೇಂದ್ರ ಸರಕಾರವು ಎಲ್ಲರಿಂದ ಕೂಡಿ ಚಿಕ್ಕದಾದುದು. ಕೊಡಗಿನ ಪ್ರತ್ಯೇಕ ಅಸ್ತಿತ್ವದ ಕಾರಣ ಅಲ್ಲಿ ಇದಕ್ಕೂ ಒಂದು ಸ್ಥಾನವಿದೆ. ಅಲ್ಲಿ ಪ್ರತಿನಿಧಿಗಳಾಗಿ ಹೋಗುವವರು ಕೊಡಗಿನ ವಿಷಯ ಮಾತ್ರ ತಮ್ಮಭಿಪ್ರಾಯ ವ್ಯಕ್ತ ಮಾಡಿ ಅದಕ್ಕೆ ಸಾಕಷ್ಟು ಸಹಾಯ ಪಡೆಯುವ ದೃಷ್ಟಿಯಿಂದಲ್ಲ; ಇಡೀ ಹಿಂದೂದೇಶದ ಅಭಿವೃದ್ಧಿಗಾಗಿ. ಅದ್ದರಿಂದ ನಿಮ್ಮದೇ ಆದ ಕೇಂದ್ರ ಸರಕಾರಕ್ಕೂ ಜವಾಬ್ದಾರಿ ಇದೆ. ಬರಗಾಲ ಪೀಡಿತ ರಾಜ್ಯಗಳಿಗೆ ನೆರವನ್ನು ಶೀಘ್ರ ಕೊಡಬೇಕಾದ ಅವಶ್ಯಕತೆ ಇದೆ. ಅದ್ದರಿಂದ ಸಂಪನ್ನ ಭಾಗಗಳು ತಮಗೆ ಬೇಕಾದ ಸಹಾಯ ಮಾಡಿಕೊಳ್ಳುವದು ಸೂಕ್ತವಿದೆ.'

ಇದಾದ ನಂತರ ಸಾಯಂಕಾಲ ೪ ಗಂಟೆಗೆ ಬೋರ್ ಬಂಗ್ಲೆಯ ಆವರಣದಲ್ಲಿ ಗೃಹಮಂತ್ರಿಗಳ ಸತ್ಕಾರಕ್ಕಾಗಿ ಸ್ಟೇಟ್ ಚಹಪಾನ ಕೂಟವನ್ನು ಏರ್ಪಡಿಸಲಾಗಿತ್ತು.

ಕಾಲೇಜಿನಲ್ಲಿ.

ಅದೇ ದಿನ ಸಾಯಂಕಾಲ ಎಂಟು ಗಂಟೆಗೆ ಕೊಡಗು ಸರಕಾರಿ ಕಾಲೇಜಿನಲ್ಲಿ ಗೃಹಮಂತ್ರಿ ಕಟ್ಜೂರವರು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿದರು. ಭಾಷಣಕ್ಕೆ ಮೊದಲು ಪ್ರಿನ್ಸಿಪಾಲರಾದ ಶ್ರೀ ಅಚ್ಯುತನ್ ಪಿಳ್ಳೆಯವರು ಅತೀ ಸೂಕ್ತ ರೀತಿಯಿಂದ ಮಂತ್ರಿಯವರನ್ನು ಸ್ವಾಗತಿಸಿ ಸಭಿಕರಿಗೆ ಅವರ ಸೂಕ್ತ ಪರಿಚಯ ಮಾಡಿ ಕೊಟ್ಟರು. ನಂತರ ಮಂತ್ರಿಯವರು ಮಾತಾಡುತ್ತಾ ಹೀಗೆಂದರು.

'ನಾನು ಯಾವಾಗಲೂ ಯುವಕರೊಡನೆ ಮಿಳಿತವಾಗಿರಲು ಆಸೆ ಪಡುವವ. ಆದರೆ ಪ್ರಿನ್ಸಿಪಾಲರು ನನ್ನ ಹುಟ್ಟಿದ ತಾರೀಕನ್ನು ಹೇಳಿ ನನಗೆ ಅನ್ಯಾಯ ಮಾಡಿದ್ದಾರೆ. ನಾನು ಮುದುಕನೆಂಬುವುದು ನಿಮಗೆ ತಿಳಿಸಿದಂತಾಯಿತು. ಆದರೂ ಇಳಿ ವಯಸ್ಸಿನವನು ಯುವಕರೊಡನೆ ಮಿಳಿತನಾಗಿರುವುದರಿಂದ ಒಂದು ಚೇತನವು ಸ್ಫುರಿಸಿದಂತಾಗುತ್ತದೆ. ಅದ್ದರಿಂದ ಯಾವಾಗಲೂ ನಾನು ಯುವಕರೊಡನೆ ಮಿಳಿತವಾಗಲು ಇಚ್ಛಿಸುವವನು. ಹಿಂದಿನ ಕಾಲದಲ್ಲಿ ದೇಶದ ವಿವಿಧ ಕಾರ್ಯಕ್ಷೇತ್ರ, ಉದ್ಯೋಗ ಉದ್ಯಮಗಳಲ್ಲಿ ಯುವಕರಿಗೆ ಹೆಚ್ಚಿನ ಅವಕಾಶವಿರಲಿಲ್ಲ. ರಾಜಕೀಯ ರಂಗವೇನೋ ತೆರೆದಿತ್ತು. ಆದರೆ ಇನ್ನಿತರ ಕ್ಷೇತ್ರಗಳಲ್ಲಿ ನಿಶ್ಚಿತ ಕೆಲವು ಸರಕಾರಿ ಹುದ್ದೆ ವಿನಹ ಬೇರೆ ಆಸ್ಪದವಿರಲಿಲ್ಲ. ಆದರೆ ಇಂದು ಪರಿಸ್ಥಿತಿ ಹಾಗಿಲ್ಲ. ಕೈಗಾರಿಕೆ, ಉದ್ಯೋಗ, ಇತರ ಹಲವಾರು ಕ್ಷೇತ್ರಗಳಲ್ಲಿ ಯುವಕರಿಗೆ ಸ್ವಾಗತವಿದೆ. ನಿನ್ನೆಯಾಗಿ ನಾನು ಬೆಂಗಳೂರಿನ 'ಹಿಂದೂಸ್ಥಾನ್ ಏರ್ ಕ್ರಾಫ್ಟ್' ವಿಮಾನ ರಚಿಸುವ ಕಾರ್ಖಾನೆಗೆ ಹೋಗಿದ್ದೆನು. ಅಲ್ಲಿ ಅವರು ವಿಮಾನದಲ್ಲಿ ಅನೇಕ ಕುಶಲ ಕಸರತ್ತುಗಳನ್ನು ತೋರಿಸಿದರು. ಆದರೆ ನನಗೆ ಸಂತೋಷವಾದುದು ಅಲ್ಲಿಯ ಯುವಕರನ್ನು ನೋಡಿ. ಸಾವಿರಗಟ್ಟಲೆ ಯುವಕರು ಪದವೀಧರರಾಗಿ ರಾಷ್ಟ್ರರಚನಾ ಉದ್ಯಮದಲ್ಲಿ ತೊಡಗಿರುವುದು ಆನಂದಕರ. ಅದ್ದರಿಂದ ಇಂದಿನ ಯುವಕರು ಭಯಪಡಬೇಕಾದ ಕಾರಣವಿಲ್ಲ. ಅವರನ್ನು ಸ್ವಾಗತಿಸಲು ಇಡೀ ವಿಶ್ವವೇ ಇದೆ. ವಿಶಾಲವಾದ, ಆಳವಾದ ವಿಭಿನ್ನ ಸ್ಥಳ ಅವರಿಗಿದೆ. ಇಂದು ವಿದ್ಯಾರ್ಥಿಗಳು ಹೆಚ್ಚಾಗಿ ವಿಜ್ಞಾನ ಶಾಸ್ತ್ರದತ್ತ ಸಾಗುತ್ತಿದ್ದಾರೆ. ಕಾಲೇಜುಗಳಲ್ಲಿ ಹೆಚ್ಚಿನವರು ಈ ವಿಷಯವನ್ನೇ ತೆಗೆದುಕೊಳ್ಳುತ್ತಾರೆ. ಇದು ಶುಭ ಚಿಹ್ನೆ. ನಾನು ಕೇವಲ ಅಕ್ಷರ ವಿದ್ಯಾ ಸಂಪನ್ನನು ಕಣ್ಣಿದ್ದರೂ ಉಪಯುಕ್ತಿರದ ವಿದ್ಯಾರ್ಥಿದೇ ವವು ಕೂಡ ನನಗೆ ಅರ್ಥವಾಗದವಿಚಾರ.

ಹೌದು ನಾನು ವಕೀಲನು ನನ್ನ ೩೦ ವರ್ಷಗಳ ಅನುಭವದಿಂದ ಹೇಳುವದಾದರೆ ಯಾವುದೇ ಕೇಸಿನ ವಿಚಾರ ಉತ್ತಮ ರೀತಿಯಲ್ಲಿ ವಾದಿಸುವದೆಂದರೆ ಯಾವುದೇ ವಾದ ಮಾಡದಿರುವದಾಗಿದೆ! ಎಲ್ಲಿ ವಾದ ಹೆಚ್ಚೋ ಅಲ್ಲಿ ಸತ್ಯಾಂಶ ಕಡಮೆ. ನ್ಯಾಯಾಧೀಶರಿಗೆ ಕೇಸಿನ ವಿಚಾರಗಳು ನಿಜರೀತಿಯಲ್ಲಿ ತಿಳಿಸುವಂತೆ ಮಾಡಿ ಯೋಗ್ಯತೀರ್ಮಾನಕ್ಕೆ ಸಹಾಯ ಮಾಡುವದೇ ವಕೀಲನ ಕೆಲಸವಾಗಿರಬೇಕು.

ನಿಮ್ಮ ಹೊಸ ಕಟ್ಟಡ ಆಗುತ್ತಿದೆಯೆಂಬುದು ಸಂತೋಷದ ವಿಚಾರ. ಕಟ್ಟಡ ಪೂರ್ತಿಯಾದಾಗ ಈ ಸುಂದರ ನಾಡಿನ ನೈಸರ್ಗಿಕ ವಾತಾವರಣಕ್ಕನುಗುಣ ಅದು ಸುಂದರವೂ, ಉಪಯುಕ್ತವೂ ಆಗಲಿ. ಇಂದು ದೇಶಕ್ಕೆ ಸಂಶೋಧಕರು, ವಿಜ್ಞಾನಿಗಳು, ಕಲಾಕಾರರೂ ಬೇಕು, ಪ್ರತಿಯೊಂದನ್ನೂ ಚಿಕಿತ್ಸಕ ದೃಷ್ಟಿಯಿಂದ ನೋಡುವ ಬಲವು ಹೆಚ್ಚಬೇಕು. ಅದಕ್ಕಾಗಿ ನಾನು ಒಂದು ಸೂಚನೆ ಮಾಡುತ್ತೇನೆ. ಏನೆಂದರೆ ಕಾಲೇಜಿನ ಇತರ ಪಾಠಗಳೊಡನೆ ವಾರಕ್ಕೆ ಮೂರು ನಾಲ್ಕು ಗಂಟೆಗಳ ವರೆಗಾದರೂ ಪ್ರತಿ ವಿದ್ಯಾರ್ಥಿಯು ತನಗೆ ಇಷ್ಟ ಇರುವ ಯಾವುದಾದರೂ ಶಾರೀರಿಕ ಪರಿಶ್ರಮದ ಉದ್ಯಮವನ್ನು ಮಾಡುವ ಏರ್ಪಾಡು ಮಾಡಬೇಕು. ನೂಲಿನ ದಿಶೆ ಕೆಲಸ, ವ್ಯವಸಾಯ ಈ ರೀತಿಯ ಮತ್ತಾವುದೇ ಏರ್ಪಾಡು ಬೇಕು. ಇದರಿಂದ ಪ್ರತಿಯೊಬ್ಬನಿಗೂ ದುಡಿಮೆಯ ಗೌರವ ತಿಳಿಯುತ್ತದೆ. ಕೊಡಗಿನಲ್ಲಿ ಬೇಕಾದಷ್ಟು ಮರದ ನಾನಾ ಮರಗಳು ಹಿತಕರವಾಗಬಹುದು. ಕಾಲೇಜು ನಾಲ್ಕರು ಎಕರೆ ಭೂಮಿಯನ್ನು ಒದಗಿಸಿಕೊಂಡು ವ್ಯವಸಾಯ ವೃತ್ತಿಯನ್ನು ಕಲಿಯಬಹುದು. ಶಾರೀರಿಕ ಪರಿಶ್ರಮದ ಬಗ್ಗೆ ಇಂದಿರುವ ತಾತ್ಸಾರ ಭಾವವು ನಿಲ್ಲಬೇಕು.

ಪ್ರತಿ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಹಿತದ ಬಗ್ಗೆ 'ಸ್ಟೂಡೆಂಟ್ಸ್ ವೆಲ್‌ಫೇರ್ ಫಂಡ್' ಸ್ಥಾಪಿಸಬೇಕು. ಪ್ರತಿ ವಿದ್ಯಾರ್ಥಿಯು ತಮ್ಮ ಅನಾವಶ್ಯಕ ಖರ್ಚನ್ನು ಉಳಿಸಿ ಇದಕ್ಕೆ ಹಣ ಒದಗಿಸಬೇಕು. ಕಾಲೇಜಿನಲ್ಲಿರುವವರೆಲ್ಲ ಸಂಪನ್ನರಲ್ಲ. ಅನೇಕರಿಗೆ ಬಟ್ಟೆಬರೆಗಳ ಅಭಾವವಿದೆ. ಅನೇಕರಿಗೆ ಪುಸ್ತಕ ಪತ್ರಿಕೆಗೆ ಹಣ ಸಾಕಾಗಲಾರದು. ಅಂಥಾ ಬಡವಿದ್ಯಾರ್ಥಿಗಳಿಗೆ ಈ ನಿಧಿಯಿಂದಲೇ ಸಹಾಯ ಮಾಡುವ ಏರ್ಪಾಡು ಮಾಡುವುದರಿಂದ ಬಡ ವಿದ್ಯಾರ್ಥಿಗಳು ಪ್ರತಿ ಮನೆ ಬಾಗಿಲಿಗೆ ಹೋಗಿ ಬೇಡುವದು ನಿಲ್ಲುವುದು. ಪ್ರತಿ ವಿದ್ಯಾರ್ಥಿಯು ಒಂದು ಮಾತನ್ನು ಮನನ ಮಾಡಬೇಕು. ನಿಮಗೆ ವಿದ್ಯೆಯನ್ನು ಕೊಡುತ್ತಿರುವದು ನಿಮ್ಮ ತಂದೆ ತಾಯಿಗಳಲ್ಲ. ನಿಮ್ಮ ಕೋಟೆಯಲ್ಲಿ ಕೆಲಸ ಮಾಡುವ ಮಜೂರರು, ಭೂಮಿಯಲ್ಲಿ ದುಡಿಯುವ ರೈತರೂ ವಿದ್ಯೆ ಕೊಡುತ್ತಿದ್ದಾರೆ. ಅವರು ದುಡಿದು ನಿಮ್ಮ ವಿದ್ಯೆಗೆ ಸಹಾಯ ಮಾಡುತ್ತಿದ್ದಾರೆ. ಅದ್ದರಿಂದ ನೀವು ವಿದ್ಯಾವಂತರಾದಾಗ ಅವರ ಬಗ್ಗೆ ನಿಮ್ಮ ಘನತರವಾದ ಕರ್ತವ್ಯವಿದೆ. ಅವರು ಮಾಡಿದ ಸಹಾಯಕ್ಕೆ ದ್ವಿಗುಣವಾಗಿ ಅವರ ಸೇವೆ ಮಾಡಬೇಕು. ಸಮಾಜದಲ್ಲಿ ಹುಟ್ಟಿದ ಪ್ರತಿಯೊಬ್ಬನಿಗೂ ಸಮಾಜದ ಬಗ್ಗೆ ಜವಾಬ್ದಾರಿ ಇದೆ.

ನಾನು ಉತ್ತರ ದೇಶದವನು. ದಕ್ಷಿಣದಲ್ಲಿ ಒಂದು ಭಾವನೆಯು ನನ್ನ ಮನಸನ್ನು ತಟ್ಟಿದೆ. ಕೇಂದ್ರ ಸರಕಾರದ ಮತ್ತಿತರ ಕ್ಷೇತ್ರಗಳಲ್ಲಿ ಉತ್ತರದವರಿಗೇ ಪ್ರಾಶಸ್ತ್ಯ ಹೆಚ್ಚು, ದಕ್ಷಿಣದವರು ಕಡೆಗಣಿಸಲ್ಪಡುತ್ತಿದ್ದಾರೆಂಬ ಭಾವನೆ ಇದೆ. ಇದು ನಿರಾಧಾರವಾದುದು. ನಾನು ಉತ್ತರದವನಲ್ಲ. ಭಾರತೀಯ. ಅದೇ

ರೀತಿ ಯಾವ ವ್ಯಕ್ತಿಯನ್ನು ಅತನು ಯಾವ ಪ್ರಾಂತದವನೆಂದು ನಾನು ಅರಿಯುವ ಗೋಜಿಗೆ ಹೋಗುವುದಿಲ್ಲ. ಪ್ರತಿಯೊಬ್ಬರೂ ಭಾರತೀಯರು. ಹಿಂದೂದೇಶಕ್ಕೆ ಜನರಲ್ [illegible] ನವರು [illegible] ಇಲ್ಲದೆ ಅವರು ಕೊಡಗಿನವರೇ ಆದರೂ ಪ್ರಾಯಃ [illegible]ನಲ್ಲ ಅವರು ಭಾರತೀಯ [illegible]ರು. ಹಿಂದೂದೇಶದ ಸೈನ್ಯ [illegible] ನಾವು ಒಪ್ಪಿದ್ದರು. [illegible] ಸ್ಥಿತಿಯು ಒಕ್ಕೂಟದಿಂದ ಭಾರತವು ವಿಶಾಲ ಖಂಡದ ಸಂಯುಕ್ತ [illegible] ತ್ತಿದೆ. ಅಂಥಾ ಕಾಲಕ್ಕೆ ಭಾರತೀಯರು ಏಕೀಕೃತರಾಗಿ [illegible] ದಾವರ [illegible] ರಾಜ್ಯಗಳ ಗಳೀ [illegible] ಉತ್ತರಗಲ್ಲೀ [illegible] ರೀತಿ ಯ [illegible] ಹೋಗಬೇಕಾಗಿತ್ತು. ಆದರೆ ಹಾಗಿಲ್ಲ. ವಿವಿಧ ಭಾಗಗಳಲ್ಲಿ ವಿವಿಧ ರೀತಿಯ ಕೆಲಸ, ಉದ್ಯಮ ಸಾಗುತ್ತಿದೆ.

ಪುರಾತನ ಕಾಲದಲ್ಲಿ ದೇಶವನ್ನು [illegible] ತೀರ್ಥಯಾತ್ರೆ [illegible]. ತೀರ್ಥ ಸ್ಥಳಗಳನ್ನು ಕೂಡ ಯೋಗ್ಯ ಸ್ಥಳಗಳಲ್ಲಿ [illegible]. ಯಾತ್ರಾರ್ಥಿಗಳು [illegible] ಪುಣ್ಯ ಕ್ಷೇತ್ರಗಳನ್ನು [illegible] ಎರಡು ವರ್ಷಗಳ [illegible] ದಿಂದ ದೇಶದ ವಿವಿಧ ಜನತೆಯ, ವಿವಿಧ ಸಂಪ್ರದಾಯದ [illegible] ವಾಗುತ್ತಿತ್ತು. ಅಂಥ [illegible] ನರುದ್ಧಾರವಾಗಬೇಕು. [illegible] ವ್ಯಕ್ತಿಯು ದೇಶದ ವಿವಿಧ ಭಾಗಗಳನ್ನು ನೋಡಬೇಕು. ಈಗ ಹೋಗಬೇಕಾದ [illegible] ತೀರ್ಥಕ್ಷೇತ್ರಗಳನ್ನು. [illegible] ಕ್ಷೇತ್ರಗಳನ್ನು ಸಂದರ್ಶಿಸಬೇಕು. [illegible] ಚಿತ್ರರಂಜನ, ಸಿಂದ್ರಿ, ಮೆಟ್ಟೂರು [illegible] ಗಳು [illegible] ಸ್ಥಳಗಳಾಗಬೇಕು. ಅದರಿಂದ ನಮ್ಮಲ್ಲಿ ಈ ಐಕ್ಯತೆ ಬೆಳೆಯಬೇಕು. ಮಂತ್ರಿಗಳು ಬದಲಾಗಿ ಹೋಗುತ್ತಾರೆ. ಆದರೆ ನಮ್ಮ ಐಕ್ಯತೆ ಜನರಲ್ಲಿ ಸಂಪೂರ್ಣ ಬೆಳೆಯಬೇಕು. ಶಾಂತ ರೀತಿಯ ಐಕ್ಯ [illegible] ಬೇಕು. ಯಾವತ [illegible] ಬೆಂಡ್ನ ಜವಾಬ್ದಾರಿ ಇದೆ. ಅದನ್ನು ಯೋಗ್ಯ ರೀತಿ ನಿರ್ವಹಿಸಿ ಭಾರತ ಮಾತೆಯ ಸುಪುತ್ರರೆನಿಸಿಕೊಳ್ಳಬೇಕು.

ವಂದನಾರ್ಪಣೆಯ ಬಳಿಕ ಸಮಾರಂಭ ಕೊನೆಗೊಂಡಿತು. ರಾಜ್ಯ, ಚೀಫ್ ಕಮಿಷನರಲ್ಲಿ ಗೃಹಮಂತ್ರಿಗಳಿಗೂ [illegible] ಆತ್ಮೀಯತೆಯಿಂದ [illegible].

ಶಾಸನ ಸಭಾಭವನದಲ್ಲಿ

ತಾ. ೨೮ರ ಬೆಳಿಗ್ಗೆ ೧೧-೩೦ ಗಂಟೆಗೆ ಶಾಸನ ಸಭಾ ಭವನವು ಅಲಂಕಾರದಿಂದ ಕಂಗೊಳಿಸುತ್ತಿತ್ತು. ವೈಸ್ ಯಿಂದ ಶ್ರೀ. ಕೆ. ಹ [illegible]ಪ್ಪನವರೂ, ಚೀಫ್ ಜಸ್ಟೀಸ್ ಮೇದಪ್ಪನವರೂ ಹಾಜರಿದ್ದರು. ಹ[illegible] ಗಂಟೆಗೆ ಸರಿಯಾಗಿ ಚೀಫ್ ಕಮಿಷನರು ಕೊಡಗಿನ ಮಂತ್ರಿಗಳೊಡನೆ ಸಭಾಭವನಕ್ಕೆ ಬಂದರು. ಚೀಫ್ ಕಮಿಷನರ ಆಹ್ವಾನದಂತೆ ಶ್ರೀ. ಸಿ. ಎ. ಮಂದಣ್ಣನವರು ಪ್ರತಿಜ್ಞಾ ಸ್ವೀಕಾರ ಮಾಡಿ ಸ್ಪೀಕರ ಸ್ಥಾನವನ್ನು ಅಲಂಕರಿಸಿದರು. ನಂತರ ಇತರ ಸದಸ್ಯರ ಪ್ರತಿಜ್ಞಾವಿಧಿ ನಡೆಯಿತು. ಮೊದಲು ಮಂತ್ರಿಗಳಿಬ್ಬರು ಪ್ರತಿಜ್ಞಾ ಸ್ವೀಕಾರ ಮಾಡಿದ ಮೇಲೆ ಇತರರ ಪ್ರತಿಜ್ಞಾ ಸ್ವೀಕಾರ ನಡೆಯಿತು. ಎ[illegible] ಕಾಲ [illegible] ತಿಳಿಯದ ಕಾರಣ ಅವರಿಗೆ [illegible] ಹೇಳಿಸಲಾಯಿತು. ಪ್ರತಿಜ್ಞಾವಿಧಿ ಮುಗಿದ ನಂತರ ಸ್ಪೀಕರರ ಸೂಚನೆಗೆ ಶಾಸನ ಸಭೆಯು ತಾ. ೨೮ರ ಬೆಳಿಗ್ಗೆ ೧೧ ಗಂಟೆಯ ವರೆಗೆ ಮುಂದರಿಸಲ್ಪಟ್ಟಿತು.

ಆ ದಿವಸ [illegible] ಸರಕಾರದ ಗೃಹಮಂತ್ರಿಗಳಾದ ಡಾ. ಕೈಲಾಸನಾಥ ಕಾಟ್ಜೂರವರು ಚೀಫ್ ಕಮಿಷನರು, ಮಂತ್ರಿಗಳು [illegible] ಸಭಾ [illegible] ಪ್ರವೇಶಿಸಿದರು [illegible] ಉದ್ಘಾಟನಾ ಭಾಷಣವನ್ನು ಮಾಡಿದರು.

ಉದ್ಘಾಟನಾ ಭಾಷಣ

"ಈ ಶುಭ ಸಂದರ್ಭದಲ್ಲಿ ನಿಮ್ಮೊಡನಿರಲು ನನಗೆ ಸಂತೋಷವಾಗಿದೆ. ನನ್ನ [illegible] ಸಂಘಟನೆಯು ಉಚಿತವಾಗಿ ೧೯೫೦ ನೇ ಜನವರಿ ೨೬ ರಂದು ನಮ್ಮ ದೇಶವು ಗಣತಂತ್ರ ರಾಜ್ಯವಾಯಿತು. [illegible] ಘಟನೆಯನ್ನು [illegible] ಎರಡು [illegible] ಮಾನವ [illegible] ಬ್ರಿಟಿಶ್ [illegible] ಹಿಂದೂದೇಶದಲ್ಲಿ [illegible]. ಇತಿಹಾಸ [illegible] ಆಕ್ರಮಣ [illegible] ಹಿಂದೂದೇಶದ [illegible] ರಾಜಕೀಯ [illegible] ಹಿಂದೂ [illegible] ಸಂಘಟನೆ [illegible] ವಿವಿಧ ಭಾಗಗಳಲ್ಲಿ [illegible] ಕೇಂದ್ರ [illegible].

ಕೊಡಗಿನಲ್ಲಿ ಜನತೆಯ [illegible] ಉತ್ಸಾಹವು [illegible] ಜನರು [illegible] ಮಾಡಿದ್ದು [illegible] ಕೊಡಗು [illegible] ನಿರ್ವಹಣ. ಕೊಡಗು [illegible] ಕಷ್ಟಕರ [illegible] ಜನರ [illegible] ಕೊಡಗಿನ [illegible] ದೊರೆಯದ [illegible] ಕೊಡಗು ಒಂದು ನಿದರ್ಶನ. ಕೊಡಗು ಈ ಬಗ್ಗೆ ಬಾಗ್ಯಶಾಲಿ. ಕಳೆದ ೧೦೦ ವರ್ಷಗಳಿಂದ ಕೊಡಗು ತನ್ನ ಸ್ವಂತ [illegible] ಜೀವನವನ್ನು ಅನ್ಯಾಹತವಾಗಿ ನಡೆಸಿದೆ. ತನಗೆ ಇಷ್ಟ ಬಂದ ಅರಸರನ್ನು ಆರಿಸಿಕೊಂಡಿದೆ. [illegible] ಹಿಂದಿನ ಕಾಲದ ಪ್ರಾಯಶಃ [illegible] ಅವರನ್ನು [illegible] ದ ಇತಿಹಾಸದಲ್ಲಿ ನೆರೆಯ ರಾಜ್ಯಗಳ ಜೊತೆ ಸೇರಿತು. ಆದರೂ ಈ ಕಳೆದ ೧೧೦ ವರ್ಷಗಳಲ್ಲೂ ಅದು ಪ್ರತ್ಯೇಕ ಪ್ರಾಂತವಾಗಿಯೇ ಇದೆ. ಕೊಡಗಿನ ಭವಿಷ್ಯ, ಅದರ ಪರಂಪರೆ ಅದರ ಜನತೆಯ [illegible]ನ್ನೇ ಕೂಡಿದೆ. ಬ್ರಿಟಿಷರ ಕಾಲದಲ್ಲಿ ಹಿಂದೂದೇಶ ಒಂದು ಎನ್ನಲ್ಪಟ್ಟರೂ ದೇಶದೊಳಗೆ ಅನೇಕ ಚಿಕ್ಕಪುಟ್ಟ ಸಂಸ್ಥಾನಗಳಿದ್ದವು. ಅದರೂ ಈ ಭಾಗಗಳೆಲ್ಲ ದೇಶದ ರಾಷ್ಟ್ರೀಯ ಜೀವನದಲ್ಲಿ ಸಹಕರಿಸಿ ದುಡಿದವು. ಇಂದೂ ಕೂಡ ಈ ಐಕ್ಯತೆ ಇದೆ. ರಾಷ್ಟ್ರೀಯ ಶಾಸನ ಸಭೆಗಳು, ಕೇಂದ್ರ ಜನತಾ ಸಭೆ, ಕೇಂದ್ರದ ಕೌನ್ಸಿಲು ಹೀಗೆ ಒಂದಕ್ಕೊಂದು ಪರಸ್ಪರ ಸಂಬಂಧವಿದೆ. ಕೊಡಗೂ ಕೂಡ ನೆರೆಯ ಇತರ ಪ್ರಾಂತಗಳ ಸಮುಚ್ಚಯದಲ್ಲಿ ನಿಂತಿದೆ. ಇಂದು ಇದರದೇ ಶಾಸನ ಸಭೆಯ ಉದ್ಘಾಟನೆಯನ್ನು ಮಾಡಲಾಗುತ್ತಿದೆ. ಹಿಂದೂದೇಶವನ್ನು ಎ. ಬಿ. ಸಿ. ಸಂಸ್ಥಾನಗಳೆಂದು ವಿಂಗಡಿಸಿದ್ದರೂ ಕೂಡ ಎಲ್ಲದರಲ್ಲಿಯೂ ಜನತಾ ಅಭಿಪ್ರಾಯಕ್ಕೆ ವೇಲ್ಯವ [illegible] ಜನರ ಆಡಳಿತ ಆಡಿಪಾಯವನ್ನು ಹಾಕಲಾಗುತ್ತಿದೆ.

ಕೊಡಗು ವಿದ್ಯೆಯಲ್ಲಿ ಬಹಳ ಮುಂದುವರಿದೆ. ರಾಜಕೀಯ ಜ್ಞಾನ ಬೆಳೆದಿದೆ. ಇಲ್ಲಿಯ ಸುಂದರ ಪ್ರಕೃತಿ ಸೌಭಾಗ್ಯವು ಸರ್ವ ವಿಧದಲ್ಲೂ ಪ್ರಗತಿಗೆ ನೆರವಾಗಿದೆ. ಇಲ್ಲಿಯ ಜನತೆಯು ಈ ಶಾಸನ ಸಭೆಯನ್ನು ಸರಿಯಾಗಿ ನಡೆಸಿ ಆಡಳಿತದ ವಿಷಯದಲ್ಲಿ ಎಂದಿಗೂ ಕೂಡ ಒಕ್ಕೂಟದ ಪ್ರತಿನಿಧಿಗಳೊಡನೆ ಸಹ[illegible] ಎಂಬ ವಿಶ್ವಾಸವಿದೆ. ಕೊಡಗಿನ ಜನರು ಯೋಗ್ಯರು. ರಣರಂಗಗಳಲ್ಲಿ ಉತ್ತಮ ಯೋಧರಾಗಿ ಶೌರ್ಯ ತೋರಿಸಿದವರು, ಶಾಂತ ನಾಗರಿಕರಾಗಿ ಬಾಳಲು ತಿಳಿದವರು. ಆದ್ದರಿಂದ ಇಲ್ಲಿ ಗಲಭೆಗಳಿಲ್ಲ.

ಇಲ್ಲಿಯ ಸಾಲಿಂದಲೂ ಇಲಾಖೆಯು ಕಳೆದ ಐದು ವರ್ಷಗಳಲ್ಲಿ ಉತ್ತಮ ಕೆಲಸ ಮಾಡಿದೆ. ೧೯೫೦ರಲ್ಲಿ ಸಾವಿರಕ್ಕೆ ೧೯೦ ಜನರು ಮಲೇರಿಯಾದಿಂದ ಸಾಯುತ್ತಿದ್ದರೆ ಈಗ ೧೯ ರಷ್ಟಕ್ಕೆ ಇಳಿದು ಹೋಗಿದೆ. ಕೊಡಗಿನ ಜನ ಸಂಖ್ಯೆ ಹೆಚ್ಚುತ್ತಿದೆ. ೧೯೫೦ರಲ್ಲಿ ಜನನ ಮರಣಗಳ ಸಂಖ್ಯೆ ಸಮವಾಗಿದ್ದರೆ ಈಗ ಮರಣಗಳ ಸಂಖ್ಯೆ [illegible] ಜನನ ಸಂಖ್ಯೆ [illegible] ಇದೆ. ಕೊಡಗು ವಿದ್ಯೆಯ[illegible] ಹಿಂದುಸ್ಥಾನದಲ್ಲಿ [illegible] ಹೆಸರು [illegible] ಕಾಲೇಜಿದೆ. [illegible] ಹೈಸ್ಕೂಲುಗಳಿವೆ. [illegible] ಕರೆ [illegible] ಇದ್ದವು. ೩೫,೦೦೦ [illegible] ಬರುವ ೫೦,೦೦೦ [illegible]. ಕಳೆದರೆ ಇಲ್ಲದ ಜನಸಂಖ್ಯೆಗೆ ಈಗ ಶಾಲೆಗೆ ಹೋಗುತ್ತಿರುವ ಮಕ್ಕಳ ಸಂಖ್ಯೆ ಆಶಾದಾಯಕವಾಗಿದೆ. ಮಕ್ಕಳ ವಿದ್ಯಾಭ್ಯಾಸದ ಮಟ್ಟಗೆ ಇಲ್ಲಿಯ ಜನರು ಎಷ್ಟು ಆಸಕ್ತಿ ವಹಿಸುತ್ತಿರುವರೆಂಬುದು ಇದರಿಂದ ಗೊತ್ತಾಗುತ್ತದೆ.

ಹಿಂದಿನ ಕಾಲದಲ್ಲಿ ಒಂದು ರಾಜ್ಯವೆಂದರೆ ಪೋಲೀಸ್ ರಾಜ್ಯ. ಅಲ್ಲಿಯ ಆಡಳಿತವೆಂದರೆ ಗೊಲ್ಲು ಕೂಲಿ, ಗಲಾಟೆ ನಡೆಯದಂತೆ ನೋಡಿಕೊಳ್ಳುವುದು ಮಾತ್ರ. ಆದರೆ ಇಂದು ಹಾಗಿಲ್ಲ. ಜನತೆಯೇ ಆಡಳಿತಗಾರರು. ಶಿಕ್ಷಣ, ಗ್ರಾಮ [illegible] ವಿಚಾರವಾಗಿ ಅವರಿಗೆ [illegible] ಹೋಗಬೇಕು. ದೇಶವು [illegible] ಆರ್ಥಿಕ ಸ್ಥಿತಿ [illegible] ಇಲ್ಲದಿದ್ದರೆ ತೊಂದರೆ ಇದೆ. ಆರ್ಥಿಕ ಸ್ಥಿತಿಯು ಚೆನ್ನಾಗಿರಬೇಕು. ಪ್ರತಿ ಸಂಸ್ಥಾನವು ಕೇಂದ್ರ ಸರಕಾರವನ್ನು ಧನ ಸಹಾಯ ಕೇಳುವುದು ಸರಿಯಲ್ಲ [illegible] ರಕ್ಷಣೆಗೆ ಅದರ ಅವಶ್ಯಕತೆ ಇದೆ. ಪ್ರಾಂತೀಯ ಸರಕಾರಗಳು ಜನತೆಗೆ ಉಪಯುಕ್ತವಾದ ಕೆಲಸಗಳನ್ನು ಮಾಡಿದಷ್ಟು ಕೇಂದ್ರದಿಂದ ಸಹಾಯ ದೊರೆಯುವ ಸಾಧ್ಯತೆ ಇದೆ. ಆಹಾರ ಧಾನ್ಯಗಳನ್ನು ಹೆಚ್ಚು ಬೆಳೆಯುವವರಿಗೆ ಹೆಚ್ಚು ಸಹಾಯ ದೊರೆಯಲಿದೆ. ವೈಶಾಲ್ಯದಿಂದ ವಿದ್ಯೆ [illegible] ದೊರೆಯುವುದೆಂದು ಕೇಳಿ ಸಂತೋಷವಾಯಿತು. ಇದರಿಂದ ಬಹಳ ಪ್ರಯೋಜನವಿದೆ. ಪ್ರಯೋಜನ ಕೊಡಗಿಗೆ ಮಾತ್ರವಲ್ಲ; ಇಡೀ ಹಿಂದೂಸ್ಥಾನಕ್ಕೆ! ಪ್ರತಿ ಸಂಸ್ಥಾನಗಳ [illegible] ಬೇಕಾದರೆ ಆಡಳಿತ [illegible] ದೇ ಬೇಕಾಗುತ್ತದೆ. ಪ್ರತಿಯೊಂದು ವಿಚಾರದಲ್ಲಿ ಒಂದು ಸಂಸ್ಥಾನವು ಸ್ವತಂತ್ರವಾಗಿ ತನ್ನ ವಿಚಾರಗಳನ್ನು ಮಾಡಿಕೊಳ್ಳಬಾರದು. ನೆರೆಯ ರಾಜ್ಯಗಳ ಸಹಾ[illegible] ಸಂಪರ್ಕಬೇಕು. ಹೊರ[illegible] ಕಾಲೇಜು, ಪಬ್ಲಿಕ್ ಸರ್ವೀಸು ಮುಂತಾದ ವಿಚಾರಗಳಲ್ಲಿನ ಸಹಾಯ ಬೇಕು. ಗ್ರಾಮಾಂತರ ಚಿಕ್ಕ ಕೆಲಸಗಳನ್ನು ಗ್ರಾಮ ಪಂಚಾಯತಿ ಮೂಲಕ ಗ್ರಾಮಸ್ಥರಿಂದಲೇ ನಡೆಸುವ ವಿಚಾರವು ಅವಶ್ಯಕ. ಕೊಡಗಿನ ಯುವಜನಾಂಗವು ಈ ಜವಾಬ್ದಾರಿಗಳನ್ನು ಯೋಗ್ಯ ರೀತಿ ನಿರ್ವಹಿಸುವದೆಂಬ ಭರವಸೆ ಇದೆ. ಕೇಂದ್ರದ ಸಂವೆಗಾಗಿ ಈ ವರೆಗೆ ತನ್ನ ಆಪೇಕ್ಷ [illegible] ಕಳುಹಿಸಿದಂತೆ ಇನ್ನೂ ಭವಿಷ್ಯದಲ್ಲಿ ಯೋಗ್ಯರನ್ನು ಬಹು ಸಂಖ್ಯೆಯಿಂದ ಕೊಡಗು ಕಳುಹಿಸಬೇಕು. ಕೊಡಗು ಹಿಂದೂದೇಶ ರಾಷ್ಟ್ರೀಯ ಭೂಪಟದಲ್ಲಿ ಸ್ಥಾನ ಪಡೆದಿದೆ. ಉತ್ತರದ ಗಂಗಾ ನದಿಯಂತೆಯೇ ದಕ್ಷಿಣದ ಕಾವೇರಿಯೂ ಪವಿತ್ರವಾಗಿದೆ. ಉತ್ತರಕ್ಕೆ ಗಂಗಾ ನದಿಯು ಹೇಗೆ ರಾಷ್ಟ್ರೀಯ ಪ್ರಗತಿಗೆ ಕಾರಣವಾಗಿದೆಯೋ ಹಾಗೆಯೇ ದಕ್ಷಿಣದ ಕಾವೇರಿಯೂ ಕೂಡ. ಕೊಡಗಿನ ಜನತೆಯು ತನ್ನ ಅಭಿಪ್ರಾಯಗಳನ್ನು ಅತಂ[illegible] ಶಾಸನ ಸಭೆಯ ಮೂಲಕ ವ್ಯಕ್ತ ಪಡಿಸ [illegible] ದೊರೆತಿದೆ. ಇ[illegible] ಯೋಗ್ಯ ರೀತಿ ನಡೆಸಿ ಸರ್ವರ ಹಿತ ಸಾಧಿಸುವ [illegible]."

ವಂದನೆಗಳು.

ಮಂತ್ರಿಗಳ ಭಾಷಣದ ನಂತರ ತಾತ್ಕಾಲಿಕ ಸ್ಪೀಕರಾದ ಶ್ರೀ ಪ[illegible] ವಂದನೆಗಳನ್ನು [illegible] ಗೃಹ ಮಂತ್ರಿಗಳಿಗೂ ಇತರರಿಗೂ ವಂದನೆಯನ್ನರ್ಪಿಸಿ ಈ ರೀತಿ ಹೇಳಿದರು: "ಇಂದು ಜನತಾ ಯುಗದ ಆರಂಭದ ದಿನ. ಕೊಡಗು ಭಾರತ ಖಂಡದ ಭಾಗಗಳಲ್ಲೊಂದು. ಗೃಹಮಂತ್ರಿಗಳು ಒಂದು ನಮಗೆ ಕೊಟ್ಟ ಬೋಧನೆಯಿಂದ ನಮ್ಮಲ್ಲಿ ಹುರುಪು ಹೆಚ್ಚಿದೆ. ನಾವು ನಮ್ಮ ಕರ್ತವ್ಯವನ್ನು ಯೋಗ್ಯ ರೀತಿ ನಿರ್ವಹಿಸುವೆವು ಎಂಬ ಭರವಸೆಯನ್ನು ಕೊಡುತ್ತೇವೆ."

ಬಹುಮಾನ ವಿನಿಯೋಗ.

ನಂತರ ಕೊಡಗಿನ ಮುಖ್ಯಮಂತ್ರಿ ಶ್ರೀ ಸಿ. ಎಂ. ಪೂಣಚ್ಚನವರು ಕಳೆದ ವರ್ಷ ಕೊಡಗಿನಲ್ಲಿ ನಡೆದ ಕ್ರಾಪ್ ಕಾಂಪಿಟೇಶನ್ ಸ್ಪರ್ಧೆಯಲ್ಲಿ ಬಹುಮಾನ ಪಡೆದವರಿಗೆ ಬಹುಮಾನವನ್ನು ತಮ್ಮ ಅಮೃತ ಹಸ್ತದಿಂದ ಕೊಡಬೇಕೆಂದು ಗೃಹಮಂತ್ರಿಯವರನ್ನು ಕೇಳಿಕೊಂಡರು. ಕ್ರಾಪ್ ಕಾಂಪಿಟಿಶನ್ ವಿಚಾರವಾಗಿ ಹೇಳುತ್ತಾ ಕೊಡಗಿನ ೩೦೦ ಗ್ರಾಮಗಳನ್ನು ೧೩ ಕೇಂದ್ರಗಳಾಗಿ ಮಾಡಲಾಯಿತೆಂದೂ, ೬೦೦ ಜನರು ಇದರಲ್ಲಿ ಭಾಗವಹಿಸಿದ್ದರೆಂದೂ ಗ್ರಾಮ, ನಾಡು, ಡಿಸ್ಟ್ರಿಕ್ಟ್ [illegible]

ಕೊಡಗು

ತಾ ೨೮-೩-೧೯೫೨ನೇ ಶುಕ್ರವಾರ

ನಮ್ಮ ಹೊಸ ಶಾಸನ ಸಭೆ.

ಕೊಡಗಿನಲ್ಲಿ ಸಾರ್ವತ್ರಿಕ ಚುನಾವಣೆಯು ಜನವರಿ ತಾ ೧೯ ಮತ್ತು ೨೦ರಲ್ಲಿ ನಡೆಯಿತು. ಈ ಚುನಾವಣೆಯು ಪ್ರೌಢ ಮತದಾನ ಪದ್ಧತಿ ಪ್ರಕಾರ ನಡೆದು ಕೊಡಗಿನ ೨೨೯ ಸಾವಿರ ಜನಸಂಖ್ಯೆಯಲ್ಲಿ ೧೨೫ ಸಾವಿರ ಇದರಲ್ಲಿ ಭಾಗವಹಿಸುವ ಅರ್ಹತೆಯುಳ್ಳವರಾಗಿದ್ದರು. ಇವರಲ್ಲಿ ಸುಮಾರು ೬೬ ಸಾವಿರ ಜನರು ಮತ ಚಲಾವಣೆ ಮಾಡಿ ೨೪ ಜನಪ್ರತಿನಿಧಿಗಳನ್ನು ಆರಿಸಿದ್ದಾರೆ. ಈ ೨೪ ಪ್ರತಿನಿಧಿಗಳಿಂದ ಕೂಡಿದ ಶಾಸನ ಸಭೆಯ ಉದ್ಘಾಟನೆಯನ್ನು ತಾ. ೨೭ರ ಯುಗಾದಿ ದಿವಸ ಕೇಂದ್ರ ಸರಕಾರದ ಮಂತ್ರಿಗಳಾದ ಡಾ. ಕಾಟ್ಜೂರವರು ಮಾಡಿದರು. ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಹೇಳಿದ ಕೆಲವು ವಿಚಾರಗಳು ಬೋಧಪ್ರದವಿವೆ. ಅವರು ಹೇಳಿದ ಹಾಗೆ ಕೊಡಗಿನಲ್ಲಿ ಜನತಾ ಯುಗಾರಂಭವಾಗಿದೆ. ಇಂದಿನ ಶಾಸನ ಸಭೆಯು ಕೊಡಗಿನ ಜನತೆಯ ಪ್ರಾತಿನಿಧಿಕ ಸಂಸ್ಥೆಯಾಗಿದೆ. ಶಾಸನ ಸಭಾ ಸದಸ್ಯರೂ ಕೂಡ ಇಂದು ಹೆಚ್ಚು ಜವಾಬ್ದಾರಿಯ ವ್ಯಕ್ತಿಗಳಾಗಿದ್ದಾರೆ. ಏಕೆಂದರೆ ಹಿಂದಿನಂತೆ ಇದು ಶಿಫಾರಸ್ಸಿನ ಕೌನ್ಸಿಲಲ್ಲ. ಎಲ್ಲರೂ ಒಮ್ಮತದಿಂದ ದೇಶದ ಹಿತವನ್ನು ಮುಂದಿಟ್ಟು ಮಾಡಿದರೆ ದೇಶಕ್ಕಾಗಿ ಮಹತ್ಕಾರ್ಯ ಮಾಡುವದು ಈ ಸಭೆಯಿಂದ ಸಾಧ್ಯವಿದೆ.

ದೇಶದ ಭವಿಷ್ಯವು ಅದರ ಆರ್ಥಿಕ ಸ್ಥಿತಿಯುಲ್ಲಿದೆಯೆಂದು ಕಾಟ್ಜೂರವರು ಹೇಳಿದರು. ದೇಶದ ಉತ್ಪತ್ತಿ ಹೆಚ್ಚಿದ್ದು ಜನತೆಗೆ ಬೇಕುಬೇಕಾದ ಕೆಲಸ ಕಾರ್ಯಗಳನ್ನು ಸಾಧಿಸಿಕೊಡಲು ಶಕ್ತವಾದರೆ ಅಂಥಾ ಸಂಸ್ಥಾನದ ಗೋಜಿಗೆ ಕೇಂದ್ರ ಸರಕಾರವು ಬರಲಾರದೆಂಬ ಅಭಿಪ್ರಾಯ ಗೃಹ ಮಂತ್ರಿಗಳ ಮಾತಿನಲ್ಲಿದೆ. ಆದ್ದರಿಂದ ದೇಶದ ಆರ್ಥಿಕ ಸ್ಥಿತಿಯು ಹಾಳಾಗದಂತೆ ನೋಡಬೇಕಾದುದು ಪ್ರತಿಯೊಬ್ಬನ ಕರ್ತವ್ಯವಾಗಿದೆ.

ಈ ಶಾಸನ ಸಭೆಯ ಸದಸ್ಯರು ಈ ಹಿಂದಿನ ಸದಸ್ಯರಂತಲ್ಲ. ಇವರು ನಿಜವಾದ ಜನಪ್ರತಿನಿಧಿಗಳು. ಆದ್ದರಿಂದ ಇವರ ಜವಾಬ್ದಾರಿ ತುಂಬಾ ಇದೆ. ಪ್ರತಿ ಮತದಾರ ತನ್ನ ಮತ ಚಾಲನೆ ಮಾಡಿದಾಗ ತನ್ನ ಹಾಗೂ ದೇಶದ ಹಿತವಾಗುವದೆಂಬ ಆಶೆಯನ್ನು ಕಟ್ಟಿ ಮತದಾನ ಮಾಡಿದ್ದಾನೆ. ಆತನ ಆಸೆ ನೆರವೇರುವಂತೆ ಪ್ರತಿನಿಧಿಗಳು ನಡೆಯಬೇಕು. ಹಳ್ಳಿ ಹಳ್ಳಿಗಳನ್ನು ಸುತ್ತಿ ಜನತೆಯ ಕಷ್ಟ ಸುಖಗಳನ್ನರಿತು ಅವಕ್ಕೆ ತಕ್ಕ ನೆರವು ನೀಡಬೇಕು. ಹಾಗೆ ಮಾಡಿದರೆ ಮಾತ್ರ ಹೊಸ ಯುಗಾರಂಭವಾಗುವದು.

ವರ್ತಮಾನ.

ಗ್ರಾಮಾಂತರ ಸೂಲಗಿತ್ತಿಯರಾಗಿ ಕೆಲಸ ಮಾಡಲು ಮಡಿಕೇರಿ ಸಿವಿಲ್ ಆಸ್ಪತ್ರೆಯಲ್ಲಿ ತರಬೇತು ಕೊಡಲಾಗುವದೆಂದೂ ಹನ್ನೆರಡು ತಿಂಗಳ ತರಬೇತು ಅವಧಿಯಲ್ಲಿ ಮಾಸಿಕ ರೂ. ೨೫ರಂತೆ ವೇತನವನ್ನೂ, ತರಬೇತು ಆದ ಮೇಲೆ ರೂ. ೫೦ ಸಾಹಿತ್ಯಗಳಿಗಾಗಿಯೂ ಕೊಡಲಾಗುವದೆಂದೂ ಉಮೇದುವಾರರು ಲೋವರ್ ಸೆಕೆಂಡರಿ ಪೂರ್ತಿ ಮಾಡಿದ್ದು ೨೧ ರಿಂದ ೩೫ ವಯಸ್ಸಿನೊಳಗಿರಬೇಕೆಂದೂ ಅರ್ಜಿಗಳು ತಾರೀಕು ೧-೪-೫೨ರೊಳಗೆ ಬರಬೇಕೆಂದೂ ತಿಳಿಯಬಂದಿದೆ.

ತಾ. ೨೮ರ ಬೆಳಿಗ್ಗೆ ಕೇಂದ್ರ ಸರ್ಕಾರದ ಗೃಹ ಮಂತ್ರಿಗಳಾದ ಡಾ. ಕೆ. ಎನ್. ಕಟ್ಜೂರವರು ಮಡಿಕೇರಿ ಸಿವಿಲ್ ಆಸ್ಪತ್ರೆಯನ್ನು ಚೀಫ್ ಕಮಿಷನರೊಡನೆ ಸಂದರ್ಶಿಸಿ ಆಸ್ಪತ್ರೆಯ ಅಚ್ಚುಕಟ್ಟುತನವನ್ನೂ ಶುಚಿತ್ವವನ್ನೂ ಮೆಚ್ಚಿ ಸಂದರ್ಶಕರ ಪುಸ್ತಕದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಪ್ರಶಂಸಿಸಿ ಬರೆದಿರುವರೆಂದು ವಾರ್ತೆ.

ಕೊಡಗಿನ ಮುಖ್ಯ ಮಂತ್ರಿಯವರಾದ ಶ್ರೀ ಸಿ ಎಂ. ಪೂಣಚ್ಚರವರಿಗೆ ಫೈನಾನ್ಸ್, ಲೇಂಡ್ ರೆವಿನ್ಯೂ, ಎಕ್ಸೈಸ್, ಪಾನನಿರೋಧ, ಶಾಸನ ಸಭೆ, ಫಾರೆಸ್ಟ್, ವ್ಯವಸಾಯ, ವೆಟರಿನರಿ, ಕೋಳಿ ಮೀನು ಸಾಕುವಿಕೆ, ಕಾರ್ಖಾನೆ ಕೆಲಸಗಾರರು, ಕಂಟ್ರೋಲ್, ಸಿವಿಲ್ ಸಪ್ಲೈ, ಉದ್ಯೋಗಿಗಳ ನೇಮಕ, ಪ್ಲಾನಿಂಗ, ರೆಕಾರ್ಡುಗಳು, ಬಡ್ಜೆಟ್, ಸ್ಥಳೀಯ ಆಡಿಟ್, ವ್ಯವಸಾಯ ಆದಾಯ ತೆರಿಗೆ, ಸ್ಟೇಷನರಿ, ಪ್ರಿಂಟಿಂಗ್, ಗ್ರಾಂಟು ಕೊಡುವದು, ಮೊದಲಾದ ಇಲಾಖೆಗಳು ಕೊಡಲ್ಪಟ್ಟಿವೆ. ಎರಡನೆ ಮಂತ್ರಿ ಶ್ರೀ ಕೆ ಮಲ್ಲಪ್ಪನವರಿಗೆ, ನ್ಯಾಯ, ಜೈಲು, ಪೋಲೀಸ್, ವಿದ್ಯೆ, ವೈದ್ಯಕೀಯ, ಪಬ್ಲಿಕ್ ಹೆಲ್ತ್, ಸಹಕಾರ, ಟೆಕ್ಸ್‌ಟೈಲ್ ಮತ್ತು ಗುಡಿಕೈಗಾರಿಕೆ, ಸ್ಥಳೀಯ ಶಾಸನ ಸಭೆ ಮೂಲನಿವಾಸಿಗಳು, ಚುನಾವಣೆ, ನೀರಾವರಿ ಮತ್ತು ಗ್ರಾಮಾಭಿವೃದ್ಧಿ, ಸಿವಿಲ್ ವರ್ಕ್ಸ್, ವಹಿವಾಟು, ರಿಜಿಸ್ಟ್ರೇಷನ್ ಮೊದಲಾದ ಇಲಾಖೆಗಳು ಕೊಡಲ್ಪಟ್ಟಿವೆ.

ಶಾಸನ ಸಭೆಯ ಸ್ಪೀಕರರ
ಚುನಾವಣೆ

ಶ್ರೀ ಬಿ. ಎಸ್. ಕುಶಾಲಪ್ಪನವರ ಆಯ್ಕೆ.

ಕೊಡಗು ಶಾಸನ ಸಭೆಗೆ ಸ್ಪೀಕರರನ್ನು ಆರಿಸುವ ಬಗ್ಗೆ ಶಾಸನ ಸಭೆಯ ಮೀಟಿಂಗು ತಾ. ೨೮ರ ಬೆಳಿಗ್ಗೆ ೧೧ ಗಂಟೆಗೆ ನಡೆಯಿತು. ತಾತ್ಕಾಲಿಕ ಸ್ಪೀಕರರಾದ ಶ್ರೀ ಚೌರಿರ ಮಂದಣ್ಣನವರು ಅಧ್ಯಕ್ಷತೆ ವಹಿಸಿದ್ದರು. ಸ್ಪೀಕರ್‌ತನಕ್ಕೆ ಶ್ರೀ ಬಿ. ಎಸ್. ಕುಶಾಲಪ್ಪನವರ ಹೆಸರನ್ನು ಶ್ರೀ ಕೋರನ ದೇವಯ್ಯನವರು ಸೂಚಿಸಿ ಶ್ರೀ ಮುರುವಂಡ ಮಾಚಯ್ಯನವರು ಅನುಮೋದಿಸಿದರು. ಬೇರೆ ಹೆಸರುಗಳಿಲ್ಲದ ಕಾರಣ ಸರ್ವಾನುಮತದಿಂದ ಶ್ರೀ ಬಿ. ಎಸ್. ಕುಶಾಲಪ್ಪನವರು ಆರಿಸಲ್ಪಟ್ಟರು. ನಂತರ ತಾತ್ಕಾಲಿಕ ಸ್ಪೀಕರಾಗಿದ್ದ ಶ್ರೀ ಮಂದಣ್ಣನವರು ಖಾಯಂ ಸ್ಪೀಕರರಾಗಿ ಆರಿಸಲ್ಪಟ್ಟ ಶ್ರೀ ಕುಶಾಲಪ್ಪನವರನ್ನು ಅಧ್ಯಕ್ಷ ಸ್ಥಾನಕ್ಕೆ ಕರೆತಂದು ಕುಳ್ಳಿರಿಸಿದರು.

ಶ್ರೀ ಸಿ. ಎಂ. ಪೂಣಚ್ಚನವರು ಸ್ಪೀಕರರಾಗಿ ಆರಿಸಲ್ಪಟ್ಟ ಶ್ರೀ ಕುಶಾಲಪ್ಪನವರನ್ನು ಶ್ಲಾಘಿಸುತ್ತಾ ಹೀಗೆ ಹೇಳಿದರು, "ಇಂದಿನದು ಮಹತ್ವದ ದಿನ. ಸ್ಪೀಕರರಾಗಿ ಆರಿಸಲ್ಪಟ್ಟ ನಿಮಗೆ ಶುಭ ಕೋರಲು ಆನಂದವಾಗುತ್ತದೆ. ನಿನ್ನೆ ದಿನ ನಮ್ಮ ಈ ಸಭೆಯ ಉದ್ಘಾಟನವಾಯಿತು. ಇಂದು ಸ್ಪೀಕರರನ್ನು ಆರಿಸುವುದು ನಮ್ಮ ಕಾರ್ಯಕ್ರಮವಾಗಿತ್ತು. ಈ ವರೆಗೆ ಇದ್ದ ಶಾಸನ ಸಭೆಯಂತೆ ನಮ್ಮ ಈ ಸಭೆಯಲ್ಲ. ಹಿಂದೆ ಕೆಲವು ಜನ ಚುನಾಯಿತ, ಕೆಲವು ಜನ ನೇಮಿತ ಸದಸ್ಯರಿರುತ್ತಿದ್ದರು. ಇಂದು ಎಲ್ಲರೂ ಚುನಾಯಿತ ಪ್ರತಿನಿಧಿಗಳು. ನೀವು ನಮ್ಮ ಎಲ್ಲಾ ಕಾರ್ಯಕಲಾಪಗಳಿಗೆ ಬೆಂಬಲ ಕೊಡುವಿರಾಗಿ ನಂಬಿರುವೆವು. ನಾವು ನಿಯಮಬದ್ಧವಾಗಿ ನಡೆಯುವೆವು. ನಿಮ್ಮನ್ನು ಸಭಿಕರಿಗೆ ಪರಿಚಯ ಮಾಡುವ ಅವಶ್ಯಕತೆ ಇಲ್ಲ. ಎಲ್ಲರಿಗೂ ತಿಳಿದಿರುವವರು ನೀವು. ಕೊಡಗು ಸರಕಾರದಲ್ಲಿ ದೊಡ್ಡ ಹುದ್ದೆಯಲ್ಲಿ ಇದ್ದವರು. ಪಾರ್ಲಿಮೆಂಟರಿ ಕಾರ್ಯಕ್ರಮದಲ್ಲಿ ನುರಿತವರು. ನಿಮಗೆ ಕಾಂಗ್ರೆಸ ಪಕ್ಷದ ಪರವಾಗಿಯೂ ಸರಕಾರದ ಪರಿಯಿಂದಲೂ ವಂದಿಸುವದಲ್ಲದೆ ನಿಮ್ಮ ಕಾರ್ಯಕಲಾಪಗಳಲ್ಲಿ ನಮ್ಮ ಪೂರ್ಣ ಸಹಕಾರವನ್ನು ಕೊಡುವೆವು".

ಸ್ಪೀಕರರಾದ ಶ್ರೀ ಬಿ. ಎಸ್. ಕುಶಾಲಪ್ಪನವರು ವಂದನೆಗೆ ಉತ್ತರ ಕೊಡುತ್ತಾ "ನನ್ನನ್ನು ಒಮ್ಮತದಿಂದ ಆರಿಸಿದುದಕ್ಕೆ ವಂದಿಸುತ್ತೇನೆ. ಶ್ರೀಯುತರು ಹೇಳಿದ ಹೊಗಳಿಕೆಯ ಮಾತುಗಳಿಗೆ ನಾನು ಅರ್ಹನಲ್ಲ. ಆದರೆ ಸಭೆಯವರಿಗೆ ನನ್ನ ಮೇಲೆ ಸದ್ಭಾವನೆಯಿದೆಯೆಂದು ನಾನು ತಿಳಿದುಕೊಳ್ಳುತ್ತೇನೆ. ನಿಮ್ಮ ಸಹಕಾರದಿಂದ ನನ್ನ ಕೆಲಸವು ಸುಲಭವಾಗುವದಾಗಿ ನಿರೀಕ್ಷಿಸುತ್ತೇನೆ. ಒಂದು ಪೀಳಿಗೆಯಿಂದಲೇ ಈ ರೀತಿಯ ಒಂದು ಶಾಸನ ಸಭೆ ಇದೆ. ಈ ಸಭೆ ಪ್ರಾರಂಭವಾದಂದಿನಿಂದಲೇ ಸದಸ್ಯರಾಗಿದ್ದವರು ಇಂದೂ ಸದಸ್ಯರಾಗಿದ್ದಾರೆ. ಈ ಸಭೆಯ ಕಾರ್ಯಕಲಾಪಗಳನ್ನು ಹಿಂದೆ ಅನೇಕ ದಕ್ಷ ಮುಖಂಡರುಗಳು ನಡೆಸಿದ್ದಾರೆ. ಈ ರೀತಿಯಲ್ಲಿ ಅತ್ಯುತ್ತಮ ಪರಂಪರೆಯೊಂದು ಸ್ಥಾಪಿಸಲ್ಪಟ್ಟಿದೆ. ಎಲ್ಲರೂ ಜವಾಬ್ದಾರಿಕೆಯನ್ನರಿತು ಸಹಕರಿಸಿ ವರ್ತಿಸಿ ಯಾರ ಮೇಲೂ ಶಿಸ್ತಿನ ಪ್ರಯೋಗ ಮಾಡುವ ಆಸ್ಪದ ತರಲಾರಿರೆಂದು ಭಾವಿಸುತ್ತೇನೆ. ಈ ವರೆಗೆ ನಮ್ಮ ಕೌನ್ಸಿಲು ಶಿಫಾರಸ್ಸಿನದಾಗಿತ್ತು. ಈಗ ಜವಾಬ್ದಾರಿಯುತದ್ದಾಗಿದೆ. ದೇಶದ ಹಿತಾಹಿತಗಳು ನಮ್ಮ ಕೈಯಲ್ಲಿವೆ. ದೇಶದ ಜನರಿಗೆ ಹಿತ ಮಾಡುವ ಒಂದು ಗುರಿಯಿಂದ ದುಡಿಯಬೇಕಿದೆ. ಭವಿಷ್ಯವು ಜನತೆಗೆ ಹಿತಕರವಾಗುವ ರೀತಿ ತೀರ್ಮಾನಿಸಲ್ಪಡಲಿ. ನಿಮಗೆಲ್ಲರಿಗೆ ಪುನಃ ವಂದಿಸುತ್ತೇನೆ" ಎಂದು ಹೇಳಿದರು. ನಂತರ ಸಭಾ ಸದಸ್ಯರ ಪರಿಚಯ ಮಾಡಿಕೊಂಡರು.

ಮೊದಲೇ ಏರ್ಪಡಿಸಿದ ಕಾರ್ಯಕ್ರಮದ ಮೇರೆ ಚೀಫ್ ಕಮಿಷನರು ಸಭೆಯನ್ನುದ್ದೇಶಿಸಿ ಮಾತಾಡಬೇಕಿತ್ತು. ಆದರೆ ಚೀಫ್ ಕಮಿಷನರ ಭಾಷಣದಲ್ಲಿ ದೇಶದ ಮುಂದಿನ ಆಡಳಿತದ ವಿಚಾರ ಸೂಕ್ಷ್ಮ ವಿವರಗಳಿದ್ದು ಅದರ ಮೇಲಿನ ಚರ್ಚೆಯು ಬಡ್ಜೆಟ್ಟನ್ನು ಹೊಂದಿಕೊಂಡಿರುವದಾಗಿರುತ್ತದೆ. ಆದರೆ ಕೇಂದ್ರ ಸರಕಾರಕ್ಕೆ ಒಪ್ಪಿಗೆಗೆ ಕಳುಹಿಸಿದ ಬಡ್ಜೆಟ್ಟಿಗೆ ಮಂಜೂರಾತಿ ದೊರೆತು ಬಾರದ ಕಾರಣ ಈ ಮೀಟಿಂಗಿನಲ್ಲಿ ಬಡ್ಜೆಟ್ ವಿಚಾರ ಚರ್ಚಿಸುವ ಅವಕಾಶವಿಲ್ಲದ್ದರಿಂದ ಕಾರ್ಯಕ್ರಮದಲ್ಲಿ ಬದಲಾವಣೆ ಮಾಡಿ ಚೀಫ್ ಕಮಿಷನರ ಭಾಷಣವನ್ನು ಮುಂದಿನ ಸಭೆಗೆ ಮುಂದರಿಸಲಾಗಿದೆಯೆಂದು ಮುಖ್ಯ ಮಂತ್ರಿ ಶ್ರೀ ಸಿ. ಎಂ. ಪೂಣಚ್ಚನವರು ಹೇಳಿದರು. ಆದರೆ ಮುಂದಿನ ನಾಲ್ಕು ತಿಂಗಳುಗಳ ವರೆಗೆ ೩೦ ಲಕ್ಷ ರೂಪಾಯಿಗಳ ವರೆಗೆ ಖರ್ಚು ಮಾಡುವ ಅಧಿಕಾರವನ್ನು ಕೇಂದ್ರ ಸರಕಾರವು ಕೊಟ್ಟಿದೆಯೆಂದೂ ಹೇಳಿದರು. ನಂತರ ಸಭೆಯು ಮುಕ್ತಾಯಗೊಂಡಿತು.

(೫ನೇ ಪುಟದಿಂದ ಸಾಗಿದ್ದು)

ಲ್ಪಟ್ಟಿತೆಂದೂ, ಸಂಸ್ಥಾನದ ಮಟ್ಟದಲ್ಲಿ ಪ್ರಥಮ ಬಹುಮಾನ ರೂ. ೧,೫೦೦/-, ದ್ವಿತೀಯ ಬಹುಮಾನ ರೂ. ೧,೦೦೦/- ಮತ್ತು ತೃತೀಯ ಬಹುಮಾನ ರೂ. ೫೦೦/- ಎಂದೂ ಹೇಳಿದರು. ಈ ಮೊದಲಿನ ವರ್ಷ ಕೊಡಗಿನಲ್ಲಿ ಎಕ್ರೆಗೆ ೬೨೮೮ ಪೌಂಡು ಬೆಳೆಯೇ ಅತ್ಯುತ್ತಮವಾಗಿತ್ತೆಂದೂ ಆದರೆ ಈ ವರ್ಷ ಶನಿವಾರಸಂತೆಯ ಆಲೂರು ಗ್ರಾಮದ ಶ್ರೀ ಸಂಗಯ್ಯ ಎಂಬವರು ಎಕ್ರೆಗೆ ೧೨,೯೫೦ ಪೌಂಡು ಬೆಳೆದು ಅಖಿಲ ಭಾರತ ರೆಕಾರ್ಡನ್ನು ಮುರಿದಿರುವರೆಂದೂ, ಈ ಮೊದಲಿನ ಶ್ರೀ ವೆಲ್ಲಯ್ಯ ಗೌಂಡರಿಗಿಂತಾ ಉತ್ತಮ ವ್ಯವಸಾಯ ಮಾಡಿರುವರೆಂದೂ ಹೇಳಿದರು. ಎರಡನೇ ಬಹುಮಾನವು ಅದೇ ಗ್ರಾಮದ ಶ್ರೀ ಕಾಳಪ್ಪನವರಿಗೆ ದೊರೆಯಿತು. ಮೂರನೇ ಬಹುಮಾನವು ದೇವನೂರು ಗ್ರಾಮದ ಶ್ರೀ ಪೋಡಾಮಾಡ ನಾಚಪ್ಪನವರಿಗೆ ದೊರೆಯಿತು. ಗೃಹ ಮಂತ್ರಿಗಳು ಬಹುಮಾನಗಳನ್ನು ಕೊಟ್ಟು ತಮ್ಮ ಆನಂದವನ್ನು ವ್ಯಕ್ತಪಡಿಸಿದರು. ಇಂದು ದಕ್ಷಿಣದವರಿಗೆ ಯುಗಾದಿಯ ದಿನವೆಂದೂ ಅದೇ ರೀತಿ ಉತ್ತರದವರಾದ ತನಗೂ ವಿಕ್ರಮ ಸಂವತ್ಸರದ ಹೊಸ ವರ್ಷಾರಂಭದ ದಿನವೆಂದೂ ಹೇಳಿ ಈ ಹೊಸ ವರ್ಷದಲ್ಲಿ ಕೊಡಗು ಪ್ರತಿ ಕ್ಷೇತ್ರದಲ್ಲೂ ಮುಂದರಿಯಲೆಂದು ಆಶಿಸಿದರು.

ಅನಂತರ ಮಂತ್ರಿಗಳು ಹೊಸ ಶಾಸನ ಸಭಾಸದರ ಪರಿಚಯ ಮಾಡಿಕೊಂಡು ಫಲಾಹಾರವನ್ನಿತ್ತರು.

ಮಧ್ಯಾಹ್ನ ೧೨ ಗಂಟೆಯಿಂದ ೧ ಗಂಟೆಯ ವರೆಗೆ ಕೆಲವು ಪ್ರಮುಖರು ಪೋರ್ಟ್ ಬಂಗ್ಲೆಯಲ್ಲಿ ಅವರನ್ನು ಭೇಟಿಯಾದರು. ನಂತರ ೨-೩೦ ಗಂಟೆಗೆ ಮಂತ್ರಿಗಳು ಸಿದ್ದಾಪುರ-ಪೊಳ್ಳಿಬೆಟ್ಟ ಮಾರ್ಗವಾಗಿ ಪೊನ್ನಂಪೇಟೆಗೆ ಹೋದರು. ಅಲ್ಲಿ ಕೊಡಗು ಜಿಲ್ಲಾ ಕಾಂಗ್ರೆಸ್ಸು ಅವರಿಗೆ ಒಂದು ಬಿನ್ನವತ್ತಳೆಯನ್ನರ್ಪಿಸಿತು. ಮಾರನಾಡಿಗಾಗಿ ಅವರು ಮಡಿಕೇರಿಗೆ ಬಂದು ಸಹಕಾರ ಬ್ಯಾಂಕಿನ ಕಟ್ಟಡವನ್ನು ಸಂದರ್ಶಿಸಿದರು. ನಂತರ ಕೋಟೆಯಲ್ಲಿ ಏರ್ಪಡಿಸಿದ್ದ ಬಳಕಾಟ ಮತ್ತು ಸುಗ್ಗಿ ಕುಣಿತಗಳನ್ನು ನೋಡಿ ಸಂತೋಷಪಟ್ಟರು. ರಾತ್ರಿ ಕೊಡಗಿನ ಮಂತ್ರಿಗಳು ಅವರಿಗೆ ಔತಣದ ಏರ್ಪಾಡು ಮಾಡಿದ್ದರು. ತಾ. ೨೮ರ ಬೆಳಿಗ್ಗೆ ಗೃಹಮಂತ್ರಿಗಳು ತಮ್ಮ ಎರಡು ದಿನಗಳ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ಹಿಂತೆರಳಿದರು.

CAR FOR SALE.

BUICK 1934|35 model 26 H. P Saloon car in very good condition. New battery, good tyres and extras fitted. European owned and driven througtout. Price Rs. 3500/- or nearest offer.

J. GUNN,
POLLIBETTA ESTATE,
Pollibetta.

ಅಮಲ ದೇಸಾಯಿ ಸುಕುಮಾರಸೇನ ಭೇಟಿ.

ಮುಂಬಯಿಯ ಗೃಹಮಂತ್ರಿ ಶ್ರೀ. ಮುರಾರಜಿ ದೇಸಾಯಿಯವರನ್ನು ಮೊನ್ನಿನ ಚುನಾವಣೆಯಲ್ಲಿ ಬುಲಸಾರ ಚಿಕಲಿ ಮತದಾರ ಕ್ಷೇತ್ರದಲ್ಲಿ ಸೋಲಿಸಿ ಆರಿಸಿ ಬಂದ ಸಮಾಜವಾದಿ ಪಕ್ಷದ ಹುರಿಯಾಳು ಡಾ. ಅಮಲ ದೇಸಾಯಿಯವರು ನಿರ್ದಿಷ್ಟ ಪಡಿಸಿದ ಅವಧಿಯಲ್ಲಿ ಚುನಾವಣಾ ವೆಚ್ಚದ ಲೆಕ್ಕವನ್ನು ಕೊಡಲು ತಪ್ಪಿದುದರ ವಿವರಣೆ ಕೊಡಲು ಭಾರತದ ಮುಖ್ಯ ಚುನಾವಣಾ ಕಮಿಷನರು ಶ್ರೀ. ಸುಕುಮಾರ ಸೇನರನ್ನು ಕಂಡರು.

ನಿರ್ದಿಷ್ಟ ಪಡಿಸಿದ ಅವಧಿಗಿಂತ ಎರಡು ದಿನ ತಡಮಾಡಿ ಲೆಕ್ಕವನ್ನು ಒಪ್ಪಿಸಿದ ಡಾ. ಅಮಲ ದೇಸಾಯಿಯವರು ಚುನಾವಣಾ ನಿಯಮಗಳನ್ವಯ ಶಾಸನ ಸಭೆಯ ಸದಸ್ಯತ್ವವನ್ನು ಕಳೆದುಕೊಳ್ಳಬಹುದಾಗಿದೆ.

ಚುನಾವಣಾ ನಿಯಮಗಳನ್ವಯ ಸಗಸ್ಯತ್ವದಿಂದ 'ಅನರ್ಹತೆಗೆ ಈಡಾಗುವರ' ಎಂದು ಅಧಿಕೃತ ಗ್ಯಾಜೇಟಿನಲ್ಲಿ ಪ್ರಕಟಿಸಿದ ನಂತರ ವಿಚಾರಿಸಲಾಗುವದೆಂದು ಶ್ರೀ. ಸೇನರು ಡಾ. ಅಮಲ ದೇಸಾಯಿಯರಿಗೆ ತಿಳಿಸಿದರೆಂದು ವರದಿಯಾಗಿದೆ. ಲೆಕ್ಕವನ್ನು ಒಪ್ಪಿಸಲು ಆದ ಕಾಲ ವಿಲಂಬವನ್ನು ಕಡೆಗಣಿಸಲು ಡಾ ದೇಸಾಯರು ಮುಖ್ಯ ಚುನಾವಣಾ ಕಮಿಷನರರಿಗೆ ಶಿಷ್ಯಮಂಡಳದ ಮುಖಾಂತರ ಕೇಳಬೇಕಾಗುವದು.

ಕೆಲ ಸಮಯದ ನಂತರ ಡಾ ಅಮಲ ದೇಸಾಯಿಯರು ಈ ಕೆಳಗೆ ಕಾಣಿಸಿದ ಪ್ರಕಟನೆಯನ್ನು ಹೊರಡಿಸಿದರು. 'ಲೆಕ್ಕವನ್ನು ಒಪ್ಪಿಸುವ ಕೊನೆಯ ದಿನವನ್ನು ತಿಳಿಸಲು ನಾನು ನಾಲ್ಕು ಬಾರಿ ನಿರ್ವಾಚನಾಧಿಕಾರಿಗಳಿಗೆ ಕೇಳಿಕೊಂಡರೂ ಅವರು ಉತ್ತರಿಸದೇ ಇದ್ದುದರಿಂದ ನಾನು ಲೆಕ್ಕ ಒಪ್ಪಿಸಲು ತಡವಾಯಿತು. ನಿರ್ವಾಚನಾಧಿಕಾರಿಗಳು ನನಗೆ ಲೆಕ್ಕ ಒಪ್ಪಿಸುವ ಫಾರ್ಮುಗಳನ್ನು ಕೊಡಲಿಲ್ಲ. ಮತ್ತು ಕೊನೆಯ ದಿನವನ್ನೂ ತಿಳಿಸಲಿಲ್ಲ. ನಾನು ಫೆಬ್ರುವರಿ ೧೪ ರಂದು ಪುನಃ ನಿರ್ವಾಚನಾಧಿಕಾರಿಗಳನ್ನು ಕಂಡೆನು. ಆಗ ಆ ಅಧಿಕಾರಿಗಳು ನನ್ನ ಮತದಾರ ಕ್ಷೇತ್ರದ ಚುನಾವಣಾ ಫಲಿತಾಂಶವು ಪ್ರಕಟವಾದ ಜನವರಿ ೩ ರ ಮುಂಬಯಿ ಸರಕಾರಿ ಗೆಜೆಟ್ಟನ್ನು ತೋರಿಸಿದ್ದಲ್ಲದೆ ಅನಂತರ ೪೫ ದಿನಗಳೊಳಗಾಗಿ ಅಂದರೆ ಮಾರ್ಚ್ ೧೭ ಕ್ಕಿಲ್ಲವೆ ಅದರೊಳಗಾಗಿ 'ಲೆಕ್ಕವನ್ನು ಒಪ್ಪಿಸಬೇಕೆಂದು ಹೇಳಿದರು. ಮಾರ್ಚ್ ದಿನಾಂಕ ೧೦ ರಂದು ಲೆಕ್ಕವನ್ನು ನಾನು ಒಪ್ಪಿಸಿದೆನು. ಕೊನೆಯ ದಿನಕ್ಕಿಂತ ೬ ದಿನ ಮೊದಲೇ ನಾನು ಲೆಕ್ಕವನ್ನು ಒಪ್ಪಿಸಿದೆನೆಂದು ತಿಳಿಸಿದೆನು. ಆದರೆ ಚುನಾವಣಾ ಫಲಿತಾಂಶವು ಜನವರಿ ೩ ರಂದು ಪ್ರಕಟವಾಗಿದೆಯೆಂಬುದು ಲೆಕ್ಕ ಒಪ್ಪಿಸಿದ ನಂತರ ನನಗೆ ತಿಳಿದುಬಂದಿತು' ಎಂದಿದ್ದಾರೆ.

ಕುಮಾರಿ ಪದ್ಮಜಾ ಗವ್ಹರ್ನರ್ ಹುದ್ದೆಗೆ?

ಸ್ವಾತಂತ್ರ್ಯ ಹೋರಾಟದಲ್ಲಿ ದೇಶಸೇವಿಕೆ ಸುಪ್ರಸಿದ್ಧ ರಾಜಕಾರಣಿಗಳಾಗಿದ್ದ ಶ್ರೀಮತಿ ಸರೋಜಿನಿನಾಯಡುರವರ ಪ್ರಿಯಪುತ್ರಿ ಕುಮಾರಿ ಪದ್ಮಜಾ ಇವರಿಗೆ ಗವ್ಹರ್ನರ್ ಹುದ್ದೆಯನ್ನು ಕೊಡುವರೆಂಬ ದಟ್ಟವಾದ ಸುದ್ದಿಯು ಕೇಳಿಬರುತ್ತಿದೆ.

ಸಿಂಹಳದ ಪ್ರಧಾನರ ನಿಧನ.

ಕುದುರೆಯ ಮೇಲಿಂದ ಬಿದ್ದುದರಿಂದ

ಸಿಂಹಳದ ಮುಖ್ಯಮಂತ್ರಿ ಶ್ರೀ. ಡಾನ್ ಸ್ಟೀಫನ್ ಸೇನಾ ನಾಯಕೆಯವರು ನಿತ್ಯದಂತೆ ಕುದುರೆ ಸವಾರಿ ಮಾಡುತ್ತಿರುವಾಗ ಕೆಳಗೆ ಬಿದ್ದರು.

೬೮ ವರ್ಷದ ಶ್ರೀ. ಸೇನಾ ನಾಯಕೆಯವರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಅವರಿಗೆ ಬಲವಾದ ಪೆಟ್ಟು ಬಿದ್ದಿದೆಯೆಂದು ಆಸ್ಪತ್ರೆಯ ಅಧಿಕಾರಿಗಳು ಹೇಳಿದರು.

ಅವರ ಪಕ್ಕದ ಎಲುಬುಗಳೆರಡು ಮುರಿದಿವೆಯೆಂದು ಗೊತ್ತಾಗಿದೆ ಅವರನ್ನು ಆಸ್ಪತ್ರೆಗೆ ಸಾಗಿಸಿ ೬ ಗಂಟೆಗಳಾದರೂ ಅವರಿಗೆ ಪ್ರಜ್ಞೆ ಬಂದಿರಲಿಲ್ಲ.

ಇತರರಂತೆ ಭಾರತದ ಹೈಕಮಿಶನರಾದ ಶ್ರೀ. ಕೇಶವ ಮೆನನ್ನರು ಸಹ ಆಸ್ಪತ್ರೆಗೆ ಹೋಗಿದ್ದರು. ಆದರೆ ಮುಖ್ಯ ಮಂತ್ರಿಗಳನ್ನು ಕಾಣಲು ಯಾರಿಗೂ ಅವಕಾಶವೀಯಲಿಲ್ಲ

ಮುಖ್ಯ ಮಂತ್ರಿಗಳು ಕುದುರೆ ಸವಾರಿಯನ್ನು ಒಂದು ವಾರದ ಹಿಂದೆ ಪುನಃ ಪ್ರಾರಂಭಿಸಿದರು. ಅವರೊಡನೆ ಗೃಹಮಂತ್ರಿ ಶ್ರೀ. ಜೆ. ಪೊನ್ನಂಬಲಂ ಹಾಗೂ ಪೋಲಿಸ ಐ ಜಿ ಸರ್ ರಿಚಾರ್ಡ ಅಲವಿಹಾರೆ ಅವರು ಕುದುರೆ ಸವಾರಿ ಮಾಡುತ್ತಿದ್ದರು.

ಅನಂತರ ಕುದುರೆಯು ಒಮ್ಮೆಲೆ ಬೆಚ್ಚಿಬಿದ್ದು ಅವರನ್ನು ಕೆಳಗೆ ಒಗೆಯಿತು. ಪ್ರಧಾನರು ಆಸ್ಪತ್ರೆಯಲ್ಲಿ ಕಾ ೨೨ ರಲ್ಲಿ ನಿಧನರಾದರು.

ವೀಳ್ಯದೆಲೆಯಿಂದ ಕಲಿಯುವ ಪಾಠ.

ತಿರುಪತಿಯ ಸನ್ನಿಧಿ ರಸ್ತೆಯಲ್ಲಿ ಗೀತಾ ಸಂಘದ ಉದ್ಘಾಟನೆಯು ಮುಂಬಯಿಯ ಕುಮಾರಿ ವಿವ ಲಾ ಎಂಬವರಿಂದ ನಡೆಯಿತು. 'ಬ್ರಾಹ್ಮಣ' ಎಂಬ ವಿಷಯದ ಮೇಲೆ ಕುಮಾರಿ ವಿಮಲಾ ಬೋಧಪ್ರದವಾದ ಭಾಷಣ ಮಾಡಿದರು. ಶುಭ ಸಮಾರಂಭಗಳಲ್ಲಿ ಸಮಾರಂಭ ಮುಕ್ತಾಯವಾಗುವಾಗ 'ಪಾನ್ ಸುಪಾರಿ' ಹಂಚುವ ವೈಶಿಷ್ಟ್ಯವೇನು ಎಂಬುದರ ಕುರಿತು ಮಾತನಾಡುತ್ತ, 'ವೀಳ್ಯದೆಲೆಯು ಪ್ರತಿಯೊಂದು ನರವು ಒಂದೇ ಹಾದಿಯಲ್ಲಿ ಬಂದು ಸೇರುತ್ತದೆ ಅದರಂತೆ ಬೇರೆ ಬೇರೆ ಜಾತಿ, ಮತ, ಧರ್ಮಗಳ ಜನರು, 'ಬ್ರಹ್ಮ'ನಲ್ಲಿ ಲೀನರಾಗುತ್ತಾರೆ' ಎಂದರು.

ಭಾರತದಲ್ಲಾದ ವಿಮಾನಾಪಘಾತಗಳೆಷ್ಟು?

ಭಾರತದ ನಾಗರಿಕ ವಿಮಾನ ಸಾರಿಗೆಯ ೧೯೫೧ನೇ ವರ್ಷದ ವರದಿ ಈಗ ಪ್ರಕಟಗೊಂಡಿದೆ. ಆಗಿನ ವರ್ಷದಲ್ಲಿ ಒಟ್ಟಿಗೆ ೮೩ ವಿಮಾನಾಪಘಾತಗಳು ನಡೆದಿದ್ದು ಇವರಿಂದಾಗಿ ೨೪ ಜನರು ಸಾವಿಗೆ ತುತ್ತಾಗಿರುವರು. ೨೯ ವಿಮಾನಗಳು ಸಂಪೂರ್ಣ ನಾಶಗೊಂಡಿವೆ. ನಾಗರಿಕ ವಿಮಾನ ಸಾರಿಗೆ ಸೌಲಭ್ಯ ವಿಸ್ತರಣೆಗೆ ೧೯೫೩-೫೪ರಲ್ಲಿ ೧೮೫೦೦೦೦೦ ರೂ. ವೆಚ್ಚ ಮಾಡಬೇಕೆಂದು ಮುಂಗಡ ಪತ್ರದಲ್ಲಿ ಸೂಚಿಸಲಾಗಿದೆ. ಗತವರ್ಷದಲ್ಲಿ ಮಂಗಳೂರು ವಿಮಾನ ನಿಲ್ದಾಣವನ್ನೊಳಗೊಂಡು ಒಟ್ಟು ಆರು ವಿಮಾನ ನಿಲ್ದಾಣಗಳು ತೆರೆಯಲ್ಪಟ್ಟಿವೆ. ಹಾಳವಾಣಿ, ಹುಬ್ಬಳ್ಳಿ ಮತ್ತು ಧರ್ಮ ನಗರಗಳಲ್ಲಿ ವಿಮಾನ ನಿಲ್ದಾಣವನ್ನು ತೆರೆಯುವದರ ಸಲುವಾಗಿ ಮುಂಗಡದಲ್ಲಿ ಹಣವನ್ನು ತೆಗೆದಿಡಲಾಗಿದೆ

ಭಾರತದಲ್ಲಿ ಡಿ. ಡಿ. ಟಿ. ಕಾರಖಾನೆ.

ಭಾರತದಲ್ಲಿ ಆರೋಗ್ಯ ಸಂಸ್ಥೆ, ಯು. ಎನ್. ಸಂಘದ ಅಂತರಾಷ್ಟ್ರೀಯ ಚಿಕ್ಕಮಕ್ಕಳ ನಿಧಿ ಮತ್ತು ಆಯಾ ಸರಕಾರಗಳ ಸಂಯುಕ್ತ ಪ್ರಯತ್ನದಿಂದ ಸಿಲೋನ, ಪಾಕಿಸ್ತಾನ, ಇಜಿಪ್ತ ಮತ್ತು ಭಾರತಗಳಲ್ಲಿ ಒಂದೊಂದು ಡಿ ಡಿ. ಟಿ. ಕಾರಖಾನೆಗಳನ್ನು ಪ್ರಾರಂಭಿಸಲಿದ್ದು ಭಾರತದಲ್ಲಿ ಪ್ರಾರಂಭಿಸುವ ಬಗ್ಗೆ ಈಗಾಗಲೇ ಮಾತುಕತೆ ಪ್ರಾರಂಭವಾಗಿವೆಯೆಂದು ತಿಳಿಯುತ್ತದೆ. ಬಹುಶಃ ಈ ಕಾರಖಾನೆಯು ಮುಂಬಯಿಯಲ್ಲಿ ಸ್ಥಾಪನೆಯಾಗಲಿರುವದು. ಭಾರತವು ಆರೋಗ್ಯ ಸಂಸ್ಥೆಯಿಂದ ಪ್ರತಿ ವರ್ಷ ೭೦೦ ಟನ್ ಡಿ ಡಿ. ಟಿ. ಯನ್ನು ಪಡೆಯುತ್ತದೆ ಭಾರತದಲ್ಲಿ ಈ ಕಾರಖಾನೆಯ ಸ್ಥಾಪನೆಯಾದ ನಂತರ ಇಷ್ಟನ್ನು ಆ ಕಾರಖಾನೆಯಿಂದ ಉತ್ಪಾದಿಸಬಹುದು. ಇದಕ್ಕೆ ಬೇಕಾಗುವ ಬೆಂಜೀನ್, ಕ್ಲೋರಿನ್ ಮತ್ತು ಗಂಧಕಗಳು ಭಾರತದಲ್ಲಿ ದೊರೆಯುತ್ತಿದ್ದು ಗಂಧಕಾಮ್ಲವನ್ನು ಮಾತ್ರ ವಿದೇಶದಿಂದ ತರಿಸಿಕೊಳ್ಳಬೇಕಾಗುವದು.

ಜಾಗತಿಕ ಕಥಾ ಸ್ಪರ್ಧೆಯಲ್ಲಿ ಭಾರತಕ್ಕೆ ವಿಜಯ.

ಜಾಗತಿಕ ಕಥಾ ಸ್ಪರ್ಧೆಗೆ ಭಾರತದಿಂದ ಕಳಿಸಲ್ಪಟ್ಟ ಎರಡು ಕತೆಗಳಲ್ಲಿ ಮದ್ರಾಸದ ಭೀಮಾವರ ಶ್ರೀ ಪಿ. ಪದ್ಮರಾಜು ಎಂಬವರ "ಕುಂಟೆಂಗಾಳ" ಎನ್ನುವ ಕತೆಗೆ ೮೦೦ ಡಾಲರುಗಳ ದ್ವಿತೀಯ ಬಹುಮಾನ ದೊರಕಿದೆ. ಶ್ರೀ ಪದ್ಮರಾಜು ಅವರು ಭೀಮಾವರಂ ಕಾಲೇಜಿನಲ್ಲಿ ರಸಾಯನ ಪ್ರಾಧ್ಯಾಪಕರಾಗಿರುವರು. ತಾವರ ವಯಸ್ಸು ೩೬. ಇದ್ದು ಕಥೆ, ನಾಟಕಗಳನ್ನು ಬರೆದು ಕೀರ್ತಿಗಳಿಸಿದ್ದಾರೆ.

ಭಾರತದಲ್ಲಿ ಜಪಾನೀ ಶಿಷ್ಯ ಮಂಡಳ.

ಜಪಾನೀ ಶಿಷ್ಯಮಂಡಳವೊಂದು ೫ ವಾರ ಭಾರತ ಸಂಚಾರ ಕೈಕೊಂಡಿದ್ದು ಭಾರತದ ಔದ್ಯೋಗೀಕರಣಕ್ಕೆ ಯಾವ ರೀತಿಯ ಸಹಾಯ ನೀಡಬಹುದೆಂದು ಪರ್ಯಾಲೋಚಿಸುತ್ತಿದೆ. ಭಾರತದ ಪಂಚ ವಾರ್ಷಿಕ ಯೋಜನೆಯು ಯಶಸ್ವಿಯಾಗುವದರಲ್ಲಿ ನಮಗೆ ಆಸ್ಥೆಯಿದೆಯೆಂದು ಈ ನಿಯೋಗದವರು ಹೇಳುವರು ಜಪಾನವು ಭಾರತಕ್ಕೆ ವಿದ್ಯುಚ್ಛಕ್ತಿ ಉತ್ಪಾದನೆಯ ಉಪಕರಣಗಳು, ರೋಲಿಂಗ್ ಸ್ಟಾಕ್ ಸಂಪರ್ಕ ಉಪಕರಣಗಳು ಒಕ್ಕಿಗಿರಣಿಯ ಯಂತ್ರಗಳು ಉಕ್ಕು ಮತ್ತು ಕಣಿಯ ಯಂತ್ರಗಳು, ರಸಾಯನಗಳು ಮೊದಲಾದವುಗಳನ್ನು ಕಳಿಸಲು ಸಿದ್ಧವಿದೆ.

ಹುಟ್ಟುವ ಮೊದಲೆ ಗಂಡೊ ಹೆಣ್ಣೊ ಹೇಳಲು ಸಾಧ್ಯ

ಹುಟ್ಟುವ ಮಗುವು ತಾಯಿಯ ಹೊಟ್ಟೆಯಲ್ಲಿರುವಾಗಲೇ ಅದು ಗಂಡೋ ಹೆಣ್ಣೋ ಎಂದು ಮುಂದಾಗಿ ಹೇಳುವುದು ವಿಶಿಷ್ಟ ಪರೀಕ್ಷಾ ಕ್ರಮದಿಂದ ಸಾಧ್ಯವಿದೆ ಎಂದು ಅಮೇರಿಕದ ವಿಜ್ಞಾನಿಗಳು ವರದಿ ಮಾಡಿರುತ್ತಾರೆ. ಸದರಿ ಶೋಧನೆಯಲ್ಲಿ ಶೇಕಡಾ ೯೫.೬ರಷ್ಟು ಜಯ ದೊರೆತಿರುವುದಾಗಿಯೂ ಅವರು ಹೇಳಿರುವರು.

ಗಂಡು ಶಿಶು ಹುಟ್ಟುವುದಿದ್ದರೆ ಗರ್ಭಿಣಿಯ ಮೂತ್ರದಲ್ಲಿ ಗಂಡಿನ 'Harmone'ಗೆ ಸಂಬಂಧಿಸಿದ ರಾಸಾಯನಿಕ ದ್ರವ್ಯವು ಕಂಡು ಬರುವುದು. ಅದು ತೋರಿಬಾರದಿದ್ದರೆ ಹೆಣ್ಣು ಮಗು ಹುಟ್ಟುವುದು ಮಿಂಚಿಗನ್ ಯೂನಿವರ್ಸಿಟಿಯ ವಿಜ್ಞಾನಿಗಳ ಸಂಘದ 'ಸಾಯನ್ಸ' ಪತ್ರಿಕೆಯಲ್ಲಿ ಈ ಸಂಶೋಧನದ ಕುರಿತು ವಿವರಗಳು ಕೊಡಲ್ಪಟ್ಟಿವೆ.

ದೆಲ್ಲಿಯಲ್ಲಿ ಶ್ರೀ ಮಿಸ್ತ್ರಿ

ಉತ್ತರ ಪ್ರದೇಶದ ಶಾಸನ ಸಭಾಧ್ಯಕ್ಷರ ಆಜ್ಞೆಯ ಮೇರೆಗೆ ಶಾಸನ ಸಭಾಹಕ್ಕಿನ ಸಮಿತಿಯ ಎದುರು ಹಾಜರಾಗಲು ತಪ್ಪಿದ ಬೋಂಬಾಯಿ 'ಬ್ಲಿಟ್ಜ್' ಪತ್ರಿಕೆಯ ಸಹ ಸಂಪಾದಕ ಶ್ರೀ ಎಚ್. ಡಿ. ಮಿಸ್ತ್ರಿಯವರ ಬಂಧನವಾಯಿತು.

ಅವರು ಈ ರೀತಿ ಹೇಳಿದರು, 'ಉತ್ತರ ಪ್ರದೇಶದ ಶಾಸನ ಸಭೆಯ ಹಕ್ಕುಚ್ಯುತಿಯಾಗಿದೆಯೆಂದು ಬ್ಲಿಟ್ಜ್ ಪತ್ರಿಕೆ ಹಲವು ಸಲ ಹೇಳಿದರೂ ನನಗೆ ತಿಳಿಸಿದರು. ಏಕೆಂದರೆ ರಾಜ್ಯಘಟನೆಯು ಮೇರೆಗೆ ಶಾಸನ ಸಭೆ ಇಲ್ಲವೇ ಅದರ ಅಧ್ಯಕ್ಷನಿಗೆ ಆ ಗೌರವವನ್ನುಂಟು ಮಾಡಿದಂತಹ ಕರೆಯೂ ಜ್ಞಾಪನವನ್ನು ಹೊರಡಿಸಲು ಇಲ್ಲವ ಆ ಬಗ್ಗೆ ಶಿಕ್ಷೆವಿಧಿಸಲು ಅವರಿಗೆ ಅಧಿಕಾರವಿಲ್ಲ ಆದ್ದರಿಂದ ಉತ್ತರ ಪ್ರದೇಶ ಶಾಸನ ಸಭೆಯಾಗಲೀ ಇಲ್ಲವೆ ಅದರ ಅಧ್ಯಕ್ಷರಾಗಲಿ ಅಂಥಾ ಅಧಿಕಾರವನ್ನು ಪಡೆಯಲಾರರು' ಎಂದರು.

ಬಿಸಿಲಿನ ಝಳ ತಡೆಯಲಾರದೆ ಹೋದರು!

ಕಲ್ಕತ್ತಾದಲ್ಲಿ ನಡೆಯುತ್ತಿರುವ ಎ. ಐ. ಸಿ. ಸಿ. ಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಪಂಡಿತ ನೆಹರೂರವರು ಧ್ವಜಾರೋಹಣವನ್ನು ನಡೆಸಿದ ನಲವತ್ತು ನಿಮಿಷಗಳ ಸಂಭ್ರಮದ ಕಾಲದಲ್ಲಿ ಬಿಸಿಲಿನ ಝಳ ತಡೆಯಲಾರದೆ ಸೇವಾ ದಳದ ಒಬ್ಬ ಹುಡುಗಿಯೂ, ಒಬ್ಬ ಹುಡುಗನೂ ಮೂರ್ಛೆ ಬಿದ್ದರು. ಅವರನ್ನು ಸ್ಟ್ರೆಚರಿನಲ್ಲಿ ಆಸ್ಪತ್ರೆಗೆ ಸಾಗಿಸಲಾಯಿತು.

ಅನೇಕ ವೃದ್ಧ ಕಾಂಗ್ರೆಸ್ ಮುಖಂಡರುಗಳೂ ಬಿಸಿಲಿನ ಬೇಗೆಯಿಂದ ಪರಿತಾಪಪಟ್ಟರು. ಉತ್ತರ ಪ್ರದೇಶದ ಮುಖ್ಯ ಮಂತ್ರಿ ಶ್ರೀ ಗೋವಿಂದವಲ್ಲಭಪಂತ್‌ರವರು ಭಾಷಣ ಮಾಡುತ್ತಿದ್ದ ನೆಹರೂರವರ ನೆರಳಿನಲ್ಲಿ ಧ್ವಜಸ್ತಂಭದ ಅಡಿಯಲ್ಲಿ ಆಶ್ರಯ ಪಡೆದರು. ಶ್ರೀ ಬಿ. ಜಿ. ಖೇರರು ಎ. ಐ. ಸಿ. ಸಿ. ಚಪ್ಪರದೊಳಗೆ ಧಾವಿಸಿ ಅಲ್ಲಿ ತಮ್ಮ ವಾಕಿಂಗ್ ಸ್ಟಿಕ್ ಊರಿಕೊಂಡು ನಿಂತು ಭಾಷಣ ಕೇಳಿದರು. ಡಾ. ಪಟ್ಟಾಭಿಸೀತಾರಾಮಯ್ಯನವರು ಮೊದಲು ಪೋಲೀಸ್ ಕಾನ್‌ಸ್ಟೇಬಲುಗಳ ಸಾಲಿನ ನೆರಳಿನಲ್ಲಿ ಆಸರೆ ಪಡೆದು ಅಲ್ಲೂ ಝಳ ತಡೆಯಲಾರದೆ ಕೊನೆಗೆ, ವರ್ಕಿಂಗ್ ಕಮಿಟಿ ಬಿಡಾರಕ್ಕೆ ಹೋಗಬೇಕಾಯಿತು. ಉಳಿದ ಅನೇಕರು ಕಂಗೆಟ್ಟು ತಮ್ಮ ಕರವಸ್ತ್ರಗಳಿಂದ ಒಂದೇ ಸಮನೆ ಮುಖವನ್ನು ಒರೆಸಿಕೊಳ್ಳುತ್ತಿದ್ದರು. ಈ ಮಧ್ಯೆ ನೆಹರೂರವರ ದರ್ಶನಕ್ಕಾಗಿ ನಡೆದ ನೂಕು ನುಗ್ಗಲಿನಲ್ಲಿ ಬೇರೆ ಒಬ್ಬ ಗಾಯಗೊಂಡು ಆಸ್ಪತ್ರೆಗೆ ದಾಖಲಾದನು.

ಮದ್ರಾಸಿನಲ್ಲಿ ಕಾಂಗ್ರೆಸ್ ಸರಕಾರ ?

ಮದ್ರಾಸಿನಲ್ಲಿ ಮಂತ್ರಿ ಮಂಡಳವನ್ನು ಸ್ಥಾಪಿಸುವ ಜವಾಬ್ದಾರಿಯನ್ನು ಮದ್ರಾಸು ಕಾಂಗ್ರೆಸ್ ಶಾಸನ ಸಭಾ ಪಕ್ಷವು ವಹಿಸಿಕೊಂಡಿದೆಯೆಂದು ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎನ್. ಸಂಜೀವರೆಡ್ಡಿಯವರು ತಿಳಿಯಪಡಿಸಿದರು.

೧೫೦ ಸದಸ್ಯರುಳ್ಳ ಮದ್ರಾಸು ಕಾಂಗ್ರೆಸ್ ಶಾಸನ ಸಭಾ ಪಕ್ಷವು ಕಾಂಗ್ರೆಸ್ ಪ್ರತಿಜ್ಞೆಗೆ ಅಂಕಿತ ಹಾಕಿದ ಇನ್ನಿತರ ಎಂಟು ಮಂದಿ ಸ್ವತಂತ್ರರೊಡನೆ ಕೂಡಿಕೊಂಡು ಮಂತ್ರಿ ಮಂಡಳವನ್ನು ರಚಿಸಿ ವಿಶ್ವಾಸ ಮತವನ್ನು ಕೇಳುವದೆಂದು ಅವರು ಮುಂದುವರಿಯುತ್ತಾ ನುಡಿದರು. ಕಾಂಗ್ರೆಸ್ ಪಕ್ಷವು ಸಮ್ಮಿಶ್ರ ಸರಕಾರವನ್ನು ರಚಿಸಲು ಒಪ್ಪುವುದಿಲ್ಲ. ಕಾಂಗ್ರೆಸ್ ಮಂತ್ರಿ ಮಂಡಳದ ಮೇಲೆ ಹೊಸ ಶಾಸನ ಸಭೆಯ ಸದಸ್ಯರು ಅವಿಶ್ವಾಸವನ್ನು ಸೂಚಿಸಿದರೆ ಕಾಂಗ್ರೆಸ್ ವಿರೋಧಿ ಪಕ್ಷವಾಗಿ ನಿಲ್ಲಲು ಸಿದ್ಧವಿದೆಯೆಂದು ಗೊತ್ತಾಗಿದೆ.

ಶಾಸನ ಸಭೆಯ ಹೆಚ್ಚಿನ ಸದಸ್ಯರು ಕಾಂಗ್ರೆಸನ್ನು ಕೂಡಿಕೊಂಡು ಕಾಂಗ್ರೆಸ್ ಮಂತ್ರಿ ಮಂಡಳವನ್ನು ಸ್ಥಾಪಿಸುವ ಕಾರ್ಯದಲ್ಲಿ ಬೆಂಬಲವನ್ನು ಕೊಡುವರೆಂದು ಆಶೆಯನ್ನು ಶ್ರೀ ಸಂಜೀವ ರೆಡ್ಡಿಯವರು ವ್ಯಕ್ತಪಡಿಸಿದರು.

ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಧುರೀಣನನ್ನು ಚುನಾಯಿಸುವುದಾಗಿ ಇದೇ ೩೧ನೇ ತಾರೀಕಿನಂದು ಅಧಿವೇಶನ ಸೇರಲಾಗುವದೆಂದು ಶ್ರೀ ರೆಡ್ಡಿಯವರು ಮುಂದುವರಿಯುತ್ತಾ ಹೇಳಿದರು.

ವರ್ಣದ್ವೇಷ ಧ್ಯೇಯಕ್ಕೆ ಬಲವಾದ ಪೆಟ್ಟು.

ವರ್ಣ ಜನಾಂಗಗಳ ಪ್ರತ್ಯೇಕ ಮತದಾರಪಟ್ಟಿ ಇರಬೇಕೆನ್ನುವ ಕಾಯಿದೆಯನ್ನು ಪರಮೋಚ್ಚ ನ್ಯಾಯಾಲಯವು ಅಕ್ರಮವೆಂದು ಸಾರಿದುದರಿಂದ ಸ್ವೀಕರಿಸಲು ಅಸಾಧ್ಯವಾದಂಥಾ ಘಟನಾತ್ಮಕ ಪರಿಸ್ಥಿತಿಯು ಉದ್ಭವಿಸಿದೆಯೆಂದು ದಕ್ಷಿಣ ಆಫ್ರಿಕದ ಮುಖ್ಯ ಮಂತ್ರಿ ಡಾ. ಮಾಲನ್ನರು ಅಸೆಂಬ್ಲಿಯಲ್ಲಿ ಹೇಳಿದರು.

ಮುಂದುವರಿಯುತ್ತಾ ಅವರಿನ್ನೂ ಹೇಳಿದುದೇನೆಂದರೆ 'ನ್ಯಾಯಾಲಯವು ಕೊಟ್ಟ ತೀರ್ಪು ೧೯೫೧ರಲ್ಲಿ ಅದು ಕೊಟ್ಟ ತೀರ್ಪಿನ ವಿರುದ್ಧವಿದೆ. ಆದುದರಿಂದ ಸ್ವೀಕರಿಸಲಸಾಧ್ಯವಾದಂಥಾ ಘಟನಾತ್ಮಕ ಬಿಕ್ಕಟ್ಟು ಉದ್ಭವಿಸಿದೆ.

ಕಾಯ್ದೆಬದ್ಧವಾಗಿ ಮತ್ತು ಪ್ರಜಾಸತ್ತಾತ್ಮಕ ರೀತಿಯಿಂದ ಚುನಾಯಿತರಾದ ಜನತಾ ಪ್ರತಿನಿಧಿಗಳ ಶಾಸನಾಧಿಕಾರವನ್ನು ತಿರಸ್ಕರಿಸುವ ಯಾವುದೇ ಪರಿಸ್ಥಿತಿಯನ್ನು ದ. ಆಫ್ರಿಕದ ಪಾರ್ಲಿಮೆಂಟಾಗಲೀ ಅಥವಾ ಜನತೆಯಾಗಲೀ ಒಪ್ಪಲು ಸಾಧ್ಯವಿಲ್ಲ. ಅದರಲ್ಲಿಯೂ ಜನತಾ ಪ್ರತಿನಿಧಿಗಳ ಶಾಸನ ಮಾಡುವ ಅಧಿಕಾರದ ಮೇಲೆ ನ್ಯಾಯ ಮಂಡಳದವರು ತೀರ್ಪನ್ನು ಕೊಡುವುದನ್ನು ಒಪ್ಪಲು ಸಾಧ್ಯವಿಲ್ಲ ಎಂದಿರುವರು.

ವರ್ಣ ಜನಾಂಗಗಳ ಮತದಾರರನ್ನು ಪ್ರತ್ಯೇಕ ದಾಖಲಾ ಯಾದಿಯಲ್ಲಿಡುವ ಕಾಯಿದೆಯು ಅಕ್ರಮವೆಂದು ದ. ಆಫ್ರಿಕದ ಅತಿ ದೊಡ್ಡ ನ್ಯಾಯಾಲಯವಾದ ಪರಿಷ್ಠ ನ್ಯಾಯಾಲಯವು ತೀರ್ಪು ಕೊಟ್ಟಿತು. ಈ ತೀರ್ಪು ಹೊರಬಿದ್ದ ಕೆಲವು ನಿಮಿಷಗಳಲ್ಲಿಯೇ ಡಾ. ಮಾಲನ್ನರು ತಮ್ಮ ಮಂತ್ರಿ ಮಂಡಲದ ಸಭೆಯನ್ನು ಕರೆದರು. ನ್ಯಾಯಾಲಯದ ತೀರ್ಪಿನ ಪ್ರಕಾರ ಸರಕಾರವು ಒಮ್ಮೆಲೇ ರಾಜಿನಾಮೆ ಕೊಡಬೇಕೆಂದು ವಿರೋಧಿ ಪಕ್ಷದ ಧುರೀಣರಾದ ಜೆ. ಜಿ. ಎನ್. ಸ್ಟ್ರಾಸರು ಸಾರಿದರು. ಪರಿಷ್ಠ ನ್ಯಾಯಾಲಯದ ತೀರ್ಪನ್ನು ಓದಿದ ಕೂಡಲೇ ಜೋಹಾನ್ಸ್‌ಬರ್ಗಿನ ಆಫ್ರಿಕನರು ಆನಂದದಿಂದ ನಲಿದಾಡತೊಡಗಿ ವೃತ್ತಪತ್ರಿಕೆಗಳನ್ನು ಬಾನಿಗೆಸೆದರು. ದಿ ರಾಂಡ್ ಡೇಲಿ ಮೇಲ ಪತ್ರಿಕೆಯು 'ಕಾಯಿದೆಯ ಅಕ್ರಮ' ಎಂಬ ಶಿರೋನಾಮೆಯೊಡನೆ ಐದು ಜನ ನ್ಯಾಯಾಧೀಶರ ಭಾವ ಚಿತ್ರಗಳನ್ನು ಕೊಟ್ಟು ವಿಶೇಷ ಸಂಚಿಕೆಯನ್ನು ಹೊರಡಿಸಿದೆ.

ಐಕಮತ್ಯವಿಲ್ಲದಿದ್ದರೆ ವಿನಾಶ ಖಂಡಿತ.

ದೇಶ ಬಲಿಷ್ಠವಾಗಬೇಕಾದರೆ ಐಕ್ಯಮತ್ಯ ಅಗತ್ಯ. ಇಲ್ಲದಿದ್ದರೆ ದೇಶ ಹರಿದು ಹಂಚಿಹೋಗಿ ನಾಶವಾಗುವುದು ಎಂಬುದಾಗಿ ಕಾಂಗ್ರೆಸ್ ಅಧ್ಯಕ್ಷ ಪಂಡಿತ ನೆಹರೂ ಎ. ಐ. ಸಿ. ಸಿ. ಧ್ವಜಾರೋಹಣ ಸಂದರ್ಭದಲ್ಲಿ ತಿಳಿಸಿದರು.

ಮುಂದರಿಯುತ್ತಾ ಅವರು ದೇಶದ ಶಕ್ತಿ, ಚೈತನ್ಯಗಳೆಲ್ಲಾ ಪರಸ್ಪರ ಜಗಳದಲ್ಲೇ ದುರ್ವಿನಿಯೋಗವಾದರೆ, ರಚನಾತ್ಮಕ ಕಾರ್ಯವೇನನ್ನೂ ಸಾಧಿಸಲಾಗದೆಂದೂ, ಜನರು ಐಕ್ಯವಾಗದಿದ್ದರೆ ಕಷ್ಟಾರ್ಜಿತ ಸ್ವಾತಂತ್ರ್ಯಕ್ಕೆ ವಿಪತ್ತು ಬರುವುದೆಂದು ಎಚ್ಚರಿಸಿದರು. ಆದುದರಿಂದ ಅನೈಕ್ಯತೆಗೆ ಕಾರಣವಾಗಬಹುದಾದಂಥಾ ಮಾತನ್ನೆಲ್ಲ ಕಿವಿಗಳಿಕ್ಕದೆ ದೂರವಾಗಿಡಬೇಕೆಂದು ನೆಹರೂ ತಿಳಿಸಿದರು. 'ಜನತೆಯ ಭಾವನೆ ಸಂಕುಚಿತವಾಗಿರದೆ, ಪ್ರಾಂತೀಯ ಗಡಿಗಳನ್ನು ಮೀರಿ ಮೇಲೆ ಹೋಗಬೇಕು. ಇಡೀ ಭಾರತ ತಮ್ಮ ಮಾತೃಭೂಮಿ ಯೆಂದು ಅರಿಯಬೇಕು' ಎಂದೂ ನೆಹರೂ ತಿಳಿಸಿದರು.

ಜನರು ಕೋಮುವಾರು ಮತ್ತು ಜಾತೀಯ ಭಾವನೆ ಮತ್ತು ಅವರ ದುಷ್ಪರಿಣಾಮಗಳ ವಿರುದ್ಧ ಹೋರಾಟ ನಡೆಸಬೇಕೆಂದು ಹೇಳಿದರು. ಜನತೆಯಲ್ಲಿ ಒಡಕು ಉಂಟಾದರೆ, ದೇಶ ದುರ್ಬಲಗೊಂಡು ಯಾವ ಮಹೋತ್ಸಾಧನೆಯೂ ಅದರಿಂದಾಗದೆಂದು ತಿಳಿಸಿದರು.

ಕೋಮುವಾರು ಭಾವನೆಯಿಂದ ಜನತೆಗೆ ಹಿಂದೆ ಹೆಚ್ಚು ಕಷ್ಟ ಒದಗಿದ್ದುದಾಗಿಯೂ ಈಚೆಗೆ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಕೂಡ ಕೋಮುವಾರು ಘೋಷಣೆಗಳು ಕೇಳಿಬಂದವೆಂದೂ ಆದರೆ ಕೋಮುವಾರು ಪಕ್ಷಗಳಿಗೆ ಜನರ ವಿಶ್ವಾಸ ಗಳಿಸಲಾಗಲಿಲ್ಲವೆಂದೂ ನೆಹರೂ ತಿಳಿಸಿದರು.

ಜಗತ್ತಿನ ಇತಿಹಾಸದಲ್ಲೇ ಇದುವರೆಗೆ ಇಷ್ಟು ಭಾರಿ ಪ್ರಮಾಣದಲ್ಲಿ ನಡೆಯದಿದ್ದ ಈ ಚುನಾವಣೆಗಳು ಅತ್ಯಂತ ಯಶಸ್ವಿಯಾಗಿ ನಡೆದದ್ದರ ಬಗ್ಗೆ ನೆಹರೂ ತೃಪ್ತಿಯನ್ನು ವ್ಯಕ್ತಪಡಿಸಿದರು. ಈ ಪ್ರಜಾಸತ್ತಾತ್ಮಕ ಮಹಾ ಚುನಾವಣೆಗಳಲ್ಲಿ ಜನರು ಸ್ವತಂತ್ರರಾಗಿ ಯಾವ ನಿರ್ಬಂಧವೂ ಇಲ್ಲದೆ ತಮ್ಮ ಓಟಿನ ಹಕ್ಕನ್ನು ಚಲಾಯಿಸಲು ಅವಕಾಶ ಹೊಂದಿದ್ದರೆಂಬುದನ್ನು ಇಡೀ ಜಗತ್ತೇ ತಿಳಿದಿದೆಯೆಂದೂ ಅವರು ತಿಳಿಸಿದರು.

ಚುನಾವಣೆಯ ಬಗ್ಗೆ ಪ್ರಪಂಚವು ಮೆಚ್ಚಿಗೆ ತಿಳಿಯಪಡಿಸಿರುವುದರಿಂದ ಭಾರತ ಹೆಮ್ಮೆಪಡಬಹುದಾಗಿದೆಯೆಂದೂ ಅವರು ತಿಳಿಸಿದರು.

ಶಾಂತಿ ಸುಭದ್ರತೆಗಳಿಲ್ಲದೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲವೆಂದೂ ನೆಹರೂ ತಿಳಿದರು. ಕಾಂಗ್ರೆಸ್ಸಿನಲ್ಲಿದ್ದು ಅನಂತರ ಕಾಂಗ್ರೆಸ್ ಬಿಟ್ಟು ಹೋದವರೂ ಇತರ ಪಕ್ಷಗಳೂ ದೇಶದ ಅಭ್ಯುದಯದ ಕಾರ್ಯದಲ್ಲಿ ಸಹಕರಿಸಬೇಕೆಂದು ತಿಳಿಸಿದರು.

ಸ್ಥಳ ಬದಲಾವಣೆ

ವೀರಾಜಪೇಟೆಯ ಕೆಳಗೆ ಅಂಗಡಿ ಗೋಣಿಕೊಪ್ಪಲಿಗೆ ಹೋಗುವ ರಸ್ತೆ ಬಳಿ ಇದ್ದ ನಮ್ಮ ಮದ್ರಾಸ್ ಸ್ಟೋರ್ ಅಂಗಡಿಯನ್ನು ಗ್ರಾಹಕರ ಮತ್ತು ಸಾರ್ವಜನಿಕರ ಹಿತ ದೃಷ್ಟಿಯಿಂದ ಗಡಿಯಾರ ಕಂಬದ ಬಳಿ ಗಣಪತಿ ದೇವಸ್ಥಾನದ ಎದುರಿನ ಅಂಗಡಿಗೆ ಬದಲಾಯಿಸಿದ್ದೇವೆ. ಎಂದಿನಂತೆ ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಎಸ್. ಎ. ಮನ್ನಾ & ಬ್ರದರ್ಸ್
3–6 ವೀರಾಜಪೇಟೆ

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[illegible] (1921ರಲ್ಲಿ ಸ್ಥಾಪಿತವಾದ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಜಿಲ್ಲೆಯ ಸಹಕಾರ ಸಂಘಗಳಿಗೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಆಧಾರದ ಮೇಲೆ ಖಾಸ ಸಾಲ ಕೊಡಲಾಗುವುದು. ಚೆಕ್ ಮತ್ತು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಾಲಿನ ಸಾಲದ ಶಾಖೆಯ ಮೂಲಕ ದೀರ್ಘ ಕಾಲಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಪಿ. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Licence No. 60.
Licenced to Post without Prepayment

Reg. No. M. 1330.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦	ತಾರೀಖು ೪-೪-೧೯೫೨ನೇ ಶುಕ್ರವಾರ	ಸಂಚಿಕೆ ೪೩

ದುರ್ಬೀನು ನೋಟ.

ಬೇಸಿಗೆಯ ಬಿಸಿಲು ಹೆಚ್ಚಾಗುತ್ತಿದೆ. ಶೀತಲವೆನಿಸಿದ ಮಡಿಕೇರಿಯಲ್ಲೂ ಕಾವು ಹೆಚ್ಚಿದೆ. ಅಪರೂಪದ ಮರಗಳು ಹೊಸ ಎಲೆ ತಳೆದುಕೊಂಡಿವೆ. ಹೂ ಬಿಟ್ಟಿವೆ. ಅಲ್ಲಲ್ಲಿ ಕೋಗಿಲೆಯ ಸ್ವರವೂ ಕೇಳಿಬರುತ್ತಿದೆ. ವಸಂತ ಋತು ಪ್ರಾರಂಭವಾಗಿದೆ. ಕೋಗಿಲೆಯ ಕೂಗೂ, ಮರದ ಚಿಗುರು ಹೂವೂ ಮಾತ್ರ ಇದಕ್ಕೆ ಸಾಕ್ಷಿಯಲ್ಲ. ಮದುವೆಯ ಆಮಂತ್ರಣಗಳು ಒಂದೊಂದಾಗಿ ಬರತೊಡಗಿವೆ!

* * *

ಇದೊಂದು ಮದುವೆಯ ಕಾಲವೆಂದು ಕಾಣುತ್ತದೆ. ಯುವಕರು ಯುವತಿಯರು ವೈವಾಹಿಕ ವರ್ತಿಸುತ್ತಾರೆ. ಎಲ್ಲರ ಬಾಯಲ್ಲೂ ಮದುವೆಯ ಪ್ರಸ್ತಾಪವೇ ಬರುತ್ತದೆ. ಎಲ್ಲರಿಗೂ ಸಂತೋಷದ ಕಾಲ. ಚಿಕ್ಕ ಮಕ್ಕಳು ಮನೆಯಲ್ಲಿ ಮದುವೆ ಇದ್ದು ಆ ಸಮಯದಲ್ಲಿ ಸಂತೋಷಪಡಬಹುದೆಂದು ಕಾತರರಾಗಿದ್ದರೆ, ಯುವಕ ಯುವತಿಯರು ಗೆಳೆಯ ಗೆಳತಿಯರನ್ನು ಪಡೆಯುವ ಸವಿಗನಸು ಕಾಣುತ್ತಾರೆ. ತಾವು ಉಡಬೇಕಾದ ವಸ್ತ್ರ ಸಾಹಿತ್ಯಗಳ ವಿಚಾರದಲ್ಲೇ ತನ್ಮಯರಾಗುವವರೂ ಇದ್ದಾರೆ. ಮತ್ತೆ, ವಯಸ್ಸಾದವರು ಹರೆಯದವರ ಈ ಸುಖದೊಂದಿಗೆ ತಮ್ಮ ಹಿಂದಿನ ಜೀವನವನ್ನು ಸ್ಮರಿಸಿ ಮೈಮರೆಯುತ್ತಾರೆ. ಮದುವೆಯ ಈ ಸೀಜನ್ ಎಲ್ಲರೂ ಮೈಮರೆಯುವ ಸೀಜನ್!

* * *

ವರ್ಷ ಕಳೆದಂತೆ ದೇಶದ ವಾತಾವರಣ ಬದಲಾಗುತ್ತಿದೆ. ದಿನ ಕಳೆದಂತೆ ವಸ್ತುಗಳ ಬೆಲೆಯೂ ಬದಲಾಗುತ್ತಿದೆ. ನಿನ್ನೆ ಇದ್ದ ಪರಿಸ್ಥಿತಿ ಇಂದಿಲ್ಲ. ಇಂದಿದ್ದದ್ದು ನಾಳೆ ಇರಲಾರದು. ಅದರಂತೆ ಮದುವೆಯ ನಿಯಮಗಳಲ್ಲೂ ಬದಲಾವಣೆ ಆಗಿದೆ. ಹಿಂದಿನ ಜಾತಕ ಗೀತಕ ಮರೆತುಹೋಗಿದೆ. ದೇವರು ದಿಂಡರು ಹಿನ್ನೆಲೆಗೆ ಬಿದ್ದಿದ್ದಾರೆ. ಮದುವೆಯ ಸಂಪ್ರದಾಯವೂ ಬದಲಾಗಿದೆ. ಎಂಟು ದಿನಗಳ ಮದುವೆ ಎರಡು ದಿನಕ್ಕಿಳಿಯಿತು. ಈಗ ದಂಪತಿ ಮುಹೂರ್ತಕ್ಕೆ ಬಂದಿದೆ. ಕೆಲವೆಡೆ ರಿಜಿಸ್ಟ್ರೇಷನ್ ಮಟ್ಟಕ್ಕೆ ಇಳಿದಿದೆ. ಒಟ್ಟಾರೆ ಹುಡುಗ ಹುಡುಗಿ ಒಪ್ಪಿದರೆ ಸಾಕು!

* * *

ಆದರೂ ಇದೊಂದೇ ಸಾಲದು. ಇಂದಿನದು ವ್ಯಾಪಾರ ಯುಗ. ದುಡ್ಡು ಜಗತ್ತನ್ನು ಆಳುತ್ತಿರುವಾಗ ಮದುವೆಯ ಜಗತ್ತಿಗೂ ಅದರ ಪ್ರಭಾವ ಇದೆ. 'ಕುರೂಪಿಯಾದರೂ ಕನ್ಯೆ ಸಂಪನ್ನೆನಿಸುವೆ' ಎಂದು ಪುರಂದರದಾಸರು ಹಾಡಿದಂತೆ ದುಡ್ಡು ಅನೇಕ ಕುರೂಪಿಯರಿಗೆ ಸುಂದರಿಯರನ್ನು, ಉತ್ತಮ ಕುಲದವರನ್ನು ಧಾರೆ ಎರೆಸಿದ್ದರೆ ದುಡ್ಡೇ ಅನೇಕರನ್ನು ಕೈಬಿಡಿಸಿದೆ. ಆದ್ದರಿಂದ ಮದುವೆಯ ಚಂದ್ರ ದುಡ್ಡಿನ ಸೂರ್ಯನ ಸುತ್ತ ತಿರುಗುತ್ತಿದೆ!

* * *

ಹಿಂದೆ ವರನಿಗೆ ಬೇಕಾಗಿದ್ದ ಹೊಸ ಬಟ್ಟೆ, ಸೈಕಲ್, ರಿಸ್ಟ್‌ವಾಚ್ ಎಂಬ ಹುಡುಗರ ಭಾವನೆ ಇತ್ತು. ಈ ಹುಡುಗರು ಗಾಂಧಿಯುಗದ ಮದುವೆಯ ಬಳಿಕ ಹೊಸ ಬಟ್ಟೆ, ಆಟವಾಡಲು ಬಚ್ಚಗೆ ಹುಡುಗಿ ಎಂದು ತಿಳಿದುಕೊಂಡಿದ್ದರು. ಹುಡುಗಿಯರೂ ಕೂಡ ಒಡವೆಗಳ ತುಂಬ ಬಟ್ಟೆ, ಜೀವನಕ್ಕೆ ಇನ್ನೊಂದು ಮನೆ ಎಂದು ಭಾವಿಸಿದ್ದ ಕಾಲ. ಆದರೆ ಇಂದು ಹಾಗಲ್ಲ. ಮದುವೆಗೆ ಮುಂಚೆಯೇ ಯುವಕರು ಮದುವಣಿಗರಂತೆ ಶೃಂಗರಿಸಿಕೊಂಡು ಜೀವಿಸುತ್ತಾರೆ. ಹಾಗೆ ಯುವತಿಯರೂ ಮದುವಣಗಿತ್ತಿಯರಂತೆ ಪೋಷಾಕು ಧರಿಸಿರುತ್ತಾರೆ. ಆದ್ದರಿಂದ ಇಂದಿನ ಮದುವೆಗಳಲ್ಲಿ ಕಾರಿನ ಬಯಕೆ, ರೇಡಿಯೋದ ಆಸೆ ಇದೆಯಾದರೂ ಇಂದಿನದೇ ನಿಜವಾದ 'ಮದು-ವೆ'ಗಳು!

* * *

ಹಿಂದೂದೇಶದ ರಾಜ್ಯಘಟನೆಯಲ್ಲಿ ಗಂಡಸರೂ ಹೆಂಗಸರೂ ಸರಿಸಮಾನರೆಂದು ಸಾರಿ ಹೇಳಿದ್ದರ ಪ್ರಭಾವವು ಮದುವೆ ಕಟ್ಟೆಯಲ್ಲೂ ಕಾಣುತ್ತಿದೆ. ಮೊನ್ನೆ ಒಂದು ಮದುವೆಗೆ ಹೋಗಿದ್ದೆ. ಹಲವು ಯುವತಿಯರ ಕೈಗಳು ಗಂಡಸರ ಕೈಗಳಂತೆಯೇ ತೋರಿದವು; ಗಂಡಸರಂತೆ ಕೇವಲ ಕೈಗಡಿಯಾರ ಒಂದಲ್ಲ, ಹಲವು ಗಂಡಸರಂತೆ ಕೆಲವು ಯುವತಿಯರು ಬಲದ ಕೈಗೆ ಕಟ್ಟಿದ್ದರು! ಮದುವೆಯ ಪೀಳಿಗೆಯಾದ ಇಂದಿನ ಬಾಲಿಕೆಯರು ಹೆಚ್ಚಾಗಿ ಶಾಲ್ವಾರ್ ಪೈಜಾಮಾ ಧರಿಸಿದ್ದರು. ಎಲ್ಲರಿಗಿಂತಾ ಬಹುಶಃ ಮುಂದುವರಿದವಳೆಂದು ತೋರುತ್ತೆ. ಒಬ್ಬಾಕೆ ಗಂಡಸರಂತೆ ದೊಡ್ಡ ಕೈಗಡಿಯಾರವನ್ನೇ ಕಟ್ಟಿದ್ದಳು! ಹೆಂಗಸರು ಎತ್ತರ ಹಿಮ್ಮಡಿಯ ಪಾದರಕ್ಷೆ ಧರಿಸುವಂತೆ ಒಂದೆರಡು ಜನ 'ಫುಲ್ ಶರ್ಟ್' ಗಂಡಸರಂತೆ ಧರಿಸಿದ್ದರು! ಅಂತೂ ಯುಗ ಪರಿವರ್ತನೆಯಾಗುತ್ತಿದೆ.

* * *

ಮೊನ್ನೆ ಕೊಡಗು ಕೌನ್ಸಿಲ ಸಭೆಯ ಉದ್ಘಾಟನಾ ಸಮಾರಂಭಕ್ಕೆ ಹೆಂಗಸರು ಸ್ವೀಕಾರ ಸೇರಿ ಕೂಡಿಸಿದ್ದರು. ಕಲ್ಕತ್ತಾ ವಿಶ್ವವಿದ್ಯಾಲಯದ ವರ್ಷೋತ್ಸವದ ಜನಗೂ ಅದರಂತೆ ಎಷ್ಟರ ಮಟ್ಟಿಗೆ ಶಕ್ತಿಯಿದೆಯೋ ಎಂದು ಅನೇಕರ ಮನಸ್ಸು ಹೋಗಿ ಕುಳಿತುಕೊಂಡ ಆ ಕಥೆ ಜನ್ಮಸಕ್ಕೆ ಬಂತು. ನಮ್ಮ ಕೊಡಗಿನ ಅಮ್ಮಮಂದಿ ಸಾಗಲು ಇನ್ನೂ ಹಲವು ಹೆಜ್ಜೆಗಳ ಅಂತರವಿದೆಯಾದರೂ ಹೆಂಗಸರೂ ಗಂಡಸರೂ ಸಮಾನತೆಯಲ್ಲಿ ಸಿಕ್ಕಿ ಸಿಕ್ಕಿದಲ್ಲಿ ಕಾಣುತ್ತಿದ್ದರೆ ಗೃಹಮಂತ್ರಿ ಕಾಟ್ಜುರವರ ಉದ್ಘಾಟನಾ ಭಾಷಣ ಯಾರಿಗೆ ಕೇಳಿಸುತ್ತಿತ್ತೋ ದೇವರೇ ಬಲ್ಲ!

* * *

ಮದುವೆಗೆ ಹುಡುಗಿಯನ್ನು ನೋಡ ಹೊರಟದ್ದು ತಿಂಗಳ ಹಿಂದೆ ಇತ್ತು. ಇಂದೂ ಅಲ್ಲಲ್ಲಿ ಇದೆ. ಆದರೆ ನಗರ ರಾಜ್ಯಘಟನೆಗಳಲ್ಲಿ ಈಚೀಚೆಗೆ ಹುಡುಗರಂತೆ ಹುಡುಗಿಯರ ಸಖ್ಯ ಪಡೆದು ಹುಡುಗಿಯರು ಹುಡುಗನನ್ನು ನೋಡಲು ಬರುವ ಸ್ವಾರಸ್ಯ ಕತೆಗಳು ನಗರಗಳಲ್ಲಿ ಒಂದೆರಡು ನಡೆದಿವೆ. ಮುಂದೆ ಇಂಥ ಸನ್ನಿವೇಶಗಳು ಹೆಚ್ಚುವ ಚಿಹ್ನೆಯೂ ಇದೆ.

* * *

ಹುಡುಗಿಯರ ಪಾಲಿಗೆ ಇದು ಸುಗ್ಗಿ ಕಾಲ. ಕಚೇರಿಗಳ ನೌಕರಿಗೆ ಹುಡುಗರಿಗೇನು ಕಡಿಮೆಯಿಲ್ಲ ಎನಿಸಿದರೂ ತ ಕಷ್ಟ ಎಲ್ಲರಿಗೂ ಗೊತ್ತು. ಆದರೆ ಮೊನ್ನೆ ಬೆಸ್ತರ ದೇವರ ಮುಂದೆ ವರ್ತಕ ಆಫೀಸಿನಲ್ಲಿ ಆದ ಕೆಲಸದ ಸಂದರ್ಶನಕ್ಕೆ ಬಂದಿದೆ. ಸ್ತ್ರೀಯರು ಅವರ ಸಂಖ್ಯೆ ಇಳಿಸುವ ಯೋಗವು ಬಂದಿದೆ! ಆಹಾ! ಅವರಿಗೇನು ಗೊತ್ತು. ಇಬ್ಬರು ಹೋದರೆ ನಾಲ್ಕು ಜನರು ಬರಲು ತಯಾರಾದರೆಂದು! ಗಂಡಸರೊಡನೆ ಸ್ಪರ್ಧೆಗೆ ಹೊರಟ ಈ ವರ್ಗ ಅಲ್ಲಲ್ಲಿ ಬೇರು ಬಿಟ್ಟು ಬೆಳೆಯುವುದರಲ್ಲಿದೆ.

——— ರಸಿಕ

ಗಾಜಿನ ಮೋಟಾರ್‌ಕಾರು.

ಹೊಸ ಶೋಧನೆಗಳಲ್ಲಿ ಮುಂದಾಗಿ ಇರುವ ಅಮೆರಿಕಾ ದೇಶದಲ್ಲಿ ಅನೇಕ ಅದ್ಭುತಗಳಿಲ್ಲ. ಈಚೆಗಿನ ವೈಜ್ಞಾನಿಕ ಶೋಧವೆಂದರೆ ಸಂಪೂರ್ಣ ಗಾಜಿನ ಅವಯವಗಳ ಮೋಟಾರ್ ಕಾರುಗಳು. ಗಾಜಿನ ಮಾದರಿ ಕಟ್ಟಡದ ಬಂದಿರುವಂತೆಯೂ ಹೆಚ್ಚಿಗೆ ಬಳಕೆ ಬರುವ ರೀತಿ ಮಾತ್ರವಲ್ಲ ಕಣ್ಣು ಹಿಡಿಯುವಷ್ಟೇನು ಜೋರಾಗಿಯೂ ಇಲ್ಲ.

ವಧುವಿನ ವಿವಾಹ ಮುಂದೂಡಿಸಿನೊಡನೆ.

ಇತ್ತೀಚೆಗೆ ಪೂರ್ವ ಪಂಜಾಬದ ಫಿರೋಜ್‌ಪುರ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಕಾರ್ಯಕರ್ತನೊಬ್ಬನ ವಿವಾಹ ನಡೆದ ಕಥೆ ಅತ್ಯಂತ ಸ್ವಾರಸ್ಯ ಪೂರ್ಣವಿದೆ. ಪೋಲೀಸರವರು ಕಣ್ಣು ತಪ್ಪಿಸಿ ಭೂಗರ್ಭದಲ್ಲಿ ಅಡಗಿರುವ ಕಮ್ಯೂನಿಸ್ಟ್ ಕಾರ್ಯಕರ್ತನೊಬ್ಬನ ವಿವಾಹ ನಿಶ್ಚಯವಾಗಿತ್ತು. ಜಗಳ ಗಟ್ಟಿನಲ್ಲಿ ಈ ಲಗ್ನ ನಡೆಸುವ ನಿಶ್ಚಿತ ನಡೆದಿದ್ದರೂ ಹೇಗೋ ಸುದ್ದಿ ಪೋಲೀಸರ ಕಿವಿಗೆ ಮುಟ್ಟಿತು. ಪೋಲೀಸರು ಮದುವೆಯ ಚಪ್ಪರವನ್ನು ಮುತ್ತಿದರು. ಎಂಬುದು ವಿವಾಹದಾಗಲಿರುವ ಕಮ್ಯೂನಿಸ್ಟ್ ವರನಿಗೂ ತಿಳಿಯಿತು. ಪೋಲೀಸರು ವಶಪಡಿಸುವ ಅಪಾಯ ಸಂಭವವಿರುವುದರಿಂದ ಆತ ಒಂದು ಹೊಸ ತಂತ್ರ ಹೂಡಿಬಿಟ್ಟ. ಮದುವೆಯ ಮಂಟಪಕ್ಕೆ ತನ್ನ ಪ್ರತಿನಿಧಿಯಾಗಿ ಮದುವೆಯ ಖಡ್ಗ ಕಳಿಸಿಕೊಟ್ಟ. ಹೀಗೆ ವರನಿಲ್ಲದೆ ವಧುವಿನ ಲಗ್ನ, ಖಡ್ಗದೊಡನೆ ವಿಧಿಪ್ರಕಾರ ನಡೆದುಹೋಯಿತು.

THE JUBILEE INSURANCE CO., LTD.

One of the very few in the feild of Insurance that has been declaring BONUS to its policy holders from its very insception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmond Road, Bangalore.

Our Chief Agents:-THE ORIENTAL ENTERPRISES, BANGALORE 1

ಜುಬಿಲಿ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮಾದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:-ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,
41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

ಶ್ರೀ ರಾಜುರವರಿಗೆ ೨ ವರ್ಷಗಳ ಸಾದಾ ಶಿಕ್ಷೆ.

ಜಸ್ಟೀಸ್ ವೇದಪ್ಪನವರಿಗೆ ವಿಷ ಪ್ರಾಶನ ಪ್ರಯತ್ನದ ಮೊಕದ್ದಮೆಯಲ್ಲಿ ಶ್ರೀ ಎಲ್. ಎಸ್. ರಾಜುರವರಿಗೆ ಎರಡು ವರ್ಷಗಳ ಸಾದಾ ಸಜಾ ಮತ್ತು ೨೦೦೦ ರೂಪಾಯಿ ಜುಲ್ಮಾನೆ ತಪ್ಪಿದರೆ ಮತ್ತೆ ಒಂದು ವರ್ಷ ಸಾದಾ ಶಿಕ್ಷೆ ವಿಧಿಸಲಾಗಿದೆ.

ಮೂರನೇ ಆಪಾದಿತರಾದ ಶ್ರೀ ದಾಸಪ್ಪ ನಾಯುಡು ಮತ್ತು ನಾಲ್ಕನೇ ಆಪಾದಿತಳಾದ ಮಿಸೆಸ್ ಆಗ್ನೆಸಳಿಗೆ ಎರಡು ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ.

ತೀರ್ಪಿನ ಪ್ರಾರಂಭದಲ್ಲಿ ಜಡ್ಜರು ಶ್ರೀ ಪಿ. ವೇದಪ್ಪನವರ ಮನೆಯ ಆಳುಗಳಾದ ಲಕ್ಕ, ಗಂಗ ಮತ್ತು ಲಿಂಗ ಇವರ ಸಾಕ್ಷ್ಯಗಳನ್ನು ಪ್ರಸ್ತಾಪಿಸಿದರು. ೧೯೫೧ ಜನವರಿ ೨೯ನೇ ತಾ. ಶ್ರೀ ಪಿ. ವೇದಪ್ಪನವರಿಗಾಗಿ ಟೀ ಮಾಡಲು ನೀರು ಕಟ್ಟಿದ್ದಾಗ ನಡೆದ ಘಟನೆಗಳ ಬಗ್ಗೆ ಅವರು ಹೇಳಿರುವುದನ್ನೂ, ಆ ಘಟನೆಗಳ ಸಂಬಂಧದಲ್ಲಿ ಶ್ರೀ ವೇದಪ್ಪನವರು ಕೊಟ್ಟಿರುವ ದೂರನ್ನೂ ಚರ್ಚಿಸಿದರು. ಶ್ರೀ ಪಿ. ವೇದಪ್ಪನವರು ಕೊಟ್ಟಿರುವ ದೂರಿನಲ್ಲಿ ಯಾರ ಮೇಲಾದರೂ ಸಂಶಯವನ್ನು ವ್ಯಕ್ತಪಡಿಸಿದ್ದಾರೆಂಬ ಸೂಚನೆಯೇ ಕಾಣಬರುವುದಿಲ್ಲವೆಂದೂ ಜಡ್ಜರು ಹೇಳಿದರು. ಚೀಫ್ ಜಸ್ಟೀಸರು ತಾವಾಗಿಯೇ ಕತೆಯೊಂದನ್ನು ಕಲ್ಪಿಸಿಕೊಂಡು ಪೋಲೀಸ್ ಮತ್ತು ತಮ್ಮ ಜವಾನರ ಮೇಲೆ ಹೊರಿಸುವಷ್ಟು ಹೀನಸ್ಥಿತಿಗೆ ಇಳಿಯುವರೆಂದು ಯಾರೇ ಆಗಲಿ ಭಾವಿಸಲು ಸಾಧ್ಯವೇ ಇಲ್ಲವೆಂದು ಹೇಳಿದರು. ಮೊಕದ್ದಮೆಯು ಕಟ್ಟುಕತೆ ಎಂಬ ವಾದವನ್ನು ಅಲ್ಲಗಳೆದರು.

ಅನಂತರ, ಟೀಗಾಗಿ ಉಪಯೋಗಿಸಲಾಗಿದ್ದ ಹಿತ್ತಾಳೆ ಅಳತೆ ಪಾತ್ರೆಯಲ್ಲಿ ಕಂಡುಬಂದಿದ್ದ ಬಿಳಿಯ ಪುಡಿಯ ಬಗ್ಗೆ ರಸಾಯನಿಕ ತಜ್ಞರು ಮಾಡಿರುವ ಪರೀಕ್ಷೆಗಳ ಸಂಬಂಧವಾಗಿ ಬಂದಿರುವ ಸಾಕ್ಷ್ಯಗಳನ್ನು ಪ್ರಸ್ತಾಪಿಸಿದರು. ಆ ಪುಡಿಯು ಮರ್ಕ್ಯುರಿಕ್ ಕ್ಲೋರೈಡಿನದೇ ಎಂಬುದಕ್ಕೂ, ಆ ಪದಾರ್ಥವು ಕೊಲ್ಲುವಂತಹ ವಿಷ ಎಂಬುದಕ್ಕೂ ಯಾವ ಸಂಶಯವೇ ಇಲ್ಲವೆಂದೂ ಹೇಳಿದರು. ಅಪ್ರೂವರ್ ನಾರಾಯಣ ಪ್ರಸಾದರ ಮನೆಯಲ್ಲಿ ಮರ್ಕ್ಯುರಿಕ್ ಕ್ಲೋರೈಡ್ ಶೀಸೆ ದೊರಕಿದುದಕ್ಕೂ, ಆ ಬಗ್ಗೆ ಅಪ್ರೂವರ್ ಹೇಳಿರುವುದಕ್ಕೂ ಎಗ್ನೇಸ್‌ಳಿಗೆ ಅಪ್ರೂವರ್ ಮರ್ಕ್ಯುರಿಕ್ ಕ್ಲೋರೈಡ್ ಪುಡಿಯನ್ನು ಕೊಟ್ಟನೆಂಬ ವಿಷಯಕ್ಕೂ ಪರಸ್ಪರ ಸಮರ್ಥನೆ ಇದೆಯೆಂದೂ ಜಡ್ಜರು ಹೇಳಿ, ಶ್ರೀ ವೇದಪ್ಪನವರ ಟೀ ಪಾತ್ರೆಗೆ ಆ ಪುಡಿಯನ್ನು ಎಗ್ನೇಸ್‌ಳಲ್ಲದೆ ಮತ್ತಾರೋ ಹಾಕಿರಬೇಕೆಂದು ಡಿಫೆನ್ಸಿನವರು ವಾದಿಸಿರುವುದನ್ನು ನಂಬಲು ಸಾಧ್ಯವೇ ಇಲ್ಲವೆಂದು ನುಡಿದರು. ಲಕ್ಕ, ಗಂಗ ಮತ್ತು ಲಿಂಗರು ಕೊಟ್ಟಿರುವ ಸಾಕ್ಷ್ಯವನ್ನು ನೋಡಿದರೆ ಅವರಲ್ಲಾರಾದರೂ ಆ ಪುಡಿಯನ್ನು ವೇದಪ್ಪನವರ ಟೀ ಪಾತ್ರೆಗೆ ಹಾಕಿದರೆಂಬ ಸಂಭವಕ್ಕೆ ಅವಕಾಶವೇ ಇಲ್ಲವೆಂದರು.

ಎಗ್ನೇಸಳ ಹೇಳಿಕೆ

ಎಗ್ನೇಸಳ ಹೇಳಿಕೆಯನ್ನು ಅಪ್ರೂವರರ ಸಾಕ್ಷ್ಯದ ಜತೆಯಲ್ಲಿ ತೂಗಿ ಜಡ್ಜರು ಅನಂತರ ಚರ್ಚಿಸಿದರು. ಎಗ್ನೇಸ್‌ಳ ಹೇಳಿಕೆಯು ಇತರ ಸ್ವತಂತ್ರ ಸಾಕ್ಷ್ಯದಿಂದ ದೃಢಪಟ್ಟಿರುವ ಮುಖ್ಯಾಂಶ ವಿವರಗಳೊಂದಿಗೆ ಹೊಂದಿಕೊಳ್ಳುವುದೆಂದೂ ಜಡ್ಜರು ಅಭಿಪ್ರಾಯಪಟ್ಟರು.

ಎಗ್ನೇಸ್‌ಳ ಮಟ್ಟಿಗೆ ಹೇಳುವುದಾದರೆ ಅವಳ ವಿಷಯದಲ್ಲಿ ಬಂದಿರುವ ಸಾಕ್ಷ್ಯ ಮತ್ತು ಅವಳ ತಪ್ಪೊಪ್ಪಿಗೆ ಹೇಳಿಕೆಯನ್ನು ಸುರಕ್ಷಿತವಾಗಿ ನಂಬಬಹುದು. ಆಕೆಯು ಐ. ಪಿ. ಸಿ. ೩೦೭ನೇ ಸೆಕ್ಷನ್ ಪ್ರಕಾರ (ಕೊಲೆ ಪ್ರಯತ್ನ) ಮಾಡಿದ ಅಪರಾಧವನ್ನು ಮಾಡಿದ್ದಾಳೆಂದು ಜಡ್ಜರು ತೀರ್ಪಿತ್ತರು.

ಎಗ್ನೇಸ್‌ಳ ತಪ್ಪೊಪ್ಪಿಗೆ ಹೇಳಿಕೆಯು ಯಾವುದೇ ಬೆದರಿಕೆಯಿಂದ ಅಥವಾ ಯಾವುದೇ ವಾಗ್ದಾನದಿಂದ ದೊರಕಿಸಿಕೊಳ್ಳಲ್ಪಟ್ಟಿದೆಂದು ನಂಬಲು ಸಾಧ್ಯವೇ ಇಲ್ಲವೆಂಬ ತೀರ್ಮಾನಕ್ಕೆ ಜಡ್ಜರು ಬಂದರು. ಅದು ಸ್ವಯಂಪ್ರೇರಿತ ಹೇಳಿಕೆಯೆಂದೂ ತೀರ್ಪಿತ್ತರು.

ಇತರ ಆಪಾದಿತರುಗಳ ವಿಷಯ.

ಎಗ್ನೇಸಳು ಮಾಡಿದ ತಪ್ಪಿಗೆ ಇತರ ಮೂವರು ಸಹಾಯಕರಾಗಿದ್ದರೇ ಇಲ್ಲವೆ ಎಂಬ ವಿಷಯವನ್ನು ಅನಂತರ ಜಡ್ಜರು ವಿವರವಾಗಿ ಚರ್ಚಿಸಿದರು. ಈ ಸಂಬಂಧದಲ್ಲಿ ಶ್ರೀ ವೇದಪ್ಪನವರ ಬಗ್ಗೆ ಶ್ರೀ ರಾಜುರವರು ಅನೇಕ ಜ್ಯೋತಿಷಿಗಳೊಡನೆ ಸಮಾಲೋಚನೆ ನಡೆಸಿದರೆಂದು ಬಂದಿರುವ ಸಾಕ್ಷ್ಯವನ್ನು ಸವಿಸ್ತಾರವಾಗಿ ಚರ್ಚೆ ಮಾಡಿದರು. ಮೊದಲನೇ ಪ್ರಾಸಿಕ್ಯೂಷನ್ ಸಾಕ್ಷಿ ಶ್ರೀ ಕೆ. ಆರ್. ಕೃಷ್ಣಮೂರ್ತಿಯವರು ಕೊಟ್ಟಿರುವ ಸಾಕ್ಷ್ಯವನ್ನು ನಂಬದೇ ಇರುವುದಕ್ಕೆ ಯಾವ ಕಾರಣವೂ ಇಲ್ಲವೆಂಬುದಾಗಿ ಹೇಳಿದರು. ಇತರ ಜ್ಯೋತಿಷಿ ಸಾಕ್ಷಿಗಳು ಕೊಟ್ಟಿರುವ ಸಾಕ್ಷ್ಯಗಳು ತಳ್ಳಿಹಾಕತಕ್ಕವುಗಳಲ್ಲವೆಂಬುದಾಗಿ ಹೇಳಿದರು.

ಶೂನ್ಯ ಪೂಜೆಗಳು

ಜಡ್ಜರು ಅನಂತರ ಕಲ್ಲಹಳ್ಳಿ ಸ್ಮಶಾನ, ನಂಜನಗೂಡು ಸ್ಮಶಾನ ಮತ್ತು [illegible]ಮಾಡಲ್ಲಿ ನಡೆಯಿತೆಂದು ಹೇಳಲಾದ ಶೂನ್ಯ ಪೂಜೆಗಳ ಸಂಬಂಧವಾಗಿ ಪ್ರಸ್ತಾಪಿಸಿದರು. ಆ ಸ್ಥಳಗಳಲ್ಲಿ ಶೂನ್ಯ ಪೂಜೆಗಳು ನಡೆಯಲಿಲ್ಲವೆಂಬುದಾಗಿ ನಂಬಲು ಇತರ ಆಧಾರವೇ ಇಲ್ಲವೆಂದೂ ಹೇಳಿದರು.

'ಶ್ರೀ ಎಲ್. ಎಸ್. ರಾಜು ತಪ್ಪಿತಸ್ಥರು'

ಜಡ್ಜರು ಈ ರೀತಿ ತೀರ್ಮಾನಕ್ಕೆ ಬಂದಿದ್ದಾರೆ:—

“ಮೊದಲನೆ ಆಪಾದಿತರಾದ ಶ್ರೀ ಎಲ್. ಎಸ್. ರಾಜುರವರು ಶ್ರೀ ವೇದಪ್ಪನವರಿಗೆ ಎಗ್ನೇಸಳ ಮೂಲಕ ವಿಷ ಹಾಕಲು ಸಹಾಯ ಮಾಡಿದರೆಂಬುದು ಸಿದ್ಧಾಂತವಾಗಿದೆ”.

ಶ್ರೀ ರಾಜುರವರು ಮುದುಕರಾಗಿರುವುದರಿಂದಲೂ ಖಾಯಿಲೆಯಿಂದಿರುವುದರಿಂದಲೂ, ಈಗಾಗಲೇ ಕಸ್ಟಡಿಯಲ್ಲಿ ಗಣವರೆ ತಿಂಗಳಷ್ಟು ಕಾಲ ಇರುವುದರಿಂದಲೂ ಈ ರೀತಿ ಕಡಿಮೆ ಶಿಕ್ಷೆ ವಿಧಿಸಿರುವುದಾಗಿ ಜಡ್ಜರು ಹೇಳಿ ಅವರನ್ನು 'ಎ' ವರ್ಗದ ಬಂದಿಯಾಗಿ ನೋಡಿಕೊಳ್ಳಬೇಕೆಂದು ಅಜ್ಞೆ ಮಾಡಿದ್ದಾರೆ.

ಜಯರಾಂ ತಪ್ಪಿತಸ್ಥರಲ್ಲ

ಎರಡನೆ ಆಪಾದಿತರಾದ ಶ್ರೀ ಜಯರಾಂ ತಪ್ಪಿತಸ್ಥರೆಂದು ತೀರ್ಮಾನಿಸುವುದು ಸಾಧ್ಯವೇ ಇಲ್ಲ. ಆತನೇನಾದರೂ ಮಾಡಿದ್ದ ಕೆಲಸವೆಲ್ಲಾ ತನ್ನ ತಂದೆಯ ಆಜ್ಞಾಪಾಲನೆ ಅಷ್ಟೆ.

ಮೂರನೆ ಆಪಾದಿತರೂ ತಪ್ಪಿತಸ್ಥರು

ಮೂರನೆ ಆಪಾದಿತರಾದ ಶ್ರೀ ದಾಸಪ್ಪ ನಾಯುಡುರವರು ಸಹಾ ಎಗ್ನೇಸಳ ಮೂಲಕ ವಿಷಪ್ರಾಶನ ಪ್ರಯತ್ನಕ್ಕೆ ಸಹಾಯ ಮಾಡಿದರು.'

ಶ್ರೀ ದಾಸಪ್ಪ ನಾಯುಡು ಮತ್ತು ಮಿಸೆಸ್ ಎಗ್ನೇಸ್‌ಳನ್ನು 'ಬಿ' ವರ್ಗದ ಬಂದಿಗಳಾಗಿ ನೋಡಿಕೊಳ್ಳಬೇಕೆಂದೂ ಆಜ್ಞೆ ಮಾಡಿದ್ದಾರೆ.

ಅಪ್ರೂವರ ಖುಲಾಸೆಗೆ ಆಜ್ಞೆ

ಅಪ್ರೂವರಿಗೆ ಕ್ಷಮೆ ಕೊಟ್ಟು [illegible] ರೀತ್ಯಾ ಖುಲಾಸೆ ಮಾಡಬೇಕೆಂದು ಜಡ್ಜರು ಅಜ್ಞೆ ಮಾಡಿದರು.

ಕೋರ್ಟು ೪–೩೦ ಗಂಟೆಗೆ ಸರಿಯಾಗಿ ಎದ್ದಿತು. ಶ್ರೀ ಪಿ. ವೇದಪ್ಪನವರ ನಾಶದ ಉದ್ದೇಶದಿಂದ, ಶ್ರೀ ರಾಜುರವರ ಪ್ರೇರಣೆ ಮೇರೆ ಅಪ್ರೂವರ್ ನಾರಾಯಣ ಪ್ರಸಾದರು ಶೂನ್ಯಪೂಜೆ ಆಚರಣೆ ಮಾಡಿದರೆಂಬುದು ಸಿದ್ಧಾಂತವಾಗಿದೆಯೆಂದೂ ಜಡ್ಜರು ತೀರ್ಪಿತ್ತರು.

ಜಾಗವಿಲ್ಲದಷ್ಟು ಸಂಖ್ಯೆಯಲ್ಲಿ ಪ್ರೇಕ್ಷಕರುಗಳೂ ವಕೀಲರುಗಳೂ ತುಂಬಿಹೋಗಿದ್ದರು. ಕೋರ್ಟಿನ ಜೊತೆಗೆ ಪೋಲೀಸ್ ಬಂದೋಬಸ್ತು ಜೋರಾಗಿದ್ದಿತು.

'ತಾ. ನಾ.'

ಮೈಸೂರಿನ ಮುಖ್ಯ ಮಂತ್ರಿ.

ಮೈಸೂರು ಮುಖ್ಯ ಮಂತ್ರಿಗಳಾಗಿ ಶ್ರೀ ಕೆ. ಹನುಮಂತಯ್ಯನವರು ತಾ. ೩೦ರಲ್ಲಿ ಶ್ರೀಮನ್ಮಹಾರಾಜರವರ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಅಸೆಂಬ್ಲಿ ಕಾಂಗ್ರೆಸ್ ಪಕ್ಷದ ನಾಯಕರಾಗಿ ಚುನಾಯಿತರಾಗಿರುವ ತಾವು ಮಂತ್ರಿ ಮಂಡಲವನ್ನು ರಚಿಸಬೇಕೆಂದು ಶ್ರೀಮನ್ಮಹಾರಾಜರವರು ಕೋರಿದರೆಂದೂ ಆ ಆಹ್ವಾನವನ್ನು ತಾವು ಒಪ್ಪಿಕೊಂಡಿರುವುದಾಗಿಯೂ ಶ್ರೀ ಹನುಮಂತಯ್ಯನವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ಶ್ರೀಮನ್ಮಹಾರಾಜರ ಜೊತೆ ಭೇಟಿ ಮುಗಿಸಿಕೊಂಡ ಬಳಿಕ ಶ್ರೀ ಹನುಮಂತಯ್ಯನವರು 'ಲೇಕ್ ವ್ಯೂ' ಭವನಕ್ಕೆ ಹೋಗಿ ಅಲ್ಲಿರುವ ಈಗಿನ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರೊಡನೆ ಮಾತುಕತೆ ನಡೆಸಿದರು.

ಅನಂತರ ತಾವು ಇಳಿದುಕೊಂಡಿರುವ ಸರ್ಕಾರಿ ಭವನಕ್ಕೆ ಹಿಂತಿರುಗಿ ಅಲ್ಲಿ ಕಾದಿದ್ದ ಪತ್ರಿಕಾ ಪ್ರತಿನಿಧಿಗಳಿಗೆ ಬೆಳಗಿನ ಭೇಟಿಯ ವಿಷಯಗಳನ್ನು ತಿಳಿಸಿದರು.

ದಕ್ಷರಾದ ಮಂತ್ರಿಗಳನ್ನೇ ತಮ್ಮ ಸಂಪುಟಕ್ಕೆ ಸೇರಿಸಿಕೊಳ್ಳುವುದಾಗಿ ಶ್ರೀ ಹನುಮಂತಯ್ಯನವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ಶಾಸನ ಸಭೆಗೆ ಚುನಾಯಿತರಾಗಿಲ್ಲದವರನ್ನು ತಾವು ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳುವುದಿಲ್ಲವೆಂದೂ ಸ್ಪಷ್ಟಪಡಿಸಿದರು.

ಮೇಧಾಶಕ್ತಿ ಕ್ರಿಯಾಶಕ್ತಿಗಳಿರುವ ಜನರನ್ನು ಆಡಳಿತದಲ್ಲಿ ತರಬೇತುಗೊಳಿಸುವುದರ ಮೂಲಕ ಪ್ರಮುಖ ಇಲಾಖೆಗಳಿಗೆ ಉಪಮಂತ್ರಿಗಳಾಗಿ ಸೇರಿಸಿಕೊಳ್ಳುವುದಾಗಿಯೂ ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದರು.

ಯಾವ ಮಂತ್ರಿಗಳ ಕೆಲಸ ಕಾರ್ಯವೇ ಆಗಲಿ ಅಸಮರ್ಪಕವಾಗಿ ಕಂಡುಬಂದಾಗ ಅವರನ್ನು ತೆಗೆದು ಹಾಕುವುದಾಗಿಯೂ ಕ್ರಿಯಾಶೀಲತೆಯ ದೃಷ್ಟಿಯಿಂದ ಅವಶ್ಯವಿದ್ದಾಗಲೆಲ್ಲಾ ಮಂತ್ರಿ ಮಂಡಲ ಪುನರ್ರಚಿಸುವುದಾಗಿಯೂ ಶ್ರೀ ಹನುಮಂತಯ್ಯನವರು ಭರವಸೆಯಿತ್ತರು.

ಮೈಸೂರಿನಲ್ಲಿ ಉನ್ನತದ ಮಟ್ಟದ ಮಂತ್ರಿ ಮಂಡಲವನ್ನು ಸ್ಥಾಪಿಸಬೇಕೆಂಬುದೇ ನನ್ನ ಉದ್ದೇಶ. ರಾಷ್ಟ್ರ ನಾಯಕ ಪಂಡಿತ ನೆಹರೂ ಮುಂತಾದವರು ಮುಂದಿಟ್ಟಿರುವ ಆದರ್ಶಗಳನ್ನು ಈಡೇರಿಸಲು ಸಾಧ್ಯವಾಗುವಂತಹ ಮಂತ್ರಿವರ್ಗ ರಚಿಸಲು ಅಪೇಕ್ಷಿಸಿದ್ದೇನೆ ಎಂದು ಶ್ರೀ ಹನುಮಂತಯ್ಯನವರು ನುಡಿದರು.

ಶ್ರೀ ಟಿ. ಎಸ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

ನಾಯಕತ್ವಕ್ಕೆ ಅಳಿಗಾಲ.

ಸ್ವಾಮಿ ವಿವೇಕಾನಂದರು ಈ ಕುರಿತು ಹೇಳಿದ್ದೇನು?

ಭಾರತದಲ್ಲಿ ನಾಯಕತ್ವಕ್ಕೆ ಅಳಿಗಾಲದ ಸೋಂಕು ಜಾಡ್ಯ ತಗಲಿದೆ. ಇಂದು ಅಂತಹ ನಿರಾಶಾಮಯ ಪರಿಸ್ಥಿತಿ ಸಂಸ್ಥೆಗಳಲ್ಲಿ ಹಾಗು ಕೇಂದ್ರದಲ್ಲಿ ಬಹಳ ಗಹನವಾಗಿದೆ. ಇದಕ್ಕೆ ಕಾರಣವೇನು?

ಸುಮಾರು ಐವತ್ತೇಳು ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದರು ಈ ಸಂಬಂಧ ಕಾರಣಗಳನ್ನು ಕೊಟ್ಟು ಬರೆದ ಪತ್ರವೊಂದು ಇಂದಿನ ದಾರುಣ ಪರಿಸ್ಥಿತಿಗೂ ಅನ್ವಯಿಸುತ್ತದೆ.

೧೮೯೯ರಲ್ಲಿ ತನ್ನ ಸ್ನೇಹಿತನೊಬ್ಬನಿಗೆ ಬರೆದ ಪತ್ರದಲ್ಲಿ 'ಆಂಗ್ಲೇಯರಿಗೆ ಭಾರತವನ್ನು ಗೆಲ್ಲುವುದು ಹೇಗೆ ಸುಲಭಸಾಧ್ಯವಾಯಿತು?' ಎಂಬ ಪ್ರಶ್ನೆಯನ್ನು ಸ್ವಾಮಿ ವಿವೇಕಾನಂದರು ಈ ರೀತಿ ಸಂಕ್ಷೇಪಿಸಿ ಉತ್ತರಿಸಿದ್ದಾರೆ. 'ಇವಕ್ಕೆ ಮುಖ್ಯ ಕಾರಣವಿಷ್ಟೆ. ಅವರು ಒಂದು ಜನಾಂಗ; ನಾವು ಅಲ್ಲ. ನಮ್ಮಲ್ಲಿ ಮಹಾಪುರುಷನೊಬ್ಬನು ಅಳಿದನೆಂದರೆ, ಅವನಂತಹನು ಮತ್ತೊಬ್ಬನು ಬರಬೇಕಾದರೆ ನಾವು ಶತಮಾನಗಳನ್ನು ಕಾಯಬೇಕಾಗುತ್ತದೆ. ಅವರಲ್ಲಿ ಹಾಗಲ್ಲ, ಅಳಿದು ಹೋದ ಹಾಗೆಲ್ಲಾ ಮುಖಂಡರು ಒಬ್ಬರ ಹಿಂದೆ ಒಬ್ಬರು ಪುನಃ ಹುಟ್ಟಿ ಬರುತ್ತಾರೆ.

....ಇದು ಹೇಗೆ ಸಾಧ್ಯವಾಗುತ್ತದೆ? ಮಹಾಪುರುಷರನ್ನು, ಪ್ರಸಿದ್ಧ ಮುಖಂಡರುಗಳನ್ನು ತರಬೇತಿಗೊಳಿಸುವ, ಸಿದ್ಧಗೊಳಿಸುವ ಅವರ ಕ್ಷೇತ್ರ ಸಾಕಷ್ಟು ವಿಶಾಲವಿದೆ. ನಮ್ಮಲ್ಲಿ ಹಾಗಲ್ಲ. ಅದು ಅತ್ಯಂತ ಸಂಕುಚಿತವಾಗಿದೆ. ಮೂವತ್ತು ಕೋಟಿತ್ತು ಇಲ್ಲವೆ ಅರುವತ್ತು ಮಿಲಿಯಷ್ಟು ಜನಸಂಖ್ಯೆಯಿರುವ ಜನಾಂಗಗಳೊಡನೆ ಮುಖಂಡರನ್ನು ಸಿದ್ಧಗೊಳಿಸುವ ಕ್ಷೇತ್ರ ಸಾಕಷ್ಟು ವಿಶಾಲ ಇರುವಾಗ, ೩೦೦ ಮಿಲಿಯಷ್ಟು ಜನಸಂಖ್ಯೆಯಿರುವ ಭಾರತದಲ್ಲಿ ಆ ಕ್ಷೇತ್ರ ಬಹಳ ಸಣ್ಣದಾಗಿದೆ ಎನ್ನುವುದು ಎಷ್ಟು ಶೋಚನೀಯ ಪರಿಸ್ಥಿತಿ! ಹೌದು, ಸುಶಿಕ್ಷಿತರಾದ ಸ್ತ್ರೀಪುರುಷರು ಆ ಜನಾಂಗಗಳೊಡನೆ ಹೆಚ್ಚು ಮುಂದಿಯಿದ್ದಾರೆ. ನಮ್ಮಲ್ಲಿ ಇರುವುದಿಲ್ಲ. ನಮ್ಮ ಜನಾಂಗದಲ್ಲಿ ಕಂಡುಬರುವ ದೊಡ್ಡ ದೋಷವಿದು. ಇದನ್ನು ಎಷ್ಟು ಬೇಗ ಪರಿಹರಿಸುವೆವೋ ಅಷ್ಟು ಒಳ್ಳೆಯದು.

ಜನಜಂಗುಳಿಗೆ ಶಿಕ್ಷಣ ಕೊಡಿರಿ.

'ಜನಸಾಮಾನ್ಯರಿಗೆ ಸಾಕಷ್ಟು ಶಿಕ್ಷಣ ಕೊಟ್ಟು ಅವರು ತಮ್ಮ ಸ್ಥಿತಿಯನ್ನು ಸುಧಾರಿಸುವರೆ ಅವಕಾಶ ಮಾಡಿ ಕೊಟ್ಟರೆ ಮಾತ್ರ ಒಂದು ಜನಾಂಗದ ಅಭಿವೃದ್ಧಿಯು ಸಾಧ್ಯ. ನಮ್ಮ ಸುಧಾರಕರು ಧಾರ್ಮಿಕವೊಂದಿದೆ ಆ ಬರೆ ಆ ಪಥ ಮತ್ತೊಂದಿದೆ ಎಂಬಂತೆ ವರ್ತಿಸುತ್ತಾರೆ. ವಿಧವೆಗಳಿಗೆ ಅಗ್ನಿ ಮಾಡಿಸಿ ಜನಾಂಗವನ್ನು ರಕ್ಷಿಸುವ ಸಾಧನೆ ಅಹರಹ.. ಎಂದರೆ ವಿಧವೆಗಳಿಗೆ ಸಿಗುವ ಗಂಡರ ಸಂಖ್ಯೆಯ ಮೇಲೆ ಜನಾಂಗದ ರಕ್ಷಣೆ ಹೊಂದಿಕೊಂಡಿದೆ ಎಂದು ನೀವು ತಿಳಿದಿರುವಿರಾ? ಮತ್ತೇನ, ಜನಾಂಗ ಏಳ್ಗೆ ಹೊಂದದಿರುವುದಕ್ಕೆ ಧರ್ಮವು ಕಾರಣವೇ? ಅಲ್ಲ. ಗುಡಿಗಳಲ್ಲಿ ವಾಸಿಸುವ ನಮ್ಮ ದೇಶದ ಸಾವಿರಾರು ಮಂದಿ ತಮ್ಮ ಮನುಷ್ಯತ್ವ, ವ್ಯಕ್ತಿತ್ವಗಳನ್ನು ಮರೆತುಬಿಟ್ಟ ದೊಡ್ಡ ದೋಷ....ಕಳೆದು ಹೋದ ಆ ಮನುಷ್ಯತ್ವ ಮತ್ತು ವ್ಯಕ್ತಿತ್ವವನ್ನು ಅವರಲ್ಲಿ ತಿರುಗಿ ತುಂಬಬೇಕು. ಶಿಕ್ಷಣ ಪ್ರಸಾರದಿಂದ ಮಾತ್ರ ಇದು ಸಾಧ್ಯ....

ಭಗವಾನ್ ಬುದ್ಧನ ಸಂದೇಶ.

'ಜನರು ತಮ್ಮ ಆತ್ಮ ಮತ್ತು ಅದರ ಅಮೂಲ್ಯ ವರ್ಚಸ್ಸನ್ನು ತಿರುಗಿ ಕಂಡುಕೊಳ್ಳಬೇಕಾಗಿದೆ. ಆಗ ತಾನೇ ಹೊಸ ಚೇತನ ಹೊಂದಿ ಜನಾಂಗದ ಏಳ್ಗೆಗೆ ಅವರು ಕಾರಣರಾಗಬಹುದು. ಭಗವಾನ್ ಬುದ್ಧನ ಜೀವನದಲ್ಲಿ ಒಂದು ಅಪೂರ್ವ ಆಕರ್ಷಣೆ ಇದೆ. ನನ್ನ ಇಡೀ ಜೀವನದಲ್ಲಿ ಬುದ್ಧನ ಕುರಿತು ನಾನು ತುಂಬಾ ಅಭಿಮಾನಪಟ್ಟಿದ್ದೇನೆ; ಅವನು ಬೋಧಿಸಿದ ತತ್ವಗಳ ಕುರಿತು ಅಲ್ಲ. ಎಲ್ಲಾ ವ್ಯಕ್ತಿಗಳಿಗಿಂತ ಆ ವ್ಯಕ್ತಿಯ ಕುರಿತು ಅದೇಕೋ ನನಗೆ ತುಂಬಾ ಗೌರವವಿದೆ. ಆ ಧೈರ್ಯ, ಆ ಸ್ಥೈರ್ಯ, ಆ ನಿಸ್ಸೀಮ ಪ್ರೇಮ? ಜನತೆಯ ಏಳ್ಗೆಗಾಗಿಯೇ ಅವನು ಹುಟ್ಟಿದ. ಇತರರು ಬೇರೆಯವರನ್ನು ಹುಡುಕುವಾಗ, ತಮಗಾಗಿಯೇ ಸತ್ಯಶೋಧಿಸುತ್ತಿರುವಾಗ, ಅತ ಜನರನ್ನು ಸಂಕಷ್ಟಗಳಿಂದ ಬಿಡುಗಡೆ ಮಾಡಲು ಸತ್ಯವನ್ನು ಶೋಧಿಸಿದ. ಜನರಿಗೆ ಯಾವ ರೀತಿಯಲ್ಲಿ ನೆರವಾಗಬಹುದೆಂಬುದೇ ಅವನ ಜೀವನದ ಮುಖ್ಯ ಉದ್ದೇಶವಾಗಿತ್ತು. ತನ್ನ ಇಡೀ ಜೀವಮಾನ ಕಾಲದಲ್ಲಿ ತನ್ನ ಸ್ವಂತಕ್ಕಾಗಿ ಅತ ಯೋಚಿಸಿದುದು ಕೂಡಾ ಇಲ್ಲ.'

ಇಂತಹ ನಿಸ್ವಾರ್ಥ ಮನಸ್ಸಿನ ಮುಖಂಡರು ನಮ್ಮಲ್ಲಿ ಎಷ್ಟು ಮಂದಿ ಇರುವರು?

'ಪ್ರಭಾತ'

<u>ಓದುಗರ ಓಲೆಗಳು.</u>

ಶಾಲಾ ಭೋಜನ ಶಾಲೆ.

ಮೊನ್ನೆ ನಾವು ಕೆಲವರು ದಕ್ಷಿಣ ಕನ್ನಡದಲ್ಲಿರುವ ಒಂದು 'ಬೇಸಿಕ್' ಶಾಲೆಗೆ ಹೋಗಿದ್ದೆವು. ಅಲ್ಲಿ ಕಲಿಯಲು ವಿಶೇಷವೇನೂ ಇರಲಿಲ್ಲ. ಆದರೆ ಒಂದು ಇತ್ತು.

ಅದೇನೆಂದರೆ ಜಾತಿಯತೆ ಅಲ್ಲಿ ಇಲ್ಲವೇ ಇಲ್ಲ. ಸರದಿ ಪ್ರಕಾರ ವಿದ್ಯಾರ್ಥಿಗಳೇ ಅಡಿಗೆ ಮಾಡುವುದು, ಬಡಿಸುವುದು. ಎಲ್ಲರಿಗೂ ಸಹ ಭೋಜನ, ಇದು ನೋಡಿ ಈ ರೀತಿ ಕೊಡಗಿನಲ್ಲಿದ್ದದ್ದರೆ ಎಂದು ನಾವೇ ಮಾತಾಡಿದೆವು. ಸಾಧ್ಯವೇ?

ಇದು ಖಂಡಿತಾ ಸಾಧ್ಯ. ಇದು ಗಾಂಧೀಜಿಯವರ ಮೂಲ ಸೂತ್ರ. ಜಾತಿಯತೆ ನಾಶವಾಗದೆ ನಮ್ಮ ಭರತ ಭೂಮಿ ಉಳಿಯದು.

ಅದಕ್ಕಾಗಿ ಅಲ್ಲಲ್ಲಿರುವ ಶಾಲಾ ಭೋಜನ ಶಾಲೆಗಳಲ್ಲಿ ಜಾತಿಯತೆಯನ್ನು ತೆಗೆದು ಹಾಕಬೇಕೆಂದು ಪತ್ರಿಕೆಗಳಲ್ಲಿ ಓದುತ್ತಿರುವೆವು. ಎಲ್ಲಾ ಜಾತಿಯವರನ್ನು ಸೇರಿಸಿಕೊಳ್ಳದೆ ಹೋದರೆ ಸರಕಾರದಿಂದ ಯಾವ ಧನ ಸಹಾಯ ಕೊಡಬಾರದೆಂದಿರುವರು. ಕೊಡಗಿನಲ್ಲಿ ಈಗ ಬಂದಿರುವ ಕಾಂಗ್ರೆಸು ಸರಕಾರವು ಇದನ್ನು ಆಲೋಚಿಸುವುದೇ?

ಎಲ್ಲಾ ಜಾತಿಯ ಮಕ್ಕಳು ಈಗ ಒಂದಾಗಿ ವಿದ್ಯೆ ಕಲಿತರೆ ಮುಂದೆ ಜೀವನ ಸುಲಭವೂ ಐಕ್ಯಯುತವೂ ಆಗುವದು. ದೇಶದಲ್ಲಿ ಶಾಂತಿಯ ಬೇರು ಊರುವುದು.

ಮಡಿಕೇರಿಯಲ್ಲಿ ಕೊಡಗರಿಗೆ ಗೌಡರಿಗೆ, ಬ್ರಾಹ್ಮಣರಿಗೆ ಭೋಜನ ಶಾಲೆಗಳು ಬೇರೆ ಬೇರೆ. ವೀರರಾಜಪೇಟೆಯಲ್ಲಿ ಕೊಡಗು ಹುಡುಗಿಯರಿಗೆ ಒಂದು ಭೋಜನ ಶಾಲೆ! ಎಲ್ಲರನ್ನೂ ಸೇರಿಸದೆ ಹೋದರೆ ಅವರಿಗೆ ಸರಕಾರ ಸಹಾಯ ಕೊಡದಿರಬೇಕ. ಹಾಗೆ ಮಾಡಲಾಗುವದೇ?

'ಜಾತ್ಯಾತೀತ'

ಅನ್ಯಾಯ

ನಮ್ಮ ಗ್ರಾಮದಲ್ಲಿ ನಾನು ಪೂರಾ ಬಡವನು. ನನ್ನ ಒಬ್ಬ ಮಗಳು ಆರನೇ ಕ್ಲಾಸಿನಲ್ಲಿ ಓದುತ್ತಿದ್ದಳು. ಅವಳ ಸ್ಕೂಲ್ ಫೀಜು ಕಟ್ಟಲು ಸ್ವಲ್ಪ ತಡವಾದ್ದರಿಂದ ಅವಳನ್ನು ಶಾಲೆಯಿಂದ ವಜಾ ಮಾಡಿಬಿಟ್ಟರು. ಶಾಲಾ ಹೆಡ್ ಮಾಸ್ಟರೊಡನೆ ಎಷ್ಟು ಅರಿಕೆ ಮಾಡಿಕೊಂಡರೂ ಗಮನಿಸಲಿಲ್ಲ. ನನ್ನ ಬಡತನದ ಬೇಸಯಿಂದ ನನ್ನ ಮಗಳ ಜೀವನೂನವೇ ಹಾಳಾಯಿತು. ಉಪಾಧ್ಯಾಯರನ್ನು ಕೇಳಿಕೊಂಡರೆ ಶಾಸನಕ್ಕೆ ವಿರೋಧವಾಗಿ ನಾನು ಕೆಲಸ ಮಾಡುವುದಿಲ್ಲ ಅಂದು ಬಿಟ್ಟರು. 'ಮಗಳ ಸ್ಕೂಲು ಫೀಜು ಕಟ್ಟಲು ಸಾಧ್ಯವಿಲ್ಲದ ನೀನು ಒಪ್ಪೇನು ಮಾಡುವೆ?' ಎಂದು ನನ್ನನ್ನು ಕೇಳಿದರು. ಅದರೆ ಮಕ್ಕಳ ವಿದ್ಯಾನಾಶಕ್ಕೆ ಬಡತನ ಮಾತ್ರವೇ ಕಾರಣವಲ್ಲ.

ಶಾಲಾ ಉಪಾಧ್ಯಾಯರು ಯಾವಾಗಲೂ ಪಾಠ ಮಾಡುವ ಮಕ್ಕಳ ಪೈಕಿ ಕೆಲವರನ್ನು ಆರಿಸಿಕೊಂಡು ಅವರಿಂದ ಹಣ ಪಡೆದು ಟ್ಯೂಶನ್ ಕೊಡುವುದು ನ್ಯಾಯವೇ?

ಯಾವಾಗಲೂ ಹಾಲು ಮಾರುವ ಒಂದು ವ್ಯಕ್ತಿಯು ಕೈಯಿಂದ ಕೊಂಡುಕೊಂಡ ಹಾಲಿನ ಕ್ರಯವನ್ನು ಕೊಡುವುದರ ಬದಲು ಆ ವ್ಯಕ್ತಿಯ ಮಗನಿಗೆ ಫೀಜು ಮಾಫಿ ಕೊಡಿಸಿದ್ದು ನ್ಯಾಯವೇ?

ವರ್ಷಾಂತ್ಯದ ವರೆಗೆ ಊಟ ಮಾಡಲು ಸಾಲವಾಗಿ ಬತ್ತ ಕೊಟ್ಟವರ ಮಕ್ಕಳಿಗೆ ಫೀಜು ಮಾಫಿ ಕೊಡಿಸಿದ್ದು ನ್ಯಾಯವೇ? ಎಲ್ಲಾ ಕ್ಷೇತ್ರಗಳಲ್ಲೂ ಅನ್ಯಾಯವೇ ನಡೆಯುತ್ತಿದೆ!

ಮಕ್ಕಳ ತಂದೆ.

ಶಾಲೆಯಲ್ಲಿ ನಗಬಾರದೆ?

ನಗಲೇಬೇಕು. ಮನೆಯಲ್ಲಿ ತಂದೆ ತಾಯಿಯರಿಗೆ ಮಕ್ಕಳೊಡನಾಡುವ ಸಮಯವಿಲ್ಲ. ಅವರಿಗೆ ಹೊಸ ಕ್ರಮದ ವಿದ್ಯೆ ಹೇಳಲು ಬರುವುದಿಲ್ಲವೆಂದೇ ಸರಕಾರವು ಪೂರ್ವದಿಂದಲೇ ಮಕ್ಕಳನ್ನು ಮುಂದಿನ ಸರ್ವಶಿಕ್ಷಿತರಾದ ಪ್ರಜೆಗಳಾಗಿ ಮಾಡಲು ಶಾಲೆ ಇಟ್ಟಿವರು. ಕೊಡಗಿನ ಶಾಲೆಗಳು ಹೇಗೆ ಇವೆಯೇ?

ಕೆಲವು ಊರುಗಳಲ್ಲಿ ಶಿಶು ವಿಹಾರಗಳಿವೆ. ಇವುಗಳಲ್ಲಿ ಆಯಿಯರಷ್ಟು ವಿಹಾರವಿಲ್ಲದ ಮನ ತಿಸ್ತ ಒಳ್ಳೆಯದಾಗಿವೆ. ಹೊಸ ಹೊಸ ಶಾಲೆಗಳು ಏಳುತ್ತಿವೆ. ದೊಡ್ಡ ಕಟ್ಟಡಗಳ ನೆಲಕ್ಕೆ ಸಿಮೆಂಟು ಹಾಕಲಾಗುತ್ತಿವೆ. ಕೆಲವಕ್ಕೆ ಆಟದ ಮೈದಾನಗಳು, ಸಣ್ಣ ಪುಟ್ಟ ಹೂವಿನ ತೋಟಗಳೂ ಇವೆ. ಚಿಣ್ಣ ತರಗತಿಗಳಲ್ಲಿ ಕಥೆ, ನರ್ತನ ಸಂಗೀತ ಗಾನಗಳು ತಲೆದೋರುತ್ತಿವೆ. ಕಥೆ ಪುಸ್ತಕಗಳು ಮಕ್ಕಳ ಕೈಗೆ ಬೀಳುತ್ತಿವೆ. ಬೆಳವಣಿಗೆ ಕಾಣದಾಗಿದೆ. ಪರೀಕ್ಷೆಯು ಒಹು ಕಠಿಣವಾಗಿರುವುದರಿಂದ ಮಕ್ಕಳು ಕೇರ್ ಡಿಸಾಂಗ್ರಿಸುವರು. ವಿದ್ಯೆ ಹೆಚ್ಚು ಕಲಿತು ಸುಶಿಕ್ಷಿತರಾದ ಉಪಾಧ್ಯಾಯ ಉಪಾಧ್ಯಾಯಿನಿಯರು ಬರುತ್ತಿರುವರು. ಅವರ ಮುಂದಹಾಸ ಅವರ ಅಂದವಾದ ಉಡುಪು ನೋಡಿದರೇ ತಿಳಿಯುತ್ತದೆ.

ಇಷ್ಟೇ ಸಾಕೇ? ಸಾಲದು. ಹಾಗಾದರೆ? ಊರವರು ಶಾಲೆಯನ್ನು ತಮ್ಮದೆಂದು ತಿಳಿಯಬೇಕು. ದೇವಸ್ಥಾನಕ್ಕೆ ತಿಂಗಳಿಗೊಂದು ಬಾರಿ ಸೇರಿದರೆ ಶಾಲೆಗೆ ಪ್ರತಿ ಶನಿವಾರ ಸೇರಿ ಹರಿಕಥೆ ಮಾಡಿಸುವದೋ, ಗ್ರಾಮವನ್ನು ಮುಂದಕ್ಕೆ ತರುವ ವಿಷಯ ಚರ್ಚಿಸುವದೋ ಶಾಲೆಯ ಗೋಡೆ, ಬೇಲಿ, ಬಾವಿ ಮೊದಲಾದುವನ್ನು ದುರಸ್ತು ಮಾಡುವದೋ, ಪುಸ್ತಕ ಭಂಢಾರ ಮತ್ತು ಪತ್ರಿಕೆಗಳನ್ನು ಓದುವದೋ, ಆಟಪಾಠವದೋ ಮೊದಲಾದ ಕೆಲಸಗಳನ್ನು ಕೈಗೊಳ್ಳಬೇಕು.

ಶಾಲೆ ನಮ್ಮದು ಮಕ್ಕಳು ನಮ್ಮವರು. ನಾವು ಕೊಟ್ಟ ಕಂದಾಯವನ್ನು ನಮ್ಮವರೇ ಈಗ ಖರ್ಚು ಮಾಡುವರು. ನೀವು ಮುಂಗಡ ಖರ್ಚು ಮಾಡಿದರೆ ದೇಶದವರು (ಸರಕಾರ) ಹಣ ಕೊಡುವರು. ಸರಕಾರ ಕೊಡಲೆಂದು ಹಾತೊರೆದು ಕುಳ್ಳಿರಬೇಡಿ. ನಮ್ಮ ದೇಶದಲ್ಲಿ ಅನೇಕರು ಸಣ್ಣಪುಟ್ಟ ಶಾಲೆಗಳಿಂದ ಹೈಸ್ಕೂಲಿನವರೆಗೆ ನಡೆಸುವರು. ನಮ್ಮ ಊರು ಮುಂದೆ ಬರಲಿ. ನಾವು ಒಗ್ಗಟ್ಟಾಗಿ ಸೊಂಟಕಟ್ಟಿ ದುಡಿದರೆ ನಮ್ಮ ಕೀರ್ತಿ ಸೌಕರ್ಯಗಳೂ ಮುಂದೆ ಬರುವವು. ನಮ್ಮ ಮಕ್ಕಳು ಸಂತೋಷದಿಂದ ಕಾಲ ಕಳೆಯುವರು. ಸರಕಾರದ ಕಡೆಯೂ ಐಶ್ವರ್ಯವಂತರ ಕಡೆಯೂ ಕಣ್ಣಿಟ್ಟು ಕರ್ತವ್ಯಚ್ಯುತರಾಗಬೇಡ. 'ಸಂಘೇಶಕ್ತಿ ಕಲಿಯುಗೇ' ಅಲ್ಲವೇ?

ಪೊನ್ನಪ್ಪ. ಓ.

ಕೊಡಗು

ತಾ. ೪-೪-೧೯೫೨ನೇ ಶುಕ್ರವಾರ

ಶುಭ ಚಿಹ್ನೆ.

ಜನಜವಾಬ್ದಾರಿಯುಳ್ಳ ಸರಕಾರವನ್ನು ಕಟ್ಟಬೇಕೆಂಬ ಕೊಡಗಿನ ಜನರ ಬಹು ಕಾಲದ ಚಳವಳಿವು ಈಗ ಸಫಲವಾಗಿದೆ. ಈ ಹೋರಾಟದ ಫಲಿತಾಂಶವಾಗಿ ದೊರೆತ ಜವಾಬ್ದಾರಿಯುತ ಶಾಸನ ಸಭೆಯ ಉದ್ಘಾಟನೋತ್ಸವದ ಕಾಲಕ್ಕೆ ಹಿಂದೂದೇಶದ ಗ್ರಹಮಂತ್ರಿಯವರಾದ ಶ್ರೀ. ಕಾಟ್ಜೂರವರು ಮಾಡಿದ ಭಾಷಣದಲ್ಲಿ ಕೊಡಗಿನ ಬೆಟ್ಟಗುಡ್ಡಗಳ ಸುಂದರ ವನತರುಗಳ ಮಧ್ಯದಲ್ಲಿ ಅದು ದೃಡಕಾಯರೂ ಮೇಧಾವಿಗಳೂ, ತಮ್ಮ ದೇಶದ ಸ್ವಾತಂತ್ರ್ಯ ಹಾಗೂ ವ್ಯಕ್ತಿತ್ವದ ಬಗ್ಗೆ ನಿಶ್ಚಲ ಭಕ್ತಿಯುತರೂ ಆದ ಜನತೆಯನ್ನು ಪೋಷಿಸಿದೆ ಆದುದರಿಂದ ಕೊಡಗಿನ ವಿಸ್ತೀರ್ಣ ಮತ್ತು ಜನಸಂಖ್ಯೆಯು ಚಿಕ್ಕದಾಗಿದ್ದರೂ ಅದು ಬಹು ವರ್ಷಗಳಿಂದ ಪ್ರತ್ಯೇಕ ಸಂಸ್ಥಾನವಾಗಿ ಉಳಿದಿದೆ. ಎಂದು ಪ್ರಶಂಸನೀಯ ರೀತಿಯಿಂದ ಹೇಳುತ್ತಾ ಈ ಪ್ರಾಂತದ ಮುಂದಿನ ಸ್ಥಿತಿಯೊದರೂ ಇಲ್ಲಿಯ ಜನರು ತಮ್ಮ ಹಿಂದಿನ ಪರಂಪರೆಯನ್ನು ಅನುಸರಿಸಿ ಅದಕ್ಕನುಗುಣವಾಗಿ ಮಾಡಿಕೊಳ್ಳಬಹುದಾದ ತೀರ್ಮಾನವನ್ನು ಹೊಂದಿಕೊಂಡಿದೆಯೆಂದು ಸ್ಪಷ್ಟಪಡಿಸಿರುವರು. ಗ್ರಹಮಂತ್ರಿಯವರ ಈ ಘನತರ ಹೇಳಿಕೆ ರೂದರೂ ಇಂಡಿಯಾ ಸರಕಾರದ ಮಂತ್ರಿಮಂಡಳದ ಅಭಿಪ್ರಾಯವನ್ನು ಸೂಚಿಸುತ್ತಿದೆಯೆಂದರೆ ತಪ್ಪಾಗಲಾರದು. ಹಲವು ವರ್ಷಗಳಿಂದ ಈ ಅಭಿಪ್ರಾಯವನ್ನೇ ನಾವು ಸಾರಿ ಸಾರಿ ಬರೆಯುತ್ತಾ ಬಂದಿರುವೆವು. ದೇಶದ ಭವಿಷ್ಯವು ಇಲ್ಲಿಯ ಜನರ ಕೈಯಲ್ಲೇ ಇದೆಯೆಂಬುದನ್ನು ವ್ಯಕ್ತಮಾಡಿದ್ದೆವು ಇದಕ್ಕೆ ಹೊರಗಿನ ಅಧ್ಯಮಹನೀಯರ ಬೆಂಬಲ ದೊರೆಯುತ್ತಿರುವದು ಶುಭದಾಯಕವಾಗಿದೆ.

ಈಗ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ಸಿನವರು ಕೊಡಗಿನ ಭವಿಷ್ಯದ ವಿಚಾರ ತೀರ್ಮಾನಿಸುವಾಗ ಕೊಡಗಿನ ಜನತೆಯ ಅಭಿಪ್ರಾಯದಂತೆ ವರ್ತಿಸಲಾಗುವದೆಂದು ವಚನ ಕೊಟ್ಟಿರುವದರಿಂದ ಗೃಹ ಮಂತ್ರಿಯವರು ಹೇಳಿದಂತೆ ತಮ್ಮ ವ್ಯಕ್ತಿತ್ವವನ್ನು ಪ್ರೀತಿಸುವ ಕೊಡಗಿನ ಜನತೆಯು ದೊಡ್ಡ ಶಾಂತದೊಡನೆ ಸೇರಿ ಅದನ್ನು ಹಾಳು ಮಾಡಿಕೊಳ್ಳದೆ ತಮ್ಮ ಪ್ರಾಂತದ ಸರಕಾರವನ್ನು ಆದರ್ಶಪ್ರಾಯವಾಗಿ ನಡೆಸಿ ಹಿಂದೂದೇಶದ ಭದ್ರತೆಗೂ ಪ್ರಗತಿಗೂ ಶಕ್ತಿಮೀರಿ ಸಹಾಯ ಮಾಡಿ ಕೊಡಗಿನ ಕೀರ್ತಿಯನ್ನು ಹೆಚ್ಚಿಸಲು ಪ್ರಯತ್ನಿಸುವರಾಗಿ ಆಶಿಸುತ್ತೇವೆ

ವರ್ತಮಾನ.

ಚೀಫ್ ಕಮಿಷನರು ತಾ. ೩ರಲ್ಲಿ ಪೊನ್ನಂಪೇಟೆಗೆ ಹೋಗಿ ತಾ. ೪ರಲ್ಲಿ ತಿತಿಮತಿಗೂ, ತಾ. ೫ರಲ್ಲಿ ಹೆಬ್ಬಾಲೆಗೂ ಹೋಗಿ ೬ರಲ್ಲಿ ಮಡಿಕೇರಿಗೆ ಬರುವರು. ೭ನೇ ತಾರೀಕಿನಲ್ಲಿ ಸೋಮವಾರಪೇಟೆ ಹೈಸ್ಕೂಲು ಕಟ್ಟಡ ತೆರೆಯುವರು. ತಾ ೯ರಲ್ಲಿ ನಾಪೋಕ್ಲು ಹೈಸ್ಕೂಲು ಕಟ್ಟಡ ತೆರೆಯುವರು.

ಕೇಂದ್ರದ ಪ್ರೆಸಿಡೆಂಟರ ಚುನಾವಣೆಯ ಬಗ್ಗೆ ಈ ತಾ. ೧೨ ನೇಮಕ ಪತ್ರ ಕೊಡಲು ಕಡೇ ದಿನವೆಂದೂ, ತಾ. ೧೪ರಲ್ಲಿ ಪರಿಶೀಲನೆಯಾಗುವದೆಂದೂ, ತಾ. ೧೭ರಲ್ಲಿ ಹಿಂತೆಗೆದುಕೊಳ್ಳಲು ಕಡೇ ದಿನವೆಂದೂ ಮೇ ತಾ. ೬ರಲ್ಲಿ ಮತದಾನವಾಗುವದೆಂದೂ ಪ್ರಕಟವಾಗಿದೆ. ಪ್ರೆಸಿಡೆಂಟರ ಚುನಾವಣೆಗೆ ಶಾಸನ ಸಭಾ ಸದಸ್ಯರು ಓಟು ಕೊಡುವರು.

ಉತ್ತರ ಕೊಡಗು ಸೋಮವಾರಪೇಟೆ ಮಹಾತ್ಮಾಜಿ ಬ್ಯಾಡ್‌ಮಿಂಟನ್ ಕ್ಲಬ್ಬಿನ ಆಶ್ರಯದಲ್ಲಿ ತಾ. ೨೮-೪-೫೨ರಿಂದ ಆಟ ಪ್ರಾರಂಭವಾಗುವದು. ಗೆದ್ದವರಿಗೂ ಮತ್ತು ರನ್ನರ್‌ಗಳಿಗೂ ಬೆಳ್ಳಿಯ ಕಪ್ಪುಗಳನ್ನು ಬಹುಮಾನ ಕೊಡಲಾಗುವುದು. ಭಾಗ ವಹಿಸಲಿಚ್ಛಿಸುವವರು ಹೆಚ್ಚಿನ ಮಾಹಿತಿಗೆ ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಳ್ಳಬಹುದು. ಭಾಗ ವಹಿಸುವವರು ತಾ. ೧೨-೪-೫೨ರೊಳಗೆ ಗೌ. ಕಾರ್ಯದರ್ಶಿಯವರಿಗೆ ಬರೆದು ಕಳುಹಿಸತಕ್ಕದ್ದು.

ಬಿ ಎ. ಯಲ್ಲಿ ಮೊದಲಿನ ಪಾರ್ಟ್ ಇಂಗ್ಲಿಷಿನಲ್ಲಿ ಒಂದನೇ ಕ್ಲಾಸ್ ಅದವಾ ಎರಡನೇ ಕ್ಲಾಸ್‌ನಲ್ಲಿ ಪಾಸಾದವರಾಗಲೀ ಅಥವಾ ಇಂಗ್ಲಿಷನ್ನು ಮುಖ್ಯ ಭಾಗವಾಗಿ ತೆಗೆದು ಪಾಸಾದ ಬಿ. ಎ. (ಆನರ್ಸ್) ನವರಾಗಲೀ ಟ್ಯೂಟರಾಗಿ ಬೇಕಾಗಿರುವರು. ಹೆಚ್ಚಿನ ವಿವರಗಳನ್ನು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಿಂದ ತಿಳಿದುಕೊಳ್ಳಬಹುದು.

ನಾಪೋಕ್ಲು ಹೈಸ್ಕೂಲ್ ತೆರೆಯುವ ಸಮಾರಂಭವನ್ನು ಇದೇ ೯ರಲ್ಲು ನಡೆಸುವಂತೆ ನಿಶ್ಚಯಿಸಿರುತ್ತಾರಾಗಿಯೂ, ಹೈಸ್ಕೂಲು ಚೀಫ್ ಕಮಿಷನರವರಿಂದಲೂ, ಬೋರ್ಡಿಂಗು ದಿವಾನ್‌ಬಹದ್ದೂರ್ ಕೆ. ಚಂಗಪ್ಪನವರಿಂದಲೂ, ಆಟದ ಮೈದಾನವು ಶ್ರೀ ಅಪ್ಪಾರಂಡ ತಿಮ್ಮಯ್ಯನವರಿಂದಲೂ ತೆರೆಯಲ್ಪಡುತ್ತದೆಂದು ವರ್ತಮಾನ

ಮಡಿಕೇರಿ ವೇದಾಂತ ಸಂಘದ ವಾರ್ಷಿಕ ಮಹಾಸಭೆಯು ಏಪ್ರಿಲ್ ತಾರೀಕು ೧೩ನೇ ಆದಿತ್ಯವಾರ ಸಾಯಂಕಾಲ ೮ ಗಂಟೆಗೆ ಸಂಘದ ಕಟ್ಟಡದಲ್ಲಿ ನಡೆಯುವದು.

ಸಿವಿಲ್ ಸರ್ಜನರು ತಮ್ಮ ಬಂಗ್ಲೆಯನ್ನು ಕೂಡಲೇ ಬಿಡಬೇಕೆಂದು ಸರಕಾರವು ಹುಕುಂ ಮಾಡಿದ್ದರಿಂದ ಅವರು ಬಂಗ್ಲೆಯನ್ನು ಬಿಟ್ಟು ಅನುಕೂಲವಾದ ಮನೆ ದೊರೆಯದ ಕಾರಣ ವೇಕ್ಸಿನ್ ಡಿಪೋದಲ್ಲಿ ಉಳಕೊಂಡಿರುವರು.

ಕೊಡಗು ಸಹಕಾರ ಬ್ಯಾಂಕಿನ ವಾರ್ಷಿಕ ಮಹಾಸಭೆಯು ತಾ. ೩೦ ರಲ್ಲಿ ಬ್ಯಾಂಕಿನ ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ವೀರಾಜಪೇಟೆಯಲ್ಲಿ ನಡೆಯಿತು.

'ವಿಷಮಿಶ್ರಿತ' ಬಿಸ್ಕೆಟ್.

ಚೀನಾದ ರೊಟ್ಟಿ ಗಡಂಗಗಳಲ್ಲಿ ತಯಾರಾದ ವಿಷಮಿಶ್ರಿತ ಬಿಸ್ಕೆಟ್‌ಗಳನ್ನು ತಿಂದು ಕೊರಿಯಾದಲ್ಲಿರುವ ಚೀಣೀ ಸೈನಿಕರು ಕಾಯಿಲೆ ಬಿದ್ದಿರುವುದಾಗಿ ಚೀಣೀ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಯೊಂದು ತಿಳಿಸುತ್ತದೆ.

ಪ್ಯಾಂಕೋದ ೨ ರೊಟ್ಟಿ ಗಡಂಗುಗಳು ಪಿತೂರಿ ನಡೆಸಿ, ಕೀಳ್ಮಟ್ಟದ ಸರಕುಗಳನ್ನು ಹಾಕಿ ತಯಾರಿಸಿದ ಬಿಸ್ಕೆಟ್‌ಗಳನ್ನು ಸೈನ್ಯಕ್ಕೆ ಸರಬರಾಜು ಮಾಡಿದವೆಂದು ಈ ಸುದ್ದಿ ತಿಳಿಸುತ್ತದೆ.

ಸೆರೆತ್ಸೆ ಖಾಮಾರಿಗೆ ಮನ್ನಣೆಯಿಲ್ಲ.

ಬೆಚೂನಲ್ಯಾಂಡದ ಮುಖ್ಯನೆಂದು ಸೆರೆತ್ಸೆ ಖಾಮಾರಿಗೆ ಮನ್ನಣೆ ಕೂಡದೆಂದು ಬ್ರಿಟನ್ನು ಕೈಕೊಂಡ ನಿರ್ಧಾರವನ್ನನುಲಕ್ಷಿಸಿ ಬಮಂಗವತೊ ಗುಡ್ಡಗಾಡು ಜನರು ಗೋಟ್ಲಾ ಟ್ರೈಬಲ್ ಕೌನ್ಸಿಲ್‌ಗೆ ಮತ್ತೊಬ್ಬ 'ಒಪ್ಪಿತ' ಮುಖ್ಯನನ್ನು ಆರಿಸಬೇಕೆಂದು ಕೇಳಿಕೊಂಡಿದ್ದಾರೆಂದು ತಿಳಿಯುತ್ತದೆ.

ಸಂಗೀತಗಾರರಿಗೆ ಸರಕಾರದ ಪ್ರೋತ್ಸಾಹನೆ.

ತಮ್ಮ ಜೀವಾವಧಿಯನ್ನು ಸಂಗೀತ ಕಲೆಗಾಗಿ ಮುಡುಪಾಗಿರಿಸಿದ ನಾಲ್ಕು ಪ್ರತಿಭಾನ್ವಿತ ಸಂಗೀತಗಾರರಿಗೆ ರಾಷ್ಟ್ರಾಧ್ಯಕ್ಷ ಡಾ ರಾಜೇಂದ್ರ ಪ್ರಸಾದರು, ಪ್ರತಿ ಒಬ್ಬರಿಗೆ ಸಾವಿರ ಮತ್ತು ಐನೂರು ರೂ. ಬೆಲೆ ಬಾಳುವ ಕಾಶ್ಮೀರ ಶಾಲು ಕೊಟ್ಟು ಸತ್ಕರಿಸಿದರು.

ಸನ್ಮಾನ ಪಡೆದ ಕಲಾಕಾರರೆಂದರೆ (೧) ಖಯಾಲ ಮತ್ತು ಹಿಂದೂಸ್ತಾನಿ ಶಾಸ್ತ್ರೀಕ್ತ ಪ್ರಸಿದ್ಧ ಸಂಗೀತಗಾರ ೭೩ ವರ್ಷದ ಉಸ್ತಾದ ಹುಸೇನ, (೨) ಕರ್ನಾಟಕ ಸಂಗೀತದಲ್ಲಿ ನಿಷ್ಣಾತರಾದ ಕರಿಕುಡಿ ಸಾಂಬಶಿವ ಅಯ್ಯರ್, (೩) ವಿಶೇಷ ಜನರನ್ನು ಕಲೆಹಾಕುತ್ತಿದ್ದ ಮತ್ತು ಕರ್ನಾಟಕ ಸಂಗೀತದಲ್ಲಿ ಕೈಯೆತ್ತಿದವರಾದ ೬೨ ವರ್ಷದ ಅರೆಕುಡಿ ರಾಮಾನುಜ ಅಯ್ಯಂಗಾರ್ಯರು (ಈಗಾಗಲೇ ಮೈಸೂರು ಮತ್ತು ತ್ರಾವಣಕೋರ, ಕೊಚಿನ್ ಸರಕಾರಗಳು ಅಯ್ಯರನ್ನು ಸನ್ಮಾನಿಸಿವೆ.) (೪) ಪ್ರಸಿದ್ಧ ಸರೋದವಾದಕರಾದ ಅಜಮೀರದ ಉಸ್ತಾದ ಅಲ್ಲಾಉದ್ದೀನ ಖಾನ ಇವರಾಗಿದ್ದಾರೆ.

ಕಲೆ ಮತ್ತು ಸಂಗೀತಕ್ಕೆ ಪ್ರೋತ್ಸಾಹನವೀಯುವ ಉದ್ದಿಶ್ಯ ಪ್ರತಿ ವರ್ಷ ಈ ರೀತಿಯಾಗಿ ಕಲಾಕಾರರನ್ನು ಸನ್ಮಾನಿಸುವ ಯೋಜನೆಯನ್ನು ಶಿಕ್ಷಣ ಮಂತ್ರಿ ಖಾತೆಯು ಇಟ್ಟುಕೊಂಡಿದೆಯೆಂದು ತಿಳಿಯುತ್ತದೆ ಸ್ಪರ್ಧೆಯ ಮೇಲಿಂದ ತರುಣ ಸಂಗೀತಗಾರರಿಗೆ ಪ್ರತಿ ವರ್ಷ ಪಾರಿತೋಷಕ ಹಂಚುವ ಯೋಜನೆಯು ಇದೆಯೆಂದು ತಿಳಿಯುತ್ತದೆ.

—೦()೦—

ವಾರ್ತೆ.

ಮದರಾಸು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಮುಂದಾಳ್ತನವನ್ನು ಶ್ರೀ ರಾಜಗೋಪಾಲಾಚಾರ್ಯರು ವಹಿಸಿಕೊಂಡಿದ್ದಾರೆ. ಮದರಾಸಿನಲ್ಲಿ ಕಾಂಗ್ರೆಸ್ಸಿಗೆ ಬಹುಮತವಿಲ್ಲದೆ ಮಂತ್ರಿಮಂಡಳ ರಚಿಸುವ ಅಡಚಣೆಯ ಕಾರಣ ನೆಹರೂರವರ ಒತ್ತಾಯ ಹಾಗೂ ಮದರಾಸು ಪ್ರಾಂತದ ಹಿತದೃಷ್ಟಿಯಿಂದ ರಾಜಾಜಿಯವರು ಧುರೀಣತ್ವ ವಹಿಸಿಕೊಂಡಿದ್ದಾರೆ ಅವರು ಮುಖ್ಯ ಮಂತ್ರಿಗಳಾಗಲಿರುವರು.

ಮುಂಬಯಿ ರಾಜ್ಯದಲ್ಲೆಲ್ಲಾ ಆಹಾರ ಧಾನ್ಯಗಳ ಧಾರಣೆಗಳನ್ನು ನೂರಕ್ಕೆ ಸುಮಾರು ಐವತ್ತರಷ್ಟು ಹೆಚ್ಚು ಮಾಡಿರುವ ಸರಕಾರದ ನಿರ್ಧಾರವನ್ನು ಮುಂಬಯಿಯ ನಾಗರಿಕ ಪೂರೈಕೆ ಮಂತ್ರಿಗಳಾದ ಶ್ರೀ ದಿನಕರರಾವ್ ದೇಸಾಯಿರವರು ತಾ. ೨೮ರಲ್ಲಿ ಬಹಿರಂಗಪಡಿಸಿದರು. ಬೃಹತ್ ಮುಂಬಯಿ, ಅಹಮ್ಮದಾಬಾದ್, ಪುಣೆ ಸೊಲ್ಲಾಪುರಗಳಲ್ಲಿ ಈ ಹೆಚ್ಚಾದ ಧಾರಣೆಗಳು ಮಾರ್ಚಿ ೩೧ರಿಂದ ಜಾರಿಯಲ್ಲಿ ಬರುವವು. ರಾಜ್ಯದ ಇನ್ನುಳಿದ ಭಾಗಗಳಲ್ಲಿ ಎಪ್ರೆಲ್ ೧ರಿಂದ ಜಾರಿಯಲ್ಲಿ ಬರುವವು. ಭಾರತ ಸರಕಾರವು ತಾನು ಕೊಡುತ್ತಿದ್ದ ಧನ ಸಹಾಯವನ್ನು ಹಿಂತೆಗೆದುಕೊಂಡುದರಿಂದಲೂ ಆಯಾತ ಆಹಾರ ಧಾನ್ಯಗಳ ಮೂಲ ಧಾರಣೆಗಳಲ್ಲಿ ಬದಲಾವಣೆಯಾದುದರಿಂದಲೂ ಆಹಾರ ಧಾನ್ಯಗಳ ಮಾರಾಟ ಧಾರಣೆಗಳಲ್ಲಿ ಈ ಹೆಚ್ಚಳವನ್ನು ಮಾಡಬೇಕಾಯಿತೆಂದು ಶ್ರೀ ದೇಸಾಯಿರವರು ಹೇಳಿದರು.

ಬಸ್ಸಿನಿಂದ ಶಾಲೆಗೆ ಹೋಗದೆ ಅದರಿಂದ ಉಳಿಸಿದ ಹಣವಾದ ಒಂದು ರೂಪಾಯನ್ನು ಓರ್ವ ಶಾಲೆಯ ಹುಡುಗನು ರಾಯಲಸೀಮಾ ಬರಗಾಲ ನಿಧಿಗೆಂದು ಗವರ್ನರಿಗೆ ಕಳಿಸಿದ್ದಾನೆ. ಗವರ್ನರರು ಹುಡುಗನ ಈ ಕಾಣಿಕೆಯ ವಿಷಯವನ್ನು ಸಾರ್ವಜನಿಕ ಸಭೆಯಲ್ಲಿ ಅರುಹಿದರು.

ಸುಮಾರು ಒಂದು ಸಾವಿರ ಕರೆನ ಬಂಡುಗಾರರು ಮಿಂಚಿನವೇಗದ ಧಾಳಿಮಾಡಿ ರಂಗೂನಿನ ಉತ್ತರದಲ್ಲಿ ೪೦ ಮೈಲಿನಲ್ಲಿಯ ೩ ಬ್ರಹ್ಮದೇಶದ ನಗರಗಳನ್ನು ಸುಟ್ಟು ಲೂಟಿ ಮಾಡಿದರು. ರೈಲ್ವೆ ಹಳಿಗಳನ್ನು ಕಿತ್ತೊಗೆದು ಸ್ಟೇಶನುಗಳನ್ನು ವ್ಯಾಪಾರಿ ಕೇಂದ್ರಗಳನ್ನು ಸುಟ್ಟರು ರೈಲ್ವೆ ಸಂಪರ್ಕವಿಲ್ಲದ್ದರಿಂದಲೂ ಟೆಲಿಫೋನುಗಳನ್ನು ಕಡಿಸಿದ್ದರಿಂದಲೂ ಈ ನಗರಗಳಿಗೆ ಉಳಿದ ಭಾಗಗಳ ಸಂಪರ್ಕವೇ ತಪ್ಪಿಹೋಯಿತು.

ಮದ್ರಾಸ್ ಶಾಸನ ಸಭೆಯ ಸಂಯುಕ್ತ ಪ್ರಜಾಸತ್ತಾರಂಗವು ಶ್ರೀ. ಟಿ. ಪ್ರಕಾಶಂರನ್ನು ತನ್ನ ಧುರೀಣನೆಂದು ಆರಿಸಿತು. ಈಗ ಪಕ್ಷದ ಬಲವು ೧೬೭ಕ್ಕೆ ಏರಿದ್ದು ಇನ್ನೂ ಬಲ ಹೆಚ್ಚುವ ಪರಿಸ್ಥಿತಿಯಲ್ಲಿದೆಯೆಂದು ಪ್ರಜಾಪಕ್ಷದ ಧುರೀಣ ಟಿ. ವಿಶ್ವನಾಥರು ಸಭೆಯಲ್ಲಿ ತಿಳಿಸಿದರು.

ಪರಾರಿಯಾಗಿದೆ.

ನನ್ನ ಬಾಬ್ತು ಒಂದು ಬೂದು ವರ್ಣದ ನೆಟ್ಟಿಗೋಡಿನ ಹೋರಿಯು ಮಡಿಕೇರಿ ನಾಡು ಕರ್ಣಂಗೇರಿ ಗ್ರಾಮದಿಂದ ಮೂರು ವಾರಗಳ ಹಿಂದೆ ಪರಾರಿಯಾಗಿದೆ. ಅದರ ಒಂದು ಕೋಡಿನ ಸಿಪ್ಪೆ ಕಳಚಿ ಹೋಗಿದೆ ಮತ್ತು ಅದರ ಒಂದು ತೊಡೆಯಲ್ಲಿ KN ಎಂದು ಸೀಲಿದೆ. ಇದನ್ನು ಪತ್ತೆ ಹಚ್ಚಿ ಕೊಟ್ಟವರಿಗೆ ರೂ. 10 ಬಹುಮಾನ ಕೊಡಲಾಗುವದು.

ಕೆ. ಪಿ. ಸಂಜೀವ.
ಕೊಡಗರಹಳ್ಳಿ ಕೋಟೆ,
ಸುಂಟಿಕೊಪ್ಪ.

ಇದೆಂಥಾ ಅಪಪ್ರಚಾರ!

'ಕೊಡಗು' ಪತ್ರಿಕೆಯಲ್ಲಿ ಕೌನ್ಸಿಲು ಮೆಂಬರುಗಳಿಗೆ ವೇತನ ಕೊಡಬೇಕೇ ಎಂಬ ವಿಚಾರವಾಗಿ ಪ್ರಕಟವಾಗಿದ್ದ ಪತ್ರಕ್ಕೆ ಉತ್ತರವಾಗಿ ತಾ. ೨೬ರ 'ಜನ್ಮಭೂಮಿ' ಪತ್ರಿಕೆಯಲ್ಲಿ 'ಪಬ್ಲಿಕಿನವ'ರೊಬ್ಬರು ಒಂದು ಬಾಕ್ಸಿಯನ್ನು ಬರೆಯುತ್ತಾ ಕೆಲವು ನಿರಾಧಾರದ ಆರೋಪ ಎತ್ತಿದ್ದಾರೆ. 'ಪಬ್ಲಿಕಿ'ನವರು ಪ್ರಥಮ ತಿಳಿದುಕೊಳ್ಳಬೇಕಾದ ಒಂದು ಮುಖ್ಯ ವಿಚಾರವೆಂದರೆ—ಒಂದು ಪತ್ರಿಕೆಯು ಸಂಪಾದಕನ ಅಭಿಪ್ರಾಯ ಮಾತ್ರ ವ್ಯಕ್ತಮಾಡಲು ಇರುವುದಲ್ಲ. ಸಂಪಾದಕರ ಅಭಿಪ್ರಾಯಕ್ಕೆ ಸರಿಹೋಗದ ವಿಚಾರಗಳೂ ಪತ್ರಿಕೆಯಲ್ಲಿ ಪ್ರಕಟವಾಗುತ್ತವೆ. ಪತ್ರಿಕೆಯು ಜನಾಭಿಪ್ರಾಯದ ಒಂದು ರಂಗವಲ್ಲದೆ ಬರೇ ಸಂಪಾದಕರ ಮುಖಪತ್ರವಲ್ಲ. ಸಂಪಾದಕರು ತಮ್ಮ ಅಭಿಪ್ರಾಯವನ್ನು ತಮ್ಮ ಅಗ್ರಲೇಖನಗಳಲ್ಲಿ ಬರೆಯುತ್ತಾರೆ. ಸಂಪಾದಕರು ತಮ್ಮ ಅಗ್ರಲೇಖನಗಳಿಗೆ ಜವಾಬ್ದಾರರಲ್ಲದೆ ಇತರ ಬಾತ್ಮಿದಾರರು ಬರೆಯುವ ಅಭಿಪ್ರಾಯಗಳಿಗೆ ಜವಾಬ್ದಾರರಲ್ಲ. ಆದ್ದರಿಂದ ಸಂಪಾದಕರ ಅಭಿಪ್ರಾಯಕ್ಕೆ ಸರಿ ಹೋಗುವ ಲೇಖನಗಳೇ ಪ್ರಕಟವಾಗಬೇಕೆನ್ನುವದು ಪತ್ರಿಕಾ ಉದ್ಯೋಗದ ಸಂಕುಚಿತ ಜ್ಞಾನವನ್ನು ತೋರಿಸುತ್ತದೆ.

ಮತ್ತೆ ಪ್ರತ್ಯೇಕ ಪಕ್ಷದ ಮುಂದಾಳಾದ ನಾನು ಮಂತ್ರಿಗಳ ವೇತನ ಮತ್ತಿತರ ವಿಚಾರದ ಬಗ್ಗೆ ಚೀಫ್ ಕಮಿಷನರ ಲ್ಲಿ ಮಾತಾಡುವಾಗ ನಾಲ್ಕು ಮಂತ್ರಿಗಳಿರಬೇಕೆಂದೂ, ಮಂತ್ರಿಗಳಿಗೆ ತಿಂಗಳಿಗೆ ರೂ. ೧೦೦೦ ವೇತನ ಬೇಕೆಂದೂ ಬಾಡಿಗೆ ಇಲ್ಲದ ಮನೆ ಬೇಕೆಂದೂ, ಪ್ರಯಾಣ ಬತ್ತೆಕ್ಕೆ ರೂ. ೨೫,೦೦೦ ಇಡಬೇಕೆಂದೂ, ಸದಸ್ಯರಿಗೆ ರೂ. ೧೫೦ ವೇತನ ಕೊಡಬೇಕೆಂದೂ ಹೇಳಿದೆನೆಂದು 'ಪಬ್ಲಿಕಿನ'ವರು ಬರೆದಿದ್ದಾರೆ. ಈ-ಸಾವಣೆಗೆ ಮುಂಚೆ ಚೀಫ್ ಕಮಿಷನರು ನನ್ನನ್ನು ಕರೆಸಿ ಕೇಳಿದಾಗ ಅಲ್ಲಿ ಬೇರೆ ಯಾರೂ ಇರಲಿಲ್ಲ. ನಾನು ನನ್ನ ಪಕ್ಷದವರನ್ನು ಕೇಳಿಯೇ ಅಭಿಪ್ರಾಯ ಕೊಟ್ಟಿದ್ದಾಗಿದೆ. ಮಂತ್ರಿಗಳ ಸಂಖ್ಯೆ ಮೂರನ್ನು ಮೀರಬಾರದೆಂದೂ ಮಂತ್ರಿಗಳಿಗೆ ತಿಂಗಳಿಗೆ ರೂಪಾಯಿ ೫೦೦ ಕೊಡಬೇಕೆಂಬುದೂ, ಸದಸ್ಯರಿಗೆ ರೂ. ೭೫ ಕೊಡಬೇಕೆಂಬುದೂ ನಮ್ಮೆಲ್ಲ ಹಲವರ ಅಭಿಪ್ರಾಯವೆಂದೂ, ಆದರೆ ನಮ್ಮ ಪಕ್ಷದ ಒಬ್ಬಿಬ್ಬರು ಮಂತ್ರಿಗಳಿಗೆ ರೂ. ೭೫೦ ರ ವರೆಗೆ, ಸದಸ್ಯರಿಗೆ ರೂ ೧೦೦ ರ ವರೆಗೆ ಕೊಡಬಹುದೆಂದೂ ಅಭಿಪ್ರಾಯಪಟ್ಟಿದ್ದಾರೆಂದೂ ಹೇಳಿರುವೆನು. ಪತ್ರಾಂತರಿಗಳಾಗ ಇಲ್ಲದ ಅಪಪ್ರಚಾರ ಮಾಡುವದು ಯೋಗ್ಯವಲ್ಲ.

ಮತ್ತೆ ನಾನು ಫೆಬ್ರವರಿಯಿಂದ ಮಾಸಿಕ್ಕೆ ರೂ. ೧೫೦೦ ಬತ್ತೆ ಹೊಂದಿಕೊಳ್ಳುತ್ತಿರುವೆನೆಂಬುದು ನಿಜವಲ್ಲದ ವಿಚಾರ. ಸರಕಾರವು ಕೌನ್ಸಿಲಿನಲ್ಲಿ ಈ ವಿಚಾರ ಉತ್ತರ ಕೊಟ್ಟಿದೆಯೆಂದು ಬರೆದಿರುವದೂ

ಓದುಗರ ಓಲೆಗಳು

ಶುದ್ಧ ನಿರಾಧಾರವಾದುದು. ಯಾರೇ ಆಗಲೀ ಸಾರ್ವಜನಿಕ ವಿಚಾರದಲ್ಲಿ ತಮಗಿರುವ ಸಂಶಯ ಯಾ ಅಭಿಪ್ರಾಯಗಳನ್ನು ಪತ್ರಿಕೆಗಳ ಮೂಲಕ ವ್ಯಕ್ತಪಡಿಸಿದರೇ ಸಂಬಂಧಿಸಿದವರು ಯಾ ತಿಳಿದವರು ಅದಕ್ಕೆ ಸರಿಯಾದ ಉತ್ತರ ಕೊಡುವದನ್ನು ಬಿಟ್ಟು ಶ್ರೀ ಬೆಳ್ಯಪ್ಪನವರು ಹಾಗೆ ಮಾಡುತ್ತಿದ್ದಾರೆ ಹೀಗೆ ಮಾಡುತಿದ್ದಾರೆಂದು ಆರೋಪ ಬರೆದು ನಿಜಸಂಗತಿಯನ್ನು ಮರೆಮಾಚುವದು ಕೆಲವರ ಸ್ವಭಾವವಾಗಿ ಬಂದಿದೆ. ಪ್ರತಿಯೊಂದಕ್ಕೂ ನನ್ನ ಹೆಸರನ್ನು ಎತ್ತಿ ಕಟ್ಟಿ ಮಸಿ ಬಳಿಯುವ ಯತ್ನ ಮಾಡಲಾಗುತ್ತಿದೆ. ಇದರಿಂದ ಜನತೆಯು ಎತ್ತಿದ ಸಂಶಯ ಮತ್ತು ಟೀಕೆಗಳಿಗೆ ಉತ್ತರ ಕೊಟ್ಟಂತಾಯಿತೆಂದು ಕೆಲವರು ತಿಳಿದುಕೊಂಡಂತೆ ಕಾಣುತ್ತದೆ. ಹೀಗೆ ಪತ್ರಿಕೆಯಲ್ಲಿ ನನ್ನ ಮೇಲೆ ಆರೋಪ ಹಾಕಿ ಬರೆಯುವದು ಕೆಲವರ ಹುಟ್ಟು ಸ್ವಭಾವವಾಗಿ ಬಂದಿರುವದೂ ದೇಶದವರಿಗೆ ತಿಳಿಯದ್ದಲ್ಲ. ಪ್ರತ್ಯೇಕ ಪಕ್ಷವು ಗೆದ್ದು ಬಂದರೆ ಪ್ರತ್ಯೇಕವಾದಿಗಳಿಗೆ ಎಲ್ಲಾ ಸೌಕರ್ಯಗಳನ್ನು ಒದಗಿಸಿ ಕೊಡಬೇಕೆಂದು ನಾನು ಎಲ್ಲೂ ಹೇಳಿರುವದಿಲ್ಲ. ಈ ರೀತಿಯ ಸುಳ್ಳು ಪ್ರಚಾರವು ಜನ ಹಿತೈಷಿಗಳಿಗೆ ಸಮಂಜಸವೂ ಅಲ್ಲ; ಅವುಗಳನ್ನು ಪ್ರಕಟಿಸುವದು ಪತ್ರಿಕೆಗಳ ಯೋಗ್ಯತೆಯೂ ಅಲ್ಲ.

ಪಿ. ಐ. ಬೆಳ್ಯಪ್ಪ.

ಮಡಿಕೇರಿಯ ಮಹಾಲಕ್ಷ್ಮಿ ಚಿಟ್ ಫಂಡ್.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಚಿಟ್ ಫಂಡಿನ ಬ್ರಾಂಚುಗಳು ಹಲವಾರು ಇದ್ದರೂ, ಇದರ ಮಡಿಕೇರಿಯ ಬ್ರಾಂಚು ಚೆನ್ನಾಗಿ ಕೆಲಸ ನಡಿಸುತ್ತಿಲ್ಲ. ಈ ಚಿಟ್ ಫಂಡು ಲಿಮಿಟೆಡ್ ಆಗಿದ್ದು ಸರಕಾರದ ಹತೋಟಿಯಲ್ಲಿರುವದೆಂದು ನಂಬಿ ನೂರಾರು ಜನರು ದಿನ, ವಾರ, ತಿಂಗಳು ಚೀಟಿಗಳಿಗೆ ಮೆಂಬರುಗಳಾಗಿ ಸೇರಿ ಈ ವರೆಗೂ ಹಣ ಕಟ್ಟಿ ಈಗ ಗಾಬರಿಗೊಂಡಿರುವರು. ಈ ಚೀಟ್ ಫಂಡು ಸದ್ಯದಲ್ಲಿಯೇ ದಿವಾಳಿಯಾಗುತ್ತದೆಂದೂ, ಇದರಿಂದ ಸಿಕ್ಕಿದನ್ನಾದರೂ ದಕ್ಕಿಸಿಕೊಳ್ಳಲು ಮೆಂಬರುಗಳು ಮೊತ್ತದ ಮುಕ್ಕಾಲು ಭಾಗದ ಬಡ್ಡಿಗೆ ತೆಗೆದರೂ, ಫಂಡಿನಿಂದ ಹಣ ಸರಿಯಾಗಿ ಕೊಡುವುದಿಲ್ಲವೆಂದೂ ಗಲಭೆಯುಂಟಾಗಿದೆ. ಕೈಗೆ ಹಣ ಸಿಕ್ಕಿದ ಮೆಂಬರುಗಳು ಕಂತುವಾರು ತಮ್ಮ ಸಾಲದ ಮೊಬಲಗನ್ನು ಪಳ್ಕೆ ಮಾಡುವುದಿಲ್ಲ. ವಸೂಲು ಮಾಡಲು ನಿಗಾ ತೆಗೆದುಕೊಳ್ಳುವುದಿಲ್ಲ. ಹೀಗಾಗಿ ಮೊತ್ತದ ಮುಕ್ಕಾಲು ಭಾಗದ ಹೆಚ್ಚು ಬಡ್ಡಿಗೆ ತೆಗೆದರೂ ಉಳಿದ ಹಣವೂ ಕೈಗೆ ಸರಿಯಾಗಿ ದೊರೆಯುತ್ತಿಲ್ಲವೆಂದರೆ ಮೆಂಬರುಗಳ ಪಾಡೇನಾಗಬೇಕು? ಇಷ್ಟು ಗಲಿಬಿಲಿ ಉಂಟಾದರೂ ಇದರ ಅಧಿಕಾರಿಹೊತ್ತವರು ಬಟ್ಟೆ ಬಿರುವದು ಸೋಜಿಗವೇ. ಅಂದ ಮೇಲೆ ಹಲವಾರು ಬ್ರಾಂಚುಗಳನ್ನು ತೆರೆದು ಈ ಚೀಟಿಯನ್ನು ನಡಿಸುವುದರ ಉದ್ದಿಶ್ಯವಾದರೂ ಏನು? ಇದು ಸರಕಾರದ ಹತೋಟಿಯಲ್ಲಿದೆಯೆಂದು ತಿಳಿಯಲಾಗಿದೆ. ಹೀಗಿರುವಾಗ ಸರಕಾರದವರು ಇದನ್ನು ವಿಚಾರಿಸಿ ಹತೋಟಿಗೆ ತಂದು ಕಷ್ಟದಿಂದ ಆರ್ಜಿಸಿದ ನೂರಾರು ಜನರ ಹಣವನ್ನು ಉಳಿಸಿ ನಿರಾಶರಾಗಿರುವ ಜನರಿಗೆ ಸಹಾಯ ಮಾಡುವರೇ?

ಮೆಂಬರು.

೫೫.

ಸರಕಾರದ ಉದ್ಯೋಗಸ್ಥರು ೫೫ ವರ್ಷ ಪ್ರಾಯ ತುಂಬಿದ ಕೂಡ್ಲೆ ನಿವೃತ್ತರಾಗಬೇಕೆಂಬುದರಲ್ಲಿ ಅರ್ಥವಿದೆ. ಆ ವ್ಯಕ್ತಿ ನಿರ್ಬಲನಾಗಿರುವನೆಂಬುದೇ ಪ್ರಾಮುಖ್ಯವಲ್ಲ. ನಿರುದ್ಯೋಗಸ್ಥರಿಗೆ ಉದ್ಯೋಗ ಒದಗಬೇಕೆಂಬುದು ಇದರ ನಿಜತತ್ವ.

ಇತ್ತೀಚೆಗೆ ಎಲ್ಲಾ ಇಲಾಖೆಗಳಲ್ಲೂ ಉದ್ಯೋಗಸ್ಥರ ಪ್ರಾಯ ರುಜುವಾತು ಕೊಡಬೇಕೆಂದರು. ಹಲವರು ತಮ್ಮ ಜನನ ತಾರೀಕುಗಳನ್ನು ಸರಿಯಾಗಿ ಕೊಟ್ಟಿರಬಹುದು. ಕೆಲವರು ಕೊಟ್ಟ ದಾಖ್ಲೆಗಳು ನಿಜವಲ್ಲದಿರಬಹುದು. ಆದರೆ ಎಲ್ಲರ ವಿಷಯದಲ್ಲೂ ಸಮಾನ ವರ್ತನೆ ಇರಬೇಕಷ್ಟೆ. ಶಾಲೆ, ಕಾಲೇಜುಗಳ ದಾಖ್ಲೆಯ ಮೇಲೆಯೇ ಎಲ್ಲಾ ಸರ್ಟಿಫಿಕೇಟುಗಳು ಭರಾಯಿಸಲ್ಪಡುತ್ತವೆ. ಹಾಗಿರುವಲ್ಲಿ ಒಬ್ಬರ ದಾಖ್ಲೆಯನ್ನು ಒಪ್ಪದೆ, ಮತ್ತೊಬ್ಬರ ದಾಖ್ಲೆಯನ್ನು ಒಪ್ಪಬಹುದೆ?

ಜನನ ತಾರೀಕುಗಳನ್ನು ದಾಖ್ಲೆ ಸಹಿತ ರುಜುವಾತುಪಡಿಸಬೇಕೆಂದಾಗ, ಜಾತಕ ಬರಿಸಿ, ಇದು ತನ್ನ ಜಾತಕವೆಂದರೆ ಅದನ್ನು ಒಪ್ಪುವ ವಿಧಾನ ಆಶ್ಚರ್ಯಕರವಾದದ್ದು. ದುಡ್ಡಿಗಾಗಿ ಹೇಳಿದಂತೆಲ್ಲ ಜಾತಕ ಬರೆಯುವ ಜ್ಯೋತಿಷ್ಯರು ಬೇಕಾದಷ್ಟಿದ್ದಾರೆ ಶಾಲೆ ಮತ್ತು ಕಾಲೇಜುಗಳಲ್ಲಿ ದೊರಕುವ ದಾಖ್ಲೆಗಳೇ ಸರಿಯೆಂದು ಒಪ್ಪಬೇಕಾಗಿದೆ. ಎಲ್ಲರಿಗೂ ಒಂದೇ ರೀತಿಯ ನ್ಯಾಯ ವರ್ತನೆಯು ದೊರಕಲೆಂದು ಕೋರುವ.

ಹಿತೈಷಿ.

ಮಂತ್ರಿಯವರ ಸಂದರ್ಶನ.

ಕೇಂದ್ರದ ಗೃಹಮಂತ್ರಿ ಕಾಟ್ಜೂರವರು ತಾರೀಕು ೨೬ ರಲ್ಲಿ ತಮ್ಮ ಪೊನ್ನಂಪೇಟೆ ಮತ್ತು ವೀರಾಜಪೇಟೆ ಕಾರ್ಯಕ್ರಮಗಳನ್ನು ಮುಗಿಸಿ ಮೂರ್ನಾಡಿನ ಮಾರ್ಗವಾಗಿ ಮಡಿಕೇರಿಗೆ ಹೋಗುವರೆಂಬ ಮಂಡಿಯನ್ನು ಕೇಳಿ ಮೂರ್ನಾಡಿನ ಮೇಯರೂ ಪೋಲೀಸ್ ಅಧಿಕಾರಿಯೂ ಸೇರಿ ಮಂತ್ರಿಗಳನ್ನು ಎದುರು ಗೊಳ್ಳಲುಸಿದ್ಧತೆ ನಡೆಸಿದರು. ಒಂದಿದ್ದ ಹಲಕೆಲವರಿಂದ ಚಂದಾ ಎತ್ತಿ ಒತ್ತೆಲಗ, ಹೂಮಾಲೆಯ ಏರ್ಪಾಡು ಮಾಡಿದರು. ಕೆಲವು ಅಂಗಡಿಗಳು ಮುಂಗಟ್ಟು, ಸ್ಕೂಲು ಕಿ ಕಾದಿದ್ದರು. ಈ ಗದ್ದಲಕ್ಕೆ ಹಲಕೆಲವು ಗ್ರಾಮಸ್ಥರೂ ಸೇರಿದ್ದರು. ಆದರೆ ರಾತ್ರಿ ಒಂಭತ್ತು ಗಂಟೆಯಾದರೂ ಮಂತ್ರಿಗಳ ಆಗಮನವಿಲ್ಲ. ವೀರಾಜಪೇಟೆ ಕಸ್ಬಾರ ಕೂಟಕ್ಕೆ ಹೋಗಿದ್ದ ಮಹನಿಯರ ಕಾರುಗಳ ಸಾಲು ಒಂದೊಂದಾಗಿ ಬಂದವು. ಮಂತ್ರಿಗಳು ಸಿದ್ದಾಪುರ ಮಾರ್ಗವಾಗಿ ಮಡಿಕೇರಿಗೆ ಹೋದರೆಂದು ತಿಳಿದು ಬಂತು! ಎಲ್ಲರೂ ನಿರಾಸೆಯಿಂದ ಹಿಂತೆರಳಿದರು. ಮೂರ್ನಾಡಿನ ಮುಖಂಡರೆನಿಸಿ ಈ ಏರ್ಪಾಡು ಮಾಡಿದವರು ವಸೂಲ್ಮಾಡಿದ ಚಂದಾ ಹಣವನ್ನಾದರೂ ವಾಪಾಸು ಮಾಡುವರೇ?

M. K.

ಯಾವ ಅಳತೆ ಕೋಲು?

ಈ ವರೆಗೆ ಅನೇಕ ಬಾರಿ ಸರಕಾರಿ ಔತಣ ಹಾಗೂ ಚಾ ಕೂಟಗಳಾಗಿವೆ. ಆ ಸಂದರ್ಭದಲ್ಲಿ ಯಾರನ್ನು ಆಹ್ವಾನಿಸಬೇಕೆಂದು ಒಂದು ಪಟ್ಟಿಯನ್ನು ತಯಾರು ಮಾಡಿ ಸರಕಾರ ಇಟ್ಟುಕೊಂಡಿರುವದು ಸಹಜ. ಇದಕ್ಕೆ 'ಸ್ಟೇಟ್ ಲಿಸ್ಟ್' ಎಂದು ಹೇಳುವರು. ಸರಕಾರದ ಯಾವುದೇ ಸಮಾರಂಭಗಳು ಜರಗಿದಾಗ ಇವರಿಗೆ ಆಹ್ವಾನವೀಯುವದು ಪದ್ಧತಿ. ಆದರೆ ಈ ಮೊನ್ನೆ ನಡೆದ ಚಹಾಪಾನ ಕೂಟದಲ್ಲಿ ವಿಶೇಷ ರೀತಿಯ ಏರ್ಪಾಡಾದಂತೆ ಕಂಡು ಬಂತು. ದೇಶದ ಜನತೆಯಲ್ಲಿ ಪ್ರಾಮುಖ್ಯರೆಂದು, ಆಹ್ವಾನ ಪತ್ರ ಕೊಡುವವರ ದೃಷ್ಟಿಯಲ್ಲಿ ತೋರಿದ ಜನರನ್ನು ಮೂರು ಭಾಗಗಳಾಗಿ ವಿಂಗಡಿಸಿದಂತೆ ಕಾಣುತ್ತದೆ. ಕೆಲವರು 'ಎ' ತರಗತಿಯವರು. ಇವರಿಗೆ ಉದ್ಘಾಟನೆಗೂ, ಚಹಪಾನಕ್ಕೂ ಆಹ್ವಾನ ಕೊಡಲಾಗಿದೆ. ಮತ್ತೆ ಕೆಲವರಿಗೆ ಉದ್ಘಾಟನೆಗೆ ಮಾತ್ರ. ಇವರು 'ಬಿ' ತರಗತಿಯವರು! ಇನ್ನು ಕೆಲವರಿಗೆ ಮಂತ್ರಿಗಳನ್ನು ಎದುರುಗೊಳ್ಳಲು ಬೋರ್ಡ್ ಬಂಗ್ಲೆಯ ಹತ್ತಿರ ಹಾಜರಿರಬೇಕೆಂದು ಆಹ್ವಾನ. ಇವರು 'ಎಕ್ಸ್' ತರಗತಿಯವರಿರಬೇಕು. ಕೊಡಗಿನ ನಾಗರಿಕರನ್ನು ಈ ರೀತಿ 'ಎ' 'ಬಿ' ಮೊದಲಾಗಿ ವಿಂಗಡಿಸಲು ಅನುಸರಿಸಿದ ಅಳತೆ ಕೋಲೇನು? ಈ ಮೊದಲು ಸರಕಾರದ ಪ್ರತಿ ಔತಣ ಮತ್ತಿತರ ಸಮಾರಂಭಗಳಿಗೆ ಆಹ್ವಾನಿಸಲ್ಪಡುತ್ತಿದ್ದವರು ಈ ಹೊಸ ಸರಕಾರದ ದೃಷ್ಟಿಯಲ್ಲಿ ಅಯೋಗ್ಯರಾದುದೇಕೆ? ಬೇರೆ ಜನರಿಗೆ ಆಹ್ವಾನ ಕೊಡಬಾರದೆಂದಲ್ಲ? ಆದರೆ ಈ ವರೆಗೆ ಆಹ್ವಾನ ದೊರೆಯ ನಿದ್ದವರಿಗೆ ದೊರೆಯದಿರಲು ಕಾರಣವೇನು? ಬದಲು ಕಾಂಗ್ರೆಸ್ ಪಕ್ಷದ ಏಜೆಂಟರಾಗಿ ಕೆಲಸ ಮಾಡಿದವರಿಗೂ, ಇತರ ಸಹಾಯ ಕೊಟ್ಟವರಿಗೂ ಆಹ್ವಾನವಿದೆ. ಆತನು ಡ್ರೈವರನಿರಲಿ, ದರ್ಜಿಯಾಗಿರಲಿ, ಚಿಕ್ಕ ಅಂಗಡಿಯ ವನಾಗಿರಲಿ, ಕೈಸಾಗಿರಲಿ ಕಾಂಗ್ರೆಸ್ಸಿಗೆ ಕೆಲಸ ಮಾಡಿದವನಿಗೆ ಆಹ್ವಾನವಿದೆ. ದ್ರೈವರ್, ದರ್ಜಿ ಎಂದು ಅವರನ್ನು ಕಡೆಗಣಿಸಬೇಕೆಂದು ನನ್ನ ಅಭಿಪ್ರಾಯವಲ್ಲ. ಆದರೆ ದೇಶದಲ್ಲಿ ಇನ್ನು ಜನ ಡ್ರೈವರು, ದರ್ಜಿಗಳಿಲ್ಲ? (ಕಾಂಗ್ರೆಸ್) ಪಕ್ಷಕ್ಕೆ ಕೆಲಸ ಮಾಡಿದವರಿಗೆ ಮಾತ್ರ ಈ ಆಹ್ವಾನವೇ

'ಸ್ಟೇಟ್ ಲಿಸ್ಟ್'ನಲ್ಲಿ ಹೆಸರಿದ್ದೂ ಕಾಂಗ್ರೆಸಿಗೆ ಕೆಲಸ ಮಾಡದವರಿಗೆ ಮಾತ್ರ ಆಹ್ವಾನ ಪತ್ರ ಕೊಡದಿರಲು ಕಾರಣವೇನು? ಬಸ್ಸಿನ ಮಾಲೀಕರಿಗೆ ಆಹ್ವಾನವಿಲ್ಲ. ಡ್ರೈವರನಿಗೆ ಇದೆ. ತಂದೆಗೆ ಆಹ್ವಾನವಿಲ್ಲ. ಮಗನಿಗೆ ಇದೆ! ಹೀಗಾಗಲು ಕಾರಣವೇನು? ಕೊಡಗು ಸರಕಾರದ ಚಹಾಪಾನ ಕೂಟವೆಂದಾಗ ಕಾಂಗ್ರೆಸ್ ಪಕ್ಷದವರ ಚಹಾಕೂಟವೇ?

'ಅಹ್ವಾನಿತ'

ಇದು ನಿಜವೇ ?

ಸಿವಿಲ್ ಸರ್ಜನರು ತಾವು ಇದ್ದ ಬಂಗ್ಲೆಯನ್ನು ಖಾಲಿ ಮಾಡಿ ಮಡಿಕೇರಿ ಪ್ರಯಾಣಿಕರ ಬಂಗ್ಲೆಯ ಹತ್ತಿರದ 'ವೇಕ್ಸಿನ್ ಡಿಪೋ'ದಲ್ಲಿರುವರು. ಈ ಮನೆಯು ಎಷ್ಟು ಅನುಕೂಲದಲ್ಲಿದೆಯೆಂಬುದು ನೋಡಿದವರಿಗೇ ಗೊತ್ತು. ಹೇಗೂ ಮೇಲಿನ ಅಧಿಕಾರಿಗಳ ಅಜ್ಞೆಯನ್ನು ಕೆಳಗಿರುವವರು ಪಾಲಿಸಬೇಕು. ಅದರಂತೆ ಸಿವಿಲ್ ಸರ್ಜನರು ನಡೆದಿದ್ದಾರೆ. ಸರಕಾರದ ಆಜ್ಞೆಯ ನ್ಯಾಯಾನ್ಯಾಯಗಳನ್ನು ಜನರು ತೀರ್ಮಾನಿಸಿಕೊಳ್ಳಲಿ.

ಆದರೆ ಮಂತ್ರಿಗಳು ತನ್ನ ಹತ್ತಿರದಲ್ಲಿರಬೇಕು. ಆದ್ದರಿಂದ ಸಿವಿಲ್ ಸರ್ಜನರ ಬಂಗ್ಲೆಯು ತೆರವಾಗಬೇಕು. ತಾನಿರುವ ಬೋರ್ ಬಂಗ್ಲೆಗೂ, ಸಿವಿಲ್ ಸರ್ಜನರ ಬಂಗ್ಲೆಗೂ ಹತ್ತಿರವಾಗುವದೆಂದು ಚೀಫ್ ಕಮಿಷನರು ಅಭಿಪ್ರಾಯಪಟ್ಟದಾಗಿ ವರ್ತಮಾನವಿದೆ. ಇದು ನಿಜವಾದರೆ ಮತ್ತೊಬ್ಬ ಮಂತ್ರಿ ಮಲ್ಲಪ್ಪನವರು ಪೇಟೆಯಲ್ಲಿ ತಮ್ಮ ಮನೆಯಲ್ಲಿ ಇಲ್ಲವೇ? ಅವರನ್ನು ಹತ್ತಿರ ತರುವ ಏರ್ಪಾಡು ಮಾಡಲಿಲ್ಲವೇಕೆ?

'ಕ್ರೈತ'

ನಾಚಿಕೆ ಕೇಡು !

ಮೊನ್ನೆ ಕೇಂದ್ರ ಸರಕಾರದ ಗೃಹ ಮಂತ್ರಿಗಳು ಕೊಡಗಿಗೆ ಬಂದಿದ್ದಾಗ ಪೊನ್ನಂಪೇಟೆಯಲ್ಲಿ ಕಾಂಗ್ರೆಸಿನವರು ಅವರಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಿದರು. ಅದರಲ್ಲಿ ಇದ್ದ ಎರಡು ಪ್ರಾಮುಖ್ಯ ವಿಚಾರಗಳನ್ನು ಬರೆಯದೆ ಸಾಧ್ಯವಾಗದು. ನಾನೂ ಕೂಡ ಮಂತ್ರಿಯವರನ್ನು ಕಾಣಲು ಹೋಗಿದ್ದ ಕಾರಣ ನನಗೂ ಒಂದು ಬಿನ್ನವತ್ತಳೆಯ ಪ್ರತಿ ದೊರಕಿತು. ಅದರಲ್ಲಿ ಕಾಂಗ್ರೆಸ್ ಕೋಮುವಾದಿಗಳ ಐಕ್ಯತೆಗಾಗಿ ಹೋರಾಡುತ್ತಿದೆಯೆಂದೂ ಕೊಡಗಿನಲ್ಲಿ ಕಾಂಗ್ರೆಸ್ಸಿಗೆ ವಿರುದ್ಧವಾದ ಪಕ್ಷಗಳು ಚುನಾವಣೆಯಲ್ಲಿ ಗೆಲ್ಲಲಿಕ್ಕಾಗಿ ಕೋಮುವಾರು ಭಾವನೆಯನ್ನು ಹೆಚ್ಚಿಸಿದರೆಂದೂ (There were anti congress bodies in coorg trying to win the elections by fomenting Communal feelings) ಬರೆದಿದ್ದಾರೆ. ಕೊಡಗಿನಲ್ಲಿ ಕೋಮುವಾರು ಭಾವನೆಯನ್ನು ಹೆಚ್ಚಿಸಿದ್ದರೆ ಅದು ಕಾಂಗ್ರೆಸ್ಸೆಂದು ಬೇರೆ ಹೇಳಬೇಕಾಗಿಲ್ಲ. ಕೊಡಗಿನ ಪ್ರತ್ಯೇಕ ಪಕ್ಷದವರು ಕೋಮುವಾರು ಭಾವನೆಯನ್ನು ಪ್ರಚಾರ ಮಾಡುವದು ಅವರ ಹಿತದೃಷ್ಟಿಯಿಂದಲೇ ಯುಕ್ತವಲ್ಲ. ಏಕೆಂದರೆ ಕೊಡಗಿನಲ್ಲಿರುವ ೯೫,೦೦೦ ಮತದಾರರಲ್ಲಿ ಕೊಡವರು ಕೇವಲ ೨೦,೦೦೦. ಪ್ರತ್ಯೇಕ ಪಕ್ಷವು ಕೊಡವರ ಪಕ್ಷವೆಂದು ಕಾಂಗ್ರೆಸ್ಸಿಗರು ಹೇಳಿದ್ದಾರೆ. ಒಂದು ವೇಳೆ ಕೊಡಗಿನ ಕೊಡವರೆಲ್ಲರೂ ಒಂದಾದರೂ ಬಹುಮತ ದೊರೆಯದೆಂಬುದು ಪ್ರತ್ಯೇಕ ಪಕ್ಷಕ್ಕೆ ತಿಳಿದಿರಲಿಲ್ಲವೆಂದು ಇವರ ವಾದವೆ? ಆದ್ದರಿಂದಲೇ ಅವರು ಎಲ್ಲಾ ಕೋಮಿನವರನ್ನು ಕೂಡಿಕೊಂಡು (ಅವರ ಪಕ್ಷದಲ್ಲಿ ಎಲ್ಲ ಮತದವರೂ ಉಮೇದುವಾರರಾಗಿ ನಿಂತಿದ್ದರು) ಕೆಲಸ ಮಾಡಿದರು. ಆದರೆ ಕಾಂಗ್ರೆಸು ಕೋಮುವಾರು ದೃಷ್ಟಿಯಿಂದಲೇ ಸ್ವಾರ್ಥಬದ್ಧವಾದ ಮುಸ್ಲಿಮರ ಕೇಳಿಕೆಯನ್ನು ನಿರಾಕರಿಸಿತು. ಕಾಂಗ್ರೆಸಿಗೆ ಬೇಕಿದ್ದದ್ದು ಜಯ. ಸಮತಾದೃಷ್ಟಿಯಲ್ಲ. ಆ ಜಯದ ಕಾರಣವೇ ಕೋಮುವಾರು ದೃಷ್ಟಿಯಿಂದಲೇ ಉಮೇದುವಾರರನ್ನು ನಿಲ್ಲಿಸಿದರು. ಇಲ್ಲದಿದ್ದರೆ ಭಾಗಮಂಡಲಕ್ಕೆ ಮೂರ್ನಾಡಿನ ಶ್ರೀ ಕೆ. ದೇವಯ್ಯನವರನ್ನು ನಿಲ್ಲಿಸಿದ ಮರ್ಮವೇನು? ಪ್ರತ್ಯೇಕ ಪಕ್ಷವು ಕೊಡವರ ಪಕ್ಷ. ಅದು ಕೊಡಗೇತರರನ್ನು ಕೆಳಗೆ ತುಳಿಯಲು ಹೊರಟಿದೆಯೆಂದು ಅಪಪ್ರಚಾರ ಮಾಡಿದವರಾರು?

ಮತ್ತೊಂದು ವಿಚಾರ. ಕೊಡಗಿನ ಚೀಫ್ ಕಮಿಷನರು ತಮ್ಮ ಎರಡು ವರ್ಷಗಳ ಅಲ್ಪ ಆಡಳಿತ ಅವಧಿಯಲ್ಲಿ ದೇಶಕ್ಕೆ ಬಹಳ ಹಿತ ಮಾಡಿದ್ದಾರೆ. ಅವರ ಅನುಭವ, ಬುದ್ಧಿಶಕ್ತಿಯಿಂದ ಕೊಡಗಿನ ಸರಕಾರಕ್ಕೆ ಜೀವ ಕಳೆ ಬಂದಿದೆ. ಅವರು ನಮ್ಮ ಮಂತ್ರಿಗಳಿಗೆ ಸಹಾಯಕಶಕ್ತಿಯಾಗಿ ಇರುವವರು ಎಂದಿದ್ದಾರೆ. ಕೊಡಗು ಕಾಂಗ್ರೆಸು ಜನತಾ ಸಂಸ್ಥೆಯಂತೆ. ಅದು ಜನರ ಅಭಿಮತವನ್ನು ಪ್ರತಿಬಿಂಬಿಸುತ್ತಿದೆಯೇ? ಚೀಫ್ ಕಮಿಷನರ ಆಡಳಿತದ ವಿಚಾರವಾಗಿ ಅವರಿಗೆ ಸಂಬಂಧಿಸಿದ ಮೇಲಧಿಕಾರಿಗಳಿಗೂ ಮತ್ತು ಜನತೆಗೂ ಅಲ್ಪಸಲ್ಪ ತಿಳಿದಿರಲಿಕ್ಕಿಲ್ಲವೇ? ಆದರೆ ಕೇಂದ್ರದ ಮಂತ್ರಿಗಳನ್ನು ಸ್ವಾಗತಿಸಿ, ಕಾಂಗ್ರೆಸ್ಸಿಗರಾದ ಅವರನ್ನು ಅಭಿನಂದಿಸಿ ತಮ್ಮ ಎದುರು ತೊಂದರೆಗಳನ್ನು ಅವರ ಮುಂದೆ ಹೇಳಿಕೊಳ್ಳುವ ಬದಲು ಈ ಹೊಗಳು ಭಟ್ಟ ಕೆಲಸ ಈ ಕಾಂಗ್ರೆಸಿನವರಿಗೇಕೆ? ಕಳೆದ ವಾರದ ಪತ್ರಿಕೆಯಲ್ಲಿ ಫ್ರೇಜರ್ ಪೇಟೆಯವರು, ಮಡಿಕೇರಿ ಪುರಸಭೆಯವರು ಕೊಟ್ಟ ಬಿನ್ನವತ್ತಳೆಯ ಸಾರಾಂಶವನ್ನು ಓದಿದೆ. ಗೃಹಮಂತ್ರಿಗಳಿಗೆ ಕೊಟ್ಟ ಬಿನ್ನವತ್ತಳೆಯೆಂದರೆ ಚೀಫ್ ಕಮಿಷನರ ಶಿಫಾರಸ್ಸು ಪತ್ರವೇ?

'ಹಾಜರಿಗ್ಗೆ'

ಕಾಳಸಂತೆ

ಇಂದು ಇಡೀ ಕೊಡಗಿನಲ್ಲಿ ನಡೆಯುವದಾದರೆ ಮದ್ಯಪಾನದ ಕಾಳಸಂತೆ ಒಂದೇ ವಿನಾ ಮತ್ತೆ ಬೇರೆ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಮೊದಲಾಗಿ ಒಬ್ಬೊಬ್ಬರು ಒಂದು ಮಳಿಗೆಯನ್ನು ಬಾಡಿಗೆಗೆ ಪಡೆದುಕೊಂಡು ಕೆಲವು ಮುರುಕಲು ಸೈಕಲುಗಳನ್ನು ಇಟ್ಟುಕೊಂಡು ಸೈಕಲ್ ರಿಪೇರಿ ಮಾಡುತ್ತೇವೆಂದು ಹೇಳಿಕೊಂಡು ಬತ ಕೈತನ ಕೈಯಿಂದ ಕಾಪಿಗಳನ್ನು ಕೇಳಿಕೊಂಡು ಕುಪ್ಪಿ ಒಂದರ ೮ ರೂ. ಗಳಿಂದ ೧೩ ರೂ. ಗಳ ವರೆಗೆ ಸಂಪಾದಿಸತೊಡಗಿದರು. ಇವರ ಕಂಗಾಳಿಯು ಹೋಟೇಲುಗಳಿಗೂ ಬೀಸಿತು. ಈಗೀಗ ಜನಸಾಮಾನ್ಯ ವ್ಯಾಪಾರಿಗಳೂ ಮತ್ತಿತರರೂ ಸಹ ತೊಡಗಿದ್ದಾರೆ.

ಸರಕಾರವು ಇದರ ವಿಷಯದಲ್ಲಿ ಎಷ್ಟು ಜಾಗರೂಕರಾಗಿದ್ದಾರೋ ಅಷ್ಟಕ್ಕಂತ ಹತ್ತು ಪಾಲು ಹುಷಾರು ಕಾಳಸಂತೆಯವರು ಇರುತ್ತಾರೆ. ಅಧಿಕಾರಿಯು ಒಂದು ಮಳಿಗೆಗೆ ನುಗ್ಗಿ ತನಿಖೆ ಮಾಡುವ ಸಮಯದಲ್ಲಿ ಇಡೀ ಪೇಟೆ ಉದ್ದಕ್ಕೂ ಅವರ ವಿಷಯವು ಟೆಲಿಫೋನಿನ ಮೂಲಕವೋ ಎಂಬಂತೆ ತಿಳಿಯುವದು. ಒಂದು ವೇಳೆ ಒಬ್ಬನು ತಪ್ಪಿತಸ್ಥನಾಗಿ ಸಿಕ್ಕಿಬಿದ್ದರೆ ಆತನು ಯಾವುದಕ್ಕೂ ಹೆದರುವದಿಲ್ಲ. ಸರಕಾರವು ಹತ್ತೊ ಇಪ್ಪತ್ತೊ ರೂಪಾಯಿಗಳನ್ನು ಫೈನ್ ವಿಧಿಸಿದರೆ ಅವರು ಆ ಫೈನ್ ಕಟ್ಟುವ ಮೊದಲೇ ಕಡಿಮೆ ಪಕ್ಷ ೨೦೦ ರೂ. ಗಳನ್ನು ಸಂಪಾದಿಸುತ್ತಾರೆ. ಈ ಸಂಪಾದನೆಯನ್ನು ಕಲ್ಪಿಸಿ ಕೊಟ್ಟದ್ದು ಸರಕಾರವೇ ಎಂದರೆ ತಪ್ಪಾಗಲಾರದು.

ಕಾಳಸಂತೆ ಮಾಡುವವರನ್ನು ಹಿಡಿದರೆ ಅವರಿಗೆ ಫೈನಿನ ಬದಲು ೩ ತಿಂಗಳಿಂದ ೬ ತಿಂಗಳ ವರೆಗೆ ಸಜ ವಿಧಿಸಿದ್ದೇ ಆದರೆ ಬರೀ ಕೆಲವೇ ದಿನಗಳಲ್ಲಿ ಕಾಳಸಂತೆಯು ಮಾಯವಾಗುವದೆಂಬದಕ್ಕೆ ಎಳ್ಳಷ್ಟು ಸಂಶಯವಿಲ್ಲ.

ಬಡ ರೈತ

ಕೊಡಗಿನ ಸರಕಾರ ಯಾರದು ?

ತಾ. ೨೫-೩-೫೨ರ ಸ್ಟೇಟ್ ಗಾರ್ಡನ್ ಪಾರ್ಟಿಯು ೪ ಗಂಟೆಗೆ ಬೋರ್ ಬಂಗಲೆಯಲ್ಲಿ ನಡೆಯಿತು. ಅದಕ್ಕೆ ಹಾಜರಾಗಲು ಕೊಡಗಿನ ೪೦೦ ಜನರ ವರೆಗೆ ಆಹ್ವಾನ ಪತ್ರ ಕೊಟ್ಟಿದ್ದರೆಂದು ವರ್ತಮಾನ. ಬಸ್ ಮಾಲೀಕರೊಬ್ಬರ ಜೇಬಿನಲ್ಲಿ ಈ ಆಹ್ವಾನ ಪತ್ರಗಳು ಬೇಕಾದಷ್ಟಿದ್ದು ಅವರು ತಮಗೆ ಬೇಕಾದವರಿಗೆ ಬರೆದು ಕೊಡುತ್ತಿದ್ದರೆಂದು ವರ್ತಮಾನವಿದೆ. ತಾ. ೨೬-೩-೫೨ರ ಕೊಡಗಿನ ಎಸೆಂಬ್ಲಿಯ ಉದ್ಘಾಟನಾ ಸಮಾರಂಭದ ಆಹ್ವಾನ ಪತ್ರವನ್ನೂ ಜೇಬಿನಲ್ಲಿಟ್ಟು ತಮಗೆ ಬೇಕಾದವರಿಗೆ ಬರೆದು ಕೊಡುವದನ್ನು ನಾನು ಖುದ್ದು ಕಂಡವನಾಗಿದ್ದೇನೆ. ಕೌನ್ಸಿಲ್ ಸೆಕ್ರೆಟರಿಯವರ ಹೆಸರಿನ ಪತ್ರಗಳು ಈ ರೀತಿ ಇದ್ದವರ ಕೈಯಲ್ಲಿ ಅವರಿಗೆ ಬೇಕುಬೇಕಾದವರಿಗೆ ಬರೆದು ಕೊಡುವಂತಾದರೆ ಸರಕಾರ ಜನತೆಯ ಕೈಗೆ ಬಂತೆಂದರ್ಥವೇ? ಚಹಪಾನದ ಮತ್ತು ಉದ್ಘಾಟನಾ ಸಮಾರಂಭದ ಆಹ್ವಾನ ಪತ್ರಗಳು ಹೆಚ್ಚಾಗಿ ಚುನಾವಣೆಯಲ್ಲಿ ಜಯಶೀಲರಾದ ಕಾಂಗ್ರೆಸ್ಸಿನವರಿಗೆ ಕೆಲಸ ಮಾಡಿದ ಏಜೆಂಟರುಗಳಿಗೂ ಸಹಾಯಕರಿಗೂ ಕೊಡಲ್ಪಟ್ಟವೆಯೆಂದು ಎದ್ದು ತೋರುತ್ತಿತ್ತು. ಇದು ಸರಿಯೆನ್ನುವದಾದರೆ ಕೊಡಗಿನ ಸರಕಾರ ಯಾರದು?

'ನಿಷ್ಪಕ್ಷಪಾತಿ'

ಹೈಸ್ಕೂಲುಗಳು.

ಕೊಡಗು ದೇಶದಲ್ಲಿ ೨ ಹೈಸ್ಕೂಲುಗಳು ಇದ್ದವು. ಇವು ಸಾಲದೆಂದು ಸ್ತ್ರೀಯರಿಗಾಗಿ ಮಡಿಕೇರಿಯಲ್ಲಿ ಒಂದು ಬಂತು. ಸರಕಾರಿ ಶಾಲೆಗಳು ಪುನಃ ಮೂರಾದವು. ಅಷ್ಟಕ್ಕೂ ತೃಪ್ತರಾಗದೆ ವೀರಾಜಪೇಟೆ ಮಡಿಕೇರಿಯಲ್ಲಿ ಸರಕಾರದಿಂದ ಸಂಪೂರ್ಣ ಸಹಾಯ ಪಡೆಯುವ ೨ ಪ್ರೈವೇಟ್ ಶಾಲೆಗಳಾದವು. ಓದುವವರ ಸಂಖ್ಯೆ ಹೆಚ್ಚಾಗಲು ಹುಟ್ಟಿರಲಿಲ್ಲ, ಹಾಗಾಗಿ ನಲ್ಲೂ ೨ ಶಾಲೆಗಳಾದವು. ಆದರೆ ಕೊನೆಗೆ ಕೆಲವು ಶಾಲೆಗಳಲ್ಲಿ ಸರಿಯಾದ ಕಟ್ಟಡಗಳಿಲ್ಲದ್ದರಿಂದ ಅವು ಮುಚ್ಚಿ ಹೋಗಬಹುದೆಂಬ ಸಂಶಯವು ಈಗಾಗಲೇ ತಲೆದೋರಿದೆ. ಆದರೆ ಪ್ರತಿಯೊಬ್ಬ ಬಾಲಕ ಬಾಲಕಿಯರಿಗೂ ಮನೆಯಿಂದಲೇ ಹೋಗಿ ವಿದ್ಯೆ ಕಲಿಯುವ ಸೌಕರ್ಯ ಮತ್ತು ಹಣದ ಉಳಿತಾಯವನ್ನು ನೋಡಿದರೆ ಶಾಲೆಗಳು ಮುಚ್ಚಲಾಗಲಿಕ್ಕಿಲ್ಲವೆಂದು ತೋರುತ್ತವೆ. ಎರಡು ಶಾಲೆಗೆ ಸಂಬಂಧಪಟ್ಟ ಮಹನೀಯರೂ ಈಗ ಆ ಹೈಸ್ಕೂಲುಗಳಲ್ಲಿ ಓದುತ್ತಿರುವ ಬಾಲಕ ಬಾಲಕಿಯರೂ ರಜದ ಸಮಯದಲ್ಲಿ ಊರೂರಲ್ಲಿ ತಿರುಗಿ ಹಣ ಸಂಗ್ರಹಿಸಲು ಸೊಂಟಕಟ್ಟಬೇಕು.

ನಮ್ಮ ದೇಶದ ಜನರು ಇಷ್ಟಕ್ಕೆ ತೃಪ್ತರಾಗದೆ ಪುನಃ ಮೂರ್ನಾಡು, ಪೊನ್ನಂಪೇಟೆ ಮತ್ತು ಅಮ್ಮತ್ತಿಯಲ್ಲಿ ಹೈಸ್ಕೂಲು ಕಟ್ಟುವ ಮಾತು ಕೇಳುತ್ತಿದೆ. ಇದು ಸಾಧ್ಯವೋ ಎಂಬ ಮಾತು ಎಲ್ಲರ ತಲೆಯಲ್ಲಿದೆ. ಕೆಲವರು ಹೈಸ್ಕೂಲುಗಳು ಹೀಗೆ ಹೆಚ್ಚಾದರೆ ಓದಿದ ಮಕ್ಕಳಿಗೆ ಉದ್ಯೋಗ ಇಲ್ಲದೆ ಎಲ್ಲರೂ ಕಮ್ಯೂನಿಸ್ಟರಾಗುವರೆನ್ನುವರು. ಇನ್ನು ಕೆಲವರು ಸರಕಾರದ ಖರ್ಚು ಹೆಚ್ಚು ಮಾಡಿಸಿ ಕೊಡಗನ್ನು ಪರದೇಶಕ್ಕೆ ಮಾರಲಿರುವ ಉಪಾಯವೆಂದು ಹೆದರುವರು. ಆದರೆ ಪರಿಸ್ಥಿತಿ ಹಾಗಿಲ್ಲ. ಎಲ್ಲರ ಬೆಂಬಲ ಈ ವಿದ್ಯಾ ಸಾಧನೆಗೆ ಅತ್ಯವಶ್ಯವಾಗಿದೆ.

N N P

ಸಿಲೋನ್ ಪ್ರಧಾನರ ನೇಮಕ.

ನಿಧನ ಹೊಂದಿದ ಸಿಲೋನಿನ ಪ್ರಧಾನರಾದ ಶ್ರೀ ಡಿ. ಎಸ್. ಸೇನಾನಾಯಕೆಯವರ ಬದಲು ೪೦ ವರ್ಷ ಪ್ರಾಯದ ಅವರ ಹಿರೀಮಗ ಶ್ರೀ ಡಡ್ಲಿ ಸೇನಾನಾಯಕೆಯವರನ್ನು ಸಿಲೋನಿನ ಪ್ರಧಾನರನ್ನಾಗಿ ನೇಮಿಸಿರುವರೆಂದು ತಿಳಿಯಬಂದಿದೆ.

ಕೊರಿಯಾದಲ್ಲಿ ಕ್ರಿಮಿ ಯುದ್ಧದ ಬಗ್ಗೆ ತನಿಖೆ.

ಕೊರಿಯಾದಲ್ಲಿ ನಡೆದಿದೆಯೆಂದು ಹೇಳಲಾಗಿರುವ ಈ ವಿಚಾರವನ್ನು ಪ್ರಪಂಚದ ಮಾಜೀ ಸೈನಿಕರ ಸಭೆಯು ಅಂತರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಯ ಆಸಕ್ತಿಗೆ ಬೆಂಬಲ ಕೊಟ್ಟಿದೆ. ಅಂತರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಯವರು ತನಿಖೆ ನಡೆಸಲು ಯುದ್ಧ ಪ್ರದೇಶದಲ್ಲಿ ಅವಕಾಶ ಕೊಡಬೇಕೆಂದು ಕೇಳಿದ ಬೇಡಿಕೆಗೆ ಚೈನೀ ಕಮ್ಯೂನಿಸ್ಟರು ಮತ್ತು ಉತ್ತರ ಕೊರಿಯ ಅಧಿಕಾರಿಗಳು ಇನ್ನೂ ಜವಾಬಿತ್ತಿಲ್ಲ.

ನೀವೂ ಆನಂದ ಅನುಭವಿಸಬಾರದೇಕೆ ?

ಹೆಚ್ಚಿನ ಮಂದಿ ತಮ್ಮ ಜೀವನದಲ್ಲಿ ವ ಹಾಗನೇ ಒಂದಂಶವನ್ನು ಅದೊಂದು ರೀತಿಯ ಜಿಗುಪ್ಸೆಯಲ್ಲಿ ಕಳೆಯುತ್ತಾರೆ. ಅವರಿಗೆ ಜೀವನದಲ್ಲಿ ಜಿಗುಪ್ಸೆ ಹುಟ್ಟಿಸುವ ವಿಷಯಗಳು ದರೋ ಅವರು ವಿಶ್ರಾಂತಿ ಸಾಧನಗಳೆಂದು ತಿಳಿದವುಗಳೇ ಆಗಿವೆ. ಒಂದು ವ್ಯಾಪಾರೀ ಯೋಜನೆಗಾಗಿ ಆರು ಮಂದಿಯನ್ನು ಒಟ್ಟುಗೂಡಿಸಿ; ಅವರು ಆಸಕ್ತಿಯಿಂದ ದುಡಿಯುತ್ತಾರೆ. ಆದರೆ ಮುಂದಿನ ಮಟ್ಟಿಗೆ ಅಂತಹುದೇ ಕೂಟವೊಂದನ್ನು ಕೂಡಿಸಿದರೆ ಅವರ ಆಸಕ್ತಿಯೇ ಬೇರೆಯಾಗುತ್ತದೆ. ಒಬ್ಬನಿಗೆ ಮತ್ತೊಬ್ಬನ ಪ್ರಿಯವಾದ ವಿಷಯದಲ್ಲಿ ಅನಾಸಕ್ತಿ ಕಂಡುಬರುತ್ತದೆ.

ಹೀಗಾಗಲು ಕಾರಣವೇನು? ಹೊಸ ಹೊಸ ವಿಷಯಗಳಲ್ಲಿ ಆಸಕ್ತಿ ಹೊಂದುವ ಕಲೆಯಲ್ಲಿ ನಮ್ಮಲ್ಲಿ ಹೆಚ್ಚಿನವರು ಅಭ್ಯಾಸ ಪಡೆದಿಲ್ಲ. ಈ ಜಗತ್ತು ನಮಗೆ ನೀಡುವ ಹಲವು ಬೇರೆ ಬೇರೆ ವಿನೋದಗಳಲ್ಲಿ ಆನಂದ ಅನುಭವಿಸಲು ನಾವು ಕಲಿತಿಲ್ಲ.

ನನಗೆ ಪರಿಚಯದ ಒಬ್ಬ ಹುಡುಗಿ ಇದ್ದಾಳೆ. ಆಕೆಗೆ ಆಗೊಂದು ಮಹಿಳಾ ಸಭೆಯ ಕುರಿತು ಬೇಸರ ಹಿಡಿದು ಹೋಗಿತ್ತು. ಅವಳ ಸ್ನೇಹಿತರೆಲ್ಲರೂ ಕಷ್ಟದ ಆ ಸಂಸ್ಥೆಯ ಭಾಷಣ ಕಾರ್ಯಕ್ರಮಗಳಿಗೆ ಎಳ್ಳು ಹಾಜರಾಗುತ್ತಿದ್ದರು. ಉಪಾಯವಿಲ್ಲದೆ ಆಕೆಯೂ ಹೋಗಬೇಕಾಗುತ್ತಿತ್ತು. ಆದರೆ ಅಲ್ಲಿ ನಡೆಯುವ ಭಾಷಣಗಳಲ್ಲಿ ಆಕೆಗೆ ಒಂದಿಷ್ಟಾದರೂ ಆಸಕ್ತಿ ಇರಲಿಲ್ಲ. ನಟಕಿಯಂತೆ ಅಲ್ಲಿ ಕೂತು ಭಾಷಣ ಕೇಳುತ್ತಿದ್ದಳು. ಒಮ್ಮೆ ಆ ಮಹಿಳಾ ಸಭೆಯ ಕೆಲ ಮಂದಿ ಸದಸ್ಯರು ಆಕೆಯೊಡನೆ ಒಂದು ನಾಟಕದ ತರಬೇತಿ ದರ್ಜೆ ತೆರೆಯುವ ಪ್ರಸ್ತಾಪ ಎತ್ತಿದರು. ಆ ವಿಷಯದಲ್ಲಿ ಅವಳಿಗೆ ಆಸಕ್ತಿ ಇತ್ತು. ಹಾಗಾಗಿ ಮುಂದೆ ಸಭಾ ಚಟುವಟಿಕೆಗಳಲ್ಲಿ ಆಕೆಗೆ ಪ್ರೇಮ ಹುಟ್ಟಿತು. ನಾಟಕಗಳ ಕುರಿತ ಹಲವು ಗ್ರಂಥಗಳನ್ನು ಓದಿದಳು. ಹಲವಾರು ನಾಟಕಗಳನ್ನು ಅಭ್ಯಸಿಸಿದಳು. ಹೀಗೆ ಕ್ರಮೇಣ ಆಕೆಗೆ ಸಭೆಯ ಇತರ ಚಟುವಟಿಕೆಗಳ ಕಡೆಗೂ ಆಸಕ್ತಿ ವಹಿಸ್ತು ಮುಂದೆ ಹುಟ್ಟಿ, ಜೀವನದಲ್ಲಿ ಜಿಗುಪ್ಸೆ ಎಂಬುದು ಇಲ್ಲದಾಯಿತು.

ಕಲೆಯ ಕುರಿತು ಯಾವುದೂ ಮಾಹಿತಿ ಕೊಳ್ಳದವನೊಬ್ಬನು ಚೀನಾ ಕಲಾ ಪ್ರದರ್ಶನವನ್ನು ನೋಡಹೊರಟಿದ್ದ. ಒಂದಾ ಕಲಾ ಪ್ರದರ್ಶನದ ಕಡೆಗೆ ಬೆರಳು ತೋರಿಸಿ, 'ಜೀವ ಇಲ್ಲದ ಜಡವಸ್ತುಗಳು. ಒಂದು ಕ್ಷಣ ರೂಪವಿಲ್ಲ. ಅರ್ಥವಿಲ್ಲ' ಎಂದು ಟೀಕಿಸಿದನು. ಅವನ ಜೊತೆಗೆ ಕಲೆಯ ಕುರಿತ ಗೋಚ ಜ್ಞಾನವಿತ್ತು. ಆತ ತನ್ನ ಗೆಳೆಯನ ಟೀಕೆ ಕೇಳಿ ನಗುತ್ತಾ, 'ಇವು ಚೀನೀಯರ ಚಿತ್ರಕಲೆ. ಅವರ ಚಿತ್ರಗಳನ್ನು ಬರೆವಾಗ ಮೇಲಿನಿಂದ ನಮಗೆ ವಸ್ತುಗಳು ಹೇಗೆ ಕಂಡುಬರುತ್ತವೋ ಹಾಗೆ ಬಿಡಿಸುತ್ತಾರೆ. ವಿಮಾನದಿಂದ ಕೆಳಗಿನ ದೃಶ್ಯಗಳನ್ನು ಕಂಡಂತೆ ಅವರ ಚಿತ್ರಕಾರರು' ಎಂದು ಹೇಳಿದಾಗ ಅವನಿಗೆ ಆ ವಿಷಯದ ಕುರಿತು ಗೋಚ ಆಸಕ್ತಿ ಹುಟ್ಟಿಕೊಂಡಿತು. ಅವನು ಆಗ ಹೇಳಿದವರ ಸಹಕಾರ ಕಂಡು ಹಿಡಿಯುವುದಕ್ಕಾಗಿ ಚೀನೀ ಕಲೆಯನ್ನು ಅಭ್ಯಸಿಸತೊಡಗಿದ. ಈಗ ಆತ ಆ ಕಲೆಯಲ್ಲಿ ಎಕ್ಸ್‌ಪರ್ಟ್ ಸ್ಪೆಶಲಿಸ್ಟ್! ಒಮ್ಮೆ ಯಾವುದನ್ನು ಆತ ತಿರಸ್ಕಾರ ದೃಷ್ಟಿಯಿಂದ ಕಂಡಿದ್ದನೋ ಅದನ್ನೇ ಆತ ಇಂದು ಪವಿತ್ರವೆಂದು ಪೂಜಿಸುತ್ತಾನೆ.

ಹೊಸ ವಿಷಯಗಳ ಕುರಿತು ಆಸಕ್ತಿ ಹುಟ್ಟಬೇಕಾದರೆ ನಮಗೆ ಅಭಿರುಚಿ ಇಲ್ಲದ ಚಟುವಟಿಕೆಯನ್ನು, ಚೆನ್ನಾಗಿ ಅಭಿರುಚಿಯುಳ್ಳ ಚಟುವಟಿಕೆಯ ಸ್ಥಾನದಲ್ಲಿ ಬದಲಾಯಿಸಲು ನಾವು ಯತ್ನಿಸಬೇಕು. ಮೊದ ಮೊದಲು ಕಠಿಣವೆನಿಸಿ ಕೊಂಡರೂ ಕೊನೆಗೆ ಅದು ಸುಲಭಸಾಧ್ಯವಾಗುವುದು ಮಾತ್ರವಲ್ಲ ನಿಮಗೆ ಬೇಸರ ಹುಟ್ಟಿಸುತ್ತಿದ್ದ ವಿಷಯವೇ ಕೊನೆಗೆ ಆಹ್ಲಾದಕರವಾಗಿ ನಿಮಗೆ ತೋರುವುದೂ ಸಾಧ್ಯವಿದೆ.

ಹೆತ್ತವರಿಗೆ ಇಬ್ಬರೋ ಮೂವರೋ ತಮ್ಮ ಮಕ್ಕಳ ಮೇಲಿಂದ ಮೇಲೆ ಹುಚ್ಚು ಪ್ರಶ್ನೆಗಳನ್ನು ಕೇಳಿ ಪೀಡಿಸುವಾಗ ಬೇಸರ ಬರುವುದುಂಟು. ಆದರೆ ಮಕ್ಕಳು ಆಸಕ್ತಿಯಿಂದ ಕೇಳುವ ಪ್ರಶ್ನೆಗಳ ಕಡೆಗೆ ನೀವು ನಿಮ್ಮ ಮನಸ್ಸು ಬಿಚ್ಚಿದರೆ, ಅದರೆ, ಆ ಮೊದಲು ಎಂದೂ ನೀವು ಅನುಭವಿಸದಂತಹ ಕಲ್ಪನಾ ಪ್ರಪಂಚವೊಂದು ಅಲ್ಲಿ ಈ ವರೆಗೆ ಎಂದೂ ಹೊಂದದ ಅಪೂರ್ವ ಅನುಭವ ಹೊಂದುವುದು ನಿಮಗೆ ಸಾಧ್ಯವಾಗಬಹುದು.

'ದೇವರನ್ನು ಯಾರು ಸೃಷ್ಟಿಸಿದನು?' ಎಂಬ ಈ ಪ್ರಾಥಮಿಕ ಪ್ರಶ್ನೆಯನ್ನು ಮಗ ಬಲು ಉತ್ಸಾಹದಿಂದ ಕೇಳಿದ. ಆಗ ಮಾತ್ರ ಮಕ್ಕಳ ಪ್ರಶ್ನೆಗಳ ಮಹತ್ವ ಪರೀಕ್ಷೆಯಲ್ಲಿ ನೀವು ಉತ್ತೀರ್ಣರಾಗಬಹುದು. ವಿನೋದದ ಸಮಾಧಾನ ಉತ್ತರ ಕೊಟ್ಟರೆ ಮಗುವಿಗೆ ತೃಪ್ತಿಯಾಗಬಹುದು. ಆದರೆ ನಿಮ್ಮ ಮಕ್ಕಳು ಇನ್ನಷ್ಟು ಸುಸ್ಪಷ್ಟವಾದ ಪ್ರಶ್ನೆಗಳನ್ನು ಕೇಳುತ್ತ, 'ಉಪ್ಪನ್ನು ಹೇಗೆ ಗಣಿಯಿಂದ ಮೇಲಕ್ಕೆ ತರುತ್ತಾರೆ?' 'ಎಲೆ ಹಸಿರು ಬಣ್ಣ ತಾಳುವುದೇಕೆ?' ಎನ್ನುವಾಗ ನೀವು ಗಲಿಬಿಲಿಗೊಳ್ಳುವಿರಿ. 'ನನಗೆ ಸರಿಯಾಗಿ ತಿಳಿದಿರುವುದಿಲ್ಲ ಮಗನೇ ಆ ಕುರಿತು. ರಾತ್ರಿ ಹೇಳುವೆ' ಎಂದು ಸಮಾಧಾನ ಪಡಿಸುವಿರಿ. ಮಗನಿಗೆ ತಕ್ಕ ಉತ್ತರ ಕೊಡಬೇಕೆಂಬ ಲವಲವಿಕೆ ನಿಮ್ಮಲ್ಲಿ ಉಂಟಾಗಿ ಪ್ರಕೃತಿಯನ್ನು ಪರಿಶೀಲಿಸುವುದನ್ನೇ ಓದಬೇಕೆಂಬ ಆಸಕ್ತಿ ನಿಮ್ಮಲ್ಲಿ ಉಂಟಾಗುವುದು. ಪ್ರಕೃತಿ ವೀಕ್ಷಣೆ ನಿಮಗೆ ಹೊಸ ಅನುಭವ ಮತ್ತು ಆನಂದವನ್ನು ಕೊಡುವುದು... ತಾರಕೆಗಳ ಕುರಿತ ಮಗುವಿನ ಕೇಳಿದ ಪ್ರಶ್ನೆ, ಮನಸ್ಸಿನಲ್ಲಿ ಉಳಿದು, ಮಗುವಿಗೆ ತಕ್ಕ ಉತ್ತರ ಕೊಡಬೇಕೆನ್ನುವ ದೃಢನಿಶ್ಚಯ ಮಗುವಿನ ತಂದೆಯನ್ನು ಹೊಸ ಜ್ಞಾನಪ್ರಪಂಚಕ್ಕೊಯ್ದು ಅಲ್ಲಿ ಅನಿರ್ವಾಚ್ಯ ಆನಂದ ನೀಡುವುದು. ಬೇಸರ ಹುಟ್ಟಿಸುವ ಪ್ರಶ್ನೆ ಎಲ್ಲಿಂದ ಎಲ್ಲಿಗೆ ತಂದಿತು ನೋಡಿ!

ಒಬ್ಬ ವರ್ತಕನ ಅನುಭವ ಕೇಳುವಿರಾ? ಆತ ಎಪ್ಪತ್ತರ ಮಟ್ಟಿಗೆ ವ್ಯಾಪಾರದಲ್ಲೇ ಮಗ್ನನಾಗಿದ್ದನೆಂದರೆ ಹಲವು ವರ್ಷಗಳ ವರೆಗೆ ಅವನಿಗೆ ವ್ಯಾಪಾರದ ನಡುವೆ ವೃತ್ತಪತ್ರಿಕೆಯೊಂದ ಬಿಟ್ಟು ಇತರ ಏನನ್ನೂ ಓದಲು ಬಿಡುವು ದೊರೆಯುತ್ತಿರಲಿಲ್ಲ. ರಾತ್ರಿ ಹಗಲು ವ್ಯಾಪಾರಿ ಸಮಸ್ಯೆಗಳ ಕುರಿತೇ ಯೋಚಿಸುತ್ತಿರಬೇಕು ಎಂಬ ಹುಚ್ಚು ಮೆದುಳಿಗೆ ನಾಟಿ, ಓದಲು ಯಾವುದಾದರೂ ಪುಸ್ತಕ ತೆರೆದನೆಂದರೆ ನಿಮಿಷದಲ್ಲಿ ಬೇಸರ ಹಿಡಿಯುತ್ತಿತ್ತು. ಮಾನಸಿಕ ಆರೋಗ್ಯಕ್ಕಾಗಿ ದಿನದ ಇಪ್ಪತ್ತನಾಲ್ಕು ತಾಸುಗಳಲ್ಲಿಯೂ ವ್ಯಾಪಾರದಲ್ಲೇ ಮಗ್ನನಾಗುವುದನ್ನು ಬಿಟ್ಟು ಇತರ ಚಟುವಟಿಕೆಗಳ ಕಡೆಗೂ ಲಕ್ಷ್ಯ ಕೊಡುವುದೊಳ್ಳೆಯದೆಂದು ಅವನ ಸ್ನೇಹಿತರೊಬ್ಬರು ಸಲಹೆಕೊಟ್ಟರು. ಅವನು ಪುಸ್ತಕಗಳನ್ನು ಓದಲು ತೊಡಗಿದ. ಮೊದಲು ಇಕೊನೊಮಿಕ್ಸ್ (ಅರ್ಥಶಾಸ್ತ್ರ) ಆ ಮೇಲೆ ಜೀವನ ಚರಿತ್ರೆಗಳು ಆಗಿ ಕೊನೆಗೆ ಕಥೆ ಕಾದಂಬರಿಗಳನ್ನು ಓದತೊಡಗಿದ. ಈ ವಾಚನಾಭಿರುಚಿಯಿಂದ ಈಗ ಆ ವರ್ತಕನಿಗೆ ಹತ್ತು ಹಲವು ವಿಷಯಗಳಲ್ಲಿ ಆಸಕ್ತಿಯುಂಟಾಗತೊಡಗಿದೆ. ಆ ಕಾರಣದಿಂದ ಮನಸ್ಸು ಪ್ರಫುಲ್ಲವಾಗಿದೆ.

ಇತರರು ಹೇಳುವುದನ್ನು ಕೇಳುವ ಅಸಮ್ಮತಿಯೇ ಹಲವರಲ್ಲಿ ಜಿಗುಪ್ಸೆಗೆ ಕಾರಣವಾಗಿದೆ. 'ನನಗೆ ತಕ್ಕ ಹಲವು ವಿಷಯಗಳನ್ನು ತಿಳಿಯಬೇಕೆಂಬ ಹಂಬಲವಿದೆ, ಆದರೆ ಯಾವುದಾದರೊಂದು ವಿಷಯದ ಕುರಿತು, ಅದರ ಬಗ್ಗೆ ಯೋಗ್ಯ ಸಹಿತಿಯಿದ್ದ ತಜ್ಞರೊಡನೆ ಕೇಳಿದರೆ, ಅವನು ಹೇಳುವ ವಿವರಣೆಯು ಅತಿ ಬೇಸರ ಹುಟ್ಟಿಸಿ, ಅವನ ಸಂಭಾಷಣೆಯೇ ಬೇಡವೆನಿಸುತ್ತದೆ' ಎಂಬುದಾಗಿ ಓರ್ವ ಹಿರಿಯ ನನ್ನೊಡನೆ ಹೇಳಿದಾಗ, 'ಅವರು ಹೇಳುವುದನ್ನು ಆಲಿಸಬೇಕು. ನಿಮಗೆ ಅವರ ಸಂಭಾಷಣೆಯಲ್ಲಿ ಬೇಸರ ಹುಟ್ಟಲು ಕಾರಣವಾದ ವಿಷಯವೇನೆಂದರೆ ಎಲ್ಲವನ್ನೂ ನೀವು ಬಲ್ಲಿರೆಂಬ ಅಭಿಮಾನ' ಎಂದು ಹೇಳಿದೆ ನಾನು! ಈ ಅಭಿಮಾನವೇ ಜೀವನದಲ್ಲಿ ಜಿಗುಪ್ಸೆ ಹುಟ್ಟಿಸುತ್ತದೆ. ಬದಲು ಹೆಚ್ಚೆಚ್ಚು ಹೊಸ ವಿಷಯಗಳನ್ನು, ಅಭಿಪ್ರಾಯಗಳನ್ನು ಸಂಗ್ರಹಿಸಲು ಹೊರಟರೆಂದರೆ, ಇನ್ನೊಬ್ಬರ ಕಡೆ ನಮ್ಮ ಮಾತು ಕಡಿಮೆ ಮಾಡಿ, ಅವನು ಹೇಳುವುದನ್ನು ಹೆಚ್ಚೆಚ್ಚು ಕೇಳಬೇಕೆಂಬ ಆಸಕ್ತಿ ತಾನಾಗಿ ಉಂಟಾಗುವುದು.

ಆದುದರಿಂದ ಬೇಸರ ಹುಟ್ಟಿಸುವ ಪ್ರತಿಯೊಂದು ವಿಷಯವೂ ಜೀವನದಲ್ಲಿ ಆಹ್ಲಾದಕರವಾದಂತಹುದೇ ಆಗಿದೆ ಎಂದು ನೆನಸಬೇಕಾದುದು ಪ್ರತಿಯೊಬ್ಬನ ಕರ್ತವ್ಯ. ಬೇಸರವೇ ಸಂತೋಷ ತರುವ ರಹಸ್ಯ ಮೂಲ. ತಮಗೆ ಬೇಕಾದ ಸಾಧನವೆಂದರೆ ಸ್ವಭಾವಸಿದ್ಧ ಬಯಕೆ. ಇತರರೊಡನೆ ಜೀವಿಸಿಕೊಂಡಿದ್ದು ಅವರ ಚಟುವಟಿಕೆಗಳಲ್ಲಿ ಸಹಭಾಗಿಗಳಾಗಿರಬೇಕಷ್ಟೆ. ಅವರಲ್ಲಿ ಆನಂದ ಅನುಭವಿಸುವುದೂ ನಿಮಗೆ ಸಾಧ್ಯ.

'ಪ್ರಭಾತ'

ನಾಲ್ಕಾಣೆ ಕಾಂಗ್ರೆಸ್ ಸದಸ್ಯತ್ವ.

ಮಹಾತ್ಮಗಾಂಧಿಯವರ ಕಾಲದಲ್ಲಿದ್ದಂತೆ ನಾಲ್ಕಾಣೆಯ ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವವನ್ನೇ ಪುನಹ ಜಾರಿಗೆ ತರಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಡಾ. ಏರಿಳ್ಳಿ ಮೊನ್ನೆಯವರೆ ಗಂಟು ಕಾಲ ಚರ್ಚಿಸಿ ನಿರ್ಧರಿಸಿತು.

ಸಕ್ರಿಯಾತ್ಮಕ ಸದಸ್ಯರು ಇದರ ಜತೆಗೆ ವರ್ಷಕ್ಕೆ ಒಂದು ರೂಪಾಯಿ ಚಂದಾ ಕೊಡಬೇಕಾಗುವುದು. ಇಲ್ಲಿವರೆಗೆ ಕಾಂಗ್ರೆಸ್ ಸದಸ್ಯತ್ವಕ್ಕೆ ಚಂದಾ ಹಣ ಬೇಡಲೇ ಬೇಡ ಎಂದು ನಿರ್ಧರಿಸಲಾಗಿತ್ತು. ಗೆಳೆಯರ ಆಹಮದಾಬಾದ್ ಅಧಿವೇಶನದಲ್ಲಿ ಈ ನಿರ್ಧಾರ ಮಾಡಲಾಗಿತ್ತು. ಈಗ ಇದನ್ನು ಬದಲಾಯಿಸಲಾಗುವುದು.

ಚುನಾವಣೆಗಳಲ್ಲಿ ಪ್ರಭಾವಶಾಲಿ ಪಾತ್ರ ವಹಿಸಿದವರನ್ನು ಸೇರಿಸಿಕೊಂಡು ಆಡ್‌ಹಾಕ್ ಪ್ರಾಂತೀಯ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಗಳನ್ನು ಪುನರ್ರಚಿಸಬೇಕೆಂದೂ ನಿರ್ಧರಿಸಿದೆ.

ಕಾಂಗ್ರೆಸ್ಸಿನವರು ಪಂಚವಾರ್ಷಿಕ ಯೋಜನೆ ಕಾರ್ಯರೂಪಕ್ಕೆ ತರಲು ಶ್ರಮಿಸಬೇಕೆಂದೂ ನಾನಾ ನಿರ್ಮಾಣ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದೂ ಸೂಚಿಸಲಾಗಿದೆ. ಕಾಂಗ್ರೆಸ್ಸನ್ನು ಪುನರುಜ್ಜೀವನಗೊಳಿಸಲು ಪ್ರತಿಯೊಂದು ಪ್ರಾಂತ್ಯದಲ್ಲೂ ಪೂರ್ಣ ಕಾಲದ ಕೆಲಸಗಾರರ ದಳ ಸ್ಥಾಪಿಸಲು ಯೋಚಿಸಲಾಗಿದೆ. ಆಹಾರ ಉತ್ಪನ್ನ ಹೆಚ್ಚಿಸುವ ಯೋಜನೆಯಲ್ಲಿ ಸರ್ವರೂ ಸಹಕರಿಸಬೇಕಾಗಿ ಮುಖ್ಯ ನಿರ್ಣಯದಲ್ಲಿ ಒತ್ತಿ ನುಡಿಯಲಾಗಿದೆ.

ಶ್ರೀ ಕೆ. ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

॥ ಹೈಸ್ಕೂಲು ಸ್ಥಾಪಿಸಲು ಸಲಹೆಗಳು. ॥

ಕೊಡಗಿನಲ್ಲಿ ೫ ಸರಕಾರಿ ಹೈಸ್ಕೂಲುಗಳೂ ೫ ಖಾಸಗಿ ಹೈಸ್ಕೂಲುಗಳೂ ಸದ್ಯಕ್ಕೆ ಇವೆ. ಮೂರು ಸರಕಾರಿ ಶಾಲೆಗಳು ಊರವರಿಂದಲೇ ನಡೆಸುವ ಸ್ಥಿತಿಯಲ್ಲಿದ್ದಾಗ ಆಗಿನ ಸರಕಾರದವರು ಅದರ ಜೊತೆಯಲ್ಲಿ ಒಂದೆರಡು ವರ್ಷ ಮಂಜೂರಾಯಿತುಂತೆ ನಡೆಸಿದರೂ ಆ ಮೇಲೆ ಸಂಪೂರ್ಣ ಸಹಾನುಭೂತಿಯನ್ನು ತೋರಿಸಿ ಆ ಶಾಲೆಗಳನ್ನು ತಮ್ಮದಾಗಿ ಮಾಡಿಕೊಂಡರು. ಅವು ಈಗ ಪ್ರಬುದ್ಧವಾಗಿ ಸರ್ವರ ಕಣ್ಣುಗಳನ್ನು ತಮ್ಮೆಡೆಗೆ ಸೆಳೆದು ಉಪಯುಕ್ತವಾಗಿ ದುಡಿಯುತ್ತಿವೆ. ಈ ಆದರ್ಶವನ್ನು ಅನುಸರಿಸಿ ಅನೇಕ ಕಡೆ ಹೈಸ್ಕೂಲು ಸ್ಥಾಪನಾ ಕಾರ್ಯ ನಡೆಯುತ್ತಿದೆ. ಈ ಸಂದರ್ಭದಲ್ಲಿ ಈ ಕೆಲಸದಲ್ಲಿ ಅನುಭವವಿರುವವನು ನಾವು ಪಟ್ಟ ಕಷ್ಟವನ್ನು ಇತರರಿಗೆ ಹೇಳಿ ಧೈರ್ಯವೀಯಬೇಕೆಂದು ಬಯಸುತ್ತೇನೆ. ಏಕೆಂದರೆ ಈ ಹೊಸ ಮೂರು ಶಾಲೆಗಳಲ್ಲೂ ಮತ್ತು ಹಳೆಯ ಶಾಲೆಗಳಲ್ಲೂ ಕಲಿಯುವ ಮಕ್ಕಳ ಸಂಖ್ಯೆ ಮಿತಿ ಮೀರಿದೆ. ಇನ್ನೂ ಹೆಚ್ಚು ಸ್ಕೂಲುಗಳ ಆವಶ್ಯಕತೆ ಇದೆ. ಆದ್ದರಿಂದ ಹೊಸ ಶಾಲೆಯನ್ನು ಆರಂಭಿಸಲು ಸಂಕಟಪಟ್ಟವರು ಅವರವರ ಅನುಭವವನ್ನು ಕೇಳಬೇಕು. ದೃಢತೆಯಿಂದ ಮುಂದೆ ಸಾಗಬೇಕು.

ಕೊಡಗಿನಲ್ಲಿ ಮೂರು ಮಿಶನ್ ಶಾಲೆಗಳಿವೆ. ಅದರಲ್ಲಿ ಒಂದು ಬಾಲಿಕಾ ಶಾಲೆ. ಇದು ಕೀರ್ತಿ ಪಡೆದಿದೆ. ಅದರಲ್ಲಿ ಕಲಿತ ವಿದ್ಯಾರ್ಥಿನಿಯರು ಈಗ ತಾಯಿಯರಾಗಿ ಆ ಶಾಲೆಗೆ ತುಂಬಾ ಸಹಾನುಭೂತಿ ತೋರುತ್ತಿರುವರು. ಮಡಿಕೇರಿಯಲ್ಲಿರುವ ಬಾಲಕರ ಹೊಸ ಶಾಲೆಯು ಇನ್ನೂ ಅಂಬೆಗಾಲಿಡುತ್ತಿದೆ. ಇದು ಮುಂದುವರಿಯುವುದೋ ಎಂಬ ಸಂಶಯ ತೋರುತ್ತಿದೆ. ಉಪಾಧ್ಯಾಯರು ಬದಲಾಗುತ್ತಿರುವರು. ಮಕ್ಕಳ ಸಂಖ್ಯೆ ಕಮ್ಮಿಯಾಗುತ್ತಿದೆ. ಈ ಮೂರನೆ ಹೈಸ್ಕೂಲಿನ ಅವಶ್ಯಕತೆಯೇ ಮಡಿಕೇರಿಯಲ್ಲಿ ಸಂಶಯಾಸ್ಪದವಾಗಿದೆ! ವೀರಾಜಪೇಟೆಯಲ್ಲಿರುವ ಬಾಲಿಕಾ ಶಾಲೆಯು ಉತ್ತಮ ಏಳಿಗೆಗೆ ಎಲ್ಲ ಚಿಹ್ನೆ ತೋರುತ್ತಿದೆ. ಈ ಶಾಲೆಯನ್ನು ತೆರೆಯದೆ ಇದ್ದಿದ್ದರೆ ಸರಕಾರಿ ಶಾಲೆಯ ಖರ್ಚು ಹೆಚ್ಚಾಗಿ ಸ್ಥಳದ ಅಭಾವದಿಂದ ಅನೇಕ ಮಕ್ಕಳಿಗೆ ತೊಂದರೆಯಾಗುತಿತ್ತು. ಆದರೆ ಉತ್ತಮ ತರದ ಮತ್ತು ಖಾಯಂ ಆದ ಉಪಾಧ್ಯಾಯರ ಅಭಾವವು ಇಷ್ಟರಲ್ಲೂ ತೋರಿ ಇದೆ. ಒಂದೆರಡು ವರ್ಷದಲ್ಲಿ ಇದು ಸರಿಯಾಗಬಹುದು.

ಹುದಿಕೇರಿಯಲ್ಲಿ ಒಂದು ಸ್ವಂತ ಕಟ್ಟಡದಲ್ಲಿ ಶಾಲೆ ನಡೆಸುತ್ತಿರುವರು. ಇದಕ್ಕೆ ಮಹಾಸಭೆಯ ಪ್ರಾರಂಭದಲ್ಲಿ ತೋರಿಸಿದ ಹುರುಪನ್ನು ಈಗ ತೋರಿಸುತ್ತಿಲ್ಲವೆನ್ನುವುದು ಶೋಚನೀಯ. ಮೇಲೆ ಹೇಳಿದ ಶಾಲೆಗಳಿಗೆ ನಾಲ್ಕಕ್ಕೂ ಸರಕಾರದ ನಿಯಮದ ಪ್ರಕಾರ ಧನಸಹಾಯ ಸಿಕ್ಕುತ್ತಿದೆ.

ಬಹಳ ಹುರುಪಿನಿಂದ ಹಾತೂರಿನಲ್ಲಿ ಶಾಲೆ ತೆರೆದು ಅಲ್ಲಿಗೆ ಅನು ಕೂಡಿದಂತೆ ತೋರುತ್ತದೆ. ಎರಡು ಗುಡಿಸಲು ಹಾಕಿಸಿದರು. ಒಂದು ಬಿದ್ದಿತು ಇನ್ನೊಂದು ಅವರ ಉಪಯೋಗದಲ್ಲಿಲ್ಲ. ಉಪಾಧ್ಯಾಯರೇ ಸಿಕ್ಕಲಾರರೆಂಬ ಅಂಜಿಕೆಯಿಂದ ಅನೇಕ ಸಲಕರಣೆಗಳನ್ನೂ ಹೆಚ್ಚು ವೇತನವನ್ನೂ ಉಪಾಧ್ಯಾಯರಿಗೆ ಮಾಡಿಕೊಟ್ಟರು. ಆದರೂ ಜನರ ಬೆಂಬಲವಿಲ್ಲದೆ ಇದು ಮುಂದುವರಿಯುವುದೋ ಸಂಶಯ. ಹಾಗೆಂದ ಮಾತ್ರಕ್ಕೆ ಸಲಕರಣೆಗಳು ಸರಿಯಾಗಿ ಇಲ್ಲದ್ದರಿಂದ ಈ ಶಾಲೆಗೆ ಸರಕಾರದ ಸಹಾಯ ದೊರಕಲಿಲ್ಲವೆಂದು ವದಂತಿ ಇದೆ. ಇನ್ನೂ ಐದು ಹೈಸ್ಕೂಲುಗಳನ್ನು ತೆರೆಯಬೇಕೆಂಬ ಹಂಬಲ ಬೇರೆ ಬೇರೆ ಕಡೆಗಳಲ್ಲಿ ಕಾಣುತ್ತಿದೆ. ಇದು ಸಂತೋಷಕರ. ಆದರೆ ಪ್ರಾರಂಭಿಸಿ ಆರಂಭ ಶೂರರಾಗುವುದಕ್ಕಿಂತ ಸುಮ್ಮನಿರುವುದು ಮೇಲು. ಸಂಘದವರು ಶಾಲೆಯನ್ನು ನಡೆಸುವರೆಂಬ ಆಸೆ ಮಾತ್ರ ನಿಷ್ಪ್ರಯೋಜನ. ಈಗಿನ ಸ್ಥಿತಿ ಇದ್ದರೆ ಹತ್ತಾರು ವರ್ಷಗಳಿಗೆ ತೆಗೆದುಕೊಳ್ಳುವದಲ್ಲವೆನ್ನಬಹುದು. ಸರಕಾರದ ಸಹಾಯವಿಲ್ಲದೆ ಖಾಸಗಿಯಾಗಿ ನಡೆಸುವ ಚೇತನವಿದ್ದರೆ ಆರಂಭದಲ್ಲೇ ಸೊಂಟ ಕಟ್ಟಿದರೆ ಆಗಬಹುದು. ಏನೇನು ಆವಶ್ಯಕತೆ ಇದೆ ಎಂಬುದನ್ನು ಪೊನ್ನಂಪೇಟೆ, ನಾಪೋಕ್ಲು ಮತ್ತು ಸೋಮವಾರಪೇಟೆ ಶಾಲೆಗಳನ್ನು ನಡೆಸಿದ ಕಮಿಟಿಯವರನ್ನು ಕೇಳಿದರೆ ಹೇಳಿಕೊಡುವರು.

ಮುಖ್ಯವಾಗಿ ಮದರಾಸು ಎಜ್ಯುಕೇಶನಲ್ ರೂಲ್ ಮತ್ತು ಗ್ರ್ಯಾಂಟ್ ಇನ್ ಎಯಿಡ್ ಕೋಡನ್ನು ತರಿಸಿಕೊಳ್ಳಬೇಕು. ಇದು ಗವರ್ನಮೆಂಟ್ ಪಬ್ಲಿಷಿಂಗ್ ಹೌಸ್, ಮದರಾಸು ಇಲ್ಲಿ ದೊರಕುತ್ತದೆ. ಕೊಡಗಿನಲ್ಲಿ ಈಗ ನಿವೃತ್ತಿ ಹೊಂದಿದ ಅನುಭವಸ್ಥರಾದ ಇಬ್ಬರು ಉಪಾಧ್ಯಾಯರು ಇರುವರು. ಸದ್ಯದಲ್ಲೇ ನಿವೃತ್ತಿ ಹೊಂದುವ ನಾಲ್ಕಾರು ಉಪಾಧ್ಯಾಯರಿರುವರು. ಇವರಲ್ಲಿ ಒಬ್ಬೊಬ್ಬರನ್ನು ಒದಗಿಸಿಕೊಂಡರೆ ಹೊಸ ಹೈಸ್ಕೂಲು ಕೆಲಸ ಸುಲಭವಾಗುವುದು. ಇನ್ನು ಐದು ವರ್ಷ ಇವರ ಕೆಲಸ ಪಡೆಯಬಹುದು. ಹೈಸ್ಕೂಲು ಸ್ಥಾಪಿಸಬೇಕಾದರೆ ಏನೇನು ಬೇಕು, ಎಷ್ಟು ಖರ್ಚಾಗುತ್ತದೆಂಬ ಅಂದಾಜು ಪಟ್ಟಿಯನ್ನು ಈ ಕೆಳಗೆ ಕೊಡುವೆನು.

೧ನೇ ವರ್ಷದ ಖರ್ಚು ೩೦'×೨೦' ಒಂದು ಕೋಣೆ ಭದ್ರವಾದ ಹುಲ್ಲು ಛಾವಣಿಯಾದರೆ ರೂ. ೫೦೦. (ಇಟ್ಟಿಗೆ ಕಟ್ಟಡವಾದರೆ ರೂ. ೫೦೦೦)

ಪುಸ್ತಕ ಭಂಡಾರ	ರೂ.	೫೦೦
ವಿಜ್ಞಾನ ಸಲಕರಣೆಗಳು	ರೂ.	೫೦೦
ಮರಮುಟ್ಟುಗಳು	ರೂ.	೧೦೦೦

ಬಿ. ಎ., ಎಲ್. ಟಿ. ಅಧ್ಯಾಪಕ

೧೫೦×೧೨=೧೮೦೦

ಇಂಟರ್‌ಮೀಡಿಯೇಟ್

೮೦×೧೨=೯೬೦

ಜುಮ್ಲಾ ರೂ. ೫೨೬೦

ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಈ ಉಪಾಧ್ಯಾಯರು ಕೆಲವು ಪಾಠಗಳನ್ನು ತೆಗೆದುಕೊಂಡರೆ ಚಿತ್ರಕಲೆ, ಹಿಂದಿ, ಮತ್ತು ವ್ಯಾಯಾಮ ಅಧ್ಯಾಪಕರು ಈ ತರಗತಿಯಲ್ಲಿ ಪಾಠ ಮಾಡಬಹುದು. ಈ ಕ್ರಮವನ್ನು ಆರಂಭದಲ್ಲಿ ಎಲ್ಲಾ ಶಾಲೆಗಳಲ್ಲೂ ನಡೆಸಬೇಕು.

ಉತ್ಪತ್ತಿ. ಮಕ್ಕಳ ಸಂಖ್ಯೆ ೪೦ ಇದ್ದರೆ ಈಗಿರುವ ಬದಲು ಫೀಸು ೬೭-೮-೦ ಆದರೆ ಶಾಲೆಯು ಸವಿಾಪವಾಗುವುದರಿಂದ ಪರ ಊರಿನಲ್ಲಿ ವಿದ್ಯಾರ್ಥಿ ಭವನಕ್ಕೆ ಕೊಡುವ ಖರ್ಚು ಉಳಿಯುವುದರಿಂದ ಹೊಸ ಶಾಲೆಗಳಲ್ಲಿ ರೂ. ೧೦೦ ಫೀಜು ಕೊಡುತ್ತಿರುವರು. ಹಾಗೆ ಫೀಜು ಕೊಟ್ಟರೆ ರೂ. ೪೦೦೦ ದೊರಕುವುದು. ಊರವರು ಬರೀ ರೂ. ೧೫೦೦ ವಂತಿಗೆಯಿಂದ ಎತ್ತಿದರೆ ಸಾಕು.

ಶಾಲೆಯ ಆರಂಭದಲ್ಲಿ ಮೇಲೆ ಹೇಳಿದ ಸಲಕರಣೆಗಳನ್ನು ಸಂಪಾದಿಸಿಕೊಂಡು ಸರಕಾರದವರಿಗೆ ಬರೆದುಕೊಂಡರೆ ಶಾಲೆಯನ್ನು ತೆರೆಯಲು ಒಪ್ಪಬೇಕೆಂದು ಮೇಲೆ ಹೇಳಿದ ಕಾನೂನು ಪುಸ್ತಕಗಳನ್ನು ಓದಿದರೆ ತಿಳಿಯುವದು. ಸರಕಾರದ ಸಹಾಯವನ್ನು ಆರಂಭದಲ್ಲಿ ನಿರೀಕ್ಷಿಸಕೂಡದು. ಆದರೆ ವರ್ಷಾಂತ್ಯದಲ್ಲಿ ಸರಕಾರವು ಸಹಾಯ ಮಾಡಬೇಕಾದ ನಿಯಮವಿದೆ. ಮರಮುಟ್ಟುಗಳ, ಪುಸ್ತಕ ಇನ್ನಿತರ ಖರ್ಚುಗಳಿಗೆ ವಿದ್ಯಾಧಿಕಾರಿಗಳ ಅಪ್ಪಣೆ ಮುಂಗಡ ಪಡೆದುಕೊಂಡು ವಿನಿಯೋಗಿಸಿದ್ದರೆ ಅದರ ಅರ್ಧವು ವರ್ಷಾಂತ್ಯದಲ್ಲಿ ದೊರಕುವುದು. ಶಾಲೆಯ ಇತರ ಖರ್ಚುಗಳಿಂದ (ಉಪಾಧ್ಯಾಯರ, ಜವಾನನ, ಪತ್ರವ್ಯವಹಾರ ನಡೆಸುವವರ ಸಂಬಳ) ವರ್ಷಕ್ಕೆ ಆಗುವ ತೇಲುವರಿಯಂತೆ ಮಕ್ಕಳಿಂದ ಎತ್ತಿದ ಫೀಸನ್ನು ಕಳೆದು ಉಳಿದುದರ [illegible]ನ್ನು ಸರಕಾರದವರು ವರ್ಷಾಂತ್ಯದಲ್ಲಿ ಸರಿಯಾಗಿ ಲೆಕ್ಕ ಪರಿಶೀಲನೆಯಿಂದ ಕೊಡುವರು. ಇದು ಸಿಕ್ಕಿತೆಂದರೆ ಕಟ್ಟಡ ಕಟ್ಟುವಲ್ಲದೆ ಇನ್ನು ಯಾವುದಕ್ಕೂ ಕಮಿಟಿಯವರು ಜನರಿಂದ ವಂತಿಗೆ ಎತ್ತುವುದು ಅವಶ್ಯವಿಲ್ಲ.

ಈ ಹೊಸ ಹೈಸ್ಕೂಲುಗಳಿಗೆ ಹೈಯರ್ ಎಲಿಮೆಂಟರಿಯವರ ಆಟದ ಮೈದಾನವೇ ಸಾಕಾಗಬಹುದು. ಎರಡನೇ ವರ್ಷ ಒಬ್ಬ ಉಪಾಧ್ಯಾಯರು ಹೆಚ್ಚುವರಿ ಸಾಕು. ಮಕ್ಕಳ ಫೀಸು ಇಮ್ಮಡಿಯಾಗುವದು. ಈ ವರ್ಷ ತರಬೇತು ಹೊಂದಿದ ಹಿಂದಿ ಮತ್ತು ವ್ಯಾಯಾಮ ಉಪಾಧ್ಯಾಯರನ್ನಿಟ್ಟುಕೊಳ್ಳಬಹುದು. ಆದ್ದರಿಂದ ಎಚ್ಚರಿಕೆಯಿಂದ ವ್ಯವಸ್ಥಿತ ರೀತಿಯಲ್ಲಿ ವರ್ತಿಸಿದರೆ ಸರಕಾರದ ಹೆಚ್ಚಿನ ಸಹಾಯವಿಲ್ಲದೆ ನಾವೇ ಶಾಲೆ ನಡೆಸಬಹುದಾಗಿದೆ.

—ಚಿಂತಾಪ್ಪ.

ಸ್ಥಳ ಬದಲಾವಣೆ

ವೀರಾಜಪೇಟೆಯ ಕೆಳಗೆ ಅಂಗಡಿ ಗೋಣಿಕೊಪ್ಪಲಿಗೆ ಹೋಗುವ ರಸ್ತೆ ಬಳಿ ಇದ್ದ ನಮ್ಮ ಮನ್ನಾ ಸ್ಟೋರ್ ಅಂಗಡಿಯನ್ನು ಗ್ರಾಹಕರ ಮತ್ತು ಸಾರ್ವಜನಿಕರ ಹಿತ ದೃಷ್ಟಿಯಿಂದ ಗಡಿಯಾರ ಕಂಬದ ಬಳಿ ಗಣಪತಿ ದೇವಸ್ಥಾನದ ಎದುರಿನ ಅಂಗಡಿಗೆ ಬದಲಾಯಿಸಿದ್ದೇವೆ ಎಂದಿನಂತೆ ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಎಸ್. ಎ. ಮನ್ನಾ & ಬ್ರದರ್ಸ್,
8-7 ವೀರಾಜಪೇಟೆ

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

[illegible] (1921 ರಲ್ಲಿ ಸ್ಥಾಪಿತವಾಗಿದೆ)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಮುಖ್ಯವಾಗಿ ಸಹಕಾರಿ ಸಂಘಗಳಿಗೆ [illegible] ಸಾಲ ಕೊಡಲಾಗುತ್ತದೆ. [illegible] ಡಿಸ್ಕೌಂಟು ಮಾಡಲ್ಪಡುವುದು. [illegible] ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರತಿನಿಧಿ [illegible] ಬ್ಯಾಂಕಿನ ದೀರ್ಘ ಕಾಲದ ಸಾಲದ ಶಾಖೆಯ ಮೂಲಕ ದೀರ್ಘ ಕಾಲದ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಪಿ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.
ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ [illegible].

Edited Printed and Published by P. I. Bellieppa at 'Kodagu' Press, Mercara, for 'Kodagu' Ltd.

Licence No. 60.
Licenced to Post without Prepayment

Reg. No. M. 1380.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦ | ತಾರೀಖು ೧೧-೪-೧೯೫೨ನೇ ಶುಕ್ರವಾರ | ಸಂಚಿಕೆ ೪೩

॥ ದುರ್ಬೀನು ನೋಟ ॥

— ಲೇ:—ರಸಿಕ —

ಚುನಾವಣೆಯ ಗಲಿಬಿಲಿಯಲ್ಲಿ ನಾಡಿ ಬಡಿತದ ರೀತಿ ತಿಳಿಯುವ ಜನರ ಮೇಲಿಂದ ವ ನನ್ನನ್ನವರೆಲ್ಲಾ ಗೊತ್ತಾಗಲಿ ಎಂಬ ಮಾತು ಪೂರಾ ಸತ್ಯವಾಗಿದೆ. ಚುನಾವಣೆಯ ಹೊತ್ತಿಗೆ ಓಟು ಕೇಳಲು ಬಂದರೆ ಒಳಗೆ ಬೇರೆ ಕೆಲಸ ಇತ್ತು. ಮೊನ್ನೆಯಾಗಿ ಒಬ್ಬರ ಹತ್ತಿರ ಹೋಗಬೇಕಾಗಿ ಬಂತು. ಚುನಾವಣೆಯಲ್ಲಿ ಮತದಾರನ ಹೇಳುತ್ತಿದ್ದ 'ನನ್ನ ಓಟು ನಿಮಗಲ್ಲದೆ ಮತ್ತಾರಿಗೆ?' ಎಂದಂತೆ 'ನಿಮ್ಮ ಸೇವೆಗಾಗಿಯೇ ನಾವಿರುವುದು; ಏನು ಬೇಕು ಹೇಳಿ' ಎಂದರು. ಅವರೊಬ್ಬ ಸರಕಾರಿ ಅಧಿಕಾರಿ. ನನಗೆ ಅವರಿಂದ ಬೇಕಾದುದೇನೂ ಇರಲಿಲ್ಲ. ನನ್ನ ಗ್ರಾಮದವರೊಬ್ಬರಿಗೆ ಅವರ ನೆರವು ಬೇಕಿತ್ತು. 'ಎಲ್ಲ ಮಾಡಿಕೊಡುತ್ತೇನೆ' ಎಂದರು. 'ನಾವಿರುವುದು ಜನರ ಸೇವೆಗಾಗಿ ಇಂಡಿಯ ಪ್ರಜಾರಾಜ್ಯದಲ್ಲಿ ಪ್ರಜೆಗಳ ಸೇವಕರು ನಾವು' ಎಂದು ಹೇಳಿದರು. ಆದರೆ ಅವರ ಹೃದಯದಲ್ಲಿದ್ದುದು ನಮಗೇನು ಗೊತ್ತು! 'ಓಡುವ ಕುದುರೆ ಹೊಡೆಯುವರಲ್ಲಿ ಒಂದು; ಉಗ್ರಗಾಮಿ ಉದ್ಯೋಗದಲ್ಲಿ ಒಂದು' ಎಂಬಂತೆ ಮಾತಿನ ಮಲ್ಲ ಕೃತಿಯಲ್ಲಿ ಹಿಂದೆ ಎಂದು ಗಣಿಸಿ ಮಾಡುವವರಾಗಲಿಲ್ಲ. ಹೌದು. ನೀರಲ್ಲಿ ಮುಳುಗಿದ ಕಲ್ಲನ್ನು ಹೆಕ್ಕಿಕೊಂಡಂತೆ ನೀರಲ್ಲಿ ಕರಗಿದ ಸಕ್ಕರೆಯನ್ನು ಎತ್ತಲಾಗುವುದಿಲ್ಲ. ತನ್ನ ಕದ್ದವರನ್ನು ಬೇರ್ಪಡಿಸಬಹುದಲ್ಲದೆ ಮನಕದ್ದವರನ್ನು ತಿಳಿಯಲಾಗದು!

* * *

ನನ್ನೊಬ್ಬ ಗೆಳೆಯರಿದ್ದಾರೆ. ಅವರೂ ನಾನೂ ಕೂಡಿ ಬೆಳೆದವರು. ತುಂಬ ಸಲುಗೆ ನಮ್ಮಲ್ಲಿದೆ. ಮೊನ್ನೆಯಾಗಿ ಅವರಿಗೆ ಸ್ವಲ್ಪ ಜವಾಬ್ದಾರಿಯುತ ಅಧಿಕಾರವೂ ಬಂದಿದೆ. ಸಹಜವಾಗಿ ನಮ್ಮ ಆತ್ಮೀಯತೆ ಕಡಿಮೆಯಾಗಿದೆ. ನಮ್ಮೊಡನೆ ಹಿಂದಿನಂತೆ ಬೆರೆಯಲಾಗಲಿಲ್ಲ. ನಮ್ಮ ಸಲುಗೆ ಪ್ರತಿಕೂಲ ಹಾಕಿದರು. ಆತ್ಮೀಯ ಸಹವಾಸ ಒಂದು ದರ್ಜೆ ಅಧಿಕಾರದಲ್ಲಿ ತೇಲಿ ಬರುತ್ತಿದೆ. ನಾವು ಆತನ ಅಂಕಿತದಲ್ಲಿರುವವರೆ ಬಹು ಮಂದಿ ಜನರ ಪ್ರತಿ ಕಾರ್ಯದಲ್ಲಿ ತೇಲಿ ಬರುತ್ತಿದೆ. 'ಕೆರಗು ಹಿಡಿಯುವುದು ಪ್ರೀತಿಗಾಗಿ; ಬಡಿಗೆ ಹಿಡಿಯುವುದು ಪೀಡೆಗಾಗಿ' ಎಂದಂತೆ ಆತ್ಮನಾಗುವುದು ಆತ್ಮೀಯತೆಯಿಂದ ಆದರೆ ಅಧಿಕಾರಿಯಾಗ ನಮ್ಮ ಅಂಕೆಯಲ್ಲಿ ವರದಕ್ಕಾಗಿಯೇ ಎಂಬಂತೆ ಪರಿಸ್ಥಿತಿ ಆಗಿದೆ.

* * *

ಕಳೆದ ವಾರ ಈಗಿನ ಮದುವೆಗಳ ವಿಚಾರ ಬರೆಯುತ್ತಾ ಹುಡುಗ ಹುಡುಗಿ ಒಪ್ಪಿದರಾಯಿತು. ಸಂಪ್ರದಾಯ ಪದ್ಧತಿಗಳು ಪ್ರಾಮುಖ್ಯವಲ್ಲವೆಂದು ಬರೆದಿದ್ದೆ. ಅದಕ್ಕೆ ಅನುಸಾರವಾಗಿ ಒಂದು ಘಟನೆ ಮೊನ್ನೆಯಾಗಿ ನಡೆದಿದೆ. ಹುಡುಗ ನೆರೆಮನೆಯ ಹುಡುಗಿಯೊಡನೆ ಸಲುಗೆಯಿಂದಿದ್ದ. ಮದುವೆಯಾಗೋಣವೆಂದು ಅವರಲ್ಲಿ ಒಪ್ಪಿತವಾಗಿ ಆತ ಹುಡುಗಿಯ ತಂದೆ ತಾಯಿಯರನ್ನು ಕೇಳಿದ. ಅವರು ನಿರಾಕರಿಸಿದರು. ಹುಡುಗ ಇವರ ಗೊತ್ತು ಬಿಟ್ಟುಬೇರೆ ಬೇರೆ ಹುಡುಗಿಯನ್ನು ನಿಶ್ಚಯಿಸಲಾಗದಷ್ಟು ಗೆಳೆತನವಾಯಿತು. ಇದನ್ನು ಕೇಳಿದ ಮೊದಲಿನ ಹುಡುಗಿಯು ನೇರವಾಗಿ ಹುಡುಗನ ಮನೆಯಲ್ಲಿ ಬಂದು ಕುಳಿತಳು. ತಂದೆ ತಾಯಿ ಎಷ್ಟು ಹೇಳಿದರೂ ಕೇಳದೆ ಹಠ ಹಿಡಿದಳು. ಆಚ್ಚಿಗೆ ಕೊಟ್ಟ ಎರಡನೆ ಹುಡುಗಿಯು ಕಾಗದವನ್ನು ಬದ್ದವಾಡಿ ಈಗ ತಂದೆ ತಾಯಿಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ಇವರೀರ್ವರ

* * *

ನನ್ನ ಮಿತ್ರ 'ಕಾಮ್ರೇಡ್' ಒಬ್ಬರು ಮಾತು ಮಾತಿಗೆ 'ಕೊಡಗಿನಲ್ಲಿ ಒಂದು ಕ್ರಾಂತಿಯಾಗಬೇಕು. ಇದಕ್ಕಾಗಿ ಜನರ ಸಂಘಟನೆಯಾಗಬೇಕು'. ಎಂದು ಹೇಳುತ್ತಾ ಇರುತ್ತಾರೆ. ಅವರ ಪೂರ್ಣ ಪರಿಚಯವುಳ್ಳವರಿಂದ ಅವರು 'ಕ್ರಾಂತಿ'ಯ ಮಾತು ಹೇಳುವಾಗ ನಾನು ನಗುವುದು! ಕ್ರಾಂತಿಯಾಗಬೇಕಾದರೆ ಮಾತಿನಲ್ಲಿ ಆಗುವುದೆ? ಕ್ರಾಂತಿಗೆ ಕಾರಣನಾಗುವ ವ್ಯಕ್ತಿಯಲ್ಲಿ ಅದೆಷ್ಟು ನಿಷ್ಠೆ, ತ್ಯಾಗ, ಛಲಗಳು ಬೇಕು. ಜನತೆಗೆ ಆತನು ಎಷ್ಟು ಆದರ್ಶ ಪಾತ್ರನಾಗಿ ಬಾಳಬೇಕು! ಪಾತ್ರಿಯೊಳಗಿನ ನೀರಿನಲ್ಲಿ ಹುಳ ಬಿಡುವುದೇ ವಿನಾ ಮೊಸಳೆ ಇರಲಾಪುದೆ? ಅವರಂತೆ ಅಲ್ಪ ಬುದ್ಧಿಯುಳ್ಳ ಕಲ್ಪನೆ ಬಿಡುವುದೇ ಹೊರತು ಕ್ರಾಂತಿಯ ಬೀಜ ಬಿತ್ತೀತೆ?

* * *

ಕಾಂಗ್ರೆಸ್ ಸರಕಾರ ಕೊಡಗಿನಲ್ಲಿ ಬಂದ ನಂತರ ಕಾಂಗ್ರೆಸ್ಸಿನಲ್ಲಿ ಕೆಲವ ಮಾಡಿದ ಅನೇಕರ ಯಾತ್ರೆಯು ನಿಬಾರ್ಧಕವಾಗಿ ಕೋಟೆಗೆ ಬರುತ್ತಿದೆ. ಅನೇಕ ಕಡೆ ಕಾಂಗ್ರೆಸಿಗರಲ್ಲಿ ಸರಕಾರ 'ನಮ್ಮದು' ಎಂಬ ಭಾವನೆಯಿದ್ದಂತೆ ತೋರುತ್ತಿದೆ. ಮಡಿಕೇರಿ ಕೋಟೆಯು ಸ್ವ ಕಾಂಗ್ರೆಸ್ [illegible] ಕಾರ್ಯವೆಂಬ ಹಲವು ಜಂಜಡ ಕಾರಣ ಮಾರಾಟ ತಂಬಿಗೆ [illegible] ಪೇಟೆ ಬೀದಿಗಳಲ್ಲಿ ಕೇಳುತ್ತಿದೆ. ಆದರೆ ಸತ್ಯಾಗ್ರಹ ದಿನ ಆತ್ಮಾಗಿ ದುಡಿದವರು ಸರ್ಕಾರದಲ್ಲಿ; ಬಲು ವಿಷಾದಕರ! ಅವರುತ್ತ ಈ 'ತುಂಬಿ'ಗಳ ಠೀಕಾ [illegible], ಸೇವೆಗಾಗಿ ಅಲ್ಲ: ಬರಲು [illegible] ಫಲಕ್ಕಾಗಿ!

* * *

ಮನುಷ್ಯನಿಗೆ ಬಾಹ್ಯರಚನೆಯಲ್ಲಿ ಒಂದೇ ರೀತಿ. ಕಣ್ಣು, ಕಿವಿ, ಬಾಯಿ ಕಾಲು, ಕೈ ಸರ್ವಸೃಷ್ಟಿಯಿಂದಲೂ ಒಂದೇ. ಆದರೂ ಮಾನವರಲ್ಲಿ ನಾನಾ ವರ್ಗವಿದೆ. ಸಿರಿತನ, ಬಡತನ, ಯೋಗ್ಯತೆಯಿಂದ ಬರುವುದಲ್ಲ. ಕರುಬತನ ಯಾ ಸ್ವಾರ್ಥತನಗಳು ಅವರವರ ಜೀವನದ ದೇಶ ಹವಾಗುಣದಿಂದ ಬರ ಪಂಥಾನುಗಳು ಅವರವರ ಆ ಆಚಾರ ಒಳ್ಳೆಯ ವಿದ್ಯೆ ಆದರೆ ಮಾನವನ ಗುಣನಡತೆಗಳು ಅವನನ್ನು ವಿವಿಧವಾಗಿ ವಿಂಗಡಿಸಿವೆ. ಆದ್ದರಿಂದ ಸಜ್ಜನರು, ಅವಿವೇಕಿಗಳು ಕ್ರೂರರು ಅವಿನಯಿಗಳು ವಿವಿಧ ವರ್ಗವಿದೆ. ವಿನಯವಿಲ್ಲದಿದ್ದರೆ ಹುವ್ವೂ ಕಂಗಾಲ ಹಗ್ಗದ ವರ್ಗಕ್ಕೆ ಸೇರಿ ಹೋಗುತ್ತಿದ್ದೇನೆ! ಅದರಂತೆ ಮೋಸ, ಕಪಟ ನೀತಿ, ಕುಟಿಲತೆಗಳಿಲ್ಲದಿದ್ದಾಗ್ಯೂ ಒಂದೇ ಮಾನವ ಸಮಾಜವಾಗಿ ಎಲ್ಲರೂ 'ಮಾನವ'ರಾಗಿ ಬಿಡುತ್ತಿದ್ದರೇನೋ! ಆದರೆ ಈ ವ್ಯತ್ಯಾಸ ವಿಷಮವಾಗಿಯೇ ಜೀವನಕ್ಕೆ ಒಂದು ಅರ್ಥವಿದೆ. ಮಾನವನಿಗೊಂದು ಗುರಿ ಇದೆ!

* * *

ನನ್ನ ನೆರೆಯಲ್ಲಿ ಒಂದು ವರಕಷ್ಟು ಜಿಪುಣರನ್ನು ನನ್ನ ಜೀವನದಲ್ಲಿ ನಾನು ಕಾಣಲಿಲ್ಲ. ಅವರಿಂದ ಒಂದು ಕಾಸಿನ ಪ್ರಯೋಜನ ಯಾರಿಗೂ ಆಗುವುದಿಲ್ಲ. ಸಾರಿದೆ ಒಡೆಯುವವನಿರಲಿ, ಮನೆಗೆ ಸುಣ್ಣ ಬಡಿಯುವವನಿರಲಿ, ಯಾರು ಅವರಲ್ಲಿ ಕೆಲಸಕ್ಕೆ ಬಂದರೂ ಕಣ್ಣೀರು ಹಾಕಿಕೊಂಡೇ ಹೋಗುತ್ತಾರೆ. ತನ್ನ ಕೈಯಿಂದ ಕೊಡಲು ಅವರು ಕಷ್ಟಪಡುವ ಕೆಲಸದಿಂದ ಹೊಂದಿಕೊಳ್ಳಲು ಕಷ್ಟಪಡುವದಿಲ್ಲ. ಸಂತೋಷದಿಂದ ಹೊಂದಿಕೊಳ್ಳುತ್ತಾರೆ. ಅವರು ಶ್ರೀಮಂತರಿದ್ದಾರೆ. ಆದರೂ ಅವರ ಕೈಗೆ ದೊರೆತ ಕಾಸು ಹಿಂದಕ್ಕೆ ಬರಲಾರದು. ಅವರನ್ನು ಕಂಡಾಗ ಈ ಮಾತು ನನಗೆ ಜ್ಞಾಪಕಕ್ಕೆ ಬರುತ್ತದೆ. 'ಆಳವಾದ ಹೊಂಡದಿಂದ ಏನನ್ನಾದರೂ ಎತ್ತಿಕೊಳ್ಳುವುದು ಕಷ್ಟ ಜೇಬಿನ ಹೊಂಡಕ್ಕೆ ಹಾಕುವದು ಸುಲಭ. ಅದರಂತೆ ಅತ್ಯಂತ ಜಿಪುಣನಿಂದ ಏನನ್ನಾದರೂ ಪಡೆಯುವುದು ಕಷ್ಟ ಹೊರತು ಕೊಡುವುದು ಸುಲಭ.'

* * *

ಕಳೆದ ವಾರದ ದುರ್ಬೀನನ್ನು ನೋಡಿ ತರುಣಿಯೊಬ್ಬಳು ರೀಗಿ ಬರೆದಿದ್ದಾಳೆ. 'ನಿಮಗೆ ಟೀಕಿಸಲು ಹುಡುಗಿಯರೇ ಇರುವರೇ? ಹಿಂದಿನ 'ಡೋಂಗಿ' ಕಟುವಿಗೂ ಇದಕ್ಕೂ ವ್ಯತ್ಯಾಸವಿಲ್ಲ. ಈಗ ನಿಮ್ಮ ಈ ದುರ್ಬೀನು ನೋಟದ ಅವಶ್ಯಕತೆ ಏನು?' ಎಂದು ಆಕೆಯ ಪ್ರಶ್ನೆ. ನಾನು ತನು ಸ್ವಯಿಂದ 'ಕನ್ನಡಿಯಲ್ಲಿ ನಿಮ್ಮನ್ನು ನೀವು ನೋಡುವವಳು. ನಾನು ಈ ದುರ್ಬೀನು ನನಗಾಗಿ ಇಟ್ಟುಕೊಂಡವನೆಂದು ಬರೆದೆ! ಏಕೆಂದರೆ ಕನ್ನಡಿ ನೋಡುವವನು ತನ್ನನ್ನು ತಾನು ನೋಡಿಕೊಳ್ಳುತ್ತಾನಾದರೆ ದುರ್ಬೀನಿನವನು ಹೊರ ಜಗತ್ತನ್ನು ಕಾಣುತ್ತಾನೆ. ಅಕ್ಷಿಯನು ಪರಕ ತನ್ನ ಕಾಣನಿಕರ ವಿಷಯ ವಿಶಾಲ ಪ್ರಪಂಚಾನುಭವ ಹೊಂದುತ್ತಾನೆ.

THE JUBILEE INSURANCE CO., LTD.

One of the very few in the feild of Insurance that has been declaring BONUS to its policy holders from its very insception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmand Road, Bangalore.

Our Chief Agents:-THE ORIENTAL ENTERPRISES, BANGALORE I

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೂದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:-ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,
41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

ನಮ್ಮ ಬಡತನ

ಲೇ:—ಶ್ರೀ ಡಾ. ಭಗವಾನ್‌ದಾಸ್. ಬಿ. ಎ., ಬಿ. ಟಿ.

"ದೇಶದ ಜನಸಂಖ್ಯೆಯು ಯಾವ ಗತಿಯಿಂದ ವೃದ್ಧಿಯಾಗುತ್ತಾ ಹೋಗುತ್ತದೋ ಅಷ್ಟು ವೇಗದಲ್ಲಿ ಆಹಾರ ಸಾಮಗ್ರಿಯ ಉತ್ಪತ್ತಿಯು ಹೆಚ್ಚುವುದಿಲ್ಲ.' ಎಂದು ಇಂಗ್ಲೆಂಡಿನ ಖಾದರ್ ಮಾಲಥಸ್‌ರವರ ಸಿದ್ಧಾಂತ. ಆಧುನಿಕ ಉನ್ನತ ರಾಷ್ಟ್ರಗಳಲ್ಲಿ ಈ ಸಿದ್ಧಾಂತದ ಸತ್ಯತೆಯು ಸಂಪೂರ್ಣವಾಗಿ ಪ್ರಮಾಣಿತವಾಗದಿದ್ದರೂ ಭಾರತದಂತಹ ಬಡದೇಶದಲ್ಲಿ ಅಕ್ಷರಶಃ ಸರಿಯಾಗಿದೆ. ನಮ್ಮಲ್ಲಿ ಜನಸಂಖ್ಯೆಯು ಹೆಚ್ಚುಗುತ್ತಿದೆ. ವ್ಯವಸಾಯ ಯೋಗ್ಯ ಭೂಮಿಯು ಕಡಿಮೆಯಾಗುತ್ತಿದೆ. ವ್ಯವಸಾಯ ಯೋಗ್ಯ ಎಲ್ಲಾ ಭೂಮಿಯನ್ನು ಈ ಕಾರ್ಯಕ್ಕೆ ಉಪಯೋಗಿಸಿದರೂ ಖಾದ್ಯ, ಮತ್ತು ಪೋಷಣೆಯ ಕೊರತೆಯು ಉಳಿದೇ ಉಳಿಯುವದು. ಇದನ್ನು ದೂರ ಮಾಡಲು ಇರುವ ಏಕಸೂತ್ರ ಉಪಾಯವೆಂದರೆ, ಆಹಾರದ ಉತ್ಪಾದನೆಯನ್ನು ಹೆಚ್ಚಿಸುವದು. ಪ್ರತಿ ಎಕರೆಯಲ್ಲಿ ಅಧಿಕ ಆಹಾರ ಸಾಮಗ್ರಿಗಳನ್ನು ಬೆಳೆಸುವುದು, ಅಧಿಕ ಕ್ಷೇತ್ರಗಳಲ್ಲಿ ವ್ಯವಸಾಯ ಮಾಡುವುದು ಮತ್ತು ರೋಗ ಎಂಜಲನ್ನು, ಅವನ್ನು ಮೊದಲಾದ ರೂಪದಲ್ಲಿ ನಷ್ಟವಾಗುವ ಆಹಾರವನ್ನು ಉಳಿಸಿಕೊಳ್ಳುವುದು ಇದಕ್ಕೆ ಮೊದಲನೆ ಆವಶ್ಯಕತೆ ಎಂದರೆ ನೀರಾವರಿಯ ಏರ್ಪಾಡಾಗಿದೆ. ಹುಲ್ಲು ಮತ್ತು ಗಿಡಮರಗಳು ಇಲ್ಲದಿರುವುದರಿಂದ ಹೆಚ್ಚಾಗಿ ಮೇಲಿನ ಧೂಳು ಹಾರುವುದರಿಂದ ಭೂಮಿಯು ಬಂಜರಾಗಿ ಹೋಗುತ್ತದೆ. ಅನಂತರ ವ್ಯವಸಾಯಕ್ಕಾಗಿ ಉಳಿಯುವ ಭೂಮಿಯನ್ನು ತನ್ನ ಬಡತನ ಮತ್ತು ಸಾಧನಹೀನತೆಯ ದೆಸೆಯಿಂದ ರೈತನು ಸರಿಯಾಗಿ ಉಪಯೋಗಿಸಿಕೊಳ್ಳಲಾರನು. ಹೆಚ್ಚಾಗಿ ಅವನು ಅದೇ ಹಳೆಯ ಕಾಲದ ಉಪಕರಣಗಳಿಂದ ಎಷ್ಟೋ ಪಲ್ಲಿಗೆ ಬೀಜ ಬಿತ್ತುತ್ತಾ ನೇಸರಿ, ಬಿತ್ತನೆಯ ಬಹಳ ಸಮಯವನ್ನು ವ್ಯರ್ಥವಾಗಿ ಕಳೆದು ಬಿಡುತ್ತಾನೆ. ಮತ್ತೆ ನಾವು ಪ್ರಕೃತಿಯ ದಯೆಯಿಂದ ತೃಪ್ತನಾಗಬೇಕಾಗುತ್ತದೆ. ಈ ರೀತಿ ಸುಮಾರು ಏಳು ಕೋಟಿ ಎಕ್ರೆ ಕೃಷಿಯೋಗ್ಯ ಭೂಮಿಯು ಬಿತ್ತಲ್ಪಡುವುದಿಲ್ಲ. ಒಳ್ಳೆಯ ಉಪಕರಣಗಳ ಮತ್ತು ಟ್ರೇಕ್ಟರ್ ಮೊದಲಾದುವುಗಳ ಸಹಾಯದಿಂದ ಸಹಕಾರ ಪದ್ಧತಿಯಲ್ಲಿ ಕೃಷಿಯ ಏರ್ಪಾಡು ಮಾಡಿದರೆ ಸ್ಥಿತಿಯು ತಕ್ಕಮಟ್ಟಿಗೆ ಸುಧಾರಿಸಬಹುದು.' (ಸರ್ ಜಾನ್ ರಸ್ಸೆಲ್) 'ಇದರ ಜೊತೆಗೆ ಪರಿವಾರ ನಿಯೋಜನೆಯು (Family planning) ಆವಶ್ಯಕವಾಗಿದೆ. ಇದಕ್ಕಾಗಿ ಗರ್ಭನಿರೋಧದ ಅಗ್ಗವಾದ ಸುಲಭವಾದ ಮತ್ತು ಪ್ರಭಾವಪೂರ್ಣವಾದ ಉಪಕರಣಗಳನ್ನು ಉಪಯೋಗಿಸಬೇಕು' (ಶ್ರೀ ಮಾಯಿಕೆಲ್ ಯಂಗ್)

ಭಾರತದಲ್ಲಿ ಮಾಲ್ಥಸನ ಸಿದ್ಧಾಂತವನ್ನು ಸುಳ್ಳು ಮಾಡಲು ಮೇಲಿನ ಮಹನೀಯರು ಸಲಹೆಗಳನ್ನು ಕೊಟ್ಟಿರುವರು. ಆದರೆ ಬಡ ರೈತನಿಗೆ ಅಂಥ ನವ ಉಪಕರಣಗಳಾದರೂ ಹೇಗೆ ದೊರೆಯಬೇಕು? ಹಲವೆಡೆಗಳಲ್ಲಿ ನೀರಾವರಿಯ ಯೋಜನೆಗಳನ್ನು ಮಾಡುತ್ತಿದ್ದಾರೆ. ಪಂಚವಾರ್ಷಿಕ ಯೋಜನೆಯಿಂದ ಅದ್ಭುತ ಕ್ರಾಂತಿಯೇ ಆಗುವಂತೆ ತೋರುತ್ತಿದೆ. ಆದರೆ ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ನಮ್ಮ ದೇಶವು ಯಾವ ಮೂಲ್ಯವನ್ನು ತೆರಬೇಕೆಂಬುದರಲ್ಲಿ ಕೊಂಚ ಯೋಚಿಸೋಣ. ಇಂದು ಧಾನ್ಯಕ್ಕಾಗಿ ಧನಕ್ಕಾಗಿ ಪರದೇಶಗಳ ಭಿಕ್ಷೆಯನ್ನು ಮತ್ತು ಸಹಾಯವನ್ನು ಪಡೆಯಕೊಳ್ಳಲು ನಮ್ಮ ಸರಕಾರವು ಜೋಳಿಗೆ ತೆರೆದು ನಿಂತಿದೆ. ಎಷ್ಟೇ ಸುರಾಜ್ಯವಾಗಿದ್ದರೂ ಅಂತಹ ಪರರಾಜ್ಯಕ್ಕಿಂತ ಎಷ್ಟೇ ಕು-ರಾಜ್ಯವಾದರೂ ಸ್ವ-ರಾಜ್ಯವೇ ಮೇಲೆಂದು ನೆನೆದು ಸ್ವಾಧಿಕಾರಕ್ಕಾಗಿ ಹೋರಾಡಿದ ನಮ್ಮ ದೇಶಕ್ಕೆ ಪರ ಪರಮುಖಾಪೇಕ್ಷೆಯಾಗಿರುವುದು ಕೀರ್ತಿಯನ್ನು ತರುವ ವಿಷಯವೇ? ನಮಗೆ ಸ್ವಸಾಮರ್ಥ್ಯವಿಲ್ಲವೆಂದೇ ಇದರಿಂದ ಸೂಚಿತವಾಗುವುದು. ಇಂದು ನಾವು ಯಾವ ಷರತ್ತುಗಳಿಲ್ಲದೆಯೇ ದಾನವನ್ನು ಪಡೆಯುತ್ತಿದ್ದರೂ, ಯಾವ ಸ್ವಾರ್ಥೀ ರಾಷ್ಟ್ರಮಂಡಲಗಳ ಹಿಂಬಾಲಕರಲ್ಲದಿದ್ದರೂ ಭವಿಷ್ಯದಲ್ಲಿ ಆಂಗ್ಲ-ಅಮೇರಿಕನ್ ಮಂಡಳಿಯೊ, ರಷ್ಯಾ ಮಂಡಳಿಯೊ ಘರ್ಷಣೆ ಮಾಡಿದಾಗ ಭಿಕ್ಷೆ ಉಂಡ ದಾಕ್ಷಿಣ್ಯಕ್ಕಾಗಿ ಭಿಕ್ಷೆ ನೀಡಿದವರ ಹಿಂದೆ ನಾವು ಯುದ್ಧಾಗ್ನಿಯಲ್ಲಿ ಧುಮುಕಬೇಕಾಗುವುದು. ಆಗ ನಾವು ಕಟ್ಟಿದ ಕಟ್ಟಡಗಳು ಭಸ್ಮವಾಗುವವು. ಸಾಮ್ರಾಜ್ಯವಾದಿ ಮತ್ತು ಬಂಡವಾಳಶಾಹಿಗಳಗಳೆರಡೂ, ಪರಸ್ಪರ ಮೇಲೆ ಬೀಳಲು ಶಸ್ತ್ರ ಸಂಗ್ರಹವನ್ನು ಭರದಿಂದ ಮಾಡುತ್ತಿರುವಾಗ ಯಾರಾದರೂ ನಮಗೆ ಫಲಾಪೇಕ್ಷೆಯಿಲ್ಲದೆ ಸಹಾಯ ಮಾಡುತ್ತಿರುವರೆಂದು ನಂಬುವದು?

ಸದ್ಯದಲ್ಲಿಯೇ ಜಾಗತಿಕ ಯುದ್ಧವಾಗಲಿಕ್ಕಿಲ್ಲವೆಂದೇ ಭಾವಿಸೋಣ. ಆದರೂ ನೀರಾವರಿಯೇ ಮೊದಲಾದ ಯೋಜನೆಗಳಿಂದ ಬಡವರಿಗೆ ಸಹಾಯವಾಗುವುದೇ ಎಂಬುದನ್ನು ಯೋಚಿಸೋಣ. ಅದ್ದರಿಂದ ಇನ್ನೂ ಹೆಚ್ಚು ಭೂಮಿಯು ವ್ಯವಸಾಯಯೋಗ್ಯವಾಗಬಹುದು. ರಾಸಾಯನಿಕ ಗೊಬ್ಬರ ಮತ್ತು ನವೀನತಮ ಕೃಷಿ ಕ್ರಮದಿಂದ ಬೆಳೆಯೂ ಹೆಚ್ಚು ಬೆಳೆಯಬಹುದು. ಆದರೆ ಇದರ ಲಾಭ ಭೂಸ್ವಾಮಿಗಳಿಗಲ್ಲದೆ ಭೂಪುತ್ರರಿಗಾಗಲೀ ಎಂಜಲನ್ನಕ್ಕಾಗಿ ಬಾಯಿ ಬಿಡುವ ದರಿದ್ರ ನಾರಾಯಣನಿಗಾಗಲೀ ಏನು ಸಿಗುವುದು? ಆಹಾರವನ್ನು ಹೆಚ್ಚು ಬೆಳೆಸಿರಿ ಎಂಬ ಮಾತ್ರಕ್ಕೆ ಭೂಮಾಲಿಕನ ಭೂಮಿಯಲ್ಲಿ ಕೆಲಸ ಮಾಡುವವನು ದ್ವಿಗುಣಿತ ಉತ್ಸಾಹದಿಂದ ಆಹಾರೋತ್ಪಾದನೆಯ ಕೆಲಸವನ್ನು ಮಾಡಲು ಸಮರ್ಥನಾಗುವನೇ? ವ್ಯವಸಾಯ ಯೋಗ್ಯವಾದ ಭೂಮಿಯು ಇಷ್ಟರವರೆಗೆ ಆಹಾರೋತ್ಪಾದನೆಯ ಕೆಲಸಕ್ಕೆ ಬಾರದಿದ್ದುದು ಕೇವಲ ಹಳೆ ಪದ್ಧತಿಯ ವ್ಯವಸಾಯದಿಂದಾಗುವ ನಷ್ಟದಿಂದಲ್ಲ ಅಥವಾ ದೇಶದಲ್ಲಿ ದುಡಿಯುವವರ ಸಂಖ್ಯೆಯು ಕಡಿಮೆಯಾದುದರಿಂದ ಅಲ್ಲ. ಭೂಮಿಯು ಕೆಲವೇ ಜನ ಜಮೀನ್ದಾರರ ಮತ್ತು ಭೂಸ್ವಾಮಿಗಳ ಕೈಯಲ್ಲಿದ್ದುದೇ ಕಾರಣ. ಅವರ ಕೈಕೆಳಗೆ ಶ್ರಮಕ್ಕೆ ತಕ್ಕ ಫಲವನ್ನು ಹೊಂದದೆ ಪರಾಧೀನತೆಯಲ್ಲಿ ಬದುಕುವುದಕ್ಕಿಂತ ಕಾಶಿ ಕಮಂಡಲ ಧರಿಸಿ ಸನ್ಯಾಸಿಗಳಾಗೋಣ ಇಲ್ಲವೇ ಭಿಕ್ಷಾಪಾತ್ರವನ್ನು ಹಿಡಿದು ನಿಶ್ಚಿಂತೆಯಿಂದ ಅಲೆಯೋಣ. ಎಂದು ಅನೇಕರಿಗೆ ಅನಿಸಿರಬೇಕು. ಗದ್ದೆ ಉಳುವ ಭೂಪುತ್ರನು ಭೂಸ್ವಾಮಿಯಾದರೇನೇ ಅತನು ಉತ್ಸಾಹದಿಂದ ಆಹಾರೋತ್ಪಾದನೆಯನ್ನು ಮಾಡಬಲ್ಲನು. ಭೂಮಿಯು ದೊರೆಯುವುದಿದ್ದರೆ ಇತರರೂ ಓಡಿಬರುವರು.

"ಉಳುವವನೇ ಭೂಮಿಯ ನಿಜವಾದ ಸ್ವಾಮಿಯು." ಎಂಬ ಸಿದ್ಧಾಂತವನ್ನು ಮುಂದಿಟ್ಟುಕೊಂಡೇ ಕಾಂಗ್ರೆಸ್ಸ ಸರಕಾರಗಳು ಜಮೀನ್ದಾರಿ ಪದ್ಧತಿಯನ್ನು ತೆಗೆಯುವ ಮಸೂದೆಯನ್ನು ಅಂಗೀಕರಿಸಿದವು. ಆದರೆ ಜಮೀನ್ದಾರರಿಗೆ ಪ್ರತಿಫಲವನ್ನು ಕೊಡುವ ಗೊಂದಲಕ್ಕೆ ಬಿದ್ದು ಆ ಮಸೂದೆಗಳು ಬರೀ ಕಾಗದದಲ್ಲಿ ಉಳಿಯುವಂತಾಗಿದೆ. ನಮ್ಮ ತಪ್ಪಿನ ಪರಿಣಾಮವನ್ನು ಅರಿತೇ ಕಾಶ್ಮೀರದವರು ಯಾವ ಪ್ರತಿಫಲವನ್ನು ಕೊಡದೆಯೇ ಜಮೀನ್ದಾರಿ ಪದ್ಧತಿಯನ್ನು ನಿರ್ಮೂಲ ಮಾಡಿದ್ದಾರೆ. ಪೂಜ್ಯ ವಿನೋಬಾ ಭಾವೆಯವರ ಈ ಮಾತುಗಳಿಗೆ ಸ್ವಲ್ಪ ಲಕ್ಷ್ಯ ಕೊಡಿರಿ. 'ನಾವು ಅಹಿಂಸೆಯ ತತ್ವಗಳನ್ನು ಜಾಗೃತವಾಗುವುದರಿಂದ ತಡೆಯಲು ಅಪೇಕ್ಷಿಸುವುದಾದರೆ, ಮತ್ತು ಸತ್ಯವಾದ ಮನಸ್ಸಿನಿಂದ ಭೂಮಿಯ ಸಮಸ್ಯೆಯನ್ನು ಶಾಂತಿಪೂರ್ವಕ ಬಿಡಿಸಲು ಅಪೇಕ್ಷಿಸುವದಾದರೆ ಈಗ ಇನ್ನು ಸ್ವಲ್ಪವೂ ತಡ ಮಾಡಬೇಡಿರೆಂದು ಆಗ್ರಹಪೂರ್ವಕವಾಗಿ ಹೇಳುತ್ತೇನೆ. ನಾನು ತಮಗೆ ಹೇಳಲಪೇಕ್ಷಿಸುವುದೇನೆಂದರೆ ನಾವು ಇದರಲ್ಲಿ ತಡಮಾಡಿದರೆ ಅನಂತರ ಪಶ್ಚಾತ್ತಾಪ ಪಡುವಿರಿ. ಜನತೆಯು ಅನಿಶ್ಚಿತ ಸಮಯದ ವರೆಗೆ ಕಾದು ಕುಳಿತಿರುವುದು ಎಂದು ಭಾವಿಸುವುದು ಕೇವಲ ತಪ್ಪು. 'ಬಾಪೂಜೀ ಕಾರವಾಸ್‌ಕಹಾನಿ' ಎಂಬ ಡಾ. ಸುಶೀಲಾನಾಯರ್‌ರವರು ಬರೆದ ಪುಸ್ತಕದ ಈ ಉದ್ಧರಣೆಯನ್ನು ಓದಿನೋಡಿರಿ. ಸಾಯಂಕಾಲ ಅಡ್ಡಾಡುತ್ತಿರುವಾಗ ಮೀರ ಬಹೆನಳು ಬಾಪುವನ್ನು ಹೀಗೆ ಪ್ರಶ್ನೆ ಕೇಳಿದಳು. 'ಸ್ವರಾಜ್ಯದಲ್ಲಿ ಭೂಮಿಯ ಹಂಚುವಿಕೆಯು ಯಾವ ರೀತಿ ಮಾಡಲಾಗುವುದು?' ಬಾಪು ಹೇಳಿದರು 'ಭೂಮಿಯು ರಾಜ್ಯದ್ದಾಗುವುದು. ಈ ಆದರ್ಶವನ್ನು ಒಪ್ಪುವ ಜನರದೇ ಶಾಸನ ಸಂಸ್ಥೆಯಿರುವುದೆಂದು ನಾನು ಎಣಿಸುತ್ತೇನೆ. ಅಧಿಕಾಂಶ ಜಮೀನ್ದಾರರು ಸ್ವೇಚ್ಛೆಯಿಂದ ಭೂಮಿಯನ್ನು ಬಿಟ್ಟುಬಿಡುವರು. ಯಾರು ಬಿಡುವುದಿಲ್ಲವೋ ಅಂಥವರಿಂದ ಕಾನೂನು ಭೂಮಿ ಬಿಡಿಸುವುದು.' ಆಗ ಮೀರಾ ಬಹೆನಳು 'ಹಾಗಾದರೆ ಜನರ ಅಭಿಪ್ರಾಯವನ್ನು ಸಿದ್ಧಗೊಳಿಸುವುದು ಮೊದಲನೆಯ ಕೆಲಸವಾಗುವುದಲ್ಲವೇ?' ಎಂದು ಅಂದಳು. ಬಾಪುವು 'ಲೋಕಮತಕ್ಕೆ ಶಿಕ್ಷಣವು ದೊರೆತಾಗಿದೆ. ಅದು ಇಂದು ಹೆಚ್ಚು ಕಡಿಮೆ ಸಿದ್ಧವಾಗಿದೆ' ಎಂದು ಉತ್ತರಕೊಟ್ಟರು. (ಪುಟ 309)

ಮೇಲಿನ ಆದರ್ಶಗಳನ್ನು ಮುಂದಿಟ್ಟುಕೊಂಡು ಕೊಡಗಿನಲ್ಲಿಯೂ, ಕಾರ್ಯಾರಂಭವಾಗಬೇಕು. ಹೊರಗಿರುವವಷ್ಟು ದೊಡ್ಡ ಜಮೀನ್ದಾರರು ಇಲ್ಲಿ ಇಲ್ಲದಿದ್ದರೂ ತನ್ನ ಜಮೀನನ್ನು ವಿಸ್ತರಿಸುವ ಮಹತ್ವಾಕಾಂಕ್ಷೆಯುಳ್ಳವರು ಹಲವರಿದ್ದಾರೆ. ತನ್ನ ಅಧೀನದಲ್ಲಿರುವ ಭೂಮಿಯಲ್ಲಿ ಕೆಲವಂಶವನ್ನು ಸರಿಬಿಟ್ಟವರೂ ಇದ್ದಾರೆ. ತನಗೆ ಸರಕಾರದಿಂದ ದಾನರೂಪವಾಗಿ ಸಿಕ್ಕಿದ ಜಾಗೆಗಳನ್ನು ಕಡಿದು ಪ್ರಾರಂಭದಲ್ಲಿ ಹೇಳಿದಂತೆ ಆ ಭೂಮಿಯನ್ನು ಬಂಜರುಗೊಳಿಸುವಂತವರೂ ಇದ್ದಾರೆ. ಅದ್ದರಿಂದ ತಡಮಾಡದೆ ಭೂಸ್ವಾಮಿಗಳು ವ್ಯವಸಾಯ ಯೋಗ್ಯವಾದರೂ ಆಹಾರೋತ್ಪಾದನೆಯ ಕಾರ್ಯಕ್ಕೆ ಉಪಯೋಗಿಸದ ಸಮಸ್ತ ಭೂಭಾಗಗಳನ್ನು ಯೋಗ್ಯರಾದವರಿಗೆ ಅಂದರೆ ಸ್ವತಃ ಕೃಷಿ ಮಾಡುವ ಶಾರೀರಿಕ ಸಾಮರ್ಥ್ಯ ಮತ್ತು ಮನಸ್ಸುಳ್ಳವರಿಗೆ ದಾನರೂಪವಾಗಿ ಕೊಡಬೇಕು. ಸ್ವತಃ ರೈತನು ಬಡವನೆ, ಉಳ್ಳವನ ಅಧಿಕಾರ ತನಗಿಲ್ಲವೆಂಬುದನ್ನು ನೆನಪಿಟ್ಟುಕೊಂಡು ಇನ್ನೊಬ್ಬರ ಶ್ರಮದಿಂದ ವ್ಯವಸಾಯ ನಡೆಯುವ ಭೂಭಾಗವನ್ನು ದಾನಮಾಡಬೇಕಾಗಬೇಕು. ಶ್ರೀಮಂತರು ಹೊಸ ರೈತನಿಗೆ ಆರಂಭಕ್ಕಾಗಿ, ಎತ್ತು, ಬೀಜ, ಗೊಬ್ಬರ ಮೊದಲಾದುವುಗಳನ್ನು ಒದಗಿಸಿ ಅತನನ್ನು ಮುನ್ನಡೆಯಲು ಬಿಡಬೇಕು. ಸರಕಾರವು ಈ ರೀತಿಯ ಕೆಲಸಗಳಾಗುವಂತೆ ಪ್ರೇರಣೆಯನ್ನು ಸಹಾಯವನ್ನು ಕೊಡಬೇಕು. ಸೈನ್ಯದಲ್ಲಿದ್ದವರಿಗೆ ಸರಕಾರವು ಭೂದಾನವನ್ನು ಕೊಡುವುದು ಆ ಸೈನಿಕನು ಊರಿಗೆ ಬಂದ ಮೇಲೆ ತನ್ನ ಶ್ರಮದಿಂದ ಆ ಭೂಮಿಯಲ್ಲಿ ಆಹಾರೋತ್ಪಾದನೆಯನ್ನು ಮಾಡಿಕೊಳ್ಳಬೇಕೆಂಬ ಉದ್ದೇಶದಿಂದಲೇ ಆಗಿದೆಯಲ್ಲದೆ ಬಂಜರು ಬಿಡಲಿಕ್ಕಾಗಿ ಅಲ್ಲ. ಮೊದಲೇ ಸಾಕಷ್ಟು ಭೂಮಿ ಇದ್ದವನಿಗೆ ಕೊಟ್ಟದ್ದರಲ್ಲಿ ಯಾವ ಅರ್ಥವೂ ಇಲ್ಲವಾದುದರಿಂದ ಅಂಥವರಿಗೆ ಕೊಟ್ಟ ಭೂಮಿಯನ್ನು ಹಿಂದಕ್ಕೆ ತೆಗೆದುಕೊಳ್ಳುವ ಅಧಿಕಾರವನ್ನು ಸರಕಾರವು ಕಾನೂನಿನ ಮೂಲಕ ಪಡೆದುಕೊಳ್ಳಬೇಕು. ಬ್ರಿಟಿಷರ ಕಾಲದಲ್ಲಿದ್ದ ಜಮೀನ್ದಾರ ಪದ್ಧತಿಯನ್ನು ತೆಗೆಯಬಲ್ಲ ಸರಕಾರಕ್ಕೆ ಇಂಥಾ ಕಾನೂನನ್ನು ಮಾಡುವುದು ಕಷ್ಟವಾಗದು. ರಾಷ್ಟ್ರೀಯ ಚಳವಳಿಯಲ್ಲಿ ಕಾರಾಗೃಹವಾಸವನ್ನನುಭವಿಸಿದವರಿಗೆ ಸಹಾಯಾರ್ಥವಾಗಿ ಭೂಮಿಯನ್ನು ಕೊಡುವಾಗಲೂ, ಮೇಲಿನ ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಈ ತರದ ಸುಧಾರಣೆಯು ಆಗದ ಹೊರತು ದೇಶದ ಏಳಿಗೆಯು ಆಗಲಾರದು. ಆ ಮೇಲೆ ಸಹಕಾರ ಪದ್ಧತಿಯಿಂದ ಬೇಕಾದರೂ ವ್ಯವಸಾಯ

ವನ್ನು ಮಾಡಿಕೊಳ್ಳಬಹುದು. ಭೂಮಿಯು ಸ್ವಾಮಿಯಾಗಿ ಆದರ ಲಾಭ ನಷ್ಟಗಳ ಜವಾಬ್ದಾರದ ಅನುಭವವಾಗದೆ, ರೈತರು ಸಹಕಾರ ಪದ್ಧತಿಯಿಂದ ಆಗುವ ಲಾಭವನ್ನು ಅರಿತುಕೊಳ್ಳಲಾರರು.

ಈಗ ಕೃಷಿಪದ್ಧತಿಯ ವಿಚಾರವಾಗಿ ಜಗತ್ಪ್ರಸಿದ್ಧ ವಿಜ್ಞಾನಿಗಳಾದ ಆಲ್ಬರ್ಟ್ ಐನ್‌ಸ್ಟೀನ್ ಇವರು ಏನೆನ್ನುತ್ತಾರೆಂದು ನೋಡೋಣ. ಅವರು ಹೀಗೆ ಹೇಳುತ್ತಾರೆ, "ಕೃಷಿಯು ಪರಂಪರಾಗತವಾದ ಸಾಧನೆಗಳನ್ನೇ ಉಪಯೋಗಿಸುತ್ತಾ ಹೋಗುವುದೇ ಭಾರತಕ್ಕೆ ಉಚಿತವಾದುದು. ದೊಡ್ಡ ದೊಡ್ಡ ಟ್ರ್ಯಾಕ್ಟರ ಗಳ, ಯಂತ್ರಗಳ ಮತ್ತು ರಾಸಾಯನಿಕ ಗೊಬ್ಬರಗಳ ಸಹಾಯದಿಂದ ಕೊಂಚ ಸಮಯದ ಮಟ್ಟಿಗೆ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಾಗಬಹುದು. ಆದರೆ ಸಂಭವತಃ ಇವುಗಳ ಪರಿಣಾಮವು ಭೂಮಿಯನ್ನು ಬಂಜರು ಮಾಡಿಬಿಡುವುದಾಗುವುದು. ಇದರಿಂದ ದೇಶಕ್ಕೆ ಅಪರಿಮಿತವಾದ ಹಾನಿಯುಂಟಾಗುವುದು.

ಈ ರೀತಿ ಉಳುವ ರೈತನನ್ನು ತನ್ನ ಭೂಮಿಯ ಸ್ವಾಮಿಯನ್ನಾಗಿ ಮಾಡಿ ಅವನಿಗೆ ಉಚಿತವಾದ ಸಾಧನಗಳ ಮತ್ತು ಗೊಬ್ಬರಗಳ ಸಹಾಯದಿಂದ (ಅವುಗಳನ್ನೇ ವಿಜ್ಞಾನದ ತಿಳುವಳಿಕೆಯಿಂದ ಸುಧಾರಿಸಿಕೊಂಡು) ವ್ಯವಸಾಯಮಾಡುವಂತೆಯೂ, ಆತನು ತನ್ನಂಥ ಇತರರೊಡನೆ ಕಾಲಕ್ಕೆ ವೇಳಾ ಸಹಕರಿಸಿ ಕೆಲಸ ಮಾಡುವಂತೆಯೂ ಮಾಡಿದರೆ, ಜತೆಗೆ ಗೃಹೋದ್ಯೋಗಕ್ಕೂ ಪ್ರೋತ್ಸಾಹಕೊಟ್ಟರೆ, ದೇಶದಲ್ಲಿ ಸುಭಿಕ್ಷ ಉಂಟಾಗುವುದು. ಆಗ ಜನಸಂಖ್ಯೆಯ ವೃದ್ಧಿಯು ಅಷ್ಟು ದೊಡ್ಡದಾಗಿ ತೋರದು. ಜೀವನದ ಮಟ್ಟವು ಉತ್ತಮಗೊಂಡರೆ, ಸಂತಾನ ವೃದ್ಧಿಯು ಒಂದು ಹಿಡಿತಕ್ಕೆ ಬರುವುದು. ಶ್ರೀಮಂತರಿಗಿಂತ ಬಡವರಿಗೇನೇ ಹೆಚ್ಚು ಮಕ್ಕಳು ಎಂಬುದನ್ನು ನಾವು ನೋಡಿಲ್ಲವೇ! ಜೀವನದ ಮಟ್ಟವನ್ನು ಏರಿಸಿಕೊಳ್ಳುವ ಸಾಧ್ಯವನ್ನು ಕಲ್ಪಿಸಿಕೊಟ್ಟರೆ, ಮನುಷ್ಯನು ತನ್ನ ಮಟ್ಟವನ್ನು ಕಾಯ್ದುಕೊಳ್ಳಲಿಕ್ಕೋಸ್ಕರ ತಾನಾಗಿಯೇ ಇಂದ್ರಿಯ ನಿಗ್ರಹದ ಅಭ್ಯಾಸ ಮಾಡತೊಡಗುವನು. ಜತೆಗೆ ಶಿಕ್ಷಣವು ದೊರೆತರೆ ಉತ್ತಮವೇ ಆಗುವುದು. ಆಗ ಜನಸಂಖ್ಯೆಯ ಸಮಸ್ಯೆಯು ತಾನಾಗಿಯೇ ಬಗೆಹರಿಯುವುದು. ಜೀವನದ ಮಟ್ಟವನ್ನು ಸುಧಾರಿಸದೆ ಕೇವಲ ಸಂತತಿ ನಿರೋಧಮಾಡಿರಿ ಎಂದು ಹೇಳಿ ಕೃತ್ರಿಮ ಸಾಧನಗಳನ್ನು ಒದಗಿಸಿಕೊಡುವುದರಿಂದ ಸರಕಾರವು ತನ್ನ ಕರ್ತವ್ಯವನ್ನು ಪಾಲಿಸಿದಂತಾಗಲಿಲ್ಲ. ಬದಲು ಜನತೆಯ ನೈತಿಕ ಪತನಕ್ಕೆ ಸಹಾಯ ಮಾಡಿದಂತಾಗುವುದು.

ದೇಶದಲ್ಲಿ ಹೆಚ್ಚು ಆಹಾರ ಬೆಳೆವುದು ಹೇಗೆ?

ಲೇ—ಶ್ರೀ. ಕೆ. ಸಿ ಕರುಂಬಯ್ಯ.

ಈ ಪ್ರಶ್ನೆಯು ಅನೇಕ ವರ್ಷಗಳಿಂದಲೂ ಎದ್ದಿದ್ದರೂ ಅದರ ಉತ್ತರ ಹುಡುಕುವುದರ ಕಡೆಗೆ ಸ್ವಾತಂತ್ರ್ಯ ದೊರೆತಂದಿನಿಂದ ಎಲ್ಲರಿಂದಲೂ ಈ ಪ್ರಶ್ನೆಗೆ ಉತ್ತರ ದೊರಕಲಿಲ್ಲ. ಸರಕಾರವು ಎರಡು ವರ್ಷಗಳ ದಿಂದೀಚೆಗೆ ಆಹಾರ ವೃದ್ಧಿಯ ವೆಚ್ಚ ಮಾಡಿ ವನಮಹೋತ್ಸವ ಪಂಕ್ತಿನ್ನಿತರ ಹೆಚ್ಚು ಆಹಾರ ಬೆಳೆಯುವ ಯೋಜನೆಯನ್ನು ಜಾರಿಗೆ ತಂದರೂ ಈ ವರ್ಷ ಕಳೆದ ವರ್ಷಕ್ಕಿಂತಲೂ ಆಹಾರ ಕಡಿಮೆಯಾಗಿದೆ. ದೇಶದಲ್ಲಿ ಜನತೆ ಈಗ ಉಣ್ಣಲು ಅನ್ನವಿಲ್ಲವೆಂದು ಹೊಟ್ಟೆ ಹೊಡೆದುಕೊಂಡರೆ 'ಎಲ್ಲರೂ ಮರ ನೆಡಿ, ನೂರು ವರ್ಷಗಳಾಚೆಗೆ ಎಲ್ಲರಿಗೂ ಅನ್ನ ಸಿಕ್ಕುತ್ತದೆ' ಎಂಬ ಹೇಳುವ ಯೋಜನೆಗೆ ಯಾವ ವಿದ್ಯಾಹೀನನಾದವನು ತಾನೇ ಸಂಶಯಪಡಲಿಕ್ಕಿಲ್ಲ. ಸ್ವಾತಂತ್ರ್ಯ ಸಿಕ್ಕುವುದಕ್ಕೆ ಮೊದಲು ಯಾವುದೋ ರೀತಿಯಲ್ಲಿ ಯಾಂಗೋ ವೆಚ್ಚವಾಗುತ್ತಿದ್ದ ಶ್ರಮಶಕ್ತಿ ಮತ್ತು ದೇಶದ ಸಂಪತ್ತು ಇಂದು ನಮ್ಮದೇ ರಾಜ್ಯಭಾರವಾದಾಗ ಇಂತಹ ಯೋಜನೆಗಳಿಗೆ ನಿಷ್ಪ್ರಯೋಜಕವಾಗಿ ವೆಚ್ಚವಾಗುತ್ತಿರುವುದು ವೇದ್ಯವಾದ ವಿಷಯವಾಗಿದೆ. ಕೌರವ ಪಾಂಡವರ ಕಾಲದ ಚರಿತ್ರೆಯಿಂದ ನೆಹರೂ ಸರಕಾರ ಬರುವ ವರೆಗಿನ ಇಡೀ ಪ್ರಪಂಚದ ಚರಿತ್ರೆಯನ್ನು ತೆಗೆದು ನೋಡಿದರೂ ವನಮಹೋತ್ಸವಕ್ಕೆ ಹೋಲಿಕೆಯಾಗುವಂತಹ ಯೋಜನೆಗಳಿಂದ ದೇಶದ ಆಹಾರ ಬೆಳೆಸಿದ ಒಂದು ವಿಷಯ ಕಂಡು ಬರುವುದಿಲ್ಲ. ಪ್ರಯಾಣಿಕರ ಸೌಕರ್ಯಕ್ಕಾಗಿ ರಸ್ತೆಯ ಇಕ್ಕಡೆಗಳಲ್ಲಿ ಸಾಲು ಮರಗಳನ್ನು ನೆಡುತ್ತಿದ್ದ ಚರಿತ್ರೆಯನ್ನು ಮಾತ್ರ ಕೇಳಬಹುದು. ಇಂತಹ ಯೋಜನೆಗಳಿಂದ ಆಹಾರ ದೇಶದಲ್ಲಿ ಸಮೃದ್ಧಿಯಾಗದು. ಹಾಗಾದರೆ ಹೆಚ್ಚು ಆಹಾರ ಬೆಳೆಯುವುದು ಹೇಗೆ?

ಅನೇಕ ಪ್ರಾಂತ್ಯಗಳಲ್ಲಿ ಸಾವಿರಾರು ಎಕ್ರೆ ಜಮೀನುಗಳೂ, ಪೈಸಾರಿ ಜಾಗಗಳೂ ಪಾಳು ಬಿದ್ದಿವೆ. ನಮ್ಮ ಕೊಡಗು ದೇಶದಲ್ಲೂ ಕೂಡಾ ಅದರಲ್ಲೂ ಪ್ರಾಮುಖ್ಯವಾಗಿ ದಕ್ಷಿಣ ಕೊಡಗಿನಲ್ಲಿ ಐವತ್ತು ಅರುವತ್ತು ವರ್ಷಗಳಿಂದಲೂ ಪಾಳುಬೀಳುತ್ತಿದ್ದು ಇಂದಿಗೂ ಹಾಗೆಯೇ ಉಳಿದಿರುವ ಹತ್ತಿಪ್ಪತ್ತು ಸಾವಿರ ಎಕರೆ ಬಹು ಫಲವತ್ತಾದ ಜಮೀನೂ, ಪೈಸಾರಿ ಜಾಗಗಳೂ ಇವೆ. ಇದೇ ಪ್ರದೇಶದಲ್ಲಿ ನೂರಾರು ಮಂದಿ ಕುರುಬ ಮತ್ತಿನ್ನಿತರ ಜಾತಿಯವರು ಇಂದಿಗೂ ಕಾಡು ಮನುಷ್ಯರಂತೆ ಮರದಡಿಗಳಲ್ಲಿ ಪೊದರುಗಳಲ್ಲಿ, ಹೊಟ್ಟೆಗನ್ನವಿಲ್ಲದೆ, ಹೊದೆಯಲು ಬಟ್ಟೆಯಿಲ್ಲದೆ ವಾಸಿಸುತ್ತಿರುವುದನ್ನು ಎಲ್ಲರೂ ನೋಡಬಹುದು. (ಅದರೆ ಅವರಿಗೂ ಅಸೆಂಬ್ಲಿಯಲ್ಲಿ ಜಾಗ ಕೊಟ್ಟಿದ್ದಾರೆ!) ಸಾಕಷ್ಟು ಜನ ಮತ್ತು ಸಾಕಷ್ಟು ಜಮೀನಿದ್ದರೂ ಕುರುಬರು ಕಾಡುಮನುಷ್ಯರಂತೆಯೇ ಉಳಿದಿರುವರು, ಪಾಳುಭೂಮಿಯೂ ಹಾಗೆಯೇ ಉಳಿದಿದೆ.

ಈ ಸಂದರ್ಭದಲ್ಲಿ ಕಾಡುಕುರುಬರ ವಿಚಾರವಾಗಿ ಕೆಲವು ವಿಷಯಗಳನ್ನು ವ್ಯಕ್ತಪಡಿಸದೆ ಹೋದರೆ ತಪ್ಪಾದೀತು. ಒಂದೆರಡು ಶತಮಾನಗಳಿಂದ ಇತ್ತೀಚೆಗೆ ದೇಶದಲ್ಲಿ ಹೊಸ ಹೊಸ ಮಾರ್ಪಾಡಾಗಿ ಜನತೆಯ ಜೀವನದ ರೀತಿ ಬದಲಾಗಿದ್ದರೂ ಅವರ ಜೀವನದಲ್ಲಿ ಯಾವುದೊಂದು ರೀತಿಯ ಮಾರ್ಪಾಡು ಕಂಡುಬರುತ್ತಿಲ್ಲ. ಆ ಪಂಗಡದವರ ಏಳಿಗೆಗೆ ಇದುವರೆಗೆ ಸರಕಾರದವರಾಗಲಿ ಆದರ್ಶ ವ್ಯಕ್ತಿಗಳಾಗಲಿ ಹೋರಾಡಿದುದಿಲ್ಲ. ಅವರ ಆ ರೀತಿಯ ಘೋರ ಬಡತನದ ನಗ್ನಜೀವನಕ್ಕೆ ಬಡತನವೇ ಕಾರಣ. ಅವರ ಕಣ್ಣ ಮುಂದೆಯೇ ಸಾವಿರಾರು ಎಕ್ರೆ ಜಮೀನು ಪಾಳು ಬಿದ್ದಿದ್ದರೂ ಸ್ವಂತ ಜಮೀನೆಂಬುದು ಅವರಿಗಿಲ್ಲ. ಹೊದೆಯಲು ಬಟ್ಟೆಯಿಲ್ಲದವರು ಎತ್ತು ತೆಗೆದು ಪಾಳುಭೂಮಿ ಉಳುವುದಿದೆಯೇ? ಅಂಥಾ ಜನತೆಗೆ ಸರಿಯಾದ ಸಹಾಯಗಳನ್ನು ಒದಗಿಸಿ ಕೊಟ್ಟು ಜಮೀನು ಸಾಗುವಳಿ ಮಾಡಿಸಿದ್ದರೆ ಈ ಹತ್ತಿಪ್ಪತ್ತು ವರ್ಷಗಳಲ್ಲಿ ದೇಶದ ಸಂಪತ್ತು ಎಷ್ಟೋ ಪಟ್ಟು ಹೆಚ್ಚಾಗುತ್ತಿತ್ತು. ಕಾಡುಕುರುಬರು ಊರು ಮನುಷ್ಯರಾಗುತ್ತಿದ್ದರು. ತಾವೂ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸಕೊಟ್ಟು ದೇಶದ ಏಳಿಗೆಗೆ ಪಾತ್ರರಾಗುತ್ತಿದ್ದರು. ಎಲ್ಲರಂತೆಯೇ ತಾವೂ ಮನೆಗಳನ್ನು ಕಟ್ಟಿಕೊಂಡು ಆನಂದಿಸುತ್ತಿದ್ದರು. ಅವರಲ್ಲೂ ಕೆಲವು ಜನರು ಆಫೀಸುಗಳಲ್ಲಿ ಉದ್ಯೋಗಸ್ಥರಾಗಿದ್ದುಕೊಂಡು ಮಡಿಕೇರಿ ವೀರರಾಜಪೇಟೆಗಳಲ್ಲಿ ಮಹಡಿಮನೆಯನ್ನು ಕಟ್ಟಿಸಿಕೊಳ್ಳುತ್ತಿದ್ದರು. ಅದರೆ ಇಂದೇನಾಗಿದೆ? ಸ್ವತಂತ್ರ ದೇಶದಲ್ಲಿ ಜನತೆಯೆಂದು ಕರೆಯಿಸಿಕೊಳ್ಳುವ ನಮಗೆ ಈ ವಿಷಯ ಹಾಸ್ಯಾಸ್ಪದವಾಗಿದೆ. ಒಬ್ಬ ಮನುಷ್ಯನ ಕಾಲು ಕುಂಟಾಗಿದ್ದರೆ, ಅಥವಾ ಕಣ್ಣು ಹೊಟ್ಟಾಗಿದ್ದರೆ ಅಂಗಹೀನನೆನಿಸಲ್ಪಡುವನು. ಒಬ್ಬ ಮನುಷ್ಯನು ಚೆನ್ನಾಗಿ ಬಾಯಿ ತೊಳೆಯದೆ ಆತನ ಬಾಯಿ ದುರ್ವಾಸನೆ ಬರುತ್ತಿದ್ದರೆ ಇತರರು ಅಸಹ್ಯಪಟ್ಟುಕೊಂಡು ಆತನನ್ನು ಶಪಿಸುವರು. ಅಂತೆಯೇ ನಮ್ಮ ಸಮಾಜದಲ್ಲಿ ಒಂದೆರಡು ಪಂಗಡದವರನ್ನು ಈ ರೀತಿ ಇಟ್ಟಿರುವುದು ಆಧುನಿಕ ಪ್ರಪಂಚದಲ್ಲಿ ಕಾಲಿಟ್ಟ ನವೀನ ಕಾಲದ ಜನತೆಯೆಂದು ಕರೆಯಿಸಿಕೊಳ್ಳುವ ನಮಗೆ ಅಸಹ್ಯವಲ್ಲವೇ? ದೂರ ದೃಷ್ಟಿಯಿಂದ ನೋಡಿದರೆ ನಾವೂ ಸಹ ಅಂಗಹೀನರಲ್ಲವೇ? ಕೆಲವು ಜನರನ್ನು ಕಾಡಿನಲ್ಲಿ ಮರೆಯಾಗಿಟ್ಟ ನಾವು ಕುರುಡರಲ್ಲವೇ? ಇಷ್ಟು ವರ್ಷಗಳಿಂದ ಆ ಪಂಗಡಗಳಲ್ಲಿ ಎಷ್ಟು ಅನರ್ಥವಾಯಿತು! ಹತ್ತಿಪ್ಪತ್ತು ವರ್ಷಗಳಿಂದಲೂ ಬೆಳೆಯಬಹುದಿದ್ದ ಬೆಳೆ, ಗಳಿಸಬಹುದಿದ್ದ ಸಂಪಾದನೆ ಎಷ್ಟು ನಿರರ್ಥಕವಾಯಿತು!!

ಈ ರೀತಿ ಕರೆಯುವ ಹಸುವನ್ನು ಕೊಟ್ಟು ಕಚ್ಚುವ ನಾಯಿ ತಂದಂತೆ ಫಲವತ್ತಾದ ಜಮೀನಿನಲ್ಲಿ ಬೆಳೆಯುತ್ತಿ ಹೆಚ್ಚು ಆಹಾರ ಬೆಳೆಯುವುದನ್ನು ಬಿಟ್ಟು ಇಲ್ಲದ ಬೇರೆ ಯೋಜನೆಗಳೇಕೆ? ಜಮೀನುಗಳನ್ನು ಸಾಗುವಳಿಮಾಡಲು ಯೋಗ್ಯತೆಯಿರುವ ರೈತರು ಕೇಳಿದಾಗ ಕೊಡದೆ ನಿರಾಕರಿಸಿದ ದೃಷ್ಟಾಂತ ನನಗೆ ಮತ್ತು ನಾಡಿನ ಜನತೆಗೆ ತಿಳಿದಿದೆ. ಈ ರೀತಿಯ ವಿಷಯಗಳಿಗೆ ಇನ್ನಾದರೂ ಎಡೆಕೊಡದಿರಲೆಂದು ಆಶಿಸೋಣವೇ? ಚೀನಾ ಮತ್ತಿನ್ನಿತರ ದೇಶದಲ್ಲಿ ಮಾಡಿದಂತೆ ಹೆಚ್ಚು ಆಹಾರ ಬೆಳೆಯಲು ಜನಸೇನೆಯನ್ನು ಕಟ್ಟಬೇಕಾಗಿದೆ. ಇರಲಿಕ್ಕೆ ಮನೆಯಿಲ್ಲದವರನ್ನು, ದುಡಿಯಲು ಕೆಲಸ ಇಲ್ಲದವರನ್ನು, ಉಳಲು ಭೂಮಿಯಿಲ್ಲದವರನ್ನೆಲ್ಲಾ ಸೇರಿಸಿ ಪಾಳುಬಿದ್ದ ಜಮೀನುಗಳನ್ನು ಸಾಗುವಳಿ ಮಾಡಿಸಿದರೆ ದೇಶದಲ್ಲಿ ಆಹಾರ ಹೆಚ್ಚಾಗಲಿಕ್ಕಿಲ್ಲವೇ? ಜನತೆಗೆ ಕೆಲಸ ಸಿಕ್ಕಲಿಕ್ಕಿಲ್ಲವೇ? ವ್ಯವಸಾಯಮಾಡಲು ಯೋಗ್ಯತೆಯಿರುವ ರೈತರಾಗಲಿ ಕೋಟಿ ಮಾಡಲು ಬಲ್ಲ ಜನರಾಗಲಿ ಮುಂದೆ ಬಂದರೆ ಅವರಿಗೆ ಜಮೀನು ಪೈಸಾರಿ ಜಾಗಗಳನ್ನು ಕೊಟ್ಟು ಪ್ರೋತ್ಸಾಹಿಸಿದರೆ ಒಂದೆರಡು ವರ್ಷಗಳಲ್ಲಿಯೇ ನಮ್ಮ ದೇಶದಲ್ಲಿ ಬೆಳೆ ಸಮೃದ್ಧಿಯಾಗಿ ಬೆಳೆದು ಆಹಾರದಅಭಾವವನ್ನುಹೋಗಲಾಡಿಸಬಹುದು ಲಕ್ಷ್ಮಣತೀರ್ಥ ನದಿಗೆ ಅಣೆಕಟ್ಟು ಕಟಲು ಮೂರು ಲಕ್ಷ ರೂಪಾಯಿ ವೆಚ್ಚಮಾಡಿ ನಿರರ್ಥಕವಾದಂತೆಯೂ ವನಮಹೋತ್ಸವಕ್ಕಾಗಿ ಸಾವಿರಾರು ರೂ. ವೆಚ್ಚಮಾಡಿದಂತೆಯೂ ದೇಶದ ಸಂಪತ್ತನ್ನು ನಿರರ್ಥಕಗೊಳಿಸುವುದರ ಬದಲು ಪಾಳುಬಿದ್ದ ಭೂಮಿಗಳನ್ನೂ, ಪೈಸಾರಿ ಜಾಗಗಳನ್ನೂ ಊರ್ಜಿತಗೊಳಿಸಿ ಬೆಳೆ ಬೆಳೆಯಲು ಆ ಹಣಗಳನ್ನು ವೆಚ್ಚ ಮಾಡಿದರೆ ಸಾರ್ಥಕವಾದೀತು. ಸಾವಿರ ಎರಡು ಸಾವಿರ ಬಿಟ್ಟ ಭೂಮಿಗಳ ಮಾಲಿಕನೆನಿಸಿಕೊಂಡು ಭೂಮಿಯನ್ನು ಪಾಳುಬಿಟ್ಟವರ ಭೂಮಿಯನ್ನು ಚೆನ್ನಾಗಿ ವ್ಯವಸಾಯದಲ್ಲಿ ನುರಿತ ರೈತರಿಗೆ ಕೊಟ್ಟು ಹೆಚ್ಚು ಬೆಳೆಯಿಸುವುದರಲ್ಲಿ ನ್ಯಾಯವಿದೆ. ನೀರಿಲ್ಲದೆ ಕೊಂದ ಕೆಡಿಸುತ್ತಿರುವ ರೈತರಿಗೆ ಕೆರೆಕಟ್ಟೆಗಳ ಮೂಲಕವಾಗಲಿ ಪಂಪುಗಳ ಮೂಲಕವಾಗಲಿ ನೀರು ಸರಬರಾಜು ಆಗುವ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಆಹಾರ ಒಂದೇ ವರ್ಷದಲ್ಲಿ ದ್ವಿಗುಣಿತ ಆಗುವುದರಲ್ಲಿ ಸಂಶಯವಿಲ್ಲ. ಈ ರೀತಿ ವ್ಯವಸ್ಥೆ ಮಾರ್ಪಾಡುಗಳಾದರೆ ದೇಶದಲ್ಲಿ ಆಹಾರವೊಂದೇ ಅಲ್ಲ. ಹೆಚ್ಚಿನ ಜನರಿಗೆ ಕೆಲಸ ಸಿಕ್ಕಿದಂತಾಗುವುದು. ದೇಶದ ಆರ್ಥಿಕ ಸ್ಥಿತಿಯೂ ಕೂಡ ಸುಧಾರಿಸುವುದು. ಬೆಳೆ ಬೆಳೆಯುವ ನಾಡಿನ ರೈತರ ಕಡೆ ಗಮನ ಕೊಡದೆ ಪಟ್ಟಣದ ಜನರಿಂದ ವನಮಹೋತ್ಸವ ಮಾಡಿಸಿದರಾಗಲಿ,' 'ಮಿಸ್ ಎಪಿಲ್'' ಚಳವಳಿಯಿಂದಾಗಲೀ, ಗರ್ಭನಿರೋಧ ಚಳುವಳಿಯಿಂದಾಗಲಿ ದೇಶದಲ್ಲಿ ಆಹಾರ ಹೆಚ್ಚಾಗಿ ನಿರುದ್ಯೋಗ ನಿವಾರಣವಾಗಿ ದೇಶವು ಸುಭಿಕ್ಷಗೊಳ್ಳಲಾರದು.

ಕಾರ್ಲ್‌ಟನ್ ಭವನ ಬೇಡ.

ಮೈಸೂರಿನ ಮುಖ್ಯಮಂತ್ರಿ ಕೆ. ಹನುಮಂತಯ್ಯನವರು ಬೆಂಗಳೂರು ಕಾರ್ಲ್‌ಟನ್ ಭವನವನ್ನು ತಮ್ಮ ವಾಸಗೃಹವನ್ನಾಗಿ ಮಾಡಿಕೊಳ್ಳುವುದಿಲ್ಲವೆಂದೂ ಸಿಲ್ವರ್ ಜ್ಯೂಬಿಲಿ ಪಾರ್ಕಿನಲ್ಲಿರುವ ತಮ್ಮ ಸ್ವಗೃಹದಲ್ಲೇ ಇರುವುದಾಗಿಯೂ ಅಭಿಪ್ರಾಯ ಪಟ್ಟಿರುವರು.

ಮಿರ್ಜಾ ಇಸ್ಮೇಲರ ಕಾಲದಿಂದಲೂ ಈ ಭವ್ಯ ಬಂಗಲೇ ದಿವಾನರ ವಾಸಸ್ಥಳವಾಗಿದ್ದು ಈಗ ಮುಖ್ಯ ಮಂತ್ರಿಗಳ ನಿವಾಸಸ್ಥಾನವಾಗಿದ್ದಿತು. ಹನುಮಂತಯ್ಯನವರು ಆರಂಭದಲ್ಲೇ ಸಂಪ್ರದಾಯವನ್ನು ಮುರಿದು ನೂತನ ಹಾದಿಯತ್ತ ಸಾಗಿರುವರು.

ಕೊಡಗು

ತಾ. ೧೧-೪-೧೯೫೨ನೇ ಶುಕ್ರವಾರ

ಮದ್ರಾಸ್ ಮಂತ್ರಿಮಂಡಳ

ಚುನಾವಣೆ ಕಳೆದು ಅನೇಕ ದಿನಗಳಾದರೂ ಮದರಾಸಿನಲ್ಲಿ ಈ ವರೆಗೆ ಮಂತ್ರಿಮಂಡಳದ ರಚನೆಯಾಗಲಿಲ್ಲ. ಕಾಂಗ್ರೆಸ್ಸಿಗೆ ಇಲ್ಲಿ ಬಹುಮತ ದೊರೆಯದ ಕಾರಣ ಮಂತ್ರಿಮಂಡಳದ ರಚನೆಯ ಬಗ್ಗೆ ನ್ಯಾಯಬದ್ಧವಾದ ಎರಡು ಮಾರ್ಗಗಳನ್ನು ಪ್ರತಿನಿಧಿಗಳು ಅನುಸರಿಸಬಹುದಿತ್ತು. ಕಾಂಗ್ರೆಸ್ ತನ್ನ ಅಲ್ಪ ಸಂಖ್ಯೆಯನ್ನೊಪ್ಪಿ ಇತರ ಪಕ್ಷಗಳು ಸೇರಿ ಸಮ್ಮಿಶ್ರ ಮಂತ್ರಿ ಮಂಡಲ ರಚಿಸಲು ಬಿಟ್ಟು ತಾನು ವಿರೋಧ ಪಕ್ಷವಾಗಿ ನಿಲ್ಲಬೇಕಿತ್ತು. ಇಲ್ಲವೇ ತಾನೆ ಇತರರನ್ನು ಆಹ್ವಾನಿಸಿ ಸಮ್ಮಿಶ್ರ ಮಂತ್ರಿಮಂಡಳದ ಜವಾಬ್ದಾರಿ ಹೊರಬೇಕಿತ್ತು. ಇವೆರಡನ್ನೂ ಮಾಡದೆ ತಾನು ಸಮ್ಮಿಶ್ರ ಮಂತ್ರಿಮಂಡಳಕ್ಕೆ ತಯಾರಿಲ್ಲವೆಂದು ತಟಸ್ಥ ಕೂತ ಕಾರಣ ಬೇರೆ ಮಾರ್ಗವನ್ನು ಹುಡುಕುವ ಅವಶ್ಯಕತೆಯಾಯಿತು.

ಕಾಂಗ್ರೆಸ್ಸು ಈಗ ಶ್ರೀ ರಾಜಗೋಪಾಲಾಚಾರಿಯವರನ್ನು ಮುಂದಾಳಾಗಿ ಆರಿಸಿದೆ. ಅವರು ಮುಖ್ಯ ಮಂತ್ರಿ ಪದ ವಹಿಸಲಿದ್ದಾರೆ. ರಾಜಾಜಿಯವರ ಚಾಣಾಕ್ಷ ಮುಂದಾಳ್ತನದ ವಿಚಾರ ನಾವು ಬರೆಯಬೇಕಾದ ಅಗತ್ಯವಿಲ್ಲ. ಹಿಂದೂದೇಶದ ಗವರ್ನರ್ ಜನರಲರಾಗಿ ನಿವೃತ್ತರಾದ ಇವರು ತಮ್ಮ ಇಳಿ ವಯಸ್ಸಿನ ಕಾಲದಲ್ಲಿ ವಿಶ್ರಾಂತಿ ತೆಗೆದುಕೊಳ್ಳಬೇಕಿರುವಾಗ ಪುನಹ ಆಡಳಿತದ ಜವಾಬ್ದಾರಿ ಹೊರಬೇಕಾಗಿ ಬಂದಿದೆ. ಮದ್ರಾಸಿನಲ್ಲಿ ಕಾಂಗ್ರೆಸ್ಸಿನ ಸ್ಥಿತಿ ಅಸ್ಥಿರಗೊಳ್ಳದೆ ಅದರ ಗೌರವವನ್ನು ಕಾಯುವ ದೃಷ್ಟಿಯಿಂದ ರಾಜಾಜಿಯವರು ಮುಂದೆ ಬಂದಿದ್ದಾರೆ. ಆದರೆ ಎಷ್ಟೇ ದಕ್ಷನಿದ್ದರೂ ಒಬ್ಬ ವ್ಯಕ್ತಿಯಿಂದಲೇ ಒಂದು ಮಂತ್ರಿ ಮಂಡಳವಾಗುವದಿಲ್ಲ; ಒಂದು ಸರಕಾರ ನಡೆಯುವುದಿಲ್ಲ. ಮದ್ರಾಸಿನ ಪರಿಸ್ಥಿತಿ ಹಿಂದಿನಂತಿಲ್ಲ. ಆದ್ದರಿಂದ ರಾಜಾಜಿಯವರಿಗೂ ಸುಗಮ ಆಡಳಿತ ನಡೆಸಲು ಎದರು ತೊಡರುಗಳು ತುಂಬಾ ಇವೆ. ಅವರು ಮಂತ್ರಿ ಮಂಡಳಕ್ಕೆ ಹೆಕ್ಕಿಕೊಳ್ಳುವ ವ್ಯಕ್ತಿಗಳ ಮೇಲೆ ಅವರ ಮಂತ್ರಿಮಂಡಳದ ಭವಿಷ್ಯ ನಿಂತಿದೆ.

ಏನೇ ಆದರೂ ಕೂಡ ಟಿ. ಪ್ರಕಾಶಂರವರನ್ನು ಸೇರಿಸದ ಮಂತ್ರಿಮಂಡಳವು ಜನಪ್ರಿಯವೆನಿಸದು. ಮುಂದೃಷ್ಟಿಯ ರಾಜಾಜಿಯವರು ಪ್ರಕಾಶಂರವರ ಸಹಕಾರ ಬೇಕೆಂದು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಅವರ ಪ್ರಿಯ ಸಹಕಾರಕ್ಕಾಗಿ ಪ್ರಯತ್ನಿಸಬೇಕಿದೆ. ಪ್ರಕಾಶಂರವರ ಕಿಸಾನ್ ಮಜದೂರ ಪಕ್ಷಕ್ಕೂ ಕಾಂಗ್ರೆಸ್ಸಿಗೂ ಹೆಚ್ಚಿನ ಹೋಲಿಕೆ ಇದೆಯೇ ವಿನಾ ಕಮ್ಯೂನಿಸ್ಟ್ ಪಕ್ಷಕ್ಕಲ್ಲ. ಇಂದು ಪ್ರಕಾಶಂರವರು ಕಮ್ಯೂನಿಸ್ಟರೊಡನಿದ್ದರೆ ಕಾಂಗ್ರೆಸಿನವರು ಪ್ರಕಾಶಂರವರನ್ನು ಕಡೆಗಣಿಸಿದ ಕಾರಣವಾಗಿದೆ. ಆದ್ದರಿಂದ ರಾಜಾಜಿಯವರು ಪ್ರಕಾಶಂರವರನ್ನು ಮಂತ್ರಿಮಂಡಳಕ್ಕೆ ತರಲು ಶಕ್ತರಾದರೆ ಮದ್ರಾಸಿನಲ್ಲಿ ಕಾಂಗ್ರೆಸಿಗೆ ಜೀವದಾನ ದೊರೆತಂತಾಗುವುದು.

ವರ್ತಮಾನ.

ಮಿಸೆಸ್ ಚೇಂದ್ರಿಮಾಡ ಬೋಳ್ಳವ್ವ ಕುಟ್ಟಪ್ಪನವರು ತಾ. ೨೪ರಲ್ಲಿ ಬೆಂಗಳೂರಿನಲ್ಲಿ ತಮ್ಮ ೮೭ನೇ ವಯಸ್ಸಿನಲ್ಲಿ ಶಿವಾಧೀನರಾದರು.

ಚೆಟ್ಟಿಮಾನಿ ಶಾಲಾ ಹೊಸ ಕಟ್ಟಡವನ್ನು ಕೊಡಗಿನ ಮುಖ್ಯ ಮಂತ್ರಿಗಳಾದ ಶ್ರೀ ಸಿ ಎಂ ಪೂಣಚ್ಚನವರು ತಾರೀಕು ೧೫-೪-೫೨ಕಲ್ಲಿ ತೆರೆಯುವರು.

ಕೋದಾಂಡ ಅಪ್ಪಚ್ಚು ದೇವಯ್ಯ ಸ್ಮಾರಕ ಕ್ರಿಕೆಟ್ ಕಪ್ಪಿನ ಕಡೇ ಆಟವು ತಾ. ೨೧ ಮತ್ತು ೨೨ರಲ್ಲಿ ಮೇನ್ಸ್ ಕಾಂಪೌಂಡಿನಲ್ಲಿ ಕಾಲೇಜು ಟೀಮಿಗೂ, ವಾಂಡರರ್ಸ್ ಟೀಮಿಗೂ ನಡೆಯುವದು. ಸೆಮಿ ಫೈನಲ್ಸ್ ಆಟದಲ್ಲಿ ವಾಂಡರರ್ಸ್ ಟೀಮು ಪ್ಲಾಂಟರ್ಸ್ ಟೀಮನ್ನು ಸೋಲಿಸಿತು.

ಭಾಗಮಂಡಲದಿಂದ ಕರಿಕೆಯ ಮಾರ್ಗವಾಗಿ ಕಾಂಞಂಗಾಡು ರೈಲ್ವೆ ಸ್ಟೇಶನನ್ನು ಸಂಧಿಸುವಂತೆ ಒಂದು ರಸ್ತೆಯನ್ನು ತೆರೆಯುವ ಬಗ್ಗೆ ಏರ್ಪಾಡಾಗುವದೆಂದೂ ಇದನ್ನು ಪರಿಶೀಲಿಸಲು ತಾ. ೧೦ರಲ್ಲಿ ಚೀಫ್ ಕಮಿಷನರು, ಸಂಬಂಧಿಸಿದ ಮಂತ್ರಿ ಶ್ರೀ ಮಲ್ಲಪ್ಪನವರು, ಕೊಡಗಿನ ಜಿಲ್ಲಾ ಜಡ್ಜರು, ಮತ್ತು ಜಿಲ್ಲಾ ಮೇಜಿಸ್ಟ್ರೇಟರು ಹೋಗುವರೆಂದು ತಿಳಿದು ಬಂದಿದೆ. ಈ ರಸ್ತೆಗೆ ಸುಮಾರು ಏಳು ಲಕ್ಷ ರೂಪಾಯಿ ವೆಚ್ಚವಾಗಬಹುದೆಂದು ಅಂದಾಜಾಗಿದೆ.

ಕೊಡಗಿನಲ್ಲಿ ಹುರಿಗಾಳು, ಅವಲಕ್ಕಿ ಮೊದಲಿದ್ದ ನಿರ್ಬಂಧವನ್ನು ತೆಗೆದು ಹಾಕಲಾಗುವದೆಂದೂ ಆಂತರಿಕ ನಿಯಂತ್ರಣವನ್ನು ಕ್ರಮಶಃ ಸಡಲಿಸಲಾಗುವದೆಂದೂ ತಿಳಿದು ಬಂದಿದೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಶಾಲಾ ದಿನೋತ್ಸವವು ತಾ. ೧೩ರಲ್ಲಿ ಕಾಲೇಜು ಹಾಲಿನಲ್ಲಿ ನಡೆಯುವದು. ಕಾಲೇಜು ಪ್ರಿನ್ಸಿಪಾಲರಾದ ಶ್ರೀ ಕೆ. ಪಿ. ಅಚ್ಯುತನ್ ಪಿಳ್ಳೆಯವರು ಅಧ್ಯಕ್ಷತೆ ವಹಿಸುವರು.

ಎಪ್ರಿಲ್ ತಾ. ೪ರಲ್ಲಿ ಸೋಮವಾರಪೇಟೆ ಹೈಸ್ಕೂಲಿನಲ್ಲಿ ಸೋಮವಾರಪೇಟೆ ನೋಟಿಫೈಡ್ ಏರ್‍ಯದ ಅಧ್ಯಕ್ಷರಾದ ಶ್ರೀ ಮರಿಬಸವಯ್ಯನವರ ಅಧ್ಯಕ್ಷತೆಯಲ್ಲಿ ವಯಸ್ಕರ ವಿದ್ಯಾಭ್ಯಾಸದ ವಿಷಯದಲ್ಲಿ ಸಾರ್ವಜನಿಕ ಸಭೆ ಜರುಗಿತು. ಶ್ರೀಗಳಾದ ಎಸ್ ಕೆ ಕರೀಂಖಾನ್, ಕೆ. ಚಂದ್ರಶೇಖರಯ್ಯ ಮತ್ತು ಶ್ರೀ ಚನ್ನಬಸಪ್ಪ ಇವರುಗಳ ಭಾಷಣ ನಡೆಯಿತು. ನಂತರ ಸಂಜೆಗೆ ಶ್ರೀ ಮರಿಬಸವಯ್ಯನವರಿಂದ ವಯಸ್ಕ ಶಿಕ್ಷಣ ತರಗತಿಯ ಉದ್ಘಾಟನಾ ಸಮಾರಂಭವು ಜರುಗಿತು.

ಸಾರಾಯಿ, ವಿದೇಶೀ ಪಾನೀಯಗಳು, ಗಾಂಜ, ಅಫೀಮುಗಳ ಲೇಸನ್ ಕೂಪನಿಗೆ ಅರ್ಜಿ ಬರಕೊಳ್ಳುವ ಕಡೇ ತಾರೀಕನ್ನು ೩೦-೪-೫೨ಕ್ಕೆ ಮುಂದರಿಸಲಾಗಿದೆ.

ವೀರಾಜಪೇಟೆ ಗವರ್ನಮೆಂಟ್ ಹೈಸ್ಕೂಲಿನ ವಾರ್ಷಿಕ ದಿನಾಚರಣೆಯು ತಾ. ೧೮ರಲ್ಲಿ ನಡೆಯುವುದು. ಚೀಫ್ ಕಮಿಷನರಾದ ಲೆ॥ ಕ॥ ದಯಾಸಿಂಗ್ ಬೇಡಿಯವರು ಅಧ್ಯಕ್ಷತೆ ವಹಿಸುವರು.

ಕೃತಜ್ಞತಾ ವಂದನೆ.

ತಾರೀಕು ೨೪-೩-೫೨ರಲ್ಲಿ ಬೆಂಗಳೂರಿನಲ್ಲಿ ಶಿವಾಧೀನರಾದ ನಮ್ಮ ಮಾತೋಶ್ರೀಯವರ ನಿಧನದಿಂದ ನಮಗುಂಟಾದ ಅಪಾರ ದುಃಖದ ಕಾಲದಲ್ಲಿ ಪ್ರತ್ಯಕ್ಷ ಬಂದು ಮತ್ತು ಪತ್ರ ಮುಖೇನ ನಮ್ಮ ದುಃಖದಲ್ಲಿ ಭಾಗಿಗಳಾದ ಬಂಧು ಮಿತ್ರರಿಗೆ ಪ್ರತ್ಯೇಕ ಬರೆದು ವಂದಿಸುವದು ಅಸಾಧ್ಯವಾದ ಕಾರಣ ಅವರೆಲ್ಲರಿಗೂ ಈ ಮೂಲಕ ನಮ್ಮ ಕೃತಜ್ಞತಾ ವಂದನೆಗಳನ್ನರ್ಪಿಸುತ್ತೇವೆ.

೧೧-೪-೫೨. ಸಿ. ಕೆ. ಮುತ್ತಣ್ಣ,
ಸಿ. ಕೆ. ಬೆಳ್ಯಪ್ಪ,
ಸಿ. ಕೆ. ಅಪ್ಪಯ್ಯ.

ಕೊಡಗಿನ ಆಡಳಿತ ಪುನರ್ರಚನೆ.

ಕೊಡಗಿನ ಸರಕಾರದ ಸೆಕ್ರೆಟರಿಯೇಟನ್ನು ಆಡಳಿತ ಅನುಕೂಲತೆಯ ದೃಷ್ಟಿಯಿಂದ ಈ ಕೆಳಗಿನಂತೆ ಮೂರು ವಿಭಾಗ ಮಾಡಲಾಗಿದೆ. ಪ್ರತಿಯೊಂದು ಭಾಗಕ್ಕೂ ಒಬ್ಬೊಬ್ಬ ಸೆಕ್ರೆಟರಿಗಳಿದ್ದು ಆಯಾಯ ಇಲಾಖೆಗಳ ಚಾರ್ಜು ಅವರ ಹಿಡಿತದಲ್ಲಿರುವದು.

ಜನರಲ್ ಡಿಪಾರ್ಟ್‌ಮೆಂಟ್.

ಇದಕ್ಕೆ ಲೇಂಡ್ ರೆವಿನ್ಯೂ, ಎಕ್ಸೈಸ್—ಪಾನನಿರೋಧ, ಸಾಮಾನ್ಯ ಆಡಳಿತ (ಶಾಸನ ಸಭಾ ಕಾರ್ಯ ಸೇರಿದೆ) ಫಾರೆಸ್ಟ್ ವ್ಯವಸಾಯ (ಡೈರಿ, ಕೋಳಿ, ಮೀನು ಸಾಕುವದು ಸಹ ಸೇರಿದೆ), ವೆಟರ್ನರಿ, ಇತರ ಅಂದರೆ ಕಾರ್ಖಾನೆ, ಲೇಬರ್ ಮೊದಲಾದುವು, ನಿಯಂತ್ರಣ ಮತ್ತು ಸಿವಿಲ್ ಸಪ್ಲೈ, ನೌಕರರ ನೇಮಕ, ಪ್ಲಾನಿಂಗ್, ರೆಕಾರ್ಡ್‌ಗಳು, ಜೈಲು, ಪೋಲೀಸ್, ವಿದ್ಯೆ, ಮೆಡಿಕಲ್, ಪಬ್ಲಿಕ್ ಹೆಲ್ತ್ ಮತ್ತು ಮಲೇರಿಯಾ, ಸಹಕಾರ, ಟೆಕ್ಸ್‌ಟಯಿಲ್, ಗುಡಿಕೈಗಾರಿಕೆ, ಸ್ಥಳೀಕ ಸಂಸ್ಥೆಗಳು, ಶೆಡ್ಯೂಲ್ಡ್ ಟ್ರೈಬ್ ಮತ್ತು ಕೇಸ್ಟ್, ಚುನಾವಣೆ ಸೇರಿದ್ದು ಈ ಇಲಾಖೆಗಳು ಚೀಫ್ ಸೆಕ್ರೆಟರಿಯವರಿಗೆ ಸಂಬಂಧಿಸಿದವುಗಳು.

ಫೈನಾನ್ಸ್ ಡಿಪಾರ್ಟ್‌ಮೆಂಟ್

ಬಡ್ಜೆಟ್, ಎಕೌಂಟ್ಸ್, ಸ್ಥಳೀಯ ಆಡಿಟ್, ವ್ಯವಸಾಯ ಆದಾಯ ತೆರಿಗೆ, ಸ್ಟೇಶನರಿ ಮತ್ತು ಪ್ರಿಂಟಿಂಗ್, ಸಾಮೂಹಿಕ ಹಿತ ಕಾರ್ಯಗಳಿಗೆ ಧನ ಸಹಾಯ, ಗ್ರಾಂಟ್-ಇನ್-ಎಯಿಡ್, ನೀರಾವರಿ ಯೋಜನೆ, ಸಿವಿಲ್ ವರ್ಕ್ಸ್, ಟ್ರಾನ್ಸ್‌ಪೋರ್ಟ ಮತ್ತು ಮೋಟಾರು ವಾಹನ ಕಂದಾಯ, ಈ ಇಲಾಖೆಗಳು ಫೈನಾನ್ಸ್ ಸೆಕ್ರೆಟರಿಯವರಿಗೆ ಸೇರಿದವುಗಳು.

ಲಾ. (ನ್ಯಾಯ ಶಾಖೆ) ಡಿಪಾರ್ಟ್‌ಮೆಂಟ್

ನ್ಯಾಯಾಡಳಿತ, ಖಾನೂನು ಕಾಯಿದೆ, ರಿಜಿಸ್ಟ್ರೇಶನ್ ಮತ್ತು ಸ್ಟಾಂಪು ಇವು ಲಾ ಸೆಕ್ರೆಟರಿಯವರಿಗೆ ಸೇರಿದವುಗಳು. ಆಯಾಯ ಇಲಾಖೆಗೆ ಸಂಬಂಧಿಸಿದ ಪತ್ರ ವ್ಯವಹಾರಗಳನ್ನು ಆಯಾಯ ಸೆಕ್ರೆಟರಿಗಳ ಮೂಲಕ ನಡೆಸಬೇಕಾಗಿದೆ

ಮಾರಾಟಕ್ಕಿದೆ.

ಮಡಿಕೇರಿ ಮುನ್ಸಿಪಲ್ ಬ್ಲಾಕ್ ನಂ. 9 ಅಂದರೆ ಕಾಲೇಜು ಕಟ್ಟಡದ ಒತ್ತಿನಲ್ಲಿ 115 ಬಟ್ಟಿ ಗದ್ದೆ ಮತ್ತು 1¼ ಎಕರು ಜಾಗದ ಆಸ್ತಿಯು ಮಾರಾಟಕ್ಕಿದೆ. ಕ್ರಯ ಅಂದಾಜು 5 ಸಾವಿರ ಅಥವ ಅದರ ಸಮೀಪ. ಹೆಚ್ಚಿನ ವಿವರಗಳಿಗೆ ಈ ಪತ್ರಿಗೆ ಬರೆಯಿರಿ. 'K'

C/o 'ಕೊಡಗು' ಮಡಿಕೇರಿ.

St. Ann's Training College, MANGALORE I.

Wanted for the B. T. Department.

(1) Lady Lecturer for Science methods.

(2) Physical Instructress

(3) Applications to the B. T. class from Kannada Students.

For particulars apply to the PRINCIPAL.

Coorg Forest Department.

TENEDR NOTICE-

Mercara the 8th April, 1952

"Sealed tenders are invited on or before 21-4-'52 up to 4 P. M. for the transport of a probable quantity of 5,50,000 cft. of timber per year for two years from the various forest depots of Coorg to the Timber Depot at Hunsur.

For further particulars please apply to the Chief Forest Officer, Coorg. Mercara:

ಒಡುಗರ ಓಲೆಗಳ.

ಪುರಸಭೆಯಲ್ಲಿ ನೀರಿನ ಸರಬರಾಯಿ.

ಈ ವರ್ಷ ಇಲ್ಲಿಯ ವರೆಗೆ ಮಡಿಕೇರಿ ಪಟ್ಟದಲ್ಲಿ ನೀರಿನ ಸರಬರಾಯಿಯು ಚೆನ್ನಾಗಿದೆ. ಆದರೆ ನೀರಿನ ಅಭಾವ ಬರುವದು ಎಪ್ರಿಲ್ ಮತ್ತು ಮೇ ತಿಂಗಳಲ್ಲಿ. ಆಗ ತೊಂದರೆಯಾಗದಂತೆ ಕೆರೆಯಲ್ಲಿ ನೀರು ಕಡಿಮೆಯಾಗಿದ್ದ ಪಕ್ಷ ನೀರು ಬಿಡ್ಡುವ ಸಮಯವನ್ನು ಇನ್ನೂ ಒಂದು ಒಂದೂವರೆ ಗಂಟೆಗಳಷ್ಟು ಕಡಿಮೆ ಮಾಡುವುದು ಉಚಿತವಲ್ಲವೇ? ಅಲ್ಲದೆ ನಲ್ಲಿಯ ಹತ್ತಿರ ಅನೇಕ ಕಡೆಗಳಲ್ಲಿ ಜನರು ಕೊಡಪಾನೆಗಳನ್ನು ಮತ್ತು ಮನೆಯ ದೊಡ್ಡ ಚಿಕ್ಕ ಪಾತ್ರೆಗಳನ್ನು ಬೆಳಗುವುದಕ್ಕೆ ಅನಾವಶ್ಯಕವಾಗಿ ನೀರನ್ನು ಕರ್ಚು ಮಾಡುತ್ತಾರೆ. ಇದರಿಂದ ನೀರು ನಷ್ಟವಾಗುವುದಲ್ಲದೆ ನೀರಿಗೆ ಬಂದ ಇತರರು ಬಹಳ ಹೊತ್ತಿನವರೆಗೆ ಕಾಯಬೇಕಾಗುತ್ತದೆ. ಅಲ್ಲದೆ ಕೆಲವರು ನಲ್ಲಿಯನ್ನು ಅವರೇ ವಹಿಸಿಕೊಂಡು ಒಂದೇ ಸರ್ತಿ ನಾಲ್ಕೈದು ಕೊಡಪಾನ ನೀರು ಹಿಡಿಯುವ ಕ್ರಮವು ಇರುವುದರಿಂದ ನೀರಿಲ್ಲದ ಸಮಯದಲ್ಲಿ ಇದು ಜಗಳಕ್ಕೆ ಆಸ್ಪದವಾಗುತ್ತದೆ. ಇದನ್ನು ತಪ್ಪಿಸಲು ಒಬ್ಬರೊಂದು ಸರ್ತಿಗೆ ಎರಡೆರಡು ಕೊಡಪಾನ ನೀರು ಹಿಡಿದುಕೊಂಡು ಹೋಗುವಂತೆ ಬಂದೋಬಸ್ತು ಮಾಡುವದಾಗಿ ನಂಬಲಾಗಿದೆ.

—ಪಟ್ಟಣಿಗ.

ಕಡಂಗ ಸೇಂದಿ ಅಂಗಡಿಯವರು ಸ್ಥಳ ಕೂಡಲೇ ಬದಲಾಯಿಸಬೇಕು.

ಎಲ್ಲಾ ಕಡೆಗಳಲ್ಲೂ ಸೇಂದಿ ಅಂಗಡಿಗಳನ್ನು ಬೀದಿಯಿಂದ ಸ್ವಲ್ಪ ದೂರದಲ್ಲಿ ಇರುವಂತೆ ಮಾಡಲಾಗಿದೆ. ಆದರೆ ಕಡಂಗದಲ್ಲಿ ಬೀದಿಯ ಮಧ್ಯದಲ್ಲಿದೆ! ಅದರ ಸುತ್ತು ಮುತ್ತಲು ಮಾಪಿಳ್ಳೆಯರು ವಾಸವಿದ್ದಾರೆ. ಮಾಪಿಳ್ಳೆಯರಿಗೆ ಸೇಂದಿ ವಿರೋಧವಾದ್ದರಿಂದ ಬಹಳ ತೊಂದರೆಯೂ ಆಗುತ್ತಲಿದೆ. ಈ ತೊಂದರೆಯನ್ನು ಕಂಡ ಕೆಲವು ಸ್ಥಳೀಕ ಹಿತೈಷಿಗಳು ಆ ಸ್ಥಳವನ್ನು ಬದಲಾಯಿಸುವ ಬಗ್ಗೆ ಮನವಿ ಅರ್ಜಿಗಳನ್ನು ಹಲವು ಸಾರಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದುಕೊಂಡಿದ್ದರು. ಅಂತೆಯೇ ಕಳೆದ ವರ್ಷ ಚೀಫ್ ಎಕ್ಸೈಸ್ ಇನ್ಸ್‌ಪೆಕ್ಟರರು ಬಂದು ನೋಡಿ ಸ್ಥಳವನ್ನು ಅಗತ್ಯವಾಗಿ ಬದಲಾಯಿಸಬೇಕೆಂದು ಸೂಚಿಸಿ ಅದಕ್ಕೆ ತಕ್ಕ ಬೇರೊಂದು ಸ್ಥಳವನ್ನು ಕಾಣಿಸಿಹೋದರು. ಕಾಣಿಸಿದ ಸ್ಥಳವು ಬೇರೊಬ್ಬರ ಸ್ವಂತ ಜಾಗವಾದರೂ ಬೇಕಾದರೆ ತಾವೇ ಒಂದು ಮನೆಯನ್ನು ಅದಕ್ಕಾಗಿ ಸ್ವಂತ ಕಟ್ಟಿಸಿಕೊಟ್ಟು ಜಾಗ ಬಿಟ್ಟು ಕೊಡಲು ಒಪ್ಪಿದ್ದಾರೆ. ಆದರೂ ಈ ವರ್ಷ ಸ್ಥಳ ಬದಲಾದುದು ಕಾಣುವುದಿಲ್ಲ. ಬದಲಾಗಿ ಪರಿಸ್ಥಿತಿ ವಿಚಿತ್ರವಾಗಿದೆ. ರಸ್ತೆಯಿಂದ ಸ್ವಲ್ಪ ದೂರದಲ್ಲಿನ ಅಂಗಡಿ ಇನ್ನೂ ರಸ್ತೆಯ ಪಕ್ಕಕ್ಕೆ ಬಂದಿದೆ. ಇಷ್ಟು ವರ್ಷ ಆ ಮನೆಯಲ್ಲಿ ಮಾಪಿಳ್ಳೆಯರು ವಾಸವಿದ್ದರು. ಅವರು ಆ ಮನೆಯನ್ನು ತಾವೇ ಕಟ್ಟಿಸಿ ಮಾಲೀಕರಿಗೆ ಬಾಡಿಗೆಯನ್ನು ಕೊಡುತ್ತಿದ್ದರು. ಆದರೆ ಎರಡು ಸೇರು ಸೇಂದಿ ಎರಡು ಕಾಸಿನ ಮುಖ ನೋಡಿಕೊಂಡು ಆ ಸ್ಥಳದ ಮಾಲೀಕರು ಮಾಪಿಳ್ಳೆಯರಿಂದ ಮನೆ ಬಿಡಿಸಿ ಸೇಂದಿ ಅಂಗಡಿ ಇಡಲು ಕೊಟ್ಟಿದ್ದಾರೆ! ಕಳೆದ ವಾರ ಎರಡು ಜನರು ಸೇಂದಿ ಕುಡಿದು ಮತ್ತರಾಗಿ ಪಕ್ಕದಲ್ಲಿಯೇ ಇದ್ದ ಮಾಪಿಳ್ಳೆಯರ ಮನೆಗೆ ಮಾಪಿಳ್ಳೆಯರು ಎಲ್ಲಿಯೋ ಕೆಲಸಕ್ಕೆ ಹೋಗಿದ್ದ ಸಮಯದಲ್ಲಿ ನುಗ್ಗಿ ಅವರ ಹೆಂಗಸರನ್ನು ಬಲಾತ್ಕಾರಿಸಿದರಂತೆ! ಇದು ನಿಜವಾದರೆ ಏನೆನ್ನಬೇಕು? ದುಡ್ಡಿನ ಮುಖ ನೋಡಿಕೊಂಡು ಜನತೆಗೆ ತೊಂದರೆ ಕೊಡುವುದು; ಹೆಂಗಸರ ಮಾನಾಪಹರಣಕ್ಕೆ ಆಸ್ಪದವಾಗುವಂತೆ ವರ್ತಿಸುವುದು ಎಂದೆಂದಿಗೂ ಶ್ರೇಯಸ್ಕರವಲ್ಲ. ಕೂಡಲೇ ಅಂಗಡಿಯಿರುವ ಆ ಸ್ಥಳವನ್ನು ಬದಲಾಯಿಸದೆ ಹೋದರೆ ಶೀಘ್ರದಲ್ಲಿಯೇ ಅನರ್ಥಗಳುಂಟಾಗಬಹುದೆಂಬುದರಲ್ಲಿ ಸಂಶಯವಿಲ್ಲ. ಶೀಘ್ರವಾಗಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಈ ಮಟ್ಟಿಗೆ ನಿಗವಹಿಸಿ ಅನರ್ಥಗಳುಂಟಾಗದಂತೆ ಸ್ಥಳ ಬದಲಾಯಿಸಲು ವ್ಯವಸ್ಥೆ ಮಾಡುವರೆಂದು ಆಶಿಸೋಣವೇ?

'ಶಾಂತಿ-ಕುಮಾರ್.'

ಓದುಗರ ಓಲೆಗಳು

ಇತ್ತ ಕಡೆ ಒಮ್ಮೆ ನೋಡಿ!

ಅಯ್ಯಾ ಅಧಿಕಾರಿಗಳೇ,

ನೀವುಗಳು ಕೊಡಗಿನಲ್ಲಿರುವ ಜಹಗೀರು ಭೂಮಿಯತ್ತ ಒಮ್ಮೆ ನಿಮ್ಮಗಳ ದೃಷ್ಟಿಯನ್ನು ತಿರುಗಿಸುವಿರಾ? ಕೊಡಗಿನಲ್ಲಿ ಇಂದಿನ ಪಟ್ಟಿಗೆ ಅಂದಾಜು ಮೂವತ್ತು ಸಾವಿರ ಎಕ್ರೆ ಭೂಮಿಗಿಂತ ಮೇಲೆ ಜಹಗೀರು ಇರುವುದಾಗಿದೆ. ಇದು ದೇವರ ಮತ್ತು ಮಠಗಳ ಹೆಸರಿನವೆಂದು ಕೆಲವು ಕಡೆಗಳಲ್ಲಿದೆ. ಇದು ಹಿಂದಿನ ರಾಜ ಮಹಾರಾಜರ ಕಾಲದಿಂದ ದೇವರ ಮತ್ತು ಮಠದ ಖರ್ಚಿಗೆಂದು ಇಟ್ಟಿದ್ದು. ಆದರೆ ಅವರೆಲ್ಲರೂ ಹೇಳ ಹೆಸರಿಲ್ಲದೆ ನಿರ್ನಾಮವಾಗಿ ಹೋದರು. ಆ ಭೂಮಿಗಳು ಮೂರು–ಪಿಕರನ್ನು ಕಳೆಕೊಂಡ ಕಬ್ಬಲಿ ಮಕ್ಕಳಿಗೆ ಇವೆ. ಇವುಗಳ ಬಗ್ಗೆ ನಮ್ಮ ಮಂತ್ರಿ ಮಂಡಲವು ಏಕೆ ಎಚ್ಚರ ತೆಗೆದುಕೊಳ್ಳಬಾರದು? ಈ ದುರವಸ್ಥೆಯಲ್ಲಿರುವ ಜಾಗ ಭೂಮಿಗಳನ್ನು ನಮ್ಮ ಘನ ಸರ್ಕಾರ ವಹಿಸಿಕೊಂಡು ಒಳ್ಳೇ ವ್ಯವಸಾಯ ನಡೆಯುವಂತೆಯೂ ಇದರಿಂದ ಸರ್ವರ ಹಿತವಾಗುವಂತೆಯೂ ಏಕೆ ಮಾಡಬಾರದು? ಈ ಭೂಮಿಗಳಿಂದ ಈಗ ಯಾವ ಹಿತವು ಆಗುತ್ತಿಲ್ಲ. ಕೆಲವು ವ್ಯಕ್ತಿಗಳು ಇದರಿಂದ ವಿಲಾಸಜೀವನ ನಡೆಸುತ್ತಿರುವರೇ ವಿನಾ ಬೇರಿಲ್ಲ. ಆದ್ದರಿಂದ ಸರಕಾರವು ಇತ್ತ ಗಮನಿಸಿ ಈ ಭೂಮಿಗಳ ಬಗ್ಗೆ ಯೋಗ್ಯ ವ್ಯವಸ್ಥೆ ಮಾಡಬೇಕು.

ವಿಚಾರಿ.

ವಿದ್ಯಾಧಿಕಾರಿಗಳ ಅವಗಾಹನೆಗೆ

ಈ ಕಳೆದ ಚುನಾವಣೆ ಸಮಯದಲ್ಲಿ ಅನೇಕ ಉಪಾಧ್ಯಾಯರುಗಳು ಕಾನೂನಿಗೆ ವಿರೋಧವಾಗಿ ನಡೆದಿರುವರೆಂಬ ಅಪಾದನೆ ಮೇರೆ ಕೆಲವರನ್ನು ವರ್ಗಾಯಿಸಿ, ಇನ್ನು ಕೆಲವರನ್ನು ಸಸ್ಪೆಂಡ್ ಮಾಡಿರುವರು. ಅದರಂತೆ ನಮ್ಮ ಕಕ್ಕಬೆ ಶಾಲೆಯಿಂದ ಎರಡು ಉಪಾಧ್ಯಾಯರುಗಳನ್ನು ವರ್ಗಾಯಿಸಿದ ಪ್ರಯುಕ್ತ ಎರಡು ಉಪಾಧ್ಯಾಯರುಗಳು ಬದಲಿಗೆ ಬಂದರು. ಆದರೆ ಇನ್ನು ಎರಡು ಉಪಾಧ್ಯಾಯರುಗಳನ್ನು ಸಸ್ಪೆಂಡ್ ಮಾಡಿರುವರು. ಇವರ ಬದಲಿಗೆ ಈ ವರೆಗೂ ಯಾರನ್ನೂ ನೇಮಕ ಮಾಡಿರುವುದು ಕಂಡು ಬರಲಿಲ್ಲ. ಪರೀಕ್ಷೆ ಸಮಯ ಹತ್ತಿರ ಹೋಯಿತು. ಆದರೂ ಕೂಡ ಈ ವರೆಗೆ ಏನೂ ಕಂಡು ಬರಲಿಲ್ಲ. ಇದರ ನಷ್ಟ ಯಾರಿಗೆ? ತಪ್ಪು ಮಾಡಿದವರು ಯಾರ? ಇದಕ್ಕೆ ಜವಾಬ್ದಾರರು ಯಾರು? ಕೇಳಿದರೆ ತಕ್ಕ ಉದಾಹರಣೆ ಸಹ ಸಿಕ್ಕದಿರುವುದು ನೋಡಿದರೆ ಮಕ್ಕಳ ಪೋಷಕರು ಮಾಡಿದ ತಪ್ಪೇನು? ಈ ಸಮಯಂದ ಅರ್ಜಿ ಕೊಡಲಾಯಿತು. ಫೀಸು ಕಟ್ಟಿ ಮಕ್ಕಳನ್ನು ಆದಷ್ಟು ಮುಂದಕ್ಕೆ ಉತ್ತೀರ್ಣರಾಗ ಮಾಡಬೇಕೆಂಬ ಆತುರದಿಂದ ಸರಕಾರದ ಸಹಾಯ ಬೇಡುವ ರೈತರ ಮಕ್ಕಳ ಪಾಡು ಏನಾಗಬೇಕು? ಇಷ್ಟು ಉದಾಸೀನದಿಂದ ವರ್ತಿಸುವುದು ನೋಡಿದರೆ ಮುಂದೆ ನಾವು ಏನು ಮಾಡಬೇಕೆಂದು ಗೊತ್ತಾಗುವುದಿಲ್ಲ. ಇದಕ್ಕೆ ಅನೇಕ ಉದಾಹರಣೆಗಳು ಸಿಕ್ಕಬಹುದು. ಆದರೆ 'ದನಕ್ಕೆ ಬಾಯಿಲಿ ಬಂದರೆ ಕೊಟ್ಟಿಗೆಗೆ ಬರೆ ಹಾಕುವುದು' ಎಂಬ ಪೂರ್ವಿಕರ ಮಾತಿನಂತೆ ವರ್ತಿಸಬಾರದು. ಆದರೆ ಹೆಚ್ಚು ಪ್ರಸಂಗದಿಂದ ಕಾರ್ಯ ನಡೆಯದು. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಈ ಮೂಲೆ ಪ್ರಾಂತದವರ ಕೋರಿಕೆಯನ್ನು ಕೂಡಲೆ ನೆರವೇರಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಮಕ್ಕಳ ತಂದೆ

ಕ್ರಾಪ್ ಕಾಂಪಿಟಿಷನ್.

ಪುಟ್ಟ ಕೊಡಗಿನ ಕ್ರಾಪ್ ಕಾಂಪಿಟಿಷನಿನ ವಿಷಯ ಸ್ಥಳೀಯ ಪೇಪರಿನಲ್ಲಿ ನೋಡಿ ನುರಿತ ವ್ಯವಸಾಯಗಾರರೊಬ್ಬರಿಗೆ ತುಂಬಾ ಸಂತೋಷವೂ ಆಶ್ಚರ್ಯವೂ ಆಗಿದೆ. ಶ್ರೀಮಾನ್ ಸಂಗಯ್ಯನವರು ಪುಟ್ಟ ಕೊಡಗಿನ ಒಂದು ಮೂಲೆಯಲ್ಲಿರುವ ತಲೂರಿನ ಕೆರೆ ಬೈಲಿನಲ್ಲಿ ಭಾರತ ದೇಶದ ಹೆಚ್ಚು ಬೆಳೆಯುವಿಕೆಯ ಬತ್ತದ ರೆಕಾರ್ಡನ್ನು ಮುರಿದರೆಂಬುದನ್ನು ತಿಳಿದು ತುಂಬಾ ಹೆಮ್ಮೆಯೂ ಆಗಿದೆ. ಮೇಲ್ಕಂಡ ಸಂಗಯ್ಯನವರಿಂದ ಕೆಲವು ಪ್ರಾಮುಖ್ಯ ಸಲಹೆಗಳನ್ನು ತಿಳಿದುಕೊಳ್ಳಲು ಈ ಲೇಖನವನ್ನು ಬರೆದದ್ದಾಗಿದೆ. ಇದರಿಂದ ಕೊಡಗು ದೇಶದ ರೈತರಿಗೆ ತುಂಬಾ ಪ್ರಯೋಜನಗಳಾಗಬಹುದೆಂದು ಆಶಿಸಲಾಗಿದೆ.

(೧) ಆಲೂರು ಸಂಗಯ್ಯನವರ ಭೂಮಿಯು ಎಷ್ಟನೇ ತರಮಿಗೆ ಸೇರಿದೆ? (೨) ಅವರ ಭೂಮಿಯು ಕೆರೆ ಬೈಲೋ, ನಾಲೆ ಬೈಲೋ ಅಥವಾ ಮಳೆ ನೀರಿನಿಂದ ಆಗುವ ವ್ಯವಸಾಯವೋ? (೩) ಅವರ ಭೂಮಿಯು ಮಣ್ಣು ಎರೆ ನೆಲವೋ, ಹೊಯಿಗೆ ಭೂಮಿಯೋ ಅಥವಾ ಮಂಗಟ್ಟೋ? (೪) ಮೇಲ್ಕಂಡ ಸಂಗಯ್ಯನವರು ಅವರ ಭೂಮಿಗೆ ಯಾವ್ಯಾವ ತರದ ಗೊಬ್ಬರ ಉಪಯೋಗಿಸಿದ್ದಾರೆ? (೫) ಇವರ ಉಳುಮೆ ಯಂತ್ರೋಪಕರಣದಿಂದೋ, ಸೀಮೆನೇಗಿಲಿನದೋ ಅಥವಾ ನಾಡು ನೇಗಿಲಿನದೋ? (೬) ಇವರು ನೆಟ್ಟ ಬೀಜದ ಬತ್ತವು ಯಾವ ದೇಶದ್ದು, ಯಾವ ಬತ್ತ? (೭) ಇವರು ಗದ್ದೆಯನ್ನು ಎಷ್ಟು ಸಾರಿ ಉತ್ತಿದ್ದಾರೆ? ಎಷ್ಟು ಸಾರಿ ಕಳೆ ತೆಗೆದಿದ್ದಾರೆ; ಇವರ ನಾಟಿಯ ಕ್ರಮ ಹೇಗೆ? (೮) ಇವರ ಬತ್ತದ ತೂಕವು ಒಂದು ಸೇರಿಗೆ ಎಷ್ಟು ಪೌಂಡ? (೯) ಮೇಲ್ಕಂಡ ಸಂಗಯ್ಯನವರ ಒಂದು ಕದುರಿನಲ್ಲಿ ಸಾಧಾರಣ ಎಷ್ಟು ಬತ್ತದ ಕಾಳುಗಳಿದ್ದಿರಬಹುದು. (೧೦) ಒಂದು ಬತ್ತದ ಬಲಿಯಲ್ಲಿ ಎಷ್ಟು ಕಣೆಗಳಿತ್ತು? (೧೧) ಈ ಮೊದಲು ಸಂಗಯ್ಯನವರು ಎಷ್ಟೆಷ್ಟು ಬೆಳೆಸಿದ್ದರು? (೧೨) ಕಳೆದ ವರ್ಷ ಇವರಿಗೆ ಬಹುಮಾನ ಸಿಕ್ಕಿದೆಯೋ? (೧೩) ಸಂಬಂಧಪಟ್ಟ ಇಲಾಖೆಯವರು ವರ್ಷದಲ್ಲಿ ಅವರ ಭೂಮಿಯನ್ನು ಎಷ್ಟು ಸಾರಿ ಸಂದರ್ಶಿಸಿ ಏನೇನು ಸಲಹೆಗಳನ್ನು ಕೊಟ್ಟಿದ್ದರು? (೧೪) ಬೆಳೆಯ ಆಕಾರ ಅಂದರೆ ದೊಡ್ಡದೊ, ಮಧ್ಯಮ ಬೆಳೆಯೋ ಅಥವಾ ಗಿಡ್ಡ ಬೆಳೆಯೋ? (೧೫) ಮೇಲ್ಕಂಡ ಸಂಗಯ್ಯನವರ ಬತ್ತದ ಬೆಳೆಯನ್ನು ಕೊಯ್ದು ಬಡಿದು ತೂಕ ಮಾಡುವಾಗ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಾರ್ವಜನಿಕರು ಯಾರಿದ್ದರು?

'ನುರಿತ ವ್ಯವಸಾಯಗಾರ'

ಉದ್ಯೋಗದ ಆಸೆಗೆ ಅಂತ್ಯವಿಲ್ಲ.

ದೇವರು ಮನುಷ್ಯನ ಕಾಯಕ್ಕೆ ಸರಿಯಾದ ಅಂಗಗಳನ್ನು ಯಾವ ರೀತಿಯಲ್ಲಿ ರಚಿಸಿ, ಅದಕ್ಕನುಸಾರವಾಗಿ ಕೆಲಸಗಳನ್ನು ನಿರ್ಣಯಿಸಿದ್ದಾನೋ; ಅದೇ ಪ್ರಕಾರವು 'ಸರಕಾರ'ವೆಂಬ ಅಮೂಲ್ಯವಾದ ಶರೀರಕ್ಕೆ, ಕೆಲವು ಇಲಾಖೆಗಳನ್ನು ನಿರ್ಮಿಸಿ ಆಯಾ ಇಲಾಖೆಗಳ ಅಧಿಕಾರಿಗಳಿಗೆ ಅವರವರ ವೇತನಕ್ಕೂ ಮತ್ತು ಯೋಗ್ಯತೆಗನುಸರಿಸಿ ಕೆಲಸ ಕಾರ್ಯಗಳನ್ನು ವಿಭಾಗ ಮಾಡಿ ಕೊಟ್ಟಿರುತ್ತಾರೆ. ಉದ್ಯೋಗಸ್ಥರು ದೇಶದ ಬಡ ರೈತರ ಮತ್ತು ನಿವಾಸಿಗಳ ಸೇವೆಯನ್ನು ಸಲ್ಲಿಸುವುದರ ಬದಲಾಗಿ ತಮ್ಮ ಮೇಲಾಧಿಕಾರಿಗಳಿಗೆ ಈ ಕೆಳಗಿನ ರೀತಿಯಾಗಿ ಸೇವೆಯನ್ನು ಸಲ್ಲಿಸುವುದು ನಿಜವೋ?

ಒಬ್ಬರು ತಮ್ಮ ಮೇಲಾಧಿಕಾರಿಗಳ ವಾಸದ ಗೃಹದಲ್ಲಿ ತಮ್ಮ ಆಳುಗಳನ್ನು ಕರೆದುಕೊಂಡು ಹೋಗಿ ಕೂಲಿಯ ಅರ್ಧಾಂಶವನ್ನು ತನ್ನ ಕಿಸೆಯಿಂದ ಕೊಟ್ಟು ಸಾಕೆ ಒಡೆಯನ ಕೊಟ್ಟು ಮೊದಲು ಕೆಲಸ ಮಾಡಿಸಿದವರಿಗೆ ಅಪಕೀರ್ತಿ ತರುವುದು! ಮತ್ತೊಬ್ಬರು ಮೇಲಾಧಿಕಾರಿಗಳ ವಾಸದ ಗೃಹದಿಂದ ಕೋಳಿ ಮೊಟ್ಟೆಯನ್ನು ಶೇಖರಿಸಿ ಸಂತೆಯಲ್ಲಿ ಹೆಚ್ಚಿನ ಕ್ರಯಕ್ಕೆ ವಿಕ್ರಯಿಸಿ ಹಣವನ್ನು ಪಾವತಿ ಮಾಡುವುದು. ಇನ್ನೊಬ್ಬರು ತನ್ನ ಕೈಯಿಂದ ಮಜೂರಿ ಕೊಟ್ಟು ಕೆಲವು ಸುಂದರವಾದ ಮರದ ಪೆಟ್ಟಿಗೆಯನ್ನು ಅಮ್ಮನವರಿಗೆ ಕಾಣಿಕೆಯಾಗಿ ಅರ್ಪಿಸುವುದು. ಇದೆಲ್ಲ ಯಾವ ಸೇವೆ? ಇವರ ಗುರಿ ಜನಸೇವೆಯೋ ಯಾ ಮೇಲಧಿಕಾರಿಗಳ ಮನೆ ಸೇವೆಯೋ?

ಮೇಲಿನ ವಿಚಾರಗಳು ಸರಿಯೆಂದಾದರೆ ಈ ಕಾಳದಂತೆ ಕುಣಿಯುವ ಮೇಲಧಿಕಾರಿಗಳನ್ನು ಏನೆಂದು ಕರೆಯೋಣ? ಮೇಲಿರುವವರನ್ನು ತೃಪ್ತಿಪಡಿಸಲು ಈ ಕೀಳ ಅಂತಸ್ತಿಗಿಳಿದ ನೌಕರರಿಗೆ ಏನೆನ್ನೋಣ? ಜನತಾ ಹಿತದ ಜವಾಬ್ದಾರಿ ಹೊತ್ತಿರುವ ಪ್ರತಿನಿಧಿಗಳು ಇದನ್ನೆಲ್ಲಾ ಅರಿತು ತಕ್ಕ ಕ್ರಮವನ್ನು ಕೈಕೊಳ್ಳಬೇಕಿದೆ.

'ಆಕಾಶರಾಜ.'

ಇದೆಂಥಾ ಜನಹಿತ ಸರಕಾರ?

"ಸ್ಥಿರವಾದ ಜಾತ್ಯತೀತ ಸರಕಾರ ಬೇಕೆಂದಿದ್ದರೆ ಕಾಂಗ್ರೆಸ್ಸಿಗೇ ಓಟುಕೊಡಿ" ಎಂದು ಬಹಿರಂಗವಾಗಿ ಕೊಡಗು ಕಾಂಗ್ರೆಸ್ ಪಕ್ಷದವರು ಪ್ರಚಾರ ಪಡಿಸಿದ್ದರ

ಷ್ಟೆ. ಇತ್ತೀಚೆಗೆ ಕಾಂಗ್ರೆಸ್ ಪಕ್ಷ ಬಹುವ ತನಕ ಬಂದು ಸರಕಾರದ ಆಡಳಿತ ರಚನೆಗೆ ಕೈಹಾಕುವಷ್ಟರಲ್ಲಿಯೇ ಕೆಲವು ರೀತಿಯ ಕುಂದು ಕೊರತೆಗಳು ತೋರಿಬರುತ್ತಿವೆ. ಈ ಕುಂದು ಕೊರತೆಗಳು ಪಾರ್ಟಿ ಪಕ್ಷಗಳ ವೈಷಮ್ಯದಿಂದ ಎಂದು ಸುಲಭದಲ್ಲಿಯೇ ಹೇಳಬಹುದು. ಇದು ಈಗಿನ ಕೆಲವು ಅನುಭವಗಳಿಂದಲೇ ನಮಗೆ ವಿದಿತವಾಗುತ್ತಿದೆ. ಎಲ್ಲರಿಗೂ ತಿಳಿದಂತೆ ಈಗ ವೊನ್ನೆ ತಾನೆ ಇಂಡಿಯಾ ಸರಕಾರದ ಗೃಹ ಮಂತ್ರಿ ಡಾ. ಕೈಲಾಸನಾಥ ಖಟ್ಜುರವರನ್ನು ಕೊಡಗಿನ ಮುಖ್ಯ ಮಂತ್ರಿಗಳೂ, ಕಾಂಗ್ರೆಸ್ಸಿಗರೂ ಸೇರಿ ಅವರು ಕೊಡಗಿಗೆ ಬರುವಂತೆ ಆಹ್ವಾನಿಸಿದರಷ್ಟೆ. ಇದು ಸಂತೋಷದ ಸಂಗತಿ. ಇದಕ್ಕಾಗಿ ಮಡಿಕೇರಿಯಲ್ಲಿ ಒಂದು ದರ್ಬಾರು ಏರ್ಪಡಿಸಿದ್ದರು. ಈ ದರ್ಬಾರಿಗೆ ಕೊಡಗಿನ ಎಲ್ಲಾ ಭಾಗಗಳ, ಹಲವು ಮುಖ್ಯಸ್ಥರಿಗೆ ಆಹ್ವಾನ ಪತ್ರವಿತ್ತು. ಈ ಪತ್ರವನ್ನು ತಮಗೆ ಯುಕ್ತವೆಂದು ತೋರಿ ಬಂದ ಮತ್ತು ಕಾಂಗ್ರೆಸ್ಸಿಗೆ ಚುನಾವಣೆಯಲ್ಲಿ ಸಹಾಯ ಮಾಡಿದ ಮಹನಿಯರಿಗೆ ಮಾತ್ರ ಕಳಿಸಲಾಗಿತ್ತು. ನಮ್ಮ ನಾಡಿನಲ್ಲಿ ನಮ್ಮದೇ ಸಾಧಾರಣ ದೊಡ್ಡ ಗ್ರಾಮ. ಆದರೆ ನಮ್ಮಲ್ಲಿ ಯಾವುದೊಂದು ವ್ಯಕ್ತಿಗೂ ಇದರ ವಿಷಯ ತಿಳಿಸಲಿಲ್ಲ. ಪರೆ ಗ್ರಾಮದಲ್ಲಿ ಅನೇಕರಿಗೆ ಪತ್ರವಿತ್ತು. ಈ ಮೊದಲು ಮಂತ್ರಿಗಳ ಅಧಿಕಾರ ಸಮಾರಂಭಕ್ಕೂ ಸಹ ಇದೇ ತರದ ವ್ಯವಸ್ಥೆಯು ನಡೆಸಲಾಗಿತ್ತು. ಇದು ತುಂಬಾ ಶೋಚನೀಯ ವಿಚಾರ. ಪ್ರಜ್ಞಾ ಜವಾಬ್ದಾರಿ ಸರ್ಕಾರ ಬಂದಿದೆ. ಅದರಲ್ಲಿ ಪ್ರಜೆಗಳಿಗೆ ಹಕ್ಕಿದೆ. ಇಂಥಾ ಸಮಯದಲ್ಲಿ ನಮ್ಮಂಥಾ ಬಡವರಿಗೆ ರಾಜಕೀಯ ವಿಚಾರಗಳನ್ನು ತಿಳಿಕೊಳ್ಳಲು ಹಕ್ಕಿಲ್ಲ! ಗ್ರಾಮಕ್ಕೆ ಒಂದು ಪತ್ರವಾದರೂ ಬೇಡವೇ? ಇದು ಪಾರ್ಟಿ ವೈಷಮ್ಯವೇ ಇರಬಹುದು. ಈ ಅಭಿಪ್ರಾಯವು ಬೆಳೆಯುತ್ತಾ ಬಂದರೆ ಇದರಿಂದ ಅನಾಹುತವಲ್ಲದೆ ಕಲ್ಯಾಣವಿಲ್ಲ. ಆದ್ದರಿಂದ ಇನ್ನು ಮುಂದೆ ಯೋಗ್ಯ ರೀತಿಯಲ್ಲಿ ಸಮಾನ ಭಾವನೆಯಿಂದ ವರ್ತಿಸಿ ಸ್ಥಿರವಾದ ಪ್ರಜಾ ಸರಕಾರವನ್ನು ಸ್ಥಾಪಿಸಬೇಕು. ಪಾರ್ಟಿ ಪಂಗಡಗಳ ವೈಷಮ್ಯವನ್ನು ಬಿಟ್ಟು ವರ್ತಿಸಬೇಕು. ಪಿ. ಮಾ. ಮು.

ಬಸ್ಸಿನ ತೊಂದರೆ.

ತಾ. ೧೭-೩-೫೨ನೇ ಸೋಮವಾರ ಮಡಿಕೇರಿಯಿಂದ ಕುಟ್ಟಕ್ಕೆ ಅನೇಕ ಪ್ರಯಾಣಿಕರಿದ್ದರು. ಮಧ್ಯಾಹ್ನದ ವೇಳೆ ಕುಟ್ಟಕ್ಕೆ ನಾಲ್ಕು ಬಸ್ಸುಗಳು ಹೋಗುತ್ತವೆ. ಅದರಂತೆ ಮೂರು ಬಸ್ಸುಗಳು ಹೋದವು. ಕಡೆಯ ಬಸ್ಸು ಬಂತು. ಮೊದಲಿನ ಬಸ್ಸುಗಳಲ್ಲಿ ಸೀಟು ಸಿಕ್ಕದೆ ನಿರಾಶರಾಗಿ ಕೆಲವರು ಕೊನೆಯ ಬಸ್ಸಿನ ಬರವನ್ನು ಎದುರು ನೋಡುತ್ತಿದ್ದರು. ನಿರೀಕ್ಷಿಸುತ್ತಿದ್ದ ಬಸ್ಸು ತಡವಾಗಿಯೇ ಬಂತು. ಸುಮಾರು ೨೫ ಬಸ್ಸಿಗಿರುವ ಜನರಿದ್ದರು. ೨೫ ಜನರ ಮೇಲೆ ಹತ್ತಿಸಕೂಡದೆಂದು ಕಂಡಕ್ಟರು ಏಜಂಟರಿಗೆ ಹೇಳುತ್ತಿದ್ದರು. ಹಾಗಾದರೆ ಉಳಿದವರ ಪಾಡೇನು? ನೀವು ಒಂದು ಮೈಲು ಮುಂದೆ ಹೋದರೆ ನಿಮ್ಮನ್ನು ಹತ್ತಿಸಿಕೊಳ್ಳುವುದಾಗಿ ಏಜಂಟರು ಪ್ರಯಾಣಿಕರಿಗೆ ಆಶ್ವಾಸವಿತ್ತರು. ಅತಿಯಾದ ಸಂತೋಷದಿಂದ ಪ್ರಯಾಣಿಕರು ನಡೆದರು. ಆವರೆ ಆದದ್ದೇನು? ದಾರಿಯಲ್ಲಿ ಕೈ ತೋರಿಸಿದಾಗ ಡ್ರೈವರನು ವೇಗದಿಂದಲೇ ಗಾಡಿಯನ್ನು ಓಡಿಸಿದ. ಪಾಪ ಜನರು ಟೌನಿನಲ್ಲಿ ಉಳಿಯುವುದೂ ಅಲ್ಲ ಮನೆ ಸೇರುವುದೂ ಅಲ್ಲ; ಕಾಡಿನ ಮಧ್ಯದಲ್ಲಿ ಬಿಟ್ಟಂತಾಯಿತು. ರಾತ್ರಿ ಆಗಲಿಕ್ಕಾಗಿತ್ತು. ನಾನು ನೋಡಿದ ತಿದ್ದಂತೆಯೇ ೨೦ ಜನರು ವೋಟರುಗಳನ್ನು ದೂಷಿಸುತ್ತ ಹೋಗುತ್ತಿದ್ದರು. ಇನ್ನೆಷ್ಟು ಜನರು ಸೀಟು ಸಿಕ್ಕದೆ ಟೌನಿನಲ್ಲಿ ಉಳಿದರೋ ತಿಳಿಯದು. ಅಂತೂ ಜನರು ಬಹು ತೊಂದರೆಗೊಳಗಾಗುತ್ತಿದ್ದಾರೆ. ಮಿತವಾಗಿ ಜನವನ್ನು ಕೂರಿಸಿಕೊಂಡು ಹೋಗುವುದು ಒಳ್ಳೆಯದು. ಇದಕ್ಕಾಗಿ ವೋಟಾರು ಅಧಿಕಾರಿಗಳಿಗೆ ತುಂಬಾ ವಂದನೆಗಳು. ಆದರೆ ಜನರ ಸುಖ ದುಃಖಗಳನ್ನು ವಿಮರ್ಶಿಸಿ ಹೆಚ್ಚು ಬಸ್ಸು ಲೈಸನುಗಳನ್ನಿಡುವುದು ಸರ್ಕಾರದ ಕರ್ತವ್ಯ. ಕುಟ್ಟಕ್ಕೆ ಈ ಮೊದಲೇ ಹೋಗುತ್ತಿದ್ದ ಗಣೇಶ ಬಸ್ಸಿನ ಲೈಸನು ಖಾಲಿಯಾಗಿರುವುದರಿಂದ ಅದನ್ನು ದಕ್ಷತೆಯಿಂದ ನಡೆಸುವವರಿಗೆ ಕೊಟ್ಟು ಪ್ರಯಾಣಿಕರನ್ನು ಪ್ರೋತ್ಸಾಹಿಸಬೇಕಾಗಿ ವೋಟಾರು ಅಧಿಕಾರಿಗಳಲ್ಲಿ ವಿನಂತಿ. ಪ್ರಯಾಣಿಕ

ಹೆಸರಿಲ್ಲದ ಸರ್ಕಾರಿ ಕಾರ್ಯಾಲಯಗಳು.

ಹೊಸಬರಿಗೆಲ್ಲರಿಗೂ ತಿಳಿದಿರಬಹುದು. ದೂರಕ್ಕೆ ಪ್ರಯಾಣ ಬೆಳೆಸಿದಾಗ ಅಲ್ಲಿಯ ಯಾವುದೊಂದೂ ಪರಿಚಯವಿಲ್ಲದಿದ್ದರೆ ಮನುಷ್ಯನಲ್ಲಿ ಎಂಥಾ ಒಂದು ಪರಿಸ್ಥಿತಿ ಉಂಟಾಗುವುದೆಂದು. ತಾನು ಹೋಗತಕ್ಕ ಸ್ಥಳದ ಅರಿವಾಗದಿದ್ದರೆ ಮತ್ತೆ ಅವನು ಬಂದ ಕೆಲಸದ ಗತಿಯೇನಾಗುವುದು? ಈಗ ಸ್ವಲ್ಪ ದಿನಗಳ ಹಿಂದೆ ವಿರಾಜಪೇಟೆಯಲ್ಲಿ ಕೆಲವರು ಯಾವುದೋ ಒಂದು ಕೆಲಸದ ನಿಮಿತ್ತ ಸರಕಾರಿ ಆಫೀಸನ್ನು ಹುಡುಕುತ್ತಿದ್ದರು. ದಾರಿಯಲ್ಲಿ ಎದುರು ಕಂಡ ವ್ಯಕ್ತಿಗಳನ್ನು ಕೇಳಿದರೆ ಅವರನ್ನೆ ಎದುರಿನಲ್ಲಿರುವ ಕಟ್ಟಡವನ್ನು ತೋರಿಸಿ ಬಿಡುತ್ತಿದ್ದರು. ಆದರೆ ಅವರಿಗಿದು ತಿಳಿದಿರಲಿಕ್ಕಿಲ್ಲ. ಅವರು ಅಲ್ಲಿ ಹೋಗಿ ಕೇಳಿದಾಗ ಅಲ್ಲಿ ಕುಳಿತಿರುವ ಗುಮಾಸ್ತರಿಗೆ ಸಿಟ್ಟು ಬಂದು ಇಲ್ಲ ಆಫೀಸು ಇದರ ಆಚೆ ಇರುವ ಕಟ್ಟಡ ಎಂದು ಹೇಳಿ ಕಳುಹಿಸುವುದು. ಅಲ್ಲಿ ಹೋಗಿ ಕೇಳಿದರೆ ಈ ಭಾಗವಲ್ಲ ಇದರಾಚೆ ಭಾಗವೆಂದು ಹೇಳುವವರು. ಅಂತೂ ಆಫೀಸು ಗೊತ್ತು ಮಾಡಲಿಕ್ಕೆ ಸ್ವಲ್ಪ ಸಮಯವೇ ಹಿಡಿಯಿತು. ತನ್ನ ಕೆಲಸದ ಆಫೀಸನ್ನು ಗೊತ್ತು ಹಚ್ಚಿ ಆಫೀಸರರು ಎಲ್ಲಿ ಎಂದು ಕೇಳಿದರೆ ಗುಮಾಸ್ತರು ಅವರು ಎಲ್ಲಿಗೋ ಹೋಗಿದ್ದಾರೆ ಗೊತ್ತಿಲ್ಲ ಎಂದು ಹೇಳಿದರು. ಬಹುಶಃ ಇನ್ನು ಸ್ವಲ್ಪ ಸಮಯದಲ್ಲೇ ಬರಬಹುದೆಂದು ಹೇಳಿದರು. ಅಂತೂ ೨ ದಿವಸದ ಕೆಲಸ ಏನೂ ನಡೆಯಲಿಲ್ಲ. ಇದಕ್ಕೆ ಇನ್ನೆಲ್ಲಾ ಕಷ್ಟಪಡಬೇಕೆ? ಆಯಾಯ ಆಫೀಸುಗಳಲ್ಲಿಯೂ ಕಟ್ಟಡಗಳಲ್ಲಿಯೂ ಅವಶ್ಯವಿರುವ ಕಡೆಗಳಲ್ಲಿ ಒಂದೊಂದು ಬೋರ್ಡನ್ನು ಮತ್ತು ಕೆಲಸದ ಸಮಯವನ್ನು ರಜಾ ದಿನಗಳನ್ನು ವಿವರವಾಗಿ ಬರೆದಿಟ್ಟರೆ ಬಹಳ ಸ್ಥಳಗಳಿಗೆ ನಿರಾಯಾಸವಾಗಿ ಪ್ರಯಾಸವಿಲ್ಲದೆ ತಮ್ಮ ಕಾರ್ಯಭಾರವನ್ನು ಶೀಘ್ರದಲ್ಲೇ ನಡೆಸಲು ಸಾಧ್ಯವಾಗುವುದಿಲ್ಲವೇ? ಸರಕಾರವು ಇದಕ್ಕೆ ಗಮನ ಕೊಡುವುದೇ?

ಬಡ ದೈತ

ಈಗ ಪಕ್ಷಗಳಿರಲು ಕಾರಣವಿದೆಯೇ?

ಮಂತ್ರಿಮಂಡಲದ ಪಟ್ಟಿಯಲ್ಲಿ ಹೆಸರು ಬಿಟ್ಟುಹೋದವರ ಪೈಕಿ ನಾನೊಬ್ಬ. ಪ್ರಾರಂಭದ ಕಾಲದಿಂದ ಇಲ್ಲಿಯ ವರೆಗೂ ನಿರಾಶಿಯಾದರೂ ನನ್ನ ಹೆಸರು ಬಿಟ್ಟುಹೋಗಲು ಕಾರಣ ತಿಳಿಯದವನಾಗಿದ್ದೇನೆ. ಆದರೂ ಚುನಾವಣಾ ಪ್ರಚಾರ ಸಂದರ್ಭ ನಡೆಸಿದ ಎರಡೂ ಕಡೆಯವರ ಕೆಲವು ಮೀಟಿಂಗುಗಳಿಗೆ ಹಾಜರಾದೆ. ಅಲ್ಲಿಯ ವಾದ ಕೇಳುತ್ತಾ ಕೆಲವು ಸಂಶಯಗಳು ತಲೆದೋರಿದ್ದವು. ಇವನ್ನು ತಿಳಿಯಲು ನನಗೆ ಕೆಲವು ಸಂಶಯಗಳಿವೆ, ಅದನ್ನು ಪರಿಹರಿಸಬೇಕು ಎಂಬುದಾಗಿ ಮೀಟಿಂಗಿನಲ್ಲಿ ಎದ್ದರೆ ಇದು ಬರೀ ಇಂಥಾ ಪಾರ್ಟಿಯವರ ಮೀಟಿಂಗು ಬೇರೆಯವರಿಗೆ ಮಾತಾಡಲು ಅವಕಾಶವಿಲ್ಲವೆಂಬ ಉತ್ತರವಲ್ಲದೆ ಸಂಗತಿಯನ್ನು ಕೇಳುವವರೇ ಇಲ್ಲ. ಕೊಡಗಿನ ಎರಡು ಪಕ್ಷದವರಿಂದಲೂ ಈ ಜವಾಬು ದೊರೆತಿದೆ. ಹೇಗೂ ಚುನಾವಣೆ ಮುಗಿಯಿತು. ಕಾಂಗ್ರೆಸ್ ಪಾರ್ಟಿ ಜಯಭೇರಿ ಹೊಡೆಯಿತು. ಜನಪ್ರಿಯ ಸರಕಾರ ಸ್ಥಾಪಿತವಾಗಿದೆ. ಅಂದರೆ ಅಂದಿನ ಎರಡು ಬಲಿಷ್ಠ ರಾಜಕೀಯ ಪಾರ್ಟಿಗಳಲ್ಲಿ ಒಂದು ಪಾರ್ಟಿಯು ಇಂದಿನ ಸರಕಾರ ಎನಿಸಿಕೊಂಡಿದೆ. ಈ ಸಂದರ್ಭದಲ್ಲಿ ಕೊಡಗಿನಲ್ಲಿರುವ ಈ ಎರಡು ಪಾರ್ಟಿಯವರಲ್ಲಿ ಇರತಕ್ಕ ತತ್ವಗಳನ್ನು ಪರಿಶೀಲಿಸುವ ಅಗತ್ಯವಿದೆ. ಎರಡೂ ಕಡೆಯವರ ಚುನಾವಣಾ ಘೋಷಣೆಯನ್ನು ಹೋಲಿಸಿ ನೋಡಿದಲ್ಲಿ ಕೆಲವು ಸಣ್ಣ ಪುಟ್ಟ ವಿಷಯಗಳಲ್ಲದೆ ಕೊಡಗು ದೇಶದಲ್ಲಿ ಈ ಮೊದಲ ಪಾರ್ಟಿಪಂಗಡ ಉಂಟಾಗಲು ಕಾರಣವಾದ ಕೊಡಗಿನ ವಿಲೀನೀಕರಣ ಅಥವಾ ಸಂಯೋಜನೆ ಎಂಬ ಮಾತೇ ಕಂಡು ಬರಲಿಲ್ಲ. ಅಂದ ಮೇಲೆ ಸಮಾನ ಪರಿಸ್ಥಿತಿಯಲ್ಲಿ ಕೊಡಗಿನ ವಿಲೀನೀಕರಣವು ಬೇಡವೆಂಬ ತತ್ವವನ್ನು ಎರಡೂ ಪಕ್ಷಗಳು ಒಪ್ಪಿರುವಾಗ ಇನ್ನಲ್ಲಿ ಇಂದು ಭಿನ್ನತೆ ಇಲ್ಲ. ಆದರೂ ಪಾರ್ಟಿ ಅಸ್ತಿತ್ವ ಹಲವೆ ಹಾಗೆಯೇ ಇರುತ್ತವೆ. ದೇಶದ ಅಭ್ಯುದಯಕ್ಕಾಗಿ ಸರ್ವಶಕ್ತಿಯನ್ನು ಉಪಯೋಗಿಸಬೇಕು ಎಂಬ ಧ್ಯೇಯವಾದ ಪಾರ್ಟಿಯು ಸ್ಥಿರತ್ವಕ್ಕೆ ಬೇಕಾದ ಅನೇಕಾನೇಕ ಪರಿಸ್ಥಿತಿಗಳನ್ನೇ ಹಿಂಬಾಲಿಸುವದರಿಂದ ದೇಶದ ಹಿತವಾಗದು. ಒಬ್ಬರು ತಮ್ಮ ಪಾರ್ಟಿಯನ್ನು ಭದ್ರಗೊಳಿಸಲೂ ಮತ್ತು ಎದುರಾಳಿಯು ತಲೆ ಎತ್ತದಂತೆ ಮಾಡಲೂ ಇನ್ನೊಬ್ಬರು ಅಧಿಕಾರ ಪಾರ್ಟಿಯವರು ತಮ್ಮ ಯಾವುದೇ ಉತ್ತಮ ಕಾರ್ಯಗಳನ್ನು ನಡೆಸಲು ಬಿಡದೆ ಅವರ ಲೋಪದೋಷಗಳನ್ನೆ ಹುಡುಕುತ್ತಲೂ ಇದ್ದರೆ ಕಾಲವು ಕಳೆಯುತ್ತದೆಯೇ ಹೊರತು ನಮ್ಮ ಜನಪ್ರಿಯ ಸರಕಾರ ಹೆಸರಿಗೆ ಗರಿಯಾಗಿ ಜನಪ್ರಿಯ ಕಾರ್ಯ ಮಾಡಲಾರದು. ಈ ಸ್ಥಿತಿಯನ್ನು ತಪ್ಪಿಸಿ ನಮ್ಮ ದೇಶವನ್ನು ಆದರ್ಶದೇಶವನ್ನಾಗಿ ಮಾಡಲು ಇಂದಿನ ಸರಕಾರ ಯಾವ ನೀತಿಯನ್ನು ಕೈಕೊಂಡಿದೆ ಎಂಬುದನ್ನು ತಿಳಿಯಬೇಕಿದೆ. ಭಾರತಾದ್ಯಂತ ಅಂದರೆ ಮಾನ್ಯ ನೆಹರೂರವರು ಪ್ರಧಾನ ಮಂತ್ರಿ ಹಾಗೂ ಕಾಂಗ್ರೆಸ್ ಅಧ್ಯಕ್ಷರಾಗಿಯಾದರೂ ಒಬ್ಬ ವ್ಯಕ್ತಿಯಲ್ಲಿರತಕ್ಕಂಥಾ ತಿಳುವಳಿಕೆಯು ಕೇವಲ ವ್ಯಕ್ತಿಗಾಗಿಯೂ ಅಥವಾ ಪಾರ್ಟಿಪಂಗಡಗಳನ್ನೇ ಕಟ್ಟಿಕೊಳ್ಳುವದರಲ್ಲಿಯೇ ವಿನಿಯೋಗವಾಗಿ ನಿಷ್ಪ್ರಯೋಜನವಾಗಿ ನಷ್ಟವಾಗುವದನ್ನು ತಪ್ಪಿಸದೆ ಪಾರ್ಟಿಪಂಗಡ ಸೋಲುಗೆಲುವನ್ನು ಗಮನಿಸದೆ ರಾಜ್ಯಭಾರ ನಡೆಸಲು ಸಹಾಯಕರಾಗುವ ವ್ಯಕ್ತಿಗಳನ್ನು ಹುಡುಕಿ (ಕಾಂಗ್ರೆಸಿಗೆ) ಆಹ್ವಾನಿಸುತ್ತಿರುವರು. ಹಾಗೆಯೇ ನಮ್ಮ ದೇಶದ ಮುಖ್ಯ ಮಂತ್ರಿಯವರು ಕೂಡ ಈ ತತ್ವವನ್ನನುಸರಿಸುವರೇ? ಅಥವಾ ಈ ಮೊದಲು ಅಂದರೆ ಫಲಿತಾಂಶ ತಿಳಿದ ಮೇಲೆ ಆ ರೀತಿ ಮಾಡಿದ್ದರೋ? ಮಾಡಿದ್ದರೆ ಪರಿಣಾಮ ಏನು? ಬಹುಶಃ ಆಹ್ವಾನಿಸಿದರೂ ಎದುರು ಪಾರ್ಟಿಯವರು ನಿರಾಕರಿಸಿರುವರೆ? ನಿರಾಕರಿಸಿದ್ದರೆ ಇವರಿಗೆ ದೇಶದ ಮೇಲೆ ಇರತಕ್ಕ ಮಮತೆ ಏನು? ಇದು ಯಾವುದೂ ನಡೆಯದೆ ಇದ್ದರೆ ಇವರ್ಮ ಮುಖ್ಯ ಮಂತ್ರಿಯವರು ಹಿಡಿದಿಟ್ಟ ಪತ್ರಿಕೆಯಲ್ಲಿ ತಿಳಿಸಬೇಕಾಗಿ ಆಶಿಸಲಾಗಿದೆ. ದೇಶದಲ್ಲಿ ಇಂದಿರತಕ್ಕಂಥಾ ಪಾರ್ಟಿಗಳ ಎರಡಾದರೂ ತತ್ವ ಕಾಂಗ್ರೆಸ್ ಎಂದೇ ಹೇಳಲು ಅಡ್ಡಿ ಇಲ್ಲ. ಅಲ್ಲಿಂದ ಎರಡೂ ಒಂದಾಗಿ ಮುಂದೆ ಬರಬಹುದಾದ ಇತರ ಪಕ್ಷಗಳು ಈ ದೇಶದಲ್ಲಿ ತಲೆದೋರದಂತೆ ಸಾರ್ವಜನಿಕರಿಗೆ ಹಲವಾರು ಪಾರ್ಟಿಗಳಿಂದ ಒದಗಬಹುದಾದ ಕಿರುಕುಳ ತಪ್ಪಿಸಲು ಹಾಗೂ ಪೂಜ್ಯ ಗಾಂಧೀಜಿಯವರ ನೇತೃತ್ವದಲ್ಲಿ ಸ್ಥಾಪಿತವಾದ ಕಾಂಗ್ರೆಸ್ ಸಂಸ್ಥೆಯ ತತ್ವ ಪಾಲನೆಮಾಡಲು ನೆರವಾಗುವರೇ?

'ದೇಶದ ಹಿತೈಷಿ.'

ಸ್ಥಳ ಬದಲಾವಣೆ

ವಿರಾಜಪೇಟೆಯ ಕೆಳಗೆ ಅಂಬಲಿಗೋದಿಕೊಪ್ಪಲಿಗೆ ಹೋಗುವ ರಸ್ತೆ ಬಳಿ ಇದ್ದ ನಮ್ಮ ಮನ್ಸೂರ್ ಅಂಗಡಿಯನ್ನು ಗ್ರಾಹಕರ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಗಡಿಯಾರ ಕಂಬದ ಬಳಿ ಗಣಪತಿ ದೇವಸ್ಥಾನದ ಎದುರಿನ ಅಂಗಡಿಗೆ ಬದಲಾಯಿಸಿದ್ದೇವೆ. ಎಂದಿನಂತೆ ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಎಸ್. ಎ. ಮಹಮ್ಮದ್ & ಬ್ರದರ್ಸ್,
3–8 ವಿರಾಜಪೇಟೆ.

ಕೇಂದ್ರದ ನೂತನ ಮಂತ್ರಿ ಮಂಡಳ

ಮೇ ತಾ. ೨ರಲ್ಲಿ ಆರಿಸಲ್ಪಡುವ ಭಾರತದ ನೂತನ ಅಧ್ಯಕ್ಷರು ಮೇ ದಿನಾಂಕ ೧೩ರಂದೂ, ಮತ್ತು ಅವರ ಮಾರನೇ ದಿನವೇ ಹೊಸ ಕೇಂದ್ರ ಮಂತ್ರಿ ಮಂಡಳವೂ ಪ್ರತಿಜ್ಞಾ ವಿಧಿಯನ್ನು ಜರುಗಿಸಬಹುದಾಗಿದೆಯೆಂದು ತಿಳಿದು ಬರುತ್ತದೆ.

ಮೇ ಪ್ರಥಮ ವಾರದಷ್ಟರಲ್ಲಿಗೆ ಅಧ್ಯಕ್ಷ ಚುನಾವಣೆಯ ಫಲಿತಾಂಶ ಹೊರಬೀಳಬೇಕೆಂದು ಈಗಾಗಲೇ ಗೊತ್ತಾಗಿದೆ. ಒಂದು ವೇಳೆ ಈ ಉನ್ನತಾಧಿಕಾರದ ಚುನಾವಣೆಯು ಅವಿರೋಧವಾಗಿ ಜರುಗಿದಲ್ಲಿ, ಮಾರ ವಾರ ಮೊದಲೇ ಅಧ್ಯಕ್ಷ ಚುನಾವಣೆ ಮುಗಿಯಂತಾಗುವುದು.

ಈಗ ಗೊತ್ತಾದ ವೇಳೆಗೆ ನಾಮಪತ್ರವನ್ನು ಅರ್ಪಿಸುವುದು ಏಪ್ರಿಲ್ ದಿ. ೧೨ ಮತ್ತು ಮತದಾನ ಮೇ. ದಿ. ೨ರಂದು ಜರುಗುವುದು.

ಸಧ್ಯದ ಕಾರ್ಯಕ್ರಮದ ವೇಳೆಗೆ, ಮೇ ದಿ ೧೩ ಮತ್ತು ಮೇ. ದಿ. ೧೪ ಈ ಎರಡು ದಿನಗಳಲ್ಲಿ ಹೊಸ ಪಾರ್ಲಿಮೆಂಟ್ ಸದಸ್ಯರು ಪ್ರತಿಜ್ಞಾ ಸ್ವೀಕರಿಸಬೇಕೆಂದು ಗೊತ್ತಾಗಿದೆ. ಪಾರ್ಲಿಮೆಂಟ್ ಅಧ್ಯಕ್ಷರ ಚುನಾವಣೆ ಮೇ. ದಿ. ೧೪ ರಂದು ಜರುಗುವುದು. ಮೇ ದಿ ೧೬ ರಂದು ರಾಷ್ಟ್ರಾಧ್ಯಕ್ಷರು ಪಾರ್ಲಿಮೆಂಟಿನ ಮೇಲ್ಮನೆ ಮತ್ತು ಕೆಳಮನೆ ಇವುಗಳ ಸಂಯುಕ್ತ ಸಭೆಯನ್ನುದ್ದೇಶಿಸಿ ಮಾತನಾಡುವರು.

ಚಲಿಸುವ ಪರ್ವತ.

ಉತ್ತರ ಆಫ್ರಿಕದಲ್ಲಿಯ ಒಳಪ್ರದೇಶದಲ್ಲಿರುವ ದೊಡ್ಡ ಪರ್ವತ ಸಾಲಿಗೆ ಸೇರಿದ ಮೌಂಟ್ ಡೆಗೊನಿ ಡ್ವೆಜೀನ್ ಎಂಬ ಪರ್ವತವು ಇತ್ತೀಚಿಗೆ ಚಲಿಸಲು ತೊಡಗಿದಂತೆ ಕಂಡುಬಂದಿತ್ತು. ಪರ್ವತದಡಿಯಲ್ಲಿ ಹರಿಯುತ್ತಿರುವ ಒಂದು ನದಿಯಲ್ಲಿ ನೀರು ಉಕ್ಕಿದ ಪರಿಣಾಮವಾಗಿ ಈ ಅದ್ಭುತ ನಡೆದುದೆನ್ನಲಾಗಿದೆ. ಅಲ್ಲಿನ ಹಲವು ಮನೆಗಳಿಗೆ ಸಂದುಬಿದ್ದಿವೆ; ನೂರಾರು ಆಲಿವ್ ಮರಗಳು ಹಲವು ಗಜಗಳಷ್ಟು ದೂರಕ್ಕೆ ಒಯ್ಯಲ್ಪಟ್ಟಿವೆ.

ರಾಜಾಜಿ ನಾಮಕರಣದ ವಿರುದ್ಧ ಅರ್ಜಿ.

ಶ್ರೀ ರಾಜಗೋಪಾಲ ಚಾರಿಯವರನ್ನು ಮದ್ರಾಸು ಮೇಲ್ಮನೆಗೆ ನಾಮಕರಣ ಮಾಡಿರುವ ಗವರ್ನರರ ಆಜ್ಞೆಯನ್ನು ತಿದ್ದುವಿಕೆಯ ಬೇಕೆಂದು ಕೇಳಿಕೊಳ್ಳುವ ಅರ್ಜಿಯೊಂದನ್ನು ಶಾಸನ ಸಭಾ ಸದಸ್ಯರಾದ ಶ್ರೀ. ರಾಮಮೂರ್ತಿ (ಕಮ್ಯೂನಿಸ್ಟ) ತಾ. ೪ರಲ್ಲಿ ಮದ್ರಾಸು ಹೈಕೋರ್ಟಿಗೆ ಸಲ್ಲಿಸಿದರು.

ನಾಮಕರಣ ಮಾಡುವ ಸಂಬಂಧದಲ್ಲಿ ಘಟನೆಯು ಗವರ್ನರರಿಗೆ ಕೊಡುವ ಅಧಿಕಾರದ ಮೋಸ ಕೃತಿಯೇ ರಾಜಾಜಿಯವರ ನಾಮಕರಣವಾಗಿದೆಯೆಂದು ಅವರು ತಮ್ಮ ಅರ್ಜಿಯಲ್ಲಿ ವಾದಿಸಿದ್ದಾರೆ. ಆದರೆ ಅವರ ಅರ್ಜಿಯನ್ನು ಕೋರ್ಟು ತಿರಸ್ಕರಿಸಿದೆ.

ಮಹಾ ಚುನಾವಣೆಯಲ್ಲಿ ಮಹಿಳೆಯರು.

ಮಹಾಚುನಾವಣೆಯಲ್ಲಿ ಮಹಿಳೆಯರು ಭಾಗವಹಿಸಿದುದರ ಬಗ್ಗೆ ಖಚಿತವಾದ ಅಂಕೆ ಸಂಖ್ಯೆಗಳು ದೊರೆಯದಿದ್ದರೂ ಈ ಕೆಳಗಿನಂತೆ ಸ್ವಲ್ಪ ಹೆಚ್ಚು ಕಡಿಮೆ ಅಂಕೆಗಳು ದೊರೆತಿವೆ.

ಲೋಕ ಸಭೆಗೆ ೫೧ ಜನರು ಸ್ಪರ್ಧಿಸಿದ್ದರು. ಇವರಲ್ಲಿ ೧೯ ಜನರು ಯಶಸ್ವಿಗಳಾಗಿದ್ದಾರೆ.

ಪ್ರಾಂತ ಶಾಸನ ಸಭೆಗಳಿಗೆ ೨೧೬ ಜನರು ಸ್ಪರ್ಧಿಸಿ ೮೧ ಜನರು ವಿಜಯಿಗಳಾಗಿದ್ದಾರೆ.

ಬೊಂಬಾಯಿ ಮತ್ತು ಉತ್ತರ ಪ್ರದೇಶದ ಉತ್ತರ ಭಾಗದಿಂದ ಹೆಚ್ಚು ಮಹಿಳೆಯರು ಸ್ಪರ್ಧಿಸಿರುವರು. ಬಿಹಾರದಲ್ಲಿ ೩೯ ಜನರು ಸ್ಪರ್ಧಿಸಿ ೧೬ ಜನರು ವಿಜಯಿಗಳಾಗಿದ್ದಾರೆ. ಯು. ಪಿ. ಯಲ್ಲಿ ೫೪ ಜನರು ಸ್ಪರ್ಧಿಸಿ ೧೬ ಜನರು ಆರಿಸಿ ಬಂದವರು. ಬೊಂಬಾಯಿ ಪ್ರಾಂತಕ್ಕೆ ಮೂರನೇ ಸ್ಥಾನ. ೨೫ ಜನರು ಚುನಾವಣೆಗೆ ನಿಂತು ೧೧ ಜನರು ಶಾಸನ ಸಭೆಗಳಿಗೆ ಆರಿಸಿ ಬಂದಿರುವರು.

ಮಧ್ಯ ಪ್ರದೇಶದಲ್ಲಿ ೧೯ರಲ್ಲಿ ೧೦ ಜನರು; ಹೈದ್ರಾಬಾದಿನಲ್ಲಿ ೮ ಜನರೂ ಆರಿಸಿ ಬಂದರು. ಮದ್ರಾಸು ಎಲ್ಲಕ್ಕಿಂತ ಕಡೆಯದಾಗಿ ಚುನಾವಣೆಗೆ ಸ್ಪರ್ಧಿಸಿದ್ದ ೩೭ ಜನರಲ್ಲಿ ನಾಲ್ವರ ಮಾತ್ರ ಶಾಸನ ಸಭೆಗೆ ಆರಿಸಿ ಬಂದಿರುವರು.

ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಒಟ್ಟು ೧೫ ಜನ ಮಹಿಳಾ ಸದಸ್ಯರಿದ್ದಾರೆ ಬಿಹಾರ ಮತ್ತು ಯು. ಪಿ. ಯವರು ಮೂವರು ಇರುವರು. ಇದರಲ್ಲೂ ಮುಂಬೈಗೆ ಮೂರನೆ ಸ್ಥಾನ. ಮುಂಬೈ ಪ್ರಾಂತದಿಂದ ಇಬ್ಬರು ಮಹಿಳಾ ಸದಸ್ಯರಿರುವರು.

ಹೊಸ ಬಾಂಬರುಗಳು.

ಸಾವಿರಾರು ಮೈಲು ದೂರಕ್ಕೆ ಬಾಂಬುಗಳನ್ನೆಸೆಯಬಲ್ಲ ಅಸಾಧಾರಣ ರೀತಿಯ ಲಾಂಗ್ ರೇಂಜ್ ಬಾಂಬರುಗಳು ರಷ್ಯದಲ್ಲಿ ತಯಾರಾಗುತ್ತಿವೆ ಎಂಬ ಆಧಾರಭೂತ ವರದಿಗಳು ಅಮೇರಿಕಕ್ಕೆ ತಲೆಸಿಡಿತವನ್ನುಂಟು ಮಾಡಿವೆ. ಅಮೇರಿಕದ ಪ್ರಸಿದ್ಧ ನಗರಗಳೆಲ್ಲಾ ರಷ್ಯದ ಆ ಹೊಸ ಮಾದರಿಯ ಲಾಂಗ್ ರೇಂಜ್ ಬಾಂಬರ್‌ಗಳ ವ್ಯಾಪಕ ಕ್ಷೇತ್ರದೊಳಗಿವೆ ಎನ್ನುವಾಗ ಅಮೇರಿಕನರಿಗೆ ಎದೆ ನಡುಕ ಉಂಟಾಗುವುದು ಸಹಜವೇ. 'Type 31' ಎಂಬ ಹೆಸರಿನ ಹೊಸ ಸೋವಿಯಟ್ ಲಾಂಗ್ ರೇಂಜ್ ಬಾಂಬರ್ ೬,೫೦೦ ಮೈಲುಗಳಷ್ಟು ದೂರಕ್ಕೆ ಬಾಂಬುಗಳನ್ನು ಹಾಕಬಲ್ಲುದಂತೆ; ಮಾತ್ರವಲ್ಲ ಗಂಟೆಗೆ ೪೫೦ರಿಂದ ೫೦೦ ಮೈಲುಗಳ ವರೆಗೆ ವೇಗದಲ್ಲಿ ಅದು ಬಾಂಬುಗಳನ್ನು ಹಾರಿಸಬಲ್ಲುದು. ಇದರ ಮೊದಲು ತಯಾರಾದ ಇಂತಹದೇ ಇನ್ನೊಂದು ಬಾಂಬರಿನ ಹೆಸರು 'Tu 4' ಈ ಎರಡು ರೀತಿಯ ಬಾಂಬರ್‌ಗಳು ವರ್ಷಕ್ಕೆ ೧,೦೦೦ದಷ್ಟು ತಯಾರಾಗುತ್ತಿವೆ.

ಹಿಮಾಲಯಾರೋಹಣ ಆರಂಭ

ಸ್ವಿಸ್ ಪರ್ವತಾರೋಹಿಗಳು ಖಟ್ಮಾಂಡುದಿಂದ ಹೊರಟರು.

ಹಿಂದಾರೂ ಜಯಿಸದ ಹಿಮಾಲಯ ಪರ್ವತದ ಅತ್ಯುನ್ನತ ಗೌರೀ ಶಂಕರ ಶಿಖರ (Mount Everest)ವನ್ನೇರುವ ಭಗೀರಥ ಪ್ರಯತ್ನವೊಂದು ತಿರುಗಿ ಆರಂಭವಾಗಿದೆ. ಗೌರೀ ಶಂಕರವನ್ನು ಗೆಲ್ಲುವ ೯ನೇ ಪ್ರಯತ್ನವಿದು. ಹಿಂದಿನ ಎಂಟು ಯತ್ನಗಳನ್ನು ಬ್ರಿಟಿಷ್ ಪರ್ವತಾರೋಹಿ ಮಂಡಲದವರು ಕೈಕೊಂಡಿದ್ದರೆ ಈ ಬಾರಿಯ ಯತ್ನ ಸ್ವಿಸ್ ಪರ್ವತಾರೋಹಿ ಮಂಡಲದ ಕಡೆಯಿಂದ ಆರಂಭವಾಗಿದೆ.

ಸ್ವಿಸ್ ಪರ್ವತಾರೋಹಿ ಮಂಡಲದ ಹತ್ತು ಮಂದಿ ಸದಸ್ಯರು ಮಾರ್ಚ್ ತಿಂಗಳ ತಾ ೨೯ರಂದು ಖಟ್ಮಾಂಡುದಿಂದ ಜಗತ್ತಿನ ಅತ್ಯುನ್ನತ ಶಿಖರ ಗೆಲ್ಲಲು ಹೊರಟಿದ್ದಾರೆ. ಗೌರೀ ಶಂಕರ ಶಿಖರವು ೨೯ ಸಾವಿರ ೨ ಅಡಿಯಷ್ಟು ಎತ್ತರವಿದೆ. ಆ ಹತ್ತು ಮಂದಿ ಸದಸ್ಯರೊಡನೆ ೧೨ ಮಂದಿ ಶೆರ್ಪಾಗಳು ಮತ್ತು ೧೬೪ ಮಂದಿ ಕೂಲಿಗಳು ಪರ್ವತಾರೋಹಣಕ್ಕೆ ಅವಶ್ಯವಿರುವ ಆಹಾರ ಮತ್ತು ಇತರ ಸಾಮಗ್ರಿಗಳನ್ನು ಹೊತ್ತುಕೊಂಡು ಪರ್ವತಾರೋಹಿಗಳನ್ನು ಅನುಸರಿಸುತ್ತಿರುವರು.

ಡಾ॥ ಎಡ್ವರ್ಡ್ ವೈಸ್ ಡ್ಯೂಂಟ್, ಮೆಡಮ್ ಮಾರ್ಗರೆಟ್ ಲೋಬ್‌ಸಿಂಗರ್ ಡೆಲ್‌ಬ್ಯಾಚ್ (ಪರ್ವತಾರೋಹಿ ಮಂಡಲದ ಏಕಮಾತ್ರ ಮಹಿಳಾ ಸದಸ್ಯೆ) ಮತ್ತು ವಿವಿಧ ಭಾಷಾ ಪಾಂಡಿತ ಹಿಂದಿಯ ಸದಸ್ಯ, ಡಾ. ಆರ್. ಎನ್. ರಾಹೇಲ್ ಈ ಮೂರು ಮಂದಿ ವೈಜ್ಞಾನಿಕ ಅಧ್ಯಯನಗಳ ಬಗ್ಗೆ ಖಟ್ಮಾಂಡುವಿನಲ್ಲಿ ಉಳಿದಿರುವರು. ಖಟ್ಮಾಂಡುದಿಂದ ಹೊರಟ ಪಡೆ ಮೊದಲ ಶಿಬಿರವನ್ನು ಖಟ್ಮಾಂಡುದಿಂದ ೧೫ ಮೈಲಿ ಪೂರ್ವದಕ್ಷಿಣದ ಬನೇಪಾ ಎಂಬ ಚಿಕ್ಕ ಹಳ್ಳಿಯಲ್ಲಿ ಹೂಡುವುದು. ಎವರೆಸ್ಟ್ ಶಿಖರದ ತಪ್ಪಲ ಪ್ರದೇಶ ಸೇರಲು ೧೫ ದಿನಗಳ ಪಯಣ ತೆಗೆದುಕೊಳ್ಳಬೇಕಾಗುವುದು.

ಎವರೆಸ್ಟ್ ಕಡೆಗೆ ಹೊರಟ ಸ್ವಿಸ್ ಮಂಡಲದವರು ಪಯಣ ಆರಂಭಿಸುವ ಮುಂಚೆ ಒಳ್ಳೆಯ ಆರೋಗ್ಯ ಮತ್ತು ಉತ್ಸಾಹದಲ್ಲಿದ್ದರು. ಎವರೆಸ್ಟ್ ಶಿಖರದ ತಪ್ಪಲ ಪ್ರದೇಶದಲ್ಲಿರುವ ನಮ್ಚೆಬಜಾರ್ ಹಳ್ಳಿಗೆ ಏಪ್ರಿಲ್ ತಾ. ೧೨ ರಂದು ಮುಟ್ಟಬಹುದೆಂದು ಸ್ವಿಸ್ ಪರ್ವತಾರೋಹಿಗಳೆಣಿಸುತ್ತಾರೆ. ಖಟ್ಮಾಂಡುವಿನಿಂದ ಆ ಹಳ್ಳಿಗೆ ೧೫೦ ಮೈಲುಗಳಷ್ಟು ಅಂತರವಿದೆ. ಬ್ರೂಸ್ ಎಂಟು ಬಾರಿ ಯುದ್ಧ ಮಾಡಿ ಸೋತರೂ ಹಠ ತೊರೆಯದೆ ೯ನೇ ಬಾರಿ ಗೆದ್ದ ಕಥೆಯನ್ನು ನಾವು ಓದಿರುವೆವು. ತದ್ರೀತಿ ಎವರೆಸ್ಟ್ ಶಿಖರವನ್ನು ಜಯಿಸುವ ೯ನೇ ಯತ್ನ ಯಶಸ್ವಿಯಾಗಬಾರದೇಕೆ? ಪ್ರ

ಬಿಸಿಲಿನಿಂದ ಅಡಿಗೆ.

ಕಟ್ಟಿಗೆಯ ಸಹಾಯವಿಲ್ಲದೆ ಕೇವಲ ಸೂರ್ಯ ಕಿರಣಗಳ ಮೂಲಕ ಅನ್ನ ಪದಾರ್ಥಗಳನ್ನು ಬೇಯಿಸುವ 'ಕುಕ್ಕರ್'ಗಳು ಭಾರತದಲ್ಲಿ ತಯಾರಾಗಿವೆ. ಇಂತಹ ಕುಕ್ಕರ್‌ಗಳನ್ನು ಸಾಮೂಹಿಕ ಕ್ಷೇತ್ರದಲ್ಲಿ ತಯಾರಿಸುವ ಪ್ರಯತ್ನವನ್ನು ಭಾರತವು ಬೇಗನೆ ಕಾರ್ಯರೂಪಕ್ಕೆ ತರಲಿದೆಯೆಂದು ಕೇಳಿಬರುತ್ತದೆ.

ಡಿಲ್ಲಿಯ ನೇಶನಲ್ ಫಿಜಿಕಲ್ ಲೆಬೊರೆಟರಿಯವರು ಈ ನೂತನ ಮಾದರಿಯ ಕುಕ್ಕರ್ ತಯಾರಿಸಿದ್ದಾರೆ. ಅದರ ಡಿಸೈನ್ ಸಿದ್ಧಪಡಿಸಿಕೊಂಡು, ಯಶಸ್ವಿಯಾಗಿ ಈ ಶೋಧವನ್ನು ಪ್ರಚಾರಕ್ಕೆ ತಂದ ಕೀರ್ತಿ ಆ ಲೆಬೊರೆಟರಿಯವರಿಗೆ ಸಲ್ಲುತ್ತದೆ. ಈ ನೂತನ 'ಕುಕ್ಕರ್' ಯಂತ್ರದ ಮಾದರಿಯೊಂದನ್ನು ಭಾರತದ ಪ್ರಧಾನ ಮಂತ್ರಿ ಪಂಡಿತ ನೆಹರೂರವರ ಮನೆಯಲ್ಲಿ ಮೊದಲಾಗಿ ಇರಿಸಲಾಯಿತು.

ಈ ಕುಕ್ಕರ್‌ದಲ್ಲಿ ತಯಾರಾದ ರೋಸು ಗೆಡ್ಡೆ ಮತ್ತು ಇತರ ತರಕಾರಿ ಪದಾರ್ಥಗಳನ್ನು ಸವಿದ ಪ್ರಧಾನ ಮಂತ್ರಿಗಳು 'ಅವು ರುಚಿಯಾಗಿವೆ' ಎಂದು ಅಭಿಪ್ರಾಯ ಕೊಟ್ಟಿರುತ್ತಾರೆ.

ಹಲವು ಸಂಸ್ಥೆಗಳು, ವ್ಯಾಪಾರಿ ಕ್ಷೇತ್ರದವರು ಈ ಹೊಸ 'ಸೋಲಾರ್ ಕುಕ್ಕರ್'ಗಳನ್ನು ಪ್ರಚಾರಕ್ಕೆ ತರುವುದಕ್ಕಾಗಿ ಆತುರ ವ್ಯಕ್ತಪಡಿಸಿವೆ. ಇಂತಹ ಕುಕ್ಕರ್ ಒಂದಕ್ಕೆ ಸುಮಾರು ೫೦ ರೂಪಾಯಿಗಳಷ್ಟು ಬೆಲೆ ಬೀಳಬಹುದೆನ್ನಲಾಗಿದೆ. ಅದನ್ನು ನಡೆಸುವದಕ್ಕೆ ಒಂದು ಪೈಯಷ್ಟೂ ಖರ್ಚು ಇರುವದಿಲ್ಲ. ಆ ಫೋಸ್ಟು ಸೂರ್ಯನ ಬಿಸಿಲು ಇದ್ದರಾಯಿತು.

ಒಂದರ ಮಧ್ಯದ ಆಕಾರದ ೩,೦೦ ವಾಟ್ ಶಕ್ತಿಯ ಇಲೆಕ್ಟ್ರಿಕ್ ಕುಕ್ಕರ್‌ದಷ್ಟೇ ಪ್ರಯೋಜನ ಈ ಹೊಸ ಕುಕ್ಕರ್ ಕೊಡಬಲ್ಲುದು. ಭಾರತದಲ್ಲಿ ಸೂರ್ಯನ ಬೆಳಕಿನ ಬರಗಾಲವಿಲ್ಲ. ಸಾಮಾನ್ಯ ವರ್ಷದ ಹನ್ನೆರಡು ತಿಂಗಳುಗಳಲ್ಲಿಯೂ ಅದು ದೊರಕುತ್ತದೆ. ಆದಕಾರಣ ಈ ಹೊಸ ಕುಕ್ಕರ್‌ಗಳು ಹಳ್ಳಿಗಳಲ್ಲಿ ಜನರಿಗೆ ತುಂಬಾ ಪ್ರಯೋಜನಕಾರಿಯಾಗಬಹುದು. ಸೌದೆಯ ಖರ್ಚನ್ನು ಉಳಿಸುವುದು ಮಾತ್ರವಲ್ಲ. ಬೆರಣಿಗೆ ಹಳ್ಳಿಗಳಲ್ಲಿ ಉಪಯೋಗಿಸಲ್ಪಡುವ ಸಗಣಿಯೆಲ್ಲಾ ಹೊಲಗಳಲ್ಲಿ ಗೊಬ್ಬರಕ್ಕೆ ಬೀಳಬಹುದು.

ಲೆಬೊರೆಟರಿಯ ಉಷ್ಣ ಮತ್ತು ಶಕ್ತಿ (Heat and Power) ವಿಭಾಗದಲ್ಲಿ ಅಮೇರಿಕದಲ್ಲಿ ತರಬೇತಿ ಹೊಂದಿದ ಶ್ರೀ ಎಂ. ಎಲ್ ಗ್ಹಾಯಿ ಎಂಬ ೩೮ ವರ್ಷ ಪ್ರಾಯದ ಹಲವು ವಿಜ್ಞಾನಿಗಳು ಕೆಲಸ ಮಾಡುತ್ತಿದ್ದಾರೆ. ಈ ವಿಭಾಗವೇ 'ಕುಕ್ಕರ್' ಯಂತ್ರದ ಶೋಧದಲ್ಲಿ ಪ್ರಯೋಗಗಳನ್ನು ನಡೆಸುತ್ತಿದೆ.

ಈ ಪ್ರಯೋಗ ಶಾಲೆಯಲ್ಲಿ ಭಾರತದ ಅಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಕಾರಾಗೃಹದಲ್ಲಿದ್ದಾಗ ತಯಾರಿಸಿದ ಒಂದು 'ಕುಕ್ಕರ್' ಇದೆ. ಪದಾರ್ಥಗಳನ್ನು ಬಿಸಿಯಾಗಿರಿಸುವ ಬಗ್ಗೆ ಮಾತ್ರ ಈ ಕುಕ್ಕರನ್ನು **ಲೆಬೊರೆಟರಿಯವರು ಉಪಯೋಗಿಸುತ್ತಿದ್ದಾರೆ. ಅಡಿಗೆ ಮಾಡಲು ಅದನ್ನು ಉಪಯೋಗಿಸುವುದಿಲ್ಲ.** ಪ್ರ.

ಕೊಡಗಿಗೆ ಒಂದು ಭರವಸೆ.

(ಕೇಂದ್ರ ಸರಕಾರದ ಗೃಹ ಮಂತ್ರಿಗಳು ಕೊಡಗಿಗೆ ಬಂದು ಶಾಸನ ಸಭೆಯನ್ನು ಉದ್ಘಾಟಿಸಿದಾಗ ಮಾಡಿದ ಭಾಷಣದ ಮೇಲೆ ಮದ್ರಾಸಿನ 'ಮೆಯಿಲ್' ಪತ್ರಿಕೆಯು ಬರೆದ ಅಗ್ರಲೇಖನದ ಅನುವಾದವನ್ನು ವಾಚಕರಿಗಾಗಿ ಇಲ್ಲಿ ಕೊಡಲಾಗಿದೆ)

ಕೊಡಗಿನ ಶಾಸನ ಸಭೆಯ ಉದ್ಘಾಟನೆಯನ್ನು ಮಾಡುವ ಕಾಲಕ್ಕೆ ಕೇಂದ್ರದ ಗೃಹ ಮಂತ್ರಿಗಳು ಜಾಣ್ಮೆಯಿಂದ ಮಾತಾಡಿದರು. ಕೊಡಗು ಚಿಕ್ಕದಾಗಿದ್ದು ಜನಸಂಖ್ಯೆಯು ಕಡಿಮೆಯಾಗಿದ್ದರೂ ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಂಡಿರುವ ವಿಚಾರ ಹೇಳಿ ಡಾ. ಖಟ್ಜುರವರು ಸಭಿಕರನ್ನುದ್ದೇಶಿಸಿ ಹೀಗೆ ಹೇಳಿದರು. 'ಭವಿಷ್ಯದಲ್ಲಿ ಘಟನೆಗಳು ಯಾವ ರೀತಿ ರೂಪಿತಗೊಳ್ಳುವವೋ ಎಂಬುದು ತನ್ನ ಗತಕಾಲದ ಪರಂಪರೆಯನ್ನನುಲಕ್ಷಿಸಿ ಜನತೆಯು ತಾವು ನಿರ್ಣಯಿಸಿಕೊಳ್ಳುವುದರ ಮೇಲೆಯೇ ಪೂರ್ಣವಾಗಿ ನಿಂತಿದೆ' ಉದ್ಘಾಟನೆಯ ಪ್ರಾಮುಖ್ಯ ಹಾಗೂ ಸುಮುಹೂರ್ತದಲ್ಲಿ ಇವರು ಹೇಳಿದ ಮಾತುಗಳು ಕೊಡಗಿನ ಬಗ್ಗೆ ಕೇಂದ್ರ ಸರಕಾರದ ಅಭಿಪ್ರಾಯವನ್ನು ವ್ಯಕ್ತ ಮಾಡುವವೆಂದು ಊಹಿಸಬಹುದಾಗಿದೆ. ಅದು ಹಾಗಿದ್ದ ಪಕ್ಷ ಕೊಡಗು ತನ್ನ ವ್ಯಕ್ತಿತ್ವವನ್ನು ಉಳಿಸಿಕೊಳ್ಳಬಹುದು. ಅಥವ ಒಂದು ವರ್ಷಕ್ಕೆ ಹಿಂದೆ ಇದ್ದಂತೆ ಕೊಡಗು ಬೇರೆ ಪ್ರಾಂತಕ್ಕೆ ಶೀಘ್ರ ಸೇರಿಸಲ್ಪಡುವ ಭಯವಿಲ್ಲವೆಂದು ಹೇಳಬಹುದು.

೧೯೫೧ನೇ ಮಾರ್ಚ್ ತಿಂಗಳಲ್ಲಿ ಸಂಸ್ಥಾನಗಳ ಮಂತ್ರಿಯವರು ಕೇಂದ್ರ ಪಾರ್ಲಿಮೆಂಟಿನಲ್ಲಿ ಕೊಡಗು ಇಂದಲ್ಲ ನಾಳೆ ನೆರೆಯ ಸಂಸ್ಥಾನದೊಡನೆ ಸೇರಿ ಹೋಗಬೇಕೆಂದರು. ಅವರ ಅಭಿಪ್ರಾಯಕ್ಕೆ ಡಾ. ಗಾಡ್ಗಿಲ್ಲರು ಬೆಂಬಲವಿತ್ತಿದರು. ಆಗ ನಾವು ಈ ಸೂಚನೆಯನ್ನು ವಿರೋಧಿಸಿದ್ದೆವು. ಕೊಡಗಿನ ಕದನಶೂರ ಜನತೆಯು ತಮ್ಮದೇ ಆದ ವಿಶಿಷ್ಟ ರಾಷ್ಟ್ರೀಯ ಸಂಪ್ರದಾಯ, ಘನತರ ಸಂಸ್ಕೃತಿಯನ್ನು ಉಳಿಸಿಕೊಂಡಿರುವುದಲ್ಲದೆ ತಮ್ಮ ಚರಿತ್ರೆಯ ಬಗ್ಗೆ ಹೆಮ್ಮೆಯುಳ್ಳವರಾಗಿಯೂ ತಮ್ಮ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ಯಾವ ತ್ಯಾಗ ಮಾಡಬಲ್ಲವರಾಗಿಯೂ ಇದ್ದಾರೆಂದು ಆಗ ಬರೆದಿದ್ದೆವು. ಆ ಲೇಖನಕ್ಕೆ ಒಂದು ಭಾಗ್ಯ ಇಂದು ಪುದುಕೋಟೆ, ಕೊಚಿನ್‌ಗಳಿಗೆ ಬಂದಿದೆ. ಕೊಚಿನ್ ಕೊಡಗಿನಂತೆಯೇ ೧೫೦೦ ಚದರ ಮೈಲು ವಿಸ್ತೀರ್ಣವುಳ್ಳ ದೇಶ. ೧೯೪೯ರಲ್ಲಿ ತಿರುವಾಂಕೂರಿನೊಡನೆ ಇದನ್ನು ವಿಲೀನಗೊಳಿಸಿದಾಗ ಇದರ ಜನಸಂಖ್ಯೆಯು ಕೊಡಗಿಗಿಂತ ಏಳು ಪಟ್ಟು ಹೆಚ್ಚಿದ್ದು ಇದರ ವಾರ್ಷಿಕ ಆದಾಯವು ಏಳು ನೂರು ಪಾಲು ಹೆಚ್ಚಿತ್ತು. ಕೇಂದ್ರ ಮಂತ್ರಿಮಂಡಲವು ಕೊಚ್ಚಿನ ಜನರನ್ನು ವಿಲೀನೀಕರಣದ ಬಗ್ಗೆ ಕೇಳಲಿಲ್ಲ. ಆದರೆ ಅನುಭವವು ಕೊಡಗಿನ ಬಗ್ಗೆ ಹಾಗೆ ಮಾಡಬಾರದೆಂಬುದನ್ನು ವ್ಯಕ್ತಪಡಿಸಿದೆ.

ಡಾಕ್ಟರ್ ಕಾಟ್ಜುರವರು ಕೊಡಗಿನ ಹಲವು ಬೇಡಿಕೆಗಳ ವಿಚಾರ ಆಸಕ್ತಿ ತೋರಿಸಿದಾರೆ. ಕೊಡಗಿಗೆ ವಿದ್ಯುಚ್ಛಕ್ತಿಯ ವಿಚಾರದಲ್ಲಿ ಅವರು ಹೇಳಿದ ವಿಚಾರವು ಪ್ರೋತ್ಸಾಹಕರವಾಗಿದೆ. ಅವರು ತಮ್ಮ ಸರ್ಜನ್ಸನ್ನು ಉಪಯೋಗಿಸಿ ಈ ಬಗ್ಗೆ ಕೇಂದ್ರದಿಂದ ಹಣ ಸಹಾಯವನ್ನೂ, ಕೊಡಗಿನ ಅಭಿವೃದ್ಧಿಗೆ ಅವಶ್ಯಕ ತಜ್ಞರ ಸಲಹೆಯನ್ನೂ ಒದಗಿಸಬಹುದೆಂದು ನಂಬಬಹುದಾಗಿದೆ. ತಾ. ೨೯ರಲ್ಲಿ ಮಡಿಕೇರಿಯಲ್ಲಿ ಮಾತಾಡುತ್ತಾ ಕಾಟ್ಜುರವರು ಕೊಡಗು ಹಿಂದೂದೇಶದಲ್ಲಿ ಅತಿ ಸುಂದರವಾದ ಒಂದು ಭಾಗವೆಂದರು. ಇದನ್ನು ಪ್ರವಾಸಿಗರ ಕೇಂದ್ರವಾಗಿ ಮಾಡುವ ಆಶೆಯನ್ನು ವ್ಯಕ್ತಪಡಿಸಿದರು. ಅವರ ಅಭಿಪ್ರಾಯವು ಸರಿಯೆನ್ನಲಡ್ಡಿಯಿಲ್ಲ. ಕೊಡಗಿನ ವಿಚಾರದಲ್ಲಿ ಬೇರೊಂದು ಪ್ರಚಾರವನ್ನು ಸಾಕಷ್ಟು ಮಾಡಬೇಕೆಂದು ಅವರು ಸೂಚಿಸಿದರು. ಈ ಬಯಕೆ ನೆರವೇರಬೇಕಾದರೆ ಕೊಡಗಿನಲ್ಲಿ ವಹಿವಾಟಿನ ಸೌಕರ್ಯ ಹೆಚ್ಚಬೇಕು. ಉತ್ತಮ ಹೋಟೆಲುಗಳ ಗಟಿಕೆ. ಪ್ರವಾಸಿಗರ ಖರ್ಚನ್ನು ಕಡಿಮೆ ಮಾಡುವುದು ಅವಶ್ಯವಾಗಿದೆ. ಹೀಗೆ ಮಾಡಿದರೆ ಬಗೆಬಗೆಯ ಸಂದರ್ಶಕರು ಅಲ್ಪ ಆದಾಯದವರಿಗೂ ಸಾಧ್ಯವಾಗುವಂತೆ ಮಾಡಬೇಕಿದೆ.

ಮೈಸೂರಿನ ಹೊಸ ಮಂತ್ರಿ ಮಂಡಳ.

ಮೈಸೂರು ರಾಜ್ಯದ ಹೊಸ ಮಂತ್ರಿ ಮಂಡಲವು ರಚಿತವಾಯಿತು. ಮುಖ್ಯ ಮಂತ್ರಿ ಕೆ. ಹನುಮಂತಯ್ಯನವರನ್ನು ಕೂಡಿಕೊಂಡು ಆರು ಜನರು ಮಂತ್ರಿ ಮಂಡಲದಲ್ಲಿರುವರು ಮುಖ್ಯ ಮಂತ್ರಿಗಳ ಘೋಷಣೆಯನ್ವಯ ಶ್ರೀ ಟಿ ಸಿದ್ದಲಿಂಗಯ್ಯ, ಎ. ಜಿ. ರಾಮಚಂದ್ರರಾವ್, ಟಿ. ಚೆನ್ನಯ್ಯ, ಕಡಿದಾಳ್ ಮಂಜಪ್ಪ ಮತ್ತು ಎಚ್. ಸಿದ್ದವೀರಪ್ಪ ಇವರು ಮೈಸೂರಿನ ಹೊಸ ಮಂತ್ರಿಗಳಾದರು.

ಮಂತ್ರಿಗಳ ಪ್ರತಿಜ್ಞಾ ವಿಧಿಯು ತಾ. ೪ರ ಮಂಗಳವಾರ ೧೦-೩೦ಕ್ಕೆ ಮೈಸೂರು ಅರಮನೆಯಲ್ಲಿ ನಡೆಯಿತು. ಇನ್ನು ಹದಿನೈದು ದಿನಗಳಲ್ಲಿ ಉಪಮಂತ್ರಿಗಳ ನೇಮಕವಾಗುವದೆಂದು ಅಭಿಪ್ರಾಯ ಸಾಮರ್ಥ್ಯವುಳ್ಳ ಜನರನ್ನು ಆರಿಸಿಕೊಳ್ಳಬೇಕೆಂಬ ಧೋರಣೆಗೆ ಒಳಗಾಗಿರುವ ನಾನು ಅದೇ ದೃಷ್ಟಿಯಿಂದ ಈಗ ಆರಿಸಿಕೊಂಡಿರುವವರನ್ನು ಮಂತ್ರಿಗಳಾಗಿ ತೆಗೆದುಕೊಂಡಿದ್ದೇನೆ ಎಂದು ಶ್ರೀ ಹನುಮಂತಯ್ಯನವರು ಮಂತ್ರಿ ಮಂಡಲದಲ್ಲಿ ಹೇಳಿದರು.

ಕೆ. ಸಿ. ರೆಡ್ಡಿಯವರ ಮಂತ್ರಿ ಮಂಡಲದಿಂದ ಹನುಮಂತಯ್ಯನವರು ತಮ್ಮ ಹೊಸ ಮಂತ್ರಿ ಮಂಡಲಕ್ಕೆ ಯಾರನ್ನೂ ತೆಗೆದುಕೊಂಡಂತಾಗಲಿಲ್ಲ. ಶ್ರೀ ಟಿ ಸಿದ್ದಲಿಂಗಯ್ಯನವರು (ನಾಜಿ ಕಾಂಗ್ರೆಸ್ ಅಧ್ಯಕ್ಷರು) ಹಿಂದೊಮ್ಮೆ ರೆಡ್ಡಿ ಮಂತ್ರಿಮಂಡಲದಲ್ಲಿ ಶಿಕ್ಷಣ ಮಂತ್ರಿಗಳಾಗಿದ್ದು ಮತಭೇದ ಬಂದು ಮಂತ್ರಿ ಮಂಡಲವನ್ನು ಬಿಟ್ಟಿದ್ದರು. ಇನ್ನುಳಿದ ನಾಲ್ವರು ಹೊಸಬರೇ.

ಎ. ಜಿ. ರಾಮಚಂದ್ರರಾಯರು ಮೈಸೂರು ಕಾಂಗ್ರೆಸ್ ಪ್ರದೇಶ ಸಮಿತಿಯ ಪ್ರಧಾನ ಕಾರ್ಯದರ್ಶಿಗಳು. ಇವರ ಸರದಿ ಈ ಸಾರಿ ಖಂಡಿತವೆಂದೂ ಮುಖ್ಯ ಮಂತ್ರಿ ಯಾರೇ ಆಗಲಿ ಇವರಿಗೊಂದು ಸ್ಥಾನವೆಂದೂ ಜನರೆಂದುಕೊಳ್ಳುತ್ತಿದ್ದದ್ದು ನಿಜವಾಯಿತು. ಹೈದರಾಬಾದಿನ ಅರ್ಥ ಮಂತ್ರಿ ಡಾ. ಮೇಲುಕೋಟೆ ಇವರ ಸಹೋದರರವರು. ರಾಮಚಂದ್ರರಾಯರು ಮೈಸೂರು ಕಾಂಗ್ರೆಸ್ ಕಾರ್ಯಕರ್ತರ ಪೈಕಿ ಹಳೆಯ ಗಂಟಿನವರು.

ಕಡಿದಾಳ ಮಂಜಪ್ಪನವರು ಶಿವಮೊಗ್ಗ ಜಿಲ್ಲೆಯವರು. ಹೆಸರಾದ ವಕೀಲರು. ಆ ಭಾಗದ ನಾಯಕರ ಮೊದಲ ಸಾಲಿನಲ್ಲಿ ಇವರೂ ಒಬ್ಬರು. ರೈತರ ಸಂಘಟನೆಯಲ್ಲಿ ತುಂಬಾ ಆಸಕ್ತಿಯುಳ್ಳವರು.

ಶ್ರೀ ಸಿದ್ದವೀರಪ್ಪನವರು ದಾವಣಗೇರಿಯಲ್ಲಿನ ವಕೀಲರು. ವಕೀಲಿ ವೃತ್ತಿಯ ಜೊತೆಗೆ ಇತ್ತೀಚೆಗೆ ವಿವಿಧ ಸಮಿತಿಗಳ ಸದಸ್ಯರಾಗಿ ಕೆಲಸ ಮಾಡಿ ಅನುಭವ ಇರುವವರು.

ಶ್ರೀ ಟಿ. ಚೆನ್ನಯ್ಯನವರು ಪಾರ್ಲಿಮೆಂಟಿನ ಸದಸ್ಯರಾಗಿದ್ದರು. ಹರಿಜನ ಪ್ರತಿನಿಧಿಯಾಗಿ ಮೊದಲಿನಿಂದಲೂ ಒಳ್ಳೆಯ ಸೇವೆ ಸಲ್ಲಿಸುತ್ತ ಬಂದಿರುವರು.

ಕೆ. ಸಿ. ರೆಡ್ಡಿಯವರ ಗುಂಪಿನಿಂದ ಒಬ್ಬರನ್ನೂ ಸಹ ತೆಗೆದುಕೊಳ್ಳದೆ ಇರುವುದು ಶ್ರೀ ರೆಡ್ಡಿಯವರಿಗೊಬ್ಬರಿಗೆ ಮಾತ್ರ ಮಂತ್ರಿಮಂಡಲಕ್ಕೆ ಆಮಂತ್ರಿಸಿದುದೂ ಅವರು ನಿರಾಕರಿಸಿದುದೂ ಗಮನಾರ್ಹ ಅಂಶಗಳಾಗಿವೆ.

"ಮಿಸ್ ಇಂಡಿಯಾ"

ಶ್ರೀಮತಿ ಇಂದ್ರಾಣಿ ರೆಹಮಾನ

ತಾ. ೩ರ ಸಾಯಂಕಾಲ ನಡೆದ ಸೌಂದರ್ಯ ಸ್ಪರ್ಧೆಯಲ್ಲಿ ಕಲ್ಕತ್ತೆಯ ೨೨ ವರ್ಷದ ಶ್ರೀಮತಿ ಇಂದ್ರಾಣಿ ರೆಹಮಾನ ಇವರು 'ಮಿಸ್ ಇಂಡಿಯಾ' ಎಂದು ಆರಿಸಲ್ಪಟ್ಟರು. ಶ್ರೀಮತಿ ರೆಹಮಾನರಿಗೆ ೫ ವರ್ಷದ ಮಗಳಿದ್ದು ಅವರ ಪತಿಯು ಪ್ರಸಿದ್ಧ ಬಂಗಾಳ ಸರಕಾರದ ಪ್ರಸಿದ್ಧ ಶಿಲ್ಪಿಯಾಗಿದ್ದಾರೆ. ಮದರಾಸಿನ ಕುಮಾರಿ ಟಿ. ಮಾಯಾಕುಮಾರಿ ಇವರು ದ್ವಿತೀಯ ಸ್ಥಾನ ಪಡೆದರು. ಈ ಸ್ಪರ್ಧೆಯಲ್ಲಿ ಭಾರತದ ನಗರಗಳಿಂದ ೧೦ ತರುಣಿಯರು ಭಾಗವಹಿಸಿದ್ದರು. ಜೂನ್ ೨೨ರಿಂದ ೨೯ರ ವರೆಗೆ ಕ್ಯಾಲಿಫೋರ್ನಿಯಾದ ಲಾಂಗಬೀಚದಲ್ಲಿ ನಡೆಯುವ 'ಮಿಸ್ ಯುನಿವರ್ಸ್ ೧೯೫೨'ರ ಸ್ಪರ್ಧೆಯಲ್ಲಿ 'ಮಿಸ್ ಇಂಡಿಯಾ' ಇವರು ಹೋಗುವರು. ಈ ಸ್ಪರ್ಧೆ ನಡೆದ ಬ್ರಬೋರ್ನ್ ಸ್ಟೇಡಿಯಂನಲ್ಲಿ ಬಹಳ ಮಂದಿ ಸೇರಿದ್ದರು. ಸುಮಾರು ೧೦,೦೦೦ ಪ್ರೇಕ್ಷಕರು ಸ್ಪರ್ಧೆಗಾರರನ್ನು ಕುರಿತು ಜಯಘೋಷ ಮಾಡಿದರು. ಕೊನೆಗಡೆಯಲ್ಲಿ ಕೆಲವು ಜನರು 'ಭಾರತಕ್ಕೆ ಮಿಸ್ ಇಂಡಿಯಾ' ಬೇಕಾಗಿಲ್ಲವೆಂದು ಸ್ಪರ್ಧೆಯ ವಿರುದ್ಧ ಪ್ರದರ್ಶನ ಮಾಡಿದರು. ಮಾರನೆಯ ಹಿಂದಿನ ವರ್ಷದ ಶ್ರೀ ಎಸ್. ಕೆ. ಪಾಟೀಲರು ಶ್ರೀಮತಿ ರೆಹಮಾನ ಇವರಿಗೆ 'ಮಿಸ್ ಇಂಡಿಯಾ' ಕಿರೀಟವನ್ನು ತೊಡಿಸಿದರು. ಅನಂತರ 'ಮಿಸ್ ಇಂಡಿಯಾ' ಇವರು ಗೌರವದಿಂದ ಸ್ಟೇಡಿಯಂನಲ್ಲಿ ಒಂದು ಸುತ್ತು ತಿರುಗಾಡಿದರು.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[illegible] (ರಿಜಿಸ್ಟರ್ಡ್ ನಂ. [illegible])

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಸಹಕಾರಿ ಸಂಘಗಳಿಗೆ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ಒಡವೆಗಳ ಆಧಾರದ ಮೇಲೆ ಸಾಲ ಕೊಡಲಾಗುವುದು. ಬ್ಯಾಂಕ್ ಡ್ರಾಫ್ಟುಗಳನ್ನು ಡಿಸ್ಕೌಂಟು ಮಾಡಲ್ಪಡುವುವು. ಪ್ರಸಿದ್ಧ, ಮಾದರಿ ಚೆಕ್ ಗಳನ್ನು ಮತ್ತು ವಿಶ್ವಭಾರತಿ ಚಾರ್ಜುಗಳನ್ನು ಕಲೆಕ್ಷನಿಗೆ ಸ್ವೀಕರಿಸಿ ಹಣವನ್ನು ಕೊಡಲಾಗುವುದು. ಬ್ಯಾಂಕಿನ ದೀರ್ಘ ಕಾಲಿನ ಸಾಲದ ಶಾಖೆಯ ಮೂಲಕ ದೀರ್ಘ ಕಾಲಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

Edited, Printed and Published by P. I. Bellippa at 'Kodagu' Press, Mercara, for 'Kodagu' Ltd.

Licence No. 60.
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 6-0-0.

ಸಂಪುಟ ೩೦ | ತಾರೀಖು ೨೮-೪-೧೯೫೦ನೇ ಶುಕ್ರವಾರ | ಸಂಚಿಕೆ ೪೪

THE JUBILEE INSURANCE CO., LTD.

One of the very few in the feild of Insurance that has been declaring BONUS to its policy holders from its very insception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmand Road, Bangalore.

Our Chief Agents:—THE ORIENTAL ENTERPRISES, BANGALORE I.

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೂದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:—ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,
3 41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

ಕೊಡಗಿನಲ್ಲಿ ಹಿಂದಿ.

ಲೇ:—ಶ್ರೀ ಪಾ ಭಗವಾನ್‌ದಾಸ್. ಬಿ. ಎ., ಬಿ. ಟಿ.

ಕೊಡಗಿಗೆ ರಾಷ್ಟ್ರಭಾಷೆಯಾದ ಹಿಂದಿಯು ಬಂದು ಸುಮಾರು ೩೦ ವರ್ಷಗಳಾದರೂ ಭಾರತೀಯರಾದ ಗೃಹಸ್ಥರಾದ ಕ್ರೈಸ್ತನಾಥ ಕಟ್ಟಿಮನಿ ಇಲ್ಲಿಯವರ ಅಭ್ಯಾಸದ ದೆಸೆಯಿಂದ ಪರಭಾಷೆಯಾದ ಇಂಗ್ಲೀಷಿನಲ್ಲಿಯೇ ತಮ್ಮ ಭಾಷಣಗಳನ್ನು ಕೊಡಬೇಕಾಯಿತು. ರಾಷ್ಟ್ರಭಾಷೆಯ ಮಹತ್ವವನ್ನು ಅರಿಯಲು ಇತರರಿಗಿಂತ ಹೆಚ್ಚು ಸಮರ್ಥರಾಗ ಇಲ್ಲಿಯ ಶಾಲೆಜನರ ಮುಂದೆಯೂ ಮಂತ್ರಿವರ್ಯರು ಇಂಗ್ಲೀಷಿನ ಆಶ್ರಯವನ್ನೇ ಬೇಡಿಕೊಂಡರೆಂದರೆ ಅದು ಕೊಡಗಿಗೆ ಲಜ್ಜಾಸ್ಪದವಾದ ವಿಷಯ. ನೆರೆ ಪಟ್ಟಣಗಳಿಂದ ಮೈಸೂರು ಮತ್ತು ಮಂಗಳೂರಿನಲ್ಲಿ ಸಾವಿರಾರು ಜನರು ಹಿರಿಯರು ಕಿರಿಯರೆಂಬ ಭೇದವಿಲ್ಲದೆ ಹಿಂದೀ ಪರೀಕ್ಷೆಗಳಲ್ಲಿ ಕುಳಿತುಕೊಳ್ಳುತ್ತಿರುವರು. ಇಲ್ಲಿ ಮಾತ್ರ ಕೆಲವರು ಉತ್ಸಾಹದಿಂದ ಮುಂದೆ ಬರುತ್ತಿರುವರು. ಶಾಲೆಗಳಲ್ಲಿ ಹಿಂದಿಯ ವ್ಯಾಸಂಗವಂತೂ ಬಹಳ ಶೋಚನೀಯವಾಗಿದೆ.

ಇನ್ನು ಸುಮಾರು ೧೫ ವರ್ಷಗಳಲ್ಲಿ ಹಿಂದೀಯು ಭಾರತದಲ್ಲೆಲ್ಲಾ ಸರಕಾರಿ ಭಾಷೆಯಾಗುವುದಿದ್ದರೂ ಯಾವ ಕಾರಣದಿಂದ ಕೊಡಗಿನ ಜನರಲ್ಲಿ ಇಂಥಾ ಅಸಡ್ಡೆಯು ಬಂದಿದೆಯೋ ತಿಳಿಯದು. ಆದುದರಿಂದ ಜನರ ಭವಿಷ್ಯದ ಹಿತದೃಷ್ಟಿಯಿಂದ ಸರಕಾರ ಹಾಗೂ ಜನತೆಯು ಈ ದಿಕ್ಕಿನಲ್ಲಿ ಕೆಲವೊಂದು ಉಪಾಯಗಳನ್ನು ಕೈಕೊಳ್ಳಬೇಕು. ಸಾಮಾನ್ಯ ಜನರಿಗೆ ಮಾರ್ಗದರ್ಶಕರಾದವರು ವಿದ್ಯಾವಂತರು. ಅದರಲ್ಲೂ ಉದ್ಯೋಗಸ್ಥರ ಮಾತಿಗೆ ಹೆಚ್ಚು ಬೆಲೆ ಇದೆ. ಸರಕಾರಿ ಉದ್ಯೋಗಸ್ಥರು ಅವರಲ್ಲಿ ವಿಶೇಷವಾಗಿ ಉಪಾಧ್ಯಾಯರು ರಾಷ್ಟ್ರಭಾಷೆಯ ಕಡೆ ಹೆಚ್ಚಿನ ಮಹತ್ವ ಕೊಟ್ಟಿದ್ದರೆ ಈ ತರದ ಪರಿಸ್ಥಿತಿಯು ಬರುತ್ತಿರಲಿಲ್ಲ. ಉಪಾಧ್ಯಾಯರನೇಕರು ಶಾಲೆಗಳಲ್ಲಿ ಈ ಭಾಷೆಗೆ [illegible] ತಕ್ಕ ಮರ್ಯಾದೆಯನ್ನು ಕೊಡುತ್ತಿರುವರು. ಹೆಚ್ಚು ತಿಳುವಳಿಕೆಯಿಲ್ಲದ ಮಾತಾಪಿತರಿಗೆ ತಮ್ಮ ಮಕ್ಕಳು ಹಿಂದಿಯನ್ನು ಶ್ರದ್ಧೆಯಿಂದ ಕಲಿಯಬೇಕೆಂಬ ವಿಷಯವನ್ನು ತಿಳಿಸುವವರು ಯಾರು? ಶಾಲೆಯಲ್ಲಿ ಹಿಂದೀ ಇದೆ; ಉಪಾಧ್ಯಾಯರು ನೇಮಿಸಲ್ಪಟ್ಟಿದ್ದಾರೆ; ನಮ್ಮ ಮಕ್ಕಳು ಹೋಗಿದ್ದರೂ ಕಲಿತೇ ಕಲಿಯುವರೆಂದು ತಿಳಿದುಕೊಳ್ಳುವ ಮಾತಾಪಿತರ ಯೋಚನೆ ಸರಿ. ಆದರೆ ಇವರಿಗೆ ಶಾಲೆಯಲ್ಲಿ ಏನು ಗೊತ್ತು! ಕೊಡಗಿನ ಮಾಧ್ಯಮಿಕ ಶಾಲೆಗಳಲ್ಲಿ ಹಿಂದೀಯನ್ನು ಕಲಿಸುವ ಪ್ರಯತ್ನವನ್ನೇನೋ ಮಾಡುತ್ತಿರುವರು. ಆದರೆ ಹಿಂದೀ ಭಾಷೆಯನ್ನು ಸರಿಯಾಗಿ ತಿಳಿದುಕೊಳ್ಳದವರು ಆ ಭಾಷೆಯನ್ನು ಬೋಧಿಸಿದರೆ ಹಾನಿಯೇ ಆಗುವುದು. ಅಂಥವರು ಬೋಧನೆ ಮಾಡುವುದಕ್ಕಿಂತ ಆ ಶಾಲೆಗಳಲ್ಲಿ ಹಿಂದೀ ಇಲ್ಲದಿರುವುದೇ ಮೇಲು. ಭಾಷೆಯನ್ನು ತಪ್ಪು ತಪ್ಪಾಗಿ ಕಲಿತು ಹೈಸ್ಕೂಲಿಗೆ ಬರುವ ವಿದ್ಯಾರ್ಥಿಯನ್ನು ತಿದ್ದಿ ಸರಿದಾರಿಗೆ ತರುವುದು ದೊಡ್ಡ ಸಮಸ್ಯೆಯಾಗಿದೆ. ಅದಕ್ಕಿಂತ ಹಿಂದಿ ಗೊತ್ತಿಲ್ಲದವರಿಗೆ ಕಲಿಸುವುದು ಸುಲಭ. ಮಾಧ್ಯಮಿಕ ಶಾಲೆಯಿಂದ ಬರುವ ಹುಡುಗರು ಹೈಸ್ಕೂಲಿಗೆ ಬಂದು ತುಂಬಾ ತೊಂದರೆಗೆ ಈಡಾಗುತ್ತಿರುವರು. ಆದ್ದರಿಂದ ಅವರ ಇಂದಿನ ಮತ್ತು ಅನಂತರದ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಫಲಿತಾಂಶವು ನಿರಾಶಾಜನಕವಾಗುವುದು.

ಕೊಡಗಿನ ಸರಕಾರವು ಹಿಂದೀ ಉಪಾಧ್ಯಾಯರ ಕಡೆಗೆ ಯಾವ ರಿಯಾಯಿತಿಯನ್ನು ತೋರಿಸಿರುವುದಿಲ್ಲವೆಂದು ಹೇಳಲಿಕ್ಕಾಗುವುದಿಲ್ಲ. ಸರಕಾರವು ಅವರಿಗೆ ಟ್ರೈನಿಂಗ್ ಆಗದಿದ್ದರೂ ಖಾಯಂ ಸ್ಥಾನವನ್ನು ಕೊಡುತ್ತಿದೆ. ಆದರೆ ಈ ನೀತಿಯು ಯೋಗ್ಯವೆಂದು ಹೇಳಲು ಬರುವುದಿಲ್ಲ. ಮದ್ರಾಸು ರಾಜ್ಯದಲ್ಲಿ ಪ್ರಚಾರಕ ತರಬೇತು ಹೊಂದಿದ ಹಿಂದೀ ಉಪಾಧ್ಯಾಯನಿಗಿಂತ ಹಿಂದಿ ಪ್ರಚಾರಕ ಪದವೀಧರನನ್ನು ಮೇಲಿನ ವೇತನ ಕ್ರಮದಲ್ಲಿ ಇಟ್ಟಿದ್ದಾರೆ. ಉಪಾಧ್ಯಾಯನನ್ನು ನೇಮಕ ಮಾಡುವಾಗಲೇ ಅವನು ಒಂದು ವೇಳೆ ಪ್ರಚಾರಕನಾಗಿರದಿದ್ದರೆ, ಕೇವಲ ವಿಶಾರದ ಪದವೀಧರನಾಗಿದ್ದರೆ ಎರಡು ವರ್ಷಗಳ ಅವಧಿಯಲ್ಲಿ ಪ್ರಚಾರಕನಾಗಬೇಕೆಂದು ಆಜ್ಞೆ ಮಾಡುವರು. ಈ ಆಜ್ಞೆಯು ಅನ್ಯಾಯಪೂರ್ಣವಾಗುವುದಿಲ್ಲ. ಏಕೆಂದರೆ ಅಲ್ಲಿ ಹಿಂದಿ ಪಂಡಿತರ ವೇತನದ ಮಟ್ಟವು ಸಾಮಾನ್ಯ ಉಪಾಧ್ಯಾಯರ ಮಟ್ಟಕ್ಕಿಂತ ಮೇಲಿನದಾಗಿದೆ. ಅಲ್ಲಿ ಹಾಗೆ ಉಪಾಧ್ಯಾಯರ ಸಂಬಳವು ಕೊಡಗಿನ ಸರಕಾರಿ ಶಾಲಾ ಉಪಾಧ್ಯಾಯರ ಸಂಬಳಕ್ಕಿಂತ ಕಡಿಮೆಯಾಗಿರುವುದೆಂಬುದೇನೋ ನಿಜ. ಆದರೆ ಅಲ್ಲಿ ಎಸ್. ಎಸ್. ಎಲ್. ಸಿ. ಆಗಿರುವ ಹಿಂದಿಯಲ್ಲಿ 'ಪ್ರಚಾರಕ' ಪದವನ್ನು ಪಡೆದವನನ್ನು ಬಿ. ಟಿ. ಗ್ರೇಡಿನಲ್ಲಿ ಇಟ್ಟಿರುವರು. ಗ್ರೇಡಿನ ದೃಷ್ಟಿಗೆ ಕೊಡಗೂ ಆ ರಾಜ್ಯದ ಅನುಕರಣೆ ಮಾಡಿದರೆ ಉತ್ತಮವಾಗುವುದು. ಇಲ್ಲಿ ಲೋವರ್ ಸೆಕೆಂಡರಿ ಆಗಿ 'ಪ್ರಚಾರಕ' ಪದವಿ ಪಡೆಯುವವನನ್ನು ಸೆಕೆಂಡರಿ ಗ್ರೇಡಿನಲ್ಲಿ ಇಡುವುದು ಉಚಿತ. ಹೈಸ್ಕೂಲುಗಳಲ್ಲಿ ಹಿಂದೀ ಪಂಡಿತರಾಗಿರುವವರು ಕೇವಲ ವಿಶಾರದ ಪದವಿಯನ್ನು ಹೊಂದಿರುವರು. ಅವರು ಶೀಘ್ರದಲ್ಲಿಯೇ 'ಪ್ರಚಾರಕ' ಪದವಿಯನ್ನು ಹೊಂದುವಂತೆ ಪ್ರೇರೇಪಿಸಬೇಕು. ಅಷ್ಟರವರೆಗೆ ಸಾಮಾನ್ಯ ಉಪಾಧ್ಯಾಯರಿಗಿಂತ ಸ್ವಲ್ಪವಾದರೂ ಮೇಲಿನ ಮಟ್ಟದಲ್ಲಿ ಅವರನ್ನು ಇಡಬೇಕು. ಮಾಧ್ಯಮಿಕ ಶಾಲೆಗಳಿಗೆ ಹಿಂದೀ ಉಪಾಧ್ಯಾಯನಾಗಿರುವವನು ಎಂದೂ ವಿಶಾರದ ಪದವಿಗಿಂತ ಕಡಮೆ ಯೋಗ್ಯತೆಯವನಾಗಿರುವುದು ಉಚಿತವಲ್ಲ. ಸದ್ಯಕ್ಕೆ ಕಡಮೆ ಪಕ್ಷ ಪ್ರವೇಶಿಕಾ ಪರೀಕ್ಷೆ ಪಾಸಾದವನನ್ನು ತೆಗೆದುಕೊಂಡರೂ ಎರಡು ವರ್ಷಗಳೊಳಗೆ ಅವನು 'ವಿಶಾರದ'ನಾಗದೆ ಹೋದರೆ ಸ್ಥಾನಚ್ಯುತನಾಗುವನೆಂದು ಆಜ್ಞೆ ಇತ್ತಿರಬೇಕು.

ಪ್ರವೇಶಿಕಾ ಪರೀಕ್ಷೆಗಿಂತ ಕಡಮೆಯಾದ ಹಿಂದೀ ಜ್ಞಾನ ಉಳ್ಳವರನ್ನು ಮಾಧ್ಯಮಿಕ ಶಾಲೆಗಳಿಗೂ ತೆಗೆದುಕೊಳ್ಳುವುದು ಉಚಿತವಲ್ಲ. ಅಂಥವರು ಸಿಗುವವರೆಗೆ ಶಾಲೆಯಲ್ಲಿ ಹಿಂದೀ ಉಪಾಧ್ಯಾಯನು ಇಲ್ಲದಿದ್ದರೂ ಚಿಂತೆಯಿಲ್ಲ. ಈ ಸಂದರ್ಭದಲ್ಲಿ ನನ್ನ ಇನ್ನೊಂದು ಸಲಹೆ ಏನೆಂದರೆ, ಕೊಡಗಿಗೆ ಹೊರಗಿನಿಂದ ಹಿಂದಿ ಉಪಾಧ್ಯಾಯರನ್ನು ತರುವುದಕ್ಕಿಂತ ಇಲ್ಲಿಯವರನ್ನೇ ಅವಶ್ಯಕವಾಗಿ ತರಬೇತು ಮಾಡುವುದು ಯೋಗ್ಯವಾಗಿದೆ. ಆದಕ್ಕಾಗಿ ಮಡಿಕೇರಿಯಲ್ಲಿ ಒಂದು ಪ್ರಶಿಕ್ಷಣ ಕೇಂದ್ರವನ್ನು ತೆರೆಯಲು ನಾವು ಸರಕಾರವನ್ನು ಕೇಳಿಕೊಳ್ಳುತ್ತೇವೆ. ಈ ಕೇಂದ್ರದಲ್ಲಿ ಜೂನಿನಿಂದ ಫೆಬ್ರವರಿಯ ಅವಧಿಯೊಳಗೆ ಏನೂ ಹಿಂದಿ ಗೊತ್ತಿಲ್ಲದವನನ್ನು ರಾಷ್ಟ್ರಭಾಷಾ ಪರೀಕ್ಷೆಯಲ್ಲಿ ಕುಳಿತುಕೊಳ್ಳುವಂತೆ ಮಾಡಲು ಯತ್ನಿಸಬಹುದು ಮತ್ತು ಆಗಸ್ಟಿನಲ್ಲಿ ಆತನು ಪ್ರವೇಶಿಕಾ ಪರೀಕ್ಷೆ ಕೊಡುವನು.

ಮೇಲೆ ಹೇಳಿದ ಸೂಚನೆಗಳಿಗನುಸಾರವಾಗಿ ಕಾರ್ಯಾರಂಭವಾದರೆ ಶಾಲೆಯಲ್ಲಿ ಹಿಂದಿಯ ಪ್ರಚಾರವೂ ಉತ್ತಮಗೊಳ್ಳುವುದು. ಇತರ ಜನರಲ್ಲೂ ಹಿಂದಿಯಲ್ಲಿ ಪ್ರೇಮ ಉಂಟಾಗುವಂತೆ ಮಾಡಿ ತಕ್ಕ ವ್ಯವಸ್ಥೆಯನ್ನು ಮಾಡಲಿಕ್ಕೂ ಕೊಡಗಿನ ಸರಕಾರವು ಯತ್ನಿಸಬೇಕು. ಸರಕಾರಿ ನೌಕರರಿಗೆ ಉಮೇದುವಾರರನ್ನು ಆರಿಸಿಕೊಳ್ಳುವಾಗ ಅಥವಾ ಇದ್ದ ಸ್ಥಾನಕ್ಕಿಂತ ಮೇಲಿನ ಸ್ಥಾನವನ್ನು ಕೊಡುವಾಗ ಹಿಂದಿ ಕಲಿತವರಿಗೆ ಹೆಚ್ಚು ಮನ್ನಣೆ ಕೊಡುವ ಪದ್ಧತಿಯನ್ನು ಪ್ರಾರಂಭಿಸಿದರೆ ಅಂದರೆ ಹಿಂದೀ ಯೋಗ್ಯತಾ ಪತ್ರವನ್ನು ಸಹಾಯಕ ಯೋಗ್ಯತಾ ಪತ್ರವೆಂದು ಎಣಿಸಿದರೆ ಉದ್ಯೋಗಾಪೇಕ್ಷಿಗಳೆಲ್ಲರೂ ಹಿಂದಿಯನ್ನು ತಾವೇ ಕಲಿಯುವರು. ಕೊಡಗಿನಲ್ಲಿ ಯಾವ ಶಾಲೆಗಳಲ್ಲಿ ಹಿಂದಿಯು ಐಚ್ಛಿಕ ವಿಷಯವಾಗಿರುವುದೋ ಅಂಥಾ ಶಾಲೆಗಳನ್ನು ಹಿಂದೀ ಪ್ರಚಾರ ಕೇಂದ್ರಗಳನ್ನಾಗಿ ಮಾಡಿಕೊಂಡು ಶಾಲಾ ಕಾರ್ಯವಿಲ್ಲದ ಸಮಯಗಳಲ್ಲಿ ಸಾರ್ವಜನಿಕ ಹಿಂದೀ ವರ್ಗಗಳನ್ನು ನಡೆಸುವ ಏರ್ಪಾಡು ಮಾಡಬೇಕು. ಇದಕ್ಕೆ ಸ್ಥಾನೀಯ ಹಿಂದೀ ಪ್ರಚಾರಕ ಅಥವಾ ಉಪಾಧ್ಯಾಯ

ಸಹಾಯವನ್ನು ತೆಗೆದುಕೊಳ್ಳಬೇಕು. ಆತನಿಗೆ ಹೆಚ್ಚಿನ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಕೊಟ್ಟು ಕಲಿಯುವವರಿಗೆ ಫೀಜು ಇಲ್ಲದೆ ಕಲಿಸಿಕೊಡುವ ಏರ್ಪಾಟು ಇರಬೇಕು.

ಜನರಲ್ಲಿ ಹಿಂದಿ ಕಲಿಯುವ ಅಭಿರುಚಿಯನ್ನು ಉಂಟು ಮಾಡುವುದು, ಸಾರ್ವಜನಿಕ ಹಿಂದೀ ತರಗತಿಗಳನ್ನು ತೆರೆಯುವುದು ಮೊದಲಾದ ಕೆಲಸಗಳನ್ನು ನಡೆಸಲು ಒಬ್ಬ ಅಧಿಕಾರಿಯ ಅಗತ್ಯವಿದೆ. ಆತನು ಎಸ್ ಎಸ್ ಎಲ್ ಸಿ ಅಥವಾ ಅದಕ್ಕಿಂತ ಹೆಚ್ಚಿನ ಸಾಮಾನ್ಯ ಶಿಕ್ಷಣ ಪಡೆದಿದ್ದು ಹಿಂದಿಯಲ್ಲಿ ಪ್ರಚಾರಕ ಪದವಿಯನ್ನು ಪಡೆದಿರಬೇಕು. ಆತನ ಸ್ಥಾನಮಾನಗಳಷ್ಟೇ ಇರಬೇಕು. ಉನ್ನತ ಸಮಸ್ಥಾನಕ್ಕೆ ಏರಿದ ಹಿಂದಿಯಲ್ಲಿ ಸಂಪೂರ್ಣ ಪಾಂಡಿತ್ಯವನ್ನು ಪಡೆದ ಶಿಕ್ಷಣದ ಶಾಸ್ತ್ರದಲ್ಲಿ ಬೇಕಷ್ಟು ಅನುಭವವುಳ್ಳ ಈ ಅಧಿಕಾರಿಯನ್ನು ಡಿ. ಇ. ಓ. ಗಿಂತ ಕಡಿಮೆ ದರ್ಜೆಯಲ್ಲಿ ಇರಿಸುವುದು ಉಚಿತವಲ್ಲ. ಈ ಅಧಿಕಾರಿಯು ಮೇಲೆ ತಿಳಿಸಿದ ಕಾರ್ಯಗಳಲ್ಲದೆ ಶಾಲೆಗಳಲ್ಲಿ ನಡೆಯುವ ಹಿಂದೀ ಮತ್ತು ಉರ್ದು ಪಾಠಗಳ ನಿರೀಕ್ಷಣೆಯನ್ನು ಮಾಡಬೇಕು. ವರ್ಷಕ್ಕೊಮ್ಮೆ ಕೊಡಗಿನ ಎಲ್ಲಾ ಹಿಂದೀ ಪ್ರಚಾರಕರು, ಹಿಂದೀ ಪಂಡಿತರು, ಮತ್ತು ಉರ್ದು ಉಪಾಧ್ಯಾಯರು ಒಂದೆಡೆ ಸಭೆ ಸೇರಿ ವಿಚಾರ ವಿನಿಮಯಗಳನ್ನು ಮಾಡಿಕೊಳ್ಳುವಂತೆ ಪ್ರೇರಣೆಯನ್ನು ನೀಡಬೇಕು.

ಇಷ್ಟರವರೆಗೆ ಬರೆದ ವಿಷಯಗಳ ಕಡೆಗೆ ಸರಕಾರವೂ ಜನತೆಯೂ ಮನಸ್ಸು ಕೊಟ್ಟರೆ ಕೊಡಗಿನವರು ಶೀಘ್ರದಲ್ಲಿಯೇ ಹಿಂದಿಯಲ್ಲಿ ಯಾರಿಗೂ ಹಿಂದೆ ಬೀಳದೆ, ರಾಷ್ಟ್ರದ ಮುನ್ನಡೆಗೆ ಸಹಾಯಕರಾಗುವುದರಲ್ಲಿ ಏನೂ ಸಂಶಯವಿಲ್ಲ.

॥ ವಿಶ್ವಾಸರ್ಹತೆ ॥

ನಾವು ಇಂದು ವಶೀಲಿ, ಲಂಚ, ಲಾಭಬಡುಕತನ, ಕಳ್ಳಪೇಟೆ, ಅಪ್ರಾಮಾಣಿಕತೆ ಮತ್ತು ಇತರ ಸರ್ವ ವಿಧದ ಭ್ರಷ್ಟಾಚಾರಗಳಿಂದ ತುಂಬಿದ ಜಗತ್ತಿನಲ್ಲಿ ವಾಸಿಸುತ್ತಿದ್ದೇವೆಂದು ತೋರುತ್ತದೆ. ವ್ಯಾಪಾರಿಗಳು ಲಾಭಬಡುಕತನ ಮತ್ತು ಸಾಮಾನುಗಳಲ್ಲಿ ಬೆರಕೆ ಮಾಡುವುದರಲ್ಲಿ ಮಗ್ನರಾಗಿದ್ದಾರೆಂದು ಜನರು ದೂರುತ್ತಾರೆ. ಸರಕಾರಿ ಖಾತೆಗಳಲ್ಲಿ ಲಂಚಗುಳಿತನವನ್ನು ವ್ಯಾಪಾರಿಗಳು ದೂರುತ್ತಾರೆ; ಮತ್ತು ಮಂತ್ರಿಗಳೂ ಉಚ್ಚಾಧಿಕಾರಿಗಳೂ ಜನರನ್ನೇ ದೂರುತ್ತಾರೆ—ಏಕೆಂದರೆ ಜನರು ಚಿಕ್ಕಪುಟ್ಟ ಸರಕಾರಿ ಅಧಿಕಾರಿಗಳಿಗೂ ನೌಕರರಿಗೂ ನಾನಾ ವಿಧದ ಆಮಿಷವನ್ನು ತೋರಿಸಿ ಅವರಿಂದ ತಮ್ಮ ಕೆಲಸಗಳನ್ನು ನ್ಯಾಯವಿರುದ್ಧವಾಗಿ ಇಲ್ಲವೆ ಉಳಿದವರಿಗಿಂತ ಮುಂಚಿತವಾಗಿ ಮಾಡಿಸಿಕೊಳ್ಳುತ್ತಾರೆ. ಈ ಜನರೂ ರಾಷ್ಟ್ರ ನೌಕರಿಯ ಒತ್ತಾಯದಿಂದ ಸುಳ್ಳು ಲೆಕ್ಕ ಬರೆಸಿ, ಖೊಟ್ಟಿ ಕಾಗದಪತ್ರಗಳನ್ನು ತೋರಿಸಿ ಸರಕಾರಕ್ಕೆ ಸಿಗಬೇಕಾದ ಆದಾಯ-ಕರ, ಮಾರಾಟಕರಗಳನ್ನು ಹೇಗೆ ತಪ್ಪಿಸುತ್ತಾರೆಂಬುದನ್ನು ಉದಾಹರಣೆಗಳನ್ನು ಕೊಡಲಾಗುತ್ತದೆ. ಈಗಿನ ಸ್ಥಿತಿಗತಿಗಳಲ್ಲಿ ಪ್ರಾಮಾಣಿಕ ರೀತಿಯಿಂದ ತಮ್ಮ ಕರ್ತವ್ಯಗಳನ್ನು ಪೂರೈಸುವುದು ವ್ಯಾಪಾರ ವ್ಯವಹಾರಗಳನ್ನು ನಡೆಸುವುದೂ ಅಸಾಧ್ಯವೆಂದು ಕಂಡುಕೊಂಡು ನೌಕರರಿಗೆ ಅಥವಾ ವ್ಯಾಪಾರಿಗಳಿಗೆ ಶರಣು ಹೋಗುವ ಜನರನ್ನೂ ತೋರಿಸಬಹುದಾಗಿದೆ.

ಈ ದುರ್ವ್ಯವಹಾರಗಳನ್ನು ನಿವಾರಿಸಿ ತಪ್ಪಿಗಾರರಿಗೆ ಉಗ್ರವಾದ ದಂಡನೆಯನ್ನು ವಿಧಿಸಬೇಕೆಂಬುದಾಗಿ ಎಲ್ಲ ಕಡೆಯಿಂದಲೂ ಬರುವ ಸೂಚನೆ. ಅವರಿಗೆ ಬಹಿರಂಗ ಛೀಮಾರಿ ಶಿಕ್ಷೆ ಮತ್ತು ಮರಣದಂಡನೆ ಕೂಡ ಕೊಡಬೇಕೆಂಬ ಬೇಡಿಕೆ ಬಂದದ್ದುಂಟು. ಗಸ್ತುಚಾರರ ಮತ್ತು ಅವರ ಮೇಲಿನ ಗುಪ್ತಚಾರರ ಜಾಲವನ್ನೇ ನಿರ್ಮಿಸಿ ಅಪರಾಧಿ ವ್ಯಕ್ತಿಯವರಿಗಾಗಿ ಬೋನುಗಳನ್ನಿಟ್ಟು ಅವರನ್ನು ಹಿಡಿಯಬೇಕೆಂಬ ಸೂಚನೆಗಳೂ ಬಂದಿವೆ.

ಈ ವಿಷಯದಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ಜನತೆಯೂ ಒಮ್ಮತವುಳ್ಳವರು ಎಂದು ತೋರುವುದು. ಕೆಲವು ಪಕ್ಷಗಳಂತೂ ತಾವು ಅಧಿಕಾರದಲ್ಲಿದ್ದರೆ ಎಲ್ಲ ಭ್ರಷ್ಟಾಚಾರಗಳನ್ನೂ ಕಾಪಲೀ ಸದೆಬಡಿದು ಬಿಡುತ್ತಿದ್ದೆವೆಂದು ಹೇಳಿಕೊಳ್ಳುತ್ತಿವೆ. ಕಾಂಗ್ರೆಸ್ಸಿಗರಿಗೆ ಕಾಂಗ್ರೆಸ್ ಮಂತ್ರಿಮಂಡಳಗಳಿಗೆ ಈ ಪರಿಸ್ಥಿತಿಯನ್ನು ಕೊನೆಗಾಣಿಸುವ ಸಾಮರ್ಥ್ಯವೂ ಇಲ್ಲ, ಇಚ್ಛೆಯೂ ಇಲ್ಲವೆಂದು ಆರೋಪಿಸಲಾಗಿದೆ. ಈ ಪ್ರಕಾರ ಅವುಗಳೊಳಗೆ ಸ್ಪರ್ಧೆ ಯಾವುದು ಬೇಕೆಂಬ ಬಗ್ಗೆ ಭಿನ್ನಾಭಿಪ್ರಾಯವಿರದೆ ಅದನ್ನು ಶೀಘ್ರವಾಗಿ ನಿವಾರಿಸಬೇಕೆಂಬ ಮಟ್ಟಿಗೆ ಮಾತ್ರ ಇದೆ.

ಈ ಆರೋಪಗಳಿಗೆ ಕಾಂಗ್ರೆಸ್ಸು ತನಗೆ ತಿಳಿದ ಉತ್ತರ ಕೊಡಬಹುದು. ನಾನಿಲ್ಲಿ ಕೇವಲ ಭ್ರಷ್ಟಾಚಾರಗಳನ್ನು ನಿವಾರಿಸುವ ಉಪಾಯಗಳನ್ನಷ್ಟೇ ವಿವೇಚಿಸುತ್ತೇನೆ.

ಮೊಟ್ಟ ಮೊದಲು, ಭ್ರಷ್ಟಾಚಾರದ ರೋಗವೂ ಸಾರ್ವಜನಿಕ ನೀತಿ ನಡವಳಿಕೆಗಳ ಬಗ್ಗೆ ಉಪೇಕ್ಷಾ ಭಾವವೂ ಸಮಾಜದ ಯಾವುದೊಂದು ವಿಶಿಷ್ಟ ವರ್ಗಕ್ಕಷ್ಟೇ ಮಿತವಾಗಿಲ್ಲವೆಂದು ನಾವು ಮನಗಾಣಬೇಕಾಗಿದೆ. ಕೇವಲ ಸರಕಾರಿ ನೌಕರರ ಅಪ್ರಾಮಾಣಿಕತೆ ಅಥವಾ ವ್ಯಾಪಾರಿಗಳ ಲಾಭಬಡುಕತನ ಇಲ್ಲವೆ ನಿಯಂತ್ರಣ ನಿಯಮಗಳೇ ಭ್ರಷ್ಟಾಚಾರಗಳಿಗೆ ಕಾರಣವೆನ್ನುವುದು ಪೂರ್ಣ ಸತ್ಯವಲ್ಲ. ಈ ದುರವಸ್ಥೆಗೆ ಆ ವರ್ಗಗಳಷ್ಟೇ ಜನಸಾಮಾನ್ಯವೂ ಕಾರಣವಾಗಿದೆ. ಕಾಂಗ್ರೆಸ್ಸಿಗರು, ಸರಕಾರಿ ನೌಕರರು, ವ್ಯಾಪಾರಿಗಳು ಮತ್ತು ಅವರ ವಿರೋಧಿಗಳು, ವಕೀಲರು ಮತ್ತು ಅವರ ಪಕ್ಷಕಾರರು ಸಾಮಾನ್ಯ ಜನರಿಗಿಂತ ಭಿನ್ನವಾದ ಪ್ರತ್ಯೇಕ ವರ್ಗವೇನೂ ಅಲ್ಲ. ಅವರು ಪ್ರತಿನಿಧಿಸುವ ಸದ್ಗುಣ ದುರ್ಗುಣಗಳು ಎಲ್ಲರಿಗೂ ಸೇರತಕ್ಕಂಥವು. ಒಂದೇ ಕುಟುಂಬ ಮತ್ತು ಬಳಗದಲ್ಲಿ ಕಾಂಗ್ರೆಸ್ಸಿಗನೂ ಸಮಾಜವಾದಿಯೂ, ಕಮ್ಯೂನಿಸ್ಟನೂ, ವ್ಯಾಪಾರಿಯೂ, ಸರಕಾರಿ ನೌಕರನೂ, ರಚನಾತ್ಮಕ ಕಾರ್ಯಕರ್ತನೂ ಮತ್ತೆ ಕೇವಲ ಸಾಮಾನ್ಯ ಮನುಷ್ಯನೂ ಇರುವ ಸಂಭವವಿದೆ. ಆದ್ದರಿಂದ ನಮ್ಮ ಸಾರ್ವಜನಿಕ ಮತ್ತು ವೈಯಕ್ತಿಕ ಜೀವನಗಳಿಗೆ ಅಂಟಿಕೊಂಡಿರುವ ಕಿಲ್ಬಿಷಗಳ ಹೊಣೆ ಇಡೀ ಸಮಾಜಕ್ಕಿದೆ; ಯಾವುದೊಂದು ವಿಶಿಷ್ಟ ವರ್ಗಕ್ಕಷ್ಟೇ ಅದನ್ನು ಆರೋಪಿಸುವುದು ಸರಿಯಲ್ಲ. ಸಾರ್ವಜನಿಕ ಜೀವನದ ಪಾರಿಶುದ್ಧ್ಯ ಪ್ರಮಾಣವು ಜನಸಾಮಾನ್ಯದ ಚಾರಿತ್ರ್ಯ ಮತ್ತು ನೀತಿನಿಷ್ಠೆಯ ಮಟ್ಟವನ್ನೇ ಅವಲಂಬಿಸಿರುವುದು.

ಆಧುನಿಕ ವಾಣಿಜ್ಯ ಮತ್ತು ಸಾರ್ವಜನಿಕ ಆಡಳಿತೆಯೆಂದರೆ ಬಹಳ ವಿಶಾಲವೂ ಜಟಿಲವೂ ಆದ ವಿಷಯ; ಅವುಗಳಿಗೆ ಯೋಗ್ಯ ಲೆಕ್ಕಪತ್ರದ ಪದ್ಧತಿಯೂ ಮೇಲ್ವಿಚಾರಣೆ ಪರಿಶೋಧನೆಗಳೂ ಅವಶ್ಯ. ತನ್ನ ಸ್ವಂತ ಹಣವನ್ನು ತಾನೇ ನೋಡಿಕೊಳ್ಳುವವನಿಗೂ ಇದು ಅಗತ್ಯವಾಗಿರುವುದರಿಂದ ಅದರಲ್ಲಿ ಹೊರಗಿನವರ ಅಧಿಕಾರಕ್ಕೆ ಒಳಗಾಗುವ ಪ್ರಶ್ನೆ ಇಲ್ಲ. ಸಾರ್ವಜನಿಕ ಆಡಳಿತೆಯಲ್ಲಿ ಪರೀಕ್ಷೆಗಳು, ಲೆಕ್ಕ ಪರಿಶೋಧನೆಗಳು, ತಪಾಸಣೆಗಳೇ ಮೊದಲಾದವು ಇನ್ನಷ್ಟು ಆವಶ್ಯವಾಗಿವೆ. ಆದರೆ ಅವುಗಳಿಂದ ಆಗಬಹುದಾದ ಪ್ರಯೋಜನಕ್ಕೂ ಮಿತಿಯುಂಟು. ಅವುಗಳ ಮುಖ್ಯ ಉದ್ದೇಶವು ಅಪ್ರಾಮಾಣಿಕತೆಯುಂಟಾಗುವ ಪ್ರಕ್ರಿಯೆಯಿಂದ ಕಾರ್ಯವನ್ನು ಉಪಕ್ರಮಿಸುವುದಲ್ಲ; ಹಾಗಿರಬಾರದು. ಅಜ್ಞಾನದಿಂದಾಗಲಿ ಪ್ರಮಾದದಿಂದಾಗಲಿ ಆಗಬಹುದಾದ ತಪ್ಪುಗಳನ್ನು ಕಂಡುಹಿಡಿದು ತಪ್ಪಿತಸ್ಥರನ್ನು ಸಾಮೂದಕ್ರಮಕ್ಕೆ ಹಚ್ಚಿ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದೇ ಪ್ರಥಮ ಉದ್ದೇಶವಾಗಿರಬೇಕು. ಆದರೆ ಪ್ರಾಮಾಣಿಕತೆಗೆ ಪರೀಕ್ಷಾ ಪ್ರಮಾಣಗಳ ಕೊರೆಯುವ ಮಟ್ಟಿಗೆ ಎಲ್ಲ ಕಾರ್ಯಗಳೂ ಅಪ್ರಾಮಾಣಿಕವೆಂದೇ ಗ್ರಹಿಸಬೇಕೆಂಬ ನಂಬಿಕೆಯಿಂದ ನಾವು ಕಾರ್ಯಾರಂಭ ಮಾಡುತ್ತೇವೆ. ಆದ್ದರಿಂದ ನಾವು ಒಬ್ಬರೊಬ್ಬರೊಡನೆ ಮಾಡುವ ವ್ಯವಹಾರದಲ್ಲಿ ಎಲ್ಲ ಬಗೆಯ ಜಾಗರೂಕತೆಗಳನ್ನೂ ವಹಿಸುತ್ತೇವೆ. ಪ್ರತಿಯೊಬ್ಬನ ಮೇಲೂ ಗರಿಷ್ಠ ಮಟ್ಟಿಗೆ ಮೇಲ್ವಿಚಾರಕನ ಕಣ್ಣಿಟ್ಟಿರಬೇಕು, ಮತ್ತೆ ಆ ಮೇಲ್ವಿಚಾರಕನ ಮೇಲೂ ಬೇರೊಬ್ಬನ ದೃಷ್ಟಿಯಿರತಕ್ಕದ್ದು. ಪ್ರತಿಯೊಂದು ವಸ್ತುವೂ ಬೀಗಹಾಕಿರಬೇಕು ಮತ್ತು ಅದಕ್ಕೆ ಕಾವಲು ಬೇರೆ ಬೇಕು; ಮತ್ತು ಪ್ರಾಮಾಣಿಕವಾಗಿಯೂ ಕ್ಷಮತಾಪೂರ್ವಕವಾಗಿಯೂ ಕ್ರಿಯೆಯೊಂದು ಕಾರ್ಯವೂ ಸಾಗುವಂತೆ ದಂಡಭಯವೂ ಇರತಕ್ಕದ್ದು—ಎಂದು ನಾವು ತಿಳಿಯುತ್ತೇವೆ.

ಆದರೆ ಮನುಷ್ಯ ಸ್ವಭಾವದ ಬಗೆಗೆ ಇಂಥ ಅಭಿಪ್ರಾಯವಿಡುವುದು ಭಯಂಕರವೆಂದು ನಮ್ಮ ಅಂತರಂಗಕ್ಕೆ ಅನಿಸುವುದು; ಆದರೆ ದುರದೃಷ್ಟದಿಂದ ನಮ್ಮ ಎಲ್ಲ ಸಾಂಗೋಪಾಂಗ ಸಂಘಟನೆಗಳಲ್ಲಿಯೂ ಈ ಭಾವನೆಯೇ ನೆಲೆಗೊಂಡಿದೆ. ವ್ಯವಹಾರನೀತಿಯನ್ನು ವಿವರಿಸುವ ಒಂದು ಸಂಸ್ಕೃತ ಗ್ರಂಥವು ಹೀಗೆ ವಿಧಿಸುತ್ತದೆ. 'ಹಣದ ಪಾವತಿ ಅಥವಾ ಭೂಮಿಯ ಹಸ್ತಾಂತರಕ್ಕೆ ಸಂಬಂಧಿಸಿದ ವ್ಯವಹಾರವು ತಂದೆ ಮಕ್ಕಳು ಅಥವಾ ಆಪ್ತಮಿತ್ರರೊಳಗಿನದಾಗಿದ್ದರೂ ಅದನ್ನು ಸ್ಪಷ್ಟವಾಗಿ ಬರೆದು ಅದಕ್ಕೆ ಒಬ್ಬನ ಸಾಕ್ಷಿ ಹಾಕಿಸಬೇಕು.' ಬರಹಕ್ಕಿಳಿಸಬೇಕೆಂಬುದು ನೆನಪಿಗೆ ಸಹಾಯಕವಾಗುವುದೆಂಬ ದೃಷ್ಟಿಯಿಂದ ಯುಕ್ತವಾಗಿದೆ; ಆದರೆ ಸಾಕ್ಷಿ ಬೇಕೆಂಬುದಕ್ಕೆ ತಕ್ಕ ಸಹಾಯಕ ದೃಷ್ಟಿಯಲ್ಲಿ ಮಗನ ಅಥವಾ ಗೆಳೆಯನ ಪ್ರಾಮಾಣಿಕತೆಯನ್ನು ನಂಬುವಂತಿಲ್ಲ ಎಂದೇ ಅರ್ಥ. ಅಲ್ಪ ಲಾಭ ನಷ್ಟದ ಸಂಭವವಿದ್ದಲ್ಲಿ ಯೋಗ್ಯ ಮುಂಜಾಗ್ರತೆ ವಹಿಸದಿದ್ದರೆ ಮಕ್ಕಳು ಮತ್ತು ಮಿತ್ರರು ಕೂಡ ಮೋಸಮಾಡಬಹುದು! ಇದು ಅವಿಶ್ವಾಸದ ಪರಾಕಾಷ್ಠೆಯೇ ಸೈ. ಸ್ವಂತ ಮಗ ಮತ್ತು ಆಪ್ತಮಿತ್ರರೊಡನೆ ಕೂಡ ವ್ಯವಹಾರವೆಲ್ಲ ಮುಂಜಾಗ್ರತೆ ವಹಿಸಬೇಕಾಗಿದ್ದ ಪಕ್ಷದಲ್ಲಿ ಜಗತ್ತಿನಲ್ಲಿ ವಿಶ್ವಾಸಾರ್ಹರಾದವರು ಯಾರೂ ಇಲ್ಲವೆಂದೇ ಅರ್ಥವಾಗುವುದಿಲ್ಲವೆ?

ನಮ್ಮ ಲೌಕಿಕ ವ್ಯವಹಾರವೆಲ್ಲ ಇಂಥ ಅವಿಶ್ವಾಸದ ತಳಹದಿಯ ಮೇಲೆಯೇ ಕಟ್ಟಲ್ಪಟ್ಟಿದೆ. ಅಪನಂಬಿಕೆ ಮತ್ತು ತತ್ಪರಿಣಾಮವಾದ ಮುಂಜಾಗ್ರತೆಯ ಕ್ರಮಗಳು—ಮತ್ತು ಅದಕ್ಕೆ ಕಟ್ಟುನಿಟ್ಟಾಗಿ ದಂಡಭಯವೇ ಮುಖ್ಯವಾಗಿರುವ ಸಂಘಟನೆ—ಇವು ಹುಟ್ಟಾಗಿಬಂದ ಆ ಪದ್ಧತಿ ವ್ಯವಹಾರವಿವೇಕವುಳ್ಳದ್ದೆಂದು ಭಾವಿಸಲಾಗುತ್ತದೆ. ಸಂಧಾನಚಾತುರ್ಯ, ರಾಜಕೀಯ ವಿವೇಕ, ಜಾಗರೂಕ ವ್ಯವಹಾರದಕ್ಷತೆ ಇವೆಲ್ಲವೂ ಮನಸ್ಸಿನ ಪ್ರಾಮಾಣಿಕತೆಯ ಕ್ಷೀಣ ಅಪನಂಬಿಕೆಯ ಬೇರೆ ಬೇರೆ ಹೆಸರುಗಳು. ಔರಂಗಜೇಬನು ಅವಿಶ್ವಾಸ ನೀತಿಯನ್ನು ಅನುಸರಿಸಿದನೆಂದು ಅವನನ್ನು ಇತಿಹಾಸ ಟೀಕಿಸುತ್ತದೆ; ಆದರೆ ಇಡೀ ಜಗತ್ತು ವ್ಯವಹಾರದಲ್ಲಿ ಅದೇ ದಾರಿಯನ್ನು ಅವಲಂಬಿಸಿದೆ.

ಆದರೆ ಇಷ್ಟೆಲ್ಲ ಮುಂಜಾಗ್ರತೆಗಳೂ ಭ್ರಷ್ಟಾಚಾರವನ್ನು ತಡೆಯಲಿಲ್ಲ ಮಾತ್ರವಲ್ಲ, ಅದನ್ನು ಕಡಿಮೆ ಮಾಡಲೂ ಇಲ್ಲ. ತದ್ವಿರುದ್ಧವಾಗಿ ಅವು ಮತ್ತಷ್ಟು ಭ್ರಷ್ಟಾಚಾರಕ್ಕೆ ಕಾರಣವಾಗಿದೆ. ಏನಿಲ್ಲೆಂದರೂ ಅದರಿಂದ ಕೆಲಸ ಹೆಚ್ಚಾಗುತ್ತದೆ, ಜಡಿಲತನ, ವಿಳಂಬ, ವಿಧಿಪ್ರದರ್ಶಕ ಮೊದಲಾದವುಗಳು ಹೆಚ್ಚುತ್ತವೆ. ಇದನ್ನೇ 'ರೆಡ್ ಟೇಪಿಜಂ' ಅಥವಾ 'ಫೋರ್ ಕಾಪಿ' ಎಂಬ ಅರ್ಥದ ಸಂದರ್ಭದಿಂದ ಕರೆಯುವರು. ಕ್ಷಿಪ್ರತೆಯಾಗಲಿ, ಉತ್ಸಾಹವಾಗಲಿ, ಕೈಯಾರೆ ಕೆಲಸದಲ್ಲಿ ಪ್ರೀತಿಯಾಗಲಿ ಇಲ್ಲದಾಗಿದೆ. ಚಿಕ್ಕ ಕೆಲಸ ಮಾಡಲು ಕಕ್ಕಸದಿಂದ ಪ್ರಯತ್ನಿಸು

ಅದಲು ಬೇಕೋ ಬೇಡವೋ ಎಂಬಂತೆ ಕೆಲಸ ಮಾಡುತ್ತಾರೆ. ಬವಲಿಗೆ ತಮ್ಮ ಮೇಲಿರುವ ವಿಚಾರಣೆಯ ಪದ್ಧತಿಯು ಹಿತದಿಂದ ನಿಭಾಯಿಸಿಕೊಂಡು, ಅದನ್ನು ವಿಫಲಗೊಳಿಸುವುದರಲ್ಲೇ ಅವರ ಬುದ್ಧಿಶಕ್ತಿಯು ವ್ಯಯವಾಗುತ್ತದೆ. ಶಿಕ್ಷೆಯು ಯಂತ್ರವತ್ತಾಗಿಬಿಡುತ್ತದೆ; ಪತ್ತೆ ಯೋಗ್ಯತೆ ಸದ್ವಿನಿಯೋಗವಾಗದೆ ಒಂದು ಕಡೆ ಎಂಜಿನೆಯನ್ನು ಕಂಡುಹಿಡಿಯುವ ಉಪಾಯಗಳನ್ನು ಯೋಜಿಸುವುದರಲ್ಲಿಯೂ ಇನ್ನೊಂದೆಡೆ ಅವುಗಳನ್ನು ವ್ಯರ್ಥಗೊಳಿಸುವ ಉಪಾಯಗಳನ್ನು ಹುಡುಕುವುದರಲ್ಲಿಯೂ ನಡೆಯುತ್ತದೆ. ಮೊದಲನೆಯದು ಎರಡನೆಯದನ್ನು ಅತಿಕ್ರಮಿಸಲು ಎಂದೂ ಸಮರ್ಥವಾಗಿಲ್ಲ; ಆದ್ದರಿಂದ ಭ್ರಷ್ಟಾಚಾರ ಯಥಾಸಾಂಗವಾಗಿ ಬೆಳೆಯುತ್ತಲೇ ಇದೆ.

ಆದ್ದರಿಂದ ಭ್ರಷ್ಟಾಚಾರನಿವಾರಣೆಗೂ ಪ್ರಾಮಾಣಿಕ ಜೀವನದ ಉತ್ಕರ್ಷಕ್ಕೂ ಎಷ್ಟೇ ಕಠೋರ ಶಿಕ್ಷೆಯಾಗಲಿ, ಎಷ್ಟೇ ಸೂಕ್ಷ್ಮವಾದ ಗುಪ್ತದೃಷ್ಟಿಯಾಗಲಿ ಸರಿಯಾದ ಉಪಾಯಗಳಲ್ಲೆಂದು ನನಗನಿಸುತ್ತದೆ. ಪ್ರಾಮಾಣಿಕ ಮನುಷ್ಯನನ್ನು ನಂಬದಿರುವುದಕ್ಕಿಂತಲೂ ದರೋಡೆಗಾರನನ್ನು ನಂಬುವುದೇ ಮೇಲು; ಅದು ಎಷ್ಟೋ ಹೆಚ್ಚು ಫಲಕಾರಿಯಾದೀತು. ತನ್ನನ್ನು ನಂಬದ ಸಮಾಜದಲ್ಲಿ ಪ್ರಾಮಾಣಿಕ ಮನುಷ್ಯನ ಗೌರವ ಹಾರಿಹೋಗುತ್ತದೆ. ಕೀಳ್ತನದಲ್ಲಿ ಬೆಳೆದ ವಿಲಾಸನ್ನು ಸಮುದ್ರದಲ್ಲಿ ತಂದು ಬಿಟ್ಟರೆ ಅವನಿಗೆ ಆಗುವಂತೆ ಅವನಿಗೆ ಅಲ್ಲಿ ಹೇಗೆಯೋ ಹೇಗೋ ಅನಿಸುತ್ತದೆ. ಬವಲಿಗೆ, ದರೋಡೆಗಾರನಲ್ಲಿ ಅವನ ಸುಚಾರಿತ್ರ್ಯವನ್ನು ಲೆಕ್ಕಿಸದೆ ನಂಬಿಕೆಯಿಟ್ಟರೆ ಅವನಲ್ಲಿ ಹುದುಗಿರುವ ಸಾತ್ವಿಕತೆಯು ಜಾಗೃತವಾದೀತು. ಅದು ಅವನ ಗೌರವದ ಪ್ರಶ್ನೆಯಾಗಿಬಿಡುವುದರಿಂದ ತನ್ನಲ್ಲಿಟ್ಟ ನಂಬಿಕೆಗೆ ತಕ್ಕಂತೆ ವರ್ತಿಸಲು ಅವನು ಪ್ರಯತ್ನಿಸುವನು.

ಸರ್ವೋದಯ ಕಾರ್ಯಕರ್ತರು ಇತರರೊಡನೆ ವ್ಯವಹಾರದಲ್ಲಿ ವಿಶ್ವಾಸವಿಟ್ಟು ವರ್ತಿಸಲಿ; ಆಗೊಮ್ಮೆ ಈಗೊಮ್ಮೆ ಅವರು ವಂಚಿಸಲ್ಪಟ್ಟರೂ ಚಿಂತೆಯಿಲ್ಲ. ಬಿಟ್ಟು ಹಾಕುವುದು, ದಂಡಿಸುವುದು ಮೊದಲಾದ ಸಾಧಾರಣ ಉಪಾಯಗಳನ್ನು ಅಧಿಕಾರಿಗಳಿಗೂ ನ್ಯಾಯಾಸ್ಥಾನಗಳಿಗೂ ಶಾಸನ ಸಭೆಗಳಿಗೂ ಬಿಟ್ಟುಬಿಡೋಣ. ಗುಪ್ತಪೋಲೀಸ ಸ್ವಯಂಸೇವಕನಂತೆ ವರ್ತಿಸುವುದು ಸೇವಕನ ಕೆಲಸವಲ್ಲ. ಜನರಲ್ಲಿರುವ ಉದಾತ್ತ ಭಾವನೆಗಳನ್ನೂ ಸಾತ್ವಿಕತೆಯನ್ನೂ ಜಾಗೃತಗೊಳಿಸುವುದು ಅವನ ಕರ್ತವ್ಯವೇ ಹೊರತು ತಪ್ಪುಗಾರರಿಗೆ ಶಿಕ್ಷೆಯ ದಂಡನೆಯನ್ನೂ ಅದಕ್ಕಾಗಿ ಕಠೋರ ಕಾಯಿದೆಗಳನ್ನೂ ಬೇಡುವುದಲ್ಲ.

ವರ್ಧಾ ಕಿ. ಘ. ಮಶ್ರೂವಾಲಾ.
೧-೪-೫೨.

ರಷ್ಯಾದಲ್ಲಿ ಯುದ್ಧದ ಮಾತೆತ್ತುವುದು ಮಹಾಪರಾಧ.

ಬೊಂಬಾಯಿಯಲ್ಲಿ ಡಾ. ರಾಧಕೃಷ್ಣನವರ ಹೇಳಿಕೆ.

“ರಷ್ಯಾದಲ್ಲಿ ಯುದ್ಧದ ಬಗ್ಗೆ ಮಾತನಾಡುವುದೇ ಅಪರಾಧ. ಅದರಂತೆ ಎಂಬುದಾಗಿ ನಿವೃತ್ತರಾಗಲಿರುವ ರಷ್ಯಾದಲ್ಲಿಯ ಭಾರತದ ರಾಯಭಾರಿ ಡಾ. ಎಸ್. ರಾಧಕೃಷ್ಣನ್ ಅವರು ಹೇಳಿದರು.

ರಷ್ಯನ್ನರು ಶಾಂತಿ ಬೇಕೆಂದು ಬಯಸುವರು. ಯುದ್ಧದ ಬಗ್ಗೆ ಪ್ರಚಾರ ಮಾಡುವುದು ಶಿಕ್ಷಾರ್ಹವಾದುದು ಎಂದು ಅವರು ಹೇಳಿದರು.

ಡಾ. ರಾಧಾಕೃಷ್ಣನ್‌ರವರು ಲಂಡನ್ನಿನಿಂದ ಬೊಂಬಾಯಿಗೆ ಆಗಮಿಸಿದರು. ಡಾ. ರಾಧಕೃಷ್ಣನ್‌ರು ‘ಕೊಸ್ಸಾಕ್’ (ರಷ್ಯಾಕ್ಕೆ ಸೇರಿದ ತುರ್ಕಿ ಜನಾಂಗ) ಟೊಪ್ಪಿಯನ್ನು ಧರಿಸಿದ್ದರು. ಅವರು ವಿಮಾನದಿಂದ ಇಳಿಯುತ್ತಲೇ ಪತ್ರಿಕಾ ಪ್ರತಿನಿಧಿಗಳು ಮತ್ತು ಕ್ಯಾಮರಾ ಜನರೂ ಅವರನ್ನು ಮುತ್ತಿದರು. ತಮಗೆ ಈ ಟೊಪ್ಪಿಯನ್ನು ರಷ್ಯನ್ನರು ಕಾಣಿಕೆಯಾಗಿ ಕೊಟ್ಟಿರುವರೋ ಎಂದು ಕೇಳಿದ್ದಕ್ಕೆ ‘ನನಗೆ ಈ ಟೊಪ್ಪಿಗೆ ಸೇರುತ್ತದೆ, ನಾನು ಇದನ್ನು ಯಾವಾಗಲೂ ಧರಿಸುತ್ತೇನೆ’ ಎಂದು ಹೇಳಿದರು.

ಅವರು ರಷ್ಯಾದಲ್ಲಿಯ ತಮ್ಮ ಎರಡು ವರ್ಷಗಳ ಅನುಭವದ ಬಗ್ಗೆ ಮಾತನಾಡುತ್ತಾ, ಭಾರತೀಯರ ಬಗ್ಗೆ ರಷ್ಯನ್ನರಲ್ಲಿ ಅಮಿತವಾದ ಸದ್ಭಾವನೆಯಿದೆಯೆಂದು ಹೇಳಿದರು. ಅವರು ಮುಂದುವರಿದು ಇನ್ನೂ ಹೀಗೆ ಹೇಳಿದರು.

“ಭಾರತೀಯ ಸಮಸ್ಯೆಗಳ ಬಗ್ಗೆ ರಷ್ಯನ್ನರಿಗೆ ಆಸಕ್ತಿಯಾಗಿದೆ. ರಷ್ಯನ್ನರು ಭಾರತದ ವಿದೇಶ ಧೋರಣೆಯ ಬಗ್ಗೆ ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ರಷ್ಯಾದ ಧುರೀಣರ ಮತ್ತು ಜನತೆಯ ಭಾರತದ ಬಗ್ಗೆ ವಿಶೇಷ ಗೌರವ ಇದೆ. ನಮ್ಮ ಆಂತರಿಕ ಸಮಸ್ಯೆಗಳ ಬಗ್ಗೆ ಧೈರ್ಯದಿಂದ ಮತ್ತು ಆತ್ಮವಿಶ್ವಾಸದಿಂದ ಬಿಡಿಸಲು ಯತ್ನಿಸಿದಲ್ಲಿ ರಷ್ಯನ್ನರಿಂದ ಲಾಭ ಸಿಗಬಹುದಾಗಿದೆ.”

ಮಾರ್ಷಲ್ ಸ್ಟಾಲಿನ್ನರೊಂದಿಗೆ ನಡೆಸಿದ ಮಾತುಕತೆಯ ಬಗ್ಗೆ ವಿಮರ್ಶೆ ಮಾಡಲು ಅವರು ನಿರಾಕರಿಸಿದರು. ಅವರೊಂದಿಗೆ ಆದ ಸಂದರ್ಶನವು ನಿಕ್ಕಿದ ವಿಷಯವಿದ್ದಂತೆ ಎಂದು ಅವರು ತಿಳಿಸಿದರು. ನಿಮ್ಮ ಮತ್ತು ಸ್ಟಾಲಿನ್ನರೊಂದಿಗೆ ಆದ ಮಾತುಕತೆಯ ಬಗ್ಗೆ ಲಂಡನ್ನಿನ ಪ್ರತಿಕ್ರಿಯೆ ಏನೆಂದು ಕೇಳಿದಕ್ಕೆ ‘ಲಂಡನನ್ನು ಕೇಳಿರಿ’ ಎಂದು ಹೇಳಿದರು.

ರಾಧಾಕೃಷ್ಣನ್ನರ ತತ್ವಜ್ಞಾನ.

ಕಳೆದ ವಾರಾಂತ್ಯದಲ್ಲಿ ಸ್ಟಾಲಿನ್ನರ ಸಂದರ್ಶನ ಪಡೆದ ಡಾ. ರಾಧಾಕೃಷ್ಣನ್ನರು ‘ಸರ್ವಪಲ್ಲಿ ರಾಧಾಕೃಷ್ಣನರ ತತ್ವಜ್ಞಾನ’ (ಫಿಲಾಸಫಿ ಆಫ್ ಸರ್ವಪಲ್ಲಿ ರಾಧಾಕೃಷ್ಣನ್) ಎಂಬ ಪುಸ್ತಕವನ್ನು ಬರೆದಿದ್ದು, ಅದು ಏಪ್ರಿಲ್ ೨೧ರಂದು ಪ್ರಸಿದ್ಧವಾಗಲಿದೆ.

ಈ ಪುಸ್ತಕದಲ್ಲಿ ಅವರು “ಸೋವಿಯಟ್ ರಷ್ಯಾ ಸಂಸಾರದ ಶೀಲದ ಬಗ್ಗೆ ಯಾವ ಏನಾದರೂ ತಿಳಿಯಲಿ, ಅಲ್ಲಿಯ ಜನತೆಯು ದಯಾಶೀಲರೂ ಮತ್ತು ನಿಜ ಮಾನವೀಯರೂ ಆಗಿದ್ದಾರೆ” ಎಂದು ಹೇಳಿದ್ದಾರೆ.

ಅವರಿನ್ನೂ ಆ ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ-“ರಷ್ಯಾದ ಜನತೆಯು ಜೀವನ ಉಳಿಸಿಕೊಂಡಿರುವ ಹಾಗೂ ಮತ್ತಿತರ ಪ್ರೀತಿ ದ್ವೇಷಗಳೊಂದಿಗೆ ಕೂಡಿದ್ದಾಗಿದೆ...... ಜಗತ್ತಿನ ವಿವಿಧ ರಾಷ್ಟ್ರಗಳ ಜನತೆ ಮತ್ತು ರಷ್ಯನ್ನರೊಂದಿಗೆ ಮೂಲಭೂತ ರೀತಿಯ ಭಿನ್ನಾಭಿಪ್ರಾಯಗಳಿಲ್ಲ. ಅವರು ವರ್ಗಭೇದ, ಹಿಂಸೆ ಇವೆಲ್ಲವುಗಳಿಗೂ ಅತೀತರಾಗಿ ಮಾನವೀಯತೆಗಾಗಿ ಕಾತುರರಿದ್ದಾರೆ” ಎಂದು ಹೇಳಿದ್ದಾರೆ.

ಈ ಪುಸ್ತಕವು ನ್ಯೂಯಾರ್ಕಿನಲ್ಲಿ ಟ್ಯೂಡರ್ ಪಬ್ಲಿಷಿಂಗ್ಸ್ ಕಂಪೆನಿಯಿಂದ ಪ್ರಸಿದ್ಧವಾಗಲಿದೆ. ಪ್ರಸಿದ್ಧ ತತ್ವಜ್ಞಾನಿಗಳೂ ಗಾಂಧೀಜಿಯವರ ಸ್ನೇಹಿತರೂ ಆದ ಡಾ. ರಾಧಾಕೃಷ್ಣನ್ನರು “ನಮ್ಮ ವಿಚಾರಶೀಲ ಧರ್ಮಗಳ ಪುನರ್ವಿಮರ್ಶೆಯಾಗಿ ಪರಿವರ್ತನೆಯಾಗಬೇಕು. ಇಲ್ಲವೇ ಸರ್ವನಾಶ ಸಂಭವಿಸುವುದು. ಮಾನವ ಐಕ್ಯವು ಹಿಂದಿನ ಧರ್ಮಗಳ ಮೇಲೆ ಕಾಲೂರಿದೆ, ನಮ್ಮ ಭವಿಷ್ಯ ಅದರ ಮೇಲೆ ಅವಲಂಬಿಸಿದೆ. ಮನುಷ್ಯನು ಮಹಾ ವಿಶ್ವಕ್ಕಾಗಿ ದುಡಿದು ವಿಶ್ವ ಮಾನಸಿಕ ಸ್ತ್ರೀ ಪುರುಷರನ್ನು ತಯಾರಿಸಬೇಕಾಗಿದೆ” ಎಂದೂ ಈ ಪುಸ್ತಕದಲ್ಲಿ ಹೇಳಿದ್ದಾರೆ.

ನೆಹರೂರವರಿಗೆ ರಷ್ಯದ ಆಮಂತ್ರಣ.

ಭಾರತದ ಪ್ರಧಾನ ಮಂತ್ರಿ ಪಂಡಿತ ನೆಹರೂರವರನ್ನು ರಷ್ಯದ ಪ್ರಧಾನಾಧಿಕಾರಿ ಮಿ. ಸ್ಟಾಲಿನರು ಮೊಸ್ಕೋ ನಗರಕ್ಕೆ ಆಮಂತ್ರಿಸಿರುವರೆಂದು ಲಂಡನಿನ ‘ಡೈಲಿ ಗ್ರಾಫಿಕ್’ ಪತ್ರಿಕೆ ಪ್ರಕಟಿಸಿದೆ.

ರಾಧಾಕೃಷ್ಣನ್-ಸ್ಟೇಲಿನ್ ಭೇಟಿ.

ಭಾರತಕ್ಕೆ ಹಿಂತಿರುಗಲಿದ್ದ ಭಾರತದ ಮೊಸ್ಕೋ ರಾಯಭಾರಿ ಡಾ. ಎಸ್. ರಾಧಾಕೃಷ್ಣನ್‌ರವರು ಮಾರ್ಷಲ್ ಸ್ಟೇಲಿನರು ಕಳೆದ ವಾರಾಂತ್ಯದಲ್ಲಿ ಭೇಟಿಯಾಗಿ ಅವರೊಡನೆ ಸುಮಾರು ೩೦ ನಿಮಿಷಗಳ ಕಾಲ ಮಾತುಕತೆ ನಡೆಸಿದರು. ಈ ಸಂಭಾಷಣೆಯಲ್ಲಿ ಹಿಂದೀಯ, ಆಸ್ಯದ ಮತ್ತು ಅಂತರಾಷ್ಟ್ರೀಯ ಹಲವು ಸಮಸ್ಯೆಗಳನ್ನು ಅವರು ಚರ್ಚಿಸಿದ್ದರೆನ್ನಲಾಗಿದೆ. ಮಾರ್ಷಲ್ ಸ್ಟೇಲಿನರು ಡಾ. ರಾಧಾಕೃಷ್ಣನ್‌ರವರನ್ನು, ಅವರು ರಾಯಭಾರತನ ಸ್ವೀಕರಿಸುವ ಕಾಲದಲ್ಲಿ ಕಂಡು ಮಾತನಾಡಿದರು. ೧೯೫೦ರ ಜನವರಿಯಲ್ಲಿ ಕ್ರೆಮ್ಲಿನ್ ಭವನದಲ್ಲಿ ಅವರ ಭೇಟಿ ನಡೆದಿತ್ತು. ಕ್ರೆಮ್ಲಿನ್ ಭವನದಲ್ಲಿ ಒಬ್ಬ ರಾಯಭಾರಿಗೆ ಎರಡು ಬಾರಿ ಭೇಟಿಯಿತ್ತ ಗೌರವವು ಡಾ. ರಾಧಾಕೃಷ್ಣನ್‌ರವರ ಕೀರ್ತಿಗೆ ಕಳಸವಿಟ್ಟದೆಯೆಂದರೆ ಅತಿಶಯೋಕ್ತಿಯೂ ಆಗಲಾರದು.

ಮದ್ರಾಸ್ ಮಂತ್ರಿಮಂಡಲದ ಖಾತೆಗಳ ಹಂಚಿಕೆ.

ಮದ್ರಾಸು ಮಂತ್ರಿಗಳ ಖಾತೆಗಳ ಹಂಚಿಕೆಯು ಈ ಕೆಳಗಿನಂತೆ ಘೋಷಿಸಲ್ಪಟ್ಟಿದೆ.

ಸಿ. ರಾಜಗೋಪಾಲಾಚಾರಿ—ಮುಖ್ಯಮಂತ್ರಿಯವರು-ಸಾರ್ವಜನಿಕ ಖಾತೆ, ಗೃಹಖಾತೆಯಲ್ಲಿ ಪೋಲಿಸು ಖಾತೆಯನ್ನು ವಹಿಸಿಕೊಳ್ಳುವರು. ಸಾರ್ವಜನಿಕ ಖಾತೆಯಲ್ಲಿ ಮನೆ ಬಾಡಿಗೆ ಖಾತೆಯನ್ನು ಬೇರೊಬ್ಬ ಮಂತ್ರಿಗಳಿಗೆ ವಹಿಸಿಕೊಟ್ಟಿರುವರು.

ಎ. ಬಿ. ಶೆಟ್ಟಿಯವರ—ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಖಾತೆ.

ಸಿ. ಸುಬ್ರಮಣ್ಯಂ—ಹಣಕಾಸು ಮತ್ತು ಆಹಾರ ವಿಭಾಗ.

ಕೆ. ವೆಂಕಟಸ್ವಾಮಿ ನಾಯ್ಡು—ಸಾರ್ವಜನಿಕ ಟ್ರಸ್ಟುಗಳು, ರಿಜಿಸ್ಟ್ರೇಷನ್.

ಎನ್. ರಂಗಾರೆಡ್ಡಿ—ಲೋಕೋಪಯೋಗಿ ಖಾತೆ.

ಡಾ. ಎಂ. ವಿ. ಕೃಷ್ಣರಾವ್—ಶಿಕ್ಷಣ, ಹರಿಜನೋದ್ಧಾರ.

ವಿ. ಸಿ. ಪಳನಿಸ್ವಾಮಿ ಗೌಡರ—ಮದ್ಯಪಾನನಿರೋಧ.

ಡಾ. ಯು. ಕೃಷ್ಣರಾವ—ಉದ್ಯಮ, ಕೂಲಿ, ಮೋಟಾರು ಸಾರಿಗೆ ಮ್ಯಾಜಿಸ್ಟ್ರೇಟರ ಪುನರ್ವಸತಿ, ರೇವು, ಅಂಚೆ, ತಂತಿ, ವಿಮಾನ ಸಾರಿಗೆ.

ಡಾ. ನಾಗನಗೌಡರು—ಒಕ್ಕಲುತನ, ಅರಣ್ಯ, ಪಶುರಕ್ಷಣೆ, ಮೀನು.

ಎನ್. ಶಂಕರರೆಡ್ಡಿ—ಸ್ಥಾನಿಕ ಆಡಳಿತ

ಎ. ಎ. ಮಾಣಿಕವೇಲು ನಾಯಕರ—ಭೂಕಂದಾಯ.

ಕೆ. ಪಿ. ಕುಟ್ಟಿಕೃಷ್ಣನ್ ನಾಯರ—ಕೋರ್ಟು ಜೇಲು ನ್ಯಾಯಖಾತೆ.

ರಾಜಾ ಶ್ರೀ ಷಣ್ಮುಖರಾಜೇಶ್ವರ ಸೇತುಪತಿ—ಮನೆಬಾಡಿಗೆ ನಿಯಂತ್ರಣ

ಪಟ್ಟಾಭಿರಾಮರಾವ—ಗ್ರಾಮಾಭಿವೃದ್ಧಿ, ವಾಣಿಜ್ಯಕರ, ಪೆಟ್ರೋಲ್ಡ ವಿಭಾಗ.

ಡಿ. ಸಂಜೀವಯ್ಯ—ಸಹಕಾರ ಮತ್ತು ವಸತಿ.

ಸಮಾನ ವಿತರಣದಿಂದಲೇ ಸಮಾಜದ ಬದಲಾವಣೆ ಸಾಧ್ಯ.

ಇಂದಿನ ಸಮಾಜದ ಕಾನೂನನ್ನೇ ಬದಲಾಯಿಸುವ ಇಚ್ಛೆ ನನ್ನದಾಗಿದೆ. ಆವಶ್ಯಕತೆಗಿಂತ ಹೆಚ್ಚಿಗೆ ಸಂಗ್ರಹಿಸುವುದನ್ನು ಕೆಲವೇ ಮಂದಿ ಹೆಚ್ಚೆಚ್ಚು ಆಸ್ತಿಪಾಸ್ತಿಗಳನ್ನಿಟ್ಟುಕೊಂಡು ಭೂಮ್ಯಾಲಕರಾಗಿ ಮೆರೆಯುವುದನ್ನು ಇಂದಿನ ಸಮಾಜ ಸಹಿಸುತ್ತದೆ. ನೀರು, ಗಾಳಿ ಮತ್ತು ಬಿಸಿಲುಗಳಂತೆ ಭೂಮಿಯೂ ಎಲ್ಲರ ಹಿತಕ್ಕಾಗಿ ದೇವರು ಕೊಟ್ಟ ವರದಾನ. ಬೇಸಾಯ ಬಲ್ಲ ಭೂಮಿಯಿಲ್ಲದವನಿಗೂ ಭೂಮಿಯನ್ನು ಹೊಂದುವ ಹಕ್ಕಿದೆ ಎಂಬುದಾಗಿ ಗೋರಖ್‌ಪುರ ಜಿಲ್ಲೆಯ ಒಂದು ಹಳ್ಳಿಯಲ್ಲಿ ಭಾಷಣ ಮಾಡುತ್ತ ಆಚಾರ್ಯ ವಿನೋಬಾ ಭಾವೆಯವರು ಹೇಳಿದರು.

ಕೊಡಗು

ತಾ. ೧೮-೪-೧೯೫೦ನೇ ಶುಕ್ರವಾರ

ಪ್ರತ್ಯೇಕ ಪಕ್ಷದ ತೀರ್ಮಾನ.

ಕೊಡಗಿನ ಶಾಸನ ಸಭೆಯಲ್ಲಿ ಕೊಡಗು ಪ್ರತ್ಯೇಕ ಪಕ್ಷದ ಸದಸ್ಯರು ಯಾವ ನೀತಿಯನ್ನು ಮತ್ತು ಧೋರಣೆಯನ್ನನುಸರಿಸಬೇಕೆಂಬುದಾಗಿ ತಾರೀಕು ೧೧ ರಲ್ಲಿ ಅವರು ಮಾಡಿದ ತೀರ್ಮಾನವನ್ನು ಕುರಿತು ಅದರ ಅಧ್ಯಕ್ಷರು ಪತ್ರಿಕೆಗಳಿಗೆ ಕೊಟ್ಟ ಪ್ರಕಟಣೆಯನ್ನು ಬೇರೆಡೆ ಪ್ರಕಟಿಸಲಾಗಿದೆ. ಈ ತೀರ್ಮಾನವು ಕಾಲೋಚಿತವೂ ಯುಕ್ತವೂ ಆಗಿದೆ. ಕೊಡಗಿನ ಜನತೆಯಲ್ಲೂ ಹಾಗೂ ಕಾಂಗ್ರೆಸ್ಸಿನಲ್ಲೂ ದೇಶದ ಭವಿಷ್ಯತ್ತಿನ ವಿಚಾರ ಎರಡಭಿಪ್ರಾಯಗಳಿದ್ದದು ಜನರಿಗೆ ತಿಳಿದ ವಿಷಯವಾಗಿದೆ. ಕೊಡಗನ್ನು ದೊಡ್ಡ ಪ್ರಾಂತಕ್ಕೆ ಸೇರಿಸಬೇಕೆನ್ನುವ ಪಕ್ಷದವರು ಈ ವಿಚಾರದಲ್ಲಿ ಸಾಮಾನ್ಯ ಜನತೆಯನ್ನು ಕೇಳಬೇಕಾಗಿಲ್ಲವೆಂದೂ ಇಂಡಿಯಾ ಸರಕಾರವೇ ಇದರ ತೀರ್ಮಾನವನ್ನು ಕೊಡಬೇಕೆಂದೂ ಪ್ರಯತ್ನಿಸುತ್ತಿದ್ದರು. ಆದರೆ ಪ್ರತ್ಯೇಕ ಪಕ್ಷದವರು ಕೊಡಗಿನ ಭವಿಷ್ಯತ್ತಿನ ಯಾವುದೇ ತೀರ್ಮಾನವನ್ನಾದರೂ ಮಾಡುವ ಹಕ್ಕು ಜನತೆಗೆ ಇದೆಯಲ್ಲದೆ ಬೇರೆಯವರಿಗಲ್ಲವೆಂದು ವಾದಿಸುತ್ತಿದ್ದರು. ಆದುದರಿಂದ ಕಳೆದ ಚುನಾವಣೆಯಲ್ಲಿ-ಜನರ ಅಭಿಮತ ತೆಗೆಯಲು ಉತ್ತಮ ಅವಕಾಶವಿದೆ; ಈ ಸಂದರ್ಭದಲ್ಲಿ ಓಟರುಗಳ ಒಂದು ತೀರ್ಮಾನವನ್ನು ತೆಗೆಯುವ ಬಗ್ಗೆ ಪ್ರತ್ಯೇಕ ಪಕ್ಷದ ವತಿಯಿಂದ ಉಮೇದುವಾರರುಗಳನ್ನು ಹಾಕಬೇಕೆಂದು ನಿಶ್ಚಯಿಸಿದ್ದರು. ಕಾಂಗ್ರೆಸಿನೊಳಗೆ ಎರಡು ವಿಧದ ಅಭಿಪ್ರಾಯದ ಪಂಗಡಗಳಿದ್ದುದರಿಂದ ಭವಿಷ್ಯತ್ತಿನ ವಿಚಾರವಾಗಿ ಕಾಂಗ್ರೆಸಿನ ಹೆಸರಿನಲ್ಲಿ ಯಾರೂ ಉಮೇದುವಾರರು ನಿಲ್ಲಕೂಡದೆಂದೂ, ಈ ವಿಚಾರವನ್ನು ಜನತೆಯ ಮುಂದಿಡಬೇಕಾಗಿಲ್ಲವೆಂದೂ ಕಾಂಗ್ರೆಸಿನ ಮೇಲಧಿಕಾರಿಗಳು ಅಭಿಪ್ರಾಯ ಕೊಟ್ಟರು. ಆದರೆ ಸಂಯೋಜನಾ ಪಕ್ಷದವರು ಜನತೆಯ ಅಭಿಮತವನ್ನು ತೆಗೆಯಲು ವಿರುದ್ಧವಿದ್ದುದರಿಂದ ಈ ವಿಚಾರದಲ್ಲಿ ಜನರ ಅಭಿಪ್ರಾಯವನ್ನು ಕೇಳುವ ಅವಕಾಶವು ಈ ಚುನಾವಣೆ ಕಳೆದ ಐದು ವರ್ಷಗಳ ಅವಧಿಯ ನಂತರವೇ ದೊರೆಯುವದರಿಂದ ಅಷ್ಟರೊಳಗೆ ಭವಿಷ್ಯದ ಬಗ್ಗೆ ತೀರ್ಮಾನ ಮಾಡುವ ಸಂದರ್ಭ ಉಂಟಾಗ ಬಹುದೆಂದೂ ಆದ್ದರಿಂದ ಈ ಚುನಾವಣೆಯಲ್ಲಿಯೇ ಜನತೆಯ ಅಭಿಪ್ರಾಯ ಕೇಳಲು ಪ್ರತ್ಯೇಕ ಪಕ್ಷವು ನಿರ್ಧರಿಸಿತು. ಹಾಗೆ ಮಾಡಲು ಕಾಂಗ್ರೆಸಿಗೆ ರಾಜಿನಾಮೆಯನ್ನು ಕೊಡಬೇಕಾಯಿತು. ತಮ್ಮ ರಾಜಿನಾಮೆ ಪತ್ರದಲ್ಲಿ ಬರೇ ಚುನಾವಣೆ ವರೆಗೆ ತಾವು ಕಾಂಗ್ರೆಸಿನಿಂದ ಹೊರಬರುವದೆಂದೂ ಚುನಾವಣೆ ಮುಗಿದ ನಂತರ ಪುನಹ ಕಾಂಗ್ರೆಸ್ ಸೇರಲು ತಾವು ಸಿದ್ಧರಿರುವೆನೆಂದೂ ಸೂಚಿಸಲಾಗಿತ್ತು.

ಆದರೆ ಕಾಂಗ್ರೆಸ್ಸಿನ ಉಮೇದುವಾರರು ಚುನಾವಣೆಯ ಮಧ್ಯದಲ್ಲಿ ಕೊಡಗಿನ ಭವಿಷ್ಯದ ವಿಚಾರದಲ್ಲಿ ಜನತೆಯನ್ನು ಕೇಳಿ ತೀರ್ಮಾನಿಸಲು ತಾವು ಸಿದ್ಧರಿರುವೆವೆಂದೂ, ಹಾಗೆ ಜನತೆಯ ಅಭಿಪ್ರಾಯ ಕೇಳಲು ಅವಕಾಶವಿಲ್ಲದಿದ್ದರೆ ತಾವು ಸದಸ್ಯತನಕ್ಕೆ ರಾಜಿನಾಮೆಯಿತ್ತು ಹೊರಬರುವೆವೆಂದೂ ತಮ್ಮ ಘೋಷಣಾ ಪತ್ರದಲ್ಲಿ ಹೊರಪಡಿಸಿದರು. ಈ ಸ್ಪಷ್ಟೀಕರಣವು ಪ್ರತ್ಯೇಕವಾದಿಗಳಿಗೂ, ಸಂಯೋಜನಾವಾದಿಗಳಿಗೂ ಇದ್ದ ಭಿನ್ನಾಭಿಪ್ರಾಯವನ್ನು ಹೋಗಲಾಡಿಸಿತು. ಅಂದರೆ ಕೊಡಗಿನ ಭವಿಷ್ಯದ ನಿರ್ಣಯವನ್ನು ಮಾಡುವಾಗ ದೇಶದ ಜನತೆಯನ್ನು ಕೇಳಿಯೇ ಮಾಡಬೇಕೆಂದು ಎರಡು ಕಡೆಯವರೂ ಒಪ್ಪಿದಂತಾಯಿತು.

ಈ ರೀತಿ ಕಾಂಗ್ರೆಸ್ಸಿನೊಳಗಿದ್ದ ಎರಡು ಪಕ್ಷದವರಿಗಿದ್ದ ಭಿನ್ನಾಭಿಪ್ರಾಯವು ಇಲ್ಲದಾದ ಕಾರಣ ಕಾಂಗ್ರೆಸ್ಸು ರಚಿಸಿರುವ ಮಂತ್ರಿ ಮಂಡಳಕ್ಕೆ ವಿರುದ್ಧವಾಗಿ ವರ್ತಿಸಲು ಯಾವ ಕಾರಣವೂ ಇರುವುದಿಲ್ಲ. ಆದ್ದರಿಂದಲೇ ಕಾಂಗ್ರೆಸ್ ತತ್ವಗಳಲ್ಲೂ, ಪಂಡಿತ ಜವಾಹರರ ಮುಂದಾಳ್ತನದಲ್ಲೂ ಸಂಪೂರ್ಣ ವಿಶ್ವಾಸವಿರುವ ಪ್ರತ್ಯೇಕ ಪಕ್ಷದ ಎಸೆಂಬ್ಲಿ ಮೆಂಬರುಗಳು ತಮ್ಮ ರಾಜಿನಾಮೆ ಪತ್ರಿಕೆಯಲ್ಲಿ ಸೂಚಿಸಿದ್ದಂತೆ ಮತ್ತು ಕಾಂಗ್ರೆಸ್ ಪ್ರೆಸಿಡೆಂಟರಾದ ಪಂಡಿತ ನೆಹರೂರವರು ಕಾಂಗ್ರೆಸ್ಸಿಗೆ ಸೇರಬೇಕೆಂದು ಆಗಾಗ್ಗೆ ಮಾಡುತ್ತಿರುವ ಅಪೀಲಿನಂತೆ ತಾವು ಪುನಹ ಕಾಂಗ್ರೆಸ್ಸಿಗೆ ಸೇರಲು ಮತ್ತು ದೇಶದ ಹಿತದೃಷ್ಟಿಯಿಂದ ಕಾಂಗ್ರೆಸ್ ಮಂತ್ರಿ ಮಂಡಳಕ್ಕೆ ಸಹಕಾರವನ್ನು ನೀಡಲು ಮುಂದೆ ಬಂದದ್ದು ಸೂಕ್ತವಾಗಿದೆ. ಮಾನ್ಯ ರಾಜಗೋಪಾಲಾಚಾರಿಯವರಂದಂತೆ ಯಾವುದೇ ಸರಕಾರವು ಒಂದು ಪಕ್ಷದ ಸರಕಾರವಾಗಿರದೆ ಇಡೀ ದೇಶದ ಸರ್ವರ ಸರಕಾರವಾಗಬೇಕಾಗಿದೆ. ಈ ದೃಷ್ಟಿಯಿಂದ ಎಲ್ಲರೂ ಸಹಕರಿಸುವುದು ಅವಶ್ಯವಿದೆ.

ಶಾಸನ ಸಭೆಯು ಸಾಮಾನ್ಯ ಮೀಟಿಂಗು ನಡೆಯುವ ಮುಂಚಿತವಾಗಿ ಅಲ್ಲಿ ವಿರೋಧ ಪಕ್ಷವನ್ನು ಸ್ಥಾಪಿಸುವ ಮೊದಲೇ ಈ ಪಕ್ಷದವರು ತಮ್ಮ ಅಭಿಪ್ರಾಯವನ್ನು ಕಾಂಗ್ರೆಸ್ಸಿನವರ ಮುಂದಿಟ್ಟದ್ದು ಸಕಾಲಿಕವಾಗಿದೆ. ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಿ ಅದರ ಮೂಲಕ ದೇಶಾಭಿವೃದ್ಧಿಯನ್ನು ಸಾಧಿಸಬೇಕೆಂದು ಇಚ್ಛಿಸುವ ಮಹನೀಯರೆಲ್ಲರೂ ಒಗ್ಗಟ್ಟಾಗಿ ಈಗ ದೊರೆತಿರುವ ಜವಾಬ್ದಾರಿ ಸರಕಾರವನ್ನು ಜಯಪ್ರದವಾಗಿ ನಡೆಸಿ ಜನತೆಗೆ ತಮ್ಮ ಸೇವೆಯನ್ನು ಸಲ್ಲಿಸುವರಾಗಿ ನಂಬುತ್ತೇವೆ.

ವರ್ತಮಾನ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಶಾಲಾ ದಿನೋತ್ಸವದ ಅಧ್ಯಕ್ಷತೆ ವಹಿಸಿದ್ದ ಸರಕಾರಿ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಅಚ್ಯುತನ್ ಪಿಳ್ಳೆಯವರು ಸಮಾಜದಲ್ಲಿ ಅಧ್ಯಾಪಕರಿಗೆ ಹೆಚ್ಚಿನ ಗೌರವ ಸಲ್ಲಬೇಕೆಂದೂ, ನೆರೆಯವರೊಡನೆ ಮಾನವನಂತೆ ಬಾಳಲು ಕಲಿಯುವದೇ ವಿದ್ಯೆಯೆಂದೂ ಸ್ವಾರಸ್ಯವಾದ ಭಾಷಣ ಮಾಡಿದರು.

ತಾ ೧೪ರಲ್ಲಿ ಮಡಿಕೇರಿ ಮಹಿಳಾ ಸಮಾಜದಲ್ಲೂ, ತಾ ೧೫ ರಲ್ಲಿ ಮಹದೇವಪೇಟೆ ಶಂಕರ ದೇವಸ್ಥಾನದಲ್ಲೂ ಶ್ರೀ ಚಿಕ್ಕೆರ ಅಸ್ಪೃಶ್ಯನವರ ಸಂಗೀತ ಕಚೇರಿ ನಡೆಯಿತು.

ಕರಿಕೆ ಮತ್ತಿ ಆ ಭಾಗದಲ್ಲಿ ಗೇರು ಬೀಜ ಮತ್ತು ಒಳ್ಳೆ ಮೆಣಸು ವ್ಯವಸಾಯಕ್ಕೆ ತುಂಬಾ ಅನುಕೂಲತೆ ಇದೆಯೆಂದೂ ಅಲ್ಲಿರುವ ಮರಾಟಿ ಮಾತಾಡುವ ಸುಮಾರು ೨೦೦ ಕುಟುಂಬಗಳಿಗೂ ಮತ್ತಿತರರಿಗೂ ಯೋಗ್ಯ ಸಹಾಯ ಕೊಟ್ಟು ಈ ವ್ಯವಸಾಯವು ನಡೆಯುವಂತೆ ಸರಕಾರವು ತಕ್ಕ ಏರ್ಪಾಡು ಮಾಡಲಿವೆಯೆಂದೂ ವರ್ತಮಾನ.

ರಾಜಕೀಯ ಆಂದೋಲನದಲ್ಲಿ ಜೈಲಿಗೆ ಹೋದವರಿಗೆ ಹತ್ತು ಎಕರೆಯಂತೆ ಜಾಗ ಕೊಡುವ ನಿರ್ಧಾರವಾಗಿದೆಯೆಂದೂ ಹಲವಾರು ಅರ್ಜಿಗಳು ಈಗಾಗಲೇ ಹೋಗಿರುವದಾಗಿಯೂ ವರ್ತಮಾನ

ಇಂಡಿಯಾ ಸರಕಾರದ ಲೇಬರ್ ಶಾಖೆಯ ಔದ್ಯೋಗಿಕ ಪ್ರೌಢ ತರಬೇತು ಶಾಲೆಯ ಎರಡನೇ ತರಬೇತಿಯು ಬರುವ ಜೂನ್ ತಿಂಗಳಿಂದ ಪ್ರಾರಂಭವಾಗುವುದು. ಸೇರಲಿಚ್ಛಿಸುವವರು ಏಪ್ರಿಲ್ ೩೦ರೊಳಗೆ ತಮ್ಮ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಈ ವಿಷಯಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಮಡಿಕೇರಿಯ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಿಂದ ತಿಳಿದುಕೊಳ್ಳಬಹುದು.

ಹಿಂದಿನ ಮೈಸೂರು 'ಸ್ಟೇಟ್ ಫೋರ್ಸಸ್' ನಲ್ಲಿದ್ದ ಸಾಧಾರಣ ೨೦೦೦ ಮಾಜಿ ಸೈನಿಕರ ಉಡುಪುಗಳು, ಅವರ ಸರಿಯಾದ ವಿಳಾಸಗಳು ದೊರೆಯದ ಕಾರಣ ವಿತರಣೆಯಾಗದೆ ಮೈಸೂರು ಸೈನ್ಯದ ರೆಕಾರ್ಡು ಆಫೀಸಿನ 'ಆಫೀಸರ್-ಇನ್-ಚಾರ್ಜ್'ರವರಲ್ಲಿ ಬಾಕಿಯಾಗಿ ಹೋಗಿವೆ. ಮೈಸೂರು ಸೈನ್ಯದ 'ಡಿಪೋ' ಶೀಘ್ರದಲ್ಲಿಯೇ ಮುಚ್ಚಿ ಹೋಗುವ ಸಂದರ್ಭವಿರುವದರಿಂದ ಮೇಲಿನ ಮಾಜಿ ಸೈನಿಕರು ಒಡನೆ ಮೇಲೆ ನಮೂದಿಸಿದ ಆಫೀಸರ್-ಇನ್-ಚಾರ್ಜ್‌ರವರನ್ನು ಖುದ್ದಾಗಿಯಾಗಲೀ, ಪತ್ರದ ಮುಖಾಂತರವಾಗಲೀ ಭೇಟಿಯಾಗಿ ಅವರವರಿಗೆ ದೊರೆಯಬೇಕಾಗಿರುವ ಉಡುಪಿನ ಭತ್ಯವನ್ನು ಹೊಂದಿಕೊಳ್ಳಬೇಕಾಗಿ ಈ ಮೂಲಕ ತಿಳಿಸಲಾಗಿದೆ.

॥ ದುರ್ಬೀನು ನೋಟ ॥

— ಲೇ:—ರಸಿಕ —

ನೌಕರರೊಬ್ಬರು ಮೇಲಧಿಕಾರಿಯ ಹಾಗೂ ಅಮ್ಮನವರ ಕೃಪೆಗಾಗಿ ಲಾರಿ ಸೌದೆಯನ್ನು ಒದಗಿಸಲು ರೂ. ೨೦ ಕೊಟ್ಟರೂ ಎಂಟು ರೂಪಾಯಿ ಜೇಬಿನಿಂದ ತೆತ್ತು ರೂ. ೧೨ ಕ್ಕೆ ಒದಗಿಸಿದೆನೆಂದು ಹೇಳಿಕೊಂಡರಂತೆ. ಶೀಘ್ರ ಪ್ರಸಾದಗಳಿಂದಲೇ ಪರಿಶುದ್ಧರಾಗಲು ಸಾಧ್ಯವಿದ್ದರೆ ಮತ್ತೆ ನೀತಿ ಪ್ರಸಾರದ ಆವಶ್ಯಕತೆ ಏನು? ಅವರಂತೆ 'ಬೆಣ್ಣೆ' ಹಾಕುವದರಿಂದ ಸಮರ್ಥ ಕೆಲಸಗಾರನೆನಿಸಿಕೊಳ್ಳುವದಾದರೆ ಸಹುಬಾಗಿ ದುಡಿಯಲೇಕೆ?

*　　*　　*

ಆಸ್ಥಾನ ಅಧಿಕಾರಿಯೊಬ್ಬರಿಗೆ ಕೊಡಗರ ಮನೆಯಲ್ಲಿ ಹೆಚ್ಚಾಗಿ ಮಾಡುವ ರೊಟ್ಟಿ ರುಚಿಸಹತ್ತಿದೆಯಂತೆ ಯಾರು ಮಾಡಿದರೂ ಆ ರೊಟ್ಟಿ ರುಚಿಕರವಲ್ಲವಂತೆ! ಆ ಇಚ್ಛಿತ ಎರಡು ಕೈಗಳು ಸುಟ್ಟ ರೊಟ್ಟಿಯೇ ರುಚಿಕರವೂ ಮನಾನಂದಕರವೂ ಆಗಿವೆಯಂತೆ. ಅದ್ದರಿಂದ ಎಲ್ಲೋ ಇರುವ ಹಾಗೂ ತನಗಾಗಿ ರೊಟ್ಟಿ ಸುಡದ ಈ ಕೈಗಳು ಅಧಿಕಾರಿಯ ಅಡಿಗೆ ಮನೆಯಲ್ಲಿ ರೊಟ್ಟಿ ತಟ್ಟತೊಡಗಿವೆಯಂತೆ! ಆಮಂತ್ರಿಸಲ್ಪಟ್ಟು ಬರುವವ ಅತಿಥಿ, ಆಜ್ಞಾಪಿಸಲ್ಪಟ್ಟು ಬರುವವ ಆಳು. ಒಲುಮೆಯಿಂದೊದಗುವದು ಸೌಹಾರ್ದತೆ. ಜುಲುಮೆಯಿಂದಾಗುವದು ಸ್ವಾಧೀನತೆಯಲ್ಲವೇ?

*　　*　　*

'ಮನೆ ಕಟ್ಟಿ ನೋಡಬೇಕು; ಮದುವೆ ಮಾಡಿ ನೋಡಬೇಕು' ಎಂಬೊಂದು ಗಾದೆ. ಅದರಲ್ಲೂ ಮಡುಗಿಯರ ಮದುವೆಯಾದರೆ ಮತ್ತೆ ತೊಂದರೆ ಅಷ್ಟಿಷ್ಟಲ್ಲ. ಪ್ರಿಯ ಜನರ ಮಕ್ಕಳ ಮದುವೆಯೆಂದರೆ ಆಸಕ್ತರು ಹೋಗಿ ಆ ವಿಚಾರ ಈ ವಿಚಾರಗಳಲ್ಲಿ ಸಲಹೆ ಕೊಡುವರು. ಆದರೆ ಮೇಲಧಿಕಾರಿಯ ಮನೆಯ ಮದುವೆಯೆಂದು 'ಕೊಕ್ಕೆತಾತಿ' 'ಜೋಮಾಲೆ' ಮಾಡಿಸುವ ಪ್ರಯತ್ನವನ್ನು ಕೆಳಗಿನವರು ಮಾಡಲೇಕೆ? ಆಡಿನ ಮೊಲೆಕಸಿಗಿಂತಲೂ ಆನೆಯ ಮಾವುತ ಗಣ್ಯನಾಗುತ್ತಾನೆ. ಆಳ್ವೇನ್ನಾಳುವವನಿಗಿಂದಲೂ ಉತ್ತಮರ ಅನುಯಾಯಿ ಮಾನ್ಯನೆಂಬುದನ್ನು ಇವರು ತಿಳಿಯಬಾರದೆ!

*　　*　　*

ಮೊನ್ನೆ ಗಣ್ಯರ ನಡುವೆ ಕೆಲವರು ಕೂಡಿಕೊಂಡು ಮಾರ ಹೋಗಿದ್ದರು. ಗಣ್ಯರೆನ್ನುವವರಿಗೆ ಹೂಮಾಲೆ ಸತ್ಕಾರಗಳಾದಾಗ ಈ ಅನ್ಯರಿಗೂ ಗೌರವವಾಯಿತು! ಭೂತ ಕನ್ನಡಿಯಲ್ಲಿಟ್ಟು ತೋರಿಸುವ ವಸ್ತು, ಅತಿಶಯ ವರ್ಣನೆಗೊಳಗಾದ ವಿಷಯ, ಘನವಂತರ ನಡುವೆ ಸೇರಿಕೊಂಡ ಅಲ್ಪ ನಿಜಸ್ಥಿತಿಗಿಂತಾ ವಿಶೇಷ ದೊಡ್ಡದಾಗಿ ತೋರುತ್ತವೆ ನಿಜ. ಆದರೆ ತೊಟ್ಟಿಲ ಜೋಗುಳ ಹಾಡಲು ತಿಳಿಯದವಳಿಗೂ, ಸಂಗೀತ ಕಚೇರಿಯ ಪಾರುಪತ್ಯವೇಕೆ?

*　　*　　*

ಸಾಧಾರಣವಾಗಿ ಯಾವಾಗಲೂ ಕಾವೇರಿ ಬಸ್ಸಿನಲ್ಲಿ ತಿರುಗುವ ಮುದುಕರೊಬ್ಬರಿದ್ದಾರೆ. ಅವರಿಗೆ ಹುಡುಗಿಯರು ತಲೆಗೆ ವಸ್ತ್ರವಿಲ್ಲದೆ ಕಾಣಲಾಗದು ಹುಡುಗರು ಕೋಟು ತೆಗೆದಿರಬಾರದು. ಓಪನ್ ಕೋಟ್, ಅರ್ಧರವಿಕೆಯ ಕೈ ಕಂಡರಾಗದು. ಸೊಸೆ ಮಾವಂದಿರು ಒಂದೆಡೆ ಊಟಮಾಡಕೂಡದು. ಕೊಡಗಿನ ಹಳೇ ಪದ್ಧತಿಯನ್ನು ಅನುಸರಿಸಬೇಕೆಂದು ಬೋಧಿಸುತ್ತಾರೆ. ಈಗಿನಂತೆ ಬೋರ್ಡಿಂಗಿನಲ್ಲಿ ಮದುವೆ ಇವರಿಗೆ ಕೂಡದು. ಆದರೆ 'ಉಪದೇಶ ಇತರರಿಗೆ' ಎಂಬಂತೆ ಅವರು ತಮ್ಮ ಮಗಳ ಮದುವೆಯನ್ನು ಬೋರ್ಡಿಂಗಿನಲ್ಲೇ ಏರ್ಪಡಿಸಿದ್ದಾರೆ; ಒಮ್ಮ ಕೊಡ ಬಾಯಿ ಬಗ್ಗಿಸದೇನೆ ಸುರಿಯುತ್ತಾದಾದರೆ ಅದಕ್ಕೆ ತೂತು ಬಿದ್ದಿರಬೇಕು. ಒಬ್ಬ ಮನುಷ್ಯ ಪರಿಸ್ಥಿತಿಯನ್ನರಿಯದೆ ಸಾರುತ್ತಾನಾದರೆ ಆತನ ಬುದ್ಧಿ ಕೆಟ್ಟಿರಬೇಕು ಅಲ್ಲವೇ?

ಓದುಗರ ಓಲೆಗಳು

ಭಾಗಮಂಡ್ಲ ಕರಿಕೆ ರಸ್ತೆ.

ಭಾಗಮಂಡ್ಲದಿಂದ ಕರಿಕೆಗಾಗಿ ಕಾಂಞಂಗಾಡಿಗೆ ಸಂಬಂಧ ಕೊಡುವ ಒಂದು ರಸ್ತೆಯನ್ನು ಕೊಡಗಿನ ಸರಕಾರವು ಮಾಡಲಿದೆಯೆಂದೂ ಅದರ ಪರೀಶೀಲನೆಯ ಬಗ್ಗೆ ಚೀಫ್ ಕಮಿಷನರಾದಿಯಾಗಿ ಕೊಡಗಿನ ಅಧಿಕಾರಿಗಳ ತಂಡವೊಂದು ಹೋಗಿತ್ತೆಂದೂ ಈ ರಸ್ತೆಗೆ ಸುಮಾರು ಒಂದು ಲಕ್ಷಕ್ಕೆ ಮೀರಿ ಖರ್ಚಾಗಬಹುದೆಂದೂ ಪತ್ರಿಕೆಯಿಂದ ತಿಳಿದುಬಂತು. ಭಾಗಮಂಡ್ಲ, ಕರಿಕೆ ಭಾಗದ ಜನರು ಬಹುತೊಂದರೆಯಲ್ಲಿರುವರೆಂಬುದು ಜನತೆಗೆ ಗೊತ್ತು. ಅದರಂತೆ ಬೇರೆದೆಯೂ ತೊಂದರೆಯಲ್ಲಿರುವವರು ಇದ್ದಾರೆ. ಸೂರ್ಲಬಿ, ಶನಿವಾರಸಂತೆ ಈ ಮೊದಲಾದ ಭಾಗದ ಜನರಿಗೆ ಆಗಬೇಕಾದ್ದು ಬಹಳ ಇದೆ. ಈ ಎಲ್ಲ ಕೆಲಸಗಳನ್ನು ಯಾವ ಸರಕಾರಕ್ಕೂ ಒಮ್ಮೆಗೇ ತೆಗೆದುಕೊಳ್ಳಲಾಗುವದಿಲ್ಲ. ಆದ್ದರಿಂದ ಯಾವ ಕೆಲಸ ಹೆಚ್ಚು ತುರ್ತಿನದು ಮತ್ತು ಅತ್ಯವಶ್ಯಕವಾದ್ದು ಎಂಬುದನ್ನು ಪರಿಶೀಲಿಸಿ ಒಂದು 'ಪ್ರಯೊರಿಟಿ' ಪಟ್ಟಿಯನ್ನು ತಯಾರಿಸಿ ಅದಕ್ಕನುಗುಣ ಕೆಲಸ ಕೈಕೊಳ್ಳುವದು ಹಿತವಿದೆ. ನಮ್ಮ ಸರಕಾರವು ಹಾಗೆ ಮಾಡುವದೇ?

'ಶಂಕರ'

ಸಿ. ವಿ. ಬಸ್ ಸರ್ವಿಸ್

ಮೇಲಿನ ಹೆಸರಿನ ಸಿ. ಪಿ. ಬಿ. ಕಂಪೆನಿಯವರ ಬಸ್ಸೊಂದು ವೀರಾಜಪೇಟೆಯಿಂದ ೧–೪೫ಕ್ಕೆ ಹೊರಟು ೫ ಗಂಟೆಗೆ ಕುಟ್ಟಕ್ಕೆ ತಲಪಿ ಮಾರಣೆ ದಿನ ಬೆಳಿಗ್ಗೆ ೭–೩೦ಕ್ಕೆ ಹೊರಟು ಹೋಗುತ್ತಿತ್ತು. ಇದಕ್ಕೆ ಸಂಬಂಧಪಟ್ಟ ಡೈರೆಕ್ಟರುಗಳು ಕೊಡಗಿನಲ್ಲಿದ್ದರೂ ಇವರು ಶ್ರೀ ಬಸ್ಸಿನಲ್ಲಿ ಕೂತು ತಿರುಗುವ ತರಗತಿಯವರಲ್ಲದೆ ಕಂಪೆನಿಯವರನ್ನು ಕೇಳುವವರಲ್ಲ. ಮುದರಾಜು ಕಡೆ ಓಡಿ, ಅಲ್ಲಿ ಓಡಲಿಕ್ಕೆ ಲಾಯಕ್ಕಿಲ್ಲದ ಒಂದು ಬಸ್ಸನ್ನು ಇಲ್ಲಿ ಓಡಿಸುತ್ತಿದ್ದಾರೆ, ವಾರಕ್ಕೆ ೩ ದಿನ ಕುಟ್ಟಕ್ಕೆ ಬಂದರೆ ೫ ದಿನ ಬರುವುದಿಲ್ಲ. ಈ ಬಸ್ಸನ್ನು ಕಾಯುವವರ ಆಡಿಕಾಲು ಗಟ್ಟಿಯಾಗಿ ನಡೆಯಲಿಕ್ಕೆ ತಯಾರಾಗಿರಬೇಕು. ಮೇಲಿನ ಕಂಪೆನಿಯವರ ಕುಟ್ಟಕ್ಕೆ ಬರುವ ಬಸ್ಸುಗಳು ಯುದ್ಧದ ಕಾಲದಲ್ಲಿ ಕೊಡಗಿಗೆ ಬಂದವುಗಳಾಗಿರುತ್ತವೆ ಮುಖ್ಯ ಡ್ರೈವರು ಹೆಚ್ಚಿನ ರೀತಿ ಬ್ರೇಕಿನ ಸಮಯ ಸವಿಾಪಿಸಿದ ಪ್ರಕಾರ ಚೆನ್ನಾಗಿ ಪೆಯಿಂಟ್ ಮಾಡಿ ಬ್ರೇಕ್ ಪಾಸು ಮಾಡಿ ತಂದು ಓಡಿಸಿ ಪ್ರಯಾಣಿಕರಿಗೆ ತೊಂದರೆ ಕೊಡುತ್ತಿದ್ದಾರೆ. ಕಂಪೆನಿಯವರಿಗೆ ಹಣದ ಗರ್ವ ಹೆಚ್ಚಿ ಈ ಲೈನು ಬೇಡವಿದ್ದ ಪಕ್ಷದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ವಿಚಾರಿಸಿ ಅವಶ್ಯವಿರುವವರಿಗೆ ಲೈಸನು ಕೊಟ್ಟದ್ದೇ ಆದರೆ ಪ್ರಯಾಣಿಕರ ತೊಂದರೆಯು ನಿವಾರಣೆಯಾಗುತ್ತದೆ.

K. K. K

ಇದಾವ ಅಳಿಲು ಸೇವೆ?

ತಾನು ತನ್ನ ಮನಸ್ಸಿನಲ್ಲಿ ಆಲೋಚಿಸಿದ ಉದ್ಯೋಗಕ್ಕೆ ಅಯೋಗ್ಯನಾದರೂ ತಾನು ಹೇಗಾದರೂ ಪ್ರಯತ್ನಪಟ್ಟು ತನ್ನ ಅಳಿಲು ಸೇವೆಯಿಂದ ತನ್ನ ಮೇಲಧಿಕಾರಿಗಳನ್ನು ತನ್ನ ವಶ ಪಡಿಸಿಕೊಂಡು ದೊಡ್ಡ ಉದ್ಯೋಗ ಮಾಡಲು ಹವಣಿಸುವುದು. ಒಬ್ಬರು ತನ್ನ ಪುತ್ರಿಯ ಜನ್ಮ ಪತ್ರಿಕದ ದಿನವೆಂದು ಹೇಳಿ ತನ್ನ ಮನೆಯಲ್ಲಿ ಸಲುವು ನಗ್ಗಿರಿ ಊಟದ ಸಾಮಾನುಗಳನ್ನು ಮಾಡಿಸಿ ಕೊಂಡು ಹೋಗಿ ತನ್ನ ಮೇಲಧಿಕಾರಿಗಳಿಗೆ ಅರ್ಪಿಸುವುದು. ಮತ್ತೊಬ್ಬರು ತನ್ನ ಅಧಿಕಾರಿಗಳ ಪುತ್ರಿಯ ಲಗ್ನ ಸಮಿಾಪಿಸಿದೆಯೆಂದು ತಿಳಿದಾಗ ಕೊಡಗು ಯುವತಿಯರ ಕೊಕ್ಕೆತಾತಿ, ಮೊದಲಾದ ಒಡವೆಗಳನ್ನು ಕೊಂಡು ಹೋಗಿ ತೋರಿಸುವದು. ಇನ್ನೊಬ್ಬರು ಮೇಲಧಿಕಾರಿಗಳಿಗೆ ರೊಟ್ಟಿ ತಿನ್ನಬೇಕೆಂಬದಾಗಿ ಹೇಳಿದಲ್ಲಿ ತನ್ನವರನ್ನು ಕೊಂಡು ಹೋಗಿ ರೊಟ್ಟಿ ಮೊದಲಾದ ನಳಪಾಕ ಶಾಸ್ತ್ರ ರೀತಿಯಾಗಿ ಅವರ ಗೃಹದಲ್ಲಿ ತಯಾರಿಸಿ ಕೊಡುವುದು, ಇವೆಲ್ಲ ಯಾವ ಅಳಿಲು ಸೇವೆ? ಈ ರೀತಿಯ ಸೇವೆಯಿಂದ ಕುಲ ಕೆಟ್ಟರೂ ಸುಖ ಪಡೆಯಬೇಕೆಂಬ ಕಾಂಕ್ಷೆಯಿಂದ ತಮ್ಮ ಗೌರವ ಘನತೆಗಳನ್ನು ಬಿಟ್ಟು ವರ್ತಿಸುವವರು ಯಾವ ಜನ ಸೇವಕರ? ಪ್ರಜಾಯುಗ ವಿದಂತೆ! ಈ ಯುಗದಲ್ಲಿ ಅಧಿಕಾರಿಗಳು ಜನತೆಯ ಸೇವಕರಂತೆ. ಆದರೆ ಮೇಲಧಿಕಾರಿಗಳನ್ನು ಸಂತೋಷಗೊಳಿಸುವದನ್ನೇ ಸರ್ವಸ್ವವೆಂದು ತಿಳಿದ ಈ ಕೀಳ್ತರಗತಿಯ ನೌಕರರನ್ನು ಮೇಲಧಿಕಾರಿಗಳು ಅವರನ್ನು ಗುರುತಿಸಿ ಶಿಕ್ಷಿಸುವ ಬದಲು ದೊಂಬರ ಎತ್ತಿನಂತೆ ತಲೆದೂಗುವದೇ?

'ರಾಜು'

ರೂಪಾಯಿಗೆ ಎರಡುವರೆ ಸೇರು.

ಕೊಡಗಿನ ರೇಶನ್ ಡಿಪ್ಪೋಗಳಲ್ಲಿ ರೂಪಾಯಿಗೆ ೨½ ಸೇರಿನಂತೆ ತಾ ೧೧೦ದ ಅಕ್ಕಿ ಮಾರಲ್ಪಡುತ್ತಿದೆ. ರೇಶನ್ ಡಿಪ್ಪೋದ ಅಕ್ಕಿ ೨½ ಸೇರಿಗಿರುವಾಗ ನಿಜದ ಅಕ್ಕಿ ಎರಡು ಸೇರು ಎಂಬ ಹಾಗಾಯಿತು. ಕೊಡಗಿನಲ್ಲಿ ರೇಶನ್ ಕಾರ್ಡಿನ ಅಕ್ಕಿಯಿಂದ ಜೀವಿಸುವವರು ಹಲವರಿದ್ದಾರೆ. ಕಟ್ಟಾಗಿ ಇವರೆಲ್ಲರೂ ಬಡವರು. ಸಾಧಾರಣವಾಗಿ ಬಡವರ ಕುಟುಂಬ ಯಾವಾಗಲೂ ದೊಡ್ಡದು! ಇವರು ರೂಪಾಯಿಗೆ ಎರಡು ಸೇರು ಅಕ್ಕಿ ಪಡೆದು ಜೀವನ ನಡೆಸುವದು ಬಹು ಕಷ್ಟವಾಗಿದೆ. ಆದ್ದರಿಂದ ಬಡ ಜನರ ಕಷ್ಟ ನಿವಾರಣೆಗಾಗಿ ಸರಕಾರವು ರೇಶನ್ ಕಾರ್ಡುದಾರರಿಗೆ ರೂಪಾಯಿಗೆ ೩ ಸೇರಿನಂತೆ ಅಕ್ಕಿ ದೊರೆಯುವ ಏರ್ಪಾಡು ಮಾಡಬೇಕು. ಈ ವಿಷಯದಿಂದ ಏನಾದರೂ ನಷ್ಟ ಬಂದರೆ ಆ ನಷ್ಟವನ್ನು ಸರಕಾರವೇ ಹೊತ್ತುಕೊಳ್ಳಬೇಕು. ಇದು ಸಾಧ್ಯವಿಲ್ಲವೆಂದಾದರೆ ಸ್ಥಳೀಯ ಸರಕಾರವು ಅಂತರಿಕ ನಿಯಂತ್ರಣವನ್ನು ರದ್ದು ಮಾಡಿ ಪೇಟೆಯಲ್ಲಿ ಸಾಗವಾಗಿ ಅಕ್ಕಿ, ಹುರಿಗಳು, ಅವಲಕ್ಕಿ ಮಾರಾಟವಾಗುವಂತೆ ಮಾಡಲಿ. ಆಗ ರೂಪಾಯಿಗೆ ೩ಸೇರು ಅಕ್ಕಿ ದೊರೆತರೂ ಕೊಡ ನಾಡಿನ ಅಕ್ಕಿ ಬೇರೆಡೆ ಹೋಗದ ಕಾರಣ ಅದರಿಂದ ಲಾಭವಿದೆ. ಸರಕಾರವು ಇಷ್ಟೊಂದು ಮಾಡಿ ಬಡ ಜನರ ಕಷ್ಟ ನಿವಾರಿಸಬೇಕಾಗಿದೆ.

'ರೇಶನ್ ಕಾರ್ಡುದಾರ'

ದಬ್ಬಾಳಿಕೆ.

ದಬ್ಬಾಳಿಕೆ ಎಂದಾಕ್ಷಣ ಜನರು ಏನೆಂದು ಕೇಳುವುದು ಸ್ವಾಭಾವಿಕ. ಆದರೆ ದಬ್ಬಾಳಿಕೆ ಪ್ರತಿ ಕ್ಷಣದಲ್ಲಿ ಪ್ರತಿ ಕಡೆಯಲ್ಲಿ ನಡೆಯುತ್ತದೆ. ಹಿಂದೂಸ್ತಾನದಲ್ಲಿ ಸಿರಿವಂತರ, ಬಡವರು ತುಂಬಾ ಜನರು ಜೀವಿಸುತ್ತಾರೆ. ಇವರಿಗೆಲ್ಲಾ ಅಶನ ವಸನ ದೊರೆಯಬೇಕೆಂಬುದೇ ನಮ್ಮ ರಾಮ ರಾಜ್ಯದ ಗುರಿ.

ಚುನಾವಣೆಯಾಗಿ ಕೆಲವಾರು ದಿನಗಳ ನಂತರ ಆದರೆ ಈ ಚುನಾವಣೆಯಲ್ಲಿ ಎಲ್ಲಾ ಕಡೆ ಇ ಮತ್ತೆ ಕೊಡಗಿನಲ್ಲಿಯೂ ಸಹ ಕಾಂಗ್ರೆಸ್ ಸಭೆಗಳಿಗೆ ಹರಿಜನ ಉಮೇದುವಾರರು ಆರಿಸಲ್ಪಟ್ಟಿದ್ದಾರೆ. ಈ ಹರಿಜನರೊಳಗೆ ಸರಿಯಾದ ಗದ್ದೆ, ತೋಟ, ಮನೆ ಇವುಗಳಿಲ್ಲದೆ ನಿರ್ಗತಿಕರಾಗಿರುವವರೇ ಹೆಚ್ಚಿನ ಮಂದಿ. ಆದರೆ ಹರಿಜನ ಉಮೇದವಾರರಲ್ಲಿ ಕೆಲವರಿಗೆ ಭೂಮಿ ಕಾಣಿಗಳಿವೆ. ಕೆಲವರಿಗಿಲ್ಲ. ಇರುವವರಲ್ಲಿ ಒಬ್ಬರಾದ ಶ್ರೀ ಪಿ. ಲಕ್ಕಪ್ಪನವರಿಗೆ ಸಾಧಾರಣ ಭೂಮಿ ಇದೆ. ಸಾಗುವಳಿಗೆ ಅನುಕೂಲವಾಗುವಂತೆ ಸ್ಥಿತಿಗತಿಯಿದೆ. ಇವರಿಗೆ ಮೊನ್ನೆ ಶನಿವಾರಸಂತೆ ನಾಡಿಗೆ ಸೇರಿದ ಹೊಸಳ್ಳಿ ಎಂಬ ಗ್ರಾಮದಲ್ಲಿ ಹತ್ತು ಏಕ್ರೆ ಭೂಮಿಯನ್ನು ಕಳೆದು ಕೊಟ್ಟಿದ್ದಾರೆ.

ಇಂದು ಅದೇ ಕೊಟ್ಟ [illegible] ಅರ್ಜಿ ಕೊಟ್ಟಿದ್ದ ಹರಿಜನರಾದ ಶ್ರೀ ಹೆಚ್. ಕೆ. ರಂಗಪ್ಪನವರು ಬಡವರು ಭೂಮಿಗಾಗಿ ಮೂರು ವರ್ಷಗಳಿಂದ ಅರ್ಜಿ ಕೊಟ್ಟು ಕಾಲ್ಲುವಾಗ ಹೊಸಳ್ಳಿಯಲ್ಲಿ ನಾಲ್ಕು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ. ಇವರು ಎಷ್ಟೇ ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಇವರು ತಡೆದ, ಆಗಲು ಪ್ರಯತ್ನಪಟ್ಟು ಕೈಲು ಮಾಡಿದ ಕೃಷಿಗೆ ತಕ್ಕ ಭೂಮಿಯನ್ನು ಸಹ ಕೌನ್ಸಿಲ್ ಸದಸ್ಯರಾದ ಶ್ರೀ ಪಿ. ಲಕ್ಕಪ್ಪನವರಿಗೆ ಕೇಳಿದ್ದು ಕೊಟ್ಟಿದ್ದಾರೆ. ಇದು ನಿಜವಾಗಿಯೂ ಅನ್ಯಾಯ. ಭೂಮಿಯಿಲ್ಲದೆ ನೂರಾರು ಜನ ಕಷ್ಟಪಡುತ್ತಿರುವಾಗ ಒಬ್ಬರಿಗೆ ೧೦ ಏಕ್ರೆ ಗದ್ದೆ ಕೊಟ್ಟದ್ದು ಸರಿಯಲ್ಲ. ಇವರಿಗೆ ಕೊಟ್ಟ ಭೂಮಿಯನ್ನು ಮೂರು ಒಕ್ಕಲುಗಳಿಗೆ ಆಳಿಕೆ ಕೊಡಬಹುದು. ಅಲ್ಲದೆ ಬೇರೆ ಜನರು ವಾಸ ಮಾಡುವ ಅವರ ಮನೆಯಲ್ಲಿ ೧೦ ಜನರಿದ್ದರೆಂದು ಅರ್ಜಿಯಲ್ಲಿ ಬರೆದಿರುವರಂತೆ! ಅದು ನಿಜವಾದರೆ ನಿಜಕ್ಕೂ ಸರಕಾರದವರು ಹೋಗಿ ಪರೀಕ್ಷಿಸಬೇಕು.

ಹೆಚ್. ಎನ್. ಪೂವಯ್ಯ.

For Sale.

One power driven Coffee Pulper, hand pulper one, rice huller. cherry coffee huller with shaft, pully etc., price Rs. 4500/— persons desiring to bargain can personally contact the following address.

M. S. SHAMBAYA,
planter,
Green hallow Estate,
Chethalli P. O., N. Coorg.

IN MEMORIUM

In ever loving and cherished Memory of our beloved son "SONNY" who suddenly left us to his Heavenly Home this sad day 14th April 1949.

. "*May His Soul Rest In Peace*"

Inserted by his grief stricken parents. Dr. & Mrs. C. B. ACHIAH and their family, Mercara.

ಪ್ರೌಢ ಔದ್ಯೋಗಿಕ ತರಬೇತು.

ಇಂಡಿಯಾ ಸರಕಾರದ ಕಾರ್ಮಿಕ ಮಂತ್ರಿಮಂಡಳದ, ಪುನರ್ವಸತಿ ವಿಭಾಗದ ಔದ್ಯೋಗಿಕ ವಿಷಯದ ಮತ್ತು ಪುನರ್ವಸತಿ ಶಾಖೆಯ ಡೀರೆಕ್ಟರ್ ಜನರಲ್.

ಎರಡನೆಯ ಪ್ರವೇಶವು.

1953ನೇ ಮೇ ತಿಂಗಳಿನಿಂದ ಪ್ರಾರಂಭವಾಗುವುದು. ನಿಶ್ಚಿತ ಫಾರ್ಮುಗಳಲ್ಲಿ ಅರ್ಜಿಗಳನ್ನು ಸಲ್ಲಿಸಲು ಕಡೆಯ ತಾರೀಕು 30-4-1952.

ಹೆಚ್ಚಿನ ವಿಷಯಗಳಿಗೆ, ಅಂದರೆ ಪ್ರಾಸ್‌ಪೆಕ್ಟಸ್ (ಬೆಲೆ ಎರಡಾಣೆ). ನಿಶ್ಚಿತ ಅರ್ಜಿ ಫಾರ್ಮುಗಳ, ಅವುಗಳನ್ನು ಯಾರಿಗೆ ಸಲ್ಲಿಸಬೇಕು, ಯಾವ ಯಾವ ಕೇಂದ್ರಗಳಲ್ಲಿ ಎಂತೆಂತಹ ಉದ್ಯಮಗಳಲ್ಲಿ ತರಬೇತು ದೊರಕುತ್ತದೆ, ವಿದ್ಯಾರ್ಥಿಗಳನ್ನು ಆರಿಸುವ ರೀತಿ ಮತ್ತು ವಿದ್ಯಾರ್ಥಿ ವೇತನ ಕೊಡುವಿಕೆ—ಮುಂತಾದವುಗಳಿಗೆ ಸವಿಾಪದ "ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್" ಅನ್ನು ಸಂಧಿಸಿ ತಿಳಿದುಕೊಳ್ಳಬಹುದು.

ಕಾಂಗ್ರೆಸ್ಸಿಗೆ ಪುನಹ ಸೇರುವ ನಿರ್ಣಯ.

ಕೊಡಗು ಪ್ರತ್ಯೇಕವಾದಿ ಪಕ್ಷದವರ ತೀರ್ಮಾನ.

ಕಳೆದ ಸಾರ್ವತ್ರಿಕ ಚುನಾವಣೆಗೆ ಮೊದಲು ಕೊಡಗಿನ ಕಾಂಗ್ರೆಸ್ಸಿನಲ್ಲಿ ಎರಡು ಪಕ್ಷಗಳಿದ್ದುವು. ಒಂದು ಪಕ್ಷವು ಕೊಡಗು ಮೈಸೂರಿನೊಡನೆ ಯಾ ಮುಂದೆ ರಚನೆಯಾಗಲಿರುವ ಸಂಯುಕ್ತ ಕರ್ನಾಟಕದೊಡನೆ ಸಂಯೋಜನೆಯಾಗಬೇಕೆಂಬ ಅಭಿಪ್ರಾಯದ್ದಾಗಿತ್ತು. ಮತ್ತೊಂದು ಪಕ್ಷವು ಕೊಡಗು ಜವಾಬ್ದಾರಿ ಸರಕಾರವನ್ನು ಪಡೆದು ಪ್ರತ್ಯೇಕ ಪ್ರಾಂತವಾಗಿ ಉಳಿಯಬೇಕೆಂಬ ಅಭಿಪ್ರಾಯದ್ದಾಗಿತ್ತು. ಕೊಡಗಿನ ಭವಿಷ್ಯದ ಪ್ರಶ್ನೆಯು ಈ ಚುನಾವಣೆಯ ಪ್ರಶ್ನೆಯಾಗಬಾರದೆಂದು ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ಕೃತಪಡಿಸಿತ್ತು. ಕೊಡಗಿನ ಸಂಯೋಜನಾ ಪಕ್ಷದವರು ಕೊಡಗಿನ ಜನತೆಯ ಅಭಿಪ್ರಾಯವನ್ನು ಈ ವಿಚಾರದಲ್ಲಿ ತೆಗೆಯಲು ಇಷ್ಟಪಡದೆ ಕೇಂದ್ರ ಸರಕಾರವೇ ಈ ವಿಷಯವನ್ನು ಜನತೆಯನ್ನು ಕೇಳದೆ ಶೀಘ್ರ ತೀರ್ಮಾನಿಸಿಬಿಡಬೇಕೆಂದು ಅಭಿಪ್ರಾಯ ಪಡುತ್ತಿದ್ದ ಕಾರಣ ಪ್ರತ್ಯೇಕವಾದಿ ಪಕ್ಷವು ಕೊಡಗಿನ ಭವಿಷ್ಯದ ಬಗ್ಗೆ ದೇಶೀಯರ ಅಭಿಮತವನ್ನು ತಿಳಿಯುವ ಕಾರಣಕ್ಕಾಗಿ ಕಾಂಗ್ರೆಸಿಗೆ ರಾಜಿನಾಮೆ ಇತ್ತು ಪ್ರತ್ಯೇಕವಾದಿ ಟಿಕೇಟಿನಲ್ಲಿ ಚುನಾವಣೆಗೆ ನಿಲ್ಲಬೇಕಾಯಿತು. ಕಾಂಗ್ರೆಸ್ ಪ್ರೆಸಿಡೆಂಟರಿಗೆ ಅವರು ಬರೆದ ರಾಜಿನಾಮೆ ಪತ್ರದಲ್ಲಿ ಚುನಾವಣೆಯ ನಂತರ ತಾವು ಕಾಂಗ್ರೆಸನ್ನು ಸೇರುವದಾಗಿ ಸ್ಪಷ್ಟಪಡಿಸಿದ್ದರು. ಈ ಪಕ್ಷದವರು ಎಸೆಂಬ್ಲಿಯ ೨೪ ಸ್ಥಳಗಳಿಗೆ ಎದುರಿಸುವರನ್ನು ಸೇರಿ ಎಲ್ಲಾ ಪ್ರಾಮುಖ್ಯ ಕೋವಿದ ಉಮೇದುವಾರರನ್ನು ನಿಲ್ಲಿಸಿದ್ದರು. ಆದರೆ ಕಾಂಗ್ರೆಸ್ ಉಮೇದುವಾರರು ತಮ್ಮ ಚುನಾವಣಾ ಘೋಷಣಾ ಪತ್ರದಲ್ಲಿ ಕೊಡಗಿನ ಭವಿಷ್ಯ ನಿರ್ಣಯದ ಕಾಲಕ್ಕೆ ಪ್ಲೆಬಿಸೈಟ್ ಮೂಲಕ ಜನಾಭಿಪ್ರಾಯ ತಿಳಿಯುವಂತೆ ಪ್ರಯತ್ನಿಸುವೆವೆಂದೂ ಅದು ಸಾಧ್ಯವಾಗದಿದ್ದರೆ ಶಾಸನ ಸಭೆಗೆ ರಾಜಿನಾಮೆ ಕೊಟ್ಟು ಬಂದು ಹೊಸ ಚುನಾವಣೆಗೆ ಅನುಮತಿಸುವೆವೆಂದೂ ಸ್ಪಷ್ಟಪಡಿಸಿದರು. ಈ ಕಾರಣದಿಂದ ಕಾಂಗ್ರೆಸ್ ಕೊಡಗು ಶಾಸನ ಸಭೆಯ ೨೪ ಸೀಟುಗಳಲ್ಲಿ ೧೫ನ್ನು ಕಾಂಗ್ರೆಸ್ ಪಡೆಯುವಂತಾಯಿತು. ಪ್ರತ್ಯೇಕ ಪಕ್ಷಕ್ಕೆ ೯ ಸ್ಥಾನಗಳು ದೊರೆತವು. ಕಾಂಗ್ರೆಸ್ ಉಮೇದುವಾರರು ಮೇಲಿನ ಹೇಳಿಕೆಯನ್ನು ತಮ್ಮ ಚುನಾವಣಾ ಘೋಷಣೆಯಲ್ಲಿ ಮಾಡಿದ ಕಾರಣ ಅಧಿಕೃತ ಕಾಂಗ್ರೆಸ್ ಉಮೇದುವಾರರಿಗೂ ಪ್ರತ್ಯೇಕ ಪಕ್ಷದ ಉಮೇದುವಾರರಿಗೂ ಇದ್ದ ಅಭಿಪ್ರಾಯ ವ್ಯತ್ಯಾಸವು ಇಲ್ಲವಂತಾಗಿದೆ. ಈಗ ಶಾಸನ ಸಭೆಯಲ್ಲಿ ಕಾಂಗ್ರೆಸಿಗೆ ಬಹುಮತ ದೊರಕಿರುವುದರಿಂದ ಅದು ಮಂತ್ರಿ ಮಂಡಳವನ್ನು ರಚಿಸಿದೆ. ಕಾಂಗ್ರೆಸಿನ ತತ್ವಗಳಲ್ಲಿ ಪೂರ್ಣ ವಿಶ್ವಾಸವಿರುವ ಮತ್ತು ಪಂಡಿತ ನೆಹರೂರವರ ಮುಂದಾಳ್ತನದಲ್ಲಿ ಭರವಸೆ ಇರುವ ಕೊಡಗು ಪ್ರತ್ಯೇಕ ಪಕ್ಷದ ಉಮೇದುವಾರರು ಇಂದು ಕಾಂಗ್ರೆಸ್ ಮಂತ್ರಿಮಂಡಳಕ್ಕೆ ವಿರುದ್ಧವಾಗಿ ಪಕ್ಷ ಕಟ್ಟಿಕೊಳ್ಳಲು ಕಾರಣವೂ ಕಾಣುವದಿಲ್ಲ. ಆದ್ದರಿಂದ ಪ್ರತ್ಯೇಕವಾದಿ ಪಕ್ಷದ ಕಾರ್ಯಕಾರಿ ಮಂಡಳಿಯು ತಮ್ಮ ತಾ. ೧೧-೪-೫೨ರ ಮೀಟಿಂಗಿನಲ್ಲಿ ತಾವು ಕಾಂಗ್ರೆಸ್ಸಿಗೆ ರಾಜಿನಾಮೆ ಕೊಟ್ಟಾಗ ಸ್ಪಷ್ಟಪಡಿಸಿದ್ದಕ್ಕನುಗುಣವಾಗಿಯೂ ಅಧಿಕೃತ ಕಾಂಗ್ರೆಸ್ ಸದಸ್ಯರು ತಮ್ಮ ಚುನಾವಣಾ ಘೋಷಣೆಯಲ್ಲಿ ಕೊಡಗಿನ ಭವಿಷ್ಯದ ಬಗ್ಗೆ ಕೊಟ್ಟಿರುವ ಹೇಳಿಕೆಯನ್ನನುಲಕ್ಷಿಸಿಯೂ, ಮತ್ತು ಕಾಂಗ್ರೆಸ್ ತತ್ವದಲ್ಲಿ ನಂಬಿಕೆ ಇರುವವರು ಪುನಹ ಕಾಂಗ್ರೆಸ್ಸಿಗೆ ಸೇರಿ ಅದನ್ನು ಬಲಪಡಿಸಬೇಕೆಂಬ ಕಾಂಗ್ರೆಸ್ ಪ್ರೆಸಿಡೆಂಟರಾದ ಪಂಡಿತ ಜವಾಹರಲಾಲರ ಅಪೀಲನ್ನು ಅನುಸರಿಸಿಯೂ ಕಾಂಗ್ರೆಸ್ಸಿಗೆ ಪುನಹ ಸೇರಿ ಕಾಂಗ್ರೆಸ್ಸನ್ನು ಬಲಪಡಿಸುವದಲ್ಲದೆ ಕಾಂಗ್ರೆಸ್ ಮಂತ್ರಿ ಮಂಡಳಕ್ಕೆ ಸಹಕಾರವನ್ನೀಯಲು ನಿರ್ಣಯಿಸಿದೆ. ಈ ತೀರ್ಮಾನವನ್ನು ಕಾಂಗ್ರೆಸ್ ಪ್ರೆಸಿಡೆಂಟರಾದ ಪಂಡಿತ ನೆಹರೂರವರಿಗೂ ಸ್ಥಳೀಯ ಶಾಸನ ಸಭಾ ಕಾಂಗ್ರೆಸ್ ಪಕ್ಷದ ಮುಂದಾಳುಗಳಿಗೂ ತಿಳಿಸಲಾಗಿದೆ.

ಪಿ. ಐ. ಬೆಳ್ಯಪ್ಪ.

ಗಾಂಧೀಜಿಯ ವಿಗ್ರಹದ ಅಚ್ಚು ಕದ್ದರು.

ನ್ಯೂ ಡಿಲ್ಲಿಯಲ್ಲಿ ಶ್ರೀ. ಬಿ ಸನ್ಯಾಲ್ ಎಂಬ ಪ್ರಸಿದ್ಧ ಚಿತ್ರಗಾರ ಹಾಗು ಶಿಲ್ಪಿಯ ಸ್ಟುಡಿಯೊ ಹೆಸರು ಹೋಲುವದು ಇತ್ತೀಚೆಗೆ, ಆ ಸ್ಟುಡಿಯೊದಲ್ಲಿ ಕಳ್ಳರು ನುಗ್ಗಿ ಸನ್ಯಾಲರು ಮಾಡಿಟ್ಟ ಕೆಲವು ಸುಂದರ ವಿಗ್ರಹಗಳ ಪ್ಲಾಸ್ಟರ್ ಆಫ್ ಪ್ಯಾರಿಸ್ ಅಚ್ಚುಗಳನ್ನು ಕದ್ದೊಯ್ದರು. ಆ ಅಚ್ಚುಗಳಲ್ಲಿ ಹೇಗ್‌ಡಲ್ಲಿರುವ ಅಂತರ್ರಾಷ್ಟ್ರೀಯ ಶಾಂತಿಭವನದಲ್ಲಿರಿಸುವ ಬಗ್ಗೆ ತಯಾರಾಗುತ್ತಿದ್ದ ಗಾಂಧೀಜಿಯವರ ಅರ್ಧ ದೇಹಾಕೃತಿಯ ಅಚ್ಚು ಒಂದಾಗಿತ್ತು.

ಶಾಲೆಗಳಿಗೆ ರೇಡಿಯೊ ಸಲಕರಣೆ.

ಮದ್ರಾಸು ಸರಕಾರದ ಶಿಕ್ಷಣ ಇಲಾಖೆಯವರು ಕಳೆದ ತಿಂಗಳಲ್ಲಿ ಸುಮಾರು ೧೭೭ ರೇಡಿಯೊ ಸೆಟ್ಟುಗಳನ್ನು ಹೈಸ್ಕೂಲು ಮತ್ತು ಟ್ರೈನಿಂಗ್ ಶಾಲೆಗಳಿಗೆ ಒದಗಿಸಿದರು. ರೇಡಿಯೊ ಯಂತ್ರದ ಖರ್ಚಿನಲ್ಲಿ ಅರ್ಧದಷ್ಟು ಮಾತ್ರ ಶಾಲಾ ಆಡಳಿತ ಮಂಡಲದವರು ವಹಿಸಿದರು. ಉಳಿದ ಅರ್ಧವನ್ನು ಸರಕಾರವು ಕೊಡುವುದು. ಈಗ ಮದ್ರಾಸು ಸಂಸ್ಥಾನದಲ್ಲಿ ೩೫೦ ಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ರೇಡಿಯೋ ಸಲಕರಣದ ಸೌಕರ್ಯವಿದೆ.

ಕಮ್ಯುನಿಸ್ಟರ ಭೀಕರ ಧಾಳಿಯ ಸಿದ್ಧತೆ?

"ಕಮ್ಯುನಿಸ್ಟರು ಕೊರಿಯಾದಲ್ಲಿ ಭೀಕರ ದಾಳಿಯನ್ನು ಹೂಡುವರೆಂದು ನಂಬಿದ್ದೇನೆ. ಆದರೆ ಆ ದಾಳಿಯು ಭೀಕರತೆಯು ೧೦ ದಿನಗಳಿಗೆ ಮಿಕ್ಕಲಾರದು' ಹೀಗೆಂದು ಅಮೇರಿಕೆಯ ೮ನೇಯ ಸೈನ್ಯದ ಮುಖ್ಯಾಧಿಕಾರಿ ಜನರಲ್ ಜೇಮ್ಸ್ ವ್ಯಾನ್ ಫ್ಲೀಟರು ತಾವು ಕೊರಿಯಾಕ್ಕೆ ಆಗಮಿಸಿದ ಒಂದು ವರ್ಷದ ಸಮಾಪ್ತಿಯನ್ನು ವರದಿಗಾರರೆದುರು ಹೇಳಿದರು.

ಅವರು ಮುಂದೆ ಸಾಗಿ—ಕಮ್ಯುನಿಸ್ಟರು ಒಂದು ವಾರ ಇಲ್ಲವೆ ೧೦ ದಿನಗಳವರೆಗೆ ಒತ್ತಡವನ್ನು ಹೆಚ್ಚಿಸಬಲ್ಲರು. ಅದಕ್ಕಿಂತ ಹೆಚ್ಚಿನ ಒತ್ತಡ ಇವರಿಂದ ಸಾಧ್ಯವಿಲ್ಲ.

೧೯೫೧ರ ವರ್ಷದ ಅವಧಿಯಲ್ಲಿ ಅಮೇರಿಕನ್ ಸೈನ್ಯವು ಕಮ್ಯುನಿಸ್ಟರಲ್ಲಿ ೩೧೦೦೦೭ ಜನರನ್ನು ಕೊಂದದ್ದಲ್ಲದೆ ೧೮೮೫೨೪ ಜನರಿಗೆ ಗಾಯಗೊಳಿಸಿತು. ಹಾಗೂ ೨೭೯೩೭ ಜನರನ್ನು ಬಂಧಿಸಿತು. ಕಮ್ಯುನಿಸ್ಟರ ೮೦ ಲಕ್ಷ ಪೌಂಡು ಭಾರದ ಮದ್ದು ಗುಂಡುಗಳನ್ನೂ ೨೫೦೦೦ ಇತರ ಶಸ್ತ್ರಾಸ್ತ್ರಗಳ ಯಂತ್ರಗಳನ್ನೂ ೯೦೦೦ ಸಣ್ಣ ದೊಡ್ಡ ಮೆಶೀನ್‌ಗನ್ನುಗಳನ್ನೂ ೧೨೦೦೦ ಸಬ್‌ಮೆಶೀನ್ ಗನ್ನುಗಳನ್ನೂ ೫೦೦೦ ರೈಫಲ್ಲುಗಳನ್ನೂ ಅಲ್ಲದೆ ಸೈನ್ಯವು ಒಂದು ವರ್ಷದಲ್ಲಿ ನಾಶಗೊಳಿಸಿತು. ಆದರೆ ಒಂದು ವರ್ಷದ ಅವಧಿಯಲ್ಲಿ ಯುಕ್ತ ರಾಷ್ಟ್ರ ಸಂಘದ ೬೦೦೦೦ ಜನರಿಗೆ ಸಾವು ನೋವುಗಳಾದವು.

ಕೊರಿಯಾದ ಸ್ವತಂತ್ರ ಪ್ರಜಾ ರಾಜ್ಯವನ್ನು ಕಮ್ಯುನಿಸ್ಟರ ಆಕ್ರಮಣದಿಂದ ಸ್ವತಂತ್ರಗೊಳಿಸಿ, ರಾಜ್ಯಾಳಿಕೆಯ ವಿಷಯದ ಸಾಂಘಿಕತೆಯನ್ನು ಕಟ್ಟುವುದೇ ನಮ್ಮ ಉದ್ದೇಶವಾಗಿದೆ. ಗೆಲುವು ಯಾರಿಗೆ? ಸೈನಿಕರ ಒಪ್ಪಂದದ ಕೆಲಸವಾಗುವುದೆಂದು ನಾನು ನಂಬಿದ್ದೇನೆ. ಆದೇನೇ ಇದ್ದರೂ, ನಮ್ಮ ವ್ಯೂಹದಷ್ಟು ಸಾಗಿ ಅವರು ಬಂದರೆ ನಾವು ಸಿದ್ಧರಿರುವೆವೆಂಬುದನ್ನು ಕಮ್ಯುನಿಸ್ಟ ಧಾಳಿಗಾರರು ಅರಿತುಕೊಳ್ಳಲಿ' ಎಂದರು.

ಸಿಂಹಳದ ಭಾರತೀಯರಿಂದ ಚಳುವಳಿ?

ಸಿಂಹಳದಲ್ಲಿರುವ ಭಾರತೀಯರ ಮತದಾನದ ಹಕ್ಕಿನ ಬಗ್ಗೆ ಸಿಂಹಳ ಸರಕಾರವು ವಹಿಸಿರುವ ಧೋರಣೆಯನ್ನು ಬದಲಾಯಿಸುವಂತೆ ನೈತಿಕ ಒತ್ತಾಯ ಬೀರಲು ಸಿಂಹಳ ಭಾರತೀಯ ಕಾಂಗ್ರೆಸು ಅಹಿಂಸಾತ್ಮಕ ಚಳವಳಿಯನ್ನು ಪ್ರಾರಂಭಿಸುವ ಸಂಭವವಿದೆಯೆಂದು ಕೊಲಂಬೋ ಭಾರತೀಯ ರಾಜಕೀಯ ವ್ಯಕ್ತಿಗಳು ಸೂಚಿಸಿವೆ.

ಹಿಂದೆ ಮತದಾನದಲ್ಲಿ ಭಾಗವಹಿಸಿರುವ ಸುಮಾರು ೭೦೦,೦೦೦ ಭಾರತೀಯರು ತಮ್ಮ ಹಕ್ಕುಗಳನ್ನು ಕಳೆದುಕೊಂಡಂತಾಗಿರುವುದರಿಂದ ಭಾರತೀಯರಲ್ಲಿ ತೀವ್ರ ಅಸಮಾಧಾನ ಮೂಡಿದೆಯೆಂದು ಆ ವ್ಯಕ್ತಿಗಳು ತಿಳಿಸಿವೆ.

೧೯೫೦ರ ಮತದಾರ ಯಾದಿಯು ಅಪೂರ್ಣವಾಗಿರುವುದರಿಂದ ಮೇಲಿನ ಭಾರತೀಯರು ಬರುವ ಚುನಾವಣೆಗಳಲ್ಲಿ ಮತದಾನ ಮಾಡಲು ಅವಕಾಶ ಕೊಡಬೇಕೆಂದು ಸಿಂಹಳ ಭಾರತೀಯ ಕಾಂಗ್ರೆಸ್ಸು ಮುಖ್ಯ ಮಂತ್ರಿ ಶ್ರೀ. ಡಡ್ಲಿ ಸೇನಾನಾಯಕೆಯವರಿಗೆ ಕೋರಿಕೆ ಕಳುಹಿಸಿದೆ.

ಬಾದುಲ್ಲಾದಲ್ಲಿ ಇದೇ ತಿಂಗಳ. ಕಾಂಗ್ರೆಸಿನ ಅಧಿವೇಶನವು ಸೇರುವ ಮೊದಲು ಈ ಕೋರಿಕೆಗೆ ಉತ್ತರ ಕಳುಹಿಸಬೇಕೆಂದೂ ಅದು ಸೂಚಿಸಿದೆ. ಡಡ್ಲಿ ಸೇನಾನಾಯಕೆಯವರ ಉತ್ತರ ತಲುಪಿದ ಮೇಲೆ ಕಾಂಗ್ರೆಸ್ ಕಾರ್ಯಸಮಿತಿ ಈಗ ಯೋಚಿಸಿರುವ ಕಾರ್ಯಕ್ರಮದ ಪುನರ್ವಿಮರ್ಶೆ ಮಾಡುವುದೆಂದೂ ಹೇಳಲಾಗಿದೆ.

ಸಿಂಹಳದ ಆರ್ಥಿಕ ಅಭ್ಯುದಯಕ್ಕೆ ಹೆಚ್ಚಿನ ಸಹಾಯ ನೀಡಿರುವ ಲಕ್ಷ ಭಾರತೀಯರ ವಿಷಯಕ್ಕೆ ಮುಖ್ಯ ಮಂತ್ರಿ ಡಡ್ಲಿ ಸೇನಾನಾಯಕೆಯವರು ಸಹಾನುಭೂತಿಯಿಂದ ಪರಿಶೀಲಿಸುವರೆಂದು ಆಶಿಸಲಾಗಿದೆಯೆಂದು ಕಾಂಗ್ರೆಸಿನ ವಕ್ತಾರನು ತಿಳಿಸಿದನು.

ಸರಕಾರದೊಡನೆ ಸಂಧಾನ ಮಾರ್ಗಗಳೆಲ್ಲ ನಿರರ್ಥಕವಾಗಿವೆಯೆಂದೂ ಸಿಂಹಳದ ಭಾರತೀಯರ ಹಕ್ಕನ್ನು ರಕ್ಷಿಸಲು ಬೇರೆ ನಿರ್ಣಾಯಕ ಕ್ರಮವನ್ನು ನಿರ್ಧರಿಸುವುದು ಅಗತ್ಯವಾಗಿದೆಯೆಂದೂ ಅವರು ತಿಳಿಸಿದರು.

ವಿಶ್ವಸಂಗೀತ ಸಮ್ಮೇಳನ.

ಜಾಗತಿಕ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಪ್ಯಾರಿಸಿನಲ್ಲಿ ನಡೆಯಲಿರುವ ಜಾಗತಿಕ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸುವುದರ ಬಗ್ಗೆ ಮೈಸೂರಿನ ಸುಪ್ರಸಿದ್ಧ ಪಿಟೀಲು ವಿದ್ವಾಂಸರಾದ ಸಂಗೀತ ರತ್ನ ಶ್ರೀ ಟಿ. ಚೌಡಯ್ಯನವರಿಗೆ ಆಮಂತ್ರಣ ಬಂದಿರುವುದಾಗಿ ತಿಳಿದುಬಂದಿದೆ.

ಅಮುಲ ದೇಸಾಯಿಯವರ ಅಪೀಲು.

ಮಹಾಚುನಾವಣೆಗಳಲ್ಲಿ ಮುಂಬಯಿಯ ಗೃಹ ಮಂತ್ರಿ ಶ್ರೀ ಮೊರಾರ್ಜಿ ದೇಸಾಯಿಯವರನ್ನು ಸೋಲಿಸಿದ ಸಮಾಜವಾದಿ ಧುರೀಣ ಡಾ. ಅಮುಲ ದೇಸಾಯಿಯವರು ತಮ್ಮ ಮೇಲೆ ಚುನಾವಣಾ ಕಮಿಷನು ವಿಧಿಸಿರುವ ಅನರ್ಹತೆಯ ವಿರುದ್ಧ ಮುಖ್ಯ ಚುನಾವಣಾ ಕಮಿಷನ್ನರಲ್ಲಿ ಅಪೀಲು ಹೋಗಲಿರುವರೆಂದು ಇಂದು ತಿಳಿದುಬಂದಿದೆ.

ಚುನಾವಣಾ ವೆಚ್ಚದ ವಿವರವನ್ನು ನಿರ್ದಿಷ್ಟ ಅವಧಿಯೊಳಗೆ ಮತ್ತು ಸರಿಯಾದ ರೀತಿಯಲ್ಲಿ ಸಲ್ಲಿಸದಿದ್ದುದರಿಂದ ಅವರನ್ನು ಇನ್ನೈದು ವರ್ಷಗಳ ವರೆಗೆ ಸ್ಪರ್ಧೆಗೆ ಅನರ್ಹರೆಂದು ಚುನಾವಣಾ ಕಮಿಷನ್ನು ಸಾರಿತ್ತು. ಚುನಾವಣಾ ಕಮಿಷನರು ಅನರ್ಹತೆಯ ಬಗ್ಗೆ ಸಾರಿರುವುದು ಸರಿಯಲ್ಲವೆಂದೂ ಮುಖ್ಯ ಚುನಾವಣಾ ಕಮಿಷನರು ವೆಚ್ಚ ತಡವಾಗಿ ಕೊಟ್ಟದ್ದನ್ನು ಕ್ಷಮಿಸುವ ಅಧಿಕಾರ ಪಡೆದಿರುವರೆಂದೂ ಡಾ. ದೇಸಾಯಿಯವರು ತಿಳಿಸಿದರು.

ಸ್ತುತ್ಯ ಮತ್ತು ಅನುಕರಣೀಯ.

ಕಳ್ಳಪೇಟೆ, ಕಳ್ಳ ಲೆಕ್ಕ [illegible], ರಾಷ್ಟ್ರದ ಆರ್ಥಿಕ ಧೋರಣೆಯನ್ನು ಹೊಂಚುಹಾಕಿ [illegible] ಕೆಡಿಸಿಕೊಳ್ಳುವಿಕೆ, ವ್ಯಾಪಾರಕ್ಕೆ ಸಂಬಂಧಿಸಿದ ಕಾಯಿದೆ ಕಾನೂನುಗಳ ಆಗುವಿಕೆಯನ್ನು ವಾಮಮಾರ್ಗದಿಂದ ಮೊದಲೇ ಗೊತ್ತುಪಡಿಸಿಕೊಳ್ಳುವಿಕೆ, ಸರಕಾರದೊಂದಿಗೆ ಮಾಡಿಕೊಂಡ ಕಂಟ್ರ್ಯಾಕ್ಟಿನಲ್ಲಿ ಮೋಸ ಮಾಡುವಿಕೆ ಮೊದಲಾದ ವ್ಯಾಪಾರೀ ಗತ್ತುಗಾರಿಕೆಯನ್ನು ಸಮೂಲ ನಿರ್ಮೂಲ ಮಾಡುವುದಕ್ಕೆಂದು ನೂತನ ಚೀನ ಸರಕಾರವು 'ಪಂಚ ವಿರೋಧಿ' ಆಂದೋಲನವನ್ನು ಹೂಡಿದೆಯಂತೆ. ಅದರ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದು ಅನೇಕ ವರ್ತಕರ ಮೋಸಗಳು ಬೈಲಿಗೆ ಬಂದು ಅವರಿಗೆ ತಕ್ಕ ಶಾಸ್ತಿಯಾಗುತ್ತಿದೆಯೆಂದು ಚೀನದ ಒಂದು ವರ್ತಮಾನ ಹೇಳುತ್ತದೆ.

ಇದು ನಿಜವಿದ್ದರೆ ಇದೊಂದು ಸ್ತುತ್ಯ ಮತ್ತು ಅನುಕರಣೀಯ ಪ್ರಯತ್ನವೆಂದು ನಿರ್ವಿವಾದವಾಗಿ ಹೇಳಬಹುದಾಗಿದೆ. ಚೀನದಲ್ಲಿ ಆಗಾಗಲೇ ಸಾವಿರಾರು ಜನ ವರ್ತಕರು ತಮ್ಮ ತಪ್ಪುಗಳನ್ನು ಒಪ್ಪಿಕೊಂಡಿದ್ದು ಇದು ಈ ಆಂದೋಲನದ ಪರಿಣಾಮವಾಗಿದೆ. [illegible] ಸಂಶಯ ತೋರುವಂತಿಲ್ಲ.

ರಾಷ್ಟ್ರಾಧ್ಯಕ್ಷ ಪದಕ್ಕೆ ನಾಲ್ಕನೆಯ ಹುರಿಯಾಳು

ವಿಂಧ್ಯ ಪ್ರದೇಶ ಶಾಸನ ಸಭೆಯ ಸದಸ್ಯರಾದ ಶ್ರೀಮತಿ [illegible] ದೇವಿಯವರು ಸ್ವತಂತ್ರವಾದಿ ಪಕ್ಷದ ವತಿಯಿಂದ ರಾಷ್ಟ್ರಾಧ್ಯಕ್ಷ ಪದಕ್ಕೆ ನಾಮಪತ್ರ ಸಲ್ಲಿಸಿದರು. ಶ್ರೀಮತಿ [illegible] ದೇವಿಯವರು ೪೫ ವರ್ಷದವರು. [illegible] ಜನಾಂಗದವರಿದ್ದಾರೆ. ಅವರು ವಿಧವೆ ಇದ್ದು ಇಂಗ್ಲಿಷ್ ಅಭ್ಯಾಸ ಮಾಡಲು ಪ್ರಯತ್ನಿಸಿದ್ದಾರೆ. ಅವರ ನಾಮಪತ್ರಕ್ಕೆ ಸಹಿ ಹಾಕಲಿಲ್ಲವೆಂದು ನಾಮಪತ್ರವನ್ನು ತಿರಸ್ಕರಿಸಲಾಯಿತು.

ಲೆ. ಗವರ್ನರರ ಭಾಷಣದ ಕಾಲಕ್ಕೆ ಹಾಜರಾಗುವುದಿಲ್ಲ

ವಿಂಧ್ಯಪ್ರದೇಶ ಶಾಸನ ಸಭೆಯಲ್ಲಿ ಲೆ. ಗವರ್ನರ್ ಶ್ರೀ ಕೆ. ಸಂತಾನಂ ಅವರು ದಿ. [illegible] ಭಾಷಣ ಮಾಡುವ ಕಾಲಕ್ಕೆ ಶಾಸನ ಸಭೆಯ [illegible] ಸದಸ್ಯರು ಹಾಜರಾಗುವುದಿಲ್ಲವೆಂದು ಪಕ್ಷದ ಧುರೀಣ ಶ್ರೀ ಜಗದೀಶಚಂದ್ರ ಜೋಷಿಯವರು ತಾ. ೧೧ರಲ್ಲಿ ಹೇಳಿದರು. ಲೆ. ಗವರ್ನರ ಭಾಷಣದ ಮೇಲೆ ಚರ್ಚೆಯು ನಿರ್ಬಂಧವಿಲ್ಲವೆಂದು ಲೆ. ಗ. ಪ್ರಕಟಿಸಿದ್ದಾರೆ. ಅದರ ಮೇಲೆ ಚರ್ಚೆಯು ಎರಡು ದಿನ ನಡೆಯುವುದೆಂದು ಲೆ. ಗವರ್ನರರು ಶ್ರೀ ಜೋಷಿಯವರಿಗೆ ಭರವಸೆಯನ್ನು ಈ ಹಿಂದೆ ಕೊಟ್ಟಿದ್ದರು. ಗವರ್ನರರ ಪ್ರಕಟನೆಯ ಪ್ರತಿಭಟನಾರ್ಥವಾಗಿ ಸಮಾಜವಾದಿಗಳು ಶಾಸನ ಸಭೆಯಲ್ಲಿ ದಿ. [illegible]ರಂದು ಹಾಜರಾಗುವುದಿಲ್ಲವೆಂದು ಶ್ರೀ ಜೋಷಿಯವರು ಹೇಳಿದರು.

ಶೇಖ್ ಅಬ್ದುಲ್ಲಾ ಯಾರಿಗೂ ಹೆದರರು.

ಭಾರತದಲ್ಲಿ ಜಾತೀಯತೆಯು ನೆಲೆಸಿರುವ ವರೆಗೆ ಕಾಶ್ಮೀರವು ಭಾರತಕ್ಕೆ ಸೇರಿದುದು ನಿರ್ಬಂಧಿತ ಸ್ವರೂಪದ್ದಾಗಿ ಉಳಿಯುವದೆಂದು ಕಾಶ್ಮೀರದ ಮುಖ್ಯ ಮಂತ್ರಿ ಶೇಖ್ ಅಬ್ದುಲ್ಲಾ ತಾ. ೧೧ರಲ್ಲಿ ಜಮ್ಮುವಿನಲ್ಲಿ ಹೇಳಿದರು.

ಭಾರತದ ರಾಜ್ಯ ಘಟನೆಯನ್ನು ಕಾಶ್ಮೀರಕ್ಕೆ ಪೂರ್ತಿಯಾಗಿ ಅನ್ವಯಿಸುವುದು 'ಅವ್ಯವಹಾರ್ಯವಾದದ್ದು ಹುಡುಗಾಟಿಕೆಯದು ಹುಚ್ಚುತನದ್ದು' ಎಂದು ಅವರು ಹೇಳಿದರು.

ಅವರಿನ್ನು ಮುಂದೆ ಸಾಗಿ 'ಯಾವುದೇ [illegible] ಭಾರತಕ್ಕೆ ಸೇರುವುದು ನಮಗೆ ಬೇಕಾಗಿದೆ. ಭಾರತದಲ್ಲಿ ಜಾತೀಯತೆಯು ಗೋರಿಯಲ್ಲಿ [illegible] ನಾವು ಭಾರತದ ರಾಜ್ಯ ಘಟನೆಯನ್ನು ಸ್ವಾಗತಿಸುತ್ತೇವೆ. ಸಂರಕ್ಷಣೆ ಪರರಾಷ್ಟ್ರ ವ್ಯವಹಾರಗಳು ಸಂಪರ್ಕ ಈ ವಿಷಯಗಳಲ್ಲಿ ಭಾರತಕ್ಕೆ ಸೇರಿರುವೆವು. ಇನ್ನುಳಿದ ವಿಷಯಗಳಲ್ಲಿ [illegible] ಶೇಖ ಅಬ್ದುಲ್ಲಾ ಈ ಜಗತ್ತಿನಲ್ಲಿ ಯಾರಿಗೂ [illegible] ಭಾರತ [illegible] ಪಾಕಿಸ್ತಾನ [illegible] ಯಾರಿಗೂ ತಲೆ ಬಾಗಿಸನು' ಎಂದು ಹೇಳಿ [illegible] ಜನ [illegible] 'ಜವಾಹರಲಾಲ ಜಿಂದಾಬಾದ್' 'ಜಯ ಹಿಂದ್' ಎಂಬ [illegible] ಘೋಷಣೆಗಳು ಕೇಳಿಬಂದವು.

ಅ. ಭಾ. ಸರ್ವೋದಯ ಸಮ್ಮೇಳನ.

[illegible] ಸೇವಾಪುರ ಆಶ್ರಮದಲ್ಲಿ ಏಪ್ರಿಲ್ ೧೩–೧೪ ಮತ್ತು ೧೫ರಂದು [illegible] ಅಖಿಲ ಭಾರತ ಸರ್ವೋದಯ ಸಮ್ಮೇಳನವನ್ನು ಆಚಾರ್ಯ [illegible] ಉದ್ಘಾಟಿಸುವರು. ಸರ್ವೋದಯ ಸಮ್ಮೇಳನ [illegible] ಶ್ರೀ ಶಂಕರರಾವ್ ದೇವ್ ಅವರು ಅಧ್ಯಕ್ಷರಾಗಿರುವರು. ಆಗಮಿಸಿದ್ದಾರೆ.

ಈ ಪರಿಷತ್ತಿನಲ್ಲಿ [illegible] ಕಾರ್ಯಕರ್ತರು ಭಾಗವಹಿಸುವ ನಿರೀಕ್ಷೆಯಿದೆ.

ಬರೋಡದಲ್ಲಿ ಗಾಂಧಿ ಪ್ರತಿಮೆ ಸ್ಥಾಪನೆ.

ಮಹಾತ್ಮಾ ಗಾಂಧಿಯವರ [illegible] ಮೂರ್ತಿಯ ಚಿತ್ರವನ್ನು [illegible] ಪೂರ್ತಿ [illegible] ಬರೋಡಾದ [illegible] ದಲ್ಲಿ [illegible] ನಗರಸಭೆಯ [illegible] ತಿಳಿಸಲಾಗಿದೆ.

ಈ ಸ್ಮಾರಕ ಪ್ರತಿಮೆಯನ್ನು ನಗರಸಭೆಯು ಬರೋಡ ಗಾಂಧಿ ಸ್ಮಾರಕ ಸಮಿತಿಗೆ ಕೊಟ್ಟಿತ್ತು. ಪ್ರಸಿದ್ಧ ಜರ್ಮನ್ ಶಿಲ್ಪಿ ಡಾ. [illegible]ರವರು ನಿರ್ಮಿಸಿರುವ ಈ ಪ್ರತಿಮೆಗೆ ೪೦,೦೦೦ ರೂ. ಗಳಿಗಿಂತ ಹೆಚ್ಚು ಹಣ ವೆಚ್ಚವಾಗಿದೆಯೆಂದು ತಿಳಿಸಲಾಗಿದೆ.

ಡಿಸೆಂಬರಿನಿಂದ ಗ್ರಾಮಾಂತರಗಳಲ್ಲಿ ರೇಶನ್ ರದ್ದು.

ಮೈಸೂರಿನಲ್ಲಿ ಆಹಾರ ಧೋರಣದ ಪುನರ್ವಿಚಾರಣೆಯ ಬಗ್ಗೆ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಇತ್ತ ಹೇಳಿಕೆಯ ಬಗ್ಗೆ ಹೆಚ್ಚಿನ ವಿವರಣೆ ಕೊಡಲು ತಾ. ೧೦ರಲ್ಲಿ ಹೊರಬಿದ್ದ ಪತ್ರಿಕಾ ಪ್ರಕಟಣೆಯೊಂದರಲ್ಲಿ ಬೆಂಗಳೂರು, ಮೈಸೂರು, ಕೋಲಾರ ಚಿನ್ನದ ಗಣಿಗಳು, ದಾವಣಗೆರೆ ಮತ್ತು ಭದ್ರಾವತಿ ಉದ್ದಿಮೆ ಕೇಂದ್ರ ಈ ನಾಲ್ಕು ನಗರಗಳನ್ನು ಬಿಟ್ಟು ಸಂಸ್ಥಾನದ ಉಳಿದ ಎಲ್ಲಾ ಕಡೆಗಳಲ್ಲಿಯೂ [illegible] ರೇಶನ್ ಪದ್ಧತಿಯು ಮುಂದಿನ ಎತ್ತುವಳಿ ಕಾಲ ಅಂದರೆ ಬರುವ ಡಿಸೆಂಬರಿನಿಂದ ರದ್ದಾಗಲಿದೆಯೆಂದೂ ತಿಳಿಸಲಾಗಿದೆ. [illegible] ಪದ್ಧತಿಯನ್ನು ಕೂಡಲೆ ರದ್ದುಗೊಳಿಸುವುದರಿಂದ ಬಡ ಜನರಿಗೆ ಒದಗುವ ಕಷ್ಟಗಳನ್ನು ತಪ್ಪಿಸಲು ಡಿಸೆಂಬರು ವರೆಗೆ ಅದು ಉಳಿಯಲಿದೆಯೆಂದೂ ಹೇಳಲಾಗಿದೆ.

ಮುಂಬಯಿ ಮಂತ್ರಿಮಂಡಲ.

ಮುಂಬಯಿ [illegible] ಮುಖ್ಯಮಂತ್ರಿ ಶ್ರೀ ಬಿ. ಜಿ. ಖೇರರ ಇಂದು ತಮ್ಮ ಮಂತ್ರಿಮಂಡಲದ [illegible] [illegible] ಶಾಸನ ಸಭೆಯ ಮೊದಲ ಸಭೆ ಸೇರುವ ದಿನ ದಿ. ೧೭ ರಂದು [illegible] ಅಧಿಕಾರವನ್ನು ಬಿಟ್ಟುಕೊಡುವರು. ಶ್ರೀ. ಮ. ರಾರಜಿ ದೇಸಾಯಿ ಅವರ ನೇತೃತ್ವದಲ್ಲಿ ಮಂತ್ರಿ [illegible] ಹೊಸ ಮಂತ್ರಿಮಂಡಲವು ದಿ. ೧೭ ರಂದು ಪ್ರತಿಜ್ಞಾವಿಧಿ ನೆರವೇರಿಸುವ ನಿರೀಕ್ಷೆಯಿದೆ. ಹೊಸ ಮಂತ್ರಿಮಂಡಲದ [illegible] ಈಗಾಗಲೇ ಸಿದ್ಧವಾಗಿದೆಯೆಂದು ಹೇಳಲಾಗಿದೆ. ರಾಜ್ಯದ ನಾಲ್ಕು ಪ್ರದೇಶದ ಕಾಂಗ್ರೆಸ ಸಮಿತಿಗಳ ಅಧ್ಯಕ್ಷರುಗಳು [illegible] ಹೊಸ ಮಂತ್ರಿ ಮಂಡಲದಲ್ಲಿ [illegible] ಹೇಳಲಾಗಿದೆ. [illegible] ಮಂತ್ರಿಮಂಡಲದಲ್ಲಿ ೧೩ [illegible] ಮಂತ್ರಿಗಳೂ [illegible] ಉಪಮಂತ್ರಿಗಳೂ ಇರುವರು.

ರಾಜಾಜಿ ಮಂತ್ರಿಮಂಡಲದ ಪ್ರತಿಜ್ಞಾ ಸ್ವೀಕಾರ.

ತಾ. ೧೦ರಲ್ಲಿ ಶ್ರೀ ರಾಜಗೋಪಾಲಾಚಾರಿಯವರ ಮಂತ್ರಿಮಂಡಳವು ಗವರ್ನರ [illegible] ಪ್ರಕಾಶ [illegible] ನೇತೃತ್ವದಲ್ಲಿ ಕ್ಯಾಬಿನೆಟ್ [illegible] ಪ್ರತಿಜ್ಞಾವಿಧಿ ಜರುಗಿತು. [illegible] ಜನಿಕರು ಸೆಕ್ರೆಟೇರಿಯೆಟ ಭವನದಲ್ಲಿ [illegible] ಮಾರ್ಗವನ್ನೇ [illegible] ಶ್ರೀ. ರಾಜಗೋಪಾಲಾಚಾರಿಯವರು ಸೆಕ್ರೆಟೇರಿಯೆಟಿಗೆ [illegible] ಜನರು [illegible] ಅವರನ್ನು ಸ್ವಾಗತಿಸಿ [illegible]. ಶ್ರೀ ರಾಜಗೋಪಾಲಾಚಾರಿಯವರು ಪ್ರತಿಜ್ಞೆ ಸ್ವೀಕರಿಸುತ್ತಿರುವ ಬಗ್ಗೆ ಜನರ [illegible] ಮುಂದೆ [illegible] ಫೋಟೊ ತೆಗೆದುಕೊಳ್ಳುವದರಲ್ಲಿ ನಿರತರಾಗಿದ್ದರು. ರಾಜಾಜಿ ಮಂತ್ರಿಮಂಡಲದಲ್ಲಿ ಶ್ರೀ. ರಾಜಾಜಿ ಒಳಗೊಂಡು ೧೫ ಜನರಿದ್ದಾರೆ.

ಬಡವರೇ ಧನಿಕರಿಗಿಂತ ಉದಾರಿಗಳು!

ವಿನೋಬಾ ಭಾವೆಯವರು ತಾ. ೯ ರಲ್ಲಿ [illegible] ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತ ಭೂಮಿಯಿಲ್ಲದವರಿಗೆ ಜಮೀನು ಕೊಡುವುದರಲ್ಲಿ ಧನಿಕರಿಗಿಂತಲೂ ಬಡವರೇ ಹೆಚ್ಚು ಉದಾರಿಗಳಾಗಿ ವರ್ತಿಸಿರುವರೆಂದು ತಿಳಿದರು. ಅದಕ್ಕೆ ಕಾರಣವಾದರೂ ತಮ್ಮ ಸಭೆಗಳಲ್ಲಿ ಹೆಚ್ಚು ಮಂದಿ ಬಡವರೇ ಭಾಗವಹಿಸುತ್ತಿದ್ದು ತಮ್ಮ ಭೂದಾನದ [illegible] ತತ್ವವನ್ನು ಅನುಸರಿಸಲು [illegible] ವರಾಗಿರುವುದೇ ಇರಬೇಕೆಂದು ಅವರು ಹೇಳಿದರು. ಐಶ್ವರ್ಯದ ಸಂಪರ್ಕವು [illegible] ಮಾತಿನಲ್ಲಿ [illegible] ದುದರಿಂದ ಶ್ರೀಮಂತರು [illegible] ಕಾಲ ಅಗತ್ಯವೆಂದೂ ಅವರು ನುಡಿದರು. ತಮ್ಮ ಕಾರ್ಯಕ್ರಮವು ನಿಧಾನವಾಗಿ ಸಾಗುತ್ತಿರುವುದು [illegible] ನಿರಾಶೆಯುಂಟುಮಾಡಿಲ್ಲವೆಂದೂ ತಮ್ಮ ಉದ್ದೇಶವನ್ನು ಸಾಧಿಸಲು ಹೆಚ್ಚಿನ [illegible] ಪಡಿಸಲಿರುವುದಾಗಿಯೂ ಅವರು ತಿಳಿಸಿದರು.

ಅಧ್ಯಕ್ಷಪದಕ್ಕೆ ಸ್ಪರ್ಧೆ.

ರಾಷ್ಟ್ರಾಧ್ಯಕ್ಷ ಪದಕ್ಕೆ ಡಾ. ರಾಜೇಂದ್ರಪ್ರಸಾದ [illegible] ನಾಮಪತ್ರವನ್ನು ಶ್ರೀ [illegible] ಲಾಲ ನೆಹರೂ ಅವರು ತಾ. ೧೦ರ [illegible] ಸಲ್ಲಿಸಿದರು. ಡಾ. ರಾಜೇಂದ್ರಪ್ರಸಾದ [illegible] ಹೆಸರು ಶ್ರೀ. ನೆಹರೂ ಅವರಿಂದ ಸೂಚಿಸಲ್ಪಟ್ಟಿದ್ದರೆ, ಮೌಲಾನಾ ಆಜಾದ [illegible] ಅನುಮೋದಿಸಿದ್ದಾರೆ.

[illegible] ನಾಮಪತ್ರವನ್ನು ಸಲ್ಲಿಸಿದ್ದಾರೆ. ಡಾ. ರಾಜೇಂದ್ರಪ್ರಸಾದ ಪ್ರೊ. ಕೆ. ಟಿ. ಶಹಾ ಮತ್ತು [illegible] ಎಪ್ರೋಟೆಸ್ಟೆಂಟರಾದ ಶ್ರೀ. ಹರಿರಾಮ [illegible] ಇದ್ದಾರೆ. ಪಂಜಾಬ ಅಸೆಂಬ್ಲಿಗೆ [illegible] ಶ್ರೀ [illegible] ಮತ್ತು ಶ್ರೀ. [illegible] ಇವರು ಶ್ರೀ [illegible] ನ ಸೂಚನೆ [illegible] ಅನುಮೋದನೆ [illegible] ದ್ದಾರೆ.

ರಾಷ್ಟ್ರಾಧ್ಯಕ್ಷ ಪದಕ್ಕೆ ಸ್ಪರ್ಧಿಸಲು [illegible] ಪತ್ರ ಸಲ್ಲಿಸಿದ ಶ್ರೀ ಹರಿರಾಮರು ೧೦೦೦ ಪದಗಳ ಪತ್ರಿಕಾ ಪ್ರಕಟಣೆಯಲ್ಲಿ [illegible] ನಿರ್ಧಾರದ [illegible] ಸಮ್ಮೇಳನ [illegible] ತಾವು [illegible] ಧ್ಯೇಯದಲ್ಲಿ [illegible] ಭಾರತ [illegible] ಪಾಕಿಸ್ತಾನ, ಸಿಲೋನ ಮತ್ತು ಬರ್ಮಾಗಳನ್ನೊಳಗೊಂಡ ಭಾರತದ ನಕಾಶೆಯಿದೆಯೆಂದೂ ಹೇಳಿದ್ದಾರೆ.

ಅವರ ೧೪ ಸೂತ್ರಗಳ ಧೋರಣಾ ಪತ್ರಿಕೆಯಲ್ಲಿ ರಾಮರಾಜ್ಯದ ಸ್ಥಾಪನೆ, ನಿಯಂತ್ರಣಗಳ ರದ್ದತಿ, [illegible] ವಿರುದ್ಧ ಚಳವಳಿ ಮತ್ತು [illegible] ಆಣೆಕಟ್ಟಿನ ರಚನೆ ಇವೆಲ್ಲ ಒಳಗೊಂಡಿವೆ.

'ನನಗೆ ಗೊತ್ತು ನನಗೆ ಕೆಲವೇ ಮತಗಳೆ [illegible] ವರಾದರೂ ಸರಿ ಆದರೆ ರಾಷ್ಟ್ರದ ಚುನಾಯಿತ ಮೇಧಾವಿಗಳ ಮುಂದೆ ನನ್ನ ಅಭಿಪ್ರಾಯವನ್ನು ಕೊಡಬೇಕಾಗಿದೆ' ಎಂದು ಅವರು ಹೇಳಿದ್ದಾರೆ.

ಅಕ್ಕಿ ಗಿರಣಿಯವರಿಗೆ
ದೊರೆಯುವ ಲಾಭಗಳು.

ಕೊಡಗಿನ ಅಕ್ಕಿ ಗಿರಣಿ ಮಾಲೀಕರು ಸ್ಥಳೀಯ ರೇಷನ್ ಅಂಗಡಿಗಳಿಗೆ ಕೊಡುವ ಮತ್ತು ಹೊರ ಪ್ರಾಂತ್ಯಗಳಿಗೆ ಕಳುಹಿಸುವ ಅಕ್ಕಿಯಿಂದ ಗಳಿಸಬಹುದಾದ ನಫೆಯ ವಿಷಯ ಕೆಲವರು ಹಲವು ತರದ ಅಭಿಪ್ರಾಯಗಳನ್ನು ಸ್ಥಳೀಯ ಪತ್ರಿಕೆಗಳಲ್ಲೂ ಮತ್ತು ಸರ್ಕಾರಕ್ಕೆ ಅರ್ಜಿಯ ರೂಪದಲ್ಲೂ ಬರೆಯುತ್ತಲಿರುವರು.

ನಾವು ಈ ಬಗ್ಗೆ ಸೂಕ್ಷ್ಮದಲ್ಲಿ ನಿಜ ಸಂಗತಿಗಳನ್ನು ಕೊಡುವದಾಗಿದೆ. ಕೊಡಗಿನ ರೇಷನ್ ಅಂಗಡಿಗೆ ಅಕ್ಕಿ ಕೊಡುವುದಕ್ಕೆ ತಾಗುವ ಸರಾಸರಿ ಖರ್ಚಿನ ವಿವರ ಈ ಕೆಳಗೆ ಬರೆಯಲ್ಪಟ್ಟಿದೆ.

ಒಂದು ಗಾಡಿ ಬತ್ತದ ಕ್ರಯ ರೂ. ೨೧೩-೬-೦ ಗಾಡಿ ಬತ್ತವನ್ನು ಮಿಲ್ಲಿಗೆ ಸಾಗಿಸುವ ಸರಾಸರಿ ಖರ್ಚು ರೂ. ೧೨, ತಾಗುವ ಸರಾಸರಿ ಮಿಲ್ಲು ಚಾರ್ಜು ರೂ. ೧೨, ಸರಾಸರಿ ಲೋಡಿಂಗ್ ಮತ್ತು ಅನ್‌ಲೋಡಿಂಗ್ ರೂ. ೩, ಮೂಳಿಗೆ ಬಾಡಿಗೆ ಸರಾಸರಿ ರೂ ೫, ಒಂದು ಗಾಡಿ ಬತ್ತದ ಅಕ್ಕಿಯನ್ನು ರೇಷನ್ ಅಂಗಡಿಗಳಿಗೆ ಸಾಗಿಸುವ ಸರಾಸರಿ ಖರ್ಚು ರೂ. ೧೦ ಒಟ್ಟು ರೂ. ೨೫೪-೬-೦. ಒಂದು ಗಾಡಿ ಬತ್ತಕ್ಕೆ ಸರಾಸರಿ ೬ ಪಲ್ಲ ೨೦ ಸೇರಿನಂತೆ ಇಳುವರಿ ಪ್ರಕಾರ ಒಂದು ಪಲ್ಲ ಅಕ್ಕಿಯ ಕ್ರಯ ರೂ ೪೧-೦-೫.

ಈ ರೀತಿ ಇಳುವರಿಯು ಸರಾಸರಿ ೬ ಪಲ್ಲ ೨೦ ಸೇರಿನಂತೆ ಸರ್ಕಾರದವರು ಸಹ ಒಪ್ಪಲು ಕಾರಣವೇನೆಂದರೆ ಕೆಲವು ತರದ ಬತ್ತದಲ್ಲಿ ೬ ಪಲ್ಲ ೭೫ ಸೇರಿನ ವರೆಗೆ ಇಳುವರಿ ಬಂದರೆ ಇನ್ನು ಕೆಲವು ಬತ್ತದಲ್ಲಿ ೫ ಪಲ್ಲ ೫೦ ಸೇರಿನ ವರೆಗೂ ಇಳುವರಿ ಬರುವುದುಂಟು. ಆದುದರಿಂದ ೬ ಪಲ್ಲ ೨೦ ಸೇರು ಇಳುವರಿಯನ್ನು ಸರ್ಕಾರದವರು ಸರಾಸರಿಯಾಗಿ ತೆಗೆದುಕೊಂಡಿರುವರು.

ಮೈಸೂರು ಪ್ರಾಂತಕ್ಕೆ ಅಕ್ಕಿ ಸರಬರಾಯಿಯ ಖರ್ಚು.

ಒಂದು ಗಾಡಿ ಬತ್ತದ ಕ್ರಯ ಸರಾಸರಿ ರೂ. ೨೧೩-೬-೦. ಬತ್ತಕ್ಕೆ ತಾಗುವ ಮಿಲ್ಲು ಚಾರ್ಜ ರೂ ೧೨, ಬತ್ತವನ್ನು ಮಿಲ್ಲಿಗೆ ಸಾಗಿಸುವ ಖರ್ಚು ರೂ. ೧೨, ಇನ್ನಿತರ ಖರ್ಚು ರೂ ೩, ಸರ್ಕಾರಕ್ಕೆ ಕಮಿಷನ್ ಪ್ರಕಾರ ಸರಾಸರಿ ೧-೧೦-೦ ಒಂದು ಗಾಡಿ ಬತ್ತದ ಅಕ್ಕಿಯನ್ನು ಮೈಸೂರಿಗೆ ಸಾಗಿಸುವ ಖರ್ಚು ಸರಾಸರಿ ೧೩೨ ಮೈಲು ರೂ. ೧೬-೩-೭. ಒಟ್ಟು ರೂ. ೨೫೮-೩-೭

ಕೊಡಗಿನ ಅಳತೆ ಸೇರು ೧೧೮ ಆಗುವ ಮೈಸೂರಿನ ಅಳತೆ ಒಂದು ಪಲ್ಲಕ್ಕೆ ಬೀಳುವ ದರ ರೂ. ೪೮-೧೧-೬.

ಈ ರೀತಿಯಲ್ಲಿದ್ದರೂ ಸಹ ಮೈಸೂರು ಸರ್ಕಾರದವರು ಪಲ್ಲ ಒಂದಕ್ಕೆ ರೂ. ೪೬-೮-೦ ಪ್ರಕಾರ ಕೊಡುವುದಾಗಿ ಈ ವರೆಗೆ ಹೇಳುತ್ತಾರೆ. ಆದರೆ ಈ ದರವನ್ನು ನಾವು ಒಪ್ಪಿರುವುದಿಲ್ಲ. ಇನ್ನೂ ಚರ್ಚೆಯಲ್ಲಿದೆ.

ಮೇಲ್ಕಂಡಂತೆ ಎಲ್ಲಾ ಲೆಕ್ಕಗಳೂ ಇರುವುದಾದರೂ ಮಿಲ್ಲು ಮಾಲೀಕರು ಗಾಡಿ ಒಂದರ ರೂ ೫೦ರಂತೆ ಲೋಡು ಒಂದರ ರೂ ೩,೦೦ ವರೆಗೆ ಲಾಭ ಸಂಪಾದಿಸುತ್ತಿರುವರೆಂದೂ, ಕೆಲವರು ಮಿಲ್ ಮಾಲೀಕರ ಮೇಲೆ ಅಸೂಯೆಯಿಂದ ಬರಹ ರೂಪದಲ್ಲೂ, ಮಾತಿನಲ್ಲೂ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಕಳೆದ ವರ್ಷ ರೂಪಾಯಿಗೆ ೩ ಸೇರಿನಂತೆ ರೇಷನ್ ಅಂಗಡಿಗಳಲ್ಲಿ ಕೊಡುತಿದ್ದುದು ಈ ವರ್ಷ ಒಂದು ಗಾಡಿ ಬತ್ತಕ್ಕೆ ರೂ. ೨೩ ಜಾಸ್ತಿಯಾದುದಕ್ಕೆ ರೂ. ಗೆ ಎರಡುವರೆ ಸೇರಿನಂತೆ ಮಾರಲು ಕಾರಣವಿಲ್ಲವೆಂದು ಕೆಲವು ಜನರು ವಾದಿಸುತಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ ರೇಷನ್ ಅಂಗಡಿಗಳಿಗೆ ಅಕ್ಕಿ ಸರಬರಾಜು ಮಾಡಿದ್ದುದರಿಂದ ಮಿಲ್ಲು ಮಾಲೀಕರುಗಳಿಗೆ ಉಂಟಾದ ನಷ್ಟದ ಪಟ್ಟಿಯನ್ನು ಈ ವರೆಗೆ ದೂಷಿಸಿದ ಮಹನೀಯರುಗಳು ಯಾರೂ ವ್ಯಕ್ತಪಡಿಸಿರುವುದಿಲ್ಲ. ಮತ್ತು ಸರಾಸರಿ ರೂ. ೧೦೦ ರಿಂದ ರೂ. ೧೫೦ ವರೆಗೆ ಗಂಟು ಕಳೆದುಕೊಂಡದ್ದರ ಬಾಬ್ತು ಕಯೂರಿಸುವ ಪಟ್ಟಿಯನ್ನು ಈ ವರೆಗೆ ಇಂಥ ಮಹನೀಯರುಗಳು ಸರ್ಕಾರಕ್ಕಾಗಲೀ ಯಾ ಪತ್ರಿಕೆಗಳಿಗಾಗಲೀ ಕಳುಹಿಸಿರುವುದಿಲ್ಲ. ಆದರೆ ಈ ವರ್ಷದ ರೇಷನ್ ಅಕ್ಕಿ ಸರಬರಾಜಿಯಲ್ಲಿ ಮಿಲ್ಲು ಮಾಲೀಕರು ತಮ್ಮ ಗಂಟನ್ನು ಕಳಕೊಳ್ಳದಿರಲಿ ಎಂದು ಪ್ರಾಂತೀಕ ಸರಕಾರದವರು ಒಂದು ರೀತಿಯ ತೀರ್ಮಾನವನ್ನು ಮಿಲ್ ಮಾಲೀಕರಿಗೆ ಕೊಟ್ಟಿದ್ದಾರೆ. ಆದುದರಿಂದ ಇದರ ವಿಚಾರವಾಗಿ ಅಸೂಯೆ ಪಡುವುದರಿಂದಲೂ ಯಾರ ಅಪಪ್ರಚಾರ ನಡೆಸುವದರಿಂದಲೂ ಮೇಲ್ಕಂಡ ಮಹನೀಯರುಗಳಿಗೆ ಯಾವ ಪ್ರಯೋಜನವೂ ಸಿಕ್ಕಲಾರದು.

ಹಾಗೆ ಮಿಲ್ಲು ಮಾಲೀಕರಿಗೆ ಲಾಭ ತಿನ್ನಲು ಕೊಡಬಾರದೆಂದಿದ್ದರೆ ಸರ್ಕಾರದವರು ಯಾಕೆ ಪ್ರಾಂತೀಕ ರಿಜರ್ವ ಇರುವ ಜವಾಬ್ದಾರಿಯನ್ನು ಹೊತ್ತುಕೊಂಡು ರೇಷನ್ ಅಂಗಡಿಗಳಿಗೆ ಅಕ್ಕಿ ಸರಬರಾಯಿ ಮಾಡಬೇಕೆಂದು ಹಲವು ಸಾರಿ ಕೌನ್ಸಿಲು ಸದಸ್ಯರು ಸರ್ಕಾರದವರನ್ನು ಕೇಳಿಕೊಳ್ಳಲಿಲ್ಲವೇ? ಲೆಕ್ಕ ಹಾಕಿ ಯಾ ಕಾರಣಕ್ಕಾಗಿ ಸರ್ಕಾರದವರು ಒಪ್ಪಲಿಲ್ಲ ರಿಜರ್ವ ಮಾಡಿಗುವುದರಿಂದ ಮಿಲ್ಲು ಮಾಲೀಕರುಗಳಿಗೆ ನಷ್ಟ ಕಷ್ಟವಿರುವದೂ, ವ್ಯಾಪಾರಕ್ಕೆ ಧಕ್ಕೆ ಬರುವುದೆಂದೂ, ಈಗ ಆದರೂ ಸರ್ಕಾರದವರು ಈ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕೆಂದು ನಾವು ಬೇಡಿಕೊಂಡರೂ ಸರ್ಕಾರದವರು ನಿರಾಕರಿಸಲು ಕಾರಣವೇನೆಂದು ಲೇಖಕರು ಈ ವರೆಗೆ ತಿಳಿಯಲಿಕ್ಕಾಗಬಾರದೇ?

ಮಿಲ್ಲು ಮಾಲೀಕರಿಗೂ, ರಿಜರ್ವ ಮತ್ತು ರೇಷನ್ ಸರಬರಾಜಿಗೂ ಸಂಬಂಧವೇನಿದೆ. ಈ ಜವಾಬ್ದಾರಿ ಸರಕಾರದಲ್ಲಿದೆ ಮಿಲ್ಲು ಮಾಲೀಕರದ್ದಲ್ಲದೆ. ಸರ್ಕಾರದವರು ಹುಲಿ ಚರ್ಮ ಹಾಕಿಕೊಂಡು ಬಡಪಾಯಿ ಮಿಲ್ಲು ಮಾಲೀಕರನ್ನು ಗದರಿಸಿ ನಡೆಸುತ್ತಿರುವ ವ್ಯವಸ್ಥೆ ಹೇಗಿದೆ ಎಂಬುದನ್ನು ಇನ್ನು ಮುಂದಾದರೂ ಲೇಖಕರು ಅರೋಯೋಗಕರು ಮತ್ತು ಅಪಪ್ರಚಾರಕರೂ ಸಹ ತಿಳಿಕೊಂಡು ಇನ್ನು ಮುಂದಾದರೂ ಲೆಕ್ಕಚಾರ ಹಾಕದೆ ಅಪಪ್ರಚಾರ ನಡೆಯದಿರಲಿ. ಎಂಬುದಾಗಿ ಈ ಪ್ರಕಟಣೆಯನ್ನು ಸಾರ್ವಜನಿಕರ ಅವಗಾಹನೆಯ ಬಗ್ಗೆ ಕೊಟ್ಟಿರುವುದಾಗಿದೆ.

ಎ ಎಸ್. ತಮ್ಮಯ್ಯ,
ಅಧ್ಯಕ್ಷ.

ಮೈಸೂರ ಮಂತ್ರಿಮಂಡಳ.
ಶಾಖೆಗಳ ವಿತರಣ.

ಮೈಸೂರು ಮಂತ್ರಿಗಳಿಗೆ ಹಂಚಿಕೊಟ್ಟ ಶಾಖೆಗಳ ವಿವರ ಈ ರೀತಿಯಾಗಿದೆಯೆಂದು ತಿಳಿದು ಬಂದಿದೆ.

ಮುಖ್ಯ ಮಂತ್ರಿ
ಶ್ರೀ ಕೆ. ಹನುಮಂತಯ್ಯ.

ಅರಮನೆ, ಹೈಕೋರ್ಟ್, ಪೊಲಿಟಿಕಲ್ ಸಿವಿಲ್ ಸರ್ವೀಸ್, ಅಠಾರ ಕಚೇರಿ, ಹಣಕಾಸು, ಆರ್ಥಿಕ ಸರ್ವೇಕ್ಷಣ ಮತ್ತು ಯೋಜನೆ, ನಿಮ್ನ ವರ್ಗದವರ ಕಾರ್ಯ, ಭೂಮಿಗಳ ರಿಕ್ವಿಸಿಷನ್ ಮತ್ತು ಡಿರಿಕ್ವಿಸಿಷನ್

ಶ್ರೀ. ಟಿ. ಸಿದ್ಧಲಿಂಗಯ್ಯ.

ಕೈಗಾರಿಕೆ ಮತ್ತು ವಾಣಿಜ್ಯ, ವಿದ್ಯುಚ್ಛಕ್ತಿ, ಟ್ರೇಡ್ ಕಮಿಷನರ ಕಛೇರಿ, ಕಬ್ಬಿಣ ಮತ್ತು ಉಕ್ಕು ಕಾರ್ಯಗಳು, ಸರ್ಕಾರ ಪ್ರೋತ್ಸಾಹಿತ ಕೈಗಾರಿಕೆಗಳು, ಗಂಧದ ಎಣ್ಣೆ ಕಾರಖಾನೆ, ವೈಜ್ಞಾನಿಕ ಮತ್ತು ಕೈಗಾರಿಕೆ ಸಂಶೋಧನೆ ಬೋರ್ಡ್, ಹೆಚ್ಚಿಗೆ ಸ್ಟೋರ್ಸಿನ ವಿಲೇವಾರಿ, ಕ್ಯಾಪಿಟಲ್ ಇಷ್ಯೂಸ್, ಜಾಯಿಂಟ್ ಸ್ಟಾಕ್ ಕಂಪನಿಗಳು, ಭೂಗರ್ಭಶಾಸ್ತ್ರ, ಖಾತೆ ಮತ್ತು ಗಣಿಗಳು, ಸ್ಟೋರ್ಸ್ ಪರ್ಚೇಸ್ ಕಮಿಟಿ, ಕಾರ್ಖಾನೆ ಪರಿಹಾರ, ವಾರ್‌ರಿಸ್ಕ್ಸ್ ಇನ್‌ಷ್ಯೂರೆನ್ಸ್ ಮತ್ತು ಲಂಚ ನಿರೋಧ.

ಶ್ರೀ. ಎ. ಜಿ. ರಾಮಚಂದ್ರರಾವ್.

ಲಾ, ಶಾಸನ, ಶಾಸನ ಸಭೆ, ಜೈಲು, ವಿದ್ಯಾಭ್ಯಾಸ, ವಿಶ್ವ ವಿದ್ಯಾಲಯ, ಕಾರ್ಮಿಕ ಖಾತೆ, ಭೂಸಂಶೋಧನಾ ಖಾತೆ, ವಸ್ತು ಪ್ರದರ್ಶನ, ಸೆನ್ಸಸ್, ಮಾರ್ಕೆಟ್, ಜನರಲ್ ಮಿಸಲೇನಿಯಸ್, ಪ್ರಾದೇಶಿಕ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ, ಸ್ಟಾಟಿಸ್ಟಿಕ್ಸ್, ಮ್ಯೂಸಿಯಂ, ನಿರಾಶ್ರಿತ ಪರಿಹಾರ ಮತ್ತು ಪುನರ್ವ್ಯವಸ್ಥೆ, ಪ್ರಿಂಟಿಂಗ್ ಮತ್ತು ಸ್ಟೇಷನರಿ, ಚುನಾವಣೆಗಳು, ಕೋರ್ಟ ಮತ್ತು ಎಕ್ಸ್‌ಟ್ರಾಡಿಷನ್.

ಶ್ರೀ ಟಿ ಚೆನ್ನಯ್ಯ.

ವೈದ್ಯಕೀಯ ಹಾಗೂ ಸಾರ್ವಜನಿಕ ಆರೋಗ್ಯ ಅರಣ್ಯ, ಜಿಲ್ಲಾ ಬೋರ್ಡುಗಳು, ಟೌನ್ ಬೋರ್ಡ್ಸ್, ಮತ್ತು ಸ್ಯಾನಿಟರಿ ಬೋರ್ಡ್ಸ್, ಪೌರಸಭೆಗಳು ಸಂಸ್ಥಾನದ ಅತಿಥಿಗಳು, ಗ್ರಾಮ ಪಂಚಾಯಿತಿಗಳು, ಗ್ರಾಮಾಭಿವೃದ್ಧಿ, ಅಬ್ಕಾರಿ, ಟ್ರಸ್ಟ್ ಬೋರ್ಡ್ಸ್ ಮತ್ತು ದೇಶೀಯ ವೈದ್ಯ.

ಶ್ರೀ. ಕಡಿದಾಳ್ ಮಂಜಪ್ಪ.

ರೆವಿನ್ಯೂ, ಮುಜರಾಯಿ, ಪಬ್ಲಿಕ್ ವರ್ಕ್ಸ, ಮರಾಮತ್ತಿಗೆ, ಸುಂಕ, ಸ್ಟಾಂಪ್ಸ್ ಮತ್ತು ರಿಜಿಸ್ಟ್ರೇಷನ್.

ಶ್ರೀ. ಎಚ್. ಸಿದ್ಧವೀರಪ್ಪ.

ಪೋಲಿಸ್, ಆಹಾರ, ವ್ಯವಸಾಯ, ಪಶುವೈದ್ಯ, ಮತ್ತು ಸಂಸತ್ತು ತೋಟಗಳು, ವ್ಯವಸಾಯ ಮಾರ್ಕೆಟ್‌ಗಳು, ಸಿರಿಕಲ್ಚರ್ ರೋಡ್ ಟ್ರಾನ್ಸ್‌ಪೋರ್ಟ, ಸಿವಿಲ್ ಏವಿಯೇಷನ್ ಮತ್ತು ಆಹಾರೋತ್ಪತ್ತಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸಿಟ್, ವಾರ್ಡನ್ ಮತ್ತು ವಿಶ್ವಭಾರತಿ ಇನ್ಸ್ಯೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಾಲದ ಶಾಖೆಯ ಮೂಲಕ ದೀರ್ಘ ಕಾಲದ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಪಿ. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

Edited Printed and Published by P. I. Belliappa at 'Kodagu' Press, Mercara, for 'Kodagu' Ltd.

ಕಂಡಿತ ನೈಜರೂರವರ ಮುಂದಾಳ್ತನದಲ್ಲಿ ವಿನ.
ಭರವಸೆ ಇರುವ ಕೊಡಗು ಪ್ರಾಂತೀಕ

ವ್ಯಕ್ತಗಳು ತಿಳಿಸಿವೆ.

LICENCE NO. 00.
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦ | ತಾರೀಖು ೨೫-೪-೧೯೫೨ನೇ ಶುಕ್ರವಾರ | ಸಂಚಿಕೆ ೪೫

THE JUBILEE INSURANCE CO., LTD.

One of the very few in the feild of Insurance that has been declaring BONUS to its policy holders from its very insception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmond Road, Bangalore.

Our Chief Agents:-THE ORIENTAL ENTERPRISES, BANGALORE I.

ಜುಬಿಲಿ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೆದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:-ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,
4 41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

ಜೀವನ ವೆಚ್ಚ ಮತ್ತು ಬೆಲೆಗಳ ಹೆಚ್ಚುವರಿ.

ನಾನಾ ರಾಷ್ಟ್ರಗಳಿಗೆ ಸಂಬಂಧಿಸಿದ ಸ್ವಾರಸ್ಯ ಅಂಕಿ ಅಂಶಗಳು.

1948–51ರ ತ್ರೈವಾರ್ಷಿಕ ಅವಧಿಯಲ್ಲಿ ಸಾಮಾನ್ಯವಾಗಿ ವಿಶ್ವದ ಎಲ್ಲ ರಾಷ್ಟ್ರಗಳಲ್ಲೂ ಜೀವನವೆಚ್ಚ ಮತ್ತು ಹೋಲ್ ಸೇಲ್ ಬೆಲೆಗಳ ವಿಪರೀತವಾಗಿ ಏರಿಹೋಗಿವೆ.

ಈ ಬಗ್ಗೆ ನಾನಾ ರಾಷ್ಟ್ರಗಳಿಗೆ ಸಂಬಂಧಿಸಿದಂತೆ ಸ್ವಾರಸ್ಯವಾದ ಅಂಕಿ ಅಂಶಗಳು ಈ ರೀತಿ ಇವೆ:—

ಆಸ್ಟ್ರಿಯಾದಲ್ಲಿ 1948ರಲ್ಲಿ ಸುಮಾರು 96 ಇದ್ದ ಬೆಲೆಗಳು 1951ರಲ್ಲಿ 200ರ ಸಂಖ್ಯೆಯನ್ನೂ ಮೀರಿ ಹೋಗಿದ್ದವು. 1949ರ ಮಧ್ಯಭಾಗದಲ್ಲಿ ಒಮ್ಮೆ ಬೆಲೆ ಸುಮಾರು 140ರಿಂದ 130ಕ್ಕೆ ಇಳಿದು ಬಿಟ್ಟಿತ್ತು. ಈ ದೇಶದಲ್ಲಿ ಜೀವನ ವೆಚ್ಚ 1948ರಲ್ಲಿ 95 ಇದ್ದುದು 1951ರಲ್ಲಿ 168ಕ್ಕೇರಿತ್ತು; 1949ರ ಅಂತ್ಯಭಾಗದಲ್ಲಿ ಒಮ್ಮೆ ಸುಮಾರು 148 ಇದ್ದ ಜೀವನ ವೆಚ್ಚ 136ಕ್ಕಿಳಿದು ಬಿಟ್ಟಿತ್ತು.

ಫಿನ್ಲೆಂಡಿನಲ್ಲಿ 1948ರ ಆರಂಭದಲ್ಲಿ 95 ಇದ್ದ ಬೆಲೆಗಳು 1951ರಲ್ಲಿ 155ಕ್ಕೆ ಏರಿದ್ದವು. ಈ ದೇಶದಲ್ಲಿ ಜೀವನವೆಚ್ಚ 1948ರಲ್ಲಿ 95 ಇದ್ದುದು 1951ರಲ್ಲಿ 132ಕ್ಕೇರಿತ್ತು. 1949ರ ಮಧ್ಯಭಾಗದಲ್ಲೊಮ್ಮೆ ಜೀವನವೆಚ್ಚ ಸುಮಾರು 98 ಮತ್ತು ಬೆಲೆಗಳು ಸುಮಾರು 96 ಇದ್ದವು.

ಸ್ಪೇನಿನಲ್ಲಿ 1948ರಲ್ಲಿ ಸುಮಾರು 99 ಇದ್ದ ಬೆಲೆಗಳು 1951ರಲ್ಲಿ 159ಕ್ಕೆ ಏರಿದವು. ಸುಮಾರು 100 ಇದ್ದ ಜೀವನವೆಚ್ಚ 129ಕ್ಕೇರಿತು.

ಗ್ರೀಸಿನಲ್ಲಿ 1948ರ ಆರಂಭದಲ್ಲಿ 95ಕ್ಕೂ ತುಸು ಕಮ್ಮಿ ಇದ್ದ ಹೋಲ್‌ಸೇಲ್ ಬೆಲೆಗಳು 1951ರಲ್ಲಿ 138ಕ್ಕೇರಿದವು. 1949ರ ಅಂತ್ಯಭಾಗದಲ್ಲೊಮ್ಮೆ 125ನ್ನು ಮುಟ್ಟಿದ ಬೆಲೆಗಳು 113ಕ್ಕಿಳಿದ್ದವು. ಅಲ್ಲದೆ 1949–50ರಲ್ಲಿ ಜೀವನ ವೆಚ್ಚದಲ್ಲಿ ಬಿರುಸಿನ ಏರಿಳಿತ ಕಂಡು ಬಂದಿತು.

ಬ್ರಿಟನ್ನಿನಲ್ಲಿ 1948ರ ಆರಂಭದಲ್ಲಿ 95ಕ್ಕಿಂತ ತುಸು ಹೆಚ್ಚಾಗಿದ್ದ ಹೋಲ್‌ಸೇಲ್ ಬೆಲೆಗಳು 1951ರಲ್ಲಿ 142ಕ್ಕೇರಿದವು. ಈಗ ಬೆಲೆಗಳು ಒಂದೇ ಸಮನೆ ಏರುತ್ತಿದೆ. ಜೀವನ ವೆಚ್ಚ ಮಾತ್ರ ಇತರ ದೇಶಗಳಿಗಿಂತಲೂ 1948ರಲ್ಲಿ 95 ಇದ್ದುದು 1951ರಲ್ಲಿ 110ಕ್ಕೂ ಸ್ವಲ್ಪ ಕಮ್ಮಿಯೇ ಇತ್ತು.

ಸ್ವೀಡನ್ನಿನಲ್ಲಿ 1948ರ ಆದಿಭಾಗದಲ್ಲಿ ಸುಮಾರು 97 ಇದ್ದ ಬೆಲೆಗಳು 1951ರಲ್ಲಿ 128ಕ್ಕೇರಿದ್ದವು. 1950ರ ಮಧ್ಯಭಾಗದ ನಂತರ ಇಲ್ಲಿನ ಬೆಲೆಗಳು ಒಂದೇ ಸಮನೆ ಹೆಚ್ಚುತ್ತಿವೆ. 1948ರಲ್ಲಿ 100 ಇದ್ದ ಜೀವನವೆಚ್ಚ 1951ರಲ್ಲಿ 115ಕ್ಕೇರಿತು.

ನಾರ್ವೆಯಲ್ಲಿ 1948ರಲ್ಲಿ 100 ಇದ್ದ ಬೆಲೆಗಳು 1951ರಲ್ಲಿ 135ಕ್ಕೇರಿದ್ದವು. 99 ಇದ್ದ ಜೀವನವೆಚ್ಚ 115ಕ್ಕೇರಿತು. 1950ರ ಆರಂಭದಿಂದ ಈ ದೇಶದಲ್ಲಿ ಬೆಲೆಗಳು ಬಿರುಸಿನ ಹೆಚ್ಚುವರಿಯಾದವು.

ಡೆನ್ಮಾರ್ಕಿನಲ್ಲೂ ಬೆಲೆ ಏರಿಕೆ ಆರಂಭವಾಗಿದೆ. 1948ರ ಮೊದಲಿನಲ್ಲಿ 95 ಇದ್ದ ಬೆಲೆಗಳು 1951ರಲ್ಲಿ 141ಕ್ಕೇರಿದವು. ಆಗ 100ಕ್ಕೆ ತುಸು ಕಮ್ಮಿಯಿದ್ದ ಜೀವನ ವೆಚ್ಚ 1951ರಲ್ಲಿ 114ಕ್ಕೇರಿತು. 1950ರ ಮಧ್ಯ ಭಾಗದ ನಂತರ ಬೆಲೆಗಳ ಏರಿಕೆ ತೀವ್ರವಾಗಿರುವುದು ವ್ಯಕ್ತಪಟ್ಟಿದೆ.

ನೆದರ್ಲೆಂಡ್ಸ್‌ನಲ್ಲಿ 1948ರ ಆರಂಭದಲ್ಲಿ 100ಕ್ಕೆ ಸ್ವಲ್ಪ ಕಮ್ಮಿಯಿದ್ದ ಹೋಲ್‌ಸೇಲ್ ಬೆಲೆಗಳು 1951ರಲ್ಲಿ 140ರ ಸಂಖ್ಯೆಯನ್ನು ಮುಟ್ಟಿದ್ದವು. 100 ಇದ್ದ ಜೀವನವೆಚ್ಚ 1951ರಲ್ಲಿ ಸುಮಾರು 122ಕ್ಕೇರಿತು. ಇಲ್ಲೂ 1950ರ ಮಧ್ಯಭಾಗದ ನಂತರವೇ ಬೆಲೆಗಳು ತೀವ್ರವಾಗಿ ಏರಿರುವುದು.

ಫ್ರಾನ್ಸಿನಲ್ಲಂತೂ 1948ರಲ್ಲಿ ಸುಮಾರು 85 ಇದ್ದ ಹೋಲ್‌ಸೇಲ್ ಬೆಲೆಗಳು 1951ರಲ್ಲಿ 150ಕ್ಕೇರಿಬಿಟ್ಟಿತು. 1949ರ ಆರಂಭದಲ್ಲಿ ಸುಮಾರು 115ನ್ನು ಮುಟ್ಟಿದ್ದ ಬೆಲೆಗಳು ಕೆಲವು ತಿಂಗಳುಗಳ ನಂತರ 150ಕ್ಕಿಳಿದು ಮತ್ತೆ ಒಂದೇ ಸಮನೆ ಏರಿಬಿಟ್ಟಿತು. 1948ರಲ್ಲಿ ಸುಮಾರು 112 ಇದ್ದ ಜೀವನವೆಚ್ಚ 1951ರಲ್ಲಿ 140ನ್ನೂ ದಾಟಿ ಹೋಗಿತ್ತು.

ಜರ್ಮನಿಯ ಪಶ್ಚಿಮ ಜೋನಿನಲ್ಲೂ ಬೆಲೆ, ಜೀವನ ವೆಚ್ಚಗಳ ಹೆಚ್ಚುವರಿ ಸ್ಪಷ್ಟವಾಗಿಯೇ ಇವೆ. 1948ರಲ್ಲಿ ಸುಮಾರು 90 ಇದ್ದ ಬೆಲೆಗಳು 1951ರಲ್ಲಿ 115ಕ್ಕೇರಿ ಸುಮಾರು 97 ಇದ್ದ ಜೀವನವೆಚ್ಚ 105ಕ್ಕೂ ಏರಿವೆ. 1949ರಲ್ಲಿ ಬೆಲೆಗಳಲ್ಲೂ 1950ರಲ್ಲಿ ಜೀವನ ವೆಚ್ಚದಲ್ಲೂ ಸ್ವಲ್ಪ ಇಳಿಮುಖ ಕಂಡು ಬಂದಿತ್ತು.

ಬೆಲ್ಜಿಯಮಿನಲ್ಲಿ 1948ರಲ್ಲಿ ಸುಮಾರು 98 ಇದ್ದ ಹೋಲ್‌ಸೇಲ್ ಬೆಲೆಗಳು 1951ರಲ್ಲಿ 120ನ್ನು ಮುಟ್ಟಿತ್ತು. ಸುಮಾರು 92 ಇದ್ದ ಜೀವನ ವೆಚ್ಚ 105ಕ್ಕೇರಿತು. 1950ರ ಆರಂಭದ ಸುಮಾರಿನಲ್ಲಿ ಬೆಲೆಗಳು 93ಕ್ಕೂ ಜೀವನವೆಚ್ಚ 92ಕ್ಕೂ ಇಳಿದಿದ್ದವು.

ಪೋರ್ಚುಗಲ್, ಇಟಲಿ, ಸ್ವಿಜರ್ಲೆಂಡ್, ಟರ್ಕಿಗಳ ಈ ಅಂಕಿ ಅಂಶಗಳಲ್ಲಿ ಏರಿಳಿತ ಬಹು ಸ್ವಾರಸ್ಯವಾಗಿವೆ.

ಪೋರ್ಚುಗಲ್‌ನಲ್ಲಿ 1948ರಲ್ಲಿ ಸುಮಾರು 98 ಇದ್ದ ಹೋಲ್‌ಸೇಲ್ ಬೆಲೆಗಳು 1950ರ ಅಂತ್ಯದಲ್ಲಿ 100ರ ಸಂಖ್ಯೆ ಮುಟ್ಟಿದ್ದವು; ಆದರೆ 1951ರಲ್ಲಿ ಅದು ಒಂದೇ ಸಮನೆ, ಹೆಚ್ಚಿ ಸುಮಾರು 128ನ್ನು ಮುಟ್ಟಿತ್ತು. ಜೀವನ ವೆಚ್ಚ ಸುಮಾರು 102 ಇದ್ದುದು 106ಕ್ಕೇರಿತಷ್ಟೇ ಅಲ್ಲದೆ 1950ರ ಪೂರ್ವಾರ್ಧದಲ್ಲಿ 110ನ್ನು ಮುಟ್ಟಿದ್ದ ಜೀವನ ವೆಚ್ಚ 1951ರಲ್ಲಿ ಇಳಿದುಬಿಟ್ಟಿತು.

ಇಟಲಿಯಲ್ಲಿ ಪರಿಸ್ಥಿತಿ ಇನ್ನೂ ವಿಚಿತ್ರವಾಗಿದೆ. 1948ರಲ್ಲಿ ಸುಮಾರು 100 ಇದ್ದ ಬೆಲೆಗಳು 1950ರ ಮಧ್ಯಭಾಗದಲ್ಲಿ 85ಕ್ಕಿಳಿದುಬಿಟ್ಟಿತು! ಆ ಮೇಲೆ 1951ರಲ್ಲಿ 105ಕ್ಕೇರಿತು. ಜೀವನ ವೆಚ್ಚ 1948ರಲ್ಲಿ 100 ಇದ್ದುದು 1951ರಲ್ಲಿ 106ಕ್ಕೇರಿತು.

ಸ್ವಿಜರ್ಲೆಂಡಿನಲ್ಲಿ 100ಕ್ಕೂ ತುಸು ಹೆಚ್ಚಾಗಿದ್ದ ಹೋಲ್‌ಸೇಲ್ ಬೆಲೆಗಳು 1950ರ ಪೂರ್ವಾರ್ಧದಲ್ಲಿ 90ಕ್ಕಿಳಿದು ಬಿಟ್ಟು ಪುನಃ 1951ರಲ್ಲಿ 108ಕ್ಕೇರಿತು. 1948ರಲ್ಲಿ 100 ಇದ್ದ ಜೀವನ ವೆಚ್ಚ 1948–49ರಲ್ಲಿ ಇಳಿದಿದ್ದು, 1951ರಲ್ಲಿ ಹೆಚ್ಚು ಕಮ್ಮಿ ಅಷ್ಟೇ ಇತ್ತು.

ಟರ್ಕಿಯಲ್ಲಿ ೧೯೪೮ರಲ್ಲಿ ಸುಮಾರು ೧೦೭ ಇದ್ದ ಬೆಲೆಗಳು ೧೯೪೯ರ ದ್ವಿತೀಯಾರ್ಧದಲ್ಲಿ ೯೦ಕ್ಕಿಳಿದು ಹೋಗಿದ್ದವು ೧೯೫೧ರಲ್ಲಿ ಸುಮಾರು ೧೨೪ಕ್ಕೇರಿತು. ೧೯೪೯ರಲ್ಲೊಮ್ಮೆ ಬೆಲೆಗಳು ೧೧೦ನ್ನೂ ದಾಟಿ ಹೋಗಿದ್ದವು. ೧೯೪೮ರಲ್ಲಿ ೧೦೦ ಇದ್ದ ಜೀವನವೆಚ್ಚ ಆ ವರ್ಷದ ಅಂತ್ಯಭಾಗದಲ್ಲಿ ಸ್ವಲ್ಪ ಇಳಿದಿತ್ಯಾದರೂ ೧೯೫೦ರ ಆದಿಭಾಗದಲ್ಲಿ ೧೧೦ಕ್ಕೆ ಏರಿದ್ದು ಮತ್ತೆ ೧೯೫೧ರಲ್ಲಿ ೧೦೭ಕ್ಕಿಳಿಯಿತು.

ಏಷ್ಯನ್ ರಾಷ್ಟ್ರಗಳಲ್ಲೂ ಪರಿಸ್ಥಿತಿ ಬಹುಶಃ ಹೀಗೆಯೇ ಇದೆ. ಭಾರತದಲ್ಲೂ ಈ ಮೂರು ವರ್ಷಗಳಲ್ಲಿ ಹೋಲ್ ಸೇಲ್ ಬೆಲೆಗಳು ಗಮನೀಯವಾಗಿ ಏರಿದ್ದು, ಜೀವನ ವೆಚ್ಚವೂ ಅದಕ್ಕನುಗುಣವಾಗಿ ಹೆಚ್ಚಾಗಿದೆ. ಬಡವರ ಮತ್ತು ಮಧ್ಯಮ ವರ್ಗದವರ ಆರ್ಥಿಕ ಸ್ಥಿತಿ ಕಷ್ಟತರವಾಗಿಯೇ ಇದೆ. ಇತ್ತೀಚೆಗೆ ಕೆಲವು ಪದಾರ್ಥಗಳ ಬೆಲೆಗಳಲ್ಲಿ ಕಂಡು ಬಂದಿರುವ ವ್ಯತ್ಯಾಸ ಜನ ಸಾಮಾನ್ಯರಿಗೆ ಸಾಕಷ್ಟು ಸಹಾಯಕವಾಗಿಲ್ಲವೆಂದೇ ಹೇಳಬಹುದು..

೧೯೫೦ರ ಜೂನ್ ನಂತರ

೧೯೫೦ರ ಜೂನ್ ತಿಂಗಳ ನಂತರವೂ ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ಜೀವನ ವೆಚ್ಚ ಹೆಚ್ಚಾಗಿರುವುದು,

೧೯೫೦ರಲ್ಲಿದ್ದುದಕ್ಕಿಂತ ೧೯೫೧ರ ಅಕ್ಟೋಬರಿನಲ್ಲಿ ಜೀವನ ವೆಚ್ಚದ ಹೆಚ್ಚುವಳಿ ಈ ರೀತಿ ಇದೆ:—

ಆಸ್ಟ್ರಿಯಾದಲ್ಲಿ ಶೇ|| ೪೩ರಷ್ಟು, ಇಂಗ್ಲೆಂಡಿನಲ್ಲಿ ಶೇ|| ೩೭ರಷ್ಟು, ಫ್ರಾನ್ಸಿನಲ್ಲಿ ಶೇ|| ೨೨ರಷ್ಟು, ನಾರ್ವೆಯಲ್ಲಿ ಶೇ||೨೦ರಷ್ಟು, ಸ್ವೀಡನ್ನಿನಲ್ಲಿ ಶೇ|| ೨೦ರಷ್ಟು ಗ್ರೀಸಿನಲ್ಲಿ ಶೇ|| ೧೬ರಷ್ಟು, ಕೆನಡಾದಲ್ಲಿ ಶೇ|| ೧೫ರಷ್ಟು, ಡೆನ್ಮಾರ್ಕಿನಲ್ಲಿ ಶೇ|| ೧೪ ರಷ್ಟು ಬೆಲ್ಜಿಯಂ, ಲಕ್ಸೆಂಬರ್ಗ್, ಚಿಲಿ ಮತ್ತು ಇಂಡೋನೇಷ್ಯಗಳಲ್ಲಿ ಶೇ|| ೧೨ರಷ್ಟು ಬ್ರಿಟನ್ ಮತ್ತು ಇರಾನ್‌ಗಳಲ್ಲಿ ಶೇ ೧೧ ರಷ್ಟು, ಅಮೇರಿಕಾದಲ್ಲಿ ಶೇ|| ೧೦ ರಷ್ಟು ಜರ್ಮನಿಯಲ್ಲಿ ಶೇ|| ೮ರಷ್ಟು ಐರ್ಲೆಂಡ್ ಕೊಲಂಬಿಯಾ ಮತ್ತು ಕ್ಯೂಬಾಗಳಲ್ಲಿ ಶೇ|| ೭ರಷ್ಟು, ಸ್ವಿಜರ್ಲೆಂಡಿನಲ್ಲಿ ಶೇ|| ೬ ರಷ್ಟು, ಪೋರ್ಚುಗಲ್‌ನಲ್ಲಿ ಶೇ|| ೧ರಷ್ಟು ಅರ್ಜೆಂಟೈನದಲ್ಲಿ ಶೇ|| ೧೪ರಷ್ಟು, ಬ್ರೆಜಿಲಿನಲ್ಲಿ ಶೇ|| ೬ರಷ್ಟು, ಥಾಯ್ಲೆಂಡ್ ಮತ್ತು ಇಸ್ರೇಲ್‌ಗಳಲ್ಲಿ ಶೇ|| ೧೩ರಷ್ಟು, ದಕ್ಷಿಣ ಆಫ್ರಿಕಾದಲ್ಲಿ ಶೇ|| ೭ರಷ್ಟು.

ಪದಾರ್ಥಗಳ ಬೆಲೆ ಹೆಚ್ಚುವರಿ.

ಬೆಲೆಗಳ ಹೆಚ್ಚುವರಿ ಯಾವ ರೀತಿ ಯಿದೆ ನೋಡಿ:—

ಕೊರಿಯಾ ಯುದ್ಧದ ಮೊದಲು ಆರು ತಿಂಗಳುಗಳಲ್ಲೇ ಬೊಲಿವಿಯದ ತವರದ ಬೆಲೆ ಪೌಂಡಿಗೆ ೭೬ ಸೆಂಟುಗಳಿಂದ ೨.೦೧ ಡಾಲರುಗಳಿಗೇರಿದೆ; ಆಸ್ಟ್ರೇಲಿಯದ ಉಣ್ಣೆ ೧೪೦ ಡಾಲರುಗಳಿಂದ ೨೭೦ ಡಾಲರುಗಳಿಗೂ, ಮಲಯದ ರಬ್ಬರು ೩೯ ಡಾಲರಿನಿಂದ ೭೫ ಡಾಲರಿಗೂ ಈಜಿಪ್ಟಿನ 'ಲಾಂಗ್ ಸ್ಟೇಪಲ್' ಹತ್ತಿ ೩೭ ಸೆಂಟ್‌ಗಳಿಂದ ೧.೨ ಡಾಲರಿಗೂ, ಮೆಕ್ಸಿ ಕಬ್ಬಿಣದ ಅದುರು ಟನ್ನಿಗೆ ೫೦-೬೨ ಡಾಲರುಗಳಿಂದ ೫೭-೭೭ ಡಾಲರುಗಳಿಗೂ ಹೆಚ್ಚಿದೆ.

೧೯೫೦ರಲ್ಲಿ ಸೈನ್ಯದ ವ್ಯಕ್ತಿಯೊಬ್ಬನ ಮಾಂಸದ ರೇಶನ್ ೪೫ ಸೆಂಟುಗಳಿಂದ ೫೯-೯ ಸೆಂಟುಗಳಿಗೆ ಹೆಚ್ಚಿತು.

ಎರಡನೇ ಮಹಾ ಯುದ್ಧದ ಸಮಯದಲ್ಲಿ ೫೪ ಸಾವಿರ ಡಾಲರುಗಳ ಬೆಲೆಯಿದ್ದ ಒಂದು ಫೈಟರು ವಿಮಾನ ೧೯೫೧ರಲ್ಲಿ ೩,೬೫,೦೦೦ ಡಾಲರುಗಳ ಬೆಲೆಯಿದಿತ್ತು. ಸಾಮಾನ್ಯ ಬಾಂಬರು ವಿಮಾನದ ಬೆಲೆ ೨,೧೮,೦೦೦ ಡಾಲರುಗಳಿಂದ ೨೫ ಲಕ್ಷ ಡಾಲರುಗಳಿಗೇರಿತು. ಸಾಧಾರಣ ಟ್ಯಾಂಕೊಂದರ ಬೆಲೆ ೧೪ ಸಾವಿರ ಡಾಲರುಗಳಿಂದ ೨ ಲಕ್ಷ ಡಾಲರುಗಳಿಗೇರಿತು.

೧೯೫೦ರ ಡಿಸೆಂಬರ್ ೧೯೫೧ರ ಆಗಷ್ಟ್ ಈ ಅವಧಿಯಲ್ಲಿ ಜೀವನ ವೆಚ್ಚವು ಆಸ್ಟ್ರೇಲಿಯಾದಲ್ಲಿ ಶೇ|| ೨೯ರಷ್ಟು, ಐರ್ಲೆಂಡಿನಲ್ಲಿ ಶೇ|| ೧೬ರಷ್ಟು, ಫ್ರಾನ್ಸ್ ಮತ್ತು ನಾರ್ವೆಗಳಲ್ಲಿ ಶೇ|| ೧೩ರಷ್ಟು, ಬ್ರಿಟನ್ ಮತ್ತು ಇಟಲಿಗಳಲ್ಲಿ ಶೇ|| ೯ರಷ್ಟು, ಕೆನಡಾದಲ್ಲಿ ಶೇ|| ೧೨ರಷ್ಟು, ಅಮೇರಿಕದಲ್ಲಿ ಶೇ|| ೫ ಷ್ಟು ಹೆಚ್ಚಿತ,

ಯೋಜನಾ,

ಬ್ರಿಟನ್ನಿನಲ್ಲಿ ನಶ್ಯದ ಹುಚ್ಚು

ಸಿಗರೇಟಿನ ಸ್ಥಾನ ನಶ್ಯವು ಹೊಂದುತ್ತಿದೆ.

ಪ್ರಸ್ತುತ ಬ್ರಿಟನ್ನಿನಲ್ಲಿ ಹೊಗೆ ಬತ್ತಿಯ ಕಷರ್ ವಿಪರೀತಕ್ಕೇರಿ, ಧೂಮಪಾನ ಚಟಕ್ಕೆ ಅಂಟಿಕೊಂಡವರು ನಶ್ಯ ಸೇವನೆಗೆ ಇಳಿಯುತ್ತಿದ್ದಾರೆ. ಸುಮಾರು ೪೦ ಶಿಲಿಂಗ್ಸ್ ಕೊಟ್ಟರೆ ದೊರೆಯುವ ಒಂದು ಔನ್ಸಿನಷ್ಟು ನಶ್ಯ ಸಾಮಾನ್ಯ ನಶ್ಯ ಸೇದುಗನಿಗೆ ಎರಡು ವಾರಗಳ ತನಕ ಸಾಕಾಗುತ್ತದೆಯೆಂದರೆ, ಅಷ್ಟು ಬೆಲೆ ಕೊಟ್ಟು ಪ್ರಸ್ತುತ ಬ್ರಿಟನ್ನಿನಲ್ಲಿ ಕೊಂಡುಕೊಳ್ಳಬಹುದಾದ ಸಿಗರೇಟುಗಳು ೨೫ ಮಾತ್ರ. ಬ್ರಿಟನ್ನಿನಲ್ಲಿ ಈಗ ಚಲಾವಣೆಯಲ್ಲಿರುವ ನಶ್ಯವಾದರೋ ಎಷ್ಟೋ ವರ್ಷಗಳ ಹಿಂದಿನಿಂದ ಅಲ್ಲಿ ಬಳಕೆಯಲ್ಲಿದ್ದುದೇ ಆಗಿದೆ. ತಂಬಾಕನ್ನು ಕೆಡಿಸಿ ಒಣಗಿಸಿದ ಒಂದು ವಿಶಿಷ್ಟ ವ್ಯಾಪಾರಿಗಳು ಕೆಲ ಶತಮಾನದಿಂದ ತಮಗೆ ರಹಸ್ಯವಾಗಿ ಉಳಿದ ಗುಪ್ತವಾದ ಕೆಲವು ದ್ರವ್ಯಗಳನ್ನು ಸೇರಿಸಿ ಈ ನಶ್ಯ ತಯಾರಿಸುತ್ತಾರೆ. ಅರಸರೂ ಉಪಯೋಗಿಸುತ್ತಿದ್ದರು.

ಬಹಳ ಹಿಂದಿನಿಂದ ಬ್ರಿಟನ್ನಿನ ನಶ್ಯ ಬಳಕೆಯ ಕ್ಷೇತ್ರಂಬುವಕ್ಕೆ ಸಾಕಷ್ಟು ದಾಖಲೆಗಳಿವೆ. ಲಂಡನ್ನಿನ ಅತಿ ಹಳೆಯ ನಶ್ಯ ಪಾರಿಪಾಟದ ಅಂಗಡಿಗೆ ಬಿ. ಬಿ. ಸಿ ಯ ಸ್ತ್ರೀ ಮುಖ್ಯಗಾರಳೊಬ್ಬಳು ಹೆಚ್ಚುವರಿ ಸಂದರ್ಶನ ಕೊಟ್ಟಾಗ ಅಲ್ಲಿ ಕೊಸ್ಬರ್ ಸ್ಟೇಬ್ ಬರವಣಿಗೆಯಲ್ಲಿ, ನಶಿ ಹೋದ ಬಣ್ಣದ ಶಾಯಿಯಲ್ಲಿ ಬರೆದ ಪಟ್ಟಿ ಕೆಲವು ಹಳೆಯ ಪುಸ್ತಕಗಳು ಅವಳ ಗೋಚರಕ್ಕೆ ಬಂದುವು. ಆ ಪುಸ್ತಕದಲ್ಲಿ ಬ್ರಿಟನ್ನಿನ ರಾಜಮನೆತನದವರ ನಶ್ಯ ಖರ್ಚಿನ ವಿಶಿಷ್ಟ ದಾಖಲೆಗಳಿವೆ. 'ನಾರ್ವಿಚ್ ಬೆರಗು ವಿಶ್ವಕ್ಕೆ ಒಂದು ರಾತ್ರ, ಸಂಜೆಯ ವಿಶ್ವಕ್ಕೆ ಒಂದು ರಾತ್ರ' ಎಂದು ಬಾಲ್ಯನ ಜಾರ್ಜ್ ಸಾರ್ವಭೌಮನಿಂದ ಬಂದ ಒಂದು ಆರ್ಡರ್ ಆ ಪುಸ್ತಕದಲ್ಲಿತ್ತು. ಚಾರ್ಲೊಟ್ಟೆ ರಾಣಿಗೆ ನಶ್ಯದ ಹುಚ್ಚು ವಿಪರೀತವಿತ್ತಂತೆ. ಅವಳನ್ನು 'ನಶ್ಯದ ಚಾರ್ಲೊಟ್ಟೆ' ಎಂದೂ ಈ ನಶ್ಯದ ಅಂಗಡಿಯವರು ಕರೆಯಲು ಅಂಜುತ್ತಿರಲಿಲ್ಲ.

ಕಾಮನ್ಸ್ ಸಭಾಮಂದಿರದಲ್ಲಿ

ಆ ನಶ್ಯದ ಅಂಗಡಿಯವನು ಹಿಲ್ಡ್ ಯಾರ್ಕ್‌ಶೈರಿನವನು. ಜಗತ್ತಿನ ಎಲ್ಲಾ ಭಾಗಗಳಿಗೆ ಅವನು ನಶ್ಯ ಕಳಿಸುತ್ತಾನೆ. ಕಳೆದ ಸುಮಾರು ೨೫೦ ವರ್ಷಗಳಿಂದ ನನ್ನ ಈ ವ್ಯಾಪಾರ ನಡೆಯುತ್ತಲೇ ಸಾಗಿದೆ. ಎಲ್ಲಾ ವರ್ಗದ ಜನರಿಗೆ ಈ ವಸ್ತು ವಿಶೇಷ ಪ್ರೀತಿ. ದೊಡ್ಡ ದೊಡ್ಡ ಶ್ರೀಮಂತರಿಂದ ಸಾಮಾನ್ಯ ಟಿಕ್ಕೆಟ್ ಕೊಡುವವರ ತನಕ ಎಲ್ಲರೂ ಅದನ್ನು ಧಾರಾಳವಾಗಿ ಉಪಯೋಗಿಸುತ್ತಿದ್ದಾರೆ. ಶ್ರೀಮಂತರು 'Facon De Paris' ತರಗತಿಯ ಉತ್ತಮ ನಶ್ಯ ಸೇದುತ್ತಿರುವರಾದರೆ ಸಾಮಾನ್ಯ ತರಗತಿಯವರಿಗೆ 'S and P.' ತರಗತಿಯ ಸಾಮಾನ್ಯ ನಶ್ಯದಲ್ಲೇ ತೃಪ್ತಿ ದೊರೆಯುತ್ತದೆ' ಎಂದನಂತೆ.

ಹೌದು, ಇಂದು ಬ್ರಿಟನ್ನಿನಲ್ಲಿ ನಶ್ಯವು ಜನಪ್ರಿಯವಾಗುತ್ತಿದೆ, ಹೆಚ್ಚುತ್ತಿರುವ ಬೆಲೆ ಕೊಟ್ಟು ಸಿಗರೇಟು, ಚುಟ್ಟಗಳನ್ನು ಕೊಂಡು ಕೊಂಡು ಧೂಮಪಾನದ ವಿಲಾಸ ಅನುಭವಿಸಲು ಅನಾನುಕೂಲವಾದವರೆಲ್ಲರೂ ನಶ್ಯದ ಶರಣು ಹೋಗುತ್ತಿದ್ದಾರೆ. ರಂಗಭೂಮಿಯ ನಟಿಯರು, ಬ್ರಾಡ್‌ಕಾಸ್ಟ್ ಮಾಡುವವರು, ಹಾಡುಗಾರರು, ಹೀಗೆ ಎಲ್ಲಾ ವರ್ಗದವರು ಸ್ತ್ರೀ ಪುರುಷರೆಂಬ ಬೇಧವಿಲ್ಲದೆ ನಶ್ಯವನ್ನು ಅತಿಯಾಗಿ ಬಳಸಲು ತೊಡಗಿದ್ದಾರೆ. ಬಹಳ ಹಿಂದೆ ಹೋದ ಒಂದು ನಶ್ಯದ ಬುರುಡೆ ಈಗಲೂ ಬ್ರಿಟನ್ನಿನ ಕಾಮನ್ಸ್ ಸಭಾಮಂದಿರದಲ್ಲಿದೆ. ಸಭಾಮಂದಿರಕ್ಕೆ ಹೋಗುವ ಪ್ರವೇಶಿ, ಸದಸ್ಯರು ಆ ನಶ್ಯ ಬುರುಡೆಯಿಂದ ಒಂದು ಚಿಟಿಕೆ ನಶ್ಯ ತೆಗೆದು ಮೂಗಿಗೇರಿಸಲು ಯಾರೂ ಅಡ್ಡಿ ಮಾಡುವುದಿಲ್ಲ. ಸದಸ್ಯರಲ್ಲಿ ಕೆಲವು ಮಂದಿ ಈ ಸೌಲಭ್ಯದ ಸದುಪಯೋಗ ಮಾಡಿಕೊಳ್ಳುವುದಿಲ್ಲ.

ಪ್ರಭಾತ.

ದೇವ ಸೃಷ್ಟಿಗೆ ಅಪಮಾನ

ಮಳೆಯಿಂದ ತೋಯಿಸಿಕೊಳ್ಳದಿರಲು ಕೊಡೆ ಹಿಡಿಯುವದು. ಇದು ಯಾರಿಗೂ ಅಪರಿಚಿತವಲ್ಲ. ಆದರೆ ೧೭೫೦ ರಲ್ಲಿ ಲಂಡನ್ನಿನಲ್ಲಿ ಜೋನ್ಸ್ ಹ್ಯಾನ್ವೇ ಎಂಬಾತನು ಕೊಡೆ ಹಿಡಿದುಕೊಂಡು ಬಂದಾಗ ಮಳೆಯಿಂದ ಅವನನ್ನು ಉಳಿಸಿದರೆ ಅದು ಅವನನ್ನು ಜನರೆಸೆಗಿದ ಕೊಳೆತ ತತ್ತಿ—ಕಲ್ಲು ಹಣ್ಣುಗಳಿಂದಲೂ ಉಳಿಸಿತು.

ಸಹಸ್ರ ಪೂರ್ವ ಮತ್ತು ಏಶಿಯಾಗಳಲ್ಲಿ ವ್ಯಾಪಾರಕ್ಕೆಂದು ಸಂಚರಿಸಿದಾಗ ಕೊಡೆಯ ಉಪಯೋಗವನ್ನು ಜೋನ್ಸ್ ಕಂಡುಕೊಂಡಿದ್ದ. ಇಂಗ್ಲಿಷ್ ಜನರಿಗೂ ಕೊಡೆಯ ಉಪಯೋಗ ತಿಳಿಸಿ ಎಂಬಾತ ತನ್ನ ಜೊತೆಯಲ್ಲಿ ಕೊಡೆಯೊಂದನ್ನು ತಂದಿದ್ದನು. ಆದರೆ ಜನರು ಅವನನ್ನು ಮೂದಲಿಸಿದರು. ಇಂಗ್ಲೆಂಡಿನಲ್ಲಿ ಕೊಡೆಗಳನ್ನು ಸ್ತ್ರೀಯರು ಮಾತ್ರ ಉಪಯೋಗಿಸುವ ವಾಡಿಕೆಯಿತ್ತು, ಗಂಡಸು ಕೊಡೆ ಹಿಡಿದು ಅಡ್ಡಾಡುವದು ಜನರಿಗೆ ಹಾಡು ಗಾಟಕೆಯ ಮೊತ್ತವೆನಿಸಿತು. ಟಾಂಗಾದವರು, ಗಾಡಿಯವರು ಇದರಿಂದ ತಮ್ಮ ಉದ್ಯೋಗಕ್ಕೆ ಧಕ್ಕೆ ತಗಲಬಹುದೆಂದೂ ಅಂಜಿದರು. ಕೆಲವರಂತೂ 'ಕೊಡೆಗಳು ದೇವರ ಸೃಷ್ಟಿಗೆ ಅಪಮಾನ' ಎಂದೇ ಹೇಳಿದರು. ಜನರನ್ನು ತೋಯಿಸುವದಕ್ಕಾಗಿಯೇ ದೇವರು ಮಳೆ ಬರಿಸುತ್ತಾನೆಂದೂ ಕೊಡೆ ಧರಿಸುವ ಹಕ್ಕು ಮನುಷ್ಯನಿಗಿಲ್ಲವೆಂದೂ ಅವರು ವಾದಿಸಿದರು. ಆದರೆ ಜೋನ್ಸ್ ಮಾತ್ರ ಯಾರ ವಿರೋಧವನ್ನೂ ಲೆಕ್ಕಿಸಲಿಲ್ಲ. ಮುಂದೆ ಒಂದಲ್ಲೊಂದು ದಿನ ಕೊಡೆಯು ಜನಪ್ರಿಯವಾಗುವದು ಎಂದಾತ ಹೇಳುತ್ತಿದ್ದನು.

ಗಂಡಂದಿರ ಪೆಟ್ಟು ತಿನ್ನುವ ಹೆಂಡಂದಿರ ಸಂಘ.

ಪಾಶ್ಚಾತ್ಯ ದೇಶಗಳಲ್ಲಿ ಸಂಘಗಳಿಗೆ ಮಹತ್ವ ಹೆಚ್ಚು. ಅಲ್ಲಿ ಯಾರ ಯಾರ ಸಂಘ ಯಾವ್ಯಾವುದರ ಸಂಘ ಇರುವುದೆಂಬುದನ್ನು ಊಹಿಸುವುದೂ ಕಷ್ಟವಾಗುತ್ತದೆ.

ಎತ್ತರ ಅಂದರೆ ಆರು ಫೂಟಿಗಿಂತ ಎತ್ತರವಿರುವ ಸ್ತ್ರೀಯರ ಸಂಘಗಳಿವೆ ಐದು ಫೂಟಿಗಿಂತ ಗಿಡ್ಡವಾಗಿರುವ ಸ್ತ್ರೀಯರ ಸಂಘಗಳಿವೆ. ದಕ್ಷಿಣ ಡಕೋಟಾದ ಸಿಯೋಕ್ಸ್ ನಗರದಲ್ಲಿ ೧೨ ಜನ ಸ್ತ್ರೀಯರು ಸೇರಿ 'ಗಂಡಂದಿರಿಂದ ಬಡಿತ ತಿನ್ನುವ ಸ್ತ್ರೀಯರ ಸಂಘ'ವೊಂದನ್ನು ಸ್ಥಾಪಿಸಿದ್ದಾರೆ. ಆ ಸಂಘದ ಅಧ್ಯಕ್ಷಿಣಿ ಶ್ರೀಮತಿ ಎಲ್. ಲೀನಳು 'ಜಗತ್ತಿನಲ್ಲಿ ಗಂಡನಿಂದ ಹೊಡಿಸಿಕೊಳ್ಳುವ ಸ್ತ್ರೀಯರಿಂದ ನಮ್ಮ ಸಂಘ ಸ್ಥಾಪಿಸಲ್ಪಟ್ಟಿದೆ. ಯಾವಾಗಾದರೊಮ್ಮೆ ಗಂಡನ ಕೈಲಿ ಹೊಡೆಸಿಕೊಳ್ಳುವದು ಕುಟುಂಬ ಸೌಖ್ಯಕ್ಕೆ ಸಹಾಯಕವಾಗುತ್ತದೆ. ಇದರಿಂದ ಅನೇಕ ದಾಂಪತ್ಯ ವಿಚ್ಛೇದನಗಳು ತಪ್ಪುತ್ತವೆ' ಎಂದು ಹೇಳುತ್ತಾಳೆ.

ಇನ್ನೂ ಒಂದು ವಿಚಿತ್ರ ಸಂಘದ ಸಮಾಚಾರ ಕೇಳಿ. ಸ್ಪೋಕೇನಿನಲ್ಲಿ ಸಿಲುಕಿದ ತಾಯಿಯರ ಸಂಘವೊಂದಿದೆ ಈ ತಾಯಿಯರ ಸಭೆಯಲ್ಲಿ ಅವರು ತಮ್ಮ ಪ್ರಿಯಕರನ ರೂಪದ ಬೊಂಬೆ ವಸ್ತುವನ್ನು ಮುಂದಿಟ್ಟುಕೊಂಡು ಮೌನದಿಂದ ಬಹು ಹೊತ್ತಿನವರೆಗೆ ಅದನ್ನು ದಿಟ್ಟಿಸುತ್ತ ಕೂಡುತ್ತಾರೆ. ಸಭೆ ಮುಗಿದ ಮೇಲೆ ಮೂರು ಸಲ ನಿಟ್ಟುಸಿರು ಹಾಕಬೇಕು ಎಂಬುದೊಂದು ಸಂಪ್ರದಾಯವೂ ಇದೆ

ಮಾರಾಟಕ್ಕಿದೆ.

ಮಡಿಕೇರಿ ಪನ್ಸನ್ ಲೈನಿನಲ್ಲಿರುವ ಬ್ಲಾಕ್ ನಂ. 11 ಮನೆ ನಂ 13, 14ರ ಎರಡು ಹಂಚಿನ ಮನೆಗಳು ಮಾರಾಟಕ್ಕಿವೆ ಎರಡು ಮನೆಗಳಲ್ಲೂ ಆರಾರು ಕೋಣೆಗಳಿವೆ. ಒಟ್ಟಾರೆ 13 ಸೆಂಟ್ ಜಾಗವಿದೆ. ಗಾಡಿ ರಸ್ತೆ ಪಕ್ಕದಲ್ಲಿದೆ. ಈಗ ರೂ. 35/- ಬಾಡಿಗೆ ಸಿಕ್ಕುತ್ತಿದೆ. ಕೊಂಡುಕೊಳ್ಳಲು ಇಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಎ. ಕೆ. ಬೆಳ್ಯಪ್ಪ,
ಜನರಲ್ ಮರ್ಚೆಂಟ್,
ಫ್ರೇಜರ್ ಪೇಟೆ.

4-1

ಕಾಣೆಯಾಗಿದೆ.

ಕರಿ ಬಣ್ಣದ ಹಸು ಸುಮಾರು 7 ಇಂಚು ಉದ್ದದ ಕೊಂಬುಗಳಿವೆ. ಕೊಂಬುಗಳು ಸ್ವಲ್ಪ ಬದಿಗೆ ಬಾಗಿವೆ. ಎತ್ತರ ಸುಮಾರು 3 ಅಡಿ ೬ ಇಂಚು. ಕರುವಿಗೆ 1 ವರ್ಷ 3 ತಿಂಗಳು ಪ್ರಾಯವಾಗಿದೆ. ಕಪ್ಪು ಬಣ್ಣ. ಕಳೆದ ಗುರುವಾರದಿಂದ ಕಾಣದಾಗಿದೆ ಇವನ್ನು ಪತ್ತೆ ಮಾಡಿ ಕೊಟ್ಟವರಿಗೆ ರೂ 10 ಬಹುಮಾನ ಕೊಡುತ್ತೇನೆ.

ಬಿ. ಸಿ. ಪೊಣ್ಣಪ್ಪ,
ಸಿ. ಪಿ ಡಬ್ಲ್ಯು ಡಿ.
ಮಡಿಕೇರಿ.

ಓದುಗರ ಓಲೆಗಳು

ಹುದಿಕೇರಿ ಜಾನುವಾರುಗಳ ಆಸ್ಪತ್ರೆ.

ಹುದಿಕೇರಿಯಲ್ಲಿ ಒಂದು ವೆಟರ್ನರಿ ಆಸ್ಪತ್ರೆ ಬೇಕೆಂದು ಸರಕಾರದೊಡನೆ ಕೇಳಿಕೊಂಡಲ್ಲಿ ಸರ್ಕಾರದವರು ಒಂದು ಚಿಕ್ಕ ಆಸ್ಪತ್ರೆಯನ್ನೂ, ಒಬ್ಬ ಸ್ಟಾಕ್‌ಮೇನನ್ನೂ ಇಲ್ಲಿ ಇಟ್ಟದ್ದಾಯಿತು. ಇದರಿಂದ ಅನೇಕ ಜನರಿಗೆ ಬಹುಮಟ್ಟಿಗೆ ಪ್ರಯೋಜನವಾಯಿತು. ಹುದಿಕೇರಿಯಲ್ಲಿ ಸಂತೆ ನಡೆಯುವದರಿಂದ ಇಲ್ಲಿಯ ಸುತ್ತ ಮುತ್ತಲಿನ ಗ್ರಾಮದ ಜನರೂ, ಮಲೆನಾಡಿನ ಜನರೂ ಮತ್ತು ಕುಟ್ಟದ ವರೆಗಿನ ಜನರೂ ಇಲ್ಲಿಗೆ ಬರುತ್ತಾರೆ. ಅವರೆಲ್ಲರೂ ಈ ಆಸ್ಪತ್ರೆಯಿಂದ ಪ್ರಯೋಜನ ಹೊಂದಿದ್ದಾರೆ. ಆದರೆ ಇತ್ತೀಚೆಗೆ ಈ ಆಸ್ಪತ್ರೆಯನ್ನು ಬಿರುನಾಣಿಗೆ ವರ್ಗಾಯಿಸಿದ್ದಾರೆ. ಇದರಿಂದ ಮರೆನಾಡಿನ ಜನರಿಗೆ ಪ್ರಯೋಜನವಾಯಿತೇ ವಿನಹ ಹುದಿಕೇರಿಯವರಿಗೆ ಪ್ರಯೋಜನವಾಗಲಿಲ್ಲ. ಇಲ್ಲಿಯ ಜನರ ದನಕರುಗಳಿಗೆ ಕಾಯಿಲೆ ಬಂದರೆ ಪೊನ್ನಂಪೇಟೆಗೆ ಹೋಗಬೇಕಾಗಿದೆ. ಇದು ತೊಂದರೆಯ ಕೆಲಸ. ಆದ್ದರಿಂದ ಸರಕಾರದವರು ಇಲ್ಲಿ ಮೊದಲಿದ್ದ ಹಾಗೆ ಆಸ್ಪತ್ರೆಯನ್ನು ಇಡಬೇಕೆಂದು ಕೇಳಿದೆ. ವಾರದಲ್ಲಿ ೩ ದಿವಸವಾದರೂ ಪೊನ್ನಂಪೇಟೆಯಿಂದ ಡಾಕ್ಟರನ್ನು ಬರಮಾಡುವಂತೆ ಸಹಾಯ ಮಾಡಬೇಕು. ಬೇಸಿಗೆ ಕಾಲವಾದ್ದರಿಂದ ಈಗಾಗಲೇ ದನಗಳಿಗೆ ಕಾಲು ಹುಣ್ಣು ಮತ್ತು ಬಾಯಿ ಹುಣ್ಣು ಕಾಯಿಲೆಯು ಪ್ರಾರಂಭವಾಗಿದೆ. ಉಳುವ ಸಮಯ ಬಂದಿದೆಯಾದರೂ ದನಗಳು ನಿಶಕ್ತತೆಯಿಂದ ಯಾವ ಕೆಲಸಕ್ಕೂ ಬಾರದಂತಿವೆ. ರೈತನ ಬೆನ್ನೆಲುಬು ದನ ಆದ್ದರಿಂದ ಸರ್ಕಾರದವರು ಇದನ್ನು ರಕ್ಷಿಸುವ ಸಹಾಯ ಮಾಡಬೇಕಾಗಿ ಕೋರಿಕೆ.

ರೈತ

ಟಿ. ಶೆಟ್ಟಿಗೇರಿ ಹೈಸ್ಕೂಲು ಫಂಡು

ಸ್ವಲ್ಪ ದಿವಸಗಳ ಹಿಂದೆ ಟಿ ಶೆಟ್ಟಿಗೇರಿಯಲ್ಲಿ ಒಂದು ಹೈಸ್ಕೂಲು ಫಂಡು ಸ್ಥಾಪನೆಯಾಗಿದೆ. ಈ ಸಂಸ್ಥೆಯಲ್ಲಿ ಅನೇಕರು ಕೆಲಸ ಮಾಡುತ್ತಿದ್ದಾರೆ. ಇವರು ವಾರ್ಷಿಕ ಸಭೆಗಳನ್ನು ನಡೆಸಿ ಆಯಾ ವಾರಗಳಲ್ಲಿ ಆಯಾ ಗ್ರಾಮಗಳಿಗೆ ವಸೂಲಾತಿಗೆ ಹೋಗುವುದೆಂದು ನಿಶ್ಚೈಸುವುದು. ಹುದಿಕೇರಿಯಲ್ಲಿ ಒಂದು ಹೈಸ್ಕೂಲು ಸ್ಥಾಪನೆಯಾಗಿ ೩ ವರ್ಷಗಳಾಯಿತು. ಶ್ರೀಮಂಗಲ ನಾಡಿನ ಹೆಚ್ಚಿನ ಮಕ್ಕಳು ಆ ಶಾಲೆಯಲ್ಲಿ ಓದುತ್ತಿರುವರು. ಟಿ. ಶೆಟ್ಟಿಗೇರಿಯ ಹೈಸ್ಕೂಲಿಗೆ ಒಂದು ಮಧ್ಯಸ್ಥಳವಾದರೂ ಈಗಾಗಲೇ ಹುದಿಕೇರಿಯಲ್ಲಿ ಒಂದು ಹೈಸ್ಕೂಲು ಸ್ಥಾಪನೆಯಾಗಿರುವುದರಿಂದ ಇಲ್ಲಿರುವ ಹೈಸ್ಕೂಲಿನ ಅಭಿವೃದ್ಧಿಯನ್ನು ಕೋರಬೇಕೇ ವಿನಹ ಬೇರೊಂದು ಹೈಸ್ಕೂಲು ಸ್ಥಾಪಿಸುವುದಲ್ಲ. ಮೊದಲು ಇಲ್ಲಿಯ ಹೈಸ್ಕೂಲು ಭದ್ರವಾದ ತಳಹದಿಯ ಮೇಲೆ ನಿಂತು ಇದರ ಕೆಲಸ ಕಾರ್ಯಗಳು ತೀರಿದ ಮೇಲೆ ಮತ್ತೊಂದಕ್ಕೆ ಕೈಹಾಕುವುದು ಉತ್ತಮ. ಹುದಿಕೇರಿಗೂ ಶೆಟ್ಟಿಗೇರಿಗೂ ಬಹು ದೊಡ್ಡ ಅಂತರವಿಲ್ಲ. ಒಂದು ಹೈಸ್ಕೂಲನ್ನು ನಡೆಸುವುದು ಸುಲಭವಲ್ಲ. ಅದಕ್ಕೆ ತಕ್ಕ ವಿದ್ಯಾರ್ಥಿಗಳ ಸಂಖ್ಯೆ ಒದಗಬೇಕು. ಅಲ್ಲದೆ ರೈತನಿಗೆ ಬಂದ ತೊಂದರೆಯೆಂದರೆ-ಈ ಕಡೆ ಹುದಿಕೇರಿಗೂ ಚಂದ ಕೊಡಬೇಕು. ಮತ್ತು ಶೆಟ್ಟಿಗೇರಿಗೂ ಚಂದ ಕೊಡಬೇಕು. ಕೊಡದೆ ಸಾಧ್ಯವೂ ಇಲ್ಲ. ನಮ್ಮ ಗ್ರಾಮದಿಂದ ಶೆಟ್ಟಿಗೇರಿಗೂ ಎರಡು ಮೈಲು ಮತ್ತು ಹುದಿಕೇರಿಗೂ ಎರಡು ಮೈಲು. ಹಾಗಾದರೆ ನಾವೇನು ಮಾಡಬೇಕು? ಒಬ್ಬ ರೈತನಿಗೆ ಒಂದು ವರ್ಷಕ್ಕೆ ಎಷ್ಟು ಚಂದ ಕೊಡಲು ಸಾಧ್ಯ? ಶಕ್ತಿ ಮೀರಿ ಕೊಡಲು ಸಾಧ್ಯವಿದೆಯೇ? ಶಾಲೆಗಳನ್ನು ಸ್ಥಾಪಿಸಬೇಕು ನಿಜ. ಆದರೆ ಸರಕಾರವು ಅದಕ್ಕೆ ತಕ್ಕ ಪ್ರೋತ್ಸಾಹ ಕೊಡಬೇಕು. ಇಲ್ಲದಿದ್ದರೆ ಎರಡು ದೋಣಿಗೆ ಕಾಲಿಟ್ಟು ಆ ಮೇಲೆ ತೊಂದರೆ ಪಡುವುದು ಮೂರ್ಖತನ. ಆದ್ದರಿಂದ ಸರ್ಕಾರದವರು ಮೊದಲಿನದನ್ನು ಉತ್ತಮಪಡಿಸಿ ಆ ಮೇಲೆ ಮತ್ತೊಂದಕ್ಕೆ ಕೈ ಹಾಕಬೇಕೇ ವಿನಃ ಮೊದಲಿನದನ್ನು ಹಾಳು ಮಾಡುವುದಕ್ಕೆ ಅವಕಾಶ ಕೊಡಬಾರದಾಗಿ ಪ್ರಾರ್ಥನೆ.

ವಿದ್ಯಾಪ್ರೇಮಿ.

'ನಮ್ಮ ಶಾಲೆ.'

ನಮ್ಮ ಬೆಳ್ಳೂರು ಶಾಲೆಯು ತೆರೆದು ೩ ವರ್ಷಗಳಾದವು. ಈ ಶಾಲೆಯು ಕಾರ್ಯಕಲಾಪಗಳು ಬಹು ಸಮರ್ಪಕವಾಗಿ ನಡೆಯುತ್ತಿದೆ. ಡಿ. ಇ. ಓ. ರವರು ಮತ್ತು ಕೆಲವು ರೇಂಜ್ ಇನ್ಸ್‌ಪೆಕ್ಟರುಗಳು ಸಂದರ್ಶಿಸಿ ಹೋಗಿ ಬರೆದಿದ್ದಾರೆ. ಇಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ ಸಂತೃಪ್ತಿಕರವಾಗಿದೆ. ಆದರೆ ಈ ಶಾಲೆಯ ವಿಚಾರ ಸರ್ಕಾರದವರು ಎಳ್ಳಷ್ಟೂ ಗಮನ ಕೊಟ್ಟಿರುವುದಿಲ್ಲ. ಗ್ರಾಮದವರು ಒಂದು ಕಟ್ಟಡವನ್ನು ಕಟ್ಟಿಸಿದ್ದಾರೆ. ಅಲ್ಪಸ್ವಲ್ಪ ಶಾಲೆಗೆ ಬೇಕಾದ ಸಾಮಾನುಗಳನ್ನು ಮಾಡಿಸಿದ್ದಾರೆ. ಇನ್ನು ಸರ್ಕಾರದಿಂದಲೂ ಹಣದ ಸಹಾಯವಾಗಬೇಕಾಗಿದೆ. ಕಳೆದ ವರ್ಷ ಈ ಶಾಲೆಯನ್ನು ಗ್ರಾಂಟಿಗೆ ತೆಗೆದುಕೊಳ್ಳಲಾಯಿತು. ೨೦ ರೂ. ಯ ಒಬ್ಬ ಉಪಾಧ್ಯಾಯರನ್ನು ಆರಿಸಿದರು. ಮತ್ತೊಬ್ಬರನ್ನು ಗ್ರಾಮದವರೇ ವೇತನ ಕೊಟ್ಟು ಇಟ್ಟುಕೊಂಡಿದ್ದಾರೆ. ಈ ವರ್ಷ ಒನೇ ತರಗತಿ ತೆರೆಯಲಾಗಿದೆ. ಈ ವರ್ಷ ಈ ಶಾಲೆಯನ್ನು ಡಿ. ಬಿ. ಗೆ ತೆಗೆದುಕೊಳ್ಳಬೇಕೆಂದು ಗ್ರಾಮದವರು ಕೇಳಿಕೊಂಡ ಮೇರೆ ಇದನ್ನು ಡಿ. ಬಿ. ಮೀಟಿಂಗಿನಲ್ಲಿ ತೆಗೆದುಕೊಳ್ಳಲಾಗಿದೆಯಂತೆ. ಆದರೆ ಮೀಟಿಂಗು ಕಳೆದು ಬಹಳ ಸಮಯವಾದರೂ ಆದರ ಪೇಪರ್ ಇನ್ನೂ ನಮ್ಮ ಶಾಲೆಗೆ ಬಂದಿರುವುದಿಲ್ಲ. ಇದಕ್ಕೆ ಕಾರಣವೇನು? ಚೀಫ್ ಕಮಿಷನರ ಸಹಿ ಸಿಕ್ಕಲಿಲ್ಲವೋ ಅಥವ ಪೆಂಡಿಂಗ್‌ನಲ್ಲಿದೆಯೋ? ಇದರ ವಿಚಾರ ತಿಳಿಸಬೇಕಾಗಿ ಜಿಲ್ಲಾ ವಿದ್ಯಾಧಿಕಾರಿಗಳಲ್ಲಿ ಬೇಡಿಕೆ.

ಗ್ರಾಮಸ್ಥ

ಸಹಿಸಲಾರದ ರೇಶನ್ ಕ್ರಮ.

ಕೊಡಗಿನಲ್ಲಿ ರೇಶನ್ ಪದ್ಧತಿ ಇದೆಯಾದರೂ ನಮ್ಮ ಮರೆ ನಾಡಿನಲ್ಲಿ ವಿಶೇಷ ಪದ್ಧತಿಯು ನಡೆಯುತ್ತಿದೆ. ಮರೆನಾಡಿಗೆ ರೇಶನ್ ಅಧಿಕಾರಿಯಾಗಿ ನೇಮಕ ಆದವರಿಗೆ ಹೆಚ್ಚಿನ ಅಧಿಕಾರ ಸರಕಾರದಿಂದ ವಹಿಸಲಾಗಿರುವುದೆಂದು ತೋರುತ್ತಿದೆ. ಇವರು ಆಚರಿಸುವ ಕ್ರಮವು ಸಾಧಾರಣವಲ್ಲ.

ಇವರು ಮನೆಗೆ ಬರುವಾಗ ಒಬ್ಬ ಮಿಲ್ ಮಾಲೀಕನ ಬೇಕಾದಷ್ಟು ಮೂಪಿಕೈ ಆಳುಗಳನ್ನೂ, ಒಬ್ಬ ವ್ಯಾಪಾರಿಯನ್ನೂ ಕರೆತರುವರು. ಬಂದ ಹಾಗೆ ಮನೆಯನ್ನೆಲ್ಲಾ ಶೋಧನೆ ಮಾಡುವರು. ಅಕ್ಕಿ, ನುಚ್ಚು ಮಡಗಿರುವ ಕುಕ್ಕೆಗಳನ್ನು ಕೈಹಾಕಿ ನೋಡಿ ಪತ್ತೆ ಹಚ್ಚುವುದೂ ಅಲ್ಲದೆ, ಹೆಂಗಸರು ಲೊಟ್ಟೆಗೆಂದು ಬೇಸಿ ಇಟ್ಟಿರುವ ಅಕ್ಕಿ ಹುಡಿ ಡಬ್ಬಿಗಳನ್ನು ಕೈಹಾಕಿ ನೋಡಿ ಅದರ ಲೆಕ್ಕವನ್ನೂ ತೆಗೆದುಕೊಳ್ಳುವರು. ಬತ್ತ ಇರುವಷ್ಟನ್ನು ಧರ್ಮದಿಂದ ತೋರಿಸಿದರೆ ಲೆಕ್ಕದ ಅವರೇ ಭೂಮಿಯಲ್ಲಿ ಇಷ್ಟು ಬೆಳೆದಿದೆಯೆಂದು ಅಂದಾಜು ಹಾಕಿಕೊಂಡು ಇರುವದನ್ನೆಲ್ಲಾ ಗದರಿಸಿ, ಬಯ್ದು, ಪೋಲೀಸು ತರುವೆನು ಎಂದು ಮೊದಲಾಗಿ ಹೇಳಿ ಇಲ್ಲದ ಕಾನೂನನ್ನು ಹೇಳಿ ಬತ್ತವನ್ನು ಮಾಪಿಳ್ಳೆಯವರಿಂದ ಅಳತೆ ಮಾಡಿಸಿ ಬೆಳೆಸಿದವನಿಗೆ ಒಂದು ತಿಂಗಳ ಊಟಕ್ಕೂ ಸಾಕಾಗದಷ್ಟನ್ನು ಮಾತ್ರವಿಟ್ಟು ತಮಗೆ ಬೇಕಾದಷ್ಟನ್ನು ತೆಗೆದುಕೊಂಡು ಹೋಗುವರು. ಇಂತಹ ಕ್ರಮ ಕೊಡಗಿನ ಇತರ ಊರುಗಳಲ್ಲಿ ಕಂಡು ಬರುವುದಿಲ್ಲವಲ್ಲ! ಇದು ಯಾಕೆ? ಕೊಡಗಿನ ಒಂದು ಮೂಲೆಯಾಗಿ ಬಡಜನರಾಗಿ, ಸಾಧುಗಳಾಗಿ, ಕಷ್ಟಕಾರ್ಯರಾಗಿ, ದುಃಖಿತರು, ಅಜ್ಞಾನರಾಗಿ, ಎಲ್ಲಾ ಕಾನೂನಿಗೆ ವಿಧೇಯರಾಗಿ, ವಿದ್ಯಾಹೀನರಾಗಿ, ಸರ್ಕಾರ ಎನೆಂಬುದನ್ನೇ ತಿಳಿಯದವರಾಗಿ ಬಳಿಕೊಂಡು ಇರುವ ಅಲ್ಪ ಸ್ವಲ್ಪ ಭೂಮಿಗಳನ್ನು ಹೇಗೆ ಕಷ್ಟ ವಹಿಸಿ ನೆಟ್ಟರೂ ಸಿಕ್ಕುವುದು ತಮ್ಮ ಗಂಜಿಗೆ ತಕ್ಕಷ್ಟೆ. ಇಲ್ಲಿ ಜನರಿಗೆ ಇತರ ಕರೆ ಸವಲತ್ತುಗಳ ಉಂಟೆ? ಏನೂ ಇಲ್ಲವಲ್ಲವೇ? ಇಂತಹ ಜನರಿಗೆ ಇದೆಂತಹ ಕಷ್ಟವನ್ನು ಆ ಅಧಿಕಾರಿಯೇ ಅಥವ ಸರಕಾರವೇ ಕೊಡುತ್ತಿರುವುದೋ ತಿಳಿಯಲಾರದು. ಮಳೆಗಾಲ ಕಳೆಯುವಾಗ ಹೆಚ್ಚಿನವರು ಅನ್ನವಿಲ್ಲದೆ ಸಾಯುವರೋ ಏನೋ ಧಾರಣೆಯೋ, ಕಂಟ್ರೋಲ್ ಇರುವುದು ರೂ. ೭-೨-೬-೦ ಅಲ್ಲವೇ? ಅವರು ಕೊಡುವುದು ಬರೇ ರೂ. ೨೦೩. ಇದು ಯಾವ ನ್ಯಾಯ. ಇದುವುದನ್ನು ಕೇಳಿದರೆ ಅಷ್ಟೇ ಕೊಡುವದೆಂದು ಗದರಿಸುವರು.'

ಇಂತಹ ಬಡನಾಡಿನ ಸ್ಥಿತಿಯನ್ನು ಇದಕ್ಕೆ ಸಂಬಂಧಪಟ್ಟ ಮೇಲಧಿಕಾರಿಗಳೂ ಮತ್ತು ಆಹಾರ ಸರಕಾರವೂ ಸ್ವಲ್ಪ ಮನ ಕೊಟ್ಟು ರಿಯಾಯಿತಿಯನ್ನು ತೋರಿಸಿದರೆ ಅದೆಷ್ಟು ದೊಡ್ಡ ಧರ್ಮವಾಗುವದೆಂ ತಿಳಿಯದು. ಬಡವರ ಹಿಂದೆ ಬಿದ್ದಿರುವ ಊರನು, ಮುಂದಾಳ ತರುವ ದನ್ನು ಬಿಟ್ಟು ಅವರನ್ನು ಅಲ್ಲಿಯೇ ಇರಿಸಿ ಹಿಂಸಿಸುವುದು ನ್ಯಾಯವೇ?

'ಮರೆನಾಡಿನವ'

ಪ್ರಕಟಣೆ.

ಈ ಮೂಲಕ ಕೊಡಗಿನ ಸಾರ್ವಜನಿಕರಿಗೆ ತಿಳಿಯಪಡಿಸುವದೇನೆಂದರೆ:—

ಕೊಡಗು ಚೀಫ್ ಕಮಿಷನರ್ ಸಾಹೇಬರವರ ತಾರೀಕು 18-12-1950 ರ A 1-2771-50ರ ಪ್ರಕಟಣೆ ಮೇರೆ ಯಾವನೊಬ್ಬನೂ ಮದುವೆ, ಸಾವು ಅಥವ ತಿಥಿಯ ಸಂದರ್ಭಗಳಲ್ಲಿ ಮನೆಯವರನ್ನು ವಿನಾಯಿಸಿ ಐವತ್ತಕ್ಕಿಂತ ಹೆಚ್ಚು ಮಂದಿಗೆ ಔತಣವನ್ನು ಬಡಿಸಕೂಡದು.

ಇತರ ಹಬ್ಬ, ಹುಣ್ಣಿಮೆ, ಸಂತೋಷ ಕೂಟ ಮುಂತಾದ ಸಮಾರಂಭಗಳಲ್ಲಿ ಅತಿಥಿಗಳನ್ನು ಬರಮಾಡಿಕೊಂಡವರನ್ನು ವಿನಾಯಿಸಿ 24 ಮಂದಿಗಿಂತ ಹೆಚ್ಚು ಜನರಿಗೆ ಔತಣ ಬಡಿಸಕೂಡದು.

ಅಲ್ಲದೆ ಮದುವೆ ಸಂದರ್ಭದಲ್ಲಿ 50 ಜನ ಮಿತಿಯುಳ್ಳ ಸಭೆಗೆ ಔತಣವನ್ನು ಎರಡಕ್ಕಿಂತ ಹೆಚ್ಚು ಬಾರಿಯೂ, ಸಾವು ಮತ್ತು ತಿಥಿಗಳಲ್ಲಿ 50 ಜನ ಮಿತಿಯುಳ್ಳ ಸಭೆಗೆ ಔತಣವನ್ನು ಒಂದಕ್ಕಿಂತ ಹೆಚ್ಚು ಬಾರಿ ಬಡಿಸತಕ್ಕದಲ್ಲ.

ಮೇಲ್ಕಂಡ ಮಿತಿಗೆ ಒಳಪಡದ ಭೋಜನ ಕೂಟದಲ್ಲಿ ಯಾವನೊಬ್ಬನೂ ಭಾಗಿಯಾಗಕೂಡದು.

ಮೇಲೆ ಸೂಚಿಸಿದ ಊಟದ ಮಿತಿಯು ಅಕ್ಕಿ, ಗೋಧಿ, ರಾಗಿ, ಬಾರ್ಲಿ ಮುಂತಾದ ನಿಯಂತ್ರಣ ಧಾನ್ಯಗಳಿಂದ ತಯಾರಿಸಿದ ಆಹಾರ ಪದಾರ್ಥಗಳಿಗೆ ಮಾತ್ರ ಅನ್ವಯಿಸುತ್ತದೆ.

ಈ ವಿಧಿಗಳಿಗೆ ವ್ಯತಿರಿಕ್ತವಾಗಿ ಔತಣ ಕೊಟ್ಟವರೂ ಮತ್ತು ಇಂಥಾ ಭೋಜನ ಕೂಟದಲ್ಲಿ ಭಾಗಿಗಳಾದವರೂ ಸಹ ಆಹಾರ ಪದಾರ್ಥಗಳ ನಿಯಂತ್ರಣದ ವಿಧಿಗನುಸಾರವಾಗಿ ಶಿಕ್ಷೆಗೆ ಗುರಿಯಾಗುತ್ತಾರೆ.

ಐ. ಸಿ. ಸುಬ್ಬಯ್ಯ,
ಕೊಡಗು ರೇಶನಿಂಗ್ ಡೈರೆಕ್ಟರ್.

ಕೊಡಗು ವ್ಯವಸಾಯ ಇಲಾಖೆ
ಮಡಿಕೇರಿ, ೨೧-೪-೫೩.

ಪ್ರಕಟಣೆ.

ಕಸಿ ಮಾಡಿದ ಹಣ್ಣು ಗಿಡಗಳಿಗೆ ಇಂಡೆಟ್ ಮಾಡಿದವರು ಮೇ ತಾರೀಕು ೨೦ ರೊಳಗೆ ತಮಗೆ ಬೇಕಾದ ಗಿಡಗಳ $\frac{3}{4}$ ಭಾಗದ ಕ್ರಯವನ್ನು ಖಜಾನೆ ಯಾ ನಾಡು ಆಫೀಸುಗಳಲ್ಲಿ ಕೊಟ್ಟು ಚಲನು ಯಾ ನಾಡು ಆಫೀಸ್ ರಶೀತಿಯನ್ನು ತಮ್ಮ ಹತ್ತಿರದ ಇಲಾಖೆ ಸಿಬ್ಬಂದಿಗಳಿಗೆ ಕೊಡಬೇಕಾಗಿ ಈ ಮೂಲಕ ತಿಳಿಸಲಾಗಿದೆ. ಹಣ ಕಟ್ಟಿದ ತಪಶೀಲು ಪ್ರಕಾರ ಹಣ್ಣು ಗಿಡಗಳನ್ನು ಜೂನ್ ಮೊದಲನೇಯ ಎರಡನೇ ವಾರದಲ್ಲಿ ಬಟವಾಡೆ ಮಾಡಲಾಗುವುದು.

ಹಣ್ಣು ಗಿಡಗಳ ಕ್ರಯವನ್ನು ಎಗ್ರಿಕಲ್ಚರ್ ಡೆಮೊನ್‌ಸ್ಟ್ರೇಟರವರ ಆಫೀಸಿನಿಂದ ತಿಳಿದುಕೊಳ್ಳಬಹುದು.

ಬಿ. ಎಸ್. ವರದರಾಜನ್,
ಅಗ್ರಿಕಲ್ಚರ್ ಆಫೀಸರ್.

ಕೊ ಡ ಗು

ತಾ. ೨೫-೪-೧೯೫೨ನೇ ಶುಕ್ರವಾರ

ಮಂತ್ರಿ ಮಂಡಳಗಳು.

ಕಳೆದ ಜನರಲ್ ಚುನಾವಣೆಯಲ್ಲಿ ಹಿಂದೂದೇಶದ ಎಲ್ಲಾ ಸಂಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಹುಮತ ದೊರೆಯದ್ದರಿಂದ ಮಂತ್ರಿ ಮಂಡಳಗಳ ರಚನೆಯು ಕೆಲವು ಕಡೆ ಸುಗಮವಾಗಿ ನಡೆದಿರುವುದಿಲ್ಲ. ತಿರುವಾಂಕೂರ್-ಕೊಚಿನ್ ಸಂಸ್ಥಾನದ ಎಸೆಂಬ್ಲಿಯಲ್ಲಿ ಕಾಂಗ್ರೆಸು ಪಕ್ಷಕ್ಕೆ ಬಹುಮತ ದೊರೆಯಲಿಲ್ಲ. ಅಲ್ಲಿ ಕಮ್ಯುನಿಸ್ಟರ ಪಂಗಡವು ಬಲವಾಗಿದೆ. ಆದ ಕಾರಣ ಕಾಂಗ್ರೆಸಿಗೆ ವಿರುದ್ಧ ನಿಂತ ಪಂಗಡಗಳೆಲ್ಲವೂ ಸಂಯುಕ್ತ ರಂಗವನ್ನು ಸ್ಥಾಪಿಸಿ, ಮಂತ್ರಿ ಮಂಡಲ ರಚಿಸಲು ಯತ್ನಿಸಿದವು. ಆದರೆ ಸಾಧ್ಯವಾಗಲಿಲ್ಲ. ಕಾಂಗ್ರೆಸ್ ಪಕ್ಷವೇ ಮಂತ್ರಿ ಮಂಡಲ ರಚಿಸಿತು. ತಿರುವಾಂಕೂರಿನಲ್ಲಿ ತಮಿಳು ಭಾಷೆಯೊಡುವ ಪ್ರದೇಶವನ್ನು ತಮಿಳು ಕಾಂಗ್ರೆಸ್ ಸಮಿತಿಗೆ ಸೇರಿಸಬೇಕೆಂಬ ಕೆಲವು ಕಾಂಗ್ರೆಸ್ಸಿಗರು ತಮ್ಮದೊಂದು ಪಕ್ಷ ಕಟ್ಟಿ ಚುನಾವಣೆಯಲ್ಲಿ ಸ್ಪರ್ಧಿಸಿ, ಎಂಟು ಜನರು ಜಯಶೀಲರಾದರು. ಈ ಪಕ್ಷದವರ ಸಹಾಯವು ಈಗ ಕಾಂಗ್ರೆಸ್ ಪಕ್ಷಕ್ಕೆ ದೊರೆಯಿತು. ಇವರು ಈಗ ಕಾಂಗ್ರೆಸ್ಸಿಗೆ ಪುನ ಸೇರಲು ನಿಶ್ಚಯಿಸಿರುವುದರಿಂದ ಅಲ್ಲಿ ಕಾಂಗ್ರೆಸ್ಸಿಗೆ ಬಹುಮತ ದೊರೆತಂತಾಯಿತು. ಆದರೆ ಕಾಂಗ್ರೆಸ್ಸಿಗರ ವಿರೋಧವಿಲ್ಲದೆ ಒಬ್ಬ ಸೋಷ್ಯಲಿಸ್ಟ್ ಉಮೇದುವಾರರು ಅಲ್ಲಿಯ ಎಸೆಂಬ್ಲಿಯ ಸ್ಪೀಕರ್ (ಅಧ್ಯಕ್ಷರು) ಆಗಿ ಆರಿಸಲ್ಪಟ್ಟಿದ್ದಾರೆ

ಮದ್ರಾಸ್ ಪ್ರಾಂತ್ಯದ ಸ್ಥಿತಿಯೂ ಮೇಲಿನದಂತೆಯೇ ಇದೆ. ಕಾಂಗ್ರೆಸ್ ಪಕ್ಷಕ್ಕೆ ಬಹುಮತವಿಲ್ಲದ್ದರಿಂದ ಅದಕ್ಕೆ ಚುನಾವಣೆ ಮುಗಿದ ಕೂಡಲೇ ಮಂತ್ರಿ ಮಂಡಳಿ ಏರ್ಪಡಿಸಲು ಸಾಧ್ಯವಾಗಲಿಲ್ಲ. ಅಲ್ಲದೆ ಚುನಾವಣೆಯಲ್ಲಿ ಮೊದಲಿನ ಪ್ರಾ ಮುಖ್ಯ ಮಂತ್ರಿಗಳೆಲ್ಲರೂ ಸೋಲಿಸಲ್ಪಟ್ಟದ್ದರಿಂದ ಯೋಗ್ಯ ಮುಂದಾಳನ್ನು ಆರಿಸುವುದೂ ಕಷ್ಟವಾಗಿತ್ತು. ಇತರ ಪಕ್ಷಗಳು ಒಟ್ಟುಗೂಡಿ ಮಂತ್ರಿಮಂಡಲ ರಚಿಸಲು ಮಾಡಿದ ಪ್ರಯತ್ನ ಸಫಲವಾಗಲಿಲ್ಲ. ಕಡೆಗೆ ತನ್ನ ವೃದ್ಧಾಪ್ಯದಲ್ಲಿ ವಿಶ್ರಾಂತಿ ತೆಗೆದುಕೊಳ್ಳುತಿದ್ದ ಶ್ರೀ ಸಿ. ರಾಜಗೋಪಾಲಚಾರ್ಯರನ್ನು ಬಿನ್ನವಿಸಿಕೊಂಡು ಅವರನ್ನು ಎಸೆಂಬ್ಲಿ ಕಾಂಗ್ರೆಸ್ ಪಾರ್ಟಿಯ ಮುಂದಾಳಾಗಿ ಒಮ್ಮತದಿಂದ ಆರಿಸಿ ಅವರ ಮುಖ್ಯ ಮಂತ್ರಿತ್ವದಲ್ಲಿ ಅಲ್ಲಿಯ ಹದಿನೈದು ಜನ ಮಂತ್ರಿಗಳ ಮಂಡಳವನ್ನು ರಚಿಸಲಾಗಿದೆ. ಭಾರತದ ಗವರ್ನರ್ ಜನರಲ ಪದವಿಯನ್ನು ಅಲಂಕರಿಸಿದ್ದ ರಾಜಾಜಿಯವರು ತ್ಯಾಗ ಬುದ್ಧಿಯನ್ನು ತೋರಿಸಿ ಈ ಕಾರ್ಯಕ್ಕೆ ಇಳಿಯದಿದ್ದರೆ ಮದರಾಸಿನಲ್ಲಿ ಯಾರಿಗೂ ಈ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಬಗೆಹರಿಸಲು ಸಾಧ್ಯವಾಗುತ್ತಿರಲಿಲ್ಲ ಅದ್ವಿತೀಯ ಮೇಧಾವಿಗಳೂ, ಬಹು ನುರಿತ ರಾಜಕಾರಣಿ ಹಾಗೂ ಆಡಳಿತಗಾರರೂ ಆದ ಇವರ ಮುಂದಾಳುತನದಲ್ಲಿ ಕಾಂಗ್ರೆಸ್ ಪಕ್ಷದ ಬಲವು ದಿನೇ ದಿನೇ ಹೆಚ್ಚುತ್ತಿದೆ. ಅವರು ಈ ಸಂದರ್ಭದಲ್ಲಿ ಹೇಳಿರುವ ಅಮೂಲ್ಯವಾದ ಬುದ್ಧಿವಾದಗಳನ್ನು ಯಾವ ಮಂತ್ರಿ ಮಂಡಲವೂ ಮರೆಯದಿರಲಿ.

'ಎಲ್ಲಿಯೂ ಪಕ್ಷರಾಜ್ಯವಾಗದಿರಲಿ. ಜಾತಿ ಮತ, ಕೋಮು ದ್ವೇಶಗಳನ್ನು ಸಂಪೂರ್ಣ ಬಿಡಬೇಕು. ಕಾಂಗ್ರೆಸು ಸರ್ಕಾರವೆಂಬುದರ ಬದಲು ಜನತಾ ಸರ್ಕಾರವಾಗಲಿ. ಅಲ್ಲದೆ. ಮಂತ್ರಿಗಳು ಆದರ್ಶಪುರುಷರಾಗಿರಬೇಕು. ತಾವು ಜನರಿಗೆ ಹೇಳುವಂತೆಯೇ ಕಾರ್ಯತ ಮಾಡುವವರಾಗಬೇಕು'

ಬೊಂಬಾಯಿ ಪ್ರಾಂತ್ಯದಲ್ಲಿ ಕಾಂಗ್ರೆಸಿಗೆ ಅದ್ವಿತೀಯ ಜಯದೊರೆಯಿತು ಆದರೆ ಅಲ್ಲಿಯ ಮುಂದಾಳ ಆಯ್ಕೆಯು ಸುಲಭವಾಗಿರಲಿಲ್ಲ ಪ್ರಧಾನ ಮಂತ್ರಿ ಪದವಿಯನ್ನು ವಹಿಸಬೇಕಾಗಿದ್ದ ಶ್ರೀ ಮುರಾರ್ಜಿ ದೇಸಾಯಿಯವರು ಚುನಾವಣೆಯಲ್ಲಿ ಸೋತಿದ್ದರು. ಹೀಗಿದ್ದರೂ ಅಲ್ಲಿಯ ಎಸೆಂಬ್ಲಿಯ ಸದಸ್ಯರುಗಳು ಅವರನ್ನೇ ಮುಂದಾಳಾಗಿ ಒಮ್ಮತದಿಂದ ಆರಿಸಿಕೊಂಡ ಕಾರಣ ಅವರು ಪ್ರಧಾನ ಮಂತ್ರಿಪದವಿಯನ್ನು ವಹಿಸಿಕೊಂಡು ೯ ಜನ ಮಂತ್ರಿಗಳ ಮಂಡಳಿಯನ್ನು ರಚಿಸಿರುವರು ಅವರು ಬೇಗನೆ ಅಹ್ಮದಾಬಾದಿನಿಂದ ಉಪಚುನಾವಣೆಗೆ ನಿಂತು, ವಿರೋಧವಿಲ್ಲದೆ ಎಸೆಂಬ್ಲಿಗೆ ಆರಿಸಲ್ಪಡಲಿರುವರು. ಇವರದೇ ಬೊಂಬಾಯಿಯ ಅತಿಚಿಕ್ಕ ಮಂತ್ರಿಮಂಡಲ ಮೊದಲಿನ ಎರಡು ಸಾರಿಯು ಮಂತ್ರಿಮಂಡಲಗಳಲ್ಲೂ ೧೨ ಮಂತ್ರಿಗಳಿದ್ದರು. ಈ ೯ ಜನರ ಪೈಕಿ ಮೂವರು ಮಾತ್ರ ಹೊಸಬರು. ಇದರಲ್ಲಿ ಮಹಾರಾಷ್ಟ್ರಕ್ಕೆ ನಾಲ್ಕು, ಗುಜರಾತಕ್ಕೆ ಮೂರು, ಕರ್ನಾಟಕಕ್ಕೆ ಒಂದು ಮತ್ತು ಬೊಂಬಾಯಿ ಪಟ್ಟಣಕ್ಕೆ ಒಂದು ಸ್ಥಳ ಸಿಕ್ಕಿದೆ. ಕರ್ನಾಟಕಕ್ಕೆ ೩ ಸ್ಥಳವನ್ನಾದರೂ ಕೊಡಬೇಕೆಂದು ಕರ್ನಾಟಕದವರು ಹೋರಾಡಿದರೂ ಸಫಲವಾಗಲಿಲ್ಲ. ಕರ್ನಾಟಕದ ಎಸೆಂಬ್ಲಿ ಮೆಂಬರುಗಳ ಅಭಿಪ್ರಾಯವನ್ನು ಉಲ್ಲಂಘಿಸಿ, ಶ್ರೀ. ಯಂ. ಪಿ. ಪಾಟಿಲ್‌ರವರು ಮಂತ್ರಿಪದವಿಯನ್ನು ಒಪ್ಪಿಕೊಂಡಿರುವರು. ಪ್ರದೇಶಗಳ ಪ್ರಾತಿನಿಧ್ಯದ ದೃಷ್ಟಿಯಿಂದ ತಾನು ಮಂತ್ರಿಗಳನ್ನು ಆರಿಸಲಿಲ್ಲವೆಂದೂ ಕೇವಲ ದಕ್ಷತೆ ಮತ್ತು ಪ್ರಮಾಣಿಕತೆಯ ಅರ್ಹತೆಯಿಂದ ಮಂತ್ರಿಮಂಡಲವನ್ನು ಕಟ್ಟಿರುವೆನೆಂದೂ ಪ್ರಧಾನಿಯಾದ ದೇಸಾಯಿಯವರು ರಚನೆಯ ಕಾಲದಲ್ಲಿ ಹೇಳಿರುವರು. ಇದಕ್ಕೆ ಕಾಂಗ್ರೆಸಿನ ಅಧ್ಯಕ್ಷರಾದ ಪಂಡಿತನೆಹರುರವರ ಒಪ್ಪಿಗೆಯೂ ದೊರೆತ್ತಿದೆ. ಇಂದೀಗ ನಿಜವಾದ ಜನಹಿತ ಸರ್ಕಾರ ನಡಿಸಲ್ಪಡಬೇಕಾದರೆ ಮಂತ್ರಿಗಳಿಗೆ ಪ್ರಮಾಣಿಕತೆ ಮತ್ತು ದಕ್ಷತೆಯ ಯೋಗ್ಯತೆಗಳು ಇದ್ದೇ ಇರಬೇಕು. ಇವಿಲ್ಲವಾದರೆ ಕಾಂಗ್ರೆಸಿನ ಹಾಗೂ ಪ್ರಜಾಜವಾಬ್ದಾರಿ ಸರ್ಕಾರದ ಉದ್ದಿಶ್ಯವು ಕೈಗೂಡಲಾರದೆಂಬುದು ಖಂಡಿತ.

ಪೆಪ್ಸು ಸಂಸ್ಥಾನದಲ್ಲಿ ಕಾಂಗ್ರೆಸಿನ ಬಹುಮತವು ಬಹಳ ಚಿಕ್ಕದಾಗಿತ್ತು. ಆದ ಕಾರಣ ಅಲ್ಲಿ ಕಾಂಗ್ರೆಸ್ ಪಕ್ಷವು ರಚಿಸಿದ ಮಂತ್ರಿ ಮಂಡಲವು ಒಂದೆ ಒಂದು ತಿಂಗಳಲ್ಲೇ ಮುರಿದು ಹೋಯಿತು ಅಲ್ಲಿಯ ಎಸೆಂಬ್ಲಿಯ ಸ್ಪೀಕರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಒಬ್ಬ ಉಪ ಮಂತ್ರಿಯವರು ಮತ್ತು ಇಬ್ಬರು ಮೆಂಬರುಗಳು ತಮ್ಮ ಪಕ್ಷವನ್ನು ಬಿಟ್ಟು ವಿರುದ್ಧ ಪಕ್ಷಕ್ಕೆ ಸೇರಿದ್ದರಿಂದ ಕಾಂಗ್ರೆಸು ಬಹುಮತವನ್ನು ಕಳೆದುಕೊಂಡಿತು. ಆದಕಾರಣ ತಮ್ಮ ಮೇಲೆ ಅವಿಶ್ವಾಸ ಠರಾವು ಬರುವ ಮುಂಚಿತವಾಗಿಯೇ ಕಾಂಗ್ರೆಸ್ ಮಂತ್ರಿ ಮಂಡಳಿಯು ರಾಜಿನಾಮೆ ಕೊಟ್ಟಿತು. ಈಗ ಸಂಯುಕ್ತ ರಂಗದವರು ಸರ್ದಾರ್ ಗಿಯಾನ್ ಸಿಂಗ್ ರೇರ್‌ವಾಲಾರವರ ಮುಂದಾಳ್ತನದಲ್ಲಿ ನಾಲ್ಕು ಜನ ಮಂತ್ರಿಗಳ ಮಂಡಳವನ್ನು ರಚಿಸಿರುವರು. ೬೦ ಮೆಂಬರುಗಳ ಎಸೆಂಬ್ಲಿಯಲ್ಲಿ ಸಂಯುಕ್ತ ರಂಗದವರಿಗೆ ೩೨ ಸ್ಥಳಗಳಿವೆ. ಇಡೀ ಹಿಂದೂಸ್ಥಾನದಲ್ಲಿ ಇದೇ ಪ್ರಥಮತ ಕಾಂಗ್ರೆಸೇತರ ಸರಕಾರವಾಗಿದೆ ಇದರ ಬಾಳಿಕೆಯು ಎಷ್ಟೆಂದು ಮುಂದೆ ನೋಡಬೇಕಾಗಿದೆ.

ವ ರ್ತ ಮಾ ನ

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರವೇಶಿಕಾ ಮತ್ತು ವಿಶಾರದಾ ಪರೀಕ್ಷೆಗಳು ಈ ಅಗಸ್ಟ್ ತಿಂಗಳಲ್ಲಿ ಮಡಿಕೇರಿಯಲ್ಲೇ ಆಗಬೇಕೆಂದು ಬಯಸುವ ಪರೀಕ್ಷಾರ್ಥಿಗಳು ಇದೇ ಮೇ ತಿಂಗಳ ಒಂದನೇ ವಾರದಲ್ಲಿ ಕೊಡಗು ಜಿಲ್ಲಾ ಹಿಂದೀ ಪ್ರಚಾರ ಸಭೆಗೆ ಕೇಂದ್ರ ವ್ಯವಸ್ಥೆಯನ್ನು ಮಾಡಲು ಪತ್ರ ಬರೆಯಬೇಕೆಂದೂ, ೧೦ ಅಥವ ಅದಕ್ಕಿಂತ ಹೆಚ್ಚು ಪರೀಕ್ಷಾರ್ಥಿಗಳು ದೊರೆತರೇನೇ ಕೇಂದ್ರದ ಏರ್ಪಾಡು ಆಗಲು ಸಾಧ್ಯವಿದೆಯೆಂದೂ ಸಭೆಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಹಿಂದೀ ವಿಮಾನ ದಳದಲ್ಲಿ ತರಬೇತಾಗಲು ಎಸ್ ಎಸ್. ಎಲ್. ಸಿ ಪಾಸಾದ ಯುವಕರು ಬೇಕಾಗಿದ್ದಾರೆ ಹೆಚ್ಚಿನ ವಿಷಯಗಳನ್ನು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಿಂದ ಕೇಳಿ ತಿಳಿದುಕೊಳ್ಳಬಹುದು.

ವೀರಾಜಪೇಟೆಯ ಶ್ರೀ ತಿರುವೆಂಗಡಂ ಪಿಳ್ಳೆಯವರು ಈ ತಾ ೨೧ ರಲ್ಲಿ ತನ್ನ ೬೦ ನೇ ವಯಸ್ಸಿನಲ್ಲಿ ಶಿವಾಧೀನರಾದರು. ಇವರು ವೀರಾಜಪೇಟೆ ಮುನ್ಸಿಪಲ್ ಕಮಿಟಿ ಸ್ಥಾಪನೆಯಾದಂದಿನಿಂದಲೇ ಸುಮಾರು ೨೦ ವರ್ಷಗಳ ವರೆಗೆ ಅದರ ಕಮಿಟಿಮೆಂಬರಾಗಿಯೂ ಮತ್ತು ೧೨ ವರ್ಷಗಳ ವರೆಗೆ ಅದರ ಅಧ್ಯಕ್ಷರಾಗಿಯೂ ಇದ್ದರು. ೬ ವರ್ಷಗಳ ವರೆಗೆ ಕೊಡಗು ನ್ಯಾಯವಿಧಾಯಕ ಸಭೆಯ ಮೆಂಬರಾಗಿಯೂ ಇದ್ದರು. ಅಲ್ಲಿಯ ಗಣಪತಿ ದೇವಸ್ಥಾನದ ವಾರ್ಷಿಕ ಉತ್ಸವಗಳನ್ನು ಬಹು ಸಂಭ್ರಮದಿಂದ ನಡಿಸುತ್ತಿದ್ದರು.

ನಿವೃತ್ತ ಸ್ಕೂಲ್ ಸುಪರ್‌ವೈಜರಾಗಿದ್ದ ಶ್ರೀ ಮೂವೆರ ಬೆಳ್ಯಪ್ಪನವರು ಈ ತಾರೀಕು ೧೭ರಲ್ಲಿ ತನ್ನ ೭೬ನೇ ವಯಸ್ಸಿನಲ್ಲಿ ಸ್ವಾಪೋಕ್ಕಿನಲ್ಲಿ ಸ್ವರ್ಗಸ್ಥರಾದರು.

ಬೆಪ್ಪುನಾಡು ನಾಲ್ಕೇರಿ ಗ್ರಾಮದ ಮಾಳೆರ ಮಂದಣ್ಣನವರನ್ನು ಕೊಂದ ಕೇಸಿನ ಅಪೀಲಿನಲ್ಲಿ ಮದ್ರಾಸು ಹೈಕೋರ್ಟಿನವರು ಇಬ್ಬರು ಸೆಷನ್ಸ್ ಜಡ್ಜರ ಶಿಕ್ಷೆಯನ್ನೇ ಖಾಯಂ ಮಾಡಿರುವರೆಂದು ತಿಳಿಯಬರುತ್ತದೆ

ಈ ತಾ. ೧೫ರಲ್ಲಿ ಕೋಣಗಣ ಗ್ರಾಮದ ಗಾಂಧೀ ಮಠದಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಭಕ್ತ ಸಂಘದ ಆಶ್ರಯದಲ್ಲಿ ಪರಮಹಂಸರವರ ೧೧೭ನೇ ಜನ್ಮದಿನೋತ್ಸವವು ಪೊನ್ನಂಪೇಟೆ ಶಾಲಾ ಪಂಡಿತರಾದ ಶ್ರೀ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಇಂಡಿಯಾ ಸರಕಾರದ ಅಧ್ಯಕ್ಷ ಪದವಿಯ ಚುನಾವಣೆಗೆ ಶ್ರೀ ಹರಿರಾವ್, ಶ್ರೀ ಕೃಷ್ಣ ಕುಮಾರ್, ಡಾ. ರಾಜೇಂದ್ರ ಪ್ರಸಾದ್, ಶ್ರೀ ಕೆ. ಟಿ. ಷಾ ಮತ್ತು ಶ್ರೀ ಎಲ್ ಜಿ. ತಟ್ಟೆ ಇವರು ಉಮೇದುವಾರರಾಗಿ ನಿಂತಿರುವರು. ಇವರಲ್ಲಿ ಒಬ್ಬರನ್ನು ಅಧ್ಯಕ್ಷರಾಗಿ ಆರಿಸಲು ಬರುವ ಮೇ ತಾ ೬ ರಲ್ಲಿ ಕೊಡಗು ಶಾಸನ ಸಭೆಯ ಮೆಂಬರುಗಳು ಬೆಳಿಗ್ಗೆ ೧೦ ಗಂಟೆಯಿಂದ ಸಾಯಂಕಾಲ ೫ ಗಂಟೆಯ ವರೆಗೆ ಕೌನ್ಸಿಲು ಹಾಲ್‌ನಲ್ಲಿ ಓಟುಗಳನ್ನು ಕೊಡುವ ಏರ್ಪಾಡು ಮಾಡಲಾಗಿದೆ.

ಚೀಫ್ ಕಮಿಷನರವರು ಈ ತಾ. ೨೦ ರಲ್ಲಿ ಬೆಂಗಳೂರಿಗೆ ಹೋಗಿ ತಾ. ೨೨ ರಲ್ಲಿ ವಾಪಸು ಬಂದಿರುವರು.

ಇಂಡಿಯನ್ ಪ್ಲಾಂಟರ್ಸ್ ಸಂಘದವರು ಈ ತಾ. ೨೧ ರಲ್ಲಿ ಕಾಲೇಜ್ ಹಾಲ್‌ನಲ್ಲಿ ಕೊಡಗಿನ ಮುಖ್ಯಮಂತ್ರಿ ಮತ್ತು ಲಾ ಮಂತ್ರಿಗಳಿಗೆ ಬಿನ್ನವತ್ತಳೆಯನ್ನು ಅರ್ಪಿಸಿ ಚಾ ಕೂಟವನ್ನು ನಡಿಸಿದರು

ಸಾರಾಯಿ ವಗೈರೆ ಅಮಲು ಪದಾರ್ಥಗಳಿಗೆ ರೇಶನ್ ಕಾರ್ಡು ಪಡೆಯಲು ಅರ್ಜಿಗಳನ್ನು ಈ ಏಪ್ರಿಲ್ ತಾ ೩೦ರ ವರೆಗೆ ಕಳುಹಿಸಬಹುದೆಂದು ಪ್ರಕಟವಾಗಿದೆ.

ದಕ್ಷಿಣ ಕೊಡಗು ಶ್ರೀಮಂಗಲ ಜೈ ಹಿಂದ್ ಕ್ಲಬ್ಬಿನ ಆಶ್ರಯದಲ್ಲಿ ಬ್ಯಾಡ್‌ಮಿಂಟನ್ ಡಬಲ್ಸ್ ಪಂದ್ಯಾಟವು ಮೇ ತಾ. ೯ರಲ್ಲಿ ಪ್ರಾರಂಭವಾಗುವುದು. ಸದರಿ ಪಂದ್ಯಾಟಕ್ಕೆ ಸ್ಪರ್ಧಿಸಲು ಇಚ್ಛಿಸುವವರು ಈ ತಾ. ೨೮ರೊಳಗೆ ಪ್ರವೇಶ ಧನ ರೂ ೩. ಗಳ ಸಮೇತ ಕಾರ್ಯದರ್ಶಿಯವರಿಗೆ ಬರೆಕೊಳ್ಳುವುದು ಮೂರು ವರ್ಷದ ರೋಲಿಂಗ್ ಮೆಮೋರಿಯಲ್ ಬೆಳ್ಳಿಯ ಕಪ್ಪನ್ನು ಗೆದ್ದವರಿಗೆ ಕೊಡಲಾಗುವುದು. ವಿನ್ನರ್ಸ್ ಮತ್ತು ರನ್ನರ್ಸ್‌ಗಳಿಗೆ ಮೆಡ್ಲುಗಳನ್ನು ಬಹುಮಾನವಾಗಿ ಕೊಡಲಾಗುವುದು.

For Sale.

One Remington Rand-Portable Type-writer Model No. 5 in good condition, is for sale. The sale price is Rs. 150/- or its nearer offer. Those who are interested may please apply to:—

The President,
THE COORG HONEY & WAX PRODUCERS. CO-OPERATIVE SOCIETY, LIMITED.,
Virajpet P. O.
[S. Coorg]

ಮಳೆಯು ಹೇಗೆ ಉಂಟಾಗುತ್ತದೆ ಎಂಬುದನ್ನು ಭೌತಿಕ ಶಾಸ್ತ್ರಜ್ಞರು ವಿವರಿಸಿದನ್ನು ನಾನು ಎಳೆಯವನಾಗಿರುವಾಗ ಶಾಲೆಗಳ ತರಗತಿಗಳಲ್ಲಿ ಓದಿದ್ದ ಈಗಲೂ ತಕ್ಕ ಮಟ್ಟಿಗೆ ಜ್ಞಾಪಕದಲ್ಲಿದೆ. ಅವರ ಅಭಿಪ್ರಾಯದಲ್ಲಿ ಸೂರ್ಯನು ತನ್ನ ಕಿರಣಗಳ ಮೂಲಕ ಭೂಮಿಯ ಮೇಲೆ ಬಿದ್ದ ನೀರನ್ನೂ ಮತ್ತು ಸಮುದ್ರ ಸರೋವರಗಳಲ್ಲಿರುವ ನೀರನ್ನೂ ಕಾಯಿಸುತ್ತಾನೆ. ಹಾಗೆ ಕಾದ ನೀರು ಆವಿಯರೂಪದಲ್ಲಿ ಮೇಲಕ್ಕೇರುತ್ತದೆ. ಹಾಗೆ ಮೇಲಕ್ಕೆದ್ದ ಆವಿಯು ಆಕಾಶದಲ್ಲಿ ಮೋಡದ ರೂಪದಲ್ಲಿ ಕೇಂದ್ರೀಕರಿಸಿ ತಂಪಾದ ಗಾಳಿಯು ತಗಲಿದಾಗ ಅದು ಹನಿ, ಹನಿಯಾಗಿ ಮಳೆರೂಪದಲ್ಲಿ ಬೀಳುತ್ತದೆ. ಅಂದರೆ ಮಳೆ ಬೀಳಬೇಕಾದರೆ ಸೂರ್ಯ, ಸಮುದ್ರ, ಮೋಡ, ಶೀತಗಾಳಿ ಮತ್ತು ತಂಪಾದ ಸ್ಥಳ ಇವೆಲ್ಲಾ ಅವಶ್ಯಕವಾದ ಸಾಧನಗಳು. ಹಾಗೆಯೇ ಒಂದು ಬೆಳೆಯಾಗಬೇಕಾದರೂ ಸಹ ಬೀಜ, ಹದಮಾಡಿದ ಜಾಗ, ಗೊಬ್ಬರ, ನೀರು ಇವೆಲ್ಲಾ ಅವಶ್ಯ. ಅಥವಾ ಇನ್ನೊಂದು ಉದಾಹರಣೆ ಹೇಳುವುದಾದರೆ, ಯುದ್ಧವಾಗಬೇಕಾದರೆ ಸೈನ್ಯಗಳು, ಕೋವಿಗಳು, ಬಾಂಬುಗಳು, ವಿಮಾನಗಳು ಮತ್ತು ಇತರ ಎಲ್ಲಾ ಅವಶ್ಯವಿರುವ ಯುದ್ಧೋಪಕರಣಗಳು ಬೇಕು. ಇಲ್ಲವಾದರೆ ಯುದ್ಧ ಮಾಡುವುದಕ್ಕೆ ಸಾಧ್ಯವಿಲ್ಲ.

ಇದು ಎಲ್ಲರೂ ಒಪ್ಪತಕ್ಕ ವಿಷಯವೆ. ಇದರಲ್ಲಿ ಭಿನ್ನಾಭಿಪ್ರಾಯಕ್ಕೆ ಕಾರಣವೇ ಇಲ್ಲ. ಆದರೆ ಮಳೆಯಾಗಲಿಕ್ಕೆ, ಬೆಳೆಯಾಗಲಿಕ್ಕೆ ಅಥವಾ ಯುದ್ಧವಾಗಲಿಕ್ಕೆ ಈ ಮೇಲ್ಕಂಡ ಉಪಕರಣಗಳೇ ಸಾಕೋ, ಇಲ್ಲ ಇನ್ನೇನಾದರೂ ಪ್ರಾಮುಖ್ಯವಾದ ಒಂದು ಸಂಗತಿಯು ಅವಶ್ಯಕತೆ ಇದೆಯೋ ಎಂಬುದನ್ನು ನಾವು ಪರಿಶೀಲಿಸಬೇಕಾಗಿದೆ. ಮಾದರಿಗಾಗಿ ನಮ್ಮ ಕಡೆಯ ಉದಾಹರಣೆಯಾದ ಯುದ್ಧವನ್ನು ತೆಗೆದುಕೊಂಡರೆ, ಮೇಲೆ ವಿವರಿಸಿದ, ಯುದ್ಧದ ಉಪಕರಣಗಳಾದ, ಸೈನ್ಯ, ವಿಮಾನ, ಶಸ್ತ್ರ ಕೋವಿಗಳು ಇಲ್ಲದೆ ಯುದ್ಧ ಮಾಡುವುದು ಸಾಧ್ಯವೇ ಇಲ್ಲ. ಆದರೆ ಈ ಸಾಧನೆಗಳೆಲ್ಲಾ ಇದ್ದ ಮಾತ್ರಕ್ಕೆ ಯುದ್ಧವಾಗಿಯೇ ಆಗುತ್ತೆ ಎನ್ನಲಾಗುವುದಿಲ್ಲ. ಈ ಎಲ್ಲಾ ಸಾಧನೆಗಳು ಎಷ್ಟಿದ್ದರೂ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ, ದೇಶದ ಆಳರಸರಿಂದ ಹುಕುಂ ದೊರೆತ ವಿನಹ ಅವರಿಗೆ ಒಂದು ಗುಂಡು ಹಾರಿಸಲಿಕ್ಕೂ ಅಧಿಕಾರವಿಲ್ಲ. ಆದುದರಿಂದ, ನಾವು ತಿಳಿಯಬೇಕಾದುದೇನೆಂದರೆ, ಈ ಸಲಕರಣೆಗಳು ಯುದ್ಧಕ್ಕೆ ಅತ್ಯವಶ್ಯಕಗಳಾದ ಸಾಧನೆಗಳಾದರೂ, ಯುದ್ಧ ಮಾಡಿಸುವ ಅಧಿಕಾರಿಗಳ ಬೇರೆ ಯವರ ನಿರ್ಧರಿಸಿ, ಅವರಿಗೆ ಅಪ್ಪಣೆ ಕೊಟ್ಟ ವಿನಹ ಈ ಹತಾರಗಳಿಗಾಗಲೀ, ಯಾ ಸೈನ್ಯಕ್ಕಾಗಲೀ ಯಾ ಸೈನ್ಯಾಧಿಕಾರಿಗಳಿಗಾಗಲೀ ಯುದ್ಧವನ್ನು ಪ್ರಾರಂಭಿಸುವ ಅಧಿಕಾರ ಯಾ ಸ್ವಾತಂತ್ರ್ಯವಿಲ್ಲ. ಸಾಮಾನ್ಯ ಜನರಿಗೆ ನಿಜವಾಗಿಯೂ ಯುದ್ಧವನ್ನು ನಡೆಸುವ ಅಧಿಕಾರಿಗಳನ್ನು ಕಾಣುವುದೂ ಇಲ್ಲ, ತಿಳಿಯುವುದು ಸುಲಭವೂ ಅಲ್ಲ. ಅವರು ದೃಷ್ಟಿಗೋಚರರಲ್ಲ, ಯುದ್ಧವು ಯಾರಿಂದ ನಡೆಯುತ್ತದೆ ಎಂದರೆ, 'ಸೈನ್ಯದಳದಿಂದ' ಎಂದು ಭಾವಿಸುತ್ತಾರೆ. ಆದರೆ ನಿಜವಾಗಿಯೂ, ಯುದ್ಧ ಮಾಡುವವರು ಸೈನಿಕರೂ, ಮತ್ತು ಅವರ ಮುಖ್ಯಾಧಿಕಾರಿಗಳೂ ಆದರೆ, ಯುದ್ಧವನ್ನು ತೊಡಗಿಸುವವರು ಯಾ ಹೂಡಿಸುವವರು ಮತ್ತು ಮಾಡಿಸುವವರು ಎಲ್ಲೋ ಪಟ್ಟಣಗಳಲ್ಲಿ ಕುಳಿತು ರಾಜ್ಯಭಾರ ನಡೆಸುವ ಆಳರಸರು.

ಮಳೆಯೂ, ಭೌತಿಕ ಶಾಸ್ತ್ರವೂ

ಲೇ:— ಶ್ರೀ ಪಿ. ಜಿ. ಐಯ್ಯಪ್ಪ, ಬಿ ಎ., ಬಿ ಎಲ್., ಮಡಿಕೇರಿ.

ಇದೇ ರೀತಿಯಲ್ಲಿ ಭೌತಿಕ ಶಾಸ್ತ್ರಜ್ಞರು, ಮಳೆಬರುವುದಕ್ಕೆ ಸಮುದ್ರ, ಸೂರ್ಯ, ಆವಿ, ಮೋಡ ಮತ್ತು ಶೀತಗಾಳಿಗಳು ಅವಶ್ಯವಿರುವ ಸಾಧನಗಳೆಂದು ಹೇಳಿದರೂ, ಈ ಉಪಕರಣಗಳಿಗೆ ಮಳೆ ಹೊಡೆಯುವ ಶಕ್ತಿ ಇದ್ದರೂ, ಆ ಅಧಿಕಾರವು ಮುಖ್ಯಾಧಿಕಾರಿಯ ಹುಕುಂ ಆಗದೆ, ಮಳೆ ಸುರಿಸುವ ಅಧಿಕಾರ ಇವಕ್ಕೆ ಇರಲಿಕ್ಕಿಲ್ಲ. ಯಾಕೆಂದರೆ, ಹೇಗೆ ಸೈನ್ಯಗಳೂ, ಕೋವಿ, ಶಸ್ತ್ರ ಮೊದಲಾದ ಆಯುಧಗಳೂ, ಮೊದಲಾದುವು ಇದ್ದರೂ, ಯುದ್ಧ ಮಾತ್ರ ಯಾವಾಗಲೂ ಇರುವುದಿಲ್ಲವೋ, ಹಾಗೆಯೇ, ಸೂರ್ಯ, ಸಮುದ್ರ, ಗಾಳಿ, ಮೋಡಗಳು, ಯಾವಾಗಲೂ ಇದ್ದಾಗ್ಯೂ ಮಳೆ ಮಾತ್ರ ಒಮ್ಮೊಮ್ಮೆ ಸುರಿಯುತ್ತದಲ್ಲದೆ ಯಾವಾಗಲೂ ಸುರಿಯುವುದಿಲ್ಲ. ಇದರಿಂದ ಏನು ಸೂಚಿತವಾಗುತ್ತದೆ ಎಂದರೆ, ಈ ಸಾಧನೆಗಳನ್ನು ನಡೆಸತಕ್ಕ, ಯಾ ಈ ಉಪಕರಣಗಳಿಗೆ ಹುಕುಂ ಕೊಡತಕ್ಕ ಒಬ್ಬನು ಇರುವನು. ಪ್ರತ್ಯೇಕ ಶಕ್ತಿಯು ಇರಬೇಕೆಂದು, ಇದನ್ನು ಈಗಿನ ಕಾಲದ ಹುಟ್ಟುತ್ತಿರುವ ಭೌತಿಕ ಶಾಸ್ತ್ರಜ್ಞರು ಇನ್ನೂ ಕಂಡುಹಿಡಿದಿಲ್ಲ. ಆದರೆ, ಪರಬ್ರಹ್ಮನನ್ನೇ ಸಾಕ್ಷಾತ್ಕಾರ ಮಾಡಿ, ನಮ್ಮ ಪೂರ್ವದ ಋಷಿಗಳು ಅದನ್ನು ಕಂಡುಹಿಡಿದು ಆ ಪ್ರಕೃತಿ ಶಕ್ತಿಗಳಿಗೆ ಇರುವ ಅಧಿಕಾರಿಗಳನ್ನು ಗುರುತಿಸಿ, ಅವರ ಪ್ರೀತಿಯನ್ನು ಸಂಪಾದಿಸಿಕೊಳ್ಳುವ ಮಾರ್ಗಗಳನ್ನೂ ಕಂಡುಹಿಡಿದು, ಲೋಕದ ಜನರ ಹಿತದೃಷ್ಟಿಯಿಂದ ಅದನ್ನು ಎಲ್ಲಾ ಅನುಸರಿಸುವಂತೆ ಕಟ್ಟು ಕಟ್ಟಳೆಗಳನ್ನು ವಿಧಿಸಿದ್ದಾರೆ. ಆದರೆ ನಾವು ನಮ್ಮ ಈಗಿನ ಅರ್ಧನಾಗರೀಕತೆಯಲ್ಲಿ ಅದನ್ನೆಲ್ಲಾ 'ಮೂಢಭಕ್ತಿ' ಎಂದು ಮೂಲೆಗೆ ಹಾಕಿದ್ದೇವೆ. ಇದರ ಫಲಿತಾಂಶವಾಗಿ, ನಾವು ನಮ್ಮ ವಿದ್ಯಾಮಾನದ ಫಲಿತಾಂಶವಾಗಿ ಸಂಪಾದಿಸಿರುವ ಜ್ಞಾನವನ್ನು ಎಷ್ಟು ಉಪಯೋಗಿಸಿದರೂ 'ಚಿಟ್ ಪಾರ್ ಚೆಂಗಿ ಚಟ್ಟಿಕ್' ಎಂಬ ಗಾದೆಯಂತೆ ಕಾಣುತ್ತಲೇ ಇದ್ದೇವೆ. ದೇವರ ಕಲ್ಪನೆಯಿಂದ ನಡೆಯಬೇಕಾದ ಕಾರ್ಯಗಳನ್ನು ಭಯಭಕ್ತಿಯಿಂದ ಪಡೆಯಬೇಕೇ ವಿನಹ ಹಟಸಾಧನೆ ಇಂದಾಗಲೀ ಯಾ ಭೌತಿಕ ಜ್ಞಾನದ ಉಪಯೋಗದಿಂದಾಗಲೀ ಸಾಧಿಸಿಕೊಳ್ಳಲು ಖಂಡಿತವಾಗಿಯೂ ಸಾಧ್ಯವಿಲ್ಲ.

ಹಿಂದೂದೇಶದ ರಾಜ್ಯಘಟನೆಯು ಜಾತಿ, ಕೋಮು ಯಾ ಮತ ತತ್ವಗಳ ಆಧಾರದ ಮೇಲೆ ಕಟ್ಟಲ್ಪಡುವುದಿಲ್ಲವೆಂದು ನಮ್ಮ ರಾಜಕೀಯ ಪಟುಗಳು, ಸಾರಿ ಸಾರಿ ಬಹಿರಂಗಪಡಿಸಿರುವರು. 'ಜಾತಿ ಯಾ ಮತಧರ್ಮಗಳ ಆಧಾರದ ಮೇಲೆ ನಮ್ಮ ರಾಜ್ಯಕ್ರಮವನ್ನು ಕಟ್ಟುವುದಿಲ್ಲವೆಂದ ಮಾತ್ರಕ್ಕೆ ನಾಸ್ತಿಕ ಮತದ ರಾಜ್ಯವೆಂದರ್ಥವಲ್ಲ. ಮಹನೀಯರೇ ಹೆಚ್ಚಾಗಿರುವ ಪಾಕಿಸ್ಥಾನವು ಇಸ್ಲಾಂ ಧರ್ಮದ ನಡಾವಳಿಕೆಗನುಸಾರವಾಗಿ, ಅದರ ರಾಜ್ಯಘಟನೆಯನ್ನು ಸ್ಥಾಪಿಸುತ್ತೇವೆಂದು ಹೇಳುವುದಕ್ಕೆ ವ್ಯತಿರಿಕ್ತವಾಗಿ, ಹಿಂದೂದೇಶದಲ್ಲಿ, ಹಿಂದೂಮತಸ್ಥರೇ ಅಧಿಕ ಸಂಖ್ಯೆಯವರಿದ್ದರೂ, ಹಿಂದೂಧರ್ಮದ ತಳಹದಿಯ ಮೇಲೆಯೇ ತಮ್ಮ ರಾಜಕೀಯ ಕಾಯಿದೆಗಳನ್ನು ರೂಪಿಸದೆ, ಎಲ್ಲಾ ಮತಸ್ಥರೂ, ಅವರವರ ಭಕ್ತಿಗನುಸಾರವಾಗಿ ದೇವರನ್ನು ಪೂಜಿಸುವ ಸ್ವಾತಂತ್ರ್ಯವನ್ನು ಕಲ್ಪಿಸಿಕೊಡತಕ್ಕ ಒಂದು ಕೋಮುವಾರು ಭಾವನೆಯ ಗಂಧ ಇಲ್ಲದ ರೀತಿಯ ರಾಜ್ಯಘಟನೆಯನ್ನು ಕಟ್ಟುವದು ಎಂದರ್ಥ. ಆದರೆ ಭಾರತದಲ್ಲಿರುವ ಪ್ರತಿಯೊಬ್ಬನೂ ದೇವರಲ್ಲಿ ನಂಬಿಕೆ ಇರುವವನು. ಪೂಜೆ ಪುನಸ್ಕಾರಗಳಲ್ಲಿ ಭಕ್ತಿ, ಶ್ರದ್ಧೆ ಇರತಕ್ಕವರು ಎಂಬುದರಲ್ಲಿ ಎಳ್ಳಷ್ಟು ಸಂಶಯವಿಲ್ಲ. ಆದರೆ ಪೂಜಿಸುವ ದೇವರ ಹೆಸರಲ್ಲಿ, ಯಾ ವಿಧಾನದಲ್ಲಿ, ಮತ್ತು ಸ್ಥಳಗಳಲ್ಲಿ ಪ್ರತಿಯೊಬ್ಬನಿಗೂ ಸಂಪೂರ್ಣ ಸ್ವಾತಂತ್ರ್ಯವಿದೆ. ಇಂತಹ ದೇವರನ್ನು ಮಾತ್ರ ಇಂತಹ ರೀತಿಯಲ್ಲಿ, ಮತ್ತು ಇಂತಹ ಸ್ಥಳಗಳಲ್ಲಿಯೇ ಪೂಜಿಸಬೇಕೆಂಬ ನಿರ್ಬಂಧ ಮಾತ್ರವಿಲ್ಲ.

ಹೀಗಿದ್ದರೂ, ನಮ್ಮ ದೇಶದಲ್ಲಿ ದೇವಭಕ್ತಿ ಮಾತ್ರ ಬಹಳ ಮಟ್ಟಿಗೆ ಕಡಮೆ ಎಂದೇ ಹೇಳಬೇಕಾಗಿದೆ. ನಮ್ಮಲ್ಲಿ ತಮ್ಮ ಸ್ವಂತ ಆತ್ಮದಲ್ಲೇ "ಭಗವಂತನನ್ನು ಸಾಕ್ಷಾತ್ಕಾರ ಮಾಡಿದ ಮಹಾಯೋಗಿಗಳೂ ಇದ್ದಾರೆ. ಮತ್ತು ದೇವಸ್ಥಾನದ ಒಳಗೆ ದೇವರ ಹೆಸರಿನಲ್ಲೇ ವರ್ಣಿಸಲು ಅಸಾಧ್ಯವಾದ ನೀಚ ಕೆಲಸಗಳನ್ನು ಮಾಡುವ ಮಹಾಪಾಪಿಗಳೂ ಇದ್ದಾರೆ. ಅಂತೂ ಸರ್ವಸಾಧಾರಣವಾಗಿ ನೋಡಿದರೆ, ಸಾಮಾನ್ಯ ಜನರಲ್ಲಿ ಭಕ್ತಿ ಮತ್ತು ದೇವರ ಪೂಜೆ ಬಹಳ ವಿರಳವೆಂದೇ ಹೇಳಬೇಕು. ಅವರಲ್ಲೂ ಹಿಂದೂಗಳಲ್ಲಿ ಇದು ಕೇವಲ ಕಡಿಮೆ. ಮುಸಲ್ಮಾನರೂ, ಕ್ರಿಶ್ಚಿಯನರೂ ವಾರಕ್ಕೆ ಒಂದು ದಿವಸವಾದರೂ, ಅವರ ದೇವಸ್ಥಾನಗಳಿಗೆ ಹೋಗಿ ತಮ್ಮ ಭಕ್ತಿಯನ್ನೂ, ಕೃತಜ್ಞತೆಯನ್ನೂ ದೇವರಿಗೆ ಅರ್ಪಿಸುತ್ತಾರೆ. ಅವರ ವೇದದಲ್ಲಿ ಮತ್ತು ಅವರ ಮತಸ್ಥಾಪಕರಲ್ಲಿ ಸಾಮಾನ್ಯ ಜ್ಞಾನವು ಎಲ್ಲರಿಗೂ ತಕ್ಕ ಮಟ್ಟಿಗೆ ಇದೆ. ಆದರೆ ಹಿಂದೂಸ್ಥಾನದ ಪ್ರಮುಖ್ಯ ಜನಾಂಗವಾದ ಹಿಂದುಗಳಲ್ಲಿ ಶೇಕಡ ೮೦ ಜನರಿಗೆ ಅವರ ಮತದ ಶಾಸ್ತ್ರಜ್ಞಾನವಾಗಲೀ ದೇವರ ವಿಷಯವಾಗಲೀ ಗೊತ್ತೇ ಇಲ್ಲ. ಶ್ರೀರಾಮಕೃಷ್ಣ ಪರಮಹಂಸರ ಮತ್ತು ಸ್ವಾಮಿ ವಿವೇಕಾನಂದರವರ ಆಗಮನದಿಂದಾಗಿ ಕೆಲವು ವಿದ್ಯಾವಂತರು ಮಾತ್ರ ತಕ್ಕ ಮಟ್ಟಿಗೆ ದೈವೀಕಜ್ಞಾನವನ್ನು ಸಂಪಾದಿಸಿಕೊಂಡಿರಬಹುದು. ಆದರೆ ಸಾಮಾನ್ಯ ಜನರು ಯಾವ ರೀತಿಯಲ್ಲೂ ದೇವರ ಪೂಜೆ ಮಾಡುವುದಿಲ್ಲವೆಂದೇ ಹೇಳಬಹುದು.

ನಮ್ಮ ಮುಂದಾಳುಗಳೂ ಸಹ ಗುಪ್ತವಾಗಿ, ಬಹು ಭಕ್ತಿಯುಳ್ಳವರಾಗಿದ್ದರೂ, ಬಹಿರಂಗವಾಗಿ, ಅವರಿಗೆ ದೇವರ ವಿಷಯ ಮಾತಾಡುವುದೆಂದರೆ ಕೊಂಚ ಸಂಕೋಚದ ವಿಷಯವೆಂದೇ ಕಾಣುತ್ತದೆ. ಮಹಾತ್ಮ ಗಾಂಧಿಜಿಯವರೊಬ್ಬರು ಮಾತ್ರ ಏನೊಂದು ಸಂಕೋಚವಿಲ್ಲದೆ ತಮಗೆ ದೇವರಲ್ಲಿದ್ದ ಅನನ್ಯ ಭಕ್ತಿಯನ್ನು ಬಹಿರಂಗವಾಗಿ ಹೊರಪಡಿಸುತ್ತಿದ್ದರು. ಇವರು ಇವರ ಜೀವಮಾನದಲ್ಲಿ ಗಳಿಸಿದ ಅಪೂರ್ವ ಸಂಪಾದನೆಗೆ ಇವರ ಭಕ್ತಿಯೇ ಕಾರಣವೆಂದೂ ಯಾರೂ ಹೇಳಬಹುದು. ಆದರೆ ಇವರ ಸಂಪಾದನೆಯನ್ನು ಅನುಭವಿಸುತ್ತಿರುವ ಇವರ ಅನುಯಾಯಿಗಳು ಇನ್ನು ದೇವರಲ್ಲಿ ಶ್ರದ್ಧಾಭಕ್ತಿ ಇಲ್ಲದೆ ವರ್ತಿಸುವುದು ಬಹಳ ವ್ಯಸನಕರ.

ಬಿಹಾರದಲ್ಲಿ ಭೂಕಂಪವುಂಟಾದಾಗ ಮಹಾತ್ಮಗಾಂಧಿಯವರು ಅದಕ್ಕೆ 'ಜನರಲ್ಲಿ ಭಕ್ತಿ ಕಡಿಮೆಯಾಗಿರುವುದೂ ಹರಿಜನರನ್ನು ಹಿಂಸಿಸಿದುದೂ' ಕಾರಣವೆಂದು ಹೇಳಿದರು. ಅನೇಕರು ಅದನ್ನು ವಿರೋಧಿಸಿ ಬರೆದರೂ, ಅವರು ಮಾತ್ರ ಅವರ ಅಭಿಮತವನ್ನು ಬಿಡಲಿಲ್ಲ.

ನಮ್ಮ ಆಹಾರ ಇಲಾಖೆಯ ಮಂತ್ರಿಯವರು ನಮ್ಮ ದಾರಿದ್ರ್ಯವನ್ನೂ ಕ್ಷಾಮವನ್ನೂ ನಿವಾರಿಸಲಿಕ್ಕೆ 'ಗರ್ಭನಿರೋಧವನ್ನೂ, ವನಮಹೋತ್ಸವವನ್ನೂ' ಮಾಡಬೇಕೆಂದಿದ್ದಾರೆ. ಆದರೆ ದೇವರನ್ನು ಪ್ರಾರ್ಥಿಸಿ ಭಕ್ತಿ ಮಾಡಿ ಎನ್ನು ಹೇಳುವುದಕ್ಕೆ ಅವರಿಗೆ ನಾಚಿಕೆ ಇರಬಹುದು.

ಕಳೆದ ಯುದ್ಧದ ಅನಂತರಕ್ಕೆ ಸಿಕ್ಕಿದ ಎಲ್ಲಾ ರಾಜ್ಯಗಳು ಈಗಾಗಲೇ ಮುಂದಕ್ಕೆ ಬಂದಿರುವಾಗ್ಯೂ, ವಿಜಯಾಗಿಯೂ ಯುದ್ಧದ ಅನಂತರಕ್ಕೆ ಸಿಕ್ಕಿದ ನಮ್ಮ ಭಾರತದಲ್ಲಿ ಮಾತ್ರ, ಈ ತರದ ದಾರಿದ್ರ್ಯವೇತಕ್ಕೆ? ಬೇರೆ ದೇಶದವರು 'ಸ್ವರ್ಗದಲ್ಲಿರುವ ನಮ್ಮ ತಂದೆಯೇ ನನಗೆ ದಿನದಿನ ಆಹಾರವನ್ನು ಕೊಡು.' ಎಂದು ಯಾವಾಗಲೂ ಅವರ ಪ್ರಾರ್ಥನೆಯಲ್ಲಿ ಹೇಳುತ್ತಿದ್ದಾರೆ. ನಮ್ಮಲ್ಲಿ 'ಸಂಕಷ್ಟಬಂದಾಗ ವೆಂಕಟರಮಣ' ಎಂಬುದಾಗಿ ಮಾತ್ರವಿದೆ.

ಈಗಲೂ ಸಹ ನಮ್ಮ ಮುಂದಾಳುಗಳು, ಹಿಂದೂದೇಶದ ಬಡತನವನ್ನೂ, ಜ್ಞಾನಹೀನತೆಯನ್ನೂ ನಿವಾರಿಸಲು ಈಗ ಮಾಡುತ್ತಿರುವ ಪ್ರಯತ್ನಗಳ ಜತೆಗೆ, ದೈವಭಕ್ತಿಯನ್ನು ಬೆಳೆಸಲು ತಮ್ಮ ನಡಾವಳಿಯಿಂದ ಮೇಲ್ಪಂಕ್ತಿ ಕೊಟ್ಟದ್ದಾದರೆ, ದೇಶಕ್ಕೆ ಕಲ್ಯಾಣವಾಗುವುದರಲ್ಲಿ ಸಂಶಯವಿರಲಾರದು. ಇವರು ಇವರ ನಡಾವಳಿಯಿಂದಲೂ, ದೈನಂದಿನ ದಿನ

ಚರ್ಯೆಯಿಂದಲೂ ದೇಶಸ್ಥರಿಗೆ ಉದಾಹರಣೆಯನ್ನು ತೋರಿಸುವಂತಿರಬೇಕು.

ಭೂಮಿ ವ್ಯವಸಾಯದಲ್ಲಿ ಹೆಚ್ಚಿನ ಬೆಳೆ ಬೆಳೆಸಲು ಅನುಕೂಲವಾಗುವ ಸಲಕರಣೆಗಳನ್ನೂ, ಗೊಬ್ಬರಗಳ ಪರಿಜ್ಞಾನವನ್ನೂ ಮತ್ತು ಆಧುನಿಕ ರೀತಿಯ ವ್ಯವಸಾಯ ಮಾರ್ಗಗಳನ್ನೂ ಜನರಿಗೆ ಬೋಧಿಸಿ ಅವರಿಂದ ಈ ಎಲ್ಲಾ ಕೆಲಸಗಳನ್ನು ಮಾಡಿಸಬಹುದು. ಆದರೆ ಸಮಯಕ್ಕೆ ಸರಿಯಾಗಿ ಮಳೆ ಬಾರದಿದ್ದರೆ, ಇಷ್ಟೆಲ್ಲಾ ಮಾಡಿ ಏನುಪ್ರಯೋಜನ. ಇದನ್ನು ಕೃತ್ರಿಮ ರೀತಿಯಿಂದ ಸೃಷ್ಟಿಸಲು ಸಾಧ್ಯವಿಲ್ಲದಿರುವಾಗ ಇದಕ್ಕೆಲ್ಲಾ ಕರ್ತೃವಾದ ಮಹದೇವನಲ್ಲಿ ಮೊರೆ ಇಡಬಾರದು. ಕಳೆದ ಮಹಾಯುದ್ಧದಲ್ಲಿ, ನಮ್ಮ ಆಳರಸರು ಆಗಿಂದಾಗ್ಗೆ ದೇವಸ್ಥಾನಗಳಲ್ಲೂ, ಮಸೀದಿಗಳಲ್ಲೂ ಮತ್ತು ಚರ್ಚುಗಳಲ್ಲೂ ಸಾರ್ವಜನಿಕ ಪೂಜೆ ಮಾಡಿಸುತ್ತಿರಲಿಲ್ಲವೇ? ಈ ದಾರಿಯನ್ನು ಈಗ ಏಕೆ ಅನುಸರಿಸುವುದಿಲ್ಲ. ಇದು ನಮ್ಮ ನಾಗರೀಕತೆಗೇ ಕೊರತೆಯೇ? ಬೇರೆ ರಾಜ್ಯಗಳಲ್ಲಿ ಭಿಕ್ಷೆ ಬೇಡುವುದಕ್ಕೇನಲೂ ಇದು ಕೊರತೆಯೇ?

ಸ್ವಾಮಿ ವಿವೇಕಾನಂದಾಜೀಯವರು ಹೇಳಿದಂತೆ 'ಒಂದು ಹುಲ್ಲು ಕಡ್ಡಿ ಚಿಗುರ ಬೇಕಾದರೆ, ಪರಮಾತ್ಮನ ಅನುಗ್ರಹ ಬೇಕು' ಮತ್ತು ಟೆನ್ನಿಸನ್ ಹೇಳಿರುವಂತೆ 'ಪ್ರಾರ್ಥನೆಯಿಂದ ಎಂಥಾ ಸಾಮರ್ಥ್ಯವಾದ ಕಾರ್ಯಗಳನ್ನೂ ಜೈಸಬಹುದು.'

ಆದುದರಿಂದ ನಮ್ಮ ಮಂತ್ರಿಮಂಡಳದವರೂ ಮತ್ತು [illegible] ಮೆಂಬರುಗಳೂ ನಮ್ಮ ದೇಶಕ್ಕಾದರೂ ಕಲ್ಯಾಣವಾಗುವಂತೆ ದೇವಸ್ಥಾನಗಳಲ್ಲಿ, ದೈವೀಕ ಕಾರ್ಯಗಳಲ್ಲೂ ಸ್ವಲ್ಪ ಶ್ರದ್ಧಾ ಭಕ್ತಿ ತೋರಿಸಿ, ದೇಶದಲ್ಲಿ ದೈವಭಕ್ತಿ ಹೆಚ್ಚಿಸುವಂತೆ ಮಾಡಬೇಕಾಗಿ ಹಾರೈಸುವುದಾಗಿದೆ. ಅದರ ಬದಲು ಅವರೇ ಅಸಂದತೆಯನ್ನು ತೋರಿಸಿದರೆ ಮೊದಲೇ ಒಂದು ಮಾತಿದೆ. 'ಉಪಾಧ್ಯಾಯರೇ ನಿಂತು ನೈಸರ್ಗಿಕ ವ್ಯಾಪಾರವನ್ನು ನಡೆಸಿದರೆ, ಮಕ್ಕಳು ಓಡಾಡಿಕೊಂಡು ಮಾಡುತ್ತಾರೆ' ಎಂದು. ರಾಜರು ಪ್ರಜಾಪರರಾದರೆ ದೇಶಕ್ಕೆ ಕಲ್ಯಾಣ ಅವರು ಅಧರ್ಮಸ್ಥರಾದರೆ ದೇಶಕ್ಕೆ ಅಶುಭವಾಗುತ್ತೆ.

ವಯಸ್ಕರ ಶಿಕ್ಷಣ.

ಯೋಜನೆಯ ಸೂಕ್ಷ್ಮ ಪರಿಚಯ

ಈಗಾಗಲೇ ೨೦ ಕೇಂದ್ರಗಳಲ್ಲಿ ವಯಸ್ಕರ ಶಿಕ್ಷಣ ಶಾಲೆಗಳು ತೆರೆಯಲ್ಪಟ್ಟು ಕಳೆದ ಮಾರ್ಚ ತಿಂಗಳಿನಿಂದ ಕೆಲಸ ಮಾಡುತ್ತಿವೆ. ಈ ಶಾಲೆಗಳಿಗೆ ಪಠ್ಯ ಪುಸ್ತಕ, ಸ್ಲೇಟು ಇತ್ಯಾದಿಗಳನ್ನು ಒದಗಿಸಿಕೊಟ್ಟಿರುವುದರ ಜೊತೆಗೆ ಒಂದೊಂದು ಪುಸ್ತಕ ಭಂಡಾರವನ್ನೂ ಸ್ಥಾಪಿಸಿದ್ದೇವೆ. ಈ ಪುಸ್ತಕ ಭಂಡಾರಗಳಲ್ಲಿ ಈಗ ತಾನೇ ಅಕ್ಷರಾಭ್ಯಾಸ ಮಾಡುವವರಿಗೂ, ವಿದ್ಯಾವಂತರಿಗೂ ಬೇಕಾದ ಪುಸ್ತಕಗಳನ್ನು ಒದಗಿಸಿಕೊಟ್ಟಿರುತ್ತೇವೆ. ಹೆಚ್ಚಿನ ಶಾಲೆಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿವೆ. ಸರ್ವ ವಿಧದಲ್ಲಿಯೂ ಜನ ಸಾಮಾನ್ಯರ ಮಾನಸಿಕ ಮಟ್ಟವನ್ನು ಅಭಿವೃದ್ಧಿಗೊಳಿಸಿ ಸತ್ಪ್ರಜೆಗಳನ್ನಾಗಿ ಮಾಡಬೇಕೆಂಬುವುದೇ ಈ ಯೋಜನೆಯ ಗುರಿ. ಈ ಧ್ಯೇಯವನ್ನು ಸಾಗಿಸಲಿಕ್ಕಾಗಿ ವಯಸ್ಕರ ಶಿಕ್ಷಣ ಕಾರ್ಯದ ಅಂಗವಾಗಿ ಈ ಕೆಳಗಿನ ಚಟುವಟಿಕೆಗಳನ್ನು ನಾವು ಈ ಯೋಜನೆಗೆ ಅಳವಡಿಸಿಕೊಂಡಿದ್ದೇವೆ.

(೧) ಗ್ರಾಮಾಂತರಗಳಲ್ಲಿ ವಯಸ್ಕರ ಶಿಕ್ಷಣ ಶಾಲೆಗಳನ್ನು ತೆರೆಯುವುದು.

(೨) ಪುಸ್ತಕ ಭಂಡಾರಗಳನ್ನೇರ್ಪಡಿಸುವುದು.

(೩) ವಾಚನಾಲಯಗಳನ್ನೇರ್ಪಡಿಸುವದು.

(೪) ಭಾಷಣಗಳ ಮುಖಾಂತರ ಪ್ರಚಾರ ಕಾರ್ಯ ಕೈಗೊಳ್ಳುವುದು.

(೫) ಜನತಾ ಶಿಕ್ಷಣ ಕೇಂದ್ರಗಳನ್ನು ತೆರೆಯುವುದು.

(೬) ವಿದ್ಯಾರ್ಥಿಗಳ ಸೇವಾ ಶಿಬಿರಗಳನ್ನೇರ್ಪಡಿಸುವದು.

(೭) ಮಾಡಿ ಕೈಬಿಟ್ಟ ಕೆಲಸಗಳನ್ನು ಮುಂದುವರಿಸುವುದು.

(೮) ಸರಕಾರಕ್ಕೂ–ಜನರಿಗೂ ನಿಕಟ ಸಂಬಂಧವನ್ನು ಕಲ್ಪಿಸುವದು.

(೯) ಪ್ರಜಾ ಧರ್ಮಗಳ ತಿಳುವಳಿಕೆ.

(೧೦) ಗ್ರಾಮಾಂತರಗಳಲ್ಲಿ ವಸ್ತು ಪ್ರದರ್ಶನಗಳನ್ನೇರ್ಪಡಿಸುವುದು.

(೧೧) ಇನ್ನಿತರ ವಿಶೇಷ ಸಂದರ್ಭಗಳಲ್ಲಿ ಭಾಗ ವಹಿಸುವುದು.

ವಿದ್ಯಾವಂತರು ಮತ್ತು ವಯಸ್ಕರ ಶಿಕ್ಷಣ.

ಹಳ್ಳಿಗಳಲ್ಲಿ ಅವಿದ್ಯಾವಂತರು ತಾವು ಅಕ್ಷರ ಕಲಿಯಬೇಕೆಂದು ತಾವಾಗಿಯೇ ಮುಂದೆ ಬರುವುದಿಲ್ಲ. ಹಾಗೆ ಮುಂದೆ ಬರುವವರಿದ್ದರೂ ಅವರ ಉತ್ಸಾಹವು ಕಡೇತನಕ ಇರುವುದಿಲ್ಲ. ನಮ್ಮ ಪ್ರಚಾರ ಕಾರ್ಯಗಳು ನಡೆದರೂ ಗ್ರಾಮಗಳಲ್ಲಿರುವ ವಿದ್ಯಾವಂತರ ನೆರವು ಬೇಕಾಗಿದೆ. ವಿದ್ಯಾವಂತರೇ, ನೀವು ಧನ್ಯರು, ಪುಣ್ಯಾತ್ಮರು; ಈ ಜನ್ಮದಲ್ಲಿ ವಿದ್ಯಾ ಸಂಪತ್ತನ್ನು ವಿನಿಯೋಗಿಸುವುದರಲ್ಲಿದೆ ಅದರ ಬೆಲೆ. ವಿದ್ಯೆಯ ಮಹತ್ವವನ್ನೂ ಅದರ ದಾನದಿಂದ ನಿಮಗೆ ಬರುವ ಕೀರ್ತಿಯನ್ನೂ ವಿದ್ಯಾವಂತರಾದ ತಮಗೆ ಹೆಚ್ಚಿಗೆ ತಿಳಿಸುವುದರ ಬದಲು ಹೇಗೆ ಈ ಯೋಜನೆಗೆ ತಾವು ಸಹಕಾರಿಗಳಾಗಬಹುದೆಂಬುವನ್ನು ತಿಳಿಸಲು ಅಪೇಕ್ಷಿಸುತ್ತೇವೆ.

೧) ಹಳ್ಳಿಗಳಲ್ಲಿರುವ ಅನಕ್ಷರಸ್ಥರನ್ನು ಹತ್ತಿರದ ವಯಸ್ಕರ ಶಿಕ್ಷಣ ಶಾಲೆಗೆ ಸೇರುವಂತೆ ಪ್ರೋತ್ಸಾಹಿಸುವುದು.

೨) ಅಂಥಾ ಶಾಲೆಗಳನ್ನು ಸಂದರ್ಶಿಸಿ ವಯಸ್ಕ ವಿದ್ಯಾರ್ಥಿಗಳಿಗೆ ಹಿತೋಕ್ತಿಗಳನ್ನಾಡುವುದು.

೩) ಇದಕ್ಕೆ ಸಂಬಂಧಪಟ್ಟ ಸಭೆಗಳಿಗೆ ಸೇರಿ, ತಮ್ಮ ಸೂಚನೆ ಸಲಹೆಗಳನ್ನೀಡುವುದು.

೪) ತಮ್ಮ ಮನೆಗಳಲ್ಲಿರುವ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವುದು.

೫) ಸ್ಥಾಪಿತವಾಗಿರುವ ಪುಸ್ತಕ ಭಂಡಾರದ ಉಪಯೋಗವನ್ನು ತಾವೂ ಹೊಂದುವುದರ ಜೊತೆಗೆ ಇತರ ವಿದ್ಯಾವಂತರೂ ತಮ್ಮ ವಿರಾಮ ಕಾಲದಲ್ಲಿ ಓದುವ ಅಭ್ಯಾಸಕ್ಕೆ ಪ್ರೋತ್ಸಾಹಿಸುವುದು. ಅಲ್ಲದೆ ಪುಸ್ತಕ ಭಂಡಾರವನ್ನು ಅಭಿವೃದ್ಧಿಗೊಳಿಸುವ ಕಾರ್ಯದಲ್ಲಿ ಭಾಗಿಗಳಾಗುವುದು.

ಈ ರೀತಿಗಳಿಂದ ತಾವು ಸಹಕಾರಿಗಳಾಗಬೇಕಾಗಿ ಕೋರುತ್ತೇನೆ, ಈಗಾಗಲೇ ಎಷ್ಟೋ ವಿದ್ಯಾಭಿಮಾನಿಗಳು ಶ್ರದ್ಧೆವಹಿಸಿ ತಮ್ಮ ನೆರವನ್ನು ನೀಡುತ್ತಿದ್ದಾರೆ. ಅವರಿಗೆ ನಮ್ಮ ಧನ್ಯವಾದಗಳು.

ವಿದ್ಯಾ ಇಲಾಖೆ.

---

೨೦ ಲಕ್ಷ ರೂ. ಆಭರಣ ಮಹಿಳೆಯ ಸೊಂಟದಲ್ಲಿ!

ಹೈದರಾಬಾದ್ ರಾಜ್ಯದ ಮನಸ್ಥಾನಕ್ಕೆ ಸೇರಿದ ಅಮೀರ್ ಇಷ್ಟೆಫಾ ಎಂಬ ಬಿರುದುಳ್ಳ ನವಾಬ್ ಜಹಿರ್ಯಾರ್ ಜಂಗ್ ಬಹದ್ದೂರ್ ಮತ್ತು ಅವರ ಪತ್ನಿ ಹಸತ್ತ ನಿಸಾರವರು ತಾ. ೧೯ರಲ್ಲಿ ಬೊಂಬಾಯಿಯ ಶಾಂತ ಕ್ರೂಜ ವಿಮಾನ ನಿಲ್ದಾಣದಿಂದ ಕೈರೋಕ್ಕೆ ವಿಮಾನ ಹತ್ತುವಾಗ ಬೊಂಬಾಯಿ ಪೋಲೀಸ್ ಮತ್ತು ಕಸ್ಟಮ್ಸ್ ಉದ್ಯೋಗಸ್ಥರು ಸಂಶಯದ ಮೇಲೆ ಅವರನ್ನು ಶೋಧನೆ ಮಾಡಿದರು. ನವಾಬರ ಕೈಯ್ಯಲ್ಲಿದ್ದ ಚಿಕ್ಕ ಚೀಲದಲ್ಲಿ ವಜ್ರಗಳಿಂದ ಕೂಡಿದ ಬ್ರೋಚ್ ಒಂದು ಸಿಕ್ಕಿತು. ಇದು ಸಂಶಯವನ್ನು ಹೆಚ್ಚಿಸಿತು. ಕೂಡಲೇ ಬೇಗಮರನ್ನು ಒಬ್ಬ ಪ್ರಿವೆಂಟಿವ್ ಮಹಿಳೆ ಆಫೀಸರ ಹುಡುಕುವ ಕೋಣೆಯಲ್ಲಿ ಶೋಧನೆ ಮಾಡಿದಾಗ್ಗೆ ಅವರ ಸೊಂಟಕ್ಕೆ ಕಟ್ಟಿದ ಒಂದು ಬಟ್ಟೆಯ ಬೆಲ್ಟಿನಲ್ಲಿ ಸುಮಾರು ಮೂವತ್ತು ಆಭರಣಗಳು ಸಿಕ್ಕಿದವು. ಅವು ಬಹು ಬೆಲೆಯ ವಜ್ರ, ಕೆಂಪು ಮೊದಲಾದ ಕಲ್ಲುಗಳಿಂದ ಕೂಡಿದ್ದಾಗಿದ್ದವು. ಅವುಗಳ ಬೆಲೆ ಸುಮಾರು ಇಪ್ಪತ್ತು ಲಕ್ಷ ರೂಪಾಯಿ ಅಂದಾಜು ಮಾಡಲಾಗಿದೆ. ಹಿಂದೂ ದೇಶದಿಂದ ಪರದೇಶಗಳಿಗೆ ಹೋಗುವಾಗ್ಗೆ ಒಬ್ಬ ಪ್ರಯಾಣಿಕನಿಗೆ ಐದು ಸಾವಿರ ರೂಪಾಯಿ ಬೆಲೆಯ ಆಭರಣ ತೆಗೆದುಕೊಂಡು ಹೋಗಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರು ಪಾಸ್ ಕೊಡುತ್ತಾರೆ. ಹೆಚ್ಚಿಗೆ ತೆಗೆದುಕೊಂಡು ಹೋಗಕೂಡದು. ಇವರಿಬ್ಬರಿಗೆ ರೂ ೧೨,೫೦೦ಯಷ್ಟು ಬೆಲೆಯ ಆಭರಣ ತೆಗೆದುಕೊಂಡು ಹೋಗಲು ಪರ್ಮಿಟ್ ಇತ್ತು. ಆದರೆ ಅವರು ಅದನ್ನು ರೂಲ್ ಮೇರೆ ಕಸ್ಟಮ್ಸ್ ಆಫೀಸಿನಲ್ಲಿ ಅಜಮಾಯಿಷಿ ಮಾಡಿಸಿಕೊಂಡಿಲ್ಲ. ಈ ಆಭರಣಗಳನ್ನು ಕಸ್ಟಮ್ಸ್ ಆಫೀಸರುಗಳು ಹೆಡ್ಡಾಫೀಸಿಗೆ ಕಳುಹಿಸಿರುವರು. ನವಾಬರು ಮತ್ತು ಪತ್ನಿಯವರು ತಮ್ಮ ಪ್ರಯಾಣವನ್ನು ವಜಾ ಮಾಡಿರುವರು.

Wanted

Applications are invited for a vacancy of an experienced Fitter and a Blaksmith. "X"

Apply to—

C/o Manager,
'Kodagu' Mercara.

ಕೊಡಗು ಚೀಫ್ ಕಮಿಷನರವರ ಕಚೇರಿ.

ನಂ. 4843/R. Dis. 2943/49, ಮಡಿಕೇರಿ, ತಾ. 1ನೇ ಏಪ್ರಿಲ್ 1953.

ಪ್ರಕಟಣೆ (ನೋಟೀಸು)

1951ನೇ ಇಸವಿಯ ಕೊಡಗು ವ್ಯವಸಾಯ ವರಮಾನ ತೆರಿಗೆ ಆಕ್ಟಿನ (1951ನೇ ಇಸವಿಯ ಕೊಡಗಿನ Iನೆ ನಂಬರು ಆಕ್ಟು) ಮೇರೆಗೆ ವ್ಯವಸಾಯ ವರಮಾನ ತೆರಿಗೆ ವಸೂಲಿ

1952—53ನೇ ವರ್ಷದಲ್ಲಿ ಕೊಡಬೇಕಾದ ತೆರಿಗೆಯನ್ನು ನಿರ್ಣಯಿಸುವ ಬಗ್ಗೆ ಹಿಂದಿನ ವರ್ಷದ ಒಟ್ಟು ವ್ಯವಸಾಯ ವರಮಾನದ ದಾಖಲೆ ಪಟ್ಟಿ.

1951ನೇ ಇಸವಿಯ ಕೊಡಗು ವ್ಯವಸಾಯ ವರಮಾನ ತೆರಿಗೆ ಆಕ್ಟಿನ ಮೇರೆಗೆ ಚಾಲ್ತಿ ತೆರಿಗೆ ವರ್ಷದಲ್ಲಿ ಅಂದರೆ 1952–53ನೇ ವರ್ಷದಲ್ಲಿ, ಯಾವ ವ್ಯಕ್ತಿಯ ಹಿಂದಿನ ವರ್ಷದ ಒಟ್ಟು ವ್ಯವಸಾಯ ವರಮಾನವು 3,500 ರೂಪಾಯಿಗಳಿಗೆ ಮೀರಿತ್ತೋ, ಅಂಥ ಪ್ರತಿಯೊಬ್ಬ ವ್ಯಕ್ತಿಯ ಮೇಲೂ ತೆರಿಗೆ ವಿಧಿಸಲಾಗುವುದು. ಸದರಿ ಹಿಂದಿನ ವರ್ಷದಲ್ಲಿ 3,500 ರೂಪಾಯಿಗಳಿಗೆ ಮೀರಿದ ಒಟ್ಟು ವ್ಯವಸಾಯ ವರಮಾನವಿರುವ ಪ್ರತಿಯೊಬ್ಬ ವ್ಯಕ್ತಿಯೂ ಮಡಿಕೇರಿಯಲ್ಲಿರುವ ಕೊಡಗು ವ್ಯವಸಾಯ ವರಮಾನ ತೆರಿಗೆ ಅಧಿಕಾರಿಗೆ ಈ ಬಗ್ಗೆ ವಿಧಿಸಿರುವ ರೀತಿಯಲ್ಲಿ ಪರಿಶೀಲಿಸಿ, ಹಿಂದಿನ ವರ್ಷದ ಒಟ್ಟು ವ್ಯವಸಾಯ ವರಮಾನಗಳ ವಿವರಗಳನ್ನೊಳಗೊಂಡ ಒಂದು ದಾಖಲೆ ಪಟ್ಟಿಯನ್ನು ಕೊಡಬೇಕಾಗಿದೆ.

ಸದರಿ ದಾಖಲೆ ಪಟ್ಟಿಯನ್ನು ತಯಾರಿಸುವ ನಮೂನೆಗಾಗಿಯಾಗಲಿ ಮತ್ತು ಈ ವಿಚಾರದಲ್ಲಿ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳುವುದಕ್ಕಾಗಲಿ ಮಡಿಕೇರಿಯಲ್ಲಿರುವ ಕೊಡಗು ವ್ಯವಸಾಯ ವರಮಾನ ತೆರಿಗೆ ಆಫೀಸರವರಿಗೆ ಅರ್ಜಿ ಬರೆದು ಕೊಳ್ಳಬಹುದು.

ಚೀಫ್ ಕಮಿಷನರವರ ಅಪ್ಪಣೆ ಮೇರೆಗೆ,
ಸಿ. ಎ. ಡೇವಿಸ್,
ಕೊಡಗು ಸರಕಾರದ ಹಣಕಾಸಿನ ಕಾರ್ಯದರ್ಶಿ.

ಮೇಹ ರೋಗವನ್ನು ತಡೆಗಟ್ಟಲೇಬೇಕು.

'ಆರೋಗ್ಯವೇ ಮಹಾಭಾಗ್ಯ' ಈ ಮಾತು ವ್ಯಕ್ತಿ, ಕುಟುಂಬ, ಕೋಮು ಮತ್ತು ಜನಾಂಗಕ್ಕೆ ಅನ್ವಯಿಸುವ ಮಾತಾಗಿದೆ. ಆರೋಗ್ಯವಿಲ್ಲದಿದ್ದರೆ ಸುಖವಿಲ್ಲ, ಶಕ್ತಿ ಕುಗ್ಗುತ್ತದೆ. ಧೈರ್ಯಸಾಹಸಗಳು ನಾಶವಾಗುತ್ತವೆ. ಉತ್ತಮವಾದ ಆರೋಗ್ಯದಿಂದ ಎಲ್ಲಾ ಸಂಪತ್ತುಗಳೂ ಜತೆಗೂಡಿ ಆ ವ್ಯಕ್ತಿ, ಜನಾಂಗವೇ ಉದ್ಧಾರವಾಗುತ್ತದೆ.

ಆರೋಗ್ಯಕ್ಕೆ ಅಪಾಯಕರವಾದ ಶತ್ರುಗಳಲ್ಲಿ ಮೇಹ ಮತ್ತು ಪರಂಗಿ ರೋಗಗಳು ಮುಖ್ಯವಾಗಿವೆ. ಆಧುನಿಕ ವೈದ್ಯಶಾಸ್ತ್ರಗಳಲ್ಲಿ ಈ ರೋಗಗಳ ನಿವಾರಣೆಗಾಗಿ ಅನೇಕ ಸಂಶೋಧನೆಗಳು ಮಾಡಲ್ಪಟ್ಟಿವೆ. ವೈದ್ಯಕೀಯ ಮತ್ತು ಆರೋಗ್ಯ ಇಲಾಖೆಯ ಇತರ ಅಧಿಕಾರಿಗಳೂ ಹೊಸ ಹೊಸ ಚಿಕಿತ್ಸೆಗಳ ಆಧಾರದಿಂದ ಮೇಹ ಮತ್ತು ಪರಂಗಿ ರೋಗಗಳನ್ನು ನಿರ್ಮೂಲಗೊಳಿಸುವ ಸಹಾಯವನ್ನು ಕೊಡುತ್ತಿದ್ದಾರೆ.

ಇತ್ತೀಚೆಗೆ ಕಂಡುಹಿಡಿದ ಪೆನ್ಸಿಲಿನ್ ಮತ್ತು ಇತರ ಅಣುನಾಶಕ ಔಷಧಿಗಳ ಸಂಶೋಧನೆಯಿಂದಲೂ, ಪೂರ್ಣ ಶಿಕ್ಷಣ ಹೊಂದಿದ ವೈದ್ಯರಿಂದಲೂ ಮತ್ತು ಆರೋಗ್ಯ ಇಲಾಖೆಯವರಿಂದಲೂ ಹಿಂದಿನ ಕಾಲದಲ್ಲಿ ಮೇಹ ಮತ್ತು ಪರಂಗಿ ರೋಗಗಳಿಂದ ನರಳುತ್ತಿದ್ದು ಅನೇಕ ವೇಳೆ ವ್ಯಕ್ತಿಗೆ ಕುತ್ತುಗುತ್ತಿದ್ದ ಬಾಧೆಗಳು ಕಡಿಮೆಯಾಗಿ, ರೋಗಿಗಳು ಸಂರಕ್ಷಿತರಾಗುವ ಭರವಸೆ ದೊರಕಿದೆ. ತಂದೆ ತಾಯಿಗಳ ತಪ್ಪಿಗಾಗಿ ನಿರಪರಾಧಿಗಳಾದ ಮಕ್ಕಳು ಈ ರೋಗಗಳಿಂದ ನರಳುತ್ತಿದ್ದ ಅವಸ್ಥೆಯನ್ನು, ಆಧುನಿಕ ಕಾಲದಲ್ಲಿ ತಕ್ಕ ವ್ಯವಸ್ಥೆಯನ್ನು ಮಾಡಿದರೆ ಬೇಕಾದ ಮಟ್ಟಿಗೆ ತಪ್ಪಿಸಬಹುದಾಗಿದೆ.

ಇಂಥಾ ಶುಭ ಸೂಚನೆಗಳಿದ್ದರೂ, ಅನೇಕ ಜನರು ಮೇಹರೋಗಗಳಿಗೆ ಈಡಾಗಿ ಈ ಜಾಡ್ಯವನ್ನು ತಮ್ಮ ಕುಟುಂಬಗಳಿಗೂ ಮತ್ತು ಮುಂದಿನ ಸಂತತಿಯವರಿಗೂ ಹರಡುತ್ತಿದ್ದಾರೆ. ಮೇಹರೋಗಪೀಡಿತರಾದ ತಂದೆ ತಾಯಿಗಳ ದೆಸೆಯಿಂದ ಎಷ್ಟೆಂದು ವ್ಯಕ್ತಿಗಳು ಹುಟ್ಟುತ್ತಿಲ್ಲ, ಎಷ್ಟೆಂದು ಮಕ್ಕಳು ಕುರುಡರಾಗಿಯೂ, ಅಂಗಹೀನರಾಗಿಯೂ ನರಳುತ್ತಿಲ್ಲ. ಸ್ತ್ರೀ ಸಂಚಾರ ಎರಡನೇ ಮಹಾಯುದ್ಧಕ್ಕೆ ಮೊದಲು ಗೋಚರವಾಗುತ್ತಿದ್ದ ಸಂಖ್ಯೆಗಿಂತಲೂ ಬಹುಶಃ ಕಡಿಮೆ ಎಂದು ತೋರುತ್ತಿದ್ದರೂ ಕೂಡ ಮಿಲಿಟರಿ ಇಲಾಖೆಗೆ ಆರೋಗ್ಯರಂಗದಲ್ಲಿ ಈಗಲೂ ಕೂಡ ಅನೇಕ ರೋಗಿಗಳು ಚಿಕಿತ್ಸೆಗೋಸ್ಕರ ಇರುವ ಮೇಹರೋಗದ ಚಿಕಿತ್ಸೆಗಳಿಗಾಗಿ ಸೈನಿಕರು ಹಲ್ಲುಡತ್ತಿದ್ದಾರೆ.

ಮೇಹರೋಗವನ್ನು ಸಂಪೂರ್ಣವಾಗಿ ಏಕೆ ಇನ್ನೂ ಜಯಿಸಲಾಗುವುದಿಲ್ಲ? ಪೆನ್ಸಿಲಿನ್ ಎಂಬ ಅದ್ಭುತ ಗುಣಕಾರಿಯಾದ ಮಾತ್ರೆಗಳಿರುವುದರಿಂದ ಕೂಡ ಇಷ್ಟರಿಂದಲೇ ಕಾಲ ಮೇಹರೋಗದೊಡನೆ ಹೋರಾಟ ನಡೆಸಿದರೂ ಕೂಡ ಅಂಟು ರೋಗಗಳ ಪಟ್ಟಿಯಲ್ಲಿ ಅದೇಕೆ ಮೇಲಿನ ಸ್ಥಾನವಿದೆ?

ಇದಕ್ಕೆ ಒಂದು ಕಾರಣವೇನೆಂದರೆ ಮೇಹ ಅಥವ ಪರಂಗಿ ರೋಗವಿರುವ ಅನೇಕರಿಗೆ ತಮಗೆ ಅಂಥಾ ರೋಗವಿದೆ ಎಂಬ ಗೋಚರವೇ ಇಲ್ಲ. ಅಥವ ಚಿಹ್ನೆಗಳೇನೆಂಬುದನ್ನು ಅವರು ತಿಳಿದುಕೊಂಡಿಲ್ಲ. ತಿಳಿದಿದ್ದರೂ ತಕ್ಕ ವೈದ್ಯ ಸಹಾಯವನ್ನು ಪಡೆದುಕೊಳ್ಳುವ ವಿಧಾನ ತಿಳಿಯದು. ಪೆನ್ಸಿಲಿನ ಚಿಕಿತ್ಸೆಯಿಂದ ಈ ರೋಗಗಳು ಅತಿ ಜಾಗ್ರತೆಯಾಗಿ ಗುಣಹೊಂದಬಹುದಾದರೂ ಅದಕ್ಕೆ ಗಮನ ಕೊಡದೆ ತಮ್ಮ ಸ್ನೇಹಿತರ ವರ್ಗಗಳಲ್ಲಿ ಜಾಡ್ಯವನ್ನು ಹರಡುತ್ತಾ ಹೋಗುತ್ತಿರುತ್ತಾರೆ. ಒಬ್ಬ ರೋಗಿಯು ೨೫ ಅಥವ ಹೆಚ್ಚು ಮಂದಿಗೆ ಮೇಹರೋಗವನ್ನು ಹರಡಬಹುದಾದ ಸಂಭವವಿದೆ.

ಈ ಕಾರಣಕ್ಕಾಗಿಯೇ ಪ್ರತಿಯೊಬ್ಬನೂ ಮೇಹ ಮತ್ತು ಪರಂಗಿ ರೋಗಗಳ ವಿಷಯ ಚೆನ್ನಾಗಿ ತಿಳಿದಿರತಕ್ಕದ್ದು. ಈ ರೋಗ ಹೇಗೆ ಹರಡುತ್ತದೆ ಅದನ್ನು ಹೇಗೆ ತಡೆಗಟ್ಟಬಹುದು ಎಂಬ ವಿಷಯ ಈ ಲೇಖನದಲ್ಲಿ ಕೆಲವೇ (ಸಂಕ್ಷಿಪ್ತ) ವಿಷಯಗಳನ್ನು ಹೇಳಲಾಗಿದೆ.

ಮೇಹ ಮತ್ತು ಪರಂಗಿ ಎಂಬ ಎರಡು ಪ್ರತ್ಯೇಕ ಜಾತಿಯ ರೋಗಗಳು. Spirochetta pallrda ಎಂಬ ಸೂಕ್ಷ್ಮ ಆಕೃತಿಯ ಅಣುವೇ ಮೇಹರೋಗಕ್ಕೆ ಕಾರಣ. ಪರಂಗಿ ರೋಗವು ಬಿಳಿಸಿನ ಆಕಾರದ ಗೋನೊಕಾಕಸ್ ಎಂಬ ಅಣುವಿನಿಂದ ಉಂಟಾಗುತ್ತದೆ. ಇದು ಯಾವತ್ತೂ ಜೊತೆ ಜೊತೆಯಾಗಿರುವುದರಲ್ಲಿ ಸಂಚರಿಸುತ್ತದೆ. ಈ ಅಣುಗಳನ್ನು ಅನೇಕ ಹೆಸರುಗಳಿಂದ ಕರೆದರೂ ಮೇಲೆ ಹೇಳಿರುವ ಸಿದ್ಧಾಂತ ರೀತಿಯ ಹೆಸರುಗಳು.

ಈ ರೋಗಗಳು ಮತ್ತೊಬ್ಬ ವ್ಯಕ್ತಿಗೆ ಸಂಪರ್ಕದಿಂದ ಉಂಟಾಗುತ್ತವೆ. ಸಾಧಾರಣವಾಗಿ ಸ್ತ್ರೀ ಪುರುಷರ ಸಂಭೋಗದಿಂದ ಹುಟ್ಟುತ್ತದೆ. ಮೇಹ ರೋಗವು ರೋಗಗ್ರಸ್ತವಾದ ಸ್ತ್ರೀ ಪುರುಷರ ಚುಂಬನ ಮಾತ್ರದಿಂದ ತುಟಿಯು ಅಥವ ಗಂಟಲಿನಲ್ಲಿ ಅಡಕವಾಗಿರಬಹುದಾದ ಅಣುವಿನಿಂದ ವ್ಯಾಪಿಸುತ್ತವೆ. ತುಟಿಯು ತಗಲಿದ ಗ್ಲಾಸಿನಿಂದ, ಹಿಡಿದ ಬಾಗಿಲಿನ ಚಿಲಕದಿಂದ, ಕಾಲಿನ ಕುರ್ಚಿಯಿಂದ ಮೇಹ ರೋಗವು ಹರಡುತ್ತದೆಂಬ ನಂಬಿಕೆ ಅತಿಶಯೋಕ್ತಿ. ಏಕೆಂದರೆ ರೋಗದ ಅಣುಗಳು ಮನುಷ್ಯನ ದೇಹದಿಂದ ಹೊರಬಿದ್ದು ಜೀವಿಸಲಾರವು. ದೇಹದಿಂದ ದೇಹಕ್ಕೆ ಇದು ವ್ಯಾಪಿಸಬೇಕಷ್ಟೆ.

ರೋಗಗ್ರಸ್ತರಾದ ವ್ಯಕ್ತಿಯಿಂದ ತಗಲಿದ ಮೇಹರೋಗದ ಮೊದಲಿನ ಚಿಹ್ನೆ ಏನೆಂದರೆ ರೋಗವು ತಗಲಿದ ಜಾಗದಲ್ಲಿ ಒಂದು ಹುಣ್ಣು ಅಥವ ಬೊಕ್ಕೆ ಏಳುವುದು. ಈ ಬೊಕ್ಕೆಯು ಹೆಚ್ಚಿಗೆ ನೋವನ್ನುಂಟು ಮಾಡದೆ ಅತಿ ಚಿಕ್ಕದಾಗಿದ್ದು ಗೋಪ್ಯವಾದ ಅಂಗದಲ್ಲಿ ಉಂಟಾಗಿ ಗಮನಕ್ಕೆ ಬಾರದಿರಬಹುದು. ಯಾವ ಚಿಕಿತ್ಸೆಯೂ ಇಲ್ಲದೆ ಇದು ಕೆಲವು ದಿನಗಳಲ್ಲಿ ವಾಸಿಯಾದಂತೆ ಕಂಡರೂ ರೋಗಾಣುಗಳು ರಕ್ತವನ್ನು ಸೇರಿ ದುಷ್ಪರಿಣಾಮ ಕಾರ್ಯಕ್ಕೆ ತೊಡಗುತ್ತವೆ.

ಕೆಲವು ದಿನಗಳನಂತರ ಚರ್ಮದ ಮೇಲೆ ಎದ್ದು ಅನೇಕ ಗಂಡೆಗಳು ಕಾಣಿಸಿಕೊಳ್ಳಬಹುದು. ಇದೂ ಕೂಡ ಯಾವ ಚಿಕಿತ್ಸೆಯೂ ಇಲ್ಲದೆ ಸ್ವಲ್ಪ ದಿನಗಳಲ್ಲಿಯೇ ವಾಸಿಯಾಗುವುದು. ಕೆಲವು ವೇಳೆ ಇಂಥ ಗಂಡೆಗಳು ಕಾಣಿಸದೆ ಇರಬಹುದು. ಆದರೂ ಮೇಹ ರೋಗವು ರಕ್ತಗತವಾಗಿಯೇ ಇರುತ್ತದೆ. ಇದನ್ನು ಪರೀಕ್ಷಿಸಿ ಚಿಕಿತ್ಸೆ ಮಾಡದಿದ್ದಲ್ಲಿ ಕ್ರಮೇಣ ರೋಗವು ಮೆದುಳನ್ನಾಗಲೀ, ಹೃದಯಕೋಶವನ್ನಾಗಲೀ ಅಥವ ಉತ್ತಮವಾದ ಇತರ ಅಂಗಗಳನ್ನಾಗಲೀ ಸೇರಿ, ರೋಗವು ಗೋಚರವಾಗದ ಸ್ಥಿತಿಯಲ್ಲಿದ್ದೇ ಅನೇಕ ವರ್ಷಗಳ ನಂತರ ನಾಶಪಡಿಸಬಹುದು.

ಗೊನೊರಿಯಾ ರೋಗವು ತಗಲಿದೊಡನೆ ಮೊದಲಿನ ಚಿಹ್ನೆಯೇನೆಂದರೆ, ಮೂತ್ರ ಮಾಡುವ ಕಾಲದಲ್ಲಿ ಸಹಿಸಲಾರದಷ್ಟು ಉರಿ. ಸ್ವಲ್ಪ ದಿನಗಳ ನಂತರ ಲಿಂಗದ ಮೂಲಕ ಬಿಳುಪು ಹೋಗುವುದು. ಈ ಬಿಳುಪು ಹೋಗುವಾಗ ಉರಿ ಮತ್ತು ನೋವು ಉಂಟಾಗುತ್ತದೆ. ಸ್ತ್ರೀಯರಲ್ಲಿ ಈ ತರದ ಚಿಹ್ನೆಗಳು ಹೆಚ್ಚಿಗೆ ಕಾಣಿಸದೇ ಇರಬಹುದು.

ಗೊನೊರಿಯಾ ರೋಗವು ಚಿಕಿತ್ಸೆ ಮಾಡದಿದ್ದಲ್ಲಿ ವಾಸಿಯಾದಂತೆ ತೋರಬಹುದು; ಆದರೂ ಅಪಾಯ ಇದ್ದೇ ಇರುತ್ತದೆ. ಕ್ರಮೇಣ ಕೀಲುಗಳಿಗೆ ತುಂಬಾ ಬಾಧೆ ಮತ್ತು ಅಪಾಯವನ್ನು ಮಾಡಬಹುದು. ಮಕ್ಕಳನ್ನು ಕುರುಡರನ್ನಾಗಿ ಮತ್ತು ಅಂಗಹೀನರನ್ನಾಗಿ ಮಾಡಲು ದೇಹಗತವಾಗಿರುವ ಗೊನೊರಿಯಾವೇ ಮುಖ್ಯ ಕಾರಣ.

ಮೇಹ ಮತ್ತು ಗೊನೊರಿಯಾ ರೋಗವು ತಗಲಿದೆಯೆಂದು ತಿಳಿಯಬೇಕಾದರೆ ಶಾಸ್ತ್ರೀಯ ವೈದ್ಯನೇ ಬೇಕು. ರೋಗ ತಗಲಿರಬಹುದೆಂಬ ಸಂಶಯ ಉಂಟಾದೊಡನೆ, ಪ್ರತಿಯೊಬ್ಬ ಸ್ತ್ರೀಯಾಗಲೀ ಪುರುಷನೇ ಆಗಲೀ ಯೋಗ್ಯರಾದ ವೈದ್ಯರ ಸಲಹೆಯನ್ನು ಪಡೆಯಬೇಕು. ವೈದ್ಯ ಪರೀಕ್ಷೆ ಮಾಡಿ ರಕ್ತವನ್ನು ಶಾಸ್ತ್ರೀಯ ರೀತಿ ಪರೀಕ್ಷಿಸಿ ನೋಡಿದಲ್ಲಿ ರೋಗದ ಗುರುತು ತಿಳಿಯುತ್ತದೆ. ಕೂಡಲೇ ಅದಕ್ಕೆ ಬೇಕಾದ ಚಿಕಿತ್ಸೆಯನ್ನು ವೈದ್ಯರು ಹೇಳುತ್ತಾರೆ.

ತಕ್ಷಣ್ಣನೆಂದೂ 'ಸಿದ್ಧೌಷಧ'ವೆಂದೂ ಪ್ರಚಾರಮಾಡುವ ಠಕ್ಕರು ಟಪ್ಪಾಲು ಮೂಲಕವಾಗಲೀ, ವಾರ್ತಾಪತ್ರಗಳ ಮೂಲಕವಾಗಲೀ ರವಾನಿಸಿ ಮೇಹರೋಗಕ್ಕೆ ರಾಮಬಾಣ ಇತ್ಯಾದಿ ವಿವರಗಳಿಂದ ವಿಚಾರವಿಲ್ಲದೆ ಮಾರುವ ಅಂಗಡಿಗಳಿಂದ ಔಷಧವನ್ನು ಕೊಂಡುಕೊಳ್ಳಲೇ ಬೇಡಿ. ಇದರಿಂದ ಅಪಾರ ಹಣವು ಖರ್ಚಾಗುವುದು ಮಾತ್ರವಲ್ಲದೆ ದೇಹಕ್ಕೆ ಅನೇಕ ತರದ ಅಪಾಯಗಳೂ ಸಂಭವಿಸಬಹುದು.

ಗರ್ಭಿಣಿಯರಾದ ಹೆಂಗಸರು ಮಗುವು ಹುಟ್ಟುತ್ತಿರುವ ಕಾಲಕ್ಕೆ ಮೇಹ ರೋಗದ ಚಿಹ್ನೆ ತಮ್ಮ ರಕ್ತದಲ್ಲಿಲ್ಲವೆಂಬ ಭರವಸೆಯ ಸಲುವಾಗಿ ಪರೀಕ್ಷೆ ಮಾಡಿಸಿಕೊಳ್ಳತಕ್ಕದ್ದು. ತಾಯಿಯ ರಕ್ತದಲ್ಲಿ ಮೇಹರೋಗದ ಅಣುಗಳು ಇದ್ದಲ್ಲಿ ಅದು ಯಾವ ರೀತಿಯಲ್ಲಿ ಬಾಧಕವಾಗಿ ತೋರದಿದ್ದರೂ ಹೊಟ್ಟೆಯಲ್ಲಿರುವ ಮಗುವಿಗೆ ವ್ಯಾಪಿಸಿ ಗಂಡಾಂತರವನ್ನುಂಟುಮಾಡಬಹುದು. ಆದ ಕಾರಣ ಪ್ರತಿಯೊಬ್ಬ ಗರ್ಭಿಣಿ ಸ್ತ್ರೀಯೂ ಕೂಡ ತನ್ನ ಮುಂದಿನ ಮಗುವಿನ ಸಲುವಾಗಿ ಪರೀಕ್ಷೆ ಮಾಡಿಸಿಕೊಳ್ಳಬೇಕಾದುದು ಆವಶ್ಯಕ. ಆ ಥಾ ರೋಗದ ಚಿಹ್ನೆ ಕಂಡುಬಂದಲ್ಲಿ ಐದು ತಿಂಗಳ ಗರ್ಭಿಣಿಯರೂ ಕೂಡ ತಕ್ಕ ಚಿಕಿತ್ಸೆಯಿಂದ ಆರೋಗ್ಯವಾದ ಮಗುವನ್ನು ಪಡೆಯಬಹುದು.

ಅನೇಕ ದೇಶಗಳಲ್ಲಿ ಗರ್ಭಿಣಿ ಸ್ತ್ರೀಯರನ್ನು ಮೇಹ ರೋಗದ ಪ್ರಯುಕ್ತ ರಕ್ತ ಪರೀಕ್ಷೆ ಮಾಡಲು ಡಾಕ್ಟರ್ ಮತ್ತು ಸೂಲಗಿತ್ತಿಯರನ್ನು ನೇಮಕ ಮಾಡುವಂತೆ ಕಾನೂನುಗಳಿವೆ. ಹಾಗೆಯೇ ವಿವಾಹವಾಗಬೇಕಾದರೆ ವಧೂವರರ ರಕ್ತ ಪರೀಕ್ಷೆಯಾಗಬೇಕೆಂಬ ಕಟ್ಟಳೆಗಳಿವೆ. ಇಂಥಾ ಕಾನೂನುಗಳಿಲ್ಲದ ದೇಶಗಳಲ್ಲಿ ತಕ್ಕ ಸಲಹೆಗಳನ್ನು ಹಾಗೆಯೇ ಕೊಡತಕ್ಕ ಡಾಕ್ಟರು ಮತ್ತು ಆರೋಗ್ಯ ಇಲಾಖೆಯವರು ಸದಾ ಸಿದ್ಧರಾಗಿರುವರು.

ಹುಟ್ಟಿದ ಕೂಡ ಮಗುವಿನ ಮಹಾಪಥಿ ... ಹಸುಗೂಸು ತನ್ನ ತಾಯಿಯಿಂದ ಮೇಹರೋಗದಿಂದ ನರಳುತ್ತಿರುವ ಕಾರಣ ವ್ಯಕ್ತ ಶಿಶುಗಳಾಗಿ ಜನಿಸುತ್ತಾರೆ. ಅಥವ ಬಲಹೀನರಾಗಿ, ರೋಗಪೀಡಿತರಾಗಿ ಹುಟ್ಟುತ್ತಾರೆ. ಕೆಲವೇ ವಾರಗಳಲ್ಲಿ ಅಥವ ತಿಂಗಳುಗಳಲ್ಲಿ ಮೃತ್ಯುವಿಗೆ ತುತ್ತಾಗುತ್ತಾರೆ. ಮೇಹ ರೋಗಗ್ರಸ್ತರಾಗಿ ಹುಟ್ಟಿದ ಮಕ್ಕಳೂ ಕೂಡ ಸರಿಯಾದ ಚಿಕಿತ್ಸೆಯಿಂದ ಜಾಗ್ರತೆ ಗುಣ ಹೊಂದಬಹುದು. ಎಚ್ಚರ ತಪ್ಪಿದರೆ ಬೆಳೆಯುವ ಮಕ್ಕಳು ಸರಿಯಾಗಿ ಬೆಳವಣಿಗೆ ಹೊಂದದಿರಬಹುದು, ಕುರುಡರು ಆಗಬಹುದು. ಕಿವುಡರಾಗಬಹುದು ಅಥವ ಬುದ್ಧಿಹೀನರಾಗಬಹುದು.

ಗೊನೊರಿಯಾ ಮತ್ತು ಮೇಹರೋಗಗಳ ವಿಷಯವಾಗಿ ಬುದ್ಧಿವಂತಿಕೆಯಿಂದ ಶೀಘ್ರವಾಗಿ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ಈ ರೋಗವು ಶತಶತಮಾನಗಳಿಂದ ಯುವಕರಲ್ಲಿ ವ್ಯಾಪಿಸಿದೆ. ಅವುಗಳಲ್ಲಿ ಎಷ್ಟೋ ಪುನಃ ಪುನಃ ತಗುಲುವ ಸಾಧ್ಯವಾಗಿದೆ. ಯುವಕರಲ್ಲಿ ತಾನೆಲ್ಲವನ್ನೂ ತಿಳಿದಿದ್ದೇನೆ ಎಂಬ ಅಭಿಪ್ರಾಯವಿದೆ. ಪೆನ್ಸಿಲಿನ ಎಂಬ ಮೇಹರೋಗಕ್ಕೆ ಉತ್ತಮವಾದ ಚಿಕಿತ್ಸೆಯಿಂದಲೂ ತಾವು ಎಷ್ಟೋ ಬಾರಿ ರೋಗದಿಂದ ನರಳುತ್ತಿದ್ದರೂ ಪೆನ್ಸಿಲಿನ್ ಪ್ರಯೋಗದಿಂದ ಗುಣಪಡಿಸಿಕೊಳ್ಳಬಹುದೆಂದು ಅವರ ದೃಢ ನಂಬಿಕೆ. ಆದರೆ ಚಿಕಿತ್ಸೆ ಪಡೆದುಕೊಳ್ಳ

ದಿದ್ದಲ್ಲಿ ಮೇಹ ರೋಗವು ಬಹಳ ಅಪಾಯವನ್ನುಂಟು ಮಾಡಬಹುದೆಂದೂ, ಪೆನ್ಸಿಲಿನ್ ಪ್ರಯೋಗದಿಂದ ಕೆಲವು ರೀತಿಯ ಮೇಹರೋಗವು ಗುಣವಾಗುವುದಿಲ್ಲವೆಂದೂ ಅವರು ತಿಳಿದಿರತಕ್ಕದ್ದು. ಅಲ್ಲದೆ ಪೆನ್ಸಿಲಿನ್ ಪ್ರಯೋಗದಿಂದ ಪದೇ ಪದೇ ತಗಲಬಹುದಾದ ಮೇಹರೋಗವನ್ನು ಗುಣಪಡಿಸಬಹುದಾದ ನಂಬಿಕೆ ಸಾಲದು ಎಂಬ ವೈದ್ಯರ ಅಭಿಪ್ರಾಯವಿದೆ. ಚಿಕಿತ್ಸೆ ಮಾಡಿಸಿಕೊಳ್ಳುವ ಪ್ರಯಾಸದಲ್ಲಿ ತಮ್ಮ ದೇಹಾರೋಗ್ಯವು ಎಷ್ಟರ ಮಟ್ಟಿಗೆ ಹಾಳಾಗುತ್ತದೆಂಬುದನ್ನು ಅರಿತಿರಬೇಕು.

ಭವಿಷ್ಯ ಭಾರತದ ಏಳಿಗೆಗೆ ಯುವಕರು ಸಂಪೂರ್ಣ ಜವಾಬ್ದಾರರು. ದೇಶದ ಸಂಪತ್ತು, ಜನಾಂಗದ ಬೆಳವಣಿಗೆ, ಆರೋಗ್ಯಭರಿತವಾದ ಕುಟುಂಬಗಳು, ಹಾಗೂ ದೇಹಕಾಯರಾದ ಮಕ್ಕಳು, ಬುದ್ಧಿವಂತರಾದ ತಂದೆ ತಾಯಿಗಳು, ಆನಂದದಿಂದ ಕೂಡಿದ ಗಂಡ ಹೆಂಡಿರ ಸಂಸಾರವೇ ಮೊದಲಾದ ಸುಖಸಂಪತ್ತಿನ ರಾಜ್ಯರಚನೆಗೆ ಯುವಕರೇ ಜವಾಬ್ದಾರರು. ಜನಾಂಗದ ಅಭಿವೃದ್ಧಿ ಅವರನ್ನೇ ಹೊಂದಿಕೊಂಡಿದೆ.

ಮೇಹರೋಗ ಹರಡುವಿಕೆಗೆ ವ್ಯಭಿಚಾರವೇ ಮುಖ್ಯ ಕಾರಣ. ಯಾವ ಔಷಧಿಯಿಂದಲಾಗಲೀ ಇದನ್ನು ತಡೆಗಟ್ಟಲು ಸಾಧ್ಯವಿಲ್ಲ.

ಆಧುನಿಕ ಸಂಶೋಧನೆಯ ಸಲುವಾಗಿ ಕಂಡುಹಿಡಿದಿರುವ ಶಾಸ್ತ್ರರೀತಿಯ ಚಿಕಿತ್ಸೆಯ ಕ್ರಮದಿಂದ ಈ ಮೇಹರೋಗವನ್ನು ಅತಿ ಸುಲಭದಲ್ಲಿಯೂ ಮತ್ತು ಶೀಘ್ರದಲ್ಲಿಯೇ ವಾಸಿಮಾಡಬಹುದು. ವಿವಾಹವಾಗುವುದಕ್ಕೆ ಮುಂಚಿತವಾಗಿ ಶುದ್ಧ ಬ್ರಹ್ಮಚರ್ಯ, ವಿವಾಹಿತರಾದ ದಂಪತಿಗಳ ಶುದ್ಧ ಜೀವನ, ಹಿರಿಯರು ಕಿರಿಯರಿಗೆ ತೋರಿಸಬೇಕಾದ ಆದರ್ಶ ಜೀವನ, ಚಿಕ್ಕವರು ತಮ್ಮ ಹಿರಿಯರ ಬೋಧನೆಗಳನ್ನು ಪರಿಪಾಲಿಸಬೇಕಾದ ಶಿಸ್ತು ಮೊದಲಾದ ಉತ್ತಮ ನಡತೆಗಳಿಂದಲೇ ಈ ಮೇಹರೋಗವನ್ನು ತಡೆಗಟ್ಟಿ ಕ್ರಮೇಣ ನಿರ್ಮೂಲ ಮಾಡಬಹುದಾಗಿದೆ.

ಈ ಹೋರಾಟದಲ್ಲಿ ನಮ್ಮಲ್ಲಿಯ ಆತ್ಮಶಕ್ತಿ ಮತ್ತು ನೈತಿಕ ಶಕ್ತಿಯು ದೊಡ್ಡ ಆಯುಧಗಳು. ಅವುಗಳನ್ನು ನಾವು ನಿತ್ಯವೂ ಚೆನ್ನಾಗಿಟ್ಟುಕೊಂಡು ಉಪಯೋಗಿಸುತ್ತಿರಬೇಕು. ನಮ್ಮ ಸ್ವಂತ ಶಕ್ತಿಯಿಂದಲೇ ನಾವು ಎಂಥಾ ಶತ್ರುವನ್ನು ಕೂಡ ಜಯಿಸುವ ಭರವಸೆಯುಳ್ಳವರಾದರೆ, ಪ್ರಪಂಚದಲ್ಲಿ ಅಸಾಧ್ಯವಾದ ವಿಷಯವೇ ಇಲ್ಲ.

ಕೊಡಗು ಸರಕಾರದ ಪಬ್ಲಿಕ್ ಹೆಲ್ತ್ ಆಕ್ಟ್ 1943 66 57 ನೇ ಸೆಕ್ಷನಿನಲ್ಲಿ ನಮೂದಿಸಿರುವಂತೆ, ಮೇಹರೋಗದ ಮತ್ತು ಪರಂಗಿರೋಗದಿಂದ ನರಳುತ್ತಿರುವ ರೋಗಿಗೆ ಸರಕಾರದ ಖರ್ಚಿನಲ್ಲಿ ಕಾಯಿಲೆಯನ್ನು ಗುಣಪಡಿಸಲಾಗುವುದು ಮತ್ತು ಈ ಕಾಯಿಲೆಗೆ ಸಂಬಂಧಪಟ್ಟ ಪರೀಕ್ಷೆಯನ್ನು ಸಹ ಮಾಡಲಾಗುವುದು.

(ಕೊಡಗು ಆರೋಗ್ಯ ಇಲಾಖೆಯಿಂದ.)

ಐದು ವರ್ಷ ಎಡೆಬಿಡದೆ ನಕ್ಕ ನಾವಿಕ ಲಕ್ಷ ಗಟ್ಲೆ ಸಂಪಾದಿಸಿದ.

ಬಾಬ್ ಮಿಚಿನ್‌ಸನ್ ಓರ್ವ ನಾವಿಕ. ತಾನು ವಿನೋದಸ್ವಭಾವದವ. ಒಂದು ಆದಿತ್ಯವಾರ ಮುಂಜಾನೆ ಪತ್ರಿಕೆಯೊಂದರಲ್ಲಿ ಒಂದು ಸಂಗತಿಯನ್ನು ಓದಿ ಆತನಿಗೆ ನಗೆ ಬಂತು. ಆಶ್ಚರ್ಯದ ಸಂಗತಿಯೆಂದರೆ– ಮುಂದೆ ಐದು ವರ್ಷಗಳವರೆಗೆ ಆತನಿಗೆ ನಗುವದನ್ನು ನಿಲ್ಲಿಸಲಾಗಲಿಲ್ಲ.

ಆತನು ಒಂದೇ ಸವನೆ ನಗ ತೊಡಗಿದ್ದನ್ನು ಕಂಡು ಆತನ ತಮ್ಮ ಆತನ ತಲೆಯ ಮೇಲೆ ಒಂದು ಕೊಡ ತಣ್ಣೀರು ಸುರುವಿದನು. ನಗೆ ಕ್ಷಣ ಕಾಲ ನಿಂತಿತಾದರೂ ಮತ್ತೆ ಹೊರಬಿದ್ದಿತು. ಆ ನಿಮಿಷದಿಂದ ಬಾಬ್ ಆಗಾಗ ಉಸಿರಾಡಿಸಿಕೊಳ್ಳುವಷ್ಟು ಅವಕಾಶ ಬಿಟ್ಟು ಒಂದೇ ಸವನೆ ನಗತೊಡಗಿದನು. ನಾವಿಕ ಕೆಲಸ ಬಿಟ್ಟು ಬಾಬ್ ಆಸ್ಪತ್ರೆ ಸೇರಿದನು. ತಜ್ಞ ಡಾಕ್ಟರರು ಚಿಕಿತ್ಸೆ ನಡೆಸಿ ಇದು ಅಸಾಧ್ಯ ರೋಗ ಎಂದು ಕೈ ಬಿಟ್ಟರು. ಬಾಬ್‌ನು ಗಪ–ಗಪ ತಿಂಬ ಊಟ ಮುಗಿಸಬೇಕಾಗುತ್ತಿತ್ತು. ಒಮ್ಮೊಮ್ಮೆ ತುತ್ತು ಇನ್ನೂ ಬಾಯಲ್ಲಿದ್ದಾಗ ನಗೆ ಉಕ್ಕಿ ಉಸಿರು ಕಟ್ಟುವಂತಾಗುತ್ತಿತ್ತು. ರಾತ್ರಿ ನಿದ್ರಿಸಿದಾಗ ಮಾತ್ರ ಅವನ ಬಾಯಿಗೆ ನಗುವಿನಿಂದ ಬಿಡುವು ದೊರೆಯುತ್ತಿತ್ತು. ಹಗಲು ಹೆಚ್ಚೆಂದರೆ ಆತನು ಬಹಳವೆಂದರೆ ೧೫ ನಿಮಿಷಗಳ ವರೆಗೆ ಮಾತ್ರ ನಗೆ ತಡೆದುಕೊಳ್ಳಬಲ್ಲವನಾಗಿದ್ದನು.

ನಗುವ ಈ ವ್ಯಾಧಿ ಪ್ರಾರಂಭವಾದಾಗ ಬಾಬ್ ಲಗ್ನ ಮಾಡಿಕೊಳ್ಳತಕ್ಕವನಿದ್ದನು. ಅವನ ವಾಗ್ದತ್ತವಧು ಅವನ ಕೈಬಿಡಲಿಲ್ಲ. 'ಬಾಬ್ ಬೇಕಾದಷ್ಟು ನಗಲೊಲ್ಲನೇಕೆ? ನನ್ನನ್ನು ಕಂಡೇನೂ ಆತ ನಗುವದಿಲ್ಲ' ಎಂದಾಕೆ ಹೇಳಿ ಆತನನ್ನು ಲಗ್ನವಾದಳು.

ನಗುತ್ತಲೇ ಬರೆಯುವದನ್ನು ಬಾಬ್ ಅಭ್ಯಾಸಮಾಡಿದನು. ನಗುತ್ತಿದ್ದಾಗ ಕಾಗದ ಪೆನ್ಸಿಲಗಳ ಸಹಾಯದಿಂದ ಸಂಭಾಷಣೆ ನಡೆಸಲು ರೂಢಿಸಿಕೊಂಡನು. ಆತನ ಜೀವನಕ್ಕೆ ಕಂಟಕಪ್ರಾಯವಾಗಿ ಬಂದ ಈ ನಗೆ–ತುಸು ಸಮಯದಲ್ಲಿ ಆತನಿಗೆ ಲಕ್ಷ್ಮಿಯ ವರಪ್ರಸಾದವನ್ನು ದೊರಕಿಸಿಕೊಟ್ಟಿತು. ಆಕಾಶವಾಣಿಯವರು, ಗ್ರಾಮಫೋನ ಕಂಪನಿಯವರು ಆತನ ನಗೆಯ ಉಪಯೋಗ ಮಾಡಿಕೊಳ್ಳತೊಡಗಿದರು. ನಾಟಕ ಕಂಪನಿಗಳು ಆತನಿಗೆ ಹಣಕೊಟ್ಟು ನಾಟಕಗಳಿಗೆ ಬರಮಾಡಿಕೊಳ್ಳತೊಡಗಿದವು. ಸಂದರ್ಭಾನುಸಾರ ನಗುವದಷ್ಟೇ ಬಾಬ್‌ನ ಕೆಲಸ. ಉಳಿದ ಸಮಯಗಳಲ್ಲಿ ಅತಿಪ್ರಯಾಸದಿಂದ ನಗುವು ತಡೆದಿಟ್ಟುಕೊಂಡು ಸಂದರ್ಭ ಬಂದೊಡನೆ ಆತ ಹೋ ಹೋ–ಹೋ ಎಂದು ನಗುತ್ತಿದ್ದ. ಪ್ರೇಕ್ಷಕವೃಂದ ಆ ನಗುವಿನ ಲಹರಿಗೆ ಸಿಕ್ಕಿ ಕೇಕೆ ಹೊಡೆಯುತ್ತಿತ್ತು. ಬಾಬ್ ಈ ರೀತಿ ತನ್ನ ನಗೆಯಿಂದ ಅಪಾರ ಹಣಗಳಿಸಿ ಕೊಂಡನು.

ಐದು ವರ್ಷಗಳ ನಂತರ ಆಕಸ್ಮಾತ್ತಾಗಿ ಪ್ರಾರಂಭವಾದ ಈ ನಗೆ ಹಾಗೆಯೇ ಆಕಸ್ಮಾತ್ತಾಗಿ ನಿಂತುಹೋಯಿತು. ಪುನಃ ಬಾಬ್ ನಾವಿಕ ದಳಕ್ಕೆ ಸೇರಲು ಪ್ರಯತ್ನಿಸಿದರೂ ಅವನಿಗದು ಸಾಧ್ಯವಾಗಲಿಲ್ಲ. ಈಗ ಬಾಬ್ ನಗುವದೆಂದರೆ ಬಹಳ ಜಿಗುಪ್ಸೆಪಟ್ಟುಕೊಳ್ಳುತ್ತಾನೆ. ಆದರೆ ಆತನು ಐದು ವರ್ಷಗಳ ಕಾಲ ಅಖಂಡವಾಗಿ ನಗುತ್ತಿದ್ದಾಗ ತೆಗೆದುಕೊಂಡ ನಗುವಿನ ರೆಕಾರ್ಡುಗಳು ಇನ್ನೂ ಆ ಘಟನೆಯ ಸಾಕ್ಷಿಯಾಗಿವೆ.

ಮಾನವನ ವಿವಿಧ ಸ್ವಭಾವಗಳು.

ಸುಪ್ರಸಿದ್ಧ ತತ್ವಜ್ಞಾನಿ 'ನಿತ್ಸೇ'ಯ ಅಭಿಪ್ರಾಯದಂತೆ:—

ಸಮಗ್ರ ಮಾನವ ಕುಲದಲ್ಲಿಯೂ ಎರಡು ಬಗೆಗಳಿರುತ್ತವೆ. ಅಪೊಲೋನಿಯನ್ ಮತ್ತು ಡೈನಿಸಿಯನ್. (ಈ ಎರಡು ಹೆಸರುಗಳು ಗ್ರೀಕ್ ಪುರಾಣದೊಳಗಿನವು).

ಪ್ರಭಾವೀ, ಶುಚಿ, ಆದರ್ಶವಾದಿ, ಹಾಗು ತನ್ನ ಅಭಿಪ್ರಾಯವನ್ನು ಉಳಿದವರ ಮೇಲೆ ಹೇರದಂತವರು ಅಪೊಲೋನಿಯನ್ ಬಗೆಯ ಜನರು. ಪಂಡಿತ ನೆಹರೂರವರು ಈ ಬಗೆಯವರೆಂದು ಹೇಳಬಹುದು.

ಆಕ್ರಮಣಶೀಲ, ಚಟುವಟಿಕೆಯುಳ್ಳ, ಪ್ರಬಲ ಹಾಗೂ ಲಂಗುಲಗಾಮಿಲ್ಲದ ಸ್ವಭಾವದವರು ಡೈನಿಸಿಯನ್ ಬಗೆಯ ಜನರು. ಎಡಾಲ್ಫ ಹಿಟ್ಲರು ಈ ಬಗೆಯ ಸ್ವಭಾವದವ ಎನ್ನಬಹುದು.

ವಿಲಿಯಂ ಜೇಮ್ಸನ ಅಭಿಪ್ರಾಯದಂತೆ:—

ಮಾನವನಲ್ಲಿ ಕೋಮಲ ಮನಸಿನವರದೊಂದು ಬಗೆ, ಕಠೋರ ಮನಸಿನವರದು ಇನ್ನೊಂದು ಬಗೆ, ಹೀಗೆ ಎರಡು ಬಗೆಗಳಿರುತ್ತವೆ.

ವಿಚಾರಪರರು, ಆದರ್ಶವಾದಿಗಳು ಧಾರ್ಮಿಕರು ಹಾಗೂ ಶ್ರದ್ಧಾವಂತರು ಹೀಗಿರುವವರು ಕೋಮಲ ಮನಸಿನವರು. ತದ್ವಿರುದ್ಧ ಸ್ವಭಾವದವರು, ಕಠೋರ ಮನಸಿನವರು.

ಮಹಾಪ್ರವಾದಿಗಳಾದ ಕ್ರಿಸ್ತ, ಶ್ರೀ ಚೈತನ್ಯ, ಮಹಮದ್, ಬುದ್ಧ, ಕನ್‌ಫ್ಯೂಸಿಯಸ್‌ರು ಹಾಗೂ ಆದರ್ಶ ತತ್ವಜ್ಞಾನಿಗಳಾದ ಶಂಕರಾಚಾರ್ಯ, ಕ್ಯಾಂಟ ಮೊದಲಾದವರೆಲ್ಲ ಕೋಮಲ ಮನಸಿನವರು.

ಬರ್ನಾರ್ಡ್ ಶಾ, ನ್ಯೂಟನ್, ಡಾರ್ವಿನ್, ನೀತ್ಸೆ, ಬೇಕನ್ ಇವರೆಲ್ಲ ಕಠೋರ ಮನಸಿನವರು.

ಸ್ಪೆಂಗಲರನ ಅಭಿಪ್ರಾಯದಂತೆ:—

ಇವನ ಅಭಿಪ್ರಾಯವು ಒಳ್ಳೇ ಮೋಜಿನದಾಗಿದ್ದು ಅದರಂತೆ ಆರು ಪ್ರಕಾರದ ಜನರಿದ್ದಾರೆ.

(೧) ಶಾಸ್ತ್ರಕರು—ಆದರ್ಶಕ್ಕನುಗುಣವಾಗಿ ಜೀವನವನ್ನು ನಡೆಸುವವರು.

(೨) ಆರ್ಥಿಕರು—ಪ್ರತಿಯೊಂದು ವಸ್ತುವನ್ನು ಉಪಯುಕ್ತತೆಯ ರೀತಿಯಲ್ಲಿ ಅವಲೋಕಿಸುವವರು.

(೩) ರಸಿಕರು—ಚೆಲುವು ನಿಲುವುಗಳಲ್ಲಿಯೇ ಆಸಕ್ತಿ ಸ್ಫೂರ್ತಿಯುಳ್ಳವರು.

(೪) ಸಾಮಾಜಿಕರು—ಸಮಾಜ ಸ್ವಾಸ್ಥ್ಯದ ದೃಷ್ಟಿಯಿಂದ ಅದಕ್ಕಾಗಿಯೇ ತಮ್ಮನ್ನು ಒಪ್ಪಿಸಿಕೊಂಡವರು. ಹಾಗೂ ಯಾವಾಗಲೂ ಲೋಕೋಪಯೋಗಿ ಕೃತಿಗಳನ್ನೇ ಗೈಯುವವರು.

(೫) ರಾಜಕಾರಣಿಗಳು—ಅಧಿಕಾರಮೋಹ ಹಾಗೂ ಸ್ವಾರ್ಥಕ್ಕಂಟಿಕೊಂಡವರು.

(೬) ಧಾರ್ಮಿಕರು—ಯಾವಾಗಲೂ ಬಾಳಿನಲ್ಲಿ ಪ್ರಧಾನ ಮೌಲ್ಯವನ್ನು ಶೋಧಿಸತಕ್ಕವರು.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್, ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಕೆ. ಕೆ. ಅಪ್ಪಯ್ಯ,

Edited· Printed and Published by P· I. Pellappa at 'Kodagu' Press, Mercara, for 'Kodagu' Ltd·

ಮಡಿಕೇರಿ, ಮೇ ೯, 1952.
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ಬಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦	ತಾರೀಕು ೯-೫-೧೯೫೨ನೇ ಶುಕ್ರವಾರ	ಸಂಚಿಕೆ ೪೭

THE JUBILEE INSURANCE CO., LTD.

One of the very few in the feild of Insurance that has been declaring BONUS to its policy holders from its very insception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmand Road, Bangalore.

Our Chief Agents:-THE ORIENTAL ENTERPRISES, BANGALORE 1.

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೆದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:-ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,

6 41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

ಜನತೆ - ಸರಕಾರ.

ಲೇ:— ಶ್ರೀ. ಶಂ ಬಾ ಮುನಗೋಳಿ

೧೯೪೦ರಿಂದ ೧೯೪೭ರ ವರೆಗಿನ ಅವಧಿಯಲ್ಲಿ ನಮ್ಮ ದೇಶದಲ್ಲಿ ಬ್ರಿಟಿಷರ ಪ್ರಭುತ್ವದ ಕೆಳಗೆ ಸಲಹೆಗಾರ ಆಡಳಿತವು ಸಾಗಿದಾಗ ನಿರಂಕುಶ ಪ್ರಭುತ್ವದ ಆಡಳಿತ ಸಾಗಿತ್ತಾದರೂ ಆವಾಗ ಪ್ರಪಂಚದಲ್ಲಿ ದ್ವಿತೀಯ ಮಹಾಯುದ್ಧ ನಡೆದಿತ್ತಾದ್ದರಿಂದ ಜನತೆಯನ್ನು ಬಿಟ್ಟು ಯಾವ ಕೆಲಸಗಳನ್ನೂ ಮಾಡುವದು ಸರಕಾರಕ್ಕೆ ಸುಲಭವಾಗಿದ್ದಿಲ್ಲ. ಆದಕ್ಕಾಗಿ ಆಡಳಿತ ವರ್ಗವು ಅನೇಕ ಸಮಿತಿಗಳನ್ನು ನಿಯಮಿಸಿತ್ತು. ಮತ್ತು ಆ ಸಮಿತಿಗಳು ಕೊಡುವ ಸಲಹೆಗಳಲ್ಲಿ ತನಗೆ ಸರಿದೋರಿದವುಗಳನ್ನು ಸ್ವೀಕರಿಸುತ್ತ ಬೇಡವಾದವುಗಳನ್ನು ಬಿಡುತ್ತ ಕಾರ್ಯಭಾರವನ್ನು ಸಾಗಿಸುತ್ತು. ಹೀಗಾಗಿ ದೇಶದ ಆಡಳಿತದ ವಿವಿಧಾಂಗಗಳಲ್ಲಿ ಈ ಸಲಹೆ ಸಮಿತಿಗಳು ಭಾರತೀಯ ಜನತೆ ಮತ್ತು ಪರಕೀಯ ಸರಕಾರ ಇವೆರಡು ಘಟಕಗಳ ನಡುವಿನ ಕೀಲದಂತಾಗಿದ್ದವು.

ಕಾಲ ಬದಲಾಯಿತು. ದೇಶವು ಸಂಪೂರ್ಣ ಸ್ವಾತಂತ್ರ್ಯ ಪಡೆಯಿತು. ಜನಪ್ರಾತಿನಿಧಿಕ ಆಡಳಿತ ದೇಶದಲ್ಲೆಲ್ಲ ಪ್ರಾರಂಭವಾಯಿತು. ಆದರೂ ಈ ಸಲಹೆ ಸಮಿತಿಗಳು ಉಳಿದೇ ಉಳಿದವಲ್ಲದೆ ಹೊಸದಾಗಿ ಆಡಳಿತ ಸೂತ್ರ ವಹಿಸಿದ ಮಂತ್ರಿಮಂಡಲವು ಜನಪ್ರಾತಿನಿಧಿಕವಿದ್ದರೂ ಆ ಮಂತ್ರಿಮಂಡಳಕ್ಕೆ ಆಡಳಿತದ ಅನುಭವವಿದ್ದಿಲ್ಲವೆಂದೋ ಅಥವ ಸಲಹೆ ಕೊಡುವ ಸಮಿತಿಗಳ ಸಭಾಸದರಲ್ಲಿ ಮಂತ್ರಿಗಳಿಗಿಂತ ಹೆಚ್ಚು ಜಾಣ್ಮೆ ಇದ್ದಿತೆಂದೋ ಈ ಸಲಹೆ ಸಮಿತಿಗಳು ಒಂದರ ಹಿಂದೊಂದರಂತೆ ಮೇಲೆ ಬರಹತ್ತಿದವು. ಈ ಸಮಿತಿಗಳ ಸದಸ್ಯರೆಂದರೆ ಸ್ಥಾನಬಲದಿಂದ ಅಲ್ಲಲ್ಲಿಯ ಶಾಸನ ಸಭೆಯ ಸದಸ್ಯರು, ಕಾಂಗ್ರೆಸ್ ಸಮಿತಿಗಳ ಪದಾಧಿಕಾರಿಗಳು ಇಲ್ಲವೆ ಅವರ ಅನುಗ್ರಹಕ್ಕೆ ಪಾತ್ರರಾದವರು. ಈ ಪರಿವಾರದ ನೆರವಿನಿಂದ ದೇಶದಲ್ಲಿಯ ಮಂತ್ರಿಮಂಡಳಗಳ ಆಡಳಿತ ಸಾಗಿತು. ಜನತೆ, ಸರಕಾರ ಮತ್ತು ಕಾಂಗ್ರೆಸ್ ಈ ಮೂರೂ ಘಟಕಗಳ ಹೊಂದಿಕೆ ಹೀಗೆ ಆಗಿತ್ತು.

ಈ ರೀತಿಯಾಗಿ ಸಾಗಿದ್ದ ಆಡಳಿತವು ಜನಹಿತಕಾರಿಯಾಗಿ ಪರಿಣಮಿಸಿದ್ದರೆ ಈ ಕ್ರಮವು ಸಯುಕ್ತಿಕವೆಂದೇ ಪರಿಗಣಿಸಬಹುದಿತ್ತು. ಆದರೆ ಮಂತ್ರಿಮಂಡಳಗಳ ದೋಷಯುಕ್ತ ಧೋರಣೆಯಿಂದಲೋ ಅಧಿಕಾರೀ ವರ್ಗದಲ್ಲಿ ಅಸಮರ್ಥತೆಯುಂಟಾದುದರಿಂದಲೋ ಶಾಸನಸಭಾ ಸದಸ್ಯರೂ ಸಲಹೆ ಸಮಿತಿಗಳೂ ಕೊಟ್ಟ ಅಪರಿಪಕ್ವ ಸಲಹೆಗಳಿಂದಲೋ ಆಡಳಿತದಿಂದ ಜನತೆಗೆ ತೃಪ್ತಿ ಮಾತ್ರ ಆಗಲಿಲ್ಲ. ಅಥವ ಜನತೆಯು ಈ ಮಂತ್ರಿಮಂಡಳಗಳಿಂದ ಅಪೇಕ್ಷಿಸಿದ್ದು ಹೆಚ್ಚಾಗಿದ್ದರೂ ಇರಬಹುದು.

ಎಲ್ಲೆಡೆಗೂ ಒಂದೇ ತರದ ಪರಿಸ್ಥಿತಿ ಇರುತಿದ್ದರೆ, ಅಂದರೆ ಒಂದು ಕಡೆ ಇದ್ದದ್ದು ಎಲ್ಲ ಕಡೆಗೂ ದೊರಕುತ್ತಿದ್ದರೆ, ಒಂದೆಡೆ ಇಲ್ಲದ್ದು ಎಲ್ಲಿಯೂ ದೊರಕುತ್ತಿರದಿದ್ದರೆ ಆವಾಗಲಾದರೂ ಜನತೆ 'ಎಲ್ಲರಿಗೂ ಆದಂತೆ ನಮಗೂ ಆಗುವುದು.' ಎಂದು ಸಮಾಧಾನವನ್ನಾದರೂ ಹಚ್ಚಿಕೊಳ್ಳುತಿತ್ತು. ಹಾಗೂ ಆಗಲಿಲ್ಲ. ಯಾರಿಗೆ ದೊಡ್ಡವರ ಬೆಂಬಲವಿತ್ತೋ ಅವರಿಗೆ ಬೇಕಾದುದು ದೊರೆಯಬಹುದಾಗಿತ್ತು; ದೊರಕುತಿತ್ತು. ಯಾರ ವಶೀಲಿಯೂ ಇಲ್ಲದವರಿಗೆ ಏನೂ ಇಲ್ಲದಾಗುತಿತ್ತು. ಆಡಳಿತದ ಬಗ್ಗೆ ಜನತೆಯಲ್ಲಿ ಬೇಸರ ಹುಟ್ಟಿದ್ದು ಈ ಕಾರಣಕ್ಕಾಗಿ.

ಅದರಲ್ಲಿಯೂ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವದಂತೂ ಅನಿರ್ಬಂಧವಾಗಿ ಸಾಗಿತು. ದಾರೆಹೋಕ ಕಳ್ಳನು ಕೂಡ 'ಮುರಾರಜಿಯವರಿಗೆ ಬರೆಯುವೆ ನೋಡು', ನೆಹರೂ ಅವರಿಗೆ ಈಗಿಂದೀಗ ತಾರು ಮಾಡುತ್ತೇನೆ ಜಾಗ್ರತೆ' ಎಂದು ಹೇಳುವದು ದಿನದ ರೂಢಿಯಾಗಿತ್ತು. 'ದೇಶ ಸ್ವತಂತ್ರವಾಗಿದೆ; ಮೇಲಿನವರ ಮೇಲೆ ಯಾರ ವರ್ಚಸ್ಸು ಎಷ್ಟು ಇದೆ ಯಾರು ಬಲ್ಲರು? ಕಾವೇನಾದರೂ ಮಾಡೋಣ, ಆದರ ಬಗ್ಗೆ ಮೇಲಿನಿಂದ ಚಾಕರಿ ಬರೋಣ, ಒಣ ಉಸಾಬರಿ ಏಕೆ? ಯಾರು ಏನು ಹೇಳುವರೋ ಹಾಗೆ, ಅವರವರ ವರ್ಚೆಯ ಮೇಲಿಂದ ವಿಚಾರ ಮಾಡಿ ಕೆಲಸ ಮಾಡಿದರಾಯಿತು'. 'ಇಂತಿಂಥವರು ಈ ಭಾಗದಲ್ಲಿ ವರ್ಚಸ್ವೀ ಜನರಿದ್ದಾರೆ. ಎಲ್ಲ ವರಿಷ್ಠ ಅಧಿಕಾರಿಗಳ ಪರಿಚಯ ಅವರಿಗಿದೆ; ಮಂತ್ರಿಗಳೂ ಅವರ ಮಾತು ಕೇಳುವರು; ಅವರು ಹೇಳಿದಂತೆ ಕೇಳಿದರಾಯಿತು. ಅವರನ್ನು ಸಂತೃಪ್ತಿಯಿಂದಿಟ್ಟರೆ ನಮ್ಮ ಕೆಲಸವಾಯಿತೆ'ಂದು ಸಣ್ಣ ದೊಡ್ಡ ಅಧಿಕಾರಿಗಳು ತಿಳಿದುಕೊಂಡರು. ತತ್ಪರಿಣಾಮವಾಗಿ ಆಡಳಿತದಲ್ಲಿ ಶೈಥಿಲ್ಯವುಂಟಾಯಿತು.

ಶುರುವಿನಿಂದ ಈ ಶೈಥಿಲ್ಯದಿಂದ ಸಂದು ದೊರೆತಲ್ಲೆಲ್ಲ ಕೂಳೆ ಕೊಂಡೆ ಕೊಬ್ಬಹತ್ತಿತು. ದುಡ್ಡಿನ ವ್ಯವಹಾರ ಸರಾಗ ಸಾಗಿತು. ಹೇಳುವದು ಏನೆ? ಕೇಳುವವರಾರು? ಯಾರು ಏನೂ ಮಾಡಿಕೊಂಡರೆ ಉತ್ತರ ಸ್ಪಷ್ಟೀಕರಣಗಳ ಸಿದ್ಧ! ಕೂಳೆ ಬಂಚಗುಳಿತನಗಳು ಬೆಳೆಯಲಿಕ್ಕೆ ಅನೇಕಾನೇಕ ನಿಯಮ ನಿರ್ಬಂಧ, ನಿಯಂತ್ರಣಗಳ ಒಳ್ಳೆ ಅನುಕೂಲತೆಯನ್ನುಂಟುಮಾಡಿಕೊಟ್ಟವು. ಪರ್ಮಿಟ್ಟಿನ ವ್ಯವಹಾರವಂತೂ ಒಳ್ಳೇ ಉಚ್ಚಾವಸ್ಥೆಯಲ್ಲಿತ್ತು. ಈ ರೀತಿಯಾಗಿ ಆಡಳಿತ ಸಾಗಿದಾಗ ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಆಗಿದ್ದರೆ ಆಶ್ಚರ್ಯವೇನು?

ಆದರೆ 'ನಮ್ಮ ರಾಜ್ಯದಲ್ಲಿ ಎಲ್ಲವೂ ಸರಿಯಾಗಿ ಸಾಗಿದೆ. ನಮ್ಮ ಆಡಳಿತ ಅತ್ಯಂತ ಕಾರ್ಯಕ್ಷಮವಾಗಿ ನಡೆದಿದೆ. ನಮ್ಮ ಆಡಳಿತದ ಪ್ರಭಾವ ರಾಜ್ಯದ ಮೂಲೆ ಮೂಲೆಗಳಲ್ಲಿ ಪಸರಿಸಿದೆ. ನಾವು ಅನುಸರಿಸುವ ಧೋರಣೆ, ಹೊರಡಿಸುವ ಆಜ್ಞೆ, ಕೊಡುವ ಸಲಹೆ ಇವೆಲ್ಲವೂ ಚಾಚೂ ತಪ್ಪದೆ ಪಾಲಿಸಲ್ಪಡುತ್ತಿವೆ' ಎಂದೇ ನಮ್ಮ ಮಂತ್ರಿಮಂಡಳ ತಿಳಿದಿತ್ತು. ಹಾಗೆ ಅದು ಭಾವಿಸಲಿಕ್ಕೆ ಕಾರಣವೂ ಇತ್ತು. ರಾಜ್ಯದಲ್ಲಿ ಏನು ಬೇಕಾದುದು ನಡೆದರೂ ಹಳ್ಳಿಯ ಬಯಲಾಟದಲ್ಲಿ ರಾಜನು ಪ್ರಧಾನಿಯನ್ನು ಕರೆದು 'ಮಂತ್ರಿವರ್ಯರೇ ನಮ್ಮ ರಾಜ್ಯದಲ್ಲಿ ಪ್ರಜಾ ಜನರು ಸುಖದಿಂದ ಇದ್ದಾರೆಯೆ? ಎಂದು ಕೇಳುವಾಗ ಮಂತ್ರಿಯು 'ಮಹಾಪ್ರಭೋ, ನಿಮ್ಮ ರಾಜ್ಯದಲ್ಲಿ ಸಕಲ ಪ್ರಜಾ ಜನರೂ ಸುಖದಿಂದಲೂ ಆನಂದದಿಂದಲೂ ತೃಪ್ತಿಯಿಂದಲೂ ಜೀವನ ಸಾಗಿಸಿದ್ದಾರೆ. ಎಲ್ಲರೂ ನಿಮ್ಮ ಆಡಳಿತವನ್ನು ಕೊಂಡಾಡುತಿದ್ದಾರೆ' ಎಂದು ಹೇಳುತ್ತಿದ್ದಂತೆ; ಸೇನಾಪತಿಯನ್ನು ಕರೆದು 'ಸೇನಾಪತಿ, ನಮ್ಮ ರಾಜ್ಯದಲ್ಲಿ ಎಲ್ಲ ಕಡೆಗೂ ಶಾಂತತೆ ಇದೆಯೇ? ಪರಚಕ್ರಗಳ ದಾಳಿಯ ಭೀತಿ ಇರುವದೆ?' ಎಂದು ಕೇಳುವಾಗ 'ಒಡೆಯಾ, ನಿನ್ನ ಬಾಹು ಬಲದ ಮುಂದೆ ಯಾವ ವೈರಿಯದು ನಡೆದೀತು. ಎಲ್ಲೆಲ್ಲಿಯೂ ಶಾಂತಿ ಇದೆ. ಮಾಂಡಲಿಕರೆಲ್ಲರೂ ಕಪ್ಪ ಕಾಣಿಕೆ ಸರಿಯಾಗಿ ಕೊಡುತಿದ್ದಾರೆ' ಎಂದು ಹೇಳುತ್ತಿದ್ದಂತೆ ಎಲ್ಲವೂ ಸರಿಯಾಗಿದೆಯೆಂಬ ವರದಿಗಳು ಮಂತ್ರಿ ಮಂಡಳಕ್ಕೆ ಹೋಗುತ್ತಿದ್ದರೆ ನಿಜಸ್ಥಿತಿ ಮಂಡಳಕ್ಕೆ ತಿಳಿಯುವದೆಂತು?

ಉದಾಹರಣೆಗೆ ಹೇಳಬೇಕೆಂದರೆ ಸರಕಾರದ ಮದ್ಯಪಾನ ಪ್ರತಿಬಂಧಕ ಧೋರಣೆಯು ಪರಿಣಾಮಕಾರಿಯಾಗಿ ಸದ್ದಿಲ್ಲದೆ ಆಯಾತವಾಗುತ್ತಿರುವ ವಿದೇಶೀ ಮದ್ಯ ಒತ್ತಟ್ಟಿಗಿರಲಿ. ಅಕ್ರಮವಾಗಿ ಸರಾಯಿ ತಯಾರಾಗುತ್ತಿರುವದರ ಪ್ರಮಾಣವು ಪ್ರತಿಯೊಬ್ಬನಿಗೆ ಗೊತ್ತಿದ್ದರೂ ಹಳ್ಳಿ ಪಟ್ಟಣಗಳಲ್ಲಿ, ಓಣಿ ಕೇರಿಗಳಲ್ಲಿ, ಹೊಲ ಹಳ್ಳಗಳಲ್ಲಿ ಈ ಅಕ್ರಮ ಸಾರಾಯಿ ತಯಾರಿಸುವ ಭಟ್ಟಿಗಳು ಸರಾಗವಾಗಿ ಸಾಗುತಿದ್ದು ಅನೇಕ ಭಟ್ಟಿಗಳನ್ನೂ ಸಿದ್ಧವಾದ ಸರಾಯಿಯನ್ನೂ ಪೋಲೀಸರು ದಿನಂಪ್ರತಿ ಹಿಡಿಯುತಿದ್ದರೂ ಮದ್ಯಪಾನ ಪ್ರತಿಬಂಧ ಧೋರಣೆ ಯಶಸ್ವಿಯಾಗಿದೆಯೆಂದೇ ಸರಕಾರ ಹಟ ಹಿಡಿದಾಗ;

೧೦-೨೦ ಮೈಲು ಅಂತರದ ಮೇಲಿರುವ ಒಂದೂರಿನಿಂದ ಇನ್ನೊಂದು ಊರಿಗೆ ಹೋಗಲಿಕ್ಕೆ ಕೂಡ ಆರಾರು ಎಂಟೆಂಟು ಗಂಟೆ ಉರಿಯುವ ಬಿಸಿಲಿನಲ್ಲಿ, ಹೆಂಡಿರು ಮಕ್ಕಳನ್ನು ಕಟ್ಟಿಕೊಂಡು ಕುಡಿಯ ನೀರು ಕಾಣದೆ ತಪಿಸುತ್ತಿರುವ ಪ್ರವಾಸಿಕರ ತಂಡಗಳು ಎಲ್ಲ ಮೋಟಾರ ನಿಲ್ದಾಣಗಳಲ್ಲಿ ಕಂಡುಬರುತ್ತಿದ್ದರೂ 'ಎಸ್. ಟಿ. ಸರ್ವಿಸು ಹಿತಕಾರಿಯೇ ಇದೆ. ಜನಹಿತ ಮಾಡುವದೇ ಹೀಗೆ' ಎಂದು ಆ ಸಂಸ್ಥೆಯ ಪ್ರಕಟಣಾಧಿಕಾರಿ ಹೇಳುತ್ತ 'ಪ್ರವಾಸಿಕರು ಹೇಳುವದೆಲ್ಲ ಸುಳ್ಳು, ನಮ್ಮ

ಡು ಮಾತ್ರ ಸತ್ಯ' ಎಂದು ಅಧಿಕಾರ ವಾಣಿಯಿಂದ ಹೇಳುವಾಗ;

ಕಳವು, ತುಡುಗು, ಸುಲಿಗೆಗಳು ಅವಿಚ್ಛಿನ್ನವಾಗಿ ಸಾಗಿದ್ದರೂ ಹೆಚ್ಚಾಗಿ ಜೂಜುಗಾರಿಕೆಗಳ ವಿರುದ್ಧ ಜನತೆ ಬೊಬ್ಬೆ ಕುಟ್ಟಿದರೂ ಅನಿರ್ಬಂಧವಾಗಿ ಅವೆಲ್ಲವೂ ಸಾಗಿದ್ದರೂ ಎಲ್ಲೆಡೆಯಲ್ಲಿ ಶಾಂತಿ ಸುವ್ಯವಸ್ಥೆ ಸರಿಯಾಗಿದೆ ಎಂದು ಹೇಳುವಾಗ;

ಮಂತ್ರಿಮಂಡಳಕ್ಕೆ ನಿಜಸಂಗತಿ ತಿಳಿಯುವ ಬಗೆ ಹೇಗೆ? ರೋಗ ನಿದಾನವೇ ಸರಿಯಾಗಿ ಆಗದಿದ್ದರೆ ರೋಗಕ್ಕೆ ತಕ್ಕ ಉಪಚಾರ ಹೇಗೆ ಆದೀತು? ಮೊದಲೇ ಪರಿಸ್ಥಿತಿ ಈ ರೀತಿ ಹದಗೆಟ್ಟಾಗ ಇದ್ದುದನ್ನು ಇದ್ದಕ್ಕಿದ್ದಂತೆ ವಿವರಿಸುವದನ್ನು ಬಿಟ್ಟು ತಮ್ಮ ತಮ್ಮ ಮನಸ್ಸಿಗೆ ಬಂದಂತೆ, ತಮ್ಮ ಬುದ್ಧಿಗೆ ಸರಿ ಹೋಗುವಂತೆ ಈ ಸಲಹೆ ಸಮಿತಿಗಳ ಸಲಹೆ ಮಂತ್ರಿಮಂಡಳಕ್ಕೆ ಹೋಗುತ್ತಿದ್ದರೆ, ಪರಿಸ್ಥಿತಿ ಕೆಡಲಿಕ್ಕೇನು ತಡ?

ಇಷ್ಟೆಲ್ಲ ಅವ್ಯವಸ್ಥೆ ನಡೆದು ಅದರ ಬೊಬ್ಬಾಟ ಬಹಳವಾದಾಗ 'ಜನತೆಯ ಸಹಕಾರ ದೊರೆಯುವದಿಲ್ಲ, ನಾವೇನು ಮಾಡುವದು?' ಎಂದು ಅಧಿಕಾರೀ ವರ್ಗ ಹೇಳುವದಂತೂ ದಿನದ ಮಾತಾಗಿದೆ. ಅಧಿಕಾರೀ ವರ್ಗಕ್ಕೆ ಜನತೆ ಸಹಕಾರವನ್ನೇಕೆ ಕೊಡುತ್ತಿರಲಿಕ್ಕಿಲ್ಲ? ಅಧಿಕಾರೀ ವರ್ಗದಲ್ಲಿ ಜನತೆಯು ವಿಶ್ವಾಸವಾದರೂ ಇರಲಿಕ್ಕಿಲ್ಲ; ಇಲ್ಲವೆ ಜನತೆಯು ಸಹಕಾರ ಕೇಳುವಷ್ಟು ಆ ವರ್ಗದಲ್ಲಿ ನಿಸ್ಪೃಹ ವೃತ್ತಿಯಾದರೂ ಇರಲಿಕ್ಕಿಲ್ಲ. ತಾನು ಕೊಟ್ಟ ಸಹಕಾರವು ಸಿರ ಉಪಯೋಗಿ ಆಗುವದೆಂದಾಗಲಿ ಅದರ ದುರುಪಯೋಗವಾಗುವದೆಂದಾಗಲಿ ಜನತೆಗೆ ಅನಿಸುವದರಿಂದಲೇ ಅದರ ಸಹಕಾರ ದೊರೆಯುವದಿಲ್ಲವೆಂಬ ಮಾತಿನತ್ತ ಮಂತ್ರಿಗಳು ಲಕ್ಷ್ಯ ಕೊಡಬೇಕಿತ್ತು. ಮಂತ್ರಿಗಳು ಅತ್ತ ಲಕ್ಷ್ಯ ಪೂರೈಸದಿದ್ದುದರಿಂದಲೇ ಆಡಳಿತದಲ್ಲಿ ಶೈಥಿಲ್ಯ, ನೌಕರ ವರ್ಗದಲ್ಲಿ ಅಸಮರ್ಥತೆ, ಕೊರತೆಗಳು ಸೇರಿಕೊಂಡವು. ಅದರ ಫಲವನ್ನು ಜನತೆ ಅನುಭವಿಸಬೇಕಾಯಿತು. ಆ ದುಷ್ಫಲಗಳನ್ನನುಭವಿಸಿದ ಜನತೆಗೆ ಇಂಥ ಆಡಳಿತದಿಂದ ಸಂತೃಪ್ತಿಯಾಗದ್ದರಲ್ಲಿ ಸೋಜಿಗವೇನು?

ಹೇಗೂ ಈಗ ಹೊಸ ಮಂತ್ರಿಮಂಡಳ ಆಡಳಿತ ಸೂತ್ರ ವಹಿಸಿದೆ. ಈ ಮಂತ್ರಿಮಂಡಳವು ಹಿಂದಿನ ಪ್ರಮಾದಗಳ ಪುನರಾವೃತ್ತಿಯಾಗದಂತೆ ಜಾಗ್ರತೆ ವಹಿಸಲಿ. ಈ ಎಲ್ಲ ದುರ್ವ್ಯಾಪಾರಗಳಿಗೂ ಮೂಲಗಳಂತಿರುವ ಸಲಹೆ ಸಮಿತಿಗಳ ಉತ್ತರಪೂಜೆ ಮಾಡಲಿ. ಆಡಳಿತದಲ್ಲಿ ಯಾರೂ ಕೈ ಹಾಕದಂತೆ ನೋಡಿಕೊಳ್ಳಲಿ. ಹಾಗೆ ಕೈ ಹಾಕುವವರು ಅವರು ಶಾಸನಸಭೆಯ ಸದಸ್ಯನಿರಲಿ, ಕಾಂಗ್ರೆಸ್ ಪದಾಧಿಕಾರಿ ಇರಲಿ, ಕಮ್ಯೂನಿಸ್ಟ್ ಕಾರ್ಯಕರ್ತನಿರಲಿ, ಇಲ್ಲವೇ ಬೀದಿಯ ಭಿಕಾರಿ ಇರಲಿ, ಅಂಥವರಿಗೆ ಉಗ್ರ ಶಾಸನ ವಿಧಿಸುವ ಧೋರಣೆ ಇಟ್ಟುಕೊಳ್ಳಲಿ. ಲಂಚ, ವಶೀಲಿ, ಭಿಡೆ ಮುಂತಾದ ದುರ್ವ್ಯವಹಾರಗಳನ್ನು ಪ್ರತಿಬಂಧಿಸುವದಕ್ಕೆ ಪೋಲೀಸ್ ಖಾತೆಯ ಅಧಿಕಾರಿಗಳಿಂದ ತುಂಬಿದ ಲಂಚ ಪ್ರತಿಬಂಧಕ ವಿಭಾಗವನ್ನು ವಿಸರ್ಜಿಸಿ ಹೊಸ ಏರ್ಪಾಟು ಮಾಡಲಿ. ಗುತ್ತು ಜನತೆಯು ಬೇಕು ಬೇಡಗಳನ್ನು ಸರಿಯಾಗಿ ತಿಳಿದುಕೊಳ್ಳುವುದಕ್ಕಾಗಿಯೂ ತಾನು ಕೈಕೊಳ್ಳಲಿರುವ ಆಡಳಿತ ಕ್ರಮಗಳನ್ನು ಜನತೆಗೆ ತಿಳಿಸುವುದಕ್ಕಾಗಿಯೂ ಸಾರ್ವಜನಿಕ ಸುದ್ದಿ ವಿಭಾಗದ ಪುನರ್ರಚನೆ ಮಾಡಲಿ. ಅಂದರೆ ಮಾತ್ರ ಆಡಳಿತವು ಪರಿಣಾಮಕಾರಿಯಾಗಬಲ್ಲದು. ಅವಾಗ ಜನತೆ ಸರಕಾರದೊಡನೆ ಸಹಕರಿಸಲು ಮುಂದೆ ಬರುವದು.

ಜೈಹಿಂದ್.

॥ ನಮ್ಮ ಮಹಿಳೆಯರಿಗೆ. ॥

ಲೇ: ಶ್ರೀ ಕೆ. ಬಿ. ಐಯ್ಯಪ್ಪ, ಬಿ. ಎ. ಬಿ. ಟಿ. ನಾಪೋಕ್ಲು.

'ಜಗತ್ತು ಅಳಿಯುವುದಾದರೂ ಸ್ತ್ರೀಯಿಂದ ಉಳಿಯುವುದಾದರೂ ಸ್ತ್ರೀಯಿಂದ' ಎಂಬ ವಾಣಿಯು ಶಾಸ್ತ್ರೋಕ್ತವಾಗಿದೆ. ಅಂದ ಮೇಲೆ ರಾಷ್ಟ್ರ ನಿರ್ಮಾಣವಾಗಬೇಕಾದರೆ ನಮ್ಮ ಮಹಿಳೆಯರ ಹೊಣೆಗಾರಿಕೆ ಅಗಾಧವಾಗಿದೆ. ಇದನ್ನರಿತು ಶ್ರದ್ಧಾಶಕ್ತಿಯಿಂದ ಮಾನವ ಏಳಿಗೆಯನ್ನು ಬಯಸತಕ್ಕದ್ದು. ರಾಷ್ಟ್ರ ಕಲ್ಯಾಣ ಕಾರ್ಯಗಳನ್ನು ಆದರ್ಶ ಸಾಮೂಹಿಕವಾಗಿ ಮೊಟ್ಟ ಮೊದಲು ಹಳ್ಳಿಗಳಲ್ಲಿ ಪ್ರಾರಂಭಿಸಬೇಕಾಗಿದೆ. ಒಂದು ಕುಟುಂಬದ ಜೀವನ ಜ್ಯೋತಿ, ಅಲ್ಲಿನ ಗೃಹಿಣಿಯಾದ್ದರಿಂದ ಅವಳನ್ನು ಯೋಗ್ಯ ಕಾರ್ಯಕಾರಿಣಿಯನ್ನಾಗಿ ಮಾಡುವದು ಅವಶ್ಯ. ನಗರ ಕುಟುಂಬಗಳಿಗಿಂತ ಗ್ರಾಮಾಂತರ ಕುಟುಂಬಗಳು ಹೀನವಾಗಿವೆ. ಇದರಿಂದ ನಗರಗಳಲ್ಲಿರುವ ಕುಟುಂಬಗಳೆಲ್ಲ ಆದರ್ಶವಾಗಿವೆಯೆಂದಲ್ಲ. ಆದರೆ ಹಳ್ಳಿವಾಸಿಗರು ಅಜ್ಞಾನವೆಂಬ ಕಗ್ಗತ್ತಲೆಯಿಂದ ಪಾರಾದರೆ, ಇಡೀ ದೇಶದ ಅಭ್ಯುದಯವಾಗುವುದರಲ್ಲಿ ಸಂಕೋಚವಿಲ್ಲ.

ವಿದ್ಯಾವಂತ ಮತ್ತು ನಾಗರಿಕ ಮಹಿಳೆಯರು, ತಮ್ಮ ಸಂಸ್ಥೆಗಳ ಮೂಲಕ ಹಳ್ಳಿಗರ ಸೇವೆ ಮಾಡುವಂತಾಗಬೇಕು. ಈಗಿನಂತೆ ಮಾಸಕ್ಕೊಂದು ಯಾ ಒಂದು ಇಲ್ಲವೆ ತ್ರೈಮಾಸಿಕ ಮೀಟಿಂಗ್ ಮಾಡಿದರೆ ಸಾಲದು. ಈ ಸಂಸ್ಥೆಗಳ ಕರ್ತವ್ಯಗಳು ಅಷ್ಟರಲ್ಲಿ ಅಂತ್ಯವಾಗುವುದು ಸರಿಯಲ್ಲ, ಹಲ ಕೆಲವು ಸಮಾಜಗಳು, ಅಲ್ಪಸ್ವಲ್ಪ ರಚನಾತ್ಮಕ ಪ್ರವರ್ತನೆಗಳಲ್ಲಿ ತಾಲಿಪ್ತರೂ, ಉತ್ಸಾಹ ಭರಿತರಾಗಿ, ನಿಷ್ಠೆಯಿಂದ ಮಾಡುವದು ಗೋಚರವಾಗುತ್ತಿಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಸಮಾಜ ಸೇವೆ ಮಾಡುವ ಸ್ವಚ್ಛಂದ ಧ್ಯೇಯವನ್ನು ಇಟ್ಟುಕೊಳ್ಳಬೇಕು. ಸಲಿಸಿದ ಸೇವೆಯಿಂದ ಜ್ಞಾನ ಹೀನ ಮಹಿಳಾ ಮಣಿಗಳು, ಪ್ರಯೋಜನ ಪಡೆದು ತಮ್ಮ ಪ್ರಗತಿಯನ್ನು ತಾವೇ ಸಾಧಿಸುವಂತಾಗಬೇಕು. ನಮ್ಮ ಈಗಿನ ಕಾಲದ ಗತಿ ರಹಿತ ದೇಶದಲ್ಲಿ ಪ್ರಚೋದನೆಗಾಗಿ ಸಲ್ಲಿಸಬಹುದಾದ ಸೇವೆ ಮಿತಿಯಿಲ್ಲದಷ್ಟಿದೆ. ಅದಗಿ ಪ್ರತಿಯೊಂದು ಮಹಿಳಾ ಸಮಾಜವು, ಕೆಲವು ತತ್ಕ್ಷಣ ಕೆಲಸಗಳನ್ನು ಮನಪೂರ್ವಕವಾಗಿ ಸಾಕ್ಷಾತ್ಕಾರ ಮಾಡಬೇಕಾಗಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರಧಾನವಾಗಿ ಇಂಗ್ಲೆಂಡು, ಅಮೇರಿಕಾ ಮತ್ತು ಯುರೋಪು ದೇಶಗಳಲ್ಲಿ ಸ್ತ್ರೀ ಸಮಾಜಗಳು ಸಲ್ಲಿಸುತ್ತಿರುವ ಅಪ್ರತಿಮ ಸೇವೆಯನ್ನು ತಿಳಿವಳಿಕೆಗಾಗಿ, ಚುಟುಕಾಗಿ ವಿವರಿಸಲೆತ್ನಿಸುತ್ತೇನೆ.

ವಾರಕ್ಕೊಂದಾವರ್ತಿ ಸಭೆ ಜರಗಿಸಲಾಗುತ್ತದೆ, ಮೂರಿಂದರೆ ತಿಂಗಳಿಗೆರಡಾವರ್ತಿ. ಪ್ರತಿಯೊಂದು ಸಮಾಜಕ್ಕೂ ಸ್ವಂತ ಭವನವೊಂದಿದೆ. ಸಾರ್ವಜನಿಕ ಉದಾತ್ತಸ್ಥೈರ್ಯದಿಂದಲೂ, ಸರಕಾರದ ಬೆಂಬಲದಿಂದಲೂ ಭವನ ನಿರ್ಮಿಸಿ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಂಡಿರುತ್ತಾರೆ. ಅಕ್ಷರಹೀನ ಮಹಿಳೆಯರ ಅಕ್ಷರಾಭ್ಯಾಸ, ಶಿಶು ವಿಹಾರಗಳ ಏರ್ಪಾಡು, ರೇಡಿಯೋ ವಾಕ್ಚಿತ್ರಾಲಯ ಸಹ ಇವೆ. ಹೆಚ್ಚಾಗಿ ಆದಿತ್ಯವಾರ ಮತ್ತು ಶನಿವಾರ ರೇಡಿಯೋ ಕಾರ್ಯಕ್ರಮಗಳನ್ನು ಕೇಳುವರು. ಉತ್ತಮ ಭಾಷಣಗಳನ್ನೂ ನಾಟಕಗಳನ್ನೂ ಸಂಗೀತಗಳನ್ನೂ ಏರ್ಪಡಿಸುವರು. ಶೈಕ್ಷಣಿಕ ಚಲನ ಚಿತ್ರಗಳ ಪ್ರದರ್ಶನ ನಡೆಯುತ್ತವೆ. ಅಡಿಗೆ ಕ್ರಮಗಳು, ಶಿಶುಗಳ ಪೋಷಣೆ, ಗೃಹ ಮತ್ತು ಗ್ರಾಮ ನೈರ್ಮಲ್ಯ, ಇವೆ ಮೊದಲಾದ ಸಂಗತಿಗಳನ್ನು ಚಿತ್ರಗಳಲ್ಲಿ ನೋಡುವರು. ಇದರ ಜೊತೆಗೆ, ಕಸೂತಿ ಕೆಲಸ, ನೇಯ್ಗೆ ಕೆಲಸ, ಆಟದ ಬೊಂಬೆಗಳನ್ನು ತಯಾರು ಮಾಡುವಿಕೆ, ಸಂಗೀತ ಅಭ್ಯಾಸ ಪರಭಾಷೆಗಳನ್ನು ಕಲಿಯುವುದು, ಇವೇ ಮೊದಲಾದ ವ್ಯವಸ್ಥೆಗಳಿವೆ. ಗ್ರಾಮ ಭವನಗಳನ್ನು ಸಂದರ್ಶಿಸಿ, ನೈರ್ಮಲ್ಯ, ಸಹಕಾರ, ಮುಂತಾದ ಸಮಾಜ ಶಿಕ್ಷಣವನ್ನೀಯುವರು. ಈ ರೀತಿಯ ಕೆಲಸಗಳನ್ನು ಅಲ್ಲಿಯ ಯುವತಿಯರು, ಸಾಧಿಸುತ್ತಿರುವಾಗ ನಮ್ಮ ಮಹಿಳೆಯರು ಚೇತನಗೊಳ್ಳಬೇಕಾಗಿದೆ.

ವಿರಾಮವಿಲ್ಲದೆ ನಿರ್ಜೀವಿ ಯಂತ್ರಗಳ ಹಾಗೆ, ಹಗಲಿರುಳು ದುಡಿಯುತ್ತಿರುವ ನಮ್ಮ ಗೃಹಿಣಿಯರು; ಪಾಶ್ಚಿಮಾತ್ಯ ವಿದ್ಯಾರಂಭವಾದ ಮೇಲೆ ನಮ್ಮ ಆಧುನಿಕ ಮಹಿಳೆಯರು, ನಾನಾ ರಂಗಗಳಲ್ಲಿ ಪ್ರಗುಷ್ಟ, ಛಲದಿಂದಲೂ, ಮನೋಬಾಹುಲ್ಯದಿಂದಲೂ, ದುಡಿಯುತ್ತಿರುವುದು ಆನಂದವಾಗಿದೆ. ವರ್ಗಗಳಾಗಿಯೂ ಅಧ್ಯಾಪಿಕೆಯರಾಗಿಯೂ, ವಕೀಲರಾಗಿಯೂ, ರಾಜಕಾರ್ಯಪಟುಗಳಾಗಿಯೂ, ಆಡಳಿತಗಾರರಾಗಿಯೂ ಸಿನಿಮಾ ತಾರೆಗಳಾಗಿಯೂ ಸೇವೆ ಸಲ್ಲಿಸುತ್ತಿರುವುದು ಗಮನಾರ್ಹವಾಗಿದೆ. ಆದರೆ ಇತ್ತೀಚೆಗೆ ಆಂಗ್ಲ ವಿದ್ಯಾಪ್ರಭಾವವು, ಇವರನ್ನು ಹದ್ದುಮೀರಿ ಹೋಗುವಂತೆ ಮಾಡಿದೆ. ಈ ರೀತಿಯ ಅಸಹ್ಯ ವರ್ತನೆಗಳನ್ನು ನಮ್ಮ ಮಹಿಳಾ ಸಮಾಜಗಳು ಗಮನಿಸಬೇಕಾಗಿದೆ. 'To call women the weaker sex is libel it is mans injustice to women' ಸ್ತ್ರೀಯನ್ನು ಅಬಲೆಯೆನ್ನುವುದು ತಪ್ಪಭಿಪ್ರಾಯವಾಗಿದೆ. ಪುರುಷನು ಸ್ತ್ರೀಗೆ ಮಾಡುವ ಅನ್ಯಾಯವಾಗಿದೆಯೆಂದು ಪೂಜ್ಯ ಬಾಪೂಜಿಯವರು ನುಡಿದಿರುವರು. ಸಮಾನ ಅಧಿಕಾರ, ಹಾಗೂ ಸಂದರ್ಭ ಕಲ್ಪಿಸಿದ ನಂತರ ವಿಪರೀತ ಧೋರಣೆಯು ಹೊರಹೊಮ್ಮುತ್ತಿರುವದು ಅತೃಪ್ತಿಕರವಾಗಿದೆ. ಆದ್ದರಿಂದ ಅಜ್ಞಾನದಿಂದ, ದಾರಿ ತಪ್ಪಿ ಹೋಗುತ್ತಿರುವ ಮಹಿಳೆಯರನ್ನು ನಮ್ಮ ಸಂಸ್ಕೃತಿಗನುಗುಣವಾಗಿ ಶೀಲವತಿಯರಾಗಿ ಮಾಡಿ, ಪ್ರತಿಯೊಂದು ಕುಟುಂಬದ ಉದ್ಧಾರವಾಗುವಂತೆ ಮಾಡಬೇಕು. ಪಾಶ್ಚಾತ್ಯ ಅನುಕರಣದಿಂದಾಗಿ ತಮ್ಮ ಉಡುಪು, ಆಭರಣ, ನೀತಿ ನಡತೆ, ವರ್ತನೆಗಳಲ್ಲಿ ಜಿಗುಪ್ಸೆ ಬಂದು ಪೌರಸ್ತ್ಯ ಶ್ರೇಷ್ಠ ಸನಾತನ ಜೀವನ ಕ್ರಮಗಳು ಇಂದು ಮಾಯವಾಗುತ್ತಿದೆ. ಹಿಂದೂ ಆಧ್ಯಾತ್ಮಿಕ ಜೀವನವನ್ನೂ ಪುನರುಜ್ಜೀವನಗೊಳಿಸುವುದರಲ್ಲಿ ನಮ್ಮ ಮಹಿಳೆಯರು ನಿರತರಾಗಬೇಕು. ಆದರಿಂದ, ಮಹಿಳಾ ಸಮಾಜಗಳ ಕ್ಷೇತ್ರ ಸಾಧಿಸಬಹುದಾದ ಅನೇಕ ಸತ್ಕಾರ್ಯಯುಕ್ತ ವೃತ್ತಿಗಳನ್ನು ಸಂಕ್ಷಿಪ್ತರೀತಿಯಲ್ಲಿ ನಿರೂಪಿಸುತ್ತೇನೆ.

ವಿದ್ಯಾವಂತೆಯರು, ಕುಟುಂಬಕ್ಕೆ ಲಕ್ಷಣ, ಹಾಗೂ ಕಳೆಯನ್ನೀಯುವವರೆಂದು ನಾವು ಭಾವಿಸುತ್ತೇವೆ. ಸಾಕಷ್ಟು ಪ್ರಾಪಂಚಿಕ ವ್ಯವಹಾರ ಜ್ಞಾನ, ಸಮಾಜ ಶಾಸ್ತ್ರದ ಅರಿವು ಇರುವುದರಿಂದ, ಸಂಸಾರ ಸಾಗರದಲ್ಲಿ ಅಲ್ಲೋಲಕಲ್ಲೋಲವಾಗದೆ ಪತಿಯ ಕಷ್ಟಗಳನ್ನರಿತು, ಸಹಧರ್ಮಿಣಿಯಲ್ಲಿ ಮಾದರಿ ಸ್ತ್ರೀಯಾಗಿ ಸುಗಮ ಸ್ಥಿತಿಯಲ್ಲಿರುವಳು. 'An ideal woman is a model of tolerence' ಅಂದರೆ 'ಉತ್ತಮ ಸ್ತ್ರೀಯು ಸಹನೆಯ ಆದರ್ಶರೂಪಳು.' ಎಂದೂ ತಜ್ಞರು ಸಾರಿದ್ದಾರೆ. ಆದರೆ ನಮ್ಮ ವಿದ್ಯಾವಂತ ಗೃಹಿಣಿಗಳು ತದ್ವಿರುದ್ಧವಾಗಿ ವರ್ತಿಸುವುದು ತಲೆದೋರುತ್ತದೆ. ಬಟ್ಟೆಬರೆಗಳಿಗಾಗಿ, ಆಭರಣಗಳಿಗಾಗಿ ಸುಗಂಧ ದ್ರವ್ಯಗಳಿಗಾಗಿ ಹೇರಳ ವ್ಯಯ ಮಾಡುವುದು ಶೋಚನೀಯವಾಗಿದೆ. ನೆರೆಹೊರೆಯವರ ಇಲ್ಲವೇ ಆಪ್ತಮಿತ್ರಳ ಸೀರೆಯೇ ಇವಳಿಗೆ ಮತ್ತೊಂದಾಗಬೇಕು. ಅವಳ ನೂತನ ಆಭರಣಗಳ ರೀತಿಯನ್ನೇ ಮತ್ತೊಂದಾವರ್ತಿ ತನ್ನ ಆಭರಣಗಳು ಅನುಸರಿಸಬೇಕು. ಈ ರೀತಿಯ ಖಾಲಿ ಸ್ವಭಾವದ ಅನಾವಶ್ಯಕವಾದ ಅನುಕರಣ ಕೇವಲ ಹಾನಿಕರವಾದದ್ದು. ಮನೆಯಿಂದ ಹೊರಗೆ ಹೋದಾಗ ಕೈಚೀಲವೊಂದು ಜೊತೆಯಲ್ಲಿಯೇ ಇರಬೇಕು. ಇನ್ನೊಬ್ಬಳಿಗಿಂತ ತಾನು ಆಕರ್ಷಣೀಯವಾಗಿರಬೇಕೆಂಬುದೇ ಆಧುನಿಕ ತರುಣಿಯ ಸ್ವಭಾವ. ಬಡತನವು ಬಾಧಿಸುತ್ತಿದ್ದರೂ ಚಿಂತೆಯಿಲ್ಲ. 'woman's vanity lies in claiming superiority over others of her sex' ಎಂದು ಬಾಪೂಜಿಯವರು ಹೇಳಿದ್ದಾರೆ. ಆದ್ದರಿಂದ ಈ ರೀತಿ ಲೋಪದೋಷಗಳನ್ನು ಸಂಪೂರ್ಣವಾಗಿ ಕಿತ್ತೊಗೆದು ಕುಟುಂಬದ ಆರ್ಥಿಕೋನ್ನತಿಯು

(೭ನೇ ಪುಟ ನೋಡಿ)

॥ ದುರ್ಬೀನು ನೋಟ ॥

— ಲೇ:—ರಸಿಕ —

ಬಾವಿ ಇಣಕಿದ ಮಾತ್ರಕ್ಕೆ ಬಾಯಾರಿಕೆ ನಿವಾರಣೆಯಾಗದು. ಓದಿ ತಿಳಿದ ಮಾತ್ರಕ್ಕೆ ಅಜ್ಞಾನ ನಿವಾರಣೆಯಾಗದು ಎಂಬ ಮಾತಿನಂತೆ ಕಾಂಗ್ರೆಸ್ ಸರಕಾರ ಆಯಿತೆಂದು ಸರ್ವ ಸಮೃದ್ಧಿಯಾಗಲಾರದು. ನನ್ನ ಹಳ್ಳಿಯ ಗೆಳೆಯರೊಬ್ಬರು ಹೇಳಿದರು. 'ಕಾಂಗ್ರೆಸ್ ಸರಕಾರ ಬಂದು ಮಾತ್ರ ಏನು? ನಮ್ಮ ಅವಸ್ಥೆ ಇನ್ನೂ ಹಾಗೆಯೇ ಇದೆ' ಎಂದು. ಯಾವ ಸರಕಾರ ಬಂದರೂ ರೈತರಾಗಿ ಬೆಳೆಸಲೇಬೇಕೆಂದು ಹಲವರಿಗೆ ತಿಳಿದಿಲ್ಲ. ಯಾವ ಸರಕಾರವೂ ಭೂಮಿಯ ಉತ್ತು ಅನ್ನ ಹುಟ್ಟಿಸಿಕೊಡಲಾರದು. ಅವರವರ ಕರ್ತವ್ಯ ಅವರವರೇ ಮಾಡಬೇಕು. ಬಾಯಾರಿದಾಗ ಬಾವಿ ನೋಡಿದಂತೆ ಕಷ್ಟ ಬಂದಾಗ ಸರಕಾರದತ್ತ ನೋಡಿದಂತಾಗದು. ಅವರವರ ಕೃತ್ಯ ಅವರವರ ತಲೆಗೆ ಅಲ್ಲವೇ? ಗಂಧದ ಕೊರಡಾದರೇನು ಸವೆದರೇನೇ ಪರಿಮಳ. ಹಾಗೆಯೇ ಕಾಂಗ್ರೆಸ್ ಸರಕಾರವಾದರೂ ದುಡಿದರೇನೇ ಜನಹಿತ.

* * *

ಕಾಂಗ್ರೆಸಿನೊಳಗೆ ಸೇರಲು ಬಯಸಿರುವ ಪ್ರತ್ಯೇಕ ಪಕ್ಷದವರನ್ನು ಸೇರಿಸಿಕೊಳ್ಳಬಾರದೆಂಬ ಅಭಿಮತವು ಕಳೆದ ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಹೊರಬಿದ್ದಿತಂತೆ. ದೇಶದ ಹಲ ಜನರೂ ಕೂಡ ಅವರನ್ನು ಸೇರಿಸಿಕೊಳ್ಳಕೂಡದೆಂದು ಶಾಸನ ಸಭಾ ಮಂಡಳಿಗೆ ಬರೆದಿರುವರಂತೆ. ಕೆಲವರು ಡೆಲ್ಲಿಗೆ ತಂತೀ ಕಳುಹಿಸಲೂ ಪ್ರಾರಂಭಿಸಿದವರಂತೆ! ಪ್ರತ್ಯೇಕವಾದಿಗಳು ಯಾವ ದ್ರೋಹಮಾಡಿರುವರೆಂದು ಈ ಗಡಿಬಿಡಿ? ಮದುವೆಗೆ ಖರ್ಚಾದ ಹಣ, ಮಯ್ಯಣಕಂಟಿದ ನೊಣ, ಮನದಲ್ಲಿ ಬೇರುಬಿಟ್ಟ ಗುಣ ತೆಗೆಯಲಿಕ್ಕಾಗದು ಎಂಬಂತೆ ಸ್ಥಿತಿಯಾಗಿದೆ. ಕಾಡಿನಲ್ಲಿರುವ ಹುಲಿಗೆ ಹೆದರದವರು ಮನೆಯಲ್ಲಿರುವ ಇಲಿಗೆ ಗಾಬರಿಗೊಂಡಂತಿದೆ.

* * *

ಯಾವುದೋ ಒಂದು ವಿಷಯಕ್ಕಾಗಿ ಮಹನೀಯರೊಬ್ಬರು ಮಂತ್ರಿಗಳಿಗೆ ಬರೆದುಕೊಂಡಿದ್ದರಂತೆ. ಚೀಫ್ ಸೆಕ್ರೆಟರಿಯವರಿಗೆ ಹೋದ ಈ ವಿಚಾರ ಅವರನ್ನು ದಾಟಿ, ಮಂತ್ರಿಯವರಿಂದ ಬೆಂಬಲಪಡೆದು ಮುಂದೆ ಹೋದಾಗ ಚೀಫ್ ಕಮಿಷನರ ನಕಾರ ಅದರ ಸದ್ದಡಗಿಸಿತೆಂದು ವರ್ತಮಾನ. ಹಾಗಾದರೆ ಚೀಫ್ ಕಮಿಷನರು ಇನ್ನೂ ಸರ್ವಾಧಿಕಾರಿಗಳೇ ಎಂಬುದಾಗಿ ಅವರು ಕೇಳುತ್ತಾರೆ. ಬೇಡುವವನ ಹಿಂದುಗಡೆ ನಿಂತು ಅತನ ಕಂಕುಳಡಿಗಾಗಿ ಮುಂದೆ ಕೈನೀಡಿದಂತಾಯಿತು. ಹಿಟ್ಟು ಬಿತ್ತರೆ ಹಿಂದಿರುವವನಿಗೆ! ಪೆಟ್ಟು ಬಿದ್ದರೆ ಮುಂದಿರುವವನ ಮುಖಕ್ಕೆ! ಹಾಗಾಗಿದೆ ನಮ್ಮ ಸರಕಾರ. ಜನರು ದೂರಿದರೆ ನಿಮ್ಮ ಸರಕಾರ ನಿಮ್ಮ ಮಂತ್ರಿಗಳಿದ್ದಾರೆ ಎಂಬ ಮಾತು. ಜನರು ಮೆಚ್ಚಿದರೆ ನಮ್ಮಿಂದ ಸಾಧಿಸಿತೆಂಬ ಹಿರಿಮೆ!

* * *

ಒಬ್ಬ 'ಕಾಮ್ರೇಡ್'ರು ನಮ್ಮಲ್ಲಿಗೆ ಆಗಾಗ ಬರುತ್ತಾರೆ. ಕೊಡಗಿನ ಬಸ್ ಕಂಪೆನಿಗಳಿಂದ ಹಿಡಿದು ಬಾರ್ಡರಿಯ ತೋಟದ ವರೆಗೆ ಎಲ್ಲವೂ ರಾಷ್ಟ್ರೀಕರಣವಾಗಬೇಕೆಂದು ವಾದ ಮಾಡುತ್ತಾರೆ. ಅವರೂ ತಕ್ಕ ಸ್ಥಿತಿವಂತರು! ನೂರು ಎಕರೆಗಿಂತ ಅಧಿಕ ಇದೆ. ನಾನು ತಮಾಷೆಯಿಂದ ನಿಮ್ಮ ಆಸ್ತಿಯಲ್ಲಿ ಅರ್ಧವನ್ನು ಭೂಮಿ ಇಲ್ಲದವರಿಗೆ ಹಂಚಿಬಿಡಿ ಎಂದೆ. ಆಗ ಅವರು ರೇಗಿ ಪ್ರಾಯಶಃ ನನಗೆ ನೂರು ಎಕರೆ ಭೂಮಿ ಒದಗಬಹುದು, ತಮ್ಮ ಗುಂಪು ಎನ್ನುತ್ತಾರೆ! ನಾಗ ಸಮಾಧಾನಕ್ಕೆ ಸೇರುವವರಾದರೂ ಹಾವು ಹೆಡೆ ಎತ್ತಿದಾಗ ನಿಲ್ಲರು. ಅವರಂತೆ ಸಮವಾದದ ಆರಾಧಕರೆಂದರೂ ಅಕ್ಕಪಕ್ಕ ಹಸಿಬೀಳಲು ಬಿಲ್ಲರು!

* * *

ಅವರೊಬ್ಬರಿದ್ದಾರೆ. ಅವರ ಮಾತಿಗೆ ತಡೆ ಇಲ್ಲ. ಪ್ರಗತಿ ಬೇಕು; ಪ್ರಗತಿಶೀಲ ಭಾವನೆ ಬೇಕು.. ಎಂದು ವಾದ ಮಾಡುತ್ತಿದ್ದರು. ಕೊಡಗಿನಲ್ಲಿ ಪ್ರಗತಿಶೀಲರೆಲ್ಲರೂ ಕೂಡಿ ಒಂದು ಪಕ್ಷವನ್ನು ಕಟ್ಟಬೇಕೆಂದು ಹೇಳುತ್ತಿದ್ದರು. ಚುನಾವಣೆ ಹತ್ತಿರ ಬಂದಾಗ ಕಾಂಗ್ರೆಸಿನ ಒಳನುಗ್ಗಿದರು. ಸದಸ್ಯರಾಗಿ ಅಂಗೀಕರಿಸಲ್ಪಟ್ಟಿದ್ದರೆ ಈಗ ಮೌನವಾಗಿದ್ದಾರೆ. ನಗಾರಿಯಲ್ಲಿದ್ದು ಮುಟ್ಟಿದರೆ ಕಿವಿಬಿರಿಯುವ ಶಬ್ದ ಮಾಡಬಲ್ಲ ಚರ್ಮ ಪ್ರಾಣಿಯು ಜೀವದಲ್ಲಿದ್ದಾಗ ಶಬ್ದ ಮಾಡಲಾರದು. ಅದರಂತೆ ಜನತಾ ಪ್ರಚಾರಕ್ಕೆ ಟೊಂಕಕಟ್ಟಿಕೊಂಡಾಗ ಏಳುವ ಆ ಘೋಷಣೆಗಳು ಜವಾಬ್ದಾರಿಗೆ ಸಿಕ್ಕಿಕೊಂಡಾಗ ಹೊರಡಲಾರವು.

* * *

ಮಂದ್ರಾಸಿನ ಗೋವಿಂದ ಸ್ವಾಮಿನಾಥನ್‌ರವರು ಗರ್ಭಿಣಿಯೊಬ್ಬಳ ಮೇಲೆ ಕಾರುಬಿಟ್ಟು ಆಕೆಯ ಮರಣಕ್ಕೆ ಕಾರಣರಾಗಿ ಆ ಬಗ್ಗೆ ಅವರಿಗೆ ಸಾವಿರ ರೂಪಾಯಿ ಜುಲ್ಮಾನೆಯಾಗಿದ್ದರೂ ಅಪೀಲಿನಲ್ಲಿ ಅವರನ್ನು ಖುಲಾಸು ಮಾಡಲಾಯಿತಷ್ಟೆ! ಈ ವಿಚಾರದಲ್ಲಿ ದುರ್ಬೀನಿಗೇನು ಕಾಣುತ್ತದೆ ಎಂದು ಒಬ್ಬರು ಕೇಳಿದರು. ದೊಡ್ಡ ಜನರನ್ನು ಹತ್ತಿಸಿಕೊಳ್ಳಬೇಕೆಂದು ಬಸ್ಸು ರಸ್ತೆ ಬಿಟ್ಟಂತಾಯಿತೆಂದೆ!

* * *

'ಚೆಂಡು ಹೊಡೆದಷ್ಟು ಸುಲಭದಲ್ಲಿ ಗುಂಡು ಹಾರಿಸುವದು ಅಪಾಯ. ವಿನೋದವಾಡಿದಷ್ಟು ಲಘುವಾಗಿ ವಿಮರ್ಶೆ ಮಾಡುವದು ಆಗದು. ಆದ್ದರಿಂದ ದುರ್ಬೀನು ಕಣ್ಣು ಎಚ್ಚರದಲ್ಲಿರಲೀ' ಎಂದು ಒಬ್ಬರು ಬರೆಯುತ್ತಾ, ಕೆಲವು ಅಧಿಕಾರಿಗಳು ನನ್ನ ಈ ದುರ್ಬೀನಿನ ವಿಚಾರ ಕೆಂಗಣ್ಣರಾಗಿದ್ದಾರೆಂದೂ ಅವರಿಗೆ ಕಹಿಯಾಗಿ ಬರೆಯುವ ನನ್ನ ಲೇಖನಿಯ ಉಸಿರಡಗಿಸಬೇಕೆಂದಿರುವರೆಂದೂ ಸೂಚಿಸಿದ್ದಾರೆ. ಆದರೆ ಅವರ ಯತ್ನ ಹೊಳೆಗೆ ಸಂಕಕಟ್ಟಿದಂತೆ. ಹೊಳೆಯ ನೀರನ್ನು ಸಂಕ ಹೇಗೆ ತಡೆದು ಹಿಡಿದಿಡಲಾರದೋ ಅದೇ ರೀತಿ ಅವರ ಕೆಂಗಣ್ಣು ದುರ್ಬೀನು ಕಣ್ಣನ್ನು ಗಾಬರಿಗೊಳಿಸಲಾರದು.

* * *

ಈ ವಾರ ನನ್ನ ಮಿತ್ರರೊಬ್ಬರು ದುರ್ಬಿನ್ ನೋಡಿ ಈ ಕೆಳಗಿನ ಅವರ ಅನುಭವವನ್ನು ಬರೆದಿದ್ದಾರೆ. ಈ ರಸಿಕ ಮಿತ್ರರು ಕಂಡ ಚಿತ್ರವನ್ನು ಈ ಕೆಳಗೆ ಕೊಡಲಾಗಿದೆ.

ನನ್ನ ಬಂಧು ಒಬ್ಬರಿದ್ದಾರೆ. ಮಹಾವೇದಾಂತಿಗಳೆಂದು ಹೇಳಿಸಿಕೊಂಡಿದ್ದಾರೆ. ದಿನ ನಿತ್ಯ ಎರಡು ಮೂರು ಗಂಟೆಗಳ ಕಾಲ ದೇವತಾ ಪ್ರಾರ್ಥನೆಗಳಲ್ಲಿ ಕಳೆಯುವವರು. ಆದರೆ ಬ್ರಾಹ್ಮಣರ ಪೂಜೆ ಪುನಸ್ಕಾರಗಳಲ್ಲಿ ನಂಬಿಕೆಯಿಲ್ಲದ ಆಧುನಿಕ ಸ್ವಭಾವದವರು. ಭಾಗಮಂಡಲದಲ್ಲಿ ಮಾತಾಪಿತೃಗಳಿಗೆ ಪಿಂಡ ಹಾಕುವಾಗ ಪೂಜೆಯನ್ನು ಸ್ವತಃ ನಡೆಸಿ ನೆರೆದ ಜನರಿಂದ ಭೇಷ್ ಎನಿಸಿಕೊಂಡವರು. ದೇವರನ್ನು ಪ್ರತ್ಯಕ್ಷ ಕಂಡಿರುತ್ತೇನೆಂದು ವಾದದ ಮಧ್ಯದಲ್ಲೊಮ್ಮೆ ನುಡಿದು ಕೂಡಿದ್ದ ನಾಲ್ಕೈದು ಜನರನ್ನು ಅಚ್ಚರಿಗೊಳಿಸಿದರು. ಆದರೆ ಮೊನ್ನೆ ಅವರ ಮನೆಯಲ್ಲಿ ಗಣಪತಿ ಪೂಜೆಗೆಂದು ಬಂದ ಆಹ್ವಾನ ಪತ್ರವನ್ನೋದಿ ನನಗೆ ನಂಬಲು ಸಾಧ್ಯವಾಗಲಿಲ್ಲ. ಬೇರೆ ಬ್ರಾಹ್ಮಣರ ನೆರವು ಈಗ ಏತಕ್ಕೋ ಅರ್ಥವಾಗುವದಿಲ್ಲ. ಹೀಗೆ ಗಯರಿಗೆ ದೈವಗಳು ವಿದ್ಯಾಭ್ಯಾಸ ಸಹ ಕೊಡಕೂಡದೆಂದು ಅವರ ಇನ್ನೊಂದ ತತ್ವ. ಹೆಣ್ಣು ಹುಡುಗಿಯರು ತಂದೆ ತಾಯಿಗಳನ್ನು ಕಡೆಗಣಿಸುವರೆಂಬ ಆ ಅಭಿಪ್ರಾಯವನ್ನು ಹೇಳುತ್ತಿದ್ದರು. ಆದರೆ ತನ್ನ ಪುತ್ರಿಯನ್ನು ಹೈಸ್ಕೂಲಿಗೆ ಸೇರಿಸುವ ಸಂದರ್ಭ ಬಂದಾಗ ತಮ್ಮ ತತ್ವಕ್ಕೊಂದು ಅರ್ಥವಾಗದ ಟಿಪ್ಪಣಿಯನ್ನು ಜೋಡಿಸಿಕೊಂಡು ಆಕೆಯನ್ನು ಹೈಸ್ಕೂಲಿಗೆ ಸೇರಿಸಿದರು. ಅಂದಿನ ಅವರ ತತ್ವದ ವಿಚಾರ ಈಗ ಮಾತೆತ್ತಿದರೆ ಸಂಭಾಷಣೆಯ ಸರಣಿಯನ್ನೇ ಬೇರೆಡೆ ಸರಿಸುವರು. ತತ್ವಭೇದಗಳೆಲ್ಲ ತನಗನ್ವಯಿಸುವದಿಲ್ಲ.

* * *

ಮಿಸ್ ಇಂಡಿಯಾ ಕೀರ್ತಿಪಡೆದ ಇಂದ್ರಾಣಿ ರೆಹಮಾನಳ ಛಾಯಾಚಿತ್ರವನ್ನು ನೋಡಿ ನನ್ನ ನೆರೆಮನೆ ಕಾಲೇಜು ಹುಡುಗಿ ರೇಗಿಬಿಟ್ಟಿದ್ದಳು. ನಿಜಕ್ಕೂ ತಾನು ಇಂದ್ರಾಣಿ ರೆಹಮಾನಳಿಗಿಂತಹ ಸುಂದರಿಯೆಂದು ಆಕೆಯ ವಾದ. ಆದರೆ ಯಾರ ಮೇಲೆ ರೇಗಿ ಬೀಳುವುದು ಎಂಬುದು ಪ್ರಶ್ನೆ. ಕೊಡಗಿನಲ್ಲಿ ಆ ರೀತಿಯ ಸ್ಪರ್ಧೆಯನ್ನು ನಡೆಸದ ಮಹಿಳಾಸಭೆಗಳ ಮೇಲೆ ಆಕೆ ಕೋಪಗೊಂಡಿದ್ದಾಳೆ. ಕೊಡಗಿನಲ್ಲಿ ನಡೆದಿದ್ದರೆ ಖಂಡಿತವಾಗಿಯೂ ತನಗೆ ಮಿಸ್ ಇಂಡಿಯ ಸ್ಪರ್ಧೆಯಲ್ಲಿ ಗೆಲ್ಲಬಹುದಾಗಿತ್ತೆಂದು ಆಕೆ ಈಗ ಎರಡು ವಾರಗಳಿಂದ ಎಲ್ಲರೊಡನೆಯೂ ಹೇಳಿಕೊಳ್ಳುತ್ತಾಳೆ. ಮೊನ್ನೆ ನನ್ನ ಅಭಿಪ್ರಾಯವನ್ನೂ ಸಹ ಕೇಳಿದಳು. 'ನಿನ್ನಂತೆ ಅನೇಕ ಹುಡುಗಿಯರು ತಮ್ಮ ಸೌಂದರ್ಯವು ಮಿಸ್ ಇಂಡಿಯಾಳ ಸೌಂದರ್ಯಕ್ಕಿಂತಹ ಮಿಗಿಲಾದುದೆಂದು ಹೇಳಿಕೊಳ್ಳುತ್ತಾರೆ. ರಾಜಕಾರಣಿಯು ಹೇಗೆ ಪರರ ತತ್ವವನ್ನು ಒಪ್ಪಲಾರನೋ ಹಾಗೆ ಸ್ತ್ರೀಯು ಪರಸ್ತ್ರೀಯ ಸೌಂದರ್ಯವನ್ನು ಮೆಚ್ಚಲಾರಳು' ಎಂದು ನಾನು ಬಿಚ್ಚುಮನಸಿನಿಂದ ಹೇಳಿದೆ.

* * *

ನನ್ನ ಗ್ರಾಮದಲ್ಲಿ ಯುವಕ ರೈತರೊಬ್ಬರಿದ್ದಾರೆ. ಕಳೆದ ಚುನಾವಣೆಯಲ್ಲಿ ಅವರ ಪಾತ್ರ ಬಹಳ ಪ್ರಾಮುಖ್ಯವಾದದು. ಕಮ್ಯೂನಿಸ್ಟ, ಕಾಂಗ್ರೆಸ್ ಮತ್ತು ಪ್ರತ್ಯೇಕ ಪಕ್ಷ ಇವರೆಲ್ಲರೊಡನೆಯೂ ಹಲವು ಗಂಟೆಗಳ ವರೆಗೆ ವಾದಮಾಡಿ ಯಾವದೊಂದು ಅಭಿಪ್ರಾಯವನ್ನು ಕೊಡದೆ ಕಳುಹಿಸುತ್ತಿದ್ದರು. ಆದರೆ ಚುನಾವಣೆ ಸಮೀಪಿಸಿದಂತೆ ಕಾಂಗ್ರೆಸಿಗಾಗಿ ಹಗಲಿರುಳು ದುಡಿದರು. ಜಯದೊರಕಿದಾಗ ಆನಂದದಿಂದ ಕುಣಿದಾಡಿದರು. ಕೆಲವು ದಿವಸಗಳ ನಂತರ ಅವರ ಭೇಟಿಯಾದಾಗ ಯಾವ ಕಾರಣಕ್ಕಾಗಿ ಕಾಂಗ್ರೆಸಿಗೆ ಓಟುಕೊಡುವ ನಿರ್ಣಯಕ್ಕೆ ಬಂದಿರೆಂದು ಕೇಳಿದೆ. ನನ್ನ ಆಪ್ತ ಮಿತ್ರರಾದುದರಿಂದ ಮುಚ್ಚುಮರೆ ಇಲ್ಲದೆ ಒಳಗುಟ್ಟನ್ನು ನುಡಿದೇಬಿಟ್ಟರು. ಕಮ್ಯೂನಿಸ್ಟ ಪಕ್ಷ ಇನ್ನು ಶೈಶವಾವಸ್ಥೆಯಲ್ಲಿರುವದರಿಂದ ಅದಕ್ಕೆ ಓಟು ಕೊಟ್ಟು ಪ್ರಯೋಜನವಿಲ್ಲವಂತೆ. ಪ್ರತ್ಯೇಕ ಪಕ್ಷವು ಸರ್ವೋದಯ ಆಡಳಿತೆಯಲ್ಲಿ ನಂಬಿಕೆಯಿರುವದರಿಂದ ಅದಕ್ಕೆ ಮತ ಕೊಟ್ಟರೆ ತನ್ನ ಮುಖ್ಯ ಉತ್ಪತ್ತಿಯಾದ ಸೇಂದಿಗೆ ಧಕ್ಕೆ ಬಂದೀತೆಂದು ಅವರ ಭಯ. ಹಾಗಾದರೆ ಕಾಂಗ್ರೆಸಿನ ತತ್ವವೇ ಪಾನನಿರೋಧವಲ್ಲವೇ ಎಂದು ಕೇಳಿದೆನು. 'ಅದು ಬರೇ ತತ್ವದಲ್ಲಿ; ಕಾರ್ಯರೂಪಕ್ಕೆ ತರುವದಿಲ್ಲವೆಂಬ ದೃಢನಂಬಿಕೆ ಇದೆ' ಎಂದು ಧೈರ್ಯವಾಗಿ ಹೇಳಿಬಿಟ್ಟರು. ನಮ್ಮ ಕಾಂಗ್ರೆಸ್ ಸರಕಾರವು ತತ್ವಕ್ಕೆ ಸರಿಯಾಗಿ ನಡೆದರೆ ಅವರು ಕೊಂಚ ದಿವಸಗಳಲ್ಲಿಯೇ ನಿರಾಶನಾಗುವದನ್ನು ಕಾಣಬಹುದು. ಎಲ್ಲದಕ್ಕಿಂತಲೂ ಮುಖ್ಯವಾದದು ಅವರು ತನ್ನ ಮತಾಧಿಕಾರವನ್ನಳೆದ ಅಳತೆಗೋಲು.

* * *

'ಪೊನ್ನಂಪೇಟೆನಾಡು ಕಾಂಗ್ರೆಸಿನ ಬೀಡು' ಎಂಬು ಹೇಳಿದರು ನನ್ನ ಸಹಪಾಠಿಯೊಬ್ಬರು. ನಾನೂ ಆ ನಾಡಿನವನಾದುದರಿಂದ ಸರಿಯೆಂದು ಸೈಗುಟ್ಟಿದೆ. ಸಾಧಾರಣ ಇಪ್ಪತ್ತು ಮನೆಗಳಿರುವ ಚಿಕ್ಕ ಗ್ರಾಮ ನಮ್ಮದು. ಬೈನೆ ಮರಗಳಲ್ಲಿ ಕಪ್ಪು ಮಡಿಕೆಗಳೂ, ತಲೆಯಲ್ಲಿ ಬಿಳಿಟೋಪಿಗಳೂ ನಿತ್ಯವಿರುತ್ತವೆ. ಒಗ್ಗಟ್ಟಿನಿಂದ ಗ್ರಾಮದವರೆಲ್ಲರೂ ಸೇರಿ ಕಾಂಗ್ರೆಸಿಗೆ ಜಯದೊರಕಿಸಿದರು. ಮೊನ್ನೆ ಮಾನ್ಯ ಮಂತ್ರಿಗಳ ಪ್ರಥಮ ಭೇಟಿ ನಮ್ಮ ಗ್ರಾಮಕ್ಕಾಯಿತು. ಎಲ್ಲರೂ ಸೇರಿ ಊರಿಗೆ ಬೇಕಾದ ನಾಲ್ಕೈದು ಸಲಕರಣೆಗಳನ್ನು ಕೇಳಿಕೊಂಡರು. ಒಂದನ್ನುಳಿದು ಉಳಿದ ಸವಲತ್ತುಗಳನ್ನೊದಗಿಸಿಕೊಡುವದಾಗಿ ಮಂತ್ರಿಗಳು ಉದಾರಭಾವದಿಂದ ಭರವಸೆಕೊಟ್ಟರು. ಒಂದು ವಿಚಾರ ಮಾತ್ರ ತನಗೆ ಸಂಬಂಧವಿಲ್ಲದ ಕಾರಣ ಅದರ ಜವಾಬ್ದಾರಿಯನ್ನು ಹೊರಲು ಸಿದ್ಧರಿಲ್ಲವೆಂದು ನಿಜಸ್ಥಿತಿಯನ್ನು ಹೇಳಿದರು. ಸುಳ್ಳು ಭರವಸೆಕೊಟ್ಟು ಮೋಸಪಡಿಸುವ ಇಚ್ಛೆ ಅವರಿಗಿರಲಿಲ್ಲ. ಅನೇಕರು ಅದನ್ನು ಮೆಚ್ಚಿದರು. ಆದರೆ 'ಪೊನ್ನಂಪೇಟೆ ನಾಡು ಕಾಂಗ್ರೆಸಿನ ಬೀಡು' ಎಂದ ಮಿತ್ರರ ಮುಖ ಕಪ್ಪಾಗಿತ್ತು. ಕಾರಣ ಕೇಳಿದೆ. 'ಓಟು ಸಿಕ್ಕಿದ ಮೇಲೆ ಹೀಗೆಯೇ' ಎಂದರು. ಹರನಿಂದ ಮೆಚ್ಚಿಸಲಾಗದ ಈ ನರನನ್ನು ವರ ಮಂತ್ರಿಗಳಿಂದ ಮೆಚ್ಚಿಸಲು ಸಾಧ್ಯವೇ?

*

ಕೊಡಗು

೯-೫-೧೯೫೨ನೇ ಶುಕ್ರವಾರ

ಲೋವರ್ ಸೆಕೆಂಡರಿ ಫಲಿತಾಂಶ.

ಕೊಡಗಿನಲ್ಲಿ ವಿದ್ಯಾಭ್ಯಾಸ ಮುಂದರಿಯುತ್ತಿದೆಯೆನ್ನಬಹುದು ದಿನೇ ದಿನೇ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ ಅದಕ್ಕನುಗುಣವಾಗಿ ಶಾಲೆಗಳ ಸಂಖ್ಯೆಯೂ ಹೆಚ್ಚುತ್ತಿದೆ ಕೊಡಗಿಗೆ ಒಂದು ಕಾಲೇಜಾಯಿತು ಹಿಂದೆ ಇದ್ದ ಕೇವಲ ಮೂರು ಹೈಸ್ಕೂಲುಗಳ ಬದಲು ಇಂದು ಎಂಟು ಹೈಸ್ಕೂಲುಗಳಾದವು ಒಂದೆರಡು ಈಗ ಆಗುತ್ತಿವೆ ಇದಕೆ ಅನುಸಾರವಾಗಿ ಹತ್ತು ಹನ್ನೆರಡಿದ್ದ ಹೈಯರ್ ಎಲಿಮೆಂಟರಿ ಶಾಲೆಗಳ ಸಂಖ್ಯೆಯು ಪೂರ್ವ ಶತಾರಕ್ಕೆ ಏರಿದೆ ಕೊಡಗಿನ ಜನರು ವಿದ್ಯೆಯ ಮಟ್ಟಿಗೆ ಹೆಚ್ಚಿನ ಆಸಕ್ತಿಯನ್ನು ತೋರುತ್ತಿರುವರೆಂಬುದರಲ್ಲಿ ಸಂಶಯವಿಲ್ಲ. ಮಕ್ಕಳ ವಿದ್ಯೆಗಾಗಿ ಸಾಲ ಮಾಡಿಯೂ, ಆಸ್ತಿ ಮಾರಿಯೂ ಅವರು ಹಿಂಜರಿಯರು ಅವರ ಈ ಉತ್ಸಾಹದ ಕಾರಣವಾಗಿಯೇ ಪ್ರಾಥಮಿಕ ಶಾಲೆಗಳು, ಲೋವರ್ ಸೆಕೆಂಡರಿ ಶಾಲೆಗಳಾಗಿಯೂ, ಲೋವರ್ ಸೆಕೆಂಡರಿ ಶಾಲೆಗಳು ಹೈಸ್ಕೂಲುಗಳಾಗಿಯೂ ಮಾರ್ಪಡುತ್ತಿವೆ ಇದು ಶುಭಚಿಹ್ನೆ ಎನ್ನಲು ಅಡ್ಡಿ ಇಲ್ಲ

ಆದರೆ ಶಾಲೆಗಳ ಸಂಖ್ಯೆ, ಮತ್ತು ಶಾಲಾ ಕಟ್ಟಡಗಳು ಹೆಚ್ಚಾಗುತ್ತಾ ಹೋಗುತ್ತಿರುವಂತೆ ಶಾಲೆಯಲ್ಲಿ ಕಲಿಸುವ ದಕ್ಷತೆ ಏರುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ ಶಾಲಾ ಪರೀಕ್ಷಾ ಫಲಿತಾಂಶಗಳು ಜನತೆಯ ಹುರುಪಿಗೆ ಸರಿಯಾಗಿ ಪ್ರೋತ್ಸಾಹಕವಾಗಿಲ್ಲ ಕಳೆದ ಲೋವರ ಸೆಕೆಂಡರಿ ಪರೀಕ್ಷೆಗೆ ಕೊಡಗಿನಲ್ಲಿ ಕೂತ ೧೬೨೨ ವಿದ್ಯಾರ್ಥಿಗಳಲ್ಲಿ ೬೬೧ ಜನರು ಮಾತ್ರ ತೇರ್ಗಡೆಯಾಗಿರುವರು ಅಂದರೆ ನೂರಕ್ಕೆ ಕೇವಲ ೪೪ ತೇರ್ಗಡೆಯಾದಂತಾಯಿತು ಯಾವಾವ ಶಾಲೆಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಪಾಸಾಗಿರುವರೆಂಬುದರ ಪಟ್ಟಿಯನ್ನು ಬೇರೆಡೆ ಕೊಡಲಾಗಿದೆ ಇಪ್ಪತ್ತು ಮೂವತ್ತು ವಿದ್ಯಾರ್ಥಿಗಳು ಪರೀಕ್ಷೆಗೆ ಕೂತು ಎರಡು ಮೂರು ಮಾತ್ರ ತೇರ್ಗಡೆಯಾದ ಶಾಲೆಗಳೂ ಇವೆಯೆಂದರೆ ವಿಷಾದಪಡಬೇಕಾಗಿದೆ ಒಂದು ವರ್ಷವಿಡೀ ಶಾಲೆಯಲ್ಲಿ ಸಮಯ ಕಳೆದು, ಹಣ ಖರ್ಚುಮಾಡಿ ನೂರಕ್ಕೆ ೪೪ ಜನರು ಮಾತ್ರ ತೇರ್ಗಡೆಯಾಗುವುದು ಎಂದೂ ತೃಪ್ತಿಕರವಲ್ಲ ಈ ಫಲಿತಾಂಶವು ಅಧ್ಯಾಪಕರ ಕರ್ತವ್ಯದಕ್ಷತೆಗೆ ಕಳಂಕಪ್ರಾಯವಾಗಿದೆ

ಇದಕ್ಕೆ ಕಾರಣವೇನೆಂದು ಕೆಲವು ಅಧ್ಯಾಪಕರಲ್ಲಿ ವಿಚಾರಿಸಿದಾಗ ಜಿಲ್ಲಾ ಬೋರ್ಡು ಅಧ್ಯಾಪಕರಲ್ಲಿರುವ ಅತೃಪ್ತಿಯೂ ಒಂದು ಕಾರಣವಾಗಿರಬಹುದೆಂದು ಹೇಳಿದ್ದಿದೆ ಅದರಲ್ಲಿ ಸ್ವಲ್ಪ ಸತ್ಯಾಂಶವಿರಬಹುದು ಆದರೂ ಅಧ್ಯಾಪಕರು ನಾಳೆಯ ನಾಗರಿಕರ ಬಗ್ಗೆ ತಮಗಿರುವ ಮಹಾಜವಾಬ್ದಾರಿಯನ್ನು ಮರೆಯಬಾರದು ತಮಗೆ ವೇತನದಲ್ಲಾಗುತ್ತಿರುವ ಅನ್ಯಾಯಕ್ಕಾಗಿ ದೇಶದ ಮೇಲೆ ಸೇಡುತೀರಿಸಬಾರದು ಅಧಿಕಾರಿಗಳೂ ಕೂಡ ಈ ವಿಚಾರದಲ್ಲಿ ಎಚ್ಚರ ವಹಿಸಿ ಅಧ್ಯಾಪಕರ ನೆರವಿಗೆ ಬರಬೇಕು ಮನಸ್ಸಿನಲ್ಲಿ ತೃಪ್ತಿ ಇರುವವನೇ ಮನಮುಟ್ಟಿ ಕೆಲಸ ಮಾಡುವನಲ್ಲದೆ ಅತೃಪ್ತಿಯಿಂದಿರುವವನಲ್ಲವೆಂಬುದನ್ನು ಸರಕಾರವು ತಿಳಿಯಬೇಕು

ವರ್ತಮಾನ.

ವೀರಾಜಪೇಟೆಯಲ್ಲಿ ವ್ಯಾಪಾರ ಮಾಡುತಿದ್ದ ಶ್ರೀ ಚಾರಿಮಂಡ ಟಿ ಮುದ್ದಪ್ಪನವರು ಚೆಂಬೆಬೆಳ್ಳೂರು ಗ್ರಾಮದ ತಮ್ಮ ಮನೆ ಬಳಿ ತಾ ೩ರಲ್ಲಿ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವರೆಂದು ತಿಳಿಯಬರುತ್ತದೆ

ಆ ಕಮಿಷನರಾದ ಶ್ರೀ ಐ ಸಿ ಸುಬ್ಬಯ್ಯನವರು ದೆಲ್ಲಿಯಲ್ಲಿ ನಡೆಯಲಿರುವ ಕಮ್ಯೂನಿಟಿ ಡೆವಲಪ್ ಮೆಂಟ್ ಪ್ರಾಜೆಕ್ಟ ಸಮ್ಮೇಳನಕ್ಕಾಗಿ ತಾರೀಕು ೫ರಲ್ಲಿ ಹೋಗಿರುವರು

ಮೇ ತಾ ೧೩ರಲ್ಲಿ ಡಲ್ಲಿಯಲ್ಲಿ ಕೇಂದ್ರ ಜನತಾಸಭೆಯ ಕಾರ್ಯಕಲಾಪಗಳ ಪ್ರಾರಂಭವಾಗುವುದರಿಂದ ಕೊಡಗಿನ ಪ್ರತಿನಿಧಿ ಶ್ರೀ ನಿಡ್ಡೆಮಲೆ ಸೋಮಣ್ಣನವರು ತಾ ೬ರಲ್ಲಿ ಡೆಲ್ಲಿಗೆ ಹೋಗಿರುವರು.

ಒಕ್ಕೂಟದ ಅಧ್ಯಕ್ಷರನ್ನು ಆರಿಸುವ ಸಲುವಾಗಿ ಕೊಡಗಿನ ಶಾಸನ ಸಭಾಸದರ ಮತದಾನವು ತಾ ೨ರಲ್ಲಿ ಕೌನ್ಸಿಲು ಹಾಲ್‌ನಲ್ಲಿ ನಡೆಯಿತು ಶ್ರೀ ಅಪ್ಪಾರಂಡ ತಿಮ್ಮಯ್ಯ ಮತ್ತು ಹರಿಜನ ಚೆನ್ನಯ್ಯ ಇವರಿಬ್ಬರಲ್ಲದೆ ಉಳಿದ ೨೨ ಜನರು ಮತದಾನ ಮಾಡಿದರು ಎಲ್ಲರೂ ರಾಜೇಂದ್ರ ಪ್ರಸಾದರಿಗೆ ಓಟು ಕೊಟ್ಟರು ರಾಜೇಂದ್ರ ಪ್ರಸಾದರು ಬಹುಮತದಿಂದ ಆರಿಸಲ್ಪಟ್ಟಿರುವರು

ಸಸ್ಪೆಂಡ್ ಆಗಿರುವ ಅಮ್ಮತ್ತಿಯ ಪಾರುಪತ್ತೆಗಾರರಾದ ಶ್ರೀ ಭೀಮರಾಯರ ಬದಲು ಶ್ರೀ ಪೈಕೆರ ಈರಪ್ಪನವರನ್ನೂ ಪೈಕೆರ ಈರಪ್ಪನವರ ಬದಲು ಶ್ರೀಮಂಗಲಕ್ಕೆ ಪಾರುಪತ್ತೆಗಾರರಾಗಿ ಶ್ರೀ ಮಾದೆಯಂಡ ಮಾದಪ್ಪನವರನ್ನೂ ನೇಮಿಸಲಾಗಿದೆ

ನಿವೃತ್ತರಾಗಲಿರುವ ಶ್ರೀ ಪಟ್ಟದ ಬುತ್ತಪ್ಪನವರ ಬದಲು ಮಡಿಕೇರಿಗೆ ಹೆಡ್ಮಾಷ್ಟರಾಗಿ ಶ್ರೀ ಕಂಬಿರಂಡ ಮುತ್ತಣ್ಣನವರನ್ನೂ, ಸೋಮವಾರಪೇಟೆಗೆ ಶ್ರೀ ಬಿ ವಿ ಟಿ ರಾಯರನ್ನೂ, ವೀರಾಜಪೇಟೆಗೆ ಶ್ರೀ ಪಟ್ಟಮಾಡ ಪೂವಯ್ಯನವರನ್ನೂ, ಪೊನ್ನಂಪೇಟೆಗೆ ಶ್ರೀ ಮಾಚಿಮಾಡ ಚಂಗಪ್ಪನವರನ್ನೂ ವರ್ಗಾಯಿಸಲಾಗಿದೆ ನಾಪೋಕ್ಲಿಗೆ ಹೆಡ್ ಮಾಸ್ಟರಾಗಿ ಶ್ರೀ ಪಾರ್ವಂಗಡ ದೇವಯ್ಯನವರನ್ನು ನೇಮಿಸಲಾಗಿದೆ.

ಅಖಿಲ ಭಾರತ ಕ್ಷಯರೋಗ ನಿವಾರಣಾ ಸಂಘದ ಕಾರ್ಯದರ್ಶಿಯವರಾಗಿರುವ ಶ್ರೀ ಬೊಳ್ಳಕರಂಡ ಕಾರ್ಯಪ್ಪನವರಿಗೆ ಜಗತ್ತಿನ ಆರೋಗ್ಯ ಸಂಸ್ಥೆಯ ಫೆಲೋಶಿಪ್ ದೊರೆತು ಅವರು ಈ ತಾ ೧೫ರಿಂದ ಇಂಗ್ಲೆಂಡ್, ನಾರ್ವೆ, ಸ್ವೀಡನ್, ಡೆನ್ಮಾರ್ಕ, ಸಂಯುಕ್ತ ಅಮೇರಿಕಾ, ಕೆನಡಾ, ದಕ್ಷಿಣ ಅಮೇರಿಕಾ ಮೊದಲಾದ ದೇಶಗಳನ್ನು ಸುತ್ತಿ, ಜಿನೆವಾ, ರೋಮ, ಪ್ಯಾರಿಸ್ ಮಾರ್ಗವಾಗಿ ಹಿಂದೂದೇಶಕ್ಕೆ ಅಕ್ಟೋಬರ್ ತಿಂಗಳಲ್ಲಿ ವಾಪಾಸು ಬರುವರು

ಪ್ರತ್ಯೇಕವಾದಿ ಪಕ್ಷ ಮತ್ತು ಕಾಂಗ್ರೆಸ್.

ಕೊಡಗಿನ ಪ್ರತ್ಯೇಕ ಪಕ್ಷದ ಶಾಸನ ಸಭಾ ಸದಸ್ಯರು ತಾವು ಕಾಂಗ್ರೆಸ್ಸಿಗೆ ಸೇರುವ ಇಚ್ಛೆಯನ್ನು ಪ್ರಕಟಿಸಿ ಕಾಂಗ್ರೆಸ್ ಅಧ್ಯಕ್ಷ ಪಂಡಿತ ಜವಾಹರರಿಗೂ, ಸ್ಥಳೀಯ ಶಾಸನ ಸಭೆಯ ಮುಂದಾಳು ಶ್ರೀ ಸಿ ಎಂ. ಪೂಣಚ್ಚನವರಿಗೂ ಪತ್ರ ಬರೆದಿದ್ದರಷ್ಟೆ ಈ ಪತ್ರಕ್ಕೆ ಉತ್ತರವಾಗಿ ಕಾಂಗ್ರೆಸ್ ಪ್ರೆಸಿಡೆಂಟರು ಕೊಡಗಿನ ಜಿಲ್ಲಾ ಕಾಂಗ್ರೆಸಿನವರಿಗೆ ಒಂದು ಪತ್ರ ಬರೆದು ಪ್ರತ್ಯೇಕ ಪಕ್ಷವು ಮಂತ್ರಿ ಮಂಡಲದೊಡನೆ ಸಹಕರಿಸುವ ಬಗೆ ಸ್ವಾಗತ ವ್ಯಕ್ತಪಡಿಸಬೇಕೆಂದೂ ಅವರನ್ನು ಕಾಂಗ್ರೆಸ್ಸಿಗೆ ಪುನ ತೆಗೆದುಕೊಳ್ಳುವ ಬಗ್ಗೆ ಕೇಂದ್ರ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ತಕ್ಕ ವಿವೇಚನೆಯಿಂದ ನಿರ್ಣಯಿಸುವದೆಂದೂ ಸೂಚಿಸಿರುವರು

ಈ ವಿಚಾರ ವಿಮರ್ಶಿಸಲು ತಾ ೨ರಲ್ಲಿ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಮತ್ತು ಶಾಸನ ಸಭಾ ಕಾಂಗ್ರೆಸ್ ಸದಸ್ಯರ ಮೀಟಿಂಗು ಮಡಿಕೇರಿಯಲ್ಲಿ ನಡೆಯಿತು ಮಂತ್ರಿಮಂಡಳಕ್ಕೆ ಸಹಕಾರ ನೀಡುವ ವಿಚಾರವಲ್ಲಿ ಸ್ವಾಗತವೀಯುವ ನಿರ್ಣಯವಾಯಿತು ಕಾಂಗ್ರೆಸ್ಸಿಗೆ ಪ್ರತ್ಯೇಕವಾದಿಗಳನ್ನು ಸೇರಿಕೊಳ್ಳುವ ವಿಚಾರದಲ್ಲಿ ಚರ್ಚೆ ನಡೆದು ಅವರನ್ನು ಸೇರಿಸಿಕೊಳ್ಳಬಾರದೆಂದು ಅನೇಕರು ವಿರೋಧಿಸಿದರೆಂದೂ, ಪ್ರತ್ಯೇಕ ಪಕ್ಷದವರನ್ನು ಸೇರಿಸಿಕೊಳ್ಳಕೂಡದೆಂದು ಹಲವು ಸಾರ್ವಜನಿಕರು ತನಗೆ ಬರೆದಿರುವವಾಗಿ ಶಾಸನ ಸಭಾ ಕಾಂಗ್ರೆಸ್ ಪಕ್ಷದ ಮುಂದಾಳು ಶ್ರೀ ಸಿ ಎಂ ಪೂಣಚ್ಚನವರು ಹೇಳಿದರೆಂದೂ ಪ್ರಕಟವಾಗಿದೆ

ನೋಟೀಸು.

ನನ್ನ ಪೌತಿ ಅಣ್ಣ ರಾಮಯ್ಯನವರ ವಿಧವೆ ಸಾವಿತ್ರಮ್ಮನವರು, ಕಂಗಾಲ ಮತ್ತು ದೇವಣಗೇರಿಯಲ್ಲಿರುವ ಸ ನಂ 317/2 ರ 6 57 ಏಕರು ಭೂಮಿ, 319 ರ 318 2ರ 14 47 ಏಕರು ಬಾಣೆ, ಈ ಸ್ಥಿರ ಆಸ್ತಿಗಳನ್ನು ನನಗೆ ನೋಟೀಸ್ ಮಾಡುವ ಉದ್ದಿಶ್ಯ ವಿಕ್ರಯಿಸುವ ಇರಾದೆಯಲ್ಲಿರುವರಾಗಿ ತಿಳಿದು ಬಂದಿದೆ

ಸದ್ರಿ ಆಸ್ತಿಗಳು ಪಿತ್ರಾರ್ಜಿತದ ಆಸ್ತಿಗಳನ್ನು ವಿಕ್ರಯಿಸಿ ಪಡೆದ ಆಸ್ತಿಗಳು ಸದ್ರಿ ಸಾವಿತ್ರಮ್ಮನವರಿಗೆ ವಿಕ್ರಯಿಸುವಯಾ ಪರಭಾರೆ ಮಾಡುವ ಹಕ್ಕು ಮತ್ತು ಅವಶ್ಯ ಏನೊಂದೂ ಇರುವುದಿಲ್ಲ ಆದ್ದರಿಂದ ಸದ್ರಿ ಆಸ್ತಿಗಳನ್ನು ಯಾರೂ ಪಡಕೊಳ್ಳಕೂಡದಾಗಿ ಈ ಮೂಲಕ ಆತಂಕಿಸಲ್ಪಟ್ಟಿದೆ ಕ್ರಯಕ್ಕೆ ಪಡೆದವರಿಗೆ ಏನೊಂದು ಹಕ್ಕು ಸದ್ರಿ ಆಸ್ತಿಯಲ್ಲಿ ಸಿಕ್ಕಲಾರದು ಎಂಬ ಸಂಗ್ತಿ ಸಹ ತಿಳಿಸಿದೆ

ತಿರ್ಮೆಕಾಡು ನಾರಣಯ್ಯ,
ಜೋಸಾನ ಹಳ್ಳಿ,
ಆಲೂರು ತಾಲ್ಲೋಕು ಹಾಸನ ಜಿಲ್ಲೆ.
ತಾ 8-5-1952.

ಮಾರಾಟಕ್ಕಿದೆ.

ಮಡಿಕೇರಿ ಪೆನ್ಷನ ಲೈನಿನಲ್ಲಿರುವ ಬ್ಲಾಕ್ ನಂ 11 ಮನೆ ನಂ 13, 14ರ ಎರಡು ಹಂಚಿನ ಮನೆಗಳು ಮಾರಾಟಕ್ಕಿವೆ ಎರಡು ಮನೆಗಳಲ್ಲೂ ಆರಾರು ಕೋಣೆಗಳಿವೆ. ಒಟ್ಟಾರೆ 13 ಸೆಂಟ್ ಜಾಗವಿದೆ ಗಾಡಿ ರಸ್ತೆ ಪಕ್ಕದಲ್ಲಿದೆ ಈಗ ರೂ 35/- ಬಾಡಿಗೆ ಸಿಕ್ಕುತ್ತಿದೆ. ಕೊಂಡುಕೊಳ್ಳಲು ಇಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಎ ಕೆ ಬೆಳ್ಯಪ್ಪ,
ಜನರಲ್ ಮರ್ಚೆಂಟ್,
ಫ್ರೇಜರ್‌ಪೇಟೆ.

4-2

Wanted

wanted two graduates (1) Science (2) His & Geog. from 1st June 52 to work as teachers who can take up Science Maths Social studies & Kannada in the High School Hathur. Appointment temporary up to 15th April 53 Preference will be given to Trained Teachers and sportsmen Candidates must be prepared to give bonds in case of their continuing in the profession Scale of pay Rs. 60/- plus 50 - D A Special scale for Trained candidates

Apply to PRESIDENT
Hathur High School Samithi
Hathur Coorg.

Chief Veterinary Office,
Coorg, Mercara the
4th May 52

Notice.

Sealed tenders are invited for the supply of cattle feed such as Groundnut cake, Horsegram (crushed), Cotton seeds, Bengal gram husk Oats, Wheatbran, etc for the use of the Demonstration Dairy Farm, Mercara and Dry Stock Farm Koodige & Hudugur. The last date for the receipt of tenders is 26 5 52. For further particulars apply to Chief Veterinary Officer, Coorg Mercara.

A M MUTHAPPA.
Chief Veterinary Officer.

ಓದುಗರ ಓಲೆಗಳು

ಮಿಥ್ಯ ಆರೋಪ.

ತಾ ೨೩-೪-೫೩ನೇ 'ಜನ್ಮಭೂಮಿ' ಪತ್ರಿಕೆಯಲ್ಲಿ ಪ್ರಕಟಿಸಿದ ಒಂದು ವಾರ್ತೆಯನ್ನು ಓದಲಾಯಿತು. ಅವರ ಬರವಣಿಗೆಯನ್ನು ನೋಡಿ ಅವರು ಜರ್ಮನಿ ನಾಜಿ ಸರಕಾರದ ಪ್ರಚಾರ ಮಂತ್ರಿಯಾಗಿದ್ದ ಡಾ. ಗಾಬೆಲ್ಸರನ್ನು ಅನುಕರಣದಲ್ಲಿ ಮೀರಿಸುವಂತೆ ತೋರುತ್ತಿದೆ. ಉದಾಹರಣೆಗಾಗಿ ಅವರು ವಾರ್ತೆಯಲ್ಲಿ ಮೂರ್ನಾಡಿನಲ್ಲಿ ಚುನಾವಣೆ ಸಮಯದಲ್ಲಿ ಪ್ರಚಾರಕ್ಕಾಗಿ ಅಂಟಿಸಿದ ನೆಹರೂರವರ ಪಟವೊಂದನ್ನು ಶ್ರೀ ಪಿ. ಐ. ಬೆಳ್ಯಪ್ಪನವರ ಕಣ್ಣ ಮುಂದೆ ಹರಿದು ಕಾಲಿನಿಂದ ತುಳಿಯಲಾಯಿತೆಂದು ಬರೆದಿದ್ದರು. ಇದು ನಿಜವೆ? ಇಂತಹ ಕೃತ್ಯವನ್ನು ತಾವೇ ಮಾಡಿ ಗಾಬೆಲ್ಸರು ಕಳೆದ ಮಹಾಯುದ್ಧದ ಸಮಯದಲ್ಲಿ ಪ್ರಚಾರ ಕೆಲಸವನ್ನು ನಡೆಸುತ್ತಿದ್ದಂತೆ ಈಗ ಒಂದು ಪಾರ್ಟಿಯ ಮೇಲೆ ಜನತೆಯನ್ನು ಹುರಿದುಂಬಿಸಲು ಇಂಥಾ ಅಪಪ್ರಚಾರ ನಡೆಸುತ್ತಿದ್ದರೆಂದು ನಾವು ಭಾವಿಸಬೇಕಾಗಿದೆ.

ಶ್ರೀ ಪಿ. ಐ. ಬೆಳ್ಯಪ್ಪನವರು ಕಾಂಗ್ರೆಸ್ ತತ್ವಕ್ಕೆ ವಿರೋಧ ಮತಪ್ರಚಾರದಿಂದಾಗಿ ... ಬಿಟ್ಟಿದ್ದರೆ ಇನ್ನೊಬ್ಬರನ್ನು ಟೀಕಿಸುವುದಕ್ಕೆ ಮೊದಲು ತಾವೇ ತಪ್ಪನ್ನು ತಿದ್ದಿಕೊಳ್ಳಬೇಕು. ಹಾಗಾಗಿದ್ದರೆ, ಚುನಾವಣೆಗೆ ೯ ತಿಂಗಳ ಹಿಂದೆ ಎಂದರೆ ಅಖಿಲ ಭಾರತ ಕಾಂಗ್ರೆಸ್ಸಿನ ಸಮಿತಿಯಲ್ಲಿ ಸ್ವಲ್ಪ ಅಭಿಪ್ರಾಯ ವ್ಯತ್ಯಾಸವುಂಟಾಗಿ ಕಾಂಗ್ರೆಸ್ ಪಾರ್ಟಿ ಹಿಂದುಸ್ತಾನದಲ್ಲಿ ಬಹುಮತದಿಂದ ಜಯವನ್ನು ಗಳಿಸಲಾರದೆಂಬ ಭಾವನೆ ಉಂಟಾದೊಡನೆ ಅವರ ಕಡೆಯ ಮುಂದಾಳುಗಳೊಬ್ಬರು ಮೂರ್ನಾಡಿನ ಕ್ಲಬ್ಬಿನಲ್ಲಿ ಕಾಂಗ್ರೆಸ್ ಪಾರ್ಟಿ ಮತ್ತು ಸರಕಾರವನ್ನು ನಿಂದಿಸಿ, ಕಮ್ಯೂನಿಸ್ಟ್ ಪಾರ್ಟಿಯನ್ನು ಹೊಗಳಿ, ಖಾದಿ ಬಿಟ್ಟು ಧರಿಸುವುದನ್ನು ಧಿಕ್ಕರಿಸಲಿಲ್ಲವೇ? ಆ ಮೇಲೆ ಅದೇ ವ್ಯಕ್ತಿಯು ನೆಹರೂರವರು ಕಾಂಗ್ರೆಸ್ ಅಧ್ಯಕ್ಷರಾದೊಡನೆ ಮತ್ತೂ ಕಾಂಗ್ರೆಸ್ ಪಕ್ಷವು ಖಚಿತವಾಗಿ ಚುನಾವಣೆಯಲ್ಲಿ ಹಿಂದೂಸ್ಥಾನದಲ್ಲಿ ಜಯವನ್ನು ಗಳಿಸಬಲ್ಲದೆಂದು ತಿಳಿದೊಡನೆ ಮೊದಲಿನ ಮಾತನ್ನು ಮರೆತು, ಕಾಂಗ್ರೆಸ್ಸಿನ ಟಿಕೇಟಿನಲ್ಲೇ ಸ್ಪರ್ಧೆಗೆ ಎಸೆಂಬ್ಲಿಗೆ ನಿಂತ ಸಂಗತಿಯನ್ನು ಮರೆತಿರುವರೇ? ನೆಹರೂರವರ ಹಿಂಬಾಲಕರಾಗಿರುವ ತಪ್ಪುಗಳು ನೆಹರೂರವರ ಜಾತಿರಹಿತ, ಕೋಮುವಾರು ರಹಿತ ಸಂಘ ಮತ್ತು ಸರಕಾರವನ್ನು ಕಾಂಗ್ರೆಸ್ ಸ್ಥಾಪಿಸಬೇಕೆಂದು ಸಾರುತ್ತಿರುವಲ್ಲಿ ಕೋಮುವಾರು ಭಾವನೆಯನ್ನು ಅಪ್ಪಿ ಹಿಡಿದಿಲ್ಲವೆ? ಪರಿಸ್ಥಿತಿ ಈ ರೀತಿಯಲ್ಲಿರಲು ಅಧಿಕಾರದಲ್ಲಿರುವ ಪಕ್ಷವು ಶ್ರೀ ಪಿ. ಐ. ಬೆಳ್ಯಪ್ಪನವರನ್ನು ಹಿಂಬಾಲಿಸಿದ ಮಾತ್ರದಿಂದ ಕೊಡಗಿನ ಜನತೆಗೆ ಸುಖ ದೊರೆಯಲಾರದು. ಅದರ ಬದಲು ಅಧಿಕಾರದಲ್ಲಿರುವ ಪಕ್ಷವು ಯಾವ ಪಕ್ಷಕ್ಕಾಗಲಿ, ವ್ಯಕ್ತಿಗಾಗಲಿ ಭೇದವನ್ನು ಬಯಸದೆ ಕೋಮುವಾರು ಭಾವನೆಯ ಪಿಶಾಚಿಯನ್ನು ಅಟ್ಟುವಂತೆ ಅವಶ್ಯವಾಗಿ ಪರಿಶೀಲಿಸಿದರೆ ಕೊಡಗಿನ ಜನತೆಗೆ ಸುಖವುಂಟಾಗಬಹುದು.

ಮೂರ್ನಾಡಿನವ.

ಜೈಲಿಗೆ ಹೋದವರಿಗೆ ಭೂಮಿ.

ಕಳೆದ ಕಾಂಗ್ರೆಸ್ ಚಳವಳದ ಕಾಲಕ್ಕೆ ಜೈಲಿಗೆ ಹೋದ ರಾಜಕೀಯ ಕೆಲಸಗಾರರಿಗೆ ಭೂಮಿಯನ್ನು ಕೊಡುವ ಪದ್ಧತಿಯು ಮದ್ರಾಸಿನಲ್ಲಿ ಜಾರಿಗೆ ಬಂದು ಅನೇಕರಿಗೆ ತಲಾ ಹತ್ತು ಎಕರೆಗಳಂತೆ ಭೂಮಿ ಕೊಡಲ್ಪಟ್ಟಿದೆ. ಆದರೆ ಇತ್ತೀಚೆಗೆ ಈ ಪದ್ಧತಿಯನ್ನು ನಿಲ್ಲಿಸಿರುವದಲ್ಲದೆ ಭೂಮಿಯನ್ನು ಪಡೆದ ಭೂಮಾಲೀಕರು ಅದನ್ನು ಬಿಟ್ಟುಕೊಡಬೇಕೆಂದು ಕೇಳಲಾಗುತ್ತಿದೆ. ಪರಿಸ್ಥಿತಿ ಹೀಗಿರುವಾಗ ಕೊಡಗಿನಲ್ಲಿ ರಾಜಕೀಯ ಸಂತ್ರಸ್ತರಿಗೆ ಭೂಮಿಯನ್ನು ಕೊಡುವ ವಿಚಾರದ ಮಾತು ಮಾಡಿದೆಂಬ ವರ್ತಮಾನವನ್ನು ಕೆಲವು ದಿನಗಳ ಹಿಂದೆ ಪತ್ರಿಕೆಯಲ್ಲಿ ಓದಿ ನನಗೆ ಆಶ್ಚರ್ಯವಾಯಿತು. ಯುದ್ಧದಲ್ಲಿ ಬ್ರಿಟಿಷ್ ಸರಕಾರಕ್ಕೆ ಸಹಾಯ ಮಾಡಿದ ಯೋಧರಿಗೆ ಭೂಮಿ ಕೊಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಆ ರೀತಿ ಸೈನಿಕರಿಗೆ ಭೂಮಿ ಕೊಟ್ಟುದರ ಗುರಿಯು ಉತ್ಪಾದನೆ ... ದೇಶಕ್ಕೆ ಪ್ರಯೋಜನವಾಗಲಿಲ್ಲ. ಬದಲು ಆ ಜಾಗದಲ್ಲಿದ್ದ ಬೆಟ್ಟವನ್ನು ಕಡಿದು ... ಮರ ಮಾರಿದ್ದು ಬಿಟ್ಟರೆ ವಿನಾ ಹೆಚ್ಚಿನದೇನೂ ಆಗಲಿಲ್ಲ. ಅದೇ ರೀತಿ ರಾಜಕೀಯ ಕೈದಿಗಳಿಗೂ ಜಾಗ ಕೊಟ್ಟರೆ ಹೆಚ್ಚಿನ ಪ್ರಯೋಜನವಾಗದು. ಅದರಲ್ಲೂ ಕೊಡಗಿನಲ್ಲಿ ಸಾಧಾರಣವಾಗಿ ಎಲ್ಲರೂ ಭೂಮಾಲೀಕರೇ. ಇದರಿಂದ ಭೂಮಿ ಇರುವವರಿಗೆ ಪುನಃ ಭೂಮಿ ಕೊಡುವುದು ಹಿತವಲ್ಲ. ದೇಶದ ಸಲುವಾಗಿ ದುಡಿದ ಮಹಾಸೇವೆಗೆ ಹತ್ತು ಎಕರೆ ಭೂಮಿಯ ಬೆಲೆ ಕಟ್ಟುವುದು ಯೋಗ್ಯವಲ್ಲ. ಆದ್ದರಿಂದ ಕೊಡಗಿನಲ್ಲಿ ಈ ಭೂಮಿ ಕೊಡುವ ಪದ್ಧತಿಯನ್ನು ಜಾರಿಗೆ ತರಬಾರದೆಂದು ಸರಕಾರವನ್ನು ಕೇಳುವುದಾಗಿದೆ. ಬದಲು ಭೂಮಿ ಇಲ್ಲದ ಇತರರಿಗೆ ಭೂಮಿ ಹಂಚುವ ಕಾರ್ಯಕ್ರಮವನ್ನು ಸರಕಾರ ಕೈಗೊಳ್ಳಬೇಕಾದುದು ಕರ್ತವ್ಯವಾಗಿದೆ.

'ಜೈಲುವಾಸಿ'

ಕ್ರಾಪ್ ಕಾಂಪಿಟಿಶನ್

ಕೊಡಗಿನಲ್ಲಿ ಕ್ರಾಪ್ ಕಾಂಪಿಟಿಶನ್ ಬಹುಮಾನಗಳು ಕೊಡಲ್ಪಟ್ಟವು. ಇನ್ನು ಕೆಲವೆಡೆ ಬಹಿರಂಗವಾದ ... ಕೊಡಗಿನ ಒಬ್ಬ ವ್ಯವಸಾಯಗಾರರಾದ ಶ್ರೀ ಸಂಗಯ್ಯನವರು ಕೃಷಿ ಪಂಡಿತ ಪದವಿಯನ್ನು ಗಳಿಸಿದ್ದು ಒಂದು ಎಕರೆಯಲ್ಲಿ ೧೫,೫೦೦ ಪೌಂಡು ಗಳಷ್ಟು ... ಬೆಳೆದಿದ್ದರೆಂದು. ಕೊಡಗಿನ ಮುಖ್ಯ ಮಂತ್ರಿಗಳೇ ಕೇಳಿ ... ಕಾಂಗ್ರೆಸ್ಸಿನವರಿಂದ ಬಹುಮಾನ ಕೊಡಿಸಿದರು. ಆದರೆ ಶ್ರೀ ಸಂಗಯ್ಯನವರಿಗೆ ಈ ರೀತಿ ಬಹುಮಾನ ಕೊಟ್ಟದ್ದರಿಂದ ಅವರಿಗೆ ಪ್ರೋತ್ಸಾಹ ಕೊಟ್ಟಂತಾಯಿತೇ ವಿನಾ ಕೊಡಗಿನ ಇತರ ರೈತರಿಗೆ ಅವರ ಅನುಭವದ ಲಾಭವಾಗಲಿಲ್ಲ. ಕೆಲವು ದಿನಗಳ ಹಿಂದೆ ಇದೇ ಪತ್ರಿಕೆಯಲ್ಲಿ ವ್ಯವಸಾಯಗಾರರೊಬ್ಬರು ಸಂಗಯ್ಯನವರ ವ್ಯವಸಾಯ ಕ್ರಮ, ಅವರು ಹಾಕಿದ ಗೊಬ್ಬರ ಮುಂತಾದ ವಿವರಗಳನ್ನು ಸಾರ್ವಜನಿಕರ ಅವಗಾಹನೆಗೆ ಪ್ರಕಟಿಸಬೇಕೆಂದು ಕೇಳಿದ್ದರು. ಆದರೆ ಕೊಡಗು ವ್ಯವಸಾಯ ಇಲಾಖೆಯವರು ಕಣ್ಣು ಮುಚ್ಚಿ ಕುಳಿತಂತಿದೆ. ಸಂಗಯ್ಯನವರ ಲೆಕ್ಕದಂತೆ ನೂರು ಬಟ್ಟಿ ಭೂಮಿಗೆ ಸುಮಾರು ಮೂನ್ನೂರು ಬಟ್ಟಿ ಬತ್ತ ಆದಂತಾಗುವುದು. ಇನ್ನಾದರೂ ಇಲಾಖೆಯವರು ತಾವು ಯಾವ ರೀತಿ ಬೆಳೆಯು ಅಧಿಕ ತೆಗೆಯುವದು ಎಂಬುದನ್ನು ಸಂಗಯ್ಯನವರ ವ್ಯವಸಾಯದ ವಿವರಗಳನ್ನು ಪ್ರಕಟಿಸುವರೇ?

'ಮತ್ತೊಬ್ಬ ವ್ಯವಸಾಯಗಾರ'

ಭೂಮಿದಾನ ಚಳವಳ.

ಆಚಾರ್ಯ ವಿನೋಬಾ ಭಾವೆಯವರು ಪ್ರಾರಂಭಿಸಿದ ಭೂಮಿ ದಾನ ಚಳವಳವು ದಿನೇ ದಿನೇ ವಿಸ್ತಾರಗೊಳ್ಳುತ್ತಿದೆ. ಈಗಾಗಲೆ ಒಂದು ಲಕ್ಷ ಎಕರೆಗಳಿಗೂ ಮೀರಿ ಭೂಮಿಯು ವಿತರಣೆಯಾಗಿದೆ. ಮೊನ್ನೆಯಾಗಿ ಸೇವಾಪುರಿಯಲ್ಲಿ ನಡೆದ ಸರ್ವೋದಯ ಸಮ್ಮೇಳನದಲ್ಲಿ ಹಿಂದೂ ದೇಶದ ಪ್ರತಿ ಗ್ರಾಮಗಳಿಂದ ಐದು ಎಕರೆಯಂತೆ ಈ ಚಳವಳಕ್ಕೆ ಭೂಮಿ ಒದಗಿಸುವ ಪ್ರಯತ್ನ ಮಾಡಬೇಕೆಂದು ಠರಾವು ಪಾಸಾಗಿದೆ. ಇದನ್ನು ಸಾಧಿಸಲು ವಿವಿಧ ಭಾಗಗಳಿಗೆ ಸಮಿತಿಗಳನ್ನು ಏರ್ಪಡಿಸಲಾಗಿದೆ.

ಕೊಡಗಿನಲ್ಲಿ ದೊಡ್ಡ ಜಮ್ಮೆಗಳಿಲ್ಲದಿದ್ದರೂ ಭೂಮಿ ಇಲ್ಲದ ಬಡ ಜನರು ತುಂಬಾ ಇದ್ದಾರೆ. ಭೂದಾನ ಕೊಡಲು ಶಕ್ತಿ ಇರುವವರೂ ಇದ್ದಾರೆ. ಅನೇಕರು ತಮಗಿರುವ ಭೂಮಿಯಲ್ಲಿ ಯೋಗ್ಯ ವ್ಯವಸಾಯ ಮಾಡಲಾರದೆ ಪಾಳು ಬಿಟ್ಟಿದ್ದಾರೆ. ನೂರಾರು ಎಕರೆಗಳಷ್ಟು ತೋಟ ಬಾಣೆ ಇಟ್ಟುಕೊಂಡವರು ಹಲವರಿದ್ದಾರೆ. ಭೂಮಿ ಇಲ್ಲದವರಿಗೆ ಈ ಹೆಚ್ಚಿನ ಜಾಗವನ್ನು ದಾನ ಮಾಡಿ ದೇಶದ ಪ್ರಗತಿಯಾಗುವಂತೆಯೂ, ಇಂದಿರುವ ಅನೇಕ ಸಮಸ್ಯೆ ತೊಂದರೆಗಳು ನಿವಾರಣೆಯಾಗುವಂತೆ ಪ್ರತಿಯೊಬ್ಬರು ಬಡಜನರಿಗಾಗಿ ಎಸೋಸಿಯೇಶನ್ ಹೆಸರಿನಲ್ಲಿ ಭೂಮಿ ದಾನ ಮಾಡಬೇಕಾದುದು ಕರ್ತವ್ಯವಿದೆ. ಕೊಡಗಿನಲ್ಲಿ ಈ ಭೂದಾನ ಚಳವಳವು ಪ್ರಾರಂಭವಾಗಬೇಕು.

ಕೇಂದ್ರ ಸರಕಾರವು ಭೂದಾನ ಪದ್ಧತಿಯನ್ನು ನ್ಯಾಯಸಮ್ಮತವೆಂದು ಸಾರಿ ಬೆಂಬಲ ಕೊಟ್ಟಿದೆ. ಕೊಡಗಿನಲ್ಲಿ ಇದಕ್ಕಾಗಿ ಒಂದು ಸಮಿತಿ ಏರ್ಪಡಬೇಕು. ಕೊಡಗು ಕಾಂಗ್ರೆಸ್ ಈ ಬಗ್ಗೆ ತೊಂದರೆ ತೆಗೆದುಕೊಳ್ಳುವದೆ?

K. A. S.

ಹರದೂರು ಸೇತುವೆ.

ಹರದೂರು ಹೊಳೆಯ ಹಂಗಾಮಿ ಸೇತುವೆಯಲ್ಲಿ ತಾ ೫-೫-೫೩ರಲ್ಲಿ ಜರುಗಿದ ವಿಷಾದಘಟನೆಯು ಕೊಡಗು ಸರಕಾರದ ಮತ್ತು ಜನರ ಗಮನವನ್ನು ಇತ್ತ ಕಡೆ ಈಗಲಾದರೂ ಸೆಳೆಯತಕ್ಕದಿದೆ. ಪ್ರತಿ ವರ್ಷವೂ ಜನವರಿಯಿಂದ ಜೂನ್ ವರೆಗೆ ವಾಹನಗಳ ಮಹಿವಾಟಿಕೆ ಉಪಯೋಗವಾಗುವ ಉದ್ದೇಶದಿಂದ ೩೦೦ ರೂ. ಖರ್ಚು ಮಾಡಿ ಅನೇಕ ವರ್ಷಗಳಿಂದ ಸರಕಾರದವರು ಹಂಗಾಮಿ ಸೇತುವೆಯನ್ನು ಕಟ್ಟಿಸುತ್ತಿದ್ದಾರೆ. ಆದರೆ ಒಂದೆರಡು ಬಲವಾದ ಮಳೆ ಬಿದ್ದಕೂಡಲೆ ಈ ಸೇತುವೆಯು ವಾಹನಗಳ ಸಂಚಾರಕ್ಕೆ ಬಹಳ ಅಭದ್ರವಾಗಿ, ತುಂಬಾ ಅಪಾಯಕರವಾಗಿರುತ್ತದೆ. ಎಷ್ಟೋ ಬಾರಿ ಅನೇಕ ವಾಹನಗಳು ಸೇತುವೆ ಮಧ್ಯ ಸಿಕ್ಕಿಬಿದ್ದು ನರಳಿದ್ದೂ ಇದೆ. ಮೊನ್ನೆ ಒಂದು ಲಾರಿ ಸೇತುವೆ ಮೇಲೆ ಹೋಗುವಾಗ, ಪಕ್ಕದ ಕಲ್ಲು ಕುಸಿದು ಬಿದ್ದು ಲಾರಿ ಹೊಳೆಗೆ ಉರುಳಿಕೊಂಡದ್ದಲ್ಲದೆ ಕ್ಲೀನರನು ಲಾರಿಕೆಳಗೆ ಸಿಕ್ಕಿಕೊಂಡು ವಿಲವಿಲನೆ ಪ್ರಾಣ ಸಂಕಟಪಡುತ್ತ ನರಳುತ್ತಿದ್ದನು.

ಡ್ರೈವರು ಜೀವ ಸಹಿತ ಉಳಿದಿರುವ ಆಶ್ಚರ್ಯಕಾರಕವೇ ಎಂಬಂತೆ ಆಗ ತಾನೇ ಸುಂಟಿಕೊಪ್ಪದಿಂದ ಮಾದಾಪುರ ತೋಟಕ್ಕೆ ಬರುತ್ತಿದ್ದ ಜೀಪ್ ಕಾರಿನ ಡ್ರೈವರು ತಕ್ಷಣ ಜಿಗಿದು ಕೊಟ್ಟು ಲಾರಿಯನ್ನು ಕೊಂಚ ಎತ್ತಿ, ಡ್ರೈವರನ್ನು ಹೊರಕ್ಕೆ ತೆಗೆದು ಆಸ್ಪತ್ರೆಗೆ ಜೀಪಿನಲ್ಲಿ ಸಾಗಿಸಿದನು. ಸ್ವಲ್ಪ ತಡವಾಗಿದ್ದರೆ ಡ್ರೈವರು ನೀರು ಕುಡಿದು ಸಾಯುತ್ತಿದ್ದನು.

ಪ್ರತಿ ವರ್ಷವೂ ಹಂಗಾಮಿ ಸೇತುವೆಗೆ ಹಣ ಖರ್ಚು ಮಾಡಿದರೂ ಸಂಕವು ಉಪಯೋಗವಾಗದಿರುವಾಗ ವ್ಯರ್ಥ ಖರ್ಚು ಮಾಡುವುದಕ್ಕಿಂತ ಇಡೀ ವರ್ಷ ವಾಹನಗಳ ಸಂಚಾರಕ್ಕೆ ಯೋಗ್ಯವಾಗುವಂತೆ ಸರಿಯಾದ ಸೇತುವೆಯನ್ನೇ ಕಟ್ಟುವುದು ಒಳ್ಳೆಯದಲ್ಲವೇ? ಹರದೂರು ಸೇತುವೆ ಕಟ್ಟುವ ಯೋಜನೆಯು, ಬೋಯ್ಕೇರಿ, ಕೊಟ್ಟಮುಡಿ ಸೇತುವೆಗಳಂತೆ ಬಹಳ ವರ್ಷಗಳಿಂದ ಹಾಗೆಯೇ ಇದೆ. ಈ ವರ್ಷವಾದರೂ ಈ ಸೇತುವೆಯ ಕೆಲಸ ಕಾರ್ಯರೂಪಕ್ಕೆ ಬಂದು ಬರುವ ವರ್ಷಾರಂಭದಲ್ಲಿ ವಾಹನಗಳ ಸುರಕ್ಷಿತ ಸಂಚಾರಕ್ಕೆ ಯೋಗ್ಯವಾಗುವ ಆಶೆಯನ್ನು ಜನರು ಇಟ್ಟುಕೊಂಡಿದ್ದಾರೆ. ಜನಹಿತ ಸರಕಾರವು ತಕ್ಷಣ ಈ ಕಾರ್ಯವನ್ನು ಕೈಗೊಳ್ಳುವದೆಂದು ಆಶಿಸಲಾಗಿದೆ.

ಸರಕಾರವು ಉದಾರವಾಗಿ ಮಂಜೂರು ಮಾಡಿ ಹಣ ಒದಗಿಸಿದರೆ ಒಂದೇ ವರ್ಷದಲ್ಲಿ ಹರದೂರು ಸೇತುವೆ ಕೆಲಸ ಪೂರೈಸುವುದರಲ್ಲಿ ಅಡ್ಡಿ ಇಲ್ಲ. ಒಂದು ವೇಳೆ ಸರಕಾರ ... ಸಮೀಪದ ಕಂಟ್ರಾಕ್ಟರು ತಕ್ಷಣ ದೊರೆಯದಿದ್ದರೂ ಲಕ್ಷಗಟ್ಟಲೆ ಹಣವನ್ನು ದಕ್ಷತೆಯಿಂದ ಅನೇಕ ಕಾರು ಗಾಡಿಗಳಿಗೆ ಖರ್ಚು ಮಾಡುತ್ತಿರುವ ದೊಡ್ಡ ಪ್ಲಾಂಟರುಗಳ ಪೈಕಿ, ಯಾರಾದರೂ ಒಬ್ಬರು ಈ ಕೆಲಸವನ್ನು ವಹಿಸಿಕೊಂಡು ನಿರ್ವಹಿಸುವ ಭಾವನೆ ಇದೆ. ಆದ್ದರಿಂದ ಸರಕಾರವು ಕೂಡಲೇ ಗಮನ ಕೊಟ್ಟು, ಹಣವೂ

ರು ನೇತೃವ ಕೆಲಸವನ್ನು ಈ ವರ್ಷವೇ ಪ್ರಾರಂಭಿಸಬೇಕೆಂದು ಕೇಳಿಕೆ.

ಯನ್. ಕೆ. ಗಣಪಯ್ಯ.

—೦()೦—

ಬಿನ್ನವತ್ತಳೆ!

ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಜಯಶೀಲರಾದ ಕೊಡಗಿನ ಶಾಸನ ಮತ್ತು ಲೋಕಸಭೆ ಮೆಂಬರರಿಗೆ ಕುಟುಂಬ, ಗ್ರಾಮ, ನಾಡಿನ ಮಹಾಜನರು ಬಿನ್ನವತ್ತಳೆ ಕೊಡುತ್ತಿರುವುದು ಎಲ್ಲರಿಗೂ ತಿಳಿದಿದೆ.

ಇಂಥಾ ಮಹಾ ಚುನಾವಣೆಯಲ್ಲಿ ಗೆದ್ದವರಿಗೆ ಸತ್ಕಾರ ಕೂಟಗಳನ್ನೇರ್ಪಡಿಸಿದೆ. ಔತಣ ಭಾಷಣಗಳನ್ನು ಕೊಡಬೇಕಾದದ್ದೇನೋ ತುಂಬಾ ಸಂತೋಷ. ಆದರೆ ಕಳೆದ ಚುನಾವಣೆಯಲ್ಲಿ ಭಾಗವಹಿಸಿದ ಪರಿಸ್ಥಿತಿಯನ್ನು ಎತ್ತಿ ನೋಡಿದ್ದೇ ಆದರೆ ಮನೆ ಮನೆಗಳಲ್ಲೂ, ಗ್ರಾಮ, ಗ್ರಾಮದಲ್ಲೂ ಒಂದೊಂದು ರೀತಿಯ ವರ್ತನೆ ನಡೆದಿರುತ್ತೆ.

ಹೀಗಿರುವಲ್ಲಿ ಆ ಪಾರ್ಟಿ ಸಂಗಡದವರು ಏಕ ರೀತಿ ಒಂದಾಗಿ ಹಾಗೆ ನಡಿಸಬೇಕಾದ ಸತ್ಕಾರ ಕೂಟದಿಂದ ನಮ್ಮೊಳಗೆ ಭಿನ್ನತೆಯನ್ನು ಹೆಚ್ಚಿಸಿದಂತಾಗುತ್ತೆ. ಕಳೆದ ಜನವರಿ ೧೮ ಮತ್ತು ೨೨ರಂದು ಸಂಗಡಗಳ ಹುರುಪು ಹುಮ್ಮಸ್ಸು ಈಗ ಇಲ್ಲ; ಮರೆತಿದೆ. ಹಾಗಿರುವುದರಿಂದ ಪುನರಾವರ್ತಿ ನಾವು ಕಳೆದ ನಮ್ಮ ವರ್ತನೆಯನ್ನು ಗೋಚರಕ್ಕೆ ತರಬಾರದು.

ನಾವು ಗ್ರಾಮದಲ್ಲಿ ಸಲ್ಲಿಸತಕ್ಕ ರೈತಾಪಿಯವರು ನರಿ ಹೊರ್‍ತ್ಸ್ಲನಕರ ಕೋಳಿ, ಹಂದಿ, ಸೀರು, ನೆಲೆಗೆಬಿಟ್ಟಿರುವ ಹೋಗಬೇಕಾಗಿದೆ. ಅಲ್ಲದೆ ಮದುವೆ ಮಂಜಿಯ ಕಾಲ, ಇಂಥಾ ಸಮಯದಲ್ಲಿ ಈ ಸತ್ಕಾರ ಕೂಟಗಳು ಹುಣ್ಣಿನ ಮೇಲೆ ಬೊಕ್ಕೆಯೆದ್ದಂತಾಗುವದು.

ನಮಗಾಗಿ ನಾವು ಚುನಾಯಿಸಿದ ನಮ್ಮ ಪ್ರತಿನಿಧಿಗಳು ನಮಗಾಗಿ ಅವರು ಸತತ ದುಡಿಯಬೇಕು. ದೇಶದ ಜನತೆಯ ಬೇಕು ಬೇಡಿಕೆಗಳನ್ನು ಅರಿತು ದುಡಿಯಬೇಕು.

ಅವರಿಗೆ ದೊರೆತ ಆ ಮುಖ್ಯ ಪದವಿಯಿಂದ ದೇಶದ ಮಹಾಜನರ ಪ್ರೀತಿಯನ್ನು ಗಳಿಸಬೇಕು. ಇಂದು ಜನತೆಯಿಂದ ಪ್ರತಿನಿಧಿಗಳಾಗಿರತಕ್ಕವರು ಅವರು ನಮ್ಮಲ್ಲಿಯ ಕಳೆದ ಪಾರ್ಟಿ ಸಂಗಡಗಳನ್ನು ಇನ್ನೂ ಎಚ್ಚರಿಸದೆ ಐಕ್ಯತೆಗಾಗಿ ದುಡಿಯಬೇಕಿದೆ.

ಎಂ. ಬಿ. ಎಸ್.

ಡಿಸ್ಟ್ರಿಕ್ಟ್ ಬೋರ್ಡ್.

ಬ್ರಿಟಿಷರ ಕಾಲದ ಸರಕಾರವು ಒಂದೆಡೆಯಾದರೆ ಜಿಲ್ಲಾ ಬೋರ್ಡ್ ಬೇರೆಡೆ ಇದ್ದು ಆಡಳಿತ ನಡೆಯುತ್ತಿತ್ತು. ಆಗ ನಮ್ಮ ಸರಕಾರವಲ್ಲದ ಕಾರಣ ಜಿಲ್ಲಾ ಬೋರ್ಡಿಗೆ ಅರ್ಥವಿತ್ತು. ಜಿಲ್ಲಾ ಬೋರ್ಡ್ ಪ್ರಾಥಮಿಕ ವಿದ್ಯಾಭ್ಯಾಸ, ರಸ್ತೆ, ತೋಡು, ಪಾಲು, ದೋಣಿ ಮಗ್ಗೆರೆಯ ಮೇಲ್ವಿಚಾರಣೆಗಳನ್ನು ಈಗ ನಡೆಸುತ್ತಿದೆ. ಈ ಸಂಸ್ಥೆಯು ನಾಡಿನ ಜನತೆಯ ಬಹುಮತದಿಂದ ಚುನಾಯಿತರಾದ ಸದಸ್ಯರಿಂದ ನಡೆಸಲ್ಪಡುತ್ತದೆ.

ಕಾಲ ಚಕ್ರವು ಬದಲಾವಣೆ ದೇಶದ ರಚನಾತ್ಮಕ ಕಾರ್ಯವೂ ಸಹ ಬದಲಾಗಬೇಕೆಂಬುದನ್ನು ಎಲ್ಲರೂ ಒಪ್ಪತಕ್ಕದಿದೆ. ಹೀಗಿರುವಾಗ ಒಂದೇ ಸರಕಾರದಲ್ಲಿ ದುಡಿಯುತ್ತಿರುವ ಯಾವುದೇ ಒಂದು ಇಲಾಖೆಯ ಸಿಬ್ಬಂದಿಗಳಲ್ಲಿ ಬೇಧಭಾವಗಳಿಗೆ ಎಡೆ ಇರಬಾರದು. ಸರಿಸಮಾನದ ಒಂದೇ ಸರಕಾರದ ಆಡಳಿತ ಹಿಡಿತದಲ್ಲಿ ಬರಬೇಕೆಂದರೆ ಅದು ಪಕ್ಷಪಾತವಲ್ಲ.

ನಮ್ಮ ಮುಂದಿನ ಜನಾಂಗವನ್ನು ರೂಪಿಸತಕ್ಕ ಶಾಲಾ ಉಪಾಧ್ಯಾಯರಲ್ಲಿ ಸರಕಾರಿ ಮತ್ತು ಡಿ ಬಿ ಯೆಂಬ ಬೇಧವಿರುವುದರಿಂದ ಅವರಿಗೆ ಕೊಡುತ್ತಿರುವ ಸಂಬಳದ ದರದಲ್ಲಿ ತುಂಬಾ ವ್ಯತ್ಯಾಸವಿದ್ದು ಸಹಿಸಲಾಗದ ಅನ್ಯಾಯ ಕಂಡು ಬರುತ್ತೆ. ನಾಲ್ಕೈದು ವರ್ಷಗಳಿಂದ ಬಡ ಡಿ ಬಿ ಉಪಾಧ್ಯಾಯರ ಕೂಗು ಇನ್ನೂ ಕೇಳಿ ಸಮಂಜಸವಾದ ರಿಯಾಯಿತಿ ದೊರಕಿರುವುದಿಲ್ಲ.

ಈಗ ರಚಿತವಾಗಿರುವ ಈ ಕಾಂಗ್ರೆಸ್ ಸರಕಾರದ ಆಡಳಿತ ಕ್ರಮದಲ್ಲಿ ಇದೊಂದು ಸಂಸ್ಥೆಯನ್ನು ವಜಮಾಡಿ ಸರಕಾರವೇ ಎಲ್ಲಾ ಕಾರ್ಯಕಲಾಪಗಳನ್ನು ನಡೆಸುವದು ಸೂಕ್ತ. ಈ ಸಂಬಂಧ ದೇಶದ ಮಹಾಜನರು ನಾಡಿನಲ್ಲಿ ಸಾರ್ವಜನಿಕ ಸಭೆ ಸೇರಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಜಿಲ್ಲಾ ಬೋರ್ಡನ್ನು ರದ್ದು ಮಾಡುವ ವಿಚಾರ ಸಲಹೆ ಕೊಡಬೇಕಾಗಿದೆ.

ಎಂ. ಸೋಮಯ್ಯ.

ಲೋವರ್ ಸೆಕೆಂಡರಿ ಪರೀಕ್ಷಾ ಫಲಿತಾಂಶ.

ಕಳೆದ ಏಪ್ರಿಲ್ ತಿಂಗಳಲ್ಲಿ ನಡೆದ ಕೊಡಗಿನ ಲೋವರ್ ಸೆಕೆಂಡರಿ ಪರೀಕ್ಷೆಗೆ ಕೂತ ೧೬೩೬ ವಿದ್ಯಾರ್ಥಿಗಳಲ್ಲಿ ೬೬೫ ಜನರು ತೇರ್ಗಡೆಯಾಗಿದ್ದಾರೆ. ಅಂದರೆ ಶೇಕಡ ೪೩.೭ರಂತೆ ಪಾಸಾದ ಹಾಗಾಯಿತು. ಯಾವ ಯಾವ ಶಾಲೆಗಳಲ್ಲಿ ಎಷ್ಟೆಷ್ಟು ಪಾಸಾಗಿರುವರೆಂದು ಇಲ್ಲಿ ಕೊಡಲಾಗಿದೆ.

ಸೆಂಟ್ರಲ್ ಹೈಸ್ಕೂಲು ಮಡಿಕೇರಿ ೧೦೦ರಲ್ಲಿ ೫೧, ಸೆಂಟ್ ಮೈಕೇಲ್ಸ ಹೈಸ್ಕೂಲು ೫೩ರಲ್ಲಿ ೨೬, ಕಾನ್ವೆಂಟ್ ೩೯ರಲ್ಲಿ ೨೦, ಗವರ್ನ್‌ಮೆಂಟ್ ಹೈಸ್ಕೂಲು ಸೋಮವಾರಪೇಟೆ ೫೯ರಲ್ಲಿ ೧೫, ವೀರಾಜಪೇಟೆ ೧೩೭ರಲ್ಲಿ ೬೧, ಪೊನ್ನಂಪೇಟೆ ೪೦ರಲ್ಲಿ ೩೮, ನಾಪೋಕ್ಲು ೬೧ರಲ್ಲಿ ೩೮, ಸೆಂಟ್ ಏನ್ಸ್ ಹೈಸ್ಕೂಲು, ವೀರಾಜಪೇಟೆ ೭೧ರಲ್ಲಿ ೨೪, ನೆಲಜಿ ೨೧ರಲ್ಲಿ ೧೧, ಗಾಳಿಬೀಡು ೭ರಲ್ಲಿ ೬, ಪಾರಾಣೆ ೪೭ರಲ್ಲಿ ೨೨, ಹಾಕತ್ತೂರು ೧೮ರಲ್ಲಿ ೮, ಫ್ರೇಜರ್‌ಪೇಟೆ ೨೪ರಲ್ಲಿ ೧೪, ಹೆಬ್ಬಾಲೆ ೧೫ರಲ್ಲಿ ೩, ಅಮ್ಮತ್ತಿ ೬೧ರಲ್ಲಿ ೩೯, ಕಕ್ಕಬೆ ೩೦ರಲ್ಲಿ ೧೪, ಬಿರುನಾಣಿ ೨೭ರಲ್ಲಿ ೨, ಚೆಯ್ಯಂಡಾಣೆ ೨೫ರಲ್ಲಿ ೧೩, ಕಾಕೋಟುಪರಂಬು ೫೮ರಲ್ಲಿ ೩೬, ಮೂರ್ನಾಡು ೫೮ರಲ್ಲಿ ೨೬, ಬೆಸಗೂರು ೩೩ರಲ್ಲಿ ೯, ಬಿ. ಶೆಟ್ಟಿಗೇರಿ ೨೪ರಲ್ಲಿ ೧೬, ಕಲ್ಲೋಡು ೩೭ರಲ್ಲಿ ೧೭, ಕೊಡ್ಲಿಪೇಟೆ ೩೫ರಲ್ಲಿ ೨೨, ಹುದಿಕೇರಿ ೫೬ರಲ್ಲಿ ೧೬, ಶನಿವಾರಸಂತೆ ೨೧ರಲ್ಲಿ ೬, ಶಾಂತಳ್ಳಿ ೩೭ರಲ್ಲಿ ೧೧, ಮರಗೋಡು ೨೪ರಲ್ಲಿ ೫, ಕರಡ ೪೯ರಲ್ಲಿ ೧೨, ದೇವಣಗೇರಿ ೧೪ರಲ್ಲಿ ೩, ಹಾತೂರು ೬೦ರಲ್ಲಿ ೧೯, ಕೊಟ್ಟೂರು ೩೨ರಲ್ಲಿ ೧೬, ಟಿ. ಶೆಟ್ಟಿಗೇರಿ ೪೭ರಲ್ಲಿ ೨೬, ಸುಂಟಿಕೊಪ್ಪ ೪೫ರಲ್ಲಿ ೧೦, ಬಾಳೆಲೆ ೧೭ರಲ್ಲಿ ೬ ಮತ್ತು ಭಾಗಮಂಡಲ ೨೪ರಲ್ಲಿ ೧೪.

ವಿನಂತಿ.

ಕೊಡಗು ಮುಜ್ರಾಯಿ ಇಲಾಖೆಗೆ ಸೇರಿದ ಶ್ರೀಮೂಲ ಕಾವೇರಮ್ಮನ ದೇವಸ್ಥಾನ ಮತ್ತು ಶ್ರೀ ಓಂಕಾರೇಶ್ವರ ದೇವಸ್ಥಾನ ಈ ಎರಡು ದೇವಸ್ಥಾನಗಳಲ್ಲಿ ಶಿವಲಿಂಗದ ಅಡಿಗೆ ಹಾಕಿದ ಪಾಣಿಪೀಠದ ಅಷ್ಟಬಂಧವು ಬಹಳ ಪುರಾತನದಾಗಿ ಶಿಥಿಲವಾಗಿ ಸಂದು ಬಿಟ್ಟಿರುವ ಕಾರಣ ದಿನಂಪ್ರತಿ ಅಭಿಷೇಕ ಮಾಡಿದ ತೀರ್ಥವು ಹೊರ ತಾವರೆ ಸಂದಿನೊಳಗೆ ನಿಲ್ಲುವುದನ್ನು ಕೈ ಮುಟ್ಟಿ ತೆಗೆಯಬೇಕಾಗುತ್ತೆ. ಇದು ಶಾಸ್ತ್ರಕ್ಕೆ ವಿರೋಧವಾಗಿದೆ.

ಇದನ್ನು ನೀಲೇಶ್ವರ ತಂತ್ರಿಯವರ ಮೂಲಕ ಅಷ್ಟಗಂಧ ಹಾಕಿಸಲು ಅಂದಾಜು ರೂ ೩೦೦೦|-(ಎರಡಕ್ಕಾಗಿ) ಖರ್ಚಿಗೆ ಬೇಕಾಗುತ್ತೆ. ಇಲಾಖೆಯಿಂದ ಈ ಕೆಲಸ ಪೂರೈಸಲು ಹಣದ ಅಭಾವದಿಂದ ಅನುಕೂಲವಿರುವುದಿಲ್ಲ. ಇದಕ್ಕಾಗಿ ಕೆಲ ಭಕ್ತರು ನೂರರಿಂದ ನೂರೈವತ್ತು ರೂಪಾಯಿಗಳಂತೆ ಸಹಾಯ ಕೊಡುವುದಾಗಿ ಭರವಸೆ ಕೊಟ್ಟಿರುತ್ತಾರೆ. ಇದೇ ಮೇರೆ ಭಕ್ತರು ದ್ರವ್ಯ ಸಹಾಯಕೊಟ್ಟು ಯಾ ಪ್ರತ್ಯೇಕವಾಗಿ ಪೂರ್ಣವಹಿಸಿಕೊಂಡು ಮೇಲ್ಕಂಡ ದೇವರ ಸೇವೆ ಸಲ್ಲಿಸಿ ದೇವರ ಕೃಪೆಗೆ ಪಾತ್ರರಾಗಬೇಕಾಗಿದೆ. ಮೊಬಲಗು ಕಳುಹಿಸುವವರು ಇಲಾಖೆಯ ಪ್ರೆಸಿಡೆಂಟರ ಹೆಸರಿಗೆ ಕಳುಹಿಸಬೇಕಾಗಿ ದೇವರ ಹೆಸರಿನಲ್ಲಿ ಅಪೀಲು ಮಾಡಿರುತ್ತೇನೆ. ಈ ಕೆಲಸ ಎರಡು ದೇವಾಲಯಗಳಲ್ಲಿ ಒಡನೆ ಮಾಡದೆ ಹೋದರೆ ದೇಶಕ್ಕೆ ಕ್ಷೇಮ ಸಿಕ್ಕಲಾರದೆಂದು ತಿಳಿದಂತವರ ಮತ್ತು ಭಕ್ತಾದಿಗಳ ಅಭಿಪ್ರಾಯವಾಗಿದೆ.

ಪಿ. ಎ. ಚಂಗಪ್ಪ,
ಪ್ರೆಸಿಡೆಂಟರು,
ಮುಜ್ರಾಯಿ ಇಲಾಖೆ.

ಸಾರ್ವಜನಿಕ ಸಭೆ.

ತಾರೀಕು ೩-೫-೫೨ರಲ್ಲು ಶ್ರೀಮಂಗಲದಲ್ಲಿ ಶ್ರೀ ಕೆ. ಎಸ್ ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಟಿ ಶೆಟ್ಟಿಗೇರಿ ಯಾ ಶ್ರೀಮಂಗಲ ಕೇಂದ್ರದಲ್ಲಿ ಒಂದು ಹೈಸ್ಕೂಲು ಸ್ಥಾಪಿಸುವ ಬಗ್ಗೆ ಶ್ರೀಮಂಗಲನಾಡು ಸಾರ್ವಜನಿಕರ ಒಂದು ಸಭೆ ಸೇರಲಾಯಿತು. ಈ ಮೊದಲು ಟಿ ಶೆಟ್ಟಿಗೇರಿಯಲ್ಲಿ ಸ್ಥಾಪಿಸುವಂತೆ ತೀರ್ಮಾನವಾಗಿದ್ದರೂ ಸಹ ಟಿ. ಶೆಟ್ಟಿಗೇರಿಯಲ್ಲಿ ಕಟ್ಟಡ ಕಟ್ಟಿಸಲು ಸ್ಥಳ ಸಂಕೋಚದ ಕಾರಣದಿಂದಲೂ ಇನ್ನೂ ಕೆಲವು ಅನಾನುಕೂಲತೆಗಳ ಕಾರಣದಿಂದಲೂ ಹೈಸ್ಕೂಲು ಕಟ್ಟಡಗಳನ್ನು ಶ್ರೀಮಂಗಲದಲ್ಲಿ ಕಟ್ಟುವಂತೆ ತೀರ್ಮಾನಿಸಲಾಯಿತು.

ಅಲ್ಲದೆ ಈಗ ಟಿ. ಶೆಟ್ಟಿಗೇರಿಯಲ್ಲಿ ಒಂದು ತರಗತಿಯನ್ನು ತೆರೆಯಲು ಕೋಣೆಗಳ ಅನುಕೂಲತೆ ಇರುವುದರಿಂದ ತಾತ್ಕಾಲಿಕಕ್ಕೆ ೯ನೇ ತರಗತಿಯನ್ನು ಟಿ ಶೆಟ್ಟಿಗೇರಿಯಲ್ಲಿ ತೆರೆಯುವಂತೆ ತೀರ್ಮಾನಿಸಲಾಯಿತು

ಶ್ರೀಮಂಗಲದಲ್ಲಿ ಹೈಸ್ಕೂಲು ಕಟ್ಟಡ ಸ್ಥಾಪಿಸಲು ಶ್ರೀಗಳಾದ ಕಳ್ಳಿಚಂಡ ಕುಟ್ಟಪ್ಪನವರು, ಕಾಳಿಮಾಡ ಗಣಪತಿಯವರು ಮತ್ತು ಅಜ್ಜಮಾಡ ಎಂ ಕುಟ್ಟಪ್ಪನವರು ತಮ್ಮ ಸ್ವಂತ ಜಾಗವನ್ನು ಉದಾರವಾಗಿ ಕೊಡುವರೆಂದು ಭರವಸೆ ಕೊಟ್ಟಿರುತ್ತಾರೆ.

ಈ ಮೇಲ್ಕಂಡ ಹೈಸ್ಕೂಲು ಸ್ಥಾಪನೆಗಾಗಿ ಶ್ರೀಯುತರಾದ ಕೊಡಂದೇರ ಎಂ. ಕಾರ್ಯಪ್ಪ, (ಲಕ್ಕುಂದ) ಇವರು ರೂ. ೧೦೦೧|-, ಕೈಬಿಲೀರ ಕುಟ್ಟಪ್ಪನವರು ರೂ ೧೦೦|-ನ್ನು ಉದಾರವಾಗಿ ಕೊಟ್ಟಿರುತ್ತಾರೆ. ಇನ್ನು ಹಲವರು ಭರವಸೆ ಕೊಟ್ಟಿರುತ್ತಾರೆ.

ಹಸನಾದ ಕಾಫಿ ಗಿಡಗಳು ಮಾರಾಟಕ್ಕೆ ಇವೆ.

1952ನೇ ಜೂನ್ ತಿಂಗಳಲ್ಲಿ ನೆಡಲು ತಯಾರಾಗಿರುವ ಸಾಧಾರಣ 6 ಸಾವಿರ ರೊಟಿಸ್ಟ ಕಾಫಿ ಗಿಡಗಳು ನನ್ನಲ್ಲಿ ತಯಾರಾಗಿವೆ. ಈ ಗಿಡಗಳು ಬಾಳೆಹೊನ್ನೂರಿನ ಮತ್ತು ಸಿ. ಸಿ. ಇ. ಕಾಫಿ ತೋಟದ ಬೀಜಗಳ ಗಿಡಗಳಾಗಿದ್ದು ಅತ್ಯುತ್ತಮ ರೀತಿಯ ವ್ಯವಸಾಯದಿಂದ ಬೆಳೆಸಲ್ಪಟ್ಟವೆ ತಾ. 30-5-52ರ ಒಳಗೆ ಬಂದ ಗಿರಾಕಿಗಳಿಗೆ ಮಾತ್ರ ಕಾಯ್ದಿಡಲಾಗುತ್ತೆ.

ಕೆ ಜೆ. ಬೋಪಯ್ಯ,
ಆರೆಂಜ್ ಗ್ರೊ ತೋಟ,
ಪೊಳ್ಳಿಬೆಟ್ಟ ಪೋಸ್ಟು, ಕೊಡಗು.

ನೋಟೀಸು.

ಸೋಮವಾರಪೇಟೆಯಿಂದ 6 ಮೈಲಿ ದೂರದಲ್ಲಿ ಇರುವ ಮಲ್ಲೇಶ್ವರ ತೋಟವು ಮಾರಾಟಕ್ಕಿದೆ. ಹೂವಿನ ಮಳೆ ಆಗಿದೆ. 25 ಟನ್ ಕಾಫಿ ಅಂದಾಜು ಮಾಡಲಾಗಿದೆ. ಪೂರ್ತಿ ಅರೆಬಿಕಾ ಕಾಫಿ. ತೋಟದ ವಿಸ್ತೀರ್ಣ 200 ಎಕ್ರೆ. ಅದರ ಪೈಕಿ 30 ಎಕರೆಯಲ್ಲಿ ಕೆಲಸ ಬಾಕಿ ಆಗಿದೆ. ತೋಟಕ್ಕೆ ಒತ್ತಾಗಿ 161 ಎಕ್ರೆ ಕಾಫಿ ವ್ಯವಸಾಯಕ್ಕೆ ಉತ್ಕೃಷ್ಟವಾದ ಮರಕಾಡು ಇದೆ. ಹೆಚ್ಚಿನ ಮಾಹಿತಿಗೆ ಕೆಳಗೆ ಕಾಣಿಸಿದ ವಿಳಾಸಕ್ಕೆ ಬರಕೊಳ್ಳಬಹುದು.

" X "

C/o 'ಕೊಡಗು' ಮಡಿಕೇರಿ.

ಶ್ರೀ ಟಿ. ಎಸ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ

(೨ನೇ ಪುಟದಿಂದ ಸಾಗಿದ್ದು)

ಲ್ಲಿ ಸಹಾಯಕರಾಗುವಂತೆ ಪ್ರತಿಯೊಬ್ಬ ಗೃಹಿಣಿಯನ್ನು ತರಬೇತು ಮಾಡುವ ಜವಾಬ್ದಾರಿಯನ್ನು ಮಹಿಳಾ ಸಮಾಜವು ಮಾಡಬೇಕಾಗಿದೆ.

ಎರಡನೇ ವಿಷಯವು ಸಾಮಾನ್ಯವಾದರೂ, ಬಹಳ ಮಹತ್ತರವಾಗಿದೆ ನಮ್ಮ ತರುಣಿಯರಲ್ಲಿ ಅನೇಕರು ಸಮಯಕ್ಕೆ ಸರಿಯಾಗಿ ಲಗ್ನವಾಗಲು ಹಿಂಜರಿಯುತ್ತಾರೆ ತಮ್ಮ ಸರ್ವ ಮನೋಭಿಷ್ಟಗಳನ್ನು ಈಡೇರಿಸಲು ತಕ್ಕುದಾದ ಸಿರಿವಂತರನ್ನು ಕಾಯುತ್ತಿರುವರು. ಐ ಸಿ ಎಸ್ ಪಧವೀಧರನ್ನು ವಿವಾಹವಾಗಬೇಕೆಂದು ಇಚ್ಛಿಸುವವರು, ಸಾಮಾನ್ಯವಾಗಿ ಅಧೀಸು ಗುಮಾಸ್ತರನ್ನು ಲಗ್ನವಾಗುವರು! ಇದರಿಂದ ದಾಂಪತ್ಯ ಜೀವನದಲ್ಲಿ ಕಷ್ಟಗಳು ಪರಂಪರೆಯಾಗಿ ಏಳುತ್ತಿದ್ದು, ನೆಮ್ಮದಿ ದೂರವಾಗಿ ಪರಸ್ಪರ ಪ್ರೀತಿಯು ಅದೃಶ್ಯವಾಗುವುದು. 'A modern girl loves to be a juliet to half a dozen Romeos' ಎಂಬದಾಗಿ ತಜ್ಞರೊಬ್ಬರು ನುಡಿದಿದ್ದಾರೆ. ಹಣದ ಅಭಾವ ಹೆಚ್ಚಲು ಗಂಡಂದಿಯರ ಅನಗಾಹನೆಗೆ ಬಾರದೆ ಹೆಂಡಂದಿಯರು ಅಲ್ಪಸ್ವಲ್ಪ ಮನೆ ಸಾಮಾನುಗಳನ್ನು (ಹೆಚ್ಚಾಗಿ ದವಸಗಳನ್ನು) ದೈನಿಕವಾಗಿ ವಿಕ್ರಯಿಸಿ, ಧನ ಸಂಪಾದಿಸುವರು. ಈ ನೀತಿ ಎಂದೂ ಸರಿಯಲ್ಲ; ಈ ದ್ರೋಹಾತ್ಮಕ ದುರ್ಗುಣವನ್ನು ನಾಶಪಡಿಸಬೇಕು ಇವುಗಳನ್ನು ನಿರ್ಮೂಲಗೊಳಿಸಲು ಮಹಿಳಾ ಸಮಾಜ ಪ್ರಾರಂಭಿಸಬೇಕು.

ಪ್ರತಿಯೊಬ್ಬ ಗೃಹಿಣಿಯು ಮನೆಗೆಲಸವನ್ನು ಸೇವಕರ ಸಹಾಯವಿಲ್ಲದೆ ಮಾಡಲು ಶಕ್ತಿ ಮೀರಿಸಬೇಕು. ಪ್ರತಿಯೊಂದಕ್ಕೂ, ಆಳು ಯಾ ಆಯಾ ಎಂದರೆ ಗಂಡಂದಿರುವರ ಬಾಳು ಗೋಳಾಗುವುದು ವ ಧ್ಯಮ ತರಗತಿ ರಂಪತಿಗಳ ಉಳುವರಿಯೆಂದರೆ, ತನ್ನ ಹೆಂಡತಿಗೆ ಒಂದು ಜೊತೆ ಮೆಟ್ಟಲು ಸಹ ಕೊಂಡುಕೊಳ್ಳಲು ಅಸಾಧ್ಯವೆಂದು ನಮ್ಮ ದೇಶದ ಅರ್ಥಶಾಸ್ತ್ರಜ್ಞರ ಬೋಧಿಸಿದ್ದಾರೆ. ಇಂಗ್ಲೆಂಡಿನಲ್ಲಿ ಮಧ್ಯಮ ವರ್ಗದ ಕುಟುಂಬಗಳಲ್ಲಿ, ಹೆಂಗಸರೇ ತಮ್ಮ ಎಲ್ಲಾ ಮನೆಗೆಲಸಗಳನ್ನು ಮಾಡುತ್ತಾರೆ. ಆದ್ದರಿಂದ ಪ್ರತಿಯೊಂದು ಮನೆಯ ಕೆಲಸವನ್ನು ತಾವೇ ಮಾಡುವಂತೆ ಪ್ರೇರೇಪಿಸಬೇಕು. ವಿದ್ಯಾರ್ಜನೆ ಮಾಡುತ್ತಿರುವ ನಮ್ಮ ತರುಣಿಯರು ಅಡಿಗೆ ಕೆಲಸ ಮಾಡುವದೆಂದರೆ ತಮ್ಮ ಘನತೆಗೆ ಕುಂದಕ ಬರುತ್ತದೆಂಬ ತಪ್ಪು ಭಾವನೆ ಸಂಪೂರ್ಣ ನಿರ್ನಾಮವಾಗುವಂತಾಗಬೇಕು.

ಮಿತವ್ಯಯ ಧೋರಣೆಯನ್ನು ಪ್ರತಿಯೊಬ್ಬ ಗೃಹಿಣಿ, ಪ್ರತಿಯೊಂದು ವಿಷಯದಲ್ಲಿ ಅನುಸರಿಸಬೇಕು. ಆಹಾರಾಭ್ಯಾಸದಲ್ಲಿ, ಉಡಿಗೆಯಲ್ಲಿ, ಹಣದಲ್ಲಿ ಸರ್ವ ವಿಷಯಗಳಲ್ಲಿಯೂ, ಉತ್ಪತ್ತಿಗೊಳಪಟ್ಟು ಖರ್ಚು ಮಾಡಲು ಅಭ್ಯಾಸ ಮಾಡಿಸಬೇಕು. ನಮ್ಮ ಅನೇಕಾನೇಕ ವಿದ್ಯಾವಂತ ಗೃಹಿಣಿಯರಿಗೆ ಅಧುನಿಕ ಆಕರ್ಷಣೀಯ ವಸ್ತುಗಳಿಂದಾಗಿಯೂ, ಅನುಕರಣದಿಂದಾಗಿಯೂ, ಶಕ್ತಿ ಮೀರಿ ವೆಚ್ಚ ಮಾಡುವ ದುರ್ಗುಣ ಅಂಟಿಕೊಂಡಿದೆ. 'ಶಾಲು ಉಗ್ರವಿದ್ದಷ್ಟು ಕಾಲು ನೀಡಬೇಕು' ಎಂಬಂತೆ ಪ್ರತಿಯೊಬ್ಬ ಸ್ತ್ರೀಯು ಆದರ್ಶ ಮಾರ್ಗಗಳಾಗುವಂತೆ ಪ್ರೇರೇಪಿಸಬೇಕು.

ಶಿಶು ಮರಣ ನಮ್ಮ ಭರತ ದೇಶದಲ್ಲಿ ಶೇಕಡ ೪೦ ಇದೆ. ಇದಕ್ಕೆ ನಮ್ಮ ದಾರಿದ್ರ್ಯ, ಪೋಷಣರಹಿತ ಆಹಾರ, ಮತ್ತು ಹೀನತರದ ಔಷದೋಪಚಾರ, ನಮ್ಮ ಅಜ್ಞಾನ ಮತ್ತು ಸಂಪ್ರದಾಯಗಳು ಪ್ರಧಾನ ಕಾರಣಗಳಾಗಿವೆ. ಆಧುನಿಕ ವಿಜ್ಞಾನರೀತ್ಯಾ ಚಿಕಿತ್ಸಾಕ್ರಮಗಳನ್ನು ಪ್ರಯೋಗಿಸಿ ತಮ್ಮ ಮಕ್ಕಳನ್ನು ಕಾಪಾಡಬೇಕು. ಈ ವಿಷಯಗಳಲ್ಲಿ ಸಾಕಷ್ಟು ಜ್ಞಾನೋದಯ ಮಾಡುವ ಕಾರ್ಯ ಮಹಿಳಾ ಸಮಾಜದ್ದಾಗಿದೆ.

ಶುಚಿತ್ವ ಮಾತ್ರೆಯನ್ನು ವೈಯಕ್ತಿಕ ಮತ್ತು ಸಾಮೂಹಿಕ ಶುಚಿತ್ವಗಳನ್ನು ಆರೋಗ್ಯ ಸೂತ್ರಗಳನ್ನೂ, ತಮ್ಮ ತಮ್ಮ ಹಳ್ಳಿಗಳಲ್ಲಿ ಪ್ರಚಾರ ಮಾಡಿ, ರೋಗ ರುಜೆಗಳ ನಿವಾರಣಾ ಕಾರ್ಯಗಳಲ್ಲಿ ಪ್ರವರ್ತರಾಗಲೂ ಸಾಧ್ಯವಿದೆ. ಮನೆ ಶುಚಿತ್ವಕ್ಕೆ ಪ್ರಧಾನ ಕಾರಣ ಕರ್ತರು, ಗೃಹಿಣಿಗಳು ಮತ್ತು ಮಕ್ಕಳು. ಪರಸ್ಪರ ಸಹಕಾರ ತತ್ವವನ್ನು ಬೋಧಿಸಬೇಕು. ನಾಲ್ಕು ಕರಿಯ ತರೆ ಸೇರಿದ್ದಲ್ಲಿ ಕ್ಷುಲ್ಲಕವಾದ ವಿಷಯಗಳ ಚರ್ಚೆಯಲ್ಲದೆ, ಜ್ಞಾನಾರ್ಜನೆಗಾಗಿಯಾಗಲೀ, ಉತ್ಪತ್ತಿಕಾರಕ ಕರ್ತವ್ಯಗಳಿಗಾಗಲೀ ನಡೆಯುವುದಿಲ್ಲ ಇಸು ಕುಟ್ಟುವ ತಪ್ಪು ತರಕಾರಿ ಬೆಳೆಸುವುದು, ಬಟ್ಟೆ ನೆಯ್ಯುವುದು, ಹೂವಿನ ತೋಟ ಮಾಡುವದು, ಕೋಳಿ ಹಂದಿ ಸಾಕುವುದು ಇವೇ ಮೊದಲಾದ ಕೆಲಸಗಳು ಪ್ರಾರಂಭವಾಗುವಂತೆ ಮಾಡಬೇಕು ಸಣ್ಣ ಸಣ್ಣ ಗುಡಿಕೈಗಾರಿಕೆಗಳಲ್ಲಿ ಭಾಗವಹಿಸುವಂತೆ ಮಾಡಬೇಕು. ನೂಲುವ, ನೆಯ್ಯುವ ಕಸೂತಿ ಕೆಲಸಗಳನ್ನು ಪ್ರಾರಂಭಿಸಿ, ಕೌಟುಂಬಿಕ ಆರ್ಥಿಕ ವಿಮೋಚನೆಯಲ್ಲಿ ಸಹಾಯಕರಾಗಬೇಕು.

ಕಸೂತಿ ಕೆಲಸ, ಆಟದ ಸಾಮಾನುಗಳ ತಯಾರಿಕೆ, ನೂಲುವದು ಕಡ್ಡಿಗಳನ್ನು ಮಾಡುವದು, ಇವೇ ಮೊದಲಾದ ಕೆಲಸಗಳನ್ನು ನಮ್ಮ ಮಹಿಳೆಯರು ಪ್ರಾರಂಭಿಸಬಹುದು ಪ್ರತಿಯೊಬ್ಬ ಗೃಹಸ್ಥೆಯು ಕಡ್ಡಾಯವಾಗಿ ಇವುಗಳಲ್ಲಿ ನಿರತಳಾಗುವಂಥಾ ನಿರ್ಬಂಧನೆಗಳನ್ನು ಇಟ್ಟುಕೊಳ್ಳಬೇಕು ಉತ್ತಮ ತಜ್ಞರಿಂದ ಭಾಷಣಗಳ ವ್ಯವಸ್ಥೆ, ಕೆಲವು ದೈನಿಕ ವ್ಯವಹಾರಗಳ ವಿಷಯ ಚರ್ಚಾಕೂಟ ಮುಂತಾದವುಗಳನ್ನು ಏರ್ಪಡಿಸಬೇಕು ಹಲಕೆಲವು ಸ್ತ್ರೀ ಮಾನ ಪತ್ರಿಕೆಗಳನ್ನು ತರಿಸಿ, ಓದುವ ಲವಲವಿಕೆಯನ್ನು ಕಲ್ಪಿಸಬೇಕು ಬಿಡು ಸಮಯದಲ್ಲಿ ಓದುವ ಅಭ್ಯಾಸ ಮಾಡಬೇಕು. ಕಸೂತಿ ಕೆಲಸ, ಹಿಂದೀ ಭಾಷಾಭ್ಯಾಸ ಯಾವಾಗಲೂ ಶರೀರ ಮತ್ತು ಮನಸ್ಸು ಕಾರ್ಯ ಪ್ರವೃತ್ತರಾಗಿದ್ದರೆ, ಬೇಡದ ಯೋಚನೆ, ಇಲ್ಲದ ತಲೆ ಹರಟೆಗಳ ಸಂದರ್ಭ ಒದಗುವುದೇ ಇಲ್ಲ.

ನೂತನ ರಾಜ್ಯ ಘಟನೆಯಂತೆ ಮಹಿಳೆಯರಿಗೆ ಸಮಾನಾಧಿಕಾರ ದೊರೆಯುತ್ತಿದ್ದರೂ, ಅದರ ದುರುಪಯೋಗ ನಡೆಯಬಾರದು ಹದ್ದು ಮೀರಿ ವರ್ತಿಸಿದರೆ, ಸರ್ವನಾಶ ಖಂಡಿತ. ದಾಂಪತ್ಯ ವಿಚ್ಛೇಧನಾ, ಬಾಲ್ಯವಿವಾಹಗಳನ್ನು ಖಂಡಿಸಬೇಕು. ವಿಧವಾ ವಿವಾಹ ಎಲ್ಲಾ ಜಾತಿಗಳಲ್ಲಿ ಕಾರ್ಯರೂಪಕ್ಕೆ ಬರುವ ಕಾರ್ಯದಲ್ಲಿ ತೊಡಗಬೇಕು. ಈ ರೀತಿ ನಮ್ಮ ಮಹಿಳಾ ಸಂಸ್ಥೆಗಳ ಮುಖಾಂತರ ಪ್ರಾಪಂಚಿಕ ವ್ಯವಹಾರಗಳನ್ನು ಅರಿಯುವ ಸಮಾಜ ಶಿಕ್ಷಣವನ್ನು ನಮ್ಮ ಅಜ್ಞಾನೀ ಮಹಿಳೆಯರ ಪ್ರಚಾರ ಮಾಡಿದರೆ, ದೇಶದ ಏಳಿಗೆ ಅಗಿ ಇಡೀ ಲೋಕದ ಕಲ್ಯಾಣವಾಗುವದು.

ಸೇವಾಪುರಿ ಗೋಷ್ಠಿವಳಿ.

ಸೇವಾಪುರಿಯಲ್ಲಿ ಸೇರಿದ ಸರ್ವೋದಯ ಪರಿಷತ್ತಿನಲ್ಲಿ ಸರ್ವ ಸೇವಾ ಸಂಘವು ಈ ಕೆಳಗಿನ ಗೊತ್ತುವಳಿಯನ್ನು ಸಾರಿತು

ಭೂದಾನ–ಯಜ್ಞ.

ಕುಲಿಗೆಯಲ್ಲದ ಮತ್ತು ವೈಯಕ್ತಿಕ ಅಭಿವೃದ್ಧಿ ಮತ್ತು ವಿಕಾಸಕ್ಕೆ ಪ್ರತಿಯೊಬ್ಬನಿಗೆ ಸಂಪೂರ್ಣ ಅವಕಾಶ ದೊರೆಯುವ ವರ್ಗ ಮತ್ತು ಜಾತಿಭೇದರಹಿತವಾದ ಸಮಾಜವನ್ನು ಸತ್ಯ ಮತ್ತು ಅಹಿಂಸೆಯ ತಳಹದಿಯ ಮೇಲೆ ರಚಿಸುವದು ಸರ್ವೋದಯ ಸಮಾಜದ ಗುರಿಯಾಗಿದೆ. ಈ ಧ್ಯೇಯ ಸಾಧನೆಗಾಗಿ ದೇಶದಲ್ಲಿರುವ ಆರ್ಥಿಕ ಅಸಮಾನತೆಯ ನಿವಾರಿಸ ಮಾರ್ಗಗಳನ್ನು ಹುಡುಕುವದೇ ನಮ್ಮ ಮುಂದಿನ ಮುಖ್ಯ ಪ್ರಶ್ನೆಯಾಗಿದೆ ಶ್ರೀ. ವಿನೋಬಾಜಿಯವರು ಪ್ರಾರಂಭಿಸಿರುವ ಭೂದಾನಯಜ್ಞ ಚಳವಳಿಯು ಈ ಪ್ರಶ್ನೆಯ ಪರಿಹಾರಕ್ಕೆ ದೊಡ್ಡ ಪ್ರಮಾಣದಲ್ಲಿ ಮಾರ್ಗವನ್ನು ತೋರಿಸಿದೆ. ಅಹಿಂಸೆಯ ಶಕ್ತಿಯನ್ನು ಪ್ರದರ್ಶಿಸಿ ಈ ಚಳವಳಿಯು ನಮ್ಮಲ್ಲಿ ಅಹಿಂಸೆಯ ಬಗ್ಗೆ ಇರುವ ನಂಬಿಕೆಯನ್ನು ಬಲಪಡಿಸಿದೆ. ಈ ಚಳವಳಿಯು ನಮ್ಮ ದೇಶದಲ್ಲಿ ಮಾತ್ರವಲ್ಲ; ವಿದೇಶಗಳಲ್ಲಿ ಸಹ ಕುತೂಹಲ ಕೆರಳಿಸಿದೆಯೆಂದು ಹೇಳಲು ನಮಗೆ ಸಂತೋಷವಾಗುತ್ತದೆ. ನಮ್ಮ ಕಾರ್ಯಕರ್ತರು ಮತ್ತು ದೇಶಬಂಧುಗಳು ಅಪೇಕ್ಷಿಸಿದಂತೆ ಸರ್ವಸೇವಾ ಸಂಘದ ನೇತೃತ್ವದಲ್ಲಿ ಈ ಚಳವಳಿಯನ್ನು ದ್ವಿಗುಣಿತ ಉತ್ಸಾಹದಲ್ಲಿ ನಡೆಸುವದ ಯೋಗ್ಯವಾಗಿದೆ. ಶ್ರೀ. ವಿನೋಬಾಜಿಯವರು ಸಹ ಕೇವಲ ತಮ್ಮೊಬ್ಬರ ಪ್ರಯತ್ನದಿಂದಲೇ ಚಳವಳಿ ನಡೆಯುವ ಬದಲು ಅದನ್ನು ವ್ಯಾಪಕ ಪ್ರಯತ್ನದಿಂದ ನಡೆಸುವದು ಒಳ್ಳೆಯದು ಎಂಬ ಅಭಿಪ್ರಾಯವನ್ನು ಉಳ್ಳವರಾಗಿದ್ದಾರೆ ಆದ್ದರಿಂದ ಸರ್ವ ಸೇವಾಸಂಘವು ಶ್ರೀ. ವಿನೋಬಾಜಿಯವರ ನೇತೃತ್ವದಲ್ಲಿ ಈ ಚಳವಳಿಯ ಹೊಣೆಯನ್ನು ಹೊರುವದು ತನ್ನ ಕರ್ತವ್ಯವೆಂದು ತಿಳಿಯುತ್ತದೆ.

ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೆಲ್ಲರಿಗೂ ಆಕೆಯ ಮೇಲೆ ಸಮಾನ ಅಧಿಕಾರವಿರುವಂತೆ ಭೂಮಾತೆಯ ಹೊಟ್ಟೆಯಲ್ಲಿ ಹುಟ್ಟಿದ ಜನರೆಲ್ಲರಿಗೂ ಭೂಮಿಯ ಮೇಲೆ ಸಮಾನಾಧಿಕಾರವಿದೆಯೆಂಬುದೇ ಭೂದಾನ ಯಜ್ಞದ ಮೂಲಭೂತ ತತ್ವವಾಗಿದೆ. ಆದುದರಿಂದ ದೇಶದ ಭೂಮಿಯು ಸರಿಯಾಗಿ ಪುನಃ ಹಂಚಲ್ಪಡಬೇಕು. ಪ್ರತಿಯೊಂದು ಕುಟುಂಬಕ್ಕೆ ಸಾಮಾನ್ಯವಾಗಿ ಒಂದು ಎಕರೆ ನೀರಾವರಿ ಭೂಮಿ ಅಥವಾ ಐದು ಎಕರೆ ಒಣಭೂಮಿ ದೊರೆಯುವಂತಾಗಬೇಕು. ಈ ರೀತಿಯ ಸಮಾನ ಪ್ರಮಾಣ ಹಂಚುವಿಕೆಗಾಗಿ ಜನರ ಸದಸದ್ವಿವೇಕವನ್ನು ಜಾಗೃತಗೊಳಿಸಲು ಸರ್ವೋದಯ ಸಮಾಜವು ಪ್ರಯತ್ನಿಸಬೇಕು. ಮುಂದಿನೆರಡು ವರ್ಷಗಳಲ್ಲಿ ಪ್ರತಿ ಹಳ್ಳಿಗೆ ಐದು ಎಕರೆಗಳಂತೆ ಸುಮಾರು ೫ ಲಕ್ಷ ಹಳ್ಳಿಗಳಿಂದ ೨೫ ಲಕ್ಷ ಎಕರೆ ಭೂಮಿಯನ್ನು ಈ ಕಾರ್ಯಕ್ಕಾಗಿ ಕೂಡಿಸಬೇಕು. ಒಕ್ಕಲತನದಲ್ಲಿ ಪರಿಶ್ರಮವುಳ್ಳ, ಭೂಮಿ ಬೇಕೆಂಬ ಇಚ್ಛೆಯಿರುವ ಮತ್ತು ಎರಡನೆ ಜೀವನ ಸಾಧನವಿಲ್ಲದಿರುವ ಜನರಲ್ಲಿ ಈ ಭೂಮಿ ಹಂಚಲ್ಪಡುವದು

ಕೇಂದ್ರೀಕೃತ ಉದ್ದಿಮೆಗಳು.

ಸರ್ವೋದಯ ಸ್ಥಾಪನೆಗಾಗಿ ಜೀವನದ ಪ್ರತಿಯೊಂದು ರಂಗದಲ್ಲಿ ಆರ್ಥಿಕ ಸಮಾನತೆ ಇರುವ ಸಮಾಜ ರಚನೆಗಾಗಿ ಪ್ರಗತಿಪರ ಹೆಜ್ಜೆಯಿಡುವದು ಅವಶ್ಯವಾಗಿದೆ. ಇದು ಪ್ರತಿಯೊಬ್ಬನಿಗೆ ಉದ್ಯೋಗ ಕೊಡುವದಕ್ಕೂ ಅಗತ್ಯವಾಗಿದೆ. ಇದು ಕೇವಲ ವಿಕೇಂದ್ರೀಕೃತ ಆರ್ಥಿಕ ವ್ಯವಸ್ಥೆ ಅಂದರೆ ಗ್ರಾಮೋದ್ಯೋಗಗಳ ಮೂಲಕ ಮಾತ್ರ ಸಾಧ್ಯವೆಂದು ನಾವು ನಂಬುತ್ತೇವೆ.

ಇದರ ಸಾಧನೆಗಾಗಿ ಮೊದಲ ಹೆಜ್ಜೆಯೆಂದು ಆಹಾರ ಮತ್ತು ಬಟ್ಟೆ ಸ್ವಾವಲಂಬನಗಳಿಗೆ ಆತಂಕವೊಡ್ಡುವ ಕೇಂದ್ರೀಕೃತ ಉದ್ದಿಮೆಗಳು ಬಹಿಷ್ಕರಿಸಲ್ಪಡಬೇಕು.

ಭೂದಾನ ಸಮಿತಿ.

ಭಾರತದ ಅನೇಕ ರಾಜ್ಯಗಳಿಗಾಗಿ ಭೂದಾನ ಸಮಿತಿಗಳು ರಚಿಸಲ್ಪಟ್ಟಿವೆ. ಅಂತನ್ನು ಪ್ರದೇಶಗಳಿಗಾಗಿ ನಿರ್ದಿಷ್ಟಪಡಿಸಿದಷ್ಟು ಭೂಮಿಯನ್ನು ಮತ್ತು ಇತರ ವಸ್ತುಗಳನ್ನು ದಾನವಾಗಿ ಪಡೆದು ಅವನ್ನು ಶ್ರೀ. ವಿನೋಬಾಜಿಯವರು ಹೇಳಿರುವ ತತ್ವಗಳ ಮೇಲೆ ಹಂಚುವ ಕೆಲಸವನ್ನು ಈ ಸಮಿತಿಗಳು ಮಾಡಬೇಕಾಗುವದು. ಸೇವಾಗ್ರಾಮದ ಸರ್ವ ಸೇವಾ ಸಂಘದ ಕಾರ್ಯದರ್ಶಿಗೆ ಬರೆದು ಈ ಪ್ರಾದೇಶಿಕ ಸಮಿತಿಗಳ ಯಾದಿಯನ್ನು ತರಿಸಿಕೊಳ್ಳಬಹುದು.

'ಕ. ವಿ.'

ಶಾಸನ ಸಭಾ ಕಾಂ. ಸದಸ್ಯರು ಖಾದಿಧಾರಿಗಳಾಗಬೇಕು

ಶಾಸನ ಸಭೆಯ ಕಾಂಗ್ರೆಸು ಸದಸ್ಯರು ಪಕ್ಷದ ಪ್ರತಿಜ್ಞಾ ಪತ್ರಕ್ಕೆ ಜೋಡಾಗಿ ಅಂಕಿತ ಹಾಕಬೇಕೆಂದೂ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ದಿಲ್ಲಿ ಶಾಸನ ಸಭಾ ಕಾಂಗ್ರೆಸು ಸದಸ್ಯರಿಗೆ ಕೇಳಿಕೊಂಡಿದೆ ಶಾಸನ ಸಭೆಯ ಕಾಂಗ್ರೆಸು ಪಕ್ಷದ ಸದಸ್ಯರು ಕಾಂಗ್ರೆಸಿನ ಪ್ರಾಥಮಿಕ ಸದಸ್ಯರಾಗಿರಬೇಕೆಂದೂ, ಖಾದಿಧಾರಿಗಳಾಗಬೇಕೆಂದೂ ಕೇಳಿಕೊಂಡಿದೆ.

ನಾವು ಚೈನಾದಿಂದ ಕಲಿಯಬೇಕು.

ಲೇ:— ಶ್ರೀ ಎಂ. ಎಸ್. ಮೊಣ್ಣಪ್ಪ, ಶಾನೂರು.

ಅಖಿಲ ಹಿಂದೂಸ್ಥಾನದಲ್ಲಿ ಪ್ರೌಢ ಮತದಾನ ಪದ್ಧತಿಗನುಸಾರವಾಗಿ ಚುನಾವಣೆ ನಡೆದು ಕಾಂಗ್ರೆಸ್ ಪಕ್ಷವು ಹಲವಾರು ಪಕ್ಷಗಳಿಗೆ ಎದುರಾಗಿ ಹೋರಾಡಿ ಒಂದೆರಡು ಪ್ರಾಂತ್ಯಗಳನ್ನುಳಿದು ಎಲ್ಲೆಲ್ಲೂ ಜಯ ಪಡೆಯಿತು. ಕೇಂದ್ರದಲ್ಲೂ ಕಾಂಗ್ರೆಸ್ ಸರಕಾರ ಸ್ಥಾಪನೆಯೂ ಯಿತು. ಮೂವತ್ತೈದು ವರ್ಷಗಳಿಂದ ಗಾಂಧೀಜಿಯ ನೇತೃತ್ವದಲ್ಲಿ ಬಾಳ ಬದುಕಿ ಸತತವಾಗಿ ದುಡಿದು ಪರದಾಸ್ಯವನ್ನಳಿಸಿ ಸ್ವಾತಂತ್ರ್ಯವನ್ನು ಗಳಿಸಿ ಮಣ್ಣಿನಂತಿದ್ದ ಹಿಂದೂಸ್ಥಾನದ ಪ್ರಜೆಗಳನ್ನು ಮಾನವರನ್ನಾಗಿ ಮಾಡಿದಂತಹ ಮಹಾಸಂಸ್ಥೆಯಿಂದು ಸ್ವಾತಂತ್ರ್ಯನಂತರ ಹಿಂದೂಸ್ಥಾನದಲ್ಲಿ ರಾಜ್ಯಾಡಳಿತೆಯನ್ನು ನಡೆಸುವುದೆಂದರೆ ಒಂದು ಹೆಮ್ಮೆಯ ವಿಷಯವಾಗಿದೆ. ರಾಜ್ಯಾಡಳಿತವನ್ನು ಹೊರಗಿನ ಶಕ್ತಿಯಿಂದ ನಡೆಸಲಾಗದು. ಅದನ್ನು ಹಿಂದೂ ಪ್ರಜೆಗಳ ಸಹಕಾರ ಸಹಾನುಭೂತಿಯಿಂದ ನಡೆಸಬೇಕಾಗಿದೆ. ಕಾಂಗ್ರೆಸ್‌ನಲ್ಲಿ ಅದೆಷ್ಟೋ ಕುಂದು ಕೊರತೆಗಳಿದ್ದಾಗ್ಯೂ ಅದನ್ನು ಮತದಾರರು ಪರಿಗಣಿಸದೆ ಹಳೆಯ ಸಂಸ್ಥೆ ಸ್ವರಾಜ್ಯವನ್ನು ಗಳಿಸಿದ ಸಂಸ್ಥೆ ಗಾಂಧೀಜಿಯ ನೇತೃತ್ವದಲ್ಲಿ ಬೆಳೆ ಸಂಸ್ಥೆ, ಅದು ಇನ್ನೂ ರಾಜ್ಯಾಡಳಿತವನ್ನು ನಡೆಸಬೇಕೆಂದು ಕೃತಜ್ಞತೆಯ ದೃಷ್ಟಿಯಿಂದ ಜನತೆಯು ಕಾಂಗ್ರೆಸ್ಸಿಗೆ ಜಯವನ್ನು ದೊರಕಿಸಿ ಕೊಟ್ಟಿದೆ. ಕಾಂಗ್ರೆಸ್ಸಿನ ಜಯವು ಹೆಚ್ಚಾಗಿ ಚುನಾವಣಾ ಚಿನ್ಹೆಯಾದ ಎತ್ತುಗಳ ಜಯವಲ್ಲದೆ ವ್ಯಕ್ತಿಗಳ ಜಯವಲ್ಲವೆನ್ನಬಹುದು. ಅರ್ಧಾಂಶ ಮತದಾರರು ವ್ಯಕ್ತಿಗಳನ್ನು ಕಂಡು ಕೇಳಿದವರಲ್ಲದಿದ್ದರೂ ಕಾಂಗ್ರೆಸಿನ ಪರವಾಗಿ ನಿಂತ ಹುರಿಯಾಳುಗಳಿಗೇ ತಮ್ಮ ಮತವನ್ನಿತ್ತಿದ್ದಾರೆ. ಇಂದು ಕಾಂಗ್ರೆಸಿನ ಉಮೇದುವಾರರುಗಳಲ್ಲಿ ಬಹಳ ಕುಂದು ಕೊರತೆಗಳಿವೆ. ಹಲವರು ಕಾಂಗ್ರೆಸ್ ತತ್ವಕ್ಕೆ ವ್ಯತಿರಿಕ್ತವಾಗಿದ್ದಾರೆ. ಆದರೂ ಅವರು ಕಾಂಗ್ರೆಸ್ ಹುರಿಯಾಳುಗಳಾಗಿ ಚುನಾವಣೆಗೆ ನಿಂತು ಕಾಂಗ್ರೆಸ್ಸಿನ ಹೆಸರಿನಲ್ಲಿ ಅಧಿಕಾರಕ್ಕೆ ಬಂದವರಾಗಿದ್ದಾರೆ. ಇನ್ನಾದರೂ ಈ ತರಹದ ಕಾಂಗ್ರೆಸ್ ಅಧಿಕಾರಿಗಳು ತಮ್ಮ ನ್ಯೂನತೆಯನ್ನು ತಿದ್ದಿಕೊಂಡು ಕಾಂಗ್ರೆಸ್ ತತ್ವಕ್ಕನುಸಾರವಾಗಿ ನಡೆದು ಗಾಂಧೀಜಿಯ ಮನೀಷೆಯಂತೆ ದೊರೆತ ಸ್ವರಾಜ್ಯವನ್ನು ನೆಲೆಗೊಳಿಸಬಹುದೆಂದು ಆಶಿಸಲಾಗಿದೆ.

ಜನತೆಯ ಜೀವನಮಟ್ಟವನ್ನು ಎತ್ತರಿಸುವುದೇ ನಮ್ಮ ಸರಕಾರದ ಆದ್ಯ ಗುರಿಯಾಗಿದೆ. ಈ ಗುರಿಯನ್ನು ಸಾಧಿಸಲು ಆರ್ಥಿಕ ಆವಶ್ಯಕತೆಯಿದ್ದಷ್ಟೇ ನೈತಿಕ ಆವಶ್ಯಕತೆ ಅನಿವಾರ್ಯವಾಗಿದೆ. ಇಂದು ಲೌಕಿಕದಲ್ಲಿ ದುಡ್ಡಿರುವವನೆ ದೊಡ್ಡಪ್ಪನೆನಿಸಿಕೊಂಡಿದ್ದರೂ ಆತನಲ್ಲಿ ನೈತಿಕ ಮಾರ್ಗದ ದೊಡ್ಡಸ್ತಿಕೆಯಿಲ್ಲ. ಆತನು ದುಡ್ಡಿಗಾಗಿ, ದುಡಿಯತೊಡಗಿ ಆತ್ಮವನ್ನು ಮರೆಯತೊಡಗಿದ್ದೇ ಅಲ್ಲದೆ ಶರೀರದ ಆವಶ್ಯಕತೆಗಳನ್ನು ಬದಿಗೊತ್ತಿ ಅಂಧನಾಗಿದ್ದಾನೆ. ಲಕ್ಷಾಧಿಪತಿಯಾಗಿದ್ದರೂ ಭಿಕ್ಷಾಧಿಪತಿಯು ಹೊಂದುತ್ತಿರುವ ಜೀವನದ ಸುಖವನ್ನು ಹೊಂದಿರಲಾರದವನಾಗಿದ್ದಾನೆ. ಇದಕ್ಕೆಲ್ಲಾ ನೈತಿಕ ಮಟ್ಟವನ್ನು ಎತ್ತರಿಸುವುದೇ ಉಪಾಯ. ಜನತೆಯು ಹಣಸಂಪಾದನೆಯ ವ್ಯಾಮೋಹವನ್ನು ತೊರೆದು ಗುಣವನ್ನು ಸಂಪಾದಿಸುವ ಕಡೆ ಸಾಗಬೇಕಿದೆ. ಹಣವೇ ಪ್ರಧಾನವೆಂಬ ಭಾವನೆಯಿಂದ ದೇವರ ಹೆಸರಿನಲ್ಲೂ ಹಣ ಸಂಪಾದನೆಯಾಗತೊಡಗಿದೆ. ನೌಕರರು ವೇತನಕ್ಕಾಗಿ ಪುರಸ್ಕಾರ ಹುಡುಕುತ್ತಲಿದ್ದಾರೆ. ಹಾಗಾಗಿ ಇಡೀ ಹಿಂದೂಸ್ಥಾನವೇ ಹಣಕ್ಕಾಗಿ ಬಾಯ್ತೆರೆಯುತ್ತಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಈ ರೀತಿಯ ಮನೋವೃತ್ತಿಯಿರುವ ದೇಶದಲ್ಲಿ ಗಾಂಧೀಜಿಯ ಮನೀಷೆಯಂತೆ ರಾಮರಾಜ್ಯವನ್ನೆಂತು ಕಟ್ಟಲಾಗುವುದು?

ಸ್ವಾತಂತ್ರ್ಯ ದೊರೆತು ಐದು ವರ್ಷಗಳಾದರೂ ಏನೊಂದೂ ಸಾಧಿಸಿದಂತಾಗಲಿಲ್ಲ. ಹೊಟ್ಟೆಯ ಹಿಟ್ಟಿಗೇ ಜನತೆಯು ಜುಟ್ಟು ಬಿಟ್ಟುಕೊಂಡು 'ಕ್ಯೂ' ನಲ್ಲಿ ನಿಂತು ಬಿಸಿಲಿನಲ್ಲಿ ಬೇಯುತಿದ್ದಾರೆ. ಕೆಲವರಿಗಂತೂ ನೆಲವೇ ಹಾಸಿಗೆ, ಆಕಾಶವೇ ಅರಮನೆಯಂತಾಗಿದೆ. ದುಡಿಯುವವರು ದುಡಿಯುತ್ತಲೇ ಇದ್ದಾರೆ. ದುಡಿಸುವವರು ದುರಾಚಾರಿಗಳಾಗುತಿದ್ದಾರೆ. ಇದಕ್ಕೆಲ್ಲಾ ಸರಕಾರವೇನು ಮಾಡಬೇಕೆಂಬುದೇ ಸಮಸ್ಯೆಯಾಗಿದೆ. ಇದಕ್ಕೆ ಸರಕಾರದ ಮೇಲಧಿಕಾರಿಗಳು ತಮ್ಮ ನೌಕರರಿಗೆ ಮಾದರಿಯಾಗಬೇಕು. ನಮ್ಮ ನೆರೆಯ ರಾಜ್ಯವಾದ ಚೈನಾ ದೇಶದಲ್ಲಿ ಸ್ವಾತಂತ್ರ್ಯ ಗಳಿಸಿದ ಎರಡೇ ವರ್ಷಗಳಲ್ಲಿ ಬಹಳ ಪ್ರಗತಿಯಾಗಿದೆಯೆಂದು ಅಲ್ಲಿಗೆ ಹೋಗಿದ್ದ ಹಿಂದೂಸ್ಥಾನದ ನಿಯೋಗಗೋಷ್ಠಿಯವರು ಈ ರೀತಿ ಹೇಳಿದ್ದಾರೆ:—

'ಅಲ್ಲಿ ಸಂಬಳದಲ್ಲಿ ಮತ್ತು ಕೂಲಿಯಲ್ಲಿ ವಿಶೇಷ ಅಂತರವಿಲ್ಲ. ಅಲ್ಲಿಯ ಯಾವ ಇಲಾಖೆಯಲ್ಲೇ ಆಗಲಿ, ಸಂಸ್ಥೆಯಲ್ಲೇ ಆಗಲಿ, ಜೀವನದ ಇತರ ಕಸಬಿನಲ್ಲೇ ಆಗಲಿ ಅತಿ ಅಲ್ಪ ಸಂಬಳಕ್ಕೂ ಅತಿ ಹೆಚ್ಚಿನ ಸಂಬಳಕ್ಕೂ ಇರುವ ಅಂತರ ಸಾಧಾರಣವಾಗಿ ೩ ಮತ್ತು ೧ಕ್ಕೆ ಇರುವ ಅಂತರಕ್ಕಿಂತ ಹೆಚ್ಚಾಗಿಲ್ಲ. ಸಂಬಳವನ್ನು ನಾಣ್ಯದ ರೂಪದಲ್ಲಿ ಕೊಡುತ್ತಾರಾದರೂ ನಿಜವಾಗಿಯೂ ಆಹಾರ ಧಾನ್ಯ ಬಟ್ಟೆ, ಜೀವನಕ್ಕೆ ಅತ್ಯಾವಶ್ಯಕವಾದ ಇತರ ವಸ್ತುಗಳ ಬೆಲೆ ಒಂದು ನಿಗದಿಯಾದ ಮೊತ್ತದ ಮೇಲೆ ಗೊತ್ತು ಮಾಡುತ್ತಾರೆ. ಈ ಪದಾರ್ಥಗಳ ಬೆಲೆ ವ್ಯತ್ಯಾಸವಾದರೆ ಅದನ್ನನುಸರಿಸಿ ಸಂಬಳ ಸಾರಿಗೆಗಳಲ್ಲೂ ವ್ಯತ್ಯಾಸವಾಗುತ್ತದೆ.

'ಅಲ್ಲಿಯ ಅಧ್ಯಕ್ಷ ಮಾವೋಗೆ ತಿಂಗಳಿಗೆ ಕೇವಲ ೬೦೦ ರೂಪಾಯಿ ಸಂಬಳ. ಸರಕಾರಿ ಇಲಾಖೆಗಳಲ್ಲಿ ತೀರ ಕಡಿಮೆ ಸಂಬಳ ರೂ. ೧೫೦. ತೀರ ಹೆಚ್ಚಿನ ಸಂಬಳ ರೂ ೩೫೦. ಅಲ್ಲಿನ ಒಂದು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ ಸಂಬಳಕ್ಕೂ, ಅಲ್ಲಿ ಕೆಲಸ ಮಾಡುವ ಒಬ್ಬ ಚಪ್ರಾಸಿ (ಜವಾನನ) ಯ ಸಂಬಳಕ್ಕೂ ಇರುವ ಅಂತರ ಇಷ್ಟೇ ಆಗಿದೆ. ನಮ್ಮ ರಾಷ್ಟ್ರಾಧ್ಯಕ್ಷರು ಎಷ್ಟು ರೂಪಾಯಿಗಳನ್ನು ತಿಂಗಳಿಗೆ ಹೊಂದಿಕೊಳ್ಳುತ್ತಿದ್ದಾರೋ ಅಷ್ಟೇ ಆಣೆಗಳನ್ನು ಮಾತ್ರ ಚೈನಾದೇಶದ ರಾಷ್ಟ್ರಾಧ್ಯಕ್ಷರು ಹೊಂದಿಕೊಳ್ಳುತ್ತಿದ್ದಾರೆ. ಈ ಸಂಬಳ ಕೂಲಿಗಳ ಮಟ್ಟ ಸಮ ಮಾಡುವ ಕಾರ್ಯಕ್ರಮದ ಪರಿಣಾಮವೆಂದರೆ, ಅಲ್ಲಿಯ ಅಧಿಕಾರಿಗಳಲ್ಲಿ ಪರಸ್ಪರ ಅಸೂಯೆ ಇಲ್ಲದಿರುವುದೇ ಆಗಿದೆ. ತನ್ನ ಮೇಲಾಧಿಕಾರಿಯಂತೆಯೇ ತಾನೂ ಒಂದು ಕಾರನ್ನು ಕೊಂಡುಕೊಳ್ಳುವುದಕ್ಕಾಗಿ ಲಂಚ ತೆಗೆದುಕೊಳ್ಳಬೇಕೆಂದು ಕೆಳಗಿನ ಅಧಿಕಾರಿಗಳಿಗೆ ಅನ್ನಿಸುವುದಿಲ್ಲ. ಅಥವಾ ಅವನ ಹೆಂಡತಿ ಮೇಲಧಿಕಾರಿಯ ಹೆಂಡತಿಯ ಬಟ್ಟೆ ಬರೆ, ಒಡವೆ ವಸ್ತುಗಳನ್ನು ನೋಡಿ ಕರುಬುವುದಿಲ್ಲ. ವಾಸ್ತವವಾಗಿ ಇಂದು ಚೀನಾದಲ್ಲಿ ಜನತೆಯ ಉಡುಪು ಪೋಷಾಕುಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಗುಮಾಸ್ತನಂತೆ ಕಾಣುವ ವೈಸ್ ಛಾನ್ಸಲರ, ವೈಸ್ ಛಾನ್ಸಲನಂತೆ ಕಾಣುವ ಗುಮಾಸ್ತ! ಇಬ್ಬರೂ ಇಸ್ತ್ರಿಯಿಲ್ಲದ ಪಂಚಾಯಿಗಳ ಸರಳವಾದ ನೀಲಿಪೋಷಾಕಿನಲ್ಲಿ! ಬದುಕಿನಲ್ಲಿ ಸರಳತೆ—ನಿಷ್ಠೆ ಇರುವ ಜನತೆ ಎಂದೂ ಲಂಚಕೋರರಾಗುವುದಿಲ್ಲ. ಅಲ್ಲಿ ಹೊಸ ಸರಕಾರ ಸ್ಥಾಪನೆಯಾದ ನಂತರ ಮೇಲಿನ ಅಧಿಕಾರಿಗಳಿಗೆ ಸಂಬಳವನ್ನು ಕಡಿಮೆಮಾಡಿ ಕೆಳಗಿನ ನೌಕರರಿಗೆ ಸಂಬಳವನ್ನು ಹೆಚ್ಚು ಮಾಡಿತು. ದೇಶದಾದ್ಯಂತವೂ ಹೊಸ ಬಾವಿಗಳನ್ನು ತೋಡಿಸಲು ಏರ್ಪಾಡು ನಡೆಯಿತು. ಇದೆಲ್ಲಾ ಯೋಜನೆಗಳಿಗೆ ಚೀಣಾ ಸರಕಾರವು ಹೊರಗಿನಿಂದ ಸಾಲವನ್ನು ಪಡೆಯಲಿಲ್ಲ. ಅಧಿಕಾಂಶ ನಿರಾವರಿ ಯೋಜನೆಗಳನ್ನು ಹಳ್ಳಿಗರ ಸಹಾಯದಿಂದಲೇ ನಿರ್ವಹಿಸಲಾಯಿತು. ಅಲ್ಲಿಯ ಮುಖಂಡರು ಸ್ವಾರ್ಥರಹಿತರಾದ ಸೇವಾದ ತತ್ಪರರಾದ ಕಾರ್ಯವರ್ಗದವರು. ಜನರಲ್ಲಿ ದೇಶಾಭಿಮಾನ ತುಂಬಿದರು. ಕಾರ್ಯೋನ್ಮುಖರನ್ನಾಗಿ ಮಾಡಿದರು. ತ್ಯಾಗಶೀಲತೆಯನ್ನು ಎಚ್ಚರಗೊಳಿಸಿದರು. ನವಚೀಣದಲ್ಲಿ ಸಂಗ್ರಾಮ ಮನೋಭಾವದ ಪ್ರಚಾರಕರಿಲ್ಲ. ಎಲ್ಲರೂ ಶಾಂತಿಪ್ರಿಯರು. ನವಚೀಣದಲ್ಲಿ ಮೂರು ಸದ್ಗುಣಗಳಿಗೆ ಪ್ರಾಶಸ್ತ್ಯವಿದೆ. 'ಸತ್ಯಸಂಧತೆ, ಸರಳತೆ, ಸೇವೆ' ಈ ಸದ್ಗುಣಗಳನ್ನು ಅನುಷ್ಠಾನಕ್ಕೆ ತರಲು ಮಾಡುತ್ತಿರುವ ಪ್ರಯತ್ನ ಸ್ತೋತ್ರಾರ್ಹವಾಗಿದೆ. ಚೀಣದ ರಾಷ್ಟ್ರೀಯ ಚಿತ್ತವೃತ್ತಿಗೆ ಈ ಮೂರು ಸದ್ಗುಣಗಳು ಅಡಿಗಲ್ಲಾಗಿದೆ.

ಆದರೆ ನಮ್ಮಲ್ಲಿ? ಸರಕಾರಿ ನೌಕರರಿಗೆ ಐವತ್ತೈದು ರೂಪಾಯಿಗಳಿಗೆ ಕಡಿಮೆಯಾಗದೆ ಸಂಬಳ ವಿತರಣೆಯಾಯಿತು. ಅದರೊಂದಿಗೆ ತುಟ್ಟಿಭತ್ಯ, ಪ್ರಯಾಣಭತ್ಯ, ಸೈಕಲ್ ಭತ್ಯ, ಮನೆಬಾಡಿಗೆ, ಫ್ಯಾಮಿಲಿ ಎಲೋಲೆನ್ಸ್, ಇತ್ಯಾದಿ ಸವಲತ್ತುಗಳನ್ನು ಕಲ್ಪಿಸಿಕೊಡಲಾಯಿತು. ನಿರಾವರಿ ಯೋಜನೆಗಳಿಗಾಗಿ ಲಕ್ಷ ಲಕ್ಷ ರೂಪಾಯಿ ಖರ್ಚುಮಾಡಿ ನಕ್ಷೆಬಿಡಿಸುವುದರಲ್ಲೇ ಮುಗಿಯಿತು. ಕೆಳಗಿನ ನೌಕರರಿಗೆ ಕಡಿಮೆ ಸಂಬಳವೂ ಮೇಲಿನ ನೌಕರರಿಗೆ ಹೆಚ್ಚಿನ ಸಂಬಳವೂ ಕೊಡಲಾಯಿತು. ನೌಕರರ ಜೀವನ ಮಟ್ಟವನ್ನು ಎತ್ತರಿಸಲಾಯಿತು. ವ್ಯವಸಾಯಗಾರರಿಗೆ ಕಡಿಮೆ ಪ್ರೋತ್ಸಾಹ ಕೂಡ ಇಲ್ಲದಾಗಿ ಹೆಚ್ಚು ಆಹಾರ ಬೆಳೆಯಲೆಂದು ಮಾಡುವ ಪ್ರಚಾರಗಳೆಲ್ಲಾ ಗಾಳಿಗೋಪುರಗಳಾದವು. ಪ್ರಚಾರಕ್ಕಾಗಿ ವ್ಯಯಮಾಡಿದ ಬೆಲೆಯಷ್ಟು ಹೆಚ್ಚು ಆಹಾರ ಬೆಳೆಯದಾಯಿತು. ಅನೇಕ ಕಾರಣಗಳಿಂದಾಗಿ ಸ್ವರಾಜ್ಯ ದೊರೆತಿದ್ದರೂ ಅದರಲ್ಲಿ ಸುರಾಜ್ಯ ನೆಲೆಸಾಗಿರುವುದಿಲ್ಲ. ರಾಷ್ಟ್ರೀಯ ಸರಕಾರವೆಂಬ ಪ್ರೇಮಭಾವನೆಯು ಜನತೆಯಲ್ಲಿ ಕುಂದುಬರದಾಗಿದೆ. ಕಾಂಗ್ರೆಸ್ಸಿನಲ್ಲಿ ವಿಶ್ವಾಸವಿಲ್ಲದಾಗಿದೆ. ಕಾಂಗ್ರೆಸು ಸಂಸ್ಥೆಯನ್ನು ಭದ್ರಗೊಳಿಸಲೋಸುಗ ಪ್ರಚಾರಕರಿಗೆ ವೇತನಕೊಟ್ಟು ನೇಮಿಸಬೇಕಾಗಿ ಬಂದಿದೆ. ಆ ಪ್ರಚಾರಕರೂ ತಾವು ಸತ್ಯಾಗ್ರಹಿಗಳೆಂದು ಹೇಳಿಕೊಳ್ಳುತ್ತಿದ್ದಾರೆ. ಚುನಾವಣೆಗೆ ಮೊದಲು ದೇಶಸೇವೆಮಾಡುವವರೆಂದೂ, ಸ್ವಾರ್ಥರಹಿತರೆಂದೂ ಪ್ರಚಾರಮಾಡಿ ಚುನಾವಣೆಯಲ್ಲಿ ಜಯಶಾಲಿಗಳಾದ ನ್ಯಾಯವಿಧಾಯಕ ಸಭೆಯ ಮೆಂಬರುಗಳು ಮಾಸಿಕ ವೇತನವನ್ನು ಜೊತೆಗೆ ಮೀಟಿಂಗಿನಲ್ಲಿ ಭಾಗವಹಿಸಿದ ದಿನಗಳಿಗೆ ಬೇಟಾವನ್ನೂ ಪಡಕೊಳ್ಳುವಂತಾಗಿದೆ. ಆದರೆ ನಮ್ಮ ಹಿಂದೂಸ್ಥಾನದಲ್ಲೂ ಜನತೆಯು ಹಣ ಸಂಪಾದನೆಗಾಗಿ ಹೆಣಗಾಡುತ್ತಿದೆಯೆಂದು ಹೇಳಬಹುದು. ಹಣದ ಎದುರಿನಲ್ಲಿ ಮತ್ತಾವ ಗುಣವೂ ನಿಲ್ಲದಾಗಿದೆ.

ಮಹಾತ್ಮಾಜಿಯವರು ಒಮ್ಮೆ 'ಭಾರತದ ಪ್ರಧಾನ ಮಂತ್ರಿಯು ರೈತನೇ ಆಗಬೇಕು. ಆತನು ಮಣ್ಣಿನ ಮನೆಯಲ್ಲಿ ವಾಸಮಾಡಿಕೊಂಡು ನೆಲದ ಮೇಲೆ ಮಲಗಿ, ಬಿಡುವಿದ್ದಾಗ ತನ್ನ ಹೊಲದಲ್ಲಿ ದುಡಿಯುತ್ತಾನೆ.' ಅಂದಿದ್ದರು. ಅದು ಅವರ ಕನಸಿನ ರಾಮರಾಜ್ಯದ ಪ್ರಧಾನ ಮಂತ್ರಿಯ ಯೋಗ್ಯತೆಯಾಗಿರಬೇಕು. ಆದರೆ ಈಗ ನಮ್ಮ ಸ್ವರಾಜ್ಯದ........?

ಶ್ರೀ ಕೆ. ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

Edited printed and published by P I Beliapa at 'Kodagu' Press, Mercara, for Kodagu Ltd.

Licence No. 60.
Licenced to Post without Prepayment

Reg. No. M. 1580.
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ಬಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦	ತಾರೀಕು [illegible]ನೇ ಶುಕ್ರವಾರ	ಸಂಚಿಕೆ ೪೯

ಅಮೂಲ್ಯ ಸಂದರ್ಭ.

ಕಳೆದ ಚುನಾವಣೆಯ ಕಾಲಕ್ಕೆ ನಮ್ಮ ಹಳ್ಳಿಗಳನ್ನು ಸುತ್ತಿ ಮನೆ ಮನೆಗೆ ಹೋಗಿ ಮಾಡಿದ ಅನುಭವದಿಂದ ಹೇಳುವದಾದರೆ ಕೊಡಗಿನ ಗ್ರಾಮಸ್ಥನಲ್ಲಿ ಸಾಮಾನ್ಯ ಜ್ಞಾನವು ತುಂಬಾ ಇರುವದಲ್ಲದೆ ಅತನಲ್ಲಿ ತೀವ್ರ ರಾಷ್ಟ್ರ ದೇಶಪ್ರೇಮವು ಅಡಗಿರುವದರಲ್ಲಿ ಸಂಶಯವಿಲ್ಲ. ಅತನಲ್ಲಿ ಸಾಕಷ್ಟು ರಾಜಕೀಯ ಜಾಗ್ರತಿ ಇದೆ. ಅತನಲ್ಲಿ ವಿಶಾಲತೆಯೂ, ಜಾತ್ಯತೀತ ದೃಷ್ಟಿಯೂ ಇದೆ. ಆದ್ದರಿಂದ ಚುನಾವಣಾ ಘೋಷಣೆಗಳಿಗೂ ಅಲ್ಲಸಲ್ಲದ ಪ್ರಚಾರಗಳಿಗೂ ಅತನು ಮರುಳಾಗಲಾರನು. ಇಂಥಾ ಪ್ರಜೆಗಳಿರುವ ದೇಶದಲ್ಲಿ ನಿಜವಾದ ಪ್ರಜಾ ಪ್ರಭುತ್ವ ಸರ

ಕೂಡ ಈ ದುರ್ಗುಣಗಳಿಂದ ನಿರ್ಲಿಪ್ತನೆಂದು ಹೆಸರು ಪಡೆಯಬೇಕು. ಈ ಹೆಸರು ಪಡೆಯಲು ಅಶಕ್ತರಾದವರನ್ನು ಅಧಿಕಾರದಿಂದ ತೆಗೆದು ಹಾಕಬೇಕು. ಪ್ರಥಮವಾಗಿ ತಮ್ಮ ಆತ್ಮ ಶುದ್ಧಿ ಹಾಗೂ ತಮ್ಮ ಮನೆ ಶುದ್ಧಿ ಮಾಡಿ ಆಡಳಿತಗಾರರು ಮುಂದೆ ಕಾಲಿಕ್ಕಬೇಕಾಗಿದೆ. ಮಂತ್ರಿಗಳು ಬಯಸಿದಂತೆ ಆಡಳಿತ ಚಕ್ರವು ಉರುಳದಿದ್ದರೆ ಯೋಚಿಸಿದ್ದೊಂದು ಆಗುವದು ಮತ್ತೊಂದು ಎಂದ ಹಾಗಾಗುವದು. ಅದ್ದರಿಂದ ಆಡಳಿತವು ಸರಾಗವಾಗಬೇಕಾದರೆ ನೀತಿ ಬಾಹಿರ ಅಧಿಕಾರಿಗಳನ್ನೂ, ಅಲಸಿ ಕೆಲಸಗಾರರನ್ನೂ ತೆಗೆದು ಹಾಕಬೇಕು. ಆಡಳಿತ ನಡೆಸುವ ಈ ಯಂತ್ರ ಯೋಗ್ಯವಾಗಿಲ್ಲದಿದ್ದರೆ ಗ್ರಾಮೋ

ನಮ್ಮ ಕಾಂಗ್ರೆಸ್ ಮಂತ್ರಿ ಮಂಡಳದ ಜವಾಬ್ದಾರಿ.

ಲೇ:— ಶ್ರೀ ಬಿ. ಡಿ. ಗಣಪತಿ.

ಕಾರವನ್ನು ಕಟ್ಟುವದು ಸುಲಭವೆನ್ನಬಹುದು.

ಮತದಾರನಾದ ಈ ಗ್ರಾಮಸ್ಥನು ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಓಟು ಕೊಟ್ಟು ಅದಕ್ಕೆ ಅಪ್ರತಿಮ ಜಯವನ್ನು ಗಳಿಸಿ ಕೊಟ್ಟಿದ್ದಾನೆ. ಏಕೆಂದರೆ ಪಂಡಿತ ನೆಹರೂರವರ ಮುಂದಾಳ್ತನದಲ್ಲಿರುವ ಕಾಂಗ್ರೆಸು ಹಿಂದೂದೇಶದ ಬಲವಾದ ಸಂಸ್ಥೆ. ಅದನ್ನು ಬಿಟ್ಟು ದೇಶದ ಆಡಳಿತ ಜವಾಬ್ದಾರಿಯನ್ನು ಹೊರಬಲ್ಲ ಶಕ್ತ ಸಂಸ್ಥೆ ಸಧ್ಯಕ್ಕಿಲ್ಲ. ಅದ್ದರಿಂದ ಈ ಸಂಸ್ಥೆಗೆ ಪುನಹ ಐದು ವರ್ಷ ಅಧಿಕಾರ ದಾನವನ್ನು ಮತದಾರನು ಕೊಟ್ಟಿದ್ದಾನೆ. ಈ ಐದು ವರ್ಷಗಳ ಜೀವದಾನವು ಕಡೆಯ ಕೊಡುಗೆ ಎಂಬುದು ಕಳೆದ ಚುನಾವಣೆಯಲ್ಲಿ ಗೋಚರವಾಗುತ್ತಿತ್ತು. ಕಾಂಗ್ರೆಸ್ಸಿನವರು ಈ ಅವಕಾಶದ ಸದುಪಯೋಗಪಡಿಸಿ ಮತದಾರನ ನ್ಯಾಯಸಮರ್ಪಕವಾದ ಆಸೆ ಭರವಸೆಗಳನ್ನು ಈಡೇರಿಸದಿದ್ದರೆ ಅತನು ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ವಿರುದ್ಧ ಮತ ಕೊಡಲು ಹಿಂಜರಿಯನು. ಆದುದರಿಂದ ಈ ಐದು ವರ್ಷಗಳಲ್ಲಿ ಕಾಂಗ್ರೆಸ್ ಮಾಡಬಹುದಾದ ಕೆಲಸದ ಮೇಲೆ ಅದರ ಅಳಿವೂ, ಉಳಿವೂ ನಿಂತಿದೆ.

ಪ್ರಥಮ ಆವಶ್ಯಕತೆ.

ಕಾಂಗ್ರೆಸು ನಿರ್ಧಾಯಕವಾಗಿ ಹಾಗೂ ಪರಿಣಾಮಕಾರಕವಾಗಿ ಕೆಲಸ ಮಾಡುವದು ಸಾಧ್ಯವಾಗಬೇಕಾದರೆ ತಾನು ಕೈಕೊಂಡ ಕಾರ್ಯ ಪಥದಲ್ಲಿ ಅಡ್ಡಿ ಆತಂಕಗಳು ಬಾರದಂತೆ ಎಚ್ಚರಿಕೆ ವಹಿಸಬೇಕು. ತನ್ನ ಕಾರ್ಯಕ್ರಮಕ್ಕೆ ದೇಶೀಯರೆಲ್ಲರ ಬೆಂಬಲ ದೊರೆಯುವ ವಾತಾವರಣವನ್ನು ಕಲ್ಪಿಸಬೇಕು. ವಿವಿಧ ರಾಜಕೀಯ ಪಕ್ಷಗಳು ಪ್ರತಿ ಹೆಜ್ಜೆಯಲ್ಲೂ ಅಡ್ಡಗಾಲು ಹಾಕಲು ಆಸ್ಪದ ಕಲ್ಪಿಸದೆ ಜವಾಬ್ದಾರಿ ಹೊತ್ತವರು ನಿರ್ಭಯದಕವಾಗಿ ತಮ್ಮ ಕಾರ್ಯಕ್ರಮಗಳನ್ನು ಜಾರಿಯಲ್ಲಿ ತರುವಂತೆಯೂ, ಅದಕ್ಕೆ ಜನತೆಯ ಪ್ರೋತ್ಸಾಹ ದೊರೆಯುವಂತೆಯೂ ಮಾಡಬೇಕು. ಈ ದೃಷ್ಟಿಯಿಂದ ಹಳೆಯ ದ್ವೇಷ ಅಸೂಯೆಗಳನ್ನು ಮರೆಯುವದಲ್ಲದೆ ಚುನಾವಣೆಯ ಕಾಲದ ಕಹಿ ನೆನಪುಗಳನ್ನು ಬಿಡಬೇಕು. ಪ್ರೀತಿಯಿಂದ ಐಕ್ಯತೆ, ಸಖ್ಯ, ಪ್ರಗತಿ ವಿನಾ ಪ್ರತೀಕಾರದಿಂದಲ್ಲ. ಮಧ್ಯಪ್ರದೇಶ ಮುತ್ತಿತರ ಅನೇಕ ಸಂಸ್ಥಾನಗಳಲ್ಲಿನ ಬಿಕ್ಕಟ್ಟು ಪರಿಹಾರವಾಗಿ ಒಗ್ಗಟ್ಟು ನೆಲೆ ನಿಂತಿದೆ. ಇದರಂತೆ ಎಲ್ಲೆಡೆಯಲ್ಲೂ ಆಗಬೇಕು. ಈ ಒಗ್ಗಟ್ಟು, ಐಕ್ಯತೆಯಿಂದಲೆ ಮಾತ್ರ ಅಧಿಕಾರ ವಹಿಸಿದ ಕಾಂಗ್ರೆಸ್ ಮಂತ್ರಿ ಮಂಡಲವು ಉಪಯುಕ್ತ ಕಾರ್ಯ ಮಾಡಲು ಸಾಧ್ಯವಾಗುವದು.

ಈ ಒಗ್ಗಟ್ಟು, ಐಕ್ಯತೆ ಕಾರ್ಯ ಸಾಧನೆಗೆ ಮಾರ್ಗವಲ್ಲದೆ ಅದೇ ಚರಮ ಗುರಿಯಲ್ಲ. ಕಾಂಗ್ರೆಸ್ ಸಂಸ್ಥೆಯೊಳಗೆ ಒಗ್ಗಟ್ಟಿದ್ದರೆ ಅದರಿಂದಲೇ ಕಾರ್ಯ ಸಾಧಿಸಿದಂತಾಗಲಿಲ್ಲ. ಬಡ ಮತದಾರನಿಗೆ ಸ್ವರಾಜ್ಯದ ಅನುಭವವಾಗುವಂತಾಗಬೇಕು. ಹೇಳ ಹೆಸರಿಲ್ಲದೆ ಅನಾಮಧೇಯನಾಗಿ ಉಳಿದಿರುವ ಜನತೆಯ ಹಿತ ಕೆಲಸಗಳು ಶೀಘ್ರವಾಗಿ ಆಗಬೇಕು. ತಮ್ಮ ಹಿತವಾಗುವದೆಂದು ವರ್ಷ ವರ್ಷಗಳಿಂದ ಕಾದು ಕುಳಿತಿರುವ ಜನತೆಯ ನಿರಾಸೆಯನ್ನು ನಿವಾರಿಸಬೇಕು. ಈಗಾಗಲೇ ಸಮಯ ಮೀರಿದೆ. ಸ್ವಾತಂತ್ರ್ಯ ದೊರೆತು ಐದು ವರ್ಷಗಳಾಗಿದ್ದರೂ ಸ್ವಾತಂತ್ರ್ಯದ ಅನುಭವ ಪಡೆಯದ ಜನತೆಗೆ ನೆರವು ಶೀಘ್ರ ಬರಬೇಕು. ಆದ್ದರಿಂದ ಮಂತ್ರಿ ಮಂಡಳವು ವಿಳಂಬ ಮಾಡದೆ ಶೀಘ್ರ ಕಾರ್ಯ ಪ್ರವೃತ್ತವಾಗಬೇಕು. ಅತೃಪ್ತ ಜನತೆಯು ಗಾಳಿ ಬಂದತ್ತ ತಿರುಗುವ ಸಾಧ್ಯತೆ ಹೆಚ್ಚು. ಹಿಂದೂದೇಶದಲ್ಲಿ ಉಗ್ರ ಸಾಮ್ಯವಾದವು ತಲೆ ಎತ್ತಲು ಕಾಂಗ್ರೆಸ್ ಸರಕಾರಗಳ ಮಂದ ವರ್ತನೆಯೇ ಕಾರಣವೆನ್ನಬಹುದು. ಜನಹಿತ ಸಾಧಿಸಲು ಐದು ವರ್ಷಗಳು ಬೇಕಿಲ್ಲ. ಒಂದೇ ವರ್ಷದಲ್ಲಿ ಅಸಾಧ್ಯವನ್ನು ಮಾಡಿ ತೋರಿಸಬಹುದು. ಚೈನಾವು ಎರಡು ವರ್ಷಗಳಲ್ಲಿ ಅಮೋಘ ಪವಾಡವನ್ನೆ ಮಾಡಲಿಲ್ಲವೇ?

ಈ ಮೋಹ ಬೇಡ

ಕೈಕೊಂಡ ಕಾರ್ಯವು ಜಯಪ್ರದವಾಗಬೇಕಾದರೆ ಹಲವು ಅವಶ್ಯಕತೆಗಳಿವೆ. ಈ ಅವಶ್ಯಕತೆಗಳನ್ನು ಕೈಗೂಡಿಸಿಕೊಳ್ಳಬೇಕಾದುದು ಅತ್ಯಗತ್ಯ. ಸರಕಾರವು ಬಯಸಿದ ಹಿತವು ಜನತೆಗೆ ಆಗಬೇಕಾದರೆ ಮಧ್ಯವರ್ತಿ ಅತಂಕಗಳಾಗಿ ಬರುವ ಪಕ್ಷ ಸಾಧನೆ, ಜಾತೀಯತೆ, ಲಂಚಗುಳಿತನ, ಸ್ವಾರ್ಥ ಹಿತಸಾಧನೆ ಮೊದಲಾದವುಗಳನ್ನು ನಿರ್ಮೂಲನ ಮಾಡಬೇಕು. ಒಂದು ದೇಶಕ್ಕೆ ಬರುವ ಯಾವುದೇ ಆಪತ್ತನ್ನು ಜನತೆಯು ಧೈರ್ಯದಿಂದ ಎದುರಿಸಿ ಅದಕ್ಕಾಗಿ ವರ್ಣನಾತೀತ ಸಂಕಷ್ಟಗಳನ್ನು ಸಹಿಸಬಲ್ಲದು. ಆದರೆ ಸರಕಾರದ ಆಡಳಿತದಲ್ಲಿ ಲಂಚ [illegible], ಜಾತೀಯತೆ, ಪಕ್ಷ ಸಾಧನೆಗಳನ್ನು ಅದು ಸಹಿಸಲಾರದು. ಈ [illegible] ಯಾಗಿ [illegible] ಆಡಳಿತ ನಿರ್ಮಲವಾಗಿ [illegible] ಅನೇಕ ಸರಕಾರಗಳು ಉರುಳಿ ಬಿದ್ದವು. ಸಾರ್ವಜನಿಕ ಜವಾಬ್ದಾರಿ ಹೊತ್ತ ಪ್ರತಿ ಒಬ್ಬನೂ

ಜನವಾಗದು. ಸರಕಾರದ ಆಡಳಿತ ಚಕ್ರ ಸುತ್ತುವದು ಬಹು ವಿಳಂಬವಾಗಿ ಎಂಬ ದೂರು ಹಿಂದಿನಿಂದಲೂ ಇದೆ. ಆಫೀಸಿಗೆ ಮುಂದಾಗಿ ಕೊಟ್ಟ ಅರ್ಜಿ ಅಧಿಕಾರಿಯ ಸಹಿ ಪಡೆದು ಆಫೀಸು ದಾಟಬೇಕಾದರೆ ತಿಂಗಳು ಸಮಯ ಹಿಡಿದರೆ ಕೆಲಸ ಹೇಗಾಗಬೇಕು? ಅದ್ದರಿಂದ ಆಫೀಸು ಕೆಲಸಗಾರರು ಚುರುಕಾಗುವಂತೆ ಮಾಡುವದು ಅವಶ್ಯ.

ಪ್ರಚಾರ ಬೇಕು.

ಜನಪ್ರಿಯ ಪ್ರಜಾ ಸರಕಾರವು ತನ್ನ ಪ್ರಯತ್ನದಲ್ಲಿ ಜಯಪ್ರದವಾಗಬೇಕಾದರೆ ಆ ಸರಕಾರವು ಮಾಡುವ ಕೆಲಸ ಕಾರ್ಯಗಳು ಜನತೆಗೆ ತಿಳಿಯಬೇಕು. ಜನತೆಯ ಅಭಿಪ್ರಾಯವನ್ನರಿತು ಜನರ ಸಹಕಾರವನ್ನು ಪಡೆದು ವರ್ತಿಸುವ ಸರಕಾರವೇ ಜನಪ್ರಿಯವಾಗುವದಲ್ಲದೆ ಜನ

THE JUBILEE INSURANCE CO., LTD.

One of the very few in the feild of Insurance that has been declaring BONUS to its policy holders from its very insception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmond Road, Bangalore.

Our Chief Agents:-THE ORIENTAL ENTERPRISES, BANGALORE I.

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮಾದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:-ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,

8 41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

ತೆಗೆ ಹಿತ ಮಾಡಿದರೂ ಜನತೆಗೆ ಅದು ತಿಳಿಯದಿದ್ದರೆ ಅಪಾಯವಿದ್ದೇ ಇದೆ. ಆದ್ದರಿಂದ ಯೋಗ್ಯ ರೀತಿಯ ಪ್ರಚಾರದ ಅವಶ್ಯಕತೆ ತುಂಬಾ ಇದೆ. ಸರಕಾರದ ಆಡಳಿತ ನೀತಿಗಳು, ಕಾಯಿದೆ ಕಾನೂನುಗಳು ಜನತೆಗೆ ತಿಳಿಸಬೇಕು. ಜನತೆಯ ಬೇಕು ಬೇಡಿಕೆಗಳು ಸರಕಾರಕ್ಕೂ ತಿಳಿಯಬೇಕು. ಈ ಪರಸ್ಪರ ಸಂಬಂಧವನ್ನು ಹುಟ್ಟಿಸಿ ಪ್ರಜಾಪ್ರಭುತ್ವದ ಸಾಧನೆಗೆ ಸಹಕಾರಿಯಾದ ಪತ್ರಿಕೆಗಳು ಬೇಕು. ಜನತೆಯೊಡನೆ ಸಂಬಂಧವಿಟ್ಟುಕೊಳ್ಳದ ಯಾವ ಸರಕಾರವೂ ಹೆಚ್ಚು ಕಾಲ ಬಾಳಲಾರದು. ಅನೇಕ ವೇಳೆ ಜನಸಾಮಾನ್ಯರಿಂದ ಅತ್ಯುಪಯುಕ್ತ ಸಲಹೆಗಳು ಸರಕಾರಕ್ಕೆ ದೊರೆಯುವವು. ಆದ್ದರಿಂದ ಈ ಪ್ರಚಾರಕ್ಕೆ ತಕ್ಕ ವ್ಯವಸ್ಥೆಯನ್ನು ಸರಕಾರ ಮಾಡಬೇಕು. ಪತ್ರಿಕೆಗಳನ್ನು ತಮ್ಮ ಸ್ನೇಹಿತರೆಂದು ಕಂಡು ವರ್ತಿಸಬೇಕು.

ಆರ್ಥಿಕ ಅಭಿವೃದ್ಧಿ

ಹಿಂದೂದೇಶದ ಮುಂದಿರುವ ಮಹಾ ಸಮಸ್ಯೆಯೆಂದರೆ ಹಿಂದೀಯನ ಅಳತೆಗೆ ಮೀರಿದ ಬಡತನ. ಕೊಡಗಿನ ಸಾಮಾನ್ಯ ಜನ ಜೀವನದ ಕತೆಯೂ ದರೂ ಇದರಿಂದ ಭಿನ್ನವಾಗಿಲ್ಲ. ಈ ಬಡತನದ ನಿವಾರಣೆಯಾಗದಿದ್ದರೆ ದೇಶದಲ್ಲಿ ಹೆಚ್ಚಿನ ಪ್ರಗತಿ ಸಾಧ್ಯವಿಲ್ಲ. ಹೊಟ್ಟೆ ಬಟ್ಟೆಯ ವಿಚಾರವೇ ಜೀವನದ ಸರ್ವಸ್ವವಾದರೆ ಯಾವ ಉಪದೇಶವೂ ಪರಿಣಾಮಕಾರಿಯಾಗದು. ರೊಟ್ಟಿ, ಬಟ್ಟೆಯ ವಿಚಾರವಲ್ಲದೆ ಬೇರೆ ವಿಚಾರ ಅವರಿಂದ ಸಾಧ್ಯವಾಗದು. ಆದ್ದರಿಂದಲೇ ಈ ಪರಿಸ್ಥಿತಿಯ ನಿವಾರಣೆ ಮೊದಲು ಆಗಬೇಕು. ನಿರುದ್ಯೋಗ ಸಮಸ್ಯೆ ನಿವಾರಣೆಯಾಗಬೇಕು. ಹಳ್ಳಿಯ ರೈತನು ವರ್ಷಕ್ಕೆ ಆರು ತಿಂಗಳು ನಿರುದ್ಯೋಗಿಯಾಗಿರತ್ತಾನೆ. ಇದರ ನಿವಾರಣೆಯಾಗಬೇಕಾದರೆ ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹ ಕೊಡಬೇಕು. ಕೊಡಗಿನಲ್ಲಿ ನೂಲುವುದು, ನೇಯುವುದು, ಎಣ್ಣೆ ತಯಾರಿ, ಹಾಲು ಸರಬರಾಯಿ, ಮರ ಕೆಲಸ, ಬಡಗಿ ಕೆಲಸ ಮೊದಲಾದುವನ್ನು ಕೈಕೊಳ್ಳಬಹುದಾಗಿದೆ. ಕೊಡಗಿನಲ್ಲಿ ವಿಪುಲವಾಗಿ ಬೆತ್ತ, ಬಿದಿರು, ಮರಗಳಿರುವುದರಿಂದ ಇವಕ್ಕೆ ಸಂಬಂಧಿಸಿದ ನೂರಾರು ಕೈಗಾರಿಕೆಗಳ ಸಾಧ್ಯತೆ ಇದೆ. ಇವಕ್ಕೆ ಸರಕಾರವು ಮುಂದೆ ನಿಂತು ಕಾರ್ಯ ಕೈಕೊಳ್ಳಬೇಕು. ಇದರಿಂದ ದೊಡ್ಡ ಕೈಗಾರಿಕೆಗಳಿಗೆ ಪೆಟ್ಟು ಬೀಳಬಹುದೇನೋ ನಿಜ. ಆದರೆ ಇಂಥಾ ಪೆಟ್ಟು ಕೊಡದಿದ್ದರೆ ಉಗ್ರ ಸಮತಾವಾದವನ್ನು ತಡೆಗಟ್ಟುವುದು ಅಸಾಧ್ಯವಾಗುವುದು.

ಕಂದಾಯದ ಗುರಿ ಏನು?

ಜನತೆಯು ಇಂದಿನ ಬಡತನದ ಸ್ಥಿತಿ ಸುಧಾರಿಸಬೇಕಾದರೆ ನಮ್ಮ ಸರಕಾರದ ಆರ್ಥಿಕ ನೀತಿಯ ಕ್ರಮ ಬದಲಾಗಬೇಕು. ಈಗಿನ ಸ್ಥಿತಿಯಂತೆ ಬಡ ರೈತನು ತೆರುವ ಕಂದಾಯದ ಪ್ರತಿಫಲವಾಗಿ ಅವನಿಗೆ ಹೆಚ್ಚಿನ ಸೌಕರ್ಯ ದೊರೆಯುತ್ತಿಲ್ಲ. ಸಾಮಾನ್ಯವಾಗಿ ಹೆಚ್ಚು ಹಣ ಪಟ್ಟಣಗಳ ಮತ್ತು ಅಲ್ಲಿರುವ ಜನತೆಯ ಹಿತಕ್ಕೇ ಖರ್ಚಾಗುತ್ತಿದೆ. ಒಂದು ಶಾಲೆ, ಒಂದು ಆಸ್ಪತ್ರೆ, ಒಂದು ರಸ್ತೆ ಎಲ್ಲವೂ ಪಟ್ಟಣದ ಹಿತಕ್ಕಾಗಿ. ಗ್ರಾಮಾಂತರ ಜನತೆಗೆ ಹೆಚ್ಚಿನ ಹಿತವಾಗುತ್ತಿಲ್ಲ. ಆದ್ದರಿಂದ ದಿನೇ ದಿನೇ ಪಟ್ಟಣಗಳು ಬೆಳೆದು ಹಳ್ಳಿಯು ಅವನತಿಯನ್ನು ಹೊಂದುತ್ತಿದೆ. ಇದು ನಿಲ್ಲಬೇಕು. ಸರಕಾರದ ಆದಾಯದ ಬಹು ಭಾಗವು ಗ್ರಾಮದ ಜನರ ಹಿತಕ್ಕಾಗಿ ಖರ್ಚಾಗಬೇಕು. ಮುಂದಿನ ಬಡ್ಜೆಟ್ಟನ್ನು ತಯಾರಿಸುವಾಗ ಜನಪ್ರಿಯ ಮಂತ್ರಿಗಳು ಈ ಬಗ್ಗೆ ಗಮನವಿಡಬೇಕು.

ಗ್ರಾಮ ಪಂಚಾಯಿತ ಸಭೆ

ಸರಕಾರವು ಎಷ್ಟೇ ದಕ್ಷವಾದುದಿರಲಿ, ಮಂತ್ರಿಗಳು ಮತ್ತು ಇತರರು ಎಷ್ಟೇ ಆಸ್ಥೆಯಿಂದ ಕೆಲಸ ಮಾಡುತ್ತಿರಲಿ, ಸರಕಾರದ ಪ್ರಯತ್ನವು ಸಫಲವಾಗಬೇಕಾದರೆ ಸರಕಾರವು ನಮ್ಮದೆಂಬ ಭಾವನೆ ಜನತೆಯಲ್ಲಿ ಬರುವಂತೆ ಮಾಡಬೇಕು. ಆಡಳಿತದಲ್ಲಿ ಜನತೆಯನ್ನೂ ಪಾಲುದಾರರನ್ನಾಗಿ ಮಾಡಬೇಕು. ಅವರಿಗೂ ಆಡಳಿತದ ಜವಾಬ್ದಾರಿ ಕೊಡಬೇಕು. ಅದಕ್ಕಾಗಿ ಗ್ರಾಮಪಂಚಾಯತ ಸಭೆಗಳನ್ನು ನೇಮಿಸಿ ಸರಕಾರವು ಅದಕ್ಕೆ ಧನ ಸಹಾಯವಲ್ಲದೆ ಯೋಗ್ಯ ಸಲಹೆ ಕೊಟ್ಟು ಜನತೆಯು ತಮ್ಮನ್ನು ತಾವೇ ಆಳಿಕೊಳ್ಳುವ ವಿಧಾನವನ್ನು ಕಲಿಸಬೇಕು. ಗ್ರಾಮದ ಜನರು ಒಗ್ಗಟ್ಟಾದರೆ ಗ್ರಾಮದ ಹಲವು ಅವಶ್ಯಕತೆಗಳನ್ನು ಅವರೇ ಒದಗಿಸಿಕೊಳ್ಳಬಹುದಾಗಿದೆ. ಮಧ್ಯ ಪ್ರದೇಶದಲ್ಲಿ ಸಾವಿರಾರು ಗ್ರಾಮ ಪಂಚಾಯಿತಗಳು ಕೆಲಸ ಮಾಡುತ್ತಿವೆ. ಗ್ರಾಮದ ರಸ್ತೆ, ಬಾವಿ, ಕೆರೆ, ಕಟ್ಟಡಗಳನ್ನು ಅವರೇ ಮಾಡಿಕೊಳ್ಳುತ್ತಿದ್ದಾರೆ. ನಗರಗಳಲ್ಲಿ ಅರಮನೆಗಳಂತೆ ಆಸ್ಪತ್ರೆ ಕಟ್ಟುವುದರ ಬದಲು ಪ್ರತಿ ಹಳ್ಳಿಯಲ್ಲಿ ಸಣ್ಣ ಔಷಧ ಕೇಂದ್ರಗಳನ್ನು ಏರ್ಪಡಿಸುವುದು ಹಿತಕರ. ನಗರದ ರಸ್ತೆಗಳಿಗೆ ಟಾರು ಹಾಕುವುದರ ಬದಲು ಗ್ರಾಮಾಂತರಗಳಲ್ಲಿ ಕಲ್ಲು ಹಾಕಿದ ರಸ್ತೆ ಮಾಡುವುದು ಉಪಯುಕ್ತ. ಚುನಾವಣಾ ಸಮಯದಲ್ಲಿ ಹಳ್ಳಿ ಹಳ್ಳಿ ತಿರುಗಿದ ಅನುಭವದಿಂದ ಹೇಳಬೇಕಾದರೆ ಹಲವು ಗ್ರಾಮಗಳಿಗೆ ರಸ್ತೆಗಳೇ ಇಲ್ಲ. ಪರಿಣಾಮವಾಗಿ ಅವರ ಬೆಳೆಗಳಿಗೆ ಯೋಗ್ಯ ಬೆಲೆ ದೊರೆಯದು. ಆದ್ದರಿಂದ ಮಂತ್ರಿ ಮಂಡಳವು ಮಹಾ ಯೋಜನೆಗಳನ್ನು ಬಿಟ್ಟು ಹಳ್ಳಿಯ ಜನತೆಗೆ ಉಪಯುಕ್ತವಾಗುವ ಚಿಕ್ಕ ಕೆಲಸಗಳನ್ನು ಮಾಡಬೇಕಾದುದಿದೆ. ದೊಡ್ಡ ಕಾಲುವೆ, ಅಣೆಕಟ್ಟು, ನೀರಾವರಿ ಮತ್ತು ವಿದ್ಯುಚ್ಛಕ್ತಿ ಯೋಜನೆಗಳ ಅವಶ್ಯವೇನೋ ಹೌದು. ಆದರೆ ಅವುಗಳಿಗಿಂಥಾ ಗ್ರಾಮದ ಜನರ ಈ ಅವಶ್ಯಕತೆಗಳು ಮೊದಲು ಪೂರೈಸಲ್ಪಡಬೇಕಾದ್ದು ಅವಶ್ಯ. ಇದು ಮಹಾ ಕೆಲಸ. ದೇಶದ ಪ್ರತಿ ಗ್ರಾಮದಲ್ಲೂ ಈ ಕಾರ್ಯಕ್ರಮಗಳನ್ನು ಜಾರಿಗೆ ತರುವುದು ಒಂದು ಸರಕಾರದಿಂದ ಶೀಘ್ರದಲ್ಲಿ ಆಗುವ ಕೆಲಸವಲ್ಲ. ಅದಕ್ಕಾಗಿ ಈ ರಾಷ್ಟ್ರ ರಚನಾ ಕಾರ್ಯದಲ್ಲಿ ಜನತೆಯ ಸಹಕಾರ ತೆಗೆದುಕೊಂಡು ಎಲ್ಲರೂ ದುಡಿಯುವಂತೆ ಮಾಡಬೇಕು. ಇದಕ್ಕೆ ಗ್ರಾಮ ಪಂಚಾಯತ ಯೋಜನೆಯೇ ಮಾರ್ಗ.

ಭೂವಿತರಣೆ

ಕೊಡಗಿನಲ್ಲಿರುವ ಬಹುತೇಕ ಜನರು ಭೂ ಮಾಲಿಕರಾದರೂ ಭೂಮಿ ಇಲ್ಲದ ಜನರು ತುಂಬಾ ಇದ್ದಾರೆ. ಹರಿಜನ, ಎರವ, ಕುರುಬ ಮೊದಲಾದವರೂ ಇನ್ನಿತರರೂ ಇದ್ದಾರೆ. ಕೊಡಗಿನಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಜಾಗ ತುಂಬಾ ಇದೆ. ಸರಕಾರವು ಈ ವಿಚಾರದಲ್ಲಿ ಖಡ್ಡಾಯವಾದ ನೀತಿಯನ್ನು ಅನುಸರಿಸಬೇಕು. ವ್ಯವಸಾಯ ಯೋಗ್ಯ ಜಾಗವನ್ನು ಭೂಮಿ ಇಲ್ಲದವರಿಗೆ ಹಂಚುವದಲ್ಲದೆ, ವ್ಯವಸಾಯ ಮಾಡದೆ ಹಾಳು ಬಿಡುವವರ ಭೂಮಿಯನ್ನೂ ಯೋಗ್ಯರಿಗೆ ವ್ಯವಸಾಯಕ್ಕೆ ಕೊಡಬೇಕು. ಸರಕಾರವು ಮಾಜಿ ಸೈನಿಕರಿಗೆ ಸ್ಥಳ, ಧನ ಸಹಾಯ ಕೊಟ್ಟಂತೆ ಜಾಗ ಕೊಡುವದರಿಂದ ಹೆಚ್ಚಿನ ಪ್ರಯೋಜನವಿಲ್ಲ. ಕೊಟ್ಟ ಸ್ಥಳದಲ್ಲಿ ವ್ಯವಸಾಯ ಮಾಡದವರಿಂದ ಭೂಮಿಯನ್ನು ಹಿಂತೆಗೆಯುವ ಅಧಿಕಾರವಿಟ್ಟುಕೊಂಡು ಕೊಡಗಿನಲ್ಲಿ ಪಾಳು ಬಿದ್ದಿರುವ ಬಾಣೆ ಭೂಮಿಗಳನ್ನು ಭೂಮಿ ಇಲ್ಲದವರಿಗೆ ಹಂಚಬೇಕು. ಹೀಗೆ ಮಾಡುವದರಿಂದ ದೇಶದ ಉತ್ಪತ್ತಿ ಹೆಚ್ಚುವುದಲ್ಲದೆ ಅನೇಕ ಗಂಡಾಂತರಗಳ ನಿವಾರಣೆಯೂ ಆಗುವದು. ಅಲ್ಲದೆ ಹೆಚ್ಚಿಗೆ ಭೂಮಿ ಇರುವ ಜಮೀನ್ದಾರರಿಂದ ಆಚಾರ್ಯ ವಿನೋಬಾರವರ ಭೂಮಿ ದಾನ ಚಳವಳಿ ಪ್ರಕಾರ ಭೂಮಿ ಪಡೆದು ವಿತರಣೆ ಮಾಡಬೇಕು (ಇದನ್ನು ಕಾಂಗ್ರೆಸ್ ಸಂಸ್ಥೆ ಕೈಗೊಳ್ಳಬೇಕಾಗಿದೆ) ಕೊಡಗು ವ್ಯವಸಾಯ ಇಲಾಖೆ, ಜಾನುವಾರು ಇಲಾಖೆಗಳ ಮೇಲೆ ಜನತೆಯ ದೂರು ಇದೆ. ಈ ಇಲಾಖೆಗಳು ಪರಿಣಾಮಕಾರಿಯಾಗಿ ಕೆಲಸ ನಡೆಸುವಂತೆ ನೋಡಬೇಕು.

ವಿದ್ಯಾ ಕ್ರಮ ಬದಲಾವಣೆ

ಸ್ವರಾಜ್ಯ ಬಂದನಂತರವೂ ನಮ್ಮ ವಿದ್ಯಾಕ್ರಮದಲ್ಲಿ ಹೆಚ್ಚಿನ ಬದಲಾವಣೆಯಾಗಲಿಲ್ಲ. ಮಹಾತ್ಮಾ ಗಾಂಧಿಯವರ ಮೂಲ ಶಿಕ್ಷಣ ಕ್ರಮವು ಇನ್ನೂ ಜಾರಿಯಲ್ಲಿ ಬರಬೇಕಿದೆ. ಅಲ್ಲೊಂದು ಇಲ್ಲೊಂದು ಮೂಲ ಶಿಕ್ಷಣ ಶಾಲೆಯಾದರೆ ಸಾಲದು. ವಿದ್ಯಾ ಪ್ರಗತಿಯ ಬಗ್ಗೆ ಒಂದು ಪಂಚವಾರ್ಷಿಕ ಯೋಜನೆ ಮಾಡಬೇಕು. ಎಲ್ಲರಿಗೂ ಖಡ್ಡಾಯ ಶಿಕ್ಷಣ ಕೊಡುವದರಿಂದಲೇ ಸಮಸ್ಯೆ ಪರಿಹಾರವಾಗುವದಿಲ್ಲ. ಎಂಥಾ ವಿದ್ಯೆ ಕೊಡಬೇಕೆಂಬುದು ಪ್ರಮುಖ. ಈಗಿನ ವಿದ್ಯಾ ಸಂಸ್ಥೆಗಳಿಗೂ, ರಾಷ್ಟ್ರೀಯ ಜನಜೀವನಕ್ಕೂ ಹೆಚ್ಚಿನ ಸಂಬಂಧವಿಲ್ಲ. ಶಾಲೆಯಲ್ಲಿ ಕಲಿತುದು ಜೀವನದ ಪೋಷಕ ಶಕ್ತಿಯಾಗಿ ಮುನ್ನಡೆಯದು. ಸಾಕ್ಷರ ಕಲಿತುದರಿಂದ ಹೊಟ್ಟೆ ತುಂಬಲಾರದು. ಅದ್ದರಿಂದ ವಿದ್ಯೆಯಲ್ಲಿ ಒಂದು ಕ್ರಾಂತಿಯಾಗಬೇಕು. ನೂಲು, ನೇಯ್ಗೆ, ಶಿಲ್ಪ ಮೊದಲಾದವುಗಳಿಗೆ ಬೆಲೆ ಹೆಚ್ಚಬೇಕು. ದೈಹಿಕ ಪರಿಶ್ರಮಕ್ಕೆ ಯೋಗ್ಯ ಮರ್ಯಾದೆ ಸಿಗಬೇಕು. ಈ ಬದಲಾವಣೆಯಾಗದೆ ದೇಶದ ಎಲ್ಲರಿಗೂ ಇಂದಿನ ವಿದ್ಯೆಯನ್ನು ಖಡ್ಡಾಯ ಕಲಿಸಿದರೂ ಹೆಚ್ಚು ಪ್ರಯೋಜನವಿಲ್ಲ.

ಶುಚಿಯಾದ ಜೀವನ.

ಅಷ್ಟಾದರೆ ಸಾಲದು. ನಮ್ಮ ಗ್ರಾಮಗಳು ಕೊಳಕಿಗೆ ಹೆಸರಾದವು. ನಮ್ಮ ಜೀವನವು ಕೂಡ ಕೊಳಕ ಜೀವನವೇ. ಮನೆಯು ಆವರಣ, ನಮ್ಮ ಬಟ್ಟೆ, ಬರೆ ಎಲ್ಲವೂ ಶುಚಿಯಾಗಿರಬೇಕು. ಈ ನೈರ್ಮಲ್ಯ ಜೀವನವನ್ನು ಬೋಧಿಸಿ, ಮಾದರಿಯಾಗಿ ತೋರಿಸಿ ಜನತೆಯನ್ನು ತಿದ್ದುವ ಅವಶ್ಯಕತೆ ತುಂಬಾ ಇದೆ. ಇಂಥಾ ಕ್ಷೇತ್ರದ ಕೆಲಸಗಳು ವರ್ಧಾನಗರ ಮತ್ತಿತರ ಕಡೆಗಳಲ್ಲಿ ನಡೆಯುತ್ತಿವೆ. ಇದಕ್ಕಾಗಿ ಶಾಲಾ ಬಾಲಕರನ್ನು, ಕಾಲೇಜು ಯುವಕರನ್ನು ಉಪಯೋಗಿಸಬೇಕು. ಇದಕ್ಕಾಗಿ ಸೇವಾದಳ, ಯುವಕ ಕೂಟಗಳು ಏರ್ಪಡಬೇಕು. ಸರಕಾರವು ಇಂಥಾ ಪ್ರಯತ್ನಗಳಿಗೆ ಬೆಂಬಲ ಕೊಡಬೇಕು.

ಪ್ರಮುಖವಾಗಿ ಜನತೆಗೆ ಬೇಕಾದುದು ಯಾವುದೆಂಬುದನ್ನು ನಮ್ಮ ಮಂತ್ರಿಮಂಡಳವು ಅರಿಯಬೇಕು. ಹೊಟ್ಟೆ ಬಟ್ಟೆಯ ಪ್ರಶ್ನೆ ಹಿರಿದಾದುದು. ಅವುಗಳ ನಂತರ ವಿದ್ಯೆ, ಶುಚಿತ್ವ, ಗ್ರಾಮ ಕೈಗಾರಿಕೆ, ವಹಿವಾಟಿನ ಏರ್ಪಾಡು ಎಲ್ಲವೂ ಬರುತ್ತದೆ. ಇವನ್ನೆಲ್ಲಾ ಸರಕಾರವೇ ಮಾಡಿಕೊಡಲಾರದು. ಆದರಿಂದ ಜನತೆಯನ್ನು ತನ್ನ ಆಡಳಿತದಲ್ಲಿ ಪಾಲುಗಾರರನ್ನಾಗಿ ಮಾಡಿ ಮಂತ್ರಿಮಂಡಳವು ಜನತೆಯಲ್ಲಿ ಒಂದಾಗಿ ಬೆರೆಯಬೇಕು. ಲೇಖನದಲ್ಲಿ ಕೊಟ್ಟ ವಿಚಾರಗಳು ಪರಿಪೂರ್ಣವಲ್ಲ. ಇದೊಂದು ಸೂಕ್ಷ್ಮ ರೂಪರೇಷೆ. ಪ್ರತಿಯೊಂದು ವಿಚಾರವನ್ನೂ ವಿಸ್ತರಿಸಿ ಕಾರ್ಯಕ್ರಮವನ್ನು ರೂಪಿಸುವ ಸಾಧ್ಯತೆ ಇದೆ. ಹೊಸ ಸರಕಾರದ ಕಡೆಗೆ ಜನತೆ ಆಶಾದೃಷ್ಟಿಯಿಂದ ನೋಡುತ್ತಿದೆ. ಮಂತ್ರಿಮಂಡಳವು ಯೋಗ್ಯ ರೀತಿ ಶೀಘ್ರವಾಗಿ ವರ್ತಿಸಿ ಈ ಐದು ವರ್ಷಗಳ ಅವಧಿಯಲ್ಲಿ ಜನತೆಯ ಮುನ್ನಡೆಗೂ ಅಭಿವೃದ್ಧಿಗೂ ದುಡಿಯಬೇಕಾಗಿದೆ.

ಹಸನಾದ ಕಾಫಿ ಗಿಡಗಳು ಮಾರಾಟಕ್ಕೆ ಇವೆ.

1952ನೇ ಜೂನ್ ತಿಂಗಳಲ್ಲಿ ನೆಡಲು ತಯಾರಾಗಿರುವ ಸಾಧಾರಣ 6 ಸಾವಿರ ಕೊಬಟ್ಟು ಕಾಫಿ ಗಿಡಗಳು ನಮ್ಮಲ್ಲಿ ತಯಾರಾಗಿವೆ. ಈ ಗಿಡಗಳು ಬಾಳೆಹೊನ್ನೂರಿನ ಮತ್ತು ಸಿ. ಸಿ. ಆ. ಕಾಫಿ ತೋಟದ ಬೀಜಗಳ ಗಿಡಗಳಾಗಿದ್ದು ಅತ್ಯುತ್ತಮ ರೀತಿಯ ವ್ಯವಸಾಯದಿಂದ ಬೆಳೆಸಲ್ಪಟ್ಟಿವೆ. ತಾ 30-5-52ರ ಒಳಗೆ ಬಂದ ಆರ್ಡರುಗಳಿಗೆ ಮಾತ್ರ ಕಾಯ್ದಿಡಲಾಗುತ್ತೆ.

ಕೆ. ಜಿ. ಬೋಪಯ್ಯ,
ಅರೇಬಿಕ್ ಗ್ರೋ ಕೋಟೆ,
ಪೊಳ್ಳಿಬೆಟ್ಟ ಪೋಸ್ಟ್, ಕೊಡಗು.

॥ ದುರ್ಬೀನು ನೋಟ ॥

ನೋಡಿದವರು :— 'ರಸಿಕ' ಮಿತ್ರ

ಚರೀಸ್ಸಿಗೆ ಕಟ್ಟುವ ಉತ್ಸಾಹ ಹಾಸದ ವೇಳೆ ಇರಲಾರದು. ಮದುವೆಗೆ ಮೊದಲಿರುವ ಸಂಭ್ರಮ ಮದುವೆ ಮುಗಿದ ವೇಳೆ ಇರಲಾರದು. ಮದುವೆಯ 'ಸೀಸನ್' ಮುಗಿಯುತ್ತಾ ಬಂದ ಹಾಗೆಲ್ಲ ಜನರಲ್ಲಿ ನಿರುತ್ಸಾಹ ಮತ್ತು ಜಿಗುಪ್ಸೆ ಹುಟ್ಟುವದು ಸಹಜ. ಹಲವು ದಂಪತಿಗಳು ಆನಂದ ಭರಿತರಾಗಿದ್ದರೆ ಕೆಲವು ದುಃಖೀ ದಂಪತಿಗಳು ಸಹ ಇದ್ದಾರೆ. ನಮ್ಮ ನೆರೆ ಗ್ರಾಮದಲ್ಲಿ ಇಂತಹ ಪರಿಸ್ಥಿತಿಯೊಂದು ತೋರುತ್ತಿದೆ. ಮದುವೆ ನಿಶ್ಚಯಿಸುವುದಕ್ಕಿಂತ ಮೊದಲು ಹೆಣ್ಣನ್ನು ಸ್ವತಃ ನೋಡಲಿಚ್ಛಿಸದ ಯುವಕನೊಬ್ಬನು ತನ್ನ ಮಿತ್ರನೊಬ್ಬನನ್ನು ಕಳುಹಿಸಿದನು. ರಂಭೆಯ ಪ್ರತಿರೂಪವೆಂದೇ ಮಿತ್ರನ ವರದಿಯಾಯಿತು. ಸಂಭ್ರಮದಿಂದ ಮದುವೆಯೂ ಆಯಿತು. ಆದರೆ ಹುಡುಗಿ ಅಷ್ಟೇನೂ ಸುಂದರಿಯಲ್ಲ. ಕುರೂಪಿಯೆಂದರೂ ತಪ್ಪಾಗಲಾರದು. ಸೌಂದರ್ಯಕ್ಕೆ ಅತಿ ಪ್ರಾಮುಖ್ಯತೆ ಕೊಡುವ ಯುವಕನಿಗೆ ಜಿಗುಪ್ಸೆ ಉಂಟಾಗಿದೆ. ಇಷ್ಟು ಆ ಸಂಸಾರವು ದುಃಖಮಯವೇ! ಆದರೆ ಮಿತ್ರನೇತಕ್ಕೆ ಸುಳ್ಳು ವರದಿ ಮಾಡಿದನೆಂದು ಕುತೂಹಲವುಳ್ಳವರ ಪ್ರಶ್ನೆ. ಕುರೂಪಿ ಹೆಂಡತಿಯನ್ನು ಕಟ್ಟಿಕೊಂಡಿದ್ದ ಮಿತ್ರನು ತನ್ನ ಸ್ನೇಹಿತನಿಗೂ ಕುರೂಪಿ ಹೆಂಡತಿಯನ್ನು ಮದುವೆ ಮಾಡಿಸಿ ಸಂತೋಷಪಟ್ಟುಕೊಂಡದ್ದರಲ್ಲಿ ಆಶ್ಚರ್ಯವೇನಿಲ್ಲ.

* * *

ಇದಕ್ಕಿಂತ ಮೋಜಿನ ವಿಚಾರವೊಂದು ಕೆಲವು ವರ್ಷಗಳಿಗೆ ಹಿಂದೆ ನಡೆಯಿತು. ಅಣ್ಣನ ಪರವಾಗಿ ತಮ್ಮನನ್ನು ಹೆಣ್ಣು ನೋಡಲಿಕ್ಕೆ ಕಳುಹಿಸಲಾಯಿತು. ತನಗೆ ಮೆಚ್ಚಿಗೆಯಿಲ್ಲವೆಂದು ತಮ್ಮನ ವರದಿಯಾದ ಕಾರಣ ಬೇರೆ ಹೆಣ್ಣಿನೊಡನೆ ಮದುವೆಯಾಯಿತು. ಮರಳಿ ವರ್ಷ ತಮ್ಮನ ಮದುವೆಗೆ ಏರ್ಪಾಡಾಯಿತು. ಹಿಂದಿನ ವರ್ಷ ಅಣ್ಣನಿಗೆ ಬೇಡವೆಂದು ತಿರಸ್ಕರಿಸಿದ್ದ ಹೆಣ್ಣನ್ನೇ ಮದುವೆಯಾಗಬೇಕೆಂದು ಹಟ ಹಿಡಿದನು. ಪಾಪ, ಅಣ್ಣನಿಗೆ ಆಗ ತಮ್ಮನ ಹಿಂದಿನ ವರ್ಷದ ವರದಿಯ ಗುಟ್ಟು ಅರಿವಾಯಿತು. ಅಣ್ಣನಿಗೆ ಹೀಗೆ ಮೋಸ ಮಾಡಬಹುದೇ ಎಂದು ಯಾರೋ ಪ್ರಶ್ನಿಸಿದರು. ಹೆಣ್ಣಿಗಾಗಿ ಅಲ್ಲವೇ? ಎಂದು ತಮ್ಮನ ಉತ್ತರ ಬಂತು. Yes, 'all is fair in love and war.'

* * *

ಪಟ್ಟಣದಲ್ಲಿ ಮಹೋತ್ಸವಕ್ಕೆ ಕುಳಿತಿದ್ದ ಮದುವಣಗಿತ್ತಿಯೊಬ್ಬಳು ಕೂಗಾಡುತ್ತಿದ್ದಳಂತೆ. ದುರ್ಬೀನಿನಲ್ಲಿ ಆಕೆಯ ಭವಿಷ್ಯ ಹೇಗೆ ಕಾಣುತ್ತದೆಯೆಂದು ನನ್ನ ಸ್ನೇಹಿತರೊಬ್ಬರು ಕೇಳಿದರು. 'ಆಕೆಯ ಗಂಡ ಸರಕಾರಿ ನೌಕರನಾಗಿದ್ದರೆ ಶಾಶ್ವತವಿಲ್ಲದ ಆಫೀಸು ಸೇರಬೇಕಾಗುತ್ತದೆ; ರೈತನಾಗಿದ್ದರೆ ಆಕೆಯ ಬೆನ್ನು ಮುರಿದು ಹೋಗುತ್ತದೆ; ವ್ಯಾಪಾರಿಯಾಗಿದ್ದರೆ ಆಕೆಯ ಅದೃಷ್ಟವನ್ನು ನೆಚ್ಚಬೇಕಾಗುತ್ತದೆ' ಎಂದು ಹೇಳಿದೆ.

* * *

ಮಾತು ಕೊಟ್ಟು ಮೋಸ ಮಾಡುವವರಿದ್ದಾರೆ; ಓಟು ಕೊಟ್ಟು ಮೋಸ ಮಾಡುವವರಿದ್ದಾರೆ; ಆದರೆ ಓಟು ಕೊಟ್ಟು ಮೋಸ ಮಾಡಿದರೆಂದರೆ ಹಲವರು ನಂಬಲಾರರು. ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಅದು ಸಹ ನಡೆದು ಹೋಗಿಬಿಟ್ಟಿದೆ. ಡಾಕ್ಟರೊಬ್ಬರು ಚುನಾವಣೆಗೆ ನಿಂತಿದ್ದರು. ವೃತ್ತಿಯಲ್ಲಿ ಮತ್ತು ವ್ಯಾಪಾರದಲ್ಲಿ ವೈರಿಯಾಗಿದ್ದ ಅದೇ ಸ್ಥಳದ ಮತ್ತೊಬ್ಬ ಡಾಕ್ಟರರು ಉಮೇದುವಾರರ ಪರವಾಗಿ ಬಹಳವಾಗಿ ದುಡಿದರು. ಇದು ಹಲವರಿಗೆ ಆಶ್ಚರ್ಯವನ್ನುಂಟು ಮಾಡಿತು. ಶತ್ರುತ್ವಕ್ಕಾಗಿ ಸಹಾಯ ಮಾಡಿರಬಹುದೆಂದು ಕೆಲವರು ಅವರ ನೆರವಿಗೆ ಬಂದರು. ಆದರೆ ನಿಜ ಸಂಗತಿ ಈಗ ತಿಳಿದು ಬಂದಿದೆ. ಚುನಾವಣೆಗೆ ನಿಂತ ಡಾಕ್ಟರರು ಜಯಿಸಿ ತನ್ನ ಹೆಚ್ಚಿನ ಸಮಯವನ್ನು ಪಾರ್ಲಿಮೆಂಟರೀ ಕಾರ್ಯಕ್ರಮಗಳಲ್ಲಿ ಕಳೆದರೆ ತನ್ನ ವ್ಯಾಪಾರವು ವೃದ್ಧಿಯಾಗುವದೆಂಬ ದೂರಾಲೋಚನೆಯಿಂದ ಚುನಾವಣೆಯಲ್ಲಿ ಅವರಿಗಾಗಿ ದುಡಿದುದಂತೆ!

* * *

(ಈ ಕೆಳಗಿನವು 'ರಸಿಕ'ರು ನೋಡಿದ ನೋಟಗಳು)

ದೊಡ್ಡ ಜನರನ್ನು ಹತ್ತಿಸಿಕೊಳ್ಳಲೆಂದು ಬಸ್ಸು ರಸ್ತೆ ಬಿಡಲಾಗುವದೇ? ಎಂದು ಮೊನ್ನೆ ನಾನು ಬರೆದಿದ್ದೆ. ಹಾಗೆ ಬಸ್ಸು ದೊಡ್ಡವರ ಉಪಕಾರಕ್ಕಾಗಿ ರಸ್ತೆ ಬಿಟ್ಟ ಪ್ರಸಂಗ ಒಂದು ನಡೆಯಿತು. ಯಾವಾಗಲೂ ಕ್ಲಿಪ್ತ ಸಮಯಕ್ಕೆ ನಿಶ್ಚಿತ ಮಾರ್ಗದಲ್ಲಿ ಓಡಬೇಕಾದ ಲೈನ್ ಬಸ್ಸೊಂದು ಕೆಲವು ದೊಡ್ಡವರ ಅನುಕೂಲತೆಗಾಗಿ ರಸ್ತೆ ಬಿಟ್ಟು ನಾಲ್ಕಾರು ಮೈಲು ಹೋಗಿತ್ತು. ಸಮಯಕ್ಕೆ ಸರಿಯಾಗಿ ಬಂದು ಟಿಕೇಟು ಕೇಳಿದವರೂ ಬಡ ಜನರಿಗೆ ಟಿಕೇಟು ಕೊಡುವದು ಪ್ರಯಾಸ. ಆದರೆ ಶ್ರೀಮಂತರ ಸುಖಕ್ಕಾಗಿ ನಿಯಮಗಳೂ ಮುರಿಯಲ್ಪಡುತ್ತವೆ. ಆದರೆ ಇವರನ್ನು ಕೇಳುವರಾರು? ಅಗೆದಗೆದು ಗುಡ್ಡವನ್ನು ಸಮ ಮಾಡಬಹುದು. ಜಗಿಜಗಿದು ಗಡ್ಡೆಯನ್ನು ಕರಗಿಸಬಹುದು. ಆದರೆ ಅಧಿಕಾರ ಮತ್ತು ಸಿರಿತನ ಸೇರಿದವರನ್ನು ಪಳಗಿಸುವದೆಂತು?

* * *

ಕೊಡವರ ಮದುವೆಯಲ್ಲಿ ಕೆಲವು ಸಂಪ್ರದಾಯಗಳಿವೆ. ತೀರಾ ಹತ್ತಿರದ ಮಾವಂದಿರು ಮೊದಲಾದ ಅತ್ತೆಂಟರಿಗೆ 'ಬಾಳೆ ಮುಯ್ಯೂರ್ದ್' ಕೊಡುವದಿದೆ. ಮೊನ್ನೆ ಒಂದು ಮದುವೆಯಲ್ಲಿ ಈ ನೆಂಟಸ್ತಿಕೆಯ ಸಂಪ್ರದಾಯವನ್ನು ಬಿಟ್ಟು ಸರಕಾರಿ ಅಧಿಕಾರಿಯೊಬ್ಬರಿಗೆ 'ಬಾಳೆ ಮುಯ್ಯೂರ್ದ್' ಕೊಟ್ಟರಂತೆ! ಇದು ಪ್ರಗತಿಯ ಪರಮಾವಧಿ. ಜಾತ್ಯಾತೀತ ರಾಷ್ಟ್ರದಲ್ಲಿ ಅವನಿವನೆಂದಿಲ್ಲ. ಪಂಡಿತ ಜವಾಹರರ ಜಾತ್ಯಾತೀತ ಭಾವನೆಯು ಸಾಮಾಜಿಕ ಸಂಪ್ರದಾಯವನ್ನು ಸಹ ಒಡೆದು ಒಳನುಗ್ಗುವದು ಸಂತೋಷ. ಮದುವೆಯಲ್ಲಿ 'ಬಾಳೆ ಮುಯ್ಯೂರ್ದ್' ರಕ್ತ ಸಂಬಂಧಿಕರಿಗೆ ಎಂಬುದರ ಜೊತೆಗೆ ಇನ್ನೂ ಕೆಲವು ಸಂಬಂಧಿಕರನ್ನು ಸೇರಿಸಬೇಕಾಗಿದೆ. ಆದರೆ ಮೇಲಿನ ಉದಾಹರಣೆಯ ಸಂಬಂಧ ಬಟ್ಟೆ ರೊಟ್ಟಿಯ ಸಂಬಂಧವೋ ಯಾ ಹಿಂದಿಯಲ್ಲಿ ಹೇಳಿದ ಹಾಗೆ 'ಚೋಲಿ-ದಾಮನ್ ಕೀ ಸಂಬಂಧ'ವೋ ತಿಳಿಯದು!

* * *

'ದುರ್ಬೀನು ನೋಟ'ದ ಬಗ್ಗೆ ಅನೇಕರು ಕಾಗದ ಬರೆಯುತ್ತಾರೆ. ಹಲವರು ಪ್ರಶಂಸಿಸಿ ಬರೆದರೆ ಕೆಲವರು ಟೀಕಿಸಿ ಬರೆಯುತ್ತಾರೆ. ಆದರೆ ದುರ್ಬೀನು ಕೇವಲ ಒಂದು ವ್ಯಕ್ತಿಯ ಕೈಯಲ್ಲಿಲ್ಲ. ಅನೇಕರು ನೋಡಿ ತಮ್ಮ ಅಭಿಪ್ರಾಯಗಳನ್ನು ಬರೆಯುತ್ತಾರೆ. ಅದನ್ನು ಚುಟುಕಾಗಿ ಬರೆಯುವದು 'ರಸಿಕ'ನ ಕೆಲಸ. ಈ ರೀತಿ ಹಲವರ ಅನುಭವಕ್ಕಾಗಿ 'ರಸಿಕ'ನನ್ನು ದೂರುವದು ಸರಿಯಲ್ಲ. ಅನೇಕರು ಪತ್ರ ಬರೆಯುವಾಗ ತಮ್ಮ ಹೆಸರು ಮತ್ತು ಅಡ್ರೆಸು ಕೊಡುವದಿಲ್ಲ. ಅಂಥಾ ಕಾಗದಗಳಿಗೆ ಬೆಲೆ ಎಷ್ಟಿದೆ? ಕನಸಿನಲ್ಲಿ ತಿಂದ ತಿಂಡಿಗೆ ಯಾರಾದರೂ ಕಾಸು ಕೊಡುತ್ತಾರೆಯೇ? ಮನಸ್ಸಿನಲ್ಲೇ ನೊಂದುಕೊಂಡ ವಿಷಯಕ್ಕಾಗಿ ಯಾರಾದರೂ ಪರಿತಪಿಸುತ್ತಾರೆಯೇ? ಹಾಗೆಯೇ ಸಹಿಯಿಲ್ಲದ ಕಾಗದಗಳಿಗೆ ಯಾರಾದರೂ ಉತ್ತರ ಕೊಡಲುಂಟೆ?

ಕೊಡಗಿನಲ್ಲಿ ಒಂದನೇ ನಂ. ಸಾಬೂನು ತಯಾರಿಕೆ

ತಾ. ೧-೫-೫೩ರಿಂದ ವೀರಾಜಪೇಟೆಯಲ್ಲಿ ಸಾಬೂನು ಕಾರ್ಖಾನೆಯೊಂದು ಶ್ರೀ ಕೆ. ಎಂ ಕಾರ್‍ಯಪ್ಪನವರಿಂದ ತೆರೆಯಲ್ಪಟ್ಟಿದೆ. ಕೊಡಗು ದೇಶದಲ್ಲಿ ಇದೊಂದು ನವೀನ ಕಾರ್ಖಾನೆಯಾಗಿದೆ. ಇಲ್ಲಿ ಸಾಬೂನು ತಯಾರು ಮಾಡುವುದು ಇದೇ ಪ್ರಥಮವಾಗಿದೆ. ಈಗಾಗಲೇ ಇಲ್ಲಿಂದ ಅಲ್ಪ ಪ್ರಮಾಣದಲ್ಲಿ ದೇಶದ ಉದ್ದಗಲಕ್ಕೂ ವಿತರಣೆಯಾಗುತ್ತಲಿದೆ. ಶೀಘ್ರದಲ್ಲಿಯೇ ಬಹು ಪ್ರಮಾಣದಲ್ಲಿ ಸಾಬೂನು ತಯಾರಾಗಿ ಜನತೆಯ ಆವಶ್ಯಕತೆಯನ್ನು ಪೂರೈಸುವುದೆಂಬುದರಲ್ಲಿ ಸಂಶಯವಿಲ್ಲ.

ಶ್ರೀ ಕೆ. ಎಂ. ಕಾರ್‍ಯಪ್ಪನವರಿಗೆ ಅನೇಕ ವರ್ಷಗಳಿಂದ ಹಿಂದೂದೇಶದ ಬಹು ದೊಡ್ಡ ಸಾಬೂನು ಕಾರ್ಖಾನೆಯಲ್ಲಿ ಕೆಲಸ ಮಾಡಿದ ಖ್ಯಾತಿ ಅನುಭವವಿದೆ. ಅವರು ತಮ್ಮ ಅಲ್ಲಿನ ಸ್ವಂತ ಅನುಭವದಿಂದ ನಮ್ಮ ನಾಡಿನಲ್ಲಿಯೂ ಕೂಡ ಇಂತಹದೊಂದು ಪ್ರಾಮುಖ್ಯವಾದ ಕೈಗಾರಿಕಾ ಕಾರ್ಯವನ್ನು ಕೈಕೊಂಡಿರುವದು ಸ್ತುತ್ಯಾರ್ಹವಾಗಿದೆ. ದೇಶದ ಯಾವ ವಸ್ತುವಿನ ಆವಶ್ಯಕತೆ ಅತ್ಯಗತ್ಯವಾಗಿದೆಯೋ ಅದೇ ವಸ್ತುವಿನ ತಯಾರಿಕೆಯು ನಮ್ಮ ನಾಡಿನಲ್ಲಾಗಿರುವುದು ಅತ್ಯಂತ ಸಂತೋಷದಾಯಕವಾದ ಸಂಗತಿಯಾಗಿದೆ.

ಯಾವುದೇ ಒಂದು ದೇಶವು ಅಭಿವೃದ್ಧಿಗೊಳ್ಳಬೇಕಾದರೆ ಆ ದೇಶವು ಕೈಗಾರಿಕೆಯಲ್ಲಿ ಮುಂದುವರಿಯಬೇಕು. ಕೈಗಾರಿಕೋದ್ಯಮದಲ್ಲಿ, ಉತ್ಪಾದನೆಯಲ್ಲಿ, ವಿತರಣೆಯಲ್ಲಿ ಪ್ರತಿಯೊಂದಕ್ಕೂ ನಾವು ಪರರ ಆಶ್ರಯ ಹೊಂದಿಕೊಂಡಿರಬಾರದು. ನಮ್ಮ ನಾಡಿನಲ್ಲಿ ಅನೇಕ ಜನರು ಸಿರಿವಂತರಿರುವರು. ಅಂತಹವರು ಈ ರೀತಿಯ ಬೇರೆ ಜನರಿಗೆ ಉಪಯುಕ್ತವಾದಂತಹ ಸಾಮಾನನ್ನು ತಯಾರಿಸುವ ಕೈಗಾರಿಕೆ ಕಾರ್ಖಾನೆಗಳನ್ನು ತೆರೆದು ದೇಶದ ಅಭಿವೃದ್ಧಿಗೆ ನೆರವಾಗಲು ಮುಂದೆ ಬರಬೇಕಾಗಿದೆ. ಅಂತೆಯೇ ನಮ್ಮ ನಾಡಿನ ಎಲ್ಲಾ ಜನತೆ ಇಂತಹ ಉದ್ಯಮ, ಕೈಗಾರಿಕೆಗಳಿಗೆ ಸಹಕಾರ, ಬೆಂಬಲ, ಪ್ರೋತ್ಸಾಹವೀಯಬೇಕು. ಈಗ ಹೊಸದಾಗಿ ತೆರೆದಿರುವ ಸಾಬೂನು ಕೈಗಾರಿಕೆಗೆ ದೇಶದ ಜನತೆಯೂ, ಸರಕಾರವೂ ಸಹಕಾರ ಪ್ರೋತ್ಸಾಹವೀಯಬೇಕಾಗಿದೆ. ಜನತೆಯ ಮತ್ತು ಸರಕಾರದ ಬೆಂಬಲ ಪ್ರೋತ್ಸಾಹಗಳಿಲ್ಲದೆ ಹೋದರೆ ಯಾವುದೇ ಕೈಗಾರಿಕೆಯಾಗಲಿ, ಕಾರ್ಖಾನೆಯಾಗಲಿ ಮುಂದುವರಿಯಲಾರದು. ಈ ಕಾರ್ಖಾನೆಯು ಎಷ್ಟು ಪ್ರಾಮುಖ್ಯವಾಗಿದೆಯೋ ಅಷ್ಟೇ ಪ್ರಾಮುಖ್ಯತೆಯನ್ನು ಜನರು ಕೊಡಬೇಕು. ದೇಶದ ಅಭಿವೃದ್ಧಿಯಿಂದ ಹಾಗೂ ರಾಷ್ಟ್ರದ ಏಳಿಗೆಯ ದೃಷ್ಟಿಯಿಂದ ನಾವು ಪ್ರಾಮುಖ್ಯತೆ, ಪ್ರೋತ್ಸಾಹವನ್ನು ಕೊಡಬೇಕಾಗಿದೆ. ನಮ್ಮ ದೇಶದ ಪ್ರತಿಯೊಬ್ಬನ ಮನೆಯಲ್ಲಿಯೂ ಸಾಬೂನಿನ ಅವಶ್ಯಕತೆಯಿದ್ದೇ ಇದೆ, ಪ್ರತಿಯೊಬ್ಬರೂ ನಮ್ಮ ನಾಡಿನಲ್ಲಿ ತಯಾರಾಗುವ ಒಂದನೇ ಸ್ಪೆಶಲ್ ಬಾರ್ ಸೋಪನ್ನೇ ತೆಗೆದುಕೊಂಡು ಉಪಯೋಗಿಸಬೇಕು. ಮೊಟ್ಟಮೊದಲು ಸಾಬೂನು ತಯಾರಾಗುತ್ತಿರುವುದಾದರೂ ಬಹಳ ಉತ್ತಮವಾಗಿದೆ. ಬೆಲೆಯೂ ಕೂಡ ಕಡಿಮೆಯಿದೆ. ಎಲ್ಲಾ ಅಂಗಡಿಯವರು ವ್ಯಾಪಾರಸ್ಥರೂ ಈ ಸೋಪನ್ನೇ ಕೊಂಡು ತಮ್ಮ ನಾಡಿನ ಕೈಗಾರಿಕೆಯನ್ನು ಪ್ರೋತ್ಸಾಹಿಸಬೇಕಾಗಿದೆ.

ಶ್ರೀ ಕಾರ್‍ಯಪ್ಪನವರೂ ಸಹ ಹೆಚ್ಚು ಲಾಭದ ಕಡೆ ದೃಷ್ಟಿಯಿಡದೆ, ಬಂಡವಾಳ ಶಾಹಿಯ ಹಿಡಿತಕ್ಕೊಳಗಾಗದೆ ದೇಶದ ಜನತೆಯ ಅವಶ್ಯ ಮತ್ತು ಹಿತದ ಕಡೆ ನಿಗವಿಟ್ಟು ನಾಡಿನ ಏಳಿಗೆಯ ಕಡೆ ಲಕ್ಷ್ಯವಿಟ್ಟು ತಾವು ಕೈಕೊಂಡಿರುವ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಿ ನಮ್ಮ ನಾಡಿಗೆ ಮಾರ್ಗದರ್ಶಕರಾಗಲೆಂದು ಹಾರೈಕೆ.

—ಕೆ. ಸಿ. ಕರುಂಬಯ್ಯ.

—೦()೦—

ಶ್ರೀ ಕೆ. ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಕೊಡಗು

ತಾ. ೨೩-೫-೧೯೫೨ನೇ ಶುಕ್ರವಾರ

ರಾಯಲಸೀಮೆಗೆ ನೆರವಾಗಿರಿ.

೧೯೪೩ರಲ್ಲಿ ಬಂಗಾಳಕ್ಕೆ ಬರಗಾಲ ಬಂದು ಸುಮಾರು ೩೫ಲಕ್ಷ ಜನರು ಮೃತರಾದರು. ಅದೇ ರೀತಿಯ ಭೀಕರ ಬರಗಾಲವೊಂದು ರಾಯಲ ಸೀಮೆಯನ್ನು ಆವರಿಸಿದೆ. ರಾಯಲ ಸೀಮೆಯೆಂದು ಕರೆಯಲ್ಪಡುವ ಚಿತ್ತೂರು, ಕಡಪ, ಕರ್ನೂಲ್, ಅನಂತಪುರ ಮತ್ತು ಬಳ್ಳಾರಿಯ ಕೆಲವು ಭಾಗಗಳಲ್ಲಿ ಈ ಬರಗಾಲವು ಭೀಕರವಾಗಿ ತಲೆದೋರಿದೆ. ಕಳೆದ ನಾಲ್ಕೈದು ವರ್ಷಗಳಿಂದ ಈ ಪ್ರದೇಶಗಳಿಗೆ ಸರಿಯಾಗಿ ಮಳೆಯೇ ಬೀಳದ ಕಾರಣ ಯಾವ ಬೆಳೆಯೂ ಆಗದೆ ಜನರು ಕಷ್ಟಪಡಬೇಕಾಗಿ ಬಂದಿದೆ. ಆಹಾರದ ಮಾತಿರಲಿ, ಕುಡಿಯಲು ನೀರಿಗೆ ಗತಿ ಇಲ್ಲದಾಗಿದೆ. ಕೆಲವು ಪ್ರದೇಶಗಳಲ್ಲಿ ನೀರಿಗಾಗಿ ಐದಾರು ಮೈಲು ದೂರ ಹೋಗಬೇಕಾಗಿದೆ. ಈ ಬರಗಾಲಕ್ಕೆ ತುತ್ತಾಗಿ ದನಕರುಗಳೂ, ಇತರ ಜೀವ ಜಂತುಗಳೂ ಲೆಕ್ಕವಿಲ್ಲದಷ್ಟು ನಾಶವಾಗಿವೆ. ಜನತೆಗೆ ಸರಕಾರವು ಅಲ್ಪ ಸ್ವಲ್ಪ ಸಹಾಯ ಮಾಡುತ್ತಿದ್ದರೂ ಬರಗಾಲದ ಬಾಧೆಯನ್ನು ನಿವಾರಿಸುವದು ಸಾಧ್ಯವಾಗಿರುವುದಿಲ್ಲ.

ಈ ಬರಗಾಲ ಪೀಡಿತರಿಗೆ ಆಹಾರ ಒದಗಿಸುವದರಿಂದ ಬರಗಾಲ ಪರಿಹಾರವಾಗದು. ಹೊರಗಿನಿಂದ ಆಹಾರ ತಂದು ಇವರನ್ನು ಸದಾಕಾಲ ಪೋಷಿಸುವದು ಆಗದ ಮಾತು. ಆದ್ದರಿಂದ ಇವರಿಗಾಗಿ ಅಲ್ಲಲ್ಲಿ ಬಾವಿಗಳು ತೆಗೆಸಲ್ಪಡಬೇಕು, ವ್ಯವಸಾಯದ ಅನುಕೂಲತೆ ಮಾಡಿಕೊಡಬೇಕು. ಚಿಕ್ಕ ದೊಡ್ಡ ಕೈಗಾರಿಕೆ ಸ್ಥಾಪಿಸಿ ಕೆಲಸದ ಅನುಮಾಡಿಕೊಡಬೇಕು. ಹೀಗೆ ಮಾಡಲು ಕೋಟಿಗಟ್ಟಲೆ ಹಣ ಬೇಕಾಗುತ್ತದೆ. ಈ ಹಣವನ್ನು ಕೇಂದ್ರ ಸರಕಾರವಾಗಲೀ, ಪ್ರಾಂತೀಯ ಸರಕಾರಗಳಾಗಲೀ ಪೂರ್ತಿಯಾಗಿ ಒದಗಿಸಲಾರವು. ಸಾರ್ವಜನಿಕರ ಕೊಡುಗೈಯ ಬೆಂಬಲವೂ ಬೇಕು.

ಕೊಡಗಿನವರು ಬರಗಾಲದ ಕಷ್ಟವನ್ನರಿತವರಲ್ಲ. ಈ ಸಮೃದ್ಧಿಯ ದೇಶವು ಸುಭಿಕ್ಷವಾಗಿದೆ. ಆದ್ದರಿಂದ ಹೊರಗಿನ ಕ್ಷುಧಾಪೀಡಿತರ ಕಷ್ಟದ ಅರಿವು ನಮಗೆ ಆಗಲಾರದು. ಕೊಡಗಿನಲ್ಲಿ ನಮ್ಮ ಜೀವನ ದುಂದುಗಾರಿಕೆಯದೇ ಆಗಿದೆ. ನಮ್ಮ ಉತ್ಸವ, ಔತಣಗಳಲ್ಲಿ ಆಹಾರ ಪದಾರ್ಥಗಳ ಸೂರೆ ಇನ್ನೂ ನಿಂತಿಲ್ಲ. ಇವನ್ನೆಲ್ಲಾ ಕಡಿಮೆ ಮಾಡಿ ಅಷ್ಟು ಉಳಿಸದಿದ್ದರೆ ನಮ್ಮ ಜೀವನವು ಅನೀತಿಯದ್ದಾಗುವದು. ನೆರೆಯವರು ಕಷ್ಟಪಡುತ್ತಿರುವಾಗ ಸುಖದ ಸುಗ್ಗಿಯಲ್ಲಿ ಸರ್ವವನ್ನು ಮರೆತು ಜೀವಿಸುವದು ಅಪರಾಧವೆನ್ನಬಹುದು. ಆದ್ದರಿಂದ ಕೊಡಗಿನವರು ನೆರೆಯವರ ನೆರವಿಗೆ ಬರಬೇಕು.

ತಾರೀಕು ೧೯ರಲ್ಲಿ ಮಡಿಕೇರಿಯಲ್ಲಿ ಒಂದು ಸಭೆ ನೆರೆದು ಬರಗಾಲ ಪೀಡಿತರಿಗಾಗಿ ನಿಧಿಸಂಗ್ರಹಿಸುವ ತೀರ್ಮಾನವಾಗಿದೆ. ನಾಡುವಾರು ಕಮಿಟಿ ಮಾಡಿ ಹಣ ಸಂಗ್ರಹಿಸುವ ಏರ್ಪಾಡು ಮಾಡಲಾಗುವದು. ಆಗ ಪ್ರತಿಯೊಬ್ಬರೂ ತಮ್ಮ ಹೃತ್ಪೂರ್ವಕ ನೆರವನ್ನು ನೀಡಬೇಕು. ಪ್ರತಿಯೊಬ್ಬನು ಇಷ್ಟೇ ಕೊಡಬೇಕೆಂದಿಲ್ಲ. 'ಹನಿ ಕೂಡಿ ಹಳ್ಳ ತೆನೆ ಕೂಡಿ ಬತ್ತ' ಎಂಬಂತೆ ತಮ್ಮ ತಮ್ಮ ಶಕ್ತ್ಯಾನುಸಾರ ಸಹಾಯಮಾಡಬೇಕು. ಟೀ, ಹೊಟೇಲುಗಳಿಗಾಗಿ ವೆಚ್ಚ ಮಾಡುವ ಹಣವನ್ನು ಉಳಿಸಿಕೊಡಬಹುದು. ಪೌಡರು, ಸ್ನೋಗಳ ಹಣ ಉಳಿಸಿಕೊಡಬಹುದು. ಕೊಡಗಿನವರು ಹಿಂದೆ ಅನೇಕ ಸಂದರ್ಭಗಳಲ್ಲಿ ಧಾರಾಳ ಮನಸ್ಸಿನಿಂದ ನೆರವಿತ್ತಂತೆ ಈ ನಿಧಿಗೂ ಬೆಂಬಲ ಕೊಡುವರಾಗಿ ನಂಬಲಾಗಿದೆ.

ವರ್ತಮಾನ.

ಮೈಸೂರಿನ ರಾಜ ಪ್ರಮುಖರಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರು ತಾ. ೨೫-೫-೫೨ರಲ್ಲಿ ಮಡಿಕೇರಿಗೆ ಬಂದು ತಾ. ೨೭ರಲ್ಲಿ ವಾಪಾಸು ಹೋಗುವರು. ಮಡಿಕೇರಿ ಪುರಸಭೆಯವರು ಅವರಿಗೆ ಒಂದು ಭಿನ್ನವತ್ತಳೆಯನ್ನು ಅರ್ಪಿಸಲಿದ್ದಾರೆ. ಇವರು ಕೊಡಗು ಸರಕಾರದ ಅತಿಥಿಯಾಗಿರುವರು. ಇವರಿಗೆ ಒಂದು ಸ್ಟೇಟ್ ಗಾರ್ಡನ್ ಪಾರ್ಟಿಯ ವ್ಯವಸ್ಥೆ ನಡೆದಿದೆ.

ಭಾರತದ ಸೇನಾ ನಾಯಕರಾದ ಜನರಲ್ ಕಾರ್ಯಪ್ಪನವರು ತಾ. ೨೬ ರಲ್ಲಿ ಕೊಡಗಿಗೆ ಬಂದು ಇಲ್ಲಿ ಒಂದು ವಾರ ಇರುವರು.

ರಾಯಲಸೀಮೆಯ ಬರಗಾಲ ಪೀಡಿತರಿಗೆ ಸಹಾಯ ಒದಗಿಸುವ ದೃಷ್ಟಿಯಿಂದ ಕೊಡಗಿನ ಉದ್ಯೋಗಸ್ಥರು, ಪ್ಲಾಂಟರುಗಳು, ಶಾಸನ ಸಭಾ ಸದಸ್ಯರ ಸಭೆಯೊಂದು ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ತಾ. ೧೯ರಲ್ಲಿ ನಡೆಯಿತು. ಹಣ ವಸೂಲಿಗಾಗಿ ಚೀಫ್ ಕಮಿಷನರು (ಅಧ್ಯಕ್ಷ) ಮುಖ್ಯಮಂತ್ರಿ (ಉಪಾಧ್ಯಕ್ಷ) ಜಿಲ್ಲಾ ಮ್ಯಾಜಿಸ್ಟ್ರೇಟರು (ಕಾರ್ಯದರ್ಶಿ) ಟ್ರೆಜರಿ ಆಫೀಸರು (ಖಜಾಂಚಿ) ಶ್ರೀ ಕೋಳೇರ ಕುಟ್ಟಪ್ಪನವರು (ಸಹ ಕಾರ್ಯದರ್ಶಿ) ಶಾಸನ ಸಭಾ ಸದಸ್ಯರು ಮತ್ತು ಮುನ್ಸಿಪಲ್ ಪ್ರೆಸಿಡೆಂಟರು ಮೊದಲಾದವರಿಂದ ಕೂಡಿದ ಒಂದು ಕೇಂದ್ರ ಸಮಿತಿಯನ್ನು ನೇಮಿಸಲಾಯಿತು. ನಾಡುವಾರು ಸಮಿತಿ ಮಾಡಿ ವಸೂಲಾತಿ ಕೈಕೊಳ್ಳುವಂತೆ ತೀರ್ಮಾನವಾಯಿತು. ಸಭೆಗೆ ಸೇರಿದ್ದವರಿಂದ ಒಟ್ಟು ರೂ. ೨೫೦೦|- ಜಮೆಯಾಯಿತು.

ಕೊಡಗಿನ ಗೃಹಮಂತ್ರಿಗಳಾದ ಶ್ರೀ ಕೆ. ಮಲ್ಲಪ್ಪನವರು ತಾ. ೨೦ರಲ್ಲಿ ಬೆಳಿಗ್ಗೆ ಕೊಡ್ಲಿಪೇಟೆ ಸಹಕಾರ ಬ್ಯಾಂಕು ಹೊಸ ಕಟ್ಟಡ ತೆರೆಯುವ ಸಮಾರಂಭವನ್ನೂ, ಮಧ್ಯಾಹ್ನ ಶನಿವಾರಸಂತೆ ಸಹಕಾರ ಮಾರ್ಕೆಟಿಂಗ್ ಸಂಘದ ಕಟ್ಟಡತೆರೆಯುವ ಸಮಾರಂಭವನ್ನೂ ನೆರವೇರಿಸಿದರು. ತಾ. ೨೨ ರಲ್ಲಿ ಮಣಗಲಿಯಲ್ಲಿಯ ಹೊಸ ಶಾಲಾ ಕಟ್ಟಡವನ್ನು ತೆರೆದರು.

ನೆಲಜಿಯಿಂದ ಕಕ್ಕಬೆ, ಚೈಯಂಡಾಣೆಗಾಗಿ ಬೆಳಿಗ್ಗೆ ಶ್ರೀಗಜಕೇಸರಿ ಮೋಟಾರು ಸರ್ವೀಸೊಂದು ಬರುವ ಜೂನ್ ೨ರಿಂದ ವೀರಾಜಪೇಟೆಗೆ ತಲಪಿ ಪುನಃ ಸಾಯಂಕಾಲ ವೀರಾಜಪೇಟೆಯಿಂದ ನೆಲಜಿಗೆ ಮರಳುವದೆಂದು ವರ್ತಮಾನ.

ಮಡಿಕೇರಿಯಲ್ಲಿ ಸರೋಜಳೆಂಬ ಹದಿನಾರು ವರ್ಷದ ಹುಡುಗಿಯೊಬ್ಬಳು ತನ್ನ ತಾಯಿ ರಾಜಮ್ಮನ ಸಂಗಡವಿರಲು ಇಷ್ಟಪಡದೆ ಹತ್ತಿರದ ಮನೆಯೊಂದರಲ್ಲಿ ಇರುತಿದ್ದ ಕಾರಣ ತಾಯಿಯು ಆಕೆಯನ್ನು ಕರೆತರಲು ಪ್ರಯತ್ನಪಟ್ಟು ಪ್ರಯೋಜನವಾಗದೆ ಪೋಲೀಸಿಗೆ ದೂರು ಕೊಟ್ಟಿದ್ದಳು. ಪೋಲೀಸರು ಗದರಿಸಿ ಆಕೆಯನ್ನು ತಾಯಿಯಲ್ಲಿಗೆ ಹೋಗುವಂತೆ ತಾ. ೨೧ರಲ್ಲಿ ಕಳುಹಿಸಿದಾಗ ಆಕೆಯು ದಾರಿಯ ಬಾವಿಯೊಂದಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದಳೆಂದೂ ಆದರೆ ಹತ್ತಿರವಿದ್ದವರು ಆಕೆಯನ್ನು ಎಳೆದು ಬದುಕಿಸಿದರೆಂದೂ ಗೊತ್ತಾಗಿದೆ. ಆಕೆಗೆ ಹತ್ತಿರದ ಮನೆಯಲ್ಲಿ ಪ್ರಣಯ ಸಂಬಂಧವಿತ್ತೆಂದು ವರ್ತಮಾನ.

ಕಾಕೋಟುಪರಂಬು ಶಾಲೆಯಲ್ಲಿ ನಾಲ್ಕನೇ ಫಾರಂ ತೆರೆಯಲಾಗುವದೆಂದೂ ಸೇರಲಿಚ್ಛಿಸುವ ವಿದ್ಯಾರ್ಥಿಗಳು ಹೆ. ಮಾಸ್ಟರಿಗೆ ಬರೆದುಕೊಳ್ಳಬೇಕೆಂದೂ ಕಳೆದ ವಾರದ ಪತ್ರಿಕೆಯಲ್ಲಿ ಆ ಶಾಲೆಯವರು ಪ್ರಕಟಿಸಿದ್ದ ವಾರ್ತೆಯ ಬಗ್ಗೆ, ಕೊಡಗಿನಲ್ಲಿ ಹೊಸ ಹೈಸ್ಕೂಲು ತೆರೆಯಲು ಈ ವರ್ಷ ಯಾವುದೇ ಶಾಲೆಗೆ ಸರಕಾರವು ಅನುಮತಿ ಕೊಟ್ಟಿಲ್ಲವೆಂದೂ ಹಾಗೆ ಸೇರುವವರು ತಮ್ಮ ಸ್ವಂತ ಜವಾಬ್ದಾರಿಯಿಂದ ಸೇರಬೇಕಾಗುವದೆಂದೂ ಜಿಲ್ಲಾ ವಿದ್ಯಾಧಿಕಾರಿಗಳು ತಿಳಿಸುತ್ತಾರೆ.

ಕೊಡಗಿನಲ್ಲಿ ಇನ್‌ಶೂರೆನ್ಸ್ ಕಂಪೆನಿಯ ಇನ್ಸ್‌ಪೆಕ್ಟರುಗಳಾಗಿ ಮಾಹೆಯಾನ ರೂ. ೧೭೫ ವೇತನದಲ್ಲಿ ಕೆಲಸ ಮಾಡಲು ಕುತೂಹಲವುಳ್ಳ ಯುವಕರು ಬೇಕಾಗಿರುವರು. ಹೆಚ್ಚಿನ ವಿಷಯವನ್ನು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಿಂದ ತಿಳಿದುಕೊಳ್ಳಬಹುದು.

ಕೊಡಗು ಸರಕಾರಿ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಸ್ಥೆಯೊಂದು ತಾರೀಕು ೧೦-೪-೫೨ ರಲ್ಲಿ ಸ್ಥಾಪಿತವಾಗಿದೆ. ಬಿಡುವಿನ ಸಮಯದಲ್ಲಿ ಗ್ರಾಮಗ್ರಾಮಗಳನ್ನು ಸುತ್ತಿ ಹಳ್ಳಿಯ ಜನರಿಗೆ ಶುಚಿತ್ವ, ಉತ್ತಮ ಜೀವನದ ಬೋಧನೆ ಕೊಡುವದಲ್ಲದೆ ಗ್ರಾಮದ ರಸ್ತೆ ಮತ್ತಿತರ ಗ್ರಾಮ ಅಭಿವೃದ್ಧಿಯ ಕಾರ್ಯಗಳಲ್ಲಿ ಸ್ವತಃ ಕೆಲಸ ಮಾಡಿ ಸಹಾಯಮಾಡುವ ಗುರಿಯಿಂದ ಇದು ಸ್ಥಾಪನೆಯಾಗಿದ್ದು ಶ್ರೀಗಳಾದ ಎಂ. ಎಂ. ಪೂಣಚ್ಚ (ಪ್ರೆಸಿಡೆಂಟ್) ಪಿ. ಎಂ. ಗಣಪತಿ (ಕಾರ್ಯದರ್ಶಿ) ಶ್ರೀಮತಿ ಕೆ. ಪಿ. ಪೊನ್ನಮ್ಮ (ಖಜಾಂಚಿ) ಶ್ರೀ. ಕೆ. ಎಂ. ಪ್ರಕಾಶ, ಕೆ. ಎಸ್. ಪೊನ್ನಮ್ಮ, ಕೆ. ಎಂ. ಸುಬ್ಬಯ್ಯ, ಮತ್ತು ಎಂ. ಪಿ. ಸುಬ್ಬಯ್ಯನವರಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಲಾಯಿತು.

ತಿದ್ದುಪಡಿ.

ತಾ ೯-೫-೫೨ರ 'ಕೊಡಗು' ಪತ್ರಿಕೆಯಲ್ಲಿ 'ಹರದಾರಿ ಸೇತುವೆ' ಎಂದು ಪ್ರಕಟವಾಗಿದ್ದ ಓಲೆಯಲ್ಲಿ 'ಲಕ್ಷಗಟ್ಟಲೆ ಹಣವನ್ನು ಕಾರು ಗಾಡಿಗಳಿಗೆ ಖರ್ಚುಮಾಡುತ್ತಿರುವ ದೊಡ್ಡ ಪ್ಲಾಂಟರು' ಎಂಬುದರ ಬದಲು 'ಲಕ್ಷಗಟ್ಟಲೆ ಹಣವನ್ನು ಅನೇಕ ಕಾರು ಗಾಡಿಗಳಿಗೆ ಖರ್ಚುಮಾಡುತ್ತಿರುವ ಪ್ಲಾಂಟರು' ಎಂದು ಓದಿಕೊಳ್ಳಬೇಕು.

[ಸಂ

ಪ್ರೆಸ್ ಪ್ರಕಟಣೆ.

ಕೊಡಗಿನ ಮುಖ್ಯ ಮತ್ತು ಗೃಹ ಮಂತ್ರಿಗಳ ಭೇಟಿಗಾಗಿ ಬೆಳಗ್ಗೆ 10 ಗಂಟೆಯಿಂದ ಸಾಯಂಕಾಲ 5-30 ಗಂಟೆಯ ವರೆಗೆ ಅನೇಕ ಸಂದರ್ಶಕರು ಬರುತ್ತಿರುವರು. ಮಂತ್ರಿಗಳು ಅದಷ್ಟು ಹೆಚ್ಚು ಜನ ಸಂದರ್ಶಕರನ್ನು ಕಂಡು ಅವರೊಡನೆ ಅವರಿಗೆ ಸಂಬಂಧಿಸಿದ ವ್ಯಕ್ತಿಗಳ ಮತ್ತು ಸಾರ್ವಜನಿಕ ಸಮಸ್ಯೆಗಳನ್ನು ಚರ್ಚಿಸಲು ಇಷ್ಟಪಟ್ಟರೂ, ಕಾರ್ಯ ಸುಗಮವಾಗಿ ನಡೆಸುವ ದೃಷ್ಟಿಯಿಂದ ಈ ಸಂದರ್ಶನೆಯನ್ನು ನಿಯಮಿತ ದಿವಸ ಮತ್ತು ಸಮಯದಲ್ಲಿ ಏರ್ಪಡಿಸುವುದು ಯುಕ್ತವಾಗಿದೆ. ಇದರಿಂದ ಸಂದರ್ಶಕರಿಗೂ ಅನುಕೂಲವಾಗ ವನು. ಪರಿಶೀಲನೆಯಿಂದ ಈ ಕೆಳಗಿನಂತೆ ಮುಂದೆ ಏರ್ಪಾಡು ಮಾಡಲಾಗುವದು. ಮಂತ್ರಿಗಳು ಅವರು ಮಡಿಕೇರಿಯಲ್ಲಿದ್ದಾಗ ಸೋಮವಾರ ಮತ್ತು ಗುರುವಾರಗಳಲ್ಲಿ ತಮ್ಮ ಕಚೇರಿಯಲ್ಲಿ ಬೆಳಗ್ಗೆ 11 ಘಂಟೆಯಿಂದ ಒಂದು ಘಂಟೆಯ ವರೆಗೆ ಸಂದರ್ಶಕರನ್ನು ಕಾಣುವರು. ಹಾಗೆ ಕಾಣಲು ಇಷ್ಟಪಡುವವರು ಮೂರು ದಿನಗಳಿಗೆ ಮುಂಚಿತವಾಗಿ ಮುಖ್ಯ ಮಂತ್ರಿಯ ಪರ್ಸನಲ್ ಅಸಿಸ್ಟೆಂಟರಿಗೂ, ಗೃಹ ಮಂತ್ರಿಯವರ ಸ್ಟೆನೋಗ್ರಾಫರಿಗೂ ತಮ್ಮ ಸಂದರ್ಶನದ ಕಾರಣವನ್ನು ಸೂಚಿಸಿ ಬರೆದುಕೊಂಡು ಸಮಯ ನಿಶ್ಚಯಿಸಿಕೊಳ್ಳಬೇಕಾಗುವದು. ಇದಲ್ಲದೆ ಅರ್ಜಿಗಳನ್ನು ಸ್ವೀಕರಿಸಲು ನಿಯೋಗಗೋಷ್ಠಿಗಳನ್ನು ಕಾಣಲು ಮತ್ತು ಮುಂಗಡ ಬರೆದು ಏರ್ಪಾಡು ಮಾಡಿಕೊಳ್ಳಲು ಅನುಕೂಲವಿಲ್ಲದವರ ಪ್ರತಿ ಶುಕ್ರವಾರ 11 ಗಂಟೆಯಿಂದ 1 ಗಂಟೆಯ ವರೆಗೆ ಕಾಣಬಹುದಾಗಿದೆ. ಸಾರ್ವಜನಿಕರು ಈ ಏರ್ಪಾಡನ್ನು ಒಪ್ಪಿ ಮಂತ್ರಿಗಳ ಕಾರ್ಯಕಲಾಪವು ದಕ್ಷವಾಗಿ ನಡೆಯಲು ಸಹಕರಿಸುವರಾಗಿ ನಂಬಲಾಗಿದೆ.

ಸಿ ನರಸಿಂಹಮೂರ್ತಿ,
ಚೀಫ್ ಸೆಕ್ರೆಟರಿ

ಕೊಡಗು ಚೀಫ್ ಫಾರೆಸ್ಟ್ ಆಫೀಸು,
ಮಡಿಕೇರಿ, ತಾ. 21-5-'52.

ನೋಟೀಸು.

ಗೇಣಿ ಅವಧಿ ಮುಗಿದ ಯಾಲಕ್ಕಿ ಮಲೆಗಳಲ್ಲಿರುವ ಹಾಲಿ ವರ್ಷದ ಯಾಲಕ್ಕಿ ಫಸಲನ್ನು ಎತ್ತುವಳಿ ಮಾಡುವ ಹಕ್ಕನ್ನು ೧೯೫೨ನೇ ಇಸವಿ ಜೂನ್ ತಾರೀಕು ೧೩ನೇ ಶುಕ್ರವಾರ ಹಗಲು ೨ಗಂಟೆಗೆ ಸರಿಯಾಗಿ ಮತ್ತು ಸದ್ರಿ ದಿನ ಮುಗಿಯದಿದ್ದರೆ ಮುಂದಿನ ದಿವಸಗಳಲ್ಲಿ ಕೊಡಗು ಚೀಫ್ ಫಾರೆಸ್ಟ್ ಆಫೀಸರವರ ರೂಬು ರೂಬು ಸದ್ರಿಯವರ ಆಫೀಸಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು. ಹೆಚ್ಚಿನ ವಿವರಗಳನ್ನು ನಾಡು ಕಚೇರಿಗಳಿಂದಾಗಲೀ ಯಾ ರೇಂಜ್ ಆಫೀಸರವರಿಂದಾಗಲೀ ಹರಾಜು ಇಸ್ತಿಹಾರ್ ಮೂಲಕ ತಿಳಿದುಕೊಳ್ಳತಕ್ಕದ್ದು.

ಸಿ. ಟಿ. ಬೋಪಯ್ಯ,
ಚೀಫ್ ಫಾರೆಸ್ಟ್ ಆಫೀಸರಿಗಾಗಿ.

ಒದುಗರ ಓಲೆಗಳು

ಇದು ನ್ಯಾಯವೋ?

ಪೊನ್ನಂಪೇಟೆ ನಾಡಿನ ಕುಟ್ಟಂದಿ, ಕೋಂಗಣ, ಕಿಟ್ಟಗೇರಿ ಮತ್ತು ಬೀರಾಜಪೇಟೆ ಬಾಡಗ, ಪೊಸಕೇರಿ ಗ್ರಾಮಸ್ಥರಿಗೆ ಗೋಣಿಕೊಪ್ಪಲಿಗೂ, ಹಾತೂರಿಗೂ, ಪೊನ್ನಂಪೇಟೆಗೂ ಹೋಗಲು ಕುತ್ತನಾಡು ಹೊಳೆಗೆ ಪಾಲ ಹಾಕಬೇಕೆಂಬುದಾಗಿ ೧೯೫೩ನೇ ಇಸವಿಯಲ್ಲಿ ಪಾಲ ಕಟ್ಟಲು ಮಂಜೂರಾತಿ ಸಿಕ್ಕಿ ಕುತ್ತನಾಡು ಸಂಘದಿಂದ ಮತ್ತು ಕಿಟ್ಟಗೇರಿ ಸಂಘದಿಂದ ಸಂಘ ಒಂದರ ೫೦೦ ರೂ. ಡಿಪಾಜಿಟ್ಟು ಮಾಡಲಾಗಿತ್ತು. ಕೋಂಗಣ ಗ್ರಾಮದ ಕಡೇಮಾಡ ಕುಟ್ಟಪ್ಪನವರು ಅವರ ಅನುಕೂಲಕ್ಕನುಸಾರವಾಗಿ ನಾಡು ಗುಂಡಿಗಾಗಿ ಪಾಲ ಹಾಕಬೇಕೆಂಬುದಾಗಿಯೂ ನಾಡಿನವರು ಡಿ. ಬಿ. ರಸ್ತೆಗಾಗಿ ಕೇಂದರೆ ಕಡುವಿಗಾಗಿ ಪಾಲ ಹಾಕಬೇಕೆಂದೂ ತಕರಾರು ಬಂದ ಕಾರಣ ಪಾಲದ ಕೆಲಸವು ನಿಂತು ಹೋಯಿತು. ೧೯೫೨ನೇ ಇಸವಿಯಲ್ಲಿ ಡಿ. ಬಿ. ರಸ್ತೆಗಾಗಿ ಅಂದರೆ ಕೇಂದರೆ ಕಡುವಿಗಾಗಿ ಪಾಲ ಕಟ್ಟಲು ಸರ್ಕಾರದಿಂದಲೂ ಜಿಲ್ಲಾ ಬೋರ್ಡಿನಿಂದಲೂ ಹಣ ಮಂಜೂರಾಯಿತು. ನಾಡಿನವರು ಪಾಲ ಕಟ್ಟಲು ನಾಡು ಮಹದೇವರ ಭಂಡಾರದಿಂದ ೫೦೦ ರೂ. ತೆಗೆದು ಕಲ್ಲು ಕಡಿಯಲು ಪ್ರಾರಂಭಮಾಡಿದರು. ಆದರೆ ಸಿಮೆಂಟು ಸಿಕ್ಕದೆ ಮತ್ತು ಮಳೆಯು ಬಿದ್ದುದರಿಂದ ಕೆಲಸವು ನಿಂತು ಹೋಯಿತು. ಈ ವರ್ಷ ಅಂದರೆ ಏಪ್ರೀಲ್‌ನಲ್ಲಿ ಕೊಡಗಿನ ಮಂತ್ರಿಗಳು ಪೊನ್ನಂಪೇಟೆಗೆ ಬಂದಲ್ಲಿ ಹೊಳೆಗೆ ಪಾಲ ಆಗಬೇಕೆಂಬುದಾಗಿ ನಾಡಿನವರು ಅರ್ಜಿ ಕೊಟ್ಟರು. ಅದೇ ದಿವಸ ಮಂತ್ರಿಗಳು ಮತ್ತು ಶ್ರೀ. ಕೆ. ಜಿ ಬೆಳ್ಯಪ್ಪನವರು ನಾಡು ಗುಂಡಿಯನ್ನು ನೋಡಿ ಕೇಂದರೆ ಕಡುವನ್ನು ನೋಡದೆ ಹೋದರು. ತಾ. ೨೪ರಲ್ಲು ಗಂಧೀ ಮೈದಾನದಲ್ಲಿ ಕಡೇಮಾಡ ಕುಟುಂಬದವರ ಸತ್ಕಾರಕೂಟವನ್ನು ಸ್ವೀಕರಿಸಿದ ಮಂತ್ರಿಗಳು ಕೇಂದರೆ ಕಡುವನ್ನು ನೋಡೀ ನಾಡುಗುಂಡಿಗಾಗಿ ಪಾಲ ಮಾಡುತ್ತೇವೆಂಬುದಾಗಿ ಹೇಳಿಹೋದರು. ಇದರಿಂದ ಒಂದು ಕುಟುಂಬಕ್ಕೆ ಹಿತವಲ್ಲದೆ ನಾಡಿಗಿಲ್ಲ. ಇದೇ ರೀತಿಯಲ್ಲಿ ಹಿಂದೆ ಕೋಂಗಣ ಗ್ರಾಮಸ್ಥರು ತಮಗೆ ಬಾವಿ ಬೇಕೆಂಬುದಾಗಿ ಅರ್ಜಿ ಬರೆಸಿದಲ್ಲಿ ಕುಟುಂಬದ ಹಟ್ಟಿಯಲ್ಲಿ ಬಾವಿಯನ್ನು ತೋಡಿಸಿದರು. ಇದರಿಂದ ಅವರಿಗೆ ಪ್ರಯೋಜನವಲ್ಲದೆ ಬೇರೆ ಯಾರಿಗೂ ಇಲ್ಲ. ನಮ್ಮ ಈಗಿನ ಪಾಲವನ್ನು ನಾಡಿನ ಎಲ್ಲಾ ಜನರಿಗೆ ಅನುಕೂಲವಾಗುವಂತೆ ಕೇಂದರೆ ಕಡುವಿಗಾಗಿ ಮಾಡಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ನಾಡಿನವ.

ಲೋವರ್ ಸೆಕೆಂಡರಿ ಪರೀಕ್ಷಾ ಫಲಿತಾಂಶ.

ಕಳೆದ ಲೋವರ್ ಸೆಕೆಂಡರಿ ಪರೀಕ್ಷೆಗೆ ಕೊಡಗಿನಲ್ಲಿ ಕೂತ ೧೯೩೬ ವಿದ್ಯಾರ್ಥಿಗಳಲ್ಲಿ ೬೬೫ ಮಾತ್ರ ತೇರ್ಗಡೆಯಾಗಿರುವರು. ಅಂದರೆ ನೂರಕ್ಕೆ ೩೪ ತೇರ್ಗಡೆಯಾದಂತಾಯಿತು. ಶಾಲಾ ಅಧಿಕಾರಿಗಳು ಈ ಕೆಳಗಿನ ಡೇಟಾವನ್ನನುಸರಿಸಿ ಮಕ್ಕಳ ಪರೀಕ್ಷೆ ಫಲಿತಾಂಶವನ್ನು ಇತ್ಯರ್ಥ ಮಾಡಿರುವರು. ಕನ್ನಡದಲ್ಲಿ ಶೇಕಡ ೩೫, ಇಂಗ್ಲಿಷ್ ೩೦, ಲೆಕ್ಕ, ಸೈನ್ಸ್, ಜಾಗ್ರಫಿ ಈ ಮೂರರಲ್ಲಿ ಪ್ರತಿ ಒಂದರಲ್ಲಿ ೨೫ರಂತೆ ಮಾರ್ಕ್ ಸಿಕ್ಕಿದವರನ್ನು, ಒಂದು ವೇಳೆ ಇವರಲ್ಲಿ ತೇರ್ಗಡೆಯಾಗದಿದ್ದಲ್ಲಿ ಯಾವದರಲ್ಲಾದರೂ ಒಂದು ಮಾರ್ಕ್ ಕಡಿಮೆ ಬಂದಲ್ಲಿ, ಒಟ್ಟು ಮಾರ್ಕಿನಲ್ಲಿ ಕಡಿಮೆ ಬಂದ ಒಂದು ಮಾರ್ಕಿಗೆ ಐದರಂತೆ ಹೆಚ್ಚು ತೆಗೆಯಬೇಕೆಂದು ನಿರ್ಣಯಿಸಿ ಇತ್ಯರ್ಥ ಮಾಡಿ ಮಕ್ಕಳ ಫಲಿತಾಂಶವನ್ನು ವಿಮರ್ಶೆ ಮಾಡಿರುವರು. ಹೀಗೆ ಶೇಕಡ ೪೪ನ್ನು ತೇರ್ಗಡೆ ಮಾಡಿರುವರು. ಈ ಫಲಿತಾಂಶವು ಬಹಳ ಕಡಿಮೆಯೆಂದೇ ಹೇಳಬೇಕಾಗಿದೆ.

ಕೊಡಗಿನಲ್ಲಿ ವಿದ್ಯಾಭ್ಯಾಸವು ಮುಂದುವರಿಯುತ್ತಿದೆ. ಒಂದು ಕಾಲೇಜು ಸಹ ಆಗಿದೆ. ಈಗಾಗಲೇ ಎಂಟು ಹೈಸ್ಕೂಲುಗಳೂ ಮೂವತ್ತಾರು ಹೈಯರ್ ಎಲಿಮೆಂಟರಿ ಶಾಲೆಗಳೂ ಇವೆ. ಈ ವರ್ಷ ಇನ್ನೂ ಕೆಲವು ಹೈಯರ್ ಎಲಿಮೆಂಟರಿ ಶಾಲೆಗಳಲ್ಲಿ ೮ನೇ ಫಾರಂ ತೆರೆಯಲು ಶಾಲಾ ಅಧಿಕಾರಿಗಳು ಅಪ್ಪಣೆ ಕೊಟ್ಟಿರಬಹುದೆಂದು ನೆನಸುತ್ತೇನೆ. ಕಳೆದ ವಾರದ ಪತ್ರಿಕೆಯಲ್ಲಿ ಕಾಕೋಟುಪರಂಬು ಶಾಲೆಯಲ್ಲಿ ೮ನೇ ಫಾರಂ ತೆರೆದಿದ್ದೇನೆ, ಸೇರಲು ಇಚ್ಛಿಸುವ ಮಕ್ಕಳು ಅರ್ಜಿ ಹಾಕಬೇಕೆಂದು ಪ್ರಕಟಿಸಿದ್ದು ನೋಡಿದ್ದೇನೆ. ಹೀಗಿರುವಾಗ ಇನ್ನೂ ಹೈಸ್ಕೂಲುಗಳ ಸಂಖ್ಯೆಯು ಏರುವ ಸಂದರ್ಭವಿದೆ. ಆದರೆ ಕಳೆದ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಬರೇ ೬೬೫ ಮಕ್ಕಳು ಮಾತ್ರ ಪಾಸಾಗಿರುವರು. ಈ ಸಂಖ್ಯೆಯು ಸಾಲದು.

ಹೈಸ್ಕೂಲುಗಳಲ್ಲೆಲ್ಲಾ ಈ ಕೆಳಗಿನ ಹೈಸ್ಕೂಲಿನ ಡೇಟಾವನ್ನು ಅನುಸರಿಸಿದರೆ ಇನ್ನೂ ಅನೇಕರು ತೇರ್ಗಡೆಯಾಗಬಹುದೆಂದು ಅನೇಕರ ಅಭಿಪ್ರಾಯವಾಗಿದೆ. ಕನ್ನಡ ೩೫, ಇಂಗ್ಲಿಷ್ ೩೦, ಉಳಿದ ಮೂರರಲ್ಲಿ ಯಾವುದಾದರೊಂದರಲ್ಲಿ ೨೦, ಉಳಿದ ಎರಡರಲ್ಲಿ ೨೫ರಂತೆಯೂ, ಒಟ್ಟು ಮಾರ್ಕಿನಲ್ಲಿ ವಿಮರ್ಶಕರ ಅಭಿಪ್ರಾಯದಂತೆ ಸ್ವಲ್ಪ ಇಳಿಸಿಯಾಗಲಿ, ತೇರ್ಗಡೆಯಾಗುವ ಮಕ್ಕಳ ಸಂಖ್ಯೆಯು ಸ್ವಲ್ಪ ಏರಬಹುದು. ಇದೂ ಅಲ್ಲದೆ ಪ್ರತಿ ಹೈಸ್ಕೂಲುಗಳಲ್ಲೂ ಮೂರು ವರ್ಷ ಒಂದೇ ತರಗತಿಯಲ್ಲಿ ಓದಿದವರನ್ನು ಮುಂದಿನ ಕ್ಲಾಸಿಗೆ ಕಳುಹಿಸಬೇಕೆಂದು ಅಧಿಕಾರಿಗಳ ಅನುಮತಿ ಇರುವಾಗ, ಲೋವರ್ ಸೆಕೆಂಡರಿಯಲ್ಲೂ ಈ ಕಾನೂನು ಜಾರಿಯಲ್ಲಿ ತಂದರೆ ಇನ್ನು ಕೆಲವರು ತೇರ್ಗಡೆಯಾಗಬಹುದು.

ಆದ ಕಾರಣ ಮೇಲೆ ನಮೂದಿಸಿದ ಕೆಲವು ವಿಷಯಗಳನ್ನು ಕೂಲಂಕುಷವಾಗಿ ಶಾಲಾ ಅಧಿಕಾರಿಗಳು ತಮ್ಮ ಅವಗಾಹನೆಗೆ ತಂದು ಎಲ್. ಎಸ್. ಫಲಿತಾಂಶವನ್ನು ಪುನಃ ವಿಮರ್ಶಿಸಿ, ಕಡಿಮೆ ಪಕ್ಷ ಶೇಕಡ ೬೦ ಮಕ್ಕಳಾದರೂ ಪಾಸಾಗುವಂತೆ ಮಾಡಿ ಎಲ್ಲಾ ಹೈಸ್ಕೂಲುಗಳಿಗೂ ಮತ್ತು ೮ನೇ ಫಾರಂ ತೆರೆಯುವ ಹೆಚ್. ಈ. ಶಾಲೆಗಳಿಗೂ ತಕ್ಕ ಮಕ್ಕಳು ಸಿಕ್ಕುವಂತೆಯೂ, ಬಡ ತಂದೆ ತಾಯಿಗಳಿಗೆ ನೆರವಾಗುವಂತೆಯೂ ಶಾಲಾ ಅಧಿಕಾರಿಗಳನ್ನು ಬೇಡಿಕೊಳ್ಳುವದಾಗಿದೆ.

—ಬಿದ್ದಯ್ಯ.

ಸಾರಾಯಿ ನಿಯಂತ್ರಣ.

ಕೊಡಗಿನಲ್ಲಿ ಸಾರಾಯಿಗೆ ನಿಯಂತ್ರಣವಿದೆ. ಕೂಪನ್‌ದಾರರಿಗೆ ತಿಂಗಳಿಗೊಂದು ಕುಪ್ಪಿ ಕೊಡಲ್ಪಡುತ್ತದೆ. ಆದರೆ ಇದು ಸಮರ್ಪಕವಾಗಿ ನಡೆಯುತ್ತಿದೆಯೋ ಎಂಬ ಸಂಶಯವಿದೆ. ವಿದೇಶೀ ಪಾನೀಯಗಳ ಮಾತಿರಲಿ; ಮಡಿಕೇರಿಯ ಒಂದೆರಡು ಮದುವೆಗಳಲ್ಲಿ ಸಾರಾಯಿಯನ್ನು ಬಹಿರಂಗವಾಗಿ ಸಭೆಗಳಲ್ಲಿ ಸರಬರಾಯಿ ಮಾಡಿದ್ದನ್ನು ಕಣ್ಣಾರೆ ಕಂಡಿದ್ದೇನೆ. ಅದೂ ಬೇಕಾದಷ್ಟು. ಒಂದು ಮದುವೆಯಲ್ಲಿ ಹೀಗೆ ಸರಬರಾಯಿ ಮಾಡಲು ಕಡಿಮೆ ಐವತ್ತು ಕುಪ್ಪಿಗಳಾದರೂ ಬೇಕು. ಹಾಗಾದರೆ ಈ ಸಾರಾಯಿ ಎಲ್ಲಿಂದ ಬಂತು?

ಸಾರಾಯಿ ನಿಯಂತ್ರಣವು ಹೆಸರಿಗಾಗಿ ಮಾತ್ರ. ಕೊಡಗಿನ ಹಲವು ಹೋಟೆಲುಗಳಲ್ಲಿ ಧಾರಾಳ ಸರಬರಾಯಿ ನಡೆಯುತ್ತಿದೆ. ಅನೇಕರು ತಮ್ಮ ಕೂಪನುಗಳಿಂದ ಪಡೆದ ಸಾರಾಯನ್ನು ಅಲ್ಲಲ್ಲೇ ಹೆಚ್ಚಿನ ಬೆಲೆಗೆ ಮಾರುತ್ತಾರೆ. ಗೋಣಿಕೊಪ್ಪಲಲ್ಲಿ ಈ ವ್ಯಾಪಾರ ಜೋರಾಗಿದೆ.

ಜೊತೆಗೆ ಸಾರಾಯಿ ಬಟ್ಟಿ ಇಳಿಸುವ ಉದ್ಯಮ ಜೋರಾಗಿ ನಡೆದಿದೆ. ಕೊಡಗಿನ ಮದಿಕೇರಿ ಮತ್ತು ನಾನಾ ನಾಡುಗಳಲ್ಲೂ ಈ ಕೆಲಸ ಜೋರಾಗಿದೆ. ಉತ್ತರ ಕೊಡಗಿನ ಒಂದೆರಡು ಸ್ಥಳಗಳಲ್ಲಿ ಇದು ದೊಡ್ಡ ಕೈಗಾರಿಕೆಯಂತೆ ನಡೆಯುತ್ತಿದ್ದುದು ಅವರ ಗಮನಕ್ಕೆ ಬಂದಿದೆ. ಈ ರೀತಿ ಸಾರಾಯಿ ಬೇಕಾದಷ್ಟು ತಯಾರಾಗುತ್ತಿದೆ. ಇದು ಕೊಡಗಿನ ಹೊರಗೂ ಹೋಗುತ್ತಿದೆ. ಮದ್ರಾಸು ಪಾನನಿರೋಧ ಇಲಾಖೆಯವರು ಮಡಿಕೇರಿಗೆ ಬಂದು ಸ್ಥಳೀಯ ಎಕ್ಸೈಸ್ ಇಲಾಖೆಯ ಜೊತೆಯಲ್ಲಿ ಬಂದು ಧಾಳಿಮಾಡುತ್ತಿರುವದರಿಂದಲೇ ಇದು ತಿಳಿಯುತ್ತದೆ. ಕೊಡಗಿನ ಪಾನನಿಯಂತ್ರಣವು ತಪ್ಪುವಂತೆ, ಲಂಚಬಡುಕತನಕ್ಕೆ ಅಸ್ಪದ ಕೊಟ್ಟಿದೆಯೇ ವಿನಾ ಬೇರಿಲ್ಲ. ಹೇಗೂ ಈ ನಿಯಂತ್ರಣದಿಂದಾಗಿ ಸರಕಾರಕ್ಕೆ ಬರುತ್ತಿದ್ದ ಹಣ ಕೆಲವು ವ್ಯಾಪಾರ ಮಾಡುವವರ ಕಿಸೆಸೇರುವಂತಾಗಿದೆ.

'ದೈತ.'

ಸತ್ಕಾರ ಕೂಟ.

ಕೆಲವು ದಿನಗಳ ಹಿಂದೆ ಕೊಡಗಿನ ಮಾನ್ಯ ಮಂತ್ರಿಗಳಿಗೂ, ಮಡಿಕೇರಿ ಪುರಸಭೆಯ ಮೆಂಬರುಗಳಿಗೂ ಮಡಿಕೇರಿಯ ಮರ್ಚೆಂಟ್ಸ್ ಎಸೋಸಿಯೇಶನ್ ಎಂಬ ಸಂಸ್ಥೆಯು ಹಣ ವಸೂಲಿ ಮಾಡಿ ಎ. ವಿ. ಶಾಲೆಯಲ್ಲಿ ಒಂದು ಸತ್ಕಾರ ಕೂಟವನ್ನು ಕೊಟ್ಟಿತು. ಈ ಸತ್ಕಾರ ಕೂಟಕ್ಕೆ ವಸೂಲಾದ ಮತ್ತು ಖರ್ಚಾದ ಹಣದ ಲೆಕ್ಕವನ್ನು ಯಾರಿಗೂ ತಿಳಿಸಿರುವದಿಲ್ಲ. ದಯವಿಟ್ಟು ಸಂಬಂಧಿಸಿದವರು ಇದರ ಲೆಕ್ಕ ಕೊಡುವರೇ?

'ಮರ್ಚೆಂಟ್'

ಮಾಯಮುಡಿ ಶಾಲೆ.

ಮಾಯಮುಡಿ ಗ್ರಾಮದಲ್ಲಿರುವ ಮಾಧ್ಯಮಿಕ ಶಾಲೆಯು ಇನ್ನೂ ಶೋಚನೀಯಾವಸ್ಥೆಯಲ್ಲಿದೆ. ಜನರೆಲ್ಲರೂ ತಮ್ಮ ಜವಾಬ್ದಾರಿಯನ್ನು ಪೂರ್ತಿಯಾಗಿ ಆ ಶಾಲೆಯ ಪ್ರೆಸಿಡೆಂಟರಿಗೆ ವಹಿಸಿರುವರು. ಅವರು ಸುಸಂದರ್ಭವನ್ನು ಕಳೆದುಕೊಳ್ಳದೆ ಅದೇ ಶಾಲೆಯಲ್ಲಿ ತಮ್ಮ ಪುತ್ರನು ಅಧ್ಯಾಪಕನಾಗಿದ್ದಾಗ ಕೊಡುತ್ತಿದ್ದ ಮಾಸಿಕ ವೇತನದ ಮೂರನೆ ಎರಡು ಅಂಶವನ್ನು ಈಗ ನಂತರ ಆ ಸ್ಥಾನವನ್ನು ಕೈಕೊಂಡ ಅಧ್ಯಾಪಕರಿಗೆ ಕೊಡುತ್ತಿರುವರಂತೆ. ಈ ರೀತಿ ಸಾರ್ವಜನಿಕರ ಹಣವನ್ನು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸುವುದು ಯಾವ ನ್ಯಾಯ? ಕೆಲವು ದಿವಸಗಳ ಹಿಂದೆ ಬೀದಿಯಲ್ಲಿ ಅಲೆದಾಡುತ್ತಿದ್ದ ಒಬ್ಬ ಮಹನೀಯ ಮಹಾಶಯನು ಶಾಲಾ ಆವರಣದಲ್ಲಿ ನಿರಪರಾಧಿಗಳಾದ ವಿದ್ಯಾರ್ಥಿಗಳ ಮೇಲೆ ವಿಚಾರವಿಲ್ಲದೆ ಕೈಮಾಡಿದನಂತೆ. ಈ ವಿಷಯವನ್ನು ಪ್ರೆಸಿಡೆಂಟರು ತಿಳಿದಿದ್ದರೂ ಸಹ ಆ ಮಹನೀಯನು ಆ ಶಾಲೆಯ ಸಮೀಪದ ಅಧಿಕಾರಿಯ ಸಹೋದರನಾದ ಕಾರಣ ವಿಚಾರಿಸದೆ ಬಿಟ್ಟರು. ನವೀನ ಅಧಿಕಾರಿಯು ನಲಿಯುವಂತೆ ಆ ಮಹನೀಯನನ್ನು ಈಗ ಆ ಶಾಲೆಯ ಉಪಾಧ್ಯಾಯನಾಗಿ ನೇಮಿಸಿರುವರಂತೆ. ಇಂಥ ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಪರಸ್ಪರ ಗೌರವ ಮತ್ತು ವಿಶ್ವಾಸ ಇರುವುದೆಂತು?

ಸಾರ್ವಜನಿಕ ರಸ್ತೆಯ ಬದಿಯಲ್ಲಿರುವ ಕಟ್ಟಡದ ಪಡಸಾಲೆಯಲ್ಲಿ ಮೂರು ತರಗತಿಗಳಿಂದ ಕೂಡಿದ ಮಾಧ್ಯಮಿಕ ಶಾಲೆ ಇದೆ. ತರಗತಿಗೆ ಮರೆ ಏನೂ ಇಲ್ಲ. ಇದರ ಕೆಳಗೆ ಒಂದು ಹೋಟೆಲ್ ಇದೆ. ಗಿರಾಕಿಗಳ ಬರುವಿಕೆಯನ್ನು ನಿರೀಕ್ಷಿಸುವ ಹೋಟೆಲ್ ಮಾಲೀಕನು ತನ್ನ ಗ್ರಾಮೋಫೋನನ್ನು ಹಾಡಿಸುವನು. ಆಗ ಮಹಡಿಯಲ್ಲಿರುವ ಮಕ್ಕಳ ಮನಸ್ಸು ಪಾಠದಿಂದ ತೀರಾ ಹಾಡಿನ ಕಡೆಗೆ ಹೋಗುವುದಲ್ಲದೆ ಅವರ ಭಾವನಾ ಪ್ರಪಂಚದಲ್ಲಿ ಸಿನಿಮಾ ಮಂದಿರದ ದೃಶ್ಯವು ಗೋಚರವಾಗುವುದು. ವಿದ್ಯಾವಂತರಾದ ಪೋಷಕರು ಶಾಲೆಯ ಭವಿಷ್ಯವನ್ನು ತಿಳಿದು ತಮ್ಮ ಮಕ್ಕಳನ್ನು ಬೇರೆ ಶಾಲೆಗಳಿಗೆ ಕಳುಹಿಸುತ್ತಿರುವರು. ಶಾಲಾ ಪರಿಸ್ಥಿತಿಯನ್ನು ಪ್ರೆಸಿಡೆಂಟರು ನಿತ್ಯವೂ ನೋಡುತ್ತಿದ್ದರೂ ಬೇರೆ ಕಟ್ಟಡದ ಯೋಚನೆಯನ್ನು ಬಿಟ್ಟು ಮೌನವಾಗಿರುವರು. ಪ್ರೆಸಿಡೆಂಟರ ಈ ವರ್ತನೆಯು ವಿದ್ಯಾರ್ಥಿಗಳ ಜೀವನವನ್ನು ಹಾಳು ಮಾಡುವುದಕ್ಕಾಗಿಯೇ? ಆದ್ದರಿಂದ ಶಾಲಾ ಸಮಿತಿಯವರಾದರೂ ಶಾಲಾ ಅಭಿವೃದ್ಧಿಗಾಗಿ ಕಂಕಣಬದ್ಧರಾಗಿ ಏರ್ಪಡಿಸಬೇಕಾಗಿ ಪ್ರಾರ್ಥಿಸುವ,

'ಜನ. ಭವಿ'

ಮೂಯುಮುಡಿ ಶಾಲೆ.

ತಾ. ೨-೫-೫೨ ರ 'ಕೊಡಗು' ಪತ್ರಿಕೆಯಲ್ಲಿ 'ಅನುಭವಸ್ಥ'ರು ಈ ಶಾಲೆಯ ವಿಷಯ ಹೆಚ್ಚು ಈ ಶಾಲೆಯ ಅನುಭವವಿಲ್ಲದೆ ಬರೆದದ್ದಕ್ಕೆ ತುಂಬಾ ವಿಷಾದಿಸಬೇಕಿದೆ.

ಕಳೆದ ವರ್ಷದಿಂದ ಯುವಕರ ತಂಡವೇ ಇಲ್ಲಿ ಉಪಾಧ್ಯಾಯರಾಗಿದ್ದು, ಗ್ರಾಮಸ್ಥರಾದ ನಾವು ಈ ಯುವಕರಿಂದ ಗ್ರಾಮಕ್ಕೆ ತುಂಬಾ ಸೇವೆ ಸಿಗಬಹುದೆಂದು ಆಶಿಸುತ್ತಿದ್ದೆವು. ಆದರೆ ಅವರ ಅಟ್ಟಹಾಸ, ನೀತಿ ನಡತೆಗಳು ಸಂಪೂರ್ಣ ಬದಲಾಗಿದ್ದು, 'ಇಂದಿನ ಯುವಕರೆಲ್ಲಾ ಇದೇ ರೀತಿಯೋ' ಎಂಬ ಸಂಶಯ ಬಹಳವಾಗಿದೆ. ಕ್ಲಾಸಿನಲ್ಲಿ ನಿಮಿಷಕೊಂದಾವರ್ತಿ ಸಿಗರೇಟು ಸೇದುತ್ತಲೂ, ಆಗಾಗ ಟೀ ಪಾರ್ಟಿಗಳನ್ನು ಶಾಲೆಯಲ್ಲಿ ಮಾಡುತ್ತಲೂ, ದೊಡ್ಡ ದೊಡ್ಡ ಆಫೀಸರುಗಳು ತಮ್ಮ ಅತೀ ಕೈ ಕೆಳಗಿನ ಸೇವಕರನ್ನು ಕಾಣುವಂತೆ, ಹಲವೊಂದು ಸಲ ಗ್ರಾಮಸ್ಥರೊಡನೆ ವರ್ತಿಸುತ್ತಲೂ ಇರುವುದಾದರೆ ಚಿಕ್ಕ ಮಕ್ಕಳಾದರೂ ಯಾವ ರೀತಿ ಮುಂದುವರಿಯಬಹುದು ಎಂಬುದನ್ನು ನಾವೇ ತಿಳಿದುಕೊಳ್ಳಬಹುದು. ಈ ವಿಷಯಗಳಲ್ಲಿ ಪ್ರೆಸಿಡೆಂಟರು ಖಾಸಗಿ ಉಪಾಧ್ಯಾಯರುಗಳೊಡನೆ ಸಿಟ್ಟಾದರೆ, ಶಾಲೆಯ ಪಾಠ ಕ್ರಮದಲ್ಲಿ ಕೈ ಹಾಕಿದರೆಂದು 'ಅನುಭವಿ'ಗಳು ಬರೆದರೆ ಅದು ತುಂಬಾ ವ್ಯಸನಾಸ್ಪದ. ಅದು ಅಲ್ಲದೆ ಪಾಠಕ್ರಮದಲ್ಲಿ ಪ್ರೆಸಿಡೆಂಟರಿಗೆ ಕೈಹಾಕಲು ಸಾಧ್ಯವೇ ಇಲ್ಲ. ಅದಕ್ಕಾಗಿ ವಿದ್ಯಾಧಿಕಾರಿಗಳಿದ್ದಾರೆ. ವಿದ್ಯಾಧಿಕಾರಿಗಳಾದರೂ ಈ ವಿಷಯ ಹೆಚ್ಚು ಗಮನ ಕೊಡಲಿಲ್ಲವೆಂದೇ ತೋರುತ್ತದೆ. ಈಗ ತಾನೇ ಹೊಸದಾಗಿ ಬಂದ ಹಿರಿಯ ಹೆಡ್ ಮಾಸ್ಟರವರನ್ನೂ ಕೂಡ ಈ ಯುವಕ ಉಪಾಧ್ಯಾಯರುಗಳು ತಿರಸ್ಕಾರ ರೀತಿಯಿಂದ ಕಾಣುತ್ತಿದ್ದಾರೆಂದು ತಿಳಿದಿದೆ. ಇದಕ್ಕೆ ಮೊದಲು ಅವರಲೊಬ್ಬರೇ ಹೆ. ಮಾ. ಆಗಿದ್ದರು. ಮಾತ್ರವಲ್ಲವೆ ೧ನೇ ೨ನೇ ಮತ್ತು ೩ನೇ ಕ್ಲಾಸುಗಳು ಗ್ರಾಮಸ್ಥರಿಂದ ನಡೆಸಲ್ಪಡುವುದರಿಂದ ಅದಕ್ಕೆ ಪಾಠಕ್ಕೆ ತಾವು ಹೋಗುವುದಿಲ್ಲವೆಂದೂ ಅವರ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಿಲ್ಲವೆಂದೂ ಹೇಳುತ್ತಾರೆ. ಆದರೆ ಕಳೆದ ವರ್ಷ ಈ ರೀತಿ ಇರಲಿಲ್ಲ. ತರಗತಿಗಳೆಲ್ಲಾ ಒಂದೇ ಶಾಲೆಯಲ್ಲಿರುವುದರಿಂದಲೂ, ಒಂದೇ ಹೆಡ್ ಮಾಸ್ಟರವರ ಆಳ್ವಿಕೆಗೆ ಒಳಪಟ್ಟಿರುವುದರಿಂದಲೂ, ಮಕ್ಕಳ ಚರ್ಚಾಕೂಟ ಆಟೋಟಗಳ ಸಂಘ ಇವೇ ಮೊದಲಾದ ವಿದ್ಯಾಪ್ರಗತಿಗೆ ದೊಡ್ಡ ಆತಂಕವಾಗಿ ಶಾಲೆಯ ದುಸ್ಥಿತಿಗೆ ಕಾರಣವಾಗುವುದು. ವಿದ್ಯಾಧಿಕಾರಿಗಳು ಈ ಕಡೆ ತುಂಬಾ ಗಮನಕೊಡಬೇಕಿದೆ.

ಪ್ರೆಸಿಡೆಂಟರು ಕಮಿಟಿಗಳ ಅನುಮತಿಯಿಲ್ಲದೆ ಉಪಾಧ್ಯಾಯರುಗಳನ್ನು ತೆಗೆದು ಹಾಕಿದರೆಂಬುದು ಸತ್ಯವಲ್ಲ. ಅನುಭವಿಗಳು ವಿಷಯವನ್ನು ಪ್ರೆಸಿಡೆಂಟರನ್ನು ಕೇಳಿಯೇ ತಿಳಿದುಕೊಳ್ಳಬೇಕಿತ್ತು. ಒಬ್ಬ ಉಪಾಧ್ಯಾಯರನ್ನು ಅವರ ಅಧಿಕ ಪ್ರಸಂಗದ ನಿಮಿತ್ತ ತೆಗೆದುಹಾಕಿರುವರು. ಆ ಉಪಾಧ್ಯಾಯರು ಒಂದು ತಿಂಗಳಿಗೆ ರಜೆಗೆ ಮಕ್ಕಳ ಪರೀಕ್ಷೆಯ ಸಮಯದಲ್ಲಿ ಬರೆದುಕೊಂಡಿದ್ದು, ಅದನ್ನು ಪ್ರೆಸಿಡೆಂಟರು ನಿರಾಕರಿಸಿದ್ದರೂ, ಅವರ ಇಚ್ಛೆ ಮೀರಿ ಶಾಲೆಗೆ ಬರದೆ, ಒಂದು ತಿಂಗಳ ನಂತರ ಒಂದು ಪ್ರೆಸಿಡೆಂಟರಿಗೆ ತನಗೆ ಆ ತಿಂಗಳ ಸಂಬಳ ಸಿಗದ ವಿನಾ ಮಕ್ಕಳಿಗೆ ಪರೀಕ್ಷೆ ಮಾಡುವುದಿಲ್ಲವೆಂದೂ ಇನ್ನೂ ಅಸಭ್ಯ ರೀತಿಯಿಂದ ಕಾಗದ ಬರೆದರೆ ಅವರನ್ನು ಯಾವ ಗ್ರಾಮಸ್ಥರು ತಾನೇ ತಮ್ಮ ಶಾಲೆಯಲ್ಲಿ ಹಣದ ಅಭಾವವಿರುವ ಈ ಸಮಯದಲ್ಲಿ ಇಟ್ಟುಕೊಳ್ಳಬಯಸುವರು?

ವಿಷಯವನ್ನು ಚೆನ್ನಾಗಿ ತಿಳಿದು ಅನುಭವಿಗಳು ಬರೆಯಬೇಕಿತ್ತು. ಈ ಶಾಲೆ ಮೂಯುಮುಡಿ ಗ್ರಾಮಸ್ಥರಿಗೆ ಮಾತ್ರ ಸಂಬಂಧಿಸಿದ್ದಲ್ಲ. ಇನ್ನೂ ಎರಡು ಮೂರು ಗ್ರಾಮಸ್ಥರೂ ಇದರಲ್ಲಿದ್ದಾರೆ. ಆದ್ದರಿಂದ ಈ ಎಲ್ಲಾ ಗ್ರಾಮಸ್ಥರೂ ಒಟ್ಟುಗೂಡಿ ನ ದೊಡ್ಡಪ್ಪನ ಕೈಕೆಳಗೆ ಇರುತ್ತಾರೆಂದು ಅನುಭವಿಗಳು ತಿಳಿಯದಿರಲಿ! ಪ್ರೆಸಿಡೆಂಟರು ತಪ್ಪಿತಸ್ಥರಿದ್ದರೆ ಖಂಡಿತವಾಗಿಯೂ ಅವರನ್ನು ಹೊರದೂಡುವೆವು. ಈ ವಿಷಯವನ್ನು ಕೊಡಗಿನ ಇತರ ಗ್ರಾಮಸ್ಥರೂ ನೋಡಿ, ತಮ್ಮ ತಮ್ಮ ಶಾಲೆಯ ಅಭಿವೃದ್ಧಿಗಾಗಿ ಪ್ರಯತ್ನಿಸುವುದಲ್ಲದೆ, ಶಾಲೆಯ ಉಪಾಧ್ಯಾಯರುಗಳು ಸಹ ಮಕ್ಕಳ ಅಭಿವೃದ್ಧಿಗಾಗಿ ಪ್ರಯತ್ನಿಸಬೇಕಿದೆ.

ಗ್ರಾಮಸ್ಥ.

ಪ್ರಜಾ ಜವಾಬ್ದಾರೀ ಸರಕಾರದ ಬೇಜವಾಬ್ದಾರಿತನ.

ಆಹಾರ ಧಾನ್ಯಗಳನ್ನು ಬೆಳೆಸುವವರಿಗೆ ಪ್ರೋತ್ಸಾಹಕೊಡುವುದಕ್ಕಾಗಿ ಈ ವರ್ಷವೂ ದೇಶದ ಅತ್ಯಂತ ಆಹಾರ ಧಾನ್ಯಗಳಿಗೆ ಸರಕಾರವು ಬೆಲೆಯನ್ನು ಏರಿಸಿತು. ಆದರೆ ಹೆಚ್ಚಿಸಿದ ಬೆಲೆಯನ್ನು ಕೊಂಡುಕೊಳ್ಳುವರಿಂದ ಪಡೆಯದೆ ಸರಕಾರವೂ ಸಹಾಯ ಬೊಕ್ಕಸದಿಂದ ತೆರತಕ್ಕದೆಂದು ಡೆಲ್ಲಿಯಲ್ಲಿ ನಡೆದ ಆಹಾರ ಮಂತ್ರಿಗಳ ಮೀಟಿಂಗಿನಲ್ಲಿ ತೀರ್ಮಾನವಾಗಿತ್ತು. ಇದು ಮಹಾ ಚುನಾವಣೆಗಿಂತ ಮುಂಚಿನ ನಿರ್ಧಾರ.

ಅಂತೆಯೇ ಕೊಡಗಿನಲ್ಲಿ ಬತ್ತದ ಬೆಲೆಯನ್ನು ಹೆಚ್ಚಿಸಲಾಯಿತು. ರೇಶನ್ ಅಂಗಡಿಗಳಲ್ಲಿ ರೂ. ೧ಕ್ಕೆ ೩ ಸೇರು ಸಿಕ್ಕುತ್ತಿದ್ದ ಅಕ್ಕಿಯನ್ನು ೨¾ ಸೇರಿಗೆ ಇಳಿಸುವಂತೆ ತೀರ್ಮಾನವಾಯಿತು.

ತಾ ೨೬-೧೨-೫೧ರಲ್ಲಿ ವೀರಾಜಪೇಟೆ ರೇಶನ್ ಕಾರ್ಡುದಾರರ ಮೀಟಿಂಗ್ ಜರಗಿ ಸರಕಾರದ ಧೋರಣೆಯಲ್ಲಿ ಅಸಮ್ಮತಿ ಅಸಂತೃಪ್ತಿಯನ್ನು ವ್ಯಕ್ತಪಡಿಸಿದ್ದಲ್ಲದೆ ಒಂದುವೇಳೆ ಸರಕಾರವು ಬೆಲೆ ಏರಿಸುವುದನ್ನು ತಡೆಯಲಾಗದಿದ್ದರೆ ಧನ ಸಹಾಯ ಕೊಟ್ಟು ಕೊಂಡುಕೊಳ್ಳುವವರಿಗೆ ೩ ಸೇರು ಅಕ್ಕಿಯನ್ನು ಕೊಡಿಸಿಕೊಡಬೇಕೆಂಬ ಬೇಡಿಕೆಯ ಠರಾವು ಪಾಸಾಯಿತು. ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ಏರಿಸುತ್ತಾ ಹೋಗುವುದು ಸಮಾಜ ಘಾತುಕವಲ್ಲದೆ ಅನ್ಯಥಾ ಇರದು. ಬತ್ತದ ಬೆಲೆ ಏರಿದಂತೆ ಮಿಕ್ಕುಳಿದವುಗಳ ಬೆಲೆಯೂ ಏರುವುದು. ಈ ದೃಷ್ಟಿಯಿಂದ ಬತ್ತದ ಬೆಲೆಯೇರಿಕೆ ನಿಷ್ಪ್ರಯೋಜನ. ಬದಲು ಜೀವನಾವಶ್ಯಕ ವಸ್ತುಗಳ [illegible] ಜನರಿಗೆ ಬೇಕಾದ ಸಲಕರಣೆಗಳ ಬೆಲೆಯನ್ನು ಹತೋಟಿಗೆ ತಂದು ಇಳಿಸುವ ಪ್ರಯತ್ನವನ್ನು ಕೈಕೊಳ್ಳುವುದರಿಂದ ಸರ್ವರಿಗೂ ಕ್ಷೇಮವಾಗುವುದು. ಈ ಸುಳಿಯಿಂದ ಸರಕಾರವು ಜನತೆಯನ್ನು ಪಾರು ಮಾಡಬೇಕು. ನಮ್ಮ ಸಂಘದ ಈ ಗೊತ್ತುವಳಿಯನ್ನು ಚೀಫ್ ಕಮಿಷನರಿಗೆ ಕಳುಹಿಸಲಾಯಿತು. ಇದಕ್ಕೆ ಯಾವ ಉತ್ತರವೂ ಸಿಗಲಿಲ್ಲ. ರೇಶನ್ ಅಂಗಡಿಗಳಲ್ಲಿ ಸಿಗುತ್ತಿದ್ದ ೨¾ ಸೇರು ಅಕ್ಕಿಯೂ ಹಾಳಾಗುತ್ತಾ ಬಂತು.

ತಾ ೧೪-೨-೫೨ರಲ್ಲಿ ವೀರಾಜಪೇಟೆಯಲ್ಲಿ ಜರುಗಿದ ಜಮಾಬಂದಿಯಲ್ಲಿ ಚೀಫ್ ಕಮಿಷನರ್ ಸಾಹೇಬರವರಿಗೆ ಇನ್ನೊಂದು ಮನವಿಯನ್ನು ಸ್ವತಃ ಅರ್ಪಿಸಿದಲ್ಲದೆ ಅವರ ಪ್ರತ್ಯಕ್ಷ ಅನುಭವಕ್ಕಾಗಿ ಇಲ್ಲಿನ ರೇಶನ್ ಅಂಗಡಿಗಳಲ್ಲಿ ಸರಬರಾಯಿಯಾಗುತ್ತಿದ್ದ ಸ್ವಲ್ಪ ಅಕ್ಕಿಯನ್ನೂ ತೋರಿಸಲಾಯಿತು. ಇದಕ್ಕೂ ಯಾವ ಉತ್ತರವೂ ಸಿಕ್ಕಲಿಲ್ಲ. ಆದರೆ ಸುಮಾರು ೨ ತಿಂಗಳ ನಂತರ ರೇಶನ್ ಅಂಗಡಿಗಳಲ್ಲಿ ಸಿಗುತ್ತಿರುವ ಅಕ್ಕಿ ಹಾಳಲ್ಲವೆಂದೂ, ಅತ್ಯುತ್ತಮ ಅಕ್ಕಿಯನ್ನೇ ವಿತರಣೆ ಮಾಡಲಾಗುತ್ತಿರುವದೆಂದೂ, ಒಳ್ಳೆಯ ಅಕ್ಕಿ ಸಿಕ್ಕುತ್ತಿಲ್ಲವೆಂಬ ನಮ್ಮ ಆರೋಪ ನಿರಾಧಾರವೆಂದೂ, ತಾನು ಸ್ವತಃ ಅಕ್ಕಿಯನ್ನು ನೋಡಿದ್ದರೂ ಉತ್ತರವನ್ನು ದಯಪಾಲಿಸಿದರು. ಈ ಉತ್ತರ 'Departmental investigation' ಮಾಡಿದನಂತರವಂತೆ. ಆದರೆ ೩ ಸೇರು ಅಕ್ಕಿಯನ್ನು ಕೊಡುವ ವಿಷಯ ಪ್ರಸ್ತಾಪವೇ ಇಲ್ಲ.

ಮಹಾ ಚುನಾವಣೆಯ ಸಮಯದಲ್ಲಿ ಸರಕಾರವು ಖರ್ಚನ್ನು ತಾನೇ ವಹಿಸಿಕೊಳ್ಳುವವರೆಗೆ ೩ ಸೇರು ಅಕ್ಕಿಯಂತೆ ಕೊಡತಕ್ಕದೆಂಬ ಮಾತು ಎಲ್ಲೆಡೆಗಳಲ್ಲಿಯೂ ಮಾರ್ದನಿಗೊಳ್ಳುತ್ತಿತ್ತು. ಆಶಾವಾದಿಗಳಾದ ನಾವು ಚೀಫ್ ಕಮಿಷನರ್ ಸಾಹೇಬರವರು ಉತ್ತರಿಸದಿದ್ದರೂ ಪ್ರಜಾಜವಾಬ್ದಾರಿ ಸರಕಾರವು ಸ್ಥಾಪನೆಯಾದೊಡನೆ ಚುನಾವಣೆಯ ಕಾಲದ ಮನೋಧರ್ಮಕ್ಕನುಸಾರಿ ತಕ್ಕ ಧೋರಣೆಯನ್ನು ವಹಿಸಬಹುದೆಂದು ನೆರೆನಂಬಿ ಕಾದೆವು. ೨೧-೩-೫೨ರಲ್ಲಿ ಮುಖ್ಯ ಮಂತ್ರಿಗಳವರಿಗೆ ಪುನಃ ಬೇಡಿಕೆಯನ್ನು ಕಳುಹಿಸಿದೆವು. ಅದಕ್ಕೆ ಇಷ್ಟರ ತನಕವೂ ಉತ್ತರವಿಲ್ಲ.

ಇಷ್ಟರಲ್ಲಿ ಕೇಂದ್ರ ಸರಕಾರದ ಆಹಾರ ನೀತಿಯೇ ಬದಲಾವಣೆಯಾಗಿದೆ. ತೋಳನು ಕೊಕ್ಕರೆಗೆ ತೋರಿಸಿದ ಕೃತಜ್ಞತೆಯಂತೆ ಚುನಾವಣೆಯವರೆಗೆ ಕೊಡುತ್ತಿದ್ದ ಸಬ್‌ಸಿಡಿಯನ್ನು ಕೇಂದ್ರ ಸರಕಾರವು ಇಂದು ರದ್ದುಗೊಳಿಸಿ ಆಹಾರದ ಬೆಲೆಯನ್ನು ಏರಿಸಿದೆ. ಆದ್ದರಿಂದ ನಮ್ಮ ಸರಕಾರದ ಧೋರಣೆಯೂ ಅಂತೆಯೇ ಎಂದು ಊಹಿಸಬೇಕಾಗಿದೆ. ಬೊಕ್ಕಸದಿಂದ ಸಹಾಯವಿಲ್ಲ, ೩ ಸೇರು ಅಕ್ಕಿಯೂ ಇಲ್ಲ, ಸಿಕ್ಕುವ ೨¾ ಸೇರು ಅಕ್ಕಿಯಾದರೂ ಒಳ್ಳೆದಾಗಿ ಸಿಕ್ಕಬಹುದೆಂದು ಆಶಿಸಿದರೆ ಅದೂ ಬತ್ತ, ಮಣ್ಣು, ಮಿಶ್ರಿತವಾಗಿರುತ್ತದೆ. ಕೆಲವೊಂದು ಸಮಯ ಅಕ್ಕಿಯು ಮುಗ್ಗುವಾಸನೆಯಿಂದಲೂ ಕೂಡಿರುತ್ತದೆ. ಇದನ್ನು ಶುದ್ಧ ಮಾಡಿದಲ್ಲಿ ಸಿಕ್ಕುವುದು ಹೆಚ್ಚು ಕಡಮೆ ೧¾ ಸೇರು ಅಕ್ಕಿ. ಸರಕಾರಕ್ಕೆ ಬರೆದುಕೊಂಡಲ್ಲಿ ಉತ್ತರವೂ ಬರುವುದಿಲ್ಲ. ಬರೆದರೂ ಇದೇ ಒಳ್ಳೆ ಅಕ್ಕಿ ಎಂದು ಉತ್ತರಿಸುತ್ತಾರೆ. ನಿಜಸ್ಥಿತಿ ಹೀಗಿರುವಲ್ಲಿ ಜವಾಬ್ದಾರೀ ಸರಕಾರದ ಈ ಬೇಜವಾಬ್ದಾರಿ ಮನೋವೃತ್ತಿ ಏಕೆಂದು ತಿಳಿಯದು. ಇನ್ನಾದರೂ ಸರಕಾರವು ರೇಶನ್ ಅಂಗಡಿಗಳಲ್ಲಿ ಒಳ್ಳೆ ಅಕ್ಕಿ ಸಿಕ್ಕುವಂತೆ ಆಸ್ಥೆವಹಿಸಿ ಬಡಜನತೆಯ ಪ್ರೀತ್ಯಾದರಗಳನ್ನು ಗಳಿಸುವುದೇ?

ಪ್ರೆಸಿಡೆಂಟ್
ಭೂಮಿ ಇಲ್ಲದ ಅಕ್ಕಿ ಕೊಂಡು ಜೀವಿಸುವವರ ಸಂಘ, ವೀರಾಜಪೇಟೆ.

Coorg Forest Department.

TENDER NOTICE.

Tenders are invited for the supply of ragi by 31-5-1952. For details please apply to the Chief Forest Officer, Coorg, Mercara.

Auction Sale.

There will an Auction sale on Sunday the 1st of June at 11 A. M. at the Bungalow Kushalnagar Works, Fraserpet, of Silver Glass, Brass, Furniture, Household Goods etc., The Property of- Mr. D. B. HARREL.

ASSOCIATED AGENCIES.

Insurance Consultants (Life, Fire, & Motor) & Commission Agents, P. B. No. 60, BANGALORE 1.

This is the time to renew the insurance on your valuable Car, Bus, Lorry etc., We allow you 33 1/3 p.c. no Claim Bonus on Cars and 20 p.c. on other Vehicles.

We also deal in motor, Parts of all Popular cars.

We want a few agents to push our business, on very attractive terms.

Please apply immediately for details to the above address.

ಹರಿಜನ ಅಗ್ರಲೇಖ

॥ ಕೃತಜ್ಞತೆ. ॥

'ಇಲ್ಲಿಯ ಜನರ ಸಲುವಾಗಿ ನಿಮಗೆ ಸಾಧ್ಯವಾದುದೆಲ್ಲವನ್ನು ನಾವು ಮಾಡುತ್ತೇವೆ. ಆದರೆ ನಾವು ನಿಮಗೆ ನಮ್ಮ ಕಟು ಅನುಭವವನ್ನು ಹೇಳಲೇಬೇಕಾಗಿದೆ. ಕೃತಜ್ಞತೆ ಈ ಜನರ ಗುಣವಾಗಿಲ್ಲ. ಅವರಿಗಾಗಿ ನೀವು ಎಷ್ಟೇ ಕಾರ್ಯ ಮಾಡಿದರೂ ಕೂಡ ದೊರೆತ ಮೊದಲನೆ ಅವಕಾಶದಲ್ಲೇ ಅವರು ನಿಮ್ಮ ಮೇಲೆ ತಿರುಗಿ ಬೀಳಲು ಹಿಂಜರಿಯರು' (ನಮ್ಮ ನೆರೆಹೊರೆ ಪ್ರದೇಶದವರು. ಅರಸೆಯ ಪರಿಚ್ಛೇದ, ಹಿಂದುಸ್ಥಾನ ಟಾಯಿಮ್ಸ್)

ಕಳೆದ ವರ್ಷ ಪೂರ್ವ ಆಫ್ರಿಕೆಗೆ ಹೋದಾಗ ಅಲ್ಲಿರುವ ನಮ್ಮ ಜನರಲ್ಲಿ ಕೆಲವರು ಈ ರೀತಿ ದೂರಿಕೊಂಡರು ಎಂದು ಶ್ರೀ ಕಾಕಾ ಕಾಲೇಲಕರರು ಬರೆಯುತ್ತಾರೆ.

ತಮ್ಮ ನೌಕರರು ಮತ್ತು ರೈತರ ವಿಷಯದಲ್ಲಿ ಔದಾರ್ಯ ತೋರಿಸಿದಾಗ ಉಂಟಾದ ಪ್ರತಿಕ್ರಿಯೆಯ ವಿಚಾರದಲ್ಲಿ ಟಾಲಸ್ಟಾಯರು ಇಂಥದೇ ಅನುಭವವನ್ನು ಬರೆದಿಟ್ಟ ವಿಚಾರವನ್ನು ಓದಿದ ನೆನಪು ನನಗೆ ಬರುತ್ತಿದೆ. ಆದರೆ ಟಾಲಸ್ಟಾಯರು ವಿಷಯ ಶೋಧಕರಾಗಿದ್ದು ಈ ಅನ್ಯಸರ್ಗಿಕ ಸ್ವಭಾವದ ಕಾರಣವನ್ನು ಕಂಡು ಹಿಡಿದರು. ಅವರು ಅದನ್ನು ಒಂದು ಉದಾಹರಣೆಯಿಂದ ವಿವರಿಸುತ್ತಾರೆ. ಅವರು ಹೇಳಿದ ಉದಾಹರಣೆ ನನಗೆ ಸರಿಯಾಗಿ ನೆನಪಿಲ್ಲವಾದರೂ ಅದು ಈ ಮುಂದಿನ ಬಗೆಯದಾಗಿದೆಯೆಂದು ಹೇಳಬಹುದು.

ನೀವೊಬ್ಬ ತಂಬಾಕು ಸೇದುವವರೆಂದೂ ರಸ್ತೆಗುಂಟ ಹೋಗುತ್ತಿದ್ದಿರೆಂದೂ ಭಾವಿಸಿಕೊಳ್ಳಿ. ನಿಮಗೆ ತಂಬಾಕು ಸೇದಬೇಕಾಗಿದೆ. ಆದರೆ ನಿಮ್ಮ ಬಳಿಯಲ್ಲಿದ್ದ ಕಡ್ಡಿಪೆಟ್ಟಿಗೆ ಬರಿದಾಗಿರುವದು ನಿಮಗೆ ಕಂಡುಬರುತ್ತದೆ. ನಿಮ್ಮ ಸಮೀಪದಲ್ಲಿಯೇ ಹಾದು ಹೋಗುತ್ತಿರುವವನೊಬ್ಬನು ತನ್ನ ಸಿಗರೇಟನ್ನು ಹೊತ್ತಿಸಿಕೊಳ್ಳತೊಡಗಿದ್ದಾನೆ. ಆತ ಕೊರೆದ ಕಡ್ಡಿಯಿಂದಲೇ ನಿಮ್ಮ ಸಿಗರೇಟ್ ಹೊತ್ತಿಸಿಕೊಳ್ಳು ಅವಕಾಶ ಕೊಡಲು ನೀವಾತನನ್ನು ಕೇಳಿಕೊಳ್ಳುತ್ತೀರಿ. ಆತ ಅಡ್ಡಿಯಿಲ್ಲವೆನ್ನುತ್ತಾನೆ. ಆಗ ನೀವು 'ಉಪಕಾರವಾಯಿತು' ಎಂದು ಹೇಳುವದರಲ್ಲಿ ಸಂದೇಹವಿಲ್ಲ. ಆದರೆ ಆತನ ಉಪಕಾರ ರಕ್ಷಣೆಗಾಗಿ ನೀವು ತೋರುವ ಕೃತಜ್ಞತೆಯ ಪ್ರಮಾಣವೆಷ್ಟು? ಆತನು ಎಷ್ಟು ಔದಾರ್ಯ ಮತ್ತು ದಯಾಬುದ್ಧಿಯಿಂದ ನಿಮ್ಮ ವಿಚಾರದಲ್ಲಿ ನಡೆದುಕೊಂಡನು ಎಂಬ ವಿಷಯವನ್ನು ನೀವು ನಿಮ್ಮ ಜೀವಮಾನವಿಡೀ ನೆನೆಯುತ್ತೀರಿ ಎಂದು ನಿಮಗನಿಸುವದೇ? ಅದೇ ರೀತಿ ಇಲ್ಲಿ ಬೇಕಾದಷ್ಟು ಧನವಿದ್ದ ಟಾಲಸ್ಟಾಯನಂಥ ಮನುಷ್ಯನು - ಯಾರಿಗೆ ಒಂದು ರೂಪಾಯಿಯೆಂದರೆ ತಂಬಾಕು ಸೇದುವವನಿಗೆ ಪೆಟ್ಟಿಗೆಯಲ್ಲಿರುವ ಒಂದು ಕಡ್ಡಿಯ ಸಮಾನವೋ ಅಂಥವನೊಬ್ಬನು ಕೆಲವು ಹಣವನ್ನು ನೌಕರನಿಗೆ, ಅಥವಾ ರೈತನಿಗೆ ಇಲ್ಲವೆ ಓರ್ವ ಭಿಕ್ಷುಕನಿಗೆ ಕೊಟ್ಟಲ್ಲಿ ಆ ಹಣವನ್ನು ಪಡೆದಾತನು ಸದಾ ಸರ್ವದಾ ಅದಕ್ಕಾಗಿ ಏಕೆ ಕೃತಜ್ಞನಾಗಿರಬೇಕು? ಹಣ ದಾನವಿತ್ತವನು ತಾನಿತ್ತ ದಾನದಿಂದ ಬಡವನೇನೂ ಆಗಲಿಲ್ಲ. ಆತ ಅದಕ್ಕಾಗಿ ತನ್ನ ಭೋಗಾದಿಗಳೇನನ್ನೂ ತ್ಯಜಿಸಬೇಕಾಗಲಿಲ್ಲ. ದಾನ ಮಾಡುವದಕ್ಕಾಗಿ ಆತ ತನ್ನ ಜೀವನಾವಶ್ಯಕ ವಸ್ತುವೊಂದನ್ನಂತೂ ಖಂಡಿತವಾಗಿಯೂ ಕಳೆದುಕೊಳ್ಳಲಿಲ್ಲ. ಆ ಸ್ಥೂಲಕಾಯದವನೊಬ್ಬನು ತನ್ನ ಶರೀರದಲ್ಲಿದ್ದ ಕೊಬ್ಬನ್ನು ಕಳೆದುಕೊಳ್ಳುವದು ಹಿತಕರವಾಗಿರುವಂತೆ ಆತನಿಗೆ ತನ್ನ ಸಂಪತ್ತನ್ನು ಕಡಿಮೆ ಮಾಡಿಕೊಳ್ಳುವುದು ಅಗತ್ಯವೂ ಒಳ್ಳೆಯದೂ ಆಗಿತ್ತು. ಕೃಶಾಂಗರಿಗೆ ತಮ್ಮ ದೇಹದ ಕೊಬ್ಬನ್ನು ಕೊಡಲು ಬರುವಂಥ ವಿಧಾನವೊಂದನ್ನು ವಿಜ್ಞಾನಿಗಳು ಕಂಡುಹಿಡಿದರೆ ಸ್ಥೂಲಕಾಯರಿಗೆ ಎಷ್ಟು ಆನಂದವಾಗಲಿಕ್ಕಿಲ್ಲ? ಅದಕ್ಕಾಗಿ ಅವರೆಷ್ಟು ಕೃತಜ್ಞರಾಗಲಿಕ್ಕಿಲ್ಲ? ಹಾಗಾದಲ್ಲಿ ಅದು ಕೊಡುವವನಿಗೆ ಮತ್ತು ಸ್ವೀಕರಿಸುವವನಿಗೆ ಇಬ್ಬರಿಗೂ ಪರಸ್ಪರ ಲಾಭದಾಯಕವಾದ ಸಂಗತಿಯಾಗಬಹುದು. ಅವರೀರ್ವರಲ್ಲಿ ಕೊಟ್ಟವ ಮತ್ತು ತೆಗೆದುಕೊಂಡವ ಎಂಬ ಸಂಬಂಧವುಂಟಾಗದು.

ದಾತೃ ಮತ್ತು ಅರ್ಥಿ ಇವರಿಬ್ಬರ ಸಂಬಂಧವು ಮುಂಚಿನ ಅಥವಾ ಪ್ರಚಲಿತ ಸುಲಿಗೆಗಾರ ಮತ್ತು ಸುಲಿಗೆಗೊಳಗಾದವನ ಸಂಬಂಧಕ್ಕೆ ಹೊಂದಿಕೊಂಡಿರುವದಾದರೆ ಕೃತಜ್ಞತೆ ಸಲ್ಲಬೇಕೆಂಬ ಮಾತು ಇನ್ನಷ್ಟು ಅಸಮ ಧ್ವನಿಯದಾಗುವದು. ದಾತೃವು ಶ್ರೀಮಂತ ವ್ಯಕ್ತಿಯಾಗಿರಲಿ ಅಥವಾ ಒಂದು ವಿಶ್ವಸ್ತ ಮಂಡಳವಾಗಿರಲಿ ಇಲ್ಲವೆ ಅಮೇರಿಕೆಯಂಥ ರಾಜ್ಯವಾಗಿರಲಿ ಮತ್ತು ಅರ್ಥಿಯು ಭಿಕ್ಷುಕ ಅಥವಾ ಸಾಮಾಜಿಕ ಕಾರ್ಯಕರ್ತ ಇಲ್ಲವೆ ಅಗತ್ಯವಿರುವ ದೇಶವಾಗಿರಲಿ, ಆಗ ದಾನವು ಯಾವ ವಿಧವಾದ ನಷ್ಟವನ್ನು ಹೊಂದದೆ ತನ್ನಲ್ಲಿರುವ ಸಮೃದ್ಧ ಸಂಪತ್ತಿನಿಂದ ಕೊಡಲ್ಪಟ್ಟದ್ದಾಗಿ ಮತ್ತು ಯಾವುದಾದರೊಂದು ಅಂಜಿಕೆಯ ನಿವಾರಣೆಯ ಉದ್ದೇಶದಿಂದ ಅಥವಾ ಯಾವುದಾದರೊಂದು ಪ್ರತಿಫಲಾಪೇಕ್ಷೆಯಿಂದ ಕೊಡಲ್ಪಟ್ಟದ್ದರೆ ಶಾಶ್ವತವಾದ ಕೃತಜ್ಞತಾ ಭಾವವು ಅರ್ಥಿಯಲ್ಲಿ ಹುಟ್ಟಲಾರದು. ಅಂಥ ಸಂದರ್ಭದಲ್ಲಿ ದಾತೃವಿನ ಬಗೆ ಅಗೌರವ ಮತ್ತು ಅಸೂಯೆ ಹುಟ್ಟುವ ಸಂಭವವಿದೆ. ಬೇಡಿಕೆ ಪೂರೈಸಲ್ಪಡದಿದ್ದರೆ ವಿದ್ರೋಹದ ಅಂಜಿಕೆಯನ್ನಾದರೂ ಹಾಕಿ ದಾತೃವಿನಿಂದ ಅದನ್ನು ಹೆಚ್ಚಿಗೆ ಪಡೆದುಕೊಳ್ಳುವ ಪ್ರಯತ್ನವಾಗಲೂಬಹುದು.

ಯುದ್ಧಾನಂತರದಲ್ಲಿ ಅಮೇರಿಕೆಯು ಯುರೋಪ ಮತ್ತು ಏಶಿಯಾಗಳಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಹಣವನ್ನು ವೆಚ್ಚ ಮಾಡುತ್ತಿದೆ. ಅಮೇರಿಕನ್ನರ ವಿಚಾರದಲ್ಲಿ ಇವರಿಂದ ಕೃತಜ್ಞತೆ ಮತ್ತು ಪ್ರೇಮವು ಉಂಟಾಗಬೇಕು. ಆದರೆ ಯುರೋಪ ಮತ್ತು ಏಶಿಯಾ ಎರಡು ಕಡೆಗಳಲ್ಲೂ ಹೀಗಿಲ್ಲವೆಂದು ನನಗೆ ತಿಳಿದಿದೆ. ಅಮೇರಿಕೆ ಇತ್ತ ಹಣವು ಸ್ವೀಕರಿಸಲ್ಪಡುತ್ತಿದೆ. ಇನ್ನೂ ಹೆಚ್ಚು ದೊರಕಿಸುವ ಪ್ರಯತ್ನವೂ ಮಾಡಲ್ಪಡುತ್ತಿದೆ. ಆದರೆ ಅದರಿಂದ ಲಾಭ ಹೊಂದಿದ ಜನರಲ್ಲಿ ಅಂತಃಕರಣಪೂರ್ವಕವಾದ ಉಪಕಾರ ಸ್ಮರಣೆಯ ಭಾವವಿಲ್ಲ. ಹಣ ಪಡೆದವರು ಕಮ್ಯೂನಿಸ್ಟರಾಗಲು ಈ ಹಣದಿಂದ ಸಹಾಯವಾಗಬಹುದು ಎಂಬ ಅಂಜಿಕೆಯಿದೆ—ಇಂಥ ಪರಿಣಾಮವಾಗಬಾರದು ಎಂಬ ವಿಷಯದಲ್ಲಿ ಅಮೇರಿಕೆ ವಿವಂಚನೆಯಿಂದಿದೆ.

ಈ ಸಂದರ್ಭದಲ್ಲಿ ಮಹಾಭಾರತದ ಬಂಗಾರದ ಮುಂಗುಸಿಯ ಕಥೆಯನ್ನು ನೆನೆದುಕೊಳ್ಳಬಹುದು.

ರಾಜಾ ಯುಧಿಷ್ಠಿರನು ರಾಜಸೂಯ ಯಜ್ಞ ಮಾಡಿದನು. ಅರ್ಥಿಗಳಿಗೆ ಬೇಕ ಬೇಕಾದ ದಾನಧರ್ಮಗಳನ್ನು ಮಾಡಿದನು. ಸಾವಿರಗಟ್ಟಳೆ ಬ್ರಾಹ್ಮಣರಿಗೆ ಭೋಜನವಾಯಿತು. ಅವರು ಕೈ ತೊಳೆದ ನೀರು ಒಂದು ಚಿಕ್ಕ ಕೆಸರು ಹೊಳೆಯೇ ಆಗಿ ಹರಿಯಿತು.

ಆಗ ಒಂದು ಮುಂಗುಸಿ ಅಲ್ಲಿಗೆ ಬಂತು. ಅದರ ಮೈಯ ಅರ್ಧಭಾಗ ಚಿನ್ನದ್ದಾಗಿತ್ತು, ಉಳಿದರ್ಧ ಎಲ್ಲ ಮುಂಗುಸಿಗಳಂತೇ ಇತ್ತು. ಅದು ಬ್ರಾಹ್ಮಣರ ಎಂಜಲು ನೀರಿನ ಕೆಸರಿನಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಹೊರಳಾಡಿತು. ಮತ್ತು ತನ್ನ ಮೈಯ ಸಾಧಾ ಭಾಗವನ್ನು ನೋಡಿತು. ಅದು ಬದಲಾಗದೆ ಮೊದಲಿದ್ದಂತೆಯೇ ಉಳಿದುದನ್ನು ಕಂಡು ಮುಂಗುಸಿ ಧರ್ಮರಾಜನಿಗೆ ಹೇಳಿತು. 'ಎಲೈ ಧರ್ಮರಾಜನೇ, ನಾನು ನಿನ್ನ ಔದಾರ್ಯದ ಯೋಗ್ಯತೆಯನ್ನು ಪರೀಕ್ಷಿಸಿದೆ. ಅದರ ಬೆಲೆ ಸೊನ್ನೆಯೆಂದು ತಿಳಿಯುತ್ತ..'

ರಾಜನು ಇದರ ಅರ್ಥವೇನೆಂದು ವಿಚಾರಿಸಿದನು.

ಮುಂಗುಸಿ ತನ್ನ ವೃತ್ತಾಂತವನ್ನು ಹೇಳಿತು. 'ಎಲೈ ಯುಧಿಷ್ಠಿರನೇ, ಮೊದಲು ನನ್ನ ದೇಹವು ಉಳಿದ ಮುಂಗುಸಿಗಳಂತೆಯೇ ಇತ್ತು. ಒಂದು ದಿನ ನನ್ನ ದೇಹದ ಅರ್ಧವು ಒಬ್ಬ ಬಡ ಗೃಹಸ್ಥನ ಮನೆಯಲ್ಲಿ ಉಂಡ ಅತಿಥಿಯು ಎಂಜಲು ಕೈ ತೊಳೆದ ನೀರಿನ ಕೆಸರಿನಲ್ಲಿ ಅದ್ದಿತು. ಹೀಗೆ ಒದ್ದೆಯಾದ ದೇಹಾರ್ಧವು ಕೂಡಲೆ ಚಿನ್ನವಾದುದನ್ನು ನಾನು ಕಂಡೆ. ವಿಚಾರಿಸಿದಾಗ ಆ ದಿನ ಹೇಗೋ ಅವನು ಸ್ವಲ್ಪ ಅಕ್ಕಿಯನ್ನು ದೊರಕಿಸಿದ್ದನು. ಅದನ್ನು ಬೇಯಿಸಿ ಉಣ್ಣಬೇಕೆಂದಾಗ ಅಷ್ಟರಲ್ಲಿಯೇ ಹಸಿದ ಒಬ್ಬ ಅತಿಥಿ ಬಂದು ಕಾಣಿಸಿಕೊಂಡು ಭೋಜನವನ್ನು ಅಪೇಕ್ಷಿಸಿದನು. ಗೃಹಸ್ಥನು ಹಲವು ದಿನಗಳಿಂದ ತಾನು ಉಪವಾಸವಿದ್ದರೂ ಅತಿಥಿಗೆ ಒಲ್ಲೆನೆನ್ನಲಿಲ್ಲ. ಅತಿಥಿಯು ಅನ್ನೆಲ್ಲ ಉಂಡು ಬಿಟ್ಟನು. ಆ ಮೇಲೆ ನೀರು ಬೇಡಿದನು. ಗೃಹಸ್ಥನು ತಾನು ಎಷ್ಟೋ ಕಷ್ಟದಿಂದ ತಂದಿರಿಸಿದ್ದ ಒಂದು ತಂಬಿಗೆ ನೀರನ್ನೂ ಅವನಿಗೆ ಕೊಟ್ಟುಬಿಟ್ಟನು. ಅತಿಥಿಯು ಅದರಲ್ಲಿ ಸ್ವಲ್ಪವನ್ನು ಕುಡಿದು ಉಳಿದುದರಿಂದ ಕೈ ತೊಳೆಸುಕೊಂಡನು. ಆ ಸ್ವಲ್ಪ ಎಂಜಲು ನೀರೆ ನನ್ನ ಮೈಗೆ ಸೋಕಿದಾಗ ನನ್ನ ಮೈ ಚಿನ್ನವಾದದ್ದು. ಅಲ್ಲಿಂದಾರಂಭಿಸಿ ನಾನು ನನ್ನ ಮೈಯ ಉಳಿದ ಅರ್ಧವನ್ನೂ ಚಿನ್ನವಾಗಿ ಮಾಡಿಕೊಳ್ಳಬೇಕೆಂದು ಅಂಥದೇ ನೀರಿನ ಕೆಸರನ್ನು ಹುಡುಕುತ್ತ ಅಲೆಯುತ್ತಿದ್ದೇನೆ. ಆದರೆ ಎಲ್ಲಿಯೂ ಅದು ಸಿಕ್ಕಲಿಲ್ಲ. ನಿನ್ನ ಯಜ್ಞದ ಸುದ್ದಿ ಕೇಳಿ ತುಂಬ ಆಸೆ ಕಟ್ಟಿಕೊಂಡು ಇಲ್ಲಿಗೆ ಬಂದೆ. ಆದರೆ ನಿನ್ನ ಧರ್ಮವು ಹೀಗೆ ಗುಣಹೀನವಾಗಿರುವುದನ್ನು ನೋಡಿ ನನಗೆ ತುಂಬ ನಿರಾಶೆಯಾಗಿದೆ'

'ಮನುಷ್ಯನು ತನಗೆ ಅತ್ಯವಶ್ಯವಾಗಿರುವ ವಸ್ತುವನ್ನೇ ದಾನಮಾಡಿದರೆ ಮಾತ್ರ ಅದರಿಂದ ಅರ್ಥಿಯ ಹೃದಯು ಕೃತಜ್ಞತೆಯಿಂದ ತುಂಬಿತುಳುಕುವುದು'

ಕಡ್ಡಿಪೆಟ್ಟಿಗೆಯಂಥ ಕ್ಷುದ್ರ ವಸ್ತುವನ್ನು ಪಡೆದವನು ಕೂಡ ಕೊಟ್ಟವನಿಗೆ ಕೃತಘ್ನನಾಗಿರಬಹುದೆಂದು ಇದರ ತಾತ್ಪರ್ಯವಲ್ಲ. ಬೀದಿಯ ನಾಯಿ ಅಥವಾ ಅಡವಿಯ ಕ್ರೂರ ಸಿಂಹವು ಕೂಡ, ತನಗೆ ಕಷ್ಟ ಕಾಲದಲ್ಲಿ ನೆರವಾದವರ ಆಕಸ್ಮಿಕ ಉಪಕಾರವನ್ನೂ ಜೀವಮಾನವೆಲ್ಲ ಸ್ಮರಿಸುವುದು. ದುರ್ದೈವದಿಂದ ಎಷ್ಟೋ ವೇಳೆ ಮನುಷ್ಯನು ನಾಯಿ ಅಥವಾ ಹಿಂಸ್ರ ಪಶುವಿನಷ್ಟು ಕೂಡ ಘನವಂತನಾಗಿರುವುದಿಲ್ಲ. ಇದು ಮನುಷ್ಯನ ಪ್ರಶಸ್ತಿಯ ಕುರುಹಲ್ಲ. ಈ ರೀತಿಯನ್ನು ನೆನೆಯುವಷ್ಟು ವಿವೇಕವಿದ್ದವನಾರೂ ತನ್ನ ಕೃತಘ್ನತೆಯನ್ನು ಸಮರ್ಥಿಸಿಕೊಳ್ಳಲಾರ.

ನನ್ನ ಈ ಲೇಖವು ದಾತೃಗಳಿಗೆ ಒಂದು ಸೌಹಾರ್ದದ ಎಚ್ಚರಿಕೆ ಕೊಡುವ ಉದ್ದೇಶದಿಂದ ಬರೆಯಲ್ಪಟ್ಟಿದೆ. ಅವರು ತಮಗೆ ಅತ್ಯವಶ್ಯವಾಗಿರುವುದನ್ನೇ ದಾನ ಮಾಡಿ ಕೆಲವು ದಿನ ಅದಿಲ್ಲದೇ ಸಾಗಿಸಬೇಕು. ಅವರು ತಾವು ಉಟ್ಟ ಹರಿದ ಬಟ್ಟೆಯನ್ನೋ ಬಿಟ್ಟು ತಿಂಗಳದ ಆಹಾರವನ್ನೋ ದಾನ ಕೊಡದಿರಲಿ. ನೀತಿಯ ನಿಯಮದ ಮೇರೆಗೆ ಬಲ್ಲದ ಸಂಪತ್ತು ಮುಂದುವರಿದ ವ್ಯಕ್ತಿಗಳಾಗಲಿ ರಾಷ್ಟ್ರಗಳಾಗಲಿ ತಾವು ಕೊಡುವ ದಾನಗಳ ಯಜಮಾನರಾಗಿರದೆ ಕೇವಲ ವಿಶ್ವಸ್ತರಾಗಿದ್ದಾರೆ. ಅವರು ತಮ್ಮ ಧಾರಣೆಯನ್ನೋ ಹಣವನ್ನೋ ಚಾತುರ್ಯವನ್ನೋ ತಮ್ಮ ಬಡಬಂಧು ಜನರಿಗಾಗಿ ಅಥವಾ ರಾಷ್ಟ್ರಗಳಿಗಾಗಿ ದಾನ ಮಾಡುವಾಗ ತಮ್ಮ ಪಾಲಿನ ಮನುಷ್ಯನ ಕರ್ತವ್ಯವನ್ನಷ್ಟೇ ಮಾಡುತ್ತಿರುವರೆಂಬುದನ್ನು ಅವರು ಮನಗಾಣಬೇಕು. ತಮ್ಮ ಉಳಿಕೆಯಿಂದಾಗಲಿ ತಮಗೆ ಅವಶ್ಯವಾಗಿರುವುದರಿಂದಾಗಲಿ ಸ್ವಲ್ಪವನ್ನು ದಾನ ಮಾಡುವಾಗ ಅದರಿಂದ ಏನಾದರೂ ಪ್ರಯೋಜನವನ್ನು ಪಡೆಯುವ ಇಲ್ಲವೆ ಯಾವುದಾದರೂ ಭೀತಿಯನ್ನು ತೊಲಗಿಸುವ ಉದ್ದೇಶವಿಟ್ಟುಕೊಂಡಿದ್ದರೆ ಆ ಕಾರಣದಿಂದ ಅವರು ನಿರಾಶರಾಗುವುದು ಖಂಡಿತ. ಅವರು ಉಳ್ಳವರಾದುದರಿಂದ ಕೊಡಬೇಕು. ಕೊಡುವಾಗ ಪ್ರತಿಫಲಾಪೇಕ್ಷೆಯಿಲ್ಲದೆ ಕೊಡಬೇಕು. ಅದಕ್ಕೆ ಏನಾದರೂ ಕಾರಣ ಎದುರು ಪ್ರತಿಫಲಾಪೇಕ್ಷೆಯನ್ನು ಅಂಟಿಸಬಾರದು. ಈ ರೀತಿಯಿಂದ ಮಾತ್ರ ಅರ್ಥಿಗಳ ಹೃದಯದಲ್ಲಿ ತಮ್ಮ ಬಗ್ಗೆ ಗೌರವವನ್ನೂ ಪ್ರೇಮವನ್ನೂ ಅವರು ಉಂಟುಮಾಡಬಲ್ಲರು.

—ಕಿ. ಘ. ಮಶ್ರೂವಾಲಾ.

ಡಾಕ್ಟರು ಬಿ. ಸಿ. ರಾಯರ ಹೊಸ ಮಂತ್ರಿ ಮಂಡಳಿ

ಹೊಸದಾಗಿ ಚುನಾಯಿತವಾದ ಪ. ಬಂಗಾಳ ಶಾಸನ ಸಭೆಯ ಕಾಂಗ್ರೆಸ್ ಪಕ್ಷ ಧುರೀಣರಾದ ಡಾ. ಬಿ. ಸಿ. ರಾಯರವರು ಮುಂದಿನ ತಿಂಗಳು ಎರಡನೇ ವಾರದಲ್ಲಿ ತಮ್ಮ ಹೊಸ ಮಂತ್ರಿ ಮಂಡಳಿ ರಚಿಸುವುದಾಗಿ ತಿಳಿಯುತ್ತದೆ.

ಮಂತ್ರಿಮಂಡಳದಲ್ಲಿ ಹೆಚ್ಚೆಂದರೆ ೧೫ ಜನರಿರಬಹುದೆಂದೂ, ರಾಜ್ಯದ ಮೇಲ್ಮನೆಯ ಚುನಾವಣೆಗಳು ಜೂನ್ ಮೊದಲನೆ ವಾರದಲ್ಲಿ ಮುಗಿಯಬಹುದೆಂದೂ ಹೊಸ ಶಾಸನಾಂಗಗಳು ಅದೇ ತಿಂಗಳ ಕೊನೆಯ ವಾರದಲ್ಲಿ ಸಭೆ ಸೇರಬಹುದೆಂದೂ ತಿಳಿಯುತ್ತದೆ.

ಪೆಪ್ಸು ವಿಲೀನೀಕರಣದ ಸಮಸ್ಯೆ

ಪಂಜಾಬದೊಂದಿಗೆ ಪೆಪ್ಸು ವಿಲೀನವಾಗುವಂತೆ ಶಿಫಾರಸು ಮಾಡುವ ಕಾಂಗ್ರೆಸ್ ಪಕ್ಷದ ಗೊತ್ತುವಳಿಯನ್ನು ತಿರಸ್ಕರಿಸಿರುವ ಅಧ್ಯಕ್ಷರ ರೂಲಿಂಗನ್ನು ಪ್ರತಿಭಟಿಸಲು ೨೮ ಸದಸ್ಯರು ಸಭಾತ್ಯಾಗ ಮಾಡಿದರು.

ಈ ೨೮ ಸದಸ್ಯರಲ್ಲಿ ೨೩ ಕಾಂಗ್ರೆಸ್ ಪಕ್ಷದವರು, ೩ ಕಮ್ಯೂನಿಸ್ಟರು, ೧ ಸ್ವತಂತ್ರರು ಮತ್ತು ಒಬ್ಬರು ಮಂತ್ರಿ ಮಂಡಳ ಪಕ್ಷದವರಿದ್ದಾರೆ.

ಡಾ. ಜೆ. ಸಿ. ಕುಮಾರಪ್ಪನವರ ಹೇಳಿಕೆ.

ವಿನಾಶಾತ್ಮಕ ಸರಕುಗಳ ಉತ್ಪಾದನೆಗಿಂತಾ ಜನತೆಯ ಅಗತ್ಯ ವಸ್ತುಗಳ ಉತ್ಪಾದನೆ ಹೆಚ್ಚು ಮುಖ್ಯವೆಂಬುದರ ಬಗ್ಗೆ ರಶ್ಯವು ಜಗತ್ತಿನ ಗಮನವನ್ನು ಸೆಳೆಯುತ್ತಿದೆಯೆಂದು ಪ್ರಸಿದ್ಧ ಗಾಂಧಿ ತತ್ವಜ್ಞಾನಿಯೂ ಹಾಗೂ ಅರ್ಥಶಾಸ್ತ್ರಜ್ಞರಾದ ಡಾ. ಜೆ. ಸಿ. ಕುಮಾರಪ್ಪನವರು ತಿಳಿಸಿದರು. ಇದು ಖಚಿತವಾಗಿಯೂ ರಚನಾತ್ಮಕ ಶಾಂತಿ ಪ್ರಯತ್ನಗಳಲ್ಲೊಂದೆಂದು ಅವರು ಹೇಳಿದರು.

ಮಾಸ್ಕೊ ಆರ್ಥಿಕ ಪರಿಷತ್ತಿನಲ್ಲಿ ಭಾಗವಹಿಸಿ ಹಿಂತಿರುಗಿದ ಡಾ. ಕುಮಾರಪ್ಪನವರು ಪತ್ರಿಕೋದ್ಯೋಗಿಗಳೊಡನೆ ಮಾತನಾಡುತ್ತಾ ರಶಿಯಾದಲ್ಲಿ ಈಗ ತಯಾರಾಗುತ್ತಿರುವ ಅಗತ್ಯ ಸರಕುಗಳ ಪ್ರಮಾಣವು ಯುದ್ಧಕ್ಕೆ ಹಿಂದೆ ಅಮೇರಿಕಾ ಬ್ರಿಟನ್ನುಗಳಲ್ಲಿದ್ದುದಕ್ಕಿಂತ ಕಡಿಮೆಯೆಂದು ತಿಳಿಸಿದರು. ತಾವು ಭಾಗವಹಿಸಿದ ಪರಿಷತ್ತು ವಾಣಿಜ್ಯ ಪರಿಷತ್ತು ಆಗಿರಲಿಲ್ಲ. ಆರ್ಥಿಕ ಪರಿಷತ್ತೂ ಆಗಿರಲಿಲ್ಲ. ಅದು ರಶಿಯನ್ನರ ಚತುರತೆಯಿಂದ ಸೇರಿಸಿದ್ದ ಶಾಂತಿ ಪರಿಷತ್ತಾಗಿತ್ತೆಂದು ಅವರು ನುಡಿದರು. ರಷ್ಯಾದಲ್ಲೂ ಭಿಕ್ಷಾಟನೆ ಇದೆಯೆಂದು ಅವರು ಹೇಳಿದರು.

ಮುಂದುವರಿದು ರಶಿಯಾ ಇನ್ನೂ ಕಮ್ಯೂನಿಸ್ಟರ ರಾಷ್ಟ್ರವಾಗಿಲ್ಲವೆಂದೂ ಅದು ಕಮ್ಯೂನಿಜಂ ಕಡೆಗೆ ಮುನ್ನಡೆಯುತ್ತಿದೆಯೆಂದೂ ಡಾ. ಕುಮಾರಪ್ಪನವರು ತಿಳಿಸಿದರು.

ಅಧ್ಯಕ್ಷ ಮುಕ್ಕಣ್ಣನಾಗಲಿ!

ಲೋಕ ಸಭೆಯ ಅಧ್ಯಕ್ಷನಿಗೆ ದೇವನು 'ತೃತೀಯ ನೇತ್ರ'ವನ್ನು ದಯಪಾಲಿಸಲೆಂದು ಬಿಕಾನೇರ ಮಹಾರಾಜರು ಇಂದು ಪ್ರಾರ್ಥಿಸಿದರು

ಶ್ರೀ ಮಾವಲಂಕರರು ಅಧ್ಯಕ್ಷರಾದುದಕ್ಕೆ ಅಭಿನಂದಿಸುತ್ತಾ ಸಭೆಯು ಬೃಹದಾಕಾರ ಮತ್ತು ಅಧ್ಯಕ್ಷರ ಕಣ್ಣನ್ನು ಹಿಡಿಯುವಲ್ಲಿ ಸದಸ್ಯರಿಗಿರುವ ತೊಂದರೆಯನ್ನು ಹೇಳುತ್ತಾ ಅವರು, 'ದೇವರು ನಿಮಗೆ ನೂರಾರು ಕಣ್ಣುಗಳನ್ನು ಕೊಟ್ಟಿದ್ದರೂ, ಯಾವ ಸದಸ್ಯನೂ ನಿಮ್ಮ ನೋಟದಿಂದ ಹೊರಗಾಗದಿರಲು ಮತ್ತು ಕಂಬದ ಮರೆಯಲ್ಲಿ ಕೂಡ್ರುವಂಥಾ ದುರ್ದೈವಿ ಸದಸ್ಯರ ದೃಷ್ಟಿಯನ್ನು ಸೆಳೆಯಲು ನಿಮಗೆ ತೃತೀಯ ಕಣ್ಣನ್ನು ದಯಪಾಲಿಸಬೇಕು' ಎಂದು ಹೇಳಿದರು (ಸಭೆ ನಗೆಗಡಲಿನಲ್ಲಿ ಮುಳುಗಿತು)

ಪೆಪ್ಸುನಲ್ಲಿ ಜಮೀನ್ದಾರಿ ರದ್ದು ಪರಿಣಾಮ

ಪೆಪ್ಸುನಲ್ಲಿ ಜಮೀನುದಾರಿ ಪದ್ಧತಿ ವಜಾ ಮಾಡುವುದರಿಂದ ೬,೪೨,೩೧೮ ಎಕರೆಗಳಷ್ಟು ಜಮೀನುಗಳು ಜಮೀನುದಾರರಿಗೂ, ಸಾಗುವಳಿದಾರರಿಗೂ ಹಂಚಿಕೆಗೆ ಸಿಗುವುವು ಎಂದು ಪೆಪ್ಸು ರೆವಿನ್ಯೂ ಮಂತ್ರಿ ಶ್ರೀ ಚೌಧರಿ ರಾಮಸಿಂಗ್‌ರು ಪೆಪ್ಸು ಅಸೆಂಬ್ಲಿಯಲ್ಲಿ ತಿಳಿಸಿದರು.

ರಸ್ತೆಯಲ್ಲಿ ಹೇಸಿಗೆ ಮಾಡುವವರಿಗೆ

ರಸ್ತೆಗಳಲ್ಲಿ ಹೇಸಿಗೆ ಮಾಡುವವರ ಮೇಲೆ ಆನೆ ಪಿಚಕಾರಿಗಳಿಂದ ನೀರೆರಚಬಹುದೆಂದು ಮುಖ್ಯ ಮಂತ್ರಿ ಸಿ. ರಾಜಗೋಪಾಲಾಚಾರಿಯವರು ತಿಳಿಸಿದರು.

ಕೆಲವು ರಸ್ತೆಗಳಲ್ಲಿ ಅಚೆಗೆ ಹೇಸಿಗೆ ಮಾಡುವುದು ಹೆಚ್ಚಾಗಿರುವುದರ ಬಗ್ಗೆ ರಾಜಾಜಿಯವರನ್ನು ಪ್ರಶ್ನಿಸಿದಾಗಲೇ ಅವರು ಮೇಲೆ ಕಂಡಂತೆ ಸೂಚಿಸಿದ್ದು.

ಇಂಥ ವಿಷಯಗಳಲ್ಲಿ ಪೋಲೀಸರನ್ನು ಕರೆಯಬಾರದು ಪೋಲೀಸಿನವರು ಇವುಗಳಲ್ಲಿ ಕೈ ಹಾಕಿದರೆ ಜನರಿಗೆ ಅವರು ಇನ್ನಷ್ಟು ಅಪ್ರಿಯರಾಗುವರು. ಬೀದಿಗಳಲ್ಲಿ ಹೇಸಿಗೆ ಮಾಡುವವರಿಗೆ ಜನರೇ ಬುದ್ಧಿ ಕಲಿಸಬೇಕು. ಹೇಸಿಗೆ ಮಾಡುವವರ ಮೇಲೆ ನೀರೆರಚುವಾಗ ಬಣ್ಣದ ನೀರನ್ನು ಹಾಕಬೇಕಾಗಿಲ್ಲವೆಂದೂ, ಅದರಿಂದ ಖರ್ಚು ವೃಥಾ ಹೆಚ್ಚುವುದೆಂದೂ, ರಾಜಾಜಿ ತಿಳಿಸಿದರು.

ಯಾರ ಹೆಂಡತಿ ಅಥವ ಯಾರ ಗಂಡ

ತಲೆ ಕೆಡಿಸುವ ವ್ಯಾಜ್ಯವೊಂದು ಮುಂಬಾಯಿ ಪೋಲೀಸರ ಮುಂದೆ ಬಂದಿದೆ. ಇಬ್ಬರು ಹೆಂಡಿರು ಗಂಡನೊಬ್ಬನ ಮೇಲೆ ಹಕ್ಕು ಸ್ಥಾಪಿಸಿ ಪೋಲೀಸ್ ಕಚೇರಿಗೆ ಅವನನ್ನು ಎಳೆದಿದ್ದಾರೆ. ಈ ಸ್ವಾರಸ್ಯ ಪೂರ್ಣ ಕಥೆ 'ಬಾಂಬೆ ಕ್ರಾನಿಕಲ್' ಪತ್ರಿಕೆಯಲ್ಲಿ ಈ ಕೆಳಗಿನಂತೆ ಪ್ರಕಟವಾಗಿದೆ.

ಕ್ರೈಸ್ತ ಮತಕ್ಕೆ ಸೇರಿದ ದಂಪತಿಗಳಿಬ್ಬರು ಹೋರ್ನಬಿ ರಸ್ತೆಯ ಮೇಲಿಂದ ಹಾದು ಹೋಗುವಾಗ ೪೦ ವರ್ಷ ಪ್ರಾಯದ ಮತ್ತೋರ್ವ ಕ್ರೈಸ್ತ ಸ್ತ್ರೀಯು ಅವರನ್ನು ದುಂಬಿಸಿದಳು. ಆ ದಂಪತಿಗಳು ಬಸ್ಸನ್ನೇರುವಾಗ ಈಕೆ ಅಡ್ಡ ಮಾಡಿದಳು ಕ್ರೈಸ್ತ ಗೃಹಸ್ಥನನ್ನು ಉದ್ದೇಶಿಸಿ ಅವಳು 'ಈ ಮನುಷ್ಯ ನನ್ನ ಗಂಡ. ಇವನಿಂದ ನನಗೆ ಮೂರು ಮಕ್ಕಳಾಗಿವೆ. ಈ ತರುಣಿಯ ಮೇಲೆ ಪ್ರೇಮ ದೃಷ್ಟಿಯನ್ನಿಟ್ಟು ಅವನು ನನ್ನನ್ನು ಮರೆತಿದ್ದಾನೆ' ಎಂದು ಗಲ್ಲೆಬ್ಬಿಸಿದಳು. ಅಷ್ಟರೊಳಗೆ ರಸ್ತೆಯಲ್ಲಿ ಜನರ ಒಂದು ಗುಂಪೇ ಕೂಡಿತು,

'ಈ ಮಹಿಳೆಯನ್ನು ನಾನು ಒಲ್ಲೆ. ಆಕೆ ಯಾರೆಂಬುದು ನನಗೆ ತಿಳಿಯದು. ಅನಾವಶ್ಯಕವಾಗಿ ನನ್ನ ಮೇಲೆ ಏನೇನೋ ಆರೋಪ ಹೊರಿಸುತ್ತಿದ್ದಾಳೆ' ಎಂದು ಆ ಗಂಡಸು ಜನರ ಮುಂದೆ ತನ್ನ ನಿರ್ದೋಷಿತ್ವವನ್ನು ಆರುಹಿಕೊಂಡನು. ಇಷ್ಟಾಗುವಾಗ ಆ ಇಬ್ಬರು ಹೆಂಗಸರೊಳಗೆ ಕಾದಾಟ ಹೆಚ್ಚಿತು. ಅಲ್ಲಿ ನೆರೆದ ಮಂದಿ ಅವರಿಗೆ ಪೋಲೀಸ್ ಸ್ಟೇಷನಿಗೆ ಈ ದೂರನ್ನು ಕೊಂಡೊಯ್ಯುವಂತೆ ಸಲಹೆ ಕೊಟ್ಟರು. ಈಗ ಅವರ ದೂರು ಪೋಲೀಸ್ ಖಚೇರಿಗೆ ಬಂದಿದೆ.

ಹಂದಿಗಳ ದಂಡಯಾತ್ರೆ ಮದುವೆಯ ಮನೆಯಲ್ಲಿ.

ಮದುವೆಯ ಮಂಟಪದಲ್ಲಿ ಕೂಡಿದ್ದ ಜನರ ಮಧ್ಯೆ ಮುಹೂರ್ತ ಆಗಬೇಕಾಗಿದ್ದ ಸಮಯದಲ್ಲಿ ಹಂದಿಗಳ ಗುಂಪೊಂದು ಮಂಟಪದೊಳಕ್ಕೆ ನುಗ್ಗಿತು. ಅವು ಕುಳಿತಿದ್ದವರ ಪಕ್ಕದಲ್ಲಿ ಹುಡುಕಲಾರಂಭಿಸಿದವು. ಅತಿಥಿಗಳು ಪರಾರಿಯಾದ ಮೇಲೆ ಈ ಆಮಂತ್ರಣವಿಲ್ಲದ ಅತಿಥಿಗಳು ತಮಗೆ ತಾವೇ ಹೋದವು. ಇದು ಜಬ್ಬಲಪುರಕ್ಕೆ ೩೬ ಮೈಲಿ ದೂರದಲ್ಲಿನ ಒಂದು ಹಳ್ಳಿಯಲ್ಲಿ ನಡೆದ ಘಟನೆ.

ಮಂತ್ರಿಗೇ ಮಂತ್ರ.

ಹೈದರಾಬಾದು ರಾಜ್ಯದ ಮಂತ್ರಿ ಮಂಡಲದ ರಚನೆಯ ಪೂರ್ವದಲ್ಲಿ ಒಬ್ಬ ವೃದ್ಧನು ಮಂತ್ರಿಗಳಾಗಿರುವರೊಬ್ಬರ ಬಳಿಗೆ ಬಂದನು. ತಾನು ನೆಹರೂರವರಿಂದ ಇಲ್ಲಿಗೆ ಕಳಿಸಲ್ಪಟ್ಟಿರುವುದಾಗಿಯೂ ಮಂತ್ರಿಗಳ ಮೇಲಿದ್ದ ಕೆಲವು ಆರೋಪಗಳನ್ನು ವಿಚಾರಿಸಲು ಬಂದಿರುವುದಾಗಿಯೂ ತಿಳಿಸಿದನಲ್ಲದೆ, ತಾನು ಈಗಾಗಲೇ ನೆಹರೂರವರಿಗೆ ಆ ಆರೋಪಗಳು ಆಧಾರರಹಿತವೆಂದು ವರದಿ ಮಾಡಿರುವುದಾಗಿಯೂ ಕೂಡಲೇ ಡಿಲ್ಲಿಗೆ ಹಾರಿ, ನೆಹರೂರವರನ್ನು ಕಾಣಬೇಕೆಂದೂ ಇಲ್ಲವಾದರೆ ಮಂತ್ರಿಯಾಗುವ ಅವಕಾಶ ತಪ್ಪಿ ಹೋಗಬಹುದೆಂದೂ ಮೊದಲಾಗಿ ಹೇಳಿದನಂತೆ. ಕೇಳುತ್ತಿದ್ದ ಮಂತ್ರಿಗೆ ಆತನ ಮಾತಿನಲ್ಲಿ ಏಕೋ ಏನೋ ಸಂದೇಹ ಬಂದು ಪೋಲಿಸರಿಗೆ ತಿಳಿಸಿದರಂತೆ ಪೋಲಿಸರು ಆತನನ್ನು ಬಂಧಿಸಿಟ್ಟಿದ್ದಾರೆ. ಈಗ ನ್ಯಾಯಾಲಯದ ಮುಂದೆ ವಿಚಾರಣೆಯಾಗುವುದಿದೆ. ಪಾಪ ಆತನ ಮೋಸ ಫಲಿಸಲಿಲ್ಲ. ಈ ಬಗ್ಗೆ ನೆಹರೂರವರ ಸಾಕ್ಷಿಯನ್ನು ಮ್ಯಾಜಿಸ್ಟ್ರೇಟರು ಲಂಬಯಿಂದ ಕೇಳಿದ್ದಾರೆ

ವನಿತೆಯ ಬದಲು ವೃಷಭ.

ಹೆಂಡತಿಯನ್ನು ಮಾರಿ ಎತ್ತು ಪಡೆದವನೊಬ್ಬನ ಕಥೆಯು ಅಹ್ಮದಾಬಾದ ಪಾಲನಪುರ ಎಂಬಲ್ಲಿಂದ ಕೇಳಿ ಬರುತ್ತದೆ. ಆ ಮನುಷ್ಯನೊಡನೆ ಎರಡು ಎತ್ತುಗಳಿದ್ದವು. ಅವುಗಳಲ್ಲಿ ಒಂದು ಸತ್ತುಹೋಯಿತು. ಹೊಲ ಉಳುವದಕ್ಕೆ ಒಂದು ಎತ್ತಿನಿಂದ ಸಾಧ್ಯವೇ? ಮತ್ತೊಂದು ಎತ್ತು ಪಡೆಯೋಣವೆಂದರೆ ಅವನಲ್ಲಿ ಹಣವಿಲ್ಲ ಬೇರೆ ಉಪಾಯ ಕಾಣದೆ ತನ್ನ ಹೆಂಡತಿಯನ್ನು ಒಬ್ಬನಿಗೆ ಕೊಟ್ಟು ಪ್ರತಿಫಲವಾಗಿ ಎತ್ತು ಪಡೆದನಂತೆ!

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರೆಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಆಡವಿನ ಮೇಲೆಯೂ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಪಿ. ಸಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಖಜಾಂಚಿ.

Edited Printed and Published by P. I. Belliappa at 'Kodagu' Press, Mercara, for 'Kodagu' Ltd.

ಈ ಮನಮೋಹಕ ದೇಶವನ್ನು ನೋಡಬೇಕೆಂದು ಬಹು ದಿನಗಳಿಂದ ಅಪೇಕ್ಷಿಸುತ್ತಿದ್ದೆನು. ಹತ್ತಿರವಿರುವ ನೆರೆಯವರು ಒಬ್ಬರಲ್ಲಿಗೆ ಒಬ್ಬರು ಹೋಗುವದನ್ನು ಹತ್ತಿರವಿದೆ, ಯಾವಾಗಲಾದರೂ ಹೋಗಬಹುದೆಂದು ಮುಂದರಿಸುವಂತೆ ನನ್ನ ಸಂದರ್ಶನೆ ಈ ವರೆಗೆ ಮುಂದರಿದಿತ್ತು. ಚೀಫ್ ಕಮಿಷನರಿಗೂ, ಮಂತ್ರಿಗಳಿಗೂ ಅವರ ಆಮಂತ್ರಣಕ್ಕೂ, ಈ ಸುಂದರ ದೇಶವನ್ನು ನೋಡಿ ಅದರ ನಾಗರಿಕರನ್ನು ಭೇಟಿಯಾಗುವ ಈ ಸುಸಂದರ್ಭ ಕಲ್ಪಿಸಿದ್ದಕ್ಕೂ ವಂದಿಸುತ್ತೇನೆ. ಈ ಬಿನ್ನವತ್ತಳೆಯನ್ನು ನನಗೆ ಕೊಟ್ಟು ನನ್ನ ಬಗೆಗೂ ನನ್ನ ದೊಡ್ಡಪ್ಪನವರ ವಿಚಾರದಲ್ಲೂ ವ್ಯಕ್ತಪಡಿಸಿದ ಸದಭಿಪ್ರಾಯಗಳಿಗೆ ನಾನು ಕೃತಜ್ಞನಾಗಿರುವೆನು.

Licence No. 60.
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಳಿಯಪ್ಪನವರು] [ವಾರ್ಷಿಕ ಚಂದಾ ರೂ. 5—0—0.

ಸಂಪುಟ ೩೦ | ತಾರೀಕು ೩೦-೫-೧೯೫೨ನೇ ಶುಕ್ರವಾರ | ಸಂಚಿಕೆ ೫೦

...ದ್ರವಾಗಿಯೂ, ಆರೋಗ್ಯ ಕೇಂದ್ರವಾಗಿಯೂ ಪರಿಣಮಿಸಲಿ.

ಪ್ರೌಢ ಮತದಾನ ಪದ್ಧತಿಯ ಮೇಲೆ ಆರಿಸಲ್ಪಟ್ಟ ಶಾಸನ ಸಭೆಯಿದ್ದು ಈ ಸಂಸ್ಥಾನದಲ್ಲಿ ಮಂತ್ರಿ ಮಂಡಳದ ರಚನೆಯಾಗಿದೆ. ನಮ್ಮ ಮಹಾ ದೇಶದಲ್ಲಿ ಪ್ರಜಾ ಪ್ರಭುತ್ವದ ಕಾರ್ಯಾಚರಣೆಯಲ್ಲಿ ಈ ಸಂಸ್ಥಾನದ ನಾಗರಿಕರಿಗೂ ಪಾಲ್ಗೊಳ್ಳುವ ಅನುವಾಗಿದೆ. ಮಿಲಿಟರಿ ಮತ್ತು ಆಡಳಿತ ದಕ್ಷತೆ ಇರುವ ಅನೇಕ ಜನರನ್ನು ಕೊಡಗು ಹೆತ್ತಿದೆ. ಅವರು ಈ ದೇಶದ ಮಿಲಿಟರಿಯಲ್ಲಿಯೂ, ಆಡಳಿತ ವಿಭಾಗದಲ್ಲಿಯೂ ಪ್ರಾಮುಖ್ಯ ಜವಾಬ್ದಾರಿಯನ್ನು ಹೊತ್ತಿರುವರು. ಕೊಡಗಿನವರು ನ್ಯಾಯಬದ್ಧವಾಗಿ ಹೆಮ್ಮೆ ಪಡ...

ಕೊಡಗು - ಮೈಸೂರಿನ ಮೈತ್ರಿ ಸಾರೋದ್ಧಾರವಾಗಿ ಬೆಳೆಯಲಿ.

ಮೈಸೂರು ರಾಜಪ್ರಮುಖರ ಮಡಿಕೇರಿ ಭಾಷಣ.

ನಿಮ್ಮ ಬಿನ್ನವತ್ತಳೆಯಲ್ಲಿ ಮೈಸೂರಿನ ಮುನ್ನಡೆಯು ವಿಶದವಾಗಿ ವಿವರಿಸಲಿವಿರಿ. ಮೈಸೂರಿನ ಕೈಗಾರಿಕಾ ಮತ್ತು ವ್ಯವಸಾಯಿಕ ಅಭಿವೃದ್ಧಿಯು ಕೊಡಗಿನಲ್ಲಿ ಹುಟ್ಟಿ, ಮೈಸೂರಿನಲ್ಲಿ ಹರಿದು ಮದ್ರಾಸು ಪ್ರಾಂತದಲ್ಲೂ ಸುಭಿಕ್ಷೆಗೆ ಕಾರಣವಾದ ಕಾವೇರಿ ನದಿಯಿಂದಾಗಿದೆ. ಹಿಂದೂದೇಶದ ಪ್ರಥಮ ವಿದ್ಯುತ್ ಕೇಂದ್ರವಾಗಿ ಶಿವನಸಮುದ್ರದಲ್ಲಿ ಪ್ರಾರಂಭವಾದ ಯೋಜನೆಯು ಕಾವೇರಿಯ ನೀರಿನಿಂದಲೇ ಆಗಿದೆ. ಕಾವೇರಿಯ ನಾಡಾದ ಈ ದೇಶದಲ್ಲಿ ಅದಕೆ ನನ್ನ ಭಕ್ತಿಯನ್ನರ್ಪಿಸಿ ಮೈಸೂರನ್ನು ಆಶೀರ್ವದಿಸಿರುವ ಆಕೆಯನ್ನು ಪ್ರಾರ್ಥನಾ ರೀತಿಯಿಂದ ವಂದಿಸುವೆನು.

ಮೈಸೂರಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿರುವ ಕಾವೇರಿಯ ಜನ್ಮ ಸ್ಥಳವಾದ ಕೊಡಗಿಗೆ ವಿದ್ಯುಚ್ಛಕ್ತಿ ಇಲ್ಲವೆಂದು ಬಿನ್ನವತ್ತಳೆಯಲ್ಲಿ ಹೇಳಲ್ಪಟ್ಟಿದೆ. ಸಿಕ್ಕಿದ ಕೊಡುಗೆಯನ್ನು ನೇರವಾಗಿ ಮರಳಿ ಕೊಡಬಾರದೆನ್ನುವ ನಮ್ಮ ಪರಂಪರಾ ಪದ್ಧತಿಯಂತೆ ಕಾವೇರಿಯಿಂದ ನಮಗೆ ವಿದ್ಯುತ್ ದೊರೆತರೂ ಈ ವರೆಗೆ ಅದನ್ನು ಕೊಡಲು ಸಾಧ್ಯವಿಲ್ಲದಾಗಿರಬಹುದು. ಆದರೆ ಈಗ ಶರಾವತಿ ನದಿಯ ನೀರಿನಿಂದ ಜೋಗ್ ಜಲಪಾತದಿಂದ ವಿದ್ಯುಚ್ಛಕ್ತಿ ಉತ್ಪಾದಿಸುವ ಯೋಜನೆಯಾಗಿರುವದರಿಂದ ಮೈಸೂರಿನ ಬೇಡಿಕೆ ತುಂಬಾ ಇದ್ದರೂ ನಿಮಗೆ ವಿದ್ಯುತ್‌ಶಕ್ತಿ ಒದಗಿಸುವ ಸದವಕಾಶ ಮೈಸೂರಿಗಿದೆಯೆನ್ನಬಹುದು. ಮೈಸೂರು ಸರಕಾರವು ಕೊಡಗಿಗೆ ವಿದ್ಯುತ್ ಶಕ್ತಿ ಒದಗಿಸಲು ಈಗಾಗಲೇ ಒಪ್ಪಿರುವದು. ಈ ಸಂಸ್ಥಾನಕ್ಕೆ ಮೈಸೂರಿನಿಂದ ವಿದ್ಯುತ್‌ಶಕ್ತಿ ದೊರೆಯುವ ವಿಚಾರದಲ್ಲಿ ನಿರತವಾಗಿ ಈಗ ಕೇವಲ ಕೇಂದ್ರ ಸರಕಾರದ ಆರ್ಥಿಕ ಮಂಜೂರಾತಿಯನ್ನು ಕಾಯಲಾಗುತ್ತಿದೆಯೆಂಬುದು ಸಂತೋಷದ ವಿಚಾರ. ಈ ಮಂಜೂರಾತಿಯು ದೊರೆತಾಗ ಮೈಸೂರು ಸರಕಾರವು ಈ ಯೋಜನೆಯನ್ನು ಆದಷ್ಟು ಬೇಗ ಜಾರಿಯಲ್ಲಿ ತರಲು ಸಾಧ್ಯವಾದ ಎಲ್ಲಾ ವಿಚಾರಗಳನ್ನು ನಿರ್ವಹಿಸುವದೆಂದು ಭರವಸೆ ಕೊಡಬಲ್ಲೆ.

ಮೈಸೂರು ಮತ್ತು ಕೊಡಗಿನವರಿಗಿರುವ ನೆರೆಕರೆಯ ಸಂಬಂಧ ಮತ್ತು ಸ್ನೇಹದ ವಿಚಾರ ಹೇಳಬೇಕಿಲ್ಲ. ಕೊಡಗು ಕೇವಲ ನಮ್ಮ ನೆರೆಯ ಸ್ನೇಹಿತ ರಾಷ್ಟ್ರ ಮಾತ್ರವಲ್ಲ; ಉಪಯುಕ್ತ ನೆರೆಯೂ ಹೌದು. ನಿಮಗೆ ತಿಳಿದಿರುವ ಹಾಗೆ ಮೈಸೂರು ಆಹಾರ ಪದಾರ್ಥಗಳಿಗೆ ತುಂಬಾ ಕೊರತೆ ಇರುವ ಪ್ರಾಂತ. ಕೊಡಗು ತನ್ನ ಉಳಿತಾಯ ಬತ್ತವನ್ನು ನಮಗೆ ಕೊಡುತ್ತಿದೆ. ಈ ಸಂಸ್ಥಾನವು ೭೦೦೦ ಟನ್ ಅಕ್ಕಿಯನ್ನು ಈ ವರ್ಷ ಕೊಟ್ಟಿದೆ. ಅಲ್ಲದೆ ಕೊಡಗು ಸರಕಾರವು ನಮಗೆ ಇನ್ನೂ ಸಹಾಯ ಮಾಡುವ ಕಾತುರತೆಯುಳ್ಳದೆಯೆಂದು ತಿಳಿದಿರುವೆನು. ನಮ್ಮ ಅವಶ್ಯಕತೆಯ ಕಾಲದಲ್ಲಿ ಸಹಾಯ ಮಾಡುತ್ತಿರುವ ಕೊಡಗಿನ ಜನರು ನಿಜವಾಗಿಯೂ ನಮ್ಮ ಮಿತ್ರರೇ ಹೌದು. ಯಾವ ಯಾವ ವಿಧಾನದಲ್ಲಿ ಕೊಡಗಿಗೆ ಸಹಾಯ ಮಾಡುವದು ನಮಗೆ ಸಾಧ್ಯವಿದೆಯೋ ಆ ಎಲ್ಲಾ ಮಾರ್ಗದಿಂದ ನಾವು ಸಹಾಯ ಮಾಡಲು ತಯಾರಿದ್ದೇವೆ. ಮುಂದೆ ಬರುವ ಭವಿಷ್ಯದ ವರ್ಷಗಳಲ್ಲಿ ಕೊಡಗು ಮತ್ತು ಮೈಸೂರಿನ ಸಂಬಂಧವು ಬೆಳೆದು ಪರಸ್ಪರ ಸಹಕಾರ ಮತ್ತು ಸದ್ಭಾವನೆಗಳಿಂದ ಬಲಗೊಳ್ಳಲೆಂಬ ನಿಮ್ಮ ಆಶಯದಲ್ಲಿ ಭಾಗಿಯಾಗುವೆನು.

ಈ ಪಟ್ಟಣದ ಪುರಸಭೆಯ ಕಮಿಟಿಯವರು ಪಟ್ಟಣಿಗರ ಅನುಕೂಲತೆಗಾಗಿ ದುಡಿಯುತ್ತಿರುವದನ್ನು ಕೇಳಿ ಸಂತೋಷವಾಯಿತು. ಪುರಸಭೆಗಳ ಕೆಲಸವು ಕಠಿಣವಾದುದು. ರಾಷ್ಟ್ರದ ರಚನೆಯಲ್ಲಿ ಅವುಗಳ ಸ್ಥಾನವು ರಾಜಕೀಯ ಸಂಸ್ಥೆಗಳಿಗಿಂತಾ ಕಡಿಮೆ ಪ್ರಾಮುಖ್ಯತೆಯದೇನಲ್ಲ. ಅಲ್ಲದೆ ಈ ಸ್ಥಳೀಯ ಸಂಸ್ಥೆಗಳು ರಾಜಕೀಯ ಮುಂದಾಳುಗಳ ಹುತ್ತು ಆಡಳಿತಗಾರರ ತರಬೇತು ಸ್ಥಳಗಳಾಗಿವೆ. ಈಗಿನ ಮಂತ್ರಿಗಳಲ್ಲಿ ಹಲವರು ಈ ಸ್ಥಳೀಯ ಸಂಸ್ಥೆಗಳಲ್ಲಿ ತರಬೇತು ಪಡೆದವರು. ನಿಮ್ಮ ಮಂತ್ರಿಗಳೊಬ್ಬರು ಈ ಪುರಸಭೆಯ ಹಿಂದಿನ ಪ್ರೆಸಿಡೆಂಟರೆಂದು ನಾನು ತಿಳಿಯುತ್ತೇನೆ. ೧೯೧೬ರಿಂದಲೇ ಉದ್ಯೋಗಸ್ಥರಲ್ಲದ ಪ್ರೆಸಿಡೆಂಟರನ್ನು ಪಡೆಯುವ ಭಾಗ್ಯ ಈ ಪುರಸಭೆಗೆ ದೊರೆಯಿತೆಂದು ತಿಳಿಯುತ್ತೇನೆ. ಪಟ್ಟಣದ ಅಭಿವೃದ್ಧಿಗಾಗಿ ಕಮಿಟಿಯು ಮಾಡಿದ ಕೆಲಸಗಳಿಗಾಗಿ ಅಭಿನಂದಿಸುತ್ತೇನೆ.

ಪಟ್ಟಣದ ಅಭಿವೃದ್ಧಿಯ ಕಾರ್ಯದಲ್ಲಿ ಪಟ್ಟಣಿಗರ ಪ್ರಾಮುಖ್ಯ ಆವಶ್ಯಕತೆಗಳನ್ನು ತಿಳಿಸಿಕೊಳ್ಳಬೇಕು. ಪ್ರಾಮುಖ್ಯವಾಗಿ ಬಡ ಜನರ ಹಿತಸಾಧನೆಯಾಗಬೇಕು. ಈ ಬಗೆಗೆ ಕಮಿಟಿಯು ಸಾಕಷ್ಟು ನಿಗ ವಹಿಸಿದೆಯೆಂದು ತಿಳಿದು ಸಂತೋಷವಾಗುತ್ತದೆ. ನೀರು ಸರಬರಾಯಿ, ಶುಚಿತ್ವ, ಮನೆಮಾರುಗಳ ಏರ್ಪಾಡು ಇವು ಪ್ರಾಮುಖ್ಯ ಆವಶ್ಯಕಗಳಾಗಿದ್ದು ಸ್ಥಳೀಯ ಸಂಸ್ಥೆಗಳು ಈ ವಿಚಾರಕ್ಕೆ ಹೆಚ್ಚಿನ ಆಸ್ಥೆ ವಹಿಸಬೇಕು.

ಮಡಿಕೇರಿಯು ಸುಂದರ ಪಟ್ಟಣ. ಇದನ್ನು ಉತ್ತಮ ಆರೋಗ್ಯಧಾಮವಾಗಿಯೂ ಪ್ರಯಾಣಿಕರ ಕೇಂದ್ರವಾಗಿಯೂ ಮಾಡುವ ಸಾಧ್ಯತೆ ತುಂಬಾ ಇದೆ. ಈ ವಿಚಾರವು ನಿಮ್ಮ ಸರಕಾರದ ಪರಿಶೀಲನೆಯಲ್ಲಿರುವದೆಂಬ ಬಗ್ಗೆ ನನಗೆ ಸಂಶಯವಿಲ್ಲ. ಸಕಲ ಆವಶ್ಯಕಗಳಿಂದ ಕೂಡಿ ಮಂ...

ಬೇಕಾದ ಸ್ವತಂತ್ರ ಭಾರತದ ಪ್ರಥಮ ಸೇನಾ ನಾಯಕ ಜನರಲ್ ಕಾರ್ಯಪ್ಪನವರು ಒಂದು ಉದಾಹರಣೆ ಇದಕ್ಕೆ ಸಾಕು. ಈ ಭೂಮಿಯಿಂದ ಹೊರಗೆ ಹೋದ ಅನೇಕರು ಮೈಸೂರಿನಲ್ಲಿ ದೊಡ್ಡ ಹುದ್ದೆಗಳನ್ನು ನಡೆಸಿದ್ದಾರೆ. ಈಗಲೂ ದಕ್ಷತೆಯಿಂದ ನಡೆಸುತ್ತಿದ್ದಾರೆ. ಕೊಡಗಿನವರ ಕರ್ತವ್ಯ ಯೋಗ್ಯತೆಗೆ ಇದು ನಿದರ್ಶನವಾಗಿದೆ. ಕೊಡಗು ಮುಂದಕ್ಕೂ ತನ್ನ ಈ ವೈಶಿಷ್ಟ್ಯವನ್ನು ಉಳಿಸಿಕೊಂಡು ಈ ಗೌರವಾನ್ವಿತ ಪರಂಪರೆಯನ್ನು ಕಾಯ್ದುಕೊಂಡು ರಾಷ್ಟ್ರೀಯ ಪುನರ್ರಚನಾ ಕಾರ್ಯದಲ್ಲಿ ತನ್ನ ಪಾತ್ರವನ್ನು ಸಮರ್ಪಕವಾಗಿ ವಹಿಸುವದೆಂದು ನನ್ನ ಅನನ್ಯ ನಂಬಿಕೆಯಾಗಿದೆ. ಈ ಸಂಸ್ಥಾನದ ಪ್ರಗತಿ ಮತ್ತು ಅಭಿವೃದ್ಧಿಯ ಸಾಧನೆಯ ಪ್ರಯತ್ನದಲ್ಲಿ ಈ ಸಂಸ್ಥಾನದ ಜನತೆಗೂ ಸರಕಾರಕ್ಕೂ ಶುಭವಾಗಲೀ ಎಂದು ಹಾರೈಸುತ್ತೇನೆ.

THE JUBILEE INSURANCE CO., LTD.

One of the very few in the feild of Insurance that has been declaring BONUS to its policy holders from its very insception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmand Road, Bangalore.

Our Chief Agents:--THE ORIENTAL ENTERPRISES, BANGALORE 1

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೆದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:--ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,
9 41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

ದೇಶಭಾಂಧವರಿಗೆ ವಿನೋಬ ಅವರ ಕರೆ.

ನನ್ನ ಪ್ರಿಯ ಭಾರತೀಯ ಬಾಂಧವರೆ,

ಕಳೆದ ವರ್ಷ ಬೇಸಗೆಯಲ್ಲಿ ನಾನು ತೆಲಂಗಾಣದಲ್ಲಿ ಸಂಚರಿಸುತ್ತಿದ್ದೆ. ಅಲ್ಲಿನ ವಿಕಟ ಸಮಸ್ಯೆಗಳನ್ನು ಕುರಿತು ನಾನು ನಿತ್ಯ ಯೋಚಿಸುತ್ತಿದ್ದೆ. ಒಂದು ದಿನ ಹರಿಜನರ ಬೇಡಿಕೆಯ ಮೇರೆಗೆ ಹಳ್ಳಿಗರ ಹತ್ತಿರ ನಾನು ಭೂದಾನದ ಮಾತೆತ್ತಿದೆ. ಹಳ್ಳಿಗರು ನನ್ನ ಮಾತನ್ನು ಒಪ್ಪಿದರು. ಮೊದಲನೇ ಭೂದಾನ ೧೯೫೧ ಏಪ್ರಿಲ್ ೧೮ನೇ ದಿನ ದೊರಕಿತು. ಆನಂತರ ಭೂದಾನ ಯಜ್ಞದ ಕಲ್ಪನೆ ನನಗೆ ಹೊಳೆಯಿತು. ಅದನ್ನು ತೆಲಂಗಾಣಾ ಯಾತ್ರೆಯಲ್ಲಿ ಉಪಯೋಗಿಸಿದೆ. ಪರಿಣಾಮ ಒಳ್ಳೆಯದಾಯಿತು. ಎರಡು ತಿಂಗಳಲ್ಲಿ ಹನ್ನೆರಡು ಸಾವಿರ ಎಕರೆ ಭೂಮಿ ದೊರೆಯಿತು. ಅಲ್ಲಿಯ ಪರಿಸ್ಥಿತಿಯನ್ನು ಹಿಡಿತಕ್ಕೆ ತರಲು ಇದರಿಂದ ತುಂಬ ಸಹಾಯವಾಯಿತೆಂದು ನನ್ನೆಣಿಕೆ. ಆಗ ಪ್ರಧಾನ ದೇಶದಲ್ಲೆಲ್ಲ ಆಯಿತು. ಈಗ ತೆಲಂಗಾಣಾ ಪರಿಸ್ಥಿತಿ ತಕ್ಕಮಟ್ಟಿಗೆ ಶಾಂತವಾಗಿದೆ.

ಗಾಂಧೀಜಿಯ ಮರಣಾನಂತರ ಅಹಿಂಸೆಯ ಪ್ರವೇಶ ಸಮಾಜದ ಹೊಸ ಕ್ಷೇತ್ರಗಳಲ್ಲಿ ಆಗಬೇಕೆಂದು ನಾನು ಯೋಚಿಸುತ್ತಿದ್ದೆ. ನೇರವಾದ ಮಾರ್ಗ ಪುನರ್ನಿವೇಶನದ ಪ್ರಶ್ನೆಯನ್ನು ಈ ವಿಚಾರದಿಂದಲೇ ನಾನು ನೋಡಿದೆ. ಆದರಿಂದ ಕೂಡ ಅನುಭವವಾಯಿತು. ಆದರ ಆಧಾರದಿಂದಲೇ ನಾನು ತೆಲಂಗಾಣಾಕ್ಕೆ ಹೋಗುವ ಧೈರ್ಯ ಮಾಡಿದೆ. ಅಲ್ಲಿ ನನಗೆ ಭೂದಾನ ಯಜ್ಞದ ರೂಪದಲ್ಲಿ ಅಹಿಂಸೆಯ ಸಾಕ್ಷಾತ್ಕಾರವಾಯಿತು.

ಕೆಲವು ಗ್ರಾಮದಲ್ಲಿ ಭೂದಾನ ದೊರಕಿದ್ದಕ್ಕೆ ಒಂದು ಹಿನ್ನೆಲೆಯಿತ್ತು. ಆ ಹಿನ್ನೆಲೆಯಿಲ್ಲದಿದ್ದ ಭಾರತದ ಇತರ ಪ್ರದೇಶಗಳಲ್ಲಿ ಆ ಕಲ್ಪನೆ ಫಲಿಸೀತೋ ಇಲ್ಲವೋ ಎಂದು ಶಂಕೆಗೆ ಎಡೆಯಿತ್ತು. ಆದರ ನಿವಾರಣೆಗಾಗಿ ಇತರ ಪ್ರದೇಶಗಳಲ್ಲಿಯೂ ಭೂದಾನ ಯಜ್ಞ ಕೈಕೊಳ್ಳುವುದು ಅವಶ್ಯವಾಗಿತ್ತು. ಯೋಜನಾ ಆಯೋಗದ ಮುಂದೆ ನನ್ನ ವಿಚಾರಗಳನ್ನು ಮಂಡಿಸಲು ಪಂ. ನೆಹರೂ ನನಗೆ ಆಮಂತ್ರಣವಿತ್ತರು. ಆ ನಿಮಿತ್ತದಿಂದ ನಾನು ಕಾಲ್ನಡಿಗೆಯಿಂದ ಯಾತ್ರೆ ಹೊರಟೆ. ದಿಲ್ಲಿಯವರೆಗೆ ಎರಡು ತಿಂಗಳ ಆ ಯಾತ್ರೆಯಲ್ಲಿ ೧೮ ಸಾವಿರ ಎಕರೆ ಭೂದಾನ ನನಗೆ ಸಿಕ್ಕಿತು. ಜನತೆ ಅಹಿಂಸೆಗೆ ಪ್ರವೇಶವೀಯಲು ಉತ್ಸುಕವಾಗಿತ್ತೆಂದು ಕಂಡುಕೊಂಡೆ.

ಉತ್ತರ ಪ್ರದೇಶದ ಸರ್ವೋದಯ ಸೇವಕರ ಸೂಚನೆಯಂತೆ ಅಲ್ಲಿಯೂ ವಿಸ್ತಾರ ಕ್ಷೇತ್ರದಲ್ಲಿ ಭೂದಾನ ಯಜ್ಞದ ಪ್ರಯೋಗವನ್ನು ಆರಂಭಿಸಿದೆ. ಉತ್ತರ ಪ್ರದೇಶದಲ್ಲಿ ಒಂದು ಲಕ್ಷ ಹನ್ನೆರಡು ಸಾವಿರ ಹಳ್ಳಿಗಳಿವೆ. ಒಂದೊಂದು ಹಳ್ಳಿಯಲ್ಲಿ ಒಂದೊಂದು ಸರ್ವೋದಯ ಕುಟುಂಬವನ್ನು ನೆಲೆಗೊಳಿಸಿ ಪ್ರತಿಯೊಂದಕ್ಕೆ ೫ ಎಕರೆಯಂತೆ ಭೂಮಿ ಕೊಡುವ ಲೆಕ್ಕ ಹಾಕಿ ೫ ಲಕ್ಷ ಎಕರೆ ಭೂದಾನ ಕೇಳುತ್ತಿರುವ ಸಂಕಲ್ಪ ಮಾಡಿದ್ದಾಯಿತು. ನಡುವೆ ಮೂರು ತಿಂಗಳು ಕಾರ್ಯಕರ್ತರನೇಕರು ಚುನಾವಣೆಯ ಗಡಿಬಿಡಿಯಲ್ಲಿದ್ದನ್ನು ಗಮನಿಸಿದರೆ ಜನರಿಂದ ದೊರೆತ ಸಹಕಾರ ಚೆನ್ನಾಗಿಯೇ ಇತ್ತು. ನಮಗೆ ಒಂದು ಲಕ್ಷ ಎಕರೆಯು ಆಗಲೇ ಸಿಕ್ಕಿದೆ. ಇದರಲ್ಲಿ ನಾನಂತೂ ಅತ್ಯಾಗ್ರಹ ಸಂಕಲ್ಪವನ್ನು ಕಾಣುತ್ತೇನೆ. ನನ್ನ ಅನೇಕ ಸಂಗಡಿಗರಿಗೂ ಹಾಗೆಯೇ ಅನಿಸಿತು. ಸೇವಾಪುರಿಯ ಸರ್ವೋದಯ ಸಮ್ಮೇಳನದಲ್ಲಿ ಎರಡು ವರ್ಷದೊಳಗೆ ಇಡೀ ದೇಶದಲ್ಲಿ ಎಲ್ಲರ ಸೇರಿ ೨೫ ಲಕ್ಷ ಎಕರೆ ಭೂಮಿಯನ್ನು ಪಡೆಯಲು ಸಂಕಲ್ಪಿಸಿದೆವು.

೨೫ ಲಕ್ಷ ಎಕರೆಯಿಂದ ಭಾರತದ ಭೂಮಿ ಹೀನರ ಸಮಸ್ಯೆ ತೀರುವುದಿಲ್ಲ. ಅದಕ್ಕೆ ಕನಿಷ್ಠ ೫ ಕೋಟಿ ಬೇಕು. ಆದರೆ ಮೊದಲನೇ ಹಪ್ತೆಯಾಗಿ ೨೫ ಲಕ್ಷ ಎಕರೆಯನ್ನು ಗಳಿಸಿದರೆ ಭಾರತದ ೫ ಲಕ್ಷ ಹಳ್ಳಿಗಳಿಗೆ ಅಹಿಂಸಾ ಸಂದೇಶವನ್ನು ತಲುಪಿಸಿದ ಹಾಗಾಗುವುದು. ಯೋಚಿತ ವಿಚಾರಕ್ಕೆ ಯೋಗ್ಯ ವಾತಾವರಣ ಉಂಟಾದೀತೆಂದು ನನ್ನ ನಂಬಿಕೆ.

ದೊಡ್ಡ ಜಮೀನ್ದಾರ, ಮಾಲೀಕರಿಂದಂತೂ ನಾನು ಭೂಮಿ ಬೇಡುತ್ತೇನೆ. ಚಿಕ್ಕ ಹಿಡುವಳಿದಾರರಿಂದಲೂ ನೆರವು ಪಡೆಯಬಯಸಿದ್ದೇನೆ. ಅವರೂ ಔದಾರ್ಯದಿಂದ ನನ್ನ ಬಿನ್ನಹ ಮನ್ನಿಸಿದ್ದಾರೆ. ಈ ಯಜ್ಞದಲ್ಲಿ ಎಷ್ಟೋ ಶಬರಿಯರು ತಮ್ಮ ಬೋರೆ ಹಣ್ಣು ನೀಡಿದ್ದಾರೆ. ಎಷ್ಟೋ ದಾನಗಳ ಹಿಂದೆ ಅಲಕ್ಷ್ಯ ಮಾಡಲಾಗದ ತ್ಯಾಗವಿದೆ. ನನಗೆ ಚಿಕ್ಕ ಹಿಡುವಳಿದಾರರ ಭಕ್ತಿ ಚಿತ್ತವು ಕಾಣಿಸಿದೆ. ಬಡವರಿಗೆ ಅತ್ಯಂತ ದಾನಶೀಲತೆ ಪ್ರೇಮದ ಸ್ಫೂರ್ತಿ ಅತ್ಯಧಿಕವಾಗಿದೆ. ಸ್ವಾಮಿತ್ವತ್ಯಾಗದ ಸಿದ್ಧಿಯೂ ಇಲ್ಲಿ ದೊರೆಕಿವೆ.

ಎಲ್ಲ ಬಗೆಯ ಜನರು ನನಗೆ ಭೂಮಿ ಕೊಟ್ಟಿದ್ದಾರೆ. ಹಿಂದುಗಳು, ಮುಸ್ಲಿಮರ ಜೊತೆಯೆ ಇತರರೂ ಕೊಟ್ಟಿದ್ದಾರೆ. ಏನೂ ಇಲ್ಲದವರೆನಿಸಿದ ಬಡಜನರೂ ಕೊಟ್ಟಿದ್ದಾರೆ. ಭೂಮಿಯ ಮೇಲೆ ಅಧಿಕಾರವಿಲ್ಲದವರೆನಿಸಿದ ಸ್ತ್ರೀಯರೂ ಕೊಟ್ಟಿದ್ದಾರೆ. ಎಲ್ಲ ಪಕ್ಷಗಳವರೂ ಕೊಟ್ಟಿದ್ದಾರೆ. ದರಿದ್ರ ನಾರಾಯಣನು ಅವರ ಕುಟುಂಬದ ಒಂದು ಅಂಗವೆಂಬ ಅಧಿಕಾರದಿಂದಲೇ ನಾನು ಭೂದಾನ ಬೇಡಿದೆ. ಕೊಡುವವರೂ ಅದೇ ಭಾವನೆಯಿಂದ ಕೊಟ್ಟರು.

ಭೂದಾನ ಶಬ್ದದಲ್ಲಿ 'ದಾನ' ಶಬ್ದವಿರುವುದರಿಂದ ಯಾರೂ ಹಿಂಜರಿಯಬೇಕಿಲ್ಲ. 'ದಾನಂ ಸಂವಿಭಾಗಃ' ಅಂದರೆ ದಾನವು ಸರಿಯಾದ ವಿಭಾಗ. ಇದು ದಾನಕ್ಕೆ ಶಂಕರಾಚಾರ್ಯರ ವ್ಯಾಖ್ಯೆ. ನಾವೂ ಅದೇ ಅರ್ಥದಲ್ಲಿ ಆ ಪದವನ್ನು ಪ್ರಯೋಗಿಸುತ್ತೇವೆ. ಭೂಮಿ ಪಡೆದವನು ಪುಕ್ಕಟೆ ತಿನ್ನಲಾರ. ಆದರ ಮೇಲೆ ಶ್ರಮ ಪಡಬೇಕಾಗುವುದು. ಅವನ ಹಕ್ಕನ್ನು ಅವನಿಗೆ ಕೊಡುತ್ತಿರುವುದರಿಂದ ಅವನು ಸಂಕೋಚ ಪಡಬೇಕಿಲ್ಲ.

ನಾವು ವಿನಯ, ಪ್ರೇಮಗಳಿಂದ ಮತ್ತು ಸ್ಥಿತಿ ಅರಿತು ಬೇಡುತ್ತೇವೆ. ನಾವು ಮೂರು ಸೂತ್ರಗಳನ್ನಿಟ್ಟುಕೊಂಡಿದ್ದೇವೆ.

೧. ನಮ್ಮ ವಿಚಾರವನ್ನು ತಿಳಿದ ನಂತರವೂ ಯಾರಾದರೂ ಕೊಡದಿದ್ದರೆ ನಾವು ದುಃಖಿಸುವುದಿಲ್ಲ. ಇಂದು ಕೊಡದವನು ನಾಳೆ ಕೊಟ್ಟಾನೆಂದು ನನ್ನ ನಂಬಿಕೆ. ವಿಚಾರದ ಬೀಜ ಮೊಳೆಯದೆ ಫಲ ಬಿಡದು.

೨. ನಮ್ಮ ವಿಚಾರವನ್ನು ಅರಿತು ಯಾರಾದರೂ ಕೊಟ್ಟರೆ ನನಗೆ ಸಂತೋಷ. ಏಕೆಂದರೆ ಅದರಿಂದ ಸೌಹಾರ್ದ ಬೆಳೆಯುತ್ತದೆ.

೩. ನಮ್ಮ ವಿಚಾರವನ್ನರಿಯದೆ ಏನಾದರೂ ಒತ್ತಾಯದಿಂದ ಯಾರಾದರೂ ಕೊಟ್ಟರೆ ನನಗೆ ದುಃಖವಾಗುತ್ತದೆ. ಹೇಗಾದರೂ ಮಾಡಿ ಭೂಮಿ ಸಂಗ್ರಹವು ನಮ್ಮ ಉದ್ದೇಶವಾಗಿಲ್ಲ. ಯೋಗ ಮಾತ್ರ ಸರ್ವೋದಯ ಸೃಷ್ಟಿಯನ್ನುಂಟುಮಾಡುವುದಾಗಿದೆ.

ಇದು ಎಲ್ಲ ಪಕ್ಷಗಳೂ ಸೇರಿ ಮಾಡಬಹುದಾದ ಕಾರ್ಯ. ಕಾಂಗ್ರೆಸೂ ಇತರ ಪಕ್ಷಗಳೂ ಈ ಕಾರ್ಯಕ್ರಮವನ್ನು ತಮ್ಮದಾಗಿಸಿಕೊಂಡು ಪಕ್ಷ ಅಭಿಪ್ರಾಯಗಳನ್ನು ಮರೆತು ನೆರವೀಸಿದರೆ ಅವುಗಳ ಶುದ್ಧೀಕರಣ ತಾನಾಗಿಯೇ ಜರಗಿ ಐಕ್ಯ ಸ್ಥಾಪನೆಯಾದೀತು.

ಭಾರತೀಯ ಬಾಂಧವರೆ, ನೀವು ಈ ಪ್ರಜಾಸೂಯ ಯಜ್ಞದಲ್ಲಿ ಭಾಗವಹಿಸಿ ಆರ್ಥಿಕ ಕ್ಷೇತ್ರದಲ್ಲಿ ಅಹಿಂಸೆಯನ್ನು ಪ್ರತಿಷ್ಠಿಸಿರಿ. ಇದರಿಂದ ಭಾರತೀಯ ಸಂಸ್ಕೃತಿಗೆ ಹಿತವಿದೆ; ಇದರಲ್ಲಿ ಆರ್ಥಿಕ ಸಾಮಾಜಿಕ ಕ್ರಾಂತಿಯ ಬೀಜವಿದೆ; ಮತ್ತು ಲೋಕದಲ್ಲಿ ಶಾಂತಿ ಸ್ಥಾಪಿಸಲೂ ಇದು ನೆರವಾಗುವುದು.

ಅಖಿಲ ಭಾರತದ ಮುಂದೆ ಯಾವುದೊಂದು ಕಾರ್ಯಕ್ರಮವನ್ನಿರಿಸುವ ಅಧಿಕಾರ ನನಗಿಲ್ಲೆಂದು ಬಲ್ಲೆ. ಜನರಿಗೆ ಆದೇಶ ಕೊಡಬಲ್ಲ ಮುಂದಾಳು ನಾನಲ್ಲ. ಹಳ್ಳಿಗರ ಸೇವೆಯನ್ನೇ ಪರಮಾರ್ಥ ಸಾಧನೆಯಾಗಿ ಮಾಡಿಕೊಂಡ ಭಕ್ತ ನಾನು. ಗಾಂಧಿಜಿ ಬದುಕಿದ್ದರೆ ನಾನು ಹೀಗೆ ಜನರ ಮುಂದೆ ನಿಲ್ಲುತ್ತಿರಲಿಲ್ಲ. ಹಳ್ಳಿಯಲ್ಲಿ ಭಂಗಿ ಕೆಲಸ ಮಾಡುತ್ತ, ಕೃಷಿಯ ಪ್ರಯೋಗ ಮಾಡುತ್ತ ಉಳಿಯುತ್ತಿದ್ದೆ. ಆದರೆ ಪರಿಸ್ಥಿತಿಯ ಮೂಲಕ ನಾನು ಹೊರಗೆ ಬರಬೇಕಾಯಿತು. ಮತ್ತು ಒಂದು ಮಹಾ ಯಜ್ಞ ಪುರೋಹಿತನಾಗುವ ದಿಟ್ಟತನಕ್ಕೆ ಪ್ರೇರಕನಾಯಿತು. ಇದು ದಿಟ್ಟತನವಾದಲ್ಲಿ ನನ್ನ ಶಕ್ತಿಯಿಂದಲ್ಲ ಆದನ್ನು ಪರಮಾತ್ಮನಿಗೆ ಒಪ್ಪಿಸಿ ಬಂಧು ಭಗಿನಿಯರಿಂದ ಈ ರೀತಿಯಲ್ಲಿ ಸಹಯೋಗಯಾಚನೆ ಮಾಡುತ್ತಿದ್ದೇನೆ.

ವಿನೋಬಾನ ಪ್ರಣಾಮಗಳು.

ಕೇಂದ್ರ ಸರಕಾರದ ಬಜೆಟ್.

ಈ ಸಾಲಿನಲ್ಲಿ ೩.೭೩ ಕೋಟಿ ರೂ. ಉಳಿತಾಯ.

ಹೊಸ ಸುಂಕವೂ ಇಲ್ಲ; ಪರಿಹಾರವೂ ಇಲ್ಲ

ಭಾರತ ಸರಕಾರದ ೧೯೫೨-೫೩ನೇ ಸಾಲಿನ ಬಜೆಟ್ ಈ ರೀತಿ ಇದೆ.

	ತಾತ್ಕಾಲಿಕ ಬಜೆಟ್	ಅಖೈರು ಬಜೆಟ್
	ಕೋಟಿ ರೂ.	ಕೋಟಿ ರೂ.
ವರಮಾನ	೪೨೭.೨೮	೪೦೮.೨೮
ವೆಚ್ಚ	೪೦೭.೫೫	೪೦೪.೫೫
ಉಳಿತಾಯ	೧೯.೭೩	೩.೭೩

ಪ್ರಸಕ್ತ ಸಾಲಿನಲ್ಲಿ ೩.೭೩ ಕೋಟಿ ರೂಪಾಯಿಗಳ ರೆವಿನ್ಯೂ ಉಳಿತಾಯವಿರುವುದಾಗಿ ಆರ್ಥಿಕ ಮಂತ್ರಿ ಶ್ರೀ ಸಿ. ಡಿ. ದೇಶಮುಖ್‌ರವರು ತಾ. ೨೩ರಂದು ಲೋಕಸಭೆಯಲ್ಲಿ ತಿಳಿಸಿದರು. ಅವರು ಕ್ಯಾಪಿಟಲ್ ವೆಚ್ಚಕ್ಕೆ ಹಣ ಒದಗಿಸಿದ ನಂತರ ಒಟ್ಟು ಲೆಕ್ಕದಲ್ಲಿ ೭೫.೬ ಕೋಟಿ ರೂ. ಕೊರತೆ ಬರುವುದೆಂದೂ ತಿಳಿಸಿದರು.

ಹೊಸದಾಗಿ ಯಾವ ತೆರಿಗೆಯನ್ನೂ ಹಾಕುವುದಿಲ್ಲವೆಂದೂ, ಈಗಿರುವ ತೆರಿಗೆಗಳಲ್ಲಿ ಯಾವ ಪರಿಹಾರವನ್ನೂ ತೋರುವುದಿಲ್ಲವೆಂದೂ ಆರ್ಥಿಕ ಮಂತ್ರಿಗಳು ತಿಳಿಸಿದರು.

ಆಹಾರ ಸಬ್ಸಿಡಿ ಇಲ್ಲ.

ಸ್ಥಳದಲ್ಲೇ ಸಂಗ್ರಹಿಸಿದ ಧಾನ್ಯಗಳ ಬೆಲೆಗೂ ಆಮದಾದ ಧಾನ್ಯಗಳ ಬೆಲೆಗೂ ಸಮಾನತೆಯನ್ನು ಕಲ್ಪಿಸುವುದಕ್ಕಾಗಿ ಆಹಾರ ಸಹಾಯ ಧನವನ್ನು ಮತ್ತೆ ಕೊಡುವುದಿಲ್ಲವೆಂದು ಶ್ರೀ. ದೇಶಮುಖ್ ತಿಳಿಸಿದರು.

ಆದಾಯ—ವ್ಯಯ.

ಪ್ರಸಕ್ತ ಸಾಲಿನ ಒಟ್ಟು ವರಮಾನ ೪೦೮.೨೮ ಕೋಟಿ ರೂಪಾಯಿಗಳು ಎಂದು ಅಂದಾಜು ಮಾಡಲಾಗಿದೆ. ವರಮಾನದಿಂದಲೇ ನಿರ್ವಹಿಸಲ್ಪಟ್ಟ ವೆಚ್ಚ ೪೦೪.೫೫ ಕೋಟಿ ರೂ. ಈ ವೆಚ್ಚದಲ್ಲಿ ೧೯೭.೨೫ ಕೋಟಿ ರೂ. ರಕ್ಷಣಾ ಬಾಬಿಗೂ, ೨೦೭.೩ ಕೋಟಿ ರೂ. ಸಿವಿಲ್ ಬಾಬಿಗಾಗಿ. ಈ ವರಮಾನ ವೆಚ್ಚದ ಲೆಕ್ಕಾಚಾರದ ರೀತಿಯಾಗಿ ಉಳಿತಾಯ ೩.೭೩ ಕೋಟಿ ರೂಪಾಯಿಗಳು. ಆದರೆ ಬಂಡವಾಳ (ಕ್ಯಾಪಿಟಲ್) ವೆಚ್ಚಕ್ಕಾಗಿ ೭೯.೩೩ ಕೋಟಿ ರೂ. ಖರ್ಚಾಗುವುದು. ಅಂದರೆ ಒಟ್ಟಿನಲ್ಲಿ ೭೫.೬ ಕೋಟಿ ರೂಪಾಯಿಗಳು ಕೊರತೆ ಬರುವುದು.

ಆರ್ಥಿಕ ಮಂತ್ರಿಗಳ ಭಾಷಣದ ಮುಖ್ಯ ವಿಭಾಗಗಳು.

ಆರ್ಥಿಕ ಮಂತ್ರಿಗಳು ತಮ್ಮ ಭಾಷಣವನ್ನು ಮುಂದೆ ಕಂಡ ಶಿರೋನಾಮೆಗಳು

ಕಳಲ್ಲಿ ವಿಭಾಗಿಸಿದ್ದಾರೆ—ಹಿಂಜರಿತದ ಆಧ ವಾ ಮುಗ್ಗಟ್ಟಿನ ಸೂಚನೆಯಿಲ್ಲ. ಬದ ಲಾಯಿಸಿದ ಪರಿಸ್ಥಿತಿಯನ್ನೆದುರಿಸಲು ಕ್ರ ಮ ಕೈಗೊಂಡಿದೆ. ಬ್ಯಾಲೆನ್ಸ್ ಆಫ್ ಪೇ ಮೆಂಟ್ ಪರಿಸ್ಥಿತಿ ಇನ್ನೂ ಕಷ್ಟವಾಗಿಯೇ ಇದೆ. ಇಂಟರಿಂ ಬಡ್ಜೆಟ್‌ನಲ್ಲಿ ಸೂಚಿಸ ಲಾಗಿದ್ದ ೧೮೭೩ ಕೋಟಿ ರೂ. ಗಳ ಉ ಳಿತಾಯ ೩೭೩ ಕೋಟಿ ರೂ. ಗಳಿಗಿಳಿದಿ ದೆ. ಆಹಾರ ಸಬ್ಸಿಡಿಯಲ್ಲಿ ವೆಚ್ಚ ಕಡಿ ಮೆ ಮಾಡಿದೆ. ನೀರಾವರಿ ಮತ್ತು ಅಭಿ ವೃದ್ಧಿ ಕಾರ್ಯಗಳಿಗೆ ಹೆಚ್ಚು ಹಣ ನಿಗದಿ ಯಾಗಿದೆ ತೆರಿಗೆಗಳಲ್ಲಿ ಯಾವ ವ್ಯತ್ಯಾಸ ವೂ ಇಲ್ಲ. ಬಡ್ಜೆಟ್‌ನಲ್ಲಿ ಕಾಣಿಸಿರುವ ಆಪ್ರೈಲ್ ಖರ್ಚು ವೆಚ್ಚ ಹೀಗಿದೆ—

ಇಂಟರಿಂ ಬಡ್ಜೆಟ್ ಪ್ರಕಾರ—ವರಮಾ ನ ೪೨೪೯೦ ಕೋಟಿ ರೂ. ವೆಚ್ಚ ೪೦೭.೨೫ ಕೋಟಿ ರೂ. ಉಳಿತಾಯ ೧೮.೭೩ ಕೋಟಿ ರೂ.

ಆಪ್ರೈಲ್ ಬಡ್ಜೆಟ್ ಪ್ರಕಾರ—ವರಮಾ ನ ೪೧೦೪೯೦ ಕೋಟಿ ರೂ. ವೆಚ್ಚ ೪೦೨.೨೫ ಕೋಟಿ ರೂ. ಉಳಿತಾಯ ೩.೭೩ ಕೋಟಿ ರೂ.

ಬೆಲೆಗಳ ಇಳಿತ.

೧೯೫೧ ನೇ ಜುಲೈ ತಿಂಗಳಿಂದಲೇ ಇ ಳಿಮುಖವಾಗಿದ್ದ ಬೆಲೆಗಳು ಈ ವರ್ಷದ ಜನವರಿ ಮತ್ತು ಮಾರ್ಚಿ ತಿಂಗಳುಗಳ ಮ ಧ್ಯೆ ಇನ್ನಷ್ಟು ಹೆಚ್ಚು ಇಳಿಮುಖವಾಯಿ ತೆಂದು ಶ್ರೀ ದೇಶಮುಖ್ ತಿಳಿಸಿದರು.

ಮುಂದುವರಿದು ಅವರು ಈ ರೀತಿ ತಿಳಿಸಿದರು:—ಈ ವರ್ಷದ ಮಾರ್ಚಿ ವೇಳೆಗೆ ಬೆಲೆಗಳ ಸೂಚ್ಯಾಂಕ ೩೬೪.೯ಕ್ಕೆ ಇಳಿದಿ ತ್ತು. ಅಂದರೆ ಜನವರಿ ತಿಂಗಳ ಅಂಕಿ ಕ್ಕಿಂತ ಶೇ. ೧೪ ರಷ್ಟು ಕಡಿಮೆಯಾಗಿತ್ತು. ಈ ಬೆಲೆ ಇಳಿತ ಸಾರ್ವತ್ರಿಕವಾಗಿದ್ದು ಯಾವ ಒಂದು ನಿರ್ದಿಷ್ಟ ಪದಾರ್ಥಕ್ಕೆ ಮಾತ್ರ ಅನ್ವಯಿಸಿರಲಿಲ್ಲ. ಆದರೂ ಕೆ ಲವು ಪದಾರ್ಥಗಳ ಬೆಲೆ ಹಠಾತ್ತಾಗಿ ಇ ಳಿಯಿತು. ಇದಕ್ಕೆ ಮುಖ್ಯ ಕಾರಣಗ ಳೆಂದರೆ ಬೆಲೆ ಕೃತಕವಾಗಿ ಹೆಚ್ಚಾಗಲು ಇ ದ್ದ ಕೆಲವು ಅಂತರರಾಷ್ಟ್ರೀಯ ಕಾರಣಗ ಳು ಕಣ್ಮರೆಯಾದುದು, ಸರ್ಕಾರದ ಹಣ ಕಾಸಿನ ಮತ್ತು ಸಾಲ ಕೊಡುವ ನೀತಿ ಮತ್ತು ಸರಬರಾಜು ಸ್ಥಿತಿ ಉತ್ತಮಗೊಂ ಡದ್ದು, ಇವೇ ಆಗಿದೆ.

ಕೆಲವು ಪದಾರ್ಥಗಳ ಬೆಲೆ ತೀರ ಇ ಳಿದುಹೋಗಲು ಆಹಾರ ಪದಾರ್ಥಗಳಲ್ಲಿ ಹಟ್ಟು ಮತ್ತು ವಿಪರೀತಗಳಿಗೆ ಸ್ವಲ್ಪ ಕಷ್ಟ ವಾಗಿದ್ದರೂ ದೇಶದ ಆರ್ಥಿಕ ಸ್ಥಿತಿಗೆ ಒ ಳ್ಳೆಯದೇ ಆಗಿದೆ. ವರ್ತಕರು ತಮ್ಮ ಹಿ ತದೃಷ್ಟಿಯಿಂದಲೇ ತಮ್ಮ ನಷ್ಟ ಆದಷ್ಟು ಕಡಿಮೆಯಾಗುವಂತೆ ನೋಡಿಕೊಂಡು, ಮಿತವ್ಯಯ ಮತ್ತು ದಕ್ಷವಾದ ಉತ್ಪನ್ನ ಗಳಿಗೆ ಹೆಚ್ಚು ಗಮನ ಕೊಡಬೇಕಾಗಿದೆ.

ಪರಿಸ್ಥಿತಿ ಎದುರಿಸಲು ಸರ್ಕಾರಿ ಕ್ರಮಗಳು.

ಪರಿಸ್ಥಿತಿಯನ್ನು ಎದುರಿಸಲು ಸರ ಕಾರ ಕೈಗೊಂಡ ಕ್ರಮಗಳನ್ನು ಶ್ರೀ ದೇಶ ಮುಖ್ ವಿವರಿಸಿದರು. ಮುಖ್ಯವಾಗಿ ರ ಫ್ತು ವ್ಯಾಪಾರವನ್ನು ಹೆಚ್ಚಿಸಲು ಕೈಗೊಂ ಡ ಕ್ರಮಗಳನ್ನು ಅವರು ಉಲ್ಲೇಖಿಸಿದ ರು. ರಫ್ತುಗಳಲ್ಲಿ ಬದಲಾವಣೆ ಮಾಡಿ ದುದು, ಸಣಬು ಮತ್ತು ಬಟ್ಟೆ ರಫ್ತಿಗೆ ಹೆ ಚ್ಚು ಅವಕಾಶ ಕೊಟ್ಟದ್ದು ಮೊದಲಾದು ವನ್ನು ಅವರು ಸೂಚಿಸಿದರು.

ಕೈಗಾರಿಕೆ ಅಭಿವೃದ್ಧಿ.

ಬೆಲೆಗಳ ಇಳಿತದಿಂದ ಕೆಲ ಕೈಗಾರಿಕೆ ಗಳಿಗೆ ಈಗ ತಾತ್ಕಾಲಿಕ ತೊಂದರೆಯಾಗಿ ರುವುದಾದರೂ ಕ್ರಮೇಣ ಕೈಗಾರಿಕೆಗಳು ಉತ್ತಮಸ್ಥಿತಿಗೆ ಬರುವುವೆಂದೂ ಕೈಗಾರಿ ಕೋತ್ಪನ್ನದ ಪ್ರಮಾಣ ತೃಪ್ತಿಕರವಾಗಿ ಯೇ ಇರುವುದೆಂದೂ ಶ್ರೀ. ದೇಶಮುಖ್ ತಿಳಿಸಿದರು.

ಶ್ರೀ. ದೇಶಮುಖರ ಭಾಷಣದ ಇ ತರ ಮುಖ್ಯಾಂಶಗಳಿವು.

ಆರ್ಥಿಕ ಪರಿಸ್ಥಿತಿ.

ಈಚೆಗೆ ಬೆಲೆಗಳು ಇಳಿದುದು ಮು ಗ್ಗಟ್ಟಿನ ಸೂಚನೆಯೇನೂ ಅಲ್ಲ. ಈಗಾ ಗಲೇ ಬೆಲೆಗಳು ಒಂದು ಸ್ಥಿಮಿತಕ್ಕೆ ಬಂದಿ ವೆ. ಬೆಲೆಗಳು ತೀರ ಇಳಿದು ರಾಷ್ಟ್ರದ ಆರ್ಥಿಕ ಸ್ಥಿತಿಗೆ ತೊಂದರೆ ಬರುವುದಾದರೆ ಅಂಥ ಸ್ಥಿತಿಯನ್ನೆದುರಿಸಲು ಸರ್ಕಾರ ಸಿ ದ್ಧವಾಗಿಯೇ ಇದೆ.

ಬ್ಯಾಲೆನ್ಸ್ ಆಫ್ ಪೇಮೆಂಟ್ (ಅ ಮದು ರಫ್ತು ವ್ಯಾಪಾರಗಳ ವ್ಯ ತ್ಯಾಸ) ಪರಿಸ್ಥಿತಿ ಕಷ್ಟವಾಗಿಯೇ ಇದೆ. ಈ ವರ್ಷದ ಮೊದಲ ೪ ತಿಂಗಳ ಅವಧಿ ಯಲ್ಲಿ ಸ್ಟರ್ಲಿಂಗ್ ನಿಧಿಯಲ್ಲಿ ೮೧ ಕೋಟಿ ರೂ. ಕಡಿಮೆ ಬಿತ್ತು. ಆದರೆ ಈ ಸ್ಥಿತಿ ಬೇನೂ ಅಪೇಕ್ಷಿತವಾದುದಲ್ಲ. ಬ್ಯಾಲೆ ನ್ಸ್ ಆಫ್ ಪೇಮೆಂಟ್‌ನಲ್ಲಿ ಮೋಸ ಬಿ ದ್ದಿರುವುದು ಯೋಜನಾಬದ್ಧವಾಗಿಯೇ ಇದೆ ರಾಷ್ಟ್ರದ ನಿಧಿ ಸಂಗ್ರಹವನ್ನು ವ್ಯ ರ್ಥ ಖರ್ಚು ಮಾಡುತ್ತಿಲ್ಲ.

ಡಾಲರ್ ಪರಿಸ್ಥಿತಿ.

ಡಾಲರ್ ಪರಿಸ್ಥಿತಿ ಇತರ ಸ್ಟರ್ಲಿಂಗ್ ಪ್ರದೇಶಗಳಲ್ಲಿರುವಂತೆಯೇ ಭಾರತದಲ್ಲೂ ಕಷ್ಟವಾಗಿದೆ. ಆದರೆ, ಈಗ ಭಾರತದ ಗೋಧಿ ಮತ್ತು ಹತ್ತಿ ದಾಸ್ತಾನಿನ ಪರಿ ಸ್ಥಿತಿ ಉತ್ತಮಗೊಂಡಿರುವುದರಿಂದ ಮ ತ್ತು ಪ್ರಪಂಚ ಬ್ಯಾಂಕಿನಿಂದ ಸಾಲ ದೊರೆ ಯುವ ಸಂಭವವಿದ್ದು ಅದು ದೊರೆತರೆ ಪರಿಸ್ಥಿತಿ ಉತ್ತಮಗೊಳ್ಳುವುದು.

ಬಡ್ಜೆಟ್ ಅಂದಾಜುಗಳು.

ಇಂಟರಿಂ ಬಡ್ಜೆಟ್‌ನಲ್ಲಿ ಸೂಚಿಸಿದ್ದ ೧೮.೭೩ ಕೋಟಿ ರೂ. ಉಳಿತಾಯ ೩.೭೩ ಕೋಟಿ ರೂಗೆ ಇಳಿದಿದೆ. ಒಟ್ಟು ಲೆಕ್ಕದಲ್ಲಿ ಸೂಚಿಸಿದ್ದ ಮೋಸ ೫೭.೩೫ ಕೋಟಿ ರೂ. ಗಳಿಂದ ೭೫.೫೭ ಕೋಟಿ ರೂ. ಗಳಿಗೆ ಹೆಚ್ಚಿದೆ. ಸುಂಕಗಳ ವರಮಾನ ೨೫ ಕೋಟಿ ರೂ. ಗಳಷ್ಟು ಕಡಿಮೆಯಾಗ ಬಹುದು. ಆದರೆ ವರಮಾನ ತೆರಿಗೆಯನ್ನು ಮುಂಚಿತವಾಗಿಯೇ ವಸೂಲುಮಾಡುವು ದರಿಂದ ೫ ಕೋಟಿ ರೂ. ಬಂದು ಸ್ಥಿತಿ ಸ್ವ ಲ್ಪ ಸುಧಾರಿಸುವುದು. ಆಹಾರ ಸಬ್ಸಿಡಿ ೨೫ ಕೋಟಿ ರೂ. ಗಳಿಂದ ೧೫ ಕೋಟಿ ರೂ. ಇಳಿಯುವುದು. ಆದರೆ ಇದರಲ್ಲಿ ೫ ಕೋಟಿ ರೂ. ಗಳನ್ನು ವಸತಿ ಮತ್ತು ಸ ಮುದಾಯ ಯೋಜನೆಗಳಿಗೆ ಕೊಡಲಾಗು ವುದು.

ಕ್ಯಾಪಿಟಲ್ ಬಡ್ಜೆಟ್‌ನಲ್ಲಿ ಸಣ್ಣ ಪು ಟ್ಟ ನೀರಾವರಿ ಯೋಜನೆಗಳಿಗೆ ೧೦ ಕೋ ಟಿ ರೂ. ಹೆಚ್ಚಾಗಿ ಕೊಡಲಾಗಿದೆ. ಇ ನ್ನಿತರ ವಸತಿಗಳಿಗೆ ೫ ಕೋಟಿ ರೂ. ಸಾ ಲವನ್ನೂ, ಸಮುದಾಯ ಯೋಜನೆಗಳಿಗೆ ಮತ್ತು ಸ್ಕೂಲಿಕ್ಕೆ ೬ ಕೋಟಿ ರೂ. ಗಳನ್ನು ಒದಗಿಸಲಾಗಿದೆ.

ಆಹಾರ ಸಬ್ಸಿಡಿ (ಸಹಾಯಧನ)

ಆಹಾರ ಸಬ್ಸಿಡಿಗಾಗಿ ಹೆಚ್ಚು ಹಣವ ನ್ನು ಕೊಡುತ್ತ ಹೋಗುವುದು ವ್ಯರ್ಥ ಖ ರ್ಚಾಗುವುದು, ಸಬ್ಸಿಡಿ ನಿಲ್ಲಿಸುವುದರಿಂದ ಪ್ರಾರಂಭದಲ್ಲಿ ಕಡಿಮೆ ವರಮಾನವಿರುವ ವರ್ಗಕ್ಕೆ ತೊಂದರೆಯಾಗುವುದು. ಆದರೆ ಜೋಳಕ್ಕೆ ಸಬ್ಸಿಡಿ ಒದಗಿಸಿ, ಅವರ ಕಷ್ಟ ವನ್ನು ಕಡಿಮೆ ಮಾಡಲು ಸರ್ಕಾರ ಪ್ರ ಯತ್ನಿಸಿದೆ. ಅಮದಾದ ಧಾನ್ಯಗಳ ಬೆಲೆ ಗೂ ಸ್ಥಳೀಯ ಧಾನ್ಯಗಳ ಬೆಲೆಗೂ ಸಮತೆ ಉಂಟುಮಾಡುವುದಕ್ಕಾಗಿ ಸಬ್ಸಿಡಿ ಕೊ ಡಲಾಗುವುದು. ಆದರೆ ಜನತೆಗೆ ಸಂಕ ಷ್ಟವುಂಟಾಗದಂತೆ ಸರ್ಕಾರ ಕ್ರಮ ಕೈ ಗೊಳ್ಳುವುದು.

ಈ ಲೆಕ್ಕಾಚಾರಗಳ ಪ್ರಕಾರ ೧೯೫೨-೫೩ನೆ ಸಾಲುಪೈನಲ್ಲಿ ನಗದು ಸಿಲ್ಕು ೮೩.೦೦ ಕೋಟಿ ರೂ. ಗಳಷ್ಟಿರುತ್ತ ವುದು.

ಸುಂಕಗಳಲ್ಲಿ ವ್ಯತ್ಯಾಸವಿಲ್ಲ.

ಸುಂಕ ಮತ್ತು ತೆರಿಗೆಗಳಲ್ಲಿ ಯಾವ ವ್ಯ ತ್ಯಾಸವೂ ಇಲ್ಲ. ಹೊಸ ಸುಂಕವೂ ಇ ಲ್ಲ, ಇರುವ ಸುಂಕಗಳಿಂದ ಪರಿಹಾರವೂ ಇಲ್ಲ.

ರಕ್ಷಣಾ ಬಾಬಿನಲ್ಲಿ ಸ್ವಲ್ಪ ವೆಚ್ಚ ಕ ಡಿಮೆ ಮಾಡುವ ಸಾಧ್ಯತೆ ಇದೆ ಸಾ ರ್ವಜನಿಕ ವೆಚ್ಚದ ಬಗೆಗೆ ಯೋಚನೆ ಮಾಡಲು ಪರಿಶೀಲನೆ ನಡೆಯುತ್ತಿದೆಯಾ ದರೂ, ಸುಂಕಗಳ ಏರುವನ್ನು ಹೆಚ್ಚಾಗಿ ಕ ಡಿಮೆ ಮಾಡಲು ಅವಕಾಶ ದೊರೆಯದಷ್ಟು ಮಟ್ಟಿಗೆ ಆಡಳಿತ ವೆಚ್ಚವನ್ನು ಕಡಿಮೆ ಮಾಡಲು ಅವಕಾಶವಿದೆಯೆಂದು ಭಾವಿಸು ವುದು ತಪ್ಪು.

ದೇಶ ವಿಭಜನೆಯಾದಾಗ ಸರ್ಕಾರದಲ್ಲಿ ನಗದು ೨೦೦ ಕೋಟಿ ರೂ. ಇತ್ತು. ಈ ಸಾಲಾಪೈನಲ್ಲಿ ೮೩ ಕೋಟಿ ರೂ. ನಗದಿ ರುತ್ತದೆ ಖರ್ಚಾದ ಹಣವೆಲ್ಲ ಅಗತ್ಯ ಕಾರ್ಯಕ್ರಮಗಳಿಗಾಗಿ ಆಗಿವೆ ಇನ್ನು ಮುಂದೆ ಸಾರ್ವಜನಿಕ ವೆಚ್ಚಕ್ಕಾಗಲಿ, ಅ ಭಿವೃದ್ಧಿ ಯೋಜನೆಗಾಗಲಿ ಹಣ ಬೇಕಾ ದರೆ ರಾಷ್ಟ್ರ ಅದಕ್ಕಾಗಿ ಆಗಾಗ ನಿಧಿ ಎತ್ತ ಬೇಕಾಗುವುದು.

'ಕಾ. ನಾ.'

ಭಾವೆ- ಜಯಪ್ರಕಾಶರ ಭೆಟ್ಟಿ

ಭೂದಾನ ಪ್ರಶ್ನೆಯ ಬಗ್ಗೆ ಚರ್ಚೆ ಮಾಡಲು ಸಮಾಜವಾದಿ ಧುರೀಣರಾದ ಶ್ರೀ. ಜಯಪ್ರಕಾಶ ನಾರಾಯಣರು ಆ ಚಾರ್ಯ ವಿನೋಬಾಭಾವೆಯವರನ್ನು ಬಾಂದಾದಲ್ಲಿ ಮೇ ೩೦ ರಂದು ಭೆಟ್ಟಿಯಾ ಗುವರು.

ಭೂದಾನ ಯಜ್ಞಕ್ಕೆ ಸಮಾಜವಾದಿ ಪಕ್ಷವು ಬೆಂಬಲ ಕೊಡಬಹುದಾದರೂ ಭೂವಿತರಣದ ಬಗ್ಗೆ ಚರ್ಚಿಸುವದು ಅವ ಶ್ಯವಿದೆಯೆಂದು ಹೇಳಿದರು.

ಮದುವೆ ವಿರುದ್ಧ ಹರತಾಳ.

ಹಿಂದೂ ತರುಣಿ ಮತ್ತು ಮುಸ್ಲಿಂ ಯುವಕ ಇವರಲ್ಲಿ ವಿವಾಹ ಜರುಗಿಸಬೇ ಕೆಂಬ ಯತ್ನದ ವಿರುದ್ಧ ಹಳೆಯ ದಿಲ್ಲಿಯ ಬಹುತರ ಎಲ್ಲ ವ್ಯವಹಾರಸ್ಥರು ತಮ್ಮ ಅಂಗಡಿಗಳನ್ನು ಬಂದುಮಾಡಿ ಹರ ತಾಳವನ್ನು ಪಾಲಿಸಿದರು.

ನಿವೃತ್ತ ಸರಕಾರಿ ಅಧಿಕಾರಿ ಮತ್ತು ವ್ಯವಹಾರಸ್ಥರಾದ ಶ್ರೀ. ರಾಮನಾರಾ ಯಣ ಅವರ ಪುತ್ರಿ ಕು. ರಾಜ ಕಪೂರ್ ಮತ್ತು ದಿಲ್ಲಿ ರಾಜ್ಯದ ಮುಖ್ಯ ಮಂತ್ರಿ ಚೌಧರಿ ಬ್ರಹ್ಮ ಪ್ರಕಾಶ ಅವರ ಆಪ್ತ ಕಾ ರ್ಯದರ್ಶಿ ವಿ. ಶಿಕಂದರ ಭಗತ್ ಇವ ರೊಂದಿಗೆ ವಿವಾಹ ಜರುಗಲಿದ್ದಿತು.

ವಧುವಿನ ತಂದೆ, ತನ್ನ ಮಗಳು ಇ ನ್ನೂ ೨೦ ವರ್ಷದವಳದ್ದು ಆಕೆಯು ತನ್ನ ತಂದೆ ತಾಯಿಗಳ ಒಪ್ಪಿಗೆಯನ್ನು ಪಡೆಯ ಬೇಕೆಂಬ ವಾದದಿಂದ ತಡೆ ಅರ್ಜಿಗಾಗಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಬೇಡಿಕೊಂ ಡಿದ್ದರು. ಆಗ ಲಕ್ಷ ೫ ಸಾವಿರ ಮೇ ಲ್ಪಟ್ಟು ಜನರು ಪ್ರದರ್ಶನವನ್ನು ಮಾಡಿದರು ಕೋರ್ಟಿನ ಸುತ್ತ ಪೋ ಲೀಸರ ಕಾವಲಿದ್ದಿತು.

ಭಾವನಗರದಲ್ಲಿ ನೀರಿಗೆ ರೇಶನ್.

ಇದೇ ವರ್ಷ ಜೂನ್ ತಿಂಗಳೊಳಗಾಗಿ ಮಳೆ ಬಾರದಿದ್ದರೆ ಭಾವನಗರದಲ್ಲಿ ನೀರಿಗೆ ರೇಶನ್ ಪ್ರಾರಂಭಿಸಬೇಕಾಗುವದೆಂದು ಗೋಹಿಲವಾಡ ಕಲೆಕ್ಟರರು ಹೇಳಿದರು.

ಶಿಹೋರಿ ಸರೋವರದಲ್ಲಿಯ ನೀರಿನ ಸಂಗ್ರಹವು ದಿನಕ್ಕೆ ಅರ್ಧಕಾಸು ಬಿಡುವ ಸ್ಥಿತಿಯೆಂದು ಕೇವಲ ಜುಲೈ ಅಂತ್ಯದವ ರೆಗೆ ಸಾಲುವದೆಂದೂ ಅವರು ಹೇಳಿದರು.

ಭಾರತ ರಾಜ್ಯಗಳ ಸಮಾನತ್ವ

ಇನ್ನು ಅಲ್ಪ ಕಾಲದಲ್ಲಿಯೇ ಭಾರ ತದ ಎಲ್ಲ ರಾಜ್ಯಗಳು ಸಮಾನ ಮಟ್ಟಕ್ಕೆ ಬರುವವೆಂದೂ, ಅಲ್ಲಿಯ ನಿವಾಸಿಗಳೆಲ್ಲ ರೂ ಸಮಾನಸ್ಥಂಧರಾಗುವರೆಂದೂ ಭಾರ ತ ಸರ್ಕಾರದ ಗೃಹಮಂತ್ರಿಗಳಾದ ಡಾ. ಕೆ. ಎನ್. ಖಟ್ಜೂರವರು ಹೇಳಿದರು.

"ರಾಜ್ಯಘಟನೆಯಲ್ಲಿಯ ಮೂರು ವಿಭಾಗಗಳು ಕೇವಲ ತಾತ್ಕಾಲಿಕವಾಗಿ ವೆ. ಆಜಮೀರದಂತಹ ಸಣ್ಣ ರಾಜ್ಯಗ ಳಲ್ಲಿ ಆಡಳಿತೆಯು ಅನೇಕ ಸಮಸ್ಯೆಗಳು ಎ ದುರಿತ್ತವೆ. ಅದಕ್ಕಾಗಿ ಅಧಿಕಾರಗಳನ್ನು ಒಂದು ಕಡೆಯ ಮತ್ತೊಂದು ಕಡೆಕ್ಕೆ ಮೇಲಿಂದ ಮೇಲೆ ವರ್ಗಾಯಿಸಬೇಕಾ ಗುವದು ಎಂದವರು ಹೇಳಿದರು.

ಅವರನ್ನು ಮುಂದುವರಿದು "ಪ್ರತಿ ಯೊಬ್ಬ ನಾಗರಿಕನು ದೇಶ ಧರ್ಮದ ಪೂರೈಸುತ್ತಾಗಿದ್ದಾನೆ. ಕೈತನು ಸಮಾಜ ದ ಸಹಕಾರ ಸ್ವೀಕರಿಸಿ ತನ್ನ ಕಲ್ಯಾಣ ಮಾಡಿಕೊಳ್ಳಬೇಕು. ಬಂದ ವಿಪತ್ತುಗಳ ನ್ನು ಎಲ್ಲರೂ ಸಮನಾಗಿ ಹಂಚಿಕೊಳ್ಳಬೇ ಕು" ಎಂದವರು ನುಡಿದರು.

ಕೊ ಡ ಗು

ತಾ. ೩೦-೫-೧೯೫೨ನೇ ಶುಕ್ರವಾರ

ಆಹಾರ ಪದಾರ್ಥಗಳ ಬೆಲೆ.

ಕೇಂದ್ರ ಶಾಸನ ಸಭೆಯಲ್ಲಿ ಶ್ರೀ ದೇಶಮುಖ್‌ರವರು ಮೊನ್ನೆಯಾಗಿ ಬಡ್ಜೆಟ್ಟನ್ನು ಮುಂದಿಟ್ಟರು. ಈ ಮುಂಗಡ ಪತ್ರದ ಪ್ರಕಾರ ಜನರಿಗೆ ಹೊಸ ಕಂದಾಯ ಹಾಕದಿದ್ದರೂ ಈಗ ತಲೆಯ ಮೇಲಿರುವ ಭಾರವೇನು ಕಡಿಮೆಯಾಗುವಂತಿಲ್ಲ. ಸರಕಾರ ನಡೆಯಲು ಘನತೆ ಕಂದಾಯ ಕೊಡಬೇಕಾದುದೇನೋ ಸಹಜವೆ. ಆದರೆ ಇಂದಿನ ಕಷ್ಟ ಸಮಯದಲ್ಲಿ ಎಷ್ಟು ಕಂದಾಯ ಕೊಡಲು ಸಾಧ್ಯ. ನಮಗಿರುವ ಕಂದಾಯ ಒಂದೆರಡಲ್ಲ. ಸರಕಾರಕ್ಕೆ, ಜಿಲ್ಲಾ ಬೋರ್ಡಿಗೆ, ನಗರ ಸಭೆಗೆ ಕಂದಾಯ ತೆರಬೇಕು. ಅಪ್ರತ್ಯಕ್ಷವಾಗಿ ಪ್ರತಿ ವಸ್ತುವಿಗೂ ಕಂದಾಯ ತೆರಬೇಕು. ಬಟ್ಟೆಯ ಮೇಲೆ ಕರಹಾಕಲಿ, ಬೇರೆ ವಸ್ತುಗಳ ಮೇಲೆ ಹಾಕಲಿ ಎಲ್ಲವೂ ಬಡ ರೈತನ ತಲೆಗೇ ಬರುವಂಥಾದ್ದು. ಈ ತಲೆ ಭಾರವು ಕಡಿಮೆಯಾಗುವ ಚಿಹ್ನೆ ತೋರಿಬಾರದ್ದರಿಂದ ಸಾಮಾನ್ಯ ಜನತೆಗೆ ನಿರಾಶೆ ಬಂದಿದೆ.

ಇಷ್ಟು ವರ್ಷಗಳ ವರೆಗೆ ಕೇಂದ್ರ ಸರಕಾರವು ಆಹಾರ ಸಬ್ಸಿಡಿ (ಸಹಾಯಕ ಧನ) ಕೊಡುತಿತ್ತು. ಕೊಡಗಿಗೆ ಎರಡು ಮೂರು ವರ್ಷಗಳಿಂದ ಈ ಹಣ ದೊರೆತಿದೆ ಈ ವರ್ಷ ಈ ಸಹಾಯವನ್ನು ನಿಲ್ಲಿಸಲಾಗಿದೆ. ಈ ಹಣವು ರೈತರಿಗೆ ಸಲ್ಲಬೇಕಾದುದು. ಕೊಡಗಿಗೆ ಒಟ್ಟು ಸುಮಾರು ೫ ಲಕ್ಷದ ವರೆಗೆ ಈ ಹಣ ಈ ವರೆಗೆ ಬಂದಿರಬಹುದಾದರೂ ಇದರಿಂದ ಬಡ ರೈತನಿಗೆ ಯಾವ ಹಿತವಾದುದೂ ಕಂಡುಬರುವದಿಲ್ಲ. ಈ ವರ್ಷ ಈ ಸಹಾಯವನ್ನೂ ಕೇಂದ್ರ ಸರಕಾರ ನಿಲ್ಲಿಸಿದೆ.

ದಿನ ಹೋದಂತೆ ಸರಕಾರದ ಆಡಳಿತ ವೆಚ್ಚ ಹೆಚ್ಚುತ್ತಿರುವದು ಮಾತ್ರ ಗೋಚರವಾಗುತ್ತದೆ. ಕೇಂದ್ರದಲ್ಲಿ ಮಂತ್ರಿಗಳ ಸಂಖ್ಯೆಯೂ ಹೆಚ್ಚುತ್ತಿದೆ. ಈ ರೀತಿಯ ಆಡಳಿತ ಖರ್ಚು ಹೆಚ್ಚುವದು ಶುಭ ಚಿಹ್ನೆಯಲ್ಲ ಮೇಲಾಗಿ ರಕ್ಷಣಾ ಇಲಾಖೆಯ ಖರ್ಚು ನಮ್ಮ ವಾರ್ಷಿಕ ಆದಾಯದ ಅರ್ಧದಷ್ಟಿದೆ ಈ ವಿಪುಲ ಖರ್ಚು ಭಾರತೀಯರ ಅಧೋಗತಿಗೆ ಒಂದು ಕಾರಣವಾಗಿದೆ

ಭಾರತದ ಮುಂಗಡ ಪತ್ರದಿಂದ ನಿರಾಶೆಯಾದವರೂ ಭಾರತ ಆಹಾರ ಮಂತ್ರಿ ಶ್ರೀ ಕಿದ್ವಾಯಿಯವರ ಮೊನ್ನೆಯ ಹೇಳಿಕೆಯು ಸ್ವಲ್ಪ ಆಶಾದಾಯಕವಾಗಿದೆ. ಆಹಾರ ಪದಾರ್ಥ ಉಳಿತಾಯ ಇರುವ ಭಾಗಗಳಲ್ಲಿ ಆಹಾರ ನಿಯಂತ್ರಣವನ್ನು ತೆಗೆದು ಹಾಕುವ ಇವರ ಸೂಚನೆಯು ಸಮಂಜಸವಾದುದು. ಮತ್ತು ಆಹಾರ ಪದಾರ್ಥಗಳ ಬೆಲೆಯನ್ನು ಇಳಿಸುವ ಆಶ್ವಾಸನವನ್ನೂ ಇವರು ಇತ್ತಿದ್ದಾರೆ. ಆ ರೀತಿ ಆಗದಿದ್ದರೆ ದೇಶದಲ್ಲಿ ಅತೃಪ್ತಿ ಹೆಚ್ಚಿ ಪರಿಸ್ಥಿತಿ ಹದಗೆಡದಿರದು.

ವ ರ್ತ ಮಾ ನ .

ಮದ್ರಾಸ್ ಏರ್‍ಯಾದ ಕಮಾಂಡರಾದ ಮೇಜರ್ ಜನರಲ್ ಮೋಹಿತ್‌ರವರು ತಾ. ೨೭ರ ಸಾಯಂಕಾಲ ಮಡಿಕೇರಿಗೆ ಬಂದ. ಚೀಫ್ ಕಮಿಷನರ ಅತಿಥಿಯಾಗಿದ್ದು ೨೮ರಲ್ಲಿ ಕೊಡಗಿನ ಮಂತ್ರಿಗಳನ್ನೂ, ಮೇಜರ್ ಜನರಲ್ ತಿಮ್ಮಯ್ಯನವರ ತಂದೆಯವರನ್ನೂ ಕಂಡು ಮಧ್ಯಾಹ್ನದ ಮೇಲೆ ವೀರಾಜಪೇಟೆಯಲ್ಲಿ ಮಾಜಿ ಸೈನಿಕರ ಸಭೆಯಲ್ಲಿ ಅವರ ಪರಿಸ್ಥಿತಿಯನ್ನು ವಿಚಾರಿಸಿ ಕಣ್ಣಾನೂರಿಗೆ ಹೋದರು.

ಮೈಸೂರಿನ ರಾಜ ಪ್ರಮುಖರಾದ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್‌ರವರು ತಾ. ೨೫ರಿಂದ ೨೭ರ ವರೆಗೆ ಕೊಡಗಿನಲ್ಲಿದ್ದು ಹಿಂತಿರುಗಿದರು. ಅವರ ಸಂದರ್ಶನದ ಗೌರವಾರ್ಥವಾಗಿ ತಾರೀಕು ೨೬ನೇ ಸೋಮವಾರವನ್ನು ಸಾರ್ವಜನಿಕ ರಜಾ ದಿನವೆಂದು ಸಾರಲಾಗಿತ್ತು.

ಕೊಡಗು ಎತ್ಲಟಿಕ್ ಎಸೋಸಿಯೇಶನಿನ ಆಶ್ರಯದಲ್ಲಿ ಮಡಿಕೇರಿಯಲ್ಲಿ ನಡೆದ ದೇವಣೀರ ಕಪ್ ಹಾಕಿ ಪಂದ್ಯಾಟದ ಕಡೇ ಆಟವು ತಾ. ೨೦ರಲ್ಲಿ ನಡೆದು ಜಾಲಿಡಾಲವೆನ್ ಟೀಮಿನವರು ಗೆದ್ದು ಕಪ್ಪನ್ನು ಪಡೆದರು.

ಮೈಸೂರು ಕರುಡರ ಮತ್ತು ಮೂಕರ ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡುವ ಹುಡುಗರಿಗೆ ೧೯೫೨-೫೩ನೇ ಸಾಲಿಗೆ ಎರಡು ಸ್ಕಾಲರ್‌ಶಿಪ್ (ವಿದ್ಯಾರ್ಥಿವೇತನ ಗಳನ್ನು ಕೊಡಲಾಗುವುದು ಅಂಥಾ ನ್ಯೂನತೆ ಇದ್ದವರು ವಿದ್ಯಾಧಿಕಾರಿಗಳಿಗೆ ಕೂಡಲೆ ಬರೆದು ಕೊಳ್ಳತಕ್ಕದ್ದು.

ತಾ. ೨೪-೫-೫೨ನೇ ಶನಿವಾರ ರಾತ್ರಿ ೧೨ ಗಂಟೆಯ ಸಮಯದಲ್ಲಿ ಮೂರ್ನಾಡು ಕಾಂತೂರು ಗ್ರಾಮದಲ್ಲಿರುವ ಲೇಟ್ ಸಿದ್ದಯ್ಯನ ಮಗ ಅಂಣ್ಣಯ್ಯನವರ ಮನೆಗೆ ಅವನ ತಮ್ಮ ಮಲ್ಲಯ್ಯನ ಮದುವೆ ಸಂಭ್ರಮದಲ್ಲಿ ಆಕಸ್ಮಿಕವಾಗಿ ಬೆಂಕಿ ಹಿಡಿದು ಬೆಂದು ಹೋಗಿ ತುಂಬಾ ನಷ್ಟವಾಗಿದೆಯೆಂದು ತಿಳಿಯುತ್ತದೆ.

ತಾ. ೧೩-೫-೫೨ನೇ ಮಂಗಳವಾರ ರಾತ್ರಿ ಸಾಧಾರಣ ೨ಗಂಟೆ ಸಮಯಕ್ಕೆ ಶ್ರೀ ಮಂಗಲನಾಡು ಹೈಸೊಡ್ಲೂರು ಗ್ರಾಮದ ಶ್ರೀ ಚೇಂದಿರ ಸೋಮಯ್ಯ, ಮಾದಪ್ಪ, ಪೂವಯ್ಯ ಇವರುಗಳ ಮನೆ ಆಕಸ್ಮಿಕ ಬೆಂದು ಮನೆಯಲ್ಲಿದ್ದ ಒಕ್ಕ ಗಾಡಿ ಒತ್ತ, ಚರಪೆಂದಿಗೆ ಎಲ್ಲವೂ ಬೆಂದು ಹೋಯಿತೆಂದು ವರ್ತಮಾನ.

ಬೇಕಾಗಿದ್ದಾರೆ.

ಎಸ್. ಎಸ್. ಎಲ್. ಸಿ. ಓದಿ ಹಿಂದಿಯಲ್ಲಿ ರಾಷ್ಟ್ರಭಾಷೆ ಕಲಿತಿರುವ ಯುವಕರು ಈ ಕೆಳಗಿನ ಶಾಲೆಯಲ್ಲಿ ಉಪಾಧ್ಯಾಯರಾಗಿ ಕೆಲಸ ಮಾಡಲು ಬೇಕಾಗಿದ್ದಾರೆ. ಅರ್ಜಿಯು ಈ ಕೆಳಗಿನ ವಿಳಾಸಕ್ಕೆ ಜೂನ್ ತಾ. 10 ರೊಳಗೆ ತಲಪತಕ್ಕದ್ದು.

ಹೆಡ್ ಮಾಸ್ಟರು,
ಹೆಚ್. ಈ. ಶಾಲೆ, ಕುಂಬೀರಾಳು.
ಮೂರ್ನಾಡು ಪೋಸ್ಟು.

॥ ದುರ್ಬೀನು ನೋಟ ॥

ನೋಡಿದವರು :— ‘ರಸಿಕ’

ಮೈಸೂರಿನ ರಾಜಪ್ರಮುಖರು ಕೊಡಗಿಗೆ ಬಂದಿದ್ದಾಗ ಕೊಡಗು ಕಮ್ಯೂನಿಸ್ಟ ಪಕ್ಷದವರ ಒಂದು ಹಸ್ತಪತ್ರಿಕೆ ಹೊರಟಿತ್ತು. ಅದರಲ್ಲಿ ‘ರಾಜಪ್ರಮುಖರಿಗೆ ಹೂಮಾಲೆ ಸತ್ಕಾರಕ್ಕಾಗಿ ಖರ್ಚು ಮಾಡಿದ ಸುಮಾರು ಹತ್ತು ಸಾವಿರ ರೂಪಾಯಿಯನ್ನು ರಾಯಲಸೀಮೆಗೆ ಕೊಟ್ಟಿದ್ದರೆ ಹಿತವಾಗಿತ್ತು’ ಎಂದು ಬರೆದಿತ್ತು. ಇದನ್ನು ಓದಿ ‘ಉಚ್ಚೆ ನಿರ್ಮಲಗೊಳಿಸಲಾರದವನಿಗೆ ಉಗುಳುವ ಅಧಿಕಾರವಿಲ್ಲ; ದುಡಿದು ತೋರಿಸಲಾರದವನಿಗೆ ದೂರುವ ಅಧಿಕಾರವಿಲ್ಲ’ ಎಂಬ ಮಾತು ನೆನಪಿಗೆ ಬಂತು. ಕಮ್ಯುನಿಸ್ಟ ಪಕ್ಷದವರೇನಾದರೂ ರಾಯಲಸೀಮೆಗೆ ಕೊಡಗಿನಲ್ಲಿ ನಿಧಿ ಸಂಗ್ರಹಿಸಿದ್ದಾರೆಯೇ ?

* * *

ಮಹಾರಾಜರನ್ನು ನೋಡಿ ‘ಪ್ರಮಜೇವಿಯ ರಟೆ ಕೊಬ್ಬುತ್ತದಾದರೆ ಸಂಪನ್ನನ ಹೊಟ್ಟೆ ಕೊಬ್ಬುತ್ತದೆ’ಂಬ ಮಾತಿನ ಸತ್ಯತೆ ತಿಳಿಯಿತು. ಪ್ರಪಂಚದಲ್ಲಿ ಶ್ರೀಮಂತನಾದರೂ ಬಡವನಾದರೂ ಕಷ್ಟವಿದೆ ಬಡವ ಹೊಟ್ಟೆಗಾಗಿ ಕಷ್ಟ ಪಟ್ಟರೆ ಶ್ರೀಮಂತರು ಹೊಟ್ಟೆಯಿಂದಾಗಿ ತೊಂದರೆ ಪಡುತ್ತಾರೆ! ಮೆಟ್ಟಿಲೇರಿದರೆ ದಣಿಯುವ, ಮಾತಾಡಿದರೆ ಉಸಿರೇರುವ, ಕೂತರೆ ಏಳಲಾಗದ ಶ್ರೀಮಂತಿಕೆ ಯಾರಿಗೆ ಬೇಕು !

* * *

ರಾಜಪ್ರಮುಖರ ಗೌರವಾರ್ಥ ಏರ್ಪಡಿಸಿದ ಚಹಾ ಕೂಟದಲ್ಲಿ ಕೆಲವರು ಮಹಾ ಪಾತ್ರ ವಹಿಸಿದ್ದರು. ಕೆಲವರಂತು ನಾನೇ ಸರಕಾರನೆಂಬ ಹೀನ ಬುಳಿಯನ್ನು ಪ್ರದರ್ಶಿಸಿದ್ದರು. ಸತ್ತು ಬಿದ್ದು ಹೋದರೂ ಆದಿದ್ದ ಮೂಗಿನ ತೂತು ಇದ್ದೇ ಇರುತ್ತದಲ್ಲವೇ? ಅದರಂತೆ ಪದವಿ ಧರಿಸಿದರೂ ಹುಟ್ಟು ಗುಣವಾಗಿ ಬಂದ ಹೀನ ಬುಳಿ ಉಳಿದಿರುತ್ತದೆ!

* * *

ಚಹಪಾನಕ್ಕೆ ಹೋದವರಲ್ಲಿ ಹಲವರು ಅಲ್ಲಿಯ ಏರ್ಪಾಡಿನಿಂದ ಅತೃಪ್ತರಾದಂತೆ ತೋರುತಿತ್ತು. ಎಲ್ಲರಿಗೂ ಒಂದೇ ರೀತಿಯ ಆಹ್ವಾನ ಪತ್ರ, ಹೋಗಿದ್ದರೂ ಸತ್ಕಾರ ಮಾತ್ರ ವಿವಿಧ ರೀತಿ. ಆಳು ಸ್ನಾನಕ್ಕೆ ಕರೆಯುವದೂ ಒಂದು ಕರೆ. ಅಧಿಕಾರಿ ಸೇನೆಗೆ ಕರೆಯುವದೂ ಒಂದು ಕರೆ. ಪ್ರೇಮಿ ಪ್ರಣಯಕ್ಕೆ ಕರೆಯುವದೂ ಒಂದು ಕರೆ. ಅದರಂತೆ ಆಮಂತ್ರಣ ಪತ್ರದಲ್ಲಿಯೂ, ಕೂಡ ಮದುವೆಯ ಆಮಂತ್ರಣದಂತೆಯೇ ತಿಥಿ ಕರ್ಮಾಂತರಕ್ಕೂ ಆಮಂತ್ರಣವಿದೆ. ನರ್ತಿಸುವವಳದೊಂದು ನಾದವಾದರೆ ನರಳುವವಳದೂ ಒಂದು ನಾದವಲ್ಲವೇ ?

* * *

ವಿವಿಧ ಭಾಗದಲ್ಲಿ ರಾಜಪ್ರಮುಖರ ಸತ್ಕಾರದ ಸಮಾರಂಭವನ್ನು ವಿವಿಧ ಜನರು ಏರ್ಪಡಿಸಿದ್ದರೂ ಗೌರವ ಕೆಲವರಿಗೆ. ಪರಿಶ್ರಮಕ್ಕಾಗುವವನೊಬ್ಬನಾದರೆ ಪ್ರದರ್ಶನಕ್ಕಾಗುವವ ಬೇರೆ. ಪೇಟಾ ಸುತ್ತುವನೊಬ್ಬನಾದರೆ, ಪೆಟ್ಟಿಗೆ ಎತ್ತುವವ ಬೇರೆ ಅದರಂತೆ ಬೆವರಿಳಿಸಿ ದುಡಿದವರು ಬೇರೆಯವರಾದರೂ ‘ಶಹಭಾಸ’ ಗಿರಿ ಪಡೆದವರು ಬೇರೆ. ಗಾಡಿಯೊಳಗಿನವರು ದಣಿದರೆಂದು ಗಾಳಿ ಹಾಕುತ್ತಾರೆಯೇ ವಿನಾ ಗಾಡಿ ಎತ್ತಿಗೆ ದಣಿವಾಯಿತೆಂದು ಯಾರಾದರೂ ಗಾಳಿ ಹಾಕುತ್ತಾರೆಯೇ?

* * *

ಕಾಂಗ್ರೆಸಿಗೆ ಜಯವಾಯಿತೆಂದು ಹಿಗ್ಗಿ ಹಿರಿಯುವ ಕೆಲ ಜನರಿದ್ದಾರೆ. ಕಾಂಗ್ರೆಸಿನ ಆಧಾರ ಸ್ತಂಭನೆನಿಸಿದವರು ಹೇಳುವ ಮಾತನ್ನು ಸಹಿಸಬಹುದು. ಆದರೆ ಈ ಅಲ್ಪರ ಮಾತು ಸಹಿಸಲಾಗುವದಿಲ್ಲ. ಘನವಂತರ ಕಠಿಣ ಮಾತನ್ನು ಸಹಿಸಬಹುದು. ಅಲ್ಪ ಬುದ್ಧಿಯವರ ಅಹಂಕಾರದ ಮಾತು ಸಹಿಸಲಾಗುವದಿಲ್ಲ. ದೊಡ್ಡ ಕಲ್ಲನ್ನು ತುಳಿಯುವಂತೆ ಸಣ್ಣ ಮುಳ್ಳನ್ನು ತುಳಿಯಲಾದೀತೆ ?

* * *

‘ಸಭ್ಯರು, ದೊಡ್ಡವರು ಚರ್ಚೆಗಿಳಿಯುವದಿಲ್ಲ. ಅಲ್ಪರು, ಅಜ್ಞಾನಿಗಳು ಗುಡುಗುಡಿಸುತ್ತಾರೆ’ ನಿಮಗೆ ಭಯವೇನು? ಎಂದೊಬ್ಬರು ಕೇಳಿದ್ದಾರೆ. ನೋಟಗಾರಿಗೆ ರುದ್ರ ‘ಹಾರ್ನ್’ ವಿಮಾನಕ್ಕೆ ಬೇಕಾಗಿಲ್ಲ. ಅದರಂತೆ ಕೆಳಮಟ್ಟದವರಿಗಿರಬೇಕಾದ ಬಾಯಿಬಲ ಮೇಲ್ಮಟ್ಟದವರಿಗೆ ಬೇಕಾಗಿಲ್ಲ.

* * *

‘ದುರ್ಬೀನು ನೋಟ’ ಬರೆಯುವವರಾರು? ಶ್ರೀ ಗಣಪತಿಯವರೇ? ಎಂದು ಒಬ್ಬರು ಕೇಳಿದ್ದಾರೆ. ಇಂಥಾ ಪ್ರಶ್ನೆ ಅಸಂಗತ. ಕೆಲಸದ ಸಾರಾಸಾರ ತಿಳಿಯಬೇಕೇ ಹೊರತು ಕೆಲಸಗಾರನ ಸಂಬಂಧದ ಕಡೆಗೆ ನೋಟವೇಕೆ? ಚಿನ್ನದ ತೂಕ ನೋಡುವ ಬದಲಿಗೆ ಚಿನಿವಾರನ ಮುಖ ನೋಡುವ ಹವ್ಯಾಸವೇಕೆ ?

ವಾ ರ್ತೆ .

ಮದ್ರಾಸು ಮುಖ್ಯಮಂತ್ರಿ ಶ್ರೀ ಸಿ ರಾಜಗೋಪಾಲಾಚಾರಿಯವರ ಸದಸ್ಯತ್ವದ ವಿರುದ್ಧ ಶ್ರೀ ಚಕ್ರರಾಯ ಚಿಟ್ಟಿ ಎಂ. ಎಲ್. ಸಿ ಅವರು ಮಾಡಿಕೊಂಡ ಅರ್ಜಿಯನ್ನು ಮದ್ರಾಸು ಹೈಕೋರ್ಟು ತಳ್ಳಿಹಾಕಿದೆ.

ಮದ್ಯಪಾನ ನಿರೋಧವನ್ನು ಭೊಪಾಲದಲ್ಲಿ ಜಾರಿಗೆ ತರುವ ಬಗ್ಗೆ ಸರಕಾರ ಪರ್ಯಾಲೋಚಿಸುತ್ತಿದೆ. ಆದರೆ ಏಕಕಾಲದಲ್ಲಿಯೇ ಅದನ್ನು ಜಾರಿಗೆ ತರದೆ ಸಾವಕಾಶವಾಗಿ ಜಾರಿಗೆ ತರಲಾಗುವುದೆಂದು ಹಣಕಾಸಿನ ಮಂತ್ರಿ ಶ್ರೀ ಕಾಮತ ಪ್ರಸಾದರು ಮುಂಗಡ ಪತ್ರಿಕೆಯ ಚರ್ಚೆಯ ಕಾಲಕ್ಕೆ ತಿಳಿಸಿರುವರು.

ಪಾಕಿಸ್ಥಾನ ಘಟನಾ ಸಮಿತಿಯ ಮೂಲಾಧಿಕಾರ ಉಪಸಮಿತಿಯವರು ತಮ್ಮ ವರದಿಯಲ್ಲಿ ಕೇಂದ್ರ ಶಾಸನ ಸಭೆಯಲ್ಲಿ ೪೦೦ ಮತ್ತು ಮೇಲ್ಮನೆಯಲ್ಲಿ ೧೨೦ ಸ್ಥಳಗಳಿರತಕ್ಕದೆಂದೂ ಈ ಎರಡೂ ಸಭೆಗಳಲ್ಲಿ ಪಶ್ಚಿಮ ಮತ್ತು ಪೂರ್ವ ಪಾಕಿಸ್ಥಾನಗಳಿಗೆ ಸಮಪ್ರಾತಿನಿಧ್ಯ ಕೊಡಬೇಕೆಂದೂ ಸೂಚಿಸಿರುವರು.

ಓದುಗರ ಓಲೆಗಳು

ನಾರ್ದನ್ ಇನ್ಶೂರೆನ್ಸ್ ಕಂಪೆನಿ.

ಕೊಡಗಿನಲ್ಲಿ ಈ ವಿಮಾ ಕಂಪೆನಿಯ ಕೆಲಸವು ವ್ಯವಸ್ಥಿತವಾಗಿ ನಡೆಯುತ್ತಿಲ್ಲ ವೆಂದರೆ ತಪ್ಪಾಗಲಾರದು. ಉದಾಹರಣೆಗೆ ನಾನು ಈ ವಿಮಾ ಕಂಪೆನಿಯಲ್ಲಿ ಮೂರು ವರ್ಷಗಳ ಹಿಂದೆ ವಿಮೆ ಮಾಡಿದ ಮೂರು ತಿಂಗಳಲ್ಲೇ ಪಾಲಿಸಿ ಹಣವನ್ನು ಪೂರ್ತಿ ಮಾಡಿದ್ದರೂ ಈ ವರೆಗೂ ಕಂಪೆನಿಯ ಬಾಂಡು ಬಂದಿರುವುದಿಲ್ಲ. ಕಂಪೆನಿಯವರನ್ನು ಕೇಳಿದರೆ ಅರ್ಧ ಹಣ ಬಂದಿರುತ್ತದೆಂತಲೂ ಇನ್ನರ್ಧ ಹಣ ಕಳುಹಿಸಿ ಕೊಡಬೇಕೆಂತಲೂ ತಿಳಿಸುತ್ತಾರೆ. ನನ್ನ ಸ್ಥಳೀಯ ಇನ್ಸ್‌ಪೆಕ್ಟರವರನ್ನು ಕೇಳಿದರೆ ಕಂಪೆನಿಗೆ ಪೂರ್ತಿ ಹಣ ವಾಪಸು ಮಾಡಿರುತ್ತೇನೆಂದು ಹೇಳುತ್ತಾರೆ. ಈ ಇಬ್ಬರ ಮಾತಿನಲ್ಲಿ ನನಗೆ ನಂಬಿಕೆಯೇ ಇಲ್ಲ. ನಾನು ಪೂರ್ತಿ ಹಣವನ್ನು ಇನ್ಸ್‌ಪೆಕ್ಟರವರಿಗೆ ಕೊಟ್ಟು ರಶೀತಿ ಪಡೆದಿದ್ದರೂ ಇವರು ಹಣವನ್ನು ಬಹಳ ಕಾಲ ಇಟ್ಟುಕೊಂಡು ತಡಮಾಡಿ ಕಳುಹಿಸುವ ಅರ್ಥವೇನು? ಈ ತರದ ನಿಧಾನದಿಂದ ನನಗೊಬ್ಬನಿಗೇ ಅಲ್ಲದೆ ಇನ್ನೂ ಹಲವಾರು ಜನರು ತೊಂದರೆ ಪಡುತ್ತಿದ್ದಾರೆ. ಇಂದ ಮೇಲೆ ಕೊಡಗಿನಲ್ಲಿ ಅನೇಕ ಜನರು ಮೋಸ ಹೋಗಿರಲಿಕ್ಕಿಲ್ಲ! ಹೀಗೆ ಬಡಜನರ ಹಣವನ್ನು ಸುಲಿಗೆ ಮಾಡುವವನನ್ನು ಕೇಳುವವರಿಲ್ಲವೇ? ಇನ್ನಾದರೂ ಜನರು ಮೇಲ್ಕಂಡ ವಿಚಾರವನ್ನು ತಿಳಿದು ಎಚ್ಚರಿಕೆ ವಹಿಸಲಿ.

ನೊಂದ ಪಾಲಿಸಿದಾರ.

ಇದು ನಿಜವೇ ?

ಹಿಂದೂದೇಶದ ಗೃಹಮಂತ್ರಿಯವರಾದ ಡಾ. ಕಾಟ್ಜೂರವರು ಕೊಡಗಿಗೆ ಬಂದಿದ್ದಾಗ್ಯೆ ಅವರ ಗೌರವಾರ್ಥವಾಗಿ ತಾ. ೨೫–೩–೫೩ ರಲ್ಲಿ ರಾತ್ರಿ ಒಂದು ಔತಣ ಕೂಟವನ್ನು ಏರ್ಪಡಿಸಿದ್ದರಷ್ಟೆ. ಈ ಔತಣದ ಸಮಾರಂಭದಲ್ಲಿ ಒಬ್ಬ ಕಾಂಗ್ರೆಸ್ ಎಂ. ಎಲ್. ಎ ಯವರು ಕೊಡಗಿನ ಗೌರವಾನ್ವಿತ ಸಭ್ಯರ ಮುಂದೆ ಕಾಟ್ಜೂರವರೊಡನೆ ಮಾತಾಡುತ್ತಾ ಕೊಡಗಿನಲ್ಲಿ ಗಜೆಟೆಡ್ ಉದ್ಯೋಗಿಗಳ ವರ್ಗ ನವರಿಗೆ ಎಡೆ ಇಲ್ಲದಿರುವವರಿಂದ ಇದು ಬೇರೆ ಪ್ರಾಂತದೊಡನೆ ವಿಲೀನವಾಗುವದೇ ಹಿತವೆಂದು ಹೇಳಿದರಂತೆ. ಉದಾಹರಣೆಗೆ ಅವರು ಕೊಡಗಿನ ಗಜೆಟೆಡ್ ಉದ್ಯೋಗಸ್ಥರೊಬ್ಬರನ್ನು ಕರೆತಂದು ಅವರ ಮುಂದೆ ನಿಲ್ಲಿಸಿ ಪರಿಸ್ಥಿತಿಯನ್ನು ವಿವರಿಸಿದರಂತೆ. ಕಾಟ್ಜೂರವರು ತಮ್ಮ ಹತ್ತಿರದಲ್ಲಿದ್ದ ಮಹನೀಯರನ್ನು ಅಭಿಪ್ರಾಯ ಕೇಳಿದಾಗ ಅವರು ಕೊಡಗು ಪ್ರತ್ಯೇಕವಿರುವದೇ ಹಿತವೆಂದು ಹೇಳಿದರೆಂದೂ ಕಾಟ್ಜೂರವರು ಎಂ. ಎಲ್. ಎ ಯವರನ್ನುದ್ದೇಶಿಸಿ 'ನೋಡಿ ಅನುಭವಿಗಳ ಅಭಿಪ್ರಾಯ ಹೇಗಿದೆ'ಯೆಂದು ಹೇಳಿದರೆಂದೂ ವರ್ತಮಾನವಿದೆ. ಇದು ನಿಜವಿದ್ದರೆ ಕೊಡಗಿನ ಭವಿಷ್ಯದ ವಿಚಾರದಲ್ಲಿ ಜನತೆಯು ಅಭಿಪ್ರಾಯವನ್ನು ತಾಳಬೇಕೆಂದು ಭರವಸೆ ಕೊಟ್ಟ ಕಾಂಗ್ರೆಸಿಗರು ಈ ರೀತಿ ವರ್ತಿಸುವದು ದ್ರೋಹಾತ್ಮಕವಲ್ಲವೇ?

'ಹಾಜರಿದ್ದವ.'

ಅವಮಾನಕರ!

ಮೊನ್ನೆ ಮೈಸೂರು ರಾಜಪ್ರಮುಖರ ಗೌರವಾರ್ಥ ಏರ್ಪಡಿಸಿದ ಚಹಾಕೂಟಕ್ಕೆ ನನಗೂ ಒಂದು ಆಹ್ವಾನ ಪತ್ರ ಬಂದಿತ್ತು. ಸಾಯಂಕಾಲ ನಾಲ್ಕು ಗಂಟೆಗೆ ಸರಿಯಾಗಿ ಹೋದೆ. ಕೋಟೆಯ ಮಹಡಿಯಲ್ಲಿ ಚಹಾಕೂಟವೆಂದು ತಿಳಿಯಿತು. ಬಾಗಿಲಲ್ಲಿದ್ದ ಪೋಲೀಸರು ಆಹ್ವಾನ ಪತ್ರ ಪರಿಶೀಲಿಸಿ ಒಳಗೆ ಬಿಟ್ಟರು. ನಾನು ಶಾಸನ ಸಭಾ ಭವನಕ್ಕಿರುವ ಏಣಿ ಹತ್ತ ತೊಡಗಿದಾಗ ಪೋಲೀಸನು ಆ ಮಾರ್ಗದಲ್ಲಿ ಹೋಗದೆ ಬೇರೆ ಮಾರ್ಗವೆಂದು ಬೇರೆಡೆಗೆ ಕೈತೋರಿಸಿದನು. ಏಕೆಂದು ಪ್ರಶ್ನಿಸಿದಾಗ ಅದು 'ದೊಡ್ಡವರಿಗೆ' ಎಂಬರ್ಥವಾಗುವಂತೆ ಸೈನ್ನೆ ಮಾಡಿದನು. ಈ ರೀತಿಯ ವಿಭಾಗೀಕರಣವೇಕೆ? ಇದು ಪ್ರಜಾಪ್ರಭುತ್ವವೇ? ಸರ್ವರನ್ನೂ ಸಮಾನತೆಯಿಂದ ನೋಡಬೇಕಾದ ದೃಷ್ಟಿಯೇ?

— ಚಿಣ್ಣಪ್ಪ.

ಇದು ಕೂಡದು.

ಕೆಲವು ದಿನಗಳ ಹಿಂದೆ ಓದುಗರ ಓಲೆ ಒಂದರಲ್ಲಿ ಒಂದು ಪತ್ರ ಕೊಡಗು ಸರಕಾರದ ಕೆಲಸ ಬಹು ನಿಧಾನವಾಗಿ ನಡೆಯುತ್ತಿದೆಯೆಂದೂ, ಆಫೀಸಿಗೆ ಕೊಟ್ಟ ಅರ್ಜಿ ಒಂದು ಆಫೀಸಿನಿಂದ ಹೊರಡಲು ತಿಂಗಳುಗಳಾಗುವದೆಂದೂ ಓದಿದೆನು. ಅದೇ ಅಲ್ಲದೆ ಆಫೀಸಿನಲ್ಲಿ ಕೊಡಲ್ಪಟ್ಟ ಕಾಗದ ಪತ್ರಗಳು ಕಾಣೆಯಾಗುವದಿದೆಯೆಂದೂ ಹಲವರ ಬಾಯಿಂದ ಕೇಳಿರುವೆನು. ಈ ವಿಚಾರದಲ್ಲಿ ಸರಕಾರಕ್ಕೆ ನನ್ನ ಕೆಲವು ಸೂಚನೆಗಳಿವೆ.

ಚೀಫ್ ಕಮಿಷನರ ಆಫೀಸಿಗೆ ಕೆಲಸದ ಸಮಯದ ಲೆಕ್ಕವಿರುವಂತೆ ತೋರುವದಿಲ್ಲ. ಯಾವಾಗಲೂ ರಾತ್ರಿ ಅಲ್ಲಿ ಕೆಲಸ ನಡೆಯುತ್ತಿರುವಂತೆ ತೋರುತ್ತದೆ. ಪ್ರತಿ ದಿನ ವಿದ್ಯುದ್ದೀಪಗಳು ಉರಿಯುತ್ತಿರುತ್ತವೆ. ಈ ಪದ್ಧತಿ ನಿಲ್ಲಬೇಕು. ಹತ್ತು ಗಂಟೆಯಿಂದ ಐದು ಗಂಟೆಯ ವರೆಗೆ ಆಫೀಸು ಎಂದ ಮೇಲೆ ಆ ಗಂಟೆಗೆ ವಿನಾ ಆಫೀಸು ತೆರೆದಿರಬಾರದು. ಹಾಗೆ ತೆರೆದಿದ್ದರೆ ಅಂಥಾ ಆಫೀಸಿನಲ್ಲಿ ಕೆಲಸ ಮಾಡುತ್ತಿರುವ ಒಬ್ಬಿಬ್ಬರು ಮನಸ್ಸಿಗೆ ತೋರಿದಂತೆ ಮಾಡುವ ಸಾಧ್ಯತೆ ಇದೆ. ಆಫೀಸುಗಳಲ್ಲಿ ತುಂಬಾ ಕೆಲಸವಿದೆಯೆಂದು ಹೇಳುವದಾದರೆ ಅದಕ್ಕೆ ಸರಿಯಾಗಿ ಸಿಬ್ಬಂದಿಗಳನ್ನು ಏರ್ಪಡಿಸಬೇಕು. ಅಲ್ಲದೆ ಹೆಚ್ಚು ರಾತ್ರಿ ಕೆಲಸ ಮಾಡುವ ಒಬ್ಬಿಬ್ಬರ ಹಗಲು ಸಿಗರೇಟು ಸೇದುತ್ತ ಮಾತಾಡುವಲ್ಲಿ ತಿರುಗಿ ಕಾಲಕಳೆಯುವದನ್ನು ಕಾಣುವದು ಅಪರೂಪವಲ್ಲ. ಈ ರೀತಿಯ ಅವ್ಯವಸ್ಥೆಯು ಕಾಣಸೇ ಆಫೀಸಿನ ದಸ್ತತೆ ಕೆಳಗಿಳಿದಿರುವದಾಗಿದೆ. ಮತ್ತೆ ಕೆಲವು ಗುಮಾಸ್ತರು ಆಫೀಸು ಕಾಗದ ಪತ್ರಗಳನ್ನು ಮನೆಗೆ ತೆಗೆದುಕೊಂಡು ಹೋಗುವದಿದೆ. ಇದನ್ನೂ ಸರಕಾರ ನಿಲ್ಲಿಸಬೇಕು. ಏಕೆಂದರೆ ಹೀಗೆ ಮಾಡುವದರಿಂದ ಗುಟ್ಟು ರಟ್ಟಾಗುವ ಹಾಗೂ ಪತ್ರಗಳು ಕಾಣೆಯಾಗುವ ಸಂದರ್ಭ ಹೆಚ್ಚು. ಸಂಬಂಧಿಸಿದ ಅಧಿಕಾರಿಗಳು ಈ ವಿಚಾರ ಗಮನಿಸುವರೇ?

'ನಿರೀಕ್ಷಕ.'

ಬಾಡಿಗೆ ನಿಯಂತ್ರಣ ಆಫೀಸರಿಗೆ

ಮಾರ್ಚ್ ತಾ. ೧೫ರಿಂದ ಬಾಡಿಗೆ ನಿಯಂತ್ರಣ ಕಾನೂನು ಕೊಡಗಿನಲ್ಲಿ ಜಾರಿಗೆ ಬಂದಿದೆಯೆಂದು ತಿಳಿದೆನು. ಈ ಕಾನೂನು ಪ್ರಕಾರ ಮನೆ ಬೇಕಿರುವವರು ನಿಯಂತ್ರಣ ಅಧಿಕಾರಿಗಳಿಗೆ ಬರೆದುಕೊಳ್ಳಬೇಕು. ಮನೆ ಇರುವವರು ಮನೆ ಖಾಲಿಯಾದಾಗ ನಿಯಂತ್ರಣಾಧಿಕಾರಿಗೆ ತಿಳಿಸಬೇಕು. ಆದರೆ ಹೀಗೆ ತಿಳಿಸಲಾಗುತ್ತಿದೆಯೇ? ಒಳಗೊಳಗೇ ಮನೆ ಮಾಲೀಕರು ಹೆಚ್ಚು ಹಣಕ್ಕೆ ಬಾಡಿಗೆಗೆ ಮನೆಯನ್ನು ಕೊಡುತ್ತಿದ್ದಾರೆ. ಮಡಿಕೇರಿಯಲ್ಲಿ ಮೂವತ್ತು ರೂಪಾಯಿಗೂ ಸಾಧಾರಣ ಮನೆ ದೊರೆಯುತ್ತಿಲ್ಲ. ಹದ್ದು ಮೀರಿ ಏರಿಸಿದ ಮನೆ ಬಾಡಿಗೆಯನ್ನು ಪರಿಶೀಲಿಸಿ ನ್ಯಾಯ ಸಮ್ಮತವಾಗಿ ನಿಶ್ಚಯಿಸಬೇಕೆಂದು ಬರೆದುಕೊಂಡರೂ ಪ್ರಯೋಜನವಿಲ್ಲದಾಗಿದೆ. ಹೀಗೆ ಅಧಿಕಾರಿಗೆ ಬರೆದುಕೊಂಡ ಒಂದೆರಡು ಉದಾಹರಣೆಗಳಲ್ಲಿ ಮನೆ ಮಾಲೀಕರು ನೋಟೀಸು ಕೊಟ್ಟು ಮನೆಯನ್ನು ಬಿಟ್ಟು ಬಿಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ತಮ್ಮ ಸ್ವಂತ ಉಪಯೋಗಕ್ಕೆ ಮನೆ ಬೇಕೆಂದು ಕೆಲವರು ನೆಪ ಹೂಡಿ ಬಾಡಿಗೆಗೆ ಇರುವವರನ್ನು ಹೊರದೂಡಲೆತ್ನಿಸುತ್ತಿದ್ದಾರೆ. ಬಾಡಿಗೆ ನಿಯಂತ್ರಣ ಕಾನೂನು ಜಾರಿಯಲ್ಲಿ ಬಂದ ಮೇಲೂ ಅನೇಕರು ಹೊಸ ಮನೆಗಳನ್ನು ಬಾಡಿಗೆಗೆ ಕೊಟ್ಟಿದ್ದಾರೆ. ಹಳೆ ಮನೆಗಳನ್ನು ಏರಿದ ಬಾಡಿಗೆಗೆ ಬೇರೆಯವರಿಗೆ ಕೊಟ್ಟಿದ್ದಾರೆ. ಬಾಡಿಗೆ ನಿಯಂತ್ರಿಸುವ ಅಧಿಕಾರಿಗಳ ಗಮನಕ್ಕೆ ಇದು ಬಂದಿಲ್ಲವೇ? ಕೇವಲ ತೋರಿಕೆಗೆ ಒಂದು ಇಲಾಖೆ ಇದ್ದರೆ ಸಾಕೆ? ಅದರಿಂದ ಏನಾದರೂ ಕೆಲಸವಾಗಬೇಕೆ?

ಕೆ. ಕೆ. ತಿಮ್ಮಯ್ಯ.

ಸಾರ್ವಜನಿಕ ಹಣದ ದುರುಪಯೋಗ.

ಕೆಲವು ತಿಂಗಳ ಹಿಂದೆ ಹಿಂದೂದೇಶದ ಗೃಹ ಮಂತ್ರಿಗಳಾದ ಡಾ. ಕಾಟ್ಜೂರವರು ಕೊಡಗಿಗೆ ಬಂದಿದ್ದಾಗ್ಯೆ ಅವರ ಸತ್ಕಾರ, ಟೀ, ಊಟಗಳಿಗೆಂದು ಸುಮಾರು ನಾಲ್ಕೈದು ಸಾವಿರ ರೂಪಾಯಿ ಖರ್ಚಾಯಿತು. ಈಗ ಮೈಸೂರಿನ ರಾಜಪ್ರಮುಖರು ದಯಮಾಡಿಸಿದಾಗ ಅವರ ಸತ್ಕಾರಕ್ಕೆಂದು ಆರೇಳು ಸಾವಿರ ಖರ್ಚಾಗಿರಬಹುದು. ಕೋಟೆಯ ಹಾಲಿನಲ್ಲಿ ಏರ್ಪಡಿಸಿದ್ದ ಚಹಾ ಕೂಟಕ್ಕೆ ರೂ ೩೦೦೦ ಖರ್ಚಾಯಿತೆಂದು ವರ್ತಮಾನವಿದೆ. ಹೀಗೆ ಕೇಂದ್ರ ಸರಕಾರದಿಂದ ಮತ್ತು ನೆರೆರಾಜ್ಯದಿಂದ ಜನರು ಬಂದಾಗ ಈ ರೀತಿಯ ಔತಣ, ದುಂದುವೆಚ್ಚವಾದರೆ ಕೊಡಗಿನ ಬೊಕ್ಕಸ ನಾಲ್ಕೈದು ವರ್ಷಗಳಲ್ಲಿ ಬರಿದಾಗುವದಿಲ್ಲವೇ? ಪ್ರಜಾರಾಜ್ಯದಲ್ಲಿ ಈ ಆಡಂಬರವೇಕೆ?

ಬಡರೈತನು ಹೊಟ್ಟೆಗೆ ಅನ್ನಕ್ಕಾಗಿ ಮೈಯ ಮೇಗೆ ಬಟ್ಟೆಗಾಗಿಯೂ ಕಷ್ಟಪಡುತ್ತಿರುವಾಗ ಆತನ ಹಿತಕ್ಕಾಗಿ ಸರ್ವಸ್ವವನ್ನೂ ವಿನಿಯೋಗಿಸುವುದನ್ನು ಬಿಟ್ಟು ಈ ರೀತಿಯ ದುಂದು ವೆಚ್ಚ ಮಾಡಬೇಕೆ? ನಮ್ಮದು ಪ್ರಜಾ ಸರಕಾರವೆನ್ನುತ್ತಾರೆ? ಆದರೆ ಹಿಂದಿನ ನಿರಂಕುಶ ಆಳ್ವಿಕೆಯ ರೀತಿಯ ಮಾಮೂಲಾಡಳಿತ ನೋಡಿ ಮಣೆ ಹಾಕುವ ಪದ್ಧತಿ ಬಿಟ್ಟಿಲ್ಲ. ಮೊನ್ನೆಯಾಗಿ ಸಾವಿರ ಜನರನ್ನು ಚಹಾಪಾನಕ್ಕೆ ಆಹ್ವಾನಿಸಿದರಂತೆ. ಕೊಡಗಿನ ಎರಡು ಲಕ್ಷ ಜನತೆಯಲ್ಲಿ ಈ ಸಾವಿರ ಜನರನ್ನು ಮಾತ್ರ ಆಹ್ವಾನಿಸಿದುದೇಕೆ? ಯಾವ ಅಳತೆ ಕೋಲಿನಿಂದ ಈ ಆಯ್ಕೆ? ದುಡ್ಡಿನ ಬಲದ ಮೇಲೆಯೋ ವಿದ್ಯಾ ಯೋಗ್ಯತೆಯ ಮೇಲೆಯೋ ಅಥವಾ ಕಾಂಗ್ರೆಸ್ಸಿಗೆ ಕೆಲಸ ಮಾಡಿದವರೆಂಬುದರ ಮೇಲೆಯೋ?

ನಮ್ಮ ರಾಜ್ಯಘಟನೆಯಲ್ಲಿ ಮನುಷ್ಯ ಮನುಷ್ಯರಲ್ಲಿ ಭೇದ ಮಾಡಕೂಡದು ಎಂದು ಸ್ಪಷ್ಟವಿರುವಾಗ ಆ ರಾಜ್ಯಘಟನೆಯನ್ನು ಒಪ್ಪಿರುವ ಈ ಸರಕಾರ ಈ ಭೇದಭಾವ ಮಾಡಬೇಕೆ? ಕೈತರ ಸರಕಾರವೆನ್ನುವ ಈ ಸರಕಾರವು ಯಾವ ಹಳ್ಳಿಯ ರೈತನಿಗೆ ಆಹ್ವಾನವಿತ್ತಿದೆ? ಸಿದ್ದಾಪುರ, ಕೊಡಗಿನ ಎರಡು ಲಕ್ಷ ಜನರಿಗೆಲ್ಲ ಆಹ್ವಾನವನ್ನು ಯಾವ ಸರಕಾರವೂ ನೀಡಲಾರದು. ಆದರೆ ಈ ಆಹ್ವಾನವಿತ್ತು ಬಡಜನರ ಹಣವನ್ನು ಪೋಲು ಮಾಡುವ ಈ ವ್ಯಾಪಾರವೇಕೆ? ಸಾಹಾರ ಜನತೆಯಿಂದ ತೆರಿಗೆಯಿಂದ ಸರಕಾರದ ಬೊಕ್ಕಸದ ಲೂಟಿ ಏಕೆ? ಮೊನ್ನೆಯ ಚಹಾಪಾನದಲ್ಲಿ ಪ್ರತಿಯೊಬ್ಬನಿಗೆ ತಲಾ ೩ ರೂ. ಗಳಂತೆ ತಿಂಡಿ ಸರಬರಾಯಿ ಮಾಡಿದರಂತೆ! ಮೂರು ರೂಪಾಯಿಗಳು ಬಡವನ ಒಂದು ವಾರದ ಖರ್ಚನ್ನು ನೀಗಿಸಬಹುದು. ಇದು ಈ ಸರಕಾರಕ್ಕೆ ತಿಳಿದಿದೆಯೋ? ಜನತೆಯ ಸರಕಾರವೆನ್ನುವ ನಮ್ಮ ಸರಕಾರಕ್ಕೆ ದುಡ್ಡಿನ ಬೆಲೆ ತಿಳಿಯದಿರುವುದು ವಿಷಾದಕರ. ಇನ್ನಾದರೂ ಇಂಥಾ ಲೂಟಿಯನ್ನು ಇವರು ನಿಲ್ಲಿಸುವರೇ?

ಕ ಕಾಲಪ್ಪ ಬಿ.

ಕೃತಜ್ಞತಾ ವಂದನೆ.

ತಾರೀಕು ೯–೫–೫೩ನೇ ಶುಕ್ರವಾರ ಶಿವಾಧೀನರಾದ ನನ್ನ ತಂದೆಯವರ ವಿಯೋಗದ ಕಾಲದಲ್ಲಿ ಪ್ರತ್ಯಕ್ಷ ಬಂದು ಮತ್ತು ನನಗೂ ನನ್ನ ಮಾತೆಯವರಿಗೂ ಸಂತಾಪ ಸೂಚನಾ ಪತ್ರ ಬರೆದು ನಮ್ಮ ದುಃಖದಲ್ಲಿ ಭಾಗಿಗಳಾದ ಬಂಧು ಮಿತ್ರರನ್ನು ಪ್ರತ್ಯೇಕ ಬರೆದು ವಂದಿಸುವದು ಅಸಾಧ್ಯವಾದ ಕಾರಣ ಅವರೆಲ್ಲರಿಗೆ ಈ ಮೂಲಕ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮೊಣ್ಣಂಡೀರ ಕೆ. ಕರುಂಬಯ್ಯ,
ಹಾಲುಗುಂದ, ಮೂರ್ನಾಡು.

ಕೊಡಗು ಸರಕಾರದ ಬೊಕ್ಕಸಕ್ಕೆ ೧ ಲಕ್ಷ ರೂ. ಗಳ ನಷ್ಟ?

ಕೊಡಗು ಫಾರೆಸ್ಟ್ ಇಲಾಖೆಯ ಅಹಿತ ಕಾರ್ಯಕಲಾಪ.?

(ನಮ್ಮ ವಿಶೇಷ ಪ್ರತಿನಿಧಿಯಿಂದ)

ಕೊಡಗಿನ ಸರಕಾರಕ್ಕೆ ಬರುವ ಆದಾಯಗಳಲ್ಲಿ ಕೊಡಗು ಫಾರೆಸ್ಟ್ ಇಲಾಖೆಯಿಂದ ಬರುವ ಉತ್ಪತ್ತಿ ದೊಡ್ಡದಾಗಿದೆ. ಕೊಡಗಿನ ಸರಕಾರದ ಬೆನ್ನೆಲುಬು ಫಾರೆಸ್ಟ್ ಇಲಾಖೆಯೆಂದರೂ ಸಲ್ಲುವದು. ಆದ್ದರಿಂದ ಈ ಇಲಾಖೆಯಿಂದ ಸರಕಾರಕ್ಕೆ ಉತ್ಪತ್ತಿಯು ಸತತವಾಗಿ ಬರುವಂತೆಯೂ ಈ ಇಲಾಖೆಯ ಕಾರ್ಯಭಾರ ದಕ್ಷತೆಯಿಂದ ನಡೆಯುವಂತೆಯೂ ನೋಡಬೇಕಾದುದು ಕರ್ತವ್ಯವಾಗಿದೆ. ಇತ್ತೀಚೆಗೆ ಈ ಇಲಾಖೆಯ ಕಾರ್ಯಕಲಾಪಗಳ ಬಗ್ಗೆ ಅನೇಕ ದೂರುಗಳು ಕೇಳಿ ಬರುತ್ತಿವೆ.

ಮರಗಳನ್ನು ಒಂದನೇ ಎರಡನೇ ಮತ್ತು ಮೂರನೇ ತರಗತಿಯವೆಂದು ವಿಂಗಡಿಸುವಾಗ ಒಂದನೇ ತರಗತಿಗೆ ಸೇರಬೇಕಾದುವನ್ನು ಎರಡನೇ ತರಗತಿಯವೆಂದು ವರ್ಗೀಕರಿಸಿ ತಮ್ಮ ಇಷ್ಟದ ಕಂಟ್ರಾಕ್ಟರಿಗೆ ಕೊಡಲಾಗುತ್ತಿದೆಯಂತೆ! ಇದು ನಿಜವಾದರೆ ಇದಕ್ಕೆ ಶಿಕ್ಷೆಯಾಗಲೇ ಬೇಕು. ಈ ಆರೋಪವನ್ನು ಸಂಬಂಧಿಸಿದ ಅಧಿಕಾರಿಗಳು ಅಜಮಾಯಿಸಬೇಕು.

ಕೊಡಗಿನ ಫಾರೆಸ್ಟಿನ ಟಿಂಬರ್ ಸಾಗಿಸಲು ಕಂಟ್ರಾಕ್ಟು ಕೊಡುವ ವಿಚಾರದಲ್ಲಿ ಹಲವು ಆರೋಪಗಳು ಕೇಳಿಬರುತ್ತಿವೆ. ಈ ಮೊದಲು ಇಂಥಾ ಕಂಟ್ರಾಕ್ಟುಗಳಿಗಾಗಿ ಅನೇಕರು ಮೇಲೇರಿ ಬರುತ್ತಿದ್ದರೂ ಈಗಿನ ಹಲವು ಖಾನೂನುಗಳ ಕಾರಣವಾಗಿ ಚಿಕ್ಕ ಚಿಕ್ಕ ಕಂಟ್ರಾಕ್ಟರುಗಳಿಗೆ ಅವಕಾಶವಿಲ್ಲದಂತಾಗಿದೆಯೆಂದು ವಾರ್ತೆ ಇದೆ. ಈಗಿನ ಅಧಿಕಾರಿಯು ಬರುವ ಮೊದಲು ಇದ್ದ ಒಬ್ಬ ಕಂಟ್ರಾಕ್ಟರನು ತಾನು ಸಾಗಿಸಿದ ಟಿಂಬರಿನ ಬಾಬ್ತು ಬರತಕ್ಕದಿದ್ದ ರೂ. ೨೫,೦೦೦ ದ ಬಿಲ್ ಕೊಟ್ಟಿಗೆ ಅಲ್ಲಸಲ್ಲದ ತೊಂದರೆ ಒಡ್ಡಿ ಸಾಲ್ಯಾರು ತಿಂಗಳುಗಳ ವರೆಗೆ ಸತಾಯಿಸಿದ್ದಿದೆಯೆಂದು ವಾರ್ತೆ ಇದೆ. ಟಿಂಬರ್ ಸಾಗಿಸಲು ಟೆಂಡರ್ ಆಹ್ವಾನಿಸಿದಾಗ ಇಂತಿಷ್ಟೇ ಲಾರಿ ಇರುವವರು ಅರ್ಜಿ ಹಾಕಬೇಕೆಂದು ಶರತ್ತು ಹಾಕಿದ್ದೂ ಇದೆಯೆಂದು ವರ್ತಮಾನವಿದೆ. ಟೆಂಡರನ್ನು ಟೆಂಡರುದಾರರ ಮುಂದೆ ತೆರೆಯದೆ ತಮಗೆ ಇಷ್ಟ ತೋರಿದಲ್ಲಿ ತೆರೆದು ತಮ್ಮ ಇಷ್ಟದ ಕಂಟ್ರಾಕ್ಟರಿಗೆ ಕೊಟ್ಟರೆಂಬ ಆರೋಪವೂ ಇದೆ.

ಚಿಕ್ಕ ಚಿಕ್ಕ ಕಂಟ್ರಾಕ್ಟರರು ಇದ್ದಾಗ ಅತೀ ಕಡಿಮೆ ದರದಲ್ಲಿ ಟಿಂಬರ್ ಸಾಗಿಸುವ ಅನುಕೂಲತೆ ಇತ್ತು. ಪೆಟ್ರೋಲ್ ಸಿಕ್ಕದ ಯುದ್ಧದ ಸಮಯದಲ್ಲೂ ಕೂಡ ಈ ಇಲಾಖೆಯು ೧೨ ಆಣೆ ದರಕ್ಕೆ ಮೀರಿ ಸಾಗಿಸುವ ಚಾರ್ಜ ಕೊಟ್ಟಿಲ್ಲ. ಈಗಿರುವ ಸರಕಾರಿ ದರವು ೦-೧೩-೯ ಪೈ ಆಗಿದೆ. ಈ ಸರಕಾರಿ ದರಕ್ಕಿಂತಾ ಕಡಿಮೆಯಲ್ಲಿಯೇ ಕಂಟ್ರಾಕ್ಟರರು ದೊರೆಯುತ್ತಿದ್ದರು. ಇಂಥಾ ಅನುಕೂಲತೆಗಳನ್ನು ಅಲ್ಲಸಲ್ಲದ ತರತರಗಳಿಂದ ಇಲ್ಲದೆ ಮಾಡಿ ಈ ವರ್ಷ ಒಬ್ಬ ಕಂಟ್ರಾಕ್ಟರಿಗೆ ರೂ. ೧-೧-೬ ಯ ದರದಲ್ಲಿ ಕೊಡಲಾಗಿದೆಯೆಂದು ತಿಳಿಯಬರುತ್ತದೆ. ಈ ಕಂಟ್ರಾಕ್ಟರು ತನ್ನ ಕೈಕೆಳಗೆ ಬೇರೆ ಕಂಟ್ರಾಕ್ಟರನ್ನು ನೇಮಿಸಿ ಅವರಿಗೆ ೧೧ ಆಣೆ ದರದಲ್ಲಿ ಕೊಟ್ಟಿರುವರಂತೆ. ಅಂದರೆ ಈ ಕಂಟ್ರಾಕ್ಟರರು ಪ್ರತಿ ಟನ್ನಿಗೆ ಆರಾಣೆಯಂತೆ ಲಾಭ ಮಾಡುತ್ತಿರುವರೆಂದಾಯಿತು. ಇದು ಹೇಗೂ ಸರಕಾರಿ ದರದ ಮೇಲೆ ನಾಲ್ಕಾಣೆ ಹೆಚ್ಚಿಗೆ ಕೊಟ್ಟಂತಾಯಿತು. ಫಾರೆಸ್ಟ್ ಇಲಾಖೆಯವರ ಯೋಜನೆ ಮೇರೆ ಈ ವರ್ಷ ನಾಲ್ಕು ಲಕ್ಷ ಟನ್ ಟಿಂಬರ್ ಕೀಳುವ ಏರ್ಪಾಡಿರುವದಂತೆ! ಪ್ರತಿ ಟನ್ನಿಗೆ ಸರಕಾರಿ ದರಕ್ಕಿಂತಾ ನಾಲ್ಕಾಣೆ ಹೆಚ್ಚಿಗೆ ಕೊಡುವಂತೆ ಕಂಟ್ರಾಕ್ಟು ಮಾಡಿರುವದರಿಂದ ೪ ಲಕ್ಷ ಟನ್ನುಗಳಿಗೆ ಕಡಿಮೆ ಒಂದು ಲಕ್ಷ ರೂಪಾಯಿ ಸರಕಾರಕ್ಕೆ ನಷ್ಟವಾಗಲಿದೆ. ಈ ನಷ್ಟಕ್ಕೆ ಯಾರು ಜವಾಬ್ದಾರರು?

ಮೇಲಾಗಿ ಈ ವರೆಗಿನ ಏರ್ಪಾಡಿಗೆ ವಿರುದ್ಧವಾಗಿ ಎರಡು ವರ್ಷಗಳ ಕಂಟ್ರಾಕ್ಟನ್ನು ಮೇಲಿನ ದರದಲ್ಲಿ ಅವರಿಗೆ ಕೊಡಲಾಗಿದೆಯಂತೆ. ಇದು ನಿಜವಿದ್ದರೆ ಇದರಿಂದ ಸರಕಾರಕ್ಕೆ ವಿಪರೀತ ನಷ್ಟವಾಗದಿರದು. ಟಿಂಬರಿನ ಬೆಲೆಯು ಇಳಿಯತೊಡಗಿ ಟನ್ನಿಗೆ ಈಗ ಸಾಗಿಸುವರೆ ಕೊಡಲು ಒಪ್ಪಿರುವ ದರವೂ ಸಿಕ್ಕದಿರಬಹುದಾದ ದಿನಗಳು ಬರಬಹುದು. ಹಾಗಿರುವಾಗ ಈ ಎರಡು ವರ್ಷಗಳ ಕಂಟ್ರಾಕ್ಟು ಕೊಡಲು ಕಾರಣವೇನು? ಫಾರೆಸ್ಟ್ ಇಲಾಖಾಧಿಕಾರಿಗಳು ಬೇರೆಡೆಗೆ ವರ್ಗವಾಗಿ ಹೋಗುವ ವಾರ್ತೆ ಇದ್ದು ಹಾಗೆ ಹೋಗುವದಾದರೆ ತಮ್ಮ ಪ್ರೀತಿಯ ಕಂಟ್ರಾಕ್ಟರಿಗೆ ತೊಂದರೆಯಾಗಬಾರದೆಂದು ಈ ರೀತಿಯ ಏರ್ಪಾಡು ಮಾಡಿರುವದಾಗಿಯೂ ವರ್ತಮಾನವಿದೆ. ಈ ಇಲಾಖೆಯ ಮೇಲೆ ಇನ್ನೂ ಹಲವಾರು ಆರೋಪಗಳಿವೆ. ಆದ್ದರಿಂದ ಸಂಬಂಧಿಸಿದ ಮಂತ್ರಿಯವರಾಗಲೀ, ಚೀಫ್ ಕಮಿಷನರಾಗಲೀ ಈ ಆರೋಪಗಳು ಆಧಾರಪೂರ್ವಕವಾದುವೇ ಎಂಬುದನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಪರಿಶೀಲಿಸಬೇಕು. ಈ ಮೇಲಿನ ಆರೋಪಗಳು ನಿಜವೆಂದಾದರೆ ಈ ರೀತಿಯ ದರ್ಬಾರಿಗೆ ಕಾರಣರಾದವರನ್ನು ಶಿಕ್ಷಿಸಲೇಬೇಕು. ಅಧಿಕಾರಿಗಳು ಕಣ್ತೆರೆದು ವರ್ತಿಸುವರೇ?

ಬೊಂಬಾಯಿ ಸರ್ವೋದಯ ಸಮಿತಿ.

ಬೊಂಬಾಯಿ ಸರಕಾರವು ಮುಖ್ಯಮಂತ್ರಿ ಶ್ರೀ ಮೊರಾರ್ಜಿ ದೇಸಾಯಿಯವರ ಅಧ್ಯಕ್ಷತೆಯಲ್ಲಿ ರಾಜ್ಯದ ಸರ್ವೋದಯ ಸಮಿತಿಯನ್ನು ಪುನರ್ರಚಿಸಿದೆ

ಕಂದಾಯದ ಮಂತ್ರಿ ಶ್ರೀ ಬಿ. ಎಸ್. ಹಿರೆ, ಒಕ್ಕಲುತನ ಮಂತ್ರಿ ಡಾ. ಜೀವರಾಜ ಮೆಹ್ತಾ, ಸಾಮಾಜಿಕ ಸಂಸ್ಥೆಗಳ ಮಂತ್ರಿ ಶ್ರೀ ಎಂ. ಪಿ. ಪಾಟೀಲ್, ಸಾರ್ವಜನೋಪಯೋಗಿ ಖಾತೆಯ ಮಂತ್ರಿ ಶ್ರೀ ಎಂ. ಎಂ. ಡಾಯರ್, ನಿಂಬಾಳಕರ್, ವಿ. ಎಲ್. ಮೆಹ್ತಾ, ದಿಲ್‌ಖುಷ್‌ಭಾಯ್ ದಿವಾನ್‌ಜಿ, ತಿಮ್ಮಪ್ಪ ಎಸ್. ನಾಯಕ್, ಅಪ್ಪಾಸಾಹೇಬ್ ಪಟವರ್ಧನ್, ಇವರುಗಳು ಸಮಿತಿಯ ಇತರ ಸದಸ್ಯರು.

೬೦೦ ಎಕರೆ ಭೂದಾನ.

ತಾ. ೨೫ ರಲ್ಲಿ ಆಚಾರ್ಯ ವಿನೋಬಾರು ಲಕ್ನೋಗೆ ಬಂದಾಗ ೫೪ ಭೂಮಿ ಒಡೆಯರು ೬೦೦ ಎಕರೆ ಭೂಮಿಯನ್ನು ದಾನಮಾಡಿದರು. ಆ ಭೂಮಿಯನ್ನು ಭೂಮಿಯಿಲ್ಲದ ೫೦ ಕುಟುಂಬಗಳಿಗೆ ಹಂಚಿಕೊಡಲಾಯಿತು.

ಸೋತವರಿಗೇ ಹೆಚ್ಚು ಮತಗಳು

ಲೋಕಸಭೆ ಚುನಾವಣೆ ಮತಗಳ ಪೃಥಕ್ಕರಣ

ಕಳೆದ ಚುನಾವಣೆಯಲ್ಲಿ ಆರಿಸಿ ಬಂದ ಲೋಕ ಸಭೆಯ ಸದಸ್ಯರು ಒಟ್ಟು ಬಿದ್ದ ಮತಗಳಲ್ಲಿ ೧೦೦ಕ್ಕೆ ೪೯.೪ ರಷ್ಟನ್ನು ಪ್ರತಿನಿಧಿಸುತ್ತಾರೆ. ಉಳಿದ ೫೦.೬ ರಷ್ಟು ಮತಗಳು ಸೋತ ಉಮೇದುವಾರರಿಗೆ ಹೋದವು.

ಲೋಕ ಸಭೆಗೆ ಬಿದ್ದ ಒಟ್ಟು ೧೦೫೯೮೬೬೨೨೮ ಮತಗಳಲ್ಲಿ ಯಶಸ್ವಿ ಕಾಂಗ್ರೆಸ್ ಸದಸ್ಯರಿಗೆ ೩೮೦೨೯೨೯೧ ಮತಗಳು ಬಿದ್ದಿವೆ. ಸ್ವತಂತ್ರ ಸದಸ್ಯರಿಗೆ ೪೦೮೯೦೩೯, ಕಮ್ಯೂನಿಸ್ಟ್ ಪಕ್ಷಕ್ಕೆ ೩೯೩೪೭೦೮ ಮತಗಳು ಬಿದ್ದಿದ್ದು ೨ ಹಾಗೂ ೩ನೆಯ ನಂಬರು ಬಂದಿವೆ. ಉಳಿದ ಪಕ್ಷಗಳಿಗೆ ನೂರಕ್ಕೆ ಕೆಳಗಿನಂತೆ ಮತಗಳು ಬಿದ್ದಿವೆ.

ಸಮಾಜವಾದಿ—೧, ಪ್ರಜಾಪಕ್ಷ—೦.೯, ಅಕಾಲಿ—೦.೬, ದಲಿತ ವರ್ಗ—೦.೪, ಜನಸಂಘ, ೦.೨.

ಲೋಕಸಭೆಯ ಸ್ಥಳಗಳಿಗೆ ೧೮೬೧ ಸದಸ್ಯರು ಸ್ಪರ್ಧೆ ಮಾಡಿದರು. ಇವರಲ್ಲಿ ೪೬೬ ಕಾಂಗ್ರೆಸ್ ಪಕ್ಷದ ಹುರಿಯಾಳುಗಳಲ್ಲಿ ಪ್ರತಿಯೊಬ್ಬನು ಸರಾಸರಿ ೯೯,೬೪೧ ಮತಗಳನ್ನು ಪಡೆದನು. ಆರ್. ಸಿ. ಪಿ. ಐ. ಹಾಗೂ ಪಿ. ಡಿ. ಎಫ್. ಹುರಿಯಾಳುಗಳು ಸರಾಸರಿ ೭೯೪೬೮ ಮತಗಳನ್ನು ಪಡೆದರು.

'ಹಿಸ್ ಎಕ್ಸಲೆನ್ಸಿ' 'ಆನರೆಬಲ್' ಅಭಿದಾನಗಳಿಗೆ ತಿಲಾಂಜಲಿ

ಗವರ್ನರರನ್ನು, ಮಂತ್ರಿಗಳನ್ನು ಸಂಬೋಧಿಸಿ ಬರೆಯುವಾಗ ಇಲ್ಲಿಯ ವರೆಗೆ ರೂಢಿಯಲ್ಲಿದ್ದ 'ಹಿಸ್ ಎಕ್ಸಲೆನ್ಸಿ' 'ಆನರೆಬಲ್' ಎಂಬ ಗೌರವದ ಅಭಿದಾನಗಳನ್ನು ಉಪಯೋಗಿಸುತ್ತಿದ್ದ ಪದ್ಧತಿಯನ್ನು ಬಂದು ಮಾಡಬೇಕೆಂದು ಭಾರತ ಸರಕಾರವು ರಾಜ್ಯ ಸರಕಾರಗಳಿಗೆ ವಿನಂತಿ ಮಾಡಿದೆ.

ಸರಕಾರೀ ಕಾಗದ ಪತ್ರಗಳಲ್ಲಿ ಇಂತಹ ಅಭಿದಾನಗಳ ಉಪಯೋಗವನ್ನು ಬಂದು ಮಾಡಲಾಗಿದೆಯೆಂದು ಗೃಹಖಾತೆಯು ರಾಜ್ಯಗಳಿಗೆ ಒಂದು ಪರಿಪತ್ರ ಕಳುಹಿಸಿದೆ. ಆದರೆ ಅಂತರರಾಷ್ಟ್ರೀಯ ಪ್ರಸಂಗದಲ್ಲಿ, ಪಾರ್ಲಿಮೆಂಟ್ ಪದ್ಧತಿಯಲ್ಲಿ ಮಾತ್ರ ಅವುಗಳನ್ನು ಉಪಯೋಗಿಸಬಹುದು.

ಡಾ. ರಾಜೇಂದ್ರಪ್ರಸಾದರು 'ಉತ್ತಮ ಪುರುಷ'ರು.

ಡಾ. ರಾಜೇಂದ್ರ ಪ್ರಸಾದರು ರಾಷ್ಟ್ರದಲ್ಲಿಯೇ ಅತ್ಯಂತ ಮಹಾನ್ ಪುರುಷರೆಂದು ಎಣಿಸುತ್ತ ಅವರನ್ನು 'ಉತ್ತಮ ಪುರುಷ' ಎಂದು ಮದ್ರಾಸ್ ಮುಖ್ಯ ಮಂತ್ರಿಯಾದ ಶ್ರೀ. ರಾಜಗೋಪಾಲಾಚಾರಿಯವರು ಹೇಳಿದರು.

ಡಾ. ಪ್ರಸಾದರು ಯಾವುದೇ ರಾಜಕೀಯ ಪಕ್ಷದ ಮುಖ್ಯಸ್ಥರಲ್ಲವೆಂದು ಶ್ರೀ ರಾಜಾಜಿಯವರು ಲೋಕಲ್‌ಬೋರ್ಡು ಕಚೇರಿಯಲ್ಲಿ ಡಾ. ಪ್ರಸಾದರ ಚಿತ್ರವನ್ನು ಅನಾವರಣ ಮಾಡುತ್ತ ಹೇಳಿದರು.

ಡಾ. ಪ್ರಸಾದರು ವಕೀಲಿವೃತ್ತಿಯನ್ನು ತ್ಯಜಿಸಿ ಎಲ್ಲವನ್ನು ತ್ಯಾಗಮಾಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ಹೇಗೆ ಧುಮುಕಿದರೆಂಬುದನ್ನು ಶ್ರೀ. ರಾಜಾಜಿಯವರು ವಿವರಿಸಿದರು.

ಆಡಳಿತೆಯನ್ನು ವಿಕೇಂದ್ರೀಕರಣ ಮಾಡುವದೇ ತಮ್ಮ ಅಂತಿಮಗುರಿಯಾಗಿದೆಯೆಂದವರು ನುಡಿದರು. ಸದ್ಯಕ್ಕೆ ಸ್ಥಾನಿಕ ಸಂಸ್ಥೆಗಳಿಗೆ ಸಾಕಷ್ಟು ಅಧಿಕಾರಗಳು ಲಭ್ಯವಾಗದಿದ್ದರೂ ಜನತೆಯಲ್ಲಿ ವಿಶ್ವಾಸ ಹುಟ್ಟುವ ವರೆಗೆ ಸದ್ಯದ ವ್ಯವಸ್ಥೆಯೇ ಮುಂದುವರಿಯುವದೆಂದೂ ಅವರು ಹೇಳಿದರು. ಶೀಘ್ರದಲ್ಲಿ ಲೋಕಲ್‌ಬೋರ್ಡು, ನಗರ ಸಭೆ, ಗ್ರಾಮಪಂಚಾಯತಿಗಳಿಗೆ ಆಡಳಿತೆಯ ಸಂಪೂರ್ಣ ಅಧಿಕಾರಗಳು ಸಿಗುವದೆಂದು ಹೇಳಿದರು.

ಮಾರಾಟಕ್ಕಿದೆ.

ಪೊನ್ನಂಪೇಟೆ ಟೌನಿನ ಮಧ್ಯದಲ್ಲಿ 4 ಮಳಿಗೆಗಳುಳ್ಳ ವಾಸಕ್ಕೂ ಸಹ ಅನುಕೂಲತೆ ಇರುವ ಒಂದು ಮಹಡಿ ಅಂಗಡಿ ಮನೆ ಮಾರಾಟಕ್ಕಿದೆ. ಬೆಲೆ ರೂಪಾಯಿ 14,000/— ಅಥವ ಸಮೀಪದ ಬೆಲೆ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ಪತ್ತೆಗೆ ಬರೆಯಿರಿ.

ಡಾ. ಎಂ. ಎಂ. ಬೆಳ್ಯಪ್ಪ,
2920
ಗೋಕುಲಮ್ ರೋಡ್,
ವಿ. ವಿ. ಮೊಹಲ್ಲಾ, ಮೈಸೂರು.
3-1

ಶ್ರೀ ಕೆ. ಸಿ. ಪೀತಾಂಬರರವರು,
"ಕೊಡಗು" ಏಜೆಂಟರು,
ಕೊಡ್ಲಿ ಪೇಟೆ.

ಕೊಡಗಿಗೆ ಮೈಸೂರಿನ ರಾಜಪ್ರಮುಖರಾದ

ಶ್ರೀ ಜಯಚಾಮರಾಜ ಒಡೆಯರ ಆಗಮನ.

ಕೊಡಗಿನ ಜನರ ಅಭೂತಪೂರ್ವ ಸ್ವಾಗತ.

ಕೊಡಗಿನ ಚೀಫ್ ಕಮಿಷನರ ಮತ್ತು ಮಂತ್ರಿಗಳ ಆಹ್ವಾನವನ್ನು ಸ್ವೀಕರಿಸಿ ಮೈಸೂರಿನ ರಾಜಪ್ರಮುಖರಾದ ಶ್ರೀ ಜಯಚಾಮರಾಜ ಒಡೆಯರ್ ಬಹದೂರ್ ಅವರು ತಾ. ೨೫ನೇ ಆದಿತ್ಯವಾರ ಫ್ರೇಜರ್‌ಪೇಟೆ ಮಾರ್ಗವಾಗಿ ಕೊಡಗಿಗೆ ಬಂದರು. ಫ್ರೇಜರ್‌ಪೇಟೆಯಲ್ಲಿ ಬೆಳಿಗ್ಗೆ ಹತ್ತು ಗಂಟೆಗೆ ರಾಜಪ್ರಮುಖರನ್ನು ಕೊಡಗಿನ ಚೀಫ್ ಕಮಿಷನರಾದ ಕೆ. ದಯಾಸಿಂಗ್ ಬೇಡಿಯವರು, ಮುಖ್ಯಮಂತ್ರಿ ಶ್ರೀ ಸಿ. ಎಂ. ಪೂಣಚ್ಚನವರೂ, ಗೃಹಮಂತ್ರಿ ಶ್ರೀ ಕೆ. ಮಲ್ಲಪ್ಪನವರೂ, ಮತ್ತಿತರರೂ ಎದುರುಗೊಂಡು ಸ್ವಾಗತಿಸಿದರು. ಹೂಮಾಲೆಗಳಿಂದ ಸತ್ಕರಿಸಿದ ನಂತರ ಪುರಜನರು ಸ್ವಾಗತಬಯಸಿ ಒಂದು ಬಿನ್ನವತ್ತಳೆಯನ್ನರ್ಪಿಸಿದರು. ಚೀಫ್ ಕಮಿಷನರವರೊಡನೆ ಲಘು ಫಲಹಾರವನ್ನು ತೀರಿಸಿ ರಾಜಪ್ರಮುಖರು ಚೀಫ್ ಕಮಿಷನರೊಡನೆ ಮಡಿಕೇರಿಗೆ ಪ್ರಯಾಣ ನಡೆಸಿದರು. ಸುಂಟಿಕೊಪ್ಪದಲ್ಲಿ ಅಲ್ಲಿಯ ಸಾರ್ವಜನಿಕರು ರಾಜಪ್ರಮುಖರಿಗೆ ಪುಷ್ಪಹಾರಗಳನ್ನಿತ್ತು ಸ್ವಾಗತಿಸಿದರು. ನಿಶ್ಚಯಿಸಿದ ಕಾರ್ಯಕ್ರಮದಂತೆ ಸರಿಯಾಗಿ ರಾಜಪ್ರಮುಖರು ಹನ್ನೆರಡು ಗಂಟೆಗೆ ಮಡಿಕೇರಿ [illegible] ತಲುಪಿದರು. ಅಲ್ಲಿ ಮಡಿಕೇರಿ ಪುರನಿವಾಸಿಗಳೂ, ವರ್ತಕರೂ ಅಭೂತಪೂರ್ವ ಸ್ವಾಗತವನ್ನಿತ್ತರು. ಕೊಡಗು ಪೊಲೀಸ್ ದಳವು 'ಗಾರ್ಡ್ ಆಫ್ ಆನರ್' ಸಲ್ಲಿಸಿತು. ನಂತರ ರಾಜಪ್ರಮುಖರು ಬೋರ್ಡ್ ಬಂಗ್ಲೆಯಲ್ಲಿ ಚೀಫ್ ಕಮಿಷನರೊಡನೆ ಊಟವನ್ನು ಮುಗಿಸಿದರು.

ಸಾಯಂಕಾಲ ನಾಲ್ಕು ಗಂಟೆಗೆ ಮಡಿಕೇರಿ ಪುರಸಭೆಯ ಬಿನ್ನವತ್ತಳೆಯನ್ನರ್ಪಿಸುವ ಏರ್ಪಾಡಾಗಿತ್ತು. ಶಾಸನಸಭಾ ಭವನವು ಸುಂದರವಾಗಿ ಅಲಂಕೃತವಾಗಿತ್ತು. ರಾಜಪ್ರಮುಖರು ಸಮಯಕ್ಕೆ ಸರಿಯಾಗಿ ಚೀಫ್ ಕಮಿಷನರ್ ಮತ್ತು ಮಂತ್ರಿಗಳೊಡನೆ ಆಗಮಿಸಿದರು. ರಾಜಪ್ರಮುಖರಿಗೂ, ಚೀಫ್ ಕಮಿಷನರ್ ಮತ್ತು ಮಂತ್ರಿಗಳಿಗೂ ಹೂವಿನ ಹಾರ ಹಾಕಿದ ತರುವಾಯ ಶ್ರೀ ಎ. ಎಸ್. ಅನಂತರಾಮಯ್ಯ ಅವರು ಸ್ವಾಗತ ಗೀತೆಯನ್ನು ಹಾಡಿದರು. ನಂತರ ಮುನ್ಸಿಪಲ್ ಪ್ರೆಸಿಡೆಂಟರಾದ ಶ್ರೀ ಪಿ. ಮೊಯಿದ್ದೀನ್‌ರವರು ಬಿನ್ನವತ್ತಳೆಯನ್ನೋದಿ ಬೆಳ್ಳಿಯ ಕರಂಡಿಕೆಯಲ್ಲಿ ಅರ್ಪಿಸಿದರು.

ಬಿನ್ನವತ್ತಳೆಯ ಸಾರಾಂಶ

"ಪುರಸಭೆಯ ಪ್ರೆಸಿಡೆಂಟ್ ಮತ್ತು ಮೆಂಬರುಗಳು ಸುಸ್ವಾಗತವನ್ನು ಬಯಸುತ್ತೇವೆ. ನಮ್ಮ ಈ ಬಿನ್ನವತ್ತಳೆಯನ್ನು ಸ್ವೀಕರಿಸಲು ಒಪ್ಪಿದಕ್ಕೆ ಕೃತಜ್ಞರಾಗಿದ್ದೇವೆ. ಈ ಸುಸಂದರ್ಭವು ಈ ಪುರಸಭೆಯ ಚರಿತ್ರೆಯಲ್ಲಿ ಚಾರಿತ್ರಿಕ ದಿನವಾಗಿ ಉಳಿಯುವದು. ನಿಮ್ಮನ್ನು ಕೊಡಗಿಗೆ ಆಹ್ವಾನಿಸಿದ ಚೀಫ್ ಕಮಿಷನರಿಗೂ ಮಂತ್ರಿಗಳಿಗೂ ನಾವು ಕೃತಜ್ಞರು. ಹಿಂದೀ ಒಕ್ಕೂಟದ ಸಂಸ್ಥಾನಗಳಲ್ಲಿ ಅತಿ ಮುಂದುವರಿದ ಮತ್ತು ಪ್ರಗತಿಶೀಲವಾದ ಸಂಸ್ಥಾನಗಳಲ್ಲಿ ಒಂದಾದ ಮೈಸೂರಿನ ರಾಜಪ್ರಮುಖರು ಇಂದು ನಮ್ಮೊಡನಿರುವದು ನಮಗೆ ಹೆಮ್ಮೆಯಾಗಿದೆ. ನಿಮಗೆ ಮುಂಚೆ ಅರಸರಾಗಿದ್ದ ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್ ಅವರು ಎಲ್ಲಾ ಅರಸರಿಗೆ ಎಲ್ಲಾ ಕಾಲಕ್ಕೂ ಅನುಕರಣೀಯವಾದ ಜನಹಿತ ಆಡಳಿತ ಪರಂಪರೆಯನ್ನು ಬಿಟ್ಟು ಹೋಗಿದ್ದಾರೆ. ಆ ಆದರ್ಶ ಅರಸರಿಂದ ತರಬೇತು ಹೊಂದಲ್ಪಟ್ಟವರೂ ಆ ರಾಜಪರಂಪರೆಯಿಂದ ಚೇತನ ಪಡೆದವರೂ ಆದ ನೀವು ಮೈಸೂರಿನ ಆಡಳಿತವನ್ನು ದಕ್ಷತೆ ಮತ್ತು ಬುದ್ಧಿವಂತಿಕೆಯಿಂದ ನಿರ್ವಹಿಸಿ, ತಮ್ಮ ಮೈಸೂರು ಹಿಂದೂದೇಶದಲ್ಲಿ ಆದರ್ಶ ಸಂಸ್ಥಾನ ಎಂಬ ಹೆಸರನ್ನು ಉಳಿಸಿಕೊಂಡಿರುವದು ಸಂತೋಷಕರವಾಗಿದೆ. ಹಿಂದೀ ಒಕ್ಕೂಟಕ್ಕೆ ಸೇರುವಾಗ ತಮ್ಮ ರಾಜಕೀಯ ಕೌಶಲ್ಯ ಮತ್ತು ಪ್ರಜಾಸತ್ತಾತ್ಮಕ ದೃಷ್ಟಿ ಎಲ್ಲರ ಮೇಲೆ ಪ್ರಭಾವವನ್ನುಂಟುಮಾಡಿದೆ. ರಾಜ್ಯಾಡಳಿತ ಒಂದರಲ್ಲಿ ಮಾತ್ರವಲ್ಲ; ವಿದ್ಯೆ, ಕಲೆ, ಸಾಹಿತ್ಯ, ಸಂಗೀತ ಮತ್ತಿತರ ಸಾಂಸ್ಕೃತಿಕ ವಿಚಾರಗಳಲ್ಲೂ ನೀವು ಹಾಕಿ ತೋರಿಸಿದ ಉದಾಹರಣೆಯು ಅನುಕರಣೀಯವಿದೆ.

ನಿಮ್ಮ ಸರಕಾರವು ಕೊಡಗಿನವರಾದ ನಮಗೆ ನಿಮ್ಮ ವಿದ್ಯಾಸಂಸ್ಥೆಗಳಲ್ಲಿ, ಆಸ್ಪತ್ರೆಗಳಲ್ಲಿ, ಆಡಳಿತದಲ್ಲಿ ಮತ್ತಿತರ ವಿಚಾರಗಳಲ್ಲಿ ತೋರಿಸಿದ ಸಹಾಯವನ್ನು ಈ ಸಂದರ್ಭದಲ್ಲಿ ನೆನೆಯದಿದ್ದರೆ ನಮ್ಮ ಕರ್ತವ್ಯವನ್ನು ಮಾಡಿದಂತಾಗದಲ್ಲ. ಮೈಸೂರು ಯಾವಾಗಲೂ ಒಳ್ಳೆಯ ನೆರೆಯಾಗಿದೆ; ಭೌಗೋಳಿಕ ಸಾಮೀಪ್ಯದಿಂದ ಮಾತ್ರವಲ್ಲ; ಆವಶ್ಯಕವಾಗಿ ಎರಡು ಸಂಸ್ಥಾನಗಳೂ ಪರಸ್ಪರ ಹಿತಕ್ಕಾಗಿ ಉಳಿಸಿಕೊಂಡು ಬಂದ ಸ್ನೇಹ ಸಂಬಂಧದಿಂದಲೂ ಉತ್ತಮ ನೆರೆಯಾಗಿದೆ. ನಿಮ್ಮ ಆಳ್ವಿಕೆಯ ಕಾಲದಲ್ಲಿ ಈ ಸಂಬಂಧವು ಮುಂದೆ ಬೆಳೆದು ಭದ್ರವಾಗುವದೆಂದು ಆಶಿಸುತ್ತೇವೆ.

ಕೊಡಗಿನಿಂದ ನೀರು ಹರಿದು ಅದರಿಂದ ವಿದ್ಯುಚ್ಛಕ್ತಿ ಮೈಸೂರಿನಲ್ಲಿ ಉತ್ಪಾದಿಸಲ್ಪಟ್ಟರೂ ಕೊಡಗಿಗೆ ಅದರ ಲಾಭವಿಲ್ಲದುದು ವಿಷಾದಕರ. ಈ ಸಂಸ್ಥಾನದ ಅಭಿವೃದ್ಧಿಗಾಗಿ ಮೈಸೂರಿನಿಂದ ವಿದ್ಯುಚ್ಛಕ್ತಿಯನ್ನು ಪಡೆಯಲು ನಮ್ಮ ಸರಕಾರವು ಪ್ರಯತ್ನಿಸುತ್ತಿದೆ. ಈ ಮಾತುಕತೆಗಳು ತೃಪ್ತಿಕರವಾಗಿ ಸಾಗಿದ್ದು ಈ ವಿಚಾರ ಇಂದಿಗೂ ಸರಕಾರದೊಂದಿಗಿದೆಯೆಂಬುದು ಸಂತೋಷದ ವಿಚಾರ. ಇದರ ತೀರ್ಮಾನವಾದಾಗ ಈ ಯೋಜನೆಯನ್ನು ನೀವು ಆಶೀರ್ವದಿಸುವಿರೆಂದು ನಂಬಿರುವೆವು.

ಕಡೆಯದಾಗಿ ಕೊಡಗಿನಲ್ಲಿಯ ನಿಮ್ಮ ಈ ಸ್ವಲ್ಪ ಕಾಲದ ಇರುವಿಕೆಯು ನಿಮಗೆ ಆನಂದಕರವಾಗಲೆಂದೂ, ನಿಮಗೂ ನಿಮ್ಮ ಕುಟುಂಬಕ್ಕೂ ಭಗವಂತನು ದೀರ್ಘಾಯುರಾರೋಗ್ಯವನ್ನು ಕೊಟ್ಟು ಮೈಸೂರಿನ ಭವ್ಯ ಭವಿಷ್ಯವನ್ನು ಆದರ್ಶ ಮೈಸೂರಿನ ಹಿತಕ್ಕಾಗಿ ಮಾತ್ರವಲ್ಲ; ಇಡೀ ಹಿಂದೂದೇಶದ ಹಿತಕ್ಕಾಗಿ ನಿರೂಪಿಸುವ ಶಕ್ತಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ."

ರಾಜಪ್ರಮುಖರು ಬಿನ್ನವತ್ತಳೆಯನ್ನು ಸ್ವೀಕರಿಸಿ ಸಮುಚಿತವಾಗಿ ಉತ್ತರ ಕೊಟ್ಟರು. (ಇದನ್ನು ಬೇರೆಡೆ ಪ್ರಕಟಿಸಲಾಗಿದೆ) ನಂತರ 'ಜನಗಣಮನ' ಹಾಡಿ ಸಭೆಯು ಮುಕ್ತಾಯಗೊಂಡಿತು.

ಸಾಯಂಕಾಲ ೫-೧೫ ಗಂಟೆಗೆ ರಾಜಪ್ರಮುಖರು, ಚೀಫ್ ಕಮಿಷನರ್, ಮಂತ್ರಿಗಳು ಮತ್ತಿತರರೊಡನೆ ಪೇಟೆಯ ಮುಖ್ಯ ಬೀದಿಗಳಾಗಿ ಕಾರಿನಲ್ಲಿ ಕುಳಿತು ಮೆರವಣಿಗೆ ಬಂದರು. ಮಡಿಕೇರಿ ಪಟ್ಟಣವು ತಳಿರು ತೋರಣಗಳಿಂದ ಅಲಂಕೃತವಾಗಿತ್ತು. ಅಲ್ಲಲ್ಲಿ ಪುರವಾಸಿಗಳು ರಾಜಪ್ರಮುಖರಿಗೆ ಹೂವಿನ ಹಾರ ಸಮರ್ಪಿಸಿ ತಮ್ಮ ಕೃತಜ್ಞತೆಯನ್ನು ಪ್ರದರ್ಶಿಸಿದರು. ರಾತ್ರಿ ೮ ಗಂಟೆಗೆ ಕೋಟೆಯ ಆವರಣದಲ್ಲಿ ಬೊಳಕಾಟ ಮತ್ತು ಸುಗ್ಗಿ ಕುಣಿತಗಳ ಪ್ರದರ್ಶನವಿತ್ತು. ರಾಜಪ್ರಮುಖರು ಇದನ್ನು ನೋಡಿದರು. ೯ ಗಂಟೆಗೆ ಶಾಸನ ಸಭಾಂಗಣದಲ್ಲಿ ರಾಜಪ್ರಮುಖರ ಗೌರವಾರ್ಥ ಔತಣಕೂಟ ಏರ್ಪಡಿಸಲಾಗಿತ್ತು.

ಮೈಸೂರು ರಾಜಪ್ರಮುಖರು

ಸೋಮವಾರಪೇಟೆಯಲ್ಲಿ.

ತಾರೀಕ ೨೬ರ ಬೆಳಿಗ್ಗೆ ರಾಜಪ್ರಮುಖರು ಚೀಫ್ ಕಮಿಷನರು, ಕೊಡಗಿನ ಮಂತ್ರಿಗಳು, ಕೆಲವು ಅಧಿಕಾರಿಗಳೊಡಗೂಡಿಕೊಂಡು ಸೋಮವಾರಪೇಟೆಗೆ ಪ್ರಯಾಣ ಬೆಳೆಸಿದರು. ದಾರಿಯಲ್ಲಿ ಹಲವೆಡೆ ಅವರನ್ನು ಪುಷ್ಪಹಾರಗಳಿಂದ ಜನರು ಸ್ವಾಗತಿಸಿದರು. ದಾರಿಯಲ್ಲಿ ಅವರು [illegible] ಫಾರ್ಮನ್ನು ಸಂದರ್ಶಿಸಿದರು. ನಂತರ ಫ್ರೇಜರ್‌ಪೇಟೆಯಲ್ಲಿ ಉಪಾಹಾರವನ್ನು ಮುಗಿಸಿ ಸೋಮವಾರಪೇಟೆಗೆ ಬಂದರು. ಸೋಮವಾರಪೇಟೆ ಪಟ್ಟಣವು ಅಲಂಕೃತವಾಗಿತ್ತು. ಹಳ್ಳಿಗಳಿಂದ ಜನಸಂದಣಿ ಬಂದು ಕಿಕ್ಕಿರಿದು ನೆರೆದಿತ್ತು. ಸೋಮವಾರಪೇಟೆ [illegible] ಆವರಣದಲ್ಲಿ ಪುರಸಭೆಯವರು ರಾಜಪ್ರಮುಖರಿಗೆ ಬಿನ್ನವತ್ತಳೆಯನ್ನರ್ಪಿಸಿದರು.

ಸನ್ಮಾನ ಪತ್ರದ ಸಾರಾಂಶ.

"ಸೋಮವಾರಪೇಟೆಯ ಪುರನಿವಾಸಿಗಳಾದ ನಾವು ಮಹಾಸ್ವಾಮಿಯವರ ಆಗಮನದಿಂದ ವಿಶೇಷವಾಗಿ ಬಹುಮಾನಿತರಾಗಿದ್ದೇವೆ. ಮಹಾಸ್ವಾಮಿಯವರ ಸಂಸ್ಥಾನದ ನೆರೆಯಲ್ಲಿರುವ ನಮ್ಮ ಕೊಡಗು ಸಂಸ್ಥಾನಕ್ಕೆ ಆಗಮಿಸಬೇಕೆಂದು ತಮಗೆ ಕರೆಯನ್ನು ಕಳುಹಿಸಿದ ಕೊಡಗಿನ ಚೀಫ್ ಕಮಿಷನರವರಿಗೂ, ಮಂತ್ರಿವರ್ಗದವರಿಗೂ ನಾವು ಚಿರಋಣಿಗಳಾಗಿರುವೆವು. ಈ ದಿವಸವನ್ನು ನಮ್ಮ ಸಣ್ಣ ಊರಿನ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ದಿನವೆಂದು ಪರಿಗಣಿಸುತ್ತೇವೆ. ಈ ಸಂದರ್ಭದಲ್ಲಿ ತಮ್ಮ ಪೂಜ್ಯ ಪಿತೃಗಳಾದ ಕೀರ್ತಿಶೇಷ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರು ಇಲ್ಲಿನ ಪವಿತ್ರ ಪುಷ್ಪಗಿರಿ ಬೆಟ್ಟಕ್ಕೆ ಆಗಮಿಸಿ ನಮ್ಮ ನಾಡನ್ನು ಗೌರವಿಸಿದ ಸಂಗತಿ ನಮ್ಮ ಸ್ಮರಣೆಗೆ ಬರುತ್ತದೆ. ಸಂಯುಕ್ತ ಭಾರತದ ಅತ್ಯಂತ ಮಹೋನ್ನತ ರಾಜಪ್ರಮುಖರೆನಿಸಿದ ತಾವು ಇಂದು ನಮ್ಮ ಮಧ್ಯದಲ್ಲಿರುವುದು ಅತ್ಯಪೂರ್ವ ಸಂಗತಿಯೇ ಸರಿ. ಮಹಾಸ್ವಾಮಿಯವರ ಪೂಜ್ಯಪಿತ ಕೀರ್ತಿಶೇಷ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರು ಶ್ರೀ ರಾಮಚಂದ್ರನಿಗೆ ಎಣೆಯೆನಿಸಿದ ಆದರ್ಶ ಪ್ರಭುಗಳೆಂದು ಅಖಿಲ ಭಾರತದಲ್ಲಿ ಕೀರ್ತಿಗಳಿಸಿದ್ದರು. ಮೈಸೂರು, ಭಾರತದಲ್ಲಿ ಮಾದರಿ ಸಂಸ್ಥಾನವೆಂಬ ಮನ್ನಣೆಯನ್ನು ಪಡೆಯಿತು. ಅಂಥಾ ಕೀರ್ತಿಶಾಲಿಗಳ ದತ್ತ ಪ್ರಭುಪದವಿಯಿಂದ ಯೋಗ್ಯ ಸಿಂಹಾಸನವನ್ನು, ಅವರ ಮಹತ್ಕಾರ್ಯಗಳಿಂದ ಕೀರ್ತಿಯನ್ನೂ ಪಡೆದ ಮಹಾಸ್ವಾಮಿಯವರು ತಮ್ಮ ಅಪೂರ್ವ ರಾಜಕೀಯ ಕೌಶಲದಿಂದಲೂ, ದಕ್ಷತೆ, ವಿಚಕ್ಷಣತೆಗಳಿಂದಲೂ ಮೈಸೂರು ಸಂಸ್ಥಾನದ ಕೀರ್ತಿ, ಘನತೆಗಳನ್ನು ಮುಂದುವರಿಸುತ್ತ ಬಂದಿರುವ ಸಂಗತಿ ಎಲ್ಲರಿಗೂ ಹರ್ಷದಾಯಕವಾದುದೇ ಸರಿ.

ಮಹಾಸ್ವಾಮಿಯವರು ಆಡಳಿತ ದಕ್ಷರು ಮಾತ್ರವಲ್ಲದೆ ಲೋಕಪ್ರಿಯ ಕ್ರೀಡಾಭಿಮಾನಿಗಳೂ, ಸಂಗೀತ, ಸಾಹಿತ್ಯ, ಲಲಿತಕಲಾಭಿಮಾನಿಗಳೂ ಆಗಿರುವುದು ನಮ್ಮೆಲ್ಲರಿಗೂ ಅತ್ಯಂತ ಹರ್ಷವನ್ನುಂಟುಮಾಡುತ್ತದೆ. ಆದರ್ಶ ಕ್ರೀಡಾಭಿಮಾನಿಗಳಲ್ಲಿರಬೇಕಾದ ಸಲ್ಲಕ್ಷಣಗಳನ್ನು ತಮ್ಮಲ್ಲಿ ಕಂಡು ನಮ್ಮ ಭಾರತ ಸರಕಾರದವರು ಮಹಾಸ್ವಾಮಿಯವರನ್ನು ವನ್ಯಮೃಗ ಸಂರಕ್ಷಣಾ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿರುವುದು ಇದಕ್ಕೆ ಯೋಗ್ಯ ನಿದರ್ಶನವಾಗಿದೆ.

ಮಹಾಸ್ವಾಮಿಯವರ ಸರಕಾರವು ನಮ್ಮ ಸಂಸ್ಥಾನಕ್ಕೆ ವಿದ್ಯಾಭ್ಯಾಸ, ವೈದ್ಯಕೀಯ ಸಹಾಯ ಮತ್ತು [illegible] ಗಳಲ್ಲಿ ಅನವರತವೂ ನೀಡುತ್ತಿರುವ ಸಹಾಯಕ್ಕಾಗಿ ಮಹಾಸ್ವಾಮಿಯವರಿಗೆ ನಮ್ಮ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಈ ಸಂದರ್ಭದಲ್ಲಿ ಸಲ್ಲಿಸಬಯಸುತ್ತೇವೆ. ಆವಶ್ಯಸಂದರ್ಭಗಳಲ್ಲಿ ಪರ[illegible]

ಸ್ಪರ ಸಹಾಯವನ್ನು ನೀಡುತ್ತಾ ಮಧುರ ಬಾಂಧವ್ಯವನ್ನು ಬೆಳೆಸಿಕೊಂಡು ಬರುವಂತೆ ಪ್ರಕೃತಿಯೂ ಮೈಸೂರು ಮತ್ತು ಕೊಡಗು ಪ್ರದೇಶಗಳನ್ನು ನೆರೆಕರೆಯ ಸಂಸ್ಥಾನಗಳನ್ನಾಗಿ ಹೆಣೆದಿದೆ. ಈ ಬಾಂಧವ್ಯವು ಮಹಾಸ್ವಾಮಿಯವರ ಪ್ರಭಾವಯುತ ಪ್ರಭುತ್ವದಲ್ಲಿ ಮತ್ತಷ್ಟು ಬಲಗೊಳ್ಳಲೆಂದು ಹಾರೈಸುತ್ತೇವೆ.”

ರಾಜಪ್ರಮುಖರು ಸನ್ಮಾನ ಪತ್ರಕ್ಕೆ ಕನ್ನಡದಲ್ಲಿ ಉತ್ತರವನ್ನೀಯುತ್ತಾ ತಮ್ಮ ಹಾಗೂ ತಮ್ಮ ದೊಡ್ಡಪ್ಪ ಇವರಸ್ಮರಣೆಗಾಗಿ ವಂದಿಸಿದರು. ತಾವು ಮತ್ತೊಮ್ಮೆ ಕೊಡಗಿಗೆ ಬರುವದಾಗಿಯೂ ಆಗ ಪುಷ್ಪಗಿರಿ ಬೆಟ್ಟವನ್ನು ಸಂದರ್ಶಿಸುವ ಇಚ್ಛೆಯನ್ನೂ ವ್ಯಕ್ತಪಡಿಸಿದರು. ಮಧ್ಯಾಹ್ನದ ವೇಳೆ ರಾಜಪ್ರಮುಖರು ಮಡಿಕೇರಿಗೆ ಹಿಂತಿರುಗಿದರು.

ಸಾಯಂಕಾಲ ನಾಲ್ಕು ಗಂಟೆಗೆ ಕೋಟೆಯೊಳಗೆ ರಾಜಪ್ರಮುಖರ ಗೌರವಾರ್ಥವಾಗಿ ಚಹಪಾನ ಕೂಟದ ಏರ್ಪಾಡು ಮಾಡಲಾಗಿತ್ತು. ಸಾಯಂಕಾಲ ೬-೩೦ ಗಂಟೆಗೆ ರಾಜಪ್ರಮುಖರು ಓಂಕಾರೇಶ್ವರ ದೇವಲಯವನ್ನು ಸಂದರ್ಶಿಸಿ ಪ್ರಸಾದ ಸ್ವೀಕರಿಸಿದರು. ದೇವಾಲಯ ಸಂದರ್ಶಿಸಿದಾಗ ಮುಜರಾಯಿ ಇಲಾಖೆಯವರು ಅವರಿಗೆ ಬಿನ್ನವತ್ತಳೆಯೊಂದನ್ನು ಅರ್ಪಿಸಿದರು. ಅದರ ಸಾರಾಂಶ ಹೀಗಿದೆ.

ದೇವಸ್ಥಾನದ ಬಿನ್ನವತ್ತಳೆ.

“ಈ ಓಂಕಾರೇಶ್ವರ ದೇವಾಲಯವು ಪ್ರಾಚೀನವಾದುದು. ಕೊಡಗು ದೇಶವನ್ನಾಳಿದ ಪೂರ್ವದ ರಾಜರು ಮಡಿಕೇರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಸಮಯದಲ್ಲಿ ನಿರ್ಮಿಸಿದರು. ಈ ದೇವಾಲಯದ ಆಡಳಿತವು ಸರಕಾರದ ಸಹಾಯದಿಂದ ನಡೆಯುವುದಾದರೂ ಇದರ ಆಡಳಿತವನ್ನು ನಡೆಸುವುದಕ್ಕೆ ಸಮಿತಿಯವರಿಗೆ ಸಂಪೂರ್ಣಾಧಿಕಾರವಿದೆ.

ಪ್ರತಿ ವರ್ಷವೂ ಭಾಗಮಂಡಲ ಮತ್ತು ತಲಕಾವೇರಿ ತೀರ್ಥಕ್ಷೇತ್ರಗಳಲ್ಲಿ ಜರಗುವ ಕಾವೇರಿ ಜಾತ್ರೆಗೆ ಬರುವ ಬಹುಜನ ಯಾತ್ರಾರ್ಥಿಗಳು ಅವರ ಸ್ಥಳಗಳಿಗೆ ಹಿಂದಿರುಗುವ ಮುನ್ನ ಮಡಿಕೇರಿಯಲ್ಲಿ ತಂಗಿದ್ದು ಶ್ರೀ ಓಂಕಾರೇಶ್ವರ ದೇವರ ಪ್ರಸಾದವನ್ನು ಸ್ವೀಕರಿಸಿ ತೆರಳುವವರಾಗಿರುತ್ತಾರೆ.

ಮೈಸೂರು ದೇಶದಲ್ಲಿರುವ ಸಮಸ್ತ ಧರ್ಮಾಲಯಗಳ ಮತ್ತು ದೇವಸ್ಥಾನದ ಕೆಲಸಗಳು ಸುವ್ಯವಸ್ಥೆಯಿಂದ ಜರುಗುವುದಕ್ಕೂ ಮತ್ತು ಅವುಗಳ ಉತ್ತಮ ಆಡಳಿತಕ್ಕೂ, ಶ್ರೇಷ್ಠ ರೀತಿಯ ಏರ್ಪಾಡುಗಳನ್ನು ಮಾಡಲು ಮಹಾಪ್ರಭುಗಳರವರು ಸ್ವತಃ ಶ್ರಮಿಸುತ್ತಿರುವದು ಶ್ಲಾಘ್ಯವಾಗಿದೆ. ಮಹಾಸ್ವಾಮಿಯವರು ತಮ್ಮ ಅನೇಕ ಮುಖ್ಯವಾದ ಕಾರ್ಯಕ್ರಮಗಳ ಮಧ್ಯೆ ಸಮಯವೊದಗಿಸಿಕೊಂಡು ಶ್ರೀ ಓಂಕಾರೇಶ್ವರ ದೇವಾಲಯವನ್ನು ಸಂದರ್ಶಿಸಿದುದರಿಂದ ನಮಗೆಲ್ಲರಿಗೂ ಅತ್ಯಂತ ಆನಂದವಾಗಿದೆ. ಭಗವಾನ್ ಶ್ರೀ ಓಂಕಾರೇಶ್ವರ ಮಹಾಸ್ವಾಮಿಯು ಮಹಾಪ್ರಭುವರ್ಯರಿಗೆ ಸಮಸ್ತ ಸನ್ಮಂಗಳಗಳನ್ನುಂಟು ಮಾಡಲೆಂದು ನಾವು ಸರ್ವದಾ ಪ್ರಾರ್ಥಿಸುತ್ತಿರುತ್ತೇವೆ.

ಈ ಬಿನ್ನವತ್ತಳೆಗೆ ಉತ್ತರವೀಯುತ್ತಾ ರಾಜಪ್ರಮುಖರು ‘ರಾಜರಿಂದ ಸ್ಥಾಪಿತವಾದ ಈ ದೇವಸ್ಥಾನವನ್ನು ಉತ್ತಮ ರೀತಿಯಲ್ಲಿ ಕಾಪಾಡಿಕೊಂಡು ಬಂದಿರುವ ಸಮಿತಿಯವರಿಗೆ ವಂದನೆಗಳು. ದೇವಸ್ಥಾನಗಳು ಜೀರ್ಣವಾಗದೆ ಉಳಿಯುವಂತೆ ನೋಡಿಕೊಳ್ಳಬೇಕು. ಜನತೆಯಲ್ಲಿ ದೈವಭಕ್ತಿ ಸದ್ಭಾವನೆಗಳನ್ನು ಹರಡಲು ಇವು ಅವಶ್ಯ. ಇಂದಿನ ಪ್ರಪಂಚದಲ್ಲಿ ಇವುಗಳ ಅವಶ್ಯಕತೆ ತುಂಬಾ ಇದೆ. ಓಂಕಾರೇಶ್ವರನು ಸರ್ವರಿಗೆ ಸನ್ಮಂಗಳವನ್ನುಂಟು ಮಾಡಲಿ’ ಎಂದರು. ರಾಜಪ್ರಮುಖರ ಗೌರವಾರ್ಥ ಸ್ಟೇಟ್ ಡಿನ್ನರ್ ಬೋರ್ಡ್ ಬಂಗ್ಲೆಯಲ್ಲಿ ಏರ್ಪಡಿಸಲ್ಪಟ್ಟಿತು. ರಾತ್ರಿ ೧೦ ಗಂಟೆಗೆ ಕಾಲೇಜ್ ಹಾಲಿನಲ್ಲಿ ವಿವಿಧ ವಿನೋದಾವಳಿಗಳನ್ನು ಏರ್ಪಡಿಸಲಾಗಿತ್ತು.

ತಲಕಾವೇರಿಗೆ ಸಂದರ್ಶನ.

ಈ ದಿನ (ತಾ. ೨೭) ಬೆಳಗ್ಗೆ ರಾಜಪ್ರಮುಖರು ಚೀಫ್ ಕಮಿಷನರ್ ಮತ್ತು ಮಂತ್ರಿಗಳೊಡಗೂಡಿ ಭಾಗಮಂಡಲಕ್ಕೆ ತೆರಳಿದರು. ದಾರಿಯಲ್ಲಿ ಹಲವೆಡೆ ಅವರಿಗೆ ಪುಷ್ಪಹಾರ ಸಮರ್ಪಣೆಯೂ ಯಿತು. ಮಹಾರಾಜರನ್ನು ಭಾಗಮಂಡಲದಲ್ಲಿ ಎದುರ್ಗೊಂಡು ಸನ್ಮಾನಿಸಲಾಯಿತು. ಮುಜರಾಯಿ ಇಲಾಖಾ ಸಮಿತಿಯವರು ಒಂದು ಬಿನ್ನವತ್ತಳೆಯನ್ನರ್ಪಿಸಿದರು. ಅದರ ಸಾರಾಂಶ ಹೀಗಿದೆ.

“ಪರಮ ಪಾವನವಾದ ಈ ಯಾತ್ರಾ ಸ್ಥಳಗಳಿಗೆ ಮಹಾಸ್ವಾಮಿಯವರು ಚಿತ್ತೈಸಿದ ಈ ಸಂದರ್ಭದಲ್ಲಿ ಕೊಡಗು ಮುಜರಾಯಿ ಸಮಿತಿಯ ಅಧ್ಯಕ್ಷರೂ ಮತ್ತು ಸದಸ್ಯರೂ ಮಹಾಸ್ವಾಮಿಯವರಿಗೆ ಸುಸ್ವಾಗತವನ್ನು ಬಯಸುತ್ತೇವೆ. ಈ ದಿವಸ ನಮ್ಮೆಲ್ಲರ ಮಧ್ಯಕ್ಕೆ ತಮ್ಮ ಅಮೋಘ ಆಗಮನದಿಂದ ನಮಗಾಗಿರುವ ಆನಂದ ಅಧಿಕವಾಗಿದೆ ಮತ್ತು ನಮ್ಮ ಸಮಿತಿಯವರು ಸಮರ್ಪಿಸುವ ಈ ಬಿನ್ನವತ್ತಳೆಯನ್ನು ಸ್ವೀಕರಿಸಲು ಮಹಾಸ್ವಾಮಿಯವರು ಕೃಪೆಯಿಟ್ಟು ಒಪ್ಪಿರುವುದು ನಮಗೊಂದು ಹೆಗ್ಗಳಿಕೆಯಾಗಿದೆ.

ಈ ತೀರ್ಥಕ್ಷೇತ್ರಕ್ಕೆ ಪುರಾಣಗಳಲ್ಲಿ ದಕ್ಷಿಣ ಕಾಶಿಯೆಂಬ ಕೀರ್ತಿ ಬಂದಿದೆ. ಪೂರ್ವದಿಂದಲೂ ಮೈಸೂರಿನ ರಾಜಮನೆತನದವರು ಈ ತೀರ್ಥಕ್ಷೇತ್ರವನ್ನು ಸಂದರ್ಶಿಸುವುದು ಪರಂಪರಾಗತವಾಗಿ ರೂಢಿಯಲ್ಲಿ ಬಂದಿದೆ. ಈ ರೂಢಿಯನ್ನನುಸರಿಸಿ ಮಹಾಸ್ವಾಮಿಯವರು ಇಲ್ಲಿಗೆ ಚಿತ್ತೈಸಿರುವುದು ಶ್ಲಾಘನೀಯವಾಗಿರುವುದು.

ಈ ಸಂದರ್ಭದಲ್ಲಿ ಕೊಡಗು ಮತ್ತು ಮೈಸೂರು ದೇಶಗಳಿಗಿರುವ ಸಂಬಂಧವನ್ನು ಮತ್ತು ಶತಮಾನಗಳಿಂದಲೂ ಅನುಸರಿಸಿ ಬಂದಿರುವ ಸ್ನೇಹ ಸೌಹಾರ್ದಗಳನ್ನೂ ಮಹಾಸ್ವಾಮಿಯವರ ಸನ್ನಿಧಿಯಲ್ಲಿ ನಿವೇದಿಸಲು ಇಚ್ಛಿಸುತ್ತೇವೆ.

ಮಹಾಸ್ವಾಮಿಯವರಲ್ಲಿ ರಾಜವಂಶಕ್ಕಿರಬೇಕಾದ ಸಮಸ್ತ ಸದ್ಗುಣಗಳೂ, ರಾಜತಂತ್ರ ಪ್ರಾವೀಣ್ಯತೆಯೂ ಅಪೂರ್ವ ಪ್ರೌಢಿಮೆಯೂ ಸಮ್ಮಿಳಿತವಾಗಿ ಪ್ರಜಾವರ್ಗದವರ ಸಂಪೂರ್ಣ ಪ್ರೇಮವನ್ನು ಸೂರೆಗೊಂಡಿವೆಯೆಂಬುದನ್ನು ಇಲ್ಲಿ ನಿವೇದಿಸಿ ಈ ಅರ್ಪಣೆ ಬೇಡುತ್ತೇವೆ.

ಆದಿಶಕ್ತಿಯಾದ ಶ್ರೀ ಕಾವೇರಿ ಮಾತೆಯು ಮಹಾ ಪ್ರಭುವರ್ಯರಿಗೂ, ಮಹಾಪ್ರಭುಗಳವರ ಕುಟುಂಬಕ್ಕೂ ಮತ್ತು ಮೈಸೂರು ಸಂಸ್ಥಾನಕ್ಕೂ ನಿರಂತರವಾಗಿ ಇತೋಪ್ಯತಿಶಯವಾದ ಮಂಗಳವನ್ನು ಕರುಣಿಸಲೆಂದು ನಾವು ಸರ್ವದಾ ಪ್ರಾರ್ಥಿಸುತ್ತಿರುತ್ತೇವೆ”.

ಬಿನ್ನವತ್ತಳೆಗೆ ಉತ್ತರವನ್ನೀಯುತ್ತಾ ರಾಜಪ್ರಮುಖರು ಕಾವೇರಿಯ ಉಗಮಸ್ಥಾನವನ್ನು ನೋಡಿದ ತಮ್ಮ ಆನಂದವನ್ನು ವ್ಯಕ್ತಪಡಿಸಿ ಮಾತೆ ಕಾವೇರಿಯ ಪೂಜ್ಯತೆಯನ್ನು ಕೊಂಡಾಡಿದರು. ಅವರು ಆನೆಯಲ್ಲಿ ಕುಳಿತು ತಲಕಾವೇರಿಗೆ ಪ್ರಯಾಣ ಬೆಳೆಸಿದರು. ತಲಕಾವೇರಿಯಲ್ಲಿ ಸ್ನಾನ ಪೂಜೆ ನಡೆಸಿ ಭಾಗಮಂಡಲಕ್ಕೆ ಹಿಂತಿರುಗಿದರು. ಅಲ್ಲಿ ಊಟ ಮುಗಿಸಿ ಮಡಿಕೇರಿಗೆ ಬಂದರು.

ಸಾಯಂಕಾಲ ಅವರು ಮಡಿಕೇರಿಯಿಂದ ಸಿದ್ಧಾಪುರ, ಅಮ್ಮತ್ತಿ ಮಾರ್ಗವಾಗಿ ವೀರಾಜಪೇಟೆಗೆ ಬಂದರು. ಸಿದ್ದಾಪುರ, ಅಮ್ಮತ್ತಿ ಮೊದಲಾದ ಕಡೆ ಅವರನ್ನು ಪುಷ್ಪಹಾರಗಳಿಂದ ಸನ್ಮಾನಿಸಲಾಯಿತು. ಅವರಿಗೆ ವೀರಾಜಪೇಟೆಯಲ್ಲಿ ಅಭೂತಪೂರ್ವ ಸ್ವಾಗತ ಕೊಡಲ್ಪಟ್ಟಿತು. ವೀರಾಜಪೇಟೆಯು ತಳಿರು ತೋರಣಗಳಿಂದ ಅಲಂಕೃತವಾಗಿತ್ತು. ಪುರಸಭೆಯವರು ರಾಜಪ್ರಮುಖರಿಗೆ ಒಂದು ಸನ್ಮಾನ ಪತ್ರವನ್ನು ಅರ್ಪಿಸಿದರು. ಅದಕ್ಕೆ ಸೂಕ್ತ ಉತ್ತರವನ್ನು ರಾಜಪ್ರಮುಖರು ಕೊಟ್ಟರು. ನಂತರ ಚಹಪಾನವನ್ನು ಮುಗಿಸಿ ಗೋಣಿಕೊಪ್ಪಲು ಮಾರ್ಗವಾಗಿ ಮೈಸೂರಿಗೆ ಪ್ರಯಾಣ ಮಾಡಿದರು. ಅವರಿಗೆ ದಾರಿಯುದ್ದಕ್ಕೂ ಕೊಡಗಿನ ಗಡಿಯ ವರೆಗೆ ಚಪ್ಪರ ತೋರಣ ಕಟ್ಟಿ ಹೂಮಾಲೆಗಳಿಂದ ಸತ್ಕಾರ ಕೊಡಲ್ಪಟ್ಟಿತು.

ಮದ್ರಾಸ್ ರಾಜ್ಯದಲ್ಲಿ ೧೪ ಸಾವಿರ ಬಾವಿಗಳು.

ಅನಾವೃಷ್ಟಿಯಿಂದ ಪೀಡಿತವಾಗಿರುವ ಪ್ರದೇಶದಲ್ಲಿ ಈ ವರ್ಷದೊಳಗೆ ೧೪ ಸಾವಿರ ಬಾವಿಗಳನ್ನು ತೋಡಿಸಲು ಮದ್ರಾಸು ಸರಕಾರವು ನಿಶ್ಚಯಿಸಿದೆಯೆಂದೂ ಅದರ ಖರ್ಚು ಸುಮಾರು ಒಂದು ಕೋಟಿ ರೂ ಗಳಷ್ಟಾಗಬಹುದೆಂದೂ ಮುಖ್ಯಮಂತ್ರಿ ಶ್ರೀ. ಸಿ. ರಾಜಗೋಪಾಲಚಾರಿಯವರು ಹೇಳಿದರು. ಇದಲ್ಲದೆ ೮೦೦ ಬಾವಿಗಳನ್ನು ಅಗಿಯಲು ಸೈನ್ಯಪಡೆಗೆ ತಿಳಿಸಲಾಗಿದೆಯೆಂದೂ ೨೦ ಮಿಲಿಟರಿ ಲಾರಿಗಳೂ ಮತ್ತು ೧೮ ನಾಗರಿಕ ಲಾರಿಗಳೂ ಈ ಭಾಗದಲ್ಲಿಯ ಹಳ್ಳಿಗಳಿಗೆ ನೀರನ್ನು ಪೂರೈಸುತ್ತಲಿವೆಯೆಂದೂ ಅವರು ಹೇಳಿದರು.

Wanted

A field writer for a Coffee Estate in Wynad. A young man with at least four years experience in a well known Coffee Estate. Pay according to qualification. The applicant should apply with copies of testimonials.

“ X ”

C/o The ‘Kodagu’ Ltd.,
2-1 Mercara.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಹಾಗೂ ಹುಂಡಿಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ನಾರ್ದರ್ನ್ ಮತ್ತು ವಿಶ್ವಭಾರತಿ ಇನ್ಶ್ಯೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಕೊಂಡು ಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ,
ಪ್ರೆಸಿಡೆಂಟ್ ಮತ್ತು ಏಜೆಂಟ್.

Edited, Printed and Published by P. I. Bellappa at ‘Kodagu’ Press, Mercara, for ‘Kodagu’ Ltd.

Licence No. 60.
Licensed to Post without Prepayment.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಳಿಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೪೧ | ತಾರೀಕು ೧೨-೬-೧೯೫೩ನೇ ಶುಕ್ರವಾರ | ಸಂಚಿಕೆ ೨

"ಸಬ್‌ಕೋ ಸನ್ಮತಿ ದೇ ಭಗವಾನ್"

ಲೇ:—ಶ್ರೀ ಐ. ಎಂ. ಬೋಪಣ್ಣ, ಬಿ. ಎ., (ಆನರ್ಸ್) ವಿದ್ಯಾರ್ಥಿ

"ಭಗವಂತಾ ಸರ್ವರಿಗೂ ಸದ್ಬುದ್ಧಿಯನ್ನು ಕೊಡು" ಎಂದು ಗಾಂಧೀಜಿಯವರು ಆತ್ಮಪೂರ್ವಕವಾಗಿ ಹಾಡಿದರು. 'ಪರರ ಸೇವೆಯನ್ನು ಮಾಡಿ' ಎಂಬ ನುಡಿಯನ್ನು ನಾವು ನಿತ್ಯವೂ ರಾಷ್ಟ್ರಪಿತರಿಗಳಿಂದ ಹಿಡಿದು ಬಡ ದೈನ್ಯನ ಬಾಯಲ್ಲೂ ಕೇಳುತ್ತಿದ್ದೇವೆ. ಸುಮ್ಮನೆ ಕುಳಿತು ಅನರ್ಥಗಳನ್ನು ಯೋಚಿಸುವುದಕ್ಕಿಂತ ಅಥವಾ ದುಷ್ಕಾರ್ಯಗಳಲ್ಲಿ ಪ್ರವರ್ತಿಸುವುದಕ್ಕಿಂತ ಸುಮ್ಮನೆ 'ಸೇವೆ ಮಾಡಿ' ಎಂದು ಹೇಳುವುದರಿಂದಲೂ ಪ್ರಯೋಜನವಿದೆ. ಕೇವಲ ಬೇಡನೊಬ್ಬನು ರಾಮ ರಾಮ ಎನ್ನುತ್ತಾ ಭಗವತ್ ಸಾಕ್ಷಾತ್ಕಾರವನ್ನು ಹೊಂದಲಿಲ್ಲವೇ? ತದ್ರೀತಿ ಹೇಳುವುದರಿಂದ ಕೆಲವು ಸಮಯದ ನಂತರ ಹಾಗೆ ಹೇಳುವಾತನು ನಿಜವಾಗಿಯೂ ಸೇವಾತತ್ಪರನಾಗಬಹುದು. ವಿಜ್ಞಾನಿಗಳು, 'ಹೀಗೆ ಹೆಚ್ಚು ಜನರು ಹೇಳುವುದರಿಂದ ಆಕಾಶದಲ್ಲಿ ಶಾಂತಿಯ ಶಬ್ದದ ಅಲೆಗಳು ಹೆಚ್ಚಾಗಿ ಕಾಲಕ್ರಮೇಣ ವಾತಾವರಣವು ಸುಧಾರಿಸಿದರೂ ಸುಧಾರಿಸಬಹುದು' ಎಂದಾರು. ಹೇಗೂ ಇರಲಿ.

ಇತರರ ಸೇವೆ ಮಾಡಬೇಕೆನ್ನೋ ನಿಜ, ಆದರೆ ಯಾತಕ್ಕೆ ಎಂಬ ವಿಷಯವನ್ನು ನಾವು ಚೆನ್ನಾಗಿ ಮನನಮಾಡಿ[illegible]ದ್ದೇ ಆದರೆ 'ಸಬ್‌ಕೋ ಸನ್ಮತಿ ದೇ ಭಗವಾನ್' ಎಂಬ ಹಾಡು ಹಾಡುವ ಅವಶ್ಯಕತೆ ಬರುತ್ತಿದ್ದಿಲ್ಲ. ನಮ್ಮಲ್ಲಿ ನಮಗೇ ಸಾಕ್ಷಾತ್ ಅನುಭವ ಬೇಡವೇ? ಯಾವನಿಗೆ ಒಳ್ಳೆಯ ಬುದ್ಧಿ ಇದೆಯೋ ಇಲ್ಲವೆಂಬ ವಿಷಯದಲ್ಲಿಯೇ ನಾವು ಸಂಶಯಗ್ರಸ್ತರಾದರೆ ನಾವು ಇನ್ನೊಬ್ಬರಿಗೆ ಒಳ್ಳೆಯದಾಗಬೇಕೆನ್ನುವುದು ಬರೀ ಬೂಟಾಟಿಕೆಯ ಮಾತೇ ವಿನಃ ಬೇರಲ್ಲ. ಆಗ ತಾನೇ ಸೇವೆಯ ನಿಜವಾದ ಅರ್ಥವಾದೀತು. ನಿಜವಾದ ಸೇವೆಗಾರನು ಹೇಳಿಯಾನು 'ನಾನು ಯಾರಿಗೂ ಸೇವೆ ಮಾಡುತ್ತಿಲ್ಲ. ನಾನು ನನ್ನ ಉದ್ಧಾರಕ್ಕಾಗಿ ಮಾತ್ರ ನನ್ನ ಕರ್ತವ್ಯವನ್ನು ಮಾಡುತ್ತಿದ್ದೇನೆ. ಹೊರತು ಮತ್ತೇನೂ ಇಲ್ಲ' ಎಂದು. ಮೊದ ಮೊದಲು ಆತ್ಮಸಾಕ್ಷಾತ್ಕಾರಕ್ಕಾಗಿ ಪ್ರಾರ್ಥಿಸಿ[illegible]ರಾಂತ ಸ್ವಾಮಿ ವಿವೇಕಾನಂದರು, ಕಡೆಗೆ 'ದೇವಾ ಪ್ರಪಂಚದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಉದ್ಧಾರವಾಗುವ ತನಕ ನನಗೆ ಸದಾ ಜನ್ಮವನ್ನು ಕರುಣಿಸು' ಎಂದು ಪರಮಾತ್ಮನಲ್ಲಿ ದೈನ್ಯತೆಯಿಂದ ಬೇಡಿಕೊಂಡರು. ಸ್ವಾಮಿಗಳು ನಿಜವಾಗಿಯೂ ಸೇವೆಯ ಬೆಲೆಯನ್ನು ಅರಿತಿದ್ದರು. ತನ್ನಲ್ಲಿಯ ಆತ್ಮನೂ ಇನ್ನೊಬ್ಬನ ಆತ್ಮನೂ ಒಂದೇ ಎಂಬುದನ್ನು ಅವರು ಸುಮ್ಮನೆ ಪುಸ್ತಕ ಓದಿಯಾಗಲಿ ಅಥವಾ ಇನ್ನೊಬ್ಬರು ಹೇಳಿಕೊಟ್ಟಂತೆಯಾಗಲಿ ತಿಳಿದಿರಲಿಲ್ಲ. ಅದನ್ನು ಸ್ವತಃ ಅನುಭವಿಸಿದ್ದರು. ಆದ್ದರಿಂದಲೇ ಅವರು ಸಾರಿದ್ದು 'ಎಂದಿನವರೆಗೆ ಪ್ರಪಂಚದಲ್ಲಿ ಹೊಟ್ಟೆಗೆ ಅನ್ನವಿಲ್ಲದೆ ಉಡಲು ಬಟ್ಟೆಯಿಲ್ಲದೆ ಒಬ್ಬಾತನಾದರೂ ಇರುವನೋ ಅಂದಿನ ವರೆಗೆ ಹಣಗಾರರು ಅವರನ್ನು ವಂಚಿಸಿದ ದ್ರೋಹಿಗಳಾಗುವರು' ಎಂದು.

ಆದ್ದರಿಂದಲೇ ಬಡವರ ಸೇವೆಯನ್ನು ಮಾಡಿರಿ, ಸರ್ವರಿಗೂ ದೇವರು ಒಳ್ಳೆಯ ಬುದ್ಧಿಯನ್ನು ಪಾಲಿಸಲಿ ಎಂದು ಸಾಧಾರಣದವರಾದ ನಾವು ಹೇಳುವೆವಾದರೆ ಅದರಲ್ಲಿ ಎಳ್ಳಷ್ಟೂ ಸತ್ಯಾಂಶವಿಲ್ಲ. ಅದು ಒಂದು ವೇಳೆ ಡಾಂಭಿಕತನದ ಪರಮಾವಧಿ. ಒಳ್ಳೆಯವರಾಗಬಯಸುವವ, ತನ್ನ ಆತ್ಮೋದ್ಧಾರಕ್ಕಾಗಿ ನಿಜವಾಗಿಯೂ ಪ್ರಯತ್ನಿಸುವವ ಖಂಡಿತವಾಗಿಯೂ ಹಾಗೆ ಹೇಳಬಯಸಲಾರ. ಯಾತಕ್ಕೆಂದರೆ ಇನ್ನೊಬ್ಬರಿಗೆ ಒಳ್ಳೆಯದು ಮಾಡಿದರೆ ಮಾತ್ರ ತನ್ನ ಗುರಿಯನ್ನು ಅತ ಮುಟ್ಟುತ್ತಾನೆ. 'ಇಲ್ಲದಿದ್ದ ಸೇವೆ' ಎಂಬ ಮಾತೇ ಅವನಿಗೆ ಹೊರತೆಯದು.. ಅದು ಅವನ ಜನ್ಮಸಿದ್ಧ ಹಕ್ಕು. ತನ್ನ ದೇಹ ರಕ್ಷಣೆಗೆ ಅಗತ್ಯವಾದ ವಾಯು ನೀರು ಬೇಕಾದಂತೆ. ಇತರರು ಅತನನ್ನು ಹೊಗಳಬೇಕಾಗಿಲ್ಲ. ಇನ್ನೊಬ್ಬರಿಗೆ 'ಸೇವೆ ಮಾಡಿ' ಎಂದು ಹೇಳಬೇಕಾಗಿಲ್ಲ. ಗುಪ್ತವಾದ ಸ್ಥಳದಲ್ಲಿ ಯಾರಿಗೂ ಅರಿಯದಂತೆ 'ದೇವಾ ಸರ್ವರಿಗೂ ಒಳ್ಳೆಯದಾಗುವಂತೆ ಸದಾ ಕರುಣಿಸು. ನನಗೆ ಸದ್ಬುದ್ಧಿಯನ್ನು ಕೊಡು' ಎಂದು ಪ್ರಾರ್ಥಿಸಿಯಾನು.

ಆದರೆ ಗಾಂಧೀಜಿಯವರಂತಹ ಮಹಾವ್ಯಕ್ತಿಗಳಿಗೆ, ಬಹಿರಂಗವಾಗಿ, ಸರ್ವರಿಗೂ ಒಳ್ಳೆಯದಾಗಬೇಕೆಂದು ದೇವನಲ್ಲಿ ನೆರವೇರಿಸುವುದಾದರೆ ಅದರಲ್ಲಿ ಅರ್ಥವಿದೆ. ಜನತೆಯೂ ತಿಳಿದುಕೊಳ್ಳುತ್ತದೆ. ಅವರ ಆತ್ಮಶಕ್ತಿಯು ಬಲವನ್ನು. ಅವರಾದರೂ ೨೪ ತಾಸುಗಳ ಕಾಲವೂ ಸಹ ದೇವರ ಪ್ರಾರ್ಥನೆಯಲ್ಲಿಯೇ ನಿರತರಾಗಿರುತ್ತಾರೆ. ಅಂಥಾ ವ್ಯಕ್ತಿಗಳಿಗೆ ದೇಹವೆಂಬ ಅಭಿಮಾನವೇ ಇಲ್ಲ. ಒಂದು ಪ್ರಾರ್ಥನೆಯಲ್ಲಿ ಗಾಂಧೀಜಿ 'I must reduce myself to zero' ಎಂಬದಾಗಿ ಪ್ರಾರ್ಥಿಸಿಕೊಂಡಿದ್ದಾರೆ. ಅಂತಹ ವ್ಯಕ್ತಿಗಳಿಗೆ ಪ್ರಾರ್ಥನೆ ಮಾಡಲಿಕ್ಕೂ, ಸೇವೆ ಇಂತ ರೀತಿ ಮಾಡಬೇಕು ಎಂದು ಆಜ್ಞೆ ಮಾಡಲಿಕ್ಕೂ ಹಕ್ಕಿರುತ್ತದೆ.

ತನ್ನ ಒಬ್ಬನೇ ಮಗ ಸ್ವಲ್ಪ ಕಾಯಿಲೆಯಾದರೆ ಮದ್ದಿಗಾಗಿ ಎಷ್ಟೋ ವೆಚ್ಚಮಾಡುತ್ತಾನೆ. ಆದರೆ ಪಕ್ಕದ ಮನೆಯಲ್ಲಿ ಒಬ್ಬ ಜವಾನನು ಸಾಯುತ್ತಿದ್ದರೂ ನೋಡುವವರಿಲ್ಲ. ಆದರೆ ಆ ಮನುಷ್ಯ ಒಬ್ಬ ಮಂತ್ರಿಯೋ ಅಥವ ಸಮಾಜದಲ್ಲಿ ಗೌರವವಿರುವ ವ್ಯಕ್ತಿಯೊ ಆಗಿದ್ದು ಅವನು ಇವರಿಗೇ 'ಸೇವೆ ಮಾಡಿ' ಜೀವಗು ಎಲ್ಲರಿಗೂ ಒಳ್ಳೆಯದನ್ನು ಮಾಡಲಿ ಎಂದು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ. ಎಂದ ಮಾತ್ರಕ್ಕೆ ಅವನು ತನ್ನ ಮಗನನ್ನು ಕಾಣದ ಸಾಯಿಸಗೊಡಬೇಕೆಂದಲ್ಲ, ಸೇವೆಯು ಮತ್ತು ಪ್ರಾರ್ಥನೆಗಳು ನಿಜವಾದ ಅನುಭವವಾಗದ ಹೊರತು ಅದರ ಗೊಡವೆಗೆ ಹೋಗದೆ ತನ್ನ ಉದ್ಧಾರಕ್ಕೆಂದೇ ಇತರರಿಗೂ ಒಳ್ಳೆಯದಾಗಲು ಬಯಸುತ್ತಾ ಅವರಂತೆ ನಡೆಯಲು ಪ್ರಯತ್ನಿಸಬೇಕು. ಇತರರಿಗೆ ರಾಶಿಯಾಗುವ ಡಾಂಭಿಕತನವು ಮರೆಯಾಗಿ ತನ್ನ ಉದ್ಧಾರಕ್ಕೆ ಕಾರಣ ಪುರುಷನಾಗಿ ಅದರಿಂದ ಸಮಾಜದ ಮತ್ತು ದೇಶದ ಉದ್ಧಾರಕ್ಕೆ ಕಾರಣನಾಗುವನು.

ಆದ್ದರಿಂದ ಸೇವೆ ಮತ್ತು ಇತರರಿಗಾಗಿ ಮಾಡುವ ಪ್ರಾರ್ಥನೆ ಇವುಗಳ ಮೇಲಿನ ನಮ್ಮ ದೃಷ್ಟಿಕೋನ ಬದಲಾಯಿಸಬೇಕಾಗಿದೆ. ತನಗಾಗಿ ತನ್ನ ಉದ್ಧಾರಕ್ಕಾಗಿ, ತನ್ನ ಮೇಲ್ಮೆಗಾಗಿ ಇನ್ನೊಬ್ಬರಿಗೆ ಸಹಾಯ ಮಾಡಬೇಕು. ಸುಬುದ್ಧಿಯು ಮೊದಲು ತನ್ನಲ್ಲಿ ಉಂಟಾಗಬೇಕು. ಹಾಗಾದರೆ ಮಾತ್ರ ನಮ್ಮ ನಮ್ಮ ಉದ್ಧಾರಗಳನ್ನು ನಾವು ಮಾಡಿಕೊಳ್ಳುವೆವು. ಅಲ್ಲದೆ ಸಮಾಜದ ಪ್ರಗತಿಗೂ ದೇಶದ ಏಳ್ಗೆಗೂ, ಲೋಕದ ಕಲ್ಯಾಣಕ್ಕೂ, ಬಹು ಶೀಘ್ರ ರೀತಿಯಲ್ಲಿ ಸಹಾಯ ಮಾಡಿದಂತಾಗುವೆವು. ಮಾತ್ರವಲ್ಲ, ಸಮಾಜದ ಉದ್ಧಾರದಿಂದ ನಮ್ಮ ನಮ್ಮ ನೀತಿ ನಡತೆಗಳು ಬಹು ಶೀಘ್ರ ರೀತಿಯಲ್ಲಿ ಉತ್ತಮಗೊಳ್ಳುವವು. ಕಾರ್ಲ್ ಮಾರ್ಕ್ಸ್‌ನ 'ವ್ಯಕ್ತಿಯ ವಿಕಾಸವು ಹೊರಗಿನ ವಾತಾವರಣಗಳಿಗನುಸಾರವಾಗಿ ಆಗುವುದು' ಎಂದ ಮಾತು ಅಕ್ಷರಶಃ ಸತ್ಯ. ಮೊದ ಮೊದಲು ಎಲ್ಲವೂ ಕಷ್ಟವಾಗಿ ಪರಿಣಮಿಸುವುದು ಸಹಜ. ಆದರೆ ಅದನ್ನು ಅಷ್ಟಕ್ಕೇ ಬಿಡದೆ ಹಲವೊಂದು ಸಾರಿ ತಪ್ಪುಗಳನ್ನು ಮಾಡಿದರೂ ಅದರಿಂದ ಹೊಸ ಪಾಠಗಳನ್ನು ನಾವು ಕಲಿತು ನಮ್ಮ ವ್ಯಕ್ತಿತ್ವದ ಮಾರ್ಪಾಡನ್ನು ಮಾಡಿಕೊಳ್ಳಬೇಕು. ಎಲ್ಲಾ ಮಹಾ ಪುರುಷರುಗಳೂ ಸಹ, ಮೊದಲು ತಮ್ಮ ಉದ್ಧಾರಕ್ಕಾಗಿ ಪ್ರಯತ್ನಿಸಿ ಅದರ ಸ್ವತಃ ಅನುಭವವಾದ ಮೇಲೆ (ಅವರೇನೂ ಅದನ್ನು ಹೇಳಿಕೊಳ್ಳುವುದಿಲ್ಲ) ಪರರ ಸೇವೆಗೆಂದು ಸಿದ್ಧರಾದರು. ಪರರಿಗಾಗಿ ಪ್ರಾರ್ಥನೆ, ಪರರಿಗೆ ಸೇವೆ ಎಂಬ ಅಹಂಭಾವವು ನಮ್ಮಿಂದ ಬಿಟ್ಟು ತೊಲಗಬೇಕು. ಅದು ಬಿಟ್ಟಲ್ಲದೆ ನಮ್ಮ ಉದ್ಧಾರವಿಲ್ಲ. ಆದ್ದರಿಂದಲೇ ಬೈಬಲ್ ಸಾರಿದ 'ನೀನು ನಿನ್ನ ಸ್ನೇಹಿತನನ್ನು ನಿನ್ನಂತೆ ಕಾಣು' ಎಂಬ ಮಾತನ್ನು ವೇದಾಂತವು 'ಏಕೆಂದರೆ ನೀನೂ ಅವನೇ ಆಗಿರುವೆ' ಎಂಬ ಮಾತುಗಳಿಂದ ಪೂರ್ತಿಸಿತು. ಇದೇ ಪರರಿಗಾಗಿ ಮಾಡುವ ಪ್ರಾರ್ಥನೆಯ ಮತ್ತು ಸೇವೆಯ ತಿರುಳು.

THE JUBILEE INSURANCE CO., LTD.

One of the very few in the feild of Insurance that has been declaring BONUS to its policy holders from its very insception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmond Road, Bangalore.

Our Chief Agents:-THE ORIENTAL ENTERPRISES, BANGALORE 1

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮಾದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:—ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,
11 41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

"ಸ್ಪೀಕರ್"

ಶಾಸನ ಸಭೆಯ ಅಧ್ಯಕ್ಷರ ಆಯ್ಕೆ ಮತ್ತು ಕರ್ತವ್ಯ.

— ಲೆ:—"ಗುಪ್ತ" ಮಡಿಕೇರಿ —

ಹಿಂದೂದೇಶದ ಕೇಂದ್ರ ಶಾಸನ ಸಭೆಗಳ ಸದಸ್ಯರು ಸೇರಿ ತಮ್ಮ ಸಭೆಗೆ ಬೇಕಾದ ಸ್ಪೀಕರರನ್ನು ಆರಿಸಿದ್ದಾರೆ. ಅದರಂತೆಯೇ ಪ್ರಾಂತೀಕ ಶಾಸನ ಸಭಾಸದರೂ ಸೇರಿ ತಮ್ಮ ತಮ್ಮ ಸಭೆಗಳಿಗೆ ಸ್ಪೀಕರರನ್ನು ಆರಿಸಿದ್ದಾರೆ. ಜನತಾ ಸಭೆಯ ಸ್ಪೀಕರರನ್ನು ಆರಿಸಿದಾಗ ಸಭೆಯಲ್ಲಿಯ ವಿವಿಧ ಪಕ್ಷಗಳಲ್ಲಿ ಒಮ್ಮತವಿತ್ತು. ಎಲ್ಲರೂ ಸೇರಿ ವಿರೋಧವಿಲ್ಲದೆ ಸ್ಪೀಕರರನ್ನು ಆರಿಸಿದರು. ಆದರೆ ಅದೇ ಕಥೆ ಎಲ್ಲಾ ಶಾಸನ ಸಭೆಗಳದ್ದಲ್ಲ. ಹಲವೆಡೆ ಸ್ಪೀಕರರ ಸ್ಥಾನಕ್ಕೆ ಸ್ಪರ್ಧೆ ಇತ್ತು. ಶಾಸನ ಸಭೆಯ ವಿವಿಧ ಪಕ್ಷಗಳು ತಮ್ಮ ತಮ್ಮ ಇಚ್ಛೆಯ ಉಮೇದುವಾರರನ್ನು ನಿಲ್ಲಿಸಿದ್ದಾರೆ.

ಸ್ಪೀಕರನ ಜವಾಬ್ದಾರಿ.

ಸ್ಪೀಕರನೆಂದು ಆರಿಸಲ್ಪಟ್ಟ ವ್ಯಕ್ತಿ ಯಾವದೇ ಪಕ್ಷದ ಸದಸ್ಯನಾಗಿರುವದು ಹಿತವಲ್ಲ ಏಕೆಂದರೆ ಸ್ಪೀಕರನಾದವನು ಯಾವದೇ ಪಕ್ಷಪಾತವಿಲ್ಲದೆ ಕಾರ್ಯ ನಿರ್ವಹಿಸಬೇಕು. ಸಭೆಯ ಪ್ರತಿ ಸದಸ್ಯನನ್ನು ಸಮಾನತೆಯಿಂದ ಕಾಣಬೇಕು. ಯಾರಿಗೂ ಅನ್ಯಾಯವಾಗದಂತೆಯೂ, ಪ್ರತಿಯೊಬ್ಬನಿಗೂ ಸಮಾನಾವಕಾಶ ದೊರೆಯುವಂತೆಯೂ ನೋಡಬೇಕು. ಇದೇ ಅಲ್ಲ, ಆತನು ಶಾಸನ ಸಭಾ ನಿಯಮಗಳ ಪಂಡಿತನಿರಬೇಕು. ಜಗತ್ತಿನ ವಿವಿಧ ದೇಶಗಳ ಶಾಸನ ಸಭಾ ನಿಯಮ, ಪದ್ಧತಿಗಳ ಅರಿವಿರುವವನಿರಬೇಕು. ಸ್ಪೀಕರನೆಂದರೆ ಶಾಸನ ಸಭಾ ಕಾರ್ಯಕಲಾಪದ ನ್ಯಾಯಾಧೀಶನೆಂದರೂ ಸಲ್ಲುವದು. ಇಂಥ ನ್ಯಾಯಸಮರ್ಪಕ ರೀತಿಯಿಂದ ನಡೆಯಬೇಕಾದವರು ಯಾವುದೇ ಪಕ್ಷದ ಕಟ್ಟಿನ ಬಲೆಯಲ್ಲಿ ಸಿಕ್ಕಿದವರಾಗಿದ್ದರೆ ಸ್ಪೀಕರರ ಪದಕ್ಕೆ ಯೋಗ್ಯ ರೀತಿ ವರ್ತಿಸುವದು ಪ್ರಯಾಸವಾಗುವವು.

ಈ ವಿಚಾರವನ್ನು ಪರಿಶೀಲಿಸಿಯೇ ಕಳೆದ ಚುನಾವಣೆಗಳಿಗೆ ಸ್ವಲ್ಪ ದಿನಗಳಿಗ ಮುನ್ನ ತಿರುವೆಂಡರಂನಲ್ಲಿ ಸೇರಿದ್ದ ಹಿಂದೂದೇಶದ ಶಾಸನ ಸಭೆಯ ಸ್ಪೀಕರುಗಳ ಸಮ್ಮೇಳನದಲ್ಲಿ ಒಂದು ನಿರ್ಣಯವಾಗಿ ಸ್ಪೀಕರುಗಳಾಗಬೇಕಾದರು ಪಕ್ಷಗಳಿಗೆ ಸೇರದವರಾಗಿರಬೇಕಲ್ಲದೆ ತಮ್ಮ ವ್ಯಕ್ತಿಗತ ಪ್ರಭಾವದಿಂದ ಅವಿರೋಧವಾಗಿ ಆರಿಸಲ್ಪಟ್ಟವರಾಗಬೇಕು. ಸ್ಪೀಕರರಾಗಿ ಆಯ್ಕೆಯಾಗುವ ಕಾಲಕ್ಕೂ ಕೂಡ ಒಮ್ಮತದ ಆಯ್ಕೆಯಾಗಬೇಕು. ಇಂಥಾ ಒಂದು ಪರಂಪರೆಯನ್ನು ಸ್ಥಾಪಿಸಬೇಕಾದುದು ಅವಶ್ಯವೆಂದು ಸ್ಪಷ್ಟಪಡಿಸಿದ್ದರು. ಅದರ ಪ್ರಕಾರವೇ ಮದ್ರಾಸ್ ಶಾಸನ ಸಭೆಯ ಸ್ಪೀಕರರಾಗಿರುವ ಶ್ರೀ ಶಿವಷಣ್ಮುಗಂ ಪಿಳ್ಳೆಯವರಾಗಲೀ, ಕೇಂದ್ರ ಜನತಾ ಸಭೆಯ ಸ್ಪೀಕರರಾಗಿರುವ ಮಾವ್ಲಂಕರರಾಗಲೀ ಯಾವದೇ ಪಕ್ಷದ ಉಮೇದುವಾರರಾಗಿಲ್ಲದೆ ಸ್ವತಂತ್ರವಾಗಿ ನಿಂತು ಆರಿಸಿಬಂದಿದ್ದಾರೆ. ಆದರೆ ಹಿಂದೂದೇಶದ ಇತರ ಶಾಸನ ಸಭಾ ಸ್ಪೀಕರುಗಳು ಈ ರೀತಿ ಆರಿಸಲ್ಪಟ್ಟವರೆನ್ನಲಾಗುವದಿಲ್ಲ. ಬಹುತೇಕ ಜನರು ಆಯಾಯ ಮಂತ್ರಿ ಪಕ್ಷಗಳಿಂದ ಆರಿಸಿ ಬಂದವರು. ಈ ಚುನಾವಣೆಯಲ್ಲಿ ಅಂಥಾ ಒಂದು ಆದರ್ಶ ಮಾದರಿಯು ಸಾಧ್ಯತೆ ಆಗದಿದ್ದರೂ ಈಗ ಆರಿಸಲ್ಪಟ್ಟಿರುವ ಸ್ಪೀಕರರು ತಮ್ಮ ಆಯ್ಕೆಯ ಕಾಲಕ್ಕೆ ಮತ್ತು ಅವರನ್ನು ಪ್ರಶಂಸಿಸಿದವರು ಮಾತಾಡಿದ ಕಾಲಕ್ಕೆ ಹೇಳಿದ ಅಭಿಪ್ರಾಯಗಳನ್ನು ಪರಿಶೀಲಿಸಿದರೆ ಸ್ಪೀಕರರ ಸ್ಥಾನವು ಮೇಲೆ ಹೇಳಿದಂತೆ ಪಕ್ಷಾತೀತವೂ, ಸರ್ವಸಮ್ಮತ ಆಯ್ಕೆಯದ್ದೂ ಆಗಬೇಕೆಂಬುದು ಗೊತ್ತಾಗುತ್ತದೆ.

ಒಂದು ಉದಾಹರಣೆ.

ಶಾಸನ ಸಭಾ ಕಾರ್ಯಕ್ಷೇತ್ರದಲ್ಲಿ ಇಂಗ್ಲೆಂಡಿನಷ್ಟು ಉತ್ತಮ ಆದರ್ಶದ ನಾಡು ಬೇರಿಲ್ಲ. ಅಲ್ಲಿ ಸ್ಪೀಕರನಾಗಲಿರುವವನು ಚುನಾವಣೆಗೆ ನಿಂತಾಗ ಆತನ ಮತದಾರನ ಕ್ಷೇತ್ರದಲ್ಲಿ ಯಾರೂ ಆತನಿಗೆ ವಿರೋಧ ನಿಲ್ಲದಷ್ಟು ಆತನು ಪ್ರಭಾವಿಯಾಗಿರಬೇಕು. ಹೀಗಾಗಬೇಕಾದುದಕ್ಕೆ ಕಾರಣವಿಷ್ಟೆ. ಸ್ಪೀಕರನೆಂಬ ಅಧಿಕಾರ ಹೊರುವವನು ಇಡೀ ಶಾಸನ ಸಭೆಯ ಪ್ರತಿನಿಧಿಯಾಗಿದ್ದು ಯಾವ ಪಕ್ಷವೂ ಆತನಿಗೆ ಪ್ರಿಯವಾಗಲೀ ವಿರೋಧಿಯಾಗಲೀ ಇಲ್ಲ. ಸ್ಪೀಕರನು ಶಾಸನ ಸಭೆಯ ಪ್ರತಿ ಸದಸ್ಯನ ನಂಬಿಕೆಗೆ ಪಾತ್ರನಾಗುವಂತೆ ವರ್ತಿಸಬೇಕು. ಆತನ ನಿಷ್ಪಕ್ಷಪಾತತನದ ಬಗ್ಗೆ ಯಾರಿಗೂ ಸಂಶಯ ಬರಬಾರದು. ಒಂದು ಪಕ್ಷದ ವ್ಯಕ್ತಿ ಆರಿಸಲ್ಪಟ್ಟರೆ ಈ ರೀತಿಯ ವಿಶ್ವಾಸವನ್ನು ಗಳಿಸುವದು ಅಸಾಧ್ಯದ ಮಾತು. ಈ ಮಾತಿನ ಮೇರೆ ಯಾವುದೇ ಪಕ್ಷದ ಒಬ್ಬ ವ್ಯಕ್ತಿಯು ಸ್ಪೀಕರನಾಗುವದು ಅಹಿತವೆಂದು ಇಂಗ್ಲೆಂಡಿನಲ್ಲಿ ಎಣಿಸಲ್ಪಡುತ್ತದೆ.

ಆದರೆ ವಾಸ್ತವವಾಗಿ ಈ ತತ್ವದಂತೆ ಕಾರ್ಯಕ್ರಮ ನಡೆಯುವದಿಲ್ಲ. ಇಂಗ್ಲೆಂಡಿನಲ್ಲೂ ಕೂಡ ಪಾರ್ಟಿಗಳು ಅಧಿಕಾರ ಬದಲಾಯಿಸಿದಂತೆ ಸ್ಪೀಕರರ ಪರಿವರ್ತನೆಯಾಗುವದಿದೆ. ಆದರೆ ಸ್ಪೀಕರರ ಆಯ್ಕೆಯ ಕಾಲಕ್ಕೆ ಶಾಸನ ಸಭೆಯ ಎಲ್ಲಾ ಪಕ್ಷದವರ ಅಭಿಮತದಿಂದ ಆಯ್ಕೆಯಾಗುವದು ಅಲ್ಲಿಯ ಪದ್ಧತಿಯಾಗಿದೆ. ವಿರೋಧ ಪಕ್ಷಗಳ ಅಭಿಪ್ರಾಯವನ್ನೂ ತೆಗೆದು ಬಹುಮತ ಪಕ್ಷವು ಸ್ಪೀಕರನನ್ನು ಆರಿಸುವರು. ಏಕೆಂದರೆ ಮೇಲೆ ಹೇಳಿದಂತೆ ಸ್ಪೀಕರನು ಒಂದು ಪಕ್ಷದ ವ್ಯಕ್ತಿಯಾಗಿರದೆ ಇಡೀ ಶಾಸನ ಸಭೆಯ ಪ್ರತಿನಿಧಿಯಾಗಿದ್ದಾನೆ.

ಕೊಡಗಿನ ಆಯ್ಕೆಯ ಒಂದು ಲೋಪ

ಕೊಡಗಿನ ಶಾಸನ ಸಭೆಯೂ ಇತರ ಹಲವು ಶಾಸನ ಸಭೆಗಳಂತೆ ಸ್ಪೀಕರರ ಆಯ್ಕೆಯನ್ನು ಮಾಡಿತು. ಆದರೆ ಮೇಲೆ ವಿವರಿಸಿದ ವಿಧಾನದಂತೆ ಆ ಆಯ್ಕೆಯಾಗಲಿಲ್ಲ. ಕೊಡಗಿನ ಶಾಸನ ಸಭೆಯಲ್ಲಿ ಯಾವ ಪಕ್ಷಕ್ಕೂ ಸೇರದ ಸ್ಪೀಕರರಾಗಲು ಅರ್ಹತೆ ಇರುವ ಯಾವ ಸ್ವತಂತ್ರ ಸದಸ್ಯನೂ ಇರಲಿಲ್ಲ. ಅದ್ದರಿಂದ ಬಹುಮತದಲ್ಲಿದ್ದ ಕಾಂಗ್ರೆಸು ತನ್ನ ಸ್ಪೀಕರನನ್ನು ಆರಿಸುವದು ನಿಯಮಬದ್ಧವಾಗಿತ್ತು. ಕಾಂಗ್ರೆಸ್ ಪಕ್ಷವು ತನ್ನೊಳಗೆ ಒಬ್ಬನನ್ನು ನಿಶ್ಚಯಿಸಿ ಆ ಆಯ್ಕೆಯನ್ನು ತಮ್ಮ ಪಕ್ಷಕ್ಕೆ ಸೇರದ ಇತರ ಸದಸ್ಯರಿಗೂ ತಿಳಿಸಿ ವಿಧಾಯಕ ರೀತಿಯಲ್ಲಿ ಆಯ್ಕೆಯ ದಿನ ಸರ್ವರ ಬೆಂಬಲದಿಂದ ಚುನಾವಣೆ ಮಾಡಬೇಕಿತ್ತು. ಆದರೆ ಹಾಗೆ ಮಾಡದೆ, ಕಾಂಗ್ರೆಸಿನ ಪಕ್ಷದಲ್ಲಿಲ್ಲದ ಒಂಭತ್ತು ಸದಸ್ಯರಿರುವಾಗ ಅವರ್ಯಾರನ್ನೂ ಕೇಳದೆ, ಸಭೆಯಲ್ಲಿ ಒಬ್ಬರ ಹೆಸರು ಮಾತ್ರ ಸೂಚಿತವಾಗಿದೆ ಅವರು ಸ್ಪೀಕರರಾಗಿ ಆರಿಸಲ್ಪಟ್ಟಿರುವರೆಂದು ಘೋಷಿಸಿದ್ದು ಅಷ್ಟೊಂದು ಸಮಂಜಸವಾಗಿ ತೋರಲಿಲ್ಲ. ಸ್ಪೀಕರರು ಒಂದು ಪಕ್ಷದ ವ್ಯಕ್ತಿಯೆಂಬಂತೆ ತೋರಿಸಲಾಯಿತು.

ಪಶ್ಚಾತ್ತಾಪ.

ಇದರ ಪರಿಣಾಮವು ಅದೇ ದಿನ ಹೊರಬಿತ್ತು. ಸ್ಪೀಕರರಾಗಿ ಆರಿಸಲ್ಪಟ್ಟವರೇ ಶಾಸನ ಸಭೆಯ ವಿರೋಧ ಪಕ್ಷದವರು ತಮ್ಮ ಮೇಲೆ ವಿಶ್ವಾಸವಿಟ್ಟಿರುವದಿಲ್ಲವೆಂದೂ ತಮ್ಮ ಆಯ್ಕೆಯ ನಂತರ ಅವರೂ ಅಭಿನಂದನಾ ಭಾಷಣ ಮಾಡಬೇಕಿತ್ತೆಂದೂ ಅಭಿಪ್ರಾಯಪಟ್ಟಿರೆಂದು ನನ್ನ ಕಿವಿಯ ವರೆಗೂ ಮುಟ್ಟಿದೆ. ಇದಕ್ಕೆ ವಿರೋಧೀ ಪಕ್ಷದವರನ್ನು ದೂರಿ ಪ್ರಯೋಜನವಿಲ್ಲ. ಏಕೆಂದರೆ ಸ್ಪೀಕರರನ್ನು ಆರಿಸುವ ಕಾರ್ಯದಲ್ಲಿ ಯಾವುದೇ ರೀತಿಯಲ್ಲಿ ಸಹಕರಿಸಲು ಅನುಮತಿಯಿಲ್ಲದ ಆ ವಿರೋಧ ಪಕ್ಷದವರು ಆಯ್ಕೆಯ ನಂತರ ಅಭಿನಂದಿಸುವದು ಹೇಗೆ ಸಾಧ್ಯ? ಸ್ಪೀಕರರು ಒಂದು ಪಕ್ಷದ ವ್ಯಕ್ತಿಯೆಂಬಂತೆ ಆಯ್ಕೆ ನಡೆದಿದ್ದು ಇಡೀ ಸಭೆಯ ಶ್ಲಾಘನೆಯನ್ನು ಪಡೆಯ ಬಯಸುವದು ಸರಿಯಲ್ಲ. ಸ್ಪೀಕರರು ಶಾಸನ ಸಭೆಯಲ್ಲಿರುವವರೆಲ್ಲರೂ ಸಮಾನ ಹಕ್ಕಿರುವ ಸದಸ್ಯರೆಂದು ವರ್ತಿಸಿದರೆ ಮಾತ್ರ ಕೆಲಸ ಕಾರ್ಯ ಸುಗಮವಾಗಬಹುದಲ್ಲದೆ ಪಾರ್ಟಿ ಲೇಬಲ್ ನೋಡಿ ವರ್ತಿಸಿದರೆ ಸ್ಪೀಕರರ ಹಿರಿಗೌರವವನ್ನು ಕಳೆಗಂದಿಸಿದಂತಾಗುವದು. ಕೊಡಗಿನ ಶಾಸನ ಸಭೆಯಲ್ಲಿ ೧೫ ಜನ ಕಾಂಗ್ರೆಸ್ ಸದಸ್ಯರೂ, ಒಂಭತ್ತು ಜನ ಪ್ರತ್ಯೇಕವಾದಿಗಳೂ ಇರುವರು. ಈ ಒಂಭತ್ತು ಜನರು ಶಾಸನ ಸಭೆಯಲ್ಲಿ ಯಾವ ನಿಲುವನ್ನು ತೆಗೆದುಕೊಳ್ಳುವರೆಂಬುದು ತಿಳಿದು ಬಂದಿರುವದಿಲ್ಲ. ಅವರು ಕಾಂಗ್ರೆಸಿಗೆ ಪುನಹ ಸೇರುವ ನಿರ್ಧಾರ ಮಾಡಿರುವರೆಂಬುದನ್ನು ಓದಿದ ನನಗೆ ಇವರು ವಿರೋಧ ಪಕ್ಷವಾಗಿ ನಿಲ್ಲಲಾರರೆಂಬುದು ತಿಳಿದುಬರುತ್ತದೆ. ಹಾಗಾದರೆ ಕೊಡಗು ಕೌನ್ಸಿಲು ಹಿಂದೂದೇಶದಲ್ಲಿ ಒಂದು ಹೊಸ ಮಾದರಿಯದ್ದಾಗುವದು. ವಿರೋಧ ಪಕ್ಷವಿಲ್ಲದ ಶಾಸನ ಸಭೆಯಲ್ಲಿ ಸ್ಪೀಕರರ ಕೆಲಸ ಹಗುರವಾಗುವದು. ಹೇಗೂ ಕೊಡಗಿನ ಶಾಸನ ಸಭಾ ಸದಸ್ಯರೂ ಸ್ಪೀಕರರೂ ಪ್ರಥಮ ಹೆಜ್ಜೆಯಲ್ಲಿ ತಪ್ಪಿದಂತೆ ಮುಂದೆ ತಪ್ಪು ಮಾಡದೆ ಶಾಸನಬದ್ಧವಾಗಿ ಕಾರ್ಯನಡೆಸಿ ಯೋಗ್ಯ ಆದರ್ಶವನ್ನು ಮುಂದಿನ ಪೀಳಿಗೆಗೆ ಹಾಕಬೇಕಾಗಿದೆ.

ವಿದ್ಯಾರ್ಥಿಗಳ ಗ್ರಾಮಸೇವೆ.

ಈಗ ಕೆಲವು ತಿಂಗಳ ಹಿಂದೆ ಕೊಡಗು ಸಹಕಾರಿ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಸ್ಥೆಯೊಂದು ಸ್ಥಾಪಿತವಾಗಿದೆ. ಮೈಸೂರು ಮತ್ತು ಮದರಾಸುಗಳಲ್ಲಿ ಈ ರೀತಿಯ ವಿದ್ಯಾರ್ಥಿ ಸಂಸ್ಥೆಗಳು ಹಲವು ಜನೋಪಯೋಗ ಕಾರ್ಯಗಳನ್ನು ಸರಕಾರ ಹಾಗೂ ಇತರರ ಸಹಾಯ ಸಹಾನುಭೂತಿಯಿಂದ ಮಾಡುತ್ತಿವೆ. ಅದೇ ರೀತಿಗಾಗಿ ಕೊಡಗಿನ ಕಾಲೇಜಿನ ಹಳೆ ವಿದ್ಯಾರ್ಥಿ ಸಂಸ್ಥೆಯು ರೂಪುಗೊಂಡದ್ದು ತುಂಬಾ ಹರ್ಷದಾಯಕವಾದುದು. ಈ ಸಂಸ್ಥೆಯ ಕೆಲವು ಜನರು ತಾರೀಕು 8-6-52ರಲ್ಲು ಫ್ರೇಜರ್‌ಪೇಟೆ ಹೋಬಳಿಯ ಹೆಬ್ಬಾಲೆ ಗ್ರಾಮಕ್ಕೆ ಹೋಗಿದ್ದರು. ಅಲ್ಲಿ ಶ್ರೀ. ಲಿಂಗರಾಜಯ್ಯ ಎಂ. ಎಲ್. ಎ ಇವರ ಸಹಕಾರದಿಂದ ಆ ಗ್ರಾಮದ ಎಲ್ಲಾ ಮನೆಗಳನ್ನು ಸಂಚರಿಸಿ ಶುಚಿತ್ವ ಹಾಗೂ ವಯಸ್ಕರ ಶಿಕ್ಷಣ ಮೊದಲಾದ ವಿಷಯಗಳಲ್ಲಿ ಯೋಗ್ಯ ಸಲಹೆಗಳನ್ನಿತ್ತರು. ಅದೂ ಅಲ್ಲದೆ ಮುಂದೆ ಸರಕಾರದಿಂದ ಬರತಕ್ಕ ಸಾಮುದಾಯಿಕ ಯೋಜನೆಯಲ್ಲಿ ತಮ್ಮಿಂದಾದ ಗ್ರಾಮ ಸೇವೆಯನ್ನು ಮಾಡಲು ಸಿದ್ಧರಾಗಿರುವೆವು ಎಂದು ತಿಳಿಸಿದರು.

ವಿದ್ಯಾರ್ಥಿ ಸಂಸ್ಥೆಯವರು ಅನೇ ದಿನ ಫ್ರೇಜರ್‌ಪೇಟೆಯ ಹೈಜನ ಕಾಲೋನಿಯ ಕೆಲವು ಮನೆಗಳನ್ನು ಸಂದರ್ಶಿಸಿ ಅವರಿಗೆ ಶುಚಿತ್ವ ಹಾಗೂ ಇನ್ನಿತರ ವಿಷಯಗಳಲ್ಲಿ ಯೋಗ್ಯ ಸಲಹೆಯನ್ನಿತ್ತರು. ಅಲ್ಲಿನ ರಾತ್ರಿಯ ವಯಸ್ಕರ ಶಿಕ್ಷಣ ಶಾಲೆಯನ್ನು ಸಂದರ್ಶಿಸಿದರು. ಅಲ್ಲಿ ಸುಮಾರು ೩೫ ಮಂದಿ ವಿದ್ಯಾರ್ಥಿಗಳು ಊರಿನ ಪಟೇಲರು ಹಾಗೂ ಊರಿನ ಹಲವು ಮುಖ್ಯಸ್ಥರು ಹಾಜರಿದ್ದರು. ವಿದ್ಯಾರ್ಥಿಗಳಲ್ಲಿ ಹಲವರು ಬಹು ಚೆನ್ನಾಗಿ ಬರೆಯುವುದನ್ನು ಓದುವುದನ್ನು ಲೆಕ್ಕ ಮಾಡುವುದನ್ನೂ ಕಲಿತಿರುವರು. ಆ ರಾತ್ರೆ ಶಾಲೆಗೆ ಹೋಗಿದ್ದ ಕಾಲೇಜು ಹಳೆ ವಿದ್ಯಾರ್ಥಿ ಸಂಸ್ಥೆಯವರನ್ನು ಅಲ್ಲಿಯ ಉಪಾಧ್ಯಾಯರು ಸಂತೋಷದಿಂದ ಬರಮಾಡಿಕೊಂಡು ಅಲ್ಲಿಯ ಕಾರ್ಯಕಲಾಪಗಳನ್ನು ತೋರಿಸಿದಲ್ಲದೆ ಕಾಲೇಜು ವಿದ್ಯಾರ್ಥಿಗಳು ಕೊಡಗಿನಲ್ಲಿ ಈ ರೀತಿಯ ಗ್ರಾಮಸೇವೆಗೆ ತೊಡಗಿದ್ದು ಇದೇ ಪ್ರಥಮ ಇಂಥಾ ಯೋಗ್ಯ ಕಾರ್ಯಗಳನ್ನು ವಿದ್ಯಾರ್ಥಿಗಳು ಮಾಡುತ್ತಿರುವುದರಿಂದ ಕೊಡಗಿನ ಗ್ರಾಮೋದ್ಧಾರಕ್ಕೆ ತೊಡಗಿದ ವಿದ್ಯಾರ್ಥಿ ಸಂಸ್ಥೆಗೆ ಶುಭವಾಗಲಿ ಎಂದು ಕೋರಿದರು. ವಿದ್ಯಾರ್ಥಿ ಸಂಸ್ಥೆಯ ಶ್ರೀ. ಎಂ. ಎ. ಪೂಣಚ್ಚನವರು ಗ್ರಾಮಾಭಿವೃದ್ಧಿಯ ಅವಶ್ಯಕತೆ ಜನತಾ ಸರಕಾರಕ್ಕೆ ಮಾಡಬೇಕಾದ ಸಹಾಯ, ಮತ್ತು ವಯಸ್ಕರ ಶಿಕ್ಷಣ ಶಾಲೆಯ ಅಭಿವೃದ್ಧಿಗೆ ಪ್ರತಿಯೊಬ್ಬರು ದುಡಿಯಬೇಕಾದ ಅವಶ್ಯಕತೆ ಮೊದಲಾದ ವಿಷಯ ಮಾತಾಡಿದರು. ಶ್ರೀ ಪಿ. ಎಂ. ಗಣಪತಿಯವರು, ವಿದ್ಯೆಯ, ಶುಚಿತ್ವದ ಪ್ರಾಮುಖ್ಯತೆ ಜನತಾ ಸರಕಾರದ ಕಾರ್ಯಕಲಾಪಗಳನ್ನು ನೆರವೇರಿಸಲು ಎಲ್ಲರ ಸಹಾಯ ಸಹಕಾರ ಅಗತ್ಯವೆಂದು ಮಾತಾಡಿದರು. ಶ್ರೀ. ಎನ್. ಬಿ. ನಾರಾಯಣರವರು ವಯಸ್ಕರ ಶಿಕ್ಷಣದ ವಿಚಾರವೂ ಅಲ್ಲಿನ ರಾತ್ರಿ ಶಾಲೆಯ ಕಾರ್ಯಕ್ರಮ ಬಹು ಚೆನ್ನಾಗಿ ನಡೆಯುತ್ತಾ, ಆ ರೋಗ್ಯ ವಿಷಯದಲ್ಲಿಯೂ ಮಾತಾಡಿದರು.

ಇನ್ನೊಂದು ವಿನಾಶಕಾರಿ ಅಸ್ತ್ರ.

ನ್ಯಾಪಾಮ್ ಬಾಂಬು.

ಅಣುಬಾಂಬು ನಾಲ್ಕುವರೆ ಚದರ ಮೈಲು ಪ್ರದೇಶವನ್ನು ನಾಶಮಾಡುತ್ತಿದ್ದರೆ ನ್ಯಾಪಾಮ್ ಬಾಂಬು ಹದಿನಾರು ಚದರ ಮೈಲು ಪ್ರದೇಶವನ್ನು ಸುಟ್ಟುಬಿಡುತ್ತದೆ. ನ್ಯೂರೆಂಬರ್ಗದಲ್ಲಿ ಜರ್ಮನ್ ಸೇನಾಪತಿಗಳನ್ನು ಯುದ್ಧಾಪರಾಧಿಗಳೆಂದು ತೀರ್ಮಾನಿಸಿ ದೀರ್ಘ ದಂಡನೆಗೆ ಗುರಿಪಡಿಸುತ್ತಿದ್ದ ಬ್ರಿಟಿಷ ಅಮೇರಿಕರುಗಳೇ ಈ ನ್ಯಾಪಾಮ್ ಬಾಂಬನ್ನು ಕೊರಿಯಾದಲ್ಲಿ ಈಗ ಉಪಯೋಗಿಸುತ್ತಿವೆ. ಸಹಸ್ರಾವಧಿ ಜನರನ್ನು ಯಮಲೋಕಕ್ಕೆ ಕಳುಹಿಸುತ್ತಿವೆ.

ದ್ವಿತೀಯ ಮಹಾಯುದ್ಧದ ಮುಕ್ತಾಯಕ್ಕೆ ಕಾರಣೀಭೂತವಾದ ಅಣುಬಾಂಬಿನ ಪ್ರಳಯಕಾರಕ ಶಕ್ತಿಯು ಅರಿವು ಈಗಾಗಲೇ ಪ್ರಪಂಚದ ಜನತೆಗಾಗಿದೆ. ಜಪಾನಿನ ನಾಗಸಾಕಿ ಮತ್ತು ಹಿರೋಶಿಮಾಗಳ ಮೇಲೆ ಈ ಬಾಂಬುಗಳ ಪ್ರಯೋಗವಾದುದರಿಂದ ಈ ಬಾಂಬುಗಳ ಭೀಕರ ಪರಿಣಾಮದಿಂದ ದಿಗ್ಭ್ರಾಂತವಾದ ಜಪಾನಿನ ಸೇನಾಪತಿಗಳು ಶಸ್ತ್ರಾಸ್ತ್ರಗಳನ್ನು ಕೆಳಗಿರಿಸಿ ಅಮೇರಿಕೆಗೆ ಶರಣುಹೋಗಬೇಕಾಯಿತು. ೧೯೪೫ರಲ್ಲಿ ಈ ಅಣುಬಾಂಬುಗಳ ಮಾರಕ ಶಕ್ತಿ ಪ್ರಪಂಚಕ್ಕೆ ತಿಳಿದು ಬಂದಿತಾದರೂ ಅದಕ್ಕೂ ಪೂರ್ವದಲ್ಲಿ ಜರ್ಮನಿ ಮತ್ತು ಅಮೇರಿಕೆಗಳು ಪ್ರತ್ಯೇಕವಾಗಿ ಗುಪ್ತವಾಗಿ ಈ ಮಹಾ ಅಸ್ತ್ರದ ಶೋಧ ಮಾಡಿದ್ದವಂತೆ. ಇದು ಜರ್ಮನ್ ತಜ್ಞರ ಕಲ್ಪಕ ಶಕ್ತಿಯ ಫಲವೆಂದು ಪ್ರಪಂಚದಲ್ಲಿ ಜನ ಜನಿತವಾಗಿ ಹೋಯಿತು.

ಈ ಅಣುಬಾಂಬಿನ ತಯಾರಿಕೆಯ ವಿವರಗಳನ್ನು ಅಮೇರಿಕೆಯು ಅತ್ಯಂತ ಗೌಪ್ಯವಾಗಿರಿಸಿದೆಯಾದರೂ ರಶಿಯಾದ ಗುಪ್ತಚಾರರ ಕೈಗೂ ಇದರ ತಯಾರಿಕೆಯ ವಿವರಗಳು ಹೇಗೋ ಮುಟ್ಟಿರಬಹುದೆಂದು ಊಹಿಸಲಾಗಿದೆ. ರಶಿಯಾವು ಈ ಅಣುಬಾಂಬುಗಳನ್ನು ವಿಪುಲವಾಗಿ ತಯಾರಿಸಿದೆಯಂತೆ. ಅದರಂತೆ ಇಂಗ್ಲೆಂಡದ ಶಾಸ್ತ್ರಜ್ಞರೂ ಈ ಬಾಂಬಿನ ತಯಾರಿಕೆಗಾಗಿ ಪ್ರಯೋಗ ನಡೆಸಿದ್ದಾರೆ.

ಮತ್ತೊಂದು ಅಷ್ಟೇ ಪ್ರಖರವಾದ ಮಾರಕ ಶಕ್ತಿಯ ಅಸ್ತ್ರವೆಂದರೆ ಹಾಯಿಡ್ರೋಜನ್ ಬಾಂಬು. ಇದರ ಪ್ರಯೋಗಗಳಾಗಿದ್ದರೂ ಅದರ ಪರಿಣಾಮವು ಮಾತ್ರ ಇನ್ನೂ ಪ್ರಚುರವಾಗಿರುವುದಿಲ್ಲ. ಇವೆರಡಲ್ಲದೆ ಅಮೇರಿಕೆಯು ೧೯೪೫ರ ಮಾರ್ಚ ತಿಂಗಳಲ್ಲಿ ಟೋಕಿಯೋ ನಗರದ ಮೇಲೆ ಇನ್ನೂ ಒಂದು ವಿನಾಶಕಾರೀ ಬಾಂಬಿನ ಪ್ರಯೋಗ ಮಾಡಿತು. ಅದೇ ನ್ಯಾಪಾಮ್ ಬಾಂಬು. ಅದರ ವಿನಾಶಕಾರೀ ಶಕ್ತಿಯು ಅಣುಬಾಂಬಿಗಿಂತಲೂ ಉಗ್ರತರವಾಗಿದೆ.

ಈ ಬಾಂಬನ್ನು ಶೋಧಿಸಿ ತೆಗೆದವರು ಬ್ರಿಟಿಷ್ ಮತ್ತು ಅಮೇರಿಕನ್ ಶಾಸ್ತ್ರಜ್ಞರು. ಶೋಧಿಸಿದ್ದು ದ್ವಿತೀಯ ಮಹಾಯುದ್ಧ ನಡೆದಾಗ. ಇದನ್ನು ಪೆಟ್ರೋಲ, ಅಲ್ಯುಮಿನಿಯಮ್, ನ್ಯಾಫ್ತನೇಟ ಮತ್ತು ಕೊಬ್ಬರಿಯಲ್ಲಿಯ ಸ್ನಿಗ್ಧ ಪದಾರ್ಥಗಳಲ್ಲಿ ಮಿಶ್ರಣ ಮಾಡಿ ಘನೀಕರಿಸುವುದರಿಂದ ಸಿದ್ಧಮಾಡಲಾಗುತ್ತಿದೆಯಂತೆ. ನೋಡಲಿಕ್ಕೆ ರ್‍ಯಾಕೆಟಿನ ಹಣ್ಣಿನ ಆಕಾರದಂತೆ ಇದ್ದು ಇದರ ಹೊಡೆತಕ್ಕೆ ಸಿಕ್ಕ ದೊಡ್ಡ ದೊಡ್ಡ ಟ್ಯಾಂಕುಗಳು ಕರಗಿ ನೀರಾಗುವವು. ೩,೦೦೦ ಡಿ.ಶ ಉಷ್ಣತೆಯು ಇದರ ಜ್ವಾಲೆಯಿಂದ ಅರ್ಧ ಎಕರೆ ಭೂಮಿ ಸುಟ್ಟು ಬೂದಿಯಾಗಬಲ್ಲದು.

ದ್ವಿತೀಯ ಯುದ್ಧಾಪರಾಧಿಗಳ ವಿಚಾರಣೆ ನ್ಯೂರೆಂಬರ್ಗದಲ್ಲಿ ನಡೆದಾಗ 'ಯುದ್ಧಾಪರಾಧ' ನಿರ್ಣಯಿಸುವ ಅಳತೆಗೋಲು ಯಾವುದು? ಎಂಬ ಬಗ್ಗೆ ಅಂದು ನಿರ್ಧಾರಕ್ಕೆ ಬರಲಾಯಿತು. ಹಾಗೆ ನೋಡಿದರೆ ಯುದ್ಧಗಳೆಲ್ಲವೂ ಅಮಾನುಷ ಕೃತಿಗಳೇ. ಯುದ್ಧಾಪರಾಧ ನಿರ್ಣಯವನ್ನು ಆ ಬಗ್ಗೆ ಪೂರ್ಣ ವಿಚಾರ ಮಾಡಿ ಮುಂದಿಡಲಾಯಿತು. ಎಂದು ಬ್ರಿಟಿಶ ಪಾರ್ಲಿಮೆಂಟಿನ ಅಧಿಕೃತ ಪ್ರತಿನಿಧಿ ನಿಗೆಲ್ ಬರ್ಚ ಇವರ ಅಭಿಪ್ರಾಯ. ಆದರೆ ನ್ಯೂರೆಂಬರ್ಗದಲ್ಲಿ ನಡೆದ ವಿಚಾರಣೆಗಳಲ್ಲಿ ಹಲವೊಂದು ಕೃತಿಗಳಿಗಿಂತಲೂ ಅಮಾನುಷವಾದವುಗಳನ್ನು ಮಾತ್ರ ಯುದ್ಧಾಪರಾಧಗಳೆಂದು ತಿಳಿಯಬೇಕೆಂದು ಸ್ಪಷ್ಟಪಡಿಸಲಾಯಿತು.

ನ್ಯಾಪಾಮ್ ಬಾಂಬು ಅಂಥ ತೀರ ಅಪೇಕ್ಷಕರ ಶಸ್ತ್ರಾಸ್ತ್ರಗಳ ವರ್ಗದಲ್ಲಿ ಬರುವದು. ಅದರ ಏಟಿನೊಳಗೆ ಬರುವ ಸೈನಿಕರಿಗೂ ನಾಗರಿಕರಿಗೂ, ಮಹಿಳೆ ಮಕ್ಕಳಿಗೂ ಮಾರಕವಾಗಿರುವ ಇಂಥ ಘೋರ ಸಂಹಾರಕ ಶಕ್ತಿಯು ಮತ್ತು ಸರ್ವನಾಶಕಾರಿಯಾದ ಅಸ್ತ್ರವನ್ನು ಅಂತರಾಷ್ಟ್ರೀಯ ಒಡಂಬಡಿಕೆ ಮೂಲಕ ಅಕ್ರಮಗೊಳಿಸಬೇಕೆಂದು ನ್ಯಾಯಾಶಾಸ್ತ್ರದ ತರ್ಕ ಬಿರಕ್ಕಾರಾದರೂ. ಗ್ಯಾರ್ಬೆಟ್ಟರು ಕ್ರಿಶ್ಚನ ಜನತೆಗೆ ಕೇಳಿಕೊಂಡಿದ್ದರೆ.

ಕೊರಿಯಾ ಯುದ್ಧದಲ್ಲಿ ಈ ಬಾಂಬಿನ ಪ್ರಯೋಗ ಮಾಡಿದ್ದರಿಂದಲೇ ಪರಿಸ್ಥಿತಿ ಯುನೈಟೆಡ ರಾಷ್ಟ್ರಗಳ ಸೈನದ ಕೈಯಲ್ಲಿ ಉಳಿಯಿತೆಂದೂ ಮತ್ತು ಕಮ್ಯುನಿಷ್ಟ ಸೈನ್ಯದ ಮುನ್ನಡೆಯನ್ನು ಪ್ರತಿಬಂಧಿಸಿತೆಂದೂ ನ್ಯಾಪಾಮ್ ಬಾಂಬು ಮತ್ತು ಅಣುಬಾಂಬುಗಳನ್ನು ಅಕ್ರಮಗೊಳಿಸಿದಲ್ಲಿ ಅವರೊಡನೆ ಜಗತ್ತಿನಲ್ಲಿಯ ಈ ಗುಂಪುಗಾರಿಕೆಯನ್ನೂ ರಶಿಯಾ ಚೀನಗಳು ಮುರಿದು ಹಾಕಬೇಕೆಂದೂ ಲಂಡನಿನ ಡೇಲಿ ಮೇಲ್ ಪತ್ರಿಕೆಯು ವರದಿ ಮಾಡಿತು.

ಇಂಥಾ ಸಾಮೂಹಿಕ ಸಂಹಾರ ಶಕ್ತಿಯ ಪ್ರತಿ ಶಸ್ತ್ರಾಸ್ತ್ರಕ್ಕೆ ಹತ್ತಿಪ್ಪತ್ತು ಸಾವಿರ ಜನ ನಿರಪರಾಧಿಗಳು ತುತ್ತಾಗಬೇಕಾಗುವುದು. ಇದು ನಿಲ್ಲಬೇಕಾದರೆ ಪ್ರಪಂಚದಲ್ಲಿ ಶಾಂತಿ ಪ್ರತಿಷ್ಠಾಪನೆಯಾಗಬೇಕಾದರೆ, ಗಾಂಧೀಜಿಯವರ ಅಮರ ಸಂದೇಶಕ್ಕೆ—ಸತ್ಯ, ಅಹಿಂಸೆ, ವಿಶ್ವಬಂಧುತ್ವಗಳಿಗೆ ಪ್ರಪಂಚವು ಶರಣು ಹೋಗಲೇಬೇಕು. ಅದಾಗದೆ ಇಂತ ಘೋರ ನಾಶದ ಮಾರಕ ಶಕ್ತಿಯ ಶಸ್ತ್ರಾಸ್ತ್ರಗಳ ಉತ್ಪಾದನೆ, ಸಂಶೋಧನೆಗಳಲ್ಲಿ ರಾಷ್ಟ್ರಗಳು ಪಿಪಾಸೆ ನಡೆಸಿದರೆ, ಅವರಿಂದ ಸರ್ವನಾಶವು ಇಷ್ಟರಷ್ಟು ಸನ್ನಿಹಕ್ಕೆ ಬಂದಿತಾಗುವ ದಿಂಬದಲ್ಲಿ ಅನುಮಾನವಿಲ್ಲ.

ಲಂಡನದ ಡೇಲಿ ಟೆಲಿಗ್ರಾಫ್ ಪತ್ರಿಕೆಯ ಯುದ್ಧ ವಾರ್ತಾಹರರಾದ ಮಿ. ರೆನೆ ಕಟ್‌ಫೋರ್ಡ ಇವರು ಕೋರಿಯನ್ ರಿಪೋರ್ಟರ್ ಎಂಬ ಪುಸ್ತಕ ಬರೆದಿದ್ದು ಅದರಲ್ಲಿ ಈ ನ್ಯಾಪಾಮ್ ಬಾಂಬಿನ ಹೊಡೆತಕ್ಕೆ ಸಿಕ್ಕ ಮನುಷ್ಯನ ಗತಿ ಏನಾಯಿತೆಂಬುದನ್ನು ಕೆಳಗಿನಂತೆ ವಿವರಿಸಿದ್ದಾರೆ:— 'ನನ್ನೆದುರು ಒಂದು ವಿಲಕ್ಷಣ ಆಕೃತಿ ಬಾಗಿ ಕಾಲು ಮಡಿಚಿಕೊಂಡು ಕೈಗಳನ್ನು ಮುಂದೆ ಚಾಚಿಕೊಂಡು ಬಾಗಿ ನಿಂತಿತ್ತು. ಅವನಿಗೆ ಕಣ್ಣು ಗುಡ್ಡೆಗಳೇ ಇದ್ದಿಲ್ಲ. ಮೈಮೇಲಿನ ಬಟ್ಟೆಬರೆಗಳೆಲ್ಲ ಇದ್ದಕ್ಕಿದ್ದಂತೆ ಸುಟ್ಟು ಹೋದುದರಿಂದ ಶರೀರವೆಲ್ಲ ತೆಗೆದು ಒಣ ಚಿತ್ತು. ಮೈಯೆಲ್ಲ ಕಪ್ಪಾಗಿ ಹಕ್ಕಳಿಗಟ್ಟಿ ಹಳದಿ ಬಣ್ಣದ ಕೀವು ಸೋರುತ್ತಿತ್ತು. ಅವನ ಶರೀರದ ಮೇಲಿನ ಚರ್ಮದ ಆಚ್ಛಾದನೆಯೇ ಬೆಂಕಿಯ ಜ್ವಾಲೆಯಿಂದ ಹಕ್ಕಳಿಗಟ್ಟಿದ್ದರಿಂದ ಅದು ಪ್ರಾಣಿಯ ಬಿಸಿ ಬರುತ್ತಿದ್ದಿಲ್ಲವಾದುದರಿಂದ ಅವನ ನಿಲ್ಲಲೇಬೇಕಾಗಿತ್ತು.'

ಇದೇ ನ್ಯಾಪಾಮ್ ಬಾಂಬಿನಿಂದಾದ ಅನಾಹುತವನ್ನು ಅಮೇರಿಕೆಯ ಪ್ರತ್ಯಕ್ಷದರ್ಶಿಯು ಹೇಳಿದ್ದೇನೆಂದರೆ ಹಳ್ಳಿಯೊಂದರ ಮೇಲೆ ಈ ಬಾಂಬು ಬಿದ್ದಾಗ ಆ ಹಳ್ಳಿಯ ನಿವಾಸಿಗಳು ಇದ್ದಕ್ಕಿದ್ದಂತೆಯೇ ಮರಣ ಹೊಂದಿದ್ದರು. ನಾಯಕನೊಬ್ಬನು ನಿಂತಲ್ಲಿಯೇ ಸಿದ್ಧನಾಗಿ ನಿಂತಿದ್ದನು. ತನ್ನ ಸೈಕಲ್ಲನ್ನು ಏರಿ ಹೊರಡುವ ಸಿದ್ಧತೆಯಲ್ಲಿ ಹಾಗೆಯೇ ಹೋಗಿತ್ತು. ಅನಾಥಾಶ್ರಮದಲ್ಲಿ ಆಡುತ್ತಿದ್ದ ೫೦ ಬಾಲಕರು ಆಡುತ್ತಿದ್ದಂತೆಯೇ ಅಸು ನೀಗಿದ್ದರು. ಕೈಯಲ್ಲಿ ಸೂಜಿ ದಾರ ಹಿಡಿದುಕೊಂಡ ಗೃಹಿಣಿಯೊಬ್ಬಳ ಗತಿಯೂ ಹಾಗೇ ಆಗಿತ್ತು.

ಇವೆಲ್ಲವೂ ಈ ನ್ಯಾಪಾಮ್ ಬಾಂಬಿನಿಂದಾಗುವ ಜನ ಹತಗಳು. ಕೋರಿಯಾ ರಣಾಂಗಣದಲ್ಲಿ ಯುನೈಟೆಡ ರಾಷ್ಟ್ರ ಸೈನ್ಯವು ಉತ್ತರ ಕೊರಿಯನ್ನರ ಮೇಲೆ ಈ ಬಾಂಬುಗಳ ಪ್ರಯೋಗ ನಡೆಸಿದೆ. ಈ ಬಗ್ಗೆ ಬ್ರಿಟನ ಪಾರ್ಲಿಮೆಂಟಿನಲ್ಲಿ ನಡೆದ ಪ್ರಶ್ನೋತ್ತರಗಳಲ್ಲಿ ಸಂರಕ್ಷಣಾ ವಿಭಾಗದ ಪಾರ್ಲಿಮೆಂಟರಿ ಸೆಕ್ರೆಟರಿಯವರಾದ ಮಿ. ನಿಗೆಲ್ ಬರ್ಚ ಅವರು ಸೈನಿಕ ದಳಗಳ ಮೇಲೆ ಮಾತ್ರ ಈ ಬಾಂಬನ್ನು ಉಪಯೋಗಿಸಲಾಗುತ್ತಿದೆಯೆಂದೂ ಯುದ್ಧದಲ್ಲಿ ಉಪಯೋಗಿಸಲ್ಪಡುವ ಶಸ್ತ್ರಾಸ್ತ್ರಗಳೆಲ್ಲವೂ ಭೀಕರ ಪರಿಣಾಮವಾಗಿರುವದರಿಂದ ಯುದ್ಧ ಸನ್ನಿವೇಶದಲ್ಲಿರುವವರು ಇದೆಲ್ಲವನ್ನೂ ಪೂರ್ವಾಲೋಚಿಸಿಯೇ ಯುದ್ಧಕ್ಕಿಳಿಯಬೇಕೆಂದೂ ಹೇಳಿದರು.

ಅಂತೂ ಈ ಬಾಂಬಿನ ಮತ್ತು ಅದರ ಹೊಡೆತದಿಂದಾಗುವ ಭೀಕರ ಪರಿಣಾಮದ ಚಿತ್ರ ಕಣ್ಣೆದುರಿಗೆ ಬಂದರೆ ಮಾನವಕೋಟಿ ಪ್ರಳಯದ ಮಾರ್ಗದತ್ತ ಸಾಗಿರಬಹುದೆ? ಎಂಬ ಅನುಮಾನಕ್ಕವಕಾಶವುಂಟಾಗುತ್ತದೆ.

ಈ ಬಾಂಬನ್ನು ಮೊದಲು ಬಾರಿ ಉಪಯೋಗಿಸಿದ್ದು ೧೯೪೪ರ ಜುಲೈ ತಿಂಗಳಲ್ಲಿ ಜಪಾನೀ ಜನರಿಂದ ಆಕ್ರಮಿತವಾದ ಚೀನದ ಚಾಂಗ್‌ಸೇನ್ ಪಟ್ಟಣದಲ್ಲಿ ಅಮೇರಿಕೆಯ ವೈಮಾನಿಕ ದಳಗಳು ಹಾಕಿದ ಈ ಬಾಂಬಿನಿಂದ ಎಷ್ಟು ಉರಿಯು ಅರ ಮೈಲುಗಳ ವರೆಗೆ ಕಾಣುತ್ತಿತ್ತು. ಆನಂತರ ಮಿತ್ರರಾಷ್ಟ್ರ ಸೈನ್ಯಕ್ಕೆ ದಾರಿಮಾಡಿಕೊಡುವದಕ್ಕಾಗಿ ಜರ್ಮನಿಯಲ್ಲಿಯೂ ಇವರ ಉಪಯೋಗ ಮಾಡಿಕೊಳ್ಳಲಾಯಿತ.

ಅಣುವದು ಶಾಂತಿ ಪಾಠ, ಮಾಡುವದು ಇಂಥ ಕೃತಿ. ಹೀಗೆ ನಡೆದಿದೆ, ತಮ್ಮನ್ನು ದೊಡ್ಡವೆಂದು ಕರೆದುಕೊಳ್ಳುತ್ತಿರುವ 'ತ್ರಿರಾಷ್ಟ್ರ'ಗಳ ಲೀಲೆ. 'ಜೈಹಿಂದ'

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್,

ಲಿಮಿಟೆಡ್, ಮಡಿಕೇರಿ.

[illegible] (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಬಡ್ಡಿಗಾಗಿ ಸಂಘಗಳಿಗೆ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಆಧಾರದ ಮೇಲೆ ಸಾಲ ಕೊಡಲಾಗುವುದು. ಚೆಕ್ ಹುಂಡಿಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟ್, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

ಕೊಡಗು

೧೩-೬-೧೯೫೨ನೇ ಶುಕ್ರವಾರ

ಆಹಾರ ಪದಾರ್ಥಗಳ ನಿಯಂತ್ರಣ.

ಯುದ್ಧ ಕಾಲದಲ್ಲಿ ಉಂಟಾದ ಆಹಾರದ ಅಭಾವದಿಂದ ಜನತೆಗೆ ಆಗುತ್ತಿದ್ದ ತೊಂದರೆಯನ್ನು ನಿವಾರಿಸಿ ಬಡ ಜನರಿಗೂ ಅವರ ಪಾಲಿನ ಆಹಾರ ಪದಾರ್ಥಗಳು ದೊರೆಯಬೇಕೆಂಬ ಉತ್ತಮ ಗುರಿಯಿಂದ ದೇಶದಲ್ಲಿ ಈ ಜೀವನಾವಶ್ಯಕ ವಸ್ತುಗಳ ನಿಯಂತ್ರಣವನ್ನು ಸರಕಾರವು ಜಾರಿಗೆ ತಂದಿತು. ಸರಕಾರದ ಉದ್ದೇಶವು ಉತ್ತಮವಿದ್ದಿತಾದರೂ ಈ ಯೋಜನೆಯು ಜಾರಿಗೆ ಬಂದಾಗ ಜನತೆಗೆ ಹಿತವಾಗುವದಕ್ಕಿಂತ ಹೆಚ್ಚಾಗಿ ಅಹಿತವೇ ಆಯಿತು. ನಿಯಂತ್ರಣವು ವ್ಯಾಪಾರಸ್ಥರಿಗೆ ಲಾಭಬಡಕತನದ ಮಾರ್ಗವಾದಂತೆ ಆ ಇಲಾಖೆಯ ಅಧಿಕಾರಿಗಳಿಗೆ ಲಂಚರುಷುವತ್ತುಗಳ ಮಾರ್ಗವಾಯಿತು. ಆ ಕಾರಣ ನಿಯಂತ್ರಣದಿಂದ ಜನತೆಗೆ ಹಾನಿಯಾಗುತ್ತಿರುವದನ್ನು ಕಂಡು ಈ ನಿಯಂತ್ರಣಗಳನ್ನು ತೆಗೆದು ಹಾಕಬೇಕೆಂದು ಬಡವರ ಬಂಧು ಮಹಾತ್ಮಾ ಗಾಂಧಿಯವರು ಅಭಿಪ್ರಾಯಪಟ್ಟಿದ್ದರು. ಆದರೆ ಆಗಿನ ಕೇಂದ್ರ ಸರಕಾರವು ಮಹಾತ್ಮರ ಈ ಅಭಿಪ್ರಾಯಕ್ಕೆ ಕಿವಿಗೊಡಲಿಲ್ಲ. ಪರಿಣಾಮವಾಗಿ ಪರಿಸ್ಥಿತಿಯು ಮತ್ತಷ್ಟು ಹಾಳಾಗಿ ಆಹಾರ ಬೆಳೆಯುವವನಿಗೂ, ಕೊಂಡುಕೊಳ್ಳುವವನಿಗೂ ವಿಪರೀತ ತೊಂದರೆಯೊದಗಿತು. ಕ್ರಮಶಃ ಇವರ ಕೂಗು ಬಲವಾಗತೊಡಗಿ ನಿಯಂತ್ರಣಗಳನ್ನು ತೆಗೆದು ಹಾಕುವ ವಿಚಾರದಲ್ಲಿ ಹಲವು ಪ್ರಾಂತೀಯ ಸರಕಾರಗಳು ಆಲೋಚನೆಗೆ ತೊಡಗಿದವು. ಈ ಮಧ್ಯೆ ಕೇಂದ್ರ ಸರಕಾರವು ಪ್ರಾಂತಗಳಿಗೆ ಈ ವರೆಗೆ ಕೊಡುತಿದ್ದ ಆಹಾರ ವಂತಿಗೆಯನ್ನು ನಿಲ್ಲಿಸಿದ ಕಾರಣ ಆಹಾರ ಪದಾರ್ಥಗಳ ಬೆಲೆ ಏರಿ ಬಡವರ ಜೀವನ ಇನ್ನೂ ಹೆಚ್ಚು ಕಷ್ಟಕ್ಕೀಡಾಯಿತು. ಹೀಗೆ ದೇಶದ ಎಲ್ಲ ಕಡೆಗಳಲ್ಲೂ ನಿಯಂತ್ರಣ ಕಾಯಿದೆಯನ್ನು ತೆಗೆದು ಹಾಕಬೇಕೆಂದು ಅಭಿಪ್ರಾಯ ಹೆಚ್ಚುತಿದ್ದ ಈ ಸಮಯದಲ್ಲಿ ಮದರಾಸಿನ ಮುಖ್ಯ ಮಂತ್ರಿಯಾಗಿರುವ ಶ್ರೀ ಸಿ. ರಾಜಗೋಪಾಲಾಚಾರಿಯವರು ತುಂಬಾ ಧೈರ್ಯ ತೆಗೆದುಕೊಂಡು ಮದ್ರಾಸು ಪ್ರಾಂತದಲ್ಲಿ ಆಹಾರ ಪದಾರ್ಥಗಳ ನಿಯಂತ್ರಣವನ್ನು ಸಂಪೂರ್ಣವಾಗಿ ಈ ತಾ. ೬ ರಿಂದ ತೆಗೆದು ಹಾಕಿರುವರು. ಇದರಿಂದ ಮದ್ರಾಸ್ ಪ್ರಾಂತದ ಜನರಿಗೆ ತುಂಬಾ ಸಂತೋಷವೂ ತೃಪ್ತಿಯೂ ಆಗಿದೆ ರಾಜಾಜಿಯವರ ಧೈರ್ಯಪೂರಿತ ಈ ಹೆಜ್ಜೆಯನ್ನು ಅನುಸರಿಸಿ ಹಿಂದೂದೇಶದ ಇತರ ಪ್ರಾಂತಗಳೂ ಮುಂದಡಿ ಇಡುವವೆಂದೂ ಇದಕ್ಕೆ ಕೇಂದ್ರ ಸರಕಾರವು ಸಮ್ಮತಿಯನ್ನೀಯುವದೆಂದೂ ಆಶಿಸಲಾಗಿದೆ.

ಕೊಡಗಿನ ಆಹಾರ ಪರಿಸ್ಥಿತಿಯು ಚೆನ್ನಾಗಿದೆ. ಇದು ಉಳುವರಿ ಪ್ರಾಂತವಾಗಿದ್ದು ನೆರೆಯ ಪ್ರಾಂತಗಳಿಗೆ ಸರಾಸರಿ ೮ ಸಾವಿರ ಟನ್ ಅಕ್ಕಿ ಸರಬರಾಯಿ ಮಾಡುತ್ತಿದೆ. ಇಂಥಾ ಉಳುವರಿ ಪ್ರಾಂತದಲ್ಲಿ ಆಹಾರ ನಿಯಂತ್ರಣದ ಆವಶ್ಯಕತೆಯಿರಲಿಲ್ಲ. ಹೊರಗಿನ ಪ್ರಾಂತಗಳಿಗೆ ಕೊಡಗಿನ ಉಳುವರಿಯನ್ನು ಸಂಗ್ರಹಿಸಿ ಕಳುಹಿಸುವ ಏರ್ಪಾಡು ಆವಶ್ಯವಿದ್ದರೂ ದೇಶದೊಳಗೆ ಆಹಾರ ಪದಾರ್ಥಗಳ ವಹಿವಾಟಿಗೂ, ಅವಲಕ್ಕಿ, ಹುರಿಗಾಳು ಮಾಡುವ ವಿಚಾರಕ್ಕೂ ನಿರ್ಬಂಧದ ಆವಶ್ಯಕತೆ ಇರಲಿಲ್ಲ ಆದರೆ ಇತ್ತಲಾಗಿ ಕೊಡಗು ಸರಕಾರವು ಆಹಾರ ನಿಯಂತ್ರಣ ನಿಯಮವನ್ನು ಸ್ವಲ್ಪ ಸಡಲಿಸಿ ಕೊಡಗಿನೊಳಗೆ ೬೦೦ ಸೇರು ಬತ್ತ ಯೂ ೩೦೦ ಸೇರು ಅಕ್ಕಿಯನ್ನು ಆಚಿತ್ತ ಸಾಗಿಸಬಹುದೆಂದೂ ಮತ್ತು ೧ ಒಟ್ಟೆಯ ಮಟ್ಟಿಗೆ ಅವಲಕ್ಕಿ ಯೂ ಹುರುಳು ಮಾಡಿ ಇಟ್ಟುಕೊಳ್ಳಬಹುದೆಂದೂ ಇಲ್ಲವೇ ರೇಷನ್ ಅಂಗಡಿ ಮೂಲಕ ಮಾರಬಹುದೆಂದೂ ಅನುಕೂಲ ಮಾಡಿರುವದಾಗಿ ವರ್ತಮಾನ. ಇಷ್ಟಾದರೂ ನಿಯಂತ್ರಣವನ್ನು ಸಡಲಿಸಿದ್ದು ಯೋಗ್ಯವಾಗಿದೆ. ಆದರೆ ಆಹಾರ ಪದಾರ್ಥಗಳಿಗೆ ಜೋತೆ ಇರುವ ಮದರಾಸು ಪ್ರಾಂತವಲ್ಲೇ ಸಂಪೂರ್ಣವಾಗಿ ಎಲ್ಲಾ ನಿಯಂತ್ರಣವನ್ನು ತೆಗೆದು ಹಾಕಿರುವಾಗ ಉಳುವರಿ ಪ್ರಾಂತವಾದ ಕೊಡಗಿನಲ್ಲಿ ಈಗಿನ ಈ ಸಡಲಿಸುವಿಕೆಯು ಸಾಲದು. ಈ ಸಡಲಿಸುವಿಕೆಯಿಂದ ಆಹಾರ ಪದಾರ್ಥಗಳ ಹೋರಾಟದಲ್ಲಿ ಉಂಟಾಗುತಿದ ಕಷ್ಟ ಸಂತೆಯನ್ನು ತಡೆದಂತಾಗುವುದಿಲ್ಲ. ಆದರಿಂದ ಆಹಾರದ ಜೋತೆ ಇರುವ ನಮ್ಮ ನೆರೆ ಪ್ರಾಂತವಾದ ಮದರಾಸು ಆದರ್ಶ ರೀತಿಯಲ್ಲಿ ಮಾಡಿರುವ ನಿರ್ಣಯದಂತೆ ಕೊಡಗಿನಲ್ಲಿಯೂ ಪೂರ್ಣವಾಗಿ ನಿಯಂತ್ರಣವನ್ನು ತೆಗೆದು ಹಾಕುವುದು ಉಚಿತವೂ, ಆವಶ್ಯವೂ ಆಗಿದೆ. ಈ ಬಗ್ಗೆ ಸ್ಥಳೀಯ ಸರಕಾರವು ಯೋಗ್ಯ ಕಾರಣಗಳನ್ನು ಕೊಟ್ಟು ಕೇಂದ್ರ ಸರಕಾರದ ಅನುಮತಿ ಪಡೆದು ನಿಯಂತ್ರಣವನ್ನು ವಜಾ ಮಾಡಿ ಜನತೆಯ ಪ್ರೀತಿಗೆ ಪಾತ್ರರಾಗುವರೆಂದು ಆಶಿಸುತ್ತೇವೆ.

ವರ್ತಮಾನ.

ಸೆಟ್ಲ್‌ಮೆಂಟ್ ಆಫೀಸರಾಗಿರುವ ಶ್ರೀ ಎಂ. ಎನ್. ಗುಂಡೂರಾಯರನ್ನು ಡಿಸ್ಟ್ರಿಕ್ಟ್ 'ಸೆಕ್ರೆಟರಿಯಾಗಿಯೂ ಇರುವಂತೆ ನೇಮಿಸಿರುರು.

ತಾ. ೧೦ರಲ್ಲಿ ಸ್ವಾಮಿ ಮೋಟಾರ್ ಸರ್ವಿಸಿನಲ್ಲಿ ಯಾರೋ ೭೦೨/- ರೂಪಾಯಿಗಳನ್ನೂ ಕೆಲವು ಖರಾರು ಪತ್ರಗಳನ್ನೂ ಬಿಟ್ಟು ಹೋಗಿದ್ದಾರೆ. ಮಾಲೀಕರು ತಕ್ಕ ರುಜುವಾತಿನಿಂದ ಅವುಗಳನ್ನು ಮಡಿಕೇರಿ ಪೋಲೀಸ್ ಸ್ಟೇಷನಿಂದ ಹೊಂದಿಕೊಳ್ಳಬಹುದೆಂದು ತಿಳಿಸುತ್ತಾರೆ.

ಚಿಕ್ಕಮಗಳೂರು ಕಾನ್ವೆಂಟಿನಲ್ಲಿ ಓದುತ್ತಿರುವ ಮಿಸ್ ಕೇತಿಯಂಡ ಸಿ. ಗೌರಿಯವರು ಕಳೆದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ಗಾಂಧೀಜಿಯವರ ಮರಣದ ಸ್ಮಾರಕವಾಗಿ ಪ್ರತಿ ಶುಕ್ರವಾರ ಸಾಯಂಕಾಲ ಮಡಿಕೇರಿ ವೇದಾಂತ ಮಂದಿರದಲ್ಲಿ ನಡೆಸುತ್ತಿದ್ದ ಜೈಮಿನಿ ಭಾರತ ವಾಚನವು ಮುಕ್ತಾಯವಾಗಿ ಮುಂದಕ್ಕೆ ಭಾಗವತ ವಾಚನವನ್ನು ಶ್ರೀ ಎಂ. ಎಸ್. ಅನಂತಪದ್ಮನಾಭ ರಾಯರು ಮಾಡುವರು.

ಶ್ರೀ ಅಪ್ಪನೆರವಂಡ ಎಂ ಬೆಳ್ಳಿಯಪ್ಪನವರು ಮೈಸೂರು ವಿಶ್ವ ವಿದ್ಯಾನಿಲಯದ ಬಿ. ಎಲ್. ಡಿಗ್ರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ಕೊಡಗು ಜಿಲ್ಲಾ ಬೋರ್ಡು ಸದಸ್ಯರ ಮೆಂಬರಿಕೆಯ ಅವಧಿಯನ್ನು ಚೀಫ್ ಕಮಿಷನರು ೧೯೫೪ರಲ್ಲಿ ಮುಂದರಿಸಿದ್ದರು. ಆದರೆ ಈಗ 'ಸಿ' ಭಾಗದ ಸಂಸ್ಥಾನಗಳ ಘಟನೆಯು ಜಾರಿಯಲ್ಲಿ ಬರುವ ಕಾರಣ ಈಗಿನ ಮೆಂಬರುಗಳ ಅವಧಿಯು ಮುಕ್ತಾಯವಾಗಿ ಈಗ ಡಿ. ಕಮಿಷನರು ಜಿಲ್ಲಾ ಬೋರ್ಡಿನ ಎಕ್ಸ್ ಆಫಿಶಿಯೋ ಪ್ರೆಸಿಡೆಂಟಾಗಿ ಅಧಿಕಾರ ವಹಿಸಿಕೊಂಡಿರುವರು.

ಕೊಡಗು ಸರಕಾರಿ ಕಾಲೇಜಿನ ವಿದ್ಯಾರ್ಥಿಗಳಿಗೆ ಹಿಂದೂದೇಶದ ಇತರ ವಿದ್ಯಾಸಂಸ್ಥೆಗಳಲ್ಲಿರುವ ಔದ್ಯೋಗಿಕ ಮತ್ತು ಇತರ ವಿಧಾನದ ಹೆಚ್ಚಿನ ವ್ಯಾಸಂಗಕ್ಕಿರುವ ಮಾಹಿತಿಯನ್ನು ಕೊಡಲು ಮಾಹಿತಿದಾಯಿಯನ್ನು ಕೊಡಗು ಸರಕಾರಿ ಕಾಲೇಜಿನಲ್ಲಿ ತೆರೆಯಬೇಕಾಗುವದೆಂದೂ ಮಾಹಿತಿ ಬೇಕಿರುವವರು ಈ ಶಾಖೆಯ ಕಾರ್ಯದರ್ಶಿಗೆ ಬರಕೊಳ್ಳಬಹುದೆಂದೂ ತಿಳಿಸುತ್ತಾರೆ.

ಹೈಸ್ಕೂಲುಗಳಲ್ಲಿ ಪಾಠಹೇಳಲು ಟ್ರೈನ್ಡ್ ಬಿ. ಎ. ಪಾಸಾದವರು ಬೇಕಾಗಿರುವರು ಕುತೂಹಲವುಳ್ಳವರು ಮತ್ತು ಅರ್ಹರಾದವರು ಮಡಿಕೇರಿ ಡಿಸ್ಟ್ರಿಕ್ಟ್ ಎಜ್ಯುಕೇಷನಲ್ ಆಫೀಸಿನಲ್ಲಿ ಹೆಚ್ಚಿನ ವಿವರವನ್ನು ತಿಳಿದುಕೊಳ್ಳಬಹುದು.

ಹಿಂದೂ ಸೈನಿಕ ದಳದಲ್ಲಿ ತರಬೇತಾಗಲು ಎಸ್. ಎಸ್. ಎಲ್. ಸಿ. ಪಾಸಾದ ಯುವಕರು ಬೇಕಾಗಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಮಡಿಕೇರಿಯ ಡಿಸ್ಟ್ರಿಕ್ಟ್ ಎಂಪ್ಲಾಯ್ಮೆಂಟ್ ಆಫೀಸಿನಿಂದ ತಿಳಿದುಕೊಳ್ಳಬಹುದು.

ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಓದುತ್ತಿದ್ದ ಶ್ರೀಮತಿ ಅಂಬೇರಂಡ ತಂಗಮ್ಮನವರು ಬಿ. ಎಸ್. ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ವಾರ್ಷಿಕ ಚುನಾವಣೆಯು ಆಧುನಿಕ ಮತದಾನ ಪದ್ಧತಿಯಂತೆ ತಾ. ೧೧-೬-೫೨ರಲ್ಲಿ ನಡೆದು ಶ್ರೀ ಎಂ. ಬಿ. ಚಿಣ್ಣಪ್ಪನವರು ಶಾಲೆಯ ಪ್ರಧಾನ ನಾಯಕರಾಗಿಯೂ, ಶ್ರೀ ಹೆಚ್. ಎಂ. ಮಹಮ್ಮದ್‌ರವರು ಉಪನಾಯಕರಾಗಿಯೂ, ಶ್ರೀ ಆರ್. ಎಸ್. ಕಾಶೀಪತಿಯವರು ವಾಚನಾಲಯ ಕಾರ್ಯದರ್ಶಿಯಾಗಿಯೂ ಮತ್ತು ಶ್ರೀಮತಿ ಕೆ. ಬಿ ಉದಯ ಕುಮಾರಿಯವರು ಬಾಲಿಕೆಯರ ಪ್ರತಿನಿಧಿಯಾಗಿಯೂ ಚುನಾಯಿತರಾದರು.

ಕೊಡಗಿನ ಎಗ್ಸಿಕ್ಯೂಟಿವ್ ಇಂಜಿನಿಯರಾಗಿರುವ ಶ್ರೀ ಉದಯಾಚಲಂರವರನ್ನು ಬೆಳ್ಳಿಗೆ ವರ್ಗ ಮಾಡಿರುವರೆಂದೂ ಅವರ ಬದಲು ಶ್ರೀ ಕೆ. ಕೋಲಿಯವರು ಬರಲಿರುವರೆಂದೂ ತಿಳಿದುಬಂದಿದೆ.

ಕೊಡಗು ಸರಕಾರಿ ಕಾಲೇಜಿನಿಂದ ಇಂಟರ್ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಲ್ಲಿ ಶ್ರೀಮತಿ ಎಸ್. ಜಿ. ಶೈಲಾ, ಇವರು ಒಂದನೇ ಸ್ಥಾನವನ್ನೂ, ಶ್ರೀ ಡಬ್ಲ್ಯು. ಎಸ್. ಕುಂದರ್ ಎರಡನೇ ಸ್ಥಾನವನ್ನೂ, ಶ್ರೀ ಪಿ ಆರ್. ಶ್ರೀನಿವಾಸ ರಾವ್ ಇವರು ಮೂರನೇ ಸ್ಥಾನವನ್ನೂ ಪಡೆದಿರುವರು.

ಸ್ತುತ್ಯಾರ್ಹ.

ಕೊಡಗು ಸರಕಾರಿ ಕಾಲೇಜಿನ ೨ನೇ ವರ್ಷದ ಪರೀಕ್ಷಾ ಫಲಿತಾಂಶ ಹೊರಬಿದ್ದಿದೆ ಪರೀಕ್ಷೆಗೆ ಕೂತ ೬೪ ವಿದ್ಯಾರ್ಥಿಗಳಲ್ಲಿ ೫೨ ಜನರು ತೇರ್ಗಡೆಯಾಗಿರುವರು ತೇರ್ಗಡೆಯಾದವರಲ್ಲಿ ಲೆಕ, ಫಿಸಿಕ್ಸ್ ಮತ್ತು ಕೆಮಿಸ್ಟ್ರಿ ಗ್ರೂಪಿನಲ್ಲಿ ೧೨ ಜನರು, ಫಿಸಿಕ್ಸ್, ಕೆಮಿಸ್ಟ್ರಿ, ಮತ್ತು ಪ್ರಕೃತಿ ಶಾಸ್ತ್ರ ಗ್ರೂಪಿನಲ್ಲಿ ೩ ಜನರು ಚರಿತ್ರೆ ಮತ್ತು ಲಾಜಿಕ್ ಗ್ರೂಪಿನಲ್ಲಿ ೨ ಜನರು ಹೀಗೆ ೧೭ ಜನರು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿರುವದು ನಿಜಕ್ಕೂ ಪ್ರಶಂಸನೀಯವಿದೆ. ಕೊಡಗು ಕಾಲೇಜಿನ ಕಳೆದ ವರ್ಷದ ಪರೀಕ್ಷಾ ಫಲಿತಾಂಶದಲ್ಲಿ ನೂರಕ್ಕೆ ೫೬ ರಂತೆ ವಿದ್ಯಾರ್ಥಿಗಳು ತೇರ್ಗಡೆಯಾಗಿದರು. ಈ ವರ್ಷ ಅದನ್ನು ಮೀರಿಸಿ ಶೇಕಡ ೬೭ರಂತೆ ತೇರ್ಗಡೆಯಾಗಿರುವದು ನಿಜಕ್ಕೂ ಹೊಗಳಲರ್ಹವಾದುದು. ಈ ಕಾಲೇಜು ಕೇವಲ ಪರೀಕ್ಷೆಯಲ್ಲಿ ಮಾತ್ರವಲ್ಲ; ಆಟೋಟಗಳಲ್ಲೂ ಮುಂದಿದೆ. ಈ ವರ್ಷದ ಮದರಾಸ್ ವಿಶ್ವವಿದ್ಯಾಲಯ ಹಾಕಿ ಛಾಂಪಿಯನ್ ಶಿಪ್ಪನ್ನು ಪಡೆದು ಈ ದ್ವಿತೀಯ ದರ್ಜೆಯ ಕಾಲೇಜು ಖ್ಯಾತಿಯನ್ನು ಪಡೆದಿದೆ ಈ ಕಾಲೇಜು ಏಳ್ಗೆಯ ಪಥದಲ್ಲಿ ನಡೆಯುತ್ತಿರುವದೆಂಬುದಕ್ಕೆ ಸಂದೇಹವಿಲ್ಲ ಇದಕ್ಕೆ ಕಾರಣರಾದ ಪ್ರಿನ್ಸಿಪಲರಿಗೂ ಮತ್ತು ಅಧ್ಯಾಪಕವರ್ಗಕ್ಕೂ, ತಮ್ಮ ಜವಾಬ್ದಾರಿಯನ್ನರಿತು ಆದರ್ಶ ವಿದ್ಯಾರ್ಥಿಗಳೆನಿಸಿದ ವಿದ್ಯಾರ್ಥಿ ವರ್ಗಕ್ಕೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ಸಂ.]

ಕೊಡಗಿನ ಮರ ವ್ಯಾಪಾರಸ್ಥರಲ್ಲಿ ವಿನಂತಿ

ಕೊಡಗಿನಲ್ಲಿ ಮರ ವ್ಯಾಪಾರ ಮಾಡುವವರಿಗೆ ಇತ್ತೀಚೆಗೆ ಒದಗಿರುವ ಕಷ್ಟದ ಕೊರತೆಗಳನ್ನು ವಿಚಾರ ಮಾಡುವ ಬಗ್ಗೆ ತಾ. 21-6-52ನೇ ಶನಿವಾರ ದಿವಸ ಪ್ರಾತಃಕಾಲ 10 ಗಂಟೆಗೆ ಸರಿಯಾಗಿ ವೀರರಾಜಪೇಟೆ ಮುನಿಸಿಪಲ್ ಹಾಲಿನಲ್ಲಿ ಮೀಟಿಂಗ್ ಸೇರುವದರಿಂದ ಪ್ರತಿ ಮರ ವ್ಯಾಪಾರಿಯೂ ಈ ಮೀಟಿಂಗಿನಲ್ಲಿ ಭಾಗವಹಿಸಿ ಅವರವರ ಅಭಿಪ್ರಾಯವನ್ನು ತಿಳಿಸಿ ಮುಂದಿನ ವ್ಯಾಪಾರದ ಅಭಿವೃದ್ಧಿಗೆ ಎಲ್ಲರೂ ಮುಂದೆ ಬರಬೇಕಾಗಿ ಕೋರುತ್ತೇನೆ.

ಕೆ. ಕೆ. ಚಿಟ್ಟಿಯಪ್ಪ,
ಗೌ. ಕಾರ್ಯದರ್ಶಿ.

ವೀರರಾಜಪೇಟೆ,
11-6-52.

ಒಡುಗರ ಓಲೆಗಳು

ಫಾರೆಸ್ಟ್ ಇಲಾಖೆಯ ಲೋಪದೋಷಗಳು.

'ಕೊಡಗಿನ ಸರಕಾರಕ್ಕೆ ಒಂದು ಲಕ್ಷ ರೂಪಾಯಿ ನಷ್ಟ'ವೆಂಬ ಶಿರೋನಾಮೆಯಿಂದ 'ಕೊಡಗು' ಪತ್ರಿಕೆಯ ಸುದ್ದಿಗಾರರೊಬ್ಬರು ಬರೆದ ಲೇಖನವನ್ನು ಓದಿ ಈ ಇಲಾಖೆಯ ಇನ್ನು ಕೆಲವು ಅವ್ಯವಸ್ಥೆಗಳನ್ನು ಬರೆಯ ಬೇಕೆಂದೆನಿಸಿ ಇದನ್ನು ಬರೆಯುತ್ತಿರುವದಾಗಿದೆ. ಫಾರೆಸ್ಟ್ ಆಫೀಸರು ಕಂಟ್ರಾಕ್ಟರೊಡನೆ ಮಾತ್ರ ವಿಚಿತ್ರ ರೀತಿಯಿಂದ ವರ್ತಿಸುವದಲ್ಲ. ಇಲಾಖೆಯೊಳಗೆ ಅವರ ವರ್ತನೆಯು ಹಾನಿಕಾರಕವಾಗಿದೆ. ಈ ಮೊದಲಿದ್ದ ಗಾರ್ಡುಗಳನ್ನು ತೆಗೆದು ಹಾಕಿ ಬುದ್ಧಿ ಮತ್ತೆಯ, ಯಾ ಮಹತ್ವವುಳ್ಳ ದೃಷ್ಟಿಯಿಂದ ತಿಂಗಳಿಗೆ ೧೭ ರೂಪಾಯಿ ಸಂಬಳದ 'ವಾಚ್ ಮೇನ್'ಗಳನ್ನು ಇವರು ನೇಮಿಸಿರು. [illegible] ಏನಾಯಿತ? ನಾಗರ ಹೊಳೆ ಫಾರೆಸ್ಟಿನ ವರ್ಷ [illegible] ಕಾದಕ್ಕು ನಷ್ಟವಾಯಿತು. ಈ ನಷ್ಟದ ಬಗ್ಗೆ ಯಾರಾದರೂ ಪರಿಶೀಲಿಸುವರೇ? ಮತ್ತೆ ಇಲಾಖೆಯಲ್ಲಿ [illegible] ತೆಯು ವಿಚಾರ [illegible]. ಗಾರ್ಡುಗಳನ್ನು ತೆಗೆದು 'ವಾಚ್ ಮೆನ್'ರನ್ನು ನೇಮಿಸಿದ ಇವರು ಈಗ ಹಕ್ಕು [illegible] ಡೆಪ್ಯುಟಿ ರೇಂಜರುಗಳನ್ನು ನೇಮಿಸಿರುವರು. ಮೈಸೂರು ಡಿವಿಜನಲ್ ಫಾರೆಸ್ಟ್ ಆಫೀಸರನ್ನು ನೇಮಿಸುವ ಅಭಿಪ್ರಾಯದಲ್ಲಿರುವರಂತೆ! ಅವರಿಗೆ ಬೇಕಾದವರಿಗೆ ಈ ಕೆಲಸಗಳನ್ನು [illegible] ಎಂತ ಈ ಡಿವಿಜನಲ್ ಆಫೀಸರ ಹುದ್ದೆಯು 'ಸಿಲೆಕ್ಷನ್ ಪೋಸ್ಟ್' ಆಗಿರಬೇಕೆಂದು ಏರ್ಪಡಿಸಿರುವರಂತೆ. ಈ ರೀತಿ ಇಲಾಖೆಯಲ್ಲಿಯ ಅವ್ಯವಸ್ಥೆಯು ಇಂದು ಕೆಲಸಗಾರರಲ್ಲಿ ಅತೃಪ್ತಿ ಹುಟ್ಟಿಸಿದೆ. ಇವರನ್ನು ವಿಚಾರಿಸಲು ಮಂತ್ರಿಗಳಿದ್ದರೆ ನಿಜ, ಆದರೆ ಅವರು ತಟಸ್ಥವಿರುವದು ಆಶ್ಚರ್ಯಜನಕವಾಗಿದೆ.

'ವಾಚಕರಲ್ಲೊಬ್ಬ'

ದೀರ್ಘ ಅವಧಿಯ ಸಾಲ

ಕೊಡಗು ಪ್ರಾಂತೀಯ ಸಹಕಾರ ಬ್ಯಾಂಕಿನಿಂದ ದೀರ್ಘ ಅವಧಿಯ ಸಾಲ ದೊರೆಯುತ್ತದೆಂಬ ವಿಚಾರ [illegible] ಅರ್ಜಿ ಬರೆಯುವವರು ನೂರಾರು ಜನರಿದ್ದಾರೆ. ಅರ್ಜಿ ಬರೆದುಕೊಂಡು ವರ್ಷಗಳು ಕಳೆದರೂ ಕೂಡ ಸಾಲ ದೊರೆಯುವ ವಿಚಾರವಿಲ್ಲ; ಅರ್ಜಿಯ ವಿಷಯ ಏನಾಯಿತೆಂದು ಕೇಳ [illegible]. ಅರ್ಜಿಗಳನ್ನು [illegible] ಭದ್ರವಾಗಿ ಕಟ್ಟಿ [illegible] ಪೆಟ್ಟಿಗೆಯಲ್ಲಿ ಇಟ್ಟಿರುವರು. ಇದರಿಂದ ಅರ್ಜಿದಾರರಿಗೆ ಸಾಲ ದೊರೆಯುವುದೇ? ಈ ವಿಚಾರದಲ್ಲಿ ಏನಾಗುತ್ತಿದೆ. ಸಾಲ ಕೊಡುವರೇ? ಅದರ ತತ್ವವೇನು? ಏಕೆ ವಿಚಾರ ಬಹಿರಂಗವಾಗಿ ತಿಳಿಸಿದ್ದರೆ ಅರ್ಜಿ ಹಾಕಿದ ನಾವು ಬ್ಯಾಂಕಿನ ಕೆಲಸ ನಿಶ್ಚಯವಾಗುವವರೆಗೆ ನಷ್ಟ [illegible] ಅವರೂ [illegible]. [illegible] ಸಂಬಂಧಿಸಿದವರು ಅಷ್ಟಾದರೂ ಉಪಕಾರ ಮಾಡುವರೇ?

ಸಹಕಾರಿ.

ಚೀಫ್ ಫಾರೆಸ್ಟ್ ಆಫೀಸರ ಅಹಿತ ವರ್ತನೆ.

ಕೊಡಗು ಫಾರೆಸ್ಟ್ ಇಲಾಖೆಯವರ ಮರದ ಹರಾಜು ಹುಣಸೂರು ಡಿಪ್ಪೋದಲ್ಲಿ ತಾ. ೩ ಮತ್ತು ೪ ರಲ್ಲಿ ನಡೆಯುವದೆಂದು ಜಾಹೀರು ಮಾಡಲ್ಪಟ್ಟಿತು. ಹರಾಜಿಗಾಗಿ ಅನೇಕ ವ್ಯಾಪಾರಸ್ಥರು ಬಂದಿದ್ದರು. ತಾರೀಖು ೪ರಲ್ಲಿ ಹರಾಜಿಗೆ ಮೊದಲು ಚೀಫ್ ಫಾರೆಸ್ಟ್ ಆಫೀಸರು ಒಬ್ಬ ವ್ಯಾಪಾರಿಯೊಡನೆ ಅಸಭ್ಯರೀತಿಯಲ್ಲಿ ವರ್ತಿಸಿದುದರಿಂದ ವ್ಯಾಪಾರಸ್ಥರಿಗೂ ಚೀಫ್ ಫಾರೆಸ್ಟ್ ಆಫೀಸರಿಗೂ ಬಿಸಿಮಾತಾಗಿ ತುಂಬ ಗಲಭೆ [illegible]. ಈ ಪ್ರಸಂಗ ಬಂದದ್ದರಿಂದ ಚೀಫ್ ಫಾರೆಸ್ಟ್ ಆಫೀಸರು ಆ ದಿವಸ ಹರಾಜನ್ನು ಬಾಕಿ ಮಾಡಿದರಾಗಿ [illegible]. ಆ ದಿನ ಹರಾಜಿಗೆಂದು ಬಂದಿದ್ದ ವ್ಯಾಪಾರಸ್ಥರೆಲ್ಲ ಚೀಫ್ ಫಾರೆಸ್ಟ್ ಆಫೀಸರ ವರ್ತನೆಯಿಂದ ನೊಂದುಕೊಂಡರು. [illegible] ದೆ [illegible] ಈ ವಿಚಾರ ಮಂತ್ರಿಗಳ ಗಮನಕ್ಕೆ ಬಂದಿಲ್ಲವೇ? ಇದರ ಸತ್ಯಾಂಶವನ್ನು ಅವರು ಪರಿಶೀಲಿಸುವರೇ? ತಾರೀಕು ೪ರಲ್ಲಿ ನಡೆಯಬೇಕಾಗಿದ್ದ ಹರಾಜನ್ನು ಬಾಕಿ ಮಾಡಿದ್ದರಿಂದ ಉಂಟಾದ ನಷ್ಟಕ್ಕೆ ಜವಾಬ್ದಾರರಾರು? ಚೀಫ್ ಫಾರೆಸ್ಟ್ ಆಫೀಸರು ವ್ಯಾಪಾರಿಗಳೊಡನೆ ಈ ರೀತಿ ವರ್ತಿಸುವುದು ಇಲಾಖೆಯ ಹಿತದೃಷ್ಟಿಯಿಂದ ಒಳ್ಳೆಯದೇ? ಇನ್ನಾದರೂ ಮಂತ್ರಿಗಳು ಈ ವಿಚಾರ ಗಮನಿಸುವರೇ?

M. S.

ಸ್ವಾತಂತ್ರ್ಯೋತ್ಸವ.

ವಿಧ ವಿಧ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ಕೈಕೊಂಡು ಯಶಸ್ವಿಯಾಗಿ ನಡೆಸಿದ ಉದಾಹರಣೆಗಳು [illegible] ಮತ್ತು ಪತ್ರಿಕಾ ಪ್ರಕಟಣೆಗಳಲ್ಲಿ ಆಗಾಗಲೇ ಕಂಡು ಬಂದಿವೆ. ಸರಕಾರಿ ಕಾಲೇಜಿನ ಹಳೆ ವಿದ್ಯಾರ್ಥಿಗಳು ಕೊಡಗಿನಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತಂದು ಹೆಬ್ಬಾಲೆ [illegible] ಮೊದಲಾದ ಗ್ರಾಮಗಳನ್ನು ಪ್ರವಾಸಿಸಿ, ಅಲ್ಲಿಯ ಜನರ ಜೀವನ ಮತ್ತು ನಡೆನುಡಿಗಳನ್ನು ಸ್ವತಃ ಪರಿಶೀಲಿಸಿದರೆಂದು ತಿಳಿಯಲು ಸಂತೋಷವಾಗಿದೆ. ಹಳ್ಳಿಯ ಜನರಿಗೆ ಅನೇಕ ಉಪಯುಕ್ತ ಸಲಹೆಗಳನ್ನು ನೀಡಿ ಅವರು ಹಳ್ಳಿಗರೊಡನೆ ಬೆರೆತು ಅವರಲ್ಲಿ [illegible] ತಟ್ಟಿ ಎಬ್ಬಿಸುವುದು ಅವಶ್ಯ. ಸರ್ಕಾರ ಅವರ ಈ ಪ್ರಯತ್ನದಲ್ಲಿ ಅಭ್ಯುದಯವನ್ನು ಕೋರಿ ಇವರ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುವಂತೆ ಆಶೀರ್ವದಿಸಬೇಕೆಂದು ಪ್ರಾರ್ಥಿಸುತ್ತೇನೆ.

[illegible]

ಬೇಜವಾಬ್ದಾರಿಕೆ.

ಕೊಡಗಿನ ಪ್ರತಿ ಗ್ರಾಮಗಳಲ್ಲೂ ಸಹಕಾರ ಸಂಘಗಳಿವೆ. ಈ ಸಂಘಗಳನ್ನು ನಡೆಸುವ ಅನುಭವ ಗ್ರಾಮಸ್ಥರಿಗೆ ದಿನೇ ದಿನೇ ಹೆಚ್ಚಾಗುತ್ತಿದೆ. ಗ್ರಾಮದಲ್ಲಿ ಸಹಕಾರ ತತ್ವದ ವಿಚಾರವಾಗಿ ಸ್ವಲ್ಪ ತಿಳುವಳಿಕೆ ಇರುವವರನ್ನೇ ಸಹಕಾರ ಸಂಘದ ಕಾರ್ಯನಿರ್ವಾಹಕರನ್ನಾಗಿ ಆರಿಸುವದಾಗಿದೆ. ಈ ಕಾರ್ಯನಿರ್ವಾಹಕರು, ಸಾಲಕ್ಕೆ ಅರ್ಜಿ ಬರೆದುಕೊಂಡ ಪ್ರತಿ ಮೆಂಬರನ ಸ್ಥಿರ ಸಾಮರ್ಥ್ಯ ಶಕ್ತಿಯನ್ನು ಪರಿಶೀಲಿಸಿ ಅವರಿಗೆ ಇಷ್ಟು ಸಾಲ ಮಂಜೂರು ಮಾಡಬಹುದೆಂದು ಶಿಫಾರಸ್ಸು ಮಾಡುವದಾಗಿದೆ. ಈ ಶಿಫಾರಸ್ಸು ಮಾಡುವಾಗ ಕಾರ್ಯಕಾರಿ ಮಂಡಳಿಯವರು ಅವರ ನಿಜವಾದ ಬೇಡಿಕೆಯನ್ನು ಪರಿಶೀಲಿಸಿ ಅವರು ಈ ಸಂಘದ ಸಾಲದ ಜೊತೆಗೆ ಬೇರೆ ಯಾವ ಸಾಲ ಮಾಡಿದ ರೀತಿಯಲ್ಲಿ ಸಾಲ ಮಂಜೂರ್ಮಾಡುವುದಾಗಿದೆ. ಸಾಲಕ್ಕೆ ಬರೆಕೊಂಡವನ ಬೇಡಿಕೆಗೆ ಸರಿಯಾದ ಸಹಾಯ ದೊರೆಯದಿದ್ದರೆ ಅವರು ಅನಿವಾರ್ಯವಾಗಿ ಇತರರಿಂದ ಸಾಲ ಕೊಂಡು ಬೇಕಾಗಿ ಬಂದು ಸಹಕಾರ ಚಳವಳಿಗೆ ಧಕ್ಕೆ ಬರುವುದು. ಕಾರ್ಯಕಾರಿ ಮಂಡಳಿಯವರು ಇಷ್ಟು ಎಚ್ಚರಿಕೆಯಿಂದ ಸಹಕಾರ ತತ್ವ ಪಾಲಿಸಲು ಯತ್ನಿಸುತ್ತಿದ್ದರೆ ರಿಜಿಸ್ಟ್ರಾರ್ ಆಫೀಸಿನ ವರ್ತನೆ ಅದಕ್ಕೆ ಸಹಾಯಕವಾಗಿಲ್ಲ. ಕಾರ್ಯಕಾರಿ ಮಂಡಳಿಯವರು ಒಬ್ಬಾತನಿಗೆ ರೂ. ೫೦೦ ಮಂಜೂರ್ಮಾಡಿದ್ದರೆ ಮತ್ತೆ ಅದನ್ನು ಪರಿಶೀಲಿಸುವ ರಿಜಿಸ್ಟ್ರಾರು ಸಾಲಕ್ಕೆ ಬರೆಕೊಂಡವನ ಪರಿಸ್ಥಿತಿಯನ್ನು ಪರಿಶೀಲಿಸದೆ ನಿರಂಕುಶವಾಗಿ ರೂ. ೨೦೦ ಎಂದು ಇಳಿಸುವುದು ರೂಢಿಯಾಗಿದೆ. ಇದರಿಂದ ಸಾಲಕ್ಕೆ ಬರೆಕೊಂಡವನಿಗೆ ಯಾವ ಪ್ರಯೋಜನವೂ ಆಗುತ್ತಿಲ್ಲ. ಈ ರೀತಿ ಸಹಕಾರ ತತ್ವವು ರಿಜಿಸ್ಟ್ರಾರವರಿಂದಲೇ ಕೊಲೆಯಾಗುತ್ತಿದೆ. ಕೇಳುವಂತೆ ಸಾಲ ಮಂಜೂರು ಮಾಡುವುದು ಈ ಕಾಲದಲ್ಲಿ ತಪ್ಪು ಎಂಬ ವಿಚಾರವು ಎಲ್ಲರಿಗೂ ತಿಳಿದಿದೆ. ರಿಜಿಸ್ಟ್ರಾರವರು ಹಾಗೆ ಮಾಡುವಂಥಾ ಕಾಲಕ್ಕೆ ಸಾಲಕ್ಕೆ ಅರ್ಜಿ ಬರೆಕೊಂಡವನ ಬೇಡಿಕೆ ಮತ್ತು ಮರು ಪಾವತಿ ಶಕ್ತಿಯನ್ನು ಪರಿಶೀಲಿಸಿ ಕೊಡುವದೊಳಿತು. ಹಾಗೆ ಮಾಡದೆ ಆಫೀಸಿನಿಂದ ಬರೆದು ಕಳುಹಿಸಿಬಿಡುವುದು ಅನೇಕರಿಗೆ ತ್ರಾಸಕವಾಗಿ ಪರಿಣಮಿಸುವುದಲ್ಲದೆ ಸಹಕಾರ ಚಳವಳಿಗೂ ಹಾನಿಕಾರಕವಾಗಿದೆ. ಇನ್ನಾದರೂ ರಿಜಿಸ್ಟ್ರಾರವರು ಯೋಗ್ಯ ರೀತಿ ವರ್ತಿಸುವದು ಅವಶ್ಯ.

'ನೊಂದವ'

ಅಧ್ಯಾಪಿಕೆಯರು—'ವಿಚಾರಿ'ಗಳ ವಿಚಾರಾರ್ಥ

ಶಾಲೆಗಳಲ್ಲಿ ದಿನೇ ದಿನೇ ಅಧ್ಯಾಪಿಕೆಯರ ಸಂಖ್ಯೆ ಹೆಚ್ಚುತ್ತಿರುವದು ಸಮಾಜೋನ್ನತಿಯ ಶುಭಸೂಚನೆಯಾಗಿದೆ. ಹದಿನೇಳನೆ ಶತಮಾನದ 'ವಿಚಾರಿ'ಗಳಿಗೆ ಇದು ಅಸಹ್ಯವಾಗಿದ್ದರೂ ನಿಷ್ಪಕ್ಷವಾತಿಗಳಾದ ಇಂದಿನ ವಿಚಾರಕರು ಹರ್ಷಗೊಳ್ಳದಿರರು.

ಅನೇಕರಿಕಾದಂಥ ಸಭ್ಯ ರಾಷ್ಟ್ರದಲ್ಲಿ ಪ್ರಾರಂಭಿಕ ತರಗತಿಗಳಿಂದ ಹಿಡಿದು ಮೇಲಿನ ತರಗತಿಗಳ ವರೆಗೆ ಹೆಚ್ಚಾಗಿ ಸ್ತ್ರೀಯರೇ ಅಧ್ಯಾಪನ ಕಾರ್ಯವನ್ನು ಮಾಡುತ್ತಿರುವರು. ಅಲ್ಲಿ ಅವಿವಾಹಿತೆ, ವಿಧವೆ ಅಥವಾ ವಿವಾಹಿತೆ ಎಂಬ ಭೇದಭಾವವಿಲ್ಲ. ಇಂದಿನ ಸಮಾಜದಲ್ಲಿ ನಾರಿಯು ಕೇವಲ ಮನೆಯ ನಾಲ್ಕು ಗೋಡೆಗಳ ಒಳಗೆ ವಿಹರಿಸುವವಳಲ್ಲ; ಹೊರಗೂ ಅವಳ ಕಾರ್ಯಕ್ಷೇತ್ರವು ತೆರೆದಿಡಲ್ಪಟ್ಟಿದೆ. ಇಂದು ಅವಳು ಮನೆಯಲ್ಲಿ ಗೊಂಬೆಯಂತೆ ಕುಳಿತಿರಲು ಹುಟ್ಟಿದವಳಲ್ಲ. ಹೊರಗೆ ದುಡಿದು ಪತಿಯು ಮಾಡುತ್ತಿರುವ ಜೀವನ ಸಂಗ್ರಾಮದಲ್ಲಿ ನೆರವಾಗುವ ನಿಜವಾದ ಅರ್ಧಾಂಗಿ [illegible]. ವಿವಾಹವಾದೊಡನೆಯೇ [illegible] ಸ್ತ್ರೀಯರನ್ನು ಬಿಡುಗಡೆ ಮಾಡಬೇಕೆಂದು [illegible] ದರಂತೆ ನಡೆಯುವ ಕಲ್ಪನೆಯ ಮನುಷ್ಯರೂ, ಹಲವು [illegible] ಇದ್ದಾರೆ. [illegible] ಧರ್ಮ [illegible] ಯ [illegible] ಜೊತೆ [illegible] ಇವರ [illegible] ರಿಂದ [illegible] ಹಲವು ಜವಾಬ್ದಾರಿಗಳಿವೆಯೆಂಬುದು ನಿಜ. ತನ್ನ ಮಕ್ಕಳನ್ನು ನೋಡಿಕೊಳ್ಳುವುದು ಒಂದಾಗಿದೆ. ಆದರಂತೆಯೇ ಪುರುಷನಿಗೂ ಹಾಲಾ [illegible] ಹಲವು ಜವಾಬ್ದಾರಿಗಳಿವೆ; ಬಿಡುವಿದ್ದಾಗಲೆಲ್ಲ ತನ್ನ ಹೊಲಗದ್ದೆಗಳಿಗೆ ಧಾವಿಸುವ ಉಪಾಧ್ಯಾಯರಿಲ್ಲವೇ? ಜವಾಬ್ದಾರಿಯ ಮಟ್ಟಿಗೆ ಸ್ತ್ರೀ ಪುರುಷರಿಬ್ಬರೂ ಸಮಾನರೆಂದ ಮೇಲೆ ಕೇವಲ ಸ್ತ್ರೀ [illegible] ಮೇಲೆ 'ವಿಚಾರಿ'ಗಳ ಕಟಾಕ್ಷ ಏಕೆ ಬಿತ್ತು? ಅಧ್ಯಾಪಿಕೆಯಾಗಿದ್ದರೂ ಸಾಮಾನ್ಯವಾಗಿ ಪ್ರತಿಯೊಬ್ಬ ಗೃಹಿಣಿಯೂ ಮನೆಯಿಲ್ಲಿಯೇ ಪ್ರಸವಿಸುವಳು. [illegible] ಅದಕ್ಕೆ ಎರಡು ಮೂರು ತಿಂಗಳ [illegible] ಬೇಕಾಗುವದು. ಆ ಸಮಯದಲ್ಲಿ [illegible] ಗೆ ಮಾಡುವವರು ಯಾರು? ಮಕ್ಕಳು [illegible] ಮಾಡುವವರು ಯಾರು? ಗಂಡನನ್ನು ವಿಚಾರಿಸಿಕೊಳ್ಳುವವರು ಯಾರು? ಹಾಗಿರಲಿ [illegible] ಡಿಸ್ ಮಿಸ್ ಮಾಡುವ [illegible] ಸ್ವಯಂ [illegible] ಮಾಡುವವರು? ಎಂದಿಗೆ ಯೋಗದ ಹದ ಗಿದ [illegible] ನ್ಯಾಯವೇ [illegible]!

[illegible] ಕಾಲಕ್ಕಿಂತ ಮೊದಲು [illegible] ಈಗ [illegible] ; ಆ ಕಾಲ ಬಂದಿದೆ [illegible] ಶಾಲೆಗಳಿಗೆ [illegible] ತಿಳಿದು [illegible] ಯಾರು [illegible] ಹಾಳಾಗದೆ ಇದ್ದರೆ, ಅಥವಾ ಸಂಬಳಕ್ಕಾಗಿ ಕಷ್ಟವೇ? ಪ್ರಸವದ ಮೊದಲಿನ ಎರಡು [illegible] ಎರಡು ತಿಂಗಳು [illegible] ಮಾಡಲು [illegible] ವ ನವರಿಕೆ. ಆ ನಾಲ್ಕು ತಿಂಗಳುಗಳಲ್ಲಿ ತಿಂಗಳ ಅಧ್ಯಾಪಿಕೆಯರು [illegible]

ರುವದರಿಂದ ಪಾಠ ನಡೆಸಲು ಯೋಗ್ಯರಾದವರನ್ನೇ ವಿದ್ಯಾಧಿಕಾರಿಗಳು ನೇಮಿಸುವರೆಂದು 'ವಿಚಾರ'ಗಳು ತಿಳಿಸುತ್ತಿಲ್ಲ. ಉಳಿದ ಒಂದು ತಿಂಗಳನ್ನು ದಕ್ಷಳಾದ ಅಧ್ಯಾಪಿಕೆಯು ಸರಿಯಾಗಿಯೇ ಉಪಯೋಗಿಸುವಳು. ಅವಳ ಜೀವಮಾನದಲ್ಲಿ ಇಂಥಾ ಸಂದರ್ಭಗಳು ಬರುವದು ಅನೇಕವಿರಲಾರವು.

ಕೆಳಗಿನ ತರಗತಿಗಳಿಗೆ ಬೇಕಾದಷ್ಟು ಮಂದಿ ಮದುವೆಯಾಗದ ಹುಡುಗಿಯರನ್ನು ಅಥವಾ ವಿಧವೆಯರನ್ನು ನೇಮಿಸುವದರಲ್ಲಿ 'ವಿಚಾರ'ಗಳ ವಿರೋಧವಿಲ್ಲ. ಮೇಲಿನ ತರಗತಿಗಳಲ್ಲಿ ಸ್ತ್ರೀಯರಿಗೆ ಅಧ್ಯಾಪಿಕೆಯಾಗುವ ಅಧಿಕಾರವು ಏಕೆ ಕೊಡಬಾರದೋ ತಿಳಿಯುವುದಿಲ್ಲ. ಇವರನ್ನು ಕಂಡು ಶಾಲೆಯ ಹುಡುಗರ ಮನಸ್ಸು ಕೆಡುವುದೇ ಹಾಗಾದರೆ ತಾಯಿಯನ್ನು ಕಂಡು ಮಗನ ಮನಸ್ಸೂ ಕೆಡಬಹುದು. ಪುರುಷ ಉಪಾಧ್ಯಾಯನನ್ನು ಕಂಡು ಶಾಲಾ ಹುಡುಗಿಯರ ಮನಸ್ಸೂ ಕೆಡಬಹುದು.

ಸರಿಯಾಗಿ ವಿಚಾರಿಸಿ ನೋಡಿದರೆ ಶಾಲೆಯಲ್ಲಿ ಪಾಠ ಹೇಳಲು ಸ್ತ್ರೀಗಿಂತ ಉತ್ತಮರಾದವರು ಪುರುಷರಲ್ಲ. ಆದರಲ್ಲೂ ಮಕ್ಕಳಿರುವ ಸ್ತ್ರೀಯು ಅತ್ಯಂತ ಶ್ರೇಷ್ಠಳು. ಉಪಾಧ್ಯಾಯನಿಗೆ ಶಿಶು ಮನೋ ವಿಜ್ಞಾನದ ಅರಿವು ಪುಸ್ತಕಗಳಿಂದ ಉಂಟಾಗಿದ್ದರೆ, ಆ ಜ್ಞಾನವು ಮಾತೃಪದವಿಗೇರಿದ ಅಧ್ಯಾಪಿಕೆಗೆ ಸ್ವಾನುಭವದಿಂದಲೇ ಬರುವುದು. ಉಪಾಧ್ಯಾಯನು ಬಾಲಕನ ಮನಸ್ಸಿನ ಕುಂದು ಕೊರತೆಗಳನ್ನು ತಿಳಿಯದಿರುವ ಕಾರಣದಿಂದಾಗಿ ಪಾಠವನ್ನು ಮನಸ್ಸಿಗೆ ಹಿಡಿಸಲು ಒಂದು ತಿಂಗಳು ತೆಗೆದುಕೊಂಡರೆ ಈಕೆಗೆ ಒಂದು ವಾರವು ಸಾಕಾಗುವುದು.

ಸಾರಾಂಶವೇನೆಂದರೆ ನಾರಿಯು ಪುರುಷನ ಸಹಚರಿಯು. ಆಕೆಯು ತನ್ನ ಮಕ್ಕಳೊಡನೆ ಒಡನಾಡಿ ಪಡೆದ ಅನುಭವವನ್ನು ಇತರ ಮಕ್ಕಳ ಹಿತಕ್ಕಾಗಿ ಉಪಯೋಗಿಸುವಳು, ತಾನೂ ಶ್ರಮಪಟ್ಟು ಮನೆಯ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವಳು. ತನ್ನ ಶಕ್ತಿಯನ್ನು ಸಂಪೂರ್ಣವಾಗಿ ಸಮಾಜದ ಕಾರ್ಯಕ್ಕೆ ಉಪಯೋಗಿಸುವಳು. ಸ್ತ್ರೀ ಪುರುಷರಿರ್ವರೂ ಸಮಾಜದ ಅಂಗಗಳು ಮತ್ತು ಇವರಿಗೂ ಸಮಾಜದಲ್ಲಿ ಯೋಗ್ಯತಾನುಸಾರ ಕೆಲಸ ಮಾಡುವ ಅಧಿಕಾರವಿದೆ.

ವಿಚಾರಕ.

ಕೊಡಗಿನಲ್ಲಿ ರೇಷ್ಮೆ ಹುಳಗಳನ್ನು ಸಾಕುವಿಕೆ.

ಸಾಧಾರಣ ನಾಲ್ಕು ವರ್ಷಗಳಿಗೆ ಹಿಂದೆ ಕೊಡಗು ನ್ಯಾಯವಿಧಾಯಕ ಸಭೆಯಲ್ಲಿ ರೇಷ್ಮೆ ಹುಳಗಳನ್ನು ಕೊಡಗಿನಲ್ಲಿ ಸಾಕಲು ತಕ್ಕ ಏರ್ಪಾಡು ಮಾಡಬೇಕೆಂದು ಚರ್ಚಿಸಿದನ್ನು ಕೊಡಗಿನ ಪತ್ರಿಕೆಗಳಲ್ಲಿ ಓದಿದೆನು.

ಇದನ್ನು ಓದಿದ ನನಗೆ ತುಂಬಾ ಸಂತೋಷವಾಯಿತು. ಯಾತಕೆಂದರೆ ಗ್ರಾಮ ಕೈಗಾರಿಕೆಗಳ ಪೈಕಿ ರೇಷ್ಮೆ ಹುಳಗಳನ್ನು ಸಾಕುವ ಕೆಲಸಕ್ಕಿಂತ ಉತ್ತಮವಾದ ಮತ್ತು ಪ್ರಯೋಜನಕಾರಿಯಾದ ಕೆಲಸವು ರೈತರಿಗೆ ಬೇರೊಂದಿಲ್ಲವೆಂದು ದೃಢವಾಗಿ ಹೇಳಬಹುದು. ಈ ಪರಿಶ್ರಮವು ಬಹಳ ರೈತರ ಸಾಮರ್ಥ್ಯವನ್ನು ಮೀರಿದ್ದಲ್ಲ. ವರ್ಷದಲ್ಲಿ ಸಾಧಾರಣವಾಗಿ ಎಂಟು ಯಾ ಹತ್ತು ಸಲ ರೇಷ್ಮೆ ಹುಳಗಳನ್ನು ಸಾಕಬಹುದು. ಆದುದರಿಂದ ರೈತನಿಗೆ ಹಣದ ಅಭಾವವು ಕಡಿಮೆಯಾಗಿ ಆತನ ಆರ್ಥಿಕ ಅಭಿವೃದ್ಧಿಯಾಗುವದರಲ್ಲಿ ಯಾವ ಸಂಶಯವೂ ಇಲ್ಲ.

ರೇಷ್ಮೆ ಇಲಾಖೆಯಲ್ಲಿ ಅನೇಕ ವರ್ಷಗಳಿಂದ ಚೆನ್ನರಾಜಧಾನಿ ಮತ್ತು ಮೈಸೂರು ದೇಶದ ರೇಷ್ಮೆ ಹುಳಗಳನ್ನು ಸಾಕುವ ಕೇಂದ್ರಗಳಲ್ಲಿ ಕೆಲಸ ಮಾಡಿರುವ ಅನುಭವದಿಂದ ಕೊಡಗಿನಲ್ಲಿ ಕೂಡ ರೇಷ್ಮೆ ಹುಳಗಳನ್ನು ಯಶಸ್ವಿಯಾಗಿ ಸಾಕಬಹುದೆಂಬ ಭರವಸೆ ನನಗಿದೆ.

ಆದ ಕಾರಣ ಕೊಡಗು ಸರಕಾರವು ಈ ಕೈಗಾರಿಕೆಯ ಕಡೆ ಸ್ವಲ್ಪ ಗಮನಕೊಟ್ಟು ಅದಕ್ಕೆ ತಕ್ಕ ಏರ್ಪಾಡನ್ನು ಬೇಗನೆ ಮಾಡುವದೆಂದು ಈ ಲೇಖಕನ ನಂಬಿಕೆ.

ಬಲ್ಯಾಟಂಡ ಗಣಪತಿ.

ವಯಸ್ಕರ ಶಿಕ್ಷಣ.

[ವಿದ್ಯಾ ಇಲಾಖೆಯಿಂದ]

"ವಯಸ್ಕರ ಶಿಕ್ಷಣ"—ಈ ಯೋಜನೆಯು ಅನಕ್ಷರಸ್ಥರಿಗೆ ಅಕ್ಷರ ಕಲಿಯುವದು ಮತ್ತು ಓದುಗಾರಿಕೆ— ಇವುಗಳ ಜೊತೆಗೆ ಪ್ರಜಾ ಧರ್ಮಗಳನ್ನು ತಿಳಿಸುವ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಪ್ರಜಾಧರ್ಮಗಳಲ್ಲಿ ನಮ್ಮ ನಾಡಿನ ರಾಷ್ಟ್ರಗೀತೆಗೆ ಗೌರವ ಕೊಡುವುದು ಮುಖ್ಯವಾದ ಪ್ರಜಾಧರ್ಮ.

ರಾಷ್ಟ್ರಗೀತೆಯನ್ನು ಹಾಡುವ ಧಾಟಿ, ಅದರ ಅರ್ಥ, ಹಾಡುವಾಗ ಅನುಸರಿಸಬೇಕಾದ ನಿಯಮಗಳು ಮತ್ತು ರಾಷ್ಟ್ರಗೀತೆಯು ಏನನ್ನು ಹೇಳುತ್ತದೋ ಅದರಂತೆ ನಾವು ವ್ಯವಹಾರದಲ್ಲಿ ನಡೆದುಕೊಳ್ಳುವುದು ಇತ್ಯಾದಿ ವಿಚಾರಗಳನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಲೇಬೇಕು.

ಹಲವು ವಿದ್ಯಾವಂತರು ಇವನ್ನು ತಿಳಿದು ಆದರಂತೆ ಆಚರಿಸುತ್ತಾರೆ. ತಿಳಿದವರಲ್ಲಿ ಹಲವರು ಮತ್ತು ಕೆಲವು ಗ್ರಾಮಾಂತರಗಳಲ್ಲಿರುವ ನಿರಕ್ಷರಸ್ಥರು ರಾಷ್ಟ್ರಗೀತೆಯ ವಿಚಾರ, ಮೇಲೆ ಹೇಳಿರುವ ಅಂಶಗಳನ್ನು ತಿಳಿದಿಲ್ಲ. ಇನ್ನಾದರೂ ತಿಳಿಯದಿದ್ದರೆ ದೋಷರ. ಪಟ್ಟಣಗಳಲ್ಲಿ ಮತ್ತು ಕೆಲವು ಗ್ರಾಮಾಂತರಗಳಲ್ಲಿ ಸಭೆಗಳನ್ನೇರ್ಪಡಿಸಿದಾಗ ಚೆನ್ನಾಗಿ ರಾಷ್ಟ್ರಗೀತೆಯನ್ನು ಹಾಡುತ್ತಾರೆ. ಇತರ ಕಡೆಗಳಲ್ಲಿ ಹಾಡುವ ವಿಧಾನವು ಹಾಡುವಾಗ ಅನುಸರಿಸುವ ನಿಯಮಗಳೂ ಇನ್ನೂ ಸುಧಾರಿಸಿಲ್ಲ.

ನಮ್ಮ ರಾಷ್ಟ್ರಗೀತೆ

ನಮ್ಮ ರಾಷ್ಟ್ರಗೀತೆ 'ಜನಗಣಮನ' ಎಂಬುದು. 'ವಂದೇ ಮಾತರಂ' ಎಂಬ ಗೀತೆಯನ್ನೂ ಹಾಡುತ್ತಾರೆ. 'ಜನಗಣಮನ' ಇದನ್ನು ಬರೆದವರು ರವೀಂದ್ರನಾಥ ಠಾಕೂರರು. ಇದರಲ್ಲಿ ಜನರಗಣಗಳ ಮನಸ್ಸಿಗೆ ಅಧಿನಾಯಕನಾಗಿ ಭಾರತದ ಭಾಗ್ಯವನ್ನು ವಿಧಾಯಕ ಮಾಡುವ ಸರ್ವಶಕ್ತಿಯನ್ನರಿತು ಪ್ರಾರ್ಥನೆ ಇದೆ. ಈ ರಾಷ್ಟ್ರಗೀತೆಯಲ್ಲಿರುವ ಐದು ಚರಣಗಳಲ್ಲಿ ಮೊದಲನೇ ಚರಣವನ್ನು ಸಭೆಯಲ್ಲಿ ಹಾಡಬೇಕು.

ಜನಗಣಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ಗುರ್ಜರ ದ್ರಾವಿಡ ವಂಗ
ಉತ್ಕಲ ವಿಂಧ್ಯ ಹಿಮಾಚಲ ಯಮುನಾ
ಗಂಗಾ ಜಲಧಿ ತರಂಗ
ತವ ಶುಭ ನಾಮೇ ಜಾಗೇ
ತವ ಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಳ ದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯಹೇ

ರಾಷ್ಟ್ರ ಗೀತೆಯ ಅರ್ಥ

ಜನರ ಮನಸ್ಸಿನ ಅಧಿನಾಯಕನೇ, ಭಾರತ ಭಾಗ್ಯ ವಿಧಾಯಕನೆ ನಿನಗೆ ಜಯವಾಗಲಿ. ಕಾಮರೂಪ (ಅಸ್ಸಾಂ), ಪಂಜಾಬ್, ಮರಾಠ, ಗುರ್ಜರ (ಗುಜರಾತ್), ದ್ರಾವಿಡ (ದಕ್ಷಿಣ ಭಾರತ), ವಂಗ (ಬಂಗಾಳ) ಈ ಪ್ರಾಂತ್ಯಗಳನ್ನೂ ಉತ್ಕಲ (ಒರಿಸ್ಸಾ), ವಿಂಧ್ಯ ಹಿಮಾಚಲ ಮೊದಲಾದ ಪರ್ವತಗಳನ್ನೂ ಒಳಕೊಂಡಿರುವೆ. ಯಮುನಾ, ಗಂಗಾ ಮೊದಲಾದ ನದಿಗಳೂ ಸಮುದ್ರದ ಅಲೆಗಳೂ ನಿನ್ನ ಮಂಗಳ ನಾಮಕ್ಕೆ ಎಚ್ಚರಗೊಂಡಿವೆ. ನಿನ್ನ ಶುಭ ಆಶೀರ್ವಾದವನ್ನೂ ಧರಿಸಿಕೊಂಡಿವೆ. ನಿನ್ನ ಕೀರ್ತಿಯ ಹಾಡನ್ನು ಹಾಡುತ್ತಿವೆ. ಜನರಿಗೆ ಮಂಗಳವನ್ನುಂಟು ಮಾಡುವವನೇ! ಭಾರತ ಭಾಗ್ಯವಿಧಾಯಕನೇ ನಿನಗೆ ಜಯವಾಗಲಿ, ಜಯವಾಗಲಿ, ಜಯವಾಗಲಿ.

ರಾಷ್ಟ್ರಗೀತೆ ಎಂದರೇನು?

1. ಒಂದು ನಾಡಿನ ಎಲ್ಲ ಪ್ರಜೆಗಳು ತಮ್ಮ ನಾಯ್ನಾಡನ್ನು ಹೊಗಳಿ ಹೇಳುವ ಹಾಡು.

2. ಈ ಹಾಡಿನಲ್ಲಿ ಆ ನಾಡಿನ ವರ್ಣನೆ ಇರುತ್ತದೆ.

3. ಈ ಹಾಡು ಆ ನಾಡಿನ ಹಿತವನ್ನೂ ಅಭಿವೃದ್ಧಿಯನ್ನೂ ಕೋರುತ್ತದೆ.

4. ಒಂದು ಸ್ವತಂತ್ರ ನಾಡಿಗೆ ನಾಲ್ಕು ಕಲಶಗಳಿರುತ್ತವೆ.

1 ರಾಷ್ಟ್ರಗೀತೆ
2. ರಾಷ್ಟ್ರಧ್ವಜ
3. ರಾಷ್ಟ್ರಮುದ್ರೆ
4. ರಾಷ್ಟ್ರಾಧ್ಯಕ್ಷ

ಈ ನಾಲ್ಕು ಕಲಶಗಳನ್ನೂ ಗೌರವದಿಂದ, ಭಕ್ತಿಯಿಂದ ಕಾಣುವುದು ಪ್ರಜೆಯ ಕರ್ತವ್ಯ.

5 ರಾಷ್ಟ್ರಗೀತೆ ಆ ನಾಡನ್ನು ನೆನಪು ಮಾಡಿಕೊಂಡಾಗ ಹೇಳುವ ಮಂತ್ರ, ಮಂಗಳಗೀತ.

6. ಪ್ರತಿ ಪ್ರಜೆಯೂ ಅದಕ್ಕೆ ಗೌರವ ಕೊಡಲೇಬೇಕು.

ಹಾಡುವಾಗ

1. ಪ್ರತಿಯೊಬ್ಬನೂ ನಿಂತಿರಬೇಕು.

2 ಹಾಡುವಾಗ ಅಪಸ್ವರಕ್ಕೆ ಎಡೆ ಕೊಡಬಾರದು

3. ಹಾಡುವಾಗ ಸೈನಿಕನಂತೆ ಶಿಸ್ತಿನಿಂದ ವರ್ತಿಸಬೇಕು.

4. ಕೈಕಾಲುಗಳನ್ನು ಆಡಿಸಬಾರದು. ನೆಟ್ಟಗೆ ನಿಂತು ನಿಶ್ಚಲ ಮನಸ್ಸಿನಿಂದ ಹಾಡಬೇಕು.

5 ರಾಷ್ಟ್ರಗೀತೆ ಹಾಡುತ್ತಿರುವಾಗ ಓಡಾಡಬಾರದು ಮಲಗಿಬಾರದು, ಕುಳಿತಿರಬಾರದು.

ಯಾವಾಗ ಹಾಡಬೇಕು

1. ಸಾರ್ವಜನಿಕ ಕಾರ್ಯಕ್ರಮಗಳಲ್ಲಿ
2. ಧ್ವಜಾರೋಹಣ ಮಾಡುವಾಗ
3. ಸಾರ್ವಜನಿಕ ಸಭೆಗಳು ಮುಗಿದಾಗ
4. ರಾಷ್ಟ್ರೀಯ ಹಬ್ಬಗಳ ಕಾರ್ಯಕ್ರಮ ಮುಗಿದಾಗ ಹಾಡಬೇಕು.

ಯಾವಾಗ ಹಾಡಬಾರದು

1. ಮದುವೆ ಮುಂಜಿ ಮುಂತಾದ ಸಾಂಸಾರಿಕ ಉತ್ಸವಗಳಲ್ಲಿ.

2. ಸಂಗೀತ ಕಚೇರಿಗಳಲ್ಲಿ ಸಂಗೀತಗಾರರು ಕೀರ್ತನೆಯಂತೆ ರಾಗವಾಗಿ.

3. ಅಮಂಗಳಕರವಾದ ಸಮಯ ಮತ್ತು ಕಾರ್ಯಕ್ರಮಗಳಲ್ಲಿ

4. ಸಾರ್ವಜನಿಕ ಕಾರ್ಯಕ್ರಮಗಳ ಪ್ರಾರಂಭವಾಗುವದಕ್ಕೆ ಮುಂಚೆ ಪ್ರಾರ್ಥನೆಯಾಗಿ ಹಾಡಬಾರದು.

ಹತ್ತು ರೂ. ಬಹುಮಾನ

ನನ್ನ ಬಾಪ್ತು ಸಾಧಾರಣ 4½ ಅಡಿ ಎತ್ತರದ ಒಂದಡಿ ಉದ್ದದ ಹಿಂಗೋಡಿನ ಸಾಧಾರಣ ಬಿಳಿ ವರ್ಣದ ಗಬ್ಬವಾಗಿರುವ ಎಮ್ಮೆಯೊಂದು ಹೊರೂರು ತೋಟದಿಂದ ಕಾಣೆಯಾಗಿದೆ. ಪತ್ತೆ ಹಚ್ಚಿ ಕೊಟ್ಟವರಿಗೆ ಹತ್ತು ರೂಪಾಯಿಗಳ ಬಹುಮಾನ ಕೊಡಲಾಗುವದು.

ಚೆಪ್ಪುಡೀರ ಸಿ. ನಾಣಯ್ಯ,
ಹೊರೂರು, ಸುಂಟಿಕೊಪ್ಪ.

Auction Sale.

2 Sindhi and 1 Shaiwal bull calves will be sold by public auction at 12 noon on saturday the 28th June 1952 at Koodige. For further particulars please apply to the Chief Veterinary Officer, Coorg, Mercara.

A. M. MUTHAPA.
Chief Veterinary Officer.

॥ ಪರೀಕ್ಷಾ ಫಲಿತಾಂಶ ॥

ಲೇ:— ಶ್ರೀ ಕೆ. ಬಿ. ಐಯ್ಯಪ್ಪ, ಬಿ. ಎ., ಬಿ. ಟಿ., ನಾಪೋಕ್ಲು.

ಈಗ ತಾನೆ ಹೊರಬಿದ್ದಿರುವ ಪರೀಕ್ಷಾ ಫಲಿತಾಂಶದ ಸಲುವಾಗಿ ಸಾರ್ವಜನಿಕರಲ್ಲಿ ಭಿನ್ನಾಭಿಪ್ರಾಯಗಳೂ, ತಪ್ಪಭಿಪ್ರಾಯಗಳೂ ಉಂಟಾಗಿರುವುದರಿಂದ ಈ ಲೇಖನವನ್ನು ಬರೆದುದಾಗಿದೆ. ವರ್ಷಾಂತ್ಯದ ಫಲಿತಾಂಶವು ಅಧ್ಯಾಪಕರ ಯೋಗ್ಯತೆಯನ್ನೂ, ವಿದ್ಯಾಪೀಠದ ಖ್ಯಾತಿಯನ್ನು ಅಳೆಯುವ ಮಾನವಿಧಿಯೆಂದು ಸರ್ವ ಪೋಷಕರು ಭಾವಿಸುವುದು ಸಹಜ. ಫಲಿತಾಂಶವು ಗಣನೀಯವಾಗಿದ್ದರೆ, ಸರ್ವರೂ ಮೆಚ್ಚುವರು; ನಿರೀಕ್ಷಣೆಯನ್ನು ಎಟುಕದಿದ್ದರೆ ಅಧ್ಯಾಪಕರನ್ನು ತೆಗಳುವರು ಇದು ಸಾಮಾನ್ಯ ರೂಢಿ.

ರಾಜಕೀಯ ಗೊಂದಲದಿಂದ ಅಲ್ಲೋಲಕಲ್ಲೋಲವಾಗಿದ್ದ ವಿದ್ಯಾರಂಗವು ಈಗೀಗ ಚೇತರಿಸಿಕೊಳ್ಳುತ್ತಿದೆ. ಆದರೂ ವಿದ್ಯೆಯತ್ತ ವಿದ್ಯಾರ್ಥಿಗಳ ಶ್ರದ್ಧೆ ಬಹಳ ಕನಿಷ್ಠವಾಗಿದೆ. ಶಾಲೆಗೆ ಹೋಗುವುದು ಕಾಲಹರಣಕ್ಕಲ್ಲದೆ, ಭಾವೀ ಜೀವನವನ್ನು ರೂಪಿಸಲಿಕ್ಕಲ್ಲವೆಂಬ ಅವಿಚಾರ ಬಾಲಕರಲ್ಲಿದೆ. ಶಿಸ್ತು ಹಾಗೂ ಸಮಯಪಾಲನೆ ನಶಿಸಿ ಗುರು ಶಿಷ್ಯರಲ್ಲಿ ಪರಸ್ಪರ ಪ್ರೀತಿಯುಕ್ತ, ಸಂಪರ್ಕ ಮರೆಯಾಗುವಾಗ, ವಿದ್ಯೆಯ ಗುರುತು ಆಕರ್ಷಣೀಯವಾದ ಪೋಷಾಕಿನಲ್ಲಿ, ಶರೀರ ಅಲಂಕಾರದಲ್ಲಿ ವಿದ್ಯೆಗೆ ಸಂಬಂಧವಾದ ಚಟುವಟಿಕೆಗಳಲ್ಲಿ ಭಾಗವಹಿಸುವುದರಲ್ಲಿ ಎಂಬ ಭಾವನೆಯನ್ನು ಮಾಡುತ್ತಿದೆ. ದಂದುಗಾರಿಕೆಯನ್ನು ನಿಗ್ರಹಿಸಿ, ವಿತನ್ಮಯವನ್ನು ಅಭ್ಯಾಸಿಸಿದರೆ ಸಕಲ ಪ್ರಾಪಂಚಿಕ ಆಕರ್ಷಣೆಗಳು ದೂರವಾಗುತ್ತವೆ. ಪುಸ್ತಕದತ್ತ ಮನಸ್ಸು ಸೆಳೆಯುತ್ತದೆ.

ಶಿಕ್ಷಾರಹಿತ ಶಾಲೆಗಳಾಗಬೇಕೆಂಬ ತತ್ತ್ವ ವಿದ್ಯಾರ್ಥಿಗಳ ಏಳಿಗೆಗೆ ಬಾಧಕವಾಗಿದೆ. ಅಂದರೆ ಪ್ರತಿಯೊಂದಕ್ಕೂ ದಂಡ ಪ್ರಯೋಗಿಸಿ, ಬಾಲಕರ ಮನಸ್ಸಿನಲ್ಲಿ ಹೆದರಿಕೆಯನ್ನು ಕಲ್ಪಿಸಬೇಕೆಂದಲ್ಲ. ಅವಶ್ಯವಿದ್ದಲ್ಲಿ ಯಥಾರ್ಥ ಶಿಕ್ಷೆಯನ್ನು ವಿಧಿಸಲೇಬೇಕು. ಬೇಕೆಂದು ಹಾದಿ ತಪ್ಪಿ ಹೋಗುವಾಗ ಉತ್ತಮ ಸಹಪಾಠಿಗಳನ್ನು ದುರ್ಮಾರ್ಗದಲ್ಲಿ ಸೆಳೆಯುವಾಗ ವ್ಯಕ್ತಿಯ ಮನೋಧರ್ಮ ಶುದ್ಧಿಗಾಗಿ ಶಿಕ್ಷೆಯು ಅವಶ್ಯಕವಾಗಿದೆ. ಮಾಡಿದ ತಪ್ಪಿಗೆಲ್ಲಾ ಜುಲ್ಮಾನೆ ವಿಧಿಸಿದರೆ ತಂದೆ ತಾಯಿಗಳಿಗೆ ತೊಂದರೆಯಲ್ಲದೆ ವಿದ್ಯಾರ್ಥಿಗಳ ನಡತೆ ಉತ್ತಮವಾಗುವುದಿಲ್ಲ. ಆದ್ದರಿಂದ ಮಿತಿಗೊಳಪಟ್ಟ ಶಿಕ್ಷಾ ಪ್ರಯೋಗ ಖಂಡಿತವಾಗಿಯೂ ಪರೀಕ್ಷೆಯ ಫಲಿತಾಂಶವನ್ನು ಉತ್ತಮಗೊಳಿಸುವುದು.

ಪಬ್ಲಿಕ್ ಪರೀಕ್ಷೆಗೆ, ಸೆಲೆಕ್ಷನ್ ಇಲ್ಲದೆ ಸರ್ವರನ್ನೂ ಕಳುಹಿಸುವುದು ತಪ್ಪು. ಕೆಲವು ವರ್ಷಗಳಿಂದ ಹಾಗೆ ಮಾಡುತ್ತಿರುವುದರಿಂದ ವಿದ್ಯಾರ್ಥಿಗಳ ಮೇಲಿನ ಹತೋಟಿ ಇಲ್ಲದಾಗಿದೆ. ಸರ್ವರಿಗೂ ವಿದ್ಯೆ ಬೇಕು ನಿಜ; ಆದರೆ ವಿದ್ಯೆಗೊಂದು ಮಟ್ಟವೂ ಬೇಕು. ಇಲ್ಲದಿದ್ದರೆ ಅದು ಅವಿದ್ಯೆಯಾಗುವುದು. ತಮ್ಮ ಬಾಲಕರು ಅಪಜಯವನ್ನು ಪಡೆದರೆ, ಮೇಲಧಿಕಾರಿಗಳಿಗೆ ಅಧ್ಯಾಪಕರನ್ನು ದೂರಿ ಹೀಯಾಳಿಸಿ ಪತ್ರ ಬರೆಯುವ ದುರಾಭ್ಯಾಸವನ್ನು ಪೋಷಕರು ತೊಲಗಿಸಬೇಕು. ಅಧ್ಯಾಪಕರು ನಿಷ್ಪಕ್ಷಪಾತದಿಂದಲೂ, ನಿರ್ದಾಕ್ಷಿಣ್ಯದಿಂದಲೂ ಫಲಿತಾಂಶವನ್ನು ಗಣಿಸುವರಲ್ಲದೆ ಬಂಧು ಸಂಪರ್ಕವನ್ನು ಎಂದೂ ಇಟ್ಟುಕೊಳ್ಳಲಾರರು. ಉತ್ತರ ಪತ್ರಗಳನ್ನು ಪುನರ್ವಿಮರ್ಶೆ ಮಾಡಬೇಕೆಂಬ ಅಹಿತ ಹಾಗೂ ದುರಭಿಪ್ರಾಯ ಹಲವರಲ್ಲಿ ನೆಲಸಿರುವುದು ಯೋಗ್ಯತೆಯಲ್ಲ. ಅಧ್ಯಾಪಕರೇನೂ ಅಷ್ಟೊಂದು ಜವಾಬ್ದಾರಿಯನ್ನು ಅರಿಯದ ವ್ಯಕ್ತಿಗಳಲ್ಲ. ಪ್ರತಿಯೊಂದಕ್ಕೂ ಅರ್ಜಿ; ಇದರ ಬದಲು ಈ ಪೋಷಕರು ಉಪಾಧ್ಯಾಯರೊಡನೆ ಸಹಕರಿಸಲಿ ಅಲ್ಲದೆ ಉತ್ತಮಶೀಲ; ಅಲ್ಲಿದೆ ನೇರವಾದ ಹಾದಿ.

ಈಗಿನ ಶಿಕ್ಷಣ ಕ್ರಮಗಳು ಕೇವಲ ಪುಸ್ತಕ ಜ್ಞಾನವಾಗಿದೆ. ಮಕ್ಕಳ ಬುದ್ಧಿ ವಾಣಿಯಿಂದ ಮಾತ್ರ ಜ್ಞಾನವನ್ನು ಶೋಧಿಸಿ ತೇರ್ಗಡೆ ಮಾಡುವುದು ಆಧುನಿಕ ವಿಜ್ಞಾನ ಶಾಸ್ತ್ರಕ್ಕೆ ಕಿರೀಟವಿಟ್ಟ ಪ್ರಪಂಚದಲ್ಲಿ ಉಚಿತವಲ್ಲ. ರಚನಾತ್ಮಕ ಮತ್ತು ಉತ್ಪಾದಕ ಶಿಕ್ಷಣಾಭ್ಯಾಸದಲ್ಲಿ ಸಹ ಗಣನೆ ನಡೆಸತಕ್ಕದ್ದು. ಯೋಚನಾಶಕ್ತಿ ಬೆಳವಣಿಗೆಯಲ್ಲಿ ಕನಿಷ್ಠವಾಗಿರಬಹುದು ಒಬ್ಬ ಬಾಲಕನಲ್ಲಿ ಅಂದ ಮಾತ್ರಕ್ಕೆ ಅವನು ಅಯೋಗ್ಯನಲ್ಲ; ಆದರೆ ರಚನಾತ್ಮಕ ಶಕ್ತಿ ಅವನಲ್ಲಿ ತುಂಬಿ ತುಳುಕುತ್ತಿರಬಹುದು. ಈಗ ವಿದ್ಯಾರ್ಥಿಗಳು ತ್ರಿಭಾಷಾಭ್ಯಾಸ ಮಾಡಬೇಕಾಗಿದೆ (ಉದಾ: ಇಂಗ್ಲಿಷ್, ಕನ್ನಡ, ಹಿಂದಿ) ಭಾಷಾ ಶಕ್ತಿ ಎಲ್ಲರಲ್ಲಿ ಏಕ ರೀತಿಯಾಗಿರುವುದಿಲ್ಲ ಈ ಪಾಠ ಪಟ್ಟಿ, ಸ್ವಲ್ಪ ದೊಡ್ಡ ಹೊರೆಯೇ ಸರಿ.

ಈಗಿನ ಪ್ರೌಢ ಶಾಲಾ ಬಾಲಕರಿಗೆ ವಸ್ತುತಃ ನಡೆಯುತ್ತಿರುವ ವಿಷಯಜ್ಞಾನ ಬಹಳ ಕಡಿಮೆಯಾಗಿದೆ. ಸಮಾಜ ಜ್ಞಾನ ಕಾರ್ಯ ಪುಸ್ತಕಗಳಿದ್ದರೂ, ವಿಷಯಗಳು ದಿನೇ ದಿನೇ ವ್ಯತ್ಯಾಸ ಹೊಂದುತ್ತಿರುವುದರಿಂದ ವರ್ತಮಾನ ಪತ್ರಿಕೆಗಳನ್ನು ಓದುವ ಅಭ್ಯಾಸ ಮಾಡಬೇಕು. ನಮ್ಮ ಭಾರತ ದೇಶದಲ್ಲಿ ಸಂಭವಿಸುತ್ತಿರುವ ರಾಜಕೀಯ, ಆರ್ಥಿಕ ಸ್ಥಿತಿ, ಸಾಮಾಜಿಕ ಬದಲಾವಣೆಗಳನ್ನು ಬಾಲಕರು ತಿಳಿಯುತ್ತಿರಬೇಕು. ಆಂಗ್ಲ ಪತ್ರಿಕೆಗಳನ್ನು ಓದುವದರಿಂದ, ವಿಷಯ ಸಂಗ್ರಹ ಮಾತ್ರವಲ್ಲ; ಭಾಷಾ ಜ್ಞಾನ ಏರುವುದು.

ಶಾಲೆಯ ಕಾಲಪಟ್ಟಿ ವ್ಯವಸ್ಥೆಯಲ್ಲಿರುವ ಲೋಪದೋಷಗಳನ್ನು ತಿದ್ದುಪಡಿ ಮಾಡತಕ್ಕದ್ದು. ಈ ಕಾಲಪಟ್ಟಿಯನ್ನು ತಯಾರು ಮಾಡುವುದು ಸಾಮಾನ್ಯವಲ್ಲ. ಕಠಿಣ ಮತ್ತು ಪ್ರಮುಖ ಪಾಠಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಬೆಳಗಿನ ಕಾಲಗಳಲ್ಲಿಯೂ, ಸಾಮಾನ್ಯ ಪಾಠಗಳನ್ನು ಮಧ್ಯಾಹ್ನದ ನಂತರವೂ ಕಲಿಸಬೇಕಾದ ಅವಶ್ಯವಿದೆ. ಯೋಗ್ಯ ಅಧ್ಯಾಪಕರ ಅಭಾವದಿಂದಲೂ ಸ್ಥಳದ ಮತ್ತು ಸಾಮಾನುಗಳ ಅಡಚಣೆಯಿಂದಲೂ ಈ ಸುವ್ಯವಸ್ಥೆ ದುಸ್ಸಾಧ್ಯವಾಗಿದೆ. ಇದನ್ನು ಸರ್ವ ಪೋಷಕರು ಗಮನಿಸಬೇಕು.

ಈಗಿನ ತೇರ್ಗಡೆ ಬಹಳ ಅಧೋಗತಿಗೆ ಇಳಿದಿದೆ. ಒಂದು ಪಾಠದಲ್ಲಿ ಕೇವಲ ಶೇಕಡ ೧೦ ಸಂಖ್ಯೆ ಸಿಕ್ಕಿದರೂ ತೇರ್ಗಡೆ ಮಾಡುವುದು ಅನರ್ಥವಾಗಿದೆ. ಒಂದೇ ಪರೀಕ್ಷೆ ಇರಕೂಡದು. ಪರೀಕ್ಷೆಯೆಂಬ ಸಾಧನ ಇದ್ದ ಮೇಲೆ, ಅದರ ರೀತಿ ನೀತಿಗಳೆಲ್ಲಾ ಗಣನೀಯವಾಗಿರಬೇಕು.

ಪರೀಕ್ಷಾರ್ಥಕ ಪುಸ್ತಕಗಳೂ, ಅರ್ಥ ಪುಸ್ತಕಗಳೂ ನಮ್ಮ ವಿದ್ಯಾರ್ಥಿಗಳನ್ನು ಹಾಳು ಮಾಡುತ್ತಿವೆ. ಉಪಾಧ್ಯಾಯರು ಹೇಳುವತ್ತ ಗಮನ ಕೊಡದೆ, ಅಧಿಕ ಸಂಖ್ಯೆ ಈ ರೀತಿಯ ಪುಸ್ತಕಗಳನ್ನು ಹೊಂದಿಕೊಂಡಿರುವುದರಿಂದ ಸೋಲುವವರ ಸಂಖ್ಯೆ ಹೆಚ್ಚುತ್ತಿದೆ.

ಬಡತನದ ಬಾಧೆಯಿಂದ ಅನೇಕ ವಿದ್ಯಾರ್ಥಿಗಳಿಗೆ ಮನೆಯಲ್ಲಿ ಓದಲು ಸಾಕಷ್ಟು ಸೌಕರ್ಯಗಳಿಲ್ಲ. ಎಲ್ಲಾ ಪುಸ್ತಕಗಳನ್ನು ಕೊಂಡುಕೊಳ್ಳಲು ಧನವಿರುವುದಿಲ್ಲ ಅನೇಕರು ೫-೬ ಮೈಲು ದೂರದಿಂದ ನಡೆದು ಬರುವದರಿಂದ, ಓದಲಿಕ್ಕೆ ಸಮಯವಿಲ್ಲ. ಸಮಯವಿದ್ದರೂ ಆಯಾಸಗೊಂಡ ದೇಹದಲ್ಲಿ ಮನಸ್ಸು ಅಸ್ಥಿರವಾಗಿದ್ದು ಓದುವ ಲವಲವಿಕೆ ಇರಲಾರದು.

ಈಗಿನ ವಿದ್ಯಾರ್ಥಿಗಳು (ಎಳೇ ಪ್ರಾಯದವರು ಸಹ) ನಾನಾ ರೀತಿಯ ದುರಭ್ಯಾಸಗಳನ್ನು ಅನುಸರಿಸುವರು. ಸಿನಿಮಾ ಸೇವನೆ, ಹೊಗೆ ಸೇವನೆ, ಇವುಗಳಿಂದ ಪುಸ್ತಕಗಳೆಲ್ಲಾ ಮೂಲೆ ಪಾಲಾಗುತ್ತಿವೆ. ಇದನ್ನು ಮಾತಾಪಿತೃಗಳು ನಿಗ್ರಹಿಸತಕ್ಕದ್ದು. ಅವರಿಗೆ ಶಾಲೆಗಳಿಂದ ಮರಳಿ ಹೋದರೂ, ಯಾವದೊಂದು ರೀತಿಯ ಕಸುಬುಗಳನ್ನು ಕೈಗೊಳ್ಳದಿರುವ ಉದಾಹರಣೆಗಳು ಅನೇಕ ಇವೆ. ಪೋಷಕರು ಈ ವಿಷಯದಲ್ಲಿ, ಅಧ್ಯಾಪಕರೊಡನೆ ಕಾಯಾ ವಾಚಾ ಮನಸಾ ಸಹಕರಿಸಬೇಕು.

ಧಾರ್ಮಿಕ ಶಿಕ್ಷಣ ಖಡ್ಡಾಯವಾಗಿ ಪ್ರತಿಯೊಂದು ಶಾಲೆಯಲ್ಲಿ ಇರಬೇಕೆಂದು ನನ್ನ ಅಭಿಪ್ರಾಯ. ಇದರಿಂದ ನೈತಿಕಾಭಿವೃದ್ಧಿಯೂ, ಗುರು ಭಕ್ತಿ, ಹಿರಿಯರಲ್ಲಿ ಭಕ್ತಿ, ಶಾಲಾಮಾತೆಯ ಹಾಗೂ ವಿದ್ಯಾದೇವತೆಯ ಮೇಲೆ ಪ್ರೀತಿ ಅಭಿಮಾನ ಹೆಚ್ಚಿ, ಉತ್ತಮ ಗುಣಶೀಲರಾಗಿ ತಮ್ಮ ಜವಾಬ್ದಾರಿಕೆಯನ್ನು ಸರಿಯಾಗಿ ಅರಿಯುವರು. ಶಾಂತ ಸ್ವಭಾವ ಮೊಳೆಯುವದು. ಈ ರೀತಿ ಹಿಂಸಾರಹಿತ ಶಾಂತ ಮಾರ್ಗಿಯಾಗುವಾಗ ವಿದ್ಯೆಯಲ್ಲಿಯೇ ಕೃತಕೃತ್ಯನಾಗಬೇಕೆಂಬ ಮನೋನಿರ್ಧಾರ ತಾನಾಗಿಯೇ ಹೊರಹೊಮ್ಮುವುದು.

ಇದೆಲ್ಲದಕ್ಕಿಂತಲೂ, ಶಾಲಾಧಿಕಾರಿಗಳಲ್ಲಿಯೂ ಮತ್ತು ಮಾತಾಪಿತೃಗಳಲ್ಲಿಯೂ ಅತೀ ನಿಕಟ, ಪರಸ್ಪರ ಉದಾತ್ತ ಸಹಕಾರ ಅತ್ಯಾವಶ್ಯಕ. ಈ ಅನಿವಾರ್ಯ ಧ್ಯೇಯವಿದ್ದರೆ ದೌರ್ಜನ್ಯವನ್ನು ಸೌಜನ್ಯದಿಂದ ಪ್ರತಿಭಟಿಸಬಹುದು. ದುಷ್ಟ ಸತ್ವಗಳನ್ನು ಸಮಾಜ ಸೇವ ದಿಂದ ಗೆಲ್ಲಬಹುದು. ಪೋಷಕರು ಆಗಿಂದಾಗ್ಗೆ ಶಾಲೆಗೆ ಆಗಮಿಸುತ್ತಿದ್ದು ತಮ್ಮ ಮಕ್ಕಳ ದೈನಿಕ ಸ್ಥಿತಿಗತಿಗಳನ್ನು ಕೂಲಂಕುಶವಾಗಿ ತಿಳಿದರೆ, ಯಾವದೊಂದು ರೀತಿ ಭಿನ್ನಾಭಿಪ್ರಾಯ ಅಧ್ಯಾಪಕವೃಂದಕ್ಕೂ ಇವರಿಗೂ ಸಂಭವಿಸಲಾರದು. ವಿದ್ಯಾರ್ಥಿಗಳ ಸೋಲಿಗೆ ಪೋಷಕರ ಅಸಹಕಾರ, ಅಹಿತ ವರ್ತನೆ ಕಾರಣಾಂತರವಾಗುವುದರಲ್ಲಿ ಲವಲೇಶವೂ ಸಂಶಯವಿಲ್ಲ.

ಪ್ರತಿ ಶಾಲೆಯು ಮುಖ್ಯೋಪಾಧ್ಯಾಯರು ಘನ ಪಟ್ಟ ಆಡಳಿತ ಜ್ಞಾನ ಇರುವ ಉತ್ತಮಶೀಲ ಅಪರೂಪ ವ್ಯಕ್ತಿಗಳಾಗಬೇಕು. ಸಹೋಪಾಧ್ಯಾಯರೊಡನೆ ಸಹಕರಿಸುತ್ತ, ತಪ್ಪಿದರೆ ಮಾರ್ಗದರ್ಶಿಯಾಗಿ, ಆಡಳಿತ ರಹಸ್ಯ ಬಲ್ಲವರಾಗಿರಬೇಕು. ಉಳಿದ ಅಧ್ಯಾಪಕರೆಲ್ಲರೂ, ಮುಖ್ಯೋಪಾಧ್ಯಾಯರೊಡನೆ ಸಹಕರಿಸಲೇಬೇಕು ಒಗಟ್ಟು, ಪರಸ್ಪರ ಒಗ್ಗಟ್ಟು, ವಾತ್ಸಲ್ಯ ಇರಬೇಕು. ಕೆಲವು ಶಾಲೆಗಳಲ್ಲಿ ಉಪಾಧ್ಯಾಯರುಗಳಲ್ಲಿ ದ್ವಿಪಕ್ಷಗಳಿರುವುದು ಶೋಚನೀಯವಾಗಿದೆ. ಇದರಿಂದ ಮಕ್ಕಳಲ್ಲಿಯೂ ಎರಡು ಪಕ್ಷಗಳಾಗಿ ಶಾಲೆಯ ವ್ಯವಸ್ಥೆ ಶಿಥಿಲವಾಗುವುದು.

ಅಧ್ಯಾಪಕರೆಲ್ಲರೂ ತಮ್ಮ ದಿನ, ಹೊಣೆಗಾರಿಕೆಯನ್ನರಿತು ಕರ್ತವ್ಯನಿಷ್ಠೆಯಿಂದಲೂ ದಕ್ಷತೆಯಿಂದಲೂ ಕೆಲಸ ನಿರ್ವಹಿಸಬೇಕು. ಸಂಬಳ ಪ್ರಶ್ನೆ ಗೌಣವಿರುವುದೆಂದರೆ, ಅಸಹ್ಯ, ಹಾಗೂ ವಾಸ್ತವ ಶಿಕ್ಷಣ ಫಲಕ್ಕೆ ಸಾಯಾಗಿ ಗ್ರಹಿಸಬಹುದು. ಎಷ್ಟು ಕಷ್ಟಪಟ್ಟರೂ ಗೀತೆಯಲ್ಲಿ ಹೇಳಿದಂತೆ 'ಸ್ವಪ್ರಯತ್ನದಿಂದ ಏನು ಅಭಿವೃದ್ಧಿಯಾಗುವುದು' ಎಂಬ ಹಾಗೆ ಬಾಲಕರಲ್ಲಿ ಸ್ವಪ್ರಯತ್ನ ಹೆಚ್ಚಾಗಿದ್ದರೆ ಫಲಿತಾಂಶ ಉತ್ತಮವಾಗುವದು.

ಸಾಕಷ್ಟು ವಿದ್ಯಾವಂತರನ್ನು, ತರಬೇತಾದವರನ್ನೂ ಅಧ್ಯಾಪಕ ವೃತ್ತಿಗೆ ಆರಿಸಬೇಕು. ಕನಿಷ್ಠ ವೇತನವೂ ಸಮಯ ಮೀರಿ ದೊರೆಯುತ್ತಿರುವ ಸಂಬಳವು ಉಪಾಧ್ಯಾಯರ ಮನಸ್ಸಿನಲ್ಲಿ ಜಿಗುಪ್ಸೆ ಮತ್ತು ನಿರುತ್ಸಾಹವನ್ನು ಹೆಚ್ಚು ಮಾಡಿದೆ. ಇದರಿಂದ ಮನೆಯಲ್ಲಿ ಅಶಾಂತಿ, ಇದರಿಂದ ಮನಸ್ಸಿನಲ್ಲಿ ಅಶಾಂತಿ, ಮನಸ್ಸಿನ ಚಂಚಲದಿಂದ ಶಾಲೆಯಲ್ಲಿ ನಿರ್ವಿಘ್ನವಾಗಿ ದುಡಿಯುವದು ಅಸಾಧ್ಯ. ಆದ್ದರಿಂದ ಕಾಲಕ್ಕೆ ಸರಿ ತಕ್ಕ ಪ್ರಮಾಣದ ವೇತನವನ್ನೊದಗಿಸಬೇಕು.

ಸಾಕಷ್ಟು ವಿದ್ಯೆ ಗಳಿಸಿದ ಹಾಗೂ ತಜ್ಞ ತರಬೇತು ಪಡೆದವರು ಮಾತ್ರ ಅಧ್ಯಾಪಕ ವೃತ್ತಿಗೆ ಆರಿಸಬೇಕಾಗಿದೆ. ಪ್ರೈಮರಿ ಎಲಿಮೆಂಟರಿ ಶಾಲೆಗಳಲ್ಲಿ ಸೆಕೆಂಡರಿ ಗ್ರೇಡ್ ತರಬೇತಾದವರ ಸಂಖ್ಯೆ ಅತೀ ಕಡಿಮೆಯಾಗಿದೆ. ಕೆಲವು ಶಾಲೆಗಳಲ್ಲಿ ಒರೇ ಒಬ್ಬನು ಮಾತ್ರ ಇದ್ದಾನೆ.

ಪಶುವೈದ್ಯ ಶಾಸ್ತ್ರ.

ತಾರೀಖು 16-5-53ರ 'ಕೊಡಗು' ಪತ್ರಿಕೆಯ ಓದುಗರ ಓಲೆಯಲ್ಲಿ ಶ್ರೀ. ಕೆ. ತಿಮ್ಮಯ್ಯನ 'ದಯನೀಯ ಪಶುವೈದ್ಯ ಇಲಾಖೆ' ಎಂಬ ಒಂದು ವಿಮರ್ಶೆ ಬರೆದುದನ್ನು ನಾನು ಓದಿದೆನು.

ಶ್ರೀ. ಕೆ. ತಿಮ್ಮಯ್ಯನವರ ಮೊದಲಿನ ವಾಕ್ಯ 'ಈ ಇಲಾಖೆಯವರ ಕೆಲಸ ಪರಿಣಾಮಕಾರಿಯಾಗಿಲ್ಲ' ಎಂದು ಬರೆದಾಗ ಶ್ರೀಯುತರು ಅವರೇ ಕೊಡಗು ಎಂದು ತಿಳಿದುಕೊಳ್ಳಬಾರದೆಂದು ವಿನಂತಿ ಯಾವುದೇ ವಿಷಯದ ಮೇಲಾದರೂ ಹಲವರಿಗೆ ಹಲವು ವಿಧದ ಅಭಿಪ್ರಾಯಗಳಿರುತ್ತವೆ. ಆದರೆ ಯಾವ ವಿಷಯದ ಮೇಲಾದರೂ ವಿಮರ್ಶೆ ಬರೆಯುವ ಬಾಧ್ಯತೆಯನ್ನು ಪಡೆಯಬೇಕಾದರೆ ಆ ವಿಷಯವನ್ನು ಇಂದಿನ ಮಟ್ಟಿಗೆ ತಿಳಿದಿರುವಷ್ಟು ತಿಳಿದವನಾಗಿರಬೇಕು. ಮತ್ತು ಇನ್ನು ಹೆಚ್ಚು ತಿಳಿಯಲು ಹಂಬಲಿಸುವವನಾಗಿರಬೇಕು. ಹೀಗಲ್ಲದೆ ಓದುಗರ ಓಲೆಯಲ್ಲಿ ಪತ್ರಿಕಾ ಸಂಪಾದಕರು ಸ್ಥಳ ಕೊಡುವರೆಂದುಕೊಂಡು ಮನಸಿಗೆ ಬಂದಂತೆ ಬರೆದುಬಿಡುವುದು ಮೂರ್ಖತೆಯ ಹೆಗ್ಗುರುತು.

ಶ್ರೀ. ಕೆ. ತಿಮ್ಮಯ್ಯನವರ ಎರಡನೆಯ ವಾಕ್ಯ 'ದನಗಳ ಕಾಯಿಲೆಗೆ ಹಲವು ವರ್ಷಗಳಿಂದ ಚಿಕಿತ್ಸೆ ನಡೆಸುತ್ತಿದ್ದರೂ ಹೆಚ್ಚಿನ ಪ್ರಯೋಜನವಾಗಲಿಲ್ಲ' ಎಂಬುದು. ಇದು ವಿಚಾರ ಹೀನತೆಯಿಂದಲೂ ಮತ್ತು ನಿಜಾಂಶದ ಅರಿವಿಲ್ಲದ್ದರಿಂದಲೂ ಬರೆಯಲಾಗಿದೆ. ಶ್ರೀಯುತರ ದನಗಳಿಗೆ ಪ್ರಯೋಜನಕಾರಿಯಾಗಿರಲಿಕ್ಕಿಲ್ಲ. ಆದರೆ ಬಹಳ ಕಡೆ ಪ್ರಯೋಜನಕಾರಿಯಾಗಿದೆ. ಅವರಲ್ಲೂ ಅಂಟುರೋಗದ ಚಿಕಿತ್ಸಾ ವಿಭಾಗವು ಎಲ್ಲೆಡೆಯಲ್ಲೂ ಪ್ರಖ್ಯಾತಿ ಹೊಂದಿದೆ. ಶ್ರೀ. ಕೆ. ತಿಮ್ಮಯ್ಯನವರು ಹೇಳಿದ ಮಾತ್ರಕ್ಕೆ ಸತ್ಯವು ಸುಳ್ಳಾಗಲಾರದು. ಸತ್ಯದ ನಿಜತ್ವವನ್ನು ಜನರ ಮನಸಿನಲ್ಲಿ ಸ್ಥಾಪಿಸುವುದು ಕಷ್ಟ. ಸುಳ್ಳನ್ನು ಸ್ಥಾಪಿಸುವುದು ಸುಲಭ. ನ್ಯೂನತೆ ಇಲ್ಲದ ಶಾಸ್ತ್ರವು ಭೂಲೋಕದಲ್ಲಿ ಯಾವುದೂ ಇಲ್ಲ. ಸಜೀವ ವಸ್ತುಗಳ ಮೇಲೆ ಚಿಕಿತ್ಸೆ ನಡೆಸುವಾಗ, ಚಿಕಿತ್ಸೆ ಸಫಲವಾಗಲು ಕಾರಣಭೂತವಾದ ಅಂಶಗಳು ಹಲವಾರಿರುವುವು. ಮದ್ದು ಕೊಟ್ಟುಬಿಟ್ಟರೆ ಮಾತ್ರ ಸಾಲದು. ನನಗೆ ಕೊಡಗಿನಲ್ಲಿ ದನಗಳನ್ನು ಸಾಕುವ ರೀತಿಯ ಅನುಭವವಿದೆ. ಆದರೆ ಶ್ರಮವಹಿಸಿ ಆದಷ್ಟು ಉತ್ತಮ ರೀತಿಯಲ್ಲಿ ದನಗಳನ್ನು ಇಟ್ಟವರು ಬರೀ ಕೆಲವರು ಮಾತ್ರ. ನೂರರಲ್ಲಿ ತೊಂಭತ್ತೊಂಭತ್ತು ಮನೆಯಲ್ಲಿ ದನಗಳ ಪರಿಸ್ಥಿತಿ ವಿಪರೀತ. ಈ ಪರಿಸ್ಥಿತಿಯಲ್ಲಿ ಮದ್ದು ಕೊಟ್ಟು ಬಿಡಬೇಕು, ಪರಿಣಾಮಕಾರಿಯಾಗಿ ಬಿಡಬೇಕು, ಎಂದು ಭಾವಿಸುವುದು ನಿರರ್ಥಕ. ನಾನು ಸರ್ವ ಜನರನ್ನು ಹಳಿಯುವುದಲ್ಲ. ನಾನೂ ಅವರಲೊಬ್ಬನಾಗಿದ್ದೇನೆ. ನಮ್ಮ ಆರ್ಥಿಕ ಪರಿಸ್ಥಿತಿಯು ನಮ್ಮನ್ನು ನಮ್ಮ ದನಗಳ ಕಡೆಗೆ ಹೆಚ್ಚು ಗಮನ ಕೊಡಲು ಬಿಡುವುದಿಲ್ಲ. ಆದರೆ ಇದಕ್ಕಾಗಿ ಪಶುವೈದ್ಯ ಇಲಾಖೆಯನ್ನು ಹಳಿದು ಪ್ರಯೋಜನವಿಲ್ಲ. ಇದು ಮುಖವನ್ನು ಪರಿಹಾಸ್ಯಕ್ಕೆ ಈಡುಮಾಡಲು ಮೂಗು ತನ್ನನ್ನು ತಾನೇ ಕೊಯ್ದುಕೊಂಡಂತಾಗುವುದು.

ಹೌದು, ಕೆಲವು ಸಮಯ ಬೇರೆ ದೇಶಗಳಿಂದ ನಮಗೆ ಕಳುಹಿಸಲ್ಪಡುವ ಸಜೀವ ಔಷಧಗಳ ಜೀವಿತಾಂಶ ಕೊಡಗಿಗೆ ಬಂದು ತಲಪುವಾಗ ಹೋಗಿರಬಹುದು. ನಾನು ಕೊಡಗಿನಲ್ಲಿ ಕೆಲಸ ಮಾಡುತಿದ್ದಾಗ ಪಡೆದಿದ್ದ ಕಠಿಣತಮ ರಿಂಡರ್‌ಪೆಸ್ಟ್ ಜಾಡ್ಯದ ಅನುಭವದಿಂದ ನನಗೆ ಇದರಲ್ಲಿ ಸತ್ಯಾಂಶವಿದೆ ಎಂದು ಗೊತ್ತಿದೆ. ಶ್ರೀ. ಕೆ. ತಿಮ್ಮಯ್ಯನಂಥವರು ಉತ್ತೇಜನ ತೆಗೆದುಕೊಂಡು ಸರಕಾರವನ್ನು ಒತ್ತಾಯಪಡಿಸಿ ಸಜೀವ ಔಷಧ, ಸೀರಂ ಮೊದಲಾದುವುಗಳನ್ನು ತಯಾರಿಸುವ ಒಂದು ಸಣ್ಣ ವಿಭಾಗವನ್ನು ಕೊಡಗಿನ ಪಶುವೈದ್ಯ ಇಲಾಖೆಗೆ ಒದಗಿಸಿಕೊಡಲಿ. ಇದರಿಂದ ಹೆಚ್ಚು ಪ್ರಯೋಜನವಾಗುವುದು.

ಶ್ರೀಯುತರು ಕಾಲುಜ್ವರ ಮಡಿಕೇರಿಯಲ್ಲೇ ಇದೆ ಎಂದು ಬರೆದಿರುವರು. ಇದನ್ನು ಬರದಂತೆ ಮಾಡಲು ಮದ್ದಿಲ್ಲ. ಮತ್ತು ಇದರ ತೀಕ್ಷ್ಣ ಹರಡುವಿಕೆಗೆ ನಾವು ನಾವು ದನಗಳನ್ನು ಸಾಕುವ ರೀತಿ ಒಂದನೇ ಕಾರಣ. ಪಶುವೈದ್ಯ ಇಲಾಖೆಗೆ ಇದನ್ನು ಬರದಂತೆ ಮಾಡಲು ಸಾಧ್ಯವಿಲ್ಲ.

ಕೋಳಿಗಳ ಕಾಯಿಲೆ ಒಂದು ದೊಡ್ಡ ಸಮಸ್ಯೆಯಾಗಿದೆ. ಅದರ ವಿಷಯ ಇನ್ನೂ ಎಷ್ಟೊ ಕಂಡು ಹಿಡಿಯಬೇಕಾಗಿರುವುದು. ಕೋಳಿಗಳಿಗೆ ಬರುವ ಕಾಯಿಲೆಯಲ್ಲಿ ಈಗ ತಿಳಿದಿರುವ ಮಟ್ಟಿಗೆ 'ಕಾಲರ' ಮತ್ತು 'ರನಿಕೇಟ್'? ಮುಖ್ಯವಾದವುಗಳು. ಮೊದಲನೆಯದು ಅಷ್ಟು ಕಠಿಣವಾದುದಲ್ಲ. ಅದಕ್ಕೆ ಒಂದು ವೇಕ್ಸಿನ್ ಇದೆ. ಎರಡನೆಯದು ಬಹಳ ಕಠಿಣವಾದುದು. ಇದಕ್ಕಿರುವ ಸಜೀವ ಮದ್ದನ್ನು, ಅದನ್ನು ಮಾಡುವ ಸ್ಥಳದಿಂದ ಬರೀ ನೂರು ಮೈಲು ದೂರ ಕಳುಹಿಸಲು ಸಾಧ್ಯ; ಅಷ್ಟರಲ್ಲಿ ಅದರ ಜೀವಿತಾಂಶ ಕಳೆದು ಹೋಗುವುದೆಂದು ಕೇಳಿರುವೆನು. ಇದು ಕೆಲವು ವರ್ಷಗಳ ಮಾತು. ಹೇಗೂ ಈ ಕಾಯಿಲೆ ಬರದಂತೆ ಮಾಡಲು ಸರ್ವಸಾಮಾನ್ಯವಾಗಿ ಉಪಯೋಗಿಸಲು ಒಂದು ದೃಢವಾದ ಮದ್ದು ಇಷ್ಟರ ವರೆಗೆ ನನಗೆ ತಿಳಿದ ಮಟ್ಟಿಗೆ ಕಂಡು ಹಿಡಿದಿರುವುದಿಲ್ಲ. ಸರಕಾರಿ ಕೋಳಿ ಫಾರಂನಲ್ಲಿಯೂ ಕೋಳಿಗಳೇ ಇರುವುದು. ಕೋಳಿ ಸರಕಾರದ್ದು ಆದ ಮಾತ್ರಕ್ಕೆ ಕಾಯಿಲೆ ಅದನ್ನು ಬಿಡದು. ಶಾಸ್ತ್ರಜ್ಞರು ಇದಕ್ಕಾಗಿ ಶ್ರಮಿಸುತ್ತಿರುವರು. 'ಹಂಬಲಿಸಿ ಬೆಂಬಲವೆ ಮುಂಬರಿವ ಮಾರ್ಗ' ಎಂಬ ಮಾತಿದೆ. ಶ್ರಮಿಸುತ್ತಾ ಹೋದಂತೆ ಶ್ರಮವು ಫಲಕಾರಿಯಾಗುವುದು. ಆದ್ದರಿಂದ ಸಾಧಾರಣ ತರುವಂತಹ ವಿಮರ್ಶೆ ಇದ್ದರೆ ಒಳ್ಳೆಯದು. ಪರಿಹಾಸ್ಯಮಾಡುವಂತಹ ವಿಮರ್ಶೆಯಿಂದ ಪ್ರಯೋಜನವಿಲ್ಲ ಎಂಬುವುದನ್ನು ಶ್ರೀ. ಕೆ. ತಿಮ್ಮಯ್ಯನವರು ತಿಳಿಯಬೇಕು.

ಅಜ್ಜಮಾಡ ಬೊ. ಬೆಳ್ಯಪ್ಪ

ಹೈಯರ್ ಎಲಿಮೆಂಟರಿ ಶಾಲೆಗಳಲ್ಲಿ ತರಬೇತಾದ ಗ್ರಾಜ್ಯುವೇಟ್‌ಗಳನ್ನು ಮುಖ್ಯೋಪಾಧ್ಯಾಯರನ್ನಾಗಿ ಮಾಡುವುದು ಉತ್ತಮವೆಂದು ನನ್ನ ಅಭಿಪ್ರಾಯವಿದೆ. ಹೀಗೆ ಮಾಡಿದರೆ ಶಾಲಾ ಆಡಳಿತ ಹಾಗೂ ಶಿಸ್ತು ಫಲಿತಾಂಶ ಗಣನೀಯವಾಗುವುದು.

ಯಾವ ರೀತಿಯ ಶಾಲೆಯೇ ಆಗಲಿ ಸರಿಸಮಾನವಾದ ಭಿನ್ನಭೇದವಿಲ್ಲದ ಮಾಸಿಕ ವೇತನ ಆಯಾ ಗ್ರೇಡಿನವರಿಗೆ ಸಿಗಬೇಕಾಗಿದೆ. ಅಧ್ಯಾಪಕ ವೃತ್ತಿಗೆ ಸೇರುವಾಗ ಕನಿಷ್ಠ ವೇತನವೆಂದು ಗೊತ್ತಿರಲಿಲ್ಲವೋ ಎಂದು ಹಲವು ಬುದ್ಧಿವಂತರು ಹೇಳುತ್ತಾರೆ. ಅವರಿಗೆ ದೇಶದ ಆರ್ಥಿಕ ಶಾಸ್ತ್ರಜ್ಞಾನದ ಲವಲೇಶವೂ ತಿಳಿದಿಲ್ಲವೆಂದು ಭಾವಿಸಬೇಕಾಗಿದೆ. ಸರಿಯಾದ ಉಪಚಾರ ಇದ್ದರೆ ಪ್ರತಿಯೊಬ್ಬ ತನ್ನ ಕರ್ತವ್ಯವನ್ನು ದಕ್ಷತೆಯಿಂದಲೂ, ಉತ್ಸಾಹದಿಂದಲೂ ನಿರ್ವಹಿಸುವನು. ಆವಾಗ ಪೋಷಕರ, ಮಕ್ಕಳ, ಅಧ್ಯಾಪಕರ ಹಾಗೂ ಇಡೀ ದೇಶದ ಅಭಿವೃದ್ಧಿಯಾಗುವುದು.

ಇಂಟರ್ ಮೀಡಿಯೇಟ್ ಪರೀಕ್ಷಾ ಫಲಿತಾಂಶ.

ಕೊಡಗು ಸರಕಾರಿ ಕಾಲೇಜಿನಿಂದ ಕಳೆದ ಇಂಟರ್ ಮೀಡಿಯೇಟ್ ಪರೀಕ್ಷೆಗೆ ಕುಳಿತ ೭೮ ವಿದ್ಯಾರ್ಥಿಗಳಲ್ಲಿ ೫೨ ಜನರು ಅಂದರೆ ಶೇಕಡ ೬೬ ರಂತೆ ಪಾಸಾಗಿರುವರು. ಪಾಸಾದ ೫೨ ರಲ್ಲಿ ೧೭ ಜನರು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿರುವರು. ತೇರ್ಗಡೆಯಾದವರ ಹೆಸರನ್ನು ಇಲ್ಲಿ ಕೊಡಲಾಗಿದೆ.

ಪ್ರಥಮ ದರ್ಜೆ.

ಶ್ರೀಗಳಾದ ಪಟ್ಟು. ಎಸ್. ಕುಂದರ್, ಸಿ. ಎಸ್. ನಾಣಯ್ಯ, ಸಿ. ಆರ್. ಸತ್ಯನಾರಾಯಣ ಭಟ್, ಬಿ. ಜಿ. ಸೀತಾರಾಮ, ಆರ್. ಎಸ್. ಅಮ್ಮಣ್ಣ, ಟಿ. ಎಸ್. ಗೋಪಾಲ, ಕೆ. ಎಂ. ಕುಟ್ಟಯ್ಯ, ಬಿ. ಎಂ. ಮಂದಪ್ಪ, ಬಿ. ಎಂ. ರವೀಂದ್ರನಾಥ ರೈ, ಪಿ. ಆರ್. ಶ್ರೀನಿವಾಸರಾವ್, ಎನ್. ಎಂ. ಗಣಪತಿ, ಎಂ. ಕೆ. ಮಾದಪ್ಪ ಇವರುಗಳು ಶ್ರೀಮತಿಯರಾದ ಎ. ಕೆ. ದೇಚಮ್ಮ, ಕೆ. ಕೆ. ನಂಜಮ್ಮ, ಎನ್. ಜಿ. ಶೈಲ, ಸಿ. ಎಂ. ಬೊಳ್ಳಮ್ಮ ಮತ್ತು ಸಿ. ಕೆ. ಚಿಣ್ಣಮ್ಮ ಇವರುಗಳು.

ಪಾಸಾದವರು.

ಶ್ರೀಗಳಾದ ಕೆ. ಎಸ್. ಆನಂದ, ಸಿ. ಜಿ. ಚಂಗಪ್ಪ, ಎಂ. ಕೆ. ಚಂಗಪ್ಪ, ಡಿ. ಟಿ. ಮುತ್ತಪ್ಪ, ಕೆ. ವಿ. ನಾಗೇಂದ್ರ, ಜಿ. ಟಿ. ನಂಜಪ್ಪ, ಎ. ಪಟ್ಟು. ಪಾಲ್, ಬಿ. ಎಂ. ಪೂವಯ್ಯ, ಕೆ. ಎಂ. ಪೊನ್ನಪ್ಪ, ಕೆ. ಬಿ. ಬೋಪಣ್ಣ, ಎಂ. ಎಸ್. ಮಂಜುನಾಥ ವರ್ಮ, ಕೆ. ಕೆ. ನಾಗಪ್ಪಗೌಡ, ಕೆ. ಎ. ನಾಣಯ್ಯ, ಕೆ. ಎಂ. ಪೊನ್ನಪ್ಪ, ಬಿ. ಎ. ಪೂಣಚ್ಚ, ಎಸ್. ಬಿ. ಪೂವಯ್ಯ, ಡಿಸಾರಿಯೋ ಲೋಬೊ, ಬಿ. ಬಿ. ಸೋಮಯ್ಯ, ಸಿ. ಕೆ. ಸುಬ್ಬಯ್ಯ, ಪಿ. ಜಿ. ಸುಬ್ಬಯ್ಯ, ಎಂ. ಎಸ್. ಉತ್ತಪ್ಪ, ಆರ್. ವಿ. ಕೃಷ್ಣಮೂರ್ತಿ, ಕೆ. ಎಂ. ಸಿದ್ದಣ್ಣ, ಕೆ. ಎಂ. ಅಚ್ಚಪ್ಪ, ಬಿ. ಎಸ್. ಚಂಗಪ್ಪ, ಕೆ. ಕೆ. ಚಂಗಪ್ಪ, ಸಿ. ಎಂ. ಮೊಣ್ಣಪ್ಪ, ಎಂ. ಉಮೇಶ, ಟಿ. ವಿ. ವರದರಾಜು ಇವರುಗಳು ಮತ್ತು ಶ್ರೀಮತಿಯರಾದ ಎಂ. ಜಿ. ಸೀತಮ್ಮ, ಬಿ. ಕೆ. ಬೋಜಮ್ಮ, ಎಂ. ಪಿ. ಗಂಗಮ್ಮ, ಎಂ. ಎಂ. ನಿರ್ಮಲ, ಪಿ. ಎಂ. ಲೀಲಮ್ಮ ಮತ್ತು ಎ. ಸಿ. ಕಾಳಮ್ಮ ಇವರುಗಳು.

ಒಂದು ಮತ್ತು ೩ನೇ ಭಾಗ.

ಶ್ರೀಗಳಾದ ಕೆ. ಅಣ್ಣಾಜಿಗೌಡ, ಕೆ. ಎಸ್. ಕರುಣಾಕರನ್, ಎಂ. ರಾಘವಗೌಡ, ಬಿ. ಸಿ. ಸೋಮಯ್ಯ, ಎಂ. ಎಂ. ದೇವಯ್ಯ ಇವರುಗಳು.

ಎರಡು ಮತ್ತು ೩ನೇ ಭಾಗ.

ಶ್ರೀಗಳಾದ ಎಂ. ಪಿ. ಕರುಂಬಯ್ಯ, ಪಿ. ನಾಗರಾಜ ಅರಸ, ಎಂ. ಎಚ್. ನೂರ್‌ಮಹಮ್ಮದ್, ಸಿ. ವೆಂಕಟಸುಬ್ಬರಾಯ, ಎಂ. ಎನ್. ಮೈನಾವತಿಬಾಯಿ, ಎ. ಜಿ. ಚಿಣ್ಣಪ್ಪ, ಎನ್. ಎ. ಕಾವೇರಪ್ಪ, ಎಂ. ಪಿ. ಮುತ್ತಪ್ಪ, ಜಿ. ಕೆ. ಕಳಂಗಪ್ಪ ಇವರುಗಳು.

ಒಂದೊಂದು ಭಾಗದಲ್ಲಿ.

ಶ್ರೀ. ಎ. ಪಟ್ಟು. ಎಫ್ರಹಾಂ ಒಂದನೆಯ ಭಾಗದಲ್ಲೂ, ಶ್ರೀಗಳಾದ ಕೆ. ಎಸ್. ಬೋಪಯ್ಯ, ಯು. ಎಸ್. ರಾಮಣ್ಣಗೌಡ, ಸಿ. ಎಂ. ಪೊನ್ನಪ್ಪ, ಎಂ. ಸೀತಾರಾಮರಾವ್, ಸಿ. ಎ. ಬೋಪಯ್ಯ, ಎಂ. ಎಸ್. ನಾಚಪ್ಪ, ಪೈ. ಎಂ. ಮೀನಾಕ್ಷಿ ಇವರುಗಳು ಎರಡನೇ ಭಾಗದಲ್ಲೂ, ಬಿ. ಕೆ. ಪೊನ್ನಪ್ಪ ಇವರು ಮೂರನೇ ಭಾಗದಲ್ಲೂ ತೇರ್ಗಡೆಯಾಗಿರುವರು.

ಮಾರಾಟಕ್ಕಿದೆ.

ಪೊನ್ನಂಪೇಟೆ ಟೌನಿನ ಮಧ್ಯದಲ್ಲಿ 4 ಮಳಿಗೆಗಳುಳ್ಳ ವಾಸಕ್ಕೂ ಸಹ ಅನುಕೂಲತೆ ಇರುವ ಒಂದು ಮಹಡಿ ಅಂಗಡಿ ಮನೆ ಮಾರಾಟಕ್ಕಿದೆ. ಬೆಲೆ ರೂಪಾಯಿ 14,000/— ಅಥವ ಸಮೀಪದ ಬೆಲೆ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ಪತ್ತೆಗೆ ಬರೆಯಿರಿ.

ಡಾ. ಎಂ. ಎಂ. ಬೆಳ್ಯಪ್ಪ,
2920
ಗೋಕುಲಮ್ ರೋಡು,
ವಿ. ವಿ. ಮೊಹಲ್ಲಾ, ಮೈಸೂರು.
3-3

Edited printed and published by P. I. Belliapa at 'Kodagu' Press, Mercara, for Kodagu Ltd.

ಶ್ರೀ ಕೆ. ಸಿ. ಪೀತಾಂಬರರವರು,
"ಕೊಡಗು" ಏಜೆಂಟರು,
ಕೊಡ್ಲಿಪೇಟೆ.

Licence No. 60.
Licenced to Post without Prepayment.
Reg. No. M. 1580.
'KODAGU' MERCARA, (Coorg).

ಕೊಡಗು

ಸಂಪಾದಕರು:– ಪಿ. ಐ. ಬೆಳ್ಳಿಯಪ್ಪನವರು | ವಾರ್ಷಿಕ ಚಂದಾ ರೂ. 5–0–0.
ಸಂಪುಟ ೧೧ | ತಾರೀಕು ೨೦–೬–೧೯೫೨ನೇ ಶುಕ್ರವಾರ | ಸಂಚಿಕೆ ೩.

ಹಿಂದುಳಿದವರ ಹಿತಕ್ಕಾಗಿ.

ಕೊಡಗಿನಲ್ಲಿ ಹಿಂದುಳಿದವರೆನ್ನುವ ಜನರು ತುಂಬಾ ಇದ್ದಾರೆ. ಹರಿಜನರು ಕುಡಿಯರು, ಕುರುಬರು ಮುತ್ತಿತರ ಹಲವರು ಇರುವರು. ಇವರ ಉದ್ಧಾರದ ಬಗ್ಗೆ ಸರಕಾರವು ಇನ್ನೂ ಏನೂ ಮಾಡಿಲ್ಲವೆಂದು ಓದುಗರ ಓಲೆಯಲ್ಲಿ ಆಗಾಗ ಪತ್ರಗಳು ಬರುತ್ತಿರುತ್ತವೆ. ಈ ವಿಚಾರದಲ್ಲಿಯೂ ಮತ್ತು ಹಲವು ವಿಷಯಗಳ ಬಗ್ಗೆ ವಿಚಾರಿಸಲು ಗಿ ಕೊಡಗಿನ ಮುಖ್ಯ ಮಂತ್ರಿಯವರೂ, ಗೃಹ ಮಂತ್ರಿಯವರೂ ಕೊಟ್ಟ ಅಭಿಪ್ರಾಯಗಳನ್ನು ಕೊಡಲಾಗಿದೆ. ಕೊಡಗಿನಲ್ಲಿ ಭೂಮಿ ಇಲ್ಲದ ಹಿಂದುಳಿದವರಿಗೆ ಭೂಮಿಯನ್ನು ಹಂಚುವ ವಿಚಾರವನ್ನು ಸರಕಾರವು ಮಾಡುತ್ತಿದೆ,

ರಾಜಕೀಯ ಸಂತ್ರಸ್ತರಿಗೆ ಭೂಮಿ.

ಕೊಡಗು ಕಾಂಗ್ರೆಸು ತನ್ನ ಮೀಟಿಂಗಿನಲ್ಲಿ ಕೊಡಗಿನಲ್ಲಿ ಜೈಲಿಗೆ ಹೋದ ರಾಜಕೀಯ ಸಂತ್ರಸ್ತರಿಗೆ ಭೂಮಿ ಕೊಡುವ ವಿಚಾರದಲ್ಲಿ ಚರ್ಚಿಸಿ ಭೂಮಿ ಇಲ್ಲದ ಮತ್ತು ಕಡಿಮೆ ಭೂಮಿ ಇರುವ ರಾಜಕೀಯ ಸಂತ್ರಸ್ತರಿಗೆ ಸಹಾಯಾರ್ಥವಾಗಿ ಭೂಮಿ ಕೊಡುವ ನಿರ್ಣಯ ಮಾಡಬೇಕೆಂದು ಕಾಂಗ್ರೆಸು ಪಕ್ಷವು ಸರಕಾರಕ್ಕೆ ಶಿಫಾರಸ್ಸು ಮಾಡಿದೆಯೆಂದೂ ಸರಕಾರವು ಆ ವಿಚಾರ ಆಲೋಚಿಸಿ ರಾಜಕೀಯ ಸ್ಥಿತಿಗೆ ಗೌರವಾರ್ಥವಾಗಿ ಅಲ್ಲ; ಅವಶ್ಯವಿರುವ ರಾಜಕೀಯ ಪೀಡಿತರಿಗೆ ಸಹಾಯಾರ್ಥವಾಗಿ ಭೂಮಿ ಕೊಡಲು ನಿರ್ಣಯಿಸಬಹುದೆಂದೂ ಮುಖ್ಯ ಮಂತ್ರಿಯವರು ಹೇಳಿದರು

ನಮ್ಮ ಕಾಂಗ್ರೆಸ್ ಮಂತ್ರಿಮಂಡಳದ ಕಾರ್ಯಕಲಾಪಗಳು.

(ಕೊಡಗಿನಲ್ಲಿ ಕಾಂಗ್ರೆಸ್ ಮಂತ್ರಿ ಮಂಡಳವು ಅಧಿಕಾರಕ್ಕೆ ಬಂದು ಮೂರು ತಿಂಗಳುಗಳಾದವು. ಈ ಅಲ್ಪ ಅವಧಿಯಲ್ಲಿಯೇ ಮಂತ್ರಿ ಮಂಡಳದ ಕಾರ್ಯ ಕಲಾಪಗಳನ್ನು ಅಳೆದು ಅಭಿಪ್ರಾಯ ಹೇಳುವದು ಯುಕ್ತವಲ್ಲದಿದ್ದರೂ ನಮ್ಮ ಓದುಗರು ಆಗಾಗ್ಗೆ ಬರೆಯುವ ಮತ್ತು ಹೇಳುವ ದೂರುಗಳಿಗೆ ಉತ್ತರವಾಗಿ ಮಂತ್ರಿಗಳ ಅಭಿಮತವನ್ನೂ, ಅವರು ಮಾಡುತ್ತಿರುವ ಕೆಲಸದ ರೂಪರೇಷೆಗಳನ್ನೂ ವಾಚಕರಿಗಾಗಿ ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ 'G')

ಭೂಮಿ ಇಲ್ಲದವರಿಗೆ ಪೈಸಾರಿಯನ್ನು ಹಂಚಬೇಕಾಗಿರುವದು. ಆದರೆ ಗ್ರಾಮದ ಪೈಸಾರಿಗಳು ಮಾಜಿ ಸೈನಿಕರಿಗೆಂದೂ, ಹತ್ತಿರದ ಇತರರಿಗೆಂದೂ ಕೊಡಲ್ಪಟ್ಟು ಯಾವ ಗ್ರಾಮದಲ್ಲಿ ಎಷ್ಟು ಪೈಸಾರಿ ಇದೆ ಎಂಬುವುದೇ ಗೊತ್ತಾಗದಾಗಿದೆ. ಪ್ರತಿ ಗ್ರಾಮದಲ್ಲಿ ಗ್ರಾಮಿಣ ಜನರ ದನಕರುಗಳ ಮೇವಿಗಾಗಿ, ಸೌದೆ ಮೊದಲಾದವುಗಳಿಗಾಗಿ ಸ್ವಲ್ಪ ಪೈಸಾರಿಯನ್ನು ಖಡ್ಡಾಯವಾಗಿ ಇಡಲೇ ಬೇಕಾಗಿದೆ. ಆದ್ದರಿಂದ ಭೂಮಿ ಇಲ್ಲದ ಹಿಂದುಳಿದವರಿಗೂ, ಇತರರಿಗೂ ಎಲ್ಲಿ ಭೂಮಿ ಕೊಡಬಹುದೆಂದು ವಿಚಾರಿಸಿ ಕೊಡಬೇಕಾಗಿದೆ. ಆದ್ದರಿಂದ ಕೊಡಗು ಸರಕಾರವು ಒಂದು ಡಿಪಾರ್ಟ್‌ಮೆಂಟಲ್ ಕಮಿಟಿಯನ್ನು ನೇಮಿಸಿ ಎಲ್ಲೆಲ್ಲಿ ಎಷ್ಟೆಷ್ಟು ಪೈಸಾರಿ ಹಂಚಲು ದೊರೆಯುವದೆಂಬುದರ ವರದಿ ಮಾಡಲು ಏರ್ಪಡಿಸಿದೆ. ಇದರ ಪರಿಶೀಲನೆಯ ನಂತರ ಭೂಮಿ ಇಲ್ಲದ ಹಿಂದುಳಿದ ಹರಿಜನ ಮೊದಲಾದವರಿಗೆ ಭೂಮಿ ಹಂಚಲಾಗುವದು. ಕೊಡಗಿನ ಫಾರೆಸ್ಟಿನಲ್ಲಿ ಭೂಮಿ ಮಾಡಲು ಯೋಗ್ಯವಾದ ಸ್ಥಳಗಳಿವೆ. ಇವುಗಳನ್ನು ಕಾಡು ಕಡಿದು ಭೂಮಿ ಮಾಡಲು ಹಂಚಿದರೆ ತೊಂದರೆ ಇದೆಯೇ ಎಂದು ಫಾರೆಸ್ಟ್ ಇಲಾಖೆಯನ್ನು ವಿಚಾರಿಸಲಾಗುತ್ತಿದೆ. ಈ ಪೈಸಾರಿಗಳನ್ನು ಸಂಗ್ರಹಿಸಿ ವ್ಯವಸ್ಥಿತ ರೀತಿಯಲ್ಲಿ ಅರ್ಜಿ ಬರೆದುಕೊಂಡ ಭೂಮಿ ಇಲ್ಲದವರಿಗೆ ಭೂಮಿ ಹಂಚಲಾಗುವುದು.

ಅಲ್ಲದೆ ಕೆಲವು ಕಡೆ ಹರಿಜನರು ಮುತ್ತಿತರ ಹಿಂದುಳಿದವರು ಬೇರೆಯವರ ಸ್ಥಳದಲ್ಲಿ ಮನೆ ಕಟ್ಟಿಕೊಂಡಿರುವರು. ಆ ಸ್ಥಳಗಳಿಂದ ಅವರನ್ನು ಹೊರಡಿಸಲು ಆ ಜಮೀನಿನವರು ಯತ್ನಿಸುತ್ತಿರುವರು. ಆದರೆ ಸರಕಾರವು ಈ ವಿಚಾರವನ್ನು ಪರಿಶೀಲಿಸಿ ೧೩ ವರ್ಷಗಳಿಗಿಂತ ಮೇಲ್ಪಟ್ಟು ಒಂದು ಸ್ಥಳದಲ್ಲಿರುವವರಿಗೆ ಆ ಮನೆ ಸ್ಥಳವು ಹಕ್ಕಾಗುವಂತೆಯೂ, ಅದಕ್ಕೆ ಕಡಿಮೆ ವರ್ಷ ಇರುವವರಿಗೆ ಆ ಸ್ಥಳಗಳನ್ನು ಮಾಲೀಕರಿಂದ ಪಡೆದುಕೊಂಡೂ ಕೊಡುವ ಏರ್ಪಾಡು ಮಾಡಲಾಗುವುದು.

ರೇಶನಿಂಗ್.

ಕೊಡಗಿನ ಗಡಿ ಗ್ರಾಮಗಳನ್ನು ಬಿಟ್ಟು ಉಳಿದ ಪ್ರದೇಶದಲ್ಲಿ ಯಾವುದೇ ತಡೆಯಿಲ್ಲದೆ ಸ್ವಂತ ಉಪಯೋಗಕ್ಕಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಅರ್ಧಗ ನಿ ಬತ್ತ ಯಾ ಕಾಲುಗಾಡಿ ಅಕ್ಕಿಯನ್ನು ಯಾರಾದರೂ ಸಾಗಿಸಬಹುದೆಂದೂ, ಯಾರೂ ತಮ್ಮ ಉಪಯೋಗಕ್ಕಾಗಿ ೮೦ ಸೇರುಗಳಿಗೆ ಮಿಗಿಂದ ಅನಬಕ್ಕಿ ಹುರಿಮಾಡಿ ಇಟ್ಟುಕೊಳ್ಳಬಹುದೆಂದೂ ಸರಕಾರವು ಜಾಹೀರುಪಡಿಸಿದೆ. ಆದರೆ ಅಕ್ಕಿ, ಅವಲಕ್ಕಿ, ಹುರಿಗಾಳುಗಳನ್ನು ಮಾರುವವರು ರೇಶನ್ ಅಂಗಡಿಯ ಮಾಲಿಕನೇ ಮಾರಬೇಕೆಂದಿದೆ. ರೇಶನ್ ಅಂಗಡಿಯಲ್ಲಿ ರೇಶನ್ ಕಾರ್ಡುದಾರರಿಗೆ ರೂಪಾಯಿಗೆ ೩ ಸೇರು ಅಕ್ಕಿ ಕೊಡುವದನ್ನು ಹೆಚ್ಚಿಸಬೇಕೆಂದು ಕೆಲವು ಸಂಸ್ಥೆಗಳೂ, ಹಲವು ಓದುಗರೂ ಬರೆಯುತ್ತಿರುವ ವಿಚಾರದಲ್ಲಿ ಸರಕಾರವು ಏನೂ ಮಾಡಲಾಗದೆಂದೂ ಈಗಿರುವ ೩ ಸೇರಿನ ಬದಲು ರೂಪಾಯಿಗೆ ಕಾಲು ಸೇರು ಹೆಚ್ಚಿಸಿ ೩¼ ಸೇರು ಅಕ್ಕಿ ಕೊಡುವುದಕ್ಕೆ ವರ್ಷ ಒಂದರ ಸರಕಾರಕ್ಕೆ ಸುಮಾರು ೨ ಲಕ್ಷ ರೂಪಾಯಿ ನಷ್ಟ ಕಟ್ಟಿಕೊಳ್ಳಬೇಕಾಗುವ ದರಿಂದ ಸಬ್ಸಿಡಿ ಬೆಲೆಯನ್ನು ಹೆಚ್ಚಿಸಲಾಗುವದಿಲ್ಲ ಎಂದರು.

ಕೊಡಗಿನಿಂದ ಮೈಸೂರಿಗೆ ೭೦೦೦ ಟನ್ನು ಅಕ್ಕಿ ರಫ್ತಾಗದಿದ್ದರೆ ಈ ವರ್ಷ ಒಪ್ಪಂದವಾಗಿದ್ದು ಕೊಡಗಿನಲ್ಲಿ ಉಳಿದ ಹೆಚ್ಚು ತೋರಿ ಬಂದುದರಿಂದ ಮೈಸೂರಿನ ರಾಜ್ಯಕ್ಕೆ ಮಗು ಕೊಡಗಿಗೆ ಬಂದಿದ್ದ ಸಮಯದಲ್ಲಿ ಇನ್ನೂ ಹೆಚ್ಚಿನ ೫೦೦ ಟನ್ನು ಅಕ್ಕಿಯನ್ನು ಕೊಡಲಾಯಿತೆಂದೂ ಈಗ ಪ್ರೊಕ್ಯೂರ್ ಮಾಡಿದ ಅಕ್ಕಿ ಇನ್ನೂ ೫೦೦ ಟನ್ ಇದೆಯೆಂದೂ ಅದು ಕೊಟ್ಟರೆ ಒಟ್ಟು ೮೦೦೦ ಟನ್ ವರೆಗೆ ಕೊಟ್ಟಂತಾಗುವದೆಂದೂ ಹೇಳಿದರು.

ಸೆಂಟ್ರಲ್ ಎಕ್ಸೈಸ್ ಉತ್ಪತ್ತಿ

ಕೊಡಗಿನಿಂದ ಸೆಂಟ್ರಲ್ ಸರಕಾರಕ್ಕೆ ಹೋಗುವ ಸೆಂಟ್ರಲ್ ಎಕ್ಸೈಸ್ ಉತ್ಪತ್ತಿಯಿಂದ ಕೆಲವಂಶವನ್ನು ಕೊಡಗಿಗೆ ಕೊಡುವ ಬಗ್ಗೆ ಕೇಂದ್ರ ಸರಕಾರದ ಫೈನಾನ್ಸ್ ಕಮಿಷನ್ನಿಗೆ ಒಂದು ಮೆಮೋರಾಂಡಮನ್ನು ಸ್ಥಳೀಯ ಸರಕಾರವು ಕಳುಹಿಸಿದೆಯೆಂದೂ, ಈ ಫೈನಾನ್ಸ್ ಕಮಿಷನಿನ ಶಿಫಾರಸ್ಸಿನ ಮೇಲೆಯೇ ಈ ಹಣ ದೊರೆಯಬೇಕಾಗಿರುವದರಿಂದ ಆ ಕಮಿಷನನ್ನು ಭೇಟಿ ಮಾಡುವ ಅನುಮತಿಯನ್ನು ಕೊಡಬೇಕೆಂದು ಕೇಳಿ ಅವರಿಗೆ ಬರೆಯಲಾಗಿದೆಯೆಂದೂ ಅವರು ಈಗ ತಿರುವಾಂಕೂರು ಮೊದಲಾದೆಡೆಗಳನ್ನು ಸಂದರ್ಶಿಸುತ್ತಿರುವದರಿಂದ ಕೊಡಗಿನ ಸರಕಾರದ ಪ್ರತಿನಿಧಿಗಳಿಗೆ ಅವರನ್ನು ಕಾಣುವ ಅನುಮತಿಯು ಈವಾಗ ದೊರೆಯುವದೆಂದು ಹೇಳಲಿಲ್ಲವೆಂದೂ ಮುಖ್ಯ ಮಂತ್ರಿಯವರು ಹೇಳಿದರು. ಹೇಗೂ ಕೇಂದ್ರ ಸರಕಾರಕ್ಕೆ ಹೋಗುತ್ತಿರುವ ಈ ಹಣದಿಂದ ಒಂದು ಪಾಲು ಕೊಡಗಿಗೆ ದೊರೆಯಬಹುದೆಂದು ಆಶಿಸಿದರು.

ಸಾಮೂಹಿಕ ಯೋಜನೆ

ಕೊಡಗಿನಲ್ಲಿ ಶೀಘ್ರ ಜಾರಿಯಲ್ಲಿ ಬರಲಿರುವ ಸಾಮೂಹಿಕ ಯೋಜನೆಯ ವಿಚಾರವಾಗಿ ಮಾತನಾಡುತ್ತಾ ಮುಖ್ಯ ಮಂತ್ರಿ ಪೂಣಚ್ಚನವರು ಹೀಗೆಂದರು. "ಹಿಂದುಸ್ಥಾನ ಮತ್ತು ಅಮೇರಿಕಾ ಟೆಕ್ನಿಕಲ್ ಸಹಾಯ ಒಪ್ಪಂದದಂತೆ ಅಮೇರಿಕವು ಹಿಂದೂಸ್ಥಾನಕ್ಕೆ ೫೦ ಮಿಲಿಯ ಡಾಲರು (ಒಂದು ಡಾಲರು ೪½ ರೂ)ಗಳ ಸಹಾಯ ಕೊಡಲಿದೆ. ಈ ಹಣವನ್ನು ಭಾರತದ ಹಳ್ಳಿಗಳ ಉದ್ಧಾರಕ್ಕಾಗಿ ಉಪಯೋಗಿಸಲು ನಿರ್ಧರಿಸಿ ಮಾಡಿದ ಈ ಯೋಜನೆಯನ್ನು ಸಾಮೂಹಿಕ ಯೋಜನೆ ಎಂದು ಕರೆಯಲಾಗಿದೆ. ಈ ಯೋಜನೆಯ ಪ್ರಕಾರ ಗ್ರಾಮದ ವ್ಯವಸಾಯ ವಹಿವಾಟು, ಆರೋಗ್ಯ, ವಿದ್ಯೆ, ಸಾಮಾಜಿಕ ಹಿತಚಿಂತನೆಯ ಕಾರ್ಯಗಳಿಗೆ ಹೆಚ್ಚಿನ ಗಮನ ವಹಿಸಲಾಗುವದು. ಪ್ರತಿ ೩೦೦ ಗ್ರಾಮಗಳಿಗಾಗಿ ಒಂದು 'ಪ್ರೋಜೆಕ್ಟ್' ಹಾಕಿ ಹಿಂದೂದೇಶದಲ್ಲಿ ೫೫ ಪ್ರೋಜೆಕ್ಟುಗಳನ್ನು ಕೈಕೊಳ್ಳಲಾಗುವದು. ಈ ಪ್ರಕಾರ ಕೊಡಗಿನಲ್ಲಿ ಒಂದು ಪ್ರೋಜೆಕ್ಟನ್ನು ಜಾರಿಯಲ್ಲಿ ತರಲಾಗುವದು. ಈ ಪ್ರೋಜೆಕ್ಟನ್ನು ಜಾರಿಯಲ್ಲಿ ತರಲು...

THE JUBILEE INSURANCE CO., LTD.
One of the very few in the feild of Insurance that has been declaring BONUS to its policy holders from its very inception.
RATE OF BONUS Rs. 10/- & Rs. 12/-
For particulars of Agency & Policy contracts apply to Sri P. C. KARAMBAYA of our Chief Agents at 41-A., Richmond Road, Bangalore.
Our Chief Agents:-THE ORIENTAL ENTERPRISES, BANGALORE 1.
ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪಿತವಾದಂದಿನಿಂದಲೂ ವಿಮಾದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.
ಈಗಿನ ದರ ಬೋನಸ್ಸು:–ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.
ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.
ದಿ ಓರಿಯೆಂಟಲ್ ಎಂಟರ್‌ಪ್ರೈಸಸ್,
12 41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

ಪಶುವೈದ್ಯ ಶಾಸ್ತ್ರ.

ತಾರೀಕು 16-5-53ರ 'ಕೊಡಗು' ಪತ್ರಿಕೆಯ ಓದುಗರ ಓಲೆಯಲ್ಲಿ ಶ್ರೀ. ಕೆ. ತಿಮ್ಮಯ್ಯನವರು 'ನಮ್ಮ ಪಶುವೈದ್ಯ ಇಲಾಖೆ' ಎಂಬ ಒಂದು ವಿಮರ್ಶೆ ಬರೆದುದನ್ನು ನಾನು ಓದಿದೆನು.

ಶ್ರೀ. ಕೆ ತಿಮ್ಮಯ್ಯನವರ ಮೊದಲಿನ ವಾಕ್ಯ 'ಈ ಇಲಾಖೆಯವರ ಕೆಲಸ ಪರಿಣಾಮಕಾರಿಯಾಗಿಲ್ಲ' ಎಂದು ಬರೆದಾಗ ಶ್ರೀಯುತರು ಅವರೇ ಕೊಡಗು ಎಂದು ತಿಳಿದು ಕೊಳ್ಳಬಾರದೆಂದು ವಿನಂತಿಯೊಪ್ಪದೇ ವಿಷಯದ ಮೇಲಾದರೂ ಹಲವರಿಗೆ ಹಲವು ವಿಧದ ಅಭಿಪ್ರಾಯಗಳಿರುತ್ತವೆ. ಆದರೆ ಯಾವ ವಿಷಯದ ಮೇಲಾದರೂ ವಿಮರ್ಶೆ ಬರೆಯುವ ಬಾಧ್ಯತೆಯನ್ನು ಪಡೆಯಬೇಕಾದರೆ ಆ ವಿಷಯವನ್ನು ಇಂದಿನ ಮಟ್ಟಿಗೆ ತಿಳಿದಿರುವಷ್ಟು ತಿಳಿದವನಾಗಿರಬೇಕು. ಮತ್ತು ಇನ್ನು ಹೆಚ್ಚು ತಿಳಿಯಲು ಹಂಬಲಿಸುವವನಾಗಿರಬೇಕು. ಹೀಗಲ್ಲದೆ ಓದುಗರ ಓಲೆಯಲ್ಲಿ ಪತ್ರಿಕಾ ಸಂಪಾದಕರು ಸ್ಥಳ ಕೊಡುವರೆಂದುಕೊಂಡು ಮನಸಿಗೆ ಬಂದಂತೆ ಬರೆದುಬಿಡುವುದು ಮೂರ್ಖತೆಯ ಹೆಗ್ಗುರುತು.

ಶ್ರೀ. ಕೆ. ತಿಮ್ಮಯ್ಯನವರ ಎರಡನೆಯ ವಾಕ್ಯ 'ದನಗಳ ಕಾಯಿಲೆಗೆ ಹಲವು ವರ್ಷಗಳಿಂದ ಚಿಕಿತ್ಸೆ ನಡೆಸುತ್ತಿದ್ದರೂ ಹೆಚ್ಚಿನ ಪ್ರಯೋಜನವಾಗಲಿಲ್ಲ' ಎಂಬುದು. ಇದು ವಿಚಾರ ಹೀನತೆಯಿಂದಲೂ ಮತ್ತು ವಿಷಯಾಂಶದ ಅರಿವಿಲ್ಲದ್ದರಿಂದಲೂ ಬರೆದುದಾಗಿದೆ. ಶ್ರೀಯುತರ ದನಗಳಿಗೆ ಪ್ರಯೋಜನಕಾರಿಯಾಗಿರಲಿಕ್ಕಿಲ್ಲ. ಆದರೆ ಬಹಳ ಕಡೆ ಪ್ರಯೋಜನಕಾರಿಯಾಗಿದೆ. ಅದರಲ್ಲೂ ಅಂಟುರೋಗದ ಚಿಕಿತ್ಸಾ ವಿಭಾಗವು ಎಲ್ಲೆಡೆಯಲ್ಲೂ ಪ್ರಖ್ಯಾತಿ ಹೊಂದಿದೆ. ಶ್ರೀ. ಕೆ. ತಿಮ್ಮಯ್ಯನವರು ಹೇಳಿದ ಮಾತ್ರಕ್ಕೆ ಸತ್ಯವು ಸುಳ್ಳಾಗಲಾರದು. ಸತ್ಯದ ನಿಜತ್ವವನ್ನು ಜನರ ಮನಸಿನಲ್ಲಿ ಸ್ಥಾಪಿಸುವುದು ಕಷ್ಟ. ಸುಳ್ಳನ್ನು ಸ್ಥಾಪಿಸುವುದು ಸುಲಭ. ನ್ಯೂನತೆ ಇಲ್ಲದ ಶಾಸ್ತ್ರವು ಭೂಲೋಕದಲ್ಲಿ ಯಾವುದೂ ಇಲ್ಲ. ಸಜೀವ ವಸ್ತುಗಳ ಮೇಲೆ ಚಿಕಿತ್ಸೆ ನಡೆಸುವಾಗ, ಚಿಕಿತ್ಸೆ ಸಫಲವಾಗಲು ಕಾರಣಭೂತವಾದ ಅಂಶಗಳು ಹಲವಾರಿರುವುವು. ಮದ್ದು ಕೊಟ್ಟುಬಿಟ್ಟರೆ ಮಾತ್ರ ಸಾಲದು. ನನಗೆ ಕೊಡಗಿನಲ್ಲಿ ದನಗಳನ್ನಿಡುವ ರೀತಿಯ ಅನುಭವವಿದೆ. ಆದರೆ ಶ್ರಮವಹಿಸಿ ಅದನ್ನು ಉತ್ತಮ ರೀತಿಯಲ್ಲಿ ದನಗಳನ್ನು ಇಟ್ಟವರು ಬರೇ ಕೆಲವರು ಮಾತ್ರ. ನೂರರಲ್ಲಿ ತೊಂಭತ್ತೊಂಭತ್ತು ಮನೆಯಲ್ಲಿ ದನಗಳ ಪರಿಸ್ಥಿತಿ ವಿಪರೀತ. ಈ ಪರಿಸ್ಥಿತಿಯಲ್ಲಿ ಮದ್ದು ಕೊಟ್ಟು ಬಿಡಬೇಕು, ಪರಿಣಾಮಕಾರಿಯಾಗಿ ಬಿಡಬೇಕು, ಎಂದು ಭಾವಿಸುವುದು ನಿರರ್ಥಕ. ನಾನು ನಮ್ಮ ಜನರನ್ನು ಹಳಿಯುವುದಲ್ಲ. ನಾನೂ ಅವರಲೊಬ್ಬನಾಗಿದ್ದೇನೆ. ನಮ್ಮ ಆರ್ಥಿಕ ದುಸ್ಥಿತಿಯು ನಮ್ಮನ್ನು ನಮ್ಮ ದನಗಳ ಕಡೆಗೆ ಹೆಚ್ಚು ಗಮನ ಕೊಡಲು ಬಿಡುವುದಿಲ್ಲ. ಆದರೆ ಇದಕ್ಕಾಗಿ ಪಶುವೈದ್ಯ ಇಲಾಖೆಯನ್ನು ಹಳಿದು ಪ್ರಯೋಜನವಿಲ್ಲ. ಇದು ಮುಖವನ್ನು ಪರಿಹಾಸ್ಯಕ್ಕೆ ಈಡುಮಾಡಲು ಮೂಗು ತನ್ನನ್ನು ತಾನೇ ಕುಯ್ದುಕೊಂಡಂತಾಗುವುದು.

ಹೌದು, ಕೆಲವು ಸಮಯ ಬೇರೆ ದೇಶಗಳಿಂದ ನಮಗೆ ಕಳುಹಿಸಲ್ಪಡುವ ಸಜೀವ ಔಷಧಗಳ ಜೀವಿತಾವಧಿ ಕೊಡಗಿಗೆ ಬಂದು ತಲುಪುವಾಗ ಹೋಗಿರಬಹುದು. ನಾನು ಕೊಡಗಿನಲ್ಲಿ ಕೆಲಸ ಮಾಡುತಿದ್ದಾಗ ಹರಡಿದ್ದ ಕರಿಣತವು ರಿಂಡರ್‌ಪೆಸ್ಟ್ ಜಾಡ್ಯದ ಅನುಭವದಿಂದ ನನಗೆ ಇದರಲ್ಲಿ ಸತ್ಯಾಂಶವಿದೆ ಎಂದು ಗೊತ್ತಿದೆ. ಶ್ರೀ. ಕೆ. ತಿಮ್ಮಯ್ಯನಂಥವರು ಉತ್ತೇಜನ ತೆಗೆದುಕೊಂಡು ಸರಕಾರವನ್ನು ಒತ್ತಾಯಪಡಿಸಿ ಸಜೀವ ಔಷಧ, ಸೀರಂ ಮೊದಲಾದುವುಗಳನ್ನು ತಯಾರಿಸುವ ಒಂದು ಸಣ್ಣ ವಿಭಾಗವನ್ನು ಕೊಡಗಿನ ಪಶುವೈದ್ಯ ಇಲಾಖೆಗೆ ಒದಗಿಸಿಕೊಡಲಿ. ಇದರಿಂದ ಹೆಚ್ಚು ಪ್ರಯೋಜನವಾಗುವುದು.

ಶ್ರೀಯುತರು ಕಾಲುಬ್ಬರ ಮಡಿಕೇರಿಯಲ್ಲೇ ಇದೆ ಎಂದು ಬರೆದಿರುವರು. ಇದನ್ನು ಬರದಂತೆ ಮಾಡಲು ಮದ್ದಿಲ್ಲ. ಮತ್ತು ಇದರ ತೀಕ್ಷ್ಣ ಹರಡುವಿಕೆಗೆ ಸಾವು ನೋವು ದನಗಳನ್ನು ಸಾಕುವ ರೀತಿ ಒಂದನೇ ಕಾರಣ. ಪಶುವೈದ್ಯ ಇಲಾಖೆಗೆ ಇದನ್ನು ಬರದಂತೆ ಮಾಡಲು ಸಾಧ್ಯವಿಲ್ಲ.

ಕೋಳಿಗಳ ಕಾಯಿಲೆ ಒಂದು ದೊಡ್ಡ ಸಮಸ್ಯೆಯಾಗಿದೆ. ಅದರ ವಿಷಯ ಇನ್ನೂ ಎಷ್ಟೋ ಕಂಡು ಹಿಡಿಯಬೇಕಾಗಿರುವುದು. ಕೋಳಿಗಳಿಗೆ ಬರುವ ಕಾಯಿಲೆಯಲ್ಲಿ ಈಗ ತಿಳಿದಿರುವ ಮಟ್ಟಿಗೆ 'ಕಾಲರಾ' ಮತ್ತು 'ರಾನಿಕೇಟ್'? ಮುಖ್ಯವಾದವುಗಳು. ಮೊದಲನೆಯದು ಅಷ್ಟು ಕಠಿಣವಾದುದಲ್ಲ. ಅದಕ್ಕೆ ಒಂದು ವೇಕ್ಸಿನ್ ಇದೆ. ಎರಡನೆಯದು ಬಹಳ ಕಠಿಣವಾದುದು. ಇದಕ್ಕಿರುವ ಸಜೀವ ಮದ್ದನ್ನು, ಅದನ್ನು ಮಾಡುವ ಸ್ಥಳದಿಂದ ಬರೇ ನೂರು ಮೈಲು ದೂರ ಕಳುಹಿಸಲು ಸಾಧ್ಯ; ಅಷ್ಟರಲ್ಲಿ ಅದರ ಜೀವಿತಾಂಶ ಕಳೆದು ಹೋಗುವುದೆಂದು ಕೇಳಿರುವೆನು. ಇದು ಕೆಲವು ವರ್ಷಗಳ ಮಾತು. ಹೇಗೂ ಈ ಕಾಯಿಲೆ ಬರದಂತೆ ಮಾಡಲು ಸರ್ವಸಾಮಾನ್ಯವಾಗಿ ಉಪಯೋಗಿಸಲು ಒಂದು ದೃಢವಾದ ಮದ್ದು ಇಷ್ಟರ ವರೆಗೆ ನನಗೆ ತಿಳಿದ ಮಟ್ಟಿಗೆ ಕಂಡು ಹಿಡಿದಿರುವುದಿಲ್ಲ. ಸರಕಾರಿ ಕೋಳಿ ಫಾರಂನಲ್ಲಿಯೂ ಕೋಳಿಗಳೇ ಇರುವುದು. ಕೋಳಿ ಸರಕಾರದ್ದು ಆದ ಮಾತ್ರಕ್ಕೆ ಕಾಯಿಲೆ ಅದನ್ನು ಬಿಡದು. ಶಾಸ್ತ್ರಜ್ಞರು ಇದಕ್ಕಾಗಿ ಶ್ರಮಿಸುತ್ತಿರುವರು. 'ಹುಟ್ಟಲು ಬೆಂಬಲವೆ ಮಾಂಬರಿವ ಪೋಗೆ' ಎಂಬ ಮಾತಿದೆ. ಶ್ರಮಿಸುತ್ತ ಹೋದಂತೆ ಶ್ರಮವು ಫಲಕಾರಿಯಾಗುವುದು. ಆದ್ದರಿಂದ ಸಾಧಾರಣ ತರುವಂತಹ ವಿಮರ್ಶೆ ಇದ್ದರೆ ಒಳ್ಳೆಯದು. ಪರಿಹಾಸ್ಯಮಾಡುವಂತಹ ವಿಮರ್ಶೆಯಿಂದ ಪ್ರಯೋಜನವಿಲ್ಲ ಎಂಬುವುದನ್ನು ಶ್ರೀ. ಕೆ. ತಿಮ್ಮಯ್ಯನವರು ತಿಳಿಯಬೇಕು.

ಅಜ್ಜಮಾಡ ಬೊ ಬೆಳ್ಯಪ್ಪ.

ಹೈಯರ್ ಎಲಿಮೆಂಟರಿ ಶಾಲೆಗಳಲ್ಲಿ ತರಬೇತಾದ ಗ್ರಾಜ್ಯುವೇಟ್‌ಗಳನ್ನು ಮುಖ್ಯೋಪಾಧ್ಯಾಯರನ್ನಾಗಿ ಮಾಡುವುದು ಉತ್ತಮವೆಂದು ನನ್ನ ಅಭಿಪ್ರಾಯವಿದೆ. ಹೀಗೆ ಮಾಡಿದರೆ ಶಾಲಾಡಳಿತ ಹಾಗೂ ಶಿಸ್ತು ಫಲಿತಾಂಶ ಗಣನೀಯವಾಗುವುದು.

ಯಾವ ರೀತಿಯ ಶಾಲೆಯೇ ಆಗಿರಲಿ ಪರಿಸಮಾನವಾದ ಭಿನ್ನಭೇದವಿಲ್ಲದ ಮಾಸಿಕ ವೇತನ ಆಯಾ ಗ್ರೇಡಿನವರಿಗೆ ಸಿಗಬೇಕಾಗಿದೆ. ಅಧ್ಯಾಪಕ ವೃತ್ತಿಗೆ ಸೇರುವಾಗ ಕನಿಷ್ಠ ವೇತನವೆಂದು ಗೊತ್ತಿರಲಿಲ್ಲವೋ ಎಂದು ಹಲವು ಬುದ್ಧಿವಂತರು ಹೇಳುತ್ತಾರೆ. ಅವರಿಗೆ ದೇಶದ ಆರ್ಥಿಕ ಶಾಸ್ತ್ರಜ್ಞಾನ ಲವಲೇಶವೂ ತಿಳಿದಿಲ್ಲವೆಂದು ಭಾವಿಸಬೇಕಾಗಿದೆ. ಸರಿಯಾದ ಉಪಚಾರ ಇದ್ದರೆ ಪ್ರತಿಯೊಬ್ಬ ತನ್ನ ಕರ್ತವ್ಯವನ್ನು ದಕ್ಷತೆಯಿಂದಲೂ, ಉತ್ಸಾಹತೆಯಿಂದಲೂ ನಿರ್ವಹಿಸುವನು. ಆವಾಗ ಪೋಷಕರ, ಮಕ್ಕಳ, ಅಧ್ಯಾಪಕರ ಹಾಗೂ ಇಡೀ ದೇಶದ ಅಭಿವೃದ್ಧಿಯಾಗುವುದು.

ಇಂಟರ್ ಮೀಡಿಯೇಟ್ ಪರೀಕ್ಷಾ ಫಲಿತಾಂಶ.

ಕೊಡಗು ಸರಕಾರಿ ಕಾಲೇಜಿನಿಂದ ಕಳೆದ ಇಂಟರ್ ಮೀಡಿಯೇಟ್ ಪರೀಕ್ಷೆಗೆ ಕುಳಿತ ೭೮ ವಿದ್ಯಾರ್ಥಿಗಳಲ್ಲಿ ೫೭ ಜನರು ಅಂದರೆ ಶೇಕಡ ೭೨ ರಂತೆ ಪಾಸಾಗಿರುವರು. ಪಾಸಾದ ೫೭ ರಲ್ಲಿ ೧೭ ಜನರು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿರುವರು. ತೇರ್ಗಡೆಯಾದವರ ಹೆಸರನ್ನು ಇಕ್ಕೆ ಕೊಡಲಾಗಿದೆ.

ಪ್ರಥಮ ದರ್ಜೆ.

ಶ್ರೀಗಳಾದ ಡಬ್ಲ್ಯು. ಎಸ್. ಕುಂದರ್, ಸಿ. ಎಸ್. ನಾಣಯ್ಯ, ಸಿ. ಆರ್. ಸತ್ಯನಾರಾಯಣ ಭಟ್, ಬಿ. ಜಿ. ಸೀತಾರಾಮ, ಆರ್. ಎಸ್. ಅಮ್ಮಣ್ಣ, ಕೆ. ಎಸ್. ಗೋಪಾಲ, ಕೆ. ಎಂ. ಕುಟ್ಟಯ್ಯ, ಬಿ. ಎಂ. ಮಂದಪ್ಪ, ಪಿ. ಎಂ. ರವೀಂದ್ರನಾಥ ರೈ, ಪಿ. ಆರ್. ಶ್ರೀನಿವಾಸರಾವ್, ಎನ್. ಎಂ. ಗಣಪತಿ, ಎಂ. ಕೆ. ಮಾದಪ್ಪ ಇವರುಗಳು ಶ್ರೀಮತಿಯರಾದ ಎ. ಕೆ. ದೇಚಮ್ಮ, ಕೆ. ಕೆ. ನಂಜಮ್ಮ, ಎನ್. ಜಿ. ಶೈಲ, ಸಿ ಎಂ. ಬೊಳ್ಳಮ್ಮ ಮತ್ತು ಸಿ. ಕೆ. ಚಿಣ್ಣಮ್ಮ ಇವರುಗಳು.

ಪಾಸಾದವರು.

ಶ್ರೀಗಳಾದ ಕೆ. ಎಸ್. ಆನಂದ, ಸಿ ಜಿ. ಚಂಗಪ್ಪ, ಎಂ. ಕೆ. ಚಂಗಪ್ಪ, ಡಿ. ಪಿ. ಮುತ್ತಪ್ಪ, ಕೆ. ವಿ ನಾಗೇಂದ್ರ, ಜಿ. ಟಿ. ನಂಜಪ್ಪ, ಎ. ಡಬ್ಲ್ಯು. ಪಾಲ್, ಬಿ. ಎಂ. ಪೂವಯ್ಯ, ಕೆ. ಎಂ, ಪೊನ್ನಪ್ಪ, ಕೆ. ಬಿ. ಬೋಪಣ್ಣ, ಎಂ. ಎನ್. ಮಂಜುನಾಥ ವರ್ಮ, ಕೆ. ಕೆ. ನಾಗಪ್ಪಗೌಡ, ಕೆ. ಎ. ನಾಣಯ್ಯ, ಕೆ. ಎಂ. ಪೊನ್ನಪ್ಪ, ಬಿ. ಎ. ಪೂಣಚ್ಚ, ಎಸ್. ಬಿ. ಪೂವಯ್ಯ, ಟಿ. ಸಾರಿಯೋ ಲೋಬೊ, ಬಿ. ಬಿ. ಸೋಮಯ್ಯ, ಸಿ. ಕೆ. ಸುಬ್ಬಯ್ಯ, ಬಿ. ಜಿ ಸುಬ್ಬಯ್ಯ, ಎಂ. ಎಸ್. ಉತ್ತಪ್ಪ, ಆರ್. ವಿ. ಕೃಷ್ಣಮೂರ್ತಿ, ಕೆ. ಎಂ. ಸಿದ್ದಣ್ಣ, ಕೆ. ಎಂ ಅಚ್ಚಪ್ಪ, ಬಿ. ಎಚ್. ಚಂಗಪ್ಪ, ಕೆ. ಕೆ. ಚಂಗಪ್ಪ, ಸಿ. ಎಂ ಮೊಣ್ಣಪ್ಪ, ಎಂ. ಉಮೇಶ, ಟಿ. ವಿ ವರದರಾಜು ಇವರುಗಳು ಮತ್ತು ಶ್ರೀಮತಿಯರಾದ ಎಂ. ಜಿ. ಸೀತಮ್ಮ, ಬಿ. ಕೆ. ಬೋಜಮ್ಮ, ಎಂ. ಪಿ. ಗಂಗಮ್ಮ, ಎಂ. ಎಂ. ನಿರ್ಮಲ, ಪಿ. ಎಂ. ಲೀಲಮ್ಮ ಮತ್ತು ಎ ಸಿ ಕಾಳಮ್ಮ ಇವರುಗಳು.

ಒಂದು ಮತ್ತು ೨ನೇ ಭಾಗ.

ಶ್ರೀಗಳಾದ ಕೆ. ಅಣ್ಣಾಜಿಗೌಡ, ಕೆ. ಎಸ್. ಕರುಣಾಕರನ್, ಎಂ ರಾಘವಗೌಡ, ಬಿ. ಸಿ. ಸೋಮಯ್ಯ, ಎಂ. ಎಂ. ದೇವಯ್ಯ ಇವರುಗಳು.

ಎರಡು ಮತ್ತು ೩ ನೇ ಭಾಗ.

ಶ್ರೀಗಳಾದ ಎಂ. ಪಿ ಕರುಂಬಯ್ಯ, ಸಿ. ನಾಗರಾಜ ಅರಿಗ, ಎಂ. ಎಚ್. ನೂರ್‌ಮಹಮ್ಮದ್, ಪಿ. ವೆಂಕಟಸುಬ್ಬರಾಯ, ಎಂ. ಎನ್. ಮೈನಾವತಿಬಾಯಿ, ಎ. ಜಿ. ಚಿಣ್ಣಪ್ಪ, ಎನ್. ಎ. ಕಾವೇರಪ್ಪ, ಎಂ. ಪಿ ಮುತ್ತಪ್ಪ, ಜಿ. ಕೆ. ಪಳಂಗಪ್ಪ ಇವರುಗಳು.

ಒಂದೊಂದು ಭಾಗದಲ್ಲಿ.

ಶ್ರೀ. ಎ. ಡಬ್ಲ್ಯು. ಎಬ್ರಹಾಂ ಒಂದನೆಯ ಭಾಗದಲ್ಲೂ, ಶ್ರೀಗಳಾದ ಕೆ. ಎಸ್. ಬೋಪಯ್ಯ, ಯು. ಎಸ್. ರಾಮಣ್ಣಗೌಡ, ಸಿ. ಎಂ. ಪೊನ್ನಪ್ಪ, ಎಂ. ಸೀತಾರಾಮರಾವ್, ಸಿ. ಎ. ಬೋಪಯ್ಯ, ಎಂ. ಎಸ್. ನಾಚಪ್ಪ, ವೈ. ಎಂ ಮೀನಾಕ್ಷಿ ಇವರುಗಳು ಎರಡನೇ ಭಾಗದಲ್ಲೂ, ಬಿ. ಕೆ. ಪೊನ್ನಪ್ಪ ಇವರು ಮೂರನೇ ಭಾಗದಲ್ಲೂ ತೇರ್ಗಡೆಯಾಗಿರುವರು.

ಮಾರಾಟಕ್ಕಿದೆ.

ಪೊನ್ನಂಪೇಟೆ ಟೌನಿನ ಮಧ್ಯದಲ್ಲಿ 4 ಮಳಿಗೆಗಳುಳ್ಳ ವಾಸಕ್ಕೂ ಸಹ ಅನುಕೂಲತೆ ಇರುವ ಒಂದು ಮಹಡಿ ಅಂಗಡಿ ಮನೆ ಮಾರಾಟಕ್ಕಿದೆ. ಬೆಲೆ ರೂಪಾಯಿ 14,000/— ಅಥವ ಸಮೀಪದ ಬೆಲೆ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ಪತ್ತೆಗೆ ಬರೆಯಿರಿ.

ಡಾ. ಎಂ. ಎಂ. ಬೆಳ್ಯಪ್ಪ,
2920
ಗೋಕುಲಮ್ ರೋಡು,
ವಿ. ವಿ ಮೊಹಲ್ಲಾ, ಮೈಸೂರು.
2-3

Edited printed and published by P. I. Belliapa at 'Kodagu' Press, Mercara, for Kodagu Ltd.

ಶ್ರೀ ಕೆ. ಸಿ. ಪೀತಾಂಬರರವರು,
"ಕೊಡಗು" ಏಜೆಂಟರು,

Licence No. 60.
Licenced to Post without Prepayment.

Reg. No. M. 1880.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಬಿ. ನೆಲ್ಲಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಕು ೨೦-೬-೧೯೫೨ನೇ ಶುಕ್ರವಾರ | ಸಂಚಿಕೆ ೩

ಹಿಂದುಳಿದವರ ಹಿತಕ್ಕಾಗಿ.

ಕೊಡಗಿನಲ್ಲಿ ಹಿಂದುಳಿದವರೆನ್ನುವ ಜನರು ತುಂಬಾ ಇದ್ದಾರೆ. ಹರಿಜನರು ಕುಡಿಯರು, ಕುರುಬರು ಮತ್ತಿತರ ಹಲವರು ಇರುವರು. ಇವರ ಉದ್ಧಾರದ ಬಗ್ಗೆ ಸರಕಾರವು ಇನ್ನೂ ಏನೂ ಮಾಡಿಲ್ಲವೆಂದು 'ಓದುಗರ ಓಲೆ'ಯಲ್ಲಿ ಆಗಾಗ ಪತ್ರಗಳು ಬರುತ್ತಿರುತ್ತವೆ. ಈ ವಿಚಾರದಲ್ಲಿಯೂ ಮತ್ತು ಹಲವು ವಿಷಯಗಳ ಬಗ್ಗೆ ವಿಚಾರಿಸಲಾಗಿ ಕೊಡಗಿನ ಮುಖ್ಯ ಮಂತ್ರಿಯವರೂ, ಗೃಹ ಮಂತ್ರಿಯವರೂ ಕೊಟ್ಟ ಅಭಿಪ್ರಾಯಗಳನ್ನು ಕೊಡಲಾಗಿದೆ. 'ಕೊಡಗಿನಲ್ಲಿ ಭೂಮಿ ಇಲ್ಲದ ಹಿಂದುಳಿದವರಿಗೆ ಭೂಮಿಯನ್ನು ಹಂಚುವ ವಿಚಾರವನ್ನು ಸರಕಾರವು ಮಾಡುತ್ತಿದೆ,

ರಾಜಕೀಯ ಸಂತ್ರಸ್ತರಿಗೆ ಭೂಮಿ.

ಕೊಡಗು ಕಾಂಗ್ರೆಸು ತನ್ನ ಮೀಟಿಂಗಿನಲ್ಲಿ ಕೊಡಗಿನಲ್ಲಿ ಜೈಲಿಗೆ ಹೋದ ರಾಜಕೀಯ ಸಂತ್ರಸ್ತರಿಗೆ ಭೂಮಿ ಕೊಡುವ ವಿಚಾರದಲ್ಲಿ ಚರ್ಚಿಸಿ ಭೂಮಿ ಇಲ್ಲದ ಮತ್ತು ಕಡಿಮೆ ಭೂಮಿ ಇರುವ ರಾಜಕೀಯ ಸಂತ್ರಸ್ತರಿಗೆ ಸಹಾಯಾರ್ಥವಾಗಿ ಭೂಮಿ ಕೊಡುವ ಏರ್ಪಾಡು ಮಾಡಬೇಕೆಂದು ಕಾಂಗ್ರೆಸು ಪಕ್ಷವು ಸರಕಾರಕ್ಕೆ ಶಿಫಾರಸ್ಸು ಮಾಡಿದೆಯೆಂದೂ ಸರಕಾರವು ಈ ವಿಚಾರ ಆಲೋಚಿಸಿ ರಾಜಕೀಯ ಕೈದಿಗಳಿಗೆ ಗೌರವಾರ್ಥವಾಗಿ ಅಲ್ಲ; ಅವಶ್ಯವಿರುವ ರಾಜಕೀಯ ಕೈದಿಗಳಿಗೆ ಸಹಾಯಾರ್ಥವಾಗಿ ಭೂಮಿ ಕೊಡಲು ನಿರ್ಣಯಿಸಲಾಗಿದೆಯೆಂದೂ ಮುಖ್ಯ ಮಂತ್ರಿಯವರು ಹೇಳಿದರು

ನಮ್ಮ ಕಾಂಗ್ರೆಸ್ ಮಂತ್ರಿಮಂಡಳದ ಕಾರ್ಯಕಲಾಪಗಳು.

(ಕೊಡಗಿನಲ್ಲಿ ಕಾಂಗ್ರೆಸ್ ಮಂತ್ರಿ ಮಂಡಳವು ಅಧಿಕಾರಕ್ಕೆ ಬಂದು ಮೂರು ತಿಂಗಳುಗಳಾದವು. ಈ ಅಲ್ಪ ಅವಧಿಯಲ್ಲಿಯೇ ಮಂತ್ರಿ ಮಂಡಳದ ಕಾರ್ಯ ಕಲಾಪಗಳನ್ನು ಅಳೆದು ಅಭಿಪ್ರಾಯ ಹೇಳುವದು ಯುಕ್ತವಲ್ಲದಿದ್ದರೂ ನಮ್ಮ ಓದುಗರು ಆಗಾಗ್ಗೆ ಬರೆಯುವ ಮತ್ತು ಹೇಳುವ ದೂರುಗಳಿಗೆ ಉತ್ತರವಾಗಿ ಮಂತ್ರಿಗಳ ಅಭಿಪ್ರಾಯವನ್ನೂ, ಅವರು ಮಾಡಲಿರುವ ಕೆಲಸದ ರೂಪರೇಷೆಗಳನ್ನೂ ವಾಚಕರಿಗಾಗಿ ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. 'ಬಿ')

ಭೂಮಿ ಇಲ್ಲದವರಿಗೆ ಪೈಸಾರಿಯನ್ನು ಹಂಚಬೇಕಾಗಿರುವದು. ಆದರೆ ಗ್ರಾಮದ ಪೈಸಾರಿಗಳು ಮಾಜಿ ಸೈನಿಕರಿಗೆಂದೂ, ಹತ್ತಿರದ ಇತರರಿಗೆಂದೂ ಕೊಡಲ್ಪಟ್ಟು ಯಾವ ಗ್ರಾಮದಲ್ಲಿ ಎಷ್ಟು ಪೈಸಾರಿ ಇದೆ ಎಂಬುವುದೇ ಗೊತ್ತಾಗದಾಗಿದೆ. ಪ್ರತಿ ಗ್ರಾಮದಲ್ಲಿ ಗ್ರಾಮೀಣ ಜನರ ದನಕರುಗಳ ಮೇವಿಗಾಗಿ, ಸೌದೆ ಮೊದಲಾದವುಗಳಿಗಾಗಿ ಸ್ವಲ್ಪ ಪೈಸಾರಿಯನ್ನು ಖಡ್ಡಾಯವಾಗಿ ಇಡಲೇ ಬೇಕಾಗಿದೆ. ಆದ್ದರಿಂದ ಭೂಮಿ ಇಲ್ಲದ ಹಿಂದುಳಿದವರಿಗೂ, ಇತರರಿಗೂ ಎಲ್ಲಿ ಭೂಮಿ ಕೊಡಬಹುದೆಂದು ವಿಚಾರಿಸಿ ಕೊಡಬೇಕಾಗಿದೆ. ಆದ್ದರಿಂದ ಕೊಡಗು ಸರಕಾರವು ಒಂದು ಡಿಪಾರ್ಟ್‌ಮೆಂಟಲ್ ಕಮಿಟಿಯನ್ನು ನೇಮಿಸಿ ಎಲ್ಲೆಲ್ಲಿ ಎಷ್ಟೆಷ್ಟು ಪೈಸಾರಿ ಹಂಚಲು ದೊರೆಯುವದೆಂಬುದರ ವರದಿ ಮಾಡಲು ಏರ್ಪಡಿಸಿದೆ. ಇದರ ಪರಿಶೀಲನೆಯ ನಂತರ ಭೂಮಿ ಇಲ್ಲದ ಹಿಂದುಳಿದ ಹರಿಜನ ಮೊದಲಾದವರಿಗೆ ಭೂಮಿ ಹಂಚಲಾಗುವದು. ಕೊಡಗಿನ ಫಾರೆಸ್ಟಿನಲ್ಲಿ ಭೂಮಿ ಮಾಡಲು ಯೋಗ್ಯವಾದ ಸ್ಥಳಗಳಿವೆ. ಇವುಗಳನ್ನು ಕಾಡು ಕಡಿದು ಭೂಮಿ ಮಾಡಲು ಹಂಚಿದರೆ ತೊಂದರೆ ಇದೆಯೋ ಎಂದು ಫಾರೆಸ್ಟ್ ಇಲಾಖೆಯನ್ನು ವಿಚಾರಿಸಲಾಗುತ್ತಿದೆ. ಈ ಪೈಸಾರಿಗಳನ್ನು ಸಂಗ್ರಹಿಸಿ ವ್ಯವಸ್ಥಿತ ರೀತಿಯಲ್ಲಿ ಅರ್ಜಿ ಬರೆದುಕೊಂಡ ಭೂಮಿ ಇಲ್ಲದವರಿಗೆ ಭೂಮಿ ಹಂಚಲಾಗುವುದು

ಅಲ್ಲದೆ ಕೆಲವು ಕಡೆ ಹರಿಜನರು ಮತ್ತಿತರ ಹಿಂದುಳಿದವರು ಬೇರೆಯವರ ಸ್ಥಳದಲ್ಲಿ ಮನೆ ಕಟ್ಟಿಕೊಂಡಿರುವರು. ಆ ಸ್ಥಳಗಳಿಂದ ಅವರನ್ನು ಹೊರಡಿಸಲು ಕೆಲವರು ಯತ್ನಿಸುತ್ತಿರುವರು. ಆದರೆ ಸರಕಾರವು ಈ ವಿಚಾರವನ್ನು ಪರಿಶೀಲಿಸಿ ೧೨ ವರ್ಷಗಳಿಗಿಂತಾ ಮೇಲ್ಪಟ್ಟು ಒಂದು ಸ್ಥಳದಲ್ಲಿರುವವರಿಗೆ ಆ ಮನೆ ಸ್ಥಳವು ಹಕ್ಕಾಗುವಂತೆಯೂ, ಅದಕ್ಕೆ ಕಡಿಮೆ ವರ್ಷವಿರುವವರಿಗೆ ಆ ಸ್ಥಳಗಳನ್ನು ಮಾಲೀಕರಿಂದ ವಶಪಡಿಸಿಕೊಂಡೂ ಕೊಡುವ ಏರ್ಪಾಡು ಮಾಡಲಾಗುವುದು.

ರೇಶನಿಂಗ್.

ಕೊಡಗಿನ ಗಡಿ ಗ್ರಾಮಗಳನ್ನು ಬಿಟ್ಟು ಉಳಿದ ಪ್ರದೇಶದಲ್ಲಿ ಯಾವುದೇ ಕಡೆ ಇಲ್ಲದೆ ಸ್ವಂತ ಉಪಯೋಗಕ್ಕಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಅರ್ಧಗಂಡಿ ಬತ್ತ ಯಾ ಕಾಲುಗಂಡಿ ಅಕ್ಕಿಯನ್ನು ಯಾರಾದರೂ ಸಾಗಿಸಬಹುದೆಂದೂ, ಯಾರೂ ತಮ್ಮ ಉಪಯೋಗಕ್ಕಾಗಿ ೮೦ ಸೇರುಗಳಿಗೆ ಮೀರದೆ ಅವಲಕ್ಕಿ ಹುರಿಮಾಡಿ ಇಟ್ಟುಕೊಳ್ಳಬಹುದೆಂದೂ ಸರಕಾರವು ಜಾಹೀರು ಪಡಿಸಿದೆ. ಆದರೆ ಅಕ್ಕಿ, ಅವಲಕ್ಕಿ, ಹುರಿಗಾಳುಗಳನ್ನು ಮಾರುವವರು ರೇಶನ್ ಅಂಗಡಿಯ ಮೂಲಕವೇ ಮಾರಬೇಕೆಂದಿದೆ. ರೇಶನ್ ಅಂಗಡಿಯಲ್ಲಿ ರೇಶನ್ ಕಾರ್ಡುದಾರರಿಗೆ ರೂಪಾಯಿಗೆ ೩½ ಸೇರು ಅಕ್ಕಿ ಕೊಡುವದನ್ನು ಹೆಚ್ಚಿಸಬೇಕೆಂದು ಕೆಲವು ಸಂಸ್ಥೆಗಳೂ, ಹಲವು ಓದುಗರೂ ಬರೆಯುತ್ತಿರುವ ವಿಚಾರದಲ್ಲಿ ಸರಕಾರವು ಏನೂ ಮಾಡಲಾಗದೆಂದೂ ಈಗಿರುವ ೩½ ಸೇರಿನ ಬದಲು ರೂಪಾಯಿಗೆ ಕಾಲುಭಾಗ ಹೆಚ್ಚಿಸಿ ೩¾ ಸೇರು ಅಕ್ಕಿ ಕೊಡುವಂತೆ ಏರ್ಪಡಿಸಿದರೆ ಸರಕಾರಕ್ಕೆ ಸುಮಾರು ೩ ಲಕ್ಷ ರೂಪಾಯಿ ನಷ್ಟ ಕಟ್ಟಿಕೊಳ್ಳಬೇಕಾಗುವದರಿಂದ ಸಧ್ಯಕ್ಕೆ ಬೆಲೆಯನ್ನು ವ್ಯತ್ಯಾಸಗೊಳಿಸಲಾಗುವದಿಲ್ಲ ಎಂದರು.

ಕೊಡಗಿನಿಂದ ಮೈಸೂರಿಗೆ ೭೦೦೦ ಟನ್ನು ಅಕ್ಕಿ ಕೊಡುವದಾಗಿ ಈ ವರ್ಷ ಒಪ್ಪಂದವಾಗಿದ್ದರೂ ಕೊಡಗಿನಲ್ಲಿ ಉಳುಮೆ ಹೆಚ್ಚು ತೋರಿ ಬಂದುದರಿಂದ ಮೈಸೂರಿನ ರಾಜಪ್ರಮುಖರು ಕೊಡಗಿಗೆ ಬಂದಿದ್ದ ಸಮಯದಲ್ಲಿ ಇನ್ನೂ ಹೆಚ್ಚಿನ ೫೦೦ ಟನ್ನು ಅಕ್ಕಿಯನ್ನು ಕೊಡಲಾಯಿತೆಂದೂ ಈಗ ಪ್ರೊಕ್ಯೂರ್ ಮಾಡಿದ ಅಕ್ಕಿ ಇನ್ನೂ ೫೦೦ ಟನ್ ಇದೆಯೆಂದೂ ಅದು ಕೂಡಿ ಒಟ್ಟು ೮೦೦೦ ಟನ್ ವರೆಗೆ ಕೊಟ್ಟಂತಾಗುವದೆಂದೂ ಹೇಳಿದರು.

ಸೆಂಟ್ರಲ್ ಎಕ್ಸೈಸ್ ಉತ್ಪತ್ತಿ

ಕೊಡಗಿನಿಂದ ಕೇಂದ್ರಕ್ಕೆ ಹೋಗುವ ಸೆಂಟ್ರಲ್ ಎಕ್ಸೈಸ್ ಉತ್ಪತ್ತಿಯಿಂದ ಕೆಲವಂಶವನ್ನು ಕೊಡಗಿಗೆ ಕೊಡುವ ಬಗೆ ಕೇಂದ್ರ ಸರಕಾರದ ಫೈನಾನ್ಸ್ ಕಮಿಷನ್ನಿಗೆ ಒಂದು ಮೆಮೋರೆಂಡಮನ್ನು ಸ್ಥಳೀಯ ಸರಕಾರವು ಕಳುಹಿಸಿದೆಯೆಂದೂ, ಈ ಫೈನಾನ್ಸ್ ಕಮಿಷನಿನ ಶಿಫಾರಸ್ಸಿನ ಮೇಲೆಯೇ ಈ ಹಣ ದೊರೆಯಬೇಕಾಗಿರುವದರಿಂದ ಆ ಕಮಿಷನನ್ನು ಭೇಟಿ ಮಾಡುವ ಅನುವನ್ನು ಕೊಡಬೇಕೆಂದು ಕೇಳಿ ಅವರಿಗೆ ಬರೆಯಲಾಗಿದೆಯೆಂದೂ ಅವರು ಈಗ ತಿರುವಾಂಕೂರು ಮೊದಲಾದೆಡೆಗಳನ್ನು ಸಂದರ್ಶಿಸುತ್ತಿರುವದರಿಂದ ಕೊಡಗಿನ ಸರಕಾರದ ಪ್ರತಿನಿಧಿಗಳಿಗೆ ಅವರನ್ನು ಕಾಣುವ ಅವಕಾಶ ಯಾವಾಗ ದೊರೆಯುವದೆಂದು ತಿಳಿದಿಲ್ಲವೆಂದೂ ಮುಖ್ಯ ಮಂತ್ರಿಯವರು ಹೇಳಿದರು. ಹೇಗೂ ಕೇಂದ್ರ ಸರಕಾರಕ್ಕೆ ಹೋಗುತ್ತಿರುವ ಈ ಹಣದಿಂದ ಒಂದು ಪಾಲು ಕೊಡಗಿಗೆ ದೊರೆಯಬಹುದೆಂದು ಆಶಿಸಿದರು.

ಸಾಮೂಹಿಕ ಯೋಜನೆ

ಕೊಡಗಿನಲ್ಲಿ ಶೀಘ್ರ ಜಾರಿಯಲ್ಲಿ ಬರಲಿರುವ ಸಾಮೂಹಿಕ ಯೋಜನೆಯ ವಿಚಾರವಾಗಿ ಮಾತಾಡುತ್ತಾ ಮುಖ್ಯ ಮಂತ್ರಿ ಪೂಣಚ್ಚನವರು ಹೀಗೆಂದರು. "ಹಿಂದೂಸ್ಥಾನ ಮತ್ತು ಅಮೇರಿಕಾ ಟೆಕ್ನಿಕಲ್ ಸಹಾಯ ಒಪ್ಪಂದದಂತೆ ಅಮೇರಿಕವು ಹಿಂದೂದೇಶಕ್ಕೆ ೬೦ ಮಿಲಿಯ ಡಾಲರು (ಒಂದು ಡಾಲರು ೪½ ರೂ.)ಗಳ ಸಹಾಯ ಕೊಡಲಿದೆ. ಈ ಹಣವನ್ನು ಭಾರತದ ಹಳ್ಳಿಗಳ ಉದ್ಧಾರಕ್ಕಾಗಿ ಉಪಯೋಗಿಸಲು ಏರ್ಪಾಡು ಮಾಡಿ ಈ ಯೋಜನೆಯನ್ನು ಸಾಮೂಹಿಕ ಯೋಜನೆಯೆಂದು ಕರೆಯಲಾಗಿದೆ. ಈ ಯೋಜನೆಯ ಪ್ರಕಾರ ಗ್ರಾಮದ ವ್ಯವಸಾಯ ವಹಿವಾಟು, ಆರೋಗ್ಯ, ವಿದ್ಯೆ, ಸಾಮಾಜಿಕ ಹಿತಚಿಂತನೆಯ ವಿಚಾರಗಳಿಗೆ ಹೆಚ್ಚಿನ ಗಮನ ವಹಿಸಲಾಗುವದು. ಪ್ರತಿ ೩೦೦ ಗ್ರಾಮಗಳಿಗಾಗಿ ಒಂದು 'ಪ್ರೋಜೆಕ್ಟ್'ನಂತೆ ಹಿಂದೂದೇಶದಲ್ಲಿ ಸುಮಾರು ಐನೂರು ಪ್ರೋಜೆಕ್ಟ್‌ಗಳನ್ನು ಕೈಕೊಳ್ಳಲಾಗುವದು. ಈ ಪ್ರಕಾರ ಕೊಡಗಿನಲ್ಲಿ ಒಂದು ಪ್ರೋಜೆಕ್ಟನ್ನು ಜಾರಿಯಲ್ಲಿ ತರಲಾಗುವದು. ಈ ಪ್ರೋಜೆಕ್ಟನ್ನು ಜಾರಿಯಲ್ಲಿ ತರಲು

THE JUBILEE INSURANCE CO., LTD.
One of the very few in the feild of Insurance that has been declaring BONUS to its policy holders from its very inception.
RATE OF BONUS Rs. 10/- & Rs. 12/-
For particulars of Agency & Policy contracts apply to Sri P. C. KARAMBAYA of our Chief Agents at 41-A., Richmand Road, Bangalore.
Our Chief Agents:-THE ORIENTAL ENTERPRISES, BANGALORE I.
ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪಿತವಾದಂದಿನಿಂದಲೂ ವಿಮೂದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.
ಈಗಿನ ದರ ಬೋನಸ್ಸು:-ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.
ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.
ದಿ ಓರಿಯಂಟಲ್ ಎಂಟರ್‌ಪ್ರೈಸಸ್,
12 41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

ಒಂದೇ ಭಾಗದಲ್ಲಿ ಹಿಂದುಳಿದ ನೂರು ಗ್ರಾಮಗಳು ಬೇಕ. ಇದಕ್ಕಾಗಿ ಕೊಡಗಿನ ಅತೀ ಹಿಂದುಳಿದ ಭಾಗವಾದ ಫ್ರೇಜರ್‌ಪೇಟೆ, ಸೋಮವಾರಪೇಟೆ, ಶನಿವಾರಸಂತೆಗಳ ನೂರು ಗ್ರಾಮಗಳನ್ನು ಮೊದಲು ಆರಿಸಿಕೊಳ್ಳಲಾಗಿದೆ. ಮೂರು ವರ್ಷಗಳ ವರೆಗೆ ಈ ನೂರು ಗ್ರಾಮಗಳ ಅಭಿವೃದ್ಧಿಗಾಗಿ ೨೧ ಲಕ್ಷ ರೂಪಾಯಿಗಳ ವೆಚ್ಚದ ಯೋಜನೆಯಾಗಿದೆ. ಈ ಮೂರು ವರ್ಷಗಳ ನಂತರ ಮತ್ತೆ ನೂರು ಗ್ರಾಮಗಳನ್ನು ತೆಗೆದುಕೊಂಡು ಇದೇ ರೀತಿಯಲ್ಲಿ ಅವಕ್ಕೆಗೂ ೨೧ ಲಕ್ಷ ವ್ಯಯ ಮಾಡಲಾಗುವದು. ಹೀಗೆ ಒಂದು ಪ್ರೋಜೆಕ್ಟ್ ೯ ವರ್ಷದ ಅವಧಿಯುದ್ದಕ್ಕೆ ೩೦೦ ಗ್ರಾಮಗಳನ್ನು ಒಳಗೊಳ್ಳುವದಲ್ಲದೆ ೬೩ ಲಕ್ಷ ರೂ.ಗಳ ವೆಚ್ಚವಾಗುವುದು. ಈ ಹಣವನ್ನೆಲ್ಲಾ ಕೊಡಗು ಸರಕಾರ ಕೊಡಬೇಕಿಲ್ಲ. ಪ್ರಥಮ ವರ್ಷದ ೨೧ ಲಕ್ಷ ರೂ. ಯೋಜನೆಯಲ್ಲಿ ರೂ. 4½ ಲಕ್ಷವನ್ನು ಕೊಡಗು ಸರಕಾರ ಕೊಟ್ಟರೆ ಸುಮಾರು ೭ ಲಕ್ಷ ರೂಪಾಯಿಯನ್ನು ಕೇಂದ್ರ ಸರಕಾರ ಕೊಡುವದು. ಮತ್ತೆ ಉಳಿದ ಹಣವನ್ನು ಕೇಂದ್ರ ಸರಕಾರವು ಟೆಕ್ನಿಕಲ್ ಸಹಾಯ ನಿಧಿಯಿಂದ ಟ್ರೇಕ್ಟರುಗಳು, ಪಂಪುಗಳು, ಇತರ ವ್ಯವಸಾಯ ಸಲಕರಣೆಗಳ ರೂಪದಲ್ಲಿ ಸಾಲ ಕೊಡುವದು.

ಪ್ರಥಮವಾಗಿ ತೆಗೆದುಕೊಳ್ಳುವ ಈ ನೂರು ಗ್ರಾಮಗಳನ್ನು ೫ ಗ್ರಾಮಗಳ ಗುಂಪುಗಳಾಗಿ ಮಾಡಿ ಪ್ರತಿ ಗುಂಪಿಗೆ ಒಬ್ಬ ಕೆಲಸಗಾರನನ್ನು ನೇಮಿಸಲಾಗುವುದು. ಈ ಕೆಲಸದ ಮಟ್ಟಿಗೆ ಇವರಿಗೆ ತರಬೇತು ಕೊಡುವದಲ್ಲದೆ ಇವರ ಮೇಲುಸ್ತುವಾರಿಗಾಗಿ ೫ ಸೂಪರ್‌ವೈಜರುಗಳನ್ನು ನೇಮಿಸಲಾಗುವದು. ಇವರಿಗೆ ಮಂಡ್ಯದಲ್ಲಿ ತೆರೆದಿರುವ ತರಬೇತು ಶಾಲೆಯಲ್ಲಿ ತರಬೇತ ಕೊಡಲಾಗುವದು. ಸೂಪರ್‌ವೈಜರುಗಳಾಗಿ ವ್ಯವಸಾಯ ಗ್ರಾಜ್ಯುವೇಟರುಗಳನ್ನು, ಗ್ರಾಮ ಅಂತಸ್ತಿನ ಕೆಲಸಗಾರರಾಗಿ ವ್ಯವಸಾಯ ಮೊದಲಾದ ಉನ್ನತ ಅರಿವುಳ್ಳ ಮತ್ತು ಗ್ರಾಮಜನ ಜೀವನದ ಮಾಹಿತಿಯುಳ್ಳವರನ್ನು ನೇಮಿಸಲಾಗುವದು. ಈ ಯೋಜನೆಗೆ ಒಬ್ಬ ಪ್ರೊಜೆಕ್ಟ್ ಅಧಿಕಾರಿಯನ್ನು ನೇಮಿಸಲಾಗುವದು. ಇವರು ಡೆವಲಪ್‌ಮೆಂಟ್ ಕಮಿಷನರ ಕೈಕೆಳಗೆ ಕೆಲಸ ಮಾಡುವರು,

ಮೈನರ್ ಇರಿಗೇಷನ್

ಮುಖ್ಯ ಮಂತ್ರಿಯವರು ಕೊಡಗಿನಲ್ಲಿ ಇತ್ತಲಾಗಿರುವ ನೀರಾವರಿ ಯೋಜನೆಗಳ ವಿಚಾರ ಹೇಳುತ್ತ ಈ ಕೆಳಗಿನ ಉದಾಹರಣೆಗಳನ್ನು ಕೊಟ್ಟರು. ಫ್ರೇಜರ್‌ಪೇಟೆ ಹೋಬಳಿಯಲ್ಲಿ ರಂಗಸಮುದ್ರ, ಹಿರಿಕೆರೆ, ಸಂಬಾಳ ಹಳ್ಳಿ, ಶಾಂತಹಳ್ಳಿ ಕಟ್ಟೆಗಳಿಗಾಗಿ ಸುಮಾರು ೪೦ ಸಾವಿರ ರೂ.ಗಳನ್ನೂ, ನಪೋಕ್ಲು ನಾಡಿನ ಕಾಪೂರು, ಭೀಮಕಲ್ಲು, ಐಯ್ಯಂಗೇರಿ, ಪೇರೂರು ಕಟ್ಟೆಗಳಿಗಾಗಿ ೨೨ ಸಾವಿರ ರೂಪಾಯಿಗಳನ್ನೂ, ಹಾತೂರು ಕಟ್ಟೆಗಾಗಿ ರೂ. ೧೦ ಸಾವಿರ, ಚೇಪೆಕೋಡು ಕಟ್ಟೆಗೆ ರೂ ೮ ಸಾವಿರ, ಪೊನ್ನಂಪೇಟೆ ನಾಡಿನ ಹಾಲದಾಳ್ಳ ಬೆಳಗೂರು ಮತ್ತು ಹಾತೂರು ಕಟ್ಟೆಗಳಿಗಾಗಿ ರೂ. ೨೦ ಸಾವಿರ ವೆಚ್ಚ ಮಾಡಿರುವದಾಗಿಯೂ, ದೇವನೂರು ನಾಲೆಯ ರಿಪೇರಿಗಾಗಿ ರೂ. ೯ ಸಾವಿರ, ಶ್ರೀಮಂಗಲ ಕಟ್ಟೆಗೆ ೩,೫೦೦, ಎಲ್ಯನೂರು, ಅರಿಯೂರು ಕೆರೆಗಳಿಗಾಗಿ ರೂ. ೮ ಸಾವಿರ, ಅಲೂರು, ಟರ್ನ್ ಕಟ್ಟೆ, ನಂದ್ಯಾಪುರ, ಕೂಡೂರು, ಗೋಣಿಬೀಡು, ಮೊದಲಾದ ಕೆರೆ ರಿಪೇರಿಗಾಗಿ ರೂ ೨೪ ಸಾವಿರ, ಹೀಗೆ ವೆಚ್ಚ ಮಾಡಲಾಗಿದೆಯೆಂದೂ, ಬೆಳ್ಳಿಸೂಡನ್ನೂರು ಕಟ್ಟೆ ಕಟ್ಟುವ ಏರ್ಪಾಡಾಗಿದ್ದರೂ ಅಲ್ಲಿಯ ಮಣ್ಣು ಸುಮಾರು ೧೫ ಅಡಿ ಆಳದ ವರೆಗೆ ಮರಳಾಗಿದ್ದು ಕಟ್ಟೆ ನಿಲ್ಲುವದು ಆರಂಭವಾಗಿಯೂ ಒಂದು ಭಾಗ, ಕಟ್ಟೆಗೆ ಸುಮಾರು ೬೦ ಸಾವಿರ ರೂಪಾಯಿ ಬೇಕಾಗಿರುವದರಿಂದಲೂ ಈ ಕಟ್ಟೆಯನ್ನು ಕಟ್ಟದೆ ಬಾಕಿ ಮಾಡಲಾಗಿದೆಯೆಂದೂ ಹೇಳಿದರು.

ಫಾರೆಸ್ಟ್ ಇಲಾಖೆ

ಈ ಇಲಾಖೆಯ ಮೇಲಿರುವ ಆರೋಪಗಳ ವಿಚಾರ ಮಾತಾಡುತ್ತಾ, ಈ ಮೊದಲು ಕೆಲವು ಸಣ್ಣ ಕಂಟ್ರಾಕ್ಟರುಗಳಿಗೆ ಮರಸಾಗಿಸುವ ಜವಾಬ್ದಾರಿ ಕೊಟ್ಟು ಅವರಲ್ಲಿ ಮರ ಸಾಗದೆ ಕೊಡಗು ಸರಕಾರಕ್ಕೆ ತುಂಬಾ ನಷ್ಟವಾಗಿದೆಯೆಂದೂ ಆದ್ದರಿಂದ ಸ್ವಲ್ಪ ಹೆಚ್ಚಿನ ದರದಲ್ಲಾದರೂ ಒಳ್ಳೆಯ ಕಂಟ್ರಾಕ್ಟರನ್ನು ಕಂಡು ಹಿಡಿದು ಆಯಾಯ ವರ್ಷದ ಮರ ಆಯಾಯ ವರ್ಷದಲ್ಲಿಯೇ ಸಾಗಿಸಲ್ಪಡುವ ದೃಷ್ಟಿಯಿಂದ ಈಗಿನ ಏರ್ಪಾಡಾಗಿದೆಯೆಂದೂ ಹೇಳಿದರು. ಈ ವರೆಗೆ ರೀಜನರೇಶನ್ ಏರ್ಪಾಡಿನ ಕೆಲಸ ಹೆಚ್ಚು ತೃಪ್ತಿಕರವಾಗಿ ನಡೆಯದ ಕಾರಣ ಸಿಬ್ಬಂದಿಯನ್ನು ಹೆಚ್ಚಿಸಿ ಹೆಚ್ಚು ದಕ್ಷತೆಯಿಂದ ಕಾರ್ಯ ನಡೆಯುವಂತೆ ನೋಡುವದೇ ತಮ್ಮ ಗುರಿಯೆಂದೂ, ನಾಗರ ಹೊಳೆ ಫಾರೆಸ್ಟ್ ಬೆಂದು ಹೋದುದನ್ನು ತಾನು ಸಂದರ್ಶಿಸಿದುದಾಗಿಯೂ ಅದರಿಂದ ಅಷ್ಟು ವಿಪರೀತ ನಷ್ಟವೇನೂ ಆಗಿಲ್ಲವೆಂದು ತಿಳಿದಿರುವದಾಗಿಯೂ ಹೇಳಿದರು

ಜಿಲ್ಲಾ ಬೋರ್ಡ್ ಶಾಲೆಗಳು.

ಗೃಹಮಂತ್ರಿಗಳಾದ ಶ್ರೀ ಕೆ. ಮಲ್ಲಪ್ಪನವರು ಕೊಡಗು ಜಿಲ್ಲಾ ಬೋರ್ಡಿನ ಬಗ್ಗೆ ತಮ್ಮ ವ್ಯಕ್ತಿಗತ ಅಭಿಪ್ರಾಯವನ್ನು ಹೀಗೆ ಹೇಳಿದರು. 'ಕೊಡಗಿನಲ್ಲಿ ಈಗ ಜನತಾ ಸರಕಾರವಿರುವದರಿಂದ ಈ ಸರಕಾರದ ವ್ಯವಹಾರ ಕ್ಷೇತ್ರವೂ ಜಿಲ್ಲಾ ಬೋರ್ಡಿನಷ್ಟೇ ಆಗಿರುವದರಿಂದ ಪ್ರತ್ಯೇಕ ಜಿಲ್ಲಾ ಬೋರ್ಡೊಂದರ ಆವಶ್ಯಕತೆ ಇಲ್ಲ. ಸದ್ಯಕ್ಕೆ ಸರಕಾರವು ಜಿಲ್ಲಾ ಬೋರ್ಡಿನ ವಶದಲ್ಲಿರುವ ವಿದ್ಯಾ ಇಲಾಖೆಯನ್ನು ತೆಗೆದುಕೊಳ್ಳುವದು. ಸರಕಾರವು ತೆಗೆದುಕೊಂಡ ನಂತರ ಬೋರ್ಡ್ ಶಾಲೆಗಳ ಮತ್ತು ಅಧ್ಯಾಪಕರ ಸ್ಥಿತಿಯನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಲಾಗುವದು. ಬೋರ್ಡಿನ ಉದ್ಯೋಗಿಗಳಿಗೆ ಸರಕಾರದ ದರದ ವೇತನವನ್ನೇ ಕೊಡುವದು ಬಹಳ ಸಾಧ್ಯವಾಗಲಾರದು. ಆದರೆ ಅವರ ಜೀವನವು ಸುಗಮವಾಗಿ ನಡೆಯುವ ದೃಷ್ಟಿಯಿಂದ ಆವಶ್ಯಕವಾಗಿ ಅವರಿಗೆ ಹೊಸ ದರದ ವೇತನ ನಿಶ್ಚಯಿಸಲಾಗುವದು. ಈ ಸಮಿತಿಯನ್ನು ನೇಮಿಸುವಾಗ ಅದರಲ್ಲಿ ಸರಕಾರಿ ಪ್ರತಿನಿಧಿಗಳು ಉಪಾಧ್ಯಾಯರ ಸಂಘದ ಪ್ರತಿನಿಧಿಗಳು ಮತ್ತು ಶಾಸನ ಸಭಾಸದಸ್ಯರ ಪ್ರತಿನಿಧಿಗಳು ಮೆಂಬರರಾಗಿರುವಂತೆ ನೋಡಲಾಗುವದು. ಈಗ ತಾತ್ಕಾಲಿಕವಾಗಿರುವ ಅಧ್ಯಾಪಕರನ್ನು ಪರಿಶೀಲಿಸಿ ಸರಕಾರಿ ಉದ್ಯೋಗಕ್ಕೆ ಯೋಗ್ಯರಲ್ಲವೆಂದು ತೋರಿದವರನ್ನು ತೆಗೆದುಹಾಕಿ ಯೋಗ್ಯರನ್ನು ನೇಮಿಸಿ ವಿದ್ಯಾ ಪ್ರಚಾರವು ದಕ್ಷವೂ ಪರಿಣಾಮಕಾರಕವೂ ಆಗುವಂತೆ ನೋಡಲಾಗುವದು. ಈಗಿನ ಜಿಲ್ಲಾ ಬೋರ್ಡ್ ಕಟ್ಟಡಗಳನ್ನು ದುರಸ್ತಿಗೊಳಿಸಲಾಗುವದಲ್ಲದೆ ಆವಶ್ಯವಿರುವೆಡೆ ಶಾಲೆಗಳ ಸ್ಥಾಪನೆಗೂ ನಿಗವಿಡಲಾಗುವದು.

ಶೀಘ್ರದಲ್ಲಿಯೇ ಸರಕಾರವು ಎಲಿಮೆಂಟರಿ ಎಜ್ಯುಕೇಶನ್ ಆಕ್ಟೊಂದನ್ನು ಜಾರಿಗೆ ತಂದು ಆವಶ್ಯವಿರುವೆಡೆ ಖಡ್ಡಾಯದ ಶಿಕ್ಷಣದ ಏರ್ಪಾಡು ಮಾಡಲಿರುವರು,

ಮೂಲನಿವಾಸಿಗಳಿಗಾಗಿ

ಕೊಡಗಿನ ಮೂಲ ನಿವಾಸಿಗಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ನಿಗ ತೆಗೆದುಕೊಳ್ಳಲಾಗುವದೆಂದು ಗೃಹ ಮಂತ್ರಿ ಮಲ್ಲಪ್ಪನವರು ಹೇಳುತ್ತ ಇಂಡಿಯಾ ಸರಕಾರವು ಮೂಲನಿವಾಸಿಗಳ ವಿದ್ಯಾಭ್ಯಾಸದ ಬಗ್ಗೆ ಈ ವರ್ಷ ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿದೆಯೆಂದೂ ಇದರಿಂದ ಮೂಲನಿವಾಸಿಗಳಿಗಾಗಿ ಕಲ್ಲಳ್ಳದಲ್ಲಿ ತೆರೆದಿರುವ ಶಾಲೆಗೆ ಸಹಾಯ ಕೊಡುವದಲ್ಲದೆ ಕಿಕಿಮತಿ, ಕಟ್ಟಗಳಲ್ಲಿ ಶಾಲೆ ತೆರೆಯಲಾಗುವದೆಂದೂ ಈ ಮಕ್ಕಳಿಗೆ ನ್ಯೂಗೆ ಬಟ್ಟೆ, ಪುಸ್ತಕ, ಸ್ಲೇಟು ಮೊದಲಾದುವು ಮತ್ತು ಮಾಸಿಕ ೨-೩ ರೂ. ವೇತನ ಕೊಟ್ಟು ಶಾಲೆಗೆ ಹೆಚ್ಚಾಗಿ ಅವರನ್ನು ಆಕರ್ಷಿಸಲೂ ಈ ಹಣವನ್ನು ವಿನಿಯೋಗಿಸಲಾಗುವದೆಂದೂ ಬರುವ ವರ್ಷ ಕೇಂದ್ರ ಸರಕಾರದಿಂದ ರೂ ೪೦ ಸಾವಿರ ದೊರೆಯಲಿರುವದರಿಂದ ಈ ಬಗ್ಗೆ ಇನ್ನೂ ವಿಸ್ತೃತ ಕಾರ್ಯಕ್ರಮ ಕೈಕೊಳ್ಳಲಾಗುವದೆಂದೂ ಹೇಳಿದರು.

ಕಾಲೇಜು

ಕಾಲೇಜು ಕಟ್ಟಡ ಕೆಲಸ ಮುಗಿಯುತ್ತ ಬಂದಿದೆ. ಮುಂದಿನ ವರ್ಷ ಅಂದರೆ ೧೯೫೩ರಲ್ಲಿ ಬಿ. ಎ. ಮತ್ತಿತರ ತರಗತಿಗಳನ್ನು ತೆರೆಯಲಾಗುವದೆಂದೂ ಅವರು ಹೇಳಿದರು. ಕೊಡಗಿನಲ್ಲಿ ಮೂಲ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಲು ನಿಶ್ಚಯಿಸಿರುವದಾಗಿಯೂ ಶೀಘ್ರವಾಗಿ ಫ್ರೇಜರ್‌ಪೇಟೆಯಲ್ಲಿ ವ್ಯವಸಾಯ ಪ್ರಧಾನವುಳ್ಳ ಮೂಲ ಶಿಕ್ಷಣ ಶಾಲೆಯೊಂದನ್ನು ತೆರೆಯಲಾಗುವದೆಂದೂ ಈ ಶಾಲೆಯನ್ನೇ ಮುಂದೆ ಮೂಲ ಶಿಕ್ಷಣ ಅಧ್ಯಾಪಕರನ್ನು ತಯಾರು ಮಾಡುವ ಶಾಲೆಯಾಗಿ ಮಾರ್ಪಡಿಸಲಾಗುವದೆಂದೂ ಕ್ರಮಶಃ ದೇಶದ ಇತರ ಭಾಗಗಳಲ್ಲಿ ವ್ಯವಸಾಯ ಕಸುಬುಳ್ಳ ಮೂಲಶಿಕ್ಷಣ ಶಾಲೆಗಳನ್ನು ತೆರೆಯಲಾಗುವದೆಂದೂ ಹೇಳಿದರು. ಉತ್ತರ ಕೊಡಗಿನಲ್ಲಿ ಈಗ ತೆರೆದಿರುವ ಸಾಮಾಜಿಕ ವಿದ್ಯಾ ಕೇಂದ್ರಗಳಂತೆ ದಕ್ಷಿಣ ಕೊಡಗಿನಲ್ಲಿ ಈ ವರ್ಷ ೨೦ ಕೇಂದ್ರಗಳನ್ನು ತೆರೆಯಲಾಗುವದೆಂದರು.

ಕೊಡಗಿನ ರಸ್ತೆಗಳು

“ಕೊಡಗಿನ ಎಲ್ಲ ರಸ್ತೆಗಳಿಗೆ ಟಾರು ಹಾಕಿ ಉತ್ತಮ ರಸ್ತೆಗಳಾಗಿ ಮಾಡಲಾಗುವದು. ಈ ಯೋಜನೆ ಪ್ರಕಾರ ಪ್ರತಿ ವರ್ಷ ಕಡಿಮೆ ೩೫ ಮೈಲುಗಳಷ್ಟು ಟಾರು ಹಾಕಲಾಗುವದು. ಈ ರೀತಿ ೧೦ ವರ್ಷಗಳಲ್ಲಿ ಕೊಡಗಿನ ರಸ್ತೆಗಳೆಲ್ಲಕ್ಕೂ ಟಾರು ಹಾಕಲ್ಪಡುವದು. ರಸ್ತೆಗಳಿಗೆ ಕಲ್ಲು ಹಾಕಿ ರಿಪೇರಿ ಮಾಡುವದು ಪುನಹ ಮಳೆಗಾಲದಲ್ಲಿ ಹಾಳಾಗುವದರಿಂದ ಮುಂದೆ ಈ ರೀತಿ ಕಲ್ಲು ಹಾಕಿ ರಿಪೇರಿ ಮಾಡಿ ಅಷ್ಟಕ್ಕೆ ಬಿಡದೆ ಆ ಭಾಗಕ್ಕೆ ಟಾರು ಹಾಕುವ ಕ್ರಮವನ್ನು ಅನುಸರಿಸಲಾಗುವದು. ಈ ವರ್ಷ ಸಂಪಾಜೆಯ ವರೆಗೂ, ಫ್ರೇಜರ್‌ಪೇಟೆ ಕೂಡಿಗೆ ಹದಿಕೇರಿ ಭಾಗಮಂಡಲ ಮತ್ತು ಶನಿವಾರಸಂತೆ ಪೇಟೆಗಳ ರಸ್ತೆಗಳಿಗೆ ಟಾರು ಹಾಕಲ್ಪಡುವವು. ಮಾಲ್ದಾರೆ, ಮಾದಾಪುರ, ಕುಟ್ಟ ರಸ್ತೆಗಳನ್ನು ಈ ವರ್ಷ ದುರಸ್ತಿ ಮಾಡಲಾಗುವದು.

ಭಾಗಮಂಡಲ ಕರಿಕೆ ರಸ್ತೆ

ಭಾಗಮಂಡಲದಿಂದ ಕರಿಕೆ ಮಾರ್ಗವಾಗಿ ಕಾಂಞಂಗಾಡ್ ರೈಲ್ವೆ ಸ್ಟೇಷನಿನ ವರೆಗೆ ಒಂದು ರಸ್ತೆ ಮಾಡಲು ಸುಮಾರು ೭ ಲಕ್ಷದ ಯೋಜನೆಯೊಂದಾಗಿದೆ. ಈ ವರ್ಷ ಈ ಕೆಲಸವನ್ನು ಕೈಕೊಂಡು ಪ್ರಥಮ ಗಾಡಿ ರಸ್ತೆಯಂತೆ ಮಾಡಿ ಕ್ರಮಶಃ ಇದನ್ನು ಅಭಿವೃದ್ಧಿಗೊಳಿಸಿ ೫ ವರ್ಷಗಳಲ್ಲಿ ಮೋಟಾರು ವಾಹನಗಳ ಚಲನೆಗೆ ಯೋಗ್ಯವಾಗಿ ಮಾಡಲಾಗುವದು. ಮತ್ತೆ ಸೂರ್ಲಬಿ, ಮರೆನಾಡು ಕಡೆಗಳಿಗೆ ಆವಶ್ಯವಿರುವ ರಸ್ತೆಗಳನ್ನು ಪರಿಶೀಲಿಸಲಾಗುವದು.

ಈ ವರ್ಷ ಬೇತ್ರಿ ಸೇತುವೆಯ ಕೆಲಸವನ್ನು ಕೈಕೊಳ್ಳಲಾಗುವದು. ಈಗ ಮಳೆಗಾಲದಲ್ಲಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡು ಹೊಳೆಯ ನೀರು ಕಡಿಮೆಯಾದೊಡನೆ ಮುಂದಿನ ನವಂಬರ್ ತಿಂಗಳಲ್ಲಿ ಕೆಲಸ ಕೈಗೊಳ್ಳಲಾಗುವದು. ಬೇತ್ರಿಯಲ್ಲಿ 'ಸಬ್ ಮರ್ಜಿಬಲ್' ಅಂದರೆ ಹೆಚ್ಚಿನ ನೀರು ಬಂದಾಗ ಮುಳುಗಿ ಹೋಗುವ ಸೇತುವೆಯನ್ನು ಕಟ್ಟುವ ಏರ್ಪಾಡಾಗಿದೆ. ಇದಕ್ಕೂ ಉಳಿದಿರುವ ಸೇತುವೆಗಳಿಗೂ ಕೇಂದ್ರದ ರೋಡ್ ಡೆವಲಪ್‌ಮೆಂಟ್ ಫಂಡಿನಿಂದ ಸಹಾಯ ಕೊಡಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯ ಮಾಡಲಾಗುತ್ತಿದೆ.

ಆರೋಗ್ಯ ಇಲಾಖೆ

ಕೊಡಗಿನ ಮಲೇರಿಯಾ ಇಲಾಖೆಯನ್ನು ಖಾಯಂ ಮಾಡಲಾಗುವದು. ಒಬ್ಬ ಆರೋಗ್ಯಾಧಿಕಾರಿಯನ್ನು ನೇಮಿಸಲಾಗುವದು. ಕೊಡಗಿನಲ್ಲಿ ಕ್ಷಯ ರೋಗಿಗಳ ಸಂಖ್ಯೆ ಹೆಚ್ಚುತ್ತಿರುವದು ತೋರಿಬರುವದರಿಂದ ಇದನ್ನು ನಿವಾರಿಸಲು ಒಂದು ತಂಡದವರಿಗೆ ತರಬೇತು ಕೊಟ್ಟು ದೇಶದ ಉದ್ದಗಲಕ್ಕೂ ಕ್ಷಯ ರೋಗ ನಿವಾರಕ ಬಿ. ಸಿ. ಜಿ. ಇನಾಕ್ಯುಲೇಶನ್ ಮಾಡಿಸಲಾಗುವದು. ಮಡಿಕೇರಿ ಆಸ್ಪತ್ರೆಯ ಆವರಣದಲ್ಲಿ ಈಗ ಇರುವ ಕ್ಷಯರೋಗ ವಾರ್ಡನ್ನು ಬದಲಾಯಿಸುವದು ಹಿತವಾದ್ದರಿಂದ ಬರುವ ಶ

ಕರ ಕ್ಷಯರೋಗಿಗಳಿಗಾಗಿ ಪ್ರತ್ಯೇಕ ಕಟ್ಟಡ ಕಟ್ಟುವ ಏರ್ಪಾಡು ಮಾಡಲಾಗುವದು. ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕ್ಕ ಮಕ್ಕಳ ಚಿಕಿತ್ಸೆಯು ಹಾನಿಕಾರಕವಾದ್ದರಿಂದ ಮಡಿಕೇರಿ ಟೋಲ್‌ಗೇಟಿನ ಬಳಿಗೆ ಇರುವ ನೂಳದಲ್ಲಿ ಮಕ್ಕಳಿಗಾಗಿ ಒಂದು ಆಸ್ಪತ್ರೆಯನ್ನು ತ್ವರಿತವಾಗಿ ಕಟ್ಟಲಾಗುವದು. ಅಲ್ಲದೆ ಮುಂದಿನ ವರ್ಷ ಹೆಂಗಸರಿಗಾಗಿ ಹೊಸ ಆಸ್ಪತ್ರೆಯೊಂದನ್ನು ಕಟ್ಟಲಾಗುವದು. ಇವು ಇಡೀ ಕೊಡಗಿಗೆ ಅನ್ವಯಿಸುವ ಕೇಂದ್ರ ಆಸ್ಪತ್ರೆಗಳಾಗಿರುವವು.

ಸಹಕಾರಿ ಇಲಾಖೆ

ಕೊಡಗಿನ ಸಹಕಾರಿ ಚಳವಳವು ಏಕಮುಖವಾಗಿ ಸಾಗುತ್ತಿದೆ. ಬೇಕಿರುವವರಿಗೆ ಸಾಲ ಒದಗಿಸುವದು ಮತ್ತು ಮಾರ್ಕೆಟಿಂಗ್ ವ್ಯವಸ್ಥೆ ವಿನಾ ಹೆಚ್ಚಿನದೇನೂ ನಡೆಯುತ್ತಿಲ್ಲ. ಕ್ರಮಶಃ ಮಾರ್ಕೆಟಿಂಗ್ ಸಂಘಗಳು ಕೆಲಸ ಮಾಡಲಾರದ ಪರಿಸ್ಥಿತಿಯೂ ಬರಬಹುದೆಂಬ ಭಯ ನನಗಿದೆ. ಆದ್ದರಿಂದ ಸಹಕಾರವು ಕೇವಲ ಉತ್ಪಾದಿಸಿದುದನ್ನು ವಿಕ್ರಯಿಸುವ ಏಜಂಟರಾಗಿರದೆ ಸ್ವತಹ ಉತ್ಪಾದನೆ ಕೈಕೊಳ್ಳುವ ವ್ಯವಸ್ಥೆ ಮಾಡಬೇಕಿದೆ. ಆದ್ದರಿಂದ ಈಗಿನ ಸಹಕಾರ ಚಳವಳವನ್ನು ಪುನರ್ಘಟಿಸಬೇಕಿದೆ. ಇದಕ್ಕಾಗಿ ಒಂದು ಸಮಿತಿಯನ್ನು ನೇಮಿಸಿ ಸಹಕಾರ ಚಳವಳದ ಪರಿಶೀಲನೆ ಮಾಡಿ ಮುಂದಿನ ವ್ಯವಸ್ಥೆಯ ಕಾರ್ಯಕ್ರಮ ಕೈಕೊಳ್ಳುವ ಅಭಿಲಾಷೆ ಇದೆ. ಸಹಕಾರವು ರಾಜಕೀಯದಿಂದ ನಿರ್ಲಿಪ್ತವಾಗಿರಬೇಕಾದುದು ತುಂಬಾ ಅಗತ್ಯವಿದೆ. ರಾಜಕೀಯ ಕಸರಿನಿಂದ ಈ ಚಳವಳವನ್ನು ಮೇಲೆತ್ತಿದರೆ ಮುಂದೆ ಸಹಕಾರದಿಂದ ದೇಶದ ಹಿತವಾಗುವದು.

ಸಹಕಾರದ ಮೂಲಕ ಆದರ್ಶ ಸಾಮೂಹಿಕ ವ್ಯವಸಾಯ ಕೇಂದ್ರ ಒಂದನ್ನು ತೆರೆಯುವ ಅಭಿಲಾಷೆ ನನಗಿದೆ. ಅಲ್ಲಿ ಸಾಮೂಹಿಕವಾಗಿ ಎಲ್ಲರೂ ದುಡಿದು ಬಂದ ಫಲವನ್ನು ತಮ್ಮ ದುಡಿಮೆಗನುಗುಣ ಹಂಚಿಕೊಳ್ಳುವ ವ್ಯವಸ್ಥೆ ಮಾಡಲಾಗುವದು. ಇದೇ ರೀತಿ ಸ್ತ್ರೀ ಸಹಕಾರದ ಆಶ್ರಯದಲ್ಲಿ ಸಾಮೂಹಿಕ ಡೈರಿ ಫಾರಂಗಳನ್ನೂ, ಕಟ್ಟಡ ಸಂಘಗಳನ್ನೂ ಏರ್ಪಡಿಸಲಾಗುವದು. ಕಟ್ಟಡ ಸಂಘದ ಜವಾಬ್ದಾರಿ ಹೊತ್ತು ಕೆಲಸ ಮಾಡುವ ಉತ್ತಮ ಸಂಘಗಳು ಸ್ಥಾಪಿತವಾದರೆ ಸರಕಾರವು ಅವರಿಗೆ ಮರ, ಕಬ್ಬಿಣ ಸಾಮಾನು, ಸೀಮೆಂಟು, ಹಣ ಮೊದಲಾದುವನ್ನು ಒದಗಿಸಿಕೊಡುವದು. ಪ್ರತಿ ವರ್ಷ ಕಡಿಮೆ ಕ್ರಯದ ಆರೋಗ್ಯಕರ ಮನೆಗಳನ್ನು ಕಟ್ಟಿ ದೀರ್ಘ ಕಂತಿನ ವ್ಯವಸ್ಥೆಯಲ್ಲಿ ಜನರಿಗೆ ವಾಸಕ್ಕೆ ಕೊಟ್ಟರೆ ಇದರಿಂದ ಕ್ರಮಶಃ ಮನೆಯ ಮಾಲೀಕರಾಗಿ ಅವರನ್ನು ಮಾಡಿದಂತಾಗುವದಲ್ಲದೆ ಪಟ್ಟಣ ಸುಂದರವಾಗುವದರೊಂದಿಗೆ ಮನೆಯ ಅಭಾವದ ಪ್ರಶ್ನೆಯನ್ನು ನೀಗಿದಂತಾಗುವದು. ಸಹಕಾರದ ಆಶ್ರಯದಲ್ಲಿ ಕೈಗಾರಿಕೆಗಳು ಅಭಿವೃದ್ಧಿಯಾಗಬೇಕು. ಕೊಡಗಿನಲ್ಲಿ ಪ್ರಧಾನವಾಗಿ ರೇಷ್ಮೆ ಕೈಗಾರಿಕೆಯನ್ನು ಸಹಕಾರದ ತಳಹದಿಯಲ್ಲಿ ಕೈಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗುವದು. ಈಗಿನ ಜೇನು ಮೇಣ ಸಂಘವೂ ಕೂಡ ಉತ್ಪಾದಕ ಸಂಸ್ಥೆಯಲ್ಲ; ಕೇವಲ ಮಾರಾಟದ ಸಂಸ್ಥೆ. ಆದ್ದರಿಂದ ಜೇನು ಕೈಗಾರಿಕೆಯನ್ನು ಸ್ವತಹ ಕೈಗೊಂಡು ಅದನ್ನು ಅಭಿವೃದ್ಧಿಗೊಳಿಸುವ ಏರ್ಪಾಡನ್ನು ಕೈಕೊಳ್ಳಲಾಗುವದು' ಎಂದು ಮುಂದಿನ ಕಾರ್ಯಕಲಾಪಗಳ ಒಂದು ಪರಿಚಯವನ್ನು ಕೊಟ್ಟರು.

ANNOUNCEMENT.

MR. M. M. DEVAIYYA, Ponnampet has been appointed the CHIEF AGENT of the Company for Coorg. The Company offers attractive appointments for Agencies and special Agenciss. Please write to the Chief Agent or the Head Office

THE POPULAR INSURANCE COMPANY LIMITED.
Head Office:-POPULAR BUILDINGS, MANGALORE.
ESTED. 1929.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡಲ್ಪಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕಾಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಸೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ,
ಪ್ರೆಸಿಡೆಂಟ್ ಮತ್ತು ಖಜಾಂಚಿ.

ಮಂತ್ರಿಗಳು ವಿಚಾರಣೆ ನಡೆಸಬೇಕು.

ಕೊಡಗು ಫಾರೆಸ್ಟ್ ಇಲಾಖೆಯ ಕೆಲಸ ಕಾರ್ಯ.

ಈಗಿನ ಫಾರೆಸ್ಟ್ ಆಫೀಸರು ಕೊಡಗಿಗೆ ಬಂದೊಡನೆ ತಮ್ಮ ಆಫೀಸಿನಲ್ಲಿ ಬದಲಾವಣೆ ಮಾಡಿ ಟಿಂಬರ್ ವ್ಯಾಪಾರಿಗಳಾಗಲೀ ಇತರರುಗಳಾಗಲೀ ನೇರವಾಗಿ ಆಫೀಸಿನೊಳನುಗ್ಗಿ, ಅಲ್ಲಿಯ ಸಿಬ್ಬಂದಿಗಳೊಡನೆ ವ್ಯವಹರಿಸದಂತೆ ಎಚ್ಚರಿಕೆ ವಹಿಸಿದರು. ಆದ ಕಾರಣ ಫಾರೆಸ್ಟ್ ಆಫೀಸಿನ ಮುಂಬಾಗಿಲಿಗೆ ಬೀಗ ಹಾಕಿಸಿ ಫಾರೆಸ್ಟ್ ಆಫೀಸರ ಆಫೀಸಿನ ಕಡೆಯಿಂದಲೇ ಬರುವಂತೆಯೂ ಅಲ್ಲಿ ಒಬ್ಬರನ್ನು 'ಎನ್‌ಕ್ವಾಯರಿ' ಗುಮಾಸ್ತರಾಗಿ ಕೂರಿಸಿ ಏನು ಬೇಕಾದರೂ ಅವರನ್ನು ವಿಚಾರಿಸಿ ಚೀಫ್ ಫಾರೆಸ್ಟ್ ಆಫೀಸರ ಅರಿವಿನಿಂದಲೇ ಕಾರುಬಾರುಗಳು ನಡೆಯಬೇಕೆಂದು ವಿಧಿಸಿದರು. ಹೀಗೆ ಮಾಡಲು ಕಾರಣವೇನೆಂದು ತಿಳಿಯದಿದ್ದರೂ ಈ ವ್ಯವಸ್ಥೆಯು ಆಫೀಸಿನ ಕೆಲಸದ ದೃಷ್ಟಿಯಿಂದ ಉತ್ತಮವೆಂದು ಹೇಳಬಹುದು. ಆದರೆ ಅಂದು ಉತ್ತಮವೆಂದು ತೋರಿದ ಈ ವ್ಯವಸ್ಥೆಯು ಬೇರೆ ಕಾರಣಗಳಿಂದಾಗಿರಬೇಕೆಂಬ ಸಂಶಯ ಬರುವಂತೆ ಇಂದು ತೋರುತ್ತಿದೆ. ಅದಕ್ಕಾಗಿ ಈ ಕೆಳಗಿನ ಒಂದೆರಡು ಉದಾಹರಣೆಗಳನ್ನು ಕೊಡಲಾಗಿದೆ. ಈ ವಿಚಾರಗಳಲ್ಲಿ ಸತ್ಯಾಂಶವಿದೆಯೋ ಎಂಬುದನ್ನು ಮಂತ್ರಿಗಳು ಪರಿಶೀಲಿಸಿ ಜನತೆಗೆ ತಿಳಿಸಬೇಕೆಂಬ ಉದ್ದೇಶದಿಂದ ಈ ಲೇಖನ ಬರೆಯುತ್ತಿರುವದಾಗಿದೆ. ಸತ್ಯಾಂಶ ಇಲ್ಲವೆಂದು ಆಧಾರಪೂರ್ವಕ ಹೇಳಿದರೆ ಇಂದು ಹಬ್ಬಿರುವ ಈ ವಾರ್ತೆಗಳನ್ನು ನಿಲ್ಲಿಸಿ ಫಾರೆಸ್ಟ್ ಇಲಾಖೆಯ ಮೇಲೆ ವಿಶ್ವಾಸ ಹುಟ್ಟುವಂತೆ ಮಾಡಿದಂತಾಗುವದು. ಆದ್ದರಿಂದ ಮಂತ್ರಿಯವರು ಈ ವಿಚಾರದಲ್ಲಿ ನಿಗ ವಹಿಸಬೇಕಿದೆ.

(೧) ಕೆಲವು ದಿನಗಳ ಹಿಂದೆ ಮಾಕುಟ ರೇಂಜಿನಲ್ಲಿ ಮರ ಸಾಗಿಸುವ ಬಗ್ಗೆ ಟೆಂಡರು ಆಹ್ವಾನಿಸಿದಾಗ ಬರೀ ಒಬ್ಬ ಮಾಪಿಳ್ಳೆ ವರ್ತಕರು ಮಾತ್ರ ಟೆಂಡರ್ರು ಹಾಕಿದ್ದರಂತೆ. ಟೆಂಡರು ಬರಬೇಕಾದ ಕಡೇ ಅವಧಿಯ ವರೆಗೂ ಆಫೀಸಿಗೆ ಇದೊಂದೇ ಟೆಂಡರು ಬಂದಿದ್ದದಂತೆ. ಆದರೆ ಈ ಟೆಂಡರುದಾರರಿಗೆ ಆ ಕಂಟ್ರಾಕ್ಟನ್ನು ಕೊಡದೆ ಬೇರೊಬ್ಬರಿಗೆ ಕಂಟ್ರಾಕ್ಟು ಕೊಡಲಾಗಿದೆಯಂತೆ. ಇವರು ಟೆಂಡರು ಹಾಕಿರಲಿಲ್ಲವೆಂದೂ, ಒತ್ತಾಯದಿಂದ ನಿಶ್ಚಿತ ತಾರೀಕಿನ ನಂತರ ಅವರಿಂದ ಬರೆಸಿಕೊಂಡು ಕಂಟ್ರಾಕ್ಟು ಕೊಡಲಾಗಿದೆಯೆಂದೂ ತಿಳಿದು ಬಂದಿದೆ. ಇದಕ್ಕೆ ಕಾರಣವಿದೆಯೆಂದೂ ಜನರು ಹೇಳಿಕೊಳ್ಳುತ್ತಿದ್ದಾರೆ. ಚೀಫ್ ಫಾರೆಸ್ಟ್ ಆಫೀಸರು ಒಂದೆಡೆ ಹೇಳಿದಂತೆ ಈ ಚಿಕ್ಕ ವ್ಯಾಪಾರಸ್ಥರು ಸರಿಯಾಗಿ ವಹಿವಾಟು ನಡೆಸಲಾರರೆನ್ನುವದಾದರೆ ತಮಗೆ ಯುಕ್ತ ತೋರುವವರಿಗೆ ಕೊಟ್ಟುಕೊಳ್ಳದೆ ಈ ಟೆಂಡರು ಆಹ್ವಾನಿಸುವ ತಮ್ಮ ಮುಖವಾಡ ಏಕೆ?

(೨) ಕಂಟ್ರಾಕ್ಟು ತೆಗೆದುಕೊಂಡ ವರ್ತಕರ ಕೆಲಸಗಾರರಿಗೆ ಫಾರೆಸ್ಟ್ ಇಲಾಖೆಯವರು ರೇಶನ್ ಕೊಡುವ ಪದ್ಧತಿ ಇವೆಯಲ್ಲವೇ? ಆದರೆ ಮೇಲೆ ಹೇಳಿದ ಕಂಟ್ರಾಕ್ಟರರ ಆಳುಗಳಿಗೆ ರೇಶನ್ ಸರಾಗ ದೊರೆಯುತಿದ್ದರೂ ಅದೇ ರೇಂಜಿನ ಇತರ ಕಂಟ್ರಾಕ್ಟರುಗಳ ಕೆಲಸಗಾರರಿಗೆ ರೇಶನ್ ದೊರೆಯುವದೇ ಕಷ್ಟವಂತೆ. ಕೆಲವು ದಿವಸಗಳ ಹಿಂದೆ ಮೇಲಿನ ಕಂಟ್ರಾಕ್ಟರ ಕೆಲಸಗಾರರು ಎಲ್ಲೋ ಕಪ್ಪು ಸಂತೆಯಿಂದ ಅಕ್ಕಿ ಸಾಗಿಸಿಕೊಂಡು ಹೋಗುತ್ತಿರುವಾಗ ಪೋಲೀಸರು ಹಿಡಿದು ಕೇಸು ಮಾಡಿದರೆಂದೂ ಈ ವಿಚಾರದಲ್ಲಿ ಚೀಫ್ ಫಾರೆಸ್ಟ್ ಆಫೀಸರು ಕೈ ಹಾಕಿ ಪೋಲೀಸರಿಗೆ ಈ ಸುದ್ದಿಯನ್ನು ಫಾರೆಸ್ಟ್ ಇಲಾಖೆಯವರು ಕೊಟ್ಟಿರಬಹುದೆಂದು ಸಂಶಯದಿಂದ ವಿಚಾರ ನಡೆಸಿ ಒಬ್ಬ ಗಾರ್ಡನ್ನು ಈ ತಪ್ಪಿಗಾಗಿ ಬೇರೆಡೆಗೆ ವರ್ಗಾಯಿಸಿದರಂತೆ! ಇದು ನಿಜವಿದ್ದರೆ ಇದಕ್ಕೇನೆನ್ನಬೇಕು?

(೩) ಬೆಂಗಳೂರಿನಲ್ಲಿರುವ ಹಿಂದೂಸ್ಥಾನ ಏರ್‌ಕ್ರಾಫ್ಟ್ ಕಂಪೆನಿಗೆ ಒಂದು ಲಕ್ಷ ೫೦ ಸಾವಿರ ಘನ ಅಡಿ ಬೀಟೆ ಮರವನ್ನು ಸರಬರಾಯಿ ಮಾಡಲು ಒಪ್ಪಿದ್ದು ಅದನ್ನು ಒಬ್ಬ ಅಧಿಕಾರಿಯು ಪರಿಶೀಲಿಸಿ ೧ ಲಕ್ಷ ಘನ ಅಡಿ 'ಎ' ತರಗತಿಯದೆಂದೂ, ೫೦೦೦೦ ಘನ ಅಡಿ 'ಬಿ' ತರಗತಿಯದೆಂದೂ ವರ್ಗೀಕರಿಸಿದ್ದರೆಂದೂ ಆದರೆ ಇತ್ತಲಾಗಿ ಫಾರೆಸ್ಟ್ ಆಫೀಸರು ಅದನ್ನು ೫೦ ಸಾವಿರ 'ಎ' ತರಗತಿ ೧ ಲಕ್ಷ 'ಬಿ' ತರಗತಿಯ ಮರವೆಂದು ಮಾಡಿದ ಕಾರಣ ಏಜೆಂಟನಾದವನಿಗೆ ಲಕ್ಷಗಟ್ಟಲೆ ಆದಾಯವಾಗಿದೆಯೆಂದೂ ವಾರ್ತೆ ಇದೆ. 'ಎ' ತರಗತಿಯ ಮರಕ್ಕೆ ಘನ ಅಡಿಗೆ ರೂ. ೧೫-ದರವೆಂದೂ 'ಬಿ' ತರಗತಿಯದ್ದಕ್ಕೆ ರೂ. ೯-ಎಂದೂ ಕಂಟ್ರಾಕ್ಟು ಆದದೆಂದು ತಿಳಿದು ಬಂದಿದೆ. ಆದ್ದರಿಂದ ೫೦೦೦೦ ಘನ ಅಡಿಗೆ ಪ್ರತಿ ಘನ ಅಡಿಗೆ ರೂ ೬ ರಂತೆ ಮೂರು ಲಕ್ಷ ರೂಪಾಯಿ ಕೊಡಗು ಸರಕಾರಕ್ಕೆ ನಷ್ಟವಾಗಿದೆಯೆಂದೂ ಮಾತಿದೆ. ಈ ವಿಚಾರವನ್ನು ಮಂತ್ರಿಗಳು ಪರಿಶೀಲಿಸಬೇಕು.

ಈ ಮೊದಲು ಫಾರೆಸ್ಟ್ ಇಲಾಖೆಯ ಮೇಲೆ ಕೆಲವು ಲೇಖನಗಳು ಪ್ರಕಟವಾಗಿದ್ದವು. ಆದರೆ ಮಂತ್ರಿಗಳು ಈ ವರೆಗೆ ಯಾವುದೇ ಕ್ರಮ ತೆಗೆದುಕೊಂಡಂತೆ ತೋರುವದಿಲ್ಲ. ಇವುಗಳೆಲ್ಲವುಗಳ ಪರಿಶೀಲನೆ ನಡೆಸಿ ಫಾರೆಸ್ಟ್ ಇಲಾಖೆಯ ಕೆಲಸ ಮತ್ತು ಫಾರೆಸ್ಟ್ ಅಧಿಕಾರಿಯ ವರ್ತನೆಗಳ ಬಗ್ಗೆ ಒಂದು ವಿವರಣೆಯನ್ನು ಜನತೆಯ ಮುಂದಿಡುವದು ಅತ್ಯವಶ್ಯವಿದೆ.

"X"

Edited printed and published by P. I. Belliapa at 'Kodagu' Press, Mercara, for Kodagu Ltd.

ಕೊಡಗು

ತಾ ೨೦-೬-೧೯೫೨ನೇ ಶುಕ್ರವಾರ

ಔದ್ಯೋಗಿಕ ಕಾಲೇಜುಗಳಿಗೆ ಆಯ್ಕೆ.

ಇಂಟರ್ ಮೀಡಿಯೇಟ್ ಪರೀಕ್ಷೆಯ ಫಲಿತಾಂಶವು ಹೊರಬಿದ್ದ ಕೂಡಲೇ ಪಾಸಾದ ವಿದ್ಯಾರ್ಥಿಗಳ ತಂದೆ ತಾಯಿಗಳಿಗೆ ತಮ್ಮ ಮಕ್ಕಳ ಮುಂದಿನ ವಿದ್ಯಾರ್ಜನೆಯ ವಿಚಾರವು ದೊಡ್ಡ ಸಮಸ್ಯೆಯಾಗಿ ಪರಿಣಮಿಸುತ್ತದೆ. ಈ ವರ್ಷ ಕೊಡಗು ಸರಕಾರಿ ಕಾಲೇಜಿನ ಇಂಟರ್ ಮೀಡಿಯೇಟ್ ಪರೀಕ್ಷೆಯ ಫಲಿತಾಂಶವು ಉತ್ತಮವಾಗಿದ್ದು ಎಲ್ಲರಿಗೂ ಸಂತೋಷವನ್ನುಂಟುಮಾಡಿದೆ. ಅದರೊಂದಿಗೆ ತೇರ್ಗಡೆಯಾದ ವಿದ್ಯಾರ್ಥಿಗಳ ಪೈಕಿ ಔದ್ಯೋಗಿಕ ಕಾಲೇಜುಗಳಿಗೆ ಯಾರನ್ನು ಆರಿಸಬೇಕೆಂಬ ವಿಚಾರವು ಈಗ ಎಲ್ಲೆಡೆಯಲ್ಲೂ ಚರ್ಚಿಸಲ್ಪಡುತ್ತಿದೆ. ಈ ಆಯ್ಕೆಯ ವಿಚಾರದಲ್ಲಿ ನಾಲ್ಕೈದು ವರ್ಷಗಳ ಹಿಂದೆ ಚೀಫ್ ಕಮಿಷನರೇ ಮಾಡುತ್ತಿದ್ದ ತೀರ್ಮಾನವು ಜನರಿಗೆ ಸಾಕಷ್ಟು ತೃಪ್ತಿಯನ್ನು ಉಂಟುಮಾಡದ್ದರಿಂದ ಶ್ರೀ. ಸಿ. ಟಿ ಮೊದಲಿಯಾರ್ ಇವರ ಕಾಲದಲ್ಲಿ ಇಂಥಾ ಆಯ್ಕೆಗೂ ಮತ್ತು ವಿದ್ಯಾರ್ಥಿವೇತನಗಳನ್ನು ಕೊಡಲಿಕ್ಕಾಗಿಯೂ ಒಂದು ಸಮಿತಿಯನ್ನು ನೇಮಿಸುತ್ತಿದ್ದರು. ಇದು ಸ್ವಲ್ಪ ಮಟ್ಟಿಗೆ ಜನರಿಗೆ ತೃಪ್ತಿಕಾರಕವಾಗಿತ್ತು. ಆದರೆ ಕಳೆದ ವರ್ಷ ಆಯ್ಕೆಯ ಕಾರ್ಯವನ್ನು ಚೀಫ್ ಕಮಿಷನರೇ ನಡೆಸಿ ವಿದ್ಯಾರ್ಥಿವೇತನವನ್ನು ಕೊಡುವ ವಿಚಾರವನ್ನು ಮಾತ್ರ ಕಮಿಟಿಗೆ ಬಿಡಲಾಗಿತ್ತೆಂದು ತಿಳಿಯಬರುತ್ತದೆ. ಇದು ಒಂದು ರೀತಿಯಲ್ಲಿ ಮುಂದಿಟ್ಟ ಹೆಜ್ಜೆಯನ್ನು ಹಿಂತೆಗೆದಂತಾಯಿತು. ಆದರೆ ಈ ಸಲ ಆಯ್ಕೆಯ ಸಮಯವು ಸಮೀಪಿಸಿದ್ದರೂ ಕೂಡ ಕಮಿಟಿಯ ನೇಮಕವಾದಂತೆ ತೋರುವದಿಲ್ಲ. ಆಯ್ಕೆಯನ್ನು ಕಮಿಟಿಯವರು ಮಾಡುವರೋ ಎಂಬ ವಿಚಾರವೂ ಕೂಡ ಜನರಿಗೆ ಇನ್ನೂ ತಿಳಿದಿರುವದಿಲ್ಲ. ನಿಷ್ಪಕ್ಷಪಾತದಿಂದ ಆಯ್ಕೆಯನ್ನು ಮಾಡುವ ಸಮಿತಿಯೇ ಉತ್ತಮಮಾರ್ಗವೆಂದು ಅನುಭವದಿಂದ ತಿಳಿದುಬಂದಿದೆ.

ಮೆಡಿಕಲ್, ಇಂಜಿನಿಯರಿಂಗ, ಎಗ್ರಿಕಲ್ಚರಲ ಮತ್ತು ವೆಟರಿನರಿ ಕಾಲೇಜುಗಳ ವ್ಯಾಸಂಗವು ಸ್ವಲ್ಪ ಕಷ್ಟಕರವಾದುದರಿಂದ ಈ ಕಾಲೇಜುಗಳಿಗೆ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದವರನ್ನೇ ಯೋಗ್ಯತೆ ನೋಡಿ ಹೆಕ್ಕಿಕೊಳ್ಳುವದಾಗಿದೆ. ಆದುದರಿಂದ ನಮ್ಮ ಆಯ್ಕೆಯೂ ಕೂಡ ಯೋಗ್ಯತೆಯನ್ನನುಸರಿಸಿಯೇ ಆಗಬೇಕಾದ್ದು ನ್ಯಾಯವೂ ಉಚಿತವೂ ಆಗಿದೆ. ಹಿಂದಿನ ವರ್ಷಗಳಲ್ಲಿ ಯೋಗ್ಯತೆಯನ್ನು ಲೆಕ್ಕಿಸದೆ ಮಾಡಿದ ಕೆಲವು ಆಯ್ಕೆಗಳ ಫಲಿತಾಂಶವಾಗಿ ಅಂಥಾ ವಿದ್ಯಾರ್ಥಿಗಳು ಕಾಲೇಜುಗಳಲ್ಲಿ ವರ್ಷಂಪ್ರತಿ ಜಯಶೀಲರಾಗುತ್ತಿಲ್ಲವೆಂಬುದು ಅನುಭವದಿಂದ ತಿಳಿದುಬಂದಿದೆ. ಆದ ಕಾರಣ ಈ ಆಯ್ಕೆಯಲ್ಲಿ, ಜಾತಿ, ಮತ, ಲಿಂಗಬೇಧಗಳನ್ನೆಣಿಸದೆ ಪ್ರಥಮ ತರಗತಿಯಲ್ಲಿ ತೇರ್ಗಡೆಯಾದವರನ್ನು ಯೋಗ್ಯತಾನುಸಾರ ಆರಿಸಿದ್ದೇ ಆದರೆ ಅಂಥಾ ವಿದ್ಯಾರ್ಥಿಗಳು ತಮ್ಮ ಮುಂದಿನ ವ್ಯಾಸಂಗದಲ್ಲಿ ವರ್ಷ ವರ್ಷ ಜಯಶೀಲರಾಗಿ ದೇಶಕ್ಕೆ ಉಪಯುಕ್ತ ಸೇವೆಯನ್ನು ದಕ್ಷತೆಯಿಂದ ಸಲ್ಲಿಸುವರೆಂಬುದರಲ್ಲಿ ಸಂಶಯವಿಲ್ಲ.

ಕೊಡಗಿನ ವಿದ್ಯಾರ್ಥಿಗಳಿಗೆ ಮದರಾಸು ಪ್ರಾಂತ್ಯದ ಮೆಡಿಕಲ್, ಇಂಜಿನಿಯರಿಂಗ್, ವೆಟರ್ನರಿ ಮತ್ತು ಎಗ್ರಿಕಲ್ಚರಲ್ ಕಾಲೇಜುಗಳಲ್ಲಿ ಎರಡೆರಡು ಸೀಟುಗಳಿರುವದಲ್ಲದೆ ಡೆಲ್ಲಿಯ ಮೆಡಿಕಲ್ ಮತ್ತು ಎಗ್ರಿಕಲ್ಚರಲ್ ಕಾಲೇಜುಗಳಲ್ಲಿಯೂ ಕೆಲವು ಸೀಟುಗಳಿವೆ. ಕೊಡಗಿಗೆ ಮೈಸೂರಿನ ಕಾಲೇಜುಗಳಲ್ಲಿ ಸ್ಥಳ ಕಾದಿರಿಸಲ್ಪಡದಿದ್ದರೂ ಕೆಲವು ವರ್ಷಗಳಿಂದ ಕೊಡಗಿನ ವಿದ್ಯಾರ್ಥಿಗಳಿಗೆ ಸ್ಥಳ ಕೊಡಲ್ಪಡುತ್ತಿವೆ. ಆದ ಕಾರಣ ವಿದ್ಯಾರ್ಥಿಗಳು ಪಡೆದ ಮಾರ್ಕುಗಳ ಆಂತಸ್ತಿನಿಂದ ಪ್ರಥಮ ಬಂದವರನ್ನು ಎಲ್ಲರೂ ಇಚ್ಛಿಸುವ ಮದ್ರಾಸು ಕಾಲೇಜುಗಳಿಗೂ, ನಂತರ ಮೈಸೂರಿಗೂ ಆ ನಂತರ ಡೆಲ್ಲಿ ಕಾಲೇಜುಗಳಿಗೂ ಆರಿಸಬೇಕಾದುದು ನ್ಯಾಯವಾಗಿದೆ. ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಅದರಲ್ಲೂ ಉತ್ತಮ ಫಲಿತಾಂಶವು ದೊರೆತಿರುವ ಈ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಸ್ವಲ್ಪ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂಬುದಕ್ಕೆ ಯಾರೂ ವಿರೋಧಿಸಲಾರರು. ಹಾಗೆಂದಾಗ ಹೊರಗಿನ ಕಾಲೇಜುಗಳಲ್ಲಿ ಬಹು ಹೆಚ್ಚಿನ ಮಾರ್ಕು ಪಡೆದು ತೇರ್ಗಡೆಯಾದವರನ್ನು ನಿರಾಕರಿಸಬೇಕೆಂದು ನಮ್ಮ ಅಭಿಪ್ರಾಯವಲ್ಲ.

ಈಗ ಆಗಲಿರುವ ಆಯ್ಕೆಯಲ್ಲಿ ಮೆಡಿಕಲ ಸೀಟನ್ನು ತಂದೆ ಡಾಕ್ಟರಾದ್ದರಿಂದ ಮಕ್ಕಳಿಗೆ ಕೊಡಲಾಗುವದೆಂದೂ, ಅಣ್ಣ ತಮ್ಮಂದಿಯರಿಗೆ ಮೆಡಿಕಲ್ ಸೀಟು ಈ ಮೊದಲು ಕೊಟ್ಟಿರುವ ಕಾರಣ ಈಗ ಅವರ ಸಹೋದರ ಸಹೋದರಿಯರಾರಿಗೂ ಕೊಡಲಾಗುವದಿಲ್ಲವೆಂದೂ ವಾರ್ತೆಗಳು ಕೇಳಿ ಬರುತ್ತಿವೆ. ಇವು ಎಂದೂ ನ್ಯಾಯವಾದ ಕಾರಣಗಳಲ್ಲ. ಈ ಕಾಲೇಜಿನ ಸ್ಥಳಗಳನ್ನು ಹುಡುಗಿಯರಿಗೂ ಮತ್ತು ಹುಡುಗರಿಗೂ ಸಮಾನವಾಗಿ ಹಂಚಬೇಕೆಂಬುದೂ ಸರಿಯಲ್ಲ. ದೇಶದ ಮುಂದಿನ ಹಿತದೃಷ್ಟಿಯಿಂದಲೂ, ನ್ಯಾಯಸಮರ್ಪಕ ನಿರ್ಣಯದ ದೃಷ್ಟಿಯಿಂದಲೂ ವಿದ್ಯಾರ್ಥಿಗಳ ಯೋಗ್ಯತೆಯನ್ನು ಅನುಸರಿಸಿಯೇ ತೀರ್ಮಾನ ಮಾಡಬೇಕಲ್ಲದೆ ಅನ್ಯಥಾ ಅಲ್ಲ.

ವರ್ತಮಾನ.

ಕೊಡಗಿನ ಮಂತ್ರಿಗಳು ಸಾಮೂಹಿಕ ಯೋಜನೆಯ ಸಂಬಂಧ ತಾ. ೨೧ರಲ್ಲಿ ಶನಿವಾರಸಂತೆಗೂ, ತಾ ೨೨ರಲ್ಲಿ ಬೆಂಬಳೂರು ಮತ್ತು ಕರಿಕೆರ ಶಾಲೆಯಲ್ಲಿಯೂ, ತಾ. ೨೪ರಲ್ಲಿ ಹೆಬ್ಬಾಲೆ ಮತ್ತು ಫ್ರೇಜರ್‌ಪೇಟೆಯಲ್ಲೂ, ತಾ. ೨೬ರಲ್ಲಿ ಆಲೂರು, ಸಿದ್ದಾಪುರ-ಗೋಣಿಕೊಪ್ಪಲುಗಳಲ್ಲಿಯೂ, ತಾ. ೩೦ ರಲ್ಲಿ ಸೋಮವಾರಪೇಟೆಗಳಲ್ಲಿಯೂ, ಮೀಟಿಂಗು ನಡೆಸುವರೆಂದು ತಿಳಿದು ಬಂದಿದೆ.

ತಾ. ೧೫ರಲ್ಲಿ ಕೊಡಗು ಸಿಂಚಿನ್‌ದಾರರ ಸಭೆಯೊಂದು ಶ್ರೀ ಸಿ. ಎಂ. ರಾಮರಾಯರ ಅಧ್ಯಕ್ಷತೆಯಲ್ಲಿ ನಡೆದು ಸಿಂಚಿನ್‌ದಾರರ ಸಂಸ್ಥೆಯೊಂದನ್ನು ಸ್ಥಾಪಿಸುವಂತೆಯೂ ಇವರು ತಮ್ಮ ನ್ಯಾಯಬದ್ಧ ಕೇಳಿಕೆಗಳನ್ನು ಸರಕಾರದ ಮುಂದಿಡುವಂತೆಯೂ ಮತ್ತು ಸಾಮೂಹಿಕ ಹಾಗೂ ಇತರ ಜನೋಪಯುಕ್ತ ಕಾರ್ಯ ಕೈಕೊಳ್ಳುವಂತೆಯೂ ತೀರ್ಮಾನಿಸಲಾಗಿದೆ

ಮದ್ರಾಸು ವಿಶ್ವ ವಿದ್ಯಾಲಯದ ಕಳೆದ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀ ಚೋವಂಡಿರ ಬಿ. ನಂಜಪ್ಪ, ಶ್ರೀ ಮುಕ್ಕಾಟಿರ ಟಿ ಮುತ್ತಪ್ಪ ಇವರುಗಳೂ ಶ್ರೀಮತಿ ಅಪ್ಪನೆರವಂಡ ಕೆ. ಕಮಲಪ್ರಭಾ ಇವರೂ ತೇರ್ಗಡೆಯಾಗಿರುವರು. ಮೈಸೂರು ವಿಶ್ವವಿದ್ಯಾಲಯದ ಎಸ್. ಎಸ್ ಎಲ್. ಸಿ. ಪರೀಕ್ಷೆಯಲ್ಲಿ ಶ್ರೀಮತಿ ನಾಣಮಂಡ ದೇಚಮ್ಮನವರು ತೇರ್ಗಡೆಯಾಗಿರುವರು.

ಶ್ರೀ ಕೆ. ಸಿ ಕರುಂಬಯ್ಯನವರು ಕೊಡಗು ಜಿಲ್ಲಾ ಕಾಂಗ್ರೆಸ್ ಪ್ರೆಸಿಡೆಂಟ್‌ತನಕ್ಕೆ ರಾಜಿನಾಮೆ ಕೊಟ್ಟಿರುವರೆಂದು ತಿಳಿಯುತ್ತದೆ

ಮದ್ರಾಸು ವಿಶ್ವ ವಿದ್ಯಾಲಯದ ವಾರ್ಷಿಕ ಪಂದ್ಯಾಟದಲ್ಲಿ ಜಯಶೀಲರಾದ ಕೊಡಗು ಸರಕಾರಿ ಕಾಲೇಜ್ ವಿದ್ಯಾರ್ಥಿಗಳಿಗೆ ತಾ. ೯-೩-೫೨ರಲ್ಲಿ ಕೊಟ್ಟ ಸತ್ಕಾರ ಊಟಕ್ಕೆ ವಸೂಲಾದ ರೂ ೩೮೬ ರಲ್ಲಿ ಟೀ ಪಾರ್ಟಿಗಾಗಿ ರೂ ೨೩೯-೬-೦, ಮೆಡಲುಗಳಿಗಾಗಿ ರೂ. ೮೦-೧೩-೮ ಖರ್ಚಾಯಿತೆಂದೂ ಉಳಿದ ರೂ. ೬೫-೧೨-೦ನ್ನು ಕಾಲೇಜು ಸ್ಪೋರ್ಟ್ಸ್ ಫಂಡಿಗೆ ಕೊಡಲಾಗಿದೆಯೆಂದೂ ಸತ್ಕಾರ ಸಮಿತಿಯ ಅಧ್ಯಕ್ಷರು ತಿಳಿಸುತ್ತಾರೆ.

ತಾ ೮ರಲ್ಲಿ ಕೂರ್ಗ್ ಯೂನಿಯನ್ ಬಸ್ಸಿನ ಮಾಲೀಕರು ಮತ್ತವರ ಸಹಾಯಕರು ಯಾವುದೋ ಹಣದ ಲೆಕ್ಕಾಚಾರದ ನಿಮಿತ್ತ ಕುಟ್ಟದಲ್ಲಿ ಆಂದು ಎಂಬ ಮಾಪಿಳ್ಳೆಯನ್ನು ಗದರಿಸಿ ತಮ್ಮ ಕಾರಿನಲ್ಲಿ ಹಾಕಿಕೊಂಡು ಹೋದರೆಂದೂ ಆ ಮಾಪಿಳ್ಳೆಯ ಸಂಬಂಧಿಕರು ಕಾರನ್ನು ತಡೆದು ಆತನನ್ನು ಇಳಿಸುವ ಯತ್ನದಲ್ಲಿ ತಕರಾರಾಗಿ ಅದು ಹೊಡೆದಾಟದಲ್ಲಿ ಪರಿಣಮಿಸಿತೆಂದೂ ಈ ಸಂದರ್ಭದಲ್ಲಿ ಪೋಲೀಸರು ಆಂದು ಸಹಿತ ೯ ಮಾಪಿಳ್ಳೆಗಳನ್ನು ವಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಟ್ಟಿರುವರೆಂದೂ ವರ್ತಮಾನ.

ನಾಪೋಕ್ಲು ಹೈಸ್ಕೂಲಿನ ಅಧ್ಯಾಪಕರಾಗಿದ್ದ ಶ್ರೀ ಕೋಟೆರ ಮುತ್ತಣ್ಣನವರು ತಾ. ೧ರಿಂದ ನಿವೃತ್ತರಾದರು. ತಾ. ೧೦ ರಲ್ಲಿ ಶಾಲಾ ವಿದ್ಯಾರ್ಥಿಗಳೂ, ಅಧ್ಯಾಪಕರೂ ಅವರಿಗೆ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿ ಬೀಳ್ಕೊಟ್ಟರು.

ಪಾರ್ಲಿಮೆಂಟಿನಲ್ಲಿ ಕೊಡಗಿನ ಸದಸ್ಯರಾದ ಶ್ರೀ ಎನ್. ಸೋಮಣ್ಣನವರನ್ನು ಜನತಾ ಸಭೆಯ ಪ್ಲಾನಿಂಗ್ ಮತ್ತು ಕಮ್ಯೂನಿಕೇಶನ್ ಸಮಿತಿಗಳಿಗೆ ಸದಸ್ಯರಾಗಿ ನೇಮಕ ಮಾಡಿರುವರೆಂದು ತಿಳಿದು ಬಂದಿದೆ.

ಕೊಡಗು ಕಂಪೆನಿಯ ವಾರ್ಷಿಕ ಮಹಾ ಸಭೆಯು ತಾ. ೨೯ರಲ್ಲಿ ವೀರರಾಜಪೇಟೆ ಮಾರ್ಕೆಟಿಂಗ್ ಫೆಡರೇಶನ್ ಹಾಲ್‌ನಲ್ಲಿ ನಡೆಯುವದು.

ಡಿ. ಕಮಿಷನರಾದ ಶ್ರೀ ಐ ಸಿ. ಸುಬ್ಬಯ್ಯನವರು ಕೊಡಗಿನಲ್ಲಿ ಜಾರಿಗೆ ಬರಲಿರುವ ಸಾಮೂಹಿಕ ಯೋಜನೆಯ ಡೆವಲಪ್‌ಮೆಂಟ್ ಕಮಿಷನರಾಗಿಯೂ, ಶ್ರೀ ನಡಿಕೇರಿಯಂಡ ಮಂದಣ್ಣನವರು ಪ್ರೋಜೆಕ್ಟ್ ಆಫೀಸರಾಗಿಯೂ ನೇಮಿಸಲ್ಪಡುವರೆಂದು ವರ್ತಮಾನ.

ಓದುಗರ ಓಲೆ

ಗೋಣಿಕೊಪ್ಪಲಿನ ಸಂತೆಮಾಳ

ಕಳೆದವಾರ ನಾನು ಒಂದು ರಾಶಿ ನನ್ನು ಉಳಲಿಕ್ಕೆ ತೆಗೆದುಕೊಂಡು ಬರಲು ಹಣವನ್ನು ಸಾಲ ಮಾಡಿ ಸಂತೆಗೆ ಶನಿವಾರ ಸಾಯಂಕಾಲವೇ ಹೋಟು ಹೋಗಿ ತಲಪಿದೆನು. ಆ ದಿನ ರಾಶು ದೊರಕದೆ ಹೊಟೇಲಿನಲ್ಲಿ ಉಳಿದು ಒಂದೆರಡು ರೂ. ಗಳನ್ನು ಖರ್ಚುಮಾಡಿ ಮಾರನೆ ದಿನ ಬೆಳಿಗ್ಗೆ ಮಾಳಕ್ಕೆ ಹೋದೆನು. ದಲ್ಲಾಳಿಗಳ ಗುಂಪು ಹೆಚ್ಚಿದ್ದರಿಂದ ರಾಶುಗಳು ಸರಿಯಾದ ಬೆಲೆಗೆ ದೊರಕದೆ ಒಂದು ಎತ್ತನ್ನು ೫೪ ರೂ. ಗಳಿಗೆ ಪಡೆದೆನು. ಅಲ್ಲಿಂದ ಹೊರಡುವ ಸಂದರ್ಭದಲ್ಲಿ ಒಂದು ಕೋಣವು ಬಾಯಿಂದ ನೊರೆ ಇಳಿಸುವುದನ್ನು ಕಂಡೆನು. ಆ ಕ್ಷಣವೇ ರಾಶಿನ ಯಜಮಾನನು ಯಾವುದೋ ಹಾಲನ್ನು ತಂದು ಅದರ ಬಾಯೊಳಗೆ ತನ್ನ ಕೈಯಿಂದ ಸವರಿಸುತ್ತಾ ಇದ್ದಂತೆ ಕೋಣವು ಥಟ್ಟನೆ ನೆಲಕ್ಕೆ ಬಿದ್ದು ಹೊಟ್ಟೆ ಉಬ್ಬರಿಸಿ ಸತ್ತು ಹೋಯಿತು! ನನಗೆ ಗಾಬರಿಯಾಯಿತು. ಎತ್ತನ್ನು ವಾಪಾಸು ಮಾಡುವ ಅಭಿಪ್ರಾಯದಿಂದ ಗೌಡನಲ್ಲಿಗೆ ತೆರಳಿ 'ನಿನ್ನ ಮಾಲನ್ನು ವಾಪಾಸು ಪಡೆದು ನನ್ನ ಹಣವನ್ನು ಕೊಡು' ಎಂದು ಹೇಳುವಾಗ 'ಕಾಸು ಕೊಟ್ಟೋರ್ನು, ಭಂಗಿ ಸಿಕ್ಕೋರ್ನು ಎಲ್ಲಿಂದ ಕೊಡೋಣ ಗೌಡ್ರೇ' ಎಂದನು! ಅಷ್ಟರಲ್ಲಿ ನನ್ನ ಸಂಗ್ಯ ಮತ್ತು ಜನರು ಸೇರಿ ಅವನನ್ನು ಗದರಿಸಲು 'ದಲ್ಲಾಳಿ ಬಾರದ ವಿನಾ ಹಣ ಎಲ್ಲಿಂದ'? ಎಂದನು. ಕೂಡಲೇ ದಲ್ಲಾಳಿಯನ್ನು ಕರೆತಂದೆನು. ಗೌಡನು ನನ್ನ ಹಣವನ್ನು ತೆಗೆದುಕೊಳ್ಳಲು ಅವನಲ್ಲಿ ಬರೇ ೫೦ ರೂಪಾಯಿ ಗಳು ಮಾತ್ರ ಇದ್ದವು. ದಲ್ಲಾಳಿಯನ್ನು ವಿಚಾರಿಸಲು ತನ್ನ ಪಾಕೇಟಿನಿಂದ ೨ ರೂ. ಹೊರಬಿದ್ದಿತು. ನಾನು ಬಡುಕಿದಂತಾಯಿತು. ವೆಟರಿನರಿ ಅಧಿಕಾರಿಗಳಿಗೆ ಈ ಮಾಳಕ್ಕೆ ಹೋಗಲು ಅಧಿಕಾರವಿಲ್ಲವೇ? ಕಾಯಿಲ ಪೀಡಿತ ರಾಸುಗಳನ್ನು ಮಾರಲು ಬಿಡ ಬಹುದೇ?

ಬಡರೈತ.

ಫಾರೆಸ್ಟ್ ಇಲಾಖೆಯ ವಿಶೇಷ ಟೆಂಡರ್ ಮರ ಮಾರಾಟ ಕ್ರಮ.

೧೯೫೩ನೆ ಜನವರಿ ತಿಂಗಳಲ್ಲಿ ಕೊಡಗು ಫಾರೆಸ್ಟ್ ಇಲಾಖೆಯವರ ಮರ ಮಾರಾಟದ ಬಗ್ಗೆ ಒಂದು ಟೆಂಡರ್ ನೋಟೀಸು ಇತ್ತು. ಇದರಲ್ಲಿ [illegible] ಗ್ರಾಮಕ್ಕೆ ಸೇರಿದ ಕೊರತ್ತಿಕಾಡು ಮತ್ತು ಮಡಿಕೇರಿ ಹತ್ತಿರದ ಮಂದೆ ಗ್ರಾಮದ ಪೈಸಾರಿಗಳಿಂದ ಮರ ಕಡಿಯಲು ೫೩ನೇ ಫೆಬ್ರವರಿ ೨೬ರಿಂದ ೫೫ನೇ ಇಸವಿ ಫೆಬ್ರವರಿ ೨೫ರ ವರೆಗೆ ವಾಯಿದೆ ಎಂದು ಬರೆದಿತ್ತು. ಹೀಗೆ ಬಹಿರಂಗ ಪಡಿಸಿದ ಟೆಂಡರಿಗೆ ಹಲವಾರು ಇತರ ಕಡೆಯಿಂದ ಒಬ್ಬ ಮರ ವ್ಯಾಪಾರಿಯು ಮಾತ್ರ ಟೆಂಡರು ಹಾಕಿದ್ದರೆಂದು ತಿಳಿದು ಬಂದಿದೆ. ಈ ವೇಳೆಯ ಟೆಂಡರಿನಲ್ಲಿ ನಮೂದಿಸಿದ ದರವನ್ನು ನೋಡಿ ಸಂಬಂಧಪಟ್ಟ ಅಧಿಕಾರಿಗಳು ತಿಳಿದುಕೊಂಡದ್ದಾಯಿತು. ಈ ಸಂಬಂಧ ಯಾವ ಹುಕುಂ ಹೊರಬೀಳಲಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಈ ಟೆಂಡರನ್ನು ಒಂದು ತಿಂಗಳ ಮಟ್ಟಿಗೆ ಮಂಜೂರು ಮಾಡದೆ ಇಟ್ಟು ಕಡೆಗೆ ತನ್ನ ನೂರಿನ ಒಬ್ಬ ಧನಿ ಮರ ವ್ಯಾಪಾರಿಗೆ ಈ ವೇಳೆಯ ಪೈಸಾರಿಯ ಮರವನ್ನು ಮಾರಾಟ ಮಾಡಿರುವರೆಂದು ತಿಳಿದು ಬಂದಿದೆ. ಈ ಕಡೆಯೊಂದ ವ್ಯಾಪಾರಿಯು ಮರಕ್ಕೆ ಟೆಂಡರು ಹಾಕಲೇ ಇಲ್ಲ. ಹಾಗೆ ಹಾಕಿದ್ದರೆ ಈ ಟೆಂಡರು ಯಾವಾಗ ಯಾವ ಪೋಸ್ಟ್ ಆಫೀಸು ಮುಖಾಂತರ ಸಂಬಂಧಪಟ್ಟ ಅಧಿಕಾರಿಗಳ ಕೈಸೇರಿತು? ಏನಾದರೂ ಗೋಪ್ಯ ರೀತಿಯಿಂದ ಈ ಟೆಂಡರು ಅವರ ಕೈಸೇರಿತೇನು? ಟೆಂಡರು ಬಂದ ವೇಳೆ ಒಬ್ಬನೇ ಟೆಂಡರುದಾರರನ್ನು ಕರೆಸಿ ದರ ಹೆಚ್ಚಿಗೆ ಕೊಡಲಾಗುವುದನ್ನು ವಿಚಾರಿಸದೆ ಬರೇ ಸುಮ್ಮನೆ ಇದ್ದವರನ್ನು ನಮ್ಮ ಇಚ್ಛೆಯಂತೆ ಕರೆಸಿ ಕೊಡುವಂತೆ ಇದ್ದ ಪಕ್ಷದಲ್ಲಿ ಈ ತರದ ಕಷ್ಟ ಕಟ್ಟುವ ಬಹಿರಂಗದ ಟೆಂಡರಿನ ಅವಶ್ಯವಿಲ್ಲ. ಸಂಬಂಧಪಟ್ಟ ಅಧಿಕಾರಿಗಳ ಈ ತರದ ವರ್ತನೆಯು ಫಾರೆಸ್ಟ್ ಇಲಾಖೆಯು ಎಷ್ಟೋ ವ್ಯಾಪಾರಿಗಳಿಗೆ ಬಹಳ ಅಶಾಂತಿಯನ್ನುಂಟುಮಾಡಿದೆ. ಅದಲ್ಲದೆ ನಮ್ಮ ದೇಶಕ್ಕೆ ನಷ್ಟ ಮತ್ತು ಹಾನಿ ಎಂಬುದರಲ್ಲಿ ಸಂಶಯವಿಲ್ಲ. ಈ ಸಂಬಂಧಪಟ್ಟ ಆಫೀಸರ ವ್ಯವಹಾರವು ಪ್ರೋಕ್ತಿಯಾಗಿ ಅವರಿಗೆ ಅನುಕೂಲವಾಗುವ ವ್ಯಕ್ತಿಗಳು ಮತ್ತು ಹಲವಾರು ಕಡೆಯ ಒಂದೆರಡು ದೊಡ್ಡ ವ್ಯಾಪಾರಿಗಳಿಗೆ ಮಾತ್ರ ಪ್ರೋತ್ಸಾಹ ಮಾಡಿದ ಹಾಗೆ ಕಂಡುಬರುವುದಕ್ಕೆ ಬೇರೇನೂ ಅಲ್ಲ. ——

ಈಗ ಫಾರೆಸ್ಟ್ ಇಲಾಖೆಯಲ್ಲಿ ನಡೆಯುತ್ತಿರುವ ವ್ಯವಹಾರಗಳು ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದಂತೆ ಈ ಆಫೀಸರು ದೇಶದ ಯಾರಿಗೂ ಗೊತ್ತಿಲ್ಲವೆಂಬ ಭರವಸೆಯಲ್ಲಿರಬಹುದು. ಇವರು ನಡೆಸುವ ಪ್ರತಿಯೊಂದು ಗುಟ್ಟಿನ ಕಾರ್ಯಗಳು ದೇಶದ ಕೆಲವರಿಗೆ ಈಗಾಗಲೇ ತಿಳಿದು ಬಂದಿದೆ.

ಓದುಗರ ಓಲೆಗಳು

ನಮ್ಮ ಕೊಡಗಿನ ಕಮಿಷನರ್ ಸಾಹೇಬರು ಮತ್ತು ಮಾನ್ಯ ಮಂತ್ರಿಗಳು ಈ ಸಂಗತಿಯನ್ನು ಗಮನಕ್ಕೆ ತೆಗೆದುಕೊಂಡು ಈ ವೇಳೆಯ ಟೆಂಡರಿನ ವಿಷಯ ವಿಚಾರಿಸಿ ತಕ್ಕ ಪ್ರತಿಫಲ ಕೊಡುವರಾಗಿ ನಂಬುತ್ತೇನೆ. ಅದಲ್ಲದೆ ಇನ್ನು ಮುಂದಕ್ಕೆ ಟೆಂಡರುಗಳನ್ನು ಮಂತ್ರಿಗಳೇ ಪೋಸ್ಟ್ ಆಫೀಸಿನಿಂದ ಹೋದಿಕೊಂಡು ಬಹಿರಂಗವಾಗಿ ತೆರೆದು ತಕ್ಕ ಆರ್ಡರು ಮಾಡಬೇಕೆಂದು ಬಿನ್ನವಿಸುವವನಾಗಿದ್ದೇನೆ.

'ನಿರೀಕ್ಷಕ'

ವೀರಾಜಪೇಟೆ ಮುನ್ಸಿಪಾಲಿಟಿ.

ಮುನ್ಸಿಪಾಲಿಟಿಗಳು ಸಾರ್ವಜನಿಕರ ಹಿತಕ್ಕೋಸ್ಕರ 'ಕೆಲಸಮಾಡುವ' ಸಂಸ್ಥೆಗಳು. ಕೊಡಗಿನ ಮುನ್ಸಿಪಾಲಿಟಿಗಳಲ್ಲಿ ವೀರಾಜಪೇಟೆಯ ಮುನ್ಸಿಪಾಲಿಟಿಯು ಹೆಚ್ಚಿನ ಆದಾಯ ಬರುವಂತಹದೆಂದು ಹೇಳಬಹುದು. ಆದರೆ ಅಲ್ಲಿನ ಕಾರ್ಯಕಲಾಪಗಳು ಸರಿಯಾಗಿ ನಡೆಯುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಸಾರ್ವಜನಿಕರ ಹಿತವನ್ನು ಅಲಕ್ಷಿಸಿ ವರ್ತಿಸುವುದು ಸ್ವಪಕ್ಷಕರವಾದ ಸಂಗತಿಯಾಗಿದೆ. ಪರಿಣಾಮವಾಗಿ ಅನೇಕ ರೀತಿಯ ಅವ್ಯವಸ್ಥೆಗಳಿಗೆ ಕಾರಣವಾಗಿದೆ. ಇಷ್ಟು ದೊಡ್ಡ ಜನಸಂಖ್ಯೆಯುಳ್ಳ ಪಟ್ಟಣದಲ್ಲಿ ಉತ್ತಮವಾದ ವಾಚನಾಲಯವಿಲ್ಲವೆಂದು ನಾಚಿಕೆಯಿಂದ ಪ್ರಕಟಿಸಬೇಕಾಗಿದೆ. ಒಂದು ವಾಚನಾಲಯ ಪೇಟೆಗೆ ಇದೆ. ಅದು ಹೆಚ್ಚಾಗಿ ಮುಂವರ್ತಕರಿಗೆ ಕರಾರ್ಪತ್ರಗಳನ್ನು ಬರೆಯಲು ಉಪಯೋಗವಾಗುತ್ತಿದೆ. ಕಾರಣವೆಂದರೆ ಬೆಳಿಗ್ಗೆ ಎಲ್ಲಾ ಜನರು ಶಾಲೆಗಳಿಗೆ ತಮ್ಮ ತಮ್ಮ ಕೆಲಸಗಳಿಗೆ ಹೋಗುವ ವೇಳೆ ತೆರೆಯಲಾಗುತ್ತದೆ. ಕೆಲಸ ಬಿಟ್ಟು ಬಂದಾಗ ಮುಚ್ಚಿರುತ್ತದೆ. ಮತ್ತೆ ಆ ವಾಚನಾಲಯ ಪತ್ರ ಕೂಡಾ ಓದುವವರಾರು? ಅಲ್ಲಿಗೆ ಬರುವುದಾದರೂ ಸಾಧಾರಣವಾಗಿ ಎಲ್ಲಾ ಜನರು ತರಿಸುತ್ತಿರುವಂತಹ ಒಂದೆರಡು ಪತ್ರಿಕೆಗಳು. ಇಲ್ಲಿಗೆ ಹೆಚ್ಚು ಪತ್ರಿಕೆ ತರಿಸಿ ರಾತ್ರಿ ದೀಪದ ಸಲಕರಣೆಗಳೊಂದಿಗೆ ಸಾರ್ವಜನಿಕರಿಗೆ ಓದುವ ಸಲಕರಣೆ ಮಾಡಿಕೊಡಬೇಕೆಂದು ವೀರಾಜಪೇಟೆಯ ಸಾರ್ವಜನಿಕರು ಈಗ ಮೂರು ನಾಲ್ಕು ತಿಂಗಳಿಗೆ ಹಿಂದೆ ಒಂದು ಅರ್ಜಿ ಹಾಕಿಕೊಂಡಿದ್ದರು. ಆ ಅರ್ಜಿ ಅವರ ಆಫೀಸಿನಲ್ಲಿಯೇ ಯಾ ಕಂದ ಬುಟ್ಟಿ ಸೇರಿದೆಯೋ ಎಂಬುದು ಸಂಶಯವಾಗಿದೆ. ಇಷ್ಟೊಂದು ಸಣ್ಣ ಕೆಲಸವನ್ನು ಮಾಡಿಕೊಡಲು ಅಸಾಧ್ಯವಾದ ಮುನ್ಸಿಪಾಲಿಟಿಯ ಕಾರ್ಯಕಾರೀ ಮಂಡಳಿಯವರನ್ನು ಕುರಿತು ವಿಷಾದಪಡಬೇಕಾಗಿದೆ. ಅನುದಿನವೂ ಅನೇಕ ಶಾಲಾ ವಿದ್ಯಾರ್ಥಿಗಳು, ರಜೆಯಲ್ಲಿ ಬಂದ ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರನೇಕರು ಪತ್ರಿಕೆ ಬಂದೊಡನೆಯೇ ರಸ್ತೆಯಲ್ಲಿಯೋ ಅಥವಾ ಯಾವುದಾದರೂ ಅಂಗಡಿಯಲ್ಲಿಯೋ ನಿಂತು ಒಂದೊಂದು ಪತ್ರಿಕೆಗೆ ಐದಾರು ಜನರು ಸೇರಿಕೊಂಡು ಓದುವ ದೃಶ್ಯವನ್ನು ನಮ್ಮ ಮುನ್ಸಿಪಾಲಿಟಿ ಕಾರ್ಯಕಾರಿ ಮಂಡಳಿಯವರು ನೋಡುತ್ತಿದ್ದರೂ, ಕರುಣೆಯಾಗಲಿ, ನಾಚಿಕೆಯಾಗಲಿ ಪಟ್ಟು ವಾಚನಾಲಯ ದುರಸ್ತಿ ಪಡಿಸದೇ ಇರುವುದು ಸಾರ್ವಜನಿಕರ ದುರದೃಷ್ಟವೇ ಸರಿ. ಇಷ್ಟು ಸಣ್ಣ ವೆಚ್ಚದ ಕೆಲಸವನ್ನು ಮಾಡಿಸಲು ಆಗಾಗ ಬಜೆಟ್ಟಿನ ಮಾತನ್ನು ಎತ್ತಿಕೊಂಡು ಈ ವರ್ಷ ರಸ್ತೆಯ ಕೆಲಸ ಮಾಡಿಸುತ್ತೇವೆಂದು ಹೇಳುತ್ತಾರೆ. ಆ ರಸ್ತೆಯ ಕೆಲಸವೂ ಪೂರ್ಣವಾಗಿರುವುದಿಲ್ಲ. ಮುನ್ಸಿಪಲ್ ಆಫೀಸಿಗೆ ಹೋಗುವ ರಸ್ತೆಯೊಂದು ಮತ್ತು ಮುನ್ಸಿಪಾಲಿಟಿ ಪ್ರೆಸಿಡೆಂಟರ ಮನೆಗೆ ಹೋಗುವ ರೋಡಿನಲ್ಲಿ ಅವರ ಮನೆಯ ಗೇಟಿನ ವರೆಗೆ ಮಾತ್ರ ಈ ವರ್ಷ ಟಾರು ಆಗಿದೆ. ಮುನ್ಸಿಪಾಲಿಟಿಯ ಎಲ್ಲಾ ರೋಡುಗಳಿಗೆ ಟಾರು ಬಳಿದು ಆಗಬೇಕಾದರೆ ವರ್ಷ ಮೂರು ನಾಲ್ಕಾಗಬಹುದು. ಅಷ್ಟರ ವರೆಗೆ ಸಾರ್ವಜನಿಕರು ಒಂದು ದಿನಕ್ಕಾದರೂ ನಾಲ್ಕೈದು ಉತ್ತಮ ಪತ್ರಿಕೆಗಳನ್ನು ಕಾಯಬೇಕಾಗುವುದೇನೋ! ಸಾರ್ವಜನಿಕರ ಕಷ್ಟವನ್ನರಿತು ಇನ್ನಾದರೂ ಮುನ್ಸಿಪಲ್ ಕಾರ್ಯಕಾರಿ ಮಂಡಳಿಯವರು ವಾಚನಾಲಯದ ಬಗ್ಗೆ ಗಮನ ಕೊಡರೇ?

ಸಾಯಂಕಾಲದ ಸಮಯದಲ್ಲಿ ದೀಪ ಹಚ್ಚುವಾಗ ಒಂದೆರಡೇ ಜನರು ಒಂದೊಂದು ಭಾಗದಲ್ಲಿ ಒಂದು ಕಡೆಯಿಂದ ದೀಪ ಹಚ್ಚುತ್ತ ಹೋಗುತ್ತಾರೆ. ಅವರು ದೀಪ ಹಚ್ಚಲು ಒಂದು ಕಡೆಯಿಂದ, ನಾಲ್ಕು ಗಂಟೆಗೆ ಆರಂಭವಾಗಿ ಮತ್ತೊಂದು ಕಡೆಗೆ ತಲುಪುವಾಗ ರಾತ್ರಿಯಾಗುತ್ತದೆ. ಆಗ ಮೊದಲು ಹೊತ್ತಿಸಿದ ದೀಪಗಳು ನಾಲ್ಕು ಗಂಟೆಯಿಂದ ಆರರ ವರೆ ಏಳು ಗಂಟೆಯ ತನಕ ಉರಿದು ಸರಿಯಾಗಿ ರಾತ್ರಿ ಆದಾಗ ಕೆಲವು ಬೀದಿಗಳಲ್ಲಿ ದೀಪ ಆರಿ 'ಬ್ಲೇಕ್‌ಔಟ್' ಆಗುತ್ತದೆ. ರಾತ್ರಿ ಆ ರಸ್ತೆಗಾಗಿ ಹೋಗುವ ಜನರು ಕತ್ತಲೆಯಲ್ಲಿ ಎತ್ತ ತಿಳಿಯದೆ ಹೇಗೆ ದಾರಿ [illegible]? ಆದ್ದರಿಂದ ದಯವಿಟ್ಟು ಒಂದೆರಡು ಜನರನ್ನು ನೇಮಿಸಿ ನಾಲ್ಕು ಗಂಟೆಯಿಂದ ಆರುವರೆ ಗಂಟೆಯ ವರೆಗೆ ದೀಪ ಹೊತ್ತಿಸುವುದಕ್ಕೆ ಬಿಡುವುದರ ಬದಲು ನಾಲ್ಕು ಜನರನ್ನು ನೇಮಿಸಿ ಐದುವರೆ ಗಂಟೆಯಿಂದ ಏಳು ಗಂಟೆ ವರೆಗೆ ದೀಪ ಹೊತ್ತಿಸಲು ಬಿಟ್ಟು 'ಬ್ಲೇಕ್‌ಔಟ್' ಆಗದಂತೆ ಮಾಡಲು ಮುನ್ಸಿಪಾಲಿಟಿಯವರು ನಿಗವಹಿಸುವರೇ?

ಮುನ್ಸಿಪಾಲಿಟಿ ಸ್ಯಾನಿಟರಿ ಇನ್ಸ್‌ಪೆಕ್ಟರರು ಹೋಟೆಲುಗಳಲ್ಲಿ ಶುಚಿತ್ವದ ವಿಷಯ ಗಮನಕೊಡದಿರುವುದು ವಿಷಾದಕರವಾದ ಸಂಗತಿಯಾಗಿದೆ. ಅನೇಕ ಹೋಟೆಲುಗಳು ವೀರಾಜಪೇಟೆಯಲ್ಲಿ ಕೊಳಕಿಗೆ ಹೆಸರಾಗಿವೆ. ಅನೇಕ ಹೋಟೆಲುಗಳಲ್ಲಿ ತಿಗಣೆಗಳು ತುಂಬಿ ಊಟಮಾಡಲು ಕುಳಿತವರ ಮೈ ಕೈ ಮೇಲೆ ಹರಿದಾಡುವುದನ್ನು ಕಾಣಬಹುದು. ಹುಲ್ಲು ಮನೆಯು ಕೊಳೆತ ಮಾಡುಗಳಿಂದ ಬೀಳುವ ಭಯ. ಕಸ ಕೊಳಕು ನೀರನ್ನು ಹೋಟೇಲುಗಳಲ್ಲಿ ಉಪಯೋಗಿಸುತ್ತಿರುವುದನ್ನು ಇಂದೂ ಕೂಡ ಕಾಣಬಹುದು. ಅಲ್ಲಿ ಊಟಮಾಡುವವರು ಸ್ಯಾನಿಟರಿ ಇನ್ಸ್‌ಪೆಕ್ಟರರಿಗೆ ಹೇಳುತ್ತೇವೆಂದು ಹೇಳಿದಾಗ 'ಇನ್ಸ್‌ಪೆಕ್ಟರರು ಬರಲಿ ಆಗ ನೋಡಿಕೊಳ್ಳುತ್ತೇವೆ' ಎಂದು ಬಿರುನುಡಿಯುತ್ತಾರೆ. ಈ ರೀತಿಯ ಮಾತುಗಳನ್ನು ಕೇಳುವಾಗ ಹೋಟೆಲು ಮಾಲಿಕರಿಗೂ ಸ್ಯಾನಿಟರಿ ಇನ್ಸ್‌ಪೆಕ್ಟರರಿಗೂ ಇರುವ ಸಂಬಂಧದ ವಿಷಯವಾಗಿ ಸಂಶಯಪಡುವ ಅವಕಾಶಬಂದಿದೆ. ದಯವಿಟ್ಟು ಇನ್ನು ಮುಂದಾದರೂ ಸ್ಯಾನಿಟರಿ ಇನ್ಸ್‌ಪೆಕ್ಟರರು ಹೋಟೆಲು ಶುಚಿತ್ವದ ಕಡೆ ಗಮನಕೊಟ್ಟು ಸಾರ್ವಜನಿಕರಿಗೆ ಹಿತಮಾಡುವರೇ?

'ಪ್ರೀತಿ ಕುಮಾರ್'

ಎಲ್ಲಿದೆ ನೀತಿ?

ನಾನೊಬ್ಬ ಇಂಟರ್‌ಮೀಡಿಯೇಟ್ ಕ್ಲಾಸಿನ ವರೆಗೆ ಓದಿದವನು. ಕಳೆದ ವರ್ಷ ಮೇ ತಿಂಗಳಲ್ಲಿ ಮಡಿಕೇರಿ ಎಂಪ್ಲಾಯಿಮೆಂಟ್ ಆಫೀಸಿನಲ್ಲಿ ನನ್ನ ಹೆಸರನ್ನು ರಿಜಿಸ್ಟರ್ ಮಾಡಿ ಜೂನ್ ತಿಂಗಳ ಸ್ಟಾಫ್ ಸೆಲೆಕ್ಷನ್ [illegible]ಗೆ ಹೋಗಿ [illegible]. ಸೆಲೆಕ್ಷನ್ ಆದನಂತರ [illegible] ಬಂತು. ಹೀಗಾದರೂ [illegible] ರೂ [illegible] ನಲ್ಲಿ [illegible] ಸೆಲೆಕ್ಷನ್ [illegible] ಸಂಬಳ ಎಲ್ಲರಿಗೂ [illegible]. ಆದ್ದರಿಂದ [illegible] ಒಂದೆರಡು [illegible] ಕ್ಕೆ ಹೋಗಿ [illegible] ಲಾಗಿಲ್ಲ. [illegible] ರೂಪಾಯಿ [illegible] ಪ್ಪಣೆಗಳ ಜವಾಬು [illegible] ಗಿನ ಸರಕಾರದ ಆಫೀಸುಗಳಲ್ಲಿ ಬೇಕಾದಷ್ಟು ಗುಮಾಸ್ತ [illegible] ಸ್ಥಳಗಳಿಗೆ ಎಂಪ್ಲಾಯ್‌ಮೆಂಟ್ ಆಫೀಸಿನ [illegible] ಬರಬಹುದೇ ಎಂದು ಕಾಯುತ್ತಿದ್ದೆ. ಆದರೆ ಇತ್ತೀಚೆಗೆ [illegible] ಬರುವ ಹೊಸ ನೌಕರರನ್ನು ನೋಡಿದಲ್ಲಿ [illegible] ಹುಟ್ಟಿನ [illegible] ಯಾಗಿ [illegible] ಕಾಣುತ್ತದೆ. ಎಸ್. ಎಸ್. ಎಲ್. ಸಿ. ಪಾಸಾಗಿ [illegible] ಅನೇಕ ಮಂದಿ ಈಗ [illegible] ಗುಮಾಸ್ತಗಿರಿಯನ್ನು ಹೊಂದಿರುವುದನ್ನು ಕಾಣಬಹುದು. ಈಗೀಗ ರಿಜಿಸ್ಟರ್ ಮಾಡಿದರೂ ಅವರಿಗೆ [illegible] ಎಲ್ಲಾ ನೌಕರಿ ದೊರೆಯುತ್ತದೆ. ಆದರೆ ಎಂಪ್ಲಾಯ್‌ಮೆಂಟ್ ಆಫೀಸಿನಿಂದ ಕೊಟ್ಟ ಕಾರ್ಡನ್ನು ಮೂರು ತಿಂಗಳಿಗೊಂದಾವರ್ತಿ ರಿನ್ಯೂವ್ ಮಾಡಿದರೂ ನಮಗೆ ಪ್ರಯೋಜನವಿಲ್ಲದಾಗಿದೆ.

ನೌಕರಿ ಕೊಡುವಾಗ ಒಂದನೇಯದಾಗಿ ವಿದ್ಯೆಯನ್ನು ನೋಡಬೇಕು, ಎರಡನೇಯದಾಗಿ ಸೆಲಕ್ಷನ್ ನಂಬರು ನೋಡಬೇಕು. ಆದರೆ ಎಲ್ಲಾ ಸಿಫಾರಸ್ಸಿನ ಪ್ರಕಾರ ಆಗುತ್ತಾ ಇದೆ. ಹೀಗಾದರೆ ಸ್ಟಾಫ್ ಸೆಲಕ್ಷನ್ ಬೋರ್ಡಿನ ಪ್ರಯೋಜನವೇನು?

ಇಂದಿನ ಸರಕಾರ ಪ್ರಜಾ ಪ್ರಭುತ್ವ ಸರಕಾರ. ಪ್ರತಿಯೊಬ್ಬರ ಯೋಗ್ಯತೆಗನುಸಾರವಾಗಿ ನೌಕರಿ ಕೊಡಿಸುವುದು ನ್ಯಾಯವಾದ ದಾರಿ. ಇಂಥಾ ಪ್ರಜಾಪ್ರಭುತ್ವ ಸರಕಾರದಲ್ಲಿ ಬಡವ ಬಲ್ಲಿದರೆಂಬ ಭೇದವಿಲ್ಲ. ಎಲ್ಲರೂ ಸಮಾನರು. ಆದರೆ ಕಾರ್ಯತಃ ಇಂದು ಬಲ್ಲಿದನು ಬಲ್ಲಿದನೆ; ಗರೀಬನು ಗರೀಬನೇ.

'ನೊಂದವ'

ಜನ್ಮಭೂಮಿಯು "ದೇಶಭಕ್ತ"ರಲ್ಲಿ ಕೆಲ ಪ್ರಶ್ನೆಗಳು.

ರಾಜಪ್ರಮುಖರನ್ನು ಬರಮಾಡಿಕೊಂಡ ಕಾಲದಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ಹಂಚಿದ ಬಿತ್ತಿ ಪತ್ರವನ್ನೂ ಅನಂತರ 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳನ್ನೂ ಓದಿರುವೆನು. ಈ ಬಗ್ಗೆ ನಿಮ್ಮ 'ಕೊಡಗು ಸರಕಾರವೂ ಮತ್ತು ರಾಜರ ತೀರ್ಥಯಾತ್ರೆಯೂ' ಎಂಬ ಲೇಖನವನ್ನು ನೋಡಿದೆನು.

ಕಮ್ಯೂನಿಸ್ಟ್ ಬಿತ್ತಿ ಪತ್ರಿಕೆಯಲ್ಲಿ 'ರಾಜಪ್ರಮುಖರನ್ನು ಇಡೀ ಕನ್ನಡ ಜನತೆಯ ಮೇಲೆ ರಾಜಪ್ರಮುಖರನ್ನಾಗಿ ಹೇರುವ ಒಂದು ಯೋಜನೆಯು ಪರದೆಯ ಹಿಂದೆ ನಡೆಯುತ್ತಿರಬೇಕೆಂ'ಬ ಸಂಶಯ ವ್ಯಕ್ತವಾಗಿತ್ತು. ಅಂದರೆ ನಮ್ಮ ಕೊಡಗು ಇದರಲ್ಲಿ ಅಡಕವಾಗುತ್ತದೆಂಬ ಅರ್ಥ. ಇದೇ ವಿಚಾರವು ಅನ್ಯ ಎಡೆಗಳಿಂದಲೂ ಕೇಳಿ ಬರುತ್ತಿದೆ. ಸ್ವಲ್ಪವೇ ಕಾಲ ಪೂರ್ವದಲ್ಲಿ ಈ ರಾಜಪ್ರಮುಖರು ಜನತೆಗಲ್ಲಿ, ಕಾಂಗ್ರೆಸಿಗರಿಗೂ ಪ್ರಿಯರಾಗಿದ್ದಿಲ್ಲ. ಈ ಒಂದೆರಡು ವರ್ಷಗಳಲ್ಲಿ ಇವರು ಒಮ್ಮಿಂದೊಮ್ಮೆಲೇ ಜನಪ್ರಿಯರಾದದ್ದು ಹೇಗೆ? ಇವರನ್ನು ಕನ್ನಡ ನಾಡಿನಲ್ಲೆಲ್ಲಾ ಮೆರೆಸುತ್ತಿರುವುದರ ಉದ್ದೇಶ್ಯವೇನು? ಇದರಿಂದ ಕಮ್ಯೂನಿಸ್ಟ್ ಪಾರ್ಟಿಯು ವ್ಯಕ್ತಪಡಿಸಿದ ಸಂಶಯಕ್ಕೆ ಸಾಕಷ್ಟು ಆಧಾರಗಳಿರುವಂತೆ ಕಾಣುತ್ತಿಲ್ಲವೇ? ಇದಕ್ಕೆ ನೀವು ಏನು ಹೇಳುವಿರಿ?

ಕನ್ನಡ ಜನತೆಯನ್ನು ಒಂದೇ ರಾಜ್ಯದಲ್ಲಿ ಒಕ್ಕೂಡಿಸುವ ಏಕೀಕರಣ ಚಳವಳಿಗೆ ಈ ಮೈಸೂರು ರಾಜಪ್ರಮುಖರು ದೊಡ್ಡ ಆತಂಕರಾಗಿರುವರಂತೆ. ಆದ್ದರಿಂದ ಅವರನ್ನೇ ಸಂಯುಕ್ತ ಕರ್ನಾಟಕದ ರಾಜಪ್ರಮುಖರನ್ನಾಗಿ ಮಾಡಬೇಕೆಂಬ ಹಲ ಕೆಲವರ ಪ್ರಯತ್ನವು ಅಲ್ಲಲ್ಲಿ ಕೇಳಿ ಬರುತ್ತಿರುವುದು. ಪರದೆಯ ಹಿಂದೆ ಇನ್ನೇನೇನು ನಡೆಯುತ್ತಿರುವದೋ ಜನತೆಗೆ ಗೊತ್ತಿಲ್ಲ. ವ್ಯಕ್ತಪಡಿಸಲಾದ ಸಂಶಯವು ನಿಜವಿರುವದಾದರೆ ನೀವು ಇವರನ್ನು ಕರ್ನಾಟಕದ ರಾಜಪ್ರಮುಖರನ್ನಾಗಿ ಒಪ್ಪಿಕೊಳ್ಳೋಣವೆನ್ನುವಿರಾ?

ಕೊಡಗಿನ ಭವಿಷ್ಯದ ಪ್ರಶ್ನೆಯು ತಾತ್ಕಾಲಿಕವಾಗಿ ತಡೆ ಹಿಡಿಯಲ್ಪಟ್ಟಿದೆಯೇ ವಿನಹ ಕೊನೆಯದಾಗಿ ಬಗೆಹರಿದಿರುವದಿಲ್ಲ. ನಾಳೆ ರೂಪುಗೊಳ್ಳಬಹುದಾದ ಸಂಯುಕ್ತ ಕರ್ನಾಟಕದಲ್ಲಿ ಕೊಡಗು ಸೇರುತ್ತದೋ ಯಾ ಇಲ್ಲವೋ ಎಂಬುದನ್ನು ಇಂದು ಹೇಳಲು ಬರುತ್ತಿಲ್ಲ. ಒಂದು ವೇಳೆ ಕೊಡಗಿನ ಮೇಲೂ ಇವರನ್ನು ರಾಜಪ್ರಮುಖರನ್ನಾಗಿ ಹೇರುವ ವಿಚಾರವಿದ್ದರೆ ಕೊಡಗು ಜನತೆಯು ಒಪ್ಪಿಕೊಳ್ಳಬೇಕೆನ್ನುವಿರಾ? ದಯವಿಟ್ಟು ಸ್ಪಷ್ಟಪಡಿಸಿರಿ.

ಕೊಡಗಿನ ಮಕ್ಕಳಾದ ನಮ್ಮೆಲ್ಲಾ ಹಿಂದಿನ ಕಾಲದ ನಮ್ಮ ಹಿರಿಯರ ರಾಜಸೇವಾಸಕ್ತರಾಗಿರುತ್ತಿದ್ದ ಗುಣವು ತುಂಬಿ ತುಳುಕುತ್ತಿರುವುದು ಎಂಬ ಅಭಿಪ್ರಾಯವು ನಿಮ್ಮ ಲೇಖನದಿಂದ ಆಗುವುದು. ನಮ್ಮ ಹಿಂದಿನ ರಾಜರ ವಂಶಸ್ಥರು ಇಂದೂ ಕಾಶಿಯಲ್ಲಿರುವರಂತೆ. ಬಹಳ ಸುಗುಣಗಳಿಂದ ಕೂಡಿರುವರಂತೆ! ಒಮ್ಮೆಯಾದರೂ ತನ್ನ ತಾತಂದಿರ ನಾಡನ್ನು ನೋಡಬೇಕೆನ್ನುವ ಲವಲವಿಕೆಯಿಂದ ಕೂಡಿರುವರಂತೆ! ಅವರನ್ನು ನಮ್ಮೂರಿಗೆ ಕರೆಸಿಕೊಂಡು ನಮ್ಮ ರಾಜಭಕ್ತಿಯನ್ನು ಅವರಿಗೂ ಏಕೆ ಸಲ್ಲಿಸಬಾರದು? ಅವರನ್ನು ಬರಮಾಡಿಕೊಂಡಲ್ಲಿ ನಮ್ಮ ಹಿಂದಿನ ರಾಜರ ಮೊಮ್ಮಗನನ್ನು ನೋಡಲು ಇಡೀ ಕೊಡಗಿನ ಸಾಮಾನ್ಯ ಜನರು ಕೊಡಗಿನ ಯಾವ ಭಾಗಗಳಿಂದಲೂ ಕಿಕ್ಕಿರಿದು ನೆರೆಯುವರೆಂಬುದಕ್ಕೆ ಸ್ವಲ್ಪವೂ ಸಂಶಯವಿಲ್ಲ. ಮೈಸೂರು ರಾಜಪ್ರಮುಖರಿಗಿಂತ ಕೊಡಗಿನಲ್ಲಿ ಇವರು ಹೆಚ್ಚಿನ ಜನಪ್ರಿಯರಾಗಿ ತೋರುವರೆಂಬುದಕ್ಕೆ ಕೊರತೆ ಇಲ್ಲ. ಈ ಸೂಚನೆಗೆ ನಿಮ್ಮ ಅಭಿಪ್ರಾಯವೇನು?

ಕಮ್ಯೂನಿಸ್ಟರ ಬಿತ್ತಿ ಪತ್ರಿಕೆಯಲ್ಲಿ ರಾಜಪ್ರಮುಖರು ಪಾಳೆಯಗಾರ, ದೊಡ್ಡ ಜಮೀನ್ದಾರ ಎಂಬದಾಗಿ ವರ್ಣಿಸಲ್ಪಟ್ಟಿರುವರು. ಈ ರೀತಿಗೆ ನಿಮ್ಮ ಅಭಿಪ್ರಾಯವೇನು? ಅತಿಥಿ ಸತ್ಕಾರ ಬೇಡೆಂಬುದಾಗಿ ಯಾರೂ ನುಡಿಯಲಿಲ್ಲ. ಯಾರನ್ನು ಅತಿಥಿಗಳನ್ನಾಗಿ ಸತ್ಕರಿಸಬೇಕು, ಅವರ ಇತಿಮಿತಿ ಎಷ್ಟು, ಎಂಬುದರ ಬಗ್ಗೆ ಮಾತ್ರ ಟೀಕೆಗಳು ನಡೆದಿವೆ. ಇದನ್ನು ನೀವು ಅರಿತುಕೊಳ್ಳದಿರುವದು ಆಶ್ಚರ್ಯ.

ನೀವು ರಾಜಪ್ರಮುಖರ ಸತ್ಕಾರಕ್ಕೆ ಸರಕಾರದ ಖರ್ಚನ್ನು ಮೂರು ಸಾವಿರವೆಂಬುದಾಗಿ ಖಚಿತವಾಗಿ ಬರೆದಿರುವಿರಿ. ಈ ಲೆಕ್ಕ ನಿಮಗೆ ಮಾತ್ರ ಹೇಗೆ ದೊರೆಯಿತು? ಪ್ಲೇಟು ಒಂದಕ್ಕೆ 2½ ರೂ. ಮೇರೆ ಗಾರ್ಡನ್ ಪಾರ್ಟಿಗಾಗಿ ಮೈಸೂರಿನ ಚಾಮುಂಡೇಶ್ವರಿ ಭವನದಿಂದ ತರಿಸಲಾದ ಸಾವಿರ ಪ್ಲೇಟು ಸಿಹಿ ಪದಾರ್ಥಕ್ಕೇನೇ ವಾಹನಗಳ ಖರ್ಚನ್ನು ಬಿಟ್ಟು ರೂ. ೨,೭೫೦ ತಗಲಿದೆ. ಸತ್ಕಾರಕ್ಕಾಗಿ ಸರಕಾರದ ಬೊಕ್ಕಸಕ್ಕೆ ಒಟ್ಟು ಹತ್ತು ಸಾವಿರ ರೂಪಾಯಿ ಖರ್ಚು ತಗಲಿದೆ ಎಂಬದಾಗಿ ಕೇಳಿರುತ್ತೇನೆ. ನಿಮ್ಮ ಲೇಖನವನ್ನು ಓದಿದನಂತರ ನನಗೆ ತಿಳಿದು ಬಂದ ಲೆಕ್ಕವನ್ನು ಸುಳ್ಳೆಂಬುದಾಗಿ ಹೇಗೆ ನಂಬಲಿ. ನಿಮ್ಮ ಲೆಕ್ಕವನ್ನು ಸ್ಪಷ್ಟವಾಗಿ ಕೊಡುವಿರಾ?

ಸಾವಿರ ಮಂದಿಗೆ ಆಮಂತ್ರಣ ಹೋಗಿತ್ತೆಂಬುದು ಸರಿಯೇ? ಈ ಸಾವಿರ ಮಂದಿಯನ್ನು ಯಾವ ಅಳತೆ ಕೋಲಿನಿಂದ ಜನಪ್ರತಿನಿಧಿಗಳೆಂಬದಾಗಿ ಆರಿಸಿಕೊಂಡರೆಂಬುದನ್ನು ನೀವು ಸ್ಪಷ್ಟಪಡಿಸಲಿಲ್ಲ. ಇನ್ನಾದರೂ ತಿಳಿಸುವಿರಾ?

ತೀರ್ಥ ಯಾತ್ರೆಗೆ ಬಂದ ರಾಜರನ್ನು ನಮ್ಮ ಸರಕಾರ ಸತ್ಕರಿಸಿದೆ ಎಂಬದಾಗಿ ಬರೆದಿರುವಿರಿ. ಈ ಬಗ್ಗೆ ನೀವು ನಿಜಾಂಶವನ್ನು ವಿಶದಗೊಳಿಸುವದು ಸ್ವಲ್ಪ ವ್ಯಸಕರ.

ಸತ್ಕಾರಕ್ಕಾಗಿ ೩,೦೦೦ ರೂಪಾಯಿ ಖರ್ಚು ಮಾಡಿದರ ಫಲವಾಗಿ ಇದರಿಂದ ನಮ್ಮ ನಾಡಿಗೆ ೧೦-೨೦ ಸಾವಿರ ವಾರ್ಷಿಕ ಲಾಭವಾಗುವದೆಂಬ ಲೆಕ್ಕವನ್ನು ನಮೂದಿಸಿರುವಿರಿ. ಒಂದು ವೇಳೆ ನೀವು ನಮೂದಿಸಿದ ಎಲ್ಲಾ ಲಾಭಗಳು ನಮ್ಮ ದೇಶಕ್ಕೆ ದೊರೆತರೆ ಅದು ಇವರ ಸ್ವಂತದ ಬೊಕ್ಕಸದಿಂದ ಬರುತ್ತದೋ ಯಾ ಮೈಸೂರಿನ ಜನತೆಗೆ ಸೇರಿದ ಬೊಕ್ಕಸದಿಂದಲೋ? ಈ ಲಾಭ ಪಡೆಯಲಿಕ್ಕಾಗಿ ಅವರನ್ನು ಇಂದು ಆಮಂತ್ರಿಸಿ ನಮ್ಮ ಸರಕಾರದ ಬೊಕ್ಕಸದ ಹಣದಿಂದ ಸತ್ಕರಿಸಿ ಈ ರೀತಿ ಅವರ ಕೈ ಬೆಚ್ಚಗೆ ಮಾಡಿಟ್ಟಿನ್ನೋಣವೇ? ಈ ಎಲ್ಲಾ ವಿಚಾರಗಳಲ್ಲಾ ಮಹತ್ವದ ರಾಜಕೀಯವು ಅಡಕವಾಗಿರುವದರಿಂದ 'ದೇಶಭಕ್ತರು' ಸ್ಪಷ್ಟಪಡಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಚೆಕ್ಕೇರ ಎಸ್. ಪೊನ್ನಪ್ಪ.

ಬೇತರಿಕಡುವಿನ ದೋಣಿ.

ವೀರಾಜಪೇಟೆಯಿಂದ ಮಾರ್ನಾಡಿಗೆ ಬರುವ ಜನರು ಮತ್ತು ಸಾಮಾನು ಮಳೆಗಾಲ ಸಮಯವಾದೊಡನೆ, ಬೇತರಿಯಲ್ಲಿ ಸೇತುವೆ ಇಲ್ಲದೆ ಇರುವ ಕಾರಣ ದೋಣಿಯಿಂದಲೇ ಸಾಗಬೇಕು. ಪ್ರತಿ ವರ್ಷ ಮೇ ತಿಂಗಳ ಅಂತ್ಯದಲ್ಲಿ ಹಂಗಾಮಿ ಬೇತರಿ ಸೇತುವೆ ಕಟ್ಟಿ ಹೋಗುತ್ತದೆಂಬ ಸಂಗತಿ ಸರಕಾರಕ್ಕೆ ತಿಳಿದ ವಿಷಯವಾಗಿದೆ. ಆದರೆ ಈ ವರ್ಷ ಜೋಡು ದೋಣಿ ಮೇ ತಿಂಗಳ ಮೊದಲಿನ ವಾರದಲ್ಲೇ ಮುಳುಗಿ ಹೋಗಿದೆ. ಸೇತುವೆ ಜೂನ್ ತಿಂಗಳು ೩ರಲ್ಲಿ ಹೋದ ಮೇಲೆಯೂ ಸಹ ಸಂಬಂಧಪಟ್ಟ ಅಧಿಕಾರಿಗಳು ಮುಳುಗಿದ ಜೋಡು ದೋಣಿಯನ್ನು ಎತ್ತಲು ಯಾವ ತೊಂದರೆ ತೆಗೆದುಕೊಂಡ ಹಾಗೆ ಕಂಡು ಬರುವುದಿಲ್ಲ. ಜೋಡು ದೋಣಿ ಇಲ್ಲದ ಕಾರಣ ಮಾರ್ನಾಡು ಸಂತೆಗೆ ಬರುವ ಸಾಮಾನು, ಗಾಡಿಗಳಲ್ಲಿ ಸರಾಗವಾಗಿ ವೀರಾಜಪೇಟೆಯಿಂದ ಬರಲು ಸಾಧ್ಯವಿಲ್ಲದೆ ಮಾರ್ನಾಡು ಸಂತೆಯಲ್ಲಿ ಸಾಮಾನುಗಳ ಬೆಲೆಯು ಏರಿದೆ. ಮತ್ತು ಮಲಬಾರಿಗೆ ಮಾರ್ನಾಡಿನಿಂದ ಹೋಗುತ್ತಿರುವ ಬಾಳೆಕಾಯಿ ಮತ್ತು ಕಿತ್ತಳೆ ಹಣ್ಣು ಸಹ ಬಾಕಿಯಾಗಿದೆ. ಅಲ್ಲದೆ ಮಳೆ ಜೋರಾಗಿ ಬಂದು ಹೊಳೆಯಲ್ಲಿ ಪ್ರವಾಹ ಬಂದರೆ ಈ ದೋಣಿಯನ್ನು ಈ ವರ್ಷಕ್ಕೆ ಎತ್ತಲು ಸಾಧ್ಯವೇ ಇರಲಾರದು. ಆದುದರಿಂದ ಆದಷ್ಟು ಶೀಘ್ರವಾಗಿ ಸಂಬಂಧಪಟ್ಟ ಅಧಿಕಾರಿಗಳು ಮುಳುಗಿರುವ ಜೋಡು ದೋಣಿಯನ್ನು ಎತ್ತಿ ಗಾಡಿ ಮತ್ತು ಮೋಟಾರುಗಳ ಓಡಾಟಕ್ಕೆ ಅನುಕೂಲ ಕಲ್ಪಿಸುವರೇ? ಅಲ್ಲದೆ ಕಳೆದ ವರ್ಷ ಈ ಕಡವಿನಲ್ಲಿ ಜನರನ್ನು ಸಾಗಿಸಲು ಹಳೇ ದೋಣಿ ಬದಲಿಗೆ ಕೊಟ್ಟಿರುವ ಹೊಸ ದೋಣಿ ಸರಿಯಾಗಿರುವುದಿಲ್ಲ. ಬರೇ ೧೦ ಜನರನ್ನು ಇದರಲ್ಲಿ ಕೂರಿಸಿ ಬಿಡುವದು ಅಪಾಯಕರ. ಆ ಕಾರಣ ತೂತು ಬಿದ್ದ ಹಳೇ ದೋಣಿಯಲ್ಲೇ ಜನರನ್ನು ದೋಣಿ ಕಂಟ್ರಾಕ್ಟರು ಸಾಗಿಸುತ್ತಿದ್ದಾರೆ. ಈ ಕಡವಿನಲ್ಲಿ ಪ್ರತಿ ದಿನ ೫ ಬಸ್ ಸರ್ವಿಸಿನ ಜನರು ಮತ್ತು ಇನ್ನಿತರ ಕಾಲ್ನಡೆಯಲ್ಲಿ ತಿರುಗುವ ಜನರು ಇಂಥಾ ಅಪಾಯಕರವಾದ ದೋಣಿಯಲ್ಲಿ ದಾಟುವುದು ಎಂದಿಗೂ ಸರಿಯಲ್ಲ. ಆದುದರಿಂದ ಇಷ್ಟರಲ್ಲೇ ಚೆನ್ನಾಗಿರುವ ದೊಡ್ಡ ದೋಣಿಯೊಂದನ್ನು ಒದಗಿಸಿ ಕೊಡುವರೇ?

K. M. M.

ಪೊನ್ನಂಪೇಟೆ ತಂತಿ ಆಫೀಸ್

ಅದೆಷ್ಟೋ ವರ್ಷಗಳ ಈ ನಾಡಿನ ಜನರ ಹೋರಾಟದಿಂದ ಈಗ ಒಂದು ತಂತಿ ಆಫೀಸು ಮಂಜೂರಾಗಿ ತಂತಿ ಕಂಬಗಳನ್ನು ರಸ್ತೆ ಉದ್ದ ನಿಲ್ಲಿಸಿರುವುದು ಕಂಡು ಬರುತ್ತದೆ. ಕೂಡಲೇ ತಂತಿ ಹಾಕುವ ಏರ್ಪಾಡು ಇದೆಯೆಂದು ನಂಬಲಾಗಿದೆ. ಆದರೆ ಕೆಲವು ಕಡೆ ಅಗಲವಿಲ್ಲದ ರಸ್ತೆ ಒತ್ತಿನಲ್ಲಿ ಕಂಬಗಳನ್ನು ನಿಲ್ಲಿಸಿರುವುದನ್ನು ನೋಡಿದರೆ ಲಾರಿ ಮತ್ತು ಬಸ್ಸು ಓಡಾಟದಲ್ಲಿ ಎಷ್ಟಕ್ಕೆ ಡಿಕ್ಕಿ ಹೊಡೆಯಬಹುದೆಂದು ಗೊತ್ತಾಗುವುದಿಲ್ಲ. ರಸ್ತೆ ಒತ್ತಿನಲ್ಲಿ ಅನುಕೂಲವಾದ ಕಾಲಿ ಜಾಗವಿದ್ದರೂ ಹೀಗೆ ಯಾಕೆ ಮಾಡಿದರೋ ತಿಳಿಯುವುದಿಲ್ಲ. ಅಷ್ಟೇ ಅಲ್ಲ. ಪೊನ್ನಂಪೇಟೆ ಪೋಸ್ಟ್ ಆಫೀಸು ಒಬಿರಾಯನ ಕಾಲದಲ್ಲಿ ಕಟ್ಟಿದ ಒಂದು ಹಳೇ ಮನೆಯಲ್ಲಿ ಊರಿನ ಒಂದು ಮೂಲೆಯಲ್ಲಿ ಇದೆ. ಈ ಕಟ್ಟಡವು ದನಗಳ ಕೊಟ್ಟಿಗೆಗಿಂತ ಹೀನಸ್ಥಿತಿಯಲ್ಲಿದೆ. ರಿಪೇರಿಯೇ ಇಲ್ಲ. ಈ ಮನೆಯ ಯಜಮಾನರು ಕಾತೂರು ಪರಂಬಿನಲ್ಲಿರುವ ಒಬ್ಬ ಮಾಪಿಳ್ಳೆ ಸಾಹುಕಾರರಾಗಿದ್ದಾರೆ. ಈ ಕಟ್ಟಡವನ್ನು ಕೂಡಲೇ ರಿಪೇರಿ ಮಾಡಬೇಕೆಂದು ಅವರಿಗೆ ನೋಟೀಸ್ ಕೊಟ್ಟಿದ್ದರೂ ಅವರು ಇದನ್ನು ಗಮನಕ್ಕೆ ತರದೆ ಇರುವುದು ಕಂಡು ಬಂದಿದೆ.

ಹೀಗಿರುವಲ್ಲಿ ಇನ್ನಾದರೂ ಡಿಪಾರ್ಟ್‌ಮೆಂಟಿನವರು ಸದರಿ ಆಫೀಸನ್ನು ಆಸ್ಥಳದಿಂದ ಬಿಟ್ಟು ಹೊಸದಾಗಿ ತೆರೆಯುವ ತಂತಿ ಆಫೀಸಿಗೂ ಮತ್ತು ಪೋಸ್ಟ್ ಆಫೀಸಿಗೂ ಅನುಕೂಲವಿರುವ ಮನೆಯನ್ನು ಏರ್ಪಡಿಸಬೇಕಲ್ಲದೆ ಮಾಪಿಳ್ಳೆ ಸಾಹುಕಾರರ ಪ್ರೀತಿಗಾಗಿ ಪಬ್ಲಿಕ್ ಜನರಿಗೆ ಹಿತವಲ್ಲದ ಕಟ್ಟಡದಲ್ಲಿ ಆಫೀಸು ತೆರೆಯುವ ಏರ್ಪಾಡು ಮಾಡಬಾರದಾಗಿ ಕೋರಿದೆ.

ಪಟ್ಟಣಿಗ.

ವಯಸ್ಕರ ಶಿಕ್ಷಣ ಮತ್ತು ಕಮ್ಯೂನಿಟಿ ಸೆಂಟರ್ಸ್. [ವಿದ್ಯಾ ಇಲಾಖೆಯಿಂದ]

ಒಂದು ದೇಶದ ಸಂಪತ್ತು ಧನಕನಕವಲ್ಲ. ಆ ದೇಶದ ಜನರು, ಅವರ ಮನಸ್ಸು, ದೇಹ ಮತ್ತು ಹೃದಯ ಎಂದ ಮೇಲೆ ವಿದ್ಯೆಯಿಲ್ಲದ ಹಿಂದುಳಿದ ನಮ್ಮ ದೇಶದಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ಕೆ ಲಕ್ಷ್ಯಕೊಟ್ಟು ಗಮನ ಕೊಡುವುದು ರಾಷ್ಟ್ರದ ಪ್ರಧಾನ ಕರ್ತವ್ಯ. ಈ ಶಿಕ್ಷಣದಿಂದ ಅವರು ಕರ್ತವ್ಯ ಪರಾಯಣರೂ, ಗೌರವಯುತರೂ, ದೈಹಿಕ ಸಂಪತ್ತುಳ್ಳ ಪ್ರತಿಭಾವಂತರೂ, ಉದ್ಯೋಗ ಕುಶಲರೂ ಆದ ಪ್ರಜೆಗಳಾಗಬೇಕು. ನಮ್ಮ ಸಾಮಾಜಿಕ ಮತ್ತು ರಾಷ್ಟ್ರೀಯ ವೈಶಿಷ್ಟ್ಯಗಳಿಗನುಗುಣವಾದ ಶಿಕ್ಷಣವನ್ನು ಪಡೆದು ರಾಷ್ಟ್ರೀಯ ವ್ಯಕ್ತಿಗಳಾಗಿ ಬಾಳಬೇಕು. ಅಂಥ ವ್ಯಕ್ತಿಗಳು ನಿಜವಾದ ದೇಶಭಕ್ತರು, ಜಗತ್ತಿನ ಸತ್ಪ್ರಜೆಗಳು.

ಇಂಥಾ ವ್ಯಕ್ತಿಗಳನ್ನು ಮಾಡಲು ಬರೇ ಅಕ್ಷರ ಜ್ಞಾನ ಕಲಿಸಿದರೆ ಸಾಲದು. ಅವರಲ್ಲಿ ನೂತನ ಜಾಗೃತಿಯನ್ನುಂಟು ಮಾಡಬೇಕು. ಅಕ್ಷರ ಕಲಿತು ವಿರಾಮ ಕಾಲದಲ್ಲಿ ಪತ್ರಿಕೆ ಪುಸ್ತಕಗಳನ್ನು ಓದುವ ಹವ್ಯಾಸವನ್ನುಂಟು ಮಾಡಬೇಕು.

ಹೀಗೆ ಮಾಡಲು ನಿರಕ್ಷರಸ್ಥರು ನಿರುತ್ಸಾಹರಾಗಿದ್ದಾರೆ. ದಿನದ ಅಭ್ಯಾಸಗಳು ಅವರನ್ನು ಬಿಡಲೊಲ್ಲವು. ಇತ್ತ ವಯಸ್ಕರ ಶಿಕ್ಷಣ ಕಾರ್ಯ ಕೈಕೊಂಡ ಅಧ್ಯಾಪಕರಿಗೆ ಪಾಠ ಹೇಳುವವರ ಜೊತೆಗೆ ಅನಕ್ಷರಸ್ಥರನ್ನು ಕಲಿಕೆಗೆ ಕರೆತರುವ ಕೆಲಸವನ್ನು ಮಾಡಬೇಕಾಗುತ್ತದೆ. ಅದ್ದರಿಂದ ಈ ಕಾರ್ಯಕ್ಕೆ ನೆರವಾಗಲು ಗ್ರಾಮದ ಸಂಘ ಸಂಸ್ಥೆಗಳನ್ನು, ವಿದ್ಯಾವಂತರನ್ನು ಸಂಘಟಿಸಿ, ಅವರ ಸಹಾಯವನ್ನು ಈ ಕಾರ್ಯಕ್ಕೆ ಪಡೆಯಬೇಕಾಗಿದೆ. ಈ ಸಂಘಟನಾ ಕಾರ್ಯಕ್ರಮ ಗ್ರಾಮೋದ್ಧಾರದ ಕ್ರಮ ಸರ್ವರೀತಿಯಲ್ಲಿ ಸಹಕಾರಿಯಾಗುವಂತೆ ಮಾಡುವುದಕ್ಕಾಗಿ 'ವಯಸ್ಕರ ಶಿಕ್ಷಣ' ಯೋಜನೆಯ ಆಶ್ರಯದಲ್ಲಿ ಗ್ರಾಮಾಂತರಗಳಲ್ಲಿ 'ಸಮಾಜ ಶಿಕ್ಷಣ ಕೇಂದ್ರ' (ಅಥವಾ ಜನತಾ ಶಿಕ್ಷಣ ಕೇಂದ್ರ) (ಕಮ್ಯೂನಿಟಿ ಸೆಂಟರ್ಸ್) ವನ್ನು ತೆರೆಯುವ ಏರ್ಪಾಡು ಮಾಡಲಾಗುವುದು.

ಸಮಾಜ ಶಿಕ್ಷಣ ಕೇಂದ್ರದ ಗುರಿ

(೧) ವಿದ್ಯಾವಂತರೂ ಇನ್ನೂ ಹೆಚ್ಚು ತಿಳುವಳಿಕೆ ಗಳಿಸುವ ಅವಕಾಶವನ್ನೂ, ಅನಕ್ಷರಸ್ಥರಿಗೆ ಅಕ್ಷರ ಕಲಿಸುವ ಏರ್ಪಾಡನ್ನೂ ಮಾಡುವುದು.

(೨) ಗ್ರಾಮ ಕಲೆಗಳ ಅಭಿವೃದ್ಧಿ ಮಾಡುವುದು.

(೩) ಪುಸ್ತಕ ಭಂಡಾರ ಮತ್ತು ವಾಚನಾಲಯಗಳನ್ನೇರ್ಪಡಿಸುವುದು.

(೪) ಪ್ರತಿಯೊಬ್ಬನೂ ತನ್ನನ್ನು ತಾನೇ ಸುಸಂಸ್ಕೃತನಾಗುವಂತೆಯೂ (೫) ಸಾಧ್ಯವಿದ್ದಷ್ಟು ಮಟ್ಟಿಗೆ ಸಾಮಾಜಿಕ ಆರ್ಥಿಕ ಪರಿಸ್ಥಿತಿಯ ಅರಿವು ಉಂಟುಮಾಡಿಕೊಳ್ಳುವಂತೆಯೂ (೬) ಮಾನಸಿಕ ಮತ್ತು ಶಾರೀರಿಕ ಬೆಳವಣಿಗೆಗಾಗಿ ಉತ್ತಮ ಚಟುವಟಿಕೆಗಳನ್ನು ಪ್ರಚಾರಕ್ಕೆ ತರುವುದು. (೭) ಮನೋರಂಜನೆಯ ಕಾರ್ಯಗಳನ್ನೇರ್ಪಡಿಸುವುದು. (೮) ಗ್ರಾಮದ ಒಗ್ಗಟ್ಟನ್ನು ಸಾಧಿಸುವುದರ ಮುಖೇನ ಜಲವು ಗ್ರಾಮದ ಕೆಲಸಗಳನ್ನು ಗ್ರಾಮಸ್ಥರೇ ಕೈಕೊಳ್ಳುವಂತೆ ಮಾಡುವುದು.

ಇವರ ಯೋಜನೆ

ಜನರು ಯಾವ ಯೋಜನೆಯನ್ನೂ ಸ್ವಾಗತಿಸುತ್ತಿಲ್ಲ. ಇದಕ್ಕೆ ಅನೇಕ ಕಾರಣಗಳು ಇರಬಹುದು. ಪ್ರತಿಯೊಂದು ಯೋಜನೆಯೂ ತನ್ನ ಹಿತಕ್ಕೆ, ಸಮಾಜದ ಹಿತಕ್ಕೆ ಎಂಬ ಅರಿವನ್ನು ಮೊದಲು ಅವನು ತಿಳಿದುಕೊಳ್ಳಬೇಕು. ಹಾಗಾದರೆ ಮಾತ್ರ ಪ್ರಯೋಗಕ್ಕೆ ಹೊರಟ ಪ್ರತಿಯೊಂದು ಯೋಜನೆಯೂ ಫಲಕಾರಿಯಾದೀತು. ಅಂಥಾ ಅರಿವನ್ನು ಜನಸಾಮಾನ್ಯರಲ್ಲಿ ಉಂಟುಮಾಡಲು ಇಂಥಾ ಕೇಂದ್ರಗಳನ್ನು ತೆರೆಯುವ ಕೆಲಸ ಮಾಡಬೇಕಾಗಿದೆ. ವಿಪರೀತ ಆಶೆಗಳನ್ನೂ, ಭರವಸೆಗಳನ್ನೂ ಗ್ರಾಮಸ್ಥರಿಗೆ ಕೊಟ್ಟು ಏನೂ ಮಾಡಲು ಸಾಧ್ಯವೋ ಅಷ್ಟೇ ವಿಚಾರ ಮಾಡುವ ಹಾಗೆ ಮಾತನಾಡಿದ್ದನ್ನು ಕಾರ್ಯರೂಪಕ್ಕೆ ತಂದು ಜನರಿಗೆ ತೋರಿಸಿ ಅನಂತರ ಮನಸ್ಸನ್ನು ಒಲಿಸಿಕೊಂಡು ಅವರಲ್ಲಿ ಒಂದು ಹೊಸ ಮನೋಭಾವನೆಯನ್ನು ಉಂಟುಮಾಡಬೇಕು.

ಇದನ್ನು ಸಾಧಿಸಲು ತಿಂಗಳಿಗೊಂದು ಸರ್ತಿ ದೈತಂಗೆ ಬಿಡುವಿರುವ ದಿವಸ ಗ್ರಾಮದ ಎಲ್ಲಾ ಜನರು ಒಂದು ಕಡೆ ಸೇರುತ್ತಾರೆ. ಸಾಧಾರಣವಾಗಿ ಸೇರುವ ವಾರ ವಿರಾಮವಿರುತ್ತದೆ.

ಸ್ಥಳ

ಗ್ರಾಮದ ಜನರು ಹೆಚ್ಚಾಗಿ ಎಲ್ಲಿ ಸೇರಲು ಅನುಕೂಲವಿದೆಯೋ ಅಲ್ಲಿ ಎಲ್ಲರೂ ಸೇರಬಹುದು. ಚಾವಡಿ, ದೇವಸ್ಥಾನ, ಗ್ರಾಮ ಪಂಚಾಯತಿ ಹಾಲು, ರಾಮಮಂದಿರ, ಭಜನಾ ಕಟ್ಟಡಗಳು— ಇವುಗಳನ್ನು ಉಪಯೋಗಿಸಿಕೊಳ್ಳಬಹುದು. ಆರಿಸಿದ ಕಟ್ಟಡದಲ್ಲಿ ಒಂದು ಪೀಠವನ್ನೂ ವಿನೋದ ಚಟುವಟಿಕೆಗಳನ್ನು ಪ್ರದರ್ಶಿಸಲು ನೋಡಿಕೊಳ್ಳಬೇಕು.

ವ್ಯವಸ್ಥೆ

ಅಲ್ಲಿ (ಮೀಟಿಂಗಿನಲ್ಲಿ) ಜರಗುವ ಕಾರ್ಯಗಳನ್ನು ೩ ಭಾಗಗಳಾಗಿ ಮಾಡಿಕೊಳ್ಳಬಹುದು. (೧) ಮನೋರಂಜನೆಯ ಚಟುವಟಿಕೆಗಳು. (೨) ಭಾಷಣಗಳು ಮತ್ತು ವೃತ್ತಾಂತ ತಿಳಿಸುವಿಕೆ (೩) ಕ್ರಿಯಾತ್ಮಕ ಕೆಲಸಗಳ ಪ್ರದರ್ಶನ.

ಈ 'ಸಮಾಜ ಶಿಕ್ಷಣ ಕೇಂದ್ರ'ದ ಕಾರ್ಯಕ್ರಮಗಳನ್ನು ಜರಗಿಸಲು ಗ್ರಾಮದ ನಾಲ್ಕಾರು ಮುಖಂಡರನ್ನೊಳಗೊಂಡ ಒಂದು ಕಮಿಟಿಯನ್ನು ರಚಿಸಬೇಕು. ಅವರಲ್ಲೊಬ್ಬರು ಸಂಚಾಲಕರಾಗಿ ಕೆಲಸ ಮಾಡುತ್ತಾರೆ. ಆ ಕೇಂದ್ರಕ್ಕೆ ಸಂಬಂಧಪಟ್ಟ ಲೆಕ್ಕಪತ್ರಗಳನ್ನಿಡುವುದು, ಪ್ರತಿ ತಿಂಗಳು ನಡೆಯಬೇಕಾದ ಕಾರ್ಯವನ್ನು ಏರ್ಪಡಿಸುವುದು ಸಂಚಾಲಕರ ಕೆಲಸ. ವಯಸ್ಕರ ಶಿಕ್ಷಣ ಕಾರ್ಯವನ್ನು ನಿರ್ವಹಿಸಲು ನೇಮಿಸಿದ ಸರಕಾರಿ ಉದ್ಯೋಗಸ್ಥನು ಆ ಕಮಿಟಿಯವರೊಡನೆ ಕೊಂಡು ಎಲ್ಲಾ ಕಾರ್ಯಗಳನ್ನು ನಡೆಸಲು ಕಲಿಕೆ ಸಹಾಯ ಕೊಡಬೇಕು. ಕಮಿಟಿಯು ಅನುಮತಿ ಮೇರೆ ಸಂಚಾಲಕನು ಮತ್ತು ವಯಸ್ಕರ ಶಿಕ್ಷಣ ಕಾರ್ಯದ ವ್ಯವಸ್ಥಾಪಕನು ಮೀಟಿಂಗಿನ ತಾರೀಖ್ಯ ಅದಕ್ಕೆ ಬರುವವರಿಗೆ ಕೋರಿಕೆಗಳನ್ನು ಕಳುಹಿಸುವುದು, ಭಾಷಣಗಳನ್ನೇರ್ಪಡಿಸುವುದು, ಗ್ರಾಮೋದ್ಧಾರಕ್ಕೆ ದುಡಿಯುವ ಇಲಾಖೆಗಳಿಂದ ಪ್ರದರ್ಶನಗಳನ್ನೇರ್ಪಡಿಸುವುದು—ಇತ್ಯಾದಿ (ವ್ಯವಸಾಯ, ಸಹಕಾರ, ಆರೋಗ್ಯ ಇಲಾಖೆಗಳಿಂದ) ಕಾರ್ಯಗಳನ್ನೇರ್ಪಡಿಸುತ್ತಾರೆ. ಈ ಕಾರ್ಯಕ್ರಮವನ್ನು ಏನು ದಿವಸಗಳ ಮುಂದಾಗಿಯೇ ಗ್ರಾಮಸ್ಥರೆಲ್ಲರಿಗೂ ತಿಳಿಸಬೇಕು.

ಮನೋರಂಜನೆ ಚಟುವಟಿಕೆಗಳು

ದುಡಿಯುವ ಜನರಿಗೆ ದಣಿವು ತುಂಬ. ದೇಹಶ್ರಮ ಪಟ್ಟವರು ಪ್ರತಿ ತಿಂಗಳ ಮೀಟಿಂಗಿಗೆ ಹಾಜರಾಗಲು ಇಷ್ಟಪಡುವುದಿಲ್ಲ. ಆದರೆ ಮನೋರಂಜನೆಯ ಕಾರ್ಯಗಳನ್ನು ಏರ್ಪಡಿಸಿದರೆ ಉತ್ಸಾಹದಿಂದ ಸೇರುವರು. ಇಂಥಾ ಕಾರ್ಯಗಳನ್ನೇರ್ಪಡಿಸುವುದು ಬಹು ಪ್ರಯಾಸದ ಕೆಲಸವಲ್ಲ. ಪ್ರತಿ ಗ್ರಾಮಗಳಲ್ಲಿಯೂ ಒಂದಲ್ಲ ಒಂದು ರೀತಿಯ ಗ್ರಾಮ ಕಲೆಗಳನ್ನು ಕಾಣುತ್ತೇವೆ. ಹಳ್ಳಿಯ ಕುಣಿತ, ಹಾಡು, ಕೋಲಾಟ, ಯಕ್ಷಗಾನ ಇತ್ಯಾದಿಗಳು ಇದ್ದೇ ಇರುತ್ತವೆ. ಇವುಗಳಲ್ಲಿ ಮರೆತವನ್ನು ಸಹಾಯಕ್ಕೆ ತೆಗೆದುಕೊಳ್ಳಬೇಕು. ಇವುಗಳ ಜೊತೆಗೆ ಇಲಾಖೆಯಿಂದ ಚಲನ ಚಿತ್ರ ಪ್ರದರ್ಶನಗಳನ್ನೇರ್ಪಡಿಸಬೇಕು. ಮನೋರಂಜನೆಯ ಕಾರ್ಯಗಳನ್ನು ಆ ದಿನದ ಕಾರ್ಯಕ್ರಮದ ಪ್ರಾರಂಭದಲ್ಲಿ ಸ್ವಲ್ಪ ಸಮಯ ಇಟ್ಟುಕೊಳ್ಳಬೇಕು. ಇದರಿಂದ ಜನರು ಸೇರಲು ತುಂಬಾ ಸಹಾಯಕವಾಗುತ್ತದೆ.

ಭಾಷಣಗಳು

ಅನಂತರ ಭಾಷಣಗಳು. ಗ್ರಾಮಾಭಿವೃದ್ಧಿಗೆ ಸಂಬಂಧಿಸಿದ ವಿಷಯಗಳ ಮೇಲೆ ಭಾಷಣಗಳನ್ನೇರ್ಪಡಿಸಬೇಕು. ಭಾಷಣಗಳು ದೀರ್ಘವಾಗಿರಬಾರದು. ಅಂದರೆ ಹತ್ತು ನಿಮಿಷದೊಳಗೆ ಮುಗಿಸಬೇಕು. ನಿರ್ದಿಷ್ಟ ವಿಷಯದ ಮೇಲೆ ಮಾತನಾಡಬೇಕು. ಭಾಷಣಗಳಾದ ಮೇಲೆ ಗ್ರಾಮಸ್ಥರು ತಮ್ಮಲ್ಲಿ ಉದ್ಭವಿಸಿದ ಸಂದೇಹಗಳನ್ನು ನಿವಾರಿಸಿಕೊಳ್ಳಲು ಪ್ರಶ್ನೆ ಕೇಳಲು ಅವಕಾಶ ಕೊಡಬೇಕು.

ಭಾಷಣ ಮಾಲಿಕೆಗಳಲ್ಲಿ ವಾರ್ತಾ ವಿಭಾಗವು ಬಹು ಪ್ರಾಮುಖ್ಯವಾದದ್ದು. ಪತ್ರಿಕಾ ಸುದ್ದಿಗಾರರೊಬ್ಬರಿಂದ (ಎ) ಪ್ರಪಂಚದ ವಿಚಾರ (ಬಿ) ಹಿಂದೂದೇಶದ ವಿಚಾರ (ಸಿ) ಸ್ಥಳೀಯ ವರ್ತಮಾನಗಳನ್ನು ಸಭಿಕರಿಗೆ ತಿಳಿಸಬೇಕು. ಅತನು ಜನಜ್ಞೆಯುಳ್ಳವನಾಗಿಯೂ, ಸುದ್ದಿಯನ್ನು ಸ್ವಾರಸ್ಯವಾಗಿ ಹೇಳುವವನಾಗಿರಬೇಕು. ಅಧ್ಯಕ್ಷನು ಗ್ರಾಮದ ಐಕ್ಯತೆ ಪ್ರಜೆಗಳ ಕರ್ತವ್ಯ ಇತ್ಯಾದಿ ಮಾತನಾಡುತ್ತಾನೆ. ಈ ಸಂದರ್ಭಗಳಲ್ಲಿ ಸಾಮಾಜಿಕ ಅಂಥ ಶ್ರದ್ಧೆಗಳನ್ನೂ, ಗ್ರಾಮಸ್ಥರಲ್ಲಿರುವ ಮನೋಮಾಲಿನ್ಯವನ್ನೂ ಹೋಗಲಾಡಿಸಿ ಒಂದು ಹೊಸ ಚೈತನ್ಯ ಬರುವಂತೆ ಮಾಡಬೇಕು.

ಪ್ರಾಮುಖ್ಯವಾದ ಒಂದು ವಿಷಯ

ಪ್ರತಿ ತಿಂಗಳು ಸೇರುವ ಈ ಮೀಟಿಂಗು ಆಡಂಬರವಿಲ್ಲದೆ ಒಂದು ಸಾಧಾರಣ ಸರಳ ರೀತಿಯಲ್ಲಿರಬೇಕು. ಆ ದಿನದ ಮಟ್ಟಿಗೆ ಹೂವಿನ ಹಾರವಾಗಲಿ, ಚಹಾ ಕೂಟಗಳಾಗಲಿ ಇರಬಾರದು. ಸರಕಾರಿ ದೊಡ್ಡ ಹುದ್ದೆಯವರಾಗಲಿ ಇಲ್ಲವೆ ಪ್ರಜಾಮುಖಂಡರಾಗಲಿ ಪ್ರತಿಯೊಬ್ಬರೂ ಸಮಾಜ ಸುಧಾರಕರಂತೆ 'ಸೇವಾದೃಷ್ಟಿ'ಯಿಂದಲೇ ಅಲ್ಲಿಗೆ ಸೇರಬೇಕು. ಸತ್ಕಾರ ಬೇಡವೆನ್ನುವುದಕ್ಕೆ ಕಾರಣವೇನೆಂದರೆ ಇಂಥಾ ಸಂದರ್ಭಗಳಲ್ಲಿ ಒಬ್ಬಿಬ್ಬರು ಮುಖಂಡರುಗಳು ಮಾತ್ರವಾಗಿ ಈ ಖರ್ಚುಗಳನ್ನು ತೆರಬೇಕಾಗುತ್ತದೆ. ಪ್ರತಿ ತಿಂಗಳೂ ನಡೆಯಬೇಕಾದ್ದರಿಂದ ಇಂಥಾ ಸಭೆಗಳ ಮೇಲೆ ಜಿಗುಪ್ಸೆ ಹುಟ್ಟಿ ಹೋಗುತ್ತದೆ. ಯಾರಿಗೂ ಜಿಗುಪ್ಸೆ ಉದಾಸೀನಕ್ಕೆ ಎಡೆ ಕೊಡಬಾರದು.

ಪ್ರಾಯೋಗಿಕ ಪ್ರದರ್ಶನಗಳು

ಇದುವರೆಗೆ ಸಾಂಪ್ರದಾಯಿಕ ಪದ್ಧತಿಯ ಮೀಟಿಂಗು. ಭಾಷಣಗಳ ವಿಚಾರವಾಯಿತು. ಇವುಗಳೂ ಕೂಡ ಬೇಕು. ಜನರ ಸಾಂಘಿಕ ಜೀವನವನ್ನು ಸಮರ್ಪಕ ಮಾಡಲು ಹಳ್ಳಿಗರಿಗೆ ಹೇಳಿದ್ದನ್ನು ಕ್ರಿಯಾತ್ಮಕವಾಗಿ ಮಾಡಿ ತೋರಿಸದಿದ್ದರೆ ಯಾವ ಯೋಜನೆಯನ್ನೂ ನಂಬರು. ಅದಕ್ಕಾಗಿ ಕೇಳಿದ ವಿಷಯವನ್ನು ಕಾರ್ಯತಃ ಮಾಡಿ ತೋರಿಸಬೇಕು. ಆ ದಿವಸದ ಮೀಟಿಂಗಿನ ಭಾಷಣಕಾರರು ಮಾಡುವ ಮತ್ತು ವಿನೋದ ಕಾರ್ಯಗಳನ್ನೂ ಚಲನ ಚಿತ್ರ ಪ್ರದರ್ಶನವನ್ನೂ ಇಟ್ಟುಕೊಳ್ಳಬೇಕು.

ಅಂಕೆ ಸಂಖ್ಯೆಗಳ ಪಟ್ಟಿ

ಈ ಸಮಾಜ ಶಿಕ್ಷಣ ಕೇಂದ್ರಗಳ ಕಾರ್ಯಚಟುವಟಿಕೆಗಳು ಜರುಗುವ ಗ್ರಾಮದ ಕಟ್ಟಡಗಳಲ್ಲಿ ಆ ಗ್ರಾಮಕ್ಕೆ ಸಂಬಂಧಿಸಿದ ಈ ಕೆಳಗಿನ ವಿಷಯಗಳನ್ನೊಳಗೊಂಡ ಒಂದು ಪಟ್ಟಿಯನ್ನು ತಯಾರಿಸಬೇಕು.

ಗ್ರಾಮದ ಜನಸಂಖ್ಯೆ
ವಿದ್ಯಾಭ್ಯಾಸ
ಗಂಡು — ಹೆಣ್ಣು —
ಶಾಲಾ ಪ್ರಾಯದ ಮಕ್ಕಳು
ಶಾಲೆಗೆ ಹೋಗುವವರ ಸಂಖ್ಯೆ—
ಶಾಲೆಗೆ ಹೋಗದವರ ಸಂಖ್ಯೆ—

ಅಕ್ಷರಸ್ಥರು	ಅನಕ್ಷರಸ್ಥರು
(ಎ) ಗಂಡಸರು	(ಎ) ಗಂಡಸರು
(ಬಿ) ಹೆಂಗಸರು	(ಬಿ) ಹೆಂಗಸರು

ವೃತ್ತಿ

(೧) ಮುಖ್ಯ ವೃತ್ತಿ.

(೨) ಉಪ ಕಸುಬುಗಳು.

ವ್ಯವಸಾಯ

(೧) ಗ್ರಾಮದಲ್ಲಿರುವ ಒಟ್ಟು ಭೂಮಿಯ ವಿಸ್ತೀರ್ಣ.

(೨) ಬೇಸಾಯ ಮಾಡುವ ಭೂಮಿಯ ವಿಸ್ತೀರ್ಣ.

(೩) ಬೇಸಾಯ ಮಾಡಲು ಅನುಕೂಲವಿರುವ ಪಾಳು ಭೂಮಿ ಕಾರಣ?

ನೈರ್ಮಲ್ಯ

(೧) ರಸ್ತೆ, ಚರಂಡಿಗಳ ವ್ಯವಸ್ಥೆ.

(೨) ಅಂಟು ಜಾಡ್ಯಗಳೇನ ದರೂ ಇವೆಯೋ?

(೩) ನೀರಿನ ಸೌಕರ್ಯ.

ಮನೋರಂಜನೆ

ಮನಸ್ಸಿನ ಬೇಸರ ಕಳೆಯಲು ಏನಾದರೂ ಏರ್ಪಾಡುಗಳಿವೆಯೋ?

(೧) ರೇಡಿಯೋ.

(೨) ವಾಚನಾಲಯ.

॥ ಸುವಿದ್ಯೆ ॥

ಲೇ:—ಶ್ರೀ ಎಂ. ಎಸ್. ಪೊಣ್ಣಪ್ಪ–ಶಾಸೂರು.

'ಉದ್ಯೋಗಂ ಪುರುಷಲಕ್ಷಣಂ' ಅಂದರೆ ಪುರುಷನಾಗಿ ಹುಟ್ಟಿದವನು ಉದ್ಯೋಗವನ್ನು ಮಾಡಿ, ಸಂಪಾದಿಸಿ ಸಂಸಾರ ನೀಗಿಸಿಕೊಂಡು ಹೋಗಬೇಕೆಂಬುವುದೇ ಈ ಮಾತಿನ ಅರ್ಥ. ಪುರುಷನು ಸಂಪಾದಿಸುವುದೂ ಸ್ತ್ರೀಯು ಸಂರಕ್ಷಣೆಯ ಹೊಣೆಯನ್ನು ನಿರ್ವಹಿಸುವುದೂ ಸೃಷ್ಟಿಯ ನಿಯಮ. ಆದರೆ ಈಗೀಗ ಕಾಲ ಹೋದಂತೆಯೇ ಈ ಮಾತಿನ ಅರ್ಥ ಮಾರ್ಪಾಡು ಹೊಂದುತ್ತಿದೆ. ಲೌಕಿಕದಲ್ಲಿ ವಿದ್ಯಾವಂತನೆಂದರೆ ಆತನ ಹೆಸರಿನ ಮುಂದೆ ಕಲಾಶಾಲೆಗಳನ್ನು ಹತ್ತಿದ್ದ ಗುರುತಿಗಾಗಿ ಒಂದೆರಡು ಅಕ್ಷರಗಳನ್ನು ಸೇರಿಸಿಕೊಂಡದ್ದೇ ಆದರೆ ಆತನು ವಿದ್ಯಾವಂತನೆನಿಸಿಕೊಂಡು ಮೆರೆಯುವವನು. ಈ ವಿದ್ಯಾವಂತನ ಗುರುತಿಗೆ ಸರಿಯಾಗಿ ಒಂದು ಸರಕಾರಿ ಉದ್ಯೋಗವನ್ನು ಸರಕಾರವು ಆವನಿಗಾಗಿ ಕೊಡಲೇಬೇಕಾಗುವುದು. ಕೊಡದಿದ್ದರೂ ಆತನು ಅದಕ್ಕಾಗಿ ಅನುದಿನವೂ ಹೋರಾಡಿ ಸಂಪಾದಿಸುವನು. ನೌಕರಿದೊರೆತು ತಾನು ಕಲಿತ ಕೃತಕ ವಿದ್ಯೆಯನ್ನೆಲ್ಲಾ ಒಟ್ಟುಗೂಡಿಸಿ ಕಾಗದ ಪತ್ರಗಳ ಮೇಲೆ ಮಸಿಯಿಂದ ಗೀಚಿದರೆ ತಿಂಗಳಂತ್ಯದಲ್ಲಿ ವೇತನಕ್ಕೆ ಅರ್ಹನೆನಿಸಿಕೊಳ್ಳುವನು. ಇದೇ ಪುರುಷನ ಈಗಿನ ಮಾರ್ಪಾಡು ಹೊಂದಿದ ಪುರುಷಾರ್ಥ! ಇದಕ್ಕೆ ಈಗ ಹೇಳುತ್ತಿರುವುದು 'ಉದ್ಯೋಗಂ ಪುರುಷ ಲಕ್ಷಣಂ' ಎಂದು! ಆದರೆ ಇದರ ನಿಜವಾದ ಅರ್ಥವೇನೆಂದು ಸಮರ್ಥಿಸುವುದೇ ಈ ಲೇಖನದ ಉದ್ದೇಶ.

ಮನುಷ್ಯನಲ್ಲಿ ಜ್ಞಾನವಿರುವುದರಿಂದ ಆತನು ಪ್ರಾಣಿಗಳಲ್ಲಿ ಶ್ರೇಷ್ಠನೆನಿಸಿಕೊಂಡಿದ್ದಾನೆ. ಈ ಜ್ಞಾನಾಭಿವೃದ್ಧಿಯೇ ದಿವ್ಯ. ಈ ವಿದ್ಯಾಭ್ಯಾಸವೇ ನರಮನುಷ್ಯನಲ್ಲಿ ಬೇಕಾದ ನಾಗರಿಕತೆ. ಈ ನಾಗರಿಕತೆಯಿಂದಲೇ ದೇಶದ ಸುಧಾರಣೆ. ಈ ತರದ ವಿದ್ಯೆಯು ವಿಕಾಸಗೊಂಡಾಗಲೇ ಮನುಷ್ಯನು ಮನುಷ್ಯತ್ವವನ್ನು ತಿಳಿದುಕೊಳ್ಳುವನು. ಅಲ್ಲದಿದ್ದರೆ ಆತನನ್ನು ಪ್ರಾಣಿಗಳಿಂದ ಬೇರ್ಪಡಿಸಲಾಗದು. ಈ ವಿದ್ಯೆಯನ್ನು ಶಾಲೆಕಾಲೇಜುಗಳನ್ನು ಹತ್ತದೆಯೇ ಅದೆಷ್ಟೋ ವರ್ಷಗಳ ಹಿಂದಿನಿಂದಲೂ ಈಗಿನ ವಿದ್ಯಾವಂತರಿಗಿಂತ ಮೇಲಾಗಿ ಮನುಷ್ಯತ್ವವನ್ನು ತಿಳಿದುಕೊಂಡು ಮನುಷ್ಯರಾಗಿ ಬಾಳಿ ಬದುಕಿ ಪ್ರಪಂಚಕ್ಕೆ ಆದರ್ಶ ಪುರುಷರಾಗಿದ್ದ, ಯೇಸುಕ್ರಿಸ್ತ, ಶ್ರೀರಾಮಕೃಷ್ಣ ಪರಮಹಂಸ, ಗೌತಮಬುದ್ಧ ಮೊದಲಾದವರು ತಮ್ಮ ಜೀವನದಲ್ಲಿ ತೋರಿಸಿದ್ದಾರೆ. ಇವರು ಯಾವ ಕಾಲೇಜಿನ ಕಪ್ಪು ಕೋಟನ್ನೂ ಧರಿಸಿದವರಲ್ಲ.

ಇಂದು ನಾವು ಕಲಿಯುತ್ತಿರುವ ವಿದ್ಯೆಯು ಕೇವಲ ನೌಕರಿಯ ದೃಷ್ಟಿಯಿಂದ. ಇದು ನಾವು ಮಾಡುವ ಮೊದಲಿನ ತಪ್ಪು. ನೌಕರಿಗಾಗಿ ಕಲಿಯುವ ವಿದ್ಯೆಯು ವಿದ್ಯೆಯಲ್ಲ. ಅದರಿಂದ ಜ್ಞಾನವಿಕಾಸವಾಗದೆ ಸಂಕುಚಿತ ಸ್ವಾರ್ಥತೆ, ದುರಾಚಾರವೇ ಎದ್ದು ಕಾಣುತ್ತದೆ. ವಿದ್ಯಾವಂತರೆನಿಸಿಕೊಂಡವರು ಅವಿದ್ಯಾವಂತರನ್ನು ಹೀನಾಯವಾಗಿ ಕಾಣುತ್ತಿದ್ದಾರೆ. ಅವರನ್ನು ಬಹಳ ಕೀಳುಮಟ್ಟದವರೆಂಬಂತೆ ಹೀನದೃಷ್ಟಿಯಿಂದ ನೋಡುತ್ತಾರಲ್ಲದೆ, ತಾವು ಕಲಿತ ವಿದ್ಯೆಯಿಂದ ಆ ವಿದ್ಯಾವಂತರನ್ನು ವಿದ್ಯಾವಂತರನ್ನಾಗಿ ಮಾಡಿ, ತಮ್ಮ ಅಂತಸ್ತಿಗೆ ಅವರನ್ನೂ ತರಬೇಕೆಂಬ ಉದಾರಬುದ್ಧಿಯು ಅವರಲ್ಲಿ ಹುಟ್ಟುತ್ತಿಲ್ಲ. ನೌಕರಿಯಲ್ಲಿರುವ ವಿದ್ಯಾವಂತರು ತಮ್ಮ ಕೈಕೆಳಗಿನವರನ್ನು ತಮ್ಮ ಅಧಿಕಾರಕ್ಕೆ ಒಳಪಟ್ಟವರನ್ನು ಕಿರುಕುಳಪಡಿಸುವುದು, ಲಂಚರುಶುವತ್ತು ಸಿಕ್ಕಿಸಲ್ಲದೆ ಕೆಲಸ ಕಾರ್ಯಗಳನ್ನು ಮಾಡಿಕೊಡದೆ ಸತಾಯಿಸುವುದು, ತಾವು ಅಧಿಕಾರಿಗಳೆಂಬ ದುರಹಂಕಾರದಿಂದ ಇತರರನ್ನು ಕಡೆಗಣಿಸುವುದೇ ಮೊದಲಾದ ಹೀನಗುಣಗಳು ವಿದ್ಯಾವಂತರೆಂದು ಹೇಳಿಕೊಳ್ಳುವವರಲ್ಲಿ ಅಧಿಕವಾಗುತ್ತಿದೆ. ಅಂದರೆ ಈಗಿನ ನೌಕರಿಗಾಗಿ ಕಲಿಯುವ ವಿದ್ಯೆಯಿಂದ ಜ್ಞಾನವಿಕಾಸವಾಗುವಂತಿಲ್ಲ. ಮನುಷ್ಯನು ಮನುಷ್ಯತ್ವವನ್ನು ಬಿಟ್ಟು ಬಂಧುಗಳನ್ನು ಬಲಿಯಿಕ್ಕುವ ಅಮಾನುಷ ಕೃತ್ಯದ ಕಡೆಗೆ ಧಾವಿಸುತ್ತಿದ್ದಾನೆ. ಇದೇ ಈಗಿನ ನಮ್ಮ ಗುರಿಯಾಗಿ 'ಅಟಂ, ಹೈಡ್ರೋಜನ್' ಬಾಂಬುಗಳ ತಯಾರಿಕೆಯಲ್ಲಿ ತನ್ನ ವಿದ್ಯೆಯು ಮುಕ್ತಾಯವಾಗುವಂತಾಗಿದೆ. ಈ ತರದ ವಿದ್ಯೆಯನ್ನು ಕಲಿತು ಮನುಷ್ಯನು ಮಾನವ ಕುಲವನ್ನೇ ನಾಶಮಾಡುವಂತಹ ವಿಜ್ಞಾನಿಯಾಗಿ, ಕಳೆದ ಯುದ್ಧದಲ್ಲಿ ಜಪಾನಿನ ಹಿರೋಶೀಮದಲ್ಲಿ 'ಅಟಂ' ಬಾಂಬನ್ನು ಎಸೆದು ಬಂಧುಗಳನ್ನು ಬಲಿಯಿಕ್ಕಿ ವಿಜಯ ಪತಾಕೆಯನ್ನು ಹಾರಿಸಿ ಮೆರೆದಾಡಿದ! ಒಂದು ಲಕ್ಷದ ಎಪ್ಪತ್ತು ಸಾವಿರ ಜನರನ್ನೂ, ಸೌಧಗಳನ್ನೂ, ಕಲಾಶಾಲೆಗಳನ್ನೂ ಒಂದೇ ಒಂದು ನಿಮಿಷದಲ್ಲಿ ನಾಶಮಾಡಿದ. ಯುದ್ಧವೆಂದರೆ ಏನೆಂದು ತಿಳಿಯದ ನಿರಪರಾಧಿಗಳಾದ ಶಿಶುಗಳನ್ನೂ, ಕೋಲು ಹಿಡಿದು ನಡೆಯುತ್ತಿದ್ದ ಮುದುಕರನ್ನೂ, ಪುಸ್ತಕ ಹಿಡಿದು ಓದುತ್ತಿದ್ದ ವಿದ್ಯಾರ್ಥಿಗಳನ್ನು ಇದ್ದಕ್ಕಿದ್ದಂತೆಯೇ ಸಭ್ಯರೂ, ಸುಸಂಸ್ಕೃತರೂ, ಸಭ್ಯರೂ ಎಂದೂ ಹೇಳಿಕೊಳ್ಳುತ್ತಿರುವ ವಿದ್ಯಾವಂತರು ನಾಶಮಾಡಿದರು. ಇದು ಈಗಿನ ವಿದ್ಯೆಯ ಪರಿಣಾಮ! ವಿಜ್ಞಾನಿಗಳ ವಿಜಯ, ವಿದ್ಯಾವಂತರ ಉಪಕಾರ! ಇವರು ನಾಗರಿಕರೊ, ನರಭಕ್ಷಕರೊ?

ನೂರಾರು ವರ್ಷಗಳ ಹಿಂದೆಯೇ ಯೇಸು ಕ್ರಿಸ್ತ, ಮಹಮ್ಮದ್ ಪೈಗಂಬರ್, ಶ್ರೀ ರಾಮಕೃಷ್ಣ ಪರಮಹಂಸ ಮುಂತಾದವರು ಜನಸೇವೆಯೇ ಜನಾರ್ದನ ಸೇವೆಯೆಂದು ಬೋಧಿಸಿ, ಸರ್ವರನ್ನು ಸಹೋದರಭಾವನೆಯಿಂದ ಕಾಣಬೇಕೆಂದು ಹೇಳಿ, ನಡೆದರು. ಆದರೆ ನಮ್ಮ ಈಗಿನ, ಉದ್ಯೋಗದ ವಿದ್ಯೆಯು ಆ ಶ್ರೇಷ್ಠರ ವಿದ್ಯೆಯನ್ನು ಕಡೆಗಣಿಸಿ ಇಂದು ಈ ಪರಿಸ್ಥಿತಿಗೆ ಇಳಿದಿದೆ.

ನಾವು ಹಿಡಿದ ಮಾರ್ಗ ತಪ್ಪೆಂಬುದನ್ನು ಇನ್ನಾದರೂ ತಿಳಿದುಕೊಂಡು ವಿದ್ಯೆಯ ನ್ಯಾಯವಾದ ಮಾರ್ಗವನ್ನು ಹಿಡಿಯಬೇಕು. ನಾವು ಅನೇಕ ಬಾರಿ ಕೇಳಿದ್ದೇವೆ. ಹೇಳಿಯೂ ಇದ್ದೇವೆ. '[illegible] ಓದಿ [illegible] ಸಂಪಾದಿಸುವುದು ಕಷ್ಟದಲ್ಲೇ ಇದೆಯೆಂದು ಚಿಕ್ಕ ಮಕ್ಕಳಿಗೆ' ಅಂದರೆ ನಮ್ಮ ಮಕ್ಕಳು ಓದಿ, ಚಾಕರಿ ಪಡೆದು ಸಂಬಳ ಸಂಪಾದಿಸಲೆಂಬುವುದೇ ನಮ್ಮ ದೃಷ್ಟಿಯಾಗಿದೆ. ನಾವು ಮಕ್ಕಳಿಗೆ ಅದನ್ನೇ ಮೇಲುಪಂಕ್ತಿಯಾಗಿರಿಸುತ್ತೇವೆ. ಅವರೂ ಹಗಲು ರಾತ್ರಿಯೆನ್ನದೆ, ಪುಸ್ತಕದ ಹಾಳೆಗಳಾಗಿ ಪ್ರಪಂಚದ ಜ್ಞಾನವೇ ಕಳೆದು, ಪುಸ್ತಕ ವಿದ್ಯೆಯನ್ನು ಕಲಿತು, ಕಲಾಶಾಲೆಯ ಪದವೀಧರರಾಗಿ ಚಾಕರಿಗೆ ಹುಡುಕುತ್ತ ಅಲೆದಾಡುತ್ತಾರಲ್ಲದೆ ಸುವಿದ್ಯೆಯನ್ನು ಕಲಿತು ಸ್ವಾವಲಂಬಿಯಾಗಲಾರರು.

ಈ ತರದ ವಿದ್ಯೆ, ಎಂದರೆ ಓದು ಬರಹವಿಲ್ಲದವರೂ ಉದ್ಯೋಗವನ್ನು ಮಾಡುತ್ತಾರೆ! ಅಗಸ ನಾಲ್ಕು ಮನೆ ಉದ್ಯೋಗ ಮಾಡುತ್ತೇನೆಂದು ಹೇಳುತ್ತಾನೆ; ಕ್ಷೌರಿಕ ನಾಲ್ಕು ಮನೆ ಉದ್ಯೋಗವಿದೆಯೆನ್ನುತ್ತಾನೆ. ಹಾಗೆಯೇ ಅನೇಕರು ಕೈ ಕೆಲಸ ಮಾಡತಕ್ಕಂಥವರು ತಾವು ಮಾಡುವ ಕಸಬಿಗೂ ಉದ್ಯೋಗವೆನ್ನುತ್ತಾರೆ. ಈ ಉದ್ಯೋಗಗಳೇ 'ಉದ್ಯೋಗಂ ಪುರುಷಲಕ್ಷಣ' ಎನ್ನುವ ನಿಜವಾದ ಅರ್ಥವಾಗುವುದು. ಪುರುಷನಾಗಿ ಹುಟ್ಟಿದವನು ಉದ್ಯೋಗಶೀಲನಾಗಿರಬೇಕಲ್ಲದೆ ಸೋಮಾರಿಯಾಗಿ ಕಿತ್ತು ತಿನ್ನುವ ಪರಪುಟ್ಟಜೀವಿಯಾಗಿರಕೂಡದು. ಅಂದರೆ ಆ ಕ್ರಿಯೆಯಲ್ಲಿರಕೂಡದು. ಬರೀ ನೌಕರಿಗಾಗಿ ಕಲಿಯುವ ವಿದ್ಯೆಯು 'ಉದ್ಯೋಗಂ ಪುರುಷಲಕ್ಷಣ'ವೇ ಅಲ್ಲ; ಈಗೀಗ ಸ್ತ್ರೀಲಕ್ಷಣವೂ ಆಗುತ್ತಿದೆ. ಈಗ ವಿದ್ಯೆ ಕಲಿತರೂ ನೌಕರದಾರನಲ್ಲದಿದ್ದರೆ ಆತನು ವಿದ್ಯಾವಂತನೆನಿಸಲಾರ! ಬಂಡೆಕಲ್ಲನ್ನು ಕೆತ್ತಿ ದೇವರ ವಿಗ್ರಹವನ್ನು ಕಡೆಯುವ ಕಲ್ಲುಕುಟಿಗನು ನಿರಕ್ಷರಕುಕ್ಷಿಯಾದರೂ ಆ ವಿದ್ಯೆಯಲ್ಲಿ ಆತನು ವಿದ್ಯಾವಂತನೆನಿಸುತ್ತಾನೆ. ಚಿತ್ರಕ್ಕೆ ಒಪ್ಪ ಬಳದ ಪ್ರಕೃತಿಯ ಸೌಂದರ್ಯವನ್ನು ಒಡಮೂಡಿಸುವ ಚಿತ್ರಗಾರ ಅದರಲ್ಲಿ ವಿದ್ಯಾವಂತನೆನಿಸುತ್ತಾನೆ. ಆದರೆ ಅವುಗಳಿಗೆ ಅಗತ್ಯವಿಲ್ಲ!

Gentleman ಅಂದರೆ ಸುಸಂಸ್ಕೃತನೆಂಬ ಅರ್ಥವಾಗುವುದು. ಆತನಲ್ಲಿ ಸದ್ಗುಣ, ಸದಾಚಾರ, ಸೌಜನ್ಯ ಇರಬೇಕು, ವಿಶಾಲ ದೃಷ್ಟಿಯಿರಬೇಕು. ಇದಿಷ್ಟೂ ಯೋಗ್ಯತೆಗಳುಳ್ಳವನನ್ನೇ Gentleman ಅನ್ನಬೇಕು. ಈ ಯೋಗ್ಯತೆಗಳು ಇರುವವರು ನಮ್ಮ ಈಗಿನ ವಿದ್ಯಾವಂತರಲ್ಲಿ ಎಷ್ಟು ಮಂದಿ? ಆದರೂ Gentleman ತನದ ಸೋಗಿನ ಪ್ರದರ್ಶನ [illegible] ಧೋರಣೆಯನ್ನು ನೋಡಿ ಮರುಳಾಗುತ್ತೇವೆ. ಇವರು ಹೊರಗೆ ತಳುಕಾಗಿದ್ದರೂ ಇವರಲ್ಲಿ ಮತ್ತೊಬ್ಬರು ತಲೆಯ ಒಳಗೆ ತುಂಬಿಸಿದ ವಿದ್ಯೆ ಎಂದರೆ ಕಾಲೇಜು ವಿದ್ಯೆಯ ಗುಣಗಳಿದ್ದರೂ ನಿಜವಾದ, ಪ್ರಕೃತಿದತ್ತವಾದ ಪರೋಪಕಾರದ ತಿಳಿವು ಅವರಲ್ಲಿರುವುದು ವಿರಳ. 'Education is the manifestation of perfection that is already in man' ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಮನುಷ್ಯನ ವಿದ್ಯೆಯು ಹುಟ್ಟಿನಿಂದಲೇ ಬರಬೇಕು. ಅಂಥ ವಿದ್ಯೆಯನ್ನು ಪೋಷಕರು ಬಾಲ್ಯದಿಂದಲೇ ಉಪಯೋಗಿಸಬೇಕಲ್ಲದೆ ಪದವಿಗಾಗಿ ಮಾರಾಟ ಮಾಡಿ ಜೀವನ ದೂಡಿಸುವಂತೆ ಆಗಬಾರದು. ತನ್ನಲ್ಲಿ ಹುಟ್ಟಿನಿಂದ ವಿದ್ಯೆ ಇದ್ದು ಕಲಿತ ವಿದ್ಯೆಯನ್ನು ಬೇರೆಯವರಿಗೆ ಹಂಚಿಕೊಡುವಂತಾಗಿ ಅದರೊಡನೆ ತಾನೂ ಸಹ ಭಾಗಿಯಾದರೆ ಆ ವಿದ್ಯೆಯ ಉದ್ದೇಶ ನೆರವೇರಿದಂತಾದೀತಲ್ಲವೆ? ಸ್ವಾರ್ಥದ ಉದ್ಯೋಗವನ್ನು ಕೈಗೊಳ್ಳುವ ವಿದ್ಯೆಯ ಉದ್ದೇಶ ನೆರವೇರದು ಹೋಗಲಿಲ್ಲ. ಸ್ವಾಮಿ ರಾಮತೀರ್ಥರಿಗೆ ಸರಕಾರವು ದೊಡ್ಡ ದೊಡ್ಡ ಉದ್ಯೋಗಗಳನ್ನು ಕರೆದು ಕೊಟ್ಟಾಗ 'I don't want to sell my education, but I want to distribute my education' ಎಂದು ಹೇಳಿ ಉಪಾಧ್ಯಾಯರಾದರಂತೆ!

ಉದ್ಯೋಗವು ಪುರುಷ ಲಕ್ಷಣವೇ ಆಗಲಿ, ಸ್ತ್ರೀ ಲಕ್ಷಣವೇ ಆಗಲಿ, ಅವರವರು ಅವರು ಉಪಯೋಗಿಸುವಂತೆಲ್ಲಾ ಅದರ ಸಾರ್ಥಕತೆ ಅಡಗಿದೆ. ಸುಳ್ಳು, ಕಪಟತನ, ಮೋಸ, ಧಗಾ, ಅತ್ಯಾಚಾರ, ಪರನಿಂದೆಗಳನ್ನು ಬಿಟ್ಟು, ನಮ್ಮನ್ನು ನಾವು ತಿದ್ದಿಕೊಂಡು, ಒಬ್ಬರಿಗೆ ಉಪಕಾರ ಮಾಡಲಾಗದಿದ್ದರೂ ಉಪದ್ರವ ಮಾಡದೆ ಬಾಳುವುದೇ ಪುರುಷಲಕ್ಷಣವೆನಿಸುವದು.

---

(೩) ವಿಹಾರಕ್ಕಾಗಿ ಹುಲ್ಲು ತೋಟಗಳು.

ಒಂದು ತಿಂಗಳ ಮೀಟಿಂಗ್‌ಗಳ ಜೊತೆಗೆ ೩ ತಿಂಗಳು ಯಾ ೬ ತಿಂಗಳಿಗೊಂದಾವೃತ್ತಿ ರೈತರಿಗೆ ಬಿಡುವಿರುವ ಸಮಯದಲ್ಲಿ 'ಸಮಾಜ ಶಿಕ್ಷಣ ಕೇಂದ್ರ'ಗಳನ್ನಿಟ್ಟು ಅವರು ಗ್ರಾಮಾಭಿವೃದ್ಧಿ ಇಲಾಖೆಗಳ ಸಹಾಯದಿಂದ ಊರಿನವರನ್ನು ಸಂಘಟಿಸಿಕೊಂಡು, ಗ್ರಾಮಾಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಬೇಕು.

ಕೈಕೊಳ್ಳುವ ಕೆಲಸ

ರಸ್ತೆ ರಿಪೇರಿ, ಚರಂಡಿಗಳ ದುರಸ್ತು, ಲಂಟಾನ ತೆಗೆಯುವಿಕೆ, ಬಾವಿ ಕೆರೆಗಳ ಶುದ್ಧತೆ, ಕಾಂಪೋಸ್ಟು ಗೊಬ್ಬರ ಗುಂಡಿಗಳನ್ನು ತೋಡುವುದು, ಗ್ರಾಮಗಳಲ್ಲಿ ವಿಹಾರ ವನಗಳನ್ನು ಏರ್ಪಡಿಸುವುದು ಇತ್ಯಾದಿ ಕೆಲಸಗಳನ್ನು ಮಾಡಬಹುದು.

ಈ ರೀತಿಯಲ್ಲಿ 'ವಯಸ್ಕರ ಶಿಕ್ಷಣ' ಯೋಜನೆಯೂ ಗ್ರಾಮಾಂತರಗಳಲ್ಲಿ 'ಸಮಾಜ ಶಿಕ್ಷಣ ಕೇಂದ್ರ'ಗಳನ್ನು ಸ್ಥಾಪಿಸಿ ರೈತರ ಸುಖ ದುಃಖ ಅವರ ಸಂಕಟ ಸಮಸ್ಯೆಗಳು, ಅವರ ಆಗು ಹೋಗುಗಳಿಗೆ ಸಹಾಯಕವಾಗುವುದರಲ್ಲಿ ಸಂದೇಹವಿಲ್ಲ. ಸಮೀಪ ಸಂಪರ್ಕದಿಂದ, ಅನುಭವದಿಂದ ರೈತನ ಸುಖ ದುಃಖಗಳನ್ನು ಅರಿತುಕೊಂಡು ಅವನ ಪ್ರಗತಿಯ ಮಾರ್ಗವನ್ನು ಎತ್ತರ ಮಟ್ಟಿಗೆ ಶೋಧಿಸುವುದೋ ಅದೇ ನಿಜವಾದ ಯೋಜನೆಯ ಉದ್ದೇಶ, ಹಾಗೂ ಪವಿತ್ರ ಕರ್ತವ್ಯ. ರೈತರು ಸುಸಂಸ್ಕೃತರಾದರೆ, ದೇಶ ಸುಭಿಕ್ಷವಾಗುವುದು. ಸುಸಂಸ್ಕೃತರನ್ನಾಗಿ ಮಾಡಲು ಇಂಥಾ ಕೇಂದ್ರಗಳು ಅಗತ್ಯ.

ಈ ಕೆಲಸವು ಯಶಸ್ವಿಯಾಗಿ ನಡೆಯಲು ಎಲ್ಲಾ ಇಲಾಖೆಗಳ ವಿಶೇಷ ದೃಷ್ಟಿ ಗ್ರಾಮದ ಕಡೆಗೆ ಹರಿಯಬೇಕು. ಸಮಾಜದ 'ಎಲ್ಲಾ' ತರದ ಮುಂದಾಳುಗಳ ಸಹಾಯ ಮತ್ತು ಸಹಾನುಭೂತಿ ಬೇಕು.

Licence No. 60.
Licenced to Post without Prepayment.

Reg. No. M. 1050.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಬಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಕು ೨೭-೬-೧೯೫೭ನೇ ಶುಕ್ರವಾರ | ಸಂಚಿಕೆ ೪

ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು.

ಲೇ:— ಶ್ರೀ ವಿ. ಎಸ್. ರಾಮಕೃಷ್ಣ ಬಿ. ಎಸ್ಸಿ (ಆನರ್ಸ್) ಬಿ. ಟಿ.

ಭರತಖಂಡವು ಬ್ರಿಟಿಷರ ಸಾಮ್ರಾಜ್ಯ ಶೃಂಖಲೆಯಿಂದ ಕಟ್ಟಲ್ಪಟ್ಟು ದಾಸ್ಯ ವಿಮೋಚನೆಗೊಳ್ಳಲು ಬಹು ಕಾಲ ಹೆಣಗಿತು. ಸನಾತನವಾದ ಧರ್ಮವನ್ನು ಸಾರಿ ಜಗತ್ತಿಗೆ ಆಧ್ಯಾತ್ಮಿಕ ತತ್ವದ ಮಹಾ ಸುಧೆಯನ್ನು ಉಣಿಸಿದ ಭಾರತವು ಕಾಲಗತಿಯಿಂದ ಅನ್ಯಾಕ್ರಾಂತವಾಗಿ ಎರಡು ದೀರ್ಘ ಶತಮಾನಗಳ ಕಾಲ ಬಳಲಿತು. ಬ್ರಿಟಿಷರ ಆಕ್ರಮಣಕ್ಕೆ ಒಳಗಾಗಿದ್ದಾಗಲೂ ಭಾರತೀಯರು ತಮ್ಮ ಧೈರ್ಯ ಸಾಹಸ ಸತ್ಯ ಪರಾಕ್ರಮಗಳಿಂದ ಜಗತ್ತನ್ನು ಬೆರಗುಗೊಳಿಸಿ ಆಂಗ್ಲರ ಪ್ರಬಲ ಶಾಸನದೆದುರು ಶಸ್ತ್ರಹೀನರಾಗಿ ಹೋರಾಡಿ ವಿಜಯವನ್ನು ಗಳಿಸಿದರು. ಅನ್ಯರಿಂದ ತಮ್ಮ ನಾಡು ಆಳಲ್ಪಡುವುದನ್ನು ಸ್ವಲ್ಪವೂ ಸಹಿಸದ ಭಾರತೀಯರು ತಮ್ಮ ಪ್ರಾಚೀನ ನಾಗರಿಕತೆಗೆ ಅನ್ವಯಿಸಿ ಅಹಿಂಸಾತ್ಮಕ ಸಮರ ಹೂಡಿ ಆಂಗ್ಲ ಶಾಸನವನ್ನು ಮುರಿದು ಸ್ವತಂತ್ರ ಪ್ರಭುತ್ವವನ್ನು ಕಟ್ಟಿದರು. ಮಹಾತ್ಮಾ ಗಾಂಧೀಜಿಯವರ ಮಹಾ ನಾಯಕತ್ವದಲ್ಲಿ ನಡೆದ ಅಹಿಂಸಾತ್ಮಕ ಆಂದೋಲನದಲ್ಲಿ ಅಗಣಿತ ಸಂಖ್ಯೆಯ ಯೋಧರು ಭಾಗವಹಿಸಿ ಪ್ರಬಲತಮವಾದ ಬ್ರಿಟಿಷ್ ಸರಕಾರದೊಡನೆ ಹೆಣಗಿದರು. ತಮ್ಮನ್ನು ತಾವೇ ಮರೆತು ತಮ್ಮ ಪ್ರಾಚೀನ ಸತ್ವ ಪರಾಕ್ರಮಗಳನ್ನು ಕೆಲ ಕಾಲ ಮಾತ್ರ ಬಚ್ಚಿಟ್ಟಿದ್ದ ಭಾರತೀಯರ ನಿಜಸ್ವರೂಪವು ಮಹಾತ್ಮನ ಅಮರವಾಣಿಯಿಂದ ಸ್ವಯಂ ಪ್ರಕಾಶಗೊಂಡು ಬೆಳಗತೊಡಗಿ ಭಾರತಮಾತೆಯ ಬಂಧವಿಮೋಚನೆಗೈಯಲು ಭಾರತೀಯರು ಬದ್ಧಕಂಕಣರಾದರು.

ಪಂಡಿತ ಜವಾಹರಲಾಲ್ ನೆಹರೂ ಸರ್ದಾರ್ ವಲ್ಲಭಭಾಯಿ ಪಟೇಲ್, ಸರೋಜಿನಿ ದೇವಿ ಮುಂತಾದ ಪ್ರತಿಭಾಪೂರ್ಣ ವ್ಯಕ್ತಿಗಳಿಂದ ಗಾಂಧೀಜಿಯ ಸತ್ಯಾಗ್ರಹ ಸಮರವು ಅವಿಶ್ರಾಂತವಾಗಿ ನಡೆದು ಅನೇಕ ಘಟ್ಟಗಳನ್ನು ದಾಟಿ ಕಷ್ಟ ನಿಷ್ಠುರಗಳ ತ್ಯಾಗಶೌರ್ಯಗಳ ಸಂಕ್ರಮಣ ಸಂಧಿ ಕಾಲಗಳನ್ನು ಕ್ರಮಿಸಿ ಭಾರತ ಸ್ವಾತಂತ್ರ್ಯ ಸೂರ್ಯನು ನಭೋತಲದಲ್ಲಿ ಉದಯಿಸಿದನು. ಗಾಂಧೀಜಿಯವರ ಸತ್ಯಾಗ್ರಹ ಸಮರದ ಯೋಧ ಪಡೆಗೆ ಸೇರಿ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ತಮ್ಮ ತನು ಮನ ಧನಗಳನ್ನು ಅರ್ಪಣಗೈದು ಭಾರತ ಸ್ವಾತಂತ್ರ್ಯಕ್ಕೆ ಕಾರಣಭೂತರಾದ ತ್ಯಾಗಮೂರ್ತಿ ಸತ್ಯಶೀಲ ವ್ಯಕ್ತಿಗಳಲ್ಲಿ ಬಾಬು ರಾಜೇಂದ್ರ ಪ್ರಸಾದರೂ ಅಗ್ರಗಣ್ಯರು.

ರಾಷ್ಟ್ರಪತಿ ರಾಜೇಂದ್ರ ಪ್ರಸಾದರನ್ನು ಅರಿಯದ ಭಾರತೀಯನಾರು? ಅಂದು ಕಾಂಗ್ರೆಸಿನ ಅಧ್ಯಕ್ಷ ಪೀಠವನ್ನು ಅಲಂಕರಿಸಿ ರಾಷ್ಟ್ರಪತಿಗಳಾಗಿದ್ದರೆ ಇಂದು ಭಾರತ ಸರಕಾರದಲ್ಲಿ ಪ್ರಥಮ ಅಧಿಕಾರ ಸ್ಥಾನ ವಹಿಸಿ ರಾಷ್ಟ್ರಪತಿಗಳಾಗಿದ್ದಾರೆ. ಪ್ರಸಾದರದು ಸರಳ ಸ್ವಭಾವ, ಆಡಂಬರವಿಲ್ಲದ ಪವಿತ್ರ ಜೀವನ, ಮೃದು ಹೃದಯ, ಕಾರ್ಯದಕ್ಷತೆ, ಸ್ವತಃ ಆಚರಣೆಯಲ್ಲಿ ಗಾಂಧೀ ವಾದವನ್ನು ಬಳಸಿ ದಿನನಿತ್ಯದ ಜೀವನದಲ್ಲಿ ಸತ್ಯ ಮಾರ್ಗವನ್ನು ಅನುಸರಿಸುವ ವಿಶೇಷ ಗುಣ ಇವುಗಳೆಲ್ಲವೂ ಒಂದಾಗಿ ಬಾಬೂ ರಾಜೇಂದ್ರ ಪ್ರಸಾದರಲ್ಲಿ ಕೇಂದ್ರೀಕರಣಗೊಂಡು ಅವರ ವ್ಯಕ್ತಿತ್ವಕ್ಕೆ ವಿಶೇಷ ಮೆರುಗನ್ನು ಕೊಟ್ಟಿದೆ. ನ್ಯಾಯಶಾಸ್ತ್ರ [illegible] ಪ್ರಸಾದರ ಜ್ಞಾನ ತೇಜಸ್ಸಾಧಾರಣವಾದುದು. ಒಂದು ವೇಳೆ ಅವರು ಮಹಾತ್ಮರ ಕರೆಗೆ ಕಿವಿಗೊಡದೆ ಬ್ರಿಟಿಷ್ ಸರಕಾರದಲ್ಲಿ ನೌಕರಿಗೆ ಆಸೆಪಟ್ಟಿದ್ದರೆ ಅವರು ಅತ್ಯುಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿಯೋ ಅಥವಾ ಒಂದು ಪ್ರಾಂತದ ರಾಜಪಾಲರಾಗಿಯೋ (ಗವರ್ನರ್) ನಿಯುಕ್ತರಾಗುತ್ತಿದ್ದರು. ಆದರೆ ನಾಡಿನ ಕರೆ ಬಂದಾಗ ತಮಗಿದ್ದ ಅಧಿಕ ಸಂಪಾದನೆಯ ವಕೀಲಿ ವೃತ್ತಿಗೆ ತಿಲಾಂಜಲಿಯಿತ್ತು ಮಹಾತ್ಮರ ಅಹಿಂಸಾ ಸಮರದ ಯೋಧರಾಗಿ ಸೇರಿದುದರಿಂದ ಸುಖಮಯವೂ ಭೋಗಪೂರ್ಣವೂ ಆದ ಜೀವನ ಪಥವು ಪ್ರಸಾದರ ಪಾಲಿಗೆ ಕನಸಾಗಿ ಉಳಿದು ಅವರ ಬಾಳು ಕಷ್ಟ ಕಾರ್ಪಣ್ಯ ತ್ಯಾಗ ಸಹನೆಗಳ ಕಠಿಣ ಮಾರ್ಗದಲ್ಲಿ ಮುನ್ನಡೆಯಿತು. ಈ ರೀತಿಯಾದ ತ್ಯಾಗಮಯ ಜೀವನದಿಂದ ಸತ್ಯಾಗ್ರಹ ಸಮರದಲ್ಲಿ ತಮ್ಮನ್ನು ತಾವು ದುಡಿಸಿಕೊಂಡುದರ ವಿಶೇಷ ಬಲದಿಂದ ತಮ್ಮ ತಮ್ಮ ಸತ್ಯನಿಷ್ಠೆ ತ್ಯಾಗ ಸೌಜನ್ಯಗಳಿಂದ ಬಾಬೂ ರಾಜೇಂದ್ರ ಪ್ರಸಾದರು ಭರತ ವರ್ಷ ಸರಕಾರದ ಮಹಾ ರಾಷ್ಟ್ರಪತಿಗಳಾಗಿ ಎರಡನೆಯ ಸಲ ಚುನಾಯಿತರಾದರು. ಅಂದು ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ತನಗೆ ಬೇಡವೆಂದು ಪರಿತ್ಯಜಿಸಿದ ಅಧಿಕಾರ ಪೀಠವು ಸ್ವತಂತ್ರ ಭಾರತದಲ್ಲಿ ಪ್ರಸಾದರಿಗೆ ತಾನಾಗಿಯೇ ಲಭಿಸಿತು. ಭಾರತದ ಸನ್ಮಾನ್ಯ ಪುತ್ರನಿಗೆ ಭಾರತೀಯರು ಕೊಟ್ಟ ಕಿರೀಟರಹಿತ ರಾಜತ್ವವು ಪ್ರಸಾದರ ಮೇಲ್ಮೆಯನ್ನೂ ಭಾರತೀಯರ ಸದ್ಬುದ್ಧಿಯನ್ನು ಪ್ರದರ್ಶಿಸುವುದೆನ್ನುವುದರಲ್ಲಿ ಸಂದೇಹವಿಲ್ಲ.

ಡಾ. ರಾಜೇಂದ್ರ ಪ್ರಸಾದರು ಬಿಹಾರ ಪ್ರಾಂತ್ಯದ ಗೌರವಯುತವಾದ ಕಾಯಸ್ಥ ಕುಟುಂಬವೊಂದರಲ್ಲಿ ಕ್ರಿ. ಶ. ೧೮೮೪ರಲ್ಲಿ ಜನಿಸಿದರು. ವಿದ್ಯಾರ್ಥಿ ದೆಶೆಯಲ್ಲಿದ್ದಾಗ ಅವರು ಅತ್ಯತಿಮ ಪ್ರತಿಭಾನ್ವಿತರಾದುದರಿಂದ ಇತರ ಪ್ರಥಮ ಪಂಕ್ತಿಯ ವಿದ್ಯಾರ್ಥಿಗಳು ನಿರಾಶೆಗೊಳ್ಳುವಂತಾಯಿತು. ಕಲ್ಕತ್ತಾ ನಗರದಲ್ಲಿ ವ್ಯಾಸಂಗ ಮಾಡುತ್ತಿದ್ದ ಪ್ರಸಾದರು ಶೀಘ್ರದಲ್ಲಿಯೇ ಜನಪ್ರಿಯರೂ ಖ್ಯಾತಿವಂತರೂ ಆಗಿ ವಿದ್ಯಾರ್ಥಿಗಳ ನಾಯಕರಾಗಿ ಆರಿಸಲ್ಪಟ್ಟರು. ಪ್ರೌಢ ಪರೀಕ್ಷೆಯಲ್ಲೂ ವಿಶ್ವವಿದ್ಯಾನಿಲಯದ ಪ್ರವೇಶ ಹಾಗೂ ಪದವೀ ಪರೀಕ್ಷೆಗಳಲ್ಲೂ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ಪದವೀಧರರಾದರು. ತರುವಾಯ ನ್ಯಾಯ ಶಾಸ್ತ್ರದಲ್ಲಿ ಉನ್ನತವಾದ ಪದವಿಯನ್ನು ಗಳಿಸಿ ನ್ಯಾಯಸ್ಥಾನದಲ್ಲಿ ನ್ಯಾಯಶಾಸ್ತ್ರದ ಪ್ರತಿಪಾದಕರಾಗಿ ಪ್ರಚಂಡ ಕೀರ್ತಿಯನ್ನು ಗಳಿಸಿದರು.

ರಾಜೇಂದ್ರ ಪ್ರಸಾದರು ವಿಶೇಷ ಸಾಮರ್ಥ್ಯಗಳನ್ನು ಗಳಿಸಿ ನ್ಯಾಯಶಾಸ್ತ್ರ ಪ್ರತಿಪಾದಕರಾಗಿ ಹಣ ಮತ್ತು ಕೀರ್ತಿಯನ್ನು ಸಂಪಾದಿಸುತ್ತಿದ್ದ ಕಾಲದಲ್ಲಿ ಭರತಮಾತೆ ಪರಕೀಯ ಆಕ್ರಮಣವನ್ನು ಸಹಿಸಲಾರದೆ ನಿರರ್ಗಳವಾಗಿ ರೋದಿಸಿದಳು. ಮಾತೆಯ ರೋದನವನ್ನು ಕೇಳಿದ ಭಾರತೀಯರು ಭಾರತ ಸ್ವಾತಂತ್ರ್ಯವನ್ನು ಅಪಹರಿಸಿದ ಅನ್ಯದೇಶೀಯರೊಡನೆ ಪ್ರಚಂಡವಾದ ಅಹಿಂಸಾ ಸಮರವನ್ನು ಹೂಡಿದರು. ಭಾರತದ ರಾಜಕೀಯ ಆಕಾಶದಲ್ಲಿ ಮಹಾ ಪ್ರಕಾಶಯುಕ್ತನಾದ ಭಾಸ್ಕರನೊಬ್ಬನು ಉದಯಿಸಿದನು. ಆತನೇ ಪರಮ ಪೂಜ್ಯ ಮಹಾತ್ಮನು. ತನ್ನ ಕರೆಯನ್ನು ಆಲಿಸಿದ ಕೇವಲ ಸಾಮಾನ್ಯ ಮನುಷ್ಯರೂ ಕೂಡ ವಿದ್ಯುದಾವೇಶಗೊಂಡಂತೆ ಮೇಲೆದ್ದು ಸಮರ ರಂಗಕ್ಕೆ ಧುಮುಕುತ್ತಿದ್ದರೆಂದ ಬಳಿಕ ಬಾಬೂ ರಾಜೇಂದ್ರ ಪ್ರಸಾದರಂತಹ ರಾಷ್ಟ್ರ ಪ್ರೇಮಿಗಳು ಸುಮ್ಮನಿರುವರೇ? ತಮ್ಮ ವೃತ್ತಿಯನ್ನು ಬಿಟ್ಟು ರಾಜೇಂದ್ರರು ರಾಷ್ಟ್ರದ ಸೇವೆಗಾಗಿ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಸರ್ವಸ್ವವನ್ನೂ ಅರ್ಪಿಸಲು ಸಿದ್ಧರಾದರು. ಅವರಿಗೆ ರಾಷ್ಟ್ರದೇಳಿಗೆಯೇ ತಮ್ಮ ಏಳಿಗೆಯಾಗಿತ್ತು. ಭರತಖಂಡದ ಸ್ವಾತಂತ್ರ್ಯ ಅಭ್ಯುದಯಗಳೇ ತನ್ನ ವ್ಯಕ್ತಿಗತ ಶ್ರೇಯೋಭ್ಯುದಯಗಳೆಂದು ಚೆನ್ನಾಗಿ ಅರಿತಿದ್ದ ರಾಜೇಂದ್ರರು ಮಹಾತ್ಮನ ಕರೆಯನ್ನು ಆಲಿಸಿ ಸತ್ಯಾಗ್ರಹ ಸಮರದಲ್ಲಿ ಧುಮುಕಿದರು. ಅವರಿಗೆ ಮಹಾತ್ಮರ ವಾಣಿಯು ವೇದವಾಕ್ಯವಾಗಿದ್ದಿತು. ಗಾಂಧೀ ವಾದದ ವಿಮಲ ನಿರ್ಮಲ ಪ್ರಾಯೋಗಿಕ ಮಾದರಿಯನ್ನು ರಾಜೇಂದ್ರರಲ್ಲಿ ಮಾತ್ರ ಕಾಣಬಹುದಲ್ಲದೆ ಇನ್ನಾರಲ್ಲೂ ಕಾಣಲಳವಲ್ಲ. ಸತ್ಯಾಗ್ರಹ ಸಮರದಲ್ಲಿ ಧುಮುಕಿ ರಾಜೇಂದ್ರರು ೧೯೩೦ರಲ್ಲೂ ೧೯೩೨-೩೩ರಲ್ಲೂ ವ್ಯಕ್ತಿಗತ ಸತ್ಯಾಗ್ರಹ ಕಾಲದಲ್ಲೂ ೧೯೪೨ರಲ್ಲಿ ಪ್ರಚಂಡ ರಾಜಕೀಯ ಕ್ರಾಂತಿಯ ಸಂದರ್ಭದಲ್ಲೂ ಸೆರೆಮನೆಯ ವಾಸವನ್ನು ದೀರ್ಘಕಾಲ ಪರ್ಯಂತ ಅನುಭವಿಸಿದರು. ಇಷ್ಟೊಂದು ದೀರ್ಘ ಕಾಲದ ಪರಿಶ್ರಮದಿಂದಾಗಿ ಗೂರಲು (ಅಸ್ತಮ.) ರೋಗಕ್ಕೆ ತುತ್ತಾಗಿ ಇಂದೂ ಕೂಡ ರಾಜೇಂದ್ರರು ಅನೇಕ ವೇಳೆ ನರಳುತ್ತಲಿರುವರು.

ರಾಜೇಂದ್ರರು ಅದ್ವಿತೀಯರಾದ ಸಮಾಜ ಸೇವಕರು. ಸಮಾಜದ ಬೇಕೆ

THE JUBILEE INSURANCE CO., LTD.
One of the very few in the feild of Insurance that has been declaring BONUS to its policy holders from its very insception.
RATE OF BONUS Rs. 10/- & Rs. 12/-
For particulars of Agency & Policy contracts apply to Sri P. C. KARAMBAYA of our Chief Agents at 41-A., Richmand Road, Bangalore.
Our Chief Agents:-THE ORIENTAL ENTERPRISES, BANGALORE 1.
ಜುಬಿಲಿ ಇನ್ಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪಿತವಾದಂದಿನಿಂದಲೂ ವಿಮಾದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.
ಈಗಿನ ದರ ಬೋನಸ್ಸು:–ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.
ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.
ದಿ ಓರಿಯಂಟಲ್ ಎಂಟರ್‌ಪ್ರೈಸಸ್,
13 41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

ಬೇಸರಿಕೆಗಳನ್ನವರು ಸ್ವಲ್ಪವೂ ಸಹಿಸರು. ಬಿಹಾರಿನಲ್ಲಿ ೧೯೩೪ರಲ್ಲಿ ಭಯಂಕರವಾದ ಭೂಕಂಪವಾಗಿ ಲಕ್ಷಾಂತರ ಜನರು ನಿರಾಶ್ರಿತರಾದಾಗ, ಭೂಕಂಪದಿಂದ ಮನೆ ಮಾರುಗಳನ್ನು ಕಳೆದುಕೊಂಡು ದಿಕ್ಕು ತೋಚದ ಅಸಂಖ್ಯಾತ ಭಾರತೀಯರಿಗೆ ರಾಜೇಂದ್ರರು ಸಹಾಯ ಮಾಡಿದರು. ಅಖಿಲ ಭಾರತದಿಂದ ಧನ ಸಂಗ್ರಹಮಾಡಿ ಬಿಹಾರಿನಲ್ಲಿ ಪ್ರಕೃತಿಯ ಕೋಪಕ್ಕೆ ಬಲಿಯಾದ ಜನರಿಗೆ ಧನ ಸಹಾಯ ಮಾಡಿ ಅಖಂಡ ರಾಷ್ಟ್ರದ ಹೊಗಳಿಕೆಗೆ ಪಾತ್ರರಾದರು.

ರಾಷ್ಟ್ರ ಸಂಸ್ಥೆಗಾಗಿ ರಾಷ್ಟ್ರಕ್ಕಾಗಿ ಸಮಾಜಕ್ಕಾಗಿ ರಾಜೇಂದರು ಮಾಡಿದ ಸೇವೆ ತ್ಯಾಗ ಮತ್ತು ಪಟ್ಟ ಕಷ್ಟಗಳನ್ನು ರಾಷ್ಟ್ರವು ಗಣಿಸದೆ ಇರಲಿಲ್ಲ. ಭಾರತ ರಾಷ್ಟ್ರೀಯ ಕಾಂಗ್ರೆಸಿನ ಮಹಾಧ್ಯಕ್ಷರಾಗಿ ರಾಜೇಂದ್ರರ ಅನೇಕ ಸಲ ಚುನಾಯಿತರಾಗಿ ರಾಷ್ಟ್ರ ಸಂಸ್ಥೆಯ ಕಾರ್ಯಕಲಾಪಗಳ ಮಹಾ ನಿರ್ದೇಶಕರಾಗಿ ರಾಷ್ಟ್ರೀಯ ಸ್ವಾತಂತ್ರ್ಯ ಸಾಧನೆಗೆ ಕಾರಣ ಭೂತರಾದರು. ಭಾರತಕ್ಕೆ ಸ್ವಾತಂತ್ರ್ಯವು ದೊರೆತ ಮೇಲೆ ಅತ್ಯುನ್ನತ ಸ್ಥಾನ ಗೌರವ ಪಡೆದಿರದ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷಪೀಠವನ್ನು ಅಲಂಕರಿಸಿ ರಾಷ್ಟ್ರ ಸಂಸ್ಥೆಯನ್ನು ಬಲಪಡಿಸಿದರು. ಭಾರತ ಸರಕಾರದ ಆಹಾರ ಮಂತ್ರಿಗಳಾಗಿ ನೆಹರೂ ಮಂತ್ರಿಮಂಡಲದಲ್ಲಿ ಸೇವೆ ಸಲ್ಲಿಸಿ ಭಾರತದ ಘಟನಾಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಭಾರತವು ಸ್ವತಂತ್ರಗೊಂಡ ಮೇಲೆ ಸ್ವತಂತ್ರ ಭಾರತದ ರಾಜನೀತಿ ವಿಚಾರಗಳ ಕಟ್ಟು ಕಟ್ಟಳೆಗಳ ವಿಧಿ ನಿಷೇಧಗಳನ್ನು ಒಳಗೊಂಡು ಜಗತ್ತಿನ ಸಂವಿಧಾನಗಳಲ್ಲೆಲ್ಲಾ ಅತ್ಯಂತ ಹಿರಿದಾದ ಭಾರತದ ಸಂವಿಧಾನ ರಚನೆಯು ಕಾಲದಲ್ಲಿ ಘಟನಾ ಸಭೆಯ ಅಧ್ಯಕ್ಷರಾಗಿ ರಾಜೇಂದ್ರರಂಥಾ ನೀತಿ ವಿಶಾರದ ವ್ಯಕ್ತಿಗಳ ಮಾರ್ಗದರ್ಶನವು ಅನಿವಾರ್ಯವಾಗಿತ್ತು. ಭಾರತದ ಸಾಮ್ರಾಜ್ಯಬಂಧವನ್ನು ಕಿತ್ತೊಗೆದು ಸಂಪೂರ್ಣ ಸ್ವಾತಂತ್ರ್ಯವುಳ್ಳ ಪ್ರಜಾರಾಜ್ಯವಾಗಿ (Republic) ೧೯೫೦ನೇ ಜನವರಿ ೨೬ರಂದು ಘೋಷಿಸಲ್ಪಟ್ಟಾಗ ಬಾಬು ರಾಜೇಂದ್ರ ಪ್ರಸಾದರು ಭಾರತ ರಿಪಬ್ಲಿಕ್ಕಿನ ಪ್ರಥಮ ಪ್ರೆಸಿಡೆಂಟರಾಗಿ ಘಟನಾ ಸಭೆಯಿಂದ ಆರಿಸಲ್ಪಟ್ಟರು. ಭಾರತದಾದ್ಯಂತವೂ ಮಹಾಚುನಾವಣೆ ನಡೆದು ಪುನರ್ರಚಿತವಾದ ಶಾಸನ ಸಭೆಗಳು ರೂಪುಗೊಂಡಾಗ ಭಾರತದ ಪ್ರಮುಖ ಪ್ರಜಾಪ್ರತಿನಿಧಿಗಳು ಬಾಬು ರಾಜೇಂದ್ರಪ್ರಸಾದರನ್ನು ಮಹಾ ರಾಷ್ಟ್ರಪತಿಗಳಾಗಿ ಎರಡನೆಯ ಸಲ ಆರಿಸಿದರು. ಈ ಪದವಿಯು ರಾಜೇಂದ್ರರಂತಹ ಆದರ್ಶ ವ್ಯಕ್ತಿಗಳಿಗಲ್ಲದೆ ಇನ್ಯಾರಿಗೆ ಲಭಿಸಬೇಕು.

ರಾಜೇಂದ್ರರು ಅನಾಸಕ್ತಿಯೋಗದ ಮೂರ್ತಿವೆತ್ತ ಪ್ರತಿಬಿಂಭರು. ಸುಖ ದುಃಖ ಕೀರ್ತಿ ಅಪಕೀರ್ತಿ ಮುಂತಾದ ಜೀವನದ ಸಮಸ್ಯೆಗಳನ್ನು ಏಕ ರೀತಿಯಾಗಿ ಭಾವಿಸಿ ಸ್ತುತಿಗೆ ಹೆಮ್ಮೆಪಡದೆ ನಿಂದೆಗೆ ನೊಂದುಕೊಳ್ಳದೆ ನಿಶ್ಚಲರಂಗವಾದ ಮಾನಸಿಕ ಸ್ಥಿತಿಯಿಂದ ಜೀವನವನ್ನು ಎದುರಿಸಿದ್ದಾರೆ. ಅವರ ಬಾಹ್ಯವೇಶ ಭೂಷಣಗಳು ಆಕರ್ಷಣೀಯವಲ್ಲದ್ದರಿಂದ ಅವರೊಮ್ಮೆ ಕಾರಾಗಾರದಲ್ಲಿರುವಾಗ ಅಂಗನೊಬ್ಬನು ಕಾರಾಗೃಹಕ್ಕೆ ಪ್ರವೇಶಿಸಿ 'ಈ ಅಪರಾಧಿ ಯಾರು?' ಎಂದು ಅವರನ್ನು ಸಂಬೋಧಿಸಿ ನುಡಿದರಂತೆ! ತಜ್ಞರೂ ಶಾಸ್ತ್ರಜ್ಞರೂ ಸ್ಥಿತಪ್ರಜ್ಞರೂ ಆದ ರಾಜೇಂದ್ರರವರೆಂದು ಪಾಪ! ಆ ಅಂಗ್ಲನಿಗಾದರೂ ಏನು ಗೊತ್ತು? ಈ ಮಾತನ್ನು ಆಲಿಸಿದ ರಾಜೇಂದ್ರರು ಮುಗುಳ್ನಗೆಯ ಮಂದಹಾಸವನ್ನು ಬೀರಿದರಂತೆ.

ರಾಜೇಂದ್ರರ ಮೃದುಸ್ವಭಾವವು ಪ್ರತಿಸ್ಪರ್ಧಿಯ ಕೋಪವನ್ನು ನಿಮಿಷಮಾತ್ರದಲ್ಲಿ ಪರಿಹರಿಸಬಲ್ಲುದು. ಕಟು ನುಡಿಗಳಿಂದ ಅವರ ಮುಂದೆ ಹಾಸದೆದುರು ಅಳಿದು ಹೋಗುವುವು. ಅವರ ದೃಷ್ಟಿ ವೈಶಾಲ್ಯವನ್ನೂ ಸ್ವರ್ಗಸ್ಥ ಭಾವವನ್ನೂ ಮುತ್ಸದ್ದಿತನದಿಂದ ಅನೇಕ ಮಹನೀಯರು ಹೊಗಳುವರು. ರಾಜೇಂದ್ರರ ವಿಶಾಲಜೀವನ ಕಾವ್ಯವನ್ನು ಲಲಿತವಾದ ಕವನವಾಗಿ ಪರಿವರ್ತಿಸಲು ಜೇನಿನ ಕೊಡಗಳಲ್ಲಿ ಅದ್ದಿದ ಭೃಂಗಾರದ ಲೇಖನಿ ಅಗತ್ಯವೆಂದು ಸರೋಜಿನಿದೇವಿಯವರು ಬಹುಹೃದಯಂಗಮವಾಗಿ ರಾಜೇಂದ್ರರನ್ನು ಪ್ರಶಂಸಿಸಿದರು.

ಅಧಿಕಾರವು ರಾಜೇಂದ್ರರನ್ನು ಮರಳುಗೊಳಿಸಿಲ್ಲ. ಅವರಿಗೆ ಅಧಿಕಾರ ಲಾಲಸೆಯಿಲ್ಲ. ರಾಷ್ಟ್ರಸೇವೆಯ ಸೇವೆಗೈಯಲು ಮಾತ್ರ ರಾಜೇಂದ್ರರು ಸರ್ವದಾ ಸಿದ್ಧರು. ಅಂತರ್ಯದಲ್ಲಿ ಮಹೋನ್ನತವಾದ ಆದರ್ಶವನ್ನೂ ಸ್ಥಿತಪ್ರಜ್ಞತೆಯನ್ನೂ ಹೊಂದಿರೊಂಡವರಾಗಿ ಭಗವದರ್ಪಣಗೊಂಡ ಆತ್ಮಶುದ್ಧಿ ಮನಸ್ಸುಗಳಿಂದ ಬಾಹ್ಯ ಪ್ರಪಂಚದಲ್ಲಿ ಕ್ರಿಯಾತ್ಮಕರಾಗಿರುವ ಅವರ ಮಹೋನ್ನತ ಆದರ್ಶಪೂರ್ಣ ರಾಷ್ಟ್ರಪತಿತ್ವದಲ್ಲಿ ಭಗತ್ ವರ್ಷದಯತೆಯಿಂದ ಭವ್ಯ ನಾಳಿನ ಸನಿಗೆ ಮೊಳಗಿ ಭಾರತವು ವಿಶ್ವಮಾನ್ಯ ರಾಷ್ಟ್ರವಾಗಲಿ!!!

= ಸಿಂಹಳ - ಹಿಂದೀಯರ ಹೋರಾಟ =

ಬಹು ದಿವಸಗಳಿಂದ ಸಿಂಹಳ ದ್ವೀಪದಲ್ಲಿ ನೆಲೆಸಿರುವ ಹಿಂದೀಯರಿಗೆ, ಅಲ್ಲಿಯ ಅಧಿಕ್ಯಯಲ್ಲಿ ಮತದಾನದ ಅಧಿಕಾರವು ಸಿಗದ್ದರಿಂದ, ಆ ವಿಷಯವಾಗಿ ಅಲ್ಲಿ ಹೋರಾಟವು ನಡೆದಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಮತದಾನದ ಅಧಿಕಾರವು ಸಿಗದಿರುವುದೆಂದರೆ, ಅಲ್ಲಿಯ ನಾಗರಿಕರಾಗಲು ಅವರಿಗೆ ಅರ್ಹತೆಯಿಲ್ಲವೆಂಬ ಅರ್ಥ.

ಸಿಂಹಲ ದ್ವೀಪಕ್ಕೆ ಬಹಳ ಕೂಲಿ ಕೆಲಸಗಳಿಗಾಗಿ ಹೋದವರೇ ಬಹಳ. ಅದರಲ್ಲಿಯೂ ವಿಶೇಷತಃ ಅದಕ್ಕೆ ಸಮೀಪ ಇರುವ ಮದರಾಸು, ಮಂಗಳೂರುಗಳ ಕಡೆಯಿಂದ ಹೋದವರೇ ಹೆಚ್ಚು. ಇನ್ನು ಅಲ್ಲಿ ವ್ಯಾಪಾರೋದ್ಯೋಗಗಳಿಗಾಗಿ ಹೋದವರೂ ಇದ್ದಾರೆ. ಅವರು ಸುಸ್ಥಿತಿಯಲ್ಲಿ ಇರುವರಲ್ಲದೆ, ಅವರಂಥವರಿಗೆ ನಾಗರಿಕತ್ವವು ಸಿಗಲು ತೊಂದರೆಯೂ ಆಗುವಂತಿಲ್ಲ.

ಅಲ್ಲಿ ಈಗ ಮುಖ್ಯ ಮಂತ್ರಿಯಾಗಿರುವ ಶ್ರೀ ಡಡ್ಲೀ ಸೇನಾನಾಯಕೆ ಇವರ ಮತ್ತು ಅವರ ಪಕ್ಷವಾದ 'ಯುನೈಟೆಡ್ ನೇಶನಲ್ ಪಾರ್ಟಿ'ಯ ಕೆಲಸಕ್ಕಾಗಿ, ಹಿಂದೀಯರದೇ ಆದ ಒಂದು ಮೋಟಾರ್ ಉಪಯೋಗಿಸುವವರು ತಮ್ಮ ಮೋಟಾರುಗಳನ್ನು ಕೇರಳವಾಗಿ ಮತ್ತು ಬಹಳ ದುಡ್ಡನ್ನು ಕೊಟ್ಟರು. ಮತ್ತು ಇಂದು ನಾಮಕರಣದಲ್ಲಿ ಶ್ರೀ ಎಸ್ ಪಿ ವೈದ್ಯಲಿಂಗಮ್ ಎಂಬವರನ್ನು ಪಾರ್ಲಿಮೆಂಟಿಗೆ ಸೇನಾನಾಯಕೆಯವರು ಹಿಂದೀಯರ ಪ್ರತಿನಿಧಿಯನ್ನಾಗಿ ಆರಿಸಿದ್ದಾರೆ. ಹೀಗೆ ಅಲ್ಲಿಯ ಇಂದಿನ ಅಧಿಕಾರದಲ್ಲಿರುವ ಗುಂಪಿಗೆ ಕೆಲವು ಹಿಂದೀಯರು ವಿಧೇಯರಾಗಿ ಮತ್ತು ಸಹಕಾರಿಗಳಾಗಿ ನಡೆಯುತ್ತಿದ್ದಾರೆ. ಅಂಥವರ ಬೇಳೆಯು ನಿಶ್ಚಯವಾಗಿ ಬೇಯುತ್ತದೆ. ಇದರಿಂದ ಆ ಹಿಂದೀಯರ ವೈಯಕ್ತಿಕ ಲಾಭವೂ ಇದೆ. ಮತ್ತು ಅಲ್ಲಿಯ ಅಧಿಕಾರೀ ವರ್ಗದ ಯೋಜನೆಗಳು ಇಂಥ ಹಸ್ತಕ ಹಿಂದೀಯರಿಂದ ಫಲಿಸುತ್ತವೆ. ಇದೇ ಮಾತನ್ನು ಶ್ರೀ ವೈದ್ಯಲಿಂಗಂ ಇವರಿಗೆ ಅಲ್ಲಿಯ ಕಾಂಗ್ರೆಸಿನ ಹಾಗೂ ಇಂಡಿಯನ್ ಹಿಂದೀ ಮುಖಂಡರ, ಆ ನಾಮಕರಣದ ಸ್ಥಳವನ್ನು ನಿರಾಕರಿಸಿರಿ ಎಂದು ಹೇಳಿದಾಗ, ಅದಕ್ಕೆ ಅವರು ಒಪ್ಪಲಿಲ್ಲವೆಂಬ ಸಂಗತಿಯಿಂದ ಮನಗಾಣಬಹುದಾಗಿದೆ.

ಮೊದಲು ಹಿಂದೀಯರಿಗೆ, ಸಿಂಹಳದ ನಾಗರಿಕತ್ವದ ಪ್ರಶ್ನೆಯೇ ಇದ್ದಿಲ್ಲ. ಏಕೆಂದರೆ ಆಗ ಬ್ರಿಟಿಶರು ಹಿಂದೂಸ್ಥಾನ ಮತ್ತು ಸಿಲೋನ್ ಎಂಬ ದೇಶದಿಂದ ಈ ಎರಡೂ ವಿಭಾಗಗಳನ್ನು ಒಂದೇ ದೇಶವನ್ನಾಗಿ ಕಾಣುತ್ತಿದ್ದರು. ಬ್ರಿಟಿಶರು ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಕೊಟ್ಟು ಹೋಗುವಾಗ ತಮ್ಮ ಕಡೆಗೆ ಉಳಿದಷ್ಟು ಉಳಿಯಲಿ ಎಂದು ಸಿಂಹಳವನ್ನು ಹಿಂದೂಸ್ಥಾನದಿಂದ ಬೇರ್ಪಡಿಸಿದರು.

ಇನ್ನೂ ಸಿಂಹಳವು ಬ್ರಿಟಿಶರ ಕೈಯಲ್ಲಿಯೇ ಇದೆ. ಗವರ್ನರ ಜನರಲ್‌ನು ಇಂಗ್ಲಂಡದಿಂದ ಅಲ್ಲಿಗೆ ಬರುತ್ತಾನೆ. ಬಹಳಷ್ಟು ಅಧಿಕಾರವು ಕೊಡಲ್ಪಟ್ಟಿದ್ದರೂ ಮತ್ತು ಮುಖ್ಯ ಮಂತ್ರಿ ಪದವಿಯು ವರೆಗೆ ಸಿಂಹಳೀಯರೇ ಏರಬಹುದಾಗಿದ್ದರೂ ಅಲ್ಪಸ್ವಲ್ಪ ಹಿಡಿತವನ್ನು ಬ್ರಿಟನ್ನೂ ಆ ಸಂಬಂಧದಲ್ಲಿ ಇಟ್ಟುಕೊಂಡಿದೆ.

ಇಷ್ಟರಿಂದ ತನ್ನ ಲಾಭ ಮಾಡಿಕೊಳ್ಳದೆ ಬ್ರಿಟನ್ನವು ಎಂದೂ ಬಿಡಲಾರದು. ಇಂತಹ ವಿಪತ್ತಿಗಳು ಇದ್ದರಂತೂ ಅದಕ್ಕೆ ದೊಡ್ಡ ಹಬ್ಬ. ಇಂದಿನ ಸಿಂಹಳದ ಹಿಂದೀಯರ ಹೋರಾಟದ ಬಗ್ಗೆ ಲಂಡನ್ ಟೈಮ್ಸ್‌ದಲ್ಲಿ ಸುದ್ದಿಗಳು ಮೇಲಿಂದ ಮೇಲೆ ಬರುತ್ತಿವೆ. ಮತ್ತು ಈ ಪತ್ರಕ್ಕೆ ಸುದ್ದಿ ಕಳಿಸುವ ಕಾರ್ಯವು ಸಿಂಹಳದ ಓರ್ವ ಅಧಿಕಾರಿಯ ಕಡೆಗೇ ಇದೆಯಂತೆ. ಅಂದ ಬಳಿಕ ಕೇಳಬೇಕು?

ಇಂದು ಸಿಂಹಳದಲ್ಲಿರುವ ಹಿಂದೀಯರ ನಿಜವಾದ ಪರಿಸ್ಥಿತಿಯು ಏನಿದೆ ಎಂಬುವದನ್ನು ನೋಡುವುದೂ ಅವಶ್ಯವಿದೆ. ಹಿಂದೀಯರ ಮತ್ತು ಸಿಂಹಳೀಯರ ಸಂಬಂಧವು ಇಂದು ನಿನ್ನೆಯದಲ್ಲ. ಶತಮಾನಗಳಿಂದ ಅವರಲ್ಲಿ ಪರಸ್ಪರ ಆತ್ಮೀಯತೆಯು ಆಳವಾಗಿ ಬೇರೂರಿದೆ. ಸಿಂಹಳೀಯರಲ್ಲಿ ಕೂಡ, ಹಿಂದೀಯರಿಗೆ ಮತಾಧಿಕಾರ ಅಥವಾ ಅಲ್ಲಿಯ ನಾಗರಿಕ ಅಧಿಕಾರವು ದೊರೆಯಬೇಕೆನ್ನುವವರೇ ಹೆಚ್ಚಾಗಿ ಇದ್ದಾರೆ.

ಮೊನ್ನಿನ ಚುನಾವಣೆಯಲ್ಲಿ ಜನರು ಕೊಟ್ಟ ಮತಗಳನ್ನು ನೋಡಿದರೆ ಈ ಮಾತು ಸಿದ್ಧವಾಗುತ್ತದೆ. ಸುಮಾರು ೨೩ ಲಕ್ಷ ಮತಗಳು ಒಟ್ಟು ಅಲ್ಲಿ ಹಾಕಲ್ಪಟ್ಟವು. ಅವುಗಳಲ್ಲಿ ಸುಮಾರು ೧೦ ಲಕ್ಷ ಮತಗಳು 'ಯುನೈಟೆಡ್ ನ್ಯಾಶನಲ್ ಪಾರ್ಟಿ'ಗೆ ದೊರೆತವು. ಇನ್ನು ಎರಡು ಪಕ್ಷಗಳು ಬೇರೆ ಬೇರೆಯಾಗಿ ಸ್ಪರ್ಧೆ ನಡೆಸಿದವು. ಈ ಮೂರೂ ಪಾರ್ಟಿಗಳಿಗೆ ಕೂಡಿ ೧೧ ಲಕ್ಷ ಮತಗಳು ದೊರೆತವು. ಈ ಪಕ್ಷಗಳು ಹಿಂದೀಯರ ವಿರೋಧಿಗಳು. ಇದೆಲ್ಲವನ್ನು ಹಿಡಿದರೂ ದಾನ ಮಾಡಲ್ಪಟ್ಟ ಒಟ್ಟು ಮತಗಳ ಅರ್ಧಕ್ಕಿಂತ ಕಡಿಮೆ ಮತಗಳು ಈ ಮೂರು ಪಕ್ಷಗಳಿಗೆ ದೊರೆತವು. ಉಳಿದ ಪಕ್ಷಗಳಲ್ಲಿ ಮತ್ತು ಸ್ವತಂತ್ರವಾಗಿ ಆರಿಸಿ ಬಂದ ಹುರಿಯಾಳುಗಳಲ್ಲಿ, ಕೆಲವರು ಸಂಪೂರ್ಣವಾಗಿ ಹಿಂದೀಯರಿಗೆ ಅನುಕೂಲರು, ಕೆಲವರು ಅರ್ಧ ಮರ್ಧ ಅನುಕೂಲರು ಇದ್ದಾರೆ. ಆದರೆ ಯುನೈಟೆಡ್ ನ್ಯಾಶನಲ್ ಪಾರ್ಟಿಗೆ ಹತ್ತೇ ಲಕ್ಷ ಮತಗಳು ಸಿಕ್ಕರೂ, ಮತದಾನದಲ್ಲಿಯ ಸೂಕ್ಷ್ಮಗಳ ಮೂಲಕ, ಅದಕ್ಕೆ ನೂರರಲ್ಲಿ ೬೦ ಸ್ಥಳಗಳು ದೊರೆತಿವೆ.

ಹೀಗೆ ಹಿಂದೀಯರ ದೃಷ್ಟಿಯಿಂದ ಈ ವಾತಾವರಣವು ನಿರಾಶಾದಾಯಕವಾಗಿಲ್ಲ. ಮತ್ತು ಈ ಪ್ರಶ್ನೆಯು ಜಾತೀಯ ಅಥವಾ ಭಾಷೆಯ ತಳಹದಿಯ ಮೇಲೆ ನಿಂತಂಥದೂ ಆಗಿಲ್ಲ.

ಹಿಂದೀಯರ ಮತದಾನದ ಅಧಿಕಾರವನ್ನು ಕಸಿದುಕೊಳ್ಳುವ ವಿಚಾರವು ಮತ್ತು ಆ ಸಂಬಂಧವಾದ ವ್ಯವಸ್ಥೆಯು, ಈ ಐಕ್ಯಯ ಪೂರ್ವದಲ್ಲಿ ೧೮ ತಿಂಗಳ ಹಿಂದೆಯೇ ಪ್ರಾರಂಭಿಸಲ್ಪಟ್ಟಿತ್ತು. ಆದರೆ ಹಿಂದೀಯರು ಆ ಬಗ್ಗೆ ಆಗನಿಂದಲೇ ತಮ್ಮ ಹೋರಾಟವನ್ನು ಮೊದಲು ಮಾಡಲಿಲ್ಲ.

ಮುಖ್ಯ ಮಂತ್ರಿಗಳಾದ ಸೇನಾನಾಯಕೆಯವರು ಪರದೇಶೀಯರ ವಿಭಾಗವನ್ನು ತಮ್ಮ ಕಡೆಗೆ ಇಟ್ಟುಕೊಂಡಿದ್ದಾರೆ. ಈ ಪ್ರಶ್ನೆಯ ಬಗ್ಗೆ ಹಲಕೆಲವು ಮಾರ್ಗದುಂಗಳನ್ನು ಅವರು ಮಾಡುವ ಲಕ್ಷಣವು ಕಾಣುತ್ತಿದೆ. ಆದರೆ ಅದರಿಂದ ಹಿಂದೀಯರಿಗೆ ತೃಪ್ತಿಯಾಗಲಾರದು. ಹಿಂದೀಯರು ತಮ್ಮ ಕಾರ್ಯ ಸಾಧಿಸಿಕೊಳ್ಳಲು ಇನ್ನೂ ಕೆಲವು ಕಾಲ ನಿಕರದ ಹೋರಾಟ ನಡೆಸದ ಹೊರತು ಗತ್ಯಂತರವಿಲ್ಲ.

'ಜೈ ಹಿಂದ್'

ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಶಾಲಾ ಸಮಾಜದ

ಉದ್ಘಾಟನೋತ್ಸವ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಶಾಲಾ ಸಮಾಜದ ಉದ್ಘಾಟನೋತ್ಸವವು ತಾ. ೨೦ನೇ ಶುಕ್ರವಾರ ಕೊಡಗು ದೇಶದ ಗೃಹ ಮಂತ್ರಿಗಳಾದ ಮಾನ್ಯ ಶ್ರೀ. ಮಲ್ಲಪ್ಪನವರಿಂದ ನೆರವೇರಿಸಲ್ಪಟ್ಟಿತು. ದೇಶದ ಪ್ರಧಾನ ಮಂತ್ರಿಗಳಾದ ಮಾನ್ಯ ಸಿ. ಎಂ. ಪೂಣಚ್ಚನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

ಪ್ರಧಾನ ಮಂತ್ರಿಗಳು ಪ್ರಥಮತಃ ರಾಷ್ಟ್ರೀಯ ಧ್ವಜಾರೋಹಣವನ್ನು ಮಾಡಿ ಧ್ವಜವಂದನೆಯ ತರುವಾಯ ರಾಷ್ಟ್ರೀಯ ಬಾಲ ಸೈನ್ಯದವರ ಗೌರವ ಪ್ರದರ್ಶನಗಳನ್ನು ಸ್ವೀಕರಿಸಿ ಬಾಲ ಸೈನ್ಯವನ್ನು ಪರಿಶೀಲಿಸಿ ಸಂತೃಪ್ತಿಯನ್ನು ವ್ಯಕ್ತಪಡಿಸಿದರು. ಉದ್ಘಾಟನಾ ಸಮಾರಂಭದ ಪ್ರಾರಂಭ ಸ್ವಾಗತ ಭಾಷಣವನ್ನು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ಎಂ. ಮುತ್ತಣ್ಣನವರು ಜನಪ್ರಿಯರಾದ ನಾಡ ಮುಖಂಡರನ್ನು ಸಮಾಜಕ್ಕೆ ಆದರದಿಂದ ಸ್ವಾಗತೀಕರಿಸಿದರು. ಡೇವೀ ಡಿಬೇಟಿಂಗ್ ಸೊಸೈಟಿ ಎಂಬ ಹೆಸರಿನಿಂದ ಇಷ್ಟರವರೆವಿಗೂ ಕಾರ್ಯ ನಿರ್ವಹಣವನ್ನು ಮಾಡುತ್ತಿದ್ದ ಸೆಂಟ್ರಲ್ ಹೈಸ್ಕೂಲಿನ ಕೂಟವನ್ನು 'ಶಾಲಾ ಸಮಾಜ' ಎಂಬ ಹೊಸ ನಾಮಕರಣದಿಂದ ಕರೆಯುವ ಉದ್ದೇಶವನ್ನು ವಿವರಿಸುತ್ತಾ ಈ ಮುಖ್ಯೋಪಾಧ್ಯಾಯರು ಶಾಲೆಯು ಸತ್ಯದ ಜೀವನದ ಸರ್ವ ವಿಷಯಗಳನ್ನು ಕೂಟವು ಒಳಗೊಳ್ಳಬೇಕಾದುದರಿಂದ ವಿದ್ಯಾರ್ಥಿಗಳ ಮಾನಸಿಕ, ಶಾರೀರಿಕ, ಸಾಮಾಜಿಕ, ಸಾಂಸ್ಕೃತಿಕ ನೈತಿಕ ಬೆಳವಣಿಗೆಗಳು ಸಂಘದಿಂದ ಸಾಧಿಸಲ್ಪಡಬೇಕಾದ್ದರಿಂದ ಹೆಚ್ಚು ವ್ಯಾಪಕ ಶಬ್ದವಾದ ಶಾಲಾ ಸಮಾಜ ಎಂಬ ಹೆಸರನ್ನು ವಿದ್ಯಾರ್ಥಿಗಳ ಸಂಘಕ್ಕೆ ಕೊಟ್ಟಿರುವೆವೆಂತಲೂ ಸಮಾಜದ ಒಂದು ಅಂಗವಾದ ಚರ್ಚಾ ಕೂಟವನ್ನು ಹಿಂದಿನ ಡೇವಿ ಡಿಬೇಟಿಂಗ್ ಸೊಸೈಟಿ ಎಂಬ ಹೆಸರಿನಿಂದಲೇ ಸಂಬೋಧಿಸುವುದಾಗಿಯೂ ವಿವರಿಸಿದರು.

ಗೃಹ ಮಂತ್ರಿಗಳು ಸಮಾಜದ ಉದ್ಘಾಟನಾ ಸಮಾರಂಭವನ್ನು ನೆರವೇರಿಸುತ್ತಾ ವಿದ್ಯೆಯೆಂದರೆ ಮಾನವನ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸಿಕೊಡಬಲ್ಲ ಮಹಾ ಸಾಧನವೆಂದೂ, ವಿದ್ಯಾರ್ಥಿಗಳು ವಿದ್ಯಾರ್ಥಿ ದೆಸೆಯಲ್ಲಿ ಜ್ಞಾನಾರ್ಜನೆ ಮಾಡುವಾಗ ಉತ್ತಮವಾದ ಗುಣ ನಡತೆಗಳನ್ನೂ ಶೀಲವನ್ನೂ ಕಟ್ಟಿಕೊಳ್ಳಬೇಕೆಂದೂ ನುಡಿದರು. ಉತ್ತಮವಾದ ಶೀಲದಿಂದಲೇ ರಾಷ್ಟ್ರೀಯ ಪುನರ್ರಚನೆಗೆ ಅಗತ್ಯವಾದ ಶಕ್ತಿ ಉಂಟಾಗುವುದೆಂದೂ ಶಿಸ್ತಿಲ್ಲದ ಜೀವನವು ದೇಶದ ಅವನತಿಗೆ ಕಾರಣವೆಂದೂ ಪ್ರತಿಯೊಬ್ಬ ವಿದ್ಯಾರ್ಥಿಯೂ ಶಿಸ್ತನ್ನು ಕಲಿತು ದೇಶದ ಕಾಯದೆ ಕಾನೂನುಗಳನ್ನು ಪಾಲಿಸಲು ಪ್ರಯತ್ನಿಸಬೇಕೆಂದೂ ಬೋಧಿಸಿದರು. ಮಾತ್ರವಲ್ಲದೆ ವಿದ್ಯಾರ್ಥಿಗಳು ಬಿಡುವಿದ್ದಾಗ ಗ್ರಾಮೋದ್ಧಾರಗಳಿಗೆ ಹೋಗಿ ಲೋಕ ಎಷ್ಟೋ ಕಷ್ಟ ಅಸ್ವಾಸ್ಥ್ಯದಿಂದ ದೇಶಬಾಂಧವರಿಗೆ ತಾವು ತಿಳಿದುದರ ಕೆಲವಂಶವನ್ನಾದರೂ ಬೋಧಿಸಿ ಜನ ಜಾಗೃತಿಯನ್ನುಂಟು ಮಾಡಿ ಸಮಾಜ ಸೇವೆಯನ್ನು ಮಾಡಬೇಕೆಂದೂ ಉಪದೇಶಿಸಿದರು.

ತರುವಾಯ ಮುಖ್ಯ ಮಂತ್ರಿಗಳು ಅಧ್ಯಕ್ಷ ಪೀಠದಿಂದ ಮಾತನಾಡುತ್ತಾ ವಿದ್ಯಾರ್ಥಿಯ ಜೀವನವು ಮಾನವ ಜೀವಿತದ ಇತರ ಭಾಗಗಳಿಗಿಂತ ಹೆಚ್ಚು ಸಂತೋಷಪೂರ್ಣವೂ ಆನಂದಮಯವೂ ಆಗಿರುವದೆಂದೂ ಇಂಥಾ ಜೀವನದಲ್ಲಿ ವಿದ್ಯಾರ್ಥಿಗಳು ರಾಷ್ಟ್ರದ ಪ್ರಜೆಗಳಾಗಿ ಬಾಳಲು ಯಾವ ರೀತಿಯಿಂದ ವ್ಯಕ್ತಿತ್ವವನ್ನು ಕಟ್ಟಿಕೊಳ್ಳಬೇಕೆಂದೂ ವಿವರಿಸಿದರು. ಶಾಲಾ ಸಮಾಜವೆಂಬ ಹೊಸ ನಾಮಕರಣವನ್ನು ಸಮರ್ಥಿಸಿ ವಿದ್ಯಾರ್ಥಿ ಜೀವನದ ಬಹು ಮುಖ ಚಟುವಟಿಕೆಗಳನ್ನು ಒಳಗೊಂಡಿರುವ ಸಂಘಕ್ಕೆ ಶಾಲಾ ಸಮಾಜವೆಂಬ ಹೆಸರು ಅಕ್ಷರಶಃ ಒಪ್ಪುತ್ತದೆಂದು ನುಡಿದರು. ಇಂಗ್ಲೆಂಡ್ ಅಮೇರಿಕ ಮುಂತಾದ ಪಾಶ್ಚಾತ್ಯ ರಾಷ್ಟ್ರಗಳು ಪ್ರಗತಿಪರ ರಾಷ್ಟ್ರಗಳಾಗಿ ಬೆಳೆದು ಮಹಾಯುದ್ಧಗಳನ್ನು ಗೆಲ್ಲಲು ಆ ರಾಷ್ಟ್ರದ ಪ್ರಜೆಗಳ ಕ್ರಮಬದ್ಧವೂ ನಿಯಮಪೂರ್ಣವೂ ಶಿಸ್ತಿನಿಂದ ಕೂಡಿದುದೂ ಆದ ಜೀವನ ವಿಧಾನವೇ ಕಾರಣವೆಂದೂ ರಾಷ್ಟ್ರಕ್ಕಾಗಿ ಸರ್ವವನ್ನೂ ಧಾರೆಯೆರೆಯಲು ಆ ದೇಶಗಳು ಹೇಗೆ ಸರ್ವದಾ ಸಿದ್ಧವಾಗಿರುವವೆಂತಲೂ ದೃಷ್ಟಾಂತಗಳೊಡನೆ ವಿವರಿಸಿದರು. ಇಂಗ್ಲೆಂಡ್ ದೇಶದಲ್ಲಿ ಸಾಮಾನ್ಯ ನೌಕರರಾಗಲೀ ಲಂಚ ಪ್ರತಿಮುಂತಾದುವುಗಳಿಗೆ ಮೋಸ ಹೋಗದೆ ಕರ್ತವ್ಯನಿಷ್ಠರಾಗಿ ಹೇಗೆ ಕಾರ್ಯ ನಿರ್ವಹಣ ಮಾಡುತ್ತಿರುವರೆಂದೂ ಪ್ರಜೆಗಳು ಆಹಾರ ನಿಯಂತ್ರಣ ಕಾಲದಲ್ಲೂ ಹೇಗೆ ತಮಗೆ ಬರತಕ್ಕ ಅಂಶ ಮಾತ್ರದಿಂದಲೇ ತೃಪ್ತರಾಗುತ್ತಲಿದ್ದರೆಂದೂ ಶಾಲೆಗಳಲ್ಲಿ ಅಧ್ಯಾಪಕರು ವಿದ್ಯಾರ್ಥಿಗಳನ್ನು ಶಿಕ್ಷಿಸದೆ ಅವರಿಗೆ ವಿನಯ, ಶೀಲ, ನಡತೆ, ಶಿಸ್ತುಗಳನ್ನು ಹೇಗೆ ಕಲಿಸುತ್ತಾರೆಂದೂ ಆ ಮಾದರಿಗಳನ್ನು ಅನುಸರಿಸಿದರೆ ಮಾತ್ರ ನಮ್ಮ ಹಿರಿಯರು ಸಂಪಾದಿಸಿ ಕೊಟ್ಟ ಸ್ವರಾಜ್ಯವನ್ನು ಕಾಪಾಡಿಕೊಂಡು ಅನುಭವಿಸಲು ನಾವು ಶಕ್ತರಾದೇವು ಎಂದೂ ಬೋಧಪ್ರದವಾದ ಭಾಷಣ ಮಾಡಿದರು.

ಶಾಲೆಯ ಚುನಾಯಿತ ಬಾಲನಾಯಕರು ಪ್ರಮಾಣ ವಚನ ಸ್ವೀಕರಿಸಿದರು. ರಾಷ್ಟ್ರೀಯ ಬಾಲ ಸೈನ್ಯದವರಿಗೆ ಬಹುಮಾನಿಸಲ್ಪಟ್ಟ ಪಾರಿತೋಷಕವು ಅಧ್ಯಕ್ಷರಿಂದ ಶಾಲೆಗೆ ಕೊಡಲ್ಪಟ್ಟಿತು. ಜಯ ಜಯಕಾರಗಳೊಡನೆ ಸಭೆಯು ಮುಕ್ತಾಯಗೊಂಡಿತು.

THE CANARA BANKING CORPORATION LIMITED, UDIPI.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್, ಉಡುಪಿ.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ ನಗಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ, ಅದರ ಮೇಲಣ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇದ್ದುದರಿಂದಲೂ, ಆ ಬಗ್ಗೆ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕೆಲವರಿಗೆ ವಾಪಸಿಯಾಗಿ, ಕೆಲವರಿಗೆ ವಾಪಸಿಯಾಗದೆ ವಾಪಾಸು ಬಂದಿರುವುದರಿಂದಲೂ, ಸದರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಸದರಿಯವರು ಈಡಿಟ್ಟ ನಗಗಳನ್ನು ತಾರೀಕು 12-7-52ರ ಒಳಗೆ ಬಿಡಿಸಿಕೊಂಡು ಹೋಗದಿದ್ದ ಪಕ್ಷದಲ್ಲಿ ತಾ. 19-7-52ನೇ ಶನಿವಾರ ಅಪರಾಹ್ನ ಗಂಟೆ 1ಕ್ಕೆ ಯೂ ಬ್ಯಾಂಕಿನವರಿಗೆ ಯುಕ್ತ ತೋರುವ ಬೇರೆ ತಾರೀಕಿನಲ್ಲಿ ಪುನಹ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಕ್ರ. ಸಂ.	ಸಾಲದ ನಂ.	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲದ ಮೊಬಲಗು.
1.	186/1949	ಶ್ರೀ ಹೆಚ್. ಸಿ. ಬೋರ್‌ಲಿಂಗಯ್ಯ, S/o. ಚೆನ್ನಯ್ಯ, ಹಾತೂರು, ಗೋಣಿಕೊಪ್ಪಲು ಪೋಸ್ಟ್	ರೂ. 130
2.	456 ,,	ಜನಾಬ್ ಮಾಣಿ ಅಬು ಮಹಮದ್, C/o ಮಾಣಿ ಅಬ್ದುಲ್ ಖಾದರ್ ಸಾಹೇಬ್ & ಸನ್ಸ್, ವೀರಾಜಪೇಟೆ	1800
3	501 ,,	ಜನಾಬ್ ಮಿತಲ್ ಪರಿಯಲ್ ಮಹಿನ್, S/o. ಬೀರಾನ್, ಬಡಗ, ಮೀನುಪೇಟೆ, ವೀರಾಜಪೇಟೆ	20
4.	513 ,,	ಜನಾಬ್ ಎಂ. ಪಿ. ಕುಂಞಾಂಬು, S/o. ಕುಂಞಿ ಮೂಸ, ವ್ಯಾಪಾರಿ, ವೀರಾಜಪೇಟೆ	425
5	577 ,,	ಶ್ರೀ ನೆಲ್ಲಮಾಡ ಮುತ್ತಣ್ಣ, S/o. ದೇವಯ್ಯ, ಕಂಡಂಗಾಲ ಗ್ರಾಮ, ವೀರಾಜಪೇಟೆ	90
6	582 ,,	ಶ್ರೀ ಮಾತಂಡ ಐಯ್ಯಮ್ಮ, S/o. ನಂಜಪ್ಪ, ಬೇಗ್ರಮಾಡು ಗ್ರಾಮ, ಮಾನಾರ್ಡ ಪೋಸ್ಟ್	100
7.	600 ,,	ಶ್ರೀ ಹೆಚ್. ಸಿ. ಬೋರ್‌ಲಿಂಗಯ್ಯ, S/o. ಚಿನ್ನಯ್ಯ, ಹಾತೂರು, ಗೋಣಿಕೊಪ್ಪಲು	125
8.	773 ,,	ಶ್ರೀಮತಿ ಕೇಮಾಬಾಯಿ, ವೀರಾಜಪೇಟೆ	40
9	837 ,,	ಜನಾಬ್ ಎಸ್. ಅಬ್ದುಲ್ ಅಜೀಸ್, ವ್ಯಾಪಾರಿ, ವೀರಾಜಪೇಟೆ	90
10.	134/1950	ಜನಾಬ್ ಸೈಯ್ಯದ್ ಹುಸೇನ್, S/o. ಸೈಯ್ಯದ್ ಅದಾಮ್, ಬೆಣ್ಣೆ ವ್ಯಾಪಾರ, ವೀರಾಜಪೇಟೆ	250
11.	652 ,,	ಶ್ರೀ ಬಂಟಂ ರಾಮಣ್ಣಶೆಟ್ಟಿ, S/o. ವೆಂಕಪ್ಪಶೆಟ್ಟಿ, ದೇವಾಂಗಬೀದಿ, ವೀರಾಜಪೇಟೆ	30
12.	788 ,,	ಶ್ರೀ ಟಿ. ವಿ. ರಾಮನಾಯರ್, S/o. ರಾಮನ್ ನಾಯರ್ ಮೇಸ್ತ್ರಿ, ಪೆರಂಬುಕೊಲ್ಲಿ ಎಸ್ಟೇಟ್, ಚೆಟ್ಟಳ್ಳಿ	40
13.	351/1951	ಶ್ರೀ ಮಾಚೆಟ್ಟಿರ ಮೇದಪ್ಪ, S/o. ಗಣಪತಿ, ಬಾಳುಗೋಡು ಗ್ರಾಮ, ವೀರಾಜಪೇಟೆ	35

ಬ್ಯಾಂಕಿನ ಆಫೀಸು:-ವೀರಾಜಪೇಟೆ, ತಾರೀಕು:-23-6-1952

U. MADHAVACHAR, Agent.

ವಿನೋಬಾ ಭಾವೆಯ ಉಪದೇಶ.

ದೇಹಲಿಯಲ್ಲಿ ಒಂದು ಬೃಹತ್ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಆಚಾರ್ಯ ವಿನೋಬಾ ಭಾವೆಯವರು, 'ಎಲ್ಲಾ ರಾಜಕೀಯ ಪಕ್ಷಗಳನ್ನು ವಿಸರ್ಜನೆಗೊಳಿಸಿ, ಸಮಾಜ ಸೇವಕರ ಒಂದೇ ಪಕ್ಷವನ್ನು ಕಟ್ಟಿಕೊಂಡರೆ ಮಾನವತೆಯ ಏಳ್ಗೆಗೆ ತುಂಬಾ ಪ್ರಯೋಜನವಾದೀತು.' ಎಂಬುದಾಗಿ ರಾಜಕೀಯ ಮುಖಂಡರನ್ನು ಉದ್ದೇಶಿಸಿ ಹಿತೋಕ್ತಿಗಳನ್ನಾಡಿದರು.

ಜಿನ್ನಾರವರ ಜೀವನ ಚರಿತ್ರೆ

ಸುಮಾರು ೩೦ ಗ್ರಂಥಗಳ ಲೇಖಕರಾದ ಮಿ. ಹೆಕ್ಟರ್ ಬೊಲಿಥೊ ಎಂಬ ಬ್ರಿಟಿಷ್ ಲೇಖಕರನ್ನು ಪಾಕಿಸ್ತಾನ ಸರಕಾರವು ದಿವಂಗತ ಮಹಮ್ಮದಾಲಿ ಜಿನ್ನಾರವರ ಜೀವನ ಚರಿತ್ರೆ ಬರೆಯುವ ಕೆಲಸಕ್ಕೆ ಈ ಮೊದಲೇ ನೇಮಿಸಿತ್ತಷ್ಟೆ? ಆದರೆ, ಪ್ರಸ್ತುತ ಆ ಕಾರ್ಯಭಾರವನ್ನು ಸ್ವತಹ ಜಿನ್ನಾರವರ ಸೋದರಿ ಮಿಸ್ ಫಾತಿಮಾ ಜಿನ್ನಾರವರು ವಹಿಸುವರೆಂದು ತಿಳಿಬರುತ್ತದೆ. ಪ್ರಾಯಶಃ ಆ ಕಾರಣದಿಂದಾಗಿಯೇ, ಜಿನ್ನಾರವರ ಜೀವನ ಚರಿತ್ರೆಗೆ ಸಂಬಂಧಪಟ್ಟ ಕೆಲವು ಪ್ರಮುಖ ದಾಖಲೆಗಳನ್ನು ಅವರು ತಮ್ಮ ವಶದಲ್ಲಿಯೇ ಇಟ್ಟುಕೊಂಡಿರುವರು. ಮಿ. ಹೆಕ್ಟರ್ ಬೊಲಿಥೊರವರು ಪಾಕಿಸ್ತಾನಕ್ಕೆ ಆಗಮಿಸಿದಂದಿನಿಂದ ಈ ವರೆಗೆ ಜಿನ್ನಾರವರ ಸಮೀಪದ ಪರಿಚಯವಿದ್ದ ಸುಮಾರು ೩೦ ಮಂದಿಯನ್ನು ಭೇಟಿಯಾಗಿ ಅವರಿಂದ ಜಿನ್ನಾರವರ ಜೀವನ ಚರಿತ್ರೆಗೆ ಅವಶ್ಯವಿರುವ ಮಾಹಿತಿಯನ್ನು ಸಂಗ್ರಹಿಸಿರುವರು.

ಕೊಡಗು

ತಾ. ೨೭-೬-೧೯೩೬ನೇ ಶುಕ್ರವಾರ

ಸ್ಕೂಲ್‌ಫೈನಲ್ ಪರೀಕ್ಷಾ ಫಲಿತಾಂಶ.

ಈ ವರ್ಷದ ಸ್ಕೂಲ್‌ಫೈನಲ್ ಪರೀಕ್ಷಾ ಫಲಿತಾಂಶ ಹೊರಬಿದ್ದಿದೆ. ಕೊಡಗಿನಿಂದ ಪರೀಕ್ಷೆಗೆ ಕೂತ ೩೯೭ ವಿದ್ಯಾರ್ಥಿಗಳಲ್ಲಿ ೯೯ ಜನರು ಅಂದರೆ ಶೇಕಡ ೫೦ ರಂತೆ ತೇರ್ಗಡೆಯಾಗಿದ್ದಾರೆ. ಕಳೆದ ವರ್ಷ ೨೩೨ ವಿದ್ಯಾರ್ಥಿಗಳಲ್ಲಿ ೧೨೪ ಜನರು ಅಂದರೆ ಶೇಕಡ ೫೩ ರಂತೆ ತೇರ್ಗಡೆಯಾಗಿದ್ದರು. ಕಳೆದ ವರ್ಷಕ್ಕಿಂಥಾ ಶೇಕಡ ಪರಿಮಾಣ ಕಡಿಮೆಯಾದುದು ಶುಭ ಚಿಹ್ನೆಯಲ್ಲ. ಈ ಬಗ್ಗೆ ಎಲ್ಲಾ ಶಾಲೆಗಳನ್ನು ಟೀಕಿಸಲಾಗುವದಿಲ್ಲ. ಕೊಡಗಿನ ಹೈಸ್ಕೂಲುಗಳಲ್ಲಿ ಕಳೆದ ವರ್ಷ ಸೋಮವಾರಪೇಟೆ ಹೈಸ್ಕೂಲು ಪ್ರಥಮ ಸ್ಥಾನ ಪಡೆದಿತ್ತು. ಮಡಿಕೇರಿ ಕಾನ್ವೆಂಟು ಎರಡನೇ ಸ್ಥಳ ಪಡೆದಿತ್ತು. ಪೊನ್ನಂಪೇಟೆ ಹೈಸ್ಕೂಲು ಮೂರನೆ ಸ್ಥಾನ ಪಡೆದಿತ್ತು. ಈ ವರ್ಷ ಕಾನ್ವೆಂಟ್ ಹೈಸ್ಕೂಲು ನೂರಕ್ಕೆ ೮೭ ರಂತೆ ಫಲಿತಾಂಶ ಪಡೆದು ಪ್ರಥಮ ಸ್ಥಾನಕ್ಕೆ ಬಂದಿದೆ. ಪೊನ್ನಂಪೇಟೆ ಹೈಸ್ಕೂಲು ನೂರಕ್ಕೆ ೬೪ ರಂತೆ ಫಲಿತಾಂಶ ದೊರಕಿಸಿ ಎರಡನೇ ಸ್ಥಳ ಪಡೆದಿದೆ. ನಾಪೋಕ್ಲು ಮತ್ತು ಸೋಮವಾರಪೇಟೆ ಶಾಲೆಗಳು ಮೂರನೇ ಸ್ಥಾನಕ್ಕೆ ಬಂದಿವೆ. ಈ ಶಾಲೆಗಳ ಈ ದಕ್ಷತೆಗಾಗಿ ಇವುಗಳ ಅಧ್ಯಾಪಕ ವರ್ಗವನ್ನೂ, ವಿದ್ಯಾರ್ಥಿಗಳನ್ನೂ ಮೆಚ್ಚಬೇಕಾಗಿದೆ

ಇಲ್ಲಿ ಪೊನ್ನಂಪೇಟೆ ಹೈಸ್ಕೂಲಿನ ವಿಚಾರ ಒಂದು ಮಾತು ಎತ್ತಿ ಹೇಳಬೇಕಾಗಿದೆ ಈ ಶಾಲೆಯು ೧೯೩೪ ರಲ್ಲಿ ಶೇಕಡ ೨೭ ರಂತೆ, ೧೯೩೫ ರಲ್ಲಿ ೨೫ ರಂತೆ, ೧೯೩೬ರಲ್ಲಿ ೩೦ ರಂತೆ ಮತ್ತು ಈ ವರ್ಷ ಶೇಕಡ ೬೪ ರಂತೆ ಫಲಿತಾಂಶವನ್ನು ಪಡೆದು ಮುಂದುವರಿಯುತ್ತಿದೆ. ಕೊಡಗಿನ ಶಾಲೆಗಳಲ್ಲಿ ದ್ವಿತೀಯಸ್ಥಾನ ಪಡೆದಿರುವ ಈ ಶಾಲೆಯು ಹೆಜ್ಜೆ ಹಿಂದೆ ಹಾಕದೆ ಮುಂದಡಿ ಇಡಲಿ

ಕಾನ್ವೆಂಟು ತನ್ನ ಫಲಿತಾಂಶಕ್ಕಾಗಿ ಹಿಂದಿನಿಂದಲೂ ಕೀರ್ತಿ ಪಡೆದಿತ್ತು ಆದರೆ ಮಧ್ಯೆ ಅಂದರೆ ೧೯೩೫ರಲ್ಲಿ ಫಲಿತಾಂಶ ಶೇಕಡ ೩೫ ಕ್ಕೆ ಇಳಿದು ಹೋಗಿತ್ತು. ಈ ವರ್ಷ ಅದು ತನ್ನ ಹಿಂದಿನ ಸ್ಥಾನವನ್ನು ಪಡೆದ ಕೀರ್ತಿಶಾಲಿಯಾಗಿದೆ.

ಸೋಮವಾರಪೇಟೆ ಹೈಸ್ಕೂಲು ಒಂದು ಹೆಜ್ಜೆ ಹಿಂದೆ ಹಾಕಿದ್ದರೂ ತೃತೀಯ ಸ್ಥಾನದಲ್ಲಿದೆ. ನಾಪೋಕ್ಲು ಹೈಸ್ಕೂಲು ಹೆಜ್ಜೆ ಮುಂದಿಕ್ಕಿ ತೃತೀಯ ಸ್ಥಾನಕ್ಕೆ ಬಂದಿದೆ. ಕಳೆದ ವರ್ಷ ಅತೀ ಕನಿಷ್ಟ ಫಲಿತಾಂಶ ಪಡೆದ ಮೈಕೇಲ್ ಶಾಲೆಯು ಸ್ವಲ್ಪ ಉತ್ತಮಗೊಂಡಿದೆ. ಈ ವರ್ಷ ಹೊಸದಾಗಿ ಪರೀಕ್ಷೆಗೆ ಕೂತಿರುವ ಮಡಿಕೇರಿ ಶಾಲೆಯ ಫಲಿತಾಂಶ ಅತೃಪ್ತಿಕರವಾಗಿದೆ. ಶೇಕಡ ೩೦ ರಂತೆ ಪಾಸಾದುದು ಎಂದೂ ಸಾಲದು. ಮುಂದಿನ ವರ್ಷಗಳಲ್ಲಿ ಇದು ಅಭಿವೃದ್ಧಿಗೊಳ್ಳಬೇಕಾಗಿದೆ. ಸೇಂಟ್ ಎನ್ಸ್ ಹೈಸ್ಕೂಲಿನ ಫಲಿತಾಂಶ ಶೇಕಡ ೪೦ರಷ್ಟಿದ್ದರೂ ಈ ಶಾಲೆ ಇನ್ನೂ ಅಭಿವೃದ್ಧಿಗೊಳ್ಳಬೇಕು.

ಈ ವರ್ಷದ ಫಲಿತಾಂಶದ ದುರಂತವೆಂದರೆ ಮಡಿಕೇರಿ ಮತ್ತು ವೀರಾಜಪೇಟೆ ಹೈಸ್ಕೂಲುಗಳು. ಈ ಎರಡು ಹೈಸ್ಕೂಲುಗಳೇ ಕೊಡಗಿನ ಹಿರಿಯ ಶಾಲೆಗಳು. ಈ ಶಾಲೆಗಳಿಗೆ ಸರಕಾರದ ಸಹಾಯ ಚೆನ್ನಾಗಿದೆ. ಅಧ್ಯಾಪಕ ವರ್ಗ, ಇತರ ಸಾಹಿತ್ಯಗಳು ಸರಿಯಾಗಿವೆ. ಆದ್ದರಿಂದ ಈ ಶಾಲೆಗಳು ಉಳಿದ ಹೈಸ್ಕೂಲುಗಳಿಗೆ ಆದರ್ಶವಾಗಿರಬೇಕಿತ್ತು. ಆದರೆ ಅವುಗಳ ಫಲಿತಾಂಶವು ಶೇಕಡ ೩೫ನ್ನು ಈ ವರ್ಷ ದಾಟಿರುವದಿಲ್ಲ ಮುಂದೆ ಹೀಗಾಗಬಾರದು. ಹಳೆಯ ಸಂಸ್ಥೆಗಳು ತಮ್ಮ ಗತ್ತುಗಾರಿಕೆಯನ್ನು ಉಳಿಸಿಕೊಳ್ಳಬೇಕು.

ಈ ಸಂದರ್ಭದಲ್ಲಿ ಶಾಲೆಗಳ ಫಲಿತಾಂಶವು ಕೇವಲ ಅಧ್ಯಾಪಕರಿಂದಲೇ ಉತ್ತಮವಾಗುವದಿಲ್ಲವೆಂದು ಸಾರ್ವಜನಿಕರೂ ಪೋಷಕರೂ ತಿಳಿಯಬೇಕು. ತಮ್ಮ ಮಕ್ಕಳ ವಿದ್ಯಾಭ್ಯಾಸದ ಮಟ್ಟಿಗೆ ಸರ್ವರೂ ಮನೆಯಲ್ಲಿ ಎಚ್ಚರಿಕೆ ವಹಿಸಿ ಅಧ್ಯಾಪಕರೊಡನೆ ಸಹಕರಿಸಿದರೆ ಮಾತ್ರ ಪರಿಸ್ಥಿತಿ ಉತ್ತಮಗೊಳ್ಳುವದು. ಆದ್ದರಿಂದ ಕೊಡಗಿನ ವಿದ್ಯಾಪ್ರಗತಿಯು ಇನ್ನೂ ಸರ್ವತೋಮುಖ ಮುನ್ನಡೆಯುವಂತೆ ಸರಕಾರವೂ, ಸಾರ್ವಜನಿಕರೂ, ಅಧ್ಯಾಪಕ ವರ್ಗದವರೂ ಸಹಕರಿಸಿ ಕೆಲಸ ಮಾಡಲಿ.

ವರ್ತಮಾನ.

ಕೊಡಗಿನಲ್ಲಿರುವ ನೇಯಿಗೆಕಾರರು ತಮಗೆ ಸಂಬಂಧಿಸಿದ ವಿಷಯಗಳನ್ನು ಜಿಲ್ಲಾ ವಿದ್ಯಾಧಿಕಾರಿಗಳ ಕಚೇರಿಯಲ್ಲಿರುವ ಕೊಡಗಿನ ವೀವಿಂಗ್ ಇನ್ಸ್‌ಟ್ರಕ್ಟರರಿಂದ ತಿಳಿಯಬಹುದಾಗಿದೆ

ಮದ್ರಾಸ್ ವಿಶ್ವವಿದ್ಯಾಲಯದ ಎಂ. ಎ. ಪರೀಕ್ಷೆಯಲ್ಲಿ ಶ್ರೀ ಪಂದಿಕುತ್ತಿರ ಮಾದಯ್ಯನವರೂ, ಬಿ. ಎ. ಪರೀಕ್ಷೆಯಲ್ಲಿ ಶ್ರೀಗಳಾದ ಅಜ್ಜಿಕುಟ್ಟಿರ ಐಯ್ಯಪ್ಪ, ತೀತಾಮಾಡ ತಿಮ್ಮಯ್ಯ ಮತ್ತು ಬಿ. ಎಸ್. ದಾಸ್ ಇವರೂ, ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀಗಳಾದ ಪಳೆಯಂಡ ಕರುಂಬಯ್ಯ (ಪ್ರಥಮ ತರಗತಿಯಲ್ಲಿ) ಮತ್ತು ಕೊಡಂದೆರ ಕಾರ್ಯಪ್ಪನವರೂ ತೇರ್ಗಡೆಯಾಗಿರುವರು. ಮೈಸೂರು ವಿಶ್ವವಿದ್ಯಾಲಯದ ಬಿ. ಎ. ಪರೀಕ್ಷೆಯಲ್ಲಿ ಮಿಸ್. ಮನೆಯಪಂಡ ಜಿ. ಕಾವೇರಿ ಇವರು ತೇರ್ಗಡೆಯಾಗಿದ್ದಾರೆ.

ತಾ. ೨೦ರಲ್ಲಿ ಮಡಿಕೇರಿಯ ಹತ್ತಿರ ಸಿದ್ದಾಪುರ ರಸ್ತೆಯಲ್ಲಿ ಲಾರಿಯೊಂದು ಆಕಸ್ಮಿಕವಾಗಿ ಮಗುಚಿಬಿದ್ದು ಸಾಗುತ್ತಿದ್ದ ಜನರ ಮೇಲೆ ಬಿದ್ದು ನಾಲ್ಕು ಜನರಿಗೆ ಜಖಂ ಆಗಿದೆಯೆಂದೂ ಈ ಬಗ್ಗೆ ತನಿಖೆ ನಡೆಯುತ್ತಿದೆಯೆಂದೂ ವರ್ತಮಾನ.

ಅಂಡಮಾನಿನಲ್ಲಿರುವ ಕೊಡಗಿನವರೆಲ್ಲರೂ ಸೇರಿ ಅಲ್ಲಿನ ಫಾರೆಸ್ಟ್ ಕನ್ಸರ್ವೇಟರಾಗಿದ್ದ ಶ್ರೀಮಾನ್ ಚಿದ್ದಂಡ ಚಂಗಪ್ಪನವರು ಉದ್ಯೋಗದಿಂದ ಜೂನ್ ತಾ. ೧ರಲ್ಲಿ ನಿವೃತ್ತರಾದುದರಿಂದ ಅವರಿಗೆ ಮೇ ತಾ. ೨೯ರಲ್ಲಿ ಒಂದು ಔತಣ ಕೂಟವನ್ನು ಪೋರ್ಟ್ ಬ್ಲೇರಿನಲ್ಲಿ ಕೊಟ್ಟು ಸತ್ಕರಿಸಿದರು.

ವೀರಾಜಪೇಟೆಯ ಇಂಡ್ರಸ್ಟ್ರೀಯಲ್ ಟ್ರೈನಿಂಗ್ ಇನ್ಸ್ಟಿಟ್ಯೂಟಿನ ಕಬ್ಬಿಣ ಮತ್ತು ಮರಕೆಲಸದ ಉದ್ಯಮಗಳಲ್ಲಿ ಎಂಟೆಂಟು ಸ್ಥಾನಗಳು, ಮತ್ತು ಜನರಲ್ ಮೆಕಾನಿಕ್ ಉದ್ಯಮದಲ್ಲಿ ಮೂರು ಸ್ಥಾನಗಳೂ ಖಾಲಿಯಿವೆ ಇಚ್ಛಿಸುವವರು ಮೇಲ್ಕಂಡ ಇನ್‌ಸ್ಟಿಟ್ಯೂಟಿನಲ್ಲಾಗಲೀ, ಯಾ ಮಡಿಕೇರಿಯ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಲ್ಲಾಗಲೀ, ಹೆಚ್ಚಿನ ವಿಷಯಗಳನ್ನರಿತುಕೊಂಡು ಒಡನೆ ತರಬೇತಿಗೆ ಸೇರಿಕೊಳ್ಳಬಹುದಾಗಿ ಈ ಮೂಲಕ ತಿಳಿಸಲ್ಪಟ್ಟಿದೆ.

ತಾ. ೨೦-೬-೫೬ರಲ್ಲಿ ಗಣಗೂರು ಗ್ರಾಮದ ವಯಸ್ಕರ ಶಿಕ್ಷಣಶಾಲೆಯಲ್ಲಿ ಗ್ರಾಮಕಲಾ ಹಬ್ಬವನ್ನು ಶ್ರೀ ಪಟೇಲ್ ಬಿ. ಬಸಪ್ಪನವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು. ವಯಸ್ಕರಿಂದ ಕೋಲಾಟ, ಭಜನೆ, ಲಾವಣಿ, ಸುಗ್ಗಿ ಮುಂತಾದ ಕುಣಿತಗಳ ಏರ್ಪಾಡಿತ್ತು. ಅನೇಕ ಮಹನೀಯರು ಆಗಮಿಸಿದ್ದರು.

ಕೊಡಗು ಶಾಸನ ಸಭೆಯಲ್ಲಿ ಬಡ್ಜೆಟ್ ಮೀಟಿಂಗ್ ತಾ. ೧೪-೭-೫೬ರಿಂದ ಪ್ರಾರಂಭವಾಗುವುದು.

ಈಗಿರುವ ಅ. ವಿದ್ಯಾಧಿಕಾರಿ ಮತ್ತು ಸುಪರ್‌ವೈಜರ ಹುದ್ದೆಯನ್ನು ತೆಗೆದುಹಾಕಿ ಅದರ ಬದಲು ಶ್ರೀ ಜಿ. ಎಸ್. ಕೇಶವಚಾರಿ ಮತ್ತು ಶ್ರೀ ದೇಯಂಡ ದೇವಯ್ಯನವರನ್ನು ಡೆಪ್ಯೂಟಿ ಇನ್ಸ್‌ಪೆಕ್ಟರುಗಳಾಗಿ ನೇಮಕ ಮಾಡಿರುವರು.

ಪೋಸ್ಟಲ್ ಡಿಪಾರ್ಟ್‌ಮೆಂಟಿಗೆ ಪೋಸ್ಟ್‌ಮೇನ್ ಮತ್ತು ಮೆಯಿಲ್ ಗಾರ್ಡ್‌ಗಳಾಗಿ ಸೇರಲು ನಡೆಯುವ ಪರೀಕ್ಷೆಯು ಆಗಸ್ಟ್ ೩೧ಕ್ಕೆ ಜರುಗುವುದು. ಎಂಟನೇ ಕ್ಲಾಸು ಪಾಸಾಗಿ ಪ್ರಾಯ ೧೮ ರಿಂದ ೨೫ ವರ್ಷದ ಒಳಗಿರುವ ಕುತೂಹಲವುಳ್ಳ ಯುವಕರು ಕೂಡಲೆ ಹೆಚ್ಚಿನ ವಿಷಯಕ್ಕೆ ಸುಪರಿಂಟೆಂಡೆಂಟ್ ಆಫೀಸು, ಮೈಸೂರಿಗೆ ಬರೆದುಕೊಳ್ಳತಕ್ಕದ್ದು.

ಕಳೆದ ತಾ ೧೮ರಲ್ಲು ಪೊನ್ನಂಪೇಟೆ ಪ್ರೌಢ ಶಾಲಾ ಚುನಾವಣೆಗಳು ಆಧುನಿಕ ಮತದಾನ ಪದ್ಧತಿಯಂತೆ ನಡೆದು ಶಾಲೆಯ ವಿವಿಧಕ್ಷೇತ್ರಗಳಿಗೆ ಈ ಕೆಳಗಿನವರು ಚುನಾಯಿಸಲ್ಪಟ್ಟರು. ಶ್ರೀ. ಟಿ. ಕೆ. ಸುಬ್ಬಯ್ಯ, ಶಾಲಾ ಕಾರ್ಯದರ್ಶಿ. ಯನ್. ಸಿ. ಬಿದ್ದಪ್ಪ, ಸಂಪಾದಕ ಬಾಲಭಾರತಿ, ಯಂ. ಯಂ. ಸುಬ್ಬಯ್ಯ, ಆಟೋಟಗಳ ಕ್ಯಾಪ್ಟನ್, ಕೆ. ಡಿ. ಬೆಳ್ಯಪ್ಪ ಹಾಕಿ ಕ್ಯಾಪ್ಟನ್, ಸಿ. ಯಂ. ಬೋಪಯ್ಯ, ಕ್ರಿಕೆಟ್ ಕ್ಯಾಪ್ಟನ್, ಯಂ. ಯನ್. ಪೂವಯ್ಯ, ವಾಲ್ಯು ಬಾಲ್ ಕ್ಯಾಪ್ಟನ್, ಸಿ. ಎ. ಮಾದಯ್ಯ, ಬ್ಯಾಡ್‌ಮಿಂಟನ್ ಕ್ಯಾಪ್ಟನ್, ಬಿ. ಯಸ್. ಅಕ್ಕಮ್ಮ, ಟೆನ್ನಿಕಾಯಿಟ್ ಕ್ಯಾಪ್ಟನ್, ಸಿ. ಎ. ಗಂಗಮ್ಮ ಬ್ಯಾಡ್ ಮಿಂಟನ್ ಕ್ಯಾಪ್ಟನ್ ಮತ್ತು ಕೆ. ಎಂ. ಸುಬ್ಬಮ್ಮ, ರಿಂಗ್ ಟೆನಿಸ್ ಕ್ಯಾಪ್ಟನ್.

ರಾಯಲ್ ಸೀಮೆ ಸಹಾಯಕ ನಿಧಿ.

ಸೆಟ್ಲ್‌ಮೆಂಟ್ ಆಫೀಸು ಸಿಬ್ಬಂದಿಗಳಿಂದ	ರೂ. 75
ಸಂಪಾಜೆ ವಿವಿಧೋದ್ದೇಶ ಸಂಘ	,, 20
ಮಿನರ್ವ ಅಂಡ್ರೀಸ್	,, 20
ಶ್ರೀಮಂಗಲ ನಾಡು ಬ್ಯಾಂಕ್	,, 20
ಶ್ರೀ ಪಿ. ಕೆ. ತಿಮ್ಮಯ್ಯ	,, 15
ಮಡಿಕೇರಿ ಮಾರ್ಕೆಟಿಂಗ್ ಸಂಘ	,, 10
ಮಡಿಕೇರಿ ಸಹಕಾರ ಬ್ಯಾಂಕ್	,, 10
ಶ್ರೀಮಂಗಲ ಮಾರ್ಕೆಟಿಂಗ್ ಸಂಘ	,, 10
ಶ್ರೀ ಕೆ ಎಸ್. ಅಪ್ಪಯ್ಯ	,, 10
ಈ ವರೆಗೆ ಪ್ರಕಟಿಸಿದ ಒಟ್ಟು ಮೊಬಲಗು	,, 822
ಒಟ್ಟು	ರೂ. 1012

೧೦ ರೂ. ಬಹುಮಾನ.

ನನ್ನ ಬಾಪ್ತು ಸುಮಾರು ೩ಕ್ಕೆ ಅಡಿ ಎತ್ತರದ ಕುಡಿಕೆ ಕೊಂಬಿನ ಕರಿ ಎಮ್ಮೆ ಒಂದು ಮತ್ತು ಅದೇ ಎತ್ತರದ ಚೆಕ್ಕೆಕೊಂಬಿನ ಬಳೀ ಎಮ್ಮೆ ಒಂದು ಮತ್ತು ಬಿಳಿ ವರ್ಣದ ಎಮ್ಮೆಕರ ಹೀಗೆ ಮೂರು ರಾಸುಗಳು ವೀರಾಜಪೇಟೆ ಕದನೂರು ಗ್ರಾಮದಿಂದ ತಾ. ೩೦-೫-೫೬ರಿಂದ ಪರಾರಿಯಾಗಿವೆ. ಇವುಗಳ ಪತ್ತೆಹಚ್ಚಿಕೊಟ್ಟವರಿಗೆ ರೂ. ೧೦|- ಬಹುಮಾನ ಕೊಡಲಾಗುವದು.

ಪಿ. ಎ. ಕಾರ್ಯಪ್ಪ,
ಕದನೂರು ಗ್ರಾಮ,
ವೀರಾಜಪೇಟೆ,

ಓದುಗರ ಓಲೆ.

ಈ ದುರಭ್ಯಾಸ ನಿಲ್ಲಲಿ.

ಸಿನಿಮಾ ಮಂದಿರಗಳಲ್ಲಿ ಹೋಗಿ ಬತ್ತಿ ಸೇದಕೂಡದೆಂದು ಮಾಲೀಕರು ನೋಟೀಸು ಬೋರ್ಡು ಹಾಕಿರುವದಲ್ಲದೆ ಒಂದು ಸ್ಲೈಡು ಸಹ ತಯಾರು ಮಾಡಿ ಪ್ರತಿ ನಿತ್ಯವೂ ತೋರಿಸುತ್ತಾ ಇದ್ದಾರೆ. ಆದಾಗ್ಯೂ ಕೂಡ ಕೆಲವು ಜನಗಳು ಈ ನಿಬಂಧನೆಗಳನ್ನು ತಿರಸ್ಕರಿಸುವದಲ್ಲದೆ ಸಿನಿಮಾ ಮಂದಿರಕ್ಕೆ ಬರುವ ಜನರಿಗೆ ಹೋಗೆ ಬತ್ತಿ ಸೇದಿ ತಂಬಾ ತೊಂದರೆ ಕೊಡುತ್ತಾರೆ. ಇದು ಸಹಿಸಲು ಬಹಳ ಅಸಾಧ್ಯವಾಗಿದೆ ಇದರಲ್ಲಿ ಮುಖ್ಯವಾಗಿ ದೊಡ್ಡ ಮನುಷ್ಯರು. ಅನ್ನಿಸಿಕೊಂಡು ಹ್ಯಾಟು ಬೂಟು ಹಾಕಿಕೊಂಡು ಬರುವವರು ಮುಖ್ಯ ಅಪರಾಧಿಗಳು. ಇವರ ವಿಷಯದಲ್ಲಿ ಕಾನೂನು ಇಲ್ಲವೆಂದು ತಿಳಿದು ಈ ರೀತಿ ಮಾಡುವದಾಗಿದೆ.

ವಾಚಕರಿಗೆ ಗೊತ್ತಿರುವಂತೆ ಇತರ ಪ್ರಾಂತ್ಯಗಳಲ್ಲಿ ಕಾನೂನು ಮಾಡಿ ಜಾರಿಗೆ ತಂದಿರುತ್ತಾರೆ. ಮೊನ್ನೆ ತಾನೆ ಮೈಸೂರು ಗಾಯಿದೆ ಸಭೆಯಲ್ಲಿ ಒಂದು ಮಸೂದೆ ತಂದಿರುತ್ತಾರೆ. ಆದ್ದರಿಂದ ದಯವಿಟ್ಟು ನಮ್ಮ ಮಂತ್ರಿಗಳ ಸದ್ಯ ಕಾನೂನನ್ನು ಕೂಡಲೇ ಕೊಡಗು ಕೌನ್ಸಿಲಿನಲ್ಲಿ ಪಾಸು ಮಾಡಿ ಸಿನಿಮಾ ಮಂದಿರಕ್ಕೆ ಹೋಗುವ ಜನರಿಗೆ ಇದರ ಬಾಧೆಯನ್ನು ತಪ್ಪಿಸುವರಾಗಿ ನಂಬುತ್ತೇನೆ.

ಸಿನಿಮಾ ಪ್ರಕಾಶ.

॥ ದುರ್ಬೀನು ನೋಟ ॥

— ನೋಡಿದವರು:— 'ರಸಿಕ' —

'ಚುನಾವಣೆ ಮುಗಿದು ಜನತಾ ಸರಕಾರವಾಗಿದೆ. ಇನ್ನಾದರೂ ಕೊಡಗಿನ ಎರಡು ರಾಜಕೀಯ ಪಕ್ಷಗಳು ಒಂದಾಗಲು ಯುಕ್ತಿ ಬಾರದೇಕೆ? ಕಣ್ಣಿಗೆ ದುರ್ಬೀನು ಇಟ್ಟು ಕೈಗೆ ಬಂದಂತೆ ಬರೆಯುವ ನೀವು ಈ ರೀತಿಯ ಒಂದು ಸಂಧಾನಕ್ಕೆ ಯುಕ್ತಿಗಬಾರದೇ' ಎಂದು ವಾಚಕರೊಬ್ಬರು ಬರೆದಿದ್ದಾರೆ. ಕೊಡಗಿನ ರಾಜಕೀಯ ಪಕ್ಷಗಳನ್ನು ಒಂದುಗೂಡಿಸುವ ಸಂಧಾನ ಸಾಧಕನ ಯೋಗ್ಯತೆ ನನಗೆ ಒಂದು ವೇಳೆ ಇದ್ದರೂ ಕೂಡ ಸಂಧಾನ ಪ್ರಯತ್ನ ಮಾಡುವಷ್ಟು ಹುಚ್ಚನು ನಾನಲ್ಲ. ಏಕೆಂದರೆ ಶಾಂತಿ ಕಾಲದ ಸಂಧಾನ ಸಾಧಕರಿಗೂ ಮಳೆಗಾಲದ ಎಳನೀರಿಗೂ ಒಂದೇ ಬೆಲೆ!

* * *

ಸಂಪಾಜೆ ಕಡೆಯಲ್ಲಿ ಬೀಜದ ಬತ್ತವನ್ನು ಮುಡಿಕಟ್ಟಿ ಇಟ್ಟಿರುತ್ತಾರಂತೆ. "ಆದರೆ ಅಂಥಾ ಮುಡಿಕಟ್ಟುಗಳಲ್ಲಿ ಸಾರಾಯಿ ಕಷ್ಟಿ ಇಟ್ಟದ್ದು ಮೊನ್ನೆ ಪತ್ತೆಯಾಗಿದೆ! ಅಂಥ ಜವಾನನಿಗೆ ಲಕೋಟೆ ಕಾಗದದ ಸಂಗತಿ ತಿಳಿಯದು. ಅದರಂತೆ ಎಕ್ಸೈಸ್ ಇನ್ಸ್‌ಪೆಕ್ಟರಿಗೂ ತಿಳಿದಿರುವುದೆಂದು ಭಾವಿಸಿದಂತಿದೆ! ಆದರೆ ಅತ್ತ ಬಡಿಸ್ಕೊಳ್ಳುವಾಗಲೂ ಅಭಿನಂದಿಸುವಾಗಲೂ ಹಣೆಗೆ ಕೈಹೋಗುವಂತೆ ಸಮಾಜ ಸೇವೆಯಲ್ಲೂ ಅಧಿಕಾರ ಚಾಲನೆಯಲ್ಲೂ ಹಣಕ್ಕೆ ಕೈ ಹೋಗಬಾರದು. ಹಾಗಿದ್ದರೆ ಮಾತ್ರ ಕೆಲಸಕ್ಕೆ ಗೌರವ.

* * *

ಗುಟ್ಟಿನವ ಗುಣಾಗುಣಾ ಮಾಡಬೇಕು. ಆದರೆ ಸಿಟ್ಟಿನವ ಗುಡುಗುಡಿಸಬೇಕು. ಇದು ಸಂಪ್ರದಾಯ. ಗುಟ್ಟು ಸಿಟ್ಟುಗಳೆರಡೂ ಸೇರಿದರೆ ಮನುಷ್ಯ ಗುಣುಗುಡಿಸಿ ನಂತರ ಸಮಾಧಾನದಿಂದ ಕ್ಷಮೆಬೇಡುತ್ತಾನೆ. ಮೊನ್ನೆ ಮರಕ್ಯಾಪಾಕದಲ್ಲಿ ಅಧಿಕಾರಿಯೊಬ್ಬರು ಗುಡುಗುಡಿಸಿದರು. ನಂತರ ಕ್ಷಮೆಬೇಡಿದರಂತೆ! ಮನುಷ್ಯ ಸಮುದ್ರದಿಂದ ಜಾರಿಕೊಳ್ಳಬಹುದು. ಆದರೆ ಸಾವಿಗೀಡೆ ತಪ್ಪಿಸಿಕೊಳ್ಳುವದು ಸಾಧ್ಯವಿಲ್ಲ. ಅದರಂತೆ ಗಲಾಟೆ ಮಾಡಿ ಹರಾಜು ತಿಳಿಸಿ ಓಡಿಹೋಗಬಹುದಾದರೂ ಜನರ ಬಾಯಿಯಿಂದ ತಪ್ಪಿಸಿಕೊಳ್ಳುವದು ಸಾಧ್ಯವಿಲ್ಲ.

* * *

'ಅಡಿಗೆ ಮನೆಯ ಹೊಗೆ ಆಸ್ಥಾನದವರೆಗೂ ವ್ಯಾಪಿಸಬಾರದು. ಸಂಬಂಧದೊಳಗಿನ ಹಗೆ ಸಾರ್ವಜನಿಕ ಕಾರ್ಯದಲ್ಲೂ ಸೇರಿ ಬರಬಾರದು.' ಎಂಬ ಮಾತಿನ ಅರ್ಥವನ್ನು ಅನೇಕರು ಅರಿಯಬೇಕು. ಕೊಡಗಿನಲ್ಲಿ ಈ ಮಾತಿನ ಅರ್ಥ ತಿಳಿದವರು ಅತಿ ವಿರಳ. ಮನೆಯಲ್ಲಿ ಭಿನ್ನಾಭಿಪ್ರಾಯವಿದ್ದರೆ ರಾಜಕೀಯದಲ್ಲೂ ಭಿನ್ನಾಭಿಪ್ರಾಯವೇ! ರಾಜಕೀಯದಲ್ಲಿ ಭಿನ್ನಾಭಿಪ್ರಾಯವಿದ್ದರೆ ಪರಸ್ಪರ ವಿರೋಧ ತಪ್ಪಿದ್ದಲ್ಲ. ಇದರಿಂದ ಬಂಧುತನ ಸ್ನೇಹಗಳಿಗೇ ಸಂಚಕಾರ!

* * *

'ದುರ್ಬೀನು ನೋಡುವ ನಿಮ್ಮ ಕೆಲಸವನ್ನು ನಾನು ಮೆಚ್ಚುವದಿಲ್ಲ. ಆದರೂ ನಿಮಗೆ ಹಲವರು ಗೌರವ ಕೊಡುತ್ತಾರೆಂಬುದು ನನಗೆ ಗೊತ್ತಾಗಿದೆ. ಪತ್ರಿಕೆ ಬಂದೊಡನೆ 'ದುರ್ಬೀನು ನೋಟ'ವನ್ನು ಮಾತ್ರ ಓದುವವರಿದ್ದಾರೆ. ಆ ಲೇಖನ ಇಲ್ಲದಿದ್ದರೆ ಪತ್ರಿಕೆಯನ್ನು ತೆಗೆದು ಹಾಕುವವರಿದ್ದಾರೆ. ಇದೇಕೆ ಹೀಗೆ ಮಾಡುತ್ತಾರೆ?' ಎಂದೊಬ್ಬರು ಕೇಳುತ್ತಾರೆ. ದುರ್ಬೀನು ನೋಡಿ ಬರೆಯುವ ನನ್ನ ಕೆಲಸಕ್ಕಿಂತಾ ಉಪಯುಕ್ತವೂ ಆದರ್ಶದಾಯಕವೂ ಆದ ಕೆಲಸ ಮಾಡುವವರು ಹಲವರಿದ್ದಾರೆಂದು ನನಗೆ ಗೊತ್ತಿದೆ. ಆದರೆ ಆರತಿ ತೆಗೆಯುವ ದೀಪಕ್ಕಿರುವ ಗೌರವ ಅಡಿಗೆಯ ಬೆಂಕಿಗಿಲ್ಲ. ಅದರಂತೆ ನನ್ನ ಪರೋಪದೇಶ ಪಾಂಡಿತ್ಯಕ್ಕಿರುವ ಮಾನ್ಯತೆ ಬೇರೆ ಪರಿಶ್ರಮಿಗಿಲ್ಲ!

* * *

'……ನ್ನು ಮುಂದಾಳೆಂದು ನಾನು ಹಿಂಬಾಲಿಸಿದೆ. ಅವರಿಗಾಗಿ ದುಡಿದೆ. ಕಳೆದ ಚುನಾವಣೆಯಲ್ಲಿ ಕೃತ್ಯಪೂರ್ವಕ ಬೆಂಬಲವಿತ್ತೆ. ಈಗ ಅವರು ಅಧಿಕಾರಕ್ಕೇರಿದ್ದಾರೆ. ಆದರೆ ಅವರು ಹಿಂದಿನಂತೆ ಇಂದಿಲ್ಲ. ಅಧಿಕಾರವು ನಿಜವಾಗಿಯೂ ಮನುಷ್ಯನನ್ನು ಹಾಳುಮಾಡುತ್ತದೆ ಎಂಬುದಕ್ಕೆ ಇದೊಂದು ನಿದರ್ಶನ' ಎಂದೊಬ್ಬರು ಬರೆದಿದ್ದಾರೆ. ಸೂರ್ಯನಮಸ್ಕಾರ ಮಾಡುವದು ದೇಹದ ಆರೋಗ್ಯಕ್ಕೆ ವಿನಾ ಸೂರ್ಯದೇವನ ಮೆಚ್ಚಿಗೆಗಲ್ಲ. ಅದರಂತೆ ಮುಂದಾಳುಗಳ ಅನುಯಾಯಿತ್ವ ಮನೋಶುದ್ಧಿಗೆ ಹೊರತು ಅವರ ಅನುಗ್ರಹವಾಗಬೇಕೆಂದಲ್ಲವೆಂದು ಅವರಿಗೆ ಹೇಳಬೇಕಾಗುತ್ತದೆ!

ಕೊಡಗಿನ ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶ.

ಕಳೆದ ಸ್ಕೂಲ್ ಫೈನಲ್ ಪರೀಕ್ಷೆಗೆ ಕೊಡಗಿನ ವಿವಿಧ ಹೈಸ್ಕೂಲುಗಳಿಂದ ಕುಳಿತ ವಿದ್ಯಾರ್ಥಿಗಳಲ್ಲಿ ಈ ಕೆಳಗಿನವರು ತೇರ್ಗಡೆಯಾಗಿದ್ದಾರೆ. ಪರೀಕ್ಷೆಗೆ ಕೂತ ೩೩೭ ವಿದ್ಯಾರ್ಥಿಗಳಲ್ಲಿ ೧೯೯ ಜನರು ಅಂದರೆ ಶೇಕಡ ೫೯ ರಂತೆ ಪಾಸಾಗಿದ್ದಾರೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲು.

ಶ್ರೀಗಳಾದ ಎ. ಜಿ. ಭಾಸ್ಕರ, ಚಿದ್ದಂಡ ಸುಬ್ಬಯ್ಯ, ಅಪ್ಪನೆರವಂಡ ಕಾಳಪ್ಪ, ಮಾರಾಂಡ ಚಿಟ್ಟವ್ವ, ಮುಕ್ಕಾಟಿರ ಅಂಬಯ್ಯ, ಅಲ್ಲಾರಂಡ ಮಂಜಪ್ಪ, ಎ. ಸಿ. ಸೋಮಯ್ಯ, ಕೇಳಪಂಡ ಗಣಪತಿ, ಕೆ. ಎಸ್. ಗಣಪತಿ, ಎಂ ಎಂ ರಾಮಮೂರ್ತಿ, ಎ.ಎ. ಅಬ್ದುಲ್‌ಗಫೂರ್, ಕೋದಂಡ ಅಪ್ಪಯ್ಯ, ಎಸ್ ಭಾಗ್ಯಲಕ್ಷ್ಮಿ, ಎಸ್ ಎಸ್. ಗೋಪಾಲಕೃಷ್ಣ, ಮೊಣ್ಣಂಡ ಗೌರವ್ವ, ಬಲ್ಯಂಡ ಕಾಳಪ್ಪ, ಕೆ.ಎಂ.ಕೇಶವ, ಮಾಳೇಟಿರ ಮಾಚಯ್ಯ, ಮುಹಮ್ಮದ್ ಉಸ್ಮನ್, ಮುಂಜಾಂದಿರ ಮುತ್ತಣ್ಣ, ಕುಪ್ಪಂಡ ಪ್ರೇಮನಾಥ್, ತೆನ್ನಿರ ಸೋಮಯ್ಯ, ಮೊಣ್ಣಂಡ ಸುಬ್ಬಯ್ಯ, ಮೇರಿಯಂಡ ಗಣಪತಿ, ಕೋದಾಂಡ ಕರುಂಬಯ್ಯ, ಸಿ. ಡಿ ಕುಂದರ್, ಕಂಬೆಯಂಡ ಅಪ್ಪಯ್ಯ, ಪಿ ಎಸ್. ಮಾದಪ್ಪ, ಸಿ. ಎಸ್. ಮಾದಪ್ಪ, ಮಾಚಿಮಾಡ ಭೀಮಯ್ಯ, ಬಿ ಬಿ. ಮಂದಪ್ಪ, ಕುಟ್ಟೇಟಿರ ಸುಬ್ಬಯ್ಯ, ಬಿ. ಎ. ಶಂಕರ, ಪಿ. ಎನ್. ರುಕ್ಮಿಣಿ, ಚೆಟ್ರಂಡ ಸೋಮಣ್ಣ, ಮಾಳೇಟಿರ ಪೂಣಚ್ಚ ಮತ್ತು ಚೇಬಾಂಡ ಮಾಚಯ್ಯ ಇವರುಗಳು. ಪರೀಕ್ಷೆಗೆ ಕೂತ ೮೩ ವಿದ್ಯಾರ್ಥಿಗಳಲ್ಲಿ ೩೭ ಜನ. ಅಂದರೆ ಶೇಕಡ ೪೫ ರಂತೆ.

ಹುಡುಗಿಯರ ಹೈಸ್ಕೂಲು ಮಡಿಕೇರಿ

ಶ್ರೀಮತಿಯರಾದ ಐಚೆಟ್ಟಿರ ಕಾವೇರಿ, ಕೆ. ಸಿ ಸುಬ್ಬವ್ವ, ಪಿ ಬಿ. ರೋಹಿಣಿ, ಎಂ. ಎನ್. ಶ್ರೀಮತಿ, ಎ ಕೆ. ಗಂಗವ್ವ, ಎಂ ಸಿ. ಬೋಜವ್ವ, ಕೆ. ಎಂ. ಸೀತವ್ವ, ಪಿ ಜಿ ಕಾವೇರಿ, ಬಿ, ಎಂ. ಮುದ್ದವ್ವ, ಸಿ. ಸಿ. ದೇಚವ್ವ, ಎನ್. ಎಂ. ಸುಬದ್ರ, ಎಂ ಎ ಪೊನ್ನವ್ವ, ಕೆ. ಕೆ. ಬೊಳ್ಳವ್ವ, ಕೆ. ಈ. ಮುತ್ತವ್ವ, ಮೈಮೂನ್ ಎಂ ಗೌಸ್, ಕೆ. ಎಂ. ಭಾಗ್ಯಂ, ಸಿ. ಪಿ ಕಮಲ, ಐ. ಕೆ. ದೇವಕ್ಕಿ, ಐ ಎಂ. ಮುದ್ದವ್ವ ಮತ್ತು ಎಚ್. ಡಿ. ಪಾರ್ವತಿ ಇವರುಗಳು. ಪರೀಕ್ಷೆಗೆ ಕೂತ ೫೩ ವಿದ್ಯಾರ್ಥಿನಿಯರಲ್ಲಿ ೨೦ ಜನರು. ಅಂದರೆ ಶೇಕಡ ೩೮ ರಂತೆ.

ಸೆಂಟ್ ಮೈಕೇಲ್ಸ್ ಹೈಸ್ಕೂಲು

ಶ್ರೀಗಳಾದ ಕೆ. ಸಿ. ಪೂವಯ್ಯ, ಬಲ್ಲಚಂಡ ಬೊಳ್ಳವ್ವ, ಜಿ. ಕೆ. ವೈಕುಲಿ, ಎಂ. ಎ. ಅಪ್ಪಯ್ಯ, ಕೆ. ಎಂ. ಬಸಪ್ಪ, ಎ. ಪಿ. ದೇವಯ್ಯ, ಎಂ. ಜಿ. ಚಂಗಪ್ಪ, ಕೆ. ಎಸ್. ಪೊನ್ನಪ್ಪ, ಕೆ ಬಿ ರಾಘವಯ್ಯ, ಸಿ ಎ ರಘುವೀರ, ಎಂ. ಸಿ ಉತ್ತಯ್ಯ ಮತ್ತು ಕೆ. ಎ ಪೆಮ್ಮಯ್ಯ. ಇವರುಗಳ, ಎರಡು ವಿದ್ಯಾರ್ಥಿಗಳ ಪುಸ್ತಕ ಬಂದಿರುವದಿಲ್ಲ. ಪರೀಕ್ಷೆಗೆ ಕೂತ ೨೫ರಲ್ಲಿ ೧೩, ಶೇಕಡ ೪೮ರಂತೆ.

ನಾಪೋಕ್ಲು ಹೈಸ್ಕೂಲು.

ಶ್ರೀಗಳಾದ ಬಿ ಡಿ. ಗಂಗವ್ವ, ಸಿ. ಎಸ್. ಅಪ್ಪಚ್ಚು, ಕೆ. ಎಂ ಅಪ್ಪಯ್ಯ, ಎ. ಎಂ. ಬೆಳ್ಳಪ್ಪ, ಎ. ಟಿ. ಗಣಪತಿ, ಜಿ ಎ. ಗೋಪಾಲ್, ಕೆ. ಎಂ. ಪೊನ್ನಪ್ಪ, ಎಂ. ಸಿ ಸುಬ್ಬಯ್ಯ, ಎಂ, ಎಸ್. ಗಣಪತಿ, ಎಂ. ಸಿ. ಸೋಮಚ್ಚಿ, ಜಿ ಎನ್. ಅಪ್ಪಯ್ಯ, ಪಿ. ಎನ್. ಅಪ್ಪಯ್ಯ, ಕೆ. ಬಿ ಅಪ್ಪಣ್ಣ, ಕೆ. ಕೆ. ಸಾವಿತ್ರಿ, ಕೆ. ಎ ಬೆಳ್ಳಪ್ಪ, ಕೆ. ಎ ಉತ್ತಪ್ಪ, ಬಿ. ಕೆ. ಅಪ್ಪಣ್ಣ, ಬಿ. ಎಂ. ಡಾಲಿ, ಡಿ. ಆರ್. ಆನಂದ, ಐ ಎನ್. ಮಾದಯ್ಯ, ಎಂ. ಡಿ. ಅಪ್ಪಯ್ಯ, ಕೆ. ಎ ಪೊನ್ನಪ್ಪ, ಬಿ. ಎಂ ತಿಮ್ಮಯ್ಯ, ಪಿ. ಟಿ, ಕಾವೇರಪ್ಪ, ಸಿ. ಸಿ. ಉತ್ತಪ್ಪ, ಎಂ ಸಿ ಈರಪ್ಪ ಮತ್ತು ಕೆ ಎ. ತಮ್ಮಯ್ಯ ಇವರುಗಳು ಪರೀಕ್ಷೆಗೆ ಕೂತ ೪೪ ವಿದ್ಯಾರ್ಥಿಗಳಲ್ಲಿ ೨೭. ಅಂದರೆ ಶೇಕಡ ೬೧ ರಂತೆ.

ವೀರಾಜಪೇಟೆ ಹೈಸ್ಕೂಲು.

ಶ್ರೀಗಳಾದ ಫಕ್ರುದ್ದೀನ್ ಪೋಕರ್, ಎಂ. ಬಿ. ಗಂಗವ್ವ, ಬಿ. ಜಿ ನಂಜಪ್ಪ, ಎಚ್ ಸಿ ಗೋಪಾಲ, ಸಿ ಟಿ. ಮುತ್ತಣ್ಣ, ಎ.ಎಸ್. ಗೋಪಾಲಕೃಷ್ಣನ್, ರಾಮೇಶರಾವ್, ಪಿ ಸಿ ಅಚ್ಚಯ್ಯ, ಪಿ ಯು. ಮೇದಪ್ಪ, ಪಿ ಪಿ. ಮಾಚಯ್ಯ, ಪಿ. ಎನ್. ಮುತ್ತವ್ವ, ಬಿ ಕುಟ್ಟಪ್ಪ, ಕೆ. ಬಿ. ಅಪ್ಪಚ್ಚು, ಎಂ ಬಿ. ಪೂಣಚ್ಚ, ಬಿ. ಈರಪ್ಪ, ಕೆ. ಚಂಗಪ್ಪ, ಕೆ. ಎ. ಐಯ್ಯಪ್ಪ, ಸಿ. ಎಂ. ಭೀಮಯ್ಯ, ಎಸ್ ಜಿ. ಭಗವಾನ್, ಎಂ. ಎಂ. ಬೆಳ್ಳಪ್ಪ, ಎಂ. ಪಿ. ಬೊಳ್ಳವ್ವ, ಪಿ. ಡಿ ಚಿಟ್ಟಿಚ, ಸಿ ಜಿ ದೇವಯ್ಯ, ಸಿ. ಎ. ಆರ್ ಸಿದ್ದಿಕ್ ಮಹಮ್ಮದ್, ಪಿ. ಸುಬ್ಬಯ್ಯ, ಕೆ. ಸಿ. ಶಾಂತಿ, ಪಿ ವೈ. ಸಾದುಲಿ, ಬಿ. ಎಸ್. ಕಾಶಾಲಪ್ಪ, ಎಂ. ಪಿ ಇಕ್ಬಾಲ್. ಕೆ. ಪಾರ್ವತಿ, ಐ ಡಿ ನಂಜಪ್ಪ, ಪಿ. ಸಿ. ಸುಬ್ಬಯ್ಯ, ಎಸ್. ಸದಾಶಿವರಾವ್, ಕೆ. ಜಿ ನಾರಾಯಣ, ಪಿ. ಬಿ ಕಾಳಪ್ಪ, ಕೆ. ಎಂ. ರಾಧ ಮತ್ತು ಎನ್. ಯು. ತಮ್ಮಯ್ಯ ಇವರುಗಳು. ೯೦ರಲ್ಲಿ ೩೭ ಶೇಕಡ ೪೧ರಂತೆ.

ಹುದಿಕೇರಿ ಹೈಸ್ಕೂಲು

ಶ್ರೀಗಳಾದ ಮುಚ್ಚಮಾಡ ಭೀಮಯ್ಯ, ಕೊಟ್ಟಂಗಡ ಮುತ್ತಣ್ಣ, ಅಜ್ಜಿಕುಟ್ಟಿರ ಮುತ್ತಣ್ಣ, ಕಾಚೆಟ್ಟಿರ ಕರುಂಬಯ್ಯ, ಕೆ. ಪಿ ಸೀತಾರಾಮ ಮತ್ತು ಬೊಜ್ಜಂಗಡ ಸೋಮಣ್ಣ ಇವರುಗಳು. ಪರೀಕ್ಷೆಗೆ ಕೂತ ೩೦ ವಿದ್ಯಾರ್ಥಿಗಳಲ್ಲಿ ೬. ಶೇಕಡ ೨೦ರಂತೆ.

ಪೊನ್ನಂಪೇಟೆ ಹೈಸ್ಕೂಲು

ಶ್ರೀಗಳಾದ ಮಲಚಿರ ಕರುಂಬಯ್ಯ, ಚೆಪ್ಪುಡೀರ ಕಾರ್ಯಪ್ಪ, ಪೋಡಮಾಡ ಚಿಣ್ಣಪ್ಪ, ಮನೆಯಪಂಡ ಬಿದ್ದಪ್ಪ, ಮನೆಯಪಂಡ ಅಚ್ಚಪ್ಪ, ಚೇಂದಿರ ಅಚ್ಚಪ್ಪ, ಬಿಟ್ಟಿಯಂಡ ಮುತ್ತಣ್ಣ, ಬಿ ಆರ್. ಪದ್ಮನಾಭರಾವ್, ಮುಕ್ಕಾಟಿರ ಸೋಮಯ್ಯ, ಮುಕ್ಕಾಟಿರ ಮುತ್ತಣ್ಣ, ಶೀತಮಾಡ ಕೆ. ಶಾಲಪ್ಪ, ಚೊಟ್ಟೆಯಣಮಾಡ ಅಪ್ಪಾಜಿ, ಕರ್ತರ ಮಂದಪ್ಪ, ಐನ್ಮಾಡ ಮಾಚಯ್ಯ, ಮಾಪಂಗಡ ಗಣಪತಿ, ಮನೆಯಪಂಡ ಬಾಲಕೃಷ್ಣ, ಕಳ್ಳಿಮಾಡ ಕರುಂಬಯ್ಯ, ಕಾಕಮಾಡ ಭೀಮಯ್ಯ, ಐಚೆಟ್ಟಿರ ಕಟ್ಟಯ್ಯ, ಪುಚ್ಚಿಮಾಡ ದೇವಯ್ಯ, ಕಾಳಮಾಡ ಮುತ್ತಪ್ಪ, ಕಲ್ಲಿಮಾಡ ಪೂಣಚ್ಚ, ಮುಂಡಮಾಡ ದೇವವ್ವ, ಬಿ ಆರ್. ಸುಶೀಲ, ಅಡೇಂಗಡ ಅಮ್ಮವ್ವ, ಅಪ್ಪಂಡೆರಂಡ ಸೋಮಯ್ಯ, ಚೇಂದ್ರಿಮಾಡ ಅಯ್ಯಪ್ಪ, ಪೆಮ್ಮಂಡ ಕೆ. ಅಯ್ಯವ್ವ, ಎಸ್. ಎಂ. ಶಿವನಂಜಪ್ಪ, ಎ. ಜಿ. ಪರಮೇಶ್ವರ, ಕೆ. ಆರ್. ವಸಂತಿ, ಎಸ್. ಎ ಸೋಮೇಶ ಇವರುಗಳು. ಪರೀಕ್ಷೆಗೆ ಕೂತ ೫೦ ರಲ್ಲಿ ೩೩ ಶೇಕಡ ೬೬ರಂತೆ.

ಓದುಗರ ಓಲೆಗಳು

ಇಲಿಗಳನ್ನು ಬಡಿದು ಹದ್ದಿನ ಹೊಟ್ಟೆಗೆ ಹಾಕುವ ನೀತಿ.

ತಾರೀಕ ೩೦-೫-೫೨ರ 'ಕೊಡಗು' ಪತ್ರಿಕೆಯಲ್ಲಿ ಆನರ ಸುದ್ದಿಗಾರರೊಬ್ಬರು ಫಾರೆಸ್ಟ್ ಇಲಾಖೆಯ ಮಂಕಂಟ್ರಾಕ್ಟ ಕೊಡುವ ಅಹಿತ ವ್ಯವಸ್ಥೆಯನ್ನು ಕುರಿತು ಬರೆದಿದ್ದರು ಆ ಲೇಖನದಲ್ಲಿ ಕೊಡಗು ಫಾರೆಸ್ಟ್ ಇಲಾಖೆಯವರು ಟೆಂಡರು ಹಾಕಿದ ಇತರರನ್ನು ಕಡೆಗಣಿಸಿ ಒಬ್ಬ ದೊಡ್ಡ ಕಂಟ್ರಾಕ್ಟರಿಗೆ ಎಂದೂ ಇಲ್ಲದ ಘನ ಅಡಿಗೆ ರೂ. ೧-೧-೬ ರ ದರದಲ್ಲಿ ಕಂಟ್ರಾಕ್ಟ ಕೊಟ್ಟ ಕಾರಣ ಕೊಡಗು ಸರಕಾರದ ಬೊಕ್ಕಸಕ್ಕೆ ಸುಮಾರು ಒಂದು ಲಕ್ಷ ರೂಪಾಯಿ ನಷ್ಟವಾಗುವದೆಂದು ಬರೆದಿದ್ದರು. ಅವರು ಬರೆದ ಲೇಖನವು ಪೂರಾ ಸತ್ಯವಾದುದೆಂಬುದಕ್ಕೆ ಈ ಕೆಳಗಿನ ಒಂದು ನಿದರ್ಶನ ಸಾಕು.

ಫಾರೆಸ್ಟ್ ಇಲಾಖೆಯು ಬಿನ್ನೈಸಿಕೊಟ್ಟ ವ ಹಾಗಿ ಮಂತ್ರಿಯವರ ಅಭಿಪ್ರಾಯವನ್ನು ಮೊನ್ನೆ 'ಕೊಡಗು' ಪತ್ರಿಕೆಯಲ್ಲಿ ಓದಿದೆನು. ಚಿಕ್ಕ ಕಂಟ್ರಾಕ್ಟರರಿಗೆ ಕಂಟ್ರಾಕ್ಟ ಕೊಟ್ಟರೆ ಅವರು ಸರಿಯಾಗಿ ಟಿಂಬರು ಕಾಲದಲ್ಲಿ ಸಾಗಿಸದೆ ಸರಕಾರಕ್ಕೆ ವಿಪರೀತ ನಷ್ಟವಾಗುತ್ತದೆಂದೂ ಆದ್ದರಿಂದ ದೊಡ್ಡ ಕಂಟ್ರಾಕ್ಟರರಿಗೆ ಕೊಟ್ಟು ಆ ವರ್ಷ ಕಡಿದ ಟಿಂಬರು ಅದೇ ವರ್ಷ ಸಾಗಿಸಲ್ಪಡುವಂತೆ ನೋಡುವದೇ ತಮ್ಮ ಗುರಿಯೆಂದೂ ಅವರು ಹೇಳಿದುದಾಗಿ ವರದಿಯಾಗಿದೆ.

ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಟೆಂಡರುದಾರರನ್ನು ಆಹ್ವಾನಿಸಿ ಕನಿಷ್ಟದರದಲ್ಲಿ ಮಾರಲಾಗುವ ಏರ್ಪಾಡು ಮಾಡಿ ಸರಕಾರಕ್ಕೆ ಹಿತವಾಗುವ ಏರ್ಪಾಡು ಮಾಡುವದೇ ಪತ್ರಿಕೆಗಳಲ್ಲಿ ಟೆಂಡರುದಾರರನ್ನು ಆಹ್ವಾನಿಸುವ ಗುರಿಯಾಗಿದೆ. ಟೆಂಡರುದಾರರು ಕಂಟ್ರಾಕ್ಟಿಗಾಗಿ ಮುಂದೆ ಬಂದಾಗ ಯಾರಾದರೊಬ್ಬರಿಗೆ ತಮ್ಮ ಇಷ್ಟದಂತೆ ಹೆಚ್ಚಿನ ದರಕ್ಕೆ ಕಂಟ್ರಾಕ್ಟ ಕೊಡುವದಾದರೆ ಪತ್ರಿಕೆಗಳಲ್ಲಿ ಟೆಂಡರು ನೋಟೀಸು ಹಾಕುವದರ ಅರ್ಥವೇನ ? ಚಿಕ್ಕ ಕಂಟ್ರಾಕ್ಟರು ಕಂಟ್ರಾಕ್ಟ ತೆಗೆದುಕೊಂಡರೆ ನಿಶ್ಚಿತ ಸಮಯದಲ್ಲಿ ಟಿಂಬರು ಸಾಗಿಸುವಂತೆ ನೋಡಲು ಯಾವುದೇ ಶರತ್ತು ವಿಧಾನಗಳಿಲ್ಲವೇ ?

ಸರಕಾರವು ಈಗ ನಿಶ್ಚಯಿಸಿರುವ ದೊಡ್ಡ ಕಂಟ್ರಾಕ್ಟರರನ್ನೂ ಮೈಸೂರಿನ ಬೋರಯ್ಯ ಬಸವಯ್ಯ ಅಂಡ್ ಸನ್ಸ್ ಇವರೂ ಕೂಡ ತಾವೇ ಮರ ಸಾಗಿಸದೆ ತಮ್ಮ ಕೈಕೆಳಗೆ ಚಿಕ್ಕ ಕಂಟ್ರಾಕ್ಟರುಗಳನ್ನು ನೇಮಿಸಿದ್ದಾರೆ ತಾ ೭-೬-೫೨ ರ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಅವರು ಪ್ರಕಟಿಸಿದ ಜಾಹೀರಾತು ಹೀಗಿದೆ. "Wanted 20 lorries in perfect working condition with new or dependable heavy duty tyres, for transporting about 3,00,000 cft of timber from Nagarahole Range to the Coorg Timber Depot at Hunsur for a period of two years at 0-15-6 per cubic foot. This rate being inclusive of of loading and unloading charges. Preference will be given to these who have four or more lorries" "ನಾಗರಹೊಳೆ ರೇಂಜಿನಿಂದ ಹುಣಸೂರಿನಲ್ಲಿರುವ ಕೊಡಗು ಫಾರೆಸ್ಟ್ ಟಿಂಬರ್ ಡಿಪೋಕ್ಕೆ ಮೂರು ಲಕ್ಷ ಘನ ಅಡಿ ಟಿಂಬರ್ ಸಾಗಿಸಲು ಉತ್ತಮ ಸ್ಥಿತಿಯಲ್ಲಿರುವ ೨೦ ಲಾರಿಗಳು ಘನ ಅಡಿಗೆ ೦-೧೫-೬ ದರದಲ್ಲಿ ಎರಡು ವರ್ಷಗಳ ಅವಧಿಯ ವರೆಗೆ ಬೇಕಾಗಿದೆ. ಈ ದರದಲ್ಲಿ ಲಾರಿ ಲೋಡ್ ಮಾಡುವ ಮತ್ತು ಖಾಲಿ ಮಾಡುವ ಖರ್ಚು ಸೇರಿದೆ. ನಾಲ್ಕು ಲಾರಿಗಳಿಗಿಂತಾ ಹೆಚ್ಚಿರುವವರಿಗೆ ಹೆಚ್ಚಿನ ಗಮನ ಕೊಡಲಾಗುವದು". ಈ ಜಾಹೀರಾತನ್ನು ನೋಡಿದರೆ ದೊಡ್ಡ ಕಂಟ್ರಾಕ್ಟರೆನ್ನುವ ಇವರೂ ಕೂಡ ಚಿಕ್ಕ ಲಾರಿ ಮಾಲೀಕರ ಮೂಲಕವೇ ಈ ಜವಾಬ್ದಾರಿಯನ್ನು ಒಪ್ಪಿಕೊಂಡಿರುವರು. ಬೋರಯ್ಯ ಬಸವಯ್ಯನವರು ಮಾಡಲೊಪ್ಪಿದ ಕೆಲಸವನ್ನೇ ನಮ್ಮ ಸರಕಾರ ಮಾಡಬಹುದಿತ್ತು. ಹಾಗೆ ಮಾಡಿದ್ದರೆ ನಮ್ಮ ಸರಕಾರಕ್ಕೂ ೦-೧೫-೬ ದರದಲ್ಲಿ ಯಾ ಅದಕ್ಕೆ ಕಡಿಮೆಯಾಗಿ ಕಂಟ್ರಾಕ್ಟರರು ದೊರೆಯುತ್ತಿದ್ದರು. ಇದು ಬಿಟ್ಟು ದೊಡ್ಡ ಕಂಟ್ರಾಕ್ಟರಿಗೆ ೧-೧-೬ ದರದಲ್ಲಿ ಎರಡು ವರ್ಷದ ಕಂಟ್ರಾಕ್ಟ ಕೊಟ್ಟು ಪ್ರತಿ ಘನ ಅಡಿಗೆ ೨ ಆಣೆ ಲಾಭ ಒದಗಿಸಿಕೊಟ್ಟಿದ್ದಾರೆ. ಇದರಿಂದ ಎರಡು ವರ್ಷಕ್ಕೆ ಸುಮಾರು ೭೨ ಸಾವಿರ ರೂಪಾಯಿ ಬೋರಯ್ಯ ಬಸವಯ್ಯ ಕಂಪೆನಿಗೆ ಸೇರುವಂತಾಯಿತು. ಚಿಲ್ಲರೆ ಕಂಟ್ರಾಕ್ಟರಿಗೆ ಕಂಟ್ರಾಕ್ಟ ಕೊಟ್ಟು ಅವರು ಸರಿಯಾಗಿ ವಹಿವಾಟು ಮಾಡುವಂತೆ ಇಲಾಖೆಯವರು ನೋಡಿಕೊಂಡಿದ್ದರೆ ಈ ಹಣ ಕೊಡಗು ಸರಕಾರಕ್ಕೆ ಉಳಿಯುತ್ತಿರಲಿಲ್ಲವೇ ? ನಾಲ್ಕು ಜನಗಳನ್ನು ಕೊಂದು ಒಬ್ಬ ಹೆಬ್ಬುಲಿಯನ್ನು ಸಾಕಿದಂತೆ ಈ ಸರಕಾರದ ನೀತಿಯಾಗಿದೆ. ಜನಪ್ರತಿನಿಧಿಗಳು ಇದನ್ನು ತಿಳಿದು ಎಚ್ಚರಿಕೆ ವಹಿಸಬೇಕು. ಮಿತ್ರರು

ಜನಹಿತ ಸಂಘ, ಮಡಿಕೇರಿ.

ಜನತೆಯ ಅವಗಾಹನೆಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ

ಈ ಮೊದಲು ಪತ್ರಿಕೆಗಳಲ್ಲಿ ಬತ್ತ ಮತ್ತು ಅಕ್ಕಿಯ ವ್ಯಾಪಾರ ಮತ್ತು ಮಾರಾಟದ ನಿಯಂತ್ರಣಕ್ಕೆ ಸರಕಾರವು ಮಾಡಿದ ತಿದ್ದುಪಡಿಯನ್ನು ಈ ಕೆಳಗಿನ ಅರ್ಥ ಬರುವಂತೆ ಪ್ರಕಟಿಸಲಾಗಿದೆ

'ದೇಶದೊಳಗೆ ಸ್ವಂತ ಉಪಯೋಗಕ್ಕಾಗಿ ಯಾರು ಬೇಕಾದರೂ ೬೦೦ ಸೇರು ಬತ್ತ ಯಾ ೩೦೦ ಸೇರು ಅಕ್ಕಿ ಸಾಗಿಸಬಹುದು. ಬತ್ತ ಕುಟ್ಟಿ ಜೀವಿಸುತಿದ್ದವರು ಹಾಗೆಯೇ ಬತ್ತ ಕುಟ್ಟಬಹುದು. ಆದರೆ ಅಕ್ಕಿಯನ್ನು ರೇಶನ್ ಅಂಗಡಿಗೇನೇ ಕೊಡಬೇಕು.'

ಆದರೆ ಕೊಡಗು ಗೆಜೆಟ್ ತಾ. ೧೦ ರ ಇಸ್ತಹಾರ್‌ನಾಮೆ ನಂ. ೭೨೬೪/R ತಾ. ೯ರಲ್ಲಿ ಈ ಕೆಳಗಿನ ಅರ್ಥ ಬರುವಂತೆ ಪ್ರಕಟಿಸಲಾಗಿದೆ.

ಸಂಕಷ್ಟದ ಗ್ರಾಮಗಳ ಹಿತ, ಕೊಡಗಿನ ಇತರ ಗ್ರಾಮಗಳಲ್ಲಿ ಸರಾಗವಾಗಿ ರೇಶನ್ ಅಧಿಕಾರಿಗಳ ಅನುಮತಿ ಇಲ್ಲದೆ ೬೦೦ ಸೇರು ಬತ್ತ ಅಥವ ೩೦೦ ಸೇರು ಅಕ್ಕಿ ಯಾ ರಾಗಿಯನ್ನು ಸ್ವಂತ ಉಪಯೋಗಕ್ಕಾಗಲಿ ಅಥವಾ ಮಾರಾಟಕ್ಕಾಗಲೀ ಅಥವಾ ಅಧಿಕೃತ ಏಜೆಂಟರುಗಳಿಗೆ ಕೊಡಲಿಕ್ಕಾಗಲಿ ಯಾ ರೇಷನ್ ಡಿಪೋಗಳಿಗೆ ಕೊಡಲಿಕ್ಕಾಗಲಿ ಸಾಗಿಸಬಹುದು.

ಈ ವೇಳೆ ನಮೂದಿಸಿದ ಪ್ರಮಾಣಕ್ಕಿಂತ ಹೆಚ್ಚು ಸಾಗಿಸಲ, ರೇಷನ್ ಅಧಿಕಾರಿಗಳ ಲಿಖಿತ ಅನುಮತಿಯನ್ನು ಪಡೆಯತಕ್ಕದ್ದು.

ಆದುದರಿಂದ ಯಾವನೇ ಒಬ್ಬನು ಮೇಲೆ ನಮೂದಿಸಲ್ಪ ಪ್ರಮಾಣಕ್ಕೊಳಪಟ್ಟು ಬತ್ತ, ಅಕ್ಕಿ ಮತ್ತು ರಾಗಿಯನ್ನು ಸರಹದ್ದು ಗ್ರಾಮಗಳ ವಿನಹ ಇತರ ಎಲ್ಲಾ ಸ್ಥಳಗಳಲ್ಲೂ ಯಾವುದೇ ತಡೆಯಿಲ್ಲದೆ, ಯಾರಿಗೂ ಮಾರಾಟ ಮಾಡಲೂ ಬಹುದು ಮತ್ತು ಕೊಂಡುಕೊಳ್ಳಲೂ ಬಹುದು.

ಕೆ. ಕೆ. ತಿಮ್ಮಯ್ಯ,
ಗೌ. ಕಾರ್ಯದರ್ಶಿ,

'ಕ್ರಾಂತಿಕುಮಾರ'ರಿಗೊಂದು ಉತ್ತರ.

ನೀವು ತಾರೀಕ ೨೦-೬-೫೨ರ 'ಕೊಡಗು' ಪತ್ರಿಕೆಯ ಓದುಗರ ಓಲೆಗಳು ಎಂಬ ಶಿರೋನಾಮೆಯಲ್ಲಿ ವೀರಾಜಪೇಟೆ ಮುನಿಸಿಪಾಲಿಟಿಯ ಕಾರ್ಯಕಾರಿಯ ಮಂಡಲಿಯ ಕೆಲಸದ ಮೇಲೆ ಬರೆದ ಲೇಖನ ಓದಿದೆನು. ವಿಚಾರಗಳನ್ನು ಪರಿಶೀಲಿಸದೆ ಬರೆದ ಆ ಲೇಖನಕ್ಕಾಗಿ ವಿಷಾದಿಸಬೇಕಾಗಿದೆ. ಕೆಲವು ನಿಜಸಂಗತಿಗಳನ್ನು ಇಲ್ಲಿ ಬರೆಯಲಾಗಿದೆ.

ಮುನಿಸಿಪಲ್ ಆಫೀಸು ಗೋಡು ಮತ್ತು ಮುನಿಸಿಪಲ್ ಪ್ರೆಸಿಡೆಂಟರ ಮನೆಯವರೆಗೆ ಮಾತ್ರ ರೋಡಿಗೆ ಟಾರು ಮಾಡಿದೆ ಎಂತ ನೀವು ಬರೆದಿರುತ್ತೀರಿ. ರೋಡು ರಿಪೇರಿ ಮತ್ತು ಟಾರು ಕೆಲಸಗಳು ಮುನಿಸಿಪಲ್ ಮೆಂಬರುಗಳೆಲ್ಲರ ಒಮ್ಮತ ಅಭಿಪ್ರಾಯಗಳ ಮೇಲೆ ಆಗತಕ್ಕ ಕಾರ್ಯಗಳಾಗಿರುತ್ತವೆ. ಅದಲ್ಲದೆ ಮೇಲ್ಕಂಡ ರೋಡುಗಳಲ್ಲಿ ವಾಹನಗಳ ಓಡಾಟ ಜಾಸ್ತಿಯಾಗಿರುವುದು ಮತ್ತು ಸರಕಾರಿ ಆಫೀಸುಗಳು ಇರುವುದು ಇವು ಕಾರಣವಲ್ಲದೆ ನಿಮ್ಮ ಅಭಿಪ್ರಾಯದಂತೆ ಹೀನೋದ್ದೇಶದಿಂದ ಆ ಕಾರ್ಯವನ್ನು ಕೈಕೊಂಡಿಲ್ಲ. ಈಗಲೂ ಸಹ ಚಂಬೆಬೆಳಿಯೂರು ರೋಡು, ಚರ್ಚ್ ಬೀದಿ ಮತ್ತು ದೇವಾಂಗ ಬೀದಿಗಳಿಗೆ ಟಾರು ಮಾಡಲು ಸುಮಾರು ಏಳು ಸಾವಿರ ರೂಪಾಯಿಗಳಿಗೂ ಮೇಲ್ಪಟ್ಟು ಅಂದಾಜು ಮಂಜೂರುಮಾಡಿ ಮಳೆಗಾಲ ಕಳೆದ ಕೂಡಲೆ ಕೆಲಸ ಶುರುಮಾಡಬೇಕೆಂದು ನಿರ್ಧರಿಸಲಾಗಿದೆ

ಎರಡನೆಯದಾಗಿ ಮುನಿಸಿಪಾಲಿಟಿಯವರಲ್ಲಿ ೫೩ ಪೆಟ್ರೋಲ್‌ಮ್ಯಾಕ್ಸ್ ಲೈಟುಗಳಿದ್ದು ಅವುಗಳನ್ನು ಉರಿಸಲು ಮೂರು ಜನರು ಖಾಯಂ ಆಗಿ ಇರುತ್ತಾರೆ. ಪ್ರತಿಯೊಬ್ಬರೂ ೧೭ ಅಥವ ೧೮ ಲೈಟುಗಳನ್ನು ಹತ್ತಿಸುತ್ತಾರೆ ಅವರು ಲೈಟು ಹತ್ತಿಸಲು ಸಾಯಂಕಾಲ ೫-೩೦ ಗಂಟೆಗೆ ಶುರುಮಾಡಿದರೆ ಒಂದೊಂದು ಲೈಟಿಗೆ ಸುಮಾರು ಹತ್ತು ನಿಮಿಷಗಳಂತೆ ಸುಮಾರು ಮೂರು ಗಂಟೆಗಳ ಕಾಲ ಹಿಡಿಯುತ್ತದೆ. ಪ್ರತಿಯೊಬ್ಬ ಲೈಟು ಹಚ್ಚುವವರೂ ರಾತ್ರಿ ೮-೩೦ ಗಂಟೆಯ ಮೇಲೆ ಪುನಹ ಒಂದು ಸರ್ತಿ ಲೈಟುಗಳನ್ನು ನೋಡಿಕೊಂಡು ಮನೆಗೆ ಹೋಗುವುದು ವಾಡಿಕೆಯಾಗಿದೆ. ಈ ಮಧ್ಯೆ ಯಾವುದಾದರೂ ಲೈಟು ಸರಿಯಾಗಿ ಉರಿಯದೆ ಇರುವ ವಿಷಯವನ್ನು ಸಾರ್ವಜನಿಕರೂ ಸಹಕರಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದಲ್ಲಿ ಅವರು ಅದಕ್ಕೆ ತಕ್ಕ ಬಂದೋಬಸ್ತು ಮಾಡಬಹುದು.

ಮೂರನೆಯದಾಗಿ ಹೋಟೇಲುಗಳ ಶುಚಿತ್ವವನ್ನು ಕೂಡ ಪ್ರಸ್ತಾಪಿಸಿರುತ್ತೀರಿ. ಹೊಟೇಲುಗಳು ಏಕೆ ಇಡೀ ಟೌನಿನ ಶುಚಿತ್ವವನ್ನು ಸಮರ್ಪಕವಾಗಿ ಕಾಪಾಡಿಕೊಂಡು ಬರತಕ್ಕ ಸ್ಯಾನಿಟರಿ ಇನ್‌ಸ್ಪೆಕ್ಟರ ಮೇಲೆ ಹೊರಿಸಬಹುದಾದ ಯಾವುದೇ ದೋಷಾರೋಪಣೆಗಳನ್ನು ಹೊರಗೆಡಹುತ್ತಿರುವುದು ನಿಮ್ಮ ಲೇಖನದಿಂದ ವ್ಯಕ್ತವಾಗುತ್ತದೆ. ಅವರು ಪ್ರತಿ ದಿನವೂ ಪ್ರತಿ ಹೋಟೇಲುಗಳನ್ನು ತನಿಖೆ ಮಾಡುವುದು ಸಾಧ್ಯವಿಲ್ಲದಾಗಿದೆ ಮತ್ತು ಸಾರ್ವಜನಿಕರು ಸಹ ಕುಂದುಕೊರತೆಗಳನ್ನು ಕಂಡಾಗ ಸಂಬಂಧಪಟ್ಟವರಿಗೆ ವರದಿಮಾಡಿದಲ್ಲಿ ಅವರು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬಹುದಾಗಿದೆ. ಕಳೆದ ಒಂದು ವರ್ಷದಿಂದ ಸಾರ್ವಜನಿಕ ಆರೋಗ್ಯಕ್ಕೆ ಭಂಗತರಬಹುದಾದ ವಿಷಯಗಳನ್ನು ಪರಿಶೀಲಿಸಿ ಸುಮಾರು ಒಂದು ನೂರು ಕೇಸುಗಳನ್ನು ಕೋರ್ಟು ಮೂಲಕ ವ್ಯವಹರಿಸಿ ಶಿಕ್ಷೆ ಪಡಿಸಿರುತ್ತಾರೆ. ಈಗಲೂ ಸಹ ಹೋಟೆಲುಗಳ ಶುಚಿತ್ವಕ್ಕೆ ಸಂಬಂಧಪಟ್ಟ ಕೆಲವು ಕೇಸುಗಳು ಕೋರ್ಟಿನಲ್ಲಿ ವಿಚಾರಣೆಗಾಗಿ ಕಾದಿವೆ. ಮುನಿಸಿಪಾಲಿಟಿಯವರು ಗಳು ತಮ್ಮ ಬಾಡಿಗೆದಾರರುಗಳಿಗೆ ಸರಿಯಾದ ಲೆಕ್ಕಗಳನ್ನು ಕಟ್ಟದೆ ಇದ್ದುದನ್ನು ಕಂಡುಹಿಡಿದು ಅಂತಹವುಗಳನ್ನು ನೋಟೀಸು ಮೂಲಕ ಕ್ರಮಪಡಿಸಿ ನೋಟೀಸಿಗೂ ಗಮನಕೊಡದಂಥವರುಗಳನ್ನು ಕೋರ್ಟಿಗೆ ಹಾಜರುಪಡಿಸಿದ್ದಾರೆ. ಇದನ್ನು ದೂರುವುದು ತಪ್ಪು.

ಕಡೆಯದಾಗಿ ವಾಚನಾಲಯದ ಸಲಕರಣೆಗಳನ್ನು ಮಾಡಿಕೊಡಬೇಕೆಂದು ಸಾರ್ವಜನಿಕರಿಂದ ಬಂದ ಅರ್ಜಿ ಪತ್ರದಲ್ಲಿ ಅವರು ಸಲಹೆ ಕೊಡಲು ಒಂದು ಕಮಿಟಿಯನ್ನು ಏರ್ಪಡಿಸಿದ್ದು ನೋಟೀಸು ಮೂಲಕ ಪ್ರಚುರಪಡಿಸಿದ್ದಾಗ್ಯೂ ಸಾರ್ವಜನಿಕರು ಬಂದು ವಾಚನಾಲಯದ ಅಭಿವೃದ್ಧಿ ಬಗ್ಗೆ ತಕ್ಕ ಸಲಹೆಗಳನ್ನು ಕೊಡಲು ಯಾರೂ ಕೂಡ ಮುಂದೆ ಬರಲಿಲ್ಲ. ಮುನಿಸಿಪಾಲಿಟಿಯ ಕಾರ್ಯಕಾರಿ ಮಂಡಲಿಯಲ್ಲಿ ಈಗಲೂ ಸದರಿ ಅರ್ಜಿಯು ಸಂಬಂಧಪಟ್ಟ ಅಧಿಕಾರಿಗಳ ಪರಿಶೀಲನೆಯಲ್ಲಿದ್ದು ವಾಚನಾಲಯದ ಸಲಕರಣೆಗಳು ಶೀಘ್ರದಲ್ಲಿಯೇ ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ. ಅಲ್ಲದೆ ವಾಚನಾಲಯವು ಬೆಳಗ್ಗೆ ೭ ಗಂಟೆಯಿಂದ ೧೧ ಗಂಟೆಯವರೆಗೆ ಸಾಯಂಕಾಲ ೩ ಗಂಟೆಯಿಂದ ೬ ಗಂಟೆಯವರೆಗೆ ತೆರೆದಿದ್ದು ಖಾಯಂ ಆರು ಪೇಪರುಗಳು ಹಾಲಿ ವಾಚನಾಲಯದಲ್ಲಿ ಇಡಲ್ಪಡುತ್ತವೆ. ಆದರೆ ನೀವು ಬರೆದಿರುವಂತೆ ಬರಿ ಎಂಟು ಪೇಪರುಗಳಲ್ಲ. ಈ ವಿಚಾರವನ್ನು ಪರಿಶೀಲಿಸಿದರೆ ನೀವು ಅಸೂಯೆಯಿಂದ ಮತ್ತು ಹೀನೋದ್ದೇಶದಿಂದ ಬರೆದಿರುವುದೆಂಬ ಬಗ್ಗೆ ಸಂದೇಹವೇ ಇಲ್ಲ. 'ಶಾಂತಿ ಕುಮಾರ'

ವಿನೋದದಲ್ಲಿ:

ಬುಶ್ ಶರ್ಟಿನ ಆತ್ಮಕಥೆ.

ಲೇ:—ವೈದ್ಯಗುರು ಎಂ. ಆರ್. ಭಟ್.

'ಭಗಿನೀ, ನಮಸ್ಕಾರ,' ಎಂದು ಶ್ರೀಮತೀ ಸೀರೆದೇವಿಯು ಹೇಳಿದಳು.

'ಎಲೇ,........ನಾನು ಭಗಿನಿಯಲ್ಲ; ಬಂಧು ಸಾಹೇಬನಾಗಿರುವೆನು; ನನ್ನನ್ನು ಜನರು ಬುಶ್‌ಶರ್ಟೆಂದು ಕರೆಯುವರು; ನಿನಗೆ ಸ್ವಲ್ಪ ಭ್ರಮೆಯಾಗಿರಬಹುದೆಂದು ನನಗೆ ತೋರುತ್ತದೆ.' ಎಂದು ಶ್ರೀಮಾನ್ ಬುಶ್‌ಶರ್ಟನು ಉತ್ತರಕೊಟ್ಟನು.

'ಕ್ಷಮಿಸು. ನಾನು ನಿನ್ನನ್ನು ಕುಮಾರೀ ಜಂಪರ್ ರಾಣಿಯೆಂದು ಭಾವಿಸಿದ್ದೆನು; ಅಂದು ನೀನು ಬಹು ದೊಡ್ಡ ಶೂರ ವೀರನಾಗಿದ್ದಿ; ಈ ಪೌರುಷಹೀನ ಅವಸ್ಥೆಯು ನಿನಗೆ ಹೇಗೆ ಸಂಭವಿಸಿತು ? ನಿನ್ನ ಅವಸ್ಥೆಯನ್ನು ನೋಡಿದಾಗ, ನೀನು ಸರ್ಕಸ್ಸಿನಲ್ಲಿ ಜೋಕರನ ಕಾರ್ಯಮಾಡುವುದನ್ನು ಪ್ರಾರಂಭಿಸಿರುವಿಯೆಂದು ಭಾಸವಾಗುತ್ತದೆ.'

ಆ ದಿನ, ರಸ್ತೆ ನಾಟಕದ ಮೇಲೆ, ಮಹಿಮಾಳ ಘಟ್ಟದ ಬದಿಯಲ್ಲಿ, ಮೂರು ಮಾರು ದಕ್ಷ ಕರಕ್ಕೆ ಎರಡು ಕಂಬಗಳಲ್ಲಿ ತೂಗಿಸಿಟ್ಟ ನೀಲಿ ಹಗ್ಗದ ಮೇಲೆ ಶ್ರೀಮತೀ ಸೀರೆ ದೇವಿಯ ಸನ್ನಿಹದಲ್ಲಿ, ತನ್ನ ಕೂದಲನ್ನು ಉಜಿ ಒಣಗಿಸುತ್ತಿದ್ದಳು; ಪಕ್ಕದಲ್ಲಿ, ಮಾರುತನ ಆಘಾತದಿಂದ ಜಬದಾಲ್ಲಿ ತೂಗ ಹಾಕಿದ ಶ್ರೀಮಾನ್ ಬುಶ್‌ಶರ್ಟನು ಬಡಬಡಿಸಿದಾಗ ಶ್ರೀಮತೀ ಸೀರೆದೇವಿಯು ಅವನನ್ನು ಕುಮಾರೀ ಜಂಪರ್ ರಾಣಿಯೆಂದು ಭಾವಿಸಿ, 'ಭಗಿನಿ,' ಎಂದು ಹೇಳಿಯೇ ಬಿಟ್ಟಳು. 'ಯಾವುದಾದರೂ ಸರ್ಕಸ್ಸಿನಲ್ಲಿ ಜೋಕರ ಕೆಲಸ ಮಾಡುತ್ತಿರುವೆಯೋ' ಎಂದು ಅವನೊಡನೆ ಸೀರೆ ದೇವಿಯು ಕೇಳಿದಳು. ಶ್ರೀಮಾನ್ ಬುಶ್‌ಶರ್ಟನು ತನ್ನ ಅವಸ್ಥೆಯನ್ನು ಕಂಡು, ಲಜ್ಜಿತನಾದನು; ಸ್ವಲ್ಪ ರೇಗಿ, ರಂಪಾಗಿ ಥಳಥಳಿಸಿದನು; ಅನಂತರ, ಸ್ವಲ್ಪ ತಡೆದು, ಬಾಗಿ ಬಳುಕಿ ಬುಶ್‌ಶರ್ಟನು ತನ್ನ ಆತ್ಮಕಥೆಯನ್ನು ಹೇಳಲು ಪ್ರಾರಂಭಿಸಿದನು. ಹತ್ತಿರವೇ ತೂಗಾಡಿಸಿದ ಒಳ ಅಂಗಿಯು, ಮಂದಹಾಸದ ಬಳಿಕ, ಬಹಳ ಅಭಿರುಚಿಯಿಂದ ಶ್ರೀಮಾನ್ ಬುಶ್‌ಶರ್ಟನ ಆತ್ಮಕಥೆಯನ್ನು ಕೇಳಿತು.

ಬುಶ್‌ಶರ್ಟನು ಹೀಗೆ ಹೇಳಿದನು:—

'ಭಗಿನೀ! ಇಂದಿಗೂ ನೀನು ಭಾರತೀಯ ಸಂಸ್ಕೃತಿಯೊಡನೆ, ಅಂಟಿಕೊಂಡಿರುತ್ತೀ; ಆದರಿಂದಲೇ, ನಿನಗೆ ನಾನು ಜೋಕರನೆಂದು ಕಾಣುತ್ತೇನೆ; ಸಭ್ಯತೆಯ ಓಟದಲ್ಲಿ ಪಾಶ್ಚಿಮಾತ್ಯ ನಡೆಯ ರೀತಿಯಲ್ಲಿ ನಾಲ್ಕು ಹೆಜ್ಜೆ ಮುಂದೆ ಹೋಗಿರುತ್ತೇನೆ; ನೀನು ಏನು ತಿಳಿದೆಯೊ!'

'ಒಂದು ಕಾಲದಲ್ಲಿ ನಾನು ಖಾಕೀ ಕೋಟನ್ನು ಒಲಿಸಿಕೊಂಡಿದ್ದೆನು; ಒಮ್ಮೊಮ್ಮೆ ಹೆಸರು ಕೋಟು ಸಹಾ ನನ್ನದಾಗಿತ್ತು; ನನ್ನ ಎರಡು ಉದ್ದ ತೋಳುಗಳು ಮತ್ತು ಅವುಗಳಲ್ಲಿ ಎರಡೆರಡು ಬಟನುಗಳು ಇದ್ದವು. ಅದೊಂದು ಕಾಲ ನನ್ನ ನಡುಕಟ್ಟು ಸೈನಿಕ ಆಫೀಸರರ ಸೊಂಟದಂತೆ, ಬಿಗಿಯಾಗಿ ಹೊಟ್ಟೆಯನ್ನು ಕಟ್ಟುತ್ತಿತ್ತು. ನನ್ನ ಭುಜಗಳ ಮೇಲೆ ಒಂದೊಂದು ಉಂಗುರವಿತ್ತು; ಅದರ ಮಧ್ಯದಿಂದ ಹೆಂಗಸರ ಜಡೆಯಂತಿರುವ ಸೈನಿಕರ ದಾರವು ಹೊರ ಬಂದು ಮೇಲದಲ್ಲಿದ್ದ ಆಫೀಸರನ ಟೋಪಿಗೆ ಕಟ್ಟಲ್ಪಡುತ್ತಿತ್ತು; ನನಗೆ ನಾಲ್ಕು ಜೇಬುಗಳಿದ್ದವು; ಅವುಗಳಿಗೆಲ್ಲಾ ಮುಚ್ಚಳಿಗೆಗಳಿದ್ದವು. ನನ್ನ ಎದೆಯ ಎಡಬದಿಯ ಮೇಲೆ, ಆಫೀಸರನ ಚಿಹ್ನೆಯಿತ್ತು; ಒಂದು ಶಿಳ್ಳೆಗಿನ, ಉದ್ದವಾದ, ಬಣ್ಣ ಬಣ್ಣದ ಪಟ್ಟಿಯು ಸಹಾ ಅದಕ್ಕಿತ್ತು.'

'ಇದೆಲ್ಲಾ ಗತ ವಿಶ್ವಯುದ್ಧಗಳಿಗಿಂತ ಮುಂಚಿನ ವಿಷಯವಾಗಿದೆ; ಸುಮಾರು ಸನ್ ೧೯೦೮ರ ಶತಕದ ವಿಷಯವು ಇದು ನನ್ನ ಜೀವನದ ಶೌರ್ಯದ ಕಾಲವಾಗಿತ್ತು; ಆದರೆ, ಆ ಕಾಲದಲ್ಲಿ ನಾನು ಅಷ್ಟು ಸಭ್ಯನಾಗಿರಲಿಲ್ಲ. ಸ್ವಲ್ಪ ಕಾಲದ ನಂತರ, ನಾನು ಸೈನಿಕ-ಉಡುಪನ್ನು ಬಿಟ್ಟು ಬಿಟ್ಟು, ಬಜಾರುಗಳಿಗೆ ಹೊರಟು ಬಂದೆನು. ಅನಂತರ ನಾನು ಬಿಳಿ ಹಾಗೂ ಅನ್ಯ ಬಣ್ಣಗಳನ್ನು ಒಲಿಸಿಕೊಳ್ಳಲು ಪ್ರಾರಂಭಿಸಿದೆನು. ಸನ್ ೧೯೩೦ರಲ್ಲಿ ನನ್ನ ಶೋಭೆಯು ಹೆಚ್ಚು ಬಿದ್ದಿತ್ತು. ಅಂದು, ನಾನು ನನ್ನ ಭುಜಗಳ ಮೇಲಿದ್ದ ಉಂಗುರಗಳನ್ನು ತೊಲಗಿಸಿದೆನು. ನನ್ನ ತೋಳುಗಳನ್ನು ಅರ್ಧವಾಗಿಸಿದೆನು. ನಾಲ್ಕು ದೊಡ್ಡ ಜೇಬುಗಳ ಬದಲಿಗೆ, ಒಂದು ಸಣ್ಣ ಜೇಬು ಎದೆಯ ಮೇಲೆ ಇರುವುದು ಉತ್ತಮವೆಂದು ಕಾಲೇಜು ವಿದ್ಯಾರ್ಥಿಗಳು ಅಂದರು. ನಡುಕಟ್ಟಿನ ಉಪಯೋಗ ಕೇವಲ ಸೈನಿಕ ಆಫೀಸರರೇ ಮಾಡಲಿಯೆಂದು ಸಹ ಅವರು ಹೇಳಿದರು.'

'ಮೂರು ಜೇಬು ಎರಡು ಉಂಗುರ, ನಡುಕಟ್ಟು ಮತ್ತು ಅರ್ಧ ಅರ್ಧ ತೋಳುಗಳನ್ನು ಮುಂದಿಸಿ ಕಳಚಿಸಿಕೊಟ್ಟ ಬಳಿಕ, ಬಣ್ಣ ಬಣ್ಣದ ಮನಮೋಹಕ ರೂಪವನ್ನು ನೋಡಿ ಅನೇಕ ಐಶ್ವರ್ಯವಂತರ ಮಕ್ಕಳು ನನ್ನೊಡನೆ ಮಿತ್ರತ್ವವನ್ನು ಕಟ್ಟಿಕೊಂಡರು. ರೇಶ್ಮೆ, ಹಾಗೂ ಲಿನನ್ ಧಾರಣಮಾಡಿ, ಅವರೊಡನೆ ಉಪಹಾರ ಗೃಹಗಳಲ್ಲಿ, ಮಧು ಶಾಲೆಗಳಲ್ಲಿ ಮತ್ತು ಸಿನೇಮಾಗೃಹಗಳಲ್ಲಿ ಹೋಗಿ ನಿಂತೆನು. ಪಾಪರನ್ನಿಗಳಲ್ಲಿ ಕಾಲುಗಳನ್ನು ಅಪಗಿಸಿರುವ ದೊಡ್ಡ ದೊಡ್ಡ ಆಫೀಸರರ ಮನೆಗಳಲ್ಲಿ ಹೋಗಿ, ನೆಲೆಸಿದೆನು.'

'ನನಗೆ ಈಗ ನನ್ನ ಜೇಬು ಹಾಗೂ ಬಟನು ಕೆಟ್ಟದೆನಿಸಿತು; ನಾನೀಗ ಉಳಿದ ಒಂದು ಜೇಬನ್ನು ಸಹ ಹಾಕಿಬಿಟ್ಟೆನು; ಮತ್ತು ಸುಂದರ ಸುಂದರ ಬಟನುಗಳನ್ನು ಹಾಕಿಸಿದೆನು. ಮಕ್ಕಳ ಉಣ್ಣೆ ಬಟ್ಟೆಗಳಲ್ಲಿ ಕಟ್ಟಿಸಿದಂತೆ, ನಾನು ಸಹ ಬಟನುಗಳನ್ನು ಹಚ್ಚಿಸಿದೆನು. ನನ್ನ ಗದ್ದಿಗೆ ಮೇಲೆ ಪ್ಲಾಸ್ಟಿಕಿನಲ್ಲಿರುವ ಸಣ್ಣ ಸಣ್ಣ ಮುತ್ತುಗಳಂತೆ ಬಟನುಗಳು ಕಾಣಿಸಿದವು. ಅನಂತರ, ಯುದ್ಧದಲ್ಲಿ ಕಡಿಮೆಯಾದೆನು; ಕೆಲವು ಜನರು ಬಟನುಗಳ ಬದಲಾಗಿ, ಸರಪಳಿಯನ್ನು ಸಹಾ ಹಾಕಲು ಆರಂಭಮಾಡಿದರು.

'ಇದೀಗ ಎಲ್ಲಾ ಕಡೆಗಳಲ್ಲಿಯೂ ನನ್ನ ರಾಜ್ಯವು ಕಾಣಿಸುತ್ತದೆ. ನಾನು ಮಂತ್ರಿಗಳ ಹಾಗೂ ರಾಜ್ಯಪಾಲರ ಶರೀರಗಳ ಮೇಲೆ ಖದ್ದರ್ ಧಾರಣಮಾಡಿ ಸುಶೋಭಿತನಾಗಿರುತ್ತೇನೆ. ಒಂದು ಧೋತಿಯುಳ್ಳಿರುವಷ್ಟು ವಸ್ತ್ರವನ್ನು ಸಹಾ ಭಂಜಿಸುವುದಿಲ್ಲವೆಂಬುದು ನಿಜ. ಇಂದೀಗ ಆಫೀಸುಗಳ ಕ್ಲಾರ್ಕರಿಂದ ಪ್ರಾರಂಭಿಸಿ, ಸೇಟಿಗಳ ತನಕ, ಸಕಲರ ಮನಸ್ಸಿನಲ್ಲಿ ರಾಜ್ಯಭಾರ ನಡೆಸುವೆನು. ಕೆಲವು ಸಾರಿ, ಒಬ್ಬ ಸುಂದರನು ಬಹಳ ಕಾಂತಿಯುಳ್ಳ, ಹಾಗೂ ಆಕರ್ಷಕ ಬಣ್ಣದ ಜೋಡಿನ ಬುಶ್‌ಶರ್ಟ್ ಧರಿಸಿದುದನ್ನು ಸಹ ಅವಶ್ಯ ನೀವು ಕಂಡಿರಬಹುದು. ಪ್ರಥಮ ಪುತ್ರನು ಜನಿಸಿದ ಸ್ವಲ್ಪ ಸಮಯದೊಳಗೆ, ಉಪ ಪುತ್ರಯೋಗಿಸುವಾಗ, ಅವನೂ ಬುಶ್‌ಶರ್ಟ್ ಸಹ ತೊಟ್ಟಿರುವುದನ್ನು ನೀವು ಕಾಣುತ್ತೀರಿ. ಕಾಲೇಜಿನ ವಿದ್ಯಾರ್ಥಿಗಳು ಸಹ ತೊಡುತ್ತಾರೆ. ವಿದ್ಯಾರ್ಥಿಗಳ ಪ್ರಶಂಸೆ ಮಾಡಿದಷ್ಟು ಕಡಿಮೆಯೇ ಸರಿ. ಅವರು ನನ್ನನ್ನು ಸಭ್ಯತೆಯ ದೇವತೆಯಾಗಿ ರಚಿಸಿರುವರು. ಮಧುರಾ, ಮುರ್ಶಿದಾಬಾದ, ಕಾಶ್ಮೀರ, ಚೀನಾ ಹಾಗೂ ಜಪಾನಿನ ರೇಶ್ಮೆ, ಜನರಸೀ ಜೋಜೆಟ್, ಮಲ್‌ಮಲ್, ಪಡದೆಯ ವಸ್ತ್ರ, ಜಂಪರದ ವಸ್ತ್ರ, ಇನ್ನೂ ಹಲವು ವಿಧದ ವಸ್ತ್ರಗಳಲ್ಲಿ ನನ್ನ ಮಾನವು ವೃದ್ಧಿಯಾಗಿದೆ. ಸುಂದರಿಯರ ಚಿತ್ರ, ಕತ್ತೆಗಳಿಂದ ಪ್ರಾರಂಭಿಸಿ ಒಂಟೆಗಳ ತನಕ ಸಕಲ ಪ್ರಾಣಿಗಳ ಚಿತ್ರ; ಹಡಗಿನಿಂದ ಹಿಡಿದು ಎತ್ತಿನ ಗಾಡಿಯ ತನಕದ ಸಕಲ ವಾಹನಗಳ ಚಿತ್ರ, ಇನ್ನಿತರ ಚಿತ್ರಗಳೂ ನನ್ನ ಮೇಲೆ ಅಂಕಿತ ಹಾಗೂ ಚಿತ್ರಿತವಾಗಿವೆ.

'ನೀವು ನೋಡಿರಬಹುದು. ನನ್ನ ತೋಳುಗಳು ಮತ್ತು ಸೊಂಟವು, ನನ್ನ ತಂಗಿ ಜಂಪರ್ ರಾಣಿಯಂತೆ, ಬಗ ಬಾಗಿವೆ; ಮಾತ್ರವಲ್ಲ, ನನ್ನ ಎತ್ತರವು ಸಹ ಕಡಿಮೆ ಬಂದಿದೆ. ನನ್ನ ಜೀವನದಲ್ಲಿ ಒಂದೇ ಅಭಿಲಾಷೆಯು ಉಳಿದಿದೆ. ಎಲೇ ಭಗವಾನನೇ, ಪಂಜಾಬೀ ಕಮೀಜ, ಸ್ವಾಮೀಕಂಠಿ (ಬಾಡಿ), ಮದ್ರಾಸೀ ರವಕೆ, ಅಥವಾ ಆಫೀಸರರ ಪತ್ನಿಗಳ ಬ್ಲೌಜುಗಳಂತೆ, ನನ್ನನ್ನು ಗಂಟು ಹಾಕಿ ಕಟ್ಟಿ, ಧರಿಸುವ ದಿನವು ಶೀಘ್ರವೇ ಬರಲಿಯೆಂದು ನಿನ್ನನ್ನು ನಾನು ಬೇಡಿಕೊಳ್ಳುತ್ತೇನೆ. ನವ ಯುವಕರ ಬಾಗಿ ಬಳುಕುವ ಕೋಮಲ ಸೊಂಟವು ನಗ್ನವಾಗಿಯೇ ಇರಬೇಕೆಂದು ನನಗೆ ಇನ್ನೊಂದು ಅಭಿಲಾಷೆಯಿದೆ. ಆದರೆ, ಅಕ್ಕ ನೋಡಿರಿ; ಮಡಿವಾಳನು ಬಂದಿರುವನು; ಈಶ್ವರನ ಕೃಪೆಯಿಂದ ಒಂದೇ ಮೂಟೆಯಲ್ಲಿ ಕಟ್ಟಿ, ಅವನು ಕೊಂಡು ಹೋದರೆ ಒಳ್ಳೇದಾದೀತೆಂದು ಹೇಳಬಿಡುವೆನು.'

ಶ್ರೀಮತೀ ಸೀರೆ ದೇವಿಯು ಒಳ ಅಂಗಿಯ ಕಡೆಗೆ ನೋಡಿದಳು; ಮತ್ತು ನಕ್ಕಳು. ಒಳಅಂಗಿಯೂ ಸಹ ಶ್ರೀಮಾನ್ ಬುಶ್‌ಶರ್ಟನ ಸಭ್ಯತೆಯ ಕಲ್ಪನೆ ಮಾಡಿ, ಮಂದಹಾಸದಿಂದ ನಗಾಡಿತು.

——— ಪ್ರಭಾತ

ಹೈದರಾಬಾದ ನವಾಬ ದಂಪತಿಗಳಿಗೆ ೧೫ ಲಕ್ಷ ರೂಪಾಯಿ ದಂಡ

ಆ ಹಿಂದೆ ೫ ಲಕ್ಷ ರೂ. ಬೆಲೆಯ ರತ್ನಾಭರಣಗಳನ್ನು ಕಳುವಿನಿಂದ ಭಾರತದ ಹೊರಗೆ ಒಯ್ಯಲು ಯತ್ನಿಸಿದ ಹೈದರಾಬಾದು ಸರದಾರ ಮನೆತನದ ನವಾಬ ಜಾಹೀರ ಯಾರ ಜಂಗಬಹದ್ದೂರ್ ಹಾಗೂ ಅವರ ಪತ್ನಿ, ಬೇಗಂ ಸಹಿಬ್—ಉನ್ನಿಸಾ ಇವರಿಗೆ ಕ್ರಮವಾಗಿ ಹತ್ತು ಲಕ್ಷ ರೂ ಹಾಗೂ ಐದು ಲಕ್ಷ ರೂ. ಗಳ ದಂಡಗಳನ್ನು ಮುಂಬಯಿ ಸುಂಕದ ಕಲೆಕ್ಟರರು ವಿಧಿಸಿದ್ದಾರೆ.

ಸಾಗರ ಸುಂಕ ಕಾಯಿದೆ ಮೇರೆಗೆ ಇಂತಹ ಅಪರಾಧಗಳಿಗೆ ವಿಧಿಸಿದ ದಂಡಗಳಲ್ಲಿ ಇದೇ ಎಲ್ಲಕ್ಕೂ ಹೆಚ್ಚಿನದಾಗಿದೆ. ಯಾತಕ್ಕೂ ರತ್ನಾಭರಣಗಳನ್ನು ಸರಕಾರಕ್ಕೆ ಜಮೆ ಮಾಡಬೇಕೆಂದು ಕಲೆಕ್ಟರರು ಆಜ್ಞಾಪಿಸಿದ್ದಾರೆ.

ಎಪ್ರಿಲ್ ೧೯ರಂದು ಈ ದಂಪತಿಗಳು ಯುರೋಪಿನ ಕಡೆ ಹೋಗುವ ಏರ್ ಇಂಡಿಯಾ ವಿಮಾನವನ್ನು ಹತ್ತುವವರಲ್ಲಿದ್ದರು. ಆ ಕಾಲಕ್ಕೆ ಅವರನ್ನು ಶೋಧಿಸಿ ರತ್ನ, ವಜ್ರ, ಪಚ್ಚೆ, ಮಾಣಿಕ್ಯಗಳಿಂದ ಖಚಿತವಾದ ಆಭರಣಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಯಿತು.

ಮುನ್ನೆಚ್ಚರಿಕೆಯ ಮೇರೆಗೆ ಸುಂಕ ನಿಲ್ದಾಣದವರು ನವಾಬರ ಸಣ್ಣ ಪೆಟ್ಟಿಗೆಯಲ್ಲಿ ಆಭರಣವನ್ನು ಕಂಡು ಹಿಡಿದರು. ಅನಂತರ ಅವರ ಸಂಶಯ ಹೆಚ್ಚಾಗಿ ಬೇಗಂರವರು ತನ್ನ [illegible] ಆಭರಣಗಳನ್ನು ಬಯಲಿಗೆಳೆದರು.

ಸುಂಕದ ನಿಯಮಗಳ ಮೇರೆಗೆ ಪರದೇಶಕ್ಕೆ ಹೋಗುವ ಪ್ರಯಾಣಿಕನು ೫ ಸಾವಿರ ರೂ. ಮೌಲ್ಯದಷ್ಟು ಬೆಲೆಯ ರತ್ನಾಭರಣಗಳನ್ನು ಒಯ್ಯಬಹುದು. ಹೆಚ್ಚಿನ ಆಭರಣಗಳನ್ನು ಒಯ್ಯಬೇಕಾದರೆ ಭಾರತದ ರಿಜರ್ವ್ ಬ್ಯಾಂಕಿನ ಪರವಾನಗಿ ಪಡೆಯಬೇಕಾಗುವುದು. ಈ ದಂಪತಿಗಳು ತಮ್ಮ [illegible] ರೂ ಬೆಲೆಯ ಆಭರಣಗಳನ್ನು ಒಯ್ಯಲು ಬ್ಯಾಂಕಿನ ಅಪ್ಪಣೆಯನ್ನು ಪಡೆದಿದ್ದರು.

ಅಪರಾಧದ ಸ್ವರೂಪ ಹಾಗೂ ಅಪರಾಧಿಗಳ ಸ್ಥಾನಮಾನ, ಅವರು ತ್ಯಜಿಸಿದ ವಿಧಾನ ಇವುಗಳನ್ನು ಅನುಲಕ್ಷಿಸಿ ಇಷ್ಟೊಂದು ಮಹಾ ದಂಡವನ್ನೂ, ರತ್ನಾಭರಣಗಳ ಜಪ್ತಿಯನ್ನೂ ವಿಧಿಸುವುದಾಗಿ ಕಲೆಕ್ಟರರಾದ ಶ್ರೀ ಪಿ. ಎನ್. ಸತ್ಯನಾಥನ್‌ರವರು ತಮ್ಮ ಆಜ್ಞೆಯಲ್ಲಿ ವಿಧಿಸಿದ್ದಾರೆ.

ಡಾ. ಪಟ್ಟಾಭಿಯವರು ಮಧ್ಯಪ್ರದೇಶದ ಗವರ್ನರ್

ಮಧ್ಯಪ್ರದೇಶದ ರಾಜ್ಯಪಾಲರಾದ ಶ್ರೀ ಮಂಗಲದಾಸ ಪಕ್ವಾಸಾ ಅವರು ನಿವೃತ್ತರಾಗಲಿದ್ದು ಅವರ ಸ್ಥಳಕ್ಕೆ ಡಾ. ಪಟ್ಟಾಭಿ ಸೀತಾರಾಮಯ್ಯನವರನ್ನು ಗವರ್ನರರಾಗಿ ನೇಮಿಸಲಾಗಿದೆ.

॥ ವಿವಿಧ ವಾರ್ತೆಗಳು ॥

ಕೋಜೆಯ ಬಂಡಾಯ.

ಕೊರಿಯಾದ ಕದನ ರಂಗದಲ್ಲಿ ಈಚೆಗೆ ಕೆಲವು ವಿಶೇಷ ಘಟನೆಗಳು ನಡೆದುವು—ಕೋಜೆ ದ್ವೀಪದಲ್ಲಿ ಕಮ್ಯೂನಿಸ್ಟ ಕೈದಿಗಳು ಶಿಬಿರದ ನಿಯಮಗಳನ್ನು ಉಲ್ಲಂಘಿಸಿ, ಮೇಲಧಿಕಾರಿಗಳ ಮೇಲೆ ಹಲ್ಲೆಯನ್ನೂ, ಸ್ವತಃ ಬಂಡಾಯವನ್ನೂ ಹೂಡುತ್ತಿದ್ದರು. ಈ ಕೈದಿಗಳನ್ನು ಬೇರೆ ಬೇರೆ ಗುಂಪುಗಳನ್ನಾಗಿ ಮಾಡಿ ದೂರ ದೂರ ಇಡಲು ಈಗ ಸಂಯುಕ್ತರಾಷ್ಟ್ರ ಸಂಘದ ಸೇನಾಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ. ಪರಿಸ್ಥಿತಿ ಒಮ್ಮೆಗೆ ವಿಷಮಾವಸ್ಥೆಗೆ ಮುಟ್ಟಿದರೆ—ಮರುದಿನವೇ ತಣ್ಣಗಾಗುತ್ತದೆ. ಹೀಗೆ ಕೈದಿಗಳ ಪ್ರಕರಣ ಒಂದೆಡೆ ನಡೆಯುತ್ತಿರುವಾಗ—ಪಾನ ಮುಂಜಾಮಿನ ಕದನ ವಿರಾಮ ಮಾತುಕತೆಗಳು ನಿಂತುಹೋಗಿವೆ. ತಮ್ಮ ಅಪ್ಪಿರಿ ಸೂಚನೆಯಲ್ಲಿ ಯಾವುದೇ ಪರಿವರ್ತನೆ ಸಾಧ್ಯವಿಲ್ಲವೆಂದೂ—ಕೈದಿಗಳ ವಿನಿಮಯದಲ್ಲಿ ಅನುಸರಿಸಲಿರುವ ತತ್ವದ ಬಗ್ಗೆ ಮಾಡಿದ ಈ ಸೂಚನೆಯನ್ನು ಚೆನ್ನಾಗಿ ಕಮ್ಯೂನಿಸ್ಟರು ಪರಾಮರ್ಶಿಸಬೇಕೆಂದೂ— ತದನಂತರವೇ, ಸಂಧಾನ ಮಾತುಕತೆಗಳು ಮುಂದರಿಯಬಹುದೆಂದೂ ಸಂಯುಕ್ತ ರಾಷ್ಟ್ರ ಸಂಘದವರು ಹೇಳಿದ್ದಾರೆ.

ಕೊರಿಯಾ.

ಕೊರಿಯಾ ಯುದ್ಧ ರಂಗದಲ್ಲಿ ಇಬ್ಬಣಗಳ ಕಾದಾಟವೂ ಅವಿರಾಮವಾಗಿ ಮುಂದರಿಯುತ್ತಿದೆ. ಇದರ ನಡುವೆ ಪಶ್ಚಿಮ ಸೇನಾಧಿಪತಿ ಜನರಲ್ ಮಾರ್ಕ ಕ್ಲಾರ್ಕರ ಆಹ್ವಾನವನ್ನು ಅಂಗೀಕರಿಸಿ, ಬ್ರಿಟನಿನ ಸಂರಕ್ಷಣಾ ಮಂತ್ರಿ ಲಾರ್ಡ್ ಅಲೆಕ್ಸಾಂಡರ್ ಕದನ ರಂಗಕ್ಕೆ ಭೇಟಿ ಕೊಟ್ಟರು. ಸಾಮಾನ್ಯವಾಗಿ ಕೊರಿಯದಲ್ಲಿ ನಡೆಯುತ್ತಿರುವ ಘಟನೆಗಳು ಬ್ರಿಟನಿನ ಮನಸ್ಸಿಗೆ ಅಸಮಾಧಾನವನ್ನುಂಟು ಮಾಡಿವೆ—ಈಚೆಗೆ ಕೈದಿಗಳ ಬಂಡಾಯದ ಸುದ್ದಿಯಿಂದ ಅದು ಮತ್ತಷ್ಟು ವ್ಯಾಕುಲಗೊಂಡಿದೆ. ಕಾರಣ ಪರಿಸ್ಥಿತಿಯ ಸ್ಪಷ್ಟ ಕಲ್ಪನೆಯನ್ನು ಮಾಡಿಕೊಳ್ಳಲಿಕ್ಕಾಗಿ ತನ್ನ ರಕ್ಷಣಾ ಸಚಿವರನ್ನೇ ಕಳಿಸಿಕೊಡಲು ಅದು ಮುಂದಾಯಿತು. ಕೊರಿಯದ ಯುದ್ಧವನ್ನು ಹಬ್ಬಿಸುವುದು ಬೇಕಾಗಿಲ್ಲ—ಆದರೆ ಮಂಚೂರಿಯಾದಲ್ಲಿ ಚೀನೀಯರು ಬಹಳ ಸೈನ್ಯ ಸಂಗ್ರಹವನ್ನು ಮಾಡಿಟ್ಟಿರುವರು. ಅದಲ್ಲದೆ ಎಲ್ಲಿಯಾದರೂ ಅಣುಬಾಂಬಿನ ಧಾಳಿಯಾಗುವುದಿದ್ದರೆ, ಅದರಿಂದ ಸಂರಕ್ಷಣೆ ಪಡೆಯುವ ಉದ್ದೇಶದಿಂದ ಈಗಲೇ ಆಳವಾದ ದೊಡ್ಡ ದೊಡ್ಡ ಕಂದಕಗಳನ್ನು ತೋಡುತ್ತಿರುವರು. ಅವರ ಜನಬಲವು ಅಪಾರವಾಗಿದೆ—ಹಾಗೆಂದ್ರು ಕೊಲೆಯ ಯುದ್ಧ ಈ ಕ್ಷಣದಲ್ಲಿ ಯೋಜನು ಆದರೂ ಸಂಭಾವನೆ ಸಂಯುಕ್ತ ರಾಷ್ಟ್ರ ಸಂಘಕ್ಕೇ ನೇಸೇ ಅದೆ ಎಂಬಲ್ಲಿ ಸಂದೇಹ ಬೇಡ—ಎಂದು ಬ್ರಿಟಿಷ್ ಸಂರಕ್ಷಣಾ ಮಂತ್ರಿಗಳ ಹೇಳಿಕೆ.

ಅರಸೊತ್ತಿಗೆ ಇನ್ನಿಲ್ಲ.

ಕಾಶ್ಮೀರದ ನಿರ್ಣಯ.

ಮೂಲ ತತ್ವಗಳನ್ನು ನಿರ್ದೇಶಿಸುವ ಉದ್ದೇಶದಿಂದ ಮುಖ್ಯ ಮಂತ್ರಿ ಶೇಖ ಅಬ್ದುಲ್ಲಾರ ಅಧ್ಯಕ್ಷತೆಯಲ್ಲಿ ಕಾಶ್ಮೀರವು ನೇಮಿಸಿದ್ದ ಸಮಿತಿಯೊಂದು ರಾಜ್ಯದ ಮರಿಷ್ಠರಾಗಿ ಚುನಾಯಿತ ವ್ಯಕ್ತಿ ಇರಬೇಕೆಂದು ಸೂಚಿಸಿದೆ. ಈಗಿರುವ ವಂಶಪರಂಪರಾಗತವಾದ ಅರಸೊತ್ತಿಗೆಯನ್ನು ನಿರ್ಮೂಲಿಸಬೇಕೆಂದು ಅದು ಶಿಫಾರಸು ಮಾಡಿದೆ. ಇದನ್ನು ಪರ್ಯಾಲೋಚಿಸಿ ಕಾಶ್ಮೀರ ಘಟನಾ ಸಮಿತಿಯು ತನ್ನ ಒಮ್ಮತದ ಒಪ್ಪಿಗೆಯನ್ನೂ ನೀಡಿದೆ. ಹೀಗಾಗಿ—ಇನ್ನು ಮುಂದೆ ಕಾಶ್ಮೀರದಲ್ಲಿ ಅರಸುಮನೆತನವು ಪರಂಪರಾಗತವಾದ ಅಧಿಕಾರದ ಬಲದಿಂದ ರಾಜ್ಯದ ವರಿಷ್ಠ ಪದವಿಯನ್ನು ಅಲಂಕರಿಸಲು ಬಾರದು. ಜನರು ಚುನಾವಣೆಯ ಮೂಲಕ ರಾಜ ಪ್ರಮುಖನನ್ನು ಆರಿಸಬೇಕಾಗುವುದು. ಭಾರತದ ರಾಜ್ಯಘಟನೆಯಂತೆ ಯಾವುದೇ ಸಂಸ್ಥಾನದಲ್ಲಿ ಜನರಿಂದ ಚುನಾಯಿತನಾದ ರಾಜಪ್ರಮುಖನಿರಬಾರದು— ರಾಷ್ಟ್ರಾಧ್ಯಕ್ಷರೇ ಅವನನ್ನು ನೇಮಿಸುವವರು ಹೊರತು, ಜನರು ಈ ವಿಷಯದಲ್ಲಿ ಸ್ವಹ ಕಳಾರರು. ಕಾಶ್ಮೀರವು ಭಾರತದೊಡನೆ ಇಟ್ಟುಕೊಂಡಿರುವ ಪ್ರಕೃತ ಸಂಬಂಧವು ಈಗಿನ ನಿರ್ಣಯದ ಪರಿಣಾಮವಾಗಿ ಕೆಡಬಹುದೆಂಬ ಸಂಶಯವೆದ್ದಿದೆ. ಆದರೆ ಮೊನ್ನೆ ಪ್ರಧಾನಿ ನೆಹರೂ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದೊಡನೆ ಮಾತನಾಡುವಾಗ ಇದು ತೊಂದರೆಕೊಡುವ ನಿರ್ಣಯವಲ್ಲವೆಂದು ಅಭಿಪ್ರಾಯಪಟ್ಟರು. ಭಾರತದೊಡನೆ ವಿದೇಶ ವ್ಯವಹಾರ, ಸಂರಕ್ಷಣೆ ಮತ್ತು ಸಾರಿಗೆ ಸಾಕರ್ಯಗಳ ಮಟ್ಟಿಗೆ ಮಾತ್ರ ಕಾಶ್ಮೀರ ಸೇರ್ಪಡೆಹೊಂದಿದೆ. ಉಳಿದ ವಿಷಯಗಳಲ್ಲಿ ಅದಕ್ಕೆ ಸ್ವಾಯತ್ತಾಧಿಕಾರವಿದೆ. ಕಾಶ್ಮೀರ ಘಟನಾ ಸಮಿತಿಯು ರಾಜ್ಯಕ್ಕೊಂದು ಘಟನೆ ನಿರ್ಮಿಸಬೇಕೆಂಬ ತತ್ವವನ್ನು ಭಾರತವು ಮಾನ್ಯಮಾಡಿದೆ. ಆದುದರಿಂದ ಅರಸೊತ್ತಿಗೆಯನ್ನು ನಿರ್ಮೂಲಿಸುವ ನಿರ್ಣಯದಿಂದ ಚಿಂತೆಗೊಳ್ಳಬೇಕಿಲ್ಲ ಎಂದು ನೆಹರೂರ ಹೇಳಿಕೆ. ಹೀಗಿದ್ದರೂ ಕಾಶ್ಮೀರವು ಭಾರತದ ರಾಜ್ಯಘಟನೆಯ ಕಾಠಿಮಿತಿಯನ್ನು ಮನ್ನಿಸಿ, ಅದನ್ನು ಅನುಸರಿಸಿ ನಡೆಯಲು ನೋಡುತ್ತಿಲ್ಲ ಎಂಬುದಕ್ಕೆ ಇನ್ನೂ ಕೆಲವು ಉದಾಹರಣೆಗಳಿವೆ—ರಾಜ್ಯದಲ್ಲಿ ಭೂಸುಧಾರಣೆ ಮಾಡುವಾಗ ಭೂಮಾಲಿಕರಿಗೆ ಏನೊಂದೂ ಪರಿಹಾರ ಕೊಡಲಿಲ್ಲ. ಮೊನ್ನೆ ಮೊನ್ನೆ ಕಾಶ್ಮೀರಕ್ಕೊಂದು ರಾಷ್ಟ್ರೀಯ ಧ್ವಜವಿರಬೇಕೆಂದು ನಿರ್ಣಯಿಸಿ, ಅದರ ಸ್ವರೂಪವನ್ನೂ ನಿರ್ಧರಿಸಿದೆ. ಈಚೆಗೆ ಶೇಖ್ ಅಬ್ದುಲ್ಲಾರು ಸಾರ್ವಜನಿಕ ಸಭೆಯಲ್ಲಿ ಮಾಡಿದ ಭಾಷಣ ಇತ್ಯಾದಿಗಳು ಕಾಶ್ಮೀರ ಪ್ರಕರಣದಲ್ಲಿ ಭಾರತದ ಸ್ಥಾನವೇನೆಂಬುದನ್ನೇ ಪ್ರಶ್ನಿಸುವಂತಿವೆ.

ಶಿವಯ್ಯಗ್ಗ

ಎಲಿಜಬೆತ್ ರಾಣಿಯ ಪಟ್ಟಾಭಿಷೇಕ

ಬ್ರಿಟಿಷ್ ರಾಣಿ ಎಲಿಜಬೆತಳ ಪಟ್ಟಾಭಿಷೇಕವನ್ನು ೧೯೫೩ನೇ ಜೂನ್ ೨ರಂದು ಜರುಗಿಸುವುದೆಂದು ನಿರ್ಣಯವಾಗಿದೆ. ಈ ಪಟ್ಟಾಭಿಷೇಕವನ್ನು ಅತ್ಯಂತ ಸ್ವಾಭ್ರಮದಲ್ಲಿ ಜರುಗಿಸುವರೆ ಖರ್ಚಿನ ಮಟ್ಟಿಗೆ ಯಾವುದೊಂದು ರೀತಿಯಲ್ಲಿ ಕೈ ಹಿಂದೆ ಸೆಳೆಯಬಾರದಾಗಿ ಬ್ರಿಟಿಷ್ ಪ್ರಧಾನ ಮಂತ್ರಿ ವಿ || ವಿನ್ಸ್ಟನ್ ಚರ್ಚಿಲ್ಲರ ಆಜ್ಞೆಯಾಗಿದೆ. ಈ ಮೊದಲು ಬ್ರಿಟಿಷ್ ಸಾರ್ವಭೌಮರ ಪಟ್ಟಾಭಿಷೇಕದ ಕುರಿತು ವ್ಯವಸ್ಥೆಯನ್ನು ಅರಸು ಮನೆತನದ ಸದಸ್ಯರೊಬ್ಬರು ಚೆಯರ್ಮನರಾಗಿದ್ದ ಪ್ರೀವಿ ಕೌನ್ಸಿಲ್ ನಡೆಸುವುದಿತ್ತು. ಆದರೆ ಈ ಬಾರಿ ಪ್ರತ್ಯೇಕವಾಗಿ ಪಟ್ಟಾಭಿಷೇಕ ಸಮಿತಿಯೊಂದು ರಚನೆಯಾಗಿದೆ. ಈ ಸಮಿತಿಯಲ್ಲಿ ಮಂತ್ರಿಮಂಡಲದ ಸದಸ್ಯರು, ಮೂರು ಸರ್ವೀಸ್‌ಗಳು ಮತ್ತು ಕೆಲ ಮಂದಿ ಹಿರಿಯ ಸರಕಾರಿ ಅಧಿಕಾರಿಗಳಿರುವರು. ಬ್ರಿಟನಿನ ಫೆಸ್ಟಿವಲ್ ಉತ್ಸವಕ್ಕೆ ಸೋಶಲಿಸ್ಟ ಸರಕಾರವು ವಿಪುಲ ಹಣವನ್ನು ವ್ಯಯಿಸಿದ ಹಾಗೆ ಈ ಬಾರಿಯ ಕನ್ಸರ್ವೇಟಿವ್ ಸರಕಾರವು ಬ್ರಿಟನ ರಾಣಿಯ ಪಟ್ಟಾಭಿಷೇಕಕ್ಕೆ ಹಣ ವ್ಯಯಿಸುವ ಮಟ್ಟಿಗೆ ಹಿಂದೆ ಸರಿಯ ಬಾರದೆಂಬ ಅಭಿಮತವು ವಿ. ಚರ್ಚಿಲ್ಲರದು.

ಉತ್ತರ ಪ್ರದೇಶದಲ್ಲಿ ಕತ್ತೆಗಳ ಹೆಚ್ಚಳ.

ಭಾರತದಲ್ಲಿ ಕತ್ತೆಗಳ ಸಂಖ್ಯೆಯ ಮಟ್ಟಿಗೆ ಪ್ರಥಮ ಸ್ಥಾನ ಉತ್ತರ ಪ್ರದೇಶಕ್ಕೆ ದೊರೆಯುತ್ತದೆ. ಇಲ್ಲಿರುವ ಕತ್ತೆಗಳ ಸಂಖ್ಯೆ ೩,೩೪,೦೦೦. ಎರಡನೆಯ ಸ್ಥಾನ ರಾಜಸ್ಥಾನಕ್ಕೆ ಸಲ್ಲುವುದು. ಅಲ್ಲಿ ೨,೦೯,೦೦೦ ಕತ್ತೆಗಳಿವೆ. ಇನ್ನು ಗೋಗಳ ಮಟ್ಟಿಗೂ ಉತ್ತರ ಪ್ರದೇಶವೇ ಮೊದಲ ಸ್ಥಾನದಲ್ಲಿದೆ. ಇಲ್ಲಿರುವ ಗೋವುಗಳ ಸಂಖ್ಯೆ ೩,೧೬,೮೦,೦೦೦. ಇನ್ನು ಹಂದಿಗಳ ಸಂಖ್ಯೆ ೧೧,೦೦,೦೦೦. ಬೀಜದ ಹೋರಿಗಳ ಮಟ್ಟಿಗೆ ಮದ್ರಾಸು ಪ್ರಾಂತವು ಭಾರತದಲ್ಲಿ ಪ್ರಥಮ ಸ್ಥಾನ ಹೊಂದುತ್ತದೆ. ಇಲ್ಲಿ ೧೪,೭೭೮ ಬೀಜದ ಹೋರಿಗಳಿವೆ. ಮುಂಬಾಯಿ ಪ್ರಾಂತದಲ್ಲಿ ೭೨,೯೦೨ ಇವೆ. ಆಡುಗಳ ಸಂಖ್ಯೆಯಲ್ಲಿ ರಾಜಸ್ಥಾನವು ಅಗ್ರಸ್ಥಾನ ಪಡೆಯುತ್ತದೆ. ಅಲ್ಲಿ ೬೨,೫೧,೦೦೦ ಆಡುಗಳಿವೆ. ಮದ್ರಾಸಿನಲ್ಲಿ ೬೨,೦೦೦೦೦ ಆಡುಗಳಿವೆ. ಒಂಟೆಗಳ ಮಟ್ಟಿಗೂ ಮೊದಲ ಸ್ಥಾನ ರಾಜಸ್ಥಾನಕ್ಕೆ. ೩,೮೧,೮೦೦ ಒಂಟೆಗಳು ಅಲ್ಲೇ ೪ ಒಂಟೆಗಳಿರುವ ಒರಿಸಕ್ಕೆ ಎರಡನೇ ಸ್ಥಾನಕ್ಕೆ ಸಲ್ಲುವುದು.

ಕುಶಲ ಕುಮಾರಿಯರು.

ಕಾನಪುರದಲ್ಲಿ ನಡೆದ ಮೆಟ್ರಿಕ್ ಹಾಗೂ ಇಂಟರ್ ಪರೀಕ್ಷೆಗಳಲ್ಲಿ ಕಾಪಿ ಮಾಡುವ ನವ ವಿಧಾನಗಳು ಹೊರಬಿದ್ದಿವೆ. ಅದರಲ್ಲಿಯೂ ಯುಕ್ತಿ ಕುಶಲರಾದ ಕುಮಾರಿಯರು ಕೈಕೊಂಡ ವಿಧಾನಗಳನ್ನು ಗಮನಿಸಿದಾಗ ಆಶ್ಚರ್ಯವಾಗದಿರದು.

ಕೆಲವು ಕುಮಾರಿಯರು ತಮಗೆ ಬೇಕಾದ ಉತ್ತರಗಳನ್ನು ತಮ್ಮ ಸೀರೆಯ ಪಡಿಗಳಲ್ಲಿ ಬರೆದುಕೊಂಡು ಬಂದು ಸಮಯ ಸಾಧಿಸಿ ನೋಡಿ ನೋಡಿ ಉತ್ತರ ಬರೆಯುತ್ತಿದ್ದುದು ಕೊನೆಗೊಮ್ಮೆ ಹೊರಬಿದ್ದಿತು. ಪಡಿಯಲ್ಲಿಯ ಉತ್ತರಗಳು ನೋಡುಗರಿಗೆ ಸೀರೆಯಲ್ಲಿ ಒಂದು ತರದ ಡಿಜಾಯಿನಂತೆ ಕಾಣುತ್ತಿದ್ದವು.

ಇನ್ನೂ ಕೆಲವು ಕುಮಾರಿಯರು ತಮ್ಮ ಅಂಗದ ಮೇಲೆ ಉತ್ತರಗಳನ್ನು ಬರೆದು ಅದರ ಮೇಲೆ ಪಾರದರ್ಶಕ ಸೀರೆಯನ್ನುಟ್ಟುಕೊಂಡು ಬಂದು ಪರೀಕ್ಷೆಯ ಕಾಲಕ್ಕೆ ಸೂಕ್ಷ್ಮವಾಗಿ ಉತ್ತರ ಬರೆಯುತ್ತಿದ್ದುದು ಬಹು ವೇಳೆಯ ನಂತರ ಗೋಚರವಾಯಿತು.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್, ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುತ್ತಿದ್ದು ಬಿಡಿ ಚಿನ್ನ ಮತ್ತು ಚಿನ್ನದ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ನಾರ್ದನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಕೊಂಡಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಕೊಳ್ಳಬಹುದು.

ಎ. ಪಿ. ಸೋಮಯ್ಯ, ಗೌ. ಕಾರ್ಯದರ್ಶಿ, ಕೆ. ಬಿ. ಅಪ್ಪಯ್ಯ, ಪ್ರೆಸಿಡೆಂಟ್ ಬೋರ್ಡು ಡೈರಕ್ಟ್ರು.

Edited, Printed and Published by P. I. Bellappa at 'KOdagu' Press, Mercara, for 'Kodagu' Ltd. 58

Licence No. 60.
Licenced to Post without Prepayment.

Reg. No. M. 1850.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಕು ೪-೮-೧೯೫೦ನೇ ಶುಕ್ರವಾರ | ಸಂಚಿಕೆ ೫

ಕೊಡಗಿನ ಕಾಲೇಜು ವಿದ್ಯಾಭ್ಯಾಸದ ವ್ಯವಸ್ಥೆ.

[ಬರೆದು ಬಂದದ್ದು]

ಕೊಡಗಿನಲ್ಲಿ ಒಂದು ಕಾಲೇಜು ಅತ್ಯವಶ್ಯವೆಂಬ ಜನತೆಯ ಒಮ್ಮತದ ಬೇಡಿಕೆಯಂತೆ ಕೊಡಗಿನಲ್ಲಿ ಒಂದು ದ್ವಿತೀಯ ಸ್ಥಾಯಿ ಕಾಲೇಜು ಸ್ಥಾಪಿತವಾಗಿ ಮೂರು ವರ್ಷಗಳು ತುಂಬಿತವು. ಕಾಲೇಜು ಸ್ಥಾಪನೆಯಾಗುವ ಕಾಲಕ್ಕೆ ಆ ವಿಚಾರಕ್ಕೆ ವಿರೋಧವಿದ್ದವರು ಹಲವರಿದ್ದರು. ಕೊಡಗಿನಂಥಾ ಹಳ್ಳಿಯಲ್ಲಿ ಕಾಲೇಜು ಸ್ಥಾಪಿಸಿ ಪ್ರಯೋಜನವಿಲ್ಲ. ವಿದ್ಯಾರ್ಥಿಗಳ ಜ್ಞಾನ ವಿಕಾಸಕ್ಕೆ ಇಲ್ಲಿ ಎಡೆಯಿಲ್ಲವೆಂದು ಹೇಳಿದವರು ಇದ್ದಾರೆ. ಅಲ್ಲದೆ ಈ ಕಾಲೇಜನ್ನು ಸರಕಾರ ಮಾಡಬೇಕಿಲ್ಲ ಕ್ರಿಶ್ಚಿಯನ್ ಮಿಶನರಿಗಳು ಸ್ಥಾಪಿಸಲಿ ಎಂದು ವಾದಿಸಿದವರೂ ಇದ್ದಾರೆ. ಆದರೆ ಕೊಡಗಿನ ಸರಕಾರವು ಧೈರ್ಯದಿಂದ ಹೆಜ್ಜೆ ಇಟ್ಟು ಈ ಕಾಲೇಜಿನ ಸ್ಥಾಪನೆಯ ಕೆಲಸವನ್ನು ಕೈಗೊಂಡಿತು. ಆ ಪ್ರಯತ್ನಕ್ಕೆ ಪೂರ್ಣ ಫಲ ದೊರಕಿದೆಯೆಂದು ನಿರ್ಭಯವಾಗಿ ಹೇಳಬಹುದು ಏಕೆಂದರೆ ಕೊಡಗಿನ ಈ ಚಿಕ್ಕ ಕಾಲೇಜು ತನ್ನ ಮೂರು ವರುಷಗಳ ಕಾರ್ಯಕಲಾಪಗಳಿಂದ ಸರ್ವರ ಹೊಗಳಿಕೆಗೆ ಪಾತ್ರವಾಗಿರುವುದಲ್ಲದೆ ಭವ್ಯವಾದ ಭವಿಷ್ಯದ ಆಸೆ ಆಕಾಂಕ್ಷೆಗಳಿಗೆ ಆಸ್ಪದ ಕೊಟ್ಟಿದೆ. ಈ ಕಾಲೇಜು ವಿಶ್ವವಿದ್ಯಾಲಯ ಪರೀಕ್ಷೆಗೆ ಎರಡು ಬಾರಿ ವಿದ್ಯಾರ್ಥಿಗಳನ್ನು ಕಳುಹಿಸಿದಲ್ಲಿ ಅತ್ಯುತ್ತಮ ಫಲಿತಾಂಶವನ್ನು ಪಡೆಸಿದೆ. ಕಳೆದ ವರ್ಷದ ಫಲಿತಾಂಶಕ್ಕಿಂತಲೂ ಈ ವರ್ಷದ ಫಲಿತಾಂಶ ಅತ್ಯುತ್ತಮವಾಗಿದೆ. ಇದೇ ಅಲ್ಲ; ಆಟೋಟಗಳಲ್ಲಿ ಈ ಕಾಲೇಜು ತನ್ನದೇ ವ್ಯಕ್ತಿತ್ವವನ್ನು ಪ್ರದರ್ಶಿಸಿದೆ. ದ್ವಿತೀಯ ಸ್ಥಾಯಿ ಕಾಲೇಜೊಂದು ಮದರಾಸು ವಿಶ್ವವಿದ್ಯಾಲಯದ ಎಲ್ಲಾ ಕಾಲೇಜುಗಳನ್ನು ಸೋಲಿಸಿ ಹಾಕಿ ಕಪ್ಪನ್ನು ಗೆದ್ದಿರುವುದೆಂದರೆ ಯಾವನಾದರೂ ಹೆಮ್ಮೆ ಪಡಬೇಕಾದ ವಿಚಾರವೇ. ಹೀಗೂ ಕಾಲೇಜು ಉತ್ತಮ ರೀತಿಯಲ್ಲಿ ಮುಂದುವರಿಯುತ್ತಿದೆಯೆಂಬುದರಲ್ಲಿ ಲವಲೇಶ ಸಂಶಯವಿಲ್ಲ.

ಯಾವುದೇ ಸಂಸ್ಥೆಯು ಮುಂದರಿದು ಯೋಗ್ಯ ಕೆಲಸ ಮಾಡಬೇಕಾದರೆ ಅದಕ್ಕೆ ಸರಕಾರದ ಮತ್ತು ಸಾರ್ವಜನಿಕರ ಬೆಂಬಲವು ಅತೀ ಅಗತ್ಯ. ಕೊಡಗಿನ ಈ ಕಾಲೇಜಿಗೆ ಅಂಥಾ ಸಹಾಯ ಸಹಕಾರಗಳು ದೊರೆಯುತ್ತಿವೆಯೇ ?

ಕೊಡಗು ಸರಕಾರ ಕಾಲೇಜಿನ ಆರ್ಥಿಕ ಸ್ಪಂದದ ಬಗ್ಗೆ ನಾನು ಬರೆಯುವದಿಲ್ಲ. ಕಾಲೇಜಿಗೆ ಬೇಕಾದ ಲೇಬೋರೇಟರಿ, ಪುಸ್ತಕಾಲಯ ಮೊದಲಾದವುಗಳ ಬಗ್ಗೆ ಸರಕಾರ ಸಹಾಯ ನೀಡಿದೆ ನಿಜ. ಆದರೆ ಕಾಲೇಜು ವಿದ್ಯಾರ್ಥಿಗಳ ಬಗ್ಗೆ ಸರಕಾರ ಸಾಕಷ್ಟು ನಿಗ ವಹಿಸಲಿಲ್ಲವೆಂದು ಹೇಳಬೇಕಾಗಿದೆ ಕೊಡಗು ಸರಕಾರ ಕಾಲೇಜಿಗೆ ಕಟ್ಟಡವಿಲ್ಲದ ಕಾರಣ ಹೈಸ್ಕೂಲ್ ಕಟ್ಟಡದಲ್ಲಿ ಕಾಲೇಜು ತರಗತಿಗಳನ್ನು ತೆರೆದರು ಆದರೆ ವಿದ್ಯಾರ್ಥಿ ನಿವಾಸಕ್ಕೆ ತಾತ್ಕಾಲಿಕವಾಗಿ (ಫೋರ್ಟಿನ) ಕಟ್ಟಡ ಕಟ್ಟಿದರು. ಆ ಕಟ್ಟಡವು ಕೇವಲ ಮೂವತ್ತು ವಿದ್ಯಾರ್ಥಿಗಳಿಗೆಂದು ಕಟ್ಟಿದ್ದು ಆದರೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದದರಿಂದ ಈ ಚಿಕ್ಕ ಕಟ್ಟಡದಲ್ಲಿ ೫೦ ವಿದ್ಯಾರ್ಥಿಗಳನ್ನು ಕಳೆದ ವರ್ಷ ಬಾಗವಿಕರೀತವಾದ ವಿರೋಧ ಪ್ರದರ್ಶನ ಪತ್ರಿಕೆಗಳ ಮೂಲಕ ಆಯಿತು ಸರಕಾರವು ಆ ಕಡೆಗೆ ಗಮನವೀಯಲಿಲ್ಲ, ಫಲಿತಾಂಶವಾಗಿ ವಿದ್ಯಾರ್ಥಿಗಳು ಈ ನಿವಾಸಗೃಹದಲ್ಲಿ ಕಿಷ್ಕಿಂಧ ಜೀವನ ನಡೆಸಿದರು ಆದರೆ ಈ ವರ್ಷ ಕಥೆ ಇನ್ನೂ ಹಾಳಾಗಿದೆ. ಕೊಡಗಿನಲ್ಲಿ ಈ ವರ್ಷ ೨೦೦ ವಿದ್ಯಾರ್ಥಿಗಳು ಸ್ಕೂಲ್ ಫೈನಲ್ ಪಾಸಾಗಿರುವದರಿಂದ ಕಾಲೇಜಿನಲ್ಲೂ, ಬೋರ್ಡಿಂಗಿನಲ್ಲೂ ಸ್ಥಳ ದೊರೆಯುವದು ತೀರಾ ತೊಂದರೆಯದಾಗಿದೆ ಒಂದು ವೇಳೆ ಕಾಲೇಜಿನಲ್ಲಿ ಸ್ಥಳ ದೊರೆತರೂ ಬೋರ್ಡಿಂಗಿನಲ್ಲಿ ಸ್ಥಳ ದೊರೆಯಲಾರದು. ಎಷ್ಟೇ ಪ್ರಯತ್ನ ಪಟ್ಟರೂ ಈಗಿರುವ ಕಟ್ಟಡದ ಮಟ್ಟಿಗೆ ೫೦ ಜನರಿಗಿಂತ ಹೆಚ್ಚು ಸೇರಿಸುವುದು ಸಾಧ್ಯವಿಲ್ಲ. ಎಷ್ಟೋ ವಿದ್ಯಾರ್ಥಿಗಳೇ ಇದರಲ್ಲಿ ಕಷ್ಟಪಡಬೇಕಾಗಿದೆ. ಹಾಗಿರುವಾಗ ಬೋರ್ಡಿಂಗಿಗೆ ಸೇರಲು ಇರುವ ಇನ್ನೂ ಹಲವು ವಿದ್ಯಾರ್ಥಿಗಳ ಗತಿ ಏನಾಗಬೇಕು ?

ನಮ್ಮ ಸರಕಾರ ದೂರದೃಷ್ಟಿಯಿಂದ ಕೆಲಸ ಮಾಡುತ್ತಿಲ್ಲವೆನ್ನಬೇಕು. ಕಳೆದ ವರ್ಷ ವಿದ್ಯಾರ್ಥಿಗಳೂ, ಸಾರ್ವಜನಿಕರೂ ಹೆಚ್ಚುಸಂಖ್ಯೆಯಿಂದ ಬರುತ್ತಿರುವ ಕಾಲೇಜು ವಿದ್ಯಾರ್ಥಿಗಳಿಗೆ ಯೋಗ್ಯ ವಸತಿಯ ಏರ್ಪಾಡು ಮಾಡಬೇಕೆಂದು ಕೂಗಿ ಕೊಂಡರೂ ಅಲುಗಾಡಲಿಲ್ಲ. ಕಳೆದ ವರ್ಷ ಹೇಗೋ ಕಳೆಯಿತು ಈ ವರ್ಷವೂ ಸರಕಾರವು ಯಾವುದೇ ತೊಂದರೆ ತೆಗೆದುಕೊಂಡಿಲ್ಲವೆಂದರೆ ವಿಷಮ ಪರಿಸ್ಥಿತಿ ಬರಬಹುದೇ ಕಾಣುತ್ತದೆ. ಪ್ರತ್ಯೇಕ ಕಟ್ಟಡ ಕಟ್ಟಿ ವಸತಿ ಏರ್ಪಡಿಸುವ ಸಾಧ್ಯತೆ ಈಗ ಇಲ್ಲ. ಆದರೆ ಸರಕಾರದವರು ಬೇರೆಡೆ ಯಾವುದಾದರೂ ಖಾಸಗಿ ಕಟ್ಟಡವನ್ನು ಬಾಡಿಗೆಗೆ ಗೊತ್ತು ಹಚ್ಚಿ ವಸತಿಯ ಏರ್ಪಾಡು ಮಾಡುವದು ಅಗತ್ಯವಿದೆ. ಹಾಗೆ ಮಾಡದಿದ್ದರೆ ವಿದ್ಯಾರ್ಥಿಗಳಿಗೆ ವಿಪರೀತ ತೊಂದರೆ ಇದೆ. ಮಡಿಕೇರಿಯು ಚಿಕ್ಕ ಪಟ್ಟಣ. ವಿದ್ಯಾರ್ಥಿಗಳು ಹೊರಗಿನ ಶಹರುಗಳಂತೆ ರೂಮ್ ಮಾಡಿಕೊಂಡು ಹೋಟೇಲುಗಳಲ್ಲಿ ಊಟ ಮಾಡಿಕೊಂಡು ಓದುವ ಅನುಕೂಲತೆ ಇಲ್ಲ ಹಾಗೆ ಮಾಡಿಕೊಂಡರೂ ವಿಪರೀತ ಖರ್ಚಿನ ದಾರಿ. ಅದ್ದರಿಂದ ಸರಕಾರವು ಈ ಹೆಚ್ಚಿನ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿಯ ಏರ್ಪಾಡನ್ನು ಶೀಘ್ರ ಮಾಡಬೇಕು.

ಕೊಡಗು ಕಾಲೇಜಿನ ಕಟ್ಟಡವು ಆಗುತ್ತಿದೆ. ವಿದ್ಯಾಮಂತ್ರಿ ಮಲ್ಲಪ್ಪನವರು ಬರುವ ವರ್ಷ ಮೇಲಿನ ತರಗತಿಗಳು ಈ ಕಾಲೇಜಿನಲ್ಲಿ ತೆರೆಯಲ್ಪಡುವವೆಂದು ಹೇಳಿದ್ದನ್ನು ಪತ್ರಿಕೆಯಲ್ಲಿ ಓದಿದೆನು ಕಟ್ಟಡವೇನೋ ಆಗಬಹುದು. ಆದರೆ ವಿದ್ಯಾರ್ಥಿಗಳ ವಸತಿಯ ಏರ್ಪಾಡಿನ ಬಗ್ಗೆ ಏನೊಂದೂ ತೊಂದರೆ ತೆಗೆದುಕೊಂಡಂತೆ ತೋರುವುದಿಲ್ಲ. ಕಾಲೇಜು ಕಟ್ಟಡದ ಪಕ್ಕದಲ್ಲಿರುವ ಪೋಲೀಸ್ ತರಬೇತು ಶಾಲೆಯನ್ನು ಬೋರ್ಡಿಂಗಾಗಿ ಉಪಯೋಗಿಸುವ ವಾರ್ತೆ ಕೇಳುತ್ತಿದೆ. ಇದು ನಿಜವಾಗಿಯೂ ಯೋಗ್ಯವಲ್ಲ. ಏಕೆಂದರೆ ಈ ಕಟ್ಟಡವು ಓಬೀರಾಯನ ಕಾಲದ್ದಿರುವದಲ್ಲದೆ ವಿದ್ಯಾರ್ಥಿಗಳ ಆರೋಗ್ಯಕ್ಕೂ ಹಾನಿ ತರುವಂತಿದೆ. ಅಲ್ಲದೆ ವಿದ್ಯಾರ್ಥಿಗಳಿಗೆ ಓದಲಿಕ್ಕೆ ಈ ಕಟ್ಟಡದಲ್ಲಿ ಅನುಕೂಲತೆ ಇಲ್ಲ. ಅದ್ದರಿಂದ ಸರಕಾರವು ಶೀಘ್ರ ವಿದ್ಯಾರ್ಥಿ ನಿವಾಸ ಗೃಹದ ಕೆಲಸವನ್ನು ಪ್ರಾರಂಭಿಸಬೇಕು.

ಕೊಡಗಿನ ಇಂದಿನ ಸರಕಾರವು ಜನತಾ ಸರಕಾರವೆಂದು ಕರೆಯಲ್ಪಟ್ಟಿದೆ. ಜನ ಪ್ರತಿನಿಧಿಗಳಾದ ಮಂತ್ರಿಗಳು ಈ ವಿಚಾರದಲ್ಲಿ ಜಾಗ್ರತರಾಗಿ ಈ ವರ್ಷ ಮೇಲೆ ಹೇಳಿದಂತೆ ವಿದ್ಯಾರ್ಥಿ ನಿವಾಸಕ್ಕೆ ಬೇರೆ ತಾತ್ಕಾಲಿಕ ಏರ್ಪಾಡು ಮಾಡುವದಲ್ಲದೆ, ಹೊಸ ಕಟ್ಟಡದ ಬಗ್ಗೆ ನಿಗವಹಿಸಬೇಕಾಗಿದೆ.

ಕೊರಿಯಾ ದಿನಾಚರಣೆ

ತಾ. ೨೫ರಲ್ಲಿ ವೀರಾಜಪೇಟೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಶ್ರೀ ಕುಯಿಮಂಡ ಅಳಯ್ಯನವರ ಅಧ್ಯಕ್ಷತೆಯಲ್ಲಿ ಕೊರಿಯಾ ದಿನಾಚರಣೆಯನ್ನು ಆಚರಿಸಲಾಯಿತು. ಕೊರಿಯಾದಲ್ಲಿ ಎರಡು ವರ್ಷಗಳಿಂದ ಯುದ್ಧದಿಂದುಂಟಾದ ಅನರ್ಥವನ್ನೂ ಅಲ್ಲಿನ ಸ್ವಾತಂತ್ರ್ಯವಾದೀ ಜನತೆಯ ಮೇಲೆ ಅಮೇರಿಕನ್ ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ದಬ್ಬಾಳಿಕೆಯನ್ನೂ, ಕ್ರಿಮಿಯುದ್ಧದಿಂದುಂಟಾಗುತ್ತಿರುವ ಹಾವಳಿಯನ್ನೂ ವಿವರಿಸಿ, ಅದಕ್ಕೆ ಕಾರಣರಾದ ಅಮೇರಿಕನ್ ಯುದ್ಧವಾದಿಗಳನ್ನು ಖಂಡಿಸಿ ಶ್ರೀ ಕೆ. ಸಿ. ಕರುಂಬಯ್ಯನವರೂ, ಡಾ ಅಶ್ವತ್ಥನವರೂ ಮತ್ತು ಶ್ರೀ ಕೆ. ಟಿ. ಮುತ್ತಣ್ಣನವರೂ ಭಾಷಣ ಮಾಡಿದರು. ಕೊರಿಯಾದಿಂದ ವಿದೇಶೀ ಸೈನ್ಯಗಳನ್ನು ವಾಪಾಸು ಕರೆಸಬೇಕೆಂದೂ ಕ್ರಿಮಿಯುದ್ಧ ತಡೆಗಟ್ಟಲು ಭಾರತ ಸರಕಾರವು ಸೂಕ್ತ ಕ್ರಮ ಕೈಗೊಳ್ಳಬೇಕೆಂದೂ, ಕ್ರಿಮಿಯುದ್ಧವನ್ನು ಪರಿಶೀಲಿಸಲು ಭಾರತದಿಂದ ನಿಯೋಗ ಮಂಡಳಿಯನ್ನು ಕಳುಹಿಸಬೇಕೆಂದೂ ಮತ್ತು ಸಂಬಂಧಪಟ್ಟ ರಾಷ್ಟ್ರಗಳ ಸಮ್ಮೇಳನವನ್ನು ಕರೆದು ಕೊರಿಯಾದಲ್ಲಿ ಶಾಂತಿ ಸಂಧಾನವಾಗುವಂತೆ ಮಾಡಲು ಭಾರತ ಸರಕಾರ ಕ್ರಮ ಕೈಗೊಳ್ಳಬೇಕೆಂದೂ ಠರಾವುಗಳನ್ನು ಪಾಸುಮಾಡಿ ಭಾರತದ ಪ್ರಧಾನಿ ನೆಹರೂರವರಿಗೆ ಕಳುಹಿಸಲಾಯಿತು. 'ಹಾಜರಿದ್ದವ'

THE JUBILEE INSURANCE CO., LTD.

One of the very few in the feild of Insurance that has been declaring BONUS to its policy holders from its very inception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmond Road, Bangalore.

Our Chief Agents:-THE ORIENTAL ENTERPRISES, BANGALORE I

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೊದಾರರಿಗೆ ಸಂಯೊದ ಬೋನಸನ್ನು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:-ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,

14 — 41-A, ರಿಚ್‌ಮಂಡ್ ರೋಡ್, ಬೆಂಗಳೂರು I.

* ನರಬೇಟೆಯಾಡುವ ನಾಗಾ ಜನರು *

ಆಸ್ಸಾಮಿನ ಭೀಷಣ ವಂಶದ ನಾಗರಿಕ ಚಳವಳಿ.

— ೧ —

ಭಾರತದ ಈಶಾನ್ಯಗಡಿಯಲ್ಲಿ ಬ್ರಹ್ಮಪುತ್ರಾ ನದಿಯ ತಪ್ಪಲಿನಲ್ಲಿ ನಾಗಾ ಜಾತಿಯ ಜನರು ನೆಲಸಿರುವರು. ನಮ್ಮ ನೆರೆಯ ನೀಲಗಿರಿಯಲ್ಲಿ ವಾಸಿಸುತ್ತಿರುವ ತೋಡರಂತೆ, ಅಥವಾ ರಾಜಪುತಾನದ ಭಿಲ್ಲರು ಮತ್ತು ಛೋಟಾ ನಾಗಪುರದ ಪೀಠಭೂಮಿಯ ಸಂತಾಲರು—ಇವರಂತೆ ನಾಗಾ ಜನರೂ ಪ್ರಾಚೀನ ವಂಶಜರು. ನಾಗರಿಕತೆಯ ಸೋಂಕು ಅಷ್ಟಾಗಿ ತಗಲದವರು. ಆದರೆ ಈಗ ಆಳುವ ಸರಕಾರದ ಲಕ್ಷ್ಯ ಈ ಜನರ ಸುಧಾರಣೆಯ ಕಡೆಗೆ ಮತ್ತು ಅವರ ನಾಗರಿಕ ತರಬೇತಿಯ ಕಡೆಗೆ ಹರಿದಿದೆ. ದೇಶದ ಇತರೆಯ ಜನರೊಡನೆ ಈ ಜನ ದಿನ ಲವೂ ಹೊಂದಿಕೊಂಡು ಮುನ್ನಡೆಯಬೇಕೆಂದು ಸರಕಾರದ ಮನೀಷೆ. ಇದಕ್ಕಾಗಿ ಶಾಲೆಗಳು, ಸಾರಿಗೆ ಸೌಕರ್ಯಗಳು, ಚಿಕಿತ್ಸಾಲಯಗಳು ಮುಂತಾದುವನ್ನು ಒದಗಿಸುವ ಮೂಲಕ ಪುರಾತನ ಕ್ರಮ. ನಿಯಮಗಳಿಗೆ ಅಂಟಿಕೊಂಡಿರುವ ಜನರನ್ನು ಅರ್ವಾಚೀನ ಶೀಲ, ಸಂಪ್ರದಾಯಗಳ ಕಡೆಗೆ ಒಲಿಸುವ ಪ್ರಯತ್ನ ನಡೆದಿದೆ. ನೀಲಗಿರಿಯ ತೋಡರಲ್ಲಿ ಈಗ ಗುಪ್ತರೋಗಗಳು ಹೆಚ್ಚಿರುವ ಕಾರಣ—ವರ್ಷಂಪ್ರತಿ ಸಾಯುವ ಜನರು ಹುಟ್ಟುವ ಮಕ್ಕಳಿಗಿಂತ ಹೆಚ್ಚಾಗತೊಡಗಿರುವರು. ಸ್ತ್ರೀಯರ ಗರ್ಭನಿಲ್ಲಲು ತಕ್ಕ ಉಪಾಯಗಳನ್ನು ಮುಖ್ಯವಾಗಿ ವೈದ್ಯಕೀಯ ನೆರವನ್ನು ಕೈಗೊಳ್ಳಬೇಕಾದುದು ಅತ್ಯಗತ್ಯವೆಂದು ಈಗ ಸಿದ್ಧವಾಗಿದೆ. ಮದ್ರಾಸು ಗವರ್ನರ ಶ್ರೀ ಪ್ರಕಾಶರು ಈಗ ಈ ವಿಷಯದಲ್ಲಿ ಹೆಚ್ಚು ಆಸಕ್ತಿಯನ್ನು ತಳೆದಿರುವರು.

— ೨ —

ಆದರೆ ಆಸಾಮಿನ ನಾಗಾ ಜನರು ನೀಲಗಿರಿಯ ತೋಡರಿಗಿಂತ ಹೆಚ್ಚು ಮಹತ್ವಕ್ಕೆ ಪಾತ್ರರು—ವಿಭಜನೆಯ ಪೂರ್ವದಲ್ಲಿ ವಾಯವ್ಯ ಸರಹದ್ದಿನ ಪಠಾಣರ ಮೇಲೆ ಕಣ್ಣಿಡುವುದು ದೇಶ ರಕ್ಷಣೆಯ ಹಿತದೃಷ್ಟಿಯಿಂದ ಹೇಗೆ ಅಗತ್ಯವಿತ್ತೋ ಈಗ ಈಶಾನ್ಯ ಗಡಿಯಲ್ಲಿರುವ ನಾಗಾ ಜನರ ಚಟುವಟಿಕೆಗಳ ಮೇಲೆ ನಿಯಂತ್ರಣ ವಿರುವುದು ಅಗತ್ಯವೆನಿಸಿದೆ. ಚೀನಾ ಮತ್ತು ಬರ್ಮಗಳ ಗಡಿ ಪ್ರದೇಶದಲ್ಲಿರುವ ನಾಗಾ ಜನರ ವಸತಿಯು ಈಗ ಆಯಕಟ್ಟಿನ ಸ್ಥಳವಾಗಿದೆ. ಭಾರತದ ಐಕ್ಯವು ಸ್ಥಿರವಾಗಿ ನಿಲ್ಲಬೇಕಾದರೆ—ಈ ನರಬೇಟೆಯಾಡುವ ಭೀಷಣ ವಂಶದ ಮೇಲೆ ಕೇಂದ್ರದ ಹತೋಟಿಯೂ ಇರಬೇಕು. ಈಚೆಗೆ—ಎಂದರೆ ಒಂದು ನೂರು ವರ್ಷಕ್ಕೆ ಮುಂಚೆ—ಮನುಷ್ಯನ ಬಿಸಿನೆತ್ತರು ಕುಡಿದು ನಾಗಾ ಜನರು ತಮ್ಮ ನೀರಡಿಕೆ ಹಿಂಗಿಸಿಕೊಳ್ಳುತ್ತಿದ್ದರು. ನರರುಂಡಗಳ ಮಾಲೆಯನ್ನು ಕೊರಳೊಳಗೆ ಧರಿಸಿ ತಿರುಗುತ್ತಿದ್ದರು. ಆದರೆ ಕ್ರಿಶ್ಚಿಯನ್ ಪಾದ್ರಿಗಳ ಸಾಹಸವೆಂದೇ ಹೇಳಬೇಕು—ಈ ಭಯಂಕರಿಗಳ ನಡುವೆಯೂ ಅವರು ಧರ್ಮೋಪದೇಶಕರಾಗಿ ಬಂದು ನೆಲಸಿದರು. ವಿದ್ಯಾ ಸಂಸ್ಥೆಗಳನ್ನು ತೆರೆದರು. ಬಟ್ಟೆಯ ಬಳಕೆಗೆ ಮತ್ತು ವ್ಯವಸಾಯವನ್ನೂ ಕೃಷಿಯನ್ನೂ, ಕಲಿಸಿದರು. ಬಟ್ಟೆ ನೇಯುವುದನ್ನು ತೋರಿಸಿ ಕೊಟ್ಟರು. ಹೀಗೆ ಇಂದು ನಾಗಾ ಜನರು ಮೊದಲಿನಷ್ಟು ಭೀಕರರಿಲ್ಲ. ಅವರು ನಾಗರಿಕತೆಯ ಕಡೆಗೆ ಹೆಚ್ಚು ಹೆಚ್ಚು ಒಲಿಯತೊಡಗಿರುವರಲ್ಲದೆ ರಾಜಕೀಯ ರಂಗದಲ್ಲಿ ಕೂಡ ಪ್ರವೇಶಿಸಿ ಚಳುವಳಿ ನಡೆಸುವಷ್ಟು ಮುಂಬರಿದಿರುವರೆಂಬುದು ಸಂತೋಷ.

— ೩ —

ಸುಮಾರು ಐವತ್ತು ಸಾವಿರ ಚದರ ಮೈಲಿ ಪ್ರದೇಶದಲ್ಲಿ ಎರಡು ಲಕ್ಷ ಜನ ನಾಗಾ ನಿವಾಸಿಗಳಿದ್ದಾರೆ. ೧೮೮೦ರಲ್ಲಿ ಬ್ರಿಟಿಷ್ ಸರಕಾರವು ಈ ಪ್ರದೇಶವನ್ನು ತನ್ನ ಸಾಮ್ರಾಜ್ಯದಲ್ಲಿ ಸೇರಿಸಿಕೊಂಡಿತು. ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಭಾರತದ ಅಧಿಕಾರವು ಇಲ್ಲಿ ಪ್ರಸ್ಥಾಪಿತವಾಯಿತು. ಈ ಪರ್ವತ ಪ್ರದೇಶದಲ್ಲಿ ಈಗಲೀಗ ನಾಗಾ ಜನರು ಅಕ್ಕಿ ಬೆಳೆಯುತ್ತಿರುವುದನ್ನು ಮತ್ತು ಮೀನ ಹಿಡಿಯುತ್ತಿರುವುದನ್ನು ಕಾಣಬಹುದು. ಯುದ್ಧ ಕಾಲದಲ್ಲಿ ಈ ಜನರು ಅತ್ಯಂತ ಶೌರ್ಯದಿಂದ ಹೋರಾಡುತ್ತಿದ್ದರು. ಬ್ರಿಟಿಷ್ ರಾಜ್ಯದ ಕಡೆಯಿಂದ ಜಪಾನೀಯರ ಮತ್ತು ಸುಭಾಷ್ ಬೋಸರ ಆಜಾದ್ ಹಿಂದ್ ಸೈನಿಕರ ವಿರುದ್ಧ ಪರಾಕ್ರಮದಿಂದ ಯುದ್ಧ ಮಾಡಿದ್ದರು. ಕೊಹಿಮಾ ಮತ್ತು ಇಂಫಾಲ್ ಪ್ರದೇಶಗಳಲ್ಲಿ ಇವರು ತೋರಿಸಿದ ಶೌರ್ಯವು ಬ್ರಿಟಿಷ್ ಸೇನಾಧಿಕಾರಿಗಳಿಂದ ಪ್ರಶಂಸೋದ್ಗಾರಗಳನ್ನು ಪಡೆಯಿತು. ಯುದ್ಧದಲ್ಲಿ ಸಾವಿಗೆ ಅಂಜದ ಧೀರರು ಎಂದು ಇವರನ್ನು ಸ್ಲಿಮ್ ಸೇನಾಧಿಪತಿ ಹೊಗಳಿರುವನು. ಈಟಿಯೇ ಈ ಜನರ ಪ್ರಮುಖ ಶಸ್ತ್ರ. ಶತ್ರುಗಳೊಡನೆ ಕಾದುವುದರಲ್ಲಿ ಇವರು ನಿಸ್ಸೀಮರು. ಹಗೆತನದ ಸೇಡು ತೀರಿಸದೆ ಬಿಡಲು ಇವರು ಸಿದ್ಧರಿಲ್ಲ.

— ೪ —

ಸ್ವಾತಂತ್ರ್ಯವೆಂದರೇನೆಂಬುದರ ಸರಿಯಾದ ಅರ್ಥ ತಿಳಿಯದೆಯೋ ಎಂಬಂತೆ ಭಾರತವು ಸ್ವಾತಂತ್ರ್ಯ ಪಡೆದ ದಿನದಿಂದ ನಾಗಾ ಜನರೂ ತಾವು ಸ್ವತಂತ್ರರೆಂದು ತಿಳಿಯಹತ್ತಿದರು. ಸ್ವತಂತ್ರ ನಾಗಾ ಪ್ರದೇಶವನ್ನು ನಿರ್ಮಿಸುವ ಆಂದೋಲನವನ್ನು ಕೆಲವು ಮಂದಿ ಸರದಾರರು ಈಗ ಹೂಡಿರುವರು. ಪರ್ವತೀಯ ಪ್ರದೇಶವಾದ ಇಲ್ಲಿ ಕೇಂದ್ರ ಸರಕಾರದ ಕೈ ಸಡಿಲು ಮಾಡಬೇಕೆಂಬ ಕುತ್ಸಿತ ಬಯಕೆಯಿಂದ ದೇಶದ್ರೋಹಿ ಚಳುವಳಿಯನ್ನೆಬ್ಬಿಸಲು ಕೆಲವು ಜನರು ಮುಂದಾದುದು ಶೋಚನೀಯ. ಇವರಲ್ಲಿ ಶ್ರೀ. ಎ. ಜಡ್ ಫಿಜೊ ಎಂಬುವರು ಉಲ್ಲೇಖನೀಯರು. ನಾಗಾ ರಾಷ್ಟ್ರೀಯ ಸಮಿತಿಯ ಸಮಿತಿಯ ಅಧ್ಯಕ್ಷರಾಗಿ ಇವರು ಕೆಲಸ ಮಾಡುತ್ತಿರುವರು. ಪಠಾಣರ ಧುರೀಣರಾದ ಖಾನ್ ಅಬ್ದುಲ್ ಗಫಾರ್ ಖಾನರು 'ಸರಹದ್ದಿನ ಗಾಂಧಿ' ಎಂದು ಹೆಸರು ಪಡೆದಂತೆ—ತಾವೂ ಕೀರ್ತಿ ಭಾಜನರಾಗಬೇಕೆಂಬುದು ಫಿಜೋರ ಅಂತರಂಗದ ಅಭಿಲಾಷೆ. ಅದಕ್ಕಾಗಿ ಈಗ ಗಾಂಧೀಜಿಯು ಅನುಸರಿಸಿದ ಅಹಿಂಸಾತ್ಮಕ ಚಳುವಳಿ ಮತ್ತು ಅಸಹಕಾರ ಆಂದೋಲನದ ಮೂಲಕ ಸ್ವಾತಂತ್ರ್ಯ ಗಳಿಸಲು ಹೆಣಗುತ್ತಿರುವರು. ಭಾರತದಲ್ಲಿ ಮಹಾ ಚುನಾವಣೆಗಳು ನಡೆದಾಗ ನಾಗಾ ಜನಾಂಗದ ಸ್ಥಾನಗಳು ಇದ್ದರೂ ಅಲ್ಲಿ ಚುನಾವಣೆ ನಡೆಸಲು ಸಾಧ್ಯವಾಗಲಿಲ್ಲ ಎಂಬುದನ್ನು ಗಮನಿಸಬೇಕು. ರಕ್ತಪಿಪಾಸುಗಳಾದ ಪಠಾಣರು ಅಹಿಂಸಾ ಭಕ್ತರಾದಂತೆ ತಾನೂ ನಾಗಾ ಜನರನ್ನು ಶಾಂತ ಚಳುವಳಿಗೆ ಪ್ರೇರಿಸುವೆನೆಂದು ಫಿಜೊ ಹೇಳುತ್ತಾರೆ.

— ೫ —

ನೆಹರೂ ಈಚೆಗೆ ಈಶಾನ್ಯ ಗಡಿಪ್ರದೇಶದ ಪ್ರವಾಸವನ್ನು ಮಾಡಿದಾಗ ಈ ಜನರ ಆಂದೋಲನ ಸರಿಯಲ್ಲವೆಂದು ಉಪದೇಶಿಸಿದರು—'ನಿಮ್ಮ ಸ್ವಾತಂತ್ರ್ಯಭಾವನೆಗೆ ನನ್ನ ಸಹಾನುಭೂತಿ ಇದೆ. ಆದರೆ ನಿಮ್ಮ ಸಣ್ಣ ಜಿಲ್ಲೆಯೊಂದೇ ಸ್ವತಂತ್ರ ರಾಜ್ಯವಾಗಲು ಭೌಗೋಲಿಕ ಸ್ವರೂಪದ ಆತಂಕಗಳಿವೆ. ಭಾರತದ ಇತರೆಡೆಯ ಜನರು ಎಷ್ಟರ ಮಟ್ಟಿಗೆ ಸ್ವತಂತ್ರರೋ—ನೀವೂ ಹಾಗೆ ಸ್ವತಂತ್ರರಿರಬಲ್ಲಿರಿ.' ಆದರೆ ಈ ಹಿತೋಕ್ತಿಯ ಪ್ರಭಾವ ಚಳುವಳಿಗಾರರ ಮೇಲೆ ಆಗಲಿಲ್ಲ—ಮೂರು ತಿಂಗಳ ಹಿಂದೆ ಒಂದು ಶಿಷ್ಟ ಮಂಡಳವು ದಿಲ್ಲಿಗೆ ಬಂದು, ಭಾರತ ಸರಕಾರದೊಡನೆ ಮಾತುಕತೆ ನಡೆಸಿತು. ಸಂಧಾನವು ಅಸಫಲವಾಗಲು ಕುಪಿತಗೊಂಡ ಫಿಜೋ ಹೀಗೆಂದರು—'ನಾಗಾ ಜನರ ರಾಷ್ಟ್ರೀಯ ಭಾವನೆಯನ್ನು ಭಾರತವು ಮೆಟ್ಟಲು ಹವಣಿಸುತ್ತಿದೆ. ಲೋಕದ ಯಾವ ಶಕ್ತಿಯೂ ನಾಗಾ ಜನರು ಸ್ವತಂತ್ರರಾಗುವುದನ್ನು ತಡೆಯಲಾರದು.' ಹೀಗೆ ಆಹ್ವಾನವನ್ನೇ ಕೊಟ್ಟಿರುವ ಫಿಜೋಗೆ ನಾಗ ಜಾತಿಯ ಇತರ ಸರದಾರರ ಬೆಂಬಲವಿಲ್ಲದಿರುವುದು ಸ್ವಲ್ಪ ಮಟ್ಟಿಗೆ ಸಮಾಧಾನ ತಂದಿದೆ. ಮಣಿಪುರದ ನಾಗಾ ಜನರು ತಾವು ಆಸಾಮಿನೊಡನೆ ಸೇರಲು ಇಚ್ಛಿಸುವವರೆಂದು ಈ ಮೊದಲೇ ನುಡಿದಿರುವರು. ಭಾರತದ ಸೇನಾಧಿಪತಿ ಜನರಲ್ ಕಾರ್ಯಪ್ಪನವರು ಈಚೆಗೆ ಇಲ್ಲಿ ಸಂಚಾರ ಮಾಡಿ ಬಂದ ಬಳಿಕ ಹೆಚ್ಚಿನ ನಾಗಾ ಸರದಾರರು ಭಾರತದೊಳಗೆ ಸೇರಲು ಉತ್ಸುಕರಿರುವ ಸಂಗತಿ ತಿಳಿಸಿದ್ದಾರೆ.

— ೬ —

ಇನ್ನೂ ಅಶಿಕ್ಷಿತರಾಗಿ ಉಳಿದಿರುವ ಗುಡ್ಡಗಾಡು ಪ್ರದೇಶದ ಜನರ ಅಭ್ಯುದಯವನ್ನು ಸಾಧಿಸಲು ಯೋಜನೆ ಮಾಡಬೇಕೆಂದು ಹೊಸ ದಿಲ್ಲಿಯಲ್ಲಿ ಈಚೆಗೆ ಒಂದು ಸಭೆ ಸೇರಿತ್ತು. ಅನಾದಿ ಕಾಲದವರೊಡನೆ ಹೊಂದಿಕೊಂಡು, ಅವರ ಹೃದಯವನ್ನು ಒಲಿಸಿಕೊಂಡು, ತನ್ಮೂಲಕ ನಾಗರಿಕತೆಯ ಪೂರ್ಣ ಶಿಕ್ಷಣವನ್ನು ವಿವಿಧ ಹಂತಗಳಲ್ಲಿ ನೀಡಬೇಕೆಂದು ನೆಹರೂ ಈ ಸಂದರ್ಭದಲ್ಲಿ ಹೇಳಿದರು. ಶಿಕ್ಷಣ ಸೌಕರ್ಯಗಳ, ಚಿಕಿತ್ಸಾಲಯಗಳು, ಗ್ರಾಮೋದ್ಯೋಗಗಳು, ಸುಧಾರಿತ ವ್ಯವಸಾಯ ಮತ್ತು ಸಾರಿಗೆ ಸಂಪರ್ಕದ ಅನುಕೂಲತೆಗಳನ್ನು ಒದಗಿಸುವ ಮೂಲಕ ನಾಗಾ ಜನರ ಹಿತವನ್ನು ಸಾಧಿಸುವುದು ಸಾಧ್ಯ. ಆದರೆ ಒಳ್ಳೆಯ ಅಭ್ಯಾಸಗಳಿಗೆ ಯಾರೂ ಬೇಗನೇ ಆಕರ್ಷಿತರಾಗುವುದಿಲ್ಲವಲ್ಲವೆ? ನಾಗಜನರಲ್ಲಿ ಗಂಡಸರಿಗೂ ಹೆಚ್ಚು ಹೆಂಗಸರೇ ಸಿಗರೇಟು ಸೇದುತ್ತಿರುವರು ಎಂಬ ಹುಚ್ಚು ವ್ಯಸನದ ವರದಿಯ ಉಪಪತ್ತಿ ಬೇರೆ ಹೇಗೆ ಸಾಧ್ಯ?

'ನವಯುಗ.'

ರಾಜಾಜಿ ವಿಶ್ವಾಸದ ಓಟು ಕೇಳುವರು.

ಮದರಾಸ್ ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಜೂನ್ ೩೦ನೇ ಸೋಮವಾರದಂದು ಪ್ರಾಂತ ಅಸೆಂಬ್ಲಿಯಿಂದ ವಿಶ್ವಾಸ ಸೂಚಕ ನಿರ್ಣಯವನ್ನು ಕೋರಲಿದ್ದಾರೆ.

ಈ ವಿಷಯವನ್ನು ರಾಜಾಜಿಯವರೇ ವ್ಯಕ್ತಪಡಿಸಿದರು.

ತಾ. ೨೭ರಂದು ಶಾಸನ ಸಭೆಗಳ ಸಂಯುಕ್ತಾಧಿವೇಶನದಲ್ಲಿ ಗವರ್ನರರು ಭಾಷಣ ಮಾಡಿದಾಗ ಯುನೈಟೆಡ್ ಡೆಮೊಕ್ರಾಟಿಕ್ ಫ್ರಂಟಿನವರು ಉದ್ದೇಶಪೂರ್ವಕವಾಗಿಯೇ ಗೈರು ಹಾಜರಾಗಿದ್ದುದರಿಂದ ತಾವು ಮುಖ್ಯಮಂತ್ರಿಯಾಗಿರುವುದು ಸರಿಯಲ್ಲವೆಂದು ಅವರೆನ್ನ ಭಾವಿಸಿದ್ದಾರೆಂಬುದನ್ನು ವ್ಯಕ್ತಪಡಿಸುವುದಾಗಿ ರಾಜಾಜಿ ಹೇಳಿದರು.

ಅರುಪ್ಪುಕೋಟೆ ಪಾರ್ಲಿಮೆಂಟರಿ ಕ್ಷೇತ್ರದ ಉಪ ಚುನಾವಣೆಯ ಫಲಿತಾಂಶವು ಆ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ 'ನನ್ನ ಸರಕಾರದ ವಿರುದ್ಧ ತೀರ್ಪಿನಂತಿದೆ' ಎಂಬುದಾಗಿ ರಾಜಾಜಿ ಹೇಳಿದರು. 'ಆದುದರಿಂದ ನಾನು ಅಸೆಂಬ್ಲಿಯಿಂದ ನೇರವಾಗಿ ವಿಶ್ವಾಸದ ಓಟನ್ನು ಕೇಳಲು ನಿರ್ಧರಿಸಿದ್ದೇನೆ' ಎಂಬುದಾಗಿ ರಾಜಾಜಿ ಹೇಳಿದರು.

ಈ ವಿಶ್ವಾಸದ ನಿರ್ಣಯವನ್ನು ಜೂನ್ ೩೦ರಂದು ಅಸೆಂಬ್ಲಿಯಲ್ಲಿ ಸಭಾ ನಾಯಕರೂ ಅರ್ಥಿಕ ಮಂತ್ರಿಯೂ ಆದ ಶ್ರೀ ಸಿ. ಸುಬ್ರಹ್ಮಣ್ಯಂರವರು ಮುಂದಿಡಲಿದ್ದಾರೆ. ನಿರ್ಣಯವು ಈ ರೀತಿ ಇದೆ—

'ಶ್ರೀ ಸಿ. ರಾಜಗೋಪಾಲಾಚಾರಿಯವರು ಮುಖ್ಯ ಮಂತ್ರಿಯಾಗಿರುವ ಮಂತ್ರಿ ಮಂಡಲದಲ್ಲಿ ಈ ಸಭೆ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ'.

೩೫. ಹತ್ತೊಂಭತ್ತು ಮಂದಿ ಸದಸ್ಯರಿರುವ ಕೃಷಿಕಾರ ಲೋಕ ಪಕ್ಷ ನಿರ್ಣಯಕ್ಕೆ ಪೂರ್ಣ ಬೆಂಬಲ ಕೊಡುವುದೆಂದು ಪಕ್ಷದ ಪ್ರಮುಖರೊಬ್ಬರು ತಿಳಿಸಿದ್ದಾರೆ.

ಶಾಸನ ಸಭೆಯ ಸೋಶಲಿಸ್ಟ್ ಪಕ್ಷ ಜೂನ್ ೨೯ರಂದು ವಿಶೇಷ ಸಭೆ ಸೇರಿ ಈ ಬಗ್ಗೆ ನಿರ್ಧಾರಕ್ಕೆ ಬರಲಿದೆ. ಉಳಿದ ಪಕ್ಷಗಳ ನಿಲುವೂ ಜೂನ್ ೨೯ರ ವೇಳೆಗೆ ಸ್ಪಷ್ಟಪಡುವುದು.

ಈ ಕೀರ್ತಿವಂತರು

[ಜನಯುಗ ಪತ್ರಿಕೆಯಿಂದ]

ತನ್ನ ಹೆಸರು ಎಲ್ಲರ ಬಾಯಿಯಲ್ಲೂ ನಲಿದಾಡುವಂತಾಗಬೇಕೆ? ಒಳ್ಳೆಯದಿರಲಿ, ಕೆಟ್ಟದಿರಲಿ, ಎಲ್ಲರೂ ಹಿಡಿದ ಹಾದಿ ಬಿಟ್ಟು ಅಡ್ಡದಾರಿಯೊಂದನ್ನು ಹಿಡಿದರೆ ಸರಿ! ಅಂಥವರಿದ್ದಾರೆ!

ದರೋಡೆಗಾರ ಭೂಪತ್!

ಗುಜರಾತ್ ವಲಯದ ಹಲವು ಸಣ್ಣ ಪುಟ್ಟ ಸಂಸ್ಥಾನಗಳ ಕೂಡಿ ಸೌರಾಷ್ಟ್ರ. ಭಾರತದ ಸ್ವಾತಂತ್ರ್ಯೋದಯದೊಂದಿಗೆ ಇಲ್ಲಿ ಧೂಮಕೇತುವಿನಂತೆ ಈ ಭೂಪತಿ ಮೂಡಿದ್ದ. ಜುನಾಗಡಿನೊಳಗೆ ತನ್ನ ಹಂಗಡಿಗರೊಂದಿಗೆ ನುಗ್ಗಿ ಹೋಗಿ ಭೂಪತ್ ಕೋಲಾಹಲವನ್ನೆಬ್ಬಿಸುತ್ತಿದ್ದಾಗಲೇ ಭಾರತದ ಸೇನೆ ಪ್ರವೇಶಿಸಿ ಆ ಸಂಸ್ಥಾನವನ್ನು ಸ್ವಾಧೀನ ಮಾಡಿಕೊಂಡಿದ್ದಿತು. ಅದಲ್ಲವಾದರೆ ನವಾಬನನ್ನು ಅಟ್ಟಿ ಓಡಿಸಿಬಿಡುತ್ತಿದ್ದನೇನೋ. ಜುನಾಗಡದ ಭೂಪತಿಯಾಗುತ್ತಿದ್ದನೋ ಏನೋ! ಅಂದಿನಿಂದ ತಲೆಮರೆಸಿಕೊಂಡು ಭೂಪತ್ ಇಡೀ ಸೌರಾಷ್ಟ್ರವನ್ನು ನಡುಗಿಸಿದ್ದಾನೆ. ಕೊಲೆ, ಸುಲಿಗೆ, ದೊಂಬಿ, ದರೋಡೆಗಳನ್ನು ನಡೆಸಿದ್ದಾನೆ; ಗಸ್ತಿನ ಬಂಡಾಯಗಾರರ ಒಂದು ದಳವೇ ಇವನೊಡನಿರುವಂತಿದೆ. ಆಶ್ಚರ್ಯವೆಂದರೆ ಸೌರಾಷ್ಟ್ರದ ಹಲವು ರಾಜಪುತ್ರ ಪುತ್ರಿಯರು, ರಾಜಕುಟುಂಬದವರು, ಗಿರಾಸ್ದಾರರು ಇವನ ಒಕ್ಕಲಿನೊಳಗೆ ಸೇರಿಕೊಂಡವರೆಂದು ದಸ್ತಗಿರಿಯಾಗಿದ್ದಾರೆ. ಒಬ್ಬಿಬ್ಬರು ಸುಪ್ರೀಮ್ ಕೋರ್ಟಿನ ಮೂಲಕ ಬಿಡುಗಡೆ ಪಡೆದರು. ಅಂತೂ ಅಖಿಲ ಸೌರಾಷ್ಟ್ರಕ್ಕೇನೇ ಈ ಭೂಪತ್ ಒಂದು ಮಹಾ ಆತಂಕ! ಇವನ ಭಯದಿಂದ ಸೌರಾಷ್ಟ್ರವಿಡೀ ತಲ್ಲಣಿಸಿ ಹೋಗಿದ್ದಿತಲ್ಲದೆ ಭಾರತ ಸರಕಾರವೂ ಗಾಬರಿಗೊಂಡಿದ್ದಿತು. ಮಹಿಳೆಯರ ಮೇಲೆ ವಿಶೇಷ ಭಕ್ತಿ, ಬಡವರ ಮೇಲೆ ದಯೆ, ಆದರೆ ಧನಿಕರ ಮೇಲೆ ಮತ್ತು ತನ್ನನ್ನು ವಿರೋಧಿಸುವ ಯಾವುದೇ ಅಧಿಕಾರದ ಮೇಲೆ ಕ್ರೂರ ಪ್ರತೀಕಾರ—ಇವು ಭೂಪತನ ವೈಶಿಷ್ಟ್ಯಗಳು. ಈ ಹೆಗ್ಗುಣಗಳಿಗಾಗಿ ಈತನನ್ನು 'ಸೌರಾಷ್ಟ್ರದ ಶಿವಾಜಿ' ಎನ್ನುವವರಿದ್ದಾರೆ. ಇವನ ರುಂಡ ತಂದವರಿಗೆ ೫೦೦೦೦ ರೂಗಳ ಬಹುಮಾನವನ್ನು ಸೌರಾಷ್ಟ್ರ ಸರಕಾರವು ಜಾಹೀರು ಮಾಡಿದ್ದಿತು. ಇಂಥ ಭೂಪತನು ಭಾರತದಲ್ಲಿ ತನಗೆ ಉಳಿಗಾಲವಿಲ್ಲವೆಂಬುದನ್ನು ಮನಗಂಡು ಮೊನ್ನೆ ಮೆಲ್ಲಗೆ ಪಾಕಿಸ್ತಾನದ ಗಡಿಯೊಳಗೆ ನುಸುಳಿಕೊಂಡ; ಅಲ್ಲಿ ಸಿಂಧ್ ಪೋಲೀಸರಿಂದ ದಸ್ತಗಿರಿ ಮಾಡಲ್ಪಟ್ಟ. ಪರ್ಮಿಟ್ ವಿನಹ ಪ್ರವೇಶಿಸಿದ್ದಕ್ಕಾಗಿ ಮತ್ತು ಲೈಸೆನ್ಸಿಲ್ಲದ ಕೋವಿ ಹಿಡಿದುಕೊಂಡ ಪಶ್ಚಾಗಿ ಪಾಕಿಸ್ತಾನ್ ಕೋರ್ಟಿನಿಂದ ಒಂದು ವರ್ಷದ ಶಿಕ್ಷೆಗೊಳಗಾಗಿ ಈಗ ಅಲ್ಲಿಯ ಜೈಲಿನಲ್ಲಿದ್ದಾನೆ. ಆತನನ್ನು ಸೌರಾಷ್ಟ್ರ ಸರಕಾರಕ್ಕೊಪ್ಪಿಸಬೇಕೆಂದು ಭಾರತ ಸರಕಾರವು ಕರಾಚಿಯಲ್ಲಿರುವ ತನ್ನ ಹೈಕಮಿಷನರರ ಮೂಲಕ ಪಾಕಿಸ್ತಾನ್ ಸರಕಾರವನ್ನು ಕೇಳಿಕೊಂಡಿದೆ. ಪಾಕಿಸ್ತಾನವಿದಕ್ಕೆ ಒಪ್ಪುವ ಸಂಭವ ಕಾಣುವದಿಲ್ಲ. ಈತನು ಭಾರತ ಸರಕಾರದ ವಿರುದ್ಧ ರಾಜಕೀಯ ಕಾರಣಗಳಿಗಾಗಿ ಪಾಕಿಸ್ತಾನದ ಮರೆಹೊಕ್ಕವನಾದ್ದರಿಂದ ತನ್ನನ್ನು ರಾಜಕೀಯ ನಿರಾಶ್ರಿತನಂತೆ ಕಾಣಬೇಕೆಂದೂ ಸೌರಾಷ್ಟ್ರದ ಕೆಲವು ರಾಜರ ಮತ್ತು ಗಿರಾಸ್ದಾರರ ಮಾಸಿಕ ವೇತನಗಳನ್ನು ಅಪಹರಿಸುವ ಉದ್ದೇಶದಿಂದ ಕೂಡಿರುವ ಮೊಕದ್ದಮೆಗಳಲ್ಲಿ ಭಾರತ ಸರಕಾರವು ತನ್ನನ್ನು ಸಾಕ್ಷಿಯೊಂದು ಉಪಕರಣವಾಗಿ ಉಪಯೋಗಿಸಲು ನೋಡುತ್ತಿದೆಯೆಂದೂ ಭೂಪತ್ ಪಾಕಿಸ್ತಾನ್ ಸರಕಾರಕ್ಕೆ ಅರ್ಜಿ ಬರೆದುಕೊಂಡಿದ್ದಾನಂತೆ. ದರೋಡೆಗಾರ ದಗಹೋರನಾಗಿ ಮಾರ್ಪಟ್ಟಂತಿದೆ!

ಉರಿಕೊಟ್ಟ ಹರಿದಾಸ!

ದಿಲ್ಲಿಯ ನಮ್ಮ ಪಾರ್ಲಿಮೆಂಟ್ ಭವನಕ್ಕೇನೇ ಬೆಂಕಿಕೊಟ್ಟ ಹರಿದಾಸ್ ಶರ್ಮಾನ ಕಥೆ ಗೊತ್ತೆ? ಮೊನ್ನೆ ಮೇ ೩೧ ರಲ್ಲಿ ಒಳಗಡೆ ಪಾರ್ಲಿಮೆಂಟ್ ಸಭೆ ಜರಗುತ್ತಿದೆ; ಭವನದ ಒಂದು ಬದಿಯಲ್ಲಿ ಪರದೆ ಮತ್ತು ಕೆಲವು ಕಟ್ಟಿಗೆಗಳು ಉರಿಯುತ್ತಿವೆ. ಬೆಂಕಿ ಹಚ್ಚಿದ ಕರಣನನ್ನು ಅಲ್ಲಿಯೇ ಪೋಲೀಸರು ದಸ್ತಗಿರಿ ಮಾಡಿದರು. ಪಾರ್ಲಿಮೆಂಟ್ ಜ್ವಾಲಾವೀರ ಈ ಹರಿದಾಸ್ ಶರ್ಮಾ ಬಂಗಾಳದ ಒಬ್ಬ ನಿರಾಶ್ರಿತ ಯುವಕ. ಕೋರ್ಟಿನಲ್ಲಿ ಅವನ ಹೇಳಿಕೆಯಿಷ್ಟು: 'ಪಾರ್ಲಿಮೆಂಟ್ ಕಟ್ಟಡವನ್ನು ಸುಡಬೇಕೆಂಬ ಇಚ್ಛೆ ನನ್ನದಾಗಿರಲಿಲ್ಲ. ಆದರೆ ಸರಕಾರದ ಲಕ್ಷ್ಯವಂತ ನನ್ನ ಕಡೆ ಬೀಳಬೇಕೆಂಬ ಬಯಕೆಯಿತ್ತು. ಇಂಥ ಸಂಬಂಧವಾಗಿ ನಡೆದಿದ್ದ ಒಂದು ದಾವೆಯಲ್ಲಿ ನನಗೆ ಅನ್ಯಾಯವಾಗಿದೆ; ನಾನದರಲ್ಲಿ ಪೂರ್ಣ ನಿರಪರಾಧಿ. ನನಗಾದ ಈ ಅನ್ಯಾಯದ ಕಡೆಗೆ ಸರಕಾರದ ಲಕ್ಷ್ಯವನ್ನೆಳೆಯಬೇಕೆಂದು ತೋರಿತು; ಅದಕ್ಕಾಗಿಯೇ ಪೆಟ್ರೋಲು ಮತ್ತು ಬೆಂಕಿಪೆಟ್ಟಿಗೆ ಹಿಡಿದುಕೊಂಡು ಬಂದು ಈ ಕೆಲಸ ಮಾಡಿಬಿಟ್ಟೆ!' ಈ ಹರಿದಾಸನೀಗ ಜೈಲಿನಲ್ಲಿದ್ದಾನೆ. ತನಗಾದ ಈ ಅನ್ಯಾಯಕ್ಕಾಗಿ ಜಾಗತಿಕ ಸಂಘದ ಲಕ್ಷ್ಯವನ್ನೆಳೆಯಬೇಕೆಂದು ಜೈಲಿನಿಂದ ಬಂದವನು ಪುನಃ ದೊಡ್ಡ ಕೆಲಸ ಮಾಡದಂತೆ ನೋಡಿಕೊಳ್ಳುವದುತ್ತಮ!

ಹುಚ್ಚು ರಾಜನ ಪತ್ನೀಬೇಟೆ!

ಅರಬ್ ರಾಷ್ಟ್ರಗಳಲ್ಲೊಂದಾದ ಜೋರ್ಡಾನಿನ ರಾಜಾ ತಲಾಲರಿಗೀಗ ತಲೆ ಹಾಳಾಗಿ ಪ್ಯಾರಿಸಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ೪೧ ವರ್ಷ ಪ್ರಾಯದ ಈ ರಾಜನಿಗೆ ಶಿಶು ಹುಟ್ಟಿದೊಡನೆಯೇ ಈ ರೋಗದ ಚಿಹ್ನೆ ಕಾಣಿಸಿಕೊಂಡಿದ್ದಿತು. ಇದು ಎರಡು ವರ್ಷಗಳ ಮೊದಲು. ತಲಾಲರ ತಂದೆ ಅಬ್ದುಲ್ಲರು ಕೊಲೆ ಮಾಡಲ್ಪಟ್ಟ ವೇಳೆ ಈವರು ಪಟ್ಟಕ್ಕೆ ಬಂದಿದ್ದರು. ಚಿಕಿತ್ಸೆಗಾಗಿ ಆರೋಗ್ಯಧಾಮ ಸೇರಲು ತಲಾಲರು ನಿರಾಕರಿಸುತ್ತಾರೆ. ತನ್ನನ್ನು ಸಿಂಹಾಸನದಿಂದ ಬಿಡಿಸಿ ಬಂಧನದಲ್ಲಿಡುವ ಯುಕ್ತಿಯಿದು ಎಂದೇ ಅವರ ಹುಚ್ಚು ತಲೆಯಲ್ಲಿ ಹುಟ್ಟಿಕೊಂಡ ಯೋಚನೆ! ಹುಚ್ಚು ತಾಗಿದ ಜನ್ಮನಿಗೆ ಪತಿಯ ಸಹವಾಸವು ಅಸಹ್ಯವಾಗಿ ರಾಣಿ ಜೈನಾ ತನ್ನ ಮಕ್ಕಳನ್ನು ಕಟ್ಟಿಕೊಂಡು ಸ್ವಿಟ್ಜರ್ಲೆಂಡಿನ ಒಂದು ಗುಪ್ತ ಸ್ಥಳದಲ್ಲಿ ವಾಸಿಸುತ್ತಿದ್ದಾಳೆ. ಅಲ್ಲಿಯ ಮಾಂಟ್ರೀಯಲ್ಲಿ ಹೋಟೆಲೊಂದರಲ್ಲಿದ್ದಾಗ ಸತಿಯನ್ನು ಹುಡುಕಿಕೊಂಡು ರಾಜ ಅಲ್ಲಿಗೂ ಹೋಗಿದ್ದ. ಆಕೆ ಪೋಲೀಸ್ ಸಹಾಯ ಕೇಳಿ ಆ ವೇಳೆ ಗಂಡನ ಕಣ್ಣು ತಪ್ಪಿಸುವದಕ್ಕಾಗಿ ಇನ್ನೊಂದು ಗುಪ್ತಸ್ಥಾನಕ್ಕೆ ಪರಾರಿಯಾಗಬೇಕಾಯಿತು. ಮುಂದಿನ ಸಿಂಹಾಸನಾಧಿಕಾರಿ ೧೭ ವರ್ಷದ ರಾಜಕುಮಾರ ಹುಸ್ಸೇನ್ ತಾಯಿಯೊಂದಿಗಿದ್ದಾನೆ. ರಾಜನ ರೋಗ ಗುಣವಾಗುವಂತಹುದಲ್ಲವೆಂದು ಸಿದ್ಧವಾಗಿರುವುದರಿಂದ ಹುಸ್ಸೇನನಿಗೆ ಪ್ರಾಯ ಬರುವ ವರೆಗೆ ರೀಜೆನ್ಸಿ ಕೌನ್ಸಿಲ್ ಆಡಳಿತೆ ನಿರ್ವಹಿಸುತ್ತಿದೆ. ರಾಜರ ಕಿರೀಟವುರುಳುವುದಷ್ಟೇ ಅಲ್ಲ, ರಾಜರ ತಲೆಯೂ ಹಾಳಾಗುವ ಕಾಲವಿದು!

ಸುರೈಯ್ಯಾನ ಹುಡುಗ ಪ್ರಣಯಿ!

ಸಿನೇಮಾ ನಟಿಯರ ಮಾನಸಿಕ ಪ್ರಣಯಿಗಳ ವರ್ಗಕ್ಕೇನೇ ಮುಕುಟಪ್ರಾಯನಾದ ಹುಡುಗನೊಬ್ಬ ತೋರಿಬಂದಿದ್ದಾನೆ. ಬೊಂಬಾಯಿ [illegible] ಸ್ಟುಡಿಯೋದಲ್ಲಿ ಚಲಚ್ಚಿತ್ರ ಪ್ರೇಮಿಗಳ ಊರ್ವಶಿ ಸುರೈಯ್ಯಾ ಒಂದು ಚಿತ್ರ ನಟನೆಯಲ್ಲಿ ತೊಡಗಿದ್ದಂತೆ ದಿಡೀರ ಬಂದು ಹೊರಗಡೆ ಸುರೈಯ್ಯಾಳ ಭೇಟಿಗಾಗಿ ಯಾರೋ ಆತುರದಿಂದ ಕಾದಿದ್ದಾರೆ ಎಂಬ ಸುದ್ದಿ ಕೇಳಿಬಂತು. ಹೊರಗೆ ಬಂದು ನೋಡುವಾಗ ಸುಮಾರು ೧೭ ವರ್ಷ ಪ್ರಾಯದ ಹುಡುಗ ನಿಂತುಕೊಂಡಿದ್ದ. ಏನೆಂದು ವಿಚಾರಿಸಿದಾಗ 'ನನಗೆ ಸುರೈಯ್ಯಾನ ಮೇಲೆ ಪ್ರೇಮ ಬಿದ್ದಿದೆ' ಎಂದ. ಹುಡುಗನಿಗೆಲ್ಲಿಯೋ ಹುಚ್ಚು ಎನ್ನುತ್ತಾ ಹಾಗೆಯೇ ಬಿಟ್ಟಿರಬೇಕು. ಮತ್ತೊಂದು ದಿನ ಸುರೈಯ್ಯಾಳ ತಾಯಿ ಮಗಳೊಂದಿಗೆ ಕಾರಿನಲ್ಲಿ ಕುಳಿತಿರುವಾಗ ಸ್ಟುಡಿಯೋದ ಅತ್ತಿಂದಿತ್ತ ಅಡ್ಡಾಡುತ್ತಿರುವ ಅದೇ ಹುಡುಗ ಕಣ್ಣಿಗೆ ಬಿದ್ದ. 'ಬಾರಪ್ಪ! ನಿನಗೆ ನನ್ನ ಮಗಳನ್ನು ಮದುವೆ ಮಾಡಿಕೊಡುತ್ತೇನೆ' ಎಂದು ಸುರೈಯ್ಯಾನನ್ನು ಹೆತ್ತಾಕೆ ಆತನನ್ನು ಕಾರಿಗೆತ್ತಿಕೊಂಡಳು. ಸ್ಟುಡಿಯೋದ ಒಂದು ಕೋಣೆಯೊಳಗೆ ಕೊಂಡುಹೋಗಿ ಚಿಲಕಹಾಕಿ, ಕಾಲಿನ 'ಚಪ್ಪಲ್' ತೆಗೆದು ಹೊಡೆಯಹತ್ತಿದಳಂತೆ. ತಡ—ಆ ಮುದುಕಿಯ ಕೈಯನ್ನು ಗಟ್ಟಿ ಹಿಡಿದುಕೊಳ್ಳುವಷ್ಟು ತ್ರಾಣ ಹುಡುಗನಿಗಿದ್ದುದರಿಂದ ಆತ ಬೊಬ್ಬೆ ಹೊಡೆದ. ಜನರೆಲ್ಲಾ ಓಡಿ ಬಂದು ಆತನನ್ನು ಬಿಡಿಸಿದರು. ಆ ಹುಡುಗನ ಸುರೈಯ್ಯಾ ಹುಚ್ಚು ಅಷ್ಟರಲ್ಲೇ ಬಿಟ್ಟು ಹೋಗಿರಬೇಕು; ಆಗರೆ ಇವನಂತಹ ವಿಲಿಯೂವಧಿ ಮಂದಿ ಬೇರೆ ಇದ್ದಾರಲ್ಲಾ—ಇವರಿಗಾವ ಚಿಕಿತ್ಸೆ?

ಕೊಡಗು ಶಾಸನ ಸಭೆ ಬಡ್ಜೆಟ್ ಮೀಟಿಂಗ್

ಕೊಡಗು ಶಾಸನ ಸಭೆಯ ಬಡ್ಜೆಟ್ ಮೀಟಿಂಗು ತಾ. ೧೪ರಿಂದ ಪ್ರಾರಂಭವಾಗುವದು. ಆ ದಿನ ಬೆಳಿಗ್ಗೆ ಸಭೆಯನ್ನುದ್ದೇಶಿಸಿ ಚೀಫ್ ಕಮಿಷನರು ಭಾಷಣ ಮಾಡುವರು. ನಂತರ ಆದೇ ದಿನ ಬಡ್ಜೆಟ್ಟನ್ನು ಸಭೆಯ ಮುಂದಿಡಲಾಗುವದು. ತಾ. ೧೫ರಲ್ಲಿ ಪಬ್ಲಿಕ್ ಎಕೌಂಟ್ಸ್ ಸಮಿತಿಯ ಮೆಂಬರುಗಳನ್ನೂ ಡಿಪ್ಯೂಟಿ ಸ್ಪೀಕರನ್ನೂ ಆರಿಸಲಾಗುವದು. ನಂತರ ಶಾಸನ ಸಭಾ ನಿಯಮಾವಳಿಯ ಪರಿಶೀಲನೆ ನಡೆಯುವದು. ತಾ. ೧೬ರಲ್ಲಿ ನಿಯಮಾವಳಿಯ ಪರಿಶೀಲನೆ ಮುಂದರಿಯುವದು. ತಾ. ೧೭ರಲ್ಲಿ ಸರಕಾರಿ ಮಸೂದೆಗಳನ್ನು ತೆಗೆದುಕೊಳ್ಳಲಾಗುವದು. ತಾ. ೧೮ರಲ್ಲಿ ಠರಾವುಗಳನ್ನೂ ಖಾಸಗಿ ಮಸೂದೆಗಳನ್ನೂ ತೆಗೆದುಕೊಳ್ಳಲಾಗುವದು. ತಾ. ೨೦ರಿಂದ ಬಡ್ಜೆಟ್ಟಿನ ಮೇಲೆ ಚರ್ಚೆ ಪ್ರಾರಂಭವಾಗುವದು. ತಾ. ೨೫ರ ವರೆಗೆ ಮೀಟಿಂಗು ನಡೆಯುವದು.

ಗೌರಮ್ಮ ಸ್ಮಾರಕ ಸಮಿತಿ ಮಡಿಕೇರಿ.

ಮೇಲಿನ ಸಮಿತಿಯವರು ಏರ್ಪಡಿಸಿದ್ದ ಕಥಾ ಸ್ಪರ್ಧೆಗೆ ಒಟ್ಟು ೬೫ ಕಥೆಗಳು ಬಂದಿದ್ದುವು. ಉತ್ತಮ ತರದ ಕಥೆಗಳು ಇರಲಿಲ್ಲವೆಂದು ನಿರ್ಣಯಕಾರರ ಅಭಿಪ್ರಾಯವಾಗಿದೆ. ಈ ಕಥೆಗಳಲ್ಲಿ ೧೪ ಉತ್ತರ ಕರ್ನಾಟಕದಿಂದಲೂ, ೪ ದಕ್ಷಿಣ ಕನ್ನಡ ಜಿಲ್ಲೆಯಿಂದಲೂ ೧೯ ಮೈಸೂರು ಪ್ರಾಂತದಿಂದಲೂ, ೧ ಬಳ್ಳಾರಿಯಿಂದಲೂ ಉಳಿದವು ಕೊಡಗಿನವೂ ಆಗಿದ್ದುವು. ಶ್ರೀ ಟಿ. ಎಸ್. ಆರ್. ನಾರಾಯಣರಾಯರೂ (ಭಾರತೀಸುತ) ಶ್ರೀ. ಡಿ. ಎಸ್. ಅನಂತಪದ್ಮನಾಭರಾಯರೂ ಮತ್ತು ಶ್ರೀ ಜಿ. ಟಿ. ನಾರಾಯಣರಾಯರೂ (ಮಂಗಳೂರಿನ ಸೈಂಟ್ ಅಲೋಸಿಯಸ್ ಕಾಲೇಜಿನ ಲೆಕ್ಚರರು) ನಿರ್ಣಯಕಾರರಾಗಿ ಸಹಾಯ ಮಾಡಿದ್ದಾರೆ; ಇವರೆಲ್ಲರಿಗೂ ನಮ್ಮ ಧನ್ಯವಾದಗಳು.

ಈ ಸ್ಪರ್ಧೆಯಲ್ಲಿ ಬೆಳಗಾವಿಯ ಲಿಂಗರಾಜ ಕಾಲೇಜಿನ ವಿದ್ಯಾರ್ಥಿ ಶ್ರೀ. ಚಿದಂಬರ ಕಾಶೀನಾಥ ಜೋಶಿ ಇವರು ಬರೆದ 'ಸಂಸ್ಕೃತಿ ಸಮರ' ಎಂಬ ಕಥೆಗೆ ಮೊದಲನೆಯ ಬಹುಮಾನವೂ, ಕುಮಟಾದ ಕುಮಾರಿ ಚಂದ್ರಿಕಾ ಅನಂತರಾವ್ ಕೊಪ್ಪಿಕರ ಇವರು ಬರೆದ 'ನಾಗರತ್ನ' ಎಂಬ ಕಥೆಗೆ ಎರಡನೇ ಬಹುಮಾನವೂ ಕಾನಕಾನಹಳ್ಳಿಯ ಶ್ರೀ. ಎಂ. ಟಿ. ಜಯಲಕ್ಷ್ಮಿ ಇವರು ಬರೆದ 'ಬಾಳಹಂಬಲ' ಎಂಬ ಕಥೆ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಕಾರ್ಕಳದ ಶ್ರೀ. ಆರ್. ಪಿ. ಶೆಣೈಯವರು ಬರೆದ 'ತ್ಯಾಗ' ಎಂಬ ಕಥೆ ಇವೆರಡಕ್ಕೂ ಮೂರನೇ ಬಹುಮಾನವೂ ದೊರೆತಿರುವುವು. ಇವರಿಗೆಲ್ಲಾ ನಮ್ಮ ಕೃತಜ್ಞತಾಪೂರ್ವಕ ಅಭಿನಂದನೆಗಳು.

ಕಳೆದ ಸಾರಿ ೩೪ ಕಥೆಗಳು ಮಾತ್ರ ಇದ್ದುವು. ಈ ಸಾರಿ ಹೆಚ್ಚಿಗೆ ಬಂದಿರುವುದು ಸಂತೋಷದ ಸಂಗತಿಯಾಗಿದೆ. ಮುಂದಿನ ವರ್ಷ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ಕಥೆಗಾರರು ಈ ಸ್ಪರ್ಧೆಯಲ್ಲಿ ಭಾಗವಹಿಸುವರೆಂದು ಹಾರೈಸಲಾಗಿದೆ.

ಸಂಚಾಲಕರು,
ಗೌರಮ್ಮ ಸ್ಮಾರಕ ಸಮಿತಿ.

ಕೊಡಗು

ತಾ. ೪-೭-೧೯೭೭ನೇ ಶುಕ್ರವಾರ

ವಿದ್ಯಾರ್ಥಿ ನಿವಾಸಗೃಹಗಳು

ವಿದ್ಯಾಭ್ಯಾಸವು ಮುಂದರಿಯಬೇಕಾದರೆ ಕೇವಲ ಶಾಲೆ ಕಾಲೇಜುಗಳಾದರೆ ಸಾಲದು. ಶಾಲೆ ಮತ್ತು ಕಾಲೇಜುಗಳಿಗೆ ಓದಲು ಹೋಗುವ ವಿದ್ಯಾರ್ಥಿಗಳಿಗೆ ಉಳಕೊಳ್ಳಲು ವಸತಿಗೃಹದ ಏರ್ಪಾಡು ಪ್ರಾಮುಖ್ಯವಾದುದು. ಶಾಲಾ, ಕಾಲೇಜುಗಳಲ್ಲಿ ಎಷ್ಟೇ ರೀತಿಯಿಂದ ಅಧ್ಯಾಪಕರು ಉತ್ತಮ ಬೋಧನೆ ಕೊಟ್ಟರೂ ಮನೆಯಲ್ಲಿ ಯಾ ಬೋರ್ಡಿಂಗ್ ಗೃಹಗಳಲ್ಲಿ ಓದಲು ಯೋಗ್ಯ ಅವಕಾಶವಿಲ್ಲದಿದ್ದರೆ ವಿದ್ಯಾರ್ಥಿಗಳು ಮುಂದರಿಯಲಾರರು. ಪ್ರಮುಖ್ಯವಾಗಿ ಶಾಲಾ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಖಾಸಗಿ ಮನೆಗಳಿಗಿಂತಲೂ ವಿದ್ಯಾರ್ಥಿನಿವಾಸಗೃಹಗಳೇ ಉತ್ತಮ. ಆದ್ದರಿಂದ ಪ್ರಾಮುಖ್ಯವಾದ ವಿದ್ಯಾಸಂಸ್ಥೆಗಳಿಗೆ ಜೋಡಿಸಲ್ಪಟ್ಟು ಉತ್ತಮ ವಸತೀಗೃಹಗಳ ಏರ್ಪಾಟನ್ನು ಮಾಡುವದಾಗಿದೆ.

ಕೊಡಗಿನಲ್ಲಿ ಒಂದು ಕಾಲೇಜು ಮತ್ತು ಎಂಟೊಂಭತ್ತು ಹೈಸ್ಕೂಲುಗಳಿದ್ದರೂ ಯೋಗ್ಯ ವಿದ್ಯಾರ್ಥಿ ವಸತೀಗೃಹಗಳಿರುವ ಸಂಸ್ಥೆಗಳು ಕಡಿಮೆ. ಉದಾಹರಣೆಗೆ ಕೊಡಗು ಸರಕಾರಿ ಕಾಲೇಜಿನ ವಿದ್ಯಾರ್ಥಿ ನಿವಾಸಗೃಹ, ವೀರಾಜಪೇಟೆ ಹೈಸ್ಕೂಲಿನ ಹುಡುಗರ ವಸತೀಗೃಹಗಳು ಚೆನ್ನಾಗಿಲ್ಲ. ಕೆಲವು ಸಂಸ್ಥೆಗಳಿಗೆ ವಸತೀಗೃಹಗಳೇ ಇಲ್ಲ. ಸರಕಾರಿ ಕಾಲೇಜಿನ ಮತ್ತು ವೀರಾಜಪೇಟೆ ಹೈಸ್ಕೂಲಿನ ಬೋರ್ಡಿಂಗ್ ಮನೆಗಳು ಕೇವಲ ಝಿಂಕ್ ಶೀಟಿನ ಕಟ್ಟಡಗಳು ಈ ಕಟ್ಟಡಗಳು ಮಳೆಗಾಲದಲ್ಲಿ ಪೂರ್ಣ ಸೋರುತ್ತವೆ ಜೊತೆಗೆ ಕಾಲೇಜಿನ ಮೂವತ್ತು ವಿದ್ಯಾರ್ಥಿಗಳಿರಬೇಕಾದ ಕಟ್ಟಡದಲ್ಲಿ ೫೦ ಕ್ಕಿಂತಾ ಹೆಚ್ಚು ಜನರನ್ನು ಸೇರಿಸಿ ವಿದ್ಯಾರ್ಥಿಗಳಿಗೆ ಓದಲಿಕ್ಕೂ ಮಲಗಲಿಕ್ಕೂ ತುಂಬಾ ಅನಾನುಕೂಲತೆಗಳಿವೆ ಈ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಬಹು ಹೆಚ್ಚಿದ್ದು ವಿಪರೀತ ತೊಂದರೆಯಾಗಿದೆ. ವೀರಾಜಪೇಟೆ ಹೈಸ್ಕೂಲು ಬೋರ್ಡಿಂಗಿನಲ್ಲೂ ಹಾವು ತೊಂದರೆಗಳಿವೆಯೆಂದು ಬೇರೆಡೆ ಪ್ರಕಟವಾದ ಪತ್ರದಿಂದ ತಿಳಿದು ಬರುತ್ತದೆ

ಈ ವಿಚಾರದಲ್ಲಿ ಸರಕಾರದವರು ಹೆಚ್ಚಿನ ನಿಗ ವಹಿಸಬೇಕು. ಮಳೆಗಾಲದಲ್ಲಿ ಝಿಂಕ್ ಶೀಟ್ ಕಟ್ಟಡಗಳಲ್ಲಿ ವಿದ್ಯಾರ್ಥಿಗಳು ಜೀವಿಸುವದೇ ಕಷ್ಟಕರವಾಗಿರುವಾಗ ಇಂಥಾ ಶೆಡ್ಡುಗಳಲ್ಲಿ ಹೆಚ್ಚು ವಿದ್ಯಾರ್ಥಿಗಳನ್ನು ತುಂಬದಂತೆ ನೋಡಿಕೊಳ್ಳಬೇಕು. ಈ ಶೆಡ್ಡುಗಳು ಮಳೆಗೆ ಸೋರದಂತೆಯೂ ಬೆಚ್ಚಗಿರುವಂತೆಯೂ ವ್ಯವಸ್ಥೆ ಮಾಡಬೇಕು. ಸಂಬಂಧಿಸಿದ ಅಧಿಕಾರಿಗಳು ಈ ವಿಚಾರ ಶೀಘ್ರ ಕ್ರಮ ಕೈಕೊಂಡರೆ ತೆಗೆದುಕೊಳ್ಳುವರೆಂದು ಆಶಿಸಲಾಗಿದೆ.

ವರ್ತಮಾನ.

ಗೋಣಿಕೊಪ್ಪ ನೋಟಿಫೈಡ್ ಏರಿಯಾದ ಸದಸ್ಯರಾಗಿ ಶ್ರೀ ಕೊಂಗಂಡ ಗಣಪತಿ, ಕಂಡ್ರತಂಡ ನಂಜಪ್ಪ, ಅಕ್ಕಸಾಲಿಗರ ರಾಮಯ್ಯಾಚಾರಿ, ಎ ಪಿ. ದಾಮೋದರನ್, ಸಿ. ಎಂ ಇಬ್ರಾಹಿಂ, ನಂಜುಂಡಸ್ವಾಮಯ್ಯ, ಎಂ. ಕೆ ಮಹಮದ್ ಹುಸೇನ್ ಮತ್ತು ಪೊನ್ನಿಮಾಡ ಪೂಚಯ್ಯನವರನ್ನು ನೇಮಿಸಲಾಗಿದೆ.

ಕೊಡಗು ಸರಕಾರದ ಸೆಕ್ರೆಟರಿಯೇಟ್ ಸಿಬ್ಬಂದಿಗಳಿಗೆ ಸೆಕ್ರೆಟರಿಯೇಟ್ ಪದ್ಧತಿಯ ತರಬೇತು ಕೊಡಲು ಮೈಸೂರಿನ ಶ್ರೀ. ಸಿ. ಜಿ. ರಾಮಯ್ಯನವರನ್ನು ಒಂದು ತಿಂಗಳ ಮಟ್ಟಿಗೆ ರೂ. ೪೦೦। ವೇತನದಲ್ಲಿ ನೇಮಿಸಿದ್ದಾರೆ.

ಕೊಡಗಿನ ಚೀಫ್ ಕನ್ಸರ್ವೇಟರಿಗೆ ಅಸ್ಸಿಸ್ಟೆಂಟರುಗಳಾಗಿ ಮೂರು ಜನರನ್ನು ಮಾಸಿಕ ರೂ. ೨೦೦।೧೦।೩೦೦ ದರದ ವೇತನದಲ್ಲಿ ನೇಮಿಸಲಾಗುವದೆಂದೂ ಇವು 'ಸಿಲೆಕ್ಷನ್ ಪೋಸ್ಟ್'ಗಳಾಗಿರುವವೆಂದೂ ಪ್ರಕಟವಾಗಿದೆ.

ಕೊಡಗಿನ ಸ್ಟೇಟ್ ರಿಲೀಫ್ ಕಮಿಟಿಗೆ ಶ್ರೀ ಚೌರಿರ ಮುದ್ದಣ್ಣ ಮತ್ತು ಪಿ ಎಂ. ನಾಣಪ್ಪಯ್ಯ ಇವರನ್ನು ಉದ್ಯೋಗಸ್ಥರಲ್ಲದ ಮೆಂಬರುಗಳಾಗಿ ನೇಮಿಸಲಾಗಿದೆ

ಕೊಡಗು ಸರಕಾರಿ ಕಾಲೇಜಿನ ಕೆಮಿಸ್ಟ್ರಿ ಲೆಕ್ಚರರಾಗಿ ಶ್ರೀ ಎಸ್. ರಾಘವೇಂದ್ರ ರಾವ್ ಎಂ. ಎಸ ಸಿ ಇವರನ್ನು ನೇಮಿಸಲಾಗಿದೆ.

ಕೊಡಗಿನಲ್ಲಿ ಏಪ್ರಿಲ್ ತಿಂಗಳಲ್ಲಿ ೪೧೧ ಜನನಗಳೂ, ೨೭೧ ಮರಣಗಳೂ ಸಂಭವಿಸಿವೆಯೆಂದು ಪ್ರಕಟವಾಗಿದೆ.

ಜನವರಿ ತಾ. ೧ರಿಂದ ಇಂದಿನ ವರೆಗೆ ಮಡಿಕೇರಿಗೆ ಒಟ್ಟು ೭೯ ಇಂಚು ೮೧ ಸೆಂಟು ಮಳೆಯಾಗಿದೆ. ಕಳೆದ ವರ್ಷ ಈ ಅವಧಿಯಲ್ಲಿ ೬೭ ಇಂಚು ೬೨ ಸೆಂಟು ಮಳೆಯಾಗಿತ್ತು. ಮಡಿಕೇರಿಗೆ ಈ ವಾರದಲ್ಲಿ ೮ ಇಂಚು ೧ ಸೆಂಟು ಮಳೆಯಾಗಿದೆ.

ಮದ್ರಾಸು ವಿಶ್ವ ವಿದ್ಯಾಲಯದ ಬಿ. ಟಿ. ಪರೀಕ್ಷೆಯಲ್ಲಿ ತ್ರೀಗಳಾದ ಬೊಪ್ಪಂಡ ಕಾಳಪ್ಪ, ಕಂಡ್ರತಂಡ ಮುತ್ತಪ್ಪ, ಬಿದ್ದಾಟಂಡ ಐಯ್ಯಪ್ಪ, ಎಂ. ಎಸ್. ವೆಂಕಟರಾವ್ ಮತ್ತು ಪಿ. ದೇವರಾವ್ ಇವರುಗಳು ತೇರ್ಗಡೆಯಾಗಿರುವರು.

ಖಾಸಗಿಯಾಗಿ ಸ್ಕೂಲ್ ಫೈನಲ್ ಪರೀಕ್ಷೆಗೆ ಕೂತ ಶ್ರೀ ಬಾಚರಣಿಯಂಡ ನಾಣಯ್ಯನವರು ತೇರ್ಗಡೆಯಾಗಿರುವರು

ರಾಯಲಸೀಮಾ ನಿಧಿಗೆ ಶ್ರೀ ಪಿ ಎ. ಚಂಗಪ್ಪನವರು ರೂ. ೨೫ ಮತ್ತು ಮಿಸೆಸ್ ಎಂ. ಜಾಬಿ ಮಾಚಯ್ಯನವರು ರೂ ೫ ಕೊಟ್ಟಿರುವರು. ಈ ವರೆಗೆ ಕೊಡಗಿನಲ್ಲಿ ಒಟ್ಟು ರೂ. ೧೦೪೨ ಸಂಗ್ರಹವಾಗಿದೆ.

ಮದ್ರಾಸು ಲಾಯೊಲಾ ಕಾಲೇಜಿನಲ್ಲಿ ಓದುತ್ತಿರುವ ಶ್ರೀ ಪಟ್ಟಮಾಡ ಕೆ. ಅಪ್ಪಚ್ಚು ಇವರು ಕಳೆದ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಹೊಂದಿರುವರು.

ಕೊಡಗಿನ ಲೇಂಡ್ ಡೆವಲಪ್‌ಮೆಂಟ್ ಬೋರ್ಡಿನ ಸದಸ್ಯರಾಗಿ ಆ ಕಮಿಷನರು (ಅಧ್ಯಕ್ಷ) ವ್ಯವಸಾಯ ಅಧಿಕಾರಿ, ಇರ್ಗೇಶನ್ ಆಫೀಸರು, ಪಿ. ಎಂ. ನಾಣಮ್ಮಯ್ಯ ಎನ್. ವೆಂಕಟಸುಬ್ಬಯ್ಯ ಮತ್ತು ಎಸ್. ಎಸ್. ನಾರಾಯಣಮೂರ್ತಿ ಇವರನ್ನು ನೇಮಿಸಲಾಗಿದೆ. ಕೊಡಗಿನ ಲೇಂಡ್ ಡೆವಲಪ್‌ಮೆಂಟ್ ಆಕ್ಟು ತಾ. ೧-೭-೫೨ ರಿಂದ ಜಾರಿಗೆ ಬಂದಿದೆ.

ಇಂಟರ್ ಮೀಡಿಯೇಟ್ ಪಾಸಾದವರು ಪ್ರಾಯ ೨೧ರ ವಳಗೆ ಇರುವವರು ಡೆಪ್ಯುಟಿ ರೇಂಜರ್ ಕೆಲಸಕ್ಕೂ, ಮತ್ತು ಎಸ್. ಎಸ್. ಎಲ್. ಸಿ. ಪಾಸಾದವರು ಫಾರೆಸ್ಟರ್ ಕೆಲಸಕ್ಕೂ ಬೇಕಾಗಿರುವರು. ಕುತೂಹಲವುಳ್ಳವರು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಲ್ಲಿ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬಹುದು

ಪೊನ್ನಂಪೇಟೆ ಹೈಸ್ಕೂಲಿನ ನಿವೃತ್ತ ಹೆಡ್ ಮಾಸ್ಟರಾಗಿದ್ದ ಶ್ರೀ ರಾಮಭಟ್ಟರು ಟಿ. ಶೆಟ್ಟಿಗೇರಿಯಲ್ಲಿ ಹೊಸದಾಗಿ ತೆರೆಯಲ್ಪಟ್ಟ ಹೈಸ್ಕೂಲಿನ ಹೆಡ್ ಮಾಸ್ಟರಾಗಿ ನೇಮಕವಾಗಿರುವರೆಂದು ತಿಳಿಯುತ್ತೇವೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ನಿವೃತ್ತರಾದ ಶ್ರೀ ಪಟ್ಟಡ ಉತ್ತಪ್ಪನವರನ್ನು ಮಡಿಕೇರಿ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ನೇಮಿಸಲಾಗಿದೆ.

ಪೊನ್ನಂಪೇಟೆ ಸರಕಾರಿ ಹೊಸ ಹೈಸ್ಕೂಲ ಕಟ್ಟಡದ ಕೆಲಸ ಪೂರೈಸಿ ಕಳೆದ ತಾ. ೧೮ರಲ್ಲಿ ಈ ಶಾಲೆಯಲ್ಲಿ ಗಣಪತಿ ಹೋಮ ಹಾಕಿ ತರಗತಿ ತೆರೆಯಲ್ಪಟ್ಟಿದೆ. ಸದ್ಯದಲ್ಲೇ ಅನಾವರಣ ಮಹೋತ್ಸವವು ನಡೆಯುವದೆಂದು ತಿಳಿಯುತ್ತೇವೆ.

ಪೊನ್ನಂಪೇಟೆ ಶ್ರೀರಾಮಕೃಷ್ಣ ಉಚಿತ ಔಷಧಾಲಯದಲ್ಲಿ ಕಳೆದ ವಾರದಿಂದ ಡೆಲ್ಲಿಯ ರೆಡ್ ಕ್ರಾಸ್ ಸಂಘದವರು ಉಚಿತಾರ್ಥವಾಗಿ ಒದಗಿಸಿಕೊಟ್ಟ ಒಳ್ಳೆ ಹಾಲು ಪುಡಿಯಿಂದ ಸ್ಥಳೀಯ ಎರಡು ವರ್ಷ ಪ್ರಾಯದ ವಳಗಿನ ಮಕ್ಕಳ ಉಪಯೋಗಾರ್ಥವಾಗಿ ದಿನಂಪ್ರತಿ ಹಾಲು ಹಂಚುವ ಏರ್ಪಾಡು ಮಾಡಲಾಗಿದೆಯೆಂದು ತಿಳಿಯಬರುತ್ತದೆ.

ಶ್ರೀ. ಎಂ. ಎನ್. ಗುಂಡೂರಾಯರನ್ನು ಎಸೆಂಬ್ಲಿ ಸಭೆಯ ಸೆಕ್ರೆಟರಿಯಾಗಿ ನೇಮಿಸಲಾಗಿದೆ.

ಕೊಡಗಿನ ಮುಖ್ಯ ಮಂತ್ರಿಗೆ ತಿಂಗಳಿಗೆ ರೂ. ೬೦೦ ವೇತನ, ರೂ. ೧೫೦ ಸಂಪ್ಚುವರಿ ಭತ್ಯ, ಗೃಹ ಮಂತ್ರಿಗೆ ರೂ. ೬೫೦ ವೇತನ, ರೂ. ೧೦೦ ಬತ್ಯ, ತಾ. ೧೭-೩-೫೨ರಿಂದಲೂ, ಸ್ಪೀಕರರಿಗೆ ರೂ. ೬೫೦ ವೇತನ ತಾ. ೨೭-೩-೫೨ರಿಂದಲೂ, ಮೆಂಬರುಗಳಿಗೆ ತಿಂಗಳಿಗೆ ರೂ. ೧೫೫ ವೇತನ ತಾ. ೨೭-೩-೫೨ರಿಂದಲೂ ಕೊಡಬೇಕೆನ್ನುವ ಮಸೂದೆಯು ಮುಂದೆ ಬರಲಿರುವ ಕೌನ್ಸಿಲು ಸಭೆಯಲ್ಲಿ ಚರ್ಚಿಸಲ್ಪಡುವುದು.

ಪೋಸ್ಟ್‌ವಾರ್ ಸರ್ವಿಸಸ್ ರಿಕನ್‌ಸ್ಟ್ರಕ್ಷನ್ ಫಂಡಿನ ಸಮಿತಿಯೊಂದನ್ನು ಏರ್ಪಡಿಸಿ ಚೀಫ್ ಕಮಿಷನರು (ಅಧ್ಯಕ್ಷ) ಮುಖ್ಯಮಂತ್ರಿ (ಉಪಾಧ್ಯಕ್ಷ), ಮದ್ರಾಸ್ ಏರಿಯಾದ ಕಮಾಂಡಿಂಗ್ ಆಫೀಸರು, ಡಿ. ಮಿಷನರಿ, ಜಿಲ್ಲಾ ಜಡ್ಜರು ಮತ್ತು ಕೆಪ್ಟನ್ ಕೆ. ಎ. ಪೊನ್ನಣ್ಣನವರನ್ನು ಸದಸ್ಯರನ್ನಾಗಿ ಆರಿಸಲಾಗಿದೆ.

ಓದುಗರ ಓಲೆ.

ವೀರಾಜಪೇಟೆ ವಿದ್ಯಾರ್ಥಿಯರ ಬೋರ್ಡಿಂಗ್

ಈ ಬೋರ್ಡಿಂಗಿನ ಅವಸ್ಥೆಯು ಶೋಚನೀಯವಾಗಿದೆ. ಬೋರ್ಡಿಂಗ್ ವಿದ್ಯಾರ್ಥಿಯರಿಗೆ ಉಳಕೊಳ್ಳಲು ಮನೆ ಆಗಿರುವದಾದರೂ ಈ ಬೋರ್ಡಿಂಗನ್ನು ನೋಡಿದರೆ ಮನುಷ್ಯರ ವಾಸಕ್ಕೆ ಲಾಯಕ್ಕಾಗಿರುವದಿಲ್ಲ. ಇದು ಒಂದು ಜಿಂಕ್ ಶೀಟಿನ ಶೆಡ್ ಆಗಿರುತ್ತದೆ ಸುತ್ತಲೂ ಗುಡಿಸಲಿಗೆ ಹಾಕುವ ಹಾಗೆ ನೇಕೆಯನ್ನು ಹಾಕಿದ್ದಾರೆ ಅದರ ಮೇಲೆ ಹಾಕಿದ ಸಾರಣೆ ಮಾಡಿದ ಮಣ್ಣೆಲ್ಲಾ ಹೋಗಿರುತ್ತೆ. ಮಳೆಯ ನೀರೆಲ್ಲ ಶೆಡ್ಡಿನೊಳಕ್ಕೆ ಬಿದ್ದು ಹರಿಯುತ್ತವೆ. ದೊಡ್ಡ ಗಾಳಿ ಮಳೆಯ ಸಮಯದಲ್ಲಿ ಮಕ್ಕಳ ಪಾಡು ದೇವರೇ ಬಲ್ಲ. ಸರಕಾರದ ಹಣ ಎಷ್ಟೋ ಬಾಬಿನಲ್ಲಿ ವ್ಯಯ ಆಗುತ್ತಿರುವದಾದರೂ ಈ ಬೋರ್ಡಿಂಗಿನ ಕಡೆಗೆ ಅಧಿಕಾರಿಗಳ ದೃಷ್ಟಿ ಬಿದ್ದು ಸ್ವಲ್ಪ ಹಣವನ್ನಾದರೂ ಖರ್ಚು ಮಾಡಿ ಮುಂದಿನ ಜನಾಂಗವಾದ ಬಡ ಮಕ್ಕಳ ಸೌಕರ್ಯಕ್ಕಾಗಿ ಯಾತಕ್ಕೆ ಅಭಿವೃದ್ಧಿ ಪಡಿಸುವದಿಲ್ಲವೆಂಬುದಕ್ಕೆ ವ್ಯಸನಪಡಬೇಕಾಗಿದೆ.

ಖಾಯಂ ಆಗಿ ಇದ್ದ ವಿದ್ಯಾರ್ಥಿ ನಿವಾಸಗೃಹದ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಆಗಿರುವ ಮನೆಯಲ್ಲಿ ಬೋರ್ಡಿಂಗ್ ನಡೆಸುತಿದ್ದುದನ್ನು ದೇಶದ ಹಿತವನ್ನು ಬಯಸಿ ಆ ಕಟ್ಟಡವನ್ನು ಟೆಕ್ನಿಕಲ್ ಇನ್‌ಸ್ಟಿಟ್ಯೂಟಿಗೆ ಬಿಟ್ಟುಕೊಟ್ಟು ತಾತ್ಕಾಲಿಕವಾಗಿ ಈಗಿನ ಬೋರ್ಡಿಂಗ್ ಶೆಡ್ಡನ್ನು ೧೯೪೫ರಲ್ಲಿ ಮಾಡಿದ್ದಾಯಿತು. ಆದರೆ ಅದನ್ನು ಏನೊಂದೂ ದುರಸ್ತು ಪಡಿಸದೆ ಈ ರೀತಿ ಹೀನಾವಸ್ಥೆಯಲ್ಲು ಇಟ್ಟದ್ದು ಅನ್ಯಾಯವಾಗಿದೆ. ಈ ರೀತಿ ಇರುವದಕ್ಕಿಂತಲೂ ಬೋರ್ಡಿಂಗನ್ನು ಮುಚ್ಚಿಸಿ ವಿದ್ಯಾರ್ಥಿಯರ ಪಾಡು ಅವರವರೇ ನೋಡಿಕೊಳ್ಳಲಿಕ್ಕೆ ಬಿಡುವದು ಉತ್ತಮ.

ಕಾಲ ಕಳೆದಂತೆ ಜನಜಾಗೃತಿ ದೇಶೋದ್ಧಾರ ಸರ್ವ ಅಭಿವೃದ್ಧಿ ಆಗುತ್ತಿರುವ ಕಾಲಕ್ಕೂ ಮತ್ತು ಈಗಿನ ಸರಕಾರದ ನೀತಿ ಮೇರೆ ದಿನಸಿತ್ಯ ಕೆಲಸಗಾರನಿಗೂ ಸಹ ವಾಸಕ್ಕೆ ತಕ್ಕ ಅನುಕೂಲತೆ ಮಾಡಿಕೊಡಬೇಕೆಂದಿರುವ ಸಮಯದಲ್ಲೂ ವಿದ್ಯಾರ್ಥಿಯರ ಪಾಡು ಈ ರೀತಿ ಆಗಿರುವದು ಆಶ್ಚರ್ಯವೇ ಸರಿ. ಅದರಲ್ಲೂ ಈಗಿನ ಸರಕಾರ ಜನತಾ ಸರಕಾರ ಆಗಿರುವಾಗ್ಗೆ ಇಂಥಾ ಸಂಗ್ತಿ ಹೆಚ್ಚು ವಿವರಿಸಬೇಕಾಗಿಲ್ಲ. ಮಂತ್ರಿಗಳು ದೇಶದ ಮೂಲೆ ಮೂಲೆ ಸುತ್ತಿ ಕಳೆದಂತಹ ಜನತೆಯಿಂದ ಆರಿಸಿ ಬಂದಂತಹವರು ಈ ತರ ಕಷ್ಟದ ಪರಿಸ್ಥಿತಿಯನ್ನು ಒಡನೆ ನಿವಾರಿಸುವ ಬಾಬಿನಲ್ಲಿ ಖುದ್ದು ನೋಡಿದರೆ ಕಷ್ಟವು ನಿವಾರಣೆ ಆಗುವದೆಂದು ಆಶಿಸುತ್ತೇನೆ.

'ಮಕ್ಕಳ ಹಿತೈಷಿ'

ಒದುಗರ ಓಲೆಗಳು

ಕೊಡಗಿನ ಆಸ್ಪತ್ರೆಗಳು ಮತ್ತು ವೀರಾಜಪೇಟೆಯ ಆಸ್ಪತ್ರೆ

ನಮ್ಮ ದೇಶದುದ್ದಗಲಕ್ಕೂ ಅನೇಕ ಧರ್ಮಾರ್ಥ ಆಸ್ಪತ್ರೆಗಳಿವೆ. ಆದರೆ ಈ ಆಸ್ಪತ್ರೆಗಳಿಗೆ [illegible] ಉತ್ತಮ ಔಷಧಿಗಳನ್ನು ಸಾಕಷ್ಟು ಸರಬರಾಜು ಮಾಡದಿರುವುದು ಶೋಚನೀಯ. ಇದರ ಪರಿಣಾಮವೇನೆಂದರೆ ಒಂದನೆಯದಾಗಿ ಡಾಕ್ಟರ್, ನರ್ಸ್, ಕಂಪೌಂಡರುಗಳಿಗೆ [illegible] ಜನರಿಂದ ಅಪವಾದ [illegible]. ಎರಡನೆಯದಾಗಿ ಹಲವಾರು ಆಸ್ಪತ್ರೆಗಳಲ್ಲಿಯೂ ಒಂದು ಆಸ್ಪತ್ರೆಯಲ್ಲಿ ಉತ್ತಮ ಮದ್ದು ಸಿಕ್ಕದೆ ಜನತೆ ಕಾಲವನ್ನು [illegible]. ಈ ವಿಷಯವಾಗಿ ಸಂಬಂಧಪಟ್ಟ ಮೇಲಧಿಕಾರಿಗಳು ಶೀಘ್ರವಾಗಿ ಗಮನ [illegible] ಬೇಕಾಗಿದೆ. 'ಓದುಗರ ಓಲೆ'ಯಲ್ಲಿ ಬರೆದ [illegible] ಎಂದು [illegible] ಅಪರಾಧವೂ [illegible]. 'ಮಾಡಿದ [illegible]' ಎಂದು [illegible] ಮಾತಿಗೆ [illegible]. [illegible] ರೋಗಿಗಳ ಹಿತವಾಗಿ [illegible] ಸಾಕಷ್ಟು [illegible] ಸಂಬಂಧಿಸಿದ [illegible] ಗಳ [illegible].

ಮೇಲಧಿಕಾರಿಗಳ ವಿಷಯ ಹೀಗಾದರೆ ಅವರ ಕೆಳಗಿನವರಲ್ಲಿ ಕೆಲವು ಡಾಕ್ಟರ್, ಕಂಪೌಂಡರ್, ನರ್ಸ್ [illegible] ನೋಡಿ ಪಟ್ಟ [illegible] ವರ್ತನೆ. ಅನೇಕ ಆಸ್ಪತ್ರೆಗಳಲ್ಲಿ ಬಡವರ [illegible] ಬಡವ ಬಂದರೆ [illegible] ರೀತಿಯ ಮದ್ದು ಹೀಗೆ ಯಾಕೆ? ಪ್ರತಿ ಯೊಬ್ಬ ಬಡವನಿಗೂ ಕೋಣೆಗಳಲ್ಲಿ ಮಂಚಗಳಿರಾಲಿ ಇದರೂ [illegible] ಕೋಣೆಗಳಲ್ಲಿಯೂ ಶೀತ ನೆಲದ ಸ್ಥಳವೇ [illegible] ನೆನು ಏನಾದರೂ ಇದೆಯೋ? ಅಲ್ಲದೆ ರೋಗಿಗಳಿಗೆ ಇಂಜಕ್ಷನ್ ಯಾ ಇನ್ನಾವುದರೂ ಮದ್ದು ಬೇಕಾದರೆ [illegible] ರೋಗಿಗಳ ಸ್ವಂತ ಖರ್ಚಿನಿಂದ [illegible] ಔಷಧ [illegible] ತರಿಸುತ್ತಾರೆ. ಆಯಾಯ ಆಸ್ಪತ್ರೆಗಳಲ್ಲಿಯೇ ಬೇಕಾದಷ್ಟು ಔಷಧಗಳನ್ನಿಟ್ಟು [illegible] ಗರೀಬರನ್ನು ಬಿಟ್ಟು ಉಳಿದವರಿಗೆ [illegible] ತೆಗೆದ [illegible] ಸರಬರಾಜು ಮಾಡುವ ವ್ಯವಸ್ಥೆಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ನಿಗಾ [illegible] ಶೋಚನೀಯವಲ್ಲವೇ? ಇನ್ನು ಮುಂದಾದರೂ ಈ ಎಲ್ಲಾ ರೀತಿಯ ವ್ಯವಸ್ಥೆಯ ಬಗ್ಗೆ ಅಧಿಕಾರಿಗಳು ನಿಗವಹಿಸುವರೇ?

ಈ ಸಂದರ್ಭದಲ್ಲಿ ವೀರಾಜಪೇಟೆಯ ಆಸ್ಪತ್ರೆಯನ್ನು ಕುರಿತು ಒಂದೆರಡು ವಾಕ್ಯಗಳನ್ನು ಬರೆಯಬೇಕಾಗಿದೆ. ಇಲ್ಲಿನ ಹೆಂಗಸರ ವಾರ್ಡುಗಳಲ್ಲಿನ ಬಡ ರೋಗಿಗಳ ಸ್ಥಿತಿ ಬಹಳ ದುಸ್ತರವಾಗಿದೆ. ಅನೇಕ ರೋಗಿಗಳಿಗೆ ಔಷಧವೇ ಸರಿಯಾಗಿ ಸರಬರಾಜು ಆಗುತ್ತಿಲ್ಲವೆಂದೂ, ನರ್ಸ್‌ಗಳು ರೋಗಿಗಳೊಂದಿಗೆ ಬಹಳ ಕಟುವಾದ ರೀತಿಯಲ್ಲಿ ವರ್ತಿಸುತ್ತಾರೆಂದೂ ಅನೇಕ ರೋಗಿಗಳಿಂದ ತಿಳಿದು ಬಂದಿದೆ. ಕಟು ವರ್ತನೆಗೆ ಉದಾಹರಣೆಯೂ [illegible] ಹೊಂದು. ಕಳೆದವಾರ ಓರ್ವ ಮಹಿಳೆಯು [illegible] ಆಸ್ಪತ್ರೆಗೆ ಸೇರಿದಳು. ಆಕೆಗೆ ಕಾಲಿನ [illegible] ಶೀಘ್ರವಾಗಿ ಇಂಜಕ್ಷನ್ ಕೊಡಬೇಕೆಂದೂ ಡಾಕ್ಟರು [illegible] ಹೇಳಿದರು. ಒಂದು ವರೆ ಗಂಟೆಗೆಯ ವರೆಗೆ [illegible] ಕಾಣದುದರಿಂದ ಓರ್ವ ನರ್ಸನ್ನು ಕರೆದು ಬೇಗನೆ ಇಂಜಕ್ಷನ್ ಕೊಡಬೇಕೆಂದು ಕೇಳಿಕೊಂಡಳು. ಅದಕ್ಕೆ ಆ ನರ್ಸ್ [illegible] ಗೆ [illegible] ಬಂದಿಲ್ಲ. ಇಂಜಕ್ಷನ್ ಬೇಗ ಮಾಡಿ ಎಂದು ತಪ್ಪಾಗಿ ನುಡಿದು ನೀವು ಇಂಜಕ್ಷನ್ [illegible]. ಹಾಗಿದ್ದರೆ ನೀವು ಸ್ಪೆಶಲ್ ವಾರ್ಡಿಗೆ ಹೋಗಿ ಎಂದು ಉರಿದು ಬಿದ್ದಳು. ಇಂತಹ ಮಾತು ಕೇಳುವಾಗ ರೋಗಿಯ ಮನಸ್ಸಿಗೆ [illegible] ಹುದು? ಹೀಗೆ ಅನೇಕ ನರ್ಸ್‌ಗಳು ವರ್ತಿಸುವುದು ಕಂಡು [illegible] ಬಡ ಜನತೆಯು ಕಡೆ [illegible]. ಬಡರೋಗಿಗಳಿಗೆ [illegible] ದಿವಸ [illegible] ಲಿಯಾಗಿ [illegible] ತಪ್ಪ [illegible] ಗೆ [illegible] ಅರ್ಥ. [illegible] ಖರ್ಚು ಮಾಡಿಕೊಂಡು ಔಷಧ [illegible] ರಲು ಶಕ್ತರು. ಅಂತವರಿಗಾಗಿಯೇ ಧರ್ಮಾರ್ಥ ಆಸ್ಪತ್ರೆಗಳಿರುವುದು. ಅಂತವರ [illegible] ಬಹಳ ಅಕ್ಕರೆ [illegible] ಉತ್ತಮ ಔಷಧಿಕೊಟ್ಟು ಚಿಕಿತ್ಸೆ [illegible] ಗುಣಪಡಿಸುವಂತಹ ಅಂತಃಕರಣ [illegible] ನಿಜವಾಗಿಯೂ ಸ್ತುತ್ಯರ್ಹವಾದುದು. ಇನ್ನಾದರೂ ಈ ರೀತಿಯ ವರ್ತನೆಯನ್ನು ಬಿಟ್ಟು ತಮ್ಮ [illegible] ಕಡೆ ಗಮನ ಕೊಡುವರೇ?

ಕಡೆಯದಾಗಿ ಹೇಳುವುದಾದರೆ ಆಸ್ಪತ್ರೆಗಳಲ್ಲಿ ಅನೇಕ ರೀತಿಯ ವ್ಯವಸ್ಥೆಗಳಾಗಬೇಕಿದೆ ರೋಗಿಗಳು ಹೆಚ್ಚಾದರೆ ಅದುದರಿಂದ ರೋಗಿಗಳಿಗೆ ಪೂರ್ಣಗುಣ ಆಗುವುದಕ್ಕೆ ಮೊದಲೇ ಆಸ್ಪತ್ರೆಯಿಂದ ಕಳುಹಿಸಲಾಗಿದೆ. ಇಲ್ಲಿಯೂ ಅದವಾದ [illegible] ನರ್ಸ್‌ಗಳೇ. ರೋಗಿಗಳಿಗೆ ಉತ್ತಮ ಆಹಾರ ದೊರಕುವುದಿಲ್ಲ [illegible] ದರೂ ಆ ರೀತಿಯ ಆಹಾರದ ವ್ಯವಸ್ಥೆ ಇಲ್ಲದಿರುವುದು ವಿಷಾದಕರ. ಉತ್ತಮ ಔಷಧಿಗಳು ದೊರಕುವುದಿಲ್ಲ. ವಾರ್ಡುಗಳಲ್ಲಿ ವಾರ್ಡುಗಳಿದ್ದರೂ ಮಂಚಗಳಿಲ್ಲ. ಇನ್ನಾದರೂ ಈ ರೀತಿಯ ಅವ್ಯವಸ್ಥೆಯನ್ನು ಸರಿಪಡಿಸಿ ಉತ್ತಮ ಆಹಾರ, ಮದ್ದುಗಳನ್ನು ಕೊಟ್ಟು ಡಾಕ್ಟರ್, ಕಂಪೌಂಡರ್ ನರ್ಸ್‌ಗಳಿಗೆ ಸಿಕ್ಕುವ ಅಪವಾದವನ್ನು ನಿಲ್ಲುವಂತೆ ಮಾಡಿ ಜನರಿಗೆ ಹಿತವಾಗುವಂತೆ ಮಾಡಲು ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತು ಶೀಘ್ರವಾಗಿ ಕಾರ್ಯಕ್ರಮ ಕೈಗೊಳ್ಳುವರೇ?

'ಕ್ರಾಂತಿ ಕುಮಾರ'

ಕೊಡಗಿನಲ್ಲಿ ಮೈನರ್ ಇರಿಗೇಶನ್ ಸ್ಕೀಮ್ ಕೆಲಸ ಕಾರ್ಯಗಳು.

೧೯೫೦ರಿಂದ ಇಂಡಿಯಾ ಸರಕಾರದ ಶಿಫಾರಸ ಮೇರೆ ಈ ಪ್ರಾಂತದಲ್ಲಿ ಒಂದೊಂದು ನಾಡಿಗೆ ೩೦ ರಿಂದ ೫೦ ಸಾವಿರ ರೂಪಾಯಿ ಖರ್ಚುಮಾಡಿ ಸಣ್ಣ ಸಣ್ಣ ಕಟ್ಟೆ, ಕೆರೆ, ನಾಲೆ ಮೊದಲಾದ್ದನ್ನು ಮಾಡುವ ಯೋಜನೆಯು ಜಾರಿಗೆ ಬಂದು ಕೆಲವು ಕಡೆ ಕೆಲಸವು ಆಗಿರುತ್ತೆ.

ಕೆಲವು ನಾಡಿನಲ್ಲಿ ಗಡಿಗಡೀ ಸಮಿತಿಯ ಮೀಟಿಂಗ ಮಾಡಿ ಕೆಲಸಕ್ಕೆ ಸಲಹೆ ಕೊಡುತ್ತಲೂ ಕೆಲವು ನಾಡಿನಲ್ಲಿ ಅದರಲ್ಲೂ [illegible] ನಾಡಿನಲ್ಲಿ ಕಮಿಟಿ ಮೆಂಬರರು ಮೀಟಿಂಗು ಕರೆಸಲು ಅಫೀಸರುಗಳಿಗೆ [illegible] ಬರಕೊಂಡರೂ ಮೀಟಿಂಗೇ ಕರೆಯದೆಯೂ ಕಾರ್ಯ ಸಾಗುತ್ತಾ ಬಂತು.

ಈ ಯೋಜನೆಯ ಪ್ರಕಾರ ಬಹಳ ಚಿಕ್ಕ ಚಿಕ್ಕ ಕಟ್ಟೆ ಕೆರೆಗಳಿಂದ [illegible] ನಾಲೆಗಳಿಂದ ಊ ನಿಜಕ್ಕೂ ರೈತಾಪಿ ಜನರಿಗೆ ಬಹಳ ಉಪಯೋಗವೇ ಆಗಿರುತ್ತೆ. ಈ ಕೆಲಸಗಳ ಈ ದೇಶೀಯರು ಮಾತ್ರ ಕೊಡಗಿನವರೂ ಬಂದ ಕಂಟ್ರಾಕ್ಟು ವಹಿಸಿಕೊಂಡು ಕೆಲಸ ನಡೆಸುತ್ತಾರೆ. ಕಳೆದ ವರ್ಷದಲ್ಲು ಏನೂ ಅದನ್ನು ಕೆಲಸದ ಬಿಲ್ಲು ಕಳುಹಿಸಿದ ಕೂಡಲೇ ಕಂಟ್ರಾಕ್ಟರುಗಳಿಗೆ ಹಣ ಸಿಕ್ಕಿ ಜಾಗ್ರತೆ ಕೆಲಸ ಆಗುತಿತ್ತು. ಆದರೆ ಈ ವರ್ಷದಲ್ಲಿ ಆದರೂ ನಮ್ಮ ಮಂತ್ರಿ ಮಂಡಳ ರಚಿಸಿದ ನಂತರ ಕಂಟ್ರಾಕ್ಟರುಗಳು ಕಳುಹಿಸಿದ ಬಿಲ್ ಯಾವದೂ ಮಂಜೂರು ಆಗದೆ [illegible] ಕೆಲಸವೆಲ್ಲಾ [illegible] ನಿಂತಿರುತ್ತೆ. ಒಂದೊಂದು ಕೆಲಸದ ಬಾಪ್ತು [illegible] ರಿಂದ ೫೦೦೦ ದ ವರೆಗೂ ಬಿಲ್ ಮಂಜೂರು ಮಾಡದೆ ಇಟ್ಟರೆ ಸಣ್ಣ ಸಣ್ಣ ಕೆಲಸಕ್ಕೆ ಬಂದಿರುವ ಬಡ ಕಂಟ್ರಾಕ್ಟರು [illegible] ಮಾಡಬೇಕು?

ಅಲ್ಲದೆ ಹಲವು ಕಡೆ ಕೆಲಸ ಪೂರ್ತಿ ಆಗದೆ ಇದ್ದರೆ ಮಳೆಗಾಲದಲ್ಲಿ ನೀರು [illegible] ಮಾಡಿದ ಕೆಲಸವೂ ಹಾಳಾಗಿ ವಿನಿಯೋಗಿಸಿದ ಹಣವು ವ್ಯರ್ಥವಾಗಿಬಿಡುತ್ತೆ.

ಹೀಗಾಗಿ ಹೊಳೆಯ ಕಟ್ಟೆಯಂತ ಕೆಲಸದಿಂದ ಕಟ್ಟೆ ಮಾಡಿ ಎಂಬ ಅಂದಾಜು ಹತ್ತು ಸಾವಿರ ಬಟ್ಟೆ ಭೂಮಿಗೆ ನೀರಿನ ಅನುಕೂಲಮಾಡಿ ಕೊಡುವ ಜಾಗದಲ್ಲಿ ನಾಲೆ ಕೆಲಸ ಮುಗಿಯದೇ ಇಲ್ಲವಂತೆ, ಹಾಗಾದರೆ ಕಟ್ಟೆಗೆ ಹತ್ತು ಸಾವಿರ ರೂಪಾಯಿ ಖರ್ಚು ಮಾಡಿದರ ಫಲವೇನಾಯಿತು? ಇಥಾ [illegible] ಪ್ರಯೋಜನದ ಕಾರ್ಯದಲ್ಲಿ ಜನತಾ ಸರಕಾರ ನಿಗವಹಿಸುವುದು ಅದ್ಯಕರ್ತವ್ಯವಲ್ಲವೇ. ಈ ಸಂಗತಿಯನ್ನು ಮಂತ್ರಿಯವರ [illegible] ವಾಗಿ ಅರಿಕೆ [illegible].

ರೈತರ ಹಿತೈಷಿ.

ಪೆನ್ಶನರುಗಳು.

ಮೂವತ್ತು ವರ್ಷಗಳ ಸರಕಾರಿ ಕೆಲಸ ನಡೆಸಿ ನಿವೃತ್ತರಾದರೂ ಕೊಂದರೆ ತಪ್ಪುವದಿಲ್ಲ. ನಿವೃತ್ತರಾದ ಮೇಲೆ ನಿವೃತ್ತಿ ವೇತನ ದೊರೆಯಬೇಕಾದರೆ ವರ್ಷಗಳು ಹಿಡಿಯುತ್ತವೆ. ನಾನು ಒಬ್ಬ ಸರಕಾರಿ ಉದ್ಯೋಗಿ. ಮೂವತ್ತುಮೂರು ವರ್ಷ ದುಡಿದು ನಿವೃತ್ತನಾದವನು. ನಾನು ನಿವೃತ್ತನಾಗಿ ಎರಡು ವರ್ಷಗಳಾಗಿರಬಹುದು. ಆದರೆ ನನ್ನ ನಿವೃತ್ತಿ ವೇತನ ಈ ವರೆಗೂ ಬಂದಿಲ್ಲ. ಶೀಘ್ರ ಬರುವಂತೆ ತೋರುವದೂ ಇಲ್ಲ. ಇದಕ್ಕಾಗಿ ಆಫೀಸು, ರಾಜಧಾನಿ ಎಲ್ಲ ಹತ್ತಾರು ಸಾರಿ ಸುತ್ತಿದರೂ ಪ್ರಯೋಜನವಾಗಿಲ್ಲ. ಹಲವು ಬಾರಿ ಜ್ಞಾಪನ ಮಾಡಿ ಕಳುಹಿಸಿ ಆಯಿತು. ಬಾಧಿತನಾಯಿತು [illegible] ಆಯಿತು. ಆದರೆ ಪೆನ್ಶನ್ ಮಾತ್ರ ಮಂಜೂರಾಗಿ ಬಂದಿರುವದಿಲ್ಲ. ಇದರಿಂದ ಜೀವನ ಬಹು ಕೊಂದರೆಗೀಡಾಗಿದೆ. ಪೆನ್ಶನ ಶೀಘ್ರ ದೊರೆಯುವಂತೆ ಮಾಡಲು ಸಂಬಂಧಿಸಿದ ಅಧಿಕಾರಿಗಳು ನಿಗವಹಿಸಬೇಕು.

ಸುಬ್ಬಯ್ಯ.

'ಶಾಂತಿ ಕುಮಾರ'ನಿಗೆ 'ಕ್ರಾಂತಿ ಕುಮಾರ'ರ ಪ್ರತ್ಯುತ್ತರ.

[illegible] ೨೭–೬–೫೨ ರ ಕೊಡಗು ಪತ್ರಿಕೆಯಲ್ಲಿ ಬರೆದ ಲೇಖನವನ್ನು ಓದಿದೆನು. ಶಾಂತಿ ಕುಮಾರನಿಗೆ [illegible] ಶಿಕ್ಷೆ [illegible] ಪ್ರತ್ಯುತ್ತರ [illegible] ನಿಂದ ನನಗೆ [illegible]. ಸತ್ಯವನ್ನು [illegible], ಅಸತ್ಯವನ್ನು ಹೇಳಿ [illegible] ನಮ್ಮ ಸಮಾಜದಲ್ಲಿರುವವರಲ್ಲ ಎಂದು ವಿಷಾದದಿಂದ ಪ್ರಕಟಿಸಬೇಕಾಗಿದೆ. ಇಂತಹ [illegible] ವೀರಾಜಪೇಟೆಯಲ್ಲಿ ಒಂದು [illegible] ಯವನ್ನು [illegible] ಸಂಘವಾಗಿದೆ. ಇದರಿಗೆ [illegible] ದೂ, ಮೂರೇ [illegible] ಕೆಲಸಗಾರರು [illegible] ಪಟ್ಟವುದೆಂದೂ [illegible] ದರೆ ಶಾಂತಿಕುಮಾರರು [illegible] ಹತ್ತಿರದ ಸಂಬಂಧಿಕರಾಗಿರಬೇಕು. ಸಾರ್ವಜನಿಕ ಹಿತದೃಷ್ಟಿಯ ಬಗ್ಗೆ ಇವರು ಪರಿಶೀಲಿಸಿದರೆ [illegible] ಲಿದ್ದರು. ಆದರೆ ಇವರ [illegible] ಭಯಂಕರವಾಗಿದೆ, [illegible] ಸ್ವಹಿತಕ್ಕಾಗಿ [illegible] ದಿನದಲ್ಲೇ [illegible] ತೋರುತ್ತದೆ. [illegible] ಪಕ್ಷದವರ [illegible] ದೊರೆತ [illegible] ಸ್ವಾರ್ಥ [illegible] ಕೊಡುವ [illegible] ತೋರುತ್ತದೆ. [illegible] ನನ್ನ [illegible] ಅರ್ಥವ

ನ್ನು ಆಪಾದೆ ಕಲ್ಪಿಸಿಕೊಂಡು ಶಾಂತಿಕುಮಾರರ ಸಂಚಿನಲ್ಲಿ ಅಶಾಂತಿಯನ್ನುಂಟು ಮಾಡುವ ಚಿಕ್ಕ ಕೆಲಸಕ್ಕೆ ಕೈ ಹಚ್ಚಿರುವಂತೆ ತೋರುತ್ತಿವೆ. ಇನ್ನಾದರೂ ಸಾರ್ವಜನಿಕರ ಹಿತಕ್ಕಾಗಿ ಸಂಪಾದಕೀಯ ಕಡೆಗೆ ಗಮನಕೊಡುವಿರಾ? ನಾವೀರ್ವರ ಸಭ್ಯತೆಯನ್ನು ನಾವೇ ತೀರ್ಮಾನಿಸುವುದು ಬೇಡ; ವೀರಾಜಪೇಟೆಯ ಸಾರ್ವಜನಿಕರೇ ತೀರ್ಮಾನಿಸುವರು. ಅದೇನೆ ಇರಲಿ; ಕಳೆದ ವಾರ ನಾನು ಮುನ್ಸಿಪಾಲಿಟಿಯ ಕುರಿತಾಗಿ ಸಾರ್ವಜನಿಕರ ಹಿತದ ದೃಷ್ಟಿಯಿಂದ ಬರೆದ ಲೇಖನ ನೂರಕ್ಕೆ ನೂರು ಪಾಲು ಸತ್ಯ. ಇವುಗಳಿಗೆ ಸಾಕಷ್ಟು ಉದಾಹರಣೆ ಕೊಡಲು ಸಿದ್ಧನಿದ್ದೇನೆ. ಇದೇ ಪರಿ ಇನ್ನೂ ಅನೇಕ ಲೇಖನಗಳನ್ನು ಈ ವಿಷಯವಾಗಿ ಪ್ರಕಟಪಡಿಸಲು ಸಿದ್ಧನಿದ್ದೇನೆ. ಆದರೆ ನೀವು ನಿಮ್ಮ ಸ್ವಹಿತಕ್ಕಾಗಿ ಬರೆದ ಲೇಖನ ಅಸತ್ಯದಿಂದ ಕೂಡಿದೆ. ಇಂತಹ ಅಸತ್ಯ ಅನ್ಯಾಯ ಪ್ರತಿಪಾದನಾ ಲೇಖನಗಳಿಂದ ವೀರಾಜಪೇಟೆಯ ಸಾರ್ವಜನಿಕರಿಗೆ ಮಾತ್ರವಲ್ಲ; ಇಡೀ ದೇಶಕ್ಕೇ ಹಾನಿಯಿದೆ. ಇನ್ನಾದರೂ ಸಾರ್ವಜನಿಕರ ಹಾಗೂ ನಾಡಿನ ಹಿತದೃಷ್ಟಿಯಿಂದ ತಮ್ಮ ತಪ್ಪನ್ನು ತಾವೇ ಅರಿತು ತಿದ್ದಿಕೊಂಡು ಅಶಾಂತಿ ಸಾರಲಾಗದೆ ನಿಜವಾದ ಶಾಂತಿ ಕುಮಾರರಾಗಲೆಂದು ನನ್ನ ಹಾರೈಕೆ.

'ಕ್ರಾಂತಿಕುಮಾರ್.'

ಮಂತ್ರಿಗಳು ಇತ್ತ ಗಮನ ಕೊಡಬೇಕು.

ಕೊಡಗಿನಲ್ಲಿ ಜನತಾ ಸರಕಾರ ಅಧಿಕಾರ ವಹಿಸಿ ಈಗಾಗಲೇ ಮೂರು ತಿಂಗಳು ಸಂದವು. ಈ ಅಲ್ಪ ಅವಧಿಯಲ್ಲಿ ಅನೇಕ ಸಾಮೂಹಿಕ ಕಾರ್ಯಗಳನ್ನು ಕೈಕೊಂಡು ಶ್ರಮಿಸುತ್ತಿರುವುದು ಪತ್ರಿಕೆಗಳ ಮೂಲಕ ಓದಿ ಸಂತೋಷವಾಯಿತು. ಈ ಗ್ರಾಮ ಸಾಮೂಹಿಕ ಕಾರ್ಯಗಳಲ್ಲಿ ಹಳ್ಳಿಯ ರೈತನು ಸುಭಿಕ್ಷವಾಗಿ ಬಾಳಬೇಕಾದರೆ ಮುಖ್ಯವಾಗಿ ದನಕರುಗಳ ಅಭಿವೃದ್ಧಿಯು ಒಂದನೇಯದಾಗಿದೆ. ರೈತನ ಭೂಮಿಯಲ್ಲಿ ಬೆಳೆದ ಹುಲ್ಲಿನಲ್ಲು ಮುಕ್ಕಾಲು ಪಾಲು ಅವರವರ ಪಾಕದ ಮನೆ, ದನದ ಕೊಟ್ಟಿಗೆ ವಗೈರೆಗೆ ಹುಲ್ಲು ಹೊದಿಸಿ ದನಗಳಿಗೆ ಸರಿಯಾಗಿ ಹುಲ್ಲು ಹಾಕದೆ ಇವುಗಳ ಪೋಷಣೆಯು ಕಷ್ಟಯಾಗಿ ಸಾಯುತ್ತಾ ಬರುತ್ತದಲ್ಲದೆ ಮಕ್ಕಳ ಪೋಷಣೆಗೆ ಹಾಲು ಇಲ್ಲದೆ ಕಷ್ಟಕರವುದಾಗಿದೆ. ಹುಲ್ಲುಗಾವಲು ಮಾಡಿಕೊಳ್ಳುವುದೆಂದರೆ, ಬಾಣೆ ಜಾಗದಲ್ಲು ಉತಾನೆ, ನಾಯಿ ಗೊಳಿಸಿ ಬೆಳೆಸು ನ್ಯಾಯವಾದ ಮೇವೂ ಸಿಕ್ಕುವುದಿಲ್ಲ. ಅಲ್ಲದೆ ಈ ಲಂಟಾನ ಪೊದೆಗಳಿಂದ ಅನೇಕ ತರದ ಖಾಯಿಲೆಗಳು ಪಶು ದನ ಕರುಗಳು ಕಾಣಕ್ಕಾಗಿ ಸಾಯಲು ಕಾರಣವಾಗುತ್ತಿದೆ.

ಸರಕಾರದವರು ಈ ಬಗ್ಗೆ ಗಮನವಿತ್ತು ಲಂಟಾನ ನಿರ್ಮೂಲ ಮಾಡಲು ತಕ್ಕ ಸಹಾಯ ಮತ್ತು ಪ್ರಯೋಜನಗಳನ್ನು ಮಾಡಿ ನಾಶಗೊಳಿಸಿದ್ದೇ ಆದರೆ ಪ್ರತಿ ಗ್ರಾಮದಲ್ಲಿ, ಪ್ರತಿ ಮನೆಯಲ್ಲೂ ಗೂಳಗಳೇ ಬೆಳೆಯುತ್ತವೆ. ಪೂರ್ವದ ನಮ್ಮ ಅಜ್ಜಂದಿರ ಕಾಲದಲ್ಲಿ ಸರಕಾರದ ಗೂಳಿಗಳ ನಿರ್ಬಂಧವೇನೂ ಇಲ್ಲದೆ ದನಗಳು ಪುಷ್ಕಳವಾಗಿ ಬೆಳೆಯುತ್ತಿರಲಿಲ್ಲವೇ. ಆದ್ದರಿಂದ ಪ್ರತಿಗ್ರಾಮದಲ್ಲಿ ಲಂಟಾನ ಸೊಸೈಟಿಯನ್ನು ಏರ್ಪಡಿಸಿ ಈ ಮೂಲಕ ಧನ ಸಹಾಯ ಮಾಡಿಯೂ, ಸಾಧ್ಯವಿಕವಾಗಿ ಪ್ರತಿಯೊಬ್ಬರು ಲಂಟಾನ ನಿರ್ಮೂಲ ಮಾಡಲು ಸಹಕರಿಸಿಯೂ ಕೆಲಸ ಮಾಡುವಂತೆ ಏರ್ಪಡಿಸಿದಲ್ಲಿ ಒಳ್ಳೇದಾಗಿತ್ತು. ಇಲ್ಲಿ ಪ್ರತಿಯೊಬ್ಬ [illegible]ಗೂ ಹುಲ್ಲು ಹಾಕುವುದರ ಬದಲು [illegible] ಹಾಕಲು ಸರಕಾರದವರು ಧನವನ್ನು ಸಾಲ ರೂಪದಲ್ಲಿ ಕೊಟ್ಟು ಸಹಾಯ ಮಾಡಿದ್ದೇ ಆದರೆ ಮನೆಯ ದನದ ಜುಲ್ಲಾದ ನಗಳ ಮೇವಿಗೆ ಉಪಯೋಗಿಸಿದ್ದೇ ಆದರೆ ಅವರವರ ಜಮೀನಿಗೆ ಬೇಕಾಗುವ ಗೊಬ್ಬರವನ್ನು ಸಹ ಹೇರಳವಾಗಿ ಮಾಡಿಕೊಳ್ಳಲು ಅನುವಾಗುತ್ತದೆ.

ಆದಕಾರಣ ಈ ವಿಚಾರಗಳನ್ನು ಮಾನ್ಯ ಮಂತ್ರಿಗಳು ಆಲೋಚಿಸಿ ನಮ್ಮ ಹಳ್ಳಿಯ ರೈತನ ಉದ್ಧಾರದ ಬಗ್ಗೆ ಸಹಾಯ ಮಾಡುವರಾಗಿ ನಂಬುತ್ತೇನೆ.

ಸಿ. ಡಿ. ಚೆನ್ನಪ್ಪ.

ಸೇಂದಿ ಮಾರಾಟ.

ಸೇಂದಿಯನ್ನು ಸೇರಿಗೆ ೦-೪-೦ ಯಂತೆ ಮಾರಾಟ ಮಾಡಬೇಕೆಂದು ಸರಕಾರ ನಿಶ್ಚಯಿಸಿದೆ. ಸರಕಾರದ ಎಲ್ಲಾ ನಿಯಮಗಳನ್ನೂ ಮೀರಿ ಅಧಿಕ ದರದಿಂದ ದುಡ್ಡು ಮಾಡುವ ವರ್ತಕರು ಇಲ್ಲಿಯೂ ಲಾಭ ಬಡಕತನಕ್ಕೆ ಇಳಿದಿದ್ದಾರೆ. ಸೇಂದಿ ಅಂಗಡಿಯ ಬೋರ್ಡಿನಲ್ಲಿ ಸೇರಿಗೆ ೦-೪-೦ ಯೆಂದು ಬರೆದು ಸೇರು ಬಿಕ್ಕದಲ್ಲಿ ನೂರರಷ್ಟು ಕಪ್ಪಿ ಬೆಕ್ಕದಲ್ಲಿ ಮಾರುತ್ತಾರೆ. ಸಾಧಾರಣ ಕಪ್ಪಿಯ ಅಳತೆಯ ಕಪ್ಪಿಗೆ ೦-೬-೦ ಚಾರ್ಜ್ ಮಾಡುತ್ತಾರೆ. ಹರಾಜಿನಲ್ಲಿ ಸೇಂದಿ ಗುತ್ತಿಗೆಯನ್ನು ದುಬಾರಿ ಬೆಲೆಗೆ ಕೊಂಡುಕೊಂಡು ಈ ರೀತಿ ಸೇಂದಿ ಕುಡಿಯುವ ಜನರನ್ನು ಸುಲಿಗೆ ಮಾಡಲಾಗುತ್ತಿದೆ. ಇದನ್ನು ವಿಚಾರಿಸುವವರಾರೂ ಇಲ್ಲವೇ?

ಕಾವೇರಪ್ಪ.

ವಾರ್ತೆ.

ಲೋಕ ಸಭೆಯ ಸದಸ್ಯರಾದ ಶ್ರೀ ಎ. ಎಸ್. ನಂದಕರರು ತಮ್ಮ ಬಂದೂಕವನ್ನು ಸ್ವಚ್ಛ ಮಾಡುತ್ತಿರುವಾಗ ಅದರಲ್ಲಿ ಇದ್ದ ಗುಂಡು ತಾಗಿ ಗಾಯಗೊಂಡದ್ದರಿಂದ ನಾಸಿಕ ಸಿವಿಲ್ ಆಸ್ಪತ್ರೆಯಲ್ಲಿ ನಿಧನ ಹೊಂದಿದರು.

ಸೋಶಾಲಿಸ್ಟ್ ಧುರೀಣರಾದ ಜಯಪ್ರಕಾಶ ನಾರಾಯಣರು ಪುಣೆಯ ನಿಸರ್ಗ ಚಿಕಿತ್ಸಾಲಯದಲ್ಲಿ ೨೨ನೇ ದಿನಾಂಕದಿಂದ ಆತ್ಮಶೋಧನೆಗಾಗಿ ಉಪವಾಸವನ್ನು ಪ್ರಾರಂಭಿಸಿರುವರು. ಅವರ ಪ್ರಕೃತಿ ಈ ವರೆಗೆ ಚೆನ್ನಾಗಿದೆ.

ಭೂದಾನ ಯಜ್ಞಕ್ಕೆ ತಮಿಳುನಾಡಿನ ಭೂಮಿಯೊಡೆಯರೆಲ್ಲ ಕೊಡುಗೈಯಿಂದ ನೆರವಾಗಬೇಕು ಮತ್ತು ದೇಶದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯಲ್ಲಿ ಕ್ರಾಂತಿಯನ್ನು ಸಾಧಿಸಬೇಕು. ಎಂದು ಓ. ಪಿ. ರಾಮಸ್ವಾಮಿ ರೆಡ್ಡಿಯವರು ತಮಿಳುನಾಡು ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಭಾಷಣ ಮಾಡುತ್ತ ಹೇಳಿದರು.

ಬ್ರಿಟನ್ನಿನಲ್ಲಿ ಭಾರತದ ಹೈ ಕಮಿಶನರಾಗಿ ನೇಮಕ ಹೊಂದಿರುವ ಶ್ರೀ ಬಿ. ಜಿ. ಖೇರರು ೨೭ನೇ ದಿನಾಂಕ ಲಂಡನಿಗೆ ತೆರಳಿದರು.

ಸೇನಾಪತಿ ಕಾರ್ಯಪ್ಪನವರು ಸಂರಕ್ಷಣ ಮಂತ್ರಿಗಳಾಗಿ ಲಂಡನಿಗೆ ಹೋಗಿರುವುದರಿಂದ ಲೆಫ್ಟನೆಂಟ್ ಜನರಲ್ ಮಹಾರಾಜ ರಾಜೇಂದ್ರ ಸಿಂಹಜಿಯವರು ತಾತ್ಕಾಲಿಕ ಸೇನಾಪತಿಗಳಾಗಿರುವರು.

ಶ್ರೀಮತಿ ಎ. ವಿ. ಕುಟ್ಟಿ ಅಮ್ಮಾಳ್ ಇವರು ಮಲಬಾರ್ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯನ್ನು ವಿಭಜಿಸಿ ಮಲಬಾರಿಕ್ಕೆ ಪ್ರತ್ಯೇಕ ಕಾಂಗ್ರೆಸ್ ಸಮಿತಿಯನ್ನು ಕೊಟ್ಟಿದ್ದಾರೆ.

ಇನ್ನು ಮುಂದೆ ಮೈಸೂರಿನಲ್ಲಿ ಭಾರತ ರಾಷ್ಟ್ರಧ್ವಜವೊಂದೇ ಹಾರತಕ್ಕದ್ದೆಂದು ಮೈಸೂರು ಸರಕಾರ ನಿರ್ಧರಿಸಿದಂತೆ ೨೭ನೇ ದಿನ ಮಧ್ಯಾಹ್ನ ಮೈಸೂರಿನ ಗಂಡಭೇರುಂಡ ಧ್ವಜವನ್ನು ರಾಜ್ಯ ಕಟ್ಟಡಗಳ ಮೇಲಿಂದ ಇಳಿಸಲಾಯಿತು. ಮೈಸೂರಿನಲ್ಲಿ ಎರಡು ಧ್ವಜ ಹಾರಿಸುತ್ತಿದ್ದುದನ್ನು ಮತ್ತು ಎರಡೂ ರಾಷ್ಟ್ರಗೀತೆ ಹಾಡುತ್ತಿದ್ದುದನ್ನು ವಿಧಾನ ಸಭೆಯ ಅನೇಕ ಸದಸ್ಯರು ಟೀಕಿಸಿದ್ದರು.

[illegible] ಪ್ರಿನ್ಸಿಪಾಲರಾದ [illegible] ಮೈಸೂರು [illegible] ಮಂತ್ರಿ [illegible] ಹೇಳಿದರು.

ಭಾರತದ ಒಟ್ಟು ಗೋಸಂಪತ್ತು ೨೭೦,೦೦೦,೦೦೦ದಷ್ಟಿದೆ ಎಂದು ಇತ್ತೀಚಿನ ಅಧಿಕೃತ ಅಂಕೆ ಸಂಖ್ಯೆಗಳಿಂದ ತಿಳಿದು ಬರುತ್ತದೆ. ಗೋಸಂಪತ್ತಿನ ಮಟ್ಟಿಗೆ ಭಾರತವು ಜಗತ್ತಿನಲ್ಲಿ ಅಗ್ರಸ್ಥಾನಗಳಿಸುತ್ತದೆ. ಇಡೀ ಜಗತ್ತಿನಲ್ಲಿ "ಸ್ವಪ್ನ"ದನ್ನು ಬಿಟ್ಟರೆ (ರಷ್ಯವು ತನ್ನ ಗೋಸಂಪತ್ತಿನ ಅಂಕೆ ಸಂಖ್ಯೆಗಳನ್ನು ಪ್ರಕಟಿಸಲು ನಿರಾಕರಿಸಿದೆ.) ಬಿಕ್ಕಳಿದ ಎಲ್ಲಾ ರಾಷ್ಟ್ರಗಳ ಗೋಸಂಪತ್ತು ೧,೭೩೪,೦೦೦,೦೦೦ ದಷ್ಟಿದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ೧೭೭,೦೦೦,೦೦೦ ಚೀನದಲ್ಲಿ ೧೩೪,೦೦೦,೦೦೦ ಮತ್ತು ಆಸ್ಟ್ರೇಲಿಯದಲ್ಲಿ ೧೧೯,೦೦೦,೦೦೦ ಭಾರತದಲ್ಲಿ ಇಷ್ಟು ಗೋಸಂಪತ್ತು ಇದ್ದೂ, ಜನಸಂಖ್ಯೆಯ ತಲಾ ಶೇಕಡಾಂಶ ಬಹಳ ಕಡಿಮೆಯಿದೆ. ಅದು ಕೇವಲ ೦.೪ ರಷ್ಟಾಗುತ್ತದೆ. ನ್ಯೂಜೀಲೆಂಡು ಈ ಮಟ್ಟಿಗೆ ಜಗತ್ತಿನಲ್ಲಿ ಅಗ್ರಸ್ಥಾನ ಪಡೆಯುತ್ತದೆ. ಅಲ್ಲಿಯ ಶೇಕಡಾಂಶ ೨೧-೦೪ ಎರಡನೆಯ ಸ್ಥಾನ ಆಸ್ಟ್ರೇಲಿಯಕ್ಕೆ ೧೫-೫೬.

ಮದುವೆಯ ಮೋಜು.

ದಕ್ಷಿಣ ಆಫ್ರಿಕದ ಝುಲು ಜನರು ತಮ್ಮ ಯುವಕರಿಗೆ ಲಗ್ನದ ವಿಚಾರವನ್ನೇ ಮಾಡಗೊಡುವುದಿಲ್ಲ. ಯುವಕರಿಗೆ ಅವರು ಯುದ್ಧ ಶಿಕ್ಷಣ ಕೊಡುತ್ತಾರೆ. ಝುಲು ಯೋಧನಿಗೆ ೪೦ ವರ್ಷಗಳಾದಾಗ ಯುದ್ಧ ಮಾಡುವ ವಯಸ್ಸು ಅವನಿಗೆ ಮೀರಿತೆಂದು ತಿಳಿಯಲ್ಪಡುತ್ತದೆ. ಆಗ ಆತ ಲಗ್ನದ ವಿಚಾರ ಮಾಡಿ 'ಹಿರಿಯರ' ಪಂಕ್ತಿಗೆ ಸೇರಿಸಲ್ಪಡುವನು.

* * *

ಬ್ರಿಟಿಷ್ ಪೂರ್ವ ಆಫ್ರಿಕಯ ಉಗಾಂಡಾದಲ್ಲಿರುವ ಹಿಮಾ ಕುಲದವರಲ್ಲಿ ವಿಚಿತ್ರ ರೂಢಿಯೊಂದಿದೆ. ಲಗ್ನವಾಗುವ ಪೂರ್ವದಲ್ಲಿ ಹುಡುಗಿಯರಿಗೆ ಬೊಜ್ಜನ್ನು ಬೆಳೆಸಲು ಸಕಲ ಪ್ರಯತ್ನಗಳನ್ನೂ ಮಾಡಲಾಗುತ್ತದೆ. ಲಗ್ನದ ಹೊತ್ತಿಗೆ ಎಷ್ಟೋ ಹುಡುಗಿಯರಿಗೆ ಸಹಜವಾಗಿ ನಡೆಯಲು ಕೂಡ ಬಾರದಷ್ಟು ಬೊಜ್ಜು ಬೆಳೆದಿರುತ್ತದೆ.

* * *

ಜಾವಾದಲ್ಲಿ ವರ ಮತ್ತು ವಧು ಲಗ್ನದ ವಿಧಿ ನೆರವೇರಿಸಲು ಪರಸ್ಪರರನ್ನು ಚಪ್ಪಲಿನಿಂದ ಹೊಡೆಯುತ್ತಾರೆ.

* * *

ಅಂದಮಾನ ನಡುಗಡ್ಡೆಗಳಲ್ಲಿ ಸಕಲರ ಸಮಕ್ಷಮದಲ್ಲಿ ವಧುವನ್ನು ವರನ ತೊಡೆಯ ಮೇಲೆ ಕೂಡ್ರಿಸಿದರೆ ತೀರಿತು. ಲಗ್ನದ ಬ್ರಹ್ಮಗಂಟು ಬಿದ್ದಂತೆಯೇ.

* * *

ಗ್ರೀಸಿನಲ್ಲಿ ತನ್ನ ವೈವಾಹಿಕ ಜೀವನ ಸುಖಮಯವಾಗಲೆಂದು ವಧುವು ತನ್ನ ಕೈಚೀಲದಲ್ಲಿ ಹಿಡಿ ಸಕ್ಕರೆಯನ್ನಿಟ್ಟುಕೊಳ್ಳುತ್ತಾಳೆ.

* * *

ಹಾರ್ವೆ ನಡುಗಡ್ಡೆಯಲ್ಲಿ ವಧುವು ವರನ ಮಿತ್ರರ ಬೆನ್ನ ಮೇಲೆ ನಡೆದು ತನ್ನ ಭಾವೀ ಪತಿಯ ಮನೆಗೆ ಹೋಗಬೇಕಾಗುವುದು. ಲಗ್ನದ ದಿನ ವಧುವಿನ ಸಮಿತ್ರರು ರಸ್ತೆಯಲ್ಲಿ ಸಾಲ್ಬ ಮಲಗುವರು. ಆಗ ವರನು ಅವರ ಬೆನ್ನ ಮೇಲೆ ನಡೆಯುತ್ತ ವಧುವಿನ ಮನೆಗೆ ಬರುವನು.

* * *

ಫ್ರೆಂಚ್ ಗಿಯಾನದಲ್ಲಿ ಅಲ್ಲಿಯ ಮೂಲ ನಿವಾಸಿಗಳು ಲಗ್ನದ ವಿಷಯ ಬಂದಾಗ ವಧು-ವರರು ತಮ್ಮ ಸಮ್ಮತಿಯನ್ನು ಪ್ರಕಟಿಸಿದೊಡನೆ ಅವರೀರ್ವರನ್ನು ಒಂದು ಚೀಲದಲ್ಲಿ ತುಂಬಿ ಚೀಲದ ಬಾಯಿ ಹೊಲಿದುಬಿಡುವರು. ಚೀಲದಲ್ಲಿ ಕೆಲವು ಇರುವೆಗಳನ್ನೂ ತುಂಬುತ್ತಾರೆ. ಮಾರನೆಯ ದಿನ ವಧು-ವರರನ್ನು ಚೀಲದಿಂದ ಹೊರತೆಗೆದಾಗ ಅವರಿಬ್ಬರೂ ಇನ್ನೂ ಪ್ರೇಮದಿಂದ ಮಾತಾಡುತ್ತಿದ್ದರೆ ಅವರದು ಶಾಶ್ವತ ಪ್ರೇಮವೆಂದು ತಿಳಿದು ಲಗ್ನವಾಗಲು ಅಪ್ಪಣೆ ಸಿಗುತ್ತದೆ.

ಕ. ವಿ.

ಶ್ರೀ ಟಿ. ಎನ್. ಗೋವಿಂದರಾಜು
'ಕೊಡಗು' ಏಜೆಂಟರು,
ವೀರಾಜಪೇಟೆ.

॥ ವಿವಿಧ ವಾರ್ತೆಗಳು ॥

ಅಂಚೆ ನೌಕರರ ಸಾರ್ವತ್ರಿಕ ಸಂಪು.

೧೯೫೩ ರ ಆಗಸ್ಟ್ ೭ ರಿಂದ ಸಾರ್ವತ್ರಿಕ ಸಂಪನ್ನು ಪ್ರಾರಂಭಿಸುವ ನಿರ್ಣಯವನ್ನು ಅಖಿಲ ಭಾರತ ಅಂಚೆ ನೌಕರರ ಸಂಘದ ಕಾರ್ಯ ಸಮಿತಿಯು ಕೈಕೊಂಡಿದೆ.

ಸಂಘದ ಬೇಡಿಕೆಗಳ ಮಹತ್ವವನ್ನು ಹಾಗೂ ಅವಶ್ಯಕತೆಯನ್ನು ಸರಕಾರಕ್ಕೆ ಮನಗಾಣಿಸಿಕೊಡಬೇಕಾದರೆ ಸಾರ್ವತ್ರಿಕ ಸಂಪನ್ನು ಕೈಕೊಳ್ಳುವದೇ ಈಗ ಉಳಿದ ಮಾರ್ಗವೆಂದು ನೌಕರರ ಸಂಘವು ಸ್ವೀಕರಿಸಿದ ಗೊತ್ತುವಳಿಯಲ್ಲಿ ಕಾಣಿಸಲಾಗಿದೆ.

ಆದರೆ ಸಂಘದ ಅಧ್ಯಕ್ಷರಾದ ಶ್ರೀ. ಜಯಪ್ರಕಾಶ ನಾರಾಯಣರು ಈಗ ೨೧ ದಿನದ ಉಪವಾಸವನ್ನು ಕೈಕೊಂಡಿರುವದರಿಂದ ಅವರ ಇಚ್ಛೆಗಳಿಗೆ ಗೌರವವನ್ನು ಕೊಡುವದಕ್ಕಾಗಿ ಸಂಪಿನ ನೋಟೀಸನ್ನು ಕೊಡುವುದನ್ನು ಅಧ್ಯಕ್ಷರ ಉಪವಾಸವು ಮುಗಿಯುವ ವರೆಗೆ ಮುಂದೆ ಹಾಕಲಾಗಿದೆ.

ಅವಶ್ಯಕ ನೋಟೀಸನ್ನು ಕೊಡುವದಕ್ಕೆ ಸಂಘವು ಪ್ರಧಾನ ಕಾರ್ಯದರ್ಶಿಗೆ ಅಪ್ಪಣೆಯನ್ನಿತ್ತಿದೆ.

೧೯೪೭ ರ ಸಂಪಿನ ಅವಧಿಯಲ್ಲಿಯ ಸಂಬಳವನ್ನು ಕೊಡುವ ಬಗ್ಗೆ ವಚನ ಕೊಟ್ಟಿಲ್ಲವೆಂದು ಪ್ರಧಾನ ಮಂತ್ರಿ ನೆಹರೂರವರು ಕೊಟ್ಟ ಪತ್ರಿಕಾ ಪ್ರಕಟನೆಯನ್ನು ಕುರಿತು ಒಂದು ಗೊತ್ತುವಳಿ ಸ್ವೀಕರಿಸಲಾಯಿತು. ಆ ಗೊತ್ತುವಳಿಯಲ್ಲಿ 'ಆ ಅವಧಿಯ ಸಂಬಳದ ಬಗ್ಗೆ ಪ್ರಧಾನ ಮಂತ್ರಿ ನೆಹರೂ ಆಗಲಿ ಅಥವಾ ಅವರ ಮಂತ್ರಿ ಮಂಡಳದವರಾಗಲಿ ವಚನ ಕೊಟ್ಟಿಲ್ಲವೆಂಬುದು ನಿಜವಿದೆ ಆದರೆ ಸಂಪರ್ಕ ಖಾತೆ ಜವಾಬ್ದಾರಿ ಮಂತ್ರಿಯಾದ ಶ್ರೀ. ರಫಿ ಅಹಮ್ಮದ ಕಿದ್ವಾಯಿಯವರು ಶ್ರೀ. ಜಯಪ್ರಕಾಶ ನಾರಾಯಣರಿಗೆ ಪಾರ್ಲಿಮೆಂಟ್ ಸದಸ್ಯರಾದ ಶ್ರೀ. ಲಾಲ ಅಚ್ಯುತರಾಮ ಇವರ ಸಮ್ಮುಖದಲ್ಲಿ ಯೋಗ್ಯ ಪ್ರಮಾಣದಲ್ಲಿ ಸಂಪಿನ ಅವಧಿಯ ಸಂಬಳವನ್ನು ಕೊಡಲು ವಚನ ಕೊಟ್ಟರು. ಈ ವಚನದ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಸರಿಯಾದ ವಿವರಗಳನ್ನು ಅವರು ಕೊಟ್ಟಂತೆ ಕಾಣುವದಿಲ್ಲ.

'ಈ ವಚನವು ಕೃತಿಯಲ್ಲಿಳಿಯುವಂತೆ ಪ್ರಧಾನ ಮಂತ್ರಿ ಇಲ್ಲವೆ ಮಂತ್ರಿ ಮಂಡಳವು ಈ ವಚನಕ್ಕೆ ಬೆಂಬಲ ಕೊಡದಿದ್ದಲ್ಲಿ ತನ್ನ ವಚನವನ್ನು ಮುರಿಯುವದಕ್ಕಿಂತ ರಾಜೀನಾಮೆ ಕೊಡುವುದು ಶ್ರೀ ಕಿದ್ವಾಯಿಯವರ ನಿಚ್ಚಳ ಕರ್ತವ್ಯವಾಗಿದೆ.

'ಜವಾಬ್ದಾರಿ ಮಂತ್ರಿಯೊಬ್ಬರ ಈ ವಚನದ ಬಗ್ಗೆ ಸತ್ಯವನ್ನು ಅರಿತುಕೊಳ್ಳುವದಕ್ಕೆ ಸ್ವತಂತ್ರ ವಿಚಾರಣೆ ಕೈಕೊಳ್ಳಬೇಕೆಂದು ಸಂಘವು ಪ್ರಧಾನ ಮಂತ್ರಿಗಳಿಗೆ ಬಿನ್ನವಿಸಿಕೊಂಡಿದೆ

'ಸಾರ್ವಜನಿಕರೊಡನೆ ಬೆರೆತು ಜವಾಬ್ದಾರಿ ಮಂತ್ರಿಯೊಬ್ಬರು ಕೊಟ್ಟ ವಚನವನ್ನು ತಮ್ಮ ಪ್ರಧಾನ ಮಂತ್ರಿಗಳು ಪ್ರತಿಪಾಲಿಸುವರೆಂದು ಸಂಘಕ್ಕೆ ಭರವಸೆ ಇದೆ. ಅದನ್ನು ಸರಕಾರವು ಮನ್ನಿಸಲೇಬೇಕಾಗುವುದು. ಆದುದರಿಂದ ಶ್ರೀ. ಕಿದ್ವಾಯಿಯವರು ಕೊಟ್ಟ ವಚನವನ್ನು ಪ್ರಧಾನ ಮಂತ್ರಿಗಳು ಮನ್ನಿಸಬೇಕೆಂದು ಸಂಘವು ವಿನಂತಿಸುತ್ತಿದೆ' ಎಂದು ಕಾಣಿಸಲಾಗಿದೆ.

ಕಮ್ಯೂನಿಸ್ಟ್ ಪಾರ್ಲಿಮೆಂಟರಿ ಸದಸ್ಯರ ಹೊಸ ಹಂಚಿಕೆ

ಪ್ರಜಾಸಭೆಯ ಕೆಲ ಮಂದಿ ಎಡಪಕ್ಷದ ಸದಸ್ಯರು ಒಂದು ನಾಟಕ ಸಂಘವನ್ನು ಸ್ಥಾಪಿಸಿಕೊಂಡು ಆ ಸಂಸ್ಥೆಯ ಮೂಲಕ ತಮ್ಮದೇ ಆದ ಕೆಲವು ನಾಟಕಗಳ ಅಭ್ಯಾಸಕ್ಕೆ ತೊಡಗಲಿರುವುದಾಗಿ ಹೊಸ ಸುದ್ದಿಯೊಂದು ಕೇಳಿಬರುತ್ತದೆ. ಅಖಿಲ ಭಾರತದ ಖ್ಯಾತಿಯ ಕೆಲ ಮಂದಿ ನಾಟಕ ಕರ್ತರೂ ನಟರೂ ಅದರಲ್ಲಿರುವರು. ಇಷ್ಟರಲ್ಲೇ ಕೆಲವು ನಾಟಕಗಳನ್ನು ಆರಿಸಲಾಗಿದೆಯೆಂದೂ, ಆ ನಾಟಕಗಳು ಪ್ರದರ್ಶಿಸಲ್ಪಟ್ಟವೆಂದರೆ ಖಂಡಿತವಾಗಿಯೂ ಜನರಲ್ಲಿ ಹೊಸ ಸ್ಫೂರ್ತಿ ಉತ್ಸಾಹಗಳನ್ನು ತರಬಲ್ಲುವೆಂದೂ ಒಬ್ಬ ಸದಸ್ಯರ ಹೇಳಿಕೆಯಾಗಿದೆ. ಈ ಕುರಿತು ದೊಡ್ಡದೊಂದು ಕಾರ್ಯಕ್ರಮವನ್ನು ಈ ಸದಸ್ಯರು ಅಂಗೀಕರಿಸಿರುವರು. ನಾಟಕಗಳು ಚೆನ್ನಾಗಿ ಅಭ್ಯಸಿಸಲ್ಪಟ್ಟ ಮೇಲೆ ಅವುಗಳನ್ನು ರಾಜಧಾನಿಯ ಪ್ರಜೆಗಳ ಮುಂದೆ ಪ್ರದರ್ಶಿಸಲಿರುವರು.

ಭಾರತಕ್ಕೆ ಬಾಪು ರಾಜ್ಯ

ಬಾಪೂಜಿಯವರ ಮೆಚ್ಚಿನ ಶಿಷ್ಯವೃಂದದಲ್ಲಿ ಒಬ್ಬರಾದ ಶ್ರೀಮತಿ ಮೀರಾ ಬೆನ್‌ರವರು ತೆಹ್ರಿಯಿಂದ ೨೭ ಮೈಲು ದೂರವಿರುವ ಹಿಮಾಚಲ ಆಶ್ರಮದಲ್ಲಿ ವಾಸವಾಗಿರುವರಷ್ಟೆ. ಅಲ್ಲಿಂದ 'ಬಾಪುರಾಜ ಪತ್ರಿಕಾ' ಎಂಬ ಹಿಂದಿ ಮಾಸಿಕವೊಂದನ್ನು ಹೊರಡಿಸಲು ಅವರು ನಿರ್ಣಯಿಸಿದ್ದಾರೆ. ಭಾರತದ ಕೃಷಿಕ ಜನತೆಯನ್ನು 'ಬಾಪು ರಾಜ್ಯ'ಕ್ಕೆ ಸಿದ್ಧಪಡಿಸುವುದೇ ಈ ಪತ್ರಿಕೆಯ ಧ್ಯೇಯವಾಗಿದೆ.

ಮೀರಾ ಬೆನ್‌ರವರು ಕಲ್ಪಿಸುತ್ತಿರುವ ಬಾಪು ರಾಜ್ಯದ ಕೆಲವು ರೂಪರೇಷೆಗಳು ಈ ರೀತಿಯಾಗಿವೆ

೧ ಮಾನವನ ಮೂಲ ಅವಶ್ಯಕತೆಗಳನ್ನು ಉತ್ಪಾದಿಸುವ ಸ್ವಾವಲಂಬಿ ಗ್ರಾಮಗಳ ಕೂಟಗಳ ನಿರ್ಮಾಣ.

೨ ಹೆಚ್ಚಿನ ಅಧಿಕಾರ ಚಲಾಯಿಸುವ ಭಾರವನ್ನು ಗ್ರಾಮ ಪಂಚಾಯಿತಗಳ ಮೇಲೆ ಹೊರಿಸಿ ಸರಳ ರೀತಿಯ ಆಡಳಿತ ನಡೆಸುವ ಸರಕಾರ.

೩ ಜನರನ್ನು ಸುಲಿಯುವ ಲಾಯರರ ಅವಶ್ಯಕತೆ ಬೀಳದಂತಹ ಪರಿಣಾಮಕಾರಿ ಹಾಗು ಸರಳ ರೀತಿಯ ಕಾನೂನು ಪದ್ಧತಿ.

೪ ದೇಶದ ರಕ್ಷಣೆಗೆ ಸೇನೆಯ ಅವಶ್ಯವಿರದು. ಆದರೆ ಅಂತರಿಕ ಭದ್ರತೆಗೆ ಸುಸಜ್ಜಿತವಾದ ಮತ್ತು ಶಿಸ್ತುಗೊಳಿಸಲ್ಪಟ್ಟ ಪೊಲೀಸ್ ಫೌಜು.

೫ ಗ್ರಾಮ ಕೈಗಾರಿಕೆಗಳನ್ನು ನಾಶಪಡಿಸುವ ದೊಡ್ಡ ಕಾರ್ಖಾನೆಗಳಿಗೆ ಅವಕಾಶವಿರಬಾರದು.

೬ ವಿಸ್ತಾರ ಜಮೀನುಗಳನ್ನು ಅಂಕೆಯಲ್ಲಿಟ್ಟ ಜಮೀನ್ದಾರರಿಗೆ ಈ ರಾಜ್ಯದಲ್ಲಿ ಸ್ಥಾನವಿಲ್ಲ.

ದೇಶದಾದ್ಯಂತ ಕಿಸಾನ ಸಮುದಾಯವು ಈ ರಾಜ್ಯಸ್ಥಾಪನೆಗೆ ಸಿದ್ಧವಾದೊಡನೆ, ಕಿಸಾನರ ಮೆರವಣಿಗೆಯೊಂದನ್ನು ದಿಲ್ಲಿಯ ತನಕ ಕರೆದೊಯ್ದು ಈ ಕಾರ್ಯಕ್ರಮವನ್ನು ಭಾರತದ ಅಧ್ಯಕ್ಷರ ಮತ್ತು ಮುಖ್ಯ ಮಂತ್ರಿಗಳ ಮುಂದೆ ಮಂಡಿಸಬೇಕೆಂದೂ ಮೀರಾ ಬೆನರು ಆಲೋಚಿಸಿರುವರು.

ಬಾಣವೆಸೆದ ಭಾರ್ಯೆ.

ಮಧ್ಯ ಪ್ರದೇಶದ ಸುಕ್ಮಾ ಸಂಸ್ಥಾನದಲ್ಲಿ ಇತ್ತೀಚೆಗೆ ಗಂಡ ಹೆಂಡಿರ ಒಂದು ಜಗಳದಲ್ಲಿ ಹೆಂಡತಿಯು ಬಾಣವೆಸೆದ ಪರಿಣಾಮವಾಗಿ ಗಂಡನು ಅಕಾಲ ಮೃತ್ಯುವಿಗೆ ತುತ್ತಾಗಬೇಕಾಯಿತು. ಹೆಂಡತಿಯು ಹೆಣ್ಣು ಕೂಸುಗಳನ್ನೇ ಹೆರುತ್ತಿರುವಳು, ಗಂಡು ಸಂತಾನವಾಗಲಿಲ್ಲ ಎಂಬ ಕಾರಣದಿಂದ ಗಂಡನು ಹೆಂಡತಿಯನ್ನು ಆಗಾಗ ಬೈದು ಭಂಗಿಸುತ್ತಿದ್ದನು. ಆಕೆ ಚಿತ್ರಹಿಂಸೆಯನ್ನೂ ಅನುಭವಿಸಬೇಕಾಗುತ್ತಿತ್ತು. ಹೆಂಡತಿಯೊಮ್ಮೆ ಬೇನೆ ಬಿದ್ದಾಗ ಅವನು ಅವಳ ಮರಣವನ್ನು ಹಾರೈಸುತ್ತಿದ್ದನು. ಆಕೆಯು ಬೇನೆ ಒಂದಿಷ್ಟು ಗುಣಮುಖವಾಗಿ ಆರೋಗ್ಯ ನೆಟ್ಟಗಾಯಿತೆಂದೊಡನೆ ಪುನಃ ಗಂಡ ಹೆಂಡಿರೊಳಗೆ ಜಗಳ ಆರಂಭವಾಯಿತು. ಗಂಡನ ಪೆಟ್ಟಿನ ಪರಿಮಳೆಯಿಂದ ಜೀವ ರಕ್ಷಿಸಿಕೊಳ್ಳಲು ಅವಳು ಬಾಣವನ್ನೆಸೆದಳಂತೆ.

ನೈಲನ್ ನೋಟುಗಳು

ಫ್ರಾನ್ಸಿನಲ್ಲಿ ನೈಲನ್ ಎಂಬ ಪದಾರ್ಥವನ್ನು ಕೃತಕ ಹಲ್ಲುಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಿದ್ದಾರೆ. ಇತ್ತೀಚೆಗೆ ಹಲವಾರು ಕೈಗಾರಿಕೆಗಳಲ್ಲಿ ಈ ಪದಾರ್ಥವನ್ನು ಧಾರಾಳವಾಗಿ ಉಪಯೋಗಿಸಲು ತೊಡಗಿದ್ದಾರೆ. ನೈಲನ್ ಬಟ್ಟೆಗಳು ಈಗಾಗಲೇ ಹಲವು ಕಡೆಗಳಲ್ಲಿ ಬಳಕೆಗೆ ಬಂದಿವೆ. ಈಗ ನೈಲನ್‌ದಿಂದ ಕರೆನ್ಸಿ ನೋಟುಗಳನ್ನು ಮತ್ತು ನಾಣ್ಯಗಳನ್ನು ತಯಾರಿಸುವ ಒಂದು ದೊಡ್ಡ ಯೋಜನೆ ಫ್ರಾನ್ಸಿನಲ್ಲಿ ತಯಾರಾಗುತ್ತಿದೆ. ಪ್ರಧಾನ ಮಂತ್ರಿ ಎಮ್. ಪಿನೇಯವರು ಪ್ಲಾಸ್ಟಿಕ್ ನಾಣ್ಯಗಳನ್ನು ಚಲಾವಣೆಗೊಳಿಸುವ ಪ್ರಯೋಗ ನಡೆಸುವಂತೆ ಆರ್ಥಿಕ ಮಂತ್ರಿಮಂಡಳದ ತಜ್ಞರನ್ನು ಪ್ರೇರೇಪಿಸುತ್ತಿದ್ದಾರೆ.

ಕೊರಿಯಾ ಯುದ್ಧವ್ಯಾಪ್ತಿ ಹೆಚ್ಚಕೂಡದು.

ಕೊರಿಯಾದಲ್ಲಿನ ಯುದ್ಧ ಕ್ರಮಗಳ ವ್ಯಾಪ್ತಿ ಹೆಚ್ಚಿದರೆ ಪ್ರಪಂಚ ಶಾಂತಿಗೆ ಭಂಗ ಬರಬಹುದೆಂದು ಪ್ರಧಾನಿ ಪಂಡಿತ ನೆಹರೂ ಲೋಕಸಭೆಯಲ್ಲಿ ತಿಳಿಸಿದರು.

ಕೊರಿಯಾದಲ್ಲಿನ ಯುದ್ಧ ಕ್ರಮಗಳು ನಿಂತು, ಯುದ್ಧ ವಿರಾಮ ಒಪ್ಪಂದವಾಗಿ, ಈಗ ವಿವಾದಕ್ಕೊಳಗಾಗಿರುವ ವಿವಿಧ ಸಮಸ್ಯೆಗಳು ಪರಿಹಾರವಾಗಬೇಕೆಂಬುದೇ ಭಾರತ ಸರಕಾರದ ತೀವ್ರ ಆಶಯವಾಗಿದೆಯೆಂದೂ ಪ್ರಧಾನಿ ನೆಹರೂ ತಿಳಿಸಿದರು.

ಯಾಲೂ ನದೀ ತೀರದ ವಿದ್ಯುತ್ ವಿಮಾನಗಳು ನಡೆಸಿದ ಧಾಳಿಗಳ ವಿಚಾರವಾಗಿ ಲೋಕ ಸಭೆಯಲ್ಲಿಂದು ಒಂದು ಹೇಳಿಕೆ ಕೊಟ್ಟು, ಪ್ರಧಾನಿ ನೆಹರೂ ಮೇಲೆ ಕಂಡಂತೆ ತಿಳಿಸಿದರು.

ಕೊರಿಯಾ-ಮಂಚೂರಿಯಾ ಗಡಿ ಪ್ರದೇಶದಲ್ಲೂ, ಗಡಿಯ ಮೇಲೆಯೂ ಇರುವ ವಿದ್ಯುತ್ ಕಾರ್ಯಾಗಾರಗಳ ಮೇಲೆ ಈ ಧಾಳಿ ನಡೆದಿವೆ. ಕೊರಿಯಾದಲ್ಲಿನ ಯುದ್ಧ ಕ್ರಮಗಳಿಗೂ ಭಾರತ ಸರಕಾರಕ್ಕೂ ಸಂಬಂಧವೇನೂ ಇಲ್ಲ. ಆದರೆ ಯುದ್ಧ ನಿಂತು, ಸಮಸ್ಯೆ ಬಗೆಹರಿಯಬೇಕೆಂಬುದೇ ಭಾರತ ಸರಕಾರದ ಆಶಯವಾಗಿದೆ' ಎಂದೂ ಅವರು ಹೇಳಿದರು.

'ಕೊರಿಯಾದಲ್ಲಿ 'ಯುದ್ಧ ವಿರಾಮ' ಒಪ್ಪಂದಕ್ಕಾಗಿ ಸಂಧಾನ ನಡೆಯುತ್ತಿದೆ. ಸಂಧಾನ ಬಹು ಮಟ್ಟಿಗೆ ಯಶಸ್ವಿಯಾಗಿದ್ದರೂ ಇನ್ನೂ ಒಂದೆರಡು ಸಮಸ್ಯೆಗಳು ಅಡ್ಡಿಯಾಗಿವೆ. ಒಪ್ಪಂದಕ್ಕೆ ಅಡ್ಡಿ ತರುವಂಥ ಕಾರ್ಯವೇನಾದರೂ ನಡೆದರೆ ಅದು ವಿಷಾದಕರ' ಎಂಬುದಾಗಿ ನೆಹರೂ ತಿಳಿಸಿದರು.

'ಕೊರಿಯಾ [illegible]ದಲ್ಲಿ ಭಾರತ ಭಾಗಿಯಲ್ಲ[illegible] [illegible] ರಾಷ್ಟ್ರ ಸಂಘ ಸಂಸ್ಥೆಯ ಸದಸ್ಯ ರಾಷ್ಟ್ರವಾದುದರಿಂದ ಅಲ್ಲಿ ನಡೆಯುವ ಕೃತ್ಯಗಳಿಗೆ ಅದು ಅಪ್ರತ್ಯಕ್ಷವಾಗಿ ಜವಾಬ್ದಾರಿ ಹೊಂದಿದೆ. ಕದನ ಕ್ಷೇತ್ರ ವ್ಯಾಪ್ತಿ ವಿಸ್ತಾರವಾಗುವಂಥ ಕೃತ್ಯ ನಡೆದಾಗಲಂತೂ ಆ ಜವಾಬ್ದಾರಿ ಹೆಚ್ಚುವುದು' ಎಂಬುದಾಗಿ ನೆಹರೂ ತಿಳಿಸಿದರು.

ಇಡೀ ಪ್ರಪಂಚಕ್ಕೆ ಸಂಬಂಧಿಸಿದ ವಿಚಾರಗಳನ್ನು ಮರೆತು, ಕೇವಲ ಸ್ಥಳೀಯ ಮಿಲಿಟರಿ ಗುರಿಗಳ ಸಾಧನೆಯನ್ನೇ ಪ್ರಾಧಾನ್ಯವೆಂದು ಭಾವಿಸುವ ಮಿಲಿಟರಿ ಕಮಾಂಡರುಗಳ ವಿವೇಚನೆಗೆ ಪ್ರಪಂಚ ಸಂಸ್ಥೆಯ ಭವಿಷ್ಯವೂ ಯುದ್ಧ ಅಥವಾ ಶಾಂತಿಯ ನಿರ್ಧಾರವೂ ಎಲ್ಲಿ ಅಧೀನವಾಗಿ ಹೋಗುವದೋ ಎಂದು ಭಾರತ ಸರಕಾರ ಕಾತರಗೊಂಡಿರುವುದಾಗಿ ನೆಹರೂ ಹೇಳಿದರು. ಈ ವಿಚಾರಗಳಲ್ಲಿ ಸೂಕ್ತ ಪರಸ್ಪರ ಸಮಾಲೋಚನೆ ಅತ್ಯಗತ್ಯವೆಂದೂ ಅವರು ತಿಳಿಸಿದರು.

ಸಾರ್ವಜನಿಕ ಸ್ಥಳಗಳಲ್ಲಿ ಉಗಿದರೆ ಶಿಕ್ಷೆ

ಸಾರ್ವಜನಿಕ ಸ್ಥಳಗಳಲ್ಲೂ, ಟ್ರೇನು, ಟ್ರಾಮ್ ಕಾರ್ ಮತ್ತು ಬಸ್ಸುಗಳಲ್ಲೂ ಉಗಿಯುವುದು ಶಿಕ್ಷಾರ್ಹವಾದ ಅಪರಾಧವೆಂದು ಕಾನೂನು ಮಾಡಬೇಕೆಂದು ಬಂಗಾಳ ಕ್ಷಯರೋಗ ಸಂಘದ ಕಾರ್ಯದರ್ಶಿಯು ಪ್ರಾಂತ ಸರಕಾರಕ್ಕೆ ಸೂಚಿಸಿದಾರೆ. ಕ್ಷಯರೋಗ ವಿರೋಧ ಕಾರ್ಯದಲ್ಲಿ ಸಂಘಕ್ಕೆ ಸರಕಾರದ ಹೆಚ್ಚಿನ ನೆರವು ಅಗತ್ಯವೆಂದೂ ಸಂಘದ ಕಾರ್ಯದರ್ಶಿ ಡಾ. ಎಸ್. ಸರ್ವಾಧಿಕಾರಿ ತಿಳಿಸಿದ್ದಾರೆ.

ದೀರ್ಘ ಕಂತಿನ ಸಾಲ.

ಈ ವಿಷಯವಾಗಿ ಪತ್ರಿಕೆಗಳಲ್ಲಿ ಬರೆದ ಲೇಖನಗಳನ್ನು ನೋಡಿದೆನು. ಆದರೆ ಇವುಗಳ ಬ್ಯಾಂಕಿನ ಡೈರೆಕ್ಟರುಗಳ ಮತ್ತು ರಿಜಿಸ್ಟ್ರಾರರ ಅವಗಾಹನೆಗೆ ಬಂದಂತೆ ಕಾಣುವುದಿಲ್ಲ. 'ಬೆಕ್ಕಿಗೆ ಆಟ, ಇಲಿಗೆ ಪ್ರಾಣ ಸಂಕಟ' ಎಂಬಂತೆ ಸಾಲಕ್ಕೆ ಬರಕೊಂಡವರು ಕಷ್ಟಪಡುತ್ತಿರುವಾಗ ಇದನ್ನು ನೋಡಿ ಆನಂದವಾಗುತ್ತದೆಯೋ ಅಥವಾ ತಾವು ಬಿಕ್ಕಟ್ಟಿನಲ್ಲಿರುವ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಸಾಧ್ಯವಿಲ್ಲದಿರುವ ಸನ್ನಿವೇಶದಲ್ಲಿ ಇತರ ತೊಂದರೆಯು ಮಹತ್ವದಲ್ಲವೆಂದು ಪರಿಗಣಿಸಿ ವರ್ತಿಸುತ್ತಾರೋ ತಿಳಿಯದು.

ದೀರ್ಘ ಕಂತಿನ ಶಾಖೆಯನ್ನು ಪ್ರಾಂತೀಕ ಬ್ಯಾಂಕಿನಲ್ಲಿ ಬಹು ಆಡಂಬರದಿಂದ ರಿಜಿಸ್ಟ್ರಾರವರು ಮತ್ತು ಬ್ಯಾಂಕಿನ ಡೈರೆಕ್ಟರುಗಳು ತೆರೆದು ಇಷ್ಟರ ವರೆಗೆ ಬರೇ ಒಂದು ಸಾಲವನ್ನು ಮಾತ್ರ ಕೊಟ್ಟಿರುತ್ತಾರೆಂದು ತಿಳಿಯಲು ಬಹಳ ಆಶ್ಚರ್ಯವಾಗುತ್ತೆ. ಈ ವರೆಗೆ ಈ ಶಾಖೆಯ ಡೈರೆಕ್ಟರು ಎಷ್ಟು ಮೀಟಿಂಗು ನಡೆಸಿದರು. ಎಷ್ಟು ಭತ್ಯ ಖರ್ಚಾಯಿತು? ಪುಸ್ತಕ ಮತ್ತು ಪ್ರಿಂಟಿಂಗು ಖರ್ಚು ಎಷ್ಟಾಗಿರಬಹುದು. ಅಂದಾಜು ರೂ. ೨ ಸಾವಿರದ ಮೇಲೆ ಬ್ಯಾಂಕಿಗೆ ಖರ್ಚಾಗಿರಬಹುದೆಂದು ಊಹಿಸಿದರೆ ತಪ್ಪಾಗಲಾರದು. ಅಲ್ಲದೆ ಸರ್ಕಾರದಿಂದ ಒಬ್ಬ ಇನ್ಸ್‌ಪೆಕ್ಟರನ್ನು ಮತ್ತು ಗುಮಾಸ್ತರನ್ನು ನೇಮಿಸಿರುವರೆಂದು ತಿಳಿಯುತ್ತೇನೆ. ಡೈರೆಕ್ಟರುಗಳು, ರಿಜಿಸ್ಟ್ರಾರವರು ಇನ್ಸ್‌ಪೆಕ್ಟರು ಮತ್ತು ಗುಮಾಸ್ತರ ಈ ವರೆಗೆ ಮಾಡಿದ ಕೆಲಸವೇನು?

ದೀರ್ಘ ಕಂತಿನ ಸಾಲದ ಉದ್ದೇಶ್ಯವೇನು? ಸಾಲವನ್ನು ತೀರಿಸಲು ಭೂಮಿ ಲೋಹಿತಪಡಿಸಲು ತೆಗೆದುಕೊಂಡ ಸಾಲವನ್ನು ೨೦ ವರ್ಷಗಳಲ್ಲಿ ಸುಲಭ ಕಂತಿನಲ್ಲಿ ತೀರಿಸುವದೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಬ್ಯಾಂಕಿನ ಡೈರೆಕ್ಟರುಗಳು ಇದಕ್ಕೆ ವಿರೋಧವಾಗಿ ಸಾಧಾರಣವಾಗಿ ಗ್ರಾಮ ಸಂಘಗಳಲ್ಲಿ ಸಾಲಕ್ಕೆ ಕಂತು ಕೊಡುವ ರೀತಿಯಲ್ಲೇ ಬರೇ ಹತ್ತು ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡುವ ಶರತ್ತಿನ ಮೇಲೆ ಸಾಲ ಮಂಜೂರ್ಮಾಡುತ್ತಾರೆಂದು ತಿಳಿಯುತ್ತೇನೆ. ಅಲ್ಲದೆ ಇನ್ನೊಂದು ವಿಶೇಷ ರೀತಿಯಲ್ಲಿ ಸಾಲ ಮಂಜೂರ್ಮಾಡುವರು! ಅರ್ಜಿ ಬರಕೊಂಡವರ ಅರ್ಜಿ ಸರಿಯಾಗಿ ತನಿಖೆ ನಡೆಸಿ ಮರುಪಾವತಿ ಶಕ್ತಿಯನ್ನು ವಿಮರ್ಶಿಸಿ ಸಾಲ ಪಡಕೊಳ್ಳುವ ಮೆಂಬರನ ಎಲ್ಲಾ ಖಾಸಗಿಯೂ ಇತರ ಸಾಲಗಳನ್ನು ತೀರಿಸಿ ಇನ್ನು ಮುಂದಕ್ಕೆ ದೂಮ ಕೊಂಡರೆ ಇಲ್ಲದಂತೆ ಮಾಡುವದೇ ಇದರ ತತ್ವವಲ್ಲವೇ? ಆದರೆ ಬ್ಯಾಂಕಿನ ಡೈರೆಕ್ಟರುಗಳು ಮತ್ತು ರಿಜಿಸ್ಟ್ರಾರವರು ತಮಗೆ ಮನಸ್ಸು ಬಂದರೆ ಭೂಮಿಗೆ ಬೆಲೆ ಕಟ್ಟಿ ಸಾಲಕ್ಕೆ ಅರ್ಜಿ ಬರಕೊಂಡಿರುವ ಮೆಂಬರು ಗಿರವಿ ಕೊಡುವ ಭೂಮಿಗೆ ತಾವು ಬೆಲೆ ಕಟ್ಟಿದ ರೀತಿ ಇಂತಿಷ್ಟೇ ಸಾಲ ದೊರಕುವುದೆಂಬದಾಗಿಯೂ ಅಷ್ಟು ಸಾಲ ಅವಶ್ಯವಿದ್ದರೆ ಮಾತ್ರ ಡೈರೆಕ್ಟರು ಅರ್ಜಿದಾರನ ಸೊತ್ತನ್ನು ನೋಡಲು ಬರುತ್ತಾರೆಂಬದಾಗಿಯೂ ನೋಟೀಸು ಮೂಲಕ ತಿಳಿಸುತ್ತಾರೆ. ಇದರ ಅರ್ಥವೇನು?

ಈ ರೀತಿಯಲ್ಲಿ ಸಾಲಕೊಡುವುದಾದರೆ ಇದರಿಂದ ತುಂಬಾ ಆಸ್ತಿ ಇರುವವರಿಗೆ ಮತ್ತು ಅನುಕೂಲಸ್ಥರಿಗೆ ಪ್ರಯೋಜನವಾಗುತ್ತದೆಯೇ ಹೊರತು ಕಡಿಮೆ ಆಸ್ತಿ ಇರುವವರಿಗೆ ಇದರಿಂದ ಪ್ರಯೋಜನವಾಗಲಿಕ್ಕಿಲ್ಲವೆಂದು ದೃಢವಾಗಿ ಹೇಳಬಹುದು. ಉದಾಹರಣೆಗೆ ೩ ಎಕ್ರೆ ಭೂಮಿ ಇರುವವನಿಗೆ ರೂ. ೧೦೦೦|- ಸಾಲವನ್ನು ೨೦ ವಾರ್ಷಿಕ ಕಂತುಗಳಲ್ಲಿ ಸುಲಭ ರೀತಿಯಲ್ಲಿ ಮರುಪಾವತಿ ಮಾಡಬಹುದು. ಆದರೆ ಅದೇ ಸಾಲವನ್ನು ೧೦ ವರ್ಷಗಳಲ್ಲಿ ಮರುಪಾವತಿ ಮಾಡಲು ಕಷ್ಟವಾಗಬಹುದು ಮತ್ತು ಮರುಪಾವತಿ ಶಕ್ತಿ ಇರಲಿಕ್ಕಿಲ್ಲ. ಆದ ಪ್ರಯುಕ್ತ ಮರುಪಾವತಿ ಶಕ್ತಿಯನ್ನು ವಿಚಾರಿಸಿ ಸಾಲಕೊಡಬೇಕಾದುದರಿಂದ ರೂ, ರೂ ೧೦೦೦/- ಸಾಲ ಅವಶ್ಯವಿದ್ದರೂ ಸಹ ಬರೇ ರೂ ೫೦೦ ರ ಸಾಲ ದೊರಕುವುದರಿಂದ ಪ್ರಯೋಜನವೇನ? ಎಂಬದನ್ನು ಸ್ವಲ್ಪ ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ. ಸರ್ಕಾರದಿಂದ ಸಹಾಯ ದೊರಕದ ಕಾರಣ ಬ್ಯಾಂಕಿನಲ್ಲಿರುವ ಸ್ವಲ್ಪ ಹಣವನ್ನು ೨೦ ವರ್ಷಗಳಲ್ಲಿ ಮರುಪಾವತಿ ಮಾಡುವ ಶರತ್ತಿನಲ್ಲಿ ಸಾಲ ಕೊಡಲು ಸಾಧ್ಯವಿಲ್ಲವಾದ್ದರಿಂದ ಈ ಮೇಲಿನ ರೀತಿ ಸಾಲಕೊಡಲು ತೀರ್ಮಾನಿಸಲಾಗಿದೆಯೆಂದು ವಾದ. ನಮ್ಮ ಸರ್ಕಾರವು ದೇಶದ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಕೈಕೊಂಡು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಲು ತಯಾರಿರುವಾಗ ಕೃಷಿಕನಿಗೆ ದೀರ್ಘಕಂತಿನ ಸಾಲವನ್ನು ಕೊಡಲು ಸರ್ಕಾರವು ಸಹಾಯವನ್ನು ಕೊಡುವುದಿಲ್ಲವೆಂದು ಹೇಳುವದಕ್ಕೆ ಕಾರಣವಿಲ್ಲ. ಕೃಷಿಕರ ಸಾಲ ನಿವಾರಣೆ ಮಾಡಿ ಹೊಸ ಹುರುಪನ್ನುಂಟು ಮಾಡಿ ತನ್ನ ಅನೇಕ ಯೋಜನೆಗಳ ಜಯಪ್ರದವಾಗುವಂತೆ ಆಗಬೇಕು. ಇಲ್ಲದಿದ್ದರೆ ಗೋಡೆಯೊಳಗೆ ಹುತ್ತ ಇಟ್ಟುಕೊಂಡು ಮೇಲೆ ಸೊಗಸಾದ ಬಣ್ಣ ಹಾಕಿದಂತೆ ಆಗಬಹುದು. ಪ್ರಾಂತೀಕ ಬ್ಯಾಂಕಿಗೆ ಕಡಿಮೆ ದರದ ಬಡ್ಡಿಯಲ್ಲಿ ಸಾಲವನ್ನು ಕೊಡಲಿಕ್ಕೆ ಸಾಧ್ಯವಿಲ್ಲದ್ದಿರೆ ಬೇರೆ ಪ್ರಾಂತಗಳಲ್ಲಿ ಇರುವಂತೆ ಪ್ರತ್ಯೇಕ ಭೂಮಿ ಅಡಮಾನದ ಬ್ಯಾಂಕುಗಳನ್ನು ಸ್ಥಾಪಿಸಲು ಯತ್ನಿಸಬಾರದೇಕೆ? ಎರಡು ವರ್ಷಗಳಿಂದ ಸಾಲಗಾರರಿಗೆ ಕಾಯಿದೆ ಹೇಳುತ್ತಾ ಬಂದ ಬ್ಯಾಂಕಿನ ಡೈರೆಕ್ಟರುಗಳ ಮತ್ತು ರಿಜಿಸ್ಟ್ರಾರವರ ವರ್ತನೆಯನ್ನು ನೋಡಿ ದಿಕ್ಕು ತೋರದಂತಾಗಿದೆ. ಹಿಂದಿನ ಹಳ ಸಾಲದ ಜೊತೆಗೆ ಸಾಲದ ಅರ್ಜಿಯ ತನಿಖೆಗಾಗಿ ಮಾಡಿರುವ ಸಾಲ ಬೇರೆ ಎನ್‌ಕಂಬ್ರೆನ್ಸ್ ಸರ್ಟಿಫಿಕೇಟ್, ಜಮಾಬಂದಿ ನಕಲು, ಸಾಲಗಾರರ ಸ್ಟೇಟ್‌ಮೆಂಟು, ಇನ್ಸ್‌ಪೆಕ್ಟರು, ಸೂಪರ್‌ವೈಜರು ಮತ್ತು ಬ್ಯಾಂಕಿನ ಕಾರ್ಯದರ್ಶಿಯವರನ್ನು, ರಿಜಿಸ್ಟ್ರಾರವರನ್ನು ಕಾಣಲಿಕ್ಕೆ ಹೋಗಲು ಮಗ್ಗರೆಗಾಗಿ ತಗಲುವ ಖರ್ಚು ಸ್ವಲ್ಪವಲ್ಲ. ಇದಲ್ಲದೆ ಡೈರೆಕ್ಟರುಗಳ ಭತ್ಯಕ್ಕಾಗಿ, ಸ್ಟ್ಯಾಂಪು ಖರ್ಚಿಗಾಗಿ ಬಾಯರು ಫೀಜು ಮತ್ತು ಶೇರು ಹಣಕ್ಕಾಗಿ ಅಂದಾಜು ರೂ. ೩೦|- ಮೇಲೆ ಪ್ರತ್ಯೇಕ ಪಾವತಿ ಮಾಡಬೇಕಾಗಿದೆ. ಒಂದು ಕೆಲಸವು ಒಂದು ಸಾರಿ ಹೇಳಿದರೆ ಆಗುವಂತಿಲ್ಲ. ಎರಡು ಯಾ ಮೂರು ಸರ್ತಿ ಹೋಗಬೇಕಾಗುತ್ತೆ. ಇಷ್ಟೆಲ್ಲಾ ತೊಂದರೆಗಳನ್ನು ಅನುಭವಿಸಿಕೊಂಡು ಅರ್ಜಿಯ ತನಿಖೆ ಬಗ್ಗೆ ರಿಜಿಸ್ಟ್ರಾರವರನ್ನು ಕೇಳಲು ಹೋದರೆ 'ಒಂದು ತಪ್ಪು ಟೀ ಕೊಟ್ಟು ಸಾಲ ಮಂಜೂರ್ಮಾಡಿಸುವಂತಿಲ್ಲ' ಎಂಬ ಸಹಿಸಲಿಕ್ಕಾಗದಂತಹ ಟೀಕೆ. ಕೃಷಿಕರೆಂದರೆ ಇಷ್ಟು ತಾತ್ಸಾರವೇ? ಸಾಲಕ್ಕೆ ಅರ್ಜಿ ಬರೆಯುವಂತೆ ಹೇಳಿ, ಸಾಲ ಕೊಡುತ್ತೇವೆಂದು ಭರವಸೆ ಕೊಟ್ಟು ಈ ಬಗ್ಗೆ ಅನೇಕ ರೀತಿಯಲ್ಲಿ ಹಣ ಖರ್ಚುಮಾಡಿಸಿದ ನಂತರ ಈ ರೀತಿಯ ಟೀಕೆಯೇ? ಬ್ಯಾಂಕಿನ ಡೈರೆಕ್ಟರುಗಳು ಮತ್ತು ರಿಜಿಸ್ಟ್ರಾರವರು ತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ತಿಳಿದಂಥಾ ವ್ಯಕ್ತಿಗಳಲ್ಲವೇ? ಆದ ಪ್ರಯುಕ್ತ ಇದು ಗೋರಿ ಆಟವೋ ಯಾ ಬೇಜವಾಬ್ದಾರಿಯೋ ಯಾ ಉದಾಸೀನತೆಯೋ ಎಂಬುದು ತಿಳಿಯದು. ಇನ್ನಾದರೂ ಬ್ಯಾಂಕಿನ ಡೈರೆಕ್ಟರು ಮತ್ತು ರಿಜಿಸ್ಟ್ರಾರವರು ತುರ್ತದಿಂದ ನಮ್ಮ ಕಷ್ಟವನ್ನು ಪರಿಹರಿಸಲು ಮುಂದೆ ಬರುವರೇ? ಇದು ಸಾಧ್ಯವಿಲ್ಲದಿದ್ದರೆ ಅರ್ಜಿ ಬರಕೊಂಡು ಎರಡು ವರ್ಷಗಳಾದರೂ ಯಾವದೊಂದು ತಿಳುವಳಿಕೆಯನ್ನು ಕೊಡದೆ ಇರುವಂತಹ ಸಂದರ್ಭಗಳಲ್ಲಿ ಇನ್ನು ಇಷ್ಟು ತಿಂಗಳುಗಳ ನಂತರ ಅರ್ಜಿಯ ತನಿಖೆಯಾಗಬಹುದೆಂಬದನ್ನಾದರೂ ತಿಳಿಸುವರೇ!

ಒಬ್ಬ ಅರ್ಜಿದಾರ.

ಇಂಡಿಯಾ ಸರಕಾರದ ಕಾರ್ಮಿಕ ಮಂತ್ರಿಮಂಡಳದ ಪ್ರೌಢ ಔದ್ಯೋಗಿಕ ತರಬೇತು.

ಈ ವಿಭಾಗದ ಕೆಳಗೆ ನಮೂದಿಸಿರುವ ತರಬೇತು ಕೇಂದ್ರಗಳಲ್ಲಿ / ಶಾಲೆಗಳಲ್ಲಿ, ನಾನಾ ಉದ್ಯಮಗಳಲ್ಲಿ ಸ್ಥಾನಗಳು ಖಾಲಿ ಇವೆ. ಸೇರಲಿಚ್ಛಿಸುವವರು ಆಯಾಯ ತರಬೇತು ಕೇಂದ್ರಗಳ / ಶಾಲೆಗಳ ಪ್ರಿನ್ಸಿಪಾಲರನ್ನು ಸಂಧಿಸಿ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬಹುದು ಪ್ರವೇಶಕ್ಕೆ ಕಡೆಯ ತಾರೀಕು 10—7—1952.

(ಎ) ಔದ್ಯೋಗಿಕ ತರಬೇತು ಶಾಲೆಗಳು:—(1) ಕಾಕಿನಾಡ, (2) ಮದ್ರಾಸು, (3) ಅನಂತಪುರ, (4) ಜಾಲಳ್ಳಿ ಮತ್ತು (5) ವೀರಾಜಪೇಟೆ (ಕೊಡಗು)

(ಬಿ) ಔದ್ಯೋಗಿಕ ತರಬೇತು ಕೇಂದ್ರಗಳು:—(1) ಪೋಲಿಟೆಕ್ನಿಕ್ ಪಯ್ಯೂರ್, (2) ಸೆಂಟ್ರಲ್ ಪೋಲಿಟೆಕ್ನಿಕ್ ಮದ್ರಾಸ್, (3) ಸ್ಟೇಟ್ ಕೋ-ಆಪರೇಟಿವ್ ಇಂಜನೀಯರಿಂಗ್ ವರ್ಕ್‌ಶಾಪ್ಸ್, ಮದ್ರಾಸ್, (4) ತಮಿಳುನಾಡು ಪೋಲಿಟೆಕ್ನಿಕ್, ಮಧುರೈ, (5) ಆರ್ಥರ್‌ಹೋಪ್ ಪೋಲಿಟೆಕ್ನಿಕ್, ಕೊಯಮುತ್ತೂರು, (6) ಕರ್ನಾಟಕ ಪೋಲಿಟೆಕ್ನಿಕ್, ಮಂಗಳೂರು, (7) ಶ್ರೀ ಜಯಚಾಮರಾಜೇಂದ್ರ ಆಕ್ಯುಪೇಶನಲ್ ಇನ್ಸ್ಟಿಟ್ಯೂಟ್, ಬೆಂಗಳೂರ, (8) ಇಂಜಿನೀಯರಿಂಗ್ ಕಾಲೇಜ್, ತ್ರಿವೇಂದ್ರಮ್, (9) ಮಹಾರಾಜಾ ಟೆಕ್ನಾಲಜಿಕಲ್ ಇನ್ಸ್ಟಿಟ್ಯೂಟ್, ತ್ರಿಚೂರ್ ಮತ್ತು (10) ಪಾಯನೀಯರ್ ಮೋಟಾರ್ ಸರ್ವಿಸ್, ನಾಗರ್ ಕೊಯಿಲ್.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ. ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ನಾರ್ದರ್ನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಅಧ್ಯಕ್ಷರು.

ಪಿ. ಕೆ. ಅಪ್ಪಯ್ಯ, ಮ್ಯಾನೇಜರ್ ಮತ್ತು ಕಾರ್ಯದರ್ಶಿ.

Edited, Printed and Published by P. I. Bellioppa at 'KOdagu' Press, Mercara, for 'Kodagu' Ltd.

Licence No. 60.
Licenced to Post without Prepayment.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 6-0-0.

ಸಂಪುಟ ೩೧ | ತಾರೀಖು ೧೧-೭-೧೯೫೨ನೇ ಶುಕ್ರವಾರ | ಸಂಚಿಕೆ ೬

ಗಾಂಧೀವಾದವನ್ನು ವಿಸರ್ಜಿಸಿ ಬಿಡೋಣ!

ಒಬ್ಬೊಬ್ಬರು ಒಂದೊಂದು ವಿಧವಾಗಿ ಗಾಂಧೀವಾದದ ಭಾಷ್ಯ ಮಾಡುವುದು ಸಾಕು

ಲೇ: ಕಿ. ಘ. ಮಶ್ರೂವಾಲಾ

(೧) 'ಗಾಂಧೀಜಿ ಪ್ರಜಾತಂತ್ರದಲ್ಲಿ ವಿಶ್ವಾಸವಿಟ್ಟಿದ್ದರು. ಅವರು ಆಚರಣೆಯಲ್ಲಿ ಶ್ರೇಷ್ಠತಮ ಪ್ರಜಾತಂತ್ರಿಗಳಿದ್ದರು. ಎರಡನೇ ಮಹಾಯುದ್ಧ ಆರಂಭವಾದಾಗ ಅವರು ಪ್ರಜಾತಂತ್ರ ಪಕ್ಷದ ರಾಜ್ಯಗಳಿಗೆ ಹಿತವನ್ನು ಕೋರಿದರೇ ಹೊರತು ಫ್ಯಾಸಿಸ್ಟ್ ಮತ್ತು ಸರ್ವಾಧಿಕಾರಿ ರಾಜ್ಯಗಳಿಗಲ್ಲ.'

(೨) 'ಗಾಂಧೀಜಿ ಹಿಂಸೆಗಿಂತ ಅಹಿಂಸೆ ಶ್ರೇಷ್ಠವೆಂದು ಹೇಳಿದರಾಗಲಿ, ಹೇಡಿತನಕ್ಕಿಂತ ಹಿಂಸೆಯೇ ಮೇಲು ಎಂದೂ ಹೇಳಿದರು.'

(೩) 'ತಮ್ಮ ಧ್ಯೇಯವೂ ಕಮ್ಯೂನಿಸ್ಟರದು ಒಂದೇ ಎಂದು ಗಾಂಧೀಜಿ ಹೇಳಿದರು; ಅವರ ರೀತಿ ಮಾತ್ರ ಅಹಿಂಸಾತ್ಮಕವಾಗಿತ್ತು.'

(೪) 'ತಮ್ಮದು ನಿಷ್ಕ್ರಿಯ ಅಹಿಂಸೆಯಲ್ಲ; ಸಕ್ರಿಯ, ಚೈತನ್ಯಪೂರ್ಣ ಅಹಿಂಸೆಯೆಂದು ಗಾಂಧೀಜಿ ಹೇಳಿದರು.'

(೫) 'ಗಾಂಧೀಜಿ ತಮ್ಮ ಜೀವನದ ಕೊನೆಕೊನೆಯಲ್ಲಿ ಭಾರತೀಯ ಜನತೆ ಅನುಸರಿಸಿದ್ದು ಸತ್ಯಾಗ್ರಹ ಅಥಾರ್ತ್ ಶೂರರ ಅಹಿಂಸೆಯಲ್ಲವೆಂದೂ ಅದು ಹಿಂಸೆಯ ಶಕ್ತಿಯಿಲ್ಲದ ಮೂಲಕ ಆಚರಿಸಿದ ಅಹಿಂಸೆ ಇಲ್ಲವೆ ನಿಷ್ಕ್ರಿಯ ಪ್ರತಿಕಾರವೆಂದೂ ಒಪ್ಪಿಕೊಂಡರು.'

ಬೇರೆ ಬೇರೆ ಗಾಂಧೀವಾದಿಗಳು ಈಗ ಮೇಲಿನಂತೆ ಹೇಳುತ್ತಿದ್ದಾರೆ. ಅವರ ಮಾತುಗಳನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಈಗ ಗಾಂಧೀಜಿಯ ಶಿಷ್ಯರಿಗೆ ಪ್ರಜಾತಂತ್ರ ಮತ್ತು ಕಮ್ಯೂನಿಜಂಗಳಲ್ಲಿ ಒಂದನ್ನು ಆರಿಸಿಕೊಳ್ಳಿರೆಂದು ಹೇಳಲಾಗುತ್ತಿದೆ, ಹಾಗೆಯೆ ಹಿಂಸೆ-ಅಹಿಂಸೆಗಳಲ್ಲೊಂದನ್ನು ಕೂಡ. ಅವರೆಲ್ಲರೂ ಹೇಡಿತನವನ್ನು ನಿರಾಕರಿಸಿದ್ದಾರೆ. ಆದರೆ ಶೂರರ ಚೈತನ್ಯ ಅಹಿಂಸೆಯಲ್ಲಿ ಮಾರ್ಗದರ್ಶನ ಮಾಡಬಲ್ಲವರು ಗಾಂಧೀಜಿಯೊಬ್ಬರೇ; ಅವರ ಅನಂತರದಲ್ಲಿ ಅವರ ಸ್ಥಾನದಲ್ಲಿ ಯಾರನ್ನೂ ಅಂಗೀಕರಿಸುವಂತಿಲ್ಲ—ಎಂಬುದು ಒಂದು ತರ್ಕ. ನಿಜವಾಗಿ [illegible] ಜೀವಿತದ ಕಾಲದಲ್ಲಿ, ತಮ್ಮ ಬಂಧಕವಾದ ವೇಳೆ ಪ್ರತಿಯೊಬ್ಬನೂ ತನಗೆ ತಾನೇ ಮುಂದಾಳಾಗಬೇಕೆಂದು ಗಾಂಧೀಜಿಯೇ ಹೇಳಿದ್ದಿಲ್ಲವೆ?

ಇನ್ನೂ ಅನೇಕರ ಅಭಿಪ್ರಾಯದಲ್ಲಿ, ಗಾಂಧೀಜಿಯ ಆಪ್ತ ಸಹಕಾರ್ಯಕರ್ತರೆನಿಸಿಕೊಂಡವರು ಹಿಂಸೆಯ ನಿಷ್ಕ್ರಿಯ ಆರಾಧಕರಾಗಿ ಬಿಟ್ಟಿದ್ದಾರೆ; ಅವರು ತಮ್ಮ ಆಶ್ರಮಗಳ ಆವಾರದಲ್ಲಿ ಬಾಗಿಲು ಮುಚ್ಚಿ ಕುಳಿತು ಕಣ್ಮುಚ್ಚಿ ಗಿಳಿಗಳಂತೆ ರಾಮನಾಮ, ಸರ್ವೋದಯ, ರಚನಾತ್ಮಕ ಕಾರ್ಯಕ್ರಮಗಳನ್ನು ಜಪಿಸುತ್ತ ಆತ್ಮಶೋಧನೆಯಲ್ಲಿ ಮಗ್ನರಾಗಿದ್ದಾರೆ. ಅವರಿಂದ ಯಾವ ಮಹಾವ್ಯಾಪಕ ಆಂದೋಲನವನ್ನೂ ನಿರೀಕ್ಷಿಸುವಂತಿಲ್ಲ.

ಆದ್ದರಿಂದ ಅವರಲ್ಲಿ ಕೆಲವರು—ಹಿಂಸೆಯ ಬಲದ ಮೇಲೆ ನಿಂತಿದ್ದರೂ ಚಿಂತೆಯಿಲ್ಲ—ಪ್ರಜಾತಂತ್ರವೇ ಒಳಿತೆಂದುಕೊಂಡು, ಶಾಸನ ಸಭೆಗಳನ್ನು ಪ್ರವೇಶಿಸಿ ಸರಕಾರಗಳನ್ನು ನಡೆಸುವ ಹೊಣೆಯನ್ನು ಕೈಕೊಂಡಿದ್ದಾರೆ.

ಆದರೆ ಕೆಲವರಿಗೆ ಇದು ಸರಿಬರುವುದಿಲ್ಲ. ಯಾಕೆಂದರೆ ಇದು ಬಂಡವಾಳಗಾರ ಪ್ರಜಾತಂತ್ರ, ಕ್ರಾಂತಿಕಾರಿ ಪ್ರಜಾತಂತ್ರವಲ್ಲ. ಆದ್ದರಿಂದ ಅವರು ತಮ್ಮ ಆಶ್ರಮಗಳನ್ನೂ ಇತರ ನಿತ್ಯಕಾರ್ಯಗಳನ್ನೂ ಕಿರಿಯರಿಗೂ ತಮ್ಮ ಹಳ್ಳಿ ತಹಸೀಲುಗಳ ಜನರನ್ನು ಅವರವರ ಪಾಡಿಗೂ ಬಿಟ್ಟು ದೇಶದಲ್ಲೆಲ್ಲ ಸುತ್ತುತ್ತ ಈಗಿನ ಸರಕಾರ ಗಾಂಧೀಜಿಗೆ ದ್ರೋಹಮಾಡಿದೆಯೆಂದು ಟೀಕಿಸುವುದರಲ್ಲಿ ನಿರತರಾಗಿದ್ದಾರೆ.

ಮತ್ತೆ ಕೆಲವರಿಗೆ ತಮ್ಮ ಕಾರ್ಯಕ್ಷೇತ್ರವನ್ನು ಭಾರತದ ಅಲ್ಪ ಕ್ಷೇತ್ರಕ್ಕೇ ಮಿತಿಗೊಳಿಸುವುದು ಸರಿಯೆನಿಸಿಲ್ಲ. ಅದು ಜಗತ್ತಿನ ಮೂಲೆ ಮೂಲೆಯನ್ನು ವ್ಯಾಪಿಸಬೇಕೆಂಬ ಆಕಾಂಕ್ಷೆಯಿಂದ ಗಾಂಧೀಜಿಯ ಶಾಂತಿ ಅಹಿಂಸಾ ಮಂತ್ರಗಳನ್ನು ಯುದ್ಧದಿಂದ ಬೇಸತ್ತ ಜಗತ್ತಿಗೆ ಬೋಧಿಸಹೊರಟಿದ್ದಾರೆ.

ಇನ್ನು ಕೆಲವರು (ಅಹಿಂಸೆಯಿಂದಲೇ ಎನ್ನಿ) ಕಮ್ಯೂನಿಜಂ ಸ್ಥಾಪಿಸಬೇಕೆಂದೂ ಹೇಳುತ್ತಾರೆ.

ಮತ್ತೆ ಈಗಿನ ಸ್ಥಿತಿಗತಿಯಿಂದ ಅಸಂತುಷ್ಟರಾದ ಸಾಮಾನ್ಯ ಜನರೂ ಯುವಕ ಕಾರ್ಯಕರ್ತರೂ ವಾದಿಸುತ್ತಾರೆ: 'ಕಮ್ಯೂನಿಜಂ ಒಳ್ಳೆಯದು, ಅದು ಬಡವರಿಗೆ ವಿಮೋಚನೆ ಮತ್ತು ಸುಖವನ್ನು ದೊರಕಿಸುವ ಭರವಸೆ ಕೊಟ್ಟಿದೆ ಎಂದ ಮೇಲೆ, ಸದ್ಯಕ್ಕಂತೂ ಗಾಂಧೀವಾದಿಗಳಲ್ಲಿ ಅದನ್ನು ಅಹಿಂಸಾಬಲದಿಂದ ಸ್ಥಾಪಿಸುವಷ್ಟು ಚೈತನ್ಯವಿಲ್ಲದಿರುವಾಗ, ಹಿಂಸೆಯಿಂದಾದರೂ ಅದನ್ನು ಸ್ಥಾಪಿಸಲು ಕಮ್ಯೂನಿಸ್ಟರಿಗೆ ನಾವೇಕೆ ಸಹಾಯ ಮಾಡಬಾರದು? ಗಾಂಧೀಜಿಯ ಶಿಷ್ಯರೇನೋ ಅಹಿಂಸೆಗೆ ಬದ್ಧರಾಗಿರಬಹುದು. ಆದರೆ ನಮಗೇನೂ ಅಂಥ ವ್ರತವಿಲ್ಲ. ಕಮ್ಯೂನಿಜಂ ಬರಬೇಕೆಂಬ ಅವರ ಪ್ರಾಂಜಲ ಸಮ್ಮತಿಯನ್ನು ಸ್ವೀಕರಿಸಿ, ತೊಡಕು ಬಿಡಿಸುತ್ತ ಹೊತ್ತು ಕಳೆಯುವ ಬದಲು ದಾರ ಕತ್ತರಿಸಿ ಮುಂದುವರಿಯೋಣ.'

ಕೆಲ ಗಾಂಧೀವಾದಿಗಳು ತಮಗೆ ಅರಿಯದಂತೆ ಇಂಥ ವಾದಸರಣಿಯನ್ನು ಎಬ್ಬಿಸಿ ಪ್ರೋತ್ಸಾಹಿಸುವವರಾಗಿದ್ದಾರೆ.

ಒಬ್ಬ ಮಹಾ ಗುರುವಿನ ಜೀವನವನ್ನೂ ಉಪದೇಶಗಳನ್ನೂ ಮೇಲ್ಮಾಣಿಸಿದಂತೆ ಕೆಲ ಸೂತ್ರಗಳಿಗಿಳಿಸಿಬಿಟ್ಟರೆ, ನಾವು ಗುರುವಿನ ಕಲ್ಪನೆಗೆ ಎಂದೂ ಹೊಳೆದಿರದಂಥ ಮತ್ತು ಅವನು ಕೇಳಿದ್ದರೆ ದಂಗುಬಡಿದು ಹೋಗಬಹುದಾದ ನಿಗಮನಗಳನ್ನು ತೆಗೆಯಬಹುದಾಗಿದೆ. ಶ್ರೇಷ್ಠತಮ ಶಿಷ್ಯರೂ ತಮಗೇ ಅರಿಯದಂತೆ ಗುರುವಿನ ಉಪದೇಶದ ಅಸಹ್ಯತಮ ವಿಕೃತಿಯನ್ನು ಮಾಡುತ್ತಾರೆ.

ಬಂಗಾಲದ ಯುವಕ ಲೇಖಕ ಶ್ರೀ ಶಚೀಂದ್ರ ಕುಮಾರ ಸೇನರು ಹೀಗೆ ಹೇಳುತ್ತಾರೆ.

'—ಯಾವಾಗಲೂ ಗುರುವಿನ ಮರಣಾನಂತರ ಅವನ ಶಿಷ್ಯರು, ಎಲ್ಲರೂ ಸುದುದ್ದೇಶಯುಳ್ಳರೂ ಅನಿಂದ್ಯಚರಿತ್ರರೂ ಆಗಿದ್ದರೂ ಅವನ ಉಪದೇಶದ ಅರ್ಥದ ಬಗ್ಗೆ ಒಮ್ಮತಕ್ಕೆ ಬರಲು ಅಸಮರ್ಥರಾಗಿ, ಸಿಡಿದು ಹೋಗಿ ಅದರ ವಿವಿಧ ಭಾಷ್ಯಗಳನ್ನೂ ಆಚರಣೆಗಳನ್ನೂ ಬೋಧಿಸತೊಡಗುತ್ತಾರೆ. ಕೊನೆಗೆ ಅದೇ ಒಂದೊಂದು ಧರ್ಮ, ಒಂದೊಂದು ವಿಚಾರ ಸಂಪ್ರದಾಯವೆನಿಸಿಬಿಡುವುದು.'

ಅವರ ಮಾತು ನಿಜವೆಂದು ನನಗೆ ತೋರುತ್ತದೆ.

ಅದ್ದರಿಂದ ಗಾಂಧೀಜಿಯ ಅಥವಾ ಗಾಂಧೀವಾದದ ಎಲ್ಲ ಅನುಯಾಯಿಗಳಿಗೂ ನನ್ನ ಕಳಕಳಿಯ ಪ್ರಾರ್ಥನೆಯಿದು: ನಾವೆಲ್ಲರೂ 'ಅಹಿಂಸೆಯ ಬಗ್ಗೆ, ಅಥವ ಕಮ್ಯೂನಿಜಂ ಬಗ್ಗೆ ಅಥವಾ ಮತ್ತೇತರ ಬಗ್ಗೆ ಇದು ನನ್ನ ನಿಲುವು' ಎಂದು ಹೇಳಿಕೊಳ್ಳೋಣ. ಹೊರತು 'ಇದು ಗಾಂಧೀಜಿಯ ಇಚ್ಛೆಯಾಗಿತ್ತು' ಅಥವಾ 'ಇದು ಗಾಂಧೀವಾದ' ಎಂದು ಹೇಳಿಕೊಳ್ಳೋಣ ಬೇಡ.

ಗಾಂಧೀವಾದವೆಂಬುದೇನಾದರೂ ಇದ್ದರೆ ಅದು ಗಾಂಧೀಜಿಯೊಡನೆಯೇ ಮರಣ ಹೊಂದಿತು. ಯಾಕೆಂದರೆ ಅದನ್ನು ಪೂರ್ಣರೂಪದಲ್ಲಿ ಪಡೆದವರು ಗಾಂಧೀಜಿಯೊಬ್ಬರೇ. ಉಳಿದವರಲ್ಲಿ ಒಬ್ಬೊಬ್ಬರಿಗೆ ಅದರ ಒಂದೊಂದು ಅಂಶ ಸಮಾನಧರ್ಮವಾಗಿರಬಹುದು, ಅಥವಾ ಅದರ ಸರ್ವಾಂಶಗಳೂ ಇದ್ದು ಮೇಲೆ ತನ್ನದಿಷ್ಟು ಇರಬಹುದು. ಆದರೆ ಯಾರ ಗಾಂಧೀವಾದವು ಪೂರ್ಣವಾಗಿ, ನ್ಯೂನಾತಿರೇಕ ರಹಿತವಾಗಿ ಇರುವುದು ಸಾಧ್ಯವಿಲ್ಲ. ಅದ್ದರಿಂದ ಯಾರೂ ಗಾಂಧೀಜಿಗೆ ಎಷ್ಟು ನಿಕಟವರ್ತಿಯಾಗಿದ್ದರೂ ತಾನು ಅವರ ಅನುಯಾಯಿ ಇಲ್ಲವೆ ಗಾಂಧೀಜಿಯ ಅಥವಾ ಗಾಂಧೀವಾದದ ಭಾಷ್ಯಕಾರನೆಂದು ಹೇಳಿಕೊಳ್ಳದಿರಲಿ. ಇದು ನನಗೂ ಅನ್ವಯಿಸುವುದೆಂದು ಬೇರೆ ಹೇಳಬೇಕಾಗಿಲ್ಲ.

ಗಾಂಧೀಜಿಯ ಅನುಯಾಯಿಗಳೆಂದು ಜಗತ್ತು ಭಾವಿಸಿರುವವರೆಲ್ಲರೂ—ಗಾಂಧೀವಾದವು ಅವರ ನಂತರ ಉಳಿದುಕೊಂಡಿ

THE JUBILEE INSURANCE CO., LTD.
One of the very few insthe feild of Insurance that has
been declaring BONUS to its policy holders
from its very inception.
RATE OF BONUS Rs. 10/- & Rs. 12/-
For particulars of Agency & Policy contracts
apply to Sri P. C. KARAMBAYA of our Chief Agents
at 41-A., Richmand Road, Bangalore.
Our Chief Agents:—THE ORIENTAL ENTERPRISES, BANGALORE 1

ಜುಬಿಲಿ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪಿತವಾದಂದಿನಿಂದಲೂ ವಿಮೆದಾರರಿಗೆ ಸರಿಯಾದ ಬೋನಸ್ಸು
ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ
ಜುಬಿಲಿಯು ಒಂದನೆಯದಾಗಿದೆ.
ಈಗಿನ ದರ ಬೋನಸ್ಸು:—ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-
ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.
ದಿ ಓರಿಯಂಟಲ್ ಎಂಟರ್‌ಪ್ರೈಸಸ್,
41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

ದ್ದರೂ ಇನ್ನು ಅದನ್ನು ವಿಸರ್ಜಿಸಿಬಿಡೋಣ. ನನ್ನ ಯುವಜನರಿಗೂ ಚಟುವಟಿಕೆಗೂ ಕ್ರಿಯೆಗೂ ಅವರ ಹೆಸರನ್ನು ಹಚ್ಚಬಾರದು, ಅವರ ಹೆಸರನ್ನು ಉಪಯೋಗಿಸಬಾರದು.

ಅಂದಮಾತ್ರಕ್ಕೆ ಗಾಂಧೀಜಿಯ ಜೀವನವನ್ನೂ ಲೇಖನಗಳನ್ನೂ ನಾವು ಆಳವಾಗಿ ಅಭ್ಯಸಿಸಬಾರದು, ಅವರ ಅಭಿಪ್ರಾಯವನ್ನು ಉದಾಹರಿಸಲೇ ಬಾರದು ಎಂದಲ್ಲ. ಅವರ ಉದಾತ್ತ ಜೀವನದ ಮತ್ತು ಅಪಾರ ಲೇಖನಸಂಪತ್ತಿಯ ಅಭ್ಯಾಸವು ಎಂದಿಗೂ ಅವಶ್ಯ, ಎಂದಿಗೂ ಹಿತಕರವಾಗಿಯೇ ಉಳಿಯುವುದು. ಯಾವುದಾದರೊಂದು ಕಲ್ಪನೆ, ವಾಕ್ಯ ಅಥವಾ ಉಪದೇಶ ಯಾರಿಗಾದರೂ ಮೆಚ್ಚಿಕೆಯಾದರೆ, ಅಥವಾ ಇತರರಿಗೆ ಹಿತಕರವಾಗಬಹುದೆಂದು ತೋರಿದರೆ, ಅಥವಾ ತನ್ನವೇ ವಿಚಾರಗಳನ್ನು ತನಗಿಂತ ಚೆನ್ನಾಗಿ ಅದು ವ್ಯಕ್ತಗೊಳಿಸಿದೆಯೆಂದೆನಿಸಿದರೆ, ಅವನು ಅದನ್ನು ಉದಾಹರಿಸುವುದು ಸ್ವಾಭಾವಿಕ. ಆದರೆ ಈ ಉದಾಹರಣೆಗಳನ್ನು, ನ್ಯಾಯಸ್ಥಾನದಲ್ಲಿ ವಿರೋಧಿಯು ಪ್ರತಿಕೂಲವಾದ ತೀರ್ಪು ಪಡೆಯಲು ಇಲ್ಲವೆ ನ್ಯಾಯಾಧೀಶನ ಸ್ವತಂತ್ರ ವಿಚಾರಧಾರೆಯನ್ನು ಸಂಕುಚಿಸುವಂತೆ ಮಾಡಲು ಪ್ರಮಾಣವು ಪರ ಅಭಿಪ್ರಾಯವನ್ನು ಉದಾಹರಿಸುವಂತೆ ಎದುರಾಳಿಯ ಬಾಯಿ ಮುಚ್ಚಿಸುವ ಉದ್ದೇಶದಿಂದ ಉದಾಹರಿಸಬಾರದು. ಮಾನವಕುಲದ ಶ್ರೇಷ್ಠ ಗುರುಗಳಲ್ಲೊಬ್ಬರೆಂದು ಗಾಂಧೀಜಿಯನ್ನು ಅಂಗೀಕರಿಸಿ ತನಗೆ ಮನವರಿಕೆಯಾಗದಲ್ಲಿ ಅವರ ಅಭಿಪ್ರಾಯಕ್ಕೆ ಅಸಮ್ಮತಿಯನ್ನು ವ್ಯಕ್ತಗೊಳಿಸುವ ಸ್ವಾತಂತ್ರ್ಯವನ್ನಿಟ್ಟುಕೊಂಡ ಜನರೇ ಗಾಂಧೀಜಿಯನ್ನು ಪರಮ ಪ್ರಮಾಣವೆಂದು ಬಗೆದವರೂ ತಮ್ಮ ಕೃತಿಗಳನ್ನೂ ನಿಲುವುಗಳನ್ನೂ ಸಮರ್ಥಿಸಲು ಗಾಂಧೀಜಿಯ ಉಪದೇಶಗಳನ್ನು ಸುತ್ತಿ ಬಳಸಿ, ಯಥಾಶಕ್ತಿ ಆಚರಣೆಯ ಸೋಗು ಹಾಕುವವರಿಗಿಂತ ಗಾಂಧೀಜಿಯನ್ನು ಚೆನ್ನಾಗಿ ಅಭ್ಯಸಿಸಬಹುದು, ಚೆನ್ನಾಗಿ ಅನುಸರಿಸಬಹುದೆಂದು ಕಾಣುವದು. ಬುದ್ಧ, ಮಹಾವೀರ, ಯೇಸು, ಮಹಮ್ಮದ ಮೊದಲಾದ ಜಗದ್ಗುರುಗಳು ವಿಶಿಷ್ಟ ಧರ್ಮಗಳ ಅಥವಾ ಸಂಪ್ರದಾಯಗಳ ಪ್ರವರ್ತಕರೆನಿಸಿರದಿದ್ದರೆ ಇಂದು ಜಗತ್ತಿನಲ್ಲೆಲ್ಲ ಧಾರ್ಮಿಕ ಪ್ರವೃತ್ತಿಯ ಜನರು ಅವರ ಉಪದೇಶಗಳನ್ನು ಹೆಚ್ಚು ಆದರ ಗೌರವಾಭಿಮಾನಗಳಿಂದ ಅಭ್ಯಸಿಸುತ್ತಿದ್ದರೇನೋ. ಶ್ರೀ. ಜೆ ಕೃಷ್ಣಮೂರ್ತಿಯವರು ತಮ್ಮ ಸಂಘವನ್ನು ವಿಸರ್ಜಿಸಿದಂತೆ, ಗಾಂಧೀಜಿಯವರೂ ೧೯೪೦ ರಲ್ಲಿ ಗಾಂಧೀ ಸೇವಾ ಸಂಘವನ್ನು ವಿಸರ್ಜಿಸಿದಂತೆ, ಗಾಂಧೀವಾದವೂ ವಿಸರ್ಜಿತವಾಗಲಿ

(ಹರಿಜನ.)

ಜಪಾನಕ್ಕೆ ಆಕಸ್ಮಿಕ ಧನಲಾಭ.

೧೭ನೇ ಶತಮಾನದಲ್ಲಿ ಸಮುದ್ರಗಳ್ಳರು ಹೂಳಿಟ್ಟ ಅಪಾರ ಸುವರ್ಣ ಸಂಪತ್ತು ಜಪಾನದ ನಾಗರಿಕನೊಬ್ಬನಿಗೆ ದೊರೆತಿದ್ದು ಅದನ್ನವನು ಜಪಾನ ಸರಕಾರಕ್ಕೆ ಕೊಡಲೊಪ್ಪಿದ್ದಾನೆ.

ಜಪಾನದ 'ಮೈನಿಚಿ' ಎಂಬ ಪ್ರಸಿದ್ಧ ಪತ್ರಿಕೆಯು ಒಂದು ವಿಸ್ಮಯಕಾರಕ ಕತೆಯನ್ನು ಪ್ರಕಟಿಸಿದೆ. ಆ ಕತೆಯು ಸತ್ಯ ಸಂಗತಿಯಾಗಿದ್ದುದೇ ಆದರೆ ಜಪಾನಕ್ಕೆ ೧ ಅಬ್ಜ ೩೦ ಕೋಟಿ ರೂಪಾಯಿ ಬೆಲೆಯ ಸುವರ್ಣ ಸಂಪತ್ತು ಕೈಗೆ ದೊರೆಯುವದು.

೧೭ನೇ ಶತಮಾನದಲ್ಲಿ ಸಮುದ್ರಗಳ್ಳರ ಹಾವಳಿ ಹೆಚ್ಚಾಗಿದ್ದಾಗ ಬ್ರಿಟಿಶ ಸರಕಾರವು ಕ್ಯಾಪ್ಟನ್ ವಿಲಿಯಂ ಕಿಡ್ ಎಂಬ ತರುಣನನ್ನು ನೌಕ ಶಿಕ್ಷಣ ಕೊಡುವದಕ್ಕಾಗಿ ಸಮುದ್ರಯಾತ್ರೆಗೆ ಕಳಿಸಿದರು. ಮುಂದೆ ಫ್ರೆಂಚರ ಮೇಲೆ ಗಸ್ತಿ ಮಾಡುವ ಕೆಲಸವನ್ನು ಅವನಿಗೊಪ್ಪಿಸಲಾಯಿತು. ೧೬೯೬ರಲ್ಲಿ ಪೌರ್ವಾತ್ಯ ದೇಶಗಳಲ್ಲಿ ಸಮುದ್ರಗಳ್ಳರ ಹಾವಳಿ ಹೆಚ್ಚಾದುದರಿಂದ ಅವರನ್ನು ದಂಡಿಸುವದಕ್ಕಾಗಿ ಕ್ಯಾ. ಕಿಡ್‌ನಿಗೆ ಒಂದು ಹಡಗದ ಅಧಿಪತ್ಯವನ್ನು ಕೊಟ್ಟು ಕಳಿಸಲಾಯಿತು. ಎರಡು ವರ್ಷಗಳ ವರೆಗೆ ಅವನ ಆ ಕೆಲಸವೂ ಜರುಗಿತು. ಕೊನೆಗೆ ತಾನೇ ಸಮುದ್ರಗಳ್ಳನಾಗಿಬಿಟ್ಟ. ಮುಂದೆ ಅವನನ್ನು ಬಂಧಿಸಿ ೧೭೦೧ರಲ್ಲಿ ಲಂಡನಿನಲ್ಲಿ ಗಲ್ಲಿಗೇರಿಸಲಾಯಿತು.

ಆ ಕ್ಯಾ. ವಿಲಿಯಮ್ ಕಿಡ್ಡನು ತಾನು ಹಡಗುಗಳ ಸುಲಿಗೆ ಮಾಡಿ ಕೂಡಿಹಾಕಿದ ಸಂಪತ್ತನ್ನು ಜಪಾನದ ಒಂದು ನಡುಗಡ್ಡೆಯಲ್ಲಿ ಹೂಳಿಟ್ಟಿದನಂತೆ. ಆ ಕತೆಯು ಜಪಾನದಲ್ಲೆಲ್ಲ ಜನಜನಿತವಾಗಿತ್ತು.

ಈಗ ಕೆಲ ವರ್ಷಗಳ ಹಿಂದೆ ಅನೇಕ ಉಕ್ಕಿನ ಪೆಟ್ಟಿಗೆಗಳನ್ನು ಹೇರಿಕೊಂಡು ಬ್ರಿಟಿಷರ ಒಂದೆರಡು ಹಡಗಗಳು ಜಪಾನದ ಹತ್ತಿರದ ಒಂದು ನಡುಗಡ್ಡೆಗೆ ಬಂದಿದ್ದವಂತೆ. ಆ ಕಾಲಕ್ಕೆ ಆ ನಡುಗಡ್ಡೆಯಲ್ಲಿ ಜನವಸತಿಯೂ ಇತ್ತಂತೆ. ಆ ಹಡಗಗಳ ಕಪ್ತಾನರು ಆ ನಡುಗಡ್ಡೆಯ ಮುಖ್ಯಸ್ಥನ ಕಡೆಗೆ ಹೋಗಿ ಮೃತರ ಶರೀರಗಳು ತಮ್ಮಲ್ಲಿಯ ಉಕ್ಕಿನ ಪೆಟ್ಟಿಗೆಗಳನ್ನು ಹೂಳಿಸಿಡಲು ನೆರವು ಕೇಳಿದರಂತೆ. ಅದರಂತೆ ಆ ಉಕ್ಕಿನ ಪೆಟ್ಟಿಗೆಗಳೆಲ್ಲವನ್ನು ಆ ನಡುಗಡ್ಡೆಯಲ್ಲಿ ಗುಹೆಗಳನ್ನಗೆದು ಅಲ್ಲಿ ಹೂಳಲಾಯಿತಂತೆ.

ಈ ಕತೆಯನ್ನು ಕೇಳಿದವರಲ್ಲಿ ಮಾಸಾಹಿರೋ ನಾಗಕಿಮಾ ಎಂಬುವವನು ತನ್ನ ಇತರ ಕೆಲವರನ್ನು ಕರೆದುಕೊಂಡು ಜಪಾನದ ನಡುಗಡ್ಡೆಗಳಲ್ಲೊಂದಾದ ರುಯಿಕು ನಡುಗಡ್ಡೆಗಳ ಹತ್ತಿರ ಜಪಾನದ ದಕ್ಷಿಣಕ್ಕೆ ೩೦೦ ಮೈಲುಗಳ ಮೇಲಿರುವ ಯೋಕೋ ಆತೆಜಿಮಾ ಎಂಬ ನಿರ್ಜನ ನಡುಗಡ್ಡೆಗೆ ಹೊರಟ. ಅನೇಕ ದಿನಗಳವರೆಗೆ ಆ ತಂಡವು ಸ್ಥಳ ಪರೀಕ್ಷೆ ಮಾಡುತ್ತ ಸಂಚರಿಸಿ, ಬಂಡೆಕಲ್ಲುಗಳಲ್ಲಿ ತೂತುಕೊರೆದು ಆ ಗುಹೆಗಳನ್ನು ಶೋಧಿಸಿ ತೆಗೆದಮೇಲೆ ಅಲ್ಲಿ ಉಕ್ಕಿನ ಪೆಟ್ಟಿಗೆಗಳಿದ್ದುದು ಕಂಡುಬಂತು. ಆ ಪೆಟ್ಟಿಗೆಗಳಲ್ಲಿ ಒಂದನ್ನು ಒಡೆದಾಗ ಅದರಲ್ಲಿ ಬೆಳ್ಳಿಯ ಗಟ್ಟಿಗಳೂ ವಿಲಕ್ಷಣ ಆಕಾರದ ಬಂಗಾರದ ನಾಣ್ಯಗಳೂ ಕಂಡವು. ಅವುಗಳನ್ನು ಶೋಧಿಸಿ ತೆಗೆದ ನಂತರ ಆ ತಂಡವು ಕೆಲಕೆಲವು ಬೆಳ್ಳಿಯ ಗಟ್ಟಿಗಳನ್ನೂ ಬಂಗಾರದ ನಾಣ್ಯಗಳನ್ನೂ ತನ್ನ ಸಂಗಡ ತೆಗೆದುಕೊಂಡು ಜಪಾನಕ್ಕೆ ಮರಳಿತು. ಆ ಬೆಳ್ಳಿ ಮತ್ತು ನಾಣ್ಯಗಳು ಚೀನ ದೇಶದವಿರಬಹುದೆಂದು ಹೇಳಲಾಗುತ್ತದೆ. ಶೋಧಿಸಲ್ಪಟ್ಟ ಆ ಸಂಪತ್ತೆಲ್ಲವನ್ನೂ ಜಪಾನ ಸರಕಾರಕ್ಕೆ ಕೊಟ್ಟು ಬಿಡುವದಾಗಿ ಮಾಸಾಹಿರೋ ನಾಗಶಿಮಾನು 'ಮೈನಿಚಿ' ಪತ್ರಿಕೆಯ ಪ್ರತಿನಿಧಿಗೆ ಹೇಳಿದನಂತೆ.

ಜೈ ಹಿಂದ್.

॥ ವಿಶ್ವಾಸದ ಠರಾವು. ॥

ಮದ್ರಾಸ್ ಶಾಸನಸಭೆಯು ಶ್ರೀ ಸಿ ರಾಜಗೋಪಾಲಾಚಾರಿಯವರ ಮಂತ್ರಿಮಂಡಳದಲ್ಲಿ ವಿಶ್ವಾಸ ಪ್ರದರ್ಶಕ ಗೊತ್ತುವಳಿಯು ೨೦೦ ರ, ೧೫೧ ವಿರುದ್ಧ ಮತಗಳಿಂದ ಸ್ವೀಕೃತವಾಯಿತು. ಒಬ್ಬ ಸದಸ್ಯರು ತಟಸ್ಥರುಳಿದಿದ್ದರು. ವಿಶ್ವಾಸ ಪ್ರದರ್ಶಕ ಗೊತ್ತುವಳಿಯು 'ರಾಜಾಜಿಕಿ ಜೈ' ಘೋಷಣೆಗಳ ಮಧ್ಯೆ ಸ್ವೀಕರಿಸಲ್ಪಟ್ಟಿತು.

ಅಧ್ಯಕ್ಷ ಶ್ರೀ ಶಿವಷಣ್ಮುಗಂ ಪಿಳ್ಳೆಯವರ ನೇತೃತ್ವದಲ್ಲಿ ಮತದಾನ ನಡೆಯಿತು. ವಿರೋಧಿ ಪಕ್ಷದ ಧುರೀಣ ಶ್ರೀ ಟಿ ಪ್ರಕಾಶಂರವರು ಮತದಾನ ನಡೆಯಬೇಕೆಂದು ಕೇಳಿದ್ದರಿಂದ ಮತದಾನ ನಡೆಯಿತು.

ಈ ವಿಶ್ವಾಸ ಗೊತ್ತುವಳಿಯ ಬಗ್ಗೆ ಕಳೆದ ಮೂರು ದಿನಗಳಿಂದ ಚರ್ಚೆ ನಡೆಯುತ್ತಲಿತ್ತು. ಇದು ಕೊನೆಯ ದಿನವಾದ ತಾ. ೩ರಲ್ಲಿ ಪ್ರೇಕ್ಷಕರ ಗ್ಯಾಲರಿಯು ಕಾರ್ಯಕಲಾಪಗಳನ್ನು ನೋಡುವುದಕ್ಕಾಗಿ ಪೂರ್ತಿ ತುಂಬಿದ್ದಿತು. ಶಾಸನಸಭೆಯ ಭವನದ ಹೊರಗೂ ಗುಂಪು ಗುಂಪಾಗಿ ಜನರು ಸೇರಿದ್ದರು.

ಸರಕಾರಕ್ಕೆ ಬೆಂಬಲ ಕೊಡಬೇಕೆಂದು ನಿರ್ಧರಿಸಿದ ೧೮ ಜನ ಸದಸ್ಯ ಕೃಷಿಕರ ಲೋಕ ಪಕ್ಷವು ಪೂರ್ತಿಯಾಗಿ ಹಾಜರಿದ್ದಿತು.

ಸಮಾಜವಾದಿ ಪಕ್ಷದ ಧುರೀಣರಾದ ಶ್ರೀ ಕೆ.ಬಿ ಮೇನನ್ನರವರು ತಮ್ಮ ಪಕ್ಷವು ಗೊತ್ತುವಳಿಗೆ ಏಕೆ ವಿರೋಧಿಸಬೇಕೆಂಬುದನ್ನು ವಿವರಿಸಿದರು. ಅವರು 'ನಾವು ಬಂಡವಾಳಶಾಹಿ ಕಾಂಗ್ರೆಸ್ ಮತ್ತು ಫ್ಯಾಸಿಸ್ಟ ಕಮ್ಯೂನಿಸ್ಟರೆಂಬ ದೆವ್ವ ಮತ್ತು ಆಳ ಸಮುದ್ರಗಳ ಮಧ್ಯೆ ಇದ್ದೇವೆ' ಎಂದು ಹೇಳಿದರು. 'ಸಮಾಜವಾದಿ ಪಕ್ಷದಂಥ ಪಕ್ಷವು ತಟಸ್ಥ ಉಳಿಯುವುದು ಸರಿಯಲ್ಲವೆಂದು ಗೊತ್ತುವಳಿಯನ್ನು ವಿರೋಧಿಸುತ್ತೇವೆ. ಆದರೆ ನಾವು ಕಮ್ಯೂನಿಸ್ಟ ಪಕ್ಷಕ್ಕೆ ಬೆಂಬಲದಿಲ್ಲ' ಎಂದು ಹೇಳಿದರು.

ಜಸ್ಟಿಸ ಪಕ್ಷದ ಒಬ್ಬರೇ ಒಬ್ಬರಾದ ಶ್ರೀ ಪಿ. ಟಿ. ರಾಜನ ಅವರು ಸರಕಾರದ ದಕ್ಷತೆಯನ್ನು ಕಾರ್ಯದಕ್ಷತೆಯನ್ನು ಹೊಗಳುತ್ತ, ರಾಜ್ಯದಂಥ ಮತ್ತು ಪಕ್ಷದ ಬಿಕ್ಕಟ್ಟಿನ ಪ್ರಸಂಗದಲ್ಲಿ ಸರಕಾರ ನಡೆಸಲು ಯೋಗ್ಯರಾದ ಶ್ರೀ ರಾಜಾಜಿಗೆ ಬೆಂಬಲ ಕೊಡುವುದಾಗಿ ತಿಳಿಸಿದರು.

ಕಮ್ಯೂನಿಸ್ಟ ಪಕ್ಷದ ಧುರೀಣರಾದ ಶ್ರೀ ಟಿ ನಾಗಿರೆಡ್ಡಿಯವರು ಪ್ರತ್ಯೇಕ ಕರ್ನಾಟಕ ಮತ್ತು ಆಂಧ್ರ ಪ್ರಾಂತರಚನೆಯಾಗದಿರುವದನ್ನು ಟೀಕಿಸುತ್ತ ರಾಜ್ಯವು ಪೋಲೀಸ್ ರಾಜ್ಯವಾಗಿ ಪರಿವರ್ತನೆಯಾಗಿದೆ ಎಂದು ನುಡಿದರು. ಅಲ್ಲದೆ ಸರಕಾರವು ಜನತೆಯ ಅಭಿಪ್ರಾಯಗಳ ವಿರುದ್ಧ ನಡೆಯುತ್ತಿರುವ ಜನವಿರೋಧಿ ಸರಕಾರವಾಗಿದೆಯೆಂದೂ ನುಡಿದರು.

ಮುಸ್ಲಿಂ ಲೀಗಿನ ಶ್ರೀ ಸಾಹೇಬರು ಇನ್ನೊಂದು ಆರು ತಿಂಗಳು ಕಮ್ಯೂನಿಸ್ಟರು ಅಧಿಕಾರಕ್ಕೆ ಬರಬಾರದೆಂದು ದೇವರಲ್ಲಿ ಪ್ರಾರ್ಥಿಸುತ್ತ, ಕಮ್ಯೂನಿಸ್ಟರು ಆರೋಪಿಸಿದ ಪೋಲೀಸ ರಾಜ್ಯದಲ್ಲಿ ತಾವು ಇಲ್ಲವೆಂದು ಸಾರಿದರು. 'ಚುನಾವಣೆಗಳಲ್ಲಿ ಮುಸ್ಲಿಂ ಲೀಗ್ ಕಾಂಗ್ರೆಸ್ಸನ್ನು ವಿರೋಧಿಸಿತಾದರೂ ಚುನಾವಣಾ ನಂತರದ ಅವಧಿಯಲ್ಲಿ ಮುಸ್ಲಿಂ ಲೀಗ್ ಕಾಂಗ್ರೆಸಿಗೆ ಬೆಂಬಲ ಕೊಡುತ್ತಾ ಬಂದಿದೆ. ಈಗಿನ ಗಂಡಾಂತರದಲ್ಲಿ ರಾಷ್ಟ್ರವನ್ನು ಉಳಿಸುವ ಸಾಮರ್ಥ್ಯ ಯಾರಿಗಾದರೆ ಕಾಂಗ್ರೆಸ್ಸಿಗೊಂದೇ ಎಂದು ಮನವರಿಕೆಯಾಯಿತು. ಎಂತಲೇ ನಾನೀಗ ವಿಶ್ವಾಸ ಗೊತ್ತುವಳಿಗೆ ಬೆಂಬಲ ಕೊಡುತ್ತೇನೆ' ಎಂದು ಹೇಳಿದರು.

ಚರ್ಚೆಯ ಕಾರ್ಯವು ಈ ರೀತಿ ನಡೆಯುತ್ತಿರಲಾಗಿ ಶ್ರೀ ರಾಜಾಜಿಯವರು ಚರ್ಚೆಯ ಉಪಸಂಹಾರ ಮಾಡುತ್ತ, 'ಇದುವರೆಗೆ ಮಾಡಿದ ಕಾರ್ಯದ ಬಗ್ಗೆ ನಿಮ್ಮೆಲ್ಲರ ಪ್ರಶಂಸೆಯನ್ನು ಪಡೆಯುವೆನೆಂದು ನಾನು ನಿಮ್ಮನ್ನು ವಿಶ್ವಾಸ ಪ್ರದರ್ಶನದ ಬಗ್ಗೆ ಕೇಳುತ್ತಿಲ್ಲ, ಭವಿಷ್ಯತ್ತಿನಲ್ಲಿ ಏನಾದರೂ ಮಾಡಲಿಕ್ಕೆ ನನ್ನಲ್ಲಿ ಬಲ ತುಂಬಲೆಂದು' ಹೇಳಿದರು.

ಶ್ರೀ ರಾಜಾಜಿಯವರು ಮುಂದುವರಿದು, 'ನೀವು ನನ್ನಲ್ಲಿ ವಿಶ್ವಾಸ ಪ್ರದರ್ಶಿಸಿದಲ್ಲಿ ನನ್ನ ಮೇಲೆ ಹೊರಿಸಲಾಗುವ ಹೊಣೆಯನ್ನು ನಾನು ಹೆಚ್ಚಾಗಿ ತೃಪ್ತಿಕರವಾಗಿ ನೆರವೇರಿಸಬಲ್ಲೆ. ನಾನು ವಿಶ್ವಾಸ ಪ್ರದರ್ಶನ ಕೇಳುವುದು ಭಾವಿ ಕಾರ್ಯಗಳಿಗಾಗಿ' ಎಂದರು.

ಶ್ರೀ ರಾಜಾಜಿಯವರು ೪೫ ನಿಮಿಷಗಳ ವರೆಗೆ ಮಾತಾಡಿದರು. ನಾಲ್ಕು ದಿನಗಳ ಚರ್ಚೆಯಲ್ಲಿ ಪ್ರಮುಖ ಪಾತ್ರವಹಿಸಿದ ಕಮ್ಯೂನಿಸ್ಟರ ಟೀಕೆಗಳಿಗೆ ಸರಿಯಾದ ಉತ್ತರ ಕೊಟ್ಟರು.

ಗೊಂಡಾರಣ್ಯದ ಪ್ರಕೃತಿಪುತ್ರರು

ಮಧ್ಯ ಭಾರತದ ಸ್ವದೇಶಪ್ರೇಮಿ ಭಿಲ್ಲರು.

— ೧ —

ಭಾರತದ ಮಧ್ಯ ಪ್ರದೇಶದಲ್ಲಿ ದಟ್ಟವಾದ ಕಾಡು ಮೇಡುಗಳ ನಡುವೆ ಏರು ತಿಟ್ಟುಗಳ ಎಡೆಗಳಲ್ಲಿ ಆರು ಲಕ್ಷ ಭಿಲ್ಲರು ನೆಲೆಸಿದ್ದಾರೆ. ಈ ಜನರು ಮೂಲ ನಿವಾಸಿಗಳ ವಂಶಜರು. ಇಂದು ಪ್ರಕೃತಿಯ ಕೋಪಕ್ಕೆ ಗುರಿಯಾದ ಈ ಮಕ್ಕಳು ತಮ್ಮ ಉಳಿವಿಗಾಗಿ ಹೋರಾಟ ನಡೆಸಬೇಕಾಗಿ ಬಂದಿದೆ. ಸ್ವಾಭಾವಿಕವಾಗಿ ವೀರರೂ, ಸಾಹಸಿಗಳೂ ಆದ ಭಿಲ್ಲರನ್ನು ಕ್ಷಾಮ ದೇವತೆಯು ಹತವೀರ್ಯರನ್ನಾಗಿ, ನಿರ್ಬಲರನ್ನಾಗಿ ಮಾಡಿದೆ. ಹಸಿವೆಯಿಂದ ಕಂಗೆಟ್ಟು ಭಿಲ್ಲರು ತಮ್ಮ [illegible]ಗಳನ್ನೆಲ್ಲ [illegible] ಹೊಟ್ಟೆಯ ಪಾಡಿಗಾಗಿ ಅಲ್ಲಿಂದಿಲ್ಲಿಗೆ ಸಾಗುತ್ತಿರುವರು. ತಮ್ಮ ಭಾಗ್ಯವನ್ನು ದೂಷಿಸಿ ಶೋಕಿಸುವರು.

ರಾಜಪುತಾನದ ಅನೇಕ ಚರಿತ್ರಾರ್ಹ ಘಟನೆಗಳಲ್ಲಿ ಭಿಲ್ಲರ ಪಾತ್ರ ಮಹತ್ವದ್ದು. ರಾಣಾ ಪ್ರತಾಪಸಿಂಹನ ಧರ್ಮ[illegible]ವನ್ನು [illegible] ಮೊಘಲರೊಡನೆ [illegible] ಉಜ್ವಲ ಪರಂಪರೆ ಭಿಲ್ಲರ ಸಂಪತ್ತು. ನಮ್ಮ ರಾಷ್ಟ್ರೀಯ ಭಾವನೆಯನ್ನು ಜಾಗೃತಗೊಳಿಸುವವರೇ ಈ ಆದಿವಾಸಿಗಳೆನ್ನಬಹುದು. ಏಕೆ ಎನ್ನುವಿರೋ? ತಮ್ಮ ಪ್ರಾಣವನ್ನು ಬಲಿಕೊಟ್ಟು ದೇಶಕ್ಕಾಗಿ ಹೋರಾಡಿದವರು ಇವರು. [illegible] ಗೋಂಡ [illegible] ಸ್ತ್ರೀ ಪುರುಷರು [illegible] ಇವರು. ಇಂದು ಅದೇ ಜನ [illegible] ಹೇಗೆ ನಂಬೋಣ?

— ೨ —

ಸರದಾರಪುರ, ಧಾರ, [illegible] ರತಲಾಮ, ಇಂದೋರ, [illegible], ಅಲಿರಾಜಪುರ, ಜೋಬಟ ಮುಂತಾದೆಡೆ ಭಿಲ್ಲ ಜಾತಿಯ ಜನರು ನೆಲಸಿರುವರು. ಈ ಪ್ರದೇಶ ಕಲ್ಲು ಕಂಟಿಗಳಿಂದ ಮತ್ತು ಏರುತಗ್ಗುಗಳಿಂದ ಕೂಡಿರುವ ಕಾರಣ ವರ್ಷದಲ್ಲಿ ಒಂದೇ ಬೆಳೆ ಬೆಳೆಯಬಹುದು. ಆದರೆ ಮಳೆಯು ನಿಯಮಿತವಾಗಿ [illegible] ಬರದೆ ಬರುವ ಮಳೆಯಿಂದ ಬಹಳ ಕಡಿಮೆ [illegible] ಬೆಳೆಯು [illegible] ವರ್ಷದ ಹಸಿವನ್ನು ಹಿಂಗಿಸಲು ಸಾಲುವುದಿಲ್ಲ. ಇತರ ಮೂಲಗಳಿಂದ ಹೊಟ್ಟೆ ಹೊರೆಯುವುದು ಅನಿವಾರ್ಯವಾಗಿದೆ. ಈಗ್ಗೆ ಎರಡು ವರ್ಷಗಳಿಂದ ಮಳೆಯ ಹನಿಯೂ ಬಂದಿಲ್ಲ. ಹೀಗಾಗಿ ಪೈರು ನಷ್ಟಪ್ರಾಯವಾಗಿದೆ. ಪೈರನ್ನು ಬಿಟ್ಟರೆ ವನ್ಯ ಉತ್ಪತ್ತಿಗಳೇ ಭಿಲ್ಲರ ಜೀವನಾಧಾರ. ಈಗ ಅರಣ್ಯ ಸಂಪತ್ತಿನ ಮೇಲೆ ಭಿಲ್ಲರಿಗೆ ಮೂಲಭೂತ ಅಧಿಕಾರ ಇದ್ದುದನ್ನು ಸರಕಾರವು ಕಸಿದುಕೊಂಡು ಗುತ್ತಿಗೆದಾರರಿಗೆ ವಹಿಸಿ ಕೊಟ್ಟಿದೆ ಎಂದು ದೂರುವರು. [illegible] ಮರ ಕಡಿದು, ಕಟ್ಟಿಗೆ ಮಾರುತ್ತಿದ್ದ ಭಿಲ್ಲರು ತಮಗೆ [illegible]ಗಳನ್ನು ಕೊಡಲು ಸಾಮರ್ಥ್ಯವಿಲ್ಲದೆ ಈಗ ನಿರುದ್ಯೋಗಿಗಳಾಗಿದ್ದಾರೆ. ಬೇರೆ ಕೆಲಸ ಕಾರ್ಯಗಳೂ ಭಿಲ್ಲರಿಗೆ ದೊರೆಯುತ್ತಿಲ್ಲ. ಆದುದರಿಂದ ಹೊರಗಿನಿಂದ ಅನ್ನ ತರಿಸಿ ತಿನ್ನಲೂ ಅವರಲ್ಲಿ ಕ್ರಯಶಕ್ತಿ ಉಳಿದಿಲ್ಲ. ಅರಣ್ಯಗಳಲ್ಲಿ ಸಿಗುವ ಗೆಡ್ಡೆ ಗೆಣಸು ಮತ್ತು ಮರದ [illegible] ತೊಗಟೆಗಳನ್ನು [illegible] ತಿಂದು ಜಠರಾಗ್ನಿಯನ್ನು ಶಾಂತಗೊಳಿಸುತ್ತಿರುವರು. [illegible] ಎಷ್ಟೋ ಕಡೆ [illegible] ಉಪಯೋಗಿಸುವ ಎತ್ತುಗಳನ್ನು, [illegible] ಹಾಲು ಕರೆಯುವ ಹಸುಗಳನ್ನು [illegible] ಕೊಂದು ತಿಂದ ಪ್ರಕರಣಗಳು ಈಗ ನಡೆಯುತ್ತಿವೆ.

— ೩ —

ಸರಕಾರವು ನಿರುದ್ಯೋಗ [illegible] ಭಿಲ್ಲರಿಗೆ ಕೆಲಸ ಒದಗಿಸಿ ಕೊಡಲು [illegible]. ರಸ್ತೆಗಳ ದುರಸ್ತಿ ಮುಂತಾದ ಸಾರ್ವಜನಿಕ ಕೆಲಸಗಳಲ್ಲಿ ಕೂಲಿಗಾಗಿ ಭಿಲ್ಲರನ್ನು ತೆಗೆದುಕೊಳ್ಳುವರು. ಗಂಡಸರಿಗೆ ದಿನಕ್ಕೆ ೧೨ ಆಣೆ, ಹೆಂಗಸರಿಗೆ ೧೦ ಆಣೆ ಮತ್ತು [illegible] ಆಣೆ ದಿನಗೂಲಿ ಕೊಡುವರು. ಕೆಲಸ ಬೇಕೆನ್ನುವವರೇ ಅಧಿಕ. [illegible] ಅನೇಕ ಭಿಲ್ಲರನ್ನೂ [illegible] ಕೆಲಸ ದೊರೆಯದು. ಪರಿಣಾಮವಾಗಿ ಅಸಂಖ್ಯ ಭಿಲ್ಲರು ನಿರಾಶ್ರಿತರಾಗಿ, ಬತ್ತಲೆ ತಿರುಗುತ್ತಿರುವರು.

ಸಹಜವಾಗಿ ಭಿಲ್ಲರು ನೆಲಸಿದ ಎಲ್ಲೆಡೆಯೂ ಕ್ಷಾಮದ ಭೀತಿ ತಪ್ಪಿದ್ದಲ್ಲ. ಈಗ ನೀರಿನ ಅಭಾವವೂ ಈ ಕಷ್ಟಕ್ಕೆ ಬಳಿ ಎಳೆದಿದೆ. ಎಷ್ಟೋ ಮೈಲು ದೂರ ಹೋಗಿ, ನೀರನ್ನು ಸ್ತ್ರೀಯರು ಹೊತ್ತು ತರಬೇಕಾಗಿದೆ. ಸರಕಾರದವರು ಪರಿಹಾರ ಕಾರ್ಯವನ್ನು ತತ್ಪರತೆಯಿಂದ ಮಾಡುತ್ತಿರುವರು. ಆದರೇನು? ಕ್ಷಾಮದ ಹಣದ ಸದುಪಯೋಗವಾಗುವುದಿಲ್ಲ. ಮಧ್ಯಸ್ಥಿದಾರರು ಹೆಚ್ಚಿನ ಹಣವನ್ನು ತಿಂದು ಹಾಕಿ, ಹೆಸರಿಗೆ ಮಾತ್ರ ಭಿಲ್ಲರ ಯೋಗಕ್ಷೇಮದ ಹೆಚ್ಚು ಮಾಡಿದ ಪಟ್ಟಿಯನ್ನು ಮುಂದಿಡುತ್ತಾರೆ. ಭಾರತಕ್ಕೆ ಅಂಟಿರುವ ಜಾಡ್ಯ ಇದೇ.

— ೪ —

ಭಿಲ್ಲರು ಸಾಹಸಿಗಳು ಅಷ್ಟೇ ಸರಳ ಸ್ವಭಾವದವರು. ಧೈರ್ಯ ಸ್ಥೈರ್ಯಗಳಿಂದ ಸಂಶೋಭಿತರಾಗಿರುವುದರಿಂದ ಎಂಥ ವಿಷಮ ಪ್ರಸಂಗದಲ್ಲಿಯೂ ಕರ್ತವ್ಯ ವಿಮುಖರಾಗುವುದಿಲ್ಲ. ಇವರು ಭಯರಹಿತರು, ಆತ್ಮವಿಶ್ವಾಸವುಳ್ಳವರು ಮತ್ತು ಪುರುಷಾರ್ಥ ಸಾಧಕರು. ಕಾರಣ, ತಾವು ಕೊಟ್ಟ ವಚನವನ್ನು ಮುರಿಯುವುದಿಲ್ಲ. ಹಿಡಿದ ಕೆಲಸ ಬಿಡುವುದಿಲ್ಲ. ಅತಿಥಿಗಳ ಆದರ ಸತ್ಕಾರಗಳೆಂದರೆ ದೊಡ್ಡ ಪುಣ್ಯದ ಕೆಲಸವೆಂದು ಭಾವಿಸುತ್ತಾರೆ. ಸ್ತ್ರೀಯರೂ ತುಂಬಾ ಸೌಜನ್ಯವಂತೆಯರು ಪರಿಶ್ರಮಿಗಳು.

ನಾಟ್ಯ ಮತ್ತು ಸಂಗೀತದ ಪ್ರಭಾವ ಭಿಲ್ಲರನ್ನು ವಿಲಾಸಿಗಳನ್ನಾಗಿಸಿದೆ. ತಮ್ಮ ಹರಕು ಗುಡಿಸಲಿನ ಮುಂದೆ ರಾತ್ರಿ ಹೊತ್ತು ಭಿಲ್ಲ ಸ್ತ್ರೀ-ಪುರುಷರು ಮಧುರ ಕಂಠದಿಂದ ಗೀತಗಳನ್ನು ಹಾಡುತ್ತಾ, ಉನ್ಮಾದ [illegible] ವರ್ತಿಸುವಾಗ, ಅದರ ಸೊಬಗನ್ನೇನು ವರ್ಣಿಸಲಿ! ಸಾಮೂಹಿಕ ನೃತ್ಯದಲ್ಲಿ ತರುಣ ತರುಣಿಯರು, ಮುದುಕರು ಮುದುಕಿಯರು ಎಲ್ಲರೂ ಉತ್ಸಾಹದಿಂದ ಭಾಗವಹಿಸುವರು. [illegible] ಮುದ್ರೆಯಿಂದ ನೃತ್ಯ ಮಾಡುವಾಗ ದರ್ಶಕರು ಸಮ್ಮೋಹಿತರಾಗಿ, ಮೈಮರೆಯುವುದು ನಿಶ್ಚಯ. ಈ ಬಗೆಯ ಮನೋರಂಜನೆಯು ಹಬ್ಬ ಹರಿದಿನಗಳಲ್ಲಿ ನಡೆವೆ, ಅಥವಾ ಮಗುವಿನ ಜನ್ಮಕಾಲದಲ್ಲಿ ವಿಜೃಂಭಣೆಯಿಂದ ನಡೆಸುವುದು ವಾಡಿಕೆ.

— ೫ —

ಸಗೋತ್ರ ವಿವಾಹವು ಭಿಲ್ಲರಿಗೆ ನಿಷಿದ್ಧ. ಯೋಗ್ಯ ವರ ವಧುವನ್ನು ಆರಿಸಿ, ಗೋತ್ರಾದಿ ಸಂಬಂಧವನ್ನು ಪರಿಶೀಲಿಸಿದ ಬಳಿಕವೇ ಮದುವೆ ನೆರವೇರುವುದು. ಹುಡುಗನ ಕಡೆಯವರು ಹುಡುಗಿಯ ಅಪ್ಪನಿಗೋ, ತಾಯಿಗೋ ಒಂದು ನಿಶ್ಚಿತ ಮೊತ್ತವನ್ನು ದಕ್ಷಿಣೆಯಾಗಿ ಕೊಡಬೇಕು. ವಿಧವಾ ವಿವಾಹ ಭಿಲ್ಲರಿಗೆ [illegible] ಹಾಗೆಯೇ ಮದುವೆಯಾದ ಬಳಿಕವೂ ಹೆಂಗಸು ತನ್ನ ವಿವಾಹ ಸಂಬಂಧವನ್ನು ಕಡಿದುಕೊಂಡು ಬೇರೊಬ್ಬ ಪ್ರಣಯಿಯೊಡನೆ ಜೀವನ ಮಾಡುವುದುಂಟು.

ಶಿಕ್ಷಣದ ವೃದ್ಧಿಯನ್ನೇ ಭಿಲ್ಲರು ತಿಳಿಯರು. ಹಾಗೆಂದು ಅಶಿಕ್ಷಿತರಿದ್ದರೂ ಅವರ ನಾಗರಿಕತೆ ಕಳೆಗುಂದಿಲ್ಲ. ಪಂಚಾಯಿತಿ ಪದ್ಧತಿಯು ಶಿಸ್ತನ್ನು ಬಹಳ ನಿಷ್ಠೆಯಿಂದ ಇಂದಿಗೂ ಕಾಪಾಡಿಕೊಂಡು ಬಂದಿರುವರು. ಜಾತೀಯ ನಿಯಮಗಳ ಉಲ್ಲಂಘನೆ ಮಾಡಿದವರಿಗೆ ಶಿಕ್ಷೆ ಮತ್ತು ಬಹಿಷ್ಕಾರಗಳನ್ನು ಈ ಪಂಚಾಯಿತಿಯ ಮೂಲಕವೇ ಘೋಷಿಸುತ್ತಾರೆ. ಅವರಲ್ಲಿ ಪರಸ್ಪರ ಸಹಕಾರ ಭಾವನೆ ತುಂಬಿ ತುಳುಕಿದೆ.

ತುಂಬಾ ಸರಳ ಜೀವಿಗಳು. ಸ್ತ್ರೀಯರು ಕೈಗೆ ಬಳೆಗಳನ್ನು, ಕಿವಿಗೆ ಬೆಂಡೋಲೆಗಳನ್ನು ಧರಿಸಿ ಸುಂದರಿಯರಾಗಿ ಕಾಣುವರು. ಭಿಲ್ಲರು ಸಾಂಸ್ಕೃತಿಕ ವೈಶಿಷ್ಟ್ಯವನ್ನು ತಮ್ಮದೇ ಆದ ರೀತಿಯಲ್ಲಿ ಕಾಪಾಡಿಕೊಂಡು ಬಂದಿರುವರು. ಇವರ ಜನಪದ ಹಾಡುಗಳು ಮತ್ತು ನೃತ್ಯಗಳು ಅಭ್ಯಾಸಯೋಗ್ಯವಾಗಿವೆ. ಸಭ್ಯ ಸಮಾಜದಲ್ಲಿ ಪ್ರಚಲಿತವಿರುವ ಎಷ್ಟೋ ದುರಭ್ಯಾಸಗಳಿಂದ ಭಿಲ್ಲರು ಮುಕ್ತರಾಗಿದ್ದಾರೆ.

ಸ್ವಾತಂತ್ರ್ಯದ ಕಲ್ಪನೆಯು ಇನ್ನೂ ಭಿಲ್ಲರಿಗೆ ಸ್ಪಷ್ಟ ರೂಪದಲ್ಲಿ ಆಗಿಲ್ಲದಿರುವುದೊಂದು ಕೊರತೆ, ಯೋಜನಾಬದ್ಧ ಉಪಾಯಗಳಿಂದ ಸರಕಾರವು ಭಿಲ್ಲರ ಸರ್ವಾಂಗೀಣ ಉನ್ನತಿಗಾಗಿ ಪ್ರಯತ್ನಿಸುವುದು ಅಪೇಕ್ಷಣೀಯ. ಇವರೊಡನೆ ಬೆರೆತು, ಅನ್ನದ ಪ್ರಶ್ನೆಯನ್ನು ಬಗೆಹರಿಸುವಲ್ಲಿ ಸಮಾಜ ಸೇವಕರು, ರಚನಾತ್ಮಕ ಕಾರ್ಯಕರ್ತರು ಸಂತೋಷ ಕಾಣುವಂತಾದರೆ ಕ್ಷೇಮ.

'ನವಯುಗ'

ವಿದ್ಯಾ ಇಲಾಖೆಯ ಪ್ರಕಟಣೆಗಳು.

೧. ಇಂಡಿಯಾ ಸರಕಾರದವರು ಶೆಡ್ಯೂಲ್ಡ್ ಜಾತಿಯವರಿಗೂ ಮತ್ತು ಇತರ ಹಿಂದುಳಿದ ಪಂಗಡದವರಿಗೂ ೧೯೫೨-೫೩ನೇ ಸಾಲಿಗೆ ಸ್ಕಾಲರ್ ಶಿಪ್ಪನ್ನು ಕೊಡಲು ರೂ. ೧೭ ಲಕ್ಷವನ್ನು ಎ. ಬಿ ಮತ್ತು ಸಿ. ಪ್ರಾಂತ್ಯಗಳಿಗಾಗಿ ಇಡಲ್ಪಟ್ಟಿದೆ. ಇಂಥಾ ಸ್ಕಾಲರ್ ಶಿಪ್‌ಗಳು ಸರಕಾರದಿಂದ ಅಂಗೀಕೃತವಾದ ಸಂಸ್ಥೆಗಳಲ್ಲಿ ಮೆಟ್ರಿಕ್ಯುಲೇಶನ್ ಪಾಸಾದವರಿಗೆ ಕೊಡಲಾಗುವುದು.

ಅಂತವರು ಹೆಚ್ಚಿನ ಮಾಹಿತಿಯನ್ನು ಕೊಡಗಿನ ವಿದ್ಯಾಧಿಕಾರಿಗಳಿಂದ ತಿಳಿಯಬಹುದು.

೨ ವಿಶ್ವಭಾರತಿ ಯೂನಿವರ್ಸಿಟಿಯವರು [illegible] ಟ್ರೇನಿಂಗ್ ಸರ್ಟಿಫಿಕೇಟ್ [illegible] ತರಬೇತಿ, [illegible] ಭವನದಲ್ಲಿ ತೆರೆಯಲು [illegible]. ಈ ಎರಡು ತರದ [illegible] ವೃತ್ತಿ ಶಿಕ್ಷಣದ [illegible] ಸಂಸ್ಥೆಗಳಲ್ಲಿ ಈ [illegible] ಅಂಥಾ [illegible] ನವರನ್ನು ಕಳುಹಿಸಬಹುದಾಗಿ ವಿಶ್ವಭಾರತಿಯು [illegible] ಇಂಡಿಯಾ ಸರಕಾರದ ಮುಖಾಂತರ ತಿಳಿಸಿರುತ್ತಾರೆ.

[illegible] ಚಾನ್ಸಲರ್, ವಿಶ್ವಭಾರತಿ, ಶಾಂತಿನಿಕೇತನ, ಬಂಗಾಲ ಇವರಿಗೆ ನೇರವಾಗಿ ಪತ್ರವ್ಯವಹಾರ ಮಾಡಬಹುದು.

ಇದರ ಯೋಜನೆಯ [illegible] ವಿಷಯ ಜಿಲ್ಲಾ ವಿದ್ಯಾಧಿಕಾರಿಗಳಿಂದ ತಿಳಿಯಬಹುದು.

೩. ಜರ್ಮನಿಯ ಪಾಲಿಟೆಕ್ನಿಕ್ ಶಾಲೆಗಳಲ್ಲಿ ಕಲಾ ಕೌಶಲ್ಯ ವಿಜ್ಞಾನ ಮತ್ತು ವೈದ್ಯಕೀಯ ವಿಷಯಗಳನ್ನು [illegible] ಹೆಚ್ಚಿನ ವ್ಯಾಸಂಗ ಮಾಡುವವರಿಗೆ ಸರಕಾರವು ಖರ್ಚಿನ ½ ಭಾಗವನ್ನು ಕೊಡುವುದು. ಉಳಿದರ್ಧ ಭಾಗವನ್ನು ಉಮೇದುವಾರರೇ ತೆರಬೇಕಾಗುವುದು. ಅಂತವರ ಅರ್ಜಿಗಳನ್ನು ಮಾತ್ರ ಮುಂದೆ ಕಳುಹಿಸಲಾಗುವುದು.

ಇದಕ್ಕೆ ಸಂಬಂಧಿಸಿದ ನಿವೇದನ ಪತ್ರಗಳು ವಿದ್ಯಾಧಿಕಾರಿಗಳ ಆಫೀಸಿನಿಂದ ಪಡೆಯಬಹುದು.

ಶ್ರೀ ಟಿ. ಎಸ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

ವಯಸ್ಕರ ಶಿಕ್ಷಣ.

(ವಿದ್ಯಾ ಇಲಾಖೆಯಿಂದ)

ಪ್ರಗತಿಯ ವರದಿ ೧೯೫೧-೫೨

ವಯಸ್ಕರ ಶಿಕ್ಷಣ ಯೋಜನೆಯು ಜನವರಿಯಲ್ಲಿ ಮಂಜೂರಾತಿ ಪಡೆದು ಅ ದಕ್ಕೆ ಸಂಬಂಧಪಟ್ಟ ಕೆಲಸ ಕಾರ್ಯಗಳನ್ನು ಜರಗಿಸುತ್ತಿವೆ. ಈ ಕಾರ್ಯವನ್ನು ನಿರ್ವಹಿಸಲು ವಿದ್ಯಾಧಿಕಾರಿಗಳ ಕೈ ಕೆಳಗೆ ಒಬ್ಬ ಆರ್ಗನೈಜರನ್ನು ಜನವರಿ ೨೪ ರಿಂದ ನೇಮಕ ಮಾಡಿದೆ.

ಈ ಯೋಜನೆಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಆಗಿಂದಾಗ್ಗೆ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿರುವೆವು.

ಕೇಂದ್ರಗಳ ಮತ್ತು ಅವುಗಳಿಗೆ ಬೇಕಾದ ಅಧ್ಯಾಪಕರುಗಳು ಆಯ್ಕೆಯಾದ ನಂತರ ವಯಸ್ಕರ ಶಾಲೆಗಳಲ್ಲಿ ನಡೆಸುವ ಅಧ್ಯಾಪಕರುಗಳ ಒಂದು ತರಬೇತಿ ತರಗತಿಯನ್ನು ಸೆಂಟ್ರಲ್ ಹೈಸ್ಕೂಲು ಮಡಿಕೇರಿಯಲ್ಲಿ ನಡೆಸಲಾಯಿತು.

ತರಬೇತಿ ತರಗತಿ:— ಈ ತರಗತಿಯುಲ್ಲಿ ತಾ. ೧೮-೨-೫೨ರಿಂದ ೨೩-೨-೫೨ರ ವರೆಗೆ ೨೨ಗಂಡಸರು ೧ ಮಹಿಳೆಯೂ ತರಬೇತಾದರು.

ಶಾಲೆಗಳು:—೧೯೫೧-೫೨ನೇ ಸಾಲಿಗೆ ಮಂಜೂರಾದ ಹಣಕ್ಕೊಳಪಟ್ಟು ೩೦ ವಯಸ್ಕರ ಶಾಲೆಗಳನ್ನು ತೆರೆಯಲಾಯಿತು. ಮಾರ್ಚ ತಿಂಗಳಿಂದ ಅವುಗಳು ಕೆಲಸ ಮಾಡುತ್ತಿವೆ. (ಅಧ್ಯಾಪಕರ ಮತ್ತು ಕೇಂದ್ರಗಳ ಹೆಸರುಗಳನ್ನು ಈ ಹಿಂದೆ ಪ್ರಕಟಿಸಿದ್ದೆವು.) ೩೦ ಶಾಲೆಗಳಲ್ಲಿ ಒಟ್ಟು ೫೪೮ ವಯಸ್ಕ ವಿದ್ಯಾರ್ಥಿಗಳಿದ್ದಾರೆ.

ಪುಸ್ತಕ ಭಂಡಾರಗಳು:— ಒಂದು ಕೇಂದ್ರ ಪುಸ್ತಕ ಭಂಡಾರವನ್ನು ವಿದ್ಯಾಧಿಕಾರಿಗಳು ಆಫೀಸಿನಲ್ಲಿ ತೆರೆಯಲಾಗಿದೆ. ಅಲ್ಲದೆ ೩೦ ಗ್ರಾಮಾಂತರ ಪುಸ್ತಕ ಭಂಡಾರಗಳನ್ನು ಸ್ಥಾಪಿಸಲಾಗಿದೆ. ವಯಸ್ಕರ ಶಾಲೆಗಳಿಗೆ ಸೇರಿ ಅಕ್ಷರಭ್ಯಾಸ ಮಾಡಿ ಓದಲು ಪ್ರಾರಂಭಿಸಿದವರಿಗೆ ಯೋಗ್ಯವಾದ ವಯಸ್ಕರ ಶಿಕ್ಷಣ ಮಾಲೆಗಳನ್ನು ಮತ್ತು ಗ್ರಾಮಾಂತರಗಳಲ್ಲಿ ಸ್ವಲ್ಪ ವಿಸ್ತೃತವಾಗಿ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕೆಂಬ ಕುತೂಹಲ ವಿದ್ಯಾವಂತ ಗ್ರಾಮಸ್ಥರಿಗೂ ಉತ್ತಮವಾದ ಪುಸ್ತಕಗಳನ್ನು ಒದಗಿಸಿಕೊಡಲಾಗಿದೆ.

ವೃತ್ತ ಪತ್ರಿಕೆಗಳು:—ವಯಸ್ಕರ ಶಿಕ್ಷಣ ಶಾಲೆಗಳಿಗಾಗಿಯೇ ಪ್ರಕಟಿಸಲ್ಪಡುವ 'ಬೆಳಕು' ಎಂಬ ವಾರ ಪತ್ರಿಕೆಯನ್ನು 'ಪುಸ್ತಕ ಪ್ರಪಂಚ' ಎಂಬ ಮಾಸ ಪತ್ರಿಕೆಯನ್ನೂ ಎಲ್ಲಾ ಶಾಲೆಗಳಿಗೂ ಒದಗಿಸಲಾಗುತ್ತಿದೆ.

ಪುಸ್ತಕ ಭಂಡಾರ ಮತ್ತು ವೃತ್ತಪತ್ರಿಕೆಗಳ ಮೇಲು ಉಸ್ತುವಾರಿಯನ್ನು ವ. ಶಿ. ಶಾಲೆಯ ಅಧ್ಯಾಪಕರೇ ನೋಡಿಕೊಳ್ಳುತ್ತಿದ್ದಾರೆ. ಈಗ ಸ್ಥಾಪಿತವಾಗಿರುವ ಪುಸ್ತಕಭಂಡಾರಗಳನ್ನು ಕ್ರಮೇಣ ಅಭಿವೃದ್ಧಿಪಡಿಸುವುದು ಮತ್ತು ಗ್ರಾಮಾಂತರಗಳಲ್ಲಿ ವಾಚನಾಲಯಗಳನ್ನು ತೆರೆಯುವ ಪ್ರಯತ್ನ ಕೈ ಕೊಳ್ಳಲಾಗುವುದು.

ವಯಸ್ಕರ ಶಿಕ್ಷಣ ಕಾರ್ಯ ಮತ್ತು ಚಲನ ಚಿತ್ರ:—ಪ್ರಚಾರ ಕಾರ್ಯಕ್ಕಾಗಿ ಮತ್ತು ಜನರಲ್ಲಿ ಮನೋಜಾಗೃತಿಯನ್ನುಂಟು ಮಾಡಲು ಚಲನ ಚಿತ್ರ ಪ್ರದರ್ಶನಗಳನ್ನು ತೋರಿಸುವ ಏರ್ಪಾಡು ಮಾಡಲಾಗುವುದು. ಪ್ರಯೋಗಾರ್ಥವಾಗಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಚಲನ ಚಿತ್ರ ಪ್ರದರ್ಶನವನ್ನೇರ್ಪಡಿಸಲಾಗಿತ್ತು. ಚೀಫ್ ಕಮಿಷನರ್‌ರವರೂ ಮತ್ತು ಮಾನ್ಯ ಮಂತ್ರಿಗಳೂ ದಯಮಾಡಿಸಿ, ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಈ ಉಪಕರಣಗಳನ್ನು ಹಳ್ಳಿಗಳಿಗೆ ಒಯ್ಯಲು ಒಂದು ವಾಹನವನ್ನು ಬಹುಬೇಗನೆ ಸರಕಾರವು ಒದಗಿಸಿ ಕೊಡುವ ಏರ್ಪಾಡು ಮಾಡುವದು.

ವಯಸ್ಕರ ಶಿಕ್ಷಣ ಯೋಜನೆ:— ವ್ಯಕ್ತಿಯ ಸರ್ವತೋಮುಖವಾದ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು ಈ ಯೋಜನೆಯನ್ನು ಎರಡು ಭಾಗಗಳನ್ನಾಗಿ ಮಾಡಿಕೊಂಡಿದೆ. ೧. ಅಕ್ಷರಭ್ಯಾಸ ಮತ್ತು ಓದುಗಾರಿಕೆ ತರಗತಿ. ೨. ಸಾಮಾಜಿಕ ಶಿಕ್ಷಣವೆಂಬದಾಗಿ ಇವುಗಳ ವಿವರವನ್ನು ಪ್ರಕಟಿಸಿದ್ದೆವು.

ಅಕ್ಷರಾಭ್ಯಾಸ ಮತ್ತು ಓದುಗಾರಿಕೆ ತರಗತಿ

ಒಬ್ಬ ಅನಕ್ಷರಸ್ಥನು ವ. ಶಿ. ಶಾಲೆಗೆ ಸೇರಿದ ನಂತರ ಅಕ್ಷರಸ್ಥನೆನ್ನಿಸಿಕೊಳ್ಳಲು ೫ ತಿಂಗಳ ಕಾಲ ವಿದ್ಯಾಭ್ಯಾಸ ಮಾಡಬೇಕಾಗಿದೆ. ಈ ಅವಧಿಯನ್ನು ಬೇರೆ ಬೇರೆ ಪ್ರಾಂತ್ಯಗಳಲ್ಲಿ ವ್ಯತ್ಯಾಸವಾಗಿಟ್ಟುಕೊಂಡಿದ್ದಾರೆ. ಮೈಸೂರು ವಯಸ್ಕರ ಶಿಕ್ಷಣ ಸಮಿತಿಯವರು ೫ ತಿಂಗಳ ಕಾಲ ಸಾಕಾಗಬಹುದೆಂಬದಾಗಿ ನಿರ್ಧರಿಸಿದ್ದಾರೆ. ಪಠ್ಯ ಪುಸ್ತಕ, ಪಾಠ ವಿಧಾನ ಮತ್ತು ಇದಕ್ಕೆ ಸಂಬಂಧಪಟ್ಟ ಇನ್ನಿತರ ವಿಷಯಗಳಲ್ಲಿ ಮೈ. ವ. ಶಿ. ಸ. ಯವರು ಅನುಸರಿಸುವ ಕ್ರಮವನ್ನೇ ನಾವು ಅನುಸರಿಸುತ್ತಾ ಇದ್ದೇವೆ. ಒಬ್ಬನು ಶಾಲೆಗೆ ದಾಖಲಾದ ಎರಡುವರೆ ತಿಂಗಳಿಗೆ ವಯಸ್ಕರಿಗಾಗಿಯೇ ಬರೆದ ಒಂದು ಚಾರ್ಟು ಮತ್ತು ಪುಸ್ತಕವನ್ನು ಓದಿ ಮುಗಿಸಬೇಕು. ಶಾಲಾ ಪ್ರಾರಂಭವಾದ ಎರಡುವರೆ ತಿಂಗಳ ಅಂತ್ಯದಲ್ಲಿ ಅಕ್ಷರಾಭ್ಯಾಸದ ಮೊದಲನೇ ಪರೀಕ್ಷೆಯನ್ನು ಮಾಡುವರು. ಹೀಗೆ ಮೊದಲನೇ ಪರೀಕ್ಷೆಯಲ್ಲಿ ಪಾಸಾದವರ ಸಂಖ್ಯೆಯನ್ನು ಈ ಕೆಳಗೆ ಕೊಡಲಾಗಿದೆ.

ಕ್ರ. ಸಂ.	ಶಾಲೆಗಳ ಹೆಸರು	ಸೇರಿದ ವಿದ್ಯಾರ್ಥಿಗಳು	ಪರೀಕ್ಷೆಗೆ ಕುಳಿತವರು	ಪಾಸಾದವರು
೧	[illegible]	[illegible]	[illegible]	[illegible]
೨	[illegible]	[illegible]	[illegible]	[illegible]
೩	[illegible]	[illegible]	[illegible]	[illegible]
೪	[illegible]	[illegible]	[illegible]	[illegible]
೫	[illegible]	[illegible]	[illegible]	[illegible]
೬	[illegible]	[illegible]	[illegible]	[illegible]
೭	[illegible]	[illegible]	[illegible]	[illegible]
೮	[illegible]	[illegible]	[illegible]	[illegible]
೯	[illegible]	[illegible]	[illegible]	[illegible]
೧೦	[illegible]	[illegible]	[illegible]	[illegible]
೧೧	[illegible]	[illegible]	[illegible]	[illegible]
೧೨	[illegible]	[illegible]	[illegible]	[illegible]

ಇನ್ನೂ ಕೆಲವು ಶಾಲೆಗಳ ವರದಿಯು ತಲ್ಪಿರುವುದಿಲ್ಲ. ಕೈ ಸೇರಿದ ನಂತರ ಫಲಿತಾಂಶವನ್ನು ಪ್ರಕಟಿಸಲಾಗುವುದು.

ಪರೀಕ್ಷಾ ಫಲಿತಾಂಶ
ಎಲ್ಲರೂ ಏಕೆ ಪಾಸಾಗಲಿಲ್ಲ?

(೧) ಕೆಲವರು ಪರೀಕ್ಷೆಗೆ ಹಾಜರಾಗಿರುವುದಿಲ್ಲ.

(೨) ಎಲ್ಲರ ಹಾಜರಾತಿ ಸರಿಯಾಗಿರುವುದಿಲ್ಲ.

(೩) ಎಲ್ಲರ ಮನೋಮಟ್ಟ ಏಕಪ್ರಕಾರವಾಗಿರುವುದಿಲ್ಲ. ನೋಕಪಡರೂ ತಾರ ಎರಡನೇ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶವಿದೆ. ಮನಸ್ಸುಳ್ಳ ಅನೇಕರು ಚೆನ್ನಾಗಿ ಕಲಿತು ಎರಡನೇ ಪರೀಕ್ಷೆಯಲ್ಲಿ ಪಾಸಾಗುವವರಿದ್ದಾರೆ. ಕಲಿತದ್ದು ವ್ಯರ್ಥವಾಗಿ ಮನಸ್ಸಿನಲ್ಲಿ ನಿಲ್ಲಲು ಪುನಃ ಎರಡುವರೆ ತಿಂಗಳು ಓದುಗಾರಿಕೆಯನ್ನು ಮಾಡುವುದು. ಎರಡನೇ ಪರೀಕ್ಷೆಯನ್ನು ಒಬ್ಬನು ದಾಖಲಾದ ೫ ತಿಂಗಳ ಅಂತ್ಯಕ್ಕೆ ಮಾಡಲಾಗುವುದು.

ಸಾಕ್ಷರತೆಯು ಸ್ಥಿರವಾಗಿ ಉಳಿಯಬೇಕೆಂಬ ಗುರಿಯನ್ನಿಟ್ಟುಕೊಂಡು ವಯಸ್ಕ ವಿದ್ಯಾರ್ಥಿಗಳನ್ನು ಪರೀಕ್ಷೆಯಲ್ಲಿ ತೇರ್ಗಡೆ ಮಾಡಲು ಕೆಲವು ನಿಯಮಗಳನ್ನು ಅನುಸರಿಸಲಾಗುವುದು.

ಈ ಯೋಜನೆಯು ಕೆಲಸಕ್ಕೆ ಪ್ರಾರಂಭಿಸಿದಂದಿನಿಂದ ಇಷ್ಟರ ವರೆಗೆ ಏನು ಸಾಧಿಸಿದೆ ಎಂಬುದನ್ನು ಸೂಕ್ಷ್ಮವಾಗಿ ತಿಳಿಯಲು ಸಂತೋಷ ಪಡುತ್ತೇವೆ. ಇನ್ನು ಸಾಧಿಸಲಿಕ್ಕಿರುವ ಕೆಲಸವು ಅಗಾಧವಾಗಿದೆ. ಈ ಕಾರ್ಯಕ್ಕೆಗೊಂಡ ಕೆಲಸಗಾರರು ತಮ್ಮ ಶಾಲೆಯ ಕೆಲಸವನ್ನು ಯೋಗ್ಯ ರೀತಿಯಲ್ಲಿ ಮಾಡುತ್ತಾ ಇದ್ದಾರಲ್ಲದೆ, ಇನ್ನು ಮುಂದೆಯೂ ಮಾಡಲು ಉತ್ಸುಕರಾಗಿದ್ದಾರೆ.

ರಾತ್ರಿ ಶಾಲೆಗೆ ಬರುವವರು ಹೆಚ್ಚಾಗಿ ಬೇಸಾಯ ಕಸುಬಿನವರಾದುದರಿಂದ ಪುರಸತ್ತಿನ ವ್ಯವಸಾಯ ಕೆಲಸಕ್ಕಾಗಿ ಸ್ವಲ್ಪ ಸಮಯ ಶಾಲೆಗಳನ್ನು ಮುಚ್ಚಲು ಅನುಮತಿ ಕೊಡಲಾಗಿದೆ. ರಜಾ ಸಮಯದಲ್ಲಿಯೂ ಕೂಡ ವಯಸ್ಕ ವಿದ್ಯಾರ್ಥಿಗಳನ್ನು ವಾರಕ್ಕೊಂದಾವೃತ್ತಿ ಶಾಲೆಗೆ ಬರಮಾಡಿಕೊಂಡು ವ್ಯವಸಾಯದಲ್ಲಿ ಉತ್ತಮ ಕ್ರಮಗಳ ತಿಳುವಳಿಕೆ, ಪುರಾಣ ಶ್ರವಣ, ಭಜನೆಗಳಲ್ಲಿ ತೊಡಗಿರುತ್ತಾರೆ.

ಹಬ್ಬ ಹರಿದಿನ ಕೇಳುವಂತೆ ಸಾರ್ವಜನಿಕರ ಸಲಹೆ, ಸಹಾಯವನ್ನು ಪುನಃ ಕೋರುತ್ತೇವೆ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೊ. ಪ್ರಾದೇಶಿಕ ಕೋಆಪರೇಟಿವ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರಿ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಹೆಚ್ಚಿನ ಬಡ್ಡಿಗೆ ಡೆಪಾಸಿಟ್ ತೆಗೆದುಕೊಳ್ಳಲಾಗುವುದು. ಟ್ರಸಿಟಿ, ವಾರ್ಡ್ ಲೀಫ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಅವಧಿಯ ಸಾಲದ ಶಾಖೆಯ ಮೂಲಕ ದೀರ್ಘ ಅವಧಿಯ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಚೇರ್ಮನ್.

For Sale.

One Austin Car 1949 Model entirely owner driven—Has run 19,000 miles. Price Rs. 6500/- or nearest offer.

Apply to;—

M. M. GANAPATHY,
Boikere Estate,
Suntikoppa P. O.

2-1

Edited printed and published by P. I. Belliapa at 'Kodagu' Press, Mercara, for Kodagu Ltd.

Licence No. 60.
Licenced to Post without Prepayment.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು:—ಪಿ. ಐ. ಬೆಳ್ಳಿಯಪ್ಪನವರು | ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಕು ೧೮-೭-೧೯೫೨ನೇ ಶುಕ್ರವಾರ | ಸಂಚಿಕೆ ೭

ಕೊಡಗು ಶಾಸನ ಸಭೆಯಲ್ಲಿ

ಚೀಫ್ ಕಮಿಷನರ ಭಾಷಣ.

'ಸಿ' ಸಂಸ್ಥಾನಗಳ ಆಕ್ಟಿನ ಮೇರೆ ರಚಿತವಾಗಿ, ಕಳೆದ ಮಾರ್ಚ್ ತಾರೀಖು ... ಕೇಂದ್ರದ ಗೃಹಮಂತ್ರಿ ಶ್ರೀ ಕೆ. ಎನ್. ಕಾಟ್ಜೂರವರಿಂದ ಉದ್ಘಾಟಿಸಲ್ಪಟ್ಟ ಈ ಶಾಸನ ಮಂಡಳದ ಪ್ರಥಮ ಸಭೆಯನ್ನು ಉದ್ದೇಶಿಸಿ ಮಾತನಾಡಲು ನನಗೆ ಹರ್ಷವೆನಿಸಿದೆ. ನಿಮ್ಮೆಲ್ಲರಿಗೂ ನಾನು ಸ್ವಾಗತ ಬಯಸುವುದಲ್ಲದೆ ನಿಮ್ಮ ಕಾರ್ಯ ಕಲಾಪಗಳಲ್ಲಿ ಜಯವನ್ನು ಗಳಿಸಿರೆಂದು ಆಶಿಸುತ್ತೇನೆ. ನಿಮಗೆ ಕೊಡಲ್ಪಟ್ಟಿರುವ ಸುಧಾರಣೆಗಳ ಹಿನ್ನೆಲೆಯನ್ನು ವಿವರಿಸುವ ಅವಶ್ಯಕತೆ ಇಲ್ಲ. ಹಿಂದೂದೇಶವನ್ನು ಸರ್ವ ಸ್ವತಂತ್ರ ಪ್ರಜಾರಾಜ್ಯವಾಗಿ ಸಾರಿದ ರಾಜ್ಯಘಟನೆಯನ್ನು ೧೯೫೦ನೇ ಜನವರಿ ೨೬ರಲ್ಲಿ ಜಾರಿಗೆ ತಂದುದು ನಿಮಗೆಲ್ಲಾ ತಿಳಿದಿದೆ. ಇಂದು ನಮ್ಮ ಮುಂದಿರುವಂತೆ ಹಿಂದೆ ಎಂದೂ ನಮ್ಮ ದೇಶವು ಇಷ್ಟು ಒಕ್ಕಟ್ಟಾಗಿಯೂ, ಏಕೀಕೃತವಾಗಿಯೂ ಇರಲಿಲ್ಲ. ಹಿಂದೂದೇಶ ಭೂಪಟವು ಪುನಃ ರಚಿಸಲ್ಪಟ್ಟು ಸಂಸ್ಥಾನಗಳು ಹಿಂದೂದೇಶದ ಇತರ ಭಾಗಗಳೊಂದಿಗೆ ಸಮಾವೇಶಗೊಳಿಸಲ್ಪಟ್ಟವು. ನಮ್ಮ ಮಹಾ ಮುಂದಾಳುಗಳ ಈ ಮಹಾ ಕಾರ್ಯದ ಅಂಗವಾಗಿ 'ಸಿ' ಭಾಗದ ಸಂಸ್ಥಾನಗಳ ಕಾಯಿದೆಯು ಜಾರಿಗೆ ಬಂದು ಹಿಂದೂದೇಶದ ರಾಜ್ಯಘಟನೆಯಲ್ಲಿ ತಮ್ಮ ಆಡಳಿತ ನಡೆಸಲು ಜವಾಬ್ದಾರಿ ಶಾಸನ ಸಭೆ, ಮಂತ್ರಿಮಂಡಳಗಳುಳ್ಳ ಜವಾಬ್ದಾರಿ ಸರಕಾರವು ... ಸಂಸ್ಥಾನಗಳಿಗೆ ದೊರಕಲ್ಪಟ್ಟಿತು. ನಮಗೆ ಈ ಅವಕಾಶವನ್ನು ತಂದ ಈ ಚಿಂತನಾಶೀಲ ಕಾಯಿದೆಯನ್ನು ರಚಿಸಲು ಕಾರಣರಾದ ದೇಶದ ಮುಂದಾಳುಗಳಿಗೂ ನಮ್ಮ ಪ್ರತಿನಿಧಿಯಾಗಿದ್ದ ಶ್ರೀ ಸಿ. ಎಂ. ಪೂಣಚ್ಚರವರಿಗೂ ನಮ್ಮ ವಂದನೆಗಳನ್ನರ್ಪಿಸುವಲ್ಲಿ ನೀವೂ ಸಹಭಾಗಿಗಳೆಂದು ನಂಬಿದ್ದೇನೆ.

ಈ ಕಾಯಿದೆಯೊಳಗೆ ಬರುವ ಇತರ ಸಂಸ್ಥಾನಗಳಿಗಿಂತಾ ಭಿನ್ನವಾಗಿ ಕೊಡಗು ೧೯೨೪ರಿಂದಲೇ ಶಾಸನ ಸಭೆಯನ್ನು ಪಡೆದಿತ್ತು. ದೇಶದ ಆಡಳಿತದಲ್ಲಿ ಜವಾಬ್ದಾರಿಯುತವಾಗಿ ಭಾಗಿಗಳಾಗಲು ಈ ಶಾಸನ ಸಭೆಯು ಅನುವು ಮಾಡಿಕೊಟ್ಟಿದ್ದಲ್ಲದೆ ಈ ಸಭೆಯ ಬಗ್ಗೆ ಜನತೆ ಮತ್ತು ಶಾಸನ ಸಭಾ ಸದಸ್ಯರು ವ್ಯಕ್ತ ಮಾಡುತ್ತಿದ್ದ ಸಹಕಾರವು ನನಗೆ ತಿಳಿದಿತ್ತು. ಅದು ಕೇವಲ ಶಿಫಾರಸ್ಸಿನ ಕೌನ್ಸಿಲಾಗಿ ಜನರ ಜನಪ್ರತಿನಿಧಿಗಳ ... ಆದರೂ ಆ ಅವಕಾಶವು ಅಲ್ಪವಲ್ಲ. ಶಿಫಾರಸ್ಸು ಮಾಡಿದ ನಿರ್ಣಯಗಳಿಗೆ ಯೋಗ್ಯ ಬೆಲೆ ಕೊಡುತ್ತಿದ್ದುದು ... ಏಕೆಂದರೆ ಅದು ಜನತೆಯ ಅಭಿಪ್ರಾಯವಾಗಿತ್ತು. ಸರಕಾರಕ್ಕೆ ಜನಪ್ರತಿನಿಧಿಗಳ ಎಲ್ಲಾ ಸಲಹೆಗಳನ್ನು ... ಅಧಿಕ ತೊಂದರೆಯೇನೂ ... ಸಾರ್ವಜನಿಕ ಸರಕಾರ ಮತ್ತು ... ಈ ಕೌನ್ಸಿಲು ನಮಗೆ ಶಾಸನ ಸಭಾ ಅನುಭವವನ್ನು ಒದಗಿಸಿಕೊಟ್ಟು ಈ ಸಂಪೂರ್ಣ ಜವಾಬ್ದಾರಿ ರೂಪದಲ್ಲಿ ನ ಕಾರ್ಯಕಲಾಪಗಳನ್ನು ನಡೆಸಲು ಮತ್ತು ಸರಕಾರದ ಜವಾಬ್ದಾರಿ ಯುಕ್ತವಾಗಿ ಮಂತ್ರಿಗಳಿಗೆ ಪ್ರಗತಿಶೀಲ ಆಡಳಿತದ ಬಗ್ಗೆ ಸಲಹೆ ಕೊಡಲು ಸಹಕಾರಿಯಾಯಿತೆಂಬುದರಲ್ಲಿ ಸಂಶಯವಿಲ್ಲ.

ನಿಮ್ಮ ಚೀಫ್ ಕಮಿಷನರಾಗಿ ನಾನು ಬಂದನಂತರ ಶಾಸನ ಸಭೆಯಲ್ಲಿ ಎರಡು ವರ್ಷಗಳ ವರೆಗೆ ಅಧ್ಯಕ್ಷತೆ ವಹಿಸುವ ಅದೃಷ್ಟವು ನನಗೊದಗಿತ್ತು. ಆ ಶಾಸನ ಸಭೆಯ ಗೌರವ ಮತ್ತು ಶಿಸ್ತನ್ನು ಮೆಂಬರುಗಳು ಯೋಗ್ಯರೀತಿ ಪಾಲಿಸಿದರು. ಶಾಸನ ಸಭೆಗಳ ... ಸರಕಾರಕ್ಕೆ ಅನುಕೂಲ, ಸಲಹೆ ಕೊಟ್ಟಿದ್ದಾರೆ. ಆ ಮೆಂಬರುಗಳಲ್ಲಿ ಸಲವರು ಈಗ ... ಆರಿಸಲ್ಪಟ್ಟಿರುವವರು ... ಅವರೆಲ್ಲರಿಗೂ ಈ ಸಂದರ್ಭದಲ್ಲಿ ವಂದನೆಗಳನ್ನರ್ಪಿಸುತ್ತೇನೆ.

ಸ್ವಾತಂತ್ರ್ಯದ ಕಠಿಣ ಯುದ್ಧವನ್ನು ಮಾಡಿ ಜಯಶೀಲವಾದ ಕಾಂಗ್ರೆಸು ಈ ಸಂಸ್ಥಾನದಲ್ಲಿ ಅಧಿಕಾರಕ್ಕೆ ಬಂದದ್ದು ಸಂತೋಷವಾಗಿದೆ. ಈ ಸಂಸ್ಥಾನದ ಸುಮಾರು ೯೫ ಸಾವಿರ ಮತದಾರರಲ್ಲಿ ೬೪ ಸಾವಿರ ಜನರು ಚುನಾವಣೆಯಲ್ಲಿ ಭಾಗವಹಿಸಿದರು. ಪ್ರೌಢ ಮತದಾನ ಪದ್ಧತಿಯು ಈ ಪ್ರಥಮ ಹಂತದಲ್ಲಿ ಪ್ರಚಲಿತವಾಗಿರುವ ಅವಿದ್ಯೆಯು ಈ ಕಾಲದಲ್ಲೂ ... ಎಷ್ಟೊಂದಷ್ಟು ಜನರು ಚುನಾವಣೆಯಲ್ಲಿ ಭಾಗವಹಿಸಿದ್ದು ನಿಜವಾಗಿಯೂ ಪ್ರಶಂಸನಾರ್ಹವಾಗಿದೆ. ನೀವು ಪ್ರತ್ಯೇಕ ಪ್ರತ್ಯೇಕ ಪಕ್ಷಗಳ ಮೇಲೆ ಚುನಾವಣೆಯಲ್ಲಿ ಹೋರಾಡಿರಬಹುದು ಆದರೆ ಒಂದು ಪಕ್ಷವು ಬಹುಮತವನ್ನು ಪಡೆದು ಬಂದನಂತರ ನನ್ನ ಮಟ್ಟಿಗೆ ಹೇಳುವದಾದರೆ ಕೊಡಗಿನ ಭವಿಷ್ಯ ನಿರ್ಮಾಣದ ಶಕ್ತಿಯು ... ನನ್ನ ಮತಭೇದವನ್ನು ಮರೆಯಬೇಕಾಗಿದೆ. ಆದ್ದರಿಂದ ಸದಸ್ಯರು ಬಹುಮತ ಪಕ್ಷದೊಡನೆ ಸಹಕರಿಸಿ ದೇಶದ ಹಿತದೃಷ್ಟಿಯಿಂದ ನಡೆದರೆ ಉತ್ತಮವಾಗುವದು. ಈ ದೃಷ್ಟಿಯಿಂದ ಎಲ್ಲರೂ ತಮ್ಮ ಪಕ್ಷಭೇದಗಳನ್ನು ಮರೆತು ಸಹಕರಿಸಿ ನಿಮ್ಮ ಮೇಲೆ ಜನತೆಯು ಇರಿಸಿದ ವಿಶ್ವಾಸಕ್ಕನುಗುಣವಾಗಿ ದೇಶದ ಹಿತಕ್ಕಾಗಿ ದುಡಿಯುವಿರೆಂದು ಆಶಿಸುತ್ತೇನೆ.

ಈ ಸಭೆಯು ಈ ವರ್ಷದ ಬಜೆಟ್ಟನ್ನು ಪರಿಶೀಲಿಸಿ ಒಪ್ಪುವ ದೃಷ್ಟಿಯಿಂದ ಕರೆಯಲ್ಪಟ್ಟಿದೆ. ಬಜೆಟ್ಟನ್ನು ಮಂಡಿಸುವ ಮುನ್ನ ಒಕ್ಕೂಟದ ಪ್ರೆಸಿಡೆಂಟರ ಪರವಾನಿಗೆಯನ್ನು ಪಡೆಯಬೇಕಾದುದರಿಂದ ಈ ಮತ್ತು ಇತರ ಕೆಲವು ಘಟನಾತ್ಮಕ ಬದಲಾವಣೆಗಳ ಕಾರಣದಿಂದ ಬಜೆಟ್ಟನ್ನು ಸಭೆಯ ಮುಂದಿಡುವ ... ವಿಳಂಬವಾಯಿತು. ಮುಖ್ಯ ಮಂತ್ರಿಯವರು ನಿಮ್ಮ ಮುಂದಿಡಲಿರುವ ಬಜೆಟ್ಟು ಉಳಿತಾಯ ಬಜೆಟ್ಟೆಂದು ಹೇಳಲು ಸಂತೋಷವಾಗುತ್ತದೆ. ಅವರ ದೂರದರ್ಶಿತ್ವ ಹಾಗೂ ದಕ್ಷತೆಯಲ್ಲಿ ನಮ್ಮ ಆರ್ಥಿಕ ಸ್ಥಿತಿಯು ಸುರಕ್ಷಿತವಿದೆಯಲ್ಲದೆ ಅದು ಅಭಿವೃದ್ಧಿಗೊಳ್ಳುವದೆಂಬುದರಲ್ಲಿ ಸಂಶಯವಿಲ್ಲ."

ಪ್ರತಿ ಇಲಾಖೆಗಳ ವಿಚಾರ ಅವರು ವಿವರಿಸುತ್ತಾ ಹೀಗೆಂದರು:

ಲೇಂಡ್ ರೆವಿನ್ಯೂ—ನೀತಿಯಲ್ಲಿ ಬದಲಾವಣೆ ಇಲ್ಲ. ಸೆಟ್ಲ್‌ಮೆಂಟ್ ಕೆಲಸ ನಡೆಯುತ್ತಿದೆ. ... ಅಧಿಕಾರಿಗಳು ಬಂದನಂತರ ಭೂಮಿ ಇಲ್ಲದವರಿಗೆ ಭೂಮಿ ಕೊಡಲು ದೊರೆಯುವ ಜಾಗಗಳ ಸರ್ವೆ ಕೈಕೊಳ್ಳಲಾಗುವುದು. ಅಲ್ಲದೆ ಒಂದು ದೀರ್ಘವಾದ ಸರ್ವೆ ಶಾಲೆಯನ್ನೂ ನಡೆಸಲಾಗುವುದು. ಕೊಡಗಿನಲ್ಲಿ ಜಮೀನ್ದಾರಿ ಪದ್ಧತಿಯು ಒಂದು ಸಮಸ್ಯೆಯಾಗಿ ಉಳಿದಿಲ್ಲ.

ಎಕ್ಸೈಸ್—ನೀತಿಯು ನಿಮಗೆ ತಿಳಿದಿದೆ. ಕಾಂಗ್ರೆಸ್ ಪಾನನಿರೋಧ ತತ್ತ್ವಕ್ಕೆ ಬದ್ಧವಾಗಿದೆ. ಕಳೆದ ನಾಲ್ಕು ವರ್ಷಗಳಿಂದ ಕೊಡಗಿನಲ್ಲಿ ಕೂಪನ್ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಅಲ್ಲದೆ ಸಾರಾಯಿ, ಕಳ್ಳಿನ ... ಇಲಾಖೆಯು ಬಹಳ ... ಈ ವಿಷಯದಲ್ಲಿ ... ಕೆಲಸದ ಜನರ ಆರೋಗ್ಯಕ್ಕೆ ಆಗುವ ಹಾನಿಯನ್ನು ತಪ್ಪಿಸಲು ಪ್ರತಿ ಕೂಪನ್‌ದಾರನಿಗೆ ತಿಂಗಳಿಗೆ ಎರಡು ಬಾಟ್ಲಿ ಸಾರಾಯಿ ಕೊಡಬೇಕೆಂದೂ ಬಾಟ್ಲಿಗೆ ರೂ. ೫ ವಿಧಿಸಬೇಕೆಂದೂ ಎಕ್ಸೈಸ್ ಕಮಿಟಿ ಶಿಫಾರಸ್ಸು ಮಾಡಿದೆ.

ಫಾರೆಸ್ಟ್—ಅರಣ್ಯವು ನಮ್ಮ ದೇಶದ ... ನಮ್ಮ ಫಾರೆಸ್ಟ್ ಕನ್ಸರ್ವೇಟರು ಒಂದು ೧೦೦ ವರ್ಷಗಳ ಯೋಜನೆಯನ್ನು ತಯಾರಿಸಿ ಪ್ರತಿ ವರ್ಷ ಸುಮಾರು ಇಪ್ಪತ್ತು ಲಕ್ಷ ರೂಪಾಯಿ ಆದಾಯ ಬರುವ ವಿವರ ಮಾಡಿರುವರು. ಏಲಕ್ಕಿ ಮಲೆ, 'ಎವರ್ ಗ್ರೀನ್ ಫಾರೆಸ್ಟ್' ಈ ಬಾಬುಗಳಿಂದ ಸುಮಾರು ಒಂದು ಲಕ್ಷ ಆದಾಯ ಬರಲಿದೆ. ಪ್ರತಿ ವರ್ಷ ... ಮಾಡಲಾಗಿದೆ. ಫಾರೆಸ್ಟ್ ಇಲಾಖೆಯು ಕಳೆದ ವರ್ಷ ೩೧ ಆನೆಗಳನ್ನು ಹಿಡಿದು ಸುಮಾರು ೧,೬೪,೦೦೦ ಸಂಪಾದಿಸಿತು. ಈಗ ಆ ಆನೆಯು ಕೆಲಸಕ್ಕಾಗಿ ಟ್ರೈನ್ ...

THE JUBILEE INSURANCE CO., LTD.

One of the very few inthe feild of Insurance that has been declaring BONUS to its policy holders from its very inception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmond Road, Bangalore.

Our Chief Agents:—THE ORIENTAL ENTERPRISES, BANGALORE 1

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೆದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯೂ ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:—ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಸರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,

16 41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

"ದೇಶದ ಹಿತಕ್ಕಾಗಿ ಒಗ್ಗಟ್ಟಿನಿಂದ ದುಡಿಯಿರಿ."

(೧ನೇ ಪುಟದಿಂದ ಮುಂದುವರಿದದ್ದು)

ಯೋಗಿಸಲಾಗುತ್ತಿದೆ.

ವಿದ್ಯಾ-ಇಲಾಖೆಯ ಬಗ್ಗೆ ಹೆಚ್ಚಿನ ಗಮನ ಕೊಡಲಾಗಿದೆ. ಶಾಪೋಕ್ಲು, ಸೋಮವಾರಪೇಟೆಯ ಹೊಸ ಹೈಸ್ಕೂಲುಗಳು ಕೆಲಸ ಪ್ರಾರಂಭಿಸಿವೆ. ಪೊನ್ನಂಪೇಟೆ ಹೈಸ್ಕೂಲು ಪೂರ್ತಿಯಾಗಿದೆ. ಮಡಿಕೇರಿಯಲ್ಲಿ ಕಾಲೇಜು ಕಟ್ಟಡ ಕೆಲಸ ಮುಂದರಿಯುತ್ತಿದೆ. ಬರುವ ಜನವರಿಯಲ್ಲಿ ಕೆಲಸ ಮುಗಿಯುವದೆಂದು ಅಂದಾಜು ಮಾಡಲಗಿದೆ. ಈಗಿನ ದ್ವಿತೀಯ ಸ್ಥಾಯಿ ಕಾಲೇಜನ್ನು ಫಸ್ಟ್‌ಗ್ರೇಡ್ ಕಾಲೇಜಾಗಿ ಮಾಡಲಾಗುವದು. ಪ್ರೌಢ ವಿದ್ಯಾಯೋಜನೆಗೆ ಹೆಚ್ಚಿನ ಗಮನ ಕೊಡಲಾಗುವದು. ಕೂಡಿಗೆಯಲ್ಲಿ ವ್ಯವಸಾಯ ಶಾಲೆಯೊಂದನ್ನು ತೆರೆಯುವ ಏರ್ಪಾಡಾಗಿದೆ. ಇದಕ್ಕಾಗಿ ೧೦೦ ಎಕ್ರೆ ಜಾಗ ಪ್ರತ್ಯೇಕಿಸಲಾಗಿದೆ. ಇದರ ಕಟ್ಟಡ ಕೆಲಸವು ಈ ವರ್ಷ ನಡೆಯುವದು. ಶನಿವಾರಸಂತೆಯಲ್ಲಿ ನೆಯಿಗೆ ಶಾಲೆ, ಮತ್ತು ಸೋಮವಾರಪೇಟೆಯಲ್ಲಿ ಎನ್. ಸಿ. ಸಿ. ದಳ ಈ ವರ್ಷ ಏರ್ಪಡಿಸಲಾಗುವದು.

ವ್ಯವಸಾಯ-ಇಲಾಖೆಯು ದೇಶದ ಜನತೆಯ ಬೆನ್ನೆಲಬಾಗಿದೆ. ಬೆಳೆಯುವವರಿಗೆ ಹೆಚ್ಚಿನ ಸಹಾಯಕ್ಕಾಗಿ ಅನೇಕ ಯೋಜನೆಗಳನ್ನು ಕೈಕೊಳ್ಳಲಾಗಿದೆ. ಕಂಪೋಸ್ಟಿಂಗ್, ಹಸುರುಗೊಬ್ಬರ, ಉತ್ತಮ ಬೀಜ, ವ್ಯವಸಾಯ ಹತ್ಯಾರು, ಪಂಪುಗಳು ಮೊದಲಾದ ರೀತಿಯ ಸಹಾಯದ ಏರ್ಪಾಡಿದೆ. ವ್ಯವಸಾಯಗಾರರ ಹಿತಕ್ಕಾಗಿ ವ್ಯವಸಾಯ ವಿಸ್ತರಣಾ ಯೋಜನೆಯೊಂದನ್ನು ಏರ್ಪಡಿಸಲಾಗಿದೆ. ಇದಕ್ಕೆ ಕೇಂದ್ರ ಸರಕಾರವು ಹಣ ಸಹಾಯ ಮಾಡಲಿದೆ. ಇದು ಕಮ್ಯೂನಿಟಿ ಪ್ರಾಜೆಕ್ಟಿನ (ಸಾಮೂಹಿಕ ಯೋಜನೆ) ಜೊತೆಯಲ್ಲಿ ನಡೆಯುವದು. ಪೊನ್ನಂಪೇಟೆ ಮತ್ತು ಕೂಡಿಗೆಯಲ್ಲಿ ಸರಕಾರ ಫಾರ್ಮುಗಳನ್ನು ತೆರೆಯಲಾಗಿದೆ. ವಿವಿಧರೀತಿಯ ಬತ್ತ ಮೊದಲಾದವುಗಳ ಪರಿಶೀಲನೆ ನಡೆದಿದೆ. ಕಿತ್ತಳೆಯ ಬಗ್ಗೆ ಹೆಚ್ಚಿನ ಎಚ್ಚರಿಕೆ ತೆಗೆಯಲಾಗಿದೆ. ಇದಕ್ಕಾಗಿ ಒಬ್ಬ ಆಫೀಸರೊಬ್ಬರ ನೇಮಕವಾಗಿದೆ. ಪ್ಲಾಂಟಿಂಗ್ ಕಾಯಿಲೆಗೆ ಇನ್ನೂ ಸಮರ್ಪಕವಾದ ಪರಿಹಾರ ಕಂಡುಹಿಡಿಯಲ್ಪಟ್ಟಿರುವದಿಲ್ಲ. ಈ ಇಲಾಖೆಗೆ ಒಂದು ಟ್ರಾಕ್ಟರನ್ನು ಕೊಂಡುಕೊಳ್ಳಲಾಗಿದೆ. ಇದು ಬಾಡಿಗೆಗೆ ರೈತರಿಗೆ ದೊರೆಯುವದು. ಕ್ರಾಪ್ ಕಾಂಪಿಟಿಷನಿನಲ್ಲಿ ಕೊಡಗು ಅಖಿಲ ಭಾರತ ರಿಕಾರ್ಡನ್ನು ಮುರಿದಿದೆ. ಈ ವರ್ಷವೂ ಅದರ ಏರ್ಪಾಡಿದೆ.

ನೀರಾವರಿ-ಯೋಜನೆಗೆ ೨ ಲಕ್ಷ ಖರ್ಚಾಗಿದೆ. ೧೯೫೧ರಲ್ಲಿ ೧೫೨ ಕೆರೆಗಳನ್ನು ೯೭ ಕಟ್ಟೆಗಳನ್ನೂ ಕಟ್ಟಲಾಗಿ ಸುಮಾರು ೬೫೦ ಎಕ್ರೆ ಭೂಮಿಗೆ ಹೆಚ್ಚಿಗೆ ನೀರು ಒದಗಿಸಲಾಯಿತು. ಬಾವಿಗಳಿಗೆ ಪಂಪುಗಳ ಏರ್ಪಾಡು ಮಾಡಲಾಗಿದೆ.

ಮೀನುಗಾರಿಕೆ-ಇದನ್ನು ವೃದ್ಧಿಗೊಳಿಸಲು ಮದ್ರಾಸು ಸರಕಾರದ ಅಧಿಕಾರಿಯೊಬ್ಬರ ಸಹಾಯ ಪಡೆಯಲಾಗಿದೆ. ಇದನ್ನು ಇನ್ನೂ ವಿಸ್ತೃತವಾಗಿ ನಡೆಸಲಾಗುವದು.

ಅದರಂತೆ ಜೇನು ಸಾಕುವ ಕೈಗಾರಿಕೆಯೂ ಸರಕಾರದಿಂದ ನಡೆಯುತ್ತಿದೆ.

ವೆಟರ್‌ನರಿ-ಇಲಾಖೆಗೆ ಹೆಚ್ಚಿನ ಗಮನ ಕೊಡಲಾಗಿದೆ. ಎರಡು ಗ್ರಾಮಾಂತರ ಆಸ್ಪತ್ರೆಗಳನ್ನು ತೆರೆಯಲಾಗಿದೆ. ಇಲಾಖೆಯು ೭೦ ಕುರಿ, ೬ ಗೀರ್, ೧ ಸೈವಾಲ್, ಒಂದು ಹಳ್ಳಿಕಾರ್ ಗೂಳಿಗಳನ್ನೂ ಒಂದು ಮುರ್ರಾ ಕೋಣವನ್ನು ಇಟ್ಟುಕೊಂಡಿದೆ. ವಿಜರಿನ ಮಿಲಿಟರಿ ಫಾರಮಿನಿಂದ ೧೩ ಸೈವಾಲ್ ಗೂಳಿಗಳನ್ನು ಕೊಂಡುಕೊಂಡು ಬೇರೆ ಬೇರೆ ಹಂಚಲಾಗಿದೆ. ಕೂಡಿಗೆಯಲ್ಲಿ ದನಗಳಿಗೆ ಕೃತಕಗರ್ಭದಾನದ ಕೇಂದ್ರವನ್ನು ತೆರೆಯಲಾಗಿದೆ. 'ಕೀ' ಗ್ರಾಮ ಯೋಜನೆಯ ಪ್ರಕಾರ ಕಾಜೂರಿನಲ್ಲಿ ಒಂದು ಕೇಂದ್ರ ತೆರೆಯಲಾಗಿದೆ. ಕೋಳಿ ಸಾಕುವ ವಿಚಾರ ಹೆಚ್ಚಿನ ಗಮನಾರ್ಹವಾಗಿದೆ. ಇದಕ್ಕಾಗಿ ಒಬ್ಬ ಅಧಿಕಾರಿಯನ್ನು ನೇಮಿಸಲಾಗಿದೆ. ಮಡಿಕೇರಿಯಲ್ಲಿರುವ ಡೈರಿ ಫಾರಂನ್ನು ಕೂಡಿಗೆಗೆ ವರ್ಗಾಯಿಸುವ ಏರ್ಪಾಡಾಗಿದೆ. ಕೊಡ್ಲಿಪೇಟೆ, ಬಾಳೆಲೆ, ಮರೆನಾಡುಗಳಲ್ಲಿ ಹೊಸ ಆಸ್ಪತ್ರೆಗಳನ್ನೂ ಅಲುವತ್ತೊಕ್ಲು ಗ್ರಾಮದಲ್ಲಿ ಒಂದು ನೂದರಿ ಕೇಂದ್ರವನ್ನೂ ತೆರೆಯಲಾಗುವದು.

ಸಾರ್ವಜನಿಕ ಆರೋಗ್ಯ-ಇಲಾಖೆಯು ವಾಂಗೆ, ಕದನೂರುಗಳಲ್ಲಿ ಎರಡು ವಾಸ್ಪತ್ರೆಗಳನ್ನು ತೆರೆದಿದೆ. ಮಡಿಕೇರಿ, ವೀರರಾಜಪೇಟೆ ಮತ್ತು ಸೋಮವಾರಪೇಟೆ ಆಸ್ಪತ್ರೆಗಳಲ್ಲಿ ಎಲ್ಲಾ ಕಣ್ಣಿನ ರೋಗಗಳಿಗೆ ಔಷಧಿ ಮಾಡುವ ಏರ್ಪಾಡು ಮಾಡಲಾಗಿದೆ. ಶಾಪೋಕ್ಲಿನಲ್ಲಿ ಒಂದು ಹೆರಿಗೆ ವಾರ್ಡ್, ಸುಂಟಿಕೊಪ್ಪದಲ್ಲಿ ಒಂದು ಇನ್‌ಪೇಶಂಟ್ ವಾರ್ಡ್ ತೆರೆಯಲಾಗಿದೆ. ಕ್ಷಯರೋಗ ಚಿಕಿತ್ಸೆಗೆ ಪ್ರತ್ಯೇಕ ಡಾಕ್ಟರೊಬ್ಬರ ನೇಮಕವಾಗಿದೆ. ಕ್ಷಯರೋಗಿಗಳಿಗಾಗಿ ಪ್ರತ್ಯೇಕ ವಾರ್ಡ ಕಟ್ಟಲಾಗಿದೆ. ಬಿ ಸಿ ಜಿ ವ್ಯಾಕ್ಸಿನೇಶನಿನ ಏರ್ಪಾಡು ಮಾಡಲಾಗುವದು. ಮಲೇರಿಯಾ ನಿವಾರಣಾ ಇಲಾಖೆಯು ಉತ್ತಮ ಕೆಲಸ ಮಾಡಿದೆ. ಹಿಂದೆ ಸಾವಿರಕ್ಕೆ ೨೫೭ ರಂತೆ ಇದ್ದ ಮರಣ ಸಂಖ್ಯೆಯು ಇಂದು ೧೦೦೦ಕ್ಕೆ ೧೯ಕ್ಕೆ ಇಳಿದಿದೆ. ಸಾರ್ವಜನಿಕ ಆರೋಗ್ಯದ ಅಭಿವೃದ್ಧಿಯಾಗಿದೆ. ದೇಶದ ಜನತೆಯ ಸಂಖ್ಯೆಯು ಶೇಕಡ ೩.೦ ರಷ್ಟು ಹೆಚ್ಚಾಗಿದೆ.

ಸಹಕಾರ-ಇಲಾಖೆಯಲ್ಲಿ ಮೂರು ಗ್ರಾಮಾಂತರ ಬ್ಯಾಂಕುಗಳನ್ನು ತೆರೆಯಲಾಗಿದೆ. ಶಾಪೋಕ್ಲಿನಲ್ಲಿ ಶಿಶುವಿಹಾರವೊಂದನ್ನು ತೆರೆಯಲಾಗಿದೆ. ಒಟ್ಟು ಕೊಡಗಿನಲ್ಲಿ ೮ ಶಿಶುವಿಹಾರಗಳಿದ್ದು ೩೦೦ ಮಕ್ಕಳು ವಿದ್ಯೆ ಕಲಿಯುತ್ತಿದ್ದಾರೆ. ೧೯೫೧ರಲ್ಲಿ ೧೪ ಹೊಸ ಸಂಘಗಳ ಸ್ಥಾಪನೆಯಾಗಿದೆ. ಕೊಡಗಿನಲ್ಲಿ ೩೭ ಸಂಘಗಳಿವೆ.

ಗ್ರಾಮಾಂತರ ರಸ್ತೆಗಳ-ಅಭಿವೃದ್ಧಿಗೆ ೧,೪೯,೭೦೦ ರೂಪಾಯಿ ಖರ್ಚಾಗಿದೆ. ಈ ವರ್ಷ ಪೊನ್ನಂಪೇಟೆಯಲ್ಲಿ ಒಂದು ಟೆಲಿಗ್ರಾಫ್ ಆಫೀಸು, ಮಡಿಕೇರಿಯಲ್ಲಿ ಪಬ್ಲಿಕ್ ಟೆಲಿಫೋನ್ ಆಫೀಸು ತೆರೆಯಲಾಗುವದು.

ಸಿವಿಲ್ ವರ್ಕ್ಸ್-ಮಡಿಕೇರಿ-ಸಿದ್ದಾಪುರ, ಮಡಿಕೇರಿ-ಫ್ರೇಜರ್‌ಪೇಟೆ ರಸ್ತೆಗೆ ಟಾರು ಹಾಕಲಾಗಿದೆ. ಮಲೇರಿಯಾ ಕಟ್ಟಡ ಕಟ್ಟಲಾಗಿದೆ. ಶಾಪೋಕ್ಲು, ಪೊನ್ನಂಪೇಟೆ ಸ್ಕೂಲುಕಟ್ಟಡಗಳ ಪೂರ್ತಿಯಾಗಿವೆ. ಈ ವರ್ಷ ಸರಕಾರವು ಮಡಿಕೇರಿ-ಮಂಗಳೂರು, ಮಡಿಕೇರಿ-ಸಂಪಾಜೆ (೪ ಮೈಲುಗಳು) ಸಿದ್ದಾಪುರ-ವೀರರಾಜಪೇಟೆ, ಫ್ರೇಜರ್‌ಪೇಟೆ-ಕೂಡಿಗೆ, ಸಿದ್ದಾಪುರ-ಫ್ರೇಜರ್‌ಪೇಟೆ ರಸ್ತೆಗಳಿಗೆ ಟಾರು ಹಾಕುವದು. ಮಡಿಕೇರಿ ರಸ್ತೆಯನ್ನು ಅಗಲಗೊಳಿಸಲಾಗುವದು. ಪೋಲೀಸ್ ತರಬೇತಿ ಶಾಲಾ ಕಟ್ಟಡ ಕಟ್ಟಲಾಗುವದು. ಕೂಡಿಗೆಯಲ್ಲಿ ಮೂಲ ಶಿಕ್ಷಣ ಕಟ್ಟಡ ಕಟ್ಟಲಾಗುವದು. ಸೋಮವಾರಪೇಟೆ ಆಸ್ಪತ್ರೆಗೆ ಹೊಸ ವಾರ್ಡ, ಮಡಿಕೇರಿಯಲ್ಲಿ ಮಕ್ಕಳ ಆಸ್ಪತ್ರೆ, ಕಾಲೇಜು ಬೋರ್ಡಿಂಗ್‌ಮನೆ, ಕರಿಕೆ ರಸ್ತೆ, ಶೀತರ ಸೇತುವೆ, ಮಡಿಕೇರಿ ಕೊಡ್ಲಿಪೇಟೆ ರಸ್ತೆಗೆ ತಾರು, ಹಾದಿಕೇರಿ, ಭಾಗಮಂಡಲ ಟೌನು ಭಾಗಗಳ ರಸ್ತೆಗೆ ಟಾರು ಹಾಕುವ ಮೊದಲಾದ ಕೆಲಸ ಕೈಕೊಳ್ಳಲಾಗುವದು.

ಎಕ್ಸ್‌ಸರ್ವೀಸ್‌ಮೆನ್‌ಗಳ ಪುನರ್ನಿವೇಶನದ ಬಗ್ಗೆ ಸರಕಾರ ತೊಂದರೆ ತೆಗೆದುಕೊಂಡಿದೆ. ಅಖಿಲ ಮಾಜಿ ಸಿಪಾಯಿಗಳಿಗೆ ಜಾಗ ಕೊಡಲಾಗಿದೆ. ಇವರಿಗಾಗಿ ಒಂದು ಸಹಕಾರ ಸಾಮೂಹಿಕ ವ್ಯವಸಾಯ ಕೇಂದ್ರ ತೆರೆಯುವ ಆಲೋಚನೆ ಇದೆ.

ಈಗಿರುವ ೮ ನಾಡುಗಳನ್ನು ೧೧ ಆಗಿ ವಿಂಗಡಿಸಲಾಗುವುದು. ಸುಂಟಿಕೊಪ್ಪ ಮತ್ತು ಭಾಗಮಂಡಲಗಳು ಪ್ರತ್ಯೇಕ ನಾಡುಗಳಾಗುವವು.

ಕೊಡಗು ಆಹಾರದ ಮಟ್ಟಿಗೆ ಉಳಿತಾಯ ಪ್ರಾಂತವಾಗಿದೆ. ೧೯೫೧ರಲ್ಲಿ ೭೩೦೦ ಟನ್ ಅಕ್ಕಿಯನ್ನು ಕೊಟ್ಟಿದ್ದೇವೆ. ಈ ವರ್ಷ ಈ ವರೆಗೆ ೭೫೦೦ ಟನ್ ಕೊಡಲಾಗಿದೆ. ಇನ್ನು ಸ್ವಲ್ಪ ಕೊಡುವ ಭರವಸೆ ಇದೆ. ಲೇಬರ್ ಸಮಸ್ಯೆಯನ್ನು ಸರಕಾರ ಮರೆತಿಲ್ಲ. ಇದಕ್ಕಾಗಿ ಬೇರೆ ಸಿಬ್ಬಂದಿ ನೇಮಿಸುವ ಆಲೋಚನೆ ಇದೆ. ಅದೇ ರೀತಿ ಹಿಂದುಳಿದ ಪಂಗಡದವರ ಹಿತದ ಬಗ್ಗೆ ಸರಕಾರ ಹೆಚ್ಚಿನ ನಿಗವಹಿಸಿದೆ. ಸರಕಾರವು ಅವರಿಗೆ ಭೂಮಿ, ಮನೆ ಜಾಗ ಕೊಡುವದಲ್ಲದೆ ವಿದ್ಯಾರ್ಥಿಗಳಿಗೆ ವೇತನ, ಬಟ್ಟೆ, ಪುಸ್ತಕ, ಮಧ್ಯಾಹ್ನ ಊಟ ಮೊದಲಾದುವನ್ನು ಕೊಡುತ್ತಿದೆ. ಫಾರೆಸ್ಟ್ ಇಲಾಖೆಯು ಅವರಿಗಾಗಿ ಒಂದು ಧರ್ಮಾಸ್ಪತ್ರೆ ಮತ್ತು ಶಾಲೆಯನ್ನು ಕಲ್ಲಳ್ಳದಲ್ಲಿ ನಡೆಸುತ್ತಿದೆ.

ಸ್ಥಳೀಯ ಸಂಸ್ಥೆ- ಜಿಲ್ಲಾ ಬೋರ್ಡಿನ ಅವಧಿ ಮುಗಿದ ಕಾರಣ ಅ. ಕವಿಯಾಶನವರು ಅಧಿಕಾರ ವಹಿಸಿಕೊಂಡಿರುವರು. ಜಿಲ್ಲಾ ಬೋರ್ಡ್ ತನ್ನ ಮೀಟಿಂಗಿನಲ್ಲಿ ಬೋರ್ಡಿನ ಸರ್ವಜನಾಸ್ಪತ್ರೆಯನ್ನು ಸರಕಾರ ವಹಿಸಿಕೊಳ್ಳಬೇಕೆಂದು ನಿರ್ಧರಿಸಿದೆ. ಈ ವಿಚಾರ ಸರಕಾರದ ಆಲೋಚನೆಯಲ್ಲಿದೆ.

ಪೊನ್ನಂಪೇಟೆ, ಗೋಣಿಕೊಪ್ಪಗಳಲ್ಲಿ ನೋಟಿಫೈಡ್ ಏರಿಯಾ ಏರ್ಪಾಡು ಮಾಡಲಾಗಿದೆ. ಹೆಚ್ಚಿನ ಗ್ರಾಮ ಪಂಚಾಯಿತಿಗಳ ಏರ್ಪಾಡು ಮಾಡಲಾಗುವದು.

ಹಾರಂಗಿ ಮತ್ತು ಲಕ್ಷ್ಮಣತೀರ್ಥ ನೀರಾವರಿ ಯೋಜನೆಗಳ ಮತ್ತು ಬರಪೊಳೆ ಹೈಡ್ರೋ ಎಲೆಕ್ಟ್ರಿಕ್ ಯೋಜನೆಯ ಬಗ್ಗೆ ಸರಕಾರ ಆತುರತೆಯಿಂದಿದೆ. ನೀರಾವರಿ ಯೋಜನೆಗಳ ಬಗ್ಗೆ ಸ್ಪೆಷಲ್ ಇಲಾಖೆಯವರು ಪರಿಶೀಲನೆ ನಡೆಸುವರು. ಹೈಡ್ರೋ ಎಲೆಕ್ಟ್ರಿಕ್ ಯೋಜನೆಯ ಬಗ್ಗೆ ಮದ್ರಾಸ್ ಸರಕಾರದೊಡನೆ ವ್ಯವಹಾರ ನಡೆಸಿದ್ದು ಅವರ ಉತ್ತರವನ್ನು ಕಾಯಲಾಗಿದೆ. ಮೈಸೂರು ನಮಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡಲು ಒಪ್ಪಿರು. ಇದನ್ನು ಇಂಡಿಯಾ ಸರಕಾರದ ಒಪ್ಪಿಗೆಗೆ ಬಿಡಲಾಗಿದೆ. ಈ ಒಪ್ಪಿಗೆ ದೊರೆತೊಡನೆ ಕೆಲಸ ಪ್ರಾರಂಭವಾಗುವುದು.

ಸಾಮೂಹಿಕ ವಿಕಾಸ ಯೋಜನೆ—ಇಂಡಿಯಾ ಸರಕಾರದವರು ಕೊಡಗಿನಲ್ಲಿ ಈ ಯೋಜನೆಯನ್ನು ಕೈಕೊಳ್ಳುವ ನಿರ್ಧಾರ ಮಾಡಿ ಪ್ರಥಮ ಉತ್ತರ ಕೊಡಗಿನಲ್ಲಿ ನೂರು ಗ್ರಾಮಗಳನ್ನು ಆರಿಸಲಾಗಿದೆ. ಇದಕ್ಕೆ ಸುಮಾರು ೨೨ ಲಕ್ಷ ವೆಚ್ಚವಾಗುವದು. ಗ್ರಾಮಾಂತರ ಜನ ಜೀವನದ ತ್ರೀ ಅಂಗದ ಅಭಿವೃದ್ಧಿಯೂ ಈ ಯೋಜನೆಯಲ್ಲಿ ಸಮಾವೇಶವಾಗುವುದು.

ಈ ಸಭೆಯಲ್ಲಿ ಕೇವಲ ಮಂತ್ರಿಗಳ, ಸ್ಪೀಕರರಗಳ ಮತ್ತು ಸದಸ್ಯರ ವೇತನದ ಮಸೂದೆಯನ್ನು ಮಾತ್ರ ಈ ಬಾರಿ ಆಲೋಚಿಸಲಾಗುವುದು.

ಸರಕಾರವು ಯಾವ ಕೆಲಸ ಮಾಡಿದೆ ಮುಂದೆ ಏನು ಮಾಡಲಿದೆಯೆಂಬ ಒಂದು ಸಂಕ್ಷಿಪ್ತ ಚಿತ್ರವನ್ನು ಇಲ್ಲಿ ಕೊಡಿರುವೆನು. ಸಹಕಾರದ ಮುಂದೆ ಪ್ರಮುಖವಾಗಿ ಆರ್ಥಿಕ ತೊಂದರೆ ಇದೆ. ಆದಕ್ಕೆ ಸಹನೆ ಸರಕಾರಗಳನ್ನು ತೋರಿಸಿದರೆ ಆ ಸರಕಾರದ ಜನಪ್ರಿಯ ಮಂತ್ರಿಗಳು ಶಕ್ಯವಾಗುವ ಪ್ರಯತ್ನ ಮಾಡಿ ಜನತೆಯ ಹಿತಕ್ಕೂ, ದೇಶದ ಪ್ರಗತಿಗೂ ತಮ್ಮ ಮಟ್ಟಿಗೆ ದುಡಿಯುವರೆಂಬ ಭರವಸೆಯನ್ನು ಕೊಡುವೆನು.

'ಜೈ ಹಿಂದ್'

ಶ್ರೀ ಕೆ. ಸಿ. ಪೀತಾಂಬರದವರು,
"ಕೊಡಗು" ಏಜೆಂಟರು,
ಕೊಡ್ಲಿಪೇಟೆ.

ಕ್ರಾಂತಿಕಾರಿ ಗಾಂಧೀವಾದಿ.

(ಕರ್ಮವೀರದಿಂದ)

ಗಾಂಧೀಜಿಯವರಿಂದ ಆಕರ್ಷಿತರಾಗಿ ದೇಶಸೇವೆಗಾಗಿ ಜೀವನವನ್ನು ಧಾರೆ ಎರೆದು ತಮ್ಮ ಉಜ್ವಲ ಭವಿಷ್ಯಕ್ಕೆ ಶರಣು ಹೊಡೆದ ಸಾವಿರಗಟ್ಟಲೆ ಜನರಲ್ಲಿ ಶ್ರೀ. ಜೆ. ಸಿ. ಕುಮಾರಪ್ಪನವರೊಬ್ಬರು. ಆವರೆ ರಾಷ್ಟ್ರಪತಿಯ ಪದವನ್ನು ಹತ್ತಿದವರಲ್ಲ; ಇಂದು ರಾಜಕೀಯ ಅಧಿಕಾರದ ಕಡೆಯನ್ನು ಸೇರಿದ್ದಾರೆ. ಹಲವರು ಆ ಪ್ರಯಾಣದ ಸಂಕಟಗಳಿಗಂಜಿ ಕಡಿಮೆ ತ್ಯಾಗದ ಸಾಮಾನ್ಯ ಜೀವನದ ದಾರಿ ಹಿಡಿದಿದ್ದಾರೆ. ಆದರೆ ಕುಮಾರಪ್ಪನವರು ಇಪ್ಪತ್ತು ಮೂರು ವರ್ಷಗಳ ಹಿಂದೆ ಕೈಕೊಂಡ ನಿಷ್ಕಾಮ ಕರ್ಮಪಥವನ್ನು ಇನ್ನೂ ತುಳಿಯುತ್ತಿದ್ದಾರೆ. ಆ ಗಾಂಧೀಜಿ ಹಿಡಿದು ಬಗೆಬಗೆ ರಚನಾತ್ಮಕ ಕಾರ್ಯಕ್ರಮದಲ್ಲಿ ಬಾಳನ್ನು ಸಮಾವೇಶಗೊಳಿಸಿರುವ ಐದಾರು ಜನ ಹಿರಿಯರ ಸಾಲಿನಲ್ಲಿ ಅವರೊಬ್ಬರು. ಕಳೆದ ಜನವರಿಯಲ್ಲಿ ಅವರಿಗೆ ಅರವತ್ತು ತುಂಬಿದಾಗ ಅವರಿಗೆ ಪ್ರತ್ಯರ್ಪಣವಾಗಿ ಒಂದು ಬೃಹದ್ಗ್ರಂಥವನ್ನು ಸರ್ವಸೇವಾ ಸಂಘದ ಕಾರ್ಯಕರ್ತರು ಅರ್ಪಿಸಿದರು. ಅಖಂಡ-ಅಮೂಲ್ಯ ದೇಶಸೇವೆಯಿಂದ ಶ್ರೀ. ಕುಮಾರಪ್ಪನವರು ಎಲ್ಲ ತರದಿಂದ ಈ ಗೌರವಕ್ಕೆ ಸತ್ಪಾತ್ರರಾಗಿದ್ದಾರೆಂದು ನಿಶ್ಚಯದಿಂದ ಹೇಳಬಹುದು. ಅದೇ ಪ್ರಕಾರ ಗ್ರಂಥವಾದರೂ ಶ್ರೀ ಕುಮಾರಪ್ಪನವರ ಜೀವನ ಕಾರ್ಯಗಳನ್ನಷ್ಟೇ ಅಲ್ಲ, ಗಾಂಧೀಜಿ ಕಲ್ಪಿಸಿದ ಭಾರತೀಯ ಆದರ್ಶಜೀವನಕ್ಕೆ ಕೈಗನ್ನಡಿಯಂತಿರುವ ಹಲ ಲೇಖನಗಳಿಂದ ಅತ್ಯಂತ ಸಂಗ್ರಾಹ್ಯವಾಗಿದೆ.

ತಂಜಾವೂರಿನಲ್ಲಿ ಒಂದು ಅನುಕೂಲಸ್ಥ ಕ್ರೈಸ್ತ ಕುಟುಂಬದಲ್ಲಿ ಶ್ರೀ ಜೋಸೆಫ್ ಕಾರ್ನೇಲಿಯಸ್ ಕುಮಾರಪ್ಪನವರು ಒಂಭತ್ತನೆಯ ಮಗನಾಗಿ ಹುಟ್ಟಿದರು. ಅವರಿಗೆ ಇಂಗ್ಲೆಂಡ್ ಅಮೇರಿಕಗಳಲ್ಲಿ ಉಚ್ಚ ಶಿಕ್ಷಣ ದೊರೆಯಿತು. ಅಮೇರಿಕೆಯ ಪ್ರಸಿದ್ಧ ವಾಣಿಜ್ಯ ವಿದ್ಯಾಲಯವಾದ ಡಾವರ್ಸ್ ಕಾಲೇಜ ಆಫ್ ಕಾಮರ್ಸದಲ್ಲಿ ಅಧ್ಯಾಪಕರೂ ಪಾಲುಗಾರರೂ ಆಗಿ ಅವರು ತಮ್ಮ ಬಾಳುವೆಯನ್ನು ಪ್ರಾರಂಭಿಸಿದರು. ಅವರೇ ಹೇಳಿದಂತೆ, ಪಾಶ್ಚಾತ್ಯರಂತೆ ಗಳ ಪರಮಾನ ದೊಡ್ಡ ಉದ್ಯೋಗಸ್ಥ ಮೇಲೆ ವಿವಾಹವಾಗಿ ಸುಖ ಸಂತೋಷದ ಜೀವನ ಪ್ರಾರಂಭಿಸಬೇಕೆಂಬುದು ಅವರ ಇಚ್ಛೆಯಾಗಿತ್ತು. ನಾಲ್ಕಂಕಿಯ ಪಗಾರ ಅವರಿಗೆ ಹೆಚ್ಚು ದೂರದಲ್ಲಿಯೂ ಇರಲಿಲ್ಲ. ಆದರೆ ಅವರು ಇಂದಿಗೂ ಬ್ರಹ್ಮಚಾರಿಗಳಾಗಿ ಉಳಿದಿದ್ದಾರೆ. ಗಾಂಧೀಜಿ ಅವರನ್ನು ಆಕರ್ಷಿಸಿದರು. ಸುಖ-ಆರಾಮದ ಭವಿಷ್ಯಕ್ಕೆ ಶರಣು ಹೊಡೆದು ಅವರು ದರಿದ್ರನಾರಾಯಣನ ಸೇವೆಗೆ ಟೊಂಕ ಕಟ್ಟಿದರು. ಗ್ರಾಮೋದ್ಯೋಗ ಸಂಘದ ಕಾರ್ಯದರ್ಶಿಯಾಗಿ ಮತ್ತು ಮುಂದೆ ಅದರ ಅಧ್ಯಕ್ಷರಾಗಿ ಅದನ್ನು ಕಟ್ಟಿ ಬೆಳೆಸಿದ ಶ್ರೇಯಸ್ಸು ಅವರದೇ. ಈಗ ಅವರು ಸಂಘದಿಂದ ನಿವೃತ್ತರಾಗಿ ವರ್ಧಾದಿಂದ ಕೆಲ ಮೈಲು ದೂರದಲ್ಲಿ ಸೇಲ್ಡೊ ಎಂಬ ಹಳ್ಳಿಯಲ್ಲಿ ಆದರ್ಶಗ್ರಾಮವನ್ನು ಕಟ್ಟುವ ಹಟದಿಂದ ದುಡಿಯುತ್ತಿದ್ದಾರೆ. ಹಠಮಾತ್ರವೇ ಅವರ [illegible] ಸ್ವಪ್ನವನ್ನು ದ [illegible] ಸಫಲಗೊಳಿಸುವರೆಂದು ನಂಬುವಲ್ಲಿ ಆತಂಕವಿಲ್ಲ.

* * *

ಗಾಂಧೀಜಿಯವರ ಶಿಷ್ಯರಲ್ಲಿ ಸ್ವತಂತ್ರವಾದ ನಾಲಿಗೆಗೆ ಪ್ರಸಿದ್ಧರಾದವರೆಂದರೆ ಶ್ರೀ ಜೆ. ಬಿ. ಕೃಪಲಾನಿ ಮತ್ತು ಶ್ರೀ. ಜೆ. ಸಿ. ಕುಮಾರಪ್ಪ. ಶ್ರೀ ಕುಮಾರಪ್ಪನವರಿಗೆ ಯಾವ ರಾಜಕೀಯ ಮಹತ್ವಾಕಾಂಕ್ಷೆಯೂ ಇಲ್ಲ; [illegible] ಟೀಕೆಗಳು ನ್ನೆಲ್ಲ ಉಗ್ರವಾಗಿರುತ್ತವೆ. ಅವರ ಈ ನಿರ್ಭಯ ಮತ್ತು ನಿಷ್ಠುರ ಟೀಕೆಗಳೇ ಅವರನ್ನು ರಾಜಕೀಯದಿಂದ ಸಂಬಂಧವಿಲ್ಲದ ರಚನಾತ್ಮಕ ಕಾರ್ಯಕರ್ತರಾಗಿದ್ದರೂ ಹಲವಾರು ಬ್ರಿಟಿಷ್ ಸೆರೆಮನೆಗಳನ್ನು ತೋರಿಸಿವೆ. ಜಾಗರೂಕತೆ, ಮಧ್ಯಮಾರ್ಗ, ನ್ಯಾಯ ಇತ್ಯಾದಿ ಶಬ್ದಗಳು ಅವರ ಕೋಶದಲ್ಲಿ ಇಲ್ಲವೇ ಇಲ್ಲ. ಉಪ್ಪಿನ ಸತ್ಯಾಗ್ರಹದ ಕಾಲದಲ್ಲಿ ಕೆಲ ದಿನ ಅವರು ಗಾಂಧೀಜಿಯವರ 'ಯಂಗ್ ಇಂಡಿಯಾ' ಸಂಪಾದಕರಾಗಿದ್ದರು. ಆಗ ಬ್ರಿಟಿಷ ಸರಕಾರವು ನಡೆಸಿದ ದೌರ್ಜನ್ಯ ಅತ್ಯಾಚಾರವನ್ನು ಅತ್ಯುಗ್ರ ಶಬ್ದಗಳಲ್ಲಿ ಖಂಡಿಸಿ ಅವರು ಲೇಖನ ಬರೆದರು. ಲೇಖನದ ಕಾವು ಉಗ್ರವಿರಬಾರದೆಂದು [illegible] ಹೇಳಿದರೆ ಸೌಮ್ಯ ಶಬ್ದಗಳನ್ನು ಪ್ರಯೋಗಿಸುವುದು ನನ್ನಿಂದಾಗದೆಂದು ಉತ್ತರ ಬಂತು. ಆಯಮಾದ ಬಂದ ಜಿಲ್ಲಾ ಮೆಜಿಸ್ಟ್ರೇಟರು ಇದಕ್ಕಾಗಿ ಎಚ್ಚರಿಕೆ ಕೊಟ್ಟಾಗ, ನಿಮ್ಮ ಸರಕಾರ ಜನತೆಯ ಹಕ್ಕನ್ನು ಅಪಹರಿಸಿರುವಾಗ ನಿಮ್ಮ ಸರಕಾರದ ಮೇಲೆ ಜನತೆಯು ಅಪ್ರೀತಿಯನ್ನು ನಾನು ಉಂಟುಮಾಡಬೇಕೆಂದೇನಿಲ್ಲ, ನಿಮ್ಮ ಮೇಲೆ ಜನತೆಗೆ ಪ್ರೀತಿಯಿದ್ದರೆ ತಾನೆ?' ಎಂದು ಹೇಳಿದರು. ಎರಡು ವರ್ಷ ಶಿಕ್ಷೆಯಾಯಿತು. ಗಾಂಧೀಜಿಗೆ ಕುಮಾರಪ್ಪನವರ ಈ ಬಿರುಸುತನವನ್ನು ಕುರಿತು ಯಾರೋ ದೂರಿಕೊಂಡಾಗ ಗಾಂಧೀಜಿ ಅಂದದ್ದು, 'ಕುಮಾರಪ್ಪ ಮದ್ರಾಸಿನವರು. ಮದ್ರಾಸು ಮೆಣಸಿನ ಕಾಯಿಯ ರಾಜ್ಯ. ಮೆಣಸಿನ ಕಾಯಿಯಿಂದ ಖಾರವನ್ನು ತೆಗೆದು ಹಾಕುವದು ಅಸಾಧ್ಯ.' ೧೯೩೧ರಲ್ಲಿ ಮತ್ತೆ ಎರಡು ವರ್ಷ ಅವರು ಸೆರೆಮನೆ ಕಂಡರು. ೧೯೪೨ರಲ್ಲಿ 'ಗ್ರಾಮೋದ್ಯೋಗ' ಪತ್ರಿಕೆಯಲ್ಲಿ ಬರೆದ 'ಅನ್ನ ಕೇಳಿದರೆ ಕಲ್ಲು ಕೊಟ್ಟರು' ಎಂಬ ಲೇಖನಕ್ಕಾಗಿ ಪುನಃ ಸೆರೆಮನೆಗೆ ಹೋದರು. ೧೯೪೨ ಆಗಸ್ಟ ಭಾರತವನ್ನು ಸುಲಿಗೆ ಮಾಡಿ ಪಲಾಯನ ಮಾಡುವ ಎತ್ತುಗಡೆಯನ್ನು ಸರಕಾರ ಮಾಡುತ್ತಿದೆಯೆಂದು ಬರೆದಿದ್ದರು. ಜಪಾನದ ಕೈಯಲ್ಲಿ ಹೊಡೆತ ತಿಂದು ಸೋತಿದ್ದ ಬ್ರಿಟಿಷರು ಇದನ್ನು ಸಹಿಸದ್ದರಲ್ಲೇನು ಆಶ್ಚರ್ಯ?

ಕ್ರೈಸ್ತ ಧರ್ಮ ಮತ್ತು ಗಾಂಧೀ ತತ್ವಗಳು ಸಂಬಂಧದಲ್ಲಿ ಅವರಿಗೂ ಭಾರತದ ಶ್ರೇಷ್ಠ ಕ್ರೈಸ್ತ ಧರ್ಮಗುರುಗಳು ಮೆಟ್ರೊಪಾಲಿಟನ್ನರಿಗೂ ಒಮ್ಮೆ ದೊಡ್ಡ ವಿವಾದ ನಡೆಯಿತು. ಆಗ ಅವರ ಅಕ್ಕ ಮೆಟ್ರೊಪಾಲಿಟನ್ನರಂಥ ಗುರುಗಳ ಮೇಲೆ ಇಷ್ಟು ಉಗ್ರಭಾಷೆಯನ್ನು ಪ್ರಯೋಗಿಸಬಾರದೆಂದು ಸೂಚಿಸಿದರು. ಕುಮಾರಪ್ಪನವರ ಉತ್ತರ ನಿಷ್ಠುರವಾಗಿತ್ತು: 'ನಿನಗೆ ಒಂದು ವಸ್ತು ಕಪ್ಪಾಗಿ ಕಂಡರೆ ಅದನ್ನು ಕಪ್ಪೆಂದು ಕರೆಯಬೇಕೇ ಹೊರತು ಕಂದೆಂದಲ್ಲ!'

* * *

ಬ್ರಿಟಿಷರ ವಿರುದ್ಧವೇ ಅವರು ಇಂಥ ತೀಕ್ಷ್ಣ ಪ್ರಹಾರ ಮಾಡುತ್ತಿದ್ದರೆಂದಲ್ಲ. ಸ್ವಾತಂತ್ರ್ಯ ಸಿಕ್ಕ ನಂತರ ನಮ್ಮ ಸರಕಾರಗಳು ಗಾಂಧೀ ತತ್ವಗಳನ್ನೂ ಭಾರತದ ಬಡ ಜನತೆಯನ್ನೂ ಕೈಬಿಟ್ಟು ವಿಶ್ವಾಸಘಾತ ಮಾಡಿವೆಯೆಂದು ಅವರು ನಿರ್ಭಯವಾಗಿ ಆರೋಪಿಸುತ್ತಾರೆ. ದಿಲ್ಲಿಯಲ್ಲಿ ಮಂತ್ರಿಗಳ ವೈಭವ ಜೀವನವನ್ನು ಅವರು, ಬಡಹೊಟ್ಟೆಯ ಹಳ್ಳಿಗರ [illegible] ಹೋಲಿಸಿ 'ರಾಜ್ಯಭೋಗ, ಎಂದು [illegible]. ಮಂತ್ರಿಗಳು ಸಂಶೋಧನ ಸಮಿತಿಗಳನ್ನು ನೇಮಿಸುವದರಲ್ಲಿ ಒಬ್ಬರಿಗೊಬ್ಬರು ಮೇಲಾಟ ನಡೆಸಿದ್ದಾರೆ. ಆದರೆ ಬಡ ಜನತೆ [illegible] ಪ್ರಯೋಜನವನ್ನು ಎಣಿಸಿದರೆ ಏನೂ ಇಲ್ಲ [illegible] ಆದರೆ [illegible] ಕಾಲದ ರಚನೆಯ ಆಸ್ಥೆಯನ್ನು ನೋಡಿ [illegible]. ರಾಜವೈಭವ ಇನ್ನೊಂದೆಡೆ ಹಸಿವು [illegible] ಸಾವು... ಇನ್ನೊಂದೆಡೆ [illegible] ಚಿತ್ರ ಅನರ್ಥವನ್ನು ತಪ್ಪಿಸುವದರೊಳ್ ಅಧಿಕಾರ ಸ್ನೇಹಿಂಸಾತ್ಮಕ ಕ್ರಾಂತಿಯು ಬಡ ಭಾರತದ [illegible]?'

ಭಾರತದ ಒಂದು ಭಾಗದ ಮೇಲೆ [illegible] ಬಡತನ [illegible] ಸಾಕ್ಷ್ಯ [illegible]. ಸಾಧುಸನ್ನ್ಯಾಸ [illegible] ಆಗ ಅವರ [illegible] ಅವರಿಗೆ [illegible] ಕೊಟ್ಟಿದ್ದ ಸನ್ಯಾಸ [illegible] ಪರದೃಷ್ಟಿ [illegible] ಗೆದಿದ್ದಾರೆ? ಮಲಬಾರದ ಭಾ [illegible] ಗಳನ್ನೆಲ್ಲ ಈ ಸಾಧುಸಂತ [illegible] ದು ತೆಗೆದು ಕೊಟ್ಟ [illegible] ಎಂದರು. [illegible] ಉತ್ತರ [illegible] ಆಗ [illegible] ಬಿಳಿ [illegible] ಉಳ್ಳವರಿಗೆ [illegible] ಕ್ರೈಸ್ತರು ಇಷ್ಟರಲ್ಲಿ [illegible] ದೃಷ್ಟಿ [illegible] ಉಲ್ಲೇಖಿಸಿ ಅವರು "ಇಂಥ ಕಾಯಿದೆ ಮಾಡುವ ದೇಶ ನಾಗರಿಕನೆಂದು ಹೇಳಿಕೊಳ್ಳಲು ನನಗೆ ನಾಚಿಕೆಯಾಗುತ್ತದೆ. ಮೇಲೆ ನಮ್ಮದು ರಾಷ್ಟ್ರೀಯ ಸರಕಾರವಂತೆ" ಎಂದು ಉದ್ಗರಿಸಿದರು. ಇಂಥಾ ಭಯಂಕರ ಆರೋಪಗಳನ್ನು ಮಾಡುವವರ ಮೇಲೆ ಅಳುವವರು ಕುಪಿತರಾಗದಿದ್ದಾರೇ? ಕೆಲ ಪ್ರಾಂತಿಕ ಸರಕಾರಗಳು ಈ ಉಗ್ರ ಗಾಂಧೀವಾದಿಯನ್ನು ಸೆರೆಮನೆಗೆ ಕಳಿಸುವ ವಿಚಾರ ಕೂಡ ಮಾಡಿದವಂತೆ. ಕೇಂದ್ರ ಸರಕಾರದ ಒಬ್ಬ ಮಂತ್ರಿ ಕುಮಾರಪ್ಪನವರನ್ನು ಎಷ್ಟು ಕಾಲ ಹೀಗೆ ಸಾಗಲು ಬಿಡಬೇಕೆಂದು ವರ್ಧಾದಲ್ಲಿಯ ಅವರ ಗೆಳೆಯರಿಗೆ ಕೇಳಿದರು. ಆದರೆ ಯಾರೋ ಅವರನ್ನು ಈ ವರೆಗೆ ಯಾರೂ ಮುಟ್ಟಿಲ್ಲ.

ವಸ್ತುಸ್ಥಿತಿಯೆಂದರೆ ಕುಮಾರಪ್ಪನವರು ಅಪ್ಪಟ ಕ್ರಾಂತಿಕಾರಿ. ಗಾಂಧೀಜಿ ಅವರನ್ನು ತಮ್ಮ ಅಹಿಂಸೆಯ ಬಲೆಯಲ್ಲಿ ಹಿಡಿಯದಿರುತ್ತಿದ್ದರೆ ಅವರು ಹಿಂಸಾತ್ಮಕ ಕ್ರಾಂತಿಕಾರರೇ ಆಗುತ್ತಿದ್ದರೇನೋ. ಅವು ನಿಷ್ಕಲಂಕ ಶುದ್ಧ ಚಾರಿತ್ರ್ಯರಾಗಿರುವುದರಿಂದ ಅವರು ನಿರ್ಭಯವಾಗಿ ಎದುರಾಳಿಯನ್ನು ಖಂಡಿಸುತ್ತಾರೆ. ಧೀಮಂತನೆನಿಸಿ ಅವರಿಗೂ ಅರ್ಧಮರ್ಧ ಕೆಲಸ ಹಿಡಿಸದು. ಗಾಂಧೀವಾದದ ಕೆಲಸ ಕೊಟ್ಟ ಮೇಲೆ ಗಾಂಧೀ ತತ್ವವನ್ನು ಪೂರ್ಣ ಅನುಸರಿಸುವವರು ಅವರು. ಅದರಲ್ಲಿ ಹಿಂದೆ ಮುಂದೆ ನೋಡುವವರ ಮೇಲೆ ದಯೆಗೆ ಆ ವಕಾಶವಿಲ್ಲ. "ಕುಮಾರಪ್ಪನವರಿಗೆ ಇಂಗ್ಲಿಷಿನ ಅರ್ಧದಷ್ಟು ಓದೇ ಬರುತ್ತಿದ್ದರೆ ಅವರು ದೇಶದಲ್ಲಿ ಎಂಥಾ ಜ್ವಾಲೆಯು ಬ್ಬಿಸಬಿಡುತ್ತಿದ್ದರು" ಎಂದು ಕಾಕಾ ಕಾಲೇಲಕರರು ಹೇಳುವದುಂಟಲ್ಲ.

* * *

ಶ್ರೀ ಕುಮಾರಪ್ಪನವರ ಚರಿತ್ರದ ಈ ಮುಖ ಅವರನ್ನು ಅನೇಕರಿಗೆ ಅಪ್ರಿಯರನ್ನಾಗಿ ಮಾಡಿದ್ದರೂ ಅವರ ವ್ಯಕ್ತಿತ್ವದ ಇತರ ಮುಖಗಳು ತುಲ್ಯ ಜನಕವಾಗಿವೆ. ಭಾರತದ ಆರ್ಥಿಕ [illegible] ಬಗ್ಗೆ ಅದರಗಿರುವ ಮೌಲಿಕ ಅವರನ್ನು ಅಹಿಂಸಾತ್ಮಕ ಸಮಾಜಕ್ಕಾಗಿ ಹಿಂಸಾತ್ಮಕ ಪದ್ಧತಿಯನ್ನು ಪ್ರಯೋಗಿಸುವಂತೆ ಮಾಡಿದೆ. [illegible] ದ ಒಕ್ಕಲಿಗರ ಬಳಲುತ್ತಿರುವ ಅವರು ಬಡವರ ಹಿತಕ್ಕೆಂದು ತಮ್ಮ ಜೀವಮಾನವನ್ನು ಕೆಲಸಕ್ಕಾಗಿ ದೇಶದ ಮೂಲೆಯಿಂದ ಮೂಲೆಗೆ ಸಂದಿಗೊಂದಿಗಳಿಗೆ ಓಡಾಡುತ್ತಾರೆ. ಗ್ರಾಮೋದ್ಧಾರದ ಕಾರ್ಯದಲ್ಲಿ ನೆರವು ಬೇಡುವವರಿಗೆಲ್ಲ ಅದನ್ನು ನೀಡುತ್ತಾರೆ. ಗಾಂಧೀವಾದವನ್ನು ಶಾಸ್ತ್ರೀಯ ತಳಹದಿಯ ಮೇಲೆ ನಿಲ್ಲಿಸಬಲ್ಲವರೇ ಮುಖ್ಯ ಕಾರಣರು. ಅವರು ಸ್ವತಂತ್ರ ಯುಕ್ತ ಶಾಸ್ತ್ರ ಅರ್ಥಶಾಸ್ತ್ರದಲ್ಲಿ ಪಾರಂಗತರು. ಅದರಿಂದಲೇ ಅವರು ಅರ್ಥಶಾಸ್ತ್ರದ ತತ್ವಗಳನ್ನೆಲ್ಲ ಬದಲಿಸಿದ ಯುದ್ಧಕ್ಕೆ ಅದೇ ಕಾರಣವೆಂದು ತೋರಿಸಿ ಕೊಟ್ಟಿದ್ದಾರೆ. ಅವರು ಬರೆದ ಅನೇಕ ಪುಸ್ತಕಗಳಲ್ಲಿ ಗಾಂಧೀಜಿ ಹೇಳಿದ ಆರ್ಥಿಕ ಪದ್ಧತಿಯೊಂದೇ ಜಗತ್ತಿನ ಶಾಂತಿಗೆ ಕಾರಣವೆಂದು ಸಿದ್ಧಪಡಿಸಿದ್ದಾರೆ. ಗ್ರಾಮಗಳ ಸ್ಥಿತಿ, ಗ್ರಾಮೋದ್ಯೋಗಗಳು, ಗ್ರಾಮ ಸುಧಾರಣೆ ಮುಂತಾದ ವಿಷಯಗಳಲ್ಲಿ ಅವರು ಅಭ್ಯಾಸ ಮಾಡಿ ತಯಾರಿಸಿದ ವರದಿಗಳು ಇಂದಿಗೂ ಮಾನ್ಯವಾಗಿವೆ.

* * *

ಕುಮಾರಪ್ಪನವರ [illegible] ಜೀವನದಲ್ಲಿ ಅತ್ಯಂತ [illegible]. ಮಾಗನವಾಡಿಯಲ್ಲಿ [illegible] ಅವರ [illegible] ಜೀವನದ ಜೀವಂತ [illegible] ಹಾಗಿದೆ. ಅಲ್ಲಿ ಪವಿತ್ರ ಕೈಲದ ದೀಪದ ಬೆಳಕಿನಲ್ಲಿ ಅಭ್ಯಾಸ ಮಾಡುತ್ತಿರುತ್ತಾರೆ. ಅವರು ಅತ್ಯಂತ ನಿಯಮದಿಂದಿರುತ್ತಾರೆ. ಅವರೆಂದೂ ತಡವಾಗಿ ಸಭೆ ಸಮ್ಮೇಳನಗಳಿಗೆ ಹೋಗುವದಿಲ್ಲ. ಸಮಯ ತಪ್ಪಿ ಬಂದವರಿಗೆ ಭೆಟ್ಟಿಯನ್ನು ಕೊಡುವದಿಲ್ಲ. ಅವರ ಈ ಸಮಯ ಧಾರಕತೆಯ ಪಟ್ಟು ತಿಂದವರಲ್ಲಿ ಗಾಂಧೀಜಿಯವರೂ ಒಬ್ಬರು!

ಗಾಂಧೀಜಿಯ ತತ್ವಗಳ ನಿಜವಾದ ಕ್ರೈಸ್ತ ಧರ್ಮದ ತಿರುಳೆಂದು ಬಗೆಯುವ ಶ್ರೀ ಕುಮಾರಪ್ಪನವರು ದೀರ್ಘ ಕಾಲ ನಮ್ಮ ಗ್ರಾಮೋದ್ಧಾರಕ್ಕಾಗಿ ದುಡಿಯಲು ಬಾಳಲಿ.

ಕೊಡಗು

ತಾ. ೧೮-೭-೧೯೫೨ನೇ ಶುಕ್ರವಾರ

ಜನಸರಕಾರದ ಪ್ರಥಮ ಬಡ್ಜೆಟ್ಟು.

ಕೊಡಗಿನಲ್ಲಿ ಜನತೆಗೆ ಜವಾಬ್ದಾರರಾಗಿರುವ ಸರಕಾರವು ರಚಿತವಾಗಿ ನಾಲ್ಕು ತಿಂಗಳುಗಳಾದವು. ಈ ಜನಸರಕಾರವು ತನ್ನ ಪ್ರಥಮ ಬಡ್ಜೆಟ್ಟನ್ನು ತಯಾರಿಸಿ ಜನತೆಯ ಮುಂದಿಟ್ಟಿದೆ. ಈ ಬಡ್ಜೆಟ್ಟು ಉಳಿತಾಯ ಬಡ್ಜೆಟ್ಟಾಗಿದೆ. ಉಳಿತಾಯವು ಕೇವಲ ೨೮ ಸಾವಿರವಾದರೂ ಮುಖ್ಯ ಮಂತ್ರಿಯವರು ಹೇಳಿದಂತೆ ಇದು ಸಮತೂಗಲ್ಪಟ್ಟ ಬಡ್ಜೆಟ್ಟಾಗಿದೆ. ಸರ್ಕಾರಕ್ಕೆ ಈ ವರ್ಷ ರೂ. ೯೦,೧೧೦೦೦ ಆದಾಯ ಬರುವದೆಂದೂ ರೂ. ೮೯,೮೩,೦೦೦ ಖರ್ಚಾಗಬಹುದೆಂದೂ ಅಂದಾಜು ಮಾಡಲಾಗಿದೆ. ಕೊಡಗಿನ ಜನಸರಕಾರದ ಪ್ರಥಮ ಬಡ್ಜೆಟ್ಟಿನಲ್ಲಿ ವಿವಿಧ ಕೆಲಸಗಳಿಗೆ ಸಾಕಷ್ಟು ಹಣವಿಡಲಾಗಿದೆ. ಈ ಕೆಲಸಗಳೆಲ್ಲಾ ಈ ಬಡ್ಜೆಟ್ ವರ್ಷದಲ್ಲೇ ಆಗುವಂತೆ ನೋಡಬೇಕಾದುದು ಅವಶ್ಯವಿದೆ.

ಈ ವರ್ಷ ಸರಕಾರಕ್ಕೆ ಬರುವ ಆದಾಯದ ಬಾಬುಗಳಲ್ಲಿ ಫಾರೆಸ್ಟ್ ಇಲಾಖೆಯಿಂದ ರೂ. ೪೩ ಲಕ್ಷ ಬರುವದೆಂದು ಅಂದಾಜು ಮಾಡಿದೆ. ಚೀಫ್ ಕಮಿಷನರು ಈ ವಿಚಾರದಲ್ಲಿ ಭಾಷಣ ಮಾಡುತ್ತ ಫಾರೆಸ್ಟ್ ಇಲಾಖೆಯು ನೂರು ವರ್ಷಗಳ ಕಾರ್ಯಕ್ರಮವೊಂದನ್ನು ಏರ್ಪಡಿಸಿ ಪ್ರತಿ ವರ್ಷ ಸರಕಾರಕ್ಕೆ ಸುಮಾರು ೩೯ವರೆ ಲಕ್ಷ ಆದಾಯ ಬರುವಂತೆ ಮಾಡಿರುವದೆಂದಿರುವರು. ಈ ಏರ್ಪಾಡು ಪ್ರಕಾರ ಪ್ರತಿ ವರ್ಷ ಸುಮಾರು ಒಂದು ಚದರ ಮೈಲು ಯಾ ೭೫೦ ಏಕರು ಸ್ಥಳದ ಟಿಂಬರು ಕಡಿದು ಮಾರಾಟ ಮಾಡಲಾಗುವದಂತೆ. ಟಿಂಬರು ಕಡಿದ ಭಾಗದಲ್ಲಿ ಬೆಲೆಯುಳ್ಳ ತೇಗ ನೆಡಲಾಗುವದಂತೆ. ಈ ರೀತಿ ಕೊಡಗಿನ ಫಾರೆಸ್ಟ್ ಉತ್ಪತ್ತಿಯನ್ನು ಹೆಚ್ಚಿಸುವ ಏರ್ಪಾಡು ನಿಜವಾಗಿಯೂ ಭವಿಷ್ಯದ ದೃಷ್ಟಿಯಿಂದ ಹಿತವಲ್ಲವೆನ್ನಬೇಕಿದೆ. ಕೊಡಗಿನ ಸರಕಾರದಲ್ಲಿ ಹಣವಿಲ್ಲದೆ ಬೇರೆ ಅತ್ಯವಶ್ಯ ಖರ್ಚಿಗೆ ಹಣದ ತೊಂದರೆ ಇದ್ದು ಈ ರೀತಿ ಮಾಡಿದ್ದರೆ ಒಪ್ಪಬಹುದಿತ್ತು. ಆದರೆ ಇಂದು ಅಂಥಾ ಪರಿಸ್ಥಿತಿ ಇಲ್ಲ. ಟಿಂಬರಿನ ಬೆಲೆಯೂ ಕೂಡ ಆಕರ್ಷಕವಾಗಿಲ್ಲ. ಹಾಗಿರುವಾಗ ಈ ರೀತಿಯ ಫಾರೆಸ್ಟ್ ಸಂಪತ್ತಿನ ಶೋಷಣೆಯು ಯೋಗ್ಯವಲ್ಲ. ಪ್ರತಿ ವರ್ಷ ೭೫೦ ಏಕರೆ ಸ್ಥಳದಲ್ಲಿ ರೀಜನರೇಷನ್ ಮಾಡಬೇಕಾದರೆ ಕಷ್ಟದ ಕೆಲಸ. ೩ ವರ್ಷಗಳ ವರೆಗೆ ನೆಟ್ಟ ತೇಗದ ಆರೈಕೆ ನಡೆಯಬೇಕಿರುವದರಿಂದ ಮೂರನೇ ವರುಷದಲ್ಲಿ ಸುಮಾರು ೨೨೦೦ ಏಕರೆ ಸ್ಥಳದ ಮೇಲ್ವಿಚಾರ ನಡೆಸಲು ಫಾರೆಸ್ಟ್ ಕೆಲಸಗಾರರ ಸಂಖ್ಯೆ ಇಂದಿಗಿಂಥಾ ನಾಲ್ಕು ಪಟ್ಟು ಹೆಚ್ಚಾಗಬೇಕಾಗುವದು. ದೇಶದ ಹಿತದ ದೃಷ್ಟಿಯಿಂದ ಈ ಏರ್ಪಾಡು ಒಳ್ಳೆಯದೆಂದು ತೋರುವದಿಲ್ಲ. ಮೇಲಾಗಿ ಪ್ರತಿ ವರ್ಷ ೭೫೦ ಏಕರೆಗಳಂತೆ ಕೊಡಗಿನ ಫಾರೆಸ್ಟನ್ನೆಲ್ಲಾ ತೇಗದ ಕಾಡಾಗಿ ಮಾಡುವ ಅಭಿಲಾಷೆಯೂ ಸಮಂಜಸವಲ್ಲ.

ವ್ಯವಸಾಯ ಆದಾಯ ತೆರಿಗೆಯಿಂದ ಹತ್ತು ಲಕ್ಷ ಬರುವದೆಂದೂ, ಎಕ್ಸೈಸ್ ಉತ್ಪತ್ತಿಯಿಂದ ಸುಮಾರು ಹತ್ತು ಲಕ್ಷ ಬರುವದೆಂದೂ ಅಂದಾಜು ಮಾಡಲಾಗಿದೆ. ಕಳೆದ ವರ್ಷ ಪ್ರತಿಯೊಬ್ಬನಿಗೆ ತಿಂಗಳಿಗೆ ಒಂದು ಕುಪ್ಪಿ ಸಾರಾಯಿ ಕೊಡುತಿದ್ದು ಕುಪ್ಪಿಗೆ ರೂ. ೪ ಬೆಲೆ ಇಟ್ಟಿದ್ದು ಇದರಿಂದ ಸರಕಾರದ ಉತ್ಪತ್ತಿ ಹತ್ತು ಲಕ್ಷದ ವರೆಗೆ ಬಂದಿದೆ. ಈ ವರ್ಷ ಪ್ರತಿಯೊಬ್ಬನಿಗೆ ಎರಡು ಕುಪ್ಪಿ ಸಾರಾಯಿಯನ್ನು ಕೊಡುವ ವ್ಯವಸ್ಥೆ ಮಾಡಿರುವದಲ್ಲದೆ ಸಾರಾಯಿಯ ಬೆಲೆಯನ್ನು ಒಂದು ರೂಪಾಯಿ ಹೆಚ್ಚಿಗೆ ಏರಿಸಿರುವದರಿಂದ ಈ ಬಾಬಿನ ಆದಾಯವು ಹೆಚ್ಚಾಗುವುದರಲ್ಲಿ ಸಂಶಯವಿಲ್ಲ. ಸೆಟ್ಲ್‌ಮೆಂಟ್ ಆದ ಕಡೆ ಹೊಸ ದರದ ಭೂ ಕಂದಾಯವನ್ನು ಈ ವರ್ಷ ಜಾರಿಯಲ್ಲಿ ತರುವದರಿಂದ ಈ ಬಾಬಿನಲ್ಲೂ ಆದಾಯ ಹೆಚ್ಚಾಗಬಹುದು.

ಖರ್ಚಿನ ಬಾಬುಗಳಲ್ಲಿ ಪ್ರಾಮುಖ್ಯವಾಗಿ ಆಡಳಿತ ಖರ್ಚಿನ ಬಗ್ಗೆ ಒಂದೆರಡು ವಿಚಾರ ಬರೆಯಬೇಕಾಗಿದೆ. ಕಳೆದ ವರ್ಷ ಸುಮಾರು ಎರಡುಮುಕ್ಕಾಲು ಲಕ್ಷವಿದ್ದ ಈ ಖರ್ಚು ಈ ವರ್ಷ ೫¼ ಲಕ್ಷವಾಗಬಹುದೆಂದು ಅಂದಾಜು ಮಾಡಲಾಗಿದೆ. ಮಂತ್ರಿ ಮಂಡಳದ ಮತ್ತು ಆಡಳಿತದ ಹೊಸ ವ್ಯವಸ್ಥೆಯ ಕಾರಣ ಈ ಖರ್ಚು ಹೆಚ್ಚಾಗಿದೆಯೆಂಬುದನ್ನು ಒಪ್ಪಬಹುದಾದರೂ ಆಡಳಿತದಲ್ಲಿ ಅನಾವಶ್ಯದ ಅನೇಕ ಹುದ್ದೆಗಳಿವೆ. ಉದಾಹರಣೆಗೆ ಚೀಫ್ ಕಮಿಷನರಿಗೆ ಒಬ್ಬ ಸೆಕ್ರೆಟರಿಯ ಅವಶ್ಯಕತೆ ನಿಜವಾಗಿಯೂ ಇರಲಿಲ್ಲ. ಈ ರೀತಿಯ ಅನಾವಶ್ಯದ ಹುದ್ದೆಗಳನ್ನು ಪರಿಶೀಲಿಸಿ ತೆಗೆದು ಹಾಕಬೇಕಾದುದು ಕರ್ತವ್ಯವಿದೆ.

ಕೊಡಗಿನಲ್ಲಿ ಸಾರ್ವಜನಿಕ ಆರೋಗ್ಯ ಯಾ ವೆಟರಿನರಿ ಇಲಾಖೆಗಳಿಗೆ ಖರ್ಚಾಗುವದಕ್ಕಿಂಥಲೂ ಹೆಚ್ಚಾಗಿ ಪೋಲೀಸ್ ಇಲಾಖೆಗೆ ಖರ್ಚಾಗುತ್ತಿರುವದು ಯೋಗ್ಯವಲ್ಲ. ಈ ಇಲಾಖೆಗೆ ಮೂರೂಕಾಲು ಲಕ್ಷ ರೂಪಾಯಿ ವೆಚ್ಚವಾಗುವದು ಹಿತಕರವಲ್ಲ. ಈ ಇಲಾಖೆಯಲ್ಲೂ ತೀವ್ರ ಖೋತೆಯ ಏರ್ಪಾಡು ಮಾಡಬೇಕಿದೆ.

ಎಕ್ಸೈಸ್ ಇಲಾಖೆಗೆ ಸುಮಾರು ೨¾ ಲಕ್ಷ ವೆಚ್ಚವಾದರೂ ಕೂಡ ಕಪ್ಪುಸಂತೆಯ ಸಾರಾಯಿ ಮಾರಾಟ ಮತ್ತು ಮನೆ ಸಾರಾಯಿ ಕಾಸುವುದು ಕಡಿಮೆಯಾಗಿಲ್ಲ. ಈ ಇಲಾಖೆಯವರು ದಕ್ಷತೆಯಿಂದ ಕೆಲಸ ಮಾಡದಿದ್ದರೆ ಇದಕ್ಕಾಗಿ ಖರ್ಚಾಗುತ್ತಿರುವ ಇಷ್ಟು ದೊಡ್ಡ ಹಣಕ್ಕೆ ಸರಿಯಾದ ಪ್ರತಿಫಲ ದೇಶೀಯರಿಗೆ ದೊರೆಯುತ್ತಿಲ್ಲವೆಂದು ಹೇಳಬೇಕಾಗುತ್ತದೆ. ಅದೇ ರೀತಿ ವ್ಯವಸಾಯ ಇಲಾಖೆಗೆ ಈ ವರೆಗೆ ಸುಮಾರು ೯ ಲಕ್ಷ ರೂ. ವೆಚ್ಚವಾಗುತಿದ್ದರೂ, ಈ ವರ್ಷ ಈ ಇಲಾಖೆಗಾಗಿ ೧೨ ಲಕ್ಷ ಹಣವಿರಿಸಿದ್ದಾರೆ. ಈ ಇಲಾಖೆಯು ಇನ್ನೂ ದಕ್ಷತೆ ವಹಿಸದಿದ್ದರೆ ಬಡ ರೈತನಿಗೆ ಹೆಚ್ಚಿನ ಲಾಭವಾಗುವಂತಿಲ್ಲ.

ಈ ವರ್ಷದ ಬಡ್ಜೆಟ್ಟಿನಲ್ಲಿ ಕಂಡು ಬರುವ ಶುಭ ಲಕ್ಷಣಗಳೆಂದರೆ ವಿದ್ಯಾ ಇಲಾಖೆಗೆ ಇರಿಸಿದ ೧೨ ಲಕ್ಷ ರೂಪಾಯಿ, ಕೈ ಮಗ್ಗ ಕೈಗಾರಿಕೆಗೆ ರೂ. ೨೦,೦೦೦ ಗ್ರಾಮಾಂತರ ರಸ್ತೆಗಳಿಗಾಗಿ ಇರಿಸಿದ ೧½ ಲಕ್ಷ ರೂಪಾಯಿಗಳು. ಈ ಹಣವು ಯೋಗ್ಯ ರೀತಿ ಖರ್ಚಾದರೆ ಜನತೆಗೆ ಹಲವು ಹಿತಕಾರಕ ಕೆಲಸಗಳಾಗುವದರಲ್ಲಿ ಸಂಶಯವಿಲ್ಲ. ಈ ವರ್ಷ ಹೊಸದಾಗಿ 'ಎಗ್ರಿಕಲ್ಚರಲ್ ಎಕ್ಸ್‌ಟೆನ್ಶನ್ ಸರ್ವಿಸ್' ಯೋಜನೆಯೊಂದನ್ನು ಕೈಗೊಳ್ಳುವ ಸೂಚನೆಯೂ ಇದೆ. ಇಂಡಿಯಾದ ವ್ಯವಸಾಯ ಪರಿಶೋಧನಾ ಕೌನ್ಸಿಲಿನವರು ಇದಕ್ಕೆ ಸುಮಾರು ರೂ. ೩೯,೦೦೦ ಸಹಾಯ ಮಾಡುವರೆಂದಿದೆ. ಈ ಯೋಜನೆಯ ಗುರಿಯು ಸ್ಪಷ್ಟವಾಗಿ ತಿಳಿದು ಬರದಿದ್ದರೂ ಬಡ ರೈತನ ಹಿತಕ್ಕೆಂದಿರುವ ಈ ಯೋಜನೆಯಿಂದ ಸಹಾಯವಾಗಲೆಂದು ಹಾರೈಸುತ್ತೇವೆ.

'ಕೊಡಗಿಗೆ ವಿದ್ಯುಚ್ಛಕ್ತಿಯನ್ನು ತರಲಾಗುವದು. ಮೈಸೂರಿನವರು ಒಪ್ಪಿರುವರು' ಎಂದು ಆಗಾಗ್ಗೆ ಹೇಳುತಿದ್ದರೂ ಅದಕ್ಕಾಗಿ ಬಡ್ಜೆಟ್ಟಿನಲ್ಲಿ ಹಣವಿಟ್ಟಿರುವದಿಲ್ಲ. ಸಿವಿಲ್ ವರ್ಕ್ಸ್ ಎಂದು ರೂ. ೧೭ ಲಕ್ಷವಿಟ್ಟಿದ್ದರೂ ಬೇತರಿ ಸೇತುವೆಗೆ ಹಣವಿಟ್ಟಂತೆ ತೋರುವದಿಲ್ಲ. ಹೇಗೂ ಜನಸರಕಾರವು ದೇಶದ ಮುಂದಿಟ್ಟ ಈ ಪ್ರಥಮ ಬಡ್ಜೆಟ್ಟು ಆಶಾದಾಯಕವಾಗಿದೆ. ಇದರಲ್ಲಿ ಸೂಚಿತವಾಗಿರುವ ಕೆಲಸಗಳನ್ನೆಲ್ಲಾ ಇದೇ ವರ್ಷ ಪೂರ್ತಿಗೊಳಿಸಿ ನಾಡಿನ ಅಭಿವೃದ್ಧಿಗೆ ಅಧಿಕಾರ ಹೊತ್ತವರು ದುಡಿಯಲೆಂದೂ, ಅದಕ್ಕೆ ಸಾರ್ವಜನಿಕರು ಬೆಂಬಲವೀಯಲೆಂದೂ ಆಶಿಸುತ್ತೇವೆ.

ವರ್ತಮಾನ.

ವಿದ್ಯಾ ಮಂತ್ರಿ ಮಲ್ಲಪ್ಪನವರು ಶಾಸನ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರವೀಯುತ್ತಾ ಕಾಲೇಜು ಕಟ್ಟಡವು ೧೯೫೩ನೇ ಏಪ್ರಿಲ್‌ನಲ್ಲಿ ಪೂರ್ತಿಯಾಗುವದೆಂದೂ, ಆ ವರ್ಷವೇ ಬಿ. ಎ. ಮತ್ತು ಬಿ. ಎಸ್‌ಸಿ. ತರಗತಿಗಳನ್ನು ತೆರೆಯಲಾಗುವದೆಂದೂ ಹೇಳಿದರು.

ವಿದ್ಯಾ ಮಂತ್ರಿಗಳು ಮತ್ತೊಂದು ಪ್ರಶ್ನೆಗೆ ಉತ್ತರವೀಯುತ್ತಾ ಸರಕಾರವು ಸೋಮವಾರಪೇಟೆ ಹೈಸ್ಕೂಲು ಕಟ್ಟಡಕ್ಕೆ ರೂ. ೨,೬೬,೨೦೦ ಗಳನ್ನೂ, ನಾಪೋಕ್ಲು ಹೈಸ್ಕೂಲು ಕಟ್ಟಡಕ್ಕೆ ರೂ. ೨,೯೫,೪೦೦ ಗಳನ್ನೂ, ಪೊನ್ನಂಪೇಟೆ ಹೈಸ್ಕೂಲಿಗೆ ರೂ. ೨,೩೨,೧೦೦ ಗಳನ್ನೂ ಮಂಜೂರ್ ಮಾಡಿತ್ತೆಂದೂ, ಸೋಮವಾರಪೇಟೆಗೆ ರೂ. ೨,೭೪,೯೦೯-೧೦ ೦ಯೂ, ನಾಪೋಕ್ಲಿಗೆ ೨,೫೨,೨೨೨-೯-೮ಯೂ ಮತ್ತು ಪೊನ್ನಂಪೇಟೆಗೆ ೧,೯೨,೭೭೦-೫-೦ ಯೂ ಖರ್ಚಾಗಿದೆಯೆಂದೂ ಹೇಳಿದರು.

ಹಾಕತ್ತೂರು ಶಾಲೆಯ ಅಧ್ಯಾಪಕರಾದ ಶ್ರೀ ಕೆ. ಕೆ. ಪೆಮ್ಮಯ್ಯನವರು ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ಮಂತ್ರಿಯಾಗಿ ಆರಿಸಲ್ಪಟ್ಟಿರುವ ಶ್ರೀ ಕೆ. ಮಲ್ಲಪ್ಪನವರು ರಾಜಿನಾಮೆ ಕೊಟ್ಟ ಮಡಿಕೇರಿ ಮುನ್ಸಿಪಾಲಿಟಿ ಕಮಿಟಿಯ ಸ್ಥಳಕ್ಕೆ ಚುನಾವಣೆಯು ಆಗಸ್ಟ್ ತಾ. ೧೯ ರಲ್ಲಿ ನಡೆಯುವದೆಂದೂ ಉಮೇದುವಾರರಾಗಲಿಚ್ಛಿಸುವವರು ನೇಮಕ ಪತ್ರವನ್ನು ತಾ. ೨೧-೭-೫೨ರಲ್ಲಿ ಸಲ್ಲಿಸಬೇಕೆಂದೂ ತಿಳಿದು ಬಂದಿದೆ.

ಸೋಮವಾರಪೇಟೆಯಿಂದ ಬಾಣಾವರ ಮತ್ತು ಶನಿವಾರಸಂತೆಯ ಮಾರ್ಗವಾಗಿ ಹಾಸನಕ್ಕೆ ಒಂದು, ಮಡಿಕೇರಿಯಿಂದ ಕೊಡ್ಲಿಪೇಟೆ, ಸಕಲೇಶಪುರ ಮಾರ್ಗವಾಗಿ ಚಿಕ್ಕಮಗಳೂರಿಗೆ ಮತ್ತೊಂದು ಮತ್ತು ಸಿದ್ದಾಪುರದಿಂದ ಮಡಿಕೇರಿ ಮಾರ್ಗವಾಗಿ ಸಂಪಾಜೆಗೆ ಇನ್ನೊಂದು ಹೀಗೆ ಮೂರು ಬಸ್ ಲೈನುಗಳನ್ನಿಡಲು ತೀರ್ಮಾನಿಸಿರುವದರಿಂದ ತಾ. ೧೦-೮-೫೨ ರ ಒಳಗೆ ಪ್ರಾಂತೀಕ ಟ್ರಾನ್ಸ್‌ಪೋರ್ಟ್ ಅಧಿಕಾರಿಗಳಿಗೆ ಬರಕೊಳ್ಳಬಹುದೆಂದು ತಿಳಿಸುತ್ತಾರೆ.

ಮದ್ರಾಸು ವಿಶ್ವವಿದ್ಯಾಲಯದ ಅಧ್ಯಾಪಕರ ಮೂಲ ಶಿಕ್ಷಣ ತರಬೇತು ಪರೀಕ್ಷೆಯಲ್ಲಿ ಸೀನಿಯರ್ ಗ್ರೂಪಿನ ೧೯ ಅಧ್ಯಾಪಕರಲ್ಲಿ ೧೮ ಜನರೂ ಜೂನಿಯರ್ ಗ್ರೂಪಿನ ೪೪ರಲ್ಲಿ ೩೫ ಜನರೂ ತೇರ್ಗಡೆಯಾಗಿರುವರು. ತೇರ್ಗಡೆಯಾದವರು ವೀರಾಜಪೇಟೆ ಮೂಲ ಶಿಕ್ಷಣ ಶಾಲೆಯ ಮುಖ್ಯೋಪಾಧ್ಯಾಯರಿಂದ ತಮ್ಮ ಸರ್ಟಿಫಿಕೇಟನ್ನು ಹೊಂದಿಕೊಳ್ಳಬಹುದಾಗಿದೆ.

ವೀರಾಜಪೇಟೆ ಹೈಸ್ಕೂಲಿನ ಚರ್ಚಾ ಸಂಘದ ಉದ್ಘಾಟನೆಯನ್ನು ತಾ. ೧೧ರಲ್ಲಿ ಶ್ರೀ ಎಸ್. ಎಸ್. ರಾಮಮೂರ್ತಿಯವರು ಜರಗಿಸಿದರು. ಮುಖ್ಯೋಪಾಧ್ಯಾಯರಾದ ಶ್ರೀ ಸಿ. ಎ. ಪೂವಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಓದುಗರಿಗಾಗಿ ವೀರಾಜಪೇಟೆಯ ಚರ್ಚ್ ಬೀದಿಯಲ್ಲಿ ಒಂದು ವಾಚನಾಲಯವನ್ನು ಖಾಸಗಿಯಾಗಿ ಕೆಲವರು ಸೇರಿಕೊಂಡು ತೆರೆದಿರುವರೆಂದೂ ಅಲ್ಲಿ ಸದಸ್ಯರಾಗುವವರಿಗೂ ಇತರರಿಗೂ ವಿಶ್ವದ ಅನೇಕ ಭಾಗಗಳಿಂದ ಪತ್ರಿಕೆಗಳನ್ನು ಒದಗಿಸಲಾಗುವದೆಂದೂ, ಸಾಯಂಕಾಲ ನಾಲ್ಕು ಗಂಟೆಯಿಂದ ೮ ಗಂಟೆಯ ವರೆಗೆ ಇದು ತೆರೆದಿರುವದೆಂದೂ ಅದರ ಕಾರ್ಯದರ್ಶಿ ಶ್ರೀ ಕೆ. ಸಿ. ಕರುಂಬಯ್ಯನವರು ತಿಳಿಸುತ್ತಾರೆ.

ತಾ. ೧೯-೭-೫೨ರಲ್ಲಿ ನಡೆಯಬೇಕಾಗಿದ್ದ ಸ್ಟಾಫ್ ಸಿಲೆಕ್ಷನ್ ಬೋರ್ಡ್ ಮೀಟಿಂಗು ಕಾರಣಾಂತರದಿಂದ ಮುಂದೂಡಲ್ಪಟ್ಟಿದೆ.

ಹೆಲ್ಸಿಂಕಿಯಲ್ಲಿ ಜರಗುವ ಒಲಂಪಿಕ್ ಪಂದ್ಯಾಟಗಳಲ್ಲಿ ಹಿಂದೀಯರು ಭಾಗವಹಿಸುವದಕ್ಕೆ ಸಹಾಯ ಮಾಡಲು ಕೇಂದ್ರ ಸರಕಾರದ ಶಿಕ್ಷಣ ಶಾಖೆಯು ಹಿಂದೀ ಒಲಂಪಿಕ್ ಸಂಸ್ಥೆಗೆ ೧,೨೫,೦೦೦ ರೂಪಾಯಿಗಳನ್ನು ಕೊಟ್ಟಿದೆ. 'ವಿಶ್ವ ಪುರುಷ' ಸ್ಪರ್ಧೆಯಲ್ಲಿ ಭಾಗವಹಿಸಲು ಹೋಗಲಿರುವ ಶ್ರೀ ಪರಿಮಳರಾಯರಿಗೆ ಸರಕಾರವು ಪ್ರತ್ಯೇಕವಾಗಿ ೨೦೦೦ ರೂ. ಗಳನ್ನು ಕೊಟ್ಟಿದೆ.

ಇದು ಕರ್ತವ್ಯ ಪಾಲನೆಯೆ?

ತಾ. ೧೬-೭-೫೨ರಲ್ಲಿ ಬೆಳಗ್ಗೆ ೯ ಗಂಟೆಗೆ ನಾಪೋಕ್ಲಿನ ಒಬ್ಬರು ಪೋಲೀಸ್ ಸ್ಟೇಷನಿಗೆ ಹೋಗಿ 'ಸರ್, ಕೊಟ್ಟಮುಡಿ ಹೊಳೆಸಾಲ್ಲಿ ಒಂದು ಹಣ ಚೀಲ ಸಿಕ್ಕಿದೆ' ಎಂದರಂತೆ. ಆದರೆ ಪೋಲೀಸರು ಆ ದಿನ ಸಾಯಂಕಾಲ ೫ ಗಂಟೆಯ ವರೆಗೆ ಹೊರಡಲಿಲ್ಲ. ೫ನೇ ಗಂಟೆಯ ಮೇಲೆ ಅವರು ಹೊರಟು ಅದೇ ಹೊಳೆಯ ಕಾಲೆಕಡು ಎಂಬಲ್ಲಿ ಹಣವನ್ನು ಗುರ್ತಿಸಿದರು. ಅಲ್ಲಿಗೆ ತಮ್ಮೊಡನೆ ಸೋಡಿಕೊಂಡು ಬಂದ ಪರೀಕ್ಷಕನನ್ನು ಕರೆತು ಪೋಲೀಸರು 'ನೀವು ರಿಪೋರ್ಟು ಕೊಡಿರಿ. ರಿಪೋರ್ಟು ವಿನಾ ಹಣ ತೆಗೆಯಲಾಗುವುದಿಲ್ಲ'ವೆಂದು ಹೇಳಿ ಸ್ಟೇಷನಿಗೆ ಕರೆದುಕೊಂಡು ಹೋಗಿ ರಿಪೋರ್ಟು ಮಾಡಿಸಿದರು. ಅಷ್ಟರಲ್ಲಿ ಸಾಯಂಕಾಲವಾದ್ದರಿಂದ ಮರು ದಿನ ಹಣ ಹುಡುಕಲು ಹೋದರು. ಆ ಹಣವು ತಾ. ೭-೭-೫೨ರ ವರೆಗೆ ದೊರೆಯಲಿಲ್ಲ. ಆ ಕಾಲೆಐನಲ್ಲಿ ವೈಕಾಡಿ ಗ್ರಾಮದ ಹತ್ತಿರ ದೊರೆತ ಆ ಹಣದ ಮೇಲೆ ಬಸಿನೆಂದೂ ಅಸ್ಥಿಪಂಜರವೂ ಇತ್ತು. ಅದನ್ನು ಗುರ್ತು ಹಚ್ಚುವುದೇ ಕಠಿಣವಾಯಿತು. ಈ ಹಣವು ಕಾಣೆಯಾಗಿದ್ದ ಶ್ರೀ ಅಜ್ಜಿಕುಟ್ಟಿರ ಗಣಪತಿಯ ಮರಣವೆಂದು ಊಹಿಸಲಾಗಿದೆ. ತಾ. ೧೪ರ ಸಾಯಂಕಾಲ ೭ ಗಂಟೆಯ ಮೇಲೆ ನಾಪೋಕ್ಲಿನಿಂದ ಹೋದ ಗಣಪತಿಯವರು ಕಾಣೆಯಾಗಿ ತಾ. ೧೬ರಲ್ಲಿ ಅವರ ಶವದ ಪೋಲೀಸರ ಆ ಚಾಣಾಕ್ಷತೆಯಿಂದಾಗಿ ಅವರ ಕಟ್ಟ ಕಡೆಯ ಹಣವನ್ನು ನೋಡುವ ಭಾಗ್ಯವಿಲ್ಲದಾಯಿತು. ಹಣ ಸಿಕ್ಕಿದರೂ, ಪಕೀಲರ ರಿಪೋರ್ಟಿದ್ದರೂ ಕೆಲಸ ತೆಗೆಯದೆ, ಕೈದೆ ಗಣಪತಿಯವರ ಸಂಬಂಧಿಕರು ರಿಪೋರ್ಟು ಮಾಡಿದ ಮೇಲೆ ತಾ. ೭ರಲ್ಲಿ ಪತ್ತೆಯಾಯಿತಂತೆ. ಇದೇ ನಮ್ಮ ಪೋಲೀಸ್ ಇಲಾಖೆಯ ಕರ್ತವ್ಯ ಪಾಲನೆಯೇ?

'ವಿಚಾರಿಸುವ'

ಓದುಗರ ಓಲೆಗಳು

ಇದಾವ ದರ್ಪ?

ಮೊನ್ನೆ ಭಾಗಮಂಡಲದ ಆಸ್ಪತ್ರೆಯನ್ನು ಸಿವಿಲ್ ಸರ್ಜನರು ಅಜಮಾಯಿಸಿ ಕೊಂಡು ಹೋದರು. ಅವರ ಅಜಮಾಯಿಸಿ ಕಾಲದಲ್ಲಿ ಸಾರ್ವಜನಿಕರಿಂದ ಡಾಕ್ಟರರ ಕೆಲಸವು ಏನೂ ತೃಪ್ತಿಕರವಿಲ್ಲವೆಂಬ ಅರ್ಜಿ ಕೊಡಲ್ಪಟ್ಟಿತ್ತಂತೆ. ಪ್ರಜಾಪ್ರಭುತ್ವದ ಯುಗದಲ್ಲಿ ಸಾರ್ವಜನಿಕ ಅಧಿಕಾರಿಗಳ ಕೆಲಸದ ವಿಷಯದಲ್ಲಿ ಜನರಿಗೆ ತಮ್ಮ ಅಭಿಪ್ರಾಯ ಸೂಚಿಸುವದಕ್ಕೆ ಸಂಪೂರ್ಣ ಅಧಿಕಾರವಿಲ್ಲವೇ? ಹೀಗಿರುವಾಗ ಸಿವಿಲ್ ಸರ್ಜನರು ತಮ್ಮ ತನಿಖೆಯನ್ನು ಮುಗಿಸಿ ಹೋದನಂತರ ಡಾಕ್ಟರರು ಅರ್ಜಿ ಬರೆದ ಜನರ ಮೇಲೆ ಬಹಳ ದರ್ಪವನ್ನು ಪ್ರದರ್ಶಿಸುತ್ತಿದ್ದಾರೆ. 'ಅರ್ಜಿ ಬರೆದವರಿಗೆಲ್ಲಾ ಬುದ್ಧಿ ಕಲಿಸುತ್ತೇನೆ. ನನ್ನನ್ನು ಯಾರಿಂದಲೂ ಏನ ಮಾಡಲೂ ಸಾಧ್ಯವಿಲ್ಲ' ಎಂದು ಬಹಿರಂಗವಾಗಿ ದರ್ಪದಿಂದಾಡುತ್ತಿದ್ದರೆ. ಈ ರೀತಿ ಹಟಸಾಧನೆಯಿಂದಿರುವ ಡಾಕ್ಟರಿಂದ ಅರ್ಜಿ ಬರೆದವರು ಚಿಕಿತ್ಸೆಯನ್ನಾದರೂ ಹೇಗೆ ಪಡೆಯುವುದು? ಈ ವಿಷಯಗಳಿಗೆ ಸಿವಿಲ್ ಸರ್ಜನರು ಗಮನ ಕೊಡಬೇಕು.

ಅಜೀದಾರನೊಬ್ಬ.

ನಾಲ್ಕಾಣೆ ಕಾಂಗ್ರೆಸು ಸದಸ್ಯತನ.

ಕಾಂಗ್ರೆಸು ಮಂತ್ರಿಮಂಡಲ ರಚನೆಯಾದ ನಂತರ ಕಾಂಗ್ರೆಸು ಪಕ್ಷದ ಸಂಘಟನೆಯ ಕಾರ್ಯಕ್ರಮವು ಬಹಳ ಬಿರುಸಿನಿಂದ ಸಾಗುತ್ತಿದೆ. ಎಂದು ಮಾರು ಅಗ್ರನ್ಯಜರುಗಳನ್ನು ನೇಮಕಮಾಡಿ ದೇಶದುದ್ದಗಲಕ್ಕೂ ನಾಲ್ಕಾಣೆಯ ಸದಸ್ಯರನ್ನು ಸೇರಿಸಿ ಕಾಂಗ್ರೆಸು ಪಕ್ಷವನ್ನು ಬೆಳೆಸುತ್ತಿದ್ದಾರೆ. ಆದರೆ ನಾಲ್ಕಾಣೆಯ ಸದಸ್ಯತನವನ್ನು ಯಾವ ಉದ್ದೇಶಕ್ಕಾಗಿ ತೆಗೆದುಕೊಳ್ಳುತ್ತಾರೆಂದು ಮರುಕವಾಲು ಹಾಕಿದರೆ ಅದಕ್ಕೆ ಉತ್ತರ 'ಅದು ಮತ್ತೆ ಮಾಡುವ ಈಗ ನಾಲ್ಕಾಣೆ ದುಡ್ಡು ಕೊಡಿ' ಎಂದು ಹೇಳುತ್ತಾರೆ. ನಾಲ್ಕಾಣೆ ದುಡ್ಡು ವಸೂಲುಮಾಡಿ ಇದರಿಂದ ಏನು ಜನಹಿತ ಕೆಲಸ ಮಾಡುತ್ತೀರೆಂದು ಕೇಳಿದರೆ ಸಮರ್ಪಕವಾದ ಉತ್ತರವೇ ಇಲ್ಲ. ಎಲ್ಲಿ ಯಾದರೂ ನಿಂತಿದ್ದರೆ ಇದ್ದಕ್ಕಿದ್ದಂತೆಯೇ 'ನಾಲ್ಕಾಣೆ ದುಡ್ಡು ಕೊಡಿ' ಎಂದು ಕೇಳಿಕೊಂಡು ಕಾಂಗ್ರೆಸು ಸದಸ್ಯತನದ ಚೀಟು ಹಿಡಿಯುತ್ತಾರೆ. ಜುಲೈ ತಾ. ೨೨ನೇ ಆದಿತ್ಯವಾರ ಗೋಣಿಕೊಪ್ಪಲಲ್ಲಿ ಈ ವಿಷಯವಾಗಿ ಅನೇಕ ಸಂಧರ್ಬಗಳಲ್ಲಿ ಜಗಳವಾಡುತ್ತಿದ್ದದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ. ಅಲ್ಲದೆ ಅಗ್ರನ್ಯಜರುಗಳಲ್ಲೊಬ್ಬರು ಒಂದು ದಿವಸ ಒಬ್ಬರನ್ನು ಕರೆದು 'ನೀವು ನಿಮ್ಮ ಗ್ರಾಮದಲ್ಲಿ ಒಬ್ಬ ಅಗ್ರನ್ಯಜರಾಗಬೇಕು; ನಿಮ್ಮ ಕೆಲಸವೆಂದರೆ ನಾಲ್ಕಾಣೆ ಸದಸ್ಯರನ್ನು ಸೇರಿಸುವುದು, ಮತ್ತು ಗ್ರಾಮದಲ್ಲಿ ಯಾರು ಯಾರು ಕಾಂಗ್ರೆಸು ಸಂಸ್ಥೆಯನ್ನು ಬಯ್ಯುತ್ತಾರೆಂದು ಹೇಳಿಕೊಡಬೇಕು' ಮತ್ತು ಕೆಲವು ಕಡೆ ಜನರು ಕಾಂಗ್ರೆಸು ಸದಸ್ಯರಾಗದಿದ್ದರೆ ಅವರ ಅರ್ಜಿ ಹವಾಲೆಗಳು ತಿರಸ್ಕರಿಸಲ್ಪಡುವುವೆಂದೂ ಹೇಳಿದ್ದಾರಂತೆ! ಕಾಂಗ್ರೆಸ್ಸು ಸಂಸ್ಥೆಯನ್ನು ಯಾವ ರೀತಿ ಅಪಮಾನಗೊಳಿಸುತ್ತಾರೆ. 'ಶಾಂತಿಕುಮಾರ್' 'ಕಾಯಿಲಕ್ಷ್ಮ'ರಂಥವರು ಇದರ ಮೇಲೆ ಸಮಾಲು ಹಾಕಲು ಬಂದರೆ ಈ ಘಟನೆಗಳು ಆದ ತಾರೀಕು, ವ್ಯಕ್ತಿಗಳು, ಸಮಯ ಸಾಕ್ಷಿ ಇವೆಲ್ಲವನ್ನು ಸರಿಯಾಗಿ ಕೊಟ್ಟು ರುಜುಮಾಡಲು ಸಿದ್ಧನಿದ್ದೇನೆ. ಕಾಂಗ್ರೆಸು ಇನ್ನಾದರೂ ಈ ರೀತಿ ಮಾಡದಿರಲಿ ಸರಿಯಾಗಿ ಕಾಂಗ್ರೆಸು ತತ್ವವನ್ನು ಜನತೆಯ ಮುಂದೆ ವಿವರಿಸಿ ಅವರು ಒಪ್ಪಿಕೊಂಡರೆ ಸದಸ್ಯರನ್ನಾಗಿ ತೆಗೆದುಕೊಂಡು ಮಹಾತ್ಮಾಗಾಂಧೀಜಿಯವರ ಹೆಸರನ್ನುಳಿಸುವಂತೆ ಈ ಅಗ್ರನ್ಯಜರುಗಳು ಗಮನಕೊಡುವರೇ? ಅಗ್ರನ್ಯಜರುಗಳ ಹೆಸರಿನಲ್ಲಿ ಗುಮಾಸ್ತೆಯಾರರಂತೆ ಕೆಲಸಮಾಡಿ ಇಲ್ಲದಸಲ್ಲದ ಅಪಪ್ರಚಾರಗಳನ್ನು ಮಾಡಬಾರದು.

'ಕ್ರಾಂತಿಕುಮಾರ್.'

ಕೊಡಗು ಫಾರೆಸ್ಟ್ ಇಲಾಖೆ

ಇಂಡಿಯಾ ಸರಕಾರದ ಜೀಪ್, 'ಪ್ರಿಫೇಬ್ರಿಕೇಟೆಡ್' ಮನೆ, ಮೊದಲಾದ ಅನರ್ಥ ಆಶೆಯಂತೆ ಕೊಡಗಿನಲ್ಲಿ ಫಾರೆಸ್ಟ್ ಇಲಾಖೆಯ ಅವ್ಯವಸ್ಥೆ ತಲೆ ಎತ್ತಿದೆ. ಕೊಡಗು ಸರಕಾರಕ್ಕೆ ಬಹು ಸ್ವಲ್ಪ ಸಮಯದಲ್ಲೇ ಕೆಲವು ರೂಪಾಯಿಗಳಷ್ಟು ನಷ್ಟವಾಗುವಂತಹ ತೀರ್ಮಾನಗಳಿಗೆ ಜವಾಬ್ದಾರರಾದ ಆಫೀಸರು ಇನ್ನೂ ಇರುವದು ಆಶ್ಚರ್ಯವಾಗಿದೆ. ಮುಂತಿಕವಾಗಿಯೂ ಸರಕಾರದ ಈ ಬಗ್ಗೆ ನಿಗವಿಡಬೇಕು.

ಈ ದೇಶದಲ್ಲಿ ಪ್ರಜಾ ಜವಾಬ್ದಾರಿ ಸರಕಾರವು ಸ್ಥಾಪಿತವಾಗಿ ಜನರ ಪ್ರತಿನಿಧಿಗಳು ಸರಕಾರವನ್ನು ನಡೆಸುವ ಭಾರವನ್ನು ಹೊತ್ತಿರುವ ಈ ಸಮಯದಲ್ಲಿ ದೇಶದ ಒಂದು ಮುಖ್ಯ ಇಲಾಖೆಯಲ್ಲಿ ಇಂಥಾದ್ದೊಂದು ದೊಡ್ಡ ಆರೋಪ ಎದ್ದದ್ದು ದುಃಖವೇ. ಈ ದೇಶದಲ್ಲಿಯು ಪ್ರಥಮ ಜವಾಬ್ದಾರಿ ಸರಕಾರವು ಜಯಪ್ರದವಾಗಿ ನಡೆದು ದೇಶಕ್ಕೆ ಕೀರ್ತಿಯನ್ನು ಪಡೆಯಬೇಕೆಂಬುದೇ ದೇಶದ ಜನರ ಆಶೆ.

ದೇಶದ ಜನರ ಇಂಥಾ ಆಸೆಗೆ ಅಡ್ಡಗಟ್ಟಿ ನಿಲ್ಲುವವರು ಯಾರು? ಮಂತ್ರಿಗಳು ಅನುಭವಶಾಲಿಗಳಲ್ಲ. ಅವರು ತಾನು ಹೇಳಿದಂತೆ ನಡೆಯಬೇಕೆಂದು ಹೇಳಿಕೊಂಡು ಅಧಿಕಾರದ ದರ್ಪದಲ್ಲಿ ಅಗ್ರಪದವಿಯನ್ನು ದುರುಪಯೋಗಪಡಿಸುವ ಆಫೀಸರುಗಳು; ಲಂಚಕೋರರು; ನಾನೂ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೇ ಸಹಾಯ ಮಾಡಿದ್ದೇನೆಂಬ ನೆರವಿನ ನೆರಳಿನಲ್ಲಿ ನಿಂತು, ಸರಕಾರಕ್ಕೆ ಅಪಕೀರ್ತಿಯನ್ನು ತರುವ ಆಫೀಸರುಗಳು ಮತ್ತು ಈ ಸ್ಥಿತಿಯಲ್ಲಿ ತನ್ನ ಪ್ರಯತ್ನದಿಂದ ಅವರು ಜಯಿಸಿ ಮಂತ್ರಿಗಳಾಗಿರುವರು, ಆದುದರಿಂದ ಅವರು ತನ್ನ ಕೈಹಿಡಿತದಲ್ಲಿರುವರೆಂದು, ಜನ ಸಮೂಹದ ಇಚ್ಛೆಗೆ ವಿರೋಧವಾಗುವಂತಹ ತೀರ್ಪುಗಳನ್ನು ಇದೇ ಸಮರ್ಥವೆಂದು ತನ್ನ ಸ್ವಪ್ರಯೋಜನಕ್ಕೋಸ್ಕರ ಪಡೆಯಲು ಯತ್ನಿಸುವವರು! ಎಂದರೆ, arrogant and corrupt officers. nepotism and favouritism—ಇವೇ ಪ್ರಜಾ ಸರಕಾರದ ಏಳಿಗೆಯ ಶತ್ರುಗಳು.

ಫಾರೆಸ್ಟ್ ಇಲಾಖೆಯ ಆರೋಪವು ದೇಶದ ಜನರ ಮನಸ್ಸನ್ನು ಬಾಧಿಸಿದೆ. ಈಗ ತಾನೇ ಅಧಿಕಾರಕ್ಕೆ ಬಂದಂತಹ ಮಂತ್ರಿಗಳು ಇದನ್ನು ವಿಚಾರಿಸದೆ ಬಿಡುವರೆಂಬ ಭಯವು ಜನರಲ್ಲಿದೆ. ಕಲಾಪ್ತಸಮಯಕ್ಕೆ ಹಿಂದೆ, ಒಬ್ಬ ಆಫೀಸರು ಪೂರಾ ಸರಕಾರದ ಹಿತದೃಷ್ಟಿಯಿಂದ ಕೊಟ್ಟಂತಹ ಒಂದು ಹುಕುಮಿನ ಪರಿಣಾಮವಾಗಿ ಸರಕಾರಕ್ಕೆ ನಷ್ಟ ಸಂಭವಿಸಬಹುದೆಂಬ ಸಂಶಯದಿಂದ ಅವರನ್ನು ಹುದ್ದೆಯಿಂದ ನಿವೃತ್ತರಾದಾಗ ಅವರ ಪ್ರಾವಿಡೆಂಟ್ ಫಂಡ್ ಮುಂತಾದ ಹಣವನ್ನು ಅವರಿಗೆ ಕೊಡಲು ಅಡ್ಡಿಪಡಿಸಿದ್ದರಂತೆ! ಆದುದರಿಂದ ಅನುಭವಶಾಲಿಗಳಾದ ಚೀಫ್ ಕಮಿಷನರು, ಈ ದೇಶದ ಪ್ರಜಾ ಜವಾಬ್ದಾರಿ ಸರಕಾರದ ಮತ್ತು ಹಿತದೃಷ್ಟಿಯಿಂದಲೂ ಮತ್ತು ಈ ದೇಶದ ಜನರಿಗೆ ಒಂದು ಸಮಾಧಾನಕ್ಕೋಸ್ಕರವಾದರೂ ಕೂಡಲೇ ಫಾರೆಸ್ಟ್ ಇಲಾಖೆಯ ತನಿಖೆಗಾಗಿ ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಬೇಕಾಗಿ ಕೋರುವ.

ಪ್ರಜೆಯೊ.

ಕಾರಾಗೃಹದಲ್ಲಿರುವ ಗಾಂಧಿ ಸೇವಾದಳದ 'ಕೆಂಪಂಗಿ' ಸಂಸ್ಥೆಯ ಭೀಕರನಾದ ಖಾನ್ ಅಬ್ದುಲ್ ಗಫಾರಖಾನರನ್ನು ಕಳೆದ ಮೂರು ತಿಂಗಳಲ್ಲಿ ಇನ್ನೊಂದು ಕಡೆಗೆ ಮೊದಲೇ ಸ್ಥಳಾಂತರ ಮಾಡಿ ಆಸ್ಪತ್ರೆಗೆ ಸೇರಿಸಲಾಗಿದೆ. ಕಳೆದ ಏಪ್ರಿಲ್ ತಿಂಗಳಲ್ಲಿ ಅವರಿಗೊಮ್ಮೆ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು.

ಇಂಡಿಯಾ ಸರಕಾರದ ಕಾರ್ಮಿಕ ಮಂತ್ರಿಮಂಡಳದ ಪ್ರೌಢ ಔದ್ಯೋಗಿಕ ತರಬೇತು ಯೋಜನೆ.

ವೀರಾಜಪೇಟೆಯ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟಿನಲ್ಲಿ ಈ ಕೆಳಗೆ ನಮೂದಿಸಿದ ಉದ್ಯಮಗಳಲ್ಲಿ ತರಬೇತಾಗಲು ಜನರು ಬೇಕಾಗಿದ್ದಾರೆ.

1. ಚಿತ್ರದ ಮತ್ತು ಬಿದಿರಿನ ಕೆಲಸ.
2. ಹೊಲಿಗೆಯ ಕೆಲಸ (ಕಟ್ಟಿಂಗ್ ಮತ್ತು ಟೈಲರಿಂಗ್)
3. ಶೀಘ್ರಲಿಪಿ. (ಸ್ಟೆನೊಗ್ರಾಫಿ)–ಇದಕ್ಕೆ ಸೇರುವವರು ಎಸ್. ಎಸ್. ಎಲ್. ಸಿ. ಪಾಸಾಗಿರಬೇಕು.

ಸ್ತ್ರೀಯರಿಗೂ ಪ್ರವೇಶವಿದೆ. ತರಬೇತಿನ ಕಾಲವು 12 ತಿಂಗಳು. ಶೀಘ್ರಲಿಪಿಯೊಂದನ್ನುಳಿದು ಇತರ ಉದ್ಯಮಗಳಿಗೆ ಸೇರಲಿಚ್ಛಿಸುವವರು ಸಾಧಾರಣ ಒಂಭತ್ತನೇ ತರಗತಿಯ ವರೆಗೆ ಓದಿರಬೇಕು. ತರಬೇತು ಉಚಿತ; ಅಲ್ಲದೆ ಶೇಕಡ 50ರಷ್ಟು ಮಂದಿಗೆ ತಿಂಗಳಿಗೆ ರೂ. 25/-ರಂತೆ ಸ್ಟೈಫಂಡನ್ನು ಕೊಡಲಾಗುವದು. ಮೇಲ್ಕಂಡ ಇನ್‌ಸ್ಟಿಟ್ಯೂಟಿನಲ್ಲೂ ಮತ್ತು ಮಡಿಕೇರಿಯ ಎಂಪ್ಲಾಯಿಮೆಂಟ್ ಆಫೀಸಿನಲ್ಲೂ ದೊರಕುವ ನಿಶ್ಚಿತ 'ಅಪ್ಲಿಕೇಶನ್ ಫಾರ್ಮು'ಗಳಲ್ಲಿ ಅರ್ಜಿಗಳನ್ನು ಸ್ವೀಕರಿಸಲೂ ಕಡೆಯ ತಾರೀಕು 21—7—1952. ಅರ್ಜಿಗಳನ್ನು ಇನ್ಸಿಟ್ಯೂಟಿನ ಸುಪರಿಂಟೆಂಡೆಂಟರವರಿಗೆ ಸಲ್ಲಿಸತಕ್ಕದ್ದು. ಇಂಟರ್‌ವ್ಯೂಗೆ ಕರೆಸಲ್ಪಟ್ಟಂತವರು ತಮ್ಮ ಸ್ವಂತ ಖರ್ಚಿನಿಂದಲೇ ಬರತಕ್ಕದ್ದು.

ಶ್ರೀ ಕೋರನ ದೇವಯ್ಯನವರು
ಡೆಪ್ಯೂಟಿ ಸ್ಪೀಕರರಾದರು.

ತಾರೀಖು ೧೫—೬—೫೨ರಲ್ಲಿ ಅಸೆಂಬ್ಲಿ ಸಭೆಯು ಬೆಳಗ್ಗೆ ೧೧ ಗಂಟೆಗೆ ಪುನಹ ಸೇರಿತು. ಪ್ರಶ್ನೋತ್ತರಗಳ ನಂತರ ಡೆಪ್ಯೂಟಿ ಸ್ಪೀಕರರ ಆಯ್ಕೆಯಾಯಿತು. ಶ್ರೀ ಕೋರನ ದೇವಯ್ಯನವರ ಹೆಸರನ್ನು ಶ್ರೀ ಸಿ. ಕಾಳಪ್ಪನವರು ಸೂಚಿಸಿದರು. ಶ್ರೀ ಲಿಂಗರಾಜಯ್ಯನವರು ಅನುಮೋದಿಸಿದರು. ಬೇರೆ ಯಾರ ಹೆಸರೂ ಸೂಚಿಸಲ್ಪಡದ ಕಾರಣ ಶ್ರೀ ದೇವಯ್ಯನವರು ಸರ್ವಾನುಮತದಿಂದ ಆರಿಸಲ್ಪಟ್ಟರೆಂದು ಸ್ಪೀಕರರಾದ ಶ್ರೀ ಬಿ. ಎಸ್. ಕುಶಾಲಪ್ಪನವರು ತಿಳಿಸಿದರು.

ಶಾಸನ ಸಭೆಯ ಮುಂದಾಳಾದ ಶ್ರೀ ಸಿ. ಎಂ. ಪೂಣಚ್ಚನವರು ಶ್ರೀ ದೇವಯ್ಯನವರ ಆಯ್ಕೆಯನ್ನು ಪ್ರಶಂಸಿಸುತ್ತಾ ಹೀಗೆ ಹೇಳಿದರು. —ಇವರು ೧೯೩೭ ರಿಂದಲೇ ಕೊಡಗು ಕೌನ್ಸಿಲಿನ ಸದಸ್ಯರಾಗಿದ್ದಾರೆ. ಈಗಿನ ಹೊಸ ಶಾಸನ ಸಭೆಗೂ ಅವರು ಆರಿಸಿ ಬಂದದ್ದು ಹೊಗಳಲರ್ಹವಾದ್ದು. ಇವರು ಹಳೇ ಕಾಂಗ್ರೆಸಿಗರು. ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಜೈಲಿಗೆ ಹೋದವರು. ದೇಶಕ್ಕೆ ಜವಾಬ್ದಾರಿ ಸರಕಾರ ದೊರೆಯಲು ಪ್ರಯತ್ನ ನಡೆಸಿದವರಲ್ಲಿ ಒಬ್ಬರು. ಇವರನ್ನು ಡೆಪ್ಯೂಟಿಸ್ಪೀಕರರಾಗಿ ನೇಮಿಸಿದ್ದರಿಂದ ಸ್ಪೀಕರರ ಭಾರವು ಸ್ವಲ್ಪ ಕಡಿಮೆಯಾಗುವುದು. ನಿಮ್ಮ ಈ ಹೊಸ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ನಮ್ಮ ಹೃತ್ಪೂರ್ವಕ ಸಹಕಾರ ಇದೆ.

ಕೋರನ ದೇವಯ್ಯನವರು ಅಭಿನಂದನೆಗೆ ಉತ್ತರವೀಯುತ್ತಾ ತನ್ನ ಕರ್ತವ್ಯವನ್ನು ಯಾವುದೇ ಪಕ್ಷಪಾತವಿಲ್ಲದೆ ನಿರ್ವಹಿಸುವುದಾಗಿ ಹೇಳಿದರು.

ನಂತರ ಸ್ಪೀಕರರು ತಮ್ಮ ಹಾಗೂ ಡೆಪ್ಯೂಟಿ ಸ್ಪೀಕರರ ಗೈರುಹಾಜರಿಯಲ್ಲಿ ಯಾರು ಅಧ್ಯಕ್ಷರಾಗಬೇಕೆಂಬ ಬಗ್ಗೆ ಶ್ರೀ ಸಿ ಎ. ಮಂದಣ್ಣ ಮತ್ತು ಗಂಡಕಟ್ಟಿ ಮಂಜುನಾಥಯ್ಯನವರ ಹೆಸರನ್ನು ನಿಶ್ಚಯಿಸಿದರು.

ಆ ನಂತರ ಶ್ರೀಗಳಾದ ಕೋರನ ದೇವಯ್ಯ (ಅಧ್ಯಕ್ಷ) ಜಿ. ಎಂ. ಮಂಜುನಾಥಯ್ಯ, ಸಿ. ಎ. ಮಂದಣ್ಣ, ಎಂ. ಡಿ. ಮಾಚಯ್ಯ ಮತ್ತು ಕೆ ಪಿ ಕರುಂಬಯ್ಯ ಇವರುಗಳಿಂದ ಕೂಡಿದ ಪ್ರಿವಿಲೇಜ್ ಕಮಿಟಿಯನ್ನು ನೇಮಿಸಲಾಯಿತು.

ಶ್ರೀಗಳಾದ ಎಂ ಡಿ. ಮಾಚಯ್ಯ, ಜಿ. ಎಂ. ಲಿಂಗರಾಜಯ್ಯ, ಪಿ. ಲಕ್ಕ, ಜಹವರ್ದ್ ಮತ್ತು ಸಿ. ಕಾಳಪ್ಪ (ಅಧ್ಯಕ್ಷ) ಇವರಿಂದ ಕೂಡಿದ ಪಿಟಿಷನ್ ಕಮಿಟಿಯನ್ನು ನೇಮಿಸಲಾಯಿತು.

ನಂತರ ಫೈನಾನ್ಸ್ ಕಮಿಟಿಗೆ ಡಾ. ಪಿ. ಎಂ. ಕಾಣಮಯ್ಯ, ಪಿ ಡಿ. ಸುಬ್ಬಯ್ಯ, ಪಿ. ಕೆ. ಚೆನ್ನಯ್ಯ ಮತ್ತು ಎಚ್. ಟಿ ಮಲ್ಲಣ್ಣನವರನ್ನು ಆರಿಸಲಾಯಿತು.

ಪಬ್ಲಿಕ್ ಎಕೌಂಟ್ಸ್ ಕಮಿಟಿಗೆ ಶ್ರೀಗಳಾದ ಸಿ. ಎ. ಮಂದಣ್ಣ, ಸಿ. ಕೆ. ಕಾಳಪ್ಪ, ಎಂ. ಡಿ. ಮಾಚಯ್ಯ ಮತ್ತು ಕೆ ಪಿ ಕರುಂಬಯ್ಯ ಇವರುಗಳನ್ನು ಆರಿಸಲಾಯಿತು.

ಇದಾದ ನಂತರ ಶಾಸನ ಸಭೆಯ ಕರಡು ಕಾರ್ಯ ನಿಯಮಗಳನ್ನು ಆಲೋಚನೆಗೆ ತೆಗೆದುಕೊಳ್ಳಲಾಯಿತು. ಇದರ ಚರ್ಚೆಯು ತಾ ೧೫ ಮತ್ತು ೧೬ ಎರಡು ದಿನ ನಡೆಯಿತು.

ತಾ. ೧೭ ರಲ್ಲಿ ಕೌನ್ಸಿಲು ಸಭೆಯು ಬೆಳಗ್ಗೆ ೧೧ ಗಂಟೆಗೆ ಸೇರಿತು. ಪ್ರಶ್ನೋತ್ತರಗಳಾದ ನಂತರ ಕಾರ್ಯಕ್ರಮವು ಮಂತ್ರಿಗಳ, ಸ್ಪೀಕರರ ಡೆಪ್ಯೂಟಿ ಸ್ಪೀಕರರ ಮತ್ತು ಮೆಂಬರುಗಳ ವೇತನದ ಮಸೂದೆಯ ಚರ್ಚೆ ನಡೆಯಬೇಕಿತ್ತು. ಆದರೆ ಈ ಮಸೂದೆಗೆ 'ಸಿ' ಸಂಸ್ಥಾನಗಳ ಆಕ್ಟಿನ ಸೆಕ್ಷನ್ ೨೪ (೨) ರಂತೆ ಚೀಫ್ ಕಮಿಷನರ ಶಿಫಾರಸು ದೊರೆತಿಲ್ಲವಾದ ಕಾರಣ ಈ ಮಸೂದೆಯ ಚರ್ಚೆಯನ್ನು ತಾರೀಕು ೨೧ ರಲ್ಲಿ ತೆಗೆದುಕೊಳ್ಳಲು ಅನುಮತಿ ಕೊಡಬೇಕೆಂದು ಮುಖ್ಯಮಂತ್ರಿ ಶ್ರೀ. ಸಿ ಎಂ. ಪೂಣಚ್ಚನವರು ಸೂಚಿಸಿದರು. ಸ್ಪೀಕರರು ಒಪ್ಪಿಗೆಯಿತ್ತರು. ಈ ದಿನಕ್ಕೆ ಬೇರೆ ಕಾರ್ಯಕ್ರಮಗಳಿಲ್ಲದ ಕಾರಣ ತಾರೀಕು ೧೭ರ ಮೀಟಿಂಗು ಮುಕ್ತಾಯಗೊಂಡಿತು.

ಕರ್ನಾಟಕ ಪ್ರಾಂತ ರಚನೆಗೆ ಮೈಸೂರಿನವರ ವಿರೋಧ.

ಮೈಸೂರು ಸಂಸ್ಥಾನವನ್ನು ಮುಖ್ಯ ಭಾಗವಾಗಿ ಒಳಗೊಂಡ ಕರ್ನಾಟಕ ಪ್ರಾಂತ ರಚನೆ ಮಾಡುವುದು ಸಂಸ್ಥಾನದ ಜನರಿಗೆ ಬೇಕಿಲ್ಲವೆಂದು ಮೈಸೂರು ಶಾಸನ ಸಭೆಯ ೬೨ ಸದಸ್ಯರು ಮುಖ್ಯಮಂತ್ರಿ ಪಂಡಿತ ನೆಹರೂರವರಿಗೆ ಮನವಿಯೊಂದರಲ್ಲಿ ತಿಳಿಸಿರುವರೆಂದು ತಿಳಿದುಬಂದಿದೆ.

ಈ ಬಗ್ಗೆ ಮುಖ್ಯ ಮಂತ್ರಿಗಳಿಗೆ ಅವರು ಕಳುಹಿಸಿರುವ ಪತ್ರವೊಂದರಲ್ಲಿ ಸದ್ಯದಲ್ಲಿ ಭಾಷಾವಾರು ಪ್ರಾಂತಗಳ ನಿರ್ಮಾಣವು ದೇಶದ ಹಿತಕ್ಕನುಗುಣವಾಗಿಲ್ಲವೆಂದು ತಿಳಿಸಿದ್ದಾರೆ.

ಮೈಸೂರನ್ನು ಮುಖ್ಯ ವಿಭಾಗವಾಗಿ ಉಳ್ಳ ಕರ್ನಾಟಕ ಪ್ರಾಂತ ನಿರ್ಮಿಸುವುದು ಮೈಸೂರಿನ ಜನರಿಗೆ ಬೇಕಿಲ್ಲ. ಮತ್ತು ಅದೇನಾದರೂ ನಡೆದಲ್ಲಿ, ಆ ಕ್ರಮದಿಂದ ಭಾರಿ ವಿಷಮ ಪರಿಣಾಮಗಳಿಗೆ ಎಡೆಕೊಟ್ಟಂತಾಗುವುದಲ್ಲದೆ ಸಂಬಂಧಪಟ್ಟ ಎಲ್ಲಾ ಪಕ್ಷಗಳಿಗೂ ಅಸಮಾಧಾನವುಂಟಾಗುವುದೆಂದೂ ಪತ್ರದಲ್ಲಿ ತಿಳಿಸಲಾಗಿದೆ. ಘಟನಾತ್ಮಕ ನಿಯಮಗಳನುಗುಣವಾಗಿ ನಿರ್ಧಾರವನ್ನು ಮಾಡುವ ಸ್ವಾತಂತ್ರ್ಯ ಪಡೆಯುವ ಮೊದಲು ಮುಖ್ಯ ಮಂತ್ರಿಗಳು ಈ ಬಗ್ಗೆ ಯಾವುದೇ ನಿರ್ಧಾರಗಳನ್ನು ಮಾಡಕೂಡದೆಂದು ಅವರು ಸೂಚಿಸಿದರೆ. ಈ ಪತ್ರಕ್ಕೆ ಅಂಕಿತ ಹಾಕಿದವರಲ್ಲಿ ಕಾಂಗ್ರೆಸ್ ಪಕ್ಷದ ಪ್ರಮುಖ ಸದಸ್ಯರು, ಸ.ತ. ವಿರೋಧಿ ಪಕ್ಷದ ಸದಸ್ಯರು ಮತ್ತು ವಿಧಾನ ಸಭೆಯ ಸಮಾಜವಾದಿ ಮತ್ತು ಕಮ್ಯೂನಿಷ್ಟ ಸದಸ್ಯರೂ ಇದ್ದಾರೆ.

ಕೊಡಗು ಸರಕಾರದ
52-53ರ ಅಂದಾಜು ಬಡ್ಜೆಟ್

ಆದಾಯದ ವಿವರಗಳು.

ವ್ಯವಸಾಯ ಆದಾಯ ತೆರಿಗೆ	10,00,000
ಭೂಕಂದಾಯ	3,87,000
ಎಕ್ಸೈಸ್ ಉತ್ಪತ್ತಿ	9,86,000
ಸ್ಟಾಂಪು	1,50,000
ಫಾರೆಸ್ಟ್ ಉತ್ಪತ್ತಿ	43,00,000
ರಿಜಿಸ್ಟ್ರೇಶನ್	20,000
ಮೋಟಾರು ವಾಹನಗಳ ಕಂದಾಯ	4,99,000
ಇತರ ಕಂದಾಯ	54,600
ನೀರಾವರಿ ಕಂದಾಯ	2,000
ಡಿಪಾಜಿಟ್ಸು ಬಡ್ಡಿ	18,800
ನ್ಯಾಯ ಇಲಾಖೆಯಿಂದ	17,000
ಜೈಲು ಇಲಾಖೆ	7,200
ಪೋಲೀಸು	600
ವಿದ್ಯಾ ಇಲಾಖೆ	3,46,000
ವೈದ್ಯ ಇಲಾಖೆ	1 23,100
ಸಾರ್ವಜನಿಕ ಆರೋಗ್ಯ	1 26,000
ವ್ಯವಸಾಯ ಇಲಾಖೆ	3,74,000
ವೆಟರ್ನರಿ	22,000
ಸಹಕಾರ	2.100
ಕೈಗಾರಿಕಾ ಶಾಖೆ	10,000
ಇತರ ಇಲಾಖೆ	8,600
ಸಿವಿಲ್ ವರ್ಕ್ಸ್	50 800
ಪ್ರಿಂಟಿಂಗು	1,100
ಸೂಪರ್ ಎನ್ಯುವೇಶನ್	200
ಇತರ ಬಾಬುಗಳು	38,400
ಕೇಂದ್ರ ಸರಕಾರದ ಸಹಾಯ	4,66,300
ಸಪ್ಲೈ ಮುಂಗಟ್ಟಲು	200
ಜುಮ್ಲಾ	90,11 000

ಖರ್ಚಿನ ವಿವರಗಳು.

ಆದಾಯದ ಮೇಲಿನ ಕಂದಾಯ	35,900
ರೆವಿನ್ಯು ಇಲಾಖೆ	2,32,700
ಎಕ್ಸೈಸ್ ,,	2,96,300
ಸ್ಟಾಂಪು	4,400
ಫಾರೆಸ್ಟ್ ಇಲಾಖೆ	14 45 000
ರಿಜಿಸ್ಟ್ರೇಶನ್	4 900
ಮೋಟರು ವಾಹನಗಳ ಬಗ್ಗೆ	1,08 600
ನೀರಾವರಿ	1 86,900
ಆಡಳಿತ ಖರ್ಚು	5,34 900
ನ್ಯಾಯ ಇಲಾಖೆ	86,300
ಜೈಲು ಇಲಾಖೆ	35,400
ಪೋಲೀಸು	3.31 000
ವಿದ್ಯಾ ಇಲಾಖೆ	12,10.000
ವೈದ್ಯ ಇಲಾಖೆ	4,76,000
ಸಾರ್ವಜನಿಕ ಆರೋಗ್ಯ	2,34,000
ವ್ಯವಸಾಯ ಇಲಾಖೆ	11,92.000
ವೆಟರ್ನರಿ	1,63,000
ಸಹಕಾರ	80.000
ಕೈಗಾರಿಕೆ	20 000
ಇತರ ಇಲಾಖೆಗಳು	38 000
ಸಿವಿಲ್ ವರ್ಕ್ಸ್	17,14,500
ಪೆನ್ಶನ್ ಇತರ ಬತ್ತೆ	2,18,000
ಪೆನ್ಶನ್ ಕಮ್ಯುಟೇಶನ್ ಮಾಡಿದ್ದರ ಬಗ್ಗೆ	5,000
ಪ್ರಿಂಟಿಂಗು & ಸ್ಟೇಶನರಿ	39,000
ಇತರ ಬಾಬುಗಳು	2.91 600
ಒಟ್ಟು (ಓಟು ಮಾಡುವ) ಖರ್ಚು	89,12.700
ಚಾರ್ಜು ಮಾಡಿದ ಖರ್ಚು (ಅಂದರೆ ಚೀಫ್ ಕಮಿಷನರ, ಅವರ ಸಿಬ್ಬಂದಿ ಸ್ಪೀಕರರ ಮೊದಲಾದ ವೇತನ)	70,700
ಸಪ್ಲೈ ಮುಂಗಟ್ಟಲು	—400
ಜುಮ್ಲಾ	89,83 000

ಯೋಜನಾ ಮಂಡಳದ ಸದಸ್ಯರೂ, ಸಂಶೋಧನ ಸಮಿತಿಯ ಅಧ್ಯಕ್ಷರೂ ಆದ ಶ್ರೀ. ಜಿ ಎಲ್. ಮೆಹತಾ ಅವರನ್ನು ಅಮೇರಿಕೆಯಲ್ಲಿ ಭಾರತದ ರಾಯಭಾರಿಯೆಂದು ನೇಮಿಸಿರುವುದಾಗಿ ವಿದೇಶ ಶಾಖೆಯು ಸಾರಿದೆ.

ವಾರ್ತೆ.

ಮುಂಬಯಿ ರಾಜ್ಯದಲ್ಲಿ ಗ್ರಾಮಾಂತರಗಳಲ್ಲಿರುವ ಸರಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷದ ವರೆಗೆ ಸೇವೆ ಸಲ್ಲಿಸದ ವಿದ್ಯಾರ್ಥಿಗಳಿಗೆ ಮೆಡಿಕಲ್ ಡಿಗ್ರಿಗಳನ್ನು ಕೊಡತಕ್ಕದಲ್ಲವೆಂದು ಮುಂಬಯಿ ವಿಶ್ವವಿದ್ಯಾಲಯವು ನಿರ್ಧರಿಸಲಿದೆ ಎಂದು ತಿಳಿಯುತ್ತದೆ.

ವಿಶಾಲ ತಳಹದಿಯ ಮೇಲೆ ಸರ್ವಮಾನ್ಯ ಕಾರ್ಯಕ್ರಮವುಳ್ಳ ಸಂಯುಕ್ತ ಪಕ್ಷವೊಂದನ್ನು ರಚಿಸುವ ಪ್ರಯತ್ನ ಮಾಡುವುದಕ್ಕಾಗಿ ಅಖಿಲ ಭಾರತ ಎಡ ಪಕ್ಷಗಳೆಲ್ಲ ದಿಲ್ಲಿಯಲ್ಲಿ ಆಗಸ್ಟ್ ತಿಂಗಳಲ್ಲಿ ಸಭೆ ಸೇರಲಿವೆಯೆಂದು ಕ್ರಾಂತಿಕಾರಿ ಸಾಮ್ಯವಾದಿ ಪಕ್ಷದ ಲೋಕ ಸಭೆಯ ಸದಸ್ಯ ಶ್ರೀ ಚೌಧುರಿ ಮತ್ತು ಶ್ರೀ ಶ್ರೀಕಂಠನ್ ನಾಯರರು ಹೇಳಿರುವರು.

ಗರ್ಭಾವಸ್ಥೆಯಿಂದ ಗೋರಿಗೆ ಹೋಗುವವರೆಗೂ ಪ್ರತಿಯೊಬ್ಬ ಮನುಷ್ಯನ ಯೋಗಕ್ಷೇಮವನ್ನು ಸರಕಾರವು ನೋಡಬೇಕೆಂಬ ತತ್ವದಲ್ಲಿ ತಮಗೆ ವಿಶ್ವಾಸವಿದೆಯೆಂದು ಕೂಲಿಕಾರ ಮಂತ್ರಿ ಶ್ರೀ ವಿ. ವಿ. ಗಿರಿಯವರು ಗುಜರಾತಿನ ಕೂಲಿಕಾರ ಸಂಘದ ಪ್ರತಿನಿಧಿಗಳ ಸಭೆಯಲ್ಲಿ ಹೇಳಿದರು.

ಅಮೇರಿಕದ ಅಧ್ಯಕ್ಷ ಚುನಾವಣೆಗೆ ರಿಪಬ್ಲಿಕನ್ ಪಕ್ಷದ ಉಮೇದುವಾರರಾಗಿ ಜ|| ಐಸೆನ್‌ಹೋವರರು ಚುನಾಯಿತರಾಗಿರುವರು.

"ದೇಶದ ಮಹತಿ ಅದರ ವಿಸ್ತೀರ್ಣದಲ್ಲಿಲ್ಲ; ಬದಲು ಜನತೆಯ ಯೋಗ್ಯತೆಯ ಮೇಲಿದೆ.'

ಮುಖ್ಯ ಮಂತ್ರಿ ಪೂಣಚ್ಚನವರ ಬಜೆಟ್ ಭಾಷಣ.

ಕೊಡಗು ಶಾಸನ ಸಭೆಯ ಪ್ರಥಮ ಅಧಿವೇಶನವು ತಾರೀಖು ೧೮ರಲ್ಲಿ ಶಾಸನ ಸಭಾಂಗಣದಲ್ಲಿ ಪ್ರಾರಂಭವಾಯಿತು, ಶ್ರೀ ಎ. ಕೆ. ಸುಬ್ಬಯ್ಯನವರಲ್ಲದೆ ಎಲ್ಲಾ ಸದಸ್ಯರು ಹಾಜರಿದ್ದರು. ಪ್ರೇಕ್ಷಕರು ತುಂಬಾ ನೆರೆದಿದ್ದರು. ಹನ್ನೊಂದು ಗಂಟೆಗೆ ಕಾರ್ಯ ಕಲಾಪಗಳು ಪ್ರಾರಂಭವಾದವು. ಪ್ರಥಮತಃ ರಾಷ್ಟ್ರಪಿತನ ನೆನಪಿಗಾಗಿ ಎಲ್ಲರೂ ಎದ್ದು ಎರಡು ನಿಮಿಷಗಳ ವರೆಗೆ ಮೌನ ಪ್ರಾರ್ಥನೆ ಮಾಡಲಾಯಿತು. ನಂತರ ಚೀಫ್ ಕಮಿಷನರು ತಮ್ಮ ಪ್ರಾರಂಭ ಭಾಷಣ ಮಾಡಿದರು. (ಇತರ ವಿವರವನ್ನು ಬೇರೆಡೆ ಕೊಡಲಾಗಿದೆ) ಚೀಫ್ ಕಮಿಷನರ ಭಾಷಣದ ನಂತರ ಸಭೆಯು ಮಧ್ಯಾಹ್ನ ೩-೩೦ ಗಂಟೆಗೆ ಪುನಃ ಸೇರಲಾಯಿತು. ಕೊಡಗು ಸರಕಾರದ ಮುಖ್ಯ ಮಂತ್ರಿಗಳಾದ ಶ್ರೀ ಸಿ. ಎಂ. ಪೂಣಚ್ಚನವರು ಕೊಡಗು ಸರಕಾರದ ೫೨-೫೩ನೆ ಸಂವತ್ಸರದ ಅಂದಾಜು ಬಜೆಟ್ಟನ್ನು ಸಭೆಗೆ ಒಪ್ಪಿಸಿದರು. ಅವರ ಬಜೆಟ್ ಭಾಷಣದ ಸಾರಾಂಶ ಹೀಗಿದೆ.

ಬಜೆಟ್ ಭಾಷಣ.

೧೯೫೧-೫೨ರ ಸಾಲಿನ ಪರಿಷ್ಕೃತ ಲೆಕ್ಕವನ್ನೂ, ೧೯೫೨-೫೩ರ ಅಂದಾಜು ಬಜೆಟ್ಟನ್ನೂ ಸಭೆಯ ಮುಂದಿಡಲು ಅಪ್ಪಣೆ ಕೇಳಿಕೊಳ್ಳುತ್ತೇನೆ. ನಾವು ಈ ದಿನ ಕುಳಿತಿರುವ ಈ ಸಂಸ್ಥಾನದ ಪ್ರಥಮ ಜನಪ್ರಿಯ ಬಜೆಟ್ಟಿನ ಅಂಶಗಳನ್ನು ಪರಿಶೀಲಿಸಿ ಅದನ್ನು ಮಂಜೂರು ಮಾಡುವುದು ಈ ಸಭೆಯ ಹಕ್ಕಾಗಿದೆ. ನಿಮ್ಮ ಮುಂದೆ ನಿಂತಾಗ ಕೊಡಗಿನ ಜನತೆ ಮಾತ್ರ ತಮಗೆ ಜವಾಬ್ದಾರಿ ಸರಕಾರ ಬೇಕೆಂದು ಹೋರಾಡುತ್ತಿದ್ದ ಕಾಲದ ನೆನಪಾಗುತ್ತದೆ. ೧೯೪೭ರ ನಂತರ ಜಾರಿಗೆ ಬಂದ ಹಿಂದೂದೇಶದ ರಾಷ್ಟ್ರೀಯ ಸರಕಾರವು ನಮ್ಮ ಬೇಡಿಕೆಗಳನ್ನು ಲಕ್ಷಿಸಿ ಕೊಡಗನ್ನೊಳಗೊಂಡ ಅರವತ್ತು 'ಸಿ' ವರ್ಗದ ಸಂಸ್ಥಾನಗಳಿಗೆ ಜವಾಬ್ದಾರಿ ಸರಕಾರ ಕೊಟ್ಟುದಕ್ಕಾಗಿ ಅವರಿಗೆ ಕೃತಜ್ಞತೆಯನ್ನರ್ಪಿಸುವುದು ನನ್ನ ಕರ್ತವ್ಯವಾಗಿದೆ. ಕೊಡಗಿನ ಜನತೆಯ ಬಗ್ಗೆ ತುಂಬಾ ಸಹಾನುಭೂತಿಯುಳ್ಳ ಪ್ರಧಾನ ಮಂತ್ರಿ ಜವಾಹರಲಾಲರಿಗೆ ನಮ್ಮ ಗೌರವಪೂರಿತ ಕೃತಜ್ಞತೆಗಳಿವೆ. ಭಾರತ ಜನತಾ ಸಭೆಯು 'ಸಿ' ವರ್ಗದ ಸಂಸ್ಥಾನಗಳ ಬಗ್ಗೆ ಚರ್ಚೆ ನಡೆದಾಗ ನಮ್ಮ ಮುಖಂಡರುಗಳು ಕೊಡಗಿನ ಮಟ್ಟಿಗೆ ಉತ್ತಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರುವುದು ನಮ್ಮ ಸೌಭಾಗ್ಯವೆನ್ನಬಹುದು. ಈ ಸಹಾನುಭೂತಿಗೆ ಕೊಡಗಿನ ಜನತೆಯು ಚಿರಋಣಿಯಾಗಿದೆ. ಹಿಂದೀ ಒಕ್ಕೂಟದ ಒಂದು ಚಿಕ್ಕ ಅಂಗವಾಗಿರುವ ನಾವು ಹಿಂದೂ ದೇಶದ ಭವಿಷ್ಯತ್ ಹಿತಸಾಧನೆಗಳಿಗಾಗಿ ನಮ್ಮ ಹೃತ್ಪೂರ್ವಕ ಸಹಾಯವನ್ನೀಯುವ ಪ್ರತಿಜ್ಞಾಬದ್ಧರಾಗಿರುವೆವು.

೧೯೫೨-೫೩ರ ಬಜೆಟ್ಟು ಉಳಿತಾಯ ಬಜೆಟ್ಟೆನ್ನಬಹುದಾದರೂ ಉಳಿತಾಯವು ಕೇವಲ ರೂ. ೨೮ ಸಾವಿರವಾದ್ದರಿಂದ ಅದನ್ನು ಹಾಗೆ ಪರಿಗಣಿಸಲಾಗುವದಿಲ್ಲ. ಆದರೂ ಇದು ಕೊರತೆ ಬಜೆಟ್ಟಾಗದೆ ಸಮತೂಗಿಸಲ್ಪಟ್ಟ ಬಜೆಟ್ಟಾಗಿದೆಯೆಂದು ಹೇಳಲು ಸಂತೋಷವಾಗುತ್ತದೆ.

೧೯೫೧-೫೨ರ ಪರಿಷ್ಕೃತ ಅಂದಾಜಿನ ಪ್ರಕಾರ ಆ ವರ್ಷಕ್ಕೆ ರೂ. ೬೨,೦೦೦ ಕೊರತೆಯಾಗಿದ್ದು ಇಂಡಿಯಾ ಸರಕಾರವು ಹಿಂದಿನ ಶಿಲ್ಕಿನಿಂದ ರೂ. ೭ ಲಕ್ಷ ವಿನಿಯೋಗಿಸಬಹುದೆಂದು ಮಂಜೂರು ಮಾಡಿತ್ತು. ಪ್ರತಿ ಇಲಾಖೆಯಲ್ಲಿ ಖರ್ಚನ್ನು ಕಡಮೆ ಮಾಡಲು ವಿಶೇಷ ಪ್ರಯತ್ನ ಪಟ್ಟರೂ ಸ್ವಲ್ಪ ಮಟ್ಟಿಗೆ ಆದಾಯ ಶುಂಠಿಗೆಯಲ್ಲಿ ಬರಬಹುದೆಂದು ಅಂದಾಜು ಮಾಡಿದ್ದ ೮ ಲಕ್ಷ ರೂಪಾಯಿಗಳಲ್ಲಿ ಕೇವಲ ೩ ಲಕ್ಷ ಮಾತ್ರ ಬಂದ ಕಾರಣ ಕೊರತೆಯನ್ನು ಸಮತೂಗಿಸಲಾಗಲಿಲ್ಲ. ಆದರೆ ಫೈನಾನ್ಸ್ ಕಮಿಟಿಯ ಸಲಹೆಯಂತೆ ಖರ್ಚು ಮಾಡಲೆಂದು ಇಟ್ಟಿದ್ದ ರೂಪಾಯಿ ೧,೧೨,೦೦೦ ದಲ್ಲಿ ಕೇವಲ ೫೭,೩೦೦ ಮಾತ್ರ ಖರ್ಚಾಗಿ ಬಾಕಿ ಉಳಿದುದರಿಂದ ೫೧-೫೨ರ ಅಂತ್ಯದಲ್ಲಿ ಕೇಂದ್ರ ಸರಕಾರವು ಮಂಜೂರು ಮಾಡಿದ ಏಳು ಲಕ್ಷದ ಮೊತ್ತವನ್ನು ಪೂರಾ ಖರ್ಚು ಆಗಲಾರದು.

೧೯೫೧ನೇ ಏಪ್ರಿಲ್ ಒಂದರಲ್ಲಿ ಸರಕಾರದ ಶಿಲ್ಕು ರೂ. ೬೬,೮೯,೬೦೭ ಇತ್ತು. ೫೧-೫೨ರಲ್ಲಿ ಸರಕಾರದ ಆದಾಯ ರೂ. ೬೬,೨೬,೫೦೦ ಬಂದು ರೂ. ೭೩೪೭೬೦೦ ಖರ್ಚಾದ್ದರಿಂದ ತಾ. ೧-೪-೫೨ಕ್ಕೆ ಸರಕಾರದ ಶಿಲ್ಕು ರೂ. ೬೦೪೯೬೦೭ ಉಳಿದಿದೆ.

೧೯೫೧ನೇ ಡಿಸೆಂಬರಿನಲ್ಲಿ ನೂರು ಟನ್ ಗಂಧವನ್ನು ಹರಾಜಿಗೆ ಇಟ್ಟಿದ್ದೆವು. ಆದರೆ ವ್ಯಾಪಾರಿಗಳು ಒಪ್ಪಂದ ಮಾಡಿಕೊಂಡು ಕಡಿಮೆ ದರಕ್ಕೆ ಬಿಡ್ ಮಾಡಿದ ಕಾರಣ ಅಂದಾಜು ಮಾಡಿದ ಎರಡುವರೆ ಲಕ್ಷದ ಬದಲು ಕೇವಲ ೧೧ ಸಾವಿರ ಮಾತ್ರ ದೊರೆಯುವಂತಿದ್ದರಿಂದ ಹರಾಜನ್ನು ನಿಲ್ಲಿಸಲಾಯಿತು. ಇದರ ಮಾರಾಟಕ್ಕೆ ಟೆಂಡರೂ ಬಾರದ್ದರಿಂದ ಪುನಹ ಮೈಸೂರಿನಲ್ಲಿ ಹರಾಜು ಇಡಲಾಗಿ ಪುನಹ ವ್ಯಾಪಾರಿಗಳು ಒಂದಾಗಿಕೊಂಡು ಯೋಗ್ಯ ಬೆಲೆ ದೊರೆಯದಾಯಿತು. ಆದ್ದರಿಂದ ಮೈಸೂರು ಸರಕಾರದೊಡನೆ ಈ ಸರಕಾರವು ಸಮಾಲೋಚಿಸಿ ಈ ನೂರು ಟನ್ ಗಂಧವನ್ನು ಮಾರುವ ಏರ್ಪಾಡು ಮಾಡಿ ಅಂದಾಜು ಮಾಡಿದ ರೂ. ೨½ ಲಕ್ಷಕ್ಕಿಂತಾ ಹೆಚ್ಚಿನ ಉತ್ಪತ್ತಿ ದೊರೆಯುವ ಸಾಧ್ಯತೆ ಇದೆ.

೧೯೪೮ನೇ ಜನವರಿಯಿಂದ ೫೦ನೇ ಡಿಸೆಂಬರ್ ವರೆಗೆ ಕೊಡಗು ಸರಕಾರವು ೯,೦೦,೮೧೭ ರೂಪಾಯಿಗಳನ್ನು ಆಹಾರ ಬೋನಸಾಗಿ ಸಂಪಾದಿಸಿತು. ಇದರಲ್ಲಿ ರೂ. ೫,೨೬,೩೫೬ನ್ನು ೧೯೪೯-೫೦ರ ಸಾಲಿಗೆ ಸರಕಾರದ ಆದಾಯವಾಗಿ ಸೇರಿಸಿಕೊಳ್ಳಲಾಯಿತು. ಉಳಿದದ್ದರಲ್ಲಿ ರೂಪಾಯಿ ೨,೬೫,೦೪೧ನ್ನು ೫೦-೫೧ರಲ್ಲಿ 'ಹೆಚ್ಚು ಬೆಳೆಯಿರಿ' ಯೋಜನೆಗೆ ದೊರೆಯಬೇಕಿದ್ದ ಕೇಂದ್ರ ಸರಕಾರದ ಆಹಾರ ಮಂತ್ರಿಗೆ ದೊರೆಯದ ಕಾರಣ ವಿನಿಯೋಗಿಸಲಾಯಿತು. ಉಳಿದ ಹಣವು ಇನ್ನೂ ಸಮಗಟ್ಟಲು ನಿಂತಿದೆ. ಪಸೆ ಬೆಲ್ಲ ಯೋಜನೆಯನ್ನು ನಿಲ್ಲಿಸಲಾಗಿದೆ. ಹೆಚ್ಚು ಬೆಳೆಯಿರಿ ಮತ್ತು ಪಸೆ ಬೆಲ್ಲ ಯೋಜನೆಯ ಬಗ್ಗೆ ಕೇಂದ್ರದಿಂದ ೩ ಲಕ್ಷ ೧೯೫೧ಕ್ಕೆ ಬರಲಿದೆ. ಕೊಡಗಿನ ಮಾಲೇರಿಯಾ ಇಲಾಖೆಯ ಸರ್ವ ಜವಾಬ್ದಾರಿಯನ್ನು ೫೨-೫೩ರಿಂದ ನಾವೇ ವಹಿಸಿಕೊಳ್ಳಬೇಕಾಗಿದೆ.

೧-೪-೫೨ರಲ್ಲಿದ್ದ ರೂ. ೬೦೪೯,೬೦೭ ಶಿಲ್ಕಿನಲ್ಲಿ ರೂ. ೧೫ ಲಕ್ಷ ಕೇಂದ್ರ ಸರಕಾರದಲ್ಲಿ ೧¼ ದರದ ಬಡ್ಡಿಯ ಡಿಪಾಜಿಟ್ಟಾಗಿದೆ.

೧೯೫೧ ರಲ್ಲಿ ಕೊಡಗು ವ್ಯವಸಾಯ ಆದಾಯ ತೆರಿಗೆ ಆಕ್ಟ್, ಕೊಡಗು ಗ್ರಾಮ ಪಂಚಾಯಿತಿ ತಿದ್ದುಪಡಿ ಆಕ್ಟ್, ಕೊಡಗು ಮುನ್ಸಿಪಲ್ ರೆಗ್ಯುಲೇಶನ್ ತಿದ್ದುಪಡಿ ಆಕ್ಟ್, ಕೊಡಗು ಲ್ಯಾಂಡ್ ಡೆವಲಪ್‌ಮೆಂಟ್ ಆಕ್ಟ್, ಕೊಡಗು ಬಿಲ್ಡಿಂಗ್ (ಬಾಡಿಗೆ ನಿಯಂತ್ರಣ) ಆಕ್ಟ್ ಇವುಗಳಿಗೆ ಒಕ್ಕೂಟದ ಪ್ರೆಸಿಡೆಂಟರ ಅನುಮತಿ ದೊರೆತಿದೆ.

೧೯೫೧-೫೨ ರಲ್ಲಿ ಬತ್ತ ವ್ಯವಸಾಯದ ವಿಸ್ತೀರ್ಣವು ೮೯,೮೧೪ ಎಕ್ರೆಯಾಗಿದೆ. ಹಿಂದಿನ ವರ್ಷ ಇದು ೮೯೬೪೦ ಆಗಿತ್ತು. ಹೀಗೆ ೬೬೬ ಎಕ್ರೆ ಕಡಿಮೆಯಾಗಲು ಅಕಾಲ ಮಳೆಯು ಕಾರಣವಾಗಿದೆ. ವರ್ಷಕ್ಕೆ ೬೧,೬೫೦ ಟನ್ ಬತ್ತ ಅಥವ ೪೧,೧೦೦ ಟನ್ ಅಕ್ಕಿಯು ಅಂದಾಜುಮಾಡಲ್ಪಟ್ಟಿತ್ತು. ಕಾಫಿ ಮತ್ತು ಕಿತ್ತಳೆ ಫಸಲು ಚೆನ್ನಾಗಿತ್ತು. ಏಲಕ್ಕಿ ಬೆಳೆ ಕಡಿಮೆ ಇದ್ದಲ್ಲದೆ ಬೆಲೆಯಲ್ಲೂ ಇಳಿತವಿತ್ತು.

೧೯೫೧ ರಲ್ಲಿ ೪೮ ಮಾಜಿ ಸಿಪಾಯಿಗಳಿಗೆ ಭೂಮಿ ಕೊಡಲಾಯಿತು. ಈ ವರೆಗೆ ಒಟ್ಟು ೫೩೮ ಜನರಿಗೆ ಕೊಡಲಾಗಿದೆ. ಕಳೆದ ಫೆಬ್ರವರಿಯಲ್ಲಿ ಮಾಜಿಸಿಪಾಯಿಗಳ ಸ್ಥಿತಿಯನ್ನು ಪರಿಶೀಲಿಸುವ ಬಗ್ಗೆ ಕೇಂದ್ರ ಸರಕಾರದಿಂದ ಬಂದಿದ್ದ ಮೇಜರ್ ನಾಮಚಂದ್ರ ಇವರು ಕೊಡಗಿನ ಮಾಜಿ ಸಿಪಾಯಿಗಳ ಪುನರ್ನಿವೇಶನದ ಕಾರ್ಯವನ್ನು ತುಂಬಾ ಪ್ರಶಂಸಿದ್ದಾರೆ.

ರೆವಿನ್ಯೂ ಇಲಾಖೆಯಲ್ಲಿ ಸರ್ವೆ ಕೆಲಸವು ಹೆಚ್ಚಾದ್ದರಿಂದ ಒಂಭತ್ತು ತಾತ್ಕಾಲಿಕ ಶಾನುಬೋಗರನ್ನು ಹೆಚ್ಚಿಸಲಾಯಿತು. ಸೆಟ್ಲ್‌ಮೆಂಟ್ ಇಲಾಖೆಯಲ್ಲಿ ಅ. ಸೆಟ್ಲ್‌ಮೆಂಟ್ ಆಫೀಸರು, ಆರು ಸರ್ವೆಯರುಗಳು, ಎರಡು ಶಾನುಬೋಗರು, ಒಬ್ಬ ಟ್ರೇಸರು ಹೀಗೆ ಹೆಚ್ಚು ಮಾಡಲಾಯಿತು. ಪೊನ್ನಂಪೇಟೆ ಮತ್ತು ಶ್ರೀಮಂಗಲ ನಾಡುಗಳಲ್ಲಿ ಸೆಟ್ಲ್‌ಮೆಂಟ್ ಕೆಲಸ ಮುಗಿದಿದೆ. ೧೯೫೩ ರಿಂದ ಹೊಸ ಕಂದಾಯದ ದರವನ್ನು ಹಾಕುವುದಲ್ಲದೆ ೫ ವರ್ಷಗಳಲ್ಲಿ ಸೆಟ್ಲ್‌ಮೆಂಟ್ ಕೆಲಸವನ್ನು ಮುಗಿಸಲಾಗುವುದು.

೧೯೫೧ ರಲ್ಲಿ ೨,೫೦೦ ಎಕರೆ ಕಾಡು ಕಡಿದು ಟಿಂಬರ್ ಮಾರಾಟ ಮಾಡಿದ್ದಲ್ಲದೆ ಆ ಭಾಗದಲ್ಲಿ ತೇಗ ನೆಡಲಾಯಿತು. ಮಾಕುಟ್ಟ ರೇಂಜಿನಲ್ಲಿ ೧೬೪ ಎಕರೆಗಳ ಎರಡು ಕೂಪುಗಳನ್ನೂ, ಸಂಪಾಜೆಯಲ್ಲಿ ೭೫ ಎಕರೆಗಳ ಒಂದು ಕೂಪನ್ನೂ ರೂ. ೧,೯೫,೦೦೦ಕ್ಕೆ ಕೊಡಲಾಯಿತು. ಈ ವರ್ಷ ೭೫೦ ಎಕರೆ ಟಿಂಬರ್ ಕಡಿದು ಸುಮಾರು ೩ ಲಕ್ಷ ಘನ ಅಡಿ ಮರ ಮಾರುವದಲ್ಲದೆ ೧೦೦ ಟನ್ ಗಂಧ ಮಾರಲು ನಿಶ್ಚಯಿಸಿದೆ. ಈಗ ಇಲಾಖೆಯಲ್ಲಿ ೩೭ ಆನೆಗಳಿವೆ.

'ಸಿ' ಸಂಸ್ಥಾನಗಳ ಆಕ್ಟನ್ನು ಕೊಡಗಿನಲ್ಲಿ ಜಾರಿಗೆ ತಂದುದರಿಂದ ಆಡಳಿತದ ಖರ್ಚು ಹೆಚ್ಚಾಗಿದೆ. ಪೋಲೀಸು ಇಲಾಖೆಯಲ್ಲಿ ಒಬ್ಬ ಇನ್ಸ್‌ಪೆಕ್ಟರು, ೫ ಹೆ. ಕಾನ್ಸ್‌ಟೇಬಲರು, ೧೧೦ ಕಾನ್ಸ್‌ಟೇಬಲುಗಳನ್ನು ಚುನಾವಣೆಯ ಸಮಯದಲ್ಲಿ ಹೆಚ್ಚಿಸಲಾಗಿತ್ತು. ತಾತ್ಕಾಲಿಕವಾಗಿರುವ ವಯರ್‌ಲೆಸ್ ಕೇಂದ್ರವನ್ನು ಖಾಯಂ ಮಾಡಲಾಗಿದೆ.

ಕಳೆದ ಫೆಬ್ರವರಿಯಿಂದ ಉತ್ತರ ಕೊಡಗಿನಲ್ಲಿ ೨೦ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ತೆರೆಯಲಾಗಿದೆ. ಈ ಯೋಜನೆಯನ್ನು ದಕ್ಷಿಣ ಕೊಡಗಿಗೂ ವಿಸ್ತರಿಸಲಾಗುವದು. ಮೂಲ ಶಿಕ್ಷಣದಲ್ಲಿ ತರಬೇತು ಕೊಡಲಾಗುತ್ತಿದೆ. ಇಂಡಿಯಾ ಸರಕಾರವು ಮೂಲ ಶಿಕ್ಷಣ ಶಾಲೆಗಳನ್ನು ತೆರೆಯುವ ಅನುಮತಿ ಇತ್ತರೆ ಆಯಕಟ್ಟು ಕೇಂದ್ರಗಳಲ್ಲಿ ಹಾಗೆ ಮಾಡಲಾಗುವದು.

ಪ್ರಾಂತೀಯ ಕ್ಷಯರೋಗ ಅಧಿಕಾರಿಯೊಬ್ಬರನ್ನು ನೇಮಿಸಲಾಗಿದೆ. ವೀರಾಜಪೇಟೆ ಆಸ್ಪತ್ರೆಯಲ್ಲೂ ಎಕ್ಸ್‌ರೇ ಅನುಕೂಲತೆ ಮಾಡಲಾಗಿದೆ. ಮಡಿಕೇರಿ, ವೀರಾಜಪೇಟೆ, ಸೋಮವಾರಪೇಟೆ ಆಸ್ಪತ್ರೆಗಳಲ್ಲಿ ಕಣ್ಣು ನೋವಿಗೆ ಚಿಕಿತ್ಸೆಯ ಏರ್ಪಾಡು ಮಾಡಲಾಗಿದೆ. ಮಲೇರಿಯಾ ನಿವಾರಣಾ ಕೆಲಸ ಚೆನ್ನಾಗಿ ನಡೆದಿದೆ. ಮೂರು ಸಾರೆ ಪ್ರತಿ ಮನೆಗೆ ಡಿ. ಡಿ. ಟಿ. ಸ್ಪ್ರೇ ಮಾಡಲಾಗಿದೆ. ಒಟ್ಟು ೧,೯೯,೨೮೩

ಜನರಿರುವ ೩೮೫ ಗ್ರಾಮಗಳಲ್ಲಿ ಕೆಲಸ ಪೂರೈಸಲಾಗಿದೆ. ೭೨೧ ಹೊಸ ಮನೆ ನಿವೇಶನವೂ, ೫೧,೧೧೨ ಮಂದುವೇಕ್ಷಿಸೇಶನೂ ನಡೆದಿದೆ. ೧೨ ಮಂದಿ ೪೦೦ ಬೋರ್ ಹೋಲ್ ಲ್ಯಾಟ್ರಿನ್‌ಗಳನ್ನು ನಿರ್ಮಿಸಿದ್ದಲ್ಲದೆ ಗ್ರಾಮಗಳ ಬಾವಿಗಳಿಗೆ ಕ್ಲೋರಿನ್ ಹಾಕಲಾಗಿದೆ. ವ್ಯವಸಾಯ ಸಂಶೋಧನಾ ಕೇಂದ್ರದಲ್ಲಿ ೧೭೩ ಮಣ್ಣು ಪರೀಕ್ಷೆಯು ಕಾರ್ಯ ನಡೆದಿದೆ. ೧೫೩ ಕೆರೆಗಳ ರಿಪೇರಿಯಾಗಿ ೯೧೪ ಎಕ್ರೆ ಬತ್ತ ಬೆಳೆ ಆಗಿದೆ. ೯೬ ಕಟ್ಟೆಗಳಿಂದಾಗಿ ೫೨೧ ಎಕರೆ ಭೂಮಿಗೆ ನೀರು ದೊರೆಯುವಂತಾಗಿದೆ. ೨೨ ಜಿಲ್ಲೆಗಳ ಸೆಟ್ ಕಂಪೂಗಳು ವ್ಯವಸಾಯಗಾರರಿಗೆ ಸಹಾಯ ಕೊಡಲಾಗುತ್ತಿದೆ. ಕೊಡಗಿನಲ್ಲಿ ವ್ಯವಸಾಯ ಶಾಲೆಯೊಂದನ್ನು ತೆರೆಯಲಾಗುವದು.

ಸಾಕಷ್ಟು ಸಂಖ್ಯೆಯಲ್ಲಿ ಗೂಳಿಗಳು ಇಲ್ಲದ್ದರಿಂದ ಹಸುಗಳಿಗೆ ಕೃತಕ ಗರ್ಭದಾನದ ಉಪ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಇವುಗಳು ಆದರ್ಶ ಗ್ರಾಮ ಕೇಂದ್ರದ ಅಂಗವಾಗಿ ಕೆಲಸ ಮಾಡುತ್ತವೆ. ಕೋಳಿ ಸಾಕಲು ತಕ್ಕ ವ್ಯವಸ್ಥೆ ಮಾಡಿ ಅದಕ್ಕೆ ಒಬ್ಬ ಅಧಿಕಾರಿಯನ್ನು ನೇಮಿಸಲಾಗಿದೆ. ಮಡಿಕೇರಿಯಲ್ಲಿರುವ ಡೈರಿ ಫಾರಂನಿಂದ ೧೯೫೧ರಲ್ಲಿ ೩೭ ಸಾವಿರ ಪೌಂಡು ಹಾಲು ಮಾರಲಾಯಿತು. ಬೆಂಗಳೂರಿನ ಡೈರಿ ರಿಸರ್ಚ್ ಇನ್‌ಸ್ಟಿಟ್ಯೂಟಿನಿಂದ ಎರಡು ಹಸು ಮತ್ತು ನಾಲ್ಕು ಕರುಗಳನ್ನು ಕೊಂಡುಕೊಳ್ಳಲಾಯಿತು. ಈ ವರ್ಷ ಕೊಡ್ಲಿಪೇಟೆ, ಬಾಳೆಲೆ, ಮರೆನಾಡುಗಳಲ್ಲಿ ಗ್ರಾಮಾಂತರ ಆಸ್ಪತ್ರೆಗಳನ್ನು ತೆರೆಯಲಾಗುವುದು. ದನಗಳಿಗೆ ಕೃತಕ ಗರ್ಭದಾನ ಮಾಡುವ ವ್ಯವಸ್ಥೆಯನ್ನು ಎಲ್ಲಾ ಆಸ್ಪತ್ರೆಗಳಲ್ಲಿ ತೆರೆಯಲಾಗುವದು.

ಕೊಡಗು ಸಹಕಾರಿ ಬ್ಯಾಂಕಿಗೆ ದೀರ್ಘವಾಯಿದೆಯ ಸಾಲ ಕೊಡಲಿಕ್ಕಾಗುವಂತೆ ಒಬ್ಬ ಇನ್ಸ್‌ಪೆಕ್ಟರು ಮತ್ತೊಬ್ಬ ಸೂಪರ್‌ವೈಸರನ್ನು ನೇಮಿಸಲು ಅಂತ್ಯದ ವರೆಗೆ ಕ್ರಮ ವಹಿಸಲಾಗಿದೆ. ಇದರಲ್ಲಿ ಕೊಡ್ಲಿಪೇಟೆ ಸಹಕಾರಿ ಸಂಘಗಳನ್ನು ಸಹಕಾರ ಬ್ಯಾಂಕುಗಳು ತೆರೆಯಲ್ಪಟ್ಟವು. ಇಂಥಾ ಸಹಕಾರಿ ಬ್ಯಾಂಕುಗಳು ವಿವಿಧ ಭಾಗಗಳಲ್ಲಿ ಕೆಲಸ ಮಾಡುತ್ತವೆ. ಈ ವರ್ಷ ಮಡಿಕೇರಿ ಮತ್ತು ವಿರಾಜಪೇಟೆಗಳಲ್ಲಿ ಬ್ಯಾಂಕುಗಳನ್ನು ತೆರೆಯಲಾಗುವುದು.

ಈ ವರ್ಷ ಕೊಡಗು ಸಹಕಾರಿ ಬ್ಯಾಂಕಿನ ಮತ್ತು ಸಹಕಾರ ಸೊಸೈಟಿಗಳ ಲೆಕ್ಕಗಳನ್ನು ಚಾರ್ಟರ್ಡ್ ಲೆಕ್ಕಪರಿಶೋಧಕರಿಂದ ಪರಿಶೀಲಿಸುವ ಏರ್ಪಾಡು ಮಾಡಲಾಗಿದೆ. ರಿಸರ್ವ್ ಬ್ಯಾಂಕಿನ ಡೆ. ಗವರ್ನರ್ ಆಫೀಸರು ಕಳೆದ ಜನವರಿಯಲ್ಲಿ ಕೊಡಗಿಗೆ ಬಂದು ಇಲ್ಲಿಯ ಸಹಕಾರಿ ಚಳುವಳಿಯನ್ನು ಪರಿಶೀಲಿಸಿದರು.

ರಸ್ತೆ ರಿಪೇರಿಯ ಬಗ್ಗೆ ಸರಕಾರವು ಹೊಸ ರೀತಿಯನ್ನು ಅನುಸರಿಸಿದೆ. ರಸ್ತೆ ಮಾಡಿದ ಭಾಗವನ್ನು ತಾರು ಹಾಕಿ ಈ ರೀತಿ ಕೆಲವು ವರ್ಷಗಳಲ್ಲಿ ಕೊಡಗಿನ ಮುಖ್ಯ ರಸ್ತೆಗಳನ್ನು ಪೂರ್ತಿಗೊಳಿಸಲಾಗುವುದು. ಈ ವರ್ಷ ಕೊಡಗಿನಲ್ಲಿ ಮೂಲ ಶಿಕ್ಷಣ ಮತ್ತು ವ್ಯವಸಾಯ ಶಾಲೆ ಕಟ್ಟಡವನ್ನೂ, ಕೊಡಿಗೆಯಲ್ಲಿ ಡೈರಿ ಫಾರಂ ಕಟ್ಟಡವನ್ನೂ, ಮಡಿಕೇರಿಯಲ್ಲಿ ಶಾಲೆ ಕಟ್ಟಡ, ಮಡಿಕೇರಿಯ ಮುಖ್ಯ ಆಸ್ಪತ್ರೆ ಕಟ್ಟಡ ಸುಮಾರು ೫೬,೫೦೦ ಖರ್ಚಿನ ರಿಪೇರಿ, ಕೆಲಸ, ಮಡಿಕೇರಿ ಆಸ್ಪತ್ರೆಗೆ ನೀರಿನ ವ್ಯವಸ್ಥೆ ಮೊದಲಾದುವನ್ನು ಮಾಡಲಾಗುವದು (ಚೀಫ್ ಕಮಿಷನರ ಭವನದಲ್ಲಿ ಸರಕಾರಿ ಕಚೇರಿ ಕೆಲಸಗಳನ್ನು ನೈಗೊಳ್ಳಲಾಗುವದೆಂದರೆ) ಈ ವರ್ಷ ಬೇಕಾದ ಸೇತುವೆ ಕೆಲಸವನ್ನು ಕೈಗೊಳ್ಳಲಾಗುವದೆಂದು ನುಡಿದರು. ಯೋಗ್ಯ ಕಂಟ್ರಾಕ್ಟರು ದೊರೆಯದಿದ್ದರೆ ಇಲಾಖೆಯವರೇ ಈ ಕೆಲಸ ಮಾಡುವರೆಂದೂ ಹೇಳಿದರು.

೧೯೫೨–೫೩ರಲ್ಲಿ ಆದಾಯವು ರೂ. ೬೦,೧೧,೦೦೦ ಬರುವದೆಂದೂ ಖರ್ಚು ರೂ. ೮೯,೮೩,೦೦೦ ಕಳೆದು ರೂಪಾಯಿ ೨೮೦೦೦ ಉಳಿ ವರಿಹೋಗುವದೆಂದೂ ಸಾರಿದರು. ೧-೪-೫೩ರ ಶಿಲ್ಕು ಸೇರಿಸಿದರೆ ವರ್ಷಾಂತ್ಯದಲ್ಲಿ ಅಂದರೆ ೩೧-೩-೫೩ರಲ್ಲಿ ರೂ ೭೮,೬೭,೭೦೭ ಉಳಿಯುವದೆಂದೂ ಹೇಳಿದರು. ಈ ವರ್ಷ ನ್ಯಾಷನಲ್ ಎಕ್ಸ್‌ಟೆನ್ಶನ್‌ಗಾಗಿ ರೂ. ೯೩,೦೦೦ ಪ್ರಾಥಮಿಕ ವಿದ್ಯಾ ಖರ್ಚಿಗಾಗಿ ರೂ ೪,೫೯೦೦೦ ವಯಸ್ಕರ ಶಿಕ್ಷಣ ಯೋಜನೆಗಾಗಿ ರೂ. ೪೭,೦೦೦ ಇಡಲಾಗಿದೆಯೆಂದು ಹೇಳಿದರು. ಜಿಲ್ಲಾ ಬೋರ್ಡ್ ಆಸ್ಪತ್ರೆಗಳಿಗಾಗಿ ರೂ ೧ ಲಕ್ಷ, ಹೆಬ್ಬಾಲೆ ನೀರಾವರಿ ಯೋಜನೆಗಾಗಿ ರೂ. ೫೦,೦೦೦, ಗ್ರಾಮಾಂತರಗಳಲ್ಲಿ ಮಲೇರಿಯಾ ಕೆಲಸಕ್ಕೆ ರೂ ೧೦,೦೦೦ ಇಡಲಾಗಿದೆ. ಹೊಂಗಾರು ಟೆಸ್ಟ್ ಕಮಿಷನ್ ಯೋಜನೆಗೆ ರೂ ೭೬,೫೦೦, ಫಾರೆಸ್ಟ್ ಯೋಜನೆಗೆ ರೂ ೧೦,೦೦೦ ವ್ಯವಸಾಯ ಶಾಲೆಗೆ ರೂ. ೪೨,೦೦೦, ಹಾಳು ಭೂಮಿಯನ್ನು ವ್ಯವಸಾಯಕ್ಕೆ ತರಲು ರೂ ೧,೫೧,೨೦೦, ಸಿಬ್ಬಂದಿಗೆ ರೂ. ೮,೦೦೦ ಖರ್ಚು ಮಾಡಲಾಗುವದೆಂದೂ ಹೇಳಿದರು. ಗ್ರಾಮ ಗೃಹ ಕೈಗಾರಿಕೆಯ ಅಭಿವೃದ್ಧಿಗೆ ರೂ. ೫೦,೦೦೦, ಲೇಬರ್ ವೆಲ್‌ಫೇರ್‌ಗಾಗಿ ರೂ. ೨೫,೦೦೦, ಗ್ರಾಮಾಂತರ ರಸ್ತೆಗಳಿಗಾಗಿ ೧,೪೯,೭೦೦ (ರೋಡ್ ಫಂಡ್ ಕೇವಲ ೧೨,೦೦೦ ಇಡಲಾಗಿತ್ತು) ಜಿಲ್ಲಾ ಬೋರ್ಡಿನ ಉದ್ಯೋಗಿಗಳ ಸಂಬಳ ಬಾಬ್ತು ರೂ. ೨ ಲಕ್ಷ, ಟೌನ್ ಮುನಿಸಿಪಾಲಿಟಿಗೆ ರೂ. ೧ ಲಕ್ಷ ಕೊಡಲಾಗುವದೆಂದು ಸ್ಪಷ್ಟಪಡಿಸಿದರು.

ಇಂಡಿಯಾ ಸರಕಾರ ನೇತೃತ್ವದಲ್ಲಿ ವಿಸ್ತಾರವಾದ ಪಂಚವಾರ್ಷಿಕ ಯೋಜನೆಯು ವಿಚಾರ ಮಾಡಲಾಗಿದೆ. ಈ ಯೋಜನೆಯು ಗ್ರಾಮದ ಜನತೆಯ ಬಹಳಷ್ಟು ಜನರ ಅನುಕೂಲಕ್ಕೆ, ಹೆಂಗಸರ ಮತ್ತು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಗಮನಕೊಡುತ್ತದೆ. ಇಂಡಿಯಾ ಸರಕಾರವು ಈಗ ಪ್ರಥಮವಾಗಿ ಉತ್ತರ ಕೊಡಗಿನ ೧೦೦ ಗ್ರಾಮಗಳನ್ನು ಆರಿಸಿಕೊಂಡಿದೆಯೆಂದೂ ಈ ಮೂರು ವರ್ಷಗಳಿಗೆ ಈ ಗ್ರಾಮಗಳಿಗಾಗಿ ರೂ ೨೨ ಲಕ್ಷ (ಇದರಲ್ಲಿ ೬¾ ಲಕ್ಷ ಕೊಡಗು ಸರಕಾರದ್ದು) ವೆಚ್ಚವಾಗುವದೆಂದೂ ಹೇಳಿದರು.

'ಸಿ' ಸಂಸ್ಥಾನಗಳ ಆಕ್ಟು ಜಾರಿಯಲ್ಲಿ ಬಂದ ಕಾರಣ ಮತ್ತು ಬಜೆಟ್ ವಿಧಾನದಲ್ಲಿ ಬದಲಾವಣೆಗಳಾದ ಕಾರಣ ಈ ವರ್ಷ ಬಜೆಟ್ ತಯಾರಿಸ ಸ್ವಲ್ಪ ಕಠಿಣವಾಯಿತು. ಈ ಸಂದರ್ಭದಲ್ಲಿ ತಾವು ಕೃಪೆಯಿಂದ ಸಕಾಲದಲ್ಲಿ ಅದು ತಯಾರಾಗುವಂತೆ ಅಧಿಕಾರಿಗಳು ಸಹಕರಿಸಿದ್ದಾರೆ. ಈಗ ಆಡಳಿತದಲ್ಲಾದ ಬದಲಾವಣೆಗಳು ಮಾನ್ಯ ಸದಸ್ಯರಿಗೆ ತಿಳಿದಿರಬಹುದು. ಈ ಪರಿವರ್ತನೆಯ ಕಾಲದಲ್ಲಿ ಕೆಲವು ಅಧಿಕಾರಿಗಳು ಶಕ್ತಿ ಮೀರಿ ಕೆಲಸ ಮಾಡಬೇಕಾಗಿ ಬಂತು. ಎಲ್ಲರೂ ದೇಶಕ್ಕಾಗಿ ತಮ್ಮ ಶಕ್ತಿಗನುಸಾರ ಕರ್ತವ್ಯ ಸಲ್ಲಿಸಿದ್ದಾರೆ. ಅವರ ಉತ್ತಮ ಸೇವೆಯನ್ನು ಕೊಂಡಾಡಬೇಕಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮುಕ್ತಾಯ ಮಾಡುವ ಮುನ್ನ ಒಂದು ಮಾತನ್ನು ಆದರ ವಿಸ್ತೀರ್ಣದ ಅಳತೆಯಿಂದ ಅಳೆಯುವ ಕಾಲ ಕಳೆದು ಹೋಯಿತೆಂದು ಹೇಳಬಯಸುತ್ತೇನೆ. ದೇಶದ ವಿಸ್ತೀರ್ಣವು ಪ್ರಧಾನವಲ್ಲ, ಅದರಲ್ಲಿ ಜೀವಿಸುವ ಜನರು ಮುಖ್ಯ. ನಮ್ಮ ಜನತಾ ಸೇವೆ, ಸಾಮೂಹಿಕ ದೃಷ್ಟಿ, ಧೈರ್ಯ ಭಾವಗಳ ಐಕ್ಯತೆಯಿಂದ ನಾವು ಅಳೆಯಲ್ಪಡುತ್ತೇವೆ. ದೇಶದ ಅಭಿವೃದ್ಧಿಯು ಮುಂದೆ ಜನತೆಯ ದೃಷ್ಟಿಯಿಂದ ಅದರ ಅಭಿವೃದ್ಧಿ ಯತ್ನಗಳಿಗೆ ಅವರೇ ಕಾರಣರಾಗಿದ್ದಾರೆ. ಸ್ವಾತಂತ್ರ್ಯವು ನಮಗೆ ತಂದುಕೊಟ್ಟಿರುವ ಈ ಜವಾಬ್ದಾರಿಯನ್ನು ತಿಳಿದುಕೊಂಡು ಜನತಾ ಸೇವೆಗಾಗಿ ಭಕ್ತಿ ಸೇವೆ ಸಲ್ಲಿಸಲು ಮತ್ತು ಅವಶ್ಯಬಿದ್ದಾಗ ಸರ್ವಹಿತದೃಷ್ಟಿಯಿಂದ ತ್ಯಾಗ ಮಾಡಲು ತಯಾರಾಗಿ ನಾವು ಹೆಮ್ಮೆಪಡಬಹುದಾದ ಒಂದು ಆದರ್ಶವನ್ನು ಸಾಧಿಸಬೇಕಾಗಿದೆ. ತ್ಯಾಗ, ಸೇವೆ ಮತ್ತು ಕರ್ತವ್ಯದಕ್ಷತೆಗಳಿಗೆ ಹೆಸರಾದ ಕೊಡಗಿನ ಜನರು ಈ ಹೊಸ ಜವಾಬ್ದಾರಿ ಸರಕಾರವನ್ನು ಜಯಪ್ರದ ನಡೆಸುವರೆಂಬ ವಿಶ್ವಾಸ ನನಗೆ ಪೂರ್ತಿ ಇದೆ. ನನ್ನ ಅಂಶದ ಸರಕಾರದ ವಿಚಾರ ಹೇಳುವುದಾದರೆ ನಾವು ಕೊಡಗಿನ ಜನತೆಯ ಹಿತದೃಷ್ಟಿಯಿಂದ, ಜಾತಿ, ಮತ ಧರ್ಮ ಬೇಧಗಳನ್ನೆಣಿಸದೆ ಎಲ್ಲರ ಅಭ್ಯುದಯಕ್ಕಾಗಿ ದುಡಿಯಲು ಪ್ರತಿಜ್ಞಾಬದ್ಧರಾಗಿದ್ದೇವೆ. ಜನತೆಯು ಕೊಡುವ ಸಹಕಾರ ಮತ್ತು ಈ ಸಭೆಯ ಪ್ರತಿ ಸದಸ್ಯನು ಸರಕಾರಕ್ಕೆ ಕೊಡುವ ಬೆಂಬಲದ ಮೇಲೆ ಮುಂದಿನ ಭವಿಷ್ಯವು ಆಧರಿಸಿದೆ.

ಈ ಬಜೆಟ್ಟಿನಲ್ಲಿ ದೇಶದ ಅಭ್ಯುದಯಕ್ಕೆ ಕಾರಣವಾಗಬಲ್ಲ ಅನೇಕ ಕಾರ್ಯಕಲಾಪಗಳ ರೂಪರೇಷೆ ಇದೆ. ಈ ಸಭೆಯು ಪ್ರತಿಯೊಬ್ಬ ಸದಸ್ಯನೂ ಕೂಡ ಈ ಉತ್ತಮ ಮತ್ತು ಘನತರ ಜವಾಬ್ದಾರಿಯ ಕಾರ್ಯಕಾರಿಯಾಗಿ ಮಾಡಿ ಸಹಕರಿಸುವರೆಂದು ಆಶಿಸುತ್ತೇನೆ.

For Sale.

One Aust'n Car 1949 Model entirely owner driven—Has run 10,000 miles Price Rs. 6500/- or nearest offer.

Apply to:—

M. M. GANAPATHY,
Boikere Estate,
Suntikoppa P. O.

2-2

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ರಿಸರ್ವ್ ಬ್ಯಾಂಕ್ ಆಕ್ಟ್, ಶೆಡ್ಯೂಲ್ಡ್ ಬ್ಯಾಂಕ್ ಆಗಿ ಸ್ಥಾಪನೆ. (೧೯೨೧ರಲ್ಲಿ ಸ್ಥಾಪಿತವಾದ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ನೈರವೇರಿಸಲಾಗುವುದು.

ಈ ಬ್ಯಾಂಕಿನಿಂದ ಜಿಲ್ಲೆಯ ಸಹಕಾರ ಸಂಘಗಳಿಗಲ್ಲದೆ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ಮುಂತಾದ ಒಡವೆಗಳ ಮೇಲೆ ಸಾಲ ಕೊಡಲಾಗುವುದು. ಇತರ ಬ್ಯಾಂಕುಗಳ ಡ್ರಾಫ್ಟುಗಳನ್ನು ಮಾಡಲ್ಪಡುವುವು. ಟ್ರಸ್ಟಿ, ಮಾರ್ಚಂಟ್ ಮತ್ತು ವಿಶ್ವಭಾರತಿ ಇನ್ಷೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಪ್ಲಾಂಟರ ದೀರ್ಘ ಕಾಲದ ಸಾಲದ ಕಾಫಿಯ ಮೇಲೆ ದೀರ್ಘ ಕಾಲದ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಸಿ. ಅಪ್ಪಯ್ಯ,
ಪ್ರೆಸಿಡೆಂಟ್ ಮತ್ತು ಮ್ಯಾನೇಜರು.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Licence No. 60.
Licenced to Post without Prepayment.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 6-0-0.

ಸಂಪುಟ ೩೧ | ತಾರೀಕು ೨೫-೭-೧೯೫೨ನೇ ಶುಕ್ರವಾರ | ಸಂಚಿಕೆ ೮

THE JUBILEE INSURANCE CO., LTD.

One of the very few in the feild of Insurance that has been declaring BONUS to its policy holders from its very inseception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmond Road, Bangalore.

Our Chief Agents:-THE ORIENTAL ENTERPRISES, BANGALORE 1

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದ ದಿನದಿಂದಲೂ ವಿಮೆದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:—ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,

17 41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

ಬಜ್ಜೆಟ್ಟಿನ ಮೇಲೆ

ಸದಸ್ಯರ ಅಭಿಪ್ರಾಯಗಳು.

ತಾರೀಕು ೨೧ರ ಮಧ್ಯಾಹ್ನದ ಮೇಲೆ ಬಜ್ಜೆಟ್ಟಿನ ಮೇಲೆ ಮೆಂಬರರ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅನುಕೂಲವಾಗಿತ್ತು. ಅವರ ಅಭಿಪ್ರಾಯಗಳ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಶ್ರೀ ಪಿ. ಐ. ಬೆಳ್ಯಪ್ಪನವರು

'ಕೊಡಗಿನ ಜನಪ್ರಿಯ ಸರಕಾರದ ಪ್ರಥಮ ಬಜ್ಜೆಟ್ ಮೀಟಿಂಗಿನ ಈ ಚಾರಿತ್ರಿಕ ಸಂದರ್ಭವು ಯಾವುದೇ ದೇಶಭಕ್ತನಿಗೆ ಸಂತೋಷಕರವಾಗಿರಬೇಕು. ೧೯೩೦ರಿಂದಲೂ ಜೈಲು ವಾಸದ ಸಮಯದಲ್ಲಲ್ಲದೆ ಕೊಡಗಿನ ಶಾಸನ ಸಭೆಯ ಸದಸ್ಯನಾಗಿರುವ ಭಾಗ್ಯ ಪಡೆದ ನನಗೆ ಇನ್ನಷ್ಟು ಸಂತೋಷವಾಗಬೇಕು. ೧೯೪೭ರಲ್ಲಿ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ದೊರೆತಾಗ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಮಹಾತ್ಮರ ಮುಂದಾಳ್ತನದಲ್ಲಿ ನನ್ನ ಅಲ್ಪ ಸೇವೆಯನ್ನು ಮಾತೃಭೂಮಿಗೆ ಸಲ್ಲಿಸಿದ ನನಗೆ ನನ್ನ ಶ್ರಮಕ್ಕೆ ಫಲ ದೊರೆತುದನ್ನು ಕಂಡು ಆನಂದವಾಯಿತು. ಅನಂತರ ನಾವು ನಮ್ಮ ದೇಶದ ಭವಿಷ್ಯದ ಕಡೆಗೆ ದೃಷ್ಟಿ ಹರಿಸಿದೆವು. ನಾವು ಕೇಂದ್ರ ಶಾಸನ ಸಭೆಯಲ್ಲಿದ್ದ ನಮ್ಮ ಪ್ರತಿನಿಧಿಯು ಜತೆಗೂಡಿ ಮಾಡಿದ ಕೆಲಸ ಮತ್ತು ಚೀಫ್ ಕಮಿಷನರ್ ಪ್ರಾಂತಗಳಲ್ಲಿ ಪ್ರಾಮುಖ್ಯವಾಗಿ ದೆಹಲಿಯಲ್ಲಿ ತೆಗೆದುಕೊಂಡ ಪ್ರಯತ್ನದಿಂದ ಕೊಡಗು ಪ್ರತ್ಯೇಕವಿದ್ದು ಜವಾಬ್ದಾರಿ ಸರಕಾರ ಪಡೆಯುವಂತಾಯಿತು. ನಮ್ಮ ಒಗ್ಗಟ್ಟಿನ ಪ್ರಯತ್ನ ಮತ್ತು ಜನತೆಯ ಬಲದಿಂದ ಕೊಡಗನ್ನು ವಿಲೀನಗೊಳಿಸುವ ಪ್ರಯತ್ನವನ್ನು ಜಯಪ್ರದವಾಗಿ ನಿವಾರಿಸಲಾಯಿತು. ಈ ಒಗ್ಗಟ್ಟಿನ ನಮ್ಮ ಪ್ರಯತ್ನದ ಫಲವೇ ಇಂದಿನ ಈ ಪ್ರಜಾ ಸರಕಾರ. ನಮ್ಮ ಈ ಚಳವಳಿಯ ಕಾಲದಲ್ಲಿ ಇಂಡಿಯಾ ಸರಕಾರದವರು ಪ್ರಾಮುಖ್ಯವಾಗಿ ಪಂಡಿತ ನೆಹರೂ, ಲೇಟ್ ಸರ್ದಾರ್ ಪಟೇಲ್ ಮತ್ತು ರಾಜಗೋಪಾಲಾಚಾರಿಯವರು ನಮಗೆ ಸಹನೆ ತೋರಿ ಇಂದಿನ ಈ ಸ್ಥಿತಿಗೆ ನಾವು ಮುಟ್ಟಲು ಸಹಾಯ ಮಾಡಿದ್ದಾರೆ. ಅದರಿಂದ ನಮ್ಮ ದೇಶದ ಕೃತಜ್ಞತೆಯನ್ನು ಅವರಿಗೆ ಸಲ್ಲಿಸುವುದು ಕರ್ತವ್ಯವಿದೆ. ಈ ಪ್ರಾಮುಖ್ಯ ಸಂದರ್ಭದಲ್ಲಿ ಭಾರತ ಒಕ್ಕೂಟಕ್ಕೂ, ನಮ್ಮ ಮಹಾ ಪ್ರಧಾನಿ ಪಂಡಿತ ನೆಹರೂರವರಿಗೂ ನಮ್ಮ ವಿಧೇಯತೆಯನ್ನೂ ಸಹಕಾರವನ್ನೂ ನೀಡುವ ಪ್ರತಿಜ್ಞೆ ಮಾಡಲು ಮರೆಯಬಾರದು.

ಕಳೆದ ಚುನಾವಣೆಯಲ್ಲಿ ಕಾಂಗ್ರೆಸಿಗರಾದ ನಾವು ಕೆಲವರು ಪ್ರತ್ಯೇಕವಾದಿ ನೆಲೆಯಿಂದ ಚುನಾವಣೆಗೆ ನಿಂತೆವು. ದೇಶದ ಭವಿಷ್ಯದ ಬಗ್ಗೆ ಜನತೆಯ ಅಭಿಪ್ರಾಯವನ್ನು ತಿಳಿಯುವುದೇ ಗುರಿಯಾಗಿತ್ತು. ಆದರೆ ಬೇರೆ ಯಾರೂ ಸಂಯೋಜನಾ ನೆಲೆಯಿಂದ ಚುನಾವಣೆಗೆ ನಿಲ್ಲದ ಕಾರಣದಿಂದ ದೇಶದ ಭವಿಷ್ಯದ ವಿಚಾರದಲ್ಲಿ ತಮ್ಮಭಿಪ್ರಾಯ ವ್ಯಕ್ತ ಮಾಡುವ ಅನು ಜನತೆಗೆ ದೊರೆಯಲಿಲ್ಲ. ಆದರೆ ನಮ್ಮ ಗುರಿಯಾದ ಪ್ರತ್ಯೇಕ ಕೊಡಗಿಗೆ ಜವಾಬ್ದಾರಿ ಸರಕಾರವು ದೊರೆತುದರಿಂದ ಜನತೆಯ ಹಿತಕ್ಕಾಗಿ ಅದನ್ನು ಉಳಿಸಿಕೊಳ್ಳುವುದು ಹಿತವಾಗಿದೆ. ಈ ದೃಷ್ಟಿಯಿಂದ ಕಾಂಗ್ರೆಸ್ಸಿನಲ್ಲಿ ನಂಬಿಕೆ ಇಟ್ಟು ಪಂಡಿತ ನೆಹರೂರವರ ಮುಂದಾಳ್ತನದಲ್ಲಿ ವಿಶ್ವಾಸವಿಟ್ಟ ನಾವು ಇಂದು ಮಂತ್ರಿಮಂಡಳ ರಚಿಸಿರುವ ಕಾಂಗ್ರೆಸ್ ಪಕ್ಷಕ್ಕೆ ಸಹಕಾರವನ್ನು ನೀಡುವೆವು. ಈ ಸಹಕಾರವು ಏಕಮುಖವಾಗದೆ ಇನ್ನು ಒಟ್ಟಿನ ಸಹಕಾರ ಮತ್ತು ಸಂಘಟಿತ ಕಾರ್ಯ ಬೇಕಾದ ಅನುವು ಕಲ್ಪಿಸಲ್ಪಡುವುದೆಂದು ಆಶಿಸುತ್ತೇನೆ. ಇಲ್ಲಿ ಇಂಡಿಯಾ ಸರಕಾರದ ಗೃಹ ಮಂತ್ರಿ ಡಾ. ಕಾಟ್ಜೂರವರು ಈ ಸಭೆಯನ್ನು ಉದ್ಘಾಟಿಸಿದಾಗ ಹೇಳಿದ ಮಾತುಗಳ ನೆನಪಿಗೆ ಬರುತ್ತವೆ. ಕೊಡಗಿನಲ್ಲಿ ಈ ಪ್ರಜಾಪ್ರಭುತ್ವ ಸರಕಾರವನ್ನು ಜಯಪ್ರದವಾಗಿ ನಡೆಸಲು ಬೇಕಾದ ಹಣ ಮತ್ತು ದಕ್ಷರಿದ್ದಾರೆ. ಆದರೆ ಜನತೆಯ ಸಹಕಾರ ಇದಕ್ಕೆ ಅಗತ್ಯ. ನಮ್ಮ ಚೀಫ್ ಕಮಿಷನರೂ ಮುಖ್ಯ ಮಂತ್ರಿಯವರೂ ತತ್ಕಾಲ ಸಂಯೋಜನೆಯ ಪ್ರಶ್ನೆ ಇಲ್ಲವೆಂದೂ ಎಲ್ಲರೂ ಸಹಕರಿಸಿ ದೇಶದ ಈ ಹಿತದೃಷ್ಟಿಯಿಂದ ಕೆಲಸ ಮಾಡಬೇಕೆಂದೂ ಮಾಡಿದ ಅಪೀಲು ಸಮಯೋಚಿತವಾಗಿದೆ. ಅದರಿಂದ ಆಡಳಿತದ ಬಗ್ಗೆ ನಾವು ಮಾಡುವ ಯೋಗ್ಯ ಟೀಕೆಯು ವಿಧಾಯಕವಾದುದೆಂದೂ, ಅದನ್ನು ಹಾಗೆಯೇ ಸರಿಗಣಿಸಬೇಕೆಂದೂ ಆಶಿಸುತ್ತೇನೆ.

ಬಜ್ಜೆಟ್ಟಿನ ವಿಷಯದಲ್ಲಿ ವಿವರವಾದ ಟೀಕೆ ಮಾಡಲು ಇಚ್ಛಿಸುವುದಿಲ್ಲವಾದರೂ ಈ ಪ್ರಥಮ ಬಜ್ಜೆಟ್ಟು ಸಮತೂಗಲ್ಪಟ್ಟ ಬಜ್ಜೆಟ್ಟಾದುದು ಯೋಗ್ಯ. ದೇಶದ ಹಿತ ಕಾರ್ಯಗಳಿಗಾಗಿ ಖರ್ಚು ಸುಮಾರು ೮೯ ಲಕ್ಷವೆಂದು ನಿರ್ಧರಿಸಿದ್ದರಿಂದ ಆದಾಯವನ್ನು ಹೆಚ್ಚಿಸಲೇ ಬೇಕಾಯಿತು. ಕಳೆದ ವರ್ಷಕ್ಕಿಂತ ಈ ವರ್ಷ ಖರ್ಚು ೧೭ ಲಕ್ಷದಷ್ಟು ಏರಿದೆ. ಇದಕ್ಕಾಗಿ ಕಳೆದ ವರ್ಷದ ಮಿಗತೆ ೪೬ ಲಕ್ಷವಿದ್ದು ಫಾರೆಸ್ಟ್ ಉತ್ಪತ್ತಿಯನ್ನು ೧೩ ಲಕ್ಷ ಏರಿಸಲಾಗಿದೆ. ಫಾರೆಸ್ಟ್ ಇಲಾಖೆಯಿಂದ ೪೦ ಲಕ್ಷ ಸರಕಾರದ ಆದಾಯದ ಮೂಲ ಏರಿಗೆ. ಅಂದರೆ ಇಂದು ಟಿಂಬರ್ ಬೆಲೆಯು ಹೆಚ್ಚಿದ್ದುದರಿಂದಾಗ ನಿಶ್ಚಯಿಸಿ ಆದಾಯ. ಒಂದು ಬೇಸಾಯದ ಹೆಚ್ಚು ಎಂಬ ಮನಗಾಣ ಮಾಡಬೇಕಾಗಿದೆ. ವರ್ಕಿಂಗ್ ಪ್ಲಾನಿನವರು ಅಂದಾಜು ಮಾಡಿರುವ ೩೦೦ ಎಕರೆಗಳನ್ನು ಮೀರಿ ೭೦೦ ಎಕರೆಗಳನ್ನು ಕಡಿಯಲು ನಿರ್ಧರಿಸುವುದು ಸರಿಯಲ್ಲ. ಈ ಪ್ರಾಮುಖ್ಯ ವಿಚಾರದಲ್ಲಿ ಹೆಚ್ಚು ಆಳವಾಗಿ ಆಲೋಚಿಸಿ ಕಾರ್ಯಕ್ರಮ ಕೈಗೊಳ್ಳಬೇಕು. ಹೊಸ ಸುಧಾರಣೆಯ ಕಾರಣ ಹೆಚ್ಚಿನ ಸಿಬ್ಬಂದಿ ಅಗತ್ಯವೆಂದು ಒಪ್ಪಬಹುದಾದರೂ ಗಜೆಟೆಡ್ ಮತ್ತು ಹೆಚ್ಚು ವೇತನದ ಉದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಕೊಡಗಿನ ಆದಾಯ ಮತ್ತು ಜನಸಂಖ್ಯೆಯ ದೃಷ್ಟಿಯಿಂದ ಇದು ಸರಿಯಲ್ಲ. ಈ ನಾಲ್ಕೈದು ಜನ ಅಧಿಕಾರಿಗಳನ್ನು ಹೊರಗಿನಿಂದ ತರಿಸಿದ್ದು ಇಲ್ಲಿಯ ಉದ್ಯೋಗಿಗಳಲ್ಲಿ ಒಂದು ರೀತಿಯ ಅತೃಪ್ತಿಯನ್ನುಂಟುಮಾಡಿದೆ. ಈ ರೀತಿ ಅಧಿಕಾರಿಗಳಲ್ಲಿ ಅತೃಪ್ತಿಯಾಗದಂತೆ ನೋಡಿಕೊಳ್ಳಬೇಕು. ಪ್ರಜಾಪ್ರಭುತ್ವ ಸರಕಾರದಲ್ಲಿ ಮಂತ್ರಿಮಂಡಳವು ಸರಕಾರದ ನೀತಿಯನ್ನು ನಿರ್ಣಯಿಸುವ ಹಕ್ಕನ್ನು ಪಡೆದಿದ್ದರೂ ಪ್ರಜಾಪ್ರಭುತ್ವದ ನೀತಿಯಂತೆ ಶಾಸನ ಸಭೆಯನ್ನು ಕೇಳಿ ತೀರ್ಮಾನಿಸುವುದು ಯುಕ್ತ. ಇದು ಪ್ರಥಮ ಶಾಸನ ಸಭಾ ಮೀಟಿಂಗಾದರೂ ಆಡಳಿತದ ಅನೇಕ ನೀತಿಯ ಬಗ್ಗೆ ಪತ್ರಿಕೆಗಳಲ್ಲಿ ಮಂತ್ರಿಗಳು ಆಗಲೇ ಹೇಳಿಕೆ ಕೊಟ್ಟಿರುವುದು ಕಂಡುಬರುವುದು.

ಕಡೆಯದಾಗಿ ಬಜ್ಜೆಟ್ಟಿನಲ್ಲಿಟ್ಟ ಹಣವು ಆಯಾಯ ಕೆಲಸಗಳಿಗೆ ಈ ವರ್ಷವೇ ಖರ್ಚಾಗಬೇಕು. ಅಧಿಕಾರದಲ್ಲಿರುವ ನನ್ನ ಸ್ನೇಹಿತರಿಗೆ ನನ್ನ ಕಿವಿಮಾತೆಂದರೆ ಪಂಡಿತ ಜವಾಹರರು, ರಾಜಗೋಪಾಲಾಚಾರಿಯವರು ಹೇಳಿರುವಂತೆ ಹಿಂದೂದೇಶದ ಹಿರಿದಾದ ಸಂಸ್ಥೆ ಕಾಂಗ್ರೆಸ್ಸು ಚುನಾವಣೆಯಲ್ಲಿ ಜಯಶೀಲವಾಗಿ ವಿವಿಧ ಪ್ರಾಂತಗಳಲ್ಲಿ ಮಂತ್ರಿ ಮಂಡಳ ರಚಿಸಿದೆ. ಆದರೆ ಅಧಿಕಾರವಪ್ಪಿರುವವರು ತಾವು ರಚಿಸಿದ ಸರಕಾರವು ಒಂದು ಪಕ್ಷಕ್ಕಾಗಿರುವ ಸರಕಾರವೆಂಬುದನ್ನು ಮರೆಯಬಾರದು. ಅದು ಎಲ್ಲಾ ಜನತೆಯ ಸರಕಾರವಾಗಿರಬೇಕಲ್ಲದೆ ಹಾಗೆ ತೋರುವಂತೆಯೂ ಇರಬೇಕು.

ಶ್ರೀ ಹರಿಜನ ಸಂಜನವರು

'ಜನಪ್ರತಿನಿಧಿಗಳು ತಯಾರಿಸಿದ ಈ ಪ್ರಥಮ ಬಜ್ಜೆಟ್ಟಿನ ವಿಚಾರ ಚರ್ಚಿಸುವುದು ಸಂತೋಷ. ಹಿಂದುಳಿದ ವರ್ಗದವರಿಗೆ ಯೋಗ್ಯ ಪ್ರಾತಿನಿಧ್ಯ ದೊರೆತುದು ತುಂಬಾ ಸಂತೋಷ. ಫಾರೆಸ್ಟ್ ಇಲಾಖೆಯ ಉತ್ಪನ್ನ ೧೩ ಲಕ್ಷ ಬರುವುದೋ ಎಂಬ ಸಂಶಯವಿದೆ. ಹೇಗೂ ಇದು ಉಳಿತಾಯದ ಬಜ್ಜೆಟ್ಟಾದುದು ಯೋಗ್ಯ. ಹರಿಜನರ ಹಿತಕ್ಕಾಗಿ ಇಟ್ಟ ಹಣ ಸಾಲದು. ನಿಶ್ಚಯಿಸಿದ ಕೆಲಸಗಳನ್ನೆಲ್ಲಾ ನಡೆಸಿ ಕೊಡಬೇಕು. ಸಹಕಾರ ಚಳವಳಿಯು ಕೊಡಗಿನಲ್ಲಿ ಮುಂದರಿದಿದೆ. ಇದಕ್ಕೆ ಕಡಿಮೆ ಹಣವಿಟ್ಟದ್ದು ವ್ಯಸನಕರ. ಮೆಡಿಕಲ್ ಇಲಾಖೆಗೆ ಕಡಿಮೆ ಹಣವಿಟ್ಟದ್ದು ಬೇಸರದ ಸಂಗತಿ. ಆಸ್ಪತ್ರೆಗಳಲ್ಲಿ ಯೋಗ್ಯ ಸ್ಥಳ, ಔಷಧಿಗಳಿಲ್ಲ. ವ್ಯವಸಾಯ ಇಲಾಖೆಗೆ ತುಂಬಾ ಹಣವಿಡಲಾಗಿದೆ. ಇದು ಉಪಯುಕ್ತ ಕೆಲಸ ಹೊ

(೫ನೇ ಪುಟಕ್ಕೆ ಸಾಗಿದೆ.)

ಕೊಡಗು ನ್ಯಾಯವಿಧಾಯಕ ಸಭೆ.

ಠರಾವುಗಳು.

(೧) ಕೊಡಗು ಶಾಸನ ಸಭೆಯು ತಾರೀಕು ೧೫-೭-೫೩ ರಲ್ಲಿ ಸಾರ್ವಜನಿಕ ಅಭಿರುಚಿಯ ಠರಾವುಗಳನ್ನು ಚರ್ಚಿಸಲು ಬೆಳಗ್ಗೆ ೧೧ ಗಂಟೆಗೆ ಸೇರಿತು. ಪ್ರಶ್ನೋತ್ತರಗಳಾದ ನಂತರ ಶ್ರೀ. ಚೌರಿರ ಮಂದಣ್ಣನವರು 'ಕೊಡಗಿನ ಎಲ್ಲಾ ಟಿಂಬರನ್ನು ಸರಕಾರವೇ ಮಾರಾಟ ಮಾಡುವ ಅನುವಾಗುವಂತೆ ಸ್ಟೇಟ್ ಟ್ರೇಡಿಂಗ್ ಕಾರ್ಪೋರೇಶನ್ ಒಂದನ್ನು ಸ್ಥಾಪಿಸಬೇಕು ಎಂದು ಈ ಸಭೆಯು ಅಭಿಪ್ರಾಯಪಿದೆ' ಎಂಬ ಠರಾವನ್ನು ಸೂಚಿಸಿದರು. ಠರಾವಿನ ವಿಚಾರ ಮಾತಾಡುತ್ತಾ ಇದು ಚರಿತ್ರಾರ್ಹ ಏರ್ಪಾಡಾಗುವದೆಂದೂ, ಖಾಸಗಿ ಮಾರಾಟಗಾರರಿಗೆ ತುಂಬಾ ಪ್ರಯೋಜನವಾಗುವದೆಂದೂ ವ್ಯಾಪಾರಿಗಳು ಕಳಿಯದ ಮರ ಮಾಲೀಕರನ್ನು ಸುಲಿಗೆ ಮಾಡುವದು ತಪ್ಪುವದೆಂದೂ, ರೂ ೩೫ ಟನೆಗೆ ತೆಗೆದುಕೊಂಡ ಒಂದು ಮರದಿಂದ ರೂ ೧೫೦೦ ಲಾಭ ಮಾಡಿದ ನಿದರ್ಶನಗಳಿವೆಯೆಂದೂ, ವ್ಯಾಪಾರಸ್ಥರು ಹಿಡಿತವಿಲ್ಲದೆ ಮರಕಡಿದು ಕೊಡಗಿನ ಫಾರೆಸ್ಟು ನಿರ್ನಾಮವಾಗುತ್ತಿದೆಯೆಂದೂ, ಆದ್ದರಿಂದ ಸರಕಾರವೇ ಏಕಮಾರಾಟದ ಜವಾಬ್ದಾರಿ ವಹಿಸಿಕೊಂಡು ಮರವನ್ನು ಕಡಿದು, ಮಾರಾಟಮಾಡಿ ತನ್ನ ಖರ್ಚನ್ನು ವಜಾ ಮಾಡಿಕೊಂಡು ಮರಮಾಲೀಕನಿಗೆ ನ್ಯಾಯಬದ್ಧ ಬೆಲೆ ಒದಗಿಸಿಕೊಡುವದು ಯುಕ್ತವೆಂದೂ ಇದರಿಂದ ಸರಕಾರಕ್ಕೂ ತುಂಬಾ ಆದಾಯ ಬರುವದೆಂದು ಹೇಳಿದರು.

ಠರಾವನ್ನು ಸಮರ್ಥಿಸುತ್ತಾ ಶ್ರೀ ಗುಂಡುಕುಟ್ಟಿ ಮಂಜುನಾಥಯ್ಯನವರು ಇಂಥಾ ಏರ್ಪಾಡ ಮೊದಲೇ ಆಗಬೇಕಿತ್ತೆಂದೂ, ವ್ಯಾಪಾರಿಗಳು ಹಿಡಿತವಿಲ್ಲದೆ ಮರಕಡಿದು ಮಾರ್ಕೆಟಿನಲ್ಲಿ ತುಂಬುವದರಿಂದ ಮರಗಳಿಗೂ ಯೋಗ್ಯ ಬೆಲೆ ದೊರೆಯುತ್ತಿಲ್ಲವೆಂದೂ ಇದರಿಂದ ವಿಪರೀತ ಹಾನಿಯಾಗುತ್ತಿದೆಯೆಂದೂ ಹೇಳಿದರು.

ಮುಖ್ಯಮಂತ್ರಿ ಶ್ರೀ. ಪೂಣಚ್ಚನವರು ಉತ್ತರವೀಯುತ್ತಾ ಸರಕಾರವೂ ಕೂಡ ಈ ಠರಾವಿನ ರೀತಿಯಲ್ಲಿಯೇ ಆಲೋಚಿಸುತ್ತಿದೆಯೆಂದೂ ಕೇವಲ ಒಂದು ಠರಾವಿನಿಂದ ಒಂದು ವ್ಯವಸ್ಥೆ ಮಾಡುವದು ಅಸಾಧ್ಯವಾದಕಾರಣ ಸರಕಾರವು ಈ ಮಾರಾಟದ ಏಜೆನ್ಸಿಯ ಖಾನೂನು, ವ್ಯವಸ್ಥೆಗಳನ್ನು ಮಾಡಿ ಶಾಸನ ಸಭೆಯ ಸದಸ್ಯರಿಂದ ಕೂಡಿದ ಸಮಿತಿಯೆಂದರೆ ಮುಂದೆ ಅವನ್ನಿಡುವದೆಂದೂ ನಂತರ ಈ ವ್ಯವಸ್ಥೆ ಜಾರಿಗೆ ಬರುವ ಏರ್ಪಾಡು ಮಾಡಲಾಗುವದೆಂದೂ ಹೇಳಿದರು. ಕೊಡಗಿನಲ್ಲಿ ಸರಕಾರಿ ಟಿಂಬರಿನ ಎರಡು ಪಟ್ಟು ಅಂದರೆ ಸುಮಾರು ೧೦ ಲಕ್ಷ ಘನ ಅಡಿಗಿಂಥಾ ಹೆಚ್ಚು ಖಾಸಗಿ ಟಿಂಬರು ಮಾರಾಟವಾಗುತ್ತಿದೆ. ಇದಕ್ಕೆ ನ್ಯಾಯಬದ್ಧವಾದ ತಡೆ ಹಾಕದಿದ್ದರೆ ದೇಶಕ್ಕೆ ಗಂಡಾಂತರ ಬಾರದಿರದು. ಆದ್ದರಿಂದ ಸರಕಾರವು ಯೋಗ್ಯ ಏರ್ಪಾಡು ಮಾಡಿ ಖಾಸಗಿ ಮಾರಾಟಗಾರರು ಸರಕಾರದ ಮೂಲಕ ಮಾರಾಟಮಾಡುವದೇ ಹೆಚ್ಚು ಲಾಭದಾಯಕವಾಗುವಂತೆ ಮಾಡಿ ಪ್ರವೇಶ ಖಾಸಗಿ ವ್ಯಾಪಾರಸ್ಥರ ಹಿಡಿತವನ್ನು ತಪ್ಪಿಸಬೇಕಾಗುವದೆಂದೂ ಹೇಳಿದರು.

ಶ್ರೀ ಕೆ. ಕೆ. ಗಣಪತಿಯವರು ಮಾತಾಡುತ್ತಾ ಈ ಯೋಜನೆಯಿಂದ ಮರ ಮಾರಾಟ ಮಾಡುವವರಿಗೆ ಪ್ರಯೋಜನವಾಗುವದಿಲ್ಲವೆಂದೂ ದೇಶದ ಎಲ್ಲಾ ಜನರ ಮರಗಳನ್ನು ಸರಕಾರ ಪಡೆದು ಅವರಿಗೆ ಸಕಾಲದಲ್ಲಿ ಹಣ ಒದಗಿಸುವದು ಆಗದ ಕೆಲಸವೆಂದೂ, ಮರ ವ್ಯಾಪಾರಿಗಳು ಬೇರೆ ಬೇರೆ ಮಾರ್ಕೆಟ್ಟುಗಳಲ್ಲಿರುವ ಬೆಲೆಯನ್ನು ತಿಳಿದು ಸ್ಪರ್ಧೋಟಿಯ ವಿಧಾನದಲ್ಲಿ ತುಂಬಾ ಆಸ್ಥೆವಹಿಸಿ ಯತ್ನಿಸುವದರಿಂದ ಮಾರಾಟಗಾರರಿಗೆ ಉತ್ತಮ ಬೆಲೆ ದೊರೆಯುವದೆಂದೂ ಹೇಳಿದರು.

ಶ್ರೀಗಳಾದ ಪಿ ಕೆ ಚೆನ್ನಯ್ಯ, ಜಿ. ಎಚ್. ಅಹಮ್ಮದ್, ಕೆ. ಪಿ. ಕರುಂಬಯ್ಯ, ಕೆ. ಎಂ. ದೇವಯ್ಯ, ಪಿ. ಎಂ. ನಾಣಯ್ಯ, ಪಿ ಡಿ. ಸುಬ್ಬಯ್ಯ, ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದರು. ನಂತರ ಸೂಚಕರು ಸರಕಾರವು ವಿವರಿಸಿದ ಸೂಚನೆಗಳನ್ನು ಒಪ್ಪಿ ಠರಾವನ್ನು ವಾಪಾಸು ತೆಗೆದುಕೊಂಡರು.

(೨) 'ಪಬ್ಲಿಕ್ ವರ್ಕ್ಸ್ ಇಲಾಖೆಯ ದೊಡ್ಡ ಕೆಲಸಗಳನ್ನೆಲ್ಲಾ ಇಲಾಖೆಯ ಮೂಲಕ ಮಾಡದೆ ಕಂಟ್ರಾಕ್ಟರರ ಮೂಲಕವೇ ಮಾಡಬೇಕು.' ಎಂಬ ಠರಾವನ್ನು ಶ್ರೀ. ಚೌರಿರ ಮಂದಣ್ಣನವರು ವಾಪಾಸು ತೆಗೆದುಕೊಂಡರು.

(೩) 'ಕೊಡಗಿನ ರಿಸರ್ವ್ ಫಾರೆಸ್ಟಿನಲ್ಲಿ ದನಗಳನ್ನು ಮುಫತ್ತು ಮೇಯಿಸಲು ಬಿಡಬೇಕು' ಎಂಬ ಠರಾವನ್ನು ಶ್ರೀ. ಬಿ. ಕೆ. ಕಾಳ ಇವರು ಸೂಚಿಸಿದರು. ಮುಖ್ಯ ಮಂತ್ರಿಯವರು ಈ ಠರಾವನ್ನು ಅದಿರುವಂತೆ ಒಪ್ಪಲಾಗುವದಿಲ್ಲವೆಂದೂ ಈಗಿರುವ ರಾಸಿಗೆ ಒಂದು, ಒಂದೂವರೆ ರೂಪಾಯಿಯ ಫೀಜನ್ನು ನಾಲ್ಕಾಣೆ, ಆರಾಣೆಗೆ ಇಳಿಸುವ ಏರ್ಪಾಡನ್ನು ಸರಕಾರವು ಮಾಡುವದೆಂದರು. ಈ ಭರವಸೆಯ ಮೇರೆ ಸೂಚಕರು ಠರಾವನ್ನು ವಾಪಾಸು ತೆಗೆದುಕೊಂಡರು.

(೪) 'ಸಾಮುದಾಯಿಕ ಅಭಿವೃದ್ಧಿ ಯೋಜನೆಗೆ ದೊರೆಯುತ್ತಿರುವ ವಂತಿಗೆಯನ್ನು ಉತ್ತರ ಕೊಡಗಿನ ಐವತ್ತು ದಕ್ಷಿಣ ಕೊಡಗಿನ ಐವತ್ತು ಗ್ರಾಮಗಳಿಗೆ ಉಪಯೋಗಿಸಬೇಕು.' ಎಂಬ ಠರಾವನ್ನು ಶ್ರೀ. ಪಿ. ಸಿ ಉತ್ತಯ್ಯನವರು ಸೂಚಿಸಿದರು. ಸರಕಾರಿ ಮೆಂಬರರು ಉತ್ತರವೀಯುತ್ತಾ ತಾವು ಕೇಂದ್ರ ಸರಕಾರಕ್ಕೆ ಹತ್ತು ಹತ್ತು ಗ್ರಾಮಗಳ ಹತ್ತು ಕೇಂದ್ರಗಳನ್ನು ಕೊಡಗಿನ ಉದ್ದಗಲಕ್ಕೂ ತೆರೆದು ಈ ಯೋಜನೆಯನ್ನು ಕೈಕೊಳ್ಳಬೇಕೆಂದು ಸೂಚಿಸಿದ್ದೆವೆಂದೂ ಆದರೆ ಇಂಡಿಯಾಸರಕಾರದವರು ನೂರು ಹಿಂದುಳಿದ ಗ್ರಾಮಗಳ ಒಂದೇ ಬ್ಲಾಕು ಆಗಬೇಕೆಂದು ತಿಳಿಸಿದ ಕಾರಣ ಈ ರೀತಿ ಏರ್ಪಡಿಸಿರುವದಾಗಿಯೂ ಹೇಳಿದರು. ಈ ಯೋಜನೆಯ ೩ ವರ್ಷಗಳಿಂದ್ಧ ಪ್ರತಿ ಮೂರು ವರ್ಷಗಳಿಗೆ ೧೦೦ ಗ್ರಾಮಗಳಂತೆ ೯ ವರ್ಷಗಳಲ್ಲಿ ಇಡೀ ಕೊಡಗು ಇದರ ಅನುಕೂಲತೆಯನ್ನು ಪಡೆಯುವದೆಂದೂ ಹೇಳಿದರು. ಚರ್ಚೆಯಲ್ಲಿ ಶ್ರೀಗಳಾದ ಗುಂಡುಕುಟ್ಟಿ ಮಂಜುನಾಥಯ್ಯ, ಚೌಡ್ಲು ಕಾಳಪ್ಪ, ಪಿ. ಡಿ. ಸುಬ್ಬಯ್ಯ, ಕೆ. ಎ. ದೇವಯ್ಯ, ಸಿ. ಎ. ಮಂದಣ್ಣ, ಕೆ ಪಿ ಕರುಂಬಯ್ಯ, ಪಿ. ಕೆ. ಚೆನ್ನಯ್ಯ, ಪಿ ಲಕ್ಕ, ಕೆ. ಕೆ. ಗಣಪತಿ ಮೊದಲಾದವರು ಭಾಗವಹಿಸಿದರು. ನಂತರ ಶ್ರೀ. ಪಿ ಸಿ. ಉತ್ತಯ್ಯನವರು ಠರಾವನ್ನು ಹಿಂತೆಗೆದುಕೊಂಡರು.

(೫) 'ಹಿಂದುಳಿದ ಕೋಮುಗಳ ಪ್ರೌಢ ವಿದ್ಯಾ ಅನುಕೂಲತೆಗಾಗಿ ಯೋಗ್ಯ ಏರ್ಪಾಡು ಮಾಡಬೇಕು,' ಎಂಬ ಠರಾವನ್ನು ಶ್ರೀ ಬಿ ಕೆ. ಕಾಳ ಇವರು ಸೂಚಿಸಿದರು. ವಿದ್ಯಾ ಮಂತ್ರಿ ಮಲ್ಲಪ್ಪನವರು ಸರಕಾರವು ಈ ವಿಚಾರದಲ್ಲಿ ತುಂಬಾ ತೊಂದರೆ ತೆಗೆದುಕೊಂಡಿದೆಯೆಂದೂ ಹಿಂದುಳಿದ ವರ್ಗದ ಮಕ್ಕಳಿಗೆ ಮುಫತ್ತಾಗಿ ಒಪ್ಪಿ, ವಿದ್ಯಾಭ್ಯಾಸ, ಪುಸ್ತಕ ಕೊಡುತ್ತಿರುವದಲ್ಲದೆ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನೂ ಮಾಡಿದೆಯೆಂದೂ, ಹೈಸ್ಕೂಲು ತರಗತಿಗಳಲ್ಲಿರುವ ಆರು ವಿದ್ಯಾರ್ಥಿಗಳಿಗೆ ಮಾಸಿಕ ರೂ ೩ರಂತೆ ಧನಸಹಾಯ ಕೊಡಲಾಗುತ್ತಿದೆಯೆಂದೂ, ಈ ಸೌಕರ್ಯಕ್ಕಾಗಿಯೇ ರೂ. ೫೦ ಸಾವಿರವನ್ನು ಬಜೆಟ್ಟಿನಲ್ಲಿಡಲಾಗಿದೆಯೆಂದೂ ಹೇಳಿದರು. ಸೂಚಕರು ಠರಾವನ್ನು ಹಿಂತೆಗೆದುಕೊಂಡರು.

(೬) ಫಾರೆಸ್ಟ್ ಇಲಾಖೆಯಲ್ಲಿರುವ ಕೆಲಸಗಾರರು ಫಾರೆಸ್ಟಿನಲ್ಲಿ ಸಾಗು ಮಾಡಿದ ಭೂಮಿಯನ್ನು ಅವರವರಿಗೇ ಬಿಟ್ಟುಕೊಡಬೇಕೆಂಬ ಠರಾವನ್ನು ಸೂಚಕರಾದ ಶ್ರೀ ಬಿ. ಕೆ. ಕಾಳ ಇವರು ವಾಪಾಸು ತೆಗೆದುಕೊಂಡರು.

(೭) 'ಮಡಿಕೇರಿ ಮಹದೇವಪೇಟೆಯಲ್ಲಿ ಒಂದು ಆಸ್ಪತ್ರೆಯನ್ನು ತೆರೆಯಬೇಕು' ಎಂಬ ಠರಾವನ್ನು ಶ್ರೀ ಪಿ. ಡಿ. ಸುಬ್ಬಯ್ಯನವರು ಸೂಚಿಸಿದರು. ಗೃಹ ಮಂತ್ರಿ ಮಲ್ಲಪ್ಪನವರು ಈ ವಿಚಾರ ಮಾತಾಡುತ್ತಾ, ಮಡಿಕೇರಿ ಮುನ್ಸಿಪಾಲಿಟಿಯವರು ಯೋಗ್ಯ ಕಟ್ಟಡ ಒಂದನ್ನು ಒದಗಿಸಿಕೊಟ್ಟರೆ ಮಡಿಕೇರಿ ಸಿವಿಲ್ ಆಸ್ಪತ್ರೆಯ [illegible] ಡಾಕ್ಟರನ್ನು ಆ ಭಾಗದ ಜನರಿಗೆ ಚಿಕಿತ್ಸೆ ಮಾಡಲು ಏರ್ಪಡಿಸಲಾಗುವದೆಂದೂ, ಪ್ರತ್ಯೇಕ ಆಸ್ಪತ್ರೆ ಕಟ್ಟುವದು ಸಾಧ್ಯವಿಲ್ಲವೆಂದೂ ಹೇಳಿದರು. ಸೂಚಕರು ಈ ಭರವಸೆಯನ್ನು ಒಪ್ಪಿ ಠರಾವನ್ನು ಹಿಂತೆಗೆದುಕೊಂಡರು. ಈ ಠರಾವಿನ ಚರ್ಚೆಯಲ್ಲಿ ಶ್ರೀ ಪಿ ಸಿ. ಉತ್ತಯ್ಯನವರು ವಿರೋಧಿಸಿಯೂ, ಶ್ರೀ ಕೆ. ಎಂ. ದೇವಯ್ಯ, ಸಿ. ಎ. ಮಂದಣ್ಣ ಇವರು ಸಮರ್ಥಿಸಿಯೂ ಭಾಗವಹಿಸಿದರು.

(೮) 'ಕೊಡಗಿನಲ್ಲಿ ಒಂದು ಉತ್ತಮವಾದ ಹಾರ್ಟಿಕಲ್ಚರಲ್ (ಹಣ್ಣು ಹಂಪಲು) ಪರಿಶೋಧನಾ ಕೇಂದ್ರವನ್ನು ತೆರೆಯಬೇಕು.' ಎಂಬ ಠರಾವನ್ನು ಶ್ರೀ ಸಿ. ಎ. ಮಂದಣ್ಣನವರು ಸೂಚಿಸಿದರು. ಶ್ರೀ ಸಿ. ಎಂ. ಪೂಣಚ್ಚನವರು ಈ ಸೂಚನೆಯನ್ನು ಒಪ್ಪಿ ಕೊಡಗಿನಲ್ಲಿ ಒಂದು ಕೇಂದ್ರವನ್ನು ತೆರೆಯುವ ವಿಚಾರದಲ್ಲಿ ಇಂಡಿಯಾ ಸರಕಾರವು ಅರ್ಧ ಖರ್ಚನ್ನು ವಹಿಸುವ ಭರವಸೆ ದೊರೆತಿರುವದರಿಂದ ಈ ವಿಚಾರದಲ್ಲಿ ವಿಸ್ತೃತ ಕಾರ್ಯಕ್ರಮ ಕೈಕೊಳ್ಳಲಾಗುವದೆಂದರು. ಸೂಚಕರು ಠರಾವನ್ನು ವಾಪಾಸು ತೆಗೆದುಕೊಂಡರು.

(೯) 'ಈಗಿರುವ ಶಾಲೆಗಳು ಮೂರು ಮೈಲುಗಳಿಗಿಂಥಾ ದೂರವಿದ್ದಲ್ಲಿ ಹಿಂದುಳಿದ ವರ್ಗದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲೆಗಳನ್ನು ಏರ್ಪಡಿಸಬೇಕು' ಎಂಬ ಠರಾವನ್ನು ಶ್ರೀ ಬಿ. ಕೆ. ಕಾಳ ಇವರು ಸೂಚಿಸಿದರು. ಮಂತ್ರಿ ಮಲ್ಲಪ್ಪನವರು ಉತ್ತರವೀಯುತ್ತಾ, ಠರಾವಿನಲ್ಲಿರುವಂತೆ ಪ್ರತಿ ಮೂರು ಮೈಲಿಗೆ ಒಂದು ಶಾಲೆ ತೆರೆಯಲಾಗುವದಿಲ್ಲವೆಂದೂ, ಎಲ್ಲಿ ಹಿಂದುಳಿದ ಮಕ್ಕಳು ತುಂಬಾ ಇದ್ದು ಶಾಲೆಯ ತೊಂದರೆ ಇದೆಯೋ ಅಲ್ಲಿ ಶಾಲೆಗಳನ್ನು ತೆರೆಯಲಾಗುವದೆಂದೂ, ಅದೇ ರೀತಿ ಕಲ್ಲಳ್ಳಿಯಲ್ಲಿ ಶಾಲೆ ತೆರೆದಿರುವದಲ್ಲದೆ ಕಟ್ಟೆ[illegible]ಲ್ಲಿ ತೆರೆಯಲಾಗುವದೆಂದೂ ಹೇಳಿದರು. ಈ ಭರವಸೆ ಮೇರೆ ಸೂಚಕರು ಠರಾವನ್ನು ಹಿಂತೆಗೆದುಕೊಂಡರು.

(೧೦) 'ವ್ಯವಸಾಯಕ್ಕಾಗಿ ಭೂಮಿ ಇಲ್ಲದವರಿಗೆ ಸೈಸಾರಿಯಿಂದ ಮೂರು ಎಕರೆಯಂತೆ ಜಾಗ ಕೊಡಬೇಕೆನ್ನುವ ಠರಾವನ್ನು ಶ್ರೀ ಬಿ. ಕೆ. ಕಾಳ ಇವರು ಸೂಚಿಸಿದರು. ಮುಖ್ಯ ಮಂತ್ರಿಯವರು ಮಾತನಾಡುತ್ತಾ ಹೀಗೆ ಭೂಮಿ ಕೊಡುವ ಉದ್ದಿಶ್ಯದಿಂದಲೇ ಸರಕಾರವು ರೆವಿನ್ಯೂ ರೂಲನ್ನು ತಿದ್ದುಪಡಿ ಮಾಡಿದೆಯೆಂದೂ ಈಗಾಗಲೇ ಅರ್ಜಿದಾರರಿಗೆ ಮೂರು ಎಕರೆ ಭೂಮಿಯೂ ಆರು ಎಕರೆ ಬಾಣೆ ಕೊಡುವ ವ್ಯವಸ್ಥೆ ಮಾಡಲಾಗಿದೆಯೆಂದೂ ಆದರೆ ಸಾವಿರಾರು ಅರ್ಜಿಗಳು ಬರುತ್ತಿರುವುದರಿಂದ ಅವರೆಲ್ಲರಿಗೂ ಭೂಮಿ ಕೊಡಲು ಸಾಕಷ್ಟು ಸೈಸಾರಿ ಇದೆಯೋ ಎಂಬುದು ಸಂಶಯವೆಂದೂ, ಕೆಲವರಿಗೆ ಹೀಗೆ ಜಾಗ ಕೊಟ್ಟರೂ ಅವುಗಳ ಮಾರಾಟ ಮಾಡಿದ ನಿದರ್ಶನಗಳಿವೆಯೆಂದೂ ಹೇಳಿದರು. ಇದಕ್ಕಾಗಿ ಏನು ಮಾಡಬೇಕೆಂದು ಪರಿಶೀಲಿಸಲು ಒಂದು ಸಮಿತಿಯನ್ನೇ ರಚಿಸುವುದು ಹಿತವೆಂದು ಹೇಳಿದರು. ಸೂಚಕರು ಠರಾವನ್ನು ಹಿಂತೆಗೆದುಕೊಂಡರು.

(ಶಾಸನ ಸಭೆಯ ಎಲ್ಲಾ ಸದಸ್ಯರೂ ಹಲವಾರು ಠರಾವುಗಳನ್ನು ಕಳುಹಿಸಿದ್ದರು. ಆದರೆ ಮೆಂಬರುಗಳ ಠರಾವಿನ ಚರ್ಚೆಗೆಂದು ಒಂದೇ ದಿನ ಇಟ್ಟಕಾರಣ ಲಾಟರಿ ಮೂಲಕ ತೆಗೆದ ಹತ್ತು ಠರಾವುಗಳನ್ನೇ ಆ ದಿನ ಚರ್ಚಿಸಲಾಯಿತು. ಇದರಿಂದ ಹಲವರು ಕಳುಹಿಸಿದ ಠರಾವುಗಳು ಮುಂದಿನ ಸಭೆಗಳಲ್ಲಿ ಚರ್ಚೆಗೆಂದು ಉಳಿಯುವವು).

ಓದುಗರ ಓಲೆಗಳು

ಕೊಡಗಿಗೆ ವಿದ್ಯುಚ್ಛಕ್ತಿ

ಕೊಡಗಿಗೆ ವಿದ್ಯುಚ್ಛಕ್ತಿಯ ಯೋಜನೆ ಬರಲಿರುವುದೆಂದೂ, ಈ ವಿಷಯ ಸರಕಾರದ ಮಂಜೂರಾತಿಯು ದೊರೆತ ಒಡನೆಯೇ, ಮೈಸೂರು ಸರಕಾರದವರ ಸಹಾಯದಿಂದ ಈ ಕಾರ್ಯವನ್ನು ಶೀಘ್ರವಾಗಿ ಪೂರೈಸುವುದೆಂದೂ ತಿಳಿದು ಬಂದಿದೆ. ಇದಕ್ಕೆ ಅಂದಾಜು ವೆಚ್ಚವು ೩೦ ಲಕ್ಷವಷ್ಟಿದೆ.

ಕೊಡಗಿಗೆ ವಿದ್ಯುಚ್ಛಕ್ತಿಯು ಬರುವುದೆಂದರೆ ಎಲ್ಲರಿಗೂ ಸಂತೋಷವೇ. ಆದರೆ ಕಾರ್ಯತಃ ಇದರಿಂದ ದೇಶದ ಎಷ್ಟು ಜನರಿಗೆ ಪ್ರಯೋಜನವಾದೀತು, ಮತ್ತು ಕೇವಲ ಬಹು ಸ್ವಲ್ಪ ಜನರಿಗೆ ಪ್ರಯೋಜನವಾಗುವಂಥಾ ಒಂದು ಯೋಜನೆಗೆ ೩೦ ಲಕ್ಷವಷ್ಟು ಹಣ ವ್ಯಯಮಾಡುವುದು ಯುಕ್ತವೋ ಎಂದು ದೀರ್ಘ ಯೋಚಿಸಬೇಕಿದೆ.

ಈ ಪ್ರಶ್ನೆಯನ್ನು ಯೋಚಿಸುವಾಗ ಮುಖ್ಯವಾಗಿ ಕೊಡಗಿನ ಗ್ರಾಮ ರಚನೆಯನ್ನು ಗಣನೆಗೆ ತಂದು ಕೊಳ್ಳಬೇಕಾಗಿದೆ. ಕೊಡಗಿನ ಗ್ರಾಮ ರಚನೆಯು ಹೊರದೇಶ [illegible] ಒಂದು ಮನೆ ಒಂದು ಬಾವಿ ಇರುವ ಉದಾಹರಣೆ ಹೆಚ್ಚು; ಎಂದರೆ, ಮನೆಗಳು ಒಟ್ಟುಗೂಡಿ ಇಲ್ಲದೆ ಒಂದು ಮನೆಯಿಂದ ಇನ್ನೊಂದು ಮನೆಯು ತಕ್ಕಷ್ಟು ದೂರದಲ್ಲಿದೆ. ಹೀಗಿರುವಾಗ ಸರಕಾರದವರ ಖರ್ಚಿನಿಂದಲೇ ಎಲ್ಲರ ಮನೆಗೂ ಎಲೆಕ್ಟ್ರಿಕ್ ಲೈನ ಹಾಕುವುದು ಸಾಧ್ಯವಿಲ್ಲ. ಗ್ರಾಮವಾಸಿಗಳು ಹೆಚ್ಚು [illegible] ತಮ್ಮ ಖರ್ಚಿನಿಂದ ಅವರವರ ಮನೆಗಳಿಗೆ ಗ್ರಾಮ ಮಧ್ಯದಿಂದಲೋ ಅಥವಾ ಹತ್ತಿರದಲ್ಲಿ ಹಾದು ಹೋಗುವ ಲೈನಿನಿಂದಲೋ ಹಾಕಿಸಿಕೊಳ್ಳುವ ಸಾಧ್ಯವಿಲ್ಲದಿರುವಾಗ ದೇಶದ ಎಷ್ಟು ಜನ ವಿದ್ಯುಚ್ಛಕ್ತಿಯ ಉಪಯೋಗವನ್ನು ಪಡೆಯಬಹುದು?

ಕೊಡಗಿನ ಜನಸಂಖ್ಯೆಯು ೨½ ಲಕ್ಷ. ಇವರಲ್ಲಿ ಪಟ್ಟಣವಾಸಿಗಳು ಹೆಚ್ಚು ಕಡಿಮೆ ಶೇಕಡ ೨೦ ರಷ್ಟು ಇರುವರು. ಇವರ ಪೈಕಿಯೂ ಕೂಡ ಶೇಕಡ ೫೦ ರಷ್ಟು ಅವರವರ ಮನೆಗೆ ವಿದ್ಯುಚ್ಛಕ್ತಿಯ ಉಪಯೋಗವನ್ನು ಕಲ್ಪಿಸಿ ಕೊಳ್ಳದವರಿದ್ದು ಅಂತ್ಯದಲ್ಲಿ ಶೇಕಡ ೧೦ ರಷ್ಟು ಜನರು, ಎಂದರೆ ಹೆಚ್ಚು ಕಡಿಮೆ ೨೦-೨೫ ಸಾವಿರ ಜನರು ಮಾತ್ರ ಇದರ ಪ್ರಯೋಜನವನ್ನು ಅನುಭವಿಸುವರು. ಪಟ್ಟಣಗಳ ಹೊರಗೆ, ಗ್ರಾಮಗಳಲ್ಲಿ, ಯೂ, ತೋಟಗಳಲ್ಲಿ ಅನುಕೂಲಸ್ಥರು ಆದವರು ಸ್ವಂತವಾಗಿಯೇ ಇದರ ಉಪಯೋಗ ಕಲ್ಪಿಸಿಕೊಂಡಿರುವರು. ಕೊಡಗಿನಲ್ಲಿಯು ಕೆಲವು ಭತ್ತದ ಗಿರಣಿಗಳು ಮತ್ತು ಕಾಫಿ ಗಿರಣಿಯವರು ಕೂಡ ಅವರವರು ಸ್ವಂತವಾಗಿಯೇ ಇದರ ಉಪಯೋಗವನ್ನು ಕಲ್ಪಿಸಿ ಕೊಂಡಿರುವರು. ಹೀಗಿರುವಾಗ ಇದರಿಂದ ಬಹು ಜನರಿಗೆ ಸಹಾಯಕವಾಗದ ಒಂದು ಯೋಜನೆಯನ್ನು ಕೈಕೊಳ್ಳುವುದರಲ್ಲಿ ೩೦ ಲಕ್ಷ ರೂಪಾಯಿ ಖರ್ಚುಮಾಡುವುದು ನ್ಯಾಯವಿದೆಯೋ, ಎಂದು ಜನರೂ, ಸರಕಾರದವರೂ ಗಮನಿಸಬೇಕಾಗಿದೆ. ಒಂದನೆಯ [illegible] ಸಮಯದ [illegible] ಯೋಜನೆಯು ಅದರ ಆಂತ್ಯವನ್ನು ಗಣನೆಗೆ ತೆಗೆದು ಕೊಳ್ಳಬೇಕಿದೆ.

ಇನ್ನೊಂದು ವಿಚಾರ. ವಿದ್ಯುಚ್ಛಕ್ತಿಯು ಬರಲಿರುವುದು ಮೈಸೂರಿನಿಂದ. ಕೊಡಗಿನಲ್ಲಿ ಮಳೆಯು ಕಡಿಮೆಯಾದುದರ ಫಲವಾಗಿ ಈಗ ಕೆಲವು ವರ್ಷಗಳಿಂದ ಮೈಸೂರು ಸೀಮೆಯವರೇ ಬೇಸಿಗೆ ಕಾಲದಲ್ಲಿ ಅವರ ವಿದ್ಯುಚ್ಛಕ್ತಿ ಆವಶ್ಯಕತೆಯನ್ನು ಬಹಳವಾಗಿ ಕಡಿಮೆ ಮಾಡುತ್ತಾರೆ. ಯಾವ ಕಾರಣದಿಂದಲೋ ವರ್ಷದಿಂದ ವರ್ಷಕ್ಕೆ ಮಳೆಯು ಕಡಿಮೆಯಾಗುತ್ತಲಿದೆ. ಮಲನಾಡ್ ಡೆವಲಪ್‌ಮೆಂಟ್ ಸ್ಕೀಮು ಜಾರಿಗೆ ಬಂದಲ್ಲಿ ಕಟ್ಟಿಮರ [illegible] ಇನ್ನೂ ಮಳೆ ಕಡಿಮೆಯಾಗುವ ಸಂಭವವಿದೆ. ಇದನ್ನು ಸಹ ಗಮನಿಸಿಕೊಳ್ಳಬೇಕಿದೆ.

ಕೊಡಗಿಗೆ ವಿದ್ಯುಚ್ಛಕ್ತಿಯ [illegible] ಕೇವಲ ರಾಜಕೀಯ ದೃಷ್ಟಿಯಿಂದ ಮಾತ್ರವಾಗಿದ್ದಾಗಿದೆ. [illegible] ಅಭಿಪ್ರಾಯವನ್ನು ಕೂಲಂಕುಷವಾಗಿ ತಿಳಿಯದೇನೇ ಈ ಯೋಜನೆಯನ್ನು ಮುಂದರಿಸಿರುವಂತಿದೆ. ಆದುದರಿಂದ ಸರಕಾರದವರು ಈ ಯೋಜನೆಯಲ್ಲಿ ಅವಸರಪಡದೆ ಇದನ್ನು ಕೂಲಂಕುಷವಾಗಿ ಪರೀಕ್ಷಿಸಿ, ಒಂದು ತಜ್ಞರ ಕಮಿಟಿಯನ್ನು ನೇಮಿಸಿ ಅದರ ವರದಿಯ ನಂತರ ಇದನ್ನು [illegible] ಯೋಜನೆಯನ್ನು ಸ್ವಲ್ಪ ಮುಂದರಿಸಿ ೩೦ ಲಕ್ಷ ಖರ್ಚುಮಾಡಿ, [illegible] ಮುಂದಿನ ವರ್ಷ ಅದರ ಉತ್ಪತ್ತಿಯಿಂದ [illegible] ಸಾಧ್ಯವಿಲ್ಲದಿದ್ದರೆ, ದೇಶದ ಹಣವು ಅನ್ಯಾಯವಾಗಿ [illegible] ವ್ಯಯವಾದೀತು. ನಮ್ಮ ಮುಂದಾಳುಗಳು ಈ ವಿಷಯ ಪುನಃ ಯೋಚಿಸಬೇಕಾಗಿ ಕೋರಿಕೆ.

ಕೆ. ಯಂ. ಪೂವಯ್ಯ.

ಪೊನ್ನಂಪೇಟೆ ಖಜಾನೆ

ಈ ನಾಡು ಕಚೇರಿಯಲ್ಲಿ ಒಂದು ಖಜಾನೆ ಇದೆ. ಈ ಖಜಾನೆ ವಾರದಲ್ಲಿ ಬರೀ ಸೋಮವಾರ ಮತ್ತು ಶುಕ್ರವಾರ ಮಾತ್ರ ತೆರೆಯಲ್ಪಡುತ್ತೆ. ಹೀಗೆ ವಾರಕ್ಕೆ ಎರಡು ದಿನದಿಂದ ಅಲ್ಲಿಯ ಜನಗಳಿಗೆ ಬೇಕಾದಷ್ಟು ಪ್ರಯೋಜನವಿಲ್ಲ. ಈ ಖಜಾನೆಯಲ್ಲಿ ದೊಡ್ಡ ಚಿಲ್ಲರೆ ಸಿಕ್ಕುವುದು ಕಷ್ಟವಾಗಿದೆ. ಅನೇಕ ಜನರು ಮತ್ತು ಅನೇಕ ಸರಕಾರಿ ಇಲಾಖೆಯವರು ಹಣ ವಹಿವಾಟಿಗೆ ವಿರಾಜಪೇಟೆಗೆ ಹೋಗುವವರನ್ನು ನಾನೆ ನೋಡಿದ್ದೇನೆ.

ಕಂದಾಯ ವಸೂಲಿಯ ಕಾಲದಲ್ಲಿ ಅಂದರೆ ಫೆಬ್ರುವರಿ ಮತ್ತು ಮಾರ್ಚ್ ತಿಂಗಳಲ್ಲಿ ಸರಕಾರದವರ ಅನುಕೂಲತೆಗೆ ವಾರದಲ್ಲಿ ಮೂರು ದಿನ ಖಜಾನೆ ತೆರೆಯಲ್ಪಡುತ್ತೆ.

ಈ ವಿಷಯದಲ್ಲಿ ಸರಕಾರದವರು ವಾರದ ಎಲ್ಲಾ ದಿವಸಗಳಲ್ಲಿ ಈ ಖಜಾನೆಯನ್ನು ತೆರೆಯುವ ಏರ್ಪಾಡು ಮಾಡಬೇಕಾಗಿದೆ. ಅದು ಸಾಧ್ಯವಾಗದಿದ್ದರೆ ಕನಿಷ್ಠ ವಾರದ ಮೂರು ದಿವಸಗಳಾದರೂ ತೆರೆದು ಜನರ ತೊಂದರೆಯನ್ನು ನಿವಾರಿಸಲು ತಕ್ಕ ಏರ್ಪಾಡು ಮಾಡಬೇಕಾಗಿ ಕೋರಿಕೆ.

ಪಟ್ಟಣಿಗ.

ಪೊನ್ನಂಪೇಟೆಯ ಸ್ಟಾಂಪು ವೆಂಡರು

ಇಲ್ಲಿಯ ಸ್ಟಾಂಪು ವೆಂಡರು ಒಬ್ಬರು [illegible] ಇಲ್ಲಿಯ ಜನರಿಗೆ ಅವಶ್ಯವಿರುವ ಕಾಗದ ಸ್ಟಾಂಪು ವಗೈರೆ ಇವರಿಂದ ಸಮಯಕ್ಕೆ ಸಿಕ್ಕುವುದು ತುಂಬಾ ತೊಂದರೆಯಾಗಿದೆ. ಕಾಗದ ಬೇಕೆಂದು ಅವರಲ್ಲಿ ಹೋಗುವವರಿಗೆ [illegible] ನಾಡಿನ ಜನರ ತುಂಬಾ ಪ್ರಕಾರವಿದೆ. ಈ ಪ್ರಕಾರದ ಸ್ಥಿತಿಯು ಅಧಿಕಾರಿಗಳಿಗೆ ಸಹ ಅನೇಕರು ಹೇಳಿರುತ್ತಾರೆ. ಆದರೂ ಈ ವೆಂಡರ ಸ್ಟಾಕಿನಲ್ಲಿ ಬೇಕಾದ ಕಾಗದ [illegible] ಕಟ್ಟಿನ ಕಾಗದ ಪತ್ರಗಳು ಇಲ್ಲ [illegible] ಹೀಗಿರುವಲ್ಲಿ ಮೇಲಧಿಕಾರಿಗಳು ದಯವಿಟ್ಟು ಈ ವಿಷಯದಲ್ಲಿ ಗಮನವಿತ್ತು [illegible] ಯಾವ ಕಾಲದಲ್ಲೂ ಬೇಕಾದಷ್ಟು ಸ್ಟಾಕಿನಲ್ಲಿ ಚಾಪಕಾಗದ ಮತ್ತು ಸ್ಟಾಂಪು ಇಡುವಂತೆ ತಕ್ಕ ಏರ್ಪಾಡು [illegible] ಜನರ ತೊಂದರೆಯನ್ನು ನಿವಾರಿಸಬೇಕಾಗಿದೆ. ಇಲ್ಲವಾದರೆ ಬೇರೆಯವರನ್ನು ಈ ಕೆಲಸ ಮಾಡಲು ನೇಮಿಸುವುದು ಉತ್ತಮ.

ನಾಡಿನವ.

ಕೋತಿ ಬುತ್ತಿ ಉಂಡು ಎತ್ತಿನ ಮುಸುಡಿಗೆ ವರಸಿತಂ!

ಮೂರ್ನಾಡು ಸರ್ಕಲಿಗೆ ಸೇರಿದ ದವಸ ಭಂಡಾರವೊಂದಿದೆ. ಅದಕ್ಕೆ ಸ್ವಂತ ಆಫೀಸು ಕಟ್ಟಡವೂ ಇದೆ. ಕಟ್ಟಡದ ಮಾಡಕ್ಕೆ ತಗಡುಹಾಕಿಸಲು ವ್ಯವಸ್ಥೆ [illegible] ಆರು ರೋಲ್ ತಗಡು ಕಳೆದ ವರ್ಷ ಕಮಿಟಿ ತೊಡಗಿಸಿದರಂತೆ. ಆಗ ತಗಡಿಗೆ ನಿಯಂತ್ರಣ ಬೆಲೆ ರೋಲ್ ಒಂದರ ರೂ. 34. ಆದರೆ ಕಪ್ಪು ಪೇಟೆಯಲ್ಲಿ ರೂ. 55 ರಿಂದ ರೂ. 60ರ ವರೆಗೂ ಇತ್ತು. ಈ ಸಂದರ್ಭವನ್ನು ಉಪಯೋಗಿಸಿಕೊಂಡ ಸಂಘದ ಪ್ರಸಿಡೆಂಟರು ತಗಡನ್ನು ಬೇರೊಬ್ಬ ವ್ಯಾಪಾರಿಗೆ ಕೈಬಿಟ್ಟು ಫೆಡರೇಷನಿನವರು ತಗಡು ಕೊಡಲಿಲ್ಲವೆಂದೂ, ಫೆಡರೇಶನಿನ ಪ್ರಸಿಡೆಂಟರು ನನ್ನ ಮೇಲೆ ದ್ವೇಷದಿಂದಲೇ ನಮಗೆ ತಗಡನ್ನು ಕೊಡದಿರುವರೆಂದೂ ಫೆಡರೇಷನಿನ ಮೇಲೆ ಆರೋಪಿಸಿದ್ದಲ್ಲದೆ ಮೇಲಧಿಕಾರಿಗಳಿಗೆ ಬರೆದು ಇನ್ನು ಮುಂದೆ ಫೆಡರೇಷನಿಗೆ ತಗಡೇ ಬಾರದಂತೆ ಮಾಡಿಬಿಡುವುದಾಗಿ ಪ್ರಚಾರ ಮಾಡಿದರು. ಮತ್ತೆ ಕೆಲವು ಕಮಿಟಿ ಮೆಂಬರುಗಳ ಸಹಾಯದಿಂದ ಈ ವಿಷಯ ಫೆಡರೇಷನಿನ ವಿರುದ್ಧ ಬಹಳ ಪ್ರಚಾರ ಮಾಡುತ್ತಿದ್ದರು. ಬಳಿಕ ಸಂಘದ ಕಮಿಟಿಯವರು ಬಹಿರಂಗವಾಗಿ ಈ ವಿಷಯ [illegible] ಫೆಡರೇಷನ [illegible] ಪ್ರಸಿಡೆಂಟರನ್ನು [illegible] ನಿಜಸಂಗತಿಯನ್ನು ಫೆಡರೇಷನಿನಲ್ಲಿ ವಿಚಾರಿಸಿ ತಿಳಿದು ಬಂದದ್ದೇನೆಂದರೆ [illegible] ಹಸಿಗಾಗಿ ಕೇಳಲಾಗಿದೆ.

ತಾರೀಕು 3-10-51 ರಲ್ಲಿ ಒಬ್ಬ ವ್ಯಾಪಾರಿಯು ಮೂರ್ನಾಡು ಸರ್ಕಲಿನ ಈ ದವಸ ಭಂಡಾರಕ್ಕೆ ಬಂದು ಆರು ರೋಲ್ ತಗಡು [illegible] ತಗಡನ್ನು ಕೇಳಿದನಂತೆ. ಆದರೆ ಸಂಘದ ಪ್ರಸಿಡೆಂಟ ಆಫೀಸಿನಲ್ಲಿದ್ದರೂ ತಗಡು ಕೊಡಲಾಗುವುದಿಲ್ಲವೆಂದು ಫೆಡರೇಶನಿನವರು [illegible] ಪ್ರಸಿಡೆಂಟರ ಪತ್ರ ತರುವ ವರೆಗೆ ಕಮಿಟಿ [illegible] ಕಾರಣ ತಗಡಿನ ಬೆಲೆಯನ್ನು ಅದೇ ವ್ಯಾಪಾರಿಯು ಫೆಡರೇಶನಿನಲ್ಲಿ ಡಿಪಾಜಿಟ್ಟು ಮಾಡಿ ತಾ 10-10-51 ರಲ್ಲಿ ಪ್ರಸಿಡೆಂಟರ [illegible] ತಗಡನ್ನು [illegible] ತಿಳಿದು ಬಂದಿದೆ. ಸಂಘದ ಪ್ರಸಿಡೆಂಟರು [illegible] ವನ್ನು ಮಾಡಿ ಸಂಘದ ಕಮಿಟಿಗೆ [illegible] ಪ್ರಚಾರವಿದೆಂದು [illegible] ಪ್ರಯೋಜನ [illegible] ಎತ್ತಿನ ಮುಸುಡಿಗೆ [illegible] ಕೋತಿಯ ಕಥೆಯಂತೆ ಇದಾಗಿದೆ.

ಸಂಘದ [illegible] ಈ ವ್ಯಾಪಾರದಿಂದ [illegible] ರೂಪಾಯಿಗಳ ಲಾಭವಾಗಿರಲಿಕ್ಕೂ ಸಾಕು. ಆದರೆ ಸಂಘಕ್ಕಾದ [illegible] ಆರ್ಥಿಕ ನಷ್ಟವೂ ದೊಡ್ಡದು. ಈ ವರ್ಷ ರೋಲ್ ಒಂದರ ಬಹು ಹೆಚ್ಚಿನ ಬೆಲೆ ಕೊಟ್ಟು ಕಲ್ಯಾಣಿ ನಂಬಿನ ಆಭಿವೃದ್ಧಿ [illegible] ಸಂಘಕ್ಕೆ ಉಪಯೋಗಿಸಿದರು. ಇದರಿಂದ ಸಂಘಕ್ಕೆ ತುಂಬಾ ನಷ್ಟವಾಗಿದೆ.

ಇದೇ ಪ್ರಸಿಡೆಂಟರ ನೇತೃತ್ವದಲ್ಲಿ ಸಂಘದ ಆಫೀಸು ಕಟ್ಟಡವೊಂದನ್ನು ಕಟ್ಟಿಸಲಾಗಿದೆ. ಕಟ್ಟಡದ ಖರ್ಚು ಪಟ್ಟಿಗೆ ಸರಿಯಾದ ಲೆಕ್ಕವು ಇಲ್ಲವೆಂದು ಅತೃಪ್ತಿಗೊಂಡು ಸಂಘಗಳ ಇನಸ್ಪೆಕ್ಟರವರು ಮೇಲಧಿಕಾರಿಗಳಿಗೆ ಒಂದು ರಿಪೋರ್ಟ್ ಮಾಡಿದರೆಂದೂ ಆದರೆ ಸಂಘದ ಕಮಿಟಿಯೊಬ್ಬರು ಈ ರಿಪೋರ್ಟನ್ನು ಮೇಲಧಿಕಾರಿಗಳಲ್ಲಿಯೇ ನಾಶಮಾಡಿಸಿ ಈ ವರೆಗೂ ವಿಚಾರಣೆಗೆ ಅದು ಬಂದುದೇ ಇಲ್ಲವೆಂದೂ ವರ್ತಮಾನ. ಈ ಸಂಘದ ಮಹಾಸಭೆ ಎಂದರೆ ಎರಡೋ ಮೂರೋ ವರ್ಷಗಳಿಗೊಮ್ಮೆ. ಆದರೂ ಮೇಲಧಿಕಾರಿಗಳೇಕೆ ಅವರನ್ನು ಮಾತಾಡಿಸುವುದಿಲ್ಲ? ಈ ರೀತಿ ಮುಂದುವರಿದರೆ ಸಹಕಾರ ಸಂಘಗಳು ಉಳಿದಾವೆ?

ಸಹಕಾರಿ

ಕೊ ಡ ಗು

ತಾ ೨೫-೭-೧೯೫೨ನೇ ಶುಕ್ರವಾರ

ನಿಜವಾದ ಪ್ರಜಾಪ್ರಭುತ್ವ.

ಜನತೆಗೆ ಜವಾಬ್ದಾರವಾದ ಸರಕಾರವು ಕೊಡಗಿನಲ್ಲಿ ರಚಿತವಾಗಿ ಅದು ಕಳೆದ ೪ ತಿಂಗಳುಗಳಿಂದ ಕೆಲಸವನ್ನು ಮಾಡುತ್ತಿದೆ. ಜನರ ಹಿತದೃಷ್ಟಿಯನ್ನು ಮನದಲ್ಲಿಟ್ಟು ಅವಶ್ಯಕನುಗುಣವಾದ ಬಜೆಟ್ಟನ್ನು ತಯಾರಿಸಿ ಶಾಸನ ಸಭೆಯ ಮುಂದಿಟ್ಟು ಅದರ ಮೇಲೆ ಜನಪ್ರತಿನಿಧಿಗಳ ಅಭಿಪ್ರಾಯಗಳೂ ಈ ವಾರದಲ್ಲಿ ವ್ಯಕ್ತಮಾಡಲ್ಪಟ್ಟವು. ಈ ಚರ್ಚೆಯಿಂದ ಒಂದು ವಿಚಾರ ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು. ಪ್ರಜಾಪ್ರಭುತ್ವವು ಪರಿಪೂರ್ಣ ರೂಪದಲ್ಲಿ ಅಲ್ಲವಾದರೂ ಒಂದು ವಿಧದಲ್ಲಿ ಕೊಡಗಿನಲ್ಲಿ ನಡೆಯುತ್ತಿದೆಯೆಂಬುದು ಸ್ಪಷ್ಟವಾಗುತಿತ್ತು. ಶಾಸನ ಸಭೆಯ ಸದಸ್ಯರು ವಿವಿಧ ರಾಜಕೀಯ ಪಕ್ಷಗಳಿಗೋ, ಅಭಿಪ್ರಾಯಗಳಿಗೋ ಬದ್ಧರಾಗಿದ್ದರೂ ಕೂಡ ತಮ್ಮ ತಮ್ಮ ಮತದಾರ ಕ್ಷೇತ್ರದ ಬಗ್ಗೆ ಅವರವರು ಪ್ರತ್ಯೇಕ ಜವಾಬ್ದಾರಿಯನ್ನು ಹೊತ್ತಿರುವರು. ಈ ಜವಾಬ್ದಾರಿಯನ್ನು ನಿರ್ವಹಿಸುವದರೊಂದಿಗೆ ದೇಶದ ಸರ್ವಾಂಗೀಣ ಹಿತಕ್ಕೂ ಅವರು ಕಾರಣರಾಗಬೇಕು. ತನ್ನ ಪ್ರತಿನಿಧಿಕ್ಷೇತ್ರದ ಹಿತವಾಗಬೇಕೆಂಬುದು ಅವಶ್ಯವಾದರೂ ಸಮಗ್ರ ಕೊಡಗಿನ ಹಿತದೃಷ್ಟಿಯೂ ಅವರಲ್ಲಿ ಅಡಗಿರಬೇಕು. ಈ ದೃಷ್ಟಿಯಿಂದ ವಿವಿಧ ಮತದಾರಕ್ಷೇತ್ರದ ಪ್ರತಿನಿಧಿಗಳು ಸೇರಿ ಹೇಗೆ ಕೊಡಗಿಗೆ ಒಂದು ಶಾಸನ ಒಡ್ಡವಾದ ಸಭೆಯಾಗಿದೆಯೋ ಅದೇ ರೀತಿ ವಿವಿಧ ನಾಡುಗಳ ಯೂ ಭಾಗಗಳ ಹಿತ ಕೆಲಸವು ದೇಶದ ಸರ್ವಾಂಗೀಣ ಉನ್ನತಿಗೆ ಕಾರಣವಾಗಬೇಕು ಅಂದರೆ ಶಾಸನ ಸಭಾ ಸದಸ್ಯರು ತಮ್ಮ ತಮ್ಮ ನಾಡಿನ ಹಿತಕ್ಕಾಗಿ ಸಿಕ್ಕಿದ ಪಾಲನ್ನು ಹೊಂದಲು ಪ್ರಯತ್ನಿಸುವ ಪಾಲುಗಾರರಲ್ಲ; ಬದಲು ಒಕ್ಕಟ್ಟಾಗಿ ಎಲ್ಲರ ಹಿತ ಬೆಳೆಸಲು ಸೇರಿದ ಅವಿಭಕ್ತ ಕುಟುಂಬಸ್ಥರು!

ಈ ದೃಷ್ಟಿಯಿಂದ ಚರ್ಚೆಯ ಕಾಲಕ್ಕೆ ಹಲವರು ತೋರ್ಪಡಿಸಿದ ದಕ್ಷಿಣ ಕೊಡಗು, ಉತ್ತರ ಕೊಡಗು ಭಾವನೆಯು ಪ್ರಜಾಪ್ರಭುತ್ವಕ್ಕೆ ಸರಿಹೋಗದ ಮಾತು. 'ತುಂಬಿರಲು ಅಸ್ಪದವಿಲ್ಲದೆ ಹಿಂದೆ ತಳ್ಳಲ್ಪಟ್ಟ ಕೋಮು ಇರುವ ವರೆಗೆ ನಾನು ಆ ಕೋಮಿನವನು; 'ಉಡಲು ಬಟ್ಟೆ, ಉಣ್ಣಲು ತುತ್ತು ಇಲ್ಲದವರಿರುವ ವರೆಗೆ ನಾನು ಅವರೊಡನೆ ಭಿಕ್ಷುಕನು' ಎಂದು ಹೇಳಿದ ವಿವೇಕಾನಂದರ ವಾಣಿಯನ್ನು ಪ್ರತಿನಿಧಿಗಳು ಗಮನಿಸಬೇಕು. ಯಾವುದಾದರೂ ಒಂದು ನಾಡಿನ ಉದ್ಧಾರವಾದ ಮಾತ್ರಕ್ಕೆ ದೇಶದ ಉದ್ಧಾರವಾದಂತಾಗದು. ಯಾವುದಾದರೂ ಒಂದು ಕೋಮಿನ ಉತ್ಕರ್ಷದಿಂದ ಎಲ್ಲರ ಉತ್ಕರ್ಷವಾದಂತಾಗದು. ಪ್ರಜಾಪ್ರಭುತ್ವವು ಎಲ್ಲರ ಉದ್ಧಾರಕ್ಕಾಗಿ. ಅದರಲ್ಲಿ ಅವಸಿವನೇದಿಲ್ಲ.

ಇಂಥಾ ಪ್ರಜಾಜವಾಬ್ದಾರಿ ಸರಕಾರದ ಜವಾಬ್ದಾರಿ ಹೊತ್ತ ಆಡಳಿತಗಾರರಿಗೆ ಪ್ರತಿನಿಧಿಗಳ ಬೆಂಬಲಬೇಕು. ಪ್ರತಿನಿಧಿಗಳಿಗೆ ಜನತೆಯ ಸಹಕಾರಬೇಕು. ಹಾಗಾಗಬೇಕಾದರೆ ಆಡಳಿತದ ಜವಾಬ್ದಾರಿ ಹೊತ್ತವರು ಪ್ರತಿನಿಧಿಗಳ ಮೇಲೆ ವಿಶ್ವಾಸವಿಟ್ಟು, ಪ್ರಾಮುಖ್ಯ ನಿರ್ಣಯಗಳಲ್ಲಿ, ತತ್ವನಿರ್ದೇಶನಗಳಲ್ಲಿ ಅವರ ಆಲೋಚನೆಯನ್ನು ತೆಗೆದುಕೊಂಡು ಮುಂದರಿಯಬೇಕು. ಪ್ರತಿನಿಧಿಗಳು ಜನತೆಯ ಸಂಪರ್ಕವಿಟ್ಟುಕೊಂಡು ಅವರ ಕಷ್ಟ ಸುಖ, ಬೇಕುಬೇಡಿಕೆಗಳನ್ನು ಅರಿತುಕೊಂಡು ಅವಕ್ಕನುಗುಣವಾಗಿ ಆಡಳಿತ ನಡೆಸುವವರಿಗೆ ಸಲಹೆಕೊಡಬೇಕು. ಆಡಳಿತ ರಥದ ಈ ಮೂರು ಪ್ರಾಮುಖ್ಯ ಭಾಗಗಳು ಒಂದಕ್ಕೊಂಡು ಹೊಂದಿಕೊಂಡು ನಡೆಯುದಿದ್ದರೆ ರಾಷ್ಟ್ರವು ಸರಾಗವಾಗಿ ಮುನ್ನಡೆಯಲಾರದು. ಅಲ್ಲದೆ ಒಬ್ಬರು ಮಾಡುವ ಕೆಲಸ ಮತ್ತೊಬ್ಬರಿಗೆ ಸಂಬಂಧಿಸಿದ್ದೇ ಆದ ಕಾರಣ ಪರಸ್ಪರ ಮಧುರಬಾಂಧವ್ಯವಿಟ್ಟು ವರ್ತಿಸಿದರೆ ಮಾತ್ರ ನಿಜವಾದ ಪ್ರಜಾಪ್ರಭುತ್ವ ಕಾರ್ಯರೂಪಕ್ಕೆ ಬರಲಾಪುದು.

ವ ರ್ತ ಮಾ ನ .

ಬೊಂಬಾಯಿಯ 'ಲಿವರ್ ಬ್ರದರ್ಸ್' ಕಂಪೆನಿಯಲ್ಲಿ ಕೆಲಸ ಮಾಡುತಿದ್ದು ಬೊಂಬಾಯಿ ಸರಕಾರದಿಂದ ತರಬೇತಿಗೆ ಕಳುಹಿಸಲ್ಪಟ್ಟ ಶ್ರೀಮತಿ ಐಚೆಟ್ಟಿರ ಬೊಳ್ಳಮ್ಮನವರು ಇಂಗ್ಲೆಂಡ್, ಸ್ವಿಟ್ಜರ್‌ಲೆಂಡ್, ಇಟಲಿ-ಫ್ರಾನ್ಸ್ ಮೊದಲಾದ ಕಡೆಯ ತಮ್ಮ ಪ್ರವಾಸವನ್ನು ಮುಗಿಸಿಕೊಂಡು ತಾ. ೧೮ರಲ್ಲಿ ಬೊಂಬಾಯಿಗೆ ಮರಳಿರುವರು.

ಮಿಲಿಟರಿಯಿಂದ ಮೆಡಿಕಲ್ ಅನ್‌ಫಿಟ್ ಆಗಿಯೂ, ಅಂಗಹೀನರಾಗಿಯೂ ಡಿಸ್‌ಚಾರ್ಜ್ ಆದಂತಹ ಮಾಜಿ ಸಿಪಾಯಿಗಳಿಗೆ ಬೊಂಬಾಯಿ ಪ್ರಾಂತದ ಕರ್ಕಿ (ಪೂನಾ) ಯಲ್ಲಿರುವ 'ಕ್ವೀನ್ ಮೇರಿ ಟೆಕ್ನಿಕಲ್ ಶಾಲೆಯಲ್ಲಿ ಬಟ್ಟೆ ನೇಯುವಿಕೆ, ಹೊಲಿಗೆ, ಆಯಿಲ್ ಇಂಜಿನ್ ಮತ್ತು ವಿದ್ಯುಚ್ಛಕ್ತಿಗಳಿಗೆ ಸಂಬಂಧಿಸಿದ ಕೆಲಸ ಮುಂತಾದ ಉದ್ಯಮಗಳಲ್ಲಿ ಪುಕ್ಕಟೆಯಾಗಿ ತರಬೇತನ್ನು ಕೊಡಲಾಗುವುದು. ತರಬೇತಿನ ಸಮಯದಲ್ಲಿ ವಾಸಸ್ಥಾನ, ಬಟ್ಟೆ ಮುಂತಾದುವನ್ನು ಒದಗಿಸಿ ಕೊಡುವದಲ್ಲದೆ ತಿಂಗಳಿಗೆ ರೂ. ೧೨ ಭತ್ಯವನ್ನೂ ಮತ್ತು ಮಾಡಿದ ಕೆಲಸಕ್ಕೆ ತಕ್ಕಂತೆ ವೇತನವನ್ನೂ ಕೊಡಲಾಗುವುದು. ಕುತೂಹಲವುಳ್ಳವರು ಹೆಚ್ಚಿನ ವಿಷಯಗಳನ್ನು ಒಡನೆ ಮಡಿಕೇರಿಯ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಿಂದ ತಿಳಿದುಕೊಳ್ಳಬಹುದು.

ಸೈನಿಕರ ಮತ್ತು ಮಾಜಿ ಸೈನಿಕರ ಪ್ರಾಯ ೯ರಿಂದ ೧೨ರ ವರೆಗಿರುವ ಮಕ್ಕಳಿಗೆ ಜಲಂಧರ್, ಅಜಮೀರ್, ಬೆಳಗಾಂ ಮತ್ತು ಬೆಂಗಳೂರು, ಈ ಸ್ಥಳಗಳಲ್ಲಿರುವ 'ಕಿಂಗ್ ಜಾರ್ಜ್'ರವರ ಶಾಲೆಗಳಲ್ಲಿ ಪ್ರವೇಶವು ದೊರಯುತ್ತದೆ. ಇದಕ್ಕೆ ಸಂಬಂಧಿಸಿದ ಹೆಚ್ಚಿನ ವಿಷಯಗಳನ್ನು ಮಡಿಕೇರಿಯ ಎಂಪ್ಲಾಯಿಮೆಂಟ್ ಆಫೀಸಿನಿಂದ ಕೇಳಿ ತಿಳಿದುಕೊಳ್ಳಬಹುದು

ಎಸ್. ಎಸ್. ಎಲ್. ಸಿ. ಪಾಸಾಗಿ ಪ್ರಾಯ ೧೮ ರಿಂದ ೨೫ ರ ವರೆಗೆ ಇರುವ ತರುಣರು ರೈಲ್ವೆಯಲ್ಲಿ ಟಿಕೆಟ್ ಕಲೆಕ್ಟರ್ ಕೆಲಸಕ್ಕೆ ಕುತೂಹಲವಿದ್ದಲ್ಲಿ ನಮೂದಿಸಿರುವ ಅಪ್ಲಿಕೇಶನ್ ಫಾರಂನ್ನು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಿಂದ ಹೊಂದಿಕೊಳ್ಳಬಹುದು. ಅಂಥಾ ಪೂರ್ತಿ ಮಾಡಿದ ಅಪ್ಲಿಕೇಶನ್ ತಾ. ೩೧-೭-೫೨ರ ಒಳಗಾಗಿ ಅಲ್ಲಿಗೆ ತಲುಪಿಸತಕ್ಕದ್ದು.

ಬೊಂಬಾಯಿ ವಿಶ್ವವಿದ್ಯಾಲಯದ ಎರಡನೇ ವರ್ಷದ ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದ ಶ್ರೀ ಕೆ ಆರ್. ಲಕ್ಷ್ಮೀಪತಿ ಇವರಿಗೆ ಡಾ. ಥಿಯೋಡರ್ ಕುಕ್‌ರವರ ವಿಶ್ವವಿದ್ಯಾಲಯದ ಬಹುಮಾನವು ದೊರೆತಿದೆ

ಕೊಡಗು ಜಿಲ್ಲಾ ಕಾಂಗ್ರೆಸ್ ಖಚೇರಿಯನ್ನು ಮಡಿಕೇರಿಯಲ್ಲಿ ತಾ. ೨೦ರಲ್ಲಿ ಮುಖ್ಯ ಮಂತ್ರಿ ಶ್ರೀ ಸಿ. ಎಂ. ಪೂಣಚ್ಚನವರು ತೆರೆದರು.

ತಾ. ೨೨ರಲ್ಲಿ ಕೊಡಗು ಶಾಸನ ಸಭೆಯ ಸದಸ್ಯರು, ಪತ್ರಿಕಾಪ್ರತಿನಿಧಿಗಳು ಮಂತ್ರಿಗಳೊಡನೆ ಫ್ರೇಜರ್‌ಪೇಟೆ ಕೂಡಿಗೆಯಲ್ಲಿರುವ ವ್ಯವಸಾಯ ಪರಿಶೋಧನಾ ಫಾರಮ್ಮನ್ನು ಸಂದರ್ಶಿಸಿ ಅಲ್ಲಿ ಇಲಾಖೆಯವರು ನಡೆಸುತ್ತಿರುವ ವಿವಿಧ ವಿಧದ ರಾಗಿ ಬೆಳೆ, ನೀರಿಲ್ಲದೆ ಬೆಳೆಯುವ ಬತ್ತದ ಕೃಷಿ, ದನಕರುಗಳ ಹುಲ್ಲಿನ ಏರ್ಪಾಡು, ಗೊಬ್ಬರಕ್ಕೆ ಅನ್ಯವಾದ ಇತರ ಸಸಿಗಳು ದನಗಳಿಗೆ ಕೃತಕ ಗರ್ಭದಾನದ ವ್ಯವಸ್ಥೆ, ಟ್ರಾಕ್ಟರಿನಲ್ಲಿ ವ್ಯವಸಾಯ ಕ್ರಮ ಮೊದಲಾದುವನ್ನು ಪರಿಶೀಲಿಸಿದ್ದಲ್ಲದೆ ಮುಂದಿನ ವ್ಯವಸಾಯ ಶಾಲೆಯ ಕಟ್ಟಡದ ಸ್ಥಳ ಮತ್ತು ಪ್ಲಾನುಗಳನ್ನು ಪರಿಶೀಲಿಸಿದರು.

ಶ್ರೀ ಕೋಟೆರ ಎಂ. ಮೇದಪ್ಪನವರು ಮದರಾಸು ವಿಶ್ವವಿದ್ಯಾಲಯದ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ಸಾಮೂಹಿಕ ವಿಕಾಸ ಯೋಜನೆಯಲ್ಲಿ ತರಬೇತು ಪಡೆಯುವ ಕಾರಣ ಶ್ರೀ ನಡಿಕೇರಿಯಂಡ ಮಂದಣ್ಣನವರನ್ನು ಪಂಜಾಬಿನ ನೀಲೊಕೆರಿ ಎಂಬಲ್ಲಿಗೆ ಒಂದು ತಿಂಗಳ ತರಬೇತಿಗೆ ಕಳುಹಿಸಲಾಗಿದೆ.

ಕೌನ್ಸಿಲಿನಲ್ಲಿ ಕೇಳಿದ ಒಂದು ಪ್ರಶ್ನೆಗೆ ಉತ್ತರವೀಯುತ್ತಾ ಮುಖ್ಯ ಮಂತ್ರಿಯವರ ಬಂಗ್ಲೆ ರಿಪೇರಿ, ಮರಮುಟ್ಟು ಸಾಮಾನು, ಅಡಿಗೆ ಸಾಮಾನು ಮೊದಲಾದುವುಗಳಿಗಾಗಿ ಸುಮಾರು ರೂ. ೬೦೦೦, ಗೃಹಮಂತ್ರಿಯವರ ಮನೆಗೆ ರೂ. ೫೦೦೦, ಚೀಫ್ ಸೆಕ್ರೆಟರಿಯವರ ಬಂಗ್ಲೆಗೆ ರೂ. ೬೦೦೦ ಖರ್ಚಾಗಿದೆಯೆಂದೂ, ಗೃಹಮಂತ್ರಿಯವರು ತಮ್ಮ ಮನೆಗೆ ಬಾಡಿಗೆ ತೆಗೆದುಕೊಳ್ಳುವುದಿಲ್ಲವೆಂದೂ ತಿಳಿಸಿದರು.

ಮತ್ತೊಂದು ಪ್ರಶ್ನೆಗೆ ಉತ್ತರಿಸುತ್ತ ಈ ವರೆಗೆ ಕೂಡಿಗೆ ವ್ಯವಸಾಯ ಪರಿಶೋಧನಾ ಕೇಂದ್ರಕ್ಕೆ ವರ್ಷಕ್ಕೆ ರೂ. ೨೬ ಸಾವಿರ, ಪೊನ್ನಂಪೇಟೆ ಫಾರಮಿಗೆ ರೂ ೧೧ ಸಾವಿರ ಖರ್ಚಾಗುತ್ತದೆಂದೂ ಅವುಗಳನ್ನು ಪ್ರಾರಂಭಿಸಿದಂದಿನಿಂದ ಕೂಡಿಗೆ ಫಾರಮಿಗೆ ರೂ. ೧,೭೦,೦೦೦ವೂ, ಪೊನ್ನಂಪೇಟೆ ಫಾರಮಿಗೆ ರೂ. ೩೧ ಸಾವಿರವೂ ಖರ್ಚಾಗಿದೆಯೆಂದೂ, ಕೂಡಿಗೆಯಲ್ಲಿ ಕಟ್ಟಲಿರುವ ವ್ಯವಸಾಯ ಶಾಲೆಗೆ ರೂ. ೪೫ ಸಾವಿರ ಖರ್ಚಾಗುವದೆಂದೂ ಹೇಳಿದರು.

ಕಳೆದ ಚುನಾವಣೆಯ ಸಮಯದಲ್ಲಿ ೩೦೦ ಜನ ಮದರಾಸು ಸ್ಪೆಶಲ್ ಪೋಲೀಸರನ್ನು ಕೊಡಗಿಗೆ ತರಲಾಗಿತ್ತೆಂದೂ ಅವರ ಊಟ ಮೊದಲಾದುವಕ್ಕೆ ರೂ. ೯೦೦೦ ಖರ್ಚಾಗಿದೆಯೆಂದೂ ಒಂದು ಪ್ರಶ್ನೆಗೆ ಉತ್ತರಿಸಲಾಗಿದೆ.

ಕೊಡಗು ಮಾರ್ಕೆಟಿಂಗ್ ಫೆಡರೇಶನು ಕಬ್ಬಿಣ ಸಾಮಾನು ವಿತರಣೆ ಮಾಡುವುದರಲ್ಲಿ ನ್ಯೂನತೆ ಇದೆಯೆಂದು ಪುಕಾರು ಬಂದಿರುವ ಕಾರಣ ಮುಂದೆ ರೇಷನಿಂಗ್ ಡಿಪೋಗಳ ಮೂಲಕ ಸರಕಾರವೇ ಇದರ ಸರಬರಾಯಿ ಮಾಡಲಿದೆಯೆಂದೂ ಒಂದು ಪ್ರಶ್ನೆಗೆ ಉತ್ತರ ಕೊಡಲಾಯಿತು.

ಹಿಂದುಳಿದ ಪಂಗಡದವರಿಗೆ ಭೂಮಿ ಕೊಡುವ ಒಗ್ಗರೆವಿನ್ಯೂ ಮೇನ್ಯುವಲಿನ ತಿದ್ದುಪಡಿ ಮಾಡಲಾಗಿದೆಯೆಂದೂ ಕಳೆದ ಮೂರು ವರ್ಷಗಳಲ್ಲಿ ಒಟ್ಟು ೪೮೦ ಎಕ್ರೆ ಸ್ಥಳವನ್ನು ಹಾಗೆ ಹಂಚಲಾಗಿದೆಯೆಂದೂ ಒಂದು ಪ್ರಶ್ನೆಗೆ ಉತ್ತರ ಕೊಡಲಾಗಿದೆ

ಬೊಂಬಾಯಿಯ ಕೊಡಗು ಸಂಘದವರು ಈ ವರ್ಷ ವಿವಾಹಿತರಾದ ತಮ್ಮ ಸಂಘದ ಸದಸ್ಯರುಗಳಾದ ಶ್ರೀ ಎ. ಎಸ್. ನಾರಾಯಣ, ಉಳುವಾರನ ಕರುಂಬಯ, ಮತ್ತು ಚೌರಿರ ಐಯ್ಯಮ್ಮ ಇವರುಗಳನ್ನು ಅವರವರ ಪತ್ನಿ ಸಮೇತ ಚಹಾಕೂಟವಿತ್ತು ಸತ್ಕರಿಸಿದರು, ಇಂಡಿಯನ್ ಪೀಪಲ್ಸ್ ಥಿಯೇಟರಿನವರ ಸಂಗೀತದ ಏರ್ಪಾಡು ಮಾಡಲಾಗಿತ್ತು.

ಈ ವರ್ಷ ಜನವರಿ ಒಂದರಿಂದ ಈ ವರೆಗೆ ಮಡಿಕೇರಿಗೆ ೪೮ ಇಂಚು ೮ ಸೆಂಟು ಮಳೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ೫೭ ಇಂಚು ೪೩ ಸೆಂಟು ಮಳೆಯಾಗಿತ್ತು. ಈ ವಾರ ಅಂದರೆ ತಾ. ೧೮ರಿಂದ ೨೪ರ ವರೆಗೆ ಮಡಿಕೇರಿಗೆ ೬ ಇಂಚು ೮೭ ಸೆಂಟು ಮಳೆ ಬಿದ್ದಿದೆ.

TENDER NOTICE-

Sealed tenders will be received by the Health Officer, Coorg, Mercara, at his Office upto 1 p. m., on the 31st July 1952 for supplying eight (8) new 'Petromax' Lanterns. The make of the lamps and the date of delivery of the goods, If the tender is accepted, at this Office should be clearly stated in the tender.

Tenders will be opened by the Health Officer, on the 2nd August 1952 at 11 A. M., in his office.

C. B. KARIAPPA.
Health Officer, Coorg.

ಬಡ್ಜೆಟ್ಟಿನ ಮೇಲೆ ಸದಸ್ಯರ ಅಭಿಪ್ರಾಯಗಳು.

(೧ ನೇ ಪುಟದಿಂದ ಸಾಗಿದ್ದು.)

ಸಬೇಕು. ಇಡೀ ದೇಶವು ಆಡಳಿತವು ಹೇಗೆ ನಡೆಯುತ್ತದೆಂದು ಪರಿಶೀಲಿಸುತ್ತಿದೆ. ಆದ್ದರಿಂದ ಯೋಗ್ಯ, ಹಾಗೂ ಆದರ್ಶ ರೀತಿಯ ಆಡಳಿತ ನಡೆಯಲಿ.

ಶ್ರೀ ಪಿ ಕೆ. ಚೆನ್ನಯ್ಯನವರು

ಹಿಂದುಳಿದ ಪಂಗಡದವರಿಗೆ ಪ್ರಾತಿನಿಧ್ಯ ಕೊಟ್ಟ ಕೇಂದ್ರ ಸರಕಾರಕ್ಕೆ ವಂದನೆ. ಗ್ರಾಮೋದ್ಧಾರ, ಹರಿಜನೋದ್ಧಾರ ಆಗಬೇಕು. ಆದರ್ಶ ಗ್ರಾಮಗಳ ರಚನೆಯಾಗಬೇಕು. ಸಾಮೂಹಿಕ ವಿಕಾಸ ಯೋಜನೆಯು ಫಲಕಾರಿಯಾಗುವಂತೆ ಮಾಡಬೇಕು. ಗಾಂಧೀಜಿಯವರ ತತ್ವ ಪ್ರಕಾರ ಹಳ್ಳಿಗಳು ಸುಸಜ್ಜಿತವಾಗಬೇಕು. ಹತ್ತು ಗ್ರಾಮಗಳನ್ನು ಕೂಡಿದ ಫಿರ್ಕಾಗಳನ್ನು ಏರ್ಪಡಿಸಿ ಒಬ್ಬೊಬ್ಬ ಅಧಿಕಾರಿಗಳ ನೇತೃತ್ವದಲ್ಲಿ ಅವು ಮುಂದುವರಿಯುವಂತೆ ಮಾಡಬೇಕು. ಕೆರೆ, ಬಾವಿ, ಹಳ್ಳಿಯ ರಸ್ತೆ, ಕಾಲುದಾರಿಗಳ ದುರಸ್ತಿ ಉತ್ತಮ ರೀತಿಯಲ್ಲಿ ಆಗಬೇಕು. ಬೀಜ, ಗೊಬ್ಬರ ಸರಬರಾಯಿ ಮಾಡಬೇಕು. ಕೃಷಿಗ ಸರಿಯಾದ ವ್ಯವಸಾಯದ ಜ್ಞಾನ ಕೊಡಬೇಕು. ಬೀಜದ ಹೋರಿ, ಟಗರುಗಳನ್ನು ಒದಗಿಸಬೇಕು. ಆಸ್ಪತ್ರೆಗಳ ಬಗ್ಗೆ ಗ್ರಾಮ ನೈರ್ಮಲ್ಯದ ವಿಚಾರ ಕೂಡ ಆಸ್ಥೆ ವಹಿಸಬೇಕು. ಶಿಶು ಸಂರಕ್ಷಣಾ ಕೇಂದ್ರ, ವಯಸ್ಕರ ಶಾಲೆಗಳನ್ನು ತೆರೆಯಬೇಕು. ಹರಿಜನರೆಂದು ಕರೆಯಲ್ಪಟ್ಟವರು ಅಸ್ಪೃಶ್ಯರಾಗಿಯೇ ಉಳಿದಿದ್ದಾರೆ. ದೇವಸ್ಥಾನ ಪ್ರವೇಶ ಏನೂ ಸ್ಥಿತಿ ಸುಧಾರಿಸಿಲ್ಲ. ಬುದ್ಧಿ ವಂತರಾದವರಿಗೆ ಬೋಧಿಸಿದರೂ ಪರಿಹಾರ ದೊರೆತಿಲ್ಲ. ಕಾಂಗ್ರೆಸು ತನ್ನಿಂದರೆ ಕೆಗೆದುಕೊಂಡು ಅದರ ಸರಕಾರವಾಗಿದ್ದೂ ಆಗಬೇಕಾದಷ್ಟು ಕೆಲಸ ಆಗಿಲ್ಲ. ಪ್ರತಿ ಜನವರಿ ೨೬ರಂದು ಹರಿಜನ ದಿನವಾಗಿ ಆಚರಿಸಬೇಕು. ರಚನಾತ್ಮಕ ಕಾರ್ಯಕ್ರಮ ಕೈಕೊಂಡು ಆರ್ಥಿಕ ಅಭಿವೃದ್ಧಿಯ ಮಾರ್ಗ ಮಾಡಬೇಕು. ಕೊಡಗಿನಲ್ಲಿ ಹರಿಜನರ ಸ್ಥಿತಿ ತುಂಬಾ ವಿಷಮವಾಗಿದೆ, ಸತ್ತ ಪ್ರಾಣಿಗಳನ್ನು ತಿನ್ನುವದರಿಂದ ದರಿದ್ರರಾಗಿದ್ದಾರೆ. ಪ್ರತಿ ತಾಲೂಕುಗಳಿಗೊಂದರಂತೆ ಹರಿಜನ ವೆಲ್‌ಫೇರ್ ಕೇಂದ್ರಗಳಾಗಬೇಕು. ಇದಕ್ಕಾಗಿ ರೂ ೫ ಲಕ್ಷ ಇಡಬೇಕು. ಮನೆಗೆ ಜಾಗ, ವ್ಯವಸಾಯಕ್ಕೆ ನೆಲ ಕೊಡಬೇಕು. ಭಜನ ಮಂದಿರ ಮೊದಲಾದವನ್ನು ಕಲ್ಪಿಸಿ ಅವರ ಜ್ಞಾನ ವಿಕಾಸಕ್ಕೆ ಅನುಮಾಡಬೇಕು.

ಶ್ರೀ. ಎ. ಪಿ ತಿಮ್ಮಯ್ಯನವರು.

ಮಂತ್ರಿಗಳ ಬಡ್ಜೆಟ್ ಭಾಷಣವನ್ನು ನೋಡಿದರೆ ಕಾಗದದ ಮೇಲೆ ಎಲ್ಲವೂ ಚೆನ್ನಾಗಿರುವಂತೆ ತೋರುತ್ತದೆ. ಹಿಂದುಳಿದ ಭಾಗಕ್ಕೆ ಹೆಚ್ಚು ಹಣ ಖರ್ಚು ಮಾಡುವ ಪ್ರಯತ್ನವನ್ನು ಅವರು ಮಾಡಿದ್ದಾರೆ. ಹಲವು ಯೋಜನೆಗಳೂ ಉತ್ತಮ ಕೊಡಗಿನ ಹಿತಕ್ಕಾಗಿಯೇ ಇವೆ. ದಕ್ಷಿಣ ಕೊಡಗನ್ನು ಉಪೇಕ್ಷಿಸಿದಂತೆ ಕಾಣುತ್ತದೆ. ನಾವು ಇಲ್ಲಿ ಸೇರಿದವರು ನಮ್ಮ ನಮ್ಮ ರಾಜಕೀಯದಲ್ಲಿ ಭಿನ್ನಾಭಿಪ್ರಾಯ ಉಳ್ಳವರಾದರೂ ನಮ್ಮ ದೇಶವನ್ನು ಆದರ್ಶರಾಜ್ಯವಾಗಿ ಮಾಡುವ ಬಯಕೆಯಲ್ಲಿ ಒಂದಾಗಿರುವೆವು. ಕೊಡಗಿನ ತೋಟಗಳ ಸಂಶೋಧನಾ ಕೇಂದ್ರದ ವ್ಯವಸ್ಥೆ ಚೆನ್ನಾಗಿಲ್ಲ. ದಕ್ಷಿಣ ಹಿಂದೂಸ್ಥಾನದಲ್ಲಿ ಯೇ ತೋಟಗಳ ವ್ಯವಸಾಯಕ್ಕೆ 'ಪ್ಲ್ಯಾಂಟಿಂಗ್' ಕಾಯಿಲೆಯಿಂದ ಗಂಡಾಂತರ ಬಂದಿದೆ. ಅನೇಕರಿಗೆ ಅದರಲ್ಲಿ ತರಬೇತಾದ ಒಬ್ಬರು ಸಮಗಿರುವಾಗ ಅವರ ಅನುಭವದ ಪೂರ್ಣ ಉಪಯೋಗವನ್ನು ನಾವು ಹೊಂದಿಕೊಳ್ಳಬೇಕು. ವ್ಯವಸಾಯದ ಮಟ್ಟಿಗೆ ಆಲ್ಲೊಂದು ಘರಂ ಇಲ್ಲೊಂದು ಸಂಶೋಧನಾ ಕೇಂದ್ರ ತೆರೆದರೆ ಸಾಲದು. ಮಣ್ಣಿನ ತತ್ವ ಪರಿಶೀಲನೆ ಮಾಡಿ ರೈತರಿಗೆ ಯೋಗ್ಯ ಸಲಹೆ ಕೊಡಬೇಕು. ಅಮೇರಿಕಾದಲ್ಲಿ ತಜ್ಞ ಸಂಶೋಧನೆಯಿಂದ ವ್ಯವಸಾಯ ಮುಂದರಿದಿದೆ. ವ್ಯವಸಾಯಿ ಇಲ್ಲಿಗೆ ಹಣಬೇಕು ನಿಜ. ಆದರೆ ಅವರು ಸಾಕಷ್ಟು ಪ್ರಚಾರ ಮಾಡುವದಿಲ್ಲ. ತಮ್ಮ ವಿವಿಧ ಸಂಶೋಧನಾ ಕೇಂದ್ರಗಳಲ್ಲಿ ಮಾಡಿದ ಶೋಧನೆಗಳನ್ನು, ಕೆಲಸದ ವಿಧಾನಗಳನ್ನು ಜನತೆಗೆ ಪತ್ರಿಕೆಗಳ ಮೂಲಕವೂ ಪ್ರತ್ಯೇಕ ಪತ್ರಿಕೆಗಳ ಮೂಲಕ ಆಗಾಗ್ಗೆ ತಿಳಿಸುತ್ತಿರಬೇಕು. ವ್ಯವಸಾಯ ಎಕ್ಸ್‌ಟೆನ್ಷನ್ ಯೋಜನೆಗೆ ರೂ. ೬೨,೦೦೦ ಇಟ್ಟಿದ್ದರೂ ಇದು ಎಂಥಾ ಯೋಜನೆಯೆಂದು ಸದಸ್ಯರಾದ ನಮಗೆ ತಿಳಿಸಿಲ್ಲವಲ್ಲ ಅದನ್ನು ತಿಳಿಸಬೇಕೆಂದು ಕೇಳುತ್ತೇನೆ. ಫೋರ್ಡ್ ಫೌಂಡೇಶನ್ ಯೋಜನೆ ಮೇರೆ ನಮ್ಮ ವ್ಯವಸಾಯ ಅಧಿಕಾರಿಯು ಅಮೇರಿಕಾದ ಕೃಷಿಕರ ಅಭ್ಯಾಸಕ್ಕಾಗಿ ಹೋಗಿ ಮರಳಿದ್ದು ಸಂತೋಷಕರ. ಅವರು ಪುನಹ ಇಲ್ಲಿಗೆ ಬಂದು ತಮ್ಮ ಅನುಭವದ ಉಪಯೋಗವನ್ನು ಇಲ್ಲಿಯ ಮಂದಿಗೆ ದೊರಕುವಂತಾಗಬೇಕು. ವೆಟರ್ನರಿ ಇಲಾಖೆಯಲ್ಲಿ ಹಸುಗಳಿಗೆ ಕೃತಕ ಗರ್ಭದಾನದ ಏರ್ಪಾಡು ಮಾಡಿರುವದು ಯೋಗ್ಯ. ಆದರೆ ಇದಕ್ಕೆ ಬೇಕಾಗುವ ವೀರ್ಯವನ್ನು ಸಂಗ್ರಹಿಸುವ ಕೇಂದ್ರ ಒಂದೇ ಇದ್ದು ಅಲ್ಲಿಂದ ವಿವಿಧ ಭಾಗಗಳಿಗೆ ಹಂಚುವಂತೆ ಮಾಡಬೇಕು. ಕೋಳಿಸಾಕುವ ಯೋಜನೆಯೂ ಕೂಡ ಇದೇ ರೀತಿ ಆಗಬೇಕು. ಒಂದು ಕೇಂದ್ರದಲ್ಲಿ ಮರಿಗಳನ್ನು ಮಾಡಿ ಯೋಗ್ಯ ಕೋಳಿಸಾಕುವವರಿಗೆ ಹಂಚಬೇಕು. ಅಮೇರಿಕಾದಲ್ಲಿ ಈ ವಿಧ ನಮ್ಮನ್ನೇ ಅನುಸರಿಸಲಾಗುತ್ತಿದೆ. ವೈದ್ಯಕೀಯ ಇಲಾಖೆಯಲ್ಲಿ ಕೆಲವು ಉತ್ತಮ ಆಸ್ಪತ್ರೆಗಳಿವೆ. ಆದರೆ ಅವುಗಳಿಗಾಗಿ ಇಟ್ಟ ಹಣ ಸಾಲದು. ಇನ್ನೂ ೫೦,೦೦೦ ರೂ. ಹೆಚ್ಚು ಇಡಬೇಕು. ಕ್ಷಯರೋಗ ಆಸ್ಪತ್ರೆಯನ್ನು ಶೀಘ್ರ ಕಟ್ಟಿಸಬೇಕು. ಆಸ್ಪತ್ರೆಗಳಿಗೆ ತಮ್ಮ ಹೆಸರಿನಲ್ಲಿ ವಾರ್ಡ ಕಟ್ಟಿಸುವ ಜನರಿದ್ದಾರೆ. ಅಂಥವರನ್ನು ಪ್ರೋತ್ಸಾಹಿಸಬೇಕು. ಕೊಡಗಿನ ಮೂರು ಪ್ರಾಮುಖ್ಯ ರಸ್ತೆಗಳನ್ನು ಉತ್ತಮಗೊಳಿಸಬೇಕು. ಬೇತರಿ, ಕೊಟ್ಟಮುಡಿ ಸೇತುವೆಗಳನ್ನು ಸರಕಾರವು ಕಾಲನೂಡಿಯಾದರೂ ಮಾಡಬೇಕು. ಈ ಸೇತುವೆಗಳಲ್ಲಿ ದಾಟುವ ವಾಹನಗಳಿಗೆ ಸುಂಕವಿಟ್ಟು ಈ ಸಾಲವನ್ನು ಭರ್ತಿಮಾಡಿದರೂ ಅಭ್ಯಂತರವಿಲ್ಲ. ಘಾಡರ್ ವ್ಯವಸಾಯ ಕಾಗದದಲ್ಲಿ ಮಾತ್ರವಿದೆ. ಅನೇಕ ರೀತಿದಲ್ಲಿ ಕತವರ್ನಸೋಲ್ತವಕ್ಕೆ ಹೋಗಿದ್ದೆ. ಜಿಲ್ಲೆಯ ದನಗಳ ಸ್ಥಿತಿಯನ್ನು ನೋಡಿ ಆನಂದವಾಯಿತು. ನಮ್ಮ ಹಿಂದೂದೇಶದಲ್ಲಿ ೨೦೦ ಮಿಲಿಯ ದನಗಳಿವೆ. ಆದರೆ ಸಂಖ್ಯೆಗೆ ಮಾತ್ರ. ಅದಕ್ಕಿಂಥಾ ಉತ್ತಮ ಕೆಲವೇ ರಾಸುಗಳಿದ್ದರೂ ಸಾಕು. ಹೆಚ್ಚು ಸಂಖ್ಯೆ ಇಟ್ಟುಕೊಳ್ಳುವದರಿಂದ ಪ್ರಯೋಜನವಿಲ್ಲ. ವ್ಯವಸಾಯ ಆದಾಯ ತೆಂಗೆಯನ್ನು ರೂಪಾಯಿಗೆ ನಾಲ್ಕಾಣೆಯಂತೆ ಇಟ್ಟದ್ದು ಹೆಚ್ಚಾಯಿತು. ಇದನ್ನು ಮೂರು ಆಣೆಗಿಳಿಸಿದರೆ ಹಿತ. ಕೊಡಗಿನ ಕಾಫಿಯು ಇಲ್ಲಿಯ ಆರ್ಥಿಕ ಭದ್ರತೆಗೆ ಬೆನ್ನೆಲುಬು. ಕಾಫಿ ವ್ಯವಸಾಯಗಾರರಿಗೆ ಸರಕಾರ ಸಹಾಯನೀಡಬೇಕು. ಸರಕಾರ ಸರಿಯಾದ ಬೆಂಬಲ ಕೊಡದೆ ಜಗತ್ತಿನಲ್ಲೇ ಹೆಸರಾದ ಬ್ರೇಜಿಲಿನಲ್ಲಿ ಕಾಫಿ ವ್ಯವಸಾಯ ಹಿಂದಡಿಇಡತೊಡಗಿದೆ. ಈ ವ್ಯವಸಾಯಕ್ಕೆ ಭವ್ಯ ಭವಿಷ್ಯವಿದೆ. ನಾವು ಕೇವಲ ಟೀಕಾದೃಷ್ಟಿಯಿಂದ ಇಲ್ಲಿ ಕುಳಿತಿಲ್ಲ. ಕೊಡಗನ್ನು ಪ್ರತ್ಯೇಕವಿಟ್ಟ ಆದರ ಅಭಿವೃದ್ಧಿಗಾಗಿ ದುಡಿಯುವದು ನಮ್ಮ ಗುರಿ. ಕೊಡಗಿನಲ್ಲಿ ವ್ಯವಸಾಯಕ್ಕೆ ತುಂಬಾ ಉತ್ತಮ ಭವಿಷ್ಯವಿದೆ. ಇದನ್ನು ಇಡೀ ಜಗತ್ತಿಗೆ ಆದರ್ಶವಾಗಿ ಮಾಡುವ ಸಾಧ್ಯತೆ ಇದೆ

ಶ್ರೀ ಕೆ ಕೆ. ಗಣಪತಿಯವರು

ಉಳಿತಾಯ ಬಡ್ಜೆಟ್ಟಿಗಾಗಿ ಸಂತೋಷ. ಫರೆಸ್ಟ್ ಇಲಾಖೆಯ ಖರ್ಚನ್ನು ೧೫ ಲಕ್ಷಕ್ಕೆ ಏರಿಸಿರುವದು ಸರಿಯಲ್ಲ. ಆಡಳಿತ ಖರ್ಚುಗಳೂ ಈ ವರ್ಷ ಎರಡುಕಾಲು ಲಕ್ಷ ಹೆಚ್ಚಾಗಿದೆ. ನ್ಯಾಯ ತೀರ್ಮಾನಗಳ ಬಗ್ಗೆ ಗ್ರಾಮ ಪಂಚಾಯಿತಿ ಯೋಜನೆಯನ್ನು ಜಾರಿಗೆ ತರುವದು ಯೋಗ್ಯ. ವಿದ್ಯಾ ಇಲಾಖೆಗೆ ಸುಮಾರು ೫ ಲಕ್ಷ ಹೆಚ್ಚಿಗೆ ಇಟ್ಟರೂ ಸಾಲದು. ವೈದ್ಯ ಇಲಾಖೆಯಲ್ಲಿ ಹಣ ಕಡಿಮೆ ಮಾಡಿದ್ದು ಸರಿಯಲ್ಲ. ಕಾಯಿಲೆ ರೋಗಿಗೆ ಸ್ಥಳವಿಲ್ಲ. ಅಲ್ಲಲ್ಲಿ ವಾರ್ಡುಗಳ ಆವಶ್ಯಕತೆ ಇದೆ. ಆರೋಗ್ಯ ಇಲಾಖೆಗೆ ೬೪೦೦೦ ಹೆಚ್ಚಿಸಲಾಗಿದೆ. ಪೋಲೀಸ್ ಇಲಾಖೆಗೆ ತುಂಬಾ ಹಣ ಖರ್ಚಾಗುತ್ತಿದೆ. ಸಿ ಐ ಡಿ. ಇಲಾಖೆಗೆ ೧೧೦೦೦ ಇಟ್ಟಿರುವದು ಸರಿಯಲ್ಲ ಅದರ ಕೆಲಸ ಚೆನ್ನಾಗಿಲ್ಲ. ವ್ಯವಸಾಯ ಇಲಾಖೆಯಲ್ಲಿ ಮೂರುವರೆ ಲಕ್ಷಕ್ಕಿಂಥಾ ಹೆಚ್ಚು ಖರ್ಚುಗಿಟ್ಟಿದ್ದರೂ ಇದು ಕೊಡಗಿಗೆ ಮತ್ತು ಪೊನ್ನಂಪೇಟೆ ಫಾರಂಗಳ ಖರ್ಚಲ್ಲದೆ ರೈತನಿಗೆ ನೇರವಾದ ಸಹಾಯ ದೊರೆಯುವಂತಿಲ್ಲ. ಪಶುವೈದ್ಯ ಇಲಾಖೆಯು ಇನ್ನೂ ಒಳ್ಳೆಯ ಕೆಲಸ ಮಾಡಬೇಕು. ಮರೆನಾಡಿನಲ್ಲಿ ಒಂದು ಡೈರಿ ಫಾರಂ ತೆರೆಯಬಹುದು. ಸಹಕಾರ ಇಲಾಖೆಗೆ ರೂ. ೫೦ ಸಾವಿರ ಕಡಿಮೆ ಇಡಲಾಗಿದೆ. ಸಹಕಾರದ ಮೂಲಕ ಗ್ರಾಮದ ಕೆಲಸಗಳನ್ನು ಮಾಡಬಹುದು. ಲಕ್ಷ್ಮಣ ತೀರ್ಥ, ಹಾರಂಗಿ ನೀರಾವರಿ ಯೋಜನೆಗಳೂ, ಬರಪೊಳೆ ವಿದ್ಯುಚ್ಛಕ್ತಿ ಯೋಜನೆಯೂ ಕೈಕೊಳ್ಳಲ್ಪಡಬೇಕು. ಗಜೆಟೆಡ್ ಉದ್ಯೋಗಿಗಳ ಸಂಖ್ಯೆ ಹೆಚ್ಚಿಸುವದು ಸರಿಯಲ್ಲ. ಹೊರಗಿನವರನ್ನು ಹೆಚ್ಚಿನ ವೇತನದಲ್ಲಿ ತರುವದು ಯೋಗ್ಯವಲ್ಲ. ಗ್ರಾಮ ರಸ್ತೆಗಳ ಮಟ್ಟಿಗೆ ಹೆಚ್ಚಿನ ಆಸ್ಥೆ ವಹಿಸಬೇಕು.

ಶ್ರೀ ಪಿ ಲಕ್ಕನವರು

ವಿದ್ಯೆ ಮುಂದುವರಿಯಬೇಕು. ಪ್ರಾಥಮಿಕ ಮತ್ತು ಹೈಯರ್ ಎಲಿಮೆಂಟರಿ ಶಾಲೆಗಳು ಹೆಚ್ಚಾಗಬೇಕು. ಜಿಲ್ಲಾ ಬೋರ್ಡು ಉಪಾಧ್ಯಾಯರ ಸ್ಥಿತಿ ತುಂಬಾ ಹಾಳಾಗಿದೆ. ಹಳ್ಳಿಯ ಶಾಲೆಗಳಲ್ಲಿ ಕೆಲಸ ಮಾಡುವುದು ತುಂಬಾ ಕಷ್ಟದ ಕೆಲಸ. ಪಟ್ಟಣದ ದೊಡ್ಡ ಶಾಲೆಗಳಲ್ಲಿ ಕೆಲಸ ಮಾಡುವುದು ಸುಲಭ. ಆದರೆ ಕಷ್ಟ ಕೆಲಸ ಮಾಡುವವರಿಗೆ ಕಡಿಮೆ ಸಂಬಳ ಕೊಡಲ್ಪಟ್ಟು ಸುಲಭ ಕೆಲಸ ಮಾಡುವವರಿಗೆ ಹೆಚ್ಚಿನ ವೇತನ ಕೊಡುತ್ತಿರುವುದು ನ್ಯಾಯವಲ್ಲ. ಯದ್ವಾತದ್ವವಾಗಿ ಹಳ್ಳಿ ಶಾಲೆಗಳ ಅಧ್ಯಾಪಕರನ್ನು ವರ್ಗಾಯಿಸುವುದೂ ಸರಿಯಲ್ಲ. ದೇಶದಲ್ಲಿ ವಿದ್ಯೆಯ ಮಟ್ಟಿಗೆ ಪ್ರಗತಿಯಾದರೆ ಇತರ ಬಾಬುಗಳಲ್ಲಿಯೂ ಅಭಿವೃದ್ಧಿ ಆಗುತ್ತದೆ.

ಶ್ರೀ ಪಿ. ಯಂ ನಾಣಯ್ಯನವರು

೧೯೪೭ ರಲ್ಲಿ ಜನತಾ ಸರಕಾರವಾಗಿ ಆ ಸ್ವರಾಜ್ಯದ ಆಡಳಿತದಲ್ಲಿ ೭೮ ಸಂಸ್ಥಾನಗಳಲ್ಲೂ ಜನತಾ ರಾಜ್ಯವಾಯಿತು. ಹೀಗೆ ಆಗ ಮಾಡಿಕೊಟ್ಟವರಿಗೆ ವಂದನೆಗಳು. ಇದಕ್ಕಾಗಿ ಪ್ರಯತ್ನಿಸಿದ ಶ್ರೀ ಸಿ. ಎಂ. ಪೂಣಚ್ಚನವರಿಗೂ ವಂದನೆ. ಇದು ಜನತಾ ಬಡ್ಜೆಟ್ ಇದು ಆನಂದದ ದಿನ. ಕೇವಲ ಅಲ್ಪ ಅವಧಿಯಲ್ಲಿ ಪರಿಶ್ರಮ ಪಟ್ಟು ಇದನ್ನು ತಯಾರಿಸಿದ್ದು ಸ್ತುತ್ಯರ್ಹ. ಬಡ್ಜೆಟ್ಟಿನಲ್ಲಿ ಸಾಮಾನ್ಯವಾಗಿ ಬೇಕಾಗುವ ಜನಹಿತ ಕೆಲಸಗಳಿಗೆಲ್ಲಾ ಹಣವಿಟ್ಟಿದ್ದಾರೆ. ಇಟ್ಟ ಹಣ ಖರ್ಚಾಗುವುದಿಲ್ಲವೆಂಬುದಕ್ಕೆ ಕಾರಣವಿಲ್ಲ. ಈಗಿನ ಅಧಿಕಾರ ಹಿಂದಿನಂತಲ್ಲ. ಮಂತ್ರಿಗಳು ನಿಗವಿಡುತ್ತಾರೆ. ಆರೆಂಟು ಗಂಟೆಗಳೊಳಗೆ ಆಗಬೇಕೆಂದರೆ ಆಗಲಾರದು. ಮಂತ್ರದಿಂದ ಕೆಲಸ ಮಾಡುವವರಿಲ್ಲ. ಸಾರ್ವಜನಿಕರೂ ಸಹಕರಿಸಬೇಕು. ಸಿಕ್ಕಿಸಿಕ್ಕಿದ್ದಕ್ಕೆಲ್ಲಾ ಅರ್ಜಿ ಬರೆದು ತುಂಬಾರದು. ಗ್ರಾಮಾಭಿವೃದ್ಧಿ, ನೀರಾವರಿ ಯೋಜನೆ, ವಿದ್ಯಾಪ್ರಚಾರ ಇವುಗಳಿಗಾಗಿ ಒಂದು ಪಂಚವಾರ್ಷಿಕ ಯೋಜನೆ ಮಾಡುವುದು ಉತ್ತಮ. ಆಡಳಿತ ಖರ್ಚು ಹೆಚ್ಚಾಗಿದೆಯೆಂಬುದು ನ್ಯಾಯವಲ್ಲ. ಜವಾಬ್ದಾರಿ ಸರಕಾರ ಬಂದ ಮೇಲೆ ಆದರ ಖರ್ಚು ನಿರ್ವಹಿಸಬೇಕಾದ್ದು ಆವಶ್ಯ. ಭೂಮಿಬೇಕೆಂದು ಕೇಳುವವರಿಗೆಲ್ಲಾ ಭೂಮಿ ಮದಗಿಸುವುದು ಕಷ್ಟ. ಆದ್ದರಿಂದ ಸಹಕಾರ ಸಾಮೂಹಿಕ ವ್ಯವಸಾಯ ಕ್ಷೇತ್ರಗಳನ್ನು ತೆರೆಯುವುದು ಹಿತಕರ. ಎಕ್ಸೈಸ್ ಇಲಾಖೆಯಲ್ಲಿ ಹೆಚ್ಚಿನ ವ್ಯವಸ್ಥೆ ಕಾಣುವುದಿಲ್ಲ. ಕಳ್ಳಸಾರಾಯಿ ಮಾರಾಟ ಇದೆ. ಇನ್ಸ್‌ಪೆಕ್ಟರಿಗೆ ಇದ್ದ ಮೋಟಾರನ್ನು ರದ್ದು ಮಾಡಿದ್ದು ಯೋಗ್ಯವಲ್ಲ. ಎಕ್ಸೈಸ್ ಇಲಾಖೆಗೆ ಒಂದು ಪೋಲೀಸ್ ತಂಡವನ್ನೂ ಒಂದು ವ್ಯಾನನ್ನು ಕೊಟ್ಟು ಕೆಲಸ ಸಮರ್ಪಕವಾಗಿ ನಡೆಯುವ ಏರ್ಪಾಡು ಮಾಡಬೇಕು. ರೆವಿನ್ಯೂ ಇಲಾಖೆಯಲ್ಲಿ ಸಿಬ್ಬಂದಿಗಳು ಸಾಲ

ದು. ಕೆಲವು ನಾಡುಕಚೇರಿಗಳಲ್ಲಿ ಪ್ಲಾನುಗಳೇ ಇಲ್ಲ. ಸೆಟ್ಲ್‌ಮೆಂಟ್ ಕೆಲಸ ಜನರಿಗೆ ಹಿತಕರವಾಗಿ ಆದರೆ ಅನೇಕ ಜಾಗದ ತಕರಾರುಗಳು ನಿಲ್ಲಬಹುದು. ವ್ಯವಸಾಯ ಇಲಾಖೆಗೆ ಹಣ, ಸಿಬ್ಬಂದಿ ಇದ್ದರೂ ಸಾಕಷ್ಟು ಕೆಲಸ ನಡೆಯುತ್ತಿಲ್ಲ. ಇತ್ತಿತ್ತ ಜನರು ಗೊಬ್ಬರ ಉಪಯೋಗಿಸುವುದೇ ಕಡಿಮೆಯಾಗಿದೆ. ತಿತಿಮತಿ ಕೇಂದ್ರದಲ್ಲಿ ೩೦೦೦೦ ಎಕರೆ ಜಾಗವನ್ನು ಹುಲ್ಲುಗಾವಲು ಮಾಡಿ ರೈತನ ದನಗಳನ್ನು ಅಷ್ಟಿಂಸಿ ತಳಿ ಉತ್ತಮಗೊಳಿಸುವ ಯತ್ನ ಮಾಡಬೇಕು. ಚುನಾವಣೆಯಲ್ಲಿ ದೇಶವನ್ನು ಮಾರಿಬಿಡುತ್ತಾರೆಂದು ಗಾಬರಿಗೊಳಿಸಲಾಯಿತು. ಆದರೆ ದೇಶ ಮಾರಿಹೋಗಲಿಲ್ಲ. ಇಂಥಾ ತಪ್ಪಭಿಪ್ರಾಯ ಬಿಡಬೇಕು. ಚೀಫ್ ಕಮಿಷನರಾದ ಬೇಡಿಯವರು ಶಾಂತರು ದೂರದೃಷ್ಟಿ ಇರುವವರು ಅನುಭವಶಾಲಿಗಳು. ಅವರ ಮಾರ್ಗದರ್ಶನದಲ್ಲಿ ಈ ಮಂತ್ರಿ ಮಂಡಳ ಮುನ್ನಡೆದು ದೇಶದ ಹಿತ ಮಾಡಬಹುದು.

ಶ್ರೀ ಸಿ. ಎ. ಮಂದಣ ನವರು

ಬಜೆಟ್ಟನ್ನು ಪುಷ್ಟೀಕರಿಸುವೆನು. ಒಳ್ಳೆ ಬಜೆಟ್ಟು ಉಳುವರ ದೃಷ್ಟಿಯಿಂದಲೇ ಅಳೆಯಲ್ಪಡುವದಿಲ್ಲ. ವಿವಿಧ ಯೋಜನೆಗಳಿಗೆ ಇಟ್ಟ ಹಣದ ದೃಷ್ಟಿಯಿಂದ ಅಳೆಯಲ್ಪಡುತ್ತದೆ. ಇದು ಸಂಪೂರ್ಣವಾದ ಬಜೆಟ್ಟಾಗಿದೆ. ಎಲ್ಲಾ ವಿಧದ ಅಭಿವೃದ್ಧಿಗೂ ಹಣವಿಡಲಾಗಿದೆ. ವೈದ್ಯ ಇಲಾಖೆಯಲ್ಲಿ ಕ್ಷಯರೋಗ ಆಸ್ಪತ್ರೆ ಕಟ್ಟಡಕ್ಕೆ ಹಣವಿಡಲಿಲ್ಲ. ಬಹುಶಃ ಬರುವ ವರ್ಷ ಇಡಬಹುದೇನೊ. ಔದ್ಯೋಗಿಕ ಕಾಲೇಜುಗಳಲ್ಲಿ ಕೊಡಗಿನ ವಿದ್ಯಾರ್ಥಿಗಳಿಗೆ ಹೆಚ್ಚಿನ ಸ್ಥಳ ದೊರೆಯುವಂತೆ ಪ್ರಯತ್ನಿಸಬೇಕು. 'ಸಿ' ಸಂಸ್ಥಾನಗಳಿಗೆಂದು ಕೇಂದ್ರ ಸರಕಾರವು ಸೀಟುಗಳನ್ನಿರಿಸಿದೆಯಂತೆ. ಅದರಿಂದ ಒಂದು ಭಾಗ ಪಡೆಯಬೇಕು. ಹಿಂದುಳಿದ ಪಂಗಡದವರಿಗೆ ಒಳ್ಳೇ ಅನುಕೂಲ ಕೊಡಲ್ಪಡುತ್ತಿದೆ. ನಮ್ಮ ರಾಜ್ಯಘಟನೆಯಲ್ಲಿರುವಂತೆ ಈ ಸವಲತ್ತು ಕೆಲವು ನಿರ್ದಿಷ್ಟ ಸಮಯದ ವರೆಗೆ ಮಾತ್ರ ಕೊಡಲ್ಪಡಬೇಕು. ಅಷ್ಟರಲ್ಲಿ ಅವರು ಇತರ ಕೋಮುಗಳಂತೆ ಮುಂದುವರಿದುಕೊಳ್ಳಬೇಕು. ಕೊಡಗು ಕಿತ್ತಳೆ ಪರಿಶೋಧನಾ ಕೇಂದ್ರದ ಬಗ್ಗೆ ಗಮನವಿಡಬೇಕೆಂದು ಹೇಳಿದ ಶ್ರೀ ಎ ಸಿ ತಿಮ್ಮಯ್ಯನವರ ಅಭಿಪ್ರಾಯವನ್ನು ಸಮರ್ಥಿಸುವೆನು. ಗುಡಿಕೈಗಾರಿಕೆಗಳ ಬಗ್ಗೆ ಬಜೆಟ್ಟಿನಲ್ಲಿ ಹಣವಿಟ್ಟಿಲ್ಲ. ಆರ್ಥಿಕ ತೊಂದರೆಯೇ ಇದಕ್ಕೆ ಕಾರಣವಿರಬಹುದು. ಕೊಡಗಿನಲ್ಲಿ ಬೆಂಕಿಪೆಟ್ಟಿಗೆ, ಪ್ಲೈವುಡ್, ಹಂಚು ಮೊದಲಾದ ಕೈಗಾರಿಕೆಗಳನ್ನು ಕೈಕೊಳ್ಳಬಹುದು. ಹೀಗೆ ಮಾಡಿದರೆ ಅನೇಕರಿಗೆ ಉದ್ಯೋಗದ ಏರ್ಪಾಡಾಗುವುದಲ್ಲದೆ ದೇಶಕ್ಕೆ ಲಾಭವೂ ಆಗುವುದು. ಸರ್ವೆ ಇಲಾಖೆಯಲ್ಲಿ ಒಂದೆರಡು ಜನರನ್ನು ಬಿಟ್ಟರೆ ಉಳಿದವರಿಗೆ ಸರ್ವೆಯೇ ತಿಳಿದಿಲ್ಲ. ಮೂರು ಜನರಿಂದ ಒಂದು ಸ್ಥಳದ ಸರ್ವೆ ಮಾಡಿಸಿದರೆ ಒಂದಕ್ಕೊಂದು ವಿರುದ್ಧವಾದ ಮೂರು ಪ್ಲಾನು ಮಾಡಬಹುದು. ಭಾಗಮಂಡಲ ಕರಿಕೆ ರಸ್ತೆಯು ಬೇರೆ ರಸ್ತೆಗಳಂಥಾ ಪ್ರಾಮುಖ್ಯವಿದೆ. ಇತರ ರಸ್ತೆಗಳನ್ನು ಕ್ರಮಶಃ ಕೈಕೊಳ್ಳಬಹುದು. ದಕ್ಷಿಣ ಕೊಡಗು, ಉತ್ತರ ಕೊಡಗು ಪೈಪೋಟಿಗೆ ಎಡೆಯಿಲ್ಲ. ಬೇತರಿ, ಕೊಟ್ಟಮುಡಿ ಸೇತುವೆಯಾಗಿ ಅವುಗಳಲ್ಲಿ ಸುಂಕವಿಟ್ಟರೂ ತೊಂದರೆ ಇಲ್ಲ. ಈಗ ಗ್ರಾಮಗಳಲ್ಲೂ ರಾಜಕೀಯ ಪಕ್ಷಗಳಾಗಿವೆ. ಪಟೇಲರು ಪಕ್ಷ ವಹಿಸಿ ಕೆಲಸ ಮಾಡುತ್ತಾರೆ. ಅಂಥಾವರನ್ನು ತೆಗೆದು ಹಾಕಬೇಕು. ಇದಕ್ಕಾಗಿ ಪೋಲೀಸು ದಳ ಬಲವಾಗಿರುವದು ಹಿತ. ಪಟೇಲರನ್ನು ಪರಂಪರಾ ಪದ್ಧತಿಯಂತೆ ನೇಮಿಸದೆ ಯೋಗ್ಯರನ್ನು ಆರಿಸುವ ಏರ್ಪಾಡು ಮಾಡಬೇಕು. ಕಳೆದುದನ್ನು ಮರೆಯಬೇಕೆಂದರೂ ಮರೆಯಲಾಗುವುದಿಲ್ಲ. ರಿಸರ್ವ್ ಪೋಲೀಸ್ ಇಲ್ಲದಿದ್ದರೆ ಚುನಾವಣೆ ಯೋಗ್ಯರೀತಿ ಆಗುತ್ತಿರಲಿಲ್ಲ. ಪ್ರಜಾಪ್ರಭುತ್ವ ಚೆನ್ನಾಗಿ ನಡೆಯಬೇಕಾದರೆ ವಿರೋಧ ಪಕ್ಷವಿರಬೇಕು. ಆದರೆ ಶ್ರೀ ಬೆಳ್ಯಪ್ಪನವರ ಪಕ್ಷವು ವಿರೋಧವಾಗಿಲ್ಲದ್ದು ವ್ಯಸನಕರ. 'ಕೊಡಗು' ಪತ್ರಿಕೆಯ ಟೀಕಾ ವಿಧಾನವನ್ನು ಶ್ರೀ ಬೆಳ್ಯಪ್ಪನವರು ಕಡಿಮೆ ಮಾಡುವರೆಂದು ನಂಬುತ್ತೇನೆ.

ಶ್ರೀ ಲಿಂಗರಾಜಯ್ಯನವರು

ವ್ಯವಸಾಯ ಇಲಾಖೆಗೆ ತುಂಬಾ ಹಣವಿಟ್ಟದ್ದು ಸಂತೋಷ. ಅದನ್ನು ಜನಪ್ರಯೋಜನಕ್ಕಾಗಿ ವಿನಿಯೋಗಿಸಬೇಕು. ಇಲಾಖೆಯಿಂದ ಸಕಾಲಕ್ಕೆ ಬೀಜ ಗೊಬ್ಬರ ದೊರೆಯುವದಿಲ್ಲ. ಬೇಸಿಗೆ ವ್ಯವಸಾಯಕ್ಕೆ ಪಂಪುಗಳನ್ನು ಒದಗಿಸಿ ಕೊಡಬೇಕು. ಕೊಡಗು ಮಲೇರಿಯ ದೇಶವೆಂದಿದ್ದದ್ದು ಈಗ ಬದಲಾಗಿದೆ. ಆಸ್ಪತ್ರೆಗಳೂ, ಅಲ್ಲಲ್ಲಿ ತಾತ್ಕಾಲಿಕ ಆಸ್ಪತ್ರೆಗಳೂ ಆಗುತ್ತಿರುವದು ಸಂತೋಷ. ಆದರೆ ಆಸ್ಪತ್ರೆಗೆ ಹೋದರೆ ಖಾಸಗಿ ವ್ಯಾಪಾರಿ ಗುಬ್ಬಿ ಬಸಪ್ಪನವರು ಯಾ ಇತರ ಅಂಗಡಿಯಿಂದ ಔಷಧಿ ತರಬೇಕೆಂದು ಚೀಟಿ ಕೊಡುವ ಪರಿಸ್ಥಿತಿ ಇರಬಾರದು. ದನಗಳ ತಳಿಯ ಮತ್ತು ಆಸ್ಪತ್ರೆಯ ಬಗ್ಗೆ ಹೆಚ್ಚಿನ ಅನುಕೂಲತೆ ಕಲ್ಪಿಸಿ ಕೊಡಬೇಕು. ಸಿಬ್ಬಂದಿಗಳಿಗೆ ಯೋಗ್ಯ ಸೌಕರ್ಯವಿಲ್ಲದೆ ಕೆಲಸ ಸರಿಯಾಗಿ ಆಗುತ್ತಿಲ್ಲ. ಒಬ್ಬ 'ಸ್ಟಾಕ್ ಮೇನ್'ನನ್ನು ಇಟ್ಟದ್ದರಿಂದ ಕಾರ್ಯವಾಗಲಿಲ್ಲ. ಶ್ರೀ ನಾಣಪ್ಪಯ್ಯನವರು ಹೇಳಿದ ೫೦ ಸಾವಿರ ಎಕರೆಯ ಹುಲ್ಲುಗಾವಲು ಮಾಡಿ ಅಲ್ಲಿ ರೈತರ ದನಗಳನ್ನು ಮೇಯಿಸುವ ಯೋಜನೆ ಸರಿಯಲ್ಲ. ಇದರಿಂದ ರೈತರಿಗೆ ಗೊಬ್ಬರ ನಷ್ಟ ಮಾತ್ರವಲ್ಲ; ವಿಪರೀತ ತೊಂದರೆಗಳಿವೆ. ಆ ಸೂಚನೆಯನ್ನು ಸರಕಾರ ಒಪ್ಪಬಾರದು. ಸಹಕಾರ ಚಳವಳ ಚೆನ್ನಾಗಿದೆ. ಚುನಾವಣೆಯ ನಂತರ ಪ್ರತಿ ಗ್ರಾಮಗಳಲ್ಲಿಯೂ ಪಂಗಡಗಳಾಗಿವೆ. ಸಹಕಾರ ಇಲಾಖೆಯಲ್ಲಿ ಸಾಲ ದೊರೆಯುವದು ಕಷ್ಟವಾಗಿದೆ. ರಿಜಿಸ್ಟ್ರಾರವರು ಒಪ್ಪಿಗೆ ಕೊಡುವದಿಲ್ಲ. ದೀರ್ಘ ಕಂತಿನ ಸಾಲದ ವ್ಯವಸ್ಥೆ ಮಾಡಬೇಕು. ಉತ್ತರ ಕೊಡಗು ದಕ್ಷಿಣ ಕೊಡಗು ಎಂಬ ಭಾವನೆ ಮೆಂಬರುಗಳಲ್ಲಿ ಬಾರದು. ಜಿಲ್ಲಾ ಬೋರ್ಡ್ ಅಧ್ಯಾಪಕರ ಸ್ಥಿತಿ ಬಹು ಹೀನಾಗಿದೆ. ಇದನ್ನು ಸುಧಾರಿಸಬೇಕು.

ಶ್ರೀ. ಎಂ ಡಿ ಮಾಚಯ್ಯನವರು.

ರಾಷ್ಟ್ರಪಿತನಿಗೂ ಮುಖ್ಯಮಂತ್ರಿ ನೆಹರೂಗಳವರಿಗೂ ವಂದನೆ. ಕೊಡಗಿನ ಚರಿತ್ರೆಯಲ್ಲಿ ಇಂಥಾ ಒಂದು ಸರಕಾರ ಆದದ್ದಿಲ್ಲ. ಪ್ರಜಾಪ್ರಭುತ್ವ ಕಾರ್ಯಾಚರಣೆಯಲ್ಲಿ ಒಂದು ಜನತೆಯ ಕೂಗು ಕೇಳುವಂತಾಗಿದೆ. ಬಜೆಟ್ಟನ್ನು ನೋಡಿದರೆ ಇದು ಬಂಡವಾಳದಾರರ ಬಜೆಟ್ಟಲ್ಲದೆ ಸಮಾಜವಾದದ ಕಡೆಗಿಟ್ಟ ಹೆಜ್ಜೆಯೆನ್ನಬಹುದು. ಶ್ರೀಮಂತ ಮತ್ತು ಬಡವರೊಳಗಿನ ಅಂತರವನ್ನು ಕಡಿಮೆ ಮಾಡುವ ಯತ್ನ ಮಾಡಬೇಕು. ನಾವು ಕೇಂದ್ರಕ್ಕೆ ಹೋಗುತ್ತಿರುವ ಸೆಂಟ್ರಲ್ ಎಕ್ಸೈಸ್ ಉತ್ಪತ್ತಿಯಿಂದ ಒಂದು ಅಂಶವನ್ನು ಪಡೆಯಲು ಯತ್ನಿಸಬೇಕು. ಉತ್ಪತ್ತಿಯನ್ನು ಹೆಚ್ಚಿಸಿ ವಿತರಣೆ ಯೋಗ್ಯವಾಗಿ ಆಗುವಂತೆ ನೋಡಬೇಕು. ಬಂಡವಾಳದಾರರ ಹಿಡಿತದಲ್ಲಿ ಬಡವರ ಶೋಷಣೆಯಾಗುವದನ್ನು ನಿಲ್ಲಿಸಬೇಕು. ದೇಶದ ವ್ಯವಸಾಯಗಾರರ ಭೂಮಿಯು ಹರಿದು ಹಂಚಿಹೋಗಿ ಆರ್ಥಿಕ ದೃಷ್ಟಿಯಿಂದ ಲಾಭದಾಯಕವಾಗಿಲ್ಲ. ಇದನ್ನು ಪರಿಹರಿಸಲು ಯೋಗ್ಯ ಉಪಾಯ ಮಾಡಬೇಕು. ರೆವಿನ್ಯೂ ಇಲಾಖೆ ಅಧಿಕಾರಿಗಳಲ್ಲಿ ಇನ್ನೂ ಆ ಅಧಿಕಾರದ ದರ್ಪವಿರುವದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿದೆ. ನಿಜವಾಗಿಯೂ ಕೆಲವು ರೈತರು ಕಷ್ಟ [illegible]. ಸರ್ವೆ ಮೊದಲಾದ ವಿಚಾರಗಳಲ್ಲಿ ಇಲಾಖೆಯ ಕೆಲಸ ಚೆನ್ನಾಗಿಲ್ಲ. ಇದರ ಕಾರಣವೇ ಕೋರ್ಟುಗಳಲ್ಲಿ ಕೇಸು ಹೆಚ್ಚಾಗಿದೆ. ನ್ಯಾಯವಿತರಣೆಯೂ ಸಮರ್ಪಕವಾಗಿಲ್ಲ. ನ್ಯಾಯತೀರ್ಮಾನ ನಗರಗಳಲ್ಲಿ ಆಗುವದರ ಬದಲು ಹಳ್ಳಿಗಳಲ್ಲಿ ಆಗುವಂತಾಗಬೇಕು. ಗ್ರಾಮ ಪಂಚಾಯತ ಸಭೆಗಳನ್ನು ಸ್ಥಾಪಿಸಿ ಅಧಿಕಾರ ಕೊಡಬೇಕು. ಪೋಲಿಸ್ ಇಲಾಖೆಯವರು ಎಚ್ಚರಿಕೆ ವಹಿಸಬೇಕು. ಕೇಸು ಆಗದಂತೆ ನೋಡುವದು ಹಿತವಲ್ಲದೆ ಆದ ಮೇಲೆ ಹಿಡಿದು ಶಿಕ್ಷಿಸುವದು ಜಾಣತನವಲ್ಲ. ಈಗಿನ ವಿದ್ಯಾಭ್ಯಾಸವು ಯೋಗ್ಯವಲ್ಲ. ಹೊಸ ಕಾಲಕ್ಕನುಗುಣ ಈ ಹಳೆಯ ಕ್ರಮ ಬದಲಾಗಬೇಕು. ಕೆಲಸದ ಗೌರವವು ಕಲಿಸಲ್ಪಡಬೇಕು. ವೈದ್ಯಕೀಯ ವಿಚಾರದಲ್ಲಿ ಗ್ರಾಮಗಳು ಕಡೆಗಣಿಸಲ್ಪಟ್ಟಿವೆ. ಇಲ್ಲಿಯೂ ಕೇಂದ್ರೀಕೃತ ವ್ಯವಸ್ಥೆಯೇ ಇದೆ. ಮಲೇರಿಯಾ ನಿವಾರಣೆಗೆ ತುಂಬಾ ಮುತುವರ್ಜಿ ತೆಗೆದುಕೊಂಡರೆ ಉಳಿದ ವಿಚಾರಗಳಲ್ಲಿ ಹೆಚ್ಚು ಕಾಯಿಲೆ ಹಬ್ಬಲು ಆಸ್ಪದವಿಲ್ಲ. ಗ್ರಾಮನೈರ್ಮಲ್ಯದ ಕಡೆ ಗಮನವೀಯಬೇಕು. ವ್ಯವಸಾಯವು ರಾಷ್ಟ್ರದ ಬೆನ್ನೆಲುಬು. ಉತ್ತಮ ವಿಧಾನಗಳ ಬೋಧನೆಯಾಗಬೇಕು. ವೆಟರ್ನರಿ ಇಲಾಖೆಯೂ ಅಭಿವೃದ್ಧಿಗೊಳ್ಳಬೇಕು. ಯಾವ ದೇಶಕ್ಕಾದರೂ ಜಾನುವಾರುಗಳೇ ಜೀವಾಳ. ಸಹಕಾರದಲ್ಲಿ ಈಗಿನ ರೀತಿ ಸರಿ ಇಲ್ಲ. ಉತ್ಪಾದನಾ ಮತ್ತು ಮಾರಾಟ ವಿಭಾಗಗಳು ಇನ್ನೂ ಅಭಿವೃದ್ಧಿಯಾಗಬೇಕು. ಭೂಮಿ ಅಡವು ಸಂಘದ ವ್ಯವಸ್ಥೆ ಮಾಡಬೇಕು. ಕೊಡಗಿನಲ್ಲಿ ಕೈಗಾರಿಕೆಗಳನ್ನು ಹೆಚ್ಚು ಮಾಡುವ ಬಗೆಗೆ ನಿಗವಿಡಬೇಕು. ಕೈಮಗ್ಗದ ಕೆಲಸ ಅಲ್ಲಲ್ಲಿ ನಡೆಯುತ್ತಿದೆ. ಅದಕ್ಕೆ ಬೆಂಬಲ ಬೇಕು. ರೈತನಿಗೆ ಆರು ತಿಂಗಳು ಕೆಲಸವಿರದು. ಆ ಸಮಯದಲ್ಲಿ ಲಾಭದಾಯಕ ವೃತ್ತಿಯನ್ನು ಕೈಕೊಳ್ಳುವ ಅನುವು ಮಾಡಬೇಕು. ಗ್ರಾಮಾಂತರ ರಸ್ತೆಗಳ ಸುಧಾರಣೆಯಾಗಬೇಕು. ಮಜೂರರ ಹಿತವನ್ನು ಸರಕಾರ ಕಾಪಾಡಬೇಕು.

ಶ್ರೀ ಪಿ. ಡಿ. ಸುಬ್ಬಯ್ಯನವರು.

ಬಜೆಟ್ಟು ಹೇಳಿದ ಮಟ್ಟಿಗೆ ಸುಸೂತ್ರವಾಗಿದೆ. ನಾವೆಲ್ಲರೂ ಈ ಕಾರ್ಯಕ್ರಮಗಳನ್ನು ಜಾರಿಯಲ್ಲಿ ತರುವ ಬಗೆ ಸಹಾಯಕರಾಗಿರಬೇಕು. ಚುನಾವಣೆಯ ಕಾಲದಲ್ಲಿ ಜನತೆಗೆ ಕೊಟ್ಟ ಭರವಸೆಗಳನ್ನು ಅವರು ನಿರೀಕ್ಷಿಸುತ್ತಾರೆ. ಆ ನಿರೀಕ್ಷಣೆಗಳಿಗೆ ಈ ಬಜೆಟೇ ಉತ್ತರ. ಮಾಜಿ ಸಿಪಾಯಿಗಳಲ್ಲಿ ಸಕಲ ಜನರಿಗೆ ಭೂಮಿ ಕೊಡಲಾಗಿದೆ. ಉಳಿದವರ ಬಗ್ಗೆ ಸರಕಾರವು ಸ್ಥಳ ಕೊಡುವದಾದರೆ ಆ ಸ್ಥಳದ ಮರಗಳನ್ನು ಆ ಮೇಲೆ ಪಡೆದು ಆ ಜಿರ್ದಾರರಿಗೆ ಬೆಲೆ ಕೊಡುವದು ಯೋಗ್ಯ. ಹಲವರು ತಾವು ಪಡೆದ ಸ್ಥಳದಲ್ಲಿ ಏನೂ ಮಾಡಿಲ್ಲ. ಮುದಕಡಿಗೆ ಬಂಜರು ಬಿಳಿಸಿದ್ದಾರೆ. ಫಾರೆಸ್ಟ್ ಇಲಾಖೆಯು ೭೫೦ ಎಕರೆ ಸಾರ ಕಡಿದರೆ ಅಷ್ಟೇ [illegible] ಹೊಸ ಜಾತಿಯ ನೆಡುತ್ತಿರುವದನ್ನು ಮರೆಯಬಾರದು. ಶ್ರೀ ಸಿ. ಎಂ. ತಿಮ್ಮಯ್ಯನವರು ಮಡಿಕೇರಿ ಆಸ್ಪತ್ರೆಯಲ್ಲಿ ಹೊಸ ವಾರ್ಡ್ ಕಟ್ಟಲು ಮುಂದೆ ಬಂದಿದ್ದಾರೆಂಬ ವರ್ತಮಾನಕ್ಕೆ ಸಂತೋಷ. ಸೋಮವಾರಪೇಟೆ, ಪಂಜಗಳಲ್ಲಿ ಆಸ್ಪತ್ರೆ ಇದ್ದರೂ ಔಷಧಿ ತೆಗೆದುಕೊಳ್ಳುವ ಅಭ್ಯಾಸ ಜನರಿಗಿಲ್ಲ. ಆದ್ದರಿಂದ ಇದಕ್ಕೆ ತಕ್ಕ ಪ್ರಚಾರವಾಗಬೇಕು. ಸಂಪಾಜೆಯಲ್ಲಿ ಒಂದು ವೆಟರ್ನರಿ ಆಸ್ಪತ್ರೆಯಾಗಬೇಕು. ಸಹಕಾರಕ್ಕೆ ತುಂಬಾ ಉಜ್ವಲವಾದ ಭವಿಷ್ಯವಿದೆ. ಸಹಕಾರದ ಮೂಲಕ ರಚನಾತ್ಮಕ ಕೆಲಸವಾಗಬೇಕು. ಆದರೆ ಸಹಕಾರ ರಾಜಕೀಯ ವಾದಿಗಳ ರಂಗಸ್ಥಳವಾಗದಂತೆ [illegible] ಪಟ್ಟಣಗಳಲ್ಲಿ ವಸತಿ ತೊಂದರೆ ಬಹಳ ಇದೆ. ಆದ್ದರಿಂದ ಸಹಕಾರ ಕಟ್ಟಡ ಸಂಘಗಳಿಗೆ ಬೆಂಬಲಕೊಡಬೇಕು. ಮೋಟಾರು ವಾಹನಗಳಿಗೆ ಹೆಚ್ಚಿನ ಕಂದಾಯ ಹಾಕಬಹುದು. ಬೇತರಿ, ಕೊಟ್ಟಮುಡಿಯಲ್ಲಿ ಸೇತುವೆ ಕಟ್ಟಿ ಸುಂಕ ವಸೂಲ್ಮಾಡಬಹುದು. ಗಜೆಟೆಡ್ ಉದ್ಯೋಗಸ್ಥರನ್ನು ನೆರೆ ಪ್ರಾಂತ್ಯಗಳೊಡನೆ ವರ್ಗಮಾಡುವ ಏರ್ಪಾಡು ಮಾಡಬೇಕು. ಇದರಿಂದ ಉದ್ಯೋಗಿಗಳಿಗೂ ಹಿತವಾಗುವದು.

(ಉಳಿದ ಸದಸ್ಯರ ಭಾಷಣದ ಸಾರಾಂಶವನ್ನೂ ಮಂತ್ರಿಯವರ ಉತ್ತರವನ್ನೂ ಮುಂದಿನ ವಾರ ಕೊಡಲಾಗುವದು)

ಶ್ರೀ ಕೆ ಯಂ. ಮೊಗಪ್ಪನವರು,..
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಮಂತ್ರಿಗಳ ವೇತನದ ಮಸೂದೆ ಪಾಸಾಯಿತು.

ತಾರೀಕು ೨೧–೭–೫೩ ರಲ್ಲಿ ಶಾಸನ ಸಭೆಯು ಬೆಳಿಗ್ಗೆ ೧೧ ಗಂಟೆಗೆ ಸೇರಿತು. ಎಲ್ಲಾ ಸದಸ್ಯರೂ ಹಾಜರಿದ್ದರು. ಪ್ರಥಮತಃ ಪ್ರಶ್ನೋತ್ತರಗಳಾದ ಮೇಲೆ ಶ್ರೀ. ಸಿ. ಎಂ. ಪೂಣಚ್ಚನವರು ಮಂತ್ರಿಗಳ ವೇತನದ ಮಸೂದೆಯನ್ನು ಸಭೆಯ ಮುಂದಿಟ್ಟರು. ಈ ಮಸೂದೆಯಂತೆ ಮುಖ್ಯ ಮಂತ್ರಿಯವರಿಗೆ ತಿಂಗಳಿಗೆ ರೂ. ೬೫೦ ವೇತನ, ೧೫೦ ರೂಪಾಯಿ ಸಂಪ್ಚುರಿ ಭತ್ಯ, ಸುಸಜ್ಜಿತ ವಾಸದ ಮನೆ, ಕಾರು, ಪೆಟ್ರೋಲ್ ಮತ್ತಿತರ ಖರ್ಚಿಗಾಗಿ ಮಾಸಿಕ ರೂ. ೧೫೦ ಕೊಡಬೇಕೆಂದೂ, ಗೃಹಮಂತ್ರಿಯವರಿಗೆ ಸಂಪ್ಚುರಿ ಭತ್ಯದಲ್ಲಿ ರೂ. ೫೦ ಕಡಿಮೆ ಮಾಡುವುದೆಂದೂ ಸೂಚಿಸಲಾಗಿತ್ತು. ಈ ಮಸೂದೆಯನ್ನು ಸಭೆಯ ಮುಂದಿಡುತ್ತಾ ಮುಖ್ಯಮಂತ್ರಿಯವರು ಹೀಗೆ ಹೇಳಿದರು. 'ನಮಗೆ ಇದಕ್ಕಿಂತಾ ಹೆಚ್ಚಿನ ದರದ ವೇತನ ನಿಶ್ಚಯಿಸಿಕೊಳ್ಳಬಹುದಾದ ಅನುವಿದ್ದರೂ ಖರ್ಚು ಮಿತಿ ಮಾಡುವ ದೃಷ್ಟಿಯಿಂದ ಈ ಕನಿಷ್ಟ ದರವನ್ನು ನಿಶ್ಚಯಿಸಿಕೊಂಡಿರುವೆವು. ಮಂತ್ರಿಗಳು ಕೊಡಗಿನ ಹೊರಗೆ ಹೋದರೆ ಅವರ ಭತ್ಯವನ್ನು ಕೊಡಲು ಸೆಕ್ಷನ್ ಆರರ ಮೇರೆ ಚೀಫ್ ಕಮಿಷನರ ಅನುಮತಿಗೊಳಪಟ್ಟು ಏರ್ಪಡಿಸಿದೆ' ಎಂದರು.

ಶ್ರೀ. ಪಿ. ಸಿ. ಉತ್ತಯ್ಯನವರು ಈ ಮಸೂದೆಗೆ ತಿದ್ದುಪಡಿಯೊಂದನ್ನು ಸೂಚಿಸುತ್ತಾ ಮಂತ್ರಿಗಳ ವೇತನವನ್ನು ರೂ. ೫೦೦ ರಲ್ಲಿ ನಿಶ್ಚಯಿಸಬೇಕೆಂದರು. ಇದರ ಆವಶ್ಯಕತೆಯ ವಿಚಾರ ಮಾತಾಡುತ್ತಾ 'ಕೊಡಗಿನ ಆಡಳಿತ ಖರ್ಚು ಹದ್ದುಮೀರಿ ಹೆಚ್ಚುತ್ತಿದೆ. ಹಿಂದೆ ಚೀಫ್ ಕಮಿಷನರ ಆಡಳಿತ ಕಾಲದಲ್ಲಿ ನಡೆಯುತ್ತಿದ್ದಂತೆಯೇ ಈಗಲೂ ನಡೆಯುತ್ತಿದೆ. ನಮ್ಮ ಮಂತ್ರಿಮಂಡಳ ಮತ್ತು ಶಾಸನ ಸಭಾವಿಭಾಗಕ್ಕೆ ಸುಮಾರು ೩ ಲಕ್ಷದ ವರೆಗೆ ಖರ್ಚಾಗುತ್ತಿರುವುದು ಸರಿಯಲ್ಲ. ದೇಶದ ಆರ್ಥಿಕ ಸ್ಥಿತಿಯ ಹಿತ ನಮ್ಮ ಕೈಗೆ ಬಂದಿರುವಾಗ ಖರ್ಚನ್ನು ಆದಷ್ಟು ಕಡಿಮೆ ಮಾಡಬೇಕಾದುದು ನಮ್ಮ ಕರ್ತವ್ಯ. ನಮ್ಮ ದೇಶವು ಚಿಕ್ಕದಾಗಿದ್ದು, ಆರ್ಥಿಕ ಸ್ಥಿತಿಯೂ ಅದರ ಮಟ್ಟಿಗೆ ಇರುವುದರಿಂದ ಅದಕ್ಕನುಗುಣ ರೂ. ೫೦೦ ಯೋಗ್ಯ. ಏಕೆಂದರೆ ಮಂತ್ರಿಗಳಿಗೆ ಇದರ ಜೊತೆಗೆ ಮುಫತ್ತು ಮನೆ, ಕಾರು ಮೊದಲಾದುವನ್ನು ಕೊಡಲಾಗಿದೆ' ಎಂದರು.

ಶ್ರೀ. ಚೌರಿರ ಮಂದಣ್ಣನವರು ತಿದ್ದುಪಡಿಯನ್ನು ವಿರೋಧಿಸುತ್ತಾ 'ಇದು ಸರಕಾರ. ಖಾಸಗಿ ಕಂಪೆನಿಯಲ್ಲ. ಲಾಭವಿದ್ದರೆ ಹೆಚ್ಚು ವೇತನ ಕೊಡುತ್ತೇವೆ. ನಷ್ಟವಾದರೆ ಕಡಿಮೆಯೆಂದು ಹೇಳುವಂತೆ ಆಗ್ತಲ್ಲಾಗದು. 'ಸಿ' ಭಾಗದ ಸಂಸ್ಥಾನಗಳ ಕಾನೂನಿನಂತೆ ಮಂತ್ರಿಗಳು ೭೫೦ ವೇತನ ಪಡೆಯಬಹುದು. ಆದರೆ ಇವರು ದೇಶದ ಹಿತದೃಷ್ಟಿಯಿಂದ ರೂ. ೬೫೦ ನಿಶ್ಚಯಿಸಿಕೊಂಡಿರುವರು. ಮಂತ್ರಿಗಳೂ ತಮ್ಮ ಜೀವನದಲ್ಲಿ ಒಂದು ಗೌರವ, ಸ್ಥಾನವನ್ನಿಟ್ಟುಕೊಳ್ಳಬೇಕು. ೬೫೦ ಸಮರ್ಪಕವಾದದ್ದು. ಠರಾವನ್ನು ಸೂಚಿಸಿದವರು ವಿದ್ಯಾರ್ಥಿಯಾಗಿದ್ದಾಗ ಹೆಚ್ಚಿನ ವೇತನಕ್ಕಾಗಿ ಕೂಗುತ್ತಿದ್ದರು. ಹಾಗಾದರೆ ಮಂತ್ರಿಗಳಿಗೇಕೆ ಕೊಡಬಾರದು' ಎಂದರು.

ಶ್ರೀ. ಪಿ. ಎಂ. ನಾಣಮಯ್ಯನವರು ತಿದ್ದುಪಡಿಗೆ ವಿರೋಧಿಸುತ್ತಾ 'ಮಂತ್ರಿಗಳು ಜವಾಬ್ದಾರಿ ಮನುಷ್ಯರು. ಆ ಜವಾಬ್ದಾರಿಗೆ ಸರಿಯಾಗಿ ವೇತನ ನಿಶ್ಚಯಿಸಿದ್ದಾರೆ. ಮಂತ್ರಿಗಳ ಗೌರವ, ಕೆಲಸದ ಮಟ್ಟಿಗೆ ದೇಶ ಚಿಕ್ಕದಾದರೂ ಕೆಲಸವು ಹೊರಗಿನ ಮಂತ್ರಿಗಳಿಗಿರುವಷ್ಟೇ ಇದೆ. ಇತರ ಕಡೆಗಳಲ್ಲಿ ಎಸೆಂಬ್ಲಿ ಮತ್ತು ಕೌನ್ಸಿಲ್ ಗಳೆಂದು ಎರಡು ಸಭೆಗಳಿರುವುದರಿಂದ ಅಲ್ಲಿ ಕೆಲಸ ಹಗುರವಾಗಿದೆ. ಮಡಿಕೇರಿಯಲ್ಲಿ 'ಜಂಟ್ಲ್‌ಮೆನ್'ರಾಗಿ ಜೀವಿಸಬೇಕಾದರೆ ಇದಕ್ಕಿಂತಾ ಕಡಿಮೆ ವೇತನದಿಂದ ಸಾಧ್ಯವಿಲ್ಲ. ತಾವು ಹುದ್ದೆಯಲ್ಲಿದ್ದಾಗ ಹೆಚ್ಚಿಗೆ ವೇತನಕ್ಕಾಗಿ ಹೋರಾಡಿದವರು ಇದು ತತ್ವ ಹೇಳಲು ಬಂದಿದ್ದಾರೆ. ಒಂದು ಇಲಾಖೆಯಲ್ಲಿ ಮುಖ್ಯಸ್ಥರಾಗಿದ್ದ ಅವರು ೫೫೦ ಅಂದು ತೆಗೆದುಕೊಳ್ಳುತ್ತಿದ್ದಾಗ ಎಲ್ಲಾ ಇಲಾಖೆಗಳ ಜವಾಬ್ದಾರಿ ವಹಿಸುವ ಮಂತ್ರಿಗಳು ೬೫೦ ತೆಗೆದುಕೊಳ್ಳುವುದು ಹೆಚ್ಚಲ್ಲ. ಮಂತ್ರಿಗಳು ಗೌರವಪೂರ್ವಕವಾಗಿ ಜೀವಿಸಬೇಕು, ಹೆಚ್ಚು ಕೆಲಸ ಮಾಡಲು ಅವರಿಗೆ ಸಾಕಷ್ಟು ಅನುಕೂಲತೆ ಕೊಡಬೇಕು.' ಎಂದರು.

ಶ್ರೀ. ಕೋರನ ದೇವಯ್ಯನವರು ತಿದ್ದುಪಡಿಗೆ ವಿರೋಧವಾಗಿ ಮಾತಾಡುತ್ತಾ ತಿದ್ದುಪಡಿಯನ್ನು ಒಪ್ಪಿಕೊಂಡರೂ ವರ್ಷಕ್ಕೆ ಆಗುವ ಉಳಿತಾಯ ಕೇವಲ ರೂ. ೩೬೦೦. ಇತರ ಸಂಸ್ಥಾನಗಳ ಮಂತ್ರಿಗಳ ವೇತನದೊಂದಿಗೆ ತುಲನೆ ಮಾಡಿದರೆ ನಮ್ಮ ಮಂತ್ರಿಗಳ ವೇತನ ಹೆಚ್ಚಲ್ಲ. ಕೊಡಗಿಗೆ ಮೂರು ಮಂತ್ರಿಗಳನ್ನು ಮಾಡಿಕೊಳ್ಳಬಹುದಿತ್ತು. ಖರ್ಚು ಮಿತಿಯ ದೃಷ್ಟಿಯಿಂದ ಅದನ್ನು ಮಾಡಿರುವದಿಲ್ಲ. ಡೆಲ್ಲಿಯಲ್ಲಿ ಮೂರು ಮಂತ್ರಿಗಳಿದ್ದಾರೆ ಅವರ ವೇತನ ತಿಂಗಳಿಗೆ ರೂ. ೭೫೦ ಇದೆ' ಎಂದರು.

ಶ್ರೀ ಜಿ. ಯಂ. ಮಂಜುನಾಥಯ್ಯನವರು ತಿದ್ದುಪಡಿಗೆ ವಿರೋಧ ಮಾತಾಡುತ್ತಾ "೧೯೩೧ಕ್ಕೆ ಮೊದಲು ಯಾರೂ ತಿಂಗಳಿಗೆ ೫೦೦ಕ್ಕಿಂತಾ ಹೆಚ್ಚು ಹೊಂದಿಕೊಳ್ಳಬಾರದೆಂದು ಕಾಂಗ್ರೆಸ್ ನಿರ್ಧರಿಸಿತ್ತು. ಆದರೆ ಇಂದಿನ ರೂ. ೬೫೦ ಎಂದರೆ ಅಂದಿನ ರೂ ೨೦೦ಕ್ಕೂ ಕಡಿಮೆಯಾಗಬಹುದು. ಇಂದಿನ ವರೆಗೆ ಹೋರಾಡಿ ನಮಗೆ ಜವಾಬ್ದಾರಿ ಸರಕಾರ ಬಂದಿದೆ. ಈ ಸರಕಾರ ದುಬಾರಿ ಖರ್ಚಿನದ್ದು ಎಂದು ಹೇಳುವುದರಿಂದ ಪ್ರಯೋಜನವಿಲ್ಲ. ಜವಾಬ್ದಾರಿ ಸರಕಾರ ಬೇಕಿದ್ದರೆ ಅದಕ್ಕಾಗಿ ವ್ಯಯ ಮಾಡಲೇಬೇಕು" ಎಂದರು.

ಶ್ರೀ ಕೆ. ಪಿ. ಕರುಂಬಯ್ಯನವರು ತಿದ್ದುಪಡಿಯನ್ನು ಸಮರ್ಥಿಸುತ್ತಾ 'ಪ್ರತಿಯೊಂದಕ್ಕೂ ಒಂದು ತತ್ವ ಬೇಕು. ತತ್ವ ಹಿಂದಲ್ಲದೆ ವೇತನ ಹಿಂದಲ್ಲ. ನನಗೂ ತಿಳಿದಿದೆ ಕಾನೂನಿನಂತೆ ರೂ. ೭೫೦ರ ವರೆಗೂ ತೆಗೆದುಕೊಳ್ಳಬಹುದೆಂದು. ನಾವು ಹೊರಗಿನ ಸಂಸ್ಥಾನಗಳನ್ನು ಪರಿಶೀಲಿಸಬೇಕು. ಮದ್ರಾಸು ೫೦ ಕೋಟಿ ಜನರಿರುವ ಸಂಸ್ಥಾನ. ಅದರ ಮುಖ್ಯ ಮಂತ್ರಿಯವರು ರೂ. ೮೦೦ ರಲ್ಲಿ ಕೆಲಸ ಮಾಡುತ್ತಿದ್ದಾರೆ. ಮೈಸೂರಿನ ಮುಖ್ಯ ಮಂತ್ರಿಯವರು ರೂ. ೯೦೦ರಲ್ಲಿ ಕೆಲಸ ಮಾಡುತಿದ್ದಾರೆ. ಚೈನಾದಂಥ ಮಹಾ ರಾಷ್ಟ್ರದ ಅಧ್ಯಕ್ಷರು ರೂ. ೬೦೦ರಲ್ಲಿ ಕೆಲಸ ಮಾಡುತ್ತಾರೆ. ಕಾಂಗ್ರೆಸ್ ರೂ. ೫೦೦ಕ್ಕಿಂತಾ ಹೆಚ್ಚು ವೇತನ ತೆಗೆಯಬಾರದೆಂದು ತೀರ್ಮಾನಿಸಿತ್ತು. ಕೊಡಗಿನಂಥಾ ಚಿಕ್ಕ ಸಂಸ್ಥಾನದಲ್ಲಿ ರೂ. ೬೫೦ ಹೆಚ್ಚಾಯಿತು. ಮಂತ್ರಿಗಳ ಉದ್ಯೋಗ ದೊಡ್ಡದೆಂಬುದನ್ನು ನಾನೂ ಬಲ್ಲೆ. ಆದರೆ ಉದ್ಯೋಗದ ಘನತೆ, ತೆಗೆದುಕೊಳ್ಳುವ ಸಂಬಳದ ಮೇಲಿಲ್ಲ. ಸಂಬಳದ ಮೇಲೆ ಯೋಗ್ಯತೆಯೆನ್ನುವದಾದರೆ ಮಂತ್ರಿಗಳ ಕೈಕೆಳಗಿರುವ ಚೀಫ್ ಸೆಕ್ರೆಟರಿಯವರಿಗೆ ಸಾವಿರ ರೂಪಾಯಿಗಳ ವೇತನವಿಲ್ಲವೇ? ಕೊಡಗು ಒಂದು ಆದರ್ಶ ರಾಜ್ಯವಾಗಬೇಕೆಂಬುದು ನಮ್ಮ ಇಚ್ಛೆ. ಮಡಿಕೇರಿಯಲ್ಲಿ ಚುನಾಯಿತ ಜನಪ್ರತಿನಿಧಿಯೊಬ್ಬನಿಗೆ ಮುಫತ್ತು ಮನೆಯಿದ್ದು, ಕಾರು ಇದ್ದು, ರೂ. ೫೦೦ರಲ್ಲಿ ಜೀವಿಸಲಾಗುವದಿಲ್ಲವೇ ಎಂಬುದು ಪ್ರಶ್ನೆ. ದೇಶದ ಆರ್ಥಿಕ ಹಿತದೃಷ್ಟಿಯಿಂದ ವೇತನ ನಿಶ್ಚಯಿಸುವುದಲ್ಲದೆ ವ್ಯಕ್ತಿಯ ಗೌರವದ ಮೇಲಲ್ಲ" ಎಂದರು.

ಶ್ರೀ ಕೆ. ಕೆ. ಗಣಪತಿಯವರು ತಿದ್ದುಪಡಿಗೆ ಬೆಂಬಲವೀಯುತ್ತಾ 'ಈ ತಿದ್ದುಪಡಿ ಅಷ್ಟು ಉಳಿತಾಯ ಮಾಡಲು ಬಡ ರೈತನ ಹಿತ ಸಾಧಿಸಲು. ತಿದ್ದುಪಡಿ ತಂದವರು ಉದ್ಯೋಗದಲ್ಲಿದ್ದಾಗ ಹೆಚ್ಚಿನ ವೇತನಕ್ಕೆ ಪ್ರಯತ್ನಿಸಿದರೆಂಬುದು ಇಲ್ಲಿ ಸರಿಹೋಗದು. ಅಂದಿನ ಸರಕಾರಕ್ಕೂ ಇಂದಿನದಕ್ಕೂ ಹೋಲಿಕೆಯಿಲ್ಲ. ಎಲ್ಲಾ ಉದ್ಯೋಗಸ್ಥರಿಗೆ ದೊರೆಯುವ ವೇತನವೇ ತನಗೂ ಬೇಕೆಂದರೇ ಹೊರತು ಬೇರೆ ಕೇಳಿಲ್ಲ. ಗೌರವ ಸಂಬಳದ ಮೇಲಿಲ್ಲ. ಸಂಬಳ ತೆಗೆದುಕೊಳ್ಳದೆ ಕೆಲಸ ಮಾಡುವವರಿಗೇ ಹೆಚ್ಚಿನ ಗೌರವವಲ್ಲದೆ ವೇತನ ಪಡೆಯುವವರಿಗಲ್ಲ. ನಮ್ಮ ಆಡಳಿತದಲ್ಲಿ ಗಜೆಟೆಡ್ ಉದ್ಯೋಗಸ್ಥರ ಸಂಖ್ಯೆ ಹೆಚ್ಚುತ್ತಿರುವದರಿಂದಲೂ, ಖರ್ಚು ಹೆಚ್ಚುತ್ತಿರುವದರಿಂದಲೂ ಎಲ್ಲೆಲ್ಲೂ ಖರ್ಚು ಮಿತಿ ಮಾಡಬೇಕು. ಅದಕ್ಕೆ ಉದಾಹರಣೆಯನ್ನು ನಾವೇ ಹಾಕಿ ಕೊಡಬೇಕು." ಎಂದರು.

ಶ್ರೀ ಪಿ ಡಿ ಸುಬ್ಬಯ್ಯನವರು ಮಾತಾಡುತ್ತಾ 'ಮದ್ರಾಸಿನಲ್ಲಿ ವೇತನ ಕಡಿಮೆಯಾದರೂ ಮಂತ್ರಿಗಳ ಸಂಖ್ಯೆ ಹೆಚ್ಚಿದೆ. ನಾವು ರೂ. ೭೫೦ ತೆಗೆದುಕೊಳ್ಳಬಹುದಿತ್ತು. ಬಹುಮತವಿದೆಯೆಂದು ಮನಸ್ಸಿಗೆ ಬಂದ ಹಾಗೆ ಮಾಡಿಲ್ಲ. ದೇಶದ ಹಿತದೃಷ್ಟಿಯಿಂದಲೇ ರೂ. ೬೫೦ ನಿಶ್ಚಯಿಸಿದ್ದು' ಎಂದರು.

ಮುಖ್ಯ ಮಂತ್ರಿಯವರು ...ಡುತ್ತಾ 'ಶ್ರೀ ಕೆ. ಪಿ. ಕರುಂಬಯ್ಯನವರು ಕಾಂಗ್ರೆಸ್ ತತ್ವ ಹೇಳಲು ಬಂದಿದ್ದಾರೆ. ನಾವು ಕಾಂಗ್ರೆಸ್ ಮಂತ್ರಿಗಳಲ್ಲ. ಸಂಸ್ಥಾನದ ಮಂತ್ರಿಗಳು. ಈ ದರವನ್ನು ನಿಶ್ಚಯಿಸುವಾಗ ನಮ್ಮ ದೃಷ್ಟಿಯಿಂದ ನಾವು ನಿಶ್ಚಯಿಸಿಲ್ಲ. ನಾಳೆ ಬರುವ ಮಂತ್ರಿಗಳ ಹಿತದೃಷ್ಟಿಯಿಂದ ನಿಶ್ಚಯಿಸಿದ್ದೇವೆ. ಇದನ್ನು ನಿಶ್ಚಯಿಸುವಾಗ ಈ ಮಂತ್ರಿ ಮಂಡಳವನ್ನು ಬದಲು ಮಾಡಬೇಕೆಂದಿರುವ ಶ್ರೀ ಕೆ ಪಿ. ಕರುಂಬಯ್ಯನವರ ಯೋಚನೆಯಿಂದಲೇ ಹಾಗೆ ಮಾಡಿರುವೆನು. ಕಾಂಗ್ರೆಸ್ಸಿನ ತತ್ವವನ್ನು ಬಲಾತ್ಕಾರದಿಂದ ಹೇರಲು ಸಾಧ್ಯವಿಲ್ಲ. ತಿದ್ದುಪಡಿಯನ್ನು ಸೂಚಿಸಿದವರು ಬಜೆಟ್ಟಿನ ಪರಿಶೀಲನೆ ಸರಿಯಾಗಿ ಮಾಡಿಲ್ಲ. ಬಜೆಟ್ಟಿನಲ್ಲಿಟ್ಟ ವೇತನವು ರೂ. ೭೫೦ರ ದರದಲ್ಲಿ ಆಗಿದೆ. ಅದರಂತೆಯೇ ಇತರ ಅನೇಕ ಐಟಂಗಳಿವೆ. ಈಗ ನಿಶ್ಚಯಿಸುವ ವೇತನ ರೂ. ೬೫೦ ಇರುವದರಿಂದ ಉಳಿತಾಯ ತುಂಬಾ ಆಗುತ್ತದೆ. ಬಜೆಟ್ಟಿನಲ್ಲಿ ಈಗ ಉಳಿತಾಯ ತೋರಿದ್ದು ರೂ. [illegible] ತುಂಬಾ ಉಳಿತಾಯ ಬರುವದರಲ್ಲಿ ಸಂಶಯವಿಲ್ಲ. ಮಂತ್ರಿಮಂಡಳ ಮತ್ತು ಇತರ ಬಾಬಿಗಾಗಿ ಈಗ ಹೆಚ್ಚಾಗಿರುವ ಖರ್ಚು ಕೇವಲ ರೂ. ೫೧,೦೦೦ ಮಾತ್ರ. ಬಾಕಿ ಖರ್ಚುಗಳು ಹಿಂದೆ ಇದ್ದವುಗಳಾಗಿವೆ. ವೇತನ ನಿಶ್ಚಯಿಸುವಾಗ ಪದವಿಗೆ ಹೊಂದಿಕೊಂಡಿರುವ ಗೌರವವನ್ನು ಪರಿಗಣಿಸಬೇಕು. ನ್ಯಾಯಬದ್ಧವಾದ ಜೀವನದ ಅನುವಿರುವಂತೆ ನೋಡಬೇಕು. ನಾವು ಮೂರು ಮಂತ್ರಿಗಳನ್ನು ಮಾಡಿಕೊಳ್ಳಬಹುದಿತ್ತು. ಖರ್ಚನ್ನು ಆದಷ್ಟು ಕಡಿಮೆ ಮಾಡಬೇಕೆಂದು ಎರಡೇ ಮಾಡಿರುವೆವು. ಮದರಾಸಿನ ಮುಖ್ಯ ಮಂತ್ರಿಯವರು ಗವರ್ನರ್ ಜನರಲ್ಲಾಗಿ ಪೆನ್ಶನ್ ದಾರರು. ನಮ್ಮ ಈ ದೇಶದ ಈ ವಿಚಾರವನ್ನು ಆಗಾಗ್ಗೆ ರಾಜಗೋಪಾಲಾಚಾರಿಯವರನ್ನು ಕಾಣುವ ಹಿರಿಯ ಮುಂದಾಳುಗಳು ಅವರ ಮುಂದಿಟ್ಟರೆ ರಾಜಾಜಿಯವರು ಹೇಳುವ ವಿಧಾನಕ್ಕೆ ನಾನು ಒಪ್ಪುವೆನು. ಇದು ನ್ಯಾಯಬದ್ಧವಾದ ಮಸೂದೆಯಾಗಿದೆ' ಎಂದರು.

ಶ್ರೀ ಪಿ. ಸಿ. ಉತ್ತಯ್ಯನವರು ಜವಾಬು ಕೊಡುತ್ತಾ "ವಿಶೇಷ ತರ ವಾದಗಳನ್ನು ಕೆಲವರು ಮಾಡಿದ್ದಾರೆ. ವಿದ್ಯಾರ್ಥಿಯಾಗಿ ಒಂದು ಇಲಾಖೆಯ ಕೆಲಸಕ್ಕಾಗಿ ನಾನು ಹೊಂದಿಕೊಳ್ಳುತ್ತಿದ್ದ ವೇತನಕ್ಕನುಗುಣ ಇಂದು ಹಲವು ಇಲಾಖೆಗಳ ಜವಾಬ್ದಾರಿ ಹೊತ್ತ ಮಂತ್ರಿಗಳು ಹೆಚ್ಚಿನ ವೇತನ ಪಡೆಯಬಹುದೆಂಬ ವಾದ ವಿಶೇಷವಾದ. ಹಿಂದಿನಂತೆಯೇ ಇಂದು ನಮ್ಮ ಖರ್ಚು ಇದೆ. ಚೀಫ್ ಕಮಿಷನರಿದ್ದಾರೆ, ಇತರ ಸಿಬ್ಬಂದಿಗಳಿದ್ದಾರೆ. ಹೆಚ್ಚಿಗೆ ಹಲವರು ಬಂದಿದ್ದಾರೆ. ಎಲ್ಲರಿಗೂ ಇಂದು ವೇತನ ಕೊಡಬೇಕಿದೆ. ಎಲ್ಲಾ 'ಸಿ' ಸಂಸ್ಥಾನಗಳು ಕೇಂದ್ರದ ಮು

ತೆಗೆದು ಮೇಲೆ ನಿಂತಿರುವುದಾದರೂ ಕೊಡಗು ತನ್ನ ಕಾಲ ಮೇಲೆ ನಿಂತಿದೆ. ಮಂತ್ರಿಗಳು ತಮ್ಮ ಜೀವನಕ್ಕೆ ಬೇಕಾದ ಕನಿಷ್ಠ ವೇತನವನ್ನು ಹೊಂದಿಕೊಳ್ಳಬೇಕಲ್ಲದೆ ಹೆಚ್ಚು ಪಡೆದು. ನಾವು ರೈತರ ಪ್ರತಿನಿಧಿಗಳು. ರೈತರ ಸ್ಥಿತಿ ಹೇಗಿದೆ? ಅದಕ್ಕನುಗುಣ ನಮ್ಮ ವೇತನದ ದರ ನಿಶ್ಚಯಿಸಲ್ಪಡಬೇಕು. ನನಗೆ ಮೂರು ರೂಪಾಯಿಯು ಸಾಕು ಬೇಕಿದ್ದರೆ ಹತ್ತು ರೂಪಾಯಿ ಬೇಕೆಂದು ಕೇಳಿಕೊಂಡು ಏಳು ರೂಪಾಯಿ ಉಳಿಸಿದ್ದೇನೆಂದು ತೋರಿಸುವುದು ನಿಜವಾಗಿಯೂ ಬಜೆಟ್ ತಯಾರಿಸುವ ತತ್ವವಲ್ಲ. ನಮ್ಮ ಮುಂದಿರುವ ಬಜೆಟ್ಟು ಈ ದೃಷ್ಟಿಯಿಂದ ನಿಜವಾಗಿಯೂ ಸಮತೂಕವಾದುದಲ್ಲ. ದೇಶದ ಹಿತಕ್ಕಾಗಿ ಪ್ರತಿಕಾಸನ್ನೂ ಉಳಿಸಬೇಕು. ಕಾಸನ್ನು ಉಳಿಸಿದರೆ ರೂಪಾಯಿಗಳು ತಮ್ಮ ಎಚ್ಚರಿಕೆ ತೆಗೆದು ಕೊಳ್ಳುವವು" ಎಂದರು.

ಶ್ರೀ ಸಿ. ಎಂ. ಪೂಣಚ್ಚನವರು ಉತ್ತರ ವೀಯುತ್ತಾ "ನಾನು ಬಜೆಟ್ಟಿನಲ್ಲಿ ಹೆಚ್ಚು ಹಣ ಕೇಳಿ ಇತರ ಕೆಲಸಗಳಿಗಿಡಬಹುದಿದ್ದ ಹಣವನ್ನು ಸದಸ್ಯರಿಗೆ ಬೇರೆ ಕೆಲಸಗಳಿಗೆ ಇಡಲು ಆಸ್ಪದ ಕೊಡಲಿಲ್ಲವೆಂಬುದು ಸರಿಯಲ್ಲ. ಸದಸ್ಯರು ತಮ್ಮ ರಾಜಕೀಯ ಮನಃಸ್ಥಾಯಿಗಳನ್ನು ಇಲ್ಲಿ ಪ್ರದರ್ಶಿಸಬಾರದು. ಕೆಲವರು ಚುನಾವಣೆಯ ಕಾಲದಲ್ಲಿ ಕೆಲವರಿಗೆ ಓಟು ಕೊಟ್ಟರೆ ದೇಶವನ್ನು ಮಾರಿಬಿಡುತ್ತಾರೆ ಅಂದರು. ಆದರೆ ದೇಶ ಹಾಗೆಯೇ ಉಳಿದಿದೆ. ಹೆಚ್ಚಿಗೆ ಹೇಳುವುದಿಲ್ಲ. ನಿಮ್ಮ ಮಂತ್ರಿಗಳ ಎಚ್ಚರಿಕೆಯನ್ನು ನೀವು ತೆಗೆದು ಕೊಂಡರೆ ಮಂತ್ರಿಗಳು ದೇಶದ ಎಚ್ಚರಿಕೆಯನ್ನು ತೆಗೆದು ಕೊಳ್ಳುವರು" ಎಂದರು.

ಶ್ರೀ ಪಿ. ಸಿ. ಉತ್ತಯ್ಯನವರು ತಮ್ಮ ತಿದ್ದುಪಡಿಯನ್ನು ಹಿಂತೆಗೆದು ಕೊಂಡರು. ನಂತರ ಸ್ಪೀಕರರ ವೇತನ ರೂ ೬೫೦ ಎಂದೂ, ಡೆಪ್ಯೂಟಿ ಸ್ಪೀಕರರಿಗೆರೂ ೨೦೦ ಎಂದೂ ನಿಶ್ಚಯಿಸುವ ಮಸೂದೆ ಪಾಸಾಯಿತು. ಶಾಸನ ಸಭಾ ಸದಸ್ಯರಿಗೆ ರೂ ೧೫೦ ನಿಶ್ಚಯಿಸುವ ಮಸೂದೆಯು ಚರ್ಚೆಗೆ ಬಂತು. ಶ್ರೀ ಪಿ. ಸಿ. ಉತ್ತಯ್ಯನವರು ರೂ ೧೦೦ ಸಾಕೆಂಬ ತಿದ್ದುಪಡಿಯನ್ನು ಸೂಚಿಸಿದರು. ಶ್ರೀ ಕೆ. ಡಿ. ಸುಬ್ಬಯ್ಯನವರು ಮತ್ತು ಚೌರಿರ ಮಂದಣ್ಣನವರು ತಿದ್ದುಪಡಿಯನ್ನು ವಿರೋಧಿಸಿ ಮಾತಾಡಿದರು. ಶ್ರೀ ಸಿ. ಎಂ. ಪೂಣಚ್ಚನವರು ಮಾತಾಡುತ್ತಾ "ಇಂದು ಸದಸ್ಯರಿಗೆ ತುಂಬಾ ಜವಾಬ್ದಾರಿ ಇದೆ. ಇದು ಹಿಂದಿನ ಶಿಫಾರಸ್ಸಿನ ಸಭೆಯಲ್ಲ. ಸತ್ಯಾಗ್ರಹದ ಕಾಲದಲ್ಲಿ ಸಲ್ಲಿಸಿದ ಸೇವೆ ಒಂದು ವಿಧದ್ದು. ಅದು ತ್ಯಾಗದ ಕಾಲ ತಮ್ಮ ಕಷ್ಟನಷ್ಟಗಳನ್ನು ತಾವೇ ಕಂಡು ಕೊಂಡು ಆಗ ಕೆಲಸ ನಡೆಯಿತು. ಈಗ ನಾವು ಪಡೆಯುವ ವೇತನಕ್ಕೆ ಸರಿಯಾದ ಕೆಲಸ ನಡೆಯಬೇಕು. ಹೆಚ್ಚು ಸೇವೆ ಮಾಡುವವರು ಹೆಚ್ಚು ವೇತನ ತೆಗೆದು ಕೊಳ್ಳುವುದು ತಪ್ಪಲ್ಲ. ಸಲ್ಲಿಸಿದ ಸೇವೆಯನ್ನು ದುಡ್ಡಿನ ಬೆಲೆಯಿಂದ ತೂಗಲಾಗುವುದಿಲ್ಲ. ಸಾವಿರ...

ಶ್ರೀ ಪಿ. ಸಿ. ಉತ್ತಯ್ಯನವರು ಮಾತಾಡುತ್ತಾ "ನಾವು ಸಂಬಳ ತೆಗೆದು ಕೊಂಡು ಕೆಲಸ ಮಾಡುತ್ತೇವೆ ಎಂದಿದ್ದರೆ ಒಬ್ಬರಿಗೂ ಓಟು ಸಿಕ್ಕುತ್ತಿರಲಿಲ್ಲ. ನಮ್ಮನ್ನು ಯಾರೂ ಸದಸ್ಯರಾಗಬೇಕೆಂದು ಕರೆದು ಚುನಾವಣೆಗೆ ನಿಲ್ಲಿಸಿಲ್ಲ. ಹಳೆ ಕೌನ್ಸಿಲಿಗೆ ಜವಾಬ್ದಾರಿ ಇರಲಿಲ್ಲ. ಈಗಿನ ಕೌನ್ಸಿಲಿಗೆ ಜವಾಬ್ದಾರಿ ಇದೆ ಎಂಬುದನ್ನು ಒಪ್ಪುತ್ತೇನೆ. ಇಂದು ನಮಗಿರುವ ಜವಾಬ್ದಾರಿಯೆಂದರೆ ನಮ್ಮ ವೇತನವನ್ನು ಕಡಿಮೆ ಮಾಡಿಕೊಳ್ಳುವ ಜವಾಬ್ದಾರಿ. ಬಹುಮತವಿದೆಯೆಂದು ಸೂಚನೆ ಮಾಡಿ ಪಾಸುಮಾಡಿ ಬಿಡುವುದಲ್ಲ. ಜನರೈತನ ಸ್ಥಿತಿಯನ್ನು ಪರಿಶೀಲಿಸಿ ನಾವು ವರ್ತಿಸಬೇಕು" ಎಂದು ಹೇಳಿದರು.

ಮುಖ್ಯ ಮಂತ್ರಿಯವರು ಉತ್ತರವೀಯುತ್ತಾ "ಸಭ್ಯತೆ ಅಸಭ್ಯತೆಯನ್ನು ಕೇವಲ ೨೫ ರೂಪಾಯಿಗಳಿಂದ ಅಳೆಯಲಾಗದು. ರೂ ೧೦೦ ತೆಗೆದು ಕೊಳ್ಳುವವರು ಸಭ್ಯರೆಂದೂ ರೂ ೧೫೦ ತೆಗದುಕೊಳ್ಳಬೇಕೆನ್ನುವವರು ಅಸಭ್ಯರೆಂದು ಹೇಳಲಾಗದು." ಎಂದರು. ನಂತರ ಶ್ರೀ ಉತ್ತಯ್ಯನವರು ತಿದ್ದುಪಡಿಯನ್ನು ಹಿಂತೆಗೆದು ಕೊಂಡರು. ಮಸೂದೆಯು ಪಾಸಾಯಿತು.

ಓದುಗರ ಓಲೆ

ಉಪಾಧ್ಯಾಯ ತರಬೇತು ಶಾಲೆಗೆ ಉಮೇದುವಾರರ ಆಯ್ಕೆ.

'ತಲೆ ನೋಡಿ ಪಟ್ಟ ಕಟ್ಟು' ಪ್ರದೇಶ ನಾಡ್ನುಡಿ ವಿದ್ಯಾ ಇಲಾಖೆಯನ್ನೂ ಬಿಡಲಿಲ್ಲ! ಈ ವರ್ಷ ಉಪಾಧ್ಯಾಯರ ತರಬೇತು ಶಾಲೆಗೆ ಅನೇಕ ಉಮೇದುವಾರರನ್ನು ಹೇಗೆ ಹೇಗೋ ಆರಿಸಲಾಯಿತು. ಪುಸ್ತಕದ ಜ್ಞಾನವನ್ನು ಪ್ರಕಾರ ಉಮೇದುವಾರರನ್ನು ಅವರು ಈ ಹಿಂದೆ ಶಾಲೆಗಳಲ್ಲಿ ಸಲ್ಲಿಸಿದ ಸೇವೆಯ ಕಾಲವನ್ನು ಗಣನೆಗೆ ತೆಗೆದುಕೊಂಡು ಆರಿಸುತ್ತಾರೆ. ಆದರೆ ಕಾರ್ಯತಃ ಆಗುತ್ತಿರುವುದು ಇದಕ್ಕೆ ತದ್ವಿರುದ್ಧವಾಗಿದೆಯೆಂದರೆ ಉಪಲೇಶವೂ ತಪ್ಪಾಗಲಾರದು. ಇದಕ್ಕೆ ಉದಾಹರಣೆಗಳು ಸಾಕಷ್ಟಿವೆ. ದಕ್ಷಿಣ ಕೊಡಗಿನ ಅನೇಕ ಶಾಲೆಗಳಲ್ಲಿ ಅನೇಕ ವರ್ಷಗಳಿಂದಲೂ ಕೆಲಸ ಮಾಡುತ್ತಿರುವ ಅನೇಕ ಜನರಿಗೆ ಈ ವರ್ಷ ಸ್ಥಳ ಕೊಡಲಿಲ್ಲ. ಆದರೆ ಒಂದೆರಡು ವರ್ಷ ಕೆಲಸ ಮಾಡಿದ ಅನೇಕರು ತರಬೇತು ಶಾಲೆಗೆ ಬಂದು ಸೇರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಅಷ್ಟೇ ಅಲ್ಲ. ಈ ವರ್ಷ ಎಸ್. ಎಸ್. ಎಲ್. ಸಿ ಯಲ್ಲಿ ತೇರ್ಗಡೆ ಹೊಂದಿದ ಮತ್ತು ಹೊಂದದ ಅನೇಕರು ಶಿಕ್ಷಕ ವೃತ್ತಿಯಿಗೆ ಎಸ್. ಎಸ್. ಎಲ್. ಸಿ ಫಲಿತಾಂಶ ಬಂದ ನಂತರ ಈ ತರಬೇತು ಶಾಲೆಯಲ್ಲಿ ಕಳೆದ ವಾರದಿಂದ ತಾನೇ ಸ್ಥಳ ಕೊಟ್ಟಿರುವದು ಮಹದ ಆಶ್ಚರ್ಯವನ್ನುಂಟು ಮಾಡುತ್ತಿದೆ. ಆರೇಳು ವರ್ಷಗಳಿಂದ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಅನೇಕರಿಗೆ ಅರುವತ್ತು ಎಪ್ಪತ್ತು ಅರ್ಜಿಗಳನ್ನು ಹಾಕಿಕೊಂಡರೂ ಗಲ, ಹತ್ತಾರು ತನ್ನು ಸಲ ಮುದ್ದೆ ಅಧಿಕಾರಿಗಳ ಹತ್ತಿರ ಹೋಗಿ ಕೇಳಿದರೂ ಒಂದಾದರೂ ಸ್ಥಳ ಕೊಟ್ಟಿರುವುದಿಲ್ಲ. ಒಂದು ದಿವಸವೂ ಶಾಲೆಯಲ್ಲಿ ಕೆಲಸ ಮಾಡದ, ಮೊನ್ನೆ ತಾನೇ ಶಾಲೆ ಬಿಟ್ಟ ಅನೇಕರಿಗೆ ಯಾವ ಯೋಗ್ಯತೆಗಾಗಿ ಸ್ಥಳ ಕೊಟ್ಟಿದ್ದಾರೆಂದು ಸಂಬಂಧಪಟ್ಟ ಅಧಿಕಾರಿಗಳು ಉತ್ತರಿಸುವರೇ? ಅವರ ಯೋಗ್ಯತೆಯನ್ನು ಯಾವ ಒರೆಗಲ್ಲಿಗೆ ಹಚ್ಚಿ ಆರಿಸಲಾಯಿತೆಂದು ತಿಳಿಸಬೇಕಾಗಿದೆ. ಈ ರೀತಿಯ ಅನ್ಯಾಯ ಕೃತ್ಯವನ್ನು ನೋಡುವವರಾರಿ ಕೇಳುವವರಾಗಲಿ ಯಾರೂ ಇಲ್ಲವೆ? ಕೊಡಗಿನ ಮಂತ್ರಿಗಳಾದರೂ ಕೂಡಲೇ ಈ ಕಡೆ ಗಮನ ಕೊಟ್ಟು ಸತ್ಯಾಂಶವನ್ನು ಕಂಡು ಹಿಡಿಯಬೇಕು. ಇಲ್ಲದಿದ್ದಲ್ಲಿ ಅನ್ಯಾಯವೆಂಬ ಕಾಡ್ಗಿಚ್ಚು ಹೊತ್ತಿ ಅವ್ಯಾಹತವಾಗಿ ಸಮಾಜದಲ್ಲಿ ಹಬ್ಬಿ ದೇಶದಲ್ಲಿ ಅಶಾಂತಿಯು ಕಪ್ಪು ಹೊಗೆಯನ್ನು ಹರಡುವುದೆಂಬುದರಲ್ಲಿ ಸಂದೇಹವಿಲ್ಲ. ಕೂಡಲೇ ಮಾನ್ಯ ಮಂತ್ರಿಗಳು ಈ ವಿಷಯದ ಕಡೆ ಗಮನ ಕೊಡುವರೇ?

'ಶಾಂತಿ ಕಾಮರ್'

ಮರಗೆಣಸು—ಆಹಾರ ರೂಪದಲ್ಲಿ

ಮೈಸೂರಿನ ಕೇಂದ್ರ ಆಹಾರ ಟೆಕ್ನಾಲಜಿಕಲ್ ಸಂಶೋಧನಾಲಯದಲ್ಲಿ ಮಾಡಲ್ಪಟ್ಟ ಪ್ರಯೋಗಗಳಿಂದ ಸಾಮಾನ್ಯ ಅಕ್ಕಿಯನ್ನು ಬಳಸುವಂತೆ ಮರಗೆಣಸಿನ ತಯಾರಾದ ಹಿಟ್ಟನ್ನು ಶೇಕಡಾ 25 ರಷ್ಟು ಅಕ್ಕಿಯ ಬದಲು ಉಪಯೋಗಿಸುವುದರಿಂದ ಇಲಿಗಳಿಗಾಗಲಿ, ದೊಡ್ಡವರಿಗಾಗಲಿ, ಮಕ್ಕಳಿಗಾಗಲಿ ವಿರೋಧ ಮಾಗಿಲ್ಲವೆಂದು ಕಂಡು ಬಂದಿರುವುದು. ಅರು ತಿಂಗಳುಗಳ ಪರ್ಯಂತರ ೯೦ ಮಕ್ಕಳ ಮೇಲೆ ನಡೆಸಿದ ಪ್ರಯೋಗದಲ್ಲಿ ಸ್ವಲ್ಪ ಭಾಗ ಮರಗೆಣಸನ್ನು ಅಕ್ಕಿಯ ಬದಲಿಗೆ ಉಪಯೋಗಿಸುವುದರಿಂದ ವಿರೋಧವಾಗಿಲ್ಲವೆಂದು ತಿಳಿದು ಬಂದಿದೆ ಈ ಪ್ರಯೋಗ ... ... ಕಡಲೇ ಕಾಯಿ ಹಿಂಡಿಯ ಹಿಟ್ಟು ಇವುಗಳಿಂದ ತಯಾರಿಸಿದ ... ಧಾನ್ಯದ ಅಕ್ಕಿಗಿಂತಲೂ ಉತ್ತಮವಾದುದೆಂದು ಕಂಡು ಬಂದಿದೆ. ೬೦ ಅಂಶ ಮರಗೆಣಸಿನ ಹಿಟ್ಟು ಮತ್ತು ೪೦ ಅಂಶ ಕಡಲೇ ಕಾಯಿ ಹಿಂಡಿಯ ಹಿಟ್ಟು ಇವುಗಳಿಂದ ತಯಾರಿಸಲ್ಪಟ್ಟ ಕೃತಕ ಧಾನ್ಯವು ಅಷ್ಟೇ ಪುಷ್ಟಿಕರವಾದುದೆಂದು ಕಂಡು ಬಂದಿದೆ. ಈ ಪ್ರಯೋಗಗಳು ನಮ್ಮ ದೇಶದ ಆಹಾರ ಸಮಸ್ಯೆಯನ್ನು ಪರಿಹರಿಸಲು ಸಹಾಯಕವಾಗಿದೆ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಜಿಲ್ಲಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಅಡವಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಹುಂಡಿಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಆ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಖಜಾಂಚಿ.

E. S. A. S. I.

Proposed Winding up

It is proposed to fight this legally. All ESASI members, whether members of Benefit fund or not, who do not agree are requested to send the following signed statement with their addresses to the undersigned.

"I do not Consent to the Winding up of ESASI"

Dr. S. Corairaj.
Murugalli Hardypet P. O.
Coimbat re Dt.

Edited printed and published by P. I. Belliapa at 'Kodagu' Press, Mercara, for Kodagu Ltd.

Licence No. 60.
Licenced to Post without Prepayment.

Reg. No. M. 1880.
'KUDAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಕು ೧-೮-೧೯೫೩ನೇ ಶುಕ್ರವಾರ | ಸಂಚಿಕೆ ೯

THE JUBILEE INSURANCE CO., LTD.

One of the very few in the feild of Insurance that has been declaring BONUS to its policy holders from its very inception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmand Road, Bangalore.

Our Chief Agents:—THE ORIENTAL ENTERPRISES, BANGALORE 1

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೂದಾರರಿಗೆ ಸರಿಯಾದ ಬೋನಸ್ಸನ್ನು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದಾಗಿದೆ.

ಈಗಿನ ದರ ಬೋನಸ್ಸು:—ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,

18 41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

ಬಡ್ಜೆಟ್ಟಿನ ಮೇಲೆ

॥ ಸದಸ್ಯರ ಅಭಿಪ್ರಾಯಗಳು ॥

ಶ್ರೀ ಕೆ. ಪಿ. ಕರುಂಬಯ್ಯನವರು

ಕೊಡಗಿನ ಈ ವರ್ಷದ ಆದಾಯವು ರೂ ೯೦,೧೦,೦೦೦ವೆಂದೂ ಖರ್ಚು ರೂ ೮೯,೮೩,೦೦೦ ವೆಂದೂ ತೋರಲಾಗಿದೆ. ಕೊಡಗಿನಲ್ಲಿರುವ ಎರಡುಕಾಲು ಲಕ್ಷ ಜನಂಗೆ ಈ ಆದಾಯವು ತಲಾ ೪೩ ರಂತೆ ಆಗುವುದು. ಖರ್ಚು ಕೂಡ ಅದೇ ಪರಿಮಾಣದಲ್ಲಿದೆ. ಇದು ಹಿಂದೂದೇಶದ ಏ ಬಿ. ಯಾವುದೇ ಸಂಸ್ಥಾನದಲ್ಲಿ ಇಲ್ಲದ ವಿಷಯ. ಇಷ್ಟು ದೊಡ್ಡ ಆದಾಯ ನಮ್ಮಲ್ಲಿರುವುದು ಶುಭ ಚಿಹ್ನೆ. ಚುನಾವಣೆ ಸಮಯದಲ್ಲಿ ತಾವು ಮಾಡಿ ಕೊಡುವೆವೆಂದು ಭರವಸೆ ಇತ್ತ ವಾಗ್ದಾನಗಳನ್ನು ಸಲ್ಲಿಸುವ ದೃಷ್ಟಿಯಿಂದ ಖರ್ಚು ಹೆಚ್ಚಾಗಿರುವದಲ್ಲದೆ ಅದಕ್ಕನುಗುಣ ಆದಾಯವನ್ನು ಹುಡುಕಿದ್ದಾರೆ. ಫಾರೆಸ್ಟ್ ಇಲಾಖೆಯಲ್ಲಿ ಬರುತಿದ್ದ ವಾರ್ಷಿಕ ಉತ್ಪತ್ತಿ ಸುಮಾರು ೨೭ ಲಕ್ಷದ ಬದಲು ಈ ವರ್ಷ ೪೩ ಲಕ್ಷ ಅಂದಾಜು ಮಾಡಲಾಗಿದೆ. ಇದಕ್ಕಾಗಿ ಈ ವರ್ಷ ೭೫೦ ಎಕರೆಯಷ್ಟು ಮರ ಕಡಿಯಲು ಏರ್ಪಡಿಸಲಾಗಿದೆಯೆಂದು ತಿಳಿದು ಬಂದಿದೆ. ಈ ಯೋಜನೆಗೆ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್ ಒಪ್ಪಿಗೆ ತೆಗೆಯಲಾಗಿದೆಯೋ ತಿಳಿಯದು. ಅವರ ಅಭಿಪ್ರಾಯವನ್ನು ತೆಗೆದು ಕಾರ್ಯ ಕೈಕೊಳ್ಳಬೇಕು. ಕೊಡಗಿನ ಫಾರೆಸ್ಟ್ ಸರಕಾರದ ಆದಾಯದ ಆಧಾರವಾಗಿರುವಾಗ ಅತುಂದ ಕಾರ್ಯ ಸಲ್ಲದು. ದೇಶದಹಿತದ ಬಗ್ಗೆ ಸರಕಾರಿ ಮೆಂಬರುಗಳಷ್ಟೇ ನಾವೂ ಕೂಡ ಆಸಕ್ತರು. ಅದ್ದರಿಂದ ಈ ಯೋಜನೆಯನ್ನು ಸ್ವಲ್ಪ ಸಾವಕಾಶ ಮಾಡಿರೆಂದು ಎಚ್ಚರಿಸುತ್ತೇನೆ. ಸರಕಾರದ ಆದಾಯವನ್ನು ಹೆಚ್ಚಿಸಲು ಫಾರೆಸ್ಟ್ ಉತ್ಪತ್ತಿಯ ಶೋಷಣೆಯನ್ನು ಹದ್ದುಮೀರಿ ಮಾಡದೆ ಬೇರೆ ವಿಧಾನ ಕೈಕೊಳ್ಳಬಹುದಾಗಿದೆ. ಕೇಂದ್ರ ಸರಕಾರಕ್ಕೆ ಕೊಡಗಿನಿಂದ ಹೋಗುವ ಸೆಂಟ್ರಲ್ ಎಕ್ಸೈಸ್, ಆದಾಯ ತೆರಿಗೆ ಮೊದಲಾದವುಗಳಿಂದ ಒಂದು ಭಾಗವನ್ನು ಪಡೆಯಲು ಯತ್ನಿಸಬೇಕು. ಇದಕ್ಕಾಗಿ ನೇಮಕವಾಗಿರುವ ಫೈನಾನ್ಸ್ ಕಮಿಷನಿನ ಮುಂದೆ ನಮ್ಮ ಬೇಡಿಕೆಯನ್ನು ಇಟ್ಟು ಪ್ರಯತ್ನಿಸಬೇಕು. ಅದರ ಜೊತೆಗೆ ನಮ್ಮ ಉಳಿತಾಯವಾಗಿರುವ ೭೦ ಲಕ್ಷ ಹಣದಿಂದ ಕೆಲವಂಶವನ್ನು ಕೇಂದ್ರದಲ್ಲಿ [illegible]ವದರಿಂದ ಬಡ್ಡಿ ಬರಬಹುದು. ಈಗ ಇರುವ ೧೫ ಲಕ್ಷದ ಜೊತೆಗೆ ಇನ್ನೂ ಕೆಲವು ಲಕ್ಷಗಳನ್ನಿರಿಸುವದು ಯೋಗ್ಯ. ನಮ್ಮ ಉಳಿತಾಯ ೭೦ ಲಕ್ಷವಿದ್ದರೂ ಅದನ್ನು ನಮ್ಮ ಖರ್ಚಿಗೆ ಉಪಯೋಗಿಸಲಾಗುವದಿಲ್ಲ. ಅನಿವಾರ್ಯವಾಗಿ ಬಂದರೂ ಕೇಂದ್ರ ಸರಕಾರದ ಅನುಮತಿ ವಿನಾ ಸಾಧ್ಯವಿಲ್ಲ. ಹಾಗಿರುವಾಗ ಅದನ್ನು ಕೇಂದ್ರ ಸರಕಾರದಲ್ಲಿ ಡಿಪಾಜಿಟ್ಟಾಗಿ ಇಡುವದರಿಂದ ಹಿತವಿದೆ. ವ್ಯವಸಾಯ ಆದಾಯ ತೆರಿಗೆಯಲ್ಲಿ ಸರಕಾರ ಮಾಡಿದ ಅಂದಾಜಿಗಿಂತ ಹೆಚ್ಚು ದೊರೆಯಬಹುದೆಂದು ತೋರುತ್ತೆ. ಹೇಗೂ ೧೫ ಲಕ್ಷ ಆದಾಯ ಬರಬಹುದು. ಸಾರಾಯಿಯ ಬೆಲೆಯನ್ನು ಏರಿಸಿದ್ದು ತುಂಬಾ ಸಂತೋಷ. ಈಗಿರುವ ಪಾರ್ಶ್ವ ಪಾನನಿರೋಧದಿಂದ ಯಾವ ಪ್ರಯೋಜನವೂ ಇಲ್ಲ. ಇದು ಕೇವಲ ಅನೀತಿಗೆ ಮಾರ್ಗವಾಗಿರುವದಲ್ಲದೆ ಬೇರಿಲ್ಲ. ಸಾರಾಯಿಯ ಬೆಲೆಯನ್ನು ಇನ್ನೂ ಏರಿಸಿ ನಿಯಂತ್ರಣವನ್ನು ತೆಗೆದು ಹಾಕುವುದೇ ಯುಕ್ತ. ವಿದ್ಯಾ ಇಲಾಖೆಯ ಬಗ್ಗೆ ಸರಕಾರ ತೋರಿಸಿರುವ ಅಭಿರುಚಿಗೆ ಅವರನ್ನು ವಂದಿಸುತ್ತೇನೆ. ಕಾಲೇಜು ಕಟ್ಟಡ ಪೂರ್ತಿಯಾಗಿ ಬರುವ ವರ್ಷ ಬಿ. ಎ, ಬಿ ಎಸ್‌ಸಿ, ತರಗತಿಗಳು ತೆರೆಯಲ್ಪಡುವವೆಂಬುದು ಸಂತೋಷ. ಆದರೆ ಕಾಲೇಜು ವಿದ್ಯಾರ್ಥಿ ನಿವಾಸಗೃಹದ ಕಟ್ಟಡ ಶೀಘ್ರ ಆಗಬೇಕು. ಬಡ್ಜೆಟ್ಟಿನಲ್ಲಿ ಅದಕ್ಕೆ ಹಣವಿಟ್ಟದ್ದು ಸಂತೋಷಕರ. ಕಾಲೇಜಿನಲ್ಲಿ ಸೀನಿಯರ್ ಡಿವಿಜನ್ ಎನ್. ಸಿ. ಸಿ. ತೆರೆಯಬೇಕು. ವಿರಾಜಪೇಟೆಯಲ್ಲಿ ವಿದ್ಯಾರ್ಥಿ ನಿವಾಸಗೃಹವು ವಾಸಯೋಗ್ಯವಾಗಿಲ್ಲ. ವಿದ್ಯಾರ್ಥಿಗಳಲ್ಲಿ ಶಿಸ್ತಿಲ್ಲದೆ ಇದ್ದರೆ ಅದಕ್ಕೆ ಯೋಗ್ಯ ವಿದ್ಯಾರ್ಥಿಗೃಹಗಳಿಲ್ಲದಿರುವದೇ ಕಾರಣ. ಜಿಲ್ಲಾ ಬೋರ್ಡನ್ನು ಸರಕಾರ ತೆಗೆದುಕೊಳ್ಳುವ ಬಗ್ಗೆ ನಾಲ್ಕುವರೆ ಲಕ್ಷ ಹಣವಿರಿಸಿದ್ದಕ್ಕೆ ನನ್ನ ವಿರೋಧವಿಲ್ಲ. ಗತವರ್ಷದ ಚುನಾವಣಾ ಘೋಷಣೆಯಂತೆ ಇದನ್ನು ಮಾಡಿರಬಹುದು. ಆದರೆ ಇಂಥಾ ಪ್ರಾಮುಖ್ಯ ವಿಚಾರಗಳನ್ನು ನಿರ್ಧರಿಸುವ ಮೊದಲು ಶಾಸನ ಸಭಾ ಸದಸ್ಯರ ಅಭಿಪ್ರಾಯ ತೆಗೆದುಕೊಂಡಿದ್ದರೆ ಹಿತವಿತ್ತು. ಡಿ ಬೋರ್ಡ ಆಸ್ಪತ್ರೆಗಳಿಗೆ ಒಂದು ಲಕ್ಷ, ರಸ್ತೆಗೆ ಕೆಲವು ಲಕ್ಷ, ಕಮ್ಯೂನಿಟಿ ಪ್ರಾಜೆಕ್ಟ್ ಮೊದಲಾದುವನ್ನು ನಿರ್ಣಯಿಸುವಾಗ ಶಾಸನ ಸಭೆಯನ್ನು ಕೇಳಬೇಕಿತ್ತು. ಲಕ್ಷ್ಮಣ ತೀರ್ಥ ಅಣೆಕಟ್ಟಿನ ವಿಚಾರ ಪರಿಶೀಲನೆಯಾಗಿದ್ದರೂ ಆ ಬಗ್ಗೆ ಏನೂ ಮಾಡಿರುವದಿಲ್ಲ. ಕಳೆದ ಹದಿನೈದು ವರ್ಷಗಳಿಂದ ಲಕ್ಷ್ಮಣ ತೀರ್ಥ, ಹಾರಂಗಿ ಯೋಜನೆಗಳ ಬಗ್ಗೆ ಶಾಸನ ಸಭೆಯಲ್ಲಿ ಠರಾವುಗಳಾದರೂ ಇನ್ನೂ ಫಲಿಸಿಲ್ಲ. ಇದರಿಂದ ಜನರಿಗೆ ಜಿಗುಪ್ಸೆ ಬಂದಿದೆ. ಈ ವಿಚಾರಗಳ ಬಗ್ಗೆ ಮಂತ್ರಿಯವರು ಡೆಲ್ಲಿಗೆ ವಿಮಾನದಲ್ಲಿ ಹಾರಿ ಒಪ್ಪಿಗೆ ಪಡೆದರೂ ಅಡ್ಡಿ ಇಲ್ಲ. ಬಿಪೋಳೆ ಯೋಜನೆಯ ಬಗ್ಗೆ ಮದ್ರಾಸು ಸರಕಾರದೊಡನೆ ಆಲೋಚಿಸಲಾಗುತ್ತಿದೆಯೆಂಬುದು ಶೀಘ್ರ ಫಲಕಾರಿಯಾಗಲಿ. ಔದ್ಯೋಗಿಕ ಶಾಲೆಗಳಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಸೀಟಿನ ಸ್ಥಳದ ಅನುಕೂಲತೆ ದೊರೆಬೇಕು. ಈ ಕಳೆದ ಮೂರು ನಾಲ್ಕು ದಿನಗಳಿಂದ ಶ್ರೀ ಸಿ. ಎಂ. ಮಂದಣ್ಣನವರು ನಮ್ಮ ಪಕ್ಷದ ಮುಖ್ಯ ಮಂತ್ರಿ ಬಳಿಯಲು ಯತ್ನಿಸುತಿದ್ದಾರೆ. ಚೀಫ್ ಕಮೀಷನರೂ ಮುಖ್ಯ ಮಂತ್ರಿಯವರೂ ಸರ್ವರ ಸಹಕಾರ ಬೇಕೆಂದು ಅಭಿಲಾಷಿಸುತ್ತಿರುವಾಗ ಇವರು ಬೇರೆ ದಾರಿ ಹಿಡಿದಿದ್ದಾರೆ. ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಲು ನಾವು ಮಾಡಿದ ಪ್ರಯತ್ನದ ಫಲವಾಗಿ ಇಂದು ನಾವು ಈ ಸ್ಥಿತಿಯಲ್ಲಿರುವೆವು. ಶ್ರೀ ಪಿ ಐ. ಬೆಳ್ಯಪ್ಪನವರ ಯಾ ಅವರ ಪಕ್ಷದ ಮೇಲೆ ಇಲ್ಲದ ಆರೋಪ ಹೊರಿಸುವದು ನ್ಯಾಯವಿಲ್ಲ. ಈ ಪ್ರಾಂತವನ್ನು ಅವರ್ ಪ್ರಾಂತವನ್ನಾಗಿ ಮಾಡಿ 'ಎ' ಸಂಸ್ಥಾನಗಳ ಸ್ಥಾನಕ್ಕೆ ತರುವ ಯತ್ನ ಮಾಡುವದಲ್ಲದೆ ಈ ಸಂಸ್ಥಾನವು ಸುಭಿಕ್ಷೆಯ ನಾಡಾಗಿ, ಹಾಲ್ಜೇನು ಹರಿಯುವಂತಾಗಬೇಕೆಂಬುದೇ ನಮ್ಮಿಚ್ಛೆ.

ಶ್ರೀ ಎಚ್. ಟಿ. ಮುತ್ತಣ್ಣನವರು.

ಈ ವರ್ಷ ಫಾರೆಸ್ಟ್ ಉತ್ಪತ್ತಿಯನ್ನು ೪೩ ಲಕ್ಷವೆಂದು ಅಂದಾಜು ಮಾಡಲಾಗಿದೆ. ಇದಕ್ಕನುಗುಣ ಮರ ಕಡಿದರೂ ಯೋಗ್ಯ ಧಾರಣೆ ದೊರೆಯದೆ ಯಾ ಮಾರಾಟವಾಗದಿದ್ದರೆ ಇದು ಪೊಳ್ಳು ಬಡ್ಜೆಟ್ಟಾಗದಿರದು. ಈ ರೀತಿಯ ಯೋಜನೆ ದೇಶದ ಭವಿಷ್ಯ ಹಿತದಿಂದ ಯೋಗ್ಯವಲ್ಲ. ಆಡಳಿತದಲ್ಲಿ ತಲೆಭಾರ ಖರ್ಚು ಇದೆ. ಹೊಸ ಹೊಸ ಉದ್ಯೋಗ, ಇಲಾಖೆಗಳಿಂದ ಖರ್ಚು ವಿಪರೀತವಾಗುತ್ತಿದೆ. ಅಧಿಕಾರಿಗಳೂ ಇಲಾಖೆಗಳೂ ಹೆಚ್ಚಾದವೆಂದು ರೈತರಿಗೇನೂ ಸುಖವಾಗಿಲ್ಲ. ರೆವಿನ್ಯೂ ಇಲಾಖೆಯ ಕೆಲಸ ತುಂಬಾ ಅತೃಪ್ತಿಕರವಾಗಿದೆ. ನಾಲ್ಕಾರು ವರ್ಷಗಳಿಂದ ಮಾಡಿಕೊಂಡ ಅರ್ಜಿ ಸರ್ವೆ ಮೊದಲಾದುವು ಸಾವಿರ ಸಂಖ್ಯೆಯಲ್ಲಿ ಪ್ರತಿ ನಾಡಾಫೀಸಿನಲ್ಲಿವೆ. ನಾಡುಚೇರಿಯ ಸಿಬ್ಬಂದಿಗಳಿಗೆ ಇತರ ಎಲ್ಲಾ ಕೆಲಸ ಹೊರಿಸುವದರಿಂದ ಅವರಿಗೆ ಆ ಇಲಾಖೆಯ ಕೆಲಸ ನಡೆಸುವದೇ ಅಸಾಧ್ಯವಾಗಿದೆ. ಈಗಿರುವ ಸಿಬ್ಬಂದಿಯಲ್ಲಿಯೇ ಹಗಲೂ ರಾತ್ರೆ ಕೆಲಸ ಮಾಡಿದರೂ ಈಗ ಸಂಗ್ರಹವಾಗಿರುವ ಕೆಲಸ ಮುಗಿಯಲು ೧೫ ವರ್ಷ ಬೇಕಾಗಬಹುದು. ನಾಡ ಕಛೇರಿಗಳ ಸಂಖ್ಯೆ ಜಾಸ್ತಿ ಮಾಡಿ ಯೋಗ್ಯ ಸಿಬ್ಬಂದಿ ಕೊಡಬೇಕು. ಈಗಿರುವ ಪಾರ್ಶ್ವಪಾನ ನಿರೋಧದಿಂದ ಸರಕಾರದ ಆದಾಯ ಕಡಿಮೆಯಾದದಲ್ಲದೆ ಕಳ್ಳ ಸಂತೆ ಹೆಚ್ಚಾಗಿದೆ. ತಪ್ಪು ಮಾಡಿದವರಿಗೆ ರೂ. ೧೫ ಜುಲ್ಮಾನೆ ಮಾಡಿ ಪ್ರಯೋಜನವಿಲ್ಲ. ಜೈಲಿಗೆ ಕಳುಹಿಸುವ ಕಾಯಿದೆ ಮಾಡಬೇಕು ಇಲ್ಲವೇ ಪೂರ್ಣ ಪಾನನಿರೋಧವನ್ನು ಜಾರಿಗೆ ತರಬೇಕು. ಫಾರೆಸ್ಟ್ ಇಲಾಖೆಯಲ್ಲಿ ಮರದ ಬೆಲೆ ಹೆಚ್ಚಾಗಿ ಉತ್ಪತ್ತಿ ಹೆಚ್ಚಾಗಿದೆಯೆಂದು ಸಿಬ್ಬಂದಿ ಹೆಚ್ಚಿಸುವದು ಸರಿಯಲ್ಲ. ಶ್ರೀ [illegible]ರಾವರ [illegible]ದಿಂದ ಪ್ರಯೋಜನವಾಗಿಲ್ಲ. ಒಂದು ವರ್ಷ ಮಾಡಿದ ಕೆಲಸ ಇನ್ನೊಂದು ವರ್ಷಕ್ಕೆ ನಿಲ್ಲದು. ಪಿ. ಪಿ. ಪಬ್ಲ್ಯು. ಡಿ. ಇಲಾಖೆಯು ಕೇಂದ್ರ ಸರಕಾರದ ಹಿಡಿತದಲ್ಲಿರುವದರಿಂದ ಅವರಿಂದ ಬೇಕಾದ ಕೆಲಸ ಮಾಡಿಸುವದು ಕಷ್ಟ

ಪಾಗಿದೆ. ಕೊಡಗಿನಲ್ಲಿ ವಿಶ್ವ ಮಾಂಡರಿ ದಿನಿಯಿಂದ ಖ್ಯಾತಿ ಇದ್ದರೂ ಉತ್ತರ ಕೊಡಗಿನ ಸ್ಥಿತಿ ಹಾಗಿಲ್ಲ. ೨೨೦೦೦ ಜನಕ್ಕೆ ಒಂದು ಡ್ರೈಯರ್ ಏಲಿವೇಟರ್ ಕಾಲಿಯಾದರೂ ಬೇಕಲ್ಲವೇ? ನಮ್ಮ ಇಂದಿನ ಸರಕಾರವೂ ಈ ಹಿಂದಿನ ಸರಕಾರದಂತೆ ಕಾಸ್ತ್ರ ಮಾಡಬಹುದು. ನಮ್ಮ ಕಡೆಯವರೇ ವಿದ್ಯಾಮಂತ್ರಿಗಳಾಗಿರುವಾಗ್ಯೂ ಈ ಕಡೆಗೆ ಗಮನವಿತ್ತವರೆಂದು ನಂಬಿರುವೆನು. ಮೆಡಿಕಲ್ ಇಲಾಖೆಯು ಕೆಲಸ ಚೆನ್ನಾಗಿದೆ ಆದರೆ ಇವಕ್ಕೆ ತಕ್ಕ ಪ್ರೋತ್ಸಾಹ ದೊರೆಯುತ್ತಿಲ್ಲ. ರೂ. ೩೫೦೦೦ ಕಡಿಮೆ ಮಾಡಲಾಗಿದೆ. ಮಡಿಕೇರಿ, ವೀರಾಜಪೇಟೆ ಆಸ್ಪತ್ರೆಗಳ ವಿನಾ ಯಾವುದೂ ಚೆನ್ನಾಗಿಲ್ಲ. ನಾವು ಉತ್ತರ ಕೊಡಗಿನವರು ವಿಶ್ವದಲ್ಲಿ ಹಿಂದುಳಿದವರೆಂದೂ ಕರೀರದಲ್ಲೂ ಹಿಂದುಳಿದಿಲ್ಲ. ಅವಕ್ಕೆ ಸರಿಯಾಗಿ ಆಸ್ಪತ್ರೆ ಬೇಕು ಪ್ರತಿಯೊಂದಕ್ಕೂ ಕಮ್ಯೂನಿಟಿ ಪ್ರಾಜೆಕ್ಟ್ ಯೋಜನೆಯ ವಿಚಾರ ಹೇಳಲಾಗುತ್ತಿದೆ. ಅದು ಪ್ರಸ್ತುತದಲ್ಲಿರುವ ಯೋಜನೆ ಮಲೇರಿಯಾ ಇಲಾಖೆ ಚೆನ್ನಾಗಿ ಕೆಲಸ ಮಾಡಿದೆ. ಸರಕಾರವು ಜನರನ್ನು ನಿಜವಾದ ಜನರನ್ನಾಗಿ ಮಾಡಿದ ಇಲಾಖೆ. ಅದಕ್ಕೆ ಉತ್ತೇಜನ ಕೊಡತಕ್ಕವರದ ಬದಲು ರೂ. ೩೦೦೦೦ ಕಡಿಮೆ ಮಾಡಿದ್ದರಿಂದ ಸಂಘಗಳಿಂದ ಸಾಲ ದೊರೆಯುವದಿಲ್ಲವೆಂದು ಅಧಿಕಾರಿಗಳನ್ನು ದೂರುವದು ಸರಿಯಲ್ಲ. ನಾಳೆ ಬೆಲೆ ಇಳಿದಾಗ ಸಾಲ ತೀರಿಸುವದು ಅಸಾಧ್ಯವಾಗಿದೆ. ಸಹಕಾರದಲ್ಲಿ ಉತ್ಪನ್ನ ವಿಭಾಗ ಸಾಕಷ್ಟು ಅಭಿವೃದ್ಧಿಯಾಗದ್ದು ನಿಜ. ಮಾರ್ಕೆಟಿಂಗ್ ವಿಭಾಗ ಕಷ್ಟ ಕೆಲಸ ಮಾಡುತ್ತಿದೆ. ವ್ಯವಸಾಯ ಇಲಾಖೆಗೆ ಹಣವಿತ್ತಿದೆ ಈ ಹಣ ಪೂರ್ಣ ಉಪಯೋಗ ರೈತರಿಗೆ ದೊರೆಯುವಂತೆ ಮಾಡಬೇಕು. ಸಕಾಲದಲ್ಲಿ ಗೊಬ್ಬರ ಒದಗಿಸಬೇಕು. ರೈತರು ಭೂಮಿಗೆ ಹಾಕುವ ಗೊಬ್ಬರವನ್ನು ಕೊಟ್ಟು ಹಣ ತೀರಿ ಅದು ಅವರಿಗೇ ತಪ್ಪು. ವೆಟೆರ್ನರಿ ಇಲಾಖೆಯು ಕಾರ್ಯ ಕೇಂದ್ರ ಚೆನ್ನಾಗಿದೆ. ದೇಶದ ಹತ್ತಾರು ಭಾಗದಲ್ಲಿ ಇಂಥಾ ಕೇಂದ್ರಗಳಾಗಬೇಕು. ಮಂತ್ರಿಮಂಡಳವು ಭೇದಭಾವವಿಡದೆ, ಪಾರ್ಟಿಪಕ್ಷಗಳನ್ನು ಬಿಟ್ಟು ಕೆಲಸ ಮಾಡಿ ದೇಶದಲ್ಲಿ ಶಾಂತಿ ಸಮಾಧಾನಗಳನ್ನು ನೆಲೆಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಜೀ. ಎಂ. ಮಂಜುನಾಥಯ್ಯನವರು.

ಸಭೆ ಕೂಡಗಲ್ಪಟ್ಟ ಈ ಬಜ್ಜೆಟ್ಟಿಗೆ ನಂದಿಸುತ್ತೇನೆ. ನಾವು ಶಿಕ್ಷಣ ಪ್ರಾರಂಭಿಸಬೇಕು ಮಾಡಬೇಕು. ರಾಷ್ಟ್ರೀಯ ಕಾರ್ಯಗಳಿಗೆ ಹಣವಿಡಲಾಗಿದೆ. ನಾನು ಫಾರೆಸ್ಟಿನ ಟಿಂಬರು ಕಡಿಯುವ ಪದ್ಧತಿ ವಿರುದ್ಧವಿಲ್ಲ. ಆದರೆ ಅಷ್ಟೇ ಹಣವೂ ಕಾಡಿನಲ್ಲಿ ರೀಜನರೇಶನ್ ಆಗಬೇಕು. ಸರಕಾರಕ್ಕಿಂಥಾ ಖಾಸಗಿ ಮರ ಟಿಂಬರುಗಳು ಹೆಚ್ಚು ಮರ ಕಡಿಯುತ್ತಿದ್ದಾರೆ. ಅನೇಕರು ಕಡಿದ ಮರಗಳು ಕಾಡಿನಲ್ಲೇ ಹಾಳಾಗುತ್ತವೆ. ಇದನ್ನು ನಿಲ್ಲಿಸಬೇಕು. ಮರ ಕಡಿದಲ್ಲಿ ಹೆಚ್ಚಿರುವಲ್ಲಿ ತೇಗವು ಚೆನ್ನಾಗಿ ಬೆಳೆಯುತ್ತದೆ. ಮೈಸೂರಿನ ಕೊಪ್ಪದ ಕಡೆಯಲ್ಲಿ ತೇಗ ಹಾಕಿದ್ದು ಚೆನ್ನಾಗಿ ಬೆಳೆಯುತ್ತಿಲ್ಲ. ಆದ್ದರಿಂದ ಎಲ್ಲಿ ಬೆಳೆಯುತ್ತದೋ ಅಲ್ಲಿ ಅದಕ್ಕೆ ಪ್ರೋತ್ಸಾಹ ನೀಡಬೇಕು. ಅದು ಬೆಳೆಯದ ಕಡೆಯಲ್ಲಿ ಬೇರೆ ಮರಗಳನ್ನು ಬೆಳೆಸಬಹುದು. ಕೊಡಗಿನಲ್ಲಿ ಪ್ಲೈವುಡ್ ಕಾರ್ಖಾನೆಯನ್ನು ಸರಕಾರ ಮಾಡಬೇಕು. ಇಲ್ಲಿಂದ ಮರಗಳಿಗೆದುಕೊಂಡು ಹೋಗಿ ಹೊರಗಿನವರು ಕಾರ್ಖಾನೆ ಇಟ್ಟು ಲಾಭ ಮಾಡುತ್ತಿರುವಾಗ ನಮಗೇಕೆ ಸಾಧ್ಯವಾಗುವದಿಲ್ಲ? ಸೌದೆಗಾಗಿ ಮರನೆಡಬೇಕು. ಪ್ಲೈವುಡ್ ಫ್ಯಾಕ್ಟರಿಗೆ ಒಳ್ಳೆ ಭವಿಷ್ಯವಿದೆ ಎಂಬ ಸಾಧ ಆದಾಯ ತೆರಿಗೆಯಿಂದ ಸರಕಾರಕ್ಕೆ ತುಂಬಾ ಲಾಭ ಬರುತ್ತಿದೆ ಇದರಿಂದ ಆರ್ಥಿಕ ಮಂತ್ರಿಗಳು ಈಗಿನ ದರವನ್ನು ಇನ್ನೂ ಹೆಚ್ಚಿಸಬೇಕು. ಕಾಫಿ ವ್ಯವಸಾಯ ಇನ್ನೂ ಹೆಚ್ಚಾಗಬೇಕು. ಈಗಿನ ಕಾಫಿಬೆಳೆ ಹಿಂದೂದೇಶದ ಉಪಯೋಗಕ್ಕೆ ಸಮನಾಗಿದೆ. ಅಂಗಡಿ ತೋಟದ ಕೆಲಸಗಾರರ ಬಗ್ಗೆ ತೋಟದ ಸ್ಥಿತಿಗತಿ ತಿಳಿಯದವರು ಡೆಲ್ಲಿಯಿಂದ ಮಾನನೀಯ ಮಾಡುವದರಿಂದ ಹೆಚ್ಚಿನ ಪ್ರಯೋಜನವಿಲ್ಲ. ಈ ವ್ಯವಸಾಯದ ಬಗ್ಗೆ ಸರಕಾರ ಕಠಿಣವಾಗಿರಬಹುದು. ಏಕೆಂದರೆ ಒಳ್ಳೆ ಪ್ಲಾಂಟರು ದೇಶಕ್ಕೆ ಎಷ್ಟು ಅವಶ್ಯಕ! ತೋಟಗಳ ಕೋಟೇಶನ್ ಮನಸ್ಸು ಚೆನ್ನಾಗಿ ನಡೆಯುತ್ತಿಲ್ಲ ಕೇಂದ್ರ ಸರಕಾರಕ್ಕೆ ಎಕ್ಸೈಸ್ ಬಾಬಿನಲ್ಲಿ ಹೋಗುವ ಹಣದಿಂದ ಒಂದು ಪಾಲು ನಾವು ಪಡೆಯಬೇಕು. ಮಡಿಕೇರಿಯ ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಆರೋಗ್ಯದಲ್ಲಿರುವವರಿಗೇ ನೆಗಡಿಯಾಗಬಹುದೆಂದಿರುವಾಗ ಸ್ವಾಭಾವಿಕ ಅಸ್ವಸ್ಥತೆ ಇಲ್ಲಿ ಕಟ್ಟುವದು ಹಿತವೋ ಎಂದು ಪರಿಶೀಲಿಸಬೇಕು. ಬಿ ಸಿ ಜಿ ವ್ಯಾಕ್ಸಿನೇಶನ್ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿರುವದರಿಂದ ಸರಕಾರವು ನಿಧಾನವಾಗಿ ವರ್ತಿಸುವದೊಳಿತು. ಮಡಿಕೇರಿಯಿಂದ ಡ್ರೈನೇಜ್ ವ್ಯವಸ್ಥೆಯನ್ನು ನಗರ ಮಾಡುವದು ಹಿತ. ದೇಶದಲ್ಲಿ ಮಲೇರಿಯಾ ನಿವಾರಣೆಯಾದರೆ ಸಾಲದು. ಅದರ ಜೊತೆಯಲ್ಲೇ ಕೊಕ್ಕೆಹುಳು ಮತ್ತಿತರ ರೋಗಗಳ ನಿವಾರಣೆಯೂ ಆಗಬೇಕು. ಪಿ. ಡಬ್ಲ್ಯು. ಡಿ. ಇಲಾಖೆಯು ಕೊಡಗಿನ ರಸ್ತೆಗಳ ರಿಪೇರಿ ಹಿಡಿಸಿ ಬರಬೇಕು. ಇದನ್ನು ಕೇಂದ್ರ ಸರಕಾರದಿಂದ ಹಿಂದಕ್ಕೆ ಪಡೆಯಬೇಕು. ಅವಶ್ಯವಿರುವ ಬೇಕರಿ, ಕೊಟ್ಟಿಗೆ ಮತ್ತಿತರ ಸೇವೆಗಳನ್ನು ಕಟ್ಟಿಸಲು ಸರಕಾರ ಹಿಂಜರಿಯಬಾರದು. ಪೋಸ್ಟ್ ಆಫೀಸಿನ ಟಪ್ಪಾಲು ಈಗೀಗ ಸರಿಯಾಗಿ ದೊರೆಯುವದೇ ಕಷ್ಟವಾಗಿದೆ. ಹಲವು ಸಮಯ ತುಂಬಾ ತಡವಾಗುತ್ತದೆ. ಜಿಲ್ಲಾ ಬೋರ್ಡನ್ನು ತೆಗೆದ ಹಾಗೆ ಆಧ್ಯಾಪಕರನ್ನು ಇತರರ ಸಮಮಟ್ಟದಲ್ಲಿ ನೋಡಬೇಕು. ಕೆಲವರಿಗೆ ಹಲವು ತಿಂಗಳಿಂದ ವೇತನವೇ ದೊರೆತಿಲ್ಲವಂತೆ. ಪಗಾರವಿಲ್ಲ ಮಕ್ಕಳಿಗಾಗಿ ಮಾಡಬಾರದು. ಶಾಲೆಗಳಲ್ಲಿ ಪಠ, ಪುಸ್ತಕಗಳನ್ನು ಆಗಾಗ ಬದಲು ಮಾಡಬಾರದು.

ಶ್ರೀ ಜಿ. ಸುಬ್ಬಯ್ಯನವರು

ಕೊಡಗಿಗೆ ಸಭಾ ನೆ ಕೊಟ್ಟದ್ದಕ್ಕೆ ಇಂಡಿಯಾ ಸರಕಾರಕ್ಕೆ ವಂದನೆ. ಫಾರೆಸ್ಟ್ ಇಲಾಖೆಯಲ್ಲಿರುವ ನೌಕರರುಗಳ ಸ್ಥಿತಿ ಬಹು ಹಾಳಾಗಿದೆ. ಅವರಿಗೆ ಯೋಗ್ಯ ಸಂಬಳ ದೊರೆಯುತ್ತಿಲ್ಲ. ಹಿಂದುಳಿದವರ ಹಿತಕ್ಕೆಂದೂ ವಿದ್ಯಾ ಇಲಾಖೆಯಲ್ಲಿ ರೂ. ೫೦೦೦೦ ಇರಿಸಿದ್ದರು. ಇದರಲ್ಲಿ ಎಷ್ಟು ಖರ್ಚಾಯಿತೆಂದು ತಿಳಿದುಬರುವದಿಲ್ಲ. ಈ ವರ್ಷ ಇಟ್ಟ ಹಣ ಸಾಲದಾಗಬಹುದು. ಪಿ. ಡಬ್ಲ್ಯು. ಡಿ. ಕೆಲಸ ಸಮರ್ಪಕವಾಗಿಲ್ಲ. ರಸ್ತೆಗಳು ಚೆನ್ನಾಗಿಲ್ಲ, ಎರಡೆರಡು ಬಾರಿ ರಿಪೇರಿ ಮಾಡಿದರೂ ಪ್ರಯೋಜನವಿಲ್ಲ. ಜೇನು ವ್ಯವಸಾಯದ ಅಭಿವೃದ್ಧಿಗೆ ಹಣವಿಡದ್ದು ವ್ಯಸನಕರ. ಈ ಕೈಗಾರಿಕೆಗೆ ಈ ವರ್ಷ ಹಣ ಹಾಕಿದರೆ ಆ ವರ್ಷವೇ ಫಲಕೊಡುವವಾದ್ದರಿಂದ ಅಂಥಾದ್ದಕ್ಕೆ ಪ್ರೋತ್ಸಾಹಬೇಕು. ಈಗಿನ ನಮ್ಮ ಮಂತ್ರಿಮಂಡಳ. ಯೋಗ್ಯ ಕೆಲಸ ಮಾಡಬೇಕು. ಸರ್ವರ ಸಹಕಾರವೂ ಬೇಕು. ಚುನಾವಣೆಯ ಕಾಲದ ಪಕ್ಷಗಳನ್ನು ನೆನೆದು ಆ ಅಭಿಪ್ರಾಯವನ್ನೇ ಇಟ್ಟುಕೊಂಡು ವರ್ತಿಸಿದರೆ ಕಲ್ಪವೃಕ್ಷ ಗುಂಡಪ್ಪ ನೇರಿ ಮೇಣಪ್ಪ ಕುಡಿಯದಂತೆ ಬಡ ರೈತನ ಸರ್ವನಾಶವಾದೀತು. ಆದರಿಂದ ಈ ಅಭಿಪ್ರಾಯವನ್ನು ಬಿಟ್ಟು ಸರ್ವರ ಏಳಿಗೆಗೆ ದುಡಿದು ಕೊಡಗಿನ ಕೀರ್ತಿಯನ್ನು ಉಳಿಸಬೇಕು.

ಶ್ರೀ. ಹಿ. ಸಿ. ಉತ್ತಯ್ಯನವರು.

ಬಜ್ಜೆಟ್ಟಿನ ಬಗ್ಗೆ ಹೆಚ್ಚು ಎನಿಸುತ್ತದೆ. ಪ್ರತಿ ಪ್ರಜೆಯ ತಲಾ ರೂ. ೬೭ರಂತೆ ಆದಾಯವು ಅನೇಕ ಪರಿಮಾಣದ ಖರ್ಚು ಹಿಂದೂದೇಶದ ಬೇರೆ ಯಾವ ಪ್ರಾಂತದಲ್ಲಿ ಇರದು. ೧೯೪೯ರಲ್ಲಿ ಡೆಲ್ಲಿಯಲ್ಲಿ ಕೊಡಗು ತನ್ನ ಕಾಲಲ್ಲಿ ನಿಲ್ಲದು, ಅದಕ್ಕೆ ಆರ್ಥಿಕ ಬಲವಿಲ್ಲವೆಂದು ಹೇಳಿದವರ ಬಾಯಿಯಿಂದಲೇ ಕೊಡಗು ಆರ್ಥಿಕ ದೃಷ್ಟಿಯಿಂದ ತನ್ನ ಕಾಲಲ್ಲಿ ನಿಲ್ಲುವದೆಂದು ಜಗತ್ತಿಗೆ ಹೇಳುವಂಥಾ ಪರಿಸ್ಥಿತಿ ಬಂದಿದೆ. ವಿಧಿಯ ವಿಲಾಸವನ್ನ ಬೇಕು. ಕೊಡಗಿನ ಸಂಪತ್ತನ್ನು ಇನ್ನೂ ಹೆಚ್ಚಿಸಬಹುದು ಮುಂಬರುವ ವರ್ಷಗಳಲ್ಲಿ ತಲಾ ರೂ ೬೦ ಕನ್ನ ನಮ್ಮ ಆದಾಯ ಏರಬಹುದು. ಸೆಂಟ್ರಲ್ ಎಕ್ಸೈಸಿನ ಪಾಲು ನಮಗೆ ಬಾರದ್ದನ್ನ ಪಡೆಯಬೇಕು. ಈ ಪರಿಗೆ 'ಬಿ' ಸಂಸ್ಥಾನಗಳಿಗಿಲ್ಲದ್ದೇಕೆ ಬಜ್ಜೆಟ್ಟಿನ ಕಾರಣ ಹಣ ಕೊಡಲ್ಪಟ್ಟಿರಬಾರದು. ಈಗ ಹಾಗಿಲ್ಲ. ಇದು ದೊರೆತರೆ ಕೊಡಗಿನ ಆದಾಯವು ಒಂದು ಕೋಟಿಗೆ ತಲುಪಬಹುದು. ನೆಟ್ಲ್ ನೇಂಟ್ ವರ್ತನೆ ಕಾರಣದಿಂದ ಐದು ಲಕ್ಷ ಹೆಚ್ಚು ಬರಬಹುದು. ಕರ್ಮಗೆ ತರಬೇತಿಗೆ ಕಳುಹಿಸಿದವರು ಬಂದ ಮೇಲೆ ಈ ಕೆಲಸವನ್ನು ಸರಕಾರಿ ಕೈಕೊಳ್ಳಬೇಕು. ವ್ಯವಸಾಯ ಆದಾಯ ತೆರಿಗೆಯಿಂದ ಆದಾಯ ಏರುತ್ತಿದೆ. ನಾವು ಕೇವಲ ಇಂಡಿಯನ ಕಾಫಿ ಬೋರ್ಡಿನವರನ್ನು ಅವಲಂಬಿಸಿರದೆ ನಮ್ಮ ಆದಾಯದಲ್ಲಿ ಕೆಲವಂಶವನ್ನು ಕಾಫಿ ನರ್ಸರಿಗಳನ್ನು ವಿವಿಧ ಭಾಗಗಳಲ್ಲಿ ತೆರೆದು ಸಸಿಗಳನ್ನು ಯೋಗ್ಯ ಬೆಲೆಗೆ ಚಿಕ್ಕ ಪ್ಲಾಂಟರುಗಳಿಗೆ ಸರಬರಾಯಿ ಮಾಡುವ ವ್ಯವಸ್ಥೆ ಮಾಡಬೇಕು. ಬಾಸೆಪಿಯಂತ್ರಣದಿಂದ ಪ್ರಯೋಜನವಾಗಿದೆ. ಹಿಂದಿನಂತೆ ಪೇಟೆ ದರಸಿಗಳಲ್ಲಿ ಅದಿಮ ಹಾದಿ ಬೀದಿಯಲ್ಲಿ ಬೀಳುವವರನ್ನು ಕಾಣುವದಿಲ್ಲ. ಪಾನನಿರೋಧ ಸಹಾಯದಿಂದ ಮಾನವ ಗುಣವನ್ನು ಬದಲು ಮಾಡಲಾಗುವದಿಲ್ಲ. ಆದರೆ ನಿಯಂತ್ರಣವೆಂದೆ ಹೇಳಲಾಗಿದೆ. ಫಾರೆಸ್ಟ್ ಇಲಾಖೆಯ ವಿಚಾರ ಅನೇಕ ಪ್ರಕಾರ ಕೇಳಿರುವೆನು. ಇದನ್ನು ವಿಚಾರಿಸಲು ಒಂದು ಸಮಿತಿಯನ್ನು ಏರ್ಪಡಿಸಬೇಕು. ಪೆಟ್ರೋಲ್ ದೊರೆಯದೆ ಗೆಲ್ಲಿಸಿಕೆಟ್ಟ ಸಂಕಿಯಲ್ಲಿ ರೂ. ೮ ಕೊಡಬೇಕಿದ್ದಾಗ ಇಷ್ಟದ್ದಕ್ಕಿಂಥ ಹೆಚ್ಚಿನ ಲಾಭ ಡಿಗೆದರವನ್ನು ಫಾರೆಸ್ಟ್ ಇಲಾಖೆಯವರು ಈಗ ಕೊಡುತ್ತಿರುವರು ಸರಿಯಲ್ಲ. ಟಿಂಬರ್ ಮಾರ್ಕೆಟ್ ಕ್ಷೀಣಿಸಿ ಬಿಟ್ಟಿದ್ದು ವ್ಯಾಪಾರಕ್ಕರ ಹಣ ಗತವಾಗುತ್ತಿದೆ. ಮಾರಾಟದಿಂದ ಕೆಲ್ಸಲು ವ್ಯಾಪಾರಕ್ಕೂ ಬೇಗ ಮುಂದೆ ಬರದಾಗಿದ್ದರೆ ಇದಕ್ಕೆ ಇಲಾಖೆಯೇ ಜವಾಬ್ದಾರವಾಗಿದೆ. ವ್ಯಾಪಾರಸ್ಥರು ಒಗ್ಗಟ್ಟಾಗಿ ಕೊಂಡಿರುವರೆಂದು ಮೈಸೂರು ಸರಕಾರಕ್ಕೆ ಗಂಧ ಮಾರಲಾಯಿತು. ನಾವು ಟಿಕ್ಕವನ್ನು ಅವರಿಗೆ ಕೊಡುತ್ತಿರುವೆವು. ಹಾಗೆ ವ್ಯಾಪಾರಸ್ಥರು ಬಾರದಂತೆ ಆದರೆ ಕಡೆಗೆ ಮೈಸೂರೊಂದೇ ವಿಜಯಿಯಾಗಿ ಉಳಿದು ತನ್ನ ಇಚ್ಛೆಯಂತೆ ನಮ್ಮ ಮೇಲೆ ದರವನ್ನು ಹೇರಬಹುದು. ಫಾರೆಸ್ಟ್ ನೀತಿಯ ಬಗ್ಗೆ ನಾವು ಪ್ರಶ್ನೆಗೆ ವಿರೋಧ ಹೇಳಿ ಇರುವರೆಂದು ಹೇಳಬೇಕಾಗಿದೆ. ತೇಗದ ಕಾಲ ಹೇಳಲು ಹೆಚ್ಚಾಗಿ ಬಂದರೆ ಅವರನ್ನು ಬದಲಾಯಿಸ ಬೇಕಾ ತೇಗವು ಯಾವಾಗಲೂ ಬೆಳೆಯುತ್ತಲಿರುತ್ತದೆ. ಪ್ರತಿ ವರ್ಷ ೬೫೦ ಎಕರೆಗಳಂತೆ ತೇಗ ನೆಟ್ಟರೆ ಈ ಮುಂದೆ ಕೊಡಗಿನ ಹಣಕಾಸನ್ನು ಬದಲಾಗದಿರದು. ಏಲಕ್ಕಿ ಮಲೆಗಳ ಗೇಣಿ ನ್ಯಾಯಕ್ಕೆ ಸರಿಯಾಗಿಲ್ಲ. ಹರಾಜಿಗೆ ಇಟ್ಟದ್ದರೆ ಸರಕಾರಕ್ಕೆ ಹೆಚ್ಚಿನ ಆದಾಯ ಬರುತ್ತಿತ್ತು. ಆರೇಳು ವರ್ಷಗಳ ಹಿಂದೆ ಕೊಡಗಿನಲ್ಲಿ ಖಡ್ಡಾಯ ಪ್ರಾಥಮಿಕ ಶಿಕ್ಷಣದ ಬಗ್ಗೆ ಪರಿಶೀಲನೆ ನಡೆಸಲಾಯಿತು. ಆದರೆ ಅದರಿಂದ ಯಾವ ಖಡ್ಡಾಯ ಶಿಕ್ಷಣವೂ ಜಾರಿಯಲ್ಲಿ ಬಂದಂತೆ ತೋರುವದಿಲ್ಲ. ಜಿಲ್ಲಾ ಬೋರ್ಡನ್ನು ಸರಕಾರ ವಹಿಸಿಕೊಳ್ಳುವ ವಿಷಯವನ್ನು ತಿಳಿದು ಆಶ್ಚರ್ಯವಾಯಿತು. ಮೂಲ ಶಿಕ್ಷಣದ ಪದ್ಧತಿಯನ್ನು ಕೊಡಗಿನಲ್ಲಿ ಜಾರಿಗೆ ತಂದು ಮಾತೃಭಾಷೆಯ ಮೂಲಕ ವಿದ್ಯಾಭ್ಯಾಸ ಮಾಡುವ ಮಕ್ಕಳು ವಿದ್ಯಾರ್ಥಿಗಳೂ ೧೮ ವರ್ಷ ವಯಸ್ಸಿನೊಳಗೆ ಈಗಿರುವ ಸ್ಕೂಲ್ ಫೈನಲ್ ಜ್ಞಾನ ಸಂಪಾದಿಸುವ ವ್ಯವಸ್ಥೆಯಾಗಬೇಕು. ಆದ್ದರಿಂದ ಇಂಥಾ ಮೂಲ ಶಿಕ್ಷಣ ಕ್ರಮವು ಜನತೆಯ ಕೈಯಲ್ಲೇ ಇರಬೇಕಲ್ಲದೆ ಸರಕಾರವು ವಹಿಸಿಕೊಳ್ಳುವದರಿಂದ ಹೆಚ್ಚಿನ ಪ್ರಯೋಜನವಿಲ್ಲ. ಆದ್ದರಿಂದ ಅಧಿಕಾರದಲ್ಲಿರುವವರು ಈ ವಿಚಾರ ಆಲೋಚಿಸಿ ವರ್ತಿಸಬೇಕು. ಕೊಡಗಿನಲ್ಲಿ ಒಂದೇ ಒಂದು ಔದ್ಯೋಗಿಕ ಶಾಲೆಯನ್ನು ತೆರೆಯುವ ಬಗೆಗಾದರೂ ಪ್ರಯತ್ನಿಸಿಲ್ಲ ಕೇವಲ ವ್ಯವಸಾಯದಿಂದಲೇ ಬದುಕಲಾಗುವುದಿಲ್ಲ. ಜೊತೆಯಲ್ಲಿ

(ಎನೇ ಪುಟ ನೋಡಿ)

ಶಾಸನ ಸಭೆಯ

ರಸ-ಕಸ ನಿಮಿಷಗಳು.

ಮುಖ್ಯ ಮಂತ್ರಿ ಪೂಣಚ್ಚನವರು ಬಜೆಟ್ ಟೀಕೆಗೆ ಉತ್ತರಿಸುತ್ತಾ ಶ್ರೀ ಪಿ. ಸಿ. ಉತ್ತಯ್ಯನವರನ್ನುದ್ದೇಶಿಸಿ ಗಂಧದ ವಿಷಯದಲ್ಲಿ ನಮ್ಮ ಸದಸ್ಯರಿಗೆ ಅದರ ಎ. ಬಿ. ಸಿ. ಡಿ. ಯೂ ಗೊತ್ತಿಲ್ಲವೆಂದರು. ಉತ್ತಯ್ಯನವರು ಪೂಣಚ್ಚನವರಿಗೆ ಅರ್ಥವಾಗಿರಲೂ ಸಾಕು. ಯಾರು ಮುಖ್ಯ ಮಂತ್ರಿಯಾದರೂ ಅತನು ಮೊದಲು ಶಾಸನ ಸಭೆಯ ಸದಸ್ಯನು. ಶಾಸನ ಸಭೆಯ ಪ್ರತಿ ಸದಸ್ಯನೂ ಸಮಾನ ರೀತಿಯ ಜವಾಬ್ದಾರಿಯುಳ್ಳ ಮನುಷ್ಯನು. ಒಬ್ಬರು ಮೇಲು ಒಬ್ಬರು ಕೀಳಲ್ಲ. ಮಂತ್ರಿಯಾಗಿ ಅಫೀಸಿನ ಒಳಗುಟ್ಟು ಗೊತ್ತಿದ್ದ ಮಾತ್ರಕ್ಕೆ ಒಬ್ಬರು ಹೆಚ್ಚು ಮತ್ತೊಬ್ಬರು ಕಡಿಮೆಯಾಗರು! ಹೇಗೂ ಗುರುವಿಗೆ ತಿರುಮಂತ್ರ ಹೇಳುವ ಪ್ರಸಂಗದಲ್ಲಿ ಕೆಲವರಿಗೆ ಅದು ರಂಜಕವಾಗಿದ್ದಾದರೂ ಕೆಲವರಿಗೆ ಭಂಜಕವಾಗಿತ್ತು.

* * *

ಶ್ರೀ ಕೆ. ಕೆ. ಗಣಪತಿಯವರು ಕುದಿಕೇರಿಗೆ ಒಂದು ಮಾನವ ಚಿಕಿತ್ಸೆಯ ಆಸ್ಪತ್ರೆ ಬೇಕೆಂದು ಠರಾವು ಕಳುಹಿಸಿದ್ದರು! ಗೃಹಮಂತ್ರಿ ಮಲ್ಲಪ್ಪನವರು ಹಾಸ್ಯದಿಂದ ಕುದಿಕೇರಿಯಲ್ಲಿ ವಾರಕ್ಕೆರಡಾವರ್ತಿಯೂ ಪೊನ್ನಂಪೇಟೆ ಶಾರದಾಶ್ರಮದಲ್ಲೂ, ಅತ್ತ ಶ್ರೀಮಂಗಲದಲ್ಲೂ 'ಮಾನವ' ಆಸ್ಪತ್ರೆ ಇರುವ ಕಾರಣ ಮತ್ತು ಮರಿನಾಡಿನಲ್ಲೊಂದು ಆಗಲಿರುವ ಕಾರಣ ಕುದಿಕೇರಿಯಲ್ಲೊಂದು ಮಾನವ ಆಸ್ಪತ್ರೆ ಸಾಧ್ಯವಿಲ್ಲವೆಂದರು. ಕುದಿಕೇರಿಯ ಜಾನುವಾರುಗಳಿಗೂ ಮಾನವರಿಗೂ ಆಸ್ಪತ್ರೆ ಬೇಡವೆಂದಾದರೆ ಮತ್ತೆ ದಾನವಂಶಕನೇ ಅವರ ನೆರವಿಗೆ ಬರಬೇಕಲ್ಲವೇ ?

* * *

ಶ್ರೀ ಸಿ. ಎ. ಮಂದಣ್ಣನವರು ಒಂದು ಠರಾವಿನ ವಿಚಾರ ಮಾತಾಡುತ್ತಾ, ಕಾಂಗ್ರೆಸ್ ಪ್ರತ್ಯೇಕ ಪಕ್ಷದ ಬೆನ್ನೆಲುಬು ಮುರಿಯಲೆಂದೇ ತಮ್ಮ ಕಾಂಗ್ರೆಸ್ಸಿನ ಈಗಿನ ಗುರಿಯೆಂದು ಹೇಳಿದರು. ಶ್ರೀ ಕೆ. ಕೆ. ಗಣಪತಿಯವರು ಇದಕ್ಕೆ ಉತ್ತರ ನೀಡಲು ಅಧ್ಯಕ್ಷರು ಬಿಡಲಿಲ್ಲ. [illegible] ಶ್ರೀ ಕೆ. ಪಿ. ಕರುಂಬಯ್ಯನವರು ಇದರ ಬಗ್ಗೆ ಆಕ್ಷೇಪವೆತ್ತುತ್ತಾ ಸರಕಾರ ರಚಿಸಿರುವ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಒಬ್ಬ ಸದಸ್ಯನ ಹೀಗೆ ಹೇಳುವುದರಿಂದ ಸರಕಾರದ ಗುರಿಯೂ ಇದೇ ಎಂದಾಗುವುದೆಂದೂ ಆದ್ದರಿಂದ ಅದು ಆಕ್ಷೇಪಕರವೆಂದೂ ಹೇಳಿದರು. ಆದರೆ ಅಧ್ಯಕ್ಷರು ಅದು ಆಕ್ಷೇಪಕರವಲ್ಲವೆಂದು ತೀರ್ಪಿತ್ತರು!

* * *

ಶ್ರೀ ಜಿ. ಸುಬ್ಬಯ್ಯನವರು ಒಂದು ಠರಾವಿನಲ್ಲಿ ಹರಿಜನ ಮತ್ತಿತರ ಹಿಂದುಳಿದ ಪಂಗಡದ ಕೆಲವು ಉತ್ತಮ ವಿದ್ಯಾರ್ಥಿಗಳಿಗೆ ಸರಕಾರವು ಸರ್ವ ಸಹಾಯವಿತ್ತು ಅವರು ವಿದ್ಯಾಭ್ಯಾಸ ಬಿಟ್ಟು ಮನೆ ಸೇರದಂತೆ ಎಚ್ಚರಿಕೆ ವಹಿಸಬೇಕೆಂದು ಸೂಚಿಸಿದ್ದರು. ಠರಾವಿನಲ್ಲಿ ಕೇಳಿದುದಕ್ಕಿಂತ ತಾವು ಹೆಚ್ಚು ಮಾಡಿ ಕೊಡುವುದಾಗಿ ಸಂಬಂಧಿಸಿದ ಮಂತ್ರಿಗಳು ಹೇಳಿದರು. ಈ ಠರಾವಿಗೆ ಒತ್ತಾಸೆಯಾಗಿ ಸರಕಾರಿ ಪಕ್ಷದ ಶ್ರೀ ಪಿ. ಕೆ. ಚಿನ್ನಯ್ಯನವರು ಮಾತಾಡಲು ಎದ್ದಾಗ ಸ್ಪೀಕರರು ಬಾಯಿ ಹಾಕಿ ಚಿನ್ನಯ್ಯನವರು ಸಮರ್ಥಿಸಿ ಮಾತಾಡದಂತೆ ಮಾಡಿದರು.

* * *

ಶ್ರೀ ಸಿ. ಎ. ಮಂದಣ್ಣನವರು ಶ್ರೀ ಪಿ. ಐ. ಬೆಳ್ಯಪ್ಪ ಪಕ್ಷದವರ ಸಹಕಾರದ ವಿಷಯ ಮಾತಾಡುತ್ತಾ, ಆನೆಯು ಆಹಾರವನ್ನು ಸ್ವೀಕರಿಸುವಾಗ, ಆಹಾರ ಕೊಡುವವನನ್ನು ಸಿಟ್ಟಿನಿಂದ ನೋಡುತ್ತಿರುವಂತೆ ಬೆಳ್ಯಪ್ಪನವರ ಸಹಕಾರವನ್ನೂ ಅದೇ ರೀತಿ ಪರಿಗಣಿಸಬೇಕೆಂದರು. ಶ್ರೀ ಪಿ. ಸಿ. ಉತ್ತಯ್ಯನವರು ಉತ್ತರವೀಯುತ್ತಾ ಈ ಪರಿಸ್ಥಿತಿ ಆನೆಯು ಸಿಟ್ಟಿನಿಂದಂತೆ ಅಲ್ಲ; ಬದಲು ಹತ್ತಿರ ಶತ್ರುವು ಸುಳಿದಾಗ ತನಗೇನಾಗುವದೋ ಎಂಬ ಭೀತಿಯಿಂದ ಕಪ್ಪೆಯು ಕಣ್ಣು ಹೊರಗೆ ಹಾಕಿ ನೋಡುವಂತಾಗಿದೆ. ಶ್ರೀ ಬೆಳ್ಯಪ್ಪನವರು ಪಾರ್ಟಿಯೊಳಗೆ ಬಂದರೆ ತನಗೆಲ್ಲಿ ಧಕ್ಕೆಯಾಗುವದೋ ಎಂಬ ಭಯವಿರಬೇಕು ಎಂದರು. ಸ್ವಾರಸ್ಯವಾದ ವಿಚಾರವೆಂದರೆ, ಎರಡು ದಿನ ಕಳೆದ ನಂತರ ಶ್ರೀ ಮಂದಣ್ಣನವರು ಅದಕ್ಕೆ ಆಕ್ಷೇಪವೆತ್ತುತ್ತಾ 'ಕಪ್ಪೆ' ಎಂಬ ಶಬ್ದ ಅಸಭ್ಯವಾದ್ದು ಅದನ್ನು ಹಿಂತೆಗೆಯಬೇಕೆಂದರು. ಸ್ಪೀಕರರ ಪ್ರಶ್ನೆಗೆ ಉತ್ತಯ್ಯನವರ ಆನೆಯ ದೃಷ್ಟಿಗೆ ತಾನು ಕಪ್ಪೆಯ ದೃಷ್ಟಿಯನ್ನು ಮಾತ್ರ ಹೋಲಿಸಿದ್ದಾಗಿದೆಯೆಂದರು. ಆದರೆ ಸ್ಪೀಕರರು ಮೈಸೂರು ಸಭೆಯಲ್ಲಿ ಒಬ್ಬ ಸದಸ್ಯರು ಸಹ ಸದಸ್ಯರೊಬ್ಬರನ್ನು 'ಕಪಿ'ಗೆ ಹೋಲಿಸಿದ್ದು ಅಸಭ್ಯ ಮಾತೆಂದು ತೀರ್ಪಿತ್ತದ್ದನ್ನು ಉದಹರಿಸಿ 'ಕಪ್ಪೆ' ಶಬ್ದವನ್ನು ವಾಪಾಸು ತೆಗೆಯಬೇಕೆಂದರು. ಉತ್ತಯ್ಯನವರು ವಾಪಾಸು ತೆಗೆದರು.

* * *

ಸಭೆಯ ಅಧ್ಯಕ್ಷರು ಸ್ವಲ್ಪ ಬಿಗಿಯಾಗಿಯೇ ಇದ್ದರು. ಶಾಲೆಯಲ್ಲಿ ಮಕ್ಕಳನ್ನು ಕೂರಿಸುವಂತೆ ಸಭಾಸದಸ್ಯರಿಗೆ "ಸಿಟ್ ಡೌನ್" ಉಪಯೋಗಿಸುತ್ತಿದ್ದರು. ಅಧ್ಯಕ್ಷರು ಆಜ್ಞೆ ಮಾಡುವಾಗ "ಪ್ಲೀಸ್" ಎಂಬ ನಯಶಬ್ದ ಸೇರಿಸ ಬಾರದೆಂದಿದೆಯೇ?

* * *

ಹೊಸ ಶಾಸನ ಸಭೆಯಲ್ಲವೆ? ಕೆಲವು ಸದಸ್ಯರು ಶಾಸನ ಸಭಾ ನಿಯಮಗಳಿಗೆ ಹೊಸಬರು. ಒಬ್ಬ ಸದಸ್ಯರು ಮಾತಾಡಲು ಎದ್ದಾಗ ಇನ್ನೊಬ್ಬ ನಿಂತಿರಬಾರದೆಂದೂ ಕೆಲವರಿಗೆ ತಿಳಿಯದು. ಕೆಲವರಿಗೆ ಅಧ್ಯಕ್ಷರನ್ನು ಸಂಬೋಧಿಸಿ ಅವರನ್ನುದ್ದೇಶಿಸಿ ಮಾತಾಡಬೇಕೆಂಬುದೂ ತಿಳಿಯದು. ಸದಸ್ಯರೊಬ್ಬರಿಗೆ ನೇರವಾದ ಉತ್ತರ ಕೊಡುತ್ತಾ, ಸಭೆಯಲ್ಲಿ ಅಧ್ಯಕ್ಷರಿರುವುದನ್ನೇ ಮರೆತವರೊಬ್ಬರನ್ನು ಎಚ್ಚರಿಸಿ ಅಧ್ಯಕ್ಷರು ತನ್ನನ್ನು ಸಂಬೋಧಿಸಿ ಮಾತಾಡುವಂತೆ ಆಜ್ಞಾಪಿಸಬೇಕಾಯಿತು.

* * *

ಡಿಗ್ರಿ ಪಡೆದ ಸದಸ್ಯರೊಬ್ಬರು "one of the speakers said" ಎಂದು ಮತ್ತೊಬ್ಬ ಸದಸ್ಯರು ಹೇಳಿದ ವಿಚಾರದಲ್ಲಿ 'ಸ್ಪೀಕರ್' ಎಂದರೆ ಅಧ್ಯಕ್ಷರೇ ಎಂದು ಕೇಳಿದ್ದಕ್ಕೆ ಆ ಸದಸ್ಯರು One of the speakers ಎಂದರೆ ಮಾತಾಡಿದವರಲ್ಲೊಬ್ಬರು ಎಂದೂ ಅಧ್ಯಕ್ಷರನ್ನು ಕುರಿತು ಹೇಳುವಾಗ 'ದಿ ಸ್ಪೀಕರ್' ಎಂದು ಹೇಳುವದೆಂದೂ ತಾನು ಇಂಗ್ಲಿಷ್ ಮಾತಾಡುತ್ತಿರುವುದಾಗಿಯೂ ಹೇಳಿದರು. ಸಭಾಸದರು ನಗುತ್ತಾ, ಕೆಲವರು ಚಪ್ಪಾಳೆ ಹಾಕಿದರು. ಆಗ ಒಬ್ಬ ಸದಸ್ಯರು ಸಭೆಯಲ್ಲಿ ಚಪ್ಪಾಳೆ ಹಾಕಬಹುದೇ ಎಂದು ಕೇಳಿದರು. ಸದಸ್ಯರು ಹಾಕಬಹುದೆಂದು ಅಧ್ಯಕ್ಷರು ಹೇಳಿದರು. ಪ್ರೇಕ್ಷಕರು ಹಾಗೆ ಮಾಡಬಹುದೇ ಎಂದು ಕೇಳಿದಾಗ ಹಾಗೆ ಕೂಡದೆಂದೂ ಹಾಗೆ ಯಾರಾದರು ಹಾಕಿದ್ದರೆ ಅವರನ್ನು ಹೊರಗೆ ಕಳುಹಿಸುವೆನೆಂದೂ ಹೇಳಿದರು. ಶ್ರೀ ಕೆ. ಕೆ. ಗಣಪತಿಯವರು, ಚಪ್ಪಾಳೆ ತಾನು ಹಾಕಿದ್ದೆಂದು ಹೇಳಿದರು. ಸದಸ್ಯರೊಬ್ಬರಾದ ಶ್ರೀ ಕೋರನ ದೇವಯ್ಯನವರು ಪ್ರೇಕ್ಷಕರ [illegible] ಸ್ಥಾನದಿಂದ ಐಯ್ಯಪ್ಪನವರು ಚಪ್ಪಾಳೆ ಹಾಕಿದರೆಂದರು. ಶ್ರೀ ಐಯ್ಯಪ್ಪನವರು ತಾನಲ್ಲವೆನ್ನುವಾಗ ಅಧ್ಯಕ್ಷರು 'ನೀವು ಇಷ್ಟ ಮಾತಾಡಕೂಡದು' ಎಂದರು. ಅದೃಷ್ಟ ಪರೀಕ್ಷೆ ಕತೆ ಅಲ್ಲಿಗೆ ಮುಗಿಯಿತು.

ಪಾಕಿಸ್ತಾನದಲ್ಲಿ ಹೆಣ್ಣಿನ ಬರ.

ಪಾಕಿಸ್ತಾನದಲ್ಲಿ ಹೆಣ್ಣಿನ ಬರ ಬಿದ್ದಿದೆಯೆಂದು ಜನಸಂಖ್ಯಾ ನಿಷ್ಕರ್ಷೆಯಿಂದ ತಿಳಿಯುತ್ತದೆ. ಪಾಕಿಸ್ತಾನದಲ್ಲೆಲ್ಲ ಈ ಬರ ನಿವಾರಣೆಯ ಉಪಾಯಗಳ ಬಗ್ಗೆ ಸಾರ್ವಜನಿಕರು ಮತ್ತು ಪತ್ರಿಕೆಗಳು ಚರ್ಚಿಸುವಷ್ಟರ ಮಟ್ಟಿಗೆ ಈ ಬರದ ಭೀಕರತೆ ಇದೆ. ಈ ಹೆಣ್ಣಿನ ಕೊರತೆಯನ್ನು ನೀಗಿಸುವದಕ್ಕೆ ಅನೇಕ ಸೂಚನೆಗಳು ಮಾಡಲ್ಪಟ್ಟಿವೆ. ಮಂಡಿಸಲ್ಪಟ್ಟ ಸೂಚನೆಗಳಲ್ಲಿ ಈ ಕೆಳಗಿನವು ಕೆಲವಾಗಿವೆ

೧) ವಿದೇಶಗಳಿಂದ ಮುಖ್ಯವಾಗಿ ಅಮೇರಿಕಾ ಮತ್ತು ಬ್ರಿಟನ್ನಿನಿಂದ ಶಕ್ಯವಾದಷ್ಟು ಹೆಚ್ಚಿಗೆ ಹೆಣ್ಣುಗಳನ್ನು ತರುವುದು.

೨) ಡಾಕ್ಟರಾಗಿ ಇಲ್ಲವೆ ಶಾಲೆ ಕಾಲೇಜುಗಳಲ್ಲಿ ಶಿಕ್ಷಕಿಯರಾಗಿ ದುಡಿಯುವಂಥ ಅವಿವಾಹಿತ ತರುಣಿಯರಿಗೆ ವಿವಾಹವಾಗಲು ಸಂಬಂಧಿಸಿದ ಅಧಿಕಾರಿಗಳು ಒತ್ತಾಯಿಸುವದು.

೩) ಒಬ್ಬರಿಗಿಂತ ಹೆಚ್ಚಿಗೆ ವಿವಾಹವಾಗದಿರಲು ಪುರುಷರನ್ನು ಪ್ರತಿಬಂಧಿಸುವುದು.

೪) ಬಾಲ್ಯದಲ್ಲೇ [illegible] ಮಕ್ಕಳನ್ನು ಪೋಷಿಸಿ, ತನ್ನಲ್ಲಿಯೇ ಪಾಕಿಸ್ತಾನವು ಹೆಚ್ಚಾಗಿ ಹೆಣ್ಣು ಸಂತತಿಯನ್ನು ಹುಟ್ಟುವಂತೆ ನೋಡಿಕೊಳ್ಳುವದು.

೫) ಸಂಸಾರ ಮಧ್ಯದಲ್ಲಿ ಪಾಕಿಸ್ತಾನಕ್ಕೆ ಬರಲು, ವಿದೇಶಗಳಲ್ಲಿಯ ವಿವಾಹ ವಿಚ್ಛೇದನೆಗೆ ಒಳಗಾದ ಸ್ತ್ರೀಯರ ಮತ್ತು ವಿಧವೆಯರ ಮನವೊಲಿಸುವದು.

Property For Sale

18 Acres of paddy feilds and 10 acres of dry Land with tiled accommodation for tenants and a new irrigation tank. One mile from Virajpet town. Ideal soil and water. Rs 25000/-

Apply to—

Mrs. C. P. CHINAPA,
C/o GANESH LODGE,
Virajpet, Coorg.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿಸಲಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ಸಂಗ್ರಹವಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಾಲದ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಅಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಖಜಾಂಚಿ.

ಕೊಡಗು

ತಾ. ೧-೮-೧೯೫೨ನೇ ಶುಕ್ರವಾರ

ಈಜಿಪ್ಟಿನ ಅರಸರ ರಾಜ್ಯತ್ಯಾಗ.

ಈಜಿಪ್ಟಿನ ಅರಸರಾದ ಫರೂಕರು ಈಜಿಪ್ಟಿನಲ್ಲಿ ತನ್ನ ನಿರಂಕುಶ ಆಡಳಿತವನ್ನು ಪ್ರಾರಂಭಿಸಿ ಜನರ ಅತೃಪ್ತಿಯು ದಿನೇ ದಿನೇ ವೃದ್ಧಿಯಾಗುತಿತ್ತು. ಕಳೆದ ಜನವರಿಯಿಂದ ಇವರ ನೀತಿ ಇನ್ನಷ್ಟು ವಿಪರೀತಕ್ಕೇರಿತ್ತು. ಕಳೆದ ಜನವರಿಯಲ್ಲಿ ಕೈರೋ ನಗರದಲ್ಲಿ ಆದ ಕೆಲವು ದುರ್ಘಟನೆಗಳಿಗೆ ಅಲ್ಲಿಯ ಜನಪ್ರಿಯ ವಾಫ್ಡ್ ಮಂತ್ರಿಮಂಡಳವೇ ಕಾರಣವೆಂದು ಮಂತ್ರಿಮಂಡಳವನ್ನು ವಿಸರ್ಜಿಸಿ ಬೇರೆ ಮಂತ್ರಿ ಮಂಡಳ ಏರ್ಪಡಿಸಿದ್ದರು. ಬಲಾತ್ಕಾರದ ಈ ಏರ್ಪಾಡಿಗೆ ಜನತೆಯ ಬೆಂಬಲವಿಲ್ಲ. ಜನವರಿಯಿಂದ ಇಲ್ಲಿಯ ವರೆಗೆ ಈಜಿಪ್ಟಿನಲ್ಲಿ ಹಲವಾರು ಮಂತ್ರಿ ಮಂಡಳಗಳಾದರೂ ಭದ್ರ ತಳಹದಿಯಲ್ಲಿ ಒಂದೂ ನಿಲ್ಲುವವಾಗಲಿಲ್ಲ. ತಿಂಗಳಿಗೆ ಒಂದರಂತೆ ಮಂತ್ರಿಮಂಡಳಗಳುರುಳಿದವು. ಜನತೆಯ ಬೆಂಬಲವಿಲ್ಲದ್ದರಿಂದ ಭದ್ರ ಮಂತ್ರಿಮಂಡಳದ ರಚನೆ ಅಸಾಧ್ಯವಾಯಿತು. ಕಡೆಗೆ ಈಜಿಪ್ಟಿನ ಸೈನ್ಯದ ಹಿಡಿತವನ್ನು ತನ್ನಲ್ಲಿ ಇಟ್ಟುಕೊಳ್ಳುವದು ಹಿತವೆಂದು ತಮ್ಮ ಬಾವನಾದ ಕರ್ನಲ್ ಶಿರಿನ್ ಬೇಯವರನ್ನು ಯುದ್ಧ ಮಂತ್ರಿಯವರನ್ನಾಗಿ ಮಾಡಲು ಅರಸರುಯತ್ನಿಸಿದರು. ಆದರೆ ಸೈನ್ಯಾಧಿಕಾರಿ ಜನರಲ್ ನಗೀಬ್ ಬೇಯವರು ಇದನ್ನು ವಿರೋಧಿಸಿ ತಮ್ಮ ಶಕ್ತಿಯನ್ನುಪಯೋಗಿಸಿ ಮಂತ್ರಿಮಂಡಳಕ್ಕೆ ಮೆಹರ್ ಪಾಷಾರವರನ್ನು ತಂದರು. ಫರೂಕರ ಕೈಗೊಂಬೆ ಮಂತ್ರಿಮಂಡಳವು ನಿರ್ನಾಮವಾಯಿತು. ಈ ಮಂತ್ರಿ ಮಂಡಳ ನಿರ್ನಾಮವಾಗಲು ಕಾರಣವೂ ಇದ್ದಿತು. ಲಂಚಗುಳಿತನ, ಸ್ವಾರ್ಥಸಾಧನೆ, ಬಂಧುಹಿತೈಷಣೆಗಳಿಗೆ ಹೆಸರಾದ ಫರೂಕರ ಆಡಳಿತವು ಜನರಿಗೆ ಜಿಗುಪ್ಸೆ ಹಿಡಿಸಿತ್ತು. ಆದ್ದರಿಂದ ಜನರಲ್ ನಗೀಬ್‌ರವರು ಹದಿನೆಂಟು ತಾಸುಗಳೊಳಗೆ ಅರಸರಾದ ಫರೂಕರು ಈಜಿಪ್ಟ್ ಬಿಟ್ಟು ತೊಲಗಬೇಕೆಂದು ಏರ್ಪಡಿಸಿದಂತೆ ಜನತೆಯ ಯಾವುದೇ ಬೆಂಬಲವಿಲ್ಲದ ಫರೂಕರರು ತಮ್ಮ ಕುಟುಂಬ ಸಮೇತ ಈಜಿಪ್ಟನ್ನು ಬಿಟ್ಟು ಅಮೇರಿಕಾಕ್ಕೆ ಹೊರಡಬೇಕಾಯಿತು. ಜನರಲ್ ನಗೀಬ್‌ರವರು ಫರೂಕರ ಏಳು ತಿಂಗಳ ಮಗು ಫೌದ್‌ರವರನ್ನು ಅರಸರಾಗಿ ಸಾರಿದ್ದಾರೆ. ಎಳು ವರ್ಷಗಳಾದ ಮೇಲೆ ಅವರು ಈಜಿಪ್ಟಿಗೆ ಬರಲಿರುವರು. ಆ ವರೆಗೆ ಅರಸರ ರಾಜ್ಯತ್ಯಾಗದಿಂದ ಉಂಟಾಗಿರುವ ಘಟನಾತ್ಮಕ ಬಿಕ್ಕಟ್ಟನ್ನು ಪರಿಹರಿಸಲು ಮೆಹರ್ ಪಾಷಾರವರು ಹೊಣೆ ಹೊತ್ತಿರುವರು. ಇವರಿಗೆ ಎಲ್ಲಾ ಪಕ್ಷಗಳ ಬೆಂಬಲವಿರುವಂತೆ ತೋರುತ್ತಿರುವುದರಿಂದ ಆಡಳಿತ ಮತ್ತಿತರ ಕ್ಷೇತ್ರಗಳಲ್ಲಿರುವ ಪ್ರತಿಗಾಮಿ ಶಕ್ತಿಗಳನ್ನು ನಿರ್ಮೂಲನಗೊಳಿಸಿ ಇವರು ಶೀಘ್ರದಲ್ಲಿ ಚುನಾವಣೆ ಏರ್ಪಡಿಸಿ ಈಜಿಪ್ಟಿನ ಜನರು ತಮ್ಮ ಸರಕಾರ ರಚಿಸುವ ಏರ್ಪಾಡು ಮಾಡಬಹುದು.

ದೇಶಕ್ಕೆ ಬಂದಿದ್ದ ಗಂಡಾಂತರವನ್ನು ನಿವಾರಿಸಿ ಜನತಾ ಸರಕಾರಕ್ಕೆ ಆಸ್ಪದ ಮಾಡಿಕೊಟ್ಟು ತಾವು ರಾಜಕೀಯದಿಂದ ಹೊರ ನಿಂತು ತಮ್ಮ ಸೈನಿಕ ವೃತ್ತಿಯಲ್ಲಿರುವ ಜ. ನಗೀಬ್‌ರವರು ವಂದನಾರ್ಹರು. ಈಜಿಪ್ಟಿನ ರಾಜಕೀಯ ಧುರೀಣರು ಒಂದಾಗಿ ದೇಶದ ಹಿತದೃಷ್ಟಿಯಿಂದ ದಕ್ಷ ಆಡಳಿತ ನಡಿಸುವರೆಂದು ಭಾವಿಸಲಾಗಿದೆ.

ಕಾಶ್ಮೀರ.

ಕಾಶ್ಮೀರ ಸಮಸ್ಯೆಯು ಅಂತರಾಷ್ಟ್ರೀಯ ಸಂಸ್ಥೆಯಲ್ಲಿ ಬಗೆ ಹರಿಯದೆ ಹಾಗೆ ಉಳಿದಿದ್ದರೂ ಇಲ್ಲಿ ಕಾಶ್ಮೀರ ಮತ್ತು ಹಿಂದುಸ್ಥಾನಗಳೊಳಗೆ ನಡೆದ ಮಾತು ಕತೆಗಳಿಂದ ಕಾಶ್ಮೀರವು ಭಾರತದ ಒಂದು ಅಂಗವಾಗಿದೆ. ಕಾಶ್ಮೀರದ ಪ್ರಧಾನ ಮಂತ್ರಿ ಶೇಕ್ ಅಬ್ದುಲ್ಲಾ ಮತ್ತು ಇತರ ಮುಂದಾಳುಗಳು ಕಳೆದ ವಾರ ಡಿಲ್ಲಿಗೆ ಬಂದು ಪಂಡಿತ ನೆಹರೂ ಮತ್ತು ಇಂಡಿಯಾ ಸರಕಾರಗಳೊಡನೆ ನಡೆಸಿದ ಮಾತು ಕತೆಯಿಂದ ಸ್ಪಷ್ಟ ನಿರ್ಣಯಗಳಾಗಿ ಭಾರತದ ರಾಜ್ಯ ಘಟನೆಯು ಅದಕ್ಕೆ ಅನ್ವಯಿಸುವಂತಾಗಿದೆ. ಕಾಶ್ಮೀರವು ತನ್ನ ಚಾರಿತ್ರಿಕ ಕಾರಣಗಳಿಂದ ತನ್ನ ಹಿಂದಿನ ಧ್ವಜವನ್ನು ಇಟ್ಟುಕೊಂಡರೂ ಅದು ಭಾರತ ರಾಷ್ಟ್ರೀಯ ಧ್ವಜಕ್ಕೆ ಅಂಕಿತವಾಗಿದೆ. ಕಾಶ್ಮೀರದಲ್ಲಿ ಇನ್ನು ಮುಂದೆ ಅರಸೊತ್ತಿಗೆಗೆ ಸ್ಥಾನವಿಲ್ಲವೆಂದು ಸಾರಲಾಗಿದೆ. ಇನ್ನು ಮುಂದೆ ಕಾಶ್ಮೀರದಲ್ಲಿ ಚುನಾಯಿತ ರಾಜ್ಯಪಾಲರಾಗುವರು. ಅವರ ನೇಮಕವು ಹಿಂದೀ ಒಕ್ಕೂಟದ ಅಧ್ಯಕ್ಷರ ಹಾಗೂ ಕಾಶ್ಮೀರ ಶಾಸನ ಸಭೆಯ ಒಪ್ಪಿಗೆಗೆ ಒಳಗಾಗಿರಬೇಕು. ಹೀಗೆ ಕಾಶ್ಮೀರವು ಭಾರತದ ಒಂದು ಅಂಗವಾದರೂ ಅದರ ವೈಶಿಷ್ಟತೆಯನ್ನು ಕಾಯ್ದುಕೊಡಲು ಭಾರತ ಸರಕಾರ ಒಪ್ಪಿದೆ. ಐತಿಹಾಸಿಕವಾಗಿ, ಭೌಗೋಳಿಕವಾಗಿ ತನ್ನದೇ ವೈಶಿಷ್ಟ್ಯದಲ್ಲಿರುವ ಕಾಶ್ಮೀರದ ಕುರಿತು ಕೇಂದ್ರ ಶಾಸನಸಭೆಯಲ್ಲಿ ಪಂಡಿತ ನೆಹರೂರವರು ಕಾಶ್ಮೀರವು ಏಶಿಯಾದ ಹೃದಯದಂತಿದೆ ಎಂದ ಮಾತು ಸತ್ಯವಾಗಿದೆ. ಅದೇ ರೀತಿ ಕಾಶ್ಮೀರವನ್ನು ಹಿಂದೂಸ್ಥಾನದ 'ಎ' ಮತ್ತು 'ಬಿ' ಪ್ರಾಂತಗಳಂತೆ ಗಣಿಸದೆ ಅದಕ್ಕೆ ಪ್ರತ್ಯೇಕ ಸ್ಥಾನವನ್ನು ಕೊಡಲಾಗಿದೆ. ಕಾಶ್ಮೀರ ಮತ್ತು ಭಾರತದ ಸಂಬಂಧದ ಮಾತುಕತೆಗಳು ಸಂಪೂರ್ಣವಾಗಿ ಅಲ್ಲಿ ಒಪ್ಪಲ್ಪಟ್ಟ ಶರತ್ತುಗಳ ಹೀಗಿವೆ.

(೧) ಕಾಶ್ಮೀರದ ಚುನಾಯಿತ ರಾಜ್ಯಪಾಲನು ಹಿಂದೂದೇಶದ ಒಕ್ಕೂಟದ ಪ್ರೆಸಿಡೆಂಟರ ಒಪ್ಪಿಗೆ ಪಡೆದವನಾಗಬೇಕು.

(೨) ಪ್ರೆಸಿಡೆಂಟರ ಇಚ್ಛೆಯ ಅವಧಿಯ ವರೆಗೆ ಅವರು ಅಧಿಕಾರದಲ್ಲಿರಬಹುದಾಗಿದೆ.

(೩) ಹಿಂದೂದೇಶದ ರಾಷ್ಟ್ರೀಯ ಧ್ವಜಕ್ಕೆ ಭಾರತದಲ್ಲಿರುವ ಗೌರವವೇ ಅಲ್ಲಿಯೂ ಇರುವದು. ಆದರೆ ಅಲ್ಲಿಯ ಸಂಸ್ಥಾನದ ಧ್ವಜವನ್ನೂ ಅವರು ಉಪಯೋಗಿಸಬಹುದು.

(೪) ಕಾಶ್ಮೀರವು ಹಿಂದೂದೇಶದ ಸುಪ್ರೀಂ ಕೋರ್ಟಿನ ವ್ಯವಹಾರ ಕ್ಷೇತ್ರಕ್ಕೊಳಗಾಗುವದು.

(೫) ಕಾಶ್ಮೀರ ಮತ್ತು ಪಾಕಿಸ್ಥಾನದ ಆರ್ಥಿಕ ಸಂಬಂಧದ ವಿಚಾರದಲ್ಲಿ ವಿವರವಾದ ಏರ್ಪಾಡು ಹಿಂದಳಿಂದ ಮಾಡುವದು.

ಈ ರೀತಿಯ ಒಪ್ಪಂದವಾಗಿ ಜಮ್ಮು ಮತ್ತು ಕಾಶ್ಮೀರದ ಪ್ರಜೆಗಳು ಭಾರತದ ಪ್ರಜೆಗಳಾಗಿರುವದು. ಇದರಿಂದ ಪರಿಸ್ಥಿತಿ ಸುಧಾರಿಸಿದೆ. ಕಾಶ್ಮೀರದ ಜನತೆಯು ಈ ನಿರ್ಣಯಗಳನ್ನು ಸ್ವೀಕರಿಸಿದೆ.

ವರ್ತಮಾನ.

ಮಡಿಕೇರಿ ರೋಟರಿ ಕ್ಲಬ್ಬಿನವರು ರಾಯಲಸೀಮಾ ಕ್ಷಾಮ ನಿವಾರಣೆ ಫಂಡಿಗೆ ರಾಯಲ ಸೀಮೆಯ ಗುಂಟೂರು ರೋಟರಿ ಕ್ಲಬ್ಬಿನ ಮೂಲಕ ರೂ. ೨೦೦೧-ನ್ನು ಸಹಾಯಾರ್ಥವಾಗಿ ಕೊಟ್ಟಿರುತ್ತಾರೆಂದ್ವ ತಿಳಿಯ ಬಂದಿದೆ.

ಬೆಂಗಳೂರಿನ ರಿಕ್ರೂಟಿಂಗ್ ಆಫೀಸರವರು ಆಗಸ್ಟ್ ತಾ. ೧೧ ಮತ್ತು ೧೨ರಲ್ಲಿ ನಾಪೋಕ್ಲಿನಲ್ಲಿಯೂ, ೧೩ರಲ್ಲಿ ವೀರಾಜಪೇಟೆಯಲ್ಲಿಯೂ, ೧೪ರಲ್ಲಿ ಸೋಮವಾರಪೇಟೆಯಲ್ಲಿಯೂ ಮತ್ತು ೧೫ ಮತ್ತು ೧೬ರಲ್ಲಿ ಮಡಿಕೇರಿಯಲ್ಲಿಯೂ ತಂಗುವರು. ಸೇನಕ್ಕೆ ಸೇರಲಿಚ್ಛಿಸುವ ಹತ್ತು ಯಾ ಹನ್ನೊಂದನೆಯ ತರಗತಿಯ ವರೆಗೆ ಓದಿದವರು, ಅವರನ್ನು ಆಯಾಯ ಸ್ಥಳಗಳಲ್ಲಿ ಭೇಟಿಯಾಗಬಹುದೆಂದು ಈ ಮೂಲಕ ತಿಳಿಸಲಾಗಿದೆ.

ಬಿ. ಎಸ್‌ಸಿ ಪ್ರಕೃತಿ ಶಾಸ್ತ್ರ (ನೇಚುರಲ್ ಸೈನ್ಸ್) ಪಾಸಾದ ಯುವಕರು ಡೆಮಾನ್‌ಸ್ಟ್ರೇಟರು (Natural science Demonstrator) ಕೆಲಸಕ್ಕೆ ಬೇಕಾಗಿರುವರು. ಅರ್ಹರಾದವರು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಿಂದ ಹೆಚ್ಚಿನ ವಿಷಯವನ್ನು ಶೀಘ್ರದಲ್ಲಿ ತಿಳಿದುಕೊಳ್ಳಬಹುದು.

ಹಿಂದಿಯಲ್ಲಿ ರಾಷ್ಟ್ರಭಾಷೆ ಅಥವಾ ಮೆಟ್ರಿಕ್ಯುಲೇಶನ್ ಪರೀಕ್ಷೆ ಪಾಸಾದವರು ಮತ್ತು ಹಿಂದೀ ಉಪಾಧ್ಯಾಯರ ವೃತ್ತಿಗೆ ಇಚ್ಛೆ ಪಡುವವರು ತಮ್ಮ ಸರ್ಟಿಫಿಕೇಟಿನ ಸಮೇತ ಒಂದು ಸರ್ತಿಯಾದರೂ ರಿಜಿಸ್ಟರ್ ಮಾಡಿಸದೆ ಇದ್ದವರು ಒಡನೆ ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಲ್ಲಿ ಮಾಡಿಸಿಕೊಳ್ಳಬಹುದು.

ಕೊಡಗು ಶಾಸನ ಸಭೆಯ ಅಧಿವೇಶನದ ಕಡೇ ದಿನ ಅಂದರೆ ತಾ. ೨೫ ರಲ್ಲಿ ಸಾಯಂಕಾಲ ಶಾಸನ ಸಭಾಂಗಣದಲ್ಲಿ ಮಹಾತ್ಮಾಗಾಂಧಿಯವರ ಮತ್ತು ಪಂಡಿತ ಜವಾಹರರ ಭಾವಚಿತ್ರಗಳ ಅನಾವರಣೋತ್ಸವವನ್ನು ಚೀಫ್ ಕಮಿಷನರೂ, ಸ್ಪೀಕರರೂ ಮಾಡಿದರು. ಭಾವಚಿತ್ರಗಳನ್ನು ಶ್ರೀ ಗುಂಡುಕುಟ್ಟಿ ಮಂಜುನಾಥಯ್ಯನವರೂ, ಶ್ರೀ ಮನೆಯಪಂಡ ಬೆಳ್ಯಪ್ಪನವರೂ ಉದಾರವಾಗಿ ಕೊಟ್ಟಿರುವುದಾಗಿದೆ. ಅದರ ನಂತರ ಶಾಸನ ಸಭಾ ಸದಸ್ಯರಿಗೂ, ಪತ್ರಿಕಾ ಪ್ರತಿನಿಧಿಗಳಿಗೂ, ಗಜೆಟೆಡ್ ಉದ್ಯೋಗಸ್ಥರಿಗೂ ಮಂತ್ರಿಗಳು ಚಹ ಕೂಟವನ್ನು ಏರ್ಪಡಿಸಿದ್ದರು.

ತಾ ೨೪ ರ ಸಾಯಂಕಾಲ ಚೀಫ್ ಕಮಿಷನರವರು ಬೋರ್ ಬಂಗ್ಲೆಯಲ್ಲಿ ಶಾಸನ ಸಭಾ ಸದಸ್ಯರಿಗೆ, ಪತ್ರಿಕಾ ಪ್ರತಿನಿಧಿಗಳಿಗೆ ಚಹ ಕೂಟವನ್ನೇರ್ಪಡಿಸಿದ್ದರು.

ಚೀಫ್ ಕಮಿಷನರು ತಾ. ೨೭ರಲ್ಲಿ ಫ್ರೇಜರ್‌ಪೇಟೆಗೆ ಹೋಗಿರುವರು. ಅವರು ಮಳೆಗಾಲ ಕಳೆದ ನಂತರ ಮಡಿಕೇರಿಗೆ ಬರುವರು.

ಸೋಮವಾರಪೇಟೆ ಹೈಸ್ಕೂಲಿನ ಹಿಂದೀ ಅಧ್ಯಾಪಕರಾಗಿರುವ ಶ್ರೀ ಬಿ ಎನ್. ನಾರಾಯಣ ಭಟ್ಟರು ಕಳೆದ ಎಸ್. ಎಸ್. ಎಲ್ ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ಈ ವಾರ ಮಡಿಕೇರಿಗೆ ೯ ಇಂಚು ೨೩ ಸೆಂಟು ಮಳೆಯಾಗಿದೆ.

Notice

The temporary shed built for the Ponnampet High School will be sold by public auction on monday the 4th August, 1952, in the old school compound. Intending buyers will be present near the site on the date at 11 a. m. The succesful bidder shall pay the full amount on the spot. Tiles, timber and other things should be removed from the site within 10 days of sale.

G. GANESH RAO.
District Educational Officer, Coorg, Mercara.

ಪ್ರಕಟಣೆ.

ಕೊಡಗು [illegible] ಸೇರಿದ [illegible] ತಾಲೂಕುಗಳ [illegible] ಶ್ರೀ ವಿಶ್ವನಾಥಯ್ಯ [illegible] ಬಿದ್ದಿದೆ. [illegible] ಈ ಬಗ್ಗೆ ಅವರ ಅರ್ಜಿಯ [illegible] 18-8-52ರ ವರೆಗೆ [illegible] ಪ್ರೆಸಿಡೆಂಟರವರ ಹೆಸರಿಗೆ [illegible] ಅಂಗೀಕರಿಸುವದಿಲ್ಲ. ಸೋಮವಾರಪೇಟೆ ತಾಲೂಕು [illegible] ತಾರೀಕು 25-8-52ರಲ್ಲು ಹಗಲು 12 ಗಂಟೆಯಿಂದ [illegible] 4 ಗಂಟೆ ವರೆಗೆ [illegible]

ಬಿ. ಪಿ. ಎ. ಜಂಗಪ್ಪ,
ಪ್ರೆಸಿಡೆಂಟ್.

ಮಡಿಕೇರಿ,
29-7-52

ಬಡ್ಜೆಟ್ಟಿನ ಮೇಲಿನ ಠರಾವುಗಳ ಚರ್ಚೆ.

ಶ್ರೀ ಎಚ್. ಟಿ. ಮುತ್ತಣ್ಣನವರ ಠರಾವುಗಳು.

ಪ್ರಕೃತಿಯಿಂದ ನಾಶಹೊಂದಿದ ಬೆಳೆಗಳಿಗೆ ಹೆಚ್ಚಿನ ಒಳ್ಳ ಕ್ಷಾಮನಿವಾರಣೆಯನ್ನು ಕೊಡಬೇಕು. ಈ ಠರಾವು ಚರ್ಚಿಸಲ್ಪಟ್ಟು ಹಾಗೆ ಮಾಡಲಾಗುವದೆಂಬ ಸರಕಾರದ ಭರವಸೆ ಮೇರೆ ಹಿಂತೆಗೆಯಲ್ಪಟ್ಟಿತು.

ತಮ್ಮ ಸ್ವಂತ ಉಪಯೋಗಕ್ಕೆ ಉಪಯೋಗಿಸುವ ಟಿಂಬರುಗಳ ಸೀನಿಯರೇಜ್ ದರವನ್ನು ಇಳಿಸಿ ಈ ಮೊದಲಿನ ದರಕ್ಕೆ ತರಬೇಕು ಎಂಬ ಠರಾವು ಸರಕಾರಿ ಮೆಂಬರುಗಳು ವಿರೋಧಿಸಿದ್ದರಿಂದ ಹಿಂತೆಗೆಯಲ್ಪಟ್ಟಿತು.

ಗಂಧದ ಮರದ ಬೆಲೆಯ ಶೇಕಡ ೫೦ರಷ್ಟನ್ನು ಆಯಾಯ ಜಾಗದ ಮಾಲೀಕರಿಗೆ ಕೊಡಬೇಕು ಎಂಬ ಠರಾವಿನ ಬಗ್ಗೆ ಆ ವಿಚಾರ ಪರಿಶೀಲಿಸಲಾಗುವದೆಂದು ಸರಕಾರ ಹೇಳಿದ ಕಾರಣ ಠರಾವು ಹಿಂತೆಗೆಯಲ್ಪಟ್ಟಿತು.

ನೆರೆಯ ಭೂಮಿಗೆ ನೀರು ಮದಗಿಳುವ ವೃಷ್ಟಿಯಿಂದ ಸಾರ್ವಜನಿಕ ಹೊಳೆಗೆ ಒಂದ ಕಟ್ಟೆ ಕಟ್ಟಬೇಕೆಂಬ ಠರಾವು ಸರಕಾರಿ ಭರವಸೆಯ ಮೇರೆ ಹಿಂತೆಗೆಯಲ್ಪಟ್ಟಿತು.

ಸೋಮವಾರಪೇಟೆ ಶಾಲೆಗೆ ಒಂದು ಆಟದ ಮೈದಾನ ಮಾಡಬೇಕು ಎಂಬ ಠರಾವು ಸರಕಾರ ಹಾಗೆ ಮಾಡುವ ಭರವಸೆ ಮೇರೆ ಹಿಂತೆಗೆಯಲ್ಪಟ್ಟಿತು.

ಶಿರಂಗಾಲ, ಕೋಳಗಾರಶೆಟ್ಟಳ್ಳಿ, ಶಾಲೆಗಳನ್ನು ಹೈಯರ್ ಎಲಿಮೆಂಟರಿ ಶಾಲೆಗಳಾಗಿ ಮಾಡಬೇಕು ಎಂಬ ಠರಾವುಗಳು ಭರವಸೆ ಮೇರೆ ವಾಪಾಸು ತೆಗೆಯಲ್ಪಟ್ಟವು.

ಎಮ್ಮಾಲೆ ಮತ್ತು ಕಲ್ಯಂದೂರುಗಳ ಮಧ್ಯದಲ್ಲಿ ಒಂದು, ದೊಡ್ಡ ಮಳ್ಳಿಯಲ್ಲಿ ಒಂದು, ಮಂಟಿಯಾಲ್ಲಿ, ಚಿಕ್ಕಬಳ್ಳರದಲ್ಲಿ, ಬಿಳಿಗಿರಿನಲ್ಲಿ, ಬೆಟ್ಟದಳ್ಳಿಯಲ್ಲಿ ಒಂದೊಂದು ಶಾಲೆಗಳನ್ನು ತೆರೆಯಬೇಕೆಂಬ ಠರಾವುಗಳು ಭರವಸೆಯ ಮೇರೆ ಹಿಂತೆಗೆಯಲ್ಪಟ್ಟವು.

ನಂಜರಾಜಪಟ್ಣ ತಾಲೋಕಿನಲ್ಲಿ ಬಿತ್ತುವ ಪ್ರಾಥಮಿಕ ಶಿಕ್ಷಣವನ್ನು ಜಾರಿಯಲ್ಲಿ ತರಬೇಕು ಎಂಬ ಠರಾವಿನ ಬಗ್ಗೆ ಎಲ್ಲಿ ಅವಶ್ಯವಿದೆಯೋ ಅಲ್ಲಿ ಹಾಗೆ ಮಾಡಲಾಗುವದೆಂಬ ಭರವಸೆಯನ್ನು ಸರಕಾರ ಕೊಟ್ಟ ಕಾರಣ ಹಿಂತೆಗೆಯಲ್ಪಟ್ಟಿತು.

ಸೋಮವಾರಪೇಟೆ ಆಸ್ಪತ್ರೆಯನ್ನು ಜಿಲ್ಲಾ ಬೋರ್ಡಿನಿಂದ ಸರಕಾರ ತೆಗೆದು ಕೊಳ್ಳುವ ಮತ್ತು ಸೋಮವಾರಪೇಟೆ ಪಿ. ಡಬ್ಲ್ಯು. ಡಿ. ಮತ್ತು ಪೊಲೀಸ್ ಇನ್ಸ್‌ಪೆಕ್ಟರ ಮನೆಗಳನ್ನು ತೆಗೆದುಕೊಂಡು ಆಸ್ಪತ್ರೆಯನ್ನು ಒಡನೆ ಮಾಡುವ ವಿಷಯವು ಸಾಮೂಹಿಕ ವಿಕಾಸ ಯೋಜನೆಯಲ್ಲಿ ಅಡಗಿದೆಯೆಂದು ಹೇಳಿದ ಕಾರಣ ಠರಾವುಗಳು ಹಿಂತೆಗೆಯಲ್ಪಟ್ಟವು.

ಸೋಮವಾರಪೇಟೆ ಆಸ್ಪತ್ರೆಗೆ ಒಬ್ಬ ಹೆಚ್ಚಿನ ಡಾಕ್ಟರು ಮತ್ತು ಒಬ್ಬ ಲೇಡಿ ಡಾಕ್ಟರನ್ನು ಕೊಡಬೇಕೆಂಬ ಠರಾವು ಭರವಸೆ ಮೇರೆ ವಾಪಾಸು ತೆಗೆಯಲ್ಪಟ್ಟಿತು.

ಸುಂಟಿಕೊಪ್ಪ, ಶಾಂತಳ್ಳಿ, ಶಿರಂಗಾಲ, ಗೌಡಳ್ಳಿ, ಬಾಣಾವರ, ಕೋಳಗಾರುಶೆಟ್ಟಳ್ಳಿ ಗ್ರಾಮಗಳಲ್ಲಿ ವಾಂತಸ್ಪತ್ರೆಗಳನ್ನು ತೆರೆಯಬೇಕು ಎಂಬ ಠರಾವು ಭರವಸೆ ಮೇರೆ ಹಿಂತೆಗೆಯಲ್ಪಟ್ಟಿತು.

ಶ್ರೀ ಪಿ. ಡಿ. ಸುಬ್ಬಯ್ಯನವರ ಠರಾವುಗಳು.

ಬೀಡು, ಔಷಧಿಯ ವೈನುಗಳು ಮತ್ತು ವಾಣಿಜ್ಯ ಸ್ಪಿರಿಟುಗಳನ್ನು ವಿನಾಯಿಸಿ ಉಳಿದ ವಿದೇಶೀ ಮದ್ಯಗಳ ಪಾನೀಯಗಳ ಕರವನ್ನು ಶೇಕಡ ೨೫ರಂತೆ ಹೆಚ್ಚು ಮಾಡಬೇಕು ಎಂಬ ಠರಾವು ಹಾಗೆ ಮಾಡುವ ಸರಕಾರದ ಭರವಸೆ ಮೇರೆ ವಾಪಾಸು ತೆಗೆದುಕೊಳ್ಳಲ್ಪಟ್ಟಿತು.

ಕೊಡಗು ಪ್ರಾಂತೀಯ ಟ್ರಾನ್ಸ್‌ಪೋರ್ಟ್ ಇತರ ದರಗಳನ್ನು ಪುನರ್ಘಟಿಸುವ ಅವಶ್ಯವಿದೆ ಎಂಬ ಠರಾವು ಭರವಸೆ ಮೇರೆ ಹಿಂತೆಗೆಯಲ್ಪಟ್ಟಿತು.

ಮೆಡಿಕಲ್ ಕಟ್ಟಡದ ಬದಲಾವಣೆಗೆ ರೂ. ೫೦೦೦ ಬೆಂಕು ಪ್ರಾಥಮಿಕ ಶಾಲೆಗೆ ರೂ. ೬೨೦೦, ಮಾಡಿ ಪ್ರಾಥಮಿಕ ಶಾಲೆಗೆ ರೂ. ೬೦೨೦. ಬೆಟ್ಟತ್ತೂರು ಪ್ರಾಥಮಿಕ ಶಾಲೆಗೆ ರೂ. ೨೦೦೦, ಕೊಡಬೇಕೆಂಬ ಠರಾವುಗಳ ಬಗ್ಗೆ ಸರಕಾರಿ ಮೆಂಬರು ಭರವಸೆ ಕೊಟ್ಟ ಮೇರೆ ಠರಾವುಗಳು ವಾಪಾಸು ತೆಗೆಯಲ್ಪಟ್ಟವು.

ಶ್ರೀ. ಚೌಡ್ಲು ಕಾಳಪ್ಪನವರ ಠರಾವುಗಳು.

ಸ್ವಂತ ಉಪಯೋಗಕ್ಕಾಗಿ ಮನೆ ಕಟ್ಟಲಿಕ್ಕೆ ಟಿಂಬರನ್ನು ಕಡಿಮೆ ದರದಲ್ಲಿ ಕೊಡಬೇಕು ಎಂಬ ಠರಾವನ್ನು ಸರಕಾರ ವಿರೋಧಿಸಿದ ಕಾರಣ ಠರಾವು ಹಿಂತೆಗೆಯಲ್ಪಟ್ಟಿತು.

ಹಿಂತರದಿಂದ ನೀರಾಗಳಿಗೆ ಅವನ ದಾರಿ. ಮಾಡುವ ಬೋಗಾನ ಫಾರೆಸ್ಟ್ ರಸ್ತೆಯನ್ನು ಗ್ರಾಮಸ್ಥರ ಉಪಯೋಗಕ್ಕಾಗಿ ಪರ್ಮನೆಂಟ್ ತೆರೆದಿಡಬೇಕು ಎಂಬ ಠರಾವಿನ ಬಗ್ಗೆ ಕೆಲವು ಶರತ್ತುಗಳ ಮೇಲೆ ಹಾಗೆ ಮಾಡಲಾಗುವದೆಂದು ಹೇಳಿದ ಕಾರಣ ಠರಾವು ಹಿಂತೆಗೆಯಲ್ಪಟ್ಟಿತು.

ಸೋಮವಾರಪೇಟೆ ಹೈಸ್ಕೂಲಿಗೆ ಒಂದು ಕ್ರೀಡಾ ಮೈದಾನ ತೆರೆಯಬೇಕೆಂಬ ಠರಾವು ಭರವಸೆ ಮೇರೆ ಹಿಂತೆಗೆಯಲ್ಪಟ್ಟಿತು.

ಸೋಮವಾರಪೇಟೆ ನೋಟಿಫೈಡ್ ಏರಿಯಾದ ಅಧ್ಯಕ್ಷರನ್ನು ಸರಕಾರ ಪರಿಶೀಲನೆಗೆ ತೆಗೆದುಕೊಳ್ಳಬೇಕೆಂಬ ಠರಾವು ಚರ್ಚೆಯ ನಂತರ ಹಿಂತೆಗೆಯಲ್ಪಟ್ಟಿತು.

ಸೋಮವಾರಪೇಟೆ ಆಸ್ಪತ್ರೆಗೆ ೩೦ ಹಾಸಿಗೆಗಳನ್ನು ಒದಗಿಸಬೇಕು ಎಂಬ ಠರಾವು ಭರವಸೆ ಮೇರೆ ಹಿಂತೆಗೆಯಲ್ಪಟ್ಟಿತು.

ಜನಾಬ್ ಎನ್. ಜಿ. ಅಹಮ್ಮದ್‌ರವರ ಠರಾವುಗಳು.

ಗ್ರಾಮ ರಕ್ಷಣೆ ಇದ್ದ ಟಿಂಬರ್ ಸೀನಿಯರೇಜ್ ದರಕ್ಕೆ ಈಗಿನ ದರವನ್ನು ಇಳಿಸಬೇಕೆಂಬ ಠರಾವಿನ ಬಗ್ಗೆ ಸರಕಾರವು ಫಾರೆಸ್ಟ್ ರೂಲನ್ನು ತಿದ್ದುಪಡಿ ಮಾಡಲು ಒಂದು ಸಮಿತಿಯನ್ನು ನೇಮಿಸಲಿರುವದೆಂದು ಈ ಠರಾವನ್ನು ವಿರೋಧಿಸಿದ ಕಾರಣ ಠರಾವು ಹಿಂತೆಗೆಯಲ್ಪಟ್ಟಿತು.

ಕೊಡಗಿನ ಫಾರೆಸ್ಟುಗಳಿಂದ ಹೊರ ಸೂರ್ ಡಿಪೋಕ್ಕೆ ಮರಸಾಗಿಸುವ ಕಂಟ್ರಾಕ್ಟ್‌ನಿಂದ ಸರಕಾರಕ್ಕೆ ಆಗುವ ದೊಡ್ಡ ನಷ್ಟವನ್ನು ನಿಲ್ಲಿಸುವ ವಿಚಾರದ ಠರಾವನ್ನು ಚರ್ಚೆಯ ನಂತರ ಹಿಂತೆಗೆಯಲಾಯಿತು.

ಕೊಡಗಿನಲ್ಲಿ ಆಹಾರ ಪದಾರ್ಥಗಳ ನಿಯಂತ್ರಣವನ್ನು ತೆಗೆದು ಹಾಕಬೇಕು ಎಂಬ ಠರಾವಿನ ಬಗ್ಗೆ ಈಗ ನಿಯಂತ್ರಣವನ್ನು ಸಡಿಲಿಸಲಾಗಿದೆಯೆಂದೂ ಪೂರ್ಣ ನಿಯಂತ್ರಣವನ್ನು ತೆಗೆದು ಹಾಕುವದು ಯೋಗ್ಯವಲ್ಲವೆಂದೂ ಹೇಳಿದ ಕಾರಣ ಠರಾವು ಹಿಂತೆಗೆಯಲ್ಪಟ್ಟಿತು.

ಶ್ರೀ. ಪಿ. ಎಂ. ನಾಣಮ್ಮಯ್ಯನವರ ಠರಾವುಗಳು.

ಟಿಂಬರ್‌ಮೇಲ್ಮಾ ರೇಟ್ ಬದಲಾಯಿಸುವ ಮೊದಲಿದ್ದ ದರವನ್ನು ಜಾರಿಯಲ್ಲಿ ತರಬೇಕೆನ್ನುವ ಠರಾವಿನ ಬಗ್ಗೆ ಸರಕಾರ ಈ ವಿಚಾರ ಆಲೋಚಿಸುತ್ತಿದೆಯೆಂದ ಕಾರಣ ಠರಾವು ಹಿಂತೆಗೆಯಲ್ಪಟ್ಟಿತು.

ಕಾರ್ಮಾಡ್, ಮಾರ್ಕರ್ಲ್, ದೇವರಕೊಲ್ಲಿ ಮತ್ತು ತಿತಿಮತಿ ಗೋಣಿ ಫಾರೆಸ್ಟ್ ರಸ್ತೆಗಳನ್ನು ಸಾರ್ವಜನಿಕರ ಉಪಯೋಗಕ್ಕೆ ವರ್ಷವಿಡೀ ಬಿಡಬೇಕು ಎಂಬ ಠರಾವನ್ನು ಚರ್ಚೆಗೆ ಮುಂಚೆ ಹಿಂತೆಗೆಯಲಾಯಿತು.

ದೇವನೂರು ಬಲಭಾಗದ ಕಾಲುವೆಯಲ್ಲಿ ಜಪ್ಪಗಾಗಿರುವ ಎಡೆ ಕಾಲುವೆಯ ಎರಡು ಪಕ್ಕಗಳಿಗೂ ಕಲ್ಲು ಕಟ್ಟಿ ಸರಿಪಡಿಸಬೇಕು ಎಂಬ ಠರಾವು ಭರವಸೆ ಮೇರೆ ಹಿಂತೆಗೆಯಲ್ಪಟ್ಟಿತು.

ನಲ್ಲೂರು ಕಟ್ಟೆಯ ನೀರು ಬೇಗೂರಿನ ಭೂಮಿಗಳಿಗೆ ಹರಿಯುವಂತೆ ಯೋಗ್ಯ ಕಾಲುವೆ ಮಾಡಬೇಕೆಂಬ ಠರಾವು ಭರವಸೆ ಮೇರೆ ಹಿಂತೆಗೆಯಲ್ಪಟ್ಟಿತು.

ಹಾತೂರು ಕಟ್ಟೆಗೆ ಯೋಗ್ಯ ಕಾಲುವೆ ಮಾಡಬೇಕ, ಬಾಳಾಜಿ ಕಾಲುವೆಯನ್ನು ಮುಂದರಿಸುವದಲ್ಲದೆ ಕಟ್ಟೆಯ ಬಲಭಾಗಕ್ಕೂ ಒಂದು ಕಾಲುವೆ ಮಾಡಬೇಕ, ಮತ್ತು ಕೀರೆಹೊಳೆಗೆ ಚಿಕ್ಕಕೊಲ್ಲಿ ಗ್ರಾಮದಲ್ಲಿ ನೀರು ಹಾಯಿಸಲು ಒಂದು ಕಟ್ಟೆ ಶೀಘ್ರ ಕಟ್ಟಬೇಕು ಎಂಬ ಠರಾವುಗಳು ಸರಕಾರಿ ಭರವಸೆ ಮೇರೆ ಹಿಂತೆಗೆಯಲ್ಪಟ್ಟವು.

ನಿಟ್ಟೂರು ಗ್ರಾಮದ ಜಾಗಲೆ ಕೋಡಿಗೆ ನೀರು ಹಾಯಿಸಲಿಕ್ಕಾಗುವ ಕಟ್ಟೆಯನ್ನು ಈ ಆಡಿತ ವರ್ಷದಲ್ಲೇ ಕಟ್ಟಬೇಕು ಎಂಬ ಠರಾವನ್ನು ಭರವಸೆ ಮೇರೆ ಹಿಂತೆಗೆಯಲಾಯಿತು.

ಬೆಕ್ಕೆಸೊಡ್ಲೂರು, ಟಿ. ಶೆಟ್ಟಿಗೇರಿ, ಬಾಳೆಲೆ, ಅಮ್ಮತ್ತಿ, ಬಿರುನಾಣಿ, ಬಾಡಗರಕೇರಿ, ಗೋಣಿಕೊಪ್ಪ, ಪಾಲಿಬೆಟ್ಟ ಮತ್ತು ತಿತಿಮತಿಯ ಶಾಲೆಗಳ ಒಡೆಯಾಗಿ ಮತ್ತು ಗ್ರಾಮಗಳ ಮನೆ ಜಾಗಗಳಿಗೆ ಪರಿಹಾರ ಕೊಡಬೇಕು ಎಂಬ ಠರಾವನ್ನು ಚರ್ಚೆಯ ನಂತರ ಹಿಂತೆಗೆಯಲಾಯಿತು.

ಮರೆನಾಡಿನಲ್ಲಿ ಒಂದು ಆಸ್ಪತ್ರೆಯನ್ನು ಶೀಘ್ರ ತೆರೆಯಬೇಕು ಎಂಬ ಠರಾವನ್ನು ವಾಪಾಸು ತೆಗೆಯಲಾಯಿತು.

ಪೊನ್ನಂಪೇಟೆ ಮತ್ತು ಗೋಣಿಕೊಪ್ಪಲು ನೋಟಿಫೈಡ್ ಏರಿಯಾಗಳಿಗೆ ರೂ. ೫೦೦೦ ದಂತೆ ಮಂಜೂರಿ ಕೊಡಬೇಕು ಎಂಬ ಠರಾವನ್ನು ಸರಕಾರ ವಿರೋಧಿಸಿ ಬಡ್ಜೆಟ್ಟಿನಲ್ಲಿ ಹಣವಿಲ್ಲವೆಂದರು. ಅದಲ್ಲದೆ ಹೊಸದಾಗಿರುವ ಗೋಣಿಕೊಪ್ಪಲಿಗೆ ಕೆಲಸ ಪ್ರಾರಂಭಿಸಲು ಅಲ್ಪ ಸ್ವಲ್ಪ ಹಣ ಸಿಗಲಾಗುವದೆಂದರು. ಠರಾವು ಹಿಂತೆಗೆಯಲ್ಪಟ್ಟಿತು.

ಶ್ರೀ ಕೋರನ ದೇವಯ್ಯನವರ ಠರಾವುಗಳು

ಎಲಕ್ಕಿ ಗೇಣಿಯ ಲೆಗಳಿಗೆ ಇರುವ ಕಂದಾಯವನ್ನು ಏಕರೆಗೆ ಒಂದು ರೂಪಾಯಿಯಷ್ಟಾದರೂ ಕಡಿಮೆ ಮಾಡಬೇಕು ಎಂಬ ಠರಾವನ್ನು ಸರಕಾರ ವಿರೋಧಿಸಿದ ಕಾರಣ ಹಿಂತೆಗೆಯಲಾಯಿತು.

ಬೆಟ್ಟಗೇರಿ ಶಾಲಾ ಕಟ್ಟಡಕ್ಕೆ ರೂ. ೮೦೦೦, ಚೆಟ್ಟಿಮಾನಿ ಶಾಲಾ ಕಟ್ಟಡಕ್ಕೆ ರೂ ೪೦೦೦ ಕೋರಂಗಾಲ ಶಾಲಾ ಕಟ್ಟಡಕ್ಕೆ ೩,೦೦೦ ಕೊಡಬೇಕು ಎಂಬ ಠರಾವಿನ ಬಗ್ಗೆ ಇವುಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಲಾಗುವುದೆಂದು ವಿದ್ಯಾ ಮಂತ್ರಿಗಳು ಹೇಳಿದ ಕಾರಣ ಠರಾವುಗಳು ಹಿಂತೆಗೆಯಲ್ಪಟ್ಟವು.

ಕೊಡಗು ಜಿಲ್ಲಾ ಬೋರ್ಡಿನ ಆಡಳಿತವನ್ನು ಶೀಘ್ರ ಸರಕಾರವು ತನ್ನ ಅಧೀನಕ್ಕೆ ತೆಗೆದು ಕೊಳ್ಳಬೇಕು ಎಂಬ ಠರಾವನ್ನು ಸೂಚಿಸಿದರು. ಈ ಠರಾವು ಕಾರ್ಯಕ್ರಮ ಪಟ್ಟಿಯ ಅಗ್ರಸ್ಥಾನದಲ್ಲಿರುವದರಿಂದ ಇದಕ್ಕೆ ಮುಂಚೆ ಇರುವ ಇತರ ಎಲ್ಲಾ ಠರಾವುಗಳನ್ನು ಬಿಟ್ಟು ಇದನ್ನು ತೆಗೆದು ಕೊಳ್ಳುವದು ಸರಿಯಲ್ಲವೆಂದು ಶ್ರೀ ಪಿ. ಸಿ. ಉತ್ತಯ್ಯನವರು ಆಕ್ಷೇಪವೆತ್ತಿದರು. ಅಧ್ಯಕ್ಷರು ಆಕ್ಷೇಪವನ್ನು ಅಂಗೀಕರಿಸಿ ಠರಾವನ್ನು ಚರ್ಚೆಗೆ ಬಿಟ್ಟರು. ಸರಕಾರಿ ಮೆಂಬರು ಠರಾವಿಗೆ ಉತ್ತರಿಸುತ್ತಾ ಹಾಗೆ ಮಾಡಲಾಗುವುದೆಂದರು. ಶ್ರೀ ಸಿ. ಪಿ. ಕರುಂಬಯ್ಯನವರು ಇಂಥಾ ಪ್ರಾಮುಖ್ಯ ವಿಚಾರದಲ್ಲಿ ಸಂಪೂರ್ಣವಾಗಿ ಆಲೋಚಿಸಲು ಸದಸ್ಯರಿಗೆ ಸಮಯ ಬೇಕಿರುವುದರಿಂದ ಇನ್ನೊಂದು ಮೀಟಿಂಗಿನವರೆಗೆ ಇದನ್ನು ಮುಂದರಿಸಬೇಕೆಂದು ಸೂಚಿಸಿದರು. ಇದು ತುರಿತದ ಠರಾವೆಂದೂ ಆದ್ದರಿಂದ ಇದೇ ಮೀಟಿಂಗಿನಲ್ಲಿ ಇದರ ನಿರ್ಣಯವಾಗಬೇಕೆಂದು ಸರಕಾರಿ ಮೆಂಬರರು ಹೇಳಿದರು. ಇಂಥಾ ತುರಿತ ವಿಷಯವಾಗಿದ್ದರೆ ಸರಕಾರವೇ ಇಂಥ ಠರಾವನ್ನು ತರಬೇಕಿತ್ತೆಂದೂ, ಮೆಂಬರರ ಠರಾವಿನ ಮೇಲೆ ಸರಕಾರದ ನೀತಿಯು ಇಂಥಾ ಮಹತ್ವದ ವಿಚಾರ ನಿರ್ಣಯಿಸುವದು ಸರಿಯಲ್ಲವೆಂದೂ ಶ್ರೀ. ಕೆ. ಪಿ. ಕರುಂಬಯ್ಯನವರು ಹೇಳಿದರು. ... ಠರಾವು ಓಟಿಗೆ ಹಾಕ

ಲ್ಪಟ್ಟು ಎಲ್ಲಾ ಕಾಂಗ್ರೆಸ್ ಮೆಂಬರುಗಳು ಪರವಾಗಿ ಓಟುಮಾಡಿದರು. ಪ್ರತ್ಯೇಕ ಪಕ್ಷದವರು ತಟಸ್ಥ ಕುಳಿತರು. ಠರಾವು ಪಾಸಾಯಿತು.

ಶ್ರೀ ಕೆ. ಪಿ. ಕರುಂಬಯ್ಯನವರ ಠರಾವುಗಳು

ಈ ವರೆಗೆ ಅನುಸರಿಸುತ್ತಿದ್ದ ನೀತಿಯನ್ನು ಬದಲಾಯಿಸಿ ಈ ವರ್ಷ ೭೫೦ ಎಕರೆ ಫಾರೆಸ್ಟಿನಲ್ಲಿ ಮರಕಡಿಯುವ ಏರ್ಪಾಡು ಯೋಗ್ಯವಲ್ಲವೆಂಬ ಠರಾವು ಚರ್ಚಿಸಲ್ಪಟ್ಟು ಈ ವರ್ಷ ಹಿಂದಿನ ವರ್ಷಗಳ ಯೋಜನೆಯಂತೆ ಬಾಕಿಯಾದ ಪ್ರದೇಶದಲ್ಲಿ ೭೫೦ ಎಕ್ರೆಗೆ ಒಳಪಟ್ಟು ಕಡಿಯಲಾಗುವುದೆಂದೂ ಮುಂದಿನ ವರ್ಷಗಳ ಯೋಜನೆಯ ಬಗ್ಗೆ ಈ ವರ್ಷದಲ್ಲಿ ಹೆಚ್ಚು ತಜ್ಞರ ಅಭಿಪ್ರಾಯ ಪಡೆದು ವರ್ತಿಸಲಾಗುವುದೆಂದೂ ಸರಕಾರಿ ಮೆಂಬರರು ಹೇಳಿದ ಕಾರಣ ಠರಾವು ಹಿಂತೆಗೆಯಲ್ಪಟ್ಟಿತು.

ಹೆಚ್ಚು ವೇತನ ಪಡೆಯುವ ಅಧಿಕಾರಿಗಳ ಸಂಖ್ಯೆಯನ್ನು ಕಡಿಮೆಮಾಡಿ ಆಡಳಿತ ಖರ್ಚು ಖೋತೆ ಮಾಡುವ ಅವಶ್ಯಕತೆಯ ಠರಾವನ್ನು ಶ್ರೀ ಕೆ. ಪಿ. ಕರುಂಬಯ್ಯನವರು ಹಾಜರಿಲ್ಲದ್ದರಿಂದ ಚರ್ಚಿಸಲಿಲ್ಲ.

ಸರಕಾರಿ ಕಾಲೇಜಿನಲ್ಲಿ ನೇಶನಲ್ ಕೆಡೆಟ್ ಕೋರಿನ ಸೀನಿಯರ್ ಡಿವಿಜನನ್ನು ತೆರೆಯಬೇಕೆಂಬ ಠರಾವು ಸೂಚಕರ ಗೈರುಹಾಜರಿಯ ಕಾರಣ ಚರ್ಚಿಸಲ್ಪಡಲಿಲ್ಲ.

ಜಿಲ್ಲಾ ಮತ್ತು ಅಸಿಸ್ಟೆಂಟ್ ವಿದ್ಯಾಧಿಕಾರಿಗಳಿಗೆ ಈಗಿನ ಪರಿಷ್ಕೃತ ದರದ ವೇತನವನ್ನು ಕೊಡಬೇಕೆಂಬ ಠರಾವನ್ನು ಸರಕಾರಿ ನೌಕರರ ವೇತನ, ಈ ಮೊದಲಾದ ವಿಚಾರಗಳನ್ನು ಸಭೆಯಲ್ಲಿ ಚರ್ಚಿಸದೆ ಮಂತ್ರಿಗಳೊಡನೆ ಮಾತಾಡಿ ವ್ಯವಸ್ಥೆ ಮಾಡುವುದು ಹಿತವಿರುವುದರಿಂದ ಇಲ್ಲಿ ಚರ್ಚಿಸುವುದು ಬೇಕಿಲ್ಲವೆಂದು ಅಧ್ಯಕ್ಷರು ಹೇಳಿದ ಮೇರೆ ಠರಾವನ್ನು ಚರ್ಚಿಸಲಿಲ್ಲ.

ಶ್ರೀ ಎಂ. ಡಿ. ಮೂಡಯ್ಯನವರ ಠರಾವುಗಳು

ವಾಲ್ನೂರು ತ್ಯಾಗತ್ತೂರು ಕಾಲುವೆಯನ್ನು ರಿಪೇರಿ ಮಾಡಬೇಕು. ಚಿನ್ನೇಗಿ ಕಟ್ಟೆ ಮತ್ತು ಕಾಲುವೆಯನ್ನು ಪುನಃ ಕಟ್ಟಿಸಬೇಕು. ಸುಮಾರು ೩೦೦೦ ಬಟ್ಟಿ ಭೂಮಿಗೆ ನೀರು ಕೊಡುವ ಚಿನ್ನನಕೋಟೆ ಕೆರೆ ರಿಪೇರಿ ಮಾಡಬೇಕು. ಬಾಡಗಬಾಣಂಗಾಲ ಗ್ರಾಮದ ಹಾಡಿಯಲ್ಲಿರುವ ಕೆರೆಯನ್ನು ರಿಪೇರಿ ಮಾಡಬೇಕು ಎಂಬ ಠರಾವುಗಳ ಬಗ್ಗೆ ಸರಕಾರಿ ಮೆಂಬರರು ಪರಿಶೀಲನೆ ಮಾಡಲಾಗುವುದೆಂದು ಭರವಸೆ ಕೊಟ್ಟ ಪ್ರಕಾರ ಠರಾವುಗಳು ಹಿಂತೆಗೆಯಲ್ಪಟ್ಟವು.

ಪೊಲಿಬೆಟ್ಟದಲ್ಲಿ ಪೊಲೀಸ್ ಔಟ್ ಪೋಸ್ಟ್ ಒಂದನ್ನು ತೆರೆಯಬೇಕು ಎಂಬ ಠರಾವು ಭರವಸೆ ಮೇರೆ ಹಿಂತೆಗೆಯಲ್ಪಟ್ಟಿತು.

ಶ್ರೀ ಪಿ. ಸಿ. ಉತ್ತಯ್ಯನವರ ಠರಾವು

ದೊಡ್ಡ ವೇತನದ ಅಧಿಕಾರಿಗಳನ್ನು ಹೊರಗಿನಿಂದ ತರುವುದು ಅನುಚಿತವೆಂಬ ಠರಾವನ್ನು ಮುಖ್ಯ ಮಂತ್ರಿಗಳು ಸೂಚಿಸುತ್ತಾ ಕೊಡಗಿನಲ್ಲೇ ಈ ಹುದ್ದೆಗಳಿಗೆ ಯೋಗ್ಯರಾದ ಯುವಕರಿದ್ದಾರೆಂದೂ, ಅಖಿಲ ಭಾರತ ಸರ್ವಿಸಿನ ಬಗ್ಗೆ ಇಡೀ ಹಿಂದೂದೇಶವನ್ನು ಒಂದಾಗಿ ತೆಗೆದುಕೊಳ್ಳುವದಲ್ಲದೆ ಪ್ರಾಂತೀಯ ಸರ್ವಿಸುಗಳಿಗೆ ಪ್ರಾಂತೀಯ ಜನರಿಗೆ ಪ್ರೋತ್ಸಾಹಕೊಡುವದು ಹಿತವೆಂದೂ, ಸೆಕ್ರೆಟರಿಯೇಟ್ ಕೆಲಸದಲ್ಲಿ ತರಬೇತು ಅದವರಿಲ್ಲದಿದ್ದರೆ ಹೊರಗಿನಿಂದ ತಾತ್ಕಾಲಕ್ಕೆ ತಂದು ಅವರಿಂದ ಇಲ್ಲಿಯವರು ತರಬೇತು ಪಡೆಯುವ ಏರ್ಪಾಡು ಮಾಡುವದು ಹಿತವೆಂದೂ ಶ್ರೀ ಪಿ. ಸಿ. ಉತ್ತಯ್ಯನವರು ಹೇಳಿದರು. ಮುಖ್ಯ ಮಂತ್ರಿಯವರು ವಿರೋಧಿಸುತ್ತಾ ಆಡಳಿತ ಯೋಗ್ಯರೀತಿ ನಡೆಯಬೇಕೆಂಬುದು ಪ್ರಾಮುಖ್ಯವಲ್ಲದೆ ಇಲ್ಲಿಯವರು ಮತ್ತು ಹೊರಗಿನವರೆಂದು ಬೇಧ ತಿಳಿಯುವುದು ಸರಿಯಲ್ಲವೆಂದೂ, ಸರಕಾರಿ ಆಡಳಿತವನ್ನು ಉದ್ಯೋಗಿಗಳ ತರಬೇತು ರಂಗವಾಗಿ ಮಾಡಲಾಗುವುದಿಲ್ಲವೆಂದೂ, ಹೊರಗಿನವರಿಗೆ ತಕ್ಕ ಪ್ರೋತ್ಸಾಹ, ಅನುಕೂಲತೆಗಳನ್ನು ಕೊಟ್ಟರೆ ಮಾತ್ರ ಅವರು ಇಲ್ಲಿಗೆ ಬರಲು ಇಚ್ಛಿಸುವುದೆಂದೂ ಹೇಳಿದರು. ಅಧ್ಯಕ್ಷರು ಠರಾವನ್ನು ಹಿಂತೆಗೆದುಕೊಳ್ಳುವಿರೋ ಎಂದು ಕೇಳುವಾಗ್ಗೆ ಗೃಹಮಂತ್ರಿಯವರು ಕೂಡಲೆ ಠರಾವನ್ನು ಓಟಿಗೆ ಹಾಕಬೇಕೆಂದರು. ಓಟಿಗೆ ಹಾಕಲಾಗಿ ಕಾಂಗ್ರೆಸ್ ಪಕ್ಷದವರು ವಿರೋಧವಾಗಿಯೂ ಉಳಿದವರು ಪರವಾಗಿಯೂ ಓಟು ಮಾಡಿದ್ದರಿಂದ ಠರಾವು ಪಾಸಾಗಲಿಲ್ಲ.

ಶ್ರೀ ಕೆ. ಕೆ. ಗಣಪತಿಯವರ ಠರಾವುಗಳು

ಸಿ. ಐ. ಡಿ. ಇಲಾಖೆಯಲ್ಲಿ ಖರ್ಚು ಖೋತೆ ಮಾಡಬೇಕು ಎಂಬ ಠರಾವು ಭರವಸೆ ಮೇರೆ ಹಿಂತೆಗೆಯಲ್ಪಟ್ಟಿತು.

ಹುದಿಕೇರಿ ಖಾಸಗಿ ಹೈಸ್ಕೂಲನ್ನು ಸರಕಾರ ತೆಗೆದುಕೊಳ್ಳಬೇಕು ಎಂಬ ಠರಾವನ್ನು ಸರಕಾರ ವಿರೋಧಿಸಿದ ಕಾರಣ ಠರಾವು ಹಿಂತೆಗೆಯಲ್ಪಟ್ಟಿತು.

ಪೇ ಕಮಿಷನಿನ ಶಿಫಾರಸ್ಸಿನ ದರದ ವೇತನವನ್ನು ವಿದ್ಯಾಧಿಕಾರಿ ಮತ್ತು ಉಪವಿದ್ಯಾಧಿಕಾರಿಗಳು ಹೊಂದುವಂತೆ ಏರ್ಪಡಿಸಬೇಕೆಂಬ ಠರಾವು ಸ್ಪೀಕರರ ಅಪ್ಪಣೆ ಪಡೆಯದ ಕಾರಣ ಚರ್ಚಿಸಲ್ಪಡಲಿಲ್ಲ.

ಮಾನವ ಚಿಕಿತ್ಸೆಗಾಗಿ ಹುದಿಕೇರಿಯಲ್ಲಿ ಒಂದು ಖಾಯಂ ಆಸ್ಪತ್ರೆ ತೆರೆಯಬೇಕೆಂಬ ಠರಾವನ್ನು ಸರಕಾರ ವಿರೋಧಿಸಿದ ಕಾರಣ ಹಿಂತೆಗೆಯಲ್ಪಟ್ಟಿತು.

ಪೊನ್ನಂಪೇಟೆ ಹಳೇ ಹೈಸ್ಕೂಲು ಕಟ್ಟಡವನ್ನು ಶ್ರೀ ರಾಮಕೃಷ್ಣಾಶ್ರಮದ ಆಸ್ಪತ್ರೆಯ ವಾರ್ಡಾಗಿ ಮಾಡಲು ಬಿಟ್ಟುಕೊಡಬೇಕು ಎಂಬ ಠರಾವನ್ನು ಸರಕಾರ ವಿರೋಧಿಸಿದ್ದರಿಂದ ಠರಾವು ಹಿಂತೆಗೆಯಲ್ಪಟ್ಟಿತು.

ಇತರರು

ಕೊಡಗು ವ್ಯವಸಾಯ ಆದಾಯ ತೆರಿಗೆ ಆಕ್ಟಿನಲ್ಲಿರುವ ಕೆಲವು ನ್ಯೂನತೆಗಳನ್ನು ತಿದ್ದಬೇಕು ಎಂಬ ಶ್ರೀ ಜಿ. ಎಂ. ಮಂಜುನಾಥಯ್ಯನವರ ಠರಾವಿನ ಬಗ್ಗೆ ಸರಕಾರವು ಹಾಗೆ ಮಾಡಲಾಗುವದೆಂಬ ಭರವಸೆ ಕೊಟ್ಟ ಮೇರೆ ಠರಾವು ಹಿಂತೆಗೆಯಲ್ಪಟ್ಟಿತು.

ಕೊಡಗಿನ ಪ್ರಾಮುಖ್ಯ ಹರಿಜನ ಕೇರಿಗಳಲ್ಲಿ ರಾತ್ರಿ ಶಾಲೆಗಳನ್ನು ತೆರೆಯಬೇಕೆಂಬ ಶ್ರೀ ಹರಿಜನ ನಂಜ ಇವರ ಠರಾವು ಅವಶ್ಯವಿರುವೆಡೆ ತೆರೆಯಲಾಗುವದೆಂಬ ಭರವಸೆ ಮೇರೆ ಹಿಂತೆಗೆಯಲ್ಪಟ್ಟಿತು.

ಹಿಂದುಳಿದ ವರ್ಗದ ಕೆಲವು ಆರಿಸಲ್ಪಟ್ಟ ವಿದ್ಯಾರ್ಥಿಗಳಿಗೆ ಮುಫತ್ತು ವಿದ್ಯಾಭ್ಯಾಸ ಕೊಡಬೇಕೆಂಬ ಶ್ರೀ. ಜಿ. ಸುಬ್ಬಯ್ಯನವರ ಠರಾವಿನ ಬಗ್ಗೆ ಹಿಂದುಳಿದ ಪಂಗಡದ ಎಲ್ಲರಿಗೂ ಕೊಡಲಾಗುವದೆಂಬ ಭರವಸೆ ಕೊಟ್ಟ ಮೇರೆ ಠರಾವು ಹಿಂತೆಗೆಯಲ್ಪಟ್ಟಿತು.

ಹೈಯರ್ ಎಲಿಮೆಂಟರಿ ಶಾಲೆಗಳಲ್ಲಿ ಓದುತ್ತಿರುವ ಬಡ ವಿದ್ಯಾರ್ಥಿಗಳಿಗೆ ಸ್ಕೂಲು ಫೀಸು ಮಾಫಿ ಬಿಡಬೇಕು ಎಂಬ ಶ್ರೀ ಜಿ. ಯಂ. ಲಿಂಗರಾಜಯ್ಯನವರ ಠರಾವಿನ ಬಗ್ಗೆ ವಿದ್ಯಾರ್ಥಿಗಳಲ್ಲಿ ಶೇಕಡ ೩೦ರಷ್ಟು ಬಡ ವಿದ್ಯಾರ್ಥಿಗಳಿಗೆ ಮಾಫಿ ಬಿಡಲಾಗುವದೆಂಬ ಭರವಸೆಯಿತ್ತ ಕಾರಣ ಠರಾವು ಹಿಂತೆಗೆಯಲ್ಪಟ್ಟಿತು.

ಶಾಲೆಗಳಲ್ಲಿ ಓದುತ್ತಿರುವ ಹರಿಜನ ವಿದ್ಯಾರ್ಥಿಗಳಿಗೆ ಒಂದು ಶರ್ಟು ಒಂದು ಚಡ್ಡಿ ಕೊಡುವ ಬದಲು ಎರಡು ಜೊತೆ ಕೊಡಬೇಕು ಎಂಬ ಶ್ರೀ ಸಿ. ಲಕ್ಕಯ್ಯನವರ ಠರಾವನ್ನು ಸರಕಾರ ಒಪ್ಪಿಕೊಂಡ ಕಾರಣ ಠರಾವು ಹಿಂತೆಗೆಯಲ್ಪಟ್ಟಿತು.

ಸುಂಟಿಕೊಪ್ಪ ಶಾಲೆಗೆ ಆಟದ ಮೈದಾನ ಮಾಡಿ ಕೊಡುವ ಶ್ರೀ ಸಿ. ಲಕ್ಕಯ್ಯನವರ ಠರಾವಿನ ವಿಚಾರದಲ್ಲಿ ಆಲೋಚಿಸಿ ಮಾಡಲಾಗುವದೆಂದ ಕಾರಣ ಠರಾವು ಹಿಂತೆಗೆಯಲ್ಪಟ್ಟಿತು.

ಮಾದಾಪುರದಲ್ಲಿ ಒಂದು ಖಾಯಂ ಆಸ್ಪತ್ರೆ ಬೇಕೆಂಬ ಶ್ರೀ ಲಕ್ಕಯ್ಯನವರ ಠರಾವು ಭರವಸೆ ಮೇರೆ ಹಿಂತೆಗೆಯಲ್ಪಟ್ಟಿತು.

ಮರೆನಾಡಿನಲ್ಲಿ ಒಂದು ಖಾಯಂ ಆಸ್ಪತ್ರೆ ತೆರೆಯಬೇಕೆಂಬ ಶ್ರೀ ಜಿ. ಸುಬ್ಬಯ್ಯನವರ ಠರಾವಿಗೆ ಸರಕಾರವು ಭರವಸೆ ಇತ್ತ ಕಾರಣ ಠರಾವು ಹಿಂತೆಗೆಯಲ್ಪಟ್ಟಿತು.

ಚೆಟ್ಟಳ್ಳಿ ಪಟ್ಟಣದವರಿಗೆ ಕುಡಿಯಲು ನೀರಿನ ವ್ಯವಸ್ಥೆಗಾಗಿ ಹತ್ತಿರದ ಜಲಾಶಯದಿಂದ ಒಂದು ಪೈಪು ಇಟ್ಟುಕೊಡಬೇಕು ಎಂಬ ಶ್ರೀ ಸಿ. ಎ. ಮಂದಣ್ಣನವರ ಠರಾವಿಗೆ ಸರಕಾರ ಭರವಸೆ ಕೊಟ್ಟ ಮೇರೆ ಠರಾವು ಹಿಂತೆಗೆಯಲ್ಪಟ್ಟಿತು.

ಕಾರ್ಯಕ್ರಮ ಪಟ್ಟಿಯಲ್ಲಿ ಒಟ್ಟು ೧೩೦ ಠರಾವುಗಳಿದ್ದರೂ ಸಮಯ ಸಾಲದ ಕಾರಣ ಮೇಲಿನ ೭೪ ಠರಾವುಗಳನ್ನು ಮಾತ್ರ ತೆಗೆದುಕೊಂಡು ಉಳಿದವನ್ನು ಚರ್ಚಿಸದೆ ಬಿಡಲಾಯಿತು. ಈ ಠರಾವುಗಳನ್ನು ಮಂತ್ರಿ ಮಂಡಳಿಯವರು ಆಲೋಚಿಸಿ ಯುಕ್ತ ರೀತಿಯಲ್ಲಿ ಜಾರಿಗೆ ತರಬೇಕೆಂದು ಶ್ರೀ ಕೆ. ಕೆ. ಗಣಪತಿಯವರು ಸೂಚಿಸಿದರು. ನಂತರ ಮುಖ್ಯ ಮಂತ್ರಿಯವರು ಎಪ್ರೋಪ್ರಿಯೇಶನ್ ಮಸೂದೆಯನ್ನು ಮಂಡಿಸಿದರು. ಅದು ಪಾಸಾಯಿತು.

ಸಭೆಯನ್ನು ಮುಕ್ತಾಯಗೊಳಿಸುವ ಮುನ್ನ ಸ್ಪೀಕರರಾದ ಶ್ರೀ ಬಿ. ಎಸ್. ಕುಶಾಲಪ್ಪನವರು ಸದಸ್ಯರ ಸಹಕಾರಕ್ಕೆ ವಂದಿಸುತ್ತಾ ರಾಜಕೀಯ ಮತಬೇಧ ತುಂಬಿರುವ ಈ ಸಮಯದಲ್ಲಿ ಸ್ಪೀಕರನ ಕೆಲಸವು ಕಠಿಣವಾದುದೆಂದೂ ಹೊರಗಿನ ಹಲವು ಶಾಸನ ಸಭೆಗಳಲ್ಲಿ ನಡೆಯುವ ಘರ್ಷಣೆಗಳಂತೆಯೇ ಇಲ್ಲಿಯೂ ನಡೆಯುವದೆಂಬ ಭೀತಿ ತನಗಿತ್ತೆಂದೂ ಆದರೆ ಎಲ್ಲರೂ ದೇಶದ ಹಿತದಿಂದ ಸಹಕರಿಸಿದರೆಂದೂ, ಈ ಸಭೆಯಲ್ಲಿ ವಿರೋಧ ಪಕ್ಷವಿಲ್ಲದಿದ್ದರೂ ರಾಜಕೀಯದಲ್ಲಿ ಪಾರಂಗತರಾದ ಸದಸ್ಯರು ತಮ್ಮ ಜವಾಬ್ದಾರಿಯನ್ನರಿತು ವರ್ತಿಸಿದರೆಂದೂ ತಾನು ಇಲ್ಲಿ ಒಬ್ಬ ನ್ಯಾಯಾಧೀಶನಂತೆ ವರ್ತಿಸಲು ಯತ್ನಿಸಿದುದಾಗಿಯೂ ಏನಾದರೂ ನ್ಯೂನತೆ ಬಂದಿದ್ದರೆ ಅದು ಪಕ್ಷದ ಹಿತಕ್ಕಾಗಲೀ ಬೇರೆ ಕಾರಣದಿಂದಾಗಲೀ ಅಲ್ಲವೆಂದೂ ಜ್ಞಾನದ ಅಪೂರ್ಣತೆಯ ಕಾರಣದಿಂದಾಗಿಯೆಂದೂ ಹೇಳಿದರು. ಶಾಸನ ಸಭೆಗೆ ಸಂಬಂಧಿಸಿದ ಸಿಬ್ಬಂದಿಗಳ ಮತ್ತು ಸದಸ್ಯರ ಸಹಕಾರದಿಂದ ಈ ಶಾಸನ ಸಭೆಯು ಆದರ್ಶ ಪರಂಪರೆಯನ್ನು ನಿರ್ಮಿಸುವದು ಎಂದು ಹೇಳಿದರು.

ತಿದ್ದುಪಡಿ.

ಕಳೆದ ವಾರದಲ್ಲಿ ಪ್ರಕಟವಾಗಿದ್ದ ಶ್ರೀ ಸಿ. ಡಿ. ಸುಬ್ಬಯ್ಯನವರ ಬಜೆಟ್ ಭಾಷಣದಲ್ಲಿ 'ಸಂಪಾಜೆ ಪೆರಾಜೆಗಳಲ್ಲಿ ಆಸ್ಪತ್ರೆ ಇದ್ದರೂ ಔಷಧಿ ತೆಗೆದುಕೊಳ್ಳುವ ಅಭ್ಯಾಸ ಜನರಿಗಿಲ್ಲ. ಅದರಿಂದ ತಕ್ಕ ಪ್ರಚಾರವಾಗಬೇಕು.' ಎಂಬುದರ ಬದಲು 'ಸಂಪಾಜೆ ಪೆರಾಜೆಗಳಲ್ಲಿ ದನಗಳ ಆಸ್ಪತ್ರೆಗಳಿಲ್ಲದೆ ಜನರು ತುಂಬಾ ತೊಂದರೆಗೀಡಾಗಿದ್ದಾರೆ. ಈಗಿರತಕ್ಕ ಮನುಷ್ಯರಿಗಿರುವ ಆಸ್ಪತ್ರೆಯಂತೆ ವಾರಕ್ಕೆರಡಾವರ್ತಿ ಜಾನುವಾರುಗಳಿಗೆ ಚಿಕಿತ್ಸೆ ಕೊಡುವ ಏರ್ಪಾಡಾಗಬೇಕು.' ಎಂದು ಅವರು ಬರೆದು ತಿಳಿಸಿದ್ದಾರೆ. ಸಂ]

ಮುಫತ್ತು.

ಈಗ ಹೊಸದಾಗಿ ಬಂದಿರುವ ನಮ್ಮ ಅಮೇರಿಕನ್ ಫೌಂಟನ್ ಪೆನ್ನುಗಳಿಗೆ ಆರ್ಡರು ಬುಕ್ ಮಾಡಲು ಏಜಂಟರು ಬೇಕಾಗಿದ್ದಾರೆ. ಇದಕ್ಕೆ ಪ್ರತಿಯಾಗಿ 15 ಯಾ 17 ಆಭರಣಗಳುಳ್ಳ ಸ್ವಿಸ್ ರಚಿತ ರಿಸ್ಟ್‌ವಾಚು, ಸೈಕಲ್, ಅಥವಾ ರೇಡಿಯೋವು ಮುಫತ್ತಾಗಿ ದೊರೆಯುವದು. ಇದು ಲಾಟರಿ, ಜೂಜು ಯಾ ಚಕ್ರಬಂಧ ಸ್ಪರ್ಧೆಯಲ್ಲ. ಒಂದು ಫೌಂಟನ್ ಪೆನ್ನಿಗೂ ಅದರೊಡನೆ ಮುಫತ್ತು ಕೆಟಲಾಗು ಮತ್ತಿತರ ಮಾಹಿತಿಗಳಿಗೆ ಬರೆಯಿರಿ.

THE UNIVERSAL MUTUAL CORPORATION (K M.)
P. O. Box No. 4013, BOMBAY—7.

ಸದಸ್ಯರ ಟೀಕೆಗಳಿಗೆ ಮುಖ್ಯಮಂತ್ರಿಗಳ ಉತ್ತರ.

ಮೊನ್ನೆ ಸ್ವೀಕರಿಸಿ ಪ್ರತಿಯೊಬ್ಬ ಸದಸ್ಯರಿಗೂ ತನ್ನ ಅಭಿಪ್ರಾಯ ವ್ಯಕ್ತಪಡಿಸಲು ಸಾಕಷ್ಟು ಸಮಯವಿತ್ತುದಕ್ಕೆ ಸಭೆಯ ಪರವಾಗಿ ವಂದಿಸುತ್ತೇನೆ. ಶ್ರೀ. ಪಿ. ಡಿ. ಉತ್ತಯ್ಯನವರು ಎಲ್ಲರಿಗಿಂತಲೂ ಹೆಚ್ಚು ಸಮಯ ತೆಗೆದುಕೊಂಡರು. ಶಾಲಾ ಅಧ್ಯಾಪಕರ ರೀತಿಯಂತೆ ಸಾವಧಾನದಿಂದ ಅವರು ಮಾತನಾಡಿದರು. ... ಪಡೆದ ... ಉಳಿದ ಭಾಗಗಳನ್ನು ಆತುರದಿಂದ ಮಾಡಬೇಕಾಗುವಂತೆ ಬಜೆಟ್ಟಿನ ಮೇಲಿನ ಚರ್ಚೆಗಳಿಗೆ ಸಮಯ ... ಬಜೆಟಿಗೆ ಸದಸ್ಯರು ಒಟ್ಟು ಸ್ವಾಗತದಿಂದ ... ಕೆಲವರು ಬಜೆಟ್ಟು ... ಬಜೆಟ್ಟು ಮಾಡಿದ ... ದೃಷ್ಟಿಯಿಲ್ಲವೆಂದರು. ನಾನು ... ಜನಹಿತ ಬಜೆಟ್ಟು ... ಅಧಿಕ ... ಗಂಡನ ಸ್ಥಿತಿಯಂತೆ. ... ಆದರೆ ಅಕ್ಕಿಯ ಬೆಲೆ ... ಗಂಧದ ಮರದ ವ್ಯಾಪಾರಿಯೊಡನೆ ... ಆದರೆ ... ಗಂಡನು ... ಹೇಳಬೇಕು. ... ಈ ಕೆಲಸಗಳಿಗೆ ... ನೋಡಿದರೆ ಹೊಸ ಇಲಾಖೆ ... ಹೊಸ ಕೆಲಸಗಳಿಗೆ ... ಈ ನನ್ನ ಆಧಿಪತ್ಯ ... ದೇಶ ... ಹಿತವಾಗುತ್ತದೆ.

ಫಾರೆಸ್ಟ್ ಇಲಾಖೆಯ ಎಲ್ಲ ಟೀಕೆಗಳಿಗೆ ಉತ್ತರ ... ಉತ್ಪನ್ನ ... ಬೆಳೆಯಾಗುವ ... ಕಡಿಮೆ ... ಆದರೆ ಕೊಡಗಿನ ಫಾರೆಸ್ಟ್ ... ಪ್ರಯೋಜನಕ್ಕೆ ಬಾರದ ... ಪೂರ್ವ ಭಾಗದ ಫಾರೆಸ್ಟ್ ... ಸುಮಾರು ೭೫,೦೦೦ ಎಕರೆ ಇದೆ. ಇದು ಕೇಗ ವ್ಯವಸಾಯಕ್ಕೆ ಯೋಗ್ಯವಾಗಿದೆ. ಇಂದು ಬಿದಿರು, ಲಂಟಾನಗಳಿಂದ ತುಂಬಿ ನಿಷ್ಪ್ರಯೋಜಕವಾಗಿರುವ ಈ ಭಾಗವನ್ನು ಬೆಲೆ ಬಾಳುವ ತೇಗದ ಕಾಡಾಗಿ ಮಾಡಿದರೆ ಅಹಿತವೇ? ಹಿಂದಿನ ಯೋಜನೆಯಂತೆ ೩೫೦ ಎಕರೆ ಕಡಿದು ಕೃಷಿ ಯೋಗ್ಯವಾಗಬಹುದು. ಆದರೆ ... ವರ್ಷಗಳ ನಂತರ ಕೊಡಗಿನ ಫಾರೆಸ್ಟಿನ ಗತಿ ಏನಾದೀತ? ಸರಕಾರಕ್ಕೆ ಎಷ್ಟು ಉತ್ಪತ್ತಿ ದೊರಕೀತು? ಆದ್ದರಿಂದ ದೂರದ ದೃಷ್ಟಿಯಿಟ್ಟು ಈ ಯೋಜನೆ ಕೈಕೊಳ್ಳಲಾಗಿದೆ. ಇಲಾಖೆಯ ಸಿಬ್ಬಂದಿಯನ್ನು ಇದಕ್ಕಾಗಿ ನಾವು ಹೆಚ್ಚಿಸಿಲ್ಲ ... ಈ ಮೊದಲು ... ೫೦೦ ಎಕರೆ ... ಬಿದಿರು ... ಇದೆಯೇ ಎಂದು ... ? ... ಎಕರೆ ... ನಾವು ... ಆದರೆ ... ? ಇಲಾಖೆಯ ... ಕೊಡಗಿನ ಫಾರೆಸ್ಟಿಗೆ ... ಅದನ್ನು ಉತ್ಪನ್ನ ... ಸರಕಾರಕ್ಕೆ ... ತೇಗದ ಕಾಡು ... ಆದರೆ ... ? ತೇಗದಂತೆ ಬೆಳೆಯುವ ಮರ ಯಾವುದಿದೆ? ಬೀಟಿ ... ನಾವು ಬೆಳೆಸುತ್ತೇವೆ. ... ಗಂಧದ ಮರ ... ವಿಚಾರದಲ್ಲೂ ... ಈ ... ಲಕ್ಷ ... ತಜ್ಞರ ... ಸರಕಾರದ ... ಬಂದು ... ೧-೧-೬ ರಿಂದ ... ೦-೧೦-೦ ... ವ್ಯವಹಾರ ... ಸರಕಾರಕ್ಕೆ ... ಗಂಧದ ಮಾರಾಟದಲ್ಲಿ ... ಲಕ್ಷದವರೆಗೆ ದೊರೆಯಬೇಕಾದ ಬೆಲೆಯನ್ನು ರೂ. ೧,೮೦,೦೦೦ ಇಳಿಸಿದರು. ಆದರೆ ವೈಸೂರು ಸರಕಾರದ ಸಹಾಯದಿಂದ

ನಮಗೆ ಯೋಗ್ಯ ಬೆಲೆ ದೊರೆಯಿತು. ಕೆಲವರು ವೈಸೂರಿಂದರೆ ಗಾಬರಿಗೊಳ್ಳುವಂತಿದೆ. ಜಗತ್ತಿನ ಗಂಧದ ಸಂತೆಯಲ್ಲಿ ವೈಸೂರಿನ ಹಿಡಿತ ಹೀದಾದ್ದು. ಹಿಂದಿನ ... ಟನ್ನು ಗಂಧದಲ್ಲಿ ೧೬೦೦ ಟನ್ ವೈಸೂರಿನಿಂದ ಬರುತ್ತದೆ. ಕೊಡಗಿನ ... ಗಂಧವೆಂದರೆ ನೂರು ಟನ್. ಆದ್ದರಿಂದ ವೈಸೂರಿನ ... ಗಂಧದ ವಿಷಯದಲ್ಲಿ ... ವ್ಯಾಪಾರಿಗಳ ಹಿಡಿತಕ್ಕೆ ... ವೈಸೂರು ಸರಕಾರ ... ಹಿಂದೂಸ್ಥಾನ ... ಸರಕಾರ ... ಟೀಕೆಗಳಿವೆ. ಇದರಿಂದ ಸರಕಾರಕ್ಕೆ ... ಆದರೆ ಈ ... ಸರಕಾರಕ್ಕೆ ನಷ್ಟದ ... ಟೀ ಬಗ್ಗೆ ಎಸ್ಟೇಟು ... ೩೦೦ ಎಕರೆಗಳಷ್ಟನ್ನು ... ಹೆಚ್ಚಿಲ್ಲ. ಏಲಕ್ಕಿಗೆ ಬೆಲೆ ಇಲ್ಲದಾಗ ಕಷ್ಟಪಟ್ಟು ವ್ಯವಸಾಯವನ್ನು ... ಆದರೆ ... ೫೦ ಎಕರೆ ಮಾತ್ರ ವ್ಯವಸಾಯ ... ಆದರೆ ... ಇಲಾಖೆಯಲ್ಲಿ ಸಿಬ್ಬಂದಿಯನ್ನು ಹೆಚ್ಚಿಸಿ ... ಈಗ ಇಲಾಖೆಯಲ್ಲಿ ೯ ರೇಂಜರುಗಳು, ೩೦ ಫಾರೆಸ್ಟರುಗಳು, ೮೦ ಗಾರ್ಡುಗಳು, ೪೫ ವಾಚ್‌ಮೆನ್‌ಗಳಿದ್ದಾರೆ. ಈಗ ೧೨ ಡೆಪ್ಯೂಟಿ ರೇಂಜರುಗಳನ್ನು ನೇಮಿಸಿ ... ಉಳಿದ ... ಆದರೆ ... ಇಲಾಖೆಯ ... ಇಲಾಖೆಯಿಂದ ... ನಮ್ಮ ಅಭಿಪ್ರಾಯ. ಜವಾಬ್ದಾರಿ ಸರಕಾರ ಬಂದಂದಿನಿಂದ ಸೆಕ್ರೆಟರಿಯೇಟಿನಲ್ಲಾದ ಬದಲಾವಣೆಗೂ ಆಗುತ್ತಿರುವ ಅಂಟಿಕ ಖರ್ಚಿಗೂ ಟೀಕೆ ... ಇದೆ. ಹೊರಗಿನಿಂದ ಅಧಿಕಾರಿಗಳನ್ನು ತರಿಸಿದ್ದು ಯೋಗ್ಯವಲ್ಲವೆನ್ನುತ್ತಾರೆ. ಈ ರೀತಿಯ ಟೀಕೆ ... ಜನರು ತಿಳಿಬೇಕು. ಮೊದಲು ಒಬ್ಬ ಚೀಫ್ ಕಮಿಷನರಿದ್ದರು

ಅವರು ಮಾಡುತ್ತಿದ್ದ ಕೆಲಸಕ್ಕೇ ಈಗ ... ಖರ್ಚು ಎಂದು ಹೇಳುವುದು ನ್ಯಾಯವಲ್ಲ. ಜವಾಬ್ದಾರಿ ಸರಕಾರ ಬಂದ ಮೇಲೆ ಆದರ ಖರ್ಚನ್ನು ನಿರ್ವಹಿಸಬೇಕು ... ಪ್ರಜಾಪ್ರಭುತ್ವಕ್ಕಾಗಿ ಈಗ ... ಖರ್ಚಾಗುತ್ತಿರುವ ೧,೫೦,೦೦೦ ಖರ್ಚು ... ಹೆಚ್ಚಲ್ಲ. ನಿಮ್ಮ ಕೈಯಲ್ಲಿ ನಿಮ್ಮ ಆಡಳಿತವಿದೆ. ಮಂತ್ರಿ ಮಂಡಳವನ್ನು ಬದಲು ಮಾಡಲೂ ನಿಮಗೆ ಹಕ್ಕಿದೆ. ಇದು ಕಡಿಮೆಯೇನಲ್ಲ. ಆಡಳಿತವನ್ನು ಟೀಕಿಸಿ ಅಧಿಕಾರಿಗಳ ... ಎಂದೂ ಸರಿಯಲ್ಲ. ಆಡಳಿತ ಯಂತ್ರವು ಸರಾಗವಾಗಿ ... ದರೆ ಸಾರ್ವಜನಿಕರು ಅದರೊಳಗೆ ... ಇಲಾಖೆಯಲ್ಲಿ ... ಕೆಲಸ ಬಾಕಿಯಿದೆ ... ಶ್ರೀ ... ಸರ್ವೆ ... ಸ್ಥಿತಿ ... ಸರ್ವೆ ... ಇದರಿಂದ ... ಯೋಗವಾಗುತ್ತಿರಬಹುದು. ಪೆಟ್ರೋಲ್ ... ಸರಕಾರದ ಆದಾಯ ೧೦ ಲಕ್ಷ ... ತೆರಿಗೆ ... ಸೆಂಟ್ರಲ್ ... ಲಕ್ಷ ... ಇದನ್ನು ಈಗ ಮಾಡುವುದು ... ವ್ಯವಸಾಯದ ಆದಾಯ ತೆರಿಗೆ ... ಇದನ್ನು ... ಸರಕಾರ ... ಶ್ರೀ ಎ. ಸಿ. ... ಶ್ರೀ ಎ. ಕೆ. ... ಪ್ಲಾಂಟರುಗಳ ... ಸರಕಾರವು ... ಕಾಫಿ ಬೋರ್ಡು ... ವ್ಯವಸಾಯ ... ಸಂಶೋಧನೆಯ ಬಗ್ಗೆ ... ಬಂದವರು ಇದೇ ಕೆಲಸದಲ್ಲಿದ್ದರೆ ... ಹೋಗುವ ... ಹಿತವಾಗದು. ... ಇಲಾಖೆ ... ಉತ್ತಮಗೊಳಿಸುವುದು ನಮ್ಮ ಗುರಿ. ಈ

ವರ್ಷ ಸ್ವಲ್ಪ ಹೆಚ್ಚು ಹಣವಿರಿಸಲಾಗಿದೆ. ಕಾಯಿಲೆ ಬಾರದಂತೆ ನೋಡುವ ವಿಚಾರಕ್ಕೂ ಗಮನವೀಯಲಾಗಿದೆ. ದನಗಳು ದೇಶದ ಬೆನ್ನೆಲುಬು ನಿಜ. ದನಗಳ ಬೆನ್ನೆಲುಬೇ ನಮಗೆ ಗೋಚರಿಸುವಂತಿರುವದು ಯುಕ್ತವಲ್ಲ. ಪೋಲೀಸ್ ಇಲಾಖೆಯು ಯಾರ ಮೇಲೂ ಗೂಢಾಚಾರ ಕೆಲಸಕ್ಕಿರುವುದಲ್ಲ. ರಾಷ್ಟ್ರದ ವಿರುದ್ಧ ಮಾತಾಡುವವರಿಗೆ ಮಾತ್ರ ಪ್ರಕಾರ ಅದೇ ರೀತಿಯ ಉತ್ತರವೀಯುದಿರದು. ಕೇಂದ್ರ ಸರಕಾರಕ್ಕೆ ಹೋಗುವ ಆದಾಯ ತೆರಿಗೆಯಿಂದ ಒಂದಂಶ ಪಡೆಯಲು ಒಕ್ಕೂಟದ ಪ್ರೆಸಿಡೆಂಟರೊಡನೆ ವ್ಯವಹಾರ ನಡೆಯಲಾಗುತ್ತಿದೆ. ಕೊಡಗು ತನ್ನ ಆದಾಯದ ಮೇಲೆ ತಾನು ನಿಲ್ಲಲಾಪುದೆಂದು ನಾನು ಇಂದೂ ಹೇಳುವದಿಲ್ಲ. ಕೇಂದ್ರ ಸರಕಾರದ ೪ ಲಕ್ಷ ರೂಪಾಯಿಗಳಿಲ್ಲದಿದ್ದರೆ ಇಂದೂ ಕೊರತೆಯ ಬಡ್ಜೆಟ್ಟೇ ಆಗುತ್ತಿತ್ತು. ಆದ್ದರಿಂದ ೧೯೪೮ ರಲ್ಲಿ ನಾನು ಹೇಳಿದ ಮಾತು ಇಂದು ನಿಜವಾಗಿ ಪರಿಣಮಿಸಿದೆ. ಬರಪೂಳೆ ಯೋಜನೆಯ ಬಗ್ಗೆ ಪರಿಶೀಲನೆ ನಡೆಯಬೇಕು. ಮದ್ರಾಸು ಸರಕಾರವು ಸಹಕರಿಸಿದರೆ ಮಾತ್ರ ಇದು ಸಾಧ್ಯವಾಗುವದು. ಅವರ ನೆರವಿಲ್ಲದಿದ್ದರೆ ನಾವು ಒಂದು ವೇಳೆ ಈ ಯೋಜನೆಯನ್ನು ಕೈಕೊಂಡರೂ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಮಾರಲು ಅನುವಿಲ್ಲದೆ ಇದು ಲಾಭದಾಯಕವಾಗದಿರಬಹುದು. ಆದ್ದರಿಂದ ಸರಕಾರ ಈ ವಿಚಾರ ಪರಿಶೀಲಿಸುತ್ತಿದೆ. ಈ ಸಭೆಯಲ್ಲಿ ಶ್ರೀ ಪಿ. ಐ. ಬೆಳ್ಯಪ್ಪನವರು ತೋರಿಸಿದ ಸಹಕಾರದ ಆದರ್ಶವು ವಂದನಾರ್ಹವಾಗಿದೆ. ಅವರ ಭಾಷಣ ಕೇಳುತ್ತಿದ್ದಾಗ್ಗೆ ನನಗೆ ಹರ್ಷವೆನಿಸಿತು. ಇದೇ ಪ್ರಜಾಪ್ರಭುತ್ವದ ತಿರುಳಾಗಿದೆ. ಚುನಾವಣೆಯಲ್ಲಿ ನಾವು ವಿವಿಧ ತತ್ವದಿಂದ ಸ್ಪರ್ಧಿಸಿರಬಹುದು. ಆದರೆ ಅದು ಕಳೆದ ನಂತರ ಅದನ್ನು ಮರೆತು ದೇಶ ಹಿತಕ್ಕಾಗಿ ಪ್ರಯತ್ನಿಸುವುದು ಯೋಗ್ಯ. ಇಂದೂ ಕೂಡ ನೆಹರೂ, ಕಾಂಗ್ರೆಸ್‌ಗಳ ಮೇಲೆ ಅವರಿಗಿರುವ ವಿಶ್ವಾಸ ಹೊಗಳಲರ್ಹವಾದುದು. ಇದು ಪ್ರಜಾಪ್ರಭುತ್ವ. ಅವರ ಈ ಧೋರಣೆಯಿಂದ ನಮ್ಮ ದೇಶಕ್ಕೆ ಭವ್ಯ ಭವಿಷ್ಯವಿದೆಯೆಂದು ಹೇಳಬಹುದು. ಅವರಿಗೆ ಯಾವ ಸಹಾಯವನ್ನು ಕೊಡಲು ತಯಾರಿರುವುದಲ್ಲದೆ ಅವರ ಸಲಹೆ ಸೂಚನೆಗಳನ್ನು ಸ್ವೀಕರಿಸಲು ಸಿದ್ಧರಿರುವೆವು. ಶ್ರೀ ಕೆ. ಪಿ ಕರುಂಬಯ್ಯನವರು ಅತ್ಯುತ್ತಮ ಭಾಷಣ ಮಾಡಿದರು. ಶಾಸನ ಸಭೆಗೆ ಸಂಬಂಧಿಸಿದ ಅಧಿಕಾರಿಗಳೂ, ನನ್ನ ಸಹೋದ್ಯೋಗಿ ಶ್ರೀ ಮಲ್ಲಪ್ಪನವರೂ ಶಕ್ತಿಮೀರಿ ದುಡಿದಿದ್ದಾರೆ. ದುಡಿಯುತ್ತಿದ್ದಾರೆ. ಇದರಿಂದಾಗಿ ಇಂದು ಆಡಳಿತವು ಒಂದು ಹಂದಾರಿಯಲ್ಲಿದೆ. ಯಾರು ಬಂದರೂ ತೊಂದರೆಯಿಲ್ಲದೆ ನಡೆಸಬಹುದಾಗಿದೆ. ಈ ಬಡ್ಜೆಟ್ಟು ತಪ್ಪಿಲ್ಲದ ಪರಿಪೂರ್ಣ ಬಡ್ಜೆಟ್ಟಾಗಿರಲಾರದು. ಆದರೂ ಸದಸ್ಯರು ಕೊಟ್ಟ ಸ್ವಾಗತಕ್ಕಾಗಿ ವಂದನೆ. ಮುಂದೆ ಇನ್ನೂ ಚೆನ್ನಾಗಿ ಕ್ರಮಿಸಲು ಯತ್ನಿಸುವೆವು.

ಬಡ್ಜೆಟ್ಟಿನ ಮೇಲೆ ಸದಸ್ಯರ ಅಭಿಪ್ರಾಯಗಳು.

(ಎರಡನೇ ಪುಟದಿಂದ ಸಾಗಿದ್ದು)

ಕೈಗಾರಿಕೆಯೂ ಬೇಕು. ಕಾಲೇಜಿನಲ್ಲಿಯೂ ಕೂಡ ಭೂರಚನಾ ಶಾಸ್ತ್ರ ಕಲಿಸಲ್ಪಡಬೇಕು. ವ್ಯವಸಾಯ ಶಾಲೆಯ ವಿಚಾರ ತಿಳಿದು ಸಂತೋಷವಾಯಿತು. ನೇಯಿಗೆ ಶಾಲೆಯ ವಿಚಾರವೂ ಸಂತೋಷಕರ. ಕೊಡಗಿನಲ್ಲಿ ಮಗ್ಗಗಳು ಹೆಚ್ಚುತ್ತಿವೆ. ಕಾಲೇಜಿನಲ್ಲಿ ಎನ್. ಸಿ. ಸಿ. ಶಿಕ್ಷಣವಿಯಬೇಕು. ವ್ಯವಸಾಯ ಇಲಾಖೆಯುವರ ಪ್ರಚಾರ ಕ್ರಮ ಸಾಲದು. ಕಬ್ಬಿಣ ನೇಗಿಲಿನ ಉಪಯೋಗವನ್ನು ಒಮ್ಮೆ ಚೀಫ್ ಕಮಿಷನರು ಗ್ರಾಮಕ್ಕೆ ಬಂದಿದ್ದಾಗ ಹೇಳಿದ ಕಾರಣ ಹಲಕೆಲವರು ನಮ್ಮ ಗ್ರಾಮದಲ್ಲಿ ಉಪಯೋಗಿಸತೊಡಗಿದ್ದಾರೆ. ಆದ್ದರಿಂದ ಯೋಗ್ಯ ಪ್ರಚಾರ ಬೇಕು. ಸಕಾಲಕ್ಕೆ ರೈತರಿಗೆ ಹತ್ಯಾರುಗಳನ್ನು ಒದಗಿಸಬೇಕು. ಕೈದಾಬಾದಿನಲ್ಲಿ ಟ್ರಾಕ್ಟರು ಮತ್ತು ಬುಲ್‌ಡೋಜರ್‌ಗಳನ್ನು ಉಪಯೋಗಿಸಿ ಉಪಯುಕ್ತ ಕೆಲಸ ಮಾಡಲಾಗುತ್ತಿದೆ. ನಮ್ಮ ಸರಕಾರವೂ ಆ ಬಗ್ಗೆ ಆಲೋಚಿಸಬೇಕು. ಕೊಡಗಿನಲ್ಲಿ ಬೇಸಿಗೆ ಕಾಲದ ವ್ಯವಸಾಯವೇ ಇಲ್ಲ. ನೀರು ದೊರೆಯುವ ಕಡೆ ಇದನ್ನು ಪ್ರೋತ್ಸಾಹಿಸಬೇಕು. ರೈತರಿಗೆ ವರ್ಷದ ಆರು ತಿಂಗಳು ಕೆಲಸವಿರುವದಿಲ್ಲ. ಅದಕ್ಕಾಗಿ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಬೇಕು. ಮೈನರ್ ಇರಿಗೇಶನ್ ಕೆಲಸದಿಂದ ಹೆಚ್ಚಿನ ಪ್ರಯೋಜನವಾಗಿಲ್ಲ. ವಿಮಾನಗಾರಿಕೆ ವಿಚಾರದಲ್ಲಿ ಕೊಡಗಿನಿಂದ ಒಬ್ಬರನ್ನು ಕಳುಹಿಸಿ ತರಬೇತಾಗಿ ಅವರು ಬಂದದ್ದರೂ ಅವರನ್ನು ಬಿಟ್ಟು ಮದ್ರಾಸಿನಿಂದ ಒಬ್ಬ ಉದ್ಯೋಗಸ್ಥರನ್ನು ತರಿಸಿರುವದು ಆಶ್ಚರ್ಯ. ವೈದ್ಯಕೀಯ ಇಲಾಖೆಯಲ್ಲಿ ದಕ್ಷತೆ ಇದೆ. ಆಪರೇಶನ್‌ಗಳು ಯಶಸ್ವಿಯಾಗಿ ಇಲ್ಲೇ ಮಾಡಲ್ಪಡುತ್ತಿವೆ. ತೃಪ್ತಿಕರವಾಗಿ ಆಪರೇಶನ್ ಇಲ್ಲಿ ಆಗುದಿಲ್ಲವೆನ್ನುವದು ನಮ್ಮ ಕೀಳು ಭಾವನೆಯು ಗುರುತಲ್ಲದೆ ಬೇರಿಲ್ಲ. ಈಗಿನ ಅಧಿಕಾರಿಯವರ ಕೈಕೆಳಗೆ ಆಸ್ಪತ್ರೆಗಳು ಆದರ್ಶರೀತಿಯಲ್ಲಿವೆ. ವೈದ್ಯಕೀಯ ವಿಚಾರಕ್ಕಾಗಿ ಕೊಡಗು ತುಂಬಾ ಖರ್ಚು ಮಾಡುತಿದೆ. ಕೊಡಗಿನಲ್ಲಿ 'ಬೇಲೆನ್ಸ್‌ಡ್' ಆಹಾರ ಪದ್ಧತಿಯನ್ನು ಜಾರಿಯಲ್ಲಿತರಬೇಕು. ಮೈಸೂರು ಮದ್ರಾಸುಗಳಲ್ಲಿರುವಂತೆ ಕೊಡಗಿನ ಹೊಟೆಲುಗಳಲ್ಲೂ ಸಮತೂಗಲ್ಪಟ್ಟ ಆಹಾರ ಕೊಡಲ್ಪಡಬೇಕು. ವಿದ್ಯುಚ್ಛಕ್ತಿಯ ಬಗ್ಗೆ ಸರಕಾರವು ಹೆಚ್ಚಿನ ಪ ಲ.ಗಳನ್ನು ತಾನು ಪಡೆದುಕೊಂಡು ಒಂದು ಕಂಪೆನಿ ತೆರೆಯಬಹುದು. ಹಳೆ ವಿಧಾನಗಳು ಬದಲಾವಣೆಯಾಗಬೇಕು. ಹೆಚ್ಚು ಪೋಲೀಸರನ್ನಿಟ್ಟಿರುವದು ಮುಂದೆ ಬರಲಿರುವ ವಿಚಾರದ ಪೂರ್ವಚಿಹ್ನೆಯಾಗಿದೆ. ಸಿ. ಐ. ಡಿ. ಇಟ್ಟುಕೊಳ್ಳುವದು ಯೋಗ್ಯ ನೀತಿಯಲ್ಲ. ತನ್ನ ಅಧಿಕಾರಕ್ಕೆ ಆತಂಕ ಬರಬಹುದೆಂಬ ಹೆದರಿಕೆಯಿಂದ ಈ ಏರ್ಪಾಡು ಮಾಡಿದಂತೆ ತೋರುತ್ತದೆ. ಸದಸ್ಯರೂ ಸಭೆಯಲ್ಲಿ ಮಾತಾಡುವಾಗ ಒಂದು ರೀತಿಯ ಸಭ್ಯತೆಯನ್ನು ಕಾಪಾಡಿಕೊಳ್ಳಬೇಕು. ಇಂಥಾ ವಿಶೇಷ ಸಂದರ್ಭಗಳಿಗನು ಸರಿಸಿ ಖಾದಿ ಧರಿಸಿ ಬರುವ ಶ್ರೀ ಸಿ. ಎ ಮಂದಣ್ಣನಂಥವರೂ ದೇಶಕ್ಕಾಗಿ ಅನವರತ ದುಡಿದ ಹಳೇ ಕಾಂಗ್ರೆಸಿಗರಾದ ಶ್ರೀ ಪಿ ಐ ಬೆಳ್ಯಪ್ಪನಂಥವರನ್ನು ಟೀಕಿಸುವದು ಹಾಸ್ಯಾಸ್ಪದ. ಶ್ರೀ ಪಿ ಐ ಬೆಳ್ಯಪ್ಪನವರು ಮಂತ್ರಿಮಂಡಳಕ್ಕೆ ನೀಡಿರುವ ಸಹಕಾರವನ್ನು — ಅನೆಯು ಆಹಾರ ಕೊಡುವವನನ್ನು ಎಮೆಯಕ್ಕದೆ ನೋಡುತ್ತಾ ಆಹಾರಸ್ವೀಕರಿಸುವಂತೆ ನಾವು ಬೆಳ್ಯಪ್ಪನವರ ಸಹಕಾರವನ್ನು ಸ್ವೀಕರಿಸಬೇಕೆಂದು ಹೇಳಿದ ಶ್ರೀ ಮಂದಣ್ಣನವರು ಹೇಳಿದರು. ಆದರೆ ಇಲ್ಲಿ ಆನೆಯ ದೃಷ್ಟಿಯ ಬದಲು ಕಪ್ಪೆಯ ದೃಷ್ಟಿಯಂತಾಗಿದೆ. ಶ್ರೀ ಬೆಳ್ಯಪ್ಪನವರು ಒಳ ಬಂದರೆ ತಮ್ಮ ಸ್ಥಾನಕ್ಕೆಲ್ಲಿಯ ಧಕ್ಕೆ ಬರುತ್ತದೋ ಎಂಬ ಹೆದರಿಕೆ ಅವರಿಗಿರುವಂತಿದೆ.

ಶ್ರೀ ಚೌರಲ್ಲ ಕಾಳಪ್ಪನವರು

ಲೇಬರ್ ದಿವಿಷನ್ನು ಇಲಾಖೆಯು ಕೆಲಸ ಸಮರ್ಪಕವಾಗಿಲ್ಲ. ನಾನಾ ರೀತಿಯ ಕೆಲಸ ಹೇರಲ್ಪಟ್ಟ ಕಾರಣ ರೈತರಿಗೆ ಸಹಾಯವಾಗುತ್ತಿಲ್ಲ. ನಾಡಾಫೀಸುಗಳಲ್ಲಿ ಸಿಬ್ಬಂದಿ ಹೆಚ್ಚು ಮಾಡಬೇಕು. ಸರಕಾರದ ನಿಯಮ, ಕಾನೂನು, ಯೋಜನೆಗಳು ಜನತೆಗೆ ತಿಳಿಸುಲು ಅನುಮಾಗುವಂತೆ ಕನ್ನಡದಲ್ಲಿ ಪ್ರಿಂಟು ಮಾಡಿ ಆಗಾಗ್ಗೆ ಗ್ರಾಮದ ಪಟೇಲರ ಮೂಲಕ ಹಂಚುವ ಏರ್ಪಾಡು ಮಾಡಬೇಕು. ಹಿಂದುಳಿದಿರುವ ಉತ್ತರ ಕೊಡಗಿನಲ್ಲಿ ಹೆಚ್ಚು ಪ್ರಾಥಮಿಕ ಶಿಕ್ಷಣದ ಏರ್ಪಾಡು ಮಾಡಬೇಕು. ಉತ್ತರ ಕೊಡಗಿನಲ್ಲಿ ಮಡಿಕೇರಿಯನ್ನು ಬಿಟ್ಟರೆ ಒಂದೇ ಹೈಸ್ಕೂಲಿದೆ. ವಿದ್ಯೆ ಕಡಿಮೆಯಾದ ಕಾರಣ ಉತ್ತರ ಕೊಡಗಿನವರು ಸಾಕಷ್ಟು ಲಾಭ ಪಡೆಯುವುದೂ ಅಸಾಧ್ಯವಾಗಿದೆ. ಬೆಂಗಳೂರಿನಲ್ಲಿ ಮತ್ತೊಂದು ಮೆಡಿಕಲ್ ಕಾಲೇಜು ಆಗುತ್ತಿದೆ. ನಮ್ಮ ವಿದ್ಯಾರ್ಥಿಗಳಿಗೆ ಹೆಚ್ಚಿಗೆ ಸ್ಥಳ ಒದಗಿಸಬೇಕು. ಈ ಕಾಲೇಜಿಗಾಗಿ ಮೈಸೂರು ಸರಕಾರವು ಧನ ಸಹಾಯ ಕೇಳಿದ್ದರೆ ಅದನ್ನು ಕೊಟ್ಟು ನಮಗೆ ಸ್ಥಳ ಕಾಯ್ದಿರಿಸುವುದು ಹಿತ. ಉತ್ತರ ಕೊಡಗಿನಲ್ಲಿ ಕಮ್ಯೂನಿಟಿ ಪ್ರಾಜೆಕ್ಟನ್ನು ಕೈಕೊಂಡುದಕ್ಕೆ ಉತ್ತರ ಕೊಡಗಿನವರ ಪರ ವಂದಿಸುತ್ತೇನೆ.

ಶ್ರೀ ಕೋರನ ದೇವಯ್ಯನವರು

೧೯೪೭ರಲ್ಲಿ ಹಿಂದೂದೇಶಕ್ಕೆ ಸ್ವಾತಂತ್ರ್ಯ ಬಂದರೂ ಸಿ, ವರ್ಗದ ಸಂಸ್ಥಾನಗಳಿಗೆ ಅದರ ಅವಕಾಶ ದೊರೆಯಲಿಲ್ಲ. ಈಗ ಜವಾಬ್ದಾರಿ ಸರಕಾರ ಕೊಟ್ಟ ಕೇಂದ್ರದವರನ್ನೂ, ನಮಗೆ ಈ ಸರಕಾರ ದೊರೆಯಲು ಪ್ರಯತ್ನಿಸಿದ ಮುಖ್ಯ ಮಂತ್ರಿಯವರನ್ನೂ ವಂದಿಸುತ್ತೇನೆ. ನಮ್ಮ ಪ್ರತಿನಿಧಿಯು ದೆಹಲಿಯಲ್ಲಿದ್ದಾಗ ಅವರು ಕರ್ನಾಟಕದವರೊಡನೆ ಕೂಡಿಕೊಂಡು ಕೊಡಗನ್ನು ವಿಲೀನ ಗೊಳಿಸಲು ಯತ್ನಿಸುತ್ತಿರ ವರೆಂದು ವಾದಿಸುತ್ತಿದ್ದ ಪ್ರತ್ಯೇಕ ಪಕ್ಷದ ಮುಖಂಡರುಗಳು ಇಂದು ಅವರು ಮಾಡಿದ ಉತ್ತಮ ಕೆಲಸವನ್ನ ಮೆಚ್ಚಿದ್ದಾರೆ. ಈಗಲಾದರೂ ಅವರು ಕಣ್ತೆರೆದುದಕ್ಕೆ ಸಂತೋಷಪಡುತ್ತೇನೆ. ಈ ಸಮತೂಗಲ್ಪಟ್ಟ ಬಡ್ಜೆಟ್ಟಿಗಾಗಿ ಮಂತ್ರಿಯವರನ್ನು ವಂದಿಸುತ್ತೇನೆ. ಹಿಂದಿನ ಬಡ್ಜೆಟ್ಟುಗಳಂತಲ್ಲದೆ ಇದರಲ್ಲಿ ರಾಷ್ಟ್ರರಚನಾ ಕೆಲಸಗಳಿಗೆ ಹಣವಿಡಲಾಗಿದೆ. 'ಹಿಂದೂ', 'ಇಂಡಿಯನ್ ಎಕ್ಸ್‌ಪ್ರೆಸ್' ಮೊದಲಾದ ಪತ್ರಿಕೆಯವರು ನಮಗೆ ಕೊಟ್ಟ ಪ್ರೋತ್ಸಾಹಕ್ಕೆ ಅವರನ್ನು ವಂದಿಸಬೇಕು. ಕೊಡಗಿನಲ್ಲಿ ಮಯುಂಟ್‌ಲೆಸ್ ಕೇಂದ್ರವನ್ನು ತೆರೆಯಬೇಕೆಂದು ಪೋಸ್ಟ್ ಮಾಸ್ಟರ್ ಜನರಲನ್ನು ಕೇಳಬೇಕಾಗಿದೆ. ಮಲೇರಿಯಾ ಇಲಾಖೆಯವರು ಪ್ರಥಮ ಬಾರಿ ಉಪಯೋಗಿಸಿದ ಔಷಧಿಯು ಪರಿಣಾಮಕಾರಿಯಾಗಿತ್ತು. ಆದರೆ ಇತ್ತೀಚೆಗೆ ಹೆಚ್ಚಿನ ಪ್ರಭಾವ ಕಾಣುತ್ತಿಲ್ಲ. ನೊಣಗಳೇ ರೋಗಕ್ಕೆ ಕಾರಣ. ಅವುಗಳ ನಾಶವಾಗಬೇಕು. ಗ್ರಾಮಗಳಲ್ಲಿ ವ್ಯವಸಾಯದ ಬಗ್ಗೆ ಹೆಚ್ಚಿನ ಪ್ರಚಾರ ನಡೆಯಬೇಕು. ದನಗಳನ್ನು ಮೇಯಿಸುವ ಕೇಂದ್ರಗಳನ್ನು ಆಲ್ಲಲ್ಲಿ ಮಾಡಿ ಕಡಿಮೆ ದರದ ದಕ್ಷಿಣೆಯಿಂದ ಮೇಯಿಸುವ ಅನುಮಾಡಬೇಕು. ಮಡಿಕೇರಿ ಮೈಸೂರು ಘಾಟನ್ನು ಕೂಡಿಗೆಗೆ ಸಾಗಿಸಿ ಯಲು ಶೀಘ್ರ ಮಾರ್ಗನಿಸಿರುವುದು ಯೋಗ್ಯ. ಅಧ್ಯಾಪಕರ ಸ್ಥಿತಿಯನ್ನು ಉತ್ತಮ ಗೊಳಿಸಲು ಜಿಲ್ಲಾ ಬೋರ್ಡನ್ನು ಸರಕಾರ ತೆಗೆದುಕೊಳ್ಳಬೇಕು. ಗ್ರಾಮ ಅಭಿವೃದ್ಧಿಗೆ ಹೆಚ್ಚಿನ ನಿಗವಿಡಬೇಕು. ಹಿಂದುಳಿದ ಪಂಗಡದ ವಿದ್ಯಾರ್ಥಿಗಳಿಗೆ ಹತ್ತು ವರ್ಷಗಳ ರಿಯಾಯಿತಿ ಕೊಟ್ಟರೆ ಸಾಕು. ನಂತರ ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡಬೇಕೆ ಎನ್ನುವುದಕ್ಕೆ ಈ ಹಿಂದುಳಿದ ಪಂಗಡಗಳೇ ಇಲ್ಲದಂತೆ ಮಾಡುವದು ಸರಕಾರದ ಕರ್ತವ್ಯವಾಗಿದೆ. ಪರ್ಮನೆಂಟ್ ಪ್ರಾವಿಡೆಂಟ್ ಫಂಡ್, ಏಲಕ್ಕಿಗಳನ್ನು ಕರಾವಳಿಗೆ ಸಾಗಿಸಲು ಆದು ಸದಾರಿಯಾಗುವುದು. ಇದನ್ನು ನಿಶ್ಚಯಿಸುವಾಗ ಶಾಸನ ಸಭಾಸದರನ್ನು ಕೇಳಲಿಲ್ಲವೆಂಬುದು ಸರಿಯಲ್ಲ. ಇದು ಕೊಡಗಿನ ಪಂಚವಾರ್ಷಿಕ ಯೋಜನೆಯಲ್ಲಿರುವ ವಿಷಯವಾಗಿದೆ. ಭಾಗಮಂಡಲವು ಯಾತ್ರೆಯ ಸ್ಥಳ. ಏಲಕ್ಕಿ, ಟಿಂಬರುಗಳಿಗೆ ಹೆಸರಾದ ಸ್ಥಳ. ಆದ್ದರಿಂದ ಈ ರಸ್ತೆ ಪ್ರಾಮುಖ್ಯವಾದುದೆಂದು ನನ್ನ ಮಿತ್ರ ಶ್ರೀ ಕರುಂಬಯ್ಯನವರಿಗೆ ಹೇಳಬಯಸುತ್ತೇನೆ. ಮಲೆ ಪೂರಾಟದ ಏರ್ಪಾಡು ತೃಪ್ತಿಕರವಾಗಿದೆ. ಹಲವಾರು ವರುಷಗಳಿಂದ ಮಲೆಗಳನ್ನು ನಡೆಸುತ್ತಿರುವವರನ್ನು ಕಡೆಗಣಿಸಿ ಕೇವಲ ವರ್ಷ ವರ್ಷದ ಹರಾಜು ಉತ್ತಮವಲ್ಲ. ಚುನಾವಣೆಯ ಕಾಲದಲ್ಲಿ ದೂರದ ಶಿಸ್ತಿನಿಂದ ರಿಜರ್ವ್ ಪೋಲೀಸರನ್ನು ಚೀಫ್ ಕಮಿಷನರು ತಾರದಿದ್ದರೆ ಏನಾಗುತ್ತಿತ್ತೋ ಹೇಳಲಾಗುವದಿಲ್ಲ. ಚೀಫ್ ಕಮಿಷನರು ದಕ್ಷರು. ಅವರ ಮಾರ್ಗದರ್ಶನದಲ್ಲಿ ಸರ್ವವೂ ಹಿತಕರವಾಗಿ ನಡೆಯುವುದೆಂದು ಭಾವಿಸುವೆನು.

Edited printed and published by P. I. Belliapa at 'Kodagu' Press, Mercara, for Kodagu Ltd.

Licence No. 60.
Licenced to Post without Prepayment

Reg. No. M. 1550,
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ಬಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಖು ೮-೮-೧೯೫೨ನೇ ಶುಕ್ರವಾರ | ಸಂಚಿಕೆ ೧೦

"ಕಮ್ಯೂನಿಟಿ ಪ್ರೊಜೆಕ್ಟ್" ಅಂದರೇನು?

'ಕಮ್ಯೂನಿಟಿ ಪ್ರೊಜೆಕ್ಟ್' ಯೋಜನೆಯನ್ನು ಉತ್ತರ ಕೊಡಗಿನಲ್ಲಿ ಸರಕಾರವು ತರುವುದೆಂಬುದನ್ನು ತಿಳಿದವು 'ಕಮ್ಯೂನಿಟಿ ಪ್ರೊಜೆಕ್ಟ್' ಎಂದರೇನು—ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಇತ್ತೀಚೆಗೆ ಭಾರತ ಸರಕಾರದ ಯೋಜನಾ ಸಮಿತಿಯು (Planing Commission) ದೇಶದ ಬೇರೆ ಬೇರೆ ಭಾಗಗಳಲ್ಲಿ ಸುಮಾರು ೫೫ ಕಮ್ಯೂನಿಟಿ ಪ್ರೊಜೆಕ್ಟ್ ಕ್ಷೇತ್ರಗಳ ಅಭಿವೃದ್ಧಿಯ ಬಗ್ಗೆ ಕಾರ್ಯಕ್ರಮ ಮಂಜೂರು ಮಾಡಿದೆ. ಈ ಕ್ಷೇತ್ರವು ಸುಮಾರು ೧೨ ಮಿಲಿಯ ಜನಸಂಖ್ಯೆಯುಳ್ಳ ೧೬,೦೦೦ ಗ್ರಾಮಗಳನ್ನೊಳಗೊಂಡಿದೆ. ಕ್ಷೇತ್ರದ ಪ್ರಮಾಣ ಸುಮಾರು ೧೫ ಮಿಲಿಯ ಎಕ್ರೆಗಳಷ್ಟಾಗುತ್ತದೆ. ಇಷ್ಟು ಕೈಕೊಳ್ಳಲ್ಪಡುವ ಈ ಅಭಿವೃದ್ಧಿಯು ಎಂತಹದು? ಕಮ್ಯೂನಿಟಿ ಪ್ರೊಜೆಕ್ಟ್ ಯೋಜನೆಗೂ ಇತರ ಅಭಿವೃದ್ಧಿ ಯೋಜನೆಗಳಿಗೂ ಇರುವ ಅಂತರವೇನು? ಕಮ್ಯೂನಿಟಿ ಪ್ರೊಜೆಕ್ಟ್ ಅನ್ವಯ ಅಭಿವೃದ್ಧಿಯು ಯಾವ ರೀತಿಯಲ್ಲಿ ಸಾಗುವುದು?

ಇವೇ ಕೆಲವು ಮತ್ತು ಇತರ ಹಲವು ಪ್ರಶ್ನೆಗಳನ್ನು ಉತ್ತರಿಸುತ್ತ ಯೋಜನಾ ಸಮಿತಿಯು ಕಮ್ಯೂನಿಟಿ ಪ್ರೊಜೆಕ್ಟ್ ಆಡಳಿತ ಮಂಡಳಿಯವರು ಒಂದು ಚಿಕ್ಕ ಪತ್ರಿಕೆಯನ್ನು ತಯಾರಿಸಿ ಅದನ್ನು ಬೇರೆ ಬೇರೆ ಸಂಸ್ಥಾನೀ ಸರಕಾರಗಳಿಗೆ ಹಂಚಿರುವರು. ಕಮ್ಯೂನಿಟಿ ಪ್ರೊಜೆಕ್ಟ್ ಯೋಜನೆಗಳ ಕೇಂದ್ರ ಆಡಳಿತಾಧಿಕಾರಿ ಶ್ರೀ ಎಸ್. ಕೆ. ಡೇಯವರು ಆ ಪತ್ರಿಕೆಯಲ್ಲಿ ಬರೆದ ತಮ್ಮ ಪ್ರಸ್ತಾವನೆಯಲ್ಲಿ ಕಮ್ಯೂನಿಟಿ ಪ್ರೊಜೆಕ್ಟ್ ಯೋಜನೆಯನ್ನು ಒಳ್ಳೆಯ ಗ್ರಹಿಕೆಯಿಂದ ನೋಡಬೇಕಾದ ಅಗತ್ಯತೆಯಿಂದ ಬರೆದ ಒಂದು ದೃಷ್ಟಿಯು ತೋರುತ್ತದೆ. ಪ್ರಕೃತಿ ದತ್ತವಾಗಿ ಬೆಳೆದ ಗೋಡಾದಿಗಳನ್ನು ಸ್ವಾಭಾವಿಕವಾಗಿ ಬೆಳೆಯಲು ಒಂದು ಉದ್ಯಾನ ಸಸ್ಯ ಅದರ ವ್ಯತ್ಯಾಸವಿಲ್ಲವೇ? ಈ ರೀತಿ ಕಮ್ಯೂನಿಟಿ ಪ್ರೊಜೆಕ್ಟ್ ಎಂಬುದು ನಿಯಮಬದ್ಧವಾದ ಒಂದು ಸುವ್ಯವಸ್ಥಿತ ಯೋಜನೆ ಎಂಬುದನ್ನು ಶ್ರೀ. ಡೇಯವರು ವಿವರಿಸಿದ್ದಾರೆ.

ಯೋಜನೆಯ ರೂಪರೇಖೆಗಳು

ಕಮ್ಯೂನಿಟಿ ಪ್ರೊಜೆಕ್ಟ್ ಎಂಬುದು ಭಾರತಕ್ಕೆ ತೀರ ಹೊಸ ಯೋಜನೆ. ಇದನ್ನು ಈ ಮೊದಲು ನಾವು ಕಂಡದ್ದಿಲ್ಲ, ಅರಿತದ್ದಿಲ್ಲ. ಆದರೆ ಈ ಯೋಜನೆಯು ಸಫಲವಾಯಿತೆಂದರೆ ನಾವು ಈ ಮೊದಲು ಎಂದೂ ಕಲ್ಪಿಸದ ಮಟ್ಟಕ್ಕೆ ನಮ್ಮ ನಾಡು ಅಭಿವೃದ್ಧಿಹೊಂದುವುದರಲ್ಲಿ ಸಂಶಯವಿಲ್ಲ. ಆಯಾಯ ಕಮ್ಯೂನಿಟಿ ಪ್ರೊಜೆಕ್ಟ್ ಕ್ಷೇತ್ರಕ್ಕೆ ಸಂಬಂಧಪಟ್ಟ ಸ್ತ್ರೀ ಪುರುಷರ ಹಾಗೂ ಮಕ್ಕಳ ಜೀವನದ ಕುರಿತಾದ ಹಕ್ಕುಗಳನ್ನು ಸ್ಥಾಪಿಸಲು ಈ ಯೋಜನೆಯು ಮಾರ್ಗದರ್ಶಕವಾಗುವುದು. ಈ ಉದ್ದೇಶವು ಸಫಲವಾಗಬೇಕಾದರೆ ಆಯಾಯ ಕ್ಷೇತ್ರದ ಜನರ ಸಹಕಾರ ಮತ್ತು ಸಾಮೂಹಿಕ ಬೆಂಬಲ ಅತ್ಯವಶ್ಯ. ಜೊತೆಗೆ ಸರಕಾರದ ಕಡೆಯಿಂದಲೂ ಬೇಕಾಗುವ ಉತ್ತೇಜನ ಮತ್ತು ಸಹಾಯ ವಿಪುಲವಾಗಿ ದೊರೆಯುತ್ತದೆ. ಹೀಗೆ ಕಮ್ಯೂನಿಟಿ ಪ್ರೊಜೆಕ್ಟ್ ಯೋಜನೆಯಲ್ಲಿ ಮುಂದಾಳುತನ ಮತ್ತು ಅಧಿಕ ಬೆಂಬಲವು ಸರಕಾರದ ಕಡೆಯಿಂದ ದೊರೆಯುತ್ತಿರುವುದಾದರೆ, ಕಾರ್ಯರೂಪದಲ್ಲಿ ಅದು ಜಾರಿಯಾಗುವ ಸತ್ಫಲವನ್ನು ತರುವ ಹೊಣೆಗಾರಿಕೆ ಜನರ ಮೇಲೆ ಹೊಂದಿಕೊಂಡಿದೆ.

ಆದುದರಿಂದ ಸಾರ್ವಜನಿಕ ಸಹಕಾರವು ಎಷ್ಟು ಹೆಚ್ಚಾಗಿ ದೊರೆಯುವುದೋ, ಅಷ್ಟು ಈ ಯೋಜನೆಗಳು ಜಯಪ್ರದವಾಗುವವು.

ಸ್ಥೂಲ ಎರಡು ರೀತಿಯ ಕಮ್ಯೂನಿಟಿ ಪ್ರೊಜೆಕ್ಟ್ ಯೋಜನೆಗಳನ್ನು ಕಲ್ಪಿಸಲಾಗಿದೆ. (೧) ಮೂಲ ಪಟ್ಟಣವೊಂದು ಇಲ್ಲದ ಆ ಸುತ್ತಣ ಪ್ರದೇಶಗಳಲ್ಲಿ ಜನರಿಗೆ ಕೃಷಿ ಅಭಿವೃದ್ಧಿಯನ್ನು ತರುವಂತಹ ಮೂಲಭೂತ ಯೋಜನೆ. (೨) ಪ್ರೊಜೆಕ್ಟ್ ಕ್ಷೇತ್ರದಲ್ಲಿ ಹೊಸದೊಂದು ಪಟ್ಟಣವನ್ನು ಸೃಷ್ಟಿಸುವ ಸಮಗ್ರವಾದ ವ್ಯವಸ್ಥೆ. ಇದನ್ನು ಕೈಕೊಳ್ಳುವುದು ಸುಲಭವಾಗಿಲ್ಲ. ಏಕೆಂದರೆ ಅಧಿಕ ಸಹಾಯದ ಅವಶ್ಯಕತೆ ಇದೆ. ಆದರೆ ಯಾವುದಾದರೊಂದು ತರಗತಿಯದರಲ್ಲೇ ಹೆಚ್ಚಿನ ಗಮನವನ್ನು ಕೊಡಬೇಕಾಗುತ್ತದೆ. ಕೇಂದ್ರ ಸಮಿತಿಯು ಮಂಜೂರ ಮಾಡಿದ ಕಮ್ಯೂನಿಟಿ ಪ್ರೊಜೆಕ್ಟ್‌ಗಳಲ್ಲಿ ಶೇಕಡ ೮೦ರಷ್ಟು ಈ ತರಗತಿಗೆ ಸೇರುತ್ತವೆ. ಉಳಿದವು ಮಾತ್ರ ಎರಡನೇ ವರ್ಗಕ್ಕೆ ಸೇರಿದವುಗಳು.

ಮುಂಚಿನ ವೇಗದಲ್ಲಿ ಕಾರ್ಯಸಾಗಬೇಕು.

ಸಾಮಾನ್ಯವಾಗಿ ಹೇಳುವುದಾದರೆ ಒಂದು ಯೋಜನೆ ಪೂರ್ಣಗೊಳ್ಳಬೇಕಾದರೆ ಕನಿಷ್ಠ ಪಕ್ಷ ಮೂರು ವರ್ಷಗಳ ಅವಧಿಯಾದರೂ ಬೇಕಾಗುವುದು. ಆ ಮೂರು ವರ್ಷಗಳಲ್ಲಿ ಮೊದಲಿನ ೬ ತಿಂಗಳ ಅವಧಿ ಯೋಜನೆ ಕಲ್ಪಿಸುವ ಕಾಲವಾಯಿತು. ಆ ವೇಳೆ ೬ ತಿಂಗಳ ಆರಂಭಿಕ ಸಿದ್ಧತೆಗಳಿಗೆ; ಆ ನಂತರದ ೧೮ ತಿಂಗಳು ಕಾರ್ಯರೂಪಕ್ಕೆ ಹಚ್ಚುವ ಬಗ್ಗೆ; ಆ ವೇಳೆ ೬ ತಿಂಗಳು ಸುಭದ್ರವಾಗುವಂತೆ ಎಲ್ಲವೂ ಪೂರ್ಣತೆಹೊಂದಲು ಬೇಕು. ಹೀಗೆ ಒಟ್ಟು ಮೂರು ವರ್ಷಗಳು. ಮೊದಲಿನ ೬ ತಿಂಗಳುಗಳಲ್ಲಿ ಯೋಜನೆಯ ಬಗ್ಗೆ ಕ್ಷೇತ್ರ ಸಿದ್ಧಗೊಳಿಸುವ ಕಾರ್ಯಾರಂಭ ನಡೆಯುವುದು. ಆ ವೇಳೆ ನಿಜವಾದ ಕೆಲಸ ಆರಂಭವಾಗಿ ಅದು ಅಮಿತ ವೇಗದಲ್ಲಿ ಸಾಗುವುದು. ಹೊಸ ರಸ್ತೆಗಳನ್ನು ರಚಿಸುವುದು. ಹೊಸ ಪಟ್ಟಣದ ರಚನೆ ಇತ್ಯಾದಿ ಯೋಜನೆಯ ಮುಖ್ಯ ಕಾರ್ಯಗಳೆಲ್ಲಾ ಈ ಅವಧಿಯಲ್ಲೇ ನಡೆದುಹೋಗಬೇಕಾಗಿದೆ. ಕೊನೆಗೆ ಹೇಳಿದ ೬ ತಿಂಗಳ ಅವಧಿ ನಡೆದುಹೋದ ಕಾರ್ಯಾಂಶ ಸುಭದ್ರವಾಗುವಂತೆ ಮಾಡಲು ಸಂದುಹೋಗುವುದು.

ಕಾರ್ಯಕ್ರಮ

ಹಲವು ರೀತಿಯ ಅಭಿವೃದ್ಧಿ ಯೋಜನೆಗಳು ಈ ಕಾರ್ಯಕ್ರಮದಲ್ಲಿ ಸೇರಿಕೊಂಡಿವೆ. ಮುಖ್ಯವಾಗಿ ಬಂಜರು ಬಿದ್ದ ಸ್ಥಳಗಳನ್ನು ಕೃಷಿಗೆ ಯೋಗ್ಯವನ್ನಾಗಿ ಮಾಡುವುದು. ನೀರಾವರಿ ಸೌಕರ್ಯಗಳನ್ನೊದಗಿಸುವುದು, ಕೃಷಿಯಲ್ಲಿ ಹೊಸ ಸುಧಾರಣೆಗಳನ್ನು ಬೆಳಕಿಗೆ ತರುವುದು, ತದ್ರೀತಿ ಜಾನುವಾರು ಸಂಪತ್ತು ಹೆಚ್ಚುವ ಯೋಜನೆಗಳನ್ನು ಕೈಕೊಳ್ಳುವುದು ಇತ್ಯಾದಿ ಭೂಸಂಪತ್ತು ಹಾಗೂ ಗೋಸಂಪತ್ತನ್ನು ಊರ್ಜಿತಗೊಳಿಸುವ ಅಭಿವೃದ್ಧಿ ಕಾರ್ಯಗಳು ನಡೆಯುವವು. ಇನ್ನು ವಿಮಾನು ವ್ಯವಸಾಯದ ಅಭಿವೃದ್ಧಿ, ಹಣ್ಣು ಹಂಪಲು ಮತ್ತು ತರಕಾರಿಗಳ ಬೆಳೆಗೆ ಪ್ರೋತ್ಸಾಹ ಕೊಡುವುದು, ಮಣ್ಣಿನ ಕುರಿತು ಸಂಶೋಧನೆ, ಗೊಬ್ಬರಗಳನ್ನು ಒದಗಿಸಿ ಕೊಡುವುದು, ಅರಣ್ಯಗಳಲ್ಲಿ ತೋಟಗಾರಿಕೆ ಇತ್ಯಾದಿ ಸುಧಾರಣೆಗಳೂ ಒಟ್ಟಿಗೆ ಸಾಗುವವು.

ಇನ್ನು ಶಿಕ್ಷಣ ಮತ್ತು ಆರೋಗ್ಯ ಸಂಬಂಧವಾದ ಸುಧಾರಣೆಗಳಲ್ಲಿ ಪ್ರಾಥಮಿಕ ಮಾಧ್ಯಮಿಕ ಮತ್ತು ಹೈಸ್ಕೂಲುಗಳಲ್ಲಿ ಮಕ್ಕಳಿಗೆ ಕಡ್ಡಾಯವಾಗಿ ಧರ್ಮೋದ್ಧರ ಶಿಕ್ಷಣ ಒದಗಿಸುವುದು. ತದ್ರೀತಿ ಸಾಮಾಜಿಕ ಶಿಕ್ಷಣ, ಗ್ರಂಥಾಲಯಗಳ ಸೌಕರ್ಯ, ನಗರ ನೈರ್ಮಲ್ಯ, ಧರ್ಮಾರ್ಥ ವೈದ್ಯಕೀಯ ಚಿಕಿತ್ಸೆ, ಪ್ರಸೂತಿ ಗೃಹಗಳು ಇವೆಲ್ಲಾ ಬರುತ್ತವೆ. ಸಾರಿಗೆಯ ವಿಭಾಗದಲ್ಲಿ ಯೋಗ್ಯ ರಸ್ತೆಗಳನ್ನು ಒದಗಿಸುವುದು, ಟ್ರಾನ್ಸ್‌ಪೋರ್ಟ್ ಸರ್ವಿಸ್, ಪ್ರಾಣಿಗಳ ಮೂಲಕ ಸಾಗಾಟವನ್ನು ಸುಧಾರಿಸುವುದು ಇತ್ಯಾದಿ ಸುಧಾರಣೆಗಳು ಬರುವವು. ಇನ್ನು ಬೇರೆ ಬೇರೆ ಕೈಗಾರಿಕಾ ವೃತ್ತಿಗಳಲ್ಲಿ ಜನರನ್ನು ತರಬೇತಿಗೊಳಿಸುವ ಸುಧಾರಣೆಯು ಯೋಜನೆಯ ಮುಖ್ಯ ಅಂಗವಾಗಿರುತ್ತದೆ.

ಇನ್ನು ಕೃಷಿತಜ್ಞರನ್ನು, ಅಭಿವೃದ್ಧಿ ಕಾರರನ್ನು, ಆರೋಗ್ಯ ಸುಧಾರಣಾ ಕಾರ್ಯಕರ್ತರನ್ನು, ಕಾರ್ಯಕಾರಿ ವಿಭಾಗದ ಅಧಿಕಾರಿಗಳನ್ನು ತರಬೇತಿಗೊಳಿಸುವ ಕಾರ್ಯಕ್ರಮವೂ ಜೊತೆಯಲ್ಲೇ ಸಾಗುವುದು.

ಗುಡಿ ಕೈಗಾರಿಕೆಗಳನ್ನು ಮತ್ತು ಇತರ ಸಾಮಾನ್ಯ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದರ ಮೂಲಕ ಹೆಚ್ಚಿನವರಿಗೆ ಉದ್ಯೋಗ ದೊರಕಿಸಿಕೊಡಬೇಕೆಂಬುದೇ ಯೋಜನೆಯ ಮುಖ್ಯ ಧ್ಯೇಯವಾಗಿದೆ. ಕ್ಷೇತ್ರವು ಸಾಮಾನ್ಯವಾಗಿ ಅಭಿವೃದ್ಧಿಹೊಂದುವಾಗ ನಿರುದ್ಯೋಗವು ಕ್ರಮೇಣ ಮಾಯವಾಗುವುದರಲ್ಲಿ ಸಂದೇಹವಿಲ್ಲ.

ಇನ್ನು ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಆಗಾಗ ವಿನೋದಗಳನ್ನು ಒದಗಿಸುವುದು, ಸಂತೆಗಳನ್ನು ಏರ್ಪಡಿಸುವುದು, ಆಟಸ್ಪರ್ಧೆಗಳು, ಗ್ರಾಮಾಂತರಗಳಲ್ಲಿ ಯೋಗ್ಯ ಮನೆಗಳ ನಿರ್ಮಾಣ ಮುಂತಾದ ಅಭಿವೃದ್ಧಿಯ ಅಂಗಗಳನ್ನು ಸೇರಿಸಿಕೊಳ್ಳಲಾಗಿದೆ.

ಗೊತ್ತುಪಡಿಸಿದ ಸ್ಥಳಗಳು

ಕಮ್ಯೂನಿಟಿ ಪ್ರೊಜೆಕ್ಟ್‌ಗಳ ಬಗ್ಗೆ ಶಿಫಾರಸು ಮಾಡಲ್ಪಟ್ಟ ಬೇರೆ ಬೇರೆ ಯೂನಿಟ್‌ಗಳಲ್ಲಿ ಎಲ್ಲೆಲ್ಲಿ ಅಭಿವೃದ್ಧಿ ಯೋಜನೆಗಳನ್ನು ಕೈಕೊಳ್ಳಬೇಕೆಂಬುದರ ಬಗ್ಗೆ ಸ್ಥಳಗಳನ್ನು ಗುರುತಿಸಲ್ಪಟ್ಟಿವೆ. ಗ್ರಾಮ, ಮಂಡಿ, ಗ್ರಾಮಾಂತರ ಪಟ್ಟಣ ಹೀಗೆ ಮೂರು ವಿಭಾಗಗಳನ್ನಾಗಿ ಗುರುತಿಸಲಾಗಿದೆ.

'ಹಳ್ಳಿ' ಎಂದು ಗುರುತಿಸಲ್ಪಟ್ಟ ಯೂನಿಟ್‌ನಲ್ಲಿ ಮುಖ್ಯವಾಗಿ ಶುದ್ಧ ನೀರಿನ ಪೂರೈಕೆ, ಕೃಷಿ ವಿಸ್ತರಣ ಸೌಕರ್ಯಗಳು, ನೀರು ಹರಿದು ಹೋಗುವ ವ್ಯವಸ್ಥೆ, ಮಕ್ಕಳ ಶಿಕ್ಷಣ, ಆರೋಗ್ಯಾಭಿವೃದ್ಧಿಯ ಸುಧಾರಣೆ ಇವುಗಳಿಗೆ ಪ್ರಾಮುಖ್ಯತೆ ಕೊಡಲಾಗಿದೆ. ನೀರಾವರಿ ಸೌಕರ್ಯಗಳು, ಬಂಜರುಬಿದ್ದ ಸ್ಥಳಗಳನ್ನು ಕೃಷಿಗೆ ಯೋಗ್ಯವನ್ನಾಗಿ ಮಾಡುವುದು, ರಸ್ತೆಗಳ ರಚನೆ ಇವು ಈ ವಿಭಾಗದ ಅಭಿವೃದ್ಧಿ ಯೋಜನೆಯ ಮುಖ್ಯ ರೂಪರೇಖೆಗಳಾಗಿವೆ.

ಇನ್ನು 'ಮಂಡಿ' ವಿಭಾಗದಲ್ಲಿ ಒಂದು ಚಿಕ್ಕ ಆಸ್ಪತ್ರೆ, ಟಪಾಲು ಮತ್ತು ತಂತಿ ಕಚೇರಿ, ಒಂದು ಟ್ರೈನಿಂಗ್ ಮತ್ತು ಟ್ರಾನ್ಸ್‌ಪೋರ್ಟ್ ಸರ್ವಿಸ್ ಕೇಂದ್ರ, ಒಂದು ಮಾರ್ಕೆಟು, ಕೃಷಿ ಉತ್ಪನ್ನ ಸಂಗ್ರಹಿಸಿಡುವ ಒಂದು ಸಂಗ್ರಹಾಲಯ, ಒಂದು ಪಶು ಕೇಂದ್ರ ಇತ್ಯಾದಿಗಳನ್ನು ಸೂಚಿಸಲಾಗಿದೆ. ಇನ್ನು ಕೃಷಿ ವಿಸ್ತರಣ ಯೋಜನೆಯ ಉಪಕಾರದ ಉಪ—ಪ್ರಧಾನ ಕಚೇರಿಯೊಂದೂ ಈ ವಿಭಾಗದಲ್ಲಿರುವ ಬಗ್ಗೆಯೂ ಸೂಚನೆಯಿದೆ.

ಇನ್ನು ವೈವಿಧ್ಯರೂಪದ ಸುಧಾರಣೆಗಳನ್ನೊಳಗೊಂಡ ಗ್ರಾಮಾಂತರ ಪಟ್ಟಣವೊಂದನ್ನು ರಚಿಸುವ ವಿಭಾಗದಲ್ಲಿ ಹತ್ತು ಹಲವು ಕಾರ್ಯಕ್ರಮಗಳು ಸೇರಿವೆ. ಮು

ಶ್ಯವಾಗಿ ನೆಲವನ್ನು ಕೃಷಿಗೆ ಯೋಗ್ಯವನ್ನಾಗಿ ಮಾಡುವುದು, ಸೈಗಳನ್ನು ಬೆಳೆಸುವುದು, ವಸತೀಗೃಹಗಳನ್ನು, ಅಂಗಡಿಗಳನ್ನು, ಕೈಗಾರಿಕಾ ಕಾರ್ಖಾನೆಗಳನ್ನು ತೆರೆಯುವುದು ಇತ್ಯಾದಿ ವಿವಿಧ ಸುಧಾರಣೆಗಳು ಈ ವಿಭಾಗದಲ್ಲಿ ನಡೆಯಬೇಕಾಗಿದೆ. ಶಾಲೆ ಮತ್ತು ಪಠ್ಯ ಹೀಗೆ ಎರಡೂ ರೀತಿಯ ಶಿಕ್ಷಣಗಳನ್ನು ರಚಿಸುವುದು. ಬೇರೆ ಬೇರೆ ರೀತಿಯ ೧,೦೦೦ ವಸತೀಗೃಹಗಳ ನಿರ್ಮಾಣ, ವಿದ್ಯುಚ್ಛಕ್ತಿಯ ಸಬ್ ಸ್ಟೇಶನ್, ಧಾನ್ಯದ ಅಂಗಡಿಗಳು, ಸಣ್ಣ ಕೈಗಾರಿಕೆಗಳ ಬಗ್ಗೆ ಪ್ರತ್ಯೇಕ ಸ್ಥಳಗಳು, ಕೈಗಾರಿಕೆಗಳಿಗೆ ಬೇಕಾದ ಸಲಕರಣೆಗಳು, ಶಾಲೆಗಳಿಗೆ ಪ್ರತ್ಯೇಕ ಕಟ್ಟಡಗಳು, ಆಸ್ಪತ್ರೆ, ಪಶುಗಳ ಬಗ್ಗೆ ಪ್ರತ್ಯೇಕ ಆಸ್ಪತ್ರೆ, ಕೋಳಿಗಳ ಹಾಗು ಸೋವುಗಳ ಸಾಕಣಿಕೆ ಬಗ್ಗೆ ಪ್ರತ್ಯೇಕ ಕೇಂದ್ರಗಳು ಮುಂತಾದ ಹಲವಾರು ಯೋಜನೆಗಳು ಈ ವಿಭಾಗಕಾರ್ಯದಲ್ಲಿ ನಡೆಯಬೇಕಾಗಿವೆ.

ವೃತ್ತಿಗನುಸರಿಸಿ ವಿತರಣ.

ಈ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಬೇರೆ ಬೇರೆ ವೃತ್ತಿಗಳಿಗನುಸಾರ ಜನಸಂಖ್ಯೆಯನ್ನು ಹಂಚಿಹಾಕುವ ವಿಷಯವನ್ನು ನಿರ್ಣಯಿಸಲಾಗಿದೆ. ಒಂದು ಹಳ್ಳಿ ಯೂನಿಟ್‍ನಲ್ಲಿ ಶೇಕಡ ೬೦ ರಷ್ಟು ಮಂದಿ ಕೃಷಿ ವಿಭಾಗದಲ್ಲಿ, ೧೨ ರಷ್ಟು ಮಂದಿ ಕಲೆಗಳು ಮತ್ತು ಗುಡಿಕೈಗಾರಿಕಾ ವಿಭಾಗದಲ್ಲಿ, ೧೦ ರಷ್ಟು ಚಿಕ್ಕ ಕ್ಷೇತ್ರದ ಕೈಗಾರಿಕೆಗಳಲ್ಲಿ ದುಡಿಯುವಂತೆ ಹಂಚಿಹಾಕಲಾಗುವುದು. ಉಳಿದವರು ಟ್ರಾನ್ಸ್‌ಪೋರ್ಟ್ ಕೆಲಸಗಾರರಾಗಿ, ಅಂಗಡಿಗಳಲ್ಲಿ, ಅಧ್ಯಾಪಕರಾಗಿ, ಆರೋಗ್ಯ ಸೇವಾ ಶಾಖೆಗಳಲ್ಲಿ, ಅಂಚೆಯವ, ಹಜಾಮ, ವೆಟ್ಟಿ ಹೊಲಿಯುವವರು ಇತ್ಯಾದಿ ಬೇರೆ ಬೇರೆ ಉಪವೃತ್ತಿಗಳಿಗೆ ಸೇರಿಸಲ್ಪಡುವರು. ಇನ್ನು ಮೈಗಳ್ಳರಾಗಿ ಅಂಡಲೆಯುವ ಮಂದಿಗೂ ಕಮ್ಯೂನಿಟಿ ಪ್ರೊಜೆಕ್ಟ್ ಯೋಜನೆಯಲ್ಲಿ ಅಧಿಕೃತ ಮನ್ನಣೆ ಕೊಡಲಾಗಿದೆ. ಅವರ ಶೇಕಡಾಂಶ ಸುಮಾರು ೧೧ ರಷ್ಟಿರಬಹುದು!

ಇನ್ನು ಪಟ್ಟಣ ಯೂನಿಟ್‍ನಲ್ಲಿ ಸರಾಸರಿ ಕುಟುಂಬಗಳ ಸಂಖ್ಯೆಯು ಸುಮಾರು ೧,೬೦೦ ರಷ್ಟಿದ್ದು, ವೃತ್ತಿಸಂಬಂಧವಾದ ಜನಸಂಖ್ಯೆಯ ವಿತರಣವು ಕಲಾ ವಿಭಾಗ, ಗುಡಿಕೈಗಾರಿಕೆಗಳು, ವ್ಯಾಪಾರ, ಉದ್ಯೋಗ, ನೌಕರಿ, ಸಾಮಾನ್ಯ ಎಂಬಿತ್ಯಾದಿ ವಿಭಾಗಗಳನ್ನೊಳಗೊಳ್ಳುವುದು.

ಯುದ್ಧ ತಳಹದಿಯ ಮೇಲೆ ನಡೆಯಬೇಕಾಗಿದೆ.

ಈಗಿನ ದೇಶದ ಆರ್ಥಿಕ ರುಗ್ಣಾವಸ್ಥೆಯಲ್ಲಿ ಕಮ್ಯೂನಿಟಿ ಪ್ರೊಜೆಕ್ಟ್ ಯೋಜನೆಯು ಭಾರತದಲ್ಲಿ ಯುದ್ಧ ತಳಹದಿಯ ಮೇಲೆ ನಡೆಯುವ ಒಂದು ಯತ್ನವಾಗುವುದು. ಜನಸಹಾಯ ಮತ್ತು ಬೇಕಾದ ಸಲಕರಣೆಗಳು ಅಲ್ಲಿವೆ. ಆದರೆ ಅವುಗಳನ್ನು ಕಾರ್ಯರೂಪಕ್ಕೆ ಹಚ್ಚುವ ಯತ್ನ ಮಾತ್ರ ನಡೆಯುವುದು ಬಾಕಿ ಇದೆ. ಅದಕ್ಕೆ ಬೇಕಾಗಿ ಕಮ್ಯೂನಿಟಿ ಪ್ರೊಜೆಕ್ಟ್ ಸಮಿತಿಯವರು ಹೊರಡಿಸಿದ ಪತ್ರಕದಲ್ಲಿ ಈ ಮೂರು ತತ್ವಗಳನ್ನು ಕೊನೆಯದಾಗಿ ಹೇಳಲಾಗಿದೆ. ಮಾತ್ರವಲ್ಲ ಆ ತತ್ವಗಳನ್ನು ಅನುಸರಿಸಿ ನಾವು ಮುಂದಡಿ ಇಟ್ಟರೆ ಕಮ್ಯೂನಿಟಿ ಪ್ರೊಜೆಕ್ಟ್ ಯೋಜನೆಯು ಅತ್ಯಂತ ಜಯಪ್ರದವಾಗಿ ಭಾರತದ ನವಮನ್ವಂತರದ ಉದಯಕ್ಕೆ ಕಾರಣವಾಗದಿರದೆಂಬ ದೃಢವಿಶ್ವಾಸವೂ ವ್ಯಕ್ತವಾಗಿದೆ. ಆ ತತ್ವತ್ರಯಗಳೆಂದರೆ: 'ಸ್ನಾಯುಗಳು ಅದನ್ನು ಮಾಡಬಲ್ಲವು' 'ಅದನ್ನು ಮಾಡಲು ಸ್ನಾಯುಗಳನ್ನು ತರಬೇತಿಗೊಳಿಸುವುದು ಸಾಧ್ಯ'. 'ಹಾಗೆ ಮಾಡಲು ಅನುಕೂಲ ಪರಿಸ್ಥಿತಿಯನ್ನೂ ಸೃಷ್ಟಿಸಬಹುದಾಗಿದೆ'. ವ್ಯತಿರಿಕ್ತವಾಗಿ ಜನರ ಸಹಾಯ ಭೂಮಿ ಮತ್ತು ಸಲಕರಣೆಗಳ ಕೊರೆಯುಂಟಾದರೆ ಕಮ್ಯೂನಿಟಿ ಪ್ರೊಜೆಕ್ಟ್ ಮತ್ತೊಂದು 'ಫತ್ತೆಪುರ ಸಿಕ್ರಿ' ಯಾಗುವುದೆಂದೂ ಸಂಬಂಧಪಟ್ಟ ಪತ್ರಕವು ಎಚ್ಚರಿಸುತ್ತದೆ.

'ಪ್ರಭಾತ.'

ಅತಿ ಸುಂದರ ಯಾರು-

ಪುರುಷನೋ ಸ್ತ್ರೀಯೋ?

[ಲೇಖಕರು ವೈದ್ಯಗುರು ಎಂ. ಆರ್. ಭಟ್.]

ಸಕಲ ಮಾನವಸಾಹಿತ್ಯವು ಪ್ರೇಮಪದಗಳಿಂದ ತುಂಬಿದೆ; ಮತ್ತು ಆ ಕಥೆಗಳಲ್ಲಿ ಹೆಚ್ಚಾಗಿ ಪುರುಷನೇ ಸ್ತ್ರೀಯೊಡನೆ ಪ್ರೇಮವನ್ನಾಡುತ್ತಿರುತ್ತಾನೆ. ಹಿಂದೀ ಹಾಗೂ ಸಂಸ್ಕೃತ ಸಾಹಿತ್ಯವು ಪೂರ್ಣವಾಗಿ ಪ್ರೇಯಸಿಯ ವರ್ಣನೆಯಿಂದ ಹಾಗೂ ದುಃಖಿತಮನಸ್ಸಿನಿಂದ ತುಂಬಿ ತುಳುಕುತ್ತದೆ. ಆದರೆ, ಮನುಷ್ಯಜಾತಿಯ ಸ್ತ್ರೀಪ್ರೇಮವು ಅಪ್ರಾಕೃತಿಕ ಹಾಗೂ ಅಸ್ವಾಭಾವಿಕವಾಗಿದೆ. ಇದರ ಪ್ರಮಾಣವು ಸ್ವಯಂ ಪ್ರಕೃತಿಯೇ ಆಗಿದೆ

ಪಶುಪಕ್ಷಿಗಳಲ್ಲಿ ಸರ್ವತ್ರ ಆಕರ್ಷಣಕೇಂದ್ರವು ಪುರುಷನಾಗಿದ್ದಾನೆ; ಸ್ತ್ರೀಯಲ್ಲ. ನಾವು ಜೇಡರ ಹುಳವನ್ನೇ ತಕ್ಕೊಳ್ಳಿರಿ. ಗಂಡು ಜೇಡರ ಹುಳವು ಚಪಲವಾಗಿರುತ್ತದೆ. ಹಾಗೂ ಕುಣಿಯಲೂ ಕೂಡಾ ಅರಿಯುತ್ತದೆ. ಹೆಣ್ಣು ಜೇಡರ ಹುಳವು ಸ್ಥೂಲ ಹಾಗೂ ದಪ್ಪವಾಗಿರುತ್ತದೆ; ಮತ್ತು ಸೋಮಾರಿಯೂ ಆಗಿದೆ; ಮತ್ತು ತನ್ನ ಜಾಳಿಯಲ್ಲಿ ಪಸರಿಸಿ, ಮಲಗುತ್ತಲೇ ಇರುತ್ತದೆ; ಗಂಡುಹುಳವು ಕುಣಿಯುವಾಗ, ಹೆಣ್ಣುಹುಳವು ಆನಂದ ಮೋಹಿತವಾಗುತ್ತದೆ.

ಹೆಡೆಯಿರುವ ನಾಗಗಳಲ್ಲಿ, ಗಂಡು ನಾಗನಿಗೆ ಮಾತ್ರ ಫಣ(ಹೆಡೆ)ವಿರುತ್ತದೆ; ಹೆಣ್ಣುನಾಗಕ್ಕೆ ಆ ತೆರದ ಹೆಡೆಯಿರುವುದಿಲ್ಲ. ಗಂಡುನಾಗವು ಪ್ರೇಮಪ್ರದರ್ಶನ ಮಾಡುವಾಗ, ಹೆಡೆಯನ್ನು ಎತ್ತಿ ಉಲ್ಲಾಸಗೊಂಡು ಶೋಭಿಸುತ್ತದೆ; ಅದರಿಂದ ಹೆಣ್ಣು ನಾಗವು ಮೋಹಿತವಾಗುತ್ತದೆ. ಸರ್ಪಗಳ ಪ್ರೇಮಾಲಿಂಗವು ಸಹ ಪ್ರಸಿದ್ಧವಾಗಿದೆ; ಇವೆರಡು ಗಂಡು ಮತ್ತು ಹೆಣ್ಣು ನಾಗಗಳು ಅತ್ಯಂತ ಉದ್ರೇಕಗೊಂಡು, ಅದರಿಂದ ತಿರುಚಿದ ಹುರಿಹಗ್ಗದಂತೆ ಕಾಣಿಸುತ್ತವೆ; ಇಂತಹ ಅವಸ್ಥೆಯಲ್ಲಿ ಅವುಗಳನ್ನು ಮನುಷ್ಯನು ನೋಡಿದರೆ, ಮತ್ತು ಅವುಗಳನ್ನು ನೋಡುತ್ತಿರುವ ಮನುಷ್ಯನ ಮೇಲೆ ಅವುಗಳ ದೃಷ್ಟಿಯು ಬಿದ್ದರೆ, ಅವುಗಳು ಅವನನ್ನು ಮನೆಯ ತನಕ ಓಡಿಸುವವು. ಕಪ್ಪೆಯ ಬಾಯಲ್ಲಿ ಎರಡು ಕಡೆಗಳಲ್ಲಿಯೂ ಎರಡು ಚೀಲಗಳಿವೆ; ವರ್ಷಾಋತುವಿನಲ್ಲಿ ಸ್ತ್ರೀಯರ ಶ್ರಾವಣ ಮಾಸದ ಹಾಡನ್ನು ಹಾಡುವಾಗ್ಗೆ ಗಂಡು ಕಪ್ಪೆಯು ತೆರಳಾಯಿಸುತ್ತದೆ; ಹೆಣ್ಣು ಕಪ್ಪೆಯ ಬಾಯಲ್ಲಿ ಈ ಚೀಲಗಳಿರುವುದಿಲ್ಲ; ಮಾತ್ರವಲ್ಲ, ಅದು ಹಾಡುವುದೇ ಇಲ್ಲ. ಗಂಡು ಕಪ್ಪೆಯ ಈ ಮಧುರ ಸಂಗೀತವನ್ನು ಕೇಳಿ ಹೆಣ್ಣು ಕಪ್ಪೆಯು ಗಂಡಿನ ಕಡೆಗೆ ಆಕರ್ಷಿತವಾಗುತ್ತದೆ

ನೀವು ನವಿಲನ್ನು ನೋಡುವಿರೇ? ನವಿಲಿನ ಸೌಂದರ್ಯವು ಅದರ ಉದ್ದವಾದ ಥಳಥಳಿಸಿ ಹೊಳೆಯುವ ಬಹುಬಣ್ಣದ ಬಾಲದಲ್ಲಿದೆ; ಆದರೆ, ಆ ಸೌಂದರ್ಯದ ಬಾಲ (ಅಂಗ)ವು ಹೆಣ್ಣು ನವಿಲಿಗಿಲ್ಲ; ಆಕಾಶದಲ್ಲಿ ಉತ್ತೇಜಿತ ಹಾಗೂ ಕವಿಯುವ ಘನಘೋರ ಮೋಡಗಳು ಮುಚ್ಚಿಹೋದ ನಂತರ, ಮಂದ ಮಧುರ ವಾಯುವು ಬೀಸುತ್ತಿರುವಾಗ, ಗಂಡು ನವಿಲು, ಮೊಟ್ಟ ಮೊದಲ ಕೂಗುತ್ತದೆ; ಅನಂತರ ತನ್ನ ಬಾಲವನ್ನು ಹರಡಿಸಿ, ಕುತ್ತಿಗೆಯನ್ನು ಗರ್ವದಿಂದ ಹಾರಿಸಿ ಸೆಟೆಸಿ ಎದೆಯನ್ನು ಉಬ್ಬಿಸಿ, ಬಹು ಒಯ್ಯಾರದಿಂದ ಕುಣಿಯುತ್ತಿರುತ್ತದೆ. ಸಮೀಪದಿಂದ ಹೆಣ್ಣು ನವಿಲು ಗಂಡನ್ನು ಆ ಕಾಲದಲ್ಲಿ ನೋಡುವಾಗ, ಅದು (ಗಂಡು) ತನ್ನ ರೆಕ್ಕೆಗಳನ್ನು ಇಂಗಿತದಿಂದ ಕಲಕಿ ಕುಲುಕಿ 'ಸರ್ರ್' ಎಂದು ಶಬ್ದ ಮಾಡುತ್ತದೆ; ಆಗ, ಹೆಣ್ಣು ನವಿಲು ಆಶ್ಚರ್ಯಚಕಿತವಾಗಿ ಆ ಅಲಂಕಾರದ ಕಲೆಯ ಮೇಲೆ ಮಾತ್ರವಲ್ಲ ಸ್ವಯಂ ಕಲಾಕಾರನ ಮೇಲೆಯೂ ತನ್ನಷ್ಟಕ್ಕೆ ಮೋಹಿತವಾಗಿ ಮುಂಬರುತ್ತದೆ.

ಸುದೂರ ಪೂರ್ವದ ದ್ವೀಪಸಮೂಹ ಹಾಗೂ ಆಸ್ಟ್ರೇಲಿಯಾ ನ್ಯೂಜಿಲೆಂಡಿನ 'ಲಾಯರ್‌ಬರ್ಡ್' ಎಂಬ ಪಕ್ಷಿಯ ಸ್ಥಿತಿಯೂ ಇದೇ ಆಗಿದೆ. ಅದರ ಬಾಲದ ಸ್ವರ್ಣವು ಸಾಗರವೆಂಬ ವಾದ್ಯದಂತೆ ಇರುತ್ತದೆ; ಹೆಣ್ಣು ಪಕ್ಷಿಗಿಲ್ಲ. ಆ ಪಕ್ಷಿಯು ನೋಡಲು ಅತ್ಯಂತ ಸುಂದರ ಹಾಗೂ ಚಿತ್ತಾಕರ್ಷಕವಾಗಿದೆ.

ಪಕ್ಷಿಗಳಲ್ಲಿ ಸಂಗೀತಜ್ಞ ಕೋಗಿಲೆಯಲ್ಲಿಯೂ ಸೌಂದರ್ಯವಿದೆ. ಹೆಣ್ಣು ಕಾಗೆಯಂತೆ ಕಪ್ಪಾಗಿರುತ್ತದೆ; ಆದರೆ, ಗಂಡು ಕೋಗಿಲೆಯು ಸ್ವಲ್ಪ ಕಂದುಬಣ್ಣದ್ದು ಹಾಗೂ ಸ್ವಲ್ಪ ಚಿತ್ರಬಣ್ಣದ್ದೂ ಆಗಿದೆ.

ನಾವೆಲ್ಲರೂ ಹುಂಜದ ಕೂಗನ್ನು ಕೇಳಿರುತ್ತೇವೆ; ಆದರೆ, ಅದರ ಕೋಮಲಾಂಗಿ ಪತ್ನಿ ಕೋಳಿಗೆ ಆ ಸಂಗೀತವು ಏಕೆ ಬರುವುದಿಲ್ಲವೆಂದು ನಾವು ವಿಚಾರ ಮಾಡುವುದಿಲ್ಲ. ಹುಂಜದ ತಲೆಯ ಮೇಲಿರುವ ಕೆಂಪು ಮುಕುಟವೇ, ಆ ಪಕ್ಷಿಜಾತಿಯ ಸೌಂದರ್ಯವಾಗಿದೆ; ಹುಂಜದ ಎದ್ದು ನಿಂತ ಜಾಲರಿ ಹಾಗೂ ಆಡಂಬರದ ಬಾಲವು ಬಹು ಶೋಭಾಯುಳ್ಳದ್ದು; ಹುಂಜವು ಒಂದೆರಡಾವರ್ತಿ ಚಿಲ್ಲಿಸಿ ಚಿಲ್ಲಿಸಿ ಕೂಗುತ್ತ ಎದೆಯನ್ನು ಅರಳಿಸಿ, ಹಾಗೂ ಬಾಲವನ್ನೆತ್ತಿ, ದುಂಡು ದುಂಡಾಗಿ ಪ್ರದಕ್ಷಿಣೆ ಮಾಡಿ ಕಾಲಕಳೆಯುವಾಗ, ಯಾವ ಬ್ರಹ್ಮಚಾರಿಣಿ ಕೋಳಿ(ಹೆಣ್ಣು)ಯು ಸಂಯಮವು ಬಿಡದೆ ಇರುವುದು?

ಈಗ ನಾವು ವನದ ಕಡೆಗೆ ದೃಷ್ಟಿಸುವಾ; ಸರ್ವಪ್ರಥಮ, ವನರಾಜ ಸಿಂಹವನ್ನೇ ಪರೀಕ್ಷಿಸುವಾ. ಸಿಂಹದ ತಲೆಯ ಮೇಲೆ ಉದ್ದುದ್ದ ಕೂದಲು ಇದೆ; ಆದರಿಂದ ಅದು ಅಧಿಕ ಭಯಂಕರವಾಗಿ ಕಾಣಿಸುತ್ತದೆ. ಮಾತ್ರವಲ್ಲ ಅತ್ಯಂತ ಸುಂದರವಾಗಿಯೂ ಕಾಣಿಸುತ್ತದೆ. ಹೆಣ್ಣು ಸಿಂಹಕ್ಕೆ (ಸಿಂಹಿಣಿಗೆ) ಈ ಸೌಂದರ್ಯವಿಲ್ಲ; ಗಜರಾಜನು ತನ್ನ ಥಳಥಳಿಸುತ್ತಿರುವ ಉದ್ದುದ್ದ ದಂತಗಳಿಂದಲೇ ಗಜರಾಣಿಯನ್ನು ಆಕರ್ಷಿತಮಾಡಿ, ಹೊಂದುತ್ತಾನೆ.

ಹರಿಣದ ಸಕಲ ಸೌಂದರ್ಯವು ಅದರ ಕೊಂಬುಗಳಲ್ಲಿದೆ; ಕಾಲುಗಳು ಅತ್ಯಂತವಾಗಿ ಅದರ ಅಂದಗೊಳಿಸುತ್ತವೆ. ಆದರೆ ಹೆಣ್ಣು ಹರಿಣಕ್ಕೆ ಈಶ್ವರನು ಕುರೂಪ ಪಂದಗಳನ್ನೇ ನೀಡಿರುವನು; ಗಂಡು ಹರಿಣಕ್ಕೆ ಸುಂದರ ಕೊಂಬುಗಳನ್ನು ಕೊಟ್ಟಿರುವನು. ಇದೇ ಕಾರಣದಿಂದ ವನದಲ್ಲಿ ಗಂಡು ಹರಿಣವು ಹೋದಲ್ಲೆಲ್ಲ ಹೆಣ್ಣು ಹರಿಣವು ಗಂಡಿನ ಹಿಂದೆ ಹಿಂದೆ ಹೋಗುತ್ತಿರುತ್ತದೆ; ಸೌಂದರ್ಯವು ಗಂಡು ಹರಿಣದ ಕೊಂಬುಗಳಲ್ಲಿದೆ; ಮತ್ತು ಆಕರ್ಷಣದ ಕೇಂದ್ರವು ಸಹ ಅದೇ ಆಗಿದೆ.

ನಾವೆಲ್ಲ ದನವನ್ನು ಗೋಮಾತೆಯೆಂದು ಕರೆಯುತ್ತೇವೆ; ಆದರೆ, ಗೋಜಾತಿಯ ಸೌಂದರ್ಯವು ಎತ್ತಿನಲ್ಲಿ ಕಾಣಿಸುತ್ತದೆ; ಹೋರಿಯಲ್ಲಿ ವಿಶೇಷವಾಗಿ, ಸೌಂದರ್ಯವು ತುಂಬಾ ವಿಕಸಿತವಾಗುತ್ತದೆ. ಈ ಪ್ರಕಾರ ಗೋಜಾತಿಯಲ್ಲಿಯೂ ಸೌಂದರ್ಯದ ರಾಶಿಯು ಗಂಡಿನಲ್ಲೇ ಲಭಿಸುತ್ತದೆ

ಈಗ ಮಾನವರಲ್ಲಿ ಪುರುಷ ಹಾಗೂ ಸ್ತ್ರೀಯ ಸೌಂದರ್ಯವರ್ಣನೆಯ ಮುಂಚಿತವಾಗಿ, ಆದಿವ ಜಾತಿಯಲ್ಲಿ ಗಡ್ಡವೇ ಸೌಂದರ್ಯದ ಕಡೆಗೆ ಲಕ್ಷ್ಯವನ್ನು ಎಳೆಯುತ್ತದೆ. ಇದೇ ಪ್ರಕಾರ ಮನುಷ್ಯರಲ್ಲಿಯೂ ಮೀಸೆ ಮತ್ತು ಗಡ್ಡವೇ ಪೌರುಷ ಹಾಗೂ ಸೌಂದರ್ಯದ ಲಕ್ಷಣವಾಗಿವೆ; ಆದರೆ, ಇಂದೀಗ ಮನುಷ್ಯನು ಪ್ರತಿಯೊಂದು ಕಡೆಯಲ್ಲಿ, ಜೀವನದ ಪ್ರತ್ಯೇಕ ಮಜಲಲ್ಲಿ (ಹೆಜ್ಜೆಯಲ್ಲಿ), ಪ್ರಕೃತಿಯ ವಿರೋಧಿಯಾಗುತ್ತಲಿದ್ದಾನೆ, ಪ್ರತ್ಯೇಕ ದೃಷ್ಟಿಯಿಂದ, ಪುರುಷನು ಸೌಂದರ್ಯದ ಕಲ್ಪನೆಯನ್ನು ಕೂಡ ಬದಲಾಯಿಸುತ್ತಾನೆ, ಮನುಷ್ಯನ ಮುಖವು ಇಂದೀಗ ನುಣುಪಾಗಿ ಥಳಥಳಿಸಿದರೆ, ಅಂತಹ ಮನುಷ್ಯನು ಸಭ್ಯ ಮತ್ತು ಸುಂದರನೆಂದು ಭಾವಿಸಲ್ಪಡುತ್ತಾನೆ; ಮನುಷ್ಯಜಾತಿಯಲ್ಲಿ ಸರ್ವತ್ರ ಪುರುಷನೇ ಸ್ತ್ರೀಯರ ಕಡೆಗೆ ಆಕರ್ಷಿತನಾಗುವುದು ಕಂಡುಬರುತ್ತದೆ; ಆದರೆ, ಪುರುಷನು ಪೌರುಷಪೂರ್ಣನಾದರೆ, ಅವನೇ ಆಕರ್ಷಣ ಕೇಂದ್ರನಾಗುತ್ತಾನೆ; ಇದು ವಾಸ್ತವಿಕತೆಯಾಗಿದೆ.

ಗಿಡುಗ ನೋಟದ ಚುಟುಕು ಚೂರು.

— [ಲೇ:—ರಸಿಕ] —

ಭಾಗಮಂಡಲ ಶಾಲೆಯಲ್ಲಿರುವ ಹತ್ತು ಮಂದಿ ಉಪಾಧ್ಯಾಯರುಗಳಲ್ಲಿ ಎಂಟು ಮಂದಿ ಬ್ರಾಹ್ಮಣರಂತೆ. ಇವರು ಕೋಮುವಾರು ವಾದಿಗಳಲ್ಲದಿದ್ದರೂ ಇತರರಿಗೆ ತಿರುಕುಳವಿದೆಯಂತೆ. ಅಧಿಕಾರಿಗಳಿಗೆ ದೂರು ಇತ್ತರೂ ಟಪ್ಪಾಲು ಹಬ್ಬಕ್ಕೆ ಸಂಗತಿಗಳ ಹೋಮದ ಹೊಗೆಯಲ್ಲಿ ಏನೂ ಕಾಣುತ್ತಿಲ್ಲವಂತೆ. ಈಗೀಗ ಶಾಲೆಗೂ ಆಸ್ಪತ್ರೆಗೂ ಪ್ರೈವೇಟು ಜಟಾಪಟಿಗಳು ಪ್ರಾರಂಭವಾಗಿವೆಯಂತೆ. ಪ್ರೈವೇಟ್ ಯಾವಾಗ ಎಂದು ಊರವರು ಕಾದಿದ್ದಾರೆ!

* * *

ಮಡಿಕೇರಿಯಲ್ಲಿ ಮಳೆ ಹೆಚ್ಚಾದರೂ ಬೇಸಿಗೆಯಲ್ಲಿ ಕುಡಿಯಲು ನೀರಿಲ್ಲ. ಈ ಕಷ್ಟ ತಿಳಿದಿದ್ದರೂ ಮನೆಗೆ ನಲ್ಲಿ ಹಾಕಿಸಲು "ಫ್ಲಶ್ ಔಟ್" ಪದ್ಧತಿಯ ಕಕ್ಕಸು ಮನೆಗಳ ಕೆಲಸ ಜೋರಾಗಿದೆ. ನೀರಿನ ಸಿಗಿ ಬೇಕೆ ಬದ್ಧರೀನಾಯಿತು; ಜಳಕ ಮಾಡಿ ಕೊಳ್ಳಬಹುದಲ್ಲವೆ ?

* * *

ಪುತ್ತೂರಿನ ಚಿಕ್ಕ ಒಕ್ಕಲಿಗ ಸರಿನ ಳ ಮಂಡಳಿಯ ರಚನೆ ಭಾವಿಸುವದೊಂದು ಭ್ರಮೆ; ಚುನಾವಣೆಯ ಸಮಯದಲ್ಲಿ ಒಕ್ಕಲಿಗ ಕೆಲಸ ಮಾಡಿದ ಕೆಲಸಗಾರ, ಸದ್ಗುಣಿಯೊಂದು ಭಾವಿಸುವುದೂ ತಪ್ಪು. ಮಂತ್ರಿಗಳು ನಾವು ಹೇಳಿದಂತಿರುವರೆಂದು ಗ್ರಾಮಗಳಲ್ಲಿ ಜಂಭ ಕೊಚ್ಚಿ ತಮ್ಮ ಸ್ವಾರ್ಥ ಸಾಧಿಸುವ ಜನರೂ ಇದ್ದಾರೆ. ಇಂಥಾ ಗೋಮುಖ ವ್ಯಾಘ್ರಗಳ ವಿಚಾರವಾಗಿ ಸರಳ ಸ್ವಭಾವದ ಮಂತ್ರಿಗಳು ಎಚ್ಚರಿಕೆಯಿಲ್ಲದಿದ್ದರೆ ಅಧಿಕಾರವು ಪಾಲುಗಾರರ ವ್ಯಾಪಾರದ ದೀಕ್ಷೆ!

* * *

ಚುನಾವಣೆ ಕಳೆದನಂತರ ಪ್ರತಿಗ್ರಾಮಗಳಲ್ಲೂ ಎರಡು ಪಕ್ಷಗಳಾಗಿವೆ. ಈ ಪಕ್ಷಗಳ ಪರಸ್ಪರ ವೈಷಮ್ಯದಿಂದ ಸರ್ವವೂ ಹಾಳಾಗುತ್ತಿದೆ. ಹೊಲಗೇರಿಯೂ ಇದರಿಂದ ಹೊರತಲ್ಲ. ಈ ಸಂಘರ್ಷದಲ್ಲಿ ಕೆಲವರು ಶಾಸನ ಸಭೆಯಲ್ಲಿ ಮಾತಾಡಿದರು. ಗ್ರಾಮಗಳಲ್ಲಿ ಐಕ್ಯತೆ, ಪ್ರೀತಿಭಾವವನ್ನು ನೆಲೆಸುವ ಪ್ರತಿನಿಧಿಗಳ, ಸಾರ್ವಜನಿಕ ಕೆಲಸಗಾರರ ಕರ್ತವ್ಯ. ಸರಕಾರಕ್ಕೆ ದೂರು ಕೊಟ್ಟರೆ ಸರಕಾರ ಗ್ರಾಮದಲ್ಲಿ ಪ್ರೇಮಭಾವವನ್ನು ಸ್ಥಾಪಿಸಲು ಶಕ್ಯವಾಗುವುದೆ? ಅಡಿಗೆ ಮನೆಯ ಹೊಗೆ ಆಸ್ಥಾನದ ವರೆಗೆ ವ್ಯಾಪಿಸಬಾರದು. ಗ್ರಾಮದ ವೈಷಮ್ಯ ಒಲೆಯ ಬೆಂಕಿಯಂತೆ ಹೊರಗಿನ ಬಿಸಿಲಿನ ಉರಿಯಂತಲ್ಲ. ಆದ್ದರಿಂದ ಒಲೆಯ ಬೆಂಕಿಯನ್ನು ನಂದಿಸಿಕೊಳ್ಳಲು ಮನೆಯವರಿಗೆ ಸಾಧ್ಯವಿಲ್ಲವೆ?

* * *

ಪ್ರತ್ಯೇಕ ಪಕ್ಷದ ಸಹಕಾರವನ್ನು ಅನೇಕ ಸದಸ್ಯರು ಸ್ವಾಗತಿಸಿದಂತೆ ತೋರುವುದಿಲ್ಲ. ಈ ಸಹಕಾರವನ್ನು ಅನೆಯಂತೆ ಸಂದೇಹ ದೃಷ್ಟಿಯಿಂದ ನೋಡಬೇಕೆಂದು ಕೆಲವರೆಂದರು. ಸೂಜಿ ಬೆಸಿ ಬ್ರಾಹ್ಮಣ ಅತನಿಗೆ ನೂರಾರು ಕೈಯಿ ದ ಎಷ್ಟು ಗತ್ತು ದಿಲ್ಲ ಹಾಗೆಯೇ ಎರಡು ಕಣ್ಣಿನ ಜೊತೆಗೆ ಸಂಶಯದ ದೃಷ್ಟಿ ಇರುವ ಈ ಮುಖ್ಯರ ಹದಗೆಟ್ಟ ವರ್ತನೆ ಕಣ್ಣಿಗೆ ರೋಗವನ್ನು ಉಂಟು ಮಾಡಿ ತೆಗೆದುಕೊಂಡಂತಿದೆ!

* * *

ಪ್ರತ್ಯೇಕ ಪಕ್ಷದ ಮುಂದಾಳಿನ ಆದರ್ಶ ವರ್ತನೆಯನ್ನು ಮುಖ್ಯ ಮಂತ್ರಿಗಳು ಮೆಚ್ಚಿ ಹೊಗಳಿದರು. ನೀರೊಂದಿದ್ದರೆ ಬಾಯಿ ಮುಕ್ಕಳಿಸಲೂ ಬಹುದು; ಬಾಯಾರಿಕೆಯನ್ನು ನೀಗಿಸಿಕೊಳ್ಳಲೂ ಬಹುದು. ಅದರಂತೆ ನೀತಿಯೊಂದಿದ್ದರೆ ಹೃದಯ ಶುದ್ಧಿ, ಕಾರ್ಯಸಿದ್ಧಿ ಎರಡೂ ಆಗುತ್ತದೆ.

* * *

ಶಾಸನ ಸಭೆಯ ಕೆಲವರು ಮಾತಾಡುವಾಗ ಗದ್ದಲವೇಳುತ್ತಿತ್ತು. ಆದರೆ ಕೆಲವರು ಮಾತಾಡುವಾಗ ನಿಶ್ಶಬ್ದ ಹಬ್ಬುತ್ತಿತ್ತು. ಕಳ್ಳಿನ ವಾಸನೆ ಬಡಿದಂತೆ ಹಾಲು ಬರಿಮುಳ ಬೀರದು. ಹೆಚ್ಚಾಗಿ ದ ಗದ್ದಲ ಎಬ್ಬಿಸಿದಂತೆ ಹುರುಳಿಲ್ಲದ್ದು ಎಬ್ಬಿಸಿದುದು ಅಲ್ಲವೇ?

* * *

ಶಾಸನ ಸಭೆಯ ಸದಸ್ಯರಾಗಲೀ, ಸರಕಾರದವರಾಗಲೀ, ಪ್ರಜೆಗಳಾಗಲೀ ಪ್ರತಿಯೊಬ್ಬನಿಗೂ, ಸಹನೆ ವಿಶ್ವಾಸ, ಕರ್ತವ್ಯದೃಷ್ಟಿ ಬೇಕು. ಇದರಿಂದ ಎಲ್ಲರಿಗೂ ಹಿತವಾಗುತ್ತದೆ. ಹಾಲು ಕುಡಿದು ಹಲ್ಲು ಮುರಿಸಿಕೊಂಡವರು ಹೋಗಲಿ, ಅದೇ ರೀತಿ ನೀತಿ, ಪ್ರಜೆಗಳನ್ನು ನುಂಗಿ ಹಾಳುಮಾಡ್ರು

* * *

ಪ್ರಜಾಪ್ರಭುತ್ವದಲ್ಲಿ ಮಾಡುವವನೇ ಮಾಡಿಸುವವನೂ ಅಲ್ಲ. ಜಣ್ಣ ಹೊತ್ತವರ ಆ ಫಲ ಬಟ್ಟನವರ ಹೇಗೆ ಅಲ್ಲವೋ ಅದೇ ರೀತಿ ಅಧಿಕಾರ ಕೊಟ್ಟವನೇ ಅದನ್ನು ಸಾಧಿಸಿಕೊಂಡವನೂ ಆಗಲಾರ.

* * *

ಅನ್ಯಾಯದ ಮಾರ್ಗದಿಂದ ಐಶ್ವರ್ಯವಂತನಾದರೆ, ಅನೀತಿಯ ಮಾರ್ಗದಿಂದ ಅಧಿಕಾರಸ್ಥನಾದರೆ ಅದರಲ್ಲಿ ಸಿರಿ ಇರದು. ಬಾತ ಬೋವನ ಬೆಳೆದಂತೆ ತೋರಿದರೂ ಅದನ್ನು ಆರೋಗ್ಯವೆನ್ನಲಾಗದು. ಅನ್ಯಾಯ ಬಲದಿಂದ ಐಶ್ವರ್ಯವಂತನಾದವನಲ್ಲಿ ಅಧ್ಯಕ್ಷ ಇರಲಾರದು.

ನಿಮ್ಮ ಮಡದಿ ಹೀಗಿರುವಳೇ?

("ರೀಡರ್ಸ್ ಡೈಜೆಸ್ಟ್" ನಿಂದ ಅನುವಾದಿಸಿದವರು ಶ್ರೀ. ಕೆ. ಎಂ. ಪೂವಯ್ಯನವರು.)

ನಾವು ಮೊನ್ನೆ ದೂರಬಂದಿನಲ್ಲಿ ಪ್ರಯಾಣಮಾಡುತ್ತಿದ್ದಾಗ, ಒಬ್ಬ ಮಿತ್ರನು ಹೀಗೆಂದನು—'ನನ್ನ ಹೆಂಡತಿಯ ಹತ್ತಿರ ೧೦೦ ಮೈಲಿ ಉದ್ದ ದಾರ ಇದೆ ಎಂದು ಹೇಳಬಲ್ಲೆನು. ಪ್ರತಿ ಸಲ ಅಂಗಡಿ ಸಾಮಾನು ಮನೆಗೆ ಬಂದರೆ, ಅವನ್ನು ಸುತ್ತಿದ ದಾರವನ್ನು ಬಹು ಸಮಾಧಾನದಿಂದ ಬಿಚ್ಚುವುದರಲ್ಲಿ ೧ ತಾಸು ಸಮಯ ಕಳೆದು, ಅದೆಲ್ಲವನ್ನೂ ಸುತ್ತಿ, ಸುತ್ತಿ 'ಒಂದು ಚೂರು ದಾರ ಯಾವಾಗ ಬೇಕಾಗುತ್ತದೆಂದು ಯಾರಿಗೂ ಹೇಳಲಾಗುವುದಿಲ್ಲ' ವೆಂದು ಹೇಳಿ ಅವನ್ನು ಮೇಜದ ಒಳಗೆ ಮಡಗುವಳು.

ಅದಕ್ಕೆ ಉತ್ತರವಾಗಿ ಮತ್ತೊಬ್ಬ ಮಿತ್ರನು ಹೀಗೆಂದನು—'ನನ್ನ ಹೆಂಡತಿ ಪೆಟ್ಟಿಗೆಗಳನ್ನು ಸಂಗ್ರಹಿಸುತ್ತಾಳೆ—ಚಾಕೊಲೇಟ್ ಪೆಟ್ಟಿಗೆ, ನಗಗಳ ಪೆಟ್ಟಿಗೆ, ಟೋಪಿಪೆಟ್ಟಿಗೆ, ಚುಟ್ಟಾಪೆಟ್ಟಿಗೆ—ಚಿಕ್ಕ ಪೆಟ್ಟಿಗೆಗಳನ್ನು ಮಡಗಲು ದೊಡ್ಡ ಪೆಟ್ಟಿಗೆ. ಒಳ್ಳೆ ಪೆಟ್ಟಿಗೆಗಳನ್ನು ಕಾಣೆಮಾಡುವುದೆಂದರೆ, ಅವಳಿಗೆ ಬಹು ಅಸಮಾಧಾನ. ಇದಕ್ಕೆ ಪ್ರತಿ ಉತ್ತರವಾಗಿ ಮತ್ತೊಬ್ಬ ಮಿತ್ರನು ಹೀಗೆಂದನು.' 'ಯಾವಾಗ ಒಂದು ಚೂರು ಕಾಗದ ಬೇಕಾಗುತ್ತದೆಂದು ಯಾರಿಗೂ ಹೇಳಲಾಗುವುದಿಲ್ಲವೆಂದು ಮನೆಗೆ ಸಾಮಾನು ಸುತ್ತಿ ಬಂದಂತಹ ಕಾಗದಗಳನ್ನೆಲ್ಲಾ ಚೆನ್ನಾಗಿ ಮಡಚಿ ನನ್ನ ಹೆಂಡತಿ ಮಡಗುತ್ತಾಳೆ.'

ಸ್ವಾಭಾವಿಕವಾಗಿ ಹೆಂಗಸರೆಲ್ಲರೂ ಸಾಮಾನುಗಳನ್ನು ಸಂಗ್ರಹಿಸುವವರೇ! ಗಂಡಸರೂ ಕೂಡ ಸಾಮಾನುಗಳನ್ನು ಸಂಗ್ರಹಿಸುತ್ತಾರೆ. ಆದರೆ ಅವರು ಹೆಚ್ಚಾಗಿ ಪ್ರಯೋಜನಕ್ಕೆ ಬರುವಂತಹ ಸಾಮಾನುಗಳನ್ನೇ ಸಂಗ್ರಹಿಸುವವರಾಗಿದ್ದಾರೆ. ಇದಕ್ಕಾದರೂ ಕಾರಣವೇನು? ಸ್ವಾಭಾವಿಕವಾಗಿ ಹೆಂಗಸರು, ಯಾವಾಗಲಾದರೂ, ಯಾಸ್ತದಾದರೂ ಪ್ರಯೋಜನಕ್ಕೆ ಬರಬಹುದೆಂಬಂತಹ ವಸ್ತುವನ್ನು ಕಳೆಯಲು ಇಷ್ಟಪಡುವುದಿಲ್ಲ.

'ನನ್ನ ಹೆಂಡತಿಯೂ ಕೂಡ ಒಂದು ಪೆಟ್ಟಿಗೆಯಲ್ಲಿ ಅನೇಕ ವಸ್ತುಗಳನ್ನು ಕೂಡಿಟ್ಟಿರುತ್ತಾಳೆ. ಒಮ್ಮೆ ಆ ಪೆಟ್ಟಿಗೆಯನ್ನು ತೆರೆದು ನಾನು ನೋಡಿದೆನು. ಅದರಲ್ಲಿ ಇದ್ದುದ್ದೇನು?

ಒಂದು ಬಟ್ಟಲಲ್ಲಿ ಕೆಲವು ವಿಲಾಯಿತಿ ಬೀಜಗಳು, ಒಂದು ಚೀಜಿನಷ್ಟು ಹುಡಿ ಮಾಡಿದ ಹಾಲುಗಡ್ಡೆ, ಒಂದು ಚೂರು ಎಣ್ಣೆ ಕಾಗದದಲ್ಲಿ ಸುತ್ತಿದ ನಾನು ನಿನ್ನೆ ರಾತ್ರಿ ಉಣ್ಣದೆ ಬಾಕಿ ಇಟ್ಟ ಫ್ರೂಟ್ ಸಾಲಡ್ ಮತ್ತು ಎರಡು ವಾರಕ್ಕೆ ಹಿಂದೆ ನಾನು ಊಟಮಾಡಿ ಬಟ್ಟಲಲ್ಲಿ ಬಾಕಿಯಾದ ಸ್ವಲ್ಪ ಮಾಂಸದ ಸಾರು ಇವು ಇದ್ದುವು. ಅವಳಲ್ಲಿ ಕೆಲವು ಔಷಧಿ ಕುಪ್ಪಿಗಳು ಇವೆ. ಇವುಗಳಲ್ಲಿ ಯಾವುದಕ್ಕೂ ಚೀಟಿ ಹತ್ತಿಸಿರುವುದಿಲ್ಲ' (ಚೀಟಿ ಹತ್ತಿಸದ ಔಷಧಿ ಕುಪ್ಪಿಗಳು ಎಲ್ಲರ ಮನೆಯಲ್ಲೂ ಇವೆ)

ಬದಲಾಗಿ ನಾನು ಸಂಗ್ರಹಿಸಿ ಬೇಕಾದ ಸಾಮಾನುಗಳು ಯಾವುವೂ ಅವಳಿಗೆ ಅರ್ಥವಾಗುವುದಿಲ್ಲ. ನನ್ನ ಮೀನು ಹಿಡಿಯುವ ಗಾಳ, ಮೀನು ಹಿಡಿಯಲು ಹೋಗಲು ಹಾಕುವ ಟೋಪಿ, ಬೂಟುಸು ಇವುಗಳನ್ನೆಲ್ಲಾ ಮಡಗಲು ಅಟ್ಟದಲ್ಲಿಯೂ ಕೂಡ ಸ್ಥಳವೆಲ್ಲಿ ಎಂದು ಅವಳು ಕೇಳುತ್ತಾಳೆ? ನನ್ನ ಹೆಂಡತಿಯು ಕೂಡಿಟ್ಟ ಸಾಮಾನುಗಳಲ್ಲಿ

೧) ಎಲ್ಲಾ ತರದ ಕುಪ್ಪಿಗಳ ಮುಚ್ಚು; ಅನೇಕ ಸಾಸರುಗಳು, ಸಾಸರುಗಳನ್ನು ಮುಚ್ಚಿ ಸಾಬರುಗಳಿವೆ.

೨) ಗುಂಡಿಗಳು, ಕಿಡಿಕಿಯ ಪತ್ತಿಗಳು, ಅನೇಕ ಸ್ಕ್ರೂಗಳು ಮತ್ತು ಬಹು ಪ್ರೀತಿಯಿಂದ, ಕಾರಿನ ಬಳಿಗೆ ಸಿಕ್ಕಿದ ಒಂದು ಕಬ್ಬಿಣದ ಆಣಿ, ಇದು ಯಾವಾಗಲಾದರೂ ಪ್ರಯೋಜನಕ್ಕೆ ಬರುತ್ತೆ ಎಂದು ತೋರಿಸಿದಳು.

೩) ಕಾಗದ ಚೀಲಗಳು, ಪೆಟ್ಟಿಯಿಂದ ಮೇಲೆತ್ತ ತಂದ ಚೀಲಗಳು, ಟಿನ್ನಿನ ಉರಟ ಪೆಟ್ಟಿಗೆಗಳು, ಖಾಲಿ ಕುಪ್ಪಿಗಳು—ಇವೆಲ್ಲಾ ಯಾವಾಗ ಬೇಕಾಗುತ್ತದೆಂದು ಯಾರಿಗೂ ಹೇಳಲಾಗುವುದಿಲ್ಲವೆಂದಳು.

೪) ಪ್ರಯೋಜನವಿಲ್ಲದ ಕಾರ್ಡಿನ ಚೀಲಗಳು ಹರಿದು ಹೋದ ಸ್ಪರಿಂಗು, ಅನೇಕ ಮದುವೆ ಕಾಗದಗಳು, ಶಾಲೆಯಲ್ಲಿ ಸಿಕ್ಕಿದ ಸರ್ಟಿಫಿಕೇಟುಗಳು ಶಾಲೆಗೆ ಹಾಕುತ್ತಿದ್ದ ಟೋಪಿ, ಕಳೆದ ವರ್ಷದ ಕ್ರಿಸ್ಮಸ್ ಕಾರ್ಡುಗಳು ಮತ್ತು ಅನೇಕ ಹೋಟೆಲು ಒಳಗೆ ಬಾಗಿಗೆ ಹಾಕುವ ಬೆಡ್‌ಶೀಟ್.

ಹೆಂಗಸರು ಇವೆಲ್ಲವನ್ನು ಅವರಿಗೆ ಸಿಕ್ಕುವ ಸ್ಥಳದಲ್ಲಿ ಮಡಗುತ್ತಾರೆ ಒಮ್ಮೆ ನಾನು, ಬಹು ಅವಸರದಲ್ಲಿ ಹೊರಟಾಗ, ನನ್ನ ಕಾಲು ಚೀಲದ ಕೈ ಎಲ್ಲಿದೆ ಎಂದು ನಾನು ಕೇಳಿದೆನು. 'ಮಹಡಿಯಲ್ಲಿ, ನನ್ನ ಡ್ರೆಸ್ಸಿಂಗ್ ಟೇಬಲಿನ ಎಡ ಡ್ರಾಯರ್‌ನಲ್ಲಿ ಚೂಲಿಗೆ ಸಾಮಾನುಗಳ ಕೆಳಗಿದೆ' ಎಂದಳು. ನಾನು ಮೇಜವನ್ನೆಲ್ಲಾ ಎರಡು ಸಲ ಹುಡುಕಿದರೂ ಸಿಕ್ಕಲಿಲ್ಲ. ಅವಳು ಬಂದು ನೆಟ್ಟಗೆ ಕೈ ಹಾಕಿ ತೆಗೆದುಕೊಟ್ಟಳು!

ಮನೆಯ ಸಾಮಾನುಗಳನ್ನು ಮಡಗುವುದರಲ್ಲಿ ಹೆಂಗಸರು—ಅಳಲುಗಳು ಹದಿನ್ನಾಗಳನ್ನು ಮಡಗುವ ಮಾದರಿಯು ಮತ್ತೊಂದು ನಗರಗಳ ರಸ್ತೆಯ ನಕ್ಷೆಯ ಪದ್ಧತಿಗೆ ಒಂದು ಮಾದರಿಯನ್ನು ಅನುಸರಿಸುವರು. ಪರ್ಸಿಗೆ ಒಮ್ಮೆ ಬೇಕಾದಂತಹ ಸಾಮಾನುಗಳೆಲ್ಲವೂ ಬೇಗನೇ ಸಿಕ್ಕುವಂತಹ ಸ್ಥಳದಲ್ಲಿಯೂ, ಬದಿ ಸದಾ ಬೇಕಾದಂತಹ ಸಾಮಾನುಗಳನ್ನು ಬಹು ಚೆನ್ನಾಗಿ ಕಾಗದದಲ್ಲಿ ಸುತ್ತಿ, ಅವರಿಗೆ ಗೊತ್ತಾಗುವಂತಹ ಅಕ್ಷರದಲ್ಲಿ ಅದರ ಹೆಸರನ್ನು ಬರೆದು ಮಡಗುವರು. ಆದರೂ ಕೂಡ ಅವರು ಆ ಸಾಮಾನನ್ನು ತೆಗೆಯುವಾಗ, ಬೆರಳನ್ನು ಚುಚ್ಚಿ ಕಾಗದ ಹರಿದೇ ಅವರೊಳಗೆ ಏನಿದೆ ಎಂದು ನೋಡುವರು!

ಆದರೆ ಅಡಿಗೆ ಮನೆ ಸಾಮಾನುಗಳನ್ನು ಮಡಗುವುದು ಅವರ ಒಂದು ವಿಚಿತ್ರವೇ! ಓರ್ವ ಮಿತ್ರನು ಹೀಗೆಂದನು. 'ಕಳೆದ ತಿಂಗಳು ನನ್ನ ಹೆಂಡತಿಯು ಅವ

(೬ನೇ ಪುಟಕ್ಕೆ ಸಾಗಿದೆ.)

ಕೊಡಗು

ತಾ. ೮-೮-೧೯೪೭ನೇ ಶುಕ್ರವಾರ

ಪಾನನಿರೋಧ.

ಕೊಡಗಿನಲ್ಲಿ ಜಾರಿಯಲ್ಲಿರುವ ಪಾರ್ಶ್ವ ಪಾನನಿರೋಧದ ವಿಚಾರವಾಗಿ ಕಳೆದ ಶಾಸನ ಸಭೆಯಲ್ಲಿ ಕೆಲವರು ಮಾತಾಡುತ್ತಾ ಇದರಿಂದ ಸರಕಾರಕ್ಕಾಗಲೀ, ಜನತೆಗಾಗಲೀ ಹಿತವಾಗಿಲ್ಲವೆಂದೂ ಕೇವಲ ಕಪ್ಪುಸಂತೆಯ ಮಾರಾಟಗಾರರಿಗೆ ಮಾತ್ರ ಅನುಕೂಲವಾಗಿದೆಯೆಂದೂ ಹೇಳಿದರು. ಆದರೆ ಕೆಲವರು ನಿಯಂತ್ರಣದಿಂದ ಕಪ್ಪುಸಂತೆಗೆ ಅನುವಾಗಿರಬಹುದಾದರೂ ಸಾಮಾನ್ಯ ಜನರಲ್ಲಿ ಕುಡುಕತನವು ಕಡಿಮೆಯಾಗಿದೆಯೆಂದೂ ಹಿಂದಿನಂತೆ ಹದ್ದು ಬಸ್ತಿಲ್ಲದೆ ಕುಡಿದು ರಸ್ತೆಯಲ್ಲಿ ಬಿದ್ದು ಹೊರಳಾಡುವ ದೃಶ್ಯ ಈಗ ಇಲ್ಲವೆಂದೂ ಹೆಚ್ಚಾಗಿ ಬಡ ಜನರಿಗೆ ತುಂಬಾ ಅನುಕೂಲವಾಗಿದೆಯೆಂದೂ ಹೇಳಿದರು. ಈ ಎರಡು ವಾದಗಳಲ್ಲಿಯೂ ಸತ್ಯಾಂಶವಿದೆ. ನಿಯಂತ್ರಣಾ ವಿಧಾನವು ಮಾಡಿದರೂ ಅದನ್ನು ಬಿಗುವಿನಿಂದ ಜಾರಿಯಲ್ಲಿ ತರುವದು ಅಸಾಧ್ಯವಾಗಿ ಕಳ್ಳಮಾರಾಟ, ಲಾಭ ಬಡುಕತನ ಮತ್ತು ಕಳ್ಳಸಾರಾಯಿ ತಯಾರಿಕೆಗಳಿಗೆ ಹೆಚ್ಚಿನ ಆಸ್ಪದವಾಗಿದೆಯೆಂಬುದು ನಿಜ. ಇವು ಕೆಲವು ಮಟ್ಟಿಗೆ ಅಲ್ಲಲ್ಲಿ ನಡೆಯುತ್ತಿದ್ದರೂ ಪಾರ್ಶ್ವ ಪಾನನಿರೋಧದಿಂದ ಕೊಡಗಿನಲ್ಲಿ ಕುಡುಕತನವು ಕಡಿಮೆಯಾಗಿದೆಯೆನ್ನಲಡ್ಡಿಯಿಲ್ಲ. ನಿಯಂತ್ರಣದ ಕಾರಣದಿಂದ ಶ್ರೀಮಂತರು ಸಾರಾಯಿಯನ್ನು ಬಿಟ್ಟು, ವಿದೇಶೀ ಪಾನೀಯಗಳನ್ನು ಹೆಚ್ಚಾಗಿ ಕುಡಿಯುತ್ತಿರಬಹುದು. ಬಡವರು ಸಾರಾಯಿಯ ಬದಲು ಶೇಂದಿಯನ್ನು ಕುಡಿಯುತ್ತಿರಬಹುದು. ಹೇಗಿದ್ದರೂ ಕೂಡ ಕುಡುಕತನ ಕಡಿಮೆಯಾಗಿದೆ. ಹಿಂದಿನಂತೆ ಕಳ್ಳುಕುಡಿದು ಮತ್ತರಾಗಿ ನಡೆಯುವ ಜನರನ್ನು ಬೀದಿಯಲ್ಲಿ ಇಂದು ಕಾಣಲಾರೆವು. ಕೊಡಗಿನಲ್ಲಿ ಖರ್ಚಾಗುತ್ತಿದ್ದ ಸಾರಾಯಿಯ ಪರಿಮಾಣವೂ ಕಡಿಮೆಯಾಗಿದೆ. ಇದರ ಬದಲು ಕಳ್ಳಸಾರಾಯಿ ಹೆಚ್ಚಾಗಿದೆಯೆಂದು ಕೆಲವರು ಹೇಳಬಹುದು. ಅದನ್ನು ನಿಜವೆಂದು ಒಂದು ವೇಳೆ ಒಪ್ಪಿದರೂ ಕೂಡ ನಿಯಂತ್ರಣದಿಂದ ಹಿತವಾಗಿದೆಯೆಂಬುವನ್ನು ಅಲ್ಲಗಳೆಯಲಾಗುವದಿಲ್ಲ.

ಮದ್ರಾಸಿನಲ್ಲಿ ಕಳೆದ ತಾರೀಕು ೧೬ ರಲ್ಲಿ ಶಾಸನ ಸಭೆಯಲ್ಲಿ ಪಾನನಿರೋಧದ ಬಗ್ಗೆ ಚರ್ಚೆಯಾದಾಗ ನಮ್ಮ ಶಾಸನ ಸಭೆಯಲ್ಲಿ ಸದಸ್ಯರು ಅಭಿಪ್ರಾಯ ವ್ಯಕ್ತಮಾಡಿದಂತೆಯೇ ಅಲ್ಲಿಯೂ ಅಭಿಪ್ರಾಯ ವ್ಯಕ್ತಪಡಿಸಲ್ಪಟ್ಟಿತು. ಕೆಲವರು ಪಾನನಿರೋಧದಿಂದ ಹಿತವಾಗಲಿಲ್ಲವೆಂದೂ, ಕಳ್ಳಮಾರಾಟ ಹೆಚ್ಚಿದೆಯೆಂದೂ ಹೇಳಿದರು. ಆದರೆ ಪಾನನಿರೋಧ ಮಂತ್ರಿ ಪಳನಿಸ್ವಾಮಿ ಗೌಂಡರ್‌ರವರು ಸರಕಾರದ ನೀತಿಯನ್ನು ವಿವರಿಸುತ್ತಾ ಪಾನನಿರೋಧವನ್ನು ಖಡಾಖಂಡಿತವಾಗಿ ಜಾರಿಯಲ್ಲಿ ತರಲಾಗುವದೆಂದೂ, ಕಳ್ಳಮಾರಾಟ, ಕಳ್ಳಸಾರಾಯಿಗಳಿಗೆ ಆಸ್ಪದ ದೊರೆಯದಂತೆ ತುಂಬಾ ಎಚ್ಚರಿಕೆ ವಹಿಸಿ ಪಾನನಿರೋಧವನ್ನು ಯಶಸ್ವಿಗೊಳಿಸಲಾಗುವದೆಂದೂ ಹೇಳಿದರು. ಅದೇ ರೀತಿ ಮೈಸೂರು ಸರಕಾರವೂ ಕೂಡ ಪಾನನಿರೋಧವನ್ನು ಜಾರಿಯಲ್ಲಿ ತರುವ ಯೋಗ್ಯ ಪ್ರಯತ್ನ ಮಾಡುತ್ತಿದೆ. ಸುತ್ತುಮುತ್ತಲಿನ ಇತರ ಸರಕಾರಗಳು ಸಂಪೂರ್ಣ ಪಾನನಿರೋಧವನ್ನು ಜಾರಿಯಲ್ಲಿ ತಂದು ಅದನ್ನು ಜಯಪ್ರದಗೊಳಿಸಿ ಜನತೆಯ ಹಿತ ಸಾಧಿಸುವ ಬಯಕೆಯಲ್ಲಿರುವಾಗ ಕೊಡಗಿನ ನಮ್ಮ ಸರಕಾರವೂ ಅದೇ ರೀತಿ ಯತ್ನಿಸಬೇಕು. ನಮ್ಮ ನೆರೆಯ ಪ್ರಾಂತ್ಯಗಳ ನೀತಿಯನ್ನು ಅನುಸರಿಸಿ ಒಂದೇ ಬಾರಿಗೆ ಸಂಪೂರ್ಣ ಪಾನನಿರೋಧವಲ್ಲದಿದ್ದರೂ ಕ್ರಮಶಃ ಸಂಪೂರ್ಣ ಪಾನನಿರೋಧವನ್ನು ಜಾರಿಯಲ್ಲಿ ತರುವ ಯತ್ನ ಮಾಡಬೇಕು. ಇಲ್ಲದಿದ್ದರೆ ನೆರೆಪ್ರಾಂತದವರ ಯತ್ನಕ್ಕೂ ನಾವು ವಿಘ್ನಮಾಡಿದಂತಾಗುತ್ತದೆ. ಏಕೆಂದರೆ ಕೊಡಗಿನ ಗಡಿಯಲ್ಲಿರುವ ಆಯಾ ಪ್ರಾಂತದವರು ಕೊಡಗಿನೊಳಗೆ ಬಂದು ಕುಡಿಯುವ ಆಸ್ಪದ ದೊರೆಯುವದಲ್ಲದೆ ಇಲ್ಲಿಂದ ಸಾರಾಯಿ ಪಡೆದು ಕಳ್ಳಮಾರಾಟಕ್ಕೂ ಅನುವಾಗಬಹುದು. ಆದ್ದರಿಂದ ಕೊಡಗಿನ ಜನರ ಹಿತದೃಷ್ಟಿಯಿಂದ, ನೆರೆರಾಜ್ಯಗಳ ಕಾರ್ಯವನ್ನು ಹಗುರಗೊಳಿಸುವ ಕಾಂಕ್ಷೆಯಿಂದ ಕೊಡಗಿನಲ್ಲಿ ಹೆಜ್ಜೆ ಹಿಂದಿಡದೆ ಪಾರ್ಶ್ವ ಪಾನನಿರೋಧವನ್ನು ಕ್ರಮಶಃ ಸಂಪೂರ್ಣ ಪಾನನಿರೋಧವಾಗಿ ಮಾಡಬೇಕಾದ್ದು ಅತ್ಯವಶ್ಯವಾಗಿದೆ.

ಕೊಡಗಿನಲ್ಲಿ ಪ್ರಜಾಜವಾಬ್ದಾರಿ ಸರಕಾರವಿಲ್ಲದಿದ್ದಾಗಲೇ ಕುಡುಕತನದ ಅಹಿತವನ್ನು ಕಂಡು ಪಾರ್ಶ್ವಪಾನ ನಿರೋಧವನ್ನು ಜಾರಿಗೆ ತಂದರು. ಈಗ ಜನಕ್ಕೆ ಜವಾಬ್ದಾರವಾದ ಕಾಂಗ್ರೆಸ್ ಮಂತ್ರಿಮಂಡಳವಿರುವಾಗ ಈ ಹೆಜ್ಜೆಯನ್ನು ಮುಂದೊತ್ತಿ ಕೊಡಗಿನಲ್ಲಿ ಸಂಪೂರ್ಣ ಪಾನನಿರೋಧವನ್ನು ಜಾರಿಯಲ್ಲಿ ತರುವ ಪ್ರಯತ್ನವನ್ನು ಮಾಡಬೇಕಾದುದು ಅಗತ್ಯವಿದೆ.

ವರ್ತಮಾನ.

ಕೊಡಗು ಸರಕಾರಿ ಕಾಲೇಜಿನ ಚರಿತ್ರಾ ಕೂಟದ ಉದ್ಘಾಟನಾ ಸಮಾರಂಭವು ಮಾನ್ಯ ವಿದ್ಯಾಮಂತ್ರಿ ಶ್ರೀ ಮಲ್ಲಪ್ಪನವರಿಂದ ತಾ. ೩೦ರಲ್ಲಿ ನೆರವೇರಿಸಲ್ಪಟ್ಟಿತು. ಆರಂಭದಲ್ಲಿ ಕಾಲೇಜಿನ ಪ್ರಿನ್ಸಿಪಾಲರವರು ಮಾನ್ಯ ಮಂತ್ರಿಗಳ ವಿದ್ಯಾಪ್ರೇಮ, ಕಾರ್ಯದಕ್ಷತೆಗಳ ವಿಚಾರವಾಗಿ ಮಾತಾಡಿದ ಬಳಿಕ ಶ್ರೀಯುತ ಮಲ್ಲಪ್ಪನವರು ಚರಿತ್ರೆಯನ್ನು ಅಭ್ಯಾಸ ಮಾಡುವಾಗ ದೇಶಪ್ರೇಮ, ದೇಶಾಭಿಮಾನಗಳು ವಿದ್ಯಾರ್ಥಿಗಳಲ್ಲುದಯಿಸಿ ಬರುವಂತೆ ಮಾಡಿ ಮುಂದಕ್ಕವರು ಸಮರ್ಥ ವ್ಯಕ್ತಿಗಳಾಗುವಂತೆ ಸಾಧಿಸುವುದು ಚರಿತ್ರೆಯ ಲೇಖಕರ ಹಾಗೂ ಬೋಧಕರ ಕರ್ತವ್ಯವೆಂದು ಮುಂತಾಗಿ ಸಮಯೋಚಿತ ಭಾಷಣ ಮಾಡಿದಲ್ಲದೆ ಭರದಿಂದ ಸಾಗುತ್ತಿರುವ ಹೊಸ ಕಾಲೇಜು ಕಟ್ಟಡದ ವಿಚಾರ ಮಾತನಾಡುತ್ತ ಆದರ್ಶ ವಿದ್ಯಾ ಮಂದಿರಕ್ಕೆ ಬೇಕಾದ ಉತ್ತಮ ವಾತಾವರಣ, ವಿದ್ಯಾರ್ಥಿಗಳ ಯೋಗ್ಯ ಆವಾಸ ಗೃಹ, ಪ್ರಾಧ್ಯಾಪಕರ ವಸತಿಯ ವ್ಯವಸ್ಥೆ, ವಿಶಾಲ ಆಟದ ಬಯಲು ಮುಂತಾದುವುಗಳನ್ನು ಏರ್ಪಡಿಸಿ ಬಿ. ಎ., ಬಿ. ಎಸ್‌ಸಿ. ಮುಂತಾದ ಹೊಸ ತರಗತಿಗಳನ್ನು ಮುಂದಿನ ವರ್ಷ ತೆರೆಯುವ ಭರವಸೆ ಇತ್ತರು.

ಮಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿರುವ ಕೊಡಗಿನ ವಿದ್ಯಾರ್ಥಿಗಳು ಮಂಗಳೂರಿಗೆ ಹೋಗಿ ಕೊಡಗಿನ ಸರಕಾರಿ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಅಚ್ಯುತ ಮೆನೋನ್‌ರವರಿಗೆ 'ಮೋಹಿನಿ ವಿಲಾಸ'ದಲ್ಲಿ ಒಂದು ಚಹಾಕೂಟವನ್ನು ಏರ್ಪಡಿಸಿದ್ದರು. ಸುಮಾರು ೪೦ ವಿದ್ಯಾರ್ಥಿಗಳೂ, ಮಂಗಳೂರು ಸರಕಾರಿ ಕಾಲೇಜಿನ ಪ್ರಿನ್ಸಿಪಾಲ್ ಮಿ. ಎಂ. ಹಶೀಮಿ ಮತ್ತು ಚರಿತ್ರೆ ಮತ್ತು ಅರ್ಥಶಾಸ್ತ್ರದ ಪ್ರೊಫೆಸರು ಶ್ರೀ ಕೆ. ಎ. ಜೋಸೆಫ್‌ರವರು ಸಹ ಆಹ್ವಾನಿಸಲ್ಪಟ್ಟಿದ್ದರು. ಕೊಡಗಿನ ವಿದ್ಯಾರ್ಥಿಗಳ ನಡವಳಿಕೆ ಅವರ ಮುಂದಿನ ಏಳಿಗೆಯ ವಿಷಯ ಎರಡು ಪ್ರಿನ್ಸಿಪಾಲರುಗಳೂ ಮತ್ತು ಪ್ರೊ. ಜೋಸೆಫ ರವರು ಮಾತಾಡಿದರು. ಇದಕ್ಕೆ ಉತ್ತರವಾಗಿ ಶ್ರೀ ಎಂ. ಎಂ. ಪೂಣಚ್ಚನವರು ಕೊಡಗಿನ ಕಾಲೇಜು ಬರೇ ನಾಲ್ಕು ವರ್ಷದಲ್ಲಿ ಕೀರ್ತಿಯನ್ನು ಗಳಿಸಿದೆ. ಹಾಕಿ ಪಂದ್ಯಾಟದಲ್ಲಿ ವಿಶ್ವವಿದ್ಯಾಲಯದ ಕಪ್ಪು ಪಡೆದು ಇತರ ಕಾಲೇಜುಗಳಿಗೆ ಮಾದರಿಯನ್ನು ತೋರಿಸಿದೆ ಎಂದು ಮಾತಾಡಿದರು.

ಸೂಚನೆ.

ನಾನು ಈ ತಾರೀಕು ೧೧ರಿಂದ ರಜೆ ತೆಗೆದುಕೊಳ್ಳುವ ಕಾರಣ 'ಕೊಡಗು' ಪತ್ರಿಕೆಗೆ ಮತ್ತು ಇಂಸುಗೆ ಸಂಬಂಧಿಸಿದ ಯಾವುದೇ ಹಣದ ರವಾನೆಯನ್ನೂ ಪತ್ರವ್ಯವಹಾರಗಳನ್ನು ನನ್ನ ಹೆಸರಿಗೆ ಯಾರೂ ಮಾಡಬಾರದಾಗಿ ಈ ಮೂಲಕ ಸೂಚಿಸಲಾಗಿದೆ.

ಬಿ. ಡಿ. ಗಣಪತಿ.

ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಓದುತ್ತಿರುವ ಶ್ರೀ ಎಂ. ಎಂ. ಪೂಣಚ್ಚನವರನ್ನು ಕಾಪ್ ರ್ಸ್ ಅಸೋಸಿಯೇಶನಿನ ಕಾರ್ಯದರ್ಶಿಯವರನ್ನಾಗಿ ಬಹುಮತದಿಂದ ಆರಿಸಿರುವರು. ಈ ಕೂಟದ ಉದ್ಘಾಟನಾ ಸಮಾರಂಭವನ್ನು ತಾ. ೭ರಲ್ಲಿ ಶ್ರೀ ಉಮಾನಾಥ ರಾವ್ ಇವರು ಜರುಗಿಸುವರು.

ತಾರೀಕು ೧೫ ರಲ್ಲಿ ಸ್ವಾತಂತ್ರ್ಯ ದಿನದಂದು ಬೆಳಗ್ಗೆ ೯-೩೦ಕ್ಕೆ ಮಡಿಕೇರಿ ಮಾರ್ಕೆಟ್ ಬಳಿ ಧ್ವಜವಂದನೆಯೂ, ನಂತರ ಮ್ಯಾನ್ಸ್ ಕಾಂಪೌಂಡಿನಲ್ಲಿ ಆಟೋಟಗಳ ಸ್ಪರ್ಧೆಯೂ, ಮಧ್ಯಾಹ್ನ ಹಿಂದಿಯಲ್ಲಿ ನಾಟಕ ಸ್ಪರ್ಧೆಯೂ ನಂತರ ಕಾವೇರಿ ಮಹಲ್‌ನಲ್ಲಿ ಸಾರ್ವಜನಿಕ ಸಭೆಯೂ ನಡೆಯುವದು.

ನಿವೃತ್ತ ಪೋಲೀಸ್ ಸಬ್ ಇನ್ಸ್‌ಪೆಕ್ಟರಾಗಿದ್ದ ಶ್ರೀ. ಚೇಂದ್ರಿಮಾಡ ಮುತ್ತಣ್ಣನವರು ತಾ. ೪ ರಲ್ಲಿ ತಮ್ಮ ೬೪ನೇ ವಯಸ್ಸಿನಲ್ಲೂ, ದಿವಂಗತ ಮಂಡೇಪಂಡ ಚಿಣ್ಣಪ್ಪನವರ ಪತ್ನಿ ನಂಜವ್ವನವರು ತಾ. ೫ರಲ್ಲಿ ತಮ್ಮ ೭೬ನೇ ವಯಸ್ಸಿನಲ್ಲೂ ಶಿವಾಧೀನರಾದರು.

ಮಡಿಕೇರಿ ಮಹಿಳಾ ಸಮಾಜ ಕಟ್ಟಡದಲ್ಲಿ ಉತ್ತಮವಾದ ದೊಡ್ಡ ಮೇಜೊಂದನ್ನು ಯಾರೋ ಇಟ್ಟಿರುವದಾಗಿಯೂ ತಕ್ಕ ರುಜುವಾತಿನಿಂದ ಅದನ್ನು ಮಾಲೀಕರು ಕೊಂಡುಹೋಗಬಹುದಾಗಿಯೂ ತಿಳಿಸುತ್ತಾರೆ.

ಏಲಕ್ಕಿ ಮಲೆ ಮತ್ತು ಘಾಟ್ ಫಾರೆಸ್ಟುಗಳಲ್ಲಿ ಕೆಲಸ ಮಾಡುವ ಗಂಡು ಮಜೂರರಿಗೆ, ರೂ. ೧-೫-೦ ಹೆಂಗಸರಿಗೆ ರೂ. ೦-೧೫-೯, ಅರೆ ಪ್ರಾಯದವರಿಗೆ ೦-೧೨-೬ ಮಕ್ಕಳಿಗೆ ೦-೧೦-೯ ಪ್ರಕಾರವಾಗಿಯೂ ಇತರ ಅಂದರೆ ಪೇಟೆ ಹತ್ತಿರ ಭಾಗದ ಏಲಕ್ಕಿ ತೋಟಗಳಲ್ಲಿ, ಕೆಲಸ ಮಾಡುವ ಗಂಡಸಿಗೆ ರೂ. ೧-೨-೯ ಹೆಂಗಸಿಗೆ ೦-೧೪-೦ ಅರೆ ಪ್ರಾಯದವರಿಗೆ ೦-೧೧-೬ ಮಕ್ಕಳಿಗೆ ೦-೯-೩ ಪ್ರಕಾರ ಮಜೂರಿಯ ದರವನ್ನು ನಿಶ್ಚಯಿಸಲಾಗಿದೆ.

ತಾರೀಕು ೩ ರಲ್ಲಿ ವಯಸ್ಕರ ಶಿಕ್ಷಣ ಯೋಜನೆಯ ಆಶ್ರಯದಲ್ಲಿ ಮಡಿಕೇರಿ ಹೈಸ್ಕೂಲ್ ವಿದ್ಯಾರ್ಥಿ ಪಂಗಡವೊಂದು ತಳಕೇರಿ ನಿಡುಗಣೆ ಗ್ರಾಮಕ್ಕೆ ಹೋಗಿ ಅಲ್ಲಿ ಗ್ರಾಮದ ಈರಪ್ಪನವರ ನಾಟಿ ಕೆಲಸಕ್ಕೆ ಸಹಾಯಮಾಡಿ ಸುಮಾರು ೩೦ ಭಟ್ಟಿಯಷ್ಟು ಭೂಮಿ ನೆಟ್ಟರೆಂದು ತಿಳಿಯಬಂದಿದೆ.

ನೇತಾಜಿ ಸುಭಾಸ್‌ಬೋಸರ ಐ. ಎನ್. ಎ. ದಳದಲ್ಲಿದ್ದ ಶ್ರೀ. ಬಿ. ರಾಮಚಂದ್ರ ಇವರು ಕ್ಷಯರೋಗದಿಂದ ಮಡಿಕೇರಿ ಆಸ್ಪತ್ರೆಯಲ್ಲಿ ತಾ. ೩೧ ರಲ್ಲಿ ಶಿವಾಧೀನರಾದರು.

ಮೈಸೂರಿಗೂ ಮಡಿಕೇರಿಗೂ ಫೋನ್ ಸಂಬಂಧವನ್ನೇರ್ಪಡಿಸುವ ಕಾರ್ಯಕ್ಕಾಗಿ ತಂತಿ ಹಾಕುವ ಕೆಲಸ ಪ್ರಾರಂಭವಾಗಿದೆ.

ಈ ವರ್ಷ ಜನವರಿ ಒಂದರಿಂದ ಈ ವರೆಗೆ ಒಟ್ಟು ೬೪ ಇಂಚು ೭೦ ಸೆಂಟು ಮಳೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ೮೫ ಇಂಚು ೯೮ ಸೆಂಟು ಮಳೆಯಾಗಿತ್ತು. ಅಂದರೆ ಕಳೆದ ವರ್ಷಕ್ಕಿಂತಾ ೨೧ ಇಂಚು ೨೪ ಸೆಂಟು ಮಳೆ ಕಡಿಮೆಯಾದಂತಾಯಿತು. ಈ ವಾರ ಅಂದರೆ ಆಗಸ್ಟ್ ೧ ರಿಂದ ೭ರ ವರೆಗೆ ಮಡಿಕೇರಿಗೆ ೭ ಇಂಚು ೩೯ ಸೆಂಟ್ ಮಳೆ ಬಿದ್ದಿದೆ.

For Sale.

One 25 B. H. P. John Robsons crude oil Engine with No. 7 rice hullur working in good condition and connected stores with zinc sheets used for the Building situated in Ranga Samudra Matt land Murnad Road, Virajpet, are available for immediate sale.

For details please contact the under signed.

M. M. UTHAPA.
Old Gadanga Street,
Virajpet, S. Coorg.

ಓದುಗರ ಓಲೆಗಳು

ದೇವಣಗೇರಿ ಹಾಲುಗುಂದ ರಸ್ತೆ

[illegible]

— ಊರವ.

ಏಕೆ ಮಾಡಲಿಲ್ಲ?

[illegible]

ನೊಂದವ

ಹುರುಳಿಲ್ಲದ ಆರೋಪ.

[illegible]

ಹಾಲುಗುಂದ ಗ್ರಾಮಸ್ಥರು.

THE JUBILEE INSURANCE CO., Ltd.

One of the very few in the feild of Insurance that has been declaring BONUS to its policy holders from its very inception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmand Road, Bangalore.

Our Chief Agents:-THE ORIENTAL ENTERPRISES, BANGALORE 1.

ಜುಬಿಲಿ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೆದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:-ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ನಮ್ಮ ಚೀಫ್ ಏಜೆಂಟರಿಗೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,

19 41-C, ರಿಚ್‌ಮಂಡ್ ರೋಡ್, ಬೆಂಗಳೂರು 1.

ವೇಷವನ್ನು ಹಿಡಿದ ಪೀಟರ್ಸ್

[illegible]

ಅಜೇಯ ಗೌರಿಶಂಕರ.

[illegible]

ಸವದಹಸಕ್ಕೆ ವಿದ್ಯುಚ್ಛಕ್ತಿ

[illegible]

ಗಾಂಧೀಜಿಯವರ [illegible] ಉಳಿಸಿದ [illegible]

[illegible]

—:0:—

Coorg Forest Department

Timber Sale.

About 1,2[illegible] c.ft of teak, rosewood, ho[illegible] and other hardwoods will be sold by auction at the Coorg Timber Depot, Hunsur, on Monday the 18th of August 52, at 10 a. m.

For further particulars apply to the, *Conservator of Forests, Coorg, Mercara.*

॥ ವಿವಿಧ ವಾರ್ತೆಗಳು ॥

ಗುಜರಾಥ ಭೂದಾನ ಯಜ್ಞ ಸಮಿತಿಯು ಅಹಮ್ಮದಾಬಾದ ಹತ್ತಿರದ ಒಂದು ಹಳ್ಳಿಯಲ್ಲಿ ಸಭೆ ಸೇರಿ ೭೫ ಸಾವಿರ ಎಕರೆ ಭೂಮಿಯನ್ನು ಕೂಡಿಸಬೇಕೆಂದು ನಿರ್ಧರಿಸಲಾಯಿತು. ಗುಜರಾಥದ ಅನೇಕ ಭಾಗಗಳಿಂದ ಈಗಾಗಲೇ ೩೦ ಸಾವಿರ ಎಕರೆ ಭೂಮಿಯ ಕಾಣಿಕೆಯ ಬಗ್ಗೆ ಆಶ್ವಾಸನೆಗಳು ಬಂದಿವೆ.

ಶ್ರೀ ಬಿ. ಜಿ ಖೇರರ ಮತ್ತು ಶ್ರೀ ದಿವಾನ್ ರಂಗರಾಯರು ಅನುಕ್ರಮವಾಗಿ ಲಂಡನ್ನಿನಲ್ಲಿ ಹೈಕಮಿಷನರ ಮತ್ತು ಬಿಹಾರದ ಗವರ್ನರರಾಗಿ ಹೋದದ್ದರಿಂದ ಪ [illegible]ಯು ಶ್ರೀ ಲೀಲಾ ಮತ್ತು ಡಾ. ಎಸ್. ಎಸ್. ಪಡೀಕರರು ರಾಜ್ಯ ಸಂಪತ್ತಿನಷ್ಟ ಅವರ ಸ್ಥಳಗಳಿಗೆ ಆರಿಸಲ್ಪಟ್ಟಿರುವರು.

ಪ್ರತಿಯೊಂದು ಪ್ರದೇಶದ ಕಾಂಗ್ರೆಸ್ ಸಮಿತಿಯು ಮುಖ್ಯ ಕಾರ್ಯಾಲಯದ [illegible] ಸಂಪರ್ಕಾಧಿಕಾರಿಯನ್ನು ನೇಮಿಸ [illegible] ಭಾ. ಕಾಂಗ್ರೆಸ್ ಸಮಿತಿಯು ನಿರ್ಧರಿಸಿರುವುದು ತಿಳಿದು ಬಂದಿದೆ. ಎಲ್ಲಾ ಕಾಂಗ್ರೆಸ್ ಸಮಿತಿಗಳು ನಿತ್ಯ ಕಾರ್ಯಕ್ಕೆ ಒಡಕು ಬಾರದಂತೆ ಎರಡೂ ಸಮಿತಿಗಳಲ್ಲಿ ಸಹಕಾರವನ್ನು ಮಾಡು [illegible]

ರಾಜ್ಯದಲ್ಲಿಯ ಜನತೆಯ ಮುಖ್ಯ [illegible] ಗ್ರಾಮಾಂತರಗಳಲ್ಲಿ ಇರುವವರ ಸಮುದಾಯ ಯೋಜನೆಗಳಿಗಾಗಿ ಪ್ರತಿ ವರ್ಷ ವಾರದಲ್ಲಿ ಇಷ್ಟವ ತಿಂಗಳಲ್ಲಿ ಒಂದು ದಿನ ದುಡಿಯಬೇಕೆಂದು ಉತ್ತರ ಪ್ರದೇಶ ಸರಕಾರದ ಮುಖ್ಯ ಮಂತ್ರಿಗಳಾದ ಪಂಡಿತ ಗೋವಿಂದ ವಲ್ಲಭಪಂತರು ವಿಧಾನ ಸಭೆಯಲ್ಲಿ ಯೋಜನೆ ಮತ್ತು ಸಂಯೋಜಕ ಖಾತೆಯ ಬೇಡಿಕೆಯ ಮೇಲೆ ಭಾಷಣ ಮಾಡುತ್ತ ಹೇಳಿದರು.

ಮದ್ರಾಸ್ ಗವರ್ನರರಾದ ಶ್ರೀ ಶ್ರೀಪ್ರಕಾಶರು ಕೊಯಮುತ್ತೂರು ಸೆಂಟ್ರಲ್ ಜೈಲಿಗೆ ಸಂದರ್ಶನವಿತ್ತಾಗ ಕೆಂಪುಕಲ್ಲನ್ನು ಬೀಸುವ ಕಲ್ಲಿನಲ್ಲಿ ಬೀಸಿದರು. ಅವರು ನಗುಮೊಗದಿಂದ ಮಾತನಾಡುತ್ತ ಕೆಲವು ವರ್ಷಗಳ ಹಿಂದೆ ತಾನು ಜೈಲಿನಲ್ಲಿದ್ದಾಗ್ಗೆ ಬೀಸಿದ್ದಾಗಿ ಜತೆಯ ಕೈದಿಗಳಿಗೆ ಹೇಳಿದರು. ಅವರು ಒಡನೆ ಮನೆಯನ್ನು ಹೊಕ್ಕು ಅಲ್ಲಿಯ ಅಡಿಗೆಯು ಚೆನ್ನಾಗಿದೆಯೆಂದು ಹೇಳಿದರು

ಕಾಂಗ್ರೆಸ್ ಮಂತ್ರಿಗಳು, ಹೈದರಾಬಾದದಿಂದ ಚುನಾಯಿತ ಪಾರ್ಲಿಮೆಂಟ್ ಸದಸ್ಯರು; ಶಾಸನ ಸಭೆಯ ಸದಸ್ಯರು ಹೈದರಾಬಾದ ಪ್ರದೇಶ ಕಾಂಗ್ರೆಸ್ ಸಮಿತಿಯ ಕೇಂದ್ರ ಕಚೇರಿಯನ್ನು ನಡೆಸುವುದಕ್ಕೆ ತಿಂಗಳಿಗೆ ಕ್ರಮವಾಗಿ ೭೫, ೪೦, ೧೦ ರೂಪಾಯಿ ದೇಣಿಗೆ ಕೊಡಬೇಕೆಂದು ಹೈದರಾಬಾದ ಪ್ರದೇಶ ಕಾಂಗ್ರೆಸ್ ಸಮಿತಿಯು ನಿರ್ಣಯಿಸಿದೆ.

ಸಿಂಹಳದಲ್ಲಿ ಭಾರತದ ಹೈಕಮಿಷನರಾಗಿರುವ ಶ್ರೀ ಕೆ. ಪಿ. ಕೇಶವ ಮೇನನ್ನರವರು ಸದ್ಯದಲ್ಲೇ ತಮ್ಮ ಹುದ್ದೆಯನ್ನು ತ್ಯಜಿಸಿ ಭಾರತಕ್ಕೆ ಹಿಂದಿರುಗುವರೆಂದು ವಿಶ್ವಸನೀಯವಾಗಿ ತಿಳಿದು ಬಂದಿದೆ. ಸಾಮಾನ್ಯವಾಗಿ ಸಾರ್ವಜನಿಕ ಕ್ಷೇತ್ರದಲ್ಲಿರುವ ಧುರೀಣರನ್ನು ರಾಯಭಾರಿಗಳಾಗಿ ನೇಮಿಸುವಾಗ ಮೊದಲು ಒಂದು ವರ್ಷದ ಮಟ್ಟಿಗೆ ನೇಮಿಸಲಾಗುವುದೆಂದೂ ಶ್ರೀ ಮೇನನ್ನರು ಕಳೆದ ತಿಂಗಳಿಗೇ ಒಂದು ವರ್ಷದ ಅವಧಿಯನ್ನು ಮುಗಿಸಿದರೆಂದೂ ಹೇಳಲಾಗಿದೆ.

ಭಾರತೀಯ ರಾಯಭಾರಿ ಡಾ. ಸಾ [illegible]ರು ಇರಾಣದ ಶಹಾರಿಗೆ ತಮ್ಮ ಶಿಫಾರಸು ಪತ್ರಗಳನ್ನು ಸಲ್ಲಿಸಿದಾಗ ಭಾರತೀಯ ಜನರಿಗೆ ಅಭಿನಂದನೆಗಳನ್ನು ಇರಾಣದ ಶಹಾರು ಸಲ್ಲಿಸಿದ್ದಾರೆ. ಭಾರತ ಹಾಗೂ ಚೀನಾಗಳಲ್ಲಿಯ ಭೂಸುಧಾರಣಾ ಪ್ರಯೋಗಗಳನ್ನು ಇರಾಣವು ಅನುಸರಿಸಬೇಕೆಂದು ಮುಖ್ಯ ಮಂತ್ರಿ ಮುಸಾದಿಕರ ಅಳಿಯರಾದ ಸಿನೇಟರ ಮಾಟಿನ್ ದಫ್ತಾರಿಯವರು ಹೇಳಿದರು. ದಫ್ತಾರಿಯವರ ಭಾಷಣವಾದ ನಂತರ ಒಬ್ಬ ಸಿನೇಟರು ತಮ್ಮ ಭೂಮಿಯಲ್ಲಿ ೧೦೦ಕ್ಕೆ ೧೫ರಷ್ಟನ್ನು ಪುನರ್ವಿತರಣ ಕಾರ್ಯಕ್ಕೆ ಕೊಡಲು ಒಪ್ಪಿಕೊಂಡರು.

ಹಿಂದಿನ ದೇಶೀಯ ಸಂಸ್ಥಾನಗಳಿಂದ ಲೋಕಸಭೆಗೆ ಆರಿಸಿ ಬಂದಿರುವ ಸದಸ್ಯರ ಪರಿಷತ್ತು ದೆಹಲಿಯಲ್ಲಿ ಸೇರಿ ಆ ಸಂಸ್ಥೆಗಳಲ್ಲೆಲ್ಲ ಆನುವಂಶಿಕ ರಾಜತ್ವವನ್ನು ರದ್ದುಗೊಳಿಸಿ ಕಾಶ್ಮೀರದಲ್ಲಿರುವಂತೆಯೇ ೫ ವರ್ಷಗಳ ಕಾಲದ ವರೆಗೆ ಚುನಾಯಿತ ಅಧಿಪತಿಯನ್ನಾರಿಸಬೇಕೆಂದೂ ಈಗ ರಾಜ್ಯಗಳನ್ನು ಎ. ಬಿ. ಸಿ. ವರ್ಗದ ರಾಜ್ಯಗಳೆಂದು ವಿಂಗಡಿಸಿರುವದನ್ನು ರದ್ದುಗೊಳಿಸಬೇಕೆಂದೂ ನಿರ್ಣಯವನ್ನು ಅಂಗೀಕರಿಸಿತು. ಶ್ರೀ ಎಸ್. ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಚಹ ಮತ್ತು ಸಕ್ಕರೆ ಇವೆರಡೂ ವಿಲಾಸ ವಸ್ತುಗಳಾದುದರಿಂದ ಇವನ್ನು ವಿವಿಧ ಮುಖ ಮಾರಾಟ ಕರದಿಂದ ಹೊರತು ಪಡಿಸಲು ಬರುವಂತಿಲ್ಲವೆಂದು ಬೊಂಬಾಯಿಯ ಅರ್ಥ ಮಂತ್ರಿ ಡಾ. ಮೆಹತಾರವರು ಶಾಸನ ಸಭೆಯಲ್ಲಿ ಹೇಳಿದರು. ಇವೆರಡೂ ಜನ ಸಾಮಾನ್ಯದ ನಿತ್ಯ ಜೀವನದ ಅವಶ್ಯಕತೆಗಳೆಂದು ವಿರೋಧಿ ಸದಸ್ಯರೊಬ್ಬರ ಕಾರಣ ತೋರಿಸಿ ಇವನ್ನು ಕರದಿಂದ ಹೊರತುಪಡಿಸಬೇಕೆಂದು ಕೇಳಿಕೊಂಡರು. ಅದಕ್ಕೆ ಉತ್ತರವಾಗಿ ಮಂತ್ರಿಗಳು 'ಬೊಂಬಾಯಿ ಇತ್ಯಾದಿ ಮಂತ್ರಿಗಳು ಚಹ ಕುಡಿಯದಿರುವುದೇ ಸಕ್ಕರೆ ಮತ್ತು ಚಹ ಅವಶ್ಯಕ ಸರಕುಗಳಾಗಿರದೆ ವಿಲಾಸಿ ವಸ್ತುಗಳಾಗಿವೆಯೆಂದೂ ಸಿದ್ಧಪಡಿಸುತ್ತದೆ' ಎಂದು ಹೇಳಿದರು.

ಸ್ವಾರ್ಥರಹಿತ ರಾಷ್ಟ್ರಭಕ್ತಿ ವಿಷಯದಲ್ಲಿ ಮಹಾತ್ಮಾಗಾಂಧಿಯವರನ್ನು ಅನುಸರಿಸಬೇಕೆಂದು ಇಜಿಪ್ತದಲ್ಲಿ ರಕ್ತ ರಹಿತ ಕ್ರಾಂತಿಯನ್ನೆಬ್ಬಿಸಿದ ಜನರಲ್ ನಗೀಬರು ತಮ್ಮ ಸೈನಿಕರಿಗೂ ಜನರಿಗೂ ವಿನಂತಿಸಿಕೊಂಡಿದ್ದಾರೆ.

ರಾಮಪುರ ಜಿಲ್ಲೆಯಲ್ಲಿಯ ಕರೀಮಗಂಜದಲ್ಲಿ ೩ ಮೈಲು ಉದ್ದದ ರಸ್ತೆಯನ್ನು ರಚಿಸಲು ಅಲ್ಲಿನ ಪುರಸಭೆಗೆ ಕೇವಲ ರೂ ೫೫ಗಳು ವೆಚ್ಚವಾದುವು. ೧೫೦೦ ಜನ ಹಳ್ಳಿಗರು ಹಣ ತೆಗೆದುಕೊಳ್ಳದೆ ಆ ರಸ್ತೆಯನ್ನು ರಚಿಸಿದರು. ಗ್ರಾಮ ಪಂಚಾಯಿತಿಯು ವೆಚ್ಚ ಮಾಡಿದ ೫೫ ರೂಪಾಯಿಗಳು ಸಲಕರಣೆಗಳನ್ನು ಕೊಳ್ಳಲು ಹೋದವು

ರಾಷ್ಟ್ರದ ಅನೇಕ ಭಾಗಗಳಲ್ಲಿ ಅನಾವೃಷ್ಟಿಯಿರುವದರಿಂದಾಗಿ ಕೃತ್ರಿಮ ಮಳೆ ಬೀಳಿಸುವ ಪ್ರಕ್ರಿಯೆ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ [illegible] ಸಂಸ್ಥೆಯ ಲಕ್ಷ್ಯವನ್ನು ಸೆಳೆದಿದೆಯೆಂದು ತಿಳಿದುಬರುತ್ತದೆ. ಸಂಸ್ಥೆಯ ವಾತಾವರಣ ಸಂಶೋಧನಾ ಸಮಿತಿಯ ಚೇರಮನ್ನ ಶ್ರೀ ವಿ. ವಿ ಸೋಹೋನಿಯವರು ೧೯೫೨ರ ಫೆಬ್ರವರಿ ತಿಂಗಳಲ್ಲಿ ಈ ಕೃತ್ರಿಮ ಮಳೆ ಬರಿಸುವ ಸಂಬಂಧದಲ್ಲಿ ಸಾರ್ವಜನಿಕ ಚರ್ಚೆಯನ್ನು ಏರ್ಪಡಿಸಿದ್ದರೆಂದು ತಿಳಿಯುತ್ತದೆ. ಆ ಚರ್ಚೆಯಲ್ಲಿ ಭಾಗವಹಿಸಲು ತಜ್ಞರನ್ನು ಅವರು ಕೇಳಿಕೊಂಡಿದ್ದಾರೆಂದೂ ಮತ್ತು ಆ ಸಂಸ್ಥೆಗೆ ತಮ್ಮ ಸಲಹೆಗಳನ್ನು ಸೆಪ್ಟೆಂಬರ ಮಧ್ಯದೊಳಗಾಗಿ ಕಳಿಸಬೇಕೆಂದೂ ವಿನಂತಿಸಿಕೊಂಡಿದ್ದಾರೆ.

ರಾಯಲಸೀಮಾ ಬರಗಾಲ ನಿಧಿ.

ಮಡಿಕೇರಿ ಮಹಿಳಾ ಸಹಕಾರ ಸಮಾಜ	ರೂ	೨೦
ಫ್ರೇಜರ್‌ಪೇಟೆ ನೋಟಿಫೈಡ್ ಏರಿಯಾ		೧೨
ಹರವನಾಡು ಸಂಘ		೧೯
ಹೆರವನಾಡು ದವಸ ಭಂಡಾರ		೧೦
ಕುಶಾಲನಗರ ಸಂಘ		೧೨
ಶ್ರೀ ಸಿ. ಎಂ. ತಿಮ್ಮಯ್ಯನವರು		೨೦೦
ವೀರಾಜಪೇಟೆ ಮುನ್ಸಿಪಾಲಿಟಿ		೧೦೦
ವೀರಾಜಪೇಟೆ ಸಬ್ ಕಮಿಟಿ ಮೂಲಕ		೧೨೦
ವೀರಾಜಪೇಟೆ ಮುನ್ಸಿಪಾಲಿಟಿ ಸಿಬ್ಬಂದಿ		೩೭
ವಿದ್ಯಾ ಇಲಾಖೆ ಉದ್ಯೋಗಸ್ಥರ ಸಂಘ		೨೨
ಶ್ರೀ ಬಿ. ಎಸ್. ಕುಶಾಲಪ್ಪನವರ ಮೂಲಕ ನಾಟಕ ಪ್ರದರ್ಶನ		೧೦೫ ೧೪ ೦
ಗೋಣಿಕೊಪ್ಪ ಆಸ್ಪತ್ರೆ		೧೨ ೧೦ ೦
ಶನಿವಾರಸಂತೆ ಆಸ್ಪತ್ರೆ	ರೂ.	೧೦
ಮಲೇರಿಯಾ ಇಲಾಖೆ		೫೪
ಶ್ರೀ ಎಂ ಬಿ ಮಾದಪ್ಪ		೧೦
ಮುನ್ಸಿಫರ್ ಕೋರ್ಟ್ ಸಿಬ್ಬಂದಿ		೧೫
ಏಲಕ್ಕಿ ಸಹಕಾರ ಸಂಘ		೨೨
ಪೊನ್ನಂಗೇರಿ ಡಿ. ಬಿ.		೧೦
ಜ॥ ಜಿ. ಅಬ್ದುಲ್ ರಹಮಾನ್ ಖಾನ್		೧೫
ಜ॥ ಹಾಜಿ ಹಬೀಬುಲ್ಲಾ ಖಾನ್		೧೦
ಗುಯ್ಯ ಅಗಸ್ತ್ಯೇಶ್ವರ ಜಿ. ಬಿ.		೧೦
ಗುಯ್ಯ ಅಗಸ್ತ್ಯೇಶ್ವರ ಸಂಘ		೧೫
ಅಮ್ಮತ್ತಿ ಸಾರುಪತ್ತೆಗಾರರ ಮೂಲಕ		೩೦
ಮಡಿಕೇರಿ ಮುನ್ಸಿಪಲ್ ನೌಕರರು		೨೯
ವೀರಾಜಪೇಟೆ ಆಸ್ಪತ್ರೆ		೩೨
ವಿದ್ಯಾಧಿಕಾರಿಗಳ ಮೂಲಕ		೧೩೬ ೧೩ ೯
ಚೀಫ್ ಕಮೀಷನರ ಆಫೀಸು		೧೬
ಸೋಮವಾರಪೇಟೆ ಹೈಸ್ಕೂಲು		೨೦೦
ಶ್ರೀ ಎಂ. ಡಿ. ಅಪ್ಪಯ್ಯ		೧೦
ಮಡಿಕೇರಿ ಆಸ್ಪತ್ರೆ		೫೧
ಶ್ರೀಮಂಗಲ ಸಾರುಪತ್ತೆಗಾರರ ಮೂಲಕ		೭೧೪
ಶ್ರೀ ಎನ್. ಕೆ. ಸುಬ್ಬಯ್ಯ		೧೧
ಶ್ರೀಮಂಗಲ ಆಸ್ಪತ್ರೆ		೧೪
ಫಾರೆಸ್ಟ್ ಆಫೀಸು		೨೫
ಅಮ್ಮತ್ತಿ ಸಾರುಪತ್ತೆಗಾರರ ಮೂಲಕ		೧೧೫
ಪೊನ್ನಂಪೇಟೆ ನಾಡು ಕಮಿಟಿ ಸೈಸಿಲೆಟರ ಮೂಲಕ		೬೬೦
ನಾಪೋಕ್ಲು ಸಾರುಪತ್ತೆಗಾರರ ಮೂಲಕ		೫೬
ಹತ್ತು ರೂಪಾಯಿಗೆ ಕಡಿಮೆ		೧೫೦ ೭ ೦
ಈ ಮೊದಲು ಪ್ರಕಟಿಸಿದ್ದು	ರೂ	೫೯೬೬ ೧೨ ೦
ಒಟ್ಟು	ರೂ.	೭,೭೯೬ ೧೫ ೯

ವಿಶ್ವಾಮಿತ್ರ—ಮೇನಕಾ

ರವಿವರ್ಮನ ವಿಶ್ವಾಮಿತ್ರ–ಮೇನಕಾ ಚಿತ್ರವನ್ನು ಎಲ್ಲರೂ ನೋಡಿದ್ದಾರೆ. ಆ ಕಥೆ ಎಲ್ಲರಿಗೂ ಗೊತ್ತು. ಮೇನಕೆ ವಿಶ್ವಾಮಿತ್ರನ ತಪೋಭಂಗ ಮಾಡಿದಳು:- ಫಲವಾಗಿ ಶಕುಂತಳಾ ಹುಟ್ಟಿದಳು. ಮೇನಕೆಯು ಮಗು ಶಕುಂತಳೆಯನ್ನು ವಿಶ್ವಾಮಿತ್ರನಿಗೆ ಕೊಡಲು ಬರುತ್ತಾಳೆ. ವಿಶ್ವಾಮಿತ್ರ ಮುಖ ಮುಚ್ಚಿಕೊಂಡು ತಿರಸ್ಕರಿಸುತ್ತಾನೆ.

ಪೂನದ "ಕೇಸರಿ" ಪತ್ರಿಕೆಯಲ್ಲಿ ಒಂದು ವ್ಯಂಗ ಚಿತ್ರವಿದೆ. ಇದು ವಿಶ್ವಾಮಿತ್ರ–ನ [illegible]

ಪ್ರಸಂಗ:–ಭಾಷಾವಾರು ಪ್ರಾಂತ ಯೋಜನೆಯನ್ನು ಕಾಂಗ್ರೆಸ್ ಪಕ್ಷ ತಿರಸ್ಕರಿಸುತ್ತಿರುವುದು.

—00O00—8

Wanted

Candidates from Coorg and Mangalore (South Canara) Special officers on Rs. 150| p. m. and Inspectors on Rs. 100 p. m; Persons with organising ability and who can invest Rs 201 and Rs. 101 repectively need only ayply. Intervied at own cost. Apply with two annas stamps to:-

The Regional Manager,
M/s Purnima Pictures Ltd.,
Mercara, Coorg.

(೩ನೇ ಪುಟದಿಂದ ಸಾಗಿದ್ದು.)

ಆ ತಾಯಿ [illegible]ನೆಗೆ ಹೋದಾಗ ನಾನೇ ಅಡಿಗೆ ಮಾಡಿಕೊಳ್ಳುತ್ತೇನೆಂದು ತೀರ್ಮಾನಿಸಿದೆನು. ನನಗೆ ಬೇಕಾದ ಸಾಮಾನುಗಳನ್ನೆಲ್ಲಾ ಅಡಿಗೆ ಮನೆಯಲ್ಲಿಯೇ ಸರಿಯಾಗಿ ಇಟ್ಟಿದ್ದೇನೆಂದಳು. ಆ ರಾತ್ರಿ ನಾನು ಅಡಿಗೆ ಮಾಡಲು ಹೊರಟು ಕಂಡದ್ದೇನು? ಉಪ್ಪು ಎಂದು ಬರೆದಿದ್ದ ಪಟ್ಟಿಗೆಯಲ್ಲಿ ಸಕ್ಕರೆ, ಸಕ್ಕರೆ ಎಂದಿದ್ದಲ್ಲಿ ಕಾಫಿ, ಕಾಫಿ ಎಂದಿದ್ದಲ್ಲಿ ಮೊಟ್ಟೆ–ಹೀಗಾಗಿ ನನಗೆ ಬೇಕಾದ ಸಾಮಾನು ಸಿಕ್ಕದೆ ಆ ರಾತ್ರಿ ಹೊಟೇಲಿನಲ್ಲಿ ಹೋಗಿ ಊಟ ಮಾಡಿದೆನು. ಮನೆಗೆ ಬಂದು, ಎಲ್ಲಾ ಸಾಮಾನುಗಳನ್ನು ಒಂದು ಕ್ರಮವಾಗಿ ಮಾಡಿ ಸರಿಪಡಿಸಿದೆನು!

ಕೆಲವು ದಿನ ಕಳೆದು ಹೆಂಗಸು ಮನೆಗೆ ಬಂದಳು—ಅಡಿಗೆ ಮನೆಗೆ ಹೋಗಿ ಎಲ್ಲವನ್ನು ನೋಡಿ–ಶೀಶೆ ಗಂಟುಗಳೆಲ್ಲವೂ ಒಂದೇ ತರ, ಶೀಶೆ ಇಲ್ಲಿ ಮಾಡಿರುವ ಆ ಕಾಷ್ಟಕವನ್ನು ನೋಡಿಸಲು ನನಗೆ, ಇನ್ನು ಒಂದು ವಾರವಾದರೂ ಬೇಕೆಂದು ಹೇಳಿ ನಗಾಡಿದಳು.

ದಿ ಕೆನಾರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್.,

ಉಡಿಪಿ.

ನೋಟೀಸು.

ಈ ಕೆಳಗೆ ಕಾಣಿಸಿದವರು ಸದ್ರಿ ಬ್ಯಾಂಕಿನಿಂದ ನಗಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ, ಅದರ ಮೇಲಿನ ಬಡ್ಡಿಯನ್ನಾಗಲೀ, ವಾಯಿದೆಗೆ ಕೊಡದೆ ಇದ್ದುದರಿಂದಲೂ, ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸುಗಳು ಕೆಲವರಿಗೆ ಪಾವತಿಯಾಗಿ, ಕೆಲವರಿಗೆ ಪಾವತಿಯಾಗದೆ ವಾಪಾಸು ಬಂದಿರುವುದರಿಂದಲೂ, ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ : —

ಸದ್ರಿಯವರು ಈಡಿಟ್ಟ ನಗಗಳನ್ನು ತಾ 22-8-52ರ ಒಳಗೆ ಬಿಡಿಸಿಕೊಂಡು ಹೋಗದಿದ್ದ ಪಕ್ಷದಲ್ಲಿ, ತಾರೀಕು 30-8-52ನೇ ಶನಿವಾರ ಅಪರಾಹ್ನ 2 ಗಂಟೆಗೆ ಯಾ ಬ್ಯಾಂಕಿನವರಿಗೆ ಯುಕ್ತ ತೋರುವ ಬೇರೆ ತಾರೀಕಿನಲ್ಲಿ ಪುನಹ ನೋಟೀಸು ಕೊಡದೇನೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಕ ನಂ.	ಸಾಲದ ನಂಬ್ರ.	ಸಾಲಗಾರರ ಹೆಸರು, ವಿಳಾಸ.	ಸಾಲದ ಮೊಬಲಗು. ರೂ.
1.	319/50	ಜ. ಎ. ರಶೀದ್ ಖಾನ್ S/o ಕರೀಂಖಾನ್, ಬಿಳುಗುಂದ ಗ್ರಾಮ ಪೊ. ಅಮ್ಮತ್ತಿ.	45
2.	498/50	ಶ್ರೀ ಪೊನ್ನಕಚ್ಚಿರ ತಿಮ್ಮಯ್ಯ S/o ಮಂದಣ್ಣ, ಬಿಟ್ಟಂಗಾಲ ಗ್ರಾಮ, ವೀರಾಜಪೇಟೆ.	300
3.	561/50	ಶ್ರೀ ಕೋಟ್ರಮಾಡ ಬೆಳ್ಯಪ್ಪ, S/o ನಾಣಯ್ಯ, ಹೈಸೊಡ್ಲೂರು ಗ್ರಾಮ, ಹುದಿಕೇರಿ ಪೊ.	75
4.	590/50	ಶ್ರೀಮತಿ ಕಮಲಾಬಾಯಿ, ವೀರಾಜಪೇಟೆ.	35
5	597/50	ಶ್ರೀ ಪೊನ್ನಕಚ್ಚಿರ ತಿಮ್ಮಯ್ಯ S/o ಮಂದಣ್ಣ, ಬಿಟ್ಟಂಗಾಲ ಗ್ರಾಮ, ವೀರಾಜಪೇಟೆ	60
6.	603/50	ಶ್ರೀ ಪೊಕ್ಕುಳಂಡ ತಿಮ್ಮಯ್ಯ S/o ಸುಬ್ಬಯ್ಯ, ನಾಲ್ಕೇರಿ ಗ್ರಾಮ, ಕಾಕೋಟುಪರಂಬು.	25
7.	819/50	ಜ. ಹೆಚ್. ಮೊಹಿನೆ S/o ಹಸೈನಾರ್, ಪೊದವಾಡ ಗ್ರಾಮ, ಬೆಟ್ಟಗೇರಿ ಪೋಸ್ಟು.	80
8.	855/50	ಶ್ರೀ ಹರಿಜನ ತಿಮ್ಮ S/o ರಂಗ, ಬಿಳುಗುಂದ ಗ್ರಾಮ, ಅಮ್ಮತ್ತಿ.	20
9.	945/50	,, ಹರಿಜನರ ತಿಮ್ಮ S/o ರಂಗ, ಬಿಳುಗುಂದ ಗ್ರಾಮ, ಅಮ್ಮತ್ತಿ.	55
10.	88/51	ಶ್ರೀ ಪಾಲಚಂಡ ದೇವಯ್ಯ S/o ಗಣಪತಿ, ಅರಪಟ್ಟು ಗ್ರಾಮ, ಕಡಂಗ ಪೋಸ್ಟು.	20
11.	253/51	ಜ. ಹರಿಚಂದ್ರ ಅಯಮದಿ S/o ಹಸೈನಾರ್, ಪೊದವಾಡ ಗ್ರಾಮ, ಬೆಟ್ಟಗೇರಿ ಪೋಸ್ಟು.	400
12.	310/51	ಜ. ಹರಿಚಂದ್ರ ಅಯಮದಿ S/o ಹಸೈನಾರ್, ಪೊದವಾಡ ಗ್ರಾಮ, ಬೆಟ್ಟಗೇರಿ ಪೋಸ್ಟು.	280
13.	352/51	ಜ. ಕುವಲೆ ಯೂಸೂಫ್ S/o ಮೊಹಿನೆ, ಮೈತಾಡಿ ಗ್ರಾಮ, ಮೂರ್ನಾಡು ಪೋಸ್ಟು.	60
14.	881/51	ಶ್ರೀ ಬಲ್ಲಂಡ ತಿಮ್ಮಯ್ಯ S/o ಸುಬ್ಬಯ್ಯ, ಪೊದವಾಡ ಗ್ರಾಮ, ಬೆಟ್ಟಗೇರಿ ಪೋಸ್ಟು.	140
15.	400/51	ಜ. ಹರಿಚಂದ್ರ ಅಯಮದಿ S/o ಹಸೈನಾರ್, ಪೊದವಾಡ ಗ್ರಾಮ, ಬೆಟ್ಟಗೇರಿ ಪೋಸ್ಟು.	270
16.	570/51	ಶ್ರೀ ಕಾಳೆಯಮಂಡ್ರ ಮಂದುವಮ್ಮಯ್ಯ S/o ಕರ್ತಮ್ಮಯ್ಯ, ಕೊಳಗದಾಳು ಗ್ರಾಮ ಮಡಿಕೇರಿ	115
17.	641/51	ಶ್ರೀ ಒಕ್ಕಲಿಗರ ಚೆನ್ನಯ್ಯ S/o ಸಿಂಗೆಗೌಡ, ಕಾರ್ಮಾಡು ಗ್ರಾಮ, ಅಮ್ಮತ್ತಿ.	150
18.	698/51	ಶ್ರೀ ಪೊನ್ನಕಚ್ಚಿರ ತಿಮ್ಮಯ್ಯ S/o ಮಂದಣ್ಣ, ಬಿಟ್ಟಂಗಾಲ ಗ್ರಾಮ, ವೀರಾಜಪೇಟೆ.	50
19.	799/51	ಶ್ರೀ ಮಾಲೇಟಿರ ಮುತ್ತಣ್ಣ S/o ಚಂಗಪ್ಪ, ಮೇಕೂರು ಗ್ರಾಮ, ಪೊನ್ನಬೆಟ್ಟ ಪೋಸ್ಟು.	30
20.	809/51	ಶ್ರೀ ಎಂ. ಮುತ್ತುಸ್ವಾಮಿ S/o ಮರಿಯನ್, ವಿನುಪೇಟೆ ವೀರಾಜಪೇಟೆ ಪೋಸ್ಟು.	20
21.	912/51	ಶ್ರೀ ಬಲಗೈ ಪುಟ್ಟ S/o ಸಿಂಗ, ಬಿಳುಗುಂದ ಗ್ರಾಮ, ಅಮ್ಮತ್ತಿ ಪೋಸ್ಟು.	25
22.	1076/51	ಜ. ಕೆ. ಅವುಲ S/o ಮೊಹಿದಿನ್, ಕ್ಯಾಲೆಸ್ ಎಸ್ಟೇಟು, ಕಕ್ಕಬೆ ಪೋಸ್ಟು.	30
23.	1116/51	ಶ್ರೀ ಕೋಟ್ರಮಾಡ ಬೆಳ್ಯಪ್ಪ S/o ನಾಣಯ್ಯ, ಹೈಸೊಡ್ಲೂರು ಗ್ರಾಮ, ಹುದಿಕೇರಿ ಪೋಸ್ಟು.	60
24.	1306/51	ಶ್ರೀ ಬೊಳ್ಳಂಡ ಚಿಣ್ಣಪ್ಪ S/o ನಂಜಪ್ಪ, ಟೈಲರ್, ವೀರಾಜಪೇಟೆ ಪೋಸ್ಟು.	175
25.	1406/51	ಶ್ರೀ ಮಾಲೇಟಿರ ಮುತ್ತಣ್ಣ S/o ಚಂಗಪ್ಪ, ಮೇಕೂರು ಗ್ರಾಮ, ಪೊನ್ನಬೆಟ್ಟ ಪೋಸ್ಟು.	25

ಬ್ಯಾಂಕಿನ ಆಫೀಸು : ವೀರಾಜಪೇಟೆ
ತಾರೀಕು 4—8—1952.

U. MADHAVACHAR,
AGENT.

ಕೇಂದ್ರ ಮಂತ್ರಿಗಳ ಪಗಾರದಲ್ಲಿ ಕಡಿತ.

ಕೇಂದ್ರ ಮಂತ್ರಿಗಳ ಸ್ಥಾನಮಾನ ಕಾಯ್ದುಕೊಂಡು ಮಂತ್ರಿಯು ಈಗಿನ ತಿಂಗಳದ ೩,೦೦೦ ರೂಪಾಯಿ ಸಂಬಳವನ್ನು ೨೨೫೦ ರೂಪಾಯಿಗೆ, ಡೆಪ್ಯೂಟಿ ಮಂತ್ರಿಯ ೨೦೦೦ ರೂಪಾಯಿ ಸಂಬಳವನ್ನು ೧೭೫೦ ರೂಪಾಯಿಗೆ ಇಳಿಸಲಾಗಿದೆ.

ಮಂತ್ರಿಗಳ ಸಂಬಳ ಮತ್ತು ಭತ್ತೆ ಮಸೂದೆಯನ್ನು ಗೃಹ ಮಂತ್ರಿಗಳಾದ ಡಾ. ಕೈಲಾಸನಾಥ ಕಾಟ್ಜುರವರು ಲೋಕಸಭೆಯಲ್ಲಿ ಮಂಡಿಸಿದರು.

ಕೇಂದ್ರ ಮಂತ್ರಿಯು ಸಂಬಳವು ತಿಂಗಳಿಗೆ ೨೨೫೦ ರೂಪಾಯಿ ಇರಬೇಕೆಂದೂ ಅವರಿಗೆ ಪುಕ್ಕಟೆ ವಸತಿ ಗೃಹ ಅವರಿಗೂ ಅವರ ಕುಟುಂಬಕ್ಕೂ ಸರಕಾರಿ ಗವಾಖಾನೆಗಳಲ್ಲಿ ಪುಕ್ಕಟೆ ಔಷಧದ ಆರೈಕೆ, ತಿಂಗಳಿಗೆ ರೂ. ೫೦೦ ಬತ್ತೆ ಕೊಡಬೇಕೆಂದೂ ಹಾಗೂ ಕಾರನ್ನು ಕೊಳ್ಳಲು ಮುಂಗಡ ಹಣ ಕೊಡಬೇಕೆಂದೂ ಆ ಮಸೂದೆಯಲ್ಲಿ ಕಾಣಿಸಲಾಗಿದೆ. ಈ ಕಾರಿನ ಹಣವನ್ನು ವಾಪಾಸು ತೆಗೆದುಕೊಳ್ಳಲಾಗುವುದು.

ಡೆಪ್ಯೂಟಿ ಮಂತ್ರಿಗೆ ತಿಂಗಳಿಗೆ ರೂ. ೧೭೫೦ ಸಂಬಳದ ಜೊತೆಗೆ ವಸತಿಗೃಹ, ವೈದ್ಯಕೀಯ ಸೌಕರ್ಯಗಳನ್ನು ಕೊಡಬೇಕೆಂದೂ, ಹೆಚ್ಚು ಬತ್ತೆಯನ್ನು ಕೊಡಲಾಗದೆಂದೂ ಅದರಲ್ಲಿ ಕಾಣಿಸಲಾಗಿದೆ.

ಮಂತ್ರಿಯು ತನ್ನ ಯೋಗ್ಯ ಜೀವನ ಮಟ್ಟವನ್ನು ಕಾಯ್ದುಕೊಳ್ಳಲೋಸುಗ ಇಷ್ಟೊಂದು ಕನಿಷ್ಟ ಸಂಬಳವನ್ನು ಪಡೆಯಬೇಕಾಗುತ್ತದೆ. ಈ ಪ್ರಕಾರವು ದೀರ್ಘ ವಿಚಾರ ಮಾಡಿ ನಿರ್ಧರಿಸಿತೆಂದು ಡಾ. ಕಾಟ್ಜುರವರು ಹೇಳಿದರು. ಉತ್ಪನ್ನ ಕರವನ್ನು ಕಳೆದ ನಂತರ ಒಬ್ಬ ಮಂತ್ರಿಯು ತಿಂಗಳಿಗೆ ರೂ ೧೭೫೦ ಅಂದರೆ ದಿನಕ್ಕೆ ೫೮ ರೂಪಾಯಿ ಪಡೆಯುವನು. ಪಾರ್ಲಿಮೆಂಟ್ ಸದಸ್ಯನು ದಿನಕ್ಕೆ ೪೦ ರೂಪಾಯಿ, ಡೆಪ್ಯೂಟಿ ಮಂತ್ರಿಯು ೫೫ ರೂ. ಪಡೆಯುತ್ತಾನೆ. ದಿಲ್ಲಿಯಂತಹ ಸ್ಥಳಗಳಲ್ಲಿ ಇದು ದೊಡ್ಡದೇನಲ್ಲ. ಯಾಕೆಂದರೆ ಮಂತ್ರಿಯು ಎರಡು ಕಡೆ ಗೃಹ ವ್ಯವಸ್ಥೆ ಮಾಡಬೇಕಾಗುವುದು. ತನ್ನ ಮಕ್ಕಳಿಗೆ ಶಿಕ್ಷಣ ಕೊಡಬೇಕಾಗಿ ಬರುವುದು. ತನ್ನ ಹೆಣ್ಣು ಮಕ್ಕಳ ಮದುವೆ ಮಾಡಬೇಕಾಗುವುದು. ಮಂತ್ರಿಗೊಂದು ಕಾರು ಬೇಕೇ ಬೇಕು. ಅನೇಕರಿಗೆ ಸ್ವಾಗತವನ್ನೀಯಲು ಪುಸ್ತಕ ಕಚೇರಿ ಬೇಕಾಗುವದು ಎಂದು ಅವರು ಹೇಳಿದರು.

ರಾಷ್ಟ್ರಾಧ್ಯಕ್ಷರ ವೇತನದಲ್ಲಿ ಕಡಿತ.

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ತಾವಾಗಿಯೇ ತಮ್ಮ ವೇತನದಲ್ಲಿ ಶೇ. ೪೦ರಷ್ಟನ್ನು ಕಡಿತ ಮಾಡಿ ಉಳಿದ ಶೇ. ೬೦ರಷ್ಟನ್ನು ಮಾತ್ರ ತೆಗೆದುಕೊಳ್ಳುತ್ತಿರುವರೆಂದು ಅಧಿಕೃತ ವ್ಯಕ್ತಿಗಳಿಂದ ತಿಳಿದು ಬಂದಿದೆ.

ಮಹಾ ಚುನಾವಣೆಗಳ ನಂತರ ಅವರು ಅಧ್ಯಕ್ಷ ಪದವನ್ನು ಸ್ವೀಕರಿಸಿದ ಕೂಡಲೇ, ಕೇಂದ್ರ ಸರಕಾರದ ಮಿತವ್ಯಯ ಯೋಜನೆಗೆ ಸಹಾಯವಾಗುವಂತೆ ತಮ್ಮ ವೇತನದಲ್ಲಿ ಕಡಿತ ಮಾಡಲು ಕೇಂದ್ರ ಸರಕಾರಕ್ಕೆ ಸೂಚಿಸಿದ್ದರೆಂದೂ, ಹೇಳಲಾಗಿದೆ. ಆದರೆ ಭಾರತದ ಘಟನೆಯ ೫೯ (೩) ನೇ ವಿಧಿಯಂತೆ ರಾಷ್ಟ್ರಾಧ್ಯಕ್ಷರು, ಲೋಕಸಭೆಯು ಕಾನೂನಿನ ಮೂಲಕ ಅವರಿಗೆಂದು ಗೊತ್ತುಪಡಿಸುವ ವೇತನ ಬತ್ತೆಗಳನ್ನು ಪಡೆಯಲು ಹಕ್ಕು ಪಡೆದಿರುವರೆಂದೂ ಅಂಥಾ ಕಾಯಿದೆಯು ಅಮಲಿನಲ್ಲಿ ಬರುವ ವರೆಗೆ ಅವರ ವೇತನವು ರೂ. ೧೦,೦೦೦ ಗಳಿರಬೇಕೆಂದೂ (೫೯)ನೇ ವಿಧಿಯಂತೆ ರಾಷ್ಟ್ರಾಧ್ಯಕ್ಷರ ಅಧಿಕಾರಾವಧಿಯಲ್ಲಿ ಈ ವೇತನ ಬತ್ತೆಗಳನ್ನು ಕಡಿಮೆ ಮಾಡಕೂಡದೆಂದೂ ತಿಳಿಸಿರುವದರಿಂದ ಸರಕಾರವು ರಾಷ್ಟ್ರಾಧ್ಯಕ್ಷರ ಸೂಚನೆಯನ್ನು ಅಂಗೀಕರಿಸಲು ಸಾಧ್ಯವಾಗಲಿಲ್ಲವೆಂದು ಹೇಳಲಾಗಿದೆ.

ಈ ಬಗ್ಗೆ ಇರುವ ಕಾಯಿದೆಯ ಕ್ಲಿಷ್ಟ ಅಂಶಗಳ ದೃಷ್ಟಿಯಿಂದ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ತಾವಾಗಿಯೇ ತಮ್ಮ ವೇತನದಲ್ಲಿ ಕಡಿತ ಮಾಡಿಸಿ ಕಳೆದ ಜೂನ್ ತಿಂಗಳಿಂದ ಕೇವಲ ರೂ ೬,೦೦೦ ಮಾತ್ರ ಪಡೆಯುತ್ತಿರುವರೆಂದು ತಿಳಿಸಲಾಗಿದೆ.

ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ.

ಅಖಿಲ ಭಾರತ ಕಾಂಗ್ರೆಸ್ಸಿನ ಚುನಾಯಿತ ಅಧ್ಯಕ್ಷರ ಚುನಾವಣೆಯು ಡಿಸೆಂಬರ್ ೨೨ ರಂದು ನಡೆಯಲಿದೆ ಮತ್ತು ಚುನಾವಣೆಯ ಪರಿಣಾಮವನ್ನು ೩೧ರಂದು ಸಾರಲಾಗುವುದೆಂದು ಕಾರ್ಯಕಾರಿಣಿಯು ಚುನಾವಣೆ ಮಂಡಳವು ಕಾರ್ಯಕ್ರಮವನ್ನು ಸಿದ್ಧಗೊಳಿಸಿದೆ.

ಡಿಸೆಂಬರ್ ೩ರ ವರೆಗೆ ಅಧ್ಯಕ್ಷ ಚುನಾವಣೆಗೆ ನಾಮಪತ್ರಗಳನ್ನು ಸ್ವೀಕರಿಸಲಾಗುವುದು. ನಾಮಪತ್ರ ಹಿಂತೆಗೆದುಕೊಳ್ಳುವ ದಿನವು ಡಿಸೆಂಬರ್ ೧೧ ಆಗುತ್ತದೆ. ಎ. ಐ. ಸಿ. ಸಿ. ಕಚೇರಿಯಲ್ಲಿ ಪರಿಣಾಮವನ್ನು ಸಾರಲಾಗುವುದು.

ಶ್ರೀ ಕೆ. ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಗಾಂಧಿ ಸ್ಮಾರಕ ನಿಧಿಯ ಕಾರ್ಯಕ್ರಮ.

ಗಾಂಧಿ ಸ್ಮಾರಕ ನಿಧಿಯ ವಿಶ್ವಸ್ಥ ಮಂಡಳಿಯ ಸಭೆಯು ನಿಧಿಯ ಅಧ್ಯಕ್ಷ ಶ್ರೀ ಮಾವಲಂಕರರ ಅಧ್ಯಕ್ಷತೆಯಲ್ಲಿ ಕೂಡಿ, ೧೯೫೧ರ ಕಾರ್ಯವರದಿ ಮತ್ತು ಲೆಕ್ಕ ಪತ್ರವನ್ನು ಸ್ವೀಕರಿಸಲಾಯಿತು.

ಒಟ್ಟು ೧೦೯೫ ಲಕ್ಷ ರೂ. ಗಳು ನಿಧಿಗಾಗಿ ಕೂಡಿದ್ದು, ಈ ವರೆಗೆ ಒಂದು ಕೋಟಿ ರೂ. ವೆಚ್ಚವಾಗಿದ್ದು ೧೯೫೧ರ ಲ್ಲಿ ೫೧ ಲಕ್ಷ ರೂ. ವೆಚ್ಚವಾಗಿದೆ.

ನಿಧಿಯ ಕಾರ್ಯ ಸಮಿತಿಯಿಂದ ಸೂಚಿಸಲ್ಪಟ್ಟ ೧,೦೮,೦೬,೩೫೭ ರೂ. ಗಳ ಹೆಚ್ಚಿನ ಬೇಡಿಕೆಗೆ ವಿಶ್ವಸ್ಥ ಮಂಡಳಿಯು ಮನ್ನಣೆ ಸಲ್ಲಿಸಿತು.

ಒಟ್ಟು ನಿಧಿಯಲ್ಲಿ ಒಂದೂವರೆ ಕೋಟಿ ರೂ. ಗಳನ್ನು ಗಾಂಧೀಜಿಯ ವಿವಿಧ ರೀತಿಯ ಭೌತಿಕ ಸ್ಮಾರಕಗಳಿಗಾಗಿ ವೆಚ್ಚ ಮಾಡಲಾಗುತಿದ್ದರೆ, ಉಳಿದ ಸುಮಾರು ೮|| ಕೋಟಿ ರೂ. ಗಳನ್ನು ಗಾಂಧಿಯ ಬಲ ಮಹತ್ವದ ವಿಧಾಯಕ ಕಾರ್ಯಕ್ರಮಗಳ ಏಳಿಗೆಗಾಗಿ ವೆಚ್ಚ ಮಾಡಲಾಗುವುದು.

ರಾಜಘಾಟ, ಸಬರಮತಿ ಆಶ್ರಮ (ಅಹ್ಮದಾಬಾದು), ಸೇವಾಗ್ರಾಮ ಆಶ್ರಮ (ವಾರ್ಧಾ) ಮತ್ತು ದ. ಭಾರತದ ಸಾಂಸ್ಕೃತಿಕ ಕೇಂದ್ರವಾದ ಮಧುರೆಯ ಲ್ಲಿ ಹೀಗೆ ನಾಲ್ಕು ಕಡೆ ಗಾಂಧೀ ಸ್ಮಾರಕ ವಸ್ತು ಸಂಗ್ರಹಾಲಯಗಳನ್ನು ಏರ್ಪಡಿಸಲು ನಿಧಿಯು ನಿರ್ಧರಿಸಿದೆ. ಪ್ರತಿಯೊಂದು ವಸ್ತು ಸಂಗ್ರಹಾಲಯದಲ್ಲಿ ಗಾಂಧೀ ಸಾಹಿತ್ಯಕ್ಕೆ ಸಂಬಂಧಿಸಿದ ಎಲ್ಲ ಪುಸ್ತಕಗಳುಳ್ಳ ವಾಚನಾಲಯವಿರುವದು.

ಗಾಂಧೀಜಿಯ ಚಟುವಟಿಕೆಗಳ ಸ್ಮಾರಕವೆಂದು ಮಹತ್ವದ ಘಟನೆಗಳು ಸಂಭವಿಸಿದಲ್ಲಿ ಭಾರತದ ಅದ್ಯಂತ ಒಟ್ಟು ನೂರು ಸ್ಮಾರಕ ಸ್ತಂಭಗಳನ್ನು ಯೋಗ್ಯವಾದ ಲಿಪಿಗಳೊಂದಿಗೆ ನಿಲ್ಲಿಸಲು ನಿರ್ಧರಿಸಿದೆ. ಈ ಸ್ತಂಭಗಳ ಮಾದರಿ ತಯಾರಿಕೆಯಲ್ಲಿದೆ. ಗಾಂಧೀಜಿಯ ಬಗ್ಗೆ ಚಲನ ಚಿತ್ರ ಹೊರಡಿಸಲು ನಿಧಿಯು ಅತಿ ಮಹತ್ವದ ಸಲಕರಣೆಗಳನ್ನು ಭಾರತದಲ್ಲದೆ ಇಂಗ್ಲೆಂಡ್ ಮತ್ತು ಅಮೇರಿಕಗಳಿಂದ ಲೂ ಸಂಗ್ರಹಿಸಿದೆ.

ಗಾಂಧೀ ತತ್ವ ಪ್ರಚಾರ ಸಮಿತಿಯು ದೇಶದಲ್ಲಲ್ಲದೆ ವಿದೇಶಗಳಲ್ಲಿಯೂ ಗಾಂಧೀ ತತ್ವ ಪ್ರಚಾರಾರ್ಥವಾಗಿ ಅವರ ಲೇಖನಗಳನ್ನು ಪ್ರಸಿದ್ಧಿಸಿ ಅಗ್ಗವಾದ ಬೆಲೆಗೆ ಮಾರುವ ಯೋಜನೆಯನ್ನಿಟ್ಟಿದೆಯಲ್ಲದೆ ವಿದ್ವಾಂಸರಿಗೆ ಪಾರಿತೋಷಕಗಳನ್ನು ಕೊಡುವ ಯೋಜನೆಯೂ ಇದೆ.

ಮಹಾರೋಗ ಪ್ರತಿಬಂಧಕ ಮತ್ತು ರೋಗಿಗಳ ಉಪಚಾರಕ್ಕಾಗಿ ನಿಧಿಯು ಒಂದು ಕೋಟಿ ರೂ. ಗಳ ವೆಚ್ಚ ವಹಿಸುವುದಕ್ಕೆ ನಿರ್ಧರಿಸಿದೆ. ಈ ಹಣದಲ್ಲಿ ಹೊಸ ಕೇಂದ್ರಗಳನ್ನು ತೆರೆಯದೇ ಅಸ್ತಿತ್ವದಲ್ಲಿರುವ ಕೇಂದ್ರಗಳ ಮುಖಾಂತರವೇ ಹೆಚ್ಚಿನ ಸೇವೆ ಸಲ್ಲಿಸಲಾಗುವುದು.

ಗಾಂಧೀ ದೃಷ್ಟಿಯಲ್ಲಿಯ ಗ್ರಾಮ ಸ್ವರಾಜ್ಯ ಅಥವಾ ರಾಮರಾಜ್ಯದ ಕಾರ್ಯಕ್ಕೆಗೊಳ್ಳುವ ಅಭಿವೃದ್ಧಿಯ ದೃಷ್ಟಿಯಲ್ಲಿ ಯೋಜನೆಯಿದೆ. ವಿವಿಧ ಕಾರ್ಯಕರ್ತರನ್ನು ತಜ್ಞರಿಂದ ಕಾರ್ಯಕೈಗೊಳ್ಳಲು ಕೇಳಿಕೊಳ್ಳಲಾಗುವುದು. ಅವರ ಶಿಕ್ಷಣದ ಯೋಗ್ಯ ವ್ಯವಸ್ಥೆ, ಶಿಕ್ಷಣದ ನಂತರ ಅವರಿಗೆ ೭೫ರಿಂದ ೧೫೦ ರೂ. ವರೆಗೆ ಗೌರವ ವೇತನವೆಂದು ಅವರ ಜೀವನ ವೆಚ್ಚಕ್ಕಾಗಿ ಒದಗಿಸಲಾಗುವುದು.

ಮೂಲ ಶಿಕ್ಷಣ, ಗ್ರಾಮ ಕೈಗಾರಿಕೆಗಳು, ನೈಸರ್ಗಿಕ ಚಿಕಿತ್ಸೆ, ಮಕ್ಕಳ ಮತ್ತು ಮಹಿಳೆಯರಿಗಾಗಿ (ಕಸ್ತೂರಬಾ ಟ್ರಸ್ಟ) ಹರಿಜನ ಮತ್ತು ಆದಿವಾಸಿಗಳ ಕಲ್ಯಾಣ, ಭೂದಾನ ಯಜ್ಞ ಇವೇ ಮೊದಲಾದ ಕಾರ್ಯಗಳೂ ನಿಧಿಯಿಂದ ನೋಡಲ್ಪಡುವವು.

ಧೂಮಪಾನದ ಅನಾಹುತ.

(ಲೇ:—ಡಾ. ಬಿ. ಎಸ್. ನಾಗಭೂಷಣಂ, ಮೈಸೂರು.

ಹೊಗೆಸೊಪ್ಪು ಸಾಧಾರಣವಾಗಿ ಇಂಡಿಯ, ಅಮೇರಿಕಾ ಮೊದಲಾದ ಉಷ್ಣವಲಯಗಳಲ್ಲಿ ಹೆಚ್ಚಾಗಿ ಬೆಳೆಯುವುದು, ಇದರಲ್ಲಿ ಮತ್ತನ್ನುಂಟುಮಾಡುವ ವಿಷ ಸಂಬಂಧವಾದ 'ನಿಕೋಟಿನ್' ವಸ್ತುವು ಬಹು ಹೆಚ್ಚಾಗಿದೆ. ಅಮೇರಿಕಾ ದೇಶದ ಹೊಗೆಸೊಪ್ಪು ಎಲ್ಲಕ್ಕಿಂತಲೂ ಶ್ರೇಷ್ಠವೆನಿಸಿದೆ. ಇದನ್ನು ಬೀಡಿ, ಸಿಗರೇಟ್, ಚುಟ್ಟ ಮುಂತಾದವುಗಳ ರೂಪದಲ್ಲಿ ಸೇದುವುದಲ್ಲದೆ 'ಹುಕ್ಕಾ'ವಿನ ಮೂಲಕವೂ ಉಪಯೋಗಿಸುತ್ತಾರೆ. ಹೊಗೆಸೊಪ್ಪನ್ನು ಎಲೆ ಅಡಿಕೆಯೊಂದಿಗೆ ಅಗಿಯುವುದನ್ನು ಎಲ್ಲರೂ ನೋಡಿದ್ದಾರೆ. ಇನ್ನು ಚೂರ್ಣಮಾಡಿ ಮೂಗಿಗೆ ಏರಿಸಿ ಹುಚ್ಚರಂತೆ ಸೀನುವ ನಶ್ಯಕರನ್ನು ಲೋಕವೆಲ್ಲವೂ ಬಲ್ಲುದು.

ಹೊಗೆಸೊಪ್ಪನ್ನು ಉಪಯೋಗಿಸುವುದರಿಂದ ಗುವ ಅನಾಹುತಗಳು ಅನೇಕರಿಗೆ ತಿಳಿದಿದ್ದರೂ ಸಹ ಆ ದುರಭ್ಯಾಸವನ್ನು ಬಿಡದೆ ಇರುವುದನ್ನು ನೋಡಿದರೆ ಬಹು ವ್ಯಸನವುಂಟಾಗುವುದು. ನಶ್ಯವನ್ನು ಮೂಗಿಗೆ ಪದೇ ಪದೇ ಏರಿಸುವುದರಿಂದ ಮೂಗಿನ ಒಳ ಹೊದಿಕೆಯು ಸೂಕ್ಷ್ಮವಾದ ನರಗಳೆಲ್ಲವೂ ಕೆಟ್ಟು ಹೋಗಿ ಘ್ರಾಣೇಂದ್ರಿಯವು ತನ್ನ ಕೆಲಸವನ್ನು ಮಾಡುವುದಕ್ಕೆ ದುರ್ಬಲವಾಗುವುದಲ್ಲದೆ ಇತರೆ ಅನಾಹುತಗಳೂ ಹಿಂಬಾಲಿಸಿಯೇ ಬರುವವು.

ಅಗುವ ಅನಾಹುತಗಳು.

ಹೊಗೆಸೊಪ್ಪನ್ನು ಹೆಚ್ಚಾಗಿ ಸೇವಿಸುವುದರಿಂದ ಪ್ರಥಮದಲ್ಲಿ ವಾಂತಿಯೂ ಭೇದಿಯೂ ಪ್ರಾಪ್ತವಾಗುವದಲ್ಲದೆ ಅತೀ ದೌರ್ಬಲ್ಯವೂ, ತಲೆ ಸುತ್ತುವಿಕೆಯೂ ಉತ್ಪನ್ನವಾಗುವವು. ನೈಜವಾದ ಪಸೀನೆ ಪಸೀನೆ ಬೆವರುಂಟಾಗುವುದು. ಇಷ್ಟೇ ಅಲ್ಲ; ಹೃದಯದ ಕೋಶಗಳು ಕೆಟ್ಟು ಹೋಗುವವು. ರಕ್ತನಾಳಗಳಲ್ಲಿ ಬಿಗಿ ತಪ್ಪಿ ಹೋಗುವುದಲ್ಲದೆ ನಾಡಿಯೂ ಅತೀ ಶೀಘ್ರವಾಗಿ ಹೊಡೆಯಲು ಪ್ರಾರಂಭಿಸುವುದು. ಗಡಿಗೆಯು ಢಕ ಢಕವೆಂದು ಬಡಿದ ಕೊಳ್ಳುವುದಲ್ಲದೆ ಎದೆಯಲ್ಲಿ ನೋವೂ ಹುಟ್ಟುವುದು. ನರಗಳಲ್ಲಿ ಬಿಗಿ ತಪ್ಪಿ ಹೋಗುವದು. ಕ್ರಮೇಣ ಮೆದುಳು ಕೆಡುವುದಕ್ಕೆ ಆಸ್ಪದವಾಗುವದು, ಬುದ್ಧಿ ವೈಕಲ್ಯವುಂಟಾಗುವುದು, ಜ್ಞಾಪಕಶಕ್ತಿ ಎಳೆ ವಯದಲ್ಲೇ ನಶಿಸುವುವು. ಅಜೀರ್ಣ ಹಸಿವು ಭಂಗವೂ ಮಲಬದ್ಧತೆಯೂ ಹೆಚ್ಚಾಗುವವು. ನೇತ್ರ ದೃಷ್ಟಿ ಕೆಡುವುದು. ಬಾಯಿಯಾಗಿ ಗಂಟಲು ಮತ್ತು ನಾಲಿಗೆಗಳಲ್ಲಿ ಹುಣ್ಣುಗಳಾಗಿ ಅಜೀರ್ಣಕ್ಕೆ ಅವಕಾಶವಾಗುವುದು. ಶ್ವಾಸನಾಳಗಳಲ್ಲಿ ವ್ರಣಗಳಾಗುವದರ ದೆಸೆಯಿಂದ ಧೂಮಪಾಯಿಗಳ ಕಂಠ ಧ್ವನಿಯು ಕರ್ಕಶವಾಗಿಯೇ ಇರುವದು.

ಬೀಡಿ ಸೇದುವುದಕ್ಕೆ ಹೋಗಿ ಗದ್ದೆ ಮನೆಗಳನ್ನು ಸುಟ್ಟುಕೊಂಡಿರುವವರೆಷ್ಟೋ ಜನ! ಉರಿಯುತ್ತಿರುವ ಬೆಂಕಿ ಕಡ್ಡಿಯನ್ನು ಬಿಸಾಡಿದುದರಿಂದ ಅದು ಎಷ್ಟು ಮನೆಗಳನ್ನೂ, ಚಪ್ಪರ, ಮೇದಿಗಳನ್ನೂ ಭಸ್ಮೀಕರಿಸಿಲ್ಲ! ನಡೆಯುತ್ತಿರುವಾಗ ಒಂದೂ, ಕೂತರೆ ಒಂದೂ, ನಿಂತರೆ ಒಂದೂ, ಮಾತಾಡಿದರೆ ಒಂದೂ ಈ ಮೇರೆ ಸೇದುವವರು ಇದ್ದಾರೆ. ಚಿಕ್ಕ ಮಕ್ಕಳಿಂದು ಹೊರಗೆ ತೋರ್ಪಡಿಸಿಕೊಳ್ಳುವರನೇಕರ 'ನನಗೆ ಕತ್ತರಿಯ ಮಾರ್ಕಿನ ಸಿಗರೇಟು ಬೇಕು' 'ನನಗೆ ಪ್ಲೇಯರ್ಸ್ ಸಿಗರೇಟು ಬೇಕು' 'ನನಗೆ ರಾಜಾ ಮಾರ್ಕಿನ ಸಿಗರೇಟ್ ಬೇಕು.' ಎಂದೂ 'ಅಮೇರಿಕಾ ಹೊಗೆಸೊಪ್ಪಿನಲ್ಲಿ ಸುವಾಸನೆಯುಂಟು.' 'ದಿಂಡಿಗಲ್ಲು ಚುಟ್ಟ ವಿನಲ್ಲಿ ಆರೋಗ್ಯ ಉಂಟು.' ಎಂದು ಚರ್ಚಿಸುವ ಪಂಡಿತರಾಗಿರುವರು! ಇವರ ಬಾಯಿಯಲ್ಲಿಯೂ ಜೇಬಿನಲ್ಲಿಯೂ ಬಟ್ಟಲಿನ ಕಾಸು ಹೊಡೆಯುತ್ತಿದ್ದರೂ ಇದೇ ಇವರಿಗೆ ಬಹು ಇಂಪು! ಬಾಯಿ ನಿಂದ ಎಳೆದು ಮೂಗಿನಿಂದ ಹೊಗೆ ಬಿಡುವುದೇ ಶೋಕ!

ವಿಶಕ್ಕೆ ಈ ದುರಭ್ಯಾಸ

ಹೊಗೆಸೊಪ್ಪು ಅಮೇರಿಕಾ ದೇಶದ್ದೇ ಆಗಲಿ ದಿಂಡಿಗಲ್ಲಿನದೇ ಆಗಲಿ, ಅದರ ವಿಷ ಸಂಬಂಧವಾದ ದುರ್ಗುಣಗಳನ್ನು ಅದು ಬಿಟ್ಟೀತೆ? ಬಲವರಿಗೆ ಕಲಹಕ್ಕೆ ಸಂಗಾತಿಯಾಗಿಸೇದದಿದ್ದರೆ ಬುದ್ಧಿಯೇ ಓಡುವುದಿಲ್ಲವಂತೆ! ಮತ್ತೆ ಕೆಲವರಿಗೆ ಚುಟ್ಟ ಅಥವಾ ಸಿಗರೇಟು ಸೇದದಿದ್ದರೆ ಮಲವಿಸರ್ಜನೆಯೇ ಆಗುವುದಿಲ್ಲವಂತೆ! ಆಹಾ ಎಂಥಾ ಅಭ್ಯಾಸ? ಇಸಂತಹ ನಾಗರೀಕತೆ? ಆ ಬಾಲ ವೃದ್ಧರೆಲ್ಲರೂ ಕಲಿತುಕೊಂಡಿರುವ ಈ ಅಭ್ಯಾಸಕ್ಕೆ ಏನು ಮಾಡೋಣ? ಪಾಶ್ಚಾತ್ಯ ದೇಶದವರೂ ಧೂಮಪಾನಕ್ಕೆ ದಾಸಿಯರಾಗಿ ತಮ್ಮ ತುಂಡುಟಗಳನ್ನು ವಿವರ್ಣಗೊಳಿಸಿ ತಪ್ಪು ಶೋಷಕಗಳನ್ನು ಲೇಪಿಸಿಕೊಂಡು ತಮ್ಮ ಸಹಜವಾದ ರೂಪ ಲಾವಣ್ಯ ಕಳೆದುಕೊಳ್ಳುತ್ತಿದ್ದಾರೆ. ಇನ್ನು ಮೇಲೆ ಭಾರತ ಮಹಿಳೆಯರು ತಮ್ಮ ನಾಗರೀಕತೆಯನ್ನು ಪ್ರಕಾಶಪಡಿಸುವುದಕ್ಕೆ ಬೀಡಿ ಸಿಗರೇಟುಗಳನ್ನು ಬಾಯಿಯಲ್ಲಿ ಇಟ್ಟುಕೊಂಡು ತಿರುಗಲು ಪ್ರಾರಂಭಿಸುವರೋ ಏನೋ!

ಡಾ. ನಾ.

ಕೊಡಗು ಡಿಸ್ಟ್ರಿಕ್ಟ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921)ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಅಡಿಸ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಸೆಕ್ರೆಟರಿ ಮತ್ತು ಖಜಾಂಚಿ.

Property For Sale

18 Acres of paddy feilds and 10 acres of dry Land with tiled accommodation for tenants and a new irrigation tank. One mile from Virajpet town. Ideal soil and water. Rs 25000/-

Apply to—

MRS. C. D. CHINADA.
C/o GANESH LODGE,
Virajpet, Coorg.

Edited printed and published by P. I. Belliapa at 'Kodagu' Press, Mercara, for Kodagu Ltd.

Licence No. 60.
Licenced to Post without Prepayment.

Regd. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಐ. ಎನ್. ಬೆಳ್ಯಪ್ಪನವರು | ವಾರ್ಷಿಕ ಚಂದಾ ರೂ. ೬-೦-೦.

ಸಂಪುಟ ೩೧ | ತಾರೀಖು ೧೫-೮-೧೯೫೨ನೇ ಶುಕ್ರವಾರ | ಸಂಚಿಕೆ ೧೧

ಭಾರತದ ವಿದ್ಯಾಮಂತ್ರಿ ಮೌ॥ ಅಬುಲ್ ಕಲಂ ಆಜಾದರು.

ಲೇ: ಶ್ರೀ ವಿ ಎಸ್. ರಾಮಕೃಷ್ಣ, ಬಿ. ಎಸ್ಸಿ (ಆನರ್ಸ್) ಬಿ. ಟಿ,

ಭಾರತದ ವಿದ್ಯಾಮಂತ್ರಿ ಮೌಲಾನಾ ಅಬುಲ್‌ಕಲಂ ಆಜಾದರು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ರಾಷ್ಟ್ರಸೇವೆಯನ್ನು ಆರಾಧಿಸುತ್ತಿರುವರು. ಆಜಾದರ ದಿವ್ಯವೂ ಭಾವನಾಪೂರ್ಣವೂ ಆದ ಜೀವನಲಹರಿ ಭಾರತೀಯರ ಅನುಕರಣೆಗೆ ಸರ್ವವಿಧದಿಂದಲೂ ಯೋಗ್ಯವಾಗಿರುವುದು. ಮೌಲಾನಾ ಆಜಾದರ ಅಪಾರ ಜ್ಞಾನವನ್ನೂ ವಿಶಾಲವಾದ ಭಾವನಾವೈಶಿಷ್ಟ್ಯವನ್ನೂ ಅರಿತೇ ಭಾರತದ ಮಹಾನಾಯಕರಾದ ಜವಾಹರಲಾಲರು ಅವರನ್ನು ವಿದ್ಯಾಮಂತ್ರಿಯಾಗಿ ನಿಯಮಿಸಿರುವರು. ಸ್ವತಂತ್ರಭಾರತದ ರಾಷ್ಟ್ರೀಯ ಶಿಕ್ಷಣ ಯೋಜನೆಯನ್ನು ರೂಪಿಸಲು ಮೌಲಾನಾ ಆಜಾದರ ವಿಶಾಲ ರಾಷ್ಟ್ರೀಯ ಭಾವನೆ, ಅಚಲ ದೇಶಪ್ರೇಮ, ಸ್ವಾರ್ಥತ್ಯಾಗ, ತತ್ವಪೂರ್ಣ ಜೀವನಗಳು ಸದಾಕಾಲವೂ ಸಹಕಾರಿಗಳಾಗಿವೆ. ಮೌಲಾನಾ ಆಜಾದರ ವ್ಯಕ್ತಿತ್ವವನ್ನು ಅರಿಯಲು ಆ ನಿರರ್ಗಳವಾದ ಜೀವನಪ್ರವಾಹವನ್ನು ಶೋಧಿಸುವುದು ಉಚಿತವಾಗಿದೆ.

ಮೌಲಾನಾ ಆಜಾದರ ಜನಕರು ಹುಟ್ಟು ಭಾರತೀಯರಾದ ಮುಸ್ಲಿಮರು. ಅವರು ಅರೇಬಿಯಾ ದೇಶದ ರಮಣಿಯೊಬ್ಬಳನ್ನು ವಿವಾಹವಾದರು. ಅರೇಬಿಯಾ ದೇಶದ ಆ ಮಹಿಳೆಯ ಗರ್ಭದಲ್ಲಿ ಅಬುಲ್‌ಕಲಮ್ ಆಜಾದರು ಮುಸ್ಲಿಮರ ಪವಿತ್ರಯಾತ್ರಾಸ್ಥಳವಾದ ಮೆಕ್ಕಾಪಟ್ಟಣದಲ್ಲಿ ಕ್ರಿ. ಶ. ೧೮೮೮ರಲ್ಲಿ ಜನಿಸಿದರು. ಅವರು ತಮ್ಮ ಬಾಲ್ಯವನ್ನು ಅರೇಬಿಯಾದೇಶದಲ್ಲೇ ಕಳೆದರು.

ಇಸ್ಲಾಂ ಸಂಸ್ಕೃತಿಯಲ್ಲೇ ಬೆಳೆದ ಆಜಾದರು ಆ ಸಂಸ್ಕೃತಿಯಿಂದಲೇ ಪರಿಪೋಷಿತರಾಗಿ ಇಸ್ಲಾಂ ಧರ್ಮದ ಮೂಲತತ್ವಗಳನ್ನು ಆಳವಾಗಿ ಅಭ್ಯಸಿಸಿದರು. ಈಜಿಪ್ಟಿನ ರಾಜಧಾನಿಯಾದ ಕೈರೋನಗರದ ಅಲ್‌ಅಜ್-ಹಾರ್ ವಿದ್ಯಾಪೀಠದಲ್ಲಿ ಅವರು ಅರೇಬಿಯಾ ಪಾರಸೀ ಮುಂತಾದ ಭಾಷೆಗಳಲ್ಲಿ ತಮ್ಮ ಎಳೆವಯಸ್ಸಿನಲ್ಲೇ ಅದ್ಭುತವಾದ ಪಾಂಡಿತ್ಯವನ್ನು ಗಳಿಸಿ ತಮ್ಮ ಪಿತೃದೇಶವಾದ ಭರತಖಂಡಕ್ಕೆ ಆಗಮಿಸಿದರು.

ಭರತಖಂಡಕ್ಕೆ ಆಜಾದರು ಬರುವ ವೇಳೆಗೆ ಭಾರತದ ರಾಜಕೀಯ ಪರಿಸ್ಥಿತಿ ವಿಷಮವಾಗಿದ್ದಿತು. ಭಾರತವನ್ನು ಬ್ರಿಟಿಷರು ತಮ್ಮ ಸಾಮ್ರಾಜ್ಯಬಂಧನದಿಂದ ಬಿಗಿದು ಭಾರತೀಯರನ್ನು ದಾಸ್ಯಪಂಜರದಲ್ಲಿಟ್ಟು ತಮ್ಮ ಅಧಿಕಾರಜಾಲವನ್ನು ಬೀಸಿದ್ದರು. ಬ್ರಿಟಿಷರ ವಿರುದ್ಧವಾಗಿ ಹೋರಾಟವೆಸಗಿ ಭರತಖಂಡದ ಕಳೆದುಹೋದ ಸ್ವತಂತ್ರವನ್ನು ಗಳಿಸಲು ಪ್ರಚಂಡವಾದ ರಾಜಕೀಯ ಕ್ರಾಂತಿ ಎದ್ದಿತ್ತು. ಆಂಗ್ಲಶಾಸನದ ವಿರುದ್ಧ ಹೋರಾಟ ನಡೆಸಲು ಸಿದ್ಧವಾದ ರಾಷ್ಟ್ರೀಯ ಮಹಾಸಂಸ್ಥೆಯು ಲೋಕಮಾನ್ಯ ತಿಲಕ, ಗೋಪಾಲಕೃಷ್ಣ ಗೋಖಲೆ ಮುಂತಾದ ರಾಷ್ಟ್ರನಾಯಕರ ಮುಂದಾಳುತನದಲ್ಲಿ ಅದ್ಭುತವಾದ ಆಂದೋಲನವನ್ನು ಎಬ್ಬಿಸಿತ್ತು. ಆದರೆ ಬ್ರಿಟಿಷರ ಪ್ರಬಲತಮ ಶಕ್ತಿಯೊಡನೆ ಶಾಸಲು ಯೋಗ್ಯ ಮಾರ್ಗ ತಿಳಿಯದೆ ತತ್ತಳಿಸಿದ ಭಾರತೀಯ ಧುರೀಣರಲ್ಲಿ ಬಿಕ್ಕಟ್ಟುಂಟಾಗಿ ತೀವ್ರ ಮತ್ತು ಮಂದಗಾಮಿ ಗಳೆಂಬೆರಡು ಗುಂಪು ರಾಷ್ಟ್ರಮಹಾಸಂಸ್ಥೆಯಲ್ಲಿ ಆಗಿಹೋಯಿತು. ೧೯೦೫ರ ಸುಮಾರಿಗೆ ಹಿಂದೂ ಮುಸ್ಲಿಮರು ಒಟ್ಟಾಗಿ ಕಲೆತು ಆಂಗ್ಲ ಶಾಸನವನ್ನು ಬುಡಮೇಲು ಮಾಡುವರೆಂದು ಹಿಂದೂ ಮುಸ್ಲಿಮರಲ್ಲಿ ಐಕ್ಯ ಭಾವನೆಯು ಮೂಡಿ ರಾಷ್ಟ್ರದ ಎರಡು ಕಣ್ಣುಗಳಾದ ಹಿಂದೂ ಮುಸ್ಲಿಮರು ಶಾಂತಿಯಿಂದ ವಿಶಾಲಭಾರತದಲ್ಲಿ ನೆಲಸಿದ್ದರು. ಆದರೆ ವಿಭಜಿಸಿ ಆಳುವ ನೀತಿಯ ಪ್ರಕಾರ ರಾಷ್ಟ್ರಮಹಾಸಂಸ್ಥೆಯ ಮೇಲೆ ಬಲು ಅಪ್ರೀತಿಯನ್ನು ಕಲ್ಪಿಸಲೋಸುಗ ಹಿಂದೂ ಮುಸ್ಲಿಮರಲ್ಲಿ ಅಸ್ತಿತ್ವದಲ್ಲಿದ್ದ ಸೌಹಾರ್ದತೆಯನ್ನು ನಾಶಮಾಡಿ ಐಕ್ಯಭಂಗವನ್ನು ತಂದೊಡ್ಡಿ ಸರ್ವತ್ರ ವೈಮನಸ್ಯವನ್ನುಂಟುಮಾಡಿ ತಮ್ಮ ಶಾಸನವನ್ನು ಅಚಲವಾಗಿ ಮುಂದೆಸಾಗಿಸಿದ್ದರು. ಮೌಲಾನಾ ಆಜಾದರು ಭಾರತಕ್ಕೆ ಬಂದಾಗ ಭಾರತದ ರಾಜಕೀಯ ಪರಿಸ್ಥಿತಿ ಈ ರೀತಿಯಾಗಿ ಸ್ಪಷ್ಟಬದ್ಧವಾಗಿದ್ದಿತು.

ಆಜಾದರು ತಮ್ಮ ಪಿತೃದೇಶವನ್ನು ಹೊಕ್ಕಾಗ ಹಿಂದೂ ಮುಸ್ಲಿಮರಲ್ಲಿ ಪರಸ್ಪರ ಮೈತ್ರಿಯನ್ನು ಬೆಳೆಸುವಂತೆ ಸಾಧಿಸುವುದೇ ತನ್ನ ಜೀವಿತದ ಮಹಾಧ್ಯೇಯವೆಂದು ಅರಿತುಕೊಂಡರು. ಭಾರತವು ಆಂಗ್ಲರ ಆಳ್ವಿಕೆಯಿಂದ ವಿಮೋಚನೆ ಹೊಂದಿ ಸ್ವತಂತ್ರ ಪಡೆಯಲು ರಾಷ್ಟ್ರವು ಹಾರಥದ ಎರಡು ಚಕ್ರಗಳಾದ ಹಿಂದೂ ಮುಸ್ಲಿಮರು ಐಕ್ಯತೆಯ ಭಾವನೆಯಿಂದ ವರ್ತಿಸಿ ಬ್ರಿಟಿಷರೆದುರು ಕಾದುವುದೇ ಶ್ರೇಯೋಮಾರ್ಗವೆಂಬುದನ್ನು ವಿಶಾಲರಾಷ್ಟ್ರೀಯ ಭಾವನೆಯುಳ್ಳ ಆಜಾದರು ಅರಿತುಕೊಂಡರು. ತಮ್ಮ ೧೯ನೆಯ ವಯಸ್ಸಿನಲ್ಲೇ ತಮ್ಮ ಭಾವನೆಗಳನ್ನು ಪ್ರಚುರಪಡಿಸಲೋಸುಗ 'ವಕೀಲ್' ಎಂಬ ಉರ್ದು ಪತ್ರಿಕೆಯನ್ನು ಹೊರಡಿಸಿದರು. ಪತ್ರಿಕೋದ್ಯಮದಲ್ಲಿ ಕೈ ಹಚ್ಚಿದ ಆಜಾದರು ತಮ್ಮ ವಿಶಾಲ ಅಭಿಪ್ರಾಯಗಳನ್ನು ಜನತೆಯ ಮುಂದಿಟ್ಟರು. ಆದರೆ ವಕೀಲ ಪತ್ರಿಕೆಯಿಂದ ತಮ್ಮ ಉದ್ದೇಶ ಸಾಧನೆಯಾಗದೆಂಬುದನ್ನರಿತ ಆಜಾದರು 'ಅಲ್ ಹಿಲಾಲ್' ಎಂಬ ಪ್ರಭಾವಪೂರ್ಣ ಪತ್ರಿಕೆಯನ್ನು ೧೯೧೨ರಲ್ಲಿ ಪ್ರಕಟಿಸಲು ಆರಂಭಿಸಿದರು. ಅಲ್ ಹಿಲಾಲಿನ ಖ್ಯಾತಿಯು ಶೀಘ್ರದಲ್ಲೇ ದೇಶದಾದ್ಯಂತ ಹಬ್ಬಿತು. ಪೈಗಂಬರನಾದ ಮಹಮ್ಮದನ ದಿವ್ಯಸಂದೇಶವನ್ನು ಜನತೆಗೆ ಸಾರಿ ಹಿಂದೂ ಮುಸ್ಲಿಂ ಐಕ್ಯತೆಯನ್ನೂ ಬಾಂಧವ್ಯ ಭ್ರಾತೃಭಾವಗಳನ್ನೂ ಬೆಳೆಸುವುದು, ಆಂಗ್ಲರಾಳ್ವಿಕೆಯನ್ನು ಹಿಂಡಿಸುವುದೂ ಅಲ್ ಹಿಲಾಲ್ ಪತ್ರಿಕೆಯ ಮಹತ್ತರವಾದ ಧ್ಯೇಯವಾಗಿದ್ದಿತು. ಈ ಧ್ಯೇಯಸಾಧನೆಗಾಗಿ ತಮ್ಮ ತನುಮನಧನಗಳನ್ನರ್ಪಿಸಲು ಸಿದ್ಧರಾದ ಆಜಾದರ ಕೀರ್ತಿ ಸ್ವಲ್ಪದರಲ್ಲೇ ನಾಲ್ದೆಸೆಗಳಿಗೂ ವ್ಯಾಪಿಸಿತು.

ಅಲ್ ಹಿಲಾಲ್ ಪತ್ರಿಕೆಯು ಆಜಾದರ ಮಹಾವ್ಯಕ್ತಿತ್ವದ ದ್ಯೋತಕವಾಗಿದ್ದಿತು. ಅವರಿಗೆ ಅರಬೀ, ಪಾರಸೀ ಭಾಷೆಗಳಲ್ಲಿದ್ದ ಅಸಾಧಾರಣಪಾಂಡಿತ್ಯವು ಆ ಪತ್ರಿಕೆಯಲ್ಲಿ ಪ್ರದರ್ಶನವಾಗುತ್ತಿತ್ತು. ಆದರೆ ಇಸ್ಲಾಂ ಸಂಸ್ಕೃತಿಯನ್ನು ಪರೀಕ್ಷಿಸಿ ವೈಜ್ಞಾನಿಕ ನೋಟದ ಒರೆಗಲ್ಲಿಗೆ ಹಚ್ಚಿದ ರೀತಿಯಾದ ಪರಿಶುದ್ಧದ ಇಸ್ಲಾಂ ಧರ್ಮದ ಅನುಯಾಯಿಗಳಾದ್ದರಿಂದ ಅವರ ಮೂಲ ಸಾಮ್ರಾಜ್ಯದ ಪ್ರತಿಬಿಂಬವೇ ಅಲ್‌ಹಿಲಾಲ್ ಪತ್ರಿಕೆಯಾಗಿದ್ದಿತು. ಅವರು ಇಸ್ಲಾಂ ಧರ್ಮ ಸೂತ್ರಗಳನ್ನು ತಾರ್ಕಿಕ ದೃಷ್ಟಿಯಿಂದ ವಿವೇಚಿಸಿ ನೋಡಿದರು. ಈಜಿಪ್ಟ್, ಟರ್ಕಿ, ಸಿರಿಯ ಪ್ಯಾಲೆಸ್ಟೈನ್, ಇರಾಕ್, ಇರಾನ್ ಮುಂತಾದ ಇಸ್ಲಾಂ ದೇಶಗಳಲ್ಲಿ ಮತೀಯ ಕ್ಷೇತ್ರದಲ್ಲುಂಟಾದ ಕ್ರಾಂತಿಸುಧಾರಣೆಗಳಿಂದ ನವಚೇತನಗೊಂಡ ಆಜಾದರಲ್ಲಿ ನೂತನ ಆವೇಶವು ಸಂಚಾರವಾಗಿತ್ತು. ಆಜಾದರ ಲೇಖನಗಳು ಇಸ್ಲಾಂ ದೇಶಗಳಲ್ಲೆಲ್ಲಾ ಹೆಚ್ಚು ಪ್ರಶಂಸೆಗೆ ಪಾತ್ರವಾದವು. ಈ ಕ್ರಾಂತಿಕಾರರ ಭಾವನೆಗಳಿಂದ ಪ್ರದೀಪವಾದ ಅಲ್‌ಹಿಲಾಲ್ ಪತ್ರಿಕೆಯು ಮುಸ್ಲಿಂ ಪ್ರಾಚೀನತಾ ಪ್ರೇಮಿಗಳ ಟೀಕೆಗೆ ಗುರಿಯಾಗಬೇಕಾಯಿತು. ಆದರೆ ತಾರ್ಕಿಕನೋಟದ ಆಜಾದರು ಇಸ್ಲಾಂ ಧರ್ಮವಾಹಿನಿ ಭಾರತ ರಾಷ್ಟ್ರೀಯತೆಗೆ ವಿರುದ್ಧವಾದುದಲ್ಲವೆಂದು ತೋರಿಸಿಕೊಟ್ಟು, ಭಾರತೀಯರ ಅತಿ ಅಂತರಂಗಗಳನ್ನು ಪತ್ರಿಕೆಯ ಮೂಲಕ ಸಾರಿದರು. ಆಜಾದರ ಉರ್ದು ಭಾಷೆಯ ಲೇಖನಗಳು ಮುಸ್ಲಿಂ ತರುಣ ಮಂಡಲಿಯಲ್ಲಿ ನವೋತ್ಸಾಹವನ್ನು ತರದಿರಲಿಲ್ಲ. ಆಜಾದರ ರಾಷ್ಟ್ರೀಯ ನೋಟದ ವಿಕಾಸವು ನಡೆಯುತ್ತಿದ್ದ ಕಾಲದಲ್ಲೇ ಮುಸ್ಲಿಂ ಪ್ರಾಚೀನತಾ ಪ್ರೇಮಿಗಳ ಸಂಸ್ಥೆಯೊಂದು ಭಾರತ ರಾಷ್ಟ್ರೀಯತೆಗೆ ವಿರುದ್ಧವಾಗಿ ಸ್ಥಾಪಿಸಲ್ಪಟ್ಟು ಭಾರತ ರಾಷ್ಟ್ರೀಯತೆಯೊಡನೆ ಘರ್ಷಣೆಗೊಳ್ಳಲಾರಂಭಿಸಿತು. ಈ ಸಂಸ್ಥೆಯೇ ಮುಂದೆ ಜಿನ್ನಾರವರ ನೇತೃತ್ವದಲ್ಲಿ ಬೆಳೆದು ಭಾರತದ ಅಖಂಡತೆಗೆ ಭಂಗತಂದಿತು. ಆಜಾದರ ಅಲ್‌ಹಿಲಾಲ್ ಪತ್ರಿಕೆ ಹೊರಡುತ್ತಿದ್ದ

THE JUBILEE INSURANCE CO., Ltd.

One of the very few in the feild of Insurance that has been declaring BONUS to its policy holders from its very inception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmond Road, Bangalore.

Our Chief Agents:-THE ORIENTAL ENTERPRISES, BANGALORE 1.

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮಾದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:—ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,

41-C, ರಿಚ್‌ಮಂಡ್ ರೋಡ್, ಬೆಂಗಳೂರು 1.

ಕಾಲದಲ್ಲಿ ಸ್ವಾತಂತ್ರ್ಯ ಪ್ರೇಮಿಗಳಾದ ಮುಸ್ಲಿಂ ಮುಖಂಡರು ಆಜಾದರನ್ನು ಖಂಡಿಸಿದರು; ದೂಷಿಸಿದರು; ಟೀಕಿಸಿದರು. ಆದರೆ ಇಸ್ಲಾಂ ಧರ್ಮ ತತ್ವಗಳಲ್ಲಿ ಮತೀಯ ಅಂಧವಿಶ್ವಾಸಕ್ಕೆ ಒಳಗಾದ ಸ್ವಾತಂತ್ರ್ಯ ಪ್ರೇಮಿಗಳಿಗಿಂತಲೂ ಹೆಚ್ಚು ಪರಿಶ್ರಮ ಹೊಂದಿದ ಆಜಾದರ ಮುಂದೆ ತನ್ನ ಸ್ವಾತಂತ್ರ್ಯಪ್ರೇಮಿಯಾದವನ್ನು ಮುಂದಿಡಲಾರದೆ ಹೋದರು.

ಪರಂತು ಆಜಾದರ ಚಟುವಟಿಕೆಗಳಿಂದ ಆಂಗ್ಲ ಸರಕಾರವು ಕೆರಳಿತು. ಆಜಾದರ ಪ್ರಕೃತಿಯನ್ನು ಸಹಿಸದ ಸರಕಾರವು ಅವರ ಪತ್ರಿಕೆ ಹೊರಡಕೂಡದೆಂದು ಪ್ರತಿಬಂಧಕಾಜ್ಞೆಯನ್ನು ೧೯೧೪ರಲ್ಲಿ ಜಾರಿಗೆ ತಂದಿತು. ಆಜಾದರು ನಿರಾಶೆಗೊಳ್ಳದೆ "ಅಲ್‌ಬಲಾಗ್" ಎಂಬ ಮತ್ತೊಂದು ಪತ್ರಿಕೆಯನ್ನು ಹೊರಡಿಸಿದರು. ಆದರೆ ಅದು ಕೂಡ ಬಹುಕಾಲ ಮುಂದುವರಿಯಲಿಲ್ಲ. ಸರಕಾರವು ಆಜಾದರನ್ನು ಬಂಗಾಳದಿಂದ ಗಡೀಪಾರುಮಾಡಿ ಇತರ ಕೆಲವು ಪ್ರಾಂತಗಳಿಗೂ ಹೋಗದಂತೆ ನಿರೋಧಕ ಆಜ್ಞೆಯನ್ನು ಜಾರಿಗೆ ತಂದಿತು. ಇದರಿಂದಲೂ ತೃಪ್ತಿಗೊಳ್ಳದ ಸರಕಾರವು ಮೌಲಾನಾ ಆಜಾದರನ್ನು ಬಂಧಿಸಿ ನಾಲ್ಕು ವರ್ಷ ಶಿಕ್ಷೆ ವಿಧಿಸಿ ಕಾರಾಗಾರಕ್ಕೆ ಅಟ್ಟಿತು.

ತೇಜೋಪೂರ್ಣ ವ್ಯಕ್ತಿಗಳನ್ನು ಎಲ್ಲಿಟ್ಟರೂ ಅವರು ತಮ್ಮ ಪ್ರಕಾಶವನ್ನು ಬೀರದಿರುವುದಿಲ್ಲ. ಬೂದಿಯ ಒಳಗಿದ್ದರೂ ಕೆಂಡವು ಕಾಂತಿಯುತವಾಗಿಯೇ ಉರಿಯುತ್ತಿರುವುದು. ಬಂಧನದಲ್ಲಿದ್ದರೂ ಆಜಾದರು ತಮ್ಮ ಅಮಿತ ಪ್ರತಿಭೆಯನ್ನು ಬೀರದಿರಲಿಲ್ಲ. ಕಾರಾಗಾರದಲ್ಲಿ ವಾಸಿಸುವಾಗಲೇ ಮುಸ್ಲಿಮರ ಪರಮ ಪವಿತ್ರ ಗ್ರಂಥವಾದ ಕೊರಾನವನ್ನು ಉರ್ದು ಭಾಷೆಗೆ ಭಾಷಾಂತರಿಸಿ ಧಾರ್ಮಿಕ ಜೀವಿಗಳಾದ ಮುಸ್ಲಿಮರಿಗೂ ಉರ್ದು ಸಾಹಿತ್ಯಕ್ಕೂ ಅಮೂಲ್ಯವಾದ ಸೇವೆ ಸಲ್ಲಿಸಿದರು.

ಆಜಾದರು ಬಂಧ ವಿಮುಕ್ತರಾದಾಗ ಭಾರತದ ರಾಷ್ಟ್ರೀಯ ಮಹಾಸಮರವು ತೀವ್ರ ಶಕ್ತಿಯಿಂದ ಹೂಡಲ್ಪಟ್ಟಿದ್ದಿತು. ಅಹಿಂಸಾಮೂರ್ತಿ ಮಹಾತ್ಮನ ನೇತೃತ್ವದಲ್ಲಿ ನಡೆಯುತ್ತಿದ್ದ ಆಂದೋಲನಕ್ಕೆ ನವಚೈತನ್ಯವು ಸಂಪ್ರಾಪ್ತವಾಗಿದ್ದಿತು. ರೌಲಟ್ ಏಕ್ಟಿನ ಪ್ರತಿಭಟನೆಗಾಗಿ ಪೂಜ್ಯ ಗಾಂಧಿಜಿ ಹೂಡಿದ ಪ್ರತಿಭಟನಾತ್ಮಕ ಹರತಾಳ, ಜಲಿಯನ್‌ವಾಲಾಬಾಗಿನ ದುರಂತ ಘಟನೆ ಮತ್ತು ಖಿಲಾಫತ್ ಚಳುವಳಿಗಳಲ್ಲಿ ಗಾಂಧಿಜೀ ವಹಿಸಿದ ಪಾತ್ರದಿಂದ ಗಾಂಧಿಜಿಯವರ ಮುಖಂಡತ್ವದಿಂದಲೇ ಭಾರತ ಸ್ವಾತಂತ್ರ್ಯ ಸಾಧ್ಯವೆಂದರಿತ ಆಜಾದರು ರಾಷ್ಟ್ರೀಯ ಸಮರದಲ್ಲಿ ಧುಮುಕಿ ಬಾಪೂಜಿಯ ಅನಂತರದ ಚಳುವಳಿಯ ಎಲ್ಲಾ ಘಟ್ಟಗಳಲ್ಲೂ ಭಾಗವಹಿಸಿ ಸೆರೆಮನೆವಾಸವನ್ನು ಅನುಭವಿಸಿದರು. ಅಂದಿನಿಂದಲೂ ಭಾರತೀಯರು ಆಜಾದರನ್ನು ರಾಷ್ಟ್ರೀಯ ಸಮರದ ಹಿರಿಯ ವ್ಯಕ್ತಿಯೆಂದೂ, ನುರಿತ ರಾಜಕಾರಿಣಿಯೆಂದೂ ಉತ್ತಮ ಸಲಹೆಗಾರರಾದ ಪೂಜ್ಯರಾದವರೆಂದೂ ಗೌರವಿಸಿ ಆದರಿಸಿದರು.

೧೯೨೧ ರ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿ ಒಂದು ವರುಷದ ಕಾರಾಗೃಹವನ್ನು ಅನುಭವಿಸಿದ ಆಜಾದರ ಬಂಧಮುಕ್ತರಾದೊಡನೆಯೇ ರಾಷ್ಟ್ರಮಹಾಸಂಸ್ಥೆಯು ಅವರನ್ನು ೧೯೨೩ರಲ್ಲಿ ಡೆಲ್ಲಿ ಕಾಂಗ್ರೆಸಿನ ಅಧ್ಯಕ್ಷರನ್ನಾಗಿ ಆರಿಸಿತು.

೧೯೩೯ರಲ್ಲಿ ದ್ವಿತೀಯ ಮಹಾಯುದ್ಧವು ತೊಡಗಿದಂದಿನಿಂದ ಭಾರತದ ರಾಜಕೀಯ ರಂಗದಲ್ಲಿ ಪ್ರಚಂಡ ಬಿರುಗಾಳಿಯೆದ್ದು ಭಾರತೀಯರ ಸ್ವತಂತ್ರಾಭಿಲಾಷೆಯು ದ್ವಿಗುಣಿತವಾಯಿತು. ಬ್ರಿಟೀಷ ಸರಕಾರದೊಡನೆ ತೀಕ್ಷ್ಣವಾದ ಹೋರಾಟವನ್ನು ನಡೆಸಬೇಕೆಂದು ಭಾರತೀಯರು ಹವಣಿಸುತ್ತಿದ್ದ ಆ ಕಾಲದಲ್ಲೇ ಮೌಲಾನ ಆಜಾದರನ್ನು ರಾಷ್ಟ್ರಮಹಾಸಂಸ್ಥೆಯು ಇನ್ನೊಮ್ಮೆ ೧೯೪೦ರಲ್ಲಿ ರಾಮಘರ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಚುನಾಯಿಸಿತು. ಆಜಾದರು ಕ್ರಿಪ್ಸರ ಸಂಧಾನಕಾಲದಲ್ಲೂ ೧೯೪೨ರ 'ಕ್ವಿಟ್ ಇಂಡಿಯಾ' ಚಳುವಳಿಯ ನಿರ್ಧಾರಕಾಲದಲ್ಲೂ ರಾಷ್ಟ್ರಮಹಾಸಂಸ್ಥೆಯ ಅಧ್ಯಕ್ಷರಾಗಿ ಅಮಿತ ಜವಾಬ್ದಾರಿಯನ್ನು ಹೊತ್ತಿದ್ದರು. ಇವೆಲ್ಲವುಗಳ ಪರಿಣಾಮವಾಗಿ ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯವು ದೊರೆಯಿತು.

ಸ್ವತಂತ್ರ ಭಾರತದಲ್ಲಿ ನೆಹರೂರವರ ಪ್ರಧಾನತ್ವದಲ್ಲಿ ಸ್ಥಾಪಿತವಾದ ಕೇಂದ್ರ ಸರಕಾರದಲ್ಲಿ ಆಜಾದರು ವಿದ್ಯಾಮಂತ್ರಿಯಾಗಿ ನಿಯಮಿಸಲ್ಪಟ್ಟರು! ಭಾವಿಜನಾಂಗವನ್ನು ನಿರ್ಮಿಸುವ ರಾಷ್ಟ್ರೀಯ ಶಿಕ್ಷಣ ಕ್ಷೇತ್ರದಲ್ಲಿ ಆಜಾದರಂತಹ ಅದ್ಭುತ ಪಾಂಡಿತ್ಯ, ಜ್ಞಾನ, ರಾಷ್ಟ್ರೀಯ ಭಾವನೆಗಳಿಂದ ಕೂಡಿದ ವ್ಯಕ್ತಿಗಳನ್ನು ನಿಯಮಿಸಿದುದು ಭಾರತ ಸರಕಾರದ ವಿಶಾಲ ಧೋರಣೆಯನ್ನು ಸಾರುವುದು. ಆಜಾದರ ದಿವ್ಯ ಸಂದೇಶವನ್ನು ಕೇಳಿದ್ದರೆ ಇಂತು ಹಿಂದೂ ಮುಸ್ಲಿಮರಲ್ಲಿ ಉಂಟಾಗಿದ್ದ ಮತೀಯ ಕಲಹಗಳು ಉಂಟಾಗಲು ಅವಕಾಶವಿರುತ್ತಿರಲಿಲ್ಲ; ಮಾತ್ರವಲ್ಲ ಭಾರತವು ಇಬ್ಭಾಗವಾಗಿ ಒಡೆಯುತ್ತಿರಲೂ ಇಲ್ಲ. ಇಂದು ಕೂಡಾ ಆಜಾದರು ಮತೀಯ ಸೌಹಾರ್ದತೆಯನ್ನು ಸಹಾನುಭೂತಿಯನ್ನು ಸಾರುವ ವಿಶಾಲ ರಾಜಕಾರಣಿಗಳಾಗಿ ಹಿಂದೂ ಮುಸ್ಲಿಂ ಐಕ್ಯತೆಗಾಗಿ ಸಾಧಿಸುತ್ತಲಿರುವರು. ಕಾಂಗ್ರೆಸ್ಸಿನ ಮಹಾಧ್ಯಕ್ಷ ಜವಹರರ ಕಾರ್ಯನಿರ್ವಾಹಕ ಸಮಿತಿಯಲ್ಲಿದ್ದು ಇಂದೂ ಕೂಡಾ ರಾಷ್ಟ್ರಸಂಸ್ಥೆಯ ಪ್ರಮುಖ ದಿಗ್ದರ್ಶಕರಾಗಿರುವರು.

೧೯೫೨ ರ ಮಹಾಚುನಾವಣೆಯಲ್ಲಿ ಲೋಕಸಭೆಗೆ ಆರಿಸಲ್ಪಟ್ಟ ಆಜಾದರು ಎರಡನೇಬಾರಿ ವಿದ್ಯಾಮಂತ್ರಿಯಾಗಿ ನಿಯಮಿಸಲ್ಪಟ್ಟಿರುವರು. ಆಜಾದರು ಮಗುದೊಮ್ಮೆ ಐರೋಪ್ಯಖಂಡಕ್ಕೂ ಮಧ್ಯಪ್ರಾಚ್ಯಕ್ಕೂ ಪಯಣ ಬೆಳೆಸಿ ಭಾರತದ ಸಂದೇಶವನ್ನು ಸಾರಿದರು. ಕೊರಾನಿನ ಭವ್ಯ ಆದರ್ಶವನ್ನು ಪಾಲಿಸುವ ಆಜಾದರ ವಿದ್ಯಾಮಂತ್ರಿತ್ವದಲ್ಲಿ ಭಾರತದ ಕೀರ್ತಿಯು ದಶದಿಕ್ಕುಗಳಿಗೂ ಹರಡಲಿ!

ಸಂಸ್ಮರಣೀಯ ಆಗಸ್ಟ್ ೮!

ಲೇ: ನಗೀನದಾಸ ಟಿ ಮಾಸ್ಟರ್,
(ಮಾಜಿ ಅಧ್ಯಕ್ಷ ಬಿ. ಪಿ. ಸಿ. ಮತ್ತು ಎಕ್ಸ್ ಮೇಯರ್ ಮುಂಬಯಿ)

ಭಾರತದ ಅನಂತಕಾಲದ ಮತ್ತು ವೈವಿಧ್ಯಮಯ ಇತಿಹಾಸದಲ್ಲಿ ಆಗಸ್ಟ್ ೮ ಮರೆಯದ ದಿನ; ಶತಾರಂಭದ ದಿನವೆಂದರೂ ಸರಿ! ಆ ಪವಿತ್ರ ದಿನದಂದು, ಮಹಾತ್ಮಾ ಗಾಂಧಿಯವರು "ಭಾರತದಿಂದ ತೊಲಗಿರಿ" ಎಂಬ ರಣಕಹಳೆಯನ್ನು ಊದಿದರು. ರಾಷ್ಟ್ರದ ಬಂಧಮುಕ್ತತೆಯ ಅಂತಿಮ ಕಾಳಗವಾದ "ಭಾರತದಿಂದ ತೊಲಗಿರಿ" ಹೋರಾಟವನ್ನು ಅವರು ಹೂಡಿಯೇ ಬಿಟ್ಟರು. ಈ ಕೂಗು ಜಗತ್ತಿನತುಂಬೆಲ್ಲ ಪ್ರತಿಧ್ವನಿಸಿದಿತ್ತು. ಮತ್ತು ಬ್ರಿಟಿಷ ಆಳರಸರ ಎದೆಗುಂಡಿಗೆಯನ್ನು ಅಲುಗಿಸಿತು.

ಸ್ವದೇಶಾಭಿಮಾನವೆಂಬ ರಭಸದ ಪ್ರವಾಹಕ್ಕೆ ಒಡ್ಡು ಹಾಕಿ ಹರಿಗಡಿಸಿದುದನ್ನು ಸ್ವತಂತ್ರ ಭಾರತದ ಮಹಾಶಿಲ್ಪಿ ಮಹಾತ್ಮಾ ಗಾಂಧಿಜಿಯವರು ಚಲುವೆಯಂತೆ ಹರಿಯಬಿಟ್ಟರು. ಜನತೆಯು ಯಾವ ಗೋಳಾಟ-ಕಷ್ಟಕ್ಕೂ ಯಾವ ತ್ಯಾಗಕ್ಕೂ ಅಳುಕದೆ, ಅವರನ್ನು ಹಿಂಬಾಲಿಸಿದರು. ಹಾಗೆ ಮಾಡಲೇಬೇಕಿತ್ತು. ಸ್ವಾತಂತ್ರ್ಯದ ಮುಂದೆ ಯಾವ ತ್ಯಾಗವೂ ಸರಿಗಟ್ಟದೆಂದು ಜನತೆಯು ಅರಿದಿದ್ದಿತು. ಗುಲಾಮಗಿರಿಯ ಆಳಿಕೆಯಲ್ಲಿ ಅವರಿಗೆ ತೃಪ್ತಿಯೂ ದರೂ ಎಂತಿರಬೇಕು? ಜಗತ್ತಿನ ಉಳಿದ ಜನಾಂಗದಂತೆ ತಾವು ಸ್ವತಂತ್ರರಾಗಿರಬೇಕೆಂಬುದೇ ಜನತೆಯ ಹೆಬ್ಬಯಕೆಯಾಗಿದ್ದಿತು. ಸತತ ೬೦ ವರ್ಷಗಳ ಕಷ್ಟ ಕಾರ್ಪಣ್ಯ ಮತ್ತು ಹೋರಾಟಗಳ ಫಲವಾಗಿ ಸುಖದಾಯಕ ಕೊನೆಯೆಂಬಂತೆ, ಕೊನೆಗೆ ಸ್ವಾತಂತ್ರ್ಯವು ನಡೆದು ಬಂದಿತು! ಶತಮಾನಗಳ ದಾಸ್ಯತ್ವ, ಗುಲಾಮಗಿರಿಯ ನಂತರ, ಭಾರತವು ಸ್ವತಂತ್ರ ರಾಷ್ಟ್ರವಾಯಿತು.

ಆದ್ದರಿಂದ, ಆಗಸ್ಟ್ ೮ ಎಂದೂ ಮರೆಯದ ದಿನ ಅದೆಂದೆಂದಿಗೂ ಸಂಸ್ಮರಣೀಯ ದಿನ! ಬಹುದಿನದ ಸ್ವಾತಂತ್ರ್ಯ ಬಯಕೆಯು ಸಾಧಿಸಲ್ಪಟ್ಟ ದಿನವಾದ ಮತ್ತು ನಮ್ಮ ಭಾರತವು ಸರ್ವಸ್ವತಂತ್ರ ರಾಷ್ಟ್ರವಾದ ಆಗಸ್ಟ್ ೧೫ಕ್ಕೆ ಆಗಸ್ಟ್ ೮ ಪೀಠಿಕೆಯಾಗಿದೆ. ಹಿಂದೀ ರಾಷ್ಟ್ರೀಯ ಕಾಂಗ್ರೆಸ್ಸು ೧೮೮೫ರಲ್ಲಿ ತಾನು ಜನ್ಮತಾಳಿದಂದಿನಿಂದಲೂ ಸಂಪೂರ್ಣ ಸ್ವಾತಂತ್ರ್ಯ ಗುರಿಗೆ ಹೋರಾಡುತ್ತಲೇ ಬಂದಿದೆ. ಆ ಗುರಿ ಕೊನೆಗೊಮ್ಮೆ ಆಗಸ್ಟ್ ೧೫ಕ್ಕೆ ಈಡೇರಿತು. ೧೯೩೦ರ ನಂತರ ಮಹಾತ್ಮಾಗಾಂಧಿಜಿಯವರು ಹೂಡಿದ ಹೋರಾಟದ ಅಂತಿಮ ಘಟ್ಟವೆಂದರೆ ಆಗಸ್ಟ್ ೮ ಎಂದೇ ಹೇಳಬೇಕು.

ಆ ದಿನ ರಾತ್ರಿ ಎಂದೂ ಮರೆಯದ್ದು. ಮುಂಬೈಯಲ್ಲಿ ಭವ್ಯವಾದ ಕಾಂಗ್ರೆಸ್ ಅಧಿವೇಶನ. ಕಾಂಗ್ರೆಸ್ಸು ಪೆಂಡಾಲು ರಾಷ್ಟ್ರದ ನಾನಾ ದಿಕ್ಕಿನಿಂದ ಬಂದ ಎ. ಐ. ಸಿ. ಸಿ. ಸದಸ್ಯರು ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮುಂಬಯಿಯ ಲಕ್ಷಾಂತರ ಪ್ರೇಕ್ಷಕರಿಂದ ಕಿಕ್ಕಿರಿದು ತುಂಬಿತ್ತು. "ಭಾರತ ಬಿಟ್ಟು ತೊಲಗಿರಿ" ಎಂಬ ಗೊತ್ತುವಳಿಯ ಮೇಲೆ ಸಮಗ್ರ ಸಭೆಯೆಲ್ಲ ಏಕಾಗ್ರವಾಗಿದ್ದಿತು. ಎಲ್ಲಿಯಾದರೂ ಸೂಜಿ ಬಿದ್ದರೂ ಸಪ್ಪಳವಾಗುವಷ್ಟರ ಮಟ್ಟಿಗೆ ನಿಶಬ್ದ. ಇಂತಹ ಗಂಭೀರವಾತಾವರಣದಲ್ಲಿ "ಭಾರತದಿಂದ ತೊಲಗಿರಿ" ಎಂಬ ಐತಿಹಾಸಿಕ ಗೊತ್ತುವಳಿಯು ಸ್ವೀಕರಿಸಲ್ಪಟ್ಟಿತು. ಇದುವೇ ಆ ಗೊತ್ತುವಳಿ, ನಮ್ಮ ಸ್ವಾತಂತ್ರ್ಯ ಸಮರವನ್ನು ಪೂರ್ತಿಯಾಗಿಯೇ ಹೊಸ ಘಾಟಿಯಲ್ಲಿ ಪರಿವರ್ತಿಸಿದುದು! ಮಹಾತ್ಮಾಜಿಯವರ ಅಚಲವಾದ ನಿರ್ಧಾರ ಮತ್ತು ಅವರ ನಿರ್ಧಾರದ ಹಿಂದೆ ಅವರ ಸೇನಾಪತಿ ವಲ್ಲಭಬಾಯಿಯವರ ಬೆಂಬಲ ಇವೆರಡರಿಂದಲೇ ಆ ಗೊತ್ತುವಳಿಯು ಸ್ವೀಕೃತವಾಗಲೇ ಬೇಕಾಯಿತು. ಕಾಂಗ್ರೆಸ್ ಕಾರ್ಯ ಸಮಿತಿಯ ಸದಸ್ಯರಲ್ಲದೆ ಹಲವಾರು ಜನರು ಕ್ಷತಿಗಿಳಿಸಲು ಹಿಂದೆಗೆಯುವಷ್ಟರ ಮಟ್ಟಿಗೆ, ಗೊತ್ತುವಳಿಯು ಉಗ್ರವಾದುದಾಗಿತ್ತು. ಅನೇಕ ಚರ್ಚೆಗಳ ನಂತರ ಗೊತ್ತುವಳಿಯು ಸ್ವೀಕೃತವಾಯಿತು. ಆ ಗೊತ್ತುವಳಿಯ ಫಲವೇ, ಆ ಗೊತ್ತುವಳಿಯ ಮಹತ್ವ ಸೂಚಿಸುತ್ತದೆ. ಬೆಳಕು ಹರಿಯುವ ಮುನ್ನ ಬಾಪೂಜಿ ಮತ್ತು ಕಾರ್ಯಸಮಿತಿ ಸದಸ್ಯರನ್ನೊಳಗೊಂಡ ಧುರೀಣರೆಲ್ಲರ ಬಂಧನವಾಯಿತು. ೧೯೪೨ರ ಆಗಸ್ಟ್ ೯ರ ಬೆಳಗ್ಗೆ "ವಿಜಯ ರಥ" ದಲ್ಲಿ ಅವರನ್ನೆಲ್ಲಾ ಅವ್ಯಕ್ತ ಸ್ಥಳಕ್ಕೆ ಒಯ್ಯಲಾಯಿತು. ಈ ಹೋರಾಟದ ಫಲವು ಇಷ್ಟೊಂದು ತೀವ್ರದಲ್ಲಿ ಲಭಿಸುತ್ತದೆಂದೂ, ನಮ್ಮನ್ನಾಳುವ ಬ್ರಿಟೀಷರು ತಮ್ಮಷ್ಟಕ್ಕೆ ತಾವೇ ಭಾರತದಿಂದ ತೊಲಗುವರೆಂದೂ ಯೂನಿಯನ್ ಜಾಕದ ಸ್ಥಳದಲ್ಲಿ ರಾಷ್ಟ್ರೀಯ ಧ್ವಜವು ಹಾರುವುದೆಂದು ಯಾರೂ ಕನಸಿನಲ್ಲಿಯೂ ಎಣಿಸಿರಲಿಲ್ಲ.

ಮರುದಿನವೇ ಮುಂಬಯಿ ಮತ್ತು ಇತರ ಕಡೆಗಳಲ್ಲಿ ನಡೆದ ಘಟನೆ, ವಿದೇಶ ಸರಕಾರ ಜನತೆಯ ಮೇಲೆ ಎಸಗಿದ ದಬ್ಬಾಳಿಕೆಯ ಕ್ರಮಗಳೇ "ಭಾರತದಿಂದ ತೊಲಗಿರಿ" ಎಂಬ ಗೊತ್ತುವಳಿಯು ತ್ವರಿತದಲ್ಲಿ ಈಡೇರಲು ಕಾರಣಗಳಾದುವು. ಒಮ್ಮೊಮ್ಮೆ ಜೈಲಿನಲ್ಲಿರುವವರು ಕೂಡ ಬ್ರಿಟೀಷರು ಭಾರತವನ್ನು ಬಿಟ್ಟು ತೊಲಗಲು ೨೫ ವರ್ಷಗಳು ಇನ್ನೂ ಹೆಚ್ಚಿನ ಅವಧಿ ಬೇಕಾದೀತೆಂದೂ ತಾವು ಜೈಲಿನಲ್ಲಿಯೇ ಕೊಳೆಯ ಬೇಕಾದೀತೆಂದೂ ಅಥವಾ ಅಲ್ಲಿಯೇ ಸಾಯಬೇಕಾದೀತೆಂದೂ ಭಾವಿಸಿಬೇಕು. ಬಾಪೂಜಿಯ ಐತಿಹಾಸಿಕ

Edited printed and published by P. I. Belliapa at 'Kodagu' Press, Mercara, for Kodagu Ltd.

ಅನ್ನ ಸತ್ಯಾಗ್ರಹ, ಕಸ್ತೂರಿಬಾ ಮತ್ತು ಮಹಾದೇವಭಾಯಿ ಯವರ ಮರಣಗಳು ಮತ್ತಷ್ಟು ನಿರಾಶೆಯನ್ನು ಹುಟ್ಟಿದಸಿವು. ಮತ್ತು ಸಿಂಹಳಾಪಾದವು ಇನ್ನೂ ಹೆಚ್ಚಿತು. ಆದರೆ ಸ್ವಾಭಿಮಾನಿಗ್ರಹದ ರೀತಿಯೇ ನಿಗೂಢವಾದುದು! ಸಂಘರು ಐದು ವರ್ಷ ಅವಧಿಯಲ್ಲಿ "ಭಾರತದಿಂದ ತೊಲಗಿ" ಎಂಬ ಕಾರ್ಯಕ್ರಮವು ೧೯೪೭ರ ಆಗಸ್ಟ್ ೧೫ರಂದು ಪೂರ್ತಿಗೊಂಡಿತು. ಸ್ವಾತಂತ್ರ್ಯ ಸೂರ್ಯ ಗಾಂಧೀಜಿಯ ದಂಡಿ ಯಾತ್ರೆಯಿಂದ ಉದಯನಾಗಿ ಆಗಸ್ಟ್ ತಿಂದ ಮುನ್ನಡೆದು ೧೫ರಂದು ಉಚ್ಚಸ್ಥಾನಕ್ಕೇರಿದ.

ಭಾರತ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಇತರ ರಾಷ್ಟ್ರಗಳ ಇತಿಹಾಸದಲ್ಲಿ "ಭಾರತದಿಂದ ತೊಲಗಿ" ಗೊತ್ತುವಳಿಯು ನಿರಂತರವಾಗಿ ಉಳಿವ ಸ್ವಾತಂತ್ರ್ಯ ಮಾರ್ಗವನ್ನು ತೋರಿಸುವುದು ಮತ್ತು ಉಳಿದ ರಾಷ್ಟ್ರವಲ್ಲಿ ನಡೆಯುತ್ತಿರುವ ವಿಧಾನವನ್ನು ತೋರಿಸುತ್ತದೆಂಬುದನ್ನು ನಾವು ಗಮನಿಸಬೇಕು, ಕೊನೆಗೆ ಅನಿವಾರ್ಯವಾಗಿ ಭಾರತದಿಂದ ತೊಲಗಿ" ಹೋಗುವ 'ಮಾಡು ಇಲ್ಲವೆ ಮಡಿ' ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಯಿತೆಂಬುದು ಗಮನಾರ್ಹವಾಗಿದೆ.

ಇಪ್ಪತ್ತನಾಲ್ಕು ವರ್ಷಗಳ ಹಿಂದೆಯೇ ಬ್ರಿಟೀಷರಿಗೆ ಸಹಾಯವೆಂದು ಭಾರತದಿಂದ ಸೈನ್ಯಭರತಿಯ ಕಾರ್ಯದಲ್ಲಿ ಭಾಪೂಜಿ ಸಹಾಯ ಕಲ್ಪಿಸಿದರು. ಅವರಿಗೆ ಅಮಿತವಾದ ಮಾನ ಮರ್ಯಾದೆಯನ್ನು ಕೊಡುತ್ತಲೇ ಬಂದರು. ಅವರ ವಿರುದ್ಧ ಎಳ್ಳಷ್ಟು ಕಹಿ ನೋವು ಎಸಗಲಿಲ್ಲ. ಇಷ್ಟೆಲ್ಲವೂ ವ್ಯರ್ಥವಾದ ಮೇಲೆ ಭಾಪೂಜಿಯಂತಹ ಉದಾತ್ತ ಹೃದಯದಿಂದ ಕೊನೆಗೆ 'ಭಾರತದಿಂದ ತೊಲಗಿರಿ' ಗೊತ್ತುವಳಿಯು ಮೂಡಿ ಬಂದಿತು. ಬ್ರಿಟೀಷರ ಕ್ಲಿಷ್ಟ ನ್ಯಾಯ ನಂಬಿಕೆಯನ್ನು ಅವರು ಸಂಬಳವನಂತರವೇ ಈ ಗೊತ್ತುವಳಿ ಬಂದಿತು.

ಈ ಸಂಧರ್ಭದಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸರು ಎಸಗಿದ ಕಾರ್ಯವನ್ನು ಸ್ಮರಿಸದಿರಲಾರೆ. ಅವರು ಭಾರತವನ್ನು ಬಿಟ್ಟು "ಅಜಾದ್‌ಹಿಂದ್" ದಳವನ್ನು ಸಂಘಟಿಸಿ ಬ್ರಿಟೀಷರನ್ನು ತೊಲಗಿಸುವಲ್ಲಿ ನಮ್ಮ ಶಾಸ್ತ್ರವನ್ನು ಅರಿದರು. ಅಜಾದ್‌ಹಿಂದ್ ದಳದ ಕಾರ್ಯ ಕೆಂಪುಕೋಟೆಯ ಐತಿಹಾಸಿಕ ವಿಚಾರಣೆಗಳು ಸ್ವರಾಜ್ಯವು ಅಮೂಲ್ಯವಾದುದೆಂದು ಖಚಿತಪಡಿಸಿದವು. ಬ್ರಿಟೀಷರು ತಮ್ಮ ಆಳ್ವಿಕೆಯಲ್ಲಿ ಹೆಚ್ಚಾಗಿ ಸೈನ್ಯವನ್ನೇ ಅವಲಂಬಿಸಿದ್ದರು. ಈ ಸೈನಿಕರಲ್ಲಿಯೇ ಸ್ವನಾಡಿನ ಬಗ್ಗೆ ಇರುವ ಅಂತಿಮ ಕಳಕಳಿಯು ಗೊತ್ತಾದುದರಿಂದ, ಬ್ರಿಟೀಷರು ಅರಿವಿನ ಮೇಲೆ ಬಂದರು. ಬ್ರಿಟೀಷರು ಜಾಣರಾಗಿ, ಹಿಂದಿಯರೊಡನೆ ಯಾವತ್ತಿಗೂ ಸ್ನೇಹಭಾವ ಸಂಪಾದಿಸಲು ಅವರ ರಾಜ್ಯವನ್ನು ಅವರಿಗೆ ಬಿಟ್ಟುಕೊಟ್ಟರು.

ಹಿಂದಿನಿಂದ ಪ್ರತ್ಯೇಕವಾಗಿ ಆ ದಿನವನ್ನು ಆಚರಿಸಲಾಗದಿದ್ದರೂ ಆಗಸ್ಟ್ ೮ ರಸ್ಥಾನವು ಮತ್ತು ಸ್ವಾತಂತ್ರ್ಯ ಹೋರಾಟವು ಭಾರತದ ಇತಿಹಾಸದಲ್ಲಿ ಯಾವತ್ತಿಗೂ ಉಳಿಯುವುದು. ೧೯೪೨ರ ಆಗಸ್ಟ್ ೮, ೧೯೪೭ರ ಆಗಸ್ಟ್ ೧೫ಕ್ಕೆ ಮುಕ್ತಾಯಿಸಿತು.

ನವಯುಗ.

ಓದುಗರ ಓಲೆಗಳು

ಹಿಂದುಳಿದ ವರ್ಗದ ಸ್ಕಾಲರ್ ಶಿಪ್.

ಅಯ್ಯಾ,

೧೧-೭-೫೩ ರ ಪತ್ರಿಕೆಯಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳು ಪ್ರಕಟಿಸಿದ ಇಸ್ತಿಹಾರನ್ನು ನೋಡಿ ಇಂಡಿಯಾ ಸರಕಾರದಿಂದ ಶೆಡ್ಯೂಲ್ ಜಾತಿ ಮತ್ತು ಹಿಂದುಳಿದವರಿಗೆ ಸ್ಕಾಲರ್‌ಶಿಪ್ ವಿಷಯವಾಗಿ ಸ್ಕೂಲ್ ಫೈನಲ್ ಪಾಸಾದವರಿಗೆ ಕೊಡಲಾಗುವದು ಎಂದು ಬರೆದಿರುತ್ತಾರೆ. ಇದು ನೋಡಿದರೆ ದಳಿತವರ್ಗದವರ ಮತ್ತು ಹಿಂದುಳಿದ ಪಾರ್ಟಿಗಳ ಹೆಸರಿನ ಸ್ಕಾಲರ್‌ಶಿಪ್ ಇಲ್ಲದ ಅದನ್ನ ಪಡೆಯಲು ಅರ್ಹರಾದ ಹುಡುಗರು ದೊರಕುವದು ವಿರಳವಾಗಿದೆ. ಯಾಕೆಂದರೆ ಹಿಂದುಳಿದ ಪಾರ್ಟಿಗಳ ಹುಡುಗರು ಎಸ್. ಎಸ್. ಎಲ್. ಸಿ. ಪಾಸಾದವರು ಮುಂದೆ ಕಾಲೇಜಿಗೆ ಹೋಗುವ ಹುಡುಗರು ಸಿಕ್ಕುವದೂ ಇಲ್ಲ, ಆ ಹಣ ಅವರಿಗೆ ಕೊಡುವದೂ ಇಲ್ಲ, ಏ ಬಡದಾಗಿ ಯೋಚಿಸಿದರೆ ತಪ್ಪಾಗಲಾರದು. ಆ ಎರಡು ವರ್ಗದವರನ್ನು ವಿದ್ಯೆ, ಬುದ್ಧಿ, ಬಟ್ಟೆ ಪ್ರಕೃತಿ ಪ್ರಗತಿಗೊಳಿಸಿ ಅವರನ್ನು ಮುಂದೆ ತರಿಯಲು ಸರಕಾರದ ಪಾಡು ಪದ ಯೋಜನೆಯಲ್ಲಿದ್ದರೆ ಈ ಯೋಜನೆಯನ್ನು ಈ ಕೆಳಗೆ ಕಂಡ ರೀತಿ ಬದಲಾಯಿಸಿ ಕೊಡಗಿನ ಮಟ್ಟಿಗೆ ಸಹಾಯಮಾಡಬೇಕೆಂದು ಸರಕಾರವನ್ನು ಬೇಡಿಕೊಳ್ಳುತ್ತೇನೆ. "ಸ್ಕೂಲ್ ಫೈನಲ್" ಎಂಬ ಬದಲು "ಪ್ರೈಮರಿ ಎಲಿಮೆಂಟರಿ" ಎಂದು ತಿದ್ದುಪಡಿಮಾಡಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡುವ ಯುವಕ ಯುವತಿಯರಿಗೆ ಸ್ಕಾಲರ್‌ಶಿಪ್ ಅಥವಾ ಪ್ರೀಶಿಪ್ ಒಟ್ಟಿನಲ್ಲಿ ಮೊದಲ ಪ್ರೋತ್ಸಾಹನ ಕೊಟ್ಟು ಅವರ ಪ್ರೋತ್ಸಾಹಿಸಿ ಮುಂದಿನ ಅಭಿವೃದ್ಧಿಗಾಗಿ ಮೇಲ್ವಿಚಾರಣೆ ವಹಿಸಿ ಅವರನ್ನು ಪತ್ತೆಗಳಾಗಿ ಪೂರೈಸಿಸಲು ಸಹಾಯ ಮಾಡಬೇಕಾಗಿ ಅಪೇಕ್ಷಿಸುತ್ತೇನೆ. ಈ ರೀತಿ ತಿದ್ದುಪಡಿಮಾಡದೆ ಈಗಿನ ಯೋಜನೆಯನ್ನೇ ಮುಂದುವರಿಸಿದರೆ, ದಳಿತವರ್ಗದವರಿಗೆ ಕೊಡುವ ಸ್ಕಾಲರ್‌ಶಿಪ್ ಮುಂದುವರಿದವರ ಪಾಲಿಗೆ ಹೋಗುತ್ತೆ. ಆದುದರಿಂದ ಅಧಿಕಾರಿಗಳು ಈ ವಿಷಯ ಹೆಚ್ಚಿನ ಆಲೋಚನೆ ವಹಿಸಿ ಪರಾಂಬರಿಕೆಯಿಂದ, ಈ ಮೇಲ್ಕಂಡ ಸೂಚನೆಗೆ ಸರಿಯಾಗಿ ಕೊಡಲ್ಪಡುವದಾಗಿಯೂ ಸ್ಕಾಲರ್‌ಶಿಪ್ ಕಮಿಟಿಗಳಿಗೆ ಈ ಸೂಚನೆಯನ್ನು ಕೊಡಬೇಕಾಗಿಯೂ ವಿನಂತಿಸುತ್ತೇನೆ.

'ಹಿಂದುಳಿದವ'

ಇದು ಯಾವ ನ್ಯಾಯ?

ಕೊಡಗಿನಲ್ಲಿ ರೈತರು ತಮ್ಮ ಭೂಮಿಗಳಿಗೆ ನೀರಿನ ಸರಬರಾಯಿಗಾಗಿ ಗ್ರಾಮಗಳಲ್ಲಿರತಕ್ಕ ಕೆರೆ, ಕಟ್ಟೆ, ಕಾಲುವೆ ಮೊದಲಾದುವನ್ನು ತಾವೇ ಪರಸ್ಪರ ಸೇರಿ ದುರಸ್ತು ಮಾಡಿದಾದರೆ ಅಂತಹ ಕೆಲಸಗಳಿಗೆ ಕೊಡಗು ಸರಕಾರವು ಇನಾಮು ಕೊಡುವುದಾಗಿ ತಾ ೭-೩-೫೧ರ ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಿದ್ದು ಸರಿಯಷ್ಟೆ. ಆದರೆ ಇಂತಹ ಕೆರೆ, ಕಟ್ಟೆ, ಕಾಲುವೆಗಳನ್ನು ಎಷ್ಟೋ ಗ್ರಾಮಗಳ ರೈತರು ಪರಸ್ಪರ ಸಹಕರಿಸಿ ರಿಪೇರಿ ಮಾಡಿ ನಾಲ್ಕು ತಿಂಗಳ ಕಾಲವಾಯಿತು. ಆದರೂ ಮೇಲೆ ತಿಳಿಸಿದ ಇನಾಮು ಹಣವು ವಿನಾಯಿತಿ ಬಂದು ಗೊತ್ತಾಗುವುದಿಲ್ಲ. ಆದರೆ ರೈತರು ಇಂತಹ ಕೆಲಸಗಳನ್ನು ಹಣದ ಆಸೆಗೆಂದು ಮಾಡಿರುವರಲ್ಲ. ಸರ್ಕಾರಗಳಲ್ಲಿ ಪ್ರಕಟಿಸಿದ ರೀತಿ ಕೇಳುವುದಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಸರಿಯಾದ ಉತ್ತರ ಕೊಡುವರೇ?

'ಮಂ. ಕೆ ಳ'

ಆಹಾರ-ನಿರುದ್ಯೋಗ ಮತ್ತು ಭಿಕ್ಷಾವೃತ್ತಿ

ಇಂದು ಹಿಂದೂದೇಶದ ಉದ್ದಗಲಕ್ಕೂ ನೋಡಿದರೆ ಈ ಸಮಸ್ಯೆಗಳು ಕಂಡು ಬರುತ್ತಿವೆ. ಇವನ್ನು ನಿವಾರಿಸುವ ಬಗ್ಗೆ ಹಲವಾರು ಪ್ರಾಂತ್ಯದ ಅಧಿಕಾರಿಗಳು ಹಲವು ರೀತಿಯಲ್ಲಿ ಪ್ರಯತ್ನಿಸುತ್ತಿರುವರು. ನಮ್ಮ ಕೊಡಗಿನಲ್ಲಿಯೂ ಕೂಡ ಈ ಸಮಸ್ಯೆಗಳ ನಿವಾರಣೋಪಾಯಕ್ಕಾಗಿ ಸಂಚಿ ಘಟಿಸ್ಪಿ ನಮ್ಮ ಪ್ರಜಾ ಸರಕಾರದ ಮಂತ್ರಿಗಳು ಶ್ರದ್ಧೆ ವಹಿಸುವರೆಂದು ಆಶಿಸಲಾಗಿದೆ.

ಆಹಾರದ ವಿಷಯ ಕೊಡಗು ಉಳುವರಿ ಪ್ರಾಂತ್ಯವಾದರೂ ಕೂಡ ಆಹಾರ ಧಾನ್ಯಗಳ ಬೆಲೆಯ ಮಿತಿಮೀರಿ ಏರದಂತೆ ಮುಂಜಾಗ್ರತೆ ವಹಿಸಿಕೊಳ್ಳುವುದು ಉತ್ತಮ. ನಿರುದ್ಯೋಗದ ಮಟ್ಟಿಗೆ ಇತರ ದೇಶಕ್ಕಿಂತ ಇದು ಮಂತ್ರಿಯೇ ತಿಂದರು ಕೊರತೆ ಎಲ್ಲಿಯೂ ಇದೆ. ಇವುಗಳ ಅಂತ್ಯ ಸಂಖ್ಯೆಗಳನ್ನು ಎ ಕ್ಸಾಯಿಮೆಂಟ್ ಆಫೀಸಿನಲ್ಲಿ ತಿಳಿಯಬಹುದು. ಅಲ್ಲದೆ ಅವಿದ್ಯಾವಂತರಾಗಿ ಕೆಲಸವಿಲ್ಲದೆ ಅಲೆದಾಡುವ ಅದೆಷ್ಟೋ ಮಂದಿ ಕೂಡಾ ಬೇರೆ ಇದ್ದಾರೆ. ಇವರಲ್ಲಿ ಮಾಕ್ಯಾಲಂಕ ಜನರು ಸ್ವೀಕಾರವಾಗಿ ವಿಷಯ ಇಲ್ಲದೆ ಉದ್ಯೋಗದ ಬಗ್ಗೆ ಅವರು ಹುಡುಕುವರನ್ನು ರಿಪೇರಿ ಮಾಡಿ ಕಡೆಯ ಹುಕುಂ ಬರಬಹುದು ... ಎಂದು ಬಯಸುವರು. ಆ ದಾರಿಯಿಂದ ಈ ವಿಚಾರದಲ್ಲಿ ಹೆಚ್ಚಿನ ಶ್ರಮವಹಿಸಿ ಆದಷ್ಟು ಮಟ್ಟಿಗೆ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಬೇಕು.

ಇದಕ್ಕಾಗಿ ಸರಕಾರದವರು ಹೆಚ್ಚಿನ ಯೋಜನೆಗಳನ್ನೂ, ಇತರ ಉದ್ಯೋಗ ಕೇಂದ್ರಗಳನ್ನೂ ನಿರ್ಮಿಸಿ ಈ ಸಮಸ್ಯೆಯನ್ನು ಪರಿಹರಿಸಬಹುದು. ಭಿಕ್ಷಾವೃತ್ತಿಯಲ್ಲಿ ಕೊಡಗಿನವರಲ್ಲಿ ಹೆಚ್ಚಿಗೆ ಇಲ್ಲದೆ ಇತರ ದೇಶಗಳಿಂದ ಇಲ್ಲಿಗೆ ಬಂದು ಜೀವಿಸುವವರೇ ಅಧಿಕ. ಅಂಗಹೀನರು ಭಿಕ್ಷೆ ಬೇಡುವುದು ಒಂದು ವಿಧವಾದರೆ, ಮಂಗ ಎತ್ತುಗಳನ್ನು ಕುಣಿಸಿ ಭಿಕ್ಷೆ ಬೇಡುವುದು ಇನ್ನೊಂದು ವಿಧ. ಕಿವಿಗೆ ಕರ್ಕಶವಾಗುವ ರೀತಿಯಲ್ಲಿ ಬೊಬ್ಬೆ ಹಾಕುತ್ತ ಹಾಡುತ್ತ ಹೊಟ್ಟೆಯ ಮೇಲೆ ಹೊಡಕೊಂಡು ಕಾಳ ಹೊಡಕೊಂಡು ಯಾ ತಂಬೂರಿ ಬಾರಿಸಿಕೊಂಡು ಬರುವವರ ಗುಂಪು ಇನ್ನೊಂದೆಡೆ. ದೇವರ ಹೆಸರಿನಲ್ಲಿ ವಿನೇನನ್ನೋ ಹೊತ್ತುಕೊಂಡು ಕೊರಳೆಯಿಂದ ಹೊಡಕೊಂಡು ಹಲವಾರು ಬಣ್ಣಗಳನ್ನು ಬಡಿದುಕೊಂಡು ಭಿಕ್ಷೆ ಎತ್ತುವವರು ಬೇರೊಂದು ಕಡೆ. ಹೀಗಾಗಿ ಭಿಕ್ಷುಕರ ಸಂಖ್ಯೆ ಹೆಚ್ಚುತ್ತಾ ಇದೆ. ಇವರಿಗಾಗಿ ಪರದೇಶಗಳಿಂದ ಬರುವವರನ್ನು ತಡೆದರೆ ಮುಂಗಾಲು ಪಾಲು ಕಡಿಮೆ ಆದಂತಾಯಿತು. ಇನ್ನುಳಿದವರಿಗೆ ಯೋಗ್ಯ ಶಾಲೆಗಳನ್ನು ತೆರೆದು ಗಂಜಿ ಕೊಡುವ ವ್ಯವಸ್ಥೆ ಮಾಡಿ ಕೈಗಾರಿಕೆಯ ಕೆಲಸಗಳನ್ನು ಅಂದರೆ ಹೆಣೆಯುವುದು, ನೂಲುವುದು ಮುಂತಾದ ಕೆಲಸಗಳನ್ನು ಕಲಿಸುವುದರಿಂದ ಈ ಸಮಸ್ಯೆಯನ್ನು ಪರಿಹರಿಸಬಹುದು. ದೀನ ಜನೋದ್ಧಾರ ಸೇವೆಯೇ ಜನಾರ್ಧನನ ಸೇವೆಯಾಗಿರುವದರಿಂದ ಈಗಿನ ಮಂತ್ರಿಗಳು ಈ ಕೆಲಸವನ್ನು ಪೂರೈಸಿ ಸರ್ವರ ಪ್ರೀತಿಗೆ ಪಾತ್ರರಾಗಿ, ಇವರ ದೇಶದ ಏಳಿಗೆಯ ಕೆಲಸವನ್ನು ಎಲ್ಲರೂ ಮೆಚ್ಚುವಂತಾಗಲಿ.

ಗೋಪಾಲಕೃಷ್ಣ.

ಯಾವ ನ್ಯಾಯ?

ಯುದ್ಧವು ನಿಂತು ಸಾಕಷ್ಟು ದಿನ ಕಳೆದಿದೆ ದೇಶವು ಸ್ವತಂತ್ರವಾಗಿದೆ. ದೇಶದಲ್ಲಿ ಶಾಂತಿ ನೆಲೆಸಿದೆ. ಆಹಾರದ ಮೇಲಿದ್ದ ಮುಖ್ಯವಾಗಿ ಅಕ್ಕಿಯ ಮೇಲಿದ್ದ ಕಡಿತರ ಪದ್ಧತಿಯ ಕೂಡ ಹೋಗಿದೆ. ಆದರೂ ರೈತನು ಉಪಯೋಗಿಸುವ ಕೆಲವು ಬಗೆಗಳಿಂದ ಇನ್ನೂ ಪರ್ಮಿಟ್ ಲೈಸೆನ್ಸ್ ಗಳನ್ನು ರದ್ದುಪಡಿಸಲಾಗಿಲ್ಲ.

ಅವುಗಳಲ್ಲಿ ಒಂದು ಎಂದರೆ, ಹೋಟೆಲುಗಳಲ್ಲಿ ಸಕ್ಕರೆ, ಹಾಲು ಧಾರಣೆ ಕಡಿಮೆ ಕ್ರಯಕ್ಕೆ ಸಿಕ್ಕುತ್ತಿದೆಯಾದರೂ ಅವರು ಮಾರುತ್ತಿರುವ ಕ್ರಯವು ಕಡಿಮೆಯಾಗಿಲ್ಲ. ಕಾಫಿ, ಟೀಗಳಿಗೆ ಇನ್ನೂ ಒಂದೂವರೆ ಎರಡಾಣೆಯಷ್ಟೇ ಉಳಿದಿದೆ. ಇದನ್ನು ತಗ್ಗಿಸಲು ಸಾಧ್ಯವಿಲ್ಲವೆ? ಸರಕಾರವು ಗಮನಿಸಿ ರೈತನ ಈ ಹಿಡಿತದಿಂದ ಬಿಡಿಸಲು ಸಾಧ್ಯವಿಲ್ಲವೇ?

ಮಿವ್ಯಯ.

ಅಯ್ಯಾ, ಸಂಪಾದಕರೆ,

ನಾನು ಎಸೆಂಬ್ಲಿಯಲ್ಲಿ ಮಾಡಿದ ಭಾಷಣದ ಸಾರಾಂಶವನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದಾಗ್ಗೆ, ನಾನು 'ತೋಟಗಳ ಕೇಂಟೀನ್ ವ್ಯವಸ್ಥೆ ಚೆನ್ನಾಗಿ ನಡೆಯುತ್ತಿಲ್ಲ'ವೆಂದು ನುಡಿದುದಾಗಿ ಪ್ರಕಟಿಸಲಾಗಿದೆ. ಆದರೆ ನಾನು ಹೇಳಿದುದರ ಅರ್ಥವು ಈ ರೀತಿ ಇದೆ.

'ತೋಟದ ಕೆಲಸಗಾರರ ಬಗ್ಗೆ ಮಾಡುವ ಶಾಸನಗಳನ್ನು ಇಲ್ಲಿನ ಸ್ಥಿತಿಗತಿಗಳ ಅನುಭವವಿಲ್ಲದ ದೆಹಲಿಯಲ್ಲಿರುವವರು ಮಾಡುವುದರಿಂದ ಹಲವು ಶಾಸನಗಳು ಈ ಊರಿಗೆ ಉಪಕಾರವಾಗುವ ಬದಲು ಅನಾವಶ್ಯಕ ಮತ್ತು ತೊಂದರೆ ಕೊಡುವಂಥ ಶಾಸನಗಳಾಗುತ್ತವೆ. ಉದಾಹರಣೆ ಹೇಳುವುದಾದರೆ ತೋಟಗಳಲ್ಲಿ ಕ್ಯಾಂಟೀನ್‌ಗಳನ್ನು ಮಾಡಬೇಕೆಂತ ಶಾಸನವು ಮಾಡುವದರಲ್ಲಿದ್ದಾರೆ. ಕಾರ್ಖಾನೆಗಳಲ್ಲಿ ಇದು ಉಪಯೋಗವಾದೀತು. ಆದರೆ ಕಾಫಿತೋಟಗಳಲ್ಲಿ ಕ್ಯಾಂಟೀನ್‌ಗಳಿಂದ ಪ್ರಯೋಜನವಾಗಲಾರದು. ಹೊಸ ಶಾಸನಗಳನ್ನು ಮಾಡುವಾಗ ಸ್ಥಳೀಯ ಸರಕಾರದವರು ಈ ಊರಿನ ಸ್ಥಿತಿಗತಿಗಳನ್ನು ಅನುಸರಿಸಿಯೇ ಪ್ಲಾಂಟೇಶನ್‌ಗಳಿಗೆ ಧಕ್ಕೆ ಬರದ ರೀತಿಯ ಶಾಸನ ಮಾಡಬೇಕು.'

ಜಿ. ಎಂ. ಮಂಜುನಾಥಯ್ಯ.

ಕೊಡಗು

ತಾ. ೧೨-೮-೧೯೫೫ನೇ ಶುಕ್ರವಾರ

ಹಿಂದುಳಿದವರು.

ಹಿಂದುಳಿದವರ ಬಂಧುವಾದ ಮಹಾತ್ಮ ಗಾಂಧಿಯವರ ತ್ಯಾಗ, ಸಾಹಸಗಳಿಂದ ಶತಮಾನಗಳಿಂದ ಹಿಂದೆ ಬಿದ್ದಿದ್ದ ಜಾತಿಗಳ ಮತ್ತು ಪಂಗಡದವರ ಸ್ಥಿತಿಗತಿಗಳಿಗೆ ಮೇಲ್ತರಗತಿಯವರು ಹೆಚ್ಚಿನ ಗಮನ ಕೊಡುವಂತಾಯಿತು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಈ ಜನರಿಗೆ ಕಾಂಗ್ರೆಸ್ ಸಂಸ್ಥೆಯು ಭರವಸೆಯನ್ನಿತ್ತಿದ್ದಂತೆ ಕಾಂಗ್ರೆಸ್ಸಿಗರು ಅಧಿಕಾರಕ್ಕೆ ಬಂದ ಮೇಲೆ ಈ ಪ್ರಶ್ನೆಗೆ ಪ್ರಾಮುಖ್ಯತೆ ದೊರೆಯಿತು. ಹೊಸ ರಾಜ್ಯಘಟನೆಯ ೧೫ ನೇ ಸೆಕ್ಷನ್ ಮೇರೆ ಈ ಪಂಗಡದವರಿಗೆ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶ ಕೊಡುವಂತೆಯೂ, ೧೭ನೇ ಸೆಕ್ಷನ್ ಮೇರೆ ಅಸ್ಪೃಶ್ಯತೆಯು ಯಾವ ವಿಧದಲ್ಲಿಯೂ ಇರಕೂಡದೆಂದೂ ಮತ್ತು ೪೬ನೇ ಸೆಕ್ಷನ್ ಮೇರೆ ಈ ಪಂಗಡದವರ ವಿದ್ಯಾಭ್ಯಾಸ, ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳಲ್ಲಿ ಸರಕಾರವು ವಿಶೇಷ ಮುತುವರ್ಜಿ ವಹಿಸಬೇಕೆಂದೂ ನಮೂದಿಸಲಾಗಿದೆ. ಅಲ್ಲದೆ ಅವರಿಗೆ ನ್ಯಾಯವಿಧಾಯಕ ಮತ್ತು ಪಾರ್ಲಿಮೆಂಟು ಸಭೆಗಳಲ್ಲಿ ೧೦ ವರ್ಷಗಳ ವರೆಗೆ ಸ್ಥಳಗಳು ಜನಸಂಖ್ಯೆಯನ್ನನುಸರಿಸಿ ಕಾದಿಡಲ್ಪಡಬೇಕೆಂದೂ, ಸರ್ಕಾರಿ ಉದ್ಯೋಗಗಳಲ್ಲೂ ಕೂಡ ಯೋಗ್ಯ ಪಾಲು ಕೊಡಬೇಕೆಂದೂ ಸೂಚಿಸಲಾಗಿದೆ.

ಹಿಂದೂದೇಶದಲ್ಲಿ ಹಿಂದುಳಿದ (ಕ್ಯಾಸ್ಟ್ಸ್) ಜಾತಿಯವರುಸುಮಾರು ೫ ಕೋಟಿ ಇರುವರು, ಮತ್ತು ಹಿಂದುಳಿದ (ಟ್ರೈಬ್ಸ್) ಪಂಗಡದವರು ಸುಮಾರು ೧೮೦ ಲಕ್ಷ ಇರುವರು. ೪೯೯ ಮೆಂಬರುಗಳಿರುವ ಜನತಾಸಭೆಯಲ್ಲಿ ಹಿಂದುಳಿದ ಜಾತಿಯವರಿಗೆ ೭೨ ಮತ್ತು ಹಿಂದುಳಿದ ಪಂಗಡದವರಿಗೆ ೨೬ ಸ್ಥಳಗಳಿರುವುವು. ಪ್ರಾಂತೀಯ ಎಸೆಂಬ್ಲಿಗಳಲ್ಲಿ ಒಟ್ಟಾಗಿ ೪೭೭ ಹಿಂದುಳಿದ ಜಾತಿಯವರ ಮತ್ತು ೧೮೨ ಹಿಂದುಳಿದ ಪಂಗಡದವರ ಪ್ರತಿನಿಧಿಗಳಿರುವರು. ಕೊಡಗಿನ ಎಸೆಂಬ್ಲಿಯಲ್ಲಿ ೨೪ ಮೆಂಬರುಗಳ ಪೈಕಿ ೬ ಜನ ಹಿಂದುಳಿದ ಜನರ ಪ್ರತಿನಿಧಿಗಳಿರುವರು. ಮಧ್ಯವರ್ತಿ ಮತ್ತು ಪ್ರಾಂತೀಯ ಸರಕಾರಗಳಲ್ಲಿ ೧೫ ಜನ ಹಿಂದುಳಿದ ಜಾತಿಯವರ ಮತ್ತು ೩ ಹಿಂದುಳಿದ ಪಂಗಡದವರ ಮಂತ್ರಿಗಳಿರುವರು.

ಈ ಭದ್ರತೆಗಳೆಲ್ಲವೂ ಸರಿಯಾಗಿ ಜಾರಿಗೆ ತರಲ್ಪಡುತ್ತಿವೆಯೋ ಮತ್ತು ಅವುಗಳಿಂದ ಎಷ್ಟರ ಮಟ್ಟಿಗೆ ಈ ಜನರ ಉದ್ಧಾರವಾಗುತ್ತಿದೆ ಎಂಬುದನ್ನು ಪರಾಂಬರಿಸುತ್ತಿದ್ದು, ಆಗಿಂದಾಗ್ಗೆ ವರದಿ ಮಾಡಲು ರಾಜ್ಯಘಟನೆಯಲ್ಲಿ ಹೇಳಿರುವ ಮೇರೆ ಇಂಡಿಯಾ ಸರಕಾರದ ಅಧ್ಯಕ್ಷರು, ಒಬ್ಬ ಕಮೀಷನರನ್ನು ನೇಮಿಸಬಹುದಾಗಿದೆ. ಹಾಗೆಯೇ ೧೯೫೦ ರಲ್ಲಿ ನೇಮಿಸಲ್ಪಟ್ಟ ಕಮೀಷನ್‌ರವರು ತಮ್ಮ ವರದಿಯನ್ನು ಅಧ್ಯಕ್ಷರಿಗೆ ಒಪ್ಪಿಸಿರುವರು. ಈ ವರದಿಯ ಮೇರೆ ಹಿಂದುಳಿದವರ ಏಳಿಗೆಯ ಬಗ್ಗೆ ತಕ್ಕ ಮಟ್ಟಿಗೆ ಕೆಲಸ ಕಾರ್ಯಗಳು ಮಾಡಲ್ಪಟ್ಟಿದ್ದರೂ, ಇನ್ನೂ ಮಾಡಲು ತುಂಬಾ ಉಳಿದಿದೆಯೆಂದು ಕಂಡು ಬರುತ್ತೆ.

ಈ ಜನರ ಉದ್ಧಾರವಾದರೂ ಸಾಮಾಜಿಕ ಸುಧಾರಣೆಯಿಂದಲೇ ಮುಖ್ಯವಾಗಿ ನಡೆಯಬೇಕಾಗಿದೆ. ಬರೀ ಕಾನೂನಿನ ಭದ್ರತೆಗಳು ಸಾಲವು. ಸಾಮಾಜಿಕ ಸುಧಾರಣೆಯು ಥಟ್ಟನೆ ಆಗುವಂತಹ ವಿಚಾರವಲ್ಲ. ನಿಧಾನವಾಗಿ ಸಾಗಬೇಕು. ಅಸ್ಪೃಶ್ಯತಾ ನಿವಾರಣೆಯು ತುಂಬಾ ಆಗಿದ್ದರೂ ಹಿಂದುಳಿದ ಜಾತಿಯವರು ಇನ್ನೂ ಕೀಳು ತರದ ವೃತ್ತಿಯಲ್ಲೇ ಇಡಲ್ಪಟ್ಟಿರುವರು, ಮತ್ತು ಹಿಂದುಳಿದ ಪಂಗಡದವರು ಸುಧಾರಿತ ಜನರಿಂದ ದೂರವಾಗಿಯೇ ವಾಸಿಸುತ್ತಿರುವರು. ಹಲವು ಪ್ರಾಂತ್ಯಗಳು ಇವರ ಸುಧಾರಣೆ ಬಗ್ಗೆ ಕಾನೂನು ಕಾಯಿದೆಗಳನ್ನು ಮಾಡಿದ್ದರೂ, ಧೈರ್ಯ ಕುಂದಿದ ಈ ಜನರು ತಮ್ಮ ಹಕ್ಕುಬಾಧ್ಯತೆಗಳನ್ನು ಸಾರ್ವಜನಿಕರಿಂದ ಹೊಂದಿಕೊಳ್ಳಲು ಅಲ್ಲಲ್ಲಿ ಹಿಂಜರಿಯುತ್ತಿರುವರು. ಕೆಲವು ಕಡೆ ಬಿಡ್ಡಾಯ ಕೆಲಸವು ಇವರಿಂದ ಮಾಡಿಸಲ್ಪಡುತ್ತಿದೆ. ಮಾಡಿದ ದುಡಿಮೆಗೆ ಕೆಲವು ವೇಳೆ ಪ್ರತಿಫಲವೇ ಕೊಡುತಿಲ್ಲ, ಎಂದೂ ಮುಂತಾಗಿ ಕಮಿಷನ್‌ನವರು ವರದಿ ಮಾಡಿರುವರು.

ಶತಮಾನಗಳಿಂದ ಮೂಲೆಗೊತ್ತಲ್ಪಟ್ಟ ಈ ಜನರನ್ನು ಬಲತ್ಕಾರದಿಂದ ಥಟ್ಟನೆ ಒಂದೇ ಸವನೆ ಮೇಲಕ್ಕೆ ಎತ್ತುವ ಪ್ರಯತ್ನದ ಬದಲು, ಅವರ ಪಂಗಡಗಳ ವಿಶೇಷತೆ ಮತ್ತು ಸಾಮಾಜಿಕ ವ್ಯವಸ್ಥೆಗಳನ್ನು ಕೆಡಿಸದೆ, ಅತಿ ತ್ವರೆ ಮಾಡದೆ, ಅವರು ಮೇಲು ಜಾತಿಯವರೊಂದಿಗೆ ಮಿಳಿತವಾಗುವಂತೆ ಯುಕ್ತ ಏರ್ಪಾಡುಗಳನ್ನು ಮಾಡುವುದು ಯೋಗ್ಯವಾಗಿದೆ ಆದರೆ ೧೦ ವರ್ಷಗಳಲ್ಲಿ ಈ ಕೆಲಸವು ಸಾಕಷ್ಟು ನಡೆದು ಅವರಿಗಿರುವ ಕಾನೂನಿನ ಭದ್ರತೆಗಳನ್ನು ಸಡಲಿಸಲು ಸಾಧ್ಯವಾಗಬೇಕು, ಎಂಬ ಆ ಕಮಿಷನ್‌ನವರ ಅಭಿಪ್ರಾಯವು ಸೂಕ್ತವಾಗಿದೆ. ಇದನ್ನು ಸಾಧಿಸಲು ಸರ್ವರೂ ಸಹಕರಿಸುವರಾಗಿ ಆಶಿಸುತ್ತೇವೆ.

ವರ್ತಮಾನ.

ಕ್ಯಾಪ್ಟನ್ ಕೋಣೇರಿರ ಬೋಪಯ್ಯನವರು ಮದ್ರಾಸು ಗೌರ್ನರರ ಎ. ಡಿ. ಸಿ. ಯವರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿಯ ಬರುತ್ತದೆ.

ಹಿಂದೂದೇಶದ ಮುಖ್ಯ ಸೇನಾಪತಿಗಳಾದ ಜನರಲ್ ಕೆ. ಎಂ ಕಾರ್ಯಪ್ಪನವರು ಈ ತಾ. ೨೩ರಲ್ಲಿ ಮಡಿಕೇರಿಗೆ ಬರುವರೆಂದು ತಿಳಿಯುತ್ತದೆ.

ಈ ತಾ ೮ರಿಂದ ೧೪ರ ವರೆಗೆ ಮಡಿಕೇರಿಯಲ್ಲಿ ೯ ಇಂಚು ೧೧ ಸೆಂಟು ಮಳೆಯಾಗಿದೆ. ಹೆಚ್ಚಾಗಿ ಮಳೆ ಬಿದ್ದ ತಾ. ೧೩ರಲ್ಲಿ ೨ ಇಂಚು ೬೩ ಸೆಂಟ್ ಆಗಿದೆ.

ಮಡಿಕೇರಿ ಆಸ್ಪತ್ರೆಯಲ್ಲಿ ಡಾಕ್ಟರಾಗಿರುವ ಶ್ರೀ ಬಿಟ್ಟಿಯಂಡ ಸುಬ್ಬಯ್ಯನವರು ಕಲ್ಕತ್ತಾ ಯೂನಿವರ್ಸಿಟಿಯ ಎಂ. ಬಿ. ಬಿ. ಎಸ್. ಪರೀಕ್ಷೆಯಲ್ಲಿ ಪಾಸಾಗಿರುವರೆಂದು ತಿಳಿಯಬರುತ್ತೆ.

ಜಿಲ್ಲಾ ಬೋರ್ಡಿನ ಶಾಲೆಗಳನ್ನು ಸರಕಾರದವರು ವಹಿಸಿಕೊಳ್ಳುವ ವಿಚಾರ ಆಲೋಚನೆ ಮಾಡಲು ನೇಮಿಸಲ್ಪಟ್ಟ ಕಮಿಟಿಯ ಮೀಟಿಂಗು ಈ ತಾ. ೧೪ರಲ್ಲಿ ಮಡಿಕೇರಿಯಲ್ಲಿ ನಡೆಯಲಿದೆಂದು ವರ್ತಮಾನ.

ಕೊಡಗಿನ ಹಲವು ಕಡೆ ಇಷ್ಟರ ವರೆಗೆ ಮಳೆಯು ಚೆನ್ನಾಗಿ ಬೀಳದೆ ವ್ಯವಸಾಯಕ್ಕೆ ತೊಂದರೆಯಾಗಿದ್ದು ಈಗ ೪ ದಿವಸಗಳಿಂದ ಸ್ವಲ್ಪ ಹೆಚ್ಚಾಗಿ ಮಳೆ ಬೀಳುತ್ತಿದೆಯೆಂದು ವರ್ತಮಾನ.

ಚೀಫ್ ಕಮಿಷನರು ತಾ. ೧೧ರಲ್ಲಿ ಡೆಲ್ಲಿಗೆ ಹೋಗಿರುವರು. ಅಲ್ಲದೆ ಮುಖ್ಯ ಮಂತ್ರಿಯವರು ತಾ. ೧೬ರಲ್ಲಿ ಡೆಲ್ಲಿಗೆ ಹೋಗುವರೆಂದೂ, ಇವರಿಬ್ಬರೂ ತಾ. ೨೨ರಲ್ಲಿ ಮರಳಿ ಕೊಡಗಿಗೆ ಬರುವರೆಂದು ತಿಳಿಯುತ್ತದೆ.

ಇಂಡಿಯಾ ಸರಕಾರದ ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಮದರಾಸು ಪ್ರಾಂತ್ಯದಲ್ಲಿ ಲೇಬರು ಇನ್ಸ್‌ಪೆಕ್ಟರಾಗಿದ್ದ ಶ್ರೀ. ಚಿರಿಯಪಂಡ ಬೋಪಯ್ಯ ಬಿ. ಎ. ಇವರನ್ನು ಆರಿಸಿ, ಕೇಂದ್ರ ಸರ್ಕಾರದ ಲೇಬರ್ ಇನ್ಸ್‌ಪೆಕ್ಟರಾಗಿ ಬೊಂಬಾಯಿಯಲ್ಲಿ ನೇಮಿಸಿರುವರು.

ಬೆಂಗಳೂರಿನ ರಿಕ್ರೂಟಿಂಗ್ ಆಫೀಸರವರ ತಂಗುವಿಕೆಯ ತಾರೀಕು ಈ ಕೆಳಗಿನಂತೆ ಬದಲಾವಣೆಯಾಗಿ ಈ ಮೂಲಕ ತಿಳಿಸಲಾಗಿದೆ. ಆಗಸ್ಟ್ ತಾ. ೧೫ ಮತ್ತು ೧೬ ರಲ್ಲಿ ನಾಪೋಕ್ಲು, ೧೭ರಲ್ಲಿ ವೀರಾಜಪೇಟೆ, ೧೮ ಮತ್ತು ೧೯ರಲ್ಲಿ ಸೋಮವಾರಪೇಟೆ ಮತ್ತು ೨೦ರಿಂದ ೨೫ ರ ವರೆಗೆ ಮಡಿಕೇರಿ.

ಹಿಂದೂ ವೈಮಾನಿಕ ದಳದಲ್ಲಿ ಸೆಪ್ಟೆಂಬರ್ ೧೫ರಿಂದ ಪೂನಾದಲ್ಲಿಯೂ ಮತ್ತು ಅಕ್ಟೋಬರ್ ೩೧ರಿಂದ ಇತರ ಕೇಂದ್ರಗಳಲ್ಲಿಯೂ ಪ್ರಾರಂಭವಾಗುವ ತರಬೇತಿಗೆ ಜನರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಮೀಪದ ರಿಕ್ರೂಟಿಂಗ್ ಆಫೀಸನ್ನು ಸಂಧಿಸಬಹುದು.

ಎಗ್ರಿಕಲ್ಚರಲ್ ಇನ್‌ಕಮ್‌ಟ್ಯಾಕ್ಸ್ ಆಫೀಸರಾದ ಶ್ರೀ ಸಿ. ಆರ್. ಕೃಷ್ಣರಾಯರು ಈ ತಾ. ೮ರಿಂದ ೨ ತಿಂಗಳು ರಜೆಯಲ್ಲಿ ಹೋಗಿರುವರು. ಇವರ ಗೈರುಹಾಜರಿನಲ್ಲಿ ಇವರ ಆಫೀಸಿನಲ್ಲಿರುವ ಶ್ರೀ ಬಿ. ಟಿ. ಗೋವಿಂದಯ್ಯನವರು ಇವರ ಕೆಲಸವನ್ನೆಲ್ಲಾ ನಡೆಸುವರು.

ಮಡಿಕೇರಿ ಸರ್ಕಾರಿ ಕಾಲೇಜಿನ ಕರ್ನಾಟಕ ಸಂಘದ, ೧೯೫೫-೫೬ರ ಪ್ರಾರಂಭೋತ್ಸವವು ಈ ತಾ ೬ರಲ್ಲಿ ಕನ್ನಡ ಪಂಡಿತರಾದ ಶ್ರೀ ಕೆ. ಆರ್. ಉಡುಪರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯಮಂತ್ರಿಯಾದ ಶ್ರೀ ಸಿ. ಎಂ. ಪೂಣಚ್ಚನವರು ಭಾಷಣ ಮಾಡಿದರು.

ಈ ತಾ. ೧೧ರಿಂದ ೧ ವರ್ಷದ ವರೆಗೆ ಶ್ರೀ ಎಂ. ಎಂ. ತಿಮ್ಮಯ್ಯನವರು (ಅಧ್ಯಕ್ಷ) ಶ್ರೀ ಕೆ. ಯಂ. ಕಾರ್ಯಪ್ಪನವರು ಮತ್ತು ಶ್ರೀ. ಹೆಚ್. ಬಿ. ಅಣ್ಣಯ್ಯನವರನ್ನು ಪೊನ್ನಂಪೇಟೆಯ ಸ್ಪೆಷಲ್ ಬೆಂಚ್ ಮ್ಯಾಜಿಸ್ಟ್ರೇಟರುಗಳಾಗಿಯೂ, ಶ್ರೀ ಕೆ. ಚಂದ್ರಶೇಖರಯ್ಯನವರು, (ಅಧ್ಯಕ್ಷರು) ಶ್ರೀ ಎಂ. ಪಿ. ಅಪ್ಪಯ್ಯನವರು ಮತ್ತು ಶ್ರೀ. ಡಿ. ಬಿ. ಜೋಯಪ್ಪನವರು, ಸೋಮವಾರಪೇಟೆಯ ಸ್ಪೆಷಲ್ ಬೆಂಚ್ ಕೋರ್ಟ್ ಮ್ಯಾಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುವರು.

ವಯಸ್ಕರ ಶಿಕ್ಷಣದ ಪರೀಕ್ಷೆಯಲ್ಲಿ ಜನಾರ್ದನ ಹಳ್ಳಿಯ ಶಾಲೆಯಲ್ಲಿ ೩೫ರಲ್ಲಿ ೨೫, ಶನಿವಾರಸಂತೆಯ ಶಾಲೆಯಲ್ಲಿ ೩೪ ರಲ್ಲಿ ೨೫, ಸೋಮವಾರಪೇಟೆ ಶಾಲೆಯಲ್ಲಿ ೨೭ರಲ್ಲಿ ೧೪, ಕೆಕ್ಕೆರಹಳ್ಳಿ ಶಾಲೆಯಲ್ಲಿ ೨೬ರಲ್ಲಿ ೧೧, ಶಾಂತಳ್ಳಿ ಶಾಲೆಯಲ್ಲಿ ೩೦ರಲ್ಲಿ ೨೭, ತಾಕೇರಿ ಶಾಲೆಯಲ್ಲಿ ೨೦ರಲ್ಲಿ ೧೪, ಮಾಲ್ದಾರು ತ್ಯಾಗತ್ತೂರು ಶಾಲೆಯಲ್ಲಿ ೩೧ರಲ್ಲಿ ೯ ಮತ್ತು ಬೆಂಬಳೂರು ಶಾಲೆಯಲ್ಲಿ ೨೪ರಲ್ಲಿ ೧೩ ಜನರು ಪಾಸಾಗಿರುವರು. ಒಟ್ಟು ೨೦ ಶಾಲೆಗಳಲ್ಲಿ ೫೪೪ರಲ್ಲಿ ೩೩೮ ಜನರು ಪಾಸಾಗಿರುವರು.

ವಾರ್ತೆ.

ಹೈದರಾಬಾದಿನ ರಾಮನ್ನಪೇಟೆ ಎಂಬಲ್ಲಿ ೩ ತಿಂಗಳ ಮಗುವೊಂದು ೧೮ ವಯಸ್ಸಿನ ಯುವಕನಂತೆ ಮಾತನಾಡುತ್ತಿದೆಯಂತೆ.

ಆಸ್ಸಾಮಿನ ಗುಡ್ಡಕಾಡಿನಲ್ಲಿರುವ ಒಂದು ಜನಾಂಗದಲ್ಲಿ ಗಂಡಸರ ಬದಲು ಹೆಂಗಸರೇ ದುಡಿಯುತ್ತಿರುವರಂತೆ. ಆ ಗಂಡಸರು,ಜಗತ್ತಿನ ಉಳಿದ ಭಾಗದಲ್ಲಿ ಗಂಡಸರು ದುಡಿಯುತ್ತಿರುವರೆಂಬುದನ್ನು ಕೇಳಿ ಬಹಳ ಆಶ್ಚರ್ಯಪಟ್ಟರಂತೆ.

ಕಳೆದ ವಾರ ಮುಕ್ತಾಯವಾದ, 'ಹೆಲ್ಸಿಂಕಿಯ ಜಾಗತಿಕ ಕ್ರೀಡಾಸ್ಪರ್ಧೆಯಲ್ಲಿ, ಮೂರು ಚಿನ್ನದ ಪದಕಗಳನ್ನು ಪಡೆದ, ಜೆಕೋಸ್ಲೋವಾಕ್ಯದ, 'ಎಮಿಲಾಜೆಟೋಪೆಕ್'ರನ್ನು 'ಮಿಸ್ಟರ್ ಆಲೋಂಪಿಕ್ಸ್'ರೆಂದು ಪರಿಗಣಿಸಿರುವರು.

ಕೊಯಿಲಾಪಟ್ಟಿಗೆ ಸೇರಿದ ವಿಲಾತಿಕುಲಂ ಎಂಬ ಗ್ರಾಮದಲ್ಲಿ ಕೋಳಿ ಜೂಜಾಡುತಿದ್ದ ೧೦೭ ಜನರನ್ನು ದಸ್ತಗಿರಿ ಮಾಡಿ, 'ಗೇಮಿಂಗ್ ಆಕ್ಟು' ಪ್ರಕಾರ ಅವರಿಗೊಬ್ಬೊಬ್ಬರಿಗೆ ರೂ. ೫ ಜುಲ್ಮಾನೆಯನ್ನು ವಿಧಿಸಿದರು. ಜುಲ್ಮಾನೆಯಿಂದ ರೂ. ೫೩೫, ದಸ್ತಗಿರಿ ಮಾಡಿದ ೧೨೭ ಹುಂಜಗಳ ಹರಾಜಿನಿಂದ ೩೬೫ ರೂ. ಗಳೂ ಸರಕಾರಕ್ಕೆ ದೊರೆಯಿತು.

ಕೃತಜ್ಞತಾ ವಂದನೆ.

ತಾರೀಕು ೧೦-೮-೫೫ನೇ ಆದಿತ್ಯವಾರ ಶಿವಾಧೀನರಾದ ನನ್ನ ತಂದೆ ಮುದ್ದಯ್ಯನವರ ವಿಯೋಗದ ಕಾಲದಲ್ಲಿ ಪ್ರತ್ಯಕ್ಷ ಬಂದು ಮತ್ತು ನನಗೂ, ನನ್ನ ಸಹೋದರರಿಗೂ, ಮತ್ತು ನನ್ನ ಮಾತೋಶ್ರೀಯವರಿಗೂ ಸಂತಾಪ ಸೂಚನಾ ಪತ್ರ ಬರೆದು ನಮ್ಮ ದು:ಖದಲ್ಲಿ ಭಾಗಿಗಳಾದ ಬಂಧು ಮಿತ್ರರನ್ನು ಪ್ರತ್ಯೇಕ ಬರೆದು ವಂದಿಸುವುದು ಅಸಾಧ್ಯವಾದ ಕಾರಣ ಅವರೆಲ್ಲರಿಗೂ ಈ ಮೂಲಕ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಕುಂಡ್ರಂಡ ಎಂ. ಚಂಗಪ್ಪ,
ಐಮಂಗ್ಲ ಗ್ರಾಮ,
ವೀರಾಜಪೇಟೆ.

ಪ್ರಜಾ ಸರಕಾರವೂ, ಪಾರ್ಟಿ ತತ್ವವೂ.

ಲೇ: ಶ್ರೀ ಪಿ. ಜಿ. ಐಯ್ಯಪ್ಪ, ಮಡಿಕೇರಿ

ಒಂದೊಂದು ವಿಷಯಗಳು ಒಂದೊಂದು ಸಮಯದಲ್ಲಿ ಪ್ರಾಮುಖ್ಯತೆಯನ್ನು ಪಡೆದು ಜನರ ಸಂಭಾಷಣೆಗಳ, ಪತ್ರಿಕೆಗಳ ಟೀಕೆಗಳ, ಬಾತ್ಮೀದಾರರ ಬರವಣಿಗೆಗಳ ಆಸ್ಪದಕಾರಿಗಳಾಗುತ್ತವೆ. ಈಗ ಕೆಲವು ದಿವಸಗಳ ಹಿಂದೆ, ಕೊಡಗು ಪ್ರಜಾಕೀಯ ಪಾರ್ಟಿಯವರು ಕಾಂಗ್ರೆಸಿನೊಳಗೆ ಸೇರುವ ತೀರ್ಮಾನವನ್ನು ಮಾಡಿ ತಮ್ಮ ಮನೋರಥವನ್ನು ಕಾಂಗ್ರೆಸ್ ಶ್ರೇಷ್ಠರಿಗೆ ತಿಳಿಸಿದಾಗ್ಯೆ, ಈ ವಿಷಯವನ್ನು ಕುರಿತು ಜನರು ಗಂಭೀರ ಕಡೆಗಿದಲ್ಲಿಲ್ಲ ಚರ್ಚಿಸಲ್ಪಟ್ಟಿದ್ದಲ್ಲದೆ, ಸ್ಥಳೀಯ ಪತ್ರಿಕೆಗಳಲ್ಲಿ ನಾನಾ ಬಗೆಗಳೂ, ಟೀಕೆಗಳೂ ಹೊರಟವು. ಆದರೆ ಕೆಲವು ದಿವಸಗಳಲ್ಲೇ ನಮ್ಮ ರಾಜಕೀಯ ಘಟನೆಗಳಲ್ಲೂ ಮತ್ತು ಪಾರ್ಟಿ ವ್ಯವಹಾರಗಳಲ್ಲೂ ಈ ಸಂಬಂಧವಾಗಿ ಕಲೆಬೇಕಾದ ಉತ್ಸುಕ, ಅಭಿಪ್ರಾಯಗಳು ಕ್ರಮೇಣ ಶಾಂತವಾಗುತ್ತಾ ಬಂತು.

ಪ್ರಜಾಕೀಯವಾದಿಗಳ ನಿರ್ಣಯವು ಸರಿಯೋ ಯಾ ತಪ್ಪೋ ಎಂಬುದನ್ನು ವಿಮರ್ಶಿಸುವುದಾಗಲೀ ಯಾ ಕಾಂಗ್ರೆಸ್ ಪಾರ್ಟಿಯವರು ಇವರನ್ನು ಪುನಃ ತಮ್ಮ ಪಾರ್ಟಿಗೆ ತೆಗೆದುಕೊಳ್ಳಬೇಕೋ ಯಾ ಬಿಡಬೇಕೋ ಎಂಬ ವಿಷಯವನ್ನು ವ್ಯಕ್ತಪಡಿಸುವುದಾಗಲೀ ಪ್ರಕೃತ ಈ ಲೇಖನದ ಅಭಿಲಾಷೆಯಲ್ಲ. ಮುಖ್ಯವಾಗಿ ಪ್ರಜಾಪ್ರತಿನಿಧಿ ಸರಕಾರ ಸುಸೂತ್ರವಾಗಿ ಸಾಗಬೇಕಾದರೆ ಶಾಸನ ಸಭೆಗಳಲ್ಲಿ ಎರಡು ಯಾ ಹೆಚ್ಚು ಪಾರ್ಟಿಗಳಿದ್ದೇ ತೀರಬೇಕೋ ಇಲ್ಲವೋ ಎಂಬುದನ್ನು ವಿಮರ್ಶಿಸುವುದೇ ಈ ಲೇಖನದ ಉದ್ದೇಶ. ಪ್ರಜಾಪ್ರಭುತ್ವ ಸರಕಾರ ಸುಸೂತ್ರವಾಗಿ ನಡೆಯಬೇಕಾದರೆ ಶಾಸನ ಸಭೆಗಳಲ್ಲಿ ಒಂದಕ್ಕಿಂತ ಹೆಚ್ಚು ಪಾರ್ಟಿಗಳಿದ್ದೇ ತೀರಬೇಕು ಎಂಬ ಒಂದು ತರದ ಭ್ರಾಂತಿಯನೇಕರ ಮನಸ್ಸಿನಲ್ಲಿ ಬೇರೂರಿರುವಂತೆ ಕಾಣುತ್ತದೆ. ಈ ಅಭಿಪ್ರಾಯವು ಬರೀ ಬೇರೆಯವರು ಹೇಳಿದುದನ್ನು ಅಥವಾ ಮಾಡುತ್ತಿರುವುದನ್ನು ನೋಡಿ ನಾವೂ ಸಹ ಹಾಗೆಯೇ ಮಾಡಬೇಕೆಂಬ ಬುದ್ಧಿಯಿಂದ ಜನಿಸಿದ್ದಲ್ಲದೆ ಸ್ವತಂತ್ರವಾಗಿ ಕಾಲ, ದೇಶ ಸ್ಥಿತಿಗಳನ್ನು ವಿಮರ್ಶಿಸಿ, ಯೋಚಿಸಿ, ಅಂತಹ ಯೋಚನೆಯ ಫಲಿತಾಂಶವಾಗಿ ಜನಿಸಿದ ತಿಳುವಳಿಕೆ ಎಂದು ಹೇಳಲು ಸಾಧ್ಯವಿಲ್ಲ.

ಇಂಗ್ಲೆಂಡ್ ಯಾ ಅಮೇರಿಕಾ ದೇಶಗಳಲ್ಲಿ ಈ ಪಾರ್ಟಿ ತತ್ವಗಳು ನಡೆಯುತ್ತಿರುವುದರಿಂದ ನಾವೂ ಸಹ ಆ ಮೇಲ್ಪಂಕ್ತಿಯನ್ನೇ ಅನುಸರಿಸಬೇಕು; ಇಲ್ಲವಾದರೆ ನಿಜವಾದ ಪ್ರಜಾ ಸರಕಾರವು ನಡೆಸಲಾರದು ಎಂಬುದಾಗಿ ನಮ್ಮಲ್ಲಿ ಕೆಲವರ ಭಾವನೆಯಾಗಿದೆ. ಇದು ಎಷ್ಟರ ಮಟ್ಟಿಗೆ ನಿಜ ಎಂಬುದನ್ನು ಕೂಲಂಕುಷವಾಗಿ ವಿಮರ್ಶಿಸುವುದೇ ಈ ಗದ್ಯ ಲೇಖನದ ಮುಖ್ಯೋದ್ದೇಶ. ಈ ವಿಮರ್ಶೆಗೆ ಹೊರಡುವುದಕ್ಕೆ ಮೊದಲೇ ಒಂದು ಸಂಗತಿ ನನ್ನದೊಂದು ದೃಷ್ಟಿ ವಿಷಯ. ನಾನು ರಾಜಕೀಯ ವಿಷಯದಲ್ಲಿ ಒಬ್ಬ ಸಾಧಾರಣ ಯಾ ಪಂಡಿತನೆಂಬ ಅಹಂಕಾರ ನನ್ನಲ್ಲಿಲ್ಲ. ನಾನು ಬೇರೆ ಬೇರೆ ದೇಶಗಳ ರಾಜ್ಯ ರಚನೆಯ ಕ್ರಮಗಳ ಕ್ನ್ನು ಓದಿಲ್ಲ. ಇತರರಿಂದ ಕಲಿಯುವೆನೆಂಬ ಕುತೂಹಲದಿಂದಲೇ ನನ್ನ ಮನಸ್ಸಿನಲ್ಲಿ ನನ್ನ ಅಲ್ಪ ಓದುಗಾರಿಕೆಯ ಪ್ರತಿಫಲವಾಗಿ ಸಂಜನಿತವಾದ ಮತ್ತು ನಾ ಮೂರ್ಖ ಜ್ಞಾನಕ್ಕೆ ಹೊಳೆಯಬಹುದಾದ ನನ್ನ ಅಭಿಪ್ರಾಯಗಳನ್ನು ಪ್ರಕಟಿಸಿರುವುದಾಗಿದೆ.

ಪ್ರಜಾಸರಕಾರ ಎಂಬುದು ನಮ್ಮ ದೇಶಿಗಳ ಜನರಿಗೆ ಕೇವಲ ಒಂದು ನವೀನ ಸಂಗತಿಯೇ ಆಗಿದೆ. ಆದುದರಿಂದಲೂ ಆ ರಾಜ್ಯಗಳ ಅಲ್ಪತೆಯೇ ಹಿಂದೂದೇಶದಲ್ಲಿದ್ದದರಿಂದ ಈ ಪ್ರಜಾಪ್ರತಿನಿಧಿ ಸರಕಾರದ ಗಂಧಗಾಳಿಗಳು ಸಹ ನಮ್ಮ ರಕ್ತದಲ್ಲಿ ಬಂದಿರುವುದಿಲ್ಲ. ಆ ಮೂರ್ತಕ್ಕೆ ನಾವು ಸಹ ಇಂಗ್ಲಿಷಿನವರ ಹಾಗೆ ರನ್ನಿಮಿಡ್ ಪಾರ್ಲಿಮೆಂಟಿನಿಂದ ಮೊದಲು ಮಾಡಿ ಮೇಗ್ನಾ ಕಾರ್ಟ್, ಬಿಲ್ ಆಫ್ ರೈಟ್ಸ್ ಮೊದಲಾದ ಅಂತರಗಳನ್ನು ದಾಟಿ ಈಗಿನ ಬ್ರಿಟಿಷ್ ರಾಜ್ಯಭಾರದ ಸ್ಥಿತಿಗೆ ಬರಬೇಕೆಂಬುದು ನನ್ನ ಅಭಿಪ್ರಾಯವಲ್ಲ. ದೇಗಿ ಹಿಂದೂದೇಶದಲ್ಲಿ ಈಗ ನಾವೂ ದು ಮೋಟಾರ್ ಆವಿಷ್ಕಾರನೆಯನ್ನು ಪ್ರಥಮತಃವಾಗಿ ಸ್ಥಾಪಿಸಿದರೆ ಅದನ್ನು 1604ನೇ ಇಸವಿಯ ಮೋಡೆಲಿನಿಂದ ಪ್ರಾರಂಭಿಸದೆ ಈಗಿನ ಆಧುನಿಕ ಕಾರಿಗೆ ಕೊಡುವ ಸಂಶೋಧನೆಗುವ ರೀತಿಯು ನಾಗಸಾದ ಬಂಡಿಗಳನ್ನೇ ತಯಾರಿಸುವವೋ ಹಾಗೆಯೇ ನಾವು ಸ್ಥಾಪಿಸುವ ಪ್ರಜಾಪ್ರತಿನಿಧಿ ಸರಕಾರವೂ ಸಹ ಈಗಿನ ಕಾಲಕ್ಕೆ ಸರಿಯಾದದ್ದೇ ಆಗಿರಬೇಕು. ಅಂದಮಾತ್ರಕ್ಕೆ ಡೆಮೊಕ್ರಸಿ ಎಂದರೆ ಇಂಗ್ಲೆಂಡ್, ಅಮೇರಿಕಾ, ಅಥವಾ ಬೇರೆಕಡೆಯಲ್ಲಿರುವ ಹಾಗೆಯೇ ಇರಬೇಕೆಂದಿಲ್ಲ. ಯಾವುದೇ ಒಂದು ಸಂಸ್ಥೆಯಾಗಲಿ, ತತ್ವವಾಗಲಿ, ಎಲ್ಲಾ ಕಾಲಗಳಲ್ಲಿಯೂ, ಎಲ್ಲಾ ಸ್ಥಿತಿಗಳಲ್ಲಿಯೂ, ಎಲ್ಲಾ ದೇಶಗಳಲ್ಲಿಯೂ ಒಂದೇ ತರದಲ್ಲಿ ಇರಲಾರದು. ಕಾಲ, ದೇಶ, ಸ್ಥಿತಿಗತಿಗಳಿಗನುಸಾರವಾಗಿ ಒಂದಕ್ಕಿಂತ ದಕ್ಕೆ ಸ್ವಲ್ಪ ಹೆಚ್ಚು ಕಡಿಮೆ ಇದ್ದೇ ತೀರಬೇಕು. ಅಂತಹ ವ್ಯತ್ಯಾಸಗಳನ್ನು ಆಯಾ ಸ್ಥಿತಿಗತಿಗನುಸಾರವಾಗಿ ಬದಲಾಯಿಸಿಕೊಳ್ಳುವ ಪರಿಜ್ಞಾನವು ಸರಕಾರವನ್ನು ರಚಿಸುವ ಮುಂದಾಳುಗಳಲ್ಲಿರಬೇಕು. ಇದರ ಬದಲು, ಅಜ್ಞಪಟ್ಟದ್ದೇ ಆಲ್ ಮೆರಿ, ಎಂಬ ದೃಷ್ಟಿಯೂ ಅವಶ್ಯವಿರದೆ ಇಲ್ಲದಿರಲಿ ನಾವು ಬೇರೊಬ್ಬರ ಮೇಲ್ಪಂಕ್ತಿಯನ್ನು ಹಿಂಬಾಲಿಸ ಬೇಕಾಗಿ ಅದರಲ್ಲಿರುವುದೆಲ್ಲಾ ನಮ್ಮಲ್ಲೂ ಇರಲೇ ಬೇಕೆಂದು ಮೂಢ ಭಕ್ತಿಯಿಂದ ಕಾಲ, ಸ್ಥಿತಿ, ಸ್ಥಳಗಳನ್ನು ಯೋಚಿಸದೆ ಹಿಂಬಾಲಿಸುವುದು. ಹಿಂಬಾಲಕರಲ್ಲಿ ಇರಬಹುದಾದ ಕನಿಷ್ಠ ಪರಿಜ್ಞಾನವನ್ನು ಪ್ರದರ್ಶಿಸತಕ್ಕ ಕುರುಹುಗಳೆಂದು ಹೇಳಬೇಕಾಗುತ್ತದೆ.

ಇಂಗ್ಲೆಂಡಿನಲ್ಲಿ ಕನ್ಸರ್‌ವೇಟಿವ್, ಲಿಬರಲ್, ಲೇಬರೈಟ್ ಮುಂತಾದ ಪಾರ್ಟಿಗಳಿರುವಂತೆ ಅಮೇರಿಕಾದಲ್ಲಿ ಡೆಮೊಕ್ರಟ್ಸ್, ರಿಪಬ್ಲಿಕನ್ ಮುಂತಾದ ಪಾರ್ಟಿಗಳಿರುವಂತೆ ಇಂಡಿಯಾದಲ್ಲಿ ಸಹ ನಾನಾ ಪಾರ್ಟಿಗಳಿರಬೇಕಾದುದು ಅವಶ್ಯವೆಂದಾದರೂ ಸಹ ಇಂಗ್ಲೆಂಡು, ಮತ್ತು ಅಮೇರಿಕಾಗಳ ಸರಕಾರವು ಬಹು ಪುರಾತನವಾದದ್ದು; ಆದರೆ ನಮ್ಮ ಸರಕಾರವಾದರೋ ಇನ್ನೂ ಬಹು ಎಳೇ ವಯಸ್ಸಿನ ಶಿಶು, ಇಲ್ಲಿನ ಜನರು ವಿದ್ಯೆಯಲ್ಲೂ, ರಾಜಕೀಯ ಪರಿಜ್ಞಾನದಲ್ಲೂ ಸಹ ಬಹು ಹಿಂದುಳಿದವರೆಂದು ಕಾಣುವ ಕಾಲಕ್ಕೆ ಇಡೀ ದೇಶದಲ್ಲಿ ಪ್ರಾಮುಖ್ಯ ಪಾರ್ಟಿಯಾಗಿರುವ ಕಾಂಗ್ರೆಸ್ ಪಾರ್ಟಿಗೆ ಸ್ವಪ್ರಮೇಳ ಬೆಂಬಲವನ್ನು ದೇಶೀಯರೆಲ್ಲಾ ಕೊಟ್ಟು ದೇಶದಲ್ಲಿ ಒಂದು ಭಲವಾದ ಅಂತಸ್ಥಿತ ಸರಕಾರವನ್ನು ಮೊದಲು ಸ್ಥಾಪಿಸುವಂತೆ ಪ್ರಯತ್ನಿಸುವುದು ಪ್ರತೀಯೊಬ್ಬನ ಈ ಕಾಲದ ಪ್ರಾಮುಖ್ಯ ಗುರಿಯಾಗಿರಬೇಕು. ಇಂತಹ ಒಂದು ಸರಕಾರ ಸ್ಥಾಪನೆಯಾಗಿ ದೇಶದಲ್ಲಿ ಶಾಂತಿ ಸಮಾಧಾನಗಳು ಸಂಪೂರ್ಣವಾಗಿ ಬೇರೂರಿದನಂತರ ಸರಕಾರದ ಅಂತರೀಯ ಮತ್ತು ಅಂತರಾಷ್ಟ್ರೀಯ ಧ್ಯೇಯ ಗುರಿಗಳಲ್ಲಿ ಕ್ರಮಶಃ ಭಿನ್ನಾಭಿಪ್ರಾಯಗಳು ತಲೆದೋರಿ ಬೇರೆ ಬೇರೆ ಪಂಗಡಗಳು ತಾವಾಗಿಯೇ ತಲೆದೋರುವುವು. ಈಗ ಮೊನ್ನೆ ತಾನೆ ಹುಟ್ಟಿ ಮೆಲ್ಲಗೆ ಅಂಬೆಗಾಲಿಡುತ್ತಿರುವ ನಮ್ಮ ಈ ಡೆಮೊಕ್ರಸಿಯಲ್ಲಿ ನಾವು ಏನನ್ನೂ ಯೋಚಿಸದೆ ನಮ್ಮ ಆರ್ಥಿಕ ಮತ್ತು ಆಹಾರದ ಸ್ಥಿತಿಗತಿಗಳೇ ಒಂದು ಸ್ಥಿರ ಸ್ಥಿತಿಯಲ್ಲಿಲ್ಲದಿರುವಾಗ್ಯೆ ಅಮೇರಿಕಾದಲ್ಲಿದೆ, ಇಂಗ್ಲೆಂಡಿನಲ್ಲಿದೆ ಎಂಬುದಾಗಿ ಇಲ್ಲಿಯೂ ಪಾರ್ಟಿಪಂಗಡಗಳನ್ನು ಸ್ಥಾಪಿಸುವುದಕ್ಕೆ ಪ್ರಯತ್ನಿಸುವುದು ದೇಶದ ಹಿತದೃಷ್ಟಿಯಿಂದ ಎಂದಿಗೂ ಸಮಂಜಸವಾಗಿ ಕಾಣುವುದಿಲ್ಲ. ಅಷ್ಟೇ ಅಲ್ಲ ನಾವು ಕಾಲಸ್ಥಿತಿ ಮತ್ತು ಆವಶ್ಯಕತೆಗಳನ್ನು ಗುರುತಿಸದೆ ಬರೀ ಕುರುಡರ ಹಾಗೆ ಬೇರೆಯವರನ್ನು ಹಿಂಬಾಲಿಸಿದಂತೆ ಆಗುತ್ತದೆ.

ಈ ನಡವಳಿಕೆಯು ಒಂದು ರೀತಿಯ ರಾಜಕೀಯ ಕುರುಡು ಭಕ್ತಿಯಾಗಿ ಕಾಣಬಹುದು. ಕನಿಷ್ಟ ಪಕ್ಷ ಹತ್ತು ವರುಷಗಳ ಪರಿಗಾದರೂ ನಮ್ಮ ಶಾಸನ ಸಭೆಗಳಲ್ಲಿ ಪಂಗಡ ಪಾರ್ಟಿಗಳಿಲ್ಲದೆ ಎಲ್ಲರೂ ಒಂದಾಗಿ ದೇಶದ ತಾತ್ಕಾಲಿಕ ಕೊರತೆಗಳನ್ನು ನಿವಾರಿಸಲಿಕ್ಕೆ ಪ್ರಯತ್ನ ಪಡುವುದು ಮೇಲು.

ಯೂನಿಯನ್ ಸರಕಾರದಲ್ಲೇ ತಾತ್ಕಾಲಿಕ ಪಾರ್ಟಿಗಳಿಗೆ ಎಡೆಯಿಲ್ಲವೆಂದ ಮೇಲೆ ಯೂನಿಯನ್ ಸರಕಾರದ ಕೈಕೆಳಗಿರುವ ಸ್ಟೇಟ್‌ಗಳ ಸರಕಾರಗಳಲ್ಲಿ ಪಾರ್ಟಿಗಳಿಗೆ ಮತ್ತಷ್ಟು ಎಡೆ ಇಲ್ಲವೆಂದು ಹೇಳಬೇಕಾದುದೇ ಇಲ್ಲ. ಸ್ಟೇಟ್‌ಗಳಲ್ಲಿ ನಡೆಯತಕ್ಕಂತಹ್ದು ಶ್ರೀ ರಾಜಗೋಪಾಲಾಚಾರಿಯವರು ಹೇಳಿದಂತೆ ಪಾರ್ಟಿ ಸರಕಾರವಲ್ಲ ಪ್ರಜೆಗಳ ಸರಕಾರ ಪ್ರಜೆಗಳ ಸರಕಾರವೆಂದ ಮೇಲೆ ಪ್ರಜೆಗಳ ಮುಂದಾಳುಗಳಲ್ಲಿ ಪಾರ್ಟಿ ಹೇಗೆ ಬಂದಿತು?

ಪ್ರಾಂತೀಕ ಶಾಸನ ಸಭೆಗಳಲ್ಲಿರಬೇಕಾದುದು ಎರಡೇ ಪಾರ್ಟಿ. ಒಂದು ಮಂತ್ರಿ ಮಂಡಳಿಯವರು, ಬಾಕಿ ಉಳಿದ ಪ್ರತಿನಿಧಿಗಳು. ಮಂತ್ರಿ ಮಂಡಳಿಯವರು ಎಲ್ಲಿಯವರೂ ತಾವೇ ಸರಕಾರವೆಂದು ಭಾವಿಸಿ ಸ್ವೇಚ್ಛಾ ಪ್ರವರ್ತಿಗಳಾಗಿ ನಡೆದರೆ ಅಂಥವರ ನಡವಳಿಗಳನ್ನು ಹತೋಟಿಗೆ ತರುವ ಶಕ್ತಿಯು ಶಾಸನ ಸಭೆಯ ಸದಸ್ಯರ ಕೈಯ್ಯಲ್ಲಿದೆ. ಮಂತ್ರಿಮಂಡಳಿಯವರು ಯಾವುದೇ ಒಂದು ಕಾನೂನು ಜಾರಿಗೆ ಮಾಡಬೇಕಾದರೂ, ಸದಸ್ಯರ ಬಹುಮತದ ಒಪ್ಪಿಗೆ ತೆಗೆದೇ ಮಾಡಬೇಕಾಗಿರುವಾಗ್ಯೆ ದೇಶದ ಮುಂದಾಳುಗಳು ತಮ್ಮ ಒಪ್ಪಿಗೆಯನ್ನು ಕೊಡುವಾಗ್ಗೆ ಅಂತಹ ಕಾನೂನು ಕಾಯಿದೆಗಳು ದೇಶದ ಹಿತದೃಷ್ಟಿಯಿಂದ ಒಳ್ಳೆಯದೋ ಯಾ ಕೆಟ್ಟದೋ ಎಂಬುದನ್ನು ವಿಮರ್ಶಿಸಿಯೇ ತಮ್ಮ ಅಭಿಪ್ರಾಯಗಳನ್ನು ಕೊಡುತ್ತಾರೆ. ಹಾಗಿರುವಾಗ್ಗೆ ಸದಸ್ಯರ ಸ್ಥಿತಿ ಎರಡು ಪಾರ್ಟಿಗಳು ಯಾತಕ್ಕೆ ಬೇಕು? ಅವಶ್ಯವೇ ಇಲ್ಲ.

ಸರಿಯಾಗಿ ಪರಿಶೀಲಿಸಿ ನೋಡಿದರೆ ಪಾಶ್ಚಿಮಾತ್ಯ ದೇಶಗಳಲ್ಲೂ ಸಹ ಈ ಪಾರ್ಟಿ ಸರಕಾರವೆಂಬುದು ಒಂದ ರೀತಿಯು ಶಾಂತಿ ಸಮಯದ ಆಡಂಬರ ಎಂದೇ ಹೇಳಬೇಕು. ಅವರ ಸರಕಾರಕ್ಕೆ ಹೊರಗಿನಿಂದ ಏನಾದರೂ ಅಪಾಯ ಸಂಭವಿಸಬಹುದಾದ ಸಮಯಗಳಲ್ಲಿ ಈ ಪಂಗಡಗಳು ಕಲೆತು ಒಂದು ಪಾರ್ಟಿಯ (ಕೊಯಲಿಷನ್) ಸರಕಾರವನ್ನು ಸ್ಥಾಪಿಸುವುದನ್ನು ನಾವು ಆಗಾಗ್ಗೆ ಕಾಣುತ್ತೇವೆ. ಇದರಿಂದ ಏನು ತಿಳಿದಂತಾಯಿತು? ಸರಕಾರವು ನಿಜವಾಗಿಯೂ ಮಹತ್ಕಾರ್ಯಗಳನ್ನು ಸಾಧಿಸಬೇಕಾದರೆ ಪಕ್ಷಗಳೇ ಇರಬಾರದೆಂಬುದು.

ನಿಜಸ್ಥಿತಿಯು ಹೀಗಿರುವಾಗ್ಯೆ ನಿಜವನ್ನು ಪರ್ಯಾಲೋಚಿಸದೆ, ಪ್ರತಿಯೊಂದು ಶಾಸನ ಸಭೆಯಲ್ಲೂ ವಿರೋಧ ಪಾರ್ಟಿಗಳಿರಬೇಕೆಂಬುದು ಅರ್ಥವಿಲ್ಲದ ಒಂದು ತಪ್ಪು ಭಾವನೆಯೆಂದು ಹೇಳಬೇಕಾಗಿಲ್ಲ. ರಾಷ್ಟ್ರೀಯ ಧ್ಯೇಯಗಳನ್ನು ನಿರ್ಣಯಿಸುವ ಜವಾಬ್ದಾರಿ ಮತ್ತು ಅಧಿಕಾರವಿರತಕ್ಕ ಸ್ವಾತಂತ್ರ್ಯ ಸರ್ಕಾರಗಳಲ್ಲೇ ಒಮ್ಮತದ ಪಂಕ್ತಿ ಒಂದು ವ್ಯಕ್ತಿಯ ಪಾರ್ಟಿ ಇರತಕ್ಕ ಶಾಸನ ಸಭೆಗಳೇ ಒಳ್ಳೆಯದೆಂದ ಮೇಲೆ, ಕೊಡಗಿನಂಥ 'ಸಿ' ಪ್ರಾಂತ್ಯಗಳಲ್ಲಿ ಪಾರ್ಟಿ ಸರಕಾರಕ್ಕೆ ಎಷ್ಟರ ಮಟ್ಟಿಗೆ ಎಡೆ ಇರಬಹುದು? ಈ ಶಾಸನ ಸಭೆಯು ಕಾರ್‍ಯಭಾರಗಳು ಯೂನಿಯನ್ ಸರಕಾರದ ನಿರ್ಣಯಗಳಿಗೆ ಒಳಪಟ್ಟೇ ಇರಬೇಕು. ಹಾಗಿರುವಾಗ ಇಲ್ಲಿ ಪಾರ್ಟಿಗಳ ಅವಶ್ಯಕತೆಗೆ ಎಡೆ ಎಲ್ಲಿದೆ?

ಕಳೆದ ನಮ್ಮ ಶಾಸನ ಸಭೆಯ ಬಜೆಟ್ ಮೀಟಿಂಗಿನಲ್ಲಿ ಶ್ರೀ ಸಿ. ಎ. ಮಂದಣ್ಣ ಬಿ. ಎ. ಬಿ. ಎಲ್., ಎಂ. ಎಲ್. ಎ. ಯವರು ತಮ್ಮ ಭಾಷಣದಲ್ಲಿ, ಪ್ರಜಾಪ್ರಭುತ್ವ ಚೆನ್ನಾಗಿ ನಡೆಯಬೇಕಾದರೆ ವಿರೋಧಪಕ್ಷವಿರಬೇಕು. ಆದುದರಿಂದ ಶ್ರೀ ಪಿ. ಐ. ಬೆಳ್ಯಪ್ಪನವರ ಪಕ್ಷವು ವಿರೋಧವಾಗಿಲ್ಲದ್ದು ವ್ಯಸನಕರ ಎಂಬುದಾಗಿ ಹೇಳಿದರೆಂದು, ತಾ ೨೫-೨-೫೧ರ ಕೊಡಗು ಪತ್ರಿಕೆಯಲ್ಲಿ ರಿಪೋರ್ಟಾದ ಅವರ ಭಾಷಣದಿಂದ ತಿಳಿದೆನು. ಶ್ರೀ. ಪಿ. ಐ. ಬೆಳ್ಯಪ್ಪನವರ ಪಾರ್ಟಿಯೂ, ಕಾಂಗ್ರೆಸ್ ಪಾರ್ಟಿಯೂ ಇದ್ದ ಒಂದೇ ಒಂದು ವ್ಯತ್ಯಾಸವೆಂದರೆ, ಅದು ಕೊಡಗಿನ ಮುಂದಿನ ವಿಲೀನೀಕರಣದ ವಿಷಯದಲ್ಲಿ ಮಾತ್ರ. ಈ ಶಾಸನ ಸಭೆಯಲ್ಲಿ ಅದರ ಚರ್ಚೆ ಬರುವುದಿಲ್ಲವೆಂದಾದ ಮೇಲೆ, ಇವರು ಬಾಕಿ ಎಲ್ಲಾ ವಿಷಯಗಳಲ್ಲೂ ಕಾಂಗ್ರೆಸ್ ತತ್ವಕ್ಕೆ ಒಪ್ಪುವವರೇ ಆಗಿರುವಾಗ್ಯೆ, ಬರೇ

ಪ್ರಜಾಪ್ರಭುತ್ವ ಸರಕಾರದ ಶಾಸನ ಸಭೆಗಳಲ್ಲಿ ಪಾರ್ಟಿಗಳಿದ್ದೇ ಇರಬೇಕೆಂಬ ಒಂದು ಭ್ರಾಂತಿಗೆ ಕಟ್ಟುಬಿದ್ದು ಅವರು ವಿರೋಧ ಪಕ್ಷದವರೆಂದು ಹೇಳಿಕೊಳ್ಳಬೇಕೇ ವಿನಹ, ದೇಶದ ಏಳ್ಗೆಗೆ ಕೆಲಸ ಮಾಡುವುದೇ ಇವರ ನಿಜವಾದ ಗುರಿಯಾದರೆ, ಇವರು ಬಂಧವಾಗಿಯೂ ಕಾಂಗ್ರೆಸ್ ಪಕ್ಷಕ್ಕೆ ತಮ್ಮ ಒಮ್ಮತದ ಬೆಂಬಲವನ್ನು ಕೊಡಬೇಕಿತ್ತು. ತತ್ವವಿಲ್ಲದ ಒಂದು ರೀತಿಯ ಪ್ರತ್ಯೇಕ ವಿಭಾಗವನ್ನು ಇಟ್ಟುಕೊಳ್ಳುವುದರಲ್ಲಿ ಅರ್ಥವೇ ಇಲ್ಲ. ಆದರಲ್ಲೂ, ಕಾಂಗ್ರೆಸ್ ಪಾರ್ಟಿಗೆ ಸಂಪೂರ್ಣ ಮೆಜಾರಿಟಿ ಇರುವಾಗ್ಯೂ, ವೈನರ್ ಪಾರ್ಟಿಯಾದ ಇವರು, ಕಾಂಗ್ರೆಸ್ ಧ್ಯೇಯಕ್ಕೆ ಯಾವ ವಿಷಯದಲ್ಲೂ ವಿರೋಧವಿಲ್ಲದಿರುವಾಗ್ಯೂ, ಇವರು ಬೇರೆ ಇದ್ದು ಮಾಡುವುದಾದರೂ ಏನು? ಇವರು ವಿರೋಧಿಗಳಾಗಿಯೇ ನಿಂತರೆ, ಅದರಿಂದ ದೇಶಕ್ಕೆ ಒಳ್ಳೆಯದಾಗುವುದರ ಬದಲು, ಕೆಲವು ಸಂದರ್ಭಗಳಲ್ಲಿ ಹಾನಿಯೇ ಆಗಬಹುದು. ಹೇಗೆಂದರೆ, ಸಭೆಯಲ್ಲಿ ಎರಡು ಪಾರ್ಟಿಗಳಿವೆ ಎಂದ ಮೇಲೆ, ಒಂದು ವೇಳೆ ಮಂತ್ರಿಮಂಡಳಿಯವರು ಏನಾದರೂ ತಪ್ಪು ಮಾಡಿದರೂ, ಆ ವಿರೋಧ ಪಾರ್ಟಿಯವರು ಅದನ್ನು ಖಂಡಿಸಿದಾಗ, ವಿರೋಧ ಪಾರ್ಟಿಯವರ ವಾದದಲ್ಲಿ ಎಷ್ಟೇ ನ್ಯಾಯ ವಿದ್ದಾಗ್ಯೂ ಪಾರ್ಟಿತತ್ವಕ್ಕೆ ಕಟ್ಟುಬಿದ್ದು ಮೆಜಾರಿಟಿ ಪಾರ್ಟಿಯವರು ಮಂತ್ರಿಗಳನ್ನೇ ಅನುಮೋದಿಸಬೇಕಾಗುತ್ತದೆ. ಅದಲ್ಲದೆ ಎದುರು ಪಾರ್ಟಿಯವರ ನ್ಯಾಯಕ್ಕೆ ತಲೆ ಬಗ್ಗಿಸಿ, ಮೆಜಾರಿಟಿ ಪಾರ್ಟಿಯ ಕೆಲವು ಸದಸ್ಯರು, ಪಾರ್ಟಿಗೆ ವಿರೋಧ ಅಭಿಪ್ರಾಯ ಕೊಟ್ಟರೆ, ಅದು ಮೇಲೆ, ಪಾರ್ಟಿ ಕ್ರಮ ಜರಗಿಸಿಯಾರು ಎಂಬ ಹೆದರಿಕೆ ಆವರಿಗಿರುತ್ತದೆ. ಅದರ ಬದಲು, ಇಡೀ ಎಸೆಂಬ್ಲಿಯಲ್ಲಿ ಒಂದೇ ಪಾರ್ಟಿಯಾದರೆ, ಮಂತ್ರಿಮಂಡಲದವರಿಗೆ ಸಿಕ್ಕಾಬಿಟ್ಟೆ ಪ್ರವರ್ತಿಸಲು ಧೈರ್ಯವಿರುವುದಿಲ್ಲ.

ಎರಡನೆಯದಾಗಿ, ಸರಕಾರವನ್ನು ನಡೆಸುವವರು ದೇಶದ ಏಳ್ಗೆಗೆ ಕಂಟಕ ತರುವ ರೀತಿಯಲ್ಲಿ ವರ್ತಿಸಿದಾಗ, ಅಂಥವ ವರ್ತನೆಯನ್ನು ವಿರೋಧ ಪಾರ್ಟಿಯವರಿಗೆ ಮಾತ್ರ ಟೀಕಿಸುವ, ಯಾ ಪ್ರಶ್ನಿಸುವ ಅಧಿಕಾರವಿದೆ ಎಂದು ತಿಳಿಯುವುದೂ ಶುದ್ಧ ತಪ್ಪು. ಶಾಸನ ಸಭೆಯ ಯಾವನೊಬ್ಬ ಸದಸ್ಯನಿಗೂ, ಆ ಅಧಿಕಾರವಿದೆ. ನಮ್ಮ ಪಾರ್ಟಿಯ ಮಂತ್ರಿಮಂಡಲವಾದುದರಿಂದ, ಅವರು ಮಾಡಿದ ಯಾವ ಕೆಲಸಕ್ಕೆ ಆಗಲಿ ನಾವು ಮಾತಾಡದೆ ಬೆಂಬಲ ಕೊಡಬೇಕು ಎಂಬುವುದು ಎಲ್ಲಿಯೂ ಇಲ್ಲದ ಸಂಗತಿ.

ಮೂರನೆಯದಾಗಿ ಶ್ರೀ. ಬೆಳ್ಳಪ್ಪನವರು ಮತ್ತು ಅವರ ಪಾರ್ಟಿಯವರು ವಿರೋಧ ಪಕ್ಷದಲ್ಲೇ ನಿಂತರೆ, ಅವರಿಗೆ ಕಾಂಗ್ರೆಸ್ ಪಾರ್ಟಿಯವರ ಎಸೆಂಬ್ಲಿಯ ಹೊರಗೆ ನಡೆಸುವ ಮೀಟಿಂಗುಗಳಲ್ಲಿ ಚರ್ಚಿಸಲ್ಪಡಬಹುದಾದ, ದೇಶದ ಮುಂದಿನ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ, ಹಾಗು ತಮ್ಮ ಅಭಿಪ್ರಾಯಗಳನ್ನು ತಿಳಿಸುವ ಸಂದರ್ಭವೇ ಸಿಕ್ಕುವುದಿಲ್ಲ. ಕಾಂಗ್ರೆಸ್ ಪಾರ್ಟಿಗೆ ಸೇರಿದರೆ, ಮಂತ್ರಿಮಂಡಲದವರು ಯಾವ ರೀತಿಯಲ್ಲಿ ವರ್ತಿಸುತ್ತಿರುವುದು ಅವರಿಗೂ ತಿಳಿಯುತ್ತದೆ. ಈ ಕಳೆದ ಚುನಾವಣೆಯಲ್ಲಿ ಉತ್ತರ ಕೊಡಗಿನಲ್ಲಿ ಎಲ್ಲಾಗೂ ಕಾಂಗ್ರೆಸ್ ಉಮೇದುವಾರರೇ ಜಯಶೀಲರಾಗಿ, ದಕ್ಷಿಣ ಕೊಡಗಿನಿಂದ ಸ್ವತಂತ್ರ ಉಮೇದುವಾರರೇ ಹೆಚ್ಚಾಗಿ ಜಯಶೀಲರಾಗಿ ಬಂದಿರುವುದರಿಂದ, ಆ ಎರಡು ಪಾರ್ಟಿಗಳು ಒಂದಾಗದಿದ್ದರೆ, ಹೊಸದಾಗಿ ಸ್ಥಾಪಿತವಾಗಿರುವ ಈ ಸರಕಾರದ ಕಾರ್ಯಕಲಾಪಗಳಲ್ಲಿ ಪ್ರಾಯಶಃ ಅರ್ಧ ಪ್ರಾಂತ್ಯದವರಿಗೆ ಭಾಗವಹಿಸಲಿಕ್ಕೆ ಅಸಾನುಕೂಲವಾದಂತಾಗುತ್ತದೆ. ಇದು ಎಂದೆಂದಿಗೂ ದೇಶದ ಏಳಿಗೆಗೂ ಜನರ ಅಭಿವೃದ್ಧಿಗೂ ಒಳ್ಳೆಯದಲ್ಲವೆಂಬುವುದೇ ನನ್ನ ಭಾವನೆ. ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿದರೆ, ಶ್ರೀ. ಮಂದಣ್ಣನವರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿಯಾರೆಂದು ಆಶಿಸುತ್ತೇನೆ.

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಧ್ಯೇಯಗಳನ್ನು ನಿರ್ಧರಿಸುವ ಪಾರ್ಲಿಮೆಂಟುಗಳಲ್ಲಿ ಒಂದು ವೇಳೆ ಭಿನ್ನಾಭಿಪ್ರಾಯಗಳ ಪಾರ್ಟಿಗಳಿರುವದು ಅವಶ್ಯವಾಗಿ ಕಂಡುಬಂದರೂ ಸಹ ಯೂನಿಯನ್ ಸರಕಾರದ ತತ್ವಗಳನ್ನನುಸರಿಸಿ, ನಡೆಯಬೇಕಾದ, ಸ್ಟೇಟ್ ಶಾಸನ ಸಭೆಗಳಲ್ಲಿ, ಅದರಲ್ಲೂ ಸಿ. ಸ್ಟೇಟಾದ, ನಮ್ಮ ಸಭೆಯಲ್ಲಿ ಪಾರ್ಟಿಗಳಿಗೆ ಎಡೆಯೇ ಇಲ್ಲವೆನ್ನಬೇಕು. ಅದೂ ಅಲ್ಲದೆ ಇರುವ ಎರಡು ಪಾರ್ಟಿಗಳಲ್ಲೂ ಅವರವರೊಳಗೆ ಇದ್ದ ಒಡೆದ ಒಂದು ತತ್ವವ್ಯತ್ಯಾಸವ, ಮಾಲವಾದ ಮೇಲೆ ಬರೇ ತೋರಿಕೆಗಾಗಿ ಒಂದು ಅಲ್ಪ ಮೆಜಾರಿಟಿಯ ಸ್ವತಂತ್ರ ಪಾರ್ಟಿಯನ್ನಿಟ್ಟುಕೊಳ್ಳಬೇಕೆಂಬುವುದು ಏನೂ ಕಾರಣವಿಲ್ಲದ ವಾದವೆಂದೇ ನನಗನಿಸುತ್ತದೆ.

ಸ್ವದೇಶದ ಕ್ರೀಡಾರಂಗ

ಫಿನ್‌ಲೆಂಡದ ಹೆಲ್ಸಿಂಕಿಯ ಪಟ್ಟಣದಲ್ಲೇ ಜಾಗತಿಕ ಕ್ರೀಡಾ ಸ್ಪರ್ಧೆಯು ಕಳೆದ ಜುಲೈ ತಿಂಗಳ ೧೯ರ ದಿನ ಪ್ರಾರಂಭವಾಗಿ ಅದೇ ತಿಂಗಳ ಮೂರನೇ ವಾರದಿನ ದಿವಸ ಮುಕ್ತಾಯವಾಯಿತು. ಜಗತ್ತಿನಲ್ಲಿಯ ಎಲ್ಲಾ ರಾಷ್ಟ್ರಗಳಿಂದಲೂ ಕೂಡಿ ೫,೮೭೦ ಜನ ಕ್ರೀಡಾಪಟುಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಸ್ಪರ್ಧಾಳುಗಳಲ್ಲಿ ಸ್ತ್ರೀ–ಪುರುಷರಿಬ್ಬರೂ ಇದ್ದರು. ದೇಶ–ವಿದೇಶಗಳಿಂದ ಬಂದ ೭೦,೦೦೦ ಪ್ರೇಕ್ಷಕರು ಜಾಗತಿಕ ಕ್ರೀಡೆಗಳನ್ನು ನೋಡಿ ನಲಿದರು.

ಸ್ಪರ್ಧೆಯ ಆಟದಲ್ಲಿ ಹಾಕಿ, ಫುಟ್ ಬಾಲ್, ವಾಟರ್‌ಪೋಲೋ, ಭಾರ ಎತ್ತುವುದು, ಗುಂಡು ಎಸೆಯುವುದು, ಎತ್ತರ ಹಾರುವುದು, ಉದ್ದ ಜಿಗಿಯುವುದು, ಓಟ ಕುಸ್ತಿ, ಈಜುವುದು, ಇವೇ ಮೊದಲಾದ ಆಟಗಳಿದ್ದುವು. ಮೊದಲು ಬೇರೆ ಬೇರೆ ತಂಡಗಳ ನಡುವೆ ಸ್ಪರ್ಧೆ ನಡೆದು ಅದರಲ್ಲಿ ಜಯಪಡೆದವರು ಕಂಚಿನ ಪದಕ ಪಡೆದರು ಜಯಶಾಲಿಯಾದವರಲ್ಲಿ ಮತ್ತೆ ಸ್ಪರ್ಧೆ ನಡೆದು ಅದರಲ್ಲಿ ವಿಜಯಿಯಾದವರಿಗೆ ರಜತ ಪದಕ ದೊರೆಯಿತು. ಆ ಸ್ಪರ್ಧೆಯಲ್ಲಿ ಗೆದ್ದವರಲ್ಲಿ ಮತ್ತೆ ಏರ್ಪಟ್ಟ ಸ್ಪರ್ಧೆಯಲ್ಲಿ ವಿಜಯ ಪಡೆದವರು ಸುವರ್ಣ ಪದಕ ಪಡೆದರು. ಅಮೇರಿಕೆ ಎಲ್ಲಕ್ಕಿಂತ ಹೆಚ್ಚು ಸುವರ್ಣ ಪದಕಗಳನ್ನು, ರಜತ ಪದಕಗಳನ್ನೂ, ಕಂಚಿನ ಪದಕಗಳನ್ನೂ, ಪಡೆಯಿತು ಅದರ ತರುವಾಯ ಎರಡನೇ ಕ್ರಮಾಂಕ ಪಡೆದ ದೇಶವೆಂದರೆ ರಶಿಯಾ. ಭಾರತ ಹಾಕೀ ಆಟದಲ್ಲಿ ಜಗತ್ತಿನಲ್ಲಿಯೇ ಸರ್ವ ಶ್ರೇಷ್ಠವೆಂದು ಸುವರ್ಣ ಪದಕ ಪಡೆಯಿತು. ಮತ್ತು ಕುಸ್ತಿಯಲ್ಲಿ ಕಂಚಿನ ಪದಕ ಪಡೆಯಿತು.

ಅವಿದ್ಯಾವಂತ ಇಂಜಿನಿಯರ್

ಪೂರ್ವ ಬಂಗಾಳದ ನಿರಾಶ್ರಿತನೊಬ್ಬನು ಹೆಚ್ಚು ಕಮ್ಮಿ ವಿದ್ಯಾಹೀನನಾಗಿದ್ದರೂ, ತಾನೊಬ್ಬ ಕಾಶೀ ವಿಶ್ವವಿದ್ಯಾನಿಲಯದ ಚಿನ್ನದ ಪದಕ ಹೊಂದಿದ ಇಂಜನಿಯರಿಂಗ್ ಗ್ರ್ಯಾಜುವೇಟು ಎಂಬ ಸುಳ್ಳು ಹೆಸರಿಂದ ಪ. ಬಂಗಾಳದ ಮುಖ್ಯ ಮಂತ್ರಿಯಾದ ಡಾ ಬಿ ಸಿ ರಾಯರವರ ಶಿಫಾರಸ್ಸು ಪತ್ರವನ್ನು ಪಡೆದು ಅಲ್ಲಿಯ ಚೀಫ್ ವಿದ್ಯುಚ್ಛಕ್ತಿ ಇಂಜನಿಯರರಿಂದ ಅಸಿಸ್ಟೆಂಟ್ ಇಂಜನಿಯರ್ ಹುದ್ದೆಯನ್ನು ಸಂಪಾದಿಸಿದನು. ಆದರೆ ಬೇಗನೆ ಸಿಕ್ಕಿಬಿದ್ದನು! ತಾನು ಹೊಂದಿಕೊಂಡ ೫೯ ರೂ. ಗಳಿಗೆ 'ರಿಸೀವ್ಡ್' ಎಂದು ಬರೆಯಲಾರದೆ ಗುಟ್ಟು ಹೊರಬಿದ್ದಿತು. ಕೂಡಲೇ ಮೋಸ ಗೊಳಿಸಿದನೆಂದು ಪೋಲೀಸರಿಗೆ ಒಪ್ಪಿಸಿದರು.

ಸಹಕಾರದಲ್ಲಿ ಕೊಡಗಿಗೆ ಒಂದನೇ ಸ್ಥಾನ

ಹಿಂದೂದೇಶದಲ್ಲಿ ಸಹಕಾರಿ ಚಳವಳದ ಭೌಗೋಳಿಕ ಬೆಳವಣಿಗೆಯು ಬಹು ಹೆಚ್ಚುಕಮ್ಮಿಯಾಗಿದೆ. ವಿಂಧ್ಯ ಪ್ರದೇಶದಲ್ಲಿ ಒಂದು ಲಕ್ಷ ಜನಸಂಖ್ಯೆಗೆ ಬರೇ ೩.೯ ಸಂಘಗಳಿರುವಲ್ಲಿ ಕೊಡಗಿನಲ್ಲಿ ಒಂದು ಲಕ್ಷ ಜನಸಂಖ್ಯೆಗೆ ೨೮೩ ಸಂಘಗಳಿವೆ ಎಂದು ಇಂಡಿಯಾ ಸರಕಾರದ ಆಹಾರ ಮತ್ತು ವ್ಯವಸಾಯ ಇಲಾಖೆಯ ಮಂತ್ರಿಯಾಗಿದ್ದ ಶ್ರೀ ಕೆ, ಯಂ. ಮುನ್ಷಿಯವರು ಕಳೆದ ಫೆಬ್ರವರಿ ತಾರೀಕು ೨೭ ರಲ್ಲಿ ಮುಂಬೈಯಲ್ಲಿ ನಡೆದ ಅಖಿಲ ಭಾರತ ಸಹಕಾರಿ ಕಾಂಗ್ರೇಸಿನ ಉದ್ಘಾಟನಾ ಭಾಷಣದಲ್ಲಿ ಹೇಳಿದರು.

'ಕೊಡಗು' ಪತ್ರಿಕೆಯ ಏಜೆಂಟರು
ಶ್ರೀ ಚೋಕಿರ ಮೊಣ್ಣಪ್ಪನವರು.
ನಾಪೋಕ್ಲಿಗೆ

ಮುಖ್ಯ ತಿಳಿವಳಿಕೆ.

ಈಗ ಹೊಸದಾಗಿ ಬಂದಿರುವ ನಮ್ಮ ಅಮೇರಿಕನ್ ಫೌಂಟನ್ ಪೆನ್ನುಗಳಿಗೆ ಆರ್ಡರು ಬುಕ್ ಮಾಡಲು ಏಜಂಟರು ಬೇಕಾಗಿದ್ದಾರೆ. ಇದಕ್ಕೆ ಪ್ರತಿಯಾಗಿ 15 ಯಾ 17 ಜ್ಯುವೆಲ್‌ಗಳುಳ್ಳ ಸ್ವಿಸ್ ರಚಿತ ರಿಸ್ಟ್‌ವಾಚು, ಸೈಕಲ್, ಅಥವಾ ರೇಡಿಯೋವು ಬಹುಮಾನವಾಗಿ ದೊರೆಯುವದು. ಇದು ಲಾಟರಿ, ಜೂಜು ಯಾ ಚಕ್ರಬಂಧ ಸ್ಪರ್ಧೆಯಲ್ಲ. ಒಂದು ಫೌಂಟನ್ ಪೆನ್ನಿಗೂ ಅದರೊಡನೆ ಬಹುಮಾನ. ಕೆಟಲಾಗು ಮತ್ತಿತರ ಮಾಹಿತಿಗಳಿಗೆ ಬರೆಯಿರಿ.

THE UNIVERSAL MUTUAL CORPORATION (K M.)
P. O. Box No. 4013, BOMBAY—7.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೊ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಬಿಲ್ ಯಾ ಚಾಕ್ಕುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ನಾರ್ದನ್ ಮತ್ತು ವಿಶ್ವಭಾರತಿ ಇನ್ಸೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ,
ಪ್ರೆಸಿಡೆಂಟ್ ಮತ್ತು ಖಜಾಂಚಿ.

ಯಂತ್ರಗಳಿಗಿಂತ ಎತ್ತುಗಳು ಶ್ರೇಷ್ಠ.

ಲೇ: ವೈದ್ಯಗುರು ಎಂ. ಆರ್. ಭಟ್.

ದೇಶದ ಆರ್ಥಿಕ ವ್ಯವಸ್ಥೆಯ ನೂತನ ಯೋಜನೆಯ ಹೆಸರಿನಲ್ಲಿ, ಪಶ್ಚಿಮದ ವಿಧಗಳ ಕಾರಣ, ಕೃಷಿಯ ವಿಧಗಳಲ್ಲಿ ಮತ್ತು ಉತ್ಪಾದನೆಯ ವಿಧಗಳಲ್ಲಿ ಅಲ್ಲಿ ಯಂತ್ರಗಳಿಗೆ ಸ್ಥಾನ ಕೊಡಿಸುವ ಪ್ರಕ್ರಿಯೆ ಎಷ್ಟೋ ಕಾಣಿಸುತ್ತದೆ. ಭಾರತದ ಯೋಜನೆಗಳ ಪಕ್ಷಪಾತಿಗಳ ಮನೋಭಾವನೆಯು ಸಫಲವಾದರೆ, ದೇಶದಲ್ಲಿ ಎತ್ತುಗಳ ಸಂಖ್ಯೆಯೇ ಕಡಿಮೆಯಾದೀತು. ನಾವು ಒಂದಾವರ್ತಿ ಪುನಃ ಈ ಸಕಲ ವಿಷಯಗಳನ್ನು ಯೋಚಿಸುವುದು ಅತ್ಯಾವಶ್ಯಕ. ಎತ್ತಿನ ವಿಷಯದಲ್ಲಿ ಸರಿಯಾದ ವಿಚಾರ ಮಾಡುವದೇ ನಮಗಿಂದು ಶೋಭಿಸುವುದು.

ನಮ್ಮ ದೇಶದಲ್ಲಿ ಅದಷ್ಟು ಅಧಿಕ ಹಾಲು ಉತ್ಪನ್ನ ಮಾಡುವುದು ಆವಶ್ಯಕವೆಂಬ ವಿಷಯವು ಮೊದಲನೇಯದು. ಆದುದರಿಂದ ನಮಗೆ ದನಗಳ ಆವಶ್ಯಕತೆಯು ಇರುವುದು ನಿಜ; ದನಗಳಿರುವಾಗ ಅವುಗಳೊಡನೆ (ಎತ್ತು) ಹೋರಿಗಳು ಕೂಡಾ ಇರಬೇಕು. ಎತ್ತುಗಳಿಗೆ ಪೂರ್ಣ ಕೆಲಸದ ಆವಶ್ಯಕತೆಯೂ ಇರುವುದು. ನಾವು ಹೊಲದಲ್ಲಿ ನೇಗಿಲಿನೊಡನೆ ಜೋಡಿಸಿ ಅವುಗಳನ್ನು ಕೃಷಿಗೆ ಉಪಯೋಗಿಸುವುದರಿಂದ, ಸವಾರಿ ಮಾಡಲು ಎತ್ತುಗಳನ್ನು ಗಾಡಿಗೆ ಜೋಡಿಸುವದರಿಂದ ಮತ್ತು ಗಾಣ ನಡೆಸಲು ಎತ್ತುಗಳನ್ನು ಉಪಯೋಗಿಸುವುದರಿಂದ ಎತ್ತುಗಳಿಗೆ ಪೂರ್ಣ ಕೆಲಸವು ಲಭಿಸಬಲ್ಲುದು. ನಾವು ಈ ಸಕಲ ಉಪಾಯಗಳಿಂದ ಎತ್ತುಗಳ ಉಪಯೋಗ ಮಾಡದಿದ್ದರೆ ನಮ್ಮ ಅವಸ್ಥೆಯು ಪಾಶ್ಚಾತ್ಯ ದೇಶದಂತೆ ಆಗುವುದು. ಅಲ್ಲಿ ದನಗಳ ವಂಶವನ್ನು ವೃದ್ಧಿಗೊಳಿಸಲು ಆವಶ್ಯವಿದ್ದಷ್ಟು ಗಂಡು ಕರುಗಳನ್ನು ಮಾತ್ರ ಪರಿಪಾಲಿಸಿ ಸಲಹಿ, ಹೋರಿಗಳಾಗಿ ಮಾಡುತ್ತಾರೆ; ಉಳಿದವುಗಳೆಲ್ಲಾ ವಧಿಸಲ್ಪಡುತ್ತವೆ.

ಯಂತ್ರಗಳು ಹೊಲಗಳನ್ನು ವಿಶಾಲ ಪ್ರಮಾಣ ರೂಪದಲ್ಲಿ ಹೂಳುತ್ತವೆ; ಹೊಲದಲ್ಲಿ ಊಳಲು ಉಪಯೋಗಿಸುವ 'ಟ್ರೇಕ್ಟರು' ಒಂದು ಯಂತ್ರವಾಗಿದೆ. ಎತ್ತಿನಲ್ಲಿ ಅದರ ಶಕ್ತಿಯಿರುವದಿಲ್ಲ ಅದು ಯಂತ್ರವೇ ಆಗಿದೆ. ಎತ್ತು ಒಂದು ಜೀವಿಸುವ ಹಾಗೂ ಜಾಗೃತೆಯ ಯಂತ್ರವೆಂದು ನೆನಪಿನಲ್ಲಿಡಬೇಕು. ಅದು ಒಂದು ಪ್ರಾಣಿ, ಅದರಂತಹ ಸರಳ ಸಾಧು ಪಶುಗಳೊಡನೆ ಮನುಷ್ಯರ ಸಂಬಂಧವು ಮಾನವೀಯ ಸಭ್ಯತೆಯ ವಿಕಾಸದಲ್ಲಿ ಒಂದು ವಿಶೇಷ ಮಹತ್ವದ ವಸ್ತುವಾಗಿದೆ; ಈ ವಿಷಯವು ಪ್ರಮಾಣಿಕವೂ ಆಗಿದೆ, ಪಶ್ಚಿಮ ಸಂಸ್ಕೃತಿಯು ವಿಶೇಷ ಚಿಹ್ನೆಯಲ್ಲಿ ಅನೇಕ ಒಡಕು ತೋರಕಗಳಿವೆ. ಅವುಗಳಲ್ಲಿ ಆಗಾಗ್ಗೆ ಸಂಭವಿಸುವ ರಕ್ತ ರಂಜಿತ ಯುದ್ಧವು ಒಂದಾಗಿದೆ. ಈ ಯುದ್ಧಗಳ ಮಧ್ಯದಲ್ಲಿ ಮನುಷ್ಯನು ತನ್ನ ಮಾನವತೆಯನ್ನು ಮರೆತು, ಪಶುವಾಗುತ್ತಾನೆಂಬುದನ್ನು ನೋಡುತ್ತಲಿದ್ದೇವೆ. ಪಶ್ಚಿಮ ಜನರು ಪಶುಗಳ ಶಕ್ತಿಯ ಉಪಯೋಗವನ್ನು ಬಿಟ್ಟು ಬಿಟ್ಟು ಅದರ ಬದಲಿಗೆ ಜಡ ಹಾಗೂ ಅಚೇತನ ಯಂತ್ರಗಳನ್ನು ಸ್ವೀಕರಿಸಿರುವರು. ಅವುಗಳೇ ಈ ಸಕಲ ಕೆಡುಕು ಹಾಗೂ ಅವಗುಣಗಳ ಮೂಲವಾಗಿವೆ; ಇದರಲ್ಲಿ ಆಶ್ಚರ್ಯವೇನು?

ಮಾನವತೆಯ ಭಾವನೆಯ ಮೇಲೆ ಉಪಸ್ಥಿತ ಮಾಡಿದ ಯುಕ್ತಿಯದು; ಆದರೆ ಇದಕ್ಕೆ ಆರ್ಥಿಕ ಯುಕ್ತಿಯ ಬೆಂಬಲ ಕೊಡ ಪುಷ್ಟೀಕರಿಸುವುದು ಆವಶ್ಯಕ. ಆದುದರಿಂದ ಈಗ ನಾವು ಆರ್ಥಿಕ ಯುಕ್ತಿಗಳ ವಿಷಯ ವಿಚಾರಿಸುವಾ. ಇದಕ್ಕೋಸ್ಕರ ನಾವು ಶ್ರೀಮಾನ್ ಎನ್. ಜಿ. ಅಪ್ಟೆಯವರ 'ಫೋರ್ಟ್ಸ್ ಎಂಡ್ ಫ್ಯೂಚರ್ ವಿಲ್ಲೇಜಸ್' ಎಂಬ ಹೆಸರಿನ ಪುಸ್ತಕದ ಉಪಯೋಗವನ್ನು ಯಥೇಷ್ಟ ಮಾಡಬೇಕಾಗಿದೆ; ಸಮರ್ಥ ಭಾರತ ಯಂತ್ರಾಲಯದ ಶ್ರೀಮಾನ್ ಸರದೇಸಾಯಿಯವರೂ ಪೂನೆಯಿಂದ ಪ್ರಕಾಶಿಸಿದ 'ಎಕೋನೋಮಿಕ್ಸ್ ಆಫ್ ದಿ ಬುಲ್ಲಕ್' ಎಂಬ ಶೀರ್ಷಕ ಭಾಗದ ಉಪಯೋಗವನ್ನು ಯಥೇಷ್ಟ ಮಾಡಬೇಕು.

ಎತ್ತು ಕೇವಲ ಚೇತನ ಟ್ರೇಕ್ಟರ ಮಾತ್ರವಲ್ಲ; ಅದು ಗೊಬ್ಬರದ ಒಂದು ಜೀವಂತ ಹಾಗೂ ಕಾರ್ಯಶೀಲ ಕಾರಖಾನೆಯೂ ಆಗಿದೆ. ಅದು ನಮಗೆ ಗೋಷ್ಠದಿಂದ ಸಿಕ್ಕುವ ಅಮೂಲ್ಯ ಗೊಬ್ಬರ ಕೊಡುತ್ತದೆ. ಆ ಗೊಬ್ಬರವು ಪೃಥ್ವಿಗೆ 'ನೈಟ್ರೋಜನ್' ಎಂಬ ಪದಾರ್ಥ ಕೊಡುತ್ತದೆ ಅದರಿಂದ ಭೂಮಿಯ ಮತ್ತು ಕಣಗಳ ಮಧ್ಯದಲ್ಲಿ ಸ್ವಲ್ಪ ಅಂತರವಿರುತ್ತದೆ. ಮತ್ತು ನೀರನ್ನು ಹಿಡಿದಿಡುವ ಭೂಮಿಯ ಶಕ್ತಿಯು ಹೆಚ್ಚಾಗುತ್ತದೆ. ಅದರ ಕಾರಣ ಭೂಮಿಯಲ್ಲಿ ನೀರಿನ ಪಸೆ ಮತ್ತು ವಾಯು ಇವೆರಡೂ ಪ್ರಚುರ ಪ್ರಮಾಣದಲ್ಲಿ ತಯಾರಾಗುತ್ತಲಿವೆ ವನಸ್ಪತಿಯ ಪೋಷಣ ಮತ್ತು ಅದರ ಬೆಳವಣಿಗೆಗೆ ಈ ಮೂರು ವಸ್ತುಗಳೂ ಅತ್ಯಾವಶ್ಯಕವಾಗಿವೆ. ಭೂಮಿಯನ್ನು ಉತ್ಕೃಷ್ಟವಾಗಿಡಲು ಇಚ್ಛಿಸುವವರು ಭಿನ್ನ ಭಿನ್ನ ತತ್ವಗಳನ್ನು ಒಟ್ಟುಗೂಡಿಸಿ ಅದರ ತೀಕ್ಷ್ಣ ಗೊಬ್ಬರವನ್ನು ರಚಿಸಬೇಕು. ಮತ್ತು ಭೂಮಿಯಲ್ಲಿ ಯಥೇಷ್ಟ ಹಾಕಿದರೂ ಅಥವಾ ಹೆಚ್ಚು ಹಾಕಿದರೂ ಅದರಿಂದ ಹಾನಿಯು ಸಂಭವಿಸದು; ಅದರಿಂದ ವಾಯು ಮತ್ತು ಜಲವನ್ನು ಹೀರುವ ಅದರ ಶಕ್ತಿಯು ಹೆಚ್ಚಾಗಿ ಆ ಗೊಬ್ಬರದಿಂದ ಹೆಚ್ಚು ಲಾಭವು ಪರಿಣಮಿಸುವುದು.

ಕೃತ್ರಿಮ ಗೊಬ್ಬರವು ಶಾಪರೂಪವಾಗಿದೆ. ಅದಲ್ಲದೆ ಸಣಬಿನಂತಹ ಎರಡು ತಕ್ಕಳೆಗಳ ಜಾತಿಯ ಗಿಡಗಳು ಸ್ವಲ್ಪ ಬೆಳೆದೊಡನೆ, ಅವುಗಳನ್ನು ನವೀನ ಭೂಮಿಯಲ್ಲಿ ನೆಟ್ಟು ಹಸಿರು ಗೊಬ್ಬರವನ್ನು ಹಾಕುವ ಸಂಪ್ರದಾಯವು ನಮ್ಮಲ್ಲಿ ಪ್ರಚಲಿತವಾಗಿದೆ; ಆದರೆ ಎಲ್ಲವನ್ನೂ ಪರೀಕ್ಷಿಸಿದ ನಂತರ ಗೋಷ್ಠದಿಂದ ಲಭಿಸುವ ಗೊಬ್ಬರದ ಸಮ್ಮುಖ ಕೃತ್ರಿಮ ಗೊಬ್ಬರವು ನೀಚ ಜಾತಿದ್ದಾಗಿದೆ. ಇದರ ಒಂದು ಕಾರಣವೇನೆಂದರೆ, ಬೀಜ ಬಿತ್ತುವ ಸಮಯದಿಂದ ಪ್ರಾರಂಭಿಸಿ, ಕತ್ತರಿಸಿದ ಪಸಿರನ್ನು ಭೂಮಿಯಲ್ಲಿ ಹುಗಿದಿಟ್ಟು, ಅವುಗಳು ಕೊಳೆಯುವ ತನಕ ಭೂಮಿಯು ಖಾಲಿ ಬೀಳುತ್ತದೆ. ಅದರ ಎರಡನೆಯ ಉಪಯೋಗವಾಗದು. ಈ ಹಸಿರು ಎಲೆಗಳು ಪಶುಗಳಿಗೆ ತಿನ್ನಿಸುವ ಕೆಲಸಕ್ಕೆ ಕೂಡ ಬರುವುದಿಲ್ಲ. ಇದಕ್ಕೆ ವಿಪರೀತವಾಗಿ, ಎತ್ತುಗಳು ಹನ್ನೆರಡು ತಿಂಗಳು ಕೆಲಸಮಾಡುತ್ತವೆ: ಸ್ವಯಂ ಹುಲ್ಲು ಮುಂತಾದವುಗಳನ್ನು ಮೇದು, ಅದನ್ನು ಸಗಣಿಯ ರೂಪದಲ್ಲಿ ಪುನಃ ನಮಗೆ ನೀಡುತ್ತದೆ. ಸಗಣಿಯ ಗೊಬ್ಬರವು ಭೂಮಿಯಲ್ಲಿ ಸರಳತೆಯಿಂದ ಮೆತ್ತಗಾಗಿ ಸೇರುತ್ತದೆ. ಭೋಜನದಂತೆ, ತಿಂದ ವಸ್ತುಗಳನ್ನು ರೂಪಾಂತರಿಸುವ ಕೆಲಸವು ಪ್ರಾಣಿಯ ದೇಹದೊಳಗೆ ಆಗುತ್ತಲಿರುತ್ತದೆ; ಆ ಕಾರಣದಿಂದ, ಅದರಲ್ಲಿ ನಾಯಟ್ರೋಜನ್ ಅಧಿಕ ಪರಿಮಾಣ ಪ್ರಮಾಣದಲ್ಲಿ ಉತ್ಪನ್ನವಾಗುತ್ತದೆ.

ಹುಲ್ಲಿನ ಮುಖಾಂತರ, ಎತ್ತು ತನ್ನ ಹೊಟ್ಟೆಯಲ್ಲಿ ಹಾಕಿದ ನಾಯಟ್ರೋಜನಿನ ಸತ್ವವು ನಮಗೆ ಅದರ ಸಗಣಿಯಿಂದ ಪುನಃ ಲಭಿಸುತ್ತದೆ; ಯಾಕೆಂದರೆ, ಕೆಲಸ ಮಾಡುತ್ತಿರುವ ಎತ್ತಿನ ಶರೀರದಲ್ಲಿ ಕೇವಲ ಪಿಷ್ಟ ಶರ್ಕರಾದಿ ವಸ್ತುಗಳ ಉಪಯೋಗವೇ ಆಗುತ್ತದೆ. ಗೊಬ್ಬರದ ರೂಪದಲ್ಲಿ ಈ ಕಾರ್ಬೋ ಹ್ಯಾಡ್ರೇಟುಗಳು ಅಧಿಕ ಕೆಲಸ ಮಾಡುವುದಿಲ್ಲ; ಯಾಕೆಂದರೆ, ಹೂಳಿದ ನಂತರ ಚಿಗುರಿಸಿದ ಹೊಲಕ್ಕೆ ಅವಶ್ಯವಿರುವಷ್ಟು, ಕಾರ್ಬೋ ಹ್ಯಾಡ್ರೇಟನ್ನು ಬೆಳೆಯುತ್ತಿರುವ ಗಿಡಗಳು ವಾಯುವಿನಿಂದ ಗ್ರಹಣಮಾಡುತ್ತವೆ; ಭೂಮಿಯೊಳಗಿನಿಂದ ಹೀರಿ ತೆಗೆದುಕೊಳ್ಳುವ ಅವಶ್ಯಕತೆಯು ಅವುಗಳಿಗೆ ಬೀಳುವುದಿಲ್ಲ. ಹಸುರು ಗಿಡಗಳನ್ನು ಭೂಮಿಯೊಳಗೆ ಹುಗಿದಿಡುವುದರಿಂದ, ವ್ಯರ್ಥವಾಗುವ ಶಕ್ತಿಯನ್ನು ಎತ್ತು ತನ್ನ ದೇಹದಿಂದ ಅದನ್ನು ಪೂರ್ಣವಾಗಿ ಪ್ರಾಪ್ತಿಸುತ್ತದೆ. ಇದರ ಅತಿರಿಕ್ತ, ಗೋಷ್ಠದಿಂದ ಲಭಿಸುವ ಸಗಣಿ ಮುಂತಾದವುಗಳ ಕಾರಣ ಹಸುರು ಗೊಬ್ಬರಕ್ಕಿಂತ ಭೂಮಿಗೆ ಅಧಿಕ ಭೋಜನ ಮುಟ್ಟಿಸುತ್ತದೆ; ಯಾಕೆಂದರೆ, ಪ್ರಾಣಿಯು ಶರೀರದೊಳಗಿನಿಂದ ಚಲಿಸಿ ಬರುವಾಗ, ಹುಲ್ಲು ಮೇವುಗಳ ರೂಪದಲ್ಲಿ, ತನ್ನ ಶರೀರದೊಳಗೆ ಮುಟ್ಟಿದ ವಸ್ತುಗಳನ್ನೆಲ್ಲಾ ಅದು ತನ್ನ ಶರೀರದ ರಸದಿಂದ ಪಚನಮಾಡಿ ಪ್ರತ್ಯೇಕ ಪ್ರತ್ಯೇಕವಾಗಿ ವಿಭಜಿಸಿ, ಸಿದ್ಧಪಡಿಸಿ, ಸಗಣಿಯ ರೂಪದಲ್ಲಿ ಹಾಗೂ ಗೊಬ್ಬರದ ರೂಪದಲ್ಲಿ ಭೂಮಿಗೆ ನೀಡುತ್ತದೆ.

ಯಂತ್ರಗಳಿಗಿಂತ, ಎತ್ತು ಶ್ರೇಷ್ಠವಾಗಿದೆ; ಹೊಲವನ್ನು ತಾಜಾ ಆಗಿಡಲು, ಉತ್ಕೃಷ್ಟ ಗೊಬ್ಬರ ಕೊಡುತ್ತದೆ; ಮಾತ್ರವಲ್ಲ, ಎತ್ತು ಹಲವು ಪ್ರಕಾರದ ಕೆಲಸ ಮಾಡುತ್ತದೆ; ಆ ಸಮಸ್ತ ಕಾರ್ಯಗಳನ್ನು ಮಾಡುವ ಒಂದು ಯಂತ್ರವನ್ನು ರಚಿಸುವುದು ಅಸಂಭವವೇ ಸರಿ; ಇದನ್ನು ನಾವು ತಿಳಿಯಬೇಕು. ಎತ್ತು ವೇಗದಿಂದಲೂ ಕೆಲಸ ಮಾಡಬಲ್ಲುದು; ಮೆಲ್ಲಮೆಲ್ಲಗೂ ಮಾಡುವುದು. ಅದು ಕೇವಲ ನೇಗಿಲಿನ ಸಹಾಯದಿಂದ ಹೊಲವನ್ನು ಹೂಳುವ ಕೆಲಸವನ್ನು ಮಾತ್ರ ಮಾಡುವುದಲ್ಲ; ಅದು ಭಾರವನ್ನು ಹೊರುತ್ತದೆ; ಧಾನ್ಯದ ಕಾಳುಗಳನ್ನು ಬಿಂಗಡಿಸುವ ಕಾರ್ಯದಲ್ಲಿಯೂ ಸಹಾಯವಾಗುತ್ತದೆ; ಇದೇ ಪ್ರಕಾರ ತಯಾರಿಸಿದ ಧಾನ್ಯವನ್ನು ಬಜಾರಿಗೆ ಕೊಂಡೊಯ್ಯಲು, ಗಾಡಿಗೆ ಜೋಡಿಸಲ್ಪಡುತ್ತದೆ; ಈ ಸಕಲ ಕಾರ್ಯಗಳೊಡನೆ, ಅದು ಬರಿದಾದ ಹೊಟ್ಟು, ಕೂಳೆ, ಒಣ ಹುಲ್ಲು ಮುಂತಾದ ವಸ್ತುಗಳನ್ನು ತಿನ್ನುತ್ತದೆ; ಅವುಗಳಿಂದ ಮನುಷ್ಯನು ತನ್ನ ಆಹಾರದ ಧಾನ್ಯ, ಅಕ್ಕಿ ಮತ್ತು ತೈಲವನ್ನು ಸಿದ್ಧಪಡಿಸುತ್ತಾನೆ. ಒಂದು ಜೋಡು ಎತ್ತಿನ ಕ್ರಯವು ಸುಮಾರು ೨೦೦-೩೦೦ ರೂಪಾಯಿ ಆಗಬಹುದು. ಎತ್ತು ಮಾಡುವ ಸಕಲ ಕಾರ್ಯಗಳನ್ನು ಯಂತ್ರಗಳಿಂದ ಮಾಡುವುದಾದರೆ, ಕೃಷಿಕರಿಗೆ ಕಡಮೆಯೆಂದರೆ ಕಡಿಮೆ ಒಂದು ಇಂಜಿನ್, ಒಂದು ಮೋಟಾರ ಲಾರಿ, ಒಂದು ಟ್ರೇಕ್ಟರ, ಮೋಟಾರಿಗೆ ಬೇಕಾಗುವ ಸಣ್ಣ ಸಣ್ಣ ಚಕ್ರಗಳು, ಮುಂತಾದ ಇನ್ನೂ ಅನೇಕ ವಸ್ತುಗಳು ಬೇಕಾಗಿವೆ. ಇವುಗಳೆಲ್ಲವುಗಳ ಕ್ರಯವು ಎತ್ತಿನ ಕ್ರಯಕ್ಕಿಂತ ಬಹು ಅಧಿಕವಾಗಿದೆ. ಅದರ ಅತಿರಿಕ್ತ, ಯಂತ್ರಗಳನ್ನು ನಡಿಸಲು; ಹುಲ್ಲಿಗೆ ಬದಲಿಗೆ, ಕ್ರೂಡ್ ಓಯಿಲ್ ಅಥವಾ ಪೆಟ್ರೋಲನ್ನು ಕೃಷಿಕರು ಖರೀದಿ ಮಾಡಬೇಕಾಗಿದೆ. ಈ ಕ್ರೂಡ್ ಓಯಿಲ್ ಅಥವಾ ಪೆಟ್ರೋಲು ದೇಶದಲ್ಲಿ ಇಂದು ಉತ್ಪನ್ನವಾಗುವುದೂ ಇಲ್ಲ; ದೇಶದಲ್ಲಿ [illegible] ಲಭಿಸುವುದೂ ಕಷ್ಟವಾಗಿದೆ; [illegible] ಒಂದು ವಿಚಾರಿಸಬೇಕಾದ [illegible] ವಾಗಿದೆ.

ಹೊಲದಲ್ಲಿ ವಿಶೇಷವಾಗಿ [illegible] ತಿರುಗಿಸುವುದು; ಮಣ್ಣನ್ನು ಮೇಲೆ ಕೆಳಗೆ ಮಾಡುವುದು, ಬೀಜ ಬಿತ್ತುವುದು, ಮುಂತಾದ ಕೆಲಸಗಳು ಇರುತ್ತವೆ. ಈ ಸಮಸ್ತ ಕೆಲಸಗಳ ಕಾರಣದಿಂದ ಎತ್ತಿಗೆ ಒಂದು ವರ್ಷದಲ್ಲಿ ಮೂರು ನಾಲ್ಕು ತಿಂಗಳು ಮಾತ್ರ ಕೆಲಸವು ಲಭಿಸುತ್ತದೆ. ಉಳಿದ ಸಮಯದಲ್ಲಿ ಅದರ ಉಪಯೋಗವು [illegible] ಮಾನಸೂನ ಬರುವುದರಲ್ಲಿ, ಇನ್ನೂ ಒಂದು ಸ್ಥಾನದಿಂದ ಇನ್ನೊಂದು [illegible] ಕೊಂಡು ಹೋಗುವದರಲ್ಲಿ, [illegible] ಮುಂತಾದವುಗಳನ್ನು [illegible] ದಲ್ಲಿ, ಮಾಡಬಹುದಾಗಿದೆ, ಅದರ [illegible] ಕೆ ತನ್ನ ಕೆಲಸವನ್ನೇ [illegible] ಹೊಲದ (ಕೃಷಿಯ) ಕೆಲಸವು [illegible] ನಂತರ, ಅದು ದೀರ್ಘಕಾಲ ಕೆಲಸವಿಲ್ಲದೆ ಇರಬೇಕಾದೀತು.

ಯಂತ್ರಗಳಿಂದ [illegible] ದರಿಂದ ಮೇಲಿಂದ ಮೇಲೆ [illegible] ದೃಷ್ಟಿಗೋಚರವಾಗುತ್ತದೆ; [illegible] ದ ಕೃಷಿಕರು ಅನ್ಯ ಪ್ರಕಾರದ [illegible] ಉಪಯೋಗವನ್ನು ಮಾಡಲಾರರು.

ಶ್ರೀಮಾನ್ ಅಪ್ಟೆಯವರ [illegible] ಮತ್ತು ಅಭ್ಯಾಸಪೂರ್ಣ ಸಂಗ್ರಹ ಗ್ರಂಥದಿಂದ ಈ ಕೆಳಗಿನ ವಿಷಯವನ್ನು [illegible] ಭೂಮಿಯ ಮತ್ತು ಪ್ರಾಣಿಗಳಲ್ಲಿರುವ ಸಮಸ್ತ ಶಕ್ತಿಯ ಪೂರ್ಣಲಾಭವನ್ನು ಪಡೆದ ನಂತರವೇ ಯಂತ್ರಗಳನ್ನು ನಾವು ಉಪಯೋಗಿಸಬೇಕು; ಆದುದರಿಂದ, ಯಂತ್ರವನ್ನು ಕೃಷಿಗೋಸ್ಕರ ಉಪಯೋಗಿಸುವ ಅವಶ್ಯಕತೆಯು ಇಂದು ಇರುವುದಿಲ್ಲ. 'ನವಯುಗ'

॥ ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಗೃಹಗಳ ಪಾತ್ರ. ॥

ಲೇ:— [illegible] ಕೆ. ಬಿ. ಐಯ್ಯಪ್ಪ, ಬಿ. ಎ, ಬಿ. ಟಿ, ಸಾಪ್ಟೋಕ್ಲು ಶಾಲೆ.

ಈಗಿನ ವಿದ್ಯಾಭ್ಯಾಸ ಕ್ರಮಗಳು, ನಮ್ಮ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ವೃದ್ಧಿಗೊಳಿಸುವುದರಲ್ಲಿ ಸ್ವಲ್ಪ ಮಾತ್ರ ಅನುಕೂಲವಾಗಿವೆ. ಆದ್ದರಿಂದ ಅನೇಕ ಜಗದ್ವಿಖ್ಯಾತ ಮೇಧಾವಿಗಳು ನಮ್ಮ ಮಕ್ಕಳನ್ನು (ರಾಷ್ಟ್ರದ ಶ್ರೇಷ್ಠ ಸಂಪತ್ತು) ನೂತನ ಶಿಕ್ಷಣ ಸಾಧನಗಳಿಂದ ಜೀವಿಸಲು [illegible] ದೀರ್ಘವಾದ ಸ್ಫೂರ್ತಿದಾಯಕ ಶಕ್ತಿಗಳನ್ನು ಇವರಲ್ಲಿ ಉಗಮಿಸುವ ಸತತ ಪ್ರಯತ್ನದಲ್ಲಿದ್ದಾರೆ.

ಈ [illegible] ಮಕ್ಕಳಲ್ಲಿ ಸರ್ವ ಗುಣ ಸಂಪನ್ನತೆ [illegible] ಸುಶಿಕ್ಷಿತ ಹಾಗೂ ಭದ್ರವಾದ ತಳಹದಿಯಲ್ಲಿ ಪ್ರಾರಂಭವಾಗುವ ಪ್ರಥಮ ಮತ್ತು ಶ್ರೇಯಸ್ಕರವಾದ ನೆಲೆವೀಡು ಎಂದರೆ ಗೃಹ. ವಿದ್ಯಾಮಾತೆ, ಸಂಸ್ಥೆಗಳ ಸಂಸರ್ಗ ಹಾಗೂ ಇಡೀ ರಾಷ್ಟ್ರವೇ ಮಕ್ಕಳಿಗೆ ಶಿಸ್ತಿನ ತರಬೇತನ್ನು ನೀಡಿದರೂ [illegible], ಅದರಲ್ಲೂ ಮಕ್ಕಳ ಪ್ರಾರಂಭದ [illegible] ವೇಳೆಯಲ್ಲಿ ಮನೆಯೇ [illegible] ಸದ್ಗುಣಗಳನ್ನು ಶೋಧಿ[illegible] ಚಟುವಟಿಕೆಯನ್ನು ಪುನ[illegible] ಅವರ ಮನೋಬಲವನ್ನು [illegible]. ಮನೆಯಲ್ಲಿ ಆಧುನಿಕ ಶಿಕ್ಷಣವನ್ನು ಸಂಘಟಿಸಲು ಸಾಧ್ಯ.

ನಮ್ಮ ಮನೆಗಳ, ನಮ್ಮ ಜನರ [illegible] ಅನೇಕಾನೇಕ ಉತ್ತಮ ಹಾಗೂ [illegible]ಯಾದ ಪರಿವರ್ತನೆಯನ್ನು [illegible] ತೊಟ್ಟಿಲುಗಳಾಗಿವೆ. [illegible] ಈಗಿನ ಶಿಕ್ಷಣ ಕ್ರಮಗಳು ಮ[illegible] ಮನೆಗಳ [illegible] ವ್ಯವಸ್ಥೆ [illegible] ಮಕ್ಕಳ ಸರ್ವತೋ[illegible] ಬೆಳವಣಿಗೆಯಲ್ಲಿ ಗೃಹಗಳ [illegible]. ಪ್ರತಿ [illegible] ಈ ದಿವ್ಯ ಜವಾಬ್ದಾರಿ [illegible] ಮಕ್ಕಳನ್ನು ಪ್ರಗತಿಶೀ[illegible] ಅಲ್ಲದೆ ಉದಾತ್ತ [illegible] ಭಾವೀ ಪೀಳಿಗೆಯ ಏಳಿ[illegible]ದಲೇ ಮನೆಗಳ ಸ್ಥಾನ ಮ[illegible] ವಾತಾವರಣದ [illegible]ವನ್ನು ಹೊಂದಿಕೊಂಡು ಈಗಿನ ಶಿಕ್ಷಣ [illegible]ವು ರೂಪಿತಗೊಳ್ಳಬೇಕು.

ಮಾನಸಿಕ ವಿಕಾಸಕ್ಕಾಗಿ, ಮನೆಯಲ್ಲಿ ವಿದ್ಯಾ ಸಹಾಯಕವಾಗುವ ನಿಯಮಗಳು ಅನೇಕ ಇವೆ.

ಮಾತಾ ಪಿತೃಗಳು ತಮ್ಮ ಮಕ್ಕಳಲ್ಲಿ [illegible] ಶೀಲತೆಯನ್ನೂ, ವಿಶಾಲ [illegible]ಯನ್ನೂ ಕಲ್ಪಿಸಬೇಕು.

ಅವಶ್ಯಕ ಕಲಾಶಕ್ತಿಯನ್ನು ಉತ್ಪನ್ನ [illegible] ಮೂಲ ಕೈಗಾರಿಕೆಯಲ್ಲಿ ಅಭಿರುಚಿಯನ್ನು ಉದ್ಭವಿಸಬಹುದು. ಬಾ[illegible]ಯರಲ್ಲಿ ಗೃಹ ವಿಜ್ಞಾನವನ್ನು [illegible]ಬೇಕು.

ಮನೆಯು ದಯಾಪೂರ್ವಕ ಸಮಾಜ ಸೇವಕರನ್ನಾಗಿ ಮಕ್ಕಳನ್ನು ತರಬೇತು ಮಾಡಬೇಕು.

ಮನೆಗೂ ರಾಷ್ಟ್ರಕ್ಕೂ ಅನ್ಯೋನ್ಯ [illegible] ಸಹಕಾರ ತರುವುದರಲ್ಲಿ ಕಾರ್ಯೋನ್ಮುಖರಾಗುವಂತೆ ಬೋಧಿಸಬೇಕು.

ಮಕ್ಕಳ ದಕ್ಷತನ ಬುದ್ಧಿಮಾಂದ್ಯತೆ, ಉದಾಸೀನತೆ ಮತ್ತು ಅಕ್ಷಮ್ಯ ತೋರುತ್ತಿರುವ ಬಾಲ್ಯ ಕೃಷಿ ಮತ್ತು ದುಷ್ಟಾಟನವನ್ನು [illegible] ಮಾಡುವ ಮಾರ್ಗ [illegible], ಜ್ಞಾನವಿಕಾಸವಾಗುವಂತೆ ಪ್ರೋತ್ಸಾಹಿಸಬೇಕು.

ಇವುಗಳೆಲ್ಲರ ಪೈಕಿ, ಬೆಳೆಯುವ ಮಕ್ಕಳ ಸದ್ಗುಣಗಳನ್ನು ಶಾಶ್ವತ ಮಾಡುವುದು; ಮತ್ತು ವಿಶಾಲ ಮನೋಭಾವನೆಯನ್ನು ಕಲ್ಪಿಸುವುದು ಪ್ರಾಧಾನ್ಯವಾಗಿದೆ. 'ಉತ್ತಮ ಸ್ವಭಾವವೇ ಉತ್ತಮ ಶೀಲದ ಕಟ್ಟಾ ಮೂಲು' ಎಂದೊಬ್ಬ ಪಂಡಿತನು ಸಾರಿದ್ದಾನೆ. ಆದ್ದರಿಂದ ಸ್ವಭಾವ ಗುಣಕ್ಕೆ ಬಲಯುಕ್ತವಾದ ಅಡಿಪಾಯವನ್ನು ಹಾಕುವ ಸ್ಥಳವೆಂದರೆ ಮನೆ. ಉತ್ತಮ ಮನೆಯು ಉತ್ತಮ ವ್ಯಕ್ತಿಗಳನ್ನು ಪಡೆಯುವುದರಲ್ಲಿ ಸಂಶಯವಿಲ್ಲ. ಈ ರೀತಿಗಿನ ಚರಿತ್ರೆ ಉದಾಹರಣೆಗಳು ಮೇಲಿನ ಮಾತನ್ನು ಪುಷ್ಟೀಕರಿಸಬಹುದು.

ಶಿವಾಜಿಯ ತಾಯಿ ಜೀಜಾಬಾಯಿ ಮತ್ತು ಗುರುಗಳಾದ ದಾದಾಜಿಯವರು ಶಿವಾಜಿಯನ್ನು ಬೆಳ್ಳೆಸಿಯೇ [illegible] ಯೋಧ[illegible]ಲಿಯಾಗಿಯೂ, ಸಿಂಹಬಲವುಳ್ಳ ವ್ಯಕ್ತಿಯಾಗಿಯೂ ಮಾಡಲಿಲ್ಲವೇ? ಆದರ್ಶ ಮತ್ತು ಮಾರ್ಗದರ್ಶಕ ಮಾತಾಪಿತೃಗಳಿಂದ ಠಾಗೂರರವರು ಜಗದ್ವಿಖ್ಯಾತ ಕವಿಯಾಗಲಿಲ್ಲವೇ? ಪ್ರಸಿದ್ಧ ರಾಷ್ಟ್ರಪತಿ ಲಿಂಕನನು ತನ್ನ ನೊಮ್ಮಗನಾದ ಅಲೆಗ್ಸಾಂಡರನ ವಿಷಯ [illegible] ಈ ರೀತಿ ಬರೆದಿರುತ್ತಾನೆ — 'ಅವನು ನಿಜವಾಗಿಯೂ ನಮ್ಮ ವಂಶಕ್ಕೆ [illegible] ಕೀರ್ತಿಯನ್ನು ತರುವನೆಂಬುದರಲ್ಲಿ ಸಂದೇಹವಿಲ್ಲ.'

ಆರೋಗ್ಯ ನಿಯಮಗಳು, ವಿಧೇಯತ್ವ, ಮಾತಾಪಿತೃಗಳ ಗುರುಹಿರಿಯರ ಮೇಲೆ ವಿಶ್ವಾಸಪೂರ್ವಕವಾದ ಆದರ ಮತ್ತು ವಿಶಾಲ ದೃಷ್ಟಿ—ಇವೇ ಮೊದಲಾದ ಗಣನಾತೀತ ಸದ್ಗುಣಗಳು ಮನೆಯಲ್ಲಿ ಮೊಳೆಯಬೇಕು. ನಾನಾ ರೀತಿಯ ಚಿನ್ನವಿಚಿನ್ನ ತತ್ವ ಸಂಗ್ರಹ, ಮಕ್ಕಳ ಮನಸ್ಸಿಗೆ ಹೊಕ್ಕಿದರೆ ಮಾನಸಿಕ ಅಭಿವೃದ್ಧಿ ಇಳಿಮುಖವಾಗುವದಲ್ಲದೆ ಜೀವನದಲ್ಲಿ ಸಹಿಷ್ಣುತೆ ಕನಿಷ್ಠವಾಗವುದು.

ಈಗೀಗ ಬುದ್ಧಿ ಭ್ರಮೆಗೊಂಡಿರುವ ಮತ್ತು ಅರೆ ಹುಚ್ಚಿನ ಮಕ್ಕಳನ್ನು ನೋಡುತ್ತಿದ್ದೇವೆ. ನಮ್ಮ ಕೊಡಗು ದೇಶದಲ್ಲಿ ಸಹ ಈ ನಿದರ್ಶನಗಳು ತೋರಿ ಬರುವುದು ಬಹಳ ವ್ಯಸನಾತ್ಮಕವಾಗಿದೆ. ಹಲವು ಅಸಮಾಧಾನಕರ ಮತ್ತು ಅಸಂತೋಷ ಸನ್ನಿವೇಶಗಳು ಮನೆಯ ಸೌಮ್ಯ ಶಾಂತ ಜೀವನವನ್ನು ಕೆಡಿಸುವದರಿಂದ ಈ ರೀತಿಯ ದುಃಖ ಚಿಹ್ನೆಗಳು ನಮ್ಮ ಬಾಲಕರಲ್ಲಿ ಹೊರಸೂಸುತ್ತಿವೆ. ಉತ್ತಮ ವ್ಯಕ್ತಿಗಳನ್ನಾಗಿ ತಮ್ಮ ಮಕ್ಕಳನ್ನು ರೂಪಿಸಬೇಕೆಂಬ ಹಂಬಲ ಮಾತಾಪಿತೃಗಳಲ್ಲಿ ಇದ್ದರೆ ಈ ರೀತಿಯ ಶೋಚನೀಯ ಘಟನೆ ಎಂದೂ ಸಂಭವಿಸಲಾರದು. ಈಗಿನ ತರಗತಿಗಳಲ್ಲಿ ಮಕ್ಕಳು ಮಿತಿಮೀರಿ ಇರುತ್ತಿದ್ದರಿಂದ ಅಧ್ಯಾಪಕರಿಗೆ ಪ್ರತಿಯೊಂದು ವಿದ್ಯಾರ್ಥಿಯ ವ್ಯಕ್ತಿದೋಷಗಳನ್ನು ವಿಶದವಾಗಿ ಅರಿಯಲು ಸಾಕಷ್ಟು ಅವಕಾಶ ಮತ್ತು ವಿರಾಮ ಸಿಗುವುದಿಲ್ಲ. ಅಲ್ಪ ಪ್ರಮಾಣದ ಕಳ್ಳತನ ಅಭ್ಯಾಸಗಳು, ಸಿಂಗಾರಕ ಮತ್ತು ದೈನಂದಿನ ಕರ್ತವ್ಯಗಳಲ್ಲಿ ಜಿಗುಪ್ಸೆ, ಬುದ್ಧಿಮಾಂದ್ಯ ಮಕ್ಕಳಲ್ಲಿ ತಲೆದೋರುತ್ತಿರುವುದನ್ನು ತಂದೆತಾಯಿಗಳ ಕರುಣಾಮಯ ಸ್ವಭಾವವು ನಿರ್ಮೂಲ ಮಾಡಬಹುದು. ಈ ರೀತಿಯ ಪವಿತ್ರ ಕಾರ್ಯದಲ್ಲಿ ಮಾತಾಪಿತೃಗಳು ನಿರಂತರವಾದರೆ ಶಾಲಾ ಮಾತೆಯು ಪಾದಸೇವೆ ಮಾಡಿದಂತಾಗಿ ಮಹತ್ತಾದ ಸಹಾಯ ನೀಡಿದಂತಾಗುತ್ತದೆ.

ಮನೆಯಲ್ಲಿ ಮಕ್ಕಳಿಗೆ ತಮ್ಮ ಕಲ ನೈಪುಣ್ಯತೆಗಳನ್ನಾಗಲೀ ತಾವು ಗಳಿಸಿದಿರುವ ಕೈಗಾರಿಕೆಯನ್ನಾಗಲೀ ಕುಶಲ ವಿದ್ಯೆಯೋಪಾದಿಯಲ್ಲಿ ಮಕ್ಕಳಿಗೆ ಅಭ್ಯಾಸಿಸಬೇಕು. ವಿರಾಮದ ವೇಳೆಯಲ್ಲಿ ಹೀಗೆ ಮಾಡಿದರೆ ಬಾಲಕರ ಎಳೇ ಮನಸ್ಸಿನಲ್ಲಿ ಉತ್ಪಾದನಾ ಶಕ್ತಿ ಪ್ರಚಲಿತವಾಗವುದು. ಒಂದು ರಾಗ ಸಂಗೀತದಲ್ಲಿ ಆಸಕ್ತಿ ತೋರಿಸಬಹುದು. ಮತ್ತೊಂದು ಏನಾದರೊಂದು ಗುಡಿ ಕೈಗಾರಿಕೆಯಲ್ಲಿ ಅಭಿರುಚಿಯನ್ನು ಸೂಚಿಸಬಹುದು. ಈ ರೀತಿಯ ಸ್ವಾಭಾವಿಕ ಮನೋಭಾವವನ್ನು ಅದಷ್ಟು ನಟ್ಟಿಗೆ ಶ್ರೇಷ್ಠ ರೀತಿಯಲ್ಲಿ ಅಭಿವೃದ್ಧಿಯಾಗುವಂತೆ ಮಾಡಬೇಕು. ಆದರೆ ಹಲವು ಪೋಷಕರು, ಈ ರೀತಿಯ ಸಕಲ ಆಕಾಂಕ್ಷೆಗಳನ್ನೆಲ್ಲಾ ನಿಗ್ರಹಿಸಿ ಬರೀ ಪುಸ್ತಕಗಳನ್ನು ಕಲಿಯುವುದು ತಪ್ಪು. ನೇಯುವುದು, ಬಡಗಿ ಕೆಲಸ, ಚಿತ್ರದ ಕೆಲಸ, ಕೆಲ್ಸಗಳ ತಯಾರಿ ಈ ಕೆಲವು ಸಾಮಾನ್ಯ ಗುಡಿ ಕೈಗಾರಿಕೆಗಳನ್ನು ಮಕ್ಕಳಿಗೆ ಕಲಿಸಬೇಕು. ನಮ್ಮ ಕೊಡಗಿನಲ್ಲಿ ಇದರ ಸಂಖ್ಯೆ ತುಂಬಾ ಇದೆ. ಇದರಿಂದ ಮಕ್ಕಳ ಘನತೆ ಕಡಿಮೆಯಾಗಲಿಕ್ಕಿಲ್ಲ. ಬದಲು ಜೀವನ [illegible]ವಾಗುವುದು. ನಮ್ಮ ಈಗಿನ ಕಾಂಗ್ರೆಸ್ ಸರ್ಕಾರದ ವೃತ್ತಿ ಶಿಕ್ಷಣ ಧೋರಣೆಯನ್ನು ನಾವೇ ಮನೆಯಲ್ಲಿ ಪ್ರಾರಂಭಿಸಬೇಕು. ಮಕ್ಕಳಲ್ಲಿ ಹೊರಹೊಮ್ಮುವ ಪ್ರವೃತ್ತಿ ಕಲಾಶಕ್ತಿಯನ್ನು ತಡೆಗಟ್ಟಿದರೆ ಆ ಶಕ್ತಿಯು ವಿವಿಧ ದುರ್ಮಾರ್ಗದಲ್ಲಿ ಪ್ರವಹಿಸಿ ತನ್ನ ನಾಶವಾಗಬಹುದು.

ಬಾಲಕಿಯರಿಗೆ ಮಾತೆಯರು ಗೃಹ ವಿಜ್ಞಾನವನ್ನು ಕಲಿಸಬೇಕಾಗಿದೆ. ಸ್ತ್ರೀಯರ ಜೀವಮಾನದಲ್ಲಿ ಮನೆಯ ಸುವ್ಯವಸ್ಥಿತ ಜ್ಞಾನ ಅವಶ್ಯಕವಾಗಿದೆ. ಸೇವಾ ದೃಷ್ಟಿ ಮಕ್ಕಳಲ್ಲಿ ನೆಲೆಸುವಂತೆ ಮಾತೆಯರು ಯತ್ನಿಸಬೇಕಾಗಿದೆ. ಮನೆಯು ಬಾಹ್ಯ ಜೀವನವು ಬರೀ ಸಾಮಾನ್ಯ ಮತ್ತು ಸ್ವಚ್ಛ ಸಮಾಜ ಸಮಾನತೆಯಾದ್ದರಿಂದ ಸಾರ್ವಜನಿಕ ಸೇವಾದೃಷ್ಟಿ ಮಕ್ಕಳಲ್ಲಿ ಅತೀ ತೀಕ್ಷ್ಣವಾಗಿರಬೇಕು. ಕೋಮುವಾರು ಭಾವನೆ, ಪಕ್ಷ ಧೋರಣೆ, ಉದ್ಭವವಾಗದ ಹಾಗೂ ಮತ್ತು ಇಡೀ ಮಾನವ ಕೋಟಿಯ ಸೇವಾ ತತ್ಪರತೆ ಇರುವ ಮನೋಭಿಲಾಷೆ ಉಳ್ಳವರಾಗಿ ಮಕ್ಕಳ ತರಬೇತು ಮಾಡಬೇಕು.

ಮೇಲು, ಕೀಳು, ಉತ್ತಮ, ಅಧಮ ಎಂಬ ದುರಭಿಪ್ರಾಯಗಳು ಮಾಯವಾಗುವಂತೆ ಸರ್ವ ಮನೆಗಳು ಗ್ರಹಿಸಬೇಕು. ಈ ಅನರ್ಥ ಭಾವನೆ ಶಾಲಾ ಮಕ್ಕಳ ಒಮ್ಮತದಲ್ಲಿಯೂ, ಐಕ್ಯತೆಯಲ್ಲಿ ದೊಡ್ಡ ತೊಡಕಾಗಿ ಪರಿಣಮಿಸಿದೆ. ಸಮಾನತೆ, ಸಹೋದರ ಭಾವ, ಆತ್ಮಸಾಕ್ಷಿಯಾಗಿ ನೆಲೆಯುವಂತೆ ಮನೆಗಳಲ್ಲಿ ಬೋಧನೆಯಾಗಬೇಕು. ಅಧಿಕ ಲಾಭದ ಆಲಸೆ, ಬಚ್ಚಿಟ್ಟುಕೊಳ್ಳುವಿಕೆ, ಪರರನ್ನು ಸುಲಿಗೆ ಮಾಡುವಿಕೆ—ಇವೇ ಮೊದಲಾದ ಜೀವನದ ದುಷ್ಕೃತ್ಯಗಳ ವಿಫಲವನ್ನು ಅರುಹಬೇಕು. ಈ ದುರಭಿಪ್ರಾಯಗಳು, ಪರರ ನಿಜವಾದ ಹಕ್ಕು ಬಾಧ್ಯತೆಗಳ ಅರ್ಹತೆಗೆ ಅಡಚಣೆಯೆಂದು ತಿಳಿಸಬೇಕು.

ಸರ್ವರೂ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು. ಇಲ್ಲದಿದ್ದರೆ ರಾಷ್ಟ್ರಕ್ಕೆ ಕೇಡು ಬಂದ ಹಾಗಾಗುವುದು. ತಂದೆ ತಾಯಿಗಳು ತಮ್ಮ ಮಕ್ಕಳ ಮೇಲಿರುವ ಜವಾಬ್ದಾರಿಕೆಯನ್ನು ತಿಳಿದು ಕಡ್ಡಾಯವಾಗಿ, ಶಾಲೆಗೆ ಕಳುಹಿಸಿದರೆ ಸರಕಾರದ ಈಗಿನ ಸಾಮೂಹಿಕ ವಿದ್ಯಾ ಯೋಜನೆಯಲ್ಲಿ ಸಹಕರಿಸಿದಂತಾಗುವುದು.

ಪ್ರೌಢ ಮತದಾನದ ಹಕ್ಕನ್ನುಳ್ಳ ನಮ್ಮ ಸರ್ವಭೌಮತ್ವ ಪ್ರಜಾರಾಜ್ಯದ ನೂತನ ರಾಜ್ಯನಿಬಂಧನೆಯಲ್ಲಿ ಸಮಾನ ಹಕ್ಕುಗಳು ಸರ್ವರಿಗೂ ಇರುವದರಿಂದ ಸರಕಾರದ ಪ್ರತಿಯೊಂದು ಶೈಕ್ಷಣಿಕ ಚಟುವಟಿಕೆ ಯೋಜನೆಗಳಲ್ಲಿ ಸರ್ವ ಗೃಹಗಳು, ತಮ್ಮ ಅಚಲ ಸಹಕಾರವನ್ನು ನೀಡಬೇಕು. ಇವತ್ತಿನ ಮಕ್ಕಳು ನಾಳಿನ ಪೌರರು. ಅವರ ಮೇಲಿರುವ ಎಚ್ಚರ, ಜಾಗರೂಕತೆ, ನಮ್ಮ ಸ್ವತಂತ್ರ ರಾಷ್ಟ್ರದ ಭವಿಷ್ಯತ್ತಿನ ಭದ್ರತೆಗಾಗಿ ಎಂದು ನಾವು ತಿಳಿಯಬೇಕು.

ನಮ್ಮ ಸರಕಾರದ ಪಂಚವಾರ್ಷಿಕ ಯೋಜನೆಯಲ್ಲಿ ವಿದ್ಯಾಭಿವೃದ್ಧಿಗೆಂದು [illegible] ಕೋಟಿ ರೂಪಾಯಿ ಖರ್ಚು ಮಾಡಲು ನಿಶ್ಚಯಿಸಿದ್ದು ತುಂಬಾ ಶ್ಲಾಘನೀಯವಾದದ್ದು. ತಲೆಯೊಂದರ ಐದು ವರ್ಷಗಳಿಗೆ ಬರೀ ನಾಲ್ಕು ರೂಪಾಯಿ ಬಂದರೂ ಏರುತ್ತಿರುವ ಜನಸಂಖ್ಯೆಯಲ್ಲಿ ಮತ್ತು ಆರ್ಥಿಕ ದುಸ್ಥಿತಿಯಿಂದ ಚೀತರಿಸಿಕೊಳ್ಳುತ್ತಿರುವ ನಮ್ಮ ಭಾರತದಲ್ಲಿ, ಈ ಮೊಬಲಗು ಗಮನಾರ್ಹವಾದದ್ದೇ ಸರಿ.

ನಮ್ಮ ಕೊಡಗಿನಲ್ಲಿ ಪ್ರಾರಂಭಿಸುವ ಸಾಮೂಹಿಕಾಭಿವೃದ್ಧಿ ಯೋಜನೆಯಲ್ಲಿ ಶಿಕ್ಷಣ ರಂಗಕ್ಕೆ ಸಾಕಷ್ಟು ಹಣ ವಿನಿಯೋಗಿಸಿದ್ದು ತುಂಬಾ ಸಂತೋಷಕರ. ಈ ಪವಿತ್ರ ಕಾರ್ಯದಲ್ಲಿ ನಮ್ಮ ಮನೆಗಳೆಲ್ಲಾ ಸಹಕರಿಸಿ ಮುಂದಿನ ಪೀಳಿಗೆಯನ್ನು ಯೋಗ್ಯರನ್ನಾಗಿ ಮಾಡಬೇಕು.

ಜೈ ಹಿಂದ್.

———

Licence No. 60.
Licenced to Post without Prepayment.

Reg. No. M. 1590.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಳಿಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಕು ೨೨-೮-೧೯೫೨ನೇ ಶುಕ್ರವಾರ | ಸಂಚಿಕೆ ೧೨

THE JUBILEE INSURANCE CO., Ltd.

One of the very few in the feild of Insurance that has been declaring BONUS to its policy holders from its very insception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmand Road, Bangalore.

Our Chief Agents:-THE ORIENTAL ENTERPRISES, BANGALORE I.

ಜುಬಿಲಿ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೆದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:—ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,
41-C, ರಿಚ್‌ಮಂಡ್ ರೋಡ್, ಬೆಂಗಳೂರು 1.

21

॥ ಸಂಘಟಿತ ಪ್ರಯತ್ನ ॥

ಗಾಂಧೀಜಿಯವರ ಹೆಸರಿನ ಉಪಯೋಗ ಮಾಡಿಕೊಳ್ಳುವ ವಿಷಯದಲ್ಲಿ ನಾನು ವ್ಯಕ್ತಪಡಿಸಿರುವ ಅಭಿಪ್ರಾಯದ ಪಡೆಯಾಗಿ, ವಿವಿಧ ಜನರ ಮತ್ತು ವಿಚಾರಗಳ—ಒಂದೇ ಒಂದು ಸುಸ್ಪಷ್ಟ ಮಾತು, ಕಾರ್ಯಯೋಗ್ಯವಾದ ಕಾರ್ಯಕ್ರಮಕ್ಕಾಗಿ ನಾವೆಲ್ಲ ಒಕ್ಕಟ್ಟಾಗಿ ಸಂಘಟಿತ ಪ್ರಯತ್ನ ಮಾಡಬೇಕೆಂಬ ವಿನಂತಿಗೆ ನನ್ನ ಸಂಪೂರ್ಣ ಅನುಮತಿಯಿದೆ ಮತ್ತು ಶ್ರೀ ಸೈನ್ಯ ಒಂದು ಹೆಜ್ಜೆ ಮುಂದೆ ಹೋಗಿ ಗಾಂಧೀ ಗುಂಪೆಂದು ಹೇಳಿಕೊಳ್ಳುವವರು ಒಂದಾಗಬೇಕು ಎಂದು ಕೇಳಿಕೊಳ್ಳುವದಲ್ಲದೆ ಗಾಂಧೀ ಗುಂಪಿಗೆ ಸೇರಿರಲಿ, ಬೇರೆ ಯಾವುದೊಂದು ಗುಂಪಿಗೆ ಸೇರಲಿ, ಅಥವಾ ಯಾವ ಗುಂಪಿಗೂ ಸೇರದಿರುವವರಾಗಲಿ—ಜನಸೇವೆ ಮಾಡಬೇಕೆನ್ನುವ ಪ್ರತಿಯೊಬ್ಬರೂ ಒಂದೆಡೆ ಸೇರಬೇಕೆಂದು ಕೇಳಿಕೊಳ್ಳುತ್ತೇನೆ. ವಿವಿಧ ತತ್ವ ಮತ್ತು ಅಭಿಪ್ರಾಯಗಳ ಬಗ್ಗೆ ಬೇಕಾದಷ್ಟು ಭಿನ್ನಾಭಿಪ್ರಾಯಗಳಿದ್ದರೂ ಇಡೀ ರಾಷ್ಟ್ರವೇ ಒಂದೇ ಅಭಿಪ್ರಾಯವನ್ನು ಹೊಂದಿರುವ ಮತ್ತು ಸಕಲರೂ ಕೂಡಿ ಕೆಲಸ ಮಾಡಬಹುದಾದ ಕೆಲ ಸರ್ವಸಾಮಾನ್ಯ ವಿಷಯಗಳಿರಲೇಬೇಕು.

ಇನ್ನೊಂದು ಬಿನ್ನಹ ಮಾಡಿಕೊಳ್ಳುತ್ತೇನೆ. ನಮ್ಮ ದೇಶವನ್ನು ಕಮ್ಯೂನಿಜಂ ಅಥವಾ ಅಮೇರಿಕನಿಜಂ ಆಕ್ರಮಿಸುತ್ತದೆ ಎಂಬ ಅಂಜಿಕೆಯನ್ನು ತೊಡೆದುಹಾಕೋಣ. ನಾವು ಒಕ್ಕಟ್ಟಿನಿಂದ ಕೆಲಸ ಮಾಡದಿದ್ದರೆ ಇವುಗಳಲ್ಲೊಂದು ಅಥವಾ ಎರಡೂ ನಮ್ಮ ದೇಶವನ್ನು ಆಕ್ರಮಿಸಬಹುದು ಎಂಬ ಅಂಜಿಕೆಯಿಂದ ನಾವು ಒಕ್ಕಟ್ಟಾಗಿ ಕೆಲಸ ಮಾಡಬೇಕು ಎಂದಲ್ಲ. ಸದ್ಯದ ಕಷ್ಟದಾಯಕ ಪರಿಸ್ಥಿತಿಯಿಂದ ನಮ್ಮನ್ನೂ ನಮ್ಮ ಜನರನ್ನೂ ಮೇಲಕ್ಕೆತ್ತುವದರ ಸಲುವಾಗಿ ನಾವೆಲ್ಲ ಒಕ್ಕಟ್ಟಾಗಿ ಸಂಘಟಿತ ಪ್ರಯತ್ನ ಮಾಡುವದು ನಮ್ಮ ಕರ್ತವ್ಯವಾಗಿದೆ. ಕಮ್ಯೂನಿಜಂ ಮತ್ತು ಅಮೇರಿಕನಿಜಂ ಎರಡೂ ಈಗ ನಮ್ಮಲ್ಲಿ ನಮ್ಮ ಜೊತೆಯಲ್ಲಿ ಇವೆ. ಅದರಂತೆ ನಮ್ಮದೇ ಆದ ಜಾತೀಯವಾದ ಹಾಗೂ ಇತರ 'ಇಜಂ'ಗಳೂ ನಮ್ಮ ಜೊತೆಯಲ್ಲಿ ಇವೆ. ಇವೆಲ್ಲವುಗಳ ಪ್ರವಾದಿಗಳು ನಮ್ಮ ಜನರಲ್ಲಿಯೇ ಇದ್ದಾರೆ. ಇವೆಲ್ಲವುಗಳಲ್ಲಿ ನಾವು ಅಲಕ್ಷಿಸಲು ಸಾಧ್ಯವಿಲ್ಲದ ಕೆಲ ವಿಚಾರಗಳಿವೆ; ಮತ್ತು ಅವುಗಳಲ್ಲಿ ಅಪಾಯಕರವಾದ ಕೆಲ ವಿಚಾರಗಳೂ ಇವೆ. ಅವುಗಳಿಗೆ ಅಂಜುವದಾಗಲಿ ಅಥವಾ ಅಸಹಾಯಕರಂತೆ ಅವುಗಳಿಗೆ ಬಲಿಯಾಗುವದಾಗಲಿ ನಮಗೆ ಸಹಾಯಕವಾಗದು. ನಮ್ಮ ಪ್ರೇಮ ಮತ್ತು ಅಹಿಂಸೆಗಳಲ್ಲಿ ಏನಾದರೂ ಪರಿಣಾಮಕಾರಕ ಶಕ್ತಿಯಿರುವದಾದರೆ ನಾವು ಈ ವಿಷಯದನ್ನು ಸತ್ವಹೀನಗೊಳಿಸಿ ಅವುಗಳಲ್ಲಿ ಪ್ರತಿಯೊಂದರಲ್ಲಿರುವ ಸತ್ಯ ಹಾಗೂ ಹಿತಕಾರಿ ಅಂಶವನ್ನು ಕಂಡುಹಿಡಿಯಬೇಕು.

ಪ್ರಬಲವಾದೊಂದು ರಾಷ್ಟ್ರೀಯ ಪ್ರಯತ್ನವನ್ನು ಕೂಡುವದಕ್ಕಾಗಿ ನಾವೆಲ್ಲ ಒಂದಾಗಬೇಕು; ಒಕ್ಕಟ್ಟನ್ನು ಸಾಧಿಸಲು ಅಹಿಂಸೆಯನ್ನು ಬೆಳೆಸಬೇಕು; ನಾವು ಪ್ರೇಮವನ್ನು ಮೈಗೂಡಿಸಿಕೊಂಡರೆ ಅಹಿಂಸೆಯನ್ನು ಬೆಳೆಸಬಹುದು. ಎಲ್ಲ ಗುಂಪುಗಳ ಬಗ್ಗೆ ಅಥವಾ ಯಾವುದೊಂದು ವಿಶಿಷ್ಟ ಗುಂಪಿನ ಬಗ್ಗೆ ವಿಚಾರ ಮಾಡಿದರೂ, ಕಷ್ಟ ದುಃಖಗಳಿಂದ ಜನಹಿತ ಪ್ರಬಲ ಪ್ರಯತ್ನ ಮಾಡುವದರಲ್ಲಿ ನಾವು ಅಯಶಸ್ವಿಗಳಾದರೆ ಅದು ಒಕ್ಕಟ್ಟಿನ ಅಭಾವದಿಂದಲೇ ಆಗಿರಬೇಕು; ಸಂಬಂಧಿಸಿದ ಗುಂಪು ಅಥವಾ ಗುಂಪುಗಳಲ್ಲಿ ಅಹಿಂಸೆಯ ಲೋಪವಿತ್ತೆಂಬುದೇ ಅದರರ್ಥ; ಗುಂಪು ಅಥವಾ ಗುಂಪುಗಳಲ್ಲಿಯ ಜನರಲ್ಲಿ ಪ್ರೇಮ—ಸ್ನೇಹಗಳಿಲ್ಲವೆಂದೇ ಅದರ ತಾತ್ಪರ್ಯ.

ಸಕಲರೂ ಮನಸಾರೆ ಒಪ್ಪಿಕೊಳ್ಳುವ ಒಂದು ಸಾಮಾನ್ಯ ಕಾರ್ಯಕ್ರಮವನ್ನು ಹುಡುಕಿಕೊಳ್ಳುವದು ಅಶಕ್ಯವೇನಲ್ಲ. ಆದರೆ ಗುಂಪಿನ ಸದಸ್ಯರಲ್ಲಿ ಪ್ರೇಮ—ಸ್ನೇಹಗಳಿಲ್ಲದಿದ್ದರೆ ಸಾಮಾನ್ಯ ಕಾರ್ಯಕ್ರಮವು ಪ್ರಬಲ ಪ್ರಯತ್ನವನ್ನು ಪ್ರಚೋದಿಸಲಾರದು. ಆಳವಾಗಿ ವಿಚಾರ ಮಾಡಿದರೆ ಭಾರತ ಅಥವಾ ಅದರಲ್ಲಿಯ ಪರಿಣಾಮಕಾರಿಯಲ್ಲದ ಗುಂಪುಗಳು (ಸರಕಾರವನ್ನೂ ಇದರಲ್ಲಿ ಸೇರಿಸಬಹುದು) ಬುದ್ಧಿಶಾಲಿಗಳ ಕೊರತೆಯಿಂದ ಪರಿಣಾಮಕಾರಿ ಕೆಲಸ ಮಾಡುತ್ತಿಲ್ಲ ಎಂದು ಕಂಡುಬರುವದಿಲ್ಲ. ಆದರೆ ಅವುಗಳ ಸದಸ್ಯರಲ್ಲಿ ಪ್ರೇಮ ಸ್ನೇಹಗಳಿಲ್ಲದ ಮೂಲಕ ಅವುಗಳ ಕಾರ್ಯ ಯಶಸ್ವಿಯಾಗುವದಿಲ್ಲವೆಂಬುದು ಕಂಡುಬರುತ್ತದೆ. ನಮ್ಮಲ್ಲಿ ಬೇಕಷ್ಟು ಬುದ್ಧಿವಂತಿಕೆಯಿದ್ದರೂ ಅದನ್ನು ನಾವು ಜೀರ್ಣಿಸಿಕೊಂಡಿಲ್ಲ ಮತ್ತು ನಾವು ಅದರ ಬಗ್ಗೆ ವೃಥಾಭಿಮಾನ ತಾಳುವಂತಾಗಿದೆ. ಇದರಿಂದ ಸಹಕಾರದ ಬೆಳವಣಿಗೆಗೆ ಅಗತ್ಯವಾದ ವಿನಯಶೀಲತೆ ಮತ್ತು ನಿರಹಂಕಾರಗಳು ನಮ್ಮಲ್ಲಿರುವದಕ್ಕೆ ಆತಂಕವಾಗಿದೆ ಮತ್ತು ಸಹಕಾರದ ಕೊರತೆಯಿಂದ ಎಲ್ಲ ಪ್ರಯತ್ನಗಳೂ ವ್ಯರ್ಥವಾಗಿ ಮಾಡಿದ ವೆಚ್ಚವೆಲ್ಲ ಅಪವ್ಯಯವಾಗುತ್ತದೆ.

ಆದರೆ ಈ ಮಾತುಗಳು ನನ್ನ ಹೃದಯದ ನಿರಾಶೆಯ ನುಡಿಗಳು ಎಂದು ಭಾವಿಸಲ್ಪಡದಿರಲಿ. ಇದ್ದ ಪರಿಸ್ಥಿತಿಯನ್ನು ಕುರಿತು ಹೇಳಿದ ಮಾತುಗಳವು. ಆಚಾರ್ಯ ವಿನೋಬಾರ ಚಳವಳಿಯಲ್ಲಿ ದೇಶದಲ್ಲಿ ಹೊಸ ವಾತಾವರಣ ಉಂಟಾಗುತ್ತಿರುವದರ ಲಕ್ಷಣಗಳು ನನಗೆ ಈಗಾಗಲೇ ಕಂಡುಬರುತ್ತಿವೆ. ಉತ್ತಮವಾದುದನ್ನು ಸಾಧಿಸುವ ಬದಲಾವಣೆಯನ್ನು ಅದು ಸೂಚಿಸುತ್ತದೆ. ಆದುದರಿಂದ ಭೂದಾನ ಯಜ್ಞವನ್ನು ಸಾಂಗಗೊಳಿಸಲು ನಾವು ಗಾಂಧಿ ಗುಂಪಿನವರಿರಲಿ ಅಥವಾ ಬೇರೆ ಗುಂಪಿನವರಿರಲಿ, ಎಲ್ಲರೂ ಒಟ್ಟಾಗಿ ಶ್ರಮಿಸೋಣ.

ಈ ಒಂದು ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿಸಲ್ಪಟ್ಟಲ್ಲಿ ಗಾಂಧೀಜಿಯ ಸ್ವರಾಜ್ಯ ಸಾಧನೆಯ ಮಾರ್ಗವು ಸುಗಮವಾದೀತು ಮಾತ್ರವಲ್ಲ, ನಮ್ಮನ್ನೆಲ್ಲ ಪ್ರೇಮ ಬಂಧನದಲ್ಲಿ ಕಟ್ಟಿಹಾಕೀತು. ಈ ಕಾರ್ಯಕ್ರಮದಲ್ಲಿ ನಮ್ಮೆಲ್ಲರ ಶಕ್ತಿ ಸಾಹಸಗಳನ್ನು ಕೇಂದ್ರೀಕರಿಸೋಣ.

ಕಿ. ಘ. ಮಶ್ರುವಾಲಾ.

ಅಪಾಯದ ಭವಿಷ್ಯ

ಈಜಿಪ್ತದ ಪ್ರಖ್ಯಾತ ಜ್ಯೋತಿಷಿಯಾದ ಮಹಮ್ಮದ ಯೂಸೂಫ ಎಲ್ ಮಿನಿಯಾವಿ ಎಂಬವನು ಜಾಗತಿಕ ಭವಿಷ್ಯವನ್ನು ಮೊನ್ನೆ ಸಾರಿದ್ದಾನೆ. ಅವನ ಹೇಳಿಕೆ ಕೆಳಗಿನಂತಿದೆ:—

ಈಜಿಪ್ತದಲ್ಲಿ

ಈಜಿಪ್ತದಲ್ಲಿ ಮುಸಲ್ಮಾನ ಬಂಧುವರ್ಗವು (ಮೊಸ್ಲೆಮ್ ಬ್ರದರ್‌ಹುಡ್) ರಾಜಕೀಯ ರಂಗದಲ್ಲಿ ಮೇಲೆ ಬಂದು ತನ್ನ ಪ್ರಭಾವ ಬೀರುವದು.

ಈಜಿಪ್ಟ ಮತ್ತು ಬ್ರಿಟನ್‌ಗಳ ನಡುವೆ ಸುಯೇಜ ಕಾಲುವೆ ಮತ್ತು ಸೂಡಾನಗಳ ಒಡೆತನದ ಬಗ್ಗೆ ಮಾತುಕತೆಗಳು ನಡೆದು ನಾಲ್ಕು ತಿಂಗಳು ಅಲಿಮೆಹರನಿಗೆ ಗೆಲುವು ಬರುವುದು. ಈಜಿಪ್ತದಿಂದ ಬ್ರಿಟಿಷ್ ಸೈನ್ಯ ಹೊರಬೀಳಬೇಕೆಂದೂ, ಸೂಡಾನವು ಈಜಿಪ್ತದ ಅಧಿಕಾರಕ್ಕೆ ಒಳಗಾಗಬೇಕೆಂದೂ ಈಜಿಪ್ತ ಬ್ರಿಟನ್ನುಗಳ ಒಡಂಬಡಿಕೆಯಾಗಿ ಎರಡೂ ರಾಷ್ಟ್ರಗಳು ಅಂಕಿತ ಹಾಕುವವು.

ಒಮ್ಮೆಂದೊಮ್ಮೆ ಅಲಿ ಮೆಹರ ಮುಖ್ಯ ಮಂತ್ರಿ ಪದಕ್ಕೆ ರಾಜೀನಾಮೆ ಕೊಡುವರು. ಮತ್ತು ಕೆಲದಿನಗಳ ಮೇಲೆ ಮತ್ತೆ ಮೊದಲಿಗಿಂತಲೂ ಹೆಚ್ಚು ಪ್ರಭಾವಶಾಲಿಗಳಾಗಿ ಅಧಿಕಾರ ಸೂತ್ರ ಹಿಡಿದು ಅನೇಕ ವರ್ಷಗಳ ವರೆಗೆ ಆಡಳಿತ ನಡೆಸಿ ಈಜಿಪ್ತದ ಉದ್ಧಾರ ಮಾಡುವರು.

ಭಾರತದಲ್ಲಿ

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಯುದ್ಧವಾಗುವ ಸಂಭವವಿದೆ.

ದೂರಪ್ರಾಚ್ಯದಲ್ಲಿ

ಮಂಚೂರಿಯಾದ ಮೇಲೆ ಅಮೇರಿಕೆಯ ವಿಮಾನಗಳು ಹೆಚ್ಚುಹೆಚ್ಚು ಪ್ರಮಾಣದಲ್ಲಿ ಬಾಂಬು ದಾಳಿ ಮಾಡುವದರಿಂದ ಪರಿಸ್ಥಿತಿ ತೀರ ವಿಕೋಪಕ್ಕೆ ಹೋಗುವದು. ಮತ್ತು ಕೊರಿಯಾದಲ್ಲಿ ಅಮೇರಿಕೆಗೆ ಅತೀವ ಹಾನಿಯಾಗುವದು.

ಇರಾಣದಲ್ಲಿ

ಇರಾಣದಲ್ಲಿ ಮುಖ್ಯ ಮಂತ್ರಿ ಡಾ. ಮೊಸಾಡಿಕರು ಮುಖ್ಯ ಮಂತ್ರಿ ಪದಕ್ಕೆ ರಾಜಿನಾಮೆ ಕೊಡುವರು. ಅದರ ಪರಿಣಾಮವು ಅರಸೊತ್ತಿಗೆಯ ಮೋಸ ಆಗುವದು.

ಚಿಯಾಂಗರ ಆಗಮನ—ನಿರ್ಗಮನ

ಚಿಯಾಂಗ ಕೈಶೇಕರು ಮತ್ತೊಮ್ಮೆ ರಾಜಕೀಯ ಕ್ಷಿತಿಜದಲ್ಲಿ ಮೇಲಕ್ಕೆ ಬಂದು ಅಕಸ್ಮಾತ್ತಾಗಿ ಮಾಯವಾಗುವರು.

———

ಅಮೇರಿಕ ಭಾರತಕ್ಕೆ ಕೊಟ್ಟ ಆರ್ಥಿಕ ಸಹಾಯದ ನಿಜಾಂಶಗಳು.

ಅಮೇರಿಕಾವು ಭಾರತಕ್ಕೆ ಕೊಟ್ಟ ಆರ್ಥಿಕ ಸಹಾಯದ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಲಾಗುತ್ತಿದೆ. ಹೊಸ ಕಾರ್ಯಕ್ರಮದ ಮೂಲವನ್ನು ತಿಳಿಯಲು ಅನೇಕರು ಕುತೂಹಲಿಗಳಾಗಿದ್ದಾರೆ. ಕೆಲವರು ಅಪಾರ್ಥವನ್ನು ಕಲ್ಪಿಸಿ ಪ್ರಶ್ನೆಗಳನ್ನು ಕೇಳಿದ್ದಾರೆ.

ಅಮೇರಿಕಾ ಸರ್ಕಾರದ ಸುದ್ದಿ ಶಾಖೆಯು ಭಾರತ ಅಮೇರಿಕಾ ಸೌಹಾರ್ದತೆಗೆ ಸಂಬಂಧಪಟ್ಟ ಈ ಪ್ರಶ್ನೆಗಳಿಗೆ ಉತ್ತರ ಕೊಡಲು ಈ ಹೊಸ ಉದ್ಯಮದಲ್ಲಿ ಪ್ರಯತ್ನಿಸುವರು.

ಭಾರತವನ್ನು ಬಿಟ್ಟು ಉಳಿದ ಯಾವುದಾದರೂ ದೇಶಗಳಿಗೆ ಅಮೇರಿಕಾವು ಸಹಾಯ ಮಾಡುತ್ತಿದೆಯೇ?

ಹೌದು ಅಮೇರಿಕದ ಸಹಾಯವು ಎರಡು ರೀತಿಯಲ್ಲಿದೆ. ಮೊದಲನೆಯದು ಮಿಲಿಟರಿ ಸಹಾಯ - ಈ ಸಹಾಯವನ್ನು ಮುಖ್ಯವಾಗಿ ಯುರೋಪಿನ ದೇಶಗಳಿಗೆ ಕೊಟ್ಟಿದೆ. ಕಾರಣ ಸೋವಿಯಟ್ ದಾಳಿಯ ಹೆದರಿಕೆ. ಯುದ್ಧ ಸಾಮಗ್ರಿಗಳನ್ನಲ್ಲದೆ ಇನ್ನೂ ಆರ್ಥಿಕ ಸಹಾಯವನ್ನು ಈ ದೇಶಗಳಿಗೆ ಅಮೇರಿಕಾವು ಕೊಡುತ್ತಿರುವುದು, ಅಮೇರಿಕ ರಕ್ಷಣಾ ಶಾಖೆಯವರು ಮಿಲಿಟರಿ ಸಹಾಯವನ್ನು ಕೊಡುವರು. ಪರಸ್ಪರ ರಕ್ಷಣಾ ನಿಧಿಯವರು ಆರ್ಥಿಕ ಸಹಾಯವನ್ನು ನೀಡುವರು. ಎರಡನೆಯ ವಿಧದ ಸಹಾಯವು ಭಾರತಕ್ಕೆ ಕೊಟ್ಟಿರುವಂತಹದು. ಹಿಂದುಳಿದ ರಾಷ್ಟ್ರಗಳಿಗೆ ಕೊಡುವ ಸಹಾಯದಲ್ಲಿ ಇದು ಬರುವುದು. ರೋಗ, ಬಡತನ, ನಿರುದ್ಯೋಗ, ಅನಕ್ಷರತೆ, ಮೂಢನಂಬುಗೆಗಳನ್ನು ಹೋಗಲಾಡಿಸಿ ದೇಶವನ್ನು ಅಭಿವೃದ್ಧಿ ಮಾಡುವುದೇ ಈ ಸಹಾಯದ ಉದ್ದೇಶ.

ಈ ತರಹವಾದ ಆರ್ಥಿಕ ಸಹಾಯವನ್ನು ಅಮೇರಿಕವು ೩೩ ದೇಶಗಳಿಗೆ ಕೊಡುತ್ತಿದೆ. ಅವ್ಯಾವುವೆಂದರೆ, ಅಫ್ಘಾನಿಸ್ಥಾನ, ಬೋಲಿವಿಯ, ಬ್ರೆಜಿಲ್ ಚಿಲಿ, ಕೊಲಂಬಿಯ, ಕೋಸ್ಟರೀಕಾ, ಕ್ಯೂಬ, ದಿ ಡೊಮಿನಿಕನ್ ರಿಪಬ್ಲಿಕ್, ಈಕ್ವಡರ್, ಈಜಿಪ್ಟ್, ಎಲ್ ಸಾಲ್ವೇಡಾರ್, ಇಥಿಯೋಪಿಯ, ಗ್ವಾಟೆಮಾಲಾ, ಹೈಟಿ, ಹೊಂಡುರಾಸ್, ಇಂಡಿಯಾ, ಇರಾನ್, ಇರಾಕ್, ಇಸ್ರೇಲ್, ಜೋರ್ಡಾನ್, ಲೆಬನಾನ್, ಲೈಬೀರಿಯ, ಲಿಬಿಯ, ಮೆಕ್ಸಿಕೋ, ನೇಪಾಲ್ ನಿಕರಾಗುವ, ಪಾಕಿಸ್ಥಾನ, ಪನಾಮ, ಪರಗ್ವೆ, ಪೆರು, ಸೌದಿ ಅರೇಬಿಯ, ಉರುಗ್ವೆ, ಮತ್ತು ವೆನೆಜುಲ.

ನಾಲ್ಕು ಅಂಶಗಳ ಯೋಜನೆಗೂ ಈ ಕಾರ್ಯಕ್ರಮಗಳಿಗೂ ಏನಾದರೂ ವ್ಯತ್ಯಾಸವಿದೆಯೇ?

ಹಿಂದುಳಿದ ರಾಷ್ಟ್ರಗಳಿಗೆ ಸಹಾಯ ಮಾಡುವ ಎಲ್ಲಾ ಸಹಾಯ ಯೋಜನೆಗಳಿಗೂ ಜನಸಾಧಾರಣವಾಗಿ ನಾಲ್ಕು ಅಂಶಗಳ ಯೋಜನೆ ಎಂದು ಕರೆಯಲಾಗುತ್ತಿದೆ. ಅಧ್ಯಕ್ಷ ಟ್ರೂಮನ್ನರು, ೧೯೪೯ನೇ ಜನವರಿ ೨೦ನೇ ತಾರೀಕು ನಾಲ್ಕು ಮುಖ್ಯ ಅಂಶಗಳನ್ನೊಳಗೊಂಡ ವಿದೇಶಾಂಗ ನೀತಿಯನ್ನು ಹೊರಗೆಡಹಿದರು, ಅಂದಿನಿಂದ ನಾಲ್ಕನೇ ಅಂಶವಾದ ಪ್ರಪಂಚಕ್ಕೆ ತಾಂತ್ರಿಕ ಸಹಾಯ ಕೊಡುವ ಅಂಶಕ್ಕೆ ನಾಲ್ಕು ಅಂಶಗಳ ಯೋಜನೆಯೆಂದು ಹೆಸರಾಯಿತು.

ಅನಂತರ ಅಮೇರಿಕ ಶಾಸನ ಸಭೆಯು ಕಾನೂನು ಮಾಡಿ ನಾಲ್ಕು ಅಂಶಗಳ ಯೋಜನೆಗೆ ಹಣವನ್ನು ಒದಗಿಸಿತು.

ಈ ನಿಧಿಯ ಸ್ವಲ್ಪ ಭಾಗವು ವಿಶ್ವಸಂಸ್ಥೆಯ ತಾಂತ್ರಿಕ ಸಹಾಯ ಯೋಜನೆಗೆ ಹೋಗುತ್ತದೆ. ವಿಶ್ವಸಂಸ್ಥೆಯಿಂದಲೂ ಭಾರತಕ್ಕೆ ಸಹಾಯ ನೀಡಲಾಗುತ್ತಿದೆ

ಹಾಗಾದರೆ ಟಿ. ಸಿ. ಎ. ಎಂದರೇನು? ತಾಂತ್ರಿಕ ಸಹಾಯ ಯೋಜನೆಯನ್ನು ಜಾರಿಗೆ ತರಲು ತಾಂತ್ರಿಕ ಸಹಕಾರ ಆಡಳಿತ ಸಮಿತಿಯನ್ನು ರಚಿಸಲಾಯಿತು. ಇದೇ ಟಿ ಸಿ. ಎ. ಇದು ಅಮೇರಿಕ ರಾಜ್ಯ ಇಲಾಖೆ (ವಿದೇಶಾಂಗ ಇಲಾಖೆ)ಯ ಕೈಕೆಳಗೆ ಕೆಲಸ ಮಾಡುತ್ತದೆ.

ಅಮೇರಿಕದ ಸಹಾಯ ಪಡೆಯುತ್ತಿರುವ ಯೋಜನೆಗಳು ಭಾರತದಲ್ಲಿ ಯಾವುವು? ಭಾರತದ ಪಂಚವಾರ್ಷಿಕ ಯೋಜನೆಯಲ್ಲಿನ ವ್ಯವಸಾಯಾಭಿವೃದ್ಧಿಗೆ ಅಮೇರಿಕವು ಹೆಚ್ಚು ಸಹಾಯವನ್ನು ಒದಗಿಸಿದೆ. ಏಕೆಂದರೆ ಭವಿಷ್ಯ ಭಾರತದ ಆರ್ಥಿಕ ಬೆಳವಣಿಗೆಯು, ಹೆಚ್ಚು ಆಹಾರ ಬೆಳೆಯುವುದರಲ್ಲಿದೆ. ಆದ್ದರಿಂದ ಅಮೇರಿಕದ ಸಹಾಯವು ಹೆಚ್ಚು ಆಹಾರ ಬೆಳೆಯಲು ಸಹಾಯ ಮಾಡುತ್ತದೆ.

ವ್ಯವಸಾಯಾಭಿವೃದ್ಧಿ ಮಾಡಲು ಅಮೇರಿಕವು ಭಾರತದಲ್ಲಿ ೧೧ ವಿಧವಾಗಿ ಸಹಾಯ ಮಾಡುತ್ತದೆ. ಹೀಗೆಂದು ಭಾರತದೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಇವುಗಳಲ್ಲಿ ಮುಖ್ಯವಾದುದು ಸಮಾಜ ವಿಕಾಸ ಕೇಂದ್ರಗಳ ಯೋಜನೆ–ಭಾರತದ ೧೬೫೦೦ ಹಳ್ಳಿಗಳ ೫೫ ಕೇಂದ್ರಗಳನ್ನು ತೆರೆಯಲಾಗಿದ್ದು ಸುಮಾರು ೨ ಲಕ್ಷ ಜನರ ಬೆಳವಣಿಗೆಯನ್ನೊಳಗೊಂಡಿದೆ. ಈ ಯೋಜನೆಯಿಂದ ಒಂದು ಕೋಟಿ ಜನರ ಅಭಿವೃದ್ಧಿಯಾಗುವುದು. ವ್ಯವಸಾಯದ ನೂತನ ವಿಧಾನಗಳನ್ನು ಕಲಿತು, ರೋಗಗಳನ್ನು ತಡೆಗಟ್ಟಿ ಆರ್ಥಿಕ ಬೆಳವಣಿಗೆಯನ್ನುಂಟುಮಾಡುತ್ತದೆ.

ಇದಾದ ನಂತರ ಇನ್ನೂ ಅನೇಕ ಇಂತಹ ಯೋಜನೆಗಳನ್ನು ಕೈಗೊಂಡು, ಅದಕ್ಕೆ ಬೇಕಾದ ಜನ ಮತ್ತು ಸಾಮಾನುಗಳನ್ನು ಅಮೇರಿಕವು ಒದಗಿಸುವುದು. ಸಮಾಜ ವಿಕಾಸವು ಎಲ್ಲ ದೃಷ್ಟಿಯಿಂದಾಗಬೇಕೆಂಬುದೇ ಉದ್ದೇಶ.

ಸಮಾಜ ಸೇವಕರನ್ನು ತರಬೇತು ಮಾಡುವುದು, ಮುಖ್ಯವಾದ ನೀರಾವರಿ ಯೋಜನೆಗಳಿಗೆ ಸಹಾಯ ಮಾಡುವುದು, ಟ್ಯೂಬ್ ವೆಲ್‌ಗಳನ್ನು ತೋಡುವುದು, ಒಳ್ಳೆಯ ಗೊಬ್ಬರವನ್ನು ತರಿಸುವುದು, ಕಬ್ಬಿಣ ಮತ್ತು ಉಕ್ಕನ್ನು ತರಿಸಿ ಕೊಡುವುದು, ಚಿಟ್ಟೆ ಹುಳಗಳನ್ನು ವಿನಾಶ ಮಾಡುವುದು, ನೆಲದ ಸಾರವನ್ನು ಅಂದಾಜು ಮಾಡುವುದು, ಮಲೇರಿಯ ರೋಗ ನಿವಾರಣೆ, ಅರಣ್ಯ ಸಂಪತ್ತಿನ ಸಂಶೋಧನೆಗೆ ಸಹಾಯ, ಮೀನು ಕೈಗಾರಿಕೆಗೆ ಸಹಾಯ, ಇವೇ ಮುಂತಾದ ಮುಖ್ಯ ಯೋಜನೆಗಳಿಗೆ ಭಾರತವು ಅಮೇರಿಕದಿಂದ ಸಹಾಯ ಪಡೆಯುತ್ತದೆ.

ಸಮಾಜ (ವಯಸ್ಕರ) ಶಿಕ್ಷಣ ಯೋಜನೆ ಮತ್ತು ಸೆಂಟ್ರಲ್ ಹೈಸ್ಕೂಲು ವಿದ್ಯಾರ್ಥಿಗಳು.

(ವಿದ್ಯಾ ಇಲಾಖೆಯಿಂದ)

ಈ ಯೋಜನೆಯು ಆಶ್ರಯದಲ್ಲಿ ಸಮಾಜದ ರಚನಾತ್ಮಕ ಕೆಲಸಗಳಿಗೆ ತುಂಬಾ ಅವಕಾಶಗಳನ್ನು ಕಲ್ಪಿಸಿಕೊಡಿದೆ. ಕೈಗೊಳ್ಳುವ ಅನೇಕ ಕೆಲಸಗಳಲ್ಲಿ ರೈತರಿಗೆ ವ್ಯವಸಾಯ ಕಾರ್ಯಗಳಲ್ಲಿ ಸಹಾಯ ಮಾಡುವುದು ಒಂದು ಮುಖ್ಯ ಕಾರ್ಯ. ಇದರಿಂದ ರೈತರಿಗೂ ಹಾಗೂ ವಿದ್ಯಾರ್ಥಿಗಳಿಗೂ ತುಂಬಾ ಪ್ರಯೋಜನವಿದೆ ಎಂಬುದನ್ನು ಸಾರ್ವಜನಿಕರಿಗೆ ವಿವರಿಸುವ ಆಗತ್ಯವಿಲ್ಲ. ರಚನಾತ್ಮಕ ಕೆಲಸಗಳಲ್ಲಿ ವಿದ್ಯಾರ್ಥಿಗಳ ಪಾತ್ರವು ಬಹು ಪ್ರಾಮುಖ್ಯವಾದುದು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಮುಖ್ಯೋಪಾಧ್ಯಾಯರ ಪ್ರೋತ್ಸಾಹದ ಮೇರೆಗೆ ೧೧ ವಿದ್ಯಾರ್ಥಿಗಳ ಒಂದು ಸಂಗಡವು ಅದೇ ಶಾಲೆಯ ಸ್ಕೌಟ್ ಮಾಸ್ಟರೂ ವಯಸ್ಕರ ಶಿಕ್ಷಣದ ಆಶ್ರಯದಲ್ಲಿ ತಾರೀಕು ೩-೮-೫೨ರಂದು ಕಳಕೇರಿ ನಿಡುಗಣೆ ಗ್ರಾಮಕ್ಕೆ ಬೇಸಾಯ ಕೆಲಸದಲ್ಲಿ ಸಹಾಯಕ್ಕೆ ಹೋಗಿದ್ದರು.

ಕಾರ್ಯಕ್ರಮ

ಪೂರ್ವ ಸಿದ್ಧತೆ—ಸೆಂಟ್ರಲ್ ಹೈಸ್ಕೂಲು ಸ್ಕೌಟು ಮಾಸ್ಟರು ಮತ್ತು ವಯಸ್ಕರ ಶಿಕ್ಷಣದ ಆರ್ಗನೈಜರೂ ಕಳಕೇರಿ ನಿಡುಗಣೆಗೆ ಹೋಗಿ ಪಟೇಲರನ್ನು ನಾಲ್ಕು ದಿನ ಮುಂಚಿತವಾಗಿ ಕಂಡು, ಅವರು ಹೋಗುವ ವಿಚಾರವನ್ನು ತಿಳಿಸಿ ನಾಟಿ ನೆಡಲು ಸಸಿ ತಯಾರಾಗಿರಬೇಕೆಂಬುದಾಗಿ ತಿಳಿಸಲಾಯಿತು. ಅಂತೆಯೇ ಬರುವ ವಿದ್ಯಾರ್ಥಿಗಳಿಗೂ ತಿಳುವಳಿಕೆ ಕೊಡಲಾಯಿತು.

ಪ್ರವಾಸ—೩-೮-೫೨ರಲ್ಲಿ ಎಲ್ಲರೂ ಬೆಳಿಗ್ಗೆ ೮-೩೦ ಗಂಟೆಗೆ ಹೈಸ್ಕೂಲು ಬಳಿ ಸೇರಿ ೯ ಗಂಟೆಗೆ ಪ್ರಯಾಣ ಬೆಳೆಸಿದರು. ೧೧ ಗಂಟೆಗಾಕ್ಕೆ ಕೆಲಸ ಮಾಡಬೇಕೆಂದಿದ್ದ ಗದ್ದೆಯ ಬಳಿ ತಲುಪಿದರು. ಹೋದವರಲ್ಲಿ ೬ ಮಂದಿ ನೇರ ನಾಟಿ ಕೆಲಸಗಾರರು. ಉಳಿದವರು ಆಗ ತಂದು ಕೊಡುವುದರ ಜೊತೆಗೆ ನಾಟಿ ನೆಡಲು ಅಭ್ಯಾಸಿಸಿದರು. ಶ್ರೀಗಳಾದ ಎಸ್. ಎಂ. ಈರಪ್ಪ, ಬೊಳ್ಳೇರ ಪೂಚಯ್ಯ ಮತ್ತು ಐಯ್ಯಪ್ಪ, ಇವರುಗಳ ಗದ್ದೆ ನಾಟಿ ಕೆಲಸ ಮಾಡಲಾಯಿತು. ಈ ಮೂವರ ಗದ್ದೆ ಅಂದಾಜು ೪೦ ಬಟ್ಟಿಯಾಗುವಷ್ಟು ವಿದ್ಯಾರ್ಥಿಗಳು ನಾಟಿ ಕೆಲಸ ಮಾಡಿದರು. ಸಮಯವನ್ನು ವ್ಯರ್ಥ ಮಾಡದೆ ನಾಲ್ಕು ಗಂಟೆಯ ವರೆಗೂ ಕೆಲಸ ಮಾಡಿ, ಐದು ಗಂಟೆಗೆ ವಾಪಸು ಹಿಂತಿರುಗಿದೆವು.

ಸಂಗಡವು ಗಮನದಲ್ಲಿಟ್ಟ ಮುಖ್ಯಾಂಶಗಳು—ಮಾತಿನಿಂದಾಗಲೀ ಇನ್ನಾವ ರೀತಿಯಿಂದಾಗಲೀ ಸಹಾಯಕ್ಕೆಂದು ಹೋಗುವವರಿಂದ ರೈತರಿಗೆ ತೊಂದರೆಯಾಗದಂತೆ ಮುಂಜಾಗ್ರತೆ ವಹಿಸಲಾಗಿತ್ತು. ಮಧ್ಯಾಹ್ನದ ಫಲಹಾರವನ್ನು ವಿದ್ಯಾರ್ಥಿಗಳೇ ತೆಗೆದುಕೊಂಡು ಹೋಗಿದ್ದರು. ಈಗಿನ ವಿದ್ಯಾಭ್ಯಾಸ ಕ್ರಮ ಸರಿಯಲ್ಲ. ಸರಿಯಲ್ಲದ ಕ್ರಮದಲ್ಲಿ ತರಬೇತಾದ ವಿದ್ಯಾರ್ಥಿಗಳ ವಿಚಾರದಲ್ಲಿ ಇದ್ದ ತಪ್ಪು ತಿಳುವಳಿಕೆ ಮಾಯವಾಗಿ ಕೈಕೆಲಸದ ಮಹಿಮೆಯನ್ನು ವಿದ್ಯಾರ್ಥಿಗಳು ತಿಳಿದಿದ್ದಾರೆಂಬುದಾಗಿ ಗ್ರಾಮಾಂತರದವರು ತಿಳಿಯುತ್ತಾರೆ. ಇತರ ವಿದ್ಯಾರ್ಥಿಗಳು ಜನರ ಜೀವನವನ್ನು ಅರಿತು ಅವರ ಕಷ್ಟ ಸುಖಗಳಲ್ಲಿ ಭಾಗಿಗಳಾಗುತ್ತಾರೆ. ಒಂದೊಂದು ದಿವಸ ಪ್ರಚಾರಕ್ಕಾಗಿಯಾಗಲೀ ಅಥವಾ ಹೊಗಳಿಕೆಗಾಗಲೀ ಬಲಿಯಾಗದೆ, ಕ್ರಿಯಾತ್ಮಕವಾಗಿ ಮಾಡಿ ತಮ್ಮ ಪಾಲಿನ ಸೇವೆಯನ್ನು ಮಾಡಲೇಬೇಕೆಂಬ ಅರಿವನ್ನು ವಿದ್ಯಾರ್ಥಿಗಳು ಮನಗಾಣುವರು. ಇಂಥಾ ಸಂದರ್ಭಗಳು ಹಿರಿಯರು ಕಿರಿಯರಿಗೆ ಕಲ್ಪಿಸಿ ಕೊಡುವುದು ಕರ್ತವ್ಯವಾಗಿದೆ

ಆಕ್ರಮಣವನ್ನೆದುರಿಸಲು ಸಿದ್ಧವಾಗಿರಬೇಕು.

ಭಾರತಕ್ಕೆ ಆಕ್ರಮಣವನ್ನು ಮಾಡುವ ಇಚ್ಛೆ ಇಲ್ಲದಿದ್ದರೂ ಎಲ್ಲಿಂದಾದರೂ ಅದರ ಮೇಲೆ ಆಕ್ರಮಣವಾದಲ್ಲಿ ಅದನ್ನು ಎದುರಿಸಲು ಭಾರತವು ಸಿದ್ಧವಾಗಿರಬೇಕೆಂದು ಭಾರತದ ಸಂರಕ್ಷಣಾ ಮಂತ್ರಿ ಶ್ರೀ ಗೋಪಾಲಸ್ವಾಮಿ ಐಯ್ಯಂಗಾರರು ಭಾರತದ ಸೇನೆಯನ್ನುದ್ದೇಶಿಸಿ ಭಾಷಣ ಮಾಡುತ್ತಾ ಹೇಳಿದರು. ದೇಶದ ಪ್ರಗತಿಯಾಗಬೇಕಾದರೆ ರಾಷ್ಟ್ರವು ಸುರಕ್ಷಿತವಾಗಿರಬೇಕು. ಜೊತೆಯಲ್ಲೇ ಜನರ ಆರ್ಥಿಕ ಉನ್ನತಿಯೂ ಆಗಬೇಕು ಎಂದರು. ಕಳೆದ ಐದು ವರ್ಷಗಳಲ್ಲಿ ಸೈನಿಕರೂ, ವಿಮಾನ ನೌಕಾ ಪಡೆಯವರೂ ಮಾಡಿದ ಕಾರ್ಯವನ್ನು ಅವರು ಕೊಂಡಾಡಿದರು.

ಶ್ರೀಮತಿ ದುರ್ಗಾಬಾಯಿ ಇವರಿಗೆ ಕಾರ್ಯದರ್ಶಿ ಪದ

ಯೋಜನಾ ಆಯೋಗದ ಸದಸ್ಯೆಯಾದ ಶ್ರೀಮತಿ ದುರ್ಗಾಬಾಯಿಯವರನ್ನು ಸಾರ್ವಜನಿಕ ಸಹಕಾರದ ರಾಷ್ಟ್ರೀಯ ಸಲಹಾ ಸಮಿತಿಯ ಕಾರ್ಯದರ್ಶಿಯನ್ನಾಗಿ ಆರಿಸಲಾಗಿದೆಯೆಂದು ಪತ್ರಿಕಾ ಪ್ರಕಟಣೆಯೊಂದರಿಂದ ತಿಳಿದು ಬರುತ್ತದೆ. ಪ್ರಧಾನಿ ನೆಹರೂರವರು ಈ ಯೋಜನಾ ಆಯೋಗದ ಅಧ್ಯಕ್ಷರು.

ಅಮೇರಿಕದ ವಿದ್ಯಾರ್ಥಿಗಳ ಸಂಪಾದನೆ

ಮೂರನೆಯ ಒಂದು ಭಾಗದಷ್ಟು ಕಾಲೇಜು ವಿದ್ಯಾರ್ಥಿಗಳು ಅಮೇರಿಕದ ಕ್ಕೆ ತಮ್ಮ ಬಿಡುವಿನಲ್ಲಿ ಕೆಲಸ ಮಾಡಿ ಸಂಪಾದಿಸಿ ತಮ್ಮ ಖರ್ಚನ್ನು ಕಳೆದುಕೊಳ್ಳುವರು.

ವಷ್ಟೋಕ್ ವಿಶ್ವವಿದ್ಯಾನಿಲಯದಲ್ಲಿ ಫಿಕೋಲಾಸ್ ಜೇಮ್ಸ್ ಪರೆಜಾ ಎಂಬ ವಿದ್ಯಾರ್ಥಿ ಇದ್ದಾನೆ. ಈತ ತಬ್ಬಲಿ. ಕಾರ್ಖಾನೆಯಲ್ಲಿ ಕೆಲಸ ಮಾಡುತ್ತ ಪದವೀಧರನಾದ ನಿಕೋಲಾಸನು, ಕಾಲೇಜಿನಲ್ಲಿ ಪ್ರಥಮ ಶ್ರೇಣಿಯಲ್ಲಿಯೇ ತೇರ್ಗಡೆಯಾದ. ಈ ವರ್ಷ ಆತನಿಗೆ ಫ್ರಾನ್ಸಿನ ವಿಶ್ವವಿದ್ಯಾನಿಲಯವೊಂದರಲ್ಲಿ ಓದಲು ಮೊದಲು ಫುಲ್‌ಬ್ರೈಟ್ ವಿದ್ಯಾರ್ಥಿ ವೇತನ ಕೊಡಲಾಗಿದೆ.

ನಿಕೋಲಾಸನಂತೆ ಇತರ ವಿದ್ಯಾರ್ಥಿಗಳೂ ಸಂಪಾದಿಸಿ ವಿದ್ಯೆ ಕಲಿಯುತ್ತಾರೆ. ಕಾಲೇಜು ಪುಸ್ತಕ ಭಂಡಾರಗಳಲ್ಲಿಯೋ, ಗುಮಾಸ್ತರಾಗಿಯೋ, ಅಥವಾ ಚಲನಚಿತ್ರಮಂದಿರಗಳಲ್ಲಿಯೋ ಕೆಲಸ ಮಾಡಿ ಹಣ ಸಂಪಾದಿಸುತ್ತಾರೆ. ವಿದ್ಯಾರ್ಥಿಗಳಿಗೆ ಕೆಲಸ ಕೊಡಲು ಅನುಕೂಲ ಮಾಡಿಕೊಡುವ ಕಚೇರಿಗಳು ಕಾಲೇಜುಗಳಲ್ಲಿವೆ. ನಿಕೋಲಾಸ ಮತ್ತು ಇತರ ಸಾವಿರಾರು ವಿದ್ಯಾರ್ಥಿಗಳು ತಮ್ಮ ಕಾಲೇಜು ಅಭ್ಯಾಸವನ್ನು ಈ ರೀತಿಯಲ್ಲಿ ಮುಗಿಸುತ್ತಾರೆ. ಇದೊಂದು ಅಮೇರಿಕದ ವಿದ್ಯಾರ್ಥಿ ಜೀವನದ ವೈಶಿಷ್ಟ್ಯ.

ಮಿಡಿತೆಗಳ ಹಾವಳಿ ತಡೆಯಲು

ಭಾರತ ಸರಕಾರವು ರೂಪಾಯಿ ೨೭,೩೮,೦೦೦ ಗಳನ್ನು ಮಂಜೂರು ಮಾಡಿದೆ. ಪಂಜಾಬು, ಪೆಪ್ಸು, ರಾಜಸ್ಥಾನ ಕಛ್, ಸೌರಾಷ್ಟ್ರ ಮತ್ತು ಮುಂಬಯಿ ಈ ಕಡೆಗಳಲ್ಲಿ ಸುಮಾರು ೬೬,೬೬೦ ಚದರ ಮೈಲು ವಿಸ್ತೀರ್ಣದ ಸ್ಥಳಗಳಲ್ಲಿ ಮಿಡಿತೆಗಳನ್ನು ನಿರೋಧಿಸುವ ಕಾರ್ಯಕ್ರಮ ಕೈಕೊಳ್ಳಲಾಗುವುದು. ವಿಮಾನಗಳ ಮತ್ತು ಮೋಟಾರು ವಾಹನಗಳ ಮೂಲಕವೂ ಈ 'ಯುದ್ಧ' ನಡೆವುದು.

ಭಾರತದಲ್ಲಿ ತಂಬಾಕು

ತಂಬಾಕು, ವಿದೇಶೀ ಸಂಪರ್ಕದಿಂದ ದೊರೆತು, ಧೂಮಪಾನದ ಪರಿಚಯವನ್ನು ಕೊಟ್ಟು, ಇಂದು ಲಕ್ಷಾಂತರ ಬಾಯಿಗಳಿಂದ ಹೊಗೆ ಕಾರಿಸುತ್ತಿರುವ ವಸ್ತು. ಇದರ ಉಪಯೋಗವೂ ಹೆಚ್ಚುತ್ತಿದೆ, ಅದಕ್ಕೆ ತಕ್ಕಂತೆ, ಉತ್ಪಾದನೆಯೂ ಅಧಿಕವಾಗುತ್ತಿದೆ. ವ್ಯಾಪಾರೀ ಬೆಳೆಗಳಲ್ಲಿ ಇದೂ ಒಂದು.

ವಿಭಜನೆಯ ನಂತರ ಭಾರತದಲ್ಲಿ ತಂಬಾಕಿನ ಖರ್ಚು ಒಂದೇ ಸಮನೆ ಹೆಚ್ಚಿದೆ. ೧೯೫೦ರ ವರ್ಷದಲ್ಲಿ, ೧೯೫೦ ಕ್ಕಿಂತ ೧೧,೦೦೦ ಟನ್ನುಗಳಷ್ಟು ಹೆಚ್ಚಿಗೆ ತಂಬಾಕು ಬೇರೆ ಬೇರೆ ರೂಪದಲ್ಲಿ ಖರ್ಚಾಗಿದೆ.

ಕಳೆದ ಮೂರು ವರ್ಷಗಳಲ್ಲಿ ಭಾರತವು ಅನುಕ್ರಮವಾಗಿ ೧,೬೦ ೦೦೦, ೨,೦೮ ೦೦೦ ಮತ್ತು ೨,೧೯,೮೦೦ ಟನ್ನುಗಳಷ್ಟು ತಂಬಾಕನ್ನು ಅಂಶಿಕವಾಗಿ ಉಪಯೋಗಿಸಿದೆ. ಭಾರತದಲ್ಲಿ ತಂಬಾಕು ಹಲವು ಬೇರೆ ಬೇರೆ ರೂಪಗಳಲ್ಲಿ ಉಪಯೋಗಿಸಲ್ಪಡುತ್ತದೆ. ಮುಖ್ಯವಾಗಿ ಮೆಲ್ಲುವುದರೊಂದಿಗೆ ಚಿನ್ನವಾಗ ಸಿಗರೇಟ್, ಬೀಡಿ, ಮತ್ತು ಚುಟ್ಟಗಳ ರೂಪದಲ್ಲಿ ಸೇದಲು, ಇನ್ನು ಹುಕ್ಕಾ ಮತ್ತು ನಶ್ಯಗಳ ರೂಪದಲ್ಲಿ ಹೀಗೆಲ್ಲಾ ಅದನ್ನು ಬಳಸುತ್ತಾರೆ.

ಭಾರತದಲ್ಲಿ ಸಿಗರೇಟ್ ತಯಾರಿಸುವ ೧೦ ದೊಡ್ಡ ಕಾರ್ಖಾನೆಗಳಿವೆ. ಅಲ್ಲಿ ವರ್ಷಕ್ಕೆ ಸುಮಾರು ೪,೫೦,೦೦,೦೦೦ ರಾತ್ತಲುಗಳಷ್ಟು ಕಚ್ಚಾ ತಂಬಾಕು ಖರ್ಚಾಗುತ್ತದೆ. ಇನ್ನು ಪರ್ಷಂಪ್ರತಿ ಸುಮಾರು ೯೩,೩೩,೩೫,೦೦೦ ರೂಪಾಯಿಯಷ್ಟು ಮೌಲ್ಯದ ೧,೫೬,೬೬,೬೦,೦೦,೦೦೦ ಬೀಡಿಗಳು ಈ ದೇಶದಲ್ಲಿ ತಯಾರಾಗುತ್ತವೆ.

ಕಚ್ಚಾ ತಂಬಾಕನ್ನು ಭಾರತವು ವಿದೇಶಗಳಿಗೆ ರಫ್ತು ಮಾಡುವುದಲ್ಲದೆ ಸಿಗರೇಟ್ ಮತ್ತು ಚುಟ್ಟಗಳನ್ನು ವಿದೇಶಗಳಿಂದ ಇಲ್ಲಿಗೆ ಆಮದು ಮಾಡಿಕೊಳ್ಳುತ್ತದೆ. ಕಳೆದ ವರ್ಷ ೧೦,೧೯,೯೦೧ ರೂಪಾಯಿ ಮೌಲ್ಯದ ೮೯೩,೩೨ ರಾತ್ತಲುಗಳಷ್ಟು ಸಿಗರೇಟುಗಳು ಮತ್ತು ರೂ. ೭,೨೧,೨೪೭ ರೂಪಾಯಿ ಮೌಲ್ಯದ ೧೧೨೬೨ ರಾತ್ತಲುಗಳ ಚುಟ್ಟಗಳೂ ಪರರಾಷ್ಟ್ರಗಳಿಂದ ಇಲ್ಲಿಗೆ ಆಮದಾಗಿದೆ.

ಪೋಲೀಸ್ ಅಧಿಕಾರಿಯ ಮನೆಯಿಂದ ಕಳವು

ತಿರುನೆಲ್ವೆಲ್ಲಿ ಜಿಲ್ಲೆಯ ಶಂಕರನ್ ಕೋವಿಲ್ ಎಂಬಲ್ಲಿ ತಾ. ೧೩ರ ರಾತ್ರಿ ಕೆಲವು ಧೂರ್ತರು ಪೋ|| ಸ|| ಸೂಪರಿಂಟೆಂಡೆಂಟರಾದ ವಿ. ಎಸ್. ಎಂ. ಪಾಂಡ್ಯರ ಮನೆಗೆ ನುಗ್ಗಿ ಅಲ್ಲಿಂದ ಸುಮಾರು ಐದು ಸಾವಿರ ರೂಪಾಯಿ ಬೆಲೆಬಾಳುವ ವಸ್ತುಗಳನ್ನು ಪಿಸ್ತೂಲಿನ ಬೆದರಿಕೆ ಹಾಕಿ ದೋಚಿಕೊಂಡು ಪರಾರಿಯಾದರು. ಪೋಲೀಸರು ಈ ಕುರಿತು ವಿಚಾರಣೆ ನಡೆಸುತ್ತಿರುವರು.

ಲಿಯಾಖತ್ ಕೊಲೆ ವರದಿ ಪ್ರಕಟಿಸಿರಿ.

'ನನ್ನ ತಂದೆಯ ಕೊಲೆಯ ವರದಿಯನ್ನು ಪ್ರಕಟಿಸಿರಿ' ಎಂದು ಪಾಕಿಸ್ತಾನ ಸರಕಾರವನ್ನು ಪಾಕಿಸ್ತಾನದ ಮಾಜಿ ಪ್ರಧಾನ ಮಂತ್ರಿ ಲಿಯಾಕತ್ ಅಲಿಖಾನರ ಹಿರೇ ಮಗನಾದ ವಿಲಾಯತ್ ಅಲಿಖಾನರು ಕೇಳಿಕೊಂಡಿರುವರು. ಕರಾಚಿಯಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ನೂತನವಾಗಿ ನಿರಾಶ್ರಿತರಿಗಾಗಿ ಏನೂ ಮಾಡದ ನಿರಾಶ್ರಿತರ ಮಂತ್ರಿ ಡಾ. ಕುರೇಶಿಯವರನ್ನು ನಿವೃತ್ತಿಗೊಳಿಸಬೇಕೆಂದು ಕೇಳಿಕೊಂಡರು.

ಸಾದಿಕ್ ವಹಾಬ್ ಎಂಬ ಕರಾಚಿ ವ್ಯಾಪಾರಸ್ಥರು ಮಾತನಾಡುತ್ತ, ನಜೀಮುದ್ದೀನ್ ಮಂತ್ರಿಮಂಡಲವು ಒಡಕುಗಳಿಂದ ಕೂಡಿದ್ದಾಗಿರುವದೆಂದೂ ಬೇಗನೆ ಅದರಲ್ಲಿ ಬದಲಾವಣೆಗಳಾಗಬಹುದೆಂದೂ ಹೇಳಿದರು.

ಕಾಂಗ್ರೆಸ್ ಒಂದು ಪಕ್ಷವಲ್ಲ, ರಾಷ್ಟ್ರವಾಗಿದೆ.

ನಾನು ಕಾಂಗ್ರೆಸ್ಸನ್ನು ಸಂಸ್ಥೆ ಎಂದು ಎಣಿಸುವದಿಲ್ಲ; ಅದು ರಾಷ್ಟ್ರವೇ ಆಗಿದೆ. ಜನರ ಬೆಂಬಲ ಮತ್ತು ಸಹಾಯ ದೇಶಕ್ಕಾಗಿರುವ ಜನದಂತೆ ಕಾಂಗ್ರೆಸಿದೆ. ಅದಕ್ಕೆ ಸರಿಯಾಗಿ ತಿನ್ನಲು ಕೊಟ್ಟಲ್ಲಿ ಒಳ್ಳೆಯ ಹಾಲು ಸಿಗಬಹುದೆಂದು ಮದ್ರಾಸಿನ ಪ್ರಧಾನಿ ಶ್ರೀ ರಾಜಗೋಪಾಲಾಚಾರ್ಯರು ಸ್ವಾತಂತ್ರ್ಯೋತ್ಸವದ ನಿಮಿತ್ತ ಸೇರಿದ್ದ ಸಭೆಯಲ್ಲಿ ಹೇಳಿದರು.

ಭೂದಾನ ಯಜ್ಞಕ್ಕೆ ಪ್ರಜಾ ಪಕ್ಷದ ಮುಖಂಡರ ಸಹಾಯ

ಮಧ್ಯ ಪ್ರದೇಶ ಎಸೆಂಬ್ಲಿಯ ವಿರೋಧ ಪಕ್ಷದ ಮುಖಂಡರೂ ಆದ ಠಾಕೂರ್ ಪ್ಯಾರೇಲಾಲ್ ಸಿಂಗರವರು ಮಹಾಕೋಶಲದ ಜಿಲ್ಲೆಗಳಲ್ಲಿ ಕಾಲ್ನಡಿಗೆಯಲ್ಲಿ ಪ್ರವಾಸ ಮಾಡಿ ಭೂದಾನ ಯಜ್ಞ ಯಶಸ್ವಿಯಾಗಲು ತಮ್ಮ ಸೇವೆ ಸಲ್ಲಿಸಲಿದ್ದಾರೆ. ದಸರಾ ಆದ ಮೇಲೆ ಅವರು ಈ ಪ್ರವಾಸ ಆರಂಭಿಸುವರು.

ಜ|| ನಗೀಬರ ಹೇಳಿಕೆ

ಸೈನ್ಯಗಳ ಸುಪ್ರೀಂ ಕಮಾಂಡರಾಗಿ ಈಜಿಪ್ಟಿನ್ ಅಧಿಕಾರಿಗಳ ಪರಿಷತ್ತಿಯೊಳಗೇ ಇದ್ದು ನಂತರ ಕಮಾಂಡರ್-ಇನ್-ಚೀಫ್ ಜ|| ನಗೀಬ್ ಈ ದಿನ ತಿಳಿಸಿದರು.

ಇದುವರೆಗೆ ಸ್ವಾರ್ಥಾಸಕ್ತವಾಗಿದ್ದ ಪಕ್ಷಗಳ ಅರಸರು ಸೈನ್ಯದ ವಿಚಾರಗಳಲ್ಲಿ ಕೈಹಾಕಿ ನಗೂ ಶುದ್ಧ ನಿಷ್ಪನ್ನವೆಂದೂ ಇನ್ನು ಮುಂದೆ ಅಂಥ ಪ್ರಕರಣಗಳಿಗೆ ಅವಕಾಶ ಕೊಡುವುದಿಲ್ಲವೆಂದೂ ಜ|| ನಗೀಬ್ ಹೇಳಿದರು.

ಬಲಾತ್ಕಾರ ಸೈನ್ಯದಾಖಲಾತಿ ಕಾನೂನು ಎಲ್ಲಾ ಜನಾಂಗಕ್ಕೂ ಅನ್ವಯವಾಗುವಂತೆ ಮಾಡಲಾಗುವುದೆಂದು ಜನರಲ್ ನಗೀಬ್ ಹೇಳಿದರು.

ಈಗ ಸೈನ್ಯದ ಪ್ರಥಮ ಮತ್ತು ಪ್ರಮುಖ ಕರ್ತವ್ಯವೆಂದರೆ ಶಾಂತಿ ಮತ್ತು ಭದ್ರತೆಗಳನ್ನು ಕಾಪಾಡುವುದೇ ಆಗಿದೆ ಎಂದೂ ಅವರು ಹೇಳಿದರು.

ಬ್ರಿಟನ್ನಿಗೆ ಪಂಡಿತ ನೆಹ್ರೂ ಸಂದೇಶ

ಸ್ವಾತಂತ್ರ್ಯ ಬಂದಂದಿನಿಂದ ಭಾರತೀಯರು ಶಾಂತಿ ಪಥದಲ್ಲೇ ನಡೆಯಲು ಪ್ರಯತ್ನಿಸುತ್ತಿದ್ದಾರೆ. ಅವರ ಪ್ರಯತ್ನದಲ್ಲಿ ಬ್ರಿಟನ್ನಿನ ಜನತೆಯ ಸಹಕಾರವನ್ನು ಅವರು ನಿರೀಕ್ಷಿಸುತ್ತಾರೆ, ಎಂದು ಪ್ರಧಾನಿ ನೆಹರು ಬ್ರಿಟನ್ನಿನ ಜನತೆಗೆ ಮತ್ತು ಬ್ರಿಟನ್ನಿನಲ್ಲಿರುವ ಭಾರತೀಯರಿಗೆ ಕೊಟ್ಟ ಸಂದೇಶದಲ್ಲಿ ತಿಳಿಸಿದಾರೆ.

ಈ ಸಂದೇಶವನ್ನು ಭಾರತದ ಹೈಕಮಿಷನರ್, ಶ್ರೀ ಬಿ. ಜಿ. ಖೇರರು "ಭಾರತ ಭವನ" ದಲ್ಲಿ ನಡೆದ ಸಮಾರಂಭದಲ್ಲಿ ಓದಿದರು.

"ಪ್ರಪಂಚದ ಇತರ ಭಾಗಗಳಂತೆಯೇ ನಮ್ಮ ಮುಂದೆಯೂ ಅನೇಕ ಸಮಸ್ಯೆಗಳಿವೆ. ಇವುಗಳನ್ನೆಲ್ಲ ಶಾಂತಿಯುತವಾಗಿ, ರಚನಾತ್ಮಕವಾಗಿ ಮತ್ತು ಸಹಕಾರದ ಮಾರ್ಗದಿಂದ, ಸದುದ್ದೇಶಗಳನ್ನು ಸನ್ಮಾರ್ಗಗಳಿಂದಲೇ ಸಾಧಿಸುವ ಪ್ರಯತ್ನದಿಂದ ಪರಿಹರಿಸಿಕೊಳ್ಳುವುದು ಸಾಧ್ಯ" ಎಂದು ನೆಹ್ರೂ ತಿಳಿಸಿದ್ದಾರೆ.

ವಾರ್ತೆ.

ಅಂತರಾಷ್ಟ್ರೀಯ ರೆಡ್ ಕ್ರಾಸಿನ ಮಂಡಲಿನ ಪರಿಷತ್ತು ೧೯೫೬ರಲ್ಲಿ ಭಾರತದಲ್ಲಿ ಸೇರಲಿದೆ.

ಪಾಶ್ಚಿಮಾತ್ಯ ವೇಷದ ಚಹಾ-ಉಪಹಾರಗಳನ್ನು ಮಾರುವ ಅಂಗಡಿ ಆಹಾರ ಮಾರುವ ಅಂಗಡಿಯಲ್ಲವೆಂದು ಬೊಂಬಾಯಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ತೀರ್ಮಾನವಿತ್ತಿದ್ದಾರೆ.

ಏರ್ ಇಂಡಿಯಾ ಮತ್ತು ಏರ್ ಇಂಟರ್ ನ್ಯಾಷನಲ್ ವಿಮಾನ ಪ್ರಯಾಣ ಸರ್ವಿಸ್‌ಗಳನ್ನೆಲ್ಲಾ ೧೬-೮-೫೨ ರಿಂದ ಅನಿರ್ದಿಷ್ಟ ಕಾಲದವರೆಗೆ ನಿಲ್ಲಿಸಲಾಗಿದೆ. ಸಂಬಳ ಕಡಿತ ನಿಲ್ಲಬೇಕೆಂದು ಈ ಸರ್ವಿಸಿನ ಉದ್ಯೋಗಿಗಳು ಮುಷ್ಕರ ಹೂಡಿರುವುದರಿಂದಲೇ ಈ ಕ್ರಮ.

ಬೊಂಬಾಯಿ, ಮದ್ರಾಸ್, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ಸರಕಾರಗಳು ತಮ್ಮ ಅಭಿವೃದ್ಧಿ ಯೋಜನೆಗಳಿಗೆ ಹಣ ಒದಗಿಸಲು ಕೇಳಿದ ಒಟ್ಟು ೧೨|| ಕೋಟಿ ರೂ. ಗಳ ಸಾಲವು ಪೂರ್ಣವಾಗಿ ಸಂಗ್ರಹ ಕಾರ್ಯ ಮುಕ್ತಾಯವಾಗಿದೆಯೆಂದು ಹಿಂದೂಸ್ಥಾನ ರಿಸರ್ವ್ ಬ್ಯಾಂಕು ಪ್ರಕಟಿಸಿದೆ.

ತಹಸೀಲ್ದಾರ್, ಏರಂಬಿ, ಸೂರದಾಸ, ಕಬೀರ, ಗಣೇಶ ಮತ್ತು ರವೀಂದ್ರನಾಥ ಠಾಕೂರ ಈ ಆರು ಜನ ಸಂತರ ಹಾಗೂ ಕವಿಗಳ ಭಾವಚಿತ್ರಗಳುಳ್ಳ ಅಂಚೆ ಚೀಟಿಗಳನ್ನು ಗಾಂಧಿ ಜಯಂತಿಯ ದಿವಸದಲ್ಲಿ ಅಕ್ಟೋಬರ್ ೧ನೇ ದಿನ ಪ್ರಸಾರ ಮಾಡಬೇಕೆಂದು ಅಂಚೆ ಚೀಟಿಗಳ ನಕ್ಷೆ ಕುರಿತು ಸಲಹೆ ಮಂಡಳಿ ಸೂಚಿಸಿದೆ.

'ಪ್ರೇಮ ಮಾಪಕ' ಯಂತ್ರವೊಂದು ತಯಾರಾಗಿದೆ. ಅದರ ಮೇಲೆ ನಿಂತು ಉಮೇದ್ವಾರ ವಧುವರರು ಮುಟ್ಟಿಕೊಂಡರೆ ಅವರ ದಾಂಪತ್ಯ ಸುಖಮಯವಾಗುವದೋ ಇಲ್ಲವೋ ಎಂದು ಅದು ಹೇಳುವದಂತೆ. ಇದರಿಂದ ಜಾತಕ ನೋಡುವ ಜೋಯಿಸರು ಗಾಬರಿಯಾಗಿದ್ದಾರೆ. ಈಗಾಗಲೇ ತರುಣ ತರುಣಿಯರು ಜಾತಕ ನೋಡುವ ಪದ್ಧತಿ ಬೇಡವೆಂದೂ ಈ ಯಂತ್ರ ಮೂಲಕ ಘಟನೆ ನೋಡಬೇಕೆಂದೂ ಹಠವಹಿಡಿದಿದ್ದಾರೆ. ಆಗಲೇ ಮದುವೆಯಾಗಿ ಬಿಟ್ಟವರು ಪಶ್ಚಾತ್ತಾಪ ಪಡತೊಡಗಿದ್ದಾರೆ.

ಶ್ರೀ ಟಿ. ಎನ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

ಕೊಡಗು

ತಾ. ೨೨-೮-೧೯೫೨ನೇ ಶುಕ್ರವಾರ

ಭಾರತ-ಕಾಶ್ಮೀರ.

ಕಾಶ್ಮೀರದ ಸಮಸ್ಯೆಯು ಕಳೆದ ಐದು ವರ್ಷಗಳಿಂದ ವಿಶ್ವ ಸಂಸ್ಥೆಯ ಮುಂದಿದ್ದು ಇನ್ನೂ ಬಗೆಹರಿದಿರುವುದಿಲ್ಲ. ಇದರ ವಿಚಾರ ತನ್ನ ಆಣೆಯಾದಲ್ಲಿ ವಿಶ್ವಸಂಸ್ಥೆಯ ಪ್ರತಿನಿಧಿಯಿಂದ ಬೇಗನೆ ನಡಿಸಲ್ಪಡಲಿರುವುದು. ಈ ವಿಚಾರಕ್ಕೆ ಇಂಡಿಯಾ ಮತ್ತು ಪಾಕಿಸ್ಥಾನವು ಸಹಕರಿಸಲು ಒಪ್ಪಿರುವವು. ಇತ್ತೀಚೆಲ್ಲಿ ಪಾಕಿಸ್ಥಾನದ ಪ್ರಧಾನ ಮಂತ್ರಿಗಳು ಸ್ವಾತಂತ್ರ್ಯ ದಿನಾಚರಣೆಯಲ್ಲಿ 'ತಾವು ಭಾಷೆ ಇತ್ತಂತೆ ಕಾಶ್ಮೀರವನ್ನು ಸಂಪೂರ್ಣ ಸ್ವತಂತ್ರ ಮಾಡದೆ ವಿಶ್ರಮಿಸೆವು' ಎಂದು ಹೇಳಿರುವರು. ಕಾಶ್ಮೀರದ ಪ್ರಶ್ನೆಯು ವಿಶ್ವಸಂಸ್ಥೆಯ ವಿಚಾರದಲ್ಲಿರುವಾಗ್ಯೆ ಈ ಉದ್ಗಾರದ ಉದ್ದೇಶವೇನೆಂದು ಗೊತ್ತಾಗುವುದಿಲ್ಲ. ಇನ್ನೊಂದೆಡೆ ಪಾಕಿಸ್ಥಾನದ ಮುಖ್ಯಸ್ಥರೊಬ್ಬರು ಈ ಸಮಸ್ಯೆಯು ಬೇಗನೆ ಬಗೆಹರಿಯದೆ ಹೋದರೆ ಮತಯುದ್ಧವನ್ನು ಹೂಡಬೇಕಾಗುವದೆಂದಿರುವರು. ಈ ರೀತಿಯ ಬೆದರಿಕೆಯ ಮಾತುಗಳಿಂದ ಶಾಂತಿಯುಕ್ತವಾದ ತೀರ್ಮಾನಕ್ಕೆ ಏನೂ ಸಹಾಯ ಮಾಡಿದಂತಾಗುವುದಿಲ್ಲ.

ಈ ಮಧ್ಯೆ ಇಂಡಿಯಾ ಸರ್ಕಾರದೊಂಗೆ ಕಾಶ್ಮೀರದ ಮುಖ್ಯ ಮಂತ್ರಿಯಾದ ಶೇಕ್ ಅಬ್ದುಲ್ಲಾರವರು ಕಾಶ್ಮೀರಕ್ಕೂ ಭಾರತಕ್ಕೂ ಇರಬೇಕಾದ ಸಂಬಂಧವನ್ನು ಕುರಿತು ಒಂದು ಒಪ್ಪಂದವನ್ನು ಮಾಡಿಕೊಂಡಿರುವರು. ಈ ಒಪ್ಪಂದದ ಮೇರೆ ಕಾಶ್ಮೀರದ ಜನರ ಪ್ರಜಾಸತ್ತಾತ್ಮಕ ಆಶೋತ್ತರಗಳ ಬಗ್ಗೆ ಭಾರತವು ಸಂಪೂರ್ಣ ಬೆಂಬಲ ಕೊಡುವದೆಂದು ಅವರು ಕಾಶ್ಮೀರದ ಘಟನಾಸಭೆಯಲ್ಲಿ ಸ್ಪಷ್ಟಪಡಿಸಿದರು. ಅಲ್ಲದೆ ಭಾರತದ ಮತ್ತು ಕಾಶ್ಮೀರದ ಸಂಬಂಧವು ಶಾಶ್ವತವಾಗಿ ಇರಬೇಕಾದರೆ ಮತ್ತು ಕಾಶ್ಮೀರದ ಸ್ವಾತಂತ್ರ್ಯವು ಭದ್ರವಾದ ಅಡಿಗಲ್ಲಿನ ಮೇಲೆ ನಿಲ್ಲಬೇಕಾದರೆ, ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯರ ಮತ್ತು ಕಾಶ್ಮೀರದವರ ಗುರಿಯಾಗಿದ್ದ ಜಾತ್ಯತೀತ ಪ್ರಜಾಸತ್ತಾತ್ಮಕ ಘಟನೆಯು ಇವೆರಡು ದೇಶಗಳಿಗೂ ಒಂದೇ ಆಗಿರಬೇಕೆಂದರು. ಅಬ್ದುಲ್ಲಾರವರ ಈ ವರ್ತನೆಯಿಂದ ಇವೆರಡು ದೇಶಗಳ ಸಂಬಂಧವು ಗಟ್ಟಿಯಾಗುವಂತೆ ತೋರುತ್ತದೆ.

ಕಾಶ್ಮೀರವು, ಇಂಡಿಯಾಕ್ಕೆ ಸ್ವಾತಂತ್ರ್ಯ ದೊರೆತಂದಿನಿಂದ ಈ ಐದು ವರ್ಷಗಳ ವರೆಗೆ ಪಟ್ಟ ಕಷ್ಟನಷ್ಟಗಳನ್ನು ಲಕ್ಷಿಸಿ, ಪಂಡಿತ ನೆಹರೂರವರ ಸರ್ಕಾರವು ಅವರಿಗೆ ಇತರ 'ಬಿ' ಸಂಸ್ಥಾನಗಳಿಗಿಂತ ಸ್ವಲ್ಪ ಹೆಚ್ಚಿನ ರಿಯಾಯಿತಿ ತೋರಿಸಲು ಕಾರಣವಾಗಿದೆ. ಆದರೆ ಇದನ್ನು ಉಪಯೋಗಿಸಿಕೊಂಡು, ಕಾಶ್ಮೀರವು ತನ್ನದೇ ಸ್ವತಂತ್ರ ಧ್ವಜವಿರಬೇಕು. ಸರ್ವ ಸ್ವತಂತ್ರ ಅಧ್ಯಕ್ಷನಿರಬೇಕೆಂದು ವಾದಿಸುವುದು ಎಂದೂ ಸರಿಯಲ್ಲ. ಕಾಶ್ಮೀರವು ಮುಂದಕ್ಕೆ ರಾಜಕೀಯ ಮತ್ತು ಆರ್ಥಿಕ ದೃಷ್ಟಿಯಲ್ಲಿ ಅಭಿವೃದ್ಧಿಗೊಳ್ಳಬೇಕಾದರೆ ಕಾಶ್ಮೀರ–ಭಾರತದ ಸಂಬಂಧವು ಹೆಚ್ಚು ಬಲಗೊಳ್ಳಬೇಕು. ಕಾಶ್ಮೀರದ ಘಟನಾಸಭೆಯು ಈ ವಿಚಾರಕ್ಕೆ ಹೆಚ್ಚಿನ ಗಮನ ಕೊಡುವದೆಂದು ನಂಬಲಾಗಿದೆ

ವರ್ತಮಾನ.

ಕಳೆದ ತಾ. ೧೦ರಲ್ಲಿ ಶ್ರೀ ಕಾಟಿತಂಡ ಪೊನ್ನಪ್ಪನವರು ಮಡಿಕೇರಿ ಆಸ್ಪತ್ರೆಯಲ್ಲಿ ಶಿವಾಧೀನರಾದರೆಂದು ತಿಳಿಯುತ್ತೇವೆ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕಿನ ಮೇನೇಜರಾಗಿ ಸೀನಿಯರ್ ಸಹಕಾರಿ ಇನ್ಸ್‌ಪೆಕ್ಟರರಾದ ಶ್ರೀ ಜಿ. ಯನ್. ತಿಮ್ಮಪ್ಪಯ್ಯನವರು ನೇಮಿಸಲ್ಪಟ್ಟಿರುವರು.

ಈ ತಾ. ೧೫ ರಿಂದ ಇಂದಿನ ವರೆಗೆ ಮಡಿಕೇರಿಯಲ್ಲಿ ೧೧ ಇಂಚು ೯೬ ಸೆಂಟು ಮಳೆಯಾಗಿದೆ. ಹೆಚ್ಚಾಗಿ ಮಳೆಯಾದ ನಿನ್ನೆ ದಿನ ೨ ಇಂಚು ೭೬ ಸೆಂಟು ಬಿದ್ದಿದೆ.

ಬರುವ ಸೆಪ್ಟಂಬರ್ ತಿಂಗಳು ೨೦ರಲ್ಲಿ ನಡೆಯಲಿಕ್ಕಿರುವ ವಿರಾಜಪೇಟೆ ಮುನ್ಸಿಪಲ್ ಕಮಿಟಿಯ ಚುನಾವಣೆಗೆ ಉಮೇದ್ವಾರರು ನೇಮಕ ಪತ್ರಗಳನ್ನು ಈ ತಾ. ೨೮ರ ಒಳಗೆ ಕೊಡಬೇಕೆಂದು ಪ್ರಕಟವಾಗಿದೆ.

ಅಸಿಸ್ಟೆಂಟ್ ಕಮಿಷನರು ಮತ್ತು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ಶ್ರೀ ಐ. ಸಿ. ಸುಬ್ಬಯ್ಯನವರು ಕೊಡಗು ಸರಕಾರದ ಪರವಾಗಿ ಕಾಫಿ ಬೋರ್ಡಿನ ಮೆಂಬರರಾಗಿ ನೇಮಿಸಲ್ಪಟ್ಟಿರುವರು

ಕೈಲ ಮೂಹೂರ್ತ, ದಸರಾ ಮತ್ತು ಕ್ರಿಸ್‌ಮಸ್ ಹಬ್ಬಗಳಿಗೆ ಅರ್ಜಿ ಬರಕೊಂಡ ಕೂಪನ ದಾರರಿಗೆ ಒಂದೊಂದು ಕುಪ್ಪಿ ಸಾರಾಯಿ ಹೆಚ್ಚಿಗೆ ಕೊಡುವುದಾಗಿ ಪ್ರಕಟವಾಗಿದೆ.

ರಾಯಲಸೀಮೆ ಕ್ಷಾಮ ನಿವಾರಣಾ ಫಂಡಿಗೆ ಕೊಡಗಿನಿಂದ ಈ ತಾ. ೨೦ರ ವರೆಗೆ ರೂ ೧,೨೬೧-೭-೩ ಜಮೆಯಾಗಿದೆ. ಇವರ ವಿವರವು ಇನ್ನೊಂದು ವಾರ ಕೊಡಲ್ಪಡುವುದು.

ತಿತಿಮತಿಯಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ 'ಮನೆಯಪಂಡ ನಾಚಯ್ಯ ನೀಲಮ್ಮ' ಶಾಲಾ ಕಟ್ಟಡವನ್ನು ಡಾ॥ ಕೆ. ಯಂ. ಕಾರ್ಯಪ್ಪನವರು ಈ ತಾ. ೨೫ರಲ್ಲಿ ಚೀಫ್ ಕಮಿಷನರ್ ಲೆ. ಕ. ಬೇಡಿಯವರ ಅಧ್ಯಕ್ಷತೆಯಲ್ಲಿ ತೆರೆಯುವರಾಗಿ ತಿಳಿಯಬರುತ್ತದೆ.

ಮದ್ರಾಸ್ ಪ್ರಾಂತ್ಯದಲ್ಲಿ ಕೆಲವು ವರ್ಷಗಳ ವರೆಗೆ ಲಾಯರು ವೃತ್ತಿಯಲ್ಲಿ ಅನುಭವ ಪಡೆದು ೩೦ ವರ್ಷ ಜಿಲ್ಲಾ ಮುನ್ಸಿಫರಾಗಿ ಉದ್ಯೋಗ ನಡೆಸಿದ ಶ್ರೀ ವಿ. ಬಾಲಸುಬ್ರಮಣ್ಯಂ ಬಿ. ಎ., ಬಿ. ಎಲ್. ಇವರು ಮಡಿಕೇರಿಯಲ್ಲಿ ಲಾಯರು ವೃತ್ತಿಯನ್ನು ಪ್ರಾರಂಭಿಸಿರುವರು.

ಕೆಲವು ದಿವಸಗಳ ಹಿಂದೆ ಮಡಿಕೇರಿ ನಾಡು ಆರುವತೊಕ್ಲು ಗ್ರಾಮದ ಶ್ರೀ ಮುಂಜಾಂದಿರ ಕಾಯ ಪ್ಪನವರು ಸದರಿ ಮನೆ ಗಣಪತಿಯ ವರಿಗೂ ಮತ್ತು ಚಾತ್ರನ ಪೂವಯ್ಯನವರಿಗೂ ಗುಂಡಿಕ್ಕಿ ಕೊಂದ ರೇಬ ಖೂನಿಕೇಸು ಮಡಿಕೇರಿ ಸೆಷನ್ ಕೋರ್ಟಿನಲ್ಲಿ ವಿಚಾರವಾಗಿ ಶ್ರೀ ಕಾರ್ಯಪ್ಪನವರಿಗೆ ಫಾಸಿ ಶಿಕ್ಷೆಯು ವಿಧಿಸಲಾಗಿದೆಯೆಂದು ತಿಳಿಯಬರುತ್ತದೆ.

ಮಡಿಕೇರಿ ಮುನಿಸಿಪಲ್ ಕಮಿಟಿಯಲ್ಲಿ ಗೃಹಮಂತ್ರಿಯವರಾದ ಶ್ರೀ ಕೆ. ಮಲ್ಲಪ್ಪನವರ ರಾಜಿನಾಮೆಯಿಂದ ಉಂಟಾದ ಖಾಲಿ ಸ್ಥಳಕ್ಕೆ ಈ ತಾ. ೧೯ರಲ್ಲಿ ಚುನಾವಣೆ ನಡೆದು ಸ್ಪರ್ಧಿಸಿದ ಮೂರು ಉಮೇದ್ವಾರರುಗಳಾದ ಶ್ರೀ ಡಿ. ಯಸ್. ದೇವಶೆಟ್ಟಿಯವರು, ಡಾ ಯಂ. ಬಿ. ಕಾರ್ಯಪ್ಪನವರು ಮತ್ತು ಬಿ. ಯಸ್. ತಿಮ್ಮಪ್ಪರ್ಸಿ ಪೈಕಿ ಶ್ರೀ ಡಿ ಯಸ್ ದೇವಶೆಟ್ಟಿಯವರು ಜಯಶೀಲರಾಗಿರುವರೆಂದು ತಿಳಿಯ ಬರುತ್ತದೆ.

ಉತ್ತರ ಕೊಡಗು ತಾಲೂಕು ಶ್ರೀ ಜರುಪೇಟೆ ಹೋಬಳಿ ರಸೂಲ್‌ಪುರ(ಬಾಳುಗೋಡು) ಗ್ರಾಮದಲ್ಲಿ, (೧) ಬಿಳಿವರ್ಣದ ಒಂದು ದೊಡ್ಡ ಕೋಣ, (೨) ಬಿಳಿವರ್ಣದ ಸ್ವಲ್ಪ ಕೂಡು ಕೋಡಿನ ಒಂದು ಸಣ್ಣ ಎಮ್ಮೆ (೩) ಕರಿವರ್ಣದ ಒಂದು ಸಣ್ಣ ಕೋಣ ಅಂತು ಮೂರು ರಾಸುಗಳು ಕೆಲವು ದಿವಸಗಳಿಂದ ಈ ಗ್ರಾಮದಲ್ಲಿವೆ. ನಿಜವಾದ ಮಾಲೀಕರು ಬಂದು ಹೊಡೆದು ಕೊಂಡು ಹೋಗಬಹುದಾಗಿ ಸದ್ರಿ ಗ್ರಾಮದ ಪಟೇಲರು ಯನ್. ಯಂ. ನಂಜಪ್ಪನವರು ತಿಳಿಸುತ್ತಾರೆ.

ಸ್ವಾತಂತ್ರ್ಯ ದಿನಾಚರಣೆ.

ಮಡಿಕೇರಿ

ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲಿ ಆಚರಿಸಿದಂತೆ ಕೊಡಗಿನ ಹಲವು ಭಾಗಗಳಲ್ಲಿಯೂ ತಾ ೧೫ರಲ್ಲಿ ಸ್ವಾತಂತ್ರ್ಯ ದಿನಾಚರಣೆಯು ನಡೆಸಲ್ಪಟ್ಟಿತು. ಆ ದಿನ ಬೆಳಿಗ್ಗೆ ಎಂಟೂವರೆ ಗಂಟೆಗೆ ಗೃಹ ಮಂತ್ರಿಯಾದ ಶ್ರೀ ಕೆ. ಮಲ್ಲಪ್ಪನವರಿಂದ ಮಾರ್ಕೆಟ್ಟಿನ ಬಳಿಯೂ, ೧೧ ಗಂಟೆಗೆ ಕೋಟೆಯಲ್ಲಿ ಮುಖ್ಯ ಮಂತ್ರಿಯಾದ ಶ್ರೀ ಸಿ. ಎಂ. ಪೂಣಚ್ಚನವರಿಂದಲೂ ಧ್ವಜಾರೋಹಣವು ಮಾಡಲ್ಪಟ್ಟಿತು. ಮಳೆಯ ದೆಸೆಯಿಂದ ಆಟೋಟಗಳು ನಡೆಯಲಿಲ್ಲ. ಸಾಯಂಕಾಲ ೩ ಗಂಟೆಗೆ ಕಾವೇರಿ ಮಹಲಿನಲ್ಲಿ ಶ್ರೀ ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮಂಗಳೂರಿನ ಶ್ರೀ ರಾಮಚಂದ್ರರಾಯರು ಮತ್ತು ಶ್ರೀ ನಾರಾಯಣರಾಯರು ಭಾಷಣಗಳನ್ನು ಮಾಡಿದರು. ಅಧ್ಯಕ್ಷರ ಭಾಷಣದಿಂದ ಸಭೆ ಮುಕ್ತಾಯವಾಯಿತು.

ವೀರಾಜಪೇಟೆ

ಈ ದಿನ ಬೆಳಿಗ್ಗೆ ೧೧ ಗಂಟೆಗೆ ತಾಲೋಕು ಕಚೇರಿ ಮೈದಾನದಲ್ಲಿ ಎಸೆಂಬ್ಲಿಯ ಸ್ಪೀಕರರಾದ ಶ್ರೀ ಬಿ. ಎಸ್. ಕುಶಾಲಪ್ಪನವರಿಂದ ಧ್ವಜಾರೋಹಣ ಮಾಡಲಾಯಿತು. ಕೂಡಲೆ ಸದರಿಯವರ ಅಧ್ಯಕ್ಷತೆಯಲ್ಲಿ ನಡೆದ ಮೀಟಿಂಗಿನಲ್ಲಿ ಮಂಗಳೂರಿನ ಶ್ರೀಗಳಾದ ನಾರಾಣಾಯಣರಾಯರು ಮತ್ತು ರಾಮಚಂದ್ರರಾಯರು ಭಾಷಣವನ್ನಿತ್ತರು.

ಸೋಮವಾರಪೇಟೆ

ಬೆಳಿಗ್ಗೆ ೭॥ ಗಂಟೆಗೆ ಹೈಸ್ಕೂಲು ಹೆಡ್ ಮಾಸ್ಟರರಾದ ಶ್ರೀ ಬಿ. ಎಸ್. ಕೆ. ವಿಟ್ಠಲರಾಯರಿಂದ ಧ್ವಜಾರೋಹಣವು ನಡೆಸಲ್ಪಟ್ಟು, ಶಾಲಾ ಮಕ್ಕಳು ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹೋದ ಮೇಲೆ ಶ್ರೀ ವಿಟ್ಠಲರಾಯರ ಅಧ್ಯಕ್ಷತೆಯಲ್ಲಿ ಮೀಟಿಂಗನ್ನು ನಡೆಸಿ, ಭಾಷಣಗಳಾದವು.

ಹಾತೂರು.

ಹಾತೂರಿನಲ್ಲಿ ಬೆಳಿಗ್ಗೆ ೯-೩೦ ಗಂಟೆಗೆ ಧ್ವಜಾರೋಹಣವನ್ನು ಮಾಡಿ ಶ್ರೀ. ಯಂ. ಡಬ್ಲ್ಯು. ಗಣಪತಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಆಟೋಟ ಮೆರವಣಿಗೆ ಮೊದಲಾದುವುಗಳಿಂದ ಸ್ವಾತಂತ್ರ್ಯ ದಿನವು ಆಚರಿಸಲ್ಪಟ್ಟಿತು

ಶ್ರೀಮಂಗಲ.

ಶ್ರೀಮಂಗಲದಲ್ಲಿ ಧ್ವಜಾರೋಹಣವಾದ ಮೇಲೆ ಜೈ ಹಿಂದ್ ವಾಚನಾಲಯದಲ್ಲಿ ಶ್ರೀ. ಯಂ. ಬಿ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಭಾಷಣಗಳು ಮಾಡಲ್ಪಟ್ಟವು.

ಬಿ. ಶೆಟ್ಟಿಗೇರಿ.

ಬಿ. ಶೆಟ್ಟಿಗೇರಿಯಲ್ಲಿ ಬೆಳಿಗ್ಗೆ ೧೧ ಗಂಟೆಗೆ ಧ್ವಜಾರೋಹಣವಾದ ನಂತರ ಶ್ರೀ. ಕೆ. ಜಿ. ಪೂವಯ್ಯನವರ ಅಧ್ಯಕ್ಷತೆಯಲ್ಲಿ ಮೀಟಿಂಗು ನಡೆಸಲಾಯಿತು.

ಹೆಬ್ಬಾಲೆ.

ಹೆಬ್ಬಾಲೆ ಶಾಲೆ ಬಳಿ ಬೆಳಿಗ್ಯೆ ೮-೩೦ ಗಂಟೆಗೆ ಧ್ವಜಾರೋಹಣ ಮಾಡಲಾಯಿತು ನಂತರ ಶ್ರೀ. ಲಕ್ಕಯ್ಯ ಎಂ. ಎಲ್. ಎ. ಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಭಾಷಣಗಳು ಮಾಡಲ್ಪಟ್ಟವು.

ನಾಪೋಕ್ಲು.

ಧ್ವಜಾರೋಹಣವಾದ ಮೇಲೆ ನಾಪೋಕ್ಲು ಹೈಸ್ಕೂಲು ಹಾಲಿನಲ್ಲಿ ಹೆಡ್‌ಮಾಸ್ಟರಾದ ಪಿ. ಎನ್. ದೇವಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ, ಈ ದಿನದ ಪ್ರಾಮುಖ್ಯತೆಯನ್ನು ಕುರಿತು ಕೆಲವರು ಭಾಷಣ ಮಾಡಿದರು.

ಕಣ್ಣಂಗಾಲ.

ಇಲ್ಲಿಯ ಶಾಲೆಯ ಬಳಿ ಬೆಳಿಗ್ಯೆ ೮ ಗಂಟೆಗೆ ಗ್ರಾಮಸ್ಥರು ಸೇರಿ ಧ್ವಜಾರೋಹಣ ಮಾಡಿದ ಮೇಲೆ ಶ್ರೀ. ಮಚ್ಚರಂಡ ಎಸ್. ಅಯ್ಯಪ್ಪನವರ ಅಧ್ಯಕ್ಷತೆಯಲ್ಲಿ ಮೀಟಿಂಗು ನಡೆಸಲಾಯಿತು.

ಅಮ್ಮತ್ತಿ

ಈ ದಿನ ಬೆಳಿಗ್ಗೆ ೯ ಗಂಟೆಗೆ ಅಮ್ಮತ್ತಿ ಶಾಲೆಯ ಮೈದಾನದಲ್ಲಿ ಮುಖ್ಯ ಮಂತ್ರಿಯಾದ ಶ್ರೀ ಸಿ ಯಂ. ಪೂಣಚ್ಚನವರಿಂದ ಧ್ವಜಾರೋಹಣ ಮಾಡಲಾಯಿತು. ನಂತರ ಶಾಲಾ ಮಕ್ಕಳಿಗೆ ಆಟೋಟಗಳನ್ನು ನಡೆಸಿ ಶಾಲಾ ಹಾಲಿನಲ್ಲಿ ಶ್ರೀ ಪಿ. ಯಸ್. ಈರಪ್ಪನವರ ಅಧ್ಯಕ್ಷತೆಯಲ್ಲಿ ಮೀಟಿಂಗು ನಡಿಸಲಾಯಿತು.

ಇತರ ಸ್ಥಳಗಳು.

ಇದೇ ರೀತಿಯಲ್ಲಿ ಸಿದ್ಧಾಪುರದಲ್ಲಿ ಶ್ರೀ ಕೋಟಂಬೈಲು ಮಾದಪ್ಪನವರ ಅಧ್ಯಕ್ಷತೆಯಲ್ಲೂ, ಪೊಳ್ಳಿಬೆಟ್ಟದಲ್ಲಿ ಶ್ರೀ ಎ. ಎಸ್. ಚಿಣ್ಣಪ್ಪನವರ ಅಧ್ಯಕ್ಷತೆಯಲ್ಲೂ, ಶನಿವಾರಸಂತೆಯಲ್ಲಿ ಶ್ರೀ ಆರ್. ಕೆ. ದೇವಪ್ಪನವರ ಅಧ್ಯಕ್ಷತೆಯಲ್ಲೂ ಮತ್ತು ತಿತಿಮತಿಯಲ್ಲಿ ಶ್ರೀ ಚೋನಿರ ಮಾದಪ್ಪನವರ ಅಧ್ಯಕ್ಷತೆಯಲ್ಲೂ ಸ್ವಾತಂತ್ರ ದಿನಾಚರಣೆಯು ನಡಿಸಲ್ಪಟ್ಟಿತು.

ಮುಜರಾಯಿ ಇಲಾಖೆಯ ಕಾರ್ಯಕಲಾಪಗಳು.

ಕೊಡಗಿನ ಮುಜರಾಯಿ ಇಲಾಖೆಯ ಕಾರ್ಯಕಲಾಪಗಳನ್ನು, ಇದರ ಸುಪರ್ದಿಗೆ ಒಳಗಿದ ದೇವಸ್ಥಾನಗಳಲ್ಲಿ ಈಗ ನಡೆಯುತ್ತಿರುವ ಪೂಜೆ ಪುರಸ್ಕಾರಗಳನ್ನೂ ಕುರಿತು ಕಳೆದ ವರ್ಷ ನಾನು ಎರಡು ಲೇಖನಗಳನ್ನು ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಿದ್ದೆನು. 'ಕೊಡಗು' ದೇಶದಲ್ಲಿ ಕಾಲಕ್ಕೆ ಸರಿಯಾಗಿ ಮಳೆ ಬೆಳೆಗಳಾಗದೆ, ಆಗಿಂದಾಗ್ಗೆ ಅತಿವೃಷ್ಟಿ, ಅನಾವೃಷ್ಟಿಗಳಾಗುತ್ತಿದ್ದ ಹಳನ್ನು ನೋಡಿ ಇದೇನಾದರೂ ದೈವ ಕೋಪದಿಂದುಂಟಾಗಿರಬಹುದೇ ಎಂದು ಶಂಕಿಸಿ ಅದನ್ನು ನಿವಾರಿಸಿದರೆ, ದೇಶಕ್ಕೆ ಕಲ್ಯಾಣವಾಗಬಹುದೆಂಬ, ಒಳ್ಳೆ ದೃಷ್ಟಿಯಿಂದ ನಾನು ಅವುಗಳನ್ನು ಬರೆದು ಪ್ರಕಟಿಸಿದುದಲ್ಲದೆ, ಅದಕ್ಕೆ ಉತ್ತರ ಕೊಟ್ಟ "ಓವರ್ ಭಕ್ತ"ರೆಂಬ ಪುಸ್ತಕ ಮಾಡಿದವರು ತಾ. ೨೧-೯-೩೬ರಲ್ಲಿ ಪ್ರಕಟಿಸಿದ ಅವರ ಉತ್ತರದ ಮೇರೆ ದೇವಸ್ಥಾನ ಕಮಿಟಿಯವರನ್ನೂ, ಪ್ರೆಸಿಡೆಂಟರನ್ನೂ ಹಿಯಾಳಿಸಲಿಕ್ಕಾಗಲೀ, ಯಾ ಅವರನ್ನು 'ಮನೆ ಮನೆಗೆ ಹೋಗಿ ಭಿಕ್ಷೆ ಬೇಡಿ' ಎಂದು ಹೇಳುವುದಕ್ಕಾಗಲಿ, ಯಾ 'ಪತ್ರಿಕೆಗಳ ಪುಟ ತುಂಬಿಸಲಿಕ್ಕಾಗಲೀ ಬರೆದುದಲ್ಲ. ಅದೂ ಅಲ್ಲದೆ, ದೇವಸ್ಥಾನ ಪೂಜಾರಿಗಳ ಪರ ವಹಿಸಿಕೊಂಡು ಅವರನ್ನು ಪುರಸ್ಕರ ಹಿಡಿಸಿ ಅವರ ಸಂಬಳ ಹೆಚ್ಚಿಸಬೇಕೆಂಬ ಅಭಿಲಾಷೆಯೂ ನನಗಿರಲಿಲ್ಲ.

ಸಂಗತಿಯು ಹೀಗಿದ್ದರೂ ಸಹ ಗೋಪ್ಯವಾದೊಂಕಿತದ ಓವರ್ 'ಭಕ್ತ'ರಿಗೆ ಇಷ್ಟೊಂದು ಸಿಟ್ಟು ಬರಲು ಕಾರಣವಾದರೂ ಏನು? ಇದನ್ನು ಬರೆದವರು ನಿಜವಾಗಿಯೂ 'ಓವರ್ ಭಕ್ತರೊ' ಅಲ್ಲ, ಪ್ರೆಸಿಡೆಂಟರೂ, ಮತ್ತು ಕಮಿಟಿ ಮೆಂಬರರೇ ಬರೆದು, ಈ ತರದ ಮಿಥ್ಯನಾಮದ ಹಾಕಿದರೆ ಈ ಬಾಕ್ಯವನ್ನು ಕೂಲಂಕಷವಾಗಿ ಓದಿದವರಿಗೆಲ್ಲಾ ಈ ಗ್ರಂಥಕರ್ತರು 'ಓವರ್ ಭಕ್ತ'ರಲ್ಲ, ಪ್ರೆಸಿಡೆಂಟರು ಮತ್ತು ಕಮಿಟಿಯವರ ಪೈಕಿ ಕೆಲವರು ಎಂಬುವುದು ಮನದಟ್ಟಿಯೇ ಇರಬೇಕು. ಪ್ರೆಸಿಡೆಂಟರೂ, ಮತ್ತು ಕಮಿಟಿ ಮೆಂಬರರೂ ಸಹ 'ಭಕ್ತರೇ' ಆದುದರಿಂದ ಅವರು 'ಓವರ್ ಭಕ್ತ' ಎಂದು ಬರೆದುದರಲ್ಲಿ ತಪ್ಪಿಲ್ಲ, ಆದರೆ, ನಾನು ನನ್ನ ಸಂಪೂರ್ಣ ವಿಳಾಸವನ್ನು ಕೊಟ್ಟಿದ್ದಾಗ್ಯೂ, ಈ ಪ್ರೆಸಿಡೆಂಟರೂ ಮತ್ತು ಕಮಿಟಿಯವರೂ ಸಹ ತಾವು ಕೊಟ್ಟ ಪ್ರತ್ಯುತ್ತರಕ್ಕೆ ತಮ್ಮ ಉದ್ಯೋಗದ ಹೆಸರನ್ನು ಕೊಡಬಹುದಿತ್ತು. ಅದರ ಬದಲು ಇವರು ಈ ರೀತಿಯ ಗುಪ್ತನಾಮವನ್ನು ಕೊಟ್ಟದ್ದರಿಂದ, ಇವರು ಕೊಟ್ಟ ಉತ್ತರದಲ್ಲಿ ಏನೋ ಅನ್ಯಾಯವಾದ ಬರವಣಿಗೆ ಇರಲಿಲ್ಲವೆಂದರ್ಥವಾಗುತ್ತೆ. ಈ ಜವಾಬು ಬರೆದವರು ಪ್ರೆಸಿಡೆಂಟರೂ ಯಾ ಕಮಿಟಿಯವರೂ ಎಂಬುದಕ್ಕೆ ಅದರ ಬಾಕ್ಯಯಿಂದ ಎತ್ತಿ ತೆಗೆದ ಇದೊಂದು ವಾಕ್ಯವೇ ಸಾಕು, '....ಬಂದ್ದನೆ ದೇವಸ್ಥಾನಗಳ ಆಗುಹೋಗುಗಳನ್ನು ಅರಿಯದೆ, ಬರೆಯುವವರ ಬದಲು, ನೀವು ತಿಳಿಸಿದಂತೆ ನಿಮ್ಮ ಉದಾರ ಸಹಾಯವನ್ನು ಧರ್ಮಶಾಸ್ತ್ರದ ಮೂಲಕ ದೇವರ ಸೇವೆಗೆ ಕೊಟ್ಟು, ನೀವು ಮೇಲ್ವಿಚಾರಣೆ ಮಾಡಿ ದೇವರ ಮಂದಿರಗಳ ಕಾರುಬಾರು ಬರುವಂತೆ ಮಾಡಿದ್ದರೆ ನಿಮಗೆ ಬೇರೆ ಚಿಂತೆಯಾಗುತ್ತಿದ್ದಿತು' ಎಂದು ಬರೆದಿರುವುದರಿಂದ ಜೀವ ನಿಗಳಾಗುವವರು ಯಾರು? ಓವರ್ ಭಕ್ತರೆ? ಅಲ್ಲ ಕಮಿಟಿ ಪ್ರೆಸಿಡೆಂಟರೇ? ಇದೊಂದು ವಾಕ್ಯದಿಂದಲೇ ಇದನ್ನು ಬರೆದವರು ಪ್ರೆಸಿಡೆಂಟರು ಮತ್ತು ಕೆಲವು ಕಮಿಟಿಯವರಲ್ಲದೆ 'ಓವರ್ ಭಕ್ತ'ರಲ್ಲ ಎಂಬುವುದು ವ್ಯಕ್ತವಾಗುತ್ತದೆ.

ಆ ಉತ್ತರ ಬರೆದವರು ಯಾರೇ ಇರಲಿ. ಅದಕ್ಕೆ ಈಗ ಸುಮಾರು ಒಂದು ವರ್ಷದ ವರೆಗೆ ಪ್ರತ್ಯುತ್ತರ ಕೊಡದೆ ಈಗ ಈ ಜವಾಬು ಬರೆದದ್ದೇಕೆಂದು ಸದರಿ 'ಭಕ್ತರು' ನನ್ನನ್ನು ಆಕ್ಷೇಪಿಸಿದ್ದಾರೆ. ಅದಕ್ಕೆ ನನ್ನ ಜವಾಬು ಇಷ್ಟೆ! ನಾನು ಈ ಮೊದಲು ಬರೆದಿರುವ ಹಾಗೆ ಈ ಬಾಕ್ಯ ಬರೆದದ್ದು ಪತ್ರಿಕೆಗಳ ಪುಟ ತುಂಬಿಸುವುದಕ್ಕಾಗಲೀ, ಯಾ ಕಮಿಟಿಯವರನ್ನು ಹಿಯಾಳಿಸುವುದಕ್ಕಾಗಲೀ ಅಲ್ಲ. ದೇಶದ ಜನರಲ್ಲಿ ಅನೇಕ ಕಾರಣಗಳಿಂದಾಗಿ ಈಗ ನಿದ್ರಾವಸ್ಥೆಯನ್ನು ಕಳೆದಿರುವ ದೈವಭಕ್ತಿಯನ್ನು ಪುನರುಜ್ಜೀವಿಸಿ ಅದು ವೃದ್ಧಿಯಾಗುವಂತೆ ಮಾಡಲು, ನನ್ನ ಅಲ್ಪ ಸೇವೆಯನ್ನು ಸಲ್ಲಿಸಬೇಕೆಂಬ ದೀರ್ಘದೃಷ್ಟಿಯಿಂದ ಬರೆದದ್ದಾಗಿದೆ. ಆದರೆ ಸದರಿ 'ಭಕ್ತರು' ನಾನು ದೇವಸ್ಥಾನಗಳ ನಿಜವಾದ ಸ್ಥಿತಿಗತಿಗಳನ್ನು, ಅವುಗಳ ಆಗುಹೋಗುಗಳನ್ನು ತಿಳಿಯದೆ ಸದರಿ ಬಾಕ್ಯಗಳನ್ನು ಬರೆದೆ'ನೆಂದು ಆಕ್ಷೇಪಿಸಿರುವುದರಿಂದಲೂ, ಮತ್ತು ದೇವಸ್ಥಾನದ ಅಭಿವೃದ್ಧಿಗೋಸ್ಕರ ಕಮಿಟಿ ಮೆಂಬರುಗಳೂ ಪ್ರೆಸಿಡೆಂಟರೂ ನಾನಾ ಯೋಜನೆಗಳನ್ನು ಕೈಕೊಂಡಿರುವರೆಂದೂ ಬರೆದುದರಿಂದ ಇವರ ಆಳಿಕೆಯು ನಿಜವಾದ ಆಗುಹೋಗುಗಳನ್ನು ಕೂಲಂಕಷವಾಗಿ ಪರಿಶೀಲಿಸುವ ದೃಷ್ಟಿಯಿಂದಲೂ ಮತ್ತು ಇವರು ಕೈಕೊಂಡಿರುವ ರಚನಾತ್ಮಕ ಕ್ರಮಗಳನ್ನು ಅಜಮಾಯಿಸುವ ದೃಷ್ಟಿಯಿಂದಲೂ ಈ ವರೆಗೆ ನಾನು ಜವಾಬು ಕೊಡಲಿಲ್ಲ. ಈ ಮಧ್ಯೆ ದೇಶದ ಜನರ ಮನಸಿಗೆ ಒಪ್ಪುವಂತ ಯಾವದೊಂದು ಬದಲಾವಣೆಯಾಗಲೀ, ಯೋಜನೆಯಾಗಲೀ ಜಾರಿಗೆ ಬಂದದ್ದನ್ನು ನಾನು ಕಾಣಲಿಲ್ಲ. ಅದೂ ಅಲ್ಲದೆ, ಈ ಮಧ್ಯೆ ನಾನು ಈ ಕಮಿಟಿಯವರ ಆಡಳಿತ ಕ್ರಮವನ್ನು ದೇವಸ್ಥಾನದಲ್ಲಿ ನಡೆಯುತ್ತಿರುವ ಪೂಜಾ ಕ್ರಮಗಳನ್ನು ಕೂಲಂಕಷವಾಗಿ ಅಜಮಾಯಿಸುತ್ತಿದ್ದೆನು. ಇವರ ಆಡಳಿತದ ಸ್ಥಿತಿಯು ಯಾವ ವಿಧದಿಂದಲೂ ಸುಧಾರಿಸಲ್ಪಡದುದರಿಂದಲೂ ನನ್ನ ಪರಿಶೀಲನೆಯಲ್ಲಿ ನಾನಾ ರೀತಿಯ ನ್ಯೂನತೆಗಳು ಕಂಡು ಬಂದುದರಿಂದಲೂ ಮತ್ತು ನನ್ನ ಬಾಕ್ಯಗಳಿಗೆ ಜವಾಬು ಕೊಟ್ಟ ಓವರ್‌ಭಕ್ತರು ಅವರ ಸ್ನೇಹಿತರೊಡನೆ ಶ್ರೀ ಅಯ್ಯಪ್ಪನವರನ್ನು ನಮ್ಮ ಒಂದೇ ಒಂದ ಜವಾಬಿನಿಂದ ಬಾಯಿ ಮುಚ್ಚಿಸಿಬಿಟ್ಟೆವು' ಎಂದು ಹೇಳಿದ ಸಂಗತಿ ನನ್ನ ಕಿವಿಗೂ ಮುಟ್ಟಿದುದರಿಂದಲೂ, ನಾನು ಈ ಕಾಲವಿಳಂಬವಾದ ಲೇಖನವನ್ನು ಬರೆದದ್ದಾಗಿದೆ.

ಪುರುಷ ಶ್ರೇಷ್ಠರಾದ ಮಹಾತ್ಮಾ ಗಾಂಧಿಯವರು ಅವರ ಜೀವನ ಚರಿತ್ರೆಯಲ್ಲಿ ತಾನು ಮಾಡಿದ ಪ್ರತಿಯೊಂದು ಕೆಲಸಗಳನ್ನೂ ಮುಚ್ಚುಮರೆ ಇಲ್ಲದೆ ಪ್ರಕಟಿಸುತ್ತಿದ್ದುದಲ್ಲದೆ ಕೆಲವೇಳೆ ಅವರು ಮಾಡಿದ ಕೆಲಸ ಅಥವಾ ಹಿಡಿದ ದಾರಿ ತಪ್ಪೆಂದು ಅವರಿಗೆ ಮನದಟ್ಟಿದ ಕೂಡಲೇ ಅಂತಹ ತಪ್ಪನ್ನು ಒಪ್ಪಿ ಕೊಳ್ಳುವುದು ತನ್ನ ಶಿಷ್ಯರಿಗೂ ಮತ್ತು ಮುಂದಾಳುತನಕ್ಕೂ ಎಂತಹ ಧಕ್ಕೆಯನ್ನು ತರುವಂತಿದ್ದರೂ ಸಹ ಅದನ್ನು ಸ್ವಲ್ಪವೂ ಲೆಕ್ಕಿಸದೆ "ನಾನು ಹಿಮಾಲಯ ಪರ್ವತದಂತಹ ತಪ್ಪನ್ನು ಮಾಡಿಬಿಟ್ಟೆನು" ಎಂಬದಾಗಿ ಒಪ್ಪಿಕೊಳ್ಳುತ್ತಿದ್ದುದಲ್ಲದೆ ಅದನ್ನು ಸ್ವಲ್ಪವೂ ಸಂಕೋಚವಿಲ್ಲದೆ ಬಹಿರಂಗವಾಗಿ ಪತ್ರಿಕೆಗಳಲ್ಲಿ ಪ್ರಕಟಿಸಿಯೂ ಬಿಡುತ್ತಿದ್ದರು. ಮಹಾತ್ಮಜಿಯವರ ಅದ್ವಿತೀಯ ಮಹತ್ವಕ್ಕೆ ಅವರ ಅನೇಕ ಗುಣಗಳು ಕಾರಣ ಭೂತಗಳಾಗಿದ್ದರೂ ಅವುಗಳಲ್ಲಿ ಈ ರೀತಿಯಲ್ಲಿ ತಮ್ಮ ತಪ್ಪನ್ನು ಸಂಕೋಚವಿಲ್ಲದೆ ಒಪ್ಪಿಕೊಳ್ಳುತ್ತಿದ್ದ ಗುಣವು ಸಹಜವಾಗಿಯೂ ಅವರಿಗೆ ನಿಜವಾದ ಪ್ರಾಮುಖ್ಯತೆಯನ್ನು ತಂದಿತ್ತೆಂದು ನನ್ನ ಭಾವನೆ.

ಒಬ್ಬ ವ್ಯಕ್ತಿಯು ತನ್ನ ಸ್ವಂತ ಕಾರುಬಾರುಗಳಲ್ಲಿ ತಾನು ಮಾಡಬಹುದಾದ ತಪ್ಪುಗಳನ್ನು ಬಹಿರಂಗವಾಗಿ ಒಪ್ಪಿಕೊಳ್ಳುವ ಆವಶ್ಯಕತೆ ಇಲ್ಲದಿದ್ದರೂ ಜನರ ಮೂಲಕ ಕಾರ್ಯ ಕಲಾಪಗಳ ಜವಾಬ್ದಾರಿಯನ್ನು ವಹಿಸಿ ಕೊಳ್ಳುವವರು ತಾವು ನಿರ್ವಹಿಸುವ ಸಾರ್ವಜನಿಕ ಕಾರುಬಾರುಗಳಲ್ಲಿ ಸ್ವೇಚ್ಛಾಪ್ರವರ್ತಕರಾಗಿ ನಡೆಯುವುದಾಗಲಿ, ತಿಳಿದೋ ತಿಳಿಯದೆಯೋ ಮಾಡಿದ ತಪ್ಪುಗಳನ್ನು ಒಪ್ಪಿಕೊಳ್ಳದೆ ಅಧಿಕಾರ ಬಲದಿಂದ ತಾನು ಮಾಡಿದ್ದೇ ಸರಿಯೆಂದು "ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ" ವೆಂಬ ರೀತಿಯಲ್ಲಿ ವಾದಿಸುವುದಾಗಲೀ ಕೇವಲ ಯೋಗ್ಯ ಗುಣಗಳೆಂದು ಹೇಳಲು ಸಾಧ್ಯವಿಲ್ಲ. ಅಂತವರು ತಮ್ಮ ಮುಂದಾಳುತನದಿಂದ ತಾವು ನಡೆಸುತ್ತಿರುವ ಸಂಸ್ಥೆಗೂ ಅದರ ಮೂಲೋದ್ದೇಶಕ್ಕೂ ಜನಸಮುದಾಯಕ್ಕೂ ಕೇಡನ್ನು ತರುತ್ತಾರೆ; ಇದು ಅವರ ವೈಯಕ್ತಿಕ ದೃಷ್ಟಿಯಿಂದಲೂ, ದೇಶದ ಜನರ ಹಿತದೃಷ್ಟಿಯಿಂದಲೂ ಸಮಂಜಸವಾದ ಪದ್ಧತಿಯಲ್ಲವೆಂದೂ ಮತ್ತೆ ಹೇಳಬೇಕಾದುದಿಲ್ಲ.

ಮುಜರಾಯಿ ಇಲಾಖೆಯು ಕೊಡಗಿನ ಒಂದು ಸಾರ್ವಜನಿಕ ಸಂಸ್ಥೆ. ಇದರ ಕಾರ್ಯಕಲಾಪಗಳು ದೇಶದ ಮತ್ತು ಇಡೀ ಜನಾಂಗದ ಹಿತದೃಷ್ಟಿಯಿಂದ ಸರಿಯಾಗಿಯೇ ನಡೆಯಬೇಕು. ಈ ಕಾರ್ಯಕಲಾಪಗಳನ್ನು ನಡೆಸುವ ಜವಾಬ್ದಾರಿಯು ಒಂದು ವೇಳೆ ಮಂಡಳಿಯ ಸದಸ್ಯರಾಗಿ ಈಗಿರುವ ಮೆಂಬರುಗಳ ಮೇಲೆ ಬಿದ್ದಿದ್ದರೆ ಆಗ್ಯೆ ಅವರು ನಾವೇನು ಮಾಡುವುದು? ನಮಗೆ ಈ ಕಾರ್ಯಗಳನ್ನು ಈಗಿನ ಸ್ಥಿತಿಗತಿಗಳಲ್ಲಿ ಸಮಂಜಸವಾಗಿ ನಡೆಸಲು ಶಕ್ತಿ ಇಲ್ಲ. ಆದರೆ ಅದನ್ನು ನಿರ್ವಹಿಸದೆ ಬಿಡಲು ವಿಧಿ ಇಲ್ಲ. ಆದುದರಿಂದ ನಾವು ನಮ್ಮ ಮನಸ್ಸಿಗೆ ತೃಪ್ತಿಯಾಗುವಂತೆ ನಮ್ಮ ಜವಾಬ್ದಾರಿಕೆಯನ್ನು ನಿರ್ವಹಿಸುತ್ತಿದ್ದೇವೆ. ದೇವರೂ ಸಾರ್ವಜನಿಕರೂ ಇದರಿಂದ ತೃಪ್ತರಾಗಿಕೊಳ್ಳಬೇಕು. ಇದರಿಂದ ಹೆಚ್ಚು ಮಾಡಲು ನಮ್ಮಿಂದ ಸಾಧ್ಯವಿಲ್ಲ"ವೆಂದು ಹೇಳಬಹುದಿತ್ತು.

ಆದರೆ ನಿಜಸ್ಥಿತಿಯು ಹಾಗಲ್ಲ. ಇವರೇ ಮುಂದೆ ಬಂದು ನಾವು ಈ ಕಾರುಬಾರಗಳನ್ನು ಸಮಂಜಸವಾಗಿ ನಡೆಸುತ್ತೇವೆ. ನಮಗೆ ದೇಶಸ್ಥರು ನಿಮ್ಮ ಅಮೂಲ್ಯವಾದ ಓಟನ್ನು ಕೊಟ್ಟು ನಮಗೆ ಆ ಜವಾಬ್ದಾರಿಕೆಯನ್ನು ವಹಿಸಿಕೊಡಿ ಎಂಬ ದಾಗಿ ಮತ ಸಂಗ್ರಹಮಾಡಿ ಉಮೇದುವಾರರಾಗಿ ನಿಂತು ಎದುರಾಳಿಗಳೊಡನೆ ಸ್ಪರ್ಧೆ ಮಾಡಿ ಬಹುಮತದಿಂದ ಚುನಾಯಿಸಿ ಬಂದ ಪ್ರತಿನಿಧಿಗಳಾಗಿರುತ್ತಾರೆ. ಈ ಇಲಾಖೆಯ ಸ್ಥಿತಿಗತಿ ಹೇಗಿದೆ, ಈ ಕಮಿಟಿಯ ಅಧಿಕಾರ ಸ್ವಾತಂತ್ರ್ಯಗಳು ಎಷ್ಟರ ಮಟ್ಟಿಗಿದೆ ಎಂಬುವುದು ಈ ಮೆಂಬರುಗಳಿಗೆ ಮುಂಚಿತವಾಗಿಯೂ ಮನವರಿಕೆ ಇತ್ತು. ಆದಾಗ್ಯೂ ಅವರಿಂಗಿ ಸ್ಪರ್ಧಿಸಿ ಜನರ ಓಟು ಪಡೆದು ರಾತ್ರಿ ಕಂಡ ಬಾವಿಗೆ ಹಗಲು ಬಿದ್ದಂತೆ ಜವಾಬ್ದಾರಿಕೆಯನ್ನು ವಹಿಸಿಕೊಂಡ ಮೇಲೆ ಈಗ ನಾವೇನು ಮಾಡುವುದು ಎಂಬಂಗೆ ತಕ್ಕಷ್ಟು ಅಧಿಕಾರವಿಲ್ಲ, ನಾವು ಇನ್ನು ಮಾಡುವುದು ಸಾಲದುದಕ್ಕೆ ಮನೆ ಮನೆ ಭಿಕ್ಷೆ ಬೇಡಬೇಕೇ? ಎಂಬ ದಾಗಿ ಬರೆಯುವುದರಲ್ಲಿ ಅರ್ಥವಿಲ್ಲ.

'ಶಾಸೋಮಾಸತೆಸು ಮೇಲೆ ಭಕ್ತಿಯೂ, ಪ್ರೀತಿಯೂ ಇರುವವರು ವರ್ಷಕ್ಕೊಂದು ಸಲ ನಡೆಯುವ ಜಾತ್ರೆಗೆ ಯಾರೂ ಕೇಳದೆಯೇ ದಾನ ಮಾಡಬೇಕು. ಆವೇರಿಪೋಸ್ ಕ್ಲಬ್, ಕುಗರ ಇಂಡಸ್ಟ್ರೀಸ್,...ಮೊದಲಾದ ಅನೇಕ ಕೆಲಸಗಳಿಗೆ ಮೇಜರಿನಲ್ಲಿ ವಿನಂತಿಸಿ ಪ್ರಕಟಿಸಿದುದಕ್ಕೆ ಸಹಾಯಗಳು ಹಣ ದೊರೆತಿದ್ದು ಶ್ರೀ. ಅಯ್ಯಪ್ಪನವರಿಗೆ ತಿಳಿದಿಲ್ಲವೇ' ಎಂಬದಾಗಿ ಈ ಭಕ್ತರು ಬರೆದಿದ್ದಾರೆ. 'ಭಕ್ತರ' ಈ ಅಭಿಪ್ರಾಯವನ್ನು ಓದಿದವರೆಲ್ಲಾ, ಅವರ ಮನಸ್ಸಿನಲ್ಲೇ ಮಂಗಳಾಕನಗೆ ನಕ್ಕು, ಈ ಪುಣ್ಯಾತ್ಮರಿಗೆ ಸಾಮಾನ್ಯ ಜ್ಞಾನವಾದರೂ ಇರುವುದಿಲ್ಲವೇ ಎಂಬದಾಗಿ ಭಾವಿಸಿರಬಹುದಾಗಿ ನನ್ನ ಭಾವನೆ. ಯಾತಕ್ಕೆಂದರೆ, 'ಕಾವೇರಿ ಪೋಲೋ ಕ್ಲಬ್, ಕುಗರ್ ಟ್ರಾನ್ಸ್‌ಪೋರ್ಟ್' ಇದಕ್ಕೆ ಪೇಪರುಗಳಲ್ಲಿ ಚಂದಾ ಕೊಡಿ ಎಂದು ಪ್ರಕಟಿಸಿದರಲ್ಲ ತೀರ್ ತೆಗೆದುಕೊಳ್ಳ, ಪ್ರತಿ ಮೇರಿಗೆ ಇಷ್ಟು ಲಾಭ ತೊಡತ್ತೇವೆಂದು ಪ್ರಕಟಿಸಿದ್ದು ಅಷ್ಟೇ ಅಲ್ಲ, ಹಾಗೆ ಲಾಭಕ್ಕೆ ಕೊಡುವ ಶೇರುಗಳನ್ನು ಜನಮಾಯಿಸಲು ಪೇಪರುಗಳಲ್ಲಿ ಪ್ರಕಟಿಸಿದುದಲ್ಲದೆ ಏಜಂಟರುಗಳಿಗೆ ಶೇಕಡ ೧೦ರ ಲೆಕ್ಕದಿಂದ ಕಮಿಷನ್ ಕೊಟ್ಟು ಮನೆ ಮನೆಗೆ ಕಳಿಸುತ್ತೇವೆ. ಈ ಪರಿಸ್ಥಿತಿಯು ಹೀಗಿರ ವಾಗ್ಯೆ, ಧರ್ಮಕಾರ್ಯಕ್ಕೆ ಬೇಕಾಗುವ ಹಣ ಮತ್ತು ಆಸ್ತಿಯನ್ನು ಸೇರಿಸುವುದರಲ್ಲಿ ಒಂದು ವಿಧಾಂತಿಯನ್ನು ಹೊಂದಿಸಿ ಮಂಡಳಿಯವರು ಕೂಡಿಕೊಂಡು ಸಾರ್ವಜನಿಕರಿಂದ ಮಾಡಬಹುದೆಂದು ಗ್ರಹಿಸಿ ಈ 'ಭಕ್ತರ' ಅಭಿಪ್ರಾಯವು ಸ್ಪಷ್ಟವಾಗಿಯೂ ಗೋಚರವಾಗುತ್ತದೆ.

ಗೋಪುರವೊ, ಅಲ್ಲ ಪ್ರೆಸಿಡೆಂಟರು ಮತ್ತು ಕಮಿಟಿ ಮೆಂಬರುಗಳು ಗ್ರಾಮ ಗ್ರಾಮಾಂತರಗಳಿಗೆ ಹೋಗಿ ಮೀಟಿಂಗ್ ನಡೆಸಿ, ಕೋಆಪರೇಟಿವ್ ಸೊಸೈಟಿಗಳ ಮೂಲಕವೂ, ಏಜೆಂಟರುಗಳ ಮೂಲಕವೂ ಪ್ರಯತ್ನಪಟ್ಟಿದ್ದಾದರೆ, ಗದ್ದೆಗಳಿಗೆ ಎಕ್ರೆಗೆ ೧ ಸೇರಿನಂತೆ ಭತ್ತವನ್ನೂ, ಕಾಫಿ ತೋಟಗಳಿಂದ, ಎಕ್ರೆಗೆ ಎರಡಾಣೆಯಂತೆ ಹಣವನ್ನೂ ವಸೂಲಿಮಾಡಬಹುದೆಂದು ನಾನು ಕೊಟ್ಟ ಸಲಹೆಯು ಗಾಳಿಗೋಪುರವೋ ಎಂಬುದನ್ನು ದೇಶಸ್ಥರೇ ಊಹಿಸಿಕೊಳ್ಳಲಿ. ಇವರ ತಿಳುವಳಿಕೆ ಬಗ್ಗೆ ನಾನಿಷ್ಟು ಹೇಳುತ್ತೇನೆ. ೧೯೫೨-೫೩ರಲ್ಲಿ ೧೩ ಲಕ್ಷ ಉತ್ಪತ್ತಿ ಇದ್ದ ನಮ್ಮ ಸರಕಾರದ ಉತ್ಪತ್ತಿಯು ಈ ದಿವಸ ೯೦ ಲಕ್ಷಕ್ಕೆ ಏರಿದೆ. ಕೊಡಗಿನ ವಿಸ್ತೀರ್ಣವು ಆಗಿದ್ದಷ್ಟೇ ಈಗಲೂ ಇದೆ, ಆದರೆ ಈ ಮುಜ್ರಾಯಿ ಇಲಾಖೆಯ ಉತ್ಪತ್ತಿಯು ಹಲವು ವರ್ಷಗಳ ಹಿಂದೆ ಎಷ್ಟಿತ್ತೋ ಅಷ್ಟೇ ಈಗಲೂ ಇದೆ. ಅದಕ್ಕಿಂತಲೂ ಸ್ಥಿತಿಗತಿಯು ಕೇವಲ ಕೆಳಗಿಳಿದಿದೆ ಎಂದರೂ ತಪ್ಪಾಗಲಾರದು. ಸರಕಾರದ ಉದ್ಯೋಗಸ್ಥರು ಈ ಇಲಾಖೆಯ ಕಾರ್ಯಕಲಾಪಗಳನ್ನು ನಡೆಸುತ್ತಿರುವಾಗ್ಗೆ ಸುಮಾರು ೧೩ ಸಾವಿರ ರೂಪಾಯಿ ಉಳಿತಾಯ ಇದ್ದದ್ದು ನನಗೆ ತಿಳಿದುಬಂದಿದೆ.

೮-೧೦ ವರ್ಷಗಳಿಂದ ಪಾಳು ಬಿದ್ದ ದೇವಾಲಯಗಳು ಎಷ್ಟು ಊರ್ಜಿತವಾಗಿವೆ ಎಂದು ನೆನಪಿಟ್ಟೀರಿ’ ಎಂಬುದಾಗಿ ಈ ‘ಭಕ್ತರು’ ಬರೆದಿದ್ದಾರೆ. ಹಾಗೆ ಈ ಕಮಿಟಿಯವರು ಊರ್ಜಿತಪಡಿಸಿದ್ದರೆ ಇವರು ಆಯಾ ದೇವರುಗಳ ಪ್ರೀತಿಗೆ ಪಾತ್ರರಾಗುವುದಲ್ಲದೆ ದೇಶಸ್ಥರ ವಂದನೆಗೂ ಅರ್ಹರಾಗುತ್ತಾರೆ. ಆದರೆ ಹಾಗೆ ಊರ್ಜಿತವಾದ ಎಂಟು ಹತ್ತು ದೇವಸ್ಥಾನಗಳು ಯಾವುವೆಂದು ಅವರು ಬರೆಯಲಿಲ್ಲ.

ದೇವಸ್ಥಾನದ ಉತ್ಪತ್ತಿಯು ಈಗ ಎಲ್ಲಾ ಸಾಮಾನುಗಳಿಗೂ ಕ್ರಯವೇರಿದ ಸ್ಥಿತಿಯಲ್ಲಿ ಬಹಳ ಕಡಿಮೆಯೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಈ ಕಮಿಟಿಯವರು ದೇವಸ್ಥಾನಗಳ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಯಾವ ಕ್ರಮ ಕೈಗೊಂಡಿರುತ್ತಾರೆ? ಹಣ ಸಾಲದಿದ್ದರೆ ಸರಕಾರಕ್ಕೆ ಅರ್ಜಿ ಬರೆದುಕೊಳ್ಳುವುದು. ಆಗ ಸರಕಾರದವರು ಇವರ ಕೋರಿಕೆಯನ್ನು ನಿರಾಕರಿಸಿದರೆ, ಇವರಿಗೆ ಇಷ್ಟರವರೆಗೆ ಕಂಡ ಒಂದು ದಾರಿ ಎಂದರೆ ಖರ್ಚು ಕಡಿತ ಮಾಡುವುದು. ಇವೆರಡು ದಾರಿಗಳಲ್ಲದೆ ಮೂರನೆಯ ದಾರಿಯಾದ ಉತ್ಪತ್ತಿಯನ್ನು ಹೆಚ್ಚಿಸುವ ಪ್ರಯತ್ನಕ್ಕೆ ಇವರು ಕೈ ಹಾಕಿದಂತೆ ಕಂಡು ಬರಲಿಲ್ಲ. ದೇವಸ್ಥಾನದ ಆಡಳಿತಕ್ಕೆ ಒಳಪಟ್ಟ ೨,೭೦೦ ಬಟ್ಟಿ ಭೂಮಿಯಿಂದ ಬರೀ ೩೪೦ ಬಟ್ಟಿ ವರಮಾನ ಬರುತ್ತದಂತೆ. ಮೊನ್ನೆ ಕಾನೆ ಕಳೆ ಎತ್ತಿದ ಸಿದ್ದಾಪುರದ ಸ್ವಾಮಿಯವರು ಕಾಸಿಲ್ಲದೆ ಕೊಡಗಿಗೆ ಬಂದು ಈಗಲೇ ವರ್ಷಕ್ಕೆ ಎಂಟು ಹತ್ತು ಸಾವಿರ ರೂಪಾಯಿ ಆತ ಮಕ್ಕೆ ಹುಟ್ಟುವಳಿಯಾಗುವಂತೆ ಮಾಡಿರುವಾಗ ೭ ಸಾವಿರ ಚಿಲ್ಲರೆ ಬಟ್ಟಿ ಭೂಮಿ ಮತ್ತು ೭೧೭ ಎಕರೆ ಹಸನಾದ ಕಾಡುಗಳಿರುವ ಈ ಇಲಾಖೆಯು ಹೀಗೆ ಹಣದ ಅಭಾವದಿಂದ ನರಳುವದು ಸರಿಯೆ?

ಈ ಇಲಾಖೆಯ ಉತ್ಪತ್ತಿಯನ್ನು ಹೆಚ್ಚಿಸುವ ದೃಷ್ಟಿಯಿಂದ ದೇವಸ್ಥಾನಕ್ಕೆ ಸೇರಿದ ಏಳುನೂರು ಚಿಲ್ಲರೆ ಎಕರೆಗಳ ಜಾಗದಲ್ಲಿ ಮರಗಳನ್ನು ಬಹಳವಾಗಿ ನಷ್ಟಪಡಿಸದೆ, ಆಯಾಯ ಜಾಗಗಳಲ್ಲಿ ಸ್ಥಿತಿಗತಿಗನುಸಾರವಾಗಿ ಕಾಫಿ, ಕಿತ್ತಳೆ, ಏಲಕ್ಕಿ ಮತ್ತು ಒಳ್ಳೆಯ ಮೆಣಸುಗಳ ತೋಟಗಳನ್ನು ಆಗುವಷ್ಟು ಮಾಡಿಸುವುದು, ಇದರ ಆದಿಯ ಖರ್ಚಿಗೆ ಬೇಕಾಗುವ ಹಣವನ್ನು ಸರಕಾರದಿಂದಲೋ ಯಾ ಖಾಸಗಿ ಬೇಂಕು ಯಾ ಜನರಿಂದ ದೀರ್ಘಕಂತಿನ ಸಾಲದಲ್ಲಿ ಪಡೆಯುವುದು.

ಪೂರ್ವದಲ್ಲಿದ್ದಂತೆ, ಗದ್ದೆ ಎಕ್ರೆಗೆ ೨ ಸೇರು ಬತ್ತದಂತೆಯೂ; ಇತರ ಆಸ್ತಿಗಳ ಎಕ್ರೆಗೆ ೨ ಆಣೆ ದುಡ್ಡಿನಂತೆಯೂ ಧರ್ಮದಾಯವನ್ನು ದೇಶದ ಉದ್ದಗಲಕ್ಕೂ ಕೋ-ಆಪರೇಟಿವ್ ಸೊಸೈಟಿಗಳ ಮೂಲಕವೂ, ಅಧಿಕೃತರಾದ ಏಜಂಟರುಗಳ ಮೂಲಕವೂ ವಸೂಲಿ ಮಾಡುವುದು.

ಈ ರೀತಿ ನೀತಿಗಳನ್ನು ಅನುಸರಿಸದೆ ಈಗ ನಡೆಯುತ್ತಿರುವ ಹಾಗೆ ಖರ್ಚು ಕಡಿತ ಮಾಡುತ್ತಾ ಬರುವುದರಲ್ಲಿ ಅರ್ಥವಿಲ್ಲ. ಪೂಜಾರಿಗಳಿಗೆ ಬೇರೆ ಉತ್ಪತ್ತಿ ಇದೆ ಎಂಬುದಾಗಿ ಪೂಜಾ ಸಾಮಾನುಗಳನ್ನು ಕಂಡ ಬಿಟ್ಟಿ ಕಡಿತ ಮಾಡುವದರಿಂದ ಪೂಜಾರಿಗಳನ್ನು ಸಾಮಾನ್ಯವಾಗಿಯೇ ಪೂಜೆಯಲ್ಲಿ ಶ್ರದ್ಧೆಯನ್ನು ಕಡಿಮೆ ಮಾಡಿ ಇತರ ಉತ್ಪತ್ತಿಯ ದಾರಿಗಳನ್ನು ಹಿಡಿಯಲು ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಪೂಜೆಗೆ ಕೊಡುವ ಸಾಮಾನುಗಳನ್ನು ಅವರು ಆಯಾ ಪೂಜೆಗಳಿಗೆ ಸರಿಯಾಗಿ ಉಪಯೋಗಿಸದೆ ದುರುಪಯೋಗಪಡಿಸುತ್ತಾರೆಂದಲ್ಲಿ, ಅಂತಹ ದುರುಪಯೋಗ ಆಗದ ರೀತಿ ಕಮಿಟಿಯವರೂ ಮೇನೇಜರೂ ಮತ್ತು ಪಾರುಪತ್ತೆಗಾರರೂ ನೋಡಿಕೊಳ್ಳಬೇಕೇ ವಿನಃ ಸಾಮಾನನ್ನೇ ಕೊಡದೆ ಇರುವುದು ಸರಿಯಲ್ಲ.

ನಮ್ಮ ಖಾಸಗಿ ಸೌಕರ್ಯಕ್ಕೆ ಬೇಕಾದ ವಸ್ತುಗಳನ್ನೆಲ್ಲಾ ಎಷ್ಟೇ ಕಷ್ಟವಿದ್ದರೂ ನಾವು ಒದಗಿಸಿಕೊಳ್ಳುತ್ತೇವಾಗ ನಮ್ಮನ್ನೆಲ್ಲಾ ಹುಟ್ಟಿಸಿ ಸಲಹುತ್ತಿರುವ ಈಶ್ವರನ ಪೂಜೆಗೆ ಮಾತ್ರ ‘ಹಣವಿಲ್ಲ ಆದುದರಿಂದ ಖರ್ಚು ಕಡಿತ ಮಾಡಬೇಕೆನ್ನುವುದು’ ನಮ್ಮ ಭಕ್ತಿಯ ಅಂತರಾಳವನ್ನು ತೋರಿಸುತ್ತದೆ. ನಾವು ಎಷ್ಟು ಭಕ್ತಿ ಶ್ರದ್ಧೆಯಿಂದ ದೇವರನ್ನು ಪೂಜಿಸುತ್ತೇವೋ ಹಾಗೆಯೇ ದೇವರ ದಯೆಯೂ ನಮ್ಮ ಮೇಲೆ ಬರುತ್ತದೆ. In what ever way men worship me in the same way do I fulfil their desires (Bhagavat Gita).

— ಪಿ. ಜಿ. ಐಯಪ್ಪ.

ನೇಪಾಳದಲ್ಲಿ ಅರಸರ ಆಳಿಕೆ

ನಮ್ಮ ನೆರೆ ರಾಷ್ಟ್ರವಾದ ನೇಪಾಳದಲ್ಲಿನ ರಾಜಕೀಯ ಬಿಕ್ಕಟ್ಟು ಮುಖ್ಯಮಂತ್ರಿ ಮಾತೃಕಾ ಪ್ರಸಾದ ಕೊಯಿರಾಲಾರ ಮಂತ್ರಿಮಂಡಲದ ರಾಜಿನಾಮೆಯಲ್ಲೇ ಕೊನೆಗೊಂಡಿತು. ಅರಸು ತ್ರಿಭುವನರು ತಾವೇ ೧೧ ಜನ ಸಲಹೆಗಾರರ ಸಹಾಯದಿಂದ ಆಡಳಿತ ನಡೆಸಲು ನಿರ್ಧರಿಸಿದ್ದಾರೆ. ಇದು ತಾತ್ಕಾಲಿಕ ಉಪಾಯವೆಂದೂ ಜನಪ್ರಿಯ ಮಂತ್ರಿಮಂಡಲವನ್ನು ರಚಿಸುವ ಪ್ರಯತ್ನಗಳು ಮುಂದುವರಿಯುವವೆಂದೂ ತಿಳಿಯುತ್ತದೆ. ಈ ತಿಂಗಳ ಕೊನೆಗೆ ಸೇರಲಿರುವ ನೇಪಾಳ ಕಾಂಗ್ರೆಸ್ ಮಹಾ ಸಮಿತಿಯ ಸಭೆಯ ನಂತರ ಪರಿಸ್ಥಿತಿ ಹೆಚ್ಚು ತಿಳಿಯಾಗಬಹುದು. ಮಾತೃಕಾ ಪ್ರಸಾದರು ರಾಜಿನಾಮೆಯ ನಂತರ ಮಾಡಿದ ಒಂದು ಭಾಷಣದಲ್ಲಿ ತಾವು ಭಾರತ ವಿರೋಧಿಗಳಿರುವೆವೆಂಬ ತಮ್ಮ ವಿರೋಧಿಗಳ ಆರೋಪದಲ್ಲಿ ಸತ್ಯಾಂಶವಿಲ್ಲೆಂದು ಸಾರಿದ್ದಾರೆ. ಭಾರತವು ತನ್ನ ವರ್ಚಸ್ಸನ್ನು ಉಪಯೋಗಿಸಿ ನೇಪಾಳದ ಪರಿಸ್ಥಿತಿಯನ್ನು ಹಿಡಿತಕ್ಕೆ ತರಬೇಕೆಂದು ನೇಪಾಳ ‘ರಾಷ್ಟ್ರೀಯ’ ಕಾಂಗ್ರೆಸಿನ ಅಧ್ಯಕ್ಷ [illegible] ದಿಲ್ಲಿಯಿಂದ ಒಂದು ಹೇಳಿಕೆ ಹೊರಡಿಸಿದ್ದಾರೆ. [illegible] ಸಾರ್ವತ್ರಿಕ ಚುನಾವಣೆ ಆಗುವ ನಿರೀಕ್ಷೆಯಿದೆ. ಆ ವರೆಗೆ ನೇಪಾಳದ ರಾಜಕೀಯ ಪಕ್ಷಗಳ ನಿಜವಾದ ಬಲಾಬಲದ ಅಂದಾಜು ಮಾಡುವುದು ತುಂಬ ಕಠಿಣ.

ಭಾರತವು ಎಲ್ಲರಿಗೂ ಬೇಕಾಗಿದೆ

ಭಾರತ ರಾಷ್ಟ್ರವೊಂದು ಕಮ್ಯೂನಿಸ್ಟ್ ಮತ್ತು ಆಂಗ್ಲೋ-ಅಮೇರಿಕನ ಜನಗಳಿಗೆ ಬೇಕಾಗಿರುವ ರಾಷ್ಟ್ರವಾಗಿದೆಯೆಂದೂ ಈ ಎರಡು ಬಣಗಳು ಭಾರತವನ್ನು ನಂಬಿಕೆಯಿಂದ ನೋಡುತ್ತಿರುವುದಾಗಿಯೂ ಅಮೆರಿಕೆಯಲ್ಲಿ ಭಾರತದ ರಾಯಭಾರಿಗಳೆಂದು ನೇಮಕವಾಗಿರುವ ಶ್ರೀ ಜಿ. ಎಲ್. ಮೆಹತಾರವರು ಹೇಳಿದರು.

“ನಮ್ಮಲ್ಲಿ ಹೆಚ್ಚಿನ ಸೈನ್ಯಬಲ ಮತ್ತು ಔದ್ಯೋಗಿಕ ಬೆಳವಣಿಗೆ ಇಲ್ಲದಿದ್ದರೂ ಜಗತ್ತಿನ ಪ್ರತಿಯೊಂದು ರಾಷ್ಟ್ರವೂ ಭಾರತವನ್ನರಿಯಲು ಬಯಸುತ್ತದೆ. ಗಾಂಧೀಜಿಯವರ ಸಂದೇಶವನ್ನು ಭೀತಿಯಿಂದ ಆವರಿಸಲ್ಪಟ್ಟ ಜಗತ್ತಿಗೆ ತಿಳಿಸಿ ಹೇಳುವುದು ಪ್ರತಿಯೊಬ್ಬ ರಾಯಭಾರಿಯ ಕರ್ತವ್ಯವು” ಎಂದೂ ಅವರು ಹೇಳಿದರು.

ಆ॥ ವಿನೋಬಾರಿಗೆ ಕಾಯಿಲೆ

ತಾ: ೧೬ರಿಂದಲೂ ಜ್ವರದಿಂದ ನರಳುತ್ತಿರುವ ಆ॥ ವಿನೋಬಾ ಭಾವೆಯವರು ತಾ: ೧೭ರ ಸಂಜೆ ಪ್ರಾರ್ಥನೋತ್ತರ ಭಾಷಣ ಮಾಡಲಿಲ್ಲ. ಅವರಿಗೆ ಇಂದು ೧೦೩ ಡಿಗ್ರಿ ಜ್ವರವಿದ್ದಿತು. ಅವರ ಹಾಸಿಗೆ ಇದ್ದ ಕೋಣೆಯಲ್ಲಿಯೇ ಪ್ರಾರ್ಥನೆ ನಡೆಯಿತು.

ಸ್ವೀಕಾರ.

“ಪ್ರಗತಿ” ಯೆಂಬ ಮಾಸ ಪತ್ರಿಕೆಯ ಪ್ರಥಮ ಸಂಚಿಕೆಯು ನಮ್ಮ ಕೈ ಸೇರಿದೆ. ಇದು ಕಳೆದ ಜುಲೈ ತಿಂಗಳಲ್ಲಿ ಪ್ರಾರಂಭವಾಗಿದೆ. ಇದರ ಸಂಪಾದಕರು ಸೋಮವಾರಪೇಟೆಯ ಬೇಳೂರಿನ ಸಿ. ಮಲ್ಲಪ್ಪನವರು. ಕೊಡಗಿನಲ್ಲಿ ಮಾಸಪತ್ರಿಕೆಗಳೇ ಇಲ್ಲದಿರುವಲ್ಲಿ ‘ಕನ್ನಡನಾಡು ನುಡಿಗಳ ಸೇವೆ ಮಾಡುವ ಮತ್ತು ದೀನ ದಲಿತರನ್ನು ಪ್ರಗತಿಹಾದಿಯಲ್ಲಿ ಕೊಂಡೊಯ್ಯುವ’ ಉದ್ದೇಶದಿಂದ ಹೊರಟಿರುವ ಈ ಮಾಸ ಪತ್ರಿಕೆಗೆ ನಮ್ಮ ಸ್ವಾಗತವಿದೆ. ವಿದ್ಯಾವಂತರ ಸಂಖ್ಯೆ ಹೆಚ್ಚಿರುವ ಕೊಡಗಿನಲ್ಲಿ ಇದಕ್ಕೆ ಸಾಕಷ್ಟು ಪ್ರೋತ್ಸಾಹ ದೊರೆಯಲೆಂದು ಆಶಿಸುತ್ತೇವೆ.

“ಕೊಡಗು ಸಮಾಚಾರ” ವೆಂಬ ವಾರ ಪತ್ರಿಕೆಯು ಈ ತಾರೀಕು ೧೫ರಲ್ಲಿ ಶ್ರೀ ಬಿ. ಕೆ. ಎಸ್. ಮೂರ್ತಿಯವರಿಂದ ಮಡಿಕೇರಿ ‘ಪ್ರಕಾಶ’ ಪ್ರೆಸ್ಸಿನಲ್ಲಿ ಪ್ರಕಟಿಸಲ್ಪಟ್ಟಿದೆ. ಇದರ ಪ್ರಥಮ ವಿಶೇಷ ಸಂಚಿಕೆಯು ನಮ್ಮ ಕೈ ಸೇರಿದೆ. ಕೊಡಗಿನಲ್ಲಿ ಇದು ಮೂರನೆಯ ವಾರಪತ್ರಿಕೆಯಾಗಿದೆ. ಜನಜಾಗೃತಿಯ ಈ ಕಾಲದಲ್ಲಿ ಯೋಗ್ಯ ಪತ್ರಿಕೆಗಳ ಸಂಖ್ಯೆ ಹೆಚ್ಚಲೇಬೇಕಾಗಿದೆ. ಇದರ ಸಂಪಾದಕರು ಯಾರೆಂದು ಪ್ರಕಟವಾಗದಿದ್ದರೂ ‘ಜನಜಾಗೃತಿಯ ಹಾಗೂ ದೇಶೋದ್ಧಾರಕ ವಿಚಾರಗಳನ್ನು ಸ್ವತಂತ್ರವಾಗಿ ಪ್ರತಿಪಾದಿಸಿ ದೇಶದ ಏಳಿಗೆಗೆ ಯತ್ನಿಸುವ’ ಈ ಸಹ ಉದ್ಯೋಗಿಗೆ ನಮ್ಮ ಸ್ವಾಗತವಿದೆ.

—ಸಂಪಾದಕ.

ಮಧ್ಯಪ್ರದೇಶ ವಿಧಾನ ಸಭೆಯಲ್ಲಿ ಮುಖ್ಯ ಮಂತ್ರಿ ಪಂಡಿತ ರವಿಶಂಕರ ಶುಕ್ಲರು ವೇಶ್ಯಾವೃತ್ತಿ ನಿರ್ಬಂಧಕ್ಕೆ ಸಂಬಂಧಿಸಿದ ಮಸೂದೆಯನ್ನು ಮಂಡಿಸಿ ಅದನ್ನು ಸಾರ್ವಜನಿಕ ಅಭಿಪ್ರಾಯಕ್ಕಾಗಿ ಪ್ರಸಾರಗೊಳಿಸಬೇಕೆಂದು ಸೂಚಿಸಿದ್ದು ಅಲ್ಲಿ ಮಾನ್ಯವಾಗಿದೆ.

ಡೆಲ್ಲಿ ರಾಜ್ಯದ ಭಾರತ ಸೇವಕ ಸಮಾಜದ ಅಧ್ಯಕ್ಷರಾದ ಶ್ರೀಮತಿ ಇಂದಿರಾ ಗಾಂಧಿಯವರು ಈ ಸಮಾಜದ ಕಾರ್ಯಕ್ಕಾಗಿ ತಾವು ಪ್ರತಿ ದಿನ ಐದು ತಾಸುಗಳನ್ನು ಮೀಸಲಾಗಿಡುವದಾಗಿ ಹೇಳಿರುವರು.

ಅಲಹಾಬಾದ್ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ ಮಿ. ಗುಲಾಮ ಹಸನ ಮತ್ತು ಬೊಂಬಾಯಿ ಹೈಕೋರ್ಟ್ ನ್ಯಾಯಾಧೀಶ ಶ್ರೀ ನಟವರಲಾಲ ಹರಿಲಾಲ ಭಗವತಿ ಇವರಿಬ್ಬರೂ ಇದೇ ಸೆಪ್ಟೆಂಬರ್ ೧ರಿಂದ ಹಿಂದೂಸ್ಥಾನದ ವರಿಷ್ಠ ನ್ಯಾಯಾಧೀಶರೆಂದು ನೇಮಿಸಲ್ಪಟ್ಟಿದ್ದಾರೆ.

ಶ್ರೀ ಕೆ. ಯಂ. ಮೊಗಪ್ಪನವರು,
“ಕೊಡಗು” ಏಜೆಂಟರು,
ಸೋಮವಾರಪೇಟೆ.

ಹಿಂಸಕ ಮತ್ತು ಅಹಿಂಸಕ ತುಲನಾತ್ಮಕ ವಿವೇಚನೆ

(ಆಚಾರ್ಯ ವಿನೋಬಾರವರ ಪ್ರಾರ್ಥನಾ ಪ್ರವಚನಗಳಿಂದ ಸಂಕಲಿತ)

ಲೇ: –ಶ್ರೀ ನಾಯಕ, ಪ್ರತಿನಿಧಿ, ಸರ್ವಸೇವಾ ಸಂಘ ಇವರಿಂದ

ಇಂದು ನಮಗೆ ಹಿಂಸೆ ಮತ್ತು ಅಹಿಂಸೆ ಎರಡು ಮಾರ್ಗಗಳಲ್ಲೊಂದನ್ನು ಆಯ್ದುಕೊಳ್ಳಲು ಸ್ವಾತಂತ್ರ್ಯವಿದೆ. ನಾವು ಯಾವದನ್ನು ತಿದ್ದುಕೊಳ್ಳಬೇಕೆಂಬುದನ್ನು ಭಾರತೀಯರು ವಿಚಾರಿಸಲಿ. ಗಾಂಧೀಜೀಯವರ ಕಾಲಕ್ಕೆ ಈ ಆಯ್ಕೆಯ ಸ್ವಾತಂತ್ರ್ಯವಿದ್ದಿಲ್ಲ. ಯಾಕೆಂದರೆ ದೇಶವು ಗುಲಾಮಗಿರಿಯಲ್ಲಿತ್ತು. ಅಹಿಂಸೆಯ ಹೊರತು ಬೇರೆ ದಾರಿ ಇದ್ದಿಲ್ಲ. ನಾವು ಅಸಹಾಯರಿದ್ದೆವು. ನಮಗೆ ಒಬ್ಬ ಮುಂದಾಳು ಸಿಕ್ಕನು. ಅವನ ಆಧಾರದಿಂದ ನಾವು ಅಹಿಂಸೆಯ ಆಶ್ರಯ ತಕ್ಕೊಂಡೆವು. ಅದರಿಂದ ಕೆಲವು ಫಲಪ್ರಾಪ್ತಿಯೂ ಆಯಿತು. ಆದರೆ ಇಂದು ನಮ್ಮ ದೇಶವು ಸ್ವತಂತ್ರವಾಗಿದೆ. ಈಗ ನಾವು ಅಹಿಂಸೆಯ ಮಾರ್ಗವನ್ನು ಸ್ವೀಕರಿಸಬೇಕೋ ಯಾ ಹಿಂಸಾ ಮಾರ್ಗವನ್ನು ಎಂಬುದನ್ನು ವಿಚಾರಿಸಿ ನಿರ್ಣಯ ಮಾಡಬೇಕು. ನಮಗೆ ಇಷ್ಟ ಬಂದಂತೆ ನಾವು ನಿರ್ಣಯ ಮಾಡಬಹುದು. ಎರಡೂ ಶಕ್ತಿಗಳ ತುಲನಾತ್ಮಕ ವಿಚಾರ ಮಾಡಿ ನಾವು ನಿರ್ಣಯಕ್ಕೆ ಬರಬೇಕು. ನನ್ನ ಅಭಿಮತವಾದರೋ ಹಿಂದುಸ್ಥಾನದ ವಾತಾವರಣ, ಹಿಂದೀ ಜನತೆಯ ಮನೋದಶೆ, ಇಲ್ಲಿಯ ಸಾಧುಸಂತರು ಜನತೆಗೆ ಕೊಟ್ಟ ಶಿಕ್ಷಣ, ನಮ್ಮ ದೇಶದ ವಿಶಾಲಕ್ಷೇತ್ರ, ಅದರೊಳಗೆ ವಾಸಿಸುವ ಮಿಶ್ರಿತ ಸಮಾಜ, ಇವೆಲ್ಲವುಗಳನ್ನು ವಿಚಾರದಲ್ಲಿ ತಕ್ಕೊಂಡರೆ ಮತ್ತು ಹಿಂಸೆಯ ಮೂಲಕ ಇಂದು ಆದ ಜಗತ್ತಿನ ದುರ್ದೆಸೆಯನ್ನು ಲಕ್ಷಿಸಿದರೆ, ಅದೇ ಪ್ರಕಾರ ಹಿಂಸೆಯು ಜನತೆಗೆ ವಿಜ್ಞಾನವು ಕೂಡಿಕೊಂಡರೆ, ಜಗತ್ತಿನ ವಿನಾಶವೇ ಆಗುವದೆಂಬುದನ್ನು ಸಹ ಲಕ್ಷಿಸಿದರೆ ನಮ್ಮ ಮುಂದೆ ಕೇವಲ ಅಹಿಂಸೆಯ ಒಂದೇ ಮಾರ್ಗವು ಉಳಿಯುತ್ತದೆ.

ಹಿಂಸೆಯ ನಿಷ್ಫಲತೆ.

ಅನೇಕ ಶತಮಾನಗಳಿಂದ ಹಿಂಸಾ ಶಕ್ತಿಯ ಪ್ರಯೋಗವು ನಡೆದಿದೆ. ಈ ಪ್ರಕಾರ ಇಷ್ಟೆಲ್ಲ ಸಂಘಟಿತ ಹಿಂಸೆಯ ಪ್ರಯೋಗ ನಡೆದರೂ ಅದು ಎಲ್ಲಿಯೂ ಪರಿಣಾಮಕಾರಿಯಾಗಿಲ್ಲ. ಜಗತ್ತಿನ ಸಮಸ್ಯೆಯು ಅದರಿಂದ ಬಗೆಹರಿದಿಲ್ಲ. ವಿಜ್ಞಾನದ ಬೆಳವಣಿಗೆಯು ಈ ದಿನಗಳಲ್ಲಂತೂ ಹಿಂಸೆಯ ನಿರುಪಯುಕ್ತತೆಯು ಹೆಚ್ಚೆಚ್ಚು ಪ್ರಕಟವಾಗುತ್ತಿದೆ. ಹೀಗಿದ್ದರೂ ಮನುಷ್ಯನಿಗೆ ಬೇರೆ ಯಾವದೂ ಸೂಚಿಸುವದಿಲ್ಲ. ಮತ್ತು ಯಾವದೊಂದು ತೊಡಕು ಬಂದೊಡನೆ ಅವನು ಹಿಂಸೆಯನ್ನಾಶ್ರಯಿಸುತ್ತಾನೆ. ಆದರೆ ಹಿಂಸೆಯಲ್ಲಿದ್ದ ಶಕ್ತಿಗಿಂತ ಹೆಚ್ಚಿನ ಹಾಗೂ ಖಚಿತ ಪರಿಣಾಮಕಾರಿಯಾದ ಶಕ್ತಿಯು ಅಹಿಂಸೆಯಲ್ಲಿದೆ. ಮಾನವನು ಅದರ ಶೋಧನನ್ನು, ಪ್ರಯೋಗವನ್ನು ಬಹಳ ಸಾರೆ ವ್ಯಕ್ತಿಗತ ಜೀವನದಲ್ಲಿ ಮಾಡಿರುವನು. ಸ್ವಲ್ಪ ಮಟ್ಟಿಗೆ ಕುಟುಂಬ ಜೀವನದಲ್ಲೂ ಮಾಡಿರುವನು. ಅಲ್ಪಾಂಶದಲ್ಲಿ ಸಾಮಾಜಿಕ ಜೀವನದಲ್ಲೂ ಮಾಡಿರುವನು. ವ್ಯಾಪಕ ಪ್ರಮಾಣದಲ್ಲಿ ಅಹಿಂಸೆಯ ಪ್ರಯೋಗ ಮಾಡುವ ಸಂಧಿಯು ಈಗ ಬಂದಿದೆ. ಆದ್ದರಿಂದ ಹಿಂಸಾ ಶಕ್ತಿಯ ಶೋಧದಲ್ಲಿ ಎಷ್ಟೆಷ್ಟು ಹೆಚ್ಚು ಮಾಡಿ ನಮ್ಮೊಳಗೆ ತೊಡಗುವರೋ ಅಷ್ಟು ಪ್ರಮಾಣದ ಮೇಲೆ ಜಗತ್ತಿನ ಕಲ್ಯಾಣವಾಗುವದು.

ಮೂಢ ಶಕ್ತಿಯ ಮೇಲೆ ವಿಶ್ವಾಸ!

ಅತ್ಯಂತ ಕಠಿಣ ಸಮಸ್ಯೆಯನ್ನು ಸಹ ಅಹಿಂಸೆಯಿಂದಲೇ ಪರಿಹರಿಸಲು ಸಮರ್ಥರಿದ್ದೇವೆಂದು ನಮ್ಮೊಳಗಿನ ಯಾರೊಬ್ಬರೂ ದೃಢಚಿತ್ತವೇ ಹೇಳಬಲ್ಲರು. ಬುದ್ಧಿಯಿಂದ ಸಿದ್ಧಿ ಮಾಡುವ ಸಂಗತಿ ಇದಲ್ಲ. ಬುದ್ಧಿ ಶಕ್ತಿಗೆ ಇತಿಮಿತಿ ಇದೆ. ಅದು ತನ್ನ ಈ ಇತಿಮಿತಿಯೊಳಗೇ ಕೆಲಸ ಮಾಡಬಲ್ಲದು. ಇದಕ್ಕೂ ಮುಂದೆ ಅದರ ಶಕ್ತಿ ನಡೆಯುವದಿಲ್ಲ. ಆಗ ಮನುಷ್ಯನು ಶ್ರದ್ಧೆಯಿಂದಲೇ ಕೆಲಸ ಮಾಡಬೇಕಾಗುತ್ತದೆ. ಆದರೆ ನಾನು ಇದಕ್ಕೂ ಮುಂದೆ ಹೋಗಿ ಪ್ರಶ್ನೆ ಮಾಡುವದೇನಂದರೆ– ಹಿಂಸೆಯು ಎಲ್ಲ ಸಮಸ್ಯೆಗಳನ್ನು ಬಗೆಹರಿಸಬಲ್ಲದೆಂದು ಸಿದ್ಧವಾಗಿದೆಯೇ? ಯಾವ ಹಿಂಸಾವಾದಿಯು ತಾನೇ ಹಿಂಸೆಯು ಯಾ ಭೌತಿಕ ಶಕ್ತಿಯ ಆಧಾರದಿಂದ ತಾನು ನೈತಿಕವೆಂದೆಣಿಸುವ ಸಮಸ್ಯೆಯನ್ನು ಬಗೆಹರಿಸಬಲ್ಲೆನೆಂದು ಎದೆ ತಟ್ಟಿ ಹೇಳಿಯಾನು? ಭೌತಿಕ ಶಕ್ತಿಯಾದರೋ ಒಂದು ಮೂಢ ಶಕ್ತಿ ಇದೆ. ನೀತಿ ಹೀನರು ಸಹಾ ಅದನ್ನು ಉಪಯೋಗಿಸಬಲ್ಲರು. ಭೌತಿಕ ಶಕ್ತಿಯ ಮೇಲೆ ಅರ್ಥಾತ್ ಹಿಂಸೆಯ ಮೇಲೆ ವಿಶ್ವಾಸವಿಡುವದೆಂದರೆ ಮೂಢ ಶಕ್ತಿಯ ಮೇಲೆ ವಿಶ್ವಾಸವಿಟ್ಟಂತೆ ಸರಿ. ಆದರೆ ಜನರಿಗೆ ಇದರ ಅಭ್ಯಾಸ ಆಗಿ ಹೋಗಿದೆ. ಆದ್ದರಿಂದ ಜನರು ಈಶ್ವರನ ಮೇಲೆ ಸಹ ವಿಶ್ವಾಸವಿಡುವದಿಲ್ಲ. ಆದರೆ ಹಿಂಸೆಯ ಮೇಲೆ ವಿಶ್ವಾಸವಿಡುತ್ತಾರೆ. ಬಾಲಕರಿಗೆ ತಿಳಿಸಿ ಹೇಳಲು ಗುರು ಜಬರು ಅಸಮರ್ಥನಾದಾಗ ಬೆತ್ತದ ಪ್ರಯೋಗ ಮಾಡುತ್ತಾನೆ. ಅರ್ಥಾತ್ ಈಶ್ವರನಿಗಿಂತ ಹೆಚ್ಚಿನ ಶಕ್ತಿಯು ಹೊಡೆಯುವದರಲ್ಲಿದೆಯೆಂದು ತಿಳಿಯುತ್ತಾನೆ. ಇದೊಂದು ಅತ್ಯಂತ ಮೂಢ ಶ್ರದ್ಧೆಯೆಂದು ನನ್ನ ಅಭಿಮತವು. ಆದರೆ ಹಿಂಸೆಯ ಮೇಲೆ ಈ ಪ್ರಕಾರ ಶ್ರದ್ಧೆ ಇಟ್ಟಿಲ್ಲ ಅದು ಬುದ್ಧಿವಂತಿಕೆ ಆಗಿದ್ದರೂ ಅಷ್ಟೊಂದು ಮೂಢತೆ ಮಾತ್ರ ಎಂದೂ ಆಗಲಿಕ್ಕಿಲ್ಲ. ಆದರೆ ಎಷ್ಟೋ ಬುದ್ಧಿಯ ಆಧಾರವು ಈ ಶ್ರದ್ಧೆಗೆ ಇದೆ.

ಭೂದಾನಯಜ್ಞ ಮತ್ತು ಕಮ್ಯೂನಿಝಮ್

ಭೂಮಿಯ ಸಮಸ್ಯೆಯು ಅನ್ಯ ದೇಶಗಳಲ್ಲಿ ಇದ್ದಂತೆ ಹಿಂದೂಸ್ಥಾನದಲ್ಲಿ ಇದೆ. ಜಮೀನು ಇದ್ದವರ ಸದ್ಭಾವನೆಯನ್ನು ಜಾಗ್ರತ ಮಾಡಿ ಜಮೀನು ಇಲ್ಲದವರಿಗೆ ಅದನ್ನು ಕೊಡಿಸಿ ಈ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನದಲ್ಲಿ ನಾನೂ ತೊಡಗಿದ್ದೇನೆ. ಇದು ಸಫಲವಾದರೆ–ಇದು ಶಕ್ಯವಾಗುವುದೆಂದು ನನಗೆ ಆಶೆ ಇದೆ–ಹಿಂದೂಸ್ಥಾನದಲ್ಲಿ ಒಂದು ರಕ್ತಹೀನ ಕ್ರಾಂತಿ ಆಗುವದು. ಮತ್ತೆ ಈ ದೇಶವು ಕಮ್ಯೂನಿಝಮದ ಗುಣಗಳನ್ನು ಗ್ರಹಣ ಮಾಡಿಕೊಂಡು ಅದರೊಳಗಿನ ದೋಷಗಳು ಇಲ್ಲಿ ಪ್ರವೇಶಿಸದಂತೆ ನೋಡಲು ಸಮರ್ಥವಾಗುವುದು. ನನ್ನ ಅಭಿಪ್ರಾಯದಂತೆ ಸಾಮ್ಯವಾದವೇನು ಕೆಟ್ಟ ವಸ್ತುವಲ್ಲ. ಆದರೆ ಹಿಂಸೆಯಿಂದ ಅದನ್ನು ಜನತೆಯ ಮೇಲೆ ಹೇರಲು ಪ್ರಯತ್ನಿಸಲಾಗುತ್ತಿರುವುದು ಕೆಟ್ಟದ್ದು, ಅನಿಷ್ಟವು. ನನಗೆ ಸಾಮ್ಯವಾದದಿಂದ ಯಾವುದೇ ಅಂಜಿಕೆ ಇಲ್ಲ. ಯಾಕೆಂದರೆ ಸಾವಿರಾರು ವರ್ಷಗಳಿಂದ ನಮ್ಮ ಸಂಸ್ಕೃತಿಯು ಹಿಂಸಾ ವಿರೋಧಿಯಾಗಿದೆ. ಮತ್ತು ಗಾಂಧೀಜಿಯವರು ನಮ್ಮ ದೇಶಕ್ಕೆ ಅಹಿಂಸಾ ಶಕ್ತಿಯನ್ನು ದಯಪಾಲಿಸಿದ್ದಾರೆ. ನನ್ನ ವಿಶ್ವಾಸವಾದರೋ ಹಿಂದುಸ್ತಾನವು ಅಹಿಂಸಾ ಶಕ್ತಿಯಿಂದಲೇ ಬದುಕಬಲ್ಲದು. ನನಗೆ ಹೀಗೂ ವಿಶ್ವಾಸವಿದೆ– ಏನೆಂದರೆ ಎಂಥ ದೇಶವು ಕೂಡ ಅಂಜಿಕೆಯನ್ನು ಬಿಟ್ಟುಕೊಟ್ಟು ಅಹಿಂಸಾ ಶಕ್ತಿಯ ಪ್ರಯೋಗ ಮಾಡಿ ನೋಡಿದರೆ ಅದು ಇಡೀ ಜಗತ್ತನ್ನು ನಿರ್ಭಯವನ್ನಾಗಿ ಮಾಡಬಲ್ಲದು. ತಾನು ನಿರ್ಭಯವಾಗಿ ಉಳಿಯಬಲ್ಲದು.

ಕ್ರಾಂತಿಯ ಗಣಿತ

ಕೆಲವರ ಹೇಳಿಕೆಯೇನಂದರೆ—ಈ ರೀತಿಯಿಂದ ಭೂ ಸಮಸ್ಯೆಯನ್ನು ಬಗೆಹರಿಸಲು ೫೦೦ ವರ್ಷಗಳು ಬೇಕಾಗುವವೆಂದು. ಇದಕ್ಕೆ ನನ್ನ ಉತ್ತರವೇನಂದರೆ–"ಕ್ರಾಂತಿಗಳು ಇಂತಹ ಗಣಿತದಿಂದ ನಡೆಯುವದಿಲ್ಲ. ಒಂದು ವರುಷದಲ್ಲಿ ಸ್ವರಾಜ್ಯ ದೊರಕಿಸುತ್ತೇನೆಂಬ ಮಾತನ್ನು ಗಾಂಧೀಜಿಯವರು ಹೇಳಿದ್ದರು. ಮತ್ತು ನಾವು ಅವರ ಮಾತನ್ನು ಕೇಳಿದ್ದರೆ, ಒಂದು ದಿವಸದ ಪಟ್ಟಿಗೆ ನೌಕರಗಳನ್ನು ಬಿಟ್ಟು ಕೊಟ್ಟಿದ್ದರೆ, ವಕೀಲರೆಲ್ಲರೂ ಕೋರ್ಟುಗಳ ಮೆಟ್ಟಲುಗಳನ್ನೇರದೇ ಹೋಗಿದ್ದರೆ, ವಿದ್ಯಾರ್ಥಿ ವೃಂದವು ಶಾಲೆ ಕಾಲೇಜುಗಳನ್ನು ಬಹಿಷ್ಕರಿಸಿದ್ದರೆ, ಸರಕಾರಿ ನೌಕರರೆಲ್ಲರೂ ತಮ್ಮ ತಮ್ಮ ಮನೆಯಲ್ಲಿ ಕೂತು ಬಿಟ್ಟಿದ್ದರೆ, ಸ್ವರಾಜ್ಯವು ಸಿಕ್ಕಿ ಹೋಗುತ್ತಿತ್ತು. ಆದರೆ ಅದು ೨೫ ವರುಷಗಳ ಮೇಲೆ ಸಿಕ್ಕೇ ಸಿಕ್ಕಿತು. ಮಹಾತ್ಮಾ ಗಾಂಧಿಯವರ ಶ್ರದ್ಧೆಯನ್ನು ಎಷ್ಟೆಂತ ಹೊಗಳಲಿ ಒಂದು ದಿನ ಮಿತ್ರರು ಗಾಂಧಿಜಿಯವರಿಗೆ ಹೇಳಿದರು–ಬಾಪೂ, ನಿಮ್ಮ ವರುಷದ ಅವಧಿಯಲ್ಲಿ ಇನ್ನು ಬರೇ ಹದಿನೆಂಟು ದಿನಗಳು ಉಳಿದವು?" ಬಾಪೂಜಿಯವರು ಉತ್ತರ ಕೊಟ್ಟರು "ಹದಿನೆಂಟು ದಿನಗಳಲ್ಲಾದರೋ ಮಹಾಭಾರತ ಯುದ್ಧವು ತಾನೇ ಮುಗಿದು ಹೋಗಿತ್ತು–ಇದನ್ನು ಮರೆಯಬೇಡಿರಿ" ಇಂಗ್ಲಿಷರು ಸಹ ಆ ವರ್ಷದ ಬಗ್ಗೆ ಸ್ವರಾಜ್ಯವು ಬಹು ಮಟ್ಟಿಗೆ ಸಿಕ್ಕಿಹೋಗಿತ್ತೆಂದು ಬರೆದು ಇಟ್ಟಿದ್ದಾರೆ. ನಾವು ಜನರು ಅವರ (ಗಾಂಧಿಯವರ) ಕಾರ್ಯಕ್ರಮವನ್ನು ಪೂರ್ಣವಾಗಿ ಕೃತಿಯಲ್ಲಿಳಿಸಲಿಲ್ಲ. ಅದ ಕಾರಣ ಒಂದರ ಬದಲು ೨೫ ವರುಷ ತಾಗಿತು. ಜನತೆಯ ಜೀವನದಲ್ಲಿಯೇ ಪರಿವರ್ತನ ಆಗುವ ಪ್ರಶ್ನೆ ಬಂದಾಗ ಗಣಿತದಿಂದ ಕೆಲಸವಾಗುವುದಿಲ್ಲ. ನಾನು ಆಶ್ರಮದಲ್ಲಿನ ನನ್ನ ಸಹಕಾರಿಗಳೊಡನೆ ಒಂದು ಬಾವಿಯನ್ನು ಅಗಿದೆ. ಒಂದು ವರ್ಷ ನಮಗೆ ಹಿಡಿಯಿತು. ಇದರಿಂದ ಲೆಕ್ಕಹಾಕಿದರೆ ದೇಶದಲ್ಲಿ ಒಂದು ಕೋಟಿ ಬಾವಿಗಳಾಗಲು ಒಂದು ಕೋಟಿ ವರುಷ ಹತ್ತುವವೆಂದು ಲೆಕ್ಕ ಹಾಕುವುದು ಮೂರ್ಖತನವಾಗದು. ನಾನೊಬ್ಬನೇ ಕೆಲಸ ಮಾಡುವುದಾದರೆ ನೀವೆಲ್ಲರೂ ಕೈಕಟ್ಟಿಕೊಂಡು ಸುಮ್ಮನೆ ಕೂತರೆ ಮೇಲಿನಂತೆ ಗಣಿತ ಹಾಕುವುದು ಸರಿಯಾದೀತು. ಆದರೆ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. —"ಈ ಕಾರ್ಯವು ತಾಂತ್ರಿಕವೂ ಅಲ್ಲ; ಯಾಂತ್ರಿಕವೂ ಅಲ್ಲ; ಇದೊಂದು ಮಾಂತ್ರಿಕ ಪ್ರವೃತ್ತಿ. ಇದರ ಒಂದು ಮಂತ್ರವಿದೆ.

ಕ್ರಾಂತಿಯ ಮಂತ್ರಶಕ್ತಿ

ಆ ಮಂತ್ರಶಕ್ತಿಯು ಸಂಚಾರವಾಗುತ್ತಿದೆ. ಯಾವುದೊಂದು ಮಂತ್ರವು ಸಮಾಜದಲ್ಲಿ ಸಂಚರಿತವಾಗುವದೇ ತಡ, ಅದು ತೀವ್ರಗತಿಯಿಂದ ಕಾರ್ಯಮಾಡುತ್ತದೆ. ಸಮಯ ಸಾಗುವುದು ಮಂತ್ರವನ್ನು ಪಚನಗತ ಮಾಡಿಕೊಳ್ಳಲು; ಮಂತ್ರಸಿದ್ಧಿಗೆ ಸಮಯ ತಾಗುತ್ತದೆಂಬುದು ನಿಜ. ದೀಪವನ್ನು ಉರಿಸಲು ಬತ್ತಿಯು ಹಚ್ಚಗಾಗುವವರೆಗೆ ಬತ್ತಿಯನ್ನು ಉರಿಸಲು ತಾಗುವ ಹೊತ್ತನ್ನು ಗಣಿತದಿಂದ ಎಣಿಸಬೇಕಾಗುತ್ತದೆ. ಆದರೆ ಒಂದು ಬಾರಿ ದೀಪವು ಉರಿಯಹತ್ತಿದರೆ ಲಕ್ಷಾವಧಿ ವರುಷಗಳ ಕತ್ತಲೆಯು ದೂರವಾಗುವುದು. ಎಲ್ಲ ಕಡೆಯಲ್ಲಿಯೂ ಭೂಮಿಯು ಬೆಳಗಲು ಎಷ್ಟೊಂದು ವಿಲಂಬವಾಗಲಾರದು. ಗಂಗಾನದಿಯು ಪ್ರಾರಂಭದಲ್ಲಿ ಕಲ್ಲು ಗುಂಡುಗಳೊಳಗಿಂದ, ಬಂಡೆಗಳೊಳಗಿಂದ ಹಾದಿಯನ್ನು ಮಾಡಿಕೊಳ್ಳಬೇಕಾದರೆ ಬಹಳ ಕಾಲ ತಾಗಿತು. ಆದರೆ ಈಗ ಅದು ಪೂರ್ಣ ವೇಗದಿಂದ ಸಮುದ್ರದ ಕಡೆಗೆ ಧಾವಿಸುತ್ತದೆ. ಭಗವಾನ್ ಯೇಸುಕ್ರಿಸ್ತನು ಎರಡು ವರುಷ ಕೆಲಸ ಮಾಡಿದನು. ಅವನಿಗೆ ಬರೇ ೧೨ ಶಿಷ್ಯರು ಸಿಕ್ಕಿದರು. ಇದರ ಮೇಲಿಂದ ೧೨ ಜನರಿಗೆ ಎರಡು ವರುಷ, ೬ ಕೋಟಿ ಕ್ರಿಸ್ತಿಯರಾಗಲು ಎಷ್ಟು ವರುಷ ಎಂತ ಗಣಿ

ತೆ ಹಾಕಿದರೆ ಅದು ತಪ್ಪಾಗುವುದು. ಆದ್ದರಿಂದ ಯಾಂತ್ರಿಕ ಸಂಗತಿಗೆ ಗಾಂತ್ರಿಕ ಗಣಿತ ಹೆಚ್ಚು ಉಪಯೋಗವಿಲ್ಲ. ಮಂತ್ರ ಸಿದ್ಧಿಯಾಗುವುದೇ ತನ್ನ ಕೆಲಸ ಪೂರ್ತಿ ಆಯಿತೆಂದು ತಿಳಿಯಬೇಕು. ಆದ್ದರಿಂದ ಈ ಕೆಲಸಕ್ಕೆ ೫೦ ವರುಷಗಳಲ್ಲಿಲ್ಲ ಆದರೆ ಒಂದೇ ವರುಷದಲ್ಲಿ ಪೂರ್ತಿ ಆಗುವುದು ಶಕ್ಯವಿದೆ ಮತ್ತು ವಾಸ್ತವಿಕ ಆಗಿ ಅದು ಪೂರ್ತಿ ಆಗಿದೆ.

ಕೆಲವು ಸಂಸ್ಮರಣೀಯ ಪ್ರಸಂಗಗಳು

ಆಚಾರ್ಯ ವಿನೋಬಾರವರ ಪಾದಯಾತ್ರೆಯಲ್ಲಿ ಅಲ್ಲಲ್ಲಿ ಕೆಲ ಅದ್ಭುತ ಪ್ರಸಂಗಗಳು ಒದಗುತ್ತವೆ. ಕೆಲವನ್ನು ಇಲ್ಲಿ ಉದಾಹರಣೆಗಾಗಿ ಕೊಟ್ಟಿದೆ. ಒಂದು ದಿನ ಒಂದು ಸ್ಥಳದಲ್ಲಿ ಅವರ ಸಹಯಾತ್ರಿ ಶ್ರೀ ಗೌತಮ ಬಜಾಜ ಅವರು ಮಂಗರೂ ಎಂಬ ಹೆಸರಿನ ಹರಿಜನ ಬಾಂಧವನೊಬ್ಬನನ್ನು ವಿನೋಬಾಜೀಯವರ ಕಡೆ ಕರೆತಂದರು. ವಿನೋಬಾಜೀಯವರ ಟೋಳಿಯಲ್ಲಿ ಸಂದರ್ಶನಕ್ಕಾಗಿ ಬಂದ ಜಮೀನುದಾರರೂ, ಮಿಲ್ಲು ಮಾಲೀಕರೂ, ಶ್ರೀಮಂತ ವಗೈರೆರ ದಟ್ಟಣೆ ಇತ್ತು. ಗೌತಮ ಬಜಾಜರು ಹೇಳಿದರು.

“ವಿನೋಬಾಜೀಯವರೇ! ಈ ಹರಿಜನನ ಹತ್ತಿರ ಬಹಳೇ ಸಣ್ಣ ಹೊಲವಿದೆ. ಎಷ್ಟು ತಿಳಿಸಿ ಹೇಳಿದರೂ ಅವನು ಕೇಳುವದಿಲ್ಲ. ಎಲ್ಲವನ್ನೂ ಕೊಟ್ಟುಬಿಡಬೇಕೆನ್ನುತ್ತಾನೆ” ಸರ್ವಸ್ವ ಸಮರ್ಪಣೆ ಮಾಡಲು ಬಂದ ಈ ಹರಿಜನನ ಕಡೆಗೆ ವಿನೋಬಾರವರು ಕೃತಜ್ಞತಾ ದೃಷ್ಟಿಯಿಂದ ನೋಡಿದರು. ಅವನು ವಿನೋಬಾರ ಕಾಲಿಗೆ ಬಿದ್ದನು. ‘ಮಹಾತ್ಮಾ, ಈ ನನ್ನ ತುಚ್ಛ ದೇಣಿಗೆಯನ್ನು ಸ್ವೀಕರಿಸಿರಿ’ ‘ನಿನಗೆ ಏನೂ ಉಳಿಯಲಿಕ್ಕಿಲ್ಲ’ ಅವನು ಉತ್ತರಿಸಿದನು ‘ಕಾರಖಾನೆಯಲ್ಲಿ ಕೆಲಸ ಮಾಡುವದು ನನ್ನ ಪಾಲಿಗೆ ಇದ್ದೇ ಇದೆ. ಇಷ್ಟು ಹೊಲದಿಂದ ನನ್ನ ನಿರ್ವಾಹ ಆಗುವದಿಲ್ಲ ಮನೆಯಲ್ಲಿ ಆರೇಳು ಮಂದಿ ಇರುತ್ತಾರೆ.’ ‘ಈ ಹೊತ್ತು ಹೊಲದಲ್ಲಿ ಏನು ಬೆಳೆಯುತ್ತದೆ’ ‘ಕೆಲವು ಬತ್ತವನ್ನು ಬಿತ್ತಿದ್ದೇನೆ. ಅದರ ಜೊತೆ ತಕ್ಕೊಂಡಿದ್ದೇನೆ’ ‘ನಿನ್ನ ಭಾವನೆ ನೋಡಿ ಬಹಳೇ ಸಂತೋಷವಾಗುತ್ತದೆ. ಆದರೆ ಈ ಹೊಲವು ನಿನ್ನ ಕಡೆಗೇ ಉಳಿಯಲಿ’ ಎಂದು ವಿನೋಬಾರವರು ತಿಳಿಸಿ ಹೇಳಿದರೂ ಅವನು ಕೇಳಲಿಲ್ಲ. ‘ನಾನು ಸಂಕಲ್ಪ ಮಾಡಿಬಿಟ್ಟಿದ್ದೇನೆ. ಸ್ವೀಕರಿಸಿರಿ’ ಎಂದು ಆಗ್ರಹ ತೊಟ್ಟನು. ಆಗ ವಿನೋಬಾರವರು ದಾನಪತ್ರವನ್ನು ಸ್ವೀಕರಿಸಿ ಅದರ ಮೇಲೆ ‘ಈ ಮನುಷ್ಯನ ಮನೋಸ್ಥಿತಿಯನ್ನು ನೋಡಲಾಗಿ ಇದನ್ನು ಇವನಿಗೇ ಕೊಡಬೇಕು. ಅವನ ಆಗ್ರಹದ ಮೂಲಕ ಅವನನ್ನು ಸಮಾಧಾನಪಡಿಸಲು ಸ್ವೀಕರಿಸಲಾಯಿತು. ಈಗ ಅದನ್ನು ಅವನಿಗೇ ಪ್ರಸಾದ ರೂಪವಾಗಿ ತಿರುಗಿ ಕೊಡುತ್ತೇನೆ’ ಎಂದು ಮಂಗರೂನ ಕಂಠವು ಗದ್ಗದಿತವಾಯಿತು. ಅವನು ಆ ಪ್ರಸಾದವನ್ನು ಗ್ರಹಣ ಮಾಡಿದನು. ಮತ್ತು ವಿನೋಬಾರ ಪಾದಗಳ ಮೇಲೆ ಪುಷ್ಪಕವನ್ನಿಟ್ಟು ಪ್ರಸನ್ನಗೊಳಿಸಿ ಹೊರಟು ಹೋದನು. ಗೋರಖಪುರದಿಂದ ಮುಂದಿನ ಮುಕ್ಕಾಮಿಗೆ ಹೋಗಬೇಕಾದರೆ ಸಾಮಾನಿನ ಗಾಡಿಯ ಸಂಗಡ ದಾರಿ ತೋರಿಸಲು ಒಬ್ಬ ಹರಿಜನನು ಬಂದಿದ್ದನು. ಅವನು ಬಹು ಸಂಕೋಚದಿಂದ ವಿನೋಬಾರ ಕಾರ್ಯದರ್ಶಿ ಕಡೆಗೆ ಹೇಳಿದನು. ‘ನಾನೂ ಕೆಲವು ಭೂಮಿ ದಾನ ಮಾಡಲಿಚ್ಛಿಸುತ್ತೇನೆ. ನಮ್ಮ ಕುಟುಂಬದಲ್ಲಿ ೧೨ ಮಂದಿ ಇದ್ದೇವೆ. ೫ ಎಕರೆ ಜಮೀನು ಇದೆ. ಕೂಲಿ ಕೆಲಸ ಮಾಡದೆ ಹೊರತು ಜೀವನ ಸಾಗಲಾರದು. ಆದ್ದರಿಂದ ನಾನೂ ಕೆಲವು ಕೊಡಬೇಕೆಂದು ಅನಿಸುತ್ತದೆ. ಆದರೆ ಬರೇ ಒಂದರಷ್ಟು ಎಕರೆ ಕೊಡಲು ಸಂಕೋಚವೆನಿಸುತ್ತದೆ. ಏನೂ ಸೂಚಿಸುವದಿಲ್ಲ. ನಿಮ್ಮ ಸಲಹೆಯೇನು?’ ಎಂದು ಕೇಳಿದನು. ಆಗ ಕಾರ್ಯದರ್ಶಿಯ ಮನಸ್ಸು ಇಂಥ ಉದಾರ ಭಕ್ತಿಯಿಂದ ಕರಗಿತು. ಅವನದು ಬಹಳೇ ಆಗ್ರಹವಾದ್ದರಿಂದ ಕೆಲವೇ ಗುಂಟೆ ಜಮೀನು ಅವನಿಂದ ಸ್ವೀಕರಿಸಲಾಯಿತು. ಈ ಸಂಗತಿಯು ಮುಂದೆ ಸಾಮಾನಿನ ಗಾಡಿ ಹೊಡೆಯುತ್ತಾ ಬಂದವನಿಗೆ ತಿಳಿಯಿತು. ಆಗ ಅವನೂ ದಾನಪತ್ರ ತುಂಬುತ್ತೇನೆಂದು ತನ್ನ ಕೆಲವು ಗುಂಟೆ ಹೊಲವನ್ನು ದಾನ ಮಾಡಿದನು. ವಿನೋಬಾರವರು ಅವರ ಸಹಯಾತ್ರಿ ಶ್ರೀ ಹರೀಶಭಾಯಿಯವರ ಊರಲ್ಲಿ ಐದು ನಿಮಿಷ ನಿಂತರು. ಊರಿನ ಹೆಣ್ಣುಮಕ್ಕಳು ಮಂಗಲ ಗೀತಗಳಿಂದ ಅವರನ್ನು ಸ್ವಾಗತಿಸಿದರು. ಹರೀಶಭಾಯಿಯವರ ತಾಯಿಯವರು ಮುಂದೆ ಬಂದು ನಮಸ್ಕಾರ ಮಾಡಿದರು. ಆದರೆ ಸಂಕೋಚದಿಂದ ಮಾತನಾಡಲಾರದೇ ನಿಂತಿದ್ದರು. ವಿನೋಬಾಜೀಯವರು ಏನಾದರೂ ಕೇಳುವದಿದೆಯೇ ಎಂದು ಕೇಳಲಾಗಿ ಅವಳು ಹೇಳಿದಳು ‘ಒಟ್ಟು ನಮ್ಮದು ೧೨ ಎಕರೆ ಜಮೀನು ಇದೆ. ಕುಟುಂಬದಲ್ಲಿ ನಾವು ಇದ್ದವರು ಐದು ಮಂದಿ ತಾವು ಆರನೆಯವರಾದಿರಿ. ಆದ್ದರಿಂದ ಎರಡು ಎಕರೆ ಜಮೀನು ಸ್ವೀಕರಿಸಿರಿ’ ವಿನೋಬಾಜಿಯವರು ಅದನ್ನು ಆ ಮಾತಿನ ಅರ್ಥವಾದದ್ದೇ ಎಂದು ಸ್ವೀಕರಿಸಿದರು. ಮತ್ತು ಆ ದಿನದ ಪ್ರವಚನದಲ್ಲಿ ಈ ಎರಡು ಎಕರೆಯು ಎರಡು ಲಕ್ಷಕ್ಕೆ ಸಮಾನ ಎಂದು ಹೇಳಿದರು.

‘ನವರಂಗ’

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ. ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1931ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಬಂಡವಾಳ	ರೂ. 10,00,000
ವಸೂಲಾದ ಶೇರು ಮೊಬಲಗು	ರೂ. 2,09,000
ಕ್ಷೇಮನಿಧಿ	ರೂ. 63,000
ಇತರ ನಿಧಿಗಳು	ರೂ. 17,000
ಠೇವಣಾತಿ	ರೂ. 8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಜಿಲ್ಲೆಯ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಬ್ರಿಟಿಷ್, ವಾರ್ಡನ್ ಮತ್ತು ವಿಶ್ವಭಾರತಿ ಇನ್ಷೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಅಂತಿಮ ಸಾಲದ ಶಾಖೆಯ ಮೂಲಕ ದೀರ್ಘ ಅಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ,
ಪ್ರೆಸಿಡೆಂಟ್ ಮತ್ತು [illegible].

ಈಜಿಪ್ಟಿನಲ್ಲಿ ಸಮಗ್ರ ಭೂ ಸುಧಾರಣೆ.

ಈಜಿಪ್ಟಿನಲ್ಲಿ ಭೂ ಒಡೆತನವನ್ನು ೨೦೦ ಫೆಡಾನ ಎಕ್ರೆಗಳಿಗೆ ನಿಯಂತ್ರಗೊಳಿಸಿ ಸಮಗ್ರ ಭೂ ಸುಧಾರಣಾ ಕಾರ್ಯಕ್ರಮ ಕೈಗೊಳ್ಳಬೇಕೆಂಬ ಬೇಡಿಕೆಯನ್ನು ಜನರಲ್ ನಗೀಬ ಮಹಮ್ಮದರ ಕೇಂದ್ರ ಕಚೇರಿಯು ಮುಖ್ಯ ಮಂತ್ರಿ ಅಲಿ ಮಹರ ಪಾಶಾರಿಗೆ ಒಪ್ಪಿಸಿದೆ.

ಜ. ನಗೀಬರ ಕಚೇರಿಯಿಂದ ಒಪ್ಪಿಸಲ್ಪಟ್ಟ ಬೇಡಿಕೆಗಳ ಮೇರೆಗೆ ಸರಕಾರವು ಉಳಿಕೆಯ ಭೂಮಿಯನ್ನೆಲ್ಲ ವಶಪಡಿಸಿಕೊಂಡು, ೩೦ ವರ್ಷದವಧಿಯಲ್ಲಿ ಆ ಭೂಮಿಗಾಗಿ ಶೇ ೩½ ಬಡ್ಡಿಯ ಮೇಲೆ ಪರಿಹಾರ ಹಣವನ್ನು ಕಂತಿನ ಮೇಲೆ ಕೊಡಲಾಗುವುದು.

ಭೂಮಿಯನ್ನು ಕೊಳ್ಳುವ ಬೆಲೆಯು ೧೯೩೭, ೩೮ ಮತ್ತು ೩೯ ಈ ಮೂರು ವರ್ಷಗಳಲ್ಲಿ ಇದ್ದ ಬೆಲೆಯ ಮಟ್ಟದ ಮೇರೆಗೆ ನಿರ್ಧರಿಸಲಾಗುವುದು.

ಸರಕಾರ ಭೂಮಿಯನ್ನು ಭೂರಹಿತ ಕೃಷಿಕರಿಗೆ ೩೦ ವರ್ಷಗಳಲ್ಲಿ ಹಣ ಮುಟ್ಟಿಸುವ ಸುಲಭವಾದ ಕರಾರುಗಳ ಮೇರೆಗೆ ಹಂಚಲಾಗುವುದು.

ಪ್ರತಿ ಹಳ್ಳಿಯಲ್ಲಿಯೂ ಸಹಕಾರ ಸಂಘಗಳನ್ನು ರಚಿಸಲಾಗುವುದು.

ಕರಾರದ ಮೇರೆಗೆ ಭೂಮಿಯನ್ನು ಕೊಳ್ಳುವವರಿಗೆ ಅದನ್ನು ಈ ೩೦ ವರ್ಷದ ಅವಧಿಯಲ್ಲಿ ಮಾರಲು ಅವಕಾಶವಿಲ್ಲ.

ಸ್ವಸ್ಥ ಭೂ ಸುಧಾರಣಾ ಯೋಜನೆಯು ಬಡ ಭೂಮಿಯನ್ನು ಸಂರಕ್ಷಿಸುವ ಭೂ ಹಂಚುವ ಮತ್ತು ಆದಾಯ ಎತ್ತುವ ಕ್ರಮವನ್ನು ನಿರ್ಧರಿಸುವದು.

ಹೊಸ ಭೂ ಸುಧಾರಣೆಯ ಮೇರೆಗೆ ಭೂಮಿಯನ್ನು ಮಾರಲು ನಿರಾಕರಿಸುವವನಿಗೆ ಅಥವಾ ಮಾರಾಟಕ್ಕೆ ತಡೆಯನ್ನುಂಟು ಮಾಡುವವನಿಗೆ ಯಾವ ಅಪೀಲಿಗೆ ಅವಕಾಶ ಕೊಡದೆ ಐದು ವರ್ಷಗಳ ಶಿಕ್ಷೆಯನ್ನು ವಿಧಿಸಲಾಗುವುದು.

ಹಿಂದಿನಿಂದ ಮಾತ್ರ ೨೦೦ ಎಕರೆಗಳಿಗಿಂತ ಹೆಚ್ಚಿನ ಭೂಮಿಯನ್ನು ಹೊಂದಬಹುದು?

ಭೂಮಿಯನ್ನು ಹಂಚುವಾಗ ನಿವಾಸಿಕರಿಗೆ ಪ್ರಥಮ ಪ್ರಾಶಸ್ತ್ಯ ಕೊಡಲಾಗುವುದು.

ಈಜಿಪ್ಟಿನ ೬೦ ಲಕ್ಷ ಎಕರೆ ಸಾಗುವಳಿ ಜಮೀನು ಬಹುತರ ೫೦೦ ಸಿರಿವಂತ ಮಾಜಿ ಪಾಶಾರ ಒಡೆತನದಲ್ಲಿದೆ. ೨೦ ಲಕ್ಷ ಜನರ ಒಡೆತನದಲ್ಲಿ ೭೮೮೭೦೪ ಎಕರೆ ಜಮೀನಿದೆ. ಇದರಿಂದ ಪ್ರತಿಯೊಬ್ಬನಿಗೆ ೨/೫ ಎಕರೆ ಜಮೀನು ಬರುತ್ತದೆ.

ಈಜಿಪ್ತದ ಎರಡು ಕೋಟಿ ಜನತೆಯಲ್ಲಿ ಬಹುಸಂಖ್ಯಾತರೆಂದರೆ ಭೂರಹಿತ ‘ಫೆಲಾಹೀನ’ (ಕಿಸಾನರು)ರಿದ್ದಾರೆ.

ಈಜಿಪ್ತದಲ್ಲಿ ಒಬ್ಬನೇ ಅತಿ ಹೆಚ್ಚು ಭೂಮಿಯ ಒಡೆತನವನ್ನು ಪಡೆದವನೆಂದರೆ ಮಾಜಿ ಅರಸ ಫರೂಕರು. ಅವರೊಬ್ಬರ ಒಡೆತನದಲ್ಲಿ ೨ ಲಕ್ಷ ಎಕರೆ ಜಮೀನಿದ್ದಿತು. ಈಗ ಈ ಜಮೀನೆಲ್ಲ ಸರಕಾರದ ವಶವಾಗಿದೆ.

ಮುಫತ್ತು.

ಈಗ ಹೊಸದಾಗಿ ಬಂದಿರುವ ನಮ್ಮ ಅಮೇರಿಕನ್ ಫೌಂಟನ್ ಪೆನ್ನುಗಳಿಗೆ ಆರ್ಡರು ಬುಕ್ ಮಾಡಲು ಏಜಂಟರು ಬೇಕಾಗಿದ್ದಾರೆ. ಇದಕ್ಕೆ ಪ್ರತಿಯಾಗಿ 15 ಯಾ 17 ಜ್ಯುವೆಲ್‌ಗಳುಳ್ಳ ಸ್ವಿಸ್ ರಚಿತ ರಿಸ್ಟ್‌ವಾಚು, ಸೈಕಲ್, ಅಥವಾ ರೇಡಿಯೋವು ಮುಫತ್ತಾಗಿ ದೊರೆಯುವದು. ಇದು ಲಾಟರಿ, ಜೂಜು ಯಾ ಚಕ್ರಬಂಧ ಸ್ಪರ್ಧೆಯಲ್ಲ. ಒಂದು ಫೌಂಟನ್ ಪೆನ್ನಿಗೂ ಆರ್ಡರಿನೊಡನೆ ಮುಫತ್ತು ಕೆಟಲಾಗು ಮತ್ತು ಇತರ ಮಾಹಿತಿಗಳಿಗೆ ಬರೆಯಿರಿ.

THE UNIVERSAL MUTUAL CORPORATION (K M)
P. O. Box No. 4013, BOMBAY—7.

Edited printed and published by P. I. Belliapa at 'Kodagu' Press, Mercara, for Kodagu Ltd.

Licence No. 60.
Licensed to Post without Prepayment.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಕು ೨೯-೮-೧೯೫೨ನೇ ಶುಕ್ರವಾರ | ಸಂಚಿಕೆ ೧೩

THE JUBILEE INSURANCE CO., Ltd.

One of the very few in the feild of Insurance that has been declaring BONUS to its policy holders from its very inception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-C., Richmand Road, Bangalore.

Our Chief Agents:-THE ORIENTAL ENTERPRISES. BANGALORE 1.

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೆದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:-ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,
22 41-C, ರಿಚ್‌ಮಂಡ್ ರೋಡ್, ಬೆಂಗಳೂರು 1.

ಪ್ರಥಮ ಭಾರತೀಯ ಮಹಾ ಸೇನಾನಿ

ಜ॥ ಕೆ. ಎಂ. ಕಾರ್ಯಪ್ಪನವರು

ಲೇ:—ಶ್ರೀ ಪಿ. ಎಸ್. ರಾಮಕೃಷ್ಣ ಬಿ. ಎಸ್‌ಸಿ (ಆನರ್ಸ್) ಬಿ. ಟಿ.

ಭದ್ರಾಕಾರ ಸೌಷ್ಠವಪೂರ್ಣವೂ ದಾರ್ಢ್ಯಮಯವೂ ನಿರಾಲಸ್ಯದ್ಯೋತಕವೂ ಆದ ಭವ್ಯ ದೈಹಿಕ ಪ್ರಕೃತಿ. ಧೀರ್ಘವಾದ ಎತ್ತರವಾದ ತೇಜಸ್ಸಿನಿಂದ ಕೂಡಿದ ಆಜಾನುಬಾಹು. ಇವುಗಳಿಂದೊಪ್ಪುವ ದೇಹ ಆರೋಗ್ಯಪೂರ್ಣ ಶಿಸ್ತಿನ ಜೀವನವನ್ನು ನಡೆಸುವುದರ ಪರಿಣಾಮವೆಂಬಂತೆ ಬೆಳೆದಿರುವ ಪುಷ್ಟವಾದ ಶರೀರ. ಇವುಗಳಿಂದ ಒಪ್ಪುತ್ತಿರುವ ಭಾರತದ ಮಹಾಸೇನಾನಿ ಜನರಲ್ ಕೆ. ಎಂ. ಕಾರ್ಯಪ್ಪನವರು, ಆಧುನಿಕ ಭಾರತದ ನಿರ್ಮಾಣ ಕಾರ್ಯದಲ್ಲಿ ಪ್ರಮುಖಪಾತ್ರವನ್ನು ವಹಿಸಿ ಯುವಪೀಳಿಗೆಗೆ ಆದರ್ಶಪೂರ್ಣರೂ ಹಿರಿಯರಿಗೆ ಸಂತೋಷದಾಯಕರೂ ಆದ ಕಾರ್ಯಪ್ಪನವರ ವೀರ ಜೀವನ ಚರಿತ್ರೆಯು ಯಾವ ದೇಶಾಭಿಮಾನಿ ಭಾರತೀಯನಿಗೆ ತಾನೇ ರೋಮಾಂಚನವುಂಟು ಮಾಡದು? ಪ್ರಾಚೀನ ಭಾರತೀಯ ವೀರಾಗ್ರಣಿಗಳಾದ ಶ್ರೀರಾಮಚಂದ್ರ, ಅರ್ಜುನ, ಕರ್ಣ, ಚಂದ್ರಗುಪ್ತ, ಅಶೋಕನಂತಹ ಪೌರಾಣಿಕ ಐತಿಹಾಸಿಕ ವ್ಯಕ್ತಿಪುಂಗವರನ್ನು ನೆನಪು ಹುಟ್ಟಿಸುವ ಕಾರ್ಯಪ್ಪನವರ ಜೀವಿತವಿನ್ಯಾಸವು ಜನಾನುಕರಣೆಗೆ ಪಾತ್ರವಾಗಿ ಬಹುಕಾಲ ಕೀರ್ತಿಯನ್ನು ಪಾಲ್ಗೊಳ್ಳುವಂತೆ ಸಾರುವುದು.

ಕೊಡಗಿನ ಹೆಮ್ಮೆಯ ಸುಪುತ್ರರಾದ ಈ ವಿಖ್ಯಾತ ಭಾರತೀಯರು ಕಾವೇರಿಯ ತೀರದ ಕಲಕಲರವದಿಂದ ಅನವರತವೂ ಪಾವನವಾದ ಕೊಡಗು ರಾಜ್ಯದ ಶನಿವಾರಸಂತೆಯಲ್ಲಿ ಕ್ರಿ. ಶ. ೧೯೦೦ ನೇ ಜನವರಿ ೨೮ ರಂದು ಜನಿಸಿದರು. ಅವರ ಜನಕರು ಈಗ ೮೩ ವಯಸ್ಸಿನ ವೃದ್ಧರೂ ನಿವೃತ್ತ [illegible] ರೂ ಹೆಸರಾಂತ ವಂಶಸ್ಥರಾದ ಪುತ್ರರನ್ನು ಪಡೆದ ಶೀ [illegible] ಅದ ಕೊಡಂಡೇರ ಮನೆತನಕ್ಕೆ ಸೇರಿದ ಮಾದಪ್ಪನವರು. ಶ್ರೀಯುತರು ಶನಿವಾರಸಂತೆಯಲ್ಲಿ ಸರಕಾರಿ ನೌಕರರಾಗಿರುವಾಗ ಸ್ವತಂತ್ರ ಭಾರತದ ಮಹಾಸೇನಾಧಿಪತಿಗಳಾಗಿರುವ ಸುಪುತ್ರನನ್ನು ಪಡೆದರು. ಕಾರ್ಯಪ್ಪನವರು ತಮ್ಮ ತಂದೆಯ ದ್ವಿತೀಯ ಪುತ್ರರು.

ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಕಾರ್ಯಪ್ಪನವರು ಕೊಡಗು ದೇಶದ ಹಿರಿಯ ಪ್ರೌಢವಿದ್ಯಾಶಾಲೆಯಾದ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ವ್ಯಾಸಂಗವನ್ನು ಮುಗಿಸಿ [illegible] ಪ್ರೌಢಶಾಲೆಯ ಅಂತ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಉಚ್ಚಶಿಕ್ಷಣವನ್ನು ಪಡೆದರು.

ವಿದ್ಯಾರ್ಥಿದೆಶೆಯಿಂದ ಸೈನಿಕ ಜೀವನಕ್ಕೆ ಆಕರ್ಷಿತರಾದ ಕಾರ್ಯಪ್ಪನವರು ಇಂದೂರಿನ ಡೇಲಿ ಕಾಲೇಜು ಎಂಬ ಸೈನಿಕ ಶಿಕ್ಷಣಾಲಯಗಳಲ್ಲಿ ಸೈನ್ಯವಿಜ್ಞಾನದ ಶಿಕ್ಷಣ ಪಡೆದು ಭಾರತೀಯ ಬಾಲಕರುಗಳಲ್ಲಿ ಪ್ರಥಮ ಬಾರಿಗೆ ೧೯೧೯ ರಲ್ಲಿ ಆರಿಸಲ್ಪಟ್ಟರು. ೧೯೨೦ ರಿಂದ ೧೯೨೨ ರ ವರೆಗೆ ಇರಾಕ್ ಎಂದು ಈಗ ಕರೆಯಲ್ಪಡುವ ಮೆಸೊಪೊಟೇಮಿಯಾದಲ್ಲಿ ೫ನೆ ಪಿಡ್ಸರ್ ರೈಫಲ್ಸ್ ಎನ್ನುವ ಪದಾತಿ ಪಡೆಯಲ್ಲಿ ಅಧಿಕಾರಿಯಾಗಿದ್ದರು. ತರುವಾಯ ವಜೀರಿಸ್ತಾನದಲ್ಲಿ ಡೋಗ್ರಾ ಮತ್ತು ರಜಪೂತ ಸೈನ್ಯಗಳಲ್ಲಿ ಅಧಿಕಾರಿಗಳಾಗಿ ೧೯೨೨ ರಿಂದ ೧೯೩೫ ರ ವರೆಗೆ ವಿವಿಧ ಕಡೆಗಳಲ್ಲಿ ಸೈನಿಕ ಜೀವನವನ್ನು ನಿರ್ವಹಿಸಿದರು.

೧೯೩೭ ರ ಹೊತ್ತಿಗೆ ಕಾರ್ಯಪ್ಪನವರು ಡೆಪ್ಯೂಟಿ [illegible] ಸೈನಿಕ ಪದವಿ ಪಡೆದರು. ೧೯೪೧ ರಲ್ಲಿ ಡೆಕ್ಕನ್ ಜಿಲ್ಲೆಯ ಪ್ರಾದೇಶಿಕ ಸೈನ್ಯಾಧಿಕಾರಿಯಾಗಿ ನಿಯಾಮಿತರಾದರು. ಸೈನಿಕ ಅಧಿಕಾರ ಶ್ರೇಣಿಯಲ್ಲಿ ದ್ವಿತೀಯ ಸ್ಥಾನವಾದ ಈ ಅಧಿಕಾರಕ್ಕೆ ಬಂದ ಭಾರತೀಯರಲ್ಲಿ ಕಾರ್ಯಪ್ಪನವರೇ ಮೊದಲಿಗರು. ೧೯೪೨ ರಲ್ಲಿ ಫ್ರೀಡಮ್ ಆರ್ಮಿ ಎಂದು ಕರೆಯಲ್ಪಡುತ್ತಿದ್ದ ೨೦ ನೇ ಭಾರತೀಯ ಕಾಲ್ಬಲ ದಳದ ದಳಾಧಿಪತಿಯಾದರು.

ದ್ವಿತೀಯ ಜಾಗತಿಕ ಮಹಾಸಮರವು ೧೯೩೯ ರಲ್ಲಿ ಘೋಷಿಸಲ್ಪಟ್ಟಾಗ ಕಾರ್ಯಪ್ಪನವರು ೧೧ನೇ ಭಾರತೀಯ ಸೈನ್ಯದಳದ ಅಧಿಪತಿಯಾಗಿ ೧೯೪೧ ರಿಂದ ೧೯೪೨ ರ ವರೆಗೆ ಇರಾಕ್, ಇರಾನ್, ಸಿರಿಯ ಮುಂತಾದ ಮಧ್ಯಪ್ರಾಚ್ಯ ದೇಶಗಳಲ್ಲಿ ಸೈನಿಕ ಸೇವೆಸಲ್ಲಿಸಿದರು. ೧೯೪೩ ರಲ್ಲಿ ೭ ನೇ ರಾಜಪೂತ ಸೈನ್ಯ ಭಾಗದ ಸೇನಾಧಿಪತಿಯಾಗಿ ಯಾಂತ್ರಿಕ ಶತಘಾತಿ (ಮೆಷಿನ್ ಗನ್) ದಳದ ದಳಪತಿ ಸ್ಥಾನವನ್ನು ವಹಿಸಿದರು. ೧೯೪೪ ರಲ್ಲಿ ಬ್ರಹ್ಮದೇಶದ ಆರಾಕಾನ್ ರಣಕ್ಷೇತ್ರದಲ್ಲಿ ೨೬ ನೇ ಭಾರತೀಯ ಸೈನ್ಯ ವಿಭಾಗದ ಅಧಿಕಾರಿಯಾಗಿ ದುಡಿದರು. ೧೯೪೬ ರಲ್ಲಿ ಸೈನ್ಯ ಪುನರ್ವ್ಯವಸ್ಥಾಪನಾ ಸಮಿತಿಯಲ್ಲಿ ಸೈನ್ಯ ದಳಾಧಿಪತಿಯಾಗಿ ನಿಯುಕ್ತರಾಗಿ ಆ ಕೆಲಸ ಮುಗಿದ ನಂತರ ಬನ್ನು ಗಡಿನಾಡು ಪ್ರಾಂತದ ಸೈನ್ಯದಳದ ಅಧಿಪತ್ಯವನ್ನು ವಹಿಸಿಕೊಂಡರು. ೧೯೪೭ ರಲ್ಲಿ ಸರ್ವ ಸೈನ್ಯ ಪುನರ್ರಚನಾ ಸಮಿತಿಯಲ್ಲಿ ಸೇವೆ ಸಲ್ಲಿಸಿ ಅದೇ ವರ್ಷ ಪ್ರಮುಖ ದಳಪತಿಯಾಗಿ ನಿಯಮಿಸಲ್ಪಟ್ಟು ಭಾರತೀಯ ಸೈನ್ಯದ ಪೂರ್ವ ಪ್ರಾದೇಶಿಕ ಮಹಾ ಸೈನಾಧಿಪತಿಯಾಗಿ ಪದವಿಯೇರಿಸಲ್ಪಟ್ಟರು. ೧೯೪೮ ರಲ್ಲಿ ಪೂರ್ವ ಪ್ರಾದೇಶಿಕ ಸೈನ್ಯಾಧಿಕಾರವನ್ನು ಬಿಟ್ಟು ಪಶ್ಚಿಮ ಪ್ರಾದೇಶಿಕ ಸೈನ್ಯಾಧಿಕಾರಿಯ ಸ್ಥಾನವನ್ನಲಂಕರಿಸಿದರು. ೧೯೪೯ ರ ಜನವರಿ ೧೫ ನೇ ತಾರೀಖಿನಲ್ಲಿ ಸ್ವತಂತ್ರ ಭಾರತದ ಪ್ರಥಮ ಭಾರತೀಯ ಮಹಾಸೇನಾನಿಯಾಗಿ ಅಭಿಷಿಕ್ತರಾಗಿ ಸೈನಿಕ ಅಧಿಕಾರ ಶ್ರೇಣಿಯಲ್ಲಿ ಮಹೋನ್ನತಸ್ಥಾನ ಪಡೆದು ಭಾರತದ ರಾಷ್ಟ್ರೀಯ ಇತಿಹಾಸದಲ್ಲಿ ಅಳಿಯದ ಸ್ಥಾನವನ್ನು ಗಳಿಸಿಕೊಂಡು ಕೀರ್ತಿಯ ಶಿಖರವನ್ನೇರಿದರು.

ಭಾರತೀಯ ಭೂಸೈನ್ಯ ಮಹಾಪಡೆಯು ಹಲವು ರೀತಿಯಲ್ಲಿ ಅನರ್ಘ್ಯಮಯ ಸಂಸ್ಥೆಯಾಗಿರುವುದು. ಅನ್ಯದೇಶೀಯ ಶತ್ರುಗಳಿಂದ ಭಾರತದ ಭದ್ರತೆಗೆ ಧಕ್ಕೆ ಬಂದಾಗ ಮಾತ್ರ ಧರ್ಮ ಸಮರವನ್ನು ಹೂಡಲು ಸಿದ್ಧವಿರುವ ಸುಶಿಕ್ಷಿತ ಭಾರತೀಯ ಸೈನ್ಯವು ಇತರ ವೇಳೆಗಳಲ್ಲಿ ಅಹಿಂಸಾತ್ಮಕ ಧೋರಣೆಯಿಂದ ರಾಷ್ಟ್ರ ರಚನಾ ಕಾರ್ಯದಲ್ಲಿ ನಿಮಗ್ನವಾಗಿರುವುದು. ಇಂತಹ ಶಿಸ್ತಿನಿಂದ ಕೂಡಿದ ಸುಸಜ್ಜಿತ ಆಧುನಿಕ ಮಹಾ ಯೋಧಪಡೆಗೆ ಧುರೀಣರಾದ ಕಾರ್ಯಪ್ಪನವರು ಮಹಾಸೇನಾನಿಯಾಗಿ ನಿಯಮಿತರಾದುದು ಭಾರತದ ಭಾಗ್ಯ. ಮಹಾಸೇನಾನಿ ಕಾರ್ಯಪ್ಪನವರ ಮಾರ್ಗದರ್ಶನದಲ್ಲೇ ರಾಷ್ಟ್ರೀಯ ದೃಢತೆಯು ಬಲಪಡಿಸಲ್ಪಟ್ಟು ಭಾರತೀಯ ಸೈನ್ಯದ ಮಹಾ ಗೌರವಕ್ಕೆ ಹೊರ ಹೊಮ್ಮುತ್ತಿರುವುದು. ಅವರ ಪ್ರಮುಖತ್ವದಲ್ಲಿ ಬೆಳೆದ ರಾಷ್ಟ್ರೀಯ ಮಹಾಸೇನೆಯು ಸಂಖ್ಯಾಬಲದಿಂದ [illegible] ಪ್ರಪಂಚದ ಸ್ವತಂತ್ರ ರಾಷ್ಟ್ರಗಳ ಸೇನೆಗಳಿಗೆ ಶಕ್ತಿ, ಸಾಹಸಗಳಲ್ಲಿ, ಧೈರ್ಯ ಸ್ಥೈರ್ಯ ಪರಾಕ್ರಮಗಳಲ್ಲಿ, ಶಿಸ್ತಿನ ಪಕ್ಕಾಬಂದಿಯಲ್ಲೂ ಸರಿಸಮಾನವಾದ ಆದರ್ಶವಾಗಿ ಖ್ಯಾತಿಗೊಂಡಿರುವುದರಲ್ಲಿ ಸಂದೇಹವಿಲ್ಲ.

ಇಂದಿನ ಭಾರತೀಯ ವಿದ್ಯಾರ್ಥಿಗಳಲ್ಲಿ ಶಿಸ್ತಿಲ್ಲವೆಂದು ಹೇಳಲು ನಾನು ಬಯಸುವುದಿಲ್ಲ. ಅವರಲ್ಲಿ ಶಿಸ್ತಿದೆ. ಶೀಲ ನಡತೆಗಳಿವೆ. ಆದರೆ ಕೆಲವು ಸ್ವಾರ್ಥಿಗಳು ತಮ್ಮ ಸ್ವಂತ ಉದ್ದೇಶ ಸಾಧನೆಗಾಗಿ ವಿದ್ಯಾರ್ಥಿಸ್ವಾತಂತ್ರ್ಯವನ್ನು ತಪ್ಪು ದಾರಿಯಲ್ಲಿ ಎಳೆಯುತ್ತಿರುವರು. ಈ ರೀತಿಗಳ ದುರ್ಬೋಧನೆಗಳಿಗೆ ಕಿವಿಗೊಡದೆ ತಮ್ಮ ವಿದ್ಯಾಸಂಸ್ಥೆಗಳೂ ಅಧ್ಯಾಪಕರುಗಳೂ ಪೋಷಕರುಗಳೂ ಮನ್ನಣೆಯಿತ್ತು ವಿದ್ಯಾರ್ಥಿ ಜೀವನದಲ್ಲಿ ತಮ್ಮ ಸರ್ವತೋಮುಖವಾದ ಬೆಳವಣಿಗೆಯನ್ನು ವಿದ್ಯಾರ್ಥಿಗಳು ಸಾಧಿಸಿಕೊಳ್ಳಬೇಕು. ಕೇವಲ ಮಾನಸಿಕ ಬೆಳವಣಿಗೆಯಿಂದ ಪ್ರಯೋಜನವಿಲ್ಲ. ಧೈರ್ಯಪೂರ್ಣವೂ ನಿರೋಗಯುತವೂ ಸೌಷ್ಠವಪೂರ್ಣವೂ ಆದ ದೇಹವನ್ನು ವಿದ್ಯಾರ್ಥಿಗಳು ಗಳಿಸಿಕೊಳ್ಳಬೇಕು. ನಿರ್ಮಲವೂ ಶಿಸ್ತಿನ ಜೀವನ, ಸಾತ್ವಿಕ ಆಹಾರಸೇವನೆ, ವ್ಯಾಯಾಮ, ಸಾಂಘಿಕವಾದ ಆಟೋಟಗಳು ಇವುಗಳಿಂದ ಶರೀರ ಬೆಳವಣಿಗೆಯು [illegible] ಟಾಗಿ ಸ್ವಾಭಾವಿಕವಾಗಿ ಸಾವ [illegible]

ತ ಹಾಕಿದರೆ ಅದು ಸಾಧ್ಯವಾಗುವುದು. ಆದ್ದರಿಂದ ಯಾಂತ್ರಿಕ ಸಂಗತಿಗೆ ತಾಂತ್ರಿಕ ಗಣಿತ ಹೆಚ್ಚು ಉಪಯೋಗವಿಲ್ಲ. ಮಾಂತ್ರಿಕ ಸಿದ್ಧಿಯಾಗುವುದೇ ತಡ, ಕೆಲಸ ಪೂರ್ತಿ ಆಯಿತೆಂದು ತಿಳಿಯಬೇಕು. ಆದ್ದರಿಂದ ಈ ಕೆಲಸವು ೫೦೦ ವರುಷಗಳಲ್ಲಿಲ್ಲ ಆದರೆ ಒಂದೇ ವರುಷದಲ್ಲಿ ಪೂರ್ತಿ ಆಗುವುದು ಶಕ್ಯವಿದೆ ಮತ್ತು ವಾಸ್ತವಿಕ ಆಗಿ ಅದು ಪೂರ್ತಿ ಆಗಿದೆ.

ಕೆಲವು ಸಂಸ್ಮರಣೀಯ ಪ್ರಸಂಗಗಳು

ಆಚಾರ್ಯ ವಿನೋಬಾರವರ ಪಾದಯಾತ್ರೆಯಲ್ಲಿ ಅಲ್ಲಲ್ಲಿ ಕೆಲ ಅದ್ಭುತ ಪ್ರಸಂಗಗಳು ಒದಗುತ್ತವೆ. ಕೆಲವನ್ನು ಇಲ್ಲಿ ಉದಾಹರಣೆಗಾಗಿ ಕೊಟ್ಟಿದೆ. ಒಂದು ದಿನ ಒಂದು ಸ್ಥಳದಲ್ಲಿ ಅವರ ಸಹಯಾತ್ರಿ ಶ್ರೀ ಗೌತಮ ಬಜಾಜ ಅವರು ಮಂಗರೂ ಎಂಬ ಹೆಸರಿನ ಹರಿಜನ ಬಾಂಧವನೊಬ್ಬನನ್ನು ವಿನೋಬಾಜೀಯವರ ಕಡೆ ಕರೆತಂದರು. ವಿನೋಬಾಜೀಯವರ ಝೋಪಡಿಯಲ್ಲಿ ಸಂದರ್ಶನಕ್ಕಾಗಿ ಬಂದ ಜಮೀನುದಾರರೂ, ಮಿಲ್ಲು ಮಾಲೀಕರೂ, ಶ್ರೀಮಂತ ವಗೈರೆರ ದಟ್ಟಣೆ ಇತ್ತು. ಗೌತಮ ಬಜಾಜರು ಹೇಳಿದರು.

" ವಿನೋಬ ಜೀಯವರೇ! ಈ ಹರಿಜನನ ಹತ್ತಿರ ಬಹಳೇ ಸಣ್ಣ ಹೊಲವಿದೆ. ಎಷ್ಟು ತಿಳಿಸಿ ಹೇಳಿದರೂ ಅವನು ಕೇಳುವದಿಲ್ಲ. ಎಲ್ಲವನ್ನೂ ಕೊಟ್ಟುಬಿಡ ಬಯಸುತ್ತಾನೆ" ಸರ್ವಸ್ವ ಸಮರ್ಪಣೆ ಮಾಡಲು ಬಂದ ಈ ಹರಿಜನನ ಕಡೆಗೆ ವಿನೋಬಾರವರು ಕೃತಜ್ಞತಾ ದೃಷ್ಟಿಯಿಂದ ನೋಡಿದರು. ಅವನು ವಿನೋಬಾರ ಕಾಲಿಗೆ ಬಿದ್ದನು. 'ಮಹಾತ್ಮ, ಈ ನನ್ನ ತುಚ್ಛ ದೇಣಿಗೆಯನ್ನು ಸ್ವೀಕರಿಸಿರಿ' 'ನಿನಗೆ ಏನೂ ಉಳಿಯಲಿಕ್ಕಿಲ್ಲ' ಅವನು ಉತ್ತರಿಸಿದನು 'ಕಾರಖಾನೆಯಲ್ಲಿ ಕೆಲಸ ಮಾಡುವದು ನನ್ನ ಪಾಲಿಗೆ ಇದ್ದೇ ಇದೆ. ಇಷ್ಟು ಹೊಲದಿಂದ ನನ್ನ ನಿರ್ವಾಹ ಆಗುವದಿಲ್ಲ ಮನೆಯಲ್ಲಿ ಆರೇಳು ಮಂದಿ ಇರುತ್ತಾರೆ.' 'ಈ ಹೊತ್ತು ಹೊಲದಲ್ಲಿ ಏನು ಬೆಳೆಯುತ್ತಿ?' 'ಕೆಲವು ಬತ್ತವನ್ನು ಬಿತ್ತಿದ್ದೇನೆ. ಅದರ ಜೊತೆ ತರಕಾರಿ ಹಾಕಿದ್ದೇನೆ' 'ನಿನ್ನ ಭಾವನೆ ನೋಡಿ ಬಹಳೇ ಸಂತೋಷವಾಗುತ್ತದೆ. ಆದರೆ ಈ ಹೊಲವು ನಿನ್ನ ಕಡೆಗೇ ಉಳಿಯಲಿ' ಎಂದು ವಿನೋಬಾರವರು ತಿಳಿಸಿ ಹೇಳಿದರೂ ಅವನು ಕೇಳಲಿಲ್ಲ. 'ನಾನು ಸಂಕಲ್ಪ ಮಾಡಿಬಿಟ್ಟಿದ್ದೇನೆ. ಸ್ವೀಕರಿಸಿರಿ' ಎಂದು ಆಗ್ರಹ ತೊಟ್ಟನು. ಆಗ ವಿನೋಬಾರವರು ದಾನಪತ್ರವನ್ನು ಸ್ವೀಕರಿಸಿ ಅದರ ಮೇಲೆ 'ಈ ಮನುಷ್ಯನ ಮನೋಸ್ಥಿತಿಯನ್ನು ನೋಡಲಾಗಿ ಇದನ್ನು ಇವನಿಗೇ ಕೊಡಬೇಕು. ಅವನ ಆಗ್ರಹದ ಮೂಲಕ ಅವನನ್ನು ಸಮಾಧಾನಪಡಿಸಲು ಸ್ವೀಕರಿಸಲಾಯಿತು. ಈಗ ಅದನ್ನು ಅವನಿಗೇ ಪ್ರಸಾದ ರೂಪವಾಗಿ ತಿರುಗಿ ಕೊಡುತ್ತೇನೆ' ಎಂದು ಮಂಗರೂನ ಕಂಠವು ಗದ್ಗದಿತವಾಯಿತು. ಅವನು ಆ ಪ್ರಸಾದವನ್ನು ಗ್ರಹಣ ಮಾಡಿದನು. ಮತ್ತು ವಿನೋಬಾರ ಪಾದಗಳ ಮೇಲೆ ಪುಷ್ಪಗಳನ್ನಿಟ್ಟು ಪ್ರಸನ್ನಗೊಳಿಸಿ ಹೊರಟು ಹೋದನು. ಗೋರಖಪುರದಿಂದ ಮುಂದಿನ ಮುಕ್ಕಾಮಿಗೆ ಹೋಗಬೇಕಾದರೆ ಸಾಮಾನಿನ ಗಾಡಿಯ ಸಂಗಡ ದಾರಿ ತೋರಿಸಲು ಒಬ್ಬ ಹರಿಜನನು ಬಂದಿದ್ದನು. ಅವನು ಬಹು ಸಂಕೋಚದಿಂದ ವಿನೋಬಾರ ಕಾರ್ಯದರ್ಶಿ ಕಡೆಗೆ ಹೇಳಿದನು. 'ನಾನೂ ಕೆಲವು ಭೂಮಿ ದಾನ ಮಾಡಲಿಚ್ಛಿಸುತ್ತೇನೆ. ನಮ್ಮ ಕುಟುಂಬದಲ್ಲಿ ೧೨ ಮಂದಿ ಇದ್ದೇವೆ. ೫ ಎಕರೆ ಜಮೀನು ಇದೆ. ಕೂಲಿ ಕೆಲಸ ಮಾಡಿದ ಹೊರತು ಜೀವನ ಸಾಗಲಾರದು. ಆದ್ದರಿಂದ ನಾನೂ ಕೆಲವು ಕೊಡಬೇಕೆಂದು ಅನಿಸುತ್ತದೆ. ಆದರೆ ಬರೇ ಒಂದೆರಡು ಎಕರೆ ಕೊಡಲು ಸಂಕೋಚವೆನಿಸುತ್ತದೆ. ಏನೂ ಸೂಚಿಸುವದಿಲ್ಲ. ನಿಮ್ಮ ಸಲಹೆಯೇನು?' ಎಂದು ಕೇಳಿದನು. ಆಗ ಕಾರ್ಯದರ್ಶಿಯ ಮನಸ್ಸು ಇಂಥ ಸುಧಾಮರ ಭಕ್ತಿಯಿಂದ ತುಂಬಿತು. ಅವನದು ಬಹಳೇ ಆಗ್ರಹವಾದ್ದರಿಂದ ಕೆಲವೇ ಗುಂಟೆ ಜಮೀನು ಅವನಿಂದ ಸ್ವೀಕರಿಸಲಾಯಿತು. ಈ ಸಂಗತಿಯು ಮುಂದೆ ಸಾಮಾನಿನ ಗಾಡಿ ಹೊಡೆಕೊಂಡು ಬಂದವನಿಗೆ ತಿಳಿಯಿತು. ಆಗ ಅವನೂ ದಾನಪತ್ರ ತುಂಬುತ್ತೇನೆಂದು ತನ್ನ ಕೆಲವು ಗುಂಟೆ ಹೊಲವನ್ನು ದಾನ ಮಾಡಿದನು.

ವಿನೋಬರವರು ಅವರ ಸಹಯಾತ್ರಿ ಶ್ರೀ ಹರೀಶಭಾಯಿಯವರ ಊರಲ್ಲಿ ಐದು ನಿಮಿಷ ನಿಂತರು. ಊರಿನ ಹೆಣ್ಣು ಮಕ್ಕಳು ಮಂಗಲ ಗೀತಗಳಿಂದ ಅವರನ್ನು ಸ್ವಾಗತಿಸಿದರು. ಹರೀಶಭಾಯಿಯವರ ತಾಯಿಯವರು ಮುಂದೆ ಬಂದು ನಮಸ್ಕಾರ ಮಾಡಿದರು. ಆದರೆ ಸಂಕೋಚದಿಂದ ಮಾತನಾಡಲಾರದೇ ನಿಂತಿದ್ದರು. ವಿನೋಬಾಜಿಯವರು ಏನಾದರೂ ಕೇಳುವದಿದೆಯೇ ಎಂದು ಕೇಳಿದಾಗ ಅವಳು ಹೇಳಿದಳು 'ಒಟ್ಟು ನಮ್ಮದು ೧೨ ಎಕರೆ ಜಮೀನು ಇದೆ. ಕುಟುಂಬದಲ್ಲಿ ನಾವು ಇದ್ದವರು ಐದು ಮಂದಿ ನೀವು ಆರನೆಯವರಾದಿರಿ. ಆದ್ದರಿಂದ ಎರಡು ಎಕರೆ ಜಮೀನು ಸ್ವೀಕರಿಸಿರಿ' ವಿನೋಬಾಜಿಯವರು ಅದನ್ನು ಆ ಮಾತೆಯ ಆಶೀರ್ವಾದವೇ ಎಂದು ಸ್ವೀಕರಿಸಿದರು. ಮತ್ತು ಆ ದಿನದ ಪ್ರವಚನದಲ್ಲಿ ಈ ಎರಡು ಎಕರೆಯು ಎರಡು ಲಕ್ಷಕ್ಕೆ ಸಮಾನ ಎಂದು ಹೇಳಿದರು.

'ನವರಂಗ'

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1931ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. [illegible], [illegible] ಮತ್ತು ವಿಶ್ವಭಾರತಿ ಇನ್ಷೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಅವಧಿಯ ಸಾಲದ ಶಾಖೆಯ ಮೂಲಕ ದೀರ್ಘ ಅವಧಿಯ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಬಿ. ಅಪ್ಪಯ್ಯ, ಪ್ರೆಸಿಡೆಂಟ್ [illegible].

ಈಜಿಪ್ಟಿನಲ್ಲಿ ಸಮಗ್ರ ಭೂ ಸುಧಾರಣೆ.

ಈಜಿಪ್ಟಿನಲ್ಲಿ ಭೂ ಒಡೆತನವನ್ನು ೨೦೦ ಫೆಡಾನ ಎಕ್ರೆಗಳಿಗೆ ನಿಯಮಿತಗೊಳಿಸಿ ಸಮಗ್ರ ಭೂ ಸುಧಾರಣಾ ಕಾರ್ಯಕ್ರಮ ಕೈಕೊಳ್ಳಬೇಕೆಂಬ ಬೇಡಿಕೆಯನ್ನು ಜನರಲ್ ನಗೀಬ ಮೊಹಮ್ಮದರ ಕೇಂದ್ರ ಕಚೇರಿಯು ಮುಖ್ಯ ಮಂತ್ರಿ ಅಲಿ ಮೆಹರ ಪಾಷಾರಿಗೆ ಒಪ್ಪಿಸಿದೆ.

ಜ. ನಗೀಬರ ಕಚೇರಿಯಿಂದ ಒಪ್ಪಿಸಲ್ಪಟ್ಟ ಬೇಡಿಕೆಗಳ ಮೇರೆಗೆ ಸರಕಾರವು ಉಳಿಕೆಯ ಭೂಮಿಯನ್ನೆಲ್ಲ ವಶಪಡಿಸಿಕೊಂಡು, ೩೦ ವರ್ಷದವಧಿಯಲ್ಲಿ ಆ ಭೂಮಿಗಾಗಿ ಶೇ ೩|| ಬಡ್ಡಿಯ ಮೇಲೆ ಪರಿಹಾರ ಹಣವನ್ನು ಕಂತಿನ ಮೇಲೆ ಕೊಡಲಾಗುವುದು.

ಭೂಮಿಯನ್ನು ಕೊಳ್ಳುವ ಬೆಲೆಯು ೧೯೫೦, ೫೧ ಮತ್ತು ೫೨ ಈ ಮೂರು ವರ್ಷಗಳಲ್ಲಿ ಇದ್ದ ಬೆಲೆಯ ಮಟ್ಟದ ಮೇರೆಗೆ ನಿರ್ಧರಿಸಲಾಗುವುದು.

ಸರಕಾರ ಭೂಮಿಯನ್ನು ಭೂರಹಿತ ಕೃಷಿಕರಿಗೆ ೩೦ ವರ್ಷಗಳಲ್ಲಿ ಹಣ ಮುಟ್ಟಿಸುವ ಸುಲಭವಾದ ಕರಾರುಗಳ ಮೇರೆಗೆ ಹಂಚಲಾಗುವುದು.

ಪ್ರತಿ ಹಳ್ಳಿಯಲ್ಲಿಯೂ ಸಹಕಾರ ಸಂಘಗಳನ್ನು ರಚಿಸಲಾಗುವುದು.

ಕಂತಿನ ಮೇರೆಗೆ ಭೂಮಿಯನ್ನು ಕೊಳ್ಳುವವರಿಗೆ ಅದನ್ನು ಈ ೩೦ ವರ್ಷದ ಅವಧಿಯಲ್ಲಿ ಮಾರಲು ಅವಕಾಶವಿಲ್ಲ.

ಸೈನ್ಯ ಭೂ ಸುಧಾರಣಾ ಯೋಜನೆಯು ಸಣ್ಣ ಭೂಮಿಯನ್ನು ಸಂರಕ್ಷಿಸುವ ಭೂ ಹಂಚುವ ಮತ್ತು ಆದಾಯ ಎತ್ತುವ ಕ್ರಮವನ್ನು ನಿರ್ಧರಿಸುವದು.

ಹೊಸ ಭೂ ಸುಧಾರಣೆಯ ಮೇರೆಗೆ ಭೂಮಿಯನ್ನು ಮಾರಲು ನಿರಾಕರಿಸುವವನಿಗೆ ಅಥವಾ ಮಾರಾಟಕ್ಕೆ ತಡೆಯನ್ನುಂಟು ಮಾಡುವವನಿಗೆ ಯಾವ ಅಪೀಲಿಗೆ ಅವಕಾಶ ಕೊಡದೆ ಐದು ವರ್ಷಗಳ ಶಿಕ್ಷೆಯನ್ನು ವಿಧಿಸಲಾಗುವುದು.

ಹಿಂದಿನಿಂದ ಮಾತ್ರ ೨೦೦ ಎಕರೆಗಳಿಗಿಂತ ಹೆಚ್ಚಿನ ಭೂಮಿಯನ್ನು ಹೊಂದಬಹುದು?

ಭೂಮಿಯನ್ನು ಹಂಚುವಾಗ್ಗೆ ವಿವಾಹಿತರಿಗೆ ಪ್ರಥಮ ಪ್ರಾಶಸ್ತ್ಯ ಕೊಡಲಾಗುವುದು.

ಈಜಿಪ್ಟಿನ ೬೦ ಲಕ್ಷ ಎಕರೆ ಸಾಗುವಳಿಯಾಗಬಲ್ಲ ಜಮೀನು ಬಹುತರ ೫೦೦೦ ಸಿರಿವಂತ ಮನೆ ಪಾಶಾರ ಒಡೆತನದಲ್ಲಿದೆ. ೨೦ ಲಕ್ಷ ಜನರ ಒಡೆತನದಲ್ಲಿ ೭೮೮೬೦೪ ಎಕರೆ ಜಮೀನಿದೆ. ಇದರಿಂದ ಪ್ರತಿಯೊಬ್ಬನಿಗೆ ೨/೫ ಎಕರೆ ಜಮೀನು ಬರುತ್ತದೆ.

ಈಜಿಪ್ಟದ ಎರಡು ಕೋಟಿ ಜನತೆಯಲ್ಲಿ ಬಹುಸಂಖ್ಯಾತರೆಂದರೆ ಭೂರಹಿತ 'ಫೆಲಾಹೀನ್' (ಕಿಸಾನರು)ರಿದ್ದಾರೆ.

ಈಜಿಪ್ಟದಲ್ಲಿ ಒಬ್ಬನೇ ಅತಿ ಹೆಚ್ಚು ಭೂಮಿಯ ಒಡೆತನವನ್ನು ಪಡೆದವನೆಂದರೆ ಮಾಜಿ ಅರಸ ಫರೂಕರು. ಅವರೊಬ್ಬರ ಒಡೆತನದಲ್ಲಿ ೨ ಲಕ್ಷ ಎಕರೆ ಜಮೀನಿದ್ದಿತು. ಈಗ ಆ ಜಮೀನೆಲ್ಲ ಸರಕಾರದ ವಶವಾಗಿದೆ.

ಮುಫತ್ತು.

ಈಗ ಹೊಸದಾಗಿ ಬಂದಿರುವ ನಮ್ಮ ಅಮೇರಿಕನ್ ಫೌಂಟನ್ ಪೆನ್ನುಗಳಿಗೆ ಆರ್ಡರು ಬುಕ್ ಮಾಡಲು ಏಜಂಟರು ಬೇಕಾಗಿದ್ದಾರೆ. ಇವಕ್ಕೆ ಪ್ರತಿಯಾಗಿ 15 ಯಾ 17 ಜ್ಯುವೆಲ್‌ಗಳುಳ್ಳ ಸ್ವಿಸ್ ಬಟನ ರಿಸ್ಟ್‌ವಾಚು, ಸೈಕಲ್, ಅಥವಾ ರೇಡಿಯೋವು ಮುಫತ್ತಾಗಿ ದೊರೆಯುವದು. ಇದು ಲಾಟರಿ, ಜೂಜು ಯಾ ಚಕ್ರಬಂಧ ಸ್ಪರ್ಧೆಯಲ್ಲ. ಒಂದು ಫೌಂಟನ್ ಪೆನ್ನಿಗೂ [illegible], ಕೆಟಲಾಗು ಮತ್ತಿತರ ಮಾಹಿತಿಗಳಿಗೆ ಬರೆಯಿರಿ.

THE UNIVERSAL MUTUAL CORPORATION (K M.)

P. O. Box No. 4013, BOMBAY—7.

Edited printed and published by P. I. Belliapa at 'Kodagu' Press, Mercara, for Kodagu Ltd.

Licence No. 60.
Licensed to post without Prepayment.

Reg. No. M. 1050.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಕು ೨೯-೮-೧೯೫೩ನೇ ಶುಕ್ರವಾರ | ಸಂಚಿಕೆ ೧೩

THE JUBILEE INSURANCE CO., Ltd.

One of the very few in the feild of Insurance that has been declaring BONUS to its policy holders from its very insception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-C., Richmand Road, Bangalore.

Our Chief Agents:—THE ORIENTAL ENTERPRISES, BANGALORE I.

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೆದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:—ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,
22 41-C, ರಿಚ್‌ಮಂಡ್ ರೋಡ್, ಬೆಂಗಳೂರು I.

ಪ್ರಥಮ ಭಾರತೀಯ ಮಹಾ ಸೇನಾನಿ

ಜ॥ ಕೆ. ಎಂ. ಕಾರ್ಯಪ್ಪನವರು

ಲೇ:—ಶ್ರೀ ಪಿ ಎಸ್. ರಾಮಕೃಷ್ಣ ಬಿ. ಎಸ್‌ಸಿ (ಆನರ್ಸ್) ಬಿ. ಟಿ

ಭದ್ರಾಕಾರ ಸೌಂದರ್ಯಪೂರ್ಣವೂ ಆ [illegible]ವೂ ಶಿಸ್ತಿನ ಲಕ್ಷ್ಯದ್ಯೋತಕವೂ ಆದ ಭವ್ಯ ದೈಹಿಕ ಪ್ರಕೃತಿ. ದೀರ್ಘವಾದ ಎತ್ತರವಾದ ತೇಜಸ್ಸಿನಿಂದ ಕೂಡಿದ ಆಜಾನು ಬಾಹುವಿನಿಂದೊಪ್ಪುವ ದೇಹ. ಆರೋಗ್ಯಪೂರ್ಣ ಶಿಸ್ತಿನ ಜೀವನವನ್ನು ನಡೆಸುವುದರ ಪರಿಣಾಮವೆಂಬಂತೆ ಬೆಳೆದಿರುವ ಪುಷ್ಟವಾದ ಶರೀರ. ಈ ಗುಣಗಳಿಂದ ಒಪ್ಪುತ್ತಿರುವ ಭಾರತದ ಮಹಾ ಸೇನಾನಿ ಜನರಲ್ ಕೆ. ಎಂ. ಕಾರ್ಯಪ್ಪನವರು, ಆಧುನಿಕ ಭಾರತದ ನಿರ್ಮಾಣ ಕಾರ್ಯದಲ್ಲಿ ಪ್ರಮುಖಪಾತ್ರವನ್ನು ವಹಿಸಿ ಯುವಜನರಿಗೆ ಆದರ್ಶಪೂರ್ಣರೂ ಹಿರಿಯರಿಗೆ ಪ್ರಶಂಸಾರ್ಹರೂ ಆದ ಕಾರ್ಯಪ್ಪನವರ ವೀರ ಜೀವನ ಚರಿತ್ರೆಯು ಯಾವ ದೇಶ ಭಕ್ತ ಭಾರತೀಯನಿಗೆ ತಾನೇ ರೋಮಾಂಚನವುಂಟು ಮಾಡದು? ಪ್ರಾಚೀನ ಭಾರತೀಯ ಇತಿಹಾಸ ಗ್ರಂಥಗಳಿಂದ ಶ್ರೀರಾಮಚಂದ್ರ, ಅರ್ಜುನ, ಕರ್ಣ, ಚಂದ್ರಗುಪ್ತ, ಅಶೋಕನಂತಹ ಪೌರಾಣಿಕ ಐತಿಹಾಸಿಕ ವ್ಯಕ್ತಿಪುಂಗವರನ್ನು ನೆನಪು ಹುಟ್ಟಿಸುವ ಕಾರ್ಯಪ್ಪನವರ ಜೀವಿತವಿನ್ಯಾಸವು ಯುವಜನಾನುಕರಣೆಗೆ ಪಾತ್ರವಾಗಿ ಭಾರತದ ವಿಮಲ ಕೀರ್ತಿಯನ್ನು ನಾಲ್ದೆಸೆಗಳಿಗೆ ಸಾರುವುದು.

ಕೊಡಗಿನ ಹೆಮ್ಮೆಯ ಸುಪುತ್ರರಾದ ಈ ವಿಖ್ಯಾತ ಭಾರತೀಯರು ಕಾವೇರಿಮಾತೆಯ ಕಲಕಲರವದಿಂದ ಅನವರತವೂ ಪಾವನವಾದ ಕೊಡಗು ರಾಜ್ಯದ ಶನಿವಾರಸಂತೆಯಲ್ಲಿ ಕ್ರಿ. ಶ. ೧೮೯೯ ನೇ ಜನವರಿ ೨೮ ರಂದು ಜನಿಸಿದರು. ಅವರ ಜನಕರು ಈಗಲೂ ೮೩ ವಯಸ್ಸಿನ ವೃದ್ಧರೂ [illegible] ಸನ್ಮಾನ್ಯ [illegible] ಕೀರ್ತಿವಂತರಾದ ಪುತ್ರರನ್ನು ಪಡೆದ ಕೀರ್ತಿಶಾಲಿಗಳೂ ಆದ ಕೊಡಂದೇರ ಮನೆತನಕ್ಕೆ ಸೇರಿದ ಮಾದಪ್ಪನವರು. ಶ್ರೀಯುತರು ಶನಿವಾರಸಂತೆಯಲ್ಲಿ ಸರಕಾರಿ ನೌಕರರಾಗಿರುವಾಗ ಸ್ವತಂತ್ರ ಭಾರತದ ಮಹಾಸೇನಾಧಿಪತಿಯಾಗಲಿರುವ ಸುಪುತ್ರನನ್ನು ಪಡೆದರು. ಕಾರ್ಯಪ್ಪನವರು ತಮ್ಮ ತಂದೆಯ ದ್ವಿತೀಯ ಪುತ್ರರು.

ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಕಾರ್ಯಪ್ಪನವರು ಕೊಡಗು ದೇಶದ ಹಿರಿಯ ಪ್ರೌಢಶಾಲೆಯಾಗಿದ್ದ ಮಡಿಕೇರಿಯ ಸೆಂಟ್ರಲ್ ಹೈಸ್ಕೂಲಿನಲ್ಲಿ ವ್ಯಾಸಂಗವನ್ನು ನಡೆಸುತ್ತಿದ್ದರು. ಪ್ರೌಢಶಾಲೆಯ ಅಂತ್ಯ ಪರೀಕ್ಷೆಯಲ್ಲಿ ಯಶಸ್ವಿಯಾಗಿ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಉಚ್ಚಶಿಕ್ಷಣವನ್ನು ಪಡೆದರು.

ವಿದ್ಯಾರ್ಥಿದೆಶೆಯಿಂದ ಸೈನಿಕ ಜೀವನಕ್ಕೆ ಕಾಲಿಟ್ಟ ಕಾರ್ಯಪ್ಪನವರು ಇಂದೂರಿನ ಡೇಲಿ ಕೆಡೆಟ್ [illegible] ಕ್ಷಣಾಲಯದಲ್ಲಿ ಸೈನ್ಯವಿಜ್ಞಾನದ ಶಿಕ್ಷಣ ಪಡೆದು ಭಾರತೀಯ [illegible]ಗಳಲ್ಲಿ ಪ್ರಥಮ ಬಾರಿಗೆ ೧೯೧೯ರಲ್ಲಿ ಆರಿಸಲ್ಪಟ್ಟರು. ೧೯೨೦ರಿಂದ ೧೯೨೨ರ ವರೆಗೆ ಇರಾಕ್ ಎಂದು ಈಗ ಕರೆಯಲ್ಪಡುವ ಮೆಸೊಪೊಟೋಮಿಯಾದಲ್ಲಿ ನೇಪಿಯರ್ ರೈಫಲ್ಸ್ ಎನ್ನುವ ಸಶಸ್ತ್ರ ಪಡೆಯಲ್ಲಿ ಅಧಿಕಾರಿಯಾಗಿದ್ದರು. ತರುವಾಯ ವಜೀರಿಸ್ತಾನದಲ್ಲಿ ಡೋಗ್ರಾ ಮತ್ತು ರಜಪೂತ ಸೈನ್ಯದಲ್ಲಿ ಅಧಿಕಾರಿಗಳಾಗಿ ೧೯೨೨ರಿಂದ ೧೯೨೫ರ ವರೆಗೆ [illegible]ಗಳಲ್ಲಿ ಸೈನಿಕ ಜೀವನವನ್ನು ನಿರ್ವಹಿಸಿದರು.

೧೯೩೩ರ ವೇಳೆಗೆ ಕಾರ್ಯಪ್ಪನವರು ಬೆಂಗಾಳ್ [illegible] ಸೈನಿಕ ಮುಖಂಡರಾಗಿ ನಿಯೋಜಿತರಾದರು. ೧೯೩೬ರಲ್ಲಿ ಡೆಕ್ಕನ್ ಜಿಲ್ಲೆಯ ಪ್ರಾದೇಶಿಕ ಸೈನ್ಯಾಧಿಕಾರಿಯಾಗಿ ನಿಯುಕ್ತರಾದರು. ಸೈನಿಕ ಅಧಿಕಾರ ಶ್ರೇಣಿಯಲ್ಲಿ ದ್ವಿತೀಯ ಸ್ಥಾನವಾದ ಈ ಅಧಿಕಾರಕ್ಕೆ ಬಂದ ಭಾರತೀಯರಲ್ಲಿ ಕಾರ್ಯಪ್ಪನವರೇ ಮೊದಲಿಗರು. ೧೯೩೭ರಲ್ಲಿ ಬ್ರಿಗೇಡಿಯರ್ ಎಂದು ಕರೆಯಲ್ಪಡುತ್ತಿದ್ದ ೨೦ನೇ ಭಾರತೀಯ ಕಾಲ್ಬಲ ದಳದ ದಳಾಧಿಪತಿಯಾದರು.

ದ್ವಿತೀಯ ಜಾಗತಿಕ ಮಹಾಸಮರವು ೧೯೩೯ರಲ್ಲಿ ಘೋಷಿಸಲ್ಪಟ್ಟಾಗ ಕಾರ್ಯಪ್ಪನವರು ೧೦ನೇ ಭಾರತೀಯ ಸೈನ್ಯದಳದ ಅಧಿಪತಿಯಾಗಿ ೧೯೪೧ರಿಂದ ೪೨ರ ವರೆಗೆ ಇರಾಕ್, ಇರಾನ್, ಸಿರಿಯಾ ಮತ್ತು ಮಧ್ಯಪ್ರಾಚ್ಯ ದೇಶಗಳಲ್ಲಿ ಸೈನಿಕ ಕ್ಷೇತ್ರದಲ್ಲಿ ಸೇವೆಸಲ್ಲಿಸಿದರು. ೧೯೪೩ರಲ್ಲಿ ೭ನೇ ರಾಜಪುತ ಸೈನ್ಯ ಭಾಗದ ಸೇನಾಧಿಕಾರಿಯಾಗಿ [illegible] (ಪಿಂಪಿಸ್ ಗನ್) ಪಡೆಯ ದಿಗ್ದರ್ಶನವನ್ನು [illegible]. ೧೯೪೪ರಲ್ಲಿ ಪಶ್ಚಿಮ ಪ್ರಾಚ್ಯಸೈನ್ಯದ ಪ್ರಾದೇಶಿಕ ಅಧಿಕಾರಿಯಾಗಿ ನಿಯಮಿಸಲ್ಪಟ್ಟರು. ಬಳಿಕ ಬ್ರಹ್ಮದೇಶದ ಅರಾಕಾನ್ ರಣಕ್ಷೇತ್ರದಲ್ಲಿ ೨೬ನೇ ಭಾರತೀಯ ಸೈನ್ಯ ವಿಭಾಗದ ಅಧಿಕಾರಿಯಾಗಿ ದುಡಿದರು. ೧೯೪೬ರಲ್ಲಿ ಸೈನ್ಯ ಪುನರ್ವ್ಯವಸ್ಥಾಪನಾ ಸಮಿತಿಯಲ್ಲಿ ಸೈನ್ಯ ದಳಾಧಿಕಾರಿಯಾಗಿ ನಿಯುಕ್ತರಾಗಿ ಆ ಕೆಲಸ ಮುಗಿದ ನಂತರ ಬನ್ನು ಗಡಿನಾಡು ಪ್ರಾಂತೀಯ ಸೈನ್ಯದಳದ ಅಧಿಪತ್ಯವನ್ನು ವಹಿಸಿಕೊಂಡರು. ೧೯೪೭ರಲ್ಲಿ [illegible] ಸೈನ್ಯ ಪುನರ್ರಚನಾ ಸಮಿತಿಯಲ್ಲಿ ಸೇವೆ ಸಲ್ಲಿಸಿ ಅದೇ ವರ್ಷ ಪ್ರಾಮುಖ್ಯ ದಳಪತಿಯಾಗಿ ನಿಯಮಿಸಲ್ಪಟ್ಟು ಭಾರತೀಯ ಸೈನ್ಯದ ಪೂರ್ವ ಪ್ರಾದೇಶಿಕ ಮಹಾ ಸೈನ್ಯಾಧಿಕಾರಿಯ ಪದವಿಗೇರಿಸಲ್ಪಟ್ಟರು. ೧೯೪೮ರಲ್ಲಿ ಪೂರ್ವ ಪ್ರಾದೇಶಿಕ ಸೈನ್ಯಾಧಿಕಾರವನ್ನು ಬಿಟ್ಟು ಪಶ್ಚಿಮ ಪ್ರಾದೇಶಿಕ ಸೈನ್ಯಾಧಿಕಾರಿಯ ಸ್ಥಾನವನ್ನಲಂಕರಿಸಿದರು. ೧೯೪೯ರ ಜನವರಿ ೧೫ನೇ ತಾರೀಕಿನಲ್ಲಿ ಸ್ವತಂತ್ರ ಭಾರತದ ಪ್ರಥಮ ಭಾರತೀಯ ಮಹಾಸೇನಾನಿಯಾಗಿ ಅಭಿಷಿಕ್ತರಾಗಿ ಸೈನಿಕ ಅಧಿಕಾರ ಶ್ರೇಣಿಯಲ್ಲಿ ಮಹೋನ್ನತಸ್ಥಾನ ಪಡೆದು ಭಾರತದ ರಾಷ್ಟ್ರೀಯ ಇತಿಹಾಸದಲ್ಲಿ ಅಳಿಯದ ಸ್ಥಾನವನ್ನು ಗಳಿಸಿಕೊಂಡು ಕೀರ್ತಿಯ ಶಿಖರವನ್ನೇರಿದರು.

ಭಾರತೀಯ ಭೂಸೈನ್ಯ ಮಹಾಪಡೆಯು ಹಲವು ರೀತಿಯಲ್ಲಿ ಆದರ್ಶಮಯ ಸಂಸ್ಥೆಯಾಗಿರುವುದು. ಅನ್ಯದೇಶೀಯ ಶತ್ರುಗಳಿಂದ ಭಾರತದ ಭದ್ರತೆಗೆ ಧಕ್ಕೆ ಬಂದಾಗ ಮಾತ್ರ ಧರ್ಮ ಸಮರವನ್ನು ಹೂಡಲು ಸಿದ್ಧವಿರುವ ಸುಸಜ್ಜಿತ ಭಾರತೀಯ ಸೈನ್ಯವು ಇತರ ವೇಳೆಗಳಲ್ಲಿ ಅಹಿಂಸಾತ್ಮಕ ಘೋಷಣೆಯಿಂದ ರಾಷ್ಟ್ರ ರಚನಾಕಾರ್ಯದಲ್ಲಿ ನಿರತವಾಗಿರುವುದು. ಇಂತಹ ಶಿಸ್ತಿನಿಂದ ಕೂಡಿದ ಸುಸಜ್ಜಿತ ಆಧುನಿಕ ಮಹಾ ಯೋಧ ಪಡೆಗೆ ದೂರ [illegible]ಗಳಾದ ಕಾರ್ಯಪ್ಪನವರು ಮಹಾಸೇನಾಧಿಪತಿಯಾಗಿ ನಿಯಮಿಸಲ್ಪಟ್ಟುದು ಭಾರತದ ಭಾಗ್ಯ. ಮಹಾಸೇನಾನಿ ಕಾರ್ಯಪ್ಪನವರ ಮಾರ್ಗದರ್ಶನದಲ್ಲೇ ಕಾಶ್ಮೀರದ [illegible] ಬಗೆಹರಿಸಲ್ಪಟ್ಟು ಭಾರತೀಯ ಸೈನ್ಯದ ಮಹಾ ತೇಜಸ್ಸು ಹೊರಹೊಮ್ಮಿರುವುದು. ಅವರ ಪ್ರಮುಖತ್ವದಲ್ಲಿ ಬೆಳೆದ ರಾಷ್ಟ್ರೀಯ ಮಹಾಸೇನೆಯು ಸಂಖ್ಯಾಬಲದಿಂದ ಚಿಕ್ಕದಾದರೂ ಪ್ರಪಂಚದ ರಾಷ್ಟ್ರಗಳ ಸೇನೆಗಳಿಗೆ ಶಕ್ತಿ, ಸಾಹಸಗಳಲ್ಲಿಯೂ, ಧೈರ್ಯ ಸ್ಥೈರ್ಯ ಪರಾಕ್ರಮಗಳಲ್ಲಿ, ಶಿಸ್ತಿನ [illegible]ಯಲ್ಲೂ [illegible] ಆದರ್ಶವಾಗಿ ಖ್ಯಾತಿಗಳಿಸಿದೆಯೆಂಬುದರಲ್ಲಿ ಸಂದೇಹವಿಲ್ಲ.

ಇಂದಿನ ಭಾರತೀಯ ವಿದ್ಯಾರ್ಥಿಗಳಲ್ಲಿ ಶಿಸ್ತಿಲ್ಲವೆಂದು ಹೇಳಲು ನಾನು ಬಯಸುವುದಿಲ್ಲ. ಅವರಲ್ಲಿ ಶಿಸ್ತಿದೆ. ಶೀಲ ನಡತೆಗಳಿವೆ. ಆದರೆ ಕೆಲವು ಸ್ವಾರ್ಥಿಗಳು ತಮ್ಮ ಸ್ವಂತ ಉದ್ದೇಶ ಸಾಧನೆಗಾಗಿ ವಿದ್ಯಾರ್ಥಿವೃಂದವನ್ನು ತಪ್ಪು ದಾರಿಯಲ್ಲಿ ಎಳೆಯುತ್ತಿರುವರು. ಈ [illegible]ಗಳ ದುರ್ಬೋಧನೆಗಳಿಗೆ ಕಿವಿಗೊಡದೆ ತಮ್ಮ ವಿದ್ಯಾಸಂಸ್ಥೆಗಳೂ ಅಧ್ಯಾಪಕರುಗಳೂ ಪೋಷಕರುಗಳೂ ಮನ್ನಣೆಯಿತ್ತು ವಿದ್ಯಾರ್ಥಿ ಜೀವನದಲ್ಲಿ ತಮ್ಮ ಸರ್ವತೋಮುಖವಾದ ಬೆಳವಣಿಗೆಗಾಗಿ ವಿದ್ಯಾರ್ಥಿಯು ಸಾಧಿಸಿಕೊಳ್ಳಬೇಕು. ಕೇವಲ ಮಾನಸಿಕ ಬೆಳವಣಿಗೆಯಿಂದ ಪ್ರಯೋಜನವಿಲ್ಲ. ದಾರ್ಢ್ಯಪೂರ್ಣವೂ ನಿರೋಗಿಯೂ [illegible] ಸೌಷ್ಠವಪೂರ್ಣವೂ ಆದ ದೇಹವನ್ನು ವಿದ್ಯಾರ್ಥಿಗಳು ಗಳಿಸಿಕೊಳ್ಳಬೇಕು. ನಿಯಮಬದ್ಧವಾದ ಶಿಸ್ತಿನ ಜೀವನ, [illegible], ವ್ಯಾಯಾಮ, ಸಾಂಘಿಕವಾದ ಆಟೋಟಗಳು ಇವುಗಳಿಂದ ಶರೀರ ಬೆಳವಣಿಗೆಯು [illegible] ಟಿಗೆ ಸ್ವಾರ್ಥ[illegible] ಭಾವನೆಯಾಗಿ ಸಾವ[illegible]

ಹಿತ ಪ್ರಗತಿಗಾಗಿ ವಿದ್ಯಾರ್ಥಿಗಳು ಶ್ರಮಿಸುವರು. ವಿದ್ಯಾರ್ಥಿಗಳೇ ರಾಷ್ಟ್ರದ ಅತುಳ ಸಂಪತ್ತು. ಸ್ವಪ್ನದಲ್ಲಿರುವಂತೆ ಜಾತ್ಯತೀತ ವರ್ಗರಹಿತ ಸಮಾಜ ನಿರ್ಮಾಣ ಮಾಡಲು ವಿದ್ಯಾರ್ಥಿಗಳು ಮುಂಬರಬೇಕು. ಭಾರತದ ರಾಷ್ಟ್ರೀಯ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಬೆಳೆದು ಶ್ರೀರಾಮಚಂದ್ರ, ಶ್ರೀಕೃಷ್ಣ, ಭಗವಾನ್ ಬುದ್ಧ, ಮಹಾತ್ಮಗಾಂಧೀ ಮೊದಲಾದ ದಿವ್ಯಜ್ಯೋತಿಗಳಾದ ಭಾರತೀಯರು ತೋರಿಸಿಕೊಟ್ಟ ದಾರಿಯಲ್ಲಿ ನಡೆದು ಭಾರತದ ಕೀರ್ತಿಧ್ವಜವನ್ನು ಎತ್ತಿಹಿಡಿಯಬೇಕು. ವಿದ್ಯಾರ್ಥಿದೆಸೆಯಲ್ಲಿ ನೈತಿಕ ಸಂಪತ್ತನ್ನು ಅಭಿವೃದ್ಧಿಗೊಳಿಸಿಕೊಳ್ಳುವುದು ಅಗತ್ಯವಾದುದರಿಂದ ಕ್ಷುಲ್ಲಕವಾದ ಅನೈತಿಕವಾದ ಉದ್ರೇಕಪೂರ್ಣ ಸ್ಪರ್ಧೆಗಳೆಡೆಗೆ ಯುವಕರು ಮನಸ್ಸುಗೊಡಬಾರದು. ರಚನಾತ್ಮಕ ಕಾರ್ಯದಲ್ಲಿ ಮನವಿಕ್ಕಿ ದ ವರ್ಗಗಳ ಪ್ರಗತಿಯ ಸಂದರ್ಭವನ್ನು ಸಹಾಯ್ಗದಲ್ಲಿ ತೋರಿಸಬೇಕು. ಹೀಗಾದರೆ ಉತ್ತಮವಾದ ವ್ಯಕ್ತಿತ್ವವನ್ನು ಕಟ್ಟಿಕೊಂಡು ಸ್ವತಂತ್ರಭಾರತದ ಹಿರಿಮೆಯನ್ನು ದಿಗ್ದಿಗಂತಗಳಲ್ಲಿ ಮೊಳಗಿಸಲು ಸಾಧ್ಯ.” ಎಂದು ಜನರಲ್ ಕಾರ್ಯಪ್ಪನವರು ತಾವು ಹೋದ ವಿದ್ಯಾಸಂಸ್ಥೆಗಳಲ್ಲೆಲ್ಲಾ ವಿದ್ಯಾರ್ಥಿಗಳಿಗೆ ಬೋಧಿಸುತ್ತಿರುವರು. ಸ್ವತಃ ಆಚರಣೆಯಲ್ಲಿ ಈ ಆದರ್ಶಗಳನ್ನು ರಾಷ್ಟ್ರದ ಮುಂದಿಟ್ಟು ಪ್ರದರ್ಶಿಸಿದ ಕಾರ್ಯಪ್ಪನವರ ಉಪದೇಶಾಮೃತವನ್ನು ನಮ್ಮ ನಾಡಿನ ವಿದ್ಯಾರ್ಥಿಗಳು ಪಾಲಿಸಿ ಶಿಸ್ತಿನ ಸಿಪಾಯಿಗಳಾಗಿ ಬಾಳಿ ನಾಡಿನ ಉಜ್ವಲಕೀರ್ತಿಯನ್ನು ಬೆಳಗಿಸುವ ದಿವ್ಯದಿನ ಇನ್ನೀಗ ಸಂಪ್ರಾಪ್ತವಾಗಿದೆ.

ಜನರಲ್ ಕಾರ್ಯಪ್ಪನವರು ವಿದ್ಯಾರ್ಥಿಗಳ ಅಭಿವೃದ್ಧಿಯ ಕಡೆಗೆ ಹೆಚ್ಚು ಶ್ರದ್ಧೆ ವಹಿಸುವರು. ತಮ್ಮ ಜ್ಞಾನದಾಯಿನೀ ಸಂಸ್ಥೆಯಾದ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ವಿದ್ಯಾರ್ಥಿಗಳನ್ನು ರಾಷ್ಟ್ರೀಯ ಬಾಲಸೈನ್ಯಪಡೆಯನ್ನು ಸಂದರ್ಶಿಸುವಾಗ ಅವರು ವಿದ್ಯಾರ್ಥಿಗಳಿಗೆ ತೋರಿಸಿದ ವೈಯಕ್ತಿಕ ಶ್ರದ್ಧೆಯೇ ಇದಕ್ಕೆ ನಿದರ್ಶನವಾಗಿದೆ. ಶಾರೀರಿಕ ಬಲವಿಲ್ಲದ ಬಾಲಕರನ್ನು ನೋಡಿ ಜನರಲರು ಪಶ್ಚಾತ್ತಾಪ ಪಡುವರು. ದೃಢ ಸುಗಾತ್ರರಾದ ಬಾಲ ಜನಾಂಗದಿಂದಲೇ ರಾಷ್ಟ್ರೀಯ ಅಭ್ಯುದಯವು ಸಾಧ್ಯವೆಂದವರು ಚೆನ್ನಾಗಿ ಮನಗಂಡಿರುವರು.

ಜ|| ಕಾರ್ಯಪ್ಪನವರು ಪ್ರಪಂಚದ ನಾನಾ ಖಂಡಗಳನ್ನೂ ರಾಷ್ಟ್ರಗಳನ್ನೂ ಸುತ್ತಿರುವರು. ೩೦ ವರುಷಗಳ ದೀರ್ಘಕಾಲ ಭಾರತದ ಸೇನಾದಳದಲ್ಲಿ ಸೇವೆಸಲ್ಲಿಸಿ ಗೌರವದ ಜನಮನ್ನಣೆಯಲ್ಲಿ ಕೆಲಸದಿಂದ ನಿವೃತ್ತರಾಗುವರು. ಲೆಫ್ಟಿನೆಂಟ್ ಜನರಲ್ ರಾಜೇಂದ್ರಸಿಂಹಜಿಯವರು ದ್ವಿತೀಯ ಭಾರತೀಯ ಮಹಾ ಸೇನಾನಿಯಾಗಿ ಅಧಿಕಾರ ಸ್ವೀಕಾರ ಮಾಡುವರು. ತಾವು ನಿವೃತ್ತರಾದರೂ ಕರೆಬಂದಾಗ ತಾಯ್ನಾಡಿನ ಸೇವೆಯನ್ನು ಸಲ್ಲಿಸಲು ಸಿದ್ಧರೆಂದು ಕಾರ್ಯಪ್ಪನವರು ಮದ್ರಾಸಿನಲ್ಲಿ ನುಡಿದರು. ಅಂಚೆ ಚೀಟಿಗಳನ್ನು ಸಂಗ್ರಹಿಸುವ ರಚನಾತ್ಮಕ ಉದ್ಯಮವು ಕಾರ್ಯಪ್ಪನವರ ಅಭ್ಯಾಸವಾಗಿರುವುದು.

ತಂದೆತಾಯಂದಿರೂ, ಸರಳ ಶ್ರಮಿಗಳೂ, ಆದರ್ಶಜೀವಿಗಳೂ, ನಾಡಿನ ಕೀರ್ತಿಯನ್ನು ದಿಗ್ದಿಗಂತಗಳಲ್ಲಿ ಹರಡಿದ ಕೊಡಗಿನ ಸುಪುತ್ರರೂ ಆದ ಜ|| ಕಾರ್ಯಪ್ಪನವರ ದಿವ್ಯವಾದ ಆದರ್ಶದಲ್ಲಿ ನಾಡಿನ ಜನತೆ ಮುನ್ನಡೆದು ಭಾರತದ ಭದ್ರತೆಯನ್ನು ಕಾಪಾಡಿ ಸ್ವತಂತ್ರ ಭಾರತವನ್ನು ಪ್ರಬಲ ಶಕ್ತರಾಷ್ಟ್ರವಾಗಿ ಮಾಡಲು ದೃಢ ಸಂಕಲ್ಪ ಮಾಡಿಕೊಳ್ಳಬೇಕು. ಭಾರತದ ವಿದ್ಯಾರ್ಥಿವೃಂದವಾದರೋ ರಾಷ್ಟ್ರಜೀವನದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿರುವ ಕಾರ್ಯಪ್ಪನವರ ಮೇಲ್ಪಂಕ್ತಿಯಿಂದ ಎಚ್ಚೆತ್ತು ರಾಷ್ಟ್ರದೇವಿಯನ್ನು ನಾನಾ ಕ್ಷೇತ್ರಗಳಿಂದ ಅರ್ಚಿಸಲು ತಮ್ಮನ್ನು ತಾವೇ ಸಿದ್ಧಪಡಿಸಿಕೊಳ್ಳಬೇಕು. ಸ್ವತಂತ್ರ ಭಾರತದ ಪ್ರಥಮ ಸೇನಾನಿ ಜ|| ಕಾರ್ಯಪ್ಪನವರು ಚಿರಕಾಲ ಬಾಳಿ ತಮ್ಮ ಅಮೂಲ್ಯ ಸೇವೆಯನ್ನು ರಾಷ್ಟ್ರಕ್ಕೆ ಸಲ್ಲಿಸಿ ರಾಷ್ಟ್ರದ ಉನ್ನತಿಗಾಗಿ ಹೆಣಗುವಂತೆ ಅವರಿಗೆ ಭಗವಂತನು ಆಯುರಾರೋಗ್ಯ ಐಶ್ವರ್ಯಗಳನು ಕೊಟ್ಟು ಹರಸಲಿ!!

“ಜೈಹಿಂದ್”

ಸಾಮೂಹಿಕ ವಿಕಾಸ ಯೋಜನೆ.

ಪ್ರಧಾನ ಮಂತ್ರಿ ನೆಹರೂರವರು ಪ್ರೊಜೆಕ್ಟ್ ಆಫೀಸರಿಗೆ ಕೊಟ್ಟ ಸಂದೇಶ.

“ಇಂಡಿಯಾ ದೇಶದಲ್ಲೆಲ್ಲಾ ಹರಡಿರುವ ೫೫ ಕಮ್ಯೂನಿಟಿ ಪ್ರೊಜೆಕ್ಟ್ ಸೆಂಟರುಗಳು ದೇಶದ ವಿಸ್ತೀರ್ಣದ ಪಟ್ಟಿಗೆ ಬಹು ಕೊಂಚವೇ ಆಗಿರಬಹುದು. ಆದರೂ ಅದು ಒಂದು ದೊಡ್ಡ ಅಂಶವೇ! ಈ ಪ್ರೊಜೆಕ್ಟುಗಳು ಸರಿಯಾಗಿ ಕಾರ್ಯಗತವಾಗದೆ ಸುತ್ತು ಮುತ್ತಲಿನ ಪ್ರದೇಶಗಳು ಸಹ ಬಲವಂತವಾಗಿ ಉತ್ತೇಜನಗೊಳ್ಳುತ್ತವೆ.

ದೊಡ್ಡ ಪ್ರೊಜೆಕ್ಟುಗಳು ಪ್ರಾಮುಖ್ಯವೆಂಬುದರಲ್ಲಿ ಸಂಶಯವಿಲ್ಲ. ಆದರೆ ಅವುಗಳು ಜನರನ್ನು ಬಹಳ ಬೇಗನೆ ಮುಟ್ಟಲೊಲ್ಲವು. ಲಕ್ಷಾಂತರ ಉತ್ಸಾಹಭರಿತರಾದ ಜನರಿಂದ ನಡೆಸುವ ಯೋಜನೆಗಳು ಜನರ ಹೃದಯಕ್ಕೆ ನಾಟುವವು. ಆದ್ದರಿಂದ ಈ ಸ್ಕೀಮುಗಳು ಒಂದು ಒಳ್ಳೆಯ ಯೋಜನೆಯೆಂದು ತಿಳಿಯಬಹುದು. ಏಕೆಂದರೆ ಕೆಲ ಸಮಯದ ನಂತರ ಅದರ ಉದ್ಘಾಟನೆಯಲ್ಲಿಯೇ ಸ್ವತಃ ಲಾಭಜನಕವಾದ ಫಲಗಳನ್ನು ಅದೇ ಉದ್ಭವಿಸಬಹುದು.

ಇಂದು ಇಂಡಿಯಾ ದೇಶವೂ ಮತ್ತು ಪ್ರಪಂಚವೂ ಒಂದು ಮಾರ್ಪಾಟಿನ ಯುಗದಲ್ಲಿ ಚಲಿಸುತ್ತಿದೆ ಎಂಬುದಾಗಿ ಹೇಳುವುದು ವಾಡಿಕೆಯಾಗಿದೆ. ಆದರೆ ಇಂದು ನಮ್ಮ ದೇಶದಲ್ಲಿಯೂ ಪ್ರಪಂಚದ ಅನೇಕ ಸ್ಥಳಗಳಲ್ಲಿಯೂ ನಡೆಯುವ ಸಂಗತಿಗಳೆಲ್ಲವೂ ದೊಡ್ಡ ಬದಲಾವಣೆಗಳ ಚಿಹ್ನೆಗಳು. ಇವೆಲ್ಲಕ್ಕೂ ನಾವು ಒರೇ ಪ್ರೇಕ್ಷಕರಾಗಿಯಾಗಲೀ, ಯಾ ಪರರ ಆಟದ ಗೊಂಬೆಗಳಾಗಿಯಾಗಲೀ ಇರಕೂಡದು. ಇವೆಲ್ಲಕ್ಕೂ ನಾವು ಸರಿಪಡಿಸಿಕೊಳ್ಳಬೇಕಾಗಿದೆ. ಇಂತಹ ಸರಿಪಡಿಸುವಿಕೆಯು ಕಲಹ ಸ್ಥಿತಿಯಲ್ಲಾಗಲೀ ಯಾ ಶಾಂತಿರೂಪದಲ್ಲಾಗಲೀ ಜರುಗಬಹುದು. ಆದರೆ, ಈ ಸಾಮೂಹಿಕ ವಿಕಾಸ ಯೋಜನೆಯ ಕಾರ್ಯಕ್ರಮದಲ್ಲಿ ಶಾಂತಿರೂಪವಾದ ಕಾರ್ಯಸಾಧನೆಯೇ ಗುರಿಯಾಗಿದೆ. ಈ ಮಾರ್ಗದಲ್ಲಿ ಅದು ಪೂರ್ಣ ಜಯಪ್ರದವಾಗದಿದ್ದರೂ ಯುದ್ಧ ಮಾರ್ಗದಲ್ಲಿ ಅನುಭವಿಸಬಹುದಾದ ವ್ಯಾಕುಲ ಫಲವನ್ನು ಅನುಭವಿಸಲಾರೆವು. ತಳಹದಿಯಲ್ಲಿಯೇ ಹುಟ್ಟಿಬರುವಾಗ ಅದಕ್ಕೆ ಏನೋ ಒಂದು ವಿಧದ ಆಂತರ್ಯದ ಅಧಿಕಾರ ಶಕ್ತಿಯು ಇದೆ.

ನೀವು ಎಷ್ಟರ ಮಟ್ಟಿಗೆ ಧರ್ಮಯುದ್ಧವೆಸಗುವವರಾಗಿಯೋ ಯಾ ಧರ್ಮಬೋಧಕರಾಗಿಯೋ ನಿಮ್ಮ ನಿಮ್ಮ ಸ್ಥಳಗಳಿಗೆ ಹಿಂದಿರುಗುವಿರೆಂದು ನಿಮ್ಮ ಮನವನ್ನು ಪರಿಶೋಧಿಸಿ ನೀವೇ ಕಂಡುಹಿಡಿಯಿರಿ. ಸರಕಾರದ ರೀತಿಯಲ್ಲಿ ಒಂದು ತರದ ಶ್ರೇಯ ಸಿಕ್ಕು, ಆದರೆ ಅದರ ಶ್ರದ್ಧೆಯು ಯಾವುದಾದರೊಂದನ್ನು ಹೊಸ ರೀತಿಯಲ್ಲಿ ಬೆಳೆಸಲು ಸಬೀಳಗೊಡುವುದಿಲ್ಲ. ಮಹಾತ್ಮಾ ಗಾಂಧೀಜಿಯವರೊಂದಿಗೆ ವಿಶೇಷವಾಗಿರುವ ಪುಣ್ಯ ಲಭಿಸಿದ ನಮಗೆ, ಹೇಗೆ ಒಬ್ಬ ಮನುಷ್ಯನು ಜನತೆಯ ಅಂತರಂಗದ ಪ್ರಭಾವವನ್ನು ಎಬ್ಬಿಸಿ ಸರಕಾರವನ್ನು ಅದರ ಮೊಣಕಾಲಿಗೆ ತಂದನೆಂದು ಗೊತ್ತಿದೆ. ಆದರೆ ಅಂತಹ ಅಮಾನುಷ ಪ್ರಭಾವವನ್ನು ಎಬ್ಬಿಸಲು ಎಲ್ಲರಿಂದಲೂ ಎಲ್ಲಾ ಸಮಯದಲ್ಲಿಯೂ ಸಾಧ್ಯವಿಲ್ಲದಿದ್ದರೂ ಅದರ ಒಂದಂಶ ಉತ್ಸಾಹವನ್ನು ಜನರಲ್ಲಿ ಎಬ್ಬಿಸಿದೆ. ಅಲ್ಲದೆ, ನಾವು ನಮ್ಮ ಕಾರ್ಯಸಾಧನೆಗೆ ಒಂದು ಮಹತ್ತಾದ ಶಕ್ತಿಯನ್ನು ಕೊಟ್ಟಂತಾಗುವುದು.

ಈ ಪ್ರೊಜೆಕ್ಟಿನ ಕೆಲಸವು ಸಂಪೂರ್ಣವಾಗಿ ರಚನಾತ್ಮಕವಾಗಿದೆ. ಇದು ನಾಶ ಮಾಡುವುದಕ್ಕಿಂತ ಬಹಳ ಕಷ್ಟವಾದದ್ದು. ದೇಶದ ಸಾಮಾನ್ಯ ಪ್ರಜೆಯು ದೇಶದ ರಚನೆಯಲ್ಲಿ ಒಂದು ಪ್ರಾಮುಖ್ಯ ಪಾತ್ರವನ್ನು ನಡೆಸುವವನೆಂದು ಅವನಿಗೆ ಮನದಟ್ಟು ಮಾಡಬೇಕು. ಇಡೀ ಹಿಂದೂದೇಶವನ್ನು ಹೊಸದಾಗಿ ಕಟ್ಟುವುದರಲ್ಲಿ ಅವನೂ ಕೂಡ ಓರ್ವ ಪಾಲುದಾರನೆಂಬ ಮನವರಿಕೆಯು ಅವನಲ್ಲಿ ಉಂಟಾಗುವಂತೆ ಮಾಡಬೇಕು. ಅವನಿಗೆ ಅವನು ಕೈಕೊಂಡ ಕೆಲಸದಲ್ಲಿ ಒಂದು ಹೆಮ್ಮೆ ಇದ್ದು ಅದರಿಂದ ಕೀರ್ತಿ ಲಭಿಸುತ್ತಿದೆ ಎಂಬ ಜ್ಞಾನವನ್ನು ಎಬ್ಬಿಸಬೇಕು. ಇಂತಹ ಒಂದು ಉತ್ಸಾಹವನ್ನು ಜನರಲ್ಲಿ ಹರಡಬೇಕಾದರೆ ಆಫೀಸರುಗಳೇ ಮೊದಲಾಗಿ ಉತ್ಸಾಹಭರಿತರಾಗಬೇಕು. ಜನರಿಗೆ ಜ್ಞಾನವನ್ನು ಕೊಡುವವರು ತಾವೇ ಜ್ಞಾನಿಗಳಾಗಬೇಕು.

ಬರೀ ಭಾವನೆ ಯಾ ತರ್ಕ ಸಾಲದು. ಅಭಿಪ್ರಾಯಗಳನ್ನು ಕಾರ್ಯಗೊಳಿಸುವುದು ಹೇಗೆಂಬುದನ್ನು ತಿಳಿದಿರುವುದಲ್ಲದೆ, ಈ ಪರಮಾರ್ಥಗಳಲ್ಲಿ ಸಾಧನಾ ಜ್ಞಾನದಲ್ಲಿ ನಿಪುಣರಾಗಬೇಕು. ಈ ವಿಜ್ಞಾನ ಕವಚವನ್ನು ಧರಿಸಿ ಅಧಿಕಾರಿಗಳು ಬಹು ಸೌಜನ್ಯದಿಂದಲೂ, ನಮ್ರತೆಯಿಂದಲೂ ಕೇಳುವವರನ್ನು ಕಾಣಬೇಕು. ಹೇಳುವವರು ಮೇಧಾವಿಗಳೆಂಬ ತಪ್ಪು ಭಾವನೆಯನ್ನು ಮಾಡಬೇಡಿ. ಸಾಧಾರಣ ಹಳ್ಳಿಯವನಿಗೆ ಜೀವಮಾನದ ಅನುಭವವಿರುವುದರಿಂದ ನಿಮಗಿಂತಲೂ ತಿಳಿದಿದೆ. ಆದ್ದರಿಂದ ನಿಮಗೇ ಹೆಚ್ಚು ಗೊತ್ತಿದೆ ಎಂಬ ಅಭಿಪ್ರಾಯದಿಂದಿರದೆ ಅವರನ್ನು ನಿಮ್ಮ ಕಡೆಗೆ ಆಕರ್ಷಿಸಿ, ಅವರಲ್ಲಿ ನಂಬಿಕೆಯನ್ನು ಹುಟ್ಟಿಸಬೇಕು.

ಕಮ್ಯೂನಿಟಿ ಪ್ರೊಜೆಕ್ಟುಗಳ ಗುರಿಯು ಎರಡು ವಿಧ. ಒಂದನೆಯದು ಮಾನವನ ಉದ್ಧಾರ; ಎರಡನೆಯದು ಗ್ರಾಮ ವಿಷಯಗಳಲ್ಲಿ ಅವನ ಸಾಧನಾ ಜ್ಞಾನದ ಮೇಲ್ಮೆ. ಇವೆರಡನ್ನು ಸಾಧಿಸಿದರೆ ನಾವು ಒಂದು ಮಹತ್ತಾದ ಜಾಗ್ರಣೆಯನ್ನು ತಂದಂತಾಗುವುದು. ಈ ಜಗತ್ತೆಲ್ಲಾ ದೇಶದ ಉದ್ದಗಲಕ್ಕೂ ಯಾವುದೋ ಒಂದು ಗೊಂದಲವಿದ್ದರೆ ಸಂದೇಹಕ್ಕೆ ಒಂದು ಬದಲಾವಣೆಯಾಗುವುದು. ದೇಶದಲ್ಲಿ ಗಲಿಬಿಲಿಗಳುಂಟಾದರೆ ನನಗೆ ಭಯವಿಲ್ಲ; ಆದರೆ, ದೇಶಕ್ಕಾಗಿ ದೇಶದ ಐಶ್ವರ್ಯವನ್ನು ಹೆಚ್ಚಿಸಲು ಉಪಯೋಗಿಸಬಹುದಾದ ದೇಶದ ಶಕ್ತಿಯನ್ನು ಈ ರೀತಿ ಕಳೆದುಕೊಳ್ಳುತ್ತಾರಲ್ಲಾ ಎಂಬುದಾಗಿ ನನಗೆ ಕೋಪವೇರುತ್ತೆ.

ದೀರ್ಘಾಯುಷ್ಯದ ಗುಟ್ಟು!

“ಸದಾ ಪ್ರಸನ್ನಚಿತ್ತರಾಗಿರಿ, ಸ್ವಾಭಾವಿಕ ಹಸನ್ಮುಖಿಗಳಾಗಿರಿ, ಎಂಥ ಪ್ರಸಂಗದಲ್ಲಿಯೂ ಮನಸ್ವಾಸ್ಥ್ಯವನ್ನು ಕಳೆದುಕೊಳ್ಳಬೇಡಿರಿ, ಕೋಪಾವಿಷ್ಟರಾಗಬೇಡಿರಿ” ಇದೇ ದೀರ್ಘಾಯುಷ್ಯದ ಗುಟ್ಟು.

ಅಮೇರಿಕೆಯ ಚಿಕ್ಯಾಗೋ ನಗರದಲ್ಲಿ ೧೦೦೦ ಜನ ಡಾಕ್ಟರರ ಸಭೆಯೊಂದು ಕೂಡಿದಾಗ ಡಾ. ನೋರಿಸ್ ಫಿಶ್‌ಬೆನ್ ಎಂಬ ವೈದ್ಯಕೀಯ ಶಾಸ್ತ್ರಜ್ಞರು ಮನುಷ್ಯನು ಶತಾಯುಷಿಯಾಗಬೇಕಾದರೆ ಅವನು ಹೇಗೆ ತನ್ನ ಜೀವನವನ್ನು ಸಾಗಿಸಬೇಕೆಂಬುದನ್ನು ವಿವರಿಸಿದರು.

ಆ ಸಂದರ್ಭದಲ್ಲಿ ಆ ಪ್ರೊಫೆಸರರು ಸಲಹೆ ಸೂಚನೆಗಳನ್ನು ಕೊಟ್ಟ ಮೇಲೆ ಬ್ರಿಟನ್ನಿನ ಪ್ರಖ್ಯಾತ ವೈದ್ಯ ಶಾಸ್ತ್ರಜ್ಞರಾದ ೮೦ ವರ್ಷ ವಯಸ್ಸಿನ ಲಾರ್ಡ್ ಹೋರ್ಡರರನ್ನು ಕಂಡು ಅವರೊಡನೆ ತಾವು ನಡೆಸಿದ ಸಂಭಾಷಣೆಯನ್ನು ವಿವರಿಸಿದ್ದು ಅದು ಮನೋರಂಜಕವೂ ಉಪದೇಶಬೋಧಕವೂ ಇದೆ.

(೭ನೇ ಪುಟ ನೋಡಿ)

ರಾಮಾಯಣ ಮಹಾ ಗ್ರಂಥ.

ಲೇ:—ಶ್ರೀ ಪಿ ಜಿ. ಐಯ್ಯಪ್ಪ, ಮಡಿಕೇರಿ.

ರಾಷ್ಟ್ರದಲ್ಲಿ ಐಕ್ಯಮತ್ಯವನ್ನು ಸ್ಥಾಪಿಸಿ ಇತರ ದೇಶದಲ್ಲಿ ವಾಸಿಸುವ ಎಲ್ಲಾ ಜನರಲ್ಲಿ ಸ್ವದೇಶ ಭಾವನೆ ಮತ್ತು ಪ್ರೀತಿಯುಂಟು ಮಾಡುವಂತೆ ಮಾಡುವ ಸಾಧನೆಗಳು ಅನೇಕವಿರುತ್ತವೆ. ಇವು ಒಂದೊಂದು ದೇಶದಲ್ಲಿ ಒಂದೊಂದು ವಿಧವಾಗಿರುತ್ತವೆ. ಉದಾಹರಣೆಗಾಗಿ ಹೇಳುವುದಾದರೆ ಇಂಗ್ಲೆಂಡಿನಲ್ಲಿರುವ ಎಲ್ಲಾ ಜನರೂ ನಾವು ಒಂದೇ ರಾಷ್ಟ್ರದ ಜನರು ಎಂಬ ಭಾವನೆಯನ್ನು ಬಲವಾಗಿ ಸ್ಥಿರಪಡಿಸುವ ಒಂದು ಪ್ರಮುಖ ವಸ್ತುವೆಂದರೆ ಅವರ ಅರಸರು. 'ನಾವೆಲ್ಲರೂ ಎಲಿಜಬೆತ್ ರಾಣಿಯ ಪ್ರಜೆಗಳು' ಎಂದೊಡನೆ ಅವರೆಲ್ಲರೂ ಒಂದೇ ಕುಟುಂಬದವರು ಎಂಬ ಭಾವನೆಯು ಅವರಲ್ಲಿ ಸಹಜವಾಗಿಯೇ ಹುಟ್ಟುವುದು. ಆ ಭಾವನೆಯು ಅವರ ರಾಷ್ಟ್ರಪ್ರೇಮವನ್ನು ಬಹಳವಾಗಿ ಹೆಚ್ಚಿಸುತ್ತದೆ. ಇದರ ಜತೆಗೆ ಅವರೆಲ್ಲರೂ ಆಡುವ ಭಾಷೆ ಸಹ ಒಂದೇ.

ಇದೇ ರೀತಿಯಲ್ಲಿ ಒಂದೊಂದು ದೇಶದಲ್ಲಿ ಒಂದೊಂದು ಪ್ರಮುಖ ವಿಷಯಗಳು ಆಯಾ ದೇಶದ ಜನರೆಲ್ಲರಲ್ಲೂ 'ಒಂದು ಜನಾಂಗ' ಎಂಬ ಭಾವನೆಯನ್ನು ಹುಟ್ಟಿಸತಕ್ಕ ಸಾಧಕಗಳಾಗಿರುತ್ತವೆ. ಇಂತಹ ಒಗ್ಗೂಡಿಸುವ ಪ್ರಾಮುಖ್ಯ ವಿಷಯವು ರಾಷ್ಟ್ರದ ಎಲ್ಲಾ ಜನರಿಗೂ ಪರಿಚಯವಾದ ಹಕ್ಕಿರತಕ್ಕ ವಸ್ತುವಾಗಿರಬೇಕು ಮತ್ತು ಆ ವಸ್ತು ಯಾ ವಿಷಯವನ್ನು 'ನನ್ನದು' ಎಂಬುದಾಗಿ ಒಬ್ಬನು ಒಪ್ಪಿಕೊಳ್ಳುವುದು ಅವನಿಗೆ ಅಭಿಮಾನವನ್ನು ಹುಟ್ಟಿಸತಕ್ಕ ಸಾಮರ್ಥ್ಯವಿರತಕ್ಕ ವಸ್ತುವಾಗಿರಬೇಕು.

ನಮ್ಮ ಭಾರತದಲ್ಲಿ ಅನೇಕ ಭಾಷೆಗಳಿದ್ದು ಅನೇಕ ಪ್ರಾಂತ್ಯಗಳಿಂದ ಕೂಡಿರುವ ರಾಷ್ಟ್ರವಾದುದರಿಂದ ಸರ್ವೋತ್ತಮವಾಗಿ ಐಕ್ಯಮತ್ಯವು ಸ್ಥಾಪನೆಯಾಗಿ ನಾವೆಲ್ಲರೂ 'ಒಂದು ಜನಾಂಗದವರು' ಎಂಬ ಭಾವನೆಯು ಬಲವಾಗಿ ಬೇರೂರಬೇಕಾದರೆ ನಮ್ಮಲ್ಲಿ ನಮ್ಮನ್ನೆಲ್ಲಾ ಒಂದುಗೂಡಿಸುವ ಶಕ್ತಿ ಇರತಕ್ಕ ಮತ್ತು ಎಲ್ಲರಿಗೂ ಏಕರೀತಿಯಲ್ಲಿ ಅನ್ವಯಿಸತಕ್ಕ ವಿಷಯ ಯಾ ವಸ್ತುಗಳನ್ನು ನಾವು ಬಹಳವಾಗಿ ಜನರಂಜಕವಾಗಿ ಮಾಡಲು ಪ್ರಯತ್ನಿಸಬೇಕು. ಇಂತಹ ಸಾಧಕಗಳಲ್ಲಿ ಪ್ರಾಮುಖ್ಯವಾದವು — ಸಾರ್ವಜನಿಕ ಭಾಷೆ ಮತ್ತು ಸಂಸ್ಕೃತಿ ಎಂದರೆ ನಮ್ಮ ಪುರಾತನ ಗ್ರಂಥಗಳಲ್ಲಿ ಅಡಕವಾಗಿರುವ ನಮ್ಮ ವಿದ್ಯೆಯು ಮತ್ತು ನಾಗರೀಕತೆಯು ಮಾತ್ರವೆಂದು ಹೇಳಬೇಕಾಗಿಲ್ಲ. ನಾನು ಒಬ್ಬ ಪಂಜಾಬಿ, ನಾನೊಬ್ಬ ಬಂಗಾಳಿ, ನಾನೊಬ್ಬ ಮದ್ರಾಸಿ ಎಂಬ ಭಿನ್ನಭೇದದ ಮಾತಾಡುವವರೆಲ್ಲ 'ರಾಮಾಯಣ ಯಾ ಭಾರತ ಎಂತಹ ಮಹತ್ತರವಾದ ಗ್ರಂಥ' ಎಂದೊಡನೆ 'ಆ ಗ್ರಂಥಗಳು ನಮ್ಮವು' ಎಂದು ಹೆಮ್ಮೆಯ ಮುಗುಳುನಗೆಯೊಡನೆ ಒಪ್ಪಿಕೊಳ್ಳುತ್ತೇವೆ. ಹೇಗೆ 'ಶೇಕ್ಸ್‌ಪಿಯರ್' ಎಂದೊಡನೆ ಪ್ರತಿಯೊಬ್ಬ ಆಂಗ್ಲೇಯನೂ ಹೆಮ್ಮೆಯಿಂದ 'ಅವನು ನಮ್ಮ ಕವಿ' ಎಂದು ಹೇಳುತ್ತಾನೋ, ಅದೇ ರೀತಿಯಲ್ಲಿ 'ರಾಮಾಯಣ ಮಹಾಭಾರತ' ಎಂದೊಡನೆ ಪ್ರತಿಯೊಬ್ಬ ಭಾರತೀಯನೂ ಉತ್ತರ ಹಿಂದೂಸ್ಥಾನದವನೇ ಆಗಲೀ, ದಕ್ಷಿಣ ಹಿಂದೂಸ್ಥಾನದವನೇ ಆಗಲಿ, ಆ ಗ್ರಂಥಗಳು ನಮ್ಮವು ಎನ್ನುತ್ತಾನೆ; ಅಷ್ಟೇ ಅಲ್ಲ ಆ ಕೂಡಲೇ ತನ್ನಲ್ಲಿರುವ ಸಂಕುಚಿತ ರಾಷ್ಟ್ರಭಾವನೆಯನ್ನು ಮರೆತು ನಾವೆಲ್ಲ ಒಂದೇ ಎಂಬ ಭಾವನೆಯನ್ನು ಆ ಕೂಡಲೇ ಆತ್ಮ ಸಂತೋಷದಿಂದ ತೋರಿಸುತ್ತಾನೆ. ಲೋಕಪ್ರಸಿದ್ಧವಾದ ಈ ಗ್ರಂಥಗಳನ್ನು ಯಾರು ತನ್ನದೆನ್ನದಿರುವರು? ನಾವೆಲ್ಲರೂ ಭಾರತೀಯ ಕುಟುಂಬಕ್ಕೆ ಸೇರಿದ ಒಂದೇ ಜನಾಂಗದವರು ಎಂಬ ಭಾವನೆಯನ್ನು ಹುಟ್ಟಿಸತಕ್ಕ ಮಹತ್ ಪ್ರಭಾವವು ಈ ನಮ್ಮ ಗ್ರಂಥಗಳಿಗಿವೆ

ಅಷ್ಟೇ ಅಲ್ಲ; ರಾಮಾಯಣವೆಂದರೆ ಮುದ್ದಣ ಕವಿಯು ಹೇಳಿದಂತೆ 'ಉಳಿದೊಡಂ ಅಳಿದೊಡಂ ಬಿಟ್ಟೆಬಿಡೆನು' ಗ್ರಂಥವೇ ಆಗಿದೆ. ಇದರಲ್ಲಿ ಪಾತ್ರವಹಿಸಿರುವವರೆಲ್ಲಾ ತಮ್ಮ ಜೀವನವನ್ನು ಲೋಕಕ್ಕೆಲ್ಲಾ ಮಾರ್ಗದರ್ಶಕಗಳಾಗುವಂತೆ ನಿರ್ವಹಿಸಿ ಪ್ರದರ್ಶಿಸಿದ್ದಾರೆ. ರಾಮನ ರಾಜ್ಯಭಾರ ಕ್ರಮ, ಪಿತೃಭಕ್ತಿ, ದೇಶಪ್ರೇಮ, ಸತ್ಯಸಂಧತೆ, ಧರ್ಮಪರಿಪಾಲನೆ ಮತ್ತು ಶೌರ್ಯ ಸಾಹಸಗಳು ಲೋಕಕ್ಕೇ ಮೇಲ್ಪಂಕ್ತಿಗಳಾಗಿವೆ. ಸೀತಾದೇವಿಯ ಪಾತಿವ್ರತ್ಯವೆಂಬ [illegible] ಕೀರ್ತಿಗೆ ಅವರ್ಣನೀಯವಾದುದು. ಎಂದರೆ ಯಾರೂ ಅದನ್ನು ಅತಿಶಯೋಕ್ತಿ ಎನ್ನಲಾರರು. ಅದೇ ರೀತಿಯಲ್ಲಿ ಭರತ ಲಕ್ಷ್ಮಣರ ಭ್ರಾತೃಪ್ರೇಮವೂ, ಆಂಜನೇಯನ ಸ್ವಾಮಿಭಕ್ತಿಯೂ, ಸುಗ್ರೀವ, ವಿಭೀಷಣರ ಮಿತ್ರಪ್ರೇಮವೂ ಎಲ್ಲರಿಗೂ ಮೇಲ್ಪಂಕ್ತಿಯಾಗಿವೆ.

ಮನಸ್ಸ್ವಭಾವವು ಒಂದೊಂದು ಕಾಲಕ್ಕೆ ಒಂದೊಂದು ರೀತಿಯಾಗಿರುವುದು ಸಹಜ. [illegible] ಕಾಲಗಳಲ್ಲಿ, ಆಗಣದಲ್ಲಿ [illegible] ಪರಿಪೂರ್ಣತೆಯನ್ನು ಪಡೆಯುವುದೇ ಎಲ್ಲರಲ್ಲಿಯೂ ಕಂಡು ಬರುವ ಗುರಿಯಾಗಿರುತ್ತದೆ. ಈ ಕಾಲದಲ್ಲಿ ಭೌತಿಕ ಶಾಸ್ತ್ರವನ್ನು ಊರ್ಜಿತಗೊಳಿಸಿ ನಾನಾ ತರದ ಯಂತ್ರಗಳನ್ನು ಕಂಡು ಹಿಡಿದು ಅತಿ ಮಹತ್ತರವಾದ ಕಾರ್ಯಗಳನ್ನು ಅತ್ಯಲ್ಪ ಕಾಲದಲ್ಲಿ ಸಾಧಿಸಬೇಕೆಂಬ ದೃಷ್ಟಿಯಿಂದ ಎಲ್ಲಾ ವಿಧದಲ್ಲಿಯೂ ವೇಗವನ್ನು ಹೆಚ್ಚಿಸುವುದೇ ಈಗಿನ ಕಾಲದ ಗುರಿಯಾಗಿದೆ. ಈ ಗುರಿಯ ಪೈಪೋಟಿಯು ಬರೇ ಆರ್ಥಿಕ ಪಂದ್ಯಾಟದಲ್ಲಿ ಮಾತ್ರ ಕಾಣಬಾರದೆ, ನಮ್ಮ ಜೀವನದ ಎಲ್ಲಾ ಉದ್ಯೋಗ ಮತ್ತು ಪ್ರಯತ್ನಗಳಲ್ಲೂ ಕಂಡು ಬರುತ್ತಿದೆ. ಹಾಗೆಯೇ ಆ ಜಾಡ್ಯವು ನಮ್ಮ ವಿದ್ಯಾರ್ಜನೆಯಲ್ಲೂ ತಲೆದೋರಿದ ಕಾರಣ ನಮ್ಮ ಪೂರ್ವಜರು ಜನರ ತಿಳುವಳಿಕೆಗಳನ್ನು ನಾನಾ ರೀತಿಯಲ್ಲಿ ಬೆಳೆಯಿಸುವ ದೃಷ್ಟಿಯಿಂದ ಬಹಳ ವಿಸ್ತಾರವಾಗಿ ಬರೆದ ಗ್ರಂಥಗಳನ್ನು ಸಂಕ್ಷೇಪಿಸಿ ಬರೆಯಲು ತೊಡಗಿದೆವು. ಇದರ ಫಲಿತಾಂಶವಾಗಿ ಪೂರ್ವಜರು ಯಾವ ದೃಷ್ಟಿಯಿಂದ ಅಂತಹ ಮಹಾ ಕಾವ್ಯಗಳನ್ನು ಬರೆದರೋ ಆ ಪ್ರಮುಖ ಗುರಿಯೇ ಬದಿಗೊತ್ತಲ್ಪಟ್ಟು ಬರೇ ಕಥಾ-ರೋಚಕ್ಕೇ ನಾವು ಪ್ರಾಮುಖ್ಯತೆಯನ್ನು ಕೊಡಲು ತೊಡಗಿದೆವು. ಆದುದರಿಂದ ಎಷ್ಟೋ ಲಕ್ಷ ಶ್ಲೋಕಗಳಿಂದ ಕೂಡಿದ ರಾಮಾಯಣವು ಸಣ್ಣ ಪುಸ್ತಕ ರೂಪದಿಂದ ಹೊರಬೀಳತೊಡಗಿತು. ಅವರಲ್ಲಿ ಬರೇ ಕಥೆ ಮಾತ್ರ ಅಡಕವಾಯಿತೇ ಹೊರತು, ಅದರಲ್ಲಿ ಅಡಕವಾಗಿದ್ದ ಬುದ್ಧಿವಾದಗಳೂ, ಬೋಧನೆಗಳೂ ಮತ್ತು ಇತರ ತಿಳುವಳಿಕೆಗಳೂ ಮಾಯವಾದವು. ಬರೇ ಕಥೆಯಿಂದ ಏನೊಂದೂ ಪ್ರಯೋಜನವಿಲ್ಲವೆಂದೇ ಹೇಳಬೇಕು. ಯಾಕೆಂದರೆ ಈಗಿನ ಭೌತಿಕ ತಿಳುವಳಿಕೆಯ ಪ್ರಭಾವಕ್ಕೆ ಮರುಳಾದ ನಮಗೆ ಈ ಕಥೆಯೇ ಒಂದು ತರದ ಅಜ್ಜಿ ಕಥೆಯಾಗಿ ಕಾಣುತ್ತದೆ. ಆದುದರಿಂದ ವಿದ್ಯಾರ್ಥಿಗಳೆನ್ನಿಸಿಕೊಳ್ಳುವ ಈಗಿನ ಯುವಕರು ಈ ನಮ್ಮ ಪುರಾತನ ಗ್ರಂಥಗಳನ್ನು ಓದುವುದೇ ಇಲ್ಲ. ಈ ತರದ ಅನರ್ಥಕ್ಕೆ ಕಾರಣವೇನೆಂದರೆ—ನಮ್ಮ ವಿದ್ಯಾ ಇಲಾಖೆಯವರು ಆ ಗ್ರಂಥಗಳ ಮಹತ್ವಿಕೆಗಳನ್ನು ಪ್ರಚಾರಪಡಿಸದೆ, ಅವುಗಳ ಸಂಕ್ಷಿಪ್ತ ಕಥಾವಳಿಗಳಿಗೆ ಉತ್ತೇಜನ ಕೊಡುತ್ತಾ ಬಂದದ್ದು. ಇದರ ಫಲಿತಾಂಶವಾಗಿ ನಮ್ಮ ದೇಶಪ್ರೇಮವೂ, ಸಂಸ್ಕೃತಿಯೂ ಬಹಳ ಮಟ್ಟಿಗೆ ಹೀನ ಮಟ್ಟಕ್ಕೆ ಇಳಿದು ಹೋಗಿದೆ.

ಸಂಸ್ಕೃತದಲ್ಲಿರುವ ವಾಲ್ಮೀಕಿ ರಾಮಾಯಣವನ್ನೂ, ವ್ಯಾಸ ಭಾರತವನ್ನೂ ಅಥವಾ ಅವುಗಳ ಸರಿಯಾದ ತರ್ಜುಮೆಗಳನ್ನು ಎಲ್ಲರೂ ಓದುವ ಅನುವನ್ನು ಎಷ್ಟು ಬೇಗ ನಾವು ಜನಸಮುದಾಯಕ್ಕೆ ಕಲ್ಪಿಸಿಕೊಡುತ್ತೇವೋ ಅಷ್ಟೇ ತ್ವರೆಯಿಂದ ನಮ್ಮ ದೇಶಪ್ರೇಮವನ್ನೂ ಮತ್ತು ಸಂಸ್ಕೃತಿಯನ್ನೂ ಮುಂದುವರಿಸಬಹುದು.

ಡೀನ್ ಇಂಜ್ ಎಂಬವರು ರಾಷ್ಟ್ರಪ್ರೇಮವೆಂಬುದನ್ನು ಹೀಗೆ ವಿವರಿಸುತ್ತಾರೆ. Petriotism means–pride in the past and ambition for the future' ಹಿಂದಿನ ಸಂಸ್ಕೃತಿಯಲ್ಲಿ ಹೆಮ್ಮೆಯೂ ಮುಂದಿನ ಅಭಿವೃದ್ಧಿಯನ್ನು ಹೆಚ್ಚಿಸುವ ಕಾಂಕ್ಷೆಯೂ ತಳಹದಿಯಾಗಿರುವಾಗ್ಯೆ ನಾವು ನಮ್ಮ ಪೂರ್ವದ ನಾಗರಿಕತೆಯನ್ನು ತಿಳಿಯದಿದ್ದರೆ ನಮಗೆ ಮುಂದುವರಿಯಬೇಕೆಂಬ ಮಹಾ ಕಾಂಕ್ಷೆಯು ಹುಟ್ಟುವುದಾದರೂ ಹೇಗೆ?

ನಮ್ಮ ರಾಮಾಯಣ ಮಹಾಭಾರತಗಳಲ್ಲಿ ಅಡಕವಾಗದ ತಿಳುವಳಿಕೆಯೇ ಇಲ್ಲವೆಂದು ಧೈರ್ಯವಾಗಿ ಹೇಳಬಹುದು. ನಮ್ಮ ಪೂರ್ವಜರ ತಿಳುವಳಿಕೆ ಮತ್ತು ನಾಗರಿಕತೆಯು ಎಷ್ಟರಮಟ್ಟಿಗೆ ಮುಂದುವರಿದಿತ್ತು ಎಂಬುದನ್ನು ನಾವು ಈ ಎರಡು ಗ್ರಂಥಗಳ ಮಹತ್ವಿಕೆಗಳನ್ನು ಓದಿದರೆ ಅರ್ಥವಾಗುತ್ತದೆ.

ರಾಮಾಯಣದಲ್ಲಿ ಅಲ್ಲಲ್ಲಿ ಚಿನ್ನ, ಬೆಳ್ಳಿ, ಉಕ್ಕು, ತಾಂಬ್ರ, ಹಿತ್ತಾಳೆ ಮುಂತಾದ ಲೋಹಗಳ ಹೆಸರುಗಳು ಬರುವುದರಿಂದ ವಾಲ್ಮೀಕಿಯ ಕಾಲಕ್ಕಿಂತಲೂ ಮೊದಲೇ ಈ ಲೋಹಗಳ ಉಪಯೋಗ ನಮ್ಮ ದೇಶದಲ್ಲಿತ್ತೆಂಬುದು ವಿದಿತವಾಗುತ್ತದೆ. ಅಲ್ಲದೆ ವಜ್ರ ವೈಡೂರ್ಯಗಳು ಮತ್ತು ನವರತ್ನ ಇತರ ನಾನಾ ತರದ ರತ್ನಗಳ ಹೆಸರು ಅಲ್ಲಲ್ಲಿ ಬರುತ್ತವೆ. ಹಾಗೆಯೇ ನಮ್ಮ ಉಡುಪುಗಳ ವಿಷಯ. ಬಣ್ಣವಾದ ಜರತಾರಿ, ನಾರುಮಡಿ ಮುಂತಾದ ಹೆಸರುಗಳು ಅಲ್ಲಲ್ಲಿ ಬರುತ್ತವೆ.

ಇಷ್ಟೇ ಅಲ್ಲ, ಭರದ್ವಾಜರ ಆಶ್ರಮದಲ್ಲಿ ಭರತನ ಸೈನ್ಯಕ್ಕೂ ಮತ್ತು ಜನರಿಗೂ ಔತಣ ಕೊಟ್ಟಾಗ ಅಲ್ಲಿ ವಿವರಿಸಿರುವ ನಾನಾ ಪಾಕಗಳಲ್ಲಿ ಎಲ್ಲಾ ತರದ ಮಾಂಸ ಮತ್ತು ತರಕಾರಿಯ ಭಕ್ಷ್ಯಗಳು ಕಂಡು ಬರುವುದಲ್ಲದೆ ಅನೇಕ ತರದ ಮದ್ಯಗಳ ಹೆಸರುಗಳು ಸಹ ಬರೆಯಲ್ಪಟ್ಟಿವೆ. ಇದರಿಂದ ಎಲ್ಲಾ ವಿಧದಲ್ಲೂ ಆಗಿನವರು ಸಂಪೂರ್ಣ ಮುಂದುವರಿದಿದ್ದರು ಎಂದು ವಿದಿತವಾಗುತ್ತದೆ.

ಅಲ್ಲದೆ ನಾನಾ ರೀತಿಯ ಯುದ್ಧ ಆಯುಧಗಳ ಹೆಸರೂ, ಹಡಗದ ಹೆಸರೂ ಬರುತ್ತದೆ. ಆಂಜನೇಯನು ಲಂಕಾ ನಗರದಿಂದ ಬಂದು ರಾವಣನ ಕೋಟೆಯ ಮತ್ತು ಸೈನ್ಯದ ಬಲಾಬಲಗಳನ್ನು ರಾಮನಿಗೆ ವಿವರಿಸುವ ಸಂದರ್ಭದಲ್ಲಿ ಆ ಪಟ್ಟಣದ ಸುತ್ತಲೂ ನಿರ್ಮಿಸಲ್ಪಟ್ಟಿರುವ ಅಗಳು ಬಹಳ ಆಳವಾಗಿಯೂ ದುಷ್ಟ ಜಲಪ್ರಾಣಿಗಳಿಂದ ನಿಬಿಡವಾಗಿಯೂ ಇರುವುದಲ್ಲದೆ ಅಲ್ಲಲ್ಲಿ ಅಂತಹ ಕಂದಕಗಳನ್ನು ದಾಟಲು ತಾನಾಗಿಯೇ ಚಾಚಿಕೊಳ್ಳುವ ಮತ್ತು ಹಿಂದಕ್ಕೆ ಎಳೆದುಕೊಳ್ಳುವ ಸೇತುವೆಗಳೂ ಅಲ್ಲಲ್ಲಿವೆ ಎಂದು ಹೇಳುತ್ತಾನೆ. ಅಷ್ಟೇ ಅಲ್ಲದೆ ಅಂತಹ ಕಂದಕಗಳ ಒಳಭಾಗದಲ್ಲಿ ಕಟ್ಟಿರುವ ಎತ್ತರವಾದ ಗೋಡೆಯ ಮೇಲೆ ತಾನಾಗಿಯೇ ಶತ್ರುಗಳ ಮೇಲೆ ಹೊಡೆಯುವಂತಹ ಯಂತ್ರ ಆಯುಧಗಳೂ ಅಲ್ಲಲ್ಲಿವೆ ಎಂಬುವುದರಿಂದ ಏಂಟಿ ಏರ್ ಕ್ರಾಫ್ಟ್ ಆಯುಧಗಳಿಗೆ ಸರಿಹೋಲುವ ಆಯುಧಗಳೂ ಸಸ್ಪೆನ್ಷನ್ ಸೇತುವೆಗಳೂ ಸಹ ಆಗಿನ ಕಾಲದಲ್ಲೂ ಇದ್ದವು ಎಂಬುವುದು ವಿಶದವಾಗುತ್ತದೆ.

ಇದಲ್ಲದೆ ಹೆಂಗಸರ ಧರ್ಮ ಹೇಗಿರಬೇಕೆಂಬುವುದನ್ನು —ಅನಸೂಯಾ ದೇವಿಯು ಸೀತೆಗೆ ಕೊಟ್ಟ ಉಪದೇಶದಿಂದಲೂ ರಾಜನ ಧರ್ಮ ಹೇಗಿರಬೇಕೆಂಬುದನ್ನು ರಾಮನು ಭರತನನ್ನು ಕೇಳಿದ ಪ್ರಶ್ನೆಗಳಿಂದಲೂ ರಾಜ್ಯತಂತ್ರ ಹೇಗಿರಬೇಕೆಂಬುದನ್ನು ವಿಭೀಷಣ, ಕುಂಭಕರ್ಣ ಮತ್ತು ರಾವಣನ ಮಂತ್ರಿಗಳು ರಾವಣನಿಗೆ ಹೇಳಿದ ಬುದ್ಧಿವಾದದಿಂದಲೂ ನಾವು ತಿಳಿಯಬಹುದು.

ಅಷ್ಟೇ ಅಲ್ಲ; ಈಗ ಎಲ್ಲ ಮುಂದಾಳುಗಳ ಬಾಯಿಯಲ್ಲೂ ವಾಡಿಕೆಯಾಗಿ ಬರುವ 'ರಾಮ ರಾಜ್ಯ' ವೇನೆಂಬುದನ್ನು ಈ ಮಹತ್ವಿಕೆಗಳನ್ನು ಓದಿದರೆ ಮಾತ್ರ ನಮ

(ಮುಂದಿನ ಪುಟ ನೋಡಿ)

ಕೊಡಗು

ತಾ. ೨೯-೮-೧೯೫೨ನೇ ಶುಕ್ರವಾರ

ಕಾಲೋಚಿತ ಸಲಹೆಗಳು.

ಸ್ವಾತಂತ್ರ್ಯ ಹಿಂದೂದೇಶದ ಪ್ರಥಮ ಮುಖ್ಯ ಸೇನಾಧಿಪತಿಯಾಗಿ ಕೊಡಗಿನ ಕೀರ್ತಿಯನ್ನು ಇಡೀ ಭಾರತ ಭೂಮಿಯ ಹಾಗೂ ಪ್ರಪಂಚದ ಎಲ್ಲಾ ಭಾಗಗಳಿಗೆ ಹರಡಿದ ಜನರಲ್ ಕಾರ್ಯಪ್ಪನವರು ೧೯೫೩ನೇ ಜನವರಿಯಲ್ಲಿ ತಮ್ಮ ಹುದ್ದೆಯಿಂದ ನಿವೃತ್ತರಾಗಲಿರುವರು. ಇವರು ತಮ್ಮ ಈಗಿನ ಉದ್ಯೋಗದಲ್ಲಿ ಕೊಡಗಿನ ಆಖೈರು ಪ್ರವಾಸವನ್ನು ಈ ತಾ. ೨೩ರಿಂದ ೨೮ರ ವರೆಗೆ ನಡಿಸಿದರು. ಈ ಪ್ರವಾಸದಲ್ಲಿ ಇವರು ಮಾಡಿದ ಕೆಲವು ಭಾಷಣಗಳಲ್ಲಿ ತನ್ನ ಮಾತೃಭೂಮಿಯಾದ ಕೊಡಗಿನ ಏಳಿಗೆಗೆ ಬಹು ಉಪಯುಕ್ತವಾದ ಸಲಹೆ ಸೂಚನೆಗಳನ್ನು ಕೊಟ್ಟಿರುವರು. "ಸಾಧ್ಯ ಜನರಿಗೆ ದಿವಸಕ್ಕೆರಡು ಹೊತ್ತು ಅನ್ನ, ಮೈ ಮುಚ್ಚಲು ಬಟ್ಟೆ ಮತ್ತು ಉಳಕೊಳ್ಳಲು ಮನೆ" ಇರುವ ನಮ್ಮ ಈ ಸುಂದರವಾದ ಚಿಕ್ಕ ಪ್ರಾಂತ್ಯವನ್ನು ಹೀಗೆಯೇ ಪ್ರತ್ಯೇಕವಾಗಿಟ್ಟುಕೊಂಡು, ಈಗ ದೊರೆತಿರುವ ಜವಾಬ್ದಾರಿ ಸರ್ಕಾರವನ್ನು ಎಲ್ಲರ ಸಹಕಾರದಿಂದ ಜಯಪ್ರದವಾಗಿ ನಡಿಸಿ, ಇಡೀ ಹಿಂದೂದೇಶಕ್ಕೊಂದು ಮಾದರಿ ಪ್ರಾಂತ್ಯವಾಗಬೇಕೆಂಬ ಇವರ ಸಲಹೆಯು ಇವರ ನಿಸ್ಸೀಮ ದೇಶಭಕ್ತಿಯನ್ನೂ, ವಿಶಾಲ ಅನುಭವವನ್ನೂ ಪ್ರದರ್ಶಿಸುತ್ತದೆ. ಬಹು ಕಾಲೋಚಿತವಾದ ಈ ಸಲಹೆಯ ಮೇಲೆ ಹೆಚ್ಚಿನ ಪ್ರಸಂಶೆಯಾ ಟೀಕೆ ಟಿಪ್ಪಣಿಗಳ ಅವಶ್ಯವಿಲ್ಲ

ದೇಶದ ಅಭಿವೃದ್ಧಿಯೆಂದರೆ ಮುಂದಿನ ಜನಾಂಗದ ಅಭಿವೃದ್ಧಿಯೆಂದು ಚೆನ್ನಾಗಿ ಅರಿತಿರುವ ಇವರಿಗೆ ವಿದ್ಯಾರ್ಥಿಗಳ ಮೇಲೆ ಬಹು ಪ್ರೇಮ. ಇವರು ಕಾಲೇಜಿನ ವಿದ್ಯಾರ್ಥಿಗಳಿಗೆ ಕೊಟ್ಟ ಭಾಷಣದಲ್ಲಿ ಅವರ ಏಳಿಗೆ ಬಗ್ಗೆ ಉತ್ಕೃಷ್ಟ ಸಲಹೆಗಳನ್ನು ಕೊಟ್ಟಿರುವರು. 'ಶಿಸ್ತನ್ನು ಇಟ್ಟುಕೊಂಡು, ದುಶ್ಚಟ ಬಿಟ್ಟು, ಶಾರೀರಕ ಹಾಗೂ ಮಾನಸಿಕ ಯೋಗ್ಯತೆಯನ್ನು ಗಳಿಸಿರಿ' ಎಂಬುದೇ ಇವರ ಸಂದೇಶದ ಮುಖ್ಯ ತಾತ್ಪರ್ಯ. ವಿದ್ಯಾರ್ಥಿ ವರ್ಗದವರು ಮತ್ತು ಅಧ್ಯಾಪಕರು ಇದನ್ನು ಪೂರ್ಣ ಪರಿಪಾಲಿಸುವರಾಗಿ ಆಶಿಸುತ್ತೇವೆ. ಇದನ್ನು ಸಾಧಿಸಲು ಅತ್ಯವಶ್ಯವಾದ ಯೋಗ್ಯ ವಿದ್ಯಾರ್ಥಿ ವಸತಿಗೃಹ, ಆಟದ ಮೈದಾನ, ಕಸರತ್ತು ವ್ಯವಸ್ಥೆ ಮೊದಲಾದುವುಗಳ ಈಗಿನ ಕೊರತೆಯನ್ನು ಇವರು ಮುಚ್ಚುಮರೆ ಇಲ್ಲದೆ ತೋರಿಸಿರುವರು. ಸ್ವಚ್ಛ ಮನಸಿನ ಈ ಸೂಚನೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೆ ಗಮನಕೊಟ್ಟು, ಕೊಡಗಿನ ಕಾಲೇಜನ್ನು ಆದರ್ಶ ಕಾಲೇಜಾಗಿ ಮಾಡಲು ಸಹಾಯಕರಾಗುವರೆಂದು ನಂಬುತ್ತೇವೆ.

ವರ್ತಮಾನ.

ತಾ. ೨೨ರಿಂದ ಇಂದಿನ ವರೆಗೆ ಮಡಿಕೇರಿಯಲ್ಲಿ ೬ ಇಂಚು ೨ ಸೆಂಟು ಮಳೆಯಾಗಿದೆ. ತಾ. ೨೨ರಲ್ಲಿ ೨ ಇಂಚು ೪೬ ಸೆಂಟು ಮಳೆ ಬಿತ್ತು.

ಇಷ್ಟರ ವರೆಗೆ ಕಿತ್ತಳೆ 'ಹೆಡ್ ರೀಸರ್ಚ್ ವರ್ಕರ್' ಆಗಿದ್ದ ಶ್ರೀ ಕಾಡುಮಂಡ ಐಯ್ಯಪ್ಪ ಎಂ. ಎಸ್‌ಸಿ., ಪಿ. ಹೆಚ್‌ಡಿ. ಯವರನ್ನು ಈಗ ಕಿತ್ತಳೆ ರೀಸರ್ಚ್ ಆಫೀಸರಾಗಿ (ಗಜೆಟೆಡ್) ನೇಮಿಸಲಾಗಿದೆ.

ಹೊಸ ರೂಲ್ಸ್‌ಗಳ ಮೇರೆ ಕೊಡಲ್ಪಟ್ಟಿರುವ ಯಾಲಕ್ಕಿ ಗೇಣಿ ಮಲೆಗಳ "ಎ" ತರಗತಿಯ ಜಾಗಕ್ಕೆ ಎಕ್ರೆಗೆ ರೂ. ೫ರಂತೆಯೂ, "ಬಿ" ತರಗತಿಯ ಜಾಗಕ್ಕೆ ರೂ. ೪ರಂತೆಯೂ ಕಂದಾಯ ಇತ್ತಲಾಗಿ ನಿಶ್ಚಯಿಸಲ್ಪಟ್ಟಿದೆ.

ಮೂರ್ನಾಡಿನ ಕೈಲ್ ಪೊಳ್ದ್ ಆಟೋಟಗಳ ಸ್ಪರ್ಧೆಯು ತಾ. ೩-೯-'೫೨ರಲ್ಲಿ 'ಪಾಂಡಾಣೆ'ಯಲ್ಲಿ ಅಕ್ಷಯ ಸಹಕಾರಿ ಸ್ಪೋರ್ಟ್ಸ್ ಕ್ಲಬ್ಬಿನ ಆಶ್ರಯದಲ್ಲಿ ಶ್ರೀ ಪಿ. ಎಂ. ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಲಿರುವುದು.

ಕೊಡಗಿನ ಜಿಲ್ಲಾ ಎಂಪ್ಲಾಯಿಮೆಂಟ್ ಆಫೀಸರಾದ ಶ್ರೀ ಕೃಷ್ಣಮೂರ್ತಿಯವರು ಮದ್ರಾಸಿಗೂ, ಬೊಂಬಾಯಿಯಲ್ಲಿರುವ ಶ್ರೀ ಪಾಲೇಕಂಡ ಎಂ. ಸುಬ್ಬಯ್ಯನವರು ಮಡಿಕೇರಿಗೂ ವರ್ಗಾಯಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ

ಕೆದಮುಳ್ಳೂರು ಗ್ರಾಮದ ಕೀತಿಯಂಡ್ರ ಜಿ. ಕರುಂಬಯ್ಯನವರ ಎಮ್ಮೆಗಳ ಜೊತೆಯಲ್ಲಿ ಯಾರದೋ ಎರಡು ಕೋಣಗಳು ಮೂರು ನಾಲ್ಕು ತಿಂಗಳಿಂದ ಬಂದು ಸೇರಿಕೊಂಡಿವೆ; ವಾರೀಸುದಾರರು ತಕ್ಕ ರುಜುವಾತಿನಿಂದ ಹೊಡೆದುಕೊಂಡು ಹೋಗಬಹುದಾಗಿ ಅವರು ತಿಳಿಸುತ್ತಾರೆ.

ಕೊಡಗಿನ ಗೃಹ ಮಂತ್ರಿಗಳಾದ ಶ್ರೀ ಕೆ. ಮಲ್ಲಪ್ಪನವರು ಈ ತಾ. ೨೭ರಲ್ಲಿ ಮಡಿಕೇರಿಯಲ್ಲಿ ಪಬ್ಲಿಕ್ ಟೆಲಿಫೋನ್ ಆಫೀಸನ್ನು ತೆರೆದರು. ಹಿಂದೂದೇಶದ ಇತರ ಪಟ್ಟಣಗಳೊಂದಿಗೆ ಮಾತಾಡುವ ಪಬ್ಲಿಕ್ ಟೆಲಿಫೋನ್ ಆಫೀಸು ಮಡಿಕೇರಿ ಪೋಸ್ಟ್ ಆಫೀಸಿನಲ್ಲಿ ಇಡಲ್ಪಟ್ಟಿದೆ.

ಕುರ್ಗ್ ಒಲಂಪಿಕ್ ಸಂಸ್ಥೆಯ ಆಶ್ರಯದಲ್ಲಿ ತಾ. ೨೩-೮-೫೨ರಲ್ಲು ನಾಪೋಕ್ಲುನಾಡು ಬೇತುಗ್ರಾಮದ ಕುಟ್ಟಂಚೆಟ್ಟಿರ ಆಕದಲ್ಲಿ ನಡೆದ ಪಬ್ಲಿಕಿನ ಓಟದ ಸ್ಪರ್ಧೆಯಲ್ಲಿ ಮಡಿಕೇರಿನಾಡಿನ ಶ್ರೀ ಕೊಕ್ಕಲೆರ ಪಿ. ತಿಮ್ಮಯ್ಯನವರು ಮೊದಲನೆಯವಾಗಿ ಬಂದು ಬಹುಮಾನ ಪಡೆದರಾಗಿ ತಿಳಿಯುತ್ತೇವೆ.

ಕ್ಷಯರೋಗನಿವಾರಣೆ ಫಂಡಿನ ಸೀಲುಗಳ ಮಾರಾಟದ ಏರ್ಪಾಡಿನ ಬಗ್ಗೆ ಅದರ ಸೆಂಟ್ರಲ್ ಕಮಿಟಿಯ ಮೀಟಿಂಗೊಂದು ಬರುವ ಸೆಪ್ಟೆಂಬರು ತಾ. ೨ರಲ್ಲಿ ಬೆಳಿಗ್ಗೆ ೧೧ ಗಂಟೆಗೆ ಎಸೆಂಬ್ಲಿ ಹಾಲ್‌ನಲ್ಲಿ ನಡೆಯುವುದೆಂದೂ, ನಂತರ ಸಂಯುಕ್ತ ರಾಷ್ಟ್ರಗಳ ಅಪ್ಪೀಲಿನ ಮೇರೆ ಕೊಡಗಿನಲ್ಲಿ 'ಮಕ್ಕಳ ದಿನಾಚರಣೆ'ಯ ವ್ಯವಸ್ಥೆಯ ಬಗ್ಗೆ ಅದರ ಕೇಂದ್ರ ಕಮಿಟಿಯ ಮೀಟಿಂಗೊಂದು ಅಲ್ಲಿಯೇ ನಡೆಯುವುದೆಂದೂ ತಿಳಿಯಬರುತ್ತದೆ.

ಈ ತಾ. ೧೫ರಿಂದ 1 ವರ್ಷ ವರೆಗೆ ಮಡಿಕೇರಿ ಬೆಂಚು ಕೋರ್ಟಿಗೆ ಶ್ರೀ ಕೆ. ಕೆ. ನಂಜಪ್ಪ ಬಿ. ಎ. ಬಿ. ಎಲ್ ರವರನ್ನು ಅಧ್ಯಕ್ಷರಾಗಿಯೂ, ಶ್ರೀ ಕೋದಂಡ ಡಿ. ಬೋಪಯ್ಯನವರು ಮತ್ತು ಶ್ರೀ ಮಹಮದ್ ಹುಸೇನ್ ಖಾನರನ್ನು ಮೇಜಿಸ್ಟ್ರೇಟರುಗಳಾಗಿಯೂ, ವಿರಾಜಪೇಟೆ ಬೆಂಚ್ ಕೋರ್ಟಿಗೆ ಕೆ. ಕೆ. ಬೆಳ್ಯಪ್ಪನವರನ್ನು ಅಧ್ಯಕ್ಷರಾಗಿಯೂ, ಶ್ರೀ ಕುಟ್ಟಂಡ ಡಿ. ಅಚ್ಚಪ್ಪನವರನ್ನು ಮತ್ತು ಶ್ರೀ ಪಶೀರ ಸಿಂಟೋರವರನ್ನು ಮೇಜಿಸ್ಟ್ರೇಟರುಗಳಾಗಿಯೂ ನೇಮಿಸಲಾಗಿದೆ.

ದಕ್ಷಿಣ ಕನ್ನಡ 'ಕೊಡಗು ಸಂಘ'ದ ವಾರ್ಷಿಕ ಮಹಾಸಭೆಯು ತಾ. ೧೭-೮-೫೨ರಲ್ಲಿ ಶ್ರೀ ಬೊವ್ವೇರಿಯಂಡ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ನಡೆದು, ಮುಂದಿನ ವರ್ಷಕ್ಕೆ ಶ್ರೀ. ಬೊವ್ವೇರಿಯಂಡ ಮುತ್ತಣ್ಣನವರು ಅಧ್ಯಕ್ಷರಾಗಿಯೂ, ಶ್ರೀ. ಬಿ. ವಿ. ರಮಣಯ್ಯನವರು ಉಪಾಧ್ಯಕ್ಷರಾಗಿಯೂ ಶ್ರೀ. ಕೊಂಗೆಟ್ಟಿರ ಉತ್ತಯ್ಯನವರು ಖಜಾನ್ಚಿಯಾಗಿಯೂ, ಶ್ರೀ, ಮಾದೆಟ್ಟಿರ ಪೂಣಚ್ಚನವರು ಗೌರವ ಕಾರ್ಯದರ್ಶಿಯಾಗಿಯೂ, ಶ್ರೀ, ಕಲಿಯಂಡ ಚಂಗಪ್ಪನವರು ಆಟೋಟಗಳ ಕಾರ್ಯದರ್ಶಿಯಾಗಿಯೂ, ಇತರ ೯ ಜನರು ಕಮಿಟಿ ಮೆಂಬರುಗಳಾಗಿಯೂ ಆರಿಸಲ್ಪಟ್ಟಿರುವರು

ಜನರಲ್ ಕಾರ್ಯಪ್ಪನವರ ಕೊಡಗು ಪ್ರವಾಸ.

ಹಿಂದೂದೇಶದ ಕಮಾಂಡರ್-ಇನ್-ಚೀಫ್‌ರಾದ ಜನರಲ್ ಕೆ. ಎಂ. ಕಾರ್ಯಪ್ಪನವರು ಈ ತಾ. ೨೩ರ ಮಧ್ಯಾಹ್ನ ೧೨-೩೦ ಗಂಟೆಗೆ ಮಡಿಕೇರಿಗೆ ಬಂದಾಗ್ಯೆ ಪುರ ನಿವಾಸಿಗಳು ಆಸ್ಪತ್ರೆ ಗೇಟಿನ ಬಳಿ ಅವರಿಗೆ ಸ್ವಾಗತವನ್ನಿತ್ತರು. ಅದೇ ದಿನ ರಾತ್ರಿ ಚೀಫ್ ಕಮಿಷನರವರು ಎಸೆಂಬ್ಲಿ ಹಾಲ್‌ನಲ್ಲಿ ಅವರಿಗೆ ಸರ್ಕಾರಿ ಔತಣವನ್ನು ಕೊಟ್ಟರು. ಸುಮಾರು ೭೦ ಜನರು ಹಾಜರಿದ್ದರು. ತಾ. ೨೪ರಲ್ಲಿ ಅವರಿಗೆ ಕೆಲವು ಕಡೆ ಖಾಸಗಿ ಮಹನೀಯರ ಊಟ ಮತ್ತು ಟೀಪಾರ್ಟಿಗಳ ಏರ್ಪಾಡುಗಳಿದ್ದವು. ತಾ ೨೫ನೇ ಸೋಮವಾರ ಬೆಳಿಗ್ಗೆ ೧೦ ಗಂಟೆಗೆ ಅವರು ಸೆಂಟ್ರಲ್ ಹೈಸ್ಕೂಲನ್ನು ಸಂದರ್ಶಿಸಿ, ಸ್ಕೌಟ್ ದಳ ಮತ್ತು ನೇಶನಲ್ ಕೇಡೆಟ್ ಕೋರನ್ನು ಪರಿಶೀಲಿಸಿದನಂತರ, ೧೧ ಗಂಟೆಗೆ ಸರ್ಕಾರಿ ಕಾಲೇಜು ಹಾಲ್‌ನಲ್ಲಿ ಸಭೆ ಸೇರಿ ವಿದ್ಯಾರ್ಥಿಗಳಿಗೆ ಉಪನ್ಯಾಸ ಮಾಡಿದರು. ಮಧ್ಯಾಹ್ನ ೧ ಗಂಟೆಗೆ ಮಂತ್ರಿಗಳು ಅತಿಥಿ ಗೃಹದಲ್ಲಿ ಅವರ ಗೌರವಾರ್ಥವಾಗಿ ಏರ್ಪಡಿಸಿದ್ದ ಔತಣದಲ್ಲಿ ಭಾಗ ವಹಿಸಿದರು. ಅದೇ ದಿನ ಸಾಯಂಕಾಲ ೪-೩೦ ಗಂಟೆಗೆ ತಿತಿಮತಿಗೆ ಹೋಗಿ, ಶ್ರೀ ಮನೆಯಪಂಡ ಗಣಪತಿಯವರು ಅವರ ಮಾತಾ ಪಿತೃಗಳ ಸ್ಮಾರಕವಾಗಿ ಕಟ್ಟಿಸಿರುವ ಪ್ರೈಯರ್ ಎಲಿಮೆಂಟರಿ ಶಾಲಾ ಕಟ್ಟಡವನ್ನು ತೆರೆದರು. ತಾ. ೨೬ನೇ ಮಂಗಳವಾರ ಬೆಳಿಗ್ಗೆ ೬-೩೦ ಗಂಟೆಗೆ ಮಡಿಕೇರಿಯಿಂದ ಮೈಸೂರಿಗೆ ಹೋದರು.

ಅಯ್ಯಾ,

ನಿಮ್ಮ ಕಳೆದ ವಾರದ ಪತ್ರಿಕೆಯಲ್ಲಿ- ಮಡಿಕೇರಿ ಮುನ್ಸಿಪಲ್ ಚುನಾವಣೆಯಲ್ಲಿ ನಾನೊಬ್ಬ ಉಮೇದುವಾರನಾಗಿ ಸ್ಪರ್ಧಿಸಿದೆನೆಂದು ಪ್ರಕಟವಾಗಿದೆ. ಆದರೆ ನಾನೊಬ್ಬ ಕಾಂಗ್ರೆಸಿಗನಾದುದರಿಂದ, ಕಾಂಗ್ರೆಸು ಉಮೇದುವಾರರಾದ ಶ್ರೀ. ಡಿ.ಯಸ್ ದೇವಶೆಟ್ಟಿಯವರಿಗೆ ಎದುರು ನಿಲ್ಲಲು ಇಚ್ಛಿಸದೆ, ನೇಮಕ ಪತ್ರವಾಪಸು ತೆಗೆಯುವ ಅವಧಿ ಮುಗಿದರೂ, ನಾನು ನಂತರ ಯಾರನ್ನು ಓಟು ಕೇಳದೆ ಸುಮ್ಮನಾಗಿ, ಸ್ಪರ್ಧಿಸಲಿಲ್ಲ.

ಬಿ. ಎಸ್. ತಿಮ್ಮಶೆಟ್ಟಿ.

(ಹಿಂದಿನ ಪುಟದಿಂದ)

ಗೆ ತಿಳಿಯುತ್ತದೆ. ರಾಮರಾಜ್ಯವನ್ನು ವಾಲ್ಮೀಕಿಯು ಹೀಗೆ ವಿವರಿಸಿದ್ದಾನೆ. "ರಾಮನು ರಾಜ್ಯವನ್ನಾಳುತ್ತಿದ್ದಾಗ ಸ್ತ್ರೀಯರು ವೈಧವ್ಯ ದುಃಖವನ್ನೇ ಕಾಣುತ್ತಿರಲಿಲ್ಲ. ದೇಶದ ಜನರು ದುಷ್ಟ ಮೃಗಗಳಿಂದಾಗಲೀ ಕೆಟ್ಟ ರೋಗಗಳಿಂದಾಗಲೀ ನರಳುತ್ತಿರಲಿಲ್ಲ. ಕಳ್ಳರ ಹೆದರಿಕೆ ಇರಲಿಲ್ಲ ಯಾವ ಪ್ರಜೆಗೂ ಯಾವ ವಿಧವಾದ ಅನರ್ಥವೂ ಉಂಟು ಗುತ್ತಿರಲಿಲ್ಲ [illegible] ಸಂಭವವೇ ಬರುತ್ತಿರಲಿಲ್ಲ [illegible] ಧರ್ಮದಲ್ಲೇ [illegible] ಎಲ್ಲರಲ್ಲಿಯೂ [illegible] ವನ್ನು ಪಡೆದು ದುಃಖವೆಂಬುವುದನ್ನೇ ಕಾಣದೆ ಸುಖದಿಂದಿರುತ್ತಿದ್ದರು.

ರಾಮ ರಾಜ್ಯದಲ್ಲಿ ಅತಿವೃಷ್ಟಿ ಅನಾವೃಷ್ಟಿ [illegible] ಗಳಿಲ್ಲದೆ ಮೇಘವು [illegible] ಎಲ್ಲಾ ಗಿಡ ಮರ ಬಳ್ಳಿಗಳು [illegible] ಪುಷ್ಪಗಳಿಂದ ತುಂಬಿರುತ್ತಿದ್ದವು. [illegible] ಸ್ಪರ್ಶವಾಗಿ ಬೀಸುತ್ತಿತ್ತು. ನಾಲ್ಕು ವರ್ಣದವರೂ ತಮ್ಮ ತಮ್ಮ ವೃತ್ತಿಗಳನ್ನು [illegible] ಲೋಭವಿಲ್ಲದಂತೆ ನಡೆಸುತ್ತಿದ್ದರು. [illegible] ಧರ್ಮ [illegible] ಸತ್ಯವಂತ [illegible] ಸೌಭಾಗ್ಯ ಸಂಪನ್ನರೂ ಆಗಿದ್ದರು.

ಇಂತಹ ರಾಮರಾಜ್ಯವು ನಮ್ಮ ಏತತ್ ಭೂಮಿಯಲ್ಲಿ ಮಗುಳ್ದು ಸ್ಥಾಪನೆಯಾಗಲೆಂದು ಹಾರೈಸುತ್ತೇನೆ.

THE COORG TRANSPORT LTD., MERCARA.

Notice is hereby given that all those who may be desirous of taking up the Managing Agency of the above Company may send their offers, setting out the terms on which they are agreable to take up the Managing Agency of the Company on or before the 10th September 1952.

Taking shares of the Company of the value of Rs. 40,000/— (Forty thousand) and above will be considered as one of the grounds of preference when the offers are taken up for consideration.

- *Sd/ C. M. THIMAYA,*

Chairman,

The Coorg Transport Ltd.,

2-1 *Mercara.*

॥ "ದುಷ್ಕಟ ಬಿಟ್ಟು ಯೋಗ್ಯತೆ ಗಳಿಸಿರಿ" ॥

ವಿದ್ಯಾರ್ಥಿಗಳಿಗೆ ಜನರಲ್ ಕಾರ್ಯಪ್ಪನವರ ಬುದ್ಧಿವಾದ.

ಹಿಂದೂದೇಶದ ಸರ್ವಸೇನಾಪತಿಯಾದ ಜನರಲ್ ಕಾರ್ಯಪ್ಪನವರು ತಾರೀಕು ೨೩ ರಲ್ಲಿ ಕೊಡಗಿಗೆ ಬಂದು ತಾರೀಕು ೨೬ ರಲ್ಲಿ ಹಿಂತಿರುಗಿದರು. ತಾರೀಕು ೨೫ರಲ್ಲಿ ಅವರು ಕೊಡಗು ಸರಕಾರಿ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿದರು. ಅದರ ಸಾರಾಂಶವನ್ನು ವಾಚಕರಿಗಾಗಿ ಇಲ್ಲಿ ಕೊಡಲಾಗಿದೆ.

ಪ್ರಿ. ಅಚ್ಯುತನ್ ಪಿಳ್ಳೆಯವರ ಸ್ವಾಗತ.

ಜನರಲ್ ಕಾರ್ಯಪ್ಪನವರು ಬೆಳಿಗ್ಗೆ ೧೧ ಗಂಟೆಗೆ ಹೈಸ್ಕೂಲು ಎನ್. ಸಿ. ಸಿ. ದಳದ ಪರಿಶೀಲನೆ ಮಾಡಿದರು. ನಂತರ ಕಾಲೇಜ್ ಹಾಲ್‌ನಲ್ಲಿ ಸಭೆ ಸೇರಿಯಿತು. ಪ್ರಾರ್ಥನೆಯ ನಂತರ ಜನರಲರಿಗೆ ಸ್ವಾಗತ ಬಯಸುತ್ತಾ ಪ್ರಿನ್ಸಿಪಲರು ಹೀಗೆಂದರು—

'ನಮ್ಮ ದೇಶದ ರಾಷ್ಟ್ರೀಯ ಅತಿಥಿಗಳ ಪ್ರತೀಕದಂತಿರುವ ನಿಮ್ಮನ್ನು ಸ್ವಾಗತಿಸಲು ಹರ್ಷವಾಗುತ್ತದೆ. ಈ ಕಾಲೇಜಿನ ಭಾಗ್ಯ ದೊಡ್ಡದು. ಪ್ರತಿ ದಿನ ನಾನು ನಮ್ಮ ಕಾಲೇಜಿನಲ್ಲಿರುವ ನಿಮ್ಮ ಭಾವಚಿತ್ರವನ್ನು ವಿದ್ಯಾರ್ಥಿಗಳಿಗೆ ತೋರಿಸಿ, ಅವರನ್ನು ನಾನು ಹುರಿದುಂಬಿಸುವ ರೂಢಿ ಇದೆ. ಇಂದು ನೀವೇ ಇಲ್ಲಿಗೆ ದಯಮಾಡಿಸಿ, ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಲಿರುವುದು ತುಂಬಾ ಹರ್ಷದಾಯಕವಾದುದು. ನಿಮ್ಮ ಜೀವನದಲ್ಲಿ ನೀವು ಈ ಹಿಂದೆ ಭಾರತೀಯರಾರೂ ಏರದ ಹಲವು ಅಂತಸ್ತುಗಳಿಗೆ ಏರಿ ಮಾರ್ಗದರ್ಶಕರಾಗಿರುವಿರಿ. ಮಿಲಿಟರಿ ತರಬೇತು ಕಾಲದಿಂದ ಹಿಡಿದು ಅನೇಕ ಪ್ರಥಮ ಸ್ಥಾನಗಳನ್ನು ಪಡೆದು ಪ್ರಥಮ ಭಾರತೀಯ ದಂಡನಾಯಕರಾದಿರಿ. ನಿಮ್ಮ ನೇತೃತ್ವದಲ್ಲಿ ಭಾರತ ಸೈನ್ಯವು ಪ್ರಥಮತಃ ಸಾರ್ವಜನಿಕ ಕೆಲವು ಕಾರ್ಯಗಳಿಗೆ ಕೈಯಿಕ್ಕಿದೆ. ಆಹಾರ ಬೆಳೆಸುವದರಿಂದ ಹಿಡಿದು ಬರಗಾಲಪೀಡಿತರಿಗೆ ನೆರವನ್ನು ಕೊಡುವ ಮೊದಲಾದ ಕೆಲಸಗಳನ್ನು ಮಾಡಿ ಜನರ ಪ್ರಶಂಸೆಗೆ ಪಾತ್ರವಾಗಿದೆ.

ನಮ್ಮ ಕಾಲೇಜು ನಾಲ್ಕು ವರ್ಷದ ಶಿಶುವಾದರೂ ಈ ಸಮಯದಲ್ಲಿ ಅದು ಯೋಗ್ಯ ರೀತಿ ಕೆಲಸ ಮಾಡಿದೆ. ಯಾರಾದರೂ ಹೆಮ್ಮೆಪಟ್ಟುಕೊಳ್ಳಬಹುದಾದಂಥಾ ಪ್ರಗತಿಯನ್ನು ತೋರಿಸಿದೆ. ಪರೀಕ್ಷೆ ಫಲಿತಾಂಶದಲ್ಲೇ ಮಾತ್ರವಲ್ಲ; ಆಟೋಟಗಳಲ್ಲೂ, ಇತರ ಕ್ಷೇತ್ರಗಳಲ್ಲೂ ಯೋಗ್ಯ ಪಥದಲ್ಲಿ ಮುಂದುವರಿಯುತ್ತಿದೆ. ಈ ವರ್ಷ ಕಾಲೇಜಿನಲ್ಲಿ ಸಮಾಜಸೇವಾ ಪಥಕ ಒಂದನ್ನು ಏರ್ಪಡಿಸಿರುವೆವು. ಇದಕ್ಕೆ ೧೫೦ ವಿದ್ಯಾರ್ಥಿಗಳು ಹೆಸರು ಕೊಟ್ಟಿರುವರು. ಇವರು ಸಮುದಾಯಿಕ ಯೋಜನೆ, ಮತ್ತಿತರ ಗ್ರಾಮಾಭಿವೃದ್ಧಿ ಕೆಲಸಗಳಲ್ಲಿ ಭಾಗವಹಿಸಲಿರುವರು. ವಯಸ್ಕರ ಶಿಕ್ಷಣ, ಗ್ರಾಮನೈರ್ಮಲ್ಯ ಮೊದಲಾದವುಗಳಿಗಾಗಿ ಸಿದ್ಧರಾಗುವರು. ನಾವು ಕಾಲೇಜಿನಲ್ಲಿ ಕೇವಲ ಪರೀಕ್ಷೆಗೆ ಕೂರಲಿರುವ ಅಭ್ಯರ್ಥಿಗಳನ್ನೇ ತಯಾರಿಸುವದಲ್ಲ; ಜೀವನದ ಪ್ರತಿ ಕ್ಷೇತ್ರದಲ್ಲೂ ಆದರ್ಶರಾಗಬೇಕಾದ ಮಾನವರ ರಚನೆ ಮಾಡುತ್ತಿರುವೆವು. ಅಧ್ಯಾಪಕ ವೃತ್ತಿಯು ರಚನಾತ್ಮಕ ಕಲೆಯಾಗಿದೆ ಎಂದರಿತೇ ನಾವು ಶ್ರಮಿಸುವೆವು. ಇಲ್ಲಿ ಕಟ್ಟಡ ಮತ್ತು ಅಲಂಕಾರ ಚೆನ್ನಾಗಿಲ್ಲದೆ ತೊಂದರೆಗಳು ಹಲವಿದ್ದರೂ ಮುಂದೆ ಹೊಸ ಕಟ್ಟಡಕ್ಕೆ ಹೋದಾಗ ಯೋಗ್ಯ ಅವಕಾಶ ದೊರೆತು ಕೊಡಗಿನ ಈ ಕಾಲೇಜು ಒಂದು ಆದರ್ಶ ಕಾಲೇಜಾಗಲೆಂದೇ ದುಡಿಯುವೆವು' ಎಂದರು.

ಜನರಲರ ಪ್ರಶಂಸೆ.

ಕಾಲೇಜಿನ ಸಂಕ್ಷಿಪ್ತ ವಿವರವನ್ನು ಕೇಳಿ ಸಂತೋಷವಾಗಿದೆ. ಪರೀಕ್ಷಾ ಫಲಿತಾಂಶವು ಚೆನ್ನಾಗಿದೆ. ಆಟೋಟಗಳಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ಪಾರಿತೋಷಕ ಪಡೆದುದೂ ಹೊಗಳಲರ್ಹವಾದುದು. ನಾಲ್ಕು ವರ್ಷಗಳಲ್ಲಿ ಈ ಯೋಗ್ಯ ಆದರ್ಶವನ್ನು ಹಾಕಿದ ವಿದ್ಯಾರ್ಥಿಗಳಿಗೂ, ಅಧ್ಯಾಪಕರಿಗೂ ವಂದನೆಗಳು.

ಈ ಬೆಳಿಗ್ಗೆ ನಾನು ಎನ್. ಸಿ. ಸಿ. ದಳವನ್ನು ಪರಿಶೀಲಿಸಿದ ನಂತರ ಹೈಸ್ಕೂಲು ಆವರಣವನ್ನೂ, ಶಾಲಾ ಕಟ್ಟಡ, ವ್ಯಾಯಾಮಶಾಲೆಗಳನ್ನೂ ನೋಡಿದೆನು. ನಿಜವಾಗಿಯೂ ಇವು ಯಾವುವೂ ಚೆನ್ನಾಗಿಲ್ಲ. ಎಲ್ಲವೂ ಕೊಳಕಾಗಿವೆ. ಶಾಲಾ ಶಾಲೆಗಳೂ, ವಿದ್ಯಾರ್ಥಿನಿವಾಸಗೃಹವೂ ಕೊಳಕಾಗಿದೆ. ಕಿಡಿಕಿಗೆ ಬಣ್ಣವಿಲ್ಲ, ಗೋಡೆಗೆ ಸುಣ್ಣವೂ ಇಲ್ಲ. ಈ ಕಟ್ಟಡಗಳು ಯೋಗ್ಯವಾಗಿಲ್ಲ. ವ್ಯಾಯಾಮಶಾಲೆಯಲ್ಲಿ ಏನೂ ಇಲ್ಲ. ಅದು ಕೇವಲ ಕೊಟ್ಟಿಗೆಯಂತಿದೆ. ಶುಚಿತ್ವದ ತತ್ವವನ್ನು ಕಲಿಯದಿದ್ದರೆ ಜೀವನದಲ್ಲಿ ದಕ್ಷತೆ ಬರಲಾರದು. ಮೂವತ್ತು ವರ್ಷಗಳ ಹಿಂದೆ ಇದೇ ಶಾಲೆಯಲ್ಲಿ ನಾನು ಓದುತ್ತಿದ್ದಾಗ ಇದರ ಪರಿಸ್ಥಿತಿ ಹೀಗಿರಲಿಲ್ಲ. ಇದಕ್ಕೆ ಶಾಲಾ ಸಿಬ್ಬಂದಿಯನ್ನು ನಾನು ದೂಷಿಸುವದಿಲ್ಲ. ಸರಕಾರವು ಇದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕಾದುದು ಕರ್ತವ್ಯವಾಗಿದೆ. ಶುಚಿಯಾಗಿರುವ ಬಟ್ಟೆ ಬರೆ, ಶುಚಿಯಾಗಿರುವ ಶರೀರ, ಶುಚಿಯಾಗಿರುವ ಮನಸ್ಸು ಮತ್ತು ಬುದ್ಧಿ ಇರುವವನೇ ಚತುರನೂ, ಯೋಗ್ಯನೂ ಎನಿಸುವನು. ಎಂ. ಎ, ಬಿ. ಎ ಡಿಗ್ರಿ ಪಡೆಯುವದೇ ವಿದ್ಯೆಯ ಗುರಿಯಲ್ಲ. ಈ ಡಿಗ್ರಿಗಳು ಜೀವನ ಯಾತ್ರೆಯಲ್ಲಿ ಹೆಚ್ಚು ಸಹಕಾರಿಗಳಲ್ಲ. ಯೋಗ್ಯತೆ ಬೇಕು. ಶಾರೀರಕ ಸಂಪತ್ತು ಬೇಕು. ಕರ್ತವ್ಯಶೀಲತೆ ಬೇಕು.

ಶುಚಿಯಾಗಿರದ ಬಟ್ಟೆ ಬರೆ, ಉದ್ದ ಕೂದಲು, ಉದ್ದ ಉಗುರುಗಳನ್ನು ಹಾಕಿಕೊಂಡು ನಾವು ರಾಷ್ಟ್ರೀಯವಾದಿಗಳೆನ್ನುವವರು ಕೆಲವರಿದ್ದಾರೆ. ರಾಷ್ಟ್ರೀಯತೆ ಕೊಳಕು ಜೀವನದಲ್ಲಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ಶುಚಿಯಾಗಿರಲು ಕಲಿಯಿರಿ. ಇಂದು ನೀವು ಅದನ್ನು ಅಭ್ಯಾಸ ಮಾಡಿದರೆ ನಾಳೆ ಶುಚಿಯಾದ, ಪ್ರಗತಿಪರವಾದ, ಸುಂದರ ರಾಷ್ಟ್ರವನ್ನು ಕಟ್ಟಲು ಶಕ್ತರಾಗುವಿರಿ. ಪರಂಪರೆಯಿಂದ ಬಂದ ಪದ್ಧತಿ ಸಂಪ್ರದಾಯಗಳ ದಾಸರಾಗುವದು ಬೇಡ. ವಿಚಾರಶೀಲರಾಗಿರಿ. ಚಿಕಿತ್ಸಕ ಬುದ್ಧಿಯಿಂದ ಪ್ರತಿಯೊಂದನ್ನೂ ಪರಿಶೀಲಿಸುವ ಬುದ್ಧಿಯನ್ನು ಬೆಳೆಸಿಕೊಳ್ಳಿರಿ.

ದೃಷ್ಟಿ ವಿಶಾಲತೆ.

ವಿದ್ಯಾರ್ಥಿಗಳ ದೃಷ್ಟಿ ವಿಶಾಲವಿರಬೇಕು. ನಾನು ನನ್ನದು ಎಂಬ ಭಾವನೆಯನ್ನು ಬಿಡಬೇಕು, ಒಂದೇ ಪ್ರಪಂಚ ನಿಮ್ಮದು. ಜಗತ್ತಿನ ನಾಗರಿಕರು ನೀವೆಂದು ಭಾವಿಸಿ ಮಾನವ ಗಣದ ಸೇವೆಗಾಗಿ ತಯಾರಾಗಿರಿ. ವಿವಿಧ ರೀತಿಯ, ವಿವಿಧ ಆಸಕ್ತಿ ಇರುವ ಜನರು ಬೇಕಾಬಂತೆ ಟೀಕೆ ಮಾಡುವರು. ಅಂಥಾ ಟೀಕೆಗಳಿಂದ ತಲೆಕೆಡಿಸಿಕೊಳ್ಳದಿರಿ. ನಿಮಗೆ ಸರಿಯೆಂದು ತೋರಿದುದನ್ನು ಮಾಡಲು ಹಿಂಜರಿಯದಿರಿ.

ಯಾವಾಗಲೂ ಸಾಮೂಹಿಕ ಆಟೋಟಗಳಲ್ಲಿ ವಿದ್ಯಾರ್ಥಿಗಳು ಹೆಚ್ಚು ಭಾಗವಹಿಸಬೇಕು. ಇದರಿಂದ ಸ್ವಾರ್ಥಸಂಕೀರ್ಣತೆಗಳು ಅಳಿದುಹೋಗಿ ಒಗ್ಗಟ್ಟಾಗಿ ಪರಿಶ್ರಮಿಸುವ ಅಭ್ಯಾಸ ಹೆಚ್ಚುವದು. ಆದರ್ಶ ನಡತೆಯ, ತಾನು ಹೇಳಿದಂತೆ ನಡೆಯುವ ವ್ಯಕ್ತಿಯೇ ಇತರರನ್ನು ಪ್ರಭಾವಿಸುವ ಮಹಾನುಭಾವನಾಗುವನು. ಬರೇ ಉಪದೇಶ ಮಾಡುವವನಲ್ಲ. ಆದ್ದರಿಂದ ಆತನು ಒಳ್ಳೆಯವನಾಗಬೇಕು, ದಕ್ಷನಾಗಬೇಕು. ಅಂದರೆ ಇತರರ ಮೇಲೆಯೂ ಪ್ರಭಾವ ಬೀರಲು ಶಕ್ತನಾಗುವನು.

ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಜಗತ್ತಿನಲ್ಲಿ ಎರಡು ಪ್ರಮುಖ ವ್ಯಕ್ತಿಗಳೆಂದರೆ—ಮಾತಾಪಿತೃಗಳು ಮತ್ತು ಅಧ್ಯಾಪಕರು. ಇವರಿಂದ ರಾಷ್ಟ್ರದ ಜನನಿರ್ಮಾಣವಾಗಿದೆ. ಯೋಗ್ಯ ಪ್ರಜೆಗಳು ಹೆಚ್ಚಬೇಕಾದರೆ, ದೇಶವು ಆದರ್ಶವೆನಿಸಬೇಕಾದರೆ ಇವರ ಜವಾಬ್ದಾರಿ ತುಂಬಾ ದೊಡ್ಡದಿದೆ. ನಾನು ಈಗಿನ ಆಧುನಿಕ ಮಾಂಟೆಸ್ಸೋರಿ ವಿಧಾನದ ವಿದ್ಯಾಭ್ಯಾಸಕ್ರಮವನ್ನು ಮೆಚ್ಚುವವನಲ್ಲ. ಮಕ್ಕಳನ್ನು ಶಿಕ್ಷಿಸಿ ಕಲಿಸಬೇಕೆಂಬ ನಂಬಿಕೆ ಇರುವವನು. ಮಕ್ಕಳಲ್ಲಿ ಶಿಸ್ತು ಬೇಕು, ಕರ್ತವ್ಯಶೀಲತೆ ಬೇಕು. ಅದರ ಇವು ಉಪದೇಶದಿಂದ ಬರುವಂಥಾವಲ್ಲ. ಅಧ್ಯಾಪಕರು, ತಂದೆ ತಾಯಿಗಳು ಆದರ್ಶರಾಗಿ ಮಾರ್ಗದರ್ಶನ ಮಾಡಬೇಕು.

ರಾಜಕೀಯ ಪರಿಜ್ಞಾನ.

ವಿದ್ಯಾರ್ಥಿಗಳು ಸಕ್ರಿಯ ರಾಜಕೀಯದಲ್ಲಿ ಕೈಹಾಕಬಾರದು. ಅನೇಕ ರಾಜಕೀಯ ಪಕ್ಷಗಳು ತಮ್ಮ ಗುರಿಯ ಸಾಧನೆಗಾಗಿ ವಿದ್ಯಾರ್ಥಿಗಳನ್ನು ಉಪಯೋಗಿಸಿಕೊಳ್ಳುವದಿದೆ. ವಿದ್ಯಾರ್ಥಿಗಳು ಈ ರೀತಿ ಇತರರ ಕೈಗೊಂಬೆಗಳಾಗಬಾರದು. ಹಾಗೆಂದಾಗ ರಾಜಕೀಯವನ್ನು ಅಭ್ಯಾಸ ಮಾಡಬಾರದೆಂದಲ್ಲ. ಆದಷ್ಟು ರಾಜಕೀಯ ಜ್ಞಾನವನ್ನು ಮಾಡಿಕೊಳ್ಳಬೇಕು. ವಿದ್ಯಾರ್ಥಿಜೀವನವು ಮುಗಿದು ವಿಶಾಲ ಪ್ರಪಂಚಕ್ಕೆ ಕಾಲಿಕ್ಕುವಾಗ ಹಮಗೆ ಬೇಕಾದ ರಾಜಕೀಯವನ್ನು ಆರಿಸಿಕೊಳ್ಳುವ ಜ್ಞಾನವನ್ನು ಪಡೆದಿರಬೇಕು. ಪ್ರತಿ ವಿದ್ಯಾರ್ಥಿಯೂ ಜೀವನದಲ್ಲಿ ಒಂದು 'ಹಾಬಿ' ಇಟ್ಟುಕೊಳ್ಳಬೇಕು. ಸ್ಟಾಂಪು ಸಂಗ್ರಹಿಸುವದು, ಪಕ್ಷಿಗಳ ಮೊಟ್ಟೆ, ಚಿಟ್ಟೆ ಮೊದಲಾದವುಗಳ ಗೂಡುಗಳನ್ನು ಸಂಗ್ರಹಿಸುವುದನ್ನು ಕೈಕೊಳ್ಳಬಹುದು.

ಚಲನ ಚಿತ್ರಗಳ ಹುಚ್ಚು ಬಿಡಿ.

ವಿದ್ಯಾರ್ಥಿಗಳು ಚಲನ ಚಿತ್ರಗಳಿಗೆ ಹೋಗುವ ಕೆಟ್ಟ ಅಭ್ಯಾಸವನ್ನು ಬಿಡಬೇಕು. ಚಲನ ಚಿತ್ರಗಳಲ್ಲಿ ಎಲ್ಲವೂ ಒಳ್ಳೆಯವಲ್ಲ. ಚಲನ ಚಿತ್ರಗಳು ಮಾನವನ ಬುದ್ಧಿವಿಕಾಸಕ್ಕೂ, ಜ್ಞಾನಪ್ರಸಾರಕ್ಕೂ ಉತ್ತಮವಾದ ಸಾಧನಗಳಾದರೂ ಇಂದು ಚಲನ ಚಿತ್ರಗಳಿಂದ ವಿಪರೀತ ಹಾನಿಯಾಗುತ್ತಿದೆ. ಎಲ್ಲೆಲ್ಲೂ ಅಶ್ಲೀಲ ಚಿತ್ರಗಳು ಜನತೆಯ ಮೇಲೆ ದುಷ್ಪರಿಣಾಮವನ್ನುಂಟುಮಾಡುತ್ತಿವೆ. ನನ್ನ ಅಭಿಪ್ರಾಯದಲ್ಲಿ ಶೇ ೯೦ರಷ್ಟು ಜನ ಜಾಡ್ಯಗಳು ಚಲನ ಚಿತ್ರದ ಹಾಳು ಸಿನೆಮಾದಿಂದ ನಮ್ಮ ನಾಡಿಗೆ ಬರುತ್ತಿದೆ. ಕಳಿದ ಪ್ರೇಮ ಹಾಗೂ ಜೂಜಾಟವನ್ನು ಕಲಿಸುವಂಥ ಕೆಟ್ಟ ಚಿತ್ರಗಳು ವಿಷದಂತೆ ಸಮಾಜವನ್ನು ಕೆಡಿಸುವವು. ಸಿನೆಮಾದ ಪ್ರಭಾವದಿಂದ ನೀತಿಗೆಡಿಸಿಕೊಂಡವರು ಬೇರೆ ದಾರಿಗೆ ಹೋಗದೇ ಉಳಿಯುವರೇ. ನಮ್ಮ ಈ ವಿಶಾಲ ದೇಶದಲ್ಲಿ ಅನೇಕ ಆದರ್ಶ ಸುಂದರ ದೃಶ್ಯಗಳೂ, ಚಾರಿತ್ರಿಕ ಸ್ಥಳಗಳೂ, ವೈಜ್ಞಾನಿಕ ಪ್ರಗತಿಯ ಕೇಂದ್ರಗಳೂ, ಹಿಮಾಲಯ, ಉದಯಪುರ ಮೊದಲಾದ ಸಾವಿರಾರು ವಿಷಯಗಳಿವೆ. ಇವುಗಳ ಪರಿಚಯವನ್ನು ಜನತೆಗೆ ಮಾಡಿಕೊಡುವದು ಚಲನಚಿತ್ರ ನಿರ್ಮಾಪಕರ ಕರ್ತವ್ಯವಾಗಬೇಕು. ಆದ್ದರಿಂದ ಶಾಲಾ ಕಾಲೇಜುಗಳಲ್ಲಿ ಪ್ರತ್ಯೇಕ ಚಲನಚಿತ್ರ ಪ್ರದರ್ಶನದ ವಿಭಾಗವು ಮಾಡಲ್ಪಟ್ಟು ವಿದ್ಯಾರ್ಥಿಗಳಿಗೆ ಯೋಗ್ಯ ಚಿತ್ರಗಳನ್ನು ಮಾತ್ರ ತೋರಿಸುವಂತೆ ಏರ್ಪಡಿಸಬೇಕು. ಇಲ್ಲಿಯ ವಿದ್ಯಾರ್ಥಿಗಳು ಚಿತ್ರಮಂದಿರಗಳಿಗೆ ಹೋಗುವುದನ್ನು ನಾನು ಒಲ್ಲೆ. ನನ್ನ ಸಲಹೆಯನ್ನು ಜನರು ಇನ್ನಾದರೂ ಇದನ್ನು ಅರಿತು ಮಾಡಬೇಕು.

ಆಟೋಟಗಳ ವ್ಯವಸ್ಥೆ

ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಗಾಗಿ ಯೋಗ್ಯ ಆಟೋಟಗಳ ವ್ಯವಸ್ಥೆ ಅಲ್ಲದಿರುವುದು ಒಂದು ಕೊರತೆಯಾಗಿದೆ. ಇಂದು ಬೆಳಿಗ್ಗೆ ಶಾಲೆಯ ಕಟ್ಟಡ ನೋಡಲು ಹೋಗಿದ್ದೆ. ಯೋಗ್ಯ ಕಟ್ಟಡ ಆಗುತ್ತಿದೆ. ಅದರೆ ಅತೀ ಅವಶ್ಯದ ಆಟದ ಮೈದಾನ, ವ್ಯಾಯಾಮ ಶಾಲೆ, ವಿದ್ಯಾರ್ಥಿನಿವಾಸಗೃಹಗಳ ವ್ಯವಸ್ಥೆ ಮಾಡಿ

ಲ್ಲ. ಇದು ತೀರಾ ಅತೃಪ್ತಿಕರ. ಇವುಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟು ಸರಕಾರವು ಇವುಗಳನ್ನು ಬೇಗ ಮಾಡಿಸಬೇಕು. ಮಡಿಕೇರಿಯು ಕೊಡಗಿನ ರಾಜಧಾನಿಯಾಗಿದ್ದು ಅದಕ್ಕೆ ಉತ್ತಮ ಆಟದ ಮೈದಾನಗಳು, ಓಟದ ದಾರಿಗಳು, ಈಜುವ ಕೊಳಗಳು ಮೊದಲಾದುವು ಇರಬೇಕಾದುದು ಅವಶ್ಯ. ತಮ್ಮ ವಿಲಾಸ ಜೀವನಕ್ಕಾಗಿ ಕಾರು, ರೇಡಿಯೋ ಮತ್ತಿತರ ಕಾರಣಗಳಿಗಾಗಿ ಸಹಸ್ರಾರು ಖರ್ಚುಮಾಡುವ ಪ್ಲಾಂಟರುಗಳು ಈ ವಿಚಾರಗಳಿಗೆ ಧನಸಹಾಯ ಮಾಡುವುದು ಅಗತ್ಯವಿದೆ.

ಈಗ ಕಾಲೇಜಿನಲ್ಲಿ ಹೈಸ್ಕೂಲುಗಳಲ್ಲಿರುವ ವಿದ್ಯಾರ್ಥಿಗಳ ಆರೋಗ್ಯ ಚೆನ್ನಾಗಿಲ್ಲ. ಕಾಲೇಜಿನಲ್ಲಿ ಓದುತ್ತಿದ್ದರೂ ಪ್ರಾಥಮಿಕ ಶಾಲೆಯ ಮಕ್ಕಳಷ್ಟಿರುವ ಅನೇಕ ವಿದ್ಯಾರ್ಥಿಗಳಿದ್ದಾರೆ. ಯೋಗ್ಯ ಆಹಾರ ಯೋಗ್ಯ ಕಸರತ್ತು ಇಲ್ಲದೆ ಈ ರೀತಿ ಬೆಳವಣಿಗೆ ಕಡಿಮೆಯಾಗಿದೆ. ಹಿಂದಿನ ಕಾಲದಲ್ಲಿ ಹೀಗಿರಲಿಲ್ಲ. ನಾಲ್ಕನೇ ಐದನೆ ತರಗತಿಗಳಲ್ಲಿಯು ವಿದ್ಯಾರ್ಥಿಗಳೂ ಕೂಡ ದೊಡ್ಡವರಾಗಿರುತ್ತಿದ್ದರು. ಮಕ್ಕಳ ಶಾರೀರಿಕ ಬೆಳವಣಿಗೆಯ ವಿಚಾರದಲ್ಲಿ ತಂದೆತಾಯಿಗಳು ತೊಂದರೆ ತೆಗೆದುಕೊಳ್ಳಬೇಕು.

ನಾನು ಹಿಂದೂದೇಶದ ಅನೇಕ ಭಾಗಗಳನ್ನು ತಿರುಗಿ ನೋಡಿರುವೆನು. ಕೊಡಗಿನ ಯುವಕ ಯುವತಿಯರಲ್ಲಿ ಒಂದು ಚೇತನ, ಸ್ಫೂರ್ತಿ ಇದೆ. ಇಲ್ಲಿ ಯೋಗ್ಯ ಕಚ್ಚಾ ಮಾಲು ಇದೆ. ಅದನ್ನು ಸರಿಯಾಗಿ ಉಪಯೋಗಿಸಿದರೆ ಆದರ್ಶ ಜನತೆಯನ್ನು ತಯಾರಿಸುವ ಸಾಧ್ಯತೆ ಇದೆ. ಯೋಗ್ಯ ಅನುಕೂಲತೆ, ತರಬೇತಿ, ಅವಕಾಶ ಕಲ್ಪಿಸಿ ಕೊಟ್ಟರೆ ಜಗತ್ತಿಗೆ ಕೀರ್ತಿ ತರಬಲ್ಲ ಯೋಗ್ಯರನ್ನು ಇಲ್ಲಿ ತಯಾರಿಸಬಹುದಾಗಿದೆ.

ಹಸನ್ಮುಖಿಗಳಾಗಿರಿ

ಯಾವಾಗಲೂ ವಿದ್ಯಾರ್ಥಿಗಳು ನಗುಮುಖರಾಗಿರಬೇಕು. ಯಾವ ವ್ಯಸನ ದುಃಖಗಳೂ ಅವರನ್ನು ಸೋಂಕಬಾರದು. ಹಿಂದೂದೇಶಕ್ಕೆ ಇಂದು ಯೋಗ್ಯ ಯುವಕ ಯುವತಿಯರು ಬೇಕಿದ್ದಾರೆ. ಹಿಂದೂದೇಶದ ಪುನರ್ರಚನೆಯನ್ನು ಮಾಡಿ ಹಿಂದೂದೇಶದ ಬೆಳಕು ಸಮಗ್ರ ಜಗತ್ತಿಗೆ ಪಸರಿಸುವಂತೆ ಮಾಡಲು ಯೋಗ್ಯ ಜನಾಂಗದ ಅವಶ್ಯಕತೆ ಇದೆ. ನಿಮಗಾಗಿ ಎರಡು ಶಬ್ದಗಳನ್ನು ಕೊಡಬಲ್ಲೆ. 'Deep end' ಎಂಬ ಶಬ್ದವು ನಿಮ್ಮ ಮನಸ್ಸಿನಲ್ಲಿ ಸರ್ವದಾ ಇರಲಿ. ಅದರ ಇಂಗಿತವು ಹೀಗಿದೆ—'ಡಿ' ಎಂದರೆ 'ಡಿಸಿಪ್ಲಿನ್' ಶಿಸ್ತು. 'ಇ' ಎಂದರೆ 'ಎನರ್ಜಿ' ಚೇತನ. 'ಇ' ಎಂದರೆ 'ಎಂಟರ್ ಪ್ರೈಸ್' ಕಾರ್ಯಶಕ್ತಿ. 'ಪಿ' ಎಂದರೆ 'ಪರ್ಸಿವಿಯರೆನ್ಸ್' ಸಾಧಿಸುವ ಛಲ. 'ಸಿ' ಎಂದರೆ 'ಕರೇಜ್' ಧೈರ್ಯ 'ಯು' ಎಂದರೆ 'ಅನ್ ಸೆಲ್ಫಿಷ್‌ನೆಸ್' ನಿಸ್ವಾರ್ಥತೆ 'ಡಿ' ಎಂದರೆ 'ಡಿಟರ್ಮಿನೇಶನ್' ದೃಢ ನಿಶ್ಚಯ. ಈ ಗುಣಗಳನ್ನು ಬೆಳೆಸಿಕೊಂಡು ದುಡಿದರೆ ನಾವು ಯೋಗ್ಯರೂ, ಕರ್ಮಕುಶಲರೂ ಆಗುವುದರಲ್ಲಿ ಸಂಶಯವಿಲ್ಲ.

ದಕ್ಷಿಣ ಆಫ್ರಿಕೆಯಲ್ಲಿ ಸತ್ಯಾಗ್ರಹ.

ಮಾನವೀಯ ಅಧಿಕಾರದ ವ್ಯಾಪ್ತಿಯನ್ನು ಧಿಕ್ಕರಿಸಿ ನಡೆಯುವ ಉಗ್ರಶಾಸನವನ್ನು ದಕ್ಷಿಣ ಆಫ್ರಿಕೆಯು ತೋರಿಸುತ್ತಾ ಬಂದಿರುವುದು ನಿಜಕ್ಕೂ ಶೋಚನೀಯ; ವಿಶ್ವರಾಷ್ಟ್ರಗಳಲ್ಲಿ ಕ್ಷೋಭೆಯನ್ನೂ ಅಸಂತೋಷವನ್ನೂ ಇದು ಹುಟ್ಟಿಸಿದ್ದು, ಇದರ ಪರಿಣಾಮವು ಭೀಕರವಾಗುವ ಸಂಭವ ಇದೆ. ಮಲನ್ ಸರಕಾರದ ನೀತಿಯು ದಿನ ಹೋದಂತೆ ಉಗ್ರವೂ ಕಟುತರವೂ ಆಗಿ ಮಾರ್ಪಡುತ್ತಿದೆ. ಲೋಕದ ಕಣ್ಣನ್ನು ಚುಚ್ಚಿ ನೋಯಿಸುವ ಚಪಲವನ್ನು ಅವರು ತೋರಿಸುತ್ತಿರುವುದು ವಿಷಾದಕರ. ವಿಶ್ವಸಂಸ್ಥೆಯು ಮಾನವನ ಹಕ್ಕುಬಾಧ್ಯತೆಗಳ ಕರಡನ್ನು ಸಿದ್ಧಗೊಳಿಸಿದಾಗ ವರ್ಣಭೇದದಂಥ ಅನೈಸರ್ಗಿಕವಾದ ಮತ್ತು ಅವಾಂಛನೀಯವಾದ ಪದ್ಧತಿಯನ್ನು ತಿರಸ್ಕರಿಸಿದ್ದರೂ, ಅದಕ್ಕೆ ಸಾಕಷ್ಟು ಮನ್ನಣೆ ದೊರಕಿಲ್ಲ. ವರ್ಣದ್ವೇಷದ ರಾಕ್ಷಸದಿಗಳ ಬಿಗಿಯನ್ನು ಇನ್ನಷ್ಟು ಬಿಗಿಪಡಿಸುವ ಸನ್ನಿವೇಶವಾಗಿ ದಕ್ಷಿಣ ಆಫ್ರಿಕೆಯ ಸರಕಾರ ನೀತಿಯು ಎಲ್ಲೆಡೆಯಿಂದಲೂ ಟೀಕೆಗೊಳಗಾಗಿದೆ. ಐರೋಪ್ಯ ಬಾಂಧವರೇ ಮಲನ್ ಸರಕಾರವನ್ನು ಕಟುವಾಗಿ ನಿಂದಿಸಿರುವರು. ಸ್ಥಳೀಯ ಐರೋಪ್ಯೇತರ ನಿವಾಸಿಗರು ಜೂನ್ ೨೬ನೇ ದಿನಾಂಕದಿಂದ ಇಂದಿನವರೆಗೂ ಅಹಿಂಸಾತ್ಮಕ ಚಳುವಳಿಯನ್ನು ಕ್ರಮಬದ್ಧವಾದ ರೀತಿಯಲ್ಲಿ ನಡೆಸುತ್ತಿರುವರು. ಪರಿಣಾಮವಾಗಿ ವಿಶ್ವದೃಷ್ಟಿಯು ಆಫ್ರಿಕೆಯಲ್ಲಿ ಕೇಂದ್ರೀಕೃತವಾಗುವ ಸರ್ವ ಲಕ್ಷಣಗಳೂ ಕಂಡು ಬರುತ್ತಿವೆ.

ಸ್ವತಂತ್ರ್ಯೋತ್ಸವದ ಸಂದರ್ಭ ಮಾತನಾಡುವಾಗ ಭಾರತದ ಪ್ರಧಾನಿ ನೆಹರೂ ದಕ್ಷಿಣ ಆಫ್ರಿಕೆಯ ಪ್ರಶ್ನೆಯನ್ನೂ ಎತ್ತಿದರು. ಭಾರತೀಯರಾದವರು ಅಲ್ಲಿ ಅನುಭವಿಸುತ್ತಿರುವ ಸಂಕಷ್ಟಗಳ ಕುರಿತು ಸಹಾನುಭೂತಿಯುಳ್ಳವರು ತೋರಿದರು. ಜಗತ್ತಿನ ಪ್ರೇಮಕ್ಕೆ ವರ್ಣದ್ವೇಷದಿಂದ ಎಷ್ಟರ ಮಟ್ಟಿನ ನಷ್ಟ ಉಂಟಾಗುತ್ತಿದೆ, ಎಂಬುವರು ವರ್ಣಿಸಿದರು. ಮಾನವೀಯವಾದ ಹಾಗೂ ಮೂಲಭೂತ ಸ್ವರೂಪದ ಅಧಿಕಾರ ಪ್ರಾಪ್ತಿಗಾಗಿ ಅಹಿಂಸಾತ್ಮಕ ಚಳುವಳಿ ಹೂಡಿರುವುದನ್ನು ಎಲ್ಲ ನಾಗರಿಕ ರಾಷ್ಟ್ರಗಳೂ ಸಮರ್ಥಿಸುವುದರಲ್ಲಿ ಆಶ್ಚರ್ಯವೇನಿದೆ? ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸು ಈಗಾಗಲೇ ರಾಷ್ಟ್ರದಾದ್ಯಂತ ಸಭೆಗಳನ್ನು ಕೂಡಿಸಿ, ಸತ್ಯಾಗ್ರಹಕ್ಕೆ ಸಂಪೂರ್ಣ ಬೆಂಬಲ ನೀಡುವ ಗೊತ್ತುವಳಿಗಳನ್ನು ಸ್ವೀಕರಿಸಬೇಕೆಂದು ಪರಿಪತ್ರ ಕಳಿಸಿದೆ. ಕಮ್ಯೂನಿಸ್ಟರೆಂಬ ಆರೋಪದ ಮೇರೆಗೆ ಭಾರತೀಯ ಹಾಗೂ ಆಫ್ರಿಕದ ಧುರೀಣರನ್ನು ಬಂಧಿಸಿದ್ದು—ಚಳುವಳಿಯಲ್ಲಿ ಭಾಗವಹಿಸಿದವರನ್ನೆಲ್ಲ ನೆಟ್ಟಗೆ ಸೆರೆಮನೆಗೊಯ್ಯಲಾಗುತ್ತಿದೆ. ಈ ಭಾರಿಯ ಸತ್ಯಾಗ್ರಹದಲ್ಲಿ ಇಂದಿನ ವರೆಗೆ ೨೩೦೦ ಮಂದಿ ಜೈಲು ಕಂಡಿದ್ದಾರೆ, ಅರ್ಥ ದಂಡವನ್ನು ಕೊಡಲು ಯಾರೊಬ್ಬರೂ ಮುಂದಾಗಲಿ, ಸ್ವೇಚ್ಛೆಯಿಂದ ಕಾರಾಗೃಹವನ್ನು ಸೇರುತ್ತಿರುವರು. ಈ ಚಳುವಳಿಯ ವ್ಯವಸ್ಥೆಯು ನಿಜಕ್ಕೂ ಪ್ರಶಂಸನೀಯ. ಹಾಗೆಂದು ಚಳುವಳಿಗಾರರಿಗೆ ಕೋರ್ಟಿನಲ್ಲಿ ಹಿಂಸೆಯನ್ನನುಭವಿಸುವ ಪ್ರಸಂಗಗಳೂ ಬಂದಿವೆ. ಚಾಟಿ ಏಟಿನಂಥ ಅಮಾನುಷ ಶಿಕ್ಷೆಯನ್ನು ವಿಧಿಸಿ, ಕ್ರೂರವಾಗಿ ದಂಡಿಸುವುದೂ ನಡೆದಿದೆ.

'ನ'

ಯೋಗ್ಯತೆಗಳಿಸಿರಿ.

ನಾನು ಇಂಥವರ ಮಗ, ನಾನು ಶ್ರೀಮಂತ, ನಾನು ಈ ಮನೆತನದವ, ನಮ್ಮ ದೇಶ ಪುಣ್ಯಭೂಮಿ, ಅಕ್ಬರನಾಳಿದ ದೇಶ ಅಶೋಕನ ರಾಜ್ಯವೆಂದುಕೊಂಡು ಹಿಂದಿನ ಮೆಗ್ಗುಳಿಕೆಯಿಂದ ಬಾಳಲು ಯತ್ನಿಸದಿರಿ. ಅಂಥವರ ಮಗ ಇಂಥವರ ನೆಂಟನೆಂದು ಹೇಳಿಕೊಳ್ಳಲು ಹೆಮ್ಮೆ ಪಡದಿರಿ. ಇನ್ನೊಬ್ಬರ ಬೆಳಕಿನಿಂದ ಬಾಳಲು ಯತ್ನಿಸದಿರಿ. ನಾನು ಇಂಥವರ ಮಗ. ಆದ್ದರಿಂದ ನನಗೆ ಹುದ್ದೆ ದೊರಿಯಬೇಕೆಂಬ ಆಸೆ ಇಡಬೇಡಿ. ನಿಮ್ಮ ನಿಮ್ಮ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳಿರಿ. ಯಾವ ಧನವ್ಯಕ್ತಿಯ ಸಂಬಂಧಿಕನಾದರೂ ನಮ್ಮ ಕಾಲಿನ ಮೇಲೆ ನಾವು ನಿಲ್ಲಲು ಕಲಿಯದಿದ್ದರೆ ಜೀವನ ವ್ಯರ್ಥ. ಆದ್ದರಿಂದ ಸ್ವಾವಲಂಬಿಗಳಾಗಿರಿ.

ನನ್ನ ಉದ್ಯೋಗದ ಅವಧಿ ಮುಗಿದು ಬರುವ ಜನವರಿಯಿಂದ ಇಲ್ಲಿಗೆ ಬರುವೆನು. ಆಗ ನಿಮ್ಮೊಡನೆ ಇನ್ನೂ ಹೆಚ್ಚಾಗಿ ಬೆರೆಯುವ ಅವಕಾಶವು ನನಗೆ ದೊರೆಯಬಹುದೆಂದು ಭಾವಿಸುತ್ತೇನೆ'.

ರಾಯಲಸೀಮಾ ಬರಗಾಲ ನಿಧಿ.

	ರೂ.
ವೀರಾಜಪೇಟೆ ಬಾರುಪತ್ತೆಗಾರರಿಂದ	[illegible]
ಶ್ರೀ ಎ ಸಿ ತಿಮ್ಮಯ್ಯ	[illegible]
ಶ್ರೀ ಜಿ ಎಂ ಮಂಜುನಾಥಯ್ಯ	[illegible]
ಅಮ್ಮತ್ತಿ ಬಾರುಪತ್ತೆಗಾರರ ಮೂಲಕ	೨೦೦
ಅಮ್ಮತ್ತಿ ಸಬ್ ಕಮಿಟಿಯಿಂದ	೨೦೦
ಶ್ರೀ ಬಿ ಹಚ ದಾಸಪ್ಪ	[illegible]
ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಸ್ಟಾಫ್	[illegible]
ವೀರಾಜಪೇಟೆ ಕೋ ಫೆಡರೇಶನ್‌ನಿಂದ	೧೦೦
ಮಡಿಕೇರಿ ಪೊಲೀಸ್ ಸ್ಟೇಷನ್ ಸ್ಟಾಫ್	[illegible]
ವೀರಾಜಪೇಟೆ ,, ,,	[illegible]
ಪೊನ್ನಂಪೇಟೆ ,, ,,	[illegible]
ನಾಪೋಕ್ಲು ,, ,,	[illegible]
ಸುಂಟಿಕೊಪ್ಪ ,,	[illegible]
ಸೋಮವಾರಪೇಟೆ ,,	[illegible]
ಪೊಲೀಸ್ ಟ್ರೈನಿಂಗ್ ಸ್ಕೂಲ್	[illegible]
ನಾಪೋಕ್ಲು ಟೌನ್	[illegible]
ನಾಪೋಕ್ಲು ಹೈಸ್ಕೂಲು	[illegible]
ನಾಪೋಕ್ಲು ಬಾರುಪತ್ತೆಗಾರರ ಮೂಲಕ	[illegible]
ಫಾರೆಸ್ಟ್ ಡಿಪಾರ್ಟ್‌ಮೆಂಟ್	[illegible]
ಶ್ರೀ ಎಸ್. ಎಸ್. ರಾಮಮೂರ್ತಿ	[illegible]
ಪೊಲೀಸ್ ಆಫೀಸ್ ಸ್ಟಾಫ್	[illegible]
ಕೋ. ಸೊ. ರಿಜಿಸ್ಟ್ರಾರರ ಮೂಲಕ	[illegible]
ಡಾ. ವೆಂಕಟಸುಬ್ಬಯ್ಯ	[illegible]
ಗಾಳಿಬೀಡು ದಸರ ಫಂಡಿನ	೧೦
ಶ್ರೀ ಡಿ. ಎಸ್. ನಿರುವಾಣಪ್ಪ	೧೦
ಎಲೆಕ್ಷನ್ ಡಿಪಾರ್ಟ್‌ಮೆಂಟ್	[illegible]
ಶ್ರೀ ಎಂ. ಸಿ. ಮುತ್ತಣ್ಣ	[illegible]
ಫಾರೆಸ್ಟ್ ಕನ್ಸರ್ವೇಟರ್	[illegible]
ಶ್ರೀ ಕೆ. ಜಿ. ಬೆಳ್ಳಪ್ಪ	[illegible]
ಟ್ರೆಜರಿ ಆಫೀಸಿನ	[illegible]
ಶ್ರೀ ಸಿ ಎಂ. ಪೂಣಚ್ಚ	[illegible]
ಸೋಮವಾರಪೇಟೆ ಬಾರುಪತ್ತೆಗಾರರ ಮೂಲಕ	[illegible]
ವೀರಾಜಪೇಟೆ ಮುನ್ಸಿಫರ ಸ್ಟಾಫ್	[illegible]
ಉ. ಕೊ. ಮುನ್ಸಿಫ್ ಕೋರ್ಟ್ ಸ್ಟಾಫ್	೧೦
ವೀರಾಜಪೇಟೆ [illegible]	[illegible]
ಶ್ರೀ ಪಿ. ಬಿ. ಕಾರ್ಯಪ್ಪ	[illegible]
ಶ್ರೀ ಜಿ. ಸಿ. ಸುಬ್ಬಯ್ಯ	[illegible]
ಶ್ರೀ ಸಿ. ಎಂ. ಪಾಲಯ್ಯ	[illegible]
[illegible] ಆಫೀಸ್ ಸ್ಟಾಫ್	[illegible]
ಶ್ರೀ ಎಂ. ಎಸ್. ಅಪ್ಪಯ್ಯ	[illegible]
ಸಿವಿಲ್ ಸರ್ಜನರ ಮೂಲಕ	[illegible]
ಪೊಲೀಸ್ ಸ್ಪೆಷಲ್ ವಿಭಾಗದಿಂದ	[illegible]
ಶ್ರೀ ಎಂ. ಎಸ್. ಕಾಳಪ್ಪ	[illegible]
[illegible]	[illegible]
ಶ್ರೀ ಕೆ ಬಿ ಈರಪ್ಪ	[illegible]
[illegible] ಕಂಪನಿ	[illegible]
ಶ್ರೀ ಕೆ. ಎಂ. ತಿಮ್ಮಯ್ಯ	[illegible]
ಶ್ರೀ ಸಿ. ಎಂ. ಕಂಗಪ್ಪ	[illegible]
ಶ್ರೀ ಎಂ. ಶ್ರೀನಿವಾಸರಾವ್	[illegible]
ಶ್ರೀ ಸಿ ಎಂ ರಾಮರಾವ್	[illegible]
ಬೆಲ್ಲಿಂಗ್ ಕೋ. ಸೊಸೈಟಿ ಮಡಿಕೇರಿ	[illegible]
ಡಾ. ಟಿ. ಬಿ ಮೊದಪ್ಪ	[illegible]
ಕೊಡಗು ಪಬ್ಲಿಕ್ ಸರ್ವೆಂಟ್ಸ್ ಕೋ. ಸೊ.	[illegible]
ಶ್ರೀ ಕೆ. ಸಿ. ಕುಟ್ಟಪ್ಪ	[illegible]
ಐದು ರೂ. ಗಳ ಒಳಗಿನ ಸಂಗ್ರಹವಾದದ್ದು	[illegible]
ಈ ಹಿಂದೆ ಪ್ರಕಟವಾದದ್ದು	[illegible]
ಒಟ್ಟು ರೂ.	[illegible]

ಶ್ರೀ ಕೆ. ಸಿ ಪೀತಾಂಬರರವರು,
"ಕೊಡಗು" ಏಜೆಂಟರು,
ಕೊಡ್ಲಿ ಪೇಟೆ.

ಮುಫತ್ತು.

ಈಗ ಹೊಸದಾಗಿ ಬಂದಿರುವ ನಮ್ಮ ಅಮೇರಿಕನ್ ಫೌಂಟನ್ ಪೆನ್ನುಗಳಿಗೆ ಆರ್ಡರು ಬುಕ್ ಮಾಡಲು ಏಜಂಟರು ಬೇಕಾಗಿದ್ದಾರೆ. ಇದಕ್ಕೆ ಕೃತಿಯಾಗಿ 15 ಯಾ 17 ಜ್ಯುವೆಲ್‌ಗಳುಳ್ಳ ಸ್ವಿಸ್ ಖಚಿತ ರಿಸ್ಟ್‌ವಾಚು, ಸೈಕಲ್, ಅಥವಾ ರೇಡಿಯೋವು ಮುಫತ್ತಾಗಿ ದೊರೆಯುವದು. ಇದು ಲಾಟರಿ, ಜೂಜು ಯಾ ಚಕ್ರಬಂಧ ಸ್ಪರ್ಧೆಯಲ್ಲ. ಒಂದು ಫೌಂಟನ್ ಪೆನ್ನಿನೂ ಅರ್ಜಿಯೊಡನೆ ಮುಫತ್ತು ಕಳಿಸಲಾಗು ಮತ್ತಿತರ ಮಾಹಿತಿಗಳಿಗೆ ಬರೆಯಿರಿ.

THE UNIVERSAL MUTUAL CORPORATION (K M)
P. O. Box No. 4013, BOMBAY—7.

(ಎರಡನೇ ಪುಟದಿಂದ ಸಾಗಿದ್ದು)

"ನಿಮಗೆಷ್ಟು ವಯಸ್ಸು?" ಎಂದು ಬ್ರಾಡ್ ಹೋರ್ಡರರು ಕೇಳಿದಕ್ಕೆ "೯೨ ವರ್ಷ" ಎಂದು ಡಾ. ಫಿಶ್‌ಬೀನರು ಉತ್ತರಿಸಿದರು.

ಲಾರ್ಡ್ ಹೋರ್ಡರರು ಡಾ. ಫಿಶ್‌ಬೆನ್ನರ ನಾಡಿಯನ್ನು ಪರೀಕ್ಷಿಸಿ "ನೀವು ನೂರುವರುಷ ಬಾಳುವಿರಿ" ಎಂದು ಉದ್ಗರಿಸಿದರು.

ಡಾ ಫಿಶಾಬೇನರಿಗೆ ಅತ್ಯಂತ ಆಶ್ಚರ್ಯವಾಗಿ "ನಿಮಗೆ ಹೇಗೆ ಗೊತ್ತು?" ಎಂದು ಕೇಳಿದರು.

"ಯಾಕೆಂದರೆ ನೀವು ಅಚಲ ಚಿತ್ತರಾಗಿರುವಿರಿ" ಎಂದು ಹೇಳಿದರಂತೆ.

"ಆ ಅಚಲ ಚಿತ್ತವು ಅಥವಾ ಸ್ಥಿತಪ್ರಜ್ಞತ್ವವು ಹೇಗೆ ಪ್ರಾಪ್ತವಾಗುವುದು." ಡಾ. ಫಿಶ್‌ಬೇನರು ಈ ಪ್ರಶ್ನೆಗೆ ಮುಂದಿನಂತೆ ಉತ್ತರ ಕೊಟ್ಟರು.

ನೀವು ಸದಾ ಹಸನ್ಮುಖಿಗಳಾಗಬೇಕು. ಮತ್ತು ಸ್ವಭಾವತಃವಾಗಿ ನಗಬೇಕು. ಜನರು ನೂಪುಕೊಂಡು ಘಟನೆಯನ್ನು ಕುತುಹಲಗ್ರಚಿತ್ತರಾದಾಗ ನೀವು ಆ ಸನ್ನಿವೇಶದೊಳಗಿನ ವಿನೋದಕರ ಅಂಶಗಳನ್ನು ಮಾತ್ರ ಗ್ರಹಿಸುವ ಅಭ್ಯಾಸವನ್ನಿಟ್ಟುಕೊಳ್ಳಬೇಕು. ಅಂಥ ಪ್ರಸಂಗಗಳಲ್ಲಿ ಕೈಲಾಗು ಕಳೆಕೊಂಡೊಳ್ಳದೆ ಮನಸಾರೆ ನಕ್ಕು ಬಿಡಿರಿ. ಆದರೆ ಗಂಡಾಂತರವನ್ನು ಎದುರಿಸುವ ಪ್ರಸಂಗವೇ ಬಂದಲ್ಲಿ ಅದನ್ನು ತಪ್ಪಿಸಿಕೊಳ್ಳಲು ಹವಣಿಸದೆ ಸ್ವಸ್ಥಚಿತ್ತದಿಂದ ಅದನ್ನೆದುರಿಸಿರಿ.

ಯಾರಾದರೂ ನಿಮ್ಮೊಡನೆ ಹುಚ್ಚುಚ್ಚಾಗಿ ಮತ್ತು ಅಸಂಬದ್ಧ ಚರ್ಚೆಯನ್ನು ನಡೆಸಿದರೆ ಅದರಿಂದ ದೂರವಾಗಿರಿ. ಅಂಥ ಮೂರ್ಖರ ಸಂಗಡ ವಾದಿಸದೆ ಅಲ್ಲಿಂದ ಹೊರಟು ಹೋಗಿರಿ.

ಸತ್ಯ ಸಂಗತಿಗಳನ್ನು ಅರಿತುಕೊಳ್ಳಬಹುದಾದ ಚರ್ಚೆ ಇದ್ದರೆ ಅದರಲ್ಲಿ ಭಾಗವಹಿಸಿರಿ. ಆದರೆ ಗೊತ್ತುಗುರಿಗಳಿಲ್ಲದ ಗೊಡ್ಡು ಹರಟೆಯಲ್ಲಿ ಮಾತ್ರ ಕಾಲಹರಣ ಮಾಡಬೇಡಿರಿ. ಹಾಗೆ ಮಾಡುವುದರಿಂದ ನಿಮ್ಮ ರಕ್ತದ ಒತ್ತಡವು ಹೆಚ್ಚಾಗುವುದು. ಅದರಿಂದ ನಿಮ್ಮ ಚಿತ್ತಸ್ವಾಸ್ಥ್ಯ ಕೆಡುವುದು.

ನೀವು ಗಟ್ಟಿಯಾಗಿ ಕೂಗಿ ಮಾತಾಡಿದರೆ ನಿಮ್ಮ ರಕ್ತಾಭಿಸರಣಕ್ಕೆ ಮಾತ್ರ ಕೇಡುಂಟಾಗುವುದು. ಅದರೆ ನೀವು ಯಾರ ಮೇಲೆ ರೇಗಿರುವಿರೋ ಅವನಿಗೇನೂ ಅಪಾಯವಾಗಲಾರದು. ಅದ್ದರಿಂದ ಕೂಗ ಬೇಡಿರಿ.

ಸಣ್ಣ ಪುಟ್ಟ ಘಟನೆಗಳನ್ನು ನಗೆಮೊಗದಿಂದ ಸ್ವಾಗತಿಸಿರಿ. ಅವುಗಳಿಂದ ನಿಮಗೆ ವೇದನೆಯಾಗ ಬಹುದಾದರೂ ಶಾಂತಿಯಿಂದ ಅವೆಲ್ಲವುಗಳನ್ನು ಸಂಗ್ರಹಿಸಿರಿ. ಮತ್ತು ನಿಮ್ಮ ಮನಸ್ಸಿಗೆ ವಿರುದ್ಧವಾಗಿ ಏನಾದರೂ ನಡೆದರೆ ಅದರಿಂದ ಎಂದಿಗೂ ಕೋಪಿಸಬೇಡಿರಿ. ನಿಮ್ಮ ರಕ್ತದ ಒತ್ತಡಕ್ಕೆ ಅದು ತೀರಾ ಅಪಾಯಕರ.

ಅಂದರೆ ನೀವು ನಿಷ್ಕ್ರಿಯರಾಗಿ ಜೀವನ ಸಾಗಿಸಬೇಕೆಂದು ಇದರ ಅರ್ಥವಲ್ಲ. ಆದರೆ ನೀವು ಚಿತ್ತಕ್ಷೋಭವಾಗದಿದ್ದರೆ, ನೀವು ಸ್ಥಿತಪ್ರಜ್ಞರಾದರೆ ನೀವು ಸಹಜವಾಗಿ ಬಹಳವನ್ನು ಸಾಧಿಸಬಲ್ಲಿರಿ.

ಇದೇ ದೀರ್ಘಾಯುಷ್ಯದ ಗುಟ್ಟು

ಲೆ. ಜ. ರಾಜೇಂದ್ರ ಸಿಂಹಜಿಯವರಿಗೆ ಭಾರತದ ಮುಖ್ಯ ಸೇನಾಧಿಪತ್ಯ

ಜನರಲ್ ಕೆ ಎಂ. ಕಾರ್ಯಪ್ಪನವರು ೧೯೫೩ನೇ ಜನವರಿಯಲ್ಲಿ ಭಾರತದ ಮುಖ್ಯ ಸೇನಾಪತಿತ್ವದಿಂದ ನಿವೃತ್ತರಾಗಲಿರುವುದರಿಂದ ಅವರ ಸ್ಥಾನಕ್ಕೆ ಲೆಫ್ಟಿನೆಂಟ್ ಜನರಲ್ ಮಹಾರಾಜ ರಾಜೇಂದ್ರಸಿಂಹಜಿ, ಡಿ ಎಸ್ ಓ. ಇವರನ್ನು ೧೯೫೩ನೇ ಜನವರಿ ೧೫ ರಿಂದ ನೇಮಿಸಲಾಗಿದೆಯೆಂದು ಭಾರತ ಸರಕಾರದ ಪ್ರಕಟಣೆ ಹೊರಟಿದೆ.

ಮುಖ್ಯ ಸೇನಾಪತಿ ಪದವಿಯನ್ನು ವಹಿಸಿಕೊಂಡ ನಂತರ ಲೆ ಜ ರಾಜೇಂದ್ರ ಸಿಂಹಜಿಯವರಿಗೆ ಫುಲ್ ಜನರಲ್ ತರಗತಿಯನ್ನು ಕೊಡಲಾಗುವದೆಂದು ತಿಳಿಯುತ್ತದೆ. ರಾಜೇಂದ್ರಸಿಂಹಜಿಯವರು ಈಗ ದಕ್ಷಿಣ ಭಾಗದ ಸೇನೆಯ ಅಧಿಪತಿಯಾಗಿದ್ದಾರೆ.

ಲೆ. ಜ ಶ್ರೀ ನಾಗೇಶರನ್ನು ಸಶ್ಚಿಮ ಸೇನೆಯ ಅಧಿಪತ್ಯದಿಂದ ದಕ್ಷಿಣ ಸೇನೆಯ ಅಧಿಪತ್ಯಕ್ಕೆ ವರ್ಗಾಯಿಸಲಾಗುವುದೆಂದೂ ಇತರ ಬದಲಾವಣೆಗಳೂ ಆಗಲಿವೆಯೆಂದೂ ತಿಳಿಯುತ್ತದೆ.

ಲೆ ಜ. ರಾಜೇಂದ್ರಸಿಂಹಜಿಯವರ ಜೀವನ ಕಥೆ.

ಲೆ. ಜ ರಾಜೇಂದ್ರ ಸಿಂಹಜಿಯವರು ಭಾರತ ಸೈನ್ಯದ ಹಿರಿಯ ಅಧಿಕಾರಿಗಳಲ್ಲಿ ಎರಡನೆಯವರು. ೧೯೨೧ರಲ್ಲಿ ಅವರು ಭಾರತೀಯ ಸೈನ್ಯದಲ್ಲಿ ಕಮಿಶನ್ ಪಡೆದು ಮೂರು ವರ್ಷವೊ ೨ನೇ ರಾಯಲ್ ಲ್ಯಾನ್ಸರ್ಸ್ ದಳವನ್ನು ಸೇರಿದರು. ೧೯೪೧ರಲ್ಲಿ ಸ್ಕ್ವಾಡ್ರನ್ ಕಮಾಂಡರರಾಗಿ ಅವರು ಉತ್ತರ ಆಫ್ರಿಕಾಕ್ಕೆ ಹೋದರು.

೧೯೪೧ ಏಪ್ರಿಲ್‌ನಲ್ಲಿ ೩ನೇ ಭಾರತೀಯ ಮೋಟಾರು ಬ್ರಿಗೇಡ್ ಮತ್ತು ೨ನೆ ರಾಜ ಲ್ಯಾನ್ಸರ್ ಇವೆರಡನ್ನೂ ಮೋಚಲಿ ಎಂಬಲ್ಲಿ ಎಷ್ಟೋ ಅಧಿಕ ಸಂಖ್ಯೆಯ ಜರ್ಮನ್ ಮತ್ತು ಇಟಾಲಿಯನ್ ಬಲಗಳು ಸುತ್ತುಗಟ್ಟಿದವು ಬೇರೆ ದಾರಿಗಾಣದೆ ಸಿಕ್ಕಿಬಿದ್ದ, ಈ ಸೈನ್ಯಗಳು ಶತ್ರು ವ್ಯೂಹವನ್ನು ಭೇದಿಸಿ ಹೊರಬಿದ್ದು ಹೋಗಬೇಕೆಂದು ನಿರ್ಧರಿಸಿದವು.

ಆಗ ಮೇಜರ್ ದರ್ಜೆಯಲ್ಲಿದ್ದ ರಾಜೇಂದ್ರ ಸಿಂಹಜಿಯವರ ತಮ್ಮ ರೆಜಿಮೆಂಟಿನ ಎರಡು ಸ್ಕ್ವಾಡ್ರನ್‌ಗಳೊಂದಿಗೆ ಹಿಂಭಾಗದ ರಕ್ಷಣೆಗೆ ನಿಂತರು. ರೆಜಿಮೆಂಟಿನ ಮುಖ್ಯ ಪಡೆ ಹೊರಬಿದ್ದು ಹೋಯಿತು. ಅಷ್ಟರಲ್ಲಿ ಅವರ ರೆಜಿಮೆಂಟಿನ ಬಹಳ ಭಾಗವನ್ನು ಜರ್ಮನರ ಟ್ಯಾಂಕುಗಳು ಪರಾಸ್ತಗೊಳಿಸಿದ್ದವು. ರಾಜೇಂದ್ರ ಸಿಂಹಜಿಯ ಸ್ಕ್ವಾಡ್ರನ್ನಿಗೆ ಮಾತ್ರ ಅಷ್ಟು ಧಕ್ಕೆಯಾಗಿರಲಿಲ್ಲ

ಆಗಲೇ ಅವರು ಧೈರ್ಯದಿಂದ ಶತ್ರುವಿನ ತೋಪುಖಾನೆಗಳನ್ನು ಧಿಕ್ಕರಿಸಿ ತಮ್ಮ ಸೈನಿಕರೊಡನೆ ಮುನ್ನುಗ್ಗಿ ಜರ್ಮನರ ಮೇಲೇರಿ ಹೋಗಿ ವ್ಯೂಹವನ್ನೊಡೆದು ಹೊರಬಿದ್ದರು. ಬೆನ್ನಟ್ಟಿ ಬಂದ ಶತ್ರುಗಳನ್ನು ಹೊಡೆದೋಡಿಸಿ ಅವರೂ ಅವರ ಸೈನಿಕರೂ ಗುಡ್ಡದ ಮರೆಯಲ್ಲಿ ಅವಿತುಕೊಂಡರು. ರಾತ್ರಿಯಾದ ಮೇಲೆ ಅವರು ಮುಂದೆ ಸಾಗಿದರು. ಆದರೆ ಭದ್ರಸ್ಥಳಕ್ಕೆ ಹೋಗಿ ಸೇರುವ ಮೊದಲು ಒಂದೆರಡು ಬಾರಿ ಶತ್ರುಗಳೊಡನೆ ತಿಕ್ಕಾಟವಾಗದಿರಲಿಲ್ಲ. ಅಂತೂ ರಾಜೇಂದ್ರ ಸಿಂಹಜಿಯವರು ೬೦ ಜನ ಶತ್ರುಗಳನ್ನು ಸೆರೆ ಹಿಡಿದು ಸಂಗಡ ಕರೆದುಕೊಂಡು ಸುರಕ್ಷಿತ ಸ್ಥಳ ಸೇರಿದರು. ಈ ದಿಟ್ಟ ಮುಂದಾಳ್ತನಕ್ಕಾಗಿ ಅವರಿಗೆ ಡಿ. ಎಸ್ ಓ. ಬಿರುದು ದೊರೆಯಿತು.

ಅಕ್ಟೋಬರ ೧೯೪೧ ರಲ್ಲಿ ಭಾರತಕ್ಕೆ ಮರಳಿದ ಅವರಿಗೆ ಸಾರ್ವಜನಿಕ ಸಂಪರ್ಕದ ಡೆಪ್ಯುಟಿ ಡೈರೆಕ್ಟರರ ಪದವಿಯಿತ್ತು ಅನೇಕ ವಿಶೇಷ ಕಾರ್ಯದ ಮೇಲೆ ಕಳುಹಿಸಲಾಯಿತು. ೧೯೪೩ರಲ್ಲಿ ಅವರು ೨ನೇ ರಾಯಲ್ ಲ್ಯಾನ್ಸರ್ಸಿನ ಕಮಾಂಡರಾದರು. ೧೯೪೫ ಮೇಯಲ್ಲಿ ಅವರು ಮಿಲಿಟರಿ ಅಟ್ಯಾಚೆಯಾಗಿ ಪುನಃ ಅಮೇರಿಕಕ್ಕೆ ಹೋದರು.

೧೯೪೬ ಸೆಪ್ಟೆಂಬರದಲ್ಲಿ ಅವರಿಗೆ ಬ್ರಿಗೇಡಿಯರ್ ರಾಗಿ ಬಡತಿ ಸಿಕ್ಕಿತು ಜೂನ್ ೧೯೪೭ರಲ್ಲಿ ಭಾರತದ ಕವಚ ದಳದ ಡೈರೆಕ್ಟರರಾದರು.

ಸ್ವಾತಂತ್ರ್ಯ ಬಂದಾಗ ಅವರನ್ನು ಮೇಜರ್ ಜನರಲ್ ಪದಕ್ಕೇರಿಸಿ ಡೆಲ್ಲಿ ಮತ್ತು ಪೂರ್ವ ಪಂಜಾಬ್ ಭಾಗದ ಅಧಿಪತ್ಯವನ್ನು ಕೊಡಲಾಯಿತು. ಆ ಭಾಗದಲ್ಲಿ ಗಲಭೆಗಳಿದ್ದಾಗ ಅವರು ಸುಸಂಸ್ಕೃತ ಸೇವೆ ಮಾಡಿ ಕೀರ್ತಿ ಗಳಿಸಿದರು. ಲೆ ಜ ಕಾರ್ಯಪ್ಪನವರು ಪಶ್ಚಿಮಾಧಿಪತ್ಯವನ್ನು ಬಿಟ್ಟುಕೊಟ್ಟು ಮುಖ್ಯ ಸೇನಾಪತಿಗಳಾದಾಗ ಲೆ. ಜ ರಾಜೇಂದ್ರ ಸಿಂಹಜಿಯವರು ಆ ಸ್ಥಾನಕ್ಕೆ ಬಂದರು. ೧೯೫೦ ಮೇಯಲ್ಲಿ ಅವರು ಭಾರತದ ೩ ಸೈನ್ಯ ವಿಭಾಗಗಳಲ್ಲಿ ಹಿರಿದಾದ ದಕ್ಷಿಣ ಸೇನೆಯ ಅಧಿಪತ್ಯ ವಹಿಸಿದರು. ಅವರ ನೇತೃತ್ವದಲ್ಲಿಯೇ ಹೈದರಾಬಾದು ಪೊಲೀಸ್ ಕ್ರಮ ಕ್ಷಿಪ್ರಫಲದಾಯಕವಾಯಿತು.

ನೀರಿನ ಮೇಲೆ ನಿಂತ ಗಾಂಧೀಜಿ!

ಹುಬ್ಬಳ್ಳಿಯ ಒಬ್ಬ ಶಾಲಾ ಮಾಸ್ತರರ ಕಲಾಕೌಶಲ್ಯವಿದು. ತಟ್ಟೆಯೊಂದರಲ್ಲಿ ತುಂಬಿದ ನೀರಿನ ಮೇಲೆ ಇದ್ದಿಲು ಪುಡಿಯನ್ನು ಚೆಲ್ಲಿ ಅದು ನೀರಿನ ಮೇಲೆ ಸಮವಾಗಿ ಹರಡಿ ನಿಂತಾಗ, ಅದರ ಮೇಲೆ ರಂಗವಲ್ಲಿಯ ಪುಡಿಯನ್ನು ಸೇರಿಸಿ ಗಾಂಧೀಜಿಯವರನ್ನು ಚಿತ್ರಿಸಿದ ಶ್ರೀ ೩.೫.ಬಾಂಡೆ ಯರು ತಮ್ಮ ರಂಗವಲ್ಲಿಯ ಚಿತ್ರಣಕ್ಕೊಂದು ವೈಶಿಷ್ಟ್ಯವನ್ನು ಸಂಪಾದಿಸಿಕೊಂಡರು.

ಇದುವರೆಗೂ ನೆಲದ ಮೇಲೆ ಅನೇಕ ಬಣ್ಣದ ರಂಗವಲ್ಲಿಯನ್ನು ಚೆಲ್ಲಿ ಹಲವು ಬಗೆಯ ವಿಭೂತಿಗಳನ್ನು ಚಿತ್ರಿಸುತ್ತಿದ್ದರು. ಇದನ್ನು ನೋಡಿಯೇ ಬೆರಗಾಗಿದ್ದ ಜನರು ನೀರಿನ ಮೇಲೆ ಅಚ್ಚಳಿಯದ ಗಾಂಧೀಜಿಯನ್ನು ಸಜೀವ ಮೂರ್ತಿಯಾಗಿ ಚಿತ್ರಿಸಿದ ಇವರ ಕೈಚಳಕವನ್ನು, ಕಲೆಯ ಜ್ಞಾನವನ್ನು ಕಳೆದ ಶುಕ್ರವಾರದಿಂದ ಸೋಮವಾರದ ವರೆಗೆ ಹುಬ್ಬಳ್ಳಿಯಲ್ಲಿ ನೋಡಿ ಹೊಗಳಿದರು.

ನೀರಿನ ಮೇಲಿದ್ದಂತೆಯೇ ಇದರ ಛಾಯಾಗ್ರಹಣವನ್ನು ಮಾಡಿ ನ್ಯಾಶನಲ್ ಫೋಟೋ ಸ್ಟುಡಿಯೋದವರು ಪತ್ರಿಕೆಯಲ್ಲಿ ಹಲವು ಬಗೆಯಿಂದ ಚಿತ್ರಿಸಿದ ಸುದ್ದಿಗೊಂದು ರೂಪವನ್ನು ತಂದು ಕೊಟ್ಟರು

ಬಾಂಡ್ರೆಯವರ ಈ ನವೀನ ರೀತಿಯ ಕಲೆಗೆ—ಕೌಶಲ್ಯಕ್ಕೆ ಪ್ರೋತ್ಸಾಹ ಸಿಕ್ಕದನ್ನು ಹೆಚ್ಚು ಹೆಚ್ಚು ವರ್ಧಿಸುವುದು.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :— ವೀರಾಜಪೇಟೆ.

ಶಾಖೆ:— ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12ನೇ ನಂಬರಿನ ಒಂಟಿ ಮತ್ತು ಜೋಡು ನಳಿಗೆಯ ಕೋವಿಗಳು.
3. 12, 16 ಮತ್ತು 20ನೇ ನಂಬರಿನ ತೋಟೆಗಳು, ಕೋವಿ ಮದ್ದು ಮತ್ತು ಕೇಪುಗಳು.
4. 9″ × 4″ ಮತ್ತು 8″ × 4″ ಕಬ್ಬಿಣದ ತೊಲೆಗಳು (Girders)
5. 8′ × 3′ × 24 (Gage) ಕಬ್ಬಿಣದ ತಗಡುಗಳು.
6. $1\frac{3}{4}$″ × $\frac{5}{16}$″ ಉಕ್ಕಿನ ಪಟ್ಟಿಗಳು (Spring steel flates)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು 'Special purchase permit' ಪಡೆಯಬೇಕಾಗಿದೆ.

ಎಂ. ಎಸ್. ಸೋಮಯ್ಯ, (ಗೌ ಕಾರ್ಯದರ್ಶಿ)

ಸಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್.)

ರಾಷ್ಟ್ರಪತಿಗಳ ಮೇಲ್ಪಂಕ್ತಿ ಮಿತವ್ಯಯದಲ್ಲಿ.

ಭಾರತದ ಅಧ್ಯಕ್ಷರ ನಿವಾಸವಾದ ರಾಷ್ಟ್ರಪತಿ ಭವನದಲ್ಲಿ ಹಲವು ರೀತಿಗಳಿಂದ ಮಿತವ್ಯಯ ಪ್ರಾರಂಭವಾಗಿದೆ. ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಮೊದಲಿಂದಲೂ ಸರಳ ಜೀವನವನ್ನು ಮೆಚ್ಚಿದವರು. ಅವರು ೧೯೫೦ ಜನವರಿಯಲ್ಲಿ ಅಧ್ಯಕ್ಷರಾದ ಕೂಡಲೆ ತಮ್ಮ ಸಂಬಳದಲ್ಲಿ ರಾಜ್ಯಘಟನೆಯಲ್ಲಿ ವಿಧಿಸಲ್ಪಟ್ಟ ೧೦,೦೦೦ ರೂ. ಗಳಲ್ಲಿ ಮೂರನೇ ಒಂದರಷ್ಟು ಕಡಿತ ಮಾಡಲು ಕೇಳಿಕೊಂಡರು. ಕರಗಳನ್ನು ಕಳೆದ ನಂತರ ಅವರಿಗೆ ೪೦೦೦ ಕ್ಕೆ ಬಂತು.

ಈಗ ಅವರು ಪುನಃ ರಾಷ್ಟ್ರಪತಿಗಳಾಗಿ ಆರಿಸಲ್ಪಟ್ಟ ಮೇಲೆ ೧೯೫೭ ಮೇ ೧೩ ರಿಂದ ವೇತನವನ್ನು ಸಂಬಳದಲ್ಲಿ ನೂರಕ್ಕೆ ೪೦ರಷ್ಟು ಕಡಿತ ಮಾಡಬೇಕೆಂದು ಮಂತ್ರಿಮಂಡಳಕ್ಕೆ ಬಿನ್ನವಿಸಿಕೊಂಡರು. ಇದರಿಂದ ಅವರ ಸಂಬಳ ಆರು ಸಾವಿರಕ್ಕಿಳಿದು ಕರಗಳನ್ನು ವಜಾ ಮಾಡಿದ ಮೇಲೆ ರೂ. ೨,೫೦೦ ಮಾತ್ರ ಅವರ ಕೈಗೆ ಬರುವಂತಾಗಿದೆ.

ಬಹುಶಃ ಮನಸಿಲ್ಲದ ಮನಸಿನಿಂದ ರಾಷ್ಟ್ರಪತಿ ರಾಜೇಂದ್ರ ಬಾಬು ಭಾರೀ ಕಟ್ಟಡದ ಅರಮನೆಯಲ್ಲಿ ವಾಸಿಸಬೇಕಾಗಿದೆ. ಅವರು ಅದರಲ್ಲಿ ಬರೀ ಎರಡು ಕೋಣೆಗಳನ್ನು ತಮಗಾಗಿ ಇಟ್ಟುಕೊಂಡಿದ್ದಾರೆ. ಅದರ ೨೭೮ ಕೋಣೆಗಳಲ್ಲಿ ಭಾರತ ಸರಕಾರದ ಬೇರೆ ಬೇರೆ ಕಚೇರಿಗಳಿವೆ. ಅತ್ಯಾಕರ್ಷಕವಾದ ೫೬ ಕೋಣೆಗಳಲ್ಲಿ ರಾಷ್ಟ್ರೀಯ ವಸ್ತು ಪ್ರದರ್ಶನಗಳಿವೆ. ೨೫ ಕೋಣೆಗಳು ಅತಿಥಿಗಳಿಗೆ ಮೀಸಲಾಗಿದ್ದು ಮತ್ತೊಂದು ಕೋಣೆಗಳಲ್ಲಿ ಅಧ್ಯಕ್ಷರ ಕುಟುಂಬದ ಜನರು ವಾಸಿಸುತ್ತಾರೆ. ಉಳಿದೆಲ್ಲ ಕೋಣೆಗಳನ್ನು ಸರಕಾರಿ ಆಸ್ಪತ್ರೆ ಮೊದಲಾದವುಗಳಿಗೆ ಬಿಟ್ಟುಕೊಡಲಾಗಿದೆ. ಕೆಲ ಕೋಣೆಗಳನ್ನು ಮಾತ್ರ ಮನೋರಂಜನೆ ಮತ್ತು ಸ್ವಾಗತ ಭವನಗಳಾಗಿ ಮೀಸಲಿಟ್ಟಿದೆ.

[illegible], ಸಿಮ್ಲಾದಲ್ಲಿಯೂ ರಾಷ್ಟ್ರಪತಿ ಭವನದ ಇತರ ಎಲ್ಲ ಭಾಗಗಳನ್ನು ಬಾಡಿಗೆ ಕೊಟ್ಟು ಬಿಡಲಾಗಿದೆ. ಇದರಿಂದ ವರ್ಷಕ್ಕೆ ಲಕ್ಷ ರೂಪಾಯಿಯಷ್ಟು ಬಾಡಿಗೆ ಬರುತ್ತಿದೆ.

ರಾಷ್ಟ್ರಪತಿ ಭವನದ ತೋಟ ಜಗತ್ತಿನಲ್ಲೆಲ್ಲ ಸುಂದರವಾದ ಉದ್ಯಾನಗಳ ಸಾಲಿನಲ್ಲಿ ಸೇರುತ್ತದೆ. ಅದರ ಪೋಷಣೆಗೆ ಕೇವಲ ಆವಶ್ಯವಿದ್ದಷ್ಟೇ ಮಾಲಿಗಳನ್ನಿಟ್ಟುಕೊಳ್ಳಲಾಗಿದೆ. ಇತಿಹಾಸದಲ್ಲಿ ಇದೇ ಮೊದಲ ಬಾರಿ ಈ ಭವನದ ಆವಾರದಲ್ಲಿರುವ ಕಡಭೂಮಿಯಲ್ಲಿ ಆಹಾರ ಬೆಳೆಯಲಾಗುತ್ತಿದೆ. ಇದರಿಂದ ಸರಕಾರಕ್ಕೆ ತುಂಬ ಲಾಭವಿದೆ.

ದೇಶದ ಆಳಿಕೆ ಪ್ರಜಾಸತ್ತಾತ್ಮಕವಾಗಿರುವುದರಿಂದ ಅಧ್ಯಕ್ಷರಿಗೆ ಬರುವ ಪತ್ರವ್ಯವಹಾರದ ಪ್ರಮಾಣ ಮಿತಿಮೀರಿ ಬೆಳೆದಿದೆ. ಆದರೂ ಸಾಧ್ಯವಿದ್ದಷ್ಟು ಮಟ್ಟಿಗೆ ಸಿಬ್ಬಂದಿಯನ್ನು ಕಡಿಮೆ ಮಾಡಲಾಗಿದೆ. ಆದರೆ ಪತ್ರಗಳ ಮತ್ತು ಕಡತಗಳ ಮೇಲೆ ಶೇಕಡಾ ಬೆಳೆದಿರುವ ಮೂಲಕ ವೆಚ್ಚವನ್ನು ವಿಶೇಷವಾಗಿ ಇಳಿಸಲು ಶಕ್ಯವಾಗಿಲ್ಲ.

ಅಧ್ಯಕ್ಷರ ಸ್ವಂತ ಆವಶ್ಯಕತೆಗಳು ತೀರ ಕಡಿಮೆ. ಆದರೆ ಅವರಿಗೆ ಬೇರೊಂದು ವಸತಿಯನ್ನು ಬಿಡಾರವಿತ್ತರೂ ಅದರಲ್ಲಿ ಬದಲಾವಣೆಗಳನ್ನು ಮಾಡದೆ ಸಾಧ್ಯವಿಲ್ಲ. ಮೇಲಾಗಿ ಭಾರತದ ಅಧ್ಯಕ್ಷರ ಗೌರವಕ್ಕೆ ಸರಿಹೋದ ನೀತಿಯಿರುವುದೂ ಅಗತ್ಯವಾದುದರಿಂದ ವೆಚ್ಚವನ್ನು ಇನ್ನೂ ಇಳಿಸುವುದು ಸಾಧ್ಯವಿಲ್ಲ.

ಕೇರಳದ ಭೂದಾನ ಯಾತ್ರೆ.

ಎಲ್ಲಾ ಕಮ್ಯುನಿಸ್ಟೇತರ ಮುಖಂಡರಿಂದೊಡಗೂಡಿದ ಸಮಿತಿಯೊಂದು ದಕ್ಷಿಣ ಕನ್ನಡದಿಂದ ಕನ್ಯಾಕುಮಾರಿವರೆಗೆ ಕಾಲ್ನಡಿಗೆಯಲ್ಲೇ ಸಮಗ್ರ ಕೇರಳದ ಭೂದಾನ ಯಾತ್ರೆ ಕೈಕೊಳ್ಳಲಿದೆಯೆಂದು ಕೇರಳದ ಪ್ರದೇಶ ಕಾಂಗ್ರೆಸ್ ಮುಖಂಡರು ಪಾರ್ಲಿಮೆಂಟ್ ಸದಸ್ಯರಾಗಿರುವ ಶ್ರೀ ಕೆ. ಪಿ. ಮಾಧವನ್‌ನಾಯರ್‌ರವರು NAFEN ಪ್ರತಿನಿಧಿಗಳನ್ನು ಭೇಟಿಯಾದಾಗ ತಿಳಿಸಿದರು. ಭೂದಾನಕ್ಕೆ ಅರ್ಹರಿರುವ ಕೃಷಿಕರಿಗೆ ಹಂಚುವ ಬಗ್ಗೆ ಜಮೀನನ್ನು ಈ ಸಮಿತಿಯು ಸಂಗ್ರಹಿಸುವುದು.

ಈ ಸಮಿತಿಯಲ್ಲಿ ಕಮ್ಯುನಿಸ್ಟರು ವಿನಹ ಕಾಂಗ್ರೆಸ್, ಸೋಶಲಿಸ್ಟ್, ಕಿಸಾನ್ ಮಜದೂರ್ ಪ್ರಜಾಪಕ್ಷ ಮತ್ತು ಇತರ ಎಲ್ಲಾ ಸಮಾಜ ಸೇವಾ ಕಾರ್ಯಕರ್ತರು ಇರುವರು. ಸಮಿತಿಯ ನೇತೃತ್ವವನ್ನು ಶ್ರೀ ಶಂಕರರಾವ್ ದೇವರವರು ವಹಿಸುವರು. ಸಪ್ಟಂಬರ್ ತಾ ೧೫ ರಂದು ಈ ಯಾತ್ರೆ ಆರಂಭವಾಗುವುದು.

ವಿನೋಬಾರವರ ಆಶೀರ್ವಾದ

ಭೂದಾನ ಚಳವಳವನ್ನು ಆರಂಭಿಸಿದ ಆಚಾರ್ಯ ವಿನೋಬಾ ಭಾವೆಯವರ ಬೆಂಬಲವನ್ನು ಪಡೆಯಬೇಕೆಂದು ಈ ಯೋಜನೆಯ [illegible] ಆಸೆಯಿತ್ತು. ಆಚಾರ್ಯರು ಈ ಯೋಜನೆಯನ್ನು ಹರಸಿರುವರು. ಉತ್ತರ ಹಿಂದೂಸ್ಥಾನದಲ್ಲಿ ತಾನು ಕೈಕೊಳ್ಳಬೇಕಾದ ಅವಸರದ ಕಾರ್ಯಕ್ರಮಗಳು ಹಲವು ಇರುವುದರಿಂದ ದಕ್ಷಿಣದಲ್ಲಿ ಈ ಚಳವಳವನ್ನು ಉದ್ಘಾಟಿಸಲು ಮಲಬಾರದ ವರೆಗೆ ತಾವು ಬರಲು ಸಾಧ್ಯವಾಗದೆಂದು ವಿನೋಬಾರವರು ತಿಳಿಸಿದರು.

ಇಡೀ ಕೇರಳವನ್ನು ಕಾಲ್ನಡಿಗೆಯಲ್ಲೇ ಸಂಚರಿಸುವುದು ಈ ಶಿಷ್ಯಮಂಡಲದವರ ಉದ್ದೇಶವಾಗಿರುತ್ತದೆ. ಕೇರಳದ ಜನಸಂಖ್ಯೆ ಮತ್ತು ಹಂಚಲು ದೊರೆಯಬಹುದಾದ ಅತ್ಯಲ್ಪ ಜಮೀನಿನ ದೆಸೆಯಿಂದ ತಮಗೆ ದಾನರೂಪವಾಗಿ ಹೆಚ್ಚಿನ ಜಮೀನು ದೊರೆಯಬಹುದೆಂದು ತಾವು ನಿರೀಕ್ಷಿಸುತ್ತಿಲ್ಲವೆಂದೂ ಜಮೀನು ಇರದ ಬಡ ಮಂದಿಯ ಕಡೆಗೆ ಹೆಚ್ಚಿನ ಒಲವು ಮತ್ತು ಸಹಾನುಭೂತಿಗಳನ್ನು ಪ್ರದರ್ಶಿಸುವಂತೆ ಜನರಲ್ಲಿ ಸೌಹಾರ್ದ ಭಾವನೆಯನ್ನು ಉಂಟುಮಾಡುವುದೇ ತಮ್ಮ ಸಂಚಾರದ ಮುಖ್ಯ ಉದ್ದೇಶವೆಂದೂ ಈ ಉದ್ದೇಶ ಫಲಕಾರಿಯಾಗಬಹುದೆಂಬ ವಿಶ್ವಾಸ ತಮಗಿರುವುದಾಗಿಯೂ ಶ್ರೀ ನಾಯರರು ತಿಳಿಸಿರುತ್ತಾರೆ.

ಸದ್ಯದ ಅವಸರದ ಕಾರ್ಯಕ್ರಮಗಳು ಮುಗಿದ ಒಂದಿಷ್ಟು ಬಿಡುವು ದೊರೆತ ಕೂಡಲೇ ತಾವು ಕೇರಳ ಸಂದರ್ಶಿಸುವುದಾಗಿ ಆಚಾರ್ಯ ವಿನೋಬಾ ಭಾವೆಯವರು ಸಮ್ಮತಿಸಿರುವರೆಂದೂ ಅವರು ಹೇಳಿದ್ದಾರೆ.

ಟೆಲಿವಿಷನ್ !

'ಈ ದಿನಗಳಲ್ಲಿ ಹೆಚ್ಚೆಚ್ಚು ಆಭರಣಗಳ, ಸೀರೆಗಳ, ಟ್ರಾನ್ಸಿಸ್ಟರ್‌ಗಳ ಹಾಗೂ ಮೋಟಾರುಗಳನ್ನಿಟ್ಟುಕೊಳ್ಳಲು ಮಕ್ಕಳ ಸಂಖ್ಯೆಯನ್ನು ಕಡಿಮೆಮಾಡುವ ಆಂದೋಲನವು ಈಗ ಬೆಳೆಯುತ್ತಿದೆ' ಹೀಗೆಂದು ಮದ್ರಾಸಿನ ಮುಖ್ಯಮಂತ್ರಿ ಶ್ರೀ. ಸಿ. ರಾಜಗೋಪಾಲಾಚಾರಿಯವರು ಜಿಲ್ಲಾ ವೈದ್ಯಕೀಯ ಅಧಿಕಾರಿಗಳ ಸಭೆಯಲ್ಲಿ ಮಾತನಾಡುತ್ತಾ ಹೇಳಿದರು.

ಅವರು ಮುಂದೆ ಸಾಗಿ, 'ಮೇಲ್ವರ್ಗ ಹಾಗೂ ಮಧ್ಯಮ ವರ್ಗದವರಲ್ಲಿ ಮಕ್ಕಳಿಗಿಂತ ಇತರ ಸಾಧನ ಸಂಪತ್ತಿನ ಬಗ್ಗೆ ಹಂಬಲ ಹೆಚ್ಚುತ್ತಲಿದೆ. ಎಂತಹ ಮಕ್ಕಳ ಬರುವಿಕೆಯನ್ನು ತಾವು ತಡೆಗಟ್ಟುತ್ತಿರುವರೆಂಬುದು ಸಹ ಅವರಿಗೆ ಗೊತ್ತಾಗಿಲ್ಲ. ಜನರು ಕಡಿಮೆ ಮಕ್ಕಳು, ಹೆಚ್ಚೆಚ್ಚು ಸೀರೆಯೂ ಹಾಗೂ ಮೋಟಾರು ಕಾರುಗಳನ್ನು ಬೇಡುತ್ತಿದ್ದಾರೆ. ಸಂತತಿ ಸಂಯಮ ಹಾಗೂ ಕೌಟುಂಬಿಕ ಯೋಜನೆಯ ಬಗ್ಗೆ ಮಾತನಾಡಲು ಅವರು ಹೆಚ್ಚೆಚ್ಚು ಸೀರೆಗಳ ಹಾಗೂ ಮೋಟಾರು ಕಾರುಗಳನ್ನು ಕೇಳುವರು. ಇದು ಸರಿಯಾದುದೋ ಅಲ್ಲವೋ ಎಂಬುದು ನನಗೆ ನಿಶ್ಚಿತವಾಗಿ ತಿಳಿಯದಾಗಿದೆ. ಆದರೆ ಈ ಪ್ರವಾಹವನ್ನು ತಡೆಯುವ ಶಕ್ತಿ ನನಗೆ ಇದೆಯೆಂದು ಅನಿಸುವುದಿಲ್ಲ' ಎಂದರು.

ಮನರಂಜನೆ ಬೇಡ

ನೃತ್ಯ ಹಾಗೂ ಇತರ ಮನರಂಜನೆಯ ಕೂಟಗಳನ್ನು ಮುಚ್ಚಬೇಕೆಂದೂ, ಚಲಚಿತ್ರ ಪ್ರದರ್ಶನಗಳನ್ನು ಪರಿಮಿತಗೊಳಿಸಬೇಕೆಂದೂ ಮುಸ್ಲಿಂ ಬಾಂಧವ್ಯ ಸಂಸ್ಥೆಯ ಧುರೀಣ ಹಸನ ಹೊದಿಬೀ ಮುರ್ಶಿದರು ಈಜಿಪ್ತ ಸರಕಾರಕ್ಕೆ ಕೇಳಿಕೊಂಡಿದ್ದಾರೆ.

ಈಜಿಪ್ತದ ಯುವಕರ ಬಾರುಗಳು, ರಾತ್ರಿ ಕ್ಲಬ್ಬುಗಳು ಹಾಗೂ ಇತರ ಮನರಂಜನೆಯ ಸ್ಥಳಗಳು ವಿದೇಶಿ ಸೈನಿಕರ ಆಕ್ರಮಣಕ್ಕಿಂತ ಹೆಚ್ಚು ಗಂಡಾಂತರಕಾರಿಯೆಂದು ಅವರು ಈಜಿಪ್ತದ ಮುಖ್ಯ ಮಂತ್ರಿ ಅಲಿಮೇಹರರಿಗೆ ಬರೆದ ಪತ್ರದಲ್ಲಿ ಘೋಷಿಸಿದ್ದಾರೆ.

ಅವುಗಳಿಂದ ಈಜಿಪ್ತದ ಯುವಕರು ವ್ಯಭಿಚಾರಕ್ಕೀಡಾಗಿ ರಾಷ್ಟ್ರ ವಿಮೋಚನೆಯ ಕಾರ್ಯಕ್ಕೆ ಪ್ರತಿಕಾರವನ್ನುಂಟುಮಾಡುವಂತೆ ಆಗುವುದೆಂದು ಅವರು ತಿಳಿಸಿದ್ದಾರೆ.

ಅನೀತಿಯನ್ನು ಬೋಧಿಸುವ ಚಲನಚಿತ್ರಗಳನ್ನು ಪ್ರತಿಬಂಧಿಸಬೇಕೆಂದೂ, ೨೧ ವರ್ಷದ ಕೆಳಗಿನ ಹುಡುಗ-ಹುಡುಗಿಯರು ಶೈಕ್ಷಣಿಕ ಹಾಗೂ ಅಲ್ಪ ಮನರಂಜನೆಯ ಚಿತ್ರಗಳನ್ನು ನೋಡುವುದಕ್ಕೆ ಅವಕಾಶ ನೀಡುವಂಥ ಕಾಯಿದೆಯನ್ನು ಮಾಡಬೇಕೆಂದೂ ಅವರು ಕೇಳಿದ್ದಾರೆ.

ನಿತ್ಯ ಜೀವನದಲ್ಲಿ ಇಸ್ಲಾಂ ಧರ್ಮದ ತತ್ವಗಳನ್ನು ಅನುಸರಿಸಬೇಕೆಂದೂ ಈಜಿಪ್ತದ ರಾಜ್ಯಘಟನೆಯು ಕುರಾನವನ್ನು ಆಧಾರವಾಗಿಟ್ಟುಕೊಳ್ಳಬೇಕೆಂದೂ ಮುಸ್ಲಿಂ ಬಾಂಧವ್ಯ ಸಂಸ್ಥೆಯು ಪ್ರತಿಪಾದಿಸಿದೆ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

(ಕೊಡಗು ಕೋಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ) (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಮುಖ್ಯವಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡಲ್ಪಡುವುದಲ್ಲದೆ ಚಿನ್ನ, ಬೆಳ್ಳಿ, ಚಿನ್ನದ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿ, ಪಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಜಮಾ ಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಾಲಿನ ಸಾಲದ ಶಾಖೆಯ ಮೂಲಕ ದೀರ್ಘ ಕಾಲಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಅಧ್ಯಕ್ಷ.

ಕೆ. ಪಿ. ಅಪ್ಪಯ್ಯ, ಸೆಕ್ರೆಟರಿ ಮತ್ತು ಮ್ಯಾನೇಜರ್.

Edited printed and published by P. I. Belliapa at 'Kodagu' Press, Mercara, for Kodagu Ltd.

Licence No. 60.
Licenced to Post without Prepayment.

Reg. No. M. 1330.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಕು ೫—೯—೧೯೫೨ನೇ ಶುಕ್ರವಾರ | ಸಂಚಿಕೆ ೧೪

ಸ್ವಚ್ಛ ಹೃದಯ

ಗಾಂಧೀಜಿಯವರು ಮೊದಲಾಗಿ ವಿಶ್ವದ ಮಹಾತ್ಮರೆಲ್ಲ ಜನರಿಗೆ ಸತ್ಯಪ್ರಿಯರಾಗಿರಲು ಬೋಧಿಸಿದರು. 'ಸತ್ಯವೇ ದೇವರು' ಎಂಬುದಾಗಿ ಅವರು ಸಾರಿದರು. ಪ್ರತಿಯೊಂದೂ ಧರ್ಮದ ಆದೇಶವು ಸುಳ್ಳನ್ನೂ ಕಪಟವನ್ನೂ ತ್ಯಜಿಸಿ ಸತ್ಯವನ್ನು ಆಡಬೇಕೆಂದು ಇತ್ತು. ಇಂದಿನ ವೈಜ್ಞಾನಿಕ ಪ್ರಯೋಗಗಳು ಗೂಢ ಮನಸ್ಸಿನ ಮಾನಸಿಕ ಕ್ಲೇಶವು [illegible] ವುದೆಂದೂ, ಕಂಡು ಬಂದಿದೆ. ಸಾವಿರ ಸುಳ್ಳು ಹೇಳಿದರೂ, ಒಂದಲ್ಲ ಒಂದು ದಿನ ಸತ್ಯಸ್ಥಿತಿಯು ತನ್ನಿಂದ ತಾನೇ ಪ್ರಕಟಗೊಳ್ಳುವುದು. ಕಪಟತನ ಆಶ್ರಯಿಸಿ ಮೋಸ ಮಾಡಲು ಯತ್ನಿಸಿದವನ ಮೇಲೆ ನಮ್ಮ ವಿಶ್ವಾಸವು ನಿಶ್ಶೇಷವಾಗಿಯೂ ಹಾರಿ ಹೋಗುವುದು. ಬದುಕು ಸುಗಮವಾಗಬೇಕಾದರೆ ನಮ್ಮ ನಡವಳಿಕೆಗಳು ಸರಳವೂ, ನೇರವೂ ಆಗಿರುವುದೊಳಿತು. ಸ್ವಚ್ಛ ಹೃದಯದ ಪಾವಿತ್ರ್ಯ ವಾತಾವರಣವನ್ನು ಮಂಗಳಮಯಗೊಳಿಸುವುದು.

ನಮ್ಮ ಕೋರ್ಟು ಕಚೇರಿಗಳಲ್ಲಿ ನಡೆಯುತ್ತಿರುವ ಸಾವಿರಾರು ವ್ಯವಹರಣೆಗಳ ಮೂಲವು ಅಸತ್ಯ ಮತ್ತು ಕಪಟ ಭಾವಗಳಲ್ಲಿದೆ. ಒಬ್ಬನು ಕಪಟದಿಂದ ವರ್ತಿಸಿದನು; ಮತ್ತೊಬ್ಬನ ಹೃದಯ ಕೊಳಕಿನಿಂದ ತುಂಬಿತ್ತು. ಹೀಗಾಗಿ ಆಸ್ತಿಯಲ್ಲಿ ವಂಚನೆಯೂ, ಕತ್ತಿಗೆ ಹಿಚುಕಿ ಕೊಲ್ಲುವುದೂ ನಡೆಯಿತು. ಈಗ ಬಂಧನ ಗೃಹದಲ್ಲಿ ಕೊಳೆಯುತ್ತಿರುವುದಲ್ಲದೆ ಕಠಿಣ ದಂಡಕ್ಕೂ ಅವರು ಭಾಗಿಗಳಾಗುವರು. ಆದರೆ ಅಲ್ಲಿರುವ ಪೊಲೀಸರ ಏಟಿಗೂ, ಬೆದರಿಕೆಗೂ ಬಗ್ಗದ ಜನರು ಇದ್ದಾರಲ್ಲವೇ? ಶಿಕ್ಷೆಯ ಭಯ ಮತ್ತು ಹೊಡೆತಗಳ ನೋವಿಗೆ ಬಾಯಿ ಬಿಡುವವರೂ ಇದ್ದಾರೆ. ಹಿಂದೆ ಒಂದು ಕಾಲದಲ್ಲಿ ರಾಜದರ್ಬಾರಿನಲ್ಲಿ ಅಪರಾಧಿಗಳ ವಿಚಾರಣೆಯಾಗುತ್ತಿದ್ದಾಗ—ಯಾರಾದರೂ ಅಸತ್ಯ ನುಡಿದರೆ ಆದರೆ—ರಾಜನ ಸಿಂಹಾಸನವನ್ನು ಹೊತ್ತ ಸಿಂಹಮೂರ್ತಿಗಳು ಘರ್ಜಿಸುತ್ತಿದ್ದುವಂತೆ, ಉಗುರುಗಳನ್ನು ಚಾಚಿ, ಬಾಲವನ್ನು ನೆಲಕ್ಕೆ ಟಪ್ಪನೆ ಬಡಿದು ಅಂಜಿಸುತ್ತಿದ್ದುವಂತೆ. ಇದರಿಂದ ಭಯವಿಹ್ವಲನಾಗಿ ಅಪರಾಧಿ ಸತ್ಯ ಸ್ಥಿತಿಯನ್ನು [illegible] ತಿಳಿಸುತ್ತಿದ್ದನು. ಆದರೆ ಸತ್ಯವನ್ನು ಹೊರಗೆಡಹಲು ಈ ಮಾರ್ಗ ಸರಿಯಾದುದೇ ಎಂಬುವುದು ಪ್ರಶ್ನೆ. ಭಯವು ಯಾವಾಗಲೂ ದುಃಖದಾಯಕವಿದೆ. ಉಗ್ರತಮವಾದ ಶಿಕ್ಷೆಯ ಅಂಜಿಕೆಯನ್ನು ನೀಡಿದಾಗ—ಮನಸ್ಸು ಭಯಗೊಂಡು ಆ ಕ್ಷಣಿಕ ಸತ್ಯಾನುವರ್ತಿಯಾದರೂ ಹೊರತು ಅವನಲ್ಲಿ ಶಾಶ್ವತವಾಗಿ ಸತ್ಯಪ್ರಿಯತೆ ನೆಲೆಗೊಳ್ಳದು.

ಸತ್ಯವನ್ನು ನುಡಿಯುವ ಅಭ್ಯಾಸವಾಗಬೇಕಾದರೆ ಪೊಲೀಸರ ಚಾಟಿ ಏಟಾಗಲೀ, ರಾಜ ಸಿಂಹಾಸನದ ಭಯವಾಗಲೀ ಆವಶ್ಯವಿಲ್ಲ. ಸತ್ಯದ ಸಿಂಹಾಸನವು ನಮ್ಮ ಹೃತ್ಕಮಲವೇ. ನಮ್ಮ ಆತ್ಮದಲ್ಲಿ ಸತ್ಯಪ್ರಿಯತೆಯ ಭಾವ ಅಂಕುರಿಸಿದರೆ ಸಾಕು. ನಮ್ಮ ಮಾತನ್ನೂ ಕೃತಿಯನ್ನೂ ಆಗ ಸತ್ಯ ತುಂಬುವುದು. ಆಗ ನಮ್ಮ ಗುರುವಿನ ಚಿತ್ರದ [illegible] ಅಥವಾ ನ್ಯಾಯಾಧೀಶ ವಿಧಿಸಬಹುದಾದ ಕಠಿಣ ಶಿಕ್ಷೆಗೆ ಅಂಜಿ ಸತ್ಯವ [illegible] ಕಲ್ಯಾಣಪ್ರದವೆಂದೂ, ಸತ್ಯನಿಷ್ಠೆಯೇ ತನ್ನ ಸ್ವಭಾವವೆಂದೂ ತಿಳಿದು ನುಡಿಯುವವನು. ಈ ಬಗೆಯ ಸತ್ಯಪ್ರೇಮಿ ವಿದ್ಯಾವಂತನು ಎಲ್ಲ ಭಯಗಳಿಂದಲೂ ದೂರನಿರುವನು. ತನ್ನ ಕಾರ್ಯಗಳನ್ನು ಅದನು ಲೆಕ್ಕಿಸದೆ ಆ ಕ್ಷಣದಲ್ಲಿ ಉಚಿತವಾದುದನ್ನೇ ನುಡಿಯುವನು.

ನಮ್ಮ ಶಿಕ್ಷಣ ಹಾಗೂ ಶಿಕ್ಷಾ ಪದ್ಧತಿಯ ಇರುವ ಮುಖ್ಯ ದೋಷ: ಭಯ ತೋರಿಸಿ ವರ್ತನೆಯನ್ನು ಸರಿಪಡಿಸುವ ಕ್ರಮ. ಇದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಮಕ್ಕಳು ಸತ್ಯ ನುಡಿಯಬೇಕೆಂದು ಅಂಜಿಸ ಹೊರಟರೆ, ಅವು ಭೀತಿಯಿಂದ ಸುಳ್ಳನ್ನಾಡುವುದೇ ನಿಜ. ಹಾಗೆಯೇ ಸತ್ಯ ನುಡಿದಾಗ ನಾವು ಅದನ್ನು ಕಡೆಗಣಿಸಿ ಕೋಪ ತೋರಿಸಿದರೆ—ಸುಳ್ಳಿನಿಂದಾದರೂ ನಮ್ಮ ಪ್ರೀತಿ ಗಳಿಸಲು ನೋಡಬಹುದು. ಒಂದು ಸಿಂಹ, ತೋಳ ಮತ್ತೊಂದು ನರಿ—ಒಟ್ಟಿಗೆ ಒಂದು ಕತ್ತೆ, ಜಿಂಕೆ, ಮತ್ತೊಂದು ಮೊಲವನ್ನು ಕೊಂದುವಂತೆ. ಆಗ ಸಿಂಹ ತೋಳದೊಡನೆ ಬೇಟೆಯನ್ನು ಹೇಗೆ ಹಂಚೋಣ ಎಂದು ಕೇಳಿತು. ತೋಳ—ಕತ್ತೆಯನ್ನು ಸಿಂಹವೂ, ತಾನು ಜಿಂಕೆಯನ್ನೂ, ನರಿ ಮೊಲವನ್ನೂ ತಿನ್ನೋಣ ಎಂದಿತು. ಇದರಿಂದ ಕುಪಿತನಾಗಿ ಸಿಂಹ ತೋಳವನ್ನು ಉಗುರಿನಿಂದ ಹೊಡೆದು ಕೊಂದಿತು. ಮತ್ತು ನರಿಯೊಡನೆ ಅದೇ ಪ್ರಶ್ನೆ ಕೇಳಿತು. ನರಿ [illegible] 'ಸ್ವಾಮಿ, ಕತ್ತೆಯನ್ನು ಮುಂಜಾನೆಯ ಊಟಕ್ಕೂ, ಜಿಂಕೆಯನ್ನು ಸಂಜೆಯ ಭೋಜನಕ್ಕೂ ಉಪಯೋಗಿಸಿರಿ. ನಡುವೆ ಅಲ್ಪಾಹಾರವೆಂದು ಮೊಲವನ್ನು ಸ್ವೀಕರಿಸಿರಿ' ಎಂದಿತು. ಸಿಂಹ ಸಂತುಷ್ಟಗೊಂಡು 'ನರಿರಾಯ, ಈ ರೀತಿ ನ್ಯಾಯಪ್ರಿಯತೆಯನ್ನೂ, ಬುದ್ಧಿವಂತಿಕೆಯನ್ನೂ ನಿನಗೆ ಕಲಿಸಿಕೊಟ್ಟವರಾರಯ್ಯಾ?' ಎಂದು ಕೇಳಿತು. ಅದಕ್ಕೆ ನರಿ ಕೊಟ್ಟ ಉತ್ತರ—'ತೋಳ, ಸ್ವಾಮಿ!'

ನರಿ ಏಕಾಗಿ ಹೀಗೆಂದಿತು? ತನ್ನ ಸತ್ಯ ಭಾವನೆಯನ್ನು ವ್ಯಕ್ತಪಡಿಸಲು ಸಿಂಹದ ಹೆದರಿಕೆಯಿಂದ ಅದಕ್ಕೆ ಸಾಧ್ಯವಾಗಲಿಲ್ಲ. ಹಾಗೆಯೇ ಸಿಂಹವನ್ನು ಪ್ರಸನ್ನಗೊಳಿಸಬೇಕೆಂಬ ನಿಜವಾದ ಅಭಿಲಾಷೆಯೂ ಅದಕ್ಕಿರಲಿಲ್ಲ. ಇದ್ದುದೆಂದರೆ, ಸಿಂಹದ ನಖದ ಭಯ! ಕೊನೆಗೆ ಸಿಂಹವಾದರೂ ನರಿಯನ್ನು ಹೊಗಳಿದುದು ತೃಪ್ತಿಯಿಂದಲ್ಲ, ಮೊಲವೆಲ್ಲ ತನಗೇ ತಿನ್ನಲು ದೊರೆತ ಸ್ವಾರ್ಥದ ಖುಷಿಯಿಂದಾಗಿಯೇ. ಆದರೆ ಇದೆಲ್ಲ ಚಾಲಾಕಿಯೇ ಹೊರತು, ಸತ್ಯಪ್ರಿಯರು ಎಂದಿಗೂ ಇಂಥದನ್ನು ಮೆಚ್ಚುವುದಿಲ್ಲ. ವಿನೋದಕ್ಕಾದರೂ ಸುಳ್ಳು ಹೇಳಬಾರದೆನ್ನುವವರು—ಸ್ವಾರ್ಥ ಪರದಿಂದ ನುಡಿದ ಅಸತ್ಯವನ್ನು ಒಪ್ಪಲಿಕ್ಕಿಲ್ಲ. ಎಷ್ಟೋ ಮಂದಿ ಸತ್ಯ ನುಡಿದರೆ ಕಷ್ಟ ತಪ್ಪದು ಎನ್ನುವರು. ಆದರೆ ಸತ್ಯಕ್ಕೆ ಸತ್ಫಲ ದೊರೆತೇ ತೀರುವುದೆಂಬ ಅನುಭವಜನ್ಯ ಮಾತನ್ನು ಮರೆಯಲಾಗದು. ಕಷ್ಟಪರಂಪರೆಗಳು ಮೊದಲಿಗೆ ಬಂದಾವು. ಆದರೆ ಕೊನೆಯವರೆಗೆ ಅಸತ್ಯದ ರಾಜ್ಯಭಾರ ನಡೆಯದು. ಸತ್ಯಹರಿಶ್ಚಂದ್ರನ ಕತೆಯನ್ನು ಕೇಳದವರಾರು?

ಕಷ್ಟಕ್ಕೆ ಒಳಗಾಗದೆ ಯಾವಾಗಲೂ ಸತ್ಯಕ್ಕೇ ಕಟ್ಟುಬಿದ್ದು ನಡೆಯಲು ಸುಲಭೋಪಾಯವೊಂದಿದೆ. ಗೋಪ್ಯವಾಗಿ ಇಡಬೇಕಾಗುವ ಯಾವುದೇ ಕೆಲಸವನ್ನು ನಾವು ಮಾಡದಿದ್ದರೆ ಸುಳ್ಳನ್ನಾಶ್ರಯಿಸುವ ಸಂದರ್ಭವೇ ಬರಲಾರದು. ಪ್ರತಿಕ್ಷಣವೂ ನಮ್ಮನ್ನು ದೇವರು ನೋಡುತ್ತಿರುವನೆಂಬ ಪವಿತ್ರ ಭಾವನೆ ನಮ್ಮಲ್ಲಿ ಇದ್ದರೆ—ಆಗ ಸತ್ಯವು ನಮ್ಮ ಸ್ವಭಾವವಾಗಿಯೇ ಮಾರ್ಪಡುವುದು. ಅವಾಚ್ಯವಾದ ಶಬ್ದವನ್ನು ಉಚ್ಚರಿಸಲು ಹಿಂಜರಿಯುವವನು ಹೇಯ ಕಾರ್ಯಗಳನ್ನು ಕೈಗೊಳ್ಳಲಾರನು. ಮನೋವಾಕ್ಕಾಯಗಳಿಂದ ಮನುಷ್ಯನು ಸತ್ಯವನ್ನು ನೆಚ್ಚಿಕೊಂಡರೆ—ಬದುಕು ಹಸನಾಗುವುದು.

ಎಷ್ಟೋ ಮಂದಿ ಜನರು ನೋಡಲು ಸುಂದರರೂ ವಿನಯಶೀಲರೂ ಆಗಿರುವರು. ಆದರೆ ಅವರ ಪ್ರತಿಯೊಂದು ಮಾತು ಅಸತ್ಯದಿಂದ ಕೂಡಿರುವುದು. ಅವರು ಕೇವಲ ತೋರಿಕೆಗಾಗಿ ಸ್ನೇಹ ಒಳ್ಳೆಯ ಮಾತು ಹೇಳುವರು; ಮನಸಿನಲ್ಲಿ ಬೇರೆಯೇ ಯೋಚಿಸುವರು. ಅವರಲ್ಲಿರುವ ಈ ದೌರ್ಬಲ್ಯವನ್ನು ಕಣ್ಣು ಮುಂದಿಟ್ಟುಕೊಂಡು ಅಂಥವರ ಭರವಸೆಯನ್ನು ಮಾಡದಿರುವುದೇ ಒಳ್ಳೇದು. ಶ್ರೀಕೃಷ್ಣನು ಸಂಧಾನಕ್ಕಾಗಿ ಹಸ್ತಿನಾವತಿಗೆ ಬಂದಾಗ, ದುರ್ಯೋಧನನ ಸ್ವಾಗತವನ್ನು ಸ್ವೀಕರಿಸದೆ ವಿದುರನ ಮನೆಗೆ ಭೋಜನಕ್ಕೆ ಹೋದನು. ಅಲ್ಲಿ ದೊರೆತದ್ದು ಒಂದು ಲೋಟ ಹಾಲೇ ಆದರೂ ಪಕ್ವಾನ್ನಗಳನ್ನುಂಡ ತೃಪ್ತಿಯಿಂದ ಸಂತುಷ್ಟನಾದನು. ವಿದುರನು ಕೊಟ್ಟ ಹಾಲಿನಲ್ಲಿ ನಿಜವಾದ ಪ್ರೇಮಭಾವವಿತ್ತು. ಅದು ಅಮೃತದ ರುಚಿಯನ್ನು ಕೊಟ್ಟಿತು. ದುರ್ಯೋಧನನು ಕೇವಲ ಆಡಂಬರ ಪ್ರದರ್ಶಿಸಲು ಭಾರಿ ಔತಣವನ್ನೇರ್ಪಡಿಸಿದನು. ಹೊರತು ಹೃದಯ ಕಲುಷಿತವಾಗಿತ್ತು, [illegible]ವಾಗಿತ್ತು. ಇಂಥದೇ ಉದಾಹರಣೆ ರಾಮಾಯಣದಲ್ಲಿಯೂ ದೊರಕುವುದು. ಶಬರಿಯು ರಾಮನಿಗೆ ಎಂಜಲು ಮಾಡಿದ ಕಾಡು ಹಣ್ಣುಗಳನ್ನು ಕೊಟ್ಟಳು. ಅದರಲ್ಲಿದ್ದ ಸ್ವಾದ ಇನ್ನೆಲ್ಲಿಯೂ ಇರಲಿಲ್ಲ! ಮಹಮ್ಮದ ಪೈಗಂಬರರ ಬಗ್ಗೆಯೂ ಒಂದು ಕಥೆ ಇದೆ. ಒಮ್ಮೆ ಅವರಿಗೆ ಬಹಳ ಅಸ್ತ್ರಶಸ್ತ್ರಗಳೂ ಅಗತ್ಯ ಬೀಳಲು ದೊಡ್ಡ ದೆ

THE JUBILEE INSURANCE CO., Ltd.

One of the very few in the feild of Insurance that has been declaring BONUS to its policy holders from its very inception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-C., Richmond Road, Bangalore.

Our Chief Agents:-THE ORIENTAL ENTERPRISES, BANGALORE 1.

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೂದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:-ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,

23 41-C, ರಿಚ್‌ಮಂಡ್ ರೋಡ್, ಬೆಂಗಳೂರು 1.

ಕ್ಷಯರೋಗ ಹೇಗೆ ಸೋಂಕುತ್ತದೆ?

(ಲೇ:—ಡಾ. ವಿ. ಆರ್. ಭಟ್, ಎಂ. ಬಿ. ಬಿ ಎಸ್., ಟಿ. ಡಿ. ಡಿ)

ಕ್ಷಯರೋಗವೆಂದು ಕರೆಯಲ್ಪಡುವ ಮಹಾಭಯಂಕರ ಸಾಂಕ್ರಾಮಿಕ ರೋಗವು ಬಹಳ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದೆ. ಕ್ರಿ. ಪೂ. ೧೦೦೦ ವರ್ಷ ಹಿಂದಿನ ಈಜಿಪ್ತ 'ಮಮ್ಮಿ'ಗಳಲ್ಲಿ ಆ ರೋಗದ ಕುರುಹುಗಳು ಕಂಡುಬಂದಿವೆ. ಪ್ರಾಚೀನ ಭಾರತದ ವಿಶಿಷ್ಟ ಸೃಷ್ಟಿಯೆನಿಸುವ ವಿಜ್ಞಾನವಾದ ಆಯುರ್ವೇದದಲ್ಲಿಯೂ ಹಲವು ಕಡೆ ಈ ರೋಗಕ್ಕೆ ಸಂಬಂಧಪಟ್ಟ ಉಲ್ಲೇಖಗಳು ಕಂಡುಬರುತ್ತವೆ; ಪ್ರಾಚೀನ ಭಾರತದಲ್ಲಿಯೂ ಈ ರೋಗವು ಹಬ್ಬಿಕೊಂಡಿತ್ತೆಂಬುದಕ್ಕೆ ಇದು ಪ್ರಬಲ ಸಾಕ್ಷ್ಯವಾಗಿದೆ. ಪ್ರಸ್ತುತ ಇದು ಜಗತ್ತಿನ ಎಲ್ಲಾ ಭಾಗಗಳಲ್ಲಿ ಕಂಡುಬರುತ್ತದೆ. ಭಾರತದಲ್ಲಿ ಇದು ವರ್ಷಕ್ಕೆ ಸುಮಾರು ೫ ಲಕ್ಷ ಮಂದಿಯಷ್ಟು ಬಲಿತೆಗೆದುಕೊಳ್ಳುತ್ತಿದೆ ಎನ್ನಲಾಗಿದೆ. ಕ್ಷಯರೋಗದ ಪ್ರತಿಯೊಂದು ಮರಣ ಸಂಭವಿಸುವಾಗ, ಪ್ರತೀ ಮಂದಿಗೆ ಐದು ಮಂದಿಯಂತೆ ಇತರರು ಆ ರೋಗದಿಂದ ನರಳುತ್ತಿರುವರು; ಎಷ್ಟವಾಗ ಸುಮಾರು ೩೦ ಲಕ್ಷ ಮಂದಿ ನಮ್ಮ ದೇಶದಲ್ಲಿ ಆ ರೋಗದಿಂದ ಬಳಲುವರೆಂದಾಯಿತು.

ಕೇವಲ ಮಾನವ ಜೀವಿಗಳಿಗೆ ಮಾತ್ರವಲ್ಲ, ಹಸು, ಕೋಳಿ ಇತ್ಯಾದಿ ಪ್ರಾಣಿಪಕ್ಷಿಗಳಿಗೂ ಇದು ಸೋಂಕಬಲ್ಲುದು. ದೇಹದಲ್ಲಿಯ ಯಾವುದೇ ಅವಯವಕ್ಕೆ ಇದು ತಗಲಬಹುದು. ಉದಾ:— ಶ್ವಾಸಕೋಶಗಳು, ಗ್ರಂಥಿಗಳು, ಎಲುಬುಗಳು, ಕೀಲುಗಳು, ಕರುಳು, ಮೂತ್ರಪಿಂಡ, ಮೆದುಳಿನ ಪರೆ ಇತ್ಯಾದಿ. ಆದರೆ ಸಾಮಾನ್ಯವಾಗಿ ಅಧಿಕ ಕಡೆಗಳಲ್ಲಿ ಕಂಡುಬರುವುದು ಶ್ವಾಸಕೋಶಕ್ಕೆ ಸಂಬಂಧಪಟ್ಟುದು. ಆದುದರಿಂದ ದೇಹದಲ್ಲಿ ಯಾವುದೇ ಅವಯವಕ್ಕೆ ಇದು ಹಿಡಿಯಬಹುದೆಂದು ತಿಳಿದವರು ವಿರಳ.

ಯಾವುದೇ ಪ್ರಾಯದಲ್ಲಿ ಕ್ಷಯವು ಹಿಡಿಯಬಹುದು. ಬಾಲ್ಯದ ಮೊದಲ ಮೂರು ವರ್ಷಗಳಲ್ಲಿ ಅದರ ಸೋಂಕು ಹಿಡಿಯುವ ಸಂಭವ ಅತ್ಯಧಿಕ ಹೆಚ್ಚಾಗಿ. ಅದು ಒಮ್ಮೆ ಸೋಂಕಿತೆಂದರೆ ದೇಹದ ಎಲ್ಲಾ ಅವಯವಗಳಿಗೆ ಹರಡಬಲ್ಲುದು. ಹೀಗಾಗಿ ಟ್ಯುಬರ್‌ಕ್ಯುಲರ್ ಮೆನಿಂಜೈಟಿಸ್ ಎಂದು ಕರೆಯಲ್ಪಡುವ ಮೆದುಳ ಸಂಬಂಧವಾದ ಕ್ಷಯವು (ಮೆದುಳಿನ ಆವರಣಕ್ಕೆ ರೋಗದ ಸೋಂಕು ಹಿಡಿಯುವುದು) ಸಾಮಾನ್ಯವಾಗಿ ೧೮ ರಿಂದ ೨೪ ತಿಂಗಳ ಪ್ರಾಯದ ಮಕ್ಕಳಲ್ಲಿ ಕಂಡುಬರುತ್ತದೆ. ೬ ರಿಂದ ೧೫ ವರ್ಷ ವರ್ಷಗಳ ವರೆಗೆ ಎಲುಬುಗಳು ಮತ್ತು ಸಂಧಿಗಳ ಸಂಬಂಧವಾದ ಕ್ಷಯವು ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತದೆ. ಎಲುಬುಗಳಲ್ಲಿ ಹೆಚ್ಚಾಗಿ, ಬೆನ್ನೆಲುಬಿನ ಮಧ್ಯಭಾಗದ ಮತ್ತು ಕೆಳಗಿನ ಎಲುಬುಗಳನ್ನು ಇದು ಹಿಡಿಯುತ್ತದೆ; ಇನ್ನು ಸಂಧಿಗಳಲ್ಲಿ ಹೆಚ್ಚಾಗಿ ಸೊಂಟ, ಮೊಣಕಾಲು ಮತ್ತು ಹರಡು ಯಾನೆ ಮೊಣಗಂಟಿನಲ್ಲಿ ಇದು ಕಾಣಬರುತ್ತದೆ.

ಕ್ಷಯವೆಂದು ಸಾಮಾನ್ಯವಾಗಿ ಕರೆಯಲ್ಪಡುವ ಶ್ವಾಸಕೋಶಕ್ಕೆ ಸಂಬಂಧಪಟ್ಟ ರೋಗವು ಹೆಚ್ಚಾಗಿ ೧೫ ವರ್ಷ ಪ್ರಾಯದ ತರುಣರಲ್ಲಿ ಕಂಡುಬರುತ್ತದೆ. ಸ್ತ್ರೀಯರಲ್ಲಿ ಹೆಚ್ಚಾಗಿ ೧೮ ರಿಂದ ೩೦ ವರ್ಷದ ಅವಧಿಯಲ್ಲಿ (ಈ ಪ್ರಾಯದಲ್ಲಿ ಹೆಚ್ಚಾಗಿ ಬಾಣಂತಿತನವನ್ನು ಅವರು ಅನುಭವಿಸುತ್ತಾರೆ) ಮತ್ತು ಪುರುಷರಲ್ಲಿ ೨೫ ರಿಂದ ೪೦ ರ ಕಾಲದಲ್ಲಿ (ಸಾಂಸಾರಿಕ ತಾಪತ್ರಯಗಳ ಹೊರೆಯು ಅತ್ಯಧಿಕವಾಗುವ ಕಾಲ) ಇದು ಹೆಚ್ಚಾಗಿ ಕಂಡುಬರುತ್ತದೆ. ಆದರೆ ಈ ರೋಗ ಹಿಡಿಯಲು ಇಂತಿಷ್ಟೇ ಪ್ರಾಯವೆಂಬ ನಿರ್ಣಯವಿಲ್ಲ. ಯಾವುದೇ ಪ್ರಾಯದಲ್ಲಿ ಇದು ಹಿಡಿಯಬಹುದು. ೭೦ ಯಾ ೮೦ ವರ್ಷ ದಾಟಿದ ವಯೋವೃದ್ಧರಲ್ಲಿಯೂ ಇದು ಕಂಡುಬಂದುದುಂಟು. ಮುದಿಪ್ರಾಯದಲ್ಲಿ ಇದು ಹಿಡಿಯುವುದಿಲ್ಲವೆಂಬ ನಂಬಿಕೆ ತಪ್ಪು.

ಇತರ ಯಾವುದೇ ವ್ಯಾಧಿಯೊಡನೆ ಕೂಡಿ ಕ್ಷಯವು ಕಂಡುಬರಬಹುದು. ದಮ್ಮು ಯಾನೆ ಗೂರಲು ರೋಗದೊಡನೆ ಇದು ಕೂಡುವುದಿಲ್ಲವೆಂಬ ಅಭಿಪ್ರಾಯ ಸರಿಯಲ್ಲ; ಹಲವು ಸಂದರ್ಭಗಳಲ್ಲಿ ಈ ಎರಡು ರೋಗಗಳು ಒಟ್ಟೊಟ್ಟಿಗೆ ಕಂಡುಬಂದುದಿದೆ. ಶ್ವಾಸಕೋಶಕ್ಕೆ ಸಂಬಂಧಪಟ್ಟ ಕ್ಷಯವು ಮಧುಮೇಹದೊಂದಿಗೆ ಕಂಡುಬರುವುದುಂಟು.

ಕ್ಷಯರೋಗವು ವಂಶಪಾರಂಪರ್ಯವಾದ ರೋಗವಲ್ಲ. ಕೆಲವೊಮ್ಮೆ ಒಂದು ಕುಟುಂಬದಲ್ಲಿ ತಂದೆ ಯಾ ತಾಯಿಗೆ ಆ ರೋಗವಿದ್ದು ಅವರ ಮಕ್ಕಳಲ್ಲಿ ಕೆಲವರಲ್ಲಿ ಅದು ಕಂಡುಬಂದಿರಬಹುದು; ಇದರಿಂದ ಅದು ವಂಶಪಾರಂಪರ್ಯವಾದುದೆಂದು ಕೆಲವರು ತಿಳಿದುಕೊಳ್ಳುತ್ತಾರೆ. ಆದರೆ ನಿಜವಾದ ಸ್ಥಿತಿ ಹಾಗಿರುವುದಿಲ್ಲ. ಹೆತ್ತವರಿಂದ ರೋಗದ ಸೋಂಕು ಸಾಂಕ್ರಾಮಿಕವಾಗಿ ಮಕ್ಕಳಿಗೆ ಬರಬಹುದು. ಕುಟುಂಬದ ಸದಸ್ಯನಲ್ಲದ ಓರ್ವ ಅಡಿಗೆಯವನಿಗೆ ಕ್ಷಯರೋಗವಿದ್ದು, ಅವನ ಮೂಲಕವೂ ಕುಟುಂಬದ ಮಕ್ಕಳಿಗೆ ಅದು ತಗಲಬಹುದು. ಸರಿಯಾದ ಜಾಗ್ರತೆ ವಹಿಸಿದರೆ ಹೆತ್ತವರಿಂದ ಮಕ್ಕಳಿಗೆ ರೋಗದ ಸೋಂಕು ಬಾರದಂತೆ ತಡೆಯಬಹುದಾಗಿದೆ.

ಕ್ಷಯ ರೋಗವು ಸಾಂಕ್ರಾಮಿಕ ರೋಗ. ಆ ರೋಗವಿದ್ದವನಿಂದ ಮತ್ತೊಬ್ಬನಿಗೆ ಅದು ಪ್ರಸಾರವಾಗಬಹುದು. ಹೀಗೆ ಒಬ್ಬನಿಂದ ಮತ್ತೊಬ್ಬನಿಗೆ ರೋಗವು ಹರಡುವುದಕ್ಕೆ ಕ್ಷಯರೋಗಾಣುಗಳೇ ಮುಖ್ಯ ಕಾರಣ. ಬೇರೆ ಬೇರೆ ಪ್ರಾಣಿಗಳಲ್ಲಿ ಹಲವು ವಿಧದ ಕ್ಷಯಾಣುಗಳು ಕಂಡುಬರುತ್ತವೆ. ಅವುಗಳಲ್ಲಿ ಮುಖ್ಯವಾದವುಗಳು, ಮನುಷ್ಯನಲ್ಲಿ ಆ ರೋಗ ಬೆಳೆಸುವ ಹ್ಯೂಮನ್ ಜಾತಿಯವು ಮತ್ತು ಹಸುಗಳಲ್ಲಿ, ಹಸುವಿನ ಮೂಲಕ ಮನುಷ್ಯನಲ್ಲಿ ರೋಗ ಉಂಟುಮಾಡುವ ಬೊವೈನ್ ಜಾತಿಯವು. ಭಾರತದಲ್ಲಿ ಮನುಷ್ಯರಲ್ಲಿ ಹೆಚ್ಚಾಗಿ ಹ್ಯೂಮನ್ ಜಾತಿಯ ಕ್ಷಯಾಣುಗಳ ಸೋಂಕೇ ಸಾಮಾನ್ಯವಾಗಿ ಕಂಡುಬರುತ್ತದೆ. ಸ್ಕಾಟ್ಲೆಂಡಿನಲ್ಲಿ ಹಲವರಿಗೆ ಬೊವೈನ್ ಅಣುಗಳ ಸೋಂಕು ಹಿಡಿಯುತ್ತದೆ. ಆ ರೋಗದ ಸೋಂಕು ಹಿಡಿದ ರೋಗಿಗಳು ಹೊರ ಹಾಕುವ ರೋಗಾಣು ಮಿಶ್ರ ಕಶ್ಮಲದಲ್ಲಿ ಉದಾ: ಶ್ವಾಸಕೋಶ ಸಂಬಂಧವಾದ ಕ್ಷಯ ರೋಗಿಯು ಉಗುಳುವ ಕಫದಲ್ಲಿ ರೋಗಾಣುಗಳು ಮಿಲಿಯಗಟ್ಟಲೆಯಾಗಿ ಹರಡಿಕೊಂಡಿರುತ್ತವೆ. ಕ್ಷಯರೋಗಿಯು ಉಗುಳಿದ ಕಫದ ಕೆಲವು ಕಣಗಳನ್ನು ಒಂದು ಗಾಜಿನ ತುಂಡಿನ ಮೇಲೆ ಹರಡಿ ಬೇಕಾದ ಬಣ್ಣ ಹಚ್ಚಿಸಿ, ಸೂಕ್ಷ್ಮದರ್ಶಕ ಯಂತ್ರದ ಮೂಲಕ ನೋಡಿದರೆ ಅಧಿಕಾಧಿಕ ಸಂಖ್ಯೆಯ ರೋಗಾಣುಗಳು ಹರಡಿಕೊಂಡ ದೃಶ್ಯ ಕಂಡುಬರುವುದು. ಈ ದೃಶ್ಯದಲ್ಲಿ ರೋಗಾಣುಗಳು ಮೂಲದಕ್ಕಿಂತ ಸುಮಾರು ಸಾವಿರ ಪಾಲು ದೊಡ್ಡದಾಗಿ ಕಂಡುಬರುವವು.

ಕಫದ ಒಂದು ಅತಿ ಸೂಕ್ಷ್ಮ ಕಣದಲ್ಲಿ ಸಾವಿರಾರು ರೋಗಾಣುಗಳಿರಬಹುದು. ಒಣಗುವುದರಿಂದ ಈ ರೋಗಾಣುಗಳು ಥಟ್ಟನೆ ಸಾಯುವುದಿಲ್ಲ. ಓರ್ವ ಕ್ಷಯರೋಗಿಯು ರೋಗಾಣುಮಿಶ್ರಿತ ಕಫವನ್ನು ಉಗುಳಿದಾಗ, ದ್ರವರೂಪವಾಗಿದ್ದ ಅಂಶ ಆರಿಹೋಗಿ, ಉಳಿದಂಶ ಧೂಳಿನೊಂದಿಗೆ ಬೆರೆತು ಹೋಗಿ, ಅದರಲ್ಲಿರುವ ರೋಗಾಣುಗಳು ಶೀತ ಪಸೆಯು ಅವಕ್ಕೆ ದೊರಕೊಡನೆ ಅಧಿಕಾಂಶವಾಗಿ ಬೆಳೆಯಲು ಸಮರ್ಥವಾಗಿ ಉಳಿಯುತ್ತವೆ. ನೇರಾದ ಸೂರ್ಯನ ಬಿಸಿಲು ಈ ರೋಗಾಣುಗಳನ್ನು ೭ ರಿಂದ ೮ ತಾಸುಗಳೊಳಗೆ ಕೊಲ್ಲಬಲ್ಲುದು. ಕತ್ತಲೆಯ ಸ್ಥಳಗಳಲ್ಲಿ ಹಲವು ತಿಂಗಳುಗಳ ತನಕ ಈ ರೋಗಾಣುಗಳು ಚೇತನಯುಕ್ತವಾಗಿ ಬದುಕಿಕೊಂಡಿರಬಲ್ಲವು. ಕೃತಕ ರೀತಿಯಲ್ಲಿ ಈ ರೋಗಾಣುಗಳನ್ನು ಬೆಳೆಸಬಹುದು. ಪರೀಕ್ಷಾ ಪ್ರಯೋಗಗಳಿಗಾಗಿ ಅವುಗಳನ್ನು ಹಾಗೆ ಬೆಳೆಸುತ್ತಾರೆ.

ಹೀಗೆ ಕ್ಷಯ ರೋಗವು ಕ್ಷಯರೋಗಾಣುಗಳಿಂದ ಹರಡುವುದೆಂದಾಯಿತು. ಈ ಕ್ಷಯರೋಗಾಣುಗಳು ಮನುಷ್ಯನ ದೇಹದೊಳಗೆ ಹೇಗೆ ಪ್ರವೇಶಿಸುತ್ತವೆ? ಹಲವು ದ್ವಾರಗಳಿಂದ ಅವು ದೇಹವನ್ನು ಸೇರಬಲ್ಲುವು.

೧. ಉಸಿರಾಟದ ದಾರಿಯಾಗಿ— ಎಂದರೆ ಶ್ವಾಸಕೋಶಗಳ ಮೂಲಕ. ಕ್ಷಯರೋಗಾಣು ಮಿಶ್ರಿತ ಕಫವು ಧೂಳಿನೊಂದಿಗೆ ಬೆರೆತು ಹೋದಾಗ ಅದರಲ್ಲಿರುವ ಕಣಗಳು ಗಾಳಿಗೆ ಮೇಲೆ ಹಾರಿ ಕ್ಷಯರೋಗಾಣುಗಳ ಧೂಳಿನೊಂದಿಗೆ ಶ್ವಾಸಕೋಶಗಳನ್ನು ಸೇರಬಹುದು.

ಹೆಚ್ಚಾಗಿ ಶ್ವಾಸಕೋಶ ಸಂಬಂಧವಾದ ಕ್ಷಯರೋಗಿಯೊಡನೆ ಸಂಪರ್ಕವಿರಿಸಿಕೊಳ್ಳುವುದರಿಂದ ಈ ರೋಗ ಬೇಗನೆ ಹರಡುತ್ತದೆ. ಅಂತಹ ರೋಗಿಯು ಕೆಮ್ಮುವಾಗ ಇಲ್ಲವೆ ಸೀನುವಾಗ ಅವನ ಮುಖದಿಂದ ಹೊರಡುವ ಉಚ್ಛ್ವಾಸದಲ್ಲಿ ಸಾವಿರಾರು ರೋಗಾಣುಗಳಿಂದ ಕೂಡಿದ ಕಫದ ಕಣಗಳು ಎರಡು ಮೂರು ಅಡಿಗಳಿಗಿಂತ ಹೆಚ್ಚು ದೂರಕ್ಕೆ ಹೊರ ಚಿಮ್ಮಲ್ಪಡಬಹುದು. ಆಗ ಅವನ ಸಮೀಪವಿದ್ದವರ 'ನಿಚ್ಛ್ವಾಸ'ದಲ್ಲಿ ಚಿಕ್ಕ ಕಣಗಳು ಸೇರಬಹುದು. ರೋಗದ ಸೋಂಕು ತಗಲಿದವನೊಡನೆ ರಾತ್ರಿ ಕಾಲ ಮಲಗುವುದರಿಂದಲೂ ಅದು ಬೇರೊಬ್ಬರಿಗೆ ಸುಲಭವಾಗಿ ತಗಲಬಹುದು.

೨ ಜಠರ, ಕರುಳುಗಳ ಮೂಲಕ: ಎಂದರೆ ಉದರ ಮತ್ತು ಕರುಳಿನ ದಾರಿಯಾಗಿ ಆಹಾರ ಇಲ್ಲವೆ ಆಹಾರವಿರಿಸಿದ ಪಾತ್ರಗಳಿಗೆ ಕ್ಷಯರೋಗಾಣು ಮಿಶ್ರಿತ ಕಫದ ಕಣಗಳ ಸೋಂಕು ಹಲವು ಬೇರೆ ಬೇರೆ ರೀತಿಗಳಲ್ಲಿ ತಗಲುವ ಸಂಭವವಿದೆ. (a) ಕ್ಷಯರೋಗದ ಸೋಂಕು ಹಿಡಿದವನನ್ನು ಅಡಿಗೆಗೆ ನೇಮಿಸುವುದರಿಂದ (b) ಕ್ಷಯರೋಗಿಯೊಬ್ಬನ ಆಹಾರದ ಮೇಲೆ ಕೆಮ್ಮುವುದರಿಂದ (c) ಆಹಾರವನ್ನು ಮುಚ್ಚದೆ ನೊಣಗಳಿಗೆ ತೆರೆದಿಡುವುದರಿಂದ ರೋಗಾಣುಮಿಶ್ರಿತ ಪದಾರ್ಥದ ಮೇಲೆ ಕುಳಿತ ನೊಣಗಳು ಆಹಾರದ ಮೇಲೆ ಕುಳಿತುವೆಂದರೆ ಅಲ್ಲಿಗೆ ಅದರ ಪ್ರಸಾರವಾಗುವುದು. (d) ಕ್ಷಯರೋಗಿಯು ಉಪಯೋಗಿಸಿದ ಪಾತ್ರೆ, ಚಮಚೆ ಇತ್ಯಾದಿಗಳನ್ನು ನಿರೋಗಿಗಳು ಬಳಸುವುದರಿಂದ. ರೋಗಿಗಳು ಉಪಯೋಗಿಸಿದ ಪಾತ್ರೆಗಳಲ್ಲಿ ಕೆಲವು ರೋಗಾಣುಗಳು ಅಂಟಿ

ದ್ದವರೆಲ್ಲ, ಬಹಳವಾಗಿ ಸಾಮಗ್ರಿಗಳನ್ನೊದಗಿಸಿದರು. ಒಬ್ಬ ಬಡವಿಗೂ ಪೈಗಂಬರರಿಗೆ ನೆರವಾಗುವ ಉತ್ಕಟೇಚ್ಛೆ ಇತ್ತು. ಆವಳು ತನ್ನ ಸರ್ವಸ್ವವನ್ನು, ಎಂದರೆ ಒಂದು ರೊಟ್ಟಿ ಮತ್ತು ಮೂರು ಖರ್ಜೂರಗಳನ್ನು ತಂದೊಪ್ಪಿಸಿದಳು. ಸೇವಕರು ಇವನ್ನು ನೋಡಿ ನಕ್ಕುಬಿಟ್ಟರು. ಪೈಗಂಬರರು ಆಗ ಹೀಗೆಂದರು—'ನಿನ್ನೆ ರಾತ್ರಿ ಕನಸಾಗಿದೆ; ಸ್ಪಷ್ಟವಾಯಿತು. ಈ ಹೆಂಗಸು ಕೊಟ್ಟ ಅಲ್ಪ ವಸ್ತುಗಳನ್ನು ಒಂದು ತಟ್ಟೆಯಲ್ಲಿ ಮತ್ತು ಇತರ ಎಲ್ಲ ಮಹಾ ವಸ್ತುಗಳನ್ನು ಇನ್ನೊಂದರಲ್ಲಿ ಇಟ್ಟು, ದೇವದೂತರು ತಕ್ಕಡಿ ತೂಗಿದರು. ಇವಳ ತಟ್ಟೆಯೇ ಬಹಳ ಭಾರವಾಗಿತ್ತು!'

ಮನುಷ್ಯನ ಎಲ್ಲ ಆಶೋತ್ತರಗಳ ಅಂತಿಮ ಗುರಿಯಾಗಿ ಸತ್ಯವಿದೆ. ಪ್ರತಿಯೊಂದೂ ವಿಷಯದ ಜಿಜ್ಞಾಸು ಸತ್ಯಾನ್ವೇಷಿಯಾಗಿರುತ್ತಾನೆ. ಅಂಥಾ ವಿಶ್ವಾಸಗಳೂ, ತನ್ನ ಕಾರ್ಯಗಳೂ ನಮಗೆ ತಿಳಿಯದರೆ ಕೊಡಬಹುದು. ಹಾಗೆಂದು ಸ್ಥಿರಬುದ್ಧಿಯಿಂದ, ಸ್ವಚ್ಛ ಹೃದಯದಿಂದ, ಸತ್ಯಪ್ರಿಯನಾಗಿ ವರ್ತಿಸಿದರೆ ಜಯ ಕಟ್ಟಿಟ್ಟದ್ದೇ. ಸತ್ಯಕ್ಕೇ ಜಯ ಎಂಬುವುದನ್ನು ಮರೆಯದೆ ವರ್ತಿಸೋಣ. ಆಗ ನಮ್ಮ ಸಮಾಜ ಹಾಗೂ ರಾಜಕೀಯದಲ್ಲಿ ತುಂಬಿರುವ ಕಲ್ಮಶಗಳು ತನ್ನಿಂದ ತಾನೇ ದೂರಾಗುವವು.

— —

ಕೊಂಡಿರಬಹುದು. ಅದೇ ಪಾತ್ರೆಯನ್ನು ಬೇರೆಯವರು ಬಳಸುವಾಗ, ಆ ಪಾತ್ರೆಗಳು ಸರಿಯಾಗಿ ತೊಳೆಯಲ್ಪಡದಿದ್ದರೆ ರೋಗಾಣುಗಳ ಸೋಂಕು ಅವನಿಗೆ ತಟ್ಟುವ ಸಂಭವ ಅತ್ಯಧಿಕ. ಹೆಚ್ಚಾಗಿ ಹೊಟೆಲುಗಳಲ್ಲಿ ಇಂತಹ ಪ್ರಸಾರ ಬೇಗ ನಡೆಯುತ್ತದೆ. ಹೀಗೆ ರೋಗದ ಸೋಂಕು ಉದರ ಮತ್ತು ಕರುಳನ್ನು ಸೇರಿ ಪ್ರಕ್ಷೀಣ ಗ್ರಾಹ್ಯ ನಾಡಿಗಳ ಮೂಲಕ ಅದು ರಕ್ತಪ್ರವಾಹದೊಂದಿಗೆ ಸೇರುತ್ತದೆ.

೩. ಶ್ಲೇಷ್ಮ ಪರೆ ಮತ್ತು ಚರ್ಮದ ಮೂಲಕ: ಶ್ಲೇಷ್ಮ ಪರೆಯ (ಮ್ಯೂಕಸ್ ಮೆಂಬ್ರೇನ್) ಮೂಲಕ (ಹೆಚ್ಚಾಗಿ ಶ್ಲೇಷ್ಮ ಪರೆಯು ರೋಗಯುಕ್ತವಾಗಿದ್ದರೆ) ರೋಗಾಣುಗಳು ದೇಹದೊಳಗೆ ಪ್ರವೇಶಿಸಬಹುದು. ಉದಾ: ಅನ್ನನಾಳ ಗಂಟಲಿಗೆ (ಟಾನ್ಸಿಲ್) ಬೇರೆ ಯಾವುದೇ ರೋಗದ ಸೋಂಕು ಇದ್ದಾಗ ಅವುಗಳ ಶ್ಲೇಷ್ಮ ಪರೆಯ ದ್ವಾರ [illegible] ರೋಗಾಣುಗಳು ಬೇಗನೆ ದೇಹದೊಳಗೆ ಪ್ರವೇಶಿಸಬಹುದಾಗಿದೆ. ಗಾಯವಾದಾಗ ಇಲ್ಲವೇ ಒಡೆದಾಗ ಚರ್ಮದ ಮೂಲಕವೂ ರೋಗಾಣುಗಳು ದೇಹವನ್ನು ಸೇರಬಹುದು. ಇದು ಹೆಚ್ಚಾಗಿ ಕಸಾಯಿಗಳು ಇಲ್ಲವೆ ಪಶುವೈದ್ಯರು ಕ್ಷಯದ ಸೋಂಕು ತಟ್ಟಿದ ಪ್ರಾಣಿಗಳನ್ನು ಕಡಿಯುವಾಗ ಇಲ್ಲವೆ ಶಸ್ತ್ರಕ್ರಿಯೆ ನಡೆಸುವಾಗ ಸಂಭವಿಸುತ್ತದೆ.

ಓದುಗರ ಓಲೆಗಳು

ಪೈಸಾರಿ ಜಾಗ ಕೊಡುವಿರೆ.

ಕೊಡಗಿನಲ್ಲಿ ಎಷ್ಟೋ ವರ್ಷದ ಹಿಂದಿನಿಂದಲೇ ಸರಕಾರದವರು ಭೂಮಿ ಬೇಟೆ ಇಲ್ಲದ ಹಿಂದುಳಿದ ಪಂಗಡಗಳಿಗೆ ಬಾಣೆಯಿಂದು ಪೈಸಾರಿ ಜಾಗವನ್ನು ಕೊಡಾಯ ವಸ್ತ್ರಿಗೆ ಇಲ್ಲದೆ ಮಂಜೂರು ಮಾಡು [illegible]. ಆದರೆ ಇಂತಹ ಜಾಗವನ್ನು ಬೇರೆ ವ್ಯಕ್ತಿ [illegible] ನರಿಗೆ ಬಂದಕ್ಕೆ [illegible] ಎಂದು ಗೊತ್ತಿಲ್ಲ. ಹಿಂದುಳಿದವರು ಎಷ್ಟೋ ಜನರು ಗ್ರಾಮದಲ್ಲಿದ್ದು ಅವರಿಗೆ ಕೊಡದೆ ಬೇರೆ ಮಾಡಿದ್ದು ನೋಡದ ವಾಗ ಇದು ಶೋಚನೀಯ. ಇಂಥದ್ದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಇನ್ನಾದರೂ ತಡೆಯುವರೇ ?

‘ಹಿಂದುಳಿದವ’

ಇದು ಯಾವ ನ್ಯಾಯ?

ತಾ ೮-೮-೫೩ರಲ್ಲಿ ಕಾರುಗುಂದ ಗ್ರಾಮಸ್ಥರು ಬರೆದಿದ್ದ ವಾರ್ತೆಯನ್ನು ಓದಿ ಬಹಳ ಸೋಜಿಗವೆನಿಸಿತು. ಇದು ಸಂಬಂಧಪಟ್ಟವರ ಪ್ರೇರಣೆಯಿಂದ ಬರೆದದ್ದೋ ಏನೋ ನಿಜ ಸ್ಥಿತಿಯು ಇದಕ್ಕೆ ತೀರಾ ವಿರೋಧವಾಗಿರುತ್ತದೆ.

ಡಾಕ್ಟರವರ ರೋಗ ಪರೀಕ್ಷೆಯೂ, ಚಿಕಿತ್ಸಾ ಕ್ರಮವೂ ಮತ್ತು ಆಯುರ್ವೇದ ಔಷಧಗಳನ್ನು ಉಪಯೋಗಿಸುವ ಕ್ರಮವೂ ಏನೂ ತೃಪ್ತಿಕರವಲ್ಲವೆಂದರೆ ತಪ್ಪಾಗಲಾರದು. ತಾ. ೧೫-೮-೫೩ರ ಪತ್ರಿಕೆಯ ವಿಷಯ ಭಾಗಮಂಡಲದಲ್ಲಿನ ಜನರಿಗೆ ತಿಳಿದಿರುತ್ತದೆ. ಇದು ಬರೀ ಅಪವಾದವೆಂದು ಕಾರುಗುಂದದವರು ಹೇಳುವದು ಎಷ್ಟು ಸಮಂಜಸವಾಗಬಹುದು ?

ಹಲವಾರು ಗ್ರಾಮಸ್ಥರುಗಳ ಅರ್ಜಿಗಳಿದ್ದರೂ ಡಾಕ್ಟರ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳಾಗಲೀ ಮಂತ್ರಿಗಳಾಗಲೀ ಏನೊಂದೂ ಕಾರ್ಯಕ್ರಮ ಕೈಗೊಳ್ಳದಿರುವದು ಬಹಳ ವಿಷಾದಕರ. ಬಡವರ ಆರೋಗ್ಯವನ್ನು ಯೋಗ್ಯರೀತಿಯಲ್ಲಿ ಕಾಪಾಡಲು ಸರ್ಕಾರದವರು ಕಾಯುವರೆ ?

‘ಕಾರುಗುಂದ ಬೈತ’

ಕೈಮಗ್ಗ ಬಟ್ಟೆ.

ಮದ್ರಾಸು ಕೈಮಗ್ಗ ಸಹಕಾರ ಸಂಘದವರು ತಮ್ಮ ಒಂದು ಮಾರಾಟ ಶಾಖೆಯನ್ನು ಕೊಡಗು ಪ್ರಾಂತೀಯ ಸಹಕಾರ ಬ್ಯಾಂಕಿನ ಕಟ್ಟಡದಲ್ಲಿ ತೆರೆದಿರುವದು ಸಂತೋಷಕರ. ಕೈಮಗ್ಗದ ಎಲ್ಲಾ ತರಹದ ಬಟ್ಟೆ [illegible] ರವುದ ಜನಹಿತಕ್ಕಾಗಿದೆ. ಮದ್ರಾಸಿನ ಪ್ರಧಾನಿ ಶ್ರೀ. ರಾಜಾಜಿಯವರು ಪ್ರಸಿದ್ಧಗೊಳಿಸಿದ್ದು ಕೈಮಗ್ಗ ಬಟ್ಟೆಯ ಉಪಯೋಗವು [illegible] ಉನ್ನತಿ. ಸಾಧನ ಮತ್ತು ಲಕ್ಷೋಪಲಕ್ಷ ಜನರ ಜೀವನಾಧಾರ. ಸರಕಾರದ ಇಲಾಖೆಗಳಲ್ಲಿ ಕೈಮಗ್ಗ ಬಟ್ಟೆಗಳನ್ನು ಉಪಯೋಗಿಸುವುದು ಉತ್ತಮ. ಕೊಡಗಿನ ಮುಖ್ಯ ಸ್ಥಳಗಳಲ್ಲೆಲ್ಲಾ ಮಾರಾಟ ಶಾಖೆಗಳನ್ನು ತೆರೆದಲ್ಲಿ ಸಾರ್ವಜನಿಕರಿಗೂ ಹಾಗೂ ಸಂಘಕ್ಕೂ ಒಳ್ಳೆಯದು. ಸರಕಾರ ಇಲಾಖೆಯವರು ಈ ವಿಚಾರವನ್ನು ಪರಿಶೀಲಿಸುವದು ಉತ್ತಮ.

‘ನಾರಾಯಣ.’

ನಿಜ ಸಂಗತಿಗಳು.

ತಾ. ೨೭-೮-೫೩ರ ‘ಜನ್ಮಭೂಮಿ’ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಬರಹದಲ್ಲಿ—ಕಳೆದ ಎಸೆಂಬ್ಲಿಯ ಮೀಟಿಂಗಿನಲ್ಲಿ ನಾನು ಪ್ರತ್ಯೇಕ ಪಕ್ಷದ ಮೆಂಬರಗಳ ಪರ ಕಾಂಗ್ರೆಸ್ ಮಂತ್ರಿಮಂಡಳಕ್ಕೆ ಸಹಕಾರವನ್ನು ನೀಡಿದ್ದರೂ, ತಾ. ೧೫-೮-೫೩ರಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣದಲ್ಲಿ ಎಲ್ಲಿಯೂ ನಾನು ಭಾಗವಹಿಸಲಿಲ್ಲವೆಂತಲೂ, ಎಸೆಂಬ್ಲಿಯ ಮೀಟಿಂಗಿನಲ್ಲಿ ನಾನು ಚೀಟಿಗಳ ಹಿಸಾಬು ನಮ್ಮ ಪಕ್ಷದ ಮೆಂಬರುಗಳು ಕಾಂಗ್ರೆಸು ಮಂತ್ರಿಮಂಡಳವನ್ನು ವಿರೋಧಿಸಲು ಪ್ರೋತ್ಸಾಹಿಸಿದೆನೆಂದೂ ಮುಂತಾದ ನಿಜವಲ್ಲದ ವಾರ್ತೆಗಳು ಇದ್ದವು. ಸದರಿ ವಾರ್ತೆಯ ಉದ್ದೇಶವೇನಿದೆಯೆಂದು ಕೂಲಂಕಷವಾಗಿ ಉತ್ತರ ಕೊಡಲು ನನಗೆ ಇಚ್ಛೆಯಿಲ್ಲವಾದರೂ ನನಗೆ ಸಂಬಂಧಪಟ್ಟ ನಿಜವಲ್ಲದ ವಿಚಾರವನ್ನು ಅಲ್ಲಗಳೆಯದೆ ಸಾಧ್ಯವಿಲ್ಲ.

ಭಾರತ ಭೂಮಿಗೆ ಸ್ವಾತಂತ್ರ್ಯವು ದೊರೆತಂದಿನಿಂದ ಇಂದಿನ ತನಕ ಆಚರಿಸುತ್ತಿದ್ದಂತೆಯೇ ಪ್ರತೀ ವರ್ಷ ಆಗೊಸ್ಟ ತಾ. ೧೫ರಲ್ಲಿ ಧ್ವಜಾಭಿವಂದನೆ ಮಾಡುತ್ತಾ ಬಂದಿರುವೆನು. ಅದೇ ರೀತಿ ಈ ವರ್ಷವೂ ತಾ ೧೫-೮-೫೩ರಲ್ಲಿ ಪ್ರಾತಃಕಾಲ ೭ ಗಂಟೆಗೆ ನನ್ನ ಮನೆಯ ಮೇಲೆ ಧ್ವಜಾರೋಹಣ ಮಾಡಿ, ನನ್ನ ಸಂಸಾರದೊಂದಿಗೆ ಧ್ವಜ ಭಿವಂದನೆಯನ್ನು ಮಾಡಿದೆನು. ಸರಕಾರದವರು ಕೋಟೆಯೊಳಗೆ ಬೆಳಿಗ್ಗೆ ೧೧ ಗಂಟೆಗೆ ನಡೆಸಿದ ಧ್ವಜ ಭಿವಂದನೆಯಲ್ಲಿ ಎಂದಿನಂತೆ ಭಾಗವಹಿಸಿದೆನು. ನನ್ನ ಮಕ್ಕಳೂ ಹೈಸ್ಕೂಲು ಮತ್ತು ಕಾಲೇಜಿನಲ್ಲಿ ಧ್ವಜ ಭಿವಂದನೆಯನ್ನು ಮುಗಿಸಿಕೊಂಡು, ಕೋಟೆಯೊಳಗಿನ ಕಾರ್ಯಕ್ರಮದಲ್ಲೂ ಭಾಗವಹಿಸಿದರು.

ಎಸೆಂಬ್ಲಿಯ ಮೀಟಿಂಗಿನಲ್ಲಿ ಪ್ರತ್ಯೇಕ ಪಕ್ಷದ ಮೆಂಬರುಗಳಿಗೆ ನಾನು ಚೀಟಿಗಳು [illegible] ಚೀಟಿಗಳನ್ನು ಕಾಂಗ್ರೆಸ್ ಪಕ್ಷದವರೂ ಆತ್ಮೀಯತೆಯಿಂದ ತಮ್ಮ ಮೆಂಬರುಗಳಿಗೆ ಕಳುಹಿಸುತ್ತಿದ್ದರು. ಹೀಗೆ [illegible] ವಾಡಿಕೆಯ ವಿಚಾರ. [illegible] ಕಳುಹಿಸಿದ ಚೀಟಿಗಳು [illegible] ವನ್ನು ವಿರೋಧಿಸಲು ಪ್ರೋತ್ಸಾಹಿಸಲಿಲ್ಲ. ಕಾಂಗ್ರೆಸು ಪಕ್ಷದ ಮೆಂಬರುಗಳು ಪ್ರತ್ಯೇಕ ಪಕ್ಷದವರನ್ನು ಕರೆತರುತ್ತಿದ್ದ ತಪ್ಪೇಕಾರದ ಮಾತುಗಳನ್ನು ಸಹಿಸಲಾರದೆ, ನಮ್ಮ ಪಕ್ಷದ ಹಲವರು ನಮ್ಮ ನಿಷೇಧವನ್ನು ಸೂಚಿಸಬೇಕೆಂದೂ, ನಾವು ಮೀಟಿಂಗಿನಿಂದ ಎದ್ದು ಹೊರಗೆ ಹೋಗಬೇಕೆಂದೂ ಒತ್ತಾಯ ಪಡಿಸುತ್ತಿದ್ದಾಗ್ಯೂ, ಹಾಗೆ ಮಾಡದೆ ನಾವು ದೇಶದ ಮುಂದಿನ ಹಿತದೃಷ್ಟಿಯಿಂದ ಸಹನೆ ಮತ್ತು ತಾಳ್ಮೆಯನ್ನು ತಳೆದುಕೊಳ್ಳುವುದು ಉಚಿತವೆಂದು ನಾನು ಬುದ್ಧಿ ಹೇಳಿದ್ದಾಗಿದೆ. ನಿಜಸಂಗತಿಗಳು ಹೀಗಿವೆ.

ಪಿ ಐ ಬೆಳ್ಯಪ್ಪ

ಇದೆಂಥಾ ಆರೋಪಣೆ?

ಕಳೆದ ವಾರದ ‘ಜನ್ಮಭೂಮಿ’ ಪತ್ರಿಕೆಯಲ್ಲಿ ‘ಇದು ಸಹಕಾರವೇ’ ಎಂಬ ವಾರ್ತೆಯನ್ನು ಓದಿ ನನಗೆ ಆಶ್ಚರ್ಯವುಂಟಾಯಿತು. ಪ್ರತ್ಯೇಕ ಪಕ್ಷದವರು ಸ್ವಾತಂತ್ರ್ಯ ದಿನ ಆಚರಣೆಯಲ್ಲಿ ಭಾಗವಹಿಸಲಿಲ್ಲವೆಂಬುದೇ ಸದರಿ ವಾರ್ತೆಯ ಆಪಾದನೆಯಾಗಿತ್ತು. ಈ ಆರೋಪಣೆಯಲ್ಲಿ ಒಂದಿಷ್ಟು ಸತ್ಯಾಂಶವಿಲ್ಲ. ಯಾಕಂದರೆ—ಮಡಿಕೇರಿ ಕೋಟೆಯೊಳಗೆ ಆ ದಿನ ಬೆಳಿಗ್ಗೆ ೧೧ ಗಂಟೆಗೆ ಧ್ವಜಾಭಿವಂದನೆ ನಡೆದಾಗ್ಗೆ ಅಲ್ಲಿ ಶ್ರೀ ಪಿ. ಐ ಬೆಳ್ಯಪ್ಪನವರು ಹಾಜರಿದ್ದದನ್ನು ನಾನು ಖುದ್ದು ನೋಡಿರುವೆನು. ಅಲ್ಲದೆ, ಮಡಿಕೇರಿ ಮಾರ್ಕೆಟಿನ ಬಳಿಯಲ್ಲೂ, ವೀರಾಜಪೇಟೆ, ಅಮ್ಮತ್ತಿ, ಸಿದ್ದಾಪುರವೇ ಮೊದಲಾದ ಕಡೆಗಳಲ್ಲೂ ನಡೆದ ಧ್ವಜಾರೋಹಣದ ಕಾರ್ಯಗಳಲ್ಲಿ ಪ್ರತ್ಯೇಕ ಪಕ್ಷದವರು ಭಾಗವಹಿಸಿರುವುದು ನನಗೆ ಗೊತ್ತಿದೆ. ಇತರ ಎಲ್ಲಾ ಕಡೆಗಳಲ್ಲೂ ಆ ಪಕ್ಷದವರು ಹಾಜರಿದ್ದರೆಂದೇ ನನ್ನ ತಿಳುವಳಿಕೆ. ಇದು ಹೊರತಾಗಿ ಆಚರಿಸುವ ಸ್ವಾತಂತ್ರ್ಯ ದಿನವಲ್ಲ. ಇಂಡಿಯಾಕ್ಕೆ ಸ್ವಾತಂತ್ರ್ಯ ಸಿಕ್ಕಿ, ೧೯೪೭ನೇ ಇಸವಿಯಿಂದಲೂ ಆಗಸ್ಟ ೧೫ರಲ್ಲಿ ಈ ದಿನವು ಆಚರಿಸಲ್ಪಡುತ್ತಾ ಬರುತ್ತಿದೆ. ಇದರಲ್ಲಿ ಕಾಂಗ್ರೆಸಿನವರೇ ಅಲ್ಲ, ದೇಶೀಯರೆಲ್ಲರೂ ಭಾಗವಹಿಸುತ್ತಾ ಬಂದಿರುತ್ತಾರೆ. ಇದು ಬಲಾತ್ಕಾರದ ಕಾರ್ಯವಲ್ಲ. ಸ್ವಯಂ ಇಚ್ಛೆಯಿಂದ ಮಾಡುವ ದೇಶಭಕ್ತಿಯ ಕಾರ್ಯ. ಹೀಗಿರುವಾಗ್ಗೆ ಈ ವರ್ಷ ಮಾತ್ರ ಪ್ರತ್ಯೇಕ ಪಕ್ಷದವರು ಎಂದಿನಂತೆ ಈ ಕಾರ್ಯದಲ್ಲಿ ಭಾಗವಹಿಸಿದ್ದರೂ ಭಾಗವಹಿಸಲಿಲ್ಲವೆಂದು ಅಪಪ್ರಚಾರ ಮಾಡುವುದು ಎಂದೂ ಸರಿಯಲ್ಲ.

ಕಳೆದ ಮಾರಾಟದ ಸಹಕಾರಿ ಸಂಘದ ಕಮಿಟಿ ಮೀಟಿಂಗೊಂದು ಆ ದಿನವೇ ಮಡಿಕೇರಿಯಲ್ಲಿ ಮಾಡಲ್ಪಟ್ಟಿತ್ತೆಂದು ಇನ್ನೊಂದು ಆರೋಪ. ಈ ಮೀಟಿಂಗಾದರೂ, ೧೧ ಗಂಟೆಗೆ ಧ್ವಜಾರೋಹಣ ಮುಗಿದ ಮೇಲೆ, ೧೨ ಗಂಟೆಗೆ ನಡೆದದ್ದಾಗಿದೆ. ಅಲ್ಲದೆ ಈ ಮೀಟಿಂಗನ್ನು ಮುಗಿಸಿಕೊಂಡು, ೩ ಗಂಟೆಗೆ ಕಾವೇರಿ ಮಹಲಿನಲ್ಲಿ ನಡೆದ ಸಾರ್ವಜನಿಕ ಭೋಜನ [illegible] ಕಮಿಟಿ ಮೆಂಬರುಗಳು ಹೋಗಿರುವರು. ಅಲ್ಲದೆ ಈ ಕಮಿಟಿ ಮೀಟಿಂಗಿಗೆ ಬಂದ ಹೊರಗಿನ ಮೆಂಬರುಗಳಿಗೆ ಮಡಿಕೇರಿಯ ಸ್ವತಂತ್ರ ದಿನಾಚರಣೆಯಲ್ಲಿ ಭಾಗವಹಿಸಲು ಅನುಕೂಲವಾಯಿತು. ಆದಕಾರಣ ಈ ಮೀಟಿಂಗಿನಿಂದ ಸ್ವತಂತ್ರ ದಿನಾಚರಣೆಗೆ ಯಾವದೊಂದೂ ಅಡಚಣೆ ಉಂಟಾಗಿರುವುದಿಲ್ಲ.

ಮೂರ್ನಾಡು ಯೂನಿಯನ್ನಿನವರು ಆ ದಿನ ರಾಷ್ಟ್ರೀಯ ಧ್ವಜವನ್ನು ಕಾಂಗ್ರೆಸ್ ಎಡ್‍ಹಾಕ್ ಕಮಿಟಿಗೆ ಕೊಡಲಿಲ್ಲವೆಂದು ಮತ್ತೊಂದು ಪ್ರಕಾರ. ಯೂನಿಯನ್ನಿನ ಹಾಲ್ ಮತ್ತು ಬೆಂಚು, ಕುರ್ಚಿಗಳನ್ನು ಬಿಟ್ಟುಕೊಟ್ಟವರು ಧ್ವಜವನ್ನು ಕೊಡದಿರಲು ಕಾರಣವೇನಿರಬಹುದೆಂದು ವಿಚಾರಿಸಿದೆ. ಸದರಿ ಯೂನಿಯನ್ನಿನಲ್ಲಿ ಚಿಕ್ಕ ೩ ಧ್ವಜಗಳಿರುವ [illegible] ದೊಡ್ಡ ಧ್ವಜವು ಅದರಲ್ಲಿಲ್ಲವೆಂದೂ, ಈ ವಿಚಾರ ಧ್ವಜ ಕೇಳಿದವರಿಗೆ ಹೇಳಲಾಗಿದೆಯೆಂದೂ ತಿಳಿಯಬಂತು. ಇನ್ನು ಶ್ರೀ ಪಿ. ಐ. ಬೆಳ್ಯಪ್ಪನವರು ಎಸೆಂಬ್ಲಿಯಲ್ಲಿ ನೀಡಿದ ಸಹಕಾರ, ನಂತರ ಆ ವರ ವರ್ತನೆ ಮುಂತಾದವುಗಳನ್ನು ಕುರಿತು ಅವರೇ ಉತ್ತರವಿತ್ತರೆ, ಅಪಪ್ರಚಾರಕ್ಕೆ ಎಡೆ ಇಲ್ಲದಂತಾಗುವುದು. ಹೇಗೂ ದೇಶದ ಹಿತವನ್ನು ಬಯಸುವವರೆಲ್ಲರೂ ಸತ್ಯಾಂಶವನ್ನು ವಿಚಾರಿಸಿ ತಿಳಿದುಕೊಳ್ಳಲು ಪ್ರಯತ್ನಿಸಬೇಕಾಗಿ ಕೋರುತ್ತೇನೆ.

‘ಸ್ವತಂತ್ರಪ್ರಿಯ’

ನೇಪಾಳ ಗೂರ್ಖ ಜನರನ್ನು ಬ್ರಿಟಿಷ್ ಸೇನೆಗೆ ಭರ್ತಿ ಮಾಡಲು ಭಾರತದಲ್ಲಿ ಕೊಡಲಾಗಿದ್ದ ಸೌಕರ್ಯಗಳನ್ನು ಹಿಂತೆಗೆದುಕೊಳ್ಳಲಾಗುವದೆಂದು ಭಾರತವು ನೇಪಾಳ, ಬ್ರಿಟನ್‍ಗಳಿಗೆ ತಿಳಿಸಿದೆ.

ಕೊಡಗು

ತಾ ೫-೯-೧೯೫೩ನೇ ಶುಕ್ರವಾರ

ಕಾಶ್ಮೀರದ ಸಮಸ್ಯೆ.

ಕಾಶ್ಮೀರ ಪ್ರಾಂತ್ಯವು ಹಿಂದೂಸ್ಥಾನಕ್ಕೆ ಸೇರಬೇಕೋ ಯಾ ಪಾಕಿಸ್ಥಾನದ ಭಾಗವಾಗಬೇಕೋ ಎಂಬ ಕಠಿಣ ಪ್ರಶ್ನೆಯನ್ನು ಬಗೆಹರಿಸಲು, ಭಾರತ ಭೂಮಿಗೆ ಸ್ವಾತಂತ್ರ್ಯ ದೊರೆತಂದಿನಿಂದಲೇ ಪ್ರಯತ್ನಗಳನ್ನು ನಡಿಸುತ್ತಾ ಬಂದಿದೆ. ಸಂಯುಕ್ತ ಜನಾಂಗಗಳ ಕೂಟವು ಈ ಪ್ರಶ್ನೆಯನ್ನು ಬಿಡಿಸಲು ದೀರ್ಘ ಕಾಲ ಸಾಧಿಸಿತು. ಆದರೂ ಮುಕ್ತಾಯಗೊಳ್ಳಲಿಲ್ಲ. ಈ ಮಧ್ಯೆ ಪಾಕಿಸ್ಥಾನದವರ ಪ್ರೋತ್ಸಾಹ ಮತ್ತು ಸಹಾಯದಿಂದ ಕಾಶ್ಮೀರದ ಗಡೀಯುಲ್ಲಿರುವ ಕಾಡುನಿವಾಸಿಗಳು ಕಾಶ್ಮೀರದ ಮೇಲೆ ಧಾಳಿಯನ್ನು ನಡಿಸಿದರು. ಕಾಶ್ಮೀರದ ಜನರ ಕೋರಿಕೆಯಂತೆ ಹಿಂದೂದೇಶದ ಸರ್ಕಾರವು ಅವರ ಪ್ರಾಣರಕ್ಷಣೆಗಾಗಿ ತಮ್ಮ ಸೈನ್ಯವನ್ನು ಅಲ್ಲಿಗೆ ಕಳುಹಿಸಿ, ಧಾಳಿ ನಡಿಸಿದವರನ್ನು ಹಿಂದಕ್ಕೆ ಓಡಿಸಬೇಕಾಯಿತು; ಮಾತ್ರವಲ್ಲ ತಮ್ಮ ಸೈನ್ಯದ ಒಂದು ಭಾಗವನ್ನು ಅಲ್ಲಿಯೇ ಇಡಬೇಕಾಯಿತು. ಪಾಕಿಸ್ಥಾನದವರು ಜನಾಂಗಗಳ ಕೂಟದ ಮುಂದೆ ಈ ಧಾಳಿಗೆ ತಮ್ಮ ಕೈವಾಡವಿಲ್ಲವೆಂದು ಪ್ರಾರಂಭದಲ್ಲಿ ವಾದಿಸಿದರೂ, ಕಡೆಗೆ ತಾವು ಸಹಾಯ ನೀಡಿದ್ದನ್ನೂ, ತಮ್ಮ ಸೈನ್ಯವೂ ಕೂಡ ಭಾಗವಹಿಸಿದನ್ನೂ ಒಪ್ಪಿಕೊಳ್ಳಬೇಕಾಯಿತು. ಸಂತರವೂ ಜನಾಂಗಗಳ ಕೂಟದ ಪ್ರತಿನಿಧಿಯು ಇಂಡಿಯಾಕ್ಕೆ ಬಂದು, ಇಂಡಿಯಾ ಮತ್ತು ಪಾಕಿಸ್ಥಾನವನ್ನು ಸರಿಸಮಾನತೆಯಲ್ಲಿ ಕಂಡು ರಾಜಿಯ ಪ್ರಯತ್ನಮಾಡಿದರು. ಯಾವದೊಂದೂ ಆತಂಕವಿಲ್ಲದ, ಸ್ವತಂತ್ರವಾದ 'ಪ್ಲೆಬಿಸೈಟ್' ಅಂದರೆ ಅಲ್ಲಿಯ ಜನತೆಯ ಅಭಿಪ್ರಾಯ ತೆಗೆಯುವ ಯೋಚನೆ ಮಾಡಲಾಯಿತು. ಹೀಗೆ ಅಭಿಪ್ರಾಯ ತೆಗೆಯಲು ಯೋಗ್ಯವಾದ ವಾತಾವರಣ ಕಲ್ಪಿಸಲಿಕ್ಕಾಗಿ ಅವಶ್ಯವಿರುವ ಏರ್ಪಾಡುಗಳ ವಿಚಾರದಲ್ಲಿ ಇಂಡಿಯ ಮತ್ತು ಪಾಕಿಸ್ಥಾನಗಳೊಳಗೆ ಒಪ್ಪಿಗೆ ಬರಲಿಲ್ಲ. ಸ. ಜ. ಕೂಟದ ಪ್ರತಿನಿಧಿಯು ಅಮೇರಿಕಾಕ್ಕೆ ಹಿಂತಿರುಗಿಹೋಗಿದ್ದವರು ಈಗ ಪುನಃ ಜಿನೇವಾದಲ್ಲಿ ಸೇರಿ ಇವೆರಡು ದೇಶಗಳ ಪ್ರತಿನಿತಿಗಳೊಂದಿಗೆ ಪರ್ಯಾಲೋಚನೆಮಾಡುತ್ತಿರುವರು. ಆದರೆ ಅಲ್ಲಿ ಚರ್ಚಿಸುತ್ತಿರುವ ಹೊಸ ಯೋಜನೆ ಏನೆಂಬುದು ಇನ್ನೂ ಹೊರಬಿದ್ದಿಲ್ಲ. ಗುಟ್ಟಿನಲ್ಲೇ ಇದೆ. ರಾಜಿಯ ಆಶೆ ಹೆಚ್ಚಾಗಿಲ್ಲ.

ಇಷ್ಟರಲ್ಲಿ ಅಮೇರಿಕದ ಒಂದು ಪತ್ರಿಕೆಯಲ್ಲಿ ಪಾಕಿಸ್ಥಾನದ ಬರಹಗಾರರೊಬ್ಬರು- ಬರುವ ಚಳಿಗಾಲದಲ್ಲಿ ಗಡಿಪ್ರಾಂತ್ಯದ ಕಾಡುನಿವಾಸಿಗಳು ಪುನಹ ಒಮ್ಮೆ ಕಾಶ್ಮೀರದ ಮೇಲೆ ಧಾಳಿ ನಡೆಸುವ ಸಂಭವವಿದೆಯೆಂದು ಪ್ರಕಟಿಸಿರುವರು.' ಹೀಗೆ ಧಾಳಿ ನಡೆಯುವದನ್ನು ತಡೆಯಲು ತಮಗೆ ಸಾಧ್ಯವಿಲ್ಲವೆಂದು ಪಾಕಿಸ್ಥಾನದ ಸರ್ಕಾರವು ಬಹಿರಂಗಪಡಿಸುತ್ತಿರುವದಾದರೂ, ಅದು ಒಳಗಿಂದೊಳಗೆ ಇದಕ್ಕೆ ಬೇಕಾಹ ಸನ್ನಾಹಗಳನ್ನು ಮಾಡುತ್ತಿರಬಹುದೆಂದೂ, ಪಾಕಿಸ್ತಾನದ ವತಿಯಿಂದಿರುವ 'ಆಜಾದ್' ಕಾಶ್ಮೀರದಲ್ಲಿ ಈ ಕಾಡುನಿವಾಸಿಗಳ ಗುಂಪುಗಳ ತಿರುಗಾಟವು ಇತ್ತೀಚೆಗೆ ಹೆಚ್ಚಾಗಿದೆಯೆಂದೂ, ಹೀಗೆ ಪುನಃ ಧಾಳಿ ನಡೆದದ್ದೇ ಆದರೆ ಅದು ಕಡೆಗೆ ಇಂಡಿಯಾ ಮತ್ತು ಪಾಕಿಸ್ಥಾನಗಳೊಳಗೆ ಯುದ್ಧ ಪ್ರಾರಂಭವಾದಂತೆಯೇ ಆಗುವದೆಂದೂ ಡೆಲ್ಲಿಯ ಅಧಿಕಾರಿಗಳು ಸೂಚಿಸಿರುವರು. ಈಜಿಪ್ಟದ ಜ್ಯೋತಿಷ್ಯರೊಬ್ಬರು ಇಂಡಿಯಾ-ಪಾಕಿಸ್ತಾನಗಳೊಳಗೆ ಯುದ್ಧ ನಡೆಯಬಹುದೆಂಬ ಭವಿಷ್ಯವನ್ನೂ ಹೇಳಿರುವರು.

ಅವರೆ ಕಾಶ್ಮೀರದ ಸರ್ಕಾರವು ಇಷ್ಟರೊಳಗೆ ಇಂಡಿಯಾ ಸರ್ಕಾರದೊಳಗೆ ತಾವೊಂದು ಪ್ರಾಂತ್ಯವಾಗಿರಲು ಒಪ್ಪಿರುರು. ಹೇಗೂ ಈ ಚರಿತ್ರಾರ್ಹ ಭೂಮಿಯಲ್ಲಿ ಯಾವಾಗ ತೋಪುಗಳ ಭೋರ್ಗರೆಯುವುದೋ ಎಂಬ ಭೀತಿ ಇದೆ. ಆಧುನಿಕ ಯುದ್ಧದಿಂದಾಗಬಹುದಾದ ಭಯಂಕರ ಅನಾಹುತಗಳನ್ನು ಉಭಯ ಕಡೆಯವರೂ ಚೆನ್ನಾಗಿ ಸ್ಮರಿಸಿಕೊಂಡು ಬೇಗನೆ ರಾಜಿಯ ತೀರ್ಮಾನಕ್ಕೆ ಬರುವರೆಂದು ಆಶಿಸುತ್ತೇವೆ.

ವರ್ತಮಾನ

ಕಳೆದ ತಾ ೨೭ರಲ್ಲಿ ನಾಪೋಕ್ಲಿನವರು ಕೈಲ್‍ಪೊಳ್ದು ಸಂಬಂಧ ತೆಂಗಿನಕಾಯಿಗೆ ಗುರಿ ಹೊಡೆಯುವದು ಮತ್ತು ಆಟೋಟಗಳನ್ನು ನಡೆಸಿದರೆಂದೂ, ಗೆದ್ದವರಿಗೆ ಹೈಸ್ಕೂಲಿನ ಹೆಡ್ಮಾಸ್ಟರು ಇನಾಮುಗಳನ್ನು ಹಂಚಿದರೆಂದೂ ತಿಳಿಯಬರುತ್ತದೆ.

ಕಳೆದ ತಾ. ೨೯ರಿಂದ ಈ ತಾ ೪ರ ವರೆಗೆ ಮಡಿಕೇರಿಯಲ್ಲಿ ೧ ಇಂಚು ೪೧ ಸೆಂಟು ಮಳೆಯಾಗಿದೆ. ಈ ವರ್ಷ ಜನವರಿ ೧ರಿಂದ ಆಗೋಸ್ತು ಅಂತ್ಯದ ವರೆಗೆ ೯೩ ಇಂಚು ೭೩ ಸೆಂಟು ಮಳೆಬಿದ್ದಿದೆ. ಕಳೆದ ವರ್ಷ ಇದೇ ಸಮಯದಲ್ಲಿ ೯೭ ಇಂಚು ೪೫ ಸೆಂಟು ಮಳೆಯಾಗಿತ್ತು.

ಕೊಡಗಿನ ಎಗ್ಸಿಕ್ಯುಟಿವ್ ಇಂಜನಿಯರಾಗಿದ್ದ ಶ್ರೀ ಉದಯಾಚಲಂರವರು ಅಲ್ಲಹಾಬಾದಿಗೆ ವರ್ಗಾಯಿಸಲ್ಪಟ್ಟು, ಶ್ರೀ ಎಸ್ ಹೆಚ್ ಅಭ್ಯಾಂಕರವರು ಡೆಲ್ಲಿಯಿಂದ ಈತಾ ೨ರಲ್ಲಿ ಬಂದು, ಇಲ್ಲಿಯ ಎಗ್ಸಿಕ್ಯುಟಿವ್ ಇಂಜಿನೀಯರ್ ಹುದ್ದೆಯ ಚಾರ್ಜನ್ನು ತಾ. ೫ರಲ್ಲಿ ವಹಿಸಿಕೊಳ್ಳುವರೆಂದು ತಿಳಿಯುತ್ತೇವೆ.

ಕಳೆದ ತಾ ೧೫ರಲ್ಲಿ ವೆಲ್ಲಿಂಗ್ಟನಿನಲ್ಲಿ ನಡೆದ ಮಿಲಿಟರಿ ಸ್ಪೋರ್ಟ್ಸನಲ್ಲಿ ಕ್ಯಾಪ್ಟನ್ ಕಾಳಪ್ಪನವರಿಗೂ, ಸಿ ಸಿ. ಕುಂಞಪ್ಪನವರಿಗೂ ಮತ್ತು ಕೆ. ಬಿ. ತಿಮ್ಮಯ್ಯನವರಿಗೂ ಇನಾಮುಗಳು ದೊರೆತವೆಂದೂ, ಗೆದ್ದವರಿಗೆ ಇನಾಮುಗಳನ್ನು ಮೇಜರ್ ಬಿ. ಕೆ ಸೋಮಯ್ಯನವರ ಪತ್ನಿಯವರು ಹಂಚಿದರೆಂದೂ ತಿಳಿಯುತ್ತೇವೆ.

ಮುಂದೆ ನಡೆಯುವ ಟಿ. ಎಸ್. ಎಲ್. ಸಿ. ಪರೀಕ್ಷೆಗೆ ಹಣ ಕಟ್ಟುವವರು ಅಕ್ಟೋಬರ್ ೧ನೇ ತಾರೀಕಿನೊಳಗೆ ಕಳುಹಿಸಬೇಕೆಂದೂ ಅದರ ನಂತರ ಅಕ್ಟೋಬರ್ ೧೫ನೇ ತಾರೀಕಿನೊಳಗೆ ೧ ರೂ. ದಂಡ ತೆತ್ತು ಹಣ ಕಳುಹಿಸಬಹುದೆಂದೂ 'ಮದರಾಸು ಕಮಿಷನರ್ ಆಫ್ ಗವರ್ನಮೆಂಟ್' ಎಗ್ಸಾಮಿನೇಶನ್ಸ್' ಇವರು ತಿಳಿಸುತ್ತಾರೆ.

ಪೆರಾಜರ್‌ಪೇಟೆ ಹೋಬಳಿ ತೋರೆನೂರು ಗ್ರಾಮದ ಶ್ರೀ ಟಿ ಆರ್. ಕೆಂಗಪ್ಪನವರಲ್ಲಿ ಒಂದು ಜೊತೆ ಗದ್ದೆ ಉಳುವ ಬಿಳಿ ವರ್ಣದ ಗಿಡ್ಡ ಎತ್ತುಗಳು ಸುಮಾರು ಒಂದೂವರೆ ತಿಂಗಳಿಂದ ಬಂದು ಸೇರಿಕೊಂಡಿವೆಯೆಂದೂ, ವಾರಿಸುದಾರರು ತಕ್ಕ ರುಜುವಾತಿನಿಂದ ಹೊಡಕೊಂಡು ಹೋಗಬಹುದೆಂದೂ ಅವರು ತಿಳಿಸಿರುವರು.

ಶ್ರೀಗಳಾದ ಎನ್. ಸಿ ಸುಬ್ಬಯ್ಯನವರು, ಕೆ. ಪಿ. ಕುಟ್ಟಪ್ಪನವರು ಮತ್ತು ಕೆ. ಬಿ ಪೊನ್ನಪ್ಪನವರುಗಳು ಕೆಲಸದಿಂದ ನಿವೃತ್ತರಾಗಿ ಹೋದ ಸಂದರ್ಭದಲ್ಲಿ ಪಬ್ಲಿಕಿನವರು ಕಳೆದ ಜುಲೈ ತಿಂಗಳಲ್ಲಿ ಕೊಟ್ಟ ಟೀ ಪಾರ್ಟಿಗೆ ಖರ್ಚಾದ ರೂ. ೭೯೭ರಲ್ಲಿ ರೂ. ೨೫೪-೨-೦ ಖರ್ಚಾಗಿ, ಉಳಿದ ರೂ. ೩೭-೧೪-೦ನ್ನು ಕೊಡಗಿನ ರೆಡ್ ಕ್ರಾಸ್ ಸಂಘಕ್ಕೆ ಕೊಡಲಾಗಿದೆಯೆಂದು ಸ್ವಾಗತಾಧ್ಯಕ್ಷರಾದ ಶ್ರೀ ಪಿ. ಎ. ಚಂಗಪ್ಪನವರು ತಿಳಿಸಿರುತ್ತಾರೆ.

ಕೊಡಗಿನಲ್ಲಿ ಅವಲಕ್ಕಿ ಮತ್ತು ಪುರಿಯನ್ನು (ಅC) ಎಂಬಷ್ಟು ಸೇರಿನ ಪರಿಮಾಣದಲ್ಲಿ ತಯಾರಿಸಲು ಮತ್ತು ಮಾರಾಟಮಾಡಲು ಅನುಕೂಲವಾಗುವಂತೆ ಆಹಾರ ನಿಯಂತ್ರಣದ ನಿಬಂಧನೆಗಳನ್ನು ಈಗಾಗಲೇ ತಿದ್ದುಪಡಿ ಮಾಡಲಾಗಿದೆ. ಕೆಲವರು ಈ ಅವಕಾಶವನ್ನು ಉಪಯೋಗಿಸಿಕೊಂಡು ಅವಲಕ್ಕಿ ಮತ್ತು ಪುರಿಯನ್ನು ಕಾಳಸಂತೆಯಲ್ಲಿ ಹೆಚ್ಚು ಕ್ರಯಕ್ಕೆ ಮಾರಾಟಮಾಡುತ್ತಾರೆಂದು ತಿಳಿಯಬಂದಿದೆ. ಅವಲಕ್ಕಿ ಸೇರಿಗೆ ೦-೬-೯ ಪೈ ಮತ್ತು ಪುರಿ ಸೇರಿಗೆ ೦-೩-೩ ಪೈಯಂತೆ ಮೇಲೆ ಸೂಚಿಸಿದ ಪರಿಮಾಣದ ಅವಧಿಯಲ್ಲಿ ಮಾರಾಟ ಮಾಡಬಹುದೇ ವಿನಹ ಹೆಚ್ಚಿಗೆ ಕ್ರಯಕ್ಕೆ ಮಾರಾಟ ಮಾಡಕೂಡದು. ಹೆಚ್ಚಿನ ಕ್ರಯಕ್ಕೆ ಮಾರಾಟಮಾಡಿದವರು ತಕ್ಸೀರಿಗೆ ಗುರಿಯಾಗುತ್ತಾರೆಂದು ರೇಷನಿಂಗ್ ಡೈರೆಕ್ಟರವರು ಪ್ರಕಟಿಸಿರುತ್ತಾರೆ.

ಈ ತಾ ೨೦ ರಲ್ಲಿ ನಡೆಯಲಿರುವ ವೀರಾಜಪೇಟೆ ಮುನ್ಸಿಪಲ್ ಕಮಿಟಿ ಮೆಂಬರುಗಳ ಚುನಾವಣೆಗೆ ೧೫ ಸ್ಥಳಗಳಿಗೆ ೩೭ ಜನರು ಉಮೇದುವಾರರಾಗಿ ನಿಂತಿರುವರು. ಕಾಂಗ್ರೆಸು ವತಿಯಿಂದ ಶ್ರೀಗಳಾದ ರಾಮಶೆಟ್ಟಿ, ಜಯಪ್ಪ, ಎಸ್. ಎಸ್. ರಾಮಮೂರ್ತಿ, ಜಯರಾಮಸಿಂಗ್, ಡಾ. ದೇಶಿಕಾಚಾರಿ, ಪಿ. ಯಂ. ಚಿಣ್ಣಪ್ಪ, ನಾರಾಯಣ ಕುರೂಪ್, ಲಾರೆನ್ಸ್ ಮಿನೆಜಸ್, ಎ. ಬಿ. ಐಯ್ಯಣ್ಣ, ಮಿಸಸ್ ಚೆಪ್ಪುಡಿರ ಕೆ. ಚಿಣ್ಣಪ್ಪ, ಡಿ. ಹೆಚ್. ಅಬ್ದುಲ್‌ರಹಮನ್, ಎಂ ಯುಸೂಫ್ ಸಾಹೇಬ್, ಅಂದ್ರು ಹಾಜಿ, ಟಿ. ಮೀಯಾ ಸಾಹೇಬ್ ಮತ್ತು ಅಬ್ದುಲ್ ಸತ್ತಾರ್‌ಸಾಹೇಬರೂ, ಸ್ವತಂತ್ರರಾಗಿ ಶ್ರೀಗಳಾದ ನೇಮಿರಾಜಯ್ಯ, ಮೋಹನ್‌ವೇಲು, ಶಿವನಂಜಪ್ಪ, ಭುಜಬಲ್ಲಯ್ಯ, ಬಿ. ಪಿ. ಬೋಪಯ್ಯ, ಹೆಚ್. ಬಿ. ತಮ್ಮಯ್ಯ, ಬಿ ಯನ್. ಅಬ್ದುಲ್ ರಹಮನ್, ಮನ್ನ ಮಿರಾ, ಎ. ಪಿ ಸಾದಲಿ, ಡಾ॥ ಅಶ್ವಣ್ಣ, ಪುಲಿಯಂಡ ಕಾಯಪ್ಪ, ಪಿ. ಬಿ. ಭೀಮಯ್ಯ, ಎ. ಬಿ. ಗಣಪತಿ, ಕೆ. ಸಿ. ಕರುಂಬಯ್ಯ, ಕೆ. ಎ. ಚಿಣ್ಣಪ್ಪ, ಡಾ. ಯಂ. ಯೇ. ಚಂಗಪ್ಪ, ಚಿನ್ನಸಾಮಿ, ಎಂ. ಸಿ. ನಂಜಪ್ಪ, ಗೌಸ್‌ಖಾನ್, ಸಿ ಎಸ್ ನಂಜಪ್ಪ ಮತ್ತು ಮಿಸಸ್. ಡಾ॥ ಪಿ. ಬಿ. ಸೋಮಪ್ಪನವರುಗಳೂ ಉಮೇದುವಾರರುಗಳಾಗಿ ನಿಂತಿರುವರು.

ಕಳೆದ ಜನವರಿ ತಿಂಗಳು ೧೩ರಲ್ಲಿ ಗೋಣಿಕೊಪ್ಪಲಲ್ಲಿ ನಡೆದ ಚುನಾವಣೆಯ ಪಬ್ಲಿಕ್ ಮೀಟಿಂಗಿನಲ್ಲಿ ಕ್ರಿ. ಪ್ರೊ. ಕೋಡಿನ ೧೪೭ ನೇ ಸೆಕ್ಷನ್ ಪ್ರಕಾರ ದಂಗೆ ನಡೆಸಿದರೆಂಬ ಆಪಾದನೆಯ ಮೇರೆ ಶ್ರೀ ಕೆ. ಕೆ. ಅಪ್ಪಯ್ಯ ಮತ್ತು ೨೯ ಜನರು ಪ್ರತ್ಯೇಕ ಪಕ್ಷದ ಕೆಲಸಗಾರರ ಮೇಲೆ ಪೊಲೀಸಿನವರು ವೀರಾಜಪೇಟೆ ಮುನ್ಸೀಫ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ಮೊಖದಮ್ಮೆ ಹೂಡಿ, ಕಳೆದ ತಾ. ೨೮ರಲ್ಲಿ ಪ್ರಥಮ ವಿಚಾರಣೆ ನಡೆಯಲಿಕ್ಕಿದ್ದದನ್ನು ಇಬ್ಬರು ಅಪರಾಧಿಗಳಿಗೆ ಸಮನ್ಸ್ ಜಾರಿಯಾಗಲಿಲ್ಲವೆಂದು, ಅಕ್ಟೋಬರ್ ತಾ. ೩ಕ್ಕೆ ಎಡ್ಜರನ್ ಮಾಡಲಾಗಿದೆಯೆಂದು ತಿಳಿಯಬರುತ್ತದೆ.

ತಿತಿಮತಿ ಹೊಸ ಶಾಲಾ ಕಟ್ಟಡ.

ತಿತಿಮತಿಯಲ್ಲಿ ತಮ್ಮ ಮಾತಾ ಪಿತೃಗಳ ಸ್ಮಾರಕವಾಗಿ ಶ್ರೀ ಮನೆಯಪಂಡ ಗಣಪತಿ ಮತ್ತು ಪತ್ನಿಯವರು ಸುಮಾರು ೨೦ ಸಾವಿರ ರೂ ಖರ್ಚಿನಿಂದ ಕಟ್ಟಿಸಿರುವ ಮನೆಯಪಂಡ ನಾಚಪ್ಪ-ನೀಲವ್ವ ಶಾಲಾ ಕಟ್ಟಡವನ್ನು ಕಳೆದ ತಾರೀಕು ೨೫ರಲ್ಲಿ ಇಂಡಿಯಾದ ಮುಖ್ಯ ಸೇನಾನಿಯಾದ ಜನರಲ್ ಕೆ ಎಂ ಕಾರ್ಯಪ್ಪನವರು ತೆರೆದರು. ಚೀಫ್ ಕಮಿಷನರಾದ ಬಿ ಕ ಬೇಡಿಯವರು ಅಧ್ಯಕ್ಷರಾಗಿದ್ದರು. ಸಮಾರಂಭವು ಸಾಯಂಕಾಲ ನಾಲ್ಕುವರೆ ಗಂಟೆಗೆ ಪ್ರಾರಂಭವಾಯಿತು. ತುಂಬಾ ಜನರು ನೆರೆದಿದ್ದರು. ಶ್ರೀ ಎಂ. ಎಸ್. ಗಣಪತಿಯವರು ಜ. ಕಾರ್ಯಪ್ಪನವರಿಗೆ ಒಂದು ಬಿಸ್ಕವತ್ತಳೆಯನ್ನರ್ಪಿಸಿದರು. ನಂತರ ಸ್ವಾಗತ ಅಧ್ಯಕ್ಷರಾದ ಶ್ರೀ ಸಿ. ಎಸ್. ಪೂವಯ್ಯನವರು ಸ್ವಾಗತ ಭಾಷಣವನ್ನು ಮಾಡಿದರು. ಜ. ಕಾರ್ಯಪ್ಪನವರು ಉತ್ತರವೀಯುತ್ತಾ, ಗಣಪತಿಯವರ ಉದಾರ ಕಾರ್ಯವನ್ನು ಮೆಚ್ಚಿ, ಅಲ್ಲಿ ವಿದ್ಯಾಭ್ಯಾಸ ಮಾಡುವ ಮಕ್ಕಳ ದೇಹ ಹಾಗೂ ಮನಸ್ಸಿನ ಆರೋಗ್ಯದ ಕಡೆಗೆ ತುಂಬಾ ಎಚ್ಚರವಿಡಬೇಕೆಂದು ಹೇಳಿ, ಕಟ್ಟಡವನ್ನು ತೆರೆದರು. ಮುಖ್ಯಮಂತ್ರಿಯಾದ ಶ್ರೀ ಸಿ. ಎಂ. ಪೂಣಚ್ಚನವರು ತಮ್ಮ ಚಿಕ್ಕ ಭಾಷಣದಿಂದ ಕಟ್ಟಡದಲ್ಲಿ ಶ್ರೀ ನಾಚಯ್ಯ-ನೀಲವ್ವನವರ ಭಾವಚಿತ್ರವನ್ನು ತೆರೆದರು. ಅಧ್ಯಕ್ಷರ ಮುಕ್ತಾಯದ ಭಾಷಣವಾದ ಮೇಲೆ ನೆರೆದಿದ್ದವರಿಗೆ ತಿಂಡಿತೀರ್ಥಗಳು ಹಂಚಲ್ಪಟ್ಟವು.

ಕೃತಜ್ಞತಾ ವಂದನೆ.

ತಾರೀಕು ೧೨-೮-೫೩ನೇ ಮಂಗಳವಾರ ದಿನ ಶಿವಾಧೀನರಾದ ನನ್ನ ತಂದೆ ಸುಬ್ರಾಯನವರ ವಿಯೋಗ ಕಾಲದಲ್ಲಿ ಪ್ರತ್ಯಕ್ಷ ಬಂದೂ, ಸಂತಾಪ ಸೂಚನಾ ಪತ್ರ ಬರೆದೂ ನಮ್ಮ ದುಃಖದಲ್ಲಿ ಭಾಗಿಗಳಾದ ಬಂಧು ಮಿತ್ರರನ್ನು ಪ್ರತ್ಯೇಕ ಬರೆದು ವಂದಿಸುವುದು ಅಸಾಧ್ಯವಾದ ಕಾರಣ ಅವರೆಲ್ಲರಿಗೂ ಈ ಮೂಲಕ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಎಂ ಎಸ್. ನಂಜಪ್ಪ,
ನೊಖ್ಯ ಗ್ರಾಮ,
ತಿತಿಮತಿ.

॥ ಕಮ್ಯುನಿಸ್ಟ್ ತತ್ವ ॥

ಲೇ:—ಶ್ರೀ ಪಿ ಜಿ ಐಯ್ಯಪ್ಪ, ಮಡಿಕೇರಿ

'ಕಮ್ಯೂನಿಸ್ಟ್, ಕಮ್ಯೂನಿಜಂ' ಅಥವಾ 'ಕಮ್ಯೂನಿಸ್ಟ್ ತತ್ವ' ಎಂಬ ಮಾತುಗಳು ಅನೇಕರ ಬಾಯಿಂದ ಆಗಾಗ್ಗೆ ಹೊರಡುವುದನ್ನೂ, ಆ ವಿಷಯದಲ್ಲಿ ಆಗಿಂದಾಗ್ಗೆ ಚರ್ಚೆಗಳು ನಡೆಯುವುದನ್ನೂ ನಾವು ಎಲ್ಲೆಲ್ಲೂ ಕೇಳುತ್ತಿದ್ದೇವೆ. ಆದರೆ ಆ ತತ್ವದ ನಿಜವಾದ ಪರಿಜ್ಞಾನವನ್ನು ನಮ್ಮಲ್ಲಿ ಯಾರೂ ವಿಚಾರಿಸಿ ತಿಳಿದುಕೊಂಡ ಹಾಗೆ ನನಗೆ ಈ ವರೆಗೆ ಮನವರಿಕೆಯಾಗಲಿಲ್ಲ. ಅಂತೂ ನಾನು ಈ ತತ್ವವನ್ನು ಓದಿ, ಮತ್ತು ಕೇಳಿ ತಿಳಿದ ಕೆಲಂಶವನ್ನು ಮುಖ್ಯಗಿಗೆ ಹೇಳುವುದಾದರೆ, ಈ ತತ್ವಕ್ಕೆ ನಮ್ಮ ಈ ದೇಶದಲ್ಲಿ, ಅಂದರೆ ಕೊಡಗಿನಲ್ಲಿ ಎಡೆಯೇ ಇಲ್ಲವೆಂದು ಹೇಳಬೇಕಾಗಿದೆ.

ಕಳೆದ ವರ್ಷದ ವರೆಗೆ ನಮ್ಮ ಹತ್ತಿರ ಒಬ್ಬ ಮರ ವ್ಯಾಪಾರಿಯು ಮರ ವ್ಯಾಪಾರದ ನಿಮಿತ್ತ ಆಗಾಗ್ಗೆ ಬರುತ್ತಿದ್ದರು. ಅವರು ಬಂದಾಗಲೆಲ್ಲಾ ನನ್ನೊಡನೆ ಬಹಳ ಆಸಕ್ತಿಯಿಂದ ರಾಜಕೀಯ ವಿಷಯದಲ್ಲಿ ಚರ್ಚಿಸುತ್ತಿದ್ದರು. ಅವರು ಹಿಂದೂದೇಶದ ಕಾಂಗ್ರೆಸ್ ರಾಜ್ಯಭಾರವನ್ನು ಕುರಿತು ಕಲವೇಳೆ ಬಹು ತೀವ್ರ ರೀತಿಯಲ್ಲಿ ಖಂಡಿಸಿ ತಿರಸ್ಕರಿಸುತ್ತಿದ್ದರು. ಅದ ಕಾರಣದಿಂದ ನಾನೊಮ್ಮೆ ಅವರನ್ನು ಕುರಿತು 'ನೀವೇನ ಕಮ್ಯೂನಿಸ್ಟರೇ? ಎಂದು ಪ್ರಶ್ನಿಸಿದಕ್ಕೆ ಅವರು 'ನಾನು ಕಮ್ಯೂನಿಸ್ಟನಲ್ಲ; ಆದರೆ ನಾನು ಅವರ ಮೀಟಿಂಗುಗಳಿಗೆ ಆಗಾಗ ಹೋಗಿ ಭಾಗಿಯಾಗುತ್ತಿದ್ದೇನೆ. ಅವರ ಕೆಲವು ಧ್ಯೇಯಗಳನ್ನು ನಾನೂ ಒಪ್ಪುತ್ತೇನೆ. ಆದರೆ, ಅವರು ದೇವರನ್ನು ನಿರಾಕರಿಸುತ್ತಾರೆ. ನಾನು ದೇವರಲ್ಲಿ ತುಂಬಾ ಭಕ್ತಿಯುಳ್ಳವನಾಗಿದ್ದೇನೆ ಆದುದರಿಂದ ನಾನು ಕಮ್ಯೂನಿಸ್ಟ ಹೇಗೆ ಆಗುವುದು?' ಎಂಬದಾಗಿ ನನಗೆ ಉತ್ತರಕೊಟ್ಟರು. ಅಷ್ಟಲ್ಲದೆ ಕೊಡಗಿನ ಒಬ್ಬಿಬ್ಬರು ಪ್ರಮುಖ ಕಮ್ಯೂನಿಸ್ಟ ಮುಂದಾಳುಗಳ ಹೆಸರನ್ನೂ ಹೇಳಿದರು.

ಇವರು ಹೇಳಿದ ಒಬ್ಬಿಬ್ಬರು ಕೊಡಗು ಕಮ್ಯೂನಿಸ್ಟರ ಪರಿಚಯವು ಮತ್ತು ಅವರ ರಾಜಕೀಯ ಧ್ಯೇಯವೂ ನನಗೆ ಸ್ವಲ್ಪ ಮಟ್ಟಿಗೆ ತಿಳಿದಿದೆ. ಆ ತಿಳುವಳಿಕೆಯಿಂದ ನನ್ನ ಅಭಿಪ್ರಾಯವನ್ನು ಹೇಳುವುದಾದರೆ, ಈ ಮಹನೀಯರು ಕಮ್ಯೂನಿಸ್ಟರ ತತ್ವಗಳನ್ನು ಸರಿಯಾಗಿ ಮನನಮಾಡಿ, ಅದರಿಂದ ಕೃತಾರ್ಥರಾಗಿ, ಆ ತತ್ವವನ್ನು ಅವಲಂಬಿಸಿದವರೆಂದು ಹೇಳಲು ಸಾಧ್ಯವಿಲ್ಲ. ಇದಕ್ಕೆ ಇವರ ಈ ಮೊದಲಿನ ನಡಾವಳಿಕೆಗಳು, ಇಂದು ಅವರು ಅವರ ದೈನಂದಿನ ವ್ಯವಹಾರಗಳಲ್ಲಿ ನಡೆಸುತ್ತಿರುವ ಚಟುವಟಿಕೆಗಳೇ ಸಾಕ್ಷಿ. ಅದು ಹೇಗೇ ಇರಲಿ ಕೊಡಗಿನಲ್ಲಿ ಈ ತತ್ವಕ್ಕೆ ಎಡೆ ಇದೆಯೇ? ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸುವುದೇ ಈ ಬರವಣಿಗೆಯ ಮುಖ್ಯ ಗುರಿ.

ಕಮ್ಯೂನಿಜಂ ಎಂಬುದರ ಡಿಕ್ಷ್‌ನರಿ ಅರ್ಥವು ಹೀಗಿದೆ. 'Vesting of property in the community, each member working according to his capacity and receiving according to his wants' ರಂಸ್ಕೃತ ಎಲ್ಲಾ ಆಸ್ತಿಪಾಸ್ತಿಗಳು ಸಮಾಜದ ಹಕ್ಕಾಗಿದ್ದು, ಪ್ರತಿಯೊಬ್ಬ ವ್ಯಕ್ತಿಯೂ ಅವನ ಶಕ್ತ್ಯಾನುಸಾರ ಸಮಾಜಕ್ಕೆ ಕೆಲಸ ಸಲ್ಲಿಸಿ, ಅವನ ಅವಶ್ಯಕತೆಗೆ ತಕ್ಕಂತೆ ಪ್ರಯೋಜನವನ್ನು ಹೊಂದುವುದು.' ಎಂದು.

ಈ ತತ್ವವು ಸೋವಿಯಟ್ ರಷ್ಯದಲ್ಲಿ ಪ್ರಾರಂಭವಾಯಿತು. ಈಗ ಅವರು ಈ ತತ್ವವನ್ನು ಲೋಕದಲ್ಲೆಲ್ಲಾ ಹರಡುವ ಪ್ರಯತ್ನದಲ್ಲಿದ್ದಾರೆ. ಈ ತತ್ವಗಳನ್ನು ಬೋಧಿಸತಕ್ಕ ಅನೇಕ ಪುಸ್ತಕಗಳು ಬಹು ಸುಲಭ ಬೆಲೆಗೆ ಮಾರಲ್ಪಡುತ್ತಿವೆ ಅಲ್ಲದೆ ಈ ತತ್ವವನ್ನು ಜನರಿಗೆ ಬೋಧಿಸಿ ಎಲ್ಲರೂ ಇದೇ ರೀತಿಯ ಸಮಾಜಗಳನ್ನು ಎಲ್ಲಾ ದೇಶಗಳಲ್ಲಾ ಹರಡಬೇಕೆಂಬ ಉದ್ದೇಶದಿಂದ ಅನೇಕ ಜನರು ಈ ತತ್ವವನ್ನು ಬೋಧಿಸುವ ಕೆಲಸಗಳನ್ನು ಕೈಕೊಂಡಿರುವರೆಂದೂ, ಅವರಿಗೆ ಸಾಕಷ್ಟು ಪ್ರೋತ್ಸಾಹ ಮತ್ತು ಸಹಾಯ ರಷ್ಯದಿಂದ ಬರುತ್ತದೆ ಎಂದೂ ನಾನು ಕಳೆದ ಲೋಕ ಸಭೆಯಲ್ಲಿ ಆದ ಚರ್ಚೆಯಿಂದ ತಿಳಿದೆನು.

ಯಾವುದೇ ಒಂದು ತತ್ವವಾಗಲೀ ಯಾ ಧರ್ಮವಾಗಲೀ, ಎಲ್ಲಾ ಕಾಲಗಳಲ್ಲಿ, ಎಲ್ಲಾ ದೇಶಗಳಲ್ಲಿ ಮತ್ತು ಎಲ್ಲಾ ಸ್ಥಿತಿಗಳಲ್ಲೂ ಒಳ್ಳೆಯದೇ ಆಗಿರತಕ್ಕಂಥದು ಖಂಡಿತವಾಗಿಯೂ ಹೇಳಲು ಸಾಧ್ಯವಿಲ್ಲ ಎಂದರೆ ಕಾಲ, ದೇಶ, ಸ್ಥಿತಿಗತಿಗಳ ಸಾರವಾಗಿ ಒಬ್ಬನಿಗೆ ಅಮೃತಪ್ರಾಯವಾಗಿರುವ ವಸ್ತು ಇನ್ನೊಬ್ಬನಿಗೆ ವಿಷವಾಗಿ ಪರಿಣಮಿಸುತ್ತದೆ ಎಂಬ ಮಾತು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಒಂದೆಡೆ ಪ್ಲೇಗಿನ ಜ್ವರ ಬಂದು ಜನರು ಸಾಯುತ್ತಿದ್ದರೆ, ಅದಕ್ಕೆ ಪ್ಲೇಗ್ ಇನಾಕ್ಯುಲೇಶನ್ ಮಾಡಿದರೆ ಅವರಿಗೆ ವಾಸಿಯಾಗುತ್ತದೆ. ಇದನ್ನು ನೋಡಿ ಇನ್ನೊಂದು ಕಡೆ ಟೈಫಾಯಿಡ್ ಕಾಯಿಲೆಯಿಂದ ನರಳುವವರನ್ನು ನೋಡಿ, ಅಲ್ಲಿ ಜ್ವರ ಬಂದವರಿಗೆ ಪ್ಲೇಗು ಡಾಕ್ಟರ್ ಹಾಕಿ ನಾಸಿಯಾಗಿದೆ; ಇವರಿಗೂ ಜ್ವರವಿದೆ. ಆದುದರಿಂದ ಇವರಿಗೂ ಅದೇ ಔಷಧಿ ಕೊಟ್ಟರೆ ಆದೀತೆಂದು ಟೈಫಾಯಿಡ್ ಜ್ವರಕ್ಕೆ ಪ್ಲೇಗು ಇನಾಕ್ಯುಲೇಶನ್ ಕೊಟ್ಟರೆ ಅವರಿಗೆ ಗುಣವಾಗಲಾರದು. ಬದಲು ಅವರೆಲ್ಲಾ ಸತ್ತೇ ಹೋದಾರು. ಪ್ಲೇಗ್ ಜ್ವರವೇ ಆಗಲಿ ಯಾ ಟೈಫಾಯಿಡ್ ಜ್ವರವೇ ಆಗಲಿ ಅದರ ಹೊರಗಿನ ಚಿಹ್ನೆಯು ಜ್ವರವೆಂದು ಮಾತ್ರಕ್ಕೆ ಒಂದೇ ರೀತಿಯ ಚಿಕಿತ್ಸೆ ನೀಡಲಾಗದು. ಒಂದೊಂದು ಕಾಯಿಲೆಗೆ ಮಾಡಬೇಕಾದ ಚಿಕಿತ್ಸೆಯು ಅದರದರ ಕಾರಣವನ್ನು ಕಂಡುಹಿಡಿದು ಅದಕ್ಕೆ ತಕ್ಕುದಾಗಿ ಮಾಡಬೇಕೇ ಹೊರತು ಹೊರಗಿನ ಚಿಹ್ನೆಯನ್ನು ನೋಡಿ ಅಲ್ಲ ಎಂದು ನೀವು ಒಪ್ಪುವಿರಿ. ಆದುದರಿಂದ ಇಲ್ಲಿ ನಾವು ಏತಕ್ಕೆ ಮಾಡಬಾರದು ಎಂಬದಾಗಿ ಒಂದು ತತ್ವ ಯಾ ಧ್ಯೇಯವನ್ನು ಕಾಲ, ದೇಶ, ಸನ್ನಿವೇಶಗಳನ್ನು ಆಲೋಚಿಸದೆ ಮಾಡುವುದು ಎಂದೂ ಬುದ್ಧಿವಂತಿಕೆಯೂ ಅಲ್ಲ ಮತ್ತು ಅದರಿಂದ ಲೋಕಕ್ಕೆ ಹಾನಿಯಲ್ಲದೆ ಏನೂ ಪ್ರಯೋಜನವಾಗಲಾರದು.

ಈ ದೃಷ್ಟಿಯಿಂದ ನಮ್ಮಲ್ಲಿ ಒಂದೊಂದು ಪಾರ್ಟಿ ಪಕ್ಷಗಳನ್ನು ಸ್ಥಾಪಿಸಿ ನಮ್ಮ ಸರಕಾರದ ಧ್ಯೇಯ, ತತ್ವ ಮತ್ತು ಗುರಿಗಳನ್ನು ಬದಲಾಯಿಸಲು ಪ್ರಯತ್ನಪಡುವ ಮುಂದಾಳುಗಳು, ತಾವು ಪ್ರತಿಪಾದಿಸಲು ಹೊರಟಿರುವ ತತ್ವಗಳನ್ನು ನಾನಾ ದೃಷ್ಟಿಯಿಂದ ಪರಿಶೀಲಿಸಿ, ಚರ್ಚಿಸಿ, ಕ್ರಮವಾಗಿ ತಿಳಿದು ಮಾಡಿ ಎಲ್ಲಾ ವಿಧದಲ್ಲೂ ಅದು ಜನಸಮುದಾಯದ ಏಳಿಗೆಗೆ ನಿಜವಾಗಿಯೂ ಸಹಾಯಕವಾದದ್ದು ಎಂಬುದಾಗಿ ಮನದಟ್ಟಾದ ಮೇಲೆ ಮಾತ್ರ ಅಂತಹ ತತ್ವ ಯಾ ಧ್ಯೇಯವನ್ನು ದೇಶದಲ್ಲಿ ಹರಡಲು ಮತ್ತು ಜಾರಿಗೊಳಿಸಲು ಪ್ರಯತ್ನ ಪಡಬೇಕು. ಯಾವುದೇ ಒಂದು ತತ್ವವೂ ಯಾವ ಕಾಲದಲ್ಲಿಯೂ ಒಂದೇ ರೀತಿಯಲ್ಲಿ ಎಲ್ಲಾ ಜನರಿಗೂ ಪ್ರಯೋಜನಕಾರಿಯಾಗಿ ಪರಿಣಮಿಸಲಾರದು. ಆದುದರಿಂದ ನಾವು ಕೇವಲ ಮಾಡಬೇಕಾದದ್ದು ಹೆಚ್ಚಿನ ಜನರಿಗೆ ಹೆಚ್ಚಿನ ರೀತಿಯಲ್ಲಿ ಪ್ರಯೋಜನಕಾರಿಯಾಗುವ ಧ್ಯೇಯವು ಕೆಲವು ಜನರಿಗೆ ಸ್ವಲ್ಪ ಮಟ್ಟಿಗೆ ತೊಂದರೆ ಕೊಡುವಂತಿದ್ದರೂ ಅದನ್ನು ನಾವು ಊರ್ಜಿತಗೊಳಿಸಬೇಕೇ ಹೊರತು ಅದು ಬಿಟ್ಟು 'ನನಗೆ ಹೇಗಾದರೂ ಒಳ್ಳೆಯದಾಗಬೇಕು. ಆ ನನ್ನ ಸ್ವಾರ್ಥಸಿದ್ಧಿಗೆ ಈ ವ್ಯವಹಾರ ಕ್ಷೇತ್ರದಲ್ಲಿ ಮುಂದಾಳತ್ವವನ್ನು ವಹಿಸಿ ಅಧಿಕಾರವನ್ನು ಗಳಿಸುವುದು ನನಗೆ ಇಂದಿನ ಸ್ವಾರ್ಥ ನೀತಿ ಎಂಬ ಮಾರ್ಗವನ್ನು ಹಿಡಿಯಬಾರದು. ಇದಕ್ಕೆ ಈ ಪಾರ್ಟಿಯ ಸಂಪೂರ್ಣ ಸಹಕಾರಿಯಾಗಿದೆ ಅಥವಾ ನಾನು ಕೆಲವೇ ಜನರ ಹಿತಕ್ಕಾಗಿ ಮಾತ್ರ ದುಡಿಯುತ್ತೇನೆ. ಇತರರನ್ನೂ ನನ್ನ ಸ್ಥಿತಿಗೇ ತರಬೇಕು ಎಂಬ ಮನಸ್ಸಿನಿಂದಾಗಲೀ ಅಥವಾ ಎಲ್ಲರೂ ಒಬ್ಬರು ಈ ರೀತಿ ಮಾಡಿ ಈ ದೇಶವನ್ನು ಅತ್ಯುನ್ನತ ಸ್ಥಿತಿಗೆ ತರಬೇಕು ಎಂಬ ದೃಷ್ಟಿಯಿಂದಾಗಲಿ ನಮ್ಮ ದೇಶವನ್ನು, ಅದೇ ಸ್ಥಿತಿಗೆ ತರಬೇಕು ಎಂಬ ಯೋಜನೆಯಿಂದಾಗಲೀ, ಕೆಲವು ತತ್ವ ಮತ್ತು ಧ್ಯೇಯಗಳನ್ನು ತಿಳುವಳಿಕೆ ಇಲ್ಲದ ಜನರ ಮುಂದೆ ಹರಡುವ ಪ್ರಯತ್ನದ ಫಲ ದೇಶದ ಹಿತಕ್ಕೆ ಹಾನಿಕರವಾಗಬಹುದು. ನಾನು ಈ ಸಂಸ್ಥೆ ಒಂದು ವಿಶಿಷ್ಟ ಪ್ರಜಾಪ್ರಭುತ್ವ ಸರಕಾರ, ಪ್ರಜಾಸ್ವಾತಂತ್ರ್ಯ ಎಂಬ ವಿಷಯಗಳ ಅರಿವು ಇಲ್ಲದ ರಾಜನಿಂದಲೇ ಆಳಲ್ಪಟ್ಟು ಬಂದ ನಮಗೆ ನಿಜವಾಗಿ ನವೀನ ಸಂಗತಿಗಳು. ಎಂದೂ ಸ್ವತಂತ್ರವಾಗಿ ರಾಜ್ಯಭಾರದ ಅನುಭವವಿಲ್ಲದ ಜನರ ಅಭಿವೃದ್ಧಿಗಾಗಿ, ಬೆಳೆಯುತ್ತಿವೆ. ನಮ್ಮ ದೇಶವು ಈಗ ಸ್ವತಂತ್ರವಾಗಿ ನಿತ್ಯನೂತನವಾದ ಭಾವನೆಗಳಿಂದ ಕೂಡಿ ನಿಧಾನವಾಗಿ ಬೆಳೆಯುತ್ತಿದೆ, (ಈಗಲೇ) ನಿಧಾನದಿಂದ ಬೆಳೆಯುತ್ತಿದೆ. ಅದಕ್ಕೆ ನಮ್ಮ ಮುಂದಾಳುಗಳು ಬೇಕಾದ ಹೆಚ್ಚಿನ ಜನರ ಏಳಿಗೆಯನ್ನು ಮೀರಿಬಿಟ್ಟು ತಮ್ಮ ಸ್ವಾರ್ಥಪರ ಆಶೆಗಳನ್ನು ಬದಿಗಿಟ್ಟು, ದೇಶದ ಹಿತವನ್ನು ಸರಿಯಾದ ದಾರಿಯನ್ನು ನಿರ್ದಿಷ್ಟವಾಗಿ ಕಂಡುಕೊಳ್ಳಬೇಕಾದದ್ದು ಅವರ ಕರ್ತವ್ಯವಾಗಿದೆ.

ಈ ದೃಷ್ಟಿಯಿಂದ ತುಲನೆಮಾಡಿದರೆ ನಮ್ಮ ದೇಶದ ಸ್ಥಿತಿಯಲ್ಲಿ, ಅಂದರೆ, ಇದೇ ಭಾರತದಲ್ಲಿ ಕಮ್ಯೂನಿಸ್ಟ್ ತತ್ವಕ್ಕೆ ಎಡೆಯಿಲ್ಲ. ಅವರೆಲ್ಲಾ ಕೊಡಗಿನಲ್ಲಿ ಮತ್ತಷ್ಟು ಇಲ್ಲ ಎನ್ನಬೇಕಾಗಿದೆ. ನಾನು ಹೇಳಿದ್ದೆಲ್ಲವೂ, ಈ ತತ್ವಗಳನ್ನು ಪ್ರತಿಪಾದಿಸುತ್ತಿರುವ ಪ್ರಮುಖರು, ನನ್ನ ವಾದಕ್ಕೆ ಒಪ್ಪಲಾರರು. ಆದುದರಿಂದ, ನಾನು ಹೇಗೆ ಈ ಅಭಿಪ್ರಾಯಕ್ಕೆ ಬಂದಿರುತ್ತೇನೆಂಬುದನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸುತ್ತೇನೆ.

ನಾನೇನು ರಷ್ಯಕ್ಕೆ ಹೋಗಿ ಅಲ್ಲಿನ ಸ್ಥಿತಿಗತಿಗಳನ್ನು ಅಭ್ಯಾಸಮಾಡಿ ಬಂದಿಲ್ಲ. ಹಾಗೆಯೇ ನಮ್ಮ ಈ ದೇಶದ ಕಮ್ಯೂನಿಸ್ಟ್ ಮುಂದಾಳುಗಳೂ ಹೋಗಿ ನೋಡಿ ಬಂದಿಲ್ಲವೆಂಬುವುದೇ ನನ್ನ ಭಾವನೆ. ಒಬ್ಬರು ಹೇಳಿದ ಕೇಳಿದ ಬಲ್ಲವರಿಂದ ಕೆಲವು, ಕೆಲವು ಪುಸ್ತಕಗಳ ಓದಿ, ಕೆಲವು ಪತ್ರಿಕೆಗಳಿಂದ ಕೆಲವು ಸಂಜ್ಞೆಯಿಂದ ನೋಡಿದ್ದು, ಈ ರೀತಿಯಿಂದ ನಾನು ಈ ಅಭಿಪ್ರಾಯಕ್ಕೆ ಬಂದದ್ದಾಗಿದೆ.

ರೋಗಿಗಳಿಗೆ ಸುಸಂದರ್ಭ! ಗುಣ ಹೊಂದಿರಿ!!

THE ASIATIC PHARMACY.
(AYURVEDIC DISPENSARY)
SCHOOL ROAD, MERCARA.
(Near Cauvery Mahal Theatre)

ಏಷ್ಯಾಟಿಕ್ ಫಾರ್ಮಸಿ.
(ಆಯುರ್ವೇದ ವೈದ್ಯಶಾಲೆ)
(ಸ್ಕೂಲ್ ರೋಡು, ಮಡಿಕೇರಿ)
(ಕಾವೇರಿ ಮಹಲ್ ಥಿಯೇಟರಿನ ಬಳಿ)

ಮೇಲಿನ ಹೆಸರಿನಿಂದ ತಾ|| 28-8-1952 ರಿಂದ ತೆರೆಯಲಾಗಿರುವ 'ಆಯುರ್ವೇದ ವೈದ್ಯಶಾಲೆ'ಯಲ್ಲಿ ಎಲ್ಲಾ ರೀತಿಯ ಶಾಸ್ತ್ರೀಯ ಔಷಧಗಳು ದೊರೆಯುತ್ತವೆ. ವೈದ್ಯರು ಎಲ್ಲರನ್ನೂ ಪರೀಕ್ಷಿಸಿ, ಉತ್ತಮ ತರದ ಚಿಕಿತ್ಸೆಯನ್ನು ಮಾಡುತ್ತಾರೆ ಮಹಾಜನರುಗಳು ನಮಗೆ ತಕ್ಕ ಪ್ರೋತ್ಸಾಹವನ್ನು ಕೊಡಬೇಕಾಗಿ ವಿನಂತಿ.

4-1 ಕೆ. ಪಿ. ಬಾಲಕೃಷ್ಣನ್,
ಆಯುರ್ವೇದ ವೈದ್ಯರು.

ರಷ್ಯದಲ್ಲಿ ಈ ಕಮ್ಯೂನಿಸ್ಟ್ ರಿವ... ಯೂ ಕ್ರಾಂತಿಯುಂಟಾಗುವುದ... ರಷ್ಯದಲ್ಲಿದ್ದ ಪಾಠಕಾವರಣವು ಕಮ್ಯೂನಿಸ್ಟ್ ಕ್ರಾಂತಿಯನ್ನು ಸ್ವಾಗತಿಸುವ ರೀತಿಯಲ್ಲಿತ್ತು. ಅಂದರೆ ಅಲ್ಲಿದ್ದುದು ಎರಡೇ ವರ್ಗ, ಬಂಡವಾಳಗಾರರು ಮತ್ತು ಕೂಲಿಕಾರರು ಅಥವಾ ಭೂಮಾಲೀಕರು ಮತ್ತು ಕೂಲಿಕಾರರು. ಈ ಎರಡು ವರ್ಗಗಳನ್ನು ನಿರ್ಣಯಿಸುತ್ತಿದ್ದ ವಸ್ತುವೆಂದರೆ ಅವರ ಹುಟ್ಟು. ಯಾ... ಬಂಡವಾಳಗಾರರ ಯಾ ಭೂಮಾಲೀಕರ ಮಕ್ಕಳು, ತಮ್ಮ ಜನ್ಮ ಹಕ್ಕಿನಿಂದ ಭೂಮಾಲೀಕರೇ ವಿನಹ ಅವರು ಕಷ್ಟಪಟ್ಟು ಸಂಪಾದಿಸಿದ ಆಸ್ತಿಯಲ್ಲ. ಭೂಮಾಲೀಕರು ಎಂದರೆ, ನಮ್ಮ ಈ ದೇಶದ ಕ್ರಿಶ್ಚಿಯನ್, ರೈತ ವಾರ್ಗಗಳಲ್ಲ ದೊಡ್ಡ ದೊಡ್ಡ ಜಮೀನುದಾರರು. ಜಮೀನುದಾರ ಬಂಡವಾಳಗಾರರಲ್ಲದೆ, ಬೇರೆಯವರೆಲ್ಲ ಕೂಲಿಕಾರರು. ಕೂಲಿಗಾರರ ಮಕ್ಕಳಿಗೆ ವಿದ್ಯೆ ಕಲಿಯುವ ಅಥವಾ ಹೆಚ್ಚಾಗಿ ಧನ ಸಂಪಾದನೆ ಮಾಡುವ ಅಧಿಕಾರವಿಲ್ಲ. ಅವರಿಗೆ ಎಷ್ಟೇ ಬುದ್ಧಿ ಯಾ ಚಾತುರ್ಯವಿದ್ದಾಗ್ಯೂ, ಅವರು ಹುಟ್ಟಿನಿಂದ ಕೂಲಿಕಾರರಾದುದರಿಂದ ಅವರು ಕೂಲಿಕಾರರಾಗಿಯೇ ಸಾಯಬೇಕು.

ಹಾಗೆಯೇ ಹುಟ್ಟಿನಿಂದ ಭೂಮಾಲೀಕರೂ, ಬಂಡವಾಳಗಾರರೂ ಆದವರು ಎಂತಹ ದಡ್ಡನೇ ಇರಲಿ, ಯಾ ಸೋಮಾರಿ ಇರಲಿ, ಅವರಿಗೆ ದೇಶದಲ್ಲಿ ಎಲ್ಲಾ ತರದ ಹಕ್ಕು ಮತ್ತು ದೊರೆತವು. ಅವರ ಜೀವನ ಕ್ರಮ ಎಂದರೆ ಜೂಜಾಡುವುದು, ಕುದುರೆ ರೇಸು, ಕುಡಿಯುವುದು ಮುಂತಾದ ಸುಖಭೋಗಗಳಲ್ಲಿ ತಮ್ಮ ಕಾಲವನ್ನು ಕಳೆಯುತ್ತಿದ್ದರೇ ವಿನಹ ದೇಶದ ಬಹುಜನ ಜನಸಂಖ್ಯೆಯವರಾದ ಕೂಲಿಕಾರರ ಏಳಿಗೆಗೆ ಯಾವದೊಂದು ಸೌಕರ್ಯವನ್ನೂ ಕಲ್ಪಿಸುತ್ತಿರಲಿಲ್ಲ. ಅದರ ಬದಲು ಈ ಕೂಲಿಕಾರರಲ್ಲಿ ಅವಿದ್ಯೆ, ಅಜ್ಞಾನ ಮತ್ತು ಕಡುಕ ತನವನ್ನು ಹೆಚ್ಚಿಸಲಕ್ಕೆ ಎಲ್ಲಾ ಸಹಾಯವನ್ನು ಕಲ್ಪಿಸಿಕೊಟ್ಟಿದ್ದರು.

ಬಹು ಅಲ್ಪಸಂಖ್ಯೆಯ ಭೂಮಾಲೀಕರೂ ಬಂಡವಾಳಗಾರರೂ, ಬಹು ಹೆಚ್ಚು ಸಂಖ್ಯೆಯ ಕೂಲಿಕಾರರನ್ನು ಯಾವ ರೀತಿಯಲ್ಲೂ ಅವರು ಮುಂದುಬರದ ಹಾಗೆ ಮಾಡಿಟ್ಟಿದ್ದರು. ಈ ತರದ ಅವರ ನಡವಳಿಕೆಯಲ್ಲಿ, ಚರ್ಚಿನ ಪಾದ್ರಿಗಳು ಅವರಿಗೆ ಬಹಳ ಸಹಾಯಕರುಗಳಾಗಿದ್ದರು. ಈ ದೇಶದ ಕವಿಗಳು ಮತ್ತು ಭೂಗೋಳಿಕ ಸ್ಥಿತಿಯೂ—ಹೊರಗಿನ ನಾಗರೀಕತೆಯು ಈ ದೇಶದೊಳಗೆ ಹೆಚ್ಚಾಗಿ ಪ್ರವೇಶಿಸಿ, ಆ ಜನರಲ್ಲಿ ಕ್ರಾಂತಿಯನ್ನು ಹುಟ್ಟಿಸುವ ಅನುವನ್ನು ಕಲ್ಪಿಸಲು ಅಡಚಣೆಗಳಾಗಿದ್ದುವು.

ಒಂದನೇ ಜಾಗತಿಕ ಯುದ್ಧದಲ್ಲಿ ಹೊರಗಿನ ಜನರು ರಷ್ಯದ ಜನರೊಡನೆ ಸಂಪರ್ಕಿತವಾಗುವ ಅನುವು ದೊರೆಕಿತು. ಈ ಸಂಪರ್ಕದ ಫಲವಾಗಿ ಅಲ್ಲಿನ ಕೂಲಿಗಾರರಿಗೆ ತಮ್ಮ ನಿಜವಾದ ಸ್ಥಿತಿಯು ತಿಳಿಯುವಂತಾಯಿತು. ಆ ಕೂಡಲೇ ಅವರು ತಮಗುಂಟಾಗುತ್ತಿದ್ದ ಅನ್ಯಾಯವನ್ನು ಕಂಡುಕೊಂಡರು. ಅವರ ಸಿಟ್ಟಿಗೂ, ರೋಷಕ್ಕೂ ತಡೆಯಿಲ್ಲದಂತಾಯಿತು. ಲಕ್ಷಾಂತರ ಜನಗಳಿಗೆ ಅಕಾಸಿಟ್ಟಿದ್ದ ಆವ ರಕ್ತ, ಸಿಟ್ಟು ಮತ್ತು ರೋಷಗಳು ಕಟ್ಟೆಯೊಡೆದ ಪ್ರವಾಹದಂತೆ ಹೊರಟು, ಯಾರು ಯಾರು ತಮ್ಮ ಸ್ವಾರ್ಥತೆಯ ದೃಷ್ಟಿಯಿಂದ ತಮ್ಮನ್ನು ಮುಂದುವರಿಯುವಂತೆ ತಡೆದಿಟ್ಟಿದ್ದರೊ ಅವರನ್ನೆಲ್ಲಾ ಸಂಪೂರ್ಣ ನಾಶಮಾಡಿಬಿಟ್ಟಿತು. ಇಷ್ಟೇ ಅಲ್ಲ, ಇಂತಹ ಅಮಾನುಷ ಕೃತ್ಯಕ್ಕೆ ಆ ವರೆಗೆ ಬೆಂಬಲಕೊಡುತ್ತಿದ್ದ ರಾಜಮನೆತನವನ್ನೂ, ಚರ್ಚ್ ಪಾದರಿಗಳನ್ನೂ ಸಹ ನಿರ್ಮೂಲಮಾಡಿ ಈಗಿನ ಕಮ್ಯೂನಿಸ್ಟ್ ರಾಜ್ಯಭಾರ ಕ್ರಮವನ್ನು ಸ್ಥಾಪಿಸಿದರು.

ಹೊರಲಿದ್ದ ಎರಡು ವಿಭಾಗದಲ್ಲಿ ಭೂಮಾಲಿಕರ ಮತ್ತು ಬಂಡವಾಳಗಾರರ ಒಂದು ಭಾಗವು ಸಂಪೂರ್ಣ ನಶಿಸಿಹೋದ ನಂತರ ಅಲ್ಲಿ ಉಳಿದದ್ದು ಕೂಲಿಕಾರರ ಒಂದು ಸಮಾಜ ಮಾತ್ರ. ನಾಶಮಾಡಲ್ಪಟ್ಟವರ ಎಲ್ಲಾ ಆಸ್ತಿಯೂ, ಕಾರ್ಖಾನೆಗಳೂ, ಆ ಒಂದು ಕುಟುಂಬಕ್ಕೆ ಉಳಿದಂತಾಯಿತು. ಅದರಲ್ಲಿ ಒಬ್ಬೊಬ್ಬರಿಗೆ ರಾಜಕೀಯ ಮತ್ತು ಆರ್ಥಿಕ ದೋರಣೆಗಳಲ್ಲಿಯ ವ್ಯತ್ಯಾಸವೂ ಇಲ್ಲವಾದ ಕಾರಣ ಅವರು ಎಲ್ಲಾ ಆಸ್ತಿಪಾಸ್ತಿಗಳನ್ನು ... ಕಮ್ಯೂನಿಸಂ.

ಆದರೆ, ನಮ್ಮ ದೇಶದ ಸ್ಥಿತಿಯು ಹಾಗಿಲ್ಲ. ಇಲ್ಲಿ ಬಂಡವಾಳಗಾರರೂ, ಜಮೀನುದಾರರೂ ಮತ್ತು ಸಣ್ಣ ರೈತರೂ ಮಧ್ಯಮ ಸಂಖ್ಯೆಯ ಮಧ್ಯಸ್ಥಿತಿಯ ಜನರೂ ಇದ್ದಾರೆ. ನಿಜವಾಗಿಯೂ ದೇಶದ ಆಡಳಿತವು, ಬಂಡವಾಳಗಾರರ ಅಥವ ಜಮೀನುದಾರರ ಕೈಯಲ್ಲಿಲ್ಲ. ಇದು ಈ ಮಧ್ಯಸ್ಥಿತಿಯ ಜನರ ಕೈಯಲ್ಲಿದೆ. ಈ ಮಧ್ಯಸ್ಥಿತಿಯ ಜನರು, ಮೇಲ ತರಗತಿಯ ಬಂಡವಾಳಗಾರರನ್ನೂ ಮತ್ತು ಭೂಮಾಲೀಕರನ್ನೂ ಕಂಡುಬಿಟ್ಟು ನಡೆಯಲು ಬಿಟ್ಟಿಲ್ಲ. ಕೆಳಗಿನ ಮೆಟ್ಟಿಲಲ್ಲಿರುವ ಮಜದೂರರಿಗೆ, ಇಲ್ಲಿ, ರಷ್ಯದಲ್ಲಿದ್ದ ಹಾಗೆ ಯಾವ ತರದ ಮುಂದುವರಿಯಲು ಅಸ್ಪದ ಕೊಡದ ನಿರ್ಬಂಧಗಳೂ ಇಲ್ಲ. ಅಷ್ಟೇ ಅಲ್ಲ, ಕೆಳಗಿನ ಮೆಟ್ಟಿಲಲ್ಲಿರುವ ಮಜದೂರರಿಗೆ ಮುನ್ನಡೆದರೆ, ಮೇಲ್ದಕ್ಕೆ ಬರಲು ಇಲ್ಲಿ ಯಾವ ತರದ ಅಡಚಣೆಯೂ ಇಲ್ಲ. ಅವರು ಆ ಸ್ಥಿತಿಯಲ್ಲಿರುವುದು ಅವರ ತಿಳಿಗೇಡಿತನದಿಂದಲ್ಲದೆ ಮೇಲ್ತರಗತಿಯವರು ಹಾಕಿದ ನಿರ್ಬಂಧದಿಂದಲ್ಲ.

ಇಂಡಿಯದ ಕೆಲವು ಪ್ರಾಂತ್ಯಗಳಲ್ಲಿ ಜಮೀನುದಾರರು ಇದ್ದುದರಿಂದ ಆ ಕಮ್ಯೂನಿಸ್ಟ್ ಮುಂದಾಳುಗಳಿಗೆ ಸ್ವಲ್ಪಮಟ್ಟಿಗೆ ಮಾತಾಡಲಿಕ್ಕೆ ಎಡೆ ಇದ್ದಿರಬಹುದು. ಅದನ್ನು ಸಹ ಸಂಪೂರ್ಣ ತಡೆಗಟ್ಟಲು ಕಾಂಗ್ರೆಸ್ ಸರಕಾರವು ಮುಂದೆ ಬಂದು ಜಮೀನುದಾರಿ ಪದ್ಧತಿಯನ್ನೇ ಹೋಗಲಾಡಿಸಲಿಕ್ಕೆ ಪ್ರಯತ್ನಮಾಡುತ್ತಿದೆ.

ನಮ್ಮ ಕೊಡಗಿನಲ್ಲಿ, ರಾಜರ ಕಾಲದಿಂದಲೇ ಅವರು ಈ ತರದ ಮೇಲ್ತರಗತಿಯ ಮತ್ತು ಕೆಳತರಗತಿಯ ಸಮಾಜಗಳು ತಲೆದೋರದಂತೆ, ಅವರು ಅವರಿಂದಲೇ ಸ್ವಂತವಾಗಿ ದುಡಿಯಲು ಸಾಕಷ್ಟಿದ್ದು, ಬೇರೆಯವರನ್ನು ವಾರಗಾರರಾಗಿಟ್ಟುಕೊಂಡು ಭೂಮಿ ದುಡಿಸುವ ಅನುವನ್ನು ಆಗಿನಿಂದಲೇ ಯಾರಿಗೂ ಕಲ್ಪಿಸಿಕೊಡದೆ, ಜಮೀನುದಾರರು ಈ ದೇಶದಲ್ಲಿ ಹುಟ್ಟದ ಹಾಗೆಯೇ ಮಾಡಿದ್ದಾರೆ. ಇಲ್ಲಿರುವವರೆಲ್ಲಾ ರೈತಾಪಿಜನರು ಮತ್ತು ದಿನಕೂಲಿಯಿಂದ ಜೀವನಮಾಡುವವರು. ದಿನಕೂಲಿಯಿಂದ ಯಾ ಕಂಗಳು ಕೂಲಿಯಿಂದ ಜೀವನಮಾಡುವವರಿಗೆ ಭೂಮಾಲೀಕರಾಗ ಕೂಡದೆಂಬ ನಿರ್ಬಂಧವು ಎಷ್ಟು ಮಾತ್ರವೂ ಇಲ್ಲ.

ಎರಡನೆಯದಾಗಿ ಇಲ್ಲಿಯ ಜನರ ಗುಣ ಸ್ವಭಾವಗಳೂ ಕಮ್ಯೂನಿಸ್ಟ್ ತತ್ವಕ್ಕೆ ವಿರೋಧವಾಗಿಯೇ ಇವೆ. ಒಂದೇ ತಂದೆ ತಾಯಿಯ ಮಕ್ಕಳೂ ಸಹ ಒಂದು ಕುಟುಂಬ, ಒಂದು ಅಡಿಗೆಯಲ್ಲಿರಲು ಇಚ್ಛಿಸದೆ ಮದುವೆಯಾದ ಕೂಡಲೇ ಬೇರೆ ಬೇರೆಯಾಗಿ ಸಂಸಾರ ಮಾಡತೊಡಗುತ್ತಾರೆ. ಹೀಗೆ ಒಂದೇ ತಂದೆ ಮಕ್ಕಳು ತಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳನ್ನೇ ಒಟ್ಟಿನಲ್ಲಿ ಅನುಭವಿಸಲು ಇಷ್ಟಪಡದಿರುವಾಗ ನೂರಾರು ತಂದೆ ತಾಯಿಗಳ ಮಕ್ಕಳಾಗಿ ನಾನಾ ತರದ ಜಾತಿ ಮತ ಧರ್ಮಗಳವರು ಎಲ್ಲಾ ಆಸ್ತಿಪಾಸ್ತಿಗಳನ್ನು ರಾಷ್ಟ್ರಕ್ಕೆ ಒಪ್ಪಿಸಿ, ತಾವು ರಷ್ಯದಲ್ಲಿರುವಂತೆ ಒಂದು ಕುಟುಂಬದವರಂತೆ ಜೀವಿಸುವ ಒಂದು ಸಮಾಜ ಜೀವನಕ್ಕೆ ಒಪ್ಪಿಯಾರು ಎಂಬುದಾಗಿ ಭಾವಿಸುವುದು ಸ್ವಪ್ನವೇ ಸರಿ. ಒಂದು ಕುಟುಂಬದಲ್ಲಿದ್ದು ಅದರಿಂದ ಬರುವ ಸುಖವು ಕನಸು ಎಂದು ತಿಳಿದಾಗಲೇ ನಮ್ಮ ಅವಿಭಕ್ತ ಕುಟುಂಬಗಳೆಲ್ಲಾ ಚೂರು ಚೂರಾಗಿ ಒಡೆದು ಹೋಗಿವೆ. ಹೀಗೆ ಅನುಭವದಿಂದ ಬಿಟ್ಟ ಒಂದು ಸಂಸ್ಥೆಯನ್ನು ಅಪೇಕ್ಷಿತ ಅಸಾಧ್ಯವಾದ ಇನ್ನೊಂದು ರೀತಿಯಲ್ಲಿ ಪುನಃ ಸ್ಥಾಪಿಸಲು ಯಾರಾದರೂ ಪ್ರಯತ್ನ ಪಡುವುದೆಂದರೆ ಅದನ್ನು ಗಾಳಿಗೋಪುರವೆಂದೇ ಭಾವಿಸಬೇಕಾಗಿದೆ.

ಕಾಂಗ್ರೆಸ್ ಸರಕಾರದ ಅಧಿಕಾರವನ್ನು ಮುರಿಯಬೇಕಾದರೆ ನಾವು ಕಮ್ಯೂನಿಸ್ಟ್ ಪಾರ್ಟಿಗೆ ಸೇರಬೇಕೆಂದು ಕೆಲವು ಮುಂದಾಳುಗಳ ಅಭಿಪ್ರಾಯವಂತೆ. ಇದು ನಿಜವಾಗಿದ್ದರೆ ಅಂತಹ ಮುಂದಾಳುಗಳು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ತಿಳಿದುಕೊಂಡಿಲ್ಲವೆಂದೇ ಹೇಳಬೇಕು. ಕಾಂಗ್ರೆಸ್ ಮುಂದಾಳುಗಳಿಗೆ ಅಧಿಕಾರವನ್ನು ಕೊಟ್ಟವರು ಯಾರು? ದೇಶದವರು. ಹಾಗಿರುವಾಗ ಕಾಂಗ್ರೆಸ್ ಅಧಿಕಾರಿಗಳು ದೇಶದವರಿಗೆ ಅನ್ಯಾಯವಾಗುವ ರೀತಿಯಲ್ಲಿ ಅಧಿಕಾರ ಚಲಾಯಿಸಿದರೆ ಅವರನ್ನು ಗದ್ದುಗೆಗೆ ಏರಿಸಿದವರಿಗೆ ಅವರನ್ನು ಕೆಳಗಿಳಿಸುವ ಶಕ್ತಿಯೂ ಇದೆ ಎಂಬುದನ್ನು ಅವರು ತಿಳಿದಿಲ್ಲವೇ? ಸಂಗತಿಯು ಹೀಗಿರುವಾಗ್ಯೆ ಅಂಥ ಸ್ವೇಚ್ಛಾಪ್ರವರ್ತಕರನ್ನು ಅಧಿಕಾರದಿಂದ ತೆಗೆದುಹಾಕಿ, ಕಾಂಗ್ರೆಸ್ ಸಂಸ್ಥೆಯನ್ನು ಶುದ್ಧೀಕರಿಸುವುದಕ್ಕೆ ಪ್ರಯತ್ನಿಸುವುದರ ಬದಲು ಈ ಮುಂದಾಳುಗಳು ಕಮ್ಯೂನಿಸ್ಟ್ ಸಂಘವನ್ನು ಸ್ಥಾಪಿಸಲು ಪ್ರಯತ್ನಪಟ್ಟರೆ ಅವರ ನಡವಳಿಕೆಯು ಯಾರೋ ಹೇಳಿದಂತೆ ಮುಖದ ಮೇಲೆ ಸಿಟ್ಟಿಗೆ ಮೂಗು ಕೊಯ್ದುಕೊಂಡಂತೆ ಆದೀತು. ಅಷ್ಟೇ ಅಲ್ಲ, ಪೂರ್ವದಲ್ಲಿ ತನ್ನ ಅಳಿಯ ಪೃಥ್ವೀರಾಜನ ಮೇಲಿನ ಸಿಟ್ಟಿನಿಂದ ಜಯಚಂದನು ಮಹಮ್ಮದ್ ಘೋರಿಯನ್ನು ದಿಲ್ಲಿಗೇ ಕರೆತಂದಂತೆ ಆದೀತು. ಆದುದರಿಂದ ಯಾವನೊಬ್ಬ ಮುಂದಾಳು ದೇಶದ ಹಿತದೃಷ್ಟಿಯು ಅವನಲ್ಲಿದ್ದರೆ ಕೊಡಗಿನಲ್ಲಿ ಈ ತರದ ಬೇಜವಾಬ್ದಾರಿ ಕೆಲಸಕ್ಕೆ ಕೈಹಾಕಲಿಕ್ಕಿಲ್ಲವೆಂದು ಆಶಿಸಲಾಗಿದೆ.

ಜಪಾನದಲ್ಲಿ ಹೆಣ್ಣು ಮಕ್ಕಳ ಮಾರಾಟ!

ಜಪಾನದಲ್ಲಿ ಬಡತನದ ಬೇಗೆಯಿಂದ ಬಳಲುತ್ತಿರುವ ಸಹಸ್ರಾರು ಒಕ್ಕಲಿಗರು ತಮ್ಮ ಹೆಣ್ಣು ಮಕ್ಕಳನ್ನು ಮಾರಿಕೊಳ್ಳುತಿದ್ದಾರೆ. ಹುಡುಗಿಯರ ಬೆಲೆ ೯೦ರಿಂದ ೧೩೦ ರೂ. ಗಳ ವರೆಗೂ ಇರುತ್ತದೆ. ಕಳೆದ ವರ್ಷಕ್ಕಿಂತ ಈ ಸಲ ಹುಡುಗಿಯರ ಮಾರಾಟ ಪ್ರಮಾಣ ಇಮ್ಮಡಿಯಾಗಿದೆಯೆಂದು ಪೊಲೀಸರ ಹೇಳಿಕೆಯಿದೆ. ಮಾರಾಟವಾದ ಹುಡುಗಿಯರಲ್ಲಿ ೩೬೯೩ ಹುಡುಗಿಯರು ೧೯ ಕ್ಕಿಂತಲೂ ಕಡಿಮೆ ವಯಸ್ಸಿನವರಿದ್ದರು. ಪೊಲೀಸರು ೩೭೧೦ ಜನರನ್ನು ಬಂಧಿಸಿದ್ದಾರೆ. ಹುಡುಗಿಯರನ್ನು ಮಾರಾಟ ಮಾಡಿದ ಬೆಲೆಯಲ್ಲಿ ಶೇಕಡ ೩೫ರಷ್ಟು ದಲಾಲರಿಗೆ ಹೋಗುತ್ತಿದೆ. ಮಾರಾಟವಾದ ಹುಡುಗಿಯರನ್ನು ನಾನಾ ವಿಧವಾದ ಕೆಲಸಗಳಿಗೆ ಉಪಯೋಗಿಸುತ್ತಾರೆ. ವೇಶ್ಯಾಗೃಹಗಳು, ಕಾರ್ಖಾನೆಗಳು ಮುಂತಾದವುಗಳಿಗೆ ಕಳಿಸುವ ಹೆಚ್ಚು.

— ನಿಮಗೆ ಅತ್ಯಂತ ಲಾಭದಾಯಕವಾಗಿ —

ವಿಮೆ ಮಾಡಲೂ ಅಥವಾ ಪ್ರತಿನಿಧಿಸಲೂ

ಇಂಡಿಯಾದ ಅತ್ಯಂತ ಹಳೆಯ ಮತ್ತು ಸುಭದ್ರತೆಯ ವಿಮಾ ಸಂಸ್ಥೆ.

ದಿ ಬಾಂಬೆ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

[ಸ್ಥಾಪನೆ 1871]

ವಿವರಗಳಿಗೆ ಬರೆಯಿರಿ—ಬ್ರಾಂಚ್ ಸೆಕ್ರೆಟರಿ,

172-3 ನರಸಿಂಹ ರಾಜಾ ರಸ್ತೆ (P. B. 186),

12-1 ಬೆಂಗಳೂರು 2, ಅಥವಾ ಫೋನ್ ಮಾಡಿ-3624.

ಪ್ರಪಂಚದ ಶಾಂತಿ ಸ್ಥಾಪನೆ

'ಭಾರತವು ಪ್ರಗತಿ ಸಾಧಿಸಿ ಜಗತ್ತಿಗೆ ಯಾವುದಾದರೂ ಶಾಂತಿ ಸಲ್ಲಿಸುವುದಾದರೆ ಇತರ ಜನಾಂಗಗಳ ಬಗ್ಗೆ ಸರಿಯಾದ ತಿಳುವಳಿಕೆ ಮತ್ತು ಸಹನಶಕ್ತಿಯನ್ನು ಬೆಳೆಸಿಕೊಳ್ಳುವುದರಿಂದ ಅದು ಸಾಧ್ಯವೇ ವಿನಾ ಅವುಗಳ ಬಗ್ಗೆ ತಿರಸ್ಕಾರ ಅಥವಾ ಅಸಹ್ಯದ ಭಾವನೆ ಇಟ್ಟುಕೊಳ್ಳುವುದರಿಂದಲ್ಲ' ಎಂದು ಭಾರತದ ಉಪರಾಷ್ಟ್ರಾಧ್ಯಕ್ಷರಾದ ಡಾ. ಎಸ್. ರಾಧಾಕೃಷ್ಣನ್‌ರವರು ಪುಣೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಅಲ್ಲಿಯ ದ. ಭಾರತ ಸಂಘದ ಆಶ್ರಯದಲ್ಲಿ ತಾ. ೨೫ರಲ್ಲಿ ನಡೆದ ಭಾರಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ, ಕಮ್ಯೂನಿಸಂ ಮತ್ತು ಪ್ರಜಾಶಕ್ತಿ ಗಳೆರಡರಲ್ಲಿಯೂ ಭಾರಿ ಕುಂದುಕೊರತೆಗಳಿವೆಯೆಂದು ಅವರು ತಿಳಿಸಿದರು. ಆದರೆ ಮಾನವ ಜನಾಂಗದ ದೊಡ್ಡ ಭಾಗದ ಮೇಲೆ ಪ್ರಭಾವ ಬೀರಿರುವ ಚಳುವಳಿಯು ತನ್ನದೇ ಆದ ಶಕ್ತಿ ಪಡೆದಿದೆಯೆಂದೂ, ಅದನ್ನು ತಿರಸ್ಕರಿಸುವುದು ಸಾಧ್ಯವಿಲ್ಲವೆಂದೂ ಡಾ. ರಾಧಾಕೃಷ್ಣನ್ ಅವರು ಹೇಳುತ್ತಾ ವಿಶ್ವಶಾಂತಿಯನ್ನು ನೆಲೆಗೊಳಿಸಲು ಈ ಉಭಯ ಪದ್ಧತಿಗಳ ನಡುವೆ ಪರಸ್ಪರ ಹೊಂದಾಣಿಕೆ ಅಗತ್ಯವೆಂದು ಅವರು ಸೂಚಿಸಿದರು.

ದೇಶದ ಯುವಕರ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿ ದೇಶದ ಪುನರುದ್ಧಾರ ಕಾರ್ಯದಲ್ಲಿ ಭಾರತದ ಯುವಕ ಯುವತಿಯರು ಮುಖ್ಯ ಪಾತ್ರ ವಹಿಸಬೇಕಾಗಿದೆಯೆಂದು ಘೋಷಿಸಿದರು.

'ಮುಂದಿನ ಬದಲಾವಣೆಯನ್ನು ನಿರೀಕ್ಷಿಸುತ್ತೇನೆ. ಆದರೆ ಯುವಕರೇ ಭಾರತದ ಭವಿಷ್ಯದ ಆಶಾಕಿರಣಗಳು. ವೇದಗಳೇ ಮೊದಲಾದ ಪ್ರಾಚೀನ ಭಾರತದ ಗ್ರಂಥಗಳು ಮಾನವ ಜನಾಂಗದಲ್ಲೇ ಪ್ರತ್ಯೇಕತೆಯ ಭಾವನೆಯನ್ನು ಹೇಳಿಲ್ಲ ತ್ತವೆ. ಭಾರತದ ಯುವಕರು ಈ ತತ್ವಗಳನ್ನು ಮನನ ಮಾಡಿಕೊಂಡು ಮಾನವ ಜನಾಂಗದ ಪ್ರಗತಿಗೆ ಸಹಾಯಕರಾಗಬೇಕು' ಎಂದು ಡಾ. ರಾಧಾಕೃಷ್ಣನ್‌ರವರು ತಿಳಿಸಿದರು.

ಭಾರತದ ಆರ್ಥಿಕ ಪ್ರಗತಿ

'ಈ ಕಷ್ಟಕಾಲದಲ್ಲಿಯೂ ಭಾರತವು ಸಾಧಿಸಿದ ಅಭಿವೃದ್ಧಿಯನ್ನು ಗಮನಿಸಿದರೆ ನಾವು ನಿರಾಶೆ ಹೊಂದಬೇಕಾಗಿಲ್ಲ. ೧೯೪೭ರಲ್ಲಿ ದೇಶದ ಆರ್ಥಿಕ ಪರಿಸ್ಥಿತಿಯು ತೃಪ್ತಿಕರವಾಗಿರದಿದ್ದರೂ ಕೇಂದ್ರ ಸರ್ಕಾರವು ವಿವಿಧ ಕ್ರಮಗಳನ್ನು ಕೈಗೊಂಡಿತು. ಅದರಿಂದ ದೇಶದ ಆರ್ಥಿಕ ಅಭಿವೃದ್ಧಿಗೆ ಎಷ್ಟೋ ಅನುಕೂಲವಾಯಿತು. ೧೯೪೮ನೇ ವರ್ಷವನ್ನು ಆಧಾರವಾಗಿಟ್ಟುಕೊಂಡು ಬೆಲೆಗಳನ್ನು ವಿಮರ್ಶಿಸಿದರೆ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿದುದು ಕಂಡು ಬಾರದಿರದು. ೧೯೪೯ನೇ ಇಸವಿಯಲ್ಲಿ ಬೆಲೆಗಳ ಸೂಚಿ ೧೦೦ ಇದ್ದರೆ ಈಗ ಆ ಬೆಲೆ ಮಟ್ಟವು ೧೧೩ ಆಗುತ್ತದೆ. ಈ ಮೂರು ವರ್ಷಗಳ ಪ್ರಯತ್ನ ಕಾಲದಲ್ಲಿ

॥ ವಿವಿಧ ವಾರ್ತೆಗಳು ॥

ನಾವು ಅನುಭವಿಸಿದ ಕಷ್ಟಗಳನ್ನು ನೆನಪಿಸಿದರೆ ಅತ್ಯಲ್ಪವಾದ ಈ ಏರಿಕೆಯು ಹೆಚ್ಚೇನಲ್ಲ. ಬೇರೆ ದೇಶಗಳ ಬೆಲೆ ಸೂಚಿಯನ್ನು ನೋಡಿದರೆ ಶೇಕಡ ೧೦೦ರಿಂದ ೧೫೦ರ ವರೆಗೆ ಹೆಚ್ಚಳವಾದದ್ದು ಕಂಡುಬರುತ್ತದೆ' ಎಂದು ಭಾರತದ ಅರ್ಥ ಸಚಿವರಾದ ಶ್ರೀ ಸಿ. ಡಿ. ದೇಶಮುಖರವರು ಹೇಳಿದರು.

ಶ್ರೀ ದೇಶಮುಖರು ಬಸ್ಸೈನ (ಮುಂಬಯಿ) ನಾಗರಿಕರನ್ನು ಕುರಿತು 'ಭಾರತದ ಆರ್ಥಿಕ ಅಭಿವೃದ್ಧಿ'ಯ ಬಗ್ಗೆ ಮಾತನಾಡುತ್ತಾ ಮೇಲಿನಂತೆ ಹೇಳಿದರು.

ಅವರಿನ್ನೂ ಮುಂದುವರೆದು—'೧೯೪೮ರಲ್ಲಿ ರಾಷ್ಟ್ರದಲ್ಲಿ ನಿರುದ್ಯೋಗತನ ತುಂಬಾ ಹೆಚ್ಚಿದ್ದಿತು. ಈಗ ಆ ಸಮಸ್ಯೆಯು ಪೂರ್ಣ ಪರಿಹಾರವಾಗಿರದಿದ್ದರೂ ಎಷ್ಟೋ ಮಟ್ಟಿಗೆ ಕಡಿಮೆಯಾಗಿರುತ್ತದೆ. ಅಭಿವೃದ್ಧಿ ಯೋಜನೆಗಳ ಕಾರ್ಯವು ತ್ವರಿತವಾಗಿ ಮುಂದುವರಿದರೆ ಈ ಸಮಸ್ಯೆ ಇನ್ನೂ ಹಗುರವಾಗಬಹುದಾಗಿದೆ.

ನಾವೀಗ ರಾಷ್ಟ್ರವನ್ನು ಅತಿ ಪ್ರಗತಿಯ ಮಾರ್ಗದ ಮುಗ್ಗಟ್ಟಿನಿಂದ ಪಾರು ಮಾಡಬೇಕಾಗಿದೆ. ಮತ್ತು ಆ ಬಗೆಯ ಎಲ್ಲ ಯತ್ನಗಳನ್ನೂ ಮಾಡಲಾಗುತ್ತಿದೆ. ಸರಕಾರದ ಸದ್ಯದ ಧೋರಣೆಯಿಂದ ಮಧ್ಯಮ ವರ್ಗದವರು ಹಾನಿಗೊಳಗಾಗಿದ್ದಾರೆಂದು ಆರೋಪಿಸಲಾಗುತ್ತಿದೆ.

ನಾನು ಈ ತತ್ವವನ್ನು ಒಪ್ಪುವುದಿಲ್ಲ. ಕೇವಲ ಮಧ್ಯಮ ವರ್ಗದ ಜನರ ಹಿತವನ್ನು ಸಾಧಿಸುವುದು ಸಾಧ್ಯವಿಲ್ಲ. ಮಧ್ಯಮ ವರ್ಗದ ಜನರು ಬದಲಾದ ಪರಿಸ್ಥಿತಿಗೆ ಹೊಂದಿಕೊಂಡು ಹೋಗಲು ಕಲಿಯಬೇಕು.

ಜನರ ಮೇಲೆ ಕರಭಾರವು ಹೆಚ್ಚಿದೆಯೆಂಬ ಆರೋಪ ಹೊರಿಸಲಾಗುತ್ತಿದೆ. ಬೇರೆ ದೇಶಗಳು ಕರ ಹೇರುವುದನ್ನು ಗಮನಿಸಿದರೆ ಈ ಆರೋಪವು ಅಸತ್ಯವಾದುದಾಗಿರುತ್ತದೆ' ಎಂದು ಹೇಳಿದರು.

ಶ್ರೀ ದೇಶಮುಖರವರು ಭಾರತ ಸರಕಾರದ ಸಣ್ಣ ಉಳಿತಾಯ ಯೋಜನೆಯ ಬಗ್ಗೆ ಮಾತನಾಡುತ್ತಾ ಅವು ಯಶಸ್ವಿಯಾಗುತ್ತಿವೆಯೆಂದು ಹೇಳಿದರು. ೩ ವರ್ಷಗಳ ಮುಂಚೆ ಈ ಯೋಜನೆಯಿಂದ ಕೇವಲ ೪_೫ ಕೋಟಿ ರೂ. ಗಳು ಬಂದಿದ್ದರೆ ಈಗ ಅದು ೪೪ ಕೋಟಿ ರೂ.ಗಳಿಗೆ ಮುಟ್ಟಿರುವುದು. ಬೇರೆ ಬೇರೆ ಪ್ರದೇಶಗಳಿಗೆ ಹೊಂದುವ ಒಂದು ಯೋಜನೆಯನ್ನು ತಯಾರಿಸುತ್ತಿದ್ದು ಅದು ಪರಿಶೀಲನೆಯಲ್ಲಿದೆಯೆಂತಲೂ ಅವರು ಹೇಳಿದರು.

ಶ್ರೀ ದೇಶಮುಖರು ಸಮಾಜವಿಕಾಸ ಯೋಜನೆಯ ಬಗ್ಗೆ ಮಾತನಾಡುತ್ತ ಈ ಯೋಜನೆಯು ಯಶಸ್ವಿಯಾಗಬೇಕಾದರೆ ಜನತೆಯ ಸಹಕಾರವನ್ನು ಅವಲಂಬಿಸಿರುತ್ತದೆಯೆಂದು ಹೇಳಿದರು.

'ಯೋಜನೆಗಳು ತೃಪ್ತಿಕರವಾಗಿ ಪ್ರಗತಿ ಹೊಂದುತ್ತಿದ್ದರೆ ರಿಜರ್ವಬೇಂಕು ಕೃಷಿಕರಿಗೆ ನೆರವಾಗಲು ಮುಂದೆ ಬರುವುದರಲ್ಲಿ ಏನೂ ಸಂದೇಹವಿಲ್ಲವೆಂದರು.

ಅಮೇರಿಕದ ಕೃಷಿಯ ನೂತನ ವಿಧಾನ

ಸುಧಾರಿಸಿದ ಕೃಷಿಯ ವಿಧಾನದಿಂದ ಭಾರತವು ತನ್ನ ಮುಖ್ಯ ಆಹಾರವಾದ ಅಕ್ಕಿಯಲ್ಲಿ ಸ್ವಯಂ ಸಮೃದ್ಧಿಯನ್ನು ಪಡೆಯಬಲ್ಲುದಾಗಿದೆಯೆಂದು ಅಮೇರಿಕೆಗೆ ಈಗ ಸಂದರ್ಶನವಿತ್ತಿರುವ ಭಾರತದ ಕೃಷಿಯ ನಿಷ್ಣಾತರು ವಾಶಿಂಗ್ಟನ್ನಿನಲ್ಲಿ ಹೇಳಿದರು.

ಹಿಂದೀ ಆಹಾರ ಮತ್ತು ವ್ಯವಸಾಯ ಮಂತ್ರಿ ಖಾತೆಯ ಕಾರ್ಯದರ್ಶಿಗಳಾದ ಶ್ರೀ ಕೆ. ಆರ್. ದಾಮ್ಲೆ ಮತ್ತು ಸರಕಾರಿ ವ್ಯವಸಾಯ ವಿಸ್ತರಣಾ ಕಮಿಶನರರಾದ ಶ್ರೀ ಎಸ್. ಸಿ. ರಾಯ್ ಅವರು ಪತ್ರಿಕಾಕರ್ತರಿಗೆ, ಹೊಸ ತಾಂತ್ರಿಕ ವಿಧಾನದಿಂದ ಒಂದು ಎಕರೆಯಲ್ಲಿ ಸದ್ಯ ೭೮೦ ಪೌಂಡಿನ ಬದಲು ೩ ಸಾವಿರ ಪೌಂಡಿನಷ್ಟು ಅಕ್ಕಿಯನ್ನು ಬೆಳೆಯಬಹುದಾಗಿದೆಯೆಂದು ತಿಳಿಸಿದರು.

'ಈ ಪ್ರಮಾಣದ ಉತ್ಪಾದನೆಯಿಂದ ಭಾರತವು ಅಕ್ಕಿಯಲ್ಲಿ ಸ್ವಯಂ ಸಮೃದ್ಧಿಯನ್ನು ಹೊಂದುವುದಲ್ಲದೆ ಬರಗಾಲದ ಅಂಜಿಕೆಯನ್ನು ಹೊಡೆದೋಡಿಸುವುದು. ಭಾರತಕ್ಕೆ ಕೇವಲ ಶೇಕಡಾ ೧೦ರಷ್ಟು ಆಹಾರ ಕೊರತೆಯಿದೆ. ಅಕ್ಕಿಯ ಕೊರತೆಯು ನೀಗಿದಲ್ಲಿ ಗೋದಿಯಂಥ ಉಳಿದ ಧಾನ್ಯಗಳನ್ನು ಆಯಾತ ಮಾಡಿಕೊಳ್ಳಬಹುದಾಗಿದೆ' ಎಂದೂ ಅವರು ಹೇಳಿದರು.

ಭಾರತದಲ್ಲಿ ಅಧಿಕ ಆಹಾರ ಬೆಳೆಯಿರಿ ಆಂದೋಲನದ ಅಂಗವಾಗಿ ಅಮೇರಿಕದಲ್ಲಿ ೨೨ ಜನರ ಹಿಂದೀ ಕೃಷಿಕರ ಶಿಷ್ಟಮಂಡಳವು ೩ ತಿಂಗಳ ಅಧ್ಯಯನ ಪ್ರವಾಸವನ್ನು ಅಮೇರಿಕದಲ್ಲಿ ಕೈಕೊಂಡಿದೆ. ಶ್ರೀ ದಾಮ್ಲೆ ಮತ್ತು ಶ್ರೀ ರಾಯ್ ಇವರು ಈ ಶಿಷ್ಟ ಮಂಡಳದ ಧುರೀಣರಾಗಿದ್ದಾರೆ. ಅಮೇರಿಕನ್ನರ ಕೃಷಿಯ ವಿಸ್ತರಣಾ ಕಾರ್ಯವನ್ನು ಅಭ್ಯಸಿಸುವ ಮತ್ತು ಅಮೇರಿಕೆಯ ವಿಧಾನವನ್ನೆಷ್ಟರ ಮಟ್ಟಿಗೆ ಭಾರತದಲ್ಲಿ ತರಬಹುದೆಂಬುದನ್ನು ನೋಡುವುದೇ ಈ ಮಂಡಳದ ಮುಖ್ಯ ಉದ್ದೇಶವಾಗಿದೆ

ಬೆಳೆ ಹೆಚ್ಚಳಕ್ಕೆ ಅಗತ್ಯವಾದ ತಾಂತ್ರಿಕ ಜ್ಞಾನವು ಭಾರತಕ್ಕಿದೆ; ಆದರೆ ಅಂಥಾ ಜ್ಞಾನ ಕೃಷಿಕರಿಗೆ ಹೊಸ ವಿಧಾನವನ್ನು ಬಳಕೆಯಲ್ಲಿ ತರಬೇಕೆಂದು ಮನವೊಲಿಸುವದೇ ಒಂದು ಸಮಸ್ಯೆಯಾಗಿದೆಯೆಂದು ಶ್ರೀ ದಾಮ್ಲೆಯವರು ಹೇಳಿದರು.

'ಭಾರತದಲ್ಲಿ ಸುಮಾರು ೩೦ ಶಿಕ್ಷಣ ಕೇಂದ್ರಗಳನ್ನು ತೆರೆದಿದ್ದು, ಕೃಷಿಕ ಜನಾಂಗದ ಪ್ರತಿನಿಧಿಗಳಿಗೆ ಹೊಸ ವಿಧಾನದಿಂದ ಹೇಗೆ ಹೆಚ್ಚಿನ ಉತ್ಪಾದನೆ ಬರುತ್ತದೆಂಬುದನ್ನು ತೋರಿಸಲಾಗಿದೆ. ಶಿಕ್ಷಣ ಹೊಂದಿದವರು ಹಳ್ಳಿ ಹಳ್ಳಿಗೆ ಹೋಗಿ ತಾವು ಪಡೆದ ಶಿಕ್ಷಣದ ಬಗ್ಗೆ ಜನತೆಗೆ ತಿಳುವಳಿಕೆ ಕೊಡುವರು. ಭಾರತದಲ್ಲಿ ೫,೦೦೦೦೦ ಹಳ್ಳಿಗಳಲ್ಲಿ ಸುಮಾರು ೭೦ ಸಾವಿರ ಹಳ್ಳಿಗಳು ಕೃಷಿಕ್ಷೇತ್ರ ಯೋಜನೆಯಲ್ಲಿ ಬರುತ್ತವೆ' ಎಂಬುದಾಗಿಯೂ ಶ್ರೀ ರಾಯರು ಹೇಳಿದರು.

ಅಮೇರಿಕದ ಸಂದರ್ಶನದಿಂದ ತಾವು ಬೇಕಷ್ಟು ಅನುಭವ ಹೊಂದಿ ಅದನ್ನು ಭಾರತದಲ್ಲಿ ಆಚರಣೆಗೆ ತರಬಹುದಾಗಿದೆಯೆಂಬ ಅಭಿಪ್ರಾಯವನ್ನು ಈ ಶಿಷ್ಟ ಮಂಡಳದವರು ತಳೆದಿದ್ದಾರೆ.

ಸ್ತ್ರೀಯರು ಪುರುಷರನ್ನು ಅನುಕರಿಸಬಾರದು...

ರಾಧಾಕೃಷ್ಣನ್ನರ ಸೂಚನೆ

'ಮಹಿಳೆಯರೇ ನೀವು ಎಲ್ಲದರಲ್ಲೂ ಪುರುಷರನ್ನು ಅನುಕರಿಸಲು ಪ್ರಯತ್ನಿಸಬೇಡಿರಿ, ನೀವು ಮಹಿಳೆಯರಾಗಿಯೇ ಉಳಿಯಬೇಕು. ಸ್ತ್ರೀ ರೂಪವತಿಯಾಗಿ, ಪೂಜ್ಯಳೋ ಗೌರವಾನ್ವಿತಳೋ ಆದನ್ನು ನೀವು ಅನುಸರಿಸಬೇಕು.' ಹೀಗೆಂದು ರಾಷ್ಟ್ರದ ಉಪಾಧ್ಯಕ್ಷ ಶ್ರೀ. ರಾಧಾಕೃಷ್ಣನ್ನರು ಬೊಂಬಾಯಿಯಲ್ಲಿ ಮಹಿಳೆಯರಿಗೆ ಉಪದೇಶಿಸಿದರು.

'ಸ್ತ್ರೀಯರು ಪುರುಷರಂತೆ ವೇಷಭೂಷಣಗಳನ್ನು ಧರಿಸುವುದು. ಧೂಮಪಾನ ಮಾಡುವುದು ಗಂಡಸರು ಕ್ರಾಪ್ ಬಿಟ್ಟಂತೆ ತಮ್ಮ ತಲೆಯ ಕೂದಲನ್ನು ಕತ್ತರಿಸಿಕೊಳ್ಳುವುದು, ಇವೆಲ್ಲವನ್ನು ನೋಡಿ ಗಂಡಸರಾರು ಹೆಂಗಸರಾರು ಎಂಬುದನ್ನು ಗುರುತಿಸುವುದೇ ಕಷ್ಟವಾಗಿ ಹೋಗಿದೆ' ಎಂದು ಶ್ರೀ. ರಾಧಾಕೃಷ್ಣನ್ನರು ತಮ್ಮ ಅನುಭವವನ್ನು ಪ್ರಕಟಿಸಿದರು.

ಸ್ತ್ರೀಯೊಂದು ಬಗೆಯ ಸೃಷ್ಟಿ, ಪುರುಷನೊಂದು ಬಗೆಯ ಸೃಷ್ಟಿ. ಇಬ್ಬರಿಂದಲೇ ಇಬ್ಬರಲ್ಲಿ ಒಂದು ಸುಂದರವಾದ ಪ್ರೇಮ ಬೆಳೆಯುವದು. ಆದರೆ ಗಂಡಸಿನ ಅನುಕರಣೆಯಲ್ಲಿ ಸ್ತ್ರೀಯು ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳಬಾರದು ಎಂದೂ ಅವರು ಮುಂದುವರಿದು ಹೇಳಿದರು.

ಪುರುಷ ಸ್ವಾಭಾವಿಕವಾಗಿ [illegible] ಗಿರುತ್ತಾನೆ [illegible] ಸ್ತ್ರೀ ತನ್ನ ಸಾಧಕತನದಿಂದ [illegible] ಇವರು [illegible] ದರು.

ಆಂಧ್ರ ಪ್ರಾಂತ್ಯ ಬೇಗ ಸಾಧ್ಯ.

ಶ್ರೀ ರಾಜಗೋಪಾಲಾಚಾರ್ಯರ ಭಾಷಣ.

ಕಳೆದ ತಾ. ೩೦ರಲ್ಲಿ ಕವಿತೆಯ ಪುಸ್ತಕವೊಂದರ ಉದ್ಘಾಟನೆ ಮಾಡುತ್ತಾ ಮದರಾಸಿನಲ್ಲಿ ಶ್ರೀ ರಾಜಗೋಪಾಲಾಚಾರ್ಯರು [illegible] ಸಂದರ್ಭದಲ್ಲಿ ಭಾಷಣ ಮಾಡುತ್ತಾ ಹೀಗೆಂದರು.—

'ಆಂಧ್ರರು ಆಂಧ್ರ ಪ್ರಾಂತ [illegible] ಯ ಪ್ರಶ್ನೆಯನ್ನು ಮದರಾಸ್ ನಗರದ ಭವಿಷ್ಯದೊಡನೆ ಬಂಧಿಸಿದ್ದಾರೆ. ನಾನು

ಒಬ್ಬನ್ ತನ್ನನ್ನು ಒಂದು ಕಂಬಕ್ಕೆ ಕಾನೇ ಕಟ್ಟಿ ಕೊಂಡು, ಕಂಬವು ತನ್ನನ್ನು ಬಿಡಬೇಕೆಂದು ಹೇಳಿದಂತಾಯಿತು. ಹಗ್ಗವನ್ನು ಅವನು ಕಡಿದು ಹಾಕಿದರೆ ಕಂಬವು ಅವನನ್ನು ಹೋಗಲು ಬಿಡುವುದು. ಆಂಧ್ರರಿಗೆ ತಮ್ಮ ಪ್ರಾಂತ ಬೇಕಾದರೆ ಅವರು ಮದ್ರಾಸ್ ನಗರವನ್ನು ಬಿಡಲಿ.

ಮದ್ರಾಸ್ ನಗರವು ತಮಗೆ ಸೇರಬೇಕೆಂದು ಹೇಳುವ ಕಾರಣ ತಮಿಳರು ಸ್ವಲ್ಪ ಭಯಾಗಿ ಕಂಡಿತೆ ಕೊಂಡಿತು. ಭಯದಿಂದ ಉದ್ರೇಕವೇ ಪ್ರಾರಂಭಗಬಹುದು. ತಮಿಳು ನಂತರ ಮಾತುಗಳ ಮಾತುಗಳನ್ನು ಶ್ರೀ ಭಕ್ತವತ್ಸಲಂರವರು ಎತ್ತಿ ಹೇಳಿರುವುದನ್ನು ಕೇಳುವಾಗ ಮದ್ರಾಸು ಸಂಪೂರ್ಣ ತಮಿಳರದೇ ಎಂಬುದು ವ್ಯಕ್ತವಾಗುತ್ತದೆ. ಮದ್ರಾಸ್ ತಮಿಳರಿಗೆ ಸೇರಿದೆಂಬುದಕ್ಕೆ ನಂತರ ಮತ್ತು ಅವುಗಳ ಆಧಾರ ಬೇಕಾಗಿಲ್ಲ ಮದ್ರಾಸಿನ ಜನ ಸಂಖ್ಯೆಯಲ್ಲಿ ೧೦ ಲಕ್ಷ ತಮಿಳರು; ೬ ಲಕ್ಷ ತೆಲುಗು ಮಾತಾಡುವವರು; ಉಳಿದ ೪ ಲಕ್ಷ ಇತರ ಭಾಷೆಗಳನ್ನು ಮಾತಾಡುವವರು. ತಮಿಳರು ನಾಡಿನಲ್ಲಿ ಬಹು ಕಾಲದ ಹಿಂದೆ ಬಂದು ನೆಲಸಿದ ಆಂಧ್ರರ ಸಂತತಿಯವರಲ್ಲಿ ಅನೇಕರು ತೆಲುಗನ್ನು ಮರೆತು ಬಿಟ್ಟಿದ್ದಾರೆ, ಅನೇಕರು ತಮಿಳು ಭಾಷೆಯಲ್ಲಿ ಉತ್ತಮ ಗ್ರಂಥಗಳನ್ನು ಕೂಡ ಬರೆದಿರುವರು ಎಂದು ಹೇಳಿದರು.

ವಾರ್ತೆ.

ಸುಮಾರು ನಾಲ್ಕು ಮೈಲ ಉದ್ದವಿರುವ ಮಿಡತೆಗಳ ತಂಡವೊಂದು ರಾಜಸ್ಥಾನ ಕಡೆಯಿಂದ ಪಂಜಾಬನ್ನು ಪ್ರವೇಶಿಸಿ ಸಿವಲ್ಲದ ಹಿಸ್ಸಾರ್ ಜಿಲ್ಲೆಯ ಸಿರಾ ತಾಲೂಕನ್ನು ಆಕ್ರಮಿಸಿರುವುದು. ಆ ಮಿಡತೆಗಳು ಮೊಟ್ಟೆಗಳನ್ನು ಇಡುತ್ತಾ ಹೋಗುತ್ತಿರುವುವು. ಪಂಜಾಬಿನ ವ್ಯವಸಾಯ ಖಾತೆಯವರು ಆ ಮಿಡತೆಗಳ ಮೂಲವನ್ನು ನಾಶ ಪಡಿಸಲು ಕಾರ್ಯಕ್ರಮಗಳನ್ನು ಕೈಕೊಂಡಿರುವರು.

ಇಂದೂರಿನ ರೆಸಿಡೆನ್ಸಿ ಮೈದಾನದಲ್ಲಿ ಕಟ್ಟಲಾಗುತ್ತಿರುವ ಮಂಟಪದಲ್ಲಿ ಸುಮಾರು ೨೫ ಸಾವಿರ ಜನರು ಕೂಡಲು ಸಾಧ್ಯವಾಗುವದಂತೆ. ಆ ಮಂಟಪವು ಬರುವ ಸೆಪ್ಟೆಂಬರ್ ೧೩ ಮತ್ತು ೧೪ ರಲ್ಲಿ ಕೂಡಲಿರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದ ಸಲುವಾಗಿದೆ ಯೆಂದು ಗೊತ್ತಾಗಿದೆ. ಮಂಟಪದೊಳಗೆ ಮಳೆ ಬೀಳದಂತೆ ವ್ಯವಸ್ಥೆಯನ್ನು ಮಾಡಲಾಗಿದೆ.

ಬ್ರಿಟನ್ನಿನ ಅತಿ ದೊಡ್ಡ "ಪ್ರಿನ್ಸೆಸ್" ಎಂಬ ವಿಮಾನವು ತನ್ನ ಪ್ರಥಮ ಹಾರಾಟವನ್ನು ಡಿಕನ್ಸನಲ್ಲಿ ನಡೆಸಿತು. ಅದು ಗಂಟೆಯೊಂದಾಗ ಅದರ ಶಕ್ತಿ ಇ ಜನರ... ಸುಮಾರು ... ಮೈಲು ದೂರದ ವರೆಗೂ ಹೋಗಬಲ್ಲದು. ... ... ಪ್ರಯಾಣಿಕರಿಗೆ ೩೨೦೦ ಮೈಲು ಅದು ಎಲ್ಲಿಯೂ ನಿಲ್ಲದೆ ಹಾರಲು ಶಕ್ತವಾಗಿ ... ಅದರ ವೇಗ ಗಂಟೆಗೆ ೩೬೦೦ ಮೈ

ಲು ದೂರ ಇರುವುದು. ಅದು ಸಮುದ್ರದ ಮೇಲೆ ಇಳಿಯಬಲ್ಲುದು.

ಶ್ರೀ ವಿನೋಬಾ ಭಾವೆಯವರ ಭೂದಾನ ಚಳುವಳಿಗೆ ಹೈದರಾಬಾದಿನ ನಿಜಾಮರು ೩,೦೦೦ ಎಕರೆ ಭೂಮಿಯನ್ನು ದಾನವಾಗಿ ಕೊಟ್ಟಿರುವರು ಎಂದು ಅಧಿಕೃತವಾಗಿ ತಿಳಿಯುತ್ತದೆ.

ಮದ್ರಾಸ್ ಕಾರ್ಪೊರೇಶನ್ನಿನ ಸ್ಕೂಲಿನಲ್ಲಿ ಮುಸ್ಲಿಮರಿಗೆ, ಹಿಂದೂ ಕ್ರಿಶ್ಚಿಯನ್ನರಿಗೆ ಮತ್ತು ಆಂಗ್ಲೋ-ಇಂಡಿಯನ್ನರಿಗೆ ಸ್ಥಳ ಕಾಯ್ದಿರಿಸುವುದು ಯೋಗ್ಯವಲ್ಲವೆಂದು ಮದ್ರಾಸ್ ಹೈಕೋರ್ಟಿನ ಅಭಿಪ್ರಾಯಪಟ್ಟಿದೆ

ಮಾರಾಟಕ್ಕಿದೆ.

ಪೀಲಿಬೆಟ್ಟ ತೋಟದ 1952-53ರ ಕಿತ್ತಳೆ ಫಸಲು ಮತ್ತು ಒಳ್ಳೆಮೆಣಸು ಮಾರಾಟಕ್ಕಿದೆ.

ಅಂದಾಜು 10,000 ಕಿತ್ತಳೆ ಮರಗಳಲ್ಲಿ ಫಸಲು ಹಿಡಿದಿರುತ್ತದೆ. 500-600 ಮೆ ಣಸಿನ ಬಳ್ಳಿಗಳಲ್ಲಿ ಫಸಲು ಇದೆ. ಖರೀದಿದಾರರು ಸೆಪ್ಟೆಂಬರ್ 15ರ ಒಳಗೆ ಬಂದು ಟೆಂಡರು ಕೊಟ್ಟಲ್ಲಿ ಸ್ವೀಕರಿಸಲ್ಪಡುವುದು. ಹೆಚ್ಚಿನ ವಿವರಗಳನ್ನು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ಅಥವ ಖುದ್ದು ಬಂದು ತಿಳಕೊಳ್ಳಬಹುದು.

A A. RODRIGUES.
Proprictor,
Peelibetta Estatate,
Ammatti, Coorg.

2-1

THE COORG TRANSPORT LTD., MERCARA.

Notice is hereby given that all those who may be desirous of taking up the Managing Agency of the above Company may send their offers, setting out the terms on which they are agreable to take up the Managing Agency of the Company on or before the 10th September 1952.

Taking shares of the Company of the value of Rs. 40,000/-- (Forty thousand) and above will be considered as one of the grounds of preference when the offers are taken up for consideration.

Sd/ C. M. THIMAYA,
Chairman,
The Coorg Transport Ltd.,
2-2 *Mercara.*

ಶ್ರೀ ಪಿ. ಐ. ಬೆಳ್ಯಪ್ಪನವರು.
"ಕೊಡಗು" ಪತ್ರಿಕೆಯ,
ಸೋಮವಾರಪೇಟೆ.

ಮುಖ ತ್ತ್ವ.

ಈಗ ಹೊಸದಾಗಿ ಬಂದಿರುವ ನಮ್ಮ ಅಮೇರಿಕನ್ ಫೌಂಟನ್ ಪೆನ್ನುಗಳಿಗೆ ಆರ್ಡರು ಬುಕ್ ಮಾಡಲು ಏಜಂಟರು ಬೇಕಾಗಿದ್ದಾರೆ ಇದಕ್ಕೆ ಪ್ರತಿಯಾಗಿ 15 ಯಾ 17 ಜ್ಯುವೆಲ್‌ಗಳುಳ್ಳ ಸ್ವಿಸ್ ರಿಚರ ರಿಸ್ಟ್‌ವಾಚು, ಸೈಕಲ್, ಅಥವಾ ರೇಡಿಯೋವು ಬಹುಮಾನವಾಗಿ ದೊರೆಯುವದು. ಇದು ಲಾಟರಿ, ಜೂಜು ಯಾ ಚಕ್ರಬಂಧ ಸ್ಪರ್ಧೆಯಲ್ಲ. ಒಂದು ಫೌಂಟನ್ ಪೆನ್ನಿಗೂ ಅಂಚೆಯಾಗಿ ಮನಿಆರ್ಡರ್ ಕಳುಹಿಸಿ ಮತ್ತು ಹೆಚ್ಚಿನ ಮಾಹಿತಿಗಳಿಗೆ ಬರೆಯಿರಿ.

THE UNIVERSAL MUTUAL CORPORATION (K M.)
P. O. Box No. 4013, BOMBAY—7.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :—ವೀರರಾಜಪೇಟೆ.

ಶಾಖೆ :—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12ನೇ ನಂಬರಿನ ಒಂಟಿ ಮತ್ತು ಜೋಡು ನಳಿಗೆಯ ಕೋವಿಗಳು.
3. ·12, 16 ಮತ್ತು 20ನೇ ನಂಬರಿನ ತೋಟೆಗಳು, ಕೋವಿ ಮದ್ದು ಮತ್ತು ಚರೆಗಳು.
4. 9" × 4" ಮತ್ತು 8" × 4" ಕಬ್ಬಿಣದ ತೊಲೆಗಳು (Girders)
5. 8' × 3' × 24 (Gage) ಕಬ್ಬಿಣದ ತಗಡುಗಳು.
6. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring steel flates)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು 'Special purchase permit' ಪಡೆಯಬೇಕಾಗಿದೆ.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)
ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್.)

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1931ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಬೆಳ್ಳಿ ಚಿನ್ನದ ನಗಗಳ ಅಡವಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಫ್ರೆಡಿಟ್, ಜನರಲ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಕೂಡಿ ಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಅಂತಿನ ಸಾಲದ ಶಾಖೆಯು ಮೂಲಕ ದೀರ್ಘ ಅಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.
ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

Edited, Printed and Published by P. I. Belliappa at 'Kodagu' Press, Mercara, for Kodagu' Ltd.

Licence No. 60.
Licenced to Post without Prepayment·

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಖು ೧೨-೯-೧೯೫೨ನೇ ಶುಕ್ರವಾರ | ಸಂಚಿಕೆ ೧೫

ಭೂದಾನ ಯಜ್ಞ ದೀಕ್ಷಿತ

ಆಚಾರ್ಯ ವಿನೋಬ ಭಾವೆಯವರು.

ಲೇ—ಶ್ರೀ ವಿ. ಎಸ್. ರಾಮಕೃಷ್ಣ ಬಿ. ಎಸ್‌ಸಿ (ಆನರ್ಸ್) ಬಿ ಟಿ,

ಯುಗಪುರುಷ ಮಹಾತ್ಮಾಗಾಂಧಿಯವರ ಅನುಪಮವಾದ ತತ್ವಸಂಗ್ರಹವನ್ನು ಜನತೆಗೆ ಬೋಧಿಸಿ ಕೇವಲ ನ್ಯಾಯ ರೀತಿಯಿಂದ ತನ್ನ ಗುರಿಯನ್ನು ಸಾಧಿಸುತ್ತಿರುವ ವಿನೋಬಭಾವೆಯವರು ರಾಷ್ಟ್ರೀಯ ಜೀವನದಲ್ಲಿ ತಮ್ಮದೇ ಆದೊಂದು ಸ್ಥಿತಿಸ್ಥಾನವನ್ನು ಗಳಿಸಿ ಖ್ಯಾತಿಪಡೆದಿರುವರು. ಮಾನವ ಸ್ವಭಾವದ ಸದ್ಗುಣ ವಿಶೇಷಗಳನ್ನು ಹೊಡೆದೆಬ್ಬಿಸಿ ಕ್ರಿಯಾರೂಪಕ್ಕೆ ತಂದು ತನ್ನ ಯಜ್ಞಪೂರ್ಣಾಹುತಿಯನ್ನು ಮಾಡಲೆಳಸುತ್ತಿರುವ ವಿನೋಭಾಜೀಯವರ ಕಾರ್ಯವು ಅಲೌಕಿಕವಾಗಿರುವುದು. ವಿನೋಭಾಜೀಯವರು ಅಹಿಂಸೆಯ ತಳಹದಿಯ ಮೇಲೆ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವ ಮಹಾಯಜ್ಞ ದೀಕ್ಷೆಯನ್ನು ಕೈಗೊಂಡು ಆರ್ಥಿಕ ಮುಗ್ಗಟ್ಟಿನಿಂದ ಬೆಂದು ಬೇಗುದಿಗೊಂಡಿರುವ ಭಾರತದ ದರಿದ್ರನಾರಾಯಣರ ಸೇವೆಯನ್ನು ಮಾಡುತ್ತಲಿರುವರು. ನಿಸ್ಸಹಾಯರಾಗಿ ತಮ್ಮ ವ್ಯಕ್ತಿತ್ವದ ವಿಕಸನಕ್ಕೆ ಪ್ರತಿಭೆಯಿಂದಲೇ ಭಾರತ ಖಂಡದ ಜಟಿಲವಾದ ಭೂಸಮಸ್ಯೆಯನ್ನು ಎದುರಿಸಲು ತತ್ಪರರಾದ ವಿನೋಬರು ಭೂಮಾಲೀಕರಾದ ಶ್ರೀಮಂತರಿಂದ ನಾಡಿನ ಬಡ ಜನರಿಗೆ ೩೫,೦೦೦ ಎಕರೆಯನ್ನು ಪರಿಹಾರ ದ್ರವ್ಯವಿಲ್ಲದೆ ಭೂಮಿಯನ್ನು ಯಾಚಿಸಿ ದಾನ ಮಾಡಿರುವರು. ಶ್ರೀಮಂತರಿಂದ ಭೂಮಿಯನ್ನು ದಾನವಾಗಿ ಪಡೆಯುವಾಗ ಹಿಂಸೆಯನ್ನಾಗಲೀ ಬಲಶಕ್ತಿಗಳನ್ನಾಗಲೀ ಪ್ರದರ್ಶಿಸದೆ ಭೂಮಾಲೀಕರ ಹೃದಯ ಪರಿವರ್ತನೆಯಿಂದಲೇ ತಮ್ಮ ಯಜ್ಞ ಸಫಲತೆಗಾಗಿ ಸಾಧಿಸುತ್ತಿರುವರು. ವಿನೋಬಾಜೀಯವರ ಈ ಶಾಂತಿಪೂರ್ಣ ಕ್ರಾಂತಿಯಿಂದ ಅಚ್ಚರಿಗೊಂಡ ಭಾರತ ಸರಕಾರದ ಆಹಾರ ವ್ಯವಸಾಯ ಖಾತೆಯ ಪ್ರಮುಖರು ತಮ್ಮ ವಶದಲ್ಲಿದ್ದ ಹತ್ತು ಮಿಲಿಯ ಎಕರೆಯಷ್ಟು ಕೃಷಿಮಾಡಬಹುದಾದ ಪಾಳುಭೂಮಿಯನ್ನು ವಿನೋಬರವರು ಯೋಗ್ಯ ರೀತಿಯಿಂದ ಜಮೀನಿಲ್ಲದ ಬಡಬಗ್ಗರಿಗೆ ಹಂಚಿಕೊಡಲಿಕ್ಕಾಗಿ ಅರ್ಪಿಸಿದರು.

ಆಚಾರ್ಯ ವಿನೋಬಭಾವೆಯವರು ಮಹಾತ್ಮರ ಅಚ್ಚಳಿಯದ ಹಿಂಬಾಲಕರು. ಅವರ ಜೀವನ ಲಹರಿ ಮಹಾತ್ಮಾಗಾಂಧಿಯವರ ಧಾರ್ಮಿಕ ಜೀವನ ತಳಹದಿಯ ಮೇಲೆ ರೂಪುಗೊಂಡಿರುವುದು. ಮಹಾತ್ಮರ ಪದತಳದಲ್ಲಿ ವಿಶ್ವವ್ಯಾಪಾರವನ್ನರಿತು ಆತ್ಮವಿಕಾಸಪಡೆದಿದ್ದ ಆಚಾರ್ಯರು ಮಹಾತ್ಮರನ್ನೇ ಬಾಹ್ಯರಚನೆಯಲ್ಲೂ ಬಹುಮಟ್ಟಿಗೆ ಹೋಲುತ್ತಾರೆ. ಪಾಶ್ಚಾತ್ಯರ ಪ್ರಪಂಚದಲ್ಲಿ ಅರ್ಧ ನಗ್ನರಾದ ಇಂಥಹ ಫಕೀರ ಜನರು ಆರ್ಥಿಕ ಸಮಸ್ಯೆಗಳಿಗೆ ಅನ್ವಯಿಸುವ ಬಗೆ ಪರಿಹಾರಗಳನ್ನು ಬೋಧಿಸುತ್ತಿದ್ದರೆ ಸಾರ್ವಜನಿಕರ ನಿಂದೆ ಅವಹೇಳನಗಳಿಗೆ ಬಲಿಯಾಗುತ್ತಿದ್ದರು. ಆದರೆ ವಿಶಿಷ್ಟವಾದ ಭರತಖಂಡದ ಸಂಸ್ಕೃತಿಗೆ ಸರ್ವವಿಧದಿಂದಲೂ ಹೊಂದಿಕೊಳ್ಳುವ ವಿನೋಭಾರವರ ವ್ಯಕ್ತಿತ್ವವು ಭಾರತೀಯರ ಮನ್ನಣೆಗೌರವಗಳಿಗೆ ಸದಾ ಯೋಗ್ಯವಾಗಿರುವುದು.

ತಮ್ಮ ಎಳೆ ಪ್ರಾಯದಲ್ಲೇ ಆತ್ಮವಿಕಸನಕ್ಕೋಸ್ಕರ ವಿನೋಬಭಾವೆಯವರು ಮನೆಬಿಟ್ಟು ಹೊರಟರು. ಜ್ಞಾನಾರ್ಜನೆಯಿಂದಲೂ ಆತ್ಮೋದ್ಧಾರದ ಹಿರಿಯ ಅಭಿಲಾಷೆಯಿಂದಲೂ ಕಾತುರರಾದ ವಿನೋಬರವರು ಮಹಾತ್ಮಗಾಂಧಿಜೀಯವರ ಸಬರ್ಮತಿ ಆಶ್ರಮವನ್ನು ಪ್ರವೇಶಿಸಿ ಕಾಲಕ್ರಮದಲ್ಲಿ ಮಹಾತ್ಮರ ಅಚ್ಚುಮೆಚ್ಚಿನ ಶಿಷ್ಯರಾದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಅಭಿಪ್ರಾಯವನ್ನು ಅವಲೋಕಿಸದೆ ದ್ವಿತೀಯ ಮಹಾಯುದ್ಧವನ್ನು ಬ್ರಿಟನು ಭಾರತದ ಪರವಾಗಿಯೂ ಘೋಷಿಸಿದಾಗ ಮಹಾತ್ಮರು ಭಾರತಕ್ಕೆ ಸಮ್ಮತವಲ್ಲದ ಈ ಯುದ್ಧಕ್ಕೆ ಭಾರತೀಯರು ಸಹಾಯ ನೀಡಕೂಡದೆಂದು ಸಾರಿ ವ್ಯಕ್ತಿಗತ ಸತ್ಯಾಗ್ರಹ ಚಳುವಳಿಯನ್ನು ೧೯೪೦ರಲ್ಲಿ ಹೂಡಿದರು. ಆ ಸತ್ಯಾಗ್ರಹ ಸಮರದ ಪ್ರಥಮ ಯೋಧರಾಗಿ ವಿನೋಭಾಜೀಯವರೇ ಮಹಾತ್ಮರಿಂದ ಆರಿಸಲ್ಪಟ್ಟು ಸತ್ಯಾಗ್ರಹ ಹೂಡಿ ಕಾರಾಗೃಹವನ್ನು ಸೇರಿದರು. ರಾಷ್ಟ್ರೀಯ ಸ್ವತಂತ್ರ ಸಮರದ ಕಾಲದಲ್ಲಿ ಆರು ಸಲ ಬ್ರಿಟಿಷ್ ಸರಕಾರವು ವಿನೋಭಾಜೀಯವರನ್ನು ಬಂಧಿಸಿ ಸೆರೆಮನೆಗೆ ಕಳುಹಿಸಿತು. ನಿಷ್ಕಾಮಕರ್ಮಯೋಗಿಗಳಾದ ವಿನೋಭಾಜೀಯವರು ಸೆರೆಮನೆಯ ವಾಸವನ್ನು ಕೃತಜ್ಞತೆಯಿಂದ ಎದುರಿಸಿ ರಾಷ್ಟ್ರಮಾತೆಯ ಉಪಾಸನೆಯನ್ನು ಮಾಡಿದರು. ಮಹಾತ್ಮಗಾಂಧಿಯವರು ಭಾರತ ವರ್ಷದ ಅಭ್ಯುದಯಕ್ಕಾಗಿ ತನ್ನ ಶರೀರವನ್ನು ಬಲಿದಾನವಾಗಿ ಅರ್ಪಿಸಿದ ಮೇಲೆ ಮಹಾತ್ಮರ ಕಾರ್ಯವನ್ನು ಮುಂದುವರಿಸುವ ಮಹಾದೀಕ್ಷಾಬದ್ಧರಾಗಿ ವಿನೋಬರವರು ಆಶ್ರಮದಿಂದ ಹೊರಟು ಕಾರ್ಯದ ರಜೋಮಯ ರಂಗಕ್ಕೆ ಪ್ರವೇಶಿಸಿದರು.

ಭಾವೆಯವರ ಅಪೇಕ್ಷಿತವಾದ ಆತ್ಮಶೋಧವು ಪ್ರಕಾಶಕ್ಕೆ ಬಂದದ್ದು ಹೈದರಾಬಾದಿನ ತೆಲಂಗಾನ ಪ್ರದೇಶದಲ್ಲಿ. ತೆಲಂಗಾನ ಪ್ರದೇಶದ ಎಂಟು ಮಿಲಿಯದಿಂದಲೂ ಹೆಚ್ಚಾದ ಬಡ ರೈತರು ಭೂಮಾಲೀಕರ ದರ್ಪ ಆಕ್ರೋಶಗಳಿಗೆ ಬಲಿಯಾಗಿ ನರಳುತ್ತಲಿದ್ದರು. ಈ ವಿಷಮ ಪರಿಸ್ಥಿತಿಯನ್ನು ತಮ್ಮ ಉಪಯೋಗಕ್ಕಾಗಿ ಬಳಸಿಕೊಂಡ ಹಲವು ಜನರು ತೆಲಂಗಾನದ ಭೂಮಾಲೀಕರ ಶಿರಗಳನ್ನು ಕಡಿದರಿಸಿ ಚೆಲ್ಲಿ ರಕ್ತದೋಕುಳಿಯಿಂದ ಪವಿತ್ರ ಭಾರತ ನೆಲವನ್ನು ಕಲುಷಿತವನ್ನಾಗಿ ಮಾಡಿದರು. ತೆಲಂಗಾನವು ಭೀಕರ ಸಂಗ್ರಾಮರಂಗವಾಗಿ ರುದ್ರಭೂಮಿಯ ಪೈಶಾಚಿಕ ನರ್ತನವು ನಡೆದು ಹೋಯಿತು. ಮಾನವ ಸಹಜ ಸದ್ಭಾವನೆಗಳು ಅಳಿದು ಹೋಗಿ ಮಾನವನು ಹಿಂಸ್ರಪಶುವಾದನು. ಜೀವನವು ಭದ್ರತೆಯಿಲ್ಲದ ಕ್ಷುದ್ರ ಬಾಳಾಯಿತು. ಕಂಗೆಟ್ಟ ಸರಕಾರವು ಬೇರೊಂದುಪಾಯ ಕಾಣದೆ ಪೋಲೀಸ್ ಸೈನ್ಯಪಡೆಗಳಿಂದ ವಿಷಮ ಪರಿಸ್ಥಿತಿಯನ್ನು ಹತೋಟಿಗೆ ತರುವ ಯತ್ನವನ್ನೆಸಗಬೇಕಾಯಿತು.

ಪೈಶಾಚಿಕ ಕ್ಷೇತ್ರವಾದ ಈ ರುದ್ರಭೂಮಿಗೆ ಭಾವೆಯವರು ಏಪ್ರಿಲ್ ೧೯೫೧ರಲ್ಲಿ ಪ್ರಥಮ ಪ್ರವೇಶ ಮಾಡಿದರು. ಅವರು ಹೋಗಬೇಕೆಂದು ನಿರ್ಧರಿಸಿದ್ದ ಸ್ಥಳಕ್ಕೆ ಪೋಲೀಸಿನವರು ಕೂಡ ಹೋಗಲಂಜುತ್ತಿದ್ದರು. ತಮ್ಮ ಸ್ವಂತ ಜೀವನದ ಹಂಗು ತೊರೆದು ಆಚಾರ್ಯರು ಹಿಂಸಾವಾದಿಗಳ ಭೀಕರ ಕಾರ್ಯಗಳನ್ನು ಎದುರಿಸಲು ಆತ್ಮಬಲದ ಅಹಿಂಸಾಸ್ತ್ರವನ್ನು ಹೂಡಿದರು. ಅಲ್ಲಿಯೇ ಭೂದಾನ ಯಜ್ಞದೀಕ್ಷಾಬದ್ಧರಾಗಿ ತಮಗೆ ಸಾಮಮಾರ್ಗದಿಂದ ದೊರೆತ ಕೆಲ ಎಕ್ರೆ ಜಮೀನನ್ನು ಬಡವರಿಗೆ ಹಂಚಿದರು. ಕೆಲವೇ ತಿಂಗಳಲ್ಲಿ ೫೭ ವರ್ಷದ ಆಚಾರ್ಯರು ಪಾದಚಾರಿಗಳಾಗಿ ೧೪೦೦ ಮೈಲುಗಳಿಗಿಂತಲೂ ಹೆಚ್ಚು ನಡೆದು ಭಾರತದ ಬಹು ಪ್ರಾಂತ್ಯಗಳಲ್ಲಿ ಸಂಚರಿಸಿ ಜನರ ಕಷ್ಟಕಾರ್ಪಣ್ಯಗಳನ್ನು ಮನಗಂಡು ಭೂದಾನ ಯಜ್ಞ ಮಹಾವ್ರತವನ್ನು ಮುಂದುವರಿಸಿದರು. ಅವರು ಹೋದ ಗ್ರಾಮಾಂತರಗಳಲ್ಲೆಲ್ಲ ಸಹಸ್ರಾರು ಮಂದಿ ಅವರನ್ನು ಹಿಂಬಾಲಿಸಿದರು. ಅವರು ಬರುತ್ತಾರೆಂದು ಅರಿತೊಡನೆಯೇ ಮಾರ್ಗಗಳೂ ಮನೆಗಳೂ ಗುಡಿಸಲುಗಳೂ ತಳಿರುತೋರಣಗಳಿಂದ ಶೃಂಗಾರವಾಗುತ್ತಿದ್ದವು. ಗ್ರಾಮಾಂತರ ನಿವಾಸಿಗಳು ಅವರನ್ನು ಸಂದರ್ಶಿಸಿ ದೀರ್ಘದಂಡ ನಮಸ್ಕರಿಸಿ ಹಾರ ಮಾಲಿಕೆಗಳಿಂದ ಅವರ ಕಂಠ ಪ್ರದೇಶವನ್ನು ನಿಬಿಡೀಕರಿಸಿದರು. ಬಡವರಿಗೆ ಭೂದಾನ ಮಾಡುವ ದೇವದೂತರೇ ವಿನೋಬರೆಂದು ಜನರು ಅವರನ್ನು ಮುಕ್ತಕಂಠದಿಂದ ಹೊಗಳಿದರು.

ಆಚಾರ್ಯರ ದಿನಚರಿಯು ಮಹಾತ್ಮರ ಕಾರ್ಯ ವಿಶೇಷಗಳನ್ನು ಬಹುತೇಕ ಹೋಲುವುದು. ಆಚಾರ್ಯರು ಪ್ರತಿನಿತ್ಯ ಪ್ರಾತಃಕಾಲ ಮೂರು ಘಂಟೆಗೆ ಏಳುವರು. ಒಂದರಿಂದ ಒಂದೂವರೆ ಘಂಟೆ ಕಾಲ ವಿಶ್ವವ್ಯಾಪಕ ಪುರುಷನಾದ ಭಗವಂತನನ್ನು ಪ್ರಾರ್ಥಿಸಿ ಧ್ಯಾನಿಸಿದ ಮೇಲೆ

ಸಂಸ್ಥಾನ ಸರ್ಕಾರಗಳಿಗೆ ಪಂಡಿತ ನೆಹರೂರವರ ಬುದ್ಧಿವಾದ.

"ಶಕ್ತಿಯುತ, ಆರೋಗ್ಯಕರ ಮತ್ತು ಸಮೃದ್ಧಿಯಾದ ಜನಾಂಗವನ್ನು ಕಟ್ಟಿ ಸಹಾಯ ಮಾಡಬೇಕೆಂದು ಇಂಡಿಯಾದ ಪ್ರಧಾನ ಮಂತ್ರಿ ಪಂಡಿತ ನೆಹರೂರವರು ಮುಖ್ಯ ಆಡಳಿತ ಅಧಿಕಾರ ಸೂತ್ರ ಹಿಡಿದಿರುವ ಎಲ್ಲಾ ಪ್ರಮುಖ ಕಾಂಗ್ರೆಸಿಗರಿಗೆ ಬುದ್ಧಿವಾದ ಹೇಳಿರುವರು.

ಸಂಸ್ಥಾನಗಳ ಮುಖ್ಯ ಮಂತ್ರಿಗಳಿಗೆ ಬರೆದ ಒಂದು ಪತ್ರದಲ್ಲಿ ನೆಹರೂರವರು ಹೀಗೆಂದಿರುವರು—'ನಾವು ಯಾರ ಸೇವೆ ಮಾಡುತ್ತಿರುವೆವೋ ಅವರ ಕ್ಷೇಮಾಪೇಕ್ಷಣೆಯೇ ತಮ್ಮ ಮುಖ್ಯ ಗುರಿಯಾಗಿರಬೇಕು. ಆಡಳಿತದಲ್ಲಿ ತೀರ್ಮಾನಗಳನ್ನು ಮಾಡುವಾಗ್ಗೆ ಮುಖ್ಯ ಮಂತ್ರಿಗಳೂ ಹಾಗೂ ಇತರ ಮಂತ್ರಿಗಳೂ ಅಲ್ಪಸಂಖ್ಯಾತರನ್ನು (ಮೈನಾರಿಟಿಯವರನ್ನು) ಮರೆಯಬಾರದು ಅಥವಾ ಅವರನ್ನು ಚುನಾವಣೆಯಲ್ಲಿ ವಿರೋಧಿಸಿದವರನ್ನು ಕಷ್ಟಕ್ಕೀಡು ಮಾಡಬಾರದು.

ಉತ್ತಮ ಮತ್ತು ಸಮರ್ಥ ಆಡಳಿತದ ಆವಶ್ಯಕತೆಯನ್ನು ಒತ್ತಿ ಸೂಚಿಸುತ್ತಾ, ಪ್ರಧಾನಿಗಳು ಹೀಗೆಂದಿರುವರು—'ಸ್ವಾತಂತ್ರ್ಯ ದೊರೆತನಂತರ ಇಂಡಿಯಾದ ವೆಲ್ಫೇರಾಕಾಂಕ್ಷಿಗಳ ಎರಡನೆಯ ಉದ್ದೇಶವು ಅದನ್ನು ಬಲವಂತ, ಪುಷ್ಟಿಕರ ಮತ್ತು ಸಮೃದ್ಧಿಯ ಜನಾಂಗವಾಗಿ ಕಟ್ಟಬೇಕಾಗಿದೆ. ಅವರು ಕಾಂಗ್ರೆಸ್ ಕಾರ್ಯಕ್ರಮವನ್ನನುಸರಿಸಬೇಕಾದರೆ, ಜನಾಂಗದ ಆಡಳಿತ ನಡೆಸುವಾಗ್ಗೆ ಅವರ ಕೃತಿಗಳು ಎಲ್ಲಾ ಪಂಗಡಗಳಿಗೆ ಸಮಾನತೆಯಿಂದ ನಡೆಯಬೇಕು".

ನಿತ್ಯದ ಕೆಲಸ ಕಾರ್ಯಗಳಲ್ಲಿ ನಿಮಗ್ನರಾಗುವರು. ಬೆಳಗಿನ ಹೊತ್ತು ಹೊರಟು ಮಧ್ಯಾಹ್ನದ ವರೆಗೂ ಕಾಲ್ನಡಿಗೆಯಿಂದಲೇ ನಡೆಯುವರು. ಅವರೂ ಅವರ ಹಿಂಬಾಲಕರೂ ನಿಶ್ಚಿತ ಗ್ರಾಮಕ್ಕೆ ತಲುಪಿದ ಮೇಲೆ ಸರಳ ಉಪಹಾರವನ್ನು ಸೇವಿಸಿ ಸ್ವಲ್ಪ ಸಮಯ ಪರ್ಯಂತ ವಿಶ್ರಾಂತಿಯನ್ನು ತೆಗೆದುಕೊಳ್ಳುವರು.

ಮೂರು ಘಂಟೆಯ ಹೊತ್ತಿಗೆ ಭೂದಾನ ಮಹಾಯಜ್ಞವು ಆರಂಭವಾಗುವುದು. ಆಚಾರ್ಯರು ಗ್ರಾಮದಲ್ಲಿ ತಮ್ಮ ನ್ಯಾಯಸ್ಥಾನವನ್ನು ಸ್ಥಾಪಿಸುವರು. ನೂರಾರು ಮಂದಿ ಬಡ ಜನರು ತಮ್ಮ ಕಷ್ಟ ನಿಷ್ಠುರಗಳನ್ನು ಹೇಳಿಕೊಳ್ಳಲು ಸಭೆಗೆ ಬರುವರು. ಶ್ರೀಮಂತರ ದಬ್ಬಾಳಿಕೆಯಿಂದ ನೊಂದ ಬಡ ಜನರಿಗೆ ಈ ರೀತಿಯ ಕ್ರಮ ವಿಶೇಷವು ತೀರಾ ಹೊಸದು. ಭಾವುಕರ ನ್ಯಾಯಾಲಯಕ್ಕೆ ಭಗವಂತನ ಆದೇಶಪೂರ್ಣ ನ್ಯಾಯವಲ್ಲದೆ ಬರಿ ದುಷ್ಟ ನ್ಯಾಯನೀತಿಯೊಂದೂ ಇಲ್ಲದಿರುವುದರಿಂದ ಭಾವೆಯವರು ಮಾನವನ ಹೃದಯದಲ್ಲಿ ವಾಸಿಸುವ ಈಶ್ವರನನ್ನು ಪ್ರಾರ್ಥಿಸಿ ಗ್ರಾಮೋತ್ತರ ವಾಸಿಗಳ ಒಳ ಜಗಳಗಳನ್ನೂ ಗೃಹಕಲಹಗಳನ್ನೂ ನಿವಾರಿಸಲೆತ್ನಿಸುವರು. ಮಾಲೀಕರು ಬಡ ಕೂಲಿಗಳಿಗೆ ಸಲ್ಲಬೇಕಾದ ಕೂಲಿಯನ್ನು ಕೊಟ್ಟುಬಿಡುವಂತೆ ಸತ್ಯಾಗ್ರಹದಿಂದಲೇ ಪ್ರೇರೇಪಿಸುವರು. ಐದು ಗಂಟೆಯ ಹೊತ್ತಿಗೆ ಆಚಾರ್ಯರ ಪ್ರಾರ್ಥನಾ ಸಭೆಯು ಆರಂಭವಾಗುವುದು. ಪ್ರಾರ್ಥನಾ ಸಭೆಯಲ್ಲಿ ಜಗತ್ತಿನ ಪ್ರಮುಖ ಧರ್ಮಗ್ರಂಥಗಳಾದ ಕೊರಾನ್, ಬೈಬಲ್, ಗ್ರಂಥಸಾಹೇಬ್ ಮತ್ತು ಜೆಂಡ ಅವೆಸ್ತಾಗಳಲ್ಲದೆ ಪರಮ ಪಾವನವಾದ ಭಗವದ್ಗೀತೆಯೂ ಪಠಿಸಲ್ಪಡುವುದು. ಶ್ರೀಮಂತರು ತನ್ನನ್ನು ತಮ್ಮ ಇನ್ನೊಬ್ಬ ಮಗನೆಂದು ಭಾವಿಸಿ ಬಡವರಿಗೆ ಹಂಚಲೋಸುಗ ತನ್ನ ಪಾಲನ್ನು ಕೊಟ್ಟುಬಿಡಬೇಕೆಂದು ಆಚಾರ್ಯರು ಪ್ರಾರ್ಥಿಸುವರು. ಅನೇಕ ಕರುಣಾಪೂರ್ಣ ಹೃದಯದ ಭೂಮಾಲಿಕರು ಸಭೆಗಳಲ್ಲೇ ದಾನಪತ್ರವನ್ನು ಬರೆದು ಆಚಾರ್ಯರಿಗೆ ಒಪ್ಪಿಸುವರು. ಭೂದಾನವನ್ನು ಭಾವೆಯವರು ಸ್ವೀಕರಿಸಿ ಭೂರಹಿತರಾದ ಬಡ ಜನರಿಗೆ ಅವರವರ ಅವಶ್ಯಕತೆಗನುಸರಿಸಿ ಭೂಮಿಯನ್ನು ಹಂಚುವರು. ತನ್ನ ಭೂದಾನ ಮಹಾಯಜ್ಞಕ್ಕೆ ಐವತ್ತು ಮಿಲಿಯ ಎಕರೆ ಭೂಮಿಯು ಅಗತ್ಯವೆಂದೂ ಪ್ರತಿಯೊಬ್ಬ ಭೂರಹಿತ ಬಡ ಕುಟುಂಬಕ್ಕೆ ಐದೈದು ಎಕರೆಗಳಷ್ಟು ಭೂಮಿಯನ್ನು ಹಂಚಿಕೊಡುವುದೇ ಯಜ್ಞದ ಮಹ ಉದ್ದಿಶ್ಯವೆಂದೂ ಭಾವೆಯವರು ಸಾರುವರು.

ವಿನೋಬಾರವರು ವಿಲಕ್ಷಣವಾದ ಮಾರ್ಗದಿಂದ ಭಾರತದ ಭೂಸಮಸ್ಯೆಯನ್ನು ಪರಿಹರಿಸಲೆತ್ನಿಸುತ್ತಿರುವುದನ್ನು ನೋಡಿ ಭಾರತದ ಮಹಾಪ್ರಧಾನಿ ಜವಾಹರರು ಆಚ್ಚರಿಗೊಂಡು ವಿನೋಬರನ್ನು ಡೆಲ್ಲಿಗೆ ಆಹ್ವಾನಿಸಿದರು. ರಾಷ್ಟ್ರನಾಯಕನ ಕರೆಯನ್ನು ಮನ್ನಿಸಿ ವಿನೋಬರವರು ೮೦೦ ಮೈಲುಗಳಷ್ಟು ಕಾಲ್ನಡಿಗೆಯಿಂದಲೇ ನಡೆದು ಡೆಲ್ಲಿಗೆ ತಲುಪಿದರು. ರಾಷ್ಟ್ರೀಯ ಯೋಜನಾ ಸಮಿತಿಗೆ (ನೇಷನಲ್ ಪ್ಲಾನಿಂಗ್ ಕಮಿಷನ್) ಯೋಗ್ಯ ಸಲಹೆಯನ್ನು ಕೊಡಲೆಂದೇ ವಿನೋಬರವರನ್ನು ಜವಾಹರರು ಆಹ್ವಾನಿಸಿದರು. ವಿನೋಬರಿಗೋಸ್ಕರ ಮಹಾತ್ಮ ಗಾಂಧಿಯವರ ಸಮಾಧಿಯ ಸಮೀಪ ಬಿದಿರಿನ ಕುಟೀರವೊಂದನ್ನು ನಿರ್ಮಿಸಿ ರಾಜಮಾರ್ಗದಿಂದ ಕಳ್ಳಿಗೊಂಡು ದಾರಿಯನ್ನು ನಿರ್ಮಿಸಲಾಯಿತು. ರಾಷ್ಟ್ರದ ಪ್ರಮುಖ ನಾಯಕರೆಲ್ಲ ಆ ಪಾವನ ಕುಟೀರಕ್ಕೆ ಬಂದು ವಿನೋಬರ ಮುಂದೆ ನೆಲದ ಮೇಲೆ ಕುಳಿತ ರಾಜನೀತಿಯ ಸಲಹೆಗಳನ್ನು ಕೇಳಿಕೊಂಡು ಹೋದರು. ವಿನೋಬಾಶ್ರಮವು ಮಹಾತ್ಮರ ಆಶ್ರಮವನ್ನು ಸರ್ವವಿಧದಿಂದಲೂ ಹೋಲುತ್ತಿತ್ತು. ಸಭ್ಯ ಮಾನವ ಸಭ್ಯತೆಯ ಮಹಿಳೆಯರೂ ಕರ್ತವ್ಯನಿಷ್ಠ ಕಾರ್ಯಕರ್ತರೂ ಮಂಗಳಕರವಾದ ಎಳೆ ಬಾಲಕಿಯರೂ ಆಶ್ರಮದ ಭವ್ಯ ವಾತಾವರಣಕ್ಕೆ ಸುಗಂಧವನ್ನು ತುಂಬಿದ್ದರು. ವಿನೋಬರವರ ಆಶ್ರಮದ ಸನ್ನಿವೇಶವು ಪ್ರಾಚೀನ ಆರ್ಯ ಋಷಿಗಳ ವಾಸಸ್ಥಾನದ ಪುಣ್ಯಾಶ್ರಮಗಳನ್ನು ನೋಡುವವರ ಮನಸ್ಸಿಗೆ ಜ್ಞಾಪಿಸುತ್ತಿದ್ದವು.

ರಾಷ್ಟ್ರಪತಿ ರಾಜೇಂದ್ರ ಪ್ರಸಾದರೂ ಮಹಾ ಪ್ರಧಾನಿ ಜವಾಹರರೂ ವಿನೋಬರನ್ನು ಅನೇಕ ಸಲ ಸಂದರ್ಶಿಸಿ ವಿಚಾರ ವಿನಿಮಯವನ್ನು ಮಾಡಿಕೊಂಡರು. ರಾಜೇಂದ್ರರು ವಿನೋಬರಿಗೆ ತಮ್ಮ ಭೂಸೊತ್ತಿನಿಂದ ಕೆಲವಂಶವನ್ನು ದಾನ ಮಾಡಿದರು. ಹನ್ನೊಂದು ದಿನಗಳ ವರೆಗೆ ಡೆಲ್ಲಿಯಲ್ಲಿ ವಾಸಿಸಿ ಆಚಾರ್ಯರು ತಮ್ಮ ಅವಿಶ್ರಾಂತವಾದ ಧರ್ಮ ಮಾರ್ಗವನ್ನು ಹೊಡಲೋಸುಗ ಉತ್ತರ ಪ್ರದೇಶಕ್ಕೆ ತೆರಳಿದರು. ರಕ್ತರಹಿತ ಕ್ರಾಂತಿಯ ಮಹಾ ಕಥನವನ್ನು ಹಾಡಿದರು. ಬಲ್ಲದರಿಂದ ಬೇಡಿ ಬಡವರಿಗೆ ದಾನವಾಗಿ ಕೊಟ್ಟು ಬಡವರ ಬಂಧುವೆಂದು ಕೀರ್ತಿಸಲ್ಪಡುವ ಆಚಾರ್ಯರು ಪ್ರತಿ ದಿನವೂ ೩೦೦ ಎಕರೆಗಳಷ್ಟು ಭೂದಾನ ಮಾಡುತ್ತಿರುವರು. ಭಾರತದ ಸಂಸ್ಕೃತಿಗೆ ಸರ್ವವಿಧದಿಂದಲೂ ಹೊಂದಿಕೊಂಡು ಮಾನವನ ದೈವೀ ಸಂಪತ್ತಿಯನ್ನು ಪ್ರಕಾಶ ಪಡಿಸಿ ಭಾರತದ ಆರ್ಥಿಕ ಸಮಸ್ಯೆಯನ್ನು ಪರಿಹರಿಸಲು ಯತ್ನಿಸುತ್ತಿರುವ ಭೂದಾನ ಯಜ್ಞದೀಕ್ಷಿತ ಆಚಾರ್ಯ ವಿನೋಬ ಭಾವೆಯವರ ಪ್ರಚಂಡ ಪ್ರಯತ್ನದಿಂದ ಭಾರತವು ಸುಭಿಕ್ಷದ ನೆಲೆವೀಡಾದ ರಾಮರಾಜ್ಯವಾಗಿ ಕಂಗೊಳಿಸಿ ಜಗತ್ತಿನ ಹಿಂಸಾತ್ಮಕ ರಾಷ್ಟ್ರಗಳಿಗೆ ಆದರ್ಶಪ್ರಾಯವಾಗಲಿ!!!

ಹೈದರಾಬಾದದಲ್ಲಿ ವಿದ್ಯಾರ್ಥಿಗಳ ಗಲಭೆ

ಹೈದರಾಬಾದ ರಾಜ್ಯದಲ್ಲಿ ಹೈದರಾಬಾದಿನ ಹೊರಗಿನವರನ್ನು ನೌಕರಿಗೆ ಸೇರಿಸಿಕೊಳ್ಳಬಾರದೆಂಬ ಆಂದೋಲನವನ್ನು ಅಲ್ಲಿಯ ವಿದ್ಯಾರ್ಥಿಗಳು ಪ್ರಾರಂಭಿಸಿದರು. ಈ ಪಂಕ್ತಿತಿಯು ಆರಂಭದಿಂದ ಅಲ್ಲಿಯ ಕಮ್ಯೂನಿಸ್ಟರೂ ಭಾಗಕಾರಾದ ದೇಶದ್ರೋಹಕರ ಪರಿಸ್ಥಿತಿಯನ್ನು ಇನ್ನೂ ಹದಗೆಡಿಸಿದರು.

ಈ ಆಂದೋಲಕರ ಅನೇಕ ಕಡೆಗೆ ಕೊಳ್ಳೆ, ಸುಲಿಗೆ ಮೊದಲಾದ ಅಸಹ್ಯ ವಿನಾಶಕರ ಚಟುವಟಿಕೆಗಳನ್ನು ಪ್ರಾರಂಭಿಸಿದ್ದರಿಂದಲೂ ಗಸ್ತಿದಳದ ಪೊಲೀಸರ ಮೇಲೆ ಕಲ್ಲು ಇಟ್ಟಿಗೆಗಳನ್ನು ತೂರಿ ಹಲ್ಲೆ ನಡೆಸಿದ್ದರಿಂದಲೂ ಪೊಲೀಸರು ಗುಂಡುಹಾರಿಸಿ ಗೋಲೀಬಾರು ಮಾಡಬೇಕಾಯಿತು. ಅದರಿಂದ ಅನೇಕರಿಗೆ ಗಾಯಗಳಾದುವು. ೧೦೦ ಜನ ಪೊಲೀಸು ಅಧಿಕಾರಿಗಳು ಮತ್ತು ಜನರು ಗಾಯಗೊಂಡರು.

ಕಲ್ಲುಗಳ ಎಸೆಯುವಿಕೆಯಿಂದ ಪೊಲೀಸರ ೩೦ ವಾಹನಗಳು ಮತ್ತು ಮೂರು ಲಾರಿಗಳು ಹಾನಿಗೀಡಾದುವು. ೩೦೦ ಜನರ ದಸ್ತಗಿರಿಯಾಗಿದೆ.

ಈಗ ಎಲ್ಲವೂ ಶಾಂತಿಯಾಗಿದೆ.

ಸಿಂಹಾಸನ ಹೋದರೂ ಸಂಪತ್ತು ಕೈಬಿಟ್ಟಿಲ್ಲ

ಫರೂಕರ ಅತ್ಯಾಡಂಬರ ಜೀವನ

ಈಜಿಪ್ಟಿನ ಸಿಂಹಾಸನವನ್ನು ತ್ಯಜಿಸಿ ದೇಶ ಬಿಟ್ಟು ಹೋಗಿರುವ ಫರೂಕರು ತಮ್ಮ ಹೆಂಡತಿ ನರಿಮಾನ ಮತ್ತು ಏಳು ತಿಂಗಳ ಮಗುವಿನೊಡನೆ ಕಾಪ್ರಿಯಲ್ಲಿಯ ಭವ್ಯ ಹೋಟೆಲೊಂದರಲ್ಲಿ ವಾಸಿಸುತ್ತಿದ್ದಾರೆ. ಮೇಲ್ಮಾಳಿಗೆಯಲ್ಲಿ ಫರೂಕ ಕುಟುಂಬ ವಾಸಿಸುತ್ತಿದ್ದು ಅಲ್ಲಿಯ ಒಂದು ಕೋಣೆಯಲ್ಲಿ ಏನಿದೆಯೆಂಬುದು ರಹಸ್ಯವಾಗಿದೆ.

ಬೀಗ ಹಾಕಿರುವ ಆ ಕೋಣೆಯ ಬಾಗಿಲಲ್ಲಿ ಹಗಲಿರುಳೂ ಫರೂಕರ ಅಂಗರಕ್ಷಕರಲ್ಲೊಬ್ಬನು ಕಾವಲಿರುತ್ತಾನೆ. ರಾತ್ರಿ ರಾಜನ ಕೋಣೆಯೊಳಗೆ ಮಲಗುತ್ತಾನೆ. ಅಲ್ಲಿಗೆ ಬರುವ ಹಾದಿಗಳಲ್ಲಿ ಇತರರು ಕಾವಲಿರುತ್ತಾರೆ.

ಈ ಕೋಣೆಯಲ್ಲಿ ಅನೇಕ ಪೆಟ್ಟಿಗೆಗಳಿವೆ. ಅವುಗಳಲ್ಲಿ ಏನಿದೆಯೆಂಬುದು ಗೊತ್ತಿರುವುದು ಫರೂಕರಿಗೆ ಮಾತ್ರ. ಸ್ವಪಕ್ಷದ ನಂತರ ಈಜಿಪ್ಟಿನಿಂದ ಹೊರಡುವಾಗ ಎಷ್ಟು ಸಂಪತ್ತನ್ನು ಅವರು ಸಾಗಿಸಿಕೊಂಡು ಹೋಗಲು ಸಮರ್ಥರಾದರೆಂಬುದು ಪತ್ರಿಕೆಗಳಿಗೆ ಉತ್ತರ ದೊರೆಯದ ಪ್ರಶ್ನೆಯಾಗಿದೆ.

ಈ ಪೆಟ್ಟಿಗೆಗಳಲ್ಲಿ ಬಂಗಾರವಿದೆ ಎಂದು ಕೆಲವರು ಹೇಳುತ್ತಿದ್ದಾರೆ, ಇನ್ನು ಕೆಲವರು ಅವುಗಳಲ್ಲಿ ಈಜಿಪ್ಟಿನ ಅರಮನೆತನದ ಮುತ್ತು ರತ್ನಗಳಿವೆ ಎನ್ನುತ್ತಾರೆ. ತನಗೆ ಇಂಥ ಪ್ರಸಂಗ ಬಂದೀತೆಂದು ಮೊದಲೇ ಅರಿತು ಫರೂಕರು ತಮ್ಮ ಜೀವನದಲ್ಲಿ ಸಂಗ್ರಹಿಸಿದ ವಜ್ರಾದಿಗಳು ಅಭರಣಗಳೂ ಈ ಪೆಟ್ಟಿಗೆಯಲ್ಲಿರುವುವೆಂದು ಅಲ್ಲಿಯ ಜನರ ಪೇಟೆಗಳಲ್ಲಿ ಜನ ಮಾತಾಡಿಕೊಳ್ಳುತ್ತಾರೆ. ಹೈರೋದಲ್ಲಿ ಫರೂಕರ ಸಂಪತ್ತು ಎಲ್ಲಿದೆ ಎಂಬುದರ ಬಗ್ಗೆ ವಿಚಾರಣೆ ನಡೆದದ್ದು ಈ ಪೆಟ್ಟಿಗೆಗಳ ರಹಸ್ಯವು ಹೊರ ಬೀಳುವುದಕ್ಕೆ ಸಾಧ್ಯವಾಯಿತು. ಆಲಿಮೆ ಹರದ ಕಾರ್ಯ ಬಹು ಮಟ್ಟಿಗೆ ಸಾಧಿಸಿದಂತಾಯಿತು.

ಫರೂಕರೇನೋ "ನಾನೇನು ಶ್ರೀಮಂತನಾಗಿಲ್ಲ. ನಾನು ಈಜಿಪ್ಟಿನಿಂದ ಅಪಾರ ಸಂಪತ್ತು ತಂದಿರುವೆನೆಂಬುದು ಸುಳ್ಳು" ಎಂದು ಹೇಳಿದ್ದಾರೆ. ಕಾಪ್ರಿಯಲ್ಲಿ ಅವರು ಸುದ್ದಿಗಾರರೊಡನೆ ಮಾತನಾಡುತ್ತಾ "ನಾನು ಅಪಾರ ಸಂಪತ್ತನ್ನು ಬಚ್ಚಿಟ್ಟುಕೊಂಡಿದ್ದೇನೆ ಎಂಬ ಮಾತು ಸುಳ್ಳು. ನಾನಿನ್ನು ಸರಳ ಸಾದಾ ಜೀವನ ನಡೆಸಬೇಕಾಗುವದು. ನನ್ನ ಈ ಮಾತು ಕೇಳಿ ನೀವು ಒಳಗೊಳಗೆ ನಗಬಹುದು" ಎಂದು ಹೇಳಿದರು.

ಅವರ ಈ ಮಾತು ನಿಜವೆಂದು ಹೇಳಬಹುದು. ಏಕೆಂದರೆ ಕೆಲವು ತಿಂಗಳ ಮುಂಚಿತವಾಗಿಯೇ ತನ್ನ ಅರಮನೆಗೆ ಸಂಚಕಾರ ಬಂದಿದೆ ಎಂಬ ಅರಿವು ಬಂದಿದ್ದ ಯಾವನೇ ಆಗಲೀ ಒಂದೇ ಒಂದು ರಾತ್ರಿಯಲ್ಲಿ ಜೂಜಿನಲ್ಲಿ ೭ ಲಕ್ಷ ರೂ.ಗಳನ್ನು ಕಳೆಯುವ ಸಾಹಸ ಮಾಡುತ್ತಿದ್ದನೇ? ಮೂರು ದಿನದ ಲಗ್ನ ಸಮಾರಂಭಕ್ಕಾಗಿ ೧ ಕೋಟಿ ರೂ. ವೆಚ್ಚ ಮಾಡುತ್ತಿದ್ದನೇ? ೬೦ ಲಕ್ಷ ರೂ.ಗಳ ವೆಚ್ಚದಿಂದ ವಿಲಾಸಕ್ಕಾಗಿ ಹಡಗು ಕಟ್ಟಿಸಲು ಪ್ರಾರಂಭಿಸುತ್ತಿದ್ದನೇ? ಇನ್ನೂ ಇದೇ ಮಾದರಿಯ ಇತರ ಅನೇಕ ವೆಚ್ಚಗಳನ್ನು ಮಾಡಿದ ಮತ್ತು ಮಾಡುತ್ತಿರುವ ಫರೂಕರು ಅವರ ಸಂಪತ್ತು ವಿದೇಶಗಳಲ್ಲಿ ದಿನ ದಿನಕ್ಕೂ ವೃದ್ಧಿಹೊಂದದೆ ಇರುತ್ತಿದ್ದರೆ ಹೀಗೆ ಮಾಡುತ್ತಿದ್ದರು ಎಂದು ಹೇಳಲು ಸಾಧ್ಯವಿಲ್ಲ.

ಹೈರೋದ ಪತ್ರಿಕೆಗಳು ಇತ್ತೀಚಿನ ಕೆಲ ತಿಂಗಳಲ್ಲಿ ಫರೂಕರು ೪ ಕೋಟಿ ರೂ.ಗಳನ್ನು ಅಮೇರಿಕೆ ಮತ್ತು ಸ್ವಿಟ್ಜರ್ಲೆಂಡ್‌ಗಳ ಬ್ಯಾಂಕುಗಳಲ್ಲಿಟ್ಟಿದ್ದಾರೆಂದು ಬರೆದಿವೆ.

ಬಹುಶಃ ಆಗಿರುವ ೭-೮ ಕೋಟಿ ರೂ.ಗಳು ಫರೂಕರಿಗೆ ಈಜಿಪ್ತದಲ್ಲಿ ಅವರಿದ್ದ ಐಶ್ವರ್ಯದಿಂದ ಮಾತ್ರವೇ ನಿಸ್ಸತ್ತ್ವರೆನಿಸಲಿಲ್ಲ. "ತನಗೆ ರಾಜ್ಯಭ್ರಷ್ಟನಾಗುವ ಸಲುವಾಗಿ ದಾರಿದ್ರ್ಯ ಪಡೆಯಬೇಕಾಗಿ ಬಂದರೂ ತಾನೂ ಬಡವನೆಂದ ಭಾವಿಸುವುದಿಲ್ಲ" ಎಂದು ಅವರು ಮನವರಿಕೆ ಮಾಡಿದ್ದಾರೆ.

— ನಿಮಗೆ ಅತ್ಯಂತ ಲಾಭದಾಯಕವಾಗಿ —

ವಿಮೆ ಮಾಡಲೂ ಅಥವಾ ಪ್ರತಿನಿಧಿಸಲೂ

ಇಂದಿಗೂ ಅತ್ಯಂತ ಹಳೆಯ ಮತ್ತು ಸುಭದ್ರತೆಯ ವಿಮಾ ಸಂಸ್ಥೆ.

ದಿ ಬಾಂಬೆ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

[ಸ್ಥಾಪನೆ 1871]

ವಿವರಗಳಿಗೆ ಬರೆಯಿರಿ—ಬ್ರಾಂಚ್ ಸೆಕ್ರೆಟರಿ,

172-3 ನರಸಿಂಹ ರಾಜಾ ರಸ್ತೆ (P. B. 186),

12-2 ಬೆಂಗಳೂರು 2, ಅಥವಾ ಫೋನ್ ನಂಬ್ರ-3624.

ಕ್ಷಯರೋಗ ಹೇಗೆ ಬೆಳೆಯುತ್ತದೆ?

(ಲೇ—ಡಾ ವಿ. ಆರ್. ಬಟ್, ಎಂ. ಬಿ. ಬಿ ಎಸ್., ಟಿ ಡಿ ಡಿ)

ರೋಗಾಣುಗಳು ಹೇಗೆ ದೇಹದೊಳಗೆ ಪ್ರವೇಶಿಸಿ ರಕ್ತದಲ್ಲಿ ಸೇರುತ್ತವೆ. ದೇಹದಲ್ಲಿ ಯಾವುದಾದರೂ ಒಂದೆಡೆ ಅವು ನೆಲಸಿ, ಸಂಖ್ಯಾಭಿವೃದ್ಧಿಗೊಂಡು ಕೆಲ ಕಾಲದ ನಂತರ ರೋಗವನ್ನುಂಟುಮಾಡಬಹುದು. ಹೀಗೆ ಉತ್ಪಾದಿಸಲ್ಪಟ್ಟ ರೋಗವು ಸ್ವಾಭಾವಿಕವಾಗಿ ಗುಣವಾಗಿ ಸಂಬಂಧಪಟ್ಟ ವ್ಯಕ್ತಿಯು ಕೆಲ ಮಟ್ಟಿಗೆ ಕ್ಷಯರೋಗದಿಂದ ನಿವೃತ್ತಿ ಹೊಂದುತ್ತಾನೆಂಬುದು ಸಾಮಾನ್ಯ ಜನರಿಗೆ ತಿಳಿದಿರುವುದಿಲ್ಲ. ರೋಗವು ವಾಸಿಯಾದರೂ ರೋಗಾಣುಗಳು ಹಲವು ವರ್ಷಗಳ ವರೆಗೆ ಯಾವೊಂದು ಹಾನಿಯುಂಟುಮಾಡದೆ ನಿಶ್ಚಲವಾದ ಸ್ಥಿತಿಯಲ್ಲಿ ಜೀವಂತ ಉಳಿಯಬಲ್ಲವು. ದೃಷ್ಟಾಂತಕ್ಕಾಗಿ, ಎರಡು ವರ್ಷದ ಮಗುವಿಗೆ ರೋಗದ ಸೋಂಕು ತಗಲಿ, ರೋಗಾಣುಗಳು ರಕ್ತವನ್ನು ಸೇರಿ ಶ್ವಾಸಕೋಶದೊಳಗೆ ನುಗ್ಗಲು ಸಮರ್ಥವಾಗಬಹುದು. ಆಗ ಮಗುವಿಗೆ ಕಠಿಣ ಜ್ವರ, ಕೆಮ್ಮು, ಮೂಗಿನಲ್ಲಿ ಸಿಂಬಳ ಇಳಿದು ಹೋಗುವುದು ಇತ್ಯಾದಿ ಲಕ್ಷಣಗಳ ಕಂಡುಬರಬಹುದು. ಇದನ್ನು ಇತರ ಸಾಮಾನ್ಯ ಜ್ವರಗಳಿಗೆ ಚಿಕಿತ್ಸೆ ನಡೆಸಿದಂತೆ ಚಿಕಿತ್ಸೆಗೊಳಪಡಿಸಬಹುದು. ಇಲ್ಲವೆ, ಚಿಕಿತ್ಸೆಯಿಲ್ಲದೆ ಹಾಗೆಯೇ ಜ್ವರ ನಿಲ್ಲಲೂಬಹುದು. ಮಗುವಿನ ದೇಹದಲ್ಲಿರುವ ಪ್ರತಿರೋಧ ಶಕ್ತಿಯು ಚೆನ್ನಾಗಿದ್ದರೆ, ಜ್ವರವು ನಿಂತ ಬಳಿಕ ಮಗುವಿನ ಆರೋಗ್ಯ ನೆಟ್ಟಗಾಗಬಹುದು. ಕ್ಷಯರೋಗವನ್ನು ತಡೆಯುವ ಶಕ್ತಿಯು ಮಗುವಿನಲ್ಲಿ ಕೆಲ ಮಟ್ಟಿಗೆ ಬೆಳೆಯಬಹುದು. ಆದರೆ ರೋಗಾಣುಗಳಲ್ಲಿ ಕೆಲವು ಶ್ವಾಸಕೋಶದ ಒಂದು ಚಿಕ್ಕ ಬೊಟ್ಟಿನಷ್ಟು ಸ್ಥಳದಲ್ಲಿ ಜೀವಂತ ಇದ್ದು, ಹಲವು ವರ್ಷಗಳ ವರೆಗೆ ಏನೊಂದೂ ತೊಂದರೆ ಕೊಡದೆ ತಮ್ಮ ಅಸ್ತಿತ್ವದ ಕುರಿತು ಹೊರಗೆ ಏನೊಂದು ರೀತಿಯ ಕುರುಹು ತೋರದೆ ಇರಬಹುದು.

ಹಲವು ಸಾಂಕ್ರಾಮಿಕ ರೋಗಗಳು ಆ ರೋಗದಿಂದ ಗುಣಮುಕ್ತವಾದೊಡನೆ, ಆ ಪ್ರತ್ಯೇಕ ರೋಗವನ್ನು ತಡೆಯುವ ಬಗ್ಗೆ ರೋಗಿಯಲ್ಲಿ ಪ್ರತಿರೋಧ ಶಕ್ತಿಯನ್ನು ಉತ್ಪಾದಿಸುತ್ತವೆ. ಉದಾ: ಒಬ್ಬನಿಗೆ ವಿಷಮ ಜ್ವರ ಟೈಫಾಯಿಡ್ ಅಂಟಿತೆನ್ನುವಾ; ಅದು ತನ್ನ ವಾಯಿದೆಯಷ್ಟು ಬಾಧಿಸಿ ನಿಂತಿತೆನ್ನುವಾ; ಆಗ ಆ ವ್ಯಕ್ತಿಯಲ್ಲಿ ವಿಷಮ ಜ್ವರವನ್ನು ನಿರೋಧಿಸುವ ಶಕ್ತಿ (ಕೆಲ ಕಾಲದ ಮಟ್ಟಿಗಾದರೂ) ಉಂಟಾಗುತ್ತದೆ. ಅದೇ ರೀತಿ ಸಿಡುಬು, ಸೀತಾಳ ಸಿಡುಬು ಇತ್ಯಾದಿ ವ್ಯಾಧಿಗಳಲ್ಲಿ ಕೂಡ ಇಂತಹದೇ ಪ್ರತಿರೋಧ ಶಕ್ತಿ ಕ್ಷಯರೋಗಿಗಳಲ್ಲೂ ಉತ್ಪಾದನೆಯಾಗುತ್ತದೆ. ಮೊದಲ ಸೋಂಕಿನಿಂದ ಗುಣಮುಖಹೊಂದಿದ ರೋಗಿಯು ಕ್ಷಯವನ್ನು ಪ್ರತಿಬಂಧಿಸುವ ಒಂದಿಷ್ಟು ಶಕ್ತಿ ಹೊಂದುತ್ತಾನೆ. ಆದರೆ ಆ ಪ್ರತಿರೋಧ ಶಕ್ತಿಯೊಡನೆ 'ಎಲ್ಲರ್ಜಿ' ಎನ್ನುವ ಮತ್ತೊಂದು ಸ್ಥಿತಿಯೂ ಅವನಲ್ಲಿ ಉಂಟಾಗುತ್ತದೆ. ಈ 'ಎಲ್ಲರ್ಜಿ' ಉತ್ಪಾದನೆಯು ಕ್ಷಯರೋಗದಲ್ಲಿ ವಿಶಿಷ್ಟವಾದುದು.

'ಎಲ್ಲರ್ಜಿ' ಎಂದರೇನೆಂದು ತಿಳಿಯಲು ಈ ಕೆಳಗಿನ ದೃಷ್ಟಾಂತವನ್ನು ಕೊಂಚ ವಿವೇಚಿಸುವಾ. ಒಂದು ಜಾತಿಯ ಹುಲ್ಲಿನ ಹೂವುಗಳ ಪರಾಗದ ವಾಸನೆ ಕೆಲವರಲ್ಲಿ 'ಶೀತ'ದಂತಹ ಅವಸ್ಥೆಯನ್ನು ತಂದೊಡ್ಡುವುದು. ಅವರಿಗೆ ಜ್ವರವೂ ಬರಬಹುದು. (ಇದನ್ನು 'ತೃಣಜ್ವರ' (ಹೇ ಫೀವರ್) ಎನ್ನುತ್ತಾರೆ.) ಆದರೆ ಅದೇ ಪುಷ್ಪ ಪರಾಗವನ್ನು ಇತರರು ಮೂಸಿದರೆ ಅವರಲ್ಲಿ ಅಂತಹ ಅವಸ್ಥೆ ತಲೆದೋರದಿರಬಹುದು. ಹಾಗಾದರೆ ಕೆಲವರಲ್ಲಿ ಮಾತ್ರ ಆ ಪರಾಗದ ವಾಸನೆ 'ತೃಣಜ್ವರ'ವನ್ನು ಏಕೆ ತರುತ್ತದೆ? ಅವರಲ್ಲಿ ಆ ಪರಾಗದ ವಿರುದ್ಧ 'ಎಲ್ಲರ್ಜಿ' ಇರುವುದೆ ಅದಕ್ಕೆ ಮುಖ್ಯ ಕಾರಣ. ಅವರಲ್ಲಿರುವ ಆ 'ಎಲ್ಲರ್ಜಿ'ಯೇ ಆ ಅಸ್ವಾಭಾವಿಕ ಪ್ರತಿಕ್ರಿಯೆಗೆ ಕಾರಣವಾಗಿರುತ್ತದೆ. ಆ ಮಂದಿಯ ಚರ್ಮಕ್ಕೆ ಸೂಕ್ಷ್ಮ ಗಾಯಗಳನ್ನು ಚುಚ್ಚಿ, ಆ ಪುಷ್ಪಪರಾಗದ ಒಂದಂಶವನ್ನು ಆ ಘಾಯಗಳ ಮೇಲೆ ಉಜ್ಜಿದರೆ, ಚರ್ಮವು ಕೆಂಪಾಗಿ ಆ ಸ್ಥಳದಲ್ಲಿ ಬಾತುಹೋಗಲೂ ಬಹುದು. ಆದರೆ ಎಲ್ಲರ್ಜಿ ಇಲ್ಲದವರಲ್ಲಿ ಅದೇ ರೀತಿ ಪರಾಗ ಹಚ್ಚಿದರೆ ಯಾವೊಂದು ರೀತಿಯ ಮಾರ್ಪಾಟು ಕಂಡುಬರುವುದಿಲ್ಲ. ಇದು ಒಂದು ವಿಧದ 'ಎಲ್ಲರ್ಜಿ' ಆಗಿರುತ್ತದೆ.

ಕ್ಷಯರೋಗದಲ್ಲಿಯೂ 'ಎಲ್ಲರ್ಜಿ' ಇದೇ ರೀತಿಯದು (ಆದರೆ ಅದೇ ಅಲ್ಲ). ಕ್ಷಯಾಣು ಸಂಬಂಧವಾದ ಪದಾರ್ಥವನ್ನು ಅಂತಹ ಮಂದಿಯ ಚರ್ಮಕ್ಕೆ ಉಜ್ಜಿದರೆ ಚರ್ಮದ ಬಣ್ಣ ಕೆಂಪೇರಿ ಉಜ್ಜಿದ ಕಡೆಯಲ್ಲಿ ಅದು ಬಾತುಹೋಗಬಹುದು. ಇದೇ ತತ್ವದ ಮೇಲೆ ಆಧರಿಸಿಕೊಂಡು ಕ್ಷಯರೋಗದ ಕುರಿತು ಎಲ್ಲರ್ಜಿ ಇದೆಯೋ ಎಂಬುದನ್ನು ಪರೀಕ್ಷಿಸಲು 'ಮೆಂಟೊ ಟೆಸ್ಟ್' ಎನ್ನುವ ಪ್ರಯೋಗ ನಡೆಸುತ್ತಾರೆ. ಈ ಪ್ರಯೋಗದಲ್ಲಿ ಓಲ್ಡ್ ಟ್ಯುಬರ್ಕ್ಯುಲಿನ್ ಎಂಬ ಪದಾರ್ಥವನ್ನು (ಸತ್ತ ಕ್ಷಯಾಣುಗಳಿಂದ ಇದನ್ನು ತಯಾರಿಸುತ್ತಾರೆ) ಚೆನ್ನಾಗಿ ಅಲ್ಪ ಮಾಡಿ ಟ್ರೈಘಾಯಿಡ್ ಅಂದರೆ ಒಂದು ಬೊಟ್ಟನ್ನು ಕೈತೋಳಿನ ಮುಂಭಾಗಕ್ಕೆ ಚುಚ್ಚಿಸುವರು. ಚುಚ್ಚಿಸಿದವನ ಮೈಯಲ್ಲಿ ಎಲ್ಲರ್ಜಿ ಇದೆ ಎಂದಾದರೆ ಚುಚ್ಚಿಸಿದ ಸ್ಥಳದ ಸುತ್ತಲೂ ಬಾತುಹೋಗಿ ೪೮ ರಿಂದ ೭೨ ತಾಸುಗಳೊಳಗೆ ಕೆಂಪು ಬೊಕ್ಕೆ ಏಳಬಹುದು. 'ಎಲ್ಲರ್ಜಿ' ಇಲ್ಲವೆಂದಾದರೆ ಯಾವುದೊಂದು ರೀತಿಯ ಬದಲಾವಣೆಗಳೂ ಕಂಡುಬರುವುದಿಲ್ಲ. 'ಎಲ್ಲರ್ಜಿ' ಇದೆಯೆಂದಾಕ್ಷಣ ರೋಗದ ಲಕ್ಷಣಗಳು ಸಂಬಂಧಪಟ್ಟ ವ್ಯಕ್ತಿಯಲ್ಲಿ ಇವೆಯೆಂದೂ, ಕೆಲ ಸಮಯದ ಹಿಂದೆ ಇದ್ದು ಗುಣವಾಗಿದ್ದಿರಬಹುದೆಂದೂ ಗ್ರಹಿಸಬಹುದಾಗಿದೆ. ಮೇಲಿನ ಪ್ರಯೋಗ ಮೆಂಟೊಟೆಸ್ಟ್ ನಡೆಸಿದಾಗ 'ಎಲ್ಲರ್ಜಿ'ಯ ಅಸ್ತಿತ್ವ ತೋರಿಸುವವರು ನಿಶ್ಚಿತ ಪ್ರತಿಕ್ರಿಯೆ ಗೊಳಪಟ್ಟವರೆಂದಾಗುವುದು. ಯಾರಲ್ಲಿ ಎಲ್ಲರ್ಜಿ ಇರುವುದಿಲ್ಲವೊ ಅವರು ಪ್ರತಿಷೇಧ ಪ್ರತಿಕ್ರಿಯೆಗೊಳಪಟ್ಟವರೆಂದಾಗುವರು. ಎಲ್ಲರ್ಜಿಯ ಅಸ್ತಿತ್ವ ಮಾತ್ರದಿಂದ ರೋಗವು ಆ ಸಂದರ್ಭದಲ್ಲಿ ಇದೆ ಎಂಬ ನಿರ್ಣಯಕ್ಕೆ ಬರುವುದಕ್ಕಾಗುವುದಿಲ್ಲ. ಕೆಲ ಸಮಯದ ಹಿಂದೆ ಆ ರೋಗದ ಲಕ್ಷಣಗಳು ಇದ್ದಿರಬೇಕೆಂಬ ಅರ್ಥವೂ ಆಗುತ್ತದೆ. ಆದರೆ ನೈಸರ್ಗಿಕವಾದ ಸೋಂಕಿನಿಂದ ಉತ್ಪಾದಿಸಲ್ಪಟ್ಟ ಎಲ್ಲರ್ಜಿ ಶಾಶ್ವತವಾಗಿ ಉಳಿಯಬಲ್ಲುದು.

ಹೀಗೆ ಕ್ಷಯ ರೋಗವು 'ಎಲ್ಲರ್ಜಿ' ಉತ್ಪಾದಿಸುವುದೆಂದಾಯಿತು. ಇದರ ಅಸ್ತಿತ್ವವನ್ನು 'ಮೆಂಟೊ ಟೆಸ್ಟ್'ದಿಂದ ಕಂಡುಹಿಡಿಯಬಹುದಾಗಿದೆ. ಈ ಪ್ರಯೋಗ ನಡೆಸಿದರೆ ನಗರ ವಾಸಿಗಳಲ್ಲಿ ಶೇಕಡ ೯೦ ರಷ್ಟು ಮಂದಿ ಹದಿನಾರು ವರ್ಷ ಪ್ರಾಯದೊಳಗೆ ನಿಶ್ಚಿತ ಪ್ರತಿಕ್ರಿಯೆ ತೋರಿಸಬಹುದೆಂದರೆ ನಿಜವಾಗಿಯೂ ಹಲವು ಮಂದಿಗೆ ಆಶ್ಚರ್ಯವಾಗಬಹುದು. ಇದರ ಅರ್ಥವೇನು? ೧೬ ವರ್ಷದೊಳಗೆ ಶೇಕಡ ೯೦ಕ್ಕಿಂತ ಹೆಚ್ಚು ಮಂದಿಗೆ ಅದರ ಸೋಂಕು ಆಗಿರುತ್ತದೆ. ಎಂದು ನೆನಸಬೇಕಾಗುತ್ತದೆ. ಅವರಲ್ಲಿ ಕೆಲವೇ ಮಂದಿಯಲ್ಲಿ ರೋಗ ಉಲ್ಬಣಾವಸ್ಥೆಯಲ್ಲಿ ಕಂಡುಬರಬಹುದು; ಉಳಿದ ಮಂದಿಯಲ್ಲಿ ಅದು ವಾಸಿಯಾಗಿರಬಹುದು; ಇಲ್ಲವೆ ಕೆಲವು ರೋಗಾಣುಗಳು ಜೀವಂತಯುಕ್ತವಾಗಿ ಉಳಿದಿದ್ದು ಪ್ರಕೋಪಕ್ಕೆ ಸಮಯ ಕಾಯುತ್ತಿರಲೂಬಹುದು. ಕೆಲವರಲ್ಲಿ ರೋಗವು ತನ್ನಿಂದ ತಾನೇ ವಾಸಿಯಾಗುವುದಿದ್ದರೆ ಅದು ಅವರ ದೇಹದಲ್ಲಿರುವ ರೋಗವನ್ನು ತಡೆವ ಪ್ರತಿರೋಧ ಶಕ್ತಿಯಿಂದಾಗಿ. ಕ್ಷಯರೋಗವನ್ನು ಗುಣಪಡಿಸುವುದು ಸಾಧ್ಯವಿದೆ ಎಂಬುದನ್ನೂ ಇದರಿಂದ ನಾವು ತಿಳಿಯಬಹುದಾಗಿದೆ.

ಕ್ಷಯದ ಬೆಳವಣಿಗೆಗೆ ಕೆಲವು ಮುಖ್ಯ ಕಾರಣಗಳು

ಶೇಕಡ ೯೦ರಷ್ಟು ಮಂದಿಯಲ್ಲಿ ರೋಗದ ಸೋಂಕು ಇದೆ ಎಂಬುದನ್ನು ನಾವು ತಿಳಕೊಂಡಂತಾಯಿತು. ಅವರಲ್ಲಿ ಕೆಲವೇ ಮಂದಿಯಲ್ಲಿ ಅದು ನಂತರ ಉಲ್ಬಣವಾಗುತ್ತದೆ. ರೋಗವು ಅಭಿವೃದ್ಧಿಗೊಳ್ಳಲು ಸಹಾಯಕವಾಗುವ ವಿಷಯಗಳು ಯಾವುವು? ರೋಗದ ಬೆಳವಣಿಗೆಗೆ ಹಲವು ಬೇರೆ ಬೇರೆ ಕಾರಣಗಳು ಸಹಾಯವಾಗುತ್ತಿವೆ. ಅವುಗಳಲ್ಲಿ ಕೆಲವು ಮುಖ್ಯ ಕಾರಣಗಳನ್ನು ಈ ಕೆಳಗೆ ನಿರೂಪಿಸಲಾಗಿದೆ.

೧. ವೈಯಕ್ತಿಕ ಆರೋಗ್ಯ—ಮನುಷ್ಯನ ಆರೋಗ್ಯವು ಚೆನ್ನಾಗಿದ್ದರೆ, ದೇಹದಲ್ಲಿ ರೋಗವನ್ನು ತಡೆವ ಪ್ರತಿರೋಧ ಶಕ್ತಿಯು ಚೇತನಯುಕ್ತವಾಗಿದ್ದರೆ, ಕ್ಷಯರೋಗವು ಬೆಳೆಯುವುದಿಲ್ಲ.

ಸಾಮಾಜಿಕ ಸ್ಥಿತಿ—ಸಿರಿವಂತರಿಗೆ ತಮ್ಮ ಆರೋಗ್ಯದ ಕುರಿತು ಅಧಿಕ ನೋಡಿಕೊಂಡಿರಲು ಹೆಚ್ಚಿನ ಸೌಕರ್ಯಗಳಿರುವುದರಿಂದ ಬಡವರಷ್ಟು ಸುಲಭವಾಗಿ ರೋಗವು ಅವರಲ್ಲಿ ಬೆಳೆಯುವುದಿಲ್ಲ. ಹೀಗೆಂದ ಮಾತ್ರಕ್ಕೆ ಕ್ಷಯ-ರೋಗವು ಬಡವರಿಗೆ ಮಾತ್ರ ಅಂಟುವ ರೋಗ ಎಂಬ ಅರ್ಥವಾಗುವುದಿಲ್ಲ. ಅದು ಸಿರಿವಂತರನ್ನೂ ಬಡವರಷ್ಟೇ ಸುಲಭವಾಗಿ ಅಂಟಬಹುದು—ಮುಖ್ಯವಾಗಿ ಕ್ಷಯರೋಗಿಗಳೊಡನೆ ನಿಕಟ ಸಂಸರ್ಗವಾದಾಗ.

೩. ಇಕ್ಕಟ್ಟಿನ ವಸತಿಗಳು: ಮನೆಯಲ್ಲಿ ಇಲ್ಲವೆ ಹಾಸ್ಟೆಲ್‌ಗಳಲ್ಲಿ ಮಿತಿ ಮೀರಿ ಸಂಖ್ಯೆಯಿದ್ದರೆ ರೋಗ ಬಲು ಬೇಗ ಪ್ರಸಾರವಾಗಬಲ್ಲುದು. ಕ್ಷಯರೋಗಿಗಳೊಡನೆ ನಿರೋಗಿಗಳು ಕೂಡುವುದರಿಂದ ಒಬ್ಬನಿಂದ ಮತ್ತೊಬ್ಬನಿಗೆ ಅದು ಹರಡುವುದು ಅಧಿಕ.

೪. ವಸತಿ ಸೌಕರ್ಯ: ಸಾಕಷ್ಟು ಸ್ಥಳಾವಕಾಶವಿಲ್ಲದ, ಗಾಳಿಯ ಸಂಚಾರಕ್ಕೆ ಮತ್ತು ಸೂರ್ಯನ ಬಿಸಿಲುಗಳಿಗೆ ಆಸ್ಪದವಿಲ್ಲದ ಬಡ ವಸತಿ ಸೌಕರ್ಯಗಳಲ್ಲಿ ಮಿತಿಮೀರಿ ಕೂಡುವಿಕೆಯಿಂದ ರೋಗದ ಸೋಂಕು ಪ್ರಸಾರವಾಗುವುದು ಸಾಧ್ಯವಿದೆ.

೫. ಆಹಾರ: ಸಾಕಷ್ಟು ಕೊಬ್ಬು, ಪ್ರೋಟಿನ್, ಕಾರ್ಬೋಹೈಡ್ರೇಟ್ಸ್ ಜೀವಾಂಶಗಳು, ಖನಿಜ ಧಾತುಗಳಿಂದ ಕೂಡಿದ ಒಳ್ಳೆಯ ಪೌಷ್ಟಿಕ ಆಹಾರವೇ ದೃಢವಾದ ಆರೋಗ್ಯಕ್ಕೆ ಮತ್ತು ದೇಹದಲ್ಲಿಯ ಸಾಮಾನ್ಯ ಪ್ರತಿರೋಧ ಶಕ್ತಿಯೂ (ರೆಸಿಸ್ಟೆನ್ಸ್) ಹೆಚ್ಚುವುದಕ್ಕೆ ಅವಶ್ಯಕವಾದ್ದು. ನಿಕೃಷ್ಟ ದರ್ಜೆಯ ಆಹಾರದಿಂದ ಸಾಮಾನ್ಯ ಪ್ರತಿರೋಧ ಶಕ್ತಿಯು ಕುಗ್ಗಿ ರೋಗದ ಸೋಂಕು ಸುಲಭವಾಗಿ ತಗಲುತ್ತದೆ.

೬. ವೃತ್ತಿ: ಗಣಿಗಳಲ್ಲಿಯ ಕೆಲಸ ಇತ್ಯಾದಿ ವೃತ್ತಿಗಳು ಆರೋಗ್ಯಕ್ಕೆ ಹಾಳು. ಅಂತಹ ವೃತ್ತಿಗಳಲ್ಲಿ ಧೂಳು ಶ್ವಾಸಕೋಶದೊಳಗೆ ಸೇರಲು ಸಾಕಷ್ಟು ಆಸ್ಪದವಿದೆ. ಇದು ಶ್ವಾಸಕೋಶದಲ್ಲಿಯ ಪ್ರತಿರೋಧ ಶಕ್ತಿಯನ್ನು ತಗ್ಗಿಸಿ ರೋಗವನ್ನು ಹರಡಬಲ್ಲದು. ಅದೇ ರೀತಿ ಸಾಕಷ್ಟು ಗಾಳಿ ಸಂಚಾರವಿಲ್ಲದ ಜನನಿಬಿಡ ಸ್ಥಳಗಳಲ್ಲಿ ದುಡಿಯುವುದರಿಂದ ಆರೋಗ್ಯಕ್ಕೆ ತುಂಬಾ ಹಾನಿಇದೆ. ಇಂತಹ ಸ್ಥಳಗಳಲ್ಲಿ ರೋಗ ಪ್ರಸಾರವು ಸುಲಭವಾಗಿ ಆಗುತ್ತದೆ.

೭ ಮಾನಸಿಕ ಮತ್ತು ದೈಹಿಕ ಯಾತನೆ: ಮಾನಸಿಕ ಮತ್ತು ದೈಹಿಕ ಯಾತನೆಯಿಂದ ಬಳಲುವ ಮಂದಿ (ಉದಾ:- ಉದ್ಯೋಗ ಹುಡುಕಿಕೊಂಡು ದೊಡ್ಡ ನಗರಗಳಿಗೆ ಹೋಗಿ ಅದು ದೊರೆಯದೆ ಬಳಲಿ ಹತಾಶರಾದ ತರುಣರು) ದೇಹದಲ್ಲಿಯ ಪ್ರತಿರೋಧ ಶಕ್ತಿ ತಗ್ಗಿ ಸುಲಭವಾಗಿ ರೋಗಕ್ಕೆ ಬಲಿಯಾಗಬಹುದು. ಇದ್ರೀತಿ ಹಲವು ಹೆರಿಗೆಗಳಿಂದ ನಿಸ್ಸತ್ವವಾದ ಮಹಿಳೆಯರು ಕ್ರಮೇಣ ಈ ಸಾಂಕ್ರಾಮಿಕ ರೋಗಕ್ಕೆ ತುತ್ತಾಗಬಹುದು.

೮. ಇತರ ಬೇನೆಗಳು: ಸಿಡುಬು, ಸೀತಾಳ ಸಿಡುಬು ಮತ್ತು ವಿಷಮ ಜ್ವರ ಇತ್ಯಾದಿ ರೋಗಗಳ ಬಾಧೆಯ ನಂತರ ರೋಗಿಯ ದೇಹದಲ್ಲಿಯ ಸಾಮಾನ್ಯ ಪ್ರತಿರೋಧ ಶಕ್ತಿಯು ಎಷ್ಟರ ಮಟ್ಟಿಗೆ ತಗ್ಗ

(೬ನೇ ಪುಟಕ್ಕೆ ಸಾಗಿದೆ.)

ಕೊಡಗು

ತಾ. ೧೨-೯-೧೯೫೨ನೇ ಶುಕ್ರವಾರ

ಮೊರಾ ಇಳಿಸಲು ಲೈಸೆನ್ಸ್

ಮದ್ರಾಸು ಸರ್ಕಾರದ ನಿಷಾನಿಶೇಧ ಆಕ್ಟಿನ ಮೇರೆ ಮೊರಾ ಅಂದರೆ ಸಿಹಿ ಸೇಂದಿ ಇಳಿಸಲು ವ್ಯಕ್ತಿಗಳಿಗೆ ಅವಕಾಶವಿಲ್ಲ. ಆದರೆ ಸಹಕಾರಿ ಸಂಘಗಳ ಮೆಂಬರುಗಳಾದವರಿಗೆ ಸದರಿ ಸಂಘಗಳ ಮೂಲಕ ಇದಕ್ಕಾಗಿ ಲೈಸೆನ್ಸ್ ಕೊಡಲಾಗುವುದು. ದಕ್ಷಿಣ ಮಲಬಾರಿನಲ್ಲಿ ತೆಂಗು, ಈಚಲು ವಗೈರೆ ಮರಗಳಿಂದ ಸೇಂದಿ ಇಳಿಸುವ ವೃತ್ತಿಯಿಂದಲೇ ಪೂರ್ವದಿಂದ ಜೀವಿಸುತ್ತಾ ಬರುತ್ತಿದ್ದ ತೀಯರ ಸಂಖ್ಯೆಯು ಸುಮಾರು ೧೧ ಲಕ್ಷವಿದೆ. ಇವರಿಗೆ ನಿಷಾನಿಶೇಧ ಆಕ್ಟಿನಿಂದ ಜೀವನಕ್ಕೆ ಧಕ್ಕೆಯೊದಗತೊಡಗಿತು. ಆದುದರಿಂದ ಮೊರಾವನ್ನು ಇಳಿಸಲು ಲೈಸೆನ್ಸ್ ಪಡೆಯಬೇಕೆಂಬ ನಿರ್ಬಂಧವು ಇಡಿಯೊದ ಹೊಸ ಆಕ್ಟಿನ ಮೇರೆ ಎಲ್ಲರಿಗೂ ಇರುವ ಫಂಡಮೆಂಟಲ್ (ಮೂಲಭೂತ) ಹಕ್ಕಿನ ವಿರುದ್ಧವೆಂದೂ, ಅದನ್ನು ರದ್ದು ಮಾಡಬೇಕೆಂದೂ ೧೫ ತೀಯರು ಮದ್ರಾಸು ಹೈಕೋರ್ಟಿಗೆ ಅರ್ಜಿ ಬರೆದಿದ್ದರು.

ಹೈಕೋರ್ಟು ಜಡ್ಜರು ಈ ರೀತಿಯ ನಿರ್ಬಂಧವು ಸಮಾಜದ ಹಿತದ ದೃಷ್ಟಿಯಿಂದ ಯೋಗ್ಯವಾದದ್ದೆಂದು ತೀರ್ಪು ಕೊಟ್ಟಿರುವರು. ನಿಷಾನಿಶೇಧದ ಆಕ್ಟು ಸಮಾಜದ ನೈತಿಕ ಮತ್ತು ಆರ್ಥಿಕ ಅಭಿವೃದ್ಧಿಯ ಗುರಿಯಿಂದ ಮಾಡಲ್ಪಟ್ಟದ್ದಾಗಿದೆ. ಈ ಆಕ್ಟನ್ನು ಜಯಪ್ರದವಾಗಿ ಜಾರಿಗೆ ತರಲು ಇಂದು ಇರುವ ಆತಂಕವೆಂದರೆ— ಸಿಹಿ ಸೇಂದಿಯನ್ನು ಇಳಿಸಲು ಕೊಟ್ಟಿರುವ ಅವಕಾಶ. ಈ ಅವಕಾಶವನ್ನು ಯಾವದೊಂದು ಆತಂಕವಿಲ್ಲದೆ ಉಪಯೋಗಿಸಲು ಬಿಟ್ಟಿದ್ದೇ ಆದರೆ-ಅದರಿಂದ ಸಿಕ್ಕುವ ಅಪಾರ ಲಾಭ ಮತ್ತು ಮನುಷ್ಯನ ಮಾನಸಿಕ ದೌರ್ಬಲತೆ.—ಇವೆರಡು ಈ ಅವಕಾಶವನ್ನು ದುರುಪಯೋಗ ಪಡಿಸಲು ಬಹಳವಾಗಿ ಪ್ರೇರೇಪಿಸುತ್ತವೆ. ಸಮಾಜದ ಹಿತವನ್ನು ಬಯಸದವರು ಈ ರೀತಿಯ ಸ್ವಾತಂತ್ರ್ಯದಿಂದ ಸಮಾಜಕ್ಕೆ ಹಲವು ತರದ ಕೇಡುಗಳನ್ನು ಮಾಡಲು ಹಿಂಜರಿಯುವುದಿಲ್ಲ. ಆದ ಕಾರಣ ಈ ಅಲ್ಪ ನಿರ್ಬಂಧವು ಇರುವುದು ಸಮಾಜದ ಅಭಿವೃದ್ಧಿ ದೃಷ್ಟಿಯಿಂದ ಯುಕ್ತವಾಗಿದೆ. ಎಂದು ಮುಂತಾಗಿ ಸಕಾರಣಗಳನ್ನು ಕೊಟ್ಟಿರುವರು.

ಇಲ್ಲಿಯೂ ಕೂಡ ಕೆಲವರು ನಿಷಾಸೇವನೆ ಮಾಡುವುದು ತಮ್ಮ ಮೂಲಭೂತ ಹಕ್ಕು, ಅದಕ್ಕೆ ಅಡ್ಡಿ ಮಾಡುವುದು ಎಂದೂ ನ್ಯಾಯವಲ್ಲವೆಂದು ವಾದಿಸುವವರಿದ್ದಾರೆ. ಅಂಥವರು ಮದ್ರಾಸು ಹೈಕೋರ್ಟಿನ ಜಡ್ಜರು ಕೊಟ್ಟಿರುವ ಮೇಲಿನ ತೀರ್ಪನ್ನು ಕೂಲಂಕುಶವಾಗಿ ಓದಿ, ಮನನ ಮಾಡುವುದು ಉತ್ತಮ. ಸಿಹಿ ಸೇಂದಿಯ ವಿಚಾರಕ್ಕೇನೇ ನುರಿತ ಜಡ್ಜರು ಈ ರೀತಿ ಅಭಿಪ್ರಾಯ ಪಟ್ಟಿದ್ದಲ್ಲಿ ಹುಳಿ ಸೇಂದಿ, ಸಾರಾಯಿ ವಗೈರೆ ಹೆಚ್ಚು ಅಮಲುಳ್ಳ ಪದಾರ್ಥಗಳ ಸೇವನೆಯ ವಿಚಾರದಲ್ಲಿ ಎಷ್ಟರ ಮಟ್ಟಿಗೆ ನಿರ್ಬಂಧಗಳನ್ನಿಡಬೇಕೆಂಬುದನ್ನು ಸಮಾಜ ಹಿತಚಿಂತಕರು ಊಹಿಸಿಕೊಳ್ಳಬಹುದು.

ವರ್ತಮಾನ.

ಮಡಿಕೇರಿಯ ನಿವಾಸಿಗಳು ಕೈಲ್ ಪೊಳ್ದು ಹಬ್ಬದ ಆಟೋಟಗಳನ್ನು ಈ ತಾ. ೩ರಲ್ಲಿ ಮ್ಯಾನ್ಸ್ ಕಂಪೌಂಡಿನಲ್ಲಿ ನಡೆಸಿದರು.

ಡಾ. ಮಾಡೆಗ ಟಿ. ಐಯ್ಯಪ್ಪನವರನ್ನು ಕೊಡಗಿನ ಅಸಿಸ್ಟೆಂಟ್ ಹೆಲ್ತ್ ಆಫೀಸರಾಗಿ ನೇಮಿಸಲಾಗಿದೆಯೆಂದು ತಿಳಿಯಬರುತ್ತದೆ.

ತಾ. ೮ರ ಸಾಯಂಕಾಲ ಕೊಡಗಿನ ಮುಖ್ಯ ಮಂತ್ರಿಯಾದ ಶ್ರೀ ಸಿ. ಯಂ. ಪೂಣಚ್ಚನವರು 'ಕೊಡಗಿನ ಪ್ರಗತಿ'ಯನ್ನು ಕುರಿತು ಮೈಸೂರು ಆಕಾಶವಾಣಿಯಲ್ಲಿ ಭಾಷಣ ಮಾಡಿದರು.

ಬೊಂಬಾಯಿಯ ಕೊಡಗು ಸಂಘದವರು 'ಕೈಲ್‌ಮುಹೂರ್ತ' ಹಬ್ಬವನ್ನು ಆಟೋಟಗಳಿಂದ ಈ ತಾ ೭ ರಲ್ಲಿ ಸಾಂತಕ್ರೂಜದ ಸೆಂಟ್ ಅಂತೋಣಿ ಶಾಲೆಯಲ್ಲಿ ವಿಜೃಂಭಣೆಯಿಂದ ನಡೆಸಿದರಾಗಿ ತಿಳಿಯುತ್ತೇವೆ.

ಗಾಂಧೀಜಿಯವರ ಒಬ್ಬ ಪರಮ ಶಿಷ್ಯರೂ, 'ಹರಿಜನ' ಪತ್ರಿಕೆಯ ಸಂಪಾದಕರೂ ಆಗಿದ್ದ ಶ್ರೀ ಕೆ. ಜಿ. ಮಶ್ರೂವಾಲಾರು ಈ ತಾ. ೯ರಲ್ಲಿ ವಾರ್ಧಾದಲ್ಲಿ ದೈವಾಧೀನರಾದರು.

ಮಳೆಯ ದೆಸೆಯಿಂದ ಸ್ವಾತಂತ್ರ್ಯ ದಿನ ನಡೆಸಲಾಗದಿದ್ದ ಆಟೋಟಗಳನ್ನು ಈ ತಾ. ೭ರಲ್ಲಿ ಮ್ಯಾನ್ಸ್ ಕಂಪೌಂಡಿನಲ್ಲಿ ನಡೆಸಿ, ಗೆದ್ದವರಿಗೆ ಮುಖ್ಯ ಮಂತ್ರಿಯವರು ಇನಾಮುಗಳನ್ನು ಹಂಚಿದರು.

ಮಡಿಕೇರಿ ವೇದಾಂತ ಸಂಘದಲ್ಲಿ ನವರಾತ್ರಿ ಉತ್ಸವವು ಈ ತಾ. ೧೯ರಿಂದ ೨೭ರ ವರೆಗೆ ನಡೆಸಲ್ಪಡುವದೆಂದೂ, ಪ್ರತೀ ದಿನ ಸಾಯಂಕಾಲ ಉಪನ್ಯಾಸ, ಭಾರತ ವಾಚನ, ಸಂಗೀತ ಮೊದಲಾದವುಗಳು ನಡೆಯುವವೆಂದೂ ತಿಳಿಯುತ್ತೇವೆ.

ಕೊಡಗಿನಲ್ಲಿ ಇನ್ಶೂರೆನ್ಸ್ ಇನ್ಸ್‌ಪೆಕ್ಟರಾಗಿ ತಿಂಗಳಿಗೆ ರೂ ೧೫೦/ರ ಸಂಬಳದಲ್ಲಿ ಕೆಲಸ ಮಾಡಲು ಜನರು ಬೇಕಾಗಿರುವರು. ಕುತೂಹಲವುಳ್ಳವರು ಹೆಚ್ಚಿನ ವಿಷಯಗಳನ್ನು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಿಂದ ಒಡನೆ ತಿಳಿದುಕೊಳ್ಳಬಹುದು

ಮೆಕಾನಿಕ್ ಕಮ್ ಇಲೆಕ್ಟ್ರಿಷಿಯನ್ ಕೆಲಸಕ್ಕೆ ಗವರ್ನ್‌ಮೆಂಟಿನಲ್ಲಿ ಕೆಲಸ ಮಾಡಲು ಜನರು ಬೇಕಾಗಿದ್ದಾರೆ. ಈ ಎರಡು ಕೆಲಸ ಗೊತ್ತಿರುವರು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಿಂದ ಹೆಚ್ಚಿನ ವಿಷಯಗಳನ್ನು ಒಡನೆ ತಿಳಿದುಕೊಳ್ಳಬಹುದು.

ಈ ತಾ. ೨೦ರಲ್ಲಿ ನಡೆಯಲಿರುವ ವೀರಾಜಪೇಟೆ ಮುನ್ಸಿಪಲ್ ಕಮಿಟಿ ಸದಸ್ಯರುಗಳ ಚುನಾವಣೆಗೆ ಶ್ರೀ ಪುಲಿಯಂಡ ಬೋಪಯ್ಯನವರೂ ಒಬ್ಬ ಉಮೇದುವಾರರಾಗಿ ನಿಂತಿರುವರೆಂದೂ, ಶ್ರೀ ಕೆ. ಎ. ಚಿಣ್ಣಪ್ಪನವರು ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲವೆಂದು ಇತ್ತಲಾಗಿ ತೀರ್ಮಾನಿಸಿರುವರೆಂದೂ ತಿಳಿಯಬರುತ್ತದೆ.

ಮದ್ರಾಸು ಮೆಡಿಕಲ್ ಕಾಲೇಜಿನ ೪ ನೇ ವರ್ಷದ ವಿದ್ಯಾರ್ಥಿಗಳಿಗೆ ನಡೆದ ಸ್ಪರ್ಧೆಯ ಪರೀಕ್ಷೆಯಲ್ಲಿ ಶ್ರೀ. ಕೊಕ್ಕೆಂಗಡ ಯಂ. ಕಾಳಪ್ಪನವರು 'ಬ್ಯಾಕ್ಟ್ರಿಯೋಲಜಿ' ಮತ್ತು 'ಫಾರ್ಮಕೋಲಜಿ' ವಿಷಯಗಳಲ್ಲಿ ಒಂದನೇಯ ಬಹುಮಾನಗಳನ್ನು ಪಡೆದಿರುವರು.

ರೈಲ್ವೆಯಲ್ಲಿ ಅಸಿಸ್ಟೆಂಟ್ ಮಾಸ್ಟರುಗಳಾಗಿಯೂ, ಟಿಕೆಟ್ ಕಲೆಕ್ಟರುಗಳಾಗಿಯೂ ಸೇರಲು ಎಸ್. ಎಸ್ ಎಲ್. ಸಿ ಪಾಸಾಗಿ ಪ್ರಾಯ ೧೮ರಿಂದ ೨೫ರ ವರೆಗೆ ಇರುವ ತರುಣರು ಬೇಕಾಗಿರುವರು. ಕುತೂಹಲವುಳ್ಳವರು ಇದೇ ತಾ. ೧೫ರ ಒಳಗಾಗಿ ಸಮ್ಪಾದಿಸಿದ ಅಪ್ಲಿಕೇಶನ್ ಫಾರಮ್ಮಿನ ಅರ್ಜಿಯನ್ನು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿಗೆ ತಲುಪಿಸತಕ್ಕದ್ದು.

ಈ ತಾ. ೭ ರಲ್ಲಿ ಮಡಿಕೇರಿ ಮ್ಯಾನ್ಸ್ ಕಂಪೌಂಡಿನಲ್ಲಿ ಕೊಡಗಿನ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಮೀಟಿಂಗು ನಡೆದು ದಕ್ಷಿಣ ಆಫ್ರಿಕ ಸರ್ಕಾರದ ವರ್ಣಭೇದ ಖಾನೂನನ್ನು ಎದುರಿಸಲು ಅಲ್ಲಿಯ ಹಿಂದೀಯರೇ ಮೊದಲಾದ ಬಣ್ಣದ ಜನರು ನಡಿಸುತ್ತಿರುವ ಸತ್ಯಾಗ್ರಹಕ್ಕೆ ಪ್ರೋತ್ಸಾಹವನ್ನೀಯುವ ಠರಾವು ಪಾಸುಮಾಡಲಾಯಿತು.

ಕೊಡಗಿನ ಪೋಲೀಸು ಸುಪರಿಂಟೆಂಡೆಂಟರಾಗಿರುವ ಶ್ರೀ ಯಂ. ಪಿ. ಮುತ್ತಣ್ಣನವರಿಗಿದ್ದ ಸಿ. ಐ. ಡಿ ಇಲಾಖೆಯ ಅಧಿಕಾರವನ್ನು ಡಿಸ್ಟ್ರಿಕ್ಟ್‌ಮೇಜಿಸ್ಟ್ರೇಟರಾದ ಶ್ರೀ. ಐ. ಸಿ. ಸುಬ್ಬಯ್ಯನವರಿಗೆ ವರ್ಗಾಯಿಸಿರುವರೆಂದೂ, ಮತ್ತು ಟ್ರಾಫಿಕ್ ಬೋರ್ಡಿನ ಸೆಕ್ರೆಟರಿತನವನ್ನು ಡಿ. ಪೊ. ಸು. ರಾದ ಶ್ರೀ. ಯಂ. ಪಿ ಮುತ್ತಣ್ಣನವರಿಂದ ಟ್ರೆಜರಿ ಆಫೀಸರಾದ ಶ್ರೀ. ಶ್ರೀನಿವಾಸರಾಯರಿಗೆ ವರ್ಗಾಯಿಸಿರುವರೆಂದೂ ವರ್ತಮಾನ.

ಸರ್ವೆ ಆಫ್ ಇಂಡಿಯಾ ಆಫೀಸಿನಲ್ಲಿ ಎಸ್ ಎಸ್. ಎಲ್. ಸಿ ವರೆಗೆ ಅಥವಾ ಎಸ್. ಎಸ್. ಎಲ್. ಸಿ. ಪಾಸಾಗಿ ಪ್ರಾಯ 18 ರಿಂದ 25 ರ ಒಳಗೆ ಇರುವ ಯುವಕರಿಗೆ ಕೆಲಸವು ಖಾಲಿ ಇದೆ ಅರ್ಹರಾದರು ತಮ್ಮ ಅಪ್ಲಿಕೇಶನನ್ನು ಡೈರೆಕ್ಟರ್ ಸದರ್ನ್ ಸರ್ಕಲ್, ಸರ್ವೆ ಆಫ್ ಇಂಡಿಯ ನಂ. ೨೨ ರಿಚ್‌ಮಂಡ್ ರೋಡ್, ಪೋಸ್ಟ್ ಬಾಕ್ಸ್ ೪೪, ಬೆಂಗಳೂರು ೧ಕ್ಕೆ ಬರೆದುಕೊಳ್ಳತಕ್ಕದ್ದು. ಅಪ್ಲಿಕೇಶನನ್ನು ಮಡಿಕೇರಿ ಎಂಪ್ಲಾಯಿಮೆಂಟ್ ಆಫೀಸಿನ ಮೂಲಕ ತಾರೀಕು ೨೦-೯-೫೨ರ ಒಳಗೆ ಕಳುಹಿಸತಕ್ಕದ್ದು.

ಕೊಡಗಿನ ಎಗ್ರಿಕಲ್ಚರ್ ಎಡ್ವೈಸರಿ ಬೋರ್ಡಿನ ಮೆಂಬರುಗಳಾಗಿ ಒಂದು ವರ್ಷದ ವರೆಗೆ ಈ ಕೆಳಗಿನ ಮಹನೀಯರು ಚೀಫ್ ಕಮಿಷನರವರಿಂದ ನೇಮಿಸಲ್ಪಟ್ಟಿರುವರು. ಮುಖ್ಯಮಂತ್ರಿಯವರು (ಅಧ್ಯಕ್ಷರು,) ಲಾ ಮಂತ್ರಿಯವರು, ಡಿವೆಲೆಪ್‌ಮೆಂಟ್ ಕಮಿಷನರು (ಸೆಕ್ರೆಟರಿ) ಎಗ್ರಿಕಲ್ಚರ್ ಆಫೀಸರು, ಇರಿಗೇಶನ್ ಆಫೀಸರು, ಸಹಕಾರಿ ಸಂಘಗಳ ರಿಜಿಸ್ಟ್ರಾರವರು, ಶ್ರೀಗಳಾದ ಕೆ. ಯಂ. ದೇವಯ್ಯನವರು, ಜಿ ಯಂ. ಮಂಜುನಾಥಯ್ಯನವರು, ಪಿ ಲಕ್ಕನವರು, ಬಿ. ಎ. ಬೆಳ್ಳಿಯಪ್ಪನವರು, ಕೆ. ಎಂ. ಕಾರ್ಯಪ್ಪನವರು, ಯಂ. ಪಿ. ಅಪ್ಪಯ್ಯನವರು, ಕೆ. ಡಿ. ಅಚ್ಚಪ್ಪನವರು, ಎಸ್. ಎಸ್. ನಾರಾಯಣಮೂರ್ತಿಯವರು, ಕೆ. ಎಸ್. ಗಣಪತಿಯವರು ಮತ್ತು ಕೆ. ಎ. ಗನ್ನಿಯವರು

—೦೦—

ಮೂರ್ನಾಡು ಕೈಲ್ ಪೊಳ್ದು

ತಾ. ೩-೯-೫೨ ರಲ್ಲಿ ಮೂರ್ನಾಡು ಸಹಕಾರ ಸ್ಪೋರ್ಟ್ಸ್ ಕ್ಲಬ್ ಲಿಮಿಟೆಡ್, ಇದರ ಆಶ್ರಯದಲ್ಲಿ ಕಿಕ್ಕಿರದ ಜನಸ್ತೋಮದ ಮುಂದೆ ಆಟೋಟಗಳ ಸ್ಪರ್ಧೆಯು ವಿಜೃಂಭಣೆಯಿಂದ ಜರಗಿತು ಮತ್ತು ಆದಿನದ ಚೆಂಪಿಯನ್‌ಶಿಪ್ ಬಹುಮಾನವು ಮ ರಾ. ಶ್ರೀ. ಪರಿಜನರ ಕುಟ್ಟಪ್ಪನವರಿಗೆ ದೊರಕಿತು.

ಸದರಿ ದಿನ ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಮ ರಾ. ಶ್ರಿ. ಸಿ. ಯಂ ತಿಮ್ಮಯ್ಯನವರು ಅವರ ಅಂತ್ಯ ಭಾಷಣದಲ್ಲಿ-ಕೊಡಗಿನಲ್ಲಿ ಆಟೋಟಗಳ ಕಲೆಯು ಬಹಳ ಮಟ್ಟಿಗೆ ಕೆಳಮಟ್ಟದಲ್ಲಿರುವ ಕಾರಣ ಇದನ್ನು ಅಭಿವೃದ್ಧಿ ಪಡಿಸಲು ಅಖಿಲ ಕೊಡಗು ಸ್ಟೇಟ್ ಒಲಂಪಿಕ್‌ನ್ನು ಸ್ಥಾಪಿಸಿ, ಇದರ ಆಶ್ರಯದಲ್ಲಿ ಸ್ಪರ್ಧೆಗಾರರನ್ನು ತರಬೇತು ಮಾಡಲು ಶುರುಮಾಡಿದ್ದೇವೆಂದರು. ಈ ಸಂದರ್ಭದಲ್ಲಿ ಮೂರ್ನಾಡಿನವರು ಇಂಥಹ ಒಂದು ಸ್ಪೋರ್ಟ್ಸ್ ಕ್ಲಬ್‌ನ್ನು ರಿಜಿಸ್ಟ್ರು ಮಾಡಿಸಿ, ಇಲ್ಲಿಯ ನಾಡಿನವರು ಇಷ್ಟು ಉತ್ಸಾಹಭರಿತರಾಗಿ ಸ್ಪರ್ಧೆಗಳನ್ನೇರ್ಪಡಿಸಿದ್ದನ್ನು ಪ್ರಸಂಶಿಸಿ, ಈ ಕ್ಲಬ್ಬಿಗೆ ಬೇಕಾಗಿರುವ ಪೆವಲಿಯನನ್ನು ಕಟ್ಟಲು ಧನ ಸಹಾಯಕ್ಕೆ ಕೊಡಗಿನ ಮಂತ್ರಿಯವನ್ನು ಕಾಣುವುದು ಯುಕ್ತವೆಂದು ಸೂಚಿಸಿದರು. ಈ ಕ್ಲಬ್ಬಿಗೆ ಪೆವಲಿಯನನ್ನು ಕಟ್ಟಲು ತಾನು ರೂ ೩೦೦ ನ್ನು ಕೊಡುತ್ತೇನೆಂದು ವಾಗ್ದಾನ ಮಾಡಿದುದಲ್ಲದೆ, ಇದಕ್ಕೆ ತಾಗುವ ಖರ್ಚಿನ ವಸುಲಾತಿ ಬಗ್ಗೆ ಈ ಸಂಘದ ಸೆಕ್ರೆಟರಿಯವರಿಗೆ ಪೂರ್ತಿ ಸಹಾಯವನ್ನು ತಾನು ಕೊಡುವುದಲ್ಲದೆ ಅಖಿಲ ಕೊಡಗು ಸ್ಟೇಟ್ ಒಲಂಪಿಕವರಿಂದಲೂ ಸಹ ಸಹಾಯ ಕೊಡಿಸುತ್ತೇನೆಬದಾಗಿ ವಾಗ್ದಾನ ಮಾಡಿದರು. ಕಡೆಗೆ ವಂದನಾರ್ಪಣೆಯಿಂದ ಸಭೆಯು ಮುಕ್ತಾಯವಾಯಿತೆಂದು, ಸೆಕ್ರೆಟರಿಯವರು ತಿಳಿಸಿರುವರು.

ಹುಬ್ಬಳ್ಳಿಯಲ್ಲಿ ಶ್ರೀ ಕೆ. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕೂಡಿದ ಕರ್ನಾಟಕ ಪ್ರಾಂತ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಮುಂಬಯಿ ನಗರ ಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಸ್ಪರ್ಧಿಸುವುದಿಲ್ಲವೆಂಬ [illegible] ಯನ್ನು ಸ್ವೀಕರಿಸಲಾಯಿತು ಎಂದು ಅಧಿಕೃತವಾಗಿ ತಿಳಿದು ಬರುತ್ತದೆ. ಆದರೆ ಕಾಂಗ್ರೆಸಿಗರು ವೈಯಕ್ತಿಕವಾಗಿ ಚುನಾವಣೆಗೆ ನಿಲ್ಲಲು ಆಕ್ಷೇಪವಿಲ್ಲ ಎಂದು ಗೊತ್ತಾಗಿದೆ.

ಈ ಸಭೆಗೆ ಮುಂಬಯಿ ಸರಕಾರದ ಉಪಮಂತ್ರಿ ಶ್ರೀ ಬಿ. ಡಿ. ಜತ್ತಿ ಮತ್ತು ಕೊಡಗಿನ ಶ್ರೀ ದೇವಯ್ಯ ಇವರಿಬ್ಬರು ಹಾಜರಿಲ್ಲವೆಂದೂ ಗೊತ್ತಾಗಿದೆ. [illegible] ದ ಕಾರ್ಯಕಾರಿ ಸಮಿತಿಯ [illegible] ದ ಸದಸ್ಯರು ಅಖಿಲ ಭಾರತ [illegible] ಶ್ರೀ ಶ್ರೀನಿವಾಸ ಮಲ್ಯರು ಸಭೆಗೆ ಹಾಜರಿದ್ದರು.

ಓದುಗರ ಓಲೆಗಳು

ಸರಕಾರಕ್ಕೆ ಕಾಣದ ಹಳ್ಳಿಗಳು.

ಸೋಮವಾರಪೇಟೆಯ ಪೂರ್ವಕ್ಕೆ ನೇಗಳ್ಳಿ, ಕರ್ಕಳ್ಳಿಗ್ರಾಮ, ಅಬಿಯೂರು, ಹಿಕ್ಕುಮಕ್ಕಿ, ಚಿಕ್ಕಬ್ಬೂರು, ಅಬ್ಬೂರು, ಹೇರೂರು, ಮತ್ತು ಯಲ್ಕನೂರು ಹೊಸ ಹಳ್ಳಿ ಗ್ರಾಮಗಳು ಇವೆ. ಈ ಗ್ರಾಮಗಳು ಸೋಮವಾರಪೇಟೆಯಿಂದ ಫ್ರೇಜರ್‌ಪೇಟೆ ಹೋಬಳಿ ಕಣಿವೆಯ ವರೆಗೆ ಚಾಚಿವೆ. ಆದುದರಿಂದ ಸೋಮವಾರಪೇಟೆಯ ಪ್ರ ಸ್ತುತ ಭಾಗದವರು ಈ ಗ್ರಾಮಗಳನ್ನು ಕಣಿವೆ ಹಳ್ಳಿಗಳೆಂದು ಕರೆಯುವುದು ವಾಡಿಕೆಯಾಗಿದೆ. ಈ ಕಣಿವೆ ಹಳ್ಳಿಗಳು ಸರಕಾರಕ್ಕೆ ಕಾಣದ ಹಳ್ಳಿಗಳಾಗಿವೆ. ಕೊಡಗಿನಲ್ಲಿ ಹಿಂದುಳಿದ ತಾಲೋಕು ಉತ್ತರ ಕೊಡಗು. ಆದರೆ ಕೊಡಗಿನಲ್ಲಿ ಹಿಂದುಳಿದ ಹಳ್ಳಿಗಳೆಂದರೆ ಈ ಕಣಿವೆ ಹಳ್ಳಿಗಳಾಗಿವೆಂದರೆ ಅತಿಶಯೋಕ್ತಿಯಾಗಲಾರದು. ಈ ಹಳ್ಳಿಗಳು ವರ್ಷ ವಂದರ ಸಾವಿರಾರು ರೂಪಾಯಿಗಳನ್ನು ಸರಕಾರಕ್ಕೆ ಕಂದಾಯ ರೂಪದಲ್ಲಿ ತೆರುತ್ತಿದ್ದರೂ ಸರಕಾರ ಮಾತ್ರ ವರ್ಷ ವಂದರ ನಾಲ್ಕಾಣೆಯನ್ನು ಸಹ ಈ ಹಳ್ಳಿಗಳಿಗಾಗಿ ಖರ್ಚು ಮಾಡುತ್ತಿಲ್ಲ. ಇದು ಈಗಿನ ಸಂಪ್ರದಾಯವಲ್ಲ. ಕೊಡಗಿನ ರಾಜರ ಕಾಲದಲ್ಲಿಯಾಗಲೀ ಬ್ರಿಟಿಷ್ ಸರಕಾರದ ಕಾಲದಲ್ಲಿ ಆಗಲೀ ಅಥವಾ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ನಂತರವಾಗಲೀ ಯಾವ ಸರಕಾರವೂ ಈ ಹಳ್ಳಿಗಳಿಗಾಗಿ ಏನೊಂದೂ ಕೆಲಸ ಮಾಡಿಲ್ಲ. ಯಾವ ಸರಕಾರ ಬಂದರೂ ರಾಗಿ ಬೀಸೋದು ತಪ್ಪದು ಎಂಬ ಕನ್ನಡಿಗರ ಗಾದೆಯಂತೆ ಯಾವ ಸರಕಾರ ಬಂದು ಆಳಿದರೂ ನಮ್ಮ ಹಳ್ಳಿಗಳಿಗೆ ಮಾತ್ರ ಒಂದು ಶಾಲೆಯಾಗಲೀ, ಒಂದು ರಸ್ತೆಯಾಗಲೀ, ಕೆರೆ, ಬಾವಿಯಾಗಲೀ ಎಲ್ಲ ದಕ್ಕು ಸೊನ್ನೆ. ಈ ಹಳ್ಳಿಗಳಲ್ಲಿ ಕಾಫಿ, ಕಿತ್ತಳೆ, ಏಲಕ್ಕಿ ಯಾವ ವ್ಯವಸಾಯವೂ ಆಗುವುದಿಲ್ಲ. ಇದೇ ಬತ್ತ ಮತ್ತು ರಾಗಿಯೇ ಇಲ್ಲಿಯ ಪ್ರಧಾನ ವ್ಯವಸಾಯವಾಗಿದೆ. ಈ ಹಳ್ಳಿಗಳಲ್ಲಿರುವ ಎಲ್ಲಾ ಪಡ್ಡು ಭೂಮಿಯೂ ಈಗ ವ್ಯವಸಾಯವಾಗುತ್ತಿದೆ. ಈಗಿನ ಆಹಾರ ಮುಗ್ಗಟ್ಟಿನಿಂದ ಹೆಚ್ಚು ಆಹಾರ ಬೆಳೆಯಿರಿ' ಎಂದು ಸರಕಾರವೇನೇನೋ ಹೇಳುತ್ತಿದೆ. ಹೆಚ್ಚು ಆಹಾರ ಉತ್ಪಾದಿಸುವ ಯೋಜನೆಯು [illegible]ದುದರಿಂದ ಹಳ್ಳಿಯ ರೈತರುಗಳು ಪೈಸಾರಿ ಜಾಗಕ್ಕೆ ಸರಕಾರಕ್ಕೆ ಅರ್ಜಿ ಬರೆದುಕೊಂಡರೆ ಗ್ರಾಮದಲ್ಲಿರುವ ಪೈಸಾರಿ ಜಾಗವನ್ನು ಮರ ಬೆಳೆಸಲು ಸರಕಾರ ಕಾಯ್ದಿರಿಸುವುದರಿಂದ ನಿಮ್ಮ ಅರ್ಜಿಯನ್ನು ತಿರಸ್ಕರಿಸಲಾಗಿದೆಂದು ಸರಕಾರದಿಂದ ಹುಕುಂ ಬರುತ್ತಿದೆ. ಈ ಹಳ್ಳಿಗಳ ಯಾವ ರೈತನಿಗೂ ಸ್ವಂತ ಬಾಣೆ, ಜಾಗವಿರುವುದಿಲ್ಲ. ಗ್ರಾಮದ ಸುತ್ತಮುತ್ತಲಿನ ಪೈಸಾರಿ ಜಾಗವನ್ನು ರೈತನ ಮನೆಗೆ ಮುಟ್ಟಿ ರಿಸರ್ವ್ ಫಾರೆಸ್ಟಿಗೆ ಸೇರಿಸಿಕೊಂಡರೆ ರೈತನು ಮಾಡೇನು ಆಗಬೇಕು? ರೈತನ ದನಕರುಗಳು ಗ್ರಾಮದ ಪೈಸಾರಿ ಜಾಗದಲ್ಲೇ ಮೇಯಬೇಕಲ್ಲದೆ ಬೇರೆ ಜಾಗವಿಲ್ಲ. ಸೌದೆ, ಸೊಪ್ಪು ಮತ್ತು ರೈತಾಪಿಗೆ ಬೇಕಾಗುವ ಎಲ್ಲಾ ಸಾಮಾನುಗಳನ್ನು ಗ್ರಾಮದ ಪೈಸಾರಿ ಜಾಗದಿಂದಲೇ ಪಡೆಯಬೇಕಿದೆ. ಈ ರೀತಿ ಆಫೀಸಿನಿಂದ ಪ್ಲಾನು ನೋಡಿ ಹುಕುಂ ಹೊರಡಿಸಿದರೆ ರೈತರಿಗೆ ಗತಿಯಾರು? ಈಗಾಗಲೇ ಸರಕಾರಕ್ಕೆ ಅರ್ಜಿಗಳನ್ನು ಬರೆಕೊಂಡಿದ್ದೇವೆ. ಕೂಡಲೇ ಮೇಲ್ಕಂಡ ಗ್ರಾಮಗಳ ಪೂರ್ತಿ ಪೈಸಾರಿ ಜಾಗವನ್ನು ಕಾಲಾವಕಾಶ ಮಾಡಿಸಿ ಕೊಟ್ಟು ರೈತರಿಗೆ ಮುಂದೆ ಬರಬಹುದಾದ ದಂತ ತೊಂದರೆ ಮತ್ತು ಕಷ್ಟವನ್ನು ಸರಕಾರವು ನೀಗಿಸಿಕೊಡಬೇಕಾಗಿದೆ. ಅಲ್ಲದೆ ಈ ಹಳ್ಳಿಗಳಿಗೆ ಶಾಲೆ, ರಸ್ತೆ, ಕೆರೆ, ಬಾವಿ ಇನ್ನಿತರ ಈ ಹಳ್ಳಿಗಳ ಏಳಿಗೆಗಾಗಿ ಈಗಿನ ಸರಕಾರವು ಸಹಾಯ ಮಾಡಬೇಕಾಗಿಯೂ ಈ ಹಿಂದಿನ ಸರಕಾರಗಳಂತೆ ತಾತ್ಸಾರ ಮಾಡಬಾರದಾಗಿ ಸರಕಾರದಲ್ಲಿ ಪ್ರಾರ್ಥನೆ.

ಹೆಚ್. ಯಂ. ಚಂಗಪ್ಪ.

ಮಕ್ಕಳ ಎಚ್ಚರಿಕೆ

ತಾ ೭–೯–೫೨ರ ಸಂಜೆ ೪ ಗಂಟೆಯ ಸಮಯದಲ್ಲಿ ಸೋಮವಾರಪೇಟೆ ಬಸ್‌ಸ್ಟೆಂಡಿಗೆ ಆಕಸ್ಮಾತ್ ಅಷ್ಟವರ್ಷ ಪ್ರಾಯದ ಹುಡುಗನೊಬ್ಬನು ಬಿದ್ದು ಪ್ರಾಣಾಪಾಯಕ್ಕೆ ಈಡಾಗ ಬೇಕಿದ್ದವನು. ಹತ್ತಿರದಲ್ಲಿದ್ದ ಆ ಮಗುವಿನ ಅಕ್ಕನು ಬೊಬ್ಬೆ ಮಾಡಿದ್ದರ ಫಲಿತಾಂಶ ನೆರೆಯವರು ಅಲ್ಲಿಗೆ ಓಡಿ ಬಂದರೂ ಅಲ್ಲೇ ದಾಟುತ್ತಿದ್ದ ವಯಸ್ಕರ ಶಿಕ್ಷಣದ ಆರ್ಗನೈಜರಾದ ಜಿ. ಬಿ. ಲಿಂಗಣ್ಣನವರು ಕೆರೆಗೆ ಧುಮುಕಿ ಹುಡುಗನನ್ನು ದಡಕ್ಕೆ ತಂದರು. ಮಗು ಈಗ ಸುಖವಾಗಿದೆ. ಕೆರೆಯ ನೆರೆಕರೆಯವರು ಚಿಕ್ಕ ಮಕ್ಕಳ ವಿಷಯದಲ್ಲಿ ನಿಗವಿಡಬೇಕಾಗಿ ಸೂಚನೆ,

ಸಹದೇವಪ್ಪ

ಮೈಸೂರಿನಲ್ಲಿ ವಿದ್ಯುಚ್ಛಕ್ತಿ ಉಪಯೋಗದ ಯೋಜನೆ

ಕೊಡಗು ಸರಕಾರಕ್ಕೆ ಎಚ್ಚರಿಕೆ

ಇನ್ನು ಮುಂದೆ ಮೈಸೂರು ಸ್ಟೇಟ್ ನಲ್ಲಿಯ ಗ್ರಾಮಗಳಿಗೆ ವಿದ್ಯುಚ್ಛಕ್ತಿಯು ಸರಬರಾಯಿಯು (ದೀಪಕ್ಕಾಗಲೀ ಯಾ ನೀರೆತ್ತುವ ಯಂತ್ರಗಳನ್ನು ನಡೆಸುವುದಕ್ಕಾಗಿಯಾಗಲೀ) ಎಷ್ಟು ಆವಶ್ಯಕವೋ ಅದರ ಖರ್ಚು ಮಾಡುವ ಹಣಕ್ಕೆ ತಕ್ಕಷ್ಟು ಪ್ರತಿಫಲವು ಇಲ್ಲವೋ ಅಂತಹ ಯೋಜನೆಗಳೆಲ್ಲವನ್ನು ಹಿಂತೆಗೆಯಲ್ಪಡುವವು' ಯಾ ಮುಂದಕ್ಕೆ ತಳ್ಳಲ್ಪಡುವವು, ಎಂಬ ದಾಗಿ ಮೈಸೂರು ಸರಕಾರದ ಒಂದು ಪ್ರಕಟಣೆಯು ಹೊರಟಿದೆ.

ಇಂದಿನ ವರೆಗೆ ಖರ್ಚು ಮಾಡಿದ ಹಣ ನೂರಕ್ಕೆ ೨ ರಷ್ಟಾದರೂ ಉತ್ಪತ್ತಿ ಇದ್ದರೆ ಗ್ರಾಮ ವಿದ್ಯುಚ್ಛಕ್ತಿಯ ಯೋಜನೆಗಳು ಕೈಗೊಳ್ಳಲ್ಪಟ್ಟಿದ್ದವು. ಆದರೆ ಇನ್ನು ಮುಂದಕ್ಕೆ ಇಂತಹ ಯೋಜನೆಗಳಿಗೆ ಖರ್ಚು ಮಾಡಿದ ಹಣಕ್ಕೆ ಕೊಡುವ ಸ್ವಾಭಾವಿಕ ಬಡ್ಡಿಯಾದರಷ್ಟಾದರೂ ಉತ್ಪತ್ತಿಯು ದೊರೆಯದಿದ್ದರೆ ಅವುಗಳು ಬೇಗನೆ ಕಾರ್ಯಗತವಾಗುವ ಸಂಭವವಿಲ್ಲ.

ಕೊಡಗು ಸರಕಾರವು ಸಹ ಕೊಡಗು ದೇಶಕ್ಕೆ ಮೈಸೂರಿನಿಂದ ವಿದ್ಯುಚ್ಛಕ್ತಿಯನ್ನು ತರುವ ಒಂದು ಯೋಜನೆಯನ್ನು ಬೇಗನೆ ಕೈಕೊಳ್ಳಲಿರುವಂತೆ ನಾನು ಮೊದಲೇ ಸೂಚಿಸಿದಂತೆ ಈ ಯೋಜನೆಯು ಎಂದೂ ತಜ್ಞರಿಂದ ವಿಮರ್ಶೆ ಪಡೆದಿಲ್ಲ. ಎರಡನೆಯದಾಗಿ ಕೊಡಗಿನಲ್ಲಿ ಈಗ ಕೆಲವು ವರ್ಷಗಳಿಂದ ಮಳೆಯು ಕಡಿಮೆಯಾಗಿ ಮೈಸೂರಿನಲ್ಲಿಯೇ ವಿದ್ಯುಚ್ಛಕ್ತಿಯು ಹೆಚ್ಚಾಗಿ ಪೋಲಾಗುತ್ತಿರುವುದರಿಂದ ಮತ್ತು ಮೇಲಿನ ಮೈಸೂರು ಸರಕಾರದ ಪ್ರಕಟಣೆಯು ಸೂಚಿಸುವಂತೆ ಮೈಸೂರಿನಲ್ಲಿಯೇ ಗ್ರಾಮ ವಿದ್ಯುಚ್ಛಕ್ತಿಯ ಯೋಜನೆಗಳು ಜಯಪ್ರದವಾಗಿರುವುದಿಲ್ಲ.

ಆದುದರಿಂದ ಕೊಡಗು ಸರಕಾರದವರು ಅವಸರ ಪಡದೆ ಕೊಡಗಿಗೆ ವಿದ್ಯುಚ್ಛಕ್ತಿ ತರುವ ಪ್ರಶ್ನೆಯನ್ನು ದೀರ್ಘ ಆಲೋಚಿಸಬೇಕಾಗಿ ಕೇಳುವುದಾಗಿದೆ.

ಕೆ. ಯಂ. ಪೂವಯ್ಯ.

ಮೂರ್ನಾಡು ಸಹಕಾರ ಯೂನಿಯನು ಪ್ರೆಸಿಡೆಂಟರ ಮೇಲೆ ಅಪಪ್ರಚಾರ.

ಮೂರ್ನಾಡು ಸಹಕಾರಿ ಯೂನಿಯನು ಪ್ರೆಸಿಡೆಂಟರು ಸ್ವಾತಂತ್ರ್ಯ ದಿನಾಚರಣೆಗೆ ಮೂರ್ನಾಡು ಕಾಂಗ್ರೆಸು ಎಡ್‌ಹಾಕ್ ಸಮಿತಿಯವರಿಗೆ ಯೂನಿಯನ ಹಾಲನ್ನು ಮಾತ್ರ ಬಿಟ್ಟುಕೊಟ್ಟು ರಾಷ್ಟ್ರೀಯ ಧ್ವಜವನ್ನು ಕೊಡಲು ನಿರಾಕರಿಸಿದರೆಂಬ ಅಪಪ್ರಚಾರದ ಬಗ್ಗೆ ತಾ. ೨೮–೮–೫೨ರ 'ಜನ್ಮಭೂಮಿ' ಪತ್ರಿಕೆಯಲ್ಲಿ ಪ್ರಕಟವಾದ ಕಾರಣ ಸತ್ಯಾಂಶವು ಸಾರ್ವಜನಿಕರಿಗೆ ತಿಳಿಯುವ ಬಗ್ಗೆ ಮೂರ್ನಾಡು ಸಹಕಾರಿ ಯೂನಿಯನು ಡೈರೆಕ್ಟರುಗಳು ಈ ರೀತಿ ಪ್ರಕಟಿಸಿರುತ್ತಾರೆ.

ಮೂರ್ನಾಡು ಸಹಕಾರಿ ಯೂನಿಯನಿನಲ್ಲಿ ಕಾಂಗ್ರೆಸು ಎಡ್‌ಹಾಕ್ ಸಮಿತಿಯವರು ಕೇಳಿದಂಥ ಧ್ವಜಾರೋಹಣ ಮಾಡುವಂಥ ರಾಷ್ಟ್ರೀಯ ಧ್ವಜವಿರುವದಿಲ್ಲ. ಸೆಂಟ್ರಲ್ ಬ್ಯಾಂಕಿನವರು ಗ್ರಾಮಾಂತರ ಸಂಘಗಳಿಗೆ ಸೂರಾಟೆಸ್ಟಿಗಳಲ್ಲೇ ಇರುವಂತಹ ಟ(?) ಸೂರಾಟವಾಗದೆ ಬಾಕಿ ಇದ್ದಂಥ ಚಿಕ್ಕ ರಾಷ್ಟ್ರೀಯ ಧ್ವಜಗಳನ್ನು ಸಹಕಾರಿ ಇನ್ಸ್‌ಪೆಕ್ಟರರು ಈ ಸಮಿತಿಗೆ ತಾ. ೧೪–೮–೫೨ರಲ್ಲೂ ತೋರಿಸಿದ್ದಾರೆ. ಆಗ್ಯೆ ಅವರು ಆ ಧ್ವಜಗಳ ಚಿಕ್ಕವುಗಳಾದ ಕಾರಣ ಬೇರೆ ಕಡೆ ದೊಡ್ಡ ಧ್ವಜವನ್ನು ನೋಡುತ್ತೇವೆಂದು ನ ಡಿನರಿಂದು ಇನ್ಸ್‌ಪೆಕ್ಟರವರು ತಿಳಿಸಿರುತ್ತಾರೆ. ಯೂನಿಯನ್ ಪ್ರೆಸಿಡೆಂಟರು ಯೂನಿಯನಿನ ಯಾವ ಸ್ವತ್ತನ್ನಾದರು ಬೇರೆಯವರಿಗೆ ಬಿಟ್ಟುಕೊಡಬೇಕಾದರೆ ರಿಜಿಸ್ಟ್ರಾರವರ ಮಂಜೂರಾತಿ ಆವಶ್ಯವಿದೆ. ಆದರೆ ಎಡ್‌ಹಾಕ್ ಕಾಂಗ್ರೆಸು ಸಮಿತಿಯವರು ಬರೇ ತಾ. ೧೪–೮–೫೨ರಲ್ಲಿ ಅರ್ಜಿ ಮಾಡಿದರಿಂದ ಮತ್ತು ರಜಿಸ್ಟ್ರಾರವರಿಂದ ಈ ಅರ್ಜಿಗೆ ಅಪ್ಪಣೆ ಬರಲು ವಿಳಂಬವಾಗಿ ಸ್ವಾತಂತ್ರ್ಯ ದಿನಾಚರಣೆಗೆ ಭಂಗವಾದೀತೆಂದು ಪ್ರೆಸಿಡೆಂಟರೇ ಯೂನಿಯನು ಹಾಲನ್ನು ಬಿಟ್ಟುಕೊಡಬೇಕೆಂದು ಹುಕುಂ ಮಾಡಿದ್ದರು. ಸಹ ಯೂನಿಯನಿನಲ್ಲಿ ಇಲ್ಲದಿರುವ ರಾಷ್ಟ್ರೀಯ ಧ್ವಜಾರೋಹಣ ಮಾಡುವಂಥ ಧ್ವಜವನ್ನು ಕೊಡಲು ಪ್ರೆಸಿಡೆಂಟರು ನಿರಾಕರಿಸಿದರೆಂಬ ಪ್ರಚಾರ ಮತ್ತು ಪ್ರಕಟಣೆಗಳು ಶೋಚನೀಯವೂ ಕಥೆಯೂ ಆಗಿದೆ.

ಸಹಕಾರ ಸಂಘಗಳಲ್ಲಿ ಎಲ್ಲಾ ರಾಜಕೀಯ ಪಕ್ಷದವರಿಗೂ ಸಹಕಾರ ಧ್ಯೇಯವನ್ನು ಸಾಧಿಸಲು ದುಡಿಯಲು ಎಡೆಯಿದೆ. ಹೀಗಿರುವಾಗ ಒಂದು ರಾಜಕೀಯ ಪಕ್ಷದ ಸ್ಥಳೀಯ ಎಡ್‌ಹಾಕ್ ಸಮಿತಿಯು ತಾನೇ ಸ್ವತಃ ಸರ್ವಾಧಿಕಾರಿಯೆಂಬ ರೀತಿಯಿಂದ ಸಹಕಾರ ಯೂನಿಯನಿನ ಸಂಸ್ಥೆಯ ಜವಾಬ್ದಾರಿಯುತ ಸಂಸ್ಥೆಯ ಮೇಲೆ ಸುಳ್ಳು ಅರೋಪಣೆಗಳನ್ನು ಹೊರಿಸಿ, ಆ ಸಂಸ್ಥೆಯು ತಮ್ಮ ಹೇಳಿಕೆಯಂತೆ ನಡೆಯಬೇಕೆಂದು ಪ್ರಯತ್ನಿಸುವುದು ಸರಿಯಲ್ಲ. ಎಡ್‌ಹಾಕ್ ಕಾಂಗ್ರೆಸು ಸಮಿತಿಯ ಈ ರೀತಿಯ ವರ್ತನೆಯಿಂದ ಕಾಂಗ್ರೆಸ್ [illegible] ಗೆ ಧಕ್ಕೆ ಬರಬಹುದೆಂದು ಬೇರೆ ಹೇಳಬೇಕಾಗಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ನ್ಯಾಯ ಅನ್ಯಾಯವನ್ನು ವಿವೇಚಿಸುವರೇ?

ಮೂರ್ನಾಡು ಯೂನಿಯನು ಡೈರೆಕ್ಟರುಗಳು.

ಪಾರ್ಲಿಮೆಂಟಿನ ಸದಸ್ಯರೆ.

ಇಂಡಿಯಾ ಪಾರ್ಲಿಮೆಂಟಿನ ಸದಸ್ಯರಾದ ಜಿ. ವಿ. [illegible]

ಪ್ರಸಂಗದಲ್ಲಿ [illegible] ಕಾರಿಗಳ ಮುಂದಿರುವ [illegible] ವೆಂದು ಕಂಡುಬರುವುದಿಲ್ಲ. [illegible] ಶ್ರವಾದ ಜೀವಮಾನದ ಅಧಿ[illegible] ರಾಟದಲ್ಲಿ ಜನರಿಗೆ ಜವಾಬ್ದಾರಿ[illegible] ಸರಕಾರದ ಮೂಲಂಶವನ್ನು [illegible] ವುದು ಬಹು ಕಷ್ಟವಾಗಿ [illegible] ವಾಡಿಕೆಯಾಗಿ ಮಾನವನು [illegible] ದು ಮಾಡಿದ ಮುಷ್ಟಿವನ್ನು [illegible] ಅವನಿಂದ ತೆಗೆಯಲ್ಪಟ್ಟ [illegible] ಮತ್ತು ಪಂಗಡ ಯಂತ್ರವು [illegible] ಡೆಸುತ್ತಿರುವುದು. ವಾಡಿಕೆಯ[illegible] ಗೆ ಜವಾಬ್ದಾರರಾಗಿರುವ [illegible] ಸರಕಾರವು ನಡೆಯುವಂತೆ [illegible] ರೂ ಸವಿಸ್ತಾರವಾದ [illegible] ದ ಮುಖ್ಯ ಪ್ರಶ್ನೆಗಳ[illegible] ಪಂಗಡಗಳ [illegible] ಟಿನ ಸರಕಾರವನ್ನು ಹೆಚ್ಚಾಗಿ [illegible] ಕಾರ ಅಧಿಕಾರದ ಕಳೆಗೆ [illegible].

IN MEMORIAM

In ever-loving memory of late Mr. N. B. Madappa, Retired School Master, Arapattu Village, who expired on 9th September 1950.

Inserted by his sons.

9-9-'52.

ಸಹಕಾರೀ ವ್ಯವಸಾಯ ಮತ್ತು ಸಮಾಜ ವಿಕಾಸ ಯೋಜನೆ

ಆಚಾರ್ಯ ವಿನೋಬಾರವರ ಅಭಿಪ್ರಾಯ ವಿಚಾರಗಳು

ಕಾಂಗ್ರೆಸ್ ಪ್ಲಾನಿಂಗ್ ಕಮಿಟಿಯ ಸಂಯೋಜಕರಾದ ಆಚಾರ್ಯ ಶ್ರೀಮನ್ನಾರಾಯಣ ಅಗ್ರವಾಲರವರು ಭೂಸಮಸ್ಯೆಯ ಕುರಿತು ವಿನೋಬಾರವರ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಕಾಶಿಯಲ್ಲಿ ಅವರ ಸಂದರ್ಶನವನ್ನು ಪಡೆದು ಸಪ್ಟೆಂಬರ ನಡೆದೆಯೂದ ಪ್ರಶ್ನೋತ್ತರದ ಸಂಪೂರ್ಣ ಮತ್ತು ಅಧಿಕೃತ ವರದಿಯನ್ನು ವಾಚಕರ ಅವಗಾಹನೆಗಾಗಿ ಇಲ್ಲಿ ಕೊಡಲಾಗಿದೆ—

ಪ್ರಶ್ನೆ-ಸರಕಾರೀ ವ್ಯವಸಾಯದ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನಿದೆ? ಪ್ಲ್ಯಾನಿಂಗ್ ಕಮಿಶನ್‌ನ ಅಭಿಪ್ರಾಯಗಳನ್ನು ಈ ವಿಷಯದಲ್ಲಿ ತಾವು ಒಪ್ಪುತ್ತೀರೋ?

ವಿನೋಬಾ—ಸರಕಾರೀ ವ್ಯವಸಾಯದ ವಿಷಯದಲ್ಲಿ ನಾನು ಅನೇಕ ಸಾರಿ ಮಾತಾಡಿರುವೆನು. ಪ್ರತಿ ಒಂದು ಸಭೆಯಲ್ಲಿಯೂ ಈ ಪ್ರಶ್ನೆಯನ್ನು ಕೇಳಲಾಗುತ್ತಿದೆ ಮತ್ತು ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. ನಿಜ ಸಂಗತಿ ಎಂದರೆ ನಾನು ನಮ್ಮ ದೇಶದ ಈಗಿನ ಸ್ಥಿತಿಯನ್ನು ಅನುಲಕ್ಷಿಸಿ ಈ ವಿಷಯದ ಬಗ್ಗೆ ವಿಚಾರ ಮಾಡುತ್ತೇನೆ. ಕಾಲ್ಪನಿಕ ದೃಷ್ಟಿಯಲ್ಲಿ ನಾನು ವಿಚಾರ ಮಾಡುವದಿಲ್ಲ. ನನ್ನ ಅಭಿಪ್ರಾಯವಾದರೋ ಹಿಂದೂಸ್ಥಾನದ ಇಂದಿನ ಪರಿಸ್ಥಿತಿಯಲ್ಲಿ ನಾವೇ ನಾವರಣ ಕೆಲಸ ಮಾಡುವವರಿದ್ದರೆ ಮತ್ತು ಜನರಿಗೆ ಈ ಕೂಡಲೇ ಪರಿಹಾರ ಒದಗಿಸುವದಿದ್ದರೆ ನಾವು ಸಣ್ಣ ಹಿಡುವಳಿಯ ಬಗ್ಗೆ ವಿಚಾರ ಮಾಡಬೇಕು, ಒದಗಿಸುವದಿದ್ದರೆ ನಾವು ಶಬ್ದಾಡಂಬರದಲ್ಲಿ ಬೀಳಕೂಡದು. ನಮ್ಮ ದೇಶವು ಶೇತಕೀ ಪ್ರಧಾನ ದೇಶವಿದೆ. ಕಡಿಮೆ ಎಂದರೆ ಹತ್ತು ಸಾವಿರ ವರ್ಷಗಳಿಂದ ಇಲ್ಲಿ ಶೇತಕೀ ಉದ್ಯೋಗವು ನಡೆಯುತ್ತಾ ಇದೆ. ಇದರ ಮೂಲಕ ಇಲ್ಲಿಯ ಜನರದು ಒಂದು ವಿಶಿಷ್ಟ ಸ್ವಭಾವವಾಗಿ ಹೋಗಿದೆ. ಇನ್ನೆಲ್ಲ ನಾವು ತಿಳಕೊಳ್ಳಲಿಕ್ಕೆ ಬೇಕು.

ಈ ವಸ್ತುಸ್ಥಿತಿಯನ್ನನುಲಕ್ಷಿಸಿ ನಾನು ಹೇಳುವದೇನೆಂದರೆ ಸದ್ಯ ಪರಿಸ್ಥಿತಿಯಲ್ಲಿ ಸಣ್ಣ ಹೊಲಗದ್ದೆಗಳ ವಿಚಾರವೇ ವ್ಯಾವಹಾರಿಕವೂ, ಉಪಯುಕ್ತವೂ ಆಗಿರುವದು. ಈ ಹೊಲಗದ್ದೆಗಳಲ್ಲಾದರೂ ನೀರಿನ ಯೋಗ್ಯ ವ್ಯವಸ್ಥೆ ಮಾಡಿ ಕುಟುಂಬದ ಜನರು ತಮ್ಮ ಪೂರ್ಣ ಶಕ್ತಿಯನ್ನು ಹಾಕಿ ಸಾಧ್ಯವಿದ್ದಷ್ಟು ಹೆಚ್ಚಿಗೆ ಆಹಾರ ಧಾನ್ಯವನ್ನು ಬೆಳೆಸುವ ಪ್ರಯೋಗವನ್ನು ಮಾಡಬೇಕು. ಇದೇ ಇಂದಿನ ಸ್ಥಿತಿಯಲ್ಲಿ ವ್ಯವಹಾರಿಕ ಮತ್ತು ಉಪಯುಕ್ತ ಮಾರ್ಗವು.

ಸಣ್ಣ ಹೊಲಗದ್ದೆಗಳಾದರೋ ಅವು ಕ್ನಿಷ್ಠ ಪಕ್ಷ ಎಷ್ಟಿರಬೇಕು. ನಾನು ೫ ಎಕರೆ ಸರಾಸರಿಯ ಮಿತಿ ಇರಬಹುದೆಂದು ಎಣಿಸಿದ್ದೇನೆ. ಇದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆಗಬಹುದು. ಉತ್ತರ ಪ್ರದೇಶದ ಸರಕಾರವು ಈ ಸಮಿತಿಯನ್ನು ೬½ ಎಕರೆಯೆಂದು ಮನ್ನಿಸಿದೆ. ಅಂದ ಮೇಲೆ ಒಬ್ಬಳಷ್ಟು ಅಂತರವಾಗಿಲ್ಲ. ಇಷ್ಟಾದರೂ ಅಂತರವಿರುವ ಕಾರಣವೆಂದರೆ, ಅವರು ಲಕ್ನೋದಲ್ಲಿ ಕೂತು ವಿಚಾರ ಮಾಡುತ್ತಾರೆ, ನಾನು ಹಳ್ಳಿಗಳಲ್ಲಿ ತಿರುಗಾಡಿ ವಿಚಾರ ಮಾಡುತ್ತೇನೆ. ಸಾಧನಗಳ ವಿಷಯಕ್ಕೆ ಹೇಳುವದಾದರೆ, ಹೊಲ ಕಾಯುವ, ಅದಕ್ಕೆ ನೀರು ಪೂರೈಸುವ ಇತ್ಯಾದಿ ವಿಷಯಗಳಲ್ಲಿ ಕೃಷಿಕರಲ್ಲಿ ಸಹಕಾರವು ಸಾಧ್ಯವಿದೆ. ಈ ತರದ ಸಹಕಾರವನ್ನು ಹಳ್ಳಿಯ ಜನರು ಈಗಲೂ ಆಚರಿಸುತ್ತಾರೆ. ಆದರೆ ಇದು ಸಂಘಟಿತ ರೀತಿಯಲ್ಲಿ ನಡೆದಿಲ್ಲ. ಅವು ಸಂಘಟಿತ ರೀತಿಯಿಂದ ನಡೆಯುವಂತೆ ಮಾಡಬೇಕಾಗುವುದು.

ನಾನು ದೊಡ್ಡ ದೊಡ್ಡ ಫಾರ್ಮಗಳನ್ನು ಬಹಳ ಸ್ಥಳಗಳಲ್ಲಿ ನೋಡಿದ್ದೇನೆ. ಅಲ್ಲಿ ಕೂಲಿಗಳು ಘಂಟೆಯ ಲೆಕ್ಕದಿಂದ ಕೆಲಸ ಮಾಡುತ್ತಾರೆ ಮತ್ತು ಎತ್ತುಗಳಂತೆ ಬೆಳೆಯನ್ನು ಕೇವಲ ಕಣ್ಣಿನಿಂದ ನೋಡುವದು, ಅದನ್ನು ಬೆಳೆಸುವದು ಮಾತ್ರ ಅವರ ಪಾಲಿಗೆ ಇರುತ್ತದೆ. ಆದರೆ ಅದನ್ನು ಉಪಯೋಗಿಸುವ ಅಧಿಕಾರ ಅವರಿಗಿಲ್ಲ. ಕೂಲಿಗಳೂ ಎತ್ತುಗಳೂ ಇಬ್ಬರೂ ಕೆಲಸ ಮಾಡುತ್ತಾರೆ. ಇಬ್ಬರಿಗೂ ತಿನ್ನಲಿಕ್ಕೆ ಸಿಕ್ಕುತ್ತದೆ. ಯಾಕೆಂದರೆ ತಿಂದ ಹೊರತು ಕೆಲಸ ಮಾಡಲು ಸಾಧ್ಯವಿಲ್ಲ. ಆದರೆ ಬುದ್ಧಿ ವಿಕಾಸ ಮತ್ತು ಅಂತರಿಕ ಆನಂದದ ವಿಷಯದಲ್ಲಿ ಅಲ್ಲಿ ದುಡಿಯುವ ಎತ್ತುಗಳ ಮತ್ತು ಕೂಲಿಗಳ ಸ್ಥಿತಿಯು ಸಮಾನವಾಗಿರುತ್ತದೆ. ಕೂಲಿಗಳೆಂದರೆ ಕೇವಲ 'ಹೆಂಡ್ಸ್' ಅರ್ಥಾತ್ ಕೆಲಸ ಮಾಡುವ ಯಂತ್ರಗಳಂತೆ ಎಣಿಸಲ್ಪಡುತ್ತಾರೋ ಮತ್ತು ಮೇಲ್ವಿಚಾರಣೆ ಮಾಡುವವರು 'ಹೆಡ್ಸ್' ಎಂತ ತಿಳಿಯಲ್ಪಡುತ್ತಾರೋ ಅಂಥಲ್ಲಿ ಸಮಾಜ ಪುರುಷನ ಶರೀರವು ಭಿನ್ನಭಿನ್ನಗೊಳಿಸಲಾಗುತ್ತದೆ. ದೇವರು ಕೆಲವರನ್ನು 'ಕೈಗಳು' ಮತ್ತು ಕೆಲವರನ್ನು 'ತಲೆಗಳು' ಅರ್ಥಾತ್ ಕೆಲವರು ಬಾಹುಗಳು ಕೆಲವರು ಶೇತುಗಳು ಎಂದು ಮಾನವನ ಸೃಷ್ಟಿಯನ್ನು ರಚಿಸಿಲ್ಲ. ಇದನ್ನು ನಾವು ಲಕ್ಷಿಸಬೇಕು. ಇಲ್ಲವಾದರೆ ಬಾಕಿ ಎಲ್ಲ ದೇಶಗಳು ಆದಂತೆ ಹೋಗಿ ಕೇವಲ ಮ್ಯಾನೇಜರ್ ಎಂಬ ದೇವರು ಸಮಾಜದಲ್ಲಿ ಉಂಟಾಗುವರು. ಇದು ನಮ್ಮ ದೇಶಕ್ಕೆ ಬಹಳ ಅಪಾಯಕರದ್ದು.

ಸಮಾಜ ವಿಕಾಸ ಯೋಜನೆ

ಪ್ರಶ್ನೆ:—ಕಮ್ಯುನಿಟಿ ಪ್ರೊಜೆಕ್ಟ್ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು?

ಕಮ್ಯುನಿಟಿ ಪ್ರೊಜೆಕ್ಟ್ ಯೋಜನೆಯು ಇನ್ನೂ ನನಗೆ ನೋಡಲಿಕ್ಕೆ ಸಿಕ್ಕಿಲ್ಲ. ನಿನ್ನೆಯಿಂದ ಅದು ಈಗ ಸಿಕ್ಕಿತು. ಅದನ್ನು ನಾನು ನೋಡಿಕೊಂಡೆನು. ಭೂದಾನ ಯಜ್ಞದ ಯಾತ್ರೆಯ ಸಂದರ್ಭದಲ್ಲಿ ನಾನು ಇಟಾವಾಕ್ಕೆ ಹೋಗುವದಾಗಿತ್ತು. ಅಲ್ಲಿ ನಾನು ಈ ವಿಷಯದಲ್ಲಿ ಕೆಲ ಸಂಗತಿಗಳನ್ನು ಕೇಳಿದೆ. ಯೋಜನೆಯ ಉದ್ದೇಶವೇನೋ ಸರಿಯಿದೆ. ಆದರೆ ಅದರಿಂದ ನನ್ನ ಮನಸ್ಸು ಆಕರ್ಷಿತವಾಗಿಲ್ಲ. ಹಳ್ಳಿಯೊಳಗಿನ ಕಚ್ಚಾ ಸರಕುಗಳಿಂದ ಹಳ್ಳಿಗರಿಗೆ ಉಪಯುಕ್ತವಿರುವ ಪಕ್ಕಾ ಸರಕುಗಳನ್ನು ಮಾಡುವ ಉದ್ಯೋಗಗಳು ಸಾಧ್ಯವಿದ್ದ ಮಟ್ಟಿಗೆ ಹಳ್ಳಿಯ ಸಾಧನಗಳಿಂದಲೇ ಮತ್ತು ಹಳ್ಳಿಗಳಲ್ಲಿಯೇ ನಡೆಯಲಿಕ್ಕೆ ಬೇಕು. ಆದರೆ ಕೊನೆಯ ಪಕ್ಷಕ್ಕೆ ಅನ್ನ ವಸ್ತ್ರದ ಮಟ್ಟಿಗಾದರೂ ಕೆಲವು ಅಪವಾದಾತ್ಮಕ ಕ್ಷೇತ್ರಗಳನ್ನು ಬಿಟ್ಟರೆ ಎಲ್ಲ ಹಳ್ಳಿಗಳೂ ಸ್ವಯಂ ಪೂರ್ಣ ಮತ್ತು ಸ್ವಾವಲಂಬಿಯಾಗಬೇಕು. ಆದರೆ ಕಮ್ಯೂನಿಟಿ ಪ್ರೊಜೆಕ್ಟ್ ಯೋಜನೆಯಲ್ಲಿ ಇದು ಕಂಡು ಬರುವದಿಲ್ಲ. ಎರಡನೆಯದಾಗಿ ಶಿಕ್ಷಣ ವಿಷಯದಲ್ಲಿ ಸಹ ಹಿಂದಿನ ಪದ್ಧತಿಯನ್ನೇ ಮನ್ನಿಸಲಾಗಿದೆ. ಹಳ್ಳಿಯ ಉದ್ಧಾರವಾಗಬೇಕು. ಹೊರಗಿನಿಂದ ಕೇವಲ ಗೌಣವಾಗಿ ಸಹಾಯವನ್ನು ಕೊಡಬಹುದು. ಆದರೆ ಹೊರಗಿನ ಆಶ್ರಯವೂ, ಅವಲಂಬನವೂ ನಿರರ್ಥಕವು. ಯಾವುದೇ ಸುಧಾರಣೆಯನ್ನು ಮೇಲಿನಿಂದ ಹೇರುವದು ಎಂದೂ ಯೋಗ್ಯ.

ಯೋಜನೆಯ ದೋಷ.

ಸುಂದರ ಹಳ್ಳಿಯ ಆದರ್ಶವು—ಹಳ್ಳಿಗೆ ಒಪ್ಪುವ ನೈಸರ್ಗಿಕ ರೀತಿಯಲ್ಲಿ ಪ್ರತಿ ಒಂದು ಮನೆಯ ಸುತ್ತಲೂ ತೋಟ ತೋಡಿಗೆ ಇರುವದು. ಅದರಲ್ಲಿ ಮನುಷ್ಯನ ಮಲ ಮೂತ್ರದ ಯೋಗ್ಯ ಶಾಸ್ತ್ರೀಯ ಉಪಯೋಗವಾಗುವದು ಯೋಜನೆಯಲ್ಲಿ ಕಂಡು ಬರುವದಿಲ್ಲ. ಭಂಗೀ ಜನರನ್ನು ಕಾಯುವ ಇರುವದು ಮಾಡಿದ್ದಾರೆ. ಸಾಯಿಕಲ್ ರಿಕ್ಷಾಗಳಲ್ಲಿ ಉಚ್ಚ ವರ್ಗದ ಜನರು (ಇಹಲೋಕದ ಇಂದ್ರರು) ಕೂಡುವರು. ವನಸ್ಪತಿ ಬಗ್ಗೆಯೂ ಹೆಸರೇ ಇಲ್ಲ. ಈ ಎಲ್ಲ ಸಂಗತಿಗಳ ಮೇಲಿಂದ ವಿಚಿತ್ರ ದೃಷ್ಟಿಯ ಅಭಾವವು ಕಂಡು ಬರುತ್ತದೆ. ಈ ಎಲ್ಲ ಕಾರಣಗಳಿಂದ ಈ ಯೋಜನೆಯು ನನ್ನಲ್ಲಿ ಉತ್ಸಾಹವನ್ನುಂಟು ಮಾಡಿಲ್ಲ. ಆದರೂ ನಾನು ಪ್ರಾರಂಭದಲ್ಲಿ ಹೇಳಿದಂತೆ ಉದ್ದೇಶವು ಸರಿ ಇದೆ. ಆದ್ದರಿಂದ ಅವಶ್ಯಕ ತಿದ್ದುಪಡಿಗಳನ್ನು ಮಾಡಿ ಕೆಲವು ಪರೀಕ್ಷೆಗೆಂದು ಕೆಲವೇ ಕ್ಷೇತ್ರಗಳಲ್ಲಿ ಅದನ್ನು ಮಾಡಿನೋಡಿದರೆ ಮತ್ತು ಹಣದ ದುಂದುಗಾರಿಕೆಯಾದಂತೆ ನೋಡಿಕೊಂಡರೆ ಅಡ್ಡಿ ಇಲ್ಲ.

(೩ನೇ ಪುಟದಿಂದ ಸಾಗಿದ್ದು)

ಬಹುದಿವಸಗಳ ಅನಿಶ್ಚಿತ ಕಾಲದಲ್ಲೇ ಶ್ವಾಸಕೋಶದಲ್ಲಿ ಅಳಿಯುದುಳಿದ ಹಳೆಯ ರೋಗಾಣುಗಳು ಥಟ್ಟನೆ ಉಲ್ಬಣವಾಗಬಹುದು. ತದ್ರೀತಿ ನಿಮೋನಿಯಾ ನ್ಯುಮೊನಿಯಾ ಇತ್ಯಾದಿ ಬೇನೆಗಳಂತ ಶ್ವಾಸಕೋಶದಲ್ಲಿಯ ಪ್ರತಿರೋಧ ಶಕ್ತಿಯು ಕುಗ್ಗಿಸುವ ರೀತಿಯ ಹಾನಿಯಾಗುವ ಸಂಭವವಿದೆ. ಇದನ್ನು ಚಿಕಿತ್ಸೆಗೊಳಪಡದ ಮಧುಮೂತ್ರ ವ್ಯಾಧಿಯು ಸಾಮಾನ್ಯ ಆರೋಗ್ಯಗತಿಯ ಮೇಲೆ ತೀವ್ರ ಪರಿಣಾಮಗಳನ್ನು ಉಂಟುಮಾಡಿ ಕ್ರಮೇಣ ಅಂತಹ ವ್ಯಕ್ತಿಯು ಸುಲಭವಾಗಿ ಕ್ಷಯರೋಗಕ್ಕೆ ಬಲಿಬೀಳಬಹುದಾಗಿದೆ. ಆದುದರಿಂದ ಇಂತಹ ಬೇನೆಗಳಲ್ಲಿ ಒಳ್ಳೆಯ ಜಾಗ್ರತೆ ಪೌಷ್ಟಿಕ ಆಹಾರ ಮತ್ತು ಆರೈಕೆಗಳು ಅತ್ಯವಶ್ಯ.

"ಪ್ರ"

ಪುರಸಭೆಗಳಿಗೆ ಕಾಂಗ್ರೆಸ್ ಸ್ಪರ್ಧಿಸಬಾರದು

ಕಾ|| ಸಂಸ್ಥೆಯು ತನ್ನ ಉಮೇದುವಾರರನ್ನು ಸಣ್ಣಪುಟ್ಟ ಚುನಾವಣೆಗೆ ನಿಲ್ಲಿಸಬಾರದೆಂದು ಗಾಂಧಿ ಅರ್ಥಶಾಸ್ತ್ರದ ಆಚಾರ್ಯ ನಾರಾಯಣ್ ಅಗರ್‌ವಾಲ್‌ರವರು ಅಭಿಪ್ರಾಯ ಪಟ್ಟಿದ್ದಾರೆ.

ಶಾಸನ ಸಭೆಗೆ ಪ್ರಮುಖ ಪಕ್ಷವಾದ ಕಾಂಗ್ರೆಸ್ ಸ್ಪರ್ಧಿಸುವುದು ನ್ಯಾಯವಾಗಿದೆ. ಆದರೆ ಜನಪದ ಸಭಾ, ಇತರ ಸಭೆಗಳಿಗೆ ಸ್ಪರ್ಧಿಸುವುದು ಅಷ್ಟು ಸರಿಯಲ್ಲ. ಜನರು ತಮಗೆ ಇಷ್ಟ ಬಂದವರನ್ನು ಆರಿಸಲು ಅವಕಾಶಕೊಡಬೇಕು ಎಂಬುದಾಗಿ ಶ್ರೀ ಅಗರ್‌ವಾಲರವರು ತಿಳಿಸಿದ್ದಾರೆ.

—೦೦೦—

ಗ್ರಾಮಾಂತರ ಶಾಲೆ ಮತ್ತು ಆಸ್ಪತ್ರೆಗಳ ಕಟ್ಟಡ ಬಡಾವಣೆಗಾಗಿ ೭೨ ಸಾವಿರ ರೂ. ಮಂಜೂರಾತಿ

ಕೊಡಗಿನ ಗ್ರಾಮಾಂತರ ಶಾಲೆಗಳ ಮತ್ತು ಇತರ ಕಟ್ಟಡಗಳ ಬಡಾವಣೆ ಮಾಡುವದಕ್ಕಾಗಿ ಕೊಡಗು ಸರಕಾರದವರು ೭೨ ಸಾವಿರ ರೂಪಾಯಿಗಳನ್ನು ಈ ಕೆಳಗಿನಂತೆ ಈ ವರ್ಷ ಖರ್ಚು ಮಾಡಲು ತೀರ್ಮಾನಿಸಿರುವದು ಸಂತೋಷಕರವಾದ ವಿಷಯವಾಗಿದೆ.

ಶಾಲೆಗಳ ಹೆಸರು.	ಗ್ರಾಂಟಾದ ಮೊಬಲಗು. ರೂಪಾಯಿ
೧ ಬಾಡಗರಕೇರಿ	೩,೦೦೦
೨ ಬಾಳೆಲೆ	೩,೦೦೦
೩ ಬೆಟ್ಟಗೇರಿ	೬,೦೦೦
೪ ಬೆಟ್ಟತ್ತೂರು	೪೦೦೦
೫ ನಿಟ್ಟೂರು	೨೮೦೦
೬ ಕೊಟ್ಟಗೇರಿ	೧೦೦೦
೭ ಕಿರುಗೂರು	೧,೦೦೦
೮ ಗೋಣಿಕೊಪ್ಪಲು	೩,೬೦೦
೯ ಕುಂಬಳದಾಳು	೫೦೦
೧೦ ಮರ್ನಾಡು	೨೫೦೦
೧೧ ಮದೆ	೪೦೦೦
೧೨ ಪೇರಗೋಡು	೧೦೦೦
೧೩ ಹಾಕತ್ತೂರು	೧೫೦೦
೧೪ ತೂಚಮಕೇರಿ	೨೦೦೦
೧೫ ಕೋರಂಗಾಲ	೨೫೦೦
೧೬ ಚೆಟ್ಟಿಮಾನಿ	೩೫೦೦
೧೭ ಮಾದಾಪುರ	೪೫೦೦
೧೮ ಬಿರುನಾಣಿ	೬,೦೦೦
೧೯ ಪಾರಾಣೆ	೬,೦೦೦
೨೦ ಪೆರಾಜೆ	೫೦೦೦
೨೧ ಟಿ. ಶೆಟ್ಟಿಗೇರಿ	೩,೦೦೦
೨೨ ಹಾತೂರು	೪೦೦೦
೨೩ ಚೆಂಬು	೨೦೦೦
ರೂ.	೬೯,೫೦೦
೨೪ ಮರವಮುಟ್ಟು ಕೊಂಡುಕೊಳ್ಳಲು ರೂ.	೫೦೦
೨೫ ಆಸ್ಪತ್ರೆ ಕಟ್ಟಡಗಳ ರಿಪೇರಿಗೆ ರೂ.	೨೦೦೦
ಜುಮ್ಲಾ ರೂ.	೭೨,೦೦೦

ಕೈಮಗ್ಗಗಳಿಗೆ ಕೇಂದ್ರ ಸರ್ಕಾರದ ಬೆಂಬಲವಿಲ್ಲವೆ?

ಆಚಾರ್ಯ ಭಾವೆಯವರ ಭಾಷಣ

ಮದ್ರಾಸ್ ರಾಜ್ಯದಲ್ಲಿ ಧೋತರ ಮತ್ತು ಸೀರೆಗಳ ಉತ್ಪಾದನೆಯನ್ನು ಕೈಮಗ್ಗದ ಉದ್ಯಮಕ್ಕೆ ಬಿಟ್ಟುಕೊಡಬೇಕೆಂಬ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯವರ ಸೂಚನೆಯನ್ನು ಕೇಂದ್ರ ಸರಕಾರದ ವಾಣಿಜ್ಯ ಮಂತ್ರಿಗಳು ಒಪ್ಪಿಕೊಳ್ಳಲು ಸಿದ್ಧವಿಲ್ಲವೆಂದು ಮದರಾಸಿನಲ್ಲಿ ಮಾಡಿದ ಭಾಷಣವನ್ನು ತಾ. ೩೧ರಲ್ಲಿ ಕಾಶಿಯ ಪ್ರಾರ್ಥನಾ ಸಭೆಯಲ್ಲಿ ಆಚಾರ್ಯ ವಿನೋಬಾ ಭಾವೆಯವರು ಟೀಕಿಸಿದರು.

ಶ್ರೀ ರಾಜಗೋಪಾಲಾಚಾರಿಯವರ ಸೂಚನೆಗೆ ಬೆಂಬಲ ಕೊಡುತ್ತಾ ವಿನೋಬಾ ಭಾವೆಯವರು '೧೦ ಜನ ಜನರು ಬೊಗಲು ಆಹಾರ ಏಕ ಸಂಖ್ಯೆಯಿಂದ ಕಾರ್ಯ ಪ್ರಾರಂಭ ಮಾಡಿ ಈಗ ನೇಕಾರರ ಕೆಲಸಕ್ಕೆ ಕೈ ಹಾಕಿದ್ದಾರೆ.

ದಕ್ಷಿಣ ಭಾರತದಲ್ಲಿ ನೇಕಾರರು ಹೆಚ್ಚಾಗಿ ಇದ್ದಾರೆ' ಎಂದೂ ಹೇಳಿದರು. 'ಬಟ್ಟೆ ಗಿರಣಿಗಳು ೧೭೦ ಕೋಟಿ ಗಜ ಬಟ್ಟೆಯನ್ನು ಉತ್ಪಾದಿಸುತ್ತಿರುವಾಗ ನೇಕಾರರ ಉತ್ಪಾದನೆಯು ಅತಿ ಸ್ವಲ್ಪವಿದೆಯೆಂದೂ ಹೇಳುವ ವಾಣಿಜ್ಯ ಮಂತ್ರಿಗಳ ವಾದವು ತಪ್ಪಿದೆ. ರಾಷ್ಟ್ರದಲ್ಲಿ ೨೫ ಲಕ್ಷ ನುರಿತ ನೇಕಾರರಿದ್ದಾರೆ. ಪ್ರತಿಯೊಬ್ಬನು ದಿನಕ್ಕೆ ನಾಲ್ಕು ಗಜದಂತೆ ನೇಯ್ದರೆ ೧೭೦ ಕೋಟಿಗಜ ಅರಿವೆಯನ್ನು ೧೭೦ ದಿವಸಗಳಲ್ಲಿ ಸಿದ್ಧಪಡಿಸಬಹುದು. ದೊಡ್ಡ ಉದ್ಯಮಕ್ಕೆ ವಿರುದ್ಧ ಗ್ರಾಮೋದ್ಯೋಗಗಳಿಗೆ ಬೆಂಬಲ ಕೊಡುವುದು ಕೇಂದ್ರ ಸರಕಾರಕ್ಕೆ ಬೇಕಾಗಿಲ್ಲವೆಂದೂ ವಾಣಿಜ್ಯ ಮಂತ್ರಿಗಳ ಭಾಷಣದಿಂದ ಗೊತ್ತಾಗುತ್ತದೆ' ಎಂದೂ ಅವರು ಹೇಳಿದರು.

ಡಾ. ಮಲನ್ನರ ವರ್ಣದ್ವೇಷ ಧೋರಣೆಯಿಂದ ಮಹಾ ಕ್ರಾಂತಿಯ ಸಂಭವ

ವಿದೇಶೀ ಪತ್ರಿಕೆಗಳ ಎಚ್ಚರಿಕೆ

ಮಬ್ಬು ಇಲ್ಲವೆ ಕಷ್ಟದಲ್ಲಿಯೂ ಕಣಿವೆಯನ್ನು ಸುಲಿಗೆ ಮಾಡುವ ರೀತಿಯಲ್ಲಿ ದಕ್ಷಿಣ ಆಫ್ರಿಕೆಯ ಬಿಳಿಯರು ವರ್ಣ ಜನಾಂಗಗಳನ್ನು ಅಳಿಸಲು ಸುಲಿಗೆ ಮಾಡುತ್ತಿದ್ದಾರೆಂದು ಬರ್ನ (ಸ್ವಿಟ್ಜರ್‌ಲ್ಯಾಂಡ್) ದ ಪ್ರಮುಖ ವ್ಯಾಪಾರಿಕ ಪತ್ರಿಕೆಯೊಂದು ಬರೆದಿದೆ.

ಸಿಂಗಪುರದ ಸ್ಟ್ರೇಟ್ಸ್ ಟೈಮ್ಸ್ ಪತ್ರಿಕೆಯು ಹೀಗೆ ಬರೆದಿದೆ—'ಸತ್ಯ ಸಂಗತಿಗಳತ್ತ ಡಾ. ಮಲನ್ ಹಾಗೂ ಅವರ ರಾಷ್ಟ್ರೀಯ ಪಕ್ಷದವರು ಎಷ್ಟೇ ಕಣ್ಣು ಮುಚ್ಚಿದರೂ ಆಫ್ರಿಕೆಯಲ್ಲಿ ವರ್ಣ ಸಮಾನತೆಯು ಬೇರೂರಿದೆ' ಎಂದಿದೆ.

ಸಿಂಗಪೂರ ಸ್ಟ್ಯಾಂಡರ್ಡ್ ಪತ್ರಿಕೆಯು ಹೀಗೆ ಅಭಿಪ್ರಾಯಪಟ್ಟಿದೆ—'ಆಗ್ನೇಯ ಏಷ್ಯಾದ ಸ್ವತಂತ್ರ ರಾಷ್ಟ್ರಗಳು ದಕ್ಷಿಣ ಆಫ್ರಿಕೆಯ ಸಾರ್ವತ್ರಿಕ ಬಂಧಗಳನ್ನು ಅತಿ ಸ್ನೇಹದಿಂದ ನೋಡಲಾರವು' ಎಂದಿದೆ.

ಸ್ವತಂತ್ರ ಜಾತಿಗೆ ಗಂಡಾಂತರ

ಡಾ. ಮಲನ್ನರು ತಮ್ಮ ವರ್ಣದ್ವೇಷ ಧೋರಣೆಯನ್ನು ಬಿಟ್ಟುಕೊಡದಿದ್ದರೆ ಬಹಿರಂಗ ಕ್ರಾಂತಿಯು ಸಂಭವಿಸಬಹುದಾಗಿದೆ. ಡಾ. ಮಲನ್ನರ ಆಡಳಿತೆಯು ಗಂಡಾಂತರಕಾರಿ ಹಾಗೂ ಸಂಕುಚಿತ ರಾಷ್ಟ್ರೀಯ ತತ್ವ ಅನುಸರಿಸಿ ಮುಂದೆಯೂ ನಡೆದರೆ ಸ್ವತಂತ್ರ ಜಗತ್ತಿನಲ್ಲಿ ಹೊಸ ಅನಾಹುತವು ಸಂಭವಿಸುವುದಲ್ಲದೆ ತೊಂದರೆಗಳನ್ನು ಹೆಚ್ಚಿಸಲು ಕಮ್ಯೂನಿಸ್ಟರಿಗೆ ಹೊಸ ಸಂಧಿ ದೊರೆಯುವುದು' ಎಂದು ವೆಲಿಂಗ್ಟನ್ನಿನ ಡೊಮಿನಿಯನ್ ಪತ್ರಿಕೆಯು ಬರೆದಿದೆ.

ಸ್ವಾರ್ಥಸಾಧಕರನ್ನು ಹೊರಗಟ್ಟುವದರಿಂದಲೇ ರಾಷ್ಟ್ರದ ಪ್ರಗತಿ ಸಾಧ್ಯ.

ಕಲ್ಕತ್ತೆಯಲ್ಲಿ ಡಾ. ರಾಧಾಕೃಷ್ಣನ್ನರ ಭಾಷಣ

'ಸಾಮಾಜಿಕ ಮತ್ತು ಆರ್ಥಿಕ ವ್ಯವಹಾರಗಳಲ್ಲಿ ಮತ್ತು ಸರಕಾರಿ ಕಾರ್ಯಾಲಯಗಳಲ್ಲಿ ಭದ್ರವಾಗಿ ಬೇರೂರಿರುವ ಸ್ವಾರ್ಥಸಾಧಕರ ವಿರುದ್ಧ ಹೋರಾಟ ಹೂಡಿದ ಹೊರತು ರಾಷ್ಟ್ರವು ಪ್ರಗತಿ ಪಥದಲ್ಲಿ ಸಾಗಲಾರದು' ಎಂಬುದಾಗಿ ಉಪರಾಷ್ಟ್ರಪತಿ ಡಾ. ಎಸ್. ರಾಧಾಕೃಷ್ಣನ್ ಅವರು ತಾ. ೮ರಲ್ಲಿ ಕಲ್ಕತ್ತಾದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡುತ್ತಾ ಹೇಳಿದರು.

ಅವರು ಮುಂದುವರಿದು, ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟ ಪಕ್ಷವು ಇಂದಿನ ತೊಡಕಿನಲ್ಲಿ ಜನತೆಯ ಪ್ರೇಮಾದರಗಳಿಗೂ ವಿಶ್ವಾಸಕ್ಕೂ ಅಷ್ಟೊಂದು ಪಾತ್ರವಾಗಿಲ್ಲವೆಂದೂ ನುಡಿದರು.

ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳಲ್ಲಿ ಮುಂದಗಮನದಲ್ಲಿ ನಡೆಯುತ್ತಿರುವ ಪ್ರಗತಿಗಾಗಿ ಜನತೆಯಲ್ಲಿ ಸಾಕಷ್ಟು ಅಸಂತುಷ್ಟಿ ಹಬ್ಬಿದೆ ಎಂಬ ಅಂಶವನ್ನು ಅವರು ಹೊರಗೆಡಹಿದರೆ, 'ರಾಜಕೀಯ ಗುಲಾಮಗಿರಿಯಿಂದ ಮುಕ್ತಗೊಳಿಸುವುದು ಚಿತ್ರದ ಒಂದು ಭಾಗ ಮಾತ್ರ, ಆರ್ಥಿಕ ಮತ್ತು ಸಾಮಾಜಿಕ ಗುಲಾಮಗಿರಿ ಇನ್ನೂ ಉಂಟು. ರಾಷ್ಟ್ರವು ನಿಜವಾಗಿ ಸ್ವತಂತ್ರವಾಗಬೇಕಾದರೆ ಇವನ್ನೆಲ್ಲ ಕೊನೆಗಾಣಿಸಬೇಕು. ಭಾರತದಲ್ಲಿ ಅಪೂರ್ಣವಾದ ಕ್ರಾಂತಿಯುಂಟು. ನಾವು ಸಾಮಾಜಿಕ ಮತ್ತು ಆರ್ಥಿಕ ಕ್ರಾಂತಿ ಸಾಧನೆಗಾಗಿ ದುಡಿಯಬೇಕು' ಎಂಬುದಾಗಿ ಹೇಳಿದರು.

'ನಾವು ಜಗತ್ತಿನ ದೃಷ್ಟಿ ಹೊರಳಿಸಿದಲ್ಲಿ ಕಚೇರಿಯೂ, ಕಾರ್ಖಾನೆ ಮತ್ತು ಆಸ್ಪತ್ರೆಗಳಲ್ಲಿಯೂ ಅರಾಜಕತೆಯನ್ನು, ಕಾಣುತ್ತೇವೆ. ಅರಾಜಕತೆಯ ಕಟ್ಟಿಕೊಂಡರೆ—ಅದರ ಹೊಣೆಗಾರಿಕೆ ನಮ್ಮದೆ' ಎಂದರು.

ಗಲಭೆ, ಅರಾಜಕತೆಯಿಂದ ರಾಷ್ಟ್ರವನ್ನು ಉಳಿಸಲು ನಾವು ಅತ್ಯಗೊಂಡಿದ್ದರೆ ನಾವು ರಾಷ್ಟ್ರದ ಘನತೆಯು ರೂವಾರಿ-ಗೂ ಉನ್ನತವಾಗಿರಬೇಕೆಂಬ ಉದ್ದೇಶದಿಂದ ದುಡಿಯಬೇಕು. ಪ್ರತಿಯೊಂದು ದಿಶೆಯಲ್ಲಿಯೂ ರಾಷ್ಟ್ರದ ಉನ್ನತಿಗಾಗಿ ದುಡಿಯಬೇಕು' ಎಂದು ಅವರು ನುಡಿದರು.

ಎಲ್ಲ ಕ್ಷೇತ್ರಗಳಲ್ಲಿಯೂ ನೆಲೆಯೂರಿರುವ ವಿಶಿಷ್ಟ ಹಿತಸಂಬಂಧಗಳನ್ನು ಕಿತ್ತುಹಾಕಲು ಹೋರಾಡಬೇಕೆಂದು ಅವರು ಹೇಳಿದರು. 'ಸ್ವಾತಂತ್ರ್ಯ ಹೋರಾಟದ ಕಾಲಕ್ಕೆ ಕಾಂಗ್ರೆಸ್ಸಿನಲ್ಲಿದ್ದಂಥ ತ್ಯಾಗದ ಹುಮ್ಮಸ್ಸು ಇದೀಗ ಇನ್ನೂ ಅಗತ್ಯವಿದೆ. ಯಾಕೆಂದರೆ, ನಾವಿನ್ನೂ ಪೂರ್ಣತ್ವವನ್ನು ಹೊಂದಿದ್ದೇವೆನ್ನುವುದು ಬಹಳ ಗಂಡಾಂತರಕಾರಿಯಾಗಿದೆ.' ಎಂದು ಕಾಂಗ್ರೆಸ್ಸಿಗೆ ಉಪದೇಶಿಸಿದರು.

'ನಾವು ನಮ್ಮ ಗುರಿಯನ್ನು ಮುಟ್ಟಿದೆವು, ನಮ್ಮ ಪ್ರಗತಿಯು ಓಟ ತೃಪ್ತಿಕರ ವಿಷಯವೆಂದು ತಿಳಿಯಕೂಡದು. ಜಗತ್ತಿನತ್ತ ನೋಡಿ, ಇತರ ಪಾಠಗಳನ್ನು ಕಲಿಯಿರಿ. ತ್ವರಿತಗೊಳ್ಳಿರಿ; ಇಲ್ಲವಾದರೆ ನಾವು ಹಿಂದಾದೇವು!' ಎಂದು ಉತ್ಸಾಹದ ನುಡಿಯನ್ನಿತ್ತರು.

ರೋಗಿಗಳಿಗೆ ಸುಸಂಧಿ ! ಗುಣ ಹೊಂದಿರಿ !!

THE ASIATIC PHARMACY.

(AYURVEDIC DISPENSARY)

SCHOOL ROAD, MERCARA.

(Near Cauvery Mahal Theatre)

ಏಷ್ಯಾಟಿಕ್ ಫಾರ್ಮಸಿ.

(ಆಯುರ್ವೇದ ವೈದ್ಯಶಾಲೆ)

(ಸ್ಕೂಲ್ ರೋಡು, ಮಡಿಕೇರಿ)

(ಕಾವೇರಿ ಮಹಲ್ ಥಿಯೇಟರ ಬಳಿ)

ಮೇಲಿನ ಹೆಸರಿನಿಂದ ತಾ|| 28-8-1952 ರಿಂದ ತೆರೆಯಲಾಗಿರುವ 'ಆಯುರ್ವೇದ ವೈದ್ಯಶಾಲೆ'ಯಲ್ಲಿ ಎಲ್ಲಾ ರೀತಿಯ ಶಾಸ್ತ್ರೀಯ ಔಷಧಗಳು ದೊರೆಯುತ್ತವೆ. ವೈದ್ಯರು ಎಲ್ಲರನ್ನು ಪರೀಕ್ಷಿಸಿ, ಉತ್ತಮ ತರದ ಚಿಕಿತ್ಸೆಯನ್ನು ಮಾಡುತ್ತಾರೆ. ಮಹನೀಯರುಗಳು ನಮಗೆ ತಕ್ಕ ಪ್ರೋತ್ಸಾಹವನ್ನು ಕೊಡಬೇಕಾಗಿ ವಿನಂತಿ.

4-2

ಕೆ. ಪಿ. ಬಾಲಕೃಷ್ಣನ್,
ಆಯುರ್ವೇದ ವೈದ್ಯರು.

ದ. ಆಫ್ರಿಕದ ವರ್ಣದ್ವೇಷದ ಪ್ರಶ್ನೆ ರಾಜಕೀಯ ಕಾಲ್ಚೆಂಡಾಗಬಾರದು.

'ಇಡಿ ಬಿಳಿಯೇತರರ ಪ್ರಶ್ನೆಯು ಪಕ್ಷೀಯ ರಾಜಕಾರಣದ ಮೇರೆಗೆ ಒಂದೇ ಒಂದು ಪಕ್ಷಕ್ಕೆ ಬಿಡಿಸಲು ಬಾರದಷ್ಟು ದೊಡ್ಡದಾಗಿದೆ. ಇದಂತೂ ಡಾ. ಮಲನ್ನರ ರಾಷ್ಟ್ರೀಯ ಪಕ್ಷಕ್ಕೆ ಹೊರಲಾರದ ಒಜ್ಜೆಯಾಗಿದೆ' ಎಂಬುದಾಗಿ ದಕ್ಷಿಣ ಆಫ್ರಿಕೆಯ ಸಂಯುಕ್ತ (ವಿರೋಧಿ) ಪಕ್ಷದ ಧುರೀಣ ಮಿ. ಜಾಕೊಬಾ ಸ್ಟ್ರಾಸ್ ಅವರು ತಾ. ೩೧ರಲ್ಲಿ ಪ್ರಿಟೋರಿಯಾದಲ್ಲಿ ಹೇಳಿದರು.

'ಇಡೀ ಬಿಳಿಯೇತರ ಸಮಸ್ಯೆಯನ್ನು ಪಕ್ಷ ರಾಜಕಾರಣದ ಕ್ಷೇತ್ರದಿಂದ ಬಿಟ್ಟುಕೊಟ್ಟಾಗಲೇ ಅದರ ಪರಿಹಾರ. ಯಾವುದರ ಮೇಲಿಂದ ಇಡಿ ಬಿಳಿಯರ ಪ್ರಶ್ನೆಯೇ ಅವಲಂಬಿಸಿದೆಯೋ ಆ ಭ ಪ್ರಶ್ನೆಯು ರಾಜಕೀಯ ಕಾಲ್ಚೆಂಡಾಗಬಾರದು' ಎಂದೂ ಅವರು ನುಡಿದರು.

ಒಂದು ವೇಳೆ ಸಂಯುಕ್ತ ಪಕ್ಷವು ಅಧಿಕಾರಕ್ಕೆ ಬಂದರೆ, ಪಕ್ಷೇತರ ವಿಧಾನದಲ್ಲಿ ಮತ್ತು ಬಿಳಿಯೇತರರೊಂದಿಗೆ ವಿಚಾರ ವಿನಿಮಯದಿಂದ ಈ ಪ್ರಶ್ನೆಯನ್ನು ಬಿಡಿಸುವುದೆಂದೂ ಅವರು ಹೇಳಿದರು.

ಮಿ. ಸ್ಟ್ರಾಸ್‌ರವರು ಸಂಯುಕ್ತ ಪಕ್ಷದ ಟ್ರಾನ್ಸ್‌ವಾಲ್ ಕಾಂಗ್ರೆಸನ್ನುದ್ದೇಶಿಸಿ ಮಾತನಾಡುತ್ತಿದ್ದರು. ಅವರು ಮುಂದುವರಿದು, 'ಅನೇಕ ಶತಮಾನಗಳಿಂದ ಬಿಳಿಯರಲ್ಲಿ ಮತ್ತು ಕರಿಯರಲ್ಲಿ ಇದ್ದ ಸಹಕಾರ ಭಾವನೆಯನ್ನು ಇದೀಗ ಈಗಿನ ಸರಕಾರವು ನಾಶಪಡಿಸಿದೆ. ಇಂತಹ ಶಾಸನವೂ ಇಲ್ಲವೇ ಇಲ್ಲ. ಪ್ರತಿ ನಾಡ—ನಾಡಕ್ಕೆ ಸರಕಾರದ ವರ್ಣದ್ವೇಷದ ವಿರುದ್ಧ ಚಳುವಳಿಯು ಹೆಚ್ಚುತ್ತಾ ನಡೆದಿದೆ' ಎಂದು ಹೇಳಿದರು.

ರಾಷ್ಟ್ರದಲ್ಲಿ ಹಬ್ಬಿರುವ ಚಳುವಳಿಗೆ ಸರಕಾರವೇ ಹೊಣೆಗಾರವೆಂದೂ ಈ ಚಳುವಳಿಯ ಪ್ರಶ್ನೆಯನ್ನು ಬಿಡಿಸುವಲ್ಲಿ ಅಂಥ ಧೈರ್ಯಾತ್ಮಕ ನಡೆಸುವಂಥವರಾರೂ ಈ ಸರಕಾರದಲ್ಲಿ ಇಲ್ಲವೆಂದೂ ಅವರು ಸ್ಪಷ್ಟವಾಗಿ ಹೇಳಿದರು.

೧೬೩೮ರಲ್ಲಿ ದಕ್ಷಿಣ ಅಮೇರಿಕೆಯಲ್ಲಿಯ ಯುರೋಪ ದೇಶದ ಗವರ್ನರನ ಪತ್ನಿ ಆ್ಯನಾ ಸಿಂಕೋನ ಎಂಬುವಳಿಗೆ ಚಳಿಜ್ವರ ಬರುತ್ತಿದ್ದು ಒಂದು ವಿಶಿಷ್ಟಗಿಡದ ತೊಗಟೆಯಿಂದ ಸಿದ್ಧಪಡಿಸಿದ ಔಷಧಿದ ಆಕೆಗೆ ಗುಣವಾಯಿತು. ಅಂತೆಯೇ ಅಂದಿನಿಂದ ಆಗಿಡಕ್ಕೆ ಸಿಂಕೋನಾ ಎಂದು ಹೆಸರು ಬಿತ್ತು. ೧೮೨೦ ರಲ್ಲಿ ಈ ಗಿಡದ ತೊಗಟೆಯಿಂದ ಕ್ವಿನೀನ್ ಔಷಧವನ್ನು ಸಿದ್ಧಪಡಿಸಲಾಯಿತು.

'ಕೊಡಗು' ಪತ್ರಿಕೆಯ ಏಜೆಂಟರು ಶ್ರೀ ಚೋಕಿರ ಮೊಣ್ಣಪ್ಪನವರು, ನಾಪೋಕ್ಲಿಗೆ

॥ ವಾರ್ತೆಗಳು. ॥

ಜಗತ್ತಿನಲ್ಲಿಯೇ ಚಹದ ಮೊದಲನೇ ಯ ಗುಟುಕನ್ನು ಕುಡಿಯುವ ಭಾಗ್ಯವನ್ನು ಕ್ರಿಸ್ತ ಪೂರ್ವದ ೨೭೩೭ ವರ್ಷಗಳ ಪೂರ್ವದಲ್ಲಿ ಶೇರನೂಂಗ ಎಂಬ ಚೀನದ ಸಾರ್ವಭೌಮನು ಉಪಯೋಗಿಸಿದನು.

ಅಮೇರಿಕೆಯಲ್ಲಿ ಭಾರತದ ರಾಯಭಾರಿಯಾಗಿ ನೇಮಕ ಹೊಂದಿದ ಶ್ರೀ ಗಗನ ವಿಹಾರಿಲಾಲ ಮೆಹತಾ ಅವರು ತಮ್ಮ ರಾಯಭಾರಿ ಪದದ ಅಧಿಕಾರ ಸೂತ್ರ ವಹಿಸಲು ಈ ತಾ. ೨ರಲ್ಲಿ ವಿಮಾನ ಮಾರ್ಗದಿಂದ ನ್ಯೂಯಾರ್ಕ್ಕಕ್ಕೆ ತೆರಳಿದರು.

ಸಮೂಹ ವಿಕಾಸ ಯೋಜನೆಯನ್ನು ಭಾರತದಲ್ಲಿಯ ೫೫ ಕೇಂದ್ರಗಳಲ್ಲಿ ಮಹಾತ್ಮಾ ಗಾಂಧೀಜಿಯವರ ಜನ್ಮದಿನವಾದ ಅಕ್ಟೋಬರ್ ಎರಡರಂದು ಏಕಕಾಲಕ್ಕೆ ಕಾರ್ಯಾರಂಭವಾಗುವುದು.

ಪಿ. ಎಂ. ಪಿ. ಪಕ್ಷವು ಸೋಶಲಿಸ್ಟ ಪಕ್ಷ ... ಕ್ಯಮತ್ಯದಿಂದ ಒಂದಾಗಿ ನೂತನ ಪ್ರಜಾ ಸೋಶಲಿಸ್ಟ ಪಕ್ಷ ಏರ್ಪಟ್ಟಿದ್ದರಿಂದ ಜನರ ಹಿತದ ಧನೆಗೆ ಒಳ್ಳೆಯದಾಗಿದೆ ಮತ್ತು ಅನುಕೂಲವಾಗುತ್ತೆ ಎಂದು ಆಚಾರ್ಯ ಜೆ. ಬಿ. ಕೃಪಾಲಾನಿಯವರು ನುಡಿದಿರುವರು.

ಅನೇರಿಕನ್ ಅಧ್ಯಕ್ಷರಿಗೆ ನಾನು ಚುನಾಯಿತನಾದರೆ ನೀಗ್ರೋ ಒಬ್ಬರಿಗೆ ಮಂತ್ರಿ ಪದವಿ ಕೊಡುತ್ತೇನೆ. ಯಾವ ಜಾಗಕ್ಕೆ ಯಾರು ಅರ್ಹರೋ ಅಂತಹವರನ್ನೇ ಚುನಾಯಿಸಿಕೊಳ್ಳುತ್ತೇನೆ. ಗ ಣಕ್ಕೆ ಮಹತ್ವವಿಲ್ಲವೆಂಬುದೇ ನನ್ನ ಕಾರ್ಯನೀತಿ ಎಂಬುದಾಗಿ ರಿಪಬ್ಲಿಕನ್ ಸ್ಪರ್ಧಿ ಜ|| ಐಸೆನ್ ಹೋವರ್ ಘೋಷಿಸಿರುವರು.

ಜಪಾನದಲ್ಲಿ ಟೋಸಾ ಎಂಬ ವಿಚಿತ್ರ ಜಾತಿಯ ಕೋಳಿಗೆ ೭ ರಿಂದ ೧೮ ಅಡಿ ಉದ್ದವಾದ ಪುಚ್ಛವಿರುತ್ತದೆ. ಈ ಜಾತಿ ಬಹುಕಾಲದಿಂದ ಜಪಾನದಲ್ಲಿದೆ. ಇತರ ಜಾತಿಯ ಕೋಳಿಗಳ ಸಂಪರ್ಕದಿಂದ ಈ ಜಾತಿಯ ಕೋಳಿಗೆ ಹುಟ್ಟುವ ಕೋಳಿಯ ಪುಚ್ಛವು ಉದ್ದವಿದ್ದರೂ ಟೋಸಾ ಜಾತಿಗಿದ್ದಷ್ಟು ಉದ್ದವಿರುವುದಿಲ್ಲ.

ಚಕ್ರವರ್ತಿ ಹಿರೋಹಿಟೋರ ಹನ್ನೊಂದನೇ ಮಗಳು ೨೧ ವರ್ಷ ವಯಸ್ಸಿನ ರಾಜಕುಮಾರಿ ಯೋರಿಯು ಮಾಜಿ ಮಾರ್ಕ್ವಿಸ್ ನೊಬುಸುಕಾ ಇಕೆಡಾರ ೨೫ ವರ್ಷದ ಪುತ್ರ ಟಕಮಾಸಾ ಇಕೆಡಾರನ್ನು ಅಕ್ಟೋಬರ್ ೧೦ರಂದು ಮದುವೆಯಾಗಲಿದ್ದಾರೆಂದು ಜಪಾನಿ ರಾಜ್ಯಮನೆತನದ ಅಧಿಕಾರಿಗಳು ತಿಳಿಸಿದರು.

ಜುಲೈ ತಿಂಗಳಲ್ಲಿ ಅಸ್ಸಾಮಿನಲ್ಲಿ ಬಂದ ಮಹಾಪೂರದಿಂದ ನೌಗಾಂಗ ಜಿಲ್ಲೆಯಲ್ಲಿಯ ೫೧,೦೦೦ ಎಕರೆ ಭೂಮಿಯಲ್ಲಿಯ ಬೆಳೆಯು ಧ್ವಂಸವಾಯಿತು. ಆ ಭೂಮಿಯಿಂದ ೮೩,೫೧೭ ಮಣ ಬತ್ತ ಬರುವುದೆಂದು ಅಂದಾಜು ಮಾಡಲಾಗಿತ್ತು. ಮಹಾಪೂರದಿಂದ ಸ್ಥಾನಿಕ ಸಂಸ್ಥೆಗಳ ೩೭೩ ಮೈಲುಗಳ ರಸ್ತೆಗಳಿಗೆ ಧಕ್ಕೆ ತಗಲಿತು. ಅನೇಕ ಸೇತುವೆಗಳು ಕಟ್ಟವು.

ಕಾಶಿ ವಿದ್ಯಾಪೀಠದಲ್ಲಿ ಪ್ರಚಾರ ಮಾಡಿದ್ದ ಆಚಾರ್ಯ ವಿನೋಬಾ ಭಾವೆಯವರು ತಾ|| ೩೦-೮-೫೩ರ ಸಂಜೆ ಮೈಸೂರು ಪ್ರಾಂತದಿಂದ ಬಂದಿರುವ ಶ್ರೀ ಟಿ. ಎಸ್. ಅನಂತರಂಗಾಚಾರ್ಯರ ಜತೆಯಲ್ಲಿ ಕನ್ನಡ ಸಾಹಿತ್ಯದ ಬಗ್ಗೆ ಮಾತುಕತೆ ನಡೆಸಿದರು. ಶ್ರೀ ಕುವೆಂಪುರವರ "ಶ್ರೀ ರಾಮಾಯಣ ದರ್ಶನಂ" –ಅಯೋಧ್ಯಾ ಸಂಪುಟದಲ್ಲಿನ "ಶವಿಕೃತು ದರ್ಶನಂ" ವಿಭಾಗವನ್ನು ಓದಿಸಿ ಕೇಳಿದರು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಂದಿರುವ ಕಾವ್ಯ ಪ್ರವೃತ್ತಿಯನ್ನು ತಿಳಿದು ತುಂಬಾ ಸಂತೋಷಪಟ್ಟರು. ತಮಗೆ ವಿರಾಮವಿದ್ದಾಗಲೆಲ್ಲಾ ಆ ಕಾವ್ಯದ ಕೆಲವು ಭಾಗಗಳನ್ನು ಓದಬೇಕೆಂದು ತಿಳಿಸಿದರು.

ಕಾಲುವೆಯೊಂದರ ರಿಪೇರಿ ಸ್ಥಾನದಲ್ಲಿ ಕೆಂಪು ದೀಪವಿದ್ದುದರಿಂದ ಅಪಘಾತಕ್ಕೀಡಾದ ವ್ಯಕ್ತಿಯೊಬ್ಬರು ಗ್ಲಾಸ್ಗೋ ನಗರ ಸಭೆಯ ಮೇಲೆ ಹೂಡಿದ ಫಿರ್ಯಾದಿಯ ಪರವಾಗಿ, ಫರ್ಸ್ಟ ಕ್ಲಾಸ್ ಸಿವಿಲ್ ಜಡ್ಜರು ನಗರಸಭೆಯ ವಿರುದ್ಧ ೭೫ ರೂ.ಗಳ ಡಿಕ್ರಿಯನ್ನು ಪಾಸು ಮಾಡಿದರು. ಸೈಕಲ್ ಮೇಲೆ ಹೋಗುತಿದ್ದ ವಕೀಲರೊಬ್ಬರು ಆ ಕಾಲುವೆಯಲ್ಲಿ ಬಿದ್ದು ಅಪಘಾತಕ್ಕೀಡಾಗಿದ್ದಲ್ಲದೆ ಸೈಕಲ್ಲೂ ಹಾದುರಸ್ತಾಯಿತು. ಈ ಅಪಘಾತಕ್ಕೆ ನಗರಸಭೆಯು ಹೊಣೆಗಾರವೆಂದು ಜಡ್ಜರು ಅಭಿಪ್ರಾಯಪಟ್ಟರು.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ರಿಜಿಸ್ಟ್ರಾರ್ ಆಫ್ ಕೋಅಪರೇಟಿವ್ ಸೊಸೈಟೀಸ್ ಅವರಿಂದ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡಲ್ಪಡುತ್ತದೆ. ಚಿನ್ನ ಮತ್ತು ಬೆಳ್ಳಿಯ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಹುಂಡಿ ಬಿಲ್ಲು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುತ್ತದೆ. ಬ್ಯಾಂಕಿನ ದೀರ್ಘ ರೀತಿಯ ಸಾಲದ ಶಾಖೆಯ ಮೂಲಕ ದೀರ್ಘ ಅವಧಿಯ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ, ಕೆ. ಬಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಮನೇಜರ್.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12ನೇ ನಂಬರಿನ ಒಂಟಿ ಮತ್ತು ಜೋಡು ನಳಿಗೆಯ ಕೋವಿಗಳು.
3. 12, 16 ಮತ್ತು 20ನೇ ನಂಬರಿನ ತೋಟೆಗಳು, ಕೋವಿ ಮದ್ದು ಮತ್ತು ಕೇಪುಗಳು.
4. 9″ × 4″ ಮತ್ತು 8″ × 4″ ಕಬ್ಬಿಣದ ತೊಲೆಗಳು (Girders)
5. 8′ × 3′ × 24 (Gage) ಕಬ್ಬಿಣದ ತಗಡುಗಳು.
6. $1\frac{3}{4}''$ × $\frac{5}{16}''$ ಉಕ್ಕಿನ ಪಟ್ಟಿಗಳು (Spring steel flates)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು 'Special purchase permit' ಪಡೆಯಬೇಕಾಗಿದೆ.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ) ಪಿ. ಬಿ. ಬೆಳ್ಳಪ್ಪ, (ಪ್ರೆಸಿಡೆಂಟ್.)

ಮಾರಾಟಕ್ಕಿದೆ.

ಪೀಲಿಬೆಟ್ಟ ತೋಟದ 1952–53ರ ಕಿತ್ತಳೆ ಫಲ ಮತ್ತು ಒಳ್ಳೆ ಮೆಣಸು ಮಾರಾಟಕ್ಕಿದೆ.

ಅಂದಾಜು 10,000 ಕಿತ್ತಳೆ ಮರಗಳಲ್ಲಿ ಫಲ ಹಿಡಿದಿರುತ್ತದೆ. 500–600 ಪೆಣಸಿನ ಬಳ್ಳಿಗಳಲ್ಲಿ ಫಲ ಇದೆ. ಖರೀದಿದಾರರು ಸೆಪ್ಟೆಂಬರ್ 15ರ ಒಳಗೆ ಬಂದು ಟೆಂಡರು ಕೊಟ್ಟಲ್ಲಿ ಸ್ವೀಕರಿಸಲ್ಪಡುವುದು. ಹೆಚ್ಚಿನ ವಿವರಗಳನ್ನು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ಅಥವ ಖುದ್ದು ಬಂದು ತಿಳಕೊಳ್ಳಬಹುದು.

A. A. RODRIGUES,
Proprietor,
Peelibetta Estaate,
Ammatti, Coorg.

2–2

THE JUBILEE INSURANCE CO., Ltd.

One of the very few in the feild of Insurance that has been declaring BONUS to its policy holders from its very insception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-C, Richmond Road, Bangalore.

Our Chief Agents:-THE ORIENTAL ENTERPRISES, BANGALORE 1.

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೆದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:–ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,
41-C, ರಿಚ್‌ಮಂಡ್ ರೋಡ್, ಬೆಂಗಳೂರು 1.

24

Edited, Printed and Published by P. I. Belliappa at 'Kodagu' Press, Mercara, for Kodagu' Ltd.

Licence No. 60.
Licenced to Post without Prepayment.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು. | ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಖು ೧೯-೯-೧೯೫೨ನೇ ಶುಕ್ರವಾರ | ಸಂಚಿಕೆ ೧೬

ಭಾರತ ಸಂವಿಧಾನದ ರೂಪರೇಖೆಗಳು

(ಔಟ್ ಲೈನ್ಸ್ ಆಫ್ ಇಂಡಿಯನ್ ಕಾನ್‌ಸ್ಟಿಟ್ಯೂಷನ್)

ಲೇ:—ಶ್ರೀ ವಿ. ಎಸ್. ರಾಮಕೃಷ್ಣ, ಬಿ. ಎಸ್‌ಸಿ (ಆನರ್ಸ್) ಬಿ. ಟಿ,

ಭಾರತದ ಸಂವಿಧಾನವು ೩೯೫ ಅನುಚ್ಛೇದ (ಆರ್ಟಿಕಲ್ಸ್)ಗಳಿಂದಲೂ, ೨೨ ಭಾಗಗಳಿಂದಲೂ ೮ ಅನುಸೂಚಿ (ಶೆಡ್ಯೂಲ್ಸ್)ಗಳಿಂದಲೂ ಕೂಡಿರುವುದು. ಇಷ್ಟೊಂದು ದೊಡ್ಡದಾದ ರಾಜ್ಯಾಂಗ ಶಾಸನವು ಪ್ರಪಂಚದ ಯಾವ ರಾಷ್ಟ್ರಗಳಲ್ಲೂ ಇಲ್ಲ. ಈ ಶಾಸನದಲ್ಲಿ ಅಡಕವಾದ ಕೆಲವು ಭಾಗಗಳು ಇತರ ರಾಷ್ಟ್ರಗಳ ಶಾಸನಗಳಲ್ಲೂ ಕಂಡು ಬರಬಹುದು. ಎಂದ ಮಾತ್ರಕ್ಕೆ ಈ ಶಾಸನವೊಂದು ಕೇವಲ ಅನ್ಯರಾಷ್ಟ್ರ ಶಾಸನಗಳ ಅನುಕರಣೆಯೆಂದು ಮಾತ್ರ ತಿಳಿಯಕೂಡದು. ಇಷ್ಟೊಂದು ವಿಸ್ತಾರವೂ ವ್ಯಾಪಕವೂ ಆದ ಸಂವಿಧಾನವೇಕೆಂದು ಹಲವರು ಪ್ರಸ್ತಾಪಿಸಬಹುದು. ಆದರೆ ಭಾರತದ ವೈವಿಧ್ಯಪೂರ್ಣ ಆಚಾರ ವಿಚಾರ ವ್ಯವಹಾರಗಳ ದೃಷ್ಟಿಯಿಂದಲೂ ಭಾರತದ ವಿಶಾಲತೆಯ ದೃಷ್ಟಿಯಿಂದಲೂ ಇಷ್ಟೊಂದು ಬೃಹತ್‌ಗ್ರಂಥವು ಅಗತ್ಯವಾಯಿತು. ಅನೇಕ ತಾತ್ವಿಕ ವಿಷಯಗಳನ್ನು ಸ್ಪಷ್ಟವಾಗಿ ವಿವರಿಸಲೂ ಅನೇಕ ಪ್ರಜಾ ಸಂಸ್ಥೆಗಳ ರೂಪರೇಖೆಗಳನ್ನು ನಿರ್ದಿಷ್ಟವಾಗಿ ವರ್ಣಿಸಲೂ ಇಷ್ಟೊಂದು ದೊಡ್ಡ ರಾಜ್ಯಾಂಗ ಶಾಸನವು ಅಗತ್ಯವಾಗಿ ಕಂಡು ಬಂದಿತು.

ಸಂವಿಧಾನದಲ್ಲಿ ಪ್ರತಿಪಾದಿತವಾದ ವ್ಯಕ್ತಿಯ ಮೂಲಭೂತ ಹಕ್ಕುಗಳು (ಫಂಡಮೆಂಟಲ್ ರೈಟ್ಸ್) ಸಂವಿಧಾನಕ್ಕೆ ಭೂಷಣಪ್ರಾಯವಾಗಿರುವುದು. ವ್ಯಕ್ತಿಯ ಮೂಲಭೂತ ಹಕ್ಕುಗಳನ್ನು ಪಾಶ್ಚಾತ್ಯ ದೇಶಗಳ ಅನೇಕ ಸಂವಿಧಾನಗಳು ನಿರೂಪಿಸಿರುವವು. ಒಂದನೇ ಜಾಗತಿಕ ಯುದ್ಧದ ತರುವಾಯ ಅವಶ್ಯವೆಂದು ಕಂಡು ಬಂದ ಈ ಹಕ್ಕು ನಿರೂಪಣೆಯು ದ್ವಿತೀಯ ಜಾಗತಿಕ ಯುದ್ಧಾನಂತರ ಅನಿವಾರ್ಯವೆಂದು ಪರಿಗಣಿಸಲ್ಪಟ್ಟಿತು. ಮೂಲಭೂತ ಹಕ್ಕುಗಳ ನಿರೂಪಣವು ಸಾರ್ವಜನಿಕ ಅಭಿಪ್ರಾಯ ಸ್ಪಷ್ಟೀಕರಣದ ದೃಷ್ಟಿಯಿಂದ ಅಗತ್ಯವಾಗಿದ್ದು ಸರಕಾರದ ರೀತಿ ನೀತಿಗಳನ್ನು ನಿಯಂತ್ರಿಸುತ್ತಿರುವುದು. ಮೂಲಭೂತ ಹಕ್ಕುಗಳು ಸಂವಿಧಾನದಲ್ಲೇ ಪ್ರತಿಪಾದಿತವಾಗಿರುವದರಿಂದ ಪರಮ ನ್ಯಾಯಾಲಯ (ಸುಪ್ರೀಂ ಕೋರ್ಟ್)ವು ರಾಷ್ಟ್ರದ ಸಹಾಯಕ್ಕೆ ಬರುವ ಅವಶ್ಯಕತೆ ಇಲ್ಲ. ಅಮೇರಿಕದ ರಾಜ್ಯಾಂಗ ಶಾಸನದಲ್ಲಿ ಉಲ್ಲೇಖಿತವಾದ ಮೂಲಭೂತ ಹಕ್ಕುಗಳ ಸ್ಪಷ್ಟೀಕರಣವು ಭಾರತ ಸಂವಿಧಾನಕ್ಕೆ ಬಹುತೇಕ ಹೋಲುವುದು.

ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ದಬ್ಬಾಳಿಕೆಯ ವಿರೋಧ ಪ್ರದರ್ಶನ ಹಕ್ಕು, ಸ್ವಧರ್ಮಾವಲಂಬನದ ಹಕ್ಕು, ಸಾಂಸ್ಕೃತಿಕ ಶೈಕ್ಷಣಿಕ ಹಕ್ಕು, ಆಸ್ತಿ ಹೊಂದಿಕೊಳ್ಳುವ ಹಕ್ಕು, ಸಂವಿಧಾನ ರೀತ್ಯಾ ಪರಿಹಾರಗಳನ್ನು ಪಡೆದುಕೊಳ್ಳುವ ಹಕ್ಕುಗಳು ಮೂಲಭೂತ ಹಕ್ಕುಗಳೆಂದು ಪರಿಗಣಿಸಲ್ಪಡುವವು. ರಾಜ್ಯಾಂಗ ಶಾಸನದ ೧೭ನೆಯ ಅನುಚ್ಛೇದವು ಅಸ್ಪೃಶ್ಯತಾ ನಿವಾರಣೆಯನ್ನು ಪಡಿಸುತ್ತಾ ಅಸ್ಪೃಶ್ಯತೆಯನ್ನು ಯಾವ ರೂಪದಲ್ಲಾಗಲೀ ಆಚರಣೆಗೆ ತರುವುದು ಶಿಕ್ಷಾರ್ಹವೆಂದು ಘೋಷಿಸುವುದರಿಂದ ಸರ್ವಜನ ತೆಯನ್ನು ಪ್ರತಿಪಾದಿಸುವುದು. ಸಂವಿಧಾನದ ೧೯ನೆಯ ಅನುಚ್ಛೇದವು ಪ್ರತಿಯೊಬ್ಬ ಪೌರನಿಗಿರುವ ಅಭಿಪ್ರಾಯ ಸ್ಪಷ್ಟೀಕರಣ ಸ್ವಾತಂತ್ರ್ಯವನ್ನು, ಶಾಂತಿಯಿಂದ ಸಭೆಗೂಡಿ ಸಂಘಗಳನ್ನು ನಿರ್ಮಿಸಿಕೊಳ್ಳುವ ಹಕ್ಕನ್ನೂ ಭಾರತದ ಯಾವ ಭಾಗಗಳಲ್ಲಾಗಲೀ ವಾಸಿಸುವ ಸ್ವಾತಂತ್ರ್ಯವನ್ನೂ ಆಸ್ತಿಯನ್ನು ಹೊಂದಲೂ ಅನುಭವಿಸಲೂ ಮಾರಾಟ ಮಾಡಲೂ ಇರುವ ಸ್ವಾತಂತ್ರ್ಯವನ್ನೂ ತನಗೆ ಇಚ್ಛೆ ಬಂದ ವೃತ್ತಿಯನ್ನು ಅವಲಂಬಿಸುವ ಹಕ್ಕನ್ನೂ ಪೌರನಿಗೆ ಕೊಟ್ಟಿರುವುದು. ಈ ಹಕ್ಕುಗಳನ್ನು ಇತರರ ಮೂಲಭೂತ ಹಕ್ಕುಗಳಿಗೆ ಅಡ್ಡಿ ಬರದಂತೆ ಅನುಭವಿಸಲು ಭಾರತದ ಸಂವಿಧಾನವು ಪ್ರತಿಬಂಧಿಸದು.

ಸಂವಿಧಾನದ ೨೧ನೆಯ ಅನುಚ್ಛೇದವು ವ್ಯಕ್ತಿಗತ ಸ್ವಾತಂತ್ರ್ಯವನ್ನು ವಿವರಿಸುವುದು. ನ್ಯಾಯಾಲಯಗಳಿಗೆ ವ್ಯಕ್ತಿಗತ ಸ್ವಾತಂತ್ರ್ಯವನ್ನು ನಿರ್ಧರಿಸುವ ಹಕ್ಕಿಲ್ಲ. ಈ ಹಕ್ಕನ್ನು ಸಂವಿಧಾನವು ಶಾಸನ ಸಭೆಗೆ ಸಂಪೂರ್ಣವಾಗಿ ಕೊಟ್ಟಿರುವುದು. ೨೧ನೆಯ ಅನುಚ್ಛೇದವು ೨೨ನೆಯ ಅನುಚ್ಛೇದದಿಂದ ಸಮರ್ಥಿಸಲ್ಪಟ್ಟಿರುತ್ತದೆ. ಯಾವನೊಬ್ಬ ವ್ಯಕ್ತಿಯ ಮೇಲೆ ಅಧಿಕಾರ ದುರುಪಯೋಗ ಮಾಡದಂತೆಯೂ ವಿಚಾರಣೆಯಿಲ್ಲದೆ ದೀರ್ಘ ಕಾಲ ಬಂಧೀಖಾನೆಯಲ್ಲಿ ಇಡದಂತೆಯೂ ಪ್ರತಿಬಂಧಿಸುವುದು.

ಸಂವಿಧಾನದ ೩೨ನೆಯ ಅನುಚ್ಛೇದವು ವ್ಯಕ್ತಿಗತ ಮೂಲಭೂತ ಹಕ್ಕನ್ನು ಆಚರಣೆಗೆ ತರಲು ಅವಕಾಶವನ್ನು ಕಲ್ಪಿಸಿರುವುದು. ಈ ಅನುಚ್ಛೇದವಿಲ್ಲದಿದ್ದರೆ ೨೧ನೆಯ ಅನುಚ್ಛೇದದಲ್ಲಿ ಪ್ರತಿಪಾದಿತವಾದ ವ್ಯಕ್ತಿಗತ ಹಕ್ಕುಗಳಿಗೆ ಬೆಲೆ ಇರಲಿಲ್ಲ. ವ್ಯಕ್ತಿಯು ತನ್ನ ಮೂಲಭೂತ ಹಕ್ಕುಗಳಿಗೆ ಧಕ್ಕೆ ಬಂದಿದೆ ಎಂದು ಭಾವಿಸಿದಾಗ ಉಚ್ಚ ನ್ಯಾಯಾಲಯ (ಹೈಕೋರ್ಟ್)ದಲ್ಲಾಗಲೀ ಪರಮ ನ್ಯಾಯಾಲಯ (ಸುಪ್ರೀಂ ಕೋರ್ಟ್)ದಲ್ಲಾಗಲೀ ತನ್ನ ಹೇಳಿಕೆಯನ್ನು ಕೊಟ್ಟು ನ್ಯಾಯಾಲಯಗಳ ತೀರ್ಮಾನವನ್ನು ಅಪೇಕ್ಷಿಸಬಹುದು. ನ್ಯಾಯಾಲಯಗಳಿಗೆ ಬಂದಿ ಪ್ರತ್ಯಕ್ಷೀಕರಣ (ಹೇಬಿಯಸ್ ಕಾರ್ಪಸ್) ಪರಮಾದೇಶ (ಮಂಡಮಸ್) ಪ್ರತಿಷೇಧ (ಪ್ರೊಹಿಬಿಷನ್) ಉತ್ಪ್ರೇಷಣ (ಸರ್ಟಿಯೊರರಿ) ಮತ್ತು ಅಧಿಕಾರ ಪೃಚ್ಛಾ (ಕ್ವೊವಾರಂಟೋ) ಮುಂತಾದ ಆಜ್ಞೆಗಳನ್ನು ಹೊರಡಿಸುವ ಅಧಿಕಾರವನ್ನು ಸಂವಿಧಾನವು ಕೊಟ್ಟಿರುವುದು. ರಾಷ್ಟ್ರವು ವ್ಯಕ್ತಿಗತ ಸ್ವಾತಂತ್ರ್ಯವನ್ನು ಕಾಪಾಡಲು ಕೆಲವು ಕಾರ್ಯಕ್ರಮಗಳನ್ನು ಮಾಡಬಾರದೆಂದು ಸಂವಿಧಾನವು ಹೇಳುವುದಾದರೆ ಪ್ರಸ್ತಾವನೆ (ಪ್ರಿಯಾಂಬ್ಲ್)ಯಲ್ಲಿ ಸೂಚಿತವಾದ ಸಂವಿಧಾನ ತತ್ವಗಳು ಆಚರಣೆಗೆ ಬರುವಂತೆ ನೋಡಿಕೊಳ್ಳಲು ಕೆಲವು ಕಾರ್ಯಕ್ರಮಗಳನ್ನು ಜಾರಿಗೆ ತರಲೇಬೇಕಾಗಿದೆ. ಈ ಕಾರ್ಯಕ್ರಮಗಳನ್ನು ನ್ಯಾಯಾಲಯದ ಮೂಲಕ ಅನುಷ್ಠಾನಕ್ಕೆ ತರಲು ಸಾಧ್ಯವಿಲ್ಲವಾದರೂ ರಾಷ್ಟ್ರ ಸರಕಾರವು ಹೊಸ ಶಾಸನಗಳನ್ನು ಮಾಡಬೇಕಾದಾಗ ಅವುಗಳನ್ನು ಅನುಸರಿಸಿಯೇ ಮಾಡಬೇಕಾಗಿದೆ. ರಾಷ್ಟ್ರದ ಹಿತಕರ ಕಾರ್ಯಗಳನ್ನು ಆಚರಣೆಗೆ ತರುವಂತೆ ಶಾಸನಗಳನ್ನು ಮಾಡುವುದು ರಾಷ್ಟ್ರನೀತಿಯಾಗಿದೆ.

ಭಾರತದ ಒಕ್ಕೂಟದ ಮಹಾಧಿಕಾರಿಯು ರಾಷ್ಟ್ರಪತಿ (ಪ್ರೆಸಿಡೆಂಟ್) ಎಂದು ನಾವು ತಿಳಿದಿದ್ದೇವೆ. ಒಕ್ಕೂಟ ಸರಕಾರದ ಕಾರ್ಯ ನಿರ್ವಹಣ ಅಧಿಕಾರವು ರಾಷ್ಟ್ರಪತಿಯಲ್ಲಿದೆ. ಸರಕಾರದ ಎಲ್ಲಾ ಕಾರ್ಯಕ್ರಮಗಳೂ ರಾಷ್ಟ್ರಪತಿಯ ಹೆಸರಿನಿಂದಲೇ ನಡೆಯುತ್ತದೆ. ಇದರಿಂದ ರಾಷ್ಟ್ರಪತಿಯನ್ನು ಇಂಗ್ಲೆಂಡಿನ ರಾಜನಿಗೆ ಹೋಲಿಸಬಹುದಾದರೂ ಸ್ಥಾನಗೌರವದಿಂದ ಭಾರತೀಯ ರಾಷ್ಟ್ರಪತಿಯು ಇಂಗ್ಲೆಂಡಿನ ರಾಜನಿಗಿಂತಲೂ ಹೆಚ್ಚು ಮಾನ್ಯನಾಗಿದ್ದಾನೆ. ರಾಷ್ಟ್ರಪತಿಯನ್ನು ಕೇಂದ್ರ ಶಾಸನ ಸಭೆಗಳ ಮತ್ತು ರಾಜ್ಯ ಶಾಸನ ಸಭೆಗಳ ಪ್ರತಿನಿಧಿಗಳು ಆರಿಸುತ್ತಾರೆ. ಐದು ವರ್ಷಕ್ಕೊಮ್ಮೆ ಹೊಸ ರಾಷ್ಟ್ರಪತಿಯು ಚುನಾವಣೆಯಾಗಬೇಕು. ಈ ಕಾಲಾವಧಿಯಲ್ಲಿ ರಾಷ್ಟ್ರಪತಿಯು ಸಂವಿಧಾನಕ್ಕೆ ವಿರುದ್ಧವಾಗಿ ನಡೆದರೆ ಅವನನ್ನು ಪದಚ್ಯುತನನ್ನಾಗಿ ಮಾಡುವ ಅಧಿಕಾರವು ಶಾಸನ ಸಭೆಗಳಿಗಿದೆ.

ಸಂವಿಧಾನವು ಉಪರಾಷ್ಟ್ರಪತಿಗೆ ಸ್ಥಾನವನ್ನು ಕಲ್ಪಿಸಿದೆ. ಉಪರಾಷ್ಟ್ರಪತಿಯು ಕೇಂದ್ರಶಾಸನ ಸಭೆಗಳ ಸದಸ್ಯರಿಂದ ಚುನಾಯಿತನಾಗುತ್ತಾನೆ. ಕೇಂದ್ರ ಶಾಸನ ಸಭೆಯ ಪರಿಷತ್ ಸಭೆ (ಅಪ್ಪರ್ ಹೌಸ್)ಗೆ ಉಪ ರಾಷ್ಟ್ರಪತಿಯು ಸ್ಥಾನಗೌರವದಿಂದ ಅಧ್ಯಕ್ಷನಾಗುತ್ತಾನೆ. ರಾಷ್ಟ್ರಪತಿಯು ಅನಿವಾರ್ಯ ಕಾರಣಗಳಿಂದ ಅಧಿಕಾರ ಸ್ಥಾನದಲ್ಲಿರಲು ಅಶಕ್ತನಾದರೆ ಉಪರಾಷ್ಟ್ರಪತಿಯು ರಾಷ್ಟ್ರಪತಿಯ ಅಧಿಕಾರಗಳನ್ನು ತಾತ್ಕಾಲಿಕವಾಗಿ ಚಲಾಯಿಸುತ್ತಾನೆ. ರಾಷ್ಟ್ರಪತಿ [illegible]

THE JUBILEE INSURANCE CO., Ltd.

One of the very few in the feild of Insurance that has been declaring BONUS to its policy holders from its very insception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-C., Richmond Road, Bangalore.

Our Chief Agents:- THE ORIENTAL ENTERPRISES, BANGALORE 1.

ಜುಬಿಲಿ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದದಿನದಿಂದಲೂ ವಿಮೆದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:-ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,
41-C, ರಿಚ್‌ಮಂಡ್ ರೋಡ್, ಬೆಂಗಳೂರು 1.

25

ಲೆಯೇ ವರ್ಗಿಸಲಹುದಾದ್ದರಿಂದ ಜನತಾ ಪ್ರತಿನಿಧಿಗಳಿರುವ ಲೋಕಸಭೆ (ಲೋವರ್ ಹೌಸ್)ಗೆ ಜವಾಬ್ದಾರರಾದ ಮಂತ್ರಿಗಳ ಅಭಿಪ್ರಾಯದಂತೆ ವರ್ತಿಸುವುದರಿಂದ ರಾಷ್ಟ್ರಪತಿಯು ಜನಾಭಿಪ್ರಾಯವನ್ನು ಅಲ್ಲಗಳೆಯಲು ಅಸಾಧ್ಯವೆಂತಾಯಿತು.

ಕೇಂದ್ರ ಶಾಸನಸಭೆಯಲ್ಲಿ ರಾಷ್ಟ್ರಪತಿಯು ದೊಡಗೂಡಿದ ವರಿಷ್ಟ ಸಭೆ ಅಥವಾ ರಾಜ್ಯಪರಿಷತ್ತು (ಕೌನ್ಸಿಲ್ ಅಫ್ ಸ್ಟೇಟ್ ಯಾ ಅಪ್ಪರ್ ಹೌಸ್) ಮತ್ತು ಲೋಕಸಭೆಯೆಂಬ ಪ್ರಜಾಪ್ರತಿನಿಧಿ ಸಭೆಯೂ ಅಡಕವಾಗಿವೆ. ರಾಜ್ಯ ಪರಿಷತ್ತಿನಲ್ಲಿ ೨೫೦ ಸದಸ್ಯರಿರುವರು. ಇವರಲ್ಲಿ ೧೨ ಜನರನ್ನು ರಾಷ್ಟ್ರಪತಿಯು ನಿಯಮಿಸುವನು. ಉಳಿದ ಸದಸ್ಯರು ವಿವಿಧ ರಾಜ್ಯಗಳ ಪ್ರತಿನಿಧಿಗಳಾಗಿರುವರು. ರಾಜ್ಯಪರಿಷತ್ತು ಶಾಶ್ವತ ಸಭೆಯಾಗಿದ್ದು ಇದರ ೩ನೇ ಒಂದು ಭಾಗದ ಸದಸ್ಯರು ಎರಡು ವರ್ಷಗಳಿಗೊಮ್ಮೆ ನಿವೃತ್ತರಾಗುವರು. ಲೋಕಸಭೆಯಲ್ಲಿ ರಾಷ್ಟ್ರದಾದ್ಯಂತ ಪ್ರೌಢ ಮತದಾನ ಪದ್ಧತಿಗನ್ವಯಿಸಿ ಚುನಾಯಿತರಾದ ೫೦೦ಕ್ಕಿಂತ ಹೆಚ್ಚಿಲ್ಲದ ಜನತಾ ಪ್ರತಿನಿಧಿಗಳಿರುವರು. ಲೋಕಸಭೆಯು ಐದು ವರ್ಷಕ್ಕೊಮ್ಮೆ ವಿಸರ್ಜಿಸಲ್ಪಟ್ಟು ಹೊಸ ಲೋಕಸಭೆಯು ರೂಪುಗೊಳ್ಳುವುದು.

ಕೇಂದ್ರ ಶಾಸನ ಸಭೆಗಳಿಗೂ ರಾಜ್ಯ ಶಾಸನ ಸಭೆಗಳಿಗೂ ಪ್ರತಿನಿಧಿಗಳನ್ನು ಆರಿಸುವಾಗ ಚುನಾವಣೆಯು ನಿಷ್ಪಕ್ಷಪಾತವಾಗಿಯೂ ಶಾಸನಬದ್ಧವಾಗಿಯೂ ನಡೆಯುವಂತೆ ಒಬ್ಬ ಮಹಾ ಚುನಾವಣಾಧಿಕಾರಿಯನ್ನು ರಾಷ್ಟ್ರಪತಿಯು ನಿಯಮಿಸುವನು. ಮಹಾ ಚುನಾವಣಾಧಿಕಾರಿ ತನ್ನ ಕ್ಷೇತ್ರದಲ್ಲಿ ಸ್ವತಂತ್ರನಾಗಿದ್ದು ನಿಷ್ಪಕ್ಷಪಾತವಾಗಿ ಚುನಾವಣೆಗಳು ನಡೆಯುವಂತೆ ನೋಡಿಕೊಳ್ಳುವನು. ಭಾರತದಲ್ಲಿ ಹಿಂದೆ ಆಚರಣೆಯಲ್ಲಿದ್ದ ಜಾತೀಯ ಚುನಾವಣಾ ಕ್ಷೇತ್ರಗಳು ವಿಸರ್ಜಿತವಾಗಿ ಪ್ರೌಢ ಮತದಾನ ಪದ್ಧತಿಗನುಸರಿಸಿದ ಸಾರ್ವತ್ರಿಕ ರೀತಿಯ ಚುನಾವಣೆಯು ನಡೆಯುವುದು.

ಶಾಸನ ಸಭೆಗಳಲ್ಲಿ ಯಾವುದಾದರೊಂದು ಶಾಸನವು ಜಾರಿಗೆ ಬರಬೇಕಾದರೆ ಆ ಮಸೂದೆಗಳು ಲೋಕಸಭೆ ಅಥವಾ ರಾಜ್ಯಪರಿಷತ್ತಿನಲ್ಲಿ ಮಂಡಿಸಲ್ಪಟ್ಟು ಎರಡು ಸಭೆಗಳಿಂದಲೂ ಚರ್ಚಿಸಲ್ಪಟ್ಟು ಒಪ್ಪಿಗೆ ಪಡೆದು ರಾಷ್ಟ್ರಪತಿಯಿಂದ ಅಂಗೀಕೃತವಾಗಬೇಕು. ಹಣಕಾಸಿನ ವಿಷಯ ಮಸೂದೆಗಳು ಮಾತ್ರ ಲೋಕಸಭೆಯಲ್ಲೇ ಮಂಡಿಸಲ್ಪಡಬೇಕು. ಇತರ ಯಾವುದಾದರೂ ಸಮಸ್ಯೆಗಳ ಮಸೂದೆಯು ಯಾವುದಾದರೊಂದು ಸಭೆಯಲ್ಲಿ ಮಂಡಿಸಲ್ಪಟ್ಟು ಎರಡು ಸಭೆಗಳೂ ಚರ್ಚಿಸಿದಾಗ ಒಂದು ಸಭೆಯ ಅಭಿಪ್ರಾಯವು ಮತ್ತೊಂದಕ್ಕೆ ವಿರುದ್ಧವಾದರೆ ರಾಷ್ಟ್ರಪತಿಯು ಎರಡು ಸಭೆಗಳ ಸಂಯುಕ್ತ ಅಧಿವೇಶನವನ್ನು ಕರೆದು ಎರಡು ಸಭೆಗಳಲ್ಲಿ ಬಹುಮತಾಭಿಪ್ರಾಯವನ್ನು ತೆಗೆದು ಮಸೂದೆಯನ್ನು ಅಂಗೀಕರಿಸಿ ಶಾಸನವನ್ನಾಗಿ ಮಾಡಬಹುದು. ಹಣಕಾಸಿನ ಮಸೂದೆಗಳು ಮಾತ್ರ ಲೋಕಸಭೆಯಲ್ಲೇ ಮಂಡಿಸಲ್ಪಟ್ಟು ಅಂಗೀಕೃತವಾಗಿ ರಾಜ್ಯಪರಿಷತ್ತಿಗೆ ರವಾನಿಸಲ್ಪಡಬೇಕು. ಒಂದು ವೇಳೆ ರಾಜ್ಯಪರಿಷತ್ತಿನ ಸದಸ್ಯರು ಮಸೂದೆಯ ಮೇಲೆ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದರೂ ಲೋಕಸಭೆಯ ತೀರ್ಮಾನವೇ ಕೊನೆಯದಾಗಿರುವುದು. [ಶೇಷ]

ಜನತೆಗೆ ಕಾಂಗ್ರೆಸ್ ಅಧ್ಯಕ್ಷರ ಕರೆ.

ರಾಷ್ಟ್ರದ ದಾರಿದ್ರ್ಯ ಪರಿಹಾರಕ್ಕಾಗಿ ಜನತೆಯು ಸರ್ಕಾರದೊಡನೆ ಸಹಕಾರದಿಂದ ಶ್ರಮಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷ ಪಂಡಿತ ಜವಾಹರಲಾಲ್ ನೆಹರೂರವರು ತಾ: ೧೩ರಲ್ಲಿ ಇಂದೂರಿನಲ್ಲಿ ಎ. ಐ. ಸಿ. ಸಿ. ಅಧಿವೇಶನದಲ್ಲಿ ಧ್ವಜಾರೋಹಣ ಮಾಡುತ್ತಾ ಹೇಳಿದರು.

'ಚಂದ್ರಶೇಖರ ನಗರ'ದಲ್ಲಿ ನಡೆದ ಈ ಸಮಾರಂಭಕ್ಕಾಗಿ ಸೇರಿದ್ದ ಮಹಾ ಜನಸಮುದಾಯವನ್ನುದ್ದೇಶಿಸಿ ಭಾಷಣ ಮಾಡುತ್ತಾ, ಪಂಡಿತ ನೆಹರೂರವರು, 'ಕೇವಲ ಭಾಷಣಗಳು ಅಥವಾ ನಿರ್ಣಯಗಳಿಂದ ರಾಷ್ಟ್ರದ ಉದ್ಧಾರವಾಗುವುದಿಲ್ಲ ಅಥವಾ ಸರ್ಕಾರವನ್ನು ಖಂಡಿಸುವುದರಿಂದಲೇ ಕೂಡ ಯಾವ ಸಹಾಯವೂ ಆಗದು' ಎಂದು ಒತ್ತಿ ನುಡಿದರು.

ಸರ್ಕಾರದವರು ತಪ್ಪು ಮಾಡಿದಾಗ ಅದನ್ನು ಎತ್ತಿ ತೋರಿಸಿ ಅವರಿಗೆ ಪಾಠ ಕಲಿಸಬೇಕಾದು ಪ್ರತಿಯೊಬ್ಬರ ಕರ್ತವ್ಯ. ಆದರೆ ಪ್ರತಿಯೊಬ್ಬ ಪ್ರಜೆಯೂ ದೇಶಕ್ಕಾಗಿ ಏನ ಮಾಡುತ್ತಿದ್ದಾನೆಂಬುದೂ ಅಷ್ಟೇ ಪ್ರಮುಖವಾದುದು. ಪ್ರತಿ ಪ್ರಜೆಯೂ ಮಾಡುವ ಕೆಲಸವೇ ಕೊನೆಗೆ ಲೆಕ್ಕಕ್ಕೆ ಬರುವುದು. ಪ್ರತಿಯೊಬ್ಬ ಪ್ರಜೆಯೂ ಏನಾದರೂ ಸ್ವಲ್ಪವಾದರೂ ದೇಶಕ್ಕಾಗಿ ದುಡಿದರೂ ಅದರಿಂದ ಮಹತ್ತರ ಪ್ರತಿಫಲ ಆಗುವುದು' ಎಂದೂ ನೆಹರೂ ಹೇಳಿದರು.

ಕಾಂಗ್ರೆಸ್ ಧ್ವಜವು ರಾಷ್ಟ್ರೀಯ ಗೌರವ ಪ್ರತಿಷ್ಠೆಗಳ ಸಂಕೇತವಷ್ಟೇ ಅಲ್ಲ, ರಾಷ್ಟ್ರಾಭಿವೃದ್ಧಿಗೆ ಸಮಸ್ತ ಜನರ ಸಂಯುಕ್ತ ಪ್ರಯತ್ನದ ಲಾಂಛನವೂ ಹೌದು—ಎಂಬುದಾಗಿ ನೆಹರೂ ನುಡಿದರು. ಭಾರತದ ಎಲ್ಲಾ ಭಾಗಗಳ ಎಲ್ಲಾ ಜನತೆಯ ಆಶೆ ಆಕಾಂಕ್ಷೆಗಳ ಪ್ರತೀಕವೆಂದೂ ಹೇಳಿದರು. ಧ್ವಜ ವಂದನೆಯ ಸಂದರ್ಭದಲ್ಲಿ ಜನರು ರಾಷ್ಟ್ರದ ಸಮಸ್ಯೆಗಳನ್ನು ನಿವಾರಿಸಲು ಶ್ರಮಪೂರ್ಣ ಸೇವೆ ಸಲ್ಲಿಸುವುದಾಗಿ ಪ್ರತಿಜ್ಞೆ ತೊಡಬೇಕೆಂದೂ ನೆಹರೂ ಪ್ರಾರ್ಥಿಸಿದರು

'ಭವಿಷ್ಯ ಅಭಿವೃದ್ಧಿಯ ಅಡಿಪಾಯವನ್ನೀಗಾಗಲೇ ಹಾಕಿದೆ. ಆದರೆ ಇದು ಕಣ್ಣಿಗೆ ಕಾಣದಿರಬಹುದು, ಏಕೆಂದರೆ ಯಾವಾಗಲೂ ಅಡಿಪಾಯಗಳು ಭೂಮಿ ಒಳಗಡೆ ಇರುವವೇ ಹೊರತು ಮೇಲಲ್ಲ ಕಾಣುವವು. ಆದರೂ ಭದ್ರವಾದ ಅಡಿಪಾಯಗಳ ಮೇಲೇ ಅಭ್ಯುದಯವನ್ನು ನಿರ್ಮಿಸುವುದು ಸಾಧ್ಯ' ಎಂದೂ ನೆಹರೂ ನುಡಿದರು.

—o0o—

— ನಿಮಗೆ ಅತ್ಯಂತ ಲಾಭದಾಯಕವಾಗಿ —
ವಿಮೆ ಮಾಡಲೂ ಅಥವಾ ಪ್ರತಿನಿಧಿಸಲೂ
ಇಂಡಿಯಾದ ಅತ್ಯಂತ ಹಳೆಯ ಮತ್ತು ಸುಭದ್ರತೆಯ ವಿಮಾ ಸಂಸ್ಥೆ.
ದಿ ಬಾಂಬೆ ಮ್ಯೂಚುವಲ್ ಲೈಫ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.
[ಸ್ಥಾಪನೆ 1871]
ವಿವರಗಳಿಗೆ ಬರೆಯಿರಿ:—ಬ್ರಾಂಚ್ ಸೆಕ್ರೆಟರಿ,
172-3 ನರಸಿಂಹ ರಾಜಾ ರಸ್ತೆ (P. B. 186),
12-3 ಬೆಂಗಳೂರು 2, ಅಥವಾ ಫೋನ್ ಮಾಡಿ-3624.

ಕಾಶ್ಮೀರ ಸಮಸ್ಯೆ ಬಿಡಿಸಲ್ಪಡಲಿಲ್ಲ.

ಕಾಶ್ಮೀರ ಪ್ರಕರಣದಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ಬಿಡಿಸುವುದಕ್ಕಾಗಿ ಭಾರತ ಪಾಕಿಸ್ಥಾನಗಳ ಮಂತ್ರಿಗಳ ಸಂಯುಕ್ತ ಸಭೆಯನ್ನು ಡಾ. ಗ್ರಹಾಮರು ಜಿನೀವಾದಲ್ಲಿ ಕರೆದಿದ್ದರಷ್ಟೆ. ಆ ಸಭೆಗೆ ಭಾರತದ ಪರವಾಗಿ ಶ್ರೀ. ಗೋಪಾಲಸ್ವಾಮಿ ಅಯ್ಯಂಗಾರರ ಮುಖಂಡತ್ವದಲ್ಲಿ ಭಾರತದ ಪ್ರತಿನಿಧಿ ಮಂಡಳವೂ ಪಾಕಿಸ್ಥಾನದ ಪರವಾಗಿ ಸರ್ ಜಫರುಲ್ಲಾಖಾನರ ಮುಖಂಡತ್ವದಲ್ಲಿ ಒಂದು ಪ್ರತಿನಿಧಿ ಮಂಡಲವೂ ಹೋಗಿದ್ದರು. ಡಾ. ಗ್ರಹಾಮರು ಈ ಇಬ್ಬರು ಮಂತ್ರಿಗಳೊಡನೆ ಒಟ್ಟಿನಲ್ಲಿ ಕೆಲವಲ್ಲ, ಪ್ರತ್ಯೇಕವಾಗಿ ಕೆಲವು ಮಾತುಕತೆ ನಡಸಿದರು. ಮಾತುಕತೆಗಳ ಸ್ನೇಹಮಯ ವಾತಾವರಣದಲ್ಲಿ ನಡೆದವು. ಆದರೆ ಮೂಲ ಪ್ರಶ್ನೆ ಅಂದರೆ ನಿಸ್ಸೈನೀಕರಣ ರೀತಿಯು ಎರಡೂ ಕಡೆಗಳಲ್ಲಿ ಈ ಎರಡೂ ರಾಷ್ಟ್ರಗಳ ಸೈನ್ಯದ ಪ್ರಮಾಣವೆಷ್ಟಿರಬೇಕೆಂಬ ಪ್ರಶ್ನೆಯ ಬಗ್ಗೆ ಕೊನೆಗೂ ಒಮ್ಮತವಾಗಲಿಲ್ಲ.

ಇದೇ ಸಂದರ್ಭದಲ್ಲಿ ಆಕ್ರಮಿತ ಕಾಶ್ಮೀರದಲ್ಲಿ ಬೀಡು ಬಿಟ್ಟಿರುವ ಪಾಕಿಸ್ಥಾನ ಸೈನ್ಯವನ್ನು ಹಿಂತೆಗೆದುಕೊಂಡ ನಂತರ ಅಲ್ಲಿಯ ಆಡಳಿತವನ್ನು ಯಾರು ವಹಿಸಬೇಕೆಂಬ ಬಗ್ಗೆ ಚರ್ಚೆ ನಡೆದಾಗ ರಾ. ರಾ. ಸಂಘದಿಂದ ನೇಮಿಸಲ್ಪಟ್ಟ ಅಧಿಕಾರಿಗಳು ಅಲ್ಲಿಯ ಆಡಳಿತವನ್ನು ನೋಡಿಕೊಳ್ಳಬೇಕು ಎಂದು ಭಾರತ ಸರಕಾರದ ಅಭಿಪ್ರಾಯವಿತ್ತು. ಸ್ಥಳೀಕ ಅಧಿಕಾರಿಗಳು ನೋಡಿಕೊಳ್ಳಬೇಕೆಂದು ಪಾಕಿಸ್ಥಾನದ ಹೇಳಿಕೆಯಿತ್ತು. ಹೀಗಾಗಿ ಆ ಪ್ರಶ್ನೆಯೂ ಅನಿರ್ಣೀತವಾಗಿಯೇ ಉಳಿಯಿತು.

ಕೊನೆಗೆ ಎರಡು ವಾರಗಳ ವರೆಗೆ ನಡೆದ ಈ ಪರಿಷತ್ತಿನಿಂದ ಯಾವುದೇ ಪ್ರಯೋಜನವಾಗದೆ ಪರಿಷತ್ತು ಕೊನೆಗೊಂಡಿತು. ಭಾರತದ ಶ್ರೀ. ಗೋಪಾಲಸ್ವಾಮಿ ಅಯ್ಯಂಗಾರರು ಕೂಡಲೇ ಭಾರತಕ್ಕೆ ಹೊರಟು ಬಂದರು.

ಡಾ. ಗ್ರಹಾಮರು ಅಲ್ಲಿಯೇ ಕೆಲದಿನಗಳ ವರೆಗೆ ಉಳಿದುಕೊಂಡು ಜಾಗತಿಕ ಭದ್ರತಾ ಮಂಡಳಕ್ಕೆ ತಾವು ಒಪ್ಪಿಸಲಿರುವ ವರದಿಯನ್ನು ಸಿದ್ಧಪಡಿಸುವರು.

ಕಾಂಗ್ರೆಸ್ ಶಾಸನ ಸಭಾ ಸದಸ್ಯರ ಪರಿಷತ್ತು.

ಕಾಂಗ್ರೆಸಿಗರು ತಮ್ಮ ಕರ್ತವ್ಯವನ್ನು ಮಾಡುವಾಗ ನಿಕಟ ಸಹಕಾರವು ಅತ್ಯವಶ್ಯವಿದೆಯೆಂದೂ, ಪಾರ್ಲಿಮೆಂಟರಿ ಪಕ್ಷ ಹಾಗೂ ಕಾಂಗ್ರೆಸ್ ವಿಧಾಯಕ ಕೆಲಸ ಮಾಡುವವರ ಪಕ್ಷ ಇವುಗಳ ನಡುವೆ ಇರುವ ಭೇದವನ್ನು ಮರೆಯಬೇಕೆಂದೂ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ತಾ. ೧೨ ರಲ್ಲಿ ಇಂದೂರಿನಲ್ಲಿ ನಡೆದ ಸುಮಾರು ೪೦೦ ಕಾಂಗ್ರೆಸ್ ಶಾಸನ ಸಭಾಸದರ ಪರಿಷತ್ತಿನಲ್ಲಿ ಹೇಳಿದರು. ಕಾಂಗ್ರೆಸಿಗರು ಹೆಗೆ ಹೆಗಲು ಹಚ್ಚಿ ಮುನ್ನುಗ್ಗಬೇಕೆಂದೂ ಅವರು ಹೇಳಿದರು.

'ಕೇಂದ್ರದಲ್ಲಿಯೂ, ರಾಜ್ಯಗಳಲ್ಲಿಯೂ ಕಾಂಗ್ರೆಸ್ ಶಾಸನ ಸಭಾ ಪಕ್ಷಗಳಿರುವುದರಿಂದ ಅವುಗಳ ನಡುವೆ ಸಂಪರ್ಕವನ್ನಿಡುವುದಕ್ಕಾಗಿ ಪಾರ್ಲಿಮೆಂಟಿನಲ್ಲಿಯ ಕಾಂಗ್ರೆಸ್ ಪಕ್ಷ ಕಚೇರಿಯು ಒಂದು ಅಂಗವನ್ನು ರಚಿಸಿ, ಪಾರ್ಲಿಮೆಂಟರಿ ಕಾರ್ಯಕ್ಕಾಗಿ ನಿಯಮಗಳನ್ನು ಹಾಕಿ ಸಿಸ್ತುಬದ್ಧ ಪಕ್ಷವನ್ನು ಕಟ್ಟಬೇಕು.

'ಪ್ರತಿಯೊಂದು ಕಾಂಗ್ರೆಸ್ ಶಾಸನ ಸಭಾ ಪಕ್ಷಕ್ಕೆ ಸುವ್ಯವಸ್ಥಿತ ಕಚೇರಿ ಇರಬೇಕು.

'ತಮ್ಮ ಶಾಸನ ಕಾರ್ಯದಲ್ಲಿ ಪಕ್ಷದ ಸದಸ್ಯರಿಗೆ ಸಹಾಯಕವಾಗುವಂತೆ ಒಂದು ಮಾರ್ಗದರ್ಶಕ ಮಂಡಳವಿರಬೇಕು. ಮಹತ್ವದ ಪ್ರಶ್ನೆಗಳ ಬಗ್ಗೆ ಅವಶ್ಯಕವಾದ ವಿಷಯಗಳನ್ನು ಸಂಗ್ರಹಿಸಿ ಪ್ರಕಟಿಸಬೇಕು. ಸದಸ್ಯರು ಮೇಲಿಂದ ಮೇಲೆ ತಮ್ಮ ಮತ ಕ್ಷೇತ್ರಗಳಿಗೆ ಸಂದರ್ಶನವಿತ್ತು ಸಮಸ್ಯಾ ಪರಿಹಾರದಲ್ಲಿ ಸಹಾಯಕರಾಗಬೇಕು. ಶಕ್ಯವಾದರೆ ಸದಸ್ಯರು ಪ್ರದೇಶ ಕಾಂಗ್ರೆಸ್ ಸಮಿತಿ ಸಹಕಾರದೊಂದಿಗೆ ಬೇರೆ ಮತ ಕ್ಷೇತ್ರಗಳಿಗೂ ಸಂದರ್ಶನವೀಯಬೇಕು.

'ಆಡಳಿತ ಕಾರ್ಯದ ಪರಿಶೀಲನೆಗಾಗಿ ಅನುಭವ ವಿನಿಮಯಕ್ಕಾಗಿ ಧುರೀಣರೂ, ಕಾರ್ಯದರ್ಶಿಗಳೂ, ಕಾಂಗ್ರೆಸದ ಪ್ರತೋದರರೂ ಸಮಸ್ಯೆಗಳನ್ನು ಚರ್ಚಿಸುವುದಕ್ಕೋಸುಗ ಸಭೆ ಸೇರಬೇಕು.

ಚುನಾವಣೆಯಲ್ಲಿ ಜನತೆಯ ಮೇಲೆ ಕಾಂಗ್ರೆಸಿನ ಪ್ರಭಾವ ಬಿದ್ದಿರುವದರಿಂದ ಜನತೆಯಲ್ಲಿ ಚೇತನವನ್ನು ತುಂಬುವದರ ಸಲುವಾಗಿ ಕಾಂಗ್ರೆಸ ಸರಕಾರಗಳು ತಮ್ಮ ರಾಜ್ಯಗಳಲ್ಲಿ ಮಾಡುತ್ತಿರುವ ಕಾರ್ಯಗಳನ್ನು ನಿರೂಪಿಸುವದಕ್ಕಾಗಿ ಒಂದು ಪತ್ರಿಕೆಯನ್ನು ಕಾಂಗ್ರೆಸು ಪ್ರಕಾಶಿ ಹೊರಡಿಸಬೇಕು.

॥ ಇಂದಿನ ನೈತಿಕ ಮಟ್ಟದ ಅಧೋಗತಿ! ॥

ಹಿಂದಕ್ಕೆ, ನಮ್ಮ ಸಾಮಾಜಿಕ ಜೀವನದಲ್ಲಿ ಪ್ರಾಮಾಣಿಕತನ, ವಿಶ್ವಾಸ, ಸತ್ಶೀಲ ಮೊದಲಾದ ಸದ್ಗುಣಗಳು ಎಲ್ಲೆಲ್ಲಿಯೂ ಎದ್ದು ಕಾಣುತ್ತಿದ್ದವು. ಇದೇನೂ ನೂರಾರು ವರ್ಷಗಳ ಹಿಂದಿನ ಮಾತಲ್ಲ. ಈ ಶತಮಾನದ ಮೊದಲಿನ ಇಪ್ಪತ್ತು ವರ್ಷಗಳು ಮುಗಿಯುವ ವರೆಗೂ ಈ ಸದ್ಗುಣಗಳಿಂದ ನಮ್ಮ ಸಾಮಾಜಿಕ ಜೀವನವು ಪ್ರಶಾಂತವಾಗಿ ಸಾಗಿತ್ತು.

ಜನರಿಗೆ ಕಳ್ಳಕಾಕರ ಹೆದರಿಕೆ ಅಷ್ಟೊಂದಿದ್ದಿಲ್ಲ. ಮನೆಗಳಿಗೆ ಕೀಲಿ ಕುಲುಪೆಗಳು ಕೂಡ ಇರುತ್ತಿದ್ದಿಲ್ಲ. ಮನೆಗೆ ಚಿಲಕ ಹಾಕಿ ಹೊಲ ಗದ್ದೆಗಳಿಗೂ ಎಂಟೆಂಟು ದಿವಸ ಪರ ಊರಿಗೂ ಪ್ರಯಾಣ ಹೋಗುತ್ತಿದ್ದರೂ ಅವರಿಗೆ ತಮ್ಮ ಮನೆಯ, ಮನೆಯೊಳಗಿನ ಆಸ್ತಿಯ ಸುರಕ್ಷಿತತೆಯ ಬಗ್ಗೆ ಯೋಚನೆ ಇರುತ್ತಿದ್ದಿಲ್ಲ.

ಹಣ ಕೊಡುವುದೂ ತೆಗೆದುಕೊಳ್ಳುವುದೂ ಬಾಯಿಮಾತಿನಿಂದಲೇ ನಡೆಯುತ್ತಿತ್ತು; ಕಾಗದ ಪತ್ರಗಳ ಅಥವಾ ಸ್ಟಾಂಪು ನೋಂದಣಿಗಳ ಆವಶ್ಯಕತೆ ಅಷ್ಟೊಂದು ಅನಿಸುತ್ತಿದ್ದಿಲ್ಲ. ಪ್ರಾಣಹೋದರೂ ಸುಳ್ಳು ಆಡಬಾರದೆಂಬ [illegible] ಬದ್ಧರಾಗುತ್ತಿದ್ದ. ಆದ್ದರಿಂದ ಕಾರಣವೇನಿದ್ದರೂ ನ್ಯಾಯ ನೀತಿಗಳ ಕಟ್ಟಿಗೆ ಅವರು ಬದ್ಧರಾಗಿದ್ದರು.

ಬಾಲ್ಯದಿಂದಲೇ ಮನಸ್ಸಿನಲ್ಲಿ ಆ ನೀತಿಯ ಕಲ್ಪನೆ ಇಳಿಯುವುದು ನಡೆಯುತ್ತಿತ್ತು. ಶಾಯಿದೆ ಕಾನೂನುಗಳ ಸಹಾಯವಿಲ್ಲದೆ ಪ್ರಾರಂಭವಾಯಿತು. ಕಾಯಿದೆಗಳೂ ಕಟ್ಟು ಕಟ್ಟಳೆಗಳೂ ಹೆಚ್ಚುತ್ತ ಸಾಗಿದಂತೆ ಅವುಗಳ ಉಲ್ಲಂಘನೆಯೂ ಬೆಳೆಯುತ್ತ ನಡೆಯಿತು. ಹೀಗಾಗಿ ಇಂದು ಹೆಜ್ಜೆಗೊಂದು ಕಾಯಿದೆ, ಮಾತಿಗೊಂದು ಆಜ್ಞೆ ಹೊರಡುತ್ತಿರುವವಾದರೂ ನೀತಿಯ ಮಟ್ಟ ಮಾತ್ರ ತೀರ ಅಧಃಪತನ ಹೊಂದಿದೆಯೆಂಬುದನ್ನು ಯಾರೂ ಅಲ್ಲಗಳೆಯಲಾರರು.

ದುರ್ದೈವದ ಸಂಗತಿಯೆಂದರೆ ಇದೆಲ್ಲವೂ ನಡೆಯುದು ಸಾಧಾರಣೆಯ ಹೆಸರಿನಲ್ಲಿ! ಹಿಂದಕ್ಕೆ ಈ ಶತಮಾನದ ಆದಿಯಲ್ಲಿ ನಮ್ಮಲ್ಲಿ ಇಷ್ಟು ಸುಧಾರಣೆಯಾಗಿದ್ದಿಲ್ಲ, ಆದರೆ ನೀತಿಯ ಮಟ್ಟ ಮಾತ್ರ ಖಂಡಿತವಾಗಿ ಬಹಳಷ್ಟು ಮೇಲ್ಮಟ್ಟದಲ್ಲಿತ್ತು. ಆದರೆ ಸಮಾಜ ಸುಧಾರಣೆಯು ಹೆಚ್ಚೆಚ್ಚು ಆಗುತ್ತ ನಡೆದಂತೆ ನೀತಿಮತ್ತೆ ಮಾತ್ರ ಹೆಚ್ಚೆಚ್ಚು ಕಳಕ್ಕಿಳಿಯಹತ್ತಿ, ಸಾಮಾಜಿಕ ಸುಧಾರಣೆಯೆಂದರೆ ಬಾಹ್ಯಾಡಂಬರ, ಪ್ರದರ್ಶನಕ್ಕಾಗಿ ಹಾಕುವ ಸೋಗು ಎಂದೆನ್ನುವ ಪರಿಸ್ಥಿತಿ ಬಂದೊದಗಿದೆ.

ದೇಶದಲ್ಲಿಯ ಆರ್ಥಿಕ ದುಸ್ಥಿತಿಯು ಈ ತರಹದ ನೈತಿಕ ಅವನತಿಗೆ ಕಾರಣವಾಗಿದೆಯೆಂದು ಹಲವರು ಅನ್ನಬಹುದು. ಆದರೆ ಹಿಂದಿನಕ್ಕಿಂತಲೂ ಇಂದು ಜನಸಾಮಾನ್ಯರ ಆರ್ಥಿಕ ಸ್ಥಿತಿಯಲ್ಲಿ ಸ್ವಲ್ಪವಾದರೂ ಸುಧಾರಣೆಯಾಗಿದೆ. ಶಿಕ್ಷಣ ಕ್ಷೇತ್ರದಲ್ಲಿಯೂ ಪ್ರಗತಿಯಾಗಿದೆ. ಇಷ್ಟೇ ಅಲ್ಲವೆ, ಅಂದು ಆರ್ಥಿಕ ದೃಷ್ಟಿಯಿಂದ ತೀರ ಹೀನಸ್ಥಿತಿಯಲ್ಲಿದ್ದವರು ಕೂಡ ಪಾಪದ ಕೆಲಸಕ್ಕೆ, ಅನ್ಯಾಯ, ಅಪ್ರಾಮಾಣಿಕತನ, ಅಸತ್ಯ ಬರಿಗಳಿಗೆ ಹೇಸುತ್ತಿದ್ದರು. ಆದರೆ ಈಗ ಎಲ್ಲವೂ ವಿಪರೀತ!

ಇಂದಿನ ಪರಿಸ್ಥಿತಿಯನ್ನೇ ವಿಚಾರಿಸೋಣ. ಸಾವಿರಾರು ಸಂಬಳ, ಉಚ್ಚ ಅಧಿಕಾರ, ಸಮಾಜದಲ್ಲಿ ಅತ್ಯುನ್ನತವಾದ ಮನ್ನಣೆಯ ಸ್ಥಾನ ಇವೆಲ್ಲವೂ ಇದ್ದರೂ ಅಧಿಕಾರಿಗಳಲ್ಲಿ ಅನೇಕರು ಲಂಚಬಡುಕರಾಗುವದೇಕೆ? ಮೊನ್ನೆ ಮೊನ್ನಿನ ವರೆಗೆ ಮಹಾತ್ಯಾಗಿಗಳು, ಸತ್ಯಸಂಧರು, ನಿಷ್ಠಾವಿಗಳು ಎಂದು ಖ್ಯಾತರಾದವರು ಇಂದು ಕೈಗೆ ಬಂದ ಅಲ್ಪಸ್ವಲ್ಪ ಅಧಿಕಾರದ ಬಲದಿಂದ ಸಿಕ್ಕ ಮಾರ್ಗದಿಂದ ಹಣಗಳಿಸಲು ಹವಣಿಸುತ್ತಿರುವದೇಕೆ? ದೊಡ್ಡ ಅಧಿಕಾರಿಗಳು ಸಾವಿರಗಟ್ಲೆ, ಲಕ್ಷಗಟ್ಲೆ, ಲಂಚ ಹೊಡೆಯುವದನ್ನು ನೋಡಿ ಚಿಕ್ಕಪುಟ್ಟ ನೌಕರ ವರ್ಗವು ಯಥಾಶಕ್ತಿ, ಹತ್ತು, ಐವತ್ತು, ನೂರು ರೂಪಾಯಿಗಳ ಲಂಚ ಹೊಡೆಯುವದೇನೂ ಆಶ್ಚರ್ಯವಲ್ಲ.

ಇಂದು ಲಂಚಬಡುಕತನವೆಂದರೆ ಅದೊಂದು, ನೌಕರ ವರ್ಗದಲ್ಲಿ ಸಾಮಾನ್ಯವಾಗಿ ಕಂಡುಬರುವ ಸ್ವಭಾವ ವೈಗುಣ್ಯವೆಂದು ದುರ್ಲಕ್ಷಿಸಲ್ಪಡುತ್ತಿದೆ. ಆದರೆ ಅತಿರೇಕವಾದಾಗ, ಅಲ್ಲೊಂದು ಇಲ್ಲೊಂದು ಕಡೆ ಲಂಚಬಡುಕರನ್ನು ಹಿಡಿದು ದಂಡಿಸಲಾಗುತ್ತಿದೆ. ಆದರೆ ಇಷ್ಟರಿಂದಲೇ ಈ ಮಹಾರೋಗವು ಮಾಯವಾದೀತೆಂದು ಅನಿಸುವದಿಲ್ಲ. ಯಾಕೆಂದರೆ ಲಂಚಬಡುಕತನವು ಚಿಕ್ಕಪುಟ್ಟ ದುರ್ಗುಣವಲ್ಲ. ಅನೇಕ ದುರ್ಗುಣಗಳ ಸಮುಚ್ಚಯವೆಂದರೆ, ಲಂಚಬಡುಕತನ.

ತಾನು ದುಡಿಯುತ್ತಿರುವ ಸಂಸ್ಥೆಯ ಸೇವೆಗಾಗಿ, ಪ್ರಾಮಾಣಿಕ ನಿಷ್ಠೆಯಿಂದ ಮಾಡಬೇಕೆಂದು ನೌಕರನಿಗೆ, ಅವನು ಅಲ್ಪವೇತನದ ಕಾರಕೂನನೇ ಇರಲಿ, ಜವಾನನಿಗೆ ಸಂಬಳದ ಉಚ್ಚ ಅಧಿಕಾರಿಯೇ ಇರಲಿ, ಅವನಿಗೆ ಅವನನ್ನು ದುಡಿಸಿಕೊಳ್ಳುವ ಸಂಸ್ಥೆಯಾಗಲೀ ಸರಕಾರವಾಗಲೀ ವೇತನ ಕೊಡುತ್ತದೆ. ಆದರೆ ಆ ನೌಕರನು ಅಥವಾ ಅಧಿಕಾರಿಯು ತನಗೊಪ್ಪಿಸಿದ ಕೆಲಸದಲ್ಲಿ ಇನ್ನೊಬ್ಬನಿಗೆ ಯಾವುದೊಂದು ಕೃಪೆಮಾಡಿ ಅದಕ್ಕೆ ಪ್ರತಿಫಲವನ್ನು ತೆಗೆದುಕೊಳ್ಳುವದು ಅಧಿಕಾರದ ದುರುಪಯೋಗವಾಗಿದೆ. ವಿಶ್ವಾಸಘಾತ ಮಾಡಿದಂತಾಗುವದು. ತಾನು ಹೊಂದಿಕೊಂಡಿರುವ ಸಂಸ್ಥೆಗೆ ದ್ರೋಹಬಗೆದಂತಾಗುವದು. ತನ್ನ ಮಾಲೀಕರನ್ನು ವಂಚಿಸಿದಂತಾಗುವದು.

ಲಂಚವನ್ನು ಅದು ಹತ್ತೇ ರೂಪಾಯಿ ಇರಲಿ, ಲಕ್ಷ ರೂಪಾಯಿ ಇರಲಿ, ಹಣದ ರೂಪದಲ್ಲಿರಲಿ, ಸಾಧನ ಸಾಮಗ್ರಿಗಳ ರೂಪದಲ್ಲಿರಲಿ, ಸ್ವೀಕರಿಸುವದು ಘೋರ ಅಪರಾಧವೆನ್ನಿಸಿದಂತೆಂಬುದು ಅನೇಕರಿಗೆ ತಿಳಿದಿಲ್ಲ. ಇಂದು ಹಣದ ಮೌಲ್ಯವೇರಿದೆಯಲ್ಲವೆ, ನೀತಿನ್ಯಾಯಗಳ ಬೆಲೆ ಅದಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಇಳಿದಿದೆ. ಅಥವಾ ಹಣ ಹೊಂದಿದ್ದರೆ ಸಾಕು, ಗುಣಗಳ ಆವಶ್ಯಕತೆ ಇಲ್ಲವೆಂದು ಎಲ್ಲರೂ ಅನ್ನುವಂತಾಗಿದೆ.

ದುರ್ದೈವದ ಸಂಗತಿಯೆಂದರೆ, ಇಂಥ ಅಘೋರ ಅಪರಾಧಗಳನ್ನೆಸಗುತ್ತಿರುವ ಸಮಾಜದ್ರೋಹಿಗಳಿಗೆ ಸಮಾಜದಲ್ಲಿ ಎಲ್ಲಿಲ್ಲದ ಮಾನಮರ್ಯಾದೆ ದೊರೆಯುತ್ತಿದೆ. ಅದಕ್ಕೆ ಕಾರಣವೇನೆಂದರೆ ಅವನು ಗಳಿಸಿರುವ ಲಂಚದಲ್ಲಿಯ ಒಂದೆರಡು ತುಣುಕುಗಳನ್ನು ಯಾವುದೊಂದು ಸಾರ್ವಜನಿಕ ಸಂಸ್ಥೆಗೋ ನಿಧಿಗೋ ಲಂಚಬಡುಕನು ಕೊಡುವದರಿಂದ ಅವನು ಮಾಡಿದ ಪಾಪವೆಲ್ಲ ಮುಚ್ಚಿ ಹೋಗಿ ಅವನಿಗೆ ಎಲ್ಲಿಲ್ಲದ [illegible], ಕೊಡುಗೈದೊರೆ, ಉದಾರ ಕೃಪಾಳು ಎಂಬ ಸ್ತುತಿಸ್ತೋತ್ರಗಳ ಲಾಭವಾಗುತ್ತದೆ.

ಹೀಗೆ ಈ ಸಮಾಜವಿದ್ರೋಹಿಯು ಉಘೋ ಉಘೋ ನಡೆಯುವದನ್ನು ನೋಡಿ ಇತರರೂ ಆ ಥರದ ಅನುಕರಣ ಮಾಡುತ್ತಾರೆ. ಈ ರೀತಿಯಾಗಿ ಇಂದು ನಮ್ಮ ಸಾಮಾಜಿಕ ಜೀವನವು ಈ ಮಟ್ಟಕ್ಕೆ ಬಂದು ಮುಟ್ಟಿದೆ. ಈ ದುಸ್ಥಿತಿ ಹೀಗೇ ಸಾಗಿದರೆ ನಮ್ಮ ಸಮಾಜ ಪ್ರಜಾಜನ ಗತಿ ಏನು? ಸಮಾಜ ಪುರುಷನ ಈ ಸ್ಥಿತಿ ಯಾವ ರಾಷ್ಟ್ರಪುರುಷನ ಗತಿ?

ಮೊನ್ನಿನ ವರೆಗೆ ನಮ್ಮ ದುಸ್ಥಿತಿಗಾಗಿ ನಾವು ನಮ್ಮ ಮೇಲೆ ಆಡಳಿತ ನಡೆಸಿದ ಪರಕೀಯರನ್ನು ಹಳಿಯುತ್ತಿದ್ದೆವು. ಆದರೆ ಈಗ ನಾವು ಸ್ವತಂತ್ರರಾಗಿರುವೆವಾದರೂ ಆ ದುಸ್ಥಿತಿ ಹೋಗದಾಗಿದೆಯಲ್ಲ? ನಮ್ಮ ದೇಶದ ದುಸ್ಥಿತಿ ದೂರಾಗಿ ಭಾರತವು ಸಕಲೈಶ್ವರ್ಯ ಸಮೃದ್ಧವಾಗಬೇಕೆಂದು ನಮ್ಮ ಸರಕಾರವು ಅನೇಕಾನೇಕ ಪ್ರಗತಿಯ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸಿದೆ. ಆದರೆ ಸಮಾಜಪುರುಷನಲ್ಲಿ ಆಳವಾಗಿ ಬೇರೂರಿರುವ ಈ ದುರ್ಗುಣಗಳ ಉಚ್ಚಾಟನವಾಗುವ ವರೆಗೆ ಯಾವ ಯೋಜನೆಗಳಿಂದ ಏನ ಫಲ ದೊರೆತೀತು?

ಚಿತ್ತದ ಭ್ರಮಣಿಯಲ್ಲಿ ಕಾಲ, ಕಣಿಗಳು ಆಳವಾಗಿ ಬೇರುಬಿಟ್ಟಾಗ ಎಷ್ಟು ಮಳೆ ಬಿದ್ದರೇನು? ಎಷ್ಟು ಗೊಬ್ಬರ ಹಾಕಿದರೇನು? ಎಷ್ಟು ದುಡಿದರೇನು? ಬೆಳೆ ಹೇಗೆ ಬಂದೀತು? ಸಮಾಜಪುರುಷನ ರೋಮ ರೋಮಗಳಲ್ಲಿ ಮೇಲೆ ಹೇಳಿದ ಮಹಾರೋಗಗಳು ಬೇರು ಬಿಟ್ಟಿರುವಾಗ ಅವನು ಬಲಶಾಲಿಯಾಗಬೇಕೆಂದು ಎಷ್ಟೇ ಪೌಷ್ಟಿಕ ಆಹಾರವನ್ನು ಕೊಡಲಿ, ಎಷ್ಟೇ ಪೌಷ್ಟಿಕ ಔಷಧಿಗಳನ್ನು ಕೊಡಲಿ, ಅದರಿಂದೇನಾದೀತು? ಮೊದಲು ರೋಗದ ನಿವಾರಣೆಯಾಗಬೇಕು. ಪ್ರಕೃತಿ ನಿರೋಗಿಯಾಯಿತೆಂದರೆ ಅನಂತರ ನಿಧಾನವಾಗಿ ಪೌಷ್ಟಿಕ ಔಷಧಿ, ಪೌಷ್ಟಿಕ ಆಹಾರಗಳ ಉಪಯೋಗವಾದೀತು.

ಆದರೆ ರಾಷ್ಟ್ರಾಭ್ಯುದಯದ ಅನೇಕಾನೇಕ ಯೋಜನೆಗಳನ್ನು ಸಿದ್ಧಗೊಳಿಸಿ, ಅವುಗಳನ್ನು ಕಾರ್ಯರೂಪಕ್ಕಿಳಿಸಲು ಸಿದ್ಧರಾಗಿರುವ ನಮ್ಮ ನಾಯಕರು ಈ ವಿಷಯದ ಕಡೆ [illegible] ಗಮನ ಕೊಟ್ಟಂತೆ ತೋರುವದಿಲ್ಲ. ಒಂದೊಮ್ಮೆ ಅವರು ಇತ್ತ ಲಕ್ಷ್ಯ ಕೊಟ್ಟಿದ್ದರೆ ಸಮಾಜದಲ್ಲಿಯೂ ಸರಕಾರದಲ್ಲಿಯೂ ಬೇರೂರಿರುವ ಅನೇಕಾನೇಕ ದುರ್ವ್ಯವಹಾರಗಳನ್ನು, ದುರ್ಗುಣಗಳನ್ನು ನಿರ್ಮೂಲ ಮಾಡುವದಕ್ಕಾಗಿ ಅವರು ಕಟಿಬದ್ಧರಾಗುತ್ತಿದ್ದರು.

ಈಗಲೂ ತಡವಾಗಿಲ್ಲ. ಈಗಲಾದರೂ ಮೊದಲು ಜನತೆಯ ನೈತಿಕ ಮಟ್ಟವು ಏರುವಂತೆ ಮಾಡಲು ನಮ್ಮ ನಾಯಕರು ಪ್ರಯತ್ನಿಸಲಿ. ಅದಿಲ್ಲದೆ, ಈಗಿನ ಸ್ಥಿತಿಯು ಇದ್ದಕ್ಕಿದ್ದಂತೆ ಮುಂದುವರೆದರೆ ನಾವು ಎಷ್ಟು ಬೇಗ ದಕ್ಕಿಸಿದರೂ ಎಷ್ಟೇ ಸಾವಿರ ಕೋಟಿ ರೂಪಾಯಿಗಳನ್ನು ಅಭಿವೃದ್ಧಿ ಯೋಜನೆಗಳಿಗಾಗಿ ವೆಚ್ಚಮಾಡಿದರೂ ಅದರಿಂದ ದೊರೆಯಬೇಕಾದ ಪ್ರತಿಫಲವು ದೊರೆಯಲಾರದು.

ಮೊದಲು ಕಾರ್ಯಕ್ಷೇತ್ರವು ನಿರ್ಮಲವಾಗಲಿ, ಕಾರ್ಯಕರ್ತರು ನಿಷ್ಠಾವಂತರಾಗಲಿ. ಆಂದರೆ ಮಾತ್ರ ಯೋಜನೆ ಕಾರ್ಯಗಳ ಸಫಲತೆ ದೊರೆತೀತು!

(ಜನಮಿತ್ರ)

ರೋಗಿಗಳಿಗೆ ಸುವರ್ಣ ಭಾಗ! ಗಮನಿಸಿರಿ!

THE ASIATIC PHARMACY.
(AYURVEDIC DISPENSARY)
SCHOOL ROAD, MERCARA.
(Near Cauvery Mahal Theatre)

ಏಷ್ಯಾಟಿಕ್ ಫಾರ್ಮಸಿ.
(ಆಯುರ್ವೇದ ವೈದ್ಯಶಾಲೆ)
(ಸ್ಕೂಲ್ ರೋಡು, ಮಡಿಕೇರಿ)
(ಕಾವೇರಿ ಮಹಲ್ ಥಿಯೇಟರಿನ ಬಳಿ)

ಮೇಲಿನ ಹೆಸರಿನಿಂದ ತಾ|| 28-8-1952 ರಿಂದ ತೆರೆಯಲಾಗಿರುವ ಆಯುರ್ವೇದ ವೈದ್ಯಶಾಲೆಯಲ್ಲಿ ಎಲ್ಲಾ ರೀತಿಯ ಶಾಸ್ತ್ರೀಯ ಔಷಧಗಳು ದೊರೆಯುತ್ತವೆ. ವೈದ್ಯರು ಎಲ್ಲರನ್ನೂ ಪರೀಕ್ಷಿಸಿ, ಉಚಿತ ತಾನ ಚಿಕಿತ್ಸೆಯನ್ನು ಮಾಡುತ್ತಾರೆ. ಮಹನೀಯ ರೋಗಿಗಳು ನಮಗೆ ತಕ್ಕ ಪ್ರೋತ್ಸಾಹವನ್ನು ಕೊಡಬೇಕಾಗಿ ವಿನಂತಿ.

4-3

ಕೆ. ಪಿ. ಬಾಲಕೃಷ್ಣನ್,
ಆಯುರ್ವೇದ ವೈದ್ಯರು.

ಕೊಡಗು

ತಾ ೧೯-೯-೧೯೫೨ನೇ ಶುಕ್ರವಾರ

ಇಂದೋರಿನ ತೀರ್ಮಾನಗಳು.

ಅಖಿಲ ಭಾರತ ಕಾಂಗ್ರೆಸು ಸಮಿತಿಯ ಅಧಿವೇಶನವು ಈ ತಾ. ೧೩ ಮತ್ತು ೧೪ ರಲ್ಲಿ ಇಂದೋರಿನಲ್ಲಿ ಜರುಗಿತು. ಕಾಂಗ್ರೆಸಿನೊಳಗೆ ಉಂಟಾಗಬಹುದೆಂದು ತೋರಿದ್ದ ಒಡಕಿನ ಭೀತಿಯನ್ನು ನಿವಾರಿಸಿದಂತ ಕೀರ್ತಿಯು ಈ ಸಭೆಗೆ ಸಲ್ಲುತ್ತದೆ. ಕೇಂದ್ರ ಪಾರ್ಲಿಮೆಂಟಿನ ಮತ್ತು ಪ್ರಾಂತೀಕ ನ್ಯಾಯವಿಧಾಯಕ ಸಭೆಗಳ ಕಾಂಗ್ರೆಸು ಮೆಂಬರುಗಳಿಗೆ ಸರ್ಕಾರದಲ್ಲಿ ಹೆಚ್ಚಿನ ಅಧಿಕಾರವಿರಬೇಕೆಂದು ಒಂದು ಪಕ್ಷವೂ, ಕಾಂಗ್ರೆಸು ವರ್ಕಿಂಗ್ ಕಮಿಟಿ ಮತ್ತು ಪ್ರಾಂತೀಕ ಕಾಂಗ್ರೆಸು ಸಮಿತಿಗಳ ಮೆಂಬರುಗಳಿಗೆ ಹೆಚ್ಚಿನ ಅಧಿಕಾರವಿರಬೇಕೆಂದು ಇನ್ನೊಂದು ಪಕ್ಷವೂ ಈ ಅಧಿವೇಶನಕ್ಕೆ ಮೊದಲು ತೀವ್ರವಾದ ಚಳವಳವನ್ನು ನಡಿಸುತ್ತಿದ್ದವು. ಈ ಎರಡು ಭಿನ್ನಾಭಿಪ್ರಾಯಗಳಿಂದ ಕಾಂಗ್ರೆಸು ಸಂಸ್ಥೆಯ ಒಗ್ಗಟ್ಟೂ, ಶಕ್ತಿಯೂ ಕುಂದುವದೆಂಬ ಭೀತಿಯು ತಲೆದೋರಿತ್ತು. ಆದರೆ ಕಾಂಗ್ರೆಸಿನ ಅಧ್ಯಕ್ಷರಾದ ಪಂಡಿತ ನೆಹರುರವರ ಜಾಣತನದಿಂದ ಈ ಸ್ಪರ್ಧೆಯು ಎಲ್ಲರಿಗೂ ಒಪ್ಪುವಂತೆ ಬಗೆಹರಿಸಲ್ಪಟ್ಟಿದ್ದು ಸಂತೋಷಕರ. ಪಾರ್ಲಿಮೆಂಟಿನ ಮತ್ತು ಪ್ರಾಂತೀಕ ಎಸೆಂಬ್ಲಿಗಳ ಸದಸ್ಯರುಗಳು ಆಯಾಯ ಪ್ರಾಂತೀಕ ಮತ್ತು ಜಿಲ್ಲಾ ಕಾಂಗ್ರೆಸು ಸಮಿತಿಗಳ 'ಎಸೋಸಿಯೇಟ' ಮೆಂಬರುಗಳಾಗಬೇಕು. ಆದರೆ ಅವರಿಗೆ ಅಲ್ಲಿ ಓಟು ಕೊಡುವ ಹಕ್ಕಿಲ್ಲವೆಂದು ಮಾಡಿದ ತೀರ್ಮಾನದಿಂದ ಕಾಂಗ್ರೆಸು ಸಮಿತಿಯ ಮೆಂಬರರಿಗೂ ನ್ಯಾಯವಿಧಾಯಕ ಸಭೆಗಳ ಸದಸ್ಯರುಗಳಿಗೂ ತಮ್ಮ ಅಭಿಪ್ರಾಯಗಳನ್ನು ಪರಸ್ಪರ ತಿಳಿಸಲಿಕ್ಕೂ ಮತ್ತು ಉಭಯ ಕಡೆಯವರಿಗೆ ಒಪ್ಪಿಗೆಯಿಂದ ಆಡಳಿತ ನಡಿಸಲಿಕ್ಕೂ ಅನುಕೂಲವಾಗುವುದು. ಇದೇ ಈ ಅಧಿವೇಶನದ ಮುಖ್ಯ ತೀರ್ಮಾನವಾಗಿದೆ.

ದೇಶದ ಆರ್ಥಿಕ ಅಭಿವೃದ್ಧಿಯು ಗೊತ್ತುವಳಿಯ ಮೇರೆ ಸರ್ಕಾರವು ಯಾವ ಯೋಜನೆಗಳನ್ನೇ ಕೈಕೊಳ್ಳಲಿ, ಅವಕ್ಕೆ ಜನತೆಯ ಪೂರ್ಣ ಸಹಕಾರ ಮತ್ತು ಬೆಂಬಲವಿಲ್ಲದಿದ್ದರೆ ಅವು ಸಫಲವಾಗಲಾರವೆಂಬುದು ಸಹಜ. ಅದು ದರಿಂದಲೇ ಕಾಂಗ್ರೆಸಿನ ಅಧ್ಯಕ್ಷರು ಪ್ರತಿಯೊಬ್ಬ ಪುರುಷನೂ, ಸ್ತ್ರೀಯೂ ದೇಶದ ಆರ್ಥಿಕ ಅಭಿವೃದ್ಧಿಗಾಗಿ ತಾವಾಗಿಯೇ ದುಡಿಯಬೇಕು, ತಮ್ಮ ಪಾಲಿನ ಕರ್ತವ್ಯವನ್ನು ನಡಸಬೇಕೆಂದು ಕೋರಿಕೊಂಡಿರುವರು. ಇಂದು ಸಮಾಜದಲ್ಲಿರುವ ದೊಡ್ಡ ತಾರತಮ್ಯಗಳನ್ನು ಹೋಗಲಾಡಿಸಲು ಕೈಕೊಳ್ಳುವ ಯೋಜನೆಗಳು ನೆರವೇರಬೇಕಾದರೆ ಗ್ರಾಮವಾಸಿಗಳಲ್ಲಿ ಈ ಕಾರ್ಯದ ಬಗ್ಗೆ ಉತ್ಸಾಹ ಉಂಟಾಗುವಂತೆ ಮಾಡಬೇಕಾಗಿದೆ, ಇದು ಸುಲಭಸಾಧ್ಯದ ವಿಷಯವಲ್ಲ. ಇದಕ್ಕಾಗಿ ತ್ಯಾಗಬುದ್ಧಿ, ಸೇವಾವೃತ್ತಿ, ದೇಶಭಕ್ತಿ—ಇವೆಲ್ಲವೂ ಒಂದುಗೂಡಿ ಮುನ್ನಡೆಯಬೇಕಾಗಿದೆ.

ಕಾಶ್ಮೀರ ಪ್ರಶ್ನೆಯು ಮತ್ತು ದಕ್ಷಿಣ ಆಫ್ರಿಕದ ವರ್ಣಭೇದದ ಸಂಬಂಧ ಮಾಡಿದ ತೀರ್ಮಾನಗಳೂ ಮಹತ್ವದಾಗಿವೆ. ಪಾಶ್ಚಿಮಾತ್ಯ ದೇಶಗಳು ಯುದ್ಧದ ಸನ್ನಾಹಗಳನ್ನು ಮಾಡುತ್ತಿರುವ ಈ ಕಾಲದಲ್ಲಿ ಸ್ವಾತಂತ್ರ್ಯ ಭಾರತವು ತನ್ನ ವೈಶಿಷ್ಟ್ಯವನ್ನು ಉಳಿಸಬೇಕಾಗಿದೆ. ಮಹಾತ್ಮಾಜಿಯವರ ಗುರಿಯಾಗಿದ್ದ ಜಾಗತಿಕ ಶಾಂತಿಯನ್ನು ಸಾಧಿಸಲು ಹಿಂದೂದೇಶವು ಸತತ ಯತ್ನಿಸಬೇಕಾಗಿದೆ. ಯಾರ ಬಲಾತ್ಕಾರಕ್ಕೂ ಬಗ್ಗದೆ ತನ್ನ ನ್ಯಾಯಶೀಲತೆಯ ವರ್ತನೆಯಿಂದ ಯುದ್ಧವಾಗಲು ಅವಕಾಶ ಕೊಡದೆ, ಅಹಿಂಸಾ ರೀತಿಯಿಂದಲೇ ಸರ್ವ ಕಲಹ ಕಕ್ಷಿಗಳನ್ನು ತೀರ್ಮಾನಿಸುವಂತೆ ಎಲ್ಲಾ ಜನಾಂಗಗಳನ್ನು ಪ್ರೇರೇಪಿಸುವುದೇ ಭಾರತದ ಧ್ಯೇಯವಾಗಬೇಕು. ಇಂದು ದಕ್ಷಿಣ ಆಫ್ರಿಕದಲ್ಲಿ ಹಿಂದೀಯರೇ ಮೊದಲಾದ ಬಣ್ಣದ ಜನರ ಮೇಲೆ ಹೇರಿಸಿರುವ ಅನ್ಯಾಯ ಕಾನೂನನ್ನು ರದ್ದು ಮಾಡಲು ಸಂಬಂಧಪಟ್ಟ ಜನರು ಕೈಕೊಂಡಿರುವ ಸತ್ಯಾಗ್ರಹ ಚಳವಳಕ್ಕೆ ಬೆಂಬಲ ಕೊಡುವ ತೀರ್ಮಾನ ಮಾಡಿದ್ದು ಯೋಗ್ಯವಾಗಿದೆ. ಈ ಚಳವಳವು ಅಲ್ಲಿ ಜಯಪ್ರದವಾಗಿ ನಡೆದರೆ ಆದರೆ ಪ್ರಪಂಚದ ಇತರ ಭಾಗಗಳಲ್ಲಿ ನಡೆಯುತ್ತಿರುವ ಈ ರೀತಿಯ ಅನ್ಯಾಯಗಳನ್ನು ಹಿಂಸೆಯನ್ನು ಅವಲಂಬಿಸದೇ ಪರಿಹರಿಸಬಹುದಾಗಿದೆ.

ಶ್ರೀ ಮಶ್ರೂವಾಲರ ನಿಧನ

ಗಾಂಧೀಜಿಯವರ ಒಬ್ಬ ಪರಮ ಶಿಷ್ಯರೂ, ನಿಸ್ಸೀಮ ದೇಶಭಕ್ತರೂ 'ಹರಿಜನ' ಪತ್ರಿಕೆಯ ಯೋಗ್ಯ ಸಂಪಾದಕರೂ ಆಗಿದ್ದ ಶ್ರೀ ಕಿಶೋರಲಾಲ ಮಶ್ರೂವಾಲರು ಈ ತಾ. ೯ರಲ್ಲಿ ವಿಧಿವಶರಾದರು. ಇವರಿಗೆ ೬೧ ವರ್ಷ ಪ್ರಾಯವಾಗಿದ್ದರೂ ಸ್ಫೂರ್ತಿ ಶಕ್ತಿಯಲ್ಲಿ ತರುಣರಾಗಿದ್ದರು. ಮಹಾತ್ಮಾಜಿಯವರ ಮರಣದ ನಂತರ ಅವರ ತತ್ವಗಳನ್ನು ಸರಿ ನುಡಿಗಳಲ್ಲಿ ಆಚರಿಸುತ್ತಿದ್ದ ಹಲಕೆಲವರು ಕಣ್ಮರೆಯಾಗುತ್ತಿರುವುದು ಭಾರತದ ದುರ್ದೈವ. ಈ ದುಃಖ ವಾರ್ತೆಯನ್ನು ಕೇಳಿ ವಿನೋಬಾರವರು ಕೆಲವು ಸಮಯ ಮೂಕರಂತಾದ ಮೇಲೆ ಗಾಂಧೀವಾದಕ್ಕೂ ಹಾಗೂ ಭಾರತಕ್ಕೂ ಇವರ ಮರಣದಿಂದ ಉಂಟಾದ ನಷ್ಟವನ್ನು ಅಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ.

ಗಾಂಧೀಜಿಯವರ ನಂತರ ಮಶ್ರೂವಾಲರು 'ಹರಿಜನ' ಪತ್ರಿಕೆಯ ಮೂಲಕ ತಮ್ಮ ಲೇಖನಗಳಿಂದ ಗಾಂಧೀ ಅನುಯಾಯಿಗಳಿಗೆ ಅವರ ಮರಣವನ್ನೇ ಮರೆಯುವಂತೆ ಮಾಡಿದ್ದರು. ತಾರುಣ್ಯದಲ್ಲಿ ಗಾಂಧೀಜಿಯವರ ವರ್ಚಸ್ಸಿಗೆ ಒಳಗಾಗಿ ವಕೀಲಿ ವೃತ್ತಿಯನ್ನು ಬಿಟ್ಟು, ದೇಶಸೇವೆಯಲ್ಲೇ ತನ್ನ ೩೯ ವರ್ಷಗಳನ್ನು ಸವೆದರು. ತನ್ನ ಬರವಣಿಗೆಗಳಲ್ಲಿ ಸತ್ಯ ಮತ್ತು ನ್ಯಾಯವನ್ನು ಎಡೆಬಿಡದೆ ಸಾಧಿಸುತ್ತಾ ಪತ್ರಿಕಾ ಪ್ರಪಂಚದಲ್ಲಿ ಆದರ್ಶಪ್ರಾಯರಾಗಿದ್ದರು. ರಚನಾತ್ಮಕ ಕಾರ್ಯಗಳನ್ನು ಜನತೆಯ ಮುಂದೆ ಸ್ಫೂರ್ತಿದಾಯಕವಾಗಿಡುತ್ತಿದ್ದರು. ಕಾಂಗ್ರೆಸಿಗರು ಪೂರ್ಣ ಅಧಿಕಾರಕ್ಕೆ ಬಂದು ಪ್ರಜಾಪ್ರತಿನಿಧಿ ಸರಕಾರದ ಪರೀಕ್ಷೆ ನಡೆಸುತ್ತಿರುವ ಈ ಸಮಯದಲ್ಲಿ ವಿನೋಬಾರವರ ಭೂದಾನ ಯಜ್ಞದ ಈ ಕಾಲದಲ್ಲಿ ಇವರ ಸೇವೆಯು ಮತ್ತಷ್ಟು ಬೇಕಾಗಿತ್ತು. ಆದರೆ ವಿಧಿಯ ವಿಲಾಸವನ್ನು ತಡೆಯಲು ಸಾಧ್ಯವಿಲ್ಲ. ಇವರು ತನ್ನ ಅಮೋಘವಾದ ಸೇವೆಯಿಂದ ತನ್ನ ಜನ್ಮವನ್ನು ಸಾರ್ಥಕ ಮಾಡಿಕೊಂಡರು. ಆದರೆ ಭಾರತವು ಈ ನಷ್ಟದಿಂದ ಬಡವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ವರ್ತಮಾನ.

ಚೀಫ಼್ ಕಮಿಷನರವರ ಆಫೀಸಿನಲ್ಲಿ ಮೇನೇಜರಾಗಿದ್ದ ಶ್ರೀ. ಎಂ ರಾಮಸ್ವಾಮಿಯವರು ಕಾರಣಾಂತರಗಳಿಂದ ಕೆಲಸದಿಂದ 'ರಿಟೈರ' ಮಾಡಲ್ಪಟ್ಟಿರುತ್ತಾರೆ.

ಇಡೀ ಹಿಂದೂಸ್ಥಾನದಲ್ಲಿ ಆಗುವಂತೆಯೇ ಕೊಡಗಿನಲ್ಲೂ ಸಮಾಜ ವಿಕಾಸಯೋಜನೆಯು ಮಹಾತ್ಮಾಜೀಯವರ ಜನ್ಮದಿನೋತ್ಸವದ ದಿನವಾದ ಒಕ್ಟೋಬರು ತಾ. ೨ ರಲ್ಲಿ ಪ್ರಾರಂಭಿಸಲ್ಪಡುವದು.

ದಸರಾ ಹಬ್ಬವನ್ನು ಆಚರಿಸುವ ಸಾರಾಯಿ ಲೈಸನ್ಸ್ ಕಾರ್ಡುದಾರರು ಈ ತಾ. ೨೫ರೊಳಗೆ ಅರ್ಜಿ ಬರೆಕೊಂಡರೆ ಒಂದು ಕುಪ್ಪಿ ಸಾರಾಯಿ ರಜ್ಜು ಕೊಡಲಾಗುವದೆಂದು ಪ್ರಕಟವಾಗಿದೆ.

ಕಳೆದ ಎಂಟು ಹತ್ತು ದಿವಸಗಳಿಂದ ಮಳೆಯೇ ಇಲ್ಲದೆ ಬಿಸಿಲು ಜೋರಾಗಿ ಭತ್ತದ ಗದ್ದೆಗಳಲ್ಲಿ ನೀರು ಬತ್ತುತ್ತಾ ಬರುತ್ತಿವೆ; ಹಲವು ಒಣಗಿ ಹೋಗಿವೆ. ಗ್ರಾಮಗಳಲ್ಲಿ 'ಹಾಹಾಕಾರ' ಎದ್ದಿದೆ. ಕೃಷಿಕರೆಲ್ಲರೂ ಆಕಾಶದ ಕಡೆ ನೋಡುತ್ತಿರುವರು!!

ವೀರಾಜಪೇಟೆ ಶ್ರೀ ಕಾವೇರಿ ಆಶ್ರಮದಲ್ಲು ನವರಾತ್ರಿ ಉತ್ಸವವು ಈ ತಾ ೧೯ ರಿಂದ ೨೮ರ ವರೆಗೆ ಆಚರಿಸಲ್ಪಡುವದೆಂದೂ ಪ್ರತೀ ದಿನ ಸಾಯಂಕಾಲ ೭ರಿಂದ ೯ ಗಂಟೆವರೆಗೆ ಭಜನೆ ಉಪನ್ಯಾಸ, ಹರಿಕಥೆ, ಭಾರತ ವಾಚನ, ಪೂಜೆ ಮೊದಲಾದವು ನಡೆಯುವವೆಂದೂ, ಸರ್ವರಿಗೂ ಆಮಂತ್ರಣವಿದೆಯೆಂದೂ ತಿಳಿಯಬರುತ್ತದೆ.

ಅನಿಷ್ಟಿತವಾದ ಆರೋಪಣೆಗಳನ್ನು ಸೂಚಿಸಿ ದಸ್ಕತ್ತು ಇಲ್ಲದ ಅರ್ಜಿಗಳನ್ನು ಪಬ್ಲಿಕಿನವರು ಮಂತ್ರಿಗಳಿಗೆ ಕಳುಹಿಸುತ್ತಿರುವರೆಂದೂ ಇಂಥಾ ಅರ್ಜಿಗಳ ಮೇಲೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುವುದಿಲ್ಲವೆಂದೂ, ಅರ್ಜಿದಾರರು ಪೂರ್ತಿ ಹೆಸರು, ವಿಳಾಸ ಮತ್ತು ನಿಶ್ಚಿತವಾದ ಪುರಾವೆಗಳನ್ನು ಸೂಚಿಸಿ ಬರೆದರೆ ಅವುಗಳನ್ನು ವಿಚಾರಿಸತಕ್ಕ ಕ್ರಮ ತೆಗೆದುಕೊಳ್ಳಲಾಗುವದೆಂದೂ ಚೀಫ್ ಸೆಕ್ರೆಟರಿಯವರು ತಿಳಿಸುತ್ತಾರೆ.

ಗ್ರಾಜ್ಯುವೇಟರುಗಳು ಮತ್ತು ಸ್ಕೂಲ್ ಫೈನಲ್ ಪರೀಕ್ಷೆಯ 'ಎಲಿಜಿಬಲಿಟಿ' ಸರ್ಟಿಫಿಕೇಟಿನಲ್ಲಿ ೪೦% ಮಾರ್ಕ್ಸ್ ಪಡೆದವರು ಪೆರಿಯಪಟ್ಟಣದಲ್ಲಿ ತಾ. ೧-೧೦-೫೨ರಿಂದ ೬ ತಿಂಗಳ ವರೆಗೆ ನಡೆಯುವ ಸರ್ವೇ ತರಬೇತಿಗೆ ಅರ್ಜಿಗಳನ್ನು ಈ ತಾ. ೨೫ ರೊಳಗೆ ಅಸಿಸ್ಟೆಂಟ್ ಕಮಿಷನರಿಗೆ ತಲುಪುವಂತೆ ಕಳುಹಿಸಬೇಕೆಂದೂ ಮತ್ತು ಅರ್ಜಿದಾರರು ತಾ. ೨೯ ರಲ್ಲಿ ಅವರ ಮುಂದೆ ಹಾಜರಾಗಬೇಕೆಂದೂ, ಈ ತರಬೇತಿನಲ್ಲಿ ತೇರ್ಗಡೆಯಾದವರನ್ನು ಅಸಿಸ್ಟೆಂಟ್ ಪಾರುಪತ್ಯಗಾರರಾಗಿ ನೇಮಿಸಲಾಗುವುದೆಂದೂ ಪ್ರಕಟವಾಗಿದೆ.

ಕೊಡಗು ಸರಕಾರದಲ್ಲಿ ಗುಮಾಸ್ತರ (ಕ್ಲಾರ್ಕ್ಸ್) ಉದ್ಯೋಗಕ್ಕೆ ಉಮೇದುವಾರರನ್ನು ಚುನಾಯಿಸಲು ಇದೇ ತಾರೀಕು ೨೯-೯-೫೨ ರಲ್ಲಿ ಕೊಡಗು "ಸ್ಟಾಫ್ ಸಿಲೆಕ್ಷನ್ ಬೋರ್ಡ್" ಮೀಟಿಂಗು ಮಡಿಕೇರಿಯಲ್ಲಿ ನಡೆಯುವುದು. ಎಸ್. ಎಸ್. ಎಲ್. ಸಿ. ಯಾ ಹೆಚ್ಚಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದು ಈ ವರೆಗೆ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಸದೆ ಇರತಕ್ಕಂತವರು ಮತ್ತು ರಿಜಿಸ್ಟರ್ ಮಾಡಿಸಿ ಅದನ್ನು ಸಮಯಕ್ಕೆ ಸರಿಯಾಗಿ ಮುಂದುವರಿಸದೆ (ರಿನ್ಯೂ ಮಾಡದೆ) ಇರತಕ್ಕಂತವರು ಒಡನೇ ಮಡಿಕೇರಿ ಎಂಪ್ಲಾಯಿಮೆಂಟ್ ಆಫೀಸಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಅಥವಾ ರಿನ್ಯೂ ಮಾಡಿಸಿಕೊಳ್ಳಬೇಕಾಗಿ ಈ ಮೂಲಕ ತಿಳಿಸಲಾಗಿದೆ.

ಕೊಡಗಿನ ಸಹಕಾರ ಚಳವಳದ ಬೆಳವಣಿಗೆಯನ್ನು ವಿಮರ್ಶಿಸಿ, ಮುಂದಿನ ಅಭಿವೃದ್ಧಿಗೆ ಸಲಹೆಗಳನ್ನು ಕೊಡಲು ಸರಕಾರವು ಈ ಕೆಳಗಿನ ಕಮಿಟಿಯನ್ನು ನೇಮಿಸಿದೆ. ರಿಸರ್ವ್ ಬ್ಯಾಂಕಿನ ನಿವೃತ್ತ ಡೆಪ್ಯುಟಿ ಗವರ್ನರರಾದ ಮೈಸೂರಿನ ಶ್ರೀ ಜಿ. ಎಂ. ಮೆಕ್ರಿಯವರು (ಅಧ್ಯಕ್ಷರು), ಶ್ರೀಗಳಾದ ಎನ್. ಸೋಮಣ್ಣನವರು, ಡಾ. ಸಿ. ಎಂ. ಪೂಣಚ್ಚಯ್ಯನವರು ಮತ್ತು ಮನೆಯಪಂಡ ಎಂ ಬೆಳ್ಯಪ್ಪನವರು ಮೆಂಬರುಗಳು, ಟ್ರೆಜರಿ ಆಫೀಸರಾದ ಶ್ರೀ ಶ್ರೀನಿವಾಸರಾವ್‌ರವರು ಸೆಕ್ರೆಟರಿಯವರು. ಈ ಕಮಿಟಿಯ ಪ್ರಥಮ ಮೀಟಿಂಗು ಈ ತಾ ೧೫ರಲ್ಲಿ ಮಡಿಕೇರಿಯಲ್ಲಿ ನಡೆಯಿತು. ಇವರು ಒಂದು ಪ್ರಶ್ನಾವಳಿಯನ್ನು ತಯಾರಿಸಿ ಜನರ ಅಭಿಪ್ರಾಯ ತೆಗೆಯುವರೆಂದೂ, ಡಿಸೆಂಬರು ಅಂತ್ಯದೊಳಗೆ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಬೇಕೆಂದೂ, ಒಂದು ತಿಂಗಳಲ್ಲಿ ಪುನಃ ಕಮಿಟಿ ಮೀಟಿಂಗು ಸೇರುವದೆಂದೂ ತಿಳಿಯಬರುತ್ತದೆ.

Coorg Forest Department.

Timber Sale.

About 60,000 cft. of Teak, Rosewood, Honne and other hardwoods will be sold by auction at the Coorg Timber Depot, Hunsur, on Friday the 3rd October 1952 at 10 A. M.

For further particulars apply to the Conservator of Forests, Coorg, Mercara.

ಓದುಗರ ಓಲೆಗಳು

ವಯಸ್ಕರ ಶಿಕ್ಷಣ.

ನಮ್ಮ ಸ್ವತಂತ್ರ ಭಾರತವು ವಿದ್ಯೆಯಲ್ಲಿ ಈಗ ಮುಂದುವರಿಯುತ್ತಾ ಬಂದಿದೆ. ಹಾಗೆಯೇ ನಮ್ಮ ಚಿಕ್ಕ ದೇಶವು ವಿದ್ಯೆಯಲ್ಲಿ ಮುಂದುವರಿಯುವಂತೆ ಮಾಡಬೇಕಾಗಿದೆ. ಇಲ್ಲಿ ವಿದ್ಯೆಯನ್ನು ಮುಂದುವರಿಸಲು ವಯಸ್ಕರ ಶಿಕ್ಷಣವನ್ನು ಏರ್ಪಡಿಸಿರುವುದೇನೋ ನಿಜ. ಇದಕ್ಕಾಗಿ ಇಟ್ಟಿರುವ ಉಪಾಧ್ಯಾಯರುಗಳನ್ನು ಸರಬೇತ ಮಾಡಿರುವರು. ಆದರೆ ಸರಕಾರವು ಇದಕ್ಕೆ ಹೆಚ್ಚಿನ ಗಮನ ಕೊಡುವಂತೆ ಕಾಣುವದಿಲ್ಲ. ಉತ್ತರ ಕೊಡಗಿನಲ್ಲಿ ವಯಸ್ಕರ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಾ ಇದೆಯೆಂಬುದು ನಿಜ. ಹಾಗೆ ದಕ್ಷಿಣ ಕೊಡಗಿನಲ್ಲಿಯೂ ವಯಸ್ಕರ ಶಿಕ್ಷಣ ಶಾಲೆಗಳನ್ನು ತೆರೆದು ಬಡ ಜನರನ್ನು ಉದ್ಧರಿಸಬೇಕೆಂದು ನನ್ನ ಪ್ರಾರ್ಥನೆ. ಇದಕ್ಕಾಗಿ ಸಂಬಂಧಿಸಿದ ಅಧಿಕಾರಿಗಳನ್ನು ನೇಮಿಸಿ ಎಲ್ಲಾ ಅವಿದ್ಯಾವಂತರನ್ನು ವಿದ್ಯಾವಂತರನ್ನಾಗಿ ಮಾಡುವರೇ? ಇನ್ನಾದರೂ ಅಧಿಕಾರಿಗಳು ಹೆಚ್ಚಿನ ಗಮನ ಕೊಡುವರೇ? ದಕ್ಷಿಣ ಕೊಡಗಿನ ಅವಿದ್ಯಾವಂತರನ್ನು ಉತ್ತರಕೊಡಗಿನ ವಿದ್ಯಾವಂತರಂತೆ ಮಾಡಬೇಕಾಗಿ ಕೋರಿಕೆ.

ಕೆ. ಪಾತ್ರಿ.

ಮಳೆಗಾಗಿ ಪ್ರಾರ್ಥನೆ.

ಕೊಡಗಿನ ಮಾನ್ಯ ಮುಖ್ಯ ಮಂತ್ರಿಯವರ ಆಜ್ಞಾನುಸಾರ ದೇವಸ್ಥಾನಗಳಲ್ಲಿ ಆಕಾಶವಾಣಿಯಲ್ಲಿ ಕೊಡಗಿನ ಜನತೆಯ ಕಾರ್ಯಕ್ರಮದಲ್ಲಿ ಕೇಳಿದ ಭಾಷಣವನ್ನು ಪತ್ರಿಕೆಯಲ್ಲಿ ಓದಿ ನೋಡಿದೆನು. ತುಂಬಾ ಸಂತೋಷದ ವಿಷಯ. ಆದರೆ ಈ ಯೋಜನೆಯು ಎಲ್ಲಿಗೆ ಫಲಪ್ರದವಾಗುವದೆಂಬುದನ್ನು ಜನರು ಈ ವರ್ಷದ ಮಳೆಗೆ ಕಾತುರದಿಂದ ಕಾದು ನೋಡಬೇಕಾಗಿದೆ. ಅದೇ ದಿವಸ ಆಕಾಶದ ಮೇಲೆಲ್ಲಾ ಈಗಿನ ಬೆಳೆಗೆ ಮಳೆ ಇಲ್ಲ. ನೀರಿನ ಅರ್ಧ ಭಾಗಕ್ಕೆ ನೀರಿಲ್ಲದೆ ಪಾಳ ಬಿದ್ದಿದೆ. ನಟ್ಟಿ ಭೂಮಿಯೂ ಸಹ ಮಳೆ ಇಲ್ಲದ ಕಾರಣ ಒಣಗುತ್ತಾ ಬರುವದನ್ನು ನೋಡಿಕೊಂಡು ಜನರು ಆಕಾಶದ ಕಡೆಗೆ ನೋಡುತ್ತಾ ಇದ್ದಾರೆ. ಇದ್ದರಿಂದ ಕೊಡಗಿನ ಪ್ರತಿ ಜನಾಂಗವೂ ಅವರ ಊರ ದೇವಸ್ಥಾನದಲ್ಲಿ ಇಂತಹ ದಿವಸ ಪೂಜೆ ನಡೆಸಬೇಕೆಂತ ಮಾನ್ಯ ಮಂತ್ರಿಯವರು ಆಕಾಶವಾಣಿಯಲ್ಲಿ ಮಾಡಿದ ಪೂಜೆ ನಡೆಸಿದಲ್ಲಿ ಈ ವೇಳೆಯ ಯೋಜನೆಗೆ ಎಷ್ಟು ದೊಡ್ಡ ಸಹಾಯವಾಗಬಹುದು. ಆದರೂ ಕಾಲವಿಳಂಬವಾಗಲಿಲ್ಲ. ಇನ್ನಾದರೂ ಮಾನ್ಯ ಮಂತ್ರಿಯವರೂ ಚೀಫ್ ಕಮಿಷನರ್‌ರವರೂ ಸಹ ಸೇರಿ ಪ್ರತಿ ಜಾತಿಯವರ ದೇವಸ್ಥಾನದಲ್ಲೂ ಪೂಜೆ ನಡೆಸುವಂತೆ ವಿನಂತಿ ಮಾಡಿದಲ್ಲಿ ಖಂಡಿತವಾಗಿಯೂ ಮಳೆ ಬರುವುದೆಂದು ನನ್ನ ನಂಬಿಕೆಯಂತೆ ದೇಶದ ಜನರೆಲ್ಲರಿಗೂ ಸಹ ನಂಬಿಕೆ ಇರುವುದೆಂದು ನನ್ನ ಭಾವನೆಯಾಗಿದೆ. ಯಾವ ಯೋಜನೆಯೂ ಜಾರಿಯಾಗಬೇಕಾದರೆ ದೇವರ ಸಹಾಯ ಬೇಕಾಗಿರುವುದು. ಆದ್ದರಿಂದ ಇನ್ನಾದರೂ ದೇವಸ್ಥಾನದಲ್ಲಿ ಪೂಜೆಗೆ ವಿಳಂಬವಾಗದೆ ಪೂಜೆ ಮಾಡಿಸಬೇಕಾಗಿ ನನ್ನ ಅರಿಕೆಯಾಗಿದೆ. ಕಳೆದ ಎರಡನೆಯ ಮಹಾಯುದ್ಧದಲ್ಲೂ ಸಹ ಬ್ರಿಟಿಷರು ಆನರು ಆಳುತ್ತಿದ್ದ ದೇಶದ ಉದ್ದಗಲಕ್ಕೂ ಇರುವ ಎಲ್ಲಾ ದೇವಸ್ಥಾನಗಳಲ್ಲಿ ಸರಕಾರದ ಖರ್ಚಿನಿಂದ ೨-೩ ಸಲ ಪೂಜೆ ಮಾಡಿಸಿ ಜಯಗಳಿಸಿರುವ ಸಂಗತಿ [illegible] ಗಿದೆ. ಪೂರ್ವ ಕಾಲದಲ್ಲೂ ಸಹ ಆಗೋಷ್ಟ ತಿಂಗಳ ಹುತ್ತರಿ ಹಬ್ಬ ಅಂದರೆ (ಕಕ್ಕಡ [illegible]) ಪ್ರತಿ ನಾಡಿನವರು ಆಯರವರ ದೇವಸ್ಥಾನಕ್ಕೆ (ಬೈಮಾಡು) ಎಂದರೆ ಪ್ರತಿ ಒಬ್ಬನು ಒಂದು ಸಡಿ ಅಕ್ಕಿ, ಒಂದು ತೆಂಗಿನಕಾಯಿ, ೨ ಚೂರು ಬೆಲ್ಲ ಮತ್ತು ಬಾಳೆಹಣ್ಣು ತೆಗೆದುಕೊಂಡು ಹೋಗಿ ಪೂಜೆ ಮಾಡಿಸುವ ಪದ್ಧತಿ ಇತ್ತು. ಆವಾಗ ಮಳೆಯಿಂದ ದೇಶವು ಸುಭಿಕ್ಷವಾಗಿತ್ತು. ಈಗಿನ ನವನಾಗರಿಕತೆಯವರು ದೇವಸ್ಥಾನಕ್ಕೆ ಸೇರುವದು ಒಂದು ತರದ ಕೊರತೆಯೆಂದು ಭಾವಿಸುವರು. ದೇವರಿಲ್ಲವೆಂದು ದೇವರನ್ನು ನಂಬದ ಕಾರಣ ದೇವರು ಸಹ ನಮ್ಮನ್ನು ಪರೀಕ್ಷಿಸುವನು. ಅಲ್ಲದೆ ಯಾವ ಭಾಷೆಯಲ್ಲೂ ನೀರಿಲ್ಲ, ಗದ್ದೆಗಳೆಲ್ಲಾ ನೀರಿಲ್ಲದೆ ಒಣಗಿದ, ಆದ್ದರಿಂದ ಪ್ರತಿ ದೇವಸ್ಥಾನದಲ್ಲೂ ಮಳೆಯಾಗಬೇಕೆಂಬುದಾಗಿ ಪ್ರಾರ್ಥನೆ ನಡೆಸುವಂತೆ ಮಾನ್ಯ ಮಂತ್ರಿಯವರು ಮತ್ತು ಚೀಫ್ ಕಮಿಷನರ್‌ರವರನ್ನು ಏರ್ಪಾಡು ಮಾಡಬೇಕೆಂದು ನಾನು ದೇಶದ ಪರವಾಗಿ ಅವರನ್ನು ಕೋರುತ್ತೇನೆ.

ಕೆ. ಐಯ್ಯಪ್ಪ.

ಜಗತ್ತಿನಲ್ಲಿ ಅಕ್ಕಿಯ ಕೊರತೆ ಹೆಚ್ಚುತ್ತಿದೆ.

ಜಗತ್ತಿನ ಜನಸಂಖ್ಯೆ ಹೆಚ್ಚುತ್ತಾ ನಡೆದಿರುವದರಿಂದಲೂ, ಉತ್ಪಾದನೆಯು ಸರಿಯಾಗಿ ನಡೆದಿಲ್ಲವಾದುದರಿಂದಲೂ ಅಕ್ಕಿಯ ಕೊರತೆಯು ಜಗತ್ತಿನಲ್ಲಿ ಭೀಕರವಾಗುತ್ತಿದೆಯೆಂದು ಕೇಂದ್ರದ ಆಹಾರ ಹಾಗೂ ವ್ಯವಸಾಯ ಶಾಖೆಯ ಸಹಾಯಕ ಉಪಮಂತ್ರಿ ಡಾ. ಸಂಜಬರಾವ್ ದೇಶಮುಖರು ತಾ. ೧೫ರಲ್ಲಿ ಕಟಕದಲ್ಲಿ ಸೇರಿದ ಅಂತರರಾಷ್ಟ್ರೀಯ ತರಬೇತು ಪರಿಷತ್ತಿನಲ್ಲಿ ಹೇಳಿದರು.

ಅಕ್ಕಿಯ ಕೊರತೆಯು ಈಗ ಭೀಕರವಾಗಿದೆ. ೧೯೫೦-೫೧ರಲ್ಲಿ ಅಕ್ಕಿ ಹುಟ್ಟುವಳಿಯು ೧೫ ಕೋಟಿ ೩೮ ಲಕ್ಷ ಟನ್ ಆಗಿದೆ. ೧೯೩೪-೩೮ರಲ್ಲಿಯದಕ್ಕಿಂತ ೪೫ ಲಕ್ಷ ಟನ್ ಹೆಚ್ಚಾಗಿದೆ. ಆದರೆ ಜಗತ್ತಿನ ಜನ ಸಂಖ್ಯೆ ಹೆಚ್ಚುತ್ತಿರುವಾಗ ಅಕ್ಕಿ ಹುಟ್ಟುವಳಿ ಪ್ರಮಾಣವು ಮಾತ್ರ ಕಡಿಮೆಯಾಗುತ್ತ ನಡೆದಿದೆ.

ಯುದ್ಧಪೂರ್ವದಲ್ಲಿಯ ಅವಧಿಯಲ್ಲಿ ೮೦ ಲಕ್ಷ ಟನ್ ಆಹಾರ ಉಳಿತಾಯವಾಗುತ್ತಿದ್ದರೆ ೧೯೫೫ರಲ್ಲಿ ೫೦ ಲಕ್ಷ ಟನ್ನಿಗೆ ಬಂದು ನಿಂತಿದೆ. ಆದರೆ ಗ್ರಾಹಕರು ತಮ್ಮ ಮಟ್ಟವನ್ನು ನೊದಲಿನಂತೆ ಕಾಯ್ದುಕೊಳ್ಳಬೇಕಾದರೆ ಅವರಿಗಾಗಿ ೯೦ ಲಕ್ಷ ಟನ್ ಅಕ್ಕಿ ಬೇಕಾಯಿತು. ಈ ಕಾರಣದಿಂದಾಗಿ ಅಕ್ಕಿಯ ಕೊರತೆಯು ಜಗತ್ತಿನಲ್ಲಿ ಸಹಜವಾಗಿದೆ. ಅಂತರರಾಷ್ಟ್ರೀಯ ಕ್ರಮವಿಲ್ಲದೆ ಈ ಕೊರತೆಯನ್ನು ನೀಗುವ ಮಾರ್ಗವೇ ಉಳಿದಿಲ್ಲವೆಂಬುದು ಈಗ ಖಚಿತವಾಗಿ ತಿಳಿದಿದೆಯೆಂದು ಡಾ. ದೇಶಮುಖರು ಹೇಳಿದರು.

ವರ್ತಮಾನ ಪತ್ರ ಕಾಗದದ ನಿಯಂತ್ರಣ ಹೋಯಿತು.

ವರ್ತಮಾನ ಪತ್ರ ಕಾಗದದ ಮಟ್ಟಾಗ್ರಿಕೆಯು ಉಂಟಾದ್ದರಿಂದ ಆದರ ಮೇಲೆ ಭಾರತ ಸರಕಾರವು ನಿಯಂತ್ರಣ ಹಾಕಿತು. ಆದರೆ ಇತ್ತೀಚೆಗೆ ಅದು ಬೇಕಾದಷ್ಟು ಹುಟ್ಟಿ ವಿತರಣೆಗೆ ಸಾಕಾಗುತ್ತಿರುವುದರಿಂದ, ಅದರ ಮೇಲಿನ ನಿಯಂತ್ರಣವನ್ನು ತೆಗೆಯುವ ಬಗ್ಗೆ ವಿಚಾರ ನಡೆಸಿತ್ತು.

ಈ ಬಗ್ಗೆ ಕೊನೆಯ ನಿರ್ಧಾರಕ್ಕೆ ಬಂದು ಈ ನಿಯಂತ್ರಣವನ್ನು ಇದೇ ತಿಂಗಳ ೧೧ನೇ ತಾರೀಕಿನಿಂದ ತೆಗೆಯಲಾಗಿದೆಯೆಂದು ಪ್ರಕಟಿಸಲಾಗಿದೆ.

ಮಲನ್ ವಿರೋಧಕ ಆಂದೋಲನ.

ದಕ್ಷಿಣ ಆಫ್ರಿಕೆಯಲ್ಲಿ ಅಲ್ಲಿಯ ಮಲನ್ ಸರಕಾರವು ನಡೆಸುತ್ತಿರುವ ವರ್ಣ ದ್ವೇಷೀಯ ಧೋರಣೆಯನ್ನು ಪ್ರತಿಭಟಿಸುತ್ತಿರುವ ಆಂದೋಲನದ ಕಾರಣದಿಂದ ಇದುವರೆಗೆ ೩-೩೪ ಕರಿ ವರ್ಣದವರು ಬಂಧಿತರಾಗಿದ್ದಾರೆ. ಈ ಆಂದೋಲನವು ಕಳೆದ ಜೂನ್ ತಿಂಗಳಲ್ಲಿ ಪ್ರಾರಂಭವಾಗಿದೆ.

ಕಲಕತ್ತೆಯ ಕೃತ್ರಿಮ ಮಳೆ ಪ್ರಯೋಗ

ಭಾರತ ಸರಕಾರದ ಸೋಧ ಶಾಲೆಯ ಮಾಜಿ ಸಂಚಾಲಕ ಡಾ. ಎಸ್. ಕೆ. ಬ್ಯಾನರ್ಜಿಯವರು ಕೃತ್ರಿಮ ಮಳೆ ಪ್ರಯೋಗಗಳಲ್ಲಿ ಯಶಸ್ವಿಯಾಗಿ ಆವರು ಕಲಕತ್ತಾ ಹಾಗೂ ಅದರ ಸುತ್ತಲಿನ ಪ್ರದೇಶದಲ್ಲಿ ಮಳೆ ಬರುವಂತೆ ಮಾಡಿದ್ದಾರೆ.

ಕಳೆದ ಎಪ್ರಿಲ್ ೧೧ರಿಂದ ಇದುವರೆಗೆ ೩೨ ಪ್ರಯೋಗಗಳನ್ನು ಮಾಡಿದ್ದಾರೆ. ಅವುಗಳ ಪೈಕಿ ೨೭ರಲ್ಲಿ ಪ್ರಯೋಗಗಳು ಯಶಸ್ವಿಯಾಗಿವೆ. ಈ ಪ್ರಯೋಗಗಳ ಪರಿಣಾಮವಾಗಿ ಇತ್ತೀಚೆ ಜರುಗಿರುವ ಆಲಿಪುರದ ಮಳೆಗಾಲದಲ್ಲಿ ಬಿದ್ದ ಮಳೆಗಿಂತ ಈ ನಗರದ ಉಪನಗರವಾದ ಜಾಧವಪುರದಲ್ಲಿ ೧೫ ಅಂಗುಲ ಹೆಚ್ಚು ಮಳೆ ಬಿದ್ದಿತು.

ಯಶಸ್ವಿಯಾದ ಡಾ. ಬ್ಯಾನರ್ಜಿಯವರ ೨೫ ಪ್ರಯೋಗಗಳಲ್ಲಿ ೩ ಪ್ರಯೋಗಗಳ ಪರಿಣಾಮವಾಗಿ ದೊಡ್ಡ ಮಳೆ ಬಿದ್ದಿತ್ತೆಂದೂ ಹೇಳಲಾಗಿದೆ. ಕಾವು ಪರಿಶ್ರಮ ಪಟ್ಟು ಹುಟ್ಟಿಸಿದ ಕೃತ್ರಿಮ ಮೋಡಗಳಿಂದ ಮಳೆ ಬಿದ್ದುದಾಗಿ ತಮಗೆ ಖಚಿತವಾಗಿರುವುದೆಂದು ಅವರು ಹೇಳಿದರು. ಕೊಳ್ಳೆಂದರೆ ಅವರು ನೈಸರ್ಗಿಕವಾಗಿದ್ದ ಮೋಡಗಳನ್ನು ಹುಟ್ಟಿಸಿದರು. ಡಾ. ಬ್ಯಾನರ್ಜಿಯವರು ಒಂದು ಬಾರಿ ಸುತ್ತ ೧೨ ಮೈಲಿಗಳ ವರೆಗೆ ಮೋಡಗಳನ್ನು ಹತ್ತಬೇಕಾಯಿತೆಂದೂ ಹೇಳಿದರು.

ವಿದ್ಯಾಭ್ಯಾಸ ಕ್ರಮದಲ್ಲಿ ಸುಧಾರಣೆ

ಮದ್ರಾಸು ವಿಶ್ವವಿದ್ಯಾನಿಲಯದ ಎಕಡೆಮಿಕ್ ಕೌನ್ಸಿಲು ಇಂಡಿಯನ್ ಮೆಡಿಕಲ್ ಕೌನ್ಸಿಲಿನ ಶಿಫಾರಸಿನ ಮೇರೆಗೆ ಮೆಡಿಕಲ್ [illegible] ಅವಧಿಯನ್ನು ೫ ವರ್ಷದಿಂದ ೫½ ವರ್ಷಗಳಿಗೆ ಹೆಚ್ಚಿಸಲು ನಿರ್ಣಯಿಸಿತು. ಇದು ವಿದ್ಯಾರ್ಥಿಗಳಿಗೆ ಪ್ರತ್ಯಕ್ಷ [illegible] ದೃಷ್ಟಿಯಿಂದ ಮಾಡಲಾಗಿದೆ. ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಯೋಗ್ಯ ನಾಗರಿಕರಾಗ [illegible] ತಿಯಾಗುವಂತೆಯೂ ವಾರದಲ್ಲಿ ಒಂದು ಗಂಟೆ ನೀತಿ ಪಾಠಗಳನ್ನು ಕೊಡಬೇಕೆಂದು ನಿರ್ಣಯಿಸಿರುವುದು. ಇಂಟರ್‌ಮಿಡಿಯೇಟಿನಲ್ಲಿ ಈ ತನಕ ಮುಗಿಸುವದನ್ನು ಎರಡೇ ವರ್ಷಗಳಾಗಿ ವಿಂಗಡಿಸುತ್ತಿದ್ದರು. ಇನ್ನು ಮುಂದೆ ಮೂರು ವರ್ಷಗಳಾಗಿ ವಿಂಗಡಿಸಲಾಗುವುದು.

ವರ್ಣಭೇದ ಧೋರಣೆಯ ಖಂಡನೆ.

ದಕ್ಷಿಣ ಆಫ್ರಿಕ ಸರಕಾರದ ವರ್ಣಭೇದ ನೀತಿಯನ್ನು ಖಂಡಿಸುವ ಹಾಗೂ ಅಂಥ ನೀತಿಯ ವಿರುದ್ಧ ಅಲ್ಲಿಯ ಜನರು ಹೂಡಿದ ಹೋರಾಟಕ್ಕೆ ಬೆಂಬಲ ನೀಡುವ ಗೊತ್ತುವಳಿಯೊಂದನ್ನು ಜಲಂಧರದಲ್ಲಿ ಮೂರು ದಿನಗಳ ವರೆಗೆ ಸೇರಿ ತಾ. ೧೫ರಲ್ಲಿ ಮುಕ್ತಾಯಗೊಂಡ ಅಖಿಲ ಭಾರತ ಶಾಂತಿ ಕಾಂಗ್ರೆಸ್ ಸ್ವೀಕರಿಸಿತು. ಕೊರಿಯ ದಲ್ಲಿ ಶಾಂತಿ ಸ್ಥಾಪನೆಗಾಗಿ ಭಾರತವು ಕ್ರಮ ಕೈಕೊಳ್ಳಲು ಮುಂದಾಗಬೇಕೆಂದೂ ಅದು ಕೇಳಿಕೊಂಡಿದೆ. ಬ್ರಿಟಿಷ್ ಸೈನ್ಯದಲ್ಲಿ ಗೂರ್ಖಾ ಜನರನ್ನು ಭಾರತದ ಗಡಿಯಲ್ಲಿಯೇ ಭರ್ತಿ ಮಾಡುತ್ತಿರುವದನ್ನು ನಿಲ್ಲಿಸಬೇಕೆಂದೂ ಪರಿಷತ್ತು ಪಡೆದ ಗೊತ್ತುವಳಿಯ ಮೂಲಕ ಭಾರತ ಸರಕಾರಕ್ಕೆ ಕೇಳಿಕೊಂಡಿದೆ.

ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಲನವನ್ನು ಈ ತಿಂಗಳ ತಾ. ೧೬ರಂದು ಭಾರತದ ಉಪಾಧ್ಯಕ್ಷ ಡಾ| ರಾಧಾಕೃಷ್ಣನವರು ಉದ್ಘಾಟಿಸಿದರು.

ಸರ್ವ ಸಾಧಾರಣ ಎಲ್ಲಾ ವಿಮಾನ ಕಂಪೆನಿಗಳು ತಮ್ಮ ಗೃಹೋದ್ಯಮ ದರವನ್ನು ಏರಿಸುವ ನಿರ್ಣಯವನ್ನು ಕೈಕೊಂಡಿರುವುವು. ವಿವರಗಳನ್ನು ಪ್ರಕಟಿಸಿಲ್ಲ.

"ಕೊಡಗು" ಪತ್ರಿಕೆಯ ಏಜೆಂಟರು ಶ್ರೀ ಚೆಟ್ಟಿಕಿರ ಪೊನ್ನಪ್ಪನವರು, ನಾಪೋಕ್ಲಿಗೆ

—೦೦೦—

ಯುದ್ಧ ತಪ್ಪಿಸುವುದೇ ಭಾರತದ ಧೋರಣೆ.

ಅದು ಅನ್ಯಾಯಕ್ಕೆ ಬಗ್ಗಲಾರದು.

ಜಾಗತಿಕ ಯುದ್ಧವನ್ನು ತಪ್ಪಿಸುವುದೇ ಭಾರತದ ನಿಶ್ಚಿತ ಧೋರಣೆ ಎಂಬುದಾಗಿ ತಿಳಿಸುತ್ತ, ಜಗತ್ತಿನೊಳಗೆ ಯಾವುದೇ ಅನ್ಯಾಯಕ್ಕೆ ಭಾರತವು ಬಗ್ಗಲಾರದೆಂದೂ ಕಾಂಗ್ರೆಸ್ ಅಧ್ಯಕ್ಷ ಪಂಡಿತ ಜವಾಹರಲಾಲ್ ನೆಹರೂರವರು ಎ. ಐ. ಸಿ. ಸಿ ಸಭೆಯಲ್ಲಿ ಭಾರತದ ವಿದೇಶ ಧೋರಣೆಯನ್ನು ಕುರಿತು ಹೇಳಿದರು.

ಅ. ಭಾ. ಕಾಂಗ್ರೆಸ್ ಸಮಿತಿಯು ಸುಂದರವಾಗಿ ರಚಿಸಲ್ಪಟ್ಟ ಸಭಾಸ್ಥಾನದಲ್ಲಿ ಸೇರಿತು. ಸಮಿತಿಯ ೩೯೬ ಮಂದಿ ಸದಸ್ಯರ ಪೈಕಿ ೨೩೦ ಮಂದಿ ಹಾಜರಿದ್ದರು. ಸುಮಾರು ೭೦೦೦ ಮಂದಿ ಪ್ರೇಕ್ಷಕರು ಕುಳಿತಿದ್ದರು.

ಸ್ವಾಗತಾಧ್ಯಕ್ಷರ ಭಾಷಣ

ವಂದೇ ಮಾತರಂ ಹಾಡಿದ ತರುವಾಯ ಸ್ವಾಗತ ಸಮಿತಿಯ ಅಧ್ಯಕ್ಷರಾದ ಕನ್ಹಯಲಾಲ ಖಾದಿವಾಲರು ಚಿಕ್ಕ ಸ್ವಾಗತ ಭಾಷಣದಲ್ಲಿ ಭಾರತದ ಸಂಸ್ಕೃತಿಗೆ ಮಧ್ಯ ಭಾರತವು ಮಾಡಿದ ಸೇವೆಯನ್ನೂ ಸ್ವಾತಂತ್ರ್ಯ ಚಳವಳದಲ್ಲಿ ಮಧ್ಯ ಭಾರತವು ವಹಿಸಿದ್ದ ಭಾಗವನ್ನೂ ವಿವರಿಸಿ ಮಧ್ಯ ಭಾರತದ ಸಮಸ್ಯೆಯನ್ನು ತಿಳಿಯುವುದಕ್ಕೆ ಭಾರತದ ಪ್ರತಿನಿಧಿಗಳಿಗೆ ಅವಕಾಶವುಂಟಾಯಿತೆಂದೂ ಬ್ರಿಟಿಷರ ಕಾಲದಲ್ಲಿ ಮಧ್ಯ ಭಾರತದ ಕಡೆಗೆ ಲಕ್ಷ್ಯ ಕೊಟ್ಟಿರಲಿಲ್ಲವೆಂದೂ ಹೇಳಿದರು. ಮಧ್ಯ ಭಾರತದ ದೇಶೀಯ ರಾಜರುಗಳ ಸಂಸ್ಥಾನಗಳನ್ನು ಮಧ್ಯ ಭಾರತದೊಡನೆ ಸೇರಿಸಿ ಒಂದುಗೂಡಿಸಿದುದಕ್ಕಾಗಿ ಮಧ್ಯ ಭಾರತವು ದಿವಂಗತ ಸರದಾರ ಪಟೇಲರಿಗೆ ಕೃತಜ್ಞತೆಯನ್ನು ಅರ್ಪಿಸುವುದೆಂದೂ ಹೇಳಿದರು. ಪಂಡಿತ ಜವಾಹರರ ಕುರಿತು 'ಶಕ್ತಿಯ ಸ್ತಂಭ'ವಾಗಿರುವರೆಂದು ಹೇಳಿದರು.

ಅಧ್ಯಕ್ಷರ ಭಾಷಣ

ಸ್ವಾಗತಾಧ್ಯಕ್ಷರ ಭಾಷಣವಾದ ತರುವಾಯ ಕಾಂಗ್ರೆಸ್ ಅಧ್ಯಕ್ಷರಾದ ಪಂಡಿತ ಜವಾಹರಲಾಲ ನೆಹರೂಗಳು ಒಂದು ತಾಸಿನ ವರೆಗೆ ಭಾಷಣ ಮಾಡಿದರು.

ಆರಂಭದಲ್ಲಿ ಪಂಡಿತ ಜವಾಹರಲಾಲ ನೆಹರೂಗಳು ಅಂತರಾಷ್ಟ್ರ ಧೋರಣೆಯ ಕುರಿತು ತಯಾರಿಸಲಾಗಿದ್ದ ಕರಡು ಠರಾವಿನ ಮಹತ್ವವನ್ನು ವಿವರಿಸಿ ಅದನ್ನು ಸಮಿತಿಯು ಚರ್ಚಿಸಿ ಮಂಜೂರು ಮಾಡಬೇಕೆಂದರು. "ನಾವು ಒಳದೇಶದ ವಿಚಾರಕ್ಕಿಂತಲೂ ಅಂತರ ರಾಷ್ಟ್ರ ವಿಚಾರದಲ್ಲಿ ಹೆಚ್ಚು ಆಸಕ್ತಿ ಕಾರ್ಯಕಾರಿ ಸಮಿತಿಯವರು ತೋರಿಸುತ್ತಾರೆಂದು ಆಲೋಚಿಸಬಹುದು. ಆದರೆ ನನ್ನ ವಿಷಯದಲ್ಲಿಯೇ ಧ್ಯಾನಗೊಂಡು ಕರ್ತವ್ಯವಿದೆ. ಅಂತರ ರಾಷ್ಟ್ರವಿಚಾರವು ನನಗೆ ಮಾತ್ರವೇ ಅಲ್ಲ ಅದು ಲೋಕಕ್ಕೆ ಮತ್ತು ನಮಗೆ ಅಗತ್ಯವಾಗಿ ಬೇಕಾದುದು. ಲೋಕದಲ್ಲಿ ಶಾಂತಿಯಾಗಲೀ ಯುದ್ಧವಾಗಲೀ ಆಗದಿರುವುದಿಲ್ಲ. ಯಾವ ಸಂಗಡವೊಡನೆಯೂ ಸೇರುವುದಿಲ್ಲವೆಂಬ ಧೋರಣೆಯು ನಮ್ಮದಾದರೂ ನಾವು ಪ್ರಪಂಚ ರಾಷ್ಟ್ರಗಳಿಂದ ಪ್ರತ್ಯೇಕವಾಗಿ ಇರಲು ಸಾಧ್ಯವಿಲ್ಲ. ನಾವು ಲೋಕದಲ್ಲಿ ದೊಡ್ಡ ವಿಪತ್ತುಂಟಾಗದಂತೆ ಮಾಡಲು ಸಾಧ್ಯವಿರುವ ಪ್ರಯತ್ನಗಳನ್ನು ಮಾಡುತ್ತೇವೆ.

ಮುಂದುವರಿಸುತ್ತಾ ಪಂಡಿತ ನೆಹರೂಗಳು ದಕ್ಷಿಣ ಆಫ್ರಿಕದಲ್ಲಿ ನಡೆಯುತ್ತಿರುವ ಸತ್ಯಾಗ್ರಹದ ಕುರಿತು ಹೇಳಿದರು. ಭಾರತದ ಸ್ವಾತಂತ್ರ್ಯ ಸಮರ ದಕ್ಷಿಣ ಆಫ್ರಿಕದಲ್ಲಿ ಮಹಾತ್ಮರ ನಾಯಕತ್ವದಲ್ಲಿ ಆರಂಭವಾಯಿತೆಂದು ಹೇಳಬಹುದೆಂದರು. ದಕ್ಷಿಣ ಆಫ್ರಿಕದ ಕುರಿತು ಠರಾವು ಬರಲಿದೆಯೆಂದೂ ಅದನ್ನು ಸರ್ವಾನುಮತದಿಂದ ಅ. ಭಾ. ಕಾಂ ಕಮಿಟಿಯು ಮಂಜೂರು ಮಾಡಬೇಕೆಂದೂ ಸೂಚಿಸಿ ದಕ್ಷಿಣ ಆಫ್ರಿಕದ ವರ್ಣದ್ವೇಷದ ವಿಷಯವಾಗಿ ಏನು ಮಾಡಬೇಕೆಂಬುದು ಲೋಕಕ್ಕೆ ತಿಳಿದಿಲ್ಲ. ಶಾಂತಿಯಿಂದ ಈ ಪ್ರಶ್ನೆ ಬಗೆಹರಿಯಬೇಕೋ ಅಥವಾ ರಕ್ತಪಾತದಿಂದಲೋ? ಎಂಬ ಕುರಿತು ಪ್ರಪಂಚವು ಇಂದು ಚಿಂತೆಗೊಳಗಾಗಿದೆ. ಆಫ್ರಿಕದ ಪ್ರಶ್ನೆಯನ್ನು ಶಾಂತ ರೀತಿಯಿಂದ ಬಗೆಹರಿಸಲು ಸಾಧ್ಯವಿದೆಯೆಂದು ಹೇಳಿದರು.

ಅಂತರಾಷ್ಟ್ರ ವಿಚಾರವೂ ದಕ್ಷಿಣ ಆಫ್ರಿಕದ ವಿಚಾರವೂ ಮುಖ್ಯವೆಂದು ಸಾರಿದರೂ ದೇಶದ ಆರ್ಥಿಕ ಸುಧಾರಣೆಯು ಅತೀ ಮುಖ್ಯವಾಗಿದೆ.

ಭಾಷಣಕ್ಕೆ ತಡೆ.

ಪಂಡಿತ ನೆಹರೂಗಳು ಭಾಷಣದ ಮಧ್ಯದಲ್ಲಿ ತಮ್ಮ ಭಾಷಣ ನಿಲ್ಲಿಸಬೇಕಾಯಿತು. ಮಳೆ ಬಂದುದರಿಂದ ಚಪ್ಪರಕ್ಕೆ ಹಾಕಿದ ತಗಡುಗಳು ದೊಡ್ಡ ಶಬ್ದ ಮಾಡಿದ್ದರಿಂದ ಅವರ ಮಾತು ಕೇಳಿಸುತ್ತಿರಲಿಲ್ಲ. ಹಾಗಾಗಿ ಮಾತನ್ನು ಸ್ವಲ್ಪ ನಿಲ್ಲಿಸಿ ಮಳೆಗೆ ಸ್ವಾಗತವಿತ್ತರು.

ಮಳೆನಿಂತ ಮೇಲೆ ತಮ್ಮ ಮಾತನ್ನು ಮುಂದರಿಸುತ್ತಾ ಪ್ರಾಂತ ಪ್ರಾಂತಗಳೊಳಗೆ ಸ್ಪರ್ಧೆ ನಡೆಯಕೂಡದೆಂದೂ ದೇಶದ ಕೆಲವೆಡೆಗಳಲ್ಲಿ ಹಿಂಸಾಕೃತ್ಯಗಳು ಕಾಣಿಸಿಕೊಳ್ಳುತ್ತಿವೆಯೆಂದೂ ಹೇಳಿದರು.

ಬಂಗಾಳ—ಬಿಹಾರಗಳ ಚರ್ಚೆಯು ಇಷ್ಟು ಉಗ್ರ ರೂಪ ತಾಳಿದುದಕ್ಕೆ ವ್ಯಸನ ಸೂಚಿಸಿದರು. ದೇಶದ ವಿಭಜನೆಯಿಂದ ಪೂರ್ವ ಪಶ್ಚಿಮ ಬಂಗಾಳವು ತುಂಬಾ ಕಷ್ಟನಷ್ಟಗಳಿಗೆ ಗುರಿಯಾಗಿದೆ. ಪೂರ್ವಬಂಗಾಳದಿಂದ ಹೆಚ್ಚು ಮಂದಿ ನಿರಾಶ್ರಿತರು ಪಶ್ಚಿಮ ಬಂಗಾಳಕ್ಕೆ ಬಂದಿದ್ದಾರೆ. ಪಶ್ಚಿಮ ಬಂಗಾಳದ ಕಷ್ಟವು ನನಗೆ ತಿಳಿದಿದೆ. ಒಂದೇ ದೇಶಕ್ಕೆ ಸೇರಿದ ಎರಡು ಪ್ರಾಂತ್ಯಗಳು ಪರಸ್ಪರ ಟೀಕಿಸಿಕೊಳ್ಳುವುದನ್ನು ನೋಡಿ ಆಶ್ಚರ್ಯಕ್ಕೊಳಗಾಗಿದ್ದೇನೆ. ಎರಡು ದೇಶಗಳೊಳಗೆ ವಿವಾದಗಳಿದ್ದರೆ ಅದನ್ನು ಶಾಂತ ರೀತಿಯಿಂದ ಬಗೆಹರಿಸಿಕೊಳ್ಳಬೇಕು. ಅದಕ್ಕಾಗಿ ಶಾಂತ ವಾತಾವರಣವನ್ನು ಕಲ್ಪಿಸಬೇಕು.

ಕಾಂಗ್ರೆಸ್ ಕಾರ್ಯ ಸ್ವಾತಂತ್ರ್ಯ ದೊರೆತೊಡನೆ ಮುಗಿದಿಲ್ಲ. ದೊರೆತ ಸ್ವಾತಂತ್ರ್ಯವನ್ನು ಇನ್ನೂ ಬಲಪಡಿಸಬೇಕು. ದೇಶದ ಮುಂದಿರುವ ಆರ್ಥಿಕ ಪ್ರಶ್ನೆಗಳನ್ನು ಸುಧಾರಿಸಿಕೊಳ್ಳಬೇಕು. ಈ ಕೆಲಸಗಳು ಕಾಂಗ್ರೆಸಿಗೆ ಮಾತ್ರ ಸಾಧ್ಯ.

ಅಧ್ಯಕ್ಷರ ಭಾಷಣ ಮುಗಿದ ಮೇಲೆ ಠರಾವುಗಳು ಒಂದೊಂದಾಗಿ ಮಂಡಿಸಲ್ಪಟ್ಟವು.

ನೆಹರೂರವರ ಭಾಷಣದ ನಂತರ ಈ ಕೆಳಗಿನ ಕಾಂಗ್ರೆಸ್ ಘಟನಾ ತಿದ್ದುಪಡಿಗಳು ಮಂಜೂರಾದುವು.

ಕಾಂಗ್ರೆಸ್ ಘಟನೆಯ ೩೦ ಸೂತ್ರಗಳಲ್ಲಿ ೧೬ ಸೂತ್ರಗಳನ್ನು ಎ. ಐ. ಸಿ. ಸಿ. ಯು ಇಂದು ತಿದ್ದುಪಡಿ ಮಾಡಿತು. ವರ್ಕಿಂಗ್ ಕಮಿಟಿಯವರು ತಯಾರಿಸಿದ ತಿದ್ದುಪಡಿಗಳ ಚರ್ಚೆಯಾದ ನಂತರ ಕೆಳಗಿನ ತಿದ್ದುಪಡಿಗಳು ಸ್ವೀಕೃತವಾದುವು.

೧) ಕೇಂದ್ರ ಹಾಗೂ ಶಾಸನ ಸಭೆಗಳಲ್ಲಿಯ ಕಾಂಗ್ರೆಸ್ ಪಕ್ಷದ ಸದಸ್ಯರು ಸಂಸ್ಥೆಯ ಸಮಿತಿಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಲು ಸಹಾಯಕ ಸದಸ್ಯತ್ವ ಕೊಡುವುದು.

ಕಾಂಗ್ರೆಸ್ ಕಾರ್ಯ ಸಮಿತಿಯಲ್ಲಿ ಮೂರರಲ್ಲಿ ಒಂದು ಪಾಲಿನಷ್ಟು ಮಂತ್ರಿಗಳಿರಬೇಕೆಂಬ ಘಟನೆಯ ನಿಯಮವನ್ನು ತೆಗೆದುಹಾಕಲಾಯಿತು.

ಕಾಂಗ್ರೆಸ್ ಉಪಾಧ್ಯಕ್ಷರಿರಬೇಕೆಂದು ಶ್ರೀ ಹನುಮಂತಯ್ಯನವರು ಸೂಚಿಸಿದಾಗ ಸದ್ಯಕ್ಕೆ ಅದರ ಅವಶ್ಯಕತೆ ಇಲ್ಲವೆಂದೂ ಶ್ರೀ ನೆಹರೂರವರು ಹೇಳಿದ್ದರಿಂದ ಸೂಚನೆಯು ಹಿಂತೆಗೆಯಲ್ಪಟ್ಟಿತು.

ಶ್ರೀಗಳಾದ ಮಶ್ರೂವಾಲ, ಹರನಾರಾಯಣ ವಾಜಪೇಯಿ, ವೇದಾಚಲ ಮೊದಲಿಯಾರ್, ಬಿ. ಎಸ್. ಮಾಹೇಶ್ವರಿ, ಛೋಟೆಲಾಲ ಗುಪ್ತ ಈ ಮಹಾನಿಯರ ನಿಧನದ ಬಗ್ಗೆ ಗೊತ್ತುವಳಿಗಳನ್ನು ಸದಸ್ಯರು ಎದ್ದುನಿಂತು ಸ್ವೀಕರಿಸಿದರು.

ಕೊಡಗಿನ ಗ್ರಾಮಾಂತರ ರಸ್ತೆಗಳಿಗೆ ೧॥ ಲಕ್ಷ ರೂ. ಮಂಜೂರಾತಿ

ಈ ಕೆಳಗೆ ಕಾಣಿಸಿದ ಗ್ರಾಮ ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿಗಾಗಿ ೧೯೫೨–೫೩ರ ಸಾಲಿನಲ್ಲಿ ಖರ್ಚು ಮಾಡಲು ಕೊಡಗು ಸರಕಾರವು ತೀರ್ಮಾನಿಸಿರುವುದು.

ನಂ.	ಹೆಸರು	ಮೊಬಲಗು
1.	ಮರಗೋಡು ರಸ್ತೆ	10,000
2.	ಕುಂಬಳದಾಳು ,,	7,000
3.	ಬಳಗೇರಿ ರಸ್ತೆ	2.000
4.	ಪೆರಾಜೆ ರಸ್ತೆ	1,500
5	ಚೆಂಬು ರಸ್ತೆ	3000
6.	ಬಟ್ಟಕಪ್ರುರು ರಸ್ತೆ	500
7.	ಅವಂದೂರು ,,	500
8.	[illegible] ಒಳರಸ್ತೆ	500
9.	ಉದ್ಯೋಗ್ ಮಟ್ಟಿ	1,000
10.	ಮೇಕೇರಿ–ಕಾಟಕೇರಿ ಸೇತುವೆ	—1,000
11.	ಚೆಂಬು ಪಾಲ	4,500
12.	[illegible] ಪಾಲ (ಅಬಿದಾರಿ) (ಡಿ. ಬಿ ಫಂಡಿನಿಂದ)	—3500+500
13.	ಕುಟ್ಟ–ಹೊಳೆ ಪಾಲ	3000
14.	ಮಡೆ ರೋಡು	500
15.	ಒಕ್ಕೆತೋಡು ಸೇತುವೆ	1,750
16.	[illegible] ಸೇತುವೆ (ಪೂರ್ತಿಗೊಳಿಸಲು)	—750
17.	ಪೊಳ್ಳಿಬೆಟ್ಟ–ಗಟ್ಟದಳ್ಳ ರಸ್ತೆ	—17,000
18.	ಪೊಳ್ಳಿಬೆಟ್ಟ–ಚೆನ್ನಂಗಿ ರಸ್ತೆ	600
19.	[illegible]–ಚೆನ್ನಂಗಿ ರಸ್ತೆ	—600
20.	ಚೆನ್ನಂಗಿ ಸೇತುವೆ	800
21.	[illegible]	300
22.	ಕಾನಂಗಾಡು–ವಾಲ್ನೂರು ರಸ್ತೆ	—700
23.	ಕಡಂಗ–ಪಾರಾಣೆ ರಸ್ತೆ	5 000
24.	ಕಕ್ಕಬೆ–ನೆಲಜಿ ರಸ್ತೆ (ರಿಪೇರಿಗಾಗಿ)	8,000
25.	ಬಾವಲಿ–ಕಿರುಂದಾಡು ರಸ್ತೆ	—2,000
26.	ಮಾರಿಕಡು ಸೇತುವೆ (ಕೊಳಕೇರಿ)	3,000
27.	ನಾಪೋಕ್ಲು–ನೆಲಜಿ ರಸ್ತೆ	3,000
28.	ಚೆನ್ನನ್‌ಕೋಟೆ–ಬಾಳೆಲೆ ರಸ್ತೆ (ಡಿ. ಬಿ. ಫಂಡಿನಿಂದ)	—5000+7000
29.	ಪೊನ್ನಂಪೇಟೆ–ನಲ್ಲೂರು ರಸ್ತೆ	—2,000
30.	ಪೊನ್ನಂಪೇಟೆ–ಕಾನೂರು ರಸ್ತೆ	—5000
31.	ಪೊನ್ನಂಪೇಟೆ–ಹಳ್ಳಿಗಟ್ಟು ರಸ್ತೆ	—2,000
32	ಬಾಳಾಜಿ ಪಾಲ	2,000
33.	ನಡುಗುಂಡಿ ಪಾಲ (ಕುತ್ತುನಾಡು)	—4 225
34.	ಟಿ ಶೆಟ್ಟಿಗೇರಿ–ಬಿರುನಾಣಿ ಸೇತುವೆ	—30,000
35.	ಕಾನೂರು ಬಾಳೆಕೋವು ರಸ್ತೆ ಕೋತೂರಿಗಾಗಿ	4775
36.	ಕಣ್ಣಪುಲಿಕೋಟೆಗೆ ಹೋಗುವ ಬಂಡಿಕಡು ಸೇತುವೆ	5,000
37.	ಚೇರಂಗಾಲ–ಸೇತುವೆ	2000
38.	ಉದಯನಪಾಲ–ಕಣ್ಣ ಪುಲಿಕೋಟು ಪಾಲ	2,000
39.	ತಣ್ಣಿಮಾನಿ ೨ ಪಾಲಗಳು	4000
	ಜುಮ್ಲಾ ರೂ.	1,50,000

ಪೆಕಿಂಗ್‌ನಲ್ಲಿ ತಾ. ೨ರಂದು ನಡೆಯಲಿರುವ ಶಾಂತಿ ಪರಿಷತ್ತಿಗೆ ಭಾರತದಿಂದ ೫೦ ಸದಸ್ಯರ ಶಿಷ್ಟ ಮಂಡಲವು ಹೋಗುವ ನಿರೀಕ್ಷೆ ಇದೆ.

॥ ಕ್ಷಯದ ಸೋಂಕನ್ನು ಹೇಗೆ ಕಂಡುಹಿಡಿಯಬಹುದು? ॥

(ಲೇ—ಡಾ. ಸಿ. ಆರ್. ಭಟ್, ಎಂ. ಬಿ. ಬಿ. ಎಸ್., ಟಿ. ಡಿ. ಡಿ.)

ಕ್ಷಯ ರೋಗವು ಮಕ್ಕಳಲ್ಲಿಯೂ ವಯಸ್ಕರಲ್ಲಿಯೂ ಸಾಮಾನ್ಯವಾಗಿ ಯಾವ ವಯಸ್ಸಿನಲ್ಲೂ ಕಂಡುಬರಬಹುದಾಗಿದೆ ಎಂಬುದನ್ನು ಈ ಮೊದಲೇ ನಾವು ತಿಳಿದಿರುವೆವು. ಒಬ್ಬ ಮನುಷ್ಯನಲ್ಲಿ ಕ್ಷಯ ರೋಗದ ಚಿಹ್ನೆಗಳು ಖಂಡಿತವಾಗಿಯೂ ಇವೆ ಎಂಬುದನ್ನು ನಾವು ಹೇಗೆ ತಿಳಿಯಬಹುದು? ರೋಗದ ಆರಂಭದ ದೆಸೆಯಲ್ಲಿ ನಿರ್ದಿಷ್ಟವಾಗಿ ಹೇಳುವುದು ಕಷ್ಟವಾಗಬಹುದು, ಆದರೆ ರೋಗವು ಬೆಳೆದ ಹಾಗೆಲ್ಲಾ ಅದರ ಲಕ್ಷಣಗಳನ್ನು ಗುರುತಿಸುವುದು ಸುಲಭವಾಗುವುದು. ಈ ರೋಗಕ್ಕೆ ಸಂಬಂಧಪಟ್ಟ ಲಕ್ಷಣಗಳು ಯಾವುವು ಎಂಬುದನ್ನು ತಿಳಿದರೆ ಮತ್ತು ಅವುಗಳನ್ನು ಗುರುತಿಸಲು ಪ್ರಯತ್ನಪಟ್ಟರೆ ರೋಗದ ಸೋಂಕನ್ನು ಸುಲಭವಾಗಿ ಕಂಡುಹಿಡಿಯಬಹುದು.

ಮಕ್ಕಳಲ್ಲಿ ಹೇಗೆ ಗುರುತಿಸಬಹುದು?

೧. ತೂಕ—ಐದು ವರ್ಷದ ಕೆಳಗಿನ ಮಕ್ಕಳು ಕ್ರಮವಾಗಿ ತೂಕದಲ್ಲಿ ಹೆಚ್ಚುತ್ತಿದ್ದಾರೆ; ಪ್ರಾಯ ಕಡಿಮೆಯಾದಷ್ಟು ತೂಕದ ವಾಡಿಕೆ ಹೆಚ್ಚು. ಒಂದು ಮಗುವಿನಲ್ಲಿ ದೀರ್ಘಕಾಲದ ವರೆಗೆ ತೂಕದಲ್ಲಿ ಏನೊಂದು ಏರಿಕೆ ಹೆಚ್ಚು ಕಂಡುಬಾರದಿದ್ದರೆ ಹೆತ್ತವರು ಆ ಮಗುವಿನ ಕುರಿತು ಜಾಗ್ರತೆ ವಹಿಸುವುದಿಷ್ಟ. ಆ ಮಗು ತೂಕದಲ್ಲಿ ಇಳಿಯುವುದೆಂದು ಕಂಡುಬಂದರೆ ಆ ಸ್ಥಿತಿ ಇನ್ನಷ್ಟು ಹಾಳು; ಅಂತಹ ಮಗುವನ್ನು ಕೂಡಲೇ ವೈದ್ಯರಿಂದ ಪರೀಕ್ಷಿಸತಕ್ಕದ್ದು.

೨. ಸಾಮಾನ್ಯ ಆರೋಗ್ಯ ಮತ್ತು ಚಟುವಟಿಕೆ.

ಬೆಳೆಯುತ್ತಿರುವ ಮಗು ಯಾವಾಗಲೂ ಚೇತನದಿಂದ ತುಂಬಿ ತುಳುಕಾಡುತ್ತಿದೆ. ಆಟದಲ್ಲಿ ಅದು ಆಸಕ್ತಿ ತೋರಿಸುವುದು. ಕ್ರಮಬದ್ಧವಾಗಿ ಅದು ನಿದ್ರೆ, ಆಹಾರ ಮತ್ತು ಆಟಗಳಲ್ಲಿ ಭಾಗವಹಿಸುವುದು. ಮಗುವಿನ ಸಾಮಾನ್ಯ ಆರೋಗ್ಯ ನೆಟ್ಟಗಿಲ್ಲದಿದ್ದರೆ ಅದು ಆಟದಲ್ಲಿ ಅಭಿರುಚಿ ತೋರಿಸದಿರಬಹುದು. ಯಾವಾಗಲೂ ಜೊಂಪು ಹಿಡಿದ ಹಾಗೆ, ಬೇಸರದಿಂದಿರುವಂತೆ ಕಂಡುಬರಬಹುದು. ಯಾವಾಗಲೂ ಸಿಡುಕು ತೋರಿಸಬಹುದು. ಅಲ್ಲದೆ ಆ ಮಗುವಿಗೆ ರಾತ್ರಿ ಕಾಲದಲ್ಲಿ ಸುಖನಿದ್ರೆ ದೊರೆಯದೆ, ಅದು ಆಗಾಗ ನಿದ್ದೆಯಲ್ಲಿ ಭಯಭ್ರಾಂತವಾದಂತೆ ಎದ್ದು ಕೂತುಕೊಳ್ಳಬಹುದು.

೩. ಬೆಳೆದ ಗ್ರಂಥಿಗಳು.

ದೇಹದ ಯಾವುದೇ ಭಾಗದಲ್ಲಿ ಗ್ರಂಥಿಗಳು (ಗ್ಲ್ಯಾಂಡ್ಸ್) ಬೆಳೆದುದು ಇಲ್ಲವೆ ದೊಡ್ಡದಾದುದು ಕಂಡುಬಂದರೆ ಅದನ್ನು ವೈದ್ಯರಿಂದ ಕೂಡಲೇ ಪರೀಕ್ಷಿಸಬೇಕು. ಸಾಮಾನ್ಯವಾಗಿ ಮಕ್ಕಳಲ್ಲಿ ಕುತ್ತಿಗೆಯ ಗ್ರಂಥಿಗಳು ಬೆಳೆದುದು ಕಂಡುಬರುತ್ತದೆ; ಇದು ಗ್ರಂಥಿಗಳಲ್ಲಿ ಕ್ಷಯದ ಸೋಂಕನ್ನು ಸೂಚಿಸಬಹುದು.

೪. ಜ್ವರ—ಆಗಾಗ ಜ್ವರ ಬರುವುದು, ಕೆಲ ಸಮಯ ನಿಂತಂತಾಗಿ ಪುನಃ ಕಾಣಿಸಿಕೊಳ್ಳುವುದು, ಆಗಾಗ ಶೀತದ ಬಾಧೆ ಈ ಲಕ್ಷಣಗಳು ಕಂಡು ಬಂದಾಗ ಮಗುವನ್ನು ವೈದ್ಯರಿಗೆ ತೋರಿಸಲು ಮರೆಯಬಾರದು.

೫. ದೀರ್ಘಕಾಲೀನ ಅತಿಸಾರ.

(ಕ್ರಾನಿಕ್ ಡಯೊರಿಯ) ಸಾಮಾನ್ಯ ಔಷಧೋಪಚಾರದಿಂದ ನಿಲ್ಲದ ದೀರ್ಘಕಾಲೀನ ಅತಿಸಾರವನ್ನು ಜಾಗ್ರತೆಯಾಗಿ ಪರೀಕ್ಷಿಸತಕ್ಕದ್ದು.

೬. ಹೊಟ್ಟೆಯು ಮಿತಿಮೀರಿ ಬೆಳೆದಿರುವುದು.

ವಯಸ್ಕರಿಗಿಂತ ಮಕ್ಕಳಲ್ಲಿ ಹೊಟ್ಟೆಯು ಹೆಚ್ಚು ಪ್ರಧಾನವಾಗಿದೆ. ಹೊಟ್ಟೆಯು ಸಾಮಾನ್ಯ ಮಿತಿಗಿಂತ ಅಧಿಕವಾಗಿ ಬೆಳೆದದ್ದು ಕಂಡುಬಂದರೆ ಅಂತಹ ಮಗುವನ್ನು ಕೂಡಲೇ ವೈದ್ಯರ ಪರೀಕ್ಷೆಗೊಳಪಡಿಸಬೇಕು. ಅಂತಹ ಸ್ಥಿತಿ ಕುಟಿಲವಾದ (ರಿಕೆಟ್) ಇಲ್ಲವೆ ದೀರ್ಘಕಾಲದ ಮಲೇರಿಯಾ ಅಥವಾ ಕರುಳು ಇಲ್ಲವೆ ಹೊಟ್ಟೆಯ ಗ್ರಂಥಿಗಳ ಸಂಬಂಧವಾದ ಕ್ಷಯದಿಂದ ಉಂಟಾದುದಿರಬಹುದು.

೭. ಚಿಕ್ಕಪುಟ್ಟ ಸ್ನಾಯುಗಳಿಂದುಂಟಾಗುವ ನ್ಯೂನತೆಗಳು.

ಮಕ್ಕಳ ಎಲುಬುಗಳು ವಯಸ್ಕರ ಎಲುಬಿನಷ್ಟು ಪಿಸುಕು ಬಿಟ್ಟು ಇರುವುದಿಲ್ಲ. ಆದ್ದರಿಂದ ಮೇಲಿಂದ ಕೆಳಗೆ ಬೀಳುವ ಚಿಕ್ಕಪುಟ್ಟ ಅಪಘಾತಗಳು ಸಂಭವಿಸುವಾಗ ವಯಸ್ಕರಲ್ಲಿ ಎಲುಬು ಸುಲಭವಾಗಿ ತುಂಡಾಗುವುದಿಲ್ಲ. ಆದರೆ ಎಲುಬು ಇಲ್ಲವೆ ಸಂಧು (ಜಾಯಿಂಟ್) ಕ್ಷಯರೋಗದ ಸೋಂಕಿನಿಂದ ನಿರ್ಬಲವಾಗಿದ್ದರೆ, ಕಾಲು ಜಾರಿ ಬೀಳುವ ಚಿಕ್ಕ ಪುಟ್ಟ ಅಪಘಾತವೇ ಅಸ್ಥಿಭಂಗಕ್ಕೆ (ಫ್ರ್ಯಾಕ್ಚರ್) ಕಾರಣವಾಗಬಹುದು. ಅಂತಹ ನಿರ್ಬಲ ಮಕ್ಕಳಿಗೆ ಕೂಡಲೇ ಯೋಗ್ಯ ಚಿಕಿತ್ಸೆ ನಡೆಸತಕ್ಕದ್ದು.

ವಯಸ್ಕರಲ್ಲಿ ರೋಗದ ಲಕ್ಷಣಗಳು.

ಈ ಅಧ್ಯಾಯದಲ್ಲಿ ನಾವು ಮುಖ್ಯವಾಗಿ ಶ್ವಾಸಕೋಶ ಸಂಬಂಧವಾದ ಕ್ಷಯದ ಲಕ್ಷಣಗಳ ಕುರಿತಾಗಿಯೇ ವಿವೇಚಿಸುವ. ಇತರ ಅವಯವಗಳ ಸಂಬಂಧವಾದ ಲಕ್ಷಣಗಳನ್ನು, ಆ ಅವಯವಗಳ ಕುರಿತಾದ ಸೋಂಕಿನ ಕುರಿತು ವಿವೇಚಿಸುವಾಗ ಸೂಚಿಸುವೆವು. ಶ್ವಾಸಕೋಶ ಸಂಬಂಧವಾದ ಕ್ಷಯದ ಸಾಮಾನ್ಯವಾದ ಲಕ್ಷಣಗಳೆಂದರೆ ಜ್ವರ ಮತ್ತು ಬೆವರುವುದು, ಕೆಮ್ಮು, ಕಫದಲ್ಲಿ ರಕ್ತ, ನಾಡಿ ಬಡಿತ ಮತ್ತು ಉಸಿರಾಟದ ಕ್ರಮವು ತೀವ್ರಗೊಳ್ಳುವುದು, ನಿಶ್ಶಕ್ತಿ, ಹಸಿವೆ ಇಲ್ಲದಿರುವುದು ಇತ್ಯಾದಿ.

ಜ್ವರ:—ಜ್ವರವು ಕ್ಷಯರೋಗದ ಏಕಮಾತ್ರ ಪ್ರಧಾನ ಲಕ್ಷಣವಾಗಿರುವುದರಿಂದ ಈ ವಿಷಯ ಕುರಿತು ವಿವರಣೆ ಆವಶ್ಯಕ. ದೀರ್ಘಕಾಲದ ವರೆಗೆ ಶರೀರದ ಸಾಮಾನ್ಯ ಉಷ್ಣಕ್ಕಿಂತ ಹೆಚ್ಚಿಗೆ ಉಷ್ಣವು ಕಂಡುಬರುವುದೇ ಜ್ವರವೆಂದು ಕರೆಯಲ್ಪಡುವುದು. ವೈದ್ಯರು ಉಷ್ಣವು ಹೆಚ್ಚಿದೆಯೋ ಎಂಬುದನ್ನು ಶಸ್ತ್ರಾಗತ (ಕ್ಲಿನಿಕಲ್) ಇಲ್ಲವೆ ಡೊಕ್ಟರ್ಸ್ ಥರ್ಮಾಮೀಟರ್ ಎಂದು ಕರೆಯಲ್ಪಡುವ ತಾಪಮಾಪಕ ಯಂತ್ರದಿಂದ ಅಳೆಯಬಹುದಾಗಿದೆ. ಜ್ವರ ಅಳೆಯುವ ಈ ತಾಪಮಾಪಕ ಯಂತ್ರವು (ಥರ್ಮಾಮೀಟರ್) ಒಳ್ಳೆಯ ದರ್ಜೆಯದಾಗಿದ್ದು ಸರಿಯಾದ ಅಳತೆ ತೋರುವಂತಹದಾಗಿರಬೇಕು. ಉಪಯೋಗಕ್ಕೆ ಮೊದಲು ಅದು ಸ್ವಚ್ಛವಾಗಿರಬೇಕು. ಮತ್ತು ಒಣಗಿರಬೇಕು. ಅದರಲ್ಲಿರುವ ಪಾದರಸದ ಮಟ್ಟ ೯೫ F ಗುರುತಿಗಿಂತ ಕೆಳಗಿರಬೇಕು. ಈ ತಾಪಮಾಪಕ ಯಂತ್ರದ ಅಡಿಭಾಗವನ್ನು (ಪಾದರಸವಿರುವ ಭಾಗ) ಬಾಯಿಯೊಳಗೆ ಇಲ್ಲವೆ ಗುದದ್ವಾರದೊಳಗೆ (ರೆಕ್ಟಂ) ಇಟ್ಟರೆ ದೇಹದ ಸರಿಯಾದ ಉಷ್ಣ ಅಳೆಯಬಹುದಾಗಿದೆ. ಕಂಕುಳಲ್ಲಿ ಅದನ್ನು ಇಟ್ಟರೆ ತೃಪ್ತಿಕರವಾದ ಫಲಿತಾಂಶ ದೊರೆಯುವುದಿಲ್ಲ. ಒಂದು ವೇಳೆ ಹಾಗೆ ಉಷ್ಣ ಅಳೆಯುವುದಿದ್ದರೆ, ತಾಪಮಾಪಕ ಯಂತ್ರವನ್ನು ಇಡುವ ಮೊದಲು ಕಂಕುಳನ್ನು ಚೆನ್ನಾಗಿ ಉಜ್ಜಿ, ತಾಪಮಾಪಕ ಯಂತ್ರವು ನೇರಾಗಿ ಮುಟ್ಟುವ ಚರ್ಮ ಒಣಗಿರುವಂತೆ ಜಾಗ್ರತೆ ವಹಿಸಬೇಕು. ತಾಪಮಾಪಕ ಯಂತ್ರವನ್ನು ಯಾವುದೇ ಭಾಗದಲ್ಲಿ ಉಪಯೋಗಿಸಿದರೂ ಅದು ಆ ಭಾಗದಲ್ಲಿ ಕನಿಷ್ಟ ಪಕ್ಷ ೫ ನಿಮಿಷಗಳಷ್ಟಾದರೂ (ತಾಪಕ ಯಂತ್ರದಲ್ಲಿ ½ ನಿಮಿಷ ಎಂದು ಬರೆದಿದ್ದರೂ) ಇರಬೇಕು. ಆಗ ತಾನೇ ಆಧಾರಭೂತವಾದ ಅಳತೆ ಸಿಗಬಹುದು. ಬಾಯಿಯಲ್ಲಿ ತಾಪಕ ಯಂತ್ರವನ್ನು ಇಡುವುದಿದ್ದರೆ ಆಹಾರ ಸೇವಿಸುವುದಕ್ಕೆ ಮುಂಚೆ ಇಲ್ಲವೆ ಸೇವಿಸಿದ ಒಂದು ತಾಸಿನ ನಂತರ ಇಡತಕ್ಕದ್ದು. ಕಾರಣ ಆಹಾರ ಸೇವಿಸುವುದರಿಂದ ಬಾಯಿಯ ಉಷ್ಣದಲ್ಲಿ ಮಾರ್ಪಾಟುಗಳಾಗುವದಾಗಿದೆ. ಬಿಸಿಯಾದ ಪಾನೀಯವನ್ನು ಕುಡಿದ ಕೂಡಲೇ ತಾಪಮಾಪಕ ಯಂತ್ರ ಉಪಯೋಗಿಸಿದರೆ ಅದು ಹೆಚ್ಚಿಗೆ ಉಷ್ಣ ತೋರಿಸಬಹುದು. ಅದೇ ರೀತಿ ತಂಪಾದ ಪಾನೀಯ ಸೇವಿಸಿ ಇಲ್ಲವೆ ಬಾಯನ್ನು ತಣ್ಣೀರಿನಿಂದ ಮುಕ್ಕಳಿಸಿ ಒಡನೆ ತಾಪಮಾಪಕ ಯಂತ್ರ ಉಪಯೋಗಿಸಿದರೆ ಉಷ್ಣದಲ್ಲಿ ಇಳಿತವು ಕಂಡುಬರಬಹುದು. ಹೆಚ್ಚು ಹೊತ್ತು ಮಾತನಾಡುವುದರಿಂದ ಬಾಯಿಯ ಉಷ್ಣ ಏರುತ್ತದೆ. ಈ ಕಾರಣಗಳಿಂದ ಗಿತ ತಾಪಮಾಪಕ ಯಂತ್ರವನ್ನು ಉಪಯೋಗಿಸುವಾಗ ಬಹಳ ಜಾಗ್ರತೆ ವಹಿಸುವುದವಶ್ಯ. ಬಾಯಿಯ ಮೂಲಕ ಉಷ್ಣವನ್ನು ಅಳೆಯುವುದಿದ್ದರೆ ಒಬ್ಬನು ನಿದ್ದೆಯಿಂದ ಎಚ್ಚರವಾಗಿ ೫ ನಿಮಿಷಗಳನಂತರ ಇನ್ನೂ ಹಾಸಿಗೆಯಲ್ಲಿದ್ದಾಗಲೇ ಅಳೆಯುವುದು ಒಳ್ಳೆಯದು. ಈ ರೀತಿ ಐದು ನಿಮಿಷ ಹೊತ್ತು ಕಾಯುವುದಕ್ಕೆ ಕಾರಣವಿದೆ. ಬಾಯಿಯಿಂದ ಶ್ವಾಸ ಎಳೆಯುವವರಲ್ಲಿ ಬಾಯಿಯ ಉಷ್ಣದಲ್ಲಿ ಮಾರ್ಪಾಟು ಕಂಡುಬರಬಹುದು. ರಾತ್ರಿ ಹೊತ್ತೆಲ್ಲಾ ಬಾಯಿಯ ಮೂಲಕವೇ ಗಾಳಿ ಸೇವಿಸುತ್ತಿದ್ದುದರಿಂದ ಬಾಯಿಯ ಉಷ್ಣ ಸಹಜ (ನಾರ್ಮಲ್) ಉಷ್ಣಕ್ಕಿಂತ ಕಡಿಮೆ ಕಂಡುಬರಬಹುದು. ಬಾಯಿಯನ್ನು ಮುಚ್ಚಿ ೫ ನಿಮಿಷಗಳ ವರೆಗೆ ಶ್ವಾಸೋಚ್ಛ್ವಾಸಗಳು ನಡೆದ ನಂತರ ಉಷ್ಣವು ಸಹಜಸ್ಥಿತಿಗೆ ಬರುವುದು. ಆ ಕಾರಣವನ್ನು [illegible] ವಾಗಿಯೇ ಉಷ್ಣವನ್ನು ಅಳೆದು ಆ ಅಳತೆಯನ್ನು (ರೀಡಿಂಗ್) ಬರೆದಿಡಬೇಕು. [illegible] ಉಷ್ಣ [illegible] ಯುವಾಗ ತಾಪಮಾಪಕ ಯಂತ್ರದ ಅಡಿಭಾಗ ನಾಲಗೆಯ ಅಡಿಯಲ್ಲಿ ಭದ್ರವಾಗಿದ್ದು ಬಾಯಿಯನ್ನು ಮುಚ್ಚಿರುವುದು ಅವಶ್ಯ.

ದೇಹದ ಉಷ್ಣದಲ್ಲಿ ಏರುವಿಕೆ ದೀರ್ಘಸಮಯದ ವರೆಗೆ ಕಂಡುಬಂದರೆ ಮಾತ್ರ ಅದನ್ನು 'ಜ್ವರ' ವೆನ್ನಬಹುದು. ಬೇಸಿಗೆ ಕಾಲದಲ್ಲಿ ಇಲ್ಲವೆ ಕದಗಳನ್ನು ಮುಚ್ಚಿದ ಕೋಣೆಯಲ್ಲಿ ಹೆಚ್ಚು ಸಮಯ ಕುಳಿತಿದ್ದು ಹೊರಗೆ ಗಾಳಿಗೆ ವ್ಯಾಯಾಮದ್ದು ವಿರಾಮ ದೊರೆಯದಿದ್ದಾಗ ವೈದ್ಯರು ಬೆಚ್ಚಗಾಗಬಹುದು. ಇದು ಜ್ವರವಲ್ಲ. ಇದೇ ರೀತಿ ಮನಸ್ಸು ಉದ್ರೇಕಗೊಂಡಾಗ ದೇಹದ ಉಷ್ಣವು ಅಲ್ಪಾವಧಿಯ ಮಟ್ಟಿಗೆ ಏರುವ ಸಂಭವವಿದೆ.

ಸಹಜ ಉಷ್ಣಕ್ಕಿಂತಲೂ ಉಷ್ಣವು ಏರಿದೆ ಎಂದು ತಿಳಿಯಬೇಕಾದರೆ ದೇಹದ ಸಹಜ ಉಷ್ಣ ಎಷ್ಟು ಎಂದು ತಿಳಿಯುವುದು ಅವಶ್ಯ. ೯೮.೪ F ಇದನ್ನು ಸಾಮಾನ್ಯವಾಗಿ ಸಹಜ ಉಷ್ಣ (ನಾರ್ಮಲ್ ಟೆಂಪರೇಚರ್) ಎಂದು ತಿಳಿದು [illegible] ತಾಪಮಾಪಕ ಯಂತ್ರಗಳಲ್ಲಿ ಆ ಅಂಕೆಯ ಎದುರುಗಡೆಯಲ್ಲೇ ಸಹಜ (ನಾರ್ಮಲ್) ಗುರುತು ಇರುತ್ತದೆ. ಹೀಗೆ ೯೮.೪ F ಇರುವಲ್ಲಿ ಸಹಜ ಉಷ್ಣದ ಗುರುತು ಇರುವ ವಿಷಯವು [illegible] ವೆನ್ನಬೇಕಾಗಿದೆ. ಕಾರಣ [illegible] ಈ ಗುರುತು [illegible] ಜ್ವರ [illegible] ಎಷ್ಟೋ ಮಂದಿ ಇದ್ದಾರೆ.

'ನಾರ್ಮಲ್' ಎಂಬ ಸಹಜ ಉಷ್ಣದಿಂದ ಹೆಚ್ಚಿಗೆ ಉಷ್ಣ ತೋರಿಸಿದೊಡನೆ ಜ್ವರವೇ ಕಾರಣವಾಗಬೇಕಾಗಿಲ್ಲ. ೯೮.೪ F ಮಾದರಿ ಸ್ವರೂಪ; ಅದು ಆರೋಗ್ಯವಂತರಾದ ವ್ಯಕ್ತಿಗಳ ಸಹಜ ಉಷ್ಣಗಳ ಒಂದು ಸರಾಸರಿ ಅಷ್ಟೆ. ಆರೋಗ್ಯ ಪೂರ್ಣನಾದ ವ್ಯಕ್ತಿಯಲ್ಲಿ ನಿಜ [illegible] ದೇಹದ ಉಷ್ಣವು ದಿನದ ಬೇರೆ ಬೇರೆ ಹೊತ್ತುಗಳಲ್ಲಿ ಬದಲುಗೊಳ್ಳುತ್ತದೆ. ಬೆಳಿಗ್ಗೆ [illegible] ೯೭.೩ ರಿಂದ ೯೮.೦ F ವರೆಗೆ ಇರಬಹುದು. [illegible] ಗಂಟೆಯ ಹೊತ್ತಿಗೆ [illegible] ಏರಬಹುದು. ಆ ನಂತರ ೯೮.೮ F ವರೆಗೆ ಇರಬಹುದು. ಆ ನಂತರ ಅದು ಇಳಿಯ ತೊಡಗಿ ರಾತ್ರಿ ೮–೧೦ ಗಂಟೆಯ ಹೊತ್ತಿಗೆ ೯೭.೬ F ವರೆಗೆ ೩

ಷ್ಟು ಮುಂಜಾನೆ ೨ ಗಂಟೆಯ ಹೊತ್ತಿಗೆ ಕನಿಷ್ಠ ಮಿತಿಗೆ ಎಂದರೆ ೯೭.೨ ರಿಂದ ೯೭.೪F ವರೆಗೆ ಮುಟ್ಟಬಹುದು. ಹೀಗೆ ಉಷ್ಣವು ಸಹಜ ಉಷ್ಣವೆಂದು ಕರೆಯಲ್ಪಡುವ ೯೮.೪F ಗುರುತಿನಲ್ಲಾಗಲೀ ಬೇರಾವ ಗುರುತಿನಲ್ಲಾಗಲೀ ಏಕಪ್ರಕಾರ ಉಳಿಯುವುದಿಲ್ಲವೆಂದಾಯಿತು. ೨೪ ತಾಸುಗಳಲ್ಲಿ ಅದು ಬದಲಾವಣೆ ಹೊಂದುತ್ತಿರುವ ಅಂತರ ಸುಮಾರು ೧.೬ ರಿಂದ ೧.೯ ಡಿಗ್ರಿಗಳಷ್ಟಿರುವುದು. ಬೇಸಗೆಯಲ್ಲಿ ಉಷ್ಣವು ಸಾಮಾನ್ಯ ವ್ಯಕ್ತಿಯಲ್ಲಿ ಸುಮಾರು ೦.೨ಯಷ್ಟು ಹೆಚ್ಚಿಗೆ ಏರಬಹುದು.

ಸಂಪೂರ್ಣ ಆರೋಗ್ಯ ಉಳ್ಳ ಸ್ತ್ರೀಯರಲ್ಲಿ ಮುಟ್ಟಿನಿಂದಾಗಿಯೂ (ಮೆನ್ಸಸ್) ದೇಹದ ಉಷ್ಣದ ಮೇಲೆ ಬದಲಾವಣೆಗಳು ಕಂಡುಬರುತ್ತವೆ. ಮುಟ್ಟಿನ ಕಾಲದಲ್ಲಿ ಅದು ೦.೬ ರಿಂದ ೧.೦ ಡಿಗ್ರಿಯ ವರೆಗೆ ಸಾಮಾನ್ಯವಾಗಿ ಏರುತ್ತದೆ. ಆದರೆ ಕ್ಷಯರೋಗದ ಸೋಂಕುಳ್ಳ ಸ್ತ್ರೀಯರಲ್ಲಿ ಉಷ್ಣದಲ್ಲಿ ಈ ಬಗೆಯ ಮಟ್ಟು ಸಂಭವಿಸುವ ೩–೪ ದಿನಗಳ ಮುಂಚೆ ಮುಟ್ಟಿನ ಕಾಲದಲ್ಲಿ ಇಲ್ಲವೆ ನಂತರ ಕಂಡು ಬರಬಹುದು.

'ಪ್ರ'

ಶ್ರೀ ಕೃಷ್ಣಮಾಚಾರಿಯವರ ವಾದ ಸರಿಯಲ್ಲ.

ದಿ ಮುಕರ್ಜಿ ಮಾಲರ ಲೇಖನ.

ಕೈಮಗ್ಗಗಳಿಗೆ ಧೋತಿ ಸೀರೆಗಳ ತಯಾರಿಕೆಯನ್ನು ಕಾಯ್ದಿರಿಸಬೇಕೆಂಬ ಶ್ರೀ. ರಾಜಾಜಿಯವರ ಸೂಚನೆಯನ್ನು ಕೇಂದ್ರದ ವಾಣಿಜ್ಯ ಮಂತ್ರಿ ಶ್ರೀ. ಕೃಷ್ಣಮಾಚಾರಿಯವರು ನಿರಾಕರಿಸಿರುವುದು ಕೇವಲ ಕಪಟವಾದವೆಂದು, ದಿ ಮುಕರ್ಜಿ ಮಾಲರು ಮರಣಕ್ಕೆ ಮುಂಚೆ 'ಹರಿಜನ'ದ ಲೇಖನದಲ್ಲಿ ಕಾಣಿಸಿದ್ದಾರೆ.

ಮತ್ತು ಬಂಡವಲ ಶಾಹಿಗಳ ಹಾಗೂ ಗಿರಣಿ ಒಡೆಯರ ಸಂಯುಕ್ತ ವಿರೋಧವನ್ನು ಎದುರಿಸಲು ಸರಕಾರವು ಅಂಜುತ್ತಿದೆಯೆಂದವರು ಅಭಿಪ್ರಾಯಪಟ್ಟಿದ್ದಾರೆ.

ನಿರುದ್ಯೋಗಿಗಳ ದೃಷ್ಟಿಯಿಂದ ಕೈಮಗ್ಗದ ಉದ್ಯಮವು ಮಹತ್ವದ್ದೆಂದೂ, ಅನುಕೂಲ ಪರಿಸ್ಥಿತಿಯಿಲ್ಲವೆಂದು ನೇಕಾರರ ಕಲೆಯನ್ನು ಸದೆ ಬಡಿಯಬಾರದೆಂದೂ ಶ್ರೀ. ರಾಜಾಜಿಯವರು ಸೂಚನೆಯನ್ನು ಸ್ವೀಕರಿಸಿದರೆ ಧೋತರ ಸೀರೆಗಳ ಕೊರತೆಯುಂಟಾಗುವದೆಂದೂ, ಈ ಸಮಯದಲ್ಲಿ ಗಿರಣಿ ಒಡೆಯರಾದರೂ ಕಾಲಗತಿಯನ್ನು ಸ್ವೀಕರಿಸಬೇಕೆಂದೂ ಶ್ರೀ ಮುಕರ್ಜಿ ಮಾಲರು ಅಭಿಪ್ರಾಯಪಟ್ಟಿದ್ದಾರೆ.

ಬೊಕ್ಸಿಂಗ್ ಸ್ಪರ್ಧೆಯಲ್ಲಿ ಲೋಕಖ್ಯಾತಿ.

ಜೋಹಾನ್ಸ್ ಬರ್ಗಿನ ಫ್ಲೈವೈಟ್ ಚಾಂಪಿಯನನು ಜೇಕ್ ಟ್ಯೂಲಿ ಎಂಬ ೨೧ ವರ್ಷ ಪ್ರಾಯದ ಮುಷ್ಟಿಯುದ್ಧ ವಿಶಾರದನು ಬ್ರಿಟೀಷ್ ಮತ್ತು ಯುರೋಪಿಯನ್ ಚಾಂಪಿಯನ್ ಮಿ|ಟೆಡ್ಡಿಗಾರ್ಡ್ನರ್‌ನನ್ನು ಸೋಲಿಸಿ ಲೋಕದ ಚಾಂಪಿಯನ್ ಎಂಬ ಬಿರುದಿಗೆ ಅರ್ಹನಾದನು. ಲೆ ಫರಿಯ ಹದಿನೆರಡನೆಯ ರೌಂಡಿನಲ್ಲಿ ಸ್ಪರ್ಧೆಯಲ್ಲಿ ನಿಲ್ಲಿಸಲಾಯಿತು. ಸ್ಪರ್ಧೆಯ ಹಿಂದಿನ ದಿನದ ವರೆಗೆ ಟ್ಯೂಲಿಯ ಹೆಸರು ಇಂಗ್ಲಾಂಡಿನಲ್ಲಿ ಯಾರಿಗೂ ತಿಳಿದಿರಲಿಲ್ಲ. ಮರುದಿನವೇ ಲೋಕದ ಚೆಂಪಿಯನ್ ಖ್ಯಾತಿಗೆ ಪಾತ್ರನಾದ.

ಭಿಕ್ಷೆ ಕಸುಬು ಆಗಿರಬಾರದು.

ಮಥುರೆಯ ನಗರ ಸಭೆಯ ಕಡೆಯಿಂದ ಕಟ್ಟಿಸಲ್ಪಟ್ಟ ನೂತನ ಭಿಕ್ಷುಕ ವಸತಿಯ ಉದ್ಘಾಟನೆ ನಡೆಸುತ್ತಾ ಮಾನ್ಯ ಮುಂಬಯಿ ಗವರ್ನರರು "ಭಿಕ್ಷೆ ಬೇಡುವುದು ಆತ್ಮ ಗೌರವಕ್ಕೆ ವಿರೋಧವಾದುದು. ಸ್ವತಂತ್ರ ಪ್ರಜಾಪ್ರಭುತ್ವವಾದಿ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿ ತನ್ನ ಗೌರವವನ್ನು ರಕ್ಷಿಸಿಕೊಳ್ಳುವಂತೆ ನೋಡುವುದು ನಮ್ಮೆಲ್ಲರ ಹೊಣೆಯಾಗಿದೆ. ಭಿಕ್ಷೆ ಬೇಡುವವರು ಸೋಮಾರಿಗಳಾಗಿ ಜೀವಿಸಿ ಸಮಾಜಕ್ಕೆ ಹೊರೆಯಾಗಬಾರದು. ಅವರನ್ನು ಯೋಗ್ಯವಾದ ಕಲೆಗಳಿಗೂ ಗುಡಿ ಕೈಗಾರಿಕೆಗಳಿಗೂ ಹಚ್ಚುವುದು ತನ್ಮೂಲಕ ಸಮಾಜ ರಚನೆಯಲ್ಲಿ ಅವರದೂ ಪಾತ್ರ ಕೂಡುವಂತೆ ಮಾಡುವುದೇ ಇಂತಹ ವಸತಿಗಳ ಉದ್ದೇಶವಾಗಿದೆ. ಈ ವಸತಿಗಳು ಕೇವಲ ಪೈಗಳ್ಳರ ಆಶ್ರಯವಾಗಿರಬಾರದು. ಈ ಕಡೆ ಲೈಸೆನ್ಸ್ ವಿತರಣೆಗಳು ಹಾಕಿಕೊಟ್ಟ ತುರ್ತು ಅನುಸರಣೆಯಾಗಿದೆ." ಎಂದರು.

ಕೊಯಮುತ್ತೂರು ನಗರ ಸಭಾ ಚುನಾವಣೆ

ಕೊಯಮುತ್ತೂರಿನ ನಗರ ಸಭೆಯ ೩೬ ಸದಸ್ಯತನಗಳ ಪೈಕಿ ಒಂದು ಎಂಗ್ಲೊ ಇಂಡಿಯನ್ ಕಾದಿಡಲಾದ ಸ್ಥಾನಸಹಿತ ಐದು ಸ್ಥಾನಗಳು ಕಾಂಗ್ರೆಸ್ ಪಕ್ಷದವರಿಗೆ ಅವಿರೋಧವಾಗಿ ದೊರೆತಿವೆ. ಆದರೆ ಎಂಗ್ಲೋ ಇಂಡಿಯನ್ ಸ್ಥಾನ ಕಾದಿರಿಸುವುದು ತಪ್ಪೆಂದು ಹೈಕೋರ್ಟು ಅಜ್ಞಾಪಿಸಿದೆ. ಆದುದರಿಂದ ಆ ವಾರ್ಡಿನ ಎರಡೂ ಚುನಾವಣೆಗಳನ್ನು ಮುಂದರಿಸಲಾಗಿದೆ.

ಉತ್ತರ ಪ್ರದೇಶದಲ್ಲಿ ಭೀಕರ ಕ್ಷಾಮ

ಇತ್ತೀಚೆಗೆ ಉತ್ತರ ಪ್ರದೇಶದ ಬರಗಾಲ ಪೀಡಿತ ಪ್ರದೇಶಗಳನ್ನು ಸಂದರ್ಶಿಸಿ, ಅಲ್ಲಿಯ ಸ್ಥಿತಿಗತಿಗಳನ್ನು ಪ್ರತ್ಯಕ್ಷ ಕಂಡು ಬಂದ ಶ್ರೀ ಜೆ ಸಿ. ಕುಮಾರಪ್ಪನವರು ಜನರೆಲ್ಲರೂ ಅಸ್ಥಿ ಪಂಜರಗಳಂತೆ ಬಹಳ ಕಂಗಾಲು ಸ್ಥಿತಿಯಲ್ಲಿದ್ದಾರೆ. ಅಲ್ಲಿಯ ವಸತಿಗಳನ್ನು ಸಂದರ್ಶಿಸಿದಾಗ ಸ್ತ್ರೀಯರು ಕಣ್ಣೀರಿನಿಂದ ನನ್ನನ್ನು ಸ್ವಾಗತಿಸಿದರು. ಸಹಕಾರದ ಪರಿಹಾರ ಕಾರ್ಯ ಏನೂ ಸಾಲದು. ಸಾಮಾಜಿಕ ಭಾವನೆಯೇ ಜನರಲ್ಲಿ ಲೋಪವಾದಂತಹ ಭೀಕರ ಪರಿಸ್ಥಿತಿ ಅಲ್ಲಿ ಎದ್ದು ತೋರುತ್ತಿದೆ' ಎಂದಿರುವರು.

ಆಚಾರ್ಯ ವಿನೋಬಾ ಭಾವೆ.

ಮಳೆಗಾಲದ ೬೦ ದಿವಸಗಳ ವರೆಗೆ ಬನಾರಸದಲ್ಲಿಯೇ ಉಳಿದಿದ್ದ ಆಚಾರ್ಯ ವಿನೋಬಾ ಭಾವೆಯವರು ತಮ್ಮ ಭೂದಾನ ಯಜ್ಞದ ಪ್ರವಾಸವನ್ನು ಪುನಃ ಪ್ರಾರಂಭಿಸಿದರು. ಉತ್ತರ ಪ್ರದೇಶದ ೧೧ ತಿಂಗಳ ಪ್ರವಾಸ ಮುಗಿಸಿ ಸಪ್ಟಂಬರ ೧೪ರಂದು ಬಿಹಾರಕ್ಕೆ ತೆರಳುವರು. ಉತ್ತರ ಪ್ರದೇಶದಲ್ಲಿ ೩|| ಲಕ್ಷ ಎಕರೆ ಭೂಮಿಯನ್ನು ದೊರಕಿಸಿದ್ದು ರಾಷ್ಟ್ರದ ಮಹಾಕಾರ್ಯದ ಪ್ರಾರಂಭ ಸೂಚಕವಾದುದೆಂದು ಅವರು ತಮ್ಮ ನಿರ್ಗಮನ ಪೂರ್ವದಲ್ಲಿ ಕೊಟ್ಟ ಸಂದೇಶದಲ್ಲಿ ಹೇಳಿದ್ದಾರೆ.

---

೪ ಸ್ಥಳಗಳಿಗೆ ೧೨೦೦ ಅರ್ಜಿ

"ನಿರುದ್ಯೋಗದ ಭೀಕರ ಸ್ವರೂಪ

ಅಹ್ಮದಾಬಾದದ ಕಾರ್ಪೋರೇಶನ್ನಿನಲ್ಲಿಯ ನಾಲ್ಕು ಕಾರಕೂನಿಕೆ ಜಾಗೆಗಳಿಗೆ ನಾಲ್ಕುನೂರು ಪದವೀಧರರನ್ನೊಳಗೊಂಡು ಸುಮಾರು ಸಾವಿರದ ಇನ್ನೂರು ಯುವಕರು ಅರ್ಜಿ ಹಾಕಿದ್ದರೆಂದು ತಿಳಿದಿದೆ.

ಅದೇ ಕಾರ್ಪೋರೇಶನ್ನಿನಲ್ಲಿಯ ೧೭ ಕಾರಕೂನಿಕೆ ಜಾಗೆಗಳಿಗೆ ಈ ಮೊದಲು ಸುಮಾರು ಸಾವಿರದ ಐನೂರು ಜನರು ಅರ್ಜಿ ಹಾಕಿಕೊಂಡಿದ್ದರು.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :— ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು,
2. 12ನೇ ನಂಬರಿನ ಒಂಟಿ ಮತ್ತು ಜೋಡು ಕೊಳವಿನ ಕೋವಿಗಳು,
3. 12, 16 ಮತ್ತು 20ನೇ ನಂಬರಿನ ತೋಟಾಕ, ಕೋವಿ ಮದ್ದು ಮತ್ತು ಕೇಪುಗಳು.
4. 9″ × 4″ ಮತ್ತು 8″ × 4″ ಕಬ್ಬಿಣದ ತೊಲೆಗಳು (Girders)
5. 8′ × 3′ × 24 (Gage) ಕಬ್ಬಿಣದ ತಗಡುಗಳು.
6. $1\frac{3}{4}$″ × $\frac{5}{16}$″ ಉಕ್ಕಿನ ಪಟ್ಟಿಗಳು (Spring steel flates)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಆವಶ್ಯವಿರುವ ಕೋವಿಗಳಿಗೂ, ತೋಟಾಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು 'Special purchase permit' ಪಡೆಯಬೇಕಾಗಿದೆ.

ಎಂ. ಎಸ್ ಸೋಮಯ್ಯ, (ಗೌ. ಕಾರ್ಯದರ್ಶಿ)   ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್.)

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ. ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಮತ್ತು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶ್ಯೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಪಿಸ್. ಸೋಮಯ್ಯ, ಗೌ. ಕಾರ್ಯದರ್ಶಿ,   ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಏಜೆಂಟ್.

Edited· Printed and Published by P· I. Belliappa at 'Kodagu' Press, Mercara, for Kodagu' Ltd.

Licence No. 60.
Licenced to Post without Prepayment.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಕು ೩೦-೯-೧೯೪೯ನೇ ಶುಕ್ರವಾರ | ಸಂಚಿಕೆ ೧೭

— ಉದಿಸಿದ ಮಹಾಜ್ಯೋತಿ —

ಅಮರ ಮಹಾತ್ಮ ಗಾಂಧೀಜಿ.

ಲೇ:—ಶ್ರೀ ವಿ. ಎಸ್. ರಾಮಕೃಷ್ಣ, ಬಿ ಎಸ್ ಸಿ (ಆನರ್ಸ್) ಬಿ. ಟಿ.,

ಭಗವಂತನ ಉಪದೇಶವು ಸತ್ಯವಾದುದು. ಧರ್ಮಕ್ಕೆ ಗ್ಲಾನಿಯೊದಗಿದಾಗ ತಾನೇ ಒಂದಲ್ಲ ಒಂದು ರೂಪದಿಂದ ಅವತರಿಸಿ ಧರ್ಮ ಸಂಸ್ಥಾಪನೆ ಮಾಡುತ್ತೇನೆಂದು ಭಗವಾನ್ ಶ್ರೀ ಕೃಷ್ಣನು ಅರ್ಜುನನಿಗೆ ಬೋಧಿಸಿರುವನು. ಅಧರ್ಮವು ಪ್ರಬಲವಾಗಿ ಧರ್ಮವು ಮೋಹದಿಂದ ಮಬ್ಬಾಗಿ ಸ್ವತೇಜವನ್ನು ಕಳಕೊಂಡಾಗ ವಿಶ್ವಮಹಾಗರ್ಭದಲ್ಲಿ ಅಡಕವಾದ ಅದ್ಭುತ ಶಾಂತಿಯು ಪ್ರಸ್ಫುಟಿಸಿ ಧರ್ಮಕ್ಕೆ ಬಂದು ಕವಿದ ಕಳಂಕವನ್ನು ಹುಡಿಗಟ್ಟಿ ಮತ್ತೊಮ್ಮೆ ಧರ್ಮಮಹಾಶರೀರದ ಹೊಂಬೆಳಕು ರಂಜಿಸುವಂತೆ ಎಸಗುವುದು. ಯುಗಪುರುಷನೂ, ಅಮರನೂ, ಅಹಿಂಸಾಮೂರ್ತಿಯೂ ರಾಷ್ಟ್ರ ಜನಕನೂ ಕರ್ಮಯೋಗಿಯೂ ಆದ ಮಹಾತ್ಮಗಾಂಧೀಜಿ ಧರ್ಮದ ಪುನರುತ್ಥಾನಕ್ಕಾಗಿ ಉದಯಿಸಿದ ಭಾಸ್ಕರತೇಜದ ಮಹಾಜ್ಯೋತಿಯು. ಪರಮ ಅಪಾಯಕಾರಿಯೂ ರೋಮಾಂಚಕವೂ ಸತ್ಯ ಮಹಾಸಾಗರವನ್ನು ಶೋಧಿಸಿದುದರ ಪರಿಣಾಮವಾಗಿ ದೊರೆತ ಅಮೂಲ್ಯ ಭಂಡಾರವೂ ಆದ ಅದ್ಭುತ ಮಾನವನ ಜೀವನ ಚರಿತ್ರೆಯು ಭಾರತೀಯರ ಹೃದಯ, ಮನಸ್ಸು ಆತ್ಮಗಳನ್ನು ಪರಿಶುದ್ಧಗೊಳಿಸಿ ಭಾರತೀಯರು ಸದಾಚಾರ, ಸತ್ಯಾಗ್ರಹ, ಸದ್ಧರ್ಮಾವಲಂಬಿಗಳಾಗುವಂತೆ ಪ್ರೇರೇಪಿಸುತ್ತಿರುವುದು. ಪರರ ದುಃಖಕ್ಕಾಗಿ ತನ್ನ ದೇಹ ಜೀವನವನ್ನು ಪಣಕ್ಕಿಟ್ಟು ಧರೆಯೆರೆದ ಹುತಾತ್ಮನ ಜೀವನ ಚರಿತ್ರೆಯನ್ನು ಅರಿಸಿ ಆ ಸತ್ಯಶೋಧನೆಯಿಂದ ಪ್ರಸ್ಫುಟವಾದ ದಿವ್ಯತತ್ವದ ಹಾದಿಯಲ್ಲಿ ನಡೆದರೆ ಮಾತ್ರ ಭಾರತೀಯರ ಕಲ್ಯಾಣವಾಗಿ ಭಾರತಖಂಡವು ವಿಶ್ವಜನಾಂಗದಲ್ಲಿ ಕೀರ್ತಿಪುಂಜವಾದ ಸ್ಥಾನವನ್ನು ಗಳಿಸಿ ಕೀರ್ತಿಯ ಶಿಖರವನ್ನೇರಿ ಬೆಳಗಲು ಸಾಧ್ಯವಾಗುವುದು. ವಿಶ್ವವಂದ್ಯನಾದ ಮಹಾತ್ಮನ ಜೀವನಚರಿತ್ರೆಯ ಜ್ಞಾನದಿಂದ ಅನುಸರಿಸಲು ಅರಿಯದ ಭಾರತೀಯನಾರು?

ಭಗವಾನ್ ಬುದ್ಧನ ತರುವಾಯ ಪುಣ್ಯಭೂಮಿಯಾದ ಭರತ ಖಂಡದಲ್ಲಿ ಅವತರಿಸಿದ ಮಹಾಪುರುಷರಲ್ಲೆಲ್ಲಾ ಅದ್ವಿತೀಯರಾದ ಮೋಹನದಾಸ ಕರಮಚಂದ್ ಗಾಂಧಿಯವರು ಕಾಠಿಯವಾರ್ ಪ್ರದೇಶದ ಪೋರ್ ಬಂದರಿನಲ್ಲಿ ಕ್ರಿ. ಶ. ೧೮೬೯ರ ಅಕ್ಟೋಬರ್ ೨ರಲ್ಲಿ ಅವತರಿಸಿದರು. ಅವರ ಜನಕರಾದ ಕರಮಚಂದ್ ಗಾಂಧಿಯವರು ಸತ್ಯಸಂಧರೂ, ಉದಾರಿಗಳೂ, ನಿರ್ಮಲ ಜೀವಿಗಳೂ ಆಗಿದ್ದು ಪೋರ ಬಂದರಿನಲ್ಲಿ ದಿವಾನರಾಗಿದ್ದರು. ಯುಗಪುರುಷನನ್ನು ಪಡೆದ ಮಹಾಮಾತೆ ಪುತ್ಲೀಬಾಯಿಯವರು. ಪುತ್ಲೀ ಬಾಯಿಯು ಧಾರ್ಮಿಕ ಜೀವನವನ್ನು ನಡೆಸುತ್ತಿದ್ದ ಸಾಧ್ವಿಯಾಗಿದ್ದು ವ್ರತೋಪವಾಸಗಳಿಂದಲೂ ಭಗವತ್ಸೇವೆಯಿಂದಲೂ ದೇಹವನ್ನು ದಂಡಿಸುವ ಪರಮಭಕ್ತೆಯಾಗಿದ್ದರು. ಇಂತಹ ಧಾರ್ಮಿಕ ದಂಪತಿಗಳ ಉದರದಲ್ಲಿ ವಿಭೂತಿಪುರುಷರಾದ ಮೋಹನದಾಸರು ಜನ್ಮತಾಳಿ ತಮ್ಮ ಬಾಲ್ಯವನ್ನು ಪೋರ್ ಬಂದರಿನಲ್ಲೇ ಕಳೆದರು.

ಕರಮಚಂದರು ರಾಜಕೋಟೆಯಲ್ಲಿ ಅಧಿಕಾರಸ್ವೀಕರಿಸಿದಾಗ ಮೋಹನದಾಸರೂ ತಮ್ಮ ಜನಕರೊಂದಿಗೆ ರಾಜಕೋಟೆಗೆ ತೆರಳಿ ಅಲ್ಲೀ ಪ್ರಾಥಮಿಕ, ಮಾಧ್ಯಮಿಕ, ಹಾಗೂ ಪ್ರೌಢ ಶಿಕ್ಷಣವನ್ನು ಪಡೆದರು. ತೀರಾ ಚಿಕ್ಕ ವಯಸ್ಸಿನಲ್ಲೇ ಅವರು ಸತ್ಯಸಂಧರಾಗಿದ್ದು ಅವರಿಗೆ ಹಿರಿಯರಿಂದ ಮನ್ನಣೆ. ಪ್ರದರ್ಶಿಸುತ್ತಿದ್ದ ಅಶ್ಲೀಲ ನಾಟಕ ಪ್ರದರ್ಶನಗಳನ್ನು ತಿರಸ್ಕಾರಭಾವದಿಂದ ಕಾಣುತ್ತಿದ್ದರು. ಶ್ರವಣ ಪಿತೃಭಕ್ತಿಯನ್ನು ಹರಿಶ್ಚಂದ್ರನ ಸತ್ಯಸಂಧತೆಯನ್ನೂ ಮೋಹನದಾಸರು ಮೆಚ್ಚಿದರು. ತಾನೂ ಹರಿಶ್ಚಂದ್ರನಂತೆ ಸತ್ಯಪಾಲಕನಾಗಬೇಕೆಂಬ ನಿರ್ಧಾರವನ್ನವರು ಆ ಎಳೆಯ ವಯಸ್ಸಿನಲ್ಲೇ ಮಾಡಿಕೊಂಡರು.

ಆದರೆ ಪ್ರಲೋಭನೆಗಳು ಮೋಹನದಾಸರ ಎಳೆಯ ಜೀವನವನ್ನು ಪ್ರವೇಶಿಸಿದುವು. ದುರ್ಮಾರ್ಗ ಸ್ನೇಹಿತರು ಅವರ ದುಷ್ಟಮಾರ್ಗಕ್ಕೆ ಎಳೆದು ಮಾಂಸಾಹಾರ ಧೂಮಪಾನ, ಕಳ್ಳತನ ಮುಂತಾದ ದುಶ್ಚಟಗಳನ್ನು ಅವರಿಗೆ ಕಲಿಸಿದರು. ಮೋಹನದಾಸರು ಆತ್ಮಶಕ್ತಿಗೆ ಎಳೆತನದಿಂದಲೂ ಅನುಸರಿಸಿ ನಡೆಯುವವರಾದ್ದರಿಂದ ಈ ಪ್ರಲೋಭನೆಗಳನ್ನು ಪ್ರತಿಭಟಿಸಿ ವಿಜಯಿಗಳಾದರು. ಇದೇ ಸಮಯದಲ್ಲಿ ಹದಿಮೂರು ವರ್ಷದ ಮೋಹನದಾಸರಿಗೆ ಅಷ್ಟೇ ವಯಸ್ಸಿನ ಎಳೆಯ ಬಾಲಕಿಯಾದ ಅದರ್ಶನಾರಿ ಕಸ್ತೂರಿಬಾಯಿಯವರೊಡನೆ ವಿವಾಹವು ನಡೆದು ಹೋಯಿತು. ಮೋಹನದಾಸ ಗಾಂಧಿಯವರ ತನ್ನ ಹೆಂಡತಿಯು ಸದಾ ತನ್ನ ಜೀವನದ ಒಡನಾಡಿಯಾಗಿರಬೇಕೆಂದೂ ತಾನು ಹೇಳಿದ ಮಾತಿಗೆ ಅವಳು ಪ್ರತಿ ಹೇಳಬಾರದೆಂದೂ ತನ್ನ ಆಜ್ಞೆಗೆ ಸ್ವಾತಂತ್ರ್ಯವಾಗಿ ಅವಳು ವರ್ತಿಸಬಾರದೆಂದೂ ಭಾವಿಸಿದ್ದರು. ಕಸ್ತೂರಿಬಾಯಿಯವರು ಗಾಂಧೀಜೀಯವರ ತಾರುಣ್ಯದ ಧೋರಣೆಯನ್ನು ಪರಮ ಸಹನೆಯಿಂದ ಸಹಿಸಿಕೊಂಡು ಉದಾತ್ತನಾದ ಲೋಕವಂದ್ಯನ ಧರ್ಮಪತ್ನಿಯಾಗಿ ವಿಶ್ವವಿಖ್ಯಾತೆಯಾದರು.

ಗಾಂಧೀಜೀ ರಾಮನಾಮದ ಮಹಿಮೆಯನ್ನು ತನ್ನ ಪೋಷಕಳಾದ ರಂಭಾ ಎಂಬ ದಾದಿಯಿಂದ ಎಳೆ ಪ್ರಾಯದಲ್ಲೇ ತಿಳಿದರು. ರಾಮಾಯಣ, ಭಾಗವತ, ಮಹಾಭಾರತ ಮುಂತಾದ ಗ್ರಂಥಗಳನ್ನು ಓದಿ ಕೇಳಿ ಅವರಲ್ಲಿ ಧಾರ್ಮಿಕ ಭಾವನೆಯು ವಿಕಸಿಸಿತು. ಮನುಸ್ಮೃತಿ ಮುಂತಾದ ಪ್ರಾಚೀನ ಗ್ರಂಥಗಳನ್ನು ಓದುತ್ತಿದ್ದಂತೆ ಅವರಲ್ಲಿ ನಿರೀಶ್ವರಭಾವನೆಯೂ ಬೇರೂರದಿರಲಿಲ್ಲ. ಮತೀಯ ಭಾವನೆಗಳನ್ನು ತರ್ಕಿಸತೊಡಗಿದ ಒರೆಗಲ್ಲಿಗೆ ಹಚ್ಚಿ ಸರಿಯೆಂದು ಕಂಡು ಬಂದುದನ್ನು ಮಾತ್ರ ಒಪ್ಪಿಕೊಳ್ಳಲು ಗಾಂಧೀಜಿ ತಿಳಿದರು.

ಗಾಂಧಿಜಿ ಕ್ರಿ. ಶ. ೧೮೮೭ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಭಾವನಗರದ ಕಾಲೇಜಿಗೆ ಪ್ರವೇಶಿಸಿದರು. ಆದರೆ ಕಾಲೇಜಿನ ಪಾಠ ಪ್ರವಚನಗಳು ಅವರಿಗೆ ಕಷ್ಟವಾಗಿ ಕಂಡುಬಂದುವು. ಐದು ತಿಂಗಳ ಶಿಕ್ಷಣ ಮುಗಿದೊಡನೆ ಮನೆಗೆ ಹಿಂದಿರುಗಿದ ಗಾಂಧೀಜಿ ತಮ್ಮ ಹಿತೈಷಿಗಳೊಬ್ಬರ ಸಲಹೆಯಂತೆ ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರ್ ಪದವೀ ಪರೀಕ್ಷೆಗೆ ಓದಲು ನಿರ್ಧರಿಸಿದರು. ಆಗಾಗಲೇ ಅವರ ಜನಕರು ಸ್ವರ್ಗವಾಸಿಗಳಾದುದರಿಂದ ತಮ್ಮ ಜನನಿಯಿಂದ ಅನುಜ್ಞೆಯನ್ನು ಸ್ವೀಕರಿಸಿ ಮದ್ಯಪಾನ ಮಾಡುವುದಿಲ್ಲವೆಂದೂ, ಮಾಂಸಭಕ್ಷಣವಿಲ್ಲವೆಂದೂ ಪರಸ್ತ್ರೀಯರನ್ನು ಮೋಹಿಸುವುದಿಲ್ಲವೆಂದೂ ಮಾತಿಗೆ ಭಾಷೆಯಿತ್ತು ಆಂಗ್ಲದೇಶಕ್ಕೆ ಪ್ರಯಾಣ ಬೆಳೆಸಿದರು. ಆಗಾಗಲೇ ಕಸ್ತೂರಿಬಾಯಿಯವರು ಪ್ರಥಮ ಪುತ್ರನನ್ನು ಹಡೆದಿದ್ದರು. ಪತ್ನೀಪುತ್ರರನ್ನು ಅಗಲಿ ಮೋಹನದಾಸರು ಕಡಲಿನಾಚೆಗೆ ಪ್ರಯಾಣ ಬೆಳೆಸಬೇಕಾಯಿತು. ಆಂಗ್ಲದೇಶಕ್ಕೆ ತನ್ನ ೧೯ನೆಯ ವಯಸ್ಸಿನಲ್ಲೇ ತೆರಳಿದ ಗಾಂಧೀಜಿ ಮೂರು ವರ್ಷದ ವ್ಯಾಸಂಗ ಮುಗಿಸಿ ಕ್ರಿ. ಶ. ೧೮೯೧ರಲ್ಲಿ ಭಾರತಕ್ಕೆ ಹಿಂದಿರುಗಿ ಬಂದರು.

ಇಂಗ್ಲೆಂಡಿನಲ್ಲಿ ವ್ಯಾಸಂಗವಮಾಡುತ್ತಿದ್ದಾಗಲೇ ಗಾಂಧೀಜಿ ತಮ್ಮ ಪ್ರತಿಜ್ಞೆಯನ್ನು ಒರೆಗಿಕ್ಕುವ ಹಲವು ಸಂದಿಗ್ಧ ಪರಿಸ್ಥಿತಿಗಳು ಪ್ರಾಪ್ತವಾದುವು. ಅವುಗಳೆಲ್ಲವನ್ನೂ ಅವರು ಉತ್ತೀರ್ಣರಾಗಿ ಇಸ್ಲಾಹಾರದ ಕುರಿತು ದೀರ್ಘವಾದ ಶೋಧನೆಗಳನ್ನು ನಡೆಸಿದರು. ಈ ಕಾಲದಲ್ಲೇ ಅವರಿಗೆ ಥಿಯಾಸಫಿ ಸಂಘದ ಕೆಲವು ಮಹನೀಯರ ಸ್ನೇಹ ಒದಗಿ ಅವರು ಪರಮ ಪಾವನವಾದ ಭಗವದ್ಗೀತೆಯನ್ನು ಪಠಿಸಿದರು. ಭಗವದ್ಗೀತೆಯ ಸ್ಥಿತಪ್ರಜ್ಞನ ಲಕ್ಷಣಗಳು ಅವರನ್ನು ಆಳವಾಗಿ ಆಕರ್ಷಿಸಿದುವು. ಗೀತಾಧ್ಯಯನದಿಂದಲೇ ಅವರು ಮಹಾ ಪ್ರತಿಭಾಶಾಲಿಗಳಾದ ನಿಷ್ಕಾಮ ಕರ್ಮಯೋಗಿಗಳಾಗಿ ಸ್ಥಿತಪ್ರಜ್ಞರಾದ ಮಹಾತ್ಮರಾದರು. ಗೀತೆಯೊಂದಿಗೆ ಗಾಂಧೀಜಿ ಬೈಬಲ್, ಲೈಟ್ ಆಫ್ ಏಶಿಯಾ, ಕೊರಾನ್ ಮುಂತಾದ ಗ್ರಂಥಗಳನ್ನು ಅಭ್ಯಸಿಸಿದರು. ಆ ಮರ್ಮಾತ್ಮ ಕ್ರಿಸ್ತ ಕರ್ತವ್ಯವಾದಪ್ರ ಬುದ್ಧನ ತ್ಯಾಗ ಗಳ ವ್ಯಾಪಕ ಪುರುಷನಾದ ಭಗವಂತನನ್ನು ಅವರು ಸರ್ವದ ಸಂಬಿ ಉಪಾಸಿಸಲು ಪ್ರಾರಂಭಿಸಿದರು.

ಸ್ವದೇಶಕ್ಕೆ ಮರಳಿದ ಮೇಲೆ ಬೊಂಬಾಯಿಯಲ್ಲಿಯೂ ರಾಜಕೋಟೆಯಲ್ಲಿಯೂ ಮೋಹನದಾಸರು ನ್ಯಾಯವಾದಿಯಾಗಿ ಉದ್ಯೋಗ ನಡೆಸಿದರು. ಆದರೆ ಅವರ ಭಾಗ್ಯಲಕ್ಷ್ಮಿ ಅವರಲ್ಲಿ ಹರಸಲಿಲ್ಲ. ಆ ಜೀವನದಲ್ಲಿ ಹಿರಿದಾದೊಂದು ಬದಲಾವಣೆ ತೋರುವ ದಿನವು ಸಮೀಪಿಸುತ್ತಿತ್ತು. ದಕ್ಷಿಣ ಆಫ್ರಿಕದಲ್ಲಿದ್ದ ಧನಿಕ ವರ್ತಕರೊಬ್ಬರ ದಾವೆಯೊಂದರ ಸಂಬಂಧವಾಗಿ ವಕಾಲತ್ತು ನಡೆಸಲು ಗಾಂಧೀಜಿ ಕ್ರಿ. ಶ. ೧೮೯೩ರ ಏಪ್ರಿಲಿನಲ್ಲಿ ದಕ್ಷಿಣ ಆಫ್ರಿಕಕ್ಕೆ ಪ್ರಯಾಣ ಬೆಳೆಸಿದರು. ದಕ್ಷಿಣ ಆಫ್ರಿಕದಲ್ಲಿ ವಾಸವಾಗಿದ್ದ ತೋಟಗಾರ ಗಾಂಧಿಯವರು ಕೆಲವೇ ದಿನಗಳಲ್ಲಿ ಅಲ್ಲಿನ ವಾಸವೇ ಸಾಕಾಗುವದೆಂದು ನಿರ್ಣಯಿಸಿದರು. ಕಷ್ಟಕರ ಬಾಳುವೆಯನ್ನು ತಪ್ಪಿಸಲು ಅವರು ಆಫ್ರಿಕದಿಂದ ಹಿಂತಿರುಗಲು ನಿರ್ಧರಿಸಿದರು. ಡರ್ಬನ್ ನಗರಕ್ಕೆ ಬಂದಾಗ ಅವರು ಪ್ರವಾಸಿಗರ ಕಳಪೆ ನಗರ ಪ್ರವೇಶದಲ್ಲಿ ಮೊದಲೇ ಆ ಭಾರತ ಪ್ರವಾಸಿಯೊಂದು ಸಂಪ್ರದಾಯ ಇತ್ತು.

ದಕ್ಷಿಣ ಆಫ್ರಿಕದ ಐರೋಪ್ಯ ನಿವಾಸಿಗಳಾದ ಬಿಳಿಯರು ದಕ್ಷಿಣ ಆಫ್ರಿಕದಲ್ಲಿ ನೆಲೆಸಿದ್ದ ಭಾರತೀಯರನ್ನು ಕನಿಷ್ಠ ದೃಷ್ಟಿಯಿಂದ ಕಾಣುತ್ತಿದ್ದರು. ದಕ್ಷಿಣ ಆಫ್ರಿಕದ ಸಂಪದಭಿವೃದ್ಧಿಗೆ ಕಾರಣರಾದ ಭಾರತೀಯರು ತಮ್ಮ ಕೂಲಿಕೆಲಸ ಮುಗಿದೊಡನೆ ದೂರವಾದರೋ ಉದ್ಯಮವನ್ನು ಕೈಕೊಳ್ಳಬಾರದೇ ಭೂಮಿಯನ್ನು ಕೊಂಡುಕೊಳ್ಳುವ ಜೀವನವು ದಕ್ಕಾಗಲೀ ಬಿಳಿಯರು ಅವಕಾಶಕೊಡುತ್ತಿರಲಿಲ್ಲ. ಬಿಳಿಯರ ವಾಹನಗಳಲ್ಲಾಗಲೀ, ಅವರಿಗೆಂದು ಮೀಸಲಾದ ರೈಲಿನ ವಿಭಾಗಗಳಲ್ಲಾಗಲೀ, ವಿಹಾರ ವನಗಳಲ್ಲಾಗಲೀ ಭಾರತೀಯರಿಗೆ ಪ್ರವೇಶವಿರಲಿಲ್ಲ. ಸ್ವಲ್ಪವೂ ನಿರ್ದಾಕ್ಷಿಣ್ಯವೂ ಆದ ಈ ಪರಿಸ್ಥಿತಿಯನ್ನು ಸಹಿಸುತ್ತಿದ್ದ ಭಾರತೀಯರನ್ನು ಬಿಳಿಯರು ವಿವಿಧ ರೀತಿಯಿಂದ ದಂಡಿಸುತ್ತಲಿದ್ದರು. ಅವರ ಮೇಲೆ ಅನ್ಯಾಯವಾದ ತೆರಿಗೆಗಳನ್ನು ಹಾಕಿ ಭಾರತೀಯರಿಗೆ ಇಲ್ಲದೆ ಕಷ್ಟಗಳನ್ನು ಕೊಡುತ್ತಿದ್ದರು. ಭಾರತೀಯರೇ ಹೆಚ್ಚಾಗಿರುವ ಹಡಗೊಂದು ಡರ್ಬನ್ ಬಂದರಕ್ಕೆ ಬಂದಿರುವುದನ್ನರಿತ ಬಿಳಿಯರು ಹೆಚ್ಚು ಭಾರತೀಯರ ಆಫ್ರಿಕಕ್ಕೆ ಪ್ರವೇಶಿಸದಂತೆ ಮಾಡಿದರು. ಹ

ಹಾಗಿನ ಪ್ರಯಾಣಿಕರನ್ನು ಇಳಿಸಬಾರದೆಂದೂ ಹಡಗು ಭಾರತಕ್ಕೆ ಹಾಗೆಯೇ ಮರಳಬೇಕೆಂದೂ ಹಂಚಿಕೆಹೂಡಿದರು. ಈ ಪ್ರಯತ್ನದಲ್ಲಿ ವಿಫಲರಾದ ಬಿಳಿಯರು ಗಾಂಧೀಜೀ ಹಡಗಿನಿಂದ ದರ್ಬಾನಿನಲ್ಲಿ ಬಂದಿಳಿದಾಗ ಕೋಲಾಹಲವನ್ನೆಬ್ಬಿಸಿದರು. ಗಾಂಧೀಜಿಯವರನ್ನು ಕಲ್ಲು ಮೊಟ್ಟೆಗಳಿಂದ ಹೊಡೆದರು. ಅವರು ಗಾಡಿಯಲ್ಲಿ ಪ್ರಯಾಣಿಸುತ್ತಿದ್ದಾಗ ಗಾಡಿಯಿಂದೆಳೆದು ಅವರಿಗೆ ಬಲವಾದ ಏಟು ಕೊಟ್ಟರು. ಅವರ ಮುಖಕ್ಕೆ ಉಗುಳಿದರು. ರೈಲಿನಲ್ಲಿ ಎಲ್ಲರಂತೆ ಟಿಕೇಟು ಪಡೆದು ಕುಳಿತಿದ್ದ ಅವರನ್ನು ಏಳೆನ್ನುತ್ತ ತೊಂದರೆಗೊಳಗುಮಾಡಿದರು. ಗಾಂಧೀಜಿ ಕಷ್ಟಕಾರ್ಪಣ್ಯಗಳನ್ನು ತಾಳ್ಮೆಯಿಂದ ಸಹಿಸಿಕೊಂಡರು.

ಬಾದಾಹಬ್ದುಲ್ಲಾರವರ ಮೊಕದ್ದಮೆಯು ರಾಜಿಯಿಂದ ತೀರ್ಮಾನವಾಗಲು ದಕ್ಷಿಣ ಆಫ್ರಿಕದ ಭಾರತೀಯರ ಕಷ್ಟನಿಷ್ಠುರಗಳನ್ನು ಪರಿಹರಿಸುವುದೇ ತಮ್ಮ ಜೀವನದ ಮಹಾ ಉದ್ದಿಷ್ಟವೆಂದು ಗಾಂಧೀಜೀ ಅರಿತುಕೊಂಡರು. ಮತೀಯ ಗ್ರಂಥಗಳನ್ನು ತುಲನಾತ್ಮಕ ರೀತಿಯಲ್ಲಿ ಅಭ್ಯಸಿಸಿ ಮಹಾಸ್ಥಿತಪ್ರಜ್ಞರಾದರು. ದಕ್ಷಿಣ ಆಫ್ರಿಕದ ಭಾರತೀಯರನ್ನು ಸಂಘಟಿಸಿ ಸರಕಾರದ ಅನ್ಯಾಯ ಶಾಸನಗಳನ್ನು ಪ್ರತಿಭಟಿಸಲೋಸುಗ ಮಹಾ ಆಂದೋಲನ ಹೂಡಲು ೧೮೯೪ರಲ್ಲಿ ನೆಟಾಲ್ ಇಂಡಿಯನ್ ಕಾಂಗ್ರೆಸ್ಸೆಂಬ ಮಹಾಸಂಸ್ಥೆಯನ್ನು ಸ್ಥಾಪಿಸಿದರು. ಗಾಂಧೀಜಿಯ ಮೇಘಗಂಭೀರವಾಣಿಗೆ ದಕ್ಷಿಣ ಆಫ್ರಿಕದ ಭಾರತೀಯರು ವಿದ್ಯುದಾವೇಶಗೊಂಡಂತೆ ಎಚ್ಚತ್ತು ಸುಸಂಘಟಿತರಾದರು. ವಿಶ್ವದ ಇತಿಹಾಸದಲ್ಲೇ ಅಭೂತಪೂರ್ವವಾದ ಅಹಿಂಸಾತ್ಮಕ ಸತ್ಯಾಗ್ರಹವು ಹೂಡಲ್ಪಟ್ಟಿತು. ಮಹಾತ್ಮರಲ್ಲಿದ್ದ ಅಮಿತವಾದ ಮಹಾಶಕ್ತಿಯು ಪ್ರಕಾಶಕ್ಕೆ ಬಂದು ವಿಶ್ವವ್ಯಾಪಿಯಾದುದು ದಕ್ಷಿಣ ಆಫ್ರಿಕದಲ್ಲೇ. ಸತ್ಯಾಕಾಂಕ್ಷಿಗಳು ಅಸತ್ಯ ಅಕ್ರಮ ಅನ್ಯಾಯಗಳನ್ನು ಅಹಿಂಸೆಯಿಂದ ಆತ್ಮಬಲದಿಂದ ಸ್ವಾರ್ಥತ್ಯಾಗದಿಂದ ಇದುರಿಸಿ ಅತುಳವಾದ ನಿಗ್ರಹಶಕ್ತಿಯಿಂದ ವಿರೋಧಿಯ ಕಠಿಣ ಹೃದಯವನ್ನು ಪರಿವರ್ತಿಸಿ ಧರ್ಮದ ಪುನರುತ್ಥಾನಗೈವುದೇ ಅಹಿಂಸಾತ್ಮಕ ಸತ್ಯಾಗ್ರಹದ ನಿಜ ಸ್ವರೂಪವಾಗಿದ್ದಿತು. ಅಹಿಂಸಾತ್ಮಕ ಸತ್ಯಾಗ್ರಹದ ಆಚಾರ್ಯಪುರುಷರಾಗಿ ಗಾಂಧೀಜಿ ಹೂಡಿದ ಸಮರದಲ್ಲಿ ಸಹಸ್ರಾರು ಆಫ್ರಿಕದ ಭಾರತೀಯರು ಸೆರೆಮನೆಗಳ ವಾಸವನ್ನು ಕೈಗೊಂಡರು. ಕಠಿನ ಯಾತನೆಗಳನ್ನು ಮನೋಧಾರ್ಢ್ಯದಿಂದ ಎದುರಿಸಿದರು. ಬಿಳಿಯ ಸರಕಾರವು ಆಚರಣೆಗೆ ತಂದಿದ್ದ ಕ್ಷುದ್ರ ನಿಯಮಗಳನ್ನು ಖಂಡಿಸುವ ಮಹಾ ಚಳುವಳಿಯು ಉಗ್ರತೆಯ ಭೀಷಣರೂಪವನ್ನು ತಾಳಿತು. ಜಗತ್ತೇ ವಿಸ್ಮಯಗೊಂಡು ಮುಗ್ಧಭಾವದಿಂದ ಮಹಾತ್ಮರ ಕಾರ್ಯಗಳನ್ನು ನೋಡುತ್ತಿತ್ತು. ಸತ್ಯಕ್ಕೆ ಜಯ ಲಭಿಸಿತು. ಮಣಿಯಲಾರೆವೆಂದು ದರ್ಪತೋರಿದ ಸರಕಾರವು ಮಣಿದು ಭಾರತೀಯರ ಬೇಡಿಕೆಗಳನ್ನು ಮಾನ್ಯಮಾಡುವ ಆಶ್ವಾಸನೆ ಇತ್ತಿತು. ಯುಗಪುರುಷನು ರಾಜಕೀಯ ಶಾಂತಿಸಮರದ ಮಹಾಶಕ್ತಿಯನ್ನು ಹಾಕಿ ಪತಿತರ ಉದ್ಧಾರದ ಮಾರ್ಗದರ್ಶನವನ್ನು ಮಾಡಿದನು.

ಮಹಾತ್ಮಗಾಂಧಿಯವರ ಸತ್ಯಾಗ್ರಹ ಹೂಡುವ ಕಾಲದಲ್ಲಿ ದಕ್ಷಿಣಾಫ್ರಿಕದಲ್ಲಿ ಟಾಲ್‌ಸ್ಟಾಯ್ ಫಾರ್ಮ್ ಎಂಬೊಂದು ಆಶ್ರಮವನ್ನು ಸ್ಥಾಪಿಸಿ ಸಾಮಾಜಿಕ ಸಾಂಸ್ಕೃತಿಕ ರಾಜಕೀಯ ಕಾರ್ಯಕ್ಕೆ ರಂಗಭೂಮಿಯನ್ನು ಕಲ್ಪಿಸಿದರು. ನಿಷ್ಕಾಮ ಕರ್ಮಯೋಗಿಗಳ ಆಶ್ರಮವು ಸೇವಾತತ್ಪರತೆಗೆ ಆವಾಸಭೂಮಿಯಾಗಿದ್ದು ಶೈಕ್ಷಣಿಕ, ರಾಜಕೀಯ ಅಧಿಕಾರ ಸಮಸ್ಯೆಗಳನ್ನು ಬಗೆಹರಿಸುವ ಕೇಂದ್ರಸ್ಥಳವಾಯಿತು. ಮಹಾತ್ಮರ ಕಟ್ಟುನಿಟ್ಟಿನ ಜೀವನಪಥದಲ್ಲಿ ಒಡನಾಡಿಯಾಗಿದ್ದು ಮಹಾತ್ಮರ ಆದರ್ಶಮಾರ್ಗದಲ್ಲಿ ನಡೆದ ಕಸ್ತೂರಬಾಯವರೂ ನಿಷ್ಕಾಮ ಕರ್ಮಯೋಗಿಯಾಗಿ ಸುಖದುಃಖಾದಿ ದ್ವಂದ್ವಗಳನ್ನು ತೃಣವಾಗಿ ಭಾವಿಸಿ ಆದರ್ಶನಾರಿಯಾದರು. ೧೯೦೬ರಿಂದ ಮಹಾತ್ಮ ಕಸ್ತೂರಬಾ ದಂಪತಿಗಳು ವಾಸನಾರಹಿತವೂ, ನಿಷ್ಕಾಮವೂ ಪ್ರೇಮಮಯವೂ ಇಂದ್ರಿಯಾತೀತವೂ ಆದ ಬ್ರಹ್ಮಚರ್ಯವನ್ನು ಪಾಲಿಸಿ ಜಗತ್ತಿನ ದಾಂಪತ್ಯಜೀವನಕ್ಕೆ ಹೊಸ ದುರ್ಲಭ ಮೇಲ್ಪಂಕ್ತಿಯನ್ನು ಕಲ್ಪಿಸಿದರು.

——— ಸಶೀಕ]

॥ ಮಂಗಲ ವರದಾನ ॥

ನೆಪೋಲಿಯನ್— ಆತ್ಮವಿಶ್ವಾಸವೇ ನನ್ನ ನಿಜವಾದ ವ್ಯಕ್ತಿತ್ವ. ಋಗ್ವೇದದ ಒಂದು ಪ್ರಾರ್ಥನಾ ಶ್ಲೋಕ ಹೀಗಿದೆ—"ಇಂದ್ರನು ನಮಗೆ ನಿಂತಿರುವಲ್ಲಿಯೂ ಶಕ್ತಿಯನ್ನು ಕೊಡಲಿ! ಬಿದ್ದಲ್ಲಿಂದ ಏಳುವ ಬಲ ಕೊಡಲಿ—" ಜೀವನದಲ್ಲಿ ಜಯಶಾಲಿಯಾಗಬೇಕಾದರೆ ಆತ್ಮವಿಶ್ವಾಸವಿರಬೇಕಾದುದು ಅತ್ಯಂತ ಆಗತ್ಯವಿದೆ. ತನ್ನ ಮೇಲಿನ ವಿಶ್ವಾಸವನ್ನೇ ಕಳಕೊಂಡ ಮನುಷ್ಯ ಜೀವನದಲ್ಲಿ ಬರುವ ತೊಡಕುಗಳ ವಿರುದ್ಧ ಏನು ಹೋರಾಡಿಯಾನು? ಆತ್ಮವಿಶ್ವಾಸವೆಂಬುದೇ ಮಂಗಲ ವರದಾನ. ಅದರಿಂದಲೇ ತ್ರಿಲೋಕ ರಾಜ್ಯವನ್ನೂ ತುಚ್ಛೀಕರಿಸಬಹುದು. ಹಾಗೆಂದು ಇಷ್ಟು ಅಗತ್ಯ ಹಾಗೂ ಮಹತ್ವದ ಆತ್ಮವಿಶ್ವಾಸವನ್ನು ಯಥಾರ್ಥವಾಗಿ ಸಂಪಾದಿಸಿಕೊಂಡಿರುವ ಜನರೆಷ್ಟು? ಹೆಚ್ಚಿನವರು ಪ್ರತಿಕ್ಷಣವೂ ಘೋರವಾದ ನಿಟ್ಟುಸಿರಿಟ್ಟು, 'ಅಯ್ಯೋ' ನಾನೂ ಹಾಗೆ ಮಾಡುತ್ತಿದ್ದರೆ!' ಎಂದೆನ್ನುವರಿರುವರು.

ಹೀಗೆ ಉಸಿರುಗರೆಯುವವರು ಎಂದಿಗೂ ಯಾವ ಕೆಲಸದಲ್ಲಿ ಯಶಸ್ಸು ಪಡೆಯಲಾರರು. ಅವರ ಪಾಲಿಗೆ ನಿರಾಶೆಯೇ ಕೊನೆಯವರೆಗೂ ಉಳಿಯುವುದು. ಇದಕ್ಕೆ ಒಂದೇ ಒಂದು ಕಾರಣ. ತನು ಶಕ್ತಿಸಂಪನ್ನತೆಯ ಮೇಲೆ ಅವರಿಗೆ ಕಿಂಚಿತ್ತೂ ಲವಲೇಶವೂ ವಿಶ್ವಾಸವಿಲ್ಲವೆಂಬುದೇ. ಅಂಥವರು "ಅಯ್ಯೋ, ನಾನೂ ಹಾಗೆ ಮಾಡುತ್ತಿದ್ದರೆ!" ಎಂಬ ನಿರಾಶೆಯ ಸೊಲ್ಲಿನ ಬದಲಿಗೆ "ನಾನು ಹಾಗೆ ಮಾಡುವೆನು!" ಎಂಬ ಸಂಕಲ್ಪವನ್ನು ಕೈಗೊಳ್ಳುವುದು ಶ್ರೇಯಸ್ಕರ. ಮಾಡಬಲ್ಲೆನಾದರೆ ಎನ್ನುವ ರೀತಿಯೇ ಚೆನ್ನಾದುದಲ್ಲ. ಮನುಷ್ಯನಿಗೆ ಒಂದು ಕೆಲಸವನ್ನು ಮಾಡುವ ಸಾಮರ್ಥ್ಯ ತನ್ನಲ್ಲಿ ಇದ್ದೇ ಇದೆ ಎಂದು ನಂಬಿಗೆ ಇರಬೇಕು. ಈ ನಂಬಿಗೆಯ ಬಲವೇ ಅವನ ಪಾಲಿಗೆ ಕಠಿಣತಮವಾದ ಕೆಲಸವನ್ನು ಸುಲಭತರವಾಗಿಸುವುದು. ಆತ್ಮವಿಶ್ವಾಸವನ್ನು ಕೊಳ್ಳುವ ಹೆಜ್ಜೆ ಇದು.

ಯುರೋಪಿನಲ್ಲಿ ನೆಪೋಲಿಯನನ ತೀವ್ರಾರ! ಅನೇಕ ರಾಜ್ಯಗಳಲ್ಲಿ ವಿಜಯ ಪತಾಕೆಯನ್ನೇರಿಸಿ ಆ ಧೀರ ಕೊನೆಗೆ ಇಟಲಿಯ ಮೇಲೆ ಹಲ್ಲೆಮಾಡಲು ಹವಣಿಸಿದ. ಆದರೆ ಭಾರತದ ಹಿಮಾಲಯದಂತೆ, ಇಟಲಿಯಲ್ಲಿ ಹಿಮಾಚ್ಛಾದಿತವಾದ ಆಲ್ಪ್ಸ್ ಪರ್ವತಾವಳಿ ತನ್ನ ಗಗನೋನ್ನತ ಮಸ್ತಕದಿಂದ ನೆಪೋಲಿಯನನಿಗೆ ಅಡ್ಡ ತೊಡ್ಡಿತು. ಅಂದಿನ ವರೆಗೆ ಆಲ್ಪ್ಸ್ ಪರ್ವತವನ್ನು ಏರಿ ಹೋಗುವ ಸಾಹಸವನ್ನು ಯಾರೂ ಮಾಡಿದ್ದಿಲ್ಲ. ಅದನ್ನು ಅಸಾಧ್ಯ ಕಾರ್ಯವೆಂದು ಎಲ್ಲರೂ ತಿಳಿದಿದ್ದರು. ಹಾಗೆಂದು ಪರ್ವತವನ್ನು ಏರಿ ಇಟಲಿಯ ಮೇಲೆ ದಾಳಿ ಮಾಡಲಾಗುವುದಿಲ್ಲವಲ್ಲ! ನೆಪೋಲಿಯನನು ಪರ್ವತ ಏರಲು ಅಜ್ಞೆ ಕೊಟ್ಟ. ಸೈನಿಕರು "ಇದು ಹೇಗೆ? ನಮ್ಮ ನಾಯಕನ ತಲೆ ಕೆಟ್ಟಿದೆಯೇ?" ಎಂದುಕೊಂಡರು. ಉಚ್ಚಾಧಿಕಾರಿಗಳು ಇದು ಅಸಾಧ್ಯದ ಕೆಲಸವಲ್ಲವೆ ಎಂದು ವಿನಯದಿಂದ ನುಡಿದರು. ನೆಪೋಲಿಯನನು ಈ ಮಾತುಗಳಿಗೆ ಕಿವುಡಾಗಿ '[illegible] ನನ್ನದೇ.' ಅಸಂಭವ ಕಾರ್ಯವನ್ನು ಸಂಭವನೀಯವೆಂದು ತೋರಿಸಿಕೊಟ್ಟ. ಆ ಸಾಹಸದ ಹಾಗೂ ಆತ್ಮವಿಶ್ವಾಸದ ನೆಲೆಯಲ್ಲಿ ನಡೆದದ್ದಕ್ಕೆ ಇಟಲಿಯ ಸಾಮ್ರಾಜ್ಯ ದೊರೆಯಿತು. ತನ್ನ ಆತ್ಮವಿಶ್ವಾಸದ ಬಲದ ಮೇಲಿಂದ ನೆಪೋಲಿಯನ ಹೇಳುತ್ತಿದ್ದ— "ಲೋಕದಲ್ಲಿ ಅಸಾಧ್ಯವೆಂಬುದಿಲ್ಲ!"

ನಿಜಕ್ಕೂ ಮನುಷ್ಯನಿಗೆ ಲೋಕದಲ್ಲಿ ಅಸಾಧ್ಯವೆಂಬುದಿಲ್ಲ. ಆದರೆ ಅಸಂಭವವು ಸಂಭವನೀಯವೆನಿಸಬೇಕಾದರೆ ಆತ್ಮವಿಶ್ವಾಸವೆಂಬ ಮಹಾ ಸಾಮರ್ಥ್ಯ ನಮ್ಮಲ್ಲಿ ಬೇಕೇ ಬೇಕು. ಜೀವನದ ವಿವಿಧ ವಿಭಾಗಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಆತ್ಮವಿಶ್ವಾಸ ಅತ್ಯಗತ್ಯ. ಅಸಫಲತೆ ಹಾಗೂ ಕಷ್ಟಗಳಿಗೆ ಅಂಜಿ ಬೆನ್ನು ತೋರದೆ— ಹೆಜ್ಜೆ ಹೆಜ್ಜೆಗೂ ದೃಢತೆಯಿಂದ ಮುನ್ನಡೆಯಲು ಆತ್ಮವಿಶ್ವಾಸ ಬಹಳ ಸಹಾಯಕರ. ಯೋಗವಾಸಿಷ್ಠದಲ್ಲಿ ವಾಲ್ಮೀಕಿ ಕರ್ಮದ ಅದ್ಭುತ ಶಕ್ತಿಯನ್ನು ಬಣ್ಣಿಸಿದ್ದಾನೆ. ಅವನ ಅಭಿಪ್ರಾಯದಂತೆ ಎಲ್ಲಾ ಕೀರ್ತಿ, ಶ್ರೇಯಸ್ಸು ಹಾಗೂ ಸಿದ್ಧಿಯ ಮೂಲವೇ ಕರ್ಮ. ಕರ್ಮಕ್ಷೇತ್ರದಲ್ಲಿಯೇ ಬಗೆ ಬಗೆಯ ಯಶೋಸೌರಭದಿಂದ ಘಮಘಮಿಸುವ ಪುಷ್ಪಗಳು ಅರಳುತ್ತವೆ. ಸಿದ್ಧಿಯ ಪುಣ್ಯಫಲ ಸಿಗುತ್ತದೆ. ಸಾಂಸಾರಿಕ ಸಿದ್ಧಿ ಜೊತೆಗೆ ಆಧ್ಯಾತ್ಮಿಕ ಸಿದ್ಧಿ ಕೂಡ ಕರ್ಮದಿಂದಲೇ ಫಲಪ್ರದವಾಗುತ್ತದೆ. ಮಿತಿ ಇಲ್ಲದ ಈ ಕರ್ಮಕ್ಷೇತ್ರ ಮನುಷ್ಯನ ಮುಂದೆ ಪ್ರತಿಕ್ಷಣವೂ ವಿಸ್ತರಿಸಿದೆ. ಸತ್ಕರ್ಮ ಸುಲಭಗ್ರಾಹ್ಯವಾಗಿದೆ. ಆತ್ಮವಿಶ್ವಾಸದಿಂದ ಈ ಕ್ಷೇತ್ರದಲ್ಲಿ ಕರ್ಮಬೀಜವನ್ನು ಬಿತ್ತುವ ಸಾಹಸ ಮಾಡುವ ಮನುಷ್ಯನಿಗೆ ಬೇಕಷ್ಟು ಕಷ್ಟಪಟ್ಟು ಕರ್ಮಕ್ಷೇತ್ರದಲ್ಲಿ ಕಾಲಿಡದೆ ಕನಸಿನಲ್ಲಿಯೇ ಇಂದಲ್ಲ ನಾಳೆ ಸಫಲತೆ ನನ್ನ ಬಳಿ ಸಾರುವುದು ಎಂದು ಕೂತರೆ ಪ್ರಯೋಜನವಿಲ್ಲ. ಆತ್ಮವಿಶ್ವಾಸಬೇಕು. ಅದರೊಡನೆ ಕರ್ಮ ಮಾಡುವ ದೃಢ ಸಂಕಲ್ಪವೂ ಬೇಕು. ಜೀವನ ಸಂಘರ್ಷದಲ್ಲಿ ನಿರಾಶೆಗಳು ಬಂದು ಮುತ್ತಿದಾಗ ಧೃತಿಗೆಡದೆ—ಹೊಸ ಹುರುಪಿನಿಂದ ಧ್ಯೇಯದೆಡೆಗೆ ಸಾಗುವ ಪ್ರವೃತ್ತಿ ತೋರಿಬಂದರೆ ಆತ್ಮವಿಶ್ವಾಸ ಜಾಗೃತವಾಗಿದೆ ಎಂಬುದಕ್ಕೆ ಸುಸ್ಪಷ್ಟ ನಿದರ್ಶನ.

"ಭಾರತ ಬಿಟ್ಟು ತೊಲಗಿ!" ಎಂಬ ಚಳುವಳಿಯ ಬೆಂಕಿಯನ್ನು ೧೯೪೨ರಲ್ಲಿ ಗಾಂಧೀಜಿ ಹೊತ್ತಿಸಿದರಷ್ಟೆ; ಗಾಂಧೀಜಿಯೊಂದಿಗೆ ಇನ್ನೂ ಹಲವು ಮುಖಂಡರು ಸೆರೆಮನೆ ಸೇರಿದರು. ಭಾರತವನ್ನು ಬಿಟ್ಟು ತೊಲಗಿರಿ ಎಂದಂತೆ ಭಾರತವು ದಿಗ್ವಿಭಾಜಿತವಾಗದು ಎಂದೂ ಅವರು ಘೋಷಿಸಿದರು. ಲಕ್ಷಾಂತರ ಜನರ ಬಾಯಿಂದ ಈ ಮಾತು ಹೊಮ್ಮಿತು. ಆದರೆ ಒಂದೇ ಒಂದು ಧ್ವನಿ ಮಾತ್ರ ಭಿನ್ನವಾಗಿತ್ತು. ಭಾರತ ಸ್ವಾತಂತ್ರ್ಯಕ್ಕಾಗಿ ಪಾಕಿಸ್ತಾನದ ಬೇಡಿಕೆಯನ್ನು ಮನ್ನಿಸಬೇಕು. ಇದೇ ಧ್ವನಿ ಗಾಂಧೀಜಿ ಕೈಗೊಂಡ ಸತ್ಯಾಗ್ರಹದ ಹೆಜ್ಜೆ ಸಲ್ಲದೆಂದು ವಿರೋಧ ಪ್ರಕಟಿಸಿತು. ತನ್ನ ನಿಷ್ಠಾವಂತ ಅನುಯಾಯಿಯೆನ್ನುವ ಈ ಮಾತು ಕೇಳಿ ಗಾಂಧೀಜಿಯೇ ಆಶ್ಚರ್ಯದಲ್ಲಿ ಬಿದ್ದರು. ಹೀಗೆ ವಿರೋಧಭಿಪ್ರಾಯ ಪ್ರಕಟಿಸಿದವರು ಮಹಾಜೀವ ಚಕ್ರವರ್ತಿ ರಾಜಗೋಪಾಲಚಾರಿ. ಅಂದು ಅವರ ಮಾತನ್ನು ಯಾರೂ ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. ಗಾಂಧೀಜಿ ಬೇಸರ ತಳೆದರು. ನೆಹರು ರಾಜಾಜಿಯ ಈ ಮಾತು ತಪ್ಪು ಮಾರ್ಗದ ಮೇಲಿನ ಮುಳ್ಳೆಂದು ಗದರಿದರು. ಜನರು ರಾಜಾಜಿಯ ಭಾಷಣ ಕಾಲದಲ್ಲಿ ಕೊಳೆತ ಕೋಳಿಮೊಟ್ಟೆ ಕಲ್ಲುಗಳನ್ನೆಸೆದು ಮಾನಭಂಗದ ಪ್ರಯತ್ನ ಮಾಡಿದರು. ಆದರೆ ಮೂರೇ ಐದು ವರ್ಷಗಳಲ್ಲಿ— ರಾಜಾಜಿಯ ಮಾತು ಸತ್ಯವೆಂದು ಇತಿಹಾಸ ಸಾಕ್ಷಿ ಕೊಟ್ಟಿತು! ರಾಜಾಜಿಯ ಆತ್ಮವಿಶ್ವಾಸದಿಂದ ನುಡಿದ ಈ ಮಾತು ನಿರ್ಭಯರಾಗಿ ಸಾರಿದ ಈ ಸಂಗತಿ ರಾಷ್ಟ್ರೀಯರಾದ ನಮ್ಮ ನೆನಪಿನಿಂದ ಜಾರುವಂತಿಲ್ಲ. ದೃಢಸಂಕಲ್ಪ ಹಾಗೂ ಅದಮ್ಯ ಆತ್ಮವಿಶ್ವಾಸದ ವ್ಯಕ್ತಿತ್ವದಿಂದ ರಾಷ್ಟ್ರವು ಉಚ್ಚಾಯವಸ್ಥೆಯನ್ನು ಮುಟ್ಟುವುದು.

ಎಂಡ್ರ್ಯೂ ಕಾರ್ನೆಗೀ ಅಮೇರಿಕದ ಪ್ರಸಿದ್ಧ ವ್ಯವಹಾರಜ್ಞ. ಇವತ್ತು ಅವನು ಕೋಟ್ಯಾಧೀಶ. ಆದರೆ ಕೈಯಲ್ಲಿ ಪುಡಿಕಾಸು ಇಲ್ಲದ ದಿನ ಅವನ ಬದುಕಿನಲ್ಲಿ ಬಂದಿತ್ತು. ಅವನ ತಂದೆ "ಟೇಬಲ್ ಕ್ಲಾತ್" ಕೈಯಲ್ಲಿ ಹಿಡಿದುಕೊಂಡು ಮಾ

ನೆ ಮನೆ ತಿರುಗುತ್ತಿದ್ದ. ತಾಯಿ ದಿನಕ್ಕೆ ೧೬ರಿಂದ ೧೮ ತಾಸು ಕುಟುಂಬ ಪೋಷಣೆಗಾಗಿ ದುಡಿಯುತ್ತಿದ್ದಳು. ಆಗೆಲ್ಲ ತಾ ನೆಗಗಿ ಹೇಳುತ್ತಿದ್ದ "ಅಮ್ಮಾ ನಾನು ಬೇಗನೇ ದೊಡ್ಡ ಮನುಷ್ಯನಾಗುವೆನಮ್ಮಾ ಭಯ ಬೇಡ". ಈ ಮಾತು ಬಾಲ್ಯದ ದಿವಾಸ್ವಪ್ನವಾಗಿರಲಿಲ್ಲ. ಅವನು ಸದಾ ಗಂಭೀರಾಲೋಚನೆಯಲ್ಲಿ ಕುಳಿತು ತನ್ನ ಮಾತಿನಂತೆ ನಡೆಯುವ ಸಂಕಲ್ಪದಲ್ಲಿ ತೊಡಗಿದ. ಒಂದಲ್ಲ ಒಂದು ದಿನ ಲಕ್ಷ್ಮಿ ತಾನು ಮುಂದು ತನ್ನ ಮನೆಯಲ್ಲಿ ಕೂಡುವಳೆಂಬ ಆತ್ಮವಿಶ್ವಾಸ ಅವನಿಗಿತ್ತು. ಹೆಚ್ಚಾಗಿ ದುಡಿದ ಮತ್ತು ವಿಶ್ವಾಸ ಅವನನ್ನು ಉತ್ತುಂಗ ಶಿಖರಕ್ಕೆ ಏರಿಸಿಯೇ ಬಿಟ್ಟಿತು.

ಯಶಸ್ಸಿನ ಭವ್ಯಭವನ ನಿರ್ಮಾಣಕ್ಕೆ ನಮ್ಮ ಆತ್ಮಶಕ್ತಿಯು ಜಾಗ್ರತವಾಗಬೇಕೆಂಬುದು ನಿಜ. ಜೀವನ ಯಾತ್ರೆ ಹೇಡಿಗಳಿಗೆ ಹೇಳಿಸಿದ್ದಲ್ಲ. ನೆಪೋಲಿಯನ್‌ರವರೇ ಅವಕ್ಕೆ ಯೋಗ್ಯರು ಎಂಬ ಶೇಕ್ಸ್‌ಪಿಯರನ ಮಾತುಗಳನ್ನು ಸ್ಮರಿಸೋಣ. ಆತ್ಮವಿಶ್ವಾಸದ ಅಭಾವವೇ ಹೇಡಿತನ. ಅದರ [illegible] ರಹಸ್ಯ. ಮನುಷ್ಯ ಸಂಕಲ್ಪ [illegible] ಅಧ್ಯವಸಾಯದಿಂದಲೂ ಯಶಸ್ಸಿನ ಒಂದೊಂದೇ ಮಣಿಯು ಅಧಿಕಾರಿಯಾಗುತ್ತಾನೆ. ಮೇಲ್ಮೆಗೆ ಅಂಜಿ ಪ್ರಶ್ನೆಯನದಿಂದ ವಿಮುಖರಾಗುವುದೇ? ಛೇ, ಭಾರತದ ರಾಷ್ಟ್ರೀಯ ಚಾರಿತ್ರ್ಯ ಇದಕ್ಕೆ ಒಪ್ಪದ.

ಓಂ ತತ್ಸತ್.

'ಸ. ಯು.'

ಪಾಕಿಸ್ತಾನದಲ್ಲಿ ಸ್ತ್ರೀಯರ ಕೊರತೆ.

ಪಾಕಿಸ್ತಾನದಲ್ಲಿ ಸ್ತ್ರೀಯರ ಕೊರತೆ ವಿಶೇಷವಾಗಿ ಅಭಾಸವಾಗುತ್ತಿದೆ ಎಂದು ಜನಸಂಖ್ಯಾ ತಜ್ಞರ ಹೇಳಿಕೆಯಿದೆ. ಈ ಕೊರತೆಯ ನಿವಾರಣೆಗಾಗಿ ಪತ್ರಿಕೆಗಳಲ್ಲಿ ಮತ್ತು ಸಭೆಗಳಲ್ಲಿ ಅನೇಕ ಸೂಚನೆಗಳು ಮಾಡಲ್ಪಡುತ್ತಿವೆ. ವಿದೇಶಗಳಿಂದ ವಿಶೇಷತಃ ಅಮೇರಿಕಾ ಮತ್ತು ಬ್ರಿಟನ್‌ಗಳಿಂದ ಅದಷ್ಟು ಹೆಂಗಸರನ್ನು ತರಬೇಕು ಎಂಬುದೊಂದು ಸೂಚನೆ. ಡಾಕ್ಟರ್, ದಾಯಿ, ಶಿಕ್ಷಕ ಮುಂತಾದ ಸ್ಥಳಗಳಲ್ಲಿ ಮಡಿಯುತ್ತಿರುವ ಕುಮಾರಿಯರನ್ನು ಲಗ್ನವಾಗಲು ಮನವೊಲಿಸಬೇಕು ಎಂಬುದು ಇನ್ನೊಂದು ಸೂಚನೆ. ಮೂರನೆಯ ಸೂಚನೆಯಲ್ಲಿ ಒಬ್ಬ ಗಂಡಸು ಒಬ್ಬಳಿಗಿಂತ ಹೆಚ್ಚು ಹೆಂಗಸರನ್ನು ಲಗ್ನವಾಗಲು ಅವಕಾಶ ಕೊಡಲಾಗದು ಎಂದು ಹೇಳಲಾಗುತ್ತಿದೆ. ಶಿಶುಗಳ ಮರಣ ಪ್ರಮಾಣ ತಗ್ಗಿಸಿ ಪಾಕಿಸ್ತಾನದ ಸ್ತ್ರೀಯರ ಸಂಖ್ಯೆಯನ್ನು ಹೆಚ್ಚಿಸಬೇಕು. ದಾಂಪತ್ಯ ವಿಚ್ಛೇದನ ಪಡೆದ ವಿದೇಶಿ ಸ್ತ್ರೀಯರನ್ನು ಸರಕಾರದ ವೆಚ್ಚದಿಂದ ಪಾಕಿಸ್ತಾನಕ್ಕೆ ಕರೆಸಬೇಕು. ಎಂದು ಮುಂತಾದ ಸೂಚನೆಗಳು ಮಾಡಲ್ಪಟ್ಟಿವೆ.

ನೆಹರೂರ ಇಬ್ಬರು ಹುಡುಗರು!

ಸ್ವಿಸ್ ಪತ್ರಿಕೆಯಲ್ಲಿ ಮೋಜಿನ ಸುದ್ದಿ.

ಭಾರತದ ಪ್ರಧಾನ ಮಂತ್ರಿ ಶ್ರೀ ನೆಹರೂರ ಬಗ್ಗೆ ಸ್ವಿಸ್ ಪತ್ರಿಕೆಗಳಲ್ಲಿ ಬಹು ಮೋಜಿನ ಸಂಗತಿಗಳು ಪ್ರಕಟವಾಗುತ್ತಿವೆ. ಎಂದು ಹಿಂದುಸ್ತಾನ ಸ್ಟ್ಯಾಂಡರ್ಡ್ ಪತ್ರಿಕೆಯ ಯುರೋಪ್ ಸುದ್ದಿಗಾರನು ಬರೆದಿದ್ದಾನೆ.

ಸ್ವಿಟ್ಜರ್‌ಲೆಂಡಿನ ಜನಪ್ರಿಯ ಪತ್ರಿಕೆ "ಡಾಯ್ ಟ್ಯಾಟ್," ಪತ್ರಿಕೆಯು ಜಗತ್ತಿನ ಅನೇಕ ಮುತ್ಸದ್ದಿಗಳ ಖಾಸಗಿ ಜೀವನ ಪರಿಚಯಮಾಡಿಕೊಡುವ ಲೇಖನಗಳನ್ನು ಪ್ರಕಟಿಸುತ್ತಿದ್ದು ಎಲ್ಲಕ್ಕೂ ಮೊದಲು ಅದು ಶ್ರೀ ನೆಹರೂರ ವಿಚಾರವನ್ನು ಬರೆದಿದೆ. ಲೇಖನದಲ್ಲಿ ವ್ಯಂಗಾರ್ಥ ಅಥವಾ ಅಸೂಯೆ ಇತ್ಯಾದಿಗಳು ಕಂಡು ಬರದಿದ್ದರೂ ಅತೀ ಮೋಜಿನ ಸಂಗತಿಗಳು ಪ್ರಕಟವಾಗಿವೆ.

ಈ ಲೇಖನದಲ್ಲಿರುವ ಒಂದು ಭಾಗವನ್ನು ಇಲ್ಲಿ ಕೊಟ್ಟಿದ್ದನ್ನು ನೋಡಿದರೆ ಲೇಖನದಲ್ಲಿಯ ಮೋಜು ಕಂಡುಬರುವಂತಿದೆ.

ಪಂಡಿತ ನೆಹರೂರವರು ಮುಂಜಾನೆ ಉಪಹಾರ ಸೇವಿಸಿ ಬಹು ಬೇಗ ಅಂದರೆ ೭-೩೦ ಗಂಟೆಗೇ ಕಚೇರಿಗೆ ಹೊರಡುತ್ತಾರೆ. ಅವರು ಅತೀ ಸ್ವಲ್ಪ ಸಮಯ ನಿದ್ರಿಸುತ್ತಾರೆ. ಸಾಮಾನ್ಯವಾಗಿ ಅವರು ಮಲಗುವುದು ರಾತ್ರಿ ೩-೩೦ ಗಂಟೆಗೆ. ಅವರ ಇಬ್ಬರು ಮಕ್ಕಳು ರಾಜೀವ ಮತ್ತು ಸಂಜಯ. ಇವರು [illegible] ಮಾಡಿಕೊಳ್ಳುತ್ತಿರುವಾಗ ಅವನ್ನು [illegible] ಮಾತಾಡುತ್ತಾರೆ. ಅವರ [illegible] ಮಗಳು ಇಂದಿರಾ ಮಾತ್ರ ಅವರನ್ನು [illegible] ಬಿಡಿಸಿ ಸಿನೇಮಾಕ್ಕೆ ಒಯ್ಯಬಲ್ಲಳು. ನೆಹರೂರ ಮನೆಯ ಕೆಲಸದ ಆಳುಗಳೆಲ್ಲ ಅಸ್ಪೃಶ್ಯರಿಂದು ಕರೆಯಲ್ಪಡುವವರಾಗಿದ್ದಾರೆ. ಅದರಿಂದ [illegible] ಸಂಪ್ರದಾಯದ ಅವರ [illegible] ಅವರೊಡನೆ ಊಟಮಾಡುವುದಿಲ್ಲ [illegible] ವೃದ್ಧ ಅತ್ಯುಚ್ಚರು ಅವರಿಗೆ [illegible] ಗ ತನ್ನ ಊಟವನ್ನು ತಯಾರಿಸುತ್ತಾಳೆ [illegible] ಲ್ಲವೆ ತಾನೇ ಅಡಿಗೆ ಮಾಡಿಕೊಳ್ಳುತ್ತಾಳೆ. ಪಂಡಿತ ನೆಹರೂರು ದಿನಾಲು ೭೦ [illegible] ಸಿಗರೇಟುಗಳನ್ನು ಸೇದುತ್ತಾರೆ. [illegible] ವರು ಮದ್ಯವನ್ನು ಸೇವಿಸುವದಿಲ್ಲ. ಅವರೆ ದಿನಾಲು [illegible] ಕಪ್ಪು ಬ್ಲೇಕ್ ಕಾಫಿ (ಹಾಲ [illegible]) ಕುಡಿಯುತ್ತಾರೆ. [illegible] ನ್ ಅವರ ಅವರ್ಷ ಪುರುಷ.

ಕಾಶ್ಮೀರದ ಮಹಾರಾಜ ಹರಿಸಿಂಗರು ಯುವರಾಜರಾದ ಕರಣಸಿಂಗರ ಪರವಾಗಿ ಸಿಂಹಾಸನ ತ್ಯಾಗ ಮಾಡಲು ತಮ್ಮ ಉದ್ದೇಶವನ್ನು ವ್ಯಕ್ತಮಾಡಿರುವರೆಂಬುದು ತಿಳಿಯುತ್ತದೆ. ಮಹಾರಾಜರು ೧೯೪೯ ಜೂನ್‌ನಲ್ಲಿ ಯುವರಾಜರಿಗೆ ಅಧಿಕಾರ ಒಪ್ಪಿ ತಾತ್ಕಾಲಿಕವಾಗಿ ರಾಜ್ಯದಿಂದ ಹೊರಬಿದ್ದಿದ್ದರು.

ವಾರ್ತೆ.

ಲೋಕಸಭೆಯ ಅಧ್ಯಕ್ಷರಾದ ಶ್ರೀ ಮಾವಳಂಕರ್ ಅವರು, ವಿರೋಧಿ ಪಕ್ಷಗಳು ತಮ್ಮ ಸರಕಾರದ ಬಗ್ಗೆ ಮಾಡಿದ ಬೇಜವಾಬ್ದಾರಿತನದ ಅಪಾದನೆಗಳನ್ನು ಗುರಿಸದೆ ಸೇನೆಗೆ ರಾಜ್ಯವನ್ನು ವಹಿಸಿಕೊಟ್ಟ ಅಧ್ಯಕ್ಷ ಪದವಿಗೆ [illegible] ರಾಜೀನಾಮೆಯಿತ್ತರು.

ಈ ವರ್ಷದ ಅಂತ್ಯದೊಳಗಾಗಿ ಭಾರತ ಸರಕಾರವು ಜಪಾನಕ್ಕೆ ೭೫ ಲಕ್ಷ ಟನ್ ಉಪ್ಪನ್ನು ನಿರ್ಯಾತ ಮಾಡುವದು. ಈಗಾಗಲೇ ೪೦ ಲಕ್ಷ ಟನ್ ಉಪ್ಪನ್ನು ಕಳಿಸಲಾಗಿದೆಯೆಂದು. ಕೇಂದ್ರ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಹೇಳಿದರು. ಉಪ್ಪಿನ ಸಂಶೋಧನೆ ಮಾಡುವದಕ್ಕಾಗಿ ಕೇಂದ್ರಗಳನ್ನು ಸ್ಥಾಪಿಸುವದಕ್ಕಾಗಿ, ಖಾಸಗಿ ಉದ್ದಿಮೆದಾರರ ಕಡೆಯಿಂದ ಮಣಕ್ಕೆ ಎರಡಾಣೆಯಂತೆ ಸರಕಾರಿ ಉಪ್ಪಿನ ಕೇಂದ್ರಗಳ ಕಡೆಯಿಂದ ಒಂದು ಮಣಕ್ಕೆ ೩ ಆಣೆ ಕರವನ್ನು ಎತ್ತಲಾಗುವದು. ಇದಕ್ಕಾಗಿ ಒಂದು ಸಮಿತಿಯನ್ನು [illegible] ಸರಕಾರವು ಯತ್ನಿಸುತ್ತಿದೆ [illegible] ಬೇಗನೆ ಉಪ್ಪಿನಲ್ಲಿ ೧೦೦ [illegible] ಶುದ್ಧತೆಯನ್ನು ತರುವ ಪ್ರಯತ್ನ ಮಾಡಲಾಗುವದೆಂದೂ ಅವರು ಹೇಳಿದರು.

ಮಹಾತ್ಮಾ ಗಾಂಧಿಯವರ ಸ್ಮಾರಕಾರ್ಥವಾಗಿ ೫ ಲಕ್ಷ ಪೌಂಡಿನ ಕಾಲೇಜೊಂದನ್ನು ದಕ್ಷಿಣ ಆಫ್ರಿಕೆಯಲ್ಲಿ ಪ್ರಾರಂಭಿಸುವ ತಯಾರಿ ನಡೆದಿದೆ. ಇಲ್ಲಿ ಎಲ್ಲ ವರ್ಣಗಳ ವಿದ್ಯಾರ್ಥಿಗಳಿಗೆ ಅವಕಾಶವನ್ನು ಕೊಡಲಾಗುವುದು.

ಬರಗಾಲದ ಭೀಕರತೆ.

ಹುಲ್ಲು ಆಹಾರವಾಗಿದೆ.

ಬೆಳಗಾಂವಿ ಜಿಲ್ಲೆಯಲ್ಲಿ ಮಳೆಯ ಅಭಾವಕ್ಕೆ ತುತ್ತಾಗಿರುವ ತಾಲೂಕುಗಳಲ್ಲಿ ರಾಮದುರ್ಗದ ಪರಿಸ್ಥಿತಿಯು ಈಗಾಗಲೇ ಕೈಮೀರಿದೆ. ಎಲ್ಲಿ ನೋಡಿದರಲ್ಲಿ ಬರಗಾಲದ ಕರಾಳ ದೃಶ್ಯವು ಎಲ್ಲರನ್ನೂ ಕಳವಳಪಡಿಸುತ್ತಿದೆ.

ರಾಮದುರ್ಗದ ಸುತ್ತುಮುತ್ತಲಿನ ಜನರು ಆಹಾರದ ಅಭಾವದಿಂದ ತಲ್ಲಣಗೊಂಡು ದಿಕ್ಕು ತೋಚದವರಾಗಿದ್ದಾರೆ. ಆಹಾರ ಧಾನ್ಯಗಳ ವಿಪರೀತ ಕೊರತೆಯಾಗಿರುವದರಿಂದ ಬಡಬಗ್ಗರು ಇದ್ದೆಗೆ ಕಾಣುವ ಹುಲ್ಲಿಗೆ ಕೈಹಾಕುತ್ತಿದ್ದಾರೆ. ಎಷ್ಟೋ ಜನರು ಹುಲ್ಲು ತಿನ್ನುವುದು ಪ್ರತ್ಯಕ್ಷವಾಗಿ ಕಂಡು ಬಂದಿತು. [illegible] ಹೊಲಗಳ ಹುಲ್ಲಿನ ಹೊರೆಗಳನ್ನು ಕಟ್ಟಿಕೊಂಡು ತಲೆಯ ಮೇಲಿಟ್ಟು ಬರುತ್ತಿರುವ ದೃಶ್ಯವು [illegible] [illegible]

ಜನರು [illegible] ಬಿಟ್ಟು ಹೋಗುವ ದೃಶ್ಯವು [illegible] ೨೦-೭೦ ಜನರ ಒಂದು ಗುಂಪು [illegible]

THE JUBILEE INSURANCE CO., Ltd.

One of the very few in the feild of Insurance that has been declaring BONUS to its policy holders from its very inception

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-C., Richmand Road, Bangalore.

Our Chief Agents:-THE ORIENTAL ENTERPRISES, BANGALORE 1.

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೆದಾರರಿಗೆ ಸರಿಯಾದ ಬೋನಸ್ಸ
ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ
ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:-ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,

26 41-C, ರಿಚ್‌ಮಂಡ್ ರೋಡ್, ಬೆಂಗಳೂರು 1.

ಕೊ. ತ. ಗು.

ತಾ|| ೨೬-೯-೧೯೫೨ನೇ ಶುಕ್ರವಾರ

ಮಳೆಯ ಅಭಾವ.

ಕೊಡಗು ಪೂರ್ಣ ವ್ಯವಸಾಯದ ದೇಶವಾಗಿದೆ. ಇಲ್ಲಿಯ ವ್ಯವಸಾಯವೆಲ್ಲವೂ ಮಳೆಯ ನೀರಿನ ಮೇಲೆಯೇ ಹೊಂದಿಕೊಂಡಿದೆ. ಹರಿಯುವ ಚಿಕ್ಕ ನೀರಿನ ನಾಲೆಗಳ ಸಂಖ್ಯೆಯು ಬಹು ಕಡಿಮೆ. ಇಲ್ಲಿ ಸಕಾಲದಲ್ಲಿ ಸಾಕಷ್ಟು ಮಳೆ ಬೀಳದಿದ್ದರೆ ವ್ಯವಸಾಯವು ಕೆಟ್ಟು ಹೋಗಿ, ಜನರ ಆರ್ಥಿಕ ಸ್ಥಿತಿ ಅಧೋಗತಿಗಿಳಿಯುವುದು. ಆದುದರಿಂದ ಇಲ್ಲಿಯ ನಿವಾಸಿಗಳು ಮುಖ್ಯವಾಗಿ ವರುಣ ದೇವರ ಭಕ್ತರು ಮತ್ತು ಆರಾಧಕರಾಗಿರುವರು. ಹಿಂದಿನ ವರ್ಷಗಳಲ್ಲಿ ಜನತೆಗೆ ದೇವರ ಮೇಲೆ ಭಕ್ತಿಯು ಹೆಚ್ಚಾಗಿದ್ದು, ಅವರ ನಡತೆ ನೀತಿಗಳು ಚೆನ್ನಾಗಿದ್ದುವು. ಆದರೆ ಇತ್ತೀಚೆಗೆ ಅದರಲ್ಲೂ ಕಳೆದ ಜಾಗತಿಕ ಯುದ್ಧವು ಮುಗಿದ ಮೇಲೆ ಜನರಿಗೆ ಸತ್ಯ, ಪ್ರಮಾಣಿಕತೆ, ಧರ್ಮ ಮೊದಲಾದವುಗಳ ಮೇಲೆ ವಿಶ್ವಾಸವೇ ಕಡಿಮೆಯಾಗುತ್ತಾ, ಬಂದು ದೇವರ ಮೇಲೆ ಭಕ್ತಿಯೇ ಕುಂದುತ್ತಾ ಬರುತ್ತಿದೆ. ವಿದ್ಯೆಯು ಹೆಚ್ಚುತ್ತಾ ಬಂದಂತೆ ಬುದ್ಧಿ ಶಕ್ತಿಯು ಅಭಿವೃದ್ಧಿಗೊಳ್ಳುತ್ತಾ, ಅದರ ಸಹಾಯದಿಂದಲೇ ತನಗೆ ಬೇಕಾದ ಸುಖ ಸೌಕರ್ಯಗಳನ್ನು ಸಾಧಿಸಿಕೊಳ್ಳಬಹುದೆಂದು ಜನರು ತಿಳಕೊಳ್ಳಹತ್ತಿರುವರು. ಆದುದರಿಂದ ಜನರು ರೀತಿನೀತಿಗಳಿಗೆ ಗಮನಕೊಡದೆ ಧನಾರ್ಜನೆಯಲ್ಲಿ ಮಗ್ನರಾಗಿರುವರು. ವಿದ್ಯಾವಂತರ ಮತ್ತು ಪಟ್ಟಣಿಗರ ಈ ರೀತಿಯ ಭ್ರಾಂತಿಯು ಈಗ, ಎಲ್ಲರಿಗಿಂತಲೂ ಉತ್ತಮರೆನಿಸಿಕೊಂಡಿದ್ದ ವ್ಯವಸಾಯಗಾರರಿಗೂ ಹರಡಿದೆ. ಫಲಿತಾಂಶವಾಗಿ ಗ್ರಾಮಗಳಲ್ಲಿಯೂ ಕೂಡ ದೇವರ ಪೂಜೆ ಪುನಸ್ಕಾರಗಳಿಗೆ ಜನರು ಬೆನ್ನು ಹಾಕುತ್ತಿರುವರು. ಆದರೆ ದೇವರ ರೀತಿಯನ್ನು ಯಾರು ಬಲ್ಲರು?

ಕೊಡಗಿನಲ್ಲಿ ಮಳೆಗಾಲವು ಕಡಿಮೆಯಾಗುವುದು ಅಪರೂಪ. ಈ ವರ್ಷವೂ ಕೂಡ ಜೂನ, ಜುಲೈ ಮತ್ತು ಆಗೋಸ್ತು ತಿಂಗಳುಗಳಲ್ಲಿ ಮಳೆಯು ಸರಾಸರಿ ತಕ್ಕ ಮಟ್ಟಿಗೆ ಬಿತ್ತು. ಭತ್ತ ಮತ್ತು ಇತರ ಬೆಳೆಗಳ ವ್ಯವಸಾಯವು ಸಾಧಾರಣವಾಗಿ ನಡೆಯಿತು. ಆದರೆ ಮಳೆಗಾಲದ ಪ್ರಾರಂಭದಲ್ಲಿ ಕೆಲವು ಸಮಯ ಜೋರಾದ ಮಳೆಗಾಳಿಗಳಾಗದೆ ವರ್ಷೆಯೇ ಹುಟ್ಟಲಿಲ್ಲ. ಆದ ಕಾರಣ ಈಗ ಕೆಲವು ದಿವಸ ಮಳೆಯಾಗದೆ ಬಿಸಿಲು ಕಾದ ಕೂಡಲೆ ಗದ್ದೆಗಳಲ್ಲಿ ನೀರು ಬತ್ತುತ್ತಾ ಬರುತ್ತಿರುವುದಲ್ಲದೆ, ಅಲ್ಲಲ್ಲಿ ಇರುವ ತೋಡು, ಕೆರೆ ಕುಂಟೆಗಳಲ್ಲೂ ನೀರು ಇಲ್ಲದಾಗುತ್ತಿವೆ. ಕ್ರಮೇಣ ಇರುವ ಕೆಲವು ನಾಲೆಗಳಲ್ಲೂ ನೀರು ಇಲ್ಲದಾಗಬಹುದು. ಇದರಿಂದಾಗಿ ಮುಖ್ಯವಾಗಿ ಭತ್ತದ ಬೆಳೆಯು ಕೆಡುತ್ತಾ ಬರುತ್ತಿದೆ. ಈ ಪರಿಸ್ಥಿತಿಯಿಂದ ಗಾಬರಿಗೊಂಡ ರೈತರು ತಂತಮ್ಮ ದೇವಾಲಯಗಳಲ್ಲಿ ಮಳೆಗಾಗಿ ಪೂಜೆ, ಪ್ರಾರ್ಥನೆ, ಭಜನೆ ಮೊದಲಾದವುಗಳನ್ನು ನಡಿಸಲಾರಂಭಿಸಿರುವರು. ಆದರೆ "ಸಂಕಟಬರುವಾಗ ವೆಂಕಟರಮಣ" ಎಂಬಂತೆ ಮಾತ್ರ ಈ ಪ್ರಾರ್ಥನೆಗಳು ಆಗಬಾರದು. ತಮ್ಮ ಅನ್ಯಾಯದ ಕಾರ್ಯಗಳಿಗೆ ಪಶ್ಚಾತ್ತಾಪ ಪಟ್ಟು ಸ್ವಚ್ಛವಾದ ಮನಸ್ಸಿನಿಂದ ದೇವರನ್ನು ಬೇಡಿಕೊಂಡರೆ ಅದು ಎಂದಿಗೂ ನಿಷ್ಫಲವಾಗಲಾರದು. ಈಗ ನಾಲ್ಕೈದು ದಿವಸಗಳಿಂದ ಮೋಡಗಳು ಎದ್ದು ಬರುತ್ತಿವೆ. ಆದರೆ ಮಳೆಯು ಬೀಳುವುದಿಲ್ಲ. ಇದಕ್ಕೆ ಕಾರಣವನ್ನು ಪ್ರತಿಯೊಬ್ಬನೂ ತನ್ನಲ್ಲೇ ತಾನು ಹುಡುಕಿಕೊಳ್ಳಬೇಕಾಗಿದೆ. ತನ್ನ ದೃಷ್ಟಿಯನ್ನು ಹೃದಯದೊಳಗೆ ತಿರುಗಿಸಿ ನೋಡಬೇಕಾಗಿದೆ. ಹೇಗೂ ನಿಷ್ಕಳಂಕ ಭಕ್ತಿಗೆ ಭಗವಂತನು ಒಲಿಯದೆ ಇರನು.

ಒಂದು ವೇಳೆ ಇನ್ನೂ ಮಳೆ ಬಾರದೆ ಭತ್ತದ ಬೆಳೆಯು ಬಹು ಮಟ್ಟಿಗೆ ಕೆಟ್ಟು ಹೋಗುವ ಸಂಭವವೂ ಇರಬಹುದು. ಇದರಿಂದ ಮುಂದಕ್ಕೆ ಕೊಡಗಿಲ್ಲಿ ಕ್ಷಾಮದ ಪರಿಸ್ಥಿತಿಯೂ ಉಂಟಾಗಬಹುದು. ಇದಕ್ಕಾಗಿ ಸರಕಾರದವರು ಈಗಲೇ ಎಚ್ಚರಿಕೆಯನ್ನು ವಹಿಸಬೇಕಾಗಿದೆ. ಅಕ್ಕಿ ಗಿರಣಿಗಳಲ್ಲಿ ಸ್ವಲ್ಪ ಮಟ್ಟಿಗೆ ಇಟ್ಟಿರುವ ದಾಸ್ತಾನು ಭತ್ತವನ್ನು ಈಗ ಖರ್ಚು ಮಾಡದೆ ಹಾಗೆಯೇ ಇಡಬೇಕು. ಹಾಗೆ ಇಡಲು ಬೇಕಾದ ಹಣದ ಸಹಾಯವನ್ನು ಸರ್ಕಾರವು ಗಿರಣಿಯವರಿಗೇ ನೀಡಬೇಕು. ಮಳೆ ಬಿದ್ದು, ಚೆನ್ನಾಗಿ ಬೆಳೆಯಾದರೆ ಮಾತ್ರ ಆ ಭತ್ತವನ್ನು ಖರ್ಚು ಮಾಡಬೇಕು. ಹಾಗೆಯೇ ಭತ್ತ ದಾಸ್ತಾನು ಇರುವ ಎಲ್ಲಾ ವ್ಯವಸಾಯಗಾರರೂ ಬಹು ಎಚ್ಚರಿಕೆಯಿಂದ ಖರ್ಚು ಮಾಡಬೇಕಾಗಿದೆ. ಮುಂಜಾಗ್ರತೆ ಮಾಡದಿದ್ದರೆ ಮುಂದಕ್ಕೆ ಬಹು ಕಷ್ಟವಾಗಬಹುದು.

ವರ್ತಮಾನ

ತಾ. ೩೧-೮-೫೨ರ ವರೆಗೆ ರಾಯಲ ಸೀಮೆ ಕ್ಷಾಮನಿವಾರಣಾ ಫಂಡಿಗೆ ಕೊಡಗಿನಲ್ಲಿ ರೂ ೧೯೫೫-೫-೬ ಜಮೆಯಾಗಿದೆಯೆಂದು ತಿಳಿಯಬರುತ್ತದೆ.

೧೯೫೨ನೇ ಇಸವಿ ಅಕ್ಟೋಬರ್ ತಾ. ೧೬ನೇ ಕನ್ಯಾ ಮಾಸ ತೇದಿ ೩೦ನೇ ತ್ರಯೋದಶಿ ಗುರುವಾರ ಉತ್ತರ ನಕ್ಷತ್ರ ರಾತ್ರಿ ಘಂಟೆ ೨-೪೭ ಮಿನಿಟಿಗೆ ತುಲಾ ಕಾವೇರಿ ಸಂಕ್ರಮಣ ತೀರ್ಥೋದ್ಭವ ಪುಣ್ಯಕಾಲ ಶುಭಮುಹೂರ್ತ.

ಮಳೆಯ ಅಭಾವದಿಂದ ಭತ್ತದ ಗದ್ದೆಗಳು ಬಹು ಮಟ್ಟಿಗೆ ಒಣಗುತ್ತಾ ಬರುತ್ತಿರುವುದರಿಂದ ದೇಶದ ಹಲವು ಭಾಗಗಳಲ್ಲಿ ಎಲ್ಲಾ ಮತಸ್ಥರು ತಮ್ಮ ತಮ್ಮ ದೇವಾಲಯಗಳಲ್ಲಿ ಮಳೆಗಾಗಿ ಪೂಜೆಗಳನ್ನು ನಡಿಸುತ್ತಿರುವರೆಂದು ತಿಳಿಯಬರುತ್ತದೆ.

ವ್ಯವಸಾಯ ಕೆಲಸಗಾರರಿಗೆ ತಾ. ೧-೧೦-೫೨ರಿಂದ ಗಂಡಸರಿಗೆ ದಿವಸಕ್ಕೆ ಕನಿಷ್ಠ ಪಕ್ಷ ರೂ. ೧-೫-೦, ಹೆಂಗಸರಿಗೆ ೦-೧೫-೯, ಯುವಕ ಯುವತಿಯರಿಗೆ ೦-೧೨-೯ ಮತ್ತು ಮಕ್ಕಳಿಗೆ ೦-೧೦-೬ ಸಂಬಳ ಕೊಡತಕ್ಕದೆಂದು ಚೀಫ್ ಕಮಿಶನರು ಪ್ರಕಟಿಸಿರುವರು.

ಅಖಿಲಭಾರತ ಸ್ಕೌಟ್ ದಳದ ಸಂಚಾಲಕರಾದ ಶ್ರೀ ಬಾಜಪೈಯವರು ಈ ತಾ. ೨೦ರಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಬಾಲಚಮೂ ದಳವನ್ನು ಪರಿಶೀಲಿಸಿದರು. ನಂತರ ಚೀಫ್ ಕಮಿಶನರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅವರು ಸ್ಕೌಟ್ ದಳದ ಅಭಿವೃದ್ಧಿಯನ್ನು ಕುರಿತು ಮಾತಾಡಿದರು.

ಹೇರೂರು ವಯಸ್ಕರ ಶಿಕ್ಷಣ ಶಾಲೆಯಲ್ಲಿ ಓದಿ ಅಕ್ಷರಸ್ಥರಾದವರಿಗೆ ಈ ತಾ. ೨೨ರಲ್ಲಿ ಶ್ರೀ. ಜಿ. ಯಂ. ಮಂಜುನಾಥಯ್ಯನವರ ಅಧ್ಯಕ್ಷತೆಯಲ್ಲಿ ಯೋಗ್ಯತಾಪತ್ರಗಳು ಕೊಡಲಾದವು ಅದೇ ದಿನ ಕಲ್ಲೂರಿನಲ್ಲಿ ಒಂದು ವಯಸ್ಕರ ಶಿಕ್ಷಣಾ ಶಾಲಾ ತೆರೆಯಲ್ಪಟ್ಟಿತೆಂದೂ ತಿಳಿಯಬರುತ್ತದೆ.

ಕೊಡಗಿಗೆ ವ್ಯವಸಾಯ ಕ್ಷೇತ್ರದ ಪ್ರಥಮ ವಾರ್ಷಿಕ ಸಮಾರಂಭವನ್ನು ಈ ತಾ. ೨೯ರಲ್ಲಿ ಚೀಫ್ ಕಮಿಶನರ್ ಲೆ ಕ. ಬೇದಿಯವರ ಅಧ್ಯಕ್ಷತೆಯಲ್ಲಿ ನಡಿಸಲ್ಪಡುವದೆಂದೂ, ಮೇಡಮ್ ಬೇಡಿಯವರು ಪ್ರದರ್ಶನದಲ್ಲಿ ಉತ್ತಮವಾದವುಗಳಿಗೆ ಇನಾಮನ್ನು ಹಂಚುವರೆಂದೂ ತಿಳಿಯಬರುತ್ತದೆ.

ಫೀಲ್ಡ್ ಸರ್ವೆ ತರಬೇತಿನ ಸಂಬಂಧ ಕಳೆದ ವಾರ ಪ್ರಕಟವಾದ ವಾರ್ತೆಯಲ್ಲಿ ನಮ್ಮ ಶಾಲೆಯ ತರಬೇತಿನಲ್ಲಿ ತೇರ್ಗಡೆಯಾದ ಗ್ರಾಜ್ಯುವೇಟರುಗಳಿಗೆ ಮಾತ್ರ (ಸ್ಕೂಲ್ ಫೈನಲ್‌ರವರಿಗಲ್ಲ) ಅಸಿಸ್ಟೆಂಟ್ ಶಾನುಭೋಗರ ಹುದ್ದೆ ಕೊಡುವ ಯೋಚನೆ ಇದೆಯೆಂದು ತಿಳಿಯುತ್ತೇವೆ.

ವ್ಯವಸಾಯ ಆದಾಯ ತೆರಿಗೆಯ ಅಕ್ಕಿ ಮತ್ತು ರೂಲ್ಸ್‌ಗಳಲ್ಲಿ ಅವಶ್ಯವಿರುವ ತಿದ್ದುಪಡಿ ಮಾಡುವ ಬಗ್ಗೆ ಲಾ ಮಂತ್ರಿಯವರು (ಅಧ್ಯಕ್ಷರು) ಶ್ರೀ ಗಣಪದ ಜಿ. ಎಂ. ಮಂಜುನಾಥಯ್ಯನವರು, ಸಿ. ಎ. ಮಂದಣ್ಣನವರು ಮತ್ತು ಎಂ. ಡಿ ನಾಚಯ್ಯನವರಿಂದ ಕೂಡಿದ ಕಮಿಟಿಯೊಂದು ನೇಮಿಸಲಾಗಿದೆ.

ಈ ತಾ. ೨೪ರ ಬೆಳಿಗ್ಗೆ ಮೈಸೂರಿನಿಂದ ಗೋಣಿಕೊಪ್ಪಲಿಗಾಗಿ ವೀರಾಜಪೇಟೆಗೆ ಬರುತ್ತಿದ್ದ ಮೋಟಾರ್ ಬಸ್ಸು ಮೈಸೂರಿನಿಂದ ಸುಮಾರು ೯ ಮೈಲು ದೂರದಲ್ಲಿ ಅಕಸ್ಮಾತು ಮಗುಚಿ ಬಿದ್ದು ಅದರಲ್ಲಿದ್ದ ಸುಮಾರು ೧೫ ಪ್ರಯಾಣಿಕರಲ್ಲಿ ಒಬ್ಬ ಮಾಪಿಳ್ಳೆ ಯುವಕನಿಗೆ ತಲೆಗೆ ಘಾಯವಾಗಿ ಕೂಡಲೆ ಶ್ರೀ ಗಣೇಶ ಬಸ್ಸಿನವರು ಅವನನ್ನು ಮೈಸೂರು ಆಸ್ಪತ್ರೆಗೆ ಸಾಗಿಸಿದರೆಂದೂ ಉಳಿದ ಕೆಲವರಿಗೆ ಅಲ್ಪ ಸ್ವಲ್ಪ ನೋವು ಮಾತ್ರ ವಾಯಿತೆಂದೂ ತಿಳಿಯಬರುತ್ತದೆ.

ಅಖಿಲ ಕೊಡಗು ಸಾರ್ವಜನಿಕ ಹಾಕಿ ಪಂದ್ಯಾಟಗಳಿಗಾಗಿ ಇಟ್ಟಿರುವ ಹಾಕಿ ಪಂದ್ಯದ ಶ್ರೀ ಜೆ. ಸಿ. ಸಿದ್ದಯ್ಯನವರ ಬಟ್ಲಿನ ಮೂರನೇ ವರ್ಷದ ಹಾಕಿ ಪಂದ್ಯಾಟವು ಅಕ್ಟೋಬರ ೬ರಿಂದ ಪ್ರಾರಂಭವಾಗುವುದು. ಅದರ 'ಟೈನ್ ಡ್ರಾ' ಮಾಡುವಿಕೆಯು ತಾ ೩೦-೯-೫೨ರ ಅಪರಾಹ್ನ ೨ ಗಂಟೆಗೆ ಜರಗುವುದು. ಪಂದ್ಯಾಟಕ್ಕೆ ಭಾಗವಹಿಸಲಿಚ್ಛಿಸುವವರು ತಾ. ೩೦-೯-೫೨ರ ಒಳಗೆ ಪ್ರವೇಶ ಹಣ ಎಂಟು ರೂಪಾಯಿಗಳನ್ನೂ ಮತ್ತು ಒಪ್ಪಿಗೆ ಪತ್ರ ಹಾಗೂ ಆಟಗಾರರ ಹೆಸರಿನ ಪಟ್ಟಿಯನ್ನೂ ಸೆಕ್ರೆಟರಿಯವರಿಗೆ ಕಳುಹಿಸಬೇಕೆಂದು ಅವರು ತಿಳಿಸಿರುತ್ತಾರೆ.

ಕಿಂಗ್ ಜಾರ್ಜ ಸ್ಕೂಲಿಗೆ ಸೈನಿಕ ಮತ್ತು ಮಾಜಿ ಸೈನಿಕರ ಪ್ರಾಯ ೯ರಿಂದ ೧೧ರ ವರೆಗೆ ಇರುವ ಮಕ್ಕಳನ್ನು ಸೇರಿಸಲು, ಅವರವರ ಯೂನಿಟ್ ಮತ್ತು ರೆಕಾರ್ಡ್ ಆಫೀಸುಗಳ ಮೂಲಕ, 'ಆರ್ಮಿ ಹೆಡ್ ಕ್ವಾರ್ಟರ್ಸ್' ನಲ್ಲಿ ನವೆಂಬರ್ ತಾರೀಕು ೧೧ರ ವರೆಗೆ ಅರ್ಜಿಗಳನ್ನು ಸ್ವೀಕರಿಸಲಾಗುವದು.

ಮಡಿಕೇರಿಯ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸ'ನ್ನು 'ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ' ಆಗಿ ಪರಿವರ್ತಿಸಿರುವುದರಿಂದ, ಇನ್ನು ಮುಂದಕ್ಕೆ ಈ ಆಫೀಸಿಗೆ ಅರ್ಜಿಗಳನ್ನು ಬರೆಯುವಾಗ 'ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್, ಮಡಿಕೇರಿ, ಕೊಡಗು ಎಂಬುದಾಗಿ ವಿಳಾಸವನ್ನು ಬರೆಯಬೇಕಾಗಿ ಈ ಮೂಲಕ ತಿಳಿಸಲಾಗಿದೆ.

ವೀರಾಜಪೇಟೆ ಮುನಿಸಿಪಲ್ ಚುನಾವಣೆ.

ಈ ತಾ. ೨೦ರಲ್ಲಿ ನಡೆದ ವೀರಾಜಪೇಟೆ ಮುನ್ಸಿಪಲ್ ಕಮಿಟಿ ಮೆಂಬರುಗಳ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ವಿಶೇಷ ಜಯ ದೊರೆಯಿತು. ಚುನಾಯಿತ ೧೫ ಸ್ಥಳಗಳಿಗೂ ಈ ಕೆಳಗಿನ ೧೫ ಕಾಂಗ್ರೆಸು ಉಮೇದುವಾರರುಗಳೇ ಆರಿಸಿ ಬಂದರೆಂದು ತಿಳಿಯುತ್ತೇವೆ. ಶ್ರೀಮತಿ ಚೆಪ್ಪುಡಿರ ಕಾವೇರಿ ಚಿಣ್ಣಪ್ಪನವರು, ಡಾ. ದೇಶಿಕಾಚಾರ್ಯ, ತೀತಿಗಳಾದ ರಾಮದಟ್ಟಿ, ಜಯರಾಮಸಿಂಗ್, ಜೆ ಯುಸ್. ಜಯಸ್ವ. ಅಬ್ದುಲ್ ರಹಮಾನ್, ಎಂ. ಮಹ್ಮದ್ ಯೂಸಫ್, ಎಸ್. ಎ. ರಾಮಮೂರ್ತಿ, ಅಂದು ಪಾಜಿ, ಪಟ್ಟದ ಚಿಣ್ಣಪ್ಪ, ಸಿ ನಾರಾಯಣ ಕಾಮತ, ಮಹ್ಮದ್ ಹಾಜಿ, ಲಾರೆನ್ಸ ಮಿನೇಜಸ, ಮಾಕೇಟಿರ ಐಯ್ಯಣ್ಣ, ಮತ್ತು ಅಬ್ದುಲ ಸತಾರ ರವರು.

..

ರಾಷ್ಟ್ರದಲ್ಲಿ ತಾವು ಕೈಕೊಂಡಿರುವ ಭೂದಾನ ಯಜ್ಞ ಮುಖಾಂತರ ೫ ಕೋಟಿ ಎಕರೆ ಭೂಮಿಯನ್ನು ಸಂಗ್ರಹಿಸಲು ತಾವು ನಿರ್ಧರಿಸಿರುವದಾಗಿ ಆಚಾರ್ಯ ವಿನೋಬಾ ಬಾವೆಯವರು ತಾ. ೨ರಲ್ಲಿ ಆರಾದ ಸಾರ್ವಜನಿಕ ಸಭೆಯಲ್ಲಿ ಹೇಳಿದರು. ಖಾದಿಯನ್ನು ಉಪಯೋಗಿಸಬೇಕೆಂದೂ, ಗ್ರಾಮೋದ್ಯೋಗ ಸರಕುಗಳನ್ನೇ ಉಪಯೋಗಿಸಬೇಕೆಂದೂ ಅವರು ಒತ್ತಿ ಹೇಳಿದರು.

ವರ್ತಮಾನ ಪತ್ರಿಕೆಗಳನ್ನು ಹಂಚಲು ಹುಡುಗರು ಬೇಕಾಗಿದ್ದಾರೆಂದು ಪೂನಾದ ದಿನ ಪತ್ರಿಕೆಯೊಂದು ಅರ್ಜಿಗಳನ್ನು ಕರೆದಿತ್ತು. ಒಟ್ಟು ೧೨೫ ಅರ್ಜಿಗಳು ಬಂದಿದ್ದು ಅರ್ಜಿದಾರರಲ್ಲಿ ಒಬ್ಬರು ಬಿ. ಎಸ್‌ಸಿ. ಎಲ್‌ಎಲ್. ಬಿ. ಪದವೀಧರರೂ, ಅನೇಕರು ಇಂಟರ್ ಆದವರೂ ಇದ್ದಾರೆ.

ಈಗ ಲಂಡನಿನಲ್ಲಿ ೨೫ ಜನಾಂಗಗಳ ೧೦೦ ಪ್ರತಿನಿಧಿಗಳಿಂದ ನಡೆಯುತ್ತಿರುವ ಪಾರ್ಲಿಮೆಂಟೇರಿಯನ್ ಕಾನ್ಫರೆನ್ಸಿಗೆ ಇಂಡಿಯಾ ಪ್ರಧಾನ ಮಂತ್ರಿಯವರು ಇಡೀ ಪ್ರಪಂಚಕ್ಕೆ ಒಂದು ಸ್ವತಂತ್ರ ಸರ್ಕಾರವನ್ನು ಸ್ಥಾಪಿಸಲು ಸಾಧ್ಯವಿದೆಯೆಂದು ಸಂದೇಶ ಕಳುಹಿಸಿರುವರು.

ದೈವಭಕ್ತಿ.

ಲೇ: ಶ್ರೀ ಪಿ. ಟಿ. ಐಯ್ಯಪ್ಪ, ಮಡಿಕೇರಿ.

“ [illegible] ಅಥವಾ ಜಡ ಶಾಸನಗಳಲ್ಲಿ ಎಷ್ಟೋ ಜನರು ಕೊಡ ಬಾರದ [illegible] ಕಣ್ಣೀರು ಸುರಿಸುತ್ತಾರೆ. ಅವರ ದುಃಖವನ್ನು ಕುರಿತು ಒಂದು ಹನಿ ನೀರು ಸುರಿಸುವವರನ್ನು ನಾನೆಲ್ಲಿಯೂ ಕಾಣಲಿಲ್ಲ” ವೆಂಬುದಾಗಿ ಶ್ರೀ ರಾಮಕೃಷ್ಣ ಪರಮಹಂಸರು ಆಗಾಗ್ಗೆ ತಮ್ಮ ಭಕ್ತ ಮಂಡಳಿಯವರಿಗೆ ಹೇಳುತ್ತಿದ್ದರಂತೆ. ಅವರು ಹಾಗೆ ಹೇಳುತ್ತಿದ್ದುದಕ್ಕೆ ಆಗಾಗ್ಗೆ [illegible] ದೇವಾಲಯದ ವಿಗ್ರಹದ ಮುಂದೆ ನಿಂತು ವಿಪುಲವಾಗಿ ಅಶ್ರುಧಾರೆಯನ್ನು ಸುರಿಸುತ್ತಿದ್ದರಂತೆ.

ಭಗವಾನರವರು ಮೇಲಿನ ಮಾತನ್ನು ಹೇಳಿದಾಗಲೆಲ್ಲಾ ಹಾಗೆ ಕಣ್ಣೀರು ಸುರಿಸುತ್ತಿದ್ದರೆಂದರೆ, ಸಾಮಾನ್ಯ ಮನುಷ್ಯರು [illegible] ಹಾಗೆ ಮಾಡಲು ಸಾಧ್ಯವಿಲ್ಲ. ಯಾಕೆಂದರೆ, ಮನುಷ್ಯನ ಕಣ್ಣಿನಿಂದ ನೀರು ಹೊರಡಬೇಕಾದರೆ ಎರಡು ಸನ್ನಿವೇಶಗಳಲ್ಲಿ ಮಾತ್ರ ಸಾಧ್ಯವು ಉಂಟು. ಅವು ಯಾವುವೆಂದರೆ (೧) ಅವನಿಗೆ ಅತ್ಯಂತ ದುಃಖವಾಗಬೇಕು (೨) ಇಲ್ಲವೇ ಅತ್ಯಂತ ಸಂತೋಷವಾಗಬೇಕು. ಈ ಎರಡು ಸಂದರ್ಭಗಳಲ್ಲಿ ಅಲ್ಲದೆ ಬೇರೆ ಸಮಯಗಳಲ್ಲಿ ಮನುಷ್ಯನು ಸ್ವಾಭಾವಿಕವಾಗಿ ಕಣ್ಣೀರಿಡಲು ಸಾಧ್ಯವಿಲ್ಲ. ಶ್ರೀ [illegible] ಪರಮಹಂಸರು [illegible] ದೇವರ ವಿಗ್ರಹವನ್ನು ಕಂಡಾಗ ಈ ಎರಡು ಸನ್ನಿವೇಶಗಳಲ್ಲಿ ಯಾವುದು ಉಂಟಾಗುತ್ತಿತ್ತೋ ಅದು ಅವರಿಗೇ ಗೊತ್ತು. ಸಾಮಾನ್ಯ ಜೀವಿಗಳಾದ ನಮ್ಮ ಕಣ್ಣುಗಳಿಂದ [illegible] ಅಶ್ರು ಬಿಂದುಗಳು ಹೊರಡಬೇಕಾದರೆ ನಮಗೆ [illegible] ಇಲ್ಲವೇ [illegible] ದ [illegible] ಉಂಟಾಗಬೇಕು. ಈ ಎರಡು ಸಂದರ್ಭಗಳಲ್ಲಾದರೂ ಕಣ್ಣೀರು ಸುರಿಯದೆ [illegible] ಸ್ವಭಾವವಾಗಿ ಯೇ [illegible] ಧಾರೆಯಾಗಿ ಸುರಿಯಲು ಬಂದರೆ ಬರುವುದು.

ಭಗವಂತನನ್ನು ನೆನೆಸಿದಾಗ ಒಬ್ಬನಿಗೆ ಕಣ್ಣೀರು ಬರಬೇಕಾದರೆ ಆ ಭಕ್ತನಿಗೆ ದೇವರನ್ನು ಕುರಿತು ಅನನ್ಯವಾದ ಪ್ರೀತಿ ಇರಬೇಕು. ಆದರೆ ಸಾಮಾನ್ಯ ಜನರಲ್ಲಿ ದೇವರ ಮೇಲಿರುವ ಭಕ್ತಿಯು ಇಲ್ಲವೇ ಪ್ರೀತಿಯು [illegible] ಅಥವಾ ಹೆದರಿಕೆಯಿಂದ ಹುಟ್ಟಿದಂತಹುದು. ಅನೇಕರು ದೇವರಿಗೆ ಹೆದರಿ ನಡೆಯುತ್ತಾರೆ. ಇನ್ನು ಅನೇಕರು ದೇವರನ್ನು ಪ್ರೀತಿಸುತ್ತಾರೆ. ಆದರೆ ದೇವರನ್ನು ಹೆದರಿ ಪೂಜಿಸುವವರು ಮತ್ತು ಪ್ರೀತಿಯಿಂದ ಪೂಜಿಸುವವರು ಇವರ್ಗಳಿಗಿಂತ ಹೆಚ್ಚಾದವರೆಂದು ಹೇಳುವರೆ ತಪ್ಪಾಗಲಾರದು. ದೇವರನ್ನು ಪ್ರೀತಿಯಿಂದ ಪೂಜಿಸುವುದು ಅತಿ ಉತ್ತಮ. ಅಂಜಿಕೆಯಿಂದ ಪೂಜೆ ಮಾಡ ದರ ಹೆದರಿಕೆಯಿಂದ ಪೂಜಿಸುವುದು ಪೂಜಿಸದೇ ಇರುವುದಕ್ಕಿಂತ ಎಷ್ಟೋ ಮೇಲೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

ಮನುಷ್ಯನು ಅನೇಕ ಕ್ಷೇತ್ರಗಳಲ್ಲಿ ಹೊಕ್ಕು ನಾನಾ ರೀತಿಯ ಕೆಲಸ ಕಾರ್ಯಗಳನ್ನು ಕೈಗೊಂಡು ಲೋಕಾಶ್ಚರ್ಯಕರವಾದ ಸಂಪಾದನೆಗಳನ್ನು ಮಾಡುತ್ತಿದ್ದರೆ ಅವನ ಈ ಎಲ್ಲಾ ಚಟುವಟಿಕೆಗಳಲ್ಲಿ ಅವನಿಗಿರುವ ಒಂದೇ ಉದ್ದೇಶ(?) [illegible] ಅವನ ಶಾರೀರಕ ಮತ್ತು ಮಾನಸಿಕ ಸೌಖ್ಯ ಮತ್ತು ಆನಂದವನ್ನು ಹೆಚ್ಚಿಸುವುದೇ ಆಗಿರುತ್ತದೆ. ಲೋಕದಲ್ಲಿರುವ ಸಕಲ ಜೀವರಾಶಿಗಳೂ ಅವರವರ ಪ್ರಯತ್ನ [illegible] ಈ ಸೌಖ್ಯ ಅಥವಾ ಆನಂದವನ್ನು ಗಳಿಸ ಪ್ರಯತ್ನ ಪಡುತ್ತಿರುವವೇ. ಕೆಲವರು ಕೂಡಲೇ ಸಿಕ್ಕಬಹುದಾದ ಕ್ಷಣಿಕ ಭೋಗಗಳಿಂದ ಸೌಖ್ಯ [illegible] ಪಡುತ್ತಿದ್ದರೆ, ಇನ್ನು ಕೆಲವರು ಅವುಗಳನ್ನು ತ್ಯಜಿಸಿ ಶಾಶ್ವತವಾದ ಆನಂದಕ್ಕೆ ಪ್ರಯತ್ನಿಸುತ್ತಾರೆ. ಅಂತೂ ಎಲ್ಲರ ಗುರಿಯು ಆನಂದ ಅಥವಾ ಸೌಖ್ಯವನ್ನು ಗಳಿಸ ಬೇಕೆಂಬುದೇ ಆಗಿದೆ.

[illegible] ಅಥವಾ ಸೌಖ್ಯವನ್ನು ಗಳಿಸುವುದು ಎಂದಾದ ಮೇಲೆ ನನಗೆ ಯಾವ ವಸ್ತುವಿನ ಮೇಲೆ ಹೆಚ್ಚಿನ ಸುಖ ಪ್ರೀತಿ [illegible] ಹುಟ್ಟುವುದೋ? ಯಾವ ವಸ್ತು ನನಗೆ ಹೆಚ್ಚಿನ ಸುಖ ಅಥವಾ ಸಂತೋಷವನ್ನು ಕೊಡುತ್ತದೋ ಅದರ ಮೇಲೆ ಹೆಚ್ಚಿನ ನಾವು ಯಾರನ್ನು ಹೆಚ್ಚಾಗಿ ಪ್ರೀತಿಸುತ್ತೇವೆ? ಯಾರು ನಮಗೆ ಹೆಚ್ಚಿನ ಸಹಾಯವನ್ನು ಒದಗಿಸಿ ದೂರದಲ್ಲಿರುವರೋ ಮತ್ತು [illegible] ಅವರನ್ನೇ ನಾವು ಹೆಚ್ಚಿಚ್ಚು ಪ್ರೀತಿ ಮತ್ತು ಅಭಿಮಾನದಿಂದ ಕಾಣುತ್ತೇವೆ. ಈಗಲೀಗ ಯಾವನೊಬ್ಬನೂ ತನ್ನ ತಂದೆ ತಾಯಿಯರನ್ನು ಇತರ ಎಲ್ಲರಿಗಿಂತಲೂ ಹೆಚ್ಚಾಗಿ ಪ್ರೀತಿಸುತ್ತಾನೆ. ಕಾರಣ ಪ್ರತಿಯೊಬ್ಬನೂ ಅವನವನ ತಾಯಿತಂದೆಗಳಿಂದ ಕೊಡುವಷ್ಟು ಪ್ರಯೋಜನವನ್ನು ಇತರರಿಂದ ಹೊಂದಿರುವುದಿಲ್ಲ. ಅವರಲ್ಲದೆ ತನಗೆ [illegible] ನಮಗೆ [illegible] ಯಾ ಪ್ರಯೋಜನ [illegible] ರತ್ತದ [illegible] ನಮಗೆ ಒಂದು [illegible] ಮೇಲೆ [illegible] ಪ್ರೀತಿ ಅಥವಾ ಅಭಿಮಾನ ಯಾ ಭಕ್ತಿ ಇರಬೇಕಾದರೆ ಆ ವಸ್ತು ಯಾ ವ್ಯಕ್ತಿಯಿಂದ ನಮಗೆ ಈ ವರೆಗೆ ಸಿಕ್ಕಿದ ಅಥವಾ ಮುಂದಕ್ಕೆ ಸಿಕ್ಕಬಹುದಾದ ಪ್ರಯೋಜನಗಳ ಮೇಲೆ ನಿಂತಿರುತ್ತದೆ. ಏನೂ ಪ್ರಯೋಜನ ದೊರೆಯದ ಮತ್ತು ನಮ್ಮ ಸುಖ ಸಂತೋಷಗಳನ್ನು ಯಾವ ರೀತಿಯಲ್ಲೂ ಹೆಚ್ಚಿಸದ ಯಾವುದೊಂದು ವಸ್ತುವನ್ನೂ ಯಾರೂ ಪ್ರೀತಿಸಲಾರರು.

ಮನುಷ್ಯನಿಗೂ ಇತರ ಪ್ರಾಣಿಗಳಿಗೂ ಇರುವ ಒಂದು ಮಹತ್ತರವಾದ ವ್ಯತ್ಯಾಸವೇನೆಂದರೆ, ಮನುಷ್ಯನಿಗಿರುವ ಜ್ಞಾನಶಕ್ತಿ. ಈ ಶಕ್ತಿಯು ಬೇರೆ ಕೆಲವು ಜೀವ ಜಂತುಗಳಲ್ಲಿ ಸ್ವಲ್ಪ ಮಟ್ಟಿಗೆ ಕಂಡು ಬಂದರೂ ಸಾಮಾನ್ಯವಾಗಿ ಪ್ರಾಣಿವರ್ಗದಲ್ಲಿ ಮನುಷ್ಯನನ್ನು ಬಿಟ್ಟು ಉಳಿದ ಬೇರೆ ಇರುವ ಪ್ರಾಣಿಗಳಿಗೆ ಜ್ಞಾನಶಕ್ತಿ ಇಲ್ಲವೆಂದೇ ಹೇಳಬೇಕು. ಆದುದರಿಂದಲೇ ಪ್ರಾಣಿಗಳಲ್ಲಿ ಭಕ್ತಿ, ಪ್ರೀತಿ ಅಥವಾ ಕೃತಜ್ಞತೆಗಳೆಂಬ ಈ ಮಹಾ ಗುಣಗಳು ಬಹಳ ವಿರಳ. ಜ್ಞಾನಶಕ್ತಿಯನ್ನು ಪಡೆದ ಮನುಷ್ಯನಲ್ಲಿ ಮಾತ್ರ ಈ ಗುಣಗಳು ಕಂಡು ಬರುತ್ತವೆ.

ಆದಿಯಲ್ಲಿ ಮನುಷ್ಯನು ತನ್ನ ಜ್ಞಾನಶಕ್ತಿಯನ್ನು ಉಪಯೋಗಿಸಿ ನೈಸರ್ಗಿಕ ಜೀವನದ ಅನೇಕ ಕಷ್ಟ ಮತ್ತು ತೊಂದರೆಗಳನ್ನು ನಿವಾರಿಸುತ್ತಾ ಬಂದನು. [illegible] ಲೋಕದಲ್ಲಿ ನಿರ್ಮಿಸಲ್ಪಟ್ಟಿದ್ದ ಎಲ್ಲಾ ವಸ್ತುಗಳನ್ನೂ ಅವನು ತನ್ನ ಸಂತೋಷವನ್ನು ಹೆಚ್ಚಿಸುವ ಆನಂದವನ್ನು ಹೆಚ್ಚಿಸಿಕೊಳ್ಳುವದಕ್ಕಾಗಿಯೇ ಉಪಯೋಗಿಸಿಕೊಳ್ಳುತ್ತಾ ಬಂದಿದ್ದಾನೆ. ಹೀಗೆ ಉಪಯೋಗಿಸುತ್ತಾ ಬರುವಾಗ್ಗೆ ಯಾವ ಯಾವ ವಸ್ತುಗಳು ಮತ್ತು ಸಾಧನಗಳು ಅವನಿಗೆ ಆನಂದವರ್ಧಕಗಳಾಗಿದ್ದವೋ ಅಂತಹ ವಸ್ತುಗಳ ಮೇಲೆ ಅವನಿಗೆ ಹೆಚ್ಚು ಪ್ರೀತಿ ಹುಟ್ಟತೊಡಗಿತು. ಹುಟ್ಟುತ್ತಾ ಬಂದವು. ಹಾಗೆಯೇ ಇವನ ಕಾಲಕಾಲಕ್ಕೆ ಅವಶ್ಯವಿರುವ ವಸ್ತುಗಳನ್ನು ಒದಗಿಸಿ ಕೊಡುವುದರಲ್ಲಿ ಯಾವ ಯಾವ ನೈಸರ್ಗಿಕ ವಸ್ತುಗಳು ಮತ್ತು ಶಕ್ತಿಗಳು ಸಹಾಯ ಪಡೆಯಾಗಿದ್ದವೋ, ಅಂತಹ ಮಹಾ ಶಕ್ತಿಗಳನ್ನು ಪ್ರೀತಿ ಭಕ್ತಿಯಿಂದ ಆರಾಧಿಸತೊಡಗಿದನು. ಈ ರೀತಿಯು ನೈಸರ್ಗಿಕ ಶಕ್ತಿಗಳಾದ ಸೂರ್ಯ, ಚಂದ್ರ, ಗಾಳಿ, ಮಳೆ ಮುಂತಾದವುಗಳನ್ನು ಪೂಜಿಸುವ ವಿಧಾನಗಳನ್ನೂ ರೀತಿಗಳನ್ನು ನಾವು ವೇದ ಮತ್ತು ಉಪನಿಷತ್ತುಗಳಲ್ಲಿ ಕಾಣುತ್ತೇವೆ.

ಈ ರೀತಿಯ ಪ್ರೀತಿ ಮತ್ತು ಭೀತಿಯ ಪೂಜೆಗಳಿಗೆ ಪ್ರಾಧಾನ್ಯ ಕಾರಣವೆಂದರೆ ಮನುಷ್ಯನ ಜ್ಞಾನಶಕ್ತಿಯು ಸರಿಯಾಗಿ ಬೆಳೆಯದಿದ್ದ ಕಾಲದಲ್ಲಿ [illegible] ಮನುಷ್ಯನು ಈ ಉಪಯೋಗಗಳನ್ನು [illegible] ಕೊಳ್ಳಬಾರದೆಂಬ ಜನರ [illegible] ಪ್ರಾಣಿಗಳಿಗೆ ಈ ವಿವೇಚನಾ ಶಕ್ತಿಯೇ ಇಲ್ಲದಿರುವುದರಿಂದ [illegible] ಭಕ್ತಿಯಾಗಲೀ, ಪ್ರೀತಿಯಾಗಲೀ ಹುಟ್ಟಲು ಇಲ್ಲ. ಆದರೂ ಅಲ್ಲದೆ ಇತರ ಪ್ರಾಣಿಗಳಿಗೆ ಸುಖ ಅಥವಾ [illegible] ಅನುಭವಿಸುವುದರಲ್ಲಿ [illegible] ಶಕ್ತ್ಯಾಲಿಕ ಜ್ಞಾನವಿದೆಯೇ ಹೊರತು ನಾಳೆ ಎಂಬ ಮುಂದಾಲೋಚನೆ ಬಹಳ ಕಡಮೆ. ಜ್ಞಾನಿಯಾದ ಮನುಷ್ಯನಿಗೆ ಹಾಗಲ್ಲ, ತನ್ನ ಸುಖವನ್ನು ಸಂತೋಷವನ್ನು ಹೆಚ್ಚಿಸಿಕೊಳ್ಳಬೇಕೆಂಬ ಹಂಬಲ ನಾಳೆ, ನಾಡಿದ್ದಲ್ಲದೆ ಇವನ್ನು ಎಂದೆಂದೂ ಶಾಶ್ವತವಾಗಿ ಕಾಯ್ದುಕೊಳ್ಳಬೇಕೆಂಬ ಆಸಕ್ತಿ. ಆದುದರಿಂದಲೇ ಅವನು ತನಗೆ ಈ ಸೌಖ್ಯಗಳನ್ನು ಒದಗಿಸಿಕೊಡುತ್ತಿದ್ದ ಅಮಾನುಷ ಶಕ್ತಿಗಳಿಗೆ ತನ್ನ ಕೃತಜ್ಞತೆಯನ್ನು ನಾನಾ ರೀತಿಯ ಆರಾಧನೆ ಮತ್ತು ಯಜ್ಞಗಳಿಂದ ತೋರಿಸುತ್ತಿದ್ದನಲ್ಲದೆ ಮುಂದಕ್ಕೂ ಸಹ ಆ ಶಕ್ತಿಗಳು ಇದೇ ರೀತಿಯಲ್ಲಿ ತನಗೆ ಸಹಾಯ ಮಾಡಲಿದ್ದರೆ ತನ್ನ ಮುಂದಿನ ಸುಖಕ್ಕೆ ಆತಂಕ ಬಾರದೆಂಬ ಹೆದರಿಕೆಯಿಂದ ಅವನು ಅವುಗಳನ್ನು ಪೂಜಿಸಲು ತೊಡಗಿದನು.

ಕಾಲವು ಹೋದ ಹಾಗೆ ಮನುಷ್ಯನ ಜ್ಞಾನಶಕ್ತಿಯು ಹೆಚ್ಚಾಗಿ ವಿಕಸಿತವಾದ ಹಾಗೆ ಅವನಿಗೆ ತನ್ನ ಪಂಚೇಂದ್ರಿಯಗಳಿಗೆ ಗೋಚರಿಸುವ ಈ ಮಹಾ ಶಕ್ತಿಗಳನ್ನು ಸಹ ಸೃಷ್ಟಿಸಿ ಸತೋಟಿಯಲ್ಲಿಟ್ಟಿರುವ ಮತ್ತೊಂದು ಮಹಾ ಶಕ್ತಿಯಿರಬೇಕೆಂಬ ಭಾವನೆಯು ಸ್ಥಿರವಾಗಿ ಬೆಳೆಯತೊಡಗಿ, ಅದನ್ನು ಕಂಡು ಹಿಡಿದು ಅದರ ಪ್ರೀತಿಯನ್ನು ಸಂಪಾದಿಸುವ ಪ್ರಯತ್ನವನ್ನು ಮಾಡತೊಡಗಿದನು. ಈ ಸಂಶೋಧನೆಯ ಫಲವಾಗಿ ನೆಲ್ಲ ಅವನು ದೇವರೆಂಬ ಮಹಾ ಶಕ್ತಿಯನ್ನು ಕಂಡು ಹಿಡಿದನಲ್ಲದೆ, ಆ ಮಹಾ ಶಕ್ತಿಯ ಪ್ರೀತಿಯನ್ನು ಸಂಪಾದಿಸುವ ರೀತಿ ನೀತಿಗಳನ್ನು ಕಂಡು ಹಿಡಿದು ನಮಗೆ [illegible] ರೀತಿಯ ಪೂಜಾ ವಿಧಿಗಳನ್ನು ತಯಾರಿಸಿಟ್ಟನು.

ಆದುದರಿಂದಲೇ ಮನುಷ್ಯನಲ್ಲಿ ದೇವರ ವಿಷಯದಲ್ಲಿರತಕ್ಕ ಭಕ್ತಿಯು ಹುಟ್ಟಿ ಬೆಳೆದುದಾಗಿದೆ. ಪರಮಾತ್ಮನಿಂದಲೇ ನಾವು ನಮ್ಮ ಪ್ರತಿಯೊಂದು ಎಲ್ಲಾ ಸುಖ ಸಂತೋಷಗಳನ್ನು ಪಡೆದಿರುವುದರಿಂದ [illegible] ಉಂಟಾದ [illegible] ಗಳನ್ನು ಕಲ್ಪಿಸಿಕೊಟ್ಟ ದೇವರನ್ನು ನಾವು ಪ್ರೀತಿಯಿಂದ ಪೂಜಿಸಬೇಕಾದುದು ಒಂದನೆ, ಎರಡನೆಯದಾಗಿ, ನಮಗೆ ಮುಂದಾಗಲೂ ಸುಖ ಸಂತೋಷಗಳು ಬೇಕಾಗಿರುವುದರಿಂದ ಇವನ್ನು ಕೊಡುವ ದೇವರನ್ನು ಆರಾಧಿಸಿದರೆ ಆ ದೇವರು ನಮಗೆ ದಯಪಾಲಿಸುತ್ತಿರುವ ಸುಖ ಸಂತೋಷಗಳನ್ನು ಕಾಪಾಡಿ ಮತ್ತು ಸಾಧನಗಳನ್ನು ನಿಲ್ಲಿಸಿಂದ [illegible] ಬಿಡುವ ಮನೆಗಳ [illegible] ನು ಎಂಬ ಹೆದರಿಕೆ ಮತ್ತೊಂದು. ಆದುದರಿಂದ ಸಾಮಾನ್ಯ ಮನುಷ್ಯನಲ್ಲಿರುವ ದೈವಭಕ್ತಿ ಎರಡು ಈ ಮೇಲೆ ತಿಳಿಸಿದ ಇಲ್ಲವೇ ಅದು ಉಪಕಾರ ಸ್ಮರಣೆಯಿಂದ ಹುಟ್ಟಿದ ಪ್ರೀತಿಯ ಭಕ್ತಿ. ಅಥವಾ ಮುಂದಕ್ಕೂ ಈ ಸುಖವು ಎಲ್ಲಿ [illegible] ತಪ್ಪಿಹೋಗಿ ಬಹುದೆಂಬ ಹೆದರಿಕೆಯಿಂದ ಹುಟ್ಟಿದ ಹೆದರಿಕೆಯ ಭಕ್ತಿ.

ನಮ್ಮ ವೇದಾಂತಿಗಳು ಮತ್ತು ಪಂಡಿತರು ಈ ಎರಡನೆಯ ರೀತಿಯ ಭಕ್ತಿಯನ್ನು ದೇವರಿಗೆ ಬೇಕಾದ ಮಾಡುವ ಒಂದು ತರದ ವ್ಯಾಪಾರವೆಂಬುದಾಗಿ ಹೇಳುತ್ತಿರುವುದನ್ನು ನಾವು ಅನೇಕ ಸಾರಿ ಕೇಳಿದ್ದೇವೆ. ಅವರ ದೃಷ್ಟಿಯಲ್ಲಿ ನಮ್ಮ ಪೂಜೆಗಳೂ ಮತ್ತು ಭಕ್ತಿಯೂ ನಿಃಸ್ವಾರ್ಥ ಸ್ವಭಾವ ರೀತಿಯದ್ದಾಗಿರಬೇಕು. ಈ ತರದ ಪ್ರತಿಫಲ ಅಪೇಕ್ಷಿಸದ ನಿಷ್ಕಾಮ ಭಕ್ತಿಯೇ ಪೂರ್ಣವಾದ ವೈದಿಕ ಭಕ್ತಿಯೇ ವಿಧಿಯಾಗಿ ಹೋಗಿದೆ. ಇದನ್ನೇ ವಿಶ್ವಾಸ ಕೊಡು, ಸುಖ ಕೊಡು, ಸಂತಾನ ಕೊಡು, ವಿದ್ಯೆ ಕೊಡು, ಎಂಬುದಾಗಿ ದೇವರನ್ನು

ಪ್ರಾರ್ಥಿಸುವುದರಲ್ಲಿ ಯಾವದೊಂದು ತಪ್ಪು ಇಲ್ಲ. ಆದರೆ ನಮ್ಮ ಕೋರಿಕೆಗಳು ಫಲಿಸಲಿಲ್ಲವೆಂದ ಮಾತ್ರಕ್ಕೆ ದೇವರನ್ನು ಹಿಯ್ಯಾಳಿಸಿ ಮಾತಾಡುವುದಾಗಲೀ ಅಥವಾ ಭಕ್ತಿಯನ್ನು ಬಿಟ್ಟು ಬಿಡುವುದಾಗಲೀ ಸರಿಯಲ್ಲ. ಸಹಸ್ರ ಕೋಟಿ ಬ್ರಹ್ಮಾಂಡಗಳನ್ನು ಸೃಷ್ಟಿಸಿ ಕಾಪಾಡಿಕೊಂಡು ಬರುತ್ತಿರುವ ಪರಮಾತ್ಮನಿಗೆ ನಮ್ಮ ಅಲ್ಪ ಕೋರಿಕೆಗಳನ್ನು ಸಲ್ಲಿಸಿ ಕೊಡುವುದು ಎಂದೂ ಅಸಾಧ್ಯವಾಗಲಾರದು. ಪ್ರಾಮುಖ್ಯವಾಗಿ ಬೇಕಾದುದೆಂದರೆ ಶಾಂತಿ, ಸಮಾಧಾನ ಮತ್ತು ತೃಪ್ತಿ. ನಮ್ಮ ಪೂರ್ವ ಕರ್ಮಗಳು ತೀರುವ ವರೆಗೆ ನಮ್ಮ ಕೋರಿಕೆಗಳು ಕೈಗೂಡದಿರಬಹುದು. ಆದರೆ ಶ್ರದ್ಧಾ ಭಕ್ತಿಯಿಂದ ಮನಗುಂದದೆ ಸಾಧಿಸಿದರೆ ನಮ್ಮ ಕೋರಿಕೆಗಳನ್ನು ಕಡೆಗಾದರೂ ದೇವರು ಕೈಗೂಡಿಸುವುದರಲ್ಲಿ ಯಾವ ಸಂಶಯವೂ ಇಲ್ಲ.

ಈಗಿನ ಕಾಲದಲ್ಲಿ ನಮ್ಮಲ್ಲಿ ದೈವ ಭಕ್ತಿಯು ಬಹಳ ಮಟ್ಟಿಗೆ ಇಳಿಮುಖವಾಗಿ ಹೋಗಿದೆ. ಇದಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಪ್ರಾಮುಖ್ಯವಾದುವುಗಳನ್ನು ನಾವು ಪರಿಶೀಲಿಸಿ ಅಗುವಷ್ಟು ಬೇಗನೆ ತಡೆಗಟ್ಟಲು ಪ್ರಯತ್ನ ಪಡದಿದ್ದರೆ ನಮ್ಮ ಮುಂದಿನ ಜೀವನವು ಬಹು ಶೋಚನೀಯಾವಸ್ಥೆಗೆ ಇಳಿಯುವುದರಲ್ಲಿ ಯಾವ ಸಂಶಯವೂ ಇಲ್ಲ.

ಒಂದನೆಯದಾಗಿ ಹೇಳುವುದಾದರೆ ಪೂರ್ವದಲ್ಲಿದ್ದ ನಮ್ಮ ವರ್ಣಾಶ್ರಮ ಧರ್ಮವು ಈ ಕಾಲದಲ್ಲಿ ಛಿಲಿಕಳಿಗಾಗಿ ಹೋಗಿದೆ. ಪೂರ್ವದಲ್ಲಿ ನಮ್ಮ ಸಮಾಜದಲ್ಲಿ ನಾಲ್ಕು ವರ್ಣಗಳಿದ್ದವು. ಬ್ರಹ್ಮ, ಕ್ಷತ್ರಿಯ ವೈಶ್ಯ ಮತ್ತು ಶೂದ್ರ ಎಂಬುದಾಗಿ, ಈಗಿನ ಕಾಲದಲ್ಲಿ ಸರಕಾರದ ಕಾರ್ಯ ಕಲಾಪಗಳು ಒಂದೊಂದು ಇಲಾಖೆಗಳಾಗಿ ಭಾಗಿಸಲ್ಪಟ್ಟು ಪ್ರತಿ ಇಲಾಖೆಯವರು ಆಯಾ ಇಲಾಖೆಯ ಕೆಲಸಗಳನ್ನು ಸರಿಯಾಗಿ ನಡೆಸುತ್ತಾ ಬರುವುದರಿಂದ ಇಡೀ ಸರಕಾರದ ಕಾರ್ಯಕಲಾಪಗಳು ಸುಸೂತ್ರವಾಗಿ ಆಯಾಯ ಡಿಪಾರ್ಟ್‌ಮೆಂಟಿನವರು ಅವರವರ ಡಿಪಾರ್ಟ್‌ಮೆಂಟಿಗೆ ಸೇರಿದ ಕೆಲಸಗಳನ್ನು ಶ್ರದ್ಧೆಯಿಂದಲೂ ಮತ್ತು ಇಡೀ ಜನಾಂಗದ ಹಿತದೃಷ್ಟಿಯಿಂದಲೂ ಸರಕಾರದ ಕಾನೂನು ಕಾಯಿದೆಗಳನ್ನು ಅನುಸರಿಸಿಯೂ ನಡೆಸುತ್ತಿದ್ದಾರೆ. ಹೀಗಿರುವಾಗ ಇಡೀ ಸರಕಾರದ ಕೆಲಸವು ಸರಿಯಾಗಿ ನಡೆದುಹೋಗುತ್ತಿದೆ. ಮತ್ತು ಆ ಇಲಾಖೆಯ ಕೆಲಸ ಸುಲಭ ಮತ್ತು ಹೆಚ್ಚು ಘನತೆಯುಳ್ಳದೆಂದಾಗಲೀ ಯಾ ಅದರಲ್ಲಿ ಹೆಚ್ಚಿನ ಸಂಪಾದನೆಯ ದಾರಿ ಇದೆ ಎಂಬ ದಾಗಿಯಾಗಲೀ ತಮ್ಮ ಕೆಲಸವನ್ನು ಬಿಟ್ಟು ಆ ಕೆಲಸಕ್ಕೆ ಹೋಗುವುದಿಲ್ಲ. ಅದರ ಬದಲು ಯಾವುದಾದರೊಂದು ಇಲಾಖೆಯ ಸಿಬ್ಬಂದಿಗಳು ತಮ್ಮ ಕೆಲಸವನ್ನು ನಿರ್ವಹಿಸದೆ ಬಿಟ್ಟು ಬಿಟ್ಟರೆ ಅಥವಾ ಇನ್ನೊಂದು ಇಲಾಖೆಯವರ ಕೆಲಸದಲ್ಲಿ ಕೈ ಹಾಕಿ ಬಿಟ್ಟರೆ ಇಡೀ ಸರಕಾರದ ಕಾರುಬಾರುಗಳೇ ಕೆಟ್ಟುಹೋಗಿ ಸಮಾಜದ ಅಭಿಪ್ರಾಯವೇ ಮುರಿದುಹೋಗುವುದು.

ಇದೇ ರೀತಿಯಲ್ಲಿ ನಮ್ಮ ಹಿಂದೂ ಸಮಾಜದಲ್ಲಿನ ಎಲ್ಲಾ ಕಾರ್ಯಕಲಾಪಗಳನ್ನು ನಾಲ್ಕು ಭಾಗಗಳಾಗಿ ಭಾಗಿಸಿ, ಒಂದೊಂದು ಭಾಗವನ್ನು ಒಂದೊಂದು ಆಶ್ರಮದವರಿಗೆ ವಹಿಸಿದ್ದರು. ಪ್ರತಿಯೊಂದು ಆಶ್ರಮದವರು ಅವರವರ ಆಶ್ರಮ ಧರ್ಮವನ್ನು ಸರಿಯಾಗಿ ನಡೆಸುತ್ತಾ ಬರುತ್ತಿರುವಾಗ್ಯೆ ನಮ್ಮ ಭಾರತದಲ್ಲಿ ರಾಮರಾಜ್ಯವು ನೆಲೆಗೊಂಡಿತು.

ಬ್ರಾಹ್ಮಣರು ದೈವೀಕ ಸಮ್ಮಂಧವಾದ ಎಲ್ಲಾ ಕಾರ್ಯಗಳನ್ನು ಇಡೀ ಸಮಾಜದ ಪರವಾಗಿ ನಿರ್ವಹಿಸಿ 'ಸರ್ವೇಜನಾಃ ಸುಖಿನೋಭವಂತು' ಎಂಬದಾಗಿ ಪೂಜೆ, ಪ್ರಾರ್ಥನೆಗಳನ್ನು ಸಲ್ಲಿಸುತ್ತಿದ್ದರು. ಕ್ಷತ್ರಿಯರು ಇಡೀ ದೇಶದ ಶತ್ರುಗಳನ್ನು ಅಡಗಿಸುತ್ತಿದ್ದರು. ವೈಶ್ಯರು ಇಡೀ ದೇಶಕ್ಕೆ ಬೇಕಾಗುವ ವ್ಯಾಪಾರ, ವ್ಯವಸಾಯಗಳನ್ನು ಸಾಗಿಸುತ್ತಿದ್ದರು. ಹಾಗೆಯೇ ಶೂದ್ರರು, ಇಡೀ ಜನಾಂಗದ ಸೇವಾವೃತ್ತಿಯಲ್ಲೇ ನಿರತರಾಗಿದ್ದರು. ಹೀಗಿರುವಾಗ್ಯೆ ಸಮಾಜದಲ್ಲಿ ಯಾವದೊಂದು ಕುಂದುಕೊರತೆಗಳೂ ಇಲ್ಲದೆ, ಎಲ್ಲವೂ ಸುಸೂತ್ರವಾಗಿ ಜರಗಿಹೋಗುತ್ತಿತ್ತು. ಈ ಆಶ್ರಮಗಳನ್ನು ಸೇರುವುದು ಹುಟ್ಟಿನಿಂದ ನಿರ್ಣಯಿಸಲ್ಪಡುತ್ತಿರಲಿಲ್ಲ. ಅವರವರ ಗುಣ ನಡತೆಗಳನ್ನನುಸರಿಸಿದ್ದವು. ಈಗಿನ ಸರಕಾರದ ನಾನಾ ಇಲಾಖೆಗಳಲ್ಲಿನ ಉದ್ಯೋಗಗಳು ಹೇಗೆ ಅವನವನ ವಿದ್ಯಾ ಮತ್ತು ತಿಳುವಳಿಕೆಯನ್ನನುಸರಿಸಿ ದೊರೆಯುತ್ತವೆಯೋ ಹಾಗೆಯೇ, ಅಗಲೂ ಒಂದೊಂದು ವರ್ಣದ ಕೆಲಸ ಕಾರ್ಯಗಳು, ಅವನವನ ಗುಣನಡತೆಗಳನ್ನನುಸರಿಸಿ ಸಿಕ್ಕುತಿತ್ತು.

ಕ್ರಮೇಣ ಈ ರೀತಿಯ ವರ್ಣಾಶ್ರಮ ಧರ್ಮವು ಹೋಗಿ, ಬ್ರಾಹ್ಮಣನ ಮಗನು ಬ್ರಾಹ್ಮಣನೂ, ಕ್ಷತ್ರಿಯನ ಮಗನೂ ಕ್ಷತ್ರಿಯನೂ ಆಗತೊಡಗಿದನು. ಅಲ್ಲಾಗಾಯತಿನಿಂದ, ನಮ್ಮ ಸಮಾಜದ ಕೀಲು ಸಡಿಲವಾಗುತ್ತಾ ಬಂತು. ಇದು ಸಾಲದುದಕ್ಕೆ ನಮ್ಮ ಪ್ರಾಮುಖ್ಯ ಆಶ್ರಮದವರಾದ ಬ್ರಾಹ್ಮಣರು ತಮ್ಮ ಧರ್ಮವನ್ನು ತಮ್ಮ ಮಕ್ಕಳಿಗೆ ಇಟ್ಟುಕೊಳ್ಳಲು ಪ್ರಯತ್ನಪಟ್ಟವಲ್ಲದೆ ಅವನ್ನು ಅಭ್ಯಾಸಿಸದೆ ಇತರರ ಆಶ್ರಮಗಳಿಗೂ ನುಗ್ಗತೊಡಗಿದರು. ಅವರು ಇತರ ಆಶ್ರಮಗಳ ಕೆಲಸಗಳಿಗೆ ಕೈಹಾಕಿದಂತೆ, ಬೇರೆ ಆಶ್ರಮದವರಿಗೆ, ಈ ಬ್ರಹ್ಮವಿದ್ಯೆಯಲ್ಲಿ ಭಾಗವಹಿಸಲು ಬಿಟ್ಟಿದ್ದರೆ, ಆದಾದರೂ ಆಗುತ್ತಿತ್ತು. ಆದರೆ ಅವರ ವಿದ್ಯೆಯನ್ನು ಇತರರು ಕಲಿಯದಂತೆ ಗುಪ್ತವಾಗಿಟ್ಟದಲ್ಲದೆ, ಇವರು ತಮ್ಮ ಕರ್ತವ್ಯವನ್ನು ಮಾಡದೆ, ಇತರರ ಕೆಲಸಗಳಲ್ಲಿ ಭಾಗವಹಿಸಿ, ಬ್ರಹ್ಮತ್ವವನ್ನು ಬಿಟ್ಟು ಕೇವಲ ಹಣ ಸಂಪಾದನೆಯ ದಾರಿಗಿಳಿದರು. 'ಫಲಿತಾಂಶವಾಗಿ ನಮ್ಮ ಸಮಾಜದ ಪ್ರಾಮುಖ್ಯ 'ಇಲಾಖೆಯಾದ ದೈವೀಕ ವಿದ್ಯೆಯ ಡಿಪಾರ್ಟ್‌ಮೆಂಟು ಸಂಪೂರ್ಣ ಮುಚ್ಚಿಯೇ ಹೋಗಿದೆ ಎಂದರೆ ತಪ್ಪಾಗಲಾರದು.

ಹಿಂದೂ ಸಮಾಜದ ಶಿರಪ್ರಾಯದಂತಿದ್ದ ಬ್ರಾಹ್ಮಣ ಸಮಾಜವು ತನ್ನ ಆಶ್ರಮ ಧರ್ಮವನ್ನು ತ್ಯಜಿಸಿ, ಇತರ ಧರ್ಮಗಳಿಗೆ ಕಾಲಿಟ್ಟದ್ದು ಮಾತ್ರವಲ್ಲದೆ ಬೇರೆ ಆಶ್ರಮದವರಿಗೆ ಆ ದೈವೀಕ ಸಮ್ಮಂದವಾದ ಪರಿಜ್ಞಾನವನ್ನು ಕಲಿಯಲು ಬಿಡದೆ ಗುಟ್ಟಾಗಿಟ್ಟದರ ಫಲಿತಾಂಶವಾಗಿ, ಈಗ ನಮ್ಮ ಸಮಾಜದಲ್ಲಿ ಈ ಆಧ್ಯಾತ್ಮಿಕ ವಿದ್ಯೆಯನ್ನು ಶಂಭತು ಶೇಕಡ ೮೦ ರಷ್ಟು ಜನರಿಗೆ 'ದೇವರು, ಪೂಜೆ, ಭಕ್ತಿ' ಎಂದರೆ ಏನೆಂಬುವುದೇ ಗೊತ್ತಿಲ್ಲ. ಬ್ರಾಹ್ಮಣರ ಪೈಕಿ ಕೆಲವರಿಗಾದರೂ, ಪೂಜೆ, ಪ್ರಾರ್ಥನೆ, ಧ್ಯಾನವೆಂಬುವುದು ಗೊತ್ತಿರಬಹುದು. ಆದರೆ ಅವರು ಅವರಿಗೇ ತಿಳಿದಿರುವವನ್ನೂ ಸರಿಯಾಗಿ ಉಪಯೋಗಿಸುವಂತಿಲ್ಲ.

'ಕ್ಷತ್ರಿಯರು ವೈಶ್ಯರು' ಎಂಬುದರಲ್ಲಿ ವಿದ್ಯಾವಂತರಾದವರು, ತಮ್ಮ ಭೌತಿಕ ಶಾಸ್ತ್ರಗಳ ಪರಿಜ್ಞಾನದ ಅಂಧಕಾರದಲ್ಲೂ ದೇವಸ್ಥಾನದಲ್ಲಿ ಪೂಜಾರಿಗಳು ನಡೆಸುತ್ತಿರುವ ಪೂಜಾ ರೀತಿಗಳಲ್ಲಿ ಭರವಸೆ ಇಲ್ಲದೆಯೂ, ಇರುವ ಕಾರಣ ಅವರಲ್ಲಿ 'ಭಕ್ತಿ' ಎಂಬುವುದು ಬಹಳ ಕಡಮೆಯಾಗಿದೆ. ವಿದ್ಯಾಹೀನರಿಗೆ, ದೇವರ ವಿಷಯ ಏನೂ ಗೊತ್ತೇಯಿಲ್ಲ. ದೇವಸ್ಥಾನದ ಒಳಗೆ ಸೇರಲು ಸಹ ಅವರಿಗೆ ಅಧಿಕಾರ, ನಮ್ಮ ಸಮಾಜವು ಕೊಡದ್ದರಿಂದ ಅವರು ಆ ಬಕ್ಕಿಗೆ ಬರುವಂತಿಲ್ಲ. ಇದರ ಫಲಿತಾಂಶವಾಗಿ ಹಿಂದೂದೇಶದಲ್ಲಿ ದೈವಭಕ್ತಿಯು ಬಹಳ ಮಟ್ಟಿಗೆ ಕೆಳಮಟ್ಟದಲ್ಲಿದೆ. ಈ ಕೊರತೆಯನ್ನು ಹೋಗಲಾಡಿಸಲು ನಮ್ಮ ಮುಂದಾಳುಗಳು ಯಾವದೊಂದೂ ಕ್ರಮ ಕೈಗೆತ್ತಿಕೊಂಡಂತೆ ಕಾಣುವುದಿಲ್ಲ.

ಹರಿಜನರನ್ನು ಬರೇ ದೇವಸ್ಥಾನಕ್ಕೆ ಸೇರಿಸಿಬಿಟ್ಟರೆ ಸಾಲದು. ಅವರಲ್ಲಿ ದೈವೀಕ ಪರಿಜ್ಞಾನವನ್ನು ಹೆಚ್ಚಿಸಿ, ಅವರ ನಡತೆ ನೀತಿಗಳನ್ನು ತಿದ್ದಿ, ಅವರಲ್ಲಿ ದೈವಭಕ್ತಿ ಹೆಚ್ಚುವಂತೆ ಪ್ರಯತ್ನಿಸಬೇಕಲ್ಲದೆ, ತಾವು ಅವರಿಗೆ ಮೇಲ್ಪಂಕ್ತಿ ಹಾಕುವ ರೀತಿಯಲ್ಲಿ ನಮ್ಮ ಮುಂದಾಳುಗಳು ತಮ್ಮ ನಡವಳಿಕೆಯನ್ನು ಇಟ್ಟುಕೊಳ್ಳಬೇಕು.

ದೇಶದಲ್ಲಿ ಅನ್ನ ಆಹಾರಾದಿಗಳು ಇಲ್ಲದೆ, ಜನರು ನರಳುತ್ತಿರುವಾಗ್ಯೆ, ಅವರಿಗೆ ಬರೇ ವನಮಹೋತ್ಸವ ಮಾಡಿ, ಬರ್ಥ್ ಕಂಟ್ರೋಲ್ ಮಾಡಿ ಎಂದರೆ ಸಾಲದು. ಬಾಪೂಜಿಯವರು ಮಾಡುತ್ತಿದ್ದ ಹಾಗೆ ಯಾವಾಗಲೂ, ಕೆಲಸ ತೀರಿದ ನಂತರ ಭಜನೆ, ಪ್ರಾರ್ಥನೆ ಮಾಡ ಮಾಡಬೇಕು. ಈಗಿನ ಕಾಲದಲ್ಲಿ ಆ ರೀತಿಯಲ್ಲಿ 'ಪ್ರಾರ್ಥನೆ ಮಾಡಿ ದೇವರಿಗೆ ಮೊರೆ ಇಡಿ' ಎಂಬದಾಗಿ ಶ್ರೀ ರಾಜಗೋಪಾಲಾಚಾರಿಯವರು ಮಾತ್ರ ಜನರಿಗೆ ಬೋಧಿಸುವುದನ್ನು ನಾವು ಕೇಳುತ್ತಿದ್ದೇವೆ.

ವನಮಹೋತ್ಸವಕ್ಕೆ ಇಂಡಿಪೆಂಡೆಂಟ್ ದಿವಸದ ಉತ್ಸವಕ್ಕೆ ಅಥವಾ ಮಹನೀಯರುಗಳ, ಜನ್ಮದಿವಸಗಳಲ್ಲಿ ನಾವು ಎಷ್ಟು ಖರ್ಚು ಮಾಡುವುದಿಲ್ಲ. ಅಷ್ಟೇ ಅಲ್ಲ ನಮ್ಮ ಸರಕಾರದವರೂ, ಮುಂದಾಳುಗಳೂ, ಹೊರಗಿನ ಅಥಿತಿಗಳನ್ನು ಸತ್ಕರಿಸಲಿಕ್ಕೆ, ಡಿನ್ನರ್ ಪಾರ್ಟಿಗಳಿಗೂ ಮತ್ತು ಕೋಕ್‌ಟೆಯಿಲ್ ಪಾರ್ಟಿಗಳಿಗೂ ಎಷ್ಟೋ ಖರ್ಚು ಮಾಡುತ್ತಿರುವಾಗ್ಯೆ, ವರ್ಷದ ಯಾವುದಾದರೊಂದು ದಿನ ದೇಶದ ಎಲ್ಲಾ ಜನರು ಜಾತಿ ಮತ ಜಾತಿ, ಮತಭೇದಗಳಿಗೆ ಸರಿಯಾಗಿ, ದೇವಸ್ಥಾನಗಳಲ್ಲೂ, ಮಸೀದಿಗಳಲ್ಲೂ ಮತ್ತು ಚರ್ಚುಗಳಲ್ಲೂ ಸೇರಿ, ದೇವರ ಪೂಜೆ ಮಾಡುವಂತೆ ಯಾತಕ್ಕೆ ಏರ್ಪಾಡು ಮಾಡಬಾರದು. ಪಶ್ಚಿಮಖಂಡದಲ್ಲಿ ರಾಜರಿಂದ ಹಿಡಿದು ಕೂಲಿಕಾರರ ವರೆಗೆ ವಾರಕೊಮ್ಮೆ ಚರ್ಚುಗಳಲ್ಲಿ ಸೇರಿ ಪ್ರತಿ ಒಬ್ಬನೂ 'Oh, father we heaven grice me my daily bread' ಎಂದು ಪೂಜಿಸುತ್ತಾರೆ. ಫಲಿತಾಂಶವಾಗಿ, ಅವರಿಗೆ ಬೇಕಾದಷ್ಟು ಆಹಾರವಿರುವುದಲ್ಲದೆ ನಮಗೂ ಕೊಡುತ್ತಿದ್ದಾರೆ.

ನಮ್ಮಲ್ಲಿಯೋ ಮುಂದಾಳುಗಳಲ್ಲಿ ಅನೇಕರಿಗೆ ದೇವರ ಮೇಲೆ ಭಕ್ತಿಯೇ ಇಲ್ಲ. ಇರುವವರೂ ಸಹ ಎಲ್ಲರಿಗೂ ಮೇಲ್ಪಂಕ್ತಿಯಾಗುವ ರೀತಿ ದೇವಸ್ಥಾನಗಳಲ್ಲಿ ಸೇರಲು ಅವರಿಗೆ ನಾಚಿಕೆ ಬ್ರಾಹ್ಮಣರು ಗೋಬ್ರಾಹ್ಮಣೇಭ್ಯ ಶುಭಮಸ್ತು ನಿತ್ಯಂ' ಎಂದು ಮಾತ್ರ ಬಾಯಿ ಪ್ರಾರ್ಥಿಸುತ್ತಾರೆ. ಇತರರಿಗೆ ಪೂಜೆ ಯಾ ಪ್ರಾರ್ಥನೆಮಾಡುವುದು ಹೇಗೆಂಬುವುದೇ ಗೊತ್ತಿಲ್ಲ. ನಮ್ಮ ಸರವಾಗಿ ಬ್ರಾಹ್ಮಣರು ಪೂಜಿಸುತ್ತಾರೆಂದು ಅವರು ಸುಮ್ಮನಿದ್ದಾರೆ. ಫಲಿತಾಂಶವಾಗಿ 'ನಾವು ಪರದೇಶಗಳಿಂದ ಭಿಕ್ಷೆ ಎತ್ತಬೇಕಾಗಿದೆ.

ವಾರ್ತೆ.

ಮುಖ್ಯ ಮಂತ್ರಿ ಪಂಡಿತ ನೆಹರೂರವರೂ ಇಂದು ಅಖಿಲ ಭಾರತ ಪತ್ರಿಕಾ ಸಂಪಾದಕರ ಪರಿಷತ್ತಿನಲ್ಲಿ ಭಾಷಣ ಮಾಡುತ್ತಾ ಪತ್ರಿಕೋದ್ಯಮದಲ್ಲಿ ಆತ್ಮಸಂಯಮವನ್ನು ಅತ್ಯಗತ್ಯವೆಂದು ಒತ್ತಿ ಹೇಳಿದರು. ವಿಚಾರಗಳ ಬಗ್ಗೆ ಭಾವನೆಗಳನ್ನು ಕೆರಳಿಸುವುದು ಗಲಭೆಯಂತಹ ರೀತಿಯ ವಿಚಾರ ಸ್ವಾತಂತ್ರ್ಯ ಹೆಸರಿನಲ್ಲಿ ಪ್ರಕ್ಷೋಭೆ ವಾತಾವರಣವನ್ನು ಸೃಷ್ಟಿಸಿ ನಾಗರಿಕತೆ ಮತ್ತು ಉತ್ತರ ಮಟ್ಟಗಳ ಅವನತಿಗೆಡೆ ಮಾಡಿಕೊಡುವುದು ತರವಲ್ಲ ಎಂದೂ ಪಂಡಿತ ನೆಹರೂರವರು ತಿಳಿಸಿದರು.

ಕೆಂಪಂಗಡಿಯ ಒಂದು ಹಸುವಿಗೆ ಕೈಗಳಲ್ಲಿ ೧೨ ಹಾಗೂ ಕಾಲುಗಳಲ್ಲಿ ೧೨ ಬೆರಳುಗಳಿವೆ. ಇದರ ತಂದೆಗೂ ಅಷ್ಟೇ ಬೆರಳುಗಳಿದ್ದವು. ಇಷ್ಟಲ್ಲದೆ ಮಕ್ಕಳಿಗೂ ಅಷ್ಟೇ ಬೆರಳುಗಳಿವೆ. ಇವನ ತಂದೆಯ ತಮ್ಮಂದಿರಿಗೂ ಅಷ್ಟೇ ಬೆರಳುಗಳಿವೆ ಇವನ ತಂದೆಯ ಸಂಬಂಧದ ಕುಟುಂಬಗಳ ಸದಸ್ಯರುಗಳಿಗೂ ಸ್ವಾಭಾವಿಕವಾಗಿಯೇ ಇಷ್ಟು ಬೆರಳುಗಳಿವೆ.

ಹಿಂದೂ ಮತ್ತು ಸಿಖ್ ನಿರಾಶ್ರಿತರು ಪಾಕಿಸ್ಥಾನದಲ್ಲಿ ಬಿಟ್ಟ ಆಸ್ತಿಯ ಬೆಲೆಯು ಸುಮಾರು ೫೦೦ ಕೋಟಿ ರೂಪಾಯಿಗಳಷ್ಟಾಗುವುದೆಂದು ಭಾರತ ಸರಕಾರ ಲೆಕ್ಕ ಮಾಡಿದೆಯೆಂದು ತಿಳಿದಿದೆ. ಇದು ನಗರ ಮತ್ತು ಪಟ್ಟಣಗಳಲ್ಲಿಯ ಲೆಕ್ಕ ಮಾತ್ರ. ಗ್ರಾಮಾಂತರಗಳ ಆಸ್ತಿಯ ಬೆಲೆಯ ಲೆಕ್ಕವನ್ನು ಆಗಿಲ್ಲ. ಇದಕ್ಕೆ ಪ್ರತಿಯಾಗಿ ಮುಸಲ್ಮಾನರು ಇಲ್ಲಿ ಬಿಟ್ಟುಹೋದ ಆಸ್ತಿಯ ಬೆಲೆ ಕೇವಲ ೮೧೦ ಕೋಟಿ ರೂಪಾಯಿ.

ಕ್ಷಯರೋಗಿಯಲ್ಲಿ ಕಂಡು ಬರುವ ಜ್ವರದ ಸ್ವರೂಪಗಳು.

(ಲೇ—ಡಾ ವಿ. ಆರ್. ಬಟ್, ಎಂ. ಬಿ, ಬಿ ಎಸ್., ಟಿ. ಡಿ. ಡಿ.)

ದೇಹದ ಉಷ್ಣವನ್ನು ಗುಧದ್ವಾರ (Rectum) ದೊಳಗೆ ಉಷ್ಣಮಾಪಕ ಯಂತ್ರವಿಟ್ಟು ಅಳೆಯಬಹುದಾಗಿದೆ. ಪಾಶ್ಚಾತ್ಯ ದೇಶಗಳಲ್ಲಿ ಯಾವುದೇ ರೀತಿಯ ಜ್ವರದಲ್ಲೂ ಈ ವಿಧಾನದಿಂದ ಸಾಮಾನ್ಯವಾಗಿ ಉಷ್ಣವನ್ನು ಅಳೆಯುತ್ತಾರೆ. ನಮ್ಮಲ್ಲಿ ಕೂಡಾ ಈ ವಿಧಾನದಿಂದ ಉಷ್ಣವನ್ನು ಅಳೆದರೆ ಒಳ್ಳೆಯದು. ಕಾರಣ ಗುಧದ್ವಾರದೊಳಗಿನ ಉಷ್ಣ, ಬಾಯಿಯ ಉಷ್ಣಕ್ಕಿಂತಲೂ ಹೆಚ್ಚಿಗೆ ಸ್ಥಿರರೂಪದ್ದಾಗಿದೆ; ಅದು ಹೆಚ್ಚು ಬದಲಾವಣೆ ಹೊಂದುವುದಿಲ್ಲ. ಉಷ್ಣಮಾಪಕ ಯಂತ್ರವು ಸುಮಾರು ೩ ಇಂಚುಗಳಷ್ಟು ಗುಧದ್ವಾರದೊಳಗೆ ತುರುಕಲ್ಪಟ್ಟು ಕನಿಷ್ಟ ಪಕ್ಷ ೩ ನಿಮಿಷಗಳಷ್ಟಾದರೂ ಇಡಬೇಕು. ಗುಧದ್ವಾರದ ಮೂಲಕ ಅಳೆದ ಉಷ್ಣ ಬಾಯಿಯಿಂದ ಅಳೆದ ಉಷ್ಣಕ್ಕಿಂತ ಸುಮಾರು ೦.೬ಯಷ್ಟು ಹೆಚ್ಚಿರುತ್ತದೆ ಎಂಬುದನ್ನು ಗಮನಿಸತಕ್ಕದ್ದು. ಹೀಗೆ ಬಾಯಿಯಲ್ಲಿ ಅಳೆದ ಉಷ್ಣವು ೯೮.೦° ದಷ್ಟಾದರೆ ಗುಧದ್ವಾರದೊಳಗೆ ಅದು ೯೮.೬° ದಷ್ಟಿರುವದು.

ಬರೀ ಒಂದು ಅಳತೆಯನ್ನು ಮಾತ್ರ ತೆಗೆದಿಟ್ಟರೆ ಸಾಲದು. ಸಂದೇಹಾಸ್ಪದ ಕಾರಣಗಳಿಂದ ಬಂದ ಜ್ವರಗಳಲ್ಲಿ ಪ್ರತೀ ನಾಲ್ಕು ತಾಸುಗಳಿಗೊಮ್ಮೆ ಇಲ್ಲವೆ ಪ್ರತೀ ೨ ತಾಸುಗಳಿಗೊಮ್ಮೆ ಸುಮಾರು ೩ ರಿಂದ ೭ ದಿನಗಳ ವರೆಗೆ ಉಷ್ಣವನ್ನು ಅಳೆದಿಡಬೇಕು. ಚಿಕಿತ್ಸೆ ಹೊಂದುತ್ತಿರುವ ರೋಗಿಗಳಲ್ಲೂ ದಿನಕ್ಕೆ ನಾಲ್ಕು ಬಾರಿ ದೇಹದ ಉಷ್ಣ ಅಳೆಯುವುದು ಅವಶ್ಯ. ಹೀಗೆ ಉಷ್ಣವನ್ನು ಅಳೆಯುವಾಗ ಅದಷ್ಟು ಮಟ್ಟಿಗೆ ನಿರ್ದಿಷ್ಟವಾದ ಅಂತರವನ್ನಿಟ್ಟುಕೊಂಡು ಪ್ರತೀ ದಿನ ಅಂತಹದೇ ಸಮಯದಲ್ಲಿ ಉಷ್ಣ ಅಳೆಯುವುದೆಂಬ ನಿಯಮವಿಟ್ಟುಕೊಳ್ಳಬೇಕು. ಯಾವುದೇ ರೀತಿಯ ದೈಹಿಕ ಶ್ರಮ ದೇಹದ ಉಷ್ಣ ಹೆಚ್ಚಿಸಬಲ್ಲ ದಾದುದರಿಂದ, ಉಷ್ಣ ಅಳೆಯುವುದಕ್ಕೆ ಕನಿಷ್ಟ ಒಂದು ತಾಸು ಮುಂಚೆ ಯಾವರೂ ಸಂಬಂಧಪಟ್ಟ ವ್ಯಕ್ತಿ ಹಾಸಿಗೆಯಲ್ಲಿ ಆರಾಮವಾಗಿ ಮಲಗಿಕೊಂಡಿರಬೇಕು. ಈ ಕೆಳಗಣ ಪಟ್ಟಿ (chart) ಯು ಉಷ್ಣವನ್ನು ಹೇಗೆ ಅಳೆದಿಡಬೇಕೆಂಬುದರ ಮಾಹಿತಿಯನ್ನು ತಿಳಿಸುವುದು.

ತಾ.	ಬೆಳಿಗ್ಗೆ	ಮಧ್ಯಾಹ್ನ	ಸಾಯಂ.	ರಾತ್ರಿ
	೭—೧೧	೧೨	೪	೮
೩-೮-೫೨	೯೭.೮	೯೮.೨	೯೯.೨	೯೮.೮
೪-೮-೫೨	೯೭.೬	೯೮.೩	೯೯.೪	೯೯.೦
೫-೮-೫೨	೯೮.೦	೯೮.೩	೯೯.೨	೯೮.೯
೬-೮-೫೨	೯೭.೮	೯೮.೪	೯೯.೦	೯೮.೯
೭-೮-೫೨	೯೭.೬	೯೮.೨	೯೯.೦	೯೯.೬
೮-೮-೫೨	೯೭.೮	೯೮.೪	೯೯.೨	೯೮.೪
೯-೮-೫೨	೯೭.೬	೯೮.೪	೯೯.೪	೯೮.೨

ಪಿ. ಎಸ್.—ಮೇಲಿನ ಉಷ್ಣ ಸಂಬಂಧವಾದ ಪಟ್ಟಿಯು ಉಷ್ಣಮಾಪಕ ಯಂತ್ರವನ್ನು ಬಾಯಿಯೊಳಗಿಟ್ಟು ಅಳೆದ, ಚಿಕಿತ್ಸೆ ಹೊಂದುತ್ತಿರುವ ಓರ್ವ ಕ್ಷಯರೋಗಿಯದಾಗಿರುತ್ತದೆ. ಈ ರೋಗಿಯು ಬೆಳಗ್ಗೆ ೭ ಗಂಟೆಗೆ ಎದ್ದು, ಉಷ್ಣ ಅಳೆಯುವ ಹೊತ್ತು ೭ ರಿಂದವರೆಗೆ ಹಾಸಿಗೆಯಲ್ಲೇ ಮಲಗಿಕೊಂಡಿರುತ್ತಾನೆ. ಆತ ಬೆಳಗ್ಗೆ ೧೧ ಗಂಟೆಗೆ ಬಿಸಿ ಪಾನೀಯ ಕುಡಿಯುತ್ತಾನೆ. ಆದುದರಿಂದಲೇ ಎರಡನೇ ಬಾರಿಯ ಉಷ್ಣವನ್ನು ಮಧ್ಯಾಹ್ನ ೧೨ ಗಂಟೆಗೆ ಅಳೆಯುವುದಾಗಿದೆ. ಸಾಯಂಕಾಲದ ೪ ಗಂಟೆಯ ಮತ್ತು ರಾತ್ರಿ ೮ ಗಂಟೆಯ ಉಷ್ಣ ಅಳೆದಾದ ನಂತರವೇ ಆತ ಆಹಾರ ಸೇವಿಸುತ್ತಾನೆ. ಮೇಲಿನ ಪಟ್ಟಿಯಲ್ಲಿ ನಾಡಿ ಬಡಿತ ಮತ್ತು ಉಸಿರಾಟದ ವೇಗವನ್ನೂ ಸೇರಿಸಿ ಬಿಟ್ಟರೆ ಅ ಪಟ್ಟಿಯ ಪ್ರಾಮುಖ್ಯತೆ ಇನ್ನಷ್ಟು ಹೆಚ್ಚುವುದು.

ಸಾಮಾನ್ಯ ವ್ಯಕ್ತಿಯೂ ವ್ಯಾಯಾಮ ಇಲ್ಲವೆ ದೇಹದ ಉಷ್ಣ ಏರುತ್ತದೆ. ಉದಾ:—ಒಬ್ಬನಿಗೆ ೧೫ ನಿಮಿಷಗಳ ವರೆಗೆ ತೀವ್ರಗತಿಯಿಂದ 'ವಾಕ್' ನಡೆಯಲು ಹೇಳಿದರೆ ಅವನ ಉಷ್ಣವು ಸುಮಾರು ೧° ಯಷ್ಟು ಏರಬಹುದು. ಆದರೆ ೨೦ ನಿಮಿಷಗಳ ವಿಶ್ರಾಂತಿ ಪಡೆದರೆ ಉಷ್ಣವು ತಿರುಗಿ ಸಹಜಸ್ಥಿತಿಗೆ ಬರುವುದು. ಕ್ಷಯರೋಗದ ಸೋಂಕು ಇರುವ ವ್ಯಕ್ತಿಯಲ್ಲಾದರೆ ಮೇಲೆ ಸೂಚಿಸಿದ ೧೫ ನಿಮಿಷಗಳ ತೀವ್ರ ನಡಿಗೆಯಿಂದ ಉಷ್ಣವು ೧° ಗಿಂತ ಹೆಚ್ಚಿಗೆ ಏರಬಹುದು ಮಾತ್ರವಲ್ಲ ಅರ್ಧ ತಾಸಿಗಿಂತ ಒಂದು ತಾಸಿನ ವರೆಗೆ ವಿಶ್ರಾಂತಿ ಪಡೆದರೂ ಅದು ಸಹಜ ಸ್ಥಿತಿಯ ಮಟ್ಟಕ್ಕೆ ಮುಟ್ಟದಿರಬಹುದು. ವ್ಯಾಯಾಮ ಇಲ್ಲವೆ ದೇಹ ಶ್ರಮದ ನಂತರ ಏರುವ ಆ ಉಷ್ಣವೇ ಪ್ರಾಮುಖ್ಯವಾದುದು. ಅದರ ಕುರಿತು ಮುಂದೆ ವಿವರಿಸಲಾಗುವುದು.

ವಿಶ್ರಾಂತಿ ಪಡೆದುಕೊಂಡಿದ್ದಾಗ ಬಾಯಿಯ ಮೂಲಕ ಅಳೆದ ೯೯° ಅಥವಾ ೯೯.೨° ಗಿಂತ ಹೆಚ್ಚಿಗೆ ಮತ್ತು ಗುದದ್ವಾರದ ಮೂಲಕ ಅಳೆದ ೯೯.೬° ಅಥವಾ ೯೯.೮° ಗಿಂತ ಹೆಚ್ಚಿಗೆ ಉಷ್ಣವು ಜ್ವರದ ಅಸ್ತಿತ್ವವನ್ನು ಸೂಚಿಸುತ್ತದೆ. ಮಧ್ಯಾಹ್ನ ೨ ಗಂಟೆಗೆ ಎಂದರೆ ಸಾಮಾನ್ಯವಾಗಿ ದೇಹದ ಉಷ್ಣವು ಏರುವ ಸಮಯದಲ್ಲಿ ಸೂಚಿಸಲ್ಪಟ್ಟ ೯೯° ಯನ್ನು ಜ್ವರವೆಂದು ಕರೆಯಲು ಬರುವುದಿಲ್ಲ; ಅದೇ ಬೆಳಗ್ಗೆ ಒಳ್ಳೆಯ ಸುಖ ನಿದ್ರೆಯ ನಂತರ ಉಷ್ಣ ೯೯ ರಷ್ಟಿದ್ದರೆ ಅದನ್ನು ಜ್ವರವೆಂದು ಅರ್ಥ ಮಾಡಿಕೊಳ್ಳಬಹುದು. ಯಾವ ರೀತಿ ಉಷ್ಣದ ಏರುಪೇರು ಇದೆ ಎಂಬುದನ್ನೂ ಅಸಹಜತೆಯಿಂದ ಅರ್ಥಮಾಡಿಕೊಳ್ಳಬಹುದಾಗಿದೆ. ದೃಷ್ಟಾಂತಕ್ಕಾಗಿ ಬೆಳಗಿನ ಜಾವದಲ್ಲಿ ಉಷ್ಣ ೯೭.೮ ಇಲ್ಲವೆ ೯೭.೨ ಇದ್ದರೆ ಅದು ಅಸಹಜತೆಯನ್ನು ಸೂಚಿಸುತ್ತದೆ.

ದೇಹದಲ್ಲಿ ವಿಪರೀತ ಉಷ್ಣವು ಏರುವುದರಿಂದ ಜ್ವರದಂತಹ ಸಮಸ್ಯಾತ್ಮಕ ಅವಸ್ಥೆಯುಂಟಾಗುತ್ತದೆ. ಆಗಲೇ ಉಷ್ಣವನ್ನು ನಿಯಂತ್ರಿಸುವ ದೈಹಿಕ ಯಂತ್ರವೂ ಕೆಟ್ಟುಹೋಗಿ ಹೆಚ್ಚಿಗೆ ಉತ್ಪಾದನೆಯಾದ ಉಷ್ಣಕ್ಕೆ ಹೊರ ಹೋಗಲು ಸರಿಯಾದ ವ್ಯವಸ್ಥೆಯಿಲ್ಲದೆ, ಅದರಿಂದಾಗಿ ಇಡೀ ದೇಹದಲ್ಲಿ ಉಷ್ಣವು ಸಾಕಷ್ಟು ಏರತೊಡಗುವುದು.

ದೇಹವನ್ನು ನಾಶ ಮಾಡಲು ಪ್ರಯತ್ನಿಸುವ ರೋಗಾಣುಗಳನ್ನು ಹೋರಾಡಲು ಜ್ವರವೂ ದೇಹದ ಪ್ರಯತ್ನಗಳಲ್ಲಿ ಒಂದು. ರೋಗಾಣುಗಳು ಜೀವಿಸಿಕೊಂಡಿರುವ ಟಿಶ್ಯೂವಿಗೆ, ಆ ರೋಗಾಣುಗಳು ಅದರ ಆಶ್ರಯದಲ್ಲಿ ಜೀವಿಸಿಕೊಂಡಿರಲು, ಬೆಳೆಯಲು, ಒಂದಿಷ್ಟು ಉಷ್ಣ ಬೇಕಾಗುತ್ತದೆ. ಉಷ್ಣವು ಅತಿ ಕಡಿಮೆ ಇಲ್ಲವೆ ಅತ್ಯಂತ ಹೆಚ್ಚಿಗೆಯಾದರೆ ರೋಗಾಣುಗಳಿಗೆ ತಮ್ಮ ವಿಷ (Toxins) ಗಳನ್ನು ಉತ್ಪಾದಿಸಲು ಸಾಧ್ಯವಾಗದೆ ಕೆಲ ಕಾಲದಲ್ಲಿ ಅವು ಸಾಯುವವು. ಪ್ರತಿಯೊಂದು ರೋಗಾಣುವಿಗೆ ತನ್ನ ಅಭಿವೃದ್ಧಿಗೆ ಮತ್ತು ಬೆಳವಣಿಗೆಗೆ ತಕ್ಕುದಾದ ಪ್ರತ್ಯೇಕ ದರ್ಜೆಯ ಉಷ್ಣವೆಂದಿದೆ. ಮಾನವ ದೇಹವನ್ನು ಸೋಂಕಿ ಅದರಲ್ಲೇ ಜೀವಿಸಿಕೊಂಡಿರುವ ಸರ್ವಸಾಮಾನ್ಯ ಎಲ್ಲಾ ರೋಗಾಣುಗಳಿಗೆ ಅನುಕೂಲವಾದ ಉಷ್ಣವೆಂದರೆ ಮನುಷ್ಯನ ದೇಹದ ಸಹಜ ಉಷ್ಣವೇ ಆಗಿರುತ್ತದೆ. ದೇಹದ ಪ್ರಯತ್ನರೂಪವಾಗಿ ಉಂಟಾದ ಜ್ವರದ ಮೂಲಕ ದೇಹದ ಉಷ್ಣವು ಏರುವಾಗ ಸಹಜವಾಗಿ ರೋಗಾಣುವು ಬೆಳೆಯುವ ಉಷ್ಣವು ಹೆಚ್ಚುವುದು. ಇದರಿಂದ ಅವುಗಳ ಬೆಳವಣಿಗೆಗೆ ತಡೆಯುಂಟಾಗುತ್ತದೆ; ಇಲ್ಲವೆ ಅವು ಸಾಯಲೂ ಬಹುದು. ರೋಗಕ್ಕೆ ಕಾರಣವಾದ ಹೊಕ್ಕುವಿನ ಮೇಲೆ ಪ್ರತಿಕ್ರಿಯೆಯ ರೂಪದಲ್ಲಿ ಜ್ವರವು ಕಾಣಿಸಿಕೊಳ್ಳುತ್ತದೆ ಮತ್ತು ರೋಗದ ಸೋಂಕಿನಿಂದ ದೇಹವನ್ನು ರಕ್ಷಿಸಲು ಅದು ನೆರವಾಗುತ್ತದೆ. ಕೆಲವು ಜ್ವರಗಳು ಮನುಷ್ಯನ ದೇಹದಲ್ಲಿ ರೋಗ ಪ್ರತಿಬಂಧಕ ವಿಷಘ್ನಗಳ (Antitoxin) ಗಳ ಉತ್ಪಾದನೆಗೆ ಉತ್ತೇಜನ ಕೊಡುತ್ತವೆ ಮತ್ತು ಈ ವಿಷಘ್ನಗಳು ರೋಗಾಣುಗಳಿಂದ ಉಂಟಾದ ವಿಷಗಳನ್ನು ನಿಶ್ಶಕ್ತಗೊಳಿಸುವವಲ್ಲದೆ (neutraliz) ರೋಗಾಣುಗಳ ಮೇಲೆ ನೇರವಾದ ಆಕ್ರಮಣ ನಡೆಸುವ ದೇಹದ ಇತರ ಶಕ್ತಿಗಳಿಗೆ ಸಾಕಷ್ಟು ಉತ್ತೇಜನವನ್ನೂ ಕೊಡುತ್ತವೆ.

ಕ್ಷಯರೋಗ ಸೋಂಕಿದ ಶ್ವಾಸಕೋಶ ಪ್ರದೇಶದಲ್ಲಿ ಕ್ಷಯಾಣುಗಳಿಂದ ವಿಷಗಳು ಉತ್ಪನ್ನವಾಗುತ್ತವೆ. ಆ ವಿಷಗಳು ಮತ್ತು ರೋಗಾಣುಗಳಿಂದ ನಾಶವಾದ ಟಿಶ್ಯೂಗಳು ರಕ್ತದಲ್ಲಿ ಸೇರಿ ಹೋಗುವುದರಿಂದ ಉಷ್ಣವನ್ನು ನಿಯಂತ್ರಿಸುವ ದೈಹಿಕ ಯಂತ್ರವು ಕೆಡುತ್ತದೆ. ಇದನ್ನು ಸಾಕಷ್ಟು ಟ್ಯೂಬರ್‌ಕ್ಯೂಲಿನ್ (ಇದನ್ನು ಕ್ಷಯಾಣುಗಳಿಂದ ತಯಾರಿಸುವರು) ಓರ್ವ ಆರೋಗ್ಯವಂತನಾದ ಮನುಷ್ಯನಲ್ಲಿ ಇಂಜೆಕ್ಟ್ ಮಾಡಿ ಪರೀಕ್ಷಿಸಬಹುದು. ಆ ಇಂಜೆಕ್ಷನ್‌ದಿಂದ ಅವನಲ್ಲಿ ಜ್ವರವು ಕಾಣಿಸಿಕೊಳ್ಳಬಹುದು. ಆದರೆ ಕ್ಷಯರೋಗ ಸೋಂಕಿದ ಪ್ರದೇಶ ಅತಿ ಚಿಕ್ಕದಾಗಿದ್ದರೆ ಅದರಿಂದ ಉತ್ಪಾದನೆಯಾಗುವ ವಿಷಯಗಳು ಜ್ವರ ಉಂಟು ಮಾಡಲು ಸಾಕಾಗಲಾರವು; ಇದೇ ರೀತಿ ಅತ್ಯಲ್ಪ ಟ್ಯೂಬರ್‌ಕ್ಯೂಲಿನ್ ಇಂಜೆಕ್ಟ್ ಮಾಡುವದರಿಂದಲೂ ಜ್ವರ ಕಾಣಿಸಿಕೊಳ್ಳಲಾರದು. ವಿಶ್ರಾಂತಿ ಪಡೆದುಕೊಂಡಿರುವಾಗ ರೋಗಿಯಲ್ಲಿ ಜ್ವರ ಕಾಣಿಸಿಕೊಳ್ಳದಿರಬಹುದು. ಆದರೆ ಯಾವುದೇ ದೇಹಶ್ರಮದ ಕೆಲಸ ಕೈಕೊಂಡೊಡನೆ ಅವನಲ್ಲಿ ಜ್ವರ ಕಾಣಿಸಿಕೊಳ್ಳಬಹುದು. ಇದರ ಕಾರಣವಿಷ್ಟೆ—ದೇಹಶ್ರಮದಿಂದ

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2 12ನೇ ನಂಬರಿನ ಒಂಟಿ ಮತ್ತು ಜೋಡು ನಳಿಗೆಯ ಕೋವಿಗಳು.
3 12, 16 ಮತ್ತು 20ನೇ ನಂಬರಿನ ಕಾರ್ಟ್ರೇಜುಗಳು, ಕೋವಿ ಮದ್ದು ಮತ್ತು ಕೇಪುಗಳು.
4. 9″ × 4″ ಮತ್ತು 8″ × 4″ ಕಬ್ಬಿಣದ ತೊಲೆಗಳು (Girders)
5. 8′ × 3′ × 24 (Gage) ಕಬ್ಬಿಣದ ತಗಡುಗಳು.
6. $1\frac{3}{4}$″ × $\frac{5}{16}$″ ಉಕ್ಕಿನ ಪಟ್ಟಿಗಳು (Spring steel flates)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ಕಾರ್ಟ್ರೇಜುಗಳಿಗೂ, ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ವಿಶೇಷ ಖರೀದಿ ಪಟ್ಟಿ 'Special purchase permit' ಪಡೆಯಬೇಕಾಗಿದೆ.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್.)

ಕ್ಷಯ ಸೋಂಕಿದ ಪ್ರದೇಶದಲ್ಲಿ ಹೆಚ್ಚಿಗೆ ರಕ್ತವು ಹರಿಯುವಂತಾಗಿ, ವಿಶ್ರಾಂತಿ ಪಡೆದುಕೊಂಡಿರುವಾಗ ನೋಡುವುದಕ್ಕಿಂತಲೂ ಹೆಚ್ಚಿಗೆ ವಿಷವು ರಕ್ತಪ್ರವಾಹದೊಡನೆ ಸೇರುವಂತಾಗಿ ಜ್ವರವು ಉಂಟಾಗಬಹುದು. ಇದು ನಿಜವಾದ ಜ್ವರ. ಸಹಜ ಪರಿಸ್ಥಿತಿಯಲ್ಲಿ ದೇಹಶ್ರಮ ಇಲ್ಲವೆ ವ್ಯಾಯಾಮದ ನಂತರ ಏರುವ ದೇಹದ ಉಷ್ಣದಿಂದ ಇದನ್ನು ಪ್ರತ್ಯೇಕ ಗುರುತಿಸತಕ್ಕದ್ದು.

ಕ್ಷಯ ರೋಗದಲ್ಲಿ ಜ್ವರವು ಬೇರೆ ಬೇರೆ ಜಾತಿಯದಿರಬಹುದು. ಉದಾ— ತೀಕ್ಷ್ಣ ಜ್ವರ (Acute fever) ದೀರ್ಘಕಾಲೀನ ಉಷ್ಣ-ತೀಕ್ಷ್ಣ ಇಳಿಜ್ವರ (Chronic low sub-acute fever), ಅಸ್ಥಿಜ್ವರ (Hectic fever), ಬಿಟ್ಟು ಬಿಟ್ಟು ಬರುವ ಜ್ವರ Intermittent fever) ಮತ್ತು ಹಿಂದುಮುಂದು ಜ್ವರ (Inverse fever) ಇವುಗಳಲ್ಲಿ ಪ್ರತಿಯೊಂದು ಜಾತಿಯ ಜ್ವರಕ್ಕೂ ರೋಗದ ಚಿಕಿತ್ಸೆ ಮತ್ತು ಪೂರ್ವಚಿಕಿತ್ಸೆ ಪರಿಶೀಲನೆಯ ದೃಷ್ಟಿಯಿಂದ ಪ್ರತ್ಯೇಕ ಮಹತ್ವವಿದೆ. ಈ ಬೇರೆ ಬೇರೆ ಜಾತಿಯ ಜ್ವರಗಳು ಕ್ಷಯ ರೋಗದಲ್ಲಿ ಬಯಲಿಗೆ ಜ್ವರಗಳ ಕಾರಣಗಳಿಗೆ ಮತ್ತು ರೋಗಿಗಳ ಪ್ರತಿಕ್ರಿಯೆ ದೇಹಸ್ಥಿತಿಗೆ ಸಂಬಂಧಪಟ್ಟ ಅನೇಕಾನೇಕ ಬದಲಾವಣೆಗಳನ್ನು ಸೂಚಿಸಬಹುದೆಂಬುದನ್ನು ಗಮನಿಸತಕ್ಕದ್ದು. ದೀರ್ಘಕಾಲೀನ ಜ್ವರ (Chronic fever) ದಲ್ಲಿ ಒಂದೇ ರೋಗಿಯಲ್ಲಿ ಒಂದು ಜಾತಿಯ ಜ್ವರದಿಂದ ಮತ್ತೊಂದು ಜಾತಿಯದಕ್ಕೆ ಮಾರ್ಪಾಟವೂ ಕಂಡುಬರಬಹುದು. ಕ್ಷಯರೋಗ ಸೋಂಕಿದ ಪದರ (ಟಿಶ್ಯೂ)ದಲ್ಲಿ ಕ್ಷಯಾಣುಗಳಲ್ಲದ ಇತರ ರೋಗಾಣುಗಳ ಸೋಂಕು ಬರುವುದಿರಬಹುದು. ಇದರಿಂದ ಆ ಬೇರೆ ರೋಗಾಣುಗಳ ವಿಷವು ರಕ್ತದಲ್ಲಿ ಸೇರಿ ಅದರಿಂದಲೂ ಜ್ವರವು ಉಂಟಾಗಬಹುದು ಎಂಬುದನ್ನು ನೆನಪಿನಲ್ಲಿಡತಕ್ಕದ್ದು.

ತೀಕ್ಷ್ಣ ಜ್ವರ-(Acute fever) ಈ ರೀತಿಯ ಜ್ವರ, ಸೋಂಕು ಉಲ್ಬಣವಾದಾಗ ಮತ್ತು ಸಾಮಾನ್ಯವಾಗಿ ರೋಗದ ಆರಂಭದ ದೆಸೆಯಲ್ಲಿ ಕಾಣಿಸಿಕೊಳ್ಳುತ್ತದೆ. ಈ ಜ್ವರ ೧೦೫° ಇಲ್ಲವೆ ೧೦೬° ವರೆಗೆ ಏರುತ್ತದೆ; ಸಹಜ ಉಷ್ಣದ ಮಟ್ಟಕ್ಕೆ ಅದು ಇಳಿಯುವುದು ಬಹಳ ಕಡಿಮೆ. ಕೆಲವೊಮ್ಮೆ ಈ ಮೊದಲೇ ದೀರ್ಘಕಾಲದಿಂದಿರುವ ರೋಗಿಯಲ್ಲಿ ಇತರ ಕಡೆಗಳಲ್ಲಿ ಕ್ಷಯರೋಗ ಸೋಂಕುವುದರಿಂದಲೂ ಈ ಜ್ವರ ಕಾಣಿಸಿಕೊಳ್ಳಬಹುದು. ಕೆಲವೊಮ್ಮೆ ಶ್ವಾಸಕೋಶ ಸಂಬಂಧವಾದ ಕ್ಷಯರೋಗ ಇದ್ದವರಲ್ಲಿ 'ಪ್ಲೂರ' ಸೋಂಕಿನಿಂದ 'ಪ್ಲೂರ'ದಲ್ಲಿ ನೀರು (Fluid) ತುಂಬುವುದುಂಟು. ಇದರಿಂದಲೂ ಜ್ವರ ಒಮ್ಮೆಲೇ ಹೆಚ್ಚಾಗುವುದಿದೆ.

ದೀರ್ಘಕಾಲೀನ ಉಪತೀಕ್ಷ್ಣ ಇಳಿಜ್ವರ-(Chronic low sub-acute fever) ಮೇಲಿನ ಜ್ವರದ ಬೆನ್ನಲ್ಲೇ ಈ ಜ್ವರ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಈ ಜ್ವರದಲ್ಲಿ ಉಷ್ಣ ೧೦೧° ಇಲ್ಲವೆ ೧೦೧.೫°ಗಿಂತ ಹೆಚ್ಚಿಗೆ ಏರುವುದಿಲ್ಲ. ಕೆಲವರಲ್ಲಿ ಅದು ಇನ್ನೂ ಕೆಳಗಿದ್ದು ೧೦೦°ಗಿಂತ ಹೆಚ್ಚಿಗೆ ಏರುವುದಿಲ್ಲ. (ಈ ೧೦೦° ಯ ಮಟ್ಟಕ್ಕೆ ಸಾಮಾನ್ಯವಾಗಿ ಸಂಜೆಗಳಲ್ಲಿ ಮುಟ್ಟುತ್ತದೆ)

ಅಸ್ಥಿಜ್ವರ-(Hectic fever) ಈ ಜ್ವರದಲ್ಲಿ ಏರಿಳಿತಗಳ ಅಂತರವು 'ರೇಂಜ್' ಬಹಳ ಜಾಸ್ತಿಯಿದ್ದು ೬ ಇಲ್ಲವೇ ೭ ಡಿಗ್ರಿಗಳಷ್ಟು ಇರುತ್ತದೆ. ಕೆಳ ಕಾಸಿನ ಅವಧಿಯೊಳಗೆ ಕಲ್ಯಾಂದ ೧೦೦° ಇಲ್ಲವೆ ೧೦೫ ರ ವರೆಗೆ ಏರಬಹುದು. ಈ ಜ್ವರ ರೋಗದ ಆರಂಭದಲ್ಲಿ, ಪದರಗಳು (ಟಿಶ್ಯೂ) ಅಧಿಕಾಧಿಕ ಸಂಖ್ಯೆಯಲ್ಲಿ ನಾಶ ಹೊಂದುತ್ತಿರುವಾಗ ಅದೇ ಸಮಯ ಹಲವು ಕಡೆ ಒಮ್ಮೆಲೇ ರೋಗವು ಆರಂಭವಾಗ ವಾಗ ಕಾಣಿಸಿಕೊಳ್ಳಬಹುದು: ರೋಗದಲ್ಲಿ ಬೇರೆ ಬೇರೆ ಕಠಿಣಾವಸ್ಥೆಗಳು ತಲೆದೋರತೊಡಗಿವೆ ಎಂಬುದನ್ನೂ ಈ ಜ್ವರ ಸೂಚಿಸಬಹುದು.

ಬಿಟ್ಟು ಬಿಟ್ಟು ಬರುವ ಜ್ವರ—(Intermittent fever) ಕೆಲವು ದಿನಗಳ ವರೆಗೆ ಜ್ವರವು ಸಂಪೂರ್ಣ ನಿಂತಂತೆ ತೋರಿ ಪುನಃ ತಲೆದೋರುವುದಕ್ಕೆ ಹೀಗೆನ್ನುವರು. ರೋಗಿಯು ಸಾಕಷ್ಟು ವಿಶ್ರಾಂತಿ ಪಡೆಯದಿದ್ದರೆ ಇಲ್ಲವೆ ಹೆಚ್ಚಿಗೆ ಪದರ (Pice)ಗಳು ನಾಶವಾಗತೊಡಗಿದಾಗ ಈ ರೀತಿಯ ಜ್ವರ ಕಾಣಿಸಿಕೊಳ್ಳುತ್ತದೆ.

ಹಿಂದುಮುಂದು ಜ್ವರ-Inverse fever ಇಲ್ಲಿ ಜ್ವರವು ಸಾಯಂಕಾಲ ಮತ್ತು ರಾತ್ರಿ ಇರುವುದಕ್ಕಿಂತ ಬೆಳಗ್ಗೆ ಹೆಚ್ಚಿರುತ್ತದೆ.

ಕ್ಷಯರೋಗ ಸಂಬಂಧವಾದ ಜ್ವರದಲ್ಲಿ ಸಾಮಾನ್ಯವಾಗಿ ೧೦೦°F ಗಿಂತ ಹೆಚ್ಚಿಗೆ ಜ್ವರವಿದ್ದರೆ ಮಾತ್ರ ರೋಗಿಗೆ ತನಗೆ ಜ್ವರವಿರುವೆಯೆಂದು ತಿಳಿಯುತ್ತದೆ. ಹೊರತು ಅದಕ್ಕಿಂತ ಕೆಳಗಿದ್ದರೆ ಜ್ವರದ ಭಾವನೆಯಾಗುವುದಿಲ್ಲ. ಆ ಕಾರಣದಿಂದಾಗಿ ತಾಪಮಾಪಕ ಯಂತ್ರವನ್ನು ಯಾವಾಗಲೂ ಉಪಯೋಗಿಸಬೇಕೆನ್ನುವುದು. ಜ್ವರವು ಸಾಯಂಕಾಲದ ಹೊತ್ತಿನಲ್ಲಿ ೫ ಗಂಟೆಯಿಂದ ೮ ಗಂಟೆಯೊಳಗಿನ ಸಮಯದಲ್ಲಿ ಅತ್ಯಂತ ಹೆಚ್ಚಿಗಿರುತ್ತದೆ 'ಎಸ್ಪಿರಿನ್'ದಂತಹ ಔಷಧಗಳಿಂದ ಜ್ವರವನ್ನು ಇಳಿಸುವುದು ಸಾಧ್ಯವಿದೆಯಾದರೂ ಈ ಗುಣವು ಅಲ್ಪಾವಧಿಯ ತಾತ್ಕಾಲಿಕ ಗುಣ ... ದನ್ನು ... ತಿಯಬೇಕು.

ತನ್ನಷ್ಟಕ್ಕೆ ಹೊತ್ತಿಕೊಳ್ಳುವ ಸಿಗರೇಟು

ಕ್ಯಾಲಿಫೋರ್ನಿಯಾದ ಒಂದು ಕಂಪೆನಿಯು ತಿಂಗಳಿಗೆ ೬೦೦೦,೦೦೦ ಪ್ಯಾಕೆಟ್ ಸಿಗರೇಟು ತಯಾರಿಸುವ ಕಾರ್ಖಾನೆಯೊಂದನ್ನು ಸ್ಥಾಪಿಸುವುದಾಗಿ ಪ್ರಕಟಿಸಿದೆ. ಈ ಸಿಗರೇಟುಗಳು ಹೊಸ ಮಾದರಿಯವೂ ಆಗುವವು. ಅವುಗಳನ್ನು ಹೊತ್ತಿಸಲು ಬೆಂಕಿ ಪೆಟ್ಟಿಗೆಯ ಅವಶ್ಯಕತೆ ಇರುವುದಿಲ್ಲ. ಪ್ರತಿಯೊಂದು ಸಿಗರೇಟಿನ ತುದಿಗೆ ಒಂದು ತರದ ದ್ರವವನ್ನು ಬಳಿದಿರುವುದರಿಂದ ಅದನ್ನು ಸಿಗರೇಟ್ ಪೆಟ್ಟಿಗೆಗೆ ತಿಕ್ಕಿದೊಡನೆ ಸಿಗರೇಟು ಹೊತ್ತಿಕೊಳ್ಳುವುದು. ಆದರೆ ಇಂಥ ಸಿಗರೇಟ್ ಸೇದಿದ್ದರಿಂದಾಗಬಹುದಾದ ಪರಿಣಾಮವನ್ನು ಕುರಿತು ಮಾತ್ರ ಆ ಕಂಪೆನಿ ಏನನ್ನು ಹೇಳಿರುವುದಿಲ್ಲ.

ವಯಸ್ಕರ ಶಿಕ್ಷಣ(ವಿದ್ಯಾಪ್ರಚಾರ)

ವಿದ್ಯಾ ಮಂದಿರ

ಅನಕ್ಷರತೆಯ ನಿವಾರಣೆಗಾಗಿ ಹೆರೂರು ವಯಸ್ಕ ವಿದ್ಯಾರ್ಥಿಗಳು ಪಟೇಲ್ ಬಸ್ಸಪ್ಪನವರ ಅಧ್ಯಕ್ಷತೆಯಲ್ಲಿ ವಿದ್ಯಾಮಂದಿರವನ್ನು ತೆರೆದರು. ಅದರ ಉದ್ದೇಶ್ಯವನ್ನು ಕ.ರಿತ ಆರ್ಗನೈಜರು ವಿವರಿಸಿದರು.

ಅವರಿಗೆ ಬೇಕಾದ ವಯಸ್ಕ ಶಿಕ್ಷಣ ಪಾಠಗಳನ್ನು ಕೊಡಲಾಯಿತು.

ಗ್ರಾಮ ಕಲಾ ಪ್ರದರ್ಶನ (ಫ್ರೇಜರ್‌ಪೇಟೆ)

ಬೈಚನಹಳ್ಳಿ ವಯಸ್ಕರ ಶಿಕ್ಷಣ ಶಾಲೆಯವರು ಶ್ರೀ ಮಾನ್ ಎಸ್. ಆರ್. ವರದರಾಜ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಗ್ರಾಮಕಲಾ ಪ್ರದರ್ಶನವನ್ನು ಪ್ರದರ್ಶಿಸಿದರು. ಫ್ರೇಜರ್‌ಪೇಟೆ ಶಾಲಾ ಬಾಲಿಕೆಯರಿಂದ ನೃತ್ಯವೂ ಶ್ರೀ ಕೇಶವಾಚಾರ್ಯರಿಂದ ಭಾರತ ವಾಚನವೂ ವಯಸ್ಕರ ಶಿಕ್ಷಣದ ಆರ್ಗನೈಜರಿಂದ ಗ್ರಾಮಗಳೆಗಳ ವಿಷಯ ಭಾಷಣವೂ ಜರಗಿಸಲ್ಪಟ್ಟವು. ವಯಸ್ಕರ ಶಿಕ್ಷಣ ಶಾಲೆಯ ವಿದ್ಯಾರ್ಥಿಗಳು ಲಕ್ಷ್ಮಣ್ಣಾ ಪೂಜಾರಿ ಕಾಲಿಗ ಯಕ್ಷಗಾನದ ಒಂದು ದೃಶ್ಯವನ್ನು ಆಡಿ ತೋರಿಸಿದರು. ನೆರೆದ ಪುರಜನರಿಗೂ, ದಾಸವರ್ಗ ಸಹಾಯವನ್ನಿತ್ತವರೆಲ್ಲರಿಗೂ, ತಿ. ಶಾಲೆಯ ಅಧ್ಯಾಪಕರು ವಂದಿಸಿದರು.

ಬೆಳ್ಳೂರು

ವಯಸ್ಕರ ಶಿಕ್ಷಣದ ಆರ್ಗನೈಜರು ತಾ. ೭-೯-೫೨ ರಲ್ಲಿ ಬೆಂಬಳೂರು ವ. ಶಿ. ಶಾಲಾ ಸಂದರ್ಶನದ ಕಾಲದಲ್ಲಿ ಸಾರ್ವಜನಿಕರ ಒಂದು ಸಭೆಯನ್ನು ಸೇರಿಸಲಾಯಿತು. ಸರಕಾರದ ವಿಕಾಸ ಯೋಜನೆಗಳ ಬಗ್ಗೆ ವಿಸ್ತಾರವಾಗಿ ಎಂ.ಬಿ. ವಿಭಾಗ ಮಾತನಾಡಿದರು. ಪ್ರತೀ ಸೋಮವಾರ ಗ್ರಾಮಸ್ಥರೆಲ್ಲರೂ ಸೇರಿ ರಸ್ತೆಗಳನ್ನು ಮತ್ತು ಗ್ರಾಮ ನೈರ್ಮಲ್ಯದ ಕೆಲಸಗಳನ್ನು ಮಾಡಲು ಒಪ್ಪಿ ತಾ. ೮-೯-೫೨ನೇ ಸೋಮವಾರದಿಂದ ವ. ಶಿ. ಶಾಲೆಯವರು ಗ್ರಾಮಸ್ಥರೂ ಸೇರಿ ಒಂದು ಮೈಲು ದೂರದ ವರೆಗೆ ರಸ್ತೆ ಕೆಲಸ ಮಾಡಿರುತ್ತಾರೆ. ಈ ಕೆಲಸವು ಮುಂದುವರಿಯುವಂತೆ ವ. ಶಿ. ಶಾಲೆ ಅಧ್ಯಾಪಕರೂ, ಪಟೇಲರೂ, ಊರಿನವರೂ ಶ್ರಮಿಸುತ್ತಿದ್ದಾರೆ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿಸಲಾಗಿದೆ)

ಅಧಿಕೃತ ಶೇರು ಭಂಡವಾಳ	ರೂ.	10,00.000
ವಸೂಲಾದ ಶೇರು ಮೊಬಲಗು	ರೂ.	2,00,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದು. ಬೆಳ್ಳಿ, ಚಿನ್ನ, ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಕೊಂಡುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಸ್. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಬಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಮ್ಯಾನೇ.

— ನಿಮಗೆ ಅತ್ಯಂತ ಲಾಭದಾಯಕವಾಗಿ —

ನಿಮೆ ಮಾಡಲೂ ಅಥವಾ ಪ್ರತಿನಿಧಿಸಲೂ

ಇಂಡಿಯಾದ ಅತ್ಯಂತ ಹಳೆಯ ಮತ್ತು ಸುಭದ್ರವಾದ ವಿಮಾ ಸಂಸ್ಥೆ.

ದಿ ಬಾಂಬೆ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

[ಸ್ಥಾಪನೆ 1871]

ವಿವರಗಳಿಗೆ ಬರೆಯಿರಿ:—ಬ್ರಾಂಚ್ ಸೆಕ್ರೆಟರಿ,

172-3 ನರಸಿಂಹ ರಾಜಾ ರಸ್ತೆ, (P. B. 186),

12-೪ ಬೆಂಗಳೂರು 2, ಅಥವಾ ಫೋನ್ ಮಾಡಿ-3624.

Edited, Printed and Published by P. I. Belliappa at 'Kodagu' Press, Mercara, for Kodagu' Ltd.

Licence No. 60.
Licenced to Post without Prepayment.

Reg. No. M. 1509.
'KODAGU' MERCARA, (Coorg).

ಕೊಡಗು

ಸಂಪಾದಕರು—ಸಿ. ಬಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5–0–0.

ಸಂಪುಟ ೩೧	ತಾರೀಖು ೧–೧೦–೧೯೪೮ನೇ ಶುಕ್ರವಾರ	ಸಂಚಿಕೆ ೧೮

— ಉದಿಸಿದ ಮಹಾಜ್ಯೋತಿ —

ಅಮರ ಮಹಾತ್ಮ ಗಾಂಧೀಜಿ.

ಲೇ:—ಶ್ರೀ ವಿ. ಎಸ್. ರಾಮಕೃಷ್ಣ, ಬಿ. ಎಸ್‌ಸಿ. (ಆನರ್ಸ್) ಬಿ. ಟಿ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಆಫ್ರಿಕದಲ್ಲಿ ಸತ್ಯಾಗ್ರಹ ಹೂಡಿ ಯಶಸ್ವಿಗಳಾಗಿ ಜಗದ್ವಂದ್ಯ ಮಹಾತ್ಮರು ಭಾರತ ಭಾಗ್ಯವಿಧಾತರಾಗಲು ಮಾತೃಭೂಮಿಗೆ ಕಾಲಿಟ್ಟರು. ಮಹಾತ್ಮನ ಪದಧೂಳಿಯು ಪುನಃ ಭರತಖಂಡಕ್ಕೆ ಸೋಕಿದಂದಿನಿಂದ ಮಹಾತ್ಮರ ಜೀವನ ಚರಿತ್ರೆಯೇ ರಾಷ್ಟ್ರದ ಇತಿಹಾಸವಾಗಿ ಪರಿವರ್ತನೆಗೊಂಡಿತು. ರಾಷ್ಟ್ರ ಮಹಾಶರೀರದಲ್ಲಿ ಹಿಂದೆಂದೂ ಇಲ್ಲದ ಅದ್ಭುತ ಶಾಂತಿಯು ಪ್ರಜ್ವಲಿಸಿ ರಾಷ್ಟ್ರಕ್ಕೆ ರಾಷ್ಟ್ರವೇ ಉಂಟಾಯಿತು. ಅದ್ಭುತ ರೀತಿಯಿಂದ ಆಂಗ್ಲ ಸರಕಾರದೊಡನೆ ಕಾದಾಡಿ ವಿಜಯಗಳಿಸಿದ ಮಹಾತ್ಮರ ಜೀವನ ಚರಿತ್ರೆಯನ್ನು ತೋರ್ಪಡಿಸುವುದು, ಅದ್ಭುತವೂ ಅದ ವೀರಕೀರ್ತಿಯ ಪ್ರಪಂಚದ ಮಹತ್ವದ ರಾಷ್ಟ್ರದಲ್ಲಿರುವುದೆ?

ಮಹಾತ್ಮಗಾಂಧಿಯವರು ಭರತಖಂಡಕ್ಕೆ ಆಗಮಿಸಿದಾಗ ಭಾರತದ ಸ್ಥಿತಿ ಶೋಚನೀಯವಾಗಿದ್ದಿತು. ವಿಶ್ವಕ್ಕೆ ಸನಾತನವಾದ ಆರ್ಯಧರ್ಮವನ್ನು ಬೋಧಿಸಿದ ಪುಣ್ಯಭೂಮಿಯಾದ ಭರತಖಂಡವನ್ನು ಆಂಗ್ಲರು ಆಕ್ರಮಿಸಿಕೊಂಡಿದ್ದರು. ಶತಮಾನಗಳಿಂದ ಭಾರತಮಾತೆ ದಾಸ್ಯಶೃಂಖಲೆಯಿಂದ ಬಂಧಿತಳಾಗಿದ್ದಳು. ಆಕೆಯ ದಾಸ್ಯಬಂಧನವನ್ನು ಕಳಚಲುಗೈಯಲು ರಾಷ್ಟ್ರೀಯ ಮಹಾಸಂಸ್ಥೆಯಾದ ಕಾಂಗ್ರೆಸ್ ಸಂಸ್ಥಾಪನೆಗೊಂಡಿತು. ರಾಷ್ಟ್ರ ಜೀವನದಲ್ಲಿ ಒಂದು ವಿಧವಾದ ಚೇತನವನ್ನು ಉಂಟುಮಾಡಿದ್ದಿತು. ಆದರೆ ಆ ಚೇತನವು ಗಗನದ ವಿಶಾಲವಾದ ತಾಂಡವವನ್ನು ಆಗಸದಲ್ಲಿಯೇ ಬೀರಿದ್ದರೂ ಆಕಾಶವಾದುದಾಗಿದ್ದಿತು. ಕಾಂಗ್ರೆಸ್ ಸಂಸ್ಥೆಯಲ್ಲೇ ತೀವ್ರ ಮತ್ತು ಮಂದಗಾಮಿಗಳೆಂಬ ಪಂಗಡಗಳುಂಟಾಗಿ ಘರ್ಷಣೆ ತೋರಿ ರಾಷ್ಟ್ರವು ನಾಯಕನಿಲ್ಲದೆ ಕಂಗೆಟ್ಟಿತ್ತು. ಕಾರ್ಗತ್ತಲೆಯನ್ನು ಛೇದಿಸಿ ರಾಷ್ಟ್ರವನ್ನು ಅಮಿತ ಪ್ರಕಾಶದಿಂದ ಬೆಳಗಿಸಲು, ರಾಜಕೀಯ ಬಾಂದಳದಲ್ಲಿ ನೇತಾರರ ರೂಪವಾಗಿ ಭಾಸ್ಕರನು ಉದಯಿಸಿದನು. ಆತನೇ ಮಹಾತ್ಮ ಗಾಂಧಿ.

ಭರತಖಂಡಕ್ಕೆ ಆಗಮಿಸಿ ಅಹಮದಾಬಾದಿನ ಸಬರಮತಿ ಆಶ್ರಮವನ್ನು ಸ್ಥಾಪಿಸಿದರು. ಮತಭೇದವಿಲ್ಲದ ಮೇಲುಕೀಳು ಭೇದಭಾವವಿಲ್ಲದ ಆ ಪುಣ್ಯಾಶ್ರಮವು ಪ್ರಾಚೀನ ಆರ್ಯ ಋಷಿಗಳ ಪವಿತ್ರವಾದ ಪುಣ್ಯಾಶ್ರಮದಂತೆ ಕಂಗೊಳಿಸುತ್ತಿದ್ದಿತು. ಅದರ ಪರಿಸರದ ಪ್ರತಿಯೊಬ್ಬರ ಜೀವನ ಮಾನವತೆಯನ್ನು ಕಳೆದುಕೊಂಡ ಜೀವಿ ಸುತ್ತಿದ್ದ ಹರಿಜನಬಾಂಧವರು ಆಶ್ರಮದ ವಾಸಿಗಳಾದರು. ಮಹಾತ್ಮಗಾಂಧೀಜಿ ಆಶ್ರಮದಿಂದಲೇ ದೇಶೀಯರಲ್ಲಿ ನೂತನ ಭಾರತೀಯರಿಗೆ ಹೊಸ ಜೀವದಾನ ಮಾಡಿ ರಾಷ್ಟ್ರೀಯ ಭಾವನೆಯ ಜ್ಯೋತಿಯ ಪ್ರಪಂಚ ಕ್ರಾಂತಿ ತಂದರು.

ಇಷ್ಟರಲ್ಲೇ ಚಂಪಾರಣ್ಯ ಎಂಬಲ್ಲಿ ಒಂದು ಕಠಿಣ ಸಮಸ್ಯೆ ತಲೆದೋರಿತು. ಬಿಹಾರಿನ ಒಂದು ಪ್ರದೇಶವಾದ ಚಂಪಾರಣ್ಯದ ಬಡ ರೈತರು ಭೂಮಾಲೀಕರಾದ ಧನಿಕರ ಆಕ್ರಮಣವನ್ನು ತಡೆಯಲಾರದೆ ಕಂಗೆಟ್ಟು ತಳಮಳಿಸುತ್ತಿದ್ದರು. ಈ ಬಡವರ ಉದ್ಧಾರಕ್ಕಾಗಿ ಜನ್ಮತಾಳಿದ ಮಹಾತ್ಮರು ಚಂಪಾರಣ್ಯಕ್ಕೆ ಪ್ರವೇಶಿಸಿದ ಕ್ಷಣ ಕ್ಷಣದಲ್ಲಿಯೂ ಸತ್ಯಾಗ್ರಹ ಹೂಡಿದ ಪ್ರಬಲ ಪರಿಣಾಮಕಾರಿಯಾದ ಅಹಿಂಸಾ ಸಮರವನ್ನು ಹೂಡಿ ಯಶಸ್ವಿಗಳಾದರು. ಮಹಾತ್ಮರ ಪ್ರಖ್ಯಾತಿಯೂ ದೇಶದ ಸ್ವಾತಂತ್ರ್ಯವೂ ಹಬ್ಬಿತು.

೧೯೧೯ರಲ್ಲಿ ಪ್ರಥಮ ಜಾಗತಿಕ ಯುದ್ಧವು ನಡೆಯಿತು. ಗಾಂಧೀಜಿ ಭಾರತ ಸ್ವಾತಂತ್ರ್ಯಕ್ಕಾಗಿ ಜೀವನವನ್ನು ಧಾರೆಯೆರೆಯುವುದೇ ತನ್ನ ಅಂತರ ದ ಸರ ದ ಮೇಯವೆಂದು ನಿರ್ಧರಿಸಿಕೊಂಡರು. ಆದರೆ ಆಪತ್ಕಾಲದಲ್ಲಿ ಆಂಗ್ಲ ಸರಕಾರಕ್ಕೆ ಸಹಾಯ ಮಾಡುವುದು ಅಹಿಂಸಾ ವೀರನ ಧರ್ಮವೆಂದು ಅವರು ಸಹಾಯವನ್ನಿತ್ತರು. ಆದರೆ ಯುದ್ಧಾನಂತರ ಸ್ವಾತಂತ್ರ್ಯವನ್ನು ಕೊಡುವುದಾಗಿ ಆಶ್ವಾಸನೆಯಿತ್ತ ಆಂಗ್ಲರು ಭಾರತೀಯರನ್ನು ಕಷ್ಟನಷ್ಟಗಳಿಗೆ ಗುರಿಮಾಡಲು ಆರಂಭಿಸಿದರು. ಅದಕ್ಕಾಗಿ ಭಾರತೀಯರನ್ನು ದಮನಗೊಳಿಸುವ ರೌಲತ್ ಆಕ್ಟ್ ಎಂಬೊಂದು ಶಾಸನವನ್ನು ಭಾರತದ ಆಂಗ್ಲ ಸರಕಾರವು ಜಾರಿಗೆ ತಂದಿತು. ಜನರು ತೀವ್ರ ಅಸಮಾಧಾನವನ್ನು ಕಲೆಹಾಕಿ ಪ್ರತಿಭಟಿಸುತ್ತ ಪ್ರಜಾಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಶಾಸನವು ಎಂದು ಆಂದೋಲನ ಮಾಡಲು ಬದ್ಧಕಂಕಣರಾದರು.

ರಾಷ್ಟ್ರದ ಇತಿಹಾಸದಲ್ಲಿ ಹೊಸತೊಂದು ಅಧ್ಯಾಯವು ಪ್ರಾರಂಭವಾಯಿತು. ಅಜ್ಞಾತರಾಗಿದ್ದ ಭಾರತೀಯರು ಮಹಾತ್ಮರ ಅನುಯಾಯಿಗಳಾಗಿ ಸ್ವಾತಂತ್ರ್ಯ ಸಮರವನ್ನು ಸಾರಿದರು. ಭರತದ ಲಕ್ಷಾಂತರ ಜನರು ಅವರ ಆಜ್ಞೆಯ ಮೇರೆಗೆ ಅಹಿಂಸಾ ಸಮರ ಹೂಡಿದರು. ಆದರೆ ಕ್ಷಾತ್ರತೇಜವು ಹಿಂದಿನ ಕಷ್ಟಗಳಿಂದ ಕುಂದಿದ ಭಾರತೀಯರ ಶಕ್ತಿ ಅಗಣಿತವಾಗಿ ಪ್ರಕಾಶಿಸಿತು. ಈ ಆತ್ಮತೇಜವಾಗಿ ವಿಕಸನಗೊಂಡು ಪ್ರಪ್ರಥಮವಾಗಿ ಅಹಿಂಸಾತ್ಮಕ ಸತ್ಯಾಗ್ರಹದ ಮಹಾಶಸ್ತ್ರವು ವ್ಯಕ್ತವಾಯಿತು. ೧೯೧೯ನೇ ಏಪ್ರಿಲ್ ೬ ರಂದು ರೌಲತ್ ಆಕ್ಟನ್ನು ವಿರೋಧಿಸಿ ದೇಶಾದ್ಯಂತ ಅಖಂಡ ಭಾರತದಲ್ಲಿ ಹರತಾಳವನ್ನು ಹೂಡಲಾಯಿತು. ಇದರಿಂದ ಉತ್ತೇಜಿತರಾದ ಸರಕಾರದವರು ಹಿಂದೆಂದೂ ಕಂಡರಿಯದ ಆಂಗ್ಲರು ಭಾರತೀಯರ ಮೇಲೆ ದೌರ್ಜನ್ಯ ಹಿಂಸೆ ಕ್ರೌರ್ಯಗಳ ಮಳೆಯನ್ನು ಕರೆದರು. ನಿರಪರಾಧಿಗಳಾದ ಅನೇಕ ಭಾರತೀಯರ ಪಂಜಾಬಿನ ಜಲಿಯನ್‌ವಾಲಾಬಾಗನಲ್ಲಿ ಗುಂಡಿನಿಂದ ಹತಿಕಿಯಾದರು. ಇಡೀ ಪಂಜಾಬಿನಲ್ಲಿ 'ಮಾರ್ಷಿಯಲ್ ಲಾ' ಎಂಬ ಸೈನಿಕ ರಾಜ್ಯವು ಘೋಷಿತವಾಗಿ ಪಂಜಾಬು ಪೈಶಾಚಿಕ ಭೂಮಿಯಾಯಿತು. ಆಖಂಡ ರಾಷ್ಟ್ರದಲ್ಲಿ ಹಾಹಾಕಾರ ಉಂಟಾಗಿ ಮಹಾತ್ಮರು ಆ ಶಾಂತ ಭರತದ ನೆನಪನ್ನು ನೀಡಿದರು. ಬ್ರಿಟಿಷರ ದೌರ್ಜನ್ಯವನ್ನು ಜಗತ್ತಿಗೆ ಪ್ರಕಟಿಸಲು ಮಹಾತ್ಮರು ವಿಶಾಲಹೃದಯದಲ್ಲಿ ಸಕಲ ಆತ್ಮವನ್ನು ಇಟ್ಟುಕೊಂಡು ಸಕಲ ಆತ್ಮದಲ್ಲಿಯೂ ತಾನು ಪ್ರವೇಶಿಸಿ ಮಹಾತ್ಮರು ನಿಜವಾಗಿಯೂ ಮಹನೀಯರಾದರು. 'ಮಹಾತ್ಮ ಗಾಂಧೀಕಿ ಜೈ' ಎಂಬ ಜಯಘೋಷದಿಂದ ಭಾರತವು ಏಕ ಸ್ವರೂಪವಾಗಿ ಎದ್ದು ನಿಂತು ಅಹಿಂಸಾತ್ಮಕ ಸಮರದಲ್ಲಿ ಧುಮುಕಿತು.

ಭಾರತದ ರಾಷ್ಟ್ರೀಯತೆಗೆ ನವೋತ್ಸಾಹವು ಪ್ರತ್ಯಕ್ಷವಾಯಿತು. ಈ ಕಾಲದಲ್ಲೇ ಅಸ್ಪೃಶ್ಯ ವರ್ಗದ ದಬ್ಬಾಳಿಕೆ ಇದ್ದುದು ಮಹಾತ್ಮರು ರಾಷ್ಟ್ರೀಯ ಸಂಗ್ರಾಮದಲ್ಲಿ ಭಾಗಿಗಳಾಗುವುದು ಪ್ರಾರಂಭವಾಯಿತು. ಟರ್ಕಿಯ ಸಾಮ್ರಾಜ್ಯವನ್ನು ಹರಿಹಂಚುಗೊಳಿಸಿದ ಕಿಲಾಫತ್ ಕಾರಣವನ್ನು ಚಳುವಳಿಗೆ ಬ್ರಿಟಿಷರು ಸಹಕರಿಸಿದ್ದರಿಂದ ಭಾರತೀಯ ಮುಸ್ಲಿಮರು ಸಂಘಟಿತರಾಗಿ ಮಹಮ್ಮದ್ ಅಲಿಯವರ ನೇತೃತ್ವದಲ್ಲಿ ಖಿಲಾಫತ್ ಸಮಿತಿಯೊಂದನ್ನು ಸ್ಥಾಪಿಸಿಕೊಂಡಿದ್ದರು. ಮಹಾತ್ಮಗಾಂಧೀಜೀ ಮಹಮ್ಮದ್ ಅಲಿಯವರೊಡನೆ ಸಹಕರಿಸಿ ಕಿಲಾಫತ್ ಚಳುವಳಿಯನ್ನು ರಾಷ್ಟ್ರ ಮಹಾಸಮರದ ಒಂದಂಗವಾಗಿ ಪರಿವರ್ತಿಸುವುದರಲ್ಲಿ ಯಶಸ್ವಿಗಳಾದರು. ೧೯೨೦ನೇ ಸೆಪ್ಟಂಬರಿನಲ್ಲಿ ಮಹಾತ್ಮರ ದಿಗ್ದರ್ಶನದಲ್ಲಿ ಕಲ್ಕತ್ತದಲ್ಲಿ ಕಾಂಗ್ರೆಸ್ ಅಧಿವೇಶನವು ನಡೆದು ಕಿಲಾಫತ್ ಚಳವಳಿಯನ್ನು ಪುರಸ್ಕರಿಸಿ ಪಂಜಾಬಿನ ಪ್ರಕರಣಗಳಿಗೆ ಪ್ರತೀಕಾರವೆಸಗಲು ನಿರ್ಣಯಗಳಾದುವಲ್ಲದೆ ಭಾರತದಲ್ಲಿ ಸ್ವರಾಜ್ಯ ಸ್ಥಾಪಿಸುವುದೇ ಕಾಂಗ್ರೆಸಿನ ಮಹಾಧ್ಯೇಯವೆಂದು ಘೋಷಿಸಲಾಯಿತು. ಅದೇ ವರ್ಷ ನಾಗಪುರದಲ್ಲಿ ಮತ್ತೊಮ್ಮೆ ಅಧಿವೇಶನಸೇರಿ ಮಹಾತ್ಮರ ಮಾರ್ಗದರ್ಶನದಲ್ಲಿ ಅಹಿಂಸಾ ಮಯವಾದ ಅಸಹಕಾರ ಆಂದೋಲನವನ್ನು ಹೂಡುವುದೇ ಕಾಂಗ್ರೆಸ್ಸಿನ ಗುರಿಯೆಂದು ನಿರ್ಧಾರವಾಗಿ ಕಲ್ಕತ್ತಾ ಅಧಿವೇಶನದ ಗೊತ್ತುವಳಿಗಳು ಸಮರ್ಥಿಸಲ್ಪಟ್ಟವು.

ಮಹಾತ್ಮರು ತಮ್ಮ ಅಕುಳವಾದ ತೇಜಸ್ಸನ್ನು ಮಾನವಕೋಟಿಯ ಮೇಲೆ ಬೀರಿದರು. ವ್ಯಕ್ತಿವ್ಯಕ್ತಿಗಳಲ್ಲಿ ಪ್ರಚಂಡ ಚೈತನ್ಯವು ಪ್ರಕಾಶವಾಯಿತು. ಸಿ. ಆರ್. ದಾಸ್, ಮೋತಿಲಾಲನೆಹರೂ, ಜವಹರಲಾಲನೆಹರೂ, ವಲ್ಲಭಭಾಯಿ ಪಟೇಲ್ ರಾಜೇಂದ್ರ ಪ್ರಸಾದ್, ಮೌಲಾನಾ ಅಜಾದ್, ಅಬ್ದುಲ್ ಗಫಾರ್ ಖಾನ್ ಮುಂತಾದ ಪ್ರಜಾ ನಾಯಕರು ಬೆಳಕಿಗೆ ಬಂದರು. ಮಹಾತ್ಮರ ಕರೆಗೆ ಓಗೊಟ್ಟು ಸರಕಾರದ ಉದ್ಯೋಗಗಳನ್ನು ತ್ಯಜಿಸಿ ನ್ಯಾಯಾಲಯಗಳನ್ನು ಬಹಿಷ್ಕರಿಸಿ ಸಾತ್ವಿಕ ಶಕ್ತಿಯಾಗಿ ಪರಿವರ್ತನೆಗೊಂಡ ರಾಷ್ಟ್ರದ ತರುಣರು ಮನೆಮಠಗಳನ್ನು ತೊರೆದು ಅಹಿಂಸಾ ಸೈನಿಕರಾದರು. ಕಾಂಗ್ರೆಸ್ ಮಹಾಸಭೆಯು ಹಳ್ಳಿ ಹಳ್ಳಿಗಳಲ್ಲಿಯೂ ಪಟ್ಟಣ ಪಟ್ಟಣಗಳಲ್ಲಿಯೂ ಶಾಖೆಗಳನ್ನು ಸ್ಥಾಪಿಸಿ ಏಕ ಮಾತ್ರ ಭಾರತೀಯ ನ ಹಿರಿಯ ಸಂಸ್ಥೆಯಾಗಿ ರೂಪುಗೊಂಡಿತು.

೧೯೨೦ರಲ್ಲಿ ರಾಷ್ಟ್ರ ಮಹಾಸಮರದ ಕ್ರಿಯಾರೂಪವನ್ನು ತಾಳಿತು. ಮಹಾತ್ಮರ ಮುಂದಾಳುತನದಲ್ಲಿ ಅನೇಕರು ಸೆರೆಮನೆಗೆ ಹೋದರು. ಅಹಿಂಸಾತ್ಮಕ ಅಸಹಕಾರದ ಕಹಳೆಯ ಕರೆಯನ್ನು ಆಲಿಸಿತು. ವಿದೇಶೀ ವಸ್ತ್ರಗಳ ಬಹಿಷ್ಕಾರ ಮಾಡಲಾಯಿತು. ಕಲಾಶಾಲೆಗಳು ವಿದ್ಯಾಲಯಗಳು ಬಹಿಷ್ಕೃತವಾದವು. ನ್ಯಾಯಾಲಯಗಳು ಶೂನ್ಯವಾದುವು. ಚರಕಾಂದೋಲನ ಪ್ರಾರಂಭವಾಯಿತು. ಚರಕಗಳ ಕರ್ಣಾನಂದ ನಿನಾದವನ್ನು ಉತ್ತೇಜಿಸಿಕೊಳ್ಳುತ್ತಾ ಯುವಜನರು ಖಾದಿಯನ್ನು ಧರಿಸಿದರು. ಬ್ರಿಟಿಷರ ಆಳ್ವಿಕೆಯ ನಿರಂಕುಶತೆಗೆ ಮದ್ಯಪಾನ ನಿಷೇಧಕ್ಕಾಗಿಯೂ ಆಂದೋಲನ ಸಾಗಿತು. ಖಿಲಾಫತ್ ಚಳವಳಿಯ ಮುಸ್ಲಿಂ ನಾಯಕರೂ ಈ ಕಾರ್ಯದಲ್ಲಿ ಕೈಜೋಡಿಸಿದರು. ವಿಶ್ವದ ಇತಿಹಾಸದಲ್ಲೇ ರೋಮಾಂಚಕಾರಿಯಾದ ಘಟನೆಗಳು ನಡೆದು ಹೋಗಿ ಸತ್ಯಾಗ್ರಹದ ಕಾವಿನಿಂದ ಆಂಗ್ಲ ಸರಕಾರವು ತತ್ತರಿಸಲಾಯಿತು.

ಗಾಂಧೀಜಿ ಅಹಿಂಸಾತ್ಮಕ ಸತ್ಯಾಗ್ರಹದ ಪಾಠವನ್ನು ಭಾರತೀಯರಿಗೆ ಕಲಿಸಲು 'ನವಜೀವನ' ಮತ್ತು 'ಯಂಗ್ ಇಂಡಿಯಾ' ಎಂಬ ಪತ್ರಿಕೆಗಳನ್ನು ಪ್ರಕಟಿಸಿದರು. ಆಫ್ರಿಕದಲ್ಲಿ 'ಇಂಡಿಯನ್ ಒಪೀನಿಯನ್' ಪತ್ರಿಕೆಯು ಸ

ಪಾದಕರಾಗಿದ್ದ ಆ ಮಹನೀಯರಿಗೆ ಶಕ್ತಿ ಸಾಮರ್ಥ್ಯವಾಗಲಿ ಹೊಸತೇನೂ ಆಗಿರಲಿಲ್ಲ. ಅಹಿಂಸೆಯ ಅಮರತತ್ವವನ್ನು ಪಾಲಿಸಿದ ಭಾರತೀಯರು ೧೯೨೧ ರಲ್ಲಿ ಅಹಮ್ಮದಾಬಾದಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಸಮರದ ತೀಕ್ಷ್ಣತೆಯನ್ನು ಹೆಚ್ಚಿಸಬೇಕೆಂದು ಮಹಾತ್ಮರನ್ನು ಒತ್ತಾಯಪಡಿಸಿದರು. ಆದರೆ ದುರ್ಘಟನೆಗಳು ನಡೆಯುತ್ತ ಹೋದುವು. ಅಹಿಂಸೆಯು ಅನೇಕ ಅಶಕ್ತ ಧುರೀಣರ ಕೈಯಲ್ಲಿ ಹಿಂಸೆ ದೌರ್ಜನ್ಯವಾಗಿ ಪರಿವರ್ತನೆಗೊಂಡಿತು. ಕೆಲವು ಹಿಂಸಾವಾದಿಗಳ ಕಾರ್ಯಕ್ಕೆ ಬಲಿಯಾಗಿ ಕೆಲವು ಪೋಲೀಸಿನವರು ಚೌರಿಚೌರ ಎಂಬಲ್ಲಿ ಅಗ್ನಿದೇವನಿಗೆ ಆಹುತಿಯಾದರು. ಅಹಿಂಸಾತ್ಮಕ ಸಮರಕ್ಕೆ ಭರತಖಂಡವು ಇನ್ನೂ ಸಿದ್ಧಗೊಳ್ಳಲಿಲ್ಲವೆಂದು ಭಾವಿಸಿ ಮಹಾತ್ಮರು ಸತ್ಯಾಗ್ರಹವನ್ನು ಹಿಂತೆಗೆದುಕೊಂಡರು. ಆದರೆ ಆಂಗ್ಲ ಸರಕಾರವು ಸಮಾಧಾನಗೊಳ್ಳದೆ ಇತರ ಮುಖಂಡರನ್ನು ಕಾರಾಗಾರಕ್ಕೆ ಅಟ್ಟಿದಂತೆ ಮಹಾತ್ಮರನ್ನು ಬಂಧಿಸಿ ಆರು ವರ್ಷ ಶಿಕ್ಷೆ ವಿಧಿಸಿ ಸೆರೆಮನೆಗೆ ಒಯ್ದರು. ಅಹಿಂಸಾಮೂರ್ತಿಯು ಬಂದೀಖಾನೆಯಲ್ಲಿ ಶಾರೀರಿಕ ಬಂಧನಕ್ಕೊಳಗಾದನು. ಆದರಾತನ ಅನುಪಮವಾದ ಆತ್ಮತೇಜಸ್ಸು ಭಾರತೀಯನ ಹೃನ್ಮಂದಿರದಲ್ಲಿ ದಿವ್ಯಶೋಭೆಯಿಂದ ಬೆಳಗಿ ಮುಂದಿನ ಮಹಾಸಮರಕ್ಕೆ ಭರತಖಂಡವನ್ನು ಸಿದ್ಧಗೊಳಿಸುತ್ತಿತ್ತು. ಭಾರತೀಯರು ಹಿಂದೆಂದೂ ಇಲ್ಲದಂತೆ ಕಷ್ಟನಿಷ್ಠುರಗಳನ್ನು ಸಹಿಸಿ ದೌರ್ಜನ್ಯವನ್ನು ಎದುರಿಸುವ ತ್ಯಾಗಶಾಲಿಗಳು ತಪೋಮಯ ಜೀವಿಗಳಾಗಿ ಪರಿವರ್ತಿತರಾದರು.

೧೯೨೪ರಲ್ಲಿ ಅನಾರೋಗ್ಯದ ನಿಮಿತ್ತ ಮಹಾತ್ಮರ ಬಿಡುಗಡೆಯಾಯಿತು. ಆಗಾಗಲೇ ಕಾಂಗ್ರೆಸಿನಲ್ಲಿ ಭಿನ್ನಾಭಿಪ್ರಾಯಗಳು ಮೂಡಿದ್ದುವು. ಮೋತೀಲಾಲ ನೆಹರು, ಸಿ. ಆರ್. ದಾಸ್. ಮುಂತಾದವರು ಶಾಸನ ಸಭೆಗಳಿಗೆ ಪ್ರವೇಶಿಸಿ ವಿರೋಧಪ್ರದರ್ಶಿಸಿ ಬ್ರಿಟಿಷರೊಡನೆ ಹೋರಾಡಬೇಕೆಂದು ವಾದಿಸಿದರು. ಮಹಾತ್ಮರಿಗೆ ಶಾಸನಸಭಾ ಪ್ರವೇಶದಲ್ಲಿ ಕಿಂಚಿತ್ತಾದರೂ ನಂಬಿಕೆಯಿರಲಿಲ್ಲ. ಆದ್ದರಿಂದ ರಾಷ್ಟ್ರವನ್ನು ಸಂಘಟಿಸುವಂತೆ ಮಾಡಿ ಮಗದೊಮ್ಮೆ ಹೋರಾಟದ ಸಿದ್ಧತೆ ನಡೆಯಲು ರಚನಾತ್ಮಕ ಕಾರ್ಯಕ್ರಮಗಳನ್ನು ಗಾಂಧೀಜಿ ಕೈಗೊಂಡರು. ಅಸ್ಪೃಶ್ಯತಾ ನಿವಾರಣೆ, ಖಾದಿ ಪ್ರಚಾರ, ಹಿಂದೂ ಮುಸ್ಲಿಂ ಬಾಂಧವ್ಯ, ರಾಷ್ಟ್ರಭಾಷಾ ಪ್ರಚಾರ, ಮದ್ಯಪಾನ ನಿರೋಧ ಮುಂತಾದ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡು ರಾಷ್ಟ್ರ ಜೀವನವನ್ನು ಪುನರುಜ್ಜೀವನಗೊಳಿಸಿದರು. ಖಿಲಾಫತ್ ಚಳವಳಿಯು ಹಿಂತೆಗೆಯಲ್ಪಟ್ಟು ಮುಸ್ಲಿಮರು ರಾಷ್ಟ್ರಮಹಾಸಂಸ್ಥೆಯಿಂದ ದೂರಸರಿಯಲಾರಂಭಿಸಿದರು. ದೇಶದ ಪರಿಸ್ಥಿತಿಯನ್ನು ಅರಿತ ಮಹಾತ್ಮರು ವ್ಯಾಕುಲಚಿತ್ತರಾದರು.

೧೯೨೯ ರಲ್ಲಿ ಲಾಹೋರಿನಲ್ಲಿ ಜವಹರರ ಅಧ್ಯಕ್ಷತೆಯಲ್ಲಿ ಕಾಂಗ್ರೆಸಿನ ಮಹಾಧಿವೇಶನವು ನಡೆಯಿತು. ಪೂರ್ಣ ಸ್ವಾತಂತ್ರ್ಯವೇ ರಾಷ್ಟ್ರ ಸಂಸ್ಥೆಯ ಗುರಿಯೆಂದು ನಿರ್ಧಾರವಾಗಿ ಅಹಿಂಸಾತ್ಮಕ ಸಂಗ್ರಾಮ ಹೂಡಲು ಮಹಾತ್ಮರಿಗೆ ಸರ್ವಾಧಿಕಾರವನ್ನು ಕಾಂಗ್ರೆಸ್ ಕೊಟ್ಟಿತು. ಕಾಂಗ್ರೆಸ್ಸಿನ ನಿರ್ಣಯಗಳನ್ನನುಸರಿಸಿ ಮಹಾತ್ಮರು ೧೧ ಬೇಡಿಕೆಗಳನ್ನು ಅಂದಿನ ವೈಸ್‌ರಾಯರ ಮುಂದಿಟ್ಟು ಪ್ರತಿಕ್ರಿಯೆ ಕಾಣದೆ ವಿಫಲ ಮನೋರಥರಾದರು. ೧೯೩೦ರ ಮಾರ್ಚಿಯಲ್ಲಿ ದ್ವಿತೀಯ ಅಸಹಕಾರಾಂದೋಲನ ಚಳುವಳಿಯು ಘೋಷಿಸಲ್ಪಟ್ಟಿತು.

ರಾಜಯೋಗಿ ಮಹಾತ್ಮರು ಊರುಗೋಲು ಹಿಡಿದು ದಂಡಿಗೆ ನಡೆದು ಆಜ್ಞೋಲ್ಲಂಘನೆ ಮಾಡಿ ಉಪ್ಪನ್ನು ತಯಾರಿಸಿದರು. ಉಪ್ಪನ್ನು ತಯಾರಿಸುವ ಕಾನೂನಿನ ವಿರುದ್ಧ ಪ್ರದರ್ಶನಗಳು ದೇಶದಾದ್ಯಂತವೂ ನಡೆದುವು. ಮಹಾತ್ಮರನ್ನು ಸರಕಾರವು ಬಂಧಿಸಿ ಕಾರಾಗೃಹಕ್ಕಟ್ಟಿತು. ೧೯೨೧ ಕ್ಕಿಂತಲೂ ತೀವ್ರ ತೀಕ್ಷ್ಣತೆಯಿಂದ ಭಾರತೀಯರು ಸಂಗ್ರಾಮದಂಗಕ್ಕೆ ಧುಮುಕಿ ಬ್ರಿಟಿಷ್ ಸಾಮ್ರಾಜ್ಯವನ್ನು ನಡುಗಿಸಿದರು, ಸರಕಾರವು ಹಿಂಸಾತ್ಮಕವಾದ ದೌರ್ಜನ್ಯಗಳಿಂದ ಭಾರತೀಯರ ಸ್ವಾತಂತ್ರ್ಯಾಭಿಲಾಷೆಯನ್ನು ಉಡುಗಿಸಲು ಪ್ರಯತ್ನಿಸಿತಲ್ಲ

[ಶೇಷ.]

॥ ಟೀಕೆಯ ಹೆದರಿಕೆ ॥

ಲೋಕ ನಿಯಮವೆಂದೇ ಹೇಳಬಹುದು—ಜನರು ಪ್ರತಿಯೊಂದು ವಿಷಯವನ್ನು, ವಸ್ತುವನ್ನು ತಮ್ಮ ಕಣ್ಣಿನಿಂದ ತಮ್ಮ ಕಲ್ಪನೆ ಹಾಗೂ ಭಾವನೆಗಳಿಗನುಸಾರ ನೋಡುತ್ತಾರೆ. ಇದರಂತೆ ಪ್ರತಿಯೊಬ್ಬನು ಲೋಕ ತನ್ನ ಇಚ್ಛೆಯಂತೆ ನಡೆಯಲೆಂದು ಬಯಸುತ್ತಾನೆ. ಆದರೆ ಲೋಕಗತಿಯು ಸಾಮಾನ್ಯ ಮನುಷ್ಯನಿಗೆ ತದ್ವಿರುದ್ಧವಾಗಿರುವ ಪ್ರಸಂಗವೇ ಹೆಚ್ಚು. ಆಗ ಪರಸ್ಪರ ದೋಷಲೋಪಗಳನ್ನೆತ್ತಿ ತೋರಿಸುವುದರಲ್ಲಿ ಟೀಕಾಟಿಪ್ಪಣಿಗಳಲ್ಲಿ ಸಂತೋಷ ಕಂಡುಕೊಳ್ಳಬಯಸುವವನು ಮತ್ತು ತನ್ನ ಮೂಲಕ ತನಗಾದ ನಿಂದೆ ಹಾಗೂ ಆಘಾತಗಳಿಂದ ಬದುಕಿ ಉಳಿಯಲು ಹವಣಿಸುವವನು.

ಜನ ನಮ್ಮ ವಿಷಯ ಮಾಡಿ ಟೀಕೆ ಟಿಪ್ಪಣಿಗಳನ್ನು ಮಾಡುವುದನ್ನು ಕಂಡು ರೋಷಾವೇಶಗೊಳ್ಳುವ ಪ್ರವೃತ್ತಿ ನಮಗೆ ಸ್ವಾಭಾವಿಕವಾಗಿ ಬರುತ್ತದೆ. ನಮ್ಮ ಲೋಪದೋಷಗಳನ್ನೆತ್ತಿ ತೋರಿಸುವವರು ತಾವೆಷ್ಟು ಸಂಭಾವಿತರಿರುವರೋ? ಎಂದು ಮೂದಲಿಸುವ ಬಯಕೆಯೂ ನಮಗಾಗುತ್ತದೆ. ಹಾಗೆಂದು ಇದು ಎಲ್ಲ ಪ್ರಸಂಗದಲ್ಲಿಯೂ ಸರಿಯಾದುದೆನ್ನಲಾರೆವು. ಅದರಲ್ಲೂ ಪ್ರಜಾಪ್ರಭುತ್ವಪದ್ಧತಿ ಜಾರಿಯಲ್ಲಿರುವ ನಮ್ಮ ರಾಷ್ಟ್ರದಲ್ಲಿ ಟೀಕೆ ಟಿಪ್ಪಣಿಗಳ ವಿಷಯದಲ್ಲಿ ಸಾಕಷ್ಟು ಸೌಹಾರ್ದಮಯವಾದ ವಾತಾವರಣವನ್ನೆ ನಿರ್ಮಿಸುವುದಗತ್ಯ. ಬುದ್ಧಿವಂತರಾದವರು ಟೀಕೆ ಟಿಪ್ಪಣಿಗಳಿಂದ ಅತ್ಯಮೂಲ್ಯವಾದ ಜ್ಞಾನಸಂಪಾದನೆ ಮಾಡುತ್ತಾರೆ. ಟೀಕೆಗಳಿಗೆ ಅವರು ಭಯಪಡುವುದಿಲ್ಲ. ಹಾರ್ದಿಕ ಸ್ವಾಗತ ನೀಡುತ್ತಾರೆ. ಬಿಚ್ಚುಮನಸ್ಸಿನಿಂದ ತಮ್ಮ ಕೆಟ್ಟತನವನ್ನು ತೋರಿಸಿಕೊಟ್ಟುದಕ್ಕೆ ಆಭಾರ ಮನ್ನಿಸುತ್ತಾರೆ.

ಹೀಗೆ ಮಾಡುವ ಬದಲಿಗೆ ನಾವು ಕೋಪಾವಿಷ್ಟರಾಗಿ ನಮ್ಮ ಒಳ್ಳೆಯದಕ್ಕೇ, ಆದರೂ ಒಬ್ಬ ಮನುಷ್ಯ ನಮ್ಮ ಲೋಪದೋಷಗಳನ್ನೆತ್ತಿ ತೋರಿಸಿದುದಕ್ಕೆ ಬೈದು ಭಂಗಿಸಿದರೆ ಅವನು ಮುಂದೆಂದೂ ನಮ್ಮ ಕೊರತೆಗಳನ್ನು ನಮ್ಮೊಡನೆ ಹೇಳಿಕೊಡುವುದಿಲ್ಲ. ಹೆರವರ ನಡುವೆ ಆ ಸುದ್ದಿಯನ್ನು ಗುಲ್ಲು ದಪ್ಪ ಮಾಡಿಕೊಂಡು ತಿರುಗುತ್ತಾನೆ! ಕೇಳುವ ಹತ್ತು ಜನರ ಕಿವಿಗೆ ರಂಗಾಗುವಂತೆ ಅವನು ಬಣ್ಣ ಹಚ್ಚುವುದರಿಂದ ಅದು ಊರಿಂದೂರಿಗೆ ನಿಸರ್ಗಾಗ್ನಿಯಂತೆ ಹಬ್ಬುತ್ತದೆ. ಮೊದಲೇ ಇಲಿ ಓಡಿದ ಸುದ್ದಿ ಹುಲಿ ಹಾರಿತು ಎಂಬುದಾಗಿ ಪ್ರಚಲಿತಗೊಂಡಿದೆ. ಇನ್ನು ಇದನ್ನು ಕೇಳಿ ಸತ್ಯಾಂಶ ಮಾಡಿ ತಮ ತಮಗೆ ತೋಚಿದಂತೆ ಭಾಷ್ಯ ಮಾಡಿದರೆ ಅಲ್ಲಿಗೆ ತೀರಿತು! ಇದರಿಂದ ತಮ್ಮ ವ್ಯಕ್ತಿತ್ವಕ್ಕೆ ಅಪಾರ ಧಕ್ಕೆ ತಗಲುವುದು ನಿಶ್ಚಯ. ಆದುದರಿಂದ ನಮ್ಮ ಕುರಿತು ಬಹಿರಂಗ ಟೀಕೆಗೆ ಅಸ್ಪದ ಕೊಡಬಾರದು.

ನಮ್ಮದು ಸಮುಚಿತ್ತವಾಗಿಲ್ಲದಿರುವಾಗ ಜನರು ನಮ್ಮ ದೋಷಗಳನ್ನೆತ್ತಿ ತೋರಿಸುವುದನ್ನು ಕಂಡು ಖೇದಗೊಳ್ಳುತ್ತೇವೆ, ಆದರೆ ಜೀವನ ಸಾಫಲ್ಯವನ್ನು ಪಡೆಯಲು ಟೀಕೆಗಳಿಗೆ ಕಿವಿಗೊಡಬೇಕಾಗಿದೆ ಎಂದು ನೆನಪಿನಲ್ಲಿಟ್ಟುಕೊಳ್ಳಬೇಕು. "ಕೇಳುವ ಕಿವಿಯುಳ್ಳವನು ಯಾವಾಗಲೂ ತಿದ್ದಿಕೊ—ಬದಲೆ ನಾಲಿಗೆಯ ಮೇಲೆ ಮಾತ್ರ ಒಡೆತನವುಳ್ಳ" ಎಂಬುದೊಂದು ಇಂಗ್ಲೀಷಿನ ವಾಕ್ಯವಿದೆ. ಸ್ವಲ್ಪ ಹಿರಿತನ ಬಂದ ಕವಿಯಂತೆ ಕಂಡರೂ ನಮ್ಮಲ್ಲಿ ಪ್ರಚಲಿತವಿರುವ "ಊಂಡೆ ಬಾಯಿ ಕಟ್ಟಬಹುದು, ದೊಂಡ್ಡೆ (ಕಂಠ) ಬಾಯಿ ಕಟ್ಟಲಾರೆವು", ಎಂಬ ಮಾತು ಕೂಡ ಟೀಕೆಗೆ ಅಂಜಬಾರದೆಂದು ಸಂಕೇತಿಸುತ್ತದೆ. ನಮಗೆ ಮನಸ್ಸಿನಲ್ಲಿ ಇಲ್ಲದಿರಲಿ ಟೀಕೆ ಎಂದರೆ ಜೀವನ ಸಂಗ್ರಾಮದಲ್ಲಿ ಅನಪೇಕ್ಷಿತವಾಗಿ ಬರುವ ಉಡುಗೊರೆಯೋ ಹೊರತು ಶಾಪವಲ್ಲ.

ಒಬ್ಬ ತತ್ವಜ್ಞಾನಿ ತನ್ನ ಗೆಳೆಯನಿಗೆ ಗೊಂಡೆಯ ಮೇಲೆ ಹೀಗೆ ಬರೆದಿದ್ದ: ಟೀಕೆಗಳಿಂದ ಮುಕ್ತನಿರಬಯಸಿ ಮೂರ್ಖನಾದ ಬಗ್ಗೆ ಏನೂ ಮಾಡಬೇಡ. ಆ ಕುರಿತು ಯೋಚನೆಯೂ ಬೇಡ, ಇದು ನಿಜ, ಮನುಷ್ಯ ಉನ್ನತ ಸ್ಥಾನವನ್ನು ಗಳಿಸಿದಂತೆ ಅವನ ಪ್ರತಿಷ್ಠೆ ಹೆಚ್ಚುತ್ತದೆ. ಅವನ ಕಾರ್ಯಕ್ಷೇತ್ರ ವ್ಯಾಪಕಗೊಳ್ಳುತ್ತದೆ. ಅವನ ನಡುವಳಿಕೆಯನ್ನು ನಿರೀಕ್ಷಿಸಿ ಪರೀಕ್ಷಿಸುವ ಜನ ಹೆಚ್ಚುತ್ತಾರೆ. ಇಲ್ಲಿ ಸ್ವಾಭಾವಿಕವಾಗಿ ಮತಭೇದ ಉಂಟಾಗುವುದರಿಂದ ಟೀಕೆಗೆ ಅವಕಾಶ ದೊರೆಯುತ್ತದೆ. ಇದನ್ನು ಮೊದಲೇ ಪ್ರತಿಯೊಬ್ಬ ಸಾರ್ವಜನಿಕ ಕಾರ್ಯಕರ್ತನೂ ಅರಿತಿರುವುದೊಳ್ಳೆಯದು. ಒಳ್ಳೆಯ ಕೆಲಸ ಮಾಡಿದಾಗಲೂ ಜನರು ದೋಷದ ಕಡೆಗೆ ಬೊಟ್ಟು ಮಾಡುತ್ತಾರಲ್ಲಾ? ಎಂದವರು ಅಪೇಕ್ಷಿಸಬಾರದು. ಆದರೆ ಈಶ್ವರನವರೆಗೆ ಒಬ್ಬನ ಸಮಸ್ಯೆಯಲ್ಲೂ ಎಲ್ಲರನ್ನು ತೃಪ್ತಿಪಡಿಸುವುದಾಗಲಿಲ್ಲ ಎಂಬುದನ್ನು ಮರೆಯಲಾಗದು. ರಾಮರಾಜ್ಯದಲ್ಲಿ ಕೂಡ ಅಗಸರವನು ಸೀತಾಮಾತೆಯ ಕುರಿತು ತನ್ನದೇ ವ್ಯಾಖ್ಯಾನವನ್ನಿತ್ತನು. ಗಾಂಧಿಜಿಯವರನ್ನು ಲೋಕವೇ ಕೊಂಡಾಡುತ್ತಿದ್ದರೂ ಸಾಮಾನ್ಯ ಮನುಷ್ಯನೊಬ್ಬನ ಧರ್ಮಾಭಿಮಾನದ ಫಲಸ್ವರೂಪವಾಗಿ ಅವರು ಗುಂಡಿನೇಟಿಗೆ ಎದೆಯೊಡ್ಡಿದರು!

ನಾವು ಎಷ್ಟೇ ಒಳ್ಳೆಯ ಕೆಲಸ ಮಾಡಿದರೂ ಜನರು ದೋಷವನ್ನೆತ್ತಿ ತೋರಿಸುವರು. ತಮ್ಮಿಂದ ಆಗದ ಕೆಲಸವನ್ನು ಮಾಡಿ ತೋರಿಸಿದನಲ್ಲ ಎಂಬ ಅಸೂಯೆಯ ಭಾವನೆ ಇದ್ದಿರಬಹುದು. ಹಾಗೆಯೇ ತಾವು ಮಾಡಲಿಲ್ಲವಲ್ಲ ಎಂಬ ಹಿರಿಮೆಯಿಂದ ಸಾಂತ್ವನ ಪಡೆಯಲು ಹೆರವರ ಭರ್ತ್ಸನೆ ನೆರವಾದೀತು. ಟೀಕೆಗಳಿಂದ ನೊಂದುಕೊಂಡು ಒಪ್ಪಿದ ಜನರನ್ನು ಕಂಡು ಸಕ್ಕ ಸಂತೋಷಪಡುವ ಬುದ್ಧಿಯಿಂದಲೂ ಜನರು ಮಾಗ್ಯಾಣಗಳನ್ನು ಸೇಗುಬಹುದು, ಆದರೆ ಸತ್ಯಪ್ರಿಯನೂ ಸ್ವಾತಂತ್ರ್ಯಪ್ರಿಯನೂ ಇವುಗಳಿಂದ ಎದೆಗೆಡಬಾರದು. ಟೀಕೆಯಲ್ಲಿ ಸತ್ಯಾಂಶವಿದೆಯೋ ಇಲ್ಲವೋ ಎಂಬುದನ್ನು ಆತ್ಮಶಕ್ತಿಯ ಬಲದಿಂದ ನ್ಯಾಯ ನಿರ್ಣಯಿಸಿ ಒಳ್ಳೆಯ ಅಂಶವನ್ನಷ್ಟೇ ಗ್ರಹಿಸುವುದು ಬುದ್ಧಿವಂತನ ಲಕ್ಷಣ.

ಟೀಕೆಯಿಂದ ಉದ್ರೇಕಗೊಂಡವರು ಮಯ್ಯಿಗೆ ಮಯ್ಯಿ ತೀರಿಸುವ ಚಟ ತೋರಿಸುವುದುಂಟು. ಇದು ಬಹಳ ಕೆಟ್ಟದ್ದು, ಹೀನ ಮಾರ್ಗ. ಟೀಕೆಯಲ್ಲಿ ಸತ್ಯವೇ ತುಂಬಿದ್ದರೂ ಅದನ್ನು ಅಲಕ್ಷಿಸಿ ಬಿಡುವುದೇ ಯೋಗ್ಯ. ಹೆಜ್ಜೆಯಾದಿತ್ತಲ್ಲದೆ ಮಾತಿಗೆ ಪ್ರತಿಮಾತನಾಡುವುದಲ್ಲ. ತನ್ನ ವಿರೋಧಕರ ವಿರೋಧ ಕುರಿತು ಅಮೇರಿಕದ ಮಾಜಿ ಅಧ್ಯಕ್ಷ ಲಿಂಕನ್ ಹೀಗೆಂದಿದ್ದಾನೆ—

'ನನ್ನ ಕುರಿತು ಎತ್ತಿದ ಆಕ್ಷೇಪಗಳನ್ನೂ, ನನ್ನ ಕಾರ್ಯದ ಲೋಪದೋಷಗಳ ಟೀಕೆಯನ್ನೂ ಕೇಳುತ್ತಾ ಕುಳಿತರೆ ನನಗೆ ಬೇರೆ ಕೆಲಸವೇ ಉಳಿಯದು. ಅವುಗಳಿಗೆ ಉತ್ತರಿಸುತ್ತಾ ಕುಳಿತರೆ ದಿನದ ಇಪ್ಪತ್ತನಾಲ್ಕು ತಾಸು ಸಾಕಾಗದೆ ಹೋದೀತು. ಕೆಲಸವನ್ನು ಎಷ್ಟು ಒಳ್ಳೆಯ ರೀತಿ ಸಾಧ್ಯವೋ ಅಷ್ಟು ಚೆನ್ನಾಗಿ ಮಾಡುತ್ತೇನೆ. ಅದರ ಪರಿಣಾಮ ಕೆಟ್ಟದೇ ಆದಲ್ಲಿ ಆಗ ನಾನು ತುಂಬಾ ಪ್ರಮಾಣಿಕತೆ ಹಾಗೂ ಸರ್ವ ಬಲವನ್ನು ಪ್ರಯೋಗಿಸಿ ಕೆಲಸ ಮಾಡಿದ್ದೇನೆಂದು ಎಷ್ಟು ಸಾಧಿಸಿದರೂ ನೀರಮೇಲಿನ ಹೋಮ! ನನ್ನ ಕೆಲಸದ ಪರಿಣಾಮ ಒಳ್ಳೆಯದಾದರೆ ಇಂದಿನ ಟೀಕೆಗಳಿಗೆ ಬೆಲೆಯೇ ಉಳಿಯುವುದಿಲ್ಲ.'

'ವ. ಯು.'

ಶ್ರೀ ಟಿ. ಎಸ್. ಗೋವಿಂದರಾಯರು,
'ಕೊಡಗು' ಏಜೆಂಟರು,
ವೀರಾಜಪೇಟೆ.

ಕ್ಷಯರೋಗ ನಿವಾರಣೆಗೆ ಸೀಲುಗಳ ಮಾರಾಟ

ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಸಂದೇಶ.

ಹಿಂದೂದೇಶದಲ್ಲಿ ಕ್ಷಯರೋಗದ ನಿವಾರಣೆಯ ಹೋರಾಟವನ್ನು ಮುಂದುವರಿಸಲು ಹಣ ಸಂಗ್ರಹಕ್ಕಾಗಿ ಸೀಲುಗಳ ಮಾರಾಟದ ಏರ್ಪಾಡನ್ನು ಇಂಡಿಯಾ ಕ್ಷಯರೋಗದ ಸಂಘವು ಮಾಡುತ್ತಿದೆ. ನಮ್ಮ ದೇಶದಲ್ಲಿ ಬಹಳ ಕಷ್ಟನಷ್ಟಗಳನ್ನು ಉಂಟುಮಾಡುತ್ತಿರುವ ಈ ರೋಗದ ನಿವಾರಣೆಗೆ ಚಿಕ್ಕದೇ ಆಗಲಿ, ದೊಡ್ಡದೇ ಆಗಲಿ, ವಂತಿಗೆಯನ್ನು ಕೊಡಲು ಸಾಧ್ಯವಿರುವ ಪ್ರತಿಯೊಬ್ಬರೂ ಈ ಅವಕಾಶವನ್ನು ಉಪಯೋಗಿಸಿಕೊಂಡು ಸಹಾಯನೀಡುವರೆಂದು ಆಶಿಸುತ್ತೇನೆ.

ರಾಜಕುಮಾರಿ ಅಮೃತಕೌರವರ ರೇಡಿಯೋ ಭಾಷಣ.

ನಮ್ಮ ದೇಶದಲ್ಲಿ ಮನುಷ್ಯವರ್ಗದಲ್ಲಿ ದೊಡ್ಡ ಸುಂಕವನ್ನು ಎತ್ತುತ್ತಿರುವ ಕ್ಷಯರೋಗವನ್ನು ಹತೋಟಿಯಲ್ಲಿಡಲು ಮಾಡುತ್ತಿರುವ ಪ್ರಯತ್ನಗಳನ್ನು ಕುರಿತು ಪುನಃ ನಿಮಗೆ ಮಾತಾಡಲು ನನಗೆ ಸಂತೋಷವೆನಿಸುತ್ತದೆ.

ಅಕ್ಟೋಬರ್ ೨ ಸಮೀಪಿಸುತ್ತಿದೆ. ಅಂದು ಮಹಾತ್ಮಗಾಂಧಿಜೀಯವರ ಜನ್ಮದಿನ. ಸಂಪೂರ್ಣ ಜನರ ಹಿತಕ್ಕಾಗಿ ತನ್ನ ಜನ್ಮವನ್ನೆಲ್ಲಾ ಧಾರೆ ಎರೆದ ಮಹಾವ್ಯಕ್ತಿಯನ್ನು ಸ್ಮರಿಸುವ ದಿನವದು. ಎಲ್ಲಾ ಅನಾರೋಗ್ಯ ಮತ್ತು ರೋಗ ರುಜಿನೆಗಳು ಈ ಭೂಮಿಯಿಂದ ಸಂಪೂರ್ಣ ಹೋಗಲಾಡಿಸಲ್ಪಡಬೇಕೆಂಬುದು ಅವರ ಸ್ವಪ್ನವಾಗಿತ್ತು. ಈ ಮಹತ್ವದ ದಿನದಲ್ಲಿ ಹೋರಾಡುತ್ತಿರುವವರ ನಿಸ್ವಾರ್ಥ ಸೇವೆಗಾಗಿ ನಾವೆಲ್ಲರೂ ಪುನಃ ಪ್ರತಿಜ್ಞೆ ಮಾಡುವ. ಇದು ಮಹಾತ್ಮಜೀಯವರು ನಮಗೆ ಬಿಟ್ಟಿರುವ ಜನ್ಮಸಿದ್ಧ ಹಕ್ಕು. ಹಿಂದೂಸ್ಥಾನದ ಕ್ಷಯರೋಗದ ಸಂಘವು ತನ್ನ ವಾರ್ಷಿಕ ಸೀಲು ಮಾರಾಟದ ಚಳವಳವನ್ನು ಈ ದಿನ ಪ್ರಾರಂಭಿಸಲು ಬಹು ಯುಕ್ತವಾಗಿ ನಿಶ್ಚಯಿಸಿದೆ.

ಕ್ಷಯರೋಗವು, ನಿಮಗೆ ಗೊತ್ತಿರುವಂತೆ, ಹಿಂದೂಸ್ಥಾನದಲ್ಲಿ ಪ್ರತಿ ವರ್ಷ ಐದು ಲಕ್ಷ ಜನರನ್ನು ಆಹುತಿ ತೆಗೆದುಕೊಳ್ಳುತ್ತಿರುವ ಭಯಂಕರವಾದ ರೋಗ ಮತ್ತು ಅದು ಹೀಗೆಯೇ ಮುಂದುವರಿಯುತ್ತಿರುವಂತೆ [illegible] ಜನರ ಪೈಕಿ ಹೆಚ್ಚಿನವರಿಗೆ ಯೋಗ್ಯ ಉಪಚಾರ ಪಡೆಯುವ ಅನುಕೂಲವಿಲ್ಲ. ಈ ಅಂಶಗಳು ಈ ರೋಗದ ಹಾವಳಿಯನ್ನು ಮತ್ತು [illegible] ಜೀವನಾಶವನ್ನು ಸೂಚಿಸುತ್ತವೆ. ಕ್ಷಯರೋಗದಿಂದುಂಟಾಗುತ್ತಿರುವ ಅನಾಹುತವನ್ನು ಕಡಿಮೆ ಮಾಡಲಿಕ್ಕೆ ತಮ್ಮ ಅಲ್ಪ ಸೇವೆಯನ್ನು ಸಲ್ಲಿಸಲು ಈ ಸೀಲುಗಳ ಮಾರಾಟದ ಏರ್ಪಾಡು ಎಲ್ಲರಿಗೂ ಅವಕಾಶವನ್ನು ಕಲ್ಪಿಸುತ್ತದೆ. ನನ್ನ ಕೋರಿಕೆಯಂತೆ ಮಾಡಿದ ಕಳೆದ ಎರಡು ವರ್ಷಗಳ ಸೀಲು ಮಾರಾಟದ ಚಳವಳವು ಈ ರೋಗದ ಭೀಕರತೆಯನ್ನು ಮತ್ತು ಅದನ್ನು ನಿವಾರಿಸಲು ಮಾಡುತ್ತಿರುವ ಪ್ರಯತ್ನಗಳನ್ನು ಜನತೆಯಲ್ಲಿ ಮನದಟ್ಟು ಮಾಡಲು ಸಹಾಯಮಾಡಿದೆ ಎಂಬುದು ಸಂತೋಷದ ವಿಚಾರ. ಹಿಂದಿನ ವರ್ಷಗಳಲ್ಲಿ ಜಮಾಯಿಸಿದ ಹಣವನ್ನು ಕ್ಷಯರೋಗಕ್ಕೆ ತುತ್ತಾದವರಿಗೆ ಚಿಕಿತ್ಸೆ ನೀಡಲು ಮತ್ತು ಅವರನ್ನು ಪ್ರತ್ಯೇಕಿಸಿಡಲು 'ಕ್ಲಿನಿಕ್ಸ್' ಮತ್ತು ಆಸ್ಪತ್ರೆಗಳನ್ನು ಸ್ಥಾಪಿಸಲೂ, ಕೆಲಸಕ್ಕೆ ಹಿಂತಿರುಗಲು ಯೋಗ್ಯರಾದವರನ್ನು ಪುನರ್ವ್ಯವಸ್ಥೆಗೊಳಿಸಲಿಕ್ಕಾಗಿಯೂ ಮತ್ತು ಅವರ ಸ್ಥಳದಲ್ಲಿಯೇ ಬಡ ರೋಗಿಗಳ ಚಿಕಿತ್ಸೆ ಮತ್ತು ಅವರ ಕುಟುಂಬದ ಪೋಷಣೆಯ ಸಹ ಸಹಾಯಕ್ಕಾಗಿಯೂ ಉಪಯೋಗಿಸಲ್ಪಡುತ್ತಿದೆಯೆಂದು ನಾನು ತಿಳಿಯುತ್ತೇನೆ.

ವರ್ಷಂಪ್ರತಿ ನೂರಾರು ಕ್ಷಯರೋಗಿಗಳು ಸಹಾಯಕ್ಕಾಗಿ ನನ್ನಲ್ಲಿ ಬರುತ್ತಿರುವರು. ನಾನು ಸಾಧ್ಯವಾದಷ್ಟು ಮಟ್ಟಿಗೆ ಸಹಾಯನೀಡಲು ಪ್ರಯತ್ನಿಸಿದರೂ ಕೂಡ ಈ ಸಮಸ್ಯೆಯು ಬಹು ದೊಡ್ಡದಾದುದರಿಂದ ಅದು ಸಮುದ್ರದಲ್ಲಿ ಒಂದು ತೊಟ್ಟಿನಂತಾಗುತ್ತದೆ. ನನ್ನ ಅಥವಾ ನಿಮ್ಮ ವ್ಯಕ್ತಿಗೆ ಗೋಚರವಾಗದಂತೆ ಶಾರೀರಿಕ ನೋವು ಮತ್ತು ಮಾನಸಿಕ ಭೀತಿಯಿಂದ ನರಳುತ್ತಿರುವ ಸಾವಿರಗಟ್ಟಲೆ ಸಹೋದರ ಸಹೋದರಿಯರನ್ನು ಜ್ಞಾಪಿಸಿಕೊಳ್ಳಿರಿ. ಈ ಮಾರಾಟದ ಚಳವಳದ ಬರುವ ೪ ತಿಂಗಳುಗಳಲ್ಲಿ ದೇಶದಲ್ಲಿ ಹಲವು ಹಬ್ಬ ಹುಣ್ಣಿಮೆಗಳಾಗುವವು. ಆಸ್ಪತ್ರೆ ಮತ್ತು ಸೇನಟೋರಿಯಮ್‌ಗಳಲ್ಲಿ ಚಿಕಿತ್ಸೆಗೊಳ್ಳುತ್ತಿರುವ ಸಾವಿರಾರು ಕ್ಷಯರೋಗಿಗಳಿಗೂ ಮತ್ತು ಇವರಿಗಿಂತಲೂ ಹೆಚ್ಚಾಗಿ ಮನೆಗಳಲ್ಲೇ ಇರುವ ಈ ರೋಗಿಗಳಿಗೂ ಈ ಹಬ್ಬ ಹುಣ್ಣಿಮೆಗಳಲ್ಲಿ ಏನೊಂದೂ ಸ್ವಾರಸ್ಯವಿಲ್ಲ. ಅವುಗಳ ಆನಂದವನ್ನು ಅವರಾರೇನೂ ಭಾಗಿಸರು. ಅವರಿಗೆ ಟಿ. ಬಿ. ಸೀಲುಗಳು, ಆನಂದ ಮತ್ತು ಆಶೆಯ ಚಿಹ್ನೆಯಾಗಿ, ತಮ್ಮನ್ನು ಜನತೆಯು ಮರೆತಿಲ್ಲ ಮತ್ತು ತಮ್ಮ ಕಷ್ಟನಿವಾರಣೆಗೆ ಪ್ರಯತ್ನಗಳು ಮಾಡಲ್ಪಡುತ್ತಿವೆಯೆಂದು ತೋರುವವು.

ನನಗೆ ಅಧ್ಯಕ್ಷೆಯಾಗಿರುವ ಭಾಗ್ಯ ದೊರೆತಿರುವ ಇಂಡಿಯಾ ಕ್ಷಯರೋಗದ ಸಂಘದ ಕಾರ್ಯಕಲಾಪಗಳು ಬೆಳೆಯುತ್ತಿವೆ ಮತ್ತು ಈ ರೋಗನಿವಾರಣೆಗೆ ಸಹಾಯನೀಡಲು ಹಿಂದಿನ ವರ್ಷಗಳಿಂತ ಮೇಲಿನ ಗುರಿಯನ್ನು ನಿಶ್ಚಯಿಸಿದೆ. ಸಂಸ್ಥಾನಗಳಲ್ಲಿರುವಂಥ ಅಂದರೆ ನಿಮ್ಮ ನಿಮ್ಮಲ್ಲಿರುವಂಥ ಸಂಘಗಳು ಕ್ಷಯರೋಗಪೀಡಿತರಿಗೆ ಬಂಧು ಮಿತ್ರರಾಗಿರುವಂತೆ ಮಾಡಲು ಪ್ರಯತ್ನಿಸುತ್ತಿದೆ. ಈ ಚಳವಳಿಯಲ್ಲಿ ಹೆಚ್ಚೆಚ್ಚಾಗಿ ಜನರು ಭಾಗವಹಿಸುವದಾಗಿ ಮಾಡಿದ್ದೇ ಆದರೆ ಈ ರೋಗನಿವಾರಣೆಗೆ ನಿಮ್ಮ ಸಂಘವು ಮಾಡುತ್ತಿರುವ ಯತ್ನಗಳನ್ನು ಹೆಚ್ಚಿಸಿದಂತಾಗುವುದು. ಸಾರ್ವಜನಿಕ ಯೋಜನೆಗಳಲ್ಲಿ ಸರಕಾರ ಕಾರ್ಯಕಲಾಪಗಳು ಮಾತ್ರ ಜಯಪ್ರದವಾಗುವವು ಮತ್ತು ಅವು ಇಲ್ಲದೆ ಸಾರ್ವಜನಿಕ ಆರೋಗ್ಯ ಚಟುವಟಿಕೆಗಳ ಜಾರಿ ಸಾಧ್ಯವಾಗುವದಿಲ್ಲ. ಆದುದರಿಂದ ನಿಮ್ಮ ಈ [illegible] ಕ್ಷಯರೋಗ [illegible] ಸಹಕರಿಸಿ ಕ್ಷಯರೋಗ ನಿವಾರಣೆಯಂಥ ಬಹು ಕಷ್ಟಕರವಾದ ಕಾರ್ಯವನ್ನು ಸಫಲಗೊಳಿಸಲು ನೆರವಾಗಿರಿ.

ಕಳೆದ ಎರಡು ವರ್ಷಗಳಲ್ಲಿ ನಮ್ಮ ಜನತೆಯು ಕೊಟ್ಟ ವಿಶೇಷ ಸಹಕಾರಕ್ಕೂ, ಅವರ ಸತತವಾದ ಸದ್ಭಾವನೆಗೂ ನಾನು ತುಂಬಾ ಋಣಿಯಾಗಿರುವೆನು. ಈ ಕಾಯಿಲೆಯಿಂದ ನರಳುತ್ತಿರುವವರಿಗೆ ಆರೋಗ್ಯವನ್ನು ಪುನಹ ಒದಗಿಸಿಕೊಟ್ಟು ಸಮಾಜಕ್ಕೆ ಪ್ರಯೋಜಕರೂ, ಗೌರವಯುತರೂ ಆದ ಸ್ಥಾನವನ್ನು ಕಲ್ಪಿಸಿಕೊಡುವ ಈ ಉತ್ತಮ ಕಾರ್ಯದಲ್ಲಿ ತೊಡಗಿರುವ ಡಾಕ್ಟರರಿಗೂ, ನರ್ಸುಗಳಿಗೂ, ಆರೋಗ್ಯ ಸಂದರ್ಶಕರಿಗೂ ಮತ್ತು ಸಾಮಾಜಿಕ ಕೆಲಸಗಾರರಿಗೂ ಸಹ ನಾನು ಋಣಿಯಾಗಿರುವೆನು. ಪ್ರತಿ ಸ್ತ್ರೀ ಪುರುಷ ವ್ಯಕ್ತಿಗಳೂ ಈ ಪ್ರಯತ್ನದಲ್ಲಿ ಸಹಕಾರ ನೀಡಬೇಕೆಂದು ನಾನು ಅಪೇಕ್ಷಿಸುವೆನು. [illegible] ಬೇಕು. [illegible] ಉದಾಹರಣೆಗೆ ಸ್ಥಳೀಯ ಅಧಿಕೃತರು, ಗ್ರಾಮಾಂತರ ಕೂಟಗಳು, ಸಾರ್ವಜನಿಕ ಸಂಸ್ಥೆಗಳು ಈ ಪ್ರಯತ್ನದಲ್ಲಿ ತುಂಬಾ ಸಹಾಯ ಮಾಡಬಹುದು. [illegible] ರೋಗಗಳ [illegible] ವ್ಯಕ್ತಿಗೂ, [illegible] ಇದನ್ನು [illegible] ಪ್ರಯತ್ನಬೇಕು.

ಅಧಿಕೃತವಾಗಿ ನಾಳೆಯಿಂದ ಪ್ರಾರಂಭವಾಗುವ ಈ ಚಳವಳವನ್ನು ನಿಮಗೆ ಒಪ್ಪಿಸುವಾಗ ನಮ್ಮ ದೇಶದ ಬೇಡಿಕೆಗಳು ಹಲವಿವೆ. ಇತರ ಜಟಿಲ ಸಮಸ್ಯೆಗಳು ಇವೆಯೆಂಬುದನ್ನು ನಾನು ಬಲ್ಲೆ. ದೇಶದ ಜನಜೀವನ ಮಟ್ಟವನ್ನು ಮೇಲೆತ್ತಲು ದೊಡ್ಡ ಯೋಜನೆಗಳಿವೆ. ಉತ್ಪಾದನೆಯನ್ನು ಹೆಚ್ಚಿಸಲು ಯೋಜನೆಗಳಿವೆ. ಸಾಮಾಜಿಕ ವಿಕಾಸಯೋಜನೆಗಳಿವೆ. ಕ್ಷಯರೋಗವಲ್ಲದೆ ಇತರರೋಗಗಳನ್ನು ತಡೆಗಟ್ಟಲು ಬೇರೆ ಯೋಜನೆಗಳಿವೆ. ಇವೆಲ್ಲವೂ ಕ್ಷಯರೋಗದ ಸಮಸ್ಯೆಯನ್ನೂ ನಿವಾರಿಸಲು ಕಡೆಗೆ ಸಹಾಯಕವಾಗುವವು. ಜನತೆಯ ಆರ್ಥಿಕ ಸ್ಥಿತಿಯ ಅಭಿವೃದ್ಧಿಯು ಕ್ಷಯರೋಗದ ಮರಣಸಂಖ್ಯೆಯನ್ನು ಒಂದು ನಿಶ್ಚಿತ ಪರಿಮಾಣದಲ್ಲಿ ತಗ್ಗಿಸಬಹುದು. ಆದರೆ ಶೀಘ್ರ ಭವಿಷ್ಯದಲ್ಲಿ ಕ್ಷಯರೋಗವನ್ನು ಹತೋಟಿಯಲ್ಲಿ [illegible] ನಿಶ್ಚಿತ [illegible] ರೋಗ [illegible] ಇವೆ. [illegible] ಈ ರೋಗವನ್ನು ನಿವಾರಿಸಲು ಕೈಗೊಂಡಿರುವ ನಿಶ್ಚಿತಯೋಜನೆಗೆ ನಾವೆಲ್ಲರೂ ಸಹಾಯ [illegible] ಆವಶ್ಯಕವಾಗಿದೆ. ಈ ಯೋಜನೆಯು [illegible] ನಿಮ್ಮ [illegible] ವಾಸ್ತವವಾಗಿ ಇದು [illegible] ಕರೆಯಾಗಿದೆ. ಈ [illegible] ನನಗೆ ನಂಬಿಕೆ ಇದೆ.

THE JUBILEE INSURANCE CO., Ltd.

One of the very few in the feild of Insurance that has been declaring BONUS to its policy holders from its very inception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-C., Richmand Road, Bangalore.

Our Chief Agents:—THE ORIENTAL ENTERPRISES, BANGALORE 1.

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೆದಾರರಿಗೆ ಸರಿಯಾದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:—ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,
41-C, ರಿಚ್‌ಮಂಡ್ ರೋಡ್, ಬೆಂಗಳೂರು 1.

27

ಕೊಡಗು

ತಾ ೩-೧೦-೧೯೫೨ನೇ ಶುಕ್ರವಾರ

ಗಾಂಧಿ ಜಯಂತಿ.

ಪೂಜ್ಯ ಗಾಂಧೀಜೀಯವರು ಜನಿಸಿದ ಪುಣ್ಯ ದಿನವಿದು. ಈ ದಿನವನ್ನು 'ಗಾಂಧಿ ಜಯಂತಿ' ಎಂದು ಇಡೀ ಭರತಖಂಡದಲ್ಲಿ ಮಾತ್ರವಲ್ಲ ಪ್ರಪಂಚದ ಹಲವು ಭಾಗಗಳಲ್ಲಿ ಆಚರಿಸುತ್ತಾರೆ. ಹೀಗೆ ಈ ಮಹಾಪುರುಷರನ್ನು ಇಡೀ ಜಗತ್ತೇ ಸನ್ಮಾನಿಸಲು ಮುಖ್ಯ ಕಾರಣವೆಂದರೆ-ಗಾಂಧೀಜಿಯವರ ಜನ್ಮಗುರಿಯು ಜಗತ್ತಿನ ಶಾಂತಿ. ಇವರಂತೆಯೇ ಶಾಂತಿ ಬಯಸಿದ ಮಹಾತ್ಮರು ಇನ್ನೂ ಕೆಲವರಿರಬಹುದು ಆದರೆ ಇವರ ಶಾಂತಿ ಸಾಧನೆಯ ದಾರಿಯಾದರೂ ಅಹಿಂಸಾ ತತ್ವದ್ದಾಗಿದೆ. ಇತರರದು ವಾಡಿಕೆ ರೀತಿಯ ಹಿಂಸಾತತ್ವದ್ದು. ಜಗತ್ತಿನ ದುರ್ದೆಶೆಯಿಂದ ಮಹಾತ್ಮರು ತನ್ನ ಈ ಅಮೋಘವಾದ ಗುರಿಯನ್ನು ತಲಪುವ ಮುಂಚೆಯೇ ಪ್ರಪಂಚವನ್ನು ಅಗಲಬೇಕಾಯಿತು. ಅವರನ್ನು ಕಳಕೊಂಡ ಬಡ ಜಗತ್ತು ಇಂದು ಶಾಂತಿಯನ್ನು ಆಶಿಸುತ್ತಿದ್ದರೂ, ನಿರೀಕ್ಷಿಸುತ್ತಿದ್ದರೂ ಅದನ್ನು ಸಮೀಪಿಸುತ್ತಿಲ್ಲ. ಅದರ ಕಡೆ ಒಂದು ಹೆಜ್ಜೆ ಕೂಡ ಮುಂದು ಹಾಕಿಲ್ಲ. ಬದಲು ಪ್ರಧಾನ ಪಶ್ಚಿಮ ಜನಾಂಗಗಳು ಯುದ್ಧದ ತಯಾರಿಯಲ್ಲಿಯೇ ಮಗ್ನವಾಗಿವೆ ಯಾಕೆ, ಕೊರಿಯಾದಲ್ಲಿ ಯುದ್ಧವು ನಡೆಯುತ್ತಲೇ ಇದೆ ಅಂದ ಮೇಲೆ ಮಹಾತ್ಮರ ಅಹಿಂಸಾ ತತ್ವದಿಂದಲ್ಲದೆ ಶಾಂತಿಸ್ಥಾಪನೆಗೆ ಬೇರೆ ದಾರಿ ಇಲ್ಲವೆಂದು ಜನತೆಯು ಇನ್ನಾದರೂ ಮನವರಿಕೆ ಮಾಡಿಕೊಂಡು, ರಕ್ತಪಾತವಿಲ್ಲದ ಅಹಿಂಸಾ ಪಥವನ್ನೇ ಸಾಧಿಸಲು ಇಂದು ಪುನಹ ಪ್ರತಿಜ್ಞೆ ಮಾಡಬೇಕಾಗಿದೆ.

ಜಾಗತಿಕ ಶಾಂತಿ ಸ್ಥಾಪನೆಯ ಪ್ರಯತ್ನದಲ್ಲಿ ಮಹಾತ್ಮಾಜೀಯವರು ತನ್ನ ಎರಡನೇ ಗುರಿಯನ್ನು ಅಂದರೆ ಭಾರತ ಭೂಮಿಗೆ ಸ್ವಾತಂತ್ರ್ಯ ಗಳಿಸುವುದನ್ನು ಅಹಿಂಸಾ ರೀತಿಯಿಂದಲೇ ಸಾಧಿಸಿದರು ಈ ಸಾಧನೆಯಲ್ಲಿ ಅವರು ಜನತೆಯನ್ನು ಅಹಿಂಸಾ ತತ್ವ, ಸತ್ಯ, ಪ್ರಮಾಣಿಕತನ, ನಿಸ್ವಾರ್ಥತೆ, ಸ್ವಾರ್ಥರಹಿತ ಜನ ಸೇವೆ ಮೊದಲಾದ ತತ್ವಗಳಲ್ಲಿಯೂ, ಅಸ್ಪೃಶ್ಯತಾ ನಿವಾರಣೆ, ಪಾನ ನಿರೋಧ, ಖಾದಿ ಧಾರಣೆ ಗುಡಿ ಕೈಗಾರಿಕೆ, ಸಹಕಾರಿ ಚಳವಳಿ ಮುಂತಾದ ಕಾರ್ಯಕ್ರಮಗಳಲ್ಲಿಯೂ ತರಬೇತು ಮಾಡಿದರು. ಈ ತರಬೇತಿನ ಫಲಿತಾಂಶವಾಗಿ ಜನತೆಯಲ್ಲಿ ಉಂಟಾದ ತ್ಯಾಗ ಬುದ್ಧಿ ಮತ್ತು ದೇಶ ಪ್ರೇಮವು ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ಸಂಪಾದಿಸಿತು. ಆದರೆ ಸ್ವಾತಂತ್ರ್ಯವು ದೊರೆತ ಕೆಲವು ಸಮಯದಲ್ಲೇ ಅದನ್ನು ಸಾಧಿಸಿ ಕೊಟ್ಟ ಮಹಾತ್ಮರು ಕಣ್ಮರೆಯಾದರು ಆದರೂ ಕೂಡ ಅವರು ತಯಾರು ಮಾಡಿದ್ದ ಜನಾಂಗವು, ದೊರೆತ ಸ್ವರಾಜ್ಯವನ್ನು ಉತ್ತಮ ರೀತಿಯಲ್ಲಿ ನಡೆಸುವರೆಂದು ನಂಬಲಾಗಿತ್ತು. ರಾಮರಾಜ್ಯವೇ ಪುನಹ ಇಂಡಿಯಾಕ್ಕೆ ಬರುವುದೆಂದು ಸಾಮಾನ್ಯ ಜನತೆಯು ಆಶಿಸಿತ್ತು. ಆದರೆ ಪರಿಣಾಮವು ಇಂದು ಹೇಗಿದೆಯೆಂಬುದು ಪ್ರತಿಯೊಬ್ಬನ ಅನುಭವದಲ್ಲಿರುವ ವಿಷಯವಾಗಿದೆ

ಮಹಾತ್ಮರ ತತ್ವಗಳನ್ನು ಸಂಪೂರ್ಣವಾಗಿ ಹಿಂಬಾಲಿಸಿ ನಡೆಯುವಂಥ ಅವರ ಶಿಷ್ಯರ ಸಂಖ್ಯೆಯು ದಿನೇ ದಿನೇ ಕಡಿಮೆಯಾಗುತ್ತಿದೆ. ಮೊನ್ನೆ ತಾನೇ ಕಳಕೊಂಡ ಶ್ರೀ. ಮಶ್ರುವಾಲರು ಅಂಥವರಲ್ಲಿ ಒಬ್ಬರಾಗಿದ್ದರು. ಉಳಿದವರಲ್ಲಿ ಶ್ರೀ ವಿನೋಬ ಭಾವೆಯವರು ಪ್ರಮುಖರಾಗಿರುವರು. ನಮ್ಮ ಜೀವನದ ಯಾವ ಸಮಸ್ಯೆಯನ್ನೇ ಆಗಲೀ ಅಹಿಂಸಾ ರೀತಿಯಿಂದಲೇ ಅದನ್ನು ಸಾಧಿಸಬಹುದೆಂದು ಇವರು ಒತ್ತಿ ಹೇಳುತ್ತಿದ್ದಾರೆ. ಇಂದು ಅನೇಕರು ಮಹಾತ್ಮರ ತತ್ವಗಳಿಗೆ ಮತ್ತು ಬೋಧನೆಗಳಿಗೆ ಬೆನ್ನು ಹಾಕಿ, ತಾವು ಕೈಕೊಳ್ಳುವ ಕಾರ್ಯ ಸಾಧನೆಗಾಗಿ ಮಾತ್ರ ಗಾಂಧೀಜಿಯವರ ಹೆಸರನ್ನು ಉಪಯೋಗಿಸುತ್ತಿದ್ದಾರೆ ಸತ್ಯ ಮತ್ತು ಅಹಿಂಸೆಯೆಂಬುದು ಈಗ ಅವರಿಗೆ ಸ್ವಪ್ನದ ಮಾತಾಗಿ ಹೋಗಿದೆ. ಅಧಿಕಾರ ಸಾಧನೆ, ದ್ರವ್ಯಾರ್ಜನೆ ಇವೇ ಅವರ ಗುರಿಯಾಗಿ ಪರಿಣಮಿಸುತ್ತಿದೆ. ಇವುಗಳಿಂದ ಮಹಾತ್ಮರ ಅಮೂಲ್ಯವಾದ ತತ್ವ ಬೋಧೆಗಳ ಕೊಲೆಯಾಗುತ್ತಿವೆಯೆಂಬ ದುಃಖದ ಚಿನ್ಹೆಗಳು ಕಂಡು ಬರುತ್ತಿವೆ.

ಈ ಪರಿಸ್ಥಿತಿಯಲ್ಲಿ ನಾವು ಯಾವ ರೀತಿಯಲ್ಲಿ "ಗಾಂಧಿ ಜಯಂತಿ'ಯನ್ನು ಆಚರಿಸಬೇಕೆಂದು ಪ್ರತಿಯೊಬ್ಬ ವ್ಯಕ್ತಿಯೂ ಚೆನ್ನಾಗಿ ಆಲೋಚಿಸಬೇಕಾಗಿದೆ ನಮ್ಮ ದೃಷ್ಟಿಯನ್ನು ನಮ್ಮ ಅಂತರಾತ್ಮನ ಕಡೆಗೆ ತಿರುಗಿಸಿ, ನಮ್ಮ ಮುಂದಿನ ಕರ್ತವ್ಯವೇನೆಂಬುದನ್ನು ನಿಶ್ಚಯಿಸಬೇಕು. ಇಂದು ಬರೇ ಗಾಂಧಿಜಿಯವರ ಹೆಸರಿಗೆ ಜಯಕಾರ ಮಾಡುವುದರಲ್ಲಿ ಅರ್ಥವೇನಿದೆ? ಮಹಾತ್ಮರು ಯಾವ ದಿನ ಅಸ್ಪೃಶ್ಯತಾ ನಿವಾರಣೆಗಾಗಿ ತಮ್ಮ ಜೀವನನ್ನು ಜೂಜಿಗೆ ಹೂಡಿದರೋ ಮತ್ತು ಯಾವ ದಿನ ಹಿಂದೂ ಮುಸ್ಲಿಂ ಐಕ್ಯತೆಗಾಗಿ, ಸರ್ವ ಧರ್ಮ, ಸರ್ವ ಪಂಥ ಮತ್ತು ಸರ್ವ ಜಾತಿಗಳ ಏಕತೆಗಾಗಿ ತನ್ನ ಪ್ರಾಣವನ್ನೇ ಆಹುತಿ ಇತ್ತರೋ ಅಂದೇ ಅವರಿಗೆ ಸಂಪೂರ್ಣ ಜಯ ಉಂಟಾಗಿದೆ. ನಾವು ನಮ್ಮ ಹೃದಯದಲ್ಲಿ, ನಮ್ಮ ಜೀವನದ ದೃಷ್ಟಿಯಲ್ಲಿ ಮತ್ತು ಪ್ರತಿನಿತ್ಯದ ನಮ್ಮ ಕಾರ್ಯ ಕಲಾಪಗಳಲ್ಲಿ ಗಾಂಧೀ ತತ್ವದ ವಿಜಯವನ್ನು ನೋಡಿದರೆ ಮಾತ್ರ ನಾವು 'ಗಾಂಧೀಜೀ ಕೀ ಜೈ' ಎಂತ ಹೇಳಲು ಯೋಗ್ಯರಾಗುತ್ತೇವೆ.

ಸಾಮೂಜಿಕ ವಿಕಾಸ ಯೋಜನೆ, ಟಿ-ಬಿ. ಸೀಲುಗಳ ಮಾರಾಟ ಮೊದಲಾದ ಪ್ರಾಮುಖ್ಯ ಕಾರ್ಯಗಳು 'ಗಾಂಧಿ ಜಯಂತಿ' ದಿನ ಪ್ರಾರಂಭಿಸಲ್ಪಡುತ್ತಿವೆ ಪ್ರಾಮುಖ್ಯತೆಯ ಮಟ್ಟಿಗೆ ಇವು ಯೋಗ್ಯವೆ. ಆದರೆ ಈ ಕಾರ್ಯಕಲಾಪಗಳಲ್ಲಿ ಗಾಂಧೀಜೀಯವರ ತತ್ವಗಳ ಪ್ರಭಾವವು ಸಂಪೂರ್ಣವಾಗಿ ಬೀಳುವಂತೆ ಮಾಡದಿದ್ದರೆ ಇದನ್ನು ಇಂದು ಪ್ರಾರಂಭಿಸಿದ್ದು ಉಚಿತವೋ ಎಂಬ ಸಂಶಯ ಹುಟ್ಟಬಹುದು. ಹೇಗೂ ಈ ಜಯಂತಿಯನ್ನು ಆಚರಿಸುವವರೆಲ್ಲರೂ ತಮ್ಮ ಮನಸಿನಲ್ಲಿರುವ ಕೊಳಕನ್ನೆಲ್ಲಾ ತೊಳೆದು, ಪೂಜ್ಯ ಗಾಂಧೀಜೀಯವರಿಗೆ ಸಂತೋಷವಾಗಲೆನಿಸಿ, ಅವರ ತತ್ವಗಳನ್ನು ಆಚರಿಸುವಂತೆ ಪುನಹ ಇಂದು ಪ್ರತಿಜ್ಞೆಯನ್ನು ಮಾಡುವ.

ವರ್ತಮಾನ.

ಗಾಂಧಿ ಜಯಂತಿಯು ದೇಶದ ಹಲವು ಭಾಗಗಳಲ್ಲಿ ಈ ತಾ. ೨ರಲ್ಲಿ ನಡಿಸಲ್ಪಟ್ಟಿತು

ಗುಹ್ಯ ಅಗಸ್ತ್ಯೇಶ್ವರ ಮಹಾದೇವರ ಉತ್ಸವವು ಈ ತಾ ೧೯ ರಲ್ಲಿ ಪ್ರಾರಂಭವಾಗಿ, ತಾ. ೧೮ ನೇ ಶನಿವಾರ ಗುಹ್ಯ ತೀರ್ಥ ಸ್ನಾನವು ನಡೆಯುವದೆಂದು ತಿಳಿಯಬರುತ್ತದೆ.

ವೀರಾಜಪೇಟೆಯಲ್ಲಿ ಅಸಿಸ್ಟೆಂಟ್ ರೇಶನಿಂಗ್ ಆಫೀಸರಾಗಿದ್ದ ಶ್ರೀ ಮಂದೇಪಂಡ ಕಾಳಪ್ಪನವರು ಅಬ್ಕಾರಿ ಇನ್‌ಸ್ಪೆಕ್ಟರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿಯ ಬರುತ್ತದೆ.

ಮಡಿಕೇರಿಯಲ್ಲಿ ಈ ವರ್ಷ ಇಂದಿನ ವರೆಗೆ ೯೮ ಇಂಚು ೭ ಸೆಂಟು ಮಳೆಯಾಗಿದೆ. ಕಳೆದ ವರ್ಷ ಇದೇ ಸಮಯದಲ್ಲಿ ೧೧೩ ಇಂಚು ೭ ಸೆಂಟು ಮಳೆ ಬಿದ್ದಿತ್ತು. ಕಳೆದ ತಾ. ೨೭ರಿಂದ ಇಂದಿನ ವರೆಗೆ ೨ ಇಂಚು ೮೦ ಸೆಂಟು ಮಳೆಯಾಗಿದೆ.

ವೀರಾಜಪೇಟೆ ಮುನ್ಸಿಪಲ್ ಕಮಿಟಿಯ ಅಧ್ಯಕ್ಷರಾಗಿ ಶ್ರೀ ಎಸ್ ಎಸ್. ರಾಮಮೂರ್ತಿಯವರೂ ಮತ್ತು ಉಪಾಧ್ಯಕ್ಷರಾಗಿ ಜ ಅಬ್ದುಲ್ ರಹಮಾನ್‌ರವರೂ ಆರಿಸಲ್ಪಟ್ಟಿರುವರೆಂದು ತಿಳಿಯುತ್ತೇವೆ.

ಕೊಡಗಿನ ಕಾಫಿತೋಟಗಳ ಕೆಲಸಗಾರರ ಕುಟುಂಬಗಳ ಆದಾಯ ವೆಚ್ಚದ ಆರ್ಥಿಕ ಪರಿಶೋಧನಾ ಆಫೀಸರಾಗಿ ಶ್ರೀ. ಕನ್ನಂಡ ಪೊನ್ನಪ್ಪನವರನ್ನು ಇಂಡಿಯಾ ಸರ್ಕಾರದ ಲೇಬರ್ ಇಲಾಖೆಯವರು ಕಳೆದ ತಾ ೨೨ರಿಂದ ನೇಮಿಸಿರುವರು.

ಉತ್ತರ ಕೊಡಗಿನಲ್ಲಿ ಜಾರಿಯಲ್ಲಿ ತರಲಿರುವ ಸಮೂಹಿಕ ವಿಕಾಸ ಯೋಜನೆಯ ಪ್ರಾರಂಭೋತ್ಸವವು ಈ ತಾ. ೨ರಲ್ಲಿ ಸೋಮವಾರಪೇಟೆ ಹೈಸ್ಕೂಲಿನ ಹಾಲ್‌ನಲ್ಲಿ ಚೀಫ್ ಕಮಿಷನರಾದ ಲಿ ಕ. ಬೇಡಿಯವರ ಅಧ್ಯಕ್ಷತೆಯಲ್ಲಿ ನಡಿಸಲ್ಪಟ್ಟಿತು.

ಕಳೆದ ಒಂದು ವಾರದಲ್ಲಿ ದೇಶದ ಹಲವು ಭಾಗಗಳಿಗೆ ಸಾಧಾರಣ ಮಟ್ಟಿಗೆ ಮಳೆಯು ಬಿದ್ದು ಹೆಚ್ಚಿನ ಭತ್ತದ ಗದ್ದೆಗಳಿಗೆ ತಕ್ಕ ಮಟ್ಟಿಗೆ ನೀರಾಗಿದೆಯೆಂದೂ, ಆದರೂ ಬಹುಮಟ್ಟಿಗೆ ಒಣಗಿ ಹೋಗಿದ್ದ ಗದ್ದೆಗಳಿಗೆ ಸಾಕಷ್ಟು ನೀರು ತುಂಬಿಲ್ಲವೆಂದೂ ತಿಳಿಯ ಬರುತ್ತದೆ.

ದಸರಾ ಹಬ್ಬವು ಕಳೆದ ತಾ. ೨೮ನೇ ಆದಿತ್ಯವಾರ ಮಡಿಕೇರಿಯಲ್ಲಿ ನಾಲ್ಕು ತೇರುಗಳ ಮೆರವಣಿಗೆಯಿಂದ ಬಹು ವಿಜೃಂಭಣೆಯಿಂದ ನಡಿಸಲ್ಪಟ್ಟಿತು. ಮೆರವಣಿಗೆಯ ಪ್ರಾರಂಭದಲ್ಲಿ ಜೋರಾಗಿ ಮಳೆ ಬಿದ್ದು ಸ್ವಲ್ಪ ಅನಾನುಕೂಲವಾಯಿತು.

ದಕ್ಷಿಣ ಕನ್ನಡದ ಕೊಡಗು ಸಂಘದವರು ಕಳೆದ ತಾ. ೭ರಲ್ಲಿ ಕೈಲ್‌ಮುಹೂರ್ತ ಹಬ್ಬವನ್ನು ಮಂಗಳೂರಿನಲ್ಲಿ ಬಹು ವಿಜೃಂಭಣೆಯಿಂದ ನಡಿಸಿದರೆಂದೂ, ಮೀಟಿಂಗು, ಸಂಗೀತ ಕಚೇರಿ ಮತ್ತು ಚಹಾ ಕೂಟವೂ ಇದ್ದವೆಂದೂ ತಿಳಿಯುತ್ತೇವೆ.

ಕೊಡಗು ವ್ಯವಸಾಯ ಇಲಾಖೆಯಲ್ಲಿರುವ ಉಪಯೋಗಕ್ಕೆ ಬಾರದ ಹಲವು ವ್ಯವಸಾಯ ಹತ್ಯಾರುಗಳು, ಸ್ಪ್ರೇಯರ್, ಹೋಸ್ ಮೊದಲಾದವು ಈ ತಾ. ೨೮ ರಲ್ಲಿ ಸದರಿ ಆಫೀಸಿನ ಎದುರು ಗಡೆಯಲ್ಲಿ ಪಬ್ಲಿಕ್ ಹರಾಜು ಮಾಡಲ್ಪಡುವವೆಂದು ತಿಳಿಯಬರುತ್ತದೆ.

ಇಂಡ್ಯನ್ ಕಂಪೆನೀಸ್ ಆಕ್ಟ್ 1913ರ ಸಂಬಂಧ ಮತ್ತು ಜಯಹಿಂದ್ ಟಾಕೀಸ್, ಸೋಮವಾರಪೇಟೆ.

ತಾರೀಕು 1-10-1952ರಲ್ಲು ಜಯಹಿಂದ್ ಟಾಕೀಸ್ ಕಂಪೆನಿಯ ಸ್ಪೆಷ್ಯಲ್ ಮೀಟಿಂಗನ್ನು ಸೋಮವಾರಪೇಟೆ ಸಹಕಾರ ಭವನದಲ್ಲಿ ನಡೆಸಲಾಗಿ ಈ ಕೆಳಗಿನ ಠರಾವುಗಳು ಪಾಸಾದವು.

1. ತಾ 14-8-52ರಲ್ಲು ನಡೆಸಿದ ಡೈರೆಕ್ಟರುಗಳ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

2. ಕಂಪೆನಿಯ ಆಡಿಟರು ತಯಾರಿಸಿದ ಬ್ಯಾಲೆನ್ಸ್ ಶೀಟನ್ನು ಓದಿ ಒಪ್ಪಲಾಯಿತು.

3. ಈ ಕಂಪೆನಿಯ ಸ್ವತ್ತುಗಳನ್ನು ಬೇರೆಯವರಿಗೆ ಮಾರಾಟ ಮಾಡಲು ಒಪ್ಪಂದ ಮಾಡಿ ಈ ಸಂಬಂಧ ಡೈರೆಕ್ಟರುಗಳು ಮಾಡಿರುವ ಎಲ್ಲಾ ಏರ್ಪಾಡುಗಳನ್ನು ಒಪ್ಪಿ, ಕಂಪೆನಿಯನ್ನು ಲಿಕ್ವಿಡೇಟ್ ಮಾಡಬೇಕೆಂದೂ, ಈ ಬಗ್ಗೆ ಶ್ರೀ ಕೆ. ಮೊಗಪ್ಪನವರನ್ನು ಕಸ್ಟೋಡಿಯನರನ್ನಾಗಿ ಮಾಡಬೇಕೆಂದೂ, ಅವರಿಗೆ 100/- ರೂ. ಫೀಸು ಕೊಡಬಹುದೆಂದೂ ಸರ್ವಸಮ್ಮತದಿಂದ ಠರಾವು ಮಂಜೂರಾಯಿತು.

ಕೆ. ಮೊಗಪ್ಪ,
ಸೋಮವಾರಪೇಟೆ, ಪ್ರೆಸಿಡೆಂಟ್ ಮತ್ತು
ತಾ. 2-10-52. ಚೇರ್‌ಮ್ಯಾನ್.

ಕಾಣೆಯಾಗಿದ್ದಾನೆ.

ಕರಣಂಗೇರಿ ಗ್ರಾಮದ ಶ್ರೀ ಪಿ. ಜೆ. ಫೈಲಿಯವರ ಹದಿನಾಲ್ಕು ವರ್ಷ ಪ್ರಾಯದ ಪಿ. ಪಿ. ಲೂಯಿಸ್ ಎಂಬ ಹೆಸರಿನ ಹುಡುಗನು ತಾ. 27-9-52ರಿಂದ ಕಾಣೆಯಾಗಿದ್ದಾನೆ. ನಾಲ್ಕು ಅಡಿ ಎತ್ತರದ, ಬಿಳುಪಾಗಿರುವ ಇವನನ್ನು ಮಹನೀಯರು ಯಾರಾದರೂ ಪತ್ತೆಹಚ್ಚಿ ಈ ಕೆಳಗಿನ ವಿಳಾಸದವರಿಗೆ ತಿಳಿಸಿದರೆ ಐದು ರೂಪಾಯಿ ಬಹುಮಾನ ಕೊಡಲಾಗುವುದು.

ಮೇನೇಜರ್,
ಮರೀನ ಟೆಯರಾ ವರ್ಕ್ಸ್,
ಮಡಿಕೇರಿ.

—೦೦೦—

ಭಾರತ ಸರಕಾರದ ಸುದ್ದಿ ಚಿತ್ರಗಳ ನ್ನಿಟ್ಟಿನ ಮುಂಬಾಯಿ ಯ ಮಧ್ಯಭಾಗದಲ್ಲಿರುವ ಚಿತ್ರ ಪ್ರಯೋಗ ಮಂದಿರಕ್ಕೆ ಸೆಪ್ಟ ದಿನಾಂಕ ಬೆಂಕಿ ಹತ್ತಿ ಸುಮಾರು ಗಲಕ್ಷ ರೂಪಾಯಿ ಬೆಲೆ ಬಾಳುವ ಚಿತ್ರಗಳು ಸುಟ್ಟು ಭಸ್ಮವಾಗಿ ಹೋದವು.

ಭಾರತದಲ್ಲಿ ೧೯೫೧-೫೬ರಲ್ಲಿ ಅಭಿವೃದ್ಧಿ ಯೋಜನೆಗಳಿಗಾಗಿ ವೆಚ್ಚಮಾಡಿದ ಹಣವು ೩೦೬೯ ಕೋಟಿ ರೂ. ಗಳಷ್ಟಾಗಿದೆಯೆಂದು ಅಧಿಕೃತ ವರ್ಗಗಳಿಂದ ತಿಳಿದು ಬಂದಿದೆ.

—೦೦೦—

ಓದುಗರ ಓಲೆಗಳು

ಜಾತಿ ಮತ ಭೇದವಿಲ್ಲ.

ಈ ತಾ. ೧೪ರಲ್ಲಿ ಭಾಗಮಂಡಲ ಪಟೇಲರ ಭವನದಲ್ಲಿ ಹೈಲು ಮಹೋತ್ಸವ ಹಬ್ಬದ ಆಚರಣೆಯು ಬಹು ವಿಜೃಂಭಣೆಯಿಂದ ನೆರವೇರಿತು. ಇಲ್ಲಿಯ ನೆರೆಹೊರೆಗ್ರಾಮಗಳಾದ ಸಿಂಗತ್ತೂರು, ಕೋಂದಚೇರಿ, ತಾವೂರು, ಚೇರಂಗಾಲ ತಣ್ಣಿಮಾನಿ ಮತ್ತು ಭಾಗಮಂಡಲ ಪುರನಿವಾಸಿಗಳ ಒಮ್ಮತದಿಂದ ಜಾತೀಯತೆಯಿಲ್ಲದೆ ಅನ್ಯೋನ್ಯತೆಯಿಂದ ನೇರ ಮೆರವಣಿಗೆ, ಭಾಷಣ ಮತ್ತು ಭೋಜನಗಳಿಂದ ಪರಿಸಮಾಪ್ತಿಯಾಯಿತು. ಈ ಸಮಿತಿಯ ಪ್ರೆಸಿಡೆಂಟರಾದ ಶ್ರೀ ಡಿ ಬೋಜಪ್ಪ, ಮತ್ತು ಸೆಕ್ರೆಟರಿ ಶ್ರೀ ಎನ್. ಮುತ್ತಣ್ಣನವರುಗಳು ಅತಿಥಿಗಳನ್ನು ಸ್ವಾಗತಿಸಿ ಗೌರವವಿತ್ತರು.

ಐಕ್ಯತೆ, ಸಹೋದರತೆಯಿಂದ ನಡೆದು ಕೊಂಡು ದೇಶದಲ್ಲಿ ಶಾಂತಿಯನ್ನು ಕಾಪಾಡಬೇಕೆಂದೂ, ನಾವೆಲ್ಲರೂ ದೇಶಪ್ರೇಮಿಗಳಾಗಿದ್ದು ಕೊಡಗಿನ ಭವಿಷ್ಯವನ್ನು ಸುಗಮಗೊಳಿಸಲು ಯತ್ನಿಸಬೇಕೆಂದು ವಿಚಾರವಾಗಿ ಸೇರಿದ್ದ ಕೆಲವರು ಬೋಧಪ್ರದವಾದ ಭಾಷಣವನ್ನು ಮಾಡಿದರು. ಆ ದಿನ ಅಧಿಕಾರಿಯಿಂದ ರೈತನ ವರೆಗೂ; ಸಾಹುಕಾರನಿಂದ ಕೂಲಿಗಾರನ ವರೆಗೂ, ಬ್ರಾಹ್ಮಣನಿಂದ ಹರಿಜನರ ವರೆಗೂ ಆಮಂತ್ರಿಸಲ್ಪಟ್ಟು ಸಮಾನತೆಯಿಂದ ಗೌರವಿಸಲ್ಪಟ್ಟ ಆದರಣೆಯನ್ನು ತೋರಿಸಿದ್ದ ಇಂದಿನ ಈ ಸಭೆಯ ವೈಶಿಷ್ಟ್ಯ.

ಹಾಜರಿದ್ದವ.

ಇದು ಗ್ರಾಮವೆ?

ಕೊಡಗಿನ ಹಿಂದುಳಿದ ತಾಲೋಕು ಉತ್ತರ ಕೊಡಗು. ಇದರಲ್ಲಿ ಹಿಂದುಳಿದ ತಾಲೋಕು ಸೋಮವಾರಪೇಟೆಯಾಗಿದೆ. ಈ ನಾಡಿನ ೩೬ ಗ್ರಾಮಗಳ ಪೈಕಿ ಹಿಂದುಳಿದ ಗ್ರಾಮ ಹಾನಗಲ್ಲು ಶೆಟ್ಟಳ್ಳಿ. ಕೊಡಗಿನ ರಾಜರ ಕಾಲದಿಂದಲೂ, ಬ್ರಿಟಿಷರ ಕಾಲದಿಂದಲೂ, ನಮಗೆ ಸ್ವರಾಜ್ಯ ಸಿಕ್ಕಿದಂದಿನಿಂದ ಇಂದಿನ ವರೆಗೂ ಈ ಹಳ್ಳಿಗೆ ಕೆರೆ, ಬಾವಿ, ರೋಡು, ಶಾಲೆ ಇಲ್ಲ. ಇದು ಎಷ್ಟು ದೊಡ್ಡ ಅನ್ಯಾಯ. ಕಳೆದ ವರ್ಷ ನಮಗೆ ಒಂದು ಶಾಲೆ ಬೇಕೆಂದು ಅರ್ಜಿ ಮಾಡಿದ್ದೆವು. ಸರಕಾರದವರು ೧೫ ದಿವಸದಲ್ಲಿ ತಿರಸ್ಕರಿಸಿದರು. ನಮ್ಮ ಗ್ರಾಮದಿಂದ ಸೋಮವಾರಪೇಟೆ ೭ ಮೈಲು ದೂರದಲ್ಲಿ ಶಾಲೆ ಇದೆ. ಇದರ ಮಧ್ಯದಲ್ಲಿ ಒಂದು ಹೊಳೆ ಇದೆ. ಬಾಲಕ ಬಾಲಕಿಯರು ಮತ್ತು ಚಿಕ್ಕ ಹುಡುಗರು ಹೋಗಲು ಅಸಾಧ್ಯ. ಗ್ರಾಮವನ್ನು ಕಲಿಕೆ ಸಾಧ್ಯವಾಗದ ರೀತಿ ನೋಡಲಿಕ್ಕೆ ಸರಕಾರದವರನ್ನು ಕರೆದೆವು. ಅವರು ಮುಖ ಹಾಕಿರುವುದಿಲ್ಲ. ಕಳೆದ ಕೊಡಗು ಪತ್ರಿಕೆಯನ್ನು ನೋಡಿದೆನು. ಮುಂದುವರಿದ ಗ್ರಾಮಗಳಿಗೆ ೧,೫೦,೦೦೦ ರೂಪಾಯಿಗಳನ್ನು ಮಂಜೂರು ಮಾಡಿರುವರು. ಇಂಥಾ ಹಿಂದುಳಿದ ಹಳ್ಳಿಗೆ ೧ ಕಾಸು ಕೂಡ ಸರಕಾರದವರು ಸಹಾಯ ಕೊಡದಿರುವುದು ಯಾವ ನ್ಯಾಯ.? ಇನ್ನಾದರೂ ಈ ಹಳ್ಳಿಗೆ ಸಹಾಯ ನೀಡುವಿರಾ ?

ಡಿ. ಎನ್. ತಮ್ಮಯ್ಯ.

ಆಧುನಿಕ ವ್ಯವಸಾಯಕ್ರಮ

ತಾರೀಕು ೭-೮-೫೩ರಲ್ಲಿ ನಮ್ಮ ಕಾವಾಡಿ ಗ್ರಾಮದ ಒಂದು ಸಾರ್ವಜನಿಕ ಮೀಟಿಂಗ್ ನಡೆಯುವ ಸಮಯದಲ್ಲಿ ವ್ಯವಸಾಯ ಇಲಾಖೆಯ ಒಬ್ಬ ಡಿಮಾನ್‌ಸ್ಟ್ರೇಟರು ಈಗಿನ ವ್ಯವಸಾಯ ಕ್ರಮವನ್ನು ಕುರಿತು ಮಾತಾಡಿದರು. 'ನಾವು ಮಾನವರು ಪುರಾತನದಲ್ಲಿ ಕಾಡು ಪ್ರಾಣಿಗಳಂತೆ ಜೀವಿಸುತ್ತಿದ್ದು, ಇತ್ತೀಚೆಗೆ ಗಾಡಿಗಳಲ್ಲೂ, ಮೋಟಾರುಗಳಲ್ಲೂ, ಉಗಿಬಂಡಿಗಳಲ್ಲೂ ಮತ್ತು ವಿಮಾನಗಳಲ್ಲೂ ತಿರುಗುವವರಾಗಿರುವೆವು. ಇಂಥ ಸಂದರ್ಭದಲ್ಲಿ ನಾವು ನಮ್ಮ ವ್ಯವಸಾಯವನ್ನು ನಮ್ಮ ಪುರಾತನ ಮಟ್ಟದಲ್ಲೇ ಇಟ್ಟಿರುವುದು ಸರಿಯಲ್ಲ; ಈಗ ಸರಕಾರವು ನಮಗೆ ಕೊಡುವ ಸಲಹೆಗಳನ್ನೂ, ಕಬ್ಬಿಣದ ನೇಗಿಲು, ಕತ್ತಿ, ಗುದ್ದಲಿ, ಗೊಬ್ಬರ ಮೊದಲಾದವುಗಳನ್ನೂ ನಾವು ಉಪಯೋಗಿಸಲು ಪ್ರಾರಂಭಿಸಬೇಕು. ಇಲ್ಲಿಯ ಮುಂದೆ ಬರುವ ಹೆಚ್ಚು ಆಹಾರ ಬೆಳೆಸುವ ಸ್ಪರ್ಧೆಗೆ ರೂ ೮|- ಫೀಜು ಸೇರಿದಲ್ಲಿ, ಇಂಡಿಯಾ ಸರ್ಕಾರ, ಬಹುಮಾನವಾಗಿ (ಕ್ರಾಪ್ ಕಾಂಪಿಟಿಶನ್‌ನಲ್ಲಿ) ಒಂದರೆ ಸುಮಾರು ೧೦ಸಾವಿರ ರೂಪಾಯಿ ಬಹುಮಾನ, ಕೊಡಗಿನಲ್ಲಿ ೧ನೇ ಯವನಾಗಿ ಬಂದರೆ ಸುಮಾರು ಒಂದು ಸಾವಿರ ರೂಪಾಯಿಯನ್ನು, ನಮ್ಮ ನಾಡಿನಲ್ಲಿ ೧೦೦|-ನ್ನೂ ನಮ್ಮ ಗ್ರಾಮದಲ್ಲಿ ೨೫ ರೂಪಾಯಿಗಳ ಇನಾಮನ್ನು ಪಡೆಯಬಹುದೆಂದು ಹೇಳಿ ಇಂಥ ಸಮಯದಲ್ಲಿ ಒಬ್ಬೊಬ್ಬ ರೈತನು ಒಂದೊಂದು ಎಕ್ರೆ ಜಾಗದಲ್ಲಿ ಬೀಜದ ಬತ್ತವನ್ನು ತೋರಿಸಿ, ಅದನ್ನೇ ಬೇರೆ ನಟ್ಟು ಹೆಚ್ಚಿನ ಬೆಳೆ ಬೆಳೆಸಲು ಪ್ರಯತ್ನಿಸಬೇಕಾಗಿ ತಿಳಿಸಿಕೊಂಡರು. ಆದರೆ ಈಗ ಯಾವ ಗೊಬ್ಬರ ಕೊಟ್ಟರೂ, ನಮ್ಮ ಬೆಳೆಯು ಹುಟ್ಟಿಯಾಗ ಒಂದು ಕೊಕ್ಕೆ ಹುಳವು ಇದೆ, ಅದು ಎಲ್ಲವನ್ನೂ ತಿಂದು ಬಿಡುತ್ತದೆ. ನಮ್ಮ ಬೆಳೆಯನ್ನು ಮೇಲೆ ಬರಲಿಕ್ಕೆ ಬಿಡುವುದಿಲ್ಲ. ಹಾಗೆ ಇಂದಿನ ಸ್ಥಿತಿಯಲ್ಲಿ ಬಡರೈತರು ಸರದಲ್ಲಿ ಕೆಲವರನ್ನು ಮಾಳು ಸಾಲದಲ್ಲಿ ಮುಳುಗಿ, ಬೇಡಾಗಿ ಮಾರಿಕೊಂಡು ಈ ಸಾಲವನ್ನು ತೀರಿಸುವ ಯೋಚನೆಯನ್ನು ಸರಕಾರವು ಈಗ ಇರುವ ಕೃಷಿ ಗ್ರಾಮದ ಸಹಕಾರ ಸಂಘಗಳ ಮೂಲಕ ಅಥವಾ ಬೇರೆ ಯಾವದೇ ರೀತಿಯಲ್ಲಿ ಧೀರ್ಘ ಕಂತಿನಲ್ಲಿ ಆಗುವಷ್ಟರ ಮಟ್ಟಿಗೆ ಕಮ್ಮಿ ಬಡ್ಡಿಯಲ್ಲಿ ಹಣ ಒದಗಿಸಿ ಕೊಟ್ಟು, ಆದರೊಂದಿಗೆ ವ್ಯವಸಾಯ ಇಲಾಖೆಯವರು ಆಧುನಿಕ ರೀತಿಯ ವ್ಯವಸಾಯದ ಕ್ರಮವನ್ನು ಹೇಳಿಕೊಟ್ಟರೆ ಮಾತ್ರ ರೈತರಿಗೆ ಅದನ್ನು ಹಿಂಬಾಲಿಸಲು ಸಾಧ್ಯವಾಗುವುದು. ಇಲ್ಲವಾದರೆ ಸಾಲದಲ್ಲಿ ಮುಳುಗಿರುವವನಿಗೆ ಬೇರೆ ಯಾವುದಕ್ಕೂ ಮನಸ್ಸು ಹೋಗುವದಿಲ್ಲ. ಈ ಕಡೆ ಸಂಬಂಧಪಟ್ಟವರು ಸ್ವಲ್ಪ ಗಮನ ಕೊಡುವರೆ?

ಎಂ. ಸಿ. ಎನ್.

ಮರೆನಾಡಿಗೊಂದು ಪೋಸ್ಟಾಫೀಸು

ಈ ನಾಡಿನ ಸುತ್ತಲೂ ಹೊಳೆಯು ಆವರಿಸಿಕೊಂಡು ಕೊಡಗಿನ ಒಂದು ದ್ವೀಪದಲ್ಲಿ ವಾಸಮಾಡಿಕೊಂಡಿರುವ ಸುಮಾರು ಮೂರುಸಾವಿರ ಜನರಿದ್ದೇವೆ. ಈ ನಾಡಿಗೆ ಯಾವುದೊಂದು ವಾಹನಗಳ ಸರಿಯಾದ ಸೌಕರ್ಯವಿಲ್ಲ. ಇಲ್ಲಿಗೆ ಮಡಿಕೇರಿ ಪೋಸ್ಟು. ಈ ನಾಡಿನ ಜನರಿಗೆ ಮಡಿಕೇರಿಯು ೫ರಿಂದ ೧೫ ಮೈಲುಗಳ ದೂರವಾಗುತ್ತ ಮಳೆಗಾಲದಲ್ಲಿ ೨೦ ಮೈಲು ದೂರವಾಗುವುದು. ಇಷ್ಟು ದೂರ ನಡೆದು ಪೋಸ್ಟಾಫೀಸಿಗೆ ತಲುಪುವಾಗ ಮಧ್ಯಾಹ್ನ ೧-೨ ಗಂಟೆಯಾಗಿ ಹೋಗುತ್ತೆ. ಪೋಸ್ಟಾಫೀಸಿನ ಆ ದಿನದ ಲೆಕ್ಕ ಪೂರ್ತಿಯಾಗಿ ಹೋಗಿ ನಮ್ಮ ಮನಿಯಾರ್ಡರ್ ಇನ್ಸೂರ ಕೆಲಸಗಳು ಮರುದಿನದ ಕಾರ್ಯಕ್ಕೆ ಮಾಡಬೇಕಾಗುತ್ತದೆ. ಈ ಕರ್ಣೆಯ ಒಬ್ಬ ಪೋಸ್ಟ್ ಮೇನು ಆತನಿಗಿರುವ ೮-೯ ಗ್ರಾಮಗಳನ್ನು ಸುತ್ತಿ ಆತನು ನಮ್ಮ ನಾಡನ್ನು ವಾರದಲ್ಲಿ ೨ ದಿನದಲ್ಲಿ ಮಡಿಕೇರಿಯಿಂದ ಹೊರಟ ಆತನು ಕೈಯಲ್ಲಿ ೧ ದಿನದ ಕೆಲಸವನ್ನು ತೀರಿಸಿ, ಶುಕ್ರವಾರ ೧ ದಿನ ಬಂದು ಹೋಗುತ್ತಾನೆ. ಆ ದಿನವೂ ಸಿಕ್ಕಿದವರ ಕೈಗೆ ಕಾಗದ ಪತ್ರಗಳನ್ನು ಕೊಟ್ಟು ಹೋಗುತ್ತಾನೆ. ಈ ಕಾಗದ ಪತ್ರಗಳು ಸಿಕ್ಕಿದರಾಯಿತು, ಸಿಕ್ಕದಿದ್ದರಾಯಿತು. ಒಂದು ಸಮಯ ಸಿಕ್ಕಿದರೂ ಒಂದು ವಾರ ಕಳೆಯುತ್ತೆ. ಆದುದರಿಂದ ಈ ನಾಡಿನಲ್ಲಿ ಈಗ ಎಲ್ಲಿ ಅನುಕೂಲವಾಗುತ್ತದೋ ಅಲ್ಲಿ ಒಂದು ಪೋಸ್ಟಾಫೀಸನ್ನು ತೆರೆಯಬಹುದು. ಟಪ್ಪಾಲು ಸಾಗಿಸಲು ಬೇಸಗೆ ಕಾಲದಲ್ಲಿ ಸಂಗಾಮ ಬರುತ್ತಿರುವ ಶ್ರೀ ಜಗದೀಶ್ವರ ಬಸ್ಸಿನಿಂದಲೂ, ಮಳೆಗಾಲದಲ್ಲಿ ಒಬ್ಬ ಅಂಚೆಯ ಮನುಷ್ಯನಿಂದಲೂ ಏರ್ಪಡಿಸಿ ಈ ನಾಡಿನ ಬಡ ಜನರ ತೊಂದರೆಯನ್ನು ನೀಗಬೇಕಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ನಮಗಳ ಕೋರಿಕೆಯನ್ನು ತಮ್ಮ ಚಿತ್ತಕ್ಕೆ ತೆಗೆದುಕೊಂಡು ಇಲ್ಲಿ ಒಂದು ಪೋಸ್ಟಾಫೀಸು ತೆರೆದು ಬಡ ಜನ ಪಡುವ ಪಾಡನ್ನು ಇಲ್ಲಿಯವರ ತೊಂದ್ರೆಗಳನ್ನು ನಿವಾರಿಸುವರಾಗಿ ನಂಬುತ್ತೇನೆ.

ಎಂ. ಎಂ. ಮಾಚಯ್ಯ.

ಎಚ್ಚರಿಕೆ, ಮೋಸಹೋಗಬೇಡಿ.

ಇತ್ತೀಚೆಗೆ ಜಾಹಿರಾತಿನ ವೈಖರಿಯನ್ನು ನೋಡಿ ಬೇಸ್ತು ಬಿದ್ದವರಲ್ಲಿ ಒಬ್ಬನು ನಾನು. ಬರೀ ಮೂರು ರೂಪಾಯಿಗೆ ಒಂದು ರಿಸ್ಟ್‌ವಾಚು ೧೦ ವರುಷ ಗ್ಯಾರಂಟಿಯೊಂದಿಗೆ ಹಾನಿ ಆಗುವುದಿಲ್ಲ; ಸಾಗಣೆ ಖರ್ಚು ೪-೦-೯ ಮಾತ್ರ ಎಂದು ಕಾಗದ ಬರೆದು ಹಾಕಿದೆ. ರೂ. ೪-೦-೦ಗೆ ಒಂದು ವಿ. ಪಿ. ಪಾರ್ಸಲು ಬಂತು. ನಾಲ್ಕು ರೂಪಾಯಿ ಕಟ್ಟಿ ಪಾರ್ಸಲು ಬಿಚ್ಚಿ ನೋಡಿದರೆ, ಅದರೊಳಗೆ ಒಂದು ವಾಚಿನ ನಕ್ಷೆ ಮತ್ತು ನಾಲ್ಕು ಖಾಲಿ ಟಿಕೇಟುಗಳಿದ್ದುವು. ಈ ವಿಚಾರ ಕಂಪೆನಿಗೆ ಕಾಗದ ಬರೆದೆ, ಅದರೆ ಉತ್ತರವಿಲ್ಲ. ಇದಲ್ಲದೆ ಇನ್ನೊಂದು ಅನುಭವ. ರೂ ೧೫-೦-೦ಕ್ಕೆ ಒಂದು ಬೈಸಿಕಲ್ ಇದಕ್ಕೂ ಬರೆದೆ! ೧೫ ರೂ ಕೊಟ್ಟು ವಿ ಪಿ ಬಿಡಿಸಿ ನೋಡಿದೆ ಅದರೊಳಗೊಂದು ಪತ್ರವಿತ್ತು. ಬೈಸಿಕಲ್ ಕಳುಹಿಸುವ ಚಾರ್ಜು ೧೬ ರೂ. ಕಳುಹಿಸಿ ಕೊಡಿ ಎಂದಿತ್ತು. ನೋಡೋಣವೆಂದು ಪುನಃ ೧೬ ರೂ. ಕಳಿಸಿದೆ; ಬದಲಾಗಿ ಒಂದು ರೈಲ್ವೆ ರಶೀದಿ ಬಂತು. ಆ ಬೈಸಿಕಲ್ ಬಂದಾಗ ರೈಲ್ವೆ ರಶೀತಿಯಲ್ಲಿ ಪುನಃ ೮ ರೂ. ಕಟ್ಟಬೇಕೆಂದಿತ್ತು. ಇಂದಿಗೆ ತಿಂಗಳು ನಾಲ್ಕಾಯಿತು. ರೈಲ್ವೆ ಔಟ್ ಏಜೆನ್ಸಿಯಲ್ಲಿ ಈ ವರೆವಿಗೂ ಸೈಕಲ್ ಪಾರ್ಸಲ್ ಬರಲಿಲ್ಲ. ಏಳೆಂಟು ಕಾಗದ ಬರೆದೆ, ಉತ್ತರವಿಲ್ಲ. ಒಟ್ಟಾರೆ ಸುಮಾರು ರೂ. ೩೪-೦-೦ ಕೊಟ್ಟು ಹೀಗೆ ಬೇಸ್ತು ಬಿದ್ದಿರುವೆನು. ನನ್ನಂತೆ ಇತರರು ಮೋಸ ಹೋಗಬಾರದೆಂದು ಈ ಸಣ್ಣ ಕಥೆಯನ್ನು ಪ್ರಕಟಿಸಿರುವೆನು. ಆದುದರಿಂದ ಇಂಥಾ ಜಾಹಿರಾತುಗಳನ್ನು ಯಾರು ನಂಬಬಾರದಾಗಿ ವಿನಂತಿ.

'ಬೇಸ್ತು ಬಿದ್ದವ'

ಗೋಧಿಯನ್ನು ಕೊಳ್ಳುವವರ ಸಲುವಾಗಿ ಪಾಕಿಸ್ತಾನಕ್ಕೆ ೧೫೦ ಲಕ್ಷ ಡಾಲರುಗಳನ್ನು ಅಮೇರಿಕೆಯು ಸಾಲವಾಗಿ ಕೊಡಲಿರುವುದಾಗಿ ಅಮೇರಿಕೆಯ ದರಬಾರವು ಪ್ರಸಿದ್ಧಿಸಿದೆ.

ಆಜಾದ್ ಮುಸ್ಲಿಂ ಲೀಗಿನ ಮುಖಂಡರಾದ ಎಚ್. ಎಸ್. ಸುಹ್ರವರ್ದಿಯವರು ಪತ್ರಿಕಾ ಪರಿಷತ್ತಿನಲ್ಲಿ ಮುಸ್ಲಿಂಲೀಗ ಮಂತ್ರಿಮಂಡಲಗಳು ಬೇಗನೆ ರಾಜಿನಾಮೆ ಕೊಡತಕ್ಕದೆಂದೂ, ಸಾರ್ವತ್ರಿಕ ಚುನಾವಣೆ ನಡೆಸತಕ್ಕದೆಂದೂ ಹೇಳಿದರು.

— ನಿಮಗೆ ಅತ್ಯಂತ ಲಾಭದಾಯಕವಾಗಿ —

ವಿಮೆ ಮಾಡಲೂ ಅಥವಾ ಪ್ರತಿನಿಧಿಸಲೂ

ಇಂಡಿಯಾದ ಅತ್ಯಂತ ಹಳೆಯ ಮತ್ತು ಸುಭದ್ರತೆಯ ವಿಮಾ ಸಂಸ್ಥೆ.

ದಿ ಬಾಂಬೆ ಮ್ಯೂಚುವಲ್ ಲೈಫ್ ಅಶ್ಶೂರೆನ್ಸ್ ಸೊಸೈಟಿ, ಲಿಮಿಟೆಡ್.

[ಸ್ಥಾಪನೆ 1871]

ವಿವರಗಳಿಗೆ ಬರೆಯಿರಿ:— ಬ್ರಾಂಚ್ ಸೆಕ್ರೆಟರಿ,

172-3 ನರಸಿಂಹ ರಾಜಾ ರಸ್ತೆ (P. B. 186),

12-5 ಬೆಂಗಳೂರು 2, ಅಥವಾ ಫೋನ್ ಮಾಡಿ-3624.

ಕೊಡಗು ಆರೋಗ್ಯ ಇಲಾಖೆಯಿಂದ.

ಸ್ವಾಭಾವಿಕವಾಗಿ ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನಕೂಡದೆಂದು ಅನೇಕಾವರ್ತಿ ಹೇಳಿದಾಗ್ಯೂ ಕೂಡ, ಇನ್ನೂ ಜನರು ಇಂಥಾ ಮಾಂಸಗಳನ್ನು ತಿನ್ನುವಂತ ಸಂಗತಿ ಗಮನಕ್ಕೆ ಬಂದಿರುತ್ತದೆ. ಈ ವಿಷಯದಲ್ಲಿ ೧೯೩೦ನೇ ಇಸವಿಯಲ್ಲಿ ಕೊಡಗಿನ ಕೌನ್ಸಿಲಿನಲ್ಲಿ ಕೊಡಗು ಪ್ಯೂರ್ ಫುಡ್ ಆಕ್ಟಿನಲ್ಲಿ ಹೊರಡಿಸಿದ ಕಾನೂನನ್ನು ಈ ಕೆಳಗೆ ಕೊಡಲಾಗಿದೆ.

Coorg Pure Food Act. 20. A.

ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನಕೂಡದು.

ಸ್ವಾಭಾವಿಕ ಕಾರಣಗಳಿಂದ ಸತ್ತ ಯಾವುದೇ ಪ್ರಾಣಿಯ ಮಾಂಸವನ್ನು ತಿಳಿದು ಯಾರೂ ತಿನ್ನಕೂಡದು.

ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನುವ ಅಪರಾಧಕ್ಕೆ ಶಿಕ್ಷೆ.

ಮೇಲೆ ಹೇಳಿದ ಉಪಕರಣದ ನಿಯಮವನ್ನು ಮೀರಿ ನಡೆದರೆ ಏಳು ವರ್ಷ ಪ್ರಾಯಕ್ಕೆ ಮೀರಿದ ಯಾವ ವ್ಯಕ್ತಿಯೇ ಆಗಲಿ, ಪ್ರಥಮ ಸಾರಿ ಮಾಡಿದ ಅಪರಾಧಕ್ಕೆ ನೂರು ರೂಪಾಯಿಗಳ ವರೆಗಿನ ಜುಲ್ಮಾನೆಗೂ ಮರಳಿ ಮಾಡುವ ಅಪರಾಧಕ್ಕೆ ಇನ್ನೂರೈವತ್ತು ರೂಪಾಯಿಗಳ ವರೆಗಿನ ಜುಲ್ಮಾನೆಗೂ ಗುರಿಪಡಿಸಲಾದೀತು.

ವಿವರ.

ಸತ್ತ ಪ್ರಾಣಿಯ ಮಾಂಸವನ್ನು ತಿನ್ನುವದು ಜಾತಿ ಪದ್ಧತಿಯೆಂದೂ, ಅಥವಾ ಅಂಥ ಶವಗಳನ್ನು ಹೊತ್ತು ಸಾಗಿಸುವ ಕೆಲಸಕ್ಕೆ ಅನ್ವಯಿಸುವ ಹಕ್ಕೆಂದೂ ಈ ಸೆಕ್ಷನಿನ ಮೇರೆ ಗುರಿಪಡಿಸಬಹುದಾದ ತಕ್ಸೀರಿನಲ್ಲಿ ಹೊಣೆಬಹುದಾದ ಪಾದ ಒಪ್ಪಲಾಗುವದಿಲ್ಲ. ಸ್ವಾಭಾವಿಕ ಕಾರಣವೆಂಬ ಮಾತಿನಲ್ಲಿ ಮುದಿತನ ಮತ್ತು ರೋಗ ಪೀಡಿತ ಎಂಬ ಕಾರಣಗಳೂ ಸೇರಿವೆ.

Act 20 B.

ಆಹಾರ ಸಾಮಗ್ರಿಗಳ ವಿಕ್ರಯ ಮಾಡುವ ಸ್ಥಳವನ್ನು ಪ್ರವೇಶಿಸಲು ಹೆಲ್ತ್ ಆಫೀಸರವರಿಗೆ ಇರುವ ಹಕ್ಕು.

ಆಹಾರ ಸಾಮಾಗ್ರಿಗಳನ್ನು ಉತ್ಪತ್ತಿ ಮಾಡುವ, ತಯಾರು ಮಾಡುವ, ವಿಕ್ರಯ ಕ್ಕಾಗಲೀ, ದಾಸ್ತಾನಕ್ಕಾಗಲೀ ಇಟ್ಟಿರುವ ಯಾವುದೇ ಸ್ಥಳವನ್ನು, ಹಗಲಾಗಲೀ ರಾತ್ರಿಯಾಗಲೀ ಯಾವುದೇ ಕಾಲಕ್ಕೆ ನೋಟಿಸಿಲ್ಲದೆ ಪ್ರವೇಶಿಸಿ ಇಂಥಾ ಆಹಾರ ಸಾಮಗ್ರಿಗಳನ್ನು ಮತ್ತು ಅವುಗಳನ್ನು ತಯಾರಿಸುವ, ತುಂಬಿಡುವ ಯಾವುದೇ ಪಾತ್ರ ಅಥವಾ ಉಪಕರಣಗಳನ್ನು ಪರೀಕ್ಷಿಸಬಹುದು.

ಇದರಿಂದ ಈ ಮೂಲಕ ಸಕಲರಿಗೆ ತಿಳಿಯಪಡಿಸುವುದೇನೆಂದರೆ- ಈ ಕಾನೂನಿನ ಮೇರೆ ಸ್ವಾಭಾವಿಕವಾಗಿ ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನುವದು ಅಪರಾಧವಾಗಿರುತ್ತದೆ. ಇಂಥಾ ಅಪರಾಧಿಗಳನ್ನು ಕಠಿಣ ಶಿಕ್ಷೆಗೆ ಗುರಿಪಡಿಸಲಾಗುತ್ತದೆ.

ಪ್ರತಿ ಗ್ರಾಮಗಳ ಪಟೇಲರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ- ಮೇಲೆ ನಮೂದಿಸಿರುವ ಕಾನೂನಿಗೆ ವಿರೋಧವಾಗಿ ನಡೆದದ್ದು ಕಂಡು ಬಂದಲ್ಲಿ ಆ ಅಪರಾಧಿಗಳ ಮೇಲೆ ಪಂಚಾಯಿತದಾರರ ಮುಖಾಂತರ ಮಹಜರನ್ನು ತಯಾರಿಸಿ ಈ ಆಫೀಸಿಗೆ ತಲಪಿಸತಕ್ಕದ್ದು. ಈ ಸಂಬಂಧದಲ್ಲಿ ಕೆಲಸವು ಸರಾಗವಾಗಿ ನಡೆಯುವಂತೆ ಸಹಕರಿಸಲು ಪೋಲೀಸು ಅಧಿಕಾರಿಗಳನ್ನು ಕೇಳಿಕೊಳ್ಳಲಾಗಿದೆ;

ಹುಡುಗಿಯರಿಗೆ ಹಿತೋಪದೇಶ.

ಭಾರತದ ಹಿರಿಯ ಮುತ್ಸದ್ದಿಗಳಲ್ಲೊಬ್ಬರೂ ಮದರಾಸಿನ ಮುಖ್ಯ ಮಂತ್ರಿಗಳೂ ಆಗಿರುವ ಶ್ರೀ. ರಾಜಗೋಪಾಲಾಚಾರಿಯವರು ಹೆಣ್ಣು ಮಕ್ಕಳ ಶಿಕ್ಷಣದಲ್ಲಿ ಅವಶ್ಯವಾಗಿ ಬೇಕಾಗಿರುವ ಗೃಹ ವಿಜ್ಞಾನ ಶಾಸ್ತ್ರವನ್ನು ಸೇರಿಸುವದರ ಅವಶ್ಯಕತೆಯನ್ನು ಮದ್ರಾಸಿನಲ್ಲಿ ಸೇರಿದ್ದ ಅಭಾ. ಗೃಹವಿಜ್ಞಾನ ಪರಿಷತ್ತಿನಲ್ಲಿ ಪ್ರತಿಪಾದಿಸಿದರು. ಅನುಷಂಗಿಕವಾಗಿ ಅವರು ತಾವು ಹಳೆಯ ಕಾಲದವರೆಂದೂ ಆಗಿನ ಸಂಪ್ರದಾಯ ರೂಢಿ ಮತ್ತು ಈಗಿನ ಸಂಪ್ರದಾಯ ರೂಢಿಗಳಲ್ಲಿ ಆಗಿರುವ ಬದಲಾವಣೆಗಳನ್ನು ವಿವರಿಸುತ್ತ ತಾವು ನೆಲದ ಮೇಲೆ ಕುಳಿತು ಊಟಮಾಡುತ್ತಿದ್ದದಾಗಿಯೂ ನೆಲದ ಮೇಲೆ ಮಲಗುತ್ತಿದ್ದದಾಗಿಯೂ, ಈಗಲಾದರೊ ಮೇಜಿನಮೇಲೆ ಊಟ ಮಾಡಿ ಮಂಚದ ಮೇಲೆ ಮಲಗುವದಾಗಿಯೂ ಹೇಳಿದರು. ಈ ಬದಲಾವಣೆಯನ್ನು ತಾವು ವಿರೋಧಿಸದಿದ್ದರೂ ಇದನ್ನು ಅಳವಡಿಸಿಕೊಳ್ಳುವದು ಅವಶ್ಯವಾಗಿದೆಯೆಂದು ಅವರು ಹೇಳಿದರು. ಕೆಲವೇ ಕುಟುಂಬಗಳನ್ನು ನಾವು ಹಾಗೆ ನಾಲ್ಕಾರಿ ಎತ್ತರಿಸಿದ್ದೇವೆ. ಎಲ್ಲ ಕುಟುಂಬಗಳನ್ನಲ್ಲ ಎಂಬುದನ್ನು ನಾವು ಮರೆಯಬಾರದು ಎಂದೂ ಅವರು ಎಚ್ಚರಿಸಿದರು. ಹೆಣ್ಣು ಮಕ್ಕಳಿಗೆ ವೈವಾಹಿಕ ಜೀವನದ ಶಿಕ್ಷಣ ಕೊಡುವದು ಅವಶ್ಯವೆಂದು ಪ್ರತಿಪಾದಿಸುತ್ತ ಬಟ್ಟೆಗಳನ್ನು ಸ್ವಚ್ಛ ಇಡುವ, ಮಿತವ್ಯಯದಿಂದ ಅಡಿಗೆ ಮಾಡುವದು, ಇಲ್ಲವೆ ಮನೆಯನ್ನು ಓರಣದಿಂದಿಡುವದು ನಿಜವಾದ ಗೃಹವಿಜ್ಞಾನವಾಗಲಾರದೆಂದರು. ವಿವಾಹವೆಂತಾಗಬೇಕು, ವೈವಾಹಿಕ ಜೀವನವನ್ನು ಹೇಗೆ ನಡೆಸಬೇಕು ಎಂಬುದನ್ನು ಕಲಿಸುವದು ಅಗತ್ಯವಾಗಿದೆ. ವಿವಾಹಿತ ಕುಟುಂಬ, ಮಕ್ಕಳು ಇವುಗಳಿಗೆ ಸಂಬಂಧಿಸಿದ್ದೇ ಗೃಹವಿಜ್ಞಾನ, ಮನೆಯನ್ನು ನಡೆಸುವ ಹೊಣೆಗಾರಿಕೆಯು ನಮ್ಮ ಮೇಲೆ ಬಿದ್ದುಕೊಂಡಿದೆ. ಅದನ್ನು ನಿರ್ವಹಿಸುವಂತೆ, ಮನೆಯನ್ನು ಸುಖಮಯವಾಗಿಟ್ಟುಕೊಳ್ಳಲು ಸಮರ್ಥರಾಗುವಂತೆ ನಮ್ಮ ತರುಣ ತರುಣಿಯರಿಗೆ ಶಿಕ್ಷಣ ದೊರೆಯಬೇಕಾದುದು ಅವಶ್ಯವೆಂದು ರಾಜಾಜಿಯವರು ಹೇಳಿದರು. ಅನೇಕಾನೇಕ ಶಿಕ್ಷಕರನ್ನು ಗೃಹವಿಜ್ಞಾನದಲ್ಲಿ ತರಬೇತಿಗೊಳಿಸಿದರೆ ನಮ್ಮ ಕೌಟುಂಬಿಕ ಜೀವನವು ಸುಖಮಯವಾಗಲಾರದು. ಅವರು ವಿವಾಹವಾಗುವದಿಲ್ಲ. ಮನೆ ಹೂಡುವುದಿಲ್ಲ. ತಮ್ಮ ಶಿಕ್ಷಣವನ್ನು ಕಾರ್ಯಗತವಾಗಿಸುವದಿಲ್ಲ. ಇಂಥವರಿಂದ ನಮಗೆ ಸಮಾಧಾನವಾಗಲಾರದು ಎಂದು ರಾಜಾಜಿಯವರು ತಮ್ಮ ಹೃದ್ಗತವನ್ನು ತಿಳಿಸಿಕೊಟ್ಟರು. ರಾಜಾಜಿಯಂಥ ಅನುಭವಿಕರ ಈ ಸದುಪದೇಶವನ್ನು ನಮ್ಮ ಶಿಕ್ಷಣಜ್ಞರು ಮತ್ತು ಶಿಕ್ಷಣ ಪಡೆವ, ಮತ್ತು ಪಡೆಯಬಯಸುವ ಹೆಣ್ಣು ಮಕ್ಕಳು ಚೆನ್ನಾಗಿ ಮನನಮಾಡಿ ಗೃಹವಿಜ್ಞಾನದ ನಿಜವಾದ ಉದ್ದೇಶವೇನೆಂಬುದನ್ನು ಗಮನಿಸಿ ಅದನ್ನು ಅಳವಡಿಸಿಕೊಂಡು ತಮ್ಮ, ತಮ್ಮ ಕುಟುಂಬದ ತದ್ವಾರಾ ದೇಶದ ರಾಷ್ಟ್ರದ ಹಿತವನ್ನು ಸಾಧಿಸಬೇಕಾದುದು ಕರ್ತವ್ಯವಾಗಿದೆ.

ಕಣ್ಣೀರಲ್ಲಿ ಕ್ರಿಮಿನಾಶಕ ಶಕ್ತಿ

ಲಂಡನ್ನಿನ ಓರ್ವ ಸರ್ಜನರು ನಮ್ಮ ಕಣ್ಣೀರಿನಲ್ಲಿ ಕ್ರಿಮಿ ನಾಶಕ ಶಕ್ತಿ ಇದೆಯೆಂದು ಹೇಳಿದ್ದಾರೆ. ೧೦೦ ಗ್ಯಾಲನ್ ನೀರಿನಲ್ಲಿ ಒಂದು ಹನಿ ಕಣ್ಣೀರು ಬೆರಸಿದರೆ, ಹಾಗಿದ್ದಾಗ್ಯೂ ಆ ಮಿಶ್ರಣಕ್ಕೆ ಕಣ್ಣಿಗೆ ತೊಂದರೆ ಕೊಡುವ ಸಹಸ್ರಾರು ಸೂಕ್ಷ್ಮಜಂತುಗಳನ್ನು ಕೊಲ್ಲುವ ಶಕ್ತಿಯಿರುವುದಂತೆ. ೬೦೦೦ ಪಟ್ಟು ನೀರಿನಲ್ಲಿ ಕೂಡಿಸಿದಾಗ ಕೂಡ ಕಣ್ಣೀರಲ್ಲಿ ಕ್ರಿಮಿನಾಶಕ ಶಕ್ತಿಯಿರುವುದು. ಈ ಶಕ್ತಿ ಬಹು ಕಾಲದ ವರೆಗೂ ಇರುತ್ತದೆ. ಹೀಗಿರುವುದರಿಂದಲೇ ಕಣ್ಣಿನಲ್ಲಿ ಪ್ರವೇಶಿಸಬಹುದಾದ ಅನೇಕ ವಿಧದ ಜಂತುಗಳಿಂದ ಅದರ ರಕ್ಷಣೆಯಾಗುತ್ತದೆ.

ಗಡ್ಡ ಬೆಳೆಸಿ ಹಣಗಳಿಸಿರಿ.

ನಾಗಪುರದಲ್ಲಿ ಇತ್ತೀಚೆಗೆ ಮಾಡಿದ ಭಾಷಣವೊಂದರಲ್ಲಿ ಕಾಂಗ್ರೆಸ್ಸಿನ ಹಿಂದಿನ ಪ್ರಧಾನ ಕಾರ್ಯದರ್ಶಿ ಶ್ರೀ ಕಲಾವೆಂಕಟರಾಯರು ಕ್ಷೌರದ ಬ್ಲೇಡುಗಳನ್ನು ವಿದೇಶಗಳಿಂದ ತರಿಸಿಕೊಳ್ಳಲು ಭಾರತವು ಈಗ ವರ್ಷಕ್ಕೆ ೨ ಕೋಟಿ ರೂ. ಗಳನ್ನು ಖರ್ಚು ಮಾಡುತ್ತಿದೆ. ಜನರು ಮುಖಕ್ಷೌರ ಮಾಡಿಕೊಳ್ಳುವುದನ್ನು ಬಿಟ್ಟು ಕನಿಷ್ಟ ಪಕ್ಷ ಮೂರು ವರ್ಷಗಳ ಕಾಲ ಗಡ್ಡ ಬೆಳೆಸಿದಲ್ಲಿ ದೇಶಕ್ಕೆ ೬೦ ಕೋಟಿ ರೂ. ಗಳ ಉಳಿತಾಯವಾಗುವುದು ಎಂದು ಹೇಳಿದರು.

ಆದರೆ ನನ್ನ ಈ ಸೂಚನೆಗೆ ಜನರ ಬೆಂಬಲ ಸಿಗಲಿಕ್ಕಿಲ್ಲ ಏಕೆಂದರೆ ಇಂದಿನ ತರುಣರಿಗೆ ಲಕ್ಷ್ಯ ಮಾಡಿಕೊಳ್ಳುವುದು ಕಠಿಣವಾದೀತು ಎಂದೂ ಅವರು ಹೇಳಿದರು.

ಬ್ರಿಟನ್ನಿನಲ್ಲಿ ಪಾಕಿಸ್ತಾನಿಗಳು

ಲಂಡನ್ನಿನಲ್ಲಿರುವ ಪಾಕಿಸ್ತಾನದ ಹೈಕಮಿಶನರರು ಬ್ರಿಟನ್ನಿನಲ್ಲಿರುವ ಪಾಕಿಸ್ತಾನಿಗಳ ಗಣತಿ ನಡೆಸಲಿದ್ದು ಅದರಿಂದ ಬ್ರಿಟನ್ನಿಗೆ ಅನಧಿಕೃತವಾಗಿ ಬಂದಿರುವ ಪಾಕಿಸ್ತಾನಿಗಳೆಷ್ಟು ಎಂಬುದು ತಿಳಿದು ಬರಬಹುದಾಗಿದೆ. ಬ್ರಿಟನ್ನಿನಲ್ಲಿ ಏಪ್ರಿಲ್ ದವರೆಗೆ ೫೦೦೦೦ ಪೌರ್ವ ಪಾಕಿಸ್ತಾನಿಗಳು ಇರಬೇಕೆಂದು ಅಂದಾಜಿದೆ. ಇವರಲ್ಲನೇಕರು ಪಾಸ್‌ಪೋರ್ಟ ಇಲ್ಲದೆ ಬಂದವರಿದ್ದಾರೆ. ಪ್ರತೀ ತಿಂಗಳು ಇಂಥವರ ಸಂಖ್ಯೆ ೩೦೦೦ ದಷ್ಟು ಹೆಚ್ಚುತ್ತಿದೆಯೆಂದು ಆ ಬ್ರಿಟನ್ ಎಂಬ ಪಾಕಿಸ್ತಾನದ ಬ್ಯಾರಿಸ್ಟರರ ಹೇಳಿಕೆಯಿದೆ.

ವಾರ್ತೆ.

ಈ ಸಾರಿ ನ್ಯೂಯಾರ್ಕಿನಲ್ಲಿ ಗಾಂಧೀಜಯಂತಿ ಉತ್ಸವ ಸಂದರ್ಭದಲ್ಲಿ ದಕ್ಷಿಣ ಆಫ್ರಿಕದಲ್ಲಿ ವರ್ಣ ವಿದ್ವೇಷಪೂರಿತ ಕಾನೂನುಗಳ ವಿರುದ್ಧವಾಗಿ ನಡೆಯುತ್ತಿರುವ ಸತ್ಯಾಗ್ರಹದ ಸಂಬಂಧವಾಗಿ ಪ್ರಚಾರ ಮಾಡಲಾಗುವದು.

ಗಾಂಧೀಜಿ ಮೊಟ್ಟ ಮೊದಲು ಸತ್ಯಾಗ್ರಹವನ್ನು ಪ್ರಯೋಗಿಸಿದುದು ದಕ್ಷಿಣ ಆಫ್ರಿಕದಲ್ಲಿ, ಅದು ವಿಭೇದಾತ್ಮಕ ಕಾನೂನುಗಳ ವಿರುದ್ಧವಾಗಿ ಎಂಬ ಅಂಶವನ್ನು ಗಾಂಧೀ ಜಯಂತಿ ಸ್ವಾಗತಕಾರರು ಎಲ್ಲರ ಗಮನಕ್ಕೆ ತಂದಿದ್ದಾರೆ.

ಈಜಿಪ್ತದ ಹಿಂದಿನ ಅರಸು ಫರೂಕರ ಬಳಿ ಇರುವ ಸ್ಟ್ಯಾಂಪ್ ಸಂಗ್ರಹದ ಬೆಲೆ ಸುಮಾರು ೯೦ ಲಕ್ಷ ಪೌಂಡು ಎಂದು ಹೇಳಲ್ಪಡುತ್ತಿದ್ದು ಅವರಿಗ ಅದನ್ನು ಮಾರಲಿರುವರಂತೆ.

೧೭ನೇ ಶತಮಾನದಲ್ಲಿ ಜೀವಿಸಿದ ಸ್ಕಾಟಲೆಂಡಿನ ನೇಕಾರನೊಬ್ಬನಿಗೆ ಒಬ್ಬಳೆ ಹೆಂಡತಿಯಲ್ಲಿ ೬೨ ಜನ ಮಕ್ಕಳಾಗಿದ್ದರು. ಅತ ಸಾಯುವಾಗ ಅವರಲ್ಲಿ ೪೭ ಜನ ಬದುಕಿದ್ದರು.

ಮಳೆ ಬೀಳದೆ ಹೋದರೆ ಪರಿಸ್ಥಿತಿ ಹಲೆ ಬೀಳದ ಮೈಸೂರು ಪ್ರಾಂತದ ಪ್ರದೇಶಗಳಲ್ಲಿ ಕ್ಷಾಮ ಬರುವದರಿಂದ ಮೈಸೂರು ಸಂಸ್ಥಾನವು ಕೇಂದ್ರದಿಂದ ಪ್ರಯತ್ನಿಸಲಿದ್ದು ಕೇಂದ್ರ ಸರಕಾರವು ಅದಕ್ಕಾಗಿ ತಾಂತ್ರಿಕ ನೆರವು ನೀಡಲಿ.

ಮದರಾಸು ರಾಜ್ಯದಲ್ಲಿ ಅಧಿಕ ಪರಿಸ್ಥಿತಿಯು ಬಹಳ ಕಷ್ಟದಾಯಕವಿರುವದರಿಂದ ಇದು ರಾಜ್ಯವನ್ನು ಬರಗಾಲ ಪ್ರದೇಶವೆಂದು ಸಾರುವ ಪ್ರಸಂಗ ಬರಬಹುದು ಎಂದು ಮುಖ್ಯಮಂತ್ರಿ ಶ್ರೀ ಸಿ ರಾಜಗೋಪಾಲಾಚಾರಿಯವರು ಬೆಂಗಳೂರಿನಲ್ಲಿ ಮಾತನಾಡುತ್ತಾ ಹೇಳಿದರು.

ಆಂಧ್ರ ಪ್ರಾಂತ ರಚನೆಯ ಬಗೆ ನಾಯಿ ಸೀತಾರಾಮಯ್ಯನವರು ಹೂಡಿರುವ ಆಂದೋಲನದ ಬಗ್ಗೆ ಸಹಾನುಭೂತಿಯುಳ್ಳವರು 'ಜೈಲೋ ಬೆಲ್ಲಿ' ಫಂಡಿಗೆ ೧೦೦೦೦ ರೂ. ಗಳನ್ನು ಕೂಡಿಸಿ ಕೊಡಿಸಿಕೊಡಬೇಕೆಂದು ಸ್ವಾಮಿ ಸೀತಾರಾಮಯ್ಯನವರು ಬಿನ್ನಹ ಪತ್ರ ಹೊರಡಿಸಿದ್ದಾರೆ.

ಅಖಿಲ ಭಾರತ ಹಿಂದೂ ಮಹಾಸಭೆಯ ವಾರ್ಷಿಕ ಅಧಿವೇಶನವು ಭೋಪಾಳದಲ್ಲಿ ಡಿಸೆಂಬರ ತಿಂಗಳ ಕೊನೆಯ ವಾರದಲ್ಲಿ ಸೇರುವುದೆಂದು ಡಾ. ಎನ್. ಬಿ. ಖರೆಯವರು ನಾಗಪುರದಿಂದ ಪ್ರಕಟನೆ ಹೊರಡಿಸಿದ್ದಾರೆ.

ಕ್ಷಯರೋಗದ ಬೇರೆ ಕೆಲವು ಲಕ್ಷಣಗಳು.

(ಲೇ:—ಡಾ ವಿ. ಆರ್. ಬಟ್, ಎಂ. ಬಿ, ಬಿ ಎಸ್., ಟಿ. ಡಿ. ಡಿ.)

ಕೆಮ್ಮು—ಕ್ಷಯ ರೋಗದಲ್ಲಿ ಮೊದಲನೆಯ ಪ್ರಧಾನ ಲಕ್ಷಣವೆಂದರೆ ಕೆಮ್ಮು. ಬೇರೆ ಹೆಚ್ಚಿನ ರೋಗಗಳಲ್ಲಿ ಕೆಮ್ಮು ಬರುತ್ತದೆ. ಆದರೆ ಕೆಮ್ಮಿನ ಲಕ್ಷಣಗಳು ಇಲ್ಲದ ಕ್ಷಯ ರೋಗಗಳೂ ಇರಬಹುದು. ಕ್ಷಯರೋಗದ ರೋಗಾಣು ಆರಂಭದಲ್ಲಿ ಶ್ವಾಸಕೋಶದ ಕೊನೆಯ ಪ್ರದೇಶದಲ್ಲಿ ರಕ್ತಾಧಿಕ್ಯ ಅಥವಾ ಕಟ್ಟಿಕ್ಕೆ (Congestion) ಯನ್ನುಂಟುಮಾಡುತ್ತದೆ. ಇದರ ಕಾರಣದಿಂದ ಅಥವಾ ಕೆರಳುವಿಕೆ (Irritation) ಕೆಮ್ಮು ಉಂಟಾಗುತ್ತದೆ. ಮೊದಮೊದಲು ಕೆಮ್ಮಿನ ಪ್ರಮಾಣ ಅಲ್ಪವಿದ್ದು ರೋಗಿಗೆ ಅದು ಗೊತ್ತಾಗದೇ ಬಾರದಿರಬಹುದು. ಆದರೆ ಅವನ ಸ್ನೇಹಿತರು ಇಲ್ಲವೇ ಬಂಧುಗಳು ಅದನ್ನು ಕಂಡು ಹಿಡಿಯಬಹುದು. ಕ್ರಮೇಣ ಕೆಮ್ಮು ಹೆಚ್ಚುವುದು ಮತ್ತು ಸಾಮಾನ್ಯವಾಗಿ ತೀವ್ರ (Sharp) ಮತ್ತು ಒಣ ಸ್ವರೂಪವಾಗಿರುವುದು. ಕಫ ಬರೇ ಅಲ್ಪ ಪ್ರಮಾಣದ ಕಫ ಉಂಟುಮಾಡುವುದರಿಂದ ರೋಗಿಗೆ ಬೇರೆ ಬಗೆಯದು. ಈ ಕೆಮ್ಮು ಬೆಳಗ್ಗೆ ಇಲ್ಲವೇ ವಿಶ್ರಾಂತಿ ಪಡೆದಾದ ನಂತರ ಹೆಚ್ಚುವುದು. ಕೆಲವು ಸಮಯ ಆಹಾರ ಸೇವಿಸಿದ ಬಳಿಕವೂ ವಿಪರೀತ ಕೆಮ್ಮು ಬಂದು, ಉಂಡ ಆಹಾರ ವಾಂತಿಯಾಗಲೂ ಬಹುದು. ಶ್ವಾಸಕೋಶದಲ್ಲಿ ಕ್ಷಯ ರೋಗಾಣು ಭಾಗ ಕಟ್ಟಿ ಹೋದವರಾದಾಗ ಕೆಮ್ಮಿನ ಸಂಬಂಧವಾದ ರೀತಿ ವಿಶೇಷ ಕಡಿಮೆಯಾಗಬಹುದು. ಆದರೆ ಅದ ಇನ್ನಷ್ಟು ಉಗ್ರ ಗೊಂಡ ಕಾಲ ಕೆರಳುವಿಕೆಯ ಜೊತೆಯಲ್ಲೇ ಬಹಳ ಹೆಚ್ಚಿಗೆ ಕಫವೂ (Expectoration) ಸೇರು ಬರಬಹುದು.

ಕ್ಷಯರೋಗದಲ್ಲಿ ಕೆಲವು ಬಾರಿಗೆ ಕೆಮ್ಮು ರೋಗಿಯನ್ನು ತಲೆಕೆಡಿಸುವ ಪ್ರದರಿಂದ ಮತ್ತು ರೋಗಿಯ ಮಾನಸಿಕ ಶಕ್ತಿಯಿಂದ ಅದನ್ನು ತಡೆಯಿಟ್ಟುಕೊಳ್ಳಬಹುದಾಗಿದೆ. ಕೆಮ್ಮಿನಿಂದ ಶ್ವಾಸಕೋಶದಲ್ಲಿ ರೋಗಾಣುಗಳ ಪ್ರಸಾರ ಹರಡಲು ಕಾರಣವಾಗುವುದರಿಂದ ಅವಶ್ಯವಿದ್ದಾಗ ಮಾತ್ರ ಕೆಮ್ಮಬೇಕು ಮತ್ತು ಗಂಟಲನ್ನು ಸ್ವಚ್ಛ ಹಿಡಿಸಿಕೊಂಡು ಅದನ್ನು ಅದನ್ನು ತಡೆಯಬೇಕೆಂದು ರೋಗಿಗೆ ಸಲಹೆ ಕೊಡಬೇಕಿದೆ. ಆದ್ದರಿಂದ ಹೆಚ್ಚಿಗೆ ಕಫವನ್ನು ಹೊರಗೆ ಹಾಕಲೆಂದೇ ಕೆಮ್ಮುವುದು ಹಿತವಾಗಿಯೂ ದಾಖಲಿಕರ.

ಉಗುಳು ಇಲ್ಲವೇ ಕಫ:—ದೇಹದ ಯಾವುದೇ ಹೊರಗಿನ ಭಾಗದಲ್ಲಿ, ಉದಾ ಕೈ ಕೋಶದಲ್ಲಿ ಒಂದು ಹುಣ್ಣಾದರೆ, ಕ್ರಮೇಣ ಅದರಲ್ಲಿ ತುಂಬಿದ ಕೀವು ಹುಣ್ಣಿನ ಮೇಲ್ಭಾಗ ಒಡೆದು ಹೊರಗೆ ಹೋಗುವುದನ್ನು ನಾವು ಕಾಣುತ್ತೇವೆ. ಕೀವು ದೇಹದ ಪದರು (Tissue) ನಾಶವಾಗುವುದರಿಂದ ಉಂಟಾಗುತ್ತದೆ ಮತ್ತು ಯಾವ ರೋಗಾಣುಗಳಿಂದ ಹುಣ್ಣು ಉಂಟಾಯಿತೋ ಆ ರೋಗಾಣುಗಳು ಮತ್ತು ರಕ್ತ ಕಣಗಳಿಂದ (Blood cells) ಕೂಡಿರುತ್ತದೆ. ಅದೇ ರೀತಿ ಶ್ವಾಸಕೋಶಕ್ಕೆ ಕ್ಷಯದ ರೋಗಾಣು ತಗಲಿದಾಗ, ಸೋಂಕಿದ ಪ್ರದೇಶದಲ್ಲಿ ಪದರು ನಾಶವಾಗಿ ಆ ಕಲ್ಮಶವು ಶ್ವಾಸನಳಿಗೆ (Bronchi) ಮೂಲಕವೇ ಉಗುಳು ಇಲ್ಲವೆ ಕಫದ ರೂಪದಲ್ಲಿ ಹೊರಗೆ ಬರಬೇಕಾಗುತ್ತದೆ. ಆರಂಭದಲ್ಲಿ ಕಫದ ಅಂಶ ಕಡಿಮೆ ಇರುತ್ತದೆ. ದ್ರವ ರೂಪವಾದ ಶ್ಲೇಷ್ಮ (Mucous) ಮತ್ತು ಅದರಲ್ಲಿ ಅತಿ ಸೂಕ್ಷ್ಮ ಕಂದು ಬಣ್ಣದ ಚುಕ್ಕೆಗಳು ಕೂಡಿಕೊಂಡಿರುತ್ತವೆ. ರೋಗ ಬೆಳೆದ ಹಾಗೆಲ್ಲಾ ಕಫದಲ್ಲಿ ಚಿಕ್ಕ ಚಿಕ್ಕ ಗಂಟುಗಳ ಪದಾರ್ಥದ ಮುದ್ದೆಗಳೂ ಕಂಡುಬರಬಹುದು. ಶ್ವಾಸಕೋಶ ಸಂಬಂಧವಾದ ಪದರು ನಾಶವಾದ ಅಂಶ, ಶ್ವಾಸಕೋಶದ ಮತ್ತು ರಕ್ತನಾಳಗಳು ಮತ್ತು (Fibrin) ಚೂರುಗಳು ಹಾಗೂ ಅನೇಕ ಕ್ಷಯ ರೋಗಾಣುಗಳು ಈ ಕಫದಲ್ಲಿ ಸೇರಿಕೊಂಡಿರಬಹುದು. ಇನ್ನೂ ಕೆಲವು ರೋಗದ ನಂತರ ಆದರಲ್ಲಿ ಕೇಂದ್ರೀಕೃತ ಕಲ್ಮಶ ಮೊದಲಿಗೆ ಪ್ರಮಾಣ ಬೆಳೆದ್ದಾಗಿ ಬೇರೆ ರೋಗಾಣುಗಳನ್ನು ಗುರುತಿಸ ಕ್ರಮ ಕಾರಣವು. ಈ ಪದಾರ್ಥದ ಬಣ್ಣ ಹಳದಿ ಮಿಶ್ರಿತ ಕಂದು.

ಹಲವು ದೀರ್ಘ ಕಾಲೀನ ರೋಗಗಳಲ್ಲಿ ಶ್ವಾಸನಳಿಗೆಗಳಲ್ಲಿ ಉರಿ ಊತ (Inflammation) ಕಂಡುಬರುವುದುಂಟು. ಕ್ಷಯರೋಗಗಳಲ್ಲದ ಇತರ ರೋಗಗಳು ಶ್ವಾಸಕೋಶದೊಳಗಿನ ನೀರು ಸೇರಿ ತಗಲಿದ ಭಾಗದಲ್ಲಿ ಸೇರಿ ಹೋಗುವವು. ಆಗ ಉಗುಳಿದ ಕಫಕ್ಕೆ ಕೆಟ್ಟ ವಾಸನೆ ಇರುತ್ತದೆ ಮತ್ತು ಅದರ ಬಣ್ಣ ಹಸಿರು ಕಪ್ಪಾಗಿರಬಹುದು. ಇಲ್ಲವೇ ನೊರೆಯು ಹಾಗಿರಬಹುದು.

ಉಗುಳಿನಲ್ಲಿ ಕ್ಷಯ ರೋಗಾಣುಗಳ ಸಂಗತಿ ಅವು ದಿನಂಪ್ರತಿ ಅಧಿಕಾಧಿಕ ಸಂಖ್ಯೆಯಲ್ಲಿ ಹೊರ ಹೋಗಬಹುದು. ಕ್ಷಯ ರೋಗಗಳಾವಿನ ಪರಿಣಾಮ ಪ್ರಮಾಣ ೧ ರಿಂದ ಹಲವು ಗಳಷ್ಟು ಉದ್ದ ಮತ್ತು ೦.೩ ರಿಂದ ೦.೬ ಅಗಲವಿರುತ್ತದೆ. (೧=೧/೧೦೦೦ ಮಿಲಿಮೀಟರ್) ಓಟೆಯ ರೋಗಿಗೆ ಶ್ವಾಸಕೋಶದಲ್ಲಿ ಹೊಳ್ಳು (Cavity) ಬಿದ್ದಾಗಲಂತೂ ರೋಗಿಯು ದೈನಂದಿನ ಕಫದಲ್ಲಿ ಹೊರ ಬೀಳುವ ಕ್ಷಯರೋಗಾಣುಗಳ ಪ್ರಮಾಣ ಅತ್ಯಧಿಕವಿರುತ್ತದೆ. ಎಷ್ಟರ ಮಟ್ಟಿಗೆಂದರೆ ಅವನ ಕಫದಲ್ಲಿ ಹೊರಬಿದ್ದ ಸ್ಥಿತಿಯನ್ನು ಒಂದು ಜೀವಿಯನ್ನು ಕೊಡಲು ಸಾಕು. ಆಗ ಕೊಂದೂ ಸಾಲದು ಎಂದರೆ ಉಗ್ರ ಕೈ ಸಿಲಿಸಿದರೆ ಆ ಸಾಲು ಹಸಿರು ನಿಲ್ಲ ಉಗುಳು ಉಗ್ರತೆ ಹರಡಬಹುದು. ಕ್ಷಯರೋಗಿಯ ಉಗುಳು ಎಷ್ಟರ ಮಟ್ಟಿಗೆ ಅಪಾಯಕಾರಿಯಾಗಿದೆ. ಅದನ್ನು ಬಾಗ್ರತೆಯಾಗಿ ರೋಗಾಣುನಾಶಕ ದ್ರವ್ಯಗಳಲ್ಲಿ ಚೆಲ್ಲಿ ಏಕೆ ನಾಶಪಡಿಸಬೇಕು ಎಂಬುವುದು ಈ ಮೇಲಿನ ವಿಷಯವನ್ನು ತಿಳಿದ ನಂತರ ನಮಗೆ ಮನದಟ್ಟಾಗದಿರದು.

ಉಗುಳಿನಲಿ ರಕ್ತ: ಹಲವೊಮ್ಮೆ ರೋಗದ ಆರಂಭ ದೆಸೆಯಲ್ಲೇ ಉಗುಳಿನಲ್ಲಿ ರಕ್ತ ಕಂಡುಬರುವುದಿದೆ. ಇಂತಹ ಅವಸ್ಥೆಯಲ್ಲಿರೋದಿದ ರೋಗಿಯ ಅಗ್ರತಸ್ಥಿತಿ ಆರೋಗ್ಯವಂತನೆಂದು ಹೇಳಬೇಕು. ಕಾರಣ ರೋಗ ಆರಂಭವಾದಾಗಲೇ ವೈದ್ಯರನ್ನು ಕಾಣಲು ಅದು ನೆರವಾಗುತ್ತದೆ. ಹೆಚ್ಚಾಗಿ ರಕ್ತದ ರೇಖೆಗಳು (Streaks) ಉಗುಳಿನೊಂದಿಗೆ ಅಂಟಿಕೊಂಡಿರುವುದು ಕಂಡುಬರುತ್ತದೆ. ಇಲ್ಲಿ ನೆತ್ತರಿನ ಅಂಶ ಬಹಳ ಕಡಿಮೆ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ನೊರೆಯುಳ್ಳ ಕೆಂಪಗಿನ ರಕ್ತ ಬಹಳವಾಗಿ ಉಗುಳಿನೊಂದಿಗೆ ಹೊರಗೆ ಹೋಗುವುದಿದೆ. ಹೊರಗೆ ಹೋಗುವ ರಕ್ತದ ಪ್ರಮಾಣದಿಂದ ರೋಗದ ಜೀವಹಾನಿಯನ್ನು ನಿರ್ಣಯಿಸಲಾಗುವುದಿಲ್ಲ. ರೋಗದ ಆರಂಭದೆಸೆಯಲ್ಲಿ ರಕ್ತನಾಳದೊಳಗಿನ ಒಂದು ಸಣ್ಣ ನೆತ್ತರು ಉಗುಳಿನೊಂದಿಗೆ ಬರಬಹುದು. ಚಿಕ್ಕ ರೋಗದ ಮಾರ್ಗ ರಕ್ತನಾಳ (Vein) ಒಡೆದದ್ದರಿಂದ ಕಪ್ಪುಬಣ್ಣದ ನೊರೆಗೂಡಿದ ನೆತ್ತರು ಕಂಡುಬರುವುದು. ಒಂದು ಚಿಕ್ಕ ಕೆಂಪು ರಕ್ತನಾಳ (Artery) ಒಡೆದದ್ದರಿಂದ ಅಚ್ಚ ಕೆಂಪಗಿನ ರಕ್ತ ಬಹಳ ಅಂಶವಾಗಿ ಹೊರಹೋಗುವುದು. ನೊರೆಯ ರಕ್ತ ಬಹಳ ಕೆಂಪಗೆ ಹೋಗುವುದಾದರೂ ಮಾರು ದಿನದಿಂದ ಅದು ಕಪ್ಪಾಗಿ ಹೋಗಬಹುದು; ಮತ್ತು ಚಿಕ್ಕ ಚಿಕ್ಕ ಗಂಟುಗಳಾಗಿ ಇಲ್ಲವೆ ಮುದ್ದೆಯಾಗಿ ಅದು ಉಗುಳಿನೊಂದಿಗೆ ಹೊರಗೆ ಬರಬಹುದು. ನೆತ್ತರು ಹೆಪ್ಪುಗಟ್ಟುವುದರಿಂದ ಹೀಗಾಗುತ್ತದೆ. ರೋಗ ವಾಸಿಯಾಗುವ ಸ್ಥಿತಿಯಲ್ಲೂ ಬಿದ್ದು ರಕ್ತ ಕಂಡುಬರುವುದಿದೆ. ಫೈಬ್ರೋಸಿಸ್ (Fibrosis) ಎಂಬ ಸ್ಥಿತಿಯಲ್ಲಿ ಅತಿ ಚಿಕ್ಕ ಅಸ್ತವ್ಯಸ್ತ ರಕ್ತನಾಳಗಳು ಹರಿದು ಹೋಗುವುದರಿಂದ ಹೀಗಾಗುತ್ತದೆ. ಶ್ವಾಸಕೋಶದಲ್ಲಿ ಕ್ಷಯರೋಗದ ರೋಗಾಣು ಉಳ್ಳವರಿಗೆ ಸ್ಥಿತಿಯಲ್ಲಿದ್ದಾಗಲೇ ರಕ್ತಸ್ರಾವವಾಗುವುದರಿಂದ ರೋಗದ ರೋಗಾಣು ಹೆಚ್ಚುಬಹುದಾಗಿದೆ. ಕಾರಣ ಹಾಗೆ ಹರಿದು ಹೋಗುವ ರಕ್ತದಲ್ಲಿ ಕ್ಷಯರೋಗದ ಗಾಗಳು ಸೇರಿಕೊಂಡಿರಬಹುದು. ಈ ರಕ್ತವು ರೋಗ ರೋಗಾಣು ಶ್ವಾಸಕೋಶದ ನಳಿಗೆಯ ಇಲ್ಲವೇ ಮತ್ತೊಂದು ಶ್ವಾಸಕೋಶದ ನಳಿಗೆಗಳ ಮೂಲಕವಾಗಿ ಹರಡಬಹುದು. ಹೀಗಾಗಿ ರೋಗಾಣು ಪ್ರಸಾರವಾಗುತ್ತದೆ.

ಉಗುಳಿನಲ್ಲಿ ಕ್ಷಯರೋಗ ರೋಗಾಣು ಸಂಬಂಧವಾಗಿ ರಕ್ತ ಕಾಣಿಸಿಕೊಳ್ಳದು. ಹೃದಯ, ಇಲ್ಲವೆ ಮೂಗು, ಬಾಯಿ, ಮತ್ತು ಗಂಟಲುಗಳಲ್ಲಿ ಯಾವುದಾದರೂ ದೋಷದಿಂದ ರಕ್ತಸ್ರಾವವಾಗಿ ಆ ರಕ್ತವು ಉಗುಳಿನಲ್ಲಿ ಸೇರುವುದರಿಂದಲೂ ಇರಬಹುದು. ಯಾವ ಕಾರಣದಿಂದೆಂಬುದನ್ನು ಸರಿಯಾಗಿ ತಿಳಿದುಕೊಳ್ಳುವುದು ಅವಶ್ಯವಿದೆ. ದ್ವಾಂತಶ್ವಾಸ ಬಾಯಿಯಲ್ಲಿ ಒಂದು ಹಾಳು ಹಲ್ಲು ವಸಡಿನ ಬಳಿ ರಕ್ತಸ್ರಾವವನ್ನುಂಟು ಮಾಡಿ, ಅದರ ಸ್ವಲ್ಪ ಭಾಗವನ್ನು ವ್ಯಕ್ತಿಯು ಉಗುಳಿನಲ್ಲೂ ಅದರ ಸಂಬಂಧವಾದ ರಕ್ತವು ಕಂಡುಬರಬಹುದು. ಉಗುಳಿನಲ್ಲಿತ್ತೆನ್ನರು ಕಾಣಿಸಿಕೊಂಡರೆ ಆ ವ್ಯಕ್ತಿ ಹಿಗಿಲ ಗೊಳ್ಳಬಹುದು. ಅದೇ ರೀತಿ ಗಂಟಲಿನಲ್ಲಿ ಒಂದು ಅತ್ಯಲ್ಪ ರಕ್ತ ನಾಳ ಒಡೆದು ಸ್ರವದಿಂದ ಉಗುಳಿನಲ್ಲಿ ರಕ್ತ ಕಾಣಿಸಿಕೊಳ್ಳಬಹುದು. ಆದುದರಿಂದ ಇಂತಹ ಸಂದರ್ಭಗಳಲ್ಲಿ ಸ್ಪಷ್ಟ ಪರೀಕ್ಷೆಗೆ ತಕ್ಕದಾದವರೂ ವೈದ್ಯರ ಬಳಿ ಹೋಗಿ ಪರೀಕ್ಷೆ ಮಾಡಿಸಿಕೊಳ್ಳುವುದು ಲೇಸು.

ತೂಕದಲ್ಲಿ ಇಳಿತ:— ಹೆಚ್ಚಾಗಿ ಕ್ಷಯರೋಗದ ಅಸ್ತಿತ್ವವನ್ನು ತೋರಿಸಲು ನೆರವಾಗುವ ಪ್ರಮುಖ ಲಕ್ಷಣವೆಂದರೆ ತೂಕದಲ್ಲಿ ಇಳಿತ. ತೂಕದಲ್ಲಿ ಇಳಿತವು ದಿನಗಳಲ್ಲಿ ಕಂಡ ಬರುವ ಕೆಲವು ರೋಗಗಳಾಗಲ ಅದೇ ರೀತಿ ಇಳಿಯಬಹುದಾಗಿದೆ. ಇಲ್ಲವೆ ಕೆಲವರಲ್ಲಿ ಒಮ್ಮೆಲೇ ಒಂದೇ ತಿಂಗಳಲ್ಲಿ ೫-೬ ಪೌಂಡುಗಳಷ್ಟು ಇಳಿತ ಕಂಡುಬರುವುದೂ ಇದೆ. ಹಸಿವು ಇಲ್ಲದಿರುವಿಕೆ, ಅಜೀರ್ಣ

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್ ಫೆಡರೇಷನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ಸ್ಕೂಲ್ ಜುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ಸಪ್ಲೈಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ನಂಬ್ರದ ಗಳು ಮತ್ತು ಪಿಕಾಸಿಗಳು.
2. 12ನೇ ನಂಬರಿನ ಬಟಿ ಮತ್ತು ಹೊರೆ ಹೊರುವ ಕೋವಿಗಳು.
3. 12, 16 ಮತ್ತು 20ನೇ ನಂಬರಿನ ತೋಟಾಗಳು, ಕೋವಿ ಮದ್ದು ಮತ್ತು ಕೇಪುಗಳು.
4. 9" X 4" ಮತ್ತು 8" X 4" ಕಬ್ಬಿಣದ ಕೋಲೆಗಳು (Girders)
5. 8' X 3' X 24 (Gage) ಕಬ್ಬಿಣದ ತಗಡುಗಳು.
6. $1\frac{3}{4}$" X $\frac{5}{16}$" ಉಕ್ಕಿನ ಸ್ಪ್ರಿಂಗ್ (Spring steel flates)
7. ಕಾಫಿ ಮತ್ತು ತಿಕ್ಕರ ಗಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಾಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಖರೀ ಚೀಟಿ 'Special purchase permit' ಪಡೆಯಬೇಕಾಗಿದೆ.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ) ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್.)

(Diarrhoea) ಮುಂತಿ ಇತ್ಯಾದಿ ಲಕ್ಷಣಗಳೂ ಜೊತೆಗೂಡಿದ್ದರೆ ತೂಕವು ಘಟ್ಟನೆ ಇಳಿಯುವುದು. ಮಧುಮೂತ್ರದಂತಹ ರೋಗಗಳಿಂದಾಗಿಯೂ ತೂಕವು ಇಳಿಯುವುದರಿಂದ ಯಾವ ಕಾರಣದಿಂದ ತೂಕ ಇಳಿದಿದೆ ಎಂಬುದನ್ನು ಮೊದಲು ಕಂಡು ಹಿಡಿಯಬೇಕು. ಬೆಳೆಯುತ್ತಿರುವ ಮಕ್ಕಳಲ್ಲಿ ಏಕ ಪ್ರಕಾರದ ಸ್ಥಿತಿ ತೂಕವೂ ತೃಪ್ತಿಕರವಾದ ಲಕ್ಷಣವಲ್ಲ. ಬೇರೆ ಅಲ್ಪಾವಧಿಯಲ್ಲಿ ಏನೂ ಕಾರಣವಿಲ್ಲದೆ ದೇಹ ತೂಕ ಪ್ರಮಾಣದಲ್ಲಿ ಶೇಕಡಾ ೧೦ರಷ್ಟು ಇಳಿಯುವುದು ಅಸಾಮಾನ್ಯ ಸ್ಥಿತಿಯಾಗಿದೆ. ಅದು ಕ್ಷಯರೋಗದ ಲಕ್ಷಣವಾಗಿರಬಹುದೆಂದು ಊಹಿಸಬಹುದಾಗಿದೆ. ಚಿಕಿತ್ಸಾ ಕಾಲದಲ್ಲಿ ತೂಕವು ಹೆಚ್ಚುವುದು ಕಂಡುಬಂದರೆ ಚಿಕಿತ್ಸೆಯಿಂದ ರೋಗಿಯ ಆರೋಗ್ಯದ ಮೇಲೆ ಪರಿಣಾಮವಾಗಿದೆ ಎಂಬುದರ ಅರ್ಥವಾಗುತ್ತದೆ. ಚಿಕಿತ್ಸಾ ಸಮಯದಲ್ಲಿ ವಾರಕ್ಕೊಮ್ಮೆ ತೂಕ ತೆಗೆಯುವುದು ಒಳ್ಳೆಯದು. (ಸೆನೆಟೋರಿಯಮ್‍ಗಳಲ್ಲಿ ಈ ಕ್ರಮವನ್ನು ಅನುಸರಿಸುತ್ತಾರೆ). ಆದರೆ ಪ್ರತಿ ಬಾರಿ ತೂಕ ತೆಗೆಯುವಾಗ ಒಂದೇ ತೂಕಯಂತ್ರ (Scale) ಉಪಯೋಗಿಸುವುದು ಅತ್ಯಗತ್ಯ.

ಎದೆ ನೋವು:— ಶ್ವಾಸಕೋಶ ಸಂಬಂಧವಾದ ಕ್ಷಯರೋಗದಲ್ಲಿ ಎದೆ ನೋವು ಇರಲೇಬೇಕೆಂಬ ನಿಯಮವಿಲ್ಲ; ಕೆಲವೊಮ್ಮೆ ಅದು ಆರಂಭದ ಲಕ್ಷಣವಾಗಿರಬಹುದು. ಶ್ವಾಸಕೋಶದಲ್ಲಿ ಕ್ಷಯರೋಗಾಣುಗಳ ಚಟುವಟಿಕೆ ಆರಂಭವಾದೊಡನೆ ಈ ನೋವು ಕಾಣಿಸಿಕೊಳ್ಳಬಹುದು. ಹೆಚ್ಚಾಗಿ ಅದು ರೋಗ ಸೋಂಕಿದ ಬದಿಯ ಎದುರು ಭಾಗದಲ್ಲಿ ಇಲ್ಲವೆ ಪಾರ್ಶ್ವದಲ್ಲಿ ಕಾಣಿಸಿಕೊಳ್ಳುವುದು. ತೀವ್ರ ಪ್ಲುರಿಸಿ(Pleurisy) ಯ ಕಾರಣದಿಂದಲೂ ಎದೆ ನೋವು ಕಾಣಿಸಿಕೊಳ್ಳಬಹುದು. ಈ ವಿಷಯವನ್ನು ಮುಂದೆ ವಿವರಿಸಲಾಗುವುದು. ಆಲ್ಲದೊಮ್ಮೆ ಮುಂದೆ ಹೇಳುವ ರೀತಿಯಂತೆ ಚಿಕಿತ್ಸಾಕ್ರಮದಲ್ಲಿ ಅಂಟುವಿಕೆ (Aphesion)ಉಂಟಾಗುವುದಿದೆ. ಇದರಿಂದ ಸೆಳೆತದಂತಹ ನೋವು ಎದೆಯಲ್ಲಿ ತಲೆದೋರುವುದು. 'ಪ್ರಭಾತ'

೧೯೫೭ರಲ್ಲಿ 'ವಿನೋಬಾ ಕ್ರಾಂತಿ'

ಕುದಾರದಲ್ಲಿ ಘೋಷಣೆ

ಭಾರತದಲ್ಲಿ ೧೭೫೭ರಲ್ಲಿ ಪ್ಲಾಸಿಯ ಕ್ರಾಂತಿ ಆದಂತೆ, ೧೮೫೭ರಲ್ಲಿ ಸಿಪಾಯಿ ಕ್ರಾಂತಿ ಆದಂತೆ ೧೯೫೭ರಲ್ಲಿ ಅಹಿಂಸಕ, ಸಾಮಾಜಿಕ ಕ್ರಾಂತಿಯೊಂದನ್ನು ನಡೆಸುವುದಾಗಿ ಆಚಾರ್ಯ ವಿನೋಬಾ ಭಾವೆಯವರು ಕುದಾರದಲ್ಲಿ ೨೦ ಸಾವಿರ ಗ್ರಾಮಸ್ಥರ ಸಭೆಯಲ್ಲಿ ಘೋಷಿಸಿದರು.

'ನನ್ನ ಕ್ರಾಂತಿ ಕೊಲೆ ಮತ್ತು ರಕ್ತಪಾತಗಳಲ್ಲ. ಅದರ ಪ್ರೇಮದ ಆಧಾರದ ಮೇಲೆ ನಡೆಯುತ್ತದೆ. ಈ ಕ್ರಾಂತಿಗಾಗಿ ಸಮಾಜದಲ್ಲಿ ವಿಚಾರಗಳ ಪರಿವರ್ತನೆ ಮಾಡಬೇಕಾಗಿದೆ. ಲೋಕಮಾನಸದಲ್ಲಿ ಪರಿವರ್ತನೆ ತರಬೇಕು. ಅತ್ಯಂತ ಹೆಚ್ಚಿನ ಸ್ವಾರ್ಥತ್ಯಾಗ ಮಾಡಬೇಕು ಮತ್ತು ಜನರ ಜೊತೆಗೆ ಜನಶಕ್ತಿಯು ನಿಜವಾದ ಸಂದೇಶ ಕೊಡಬೇಕು. ಆಗಲೇ ಆಡಳಿತ ಶಕ್ತಿ, ಪ್ರಭುತ್ವ ಶಕ್ತಿ ಅದರ ಹಿಂದೆ ಹಿಂದೆ ಅನುಸರಿಸುತ್ತದೆ ಮತ್ತು ಈ ಕೆಲಸ ಶೀಘ್ರವಾಗಿ ಸಫಲವಾಗಬಲ್ಲದು' ಎಂದು ಹೇಳಿದರು.

ಜನಶಕ್ತಿ ಪ್ರಭುತ್ವದ ಕಡೆಗೆ ಗಮನ ಕೊಡದೆ ಸತ್ಯದ ಕಡೆಗೆ ಗಮನ ಕೊಟ್ಟಾಗ ಮಾತ್ರ ನಮ್ಮ ನಿಜವಾದ ಅರ್ಥದಲ್ಲಿ ಉದ್ಧಾರವಾಗುತ್ತದೆ. ಏಕೆಂದರೆ ಇಂದಿನ ಸಮಾಜ ಪದ್ಧತಿಯಲ್ಲೇ ದೋಷ ತುಂಬಿದೆ. ಕೆಲಸಗಾರರು ೮ ಗಂಟೆ ಕೆಲಸ ಮಾಡಿದರೂ ಅದನ್ನು ಸೇವೆ ಎಂದು ತಿಳಿಯುವುದಿಲ್ಲ. ಈ ವಿಚಾರ ತುಂಬಾ ತಪ್ಪಾದುದು. ಹೊಸ ಸಮಾಜ ರಚನೆ ಮಾಡುವ ಕೆಲ ರಾಷ್ಟ್ರಪತಿ ಅಥವಾ ಮಂತ್ರಿಗಳ ಕೆಲಸವಲ್ಲ. ಪ್ರಭುತ್ವಕ್ಕೆ ಹೋಗಿರುವ ಜನ ಸಹಾಯಕರಾಗುವುದಿಲ್ಲ. ಅವರೆಲ್ಲಾ ನೌಕರರಾಗಿದ್ದಾರೆ. ಕ್ರಾಂತಿಯ ಕೆಲಸ ಸಮಾಜ ಸೇವಕರದು. ಸಮಾಜದಲ್ಲಿ ಎಲ್ಲಾ ದುರ್ಗುಣಗಳನ್ನು ದೂರ ಮಾಡುವುದಕ್ಕಾಗಿ ವಾತಾವರಣ ನಿರ್ಮಿಸುವುದು ಅವರ ಕೆಲಸ. ಆ ಮೇಲೆ ನೂತನ ಪ್ರಭುತ್ವ ಆ ಮಾರ್ಗದಲ್ಲಿ ಹಿಂಬಾಲಿಸುತ್ತದೆ' ಎಂದು ವಿನೋಬಾರವರು ನುಡಿದರು.

ಬಿಹಾರಿನಲ್ಲಿ ಗೇಣಿದಾರರನ್ನು ಭೂಮಿಯಿಂದ ಬಿಡುಗಡೆ ಮಾಡುತ್ತಿರುವ ವಿಚಾರ ಪ್ರಸ್ತಾಪಿಸುತ್ತಾ 'ನಾನು ಆ ಎಲ್ಲಾ ಹಳ್ಳಿಗಳನ್ನು ಆ ಎಲ್ಲಾ ಕ್ಷೇತ್ರವನ್ನೂ ಕಾಣಬಯಸುತ್ತೇನೆ. ಯಾವುದಾದರೂ ವಸ್ತುವನ್ನು ಸಮಾಜದಲ್ಲಿ ಯಾರಾದರೂ ಕಾಸಿನಿಂದ ಪಡೆದರೆ ಅದರಲ್ಲಿ ಸುಖ ಮತ್ತು ಆನಂದ ಇರುವುದಿಲ್ಲ ಮತ್ತು ಅದರಿಂದ ತನ್ನ ಮಕ್ಕಳನ್ನು ಆನಂದದಿಂದ ಸಾಕಲಾಗುವುದಿಲ್ಲ. ನಾವು ನಮ್ಮ ಕುಟುಂಬಕ್ಕಾಗಿ ತ್ಯಾಗ ಮಾಡುವ ಮನೋವೃತ್ತಿ ಹೇಗೆ ಇದೆಯೋ ಹಾಗೆಯೇ ಇಡೀ ಸಮಾಜಕ್ಕಾಗಿ ತ್ಯಾಗ ಮಾಡುವ ಮನೋವೃತ್ತಿ ಮಾಡಬೇಕು' ಎಂದೂ ಆಚಾರ್ಯರು ತಿಳಿಸಿದರು.

ಪ್ರಜಾಪ್ರಭುತ್ವದಲ್ಲಿ ಸತ್ಯಾಗ್ರಹ.

'ಪ್ರಜಾಪ್ರಭುತ್ವದಲ್ಲಿ ಸತ್ಯಾಗ್ರಹಕ್ಕೆ ಸ್ಥಾನವಿಲ್ಲ. ಚಳವಳಿ ಮತ್ತು ಮುಷ್ಕರಗಳು ಮತ ಬದಲಾಯಿಸಲು ಅವಕಾಶವಿಲ್ಲದೇನೇ ಪ್ರಜಾಪ್ರಭುತ್ವ ಕಾರ್ಯ ಮಾಡಿಸುತ್ತ. ಈ ಕಾರ್ಯಕ್ಕೆ ಸತ್ಯಾಗ್ರಹ ವಿಘ್ನ ಉಂಟುಮಾಡುವುದು. ಅಲ್ಲದೆ ಅದು ಪ್ರಜಾಪ್ರಭುತ್ವದ ಅಡಿಗಲ್ಲನ್ನೇ ಅಲುಗಿಸುವ ಕಾರ್ಯದ ಭಂಗಕ್ಕೆ ಪ್ರೋತ್ಸಾಹ ನೀಡುವುದು' ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತರು ಹೇಳಿದ್ದುದು ಜಬ್ಬಲ್ಪುರದ ಪಿ. ಟಿ. ಐ. ವರದಿ ಮಾಡಿದೆ.

ಈ ಮಾತುಗಳ ಬಗ್ಗೆ ನನ್ನ ಅಭಿಪ್ರಾಯವೇನೆಂದು ಕೇಳುವ ಪತ್ರಗಳು ನನಗೆ ಬಂದವು. ಪಂಡಿತ ಪಂತರ ಈ ಮಾತುಗಳು ಖೇದಕರವಾದವು ಎಂದು ನನಗನಿಸಿ ಆ ಬಗ್ಗೆ ನಾನೊಂದು ಟಿಪ್ಪಣಿ ಬರೆದೆ. ಅದನ್ನು ಪ್ರಕಟಿಸುವ ಮೊದಲು ಪಂಡಿತ ಪಂತರು ಹೇಳಿದರೆನ್ನಲಾದ ಪ್ರಕಟವಾದ ಮಾತುಗಳನ್ನು ಅವರು ನಿಜವಾಗಿಯೂ ಹೇಳಿದರೇ ಎಂಬುದನ್ನು ಸಿದ್ಧಮಾಡಿಕೊಳ್ಳಬೇಕು ಎಂದು ನನ್ನ ಸಹಾಯಕರಲ್ಲೊಬ್ಬರು ಸೂಚಿಸಿದರು. ಆ ಸೂಚನೆಯಂತೆ ನನ್ನ ಟಿಪ್ಪಣಿಯ ಪ್ರತಿಯೊಂದನ್ನು ನಾನು ಪಂಡಿತ ಪಂತರ ಬಳಿಗೆ ಕಳಿಸಿದೆ. ಈ ಅವಧಿಯಲ್ಲಿ ಶ್ರೀ ವಿನೋಬಾರವರೂ ಈ ಸುದ್ದಿಯ ಬಗ್ಗೆ ತಮ್ಮ ಭಾಷಣವೊಂದರಲ್ಲಿ ಪ್ರಸ್ತಾಪಿಸಿದರು.

ನನಗೀಗ ಪಂಡಿತ ಪಂತರ ಉತ್ತರವು ಬಂದಿದೆ. ಅವರ ಪತ್ರ ಮತ್ತು ಶ್ರೀ ವಿನೋಬಾರ ಅಭಿಪ್ರಾಯ ಇವುಗಳಿಂದ ಈ ವಿಷಯದ ಮೂಲಭೂತ ವಿಚಾರದಲ್ಲಿ ಯಾವ ಸಂದೇಹವೂ ಉಳಿಯದು. ಆದರೆ ಹಿಂದುಮುಂದಿನ ಸಂದರ್ಭದಿಂದ ಪ್ರತ್ಯೇಕವಾಗಿ ಬಂದ ಪಿ. ಟಿ. ಐ. ವರದಿ ಅಯುಕ್ತವಾಗಿದೆ. ಪ್ರಜಾಪ್ರಭುತ್ವದಲ್ಲಿ ಸತ್ಯಾಗ್ರಹ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ ಎಂದು ಪಂಡಿತರು ಹೇಳಿದರೆಂದು ಅರ್ಥವಾಗುತ್ತದೆ.

ಈಗ ನಾನು ಸಿದ್ಧಪಡಿಸಿದ್ದ ಟಿಪ್ಪಣಿಯನ್ನು ಇಲ್ಲಿ ಬರೆಯುತ್ತೇನೆ. ಮೊದಲು ಅದು ಶ್ರೀ ಪಂತರ ಹೇಳಿಕೆಯ ಮೇಲಿನ ಟೀಕೆ ಎಂದೆನಿಸುವಂತಿದ್ದರೂ ಯಾವ ವಿಧವಾದ ಸಂಶಯವೇ ಆಗಲೊಲ್ಲದೇಕೆ— 'ಸತ್ಯಾಗ್ರಹ'ವೆಂದು ಕರೆಯಲ್ಪಡುವ ಪ್ರತಿಭಟನೆಯ ಪದ್ಧತಿಯ ತತ್ವಗಳ ಸಾರ ಮಾತ್ರ ಮೇಲಂತೆ ಅದು ಬರೆಯಲ್ಪಟ್ಟಿದೆ.

'ಸತ್ಯಾಗ್ರಹ—ಸತ್ಯಕ್ಕಾಗಿ ಆಗ್ರಹ— ಸರಕಾರದ ಸ್ವರೂಪವನ್ನು ಅವಲಂಬಿಸಿರುವುದಿಲ್ಲ. ಅದು ಒಂದು ಸತ್ಯಾಗ್ರಹಿಯ ನೈತಿಕ ಕರ್ತವ್ಯವಾಗಿದೆ. ಆದುದರಿಂದ ಅದು ಯಾವ ಕಾಲಕ್ಕೂ ಅಯೋಗ್ಯವೆಂದೆನಿಸಿಕೊಳ್ಳಲಾರದು. ಯಾವುದೊಂದು ಅನ್ಯಾಯದ ಸತ್ಯಾಗ್ರಹವು ಕಾಯಿದೆ ಅಥವಾ ಆಜ್ಞೆಯ ವಿರುದ್ಧ ನಡೆಸುವ ವೈಯಕ್ತಿಕ ಅಥವಾ ಸಂಘಟಿತ ಪ್ರತಿಭಟನೆಯ ಸ್ವರೂಪದ್ದಾಗಿರಲಿ, ಅಥವಾ ಯಾವುದೊಂದು ವಿಶಿಷ್ಟ ಕೇಡಿನ ವಿರುದ್ಧ ನಡೆಸುವ ಅಸಹಕಾರದ ಸ್ವರೂಪದ್ದಾಗಿರಲಿ ಇಲ್ಲವೆ ಉಪವಾಸದ ಸ್ವರೂಪದ್ದಾಗಿರಲಿ, ಸತ್ಯಾಗ್ರಹಿಯು ಪ್ರಜಾಪ್ರಭುತ್ವದಲ್ಲಿ ಕೂಡ ಸತ್ಯಾಗ್ರಹವನ್ನು ಬಿಟ್ಟುಕೊಡಲಾರನು. ಸಂಖ್ಯಾಬಲದಿಂದ, ಅಥವಾ ಅಧಿಕಾರದ ಒತ್ತಡದಿಂದ ಇಲ್ಲವೇ ಧನಬಲದಿಂದ ಕಷ್ಟಸಿದಾರಣೆಯು ಸಾಮರ್ಥ್ಯವಿಲ್ಲದವಲ್ಲಿ ಅಂಥ ಸಾಧ್ಯಭಾವನೆ ಇಲ್ಲದಾಗಿದ್ದಾಗ ಅಂಥವರ ಹೃದಯ ಪರಿವರ್ತನೆಗೆ ಮತ್ತು ಕರ್ತವ್ಯಬುದ್ಧಿಯ ಜಾಗೃತಿಗೆ ಯಾವುದೊಂದು ಸ್ವರೂಪದ ಸತ್ಯಾಗ್ರಹವೊಂದೇ ಅಹಿಂಸಾತ್ಮಕ ಉಪಾಯವಾಗಿದೆ. ಈ ಅರ್ಥದಲ್ಲಿ ಸತ್ಯಾಗ್ರಹವು ನೇರವಾದ ಪ್ರಯೋಗವಾಗುವುದು. ಹಾಗಿರುವುದರಿಂದ ಚಳವಳಿ ಮತ್ತು ವಾದಗಳಿಂದ ಹಾಗೂ ಇತರ ಕಾಯಿದೆಬದ್ಧ ಮಾರ್ಗಗಳಿಂದ ಪರಿವರ್ತನೆ ಅಸಾಧ್ಯವಾದಾಗ ಸತ್ಯಾಗ್ರಹಕ್ಕೆ ಶರಣು ಹೋಗಬೇಕಾಗುವುದು. ಸರಕಾರದ ಸ್ವರೂಪ ಯಾವುದೇ ಇರಲಿ ಅದನ್ನು ಅವಸರದಲ್ಲಿ ಅಥವಾ ಹೃದಯ ದೌರ್ಬಲ್ಯದಿಂದ ಸ್ವೀಕರಿಸಲಾಗದು. ಒಳ್ಳೆಯ ಆಡಳಿತವಿರುವ ಪ್ರಜಾಪ್ರಭುತ್ವದಲ್ಲಿ ಸತ್ಯಾಗ್ರಹಕ್ಕೆ ಅನುವಿರುವ ಅವಕಾಶಗಳು ಬಹಳ ಕಡಿಮೆಯಿರಬೇಕು. ಆದರೆ ಯೋಗ್ಯ ಪ್ರಸಂಗದಲ್ಲಿ ಕೂಡ ಅದಕ್ಕೆ ಸ್ಥಾನವಿಲ್ಲೆಂದು ಎಂದಿಗೂ ಆಗದು.'

೨೬-೮-೫೨. ಕಿ. ಘ. ಮಶ್ರೂವಾಲಾ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಬಂಡವಾಳ	ರೂ.	10,00,000
ವಸೂಲಾದ ಶೇರು ಬಂಡವಾಳ	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಕೆಳಗಿನ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದರ ಜೊತೆ ಕಾಫಿ ಮತ್ತು ಭತ್ತ ವಗೈರೆ ಬೆಳೆಗಳ ಅಡವಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಮತ್ತು ಹುಂಡಿಗಳ ಡಿಸ್ಕೌಂಟು ಮಾಡಲ್ಪಡುವುದು. ಫಿಕ್ಸೆಡ್, ಕರಂಟ್ ಮತ್ತು ಸೇವಿಂಗ್ಸ್ ಬ್ಯಾಂಕ್ ಠೇವಣಿಗಳ ಸ್ವೀಕರಿಸಿಯೂ ಬಡ್ಡಿಯನ್ನು ಕೊಡಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಸಿ. ಅಪ್ಪಯ್ಯ, ಪ್ರೆಸಿಡೆಂಟ್ ಬೋರ್ಡ ಡೈರೆಕ್ಟರ್ಸ್.

Edited Printed and Published by P. I. Belliappa at 'Kodagu' Press, Mercara, for Kodagu' Ltd.

Licence No. 60.
Licenced to Post without Prepayment.

Reg. No. M. 1850.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೧ | ತಾರೀಕು ೧೦-೧೦-೧೯೪೮ನೇ ಶುಕ್ರವಾರ | ಸಂಚಿಕೆ ೧೯

— ಅಸ್ತಂಗತ ಮಹಾಜ್ಯೋತಿ —

ಅಮರ ಮಹಾತ್ಮ ಗಾಂಧೀಜಿ.

ಲೇ:-ಶ್ರೀ ವಿ. ಎಸ್. ರಾಮಕೃಷ್ಣ, ಬಿ. ಎಸ್‌ಸಿ. (ಆನರ್ಸ್) ಬಿ. ಟಿ.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

೧೯೩೦ರ ರಾಜಕೀಯ ಆಂದೋಲನದಿಂದ ದೇಶದಲ್ಲಿ ಉಲ್ಬಣವಾದ ಪರಿಸ್ಥಿತಿ ಅಸ್ಪಷ್ಟವಾಯಿತು. ತೇಜ್‌ಬಹದೂರ್ ಸಪ್ರು, ಜಯಕರ್ ಮುಂತಾದ ಮಧ್ಯಸ್ಥಿಕೆಯ ಮುಂದಾಳುಗಳ ಪ್ರಯತ್ನದಿಂದ ಸರಕಾರಕ್ಕೂ ರಾಷ್ಟ್ರ ಮಹಾಸಂಸ್ಥೆಗೂ ಒಪ್ಪಂದವಾಗುವ ಏರ್ಪಾಡಾಗಿ ಗಾಂಧೀಜೀಯವರು ಬಿಡುಗಡೆ ಹೊಂದಿದರು. ಗಾಂಧಿ—ಇರ್ವಿನ್ ಒಪ್ಪಂದವಾಯಿತು. ಒಪ್ಪಂದದ ಶರತ್ತುಗಳನ್ನು ಜಾರಿಗೆ ತರುವುದರಲ್ಲೇ ಭಿನ್ನಾಭಿಪ್ರಾಯಗಳುಂಟಾದರೂ ಗಾಂಧೀಜಿ ಚಕ್ರಗೋಷ್ಠಿಗಾಗಿ ಲಂಡನ್ನಿಗೆ ತೆರಳಲು ಸಮ್ಮತಿಸಿದರು.

ಲಂಡನ್ನಿನ ಚಕ್ರಗೋಷ್ಠಿಯು ನಿರಾಶಾಜನಕವಾಗಿದ್ದಿತು. ಮಹಾತ್ಮಗಾಂಧೀಜೀ ಭಾರತಕ್ಕೆ ಮರಳಿದಾಗ ವೈಸ್‌ರಾಯ್ ಲಾರ್ಡ್ ವೆಲ್ಲಿಂಗ್ಟನನು ಕಾಂಗ್ರೆಸನ್ನು ತುಳಿಯಲು ಬದ್ಧಕಂಕಣನಾಗಿದ್ದನು. ಬೇರೊಂದು ದಾರಿಯು ಕಾಣದೆ ಮತ್ತೆ ೧೯೩೨ರಲ್ಲಿ ಮಹಾತ್ಮರು ಅಹಿಂಸಾತ್ಮಕ ಸಮರವನ್ನು ಹೂಡಿದರು. ಪ್ರಕ್ಷುಬ್ಧ ವಾತಾವರಣ ಉಂಟಾಗಿ ಶಾಸನಗಳು ಉಲ್ಲಂಘಿಸಲ್ಪಟ್ಟವು. ಅಸಂಖ್ಯಾತ ಭಾರತೀಯರು ಲಾಠಿಪ್ರಹಾರಗಳಿಂದಲೂ ಗುಂಡಿನೇಟುಗಳಿಂದಲೂ ಕಷ್ಟ ಸಹಿಸಿದರು. ತಮ್ಮ ಶರೀರವನ್ನು ಬಲಿದಾನವಾಗಿ ಅರ್ಪಿಸಿದ ಭಾರತೀಯರಿಗೇನೂ ಕೊನೆಯಿರಲಿಲ್ಲ. ಸತ್ಯಾಗ್ರಹದ ಸ್ವರೂಪವು ಭೀಷಣಸ್ವರೂಪವನ್ನು ತಾಳಿದ್ದರೂ ಸರಕಾರದ ನೀತಿ ಬದಲಾವಣೆ ಹೊಂದಲಿಲ್ಲ.

ಮಹಾತ್ಮರ ಆತ್ಮವೇ ಕಾಂಗ್ರೆಸನ್ನು ಚಾಲನಗೊಳಿಸಿದ ವಿದ್ಯುತ್ ಪ್ರವಾಹವು. ಅವರ ಏಕವ್ಯಕ್ತಿಯ ನೇತೃತ್ವದಲ್ಲಿ ಕಾಂಗ್ರೆಸ್ಸಿಂ ಭಾರವೆಂದು ಭಾವಿಸಿದ ಮಹಾತ್ಮರು ಕೆಲ ಕಾಲ ಬೇರೆಯಾಗಿರಲು ಆಶಿಸಿ ವಾರ್ಧಾ ಸಮೀಪ ಸೇವಾಗ್ರಾಮದಲ್ಲಿ ಆಶ್ರಮವೊಂದನ್ನು ಸ್ಥಾಪಿಸಿದರು. ಭಾರತೀಯ ಸಂಸ್ಕೃತಿಗೆ ಕೇಂದ್ರಪ್ರಾಯವಾದ ಆ ಆಶ್ರಮವು ಪ್ರಪಂಚದ ನಾನಾ ಭಾಗಗಳಿಂದ ರಾಜನೀತಿ ವಿಶಾರದರನ್ನೂ ಆಕರ್ಷಿಸಿತು. ಏಕವಸ್ತ್ರಧಾರಿಯಾದ ರಾಜಯೋಗಿಯ ಅಡಿದಾವರೆಗಳಲ್ಲಿ ರಾಜನೀತಿ ವಿಶಾರದರು ಪಾವನರಾದರು. ೧೯೩೭ರಲ್ಲಿ ೭ ಪ್ರಾಂತ್ಯಗಳಲ್ಲಿ ಪ್ರಾಂತೀಯ ಸ್ವತಂತ್ರವು ಅಂಗೀಕೃತವಾಗಿ ಕಾಂಗ್ರೆಸಿನ ಮಂತ್ರಿಮಂಡಲವು ಸ್ಥಾಪನೆಯಾದಾಗ ರಾಜಯೋಗಿಯ ದೈವೀಕ ಉಪದೇಶವನ್ನು ಪಡೆದು ಮಂತ್ರಿಗಳು ಪ್ರಾಂತ್ಯ ಸರಕಾರವನ್ನು ನಿರ್ವಹಿಸಿದರು. ಮಹಾತ್ಮರು ತಮ್ಮ ಉಪದೇಶಗಳನ್ನು ಜನತೆಗೆ ಸಾರಲು ಗುಜರಾತಿ, ಹಿಂದಿ ಮತ್ತು ಆಂಗ್ಲ ಭಾಷೆಗಳಲ್ಲಿ 'ಹರಿಜನ್' ಎಂಬ ಪತ್ರಿಕೆಯನ್ನು ಪ್ರಕಟಿಸಿ ದೇಶದಲ್ಲಿ ಸತ್ಯ, ಅಹಿಂಸೆ ತ್ಯಾಗ ಶಾಂತಿಗಳು ನೆಲೆಗೊಳ್ಳುವಂತೆ ಎಸಗಿದರು.

ದ್ವಿತೀಯ ಜಾಗತಿಕ ಯುದ್ಧವು ಐರೋಪ್ಯಖಂಡದಲ್ಲಿ ಘೋಷಿಸಲ್ಪಟ್ಟು ಭಾರತ ಸರಕಾರವು ಅಕ್ಷರಾಷ್ಟ್ರಗಳ ವಿರುದ್ಧ ಯುದ್ಧ ಸಾರಿತು. ರಾಷ್ಟ್ರ ಮಹಾಸಂಸ್ಥೆಯ ಕೇಳಿಕೆಯನ್ನು ಮನ್ನಿಸದೆ ಹೂಡಿದ ಯುದ್ಧಕ್ಕೆ ಭಾರತೀಯರು ಸಹಕರಿಸಕೂಡದೆಂದೂ ಎಲ್ಲ ವಿಧವಾದ ಸಮರಗಳನ್ನೂ ಅಹಿಂಸಾತ್ಮಕ ರೀತಿಯಲ್ಲೇ ಎದುರಿಸಬೇಕೆಂದೂ ಸಾರಿ ಮಹಾತ್ಮರು ವ್ಯಕ್ತಿಗತ ಸತ್ಯಾಗ್ರಹದ ದಿಗ್ದರ್ಶನವನ್ನು ವಹಿಸಿಕೊಂಡರು. ಆಚಾರ್ಯ ವಿನೋಭಾವೆಯವರು ಈ ಸತ್ಯಾಗ್ರಹದ ಪ್ರಥಮ ಯೋಧರಾಗಿ ಮಹಾತ್ಮರಿಂದ ಆರಿಸಲ್ಪಟ್ಟರು.

೧೯೪೨ರಲ್ಲಿ ಕ್ರಿಪ್ಸರು ಭಾರತಕ್ಕೆ ಆಗಮಿಸಿ ಸಂಧಾನ ನಡೆಸಿದರು. ಸಂಧಾನವು ನಿಷ್ಫಲವಾಗಲು ೧೯೪೨ರ ಆಗಸ್ಟ್ ೮ರಲ್ಲಿ ರಾಷ್ಟ್ರ ಮಹಾಸಭೆಯು ಬೊಂಬಾಯಿಯಲ್ಲಿ ಅಧಿವೇಶನ ನಡೆಸಿ ಇತಿಹಾಸ ಪ್ರಸಿದ್ಧವಾದ ನಿರ್ಧಾರವನ್ನು ಅಂಗೀಕರಿಸಿತು. 'ಬ್ರಿಟಿಷರೇ ಬಿಟ್ಟು ತೊಲಗಿರಿ' (ಕ್ವಿಟ್ ಇಂಡಿಯಾ) ಎಂದು ಮಹಾತ್ಮರು ಸಿಂಹಗರ್ಜನೆ ಮಾಡಿದರು. ಮಹಾತ್ಮರ ಮಹಾವಾಣಿ ಆಸೇತುಹಿಮಾಲಯ ಪರ್ಯಂತ ಪ್ರತಿಕ್ರಿಯೆಯನ್ನುಂಟುಮಾಡಿ ಲಂಡನ್ ರಾಜನೀತಿಕ್ಷೇತ್ರದಲ್ಲಿ ಅಲ್ಲೋಲಕಲ್ಲೋಲವನ್ನುಂಟುಮಾಡಿತು. ಸರಕಾರವು ಮಹಾತ್ಮರೇ ಮುಂತಾದ ರಾಷ್ಟ್ರೀಯ ಮಹಾನಾಯಕರನ್ನು ಮರುದಿನವೇ ಬಂಧಿಸಿ ಕಾರಾಗಾರಕ್ಕಟ್ಟಿತು.

'ಕ್ವಿಟ್ ಇಂಡಿಯಾ' ಎಂಬ ಕೂಗು ಕಾಶ್ಮೀರದಿಂದ ಕನ್ಯಾಕುಮಾರಿ ವರೆಗೆ ಸಾಗರದಿಂದ ಸಾಗರದ ವರೆಗೆ ಪ್ರತಿಧ್ವನಿತವಾಗಿ ಪ್ರಚಂಡ ಕೋಲಾಹಲವೆದ್ದಿತು. ೧೮೫೭ರ ಸಿಪಾಯಿದಂಗೆಗಿಂತಲೂ ಕಠೋರವಾದ ಕ್ರಾಂತಿಯು ಭಾರತದಲ್ಲಿ ನಡೆದುಹೋಯಿತು. ಕೆಲವು ಪ್ರದೇಶದಲ್ಲಿ ಬ್ರಿಟಿಷ್ ಸರಕಾರವು ತಿಂಗಳುಗಟ್ಟಲೆ ನಾಮಾವಶೇಷವಾಯಿತು. ಹುಡುಗರೂ ಸ್ತ್ರೀಯರು ಸತ್ಯಾಗ್ರಹಿಗಳೂ ಗುಂಡಿನೇಟಿಗೆ ಬಲಿಯಾದರು. ಕಾರಾಗೃಹಗಳು ಪವಿತ್ರೀಕೃತವಾದುವು.

ಮಹಾತ್ಮರು ಪೂನಾದ ಆಗಾಖಾನ್ ಅರಮನೆಯಲ್ಲಿ ಕಸ್ತೂರಿಬಾರವರೊಡನೆ ಬಂಧಿತರಾದರು. ಅಲ್ಲೇ ಮಹಾತ್ಮರ ಆಪ್ತಕಾರ್ಯದರ್ಶಿಗಳಾದ ಮಹದೇವದೇಸಾಯಿಯವರು ಪರಂಧಾಮವನ್ನೈದಿದರು. ಶೋಕಗ್ರಸ್ತರಾದ ಮಹಾತ್ಮರ ಚಿಂತಾಗ್ನಿಯು ಹೊತ್ತಿಕ್ಕಿರುವ ಕಾಲದಲ್ಲೇ ಮಹಾತ್ಮರ ಕಷ್ಟನಿಷ್ಠುರಗಳಲ್ಲಿ ಭಾಗಿಗಳಾಗಿ ಜತೆಗನುಕೂಲೆಯಾಗಿ ಜಗದ್ವಂದ್ಯೆಯರಾದ ಸಾಧ್ವಿ ಕಸ್ತೂರಿಬಾರವರು ರೋಗಗ್ರಸ್ತರಾಗಿ ಬಂಧನಾಗ್ರಹದಲ್ಲಿ ಭೌತಿಕ ದೇಹವನ್ನು ತ್ಯಜಿಸಿ ಕೀರ್ತಿಶೇಷರಾಗಿ ಭಾರತ ನಾರೀವೃಂದಕ್ಕೆ ಶಕ್ತಿಸ್ವರೂಪಿಣಿಯಾಗಿ ವಿರಾಜಿಸಿದರು. ಸೆರೆಮನೆಯಲ್ಲೇ ಮಹಾತ್ಮರು ೨೧ ದಿನಗಳ ಕಠಿಣೋಪವಾಸವನ್ನು ಕೈಗೊಂಡು ಅನ್ಯರ ಅಪರಾಧಗಳಿಗಾಗಿ ತನ್ನನ್ನು ತಾನು ದಂಡಿಸಿಕೊಂಡರು. ಸರಕಾರವು ದೇಹಾಲಸ್ಯದಿಂದ ಬಳಲಿದ್ದ ಮಹಾತ್ಮರನ್ನು ಬಿಡುಗಡೆ ಮಾಡುವಷ್ಟು ಉದಾರತೆ ತೋರಿಸಿತು.

೧೯೪೫ರಲ್ಲಿ ರಾಜಕೀಯ ಮುಖಂಡರ ಬಂಧಮುಕ್ತತೆಯಾಯಿತು. ದ್ವಿತೀಯ ಮಹಾಯುದ್ಧವು ಮುಗಿದು ಹೋಗಿ ಪ್ರಪಂಚದ ಪರಿಸ್ಥಿತಿ ಹದಗೆಟ್ಟಿತು. ಇನ್ನು ಬಹುಕಾಲ ಭಾರತವನ್ನು ಆಳಲು ತಾವು ಅಸಮರ್ಥರೆಂದು ಬ್ರಿಟಿಷರು ಅರಿತುಕೊಂಡರು. ಲಾರ್ಡ್ ಮೌಂಟ್ ಬ್ಯಾಟನ್ ರವರು ವೈಸರಾಯರಾಗಿ ಭಾರತಕ್ಕೆ ಆಗಮಿಸಿ ತಮ್ಮ ಸಲಹೆಗಳನ್ನು ಕಾಂಗ್ರೆಸ್ಸಿನ ಮುಂದಿಟ್ಟರು. ತಾತ್ಕಾಲಿಕವಾದ ಮಂತ್ರಿ ಮಂಡಲವು ಕೇಂದ್ರದಲ್ಲಿ ಸ್ಥಾಪಿತವಾಗಿ ವಿಶ್ವರಾಜಕಾರಣಿಗಳೆಲ್ಲೆಲ್ಲಾ ಪ್ರಸಿದ್ಧರಾದ ಮಹಾತ್ಮರ ರಾಜಕೀಯ ಉತ್ತರಾಧಿಕಾರಿಗಳಾದ ಜವಹಾರರು ರಾಷ್ಟ್ರ ಮಹಾರಥದ ಮಹಾಸಂಚಾಲಕರಾದರು. ಮೌಂಟ್ ಬ್ಯಾಟನ್ ರವರ ಸಲಹೆಯು ಅಂಗೀಕೃತವಾಗಿ ಭರತ ಖಂಡವು ಇಂಡಿಯಾ ಮತ್ತು ಪಾಕಿಸ್ತಾನವೆಂದು ವಿಭಜಿಸಲ್ಪಟ್ಟು ೧೯೪೭ನೇ ಆಗಸ್ಟ್ ೧೫ರಂದು ಎರಡು ಸ್ವತಂತ್ರ ರಾಷ್ಟ್ರಗಳು ಉದಯವಾಗಿ ರಾಷ್ಟ್ರೀಯ ಸಂಸ್ಥೆಯ ಆಶೆ ಆಕಾಂಕ್ಷೆಗಳು ಈಡೇರಿದುವು.

ಮಹಾತ್ಮರಿಗೆ ಭಾರತದ ವಿಭಜನೆಯು ಸ್ವಲ್ಪವೂ ಇಷ್ಟವಿರಲಿಲ್ಲ. ಹಿಂದೂಮುಸ್ಲಿಮರು ಭರತ ಖಂಡದಲ್ಲಿ ಶಾಂತಿಯಿಂದಲೂ ಸೌಹಾರ್ದತೆಯಿಂದಲೂ ಭ್ರಾತೃಭಾವದಿಂದಲೂ ನೆಲಸಿ ಪ್ರಬಲವೂ ಸ್ವತಂತ್ರವೂ ಆದ ರಾಷ್ಟ್ರವನ್ನು ಕಟ್ಟಬೇಕೆಂದು ಮಹಾತ್ಮರ ಅಭಿಲಾಷೆಯಾಗಿದ್ದಿತು. ಆದರೆ ದೈವೇಚ್ಛೆಯು ವಿಚಿತ್ರತರವಾಗಿದ್ದಿತು. ಭ್ರಾತೃ ಭಾವವು ಅಳಿದು ಹೋಗಿ ಹಿಂದೂ ಮುಸ್ಲಿಮರು ಪರಸ್ಪರ ಕಾದಾಟಕ್ಕೆ ಆರಂಭಿಸಿದರು. ಭಾರತದ ಎರಡು ಕಣ್ಣುಗಳಾದ ಹಿಂದೂ ಮುಸ್ಲಿಮರ ರಕ್ತದಿಂದ ಪವಿತ್ರ ಭಾರತ ನೆಲವು ಕಲುಷಿತವಾಯಿತು. ಬಂಗಾಳ, ಬಿಹಾರು ಮತ್ತು ಪಂಜಾಬುಗಳಲ್ಲಿ ಭೀಷಣ ಪರಿಸ್ಥಿತಿ ಪ್ರಾಪ್ತವಾಗಿದ್ದಾಗ ಮಹಾತ್ಮರು ಕಲ್ಕತ್ತೆಗೂ, ನವಖಾಲಿಗೂ ಬಿಹಾರಿಗೂ ಆಗಮಿಸಿ ಹಿಂದೂ ಮುಸ್ಲಿಮರಲ್ಲಿ ಬಾಂಧವ್ಯವನ್ನು ಸ್ಥಾಪಿಸಲು ತನ್ನ ಅತುಳವಾದ ಆತ್ಮಬಲವನ್ನು ಧಾರೆಯೆರೆದರು. ಪರಿಣಾಮವಾಗಿ ಮತ್ತೊಮ್ಮೆ ಹಿಂದೂ ಮುಸ್ಲಿಂ ಐಕ್ಯತೆ ಏರ್ಪಟ್ಟಿತು.

ಆದರೆ ಹರಡಿದ ವಿಷಗಾಳಿಯು ತನ್ನ ದುಷ್ಪ್ರಭಾವವನ್ನು ಪ್ರದರ್ಶಿಸದಿರಲಿಲ್ಲ. ಡೆಲ್ಲಿಯಲ್ಲಿ ಮತೀಯ ಕಲಹಗಳು ಉಂಟಾದುವು. ಎರಡು ಪ್ರಮುಖ ಧರ್ಮಗಳ ದೇವಾಲಯ ಮಸೀದಿಗಳು ಹಿಂಸಾವಾದಿಗಳ ದೌರ್ಜನ್ಯ ಪ್ರಯೋಗಶಾಲೆಗಳಾದುವು. ಮುಸ್ಲಿಮರ ಮಸೀದಿಗಳನ್ನು ಅವರಿಗೆ ಪುನಃ ಬಿಟ್ಟುಕೊಡುವುದೇ ಉದಾರತೆಯೆಂದೂ ಪ್ರೇಮದಿಂದ ದ್ವೇಷ ಅಳಿಯುವುದೆಂದೂ, ದ್ವೇಷವನ್ನು ಅಹಿಂಸೆಯಿಂದಲೇ ಗೆಲ್ಲಲು ಸಾಧ್ಯವೆಂದೂ ಮಹಾತ್ಮರು ಬೋಧಿಸಿದರು.

ಹಿಂದೂ ಮತೀಯ ಅಂಧಾಭಿಮಾನಿಗಳಿಗೆ ಕೊರತೆಯಿರಲಿಲ್ಲ. ವಿಶ್ವಧರ್ಮವನ್ನು ಪ್ರಚಾರಮಾಡಲು ಹೊರಟು ಗೀತೆ, ಉಪನಿಷತ್ತು ಕೊರಾನ್, ಬೈಬಲ್, ಜೆಂಡಾ ಅವೆಸ್ತಾ, ಗ್ರಂಥಸಾಹೇಬ್ ಮುಂತಾದ ಭಗವಂತನ ಆರಾಧನಾಮಂತ್ರಗಳನ್ನು ಕ್ರೋಢೀಕರಿಸಿ ಈಶ್ವರ ಅಲ್ಲಾ ಎಂಬೆರಡು ಹೆಸರುಗಳೂ ಪರಬ್ರಹ್ಮನ ವಿವಿಧ ನಾಮಗಳೆಂದು ಉಪದೇಶಿಸುವ ಮಹಾತ್ಮರ ಪ್ರಾರ್ಥನಾಸಭೆಯಲ್ಲಿ ದೌರ್ಜನ್ಯದ ಬಾಂಬೊಂದು ಆಸ್ಫೋಟಿಸಲಾಯಿತು. ಪರಮ ಭಾಗವತರೂ ಅಭಯ ಸತ್ಯಶಾಂತಿ ಪಕ್ಷಗಳೇ ಮೂರ್ತಿವೆತ್ತ ಸ್ಥಿತಪ್ರಜ್ಞರೂ ಆದ ಮಹಾತ್ಮರು ಬೆದರದೆ ಜಗ್ಗದೆ ಕುಗ್ಗದೆ ಪ್ರಾರ್ಥನೆಯನ್ನು ಮುಂದುವರಿಸಿ ವಿಶ್ವಧರ್ಮಾವಲಂಬನ, ಪ್ರೇಮ, ಶಾಂತಿ ಅಹಿಂಸೆಗಳ ತತ್ವ ಪೀಯೂಷವನ್ನು ಭಾರತೀಯರಿಗೆ ಉಣಿಸಿದರು.

೧೯೪೮ನೇಯ ಜನವರಿ ೩೦ನೇಯ ಶುಕ್ರವಾರ ವಿಶ್ವೇತಿಹಾಸದಲ್ಲಿ ದುರ್ಘಟನೆಯು ನಡೆದು ಯುಗಪುರುಷನ ಅವತಾರ ಸಮಾಪ್ತಿಯಾದ ಶೋಕ ದಿನ. ಯುಗಪುರುಷನು ತನ್ನ ಶಿಬಿರದಿಂದ ಪ್ರಾರ್ಥನಾಸಭೆಗೆ ಆಗಮಿಸುತ್ತಿದ್ದನು. ಅಹಿಂಸೆಯ ದಿವ್ಯಮಂಗಳ ಸ್ವರೂಪನು ಜನತೆಗೆ ಅಹಿಂಸೆ, ಸತ್ಯ, ಶಾಂತಿಗಳ ಮಹಾಸಂದೇಶವನ್ನು ಸಾರಲು ಹೊರಟಿದ್ದನು. ಎಂಥಹ ಪ್ರಮಾದ ನಡೆದು ಹೋಯಿತು! ಅಹಿಂಸೆಯ ಮೇರು ಹೀಗೆ! ದೈವೀಕ ಶಕ್ತಿಯ ಇದಿರು ಪೈಶಾಚಿಕ ವರ್ತನೆ 'ಹೇ, ಹೇ' ಎಂಬ ಶಬ್ದ ಮೂರಾವರ್ತಿ ಕೇಳಿಸಿತು. ಮ

ತೀಯ ಅಂಧಕಾರವು ಸಾಧ ರಾಮು ಗೋಡ್ಸೆಯ ಗುಂಡಿನೇಟು ವಿಶ್ವದ ಜನತೆಯ ಆತ್ಮಗಳನ್ನು ತತ್ ಮಹಾತ್ಮನ ಹೃದಯದಲ್ಲಿ ಧರಿಸಿದ್ದ ಮಹಾತ್ಮನ ಎದೆಗೆ ತಾಗಿ ರಕ್ತದೋಕುಳಿಯಿಂದ ಭಾರತ ನೆಲವು ಒದ್ದೆಯಾಗುತ್ತಿರಲು ಭರತ ಕುಲಲಲಾಮನು 'ಹಾ ರಾಮ್' ಎಂಬ ಶಬ್ದಗಳನ್ನು ಉಸಿರುತ್ತಾ, ಅವನಿಗೆ ಅನಂತನಾದನು. ಆ ಮಹಾಶರೀರದಲ್ಲಿ ರಂಜಿಸುತ್ತಿದ್ದ ದೇದೀಪ್ಯಕಾಂತಿಯೊಂದು ಹೊರಹೊಮ್ಮಿ ವಿಶ್ವದ ವಿರಾಟ ಆತ್ಮದಲ್ಲಿ ಸಮಾವೇಶಗೊಂಡು ಅಮರವಾಯಿತು.

ಪ್ರಪಂಚವು ಗೋಳಿಟ್ಟಿತು. ಅಘಟಿತ ಘಟನೆ ನಡೆದು ಹೋಯಿತು. ಭಾರತವು ದಿಕ್ಕಿಲ್ಲದ ತಬ್ಬಲಿ ಮಗುವಿನಂತೆ ಕಣ್ಣೀರಗೋಡಿ ಹರಿಸಿತು. ರಾಷ್ಟ್ರಮಹಾನಾಯಕರು ಕಂಬನಿಗರೆದರು. ೪೦ ಕೋಟಿ ಭಾರತೀಯರು ಅವರ ಬಾಪುವಿಗಾಗಿ ಗೋಳಿಟ್ಟರು. ದುಃಖಾಂಜಲಿಯು ಭಾರತ ನೆಲದಲ್ಲಿ ಪ್ರವಾಹರೂಪದಲ್ಲಿ ಹರಿದುಹೋಯಿತು. ರಾಜಘಾಟಿನಲ್ಲಿ ಯುಗಪುರುಷನ ಮಹಾಸಮಾಧಿಯಾಯಿತು. ಭೌತಿಕ ದೇಹವು ಬೆಂದು ಹೋಗಿ ಮಹಾತ್ಮರು ಅಮರರಾದರು. ಮಹಾತ್ಮರ ಭೌತಿಕ ದೇಹದ ಭಸ್ಮಾವಶೇಷದಿಂದ ಭಾರತದ ಪುಣ್ಯನದಿಗಳು ಪಾವನೀಕೃತವಾದುವು. ರಾಜಘಾಟಿನ ಮಹಾಸಮಾಧಿಯು ರಾಜನೀತಿ ವಿಶಾರದರಿಗೆ ಮುಮುಕ್ಷುಗಳಿಗೆ, ಸತ್ಯಾಗ್ರಹಿಗಳಿಗೆ ನಿಷ್ಕಾಮ ಕರ್ಮಯೋಗಿಗಳಿಗೆ, ವಿದೇಶದ ಪ್ರವಾಸಿಗರಿಗೆ ಸಕಲ ಭಾರತೀಯರಿಗೆ ಪವಿತ್ರ ಯಾತ್ರಾಸ್ಥಳವಾಯಿತು.

ಇಂತು ೭೯ ವರ್ಷ ಭಾರತದ ಬಾಂದಳದಲ್ಲಿ ಅನಿತ್ರ ಪ್ರಭೆಯಿಂದ ಬೆಳಗಿದ ಜ್ಯೋತಿಯು ಅಸ್ತಂಗತವಾಯಿತು. ಆ ಮಹಾಪುರುಷನ ಜೀವನ ಚರಿತ್ರೆಯೇ ಮಹಾಸಾಗರವಾಗಿರುವಾಗ ಅದನ್ನು ಸಂಕ್ಷೇಪಿಸಿ ಹೇಳಲು ಅಸದಳವಾಗಿರುವುದು. ಆ ಸತ್ಯ ಮಹಾಶರಧಿಯಲ್ಲಿ ಮುಳುಗಿ ಹುಡುಕಿದಷ್ಟು ಅನರ್ಘ್ಯರತ್ನಗಳು ಸಿಗುವುವು. ಭಾರತೀಯರು ಆ ಸತ ಮಹಾಸಾಗರದಲ್ಲಿ ಮುಳುಗಿ ಸತ್ಯಶೋಧಕರಾಗಿ, ಧಾರ್ಮಿಕ ವ್ಯಕ್ತಿಗಳಾಗಿ, ಕರ್ತವ್ಯಪರಾಯಣರಾದ ಕರ್ಮಯೋಗಿಗಳಾಗಿ ಅನ್ಯರಾದ ಮಹಾತ್ಮರ ದಿವ್ಯತೇಜಸ್ಸಿನಿಂದ, ನವೋತ್ಸಾಹವನ್ನು ಪಡೆಯುತ್ತಾ ಪ್ರಬಲತರವಾದ ರಾಷ್ಟ್ರವನ್ನು ಕಟ್ಟಿ ಭಾರತವು ಬಾಪುವಿನ ಆದರ್ಶರಾಮರಾಜ್ಯವಾಗುವಂತೆ ಅನುನಿತ್ಯವೂ ಪರಿಶ್ರಮಿಸಿ ಭರತಖಂಡದ ವಿಮಲ ಕೀರ್ತಿಯನ್ನು ದಿಗ್ದಿಗಂತಗಳಲ್ಲಿ ಹರಡಲಿ!!!

ಮಹಾತ್ಮಗಾಂಧೀ ಜೈ.

"ಕೊಡಗು" ಪತ್ರಿಕೆಯ ಏಜೆಂಟರು ಶ್ರೀ ಜೋಕಿರ ಮೊಣ್ಣಪ್ಪನವರು ನಾಪೋಕ್ಲಿಗೆ.

ವಿದ್ಯಾಲಯಗಳಲ್ಲಿ ಧಾರ್ಮಿಕ ಶಿಕ್ಷಣ.

ಲೇ:- ಶ್ರೀ ಕೆ. ಬಿ. ಐಯ್ಯಪ್ಪ, ಬಿ. ಎ., ಬಿ. ಟಿ., ನಾಪೋಕ್ಲು.

ಪಾಶ್ಚಾತ್ಯರು ನಮ್ಮ ದೇಶದಲ್ಲಿ ನೆಲಸಿರುವಾಗ, ನಮ್ಮ ಶಾಲೆಗಳ ಪಾಠ ಪ್ರವಚನಗಳಲ್ಲಿ ಅನೇಕಾನೇಕ ಲೋಪ ದೋಷಗಳಿದ್ದುವು. ಈಗಲೂ ಇವೆ. ಅವರ ಪ್ರಯೋಜನಕ್ಕೆ ಬೇಕಾದ ರೀತಿಯಲ್ಲಿ ಶಿಕ್ಷಣಾಭ್ಯಾಸವು ಸಾಗಿತು. ಈಗೀಗ ವಿದ್ಯಾಶೋಧಕರು ಯೋಗ್ಯ ಪ್ರತಿಕ್ರಿಯೆಯನ್ನು ಅನ್ವೇಷಿಸಿ, ಬಳಕೆಯಲ್ಲಿ ತರಲು ಪ್ರಯತ್ನಿಸುತ್ತಿದ್ದಾರೆ. ಧಾರ್ಮಿಕ ಪ್ರವಚನ ರಹಿತವಾಗಿರುವುದು, ಮಹಾ ಕೊರತೆಗಳಲ್ಲೊಂದಾಗಿದೆ. ಅತ್ಯುತ್ಕೃಷ್ಟ ಶ್ರೇಷ್ಠ ಧರ್ಮಗಳ ನೆಲೆವೀಡಾಗಿರುವ ನಮ್ಮ ಭರತ ಮಾತೆಯ ಮಡಲಿನಲ್ಲಿರುವ ಜನತೆಯ ಮನಗಳಲ್ಲಿ ಆಧ್ಯಾತ್ಮಿಕ ಅಭಿಪ್ರಾಯಗಳ, ನಿತ್ಯವೂ ಸರಾಗವಾಗಿ ಪ್ರವಹಿಸುತ್ತಿದೆ; ಮಾತ್ರವಲ್ಲ, ಧರ್ಮದ ಸೈನಿಕ ಶ್ವಾಸದ ಹಾಸುಹೊಕ್ಕಾಗಿದೆ. ಆಧ್ಯಾತ್ಮಿಕ ತೃಷೆಯು ಅಧಿಕವಾಗಿದೆ. ಆದರೆ ತೃಷೆಯನ್ನಡಗಿಸಿ, ತೃಪ್ತಿ ಮಾಡುವವರಿಲ್ಲ. ವಿದ್ಯಾರ್ಥಿಗಳ ಜೀವನದಲ್ಲಿ ಗಣನೀಯವಾದ ಶಿಸ್ತು, ಮತ್ತು ಮಂಗಳ ಸ್ವರೂಪವಾದ ಗುರಿ ಇರಬೇಕಾದರೆ, ಧರ್ಮ ಶಿಕ್ಷಣವು ಅನಿವಾರ್ಯವಾಗಿದೆ.

ಭಾರತೀಯರ ದೃಷ್ಟಿ ಆತ್ಮಿಕವಾದದ್ದು, ದೈವ ಸಮಾನವಾದದ್ದು. ಪಾಶ್ಚಾತ್ಯರ ದೃಷ್ಟಿ ಹಿಡಿತವಾದದ್ದು; ಭೌತಿಕವಾದದ್ದು. ಆದರೂ ಪಾಶ್ಚಾತ್ಯ ವಿದ್ಯಾಪೀಠಗಳಲ್ಲಿ, ಧಾರ್ಮಿಕ ಶಿಕ್ಷಣ ಗೌರವಯುಕ್ತವಾಗಿ ನಡೆಯುತ್ತಿದೆ. ನಮ್ಮ ಶಾಲೆಗಳಲ್ಲಿ ಇದಕ್ಕೆ ಅವಕಾಶವೇ ಇಲ್ಲ. ಇದನ್ನು ಅವಲೋಕಿಸುವಾಗ ಆಶ್ಚರ್ಯವಾಗದಿರದು. ವಿದ್ಯಾರ್ಥಿಗಳ ಸಾಮೂದಾಯಿಕ ಹಾಗೂ ವೈಯಕ್ತಿಕ ಜೀವನವನ್ನು ಸರಿಯಾಗಿ ರೂಪಾಂತರಗೊಳಿಸಿ ಸಜ್ಜನಿಗರನ್ನಾಗಿ ಮಾಡಬೇಕಾದರೆ, ಸಾಕಷ್ಟು ನೈತಿಕಾಭಿವೃದ್ಧಿಯಾಗಲೇಬೇಕು. ಇದಕ್ಕೆ ಬೇಕಾದ ಧರ್ಮತತ್ವಗಳನ್ನು ಕಲಿಸಬೇಕಾಗಿದೆ.

ಪರಮತ ಮತ್ತು ಅನ್ಯ ಸಂಸ್ಕೃತಿಯವರಾದ ಬಿಳಿಯರು ನಮ್ಮ ದೇಶದ ಆಡಳಿತ ಹೊಣೆಗಾರಿಕೆಯನ್ನು ಸಂಪೂರ್ಣ ಹೊತ್ತು, ಕ್ರೈಸ್ತ ಧರ್ಮ ಮಾತ್ರ ದೈವಸಮಾನ ಮತ, ಶ್ರೇಷ್ಠವೆಂದೂ, ಇತರ ಧರ್ಮಗಳು ದೋಷಪೂರಿತವಾಗಿದೆಯೆಂದೂ ಸಹಿಸಲಾಗದ ಅಪಪ್ರಚಾರಗಳನ್ನು ಮಾಡಿದ ಪರಿಣಾಮವಾಗಿ, ತತ್ಪೂರ್ವದಲ್ಲಿದ್ದ ಧಾರ್ಮಿಕ ಶಿಕ್ಷಣವು ಅಳಿದು ಹೋಯಿತು. ಹಿಂದೂ ವಿದ್ಯಾಲಯಗಳಲ್ಲಿಯೂ ಮತ್ತು ಮಹಮ್ಮದೀಯರ ಮದ್ರಸಗಳಲ್ಲಿಯೂ, ಬ್ರಿಟಿಷರು ಆಕ್ರಮಣಗಾರರಾಗುವ ಮುನ್ನ, ಧರ್ಮಬೋಧನೆಯು ನಡೆಯುತ್ತಿತ್ತು.

ಆಂಗ್ಲರಾದರೂ ಧರ್ಮ ಬೋಧನೆಗೆ ತೊಡಕಿಲ್ಲದಿಲ್ಲ. ಅತೀ ಉಗ್ರವಾದ ಅಡಚಣೆಯಾದರೆ, ಧರ್ಮ ಶಾಸ್ತ್ರಗಳಲ್ಲಿ ಒಮ್ಮತವಿಲ್ಲದಿರುವುದು. ಹಿಂದುಗಳಲ್ಲಿ, ಎಸಗಲ ಸಾಧ್ಯವಾದಷ್ಟು ಪಂಥಗಳು, ಜೊತೆಗೆ ವಿವಿಧ ಅನ್ಯಮತಗಳ ಸಂಕುಚಿತ ಭಾವನೆಗಳು—ಇದರಿಂದ ಆಯಾ ಮತಾನುಯಾಯಿಗಳು ಅವರವರ ಧರ್ಮವೇ ಅತ್ಯುತ್ಕೃಷ್ಟವೆಂದು ಬೋಧಿಸಿ, ಪರಧರ್ಮ ದ್ವೇಷವನ್ನು ಶಿಷ್ಯರ ಭಾವನೆಯಲ್ಲಿ ಬಿತ್ತುವುದಲ್ಲದೆ ಬೇರೆ ಏನಿಲ್ಲ. ಇದರಿಂದ ಒಗ್ಗಟ್ಟು, ಪರಸ್ಪರ ನಿರ್ಮಲ ಪ್ರೀತಿ ಭ್ರಾತೃತ್ವ ಮತ್ತು ಸಹಿಷ್ಣುತೆಯ ಬದಲು ಕೋಮುವಾರು ಕಲಹ ವಸ್ತು ವೃದ್ಧಿಗೊಂಡು, ವಿದ್ಯಾರ್ಥಿಗಳ ಜೀವನವೇ ಅಲ್ಲೋಲ ಕಲ್ಲೋಲವಾಗಬಹುದು.

ಈ ಅನರ್ಥಕಾರಕ ಪರಿಣಾಮವನ್ನರಿತೇ ಪೂಜ್ಯ ಗಾಂಧೀಜಿಯವರು ಸಹ, ಸಾರ್ವಜನಿಕಗಳಲ್ಲಿ ಧರ್ಮ ಶಿಕ್ಷಣವು ಅನವಶ್ಯಕವಾಗುವುದೆಂಬುದಾಗಿ ಸಾರಿದ್ದಾರೆ. ಸನಾತನ ಧರ್ಮ ಜ್ಯೋತಿಯಾಗಿದ್ದು ಮತ್ತು ಸ್ವಾತಂತ್ರ್ಯ ಸಮರದಲ್ಲಿ ಸಹ ಧರ್ಮವನ್ನೇ ತಳಹದಿಯನ್ನಾಗಿಟ್ಟುಕೊಂಡಿದ್ದ, ಅವರು ಹೀಗೆ ಅಭಿಪ್ರಾಯಪಡದೆಂದರೆ ಸೋಜಿಗವೇ ಸರಿ. ಆದರೆ ಅವರ ಹೇಳಿಕೆಗಳನ್ನು ಸಮರ್ಥಿಸುವ ಬಲವಾದ ಕಾರಣಗಳನೇಕ ಇವೆ. ವಿವಿಧ ಮತೀಯ ವಿದ್ಯಾರ್ಥಿಗಳು ಕಲಿಯುವ ಶಾಲೆಗಳಲ್ಲಿ ಧರ್ಮಬೋಧನೆಯನ್ನು ಪ್ರಾರಂಭಿಸಿದರೆ ಪರಮತ ದ್ವೇಷ ಬೆಳೆತು, ಐಕ್ಯತೆ ಛಿನ್ನಭಿನ್ನವಾಗುವುದಲ್ಲದೆ ಉತ್ತಮ ಫಲ ಸಿಂಧಿಸಲಾರದು. ಕೋಮುವಾರು ಭಾವನೆಯು ವಿಷ ಬೀಜಕ್ಕೆ ಉತ್ತಮ ಮಣ್ಣಾಗದಿರದು.

ನಮ್ಮ ನೂತನ ರಾಜ್ಯಘಟನೆಯ ಕರಡಿನ, ೧೯,೨೦.೨೧ ಮತ್ತು ೨೨ನೇ ಅಂಗಗಳಲ್ಲಿ ವ್ಯಕ್ತಿಗಳ ಧಾರ್ಮಿಕ ಪಾಲನೆ ವಿಚಾರದಲ್ಲಿ ಹೀಗೆ ನಮೂದಿಸಿದೆ. 'ಪ್ರತಿಯೊಬ್ಬ ಪ್ರಜಾಹಕ್ಕು ಪಡೆದವನಿಗೆ ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯವಿದೆ. ತನ್ನ ಆತ್ಮವಿಶ್ವಾಸದಂತೆ, ಯಾವ ಧರ್ಮವು ಪಾಲಿಸಲು ಯೋಗ್ಯವೆಂದು ಮನಸ್ತೃಪ್ತಿಯಾಗುತ್ತದೋ ಅದನ್ನು ಅನುಸರಿಸಬಹುದು' ಇದರಿಂದ ಸಾರ್ವಜನಿಕ ಶಾಲೆಗಳಲ್ಲಿ ನಿರ್ದಿಷ್ಟವಾಗಿ ಯಾವುದೇ ಒಂದು ಧರ್ಮ ಬೋಧನೆಗೆ ಸಾಧ್ಯತೆ ಅಸಿನ್ನವಾಗುತ್ತದೆ.

ಆದರೆ, ಈ ರೀತಿಯ ಕಷ್ಟ ಪರಂಪರೆಗಳನ್ನು ಹೋಗಲಾಡಿಸಿ, ಮಕ್ಕಳ ನೈತಿಕಾಭಿವೃದ್ಧಿಯಾಗುವಂತೆ ಮಾಡುವುದು, ಜವಾಬ್ದಾರಿಯುಳ್ಳ ಹೊತ್ತವರ ಉದಾತ್ತ ಧ್ಯೇಯವಾಗಿರಬೇಕು. ಸರ್ವಾರ್ಥನೀಯವಾದ ಉತ್ತಮ ನೀತಿ ಮತ್ತು ದಿವ್ಯ ಮನೋಭಿಪ್ರಾಯಗಳು ಉದ್ಭವಿಸಿ ಆದರ್ಶ ವ್ಯಕ್ತಿಗಳನ್ನಾಗಿ ರೂಪಿಸಬೇಕಾದರೆ, ಧರ್ಮ ತತ್ವಗಳ ಬಲವಂತ ಅಡಿಪಾಯ ವಿದ್ಯಾರ್ಥಿಗಳ ಹಿಂದಿರಬೇಕು. ಆಧ್ಯಾತ್ಮಿಕ ವಿಚಾರಗಳು, ಬಾಲಕರ ನಾನಾ ಜೀವನಾವಧಿಯ ಅವಸ್ಥೆಗಳಲ್ಲಿ, ಮಟ್ಟಕ್ಕೆ ತಕ್ಕಂತೆ ಮಥನವಾಗಿ ಅಂತರಂಗದಲ್ಲಿ ಸ್ಥಿರವಾಗಿ ಬೇರೂರಬೇಕು. ಈ ರೀತಿಯ ಧಾರ್ಮಿಕ ಶಿಕ್ಷಣ ಕಲಿಸುವುದು ಬಹು ಸುಲಭವಾಗಿದೆ. (೧) ಸಾಮೂಹಿಕ ಪ್ರಾರ್ಥನೆಯ ಧ್ಯೇಯ. (೨) ಶಾಲೆಯ ದೈನಂದಿನ ಕರ್ತವ್ಯದಲ್ಲಿ ಹೊಂದಿಕೊಂಡಿರುವ ಮತ್ತು ಶಾಂತ ಸಾಮಾನ್ಯ ವಾತಾವರಣದ ಕಲ್ಪನೆ ಹಾಗೂ ಸೃಷ್ಟಿ. (೩) ಅಧ್ಯಾಪಕರು ಆದರ್ಶ ಶೀಲರಾಗುವುದು ಅಭ್ಯಾಸ ಜ್ಞಾನಾರ್ಜನೆ.

ವಿದ್ಯಾಲಯಗಳಲ್ಲಿ ಧಾರ್ಮಿಕ ಶಿಕ್ಷಣದ ಅವಶ್ಯಕತೆಯ ಪರಿಶೀಲನೆಗಾಗಿ ಕೇಂದ್ರ ಸರಕಾರವು ನಮ್ಮ ಉಪಾಧ್ಯಕ್ಷರಾದ ಶ್ರೀ ರಾಧಾಕೃಷ್ಣನ್‌ರವರ ನೇತೃತ್ವದಲ್ಲಿ ವಿಮರ್ಶನ ಸಮಿತಿಯೊಂದನ್ನು ರಚಿಸಿದ್ದರು. ಅವರು ತಮ್ಮ ಸರ್ವಸಮ್ಮತ ಅಭಿಪ್ರಾಯಗಳನ್ನು ತಮ್ಮ ವರದಿಯ ಮೂಲಕ ಸೂಚಿಸಿದ್ದಾರೆ. ಆದರೆ ಬರೇ ಕಾಲೇಜಿನಲ್ಲಿ ಮಾತ್ರ ವಾರಕ್ಕೆ ಒಂದು ಗಂಟೆ ಧರ್ಮ ಬೋಧನೆ ಮಾಡಬಹುದೆಂದಿದ್ದಾರೆ. ಸರ್ವ ಮತಗಳ ಸಾರಾಂಶ, ವಿಚಾರಗಳನ್ನು ಆತ್ಮದ ಸ್ಥಿರತೆ ಮತ್ತು ನಂಬಿಕೆ ಮತ್ತು ದೈವಭಕ್ತಿಯ ಪ್ರಾಶಸ್ತ್ಯವನ್ನು ಬೋಧಿಸಬೇಕೆಂದು ಸಾರಿದ್ದಾರೆ. ಬರೇ ಧಾರ್ಮಿಕ ಗ್ರಂಥಗಳ ಪಠನ ಸಾಲದು; ವಿದ್ಯಾಲಯಗಳ ವಾತಾವರಣವೇ ಧಾರ್ಮಿಕವಾಗಿ ಮಾರ್ಪಾಡಾಗಬೇಕೆಂದಿದ್ದಾರೆ. ಕಾರ್ಯಾರಂಭದಲ್ಲಿ ನಿತ್ಯವೂ ಮೌನಧ್ಯಾನದ ವ್ಯವಸ್ಥೆ. ಕೀರ್ತಿಶೀಲ ಧರ್ಮ ಪ್ರಚಾರಕರಾದ ಬುದ್ಧ, ಶಂಕರಾಚಾರ್ಯ, ತುಕಾರಾಮ, ರಾಮದಾಸ, ಮಹಮ್ಮದ್, ಜೀಸಸ್ ಕ್ರೈಸ್ಟ್, ನಾನಕ್, ಗಾಂಧೀಜಿ, ಮುಂತಾದವರ ಜೀವನ ಚರಿತ್ರೆ, ಬೋಧನೆ, (ಅವರ ಧಾರ್ಮಿಕ ಕೃತಿಗಳನ್ನೆ ಒತ್ತಿ ಹೇಳಬೇಕು) ಮತ್ತು ಸರ್ವಮತಗಳ ಏಕಾಭಿಪ್ರಾಯಗಳನ್ನು ಮಾತ್ರ ಹೆಕ್ಕಿ ಧರ್ಮದ ಆಳದಿಂದ ದೈವಮೂಲ ಸೂತ್ರಗಳ ರೂಪರೇಷೆಗಳನ್ನು ವಿಮರ್ಶೆಮಾಡಬೇಕು.

ಈ ಮೇಲಿನ ಸಲಹೆಗಳೆಲ್ಲಾ ಅತ್ಯುತ್ತಮವಾಗಿರುತ್ತದೆ. ಇದರಿಂದ ಒಂದೇ ಮತಾಭಿಪ್ರಾಯಗಳನ್ನು ಸಮರ್ಥಿಸಿದಂತಾಗುವುದಿಲ್ಲ. ಪರಮತ ದ್ವೇಷ, ಕೋಮುವಾರು ಸಂಕುಚಿತ ಅಭಿಪ್ರಾಯಗಳು ಮನಸ್ಸಿಗೆ ಹೊಳೆಯದು. ಆದರೆ ಬರೇ ಕಾಲೇಜಿನಲ್ಲಿ ಮಾತ್ರ ಈ ಬೋಧನೆಯಾಗಬೇಕೆನ್ನುವುದು ನನ್ನ ಅಭಿಪ್ರಾಯದಲ್ಲಿ ತೃಪ್ತಿಕರವಾಗದು. ಪ್ರಾಥಮಿಕ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ಸಹ ಅವರವರ ಮಾನಸಿಕ ಮಟ್ಟಕ್ಕೆ ತಕ್ಕಂತೆ ಧರ್ಮವಾತಾವರಣವನ್ನು ಕಲ್ಪಿಸಲೇಬೇಕು. ಬೋಧನೆಗಿಂತ ಶಾಲಾ ಸಂಸ್ಥಾನ ಆಡಳಿತ ಕ್ರಮದಿಂದಲೂ ಅಧ್ಯಾಪಕರ ಆಧ್ಯಾತ್ಮಿಕ ನಡತೆಯಿಂದಲೂ ತೋರಿಸಬಹುದು.

ದಿನನಿತ್ಯದ ಶಾಲೆಯ ಕಾರ್ಯ ಪ್ರಾರಂಭದಲ್ಲಿ ಸಾಮೂಹಿಕ ಪ್ರಾರ್ಥನೆ ಕಡ್ಡಾಯವಾಗಿ ನಡೆಸಬೇಕು. ಇದು ಬಾಲಕರ ದೈನಿಕ ನಡತೆಯಲ್ಲಿ ಸಾತ್ವಿಕ ಪ್ರಭಾವವನ್ನುಂಟುಮಾಡುವುದು. ಕ್ರೈಸ್ತಶಾಲೆ

ಗಳಲ್ಲಿರುವಂತೆ ಮನೋನಿಧ್ಯಾನಕ್ಕೆ ಅವಕಾಶ ಕೊಡುವುದು ಮತ್ತೊಂದು ಹೆಚ್ಚಿನ ಮೆಟ್ಟಿಲಾಗುವುದು. ಹಲವು ಧರ್ಮ ಸಂಸ್ಥಾಪಕರ ಪ್ರಕಾಶಮಯ ಸತ್ಪ್ರಭಾವಗಳನ್ನೂ, ಸದ್ಗುಣಗಳನ್ನೂ ಸರಳ ರೂಪದಲ್ಲಿ ಮುಂದಿಟ್ಟು ಮಾಡಬೇಕು. ಧಾರ್ಮಿಕ ಚರ್ಚೆ, ತತ್ವಾನ್ವೇಷಣೆ ಅಗತ್ಯವಿಲ್ಲ; ಇವು ಶುಷ್ಕವಾಗುವದರಲ್ಲಿ ಸಂಶಯವಿಲ್ಲ. ಸತತ ಶಾಂತಿಯ ವಾತಾವರಣ ಕಲ್ಪನೆ ಪ್ರಧಾನ ಅಧ್ಯಾಪಕರಲ್ಲಿ ಎಲ್ಲ ಮತಗಳಲ್ಲಿಯೂ ಏಕ ರೀತಿಯ ಗೌರವವಿರಬೇಕು. ಕಾರಣ ಸಕಲ ಧಾರ್ಮಿಕ ಮುಂದಾಳುಗಳ ಅಂತಿಮ ಗುರಿ ಒಂದೇ; ಹಾದಿಮಾತ್ರ ಬೇರೆ ಬೇರೆಯಾಗಿದೆ. ಬೇರೆ ಬೇರೆ ಜಾತಿಯ ಮಕ್ಕಳಲ್ಲಿ ಪರಸ್ಪರ ಸಹೋದರ ಭಾವ ಸೃಷ್ಟಿ ಪ್ರೀತಿ ಬೆಳೆಯಬೇಕಾದರೆ ಸರಿಸಮಾನ ಆಧರ ವತ್ತ ಗೌರವ ಪ್ರತೀಯೊಂದು ಧರ್ಮದಲ್ಲಿ ಎತ್ತಿ ತೋರಿಸಬೇಕು. ನಾನಾ ಯುಗ ಪುರುಷರ ಧಾರ್ಮಿಕ ವೈಶಿಷ್ಟವನ್ನು ಬೋಧಿಸಬಹುದು. ಧರ್ಮಶ್ರೇಷ್ಠ ವ್ಯಕ್ತಿಗಳ ಮಹೋಪದೇಶವೆಂದೂ ಸಾಮೂಹಿಕವಲ್ಲವೆಂದೂ ಶಿಸ್ತುಬದ್ಧವಾಗಿರುವಪ್ರಯುಕ್ತ ಸುಕಾರ್ಯ ಬದ್ಧಾಯ ವ್ಯವಸ್ಥೆ ಮಾಡಲು ಎಡೆಯಿಲ್ಲವೆಂದೂ ಸಂಕೋಚವಿಲ್ಲದೆ ನುಡಿಯಬಹುದು. ಆದರೆ ವಿದ್ಯಾಲಯಗಳಲ್ಲಿ ಸಾಮೂಹಿಕ ಧಾರ್ಮಿಕ ವಾತಾವರಣವಿರಲೇಬೇಕು. ಅಂದರೆ ಪಡೆ ನಡಿ ನೀತಿಗಳಲ್ಲಿ ಸತ್ಸಂಘಕ್ಕೆ ತುಂಬ ತಿಳುಕಳ್ಳಿರಬೇಕು. ಸರ್ವತೋಮುಖವಾದ ಅಭಿವೃದ್ಧಿಗೂ, ಶ್ರೇಯಸ್ಕರ ಸಮಾಜ ಶಿಕ್ಷಣಕ್ಕೂ ಇದು ಅನಿವಾರ್ಯವಾಗಿದೆ. ನಮ್ಮ ಪ್ರಾಚೀನ ಸಾಂಸ್ಕೃತಿಕ ಹಿರಿಮೆ ಪುನರುಜ್ಜೀವನಗೊಂಡು ಸರ್ವರಿಗೂ ಮಾನವರನ್ನಾಗಿ ಮಾಡಬೇಕಾದರೆ ಶಿಕ್ಷಣಾಲಯಗಳಿಂದಲೇ ಸಾಧ್ಯ. ವಿದ್ಯಾರ್ಥಿಗಳಲ್ಲಿರುವ ಧಾರ್ಮಿಕ ಸಂಕುಚಿತ ಭಾವನೆಗಳನ್ನು ನಿರ್ಮೂಲ ಮಾಡಿ ಮನೋವಿಕಾಸ ಗೊಳಿಸಬೇಕಾದರೆ ಸರ್ವಮತಗಳಲ್ಲಿ ಏಕರೀತಿಯ ಆದರವನ್ನೂ ತೋರಿಸಬೇಕಾದರೆ ಧರ್ಮನಿಷ್ಠರಾಗಿ ಬಾಳಿ ಬದುಕಬೇಕಾದರೆ ಶಾಲೆಗಳಲ್ಲಿ ಈ ರೀತಿಯ ಎಡೆಗಳನ್ನು ಬಿಡದುದುವಾಗಿ ಕಲಿಸಲೇ ಬೇಕಾಗುತ್ತದೆ. ನಮ್ಮ ಕೊಡಗು ದೇಶದಲ್ಲಿ ಎರಡು ವರ್ಷಗಳ ಹಿಂದೆ ಈ ವ್ಯವಸ್ಥೆ ಇಂದಿತ್ತು, ಕಾರಣಾಂತರದಿಂದ ಮಾಯವಾದದ್ದು ಚಿಂತಾಕ್ರಾಂತವಾಗಿದೆ.

ಗಾಂಧಿ ಜಯಂತಿ.

ಮಹಾತ್ಮಗಾಂಧಿಯವರ ಜಯಂತ್ಯುತ್ಸವವು ಮಡಿಕೇರಿಯಲ್ಲಿ ಬೆಳಗೆ ಪ್ರಭಾತ ಫೇರಿ, ಸಾಯಂಕಾಲ ರಥ ಸಮೇತ ಮೆರವಣಿಗೆಯಿಂದ ನಡೆಯಿತು.

ಭಾಗಮಂಡಲದಲ್ಲಿ ಶ್ರೀ. ಕೆ. ಎಸ್. ನಾಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಗೀತಾ ಪಠನ, ಧ್ವಜವಂದನೆ, ಭಾಷಣಗಳಾದ ಮೇಲೆ ಸುಮಾರು ೩೦ ಸ್ವಯಂಸೇವಕರು ರಸ್ತೆ ರಿಪೇರಿ ಕೆಲಸ ಮಾಡಲಾಯಿತು. ಸಂತೆ ತ ಭಗಂಡೇಶ್ವರ ಲಿಂಗೇಶ್ವರ ದೇವಸ್ಥಾನದಲ್ಲಿ ಪೂಜೆ ಪ್ರಸಾದ ವಿನಿಯೋಗವಾಯಿತು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಕಾಲೇಜ್ ಪ್ರಾಧ್ಯಾಪಕರಾದ ಶ್ರೀ ವೆಂಕಟರಮಣರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಕೆ. ಎಂ. ಕರಿಯಪ್ಪ, ಎಚ್. ಎ. ಪಾರ್ಥಸಾರಥಿ, ರೋಹಿಣಿಬಾಯಿ, ಉದಯ ಕುಮಾರಿ ಮೊದಲಾದವರು ಭಾಷಣ ಮಾಡಿದರು. ಶಾಲಾ ಅಧ್ಯಾಪಕರಾದ ಶ್ರೀ ಬಿ. ಎಸ್. ರಾಮಕೃಷ್ಣ, ಡಿ. ಎನ್. ಕೃಷ್ಣಯ್ಯ ಇವರುಗಳು ಸ್ವಾರಸ್ಯವಾಗಿ ಭಾಷಣ ಮಾಡಿದರು.

ತಾ. ೪ರಂದು ಗಾಂಧಿ ಜಯಂತಿಯನ್ನು ಮಾಲ್ದಾರು ಶಾಲೆಯಲ್ಲಿ ಶ್ರೀ ಎಂ. ಡಿ. ಮಾಚಯ್ಯನವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಪೂಜೆ, ಮೆರವಣಿಗೆ, ಆಟೋಟಗಳ ಸ್ಪರ್ಧೆ ಮೊದಲಾದ ಏರ್ಪಾಡುಗಳಿದ್ದುವು.

ಹಾತೂರು ಹೈಸ್ಕೂಲಿನಲ್ಲಿ ಶ್ರೀ ಎಚ್. ಬಿ. ಅಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು.

ಚೆನ್ನಯ್ಯನ ಕೋಟೆ ಶಾಲೆಯಲ್ಲಿ ಶಾರದಕ್ಕ ಶ್ರೀ ಎಂ. ಡಿ. ಮಾಚಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸೂತ್ರಯಜ್ಞ ನಡೆಯಿತು.

ಪೊನ್ನಂಪೇಟೆ ಶಾಲೆಯಲ್ಲಿ, ಮಹಾತ್ಮಾಜಿಯವರ ಭಾವ ಚಿತ್ರವನ್ನು ಪೂಜೆ ಮಾಡಿದ ನಂತರ, ಶ್ರೀ. ಎ. ಯು. ಸ್. ಚಿಣ್ಣಪ್ಪ, ಪಿ. ಬಿ. ಯಂ. ಪೂವಯ್ಯನವರು ಮಹಾತ್ಮಾಜಿಯವರ ಜೀವನ ಚರಿತ್ರೆಯನ್ನು ವಿವರಿಸಿದರು. ನಂತರ ಎಲ್ಲರೂ ಖಾದಿ ವಸ್ತ್ರ ಧರಿಸಿ ಮೆರವಣಿಗೆ ಹೋದ ಮೇಲೆ, ಹಿಂದುಗಳಾಗ, ಎಲ್ಲರೂ, ಸರಕಾರಿ ರಸ್ತೆ ಉಭಯ ಬಾಜುಗಳಲ್ಲಿಯೂ ಶಾಲೆ ಆಟದ ಮೈದಾನದಲ್ಲಿಯೂ, ಯಥೇಚ್ಛವಾಗಿ ಬೆಳೆದಿದ್ದ ಪೊದೆಗಳನ್ನು ಕಡಿದು ಸುಮಾರು ಒಂದು ಘಂಟೆಯ ಸಮಯ ಕಿತ್ತು ದಿವಸದ ಕಾರ್ಯವನ್ನು ಮುಕ್ತಾಯ ಮಾಡಿದರು.

ಬಿ. ಶೆಟ್ಟಿಗೇರಿ ಶಾಲೆಯಲ್ಲಿ ಶ್ರೀ. ಪಿ. ಎನ್. ಭೀಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಕೆ. ಜಿ. ಪ್ರಾಣಯ್ಯ, ಕೆ. ಕೆ. ಸೋಮಯ್ಯ, ಸಿ. ಪಿ. ಗಿವಪ್ಪಯ್ಯ, ಕೆ. ಜಿ. ಪಾರ್ವತಿ ಮೊದಲಾದವರು ಗಾಂಧೀಜಿಯವರ ಗುಣಗಾನ ಮಾಡಿದರು.

ಗಾಂಧೀ ವಚನಾಮೃತ

೧ ಸತ್ಯವೇ ದೇವರು, ಬೇರೆ ದೇವರಿಲ್ಲ. ೨. ಸತ್ಯಸಾಧನೆಗೆ ಒಂದೇ ಮಾರ್ಗ ಅಹಿಂಸೆ. ೩. ಕ್ಷಮೆ ದಯೆ—ಆತ್ಮಬಲ, ಅಹಿಂಸೆಯ ಲಕ್ಷಣ. ೪. ಪ್ರೀತಿ ಇದ್ದಲ್ಲಿ ಬಲ, ಹಗೆ ಇದ್ದಲ್ಲಿ ಹಾನಿ. ೫. ಹೆಣ್ಣು ಅಹಿಂಸೆಯ ಅವತಾರ ಪುರುಷ. ೬. ಸತ್ಯಾಗ್ರಹವೇ ಸತ್ಯಶೋಧನೆಯ ದಾರಿ. ೭. ಸತ್ಯಾಗ್ರಹ ಧರ್ಮಯುದ್ಧ, ಯುದ್ಧ ವಿರೋಧ. ೮. ಎಲ್ಲ ಧರ್ಮಗಳೂ ಸತ್ಯ, ಸಮಾನ. ೯. ಮನುಷ್ಯನಿಗೆ ಸ್ವಧರ್ಮವೇ ಶ್ರೇಯ, ಶ್ರೇಷ್ಠ. ೧೦. ಮನಸ್ಸು ಮನಸ್ಸುಗಳಲ್ಲಿ ಭೇದವಿಲ್ಲದು. ೧೧. ರಾಟೆ ದೈನಿಕ ಸಾಮಧೇನು, ಅನ್ನಪೂರ್ಣೆ. ೧೨ ಸೂತವಗೆ ಒಟ್ಟಿದ ಉಡುವಗೆ ಹಿಟ್ಟು. ೧೩ ಸ್ವಾವಲಂಬನ ಬಲ; ಪರಾವಲಂಬನ ಸಾವು. ೧೪ ಕೈಗೆಲಸ ಕಲಿಕೆ ವಿಶ್ವಸ್ಥ. ೧೫. ಯಂತ್ರ ನರನ ಗುಲಾಮ, ನರ ಯಂತ್ರದಾಳಲ್ಲ. ೧೬. ಗ್ರಾಮ ಸ್ವರಾಜ್ಯವೇ ನಿಜ ಸ್ವರಾಜ್ಯ. ೧೭. ಅರ್ಥಶಾಸ್ತ್ರದ ಗುರಿ ಹಣವಲ್ಲ, ಶಾಂತಿ. ೧೮. ಹಸು, ಭಾರತೀಯ ಜೀವನದ ಆಧಾರ.

BORGIA.

THE TREE KILLER AGAIN AVAILABLE.

We are pleased to announce that supplies of BORGIA TREE KILLER a famous and highly-efficient sodium arsenate preparation are now again available to our many clients who have ordered it in the past and whom we have had to disappoint until the completion of our new plant for the manufacture of this product. Deliveries are now available from ready stock at Rs. 8-12-0 per gallon; containers extra at cost. All orders will receive prompt attention.

HUNSUR WORKS,
HUNSUR P. O., MYSORE STATE.

"A" Class Pool Agents for the Indian Coffee Board: Coffee Curers; Suppliers and Dealers in raw and Roasted Coffee, Whole-sale and retail; Dealers in Cardamoms, Pepper and all other hill produce. Suppliers of all Estate Stores and requirements, including straight Fertilisers and Manure Mixtures: Sub-Agents for Coorg and Mysore for SOLIGNUM. Sole Distributors for Coorg and Mysore Planting area, for Albuquerque's SUN Brand Tiles. Stockists and distributors for Imperial Chemical Industries Ltd., Dunlop Rubber Co., Ltd., Geigy Insecticides, Burmah-Shell oil Storage and Distributing Co of India, Ltd: Engineering Workshop equipped to undertake repairs to moter transport and Estate machinery, particularly Pulphouse equipment.

ಬೋರ್ಗಿಯಾ.

ಮರಕೊಲ್ಲುವ ಔಷಧಿ ಈಗ ದೊರೆಯುತ್ತದೆ.

ಸೋಡಿಯಮ್ ಆರ್ಸೆನೇಟ್ ತಯಾರಿಯ ಅತೀ ಪರಿಣಾಮಕಾರಿಯಾದ ಬೋರ್ಗಿಯಾ ಮರಕೊಲ್ಲುವ ಔಷಧವು ಈಗ ಪುನಹ ದೊರೆಯುತ್ತದೆ. ಈ ಹಿಂದೆ ಇದಕ್ಕಾಗಿ ನಮಗೆ ಬರೆದ ನಮ್ಮ ಅನೇಕ ಗ್ರಾಹಕರಿಗೆ ಇದನ್ನು ತಯಾರಿಸುವ ನಮ್ಮ ಹೊಸ ಯಂತ್ರ ಸ್ಥಾಪನೆಯಾಗದೆ ನಿರಾಶರಾಗುವಂತೆ ಮಾಡಬೇಕಾಗಿ ಬಂದರೂ ಈಗ ಅದು ನಮ್ಮ ರೆಡಿ ಸ್ಟಾಕಿನಿಂದ ಗೆಲನಿಗೆ ರೂ. ೮—೧೨—೦ರಂತೆ ದೊರೆಯುತ್ತದೆ. ಇದನ್ನು ಹಾಕಿ ಕೊಡುವ ಡಬ್ಬ ಪಾತ್ರೆಗಳಿಗೆ ಹೆಚ್ಚಿನ ಚಾರ್ಜ ಮಾಡಲಾಗುವದು. ಎಲ್ಲಾ ಆರ್ಡರುಗಳನ್ನೂ ತೀವ್ರ ಎಚ್ಚರಿಕೆಯಿಂದ ಗಮನಿಸಲಾಗುವದು.

ದಿ ಹುಣಸೂರು ವರ್ಕ್ಸ್,
ಹುಣಸೂರು ಪೋಸ್ಟು, ಮೈಸೂರು.

ಇಂಡಿಯಾ ಕಾಫಿ ಬೋರ್ಡಿನ "ಎ" ತರಗತಿಯ ಪೂಲ್ ಏಜೆಂಟರು, ಕಾಫಿ ಶುದ್ಧ ಮಾಡುವವರು, ಸರಬರಾಯಿ ಮಾಡುವವರು, ಹಸಿ ಮತ್ತು ರೋಸ್ಟ ಮಾಡಿದ ಕಾಫಿಯ ರಖಂ ಮತ್ತು ಚಿಲ್ಲರೆ ವ್ಯಾಪಾರಸ್ಥರು, ಯಾಲಕ್ಕಿ ವ್ಯಾಪಾರಿಗಳು, ಒಳ್ಳೆ ಮೆಣಸು ಮತ್ತಿತರ ಬೆಟ್ಟ ಪ್ರದೇಶದ ಉತ್ಪನ್ನಗಳ ವ್ಯವಹಾರ ಮಾಡುವವರು, ತೋಟಗಳಿಗೆ ಸ್ಟೋರ್ಸ್ ಮತ್ತಿತರ ಬೇಡಿಕೆಗಳ ಗೊಬ್ಬರ ಮಿಶ್ರಣ, ಫರ್ಟಿಲೈಸರುಗಳನ್ನು ಸರಬರಾಯಿ ಮಾಡುವವರು, ಸೊಲಿಗ್ನಮ್ ಇದಕ್ಕೆ ಕೊಡಗು ಮತ್ತು ಮೈಸೂರಿಗೆ ಸೋಲ ಏಜೆಂಟರು, ಅಲ್ಬುಕರ್ಕರ ಸನ್ ಗುರ್ತಿನ ಹಂಚುಗಳನ್ನು ಕೊಡಗು ಮತ್ತು ಮೈಸೂರು ಪ್ಲಾಂಟಿಂಗ್ ಏರಿಯಾಕ್ಕೆ ಸರಬರಾಯಿ ಮಾಡುವವರು, ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ ಕಂಪೆನಿಯ, ಡನ ಲಪ್ ರಬ್ಬರ ಕಂಪೆನಿಯ, ಜೇಗಿ ಕ್ರಿಮಿ ನಾಶಗಳ, ಇಂಡಿಯಾದ ಬರ್ಮಾಶೆಲ್ ಆಯಿಲ್ ಸ್ಟೋರೇಜ್ ಮತ್ತು ಡಿಸ್ಟ್ರಿಬ್ಯೂಟಿಂಗ್, ಕಂಪೆನಿಯ ಸ್ಟಾಕಿಸ್ಟರು ಮತ್ತು ವಿತರಣಗಾರರು, ಮೋಟಾರು ವಾಹನಗಳ, ತೋಟದ, ಪ್ರಾಮುಖ್ಯವಾಗಿ ಪಲ್ಪಹೌಸ್ ಯಂತ್ರಗಳ ರಿಪೇರಿ ಮಾಡುವ ಇಂಜಿನೀಯರಿಂಗ್ ವರ್ಕ ಶಾಪಿನ ವ್ಯವಸ್ಥೆ ಮಾಡಿರುವವರು.

ಕೊಡಗು

ತಾ. ೧೦-೧೦-೧೯೫೨ನೇ ಶುಕ್ರವಾರ

ಸಾಮೂಹಿಕ ವಿಕಾಸ ಯೋಜನೆ.

ಮಹಾತ್ಮಾ ಗಾಂಧೀಜಿಯವರ ಜನ್ಮದಿನದಂದು ಹಿಂದೂದೇಶದ ಅದ್ಯಂತಕ್ಕೂ ೫೫ ಕೇಂದ್ರಗಳಲ್ಲಿ ಸಾಮೂಹಿಕ ವಿಕಾಸ ಯೋಜನೆಗಳ ಉದ್ಘಾಟನೆ ನಡೆಯಿತು. ರಾಷ್ಟ್ರಪತಿಗಳಾದ ರಾಜೇಂದ್ರ ಪ್ರಸಾದರೂ ಮುಖ್ಯ ಮಂತ್ರಿಗಳಾದ ನೆಹರೂರವರೂ ಈ ಯೋಜನೆಯನ್ನು ಆಶೀರ್ವದಿಸಿ ಈ ಮೂಲಕ ಜನತೆ ತನ್ನ ಹಿತ ಸಾಧಿಸಿಕೊಳ್ಳುವ ಯತ್ನ ಮಾಡಬೇಕೆಂದು ಅಪೀಲು ಮಾಡಿರುವರು. ಅದೇ ರೀತಿ ಕೊಡಗಿನಲ್ಲೂ ಒಂದು ಕೇಂದ್ರದ ಉದ್ಘಾಟನೆಯು ಅದೇ ದಿನ ನಡೆಯಿತು. ಶನಿವಾರಸಂತೆ, ಫ್ರೇಜರ್‌ಪೇಟೆ, ಹೆಬ್ಬಾಲೆ, ಸೋಮವಾರಪೇಟೆ ಮೊದಲಾದೆಡೆಗಳಲ್ಲಿ ಆ ದಿನ ಈ ಯೋಜನೆಯ ಉದ್ಘಾಟನೆಯ ಸಮಾರಂಭಗಳು ನಡೆದವು. ಕೊಡಗಿನ ಚೀಫ್ ಕಮಿಷನರೂ, ಮಂತ್ರಿದ್ವಯರೂ, ಇತರ ಮುಂದಾಳುಗಳೂ ಜನತೆಯ ಸಹಕಾರವನ್ನು ಅಪೇಕ್ಷಿಸಿ ಮಾತಾಡಿದುದಲ್ಲದೆ ಈ ಯೋಜನೆಯು ಜನತೆಯದ್ದೇ ಎಂದು ಹೇಳಿದರು.

ಕೊಡಗಿನಲ್ಲಿ ಉದ್ಘಾಟಿಸಲ್ಪಟ್ಟಿರುವ ಈ ೨೨ ಲಕ್ಷ ರೂಪಾಯಿಗಳ ಮೂರು ವರ್ಷದ ಯೋಜನೆಯು ಉತ್ತರ ಕೊಡಗಿನ ಹಿಂದುಳಿದ ಸುಮಾರು ನೂರು ಗ್ರಾಮಗಳಿಗೆ ಅನ್ವಯಿಸುತ್ತದೆ. ಈ ೨೨ ಲಕ್ಷ ರೂಪಾಯಿಗಳಲ್ಲಿ ಕೊಡಗು ಸರಕಾರದ ಹಣವೆಷ್ಟು, ಇಂಡಿಯಾ ಸರಕಾರದ್ದೆಷ್ಟು, ಅಮೇರಿಕಾದ ಸಹಾಯವೆಷ್ಟು, ಜನತೆಯು ಕೊಡಬೇಕಾದ ವಂತಿಗೆಯೆಷ್ಟೆಂಬುದು ಸ್ಪಷ್ಟವಾಗಿ ತಿಳಿದಿಲ್ಲ. ಈ ಯೋಜನೆಗೆ ಹಣ ಎಲ್ಲಿಂದ ಬಂದರೂ ಯೋಜನೆಯ ಗುರಿಯು ಜನತೆಯ ಹಿತವಾಗಿರುವದರಿಂದ ಹೊಗಳಲರ್ಹವಾಗಿದೆ. ಮಹಾತ್ಮಗಾಂಧೀಜಿಯವರ ಅನುಯಾಯಿಗಳಾದ ವಿನೋಬಾಭಾವೆ ಮೊದಲಾದವರು ಈ ಯೋಜನೆಯ ಕಾರ್ಯವಿಧಾನವನ್ನು ಸಮರ್ಥನೆಗೈದಿದ್ದರೂ ಧ್ಯೇಯವನ್ನು ಒಪ್ಪಿದ್ದಾರೆ. ಹಳ್ಳಿಗಳಲ್ಲಿ ಶುಚಿತ್ವವನ್ನು ಹೆಚ್ಚಿಸಿ, ವಹಿವಾಟಿನ ಸೌಕರ್ಯವನ್ನು ಬೆಳೆಸಿ, ಎಲ್ಲರನ್ನೂ ಶಿಕ್ಷಿತರನ್ನಾಗಿಯೂ, ಗ್ರಾಮ ಜನರ ಆರ್ಥಿಕ ಸ್ಥಿತಿಯನ್ನು ಉತ್ತಮವನ್ನಾಗಿಯೂ ಮಾಡುವದೇ ಈ ಯೋಜನೆಯ ಮೂಲ ಗುರಿ

ಆದರೆ ಈ ಗುರಿ ಸಫಲವಾಗಬೇಕಾದರೆ ಜನತೆಯು ಈ ಯೋಜನೆಯು ತನ್ನದೆಂದೂ, ಅದರಲ್ಲಿ ತನ್ನ ಹಿತವಡಗಿದೆಯೆಂದೂ ತಿಳಿದು ತಾನೇ ಕಾರ್ಯಪ್ರವೃತ್ತವಾಗಬೇಕು. ಜನತೆಯ ಸಹಕಾರವಿಲ್ಲದಿದ್ದರೆ ಗ್ರಾಮದಲ್ಲಿ ಹೊನ್ನಿನ ಹೊಳೆಯೇ ಹರಿದರೂ ಪ್ರಗತಿ ಕೈಗೂಡಲಾರದು. ಆದ್ದರಿಂದ ಈ ಯೋಜನೆಯ ಬಗ್ಗೆ ಇನ್ನೂ ಹೆಚ್ಚಿನ ಪ್ರಚಾರವಾಗಬೇಕು. ಜನತೆಯು ಈ ಯೋಜನೆಗೆ ಸಹಕರಿಸಿ ದುಡಿಯುವದರಲ್ಲೇ ತನ್ನ ಹಿತ, ಉತ್ಕರ್ಷಗಳು ಅಡಗಿವೆಯೆಂಬುದನ್ನು ತಿಳಿಯುವಂತೆ ಮಾಡಬೇಕು. ಇಂಥಾ ಸಹಕಾರ ದೊರೆತು ಈ ಯೋಜನೆಯು ಯಶಸ್ವಿಯಾಗಲೀ ಎಂದು ಹಾರೈಸುತ್ತೇವೆ.

ವರ್ತಮಾನ

ಮಡಿಕೇರಿಯಲ್ಲಿರುವ ಡಾ. ಕಡೇಮಾಡ ಕರುಂಬಯ್ಯನವರ ಪತ್ನಿಯವರು ತಾ. ೯-೧೦-೫೨ರಲ್ಲು ಸ್ವರ್ಗಸ್ಥರಾದರು.

ತಾ. ೧೯-೯-೫೨ರಲ್ಲಿ ಚೆಪ್ಪುಡೀರ ಕುಟುಂಬದ ಪಟ್ಟೆದಾರ ಪೊನ್ನಪ್ಪನವರು ತಮ್ಮ ೭೫ನೇ ವಯಸ್ಸಿನಲ್ಲಿ ಹೃದಯ ಕ್ರಿಯೆ ನಿಂತು ಶಿವಾಧೀನರಾದರು.

ಕೊಡವ ವಿದ್ಯಾಭಿವೃದ್ಧಿ ನಿಧಿಯ ವಾರ್ಷಿಕ ಮಹಾ ಸಭೆಯು ಈ ತಾ ೧೨ರಲ್ಲಿ ಮಡಿಕೇರಿ ಕೊಡವ ಎಸೋಸಿಯೇಶನ್ ಕಟ್ಟಡದಲ್ಲಿ ನಡೆಯುವದು

ಕೊಡಗು ಫಾರೆಸ್ಟ್ ಇಲಾಖೆಯ ಹುಣಸೂರು ಡಿಪ್ಪೋದ ಡಿಪ್ಪೋ ಆಫೀಸರ ಹುದ್ದೆಯನ್ನು 'ಸೆಲೆಕ್ಷನ್ ಪೋಸ್ಟ್' ಆಗಿ ಏರ್ಪಡಿಸಿರುವದಲ್ಲದೆ ರೂ. ೧೨೦ ೮-೧೬೦ರ ವೇತನ ದರವನ್ನು ನಿಶ್ಚಯಿಸಲಾಗಿದೆ

ಸಿ. ಐ. ಡಿ. ಇನ್ಸ್‌ಪೆಕ್ಟರಾಗಿದ್ದ ಶ್ರೀ ಮುಂಜಾಂದಿರ ಕಾಳಪ್ಪನವರನ್ನು ಸರ್ಕಲ್ ಇನ್ಸ್‌ಪೆಕ್ಟರಾಗಿಯೂ, ಜ. ಅಬ್ದುಲ್ ಗಫೂರ್ ಖಾನರನ್ನು ಸಿ. ಐ. ಡಿ. ಇನ್ಸ್‌ಪೆಕ್ಟರಾಗಿಯೂ ನೇಮಿಸಿರುವರು.

ವಯಸ್ಕರ ಶಿಕ್ಷಣ ಶಾಲೆಯಲ್ಲಿ ಓದಿ ಅಕ್ಷರಸ್ಥರಾದವರಿಗೆ ಯೋಗ್ಯತಾ ಪತ್ರ ವಿನಿಯೋಗ ಸಮಾರಂಭವನ್ನು ಗೃಹಮಂತ್ರಿ ಶ್ರೀ ಕೆ. ಮಲ್ಲಪ್ಪನವರು ತಾ. ೧೨ರಲ್ಲಿ ಕೆಲಕೊಡಲಿ ದೇವಸ್ಥಾನದ ಆವರಣದಲ್ಲಿ ನಡೆಸುವರು.

ಮೈಸೂರು ಇಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಸುಪರಿಂಟೆಂಡೆಂಟರಾಗಿ ನಿವೃತ್ತರಾಗಿದ್ದ ಶ್ರೀ ಸಿ ಬಿ. ನರಸಿಂಹ ಮೂರ್ತಿಯವರನ್ನು ಕೊಡಗಿನ ಇಲೆಕ್ಟ್ರಿಕಲ್ ಇನ್ಸ್‌ಪೆಕ್ಟರಾಗಿ ತಾ. ೧೫-೯-೫೨ರಿಂದ ಒಂದು ವರ್ಷದ ವರೆಗೆ ನೇಮಿಸಲಾಗಿದೆ

ಮೂರ್ನಾಡು ಬಾಡಗ ಗ್ರಾಮದ ಶ್ರೀ ಮುಕ್ಕಾಟಿರ ಬೆಳ್ಳಪ್ಪನವರ ದನಗಳ ಜೊತೆಯಲ್ಲಿ ಕಳೆದ ಒಂದು ತಿಂಗಳಿಂದ ಒಂದು ಹೆಣ್ಣು ಕರವು ಸೇರಿಕೊಂಡಿದೆಯೆಂದೂ ಮಾಲೀಕರು ತಕ್ಕ ರುಜುವಾತಿನಿಂದ ಹೊಡಕೊಂಡು ಹೋಗಬಹುದಾಗಿಯೂ ತಿಳಿಸುತ್ತಾರೆ.

ಭಾಗಮಂಡಲದ ವಯಸ್ಕರ ಶಿಕ್ಷಣ ಶಾಲೆಯ ವಿದ್ಯಾರ್ಥಿಗಳು ಗ್ರಾಮ ನೈರ್ಮಲ್ಯ ಕಾರ್ಯಕ್ಕಾಗಿ ಪ್ರತಿ ಆದಿತ್ಯವಾರ ಸಾಮೂಹಿಕವಾಗಿ ಕೆಲಸ ಮಾಡುತ್ತಿರುವರು. ಈ ವರೆಗೆ ಸುಮಾರು ಒಂದು ಮೈಲಿ ಉದ್ದದ ರಸ್ತೆಯನ್ನು ಸರಿಪಡಿಸಿ ಸುಮಾರು ರೂ ೨೦೦ರ ಕೆಲಸ ಮಾಡಿರುವರು.

ಕೊಡಗಿನ ಕೈಗಾರಿಕಾ ಸಲಹಾ ಸಮಿತಿಯಾಗಿ ಗೃಹ ಮಂತ್ರಿ (ಅಧ್ಯಕ್ಷ), ಅ. ಕಮಿಷನರು, ಸಹಕಾರ ಸಂಘಗಳ ರಿಜಿಸ್ಟ್ರಾರರು, ವ್ಯವಸಾಯ ಅಧಿಕಾರಿ, ಸಿ. ಎ. ಮಂದಣ್ಣ, ಪಿ ಡಿ ಸುಬ್ಬಯ್ಯ ಮತ್ತು ಮಾರ್ಕೆಟಿಂಗ್ ಫೆಡರೇಶನಿನ ಪ್ರೆಸಿಡೆಂಟರು ಇವರುಗಳನ್ನು ನೇಮಿಸಲಾಗಿದೆ.

ಕಳೆದ ತಿಂಗಳು ೨೦ರಲ್ಲಿ ನಡೆದ ವೀರಾಜಪೇಟೆ ಮುನ್ಸಿಪಲ್ ಚುನಾವಣೆಯು ಕ್ರಮಬದ್ಧವಾಗಿ ನಡೆಯಲಿಲ್ಲವಾದ್ದರಿಂದ ಅದನ್ನು ವಜಾ ಮಾಡಬೇಕೆಂದು ಹೆಚ್ಚು ಕಮ್ಮಿ ಎಲ್ಲಾ ವಾರ್ಡುಗಳಲ್ಲಿ ಸೋತ ಉಮೇದ್ವಾರರು ವೀರಾಜಪೇಟೆ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರ ಮುಂದೆ ಚುನಾವಣಾ ಅರ್ಜಿ ಹಾಕಿರುವರು

ಇದೇ ಅಕ್ಟೋಬರ್ ತಾರೀಖು ೧೬ ಮತ್ತು ೧೭ ಕಾವೇರಿ ಜಾತ್ರೆಯ ಎರಡು ದಿನಗಳಲ್ಲೂ ಒಂದು ಪಾವು ಅಕ್ಕಿ ಮೇರೆ ಪಡಿ ಕೊಡಲು ಏರ್ಪಾಡು ಆಗಿರುತ್ತೆ. ಇದಕ್ಕೆ ಉದಾರ ಮನಸ್ಸಿನ ಜನಗಳ ಸಹಾಯ ಅಕ್ಕಿ ರೂಪದಲ್ಲಾಗಲೀಯೂ ಹಣದ ರೂಪದಲ್ಲಾಗಲೀ ಅತಿ ಅವಶ್ಯವಿದೆ. ತೀರ್ಥವು ೧೭ನೇ ತಾರೀಕು ರಾತ್ರಿ ೨-೪೭ ಘಂಟೆಗೆ ಉದ್ಭವವಾಗುವುದು.

ಮರೆನಾಡಿನ ನಾಲ್ಕು ಸಹಕಾರ ಸಂಘಗಳ ಕಾರ್ಯಕಾರಿ ಮಂಡಳಿಯವರು ಮತ್ತು ನಾಡಿನ ಕೆಲವರು ತಾ. ೧೬-೯-೫೨ರಲ್ಲಿ ಇನ್ಸ್‌ಪೆಕ್ಟರಾದ ಶ್ರೀ ಎಂ. ಬಿ. ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಆ ನಾಡಿನ ಜನತೆಯ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಚಿತ್ತ, ಓಟೆ, ಮರ, ಪಗ್ಗೆರೆಯ ಕೈಗಾರಿಕಾ ಸಂಘ ಒಂದನ್ನು ಸ್ಥಾಪಿಸಬೇಕೆಂದೂ ಅದಕ್ಕೆ ಸರಕಾರವು ನೆರವೀಯಬೇಕೆಂದೂ ನಿರ್ಣಯಿಸಿರುವರು

ಕೊಡಗಿನ ಗುಡಿಕೈಗಾರಿಕಾ ಅಭಿವೃದ್ಧಿಯನ್ನು ಸಾಧಿಸುವ ದೃಷ್ಟಿಯಿಂದ ಗೃಹ ಮಂತ್ರಿ (ಅಧ್ಯಕ್ಷ), ಕೊಡಗಿನ ಚೀಫ್ ಸೆಕ್ರೆಟರಿ, ಅ. ಕಮಿಷನರು, ವ್ಯವಸಾಯ ಅಧಿಕಾರಿ, (ಕಾರ್ಯದರ್ಶಿ) ಸಹಕಾರ ಸಂಘಗಳ ರಿಜಿಸ್ಟ್ರಾರು, ಜಿಲ್ಲಾ ವಿದ್ಯಾಧಿಕಾರಿ, ಚೀಫ್ ವೆಟರ್ನರಿ ಆಫೀಸರ್, ಯನ್. ಕೆ. ಗಣಪಯ್ಯ, ಸಿ. ಎ. ಮಂದಣ್ಣ, ಎಸ್. ನಾರಾಯಣ ಮೂರ್ತಿ, ಎಂ. ಸಿ. ಅಪ್ಪಯ್ಯ ಮತ್ತು ಕೆ ಸಿ. ಕರುಂಬಯ್ಯನವರಿಂದ ಕೂಡಿದ ಸಮಿತಿಯೊಂದನ್ನು ನೇಮಿಸಲಾಗಿದೆ.

ವಾಚಕರಲ್ಲಿ ವಿನಂತಿ.

ತಾರೀಖು ೧೬ ಮತ್ತು ೧೭ರಲ್ಲಿ ನಡೆಯುವ ಕಾವೇರಿ ಸಂಕ್ರಮಣ ನಿಮಿತ್ತ ಆಫೀಸಿಗೆ ಬಿಡುವಿರುವ ಕಾರಣ ತಾ ೧೭ರ ಸಂಚಿಕೆಯು ಹೊರಡದೆ ತಾ. ೨೪ರಲ್ಲಿ ಹೊರಡುವದು

—ಸಂಪಾದಕ.

ಕಳೆದ ಜನವರಿ ತಿಂಗಳಲ್ಲಿ ಗೋಣಿಕೊಪ್ಪಲಲ್ಲಿ ನಡೆದ ಚುನಾವಣೆ ವೋಟಿಂಗಿನಲ್ಲಿ ದೊಂಬಿ ನಡೆಸಿದರೆಂದು ಪ್ರತ್ಯೇಕ ಪಕ್ಷದ ಸುಮಾರು ೩೦ ಜನರ ಮೇಲೆ ಪೋಲೀಸರು ಹೂಡಿರುವ ಕೇಸಿನ ವಿಚಾರವು ತಾ. ೩ರಲ್ಲಿ ಇಟ್ಟಿದ್ದನ್ನು ಇತ್ತಲಾಗಿ ಈ ಕೇಸನ್ನು ಕೊಡಗಿನ ಪಬ್ಲಿಕ್ ಪ್ರಾಸಿಕ್ಯೂಟರು ನಡೆಸಬೇಕೆಂದು ಸರಕಾರ ಹುಕುಂ ಮಾಡಿರುವದರಿಂದಲೂ ಪಬ್ಲಿಕ್ ಪ್ರಾಸಿಕ್ಯೂಟರಿಗೆ ಈ ಕೇಸಿನ ವಿಚಾರ ಅಭ್ಯಾಸಮಾಡಲು ಸಮಯಬೇಕೆಂದು ಕೇಳಿಕೊಂಡದ್ದರಿಂದಲೂ ತಾ. ೨೦ಕ್ಕೆ ಮುಂದರಿಸಲಾಗಿದೆ.

ವೀರಾಜಪೇಟೆ ಮಾರ್ಕೆಟಿನ ಬಳಿಯಲ್ಲಿ ಜನಾಬ್ ಕುಂಞಮಾಯಿನ್ ಹಾಜಿಯವರು ಕಟ್ಟಿರುವ ಹೊಸ ಅಂಗಡಿ ಮನೆಯ ತಿರುವಾಂಕೂರು ಕಂಟ್ರಾಕ್ಟದಾರನಿಗೂ ಅವರಿಗೂ ಲೆಕ್ಕಾಚಾರದಲ್ಲಿ ತಕರಾರು ಉಂಟಾಗಿ ಕಂಟ್ರಾಕ್ಟದಾರನು ಕಟ್ಟಡವನ್ನು ಬಿಟ್ಟು ಕೊಡುವದಿಲ್ಲವೆಂದು ತಕರಾರುಮಾಡಿ ಎರಡು ಕಡೆಯವರಿಗೂ ತಾ. ೭ರಲ್ಲಿ ಸ್ವಲ್ಪ ಘರ್ಷಣೆ ನಡೆಯಿತೆಂದೂ ಮರುದಿನ ಮನೆಯ ಮಾಲೀಕರ ಕಡೆಯವರು ಕಟ್ಟಡದಲ್ಲಿ ತಂದು ಹಾಕಿದ್ದ ನೂರಾರು ತೆಂಗಿನ ಕಾಯಿಗಳನ್ನು ಕಂಟ್ರಾಕ್ಟರನ ಕೆಲಸಗಾರರು ಎದುರಿನ ರಸ್ತೆಗೆ ಒಗೆದು ಚೂರು ಮಾಡಿದರೆಂದೂ ಪೋಲೀಸಿನವರು ಬಂದು ತಡೆದು ಎರಡು ಕಡೆಯವರನ್ನೂ ಮುನ್ಸೀಫ್ ಕೋರ್ಟಿಗೆ ಹಾಜರ್ಪಡಿಸಿ ತಾ. ೨೦ರ ವರೆಗೆ ಸರಕಾರದವರೇ ಕಟ್ಟಡವನ್ನು ಬೀಗ ಹಾಕಿ ಇಡುವಂತೆಯೂ ಅಷ್ಟರೊಳಗೆ ಎರಡು ಕಡೆಯವರೂ ರಾಜಿ ತೀರ್ಮಾನ ಮಾಡಿಕೊಳ್ಳುವಂತೆಯೂ ಒಪ್ಪಿರುವರೆಂದೂ ಸುದ್ದಿ.

ಸಾಮೂಹಿಕ ವಿಕಾಸ ಯೋಜನೆಯ ಉದ್ಘಾಟನೆ.

ಸೋಮವಾರಪೇಟೆ.

ಮಹಾತ್ಮಾಗಾಂಧೀಜಿಯವರ ಜನ್ಮದಿನವಾದ ತಾ. ೨ರಲ್ಲಿ ಕೊಡಗಿನ ಸಾಮೂಹಿಕ ವಿಕಾಸ ಯೋಜನೆಯ ಉದ್ಘಾಟನೆಯು ಸೋಮವಾರಪೇಟೆಯಲ್ಲಿ ನಡೆಯಿತು ಪಟ್ಟಣವು ಉತ್ಸವ ಪೂರ್ಣ ದೃಶ್ಯದಿಂದ ಕಂಗೊಳಿಸುತಿತ್ತು. ಜನರು ಕಿಕ್ಕಿರಿದು ನೆರೆದಿದ್ದರು. ಕೊಡಗಿನ ಚೀಫ್ ಕಮಿಷನರಾದ ದಯಾಸಿಂಗ್ ಬೇಡಿಯವರು ಉದ್ಘಾಟನೆಯನ್ನು ಮಾಡಿದರು. ಮುಖ್ಯ ಮಂತ್ರಿಗಳಾದ ಶ್ರೀ ಸಿ. ಎಂ ಪೂಣಚ್ಚನವರೂ, ಗೃಹಮಂತ್ರಿ ಶ್ರೀ. ಮಲ್ಲಪ್ಪನವರೂ, ಪಾರ್ಲಿಮೆಂಟಿನ ಸದಸ್ಯರಾದ ಶ್ರೀ. ಎನ್. ಸೋಮಣ್ಣನವರೂ ಯೋಜನೆಯು ಜನತೆಯದೇ ಆಗಿದೆಯೆಂದೂ, ಅದನ್ನು ಯಶಸ್ವಿಗೊಳಿಸುವದು ಜನತೆಯ ಕೈಯಲ್ಲಿದೆಯೆಂದೂ ಆದ್ದರಿಂದ ಅದಕ್ಕಾಗಿ ಎಲ್ಲರೂ ಸಹಕರಿಸಿ ದುಡಿಯಬೇಕೆಂದೂ ಅಪೀಲು ಮಾಡಿದರು. ಯೋಜನೆಯ ಡೆವಲಪ್‌ಮೆಂಟ್ ಆಫೀಸರಾದ ಶ್ರೀ ಐ ಸಿ. ಸುಬ್ಬಯ್ಯನವರು ವಂದನೆಯನ್ನು ಅರ್ಪಿಸಿದರು.

ಹೆಬ್ಬಾಲೆ.

ಹೆಬ್ಬಾಲೆ, ಕಣಿವೆ, ಶಿರಂಗಾಲ, ತೊರೆನೂರು, ಕೂಡಿಗೆ ಮತ್ತು ನಲ್ಲೂರು ಗ್ರಾಮಗಳ ಜನರು ಹೆಬ್ಬಾಲೆ ಶಾಲಾ ಹಾಲಿನಲ್ಲಿ ಕಿಕ್ಕಿರಿದು ನೆರೆದಿದ್ದರು. ಕೊಡಗಿನ ಚೀಫ್ ಕಮಿಷನರವರು ಸಾಮೂಹಿಕ ವಿಕಾಸಯೋಜನೆಯ ಉದ್ಘಾಟನೆಯನ್ನು ಮಾಡುತ್ತಾ ಜನತೆಯ ಜವಾಬ್ದಾರಿಯನ್ನು ವಿವರಿಸಿದರು ವಯಸ್ಕರ ಶಾಲೆಯ ವಿದ್ಯಾರ್ಥಿಗಳಿಗೂ ಇತರರಿಗೂ ಆಟೋಟಗಳ ಸ್ಪರ್ಧೆ ಇತ್ತು. ಸಮಾರಂಭಕ್ಕೆ ಅ. ಕಮಿಷನರೇ ಮೊದಲಾದ ಉದ್ಯೋಗಸ್ಥರು ಬಂದಿದ್ದರು.

ಫ್ರೇಜರ್‌ಪೇಟೆ

ಮಹಾತ್ಮಗಾಂಧಿಯವರ ಜಯಂತಿ ಮತ್ತು ಸಾಮೂಹಿಕ ವಿಕಾಸಯೋಜನೆಯ ಉದ್ಘಾಟನೆಯು ಮುಖ್ಯ ಮಂತ್ರಿ ಶ್ರೀ ಸಿ. ಎಂ ಪೂಣಚ್ಚನವರಿಂದ ಫ್ರೇಜರ್‌ಪೇಟೆಯಲ್ಲಿ ನಡೆಯಿತು. ಮೆರವಣಿಗೆ, ಪೂಜೆಗಳಾದ ನಂತರ ಮಾಧ್ಯಮಿಕ ಶಾಲೆಯಲ್ಲಿ ಸಭೆ ನೆರೆಯಿತು. ಶ್ರೀ. ಎನ್. ಎಸ್. ಲಕ್ಷ್ಮಣಶೆಟ್ಟಿಯವರು ಸ್ವಾಗತ ಭಾಷಣ ಮಾಡಿದರು. ಮಂತ್ರಿಯವರು ವಿಕಾಸ ಯೋಜನೆಯ ವಿಚಾರವಾಗಿಯೂ, ಫ್ರೇಜರ್‌ಪೇಟೆ ಟೌನಿಗೆ ನೀರು ಒದಗಿಸಲಿರುವ ವಿಚಾರವಾಗಿಯೂ ಭಾಷಣ ಮಾಡಿದರು. ಶ್ರೀ. ಕೆ. ರಾಮರಾಯ ಮೊದಲಾದವರೂ ಭಾಷಣ ಮಾಡಿದರು.

॥ ಭಕ್ತಿಯ ಪ್ರಭಾವ. ॥

ಲೇ: ಶ್ರೀ ಸಿ. ಟಿ. ಐಯ್ಯಪ್ಪ, ಮಡಿಕೇರಿ

"More things are wrought by prayer than this world dreams of" ಎಂಬುದಾಗಿ ಟೆನ್ನಿಸನ್ ಕವಿಯು ಹೇಳಿರುತ್ತಾರೆ. ಅಲ್ಲದೆ ಏಸುಕ್ರಿಸ್ತ ಮಹಾತ್ಮರು ಬೈಬಲಿನಲ್ಲಿ "Ask and thou shalt have it" ಎಂಬುದಾಗಿಯೂ ಹೇಳಿದ್ದಾರೆ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಭಗವಾನ್ನನು 'Proclaim to the whole world Arjuna that my devotee is never destroyed' ಎಂಬುದಾಗಿ ಹೇಳಿರುತ್ತಾನೆ.

ಭಕ್ತಿಯಿಂದ ದೇವರನ್ನು ಪೂಜಿಸಿ, ದೇವರನ್ನು ಪ್ರೀತಿಸಿ ಅನುಗ್ರಹವನ್ನು ಸಂಪಾದಿಸಿಕೊಂಡರೆ ಮನುಷ್ಯನ ಯಾವುದೊಂದು ಕೋರಿಕೆಯನ್ನು ಕೈಗೂಡಿಸಿಕೊಳ್ಳಬಹುದೆಂಬ ವಿಷಯವನ್ನು ಅಂತಹ ಲೋಕದ ಎಲ್ಲಾ ಮತಬೋಧಕರು ಸಾರುತ್ತಿದ್ದಾರೆ. ಯಾವುದೇ ಒಂದು ಜನಾಂಗದ ಪುರಾಣಗಳನ್ನಾಗಲಿ ಯಾ ಚರಿತ್ರೆಯನ್ನಾಗಲೀ ತೆಗೆದುಕೊಂಡರೆ ನಮ್ಮ ಕಣ್ಣೆದುರು ತನ್ನ ಕಷ್ಟಗಳನ್ನು ಭಗವಂತನ ಪ್ರೀತಿಯನ್ನು ಭಕ್ತಿಯಿಂದ ಒಲಿಸಿಕೊಂಡು ನಿವಾರಿಸಿಕೊಂಡ ಸಹಸ್ರಾರು ನಿದರ್ಶನಗಳನ್ನು ತೋರಿಸಬಹುದು. ಇಷ್ಟಿದ್ದರೂ ಈ ಕಾಲದಲ್ಲಿ ಅಂಗಳ ನಮ್ಮ ಹಿಂದೂ ದೇಶದಲ್ಲಿ ದೈವಭಕ್ತಿಯು ಬಹಳ ಮಟ್ಟಿಗೆ ಕಳೆ ಕುಂದಿಹೋಗುತ್ತಿರುವುದು ಬಹು ಶೋಚನೀಯವೆಂದೇ ಹೇಳಬೇಕಾಗಿದೆ.

ಹೀಗಿರುವುದಕ್ಕೆ ಪ್ರಬಲವಾದ ಅನೇಕ ಕಾರಣಗಳಿವೆ. ಅವುಗಳಲ್ಲಿ ಪ್ರಮುಖವಾದುದು ನಮ್ಮಲ್ಲಿ ಮುಕ್ಕಾಲು ಪಾಲು ಜನರಿಗೆ ವಿದ್ಯೆ ಇಲ್ಲದಿರುವುದು. ಕೇವಲ ಕೊಂಚವಷ್ಟು ಜನರಿಗೆ ವಿದ್ಯೆಯೇ ಇಲ್ಲದಿರುವಾಗ್ಯೆ ಅವರಿಗೆ ಪಾರಮಾರ್ಥಿಕ ವಿದ್ಯೆ ಗಂಧವಾದರೂ ಎಲ್ಲಿಂದ ಬಂದೀತು. ಇದರ ಜತೆಗೆ ಪ್ರಸ್ತುತ ಕ್ರೈಸ್ತ ದೇಶಗಳಲ್ಲಿರುವಂತೆ ವಾರಕ್ಕೊಮ್ಮೆ ಚರ್ಚುಗಳಲ್ಲಿ ಸೇರಿ ಪಾದ್ರಿಗಳಿಂದ ಸರ್ಮನ್ಸ್‌ಗಳನ್ನು ಆಗಾಗ್ಯೆ ಕೇಳುವ ಅವಕಾಶವಾದರೂ ದೊರೆತರೆ ಅದರಿಂದಲಾದರೂ ಜನರಲ್ಲಿ ಸ್ವಲ್ಪಮಟ್ಟಿಗೆ ಭಕ್ತಿ ಹುಟ್ಟಬಹುದು. ಆದರೆ ನಮ್ಮ ದೇವಸ್ಥಾನಗಳಲ್ಲಿ ಅಂತಹ ರೀತಿಯ ಬೋಧನೆಗಳಿಗೆ ಎಡೆಯೇ ಇಲ್ಲ. ಅಲ್ಲಿ ಪೂಜಾರಿಗಳು ದೇವರ ವಿಗ್ರಹದ ಎದುರು ನಿಂತು ಏನು ಹೇಳುತ್ತಾನೆ ಎಂದು ಅವನಿಗೆ ಮಾತ್ರ ಗೊತ್ತು. ಸಂಸ್ಕೃತದಲ್ಲಿರತಕ್ಕ ಆ ಮಂತ್ರಗಳ ಅರ್ಥವು ಅವನಿಗೂ ಸರಿಯಾಗಿ ಗೊತ್ತಿದೆಯೋ ಎಂಬುದಾಗಿ ಹೇಳಲಿಕ್ಕೆ ಸಾಧ್ಯವಿಲ್ಲ. ಇಂತಿರುವಾಗ್ಯೆ ಬಡ ರೈತ ಜನರಲ್ಲಿ ಭಕ್ತಿಯೆಂಬುವುದು ಹುಟ್ಟುವುದಕ್ಕೆ ಅವಕಾಶ ಇಲ್ಲದಂತಾಯಿತು. ಇನ್ನುಳಿದ ಸಹಾ ಆದಿನೊಂದು ರೀತಿಯ ನೆಂಕಟಿನ ವೆಂಕಟರಮಣ ಎಂಬ ರೀತಿಯ ತತ್ಕಾಲಿಕ ರೀತಿಯ ಜನರಿಗೆ ಭಕ್ತಿಯೇ ಅಳಿಸುತ್ತಿದೆ.

ವಿದ್ಯೆ ಇಲ್ಲದವರ ರೀತಿ ಹೀಗಾಯಿತು. ಇನ್ನು ನಮ್ಮಲ್ಲಿ ವಿದ್ಯಾವಂತರೆನಿಸಿಕೊಂಡಿರುವ ನಮ್ಮ ಪಾಡು ದರೋ ವಿದ್ಯೆಇಲ್ಲದ ನಮ್ಮ ಸಹೋದರ ಸಹೋದರಿಯರನ್ನು ಭಕ್ತಿಮಾರ್ಗಕ್ಕೆ ಎಳೆಯುವಂತ ರೀತಿಯಲ್ಲಿ ದೆಯೇ ಎಂದು ಪರಿಶೀಲಿಸಿದರೆ ಅದೂ ಇಲ್ಲವೆಂದು ಸಖೇದ ರೀತಿಯಲ್ಲಿ ಇಲ್ಲವೆಂದೇ ಹೇಳಬೇಕಾಗಿದೆ. ಯಾಕೆಂದರೆ ಯಾವುದಾದರೂ ಒಂದು ಗುಣವು ನಮ್ಮಲ್ಲಿ ಬೆಳೆಯಬೇಕಾದರೆ ಅದು ಚಿಕ್ಕವಯಸ್ಸಿನಲ್ಲೇ ನಮ್ಮಲ್ಲಿ ಮೊಳೆಯಬೇಕು. ನಾವು ಚಿಕ್ಕವರಾಗಿರುವಾಗ್ಯೆ ಮನೆಯಲ್ಲಾಗಲೀ ಶಾಲೆಗಳಲ್ಲಾಗಲೀ ದೈವಿಕ ವಿಷಯಗಳನ್ನು ಕುರಿತು ಯಾವುದೊಂದು ಬೋಧನೆಗಳಾಗಲೀ ಕಥೆಗಳಾಗಲೀ ನಮಗೆ ಸಿಕ್ಕಲಿಲ್ಲ.

ಗ್ರಾಮ ದೇವಸ್ಥಾನಗಳಲ್ಲಿ ವರ್ಷಕ್ಕೊಮ್ಮೆ ನಡೆಯುವ ಉತ್ಸವಗಳೂ ಹಳೆ ಮಾದರಿಯಾಗಿ ವರುಷಕ್ಕೆ ೧೫ ದಿಂದ ಎಪ್ಪತ್ತು ೧೫ ದಿನಗಳ ವರೆಗೆ ಬಹಳ ಪೂರ್ವದಿಂದ ಬಳಸಿಕೊಂಡು ಬಂದ ಆಚಾರ ವಿಚಾರಗಳಿಂದ ಈ ಉತ್ಸವಗಳಲ್ಲೂ ಸರಿಯಾಗಿ ಭಾಗವಹಿಸುವ ಸಂದರ್ಭ ನಮಗೆ ದೊರೆಯಲಿಲ್ಲ. [illegible] ಈ ಉತ್ಸವಗಳು ಸಲ್ಲುವ ಭಕ್ತಿಯನ್ನು ಯಾವ ರೀತಿ ಎಲ್ಲಾ ಕಡೆ ಭಾವನೆಗಳನ್ನು ಹುಟ್ಟಿಸುತ್ತಿಲ್ಲ. ದೈವಭಕ್ತಿ ಹುಟ್ಟುವ ಸನ್ನಿವೇಶಗಳು ನಡೆಯುವ ಕಥೆಗಳಾಗಲೀ ಯೋಗ ಪುರಾಣಗಳ ಸಾರಗಳಾಗಲೀ ಏನೂ ದೈವಿಕ ಜ್ಞಾನದಲ್ಲಿ ಸಂಬಂಧಿಸಿದ ಮನಸ್ಸಿನ ಮನುಷ್ಯರ ಹಾದಿಯನ್ನು ಕೊಂಡಾಗ್ಯೆ ನಮ್ಮ ಯಾವುದೇ ಬೋಧನೆಗಳನ್ನು ಸಾಮೂಹಿಕವಾಗಿ ಭಜನೆಗಳ ಮೂಲಕವೂ ತನ್ಮೂಲಕ ಉಪನ್ಯಾಸ ಮೂಲಕವೂ ಹುಟ್ಟಿಸುವ ಮಾರ್ಗವನ್ನೂ ಸಾಗಿಸಬೇಕಿಲ್ಲದ ರೀತಿಯಿಂದ ಅದು ಆಗುವುದೇ ಇಲ್ಲ. ಈಗ ನಮ್ಮ ದೇವಸ್ಥಾನಗಳಲ್ಲಿ ನಡೆಯುತ್ತಿರುವ ಉತ್ಸವಗಳು ಈ ರೀತಿಯ ಬೋಧನೆಗಳನ್ನು ಯಾವ ರೀತಿಯಲ್ಲೂ ಕೊಡುವಂತಿಲ್ಲ. ಎರಡನೆಯದಾಗಿ ಶಾಲೆಗಳಲ್ಲಿ ದೈವಿಕ ಬೋಧನೆಯ ಪಾಠಗಳೇ ಇಲ್ಲ.

ನಮ್ಮ ಕಾಲದ ಮತ್ತು ಅಜ್ಜಂದಿರ ಕಾಲದಲ್ಲಿ ಭರತ ಖಂಡದ ಜನರು ಒಂದು ರೀತಿಯ ಗ್ರಾಮ ಜೀವನದ ಅಂಗವಾಗಿತ್ತು. ಗವ ಕಥೆಗಳು ಮಹಾಭಾರತ ರಾಮಾಯಣ ಉಪನ್ಯಾಸಗಳಲ್ಲಿ ಅಥವಾ ಇನ್ನಿತರ ಕಥಾ ಪ್ರಸಂಗಗಳಲ್ಲಿ ನಡೆಯುತ್ತಿದ್ದ ಜನರು ಮನಸ್ಸಿಗೆ ಭಕ್ತಿ ಇಲ್ಲದ ರಾಮಾಯಣ ಭಾಗವತಗಳ ಕೆಲವು ಅಧ್ಯಾಯಗಳನ್ನು ರಾಗವಾಗಿ ಓದಿ ಜನರಿಗೆ ವಿವರಿಸುತ್ತಿದ್ದರು. ಆದರೆ ನಾವೆಲ್ಲರೂ ಚಿಕ್ಕವರಾಗಿರುವಾಗ ಇಂಗ್ಲಿಷ್ ವಿದ್ಯೆಗೆ ಹೆಚ್ಚಿನ ಬೆಲೆ ಕೊಟ್ಟುದರಿಂದ ಈ ರೀತಿಯ ಭಕ್ತಿ ಬೋಧನೆಯು ಕಾಣೆಯಾಯಿತು. ಎಲ್ಲಿಯಾದರೂ ಮತ ಬೋಧನೆಯು ಇದ್ದರೂ ಕೆಲವು ಸಂದರ್ಭಗಳಲ್ಲಿ ಅದು ಪುರಾಣದ ಕಥೆಗಳಿಂದ ಮಾತ್ರ. ಆದರೆ ಈ ಪರಿಪಾಠದಿಂದ ಕೆಲವು ದಾರ್ಶನಿಕರು ದೈವಸೇವೆ ಎಂಬ ಹೆಸರಿನಿಂದ ತಮ್ಮ ಜೀವನ ಪ್ರಾರಂಭಿಸಿ ಬರುತ್ತಿದ್ದ ಹರಿದಾಸರು ನಿಜವಾಗಿಯೂ ದೈವಭಕ್ತರಿಂದದೆ ಬರೇ ಬಯಲಾಟದ ಹೊಟ್ಟೆಪಾಡಿನ ದಾಸರಾಗಿದ್ದುದರಿಂದ ಅವರ ಬೋಧನೆಗಳೂ ಸಹ ಕೇಳಿದವರ ಮನಸ್ಸಿನಲ್ಲಿ ನಿಜವಾದ ಭಕ್ತಿಯನ್ನು ಹುಟ್ಟಿಸುವಂತಿರಲಿಲ್ಲ. ಎರಡನೆಯದಾಗಿ ಅವರು ಪಾರಮಾರ್ಥಿಕ ವಿದ್ಯೆಯನ್ನು ಸರಿಯಾಗಿ ಶಾಸ್ತ್ರವಿಧಿ ಕಲಿತವರೂ ಆಗಿರದೆ ಕಲ್ಲಿಂದೆಷ್ಟು ಇಲ್ಲಿಂದಿಷ್ಟು ತತ್ವಗಳನ್ನು ಕಲಿತುಕೊಂಡು ತಮಗೆ ಗೊತ್ತಿಲ್ಲದ ಮತ್ತು ತಾವೇ ಆಚರಿಸದ ತತ್ವಗಳನ್ನು ಏನೂ ತಿಳಿಯದ ಜನರಿಗೆ ಬೋಧಿಸಲು ಪ್ರಯತ್ನಿಸುತ್ತಿದ್ದರಿಂದ ಅವರ ಬೋಧನೆಯು ಯಾರ ಮನಸ್ಸನ್ನು ಮಾರ್ಪಡಿಸುತ್ತಿರಲಿಲ್ಲ. ಹೇಗೆ ದಾಸರ ಕಥೆ? ಎಂದರೆ 'ಓಹೋ, ಬಹು ಸೊಗಸಾಗಿತ್ತು ಸಂಗೀತ ಬಹಳ ಚೆನ್ನಾಗಿತ್ತು, ಅವರ ಕಥೆಯು ಜನರನ್ನು ನಗಿಸುವಂತೆ ಬಹಳ ತಮಾಷೆಯಾಗಿತ್ತು' ಎಂಬುದಾಗಿ ಕೇಳಿದವರು ಹೇಳುತ್ತಿದ್ದರೇ ಹೊರತು ಅವರ ಬೋಧನೆಯಿಂದ ಕೇಳಿದವರಲ್ಲಿ ಬೇರೆ ಯಾವುದೊಂದು ಪರಿಣಾಮವೂ ಉಂಟಾಗುತ್ತಿರಲಿಲ್ಲ. ಯಾಕೆಂದರೆ ಈ ಹರಿದಾಸರು ತಾವು ಬೋಧಿಸುತ್ತಿರುವ ತತ್ವಗಳನ್ನು ಅವರೇ ಆಚರಣೆಯಲ್ಲಿ ನಡೆಸುತ್ತಿರಲಿಲ್ಲ. ಅವರ ಬಗ್ಗೆ ಅವರ ಬೋಧನೆಗಳೂ ದೈನಂದಿನ ಅವರ ನಡವಳಿಕೆಗಳೂ ಒಂದಕ್ಕೊಂದು ವಿರೋಧವಾಗಿಯೇ ಇರುತ್ತಿದ್ದವು. ಹೇಗೆಂದರೆ, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳನ್ನು ಗೆಲ್ಲಬೇಕು ಎಂದು ಗೆದ್ದವನೇ ಮನುಷ್ಯ. ಈ ವ್ಯಸನಗಳಿಗೆ ಬಲಿಯಾದವರು ಪಾಪಿಗಳು. ಅವರಿಗೆ ಕಡೆ ಎಂಬುದಾಗಿ ತಾವು ಕಲಿತ ಸಂಗೀತಗಳಿಂದ ಹೇಳುತ್ತಿದ್ದರಲ್ಲಾ, ತಮ್ಮ ಕಥೆ ಮುಗಿಯುವುದೇ ತಡ ಅಷ್ಟು ಜನರ ಎದುರಿನಲ್ಲಿ ಎಡೆಬಿಡದೆ ಸೂರಿನಂತೆ ಸ್ವರ್ಶ ಮಾಡಿಯೂ ನಡೆಸ ಇಲ್ಲದೆ ಮಾಡಿಗೆ ಸಿಕ್ಕವುಗಳನ್ನು ನಾನು ಸ್ವತಃ ನೋಡಿದ್ದೇನೆ. ಅದನ್ನು ಈ ರೀತಿಯ ಹರಿಕಥಾ ಕಾಲಕ್ಷೇಪಗಳೇ ನಮ್ಮ ಧರ್ಮ ನಾಶಕ್ಕೆ ಕಾರಣ. ಅವುಗಳನ್ನು ಎಲ್ಲರೂ ಬಹಿಷ್ಕರಿಸಬೇಕು ಎಂದು ಹೇಳುವ ಬಹಳ ಗ್ರಂಥಗಳಿಗಿಂತ ದೇವ ಯಾವಾಗಲೂ ಕೀರ್ತನೆಗಳ ಮೂಲಕ ಸರ್ವತೋಮುಖವಾದ ಆಧ್ಯಾತ್ಮಿಕ ಸತ್ಯವನ್ನು ಪ್ರಚಾರ ಮಾಡಿದ ಕನಕದಾಸ ಪುರಂದರದಾಸರಂತೆ ಈಗಿನ ದಾಸರುಗಳೂ ಇರುತ್ತಿದ್ದರೆ ಅವರ ಹೆಸರು ಕೀರ್ತಿಯನ್ನು ಪಡೆಯುತ್ತಿತ್ತು. ಈ ತರದ, ನಾವು ಹೇಳುವ ಸ್ವರೂಪ ಬದ್ಧವಾದ ಆ ಕಾವ್ಯದ ಬೋಧನೆ ಮಾತ್ರ ವಿದ್ಯಾವಂತರಾದ ಯುವಕರಿಗೆ ಹೇಗೆ ತಾನೇ ವಿಶ್ವಾಸವುಂಟಾದೀತು?

ಈ ಎಲ್ಲಾ ಕಾರಣಗಳ ಜತೆಗೆ ಇನ್ನೊಂದು ಪ್ರಬಲವಾದ ಕಾರಣವೂ ನಮ್ಮಲ್ಲಿ ದೇವರನ್ನು ಕುರಿತು ಭಕ್ತಿ ಯಾ ಪ್ರೀತಿ ಹುಟ್ಟದಿರುವುದಕ್ಕೆ ಕಾರಣವಾಗುತ್ತದೆ. ಅದು ಯಾವುದೆಂಬುದನ್ನು ಫ್ರಾನ್ಸಿಸ್ ಥಾಮ್ಸನ್ ಎಂಬ ಕವಿಯು ಅವರು ಬರೆದ 'The Hound of Heaven' ಎಂಬ ಕವನದಲ್ಲಿ ಒಂದು ವಾಕ್ಯದಲ್ಲಿ ಹೀಗೆ ವಿವರಿಸಿದ್ದಾನೆ. 'Men avoid God because, to have Him, is to have naught besides' ದೇವರು ಎಲ್ಲೆಲ್ಲಿಯೂ ಇದ್ದಾನೆ. ಅವನ ಶಾಸನವು ತಾಯಿದೆಗಳಿಗೆ ವಿರೋಧವಾಗಿ ನಾವು ನಡೆಯಬಾರದು. ಆತನನ್ನು ಶ್ರದ್ಧಾಭಕ್ತಿಯಿಂದ ಪೂಜಿಸಿ, ಅವನ ಪ್ರೀತಿಯನ್ನು ನಾವು ಸಂಪಾದಿಸಿಕೊಳ್ಳಬೇಕು ಎಂಬುದಾಗಿ ನಾವು ನಿರ್ಧರಿಸಿ ಅವನನ್ನು ಪೂಜಿಸಲು ನಾವು ಮೊದಲು ಮಾಡಿದೆವೆಂದರೆ ಆ ಕ್ಷಣದಿಂದಲೇ ನಾವು ಪ್ರತೀ ದಿನ ಮಾಡುತ್ತಿರುವ ಅನೇಕ ದುಷ್ಕಾರ್ಯಗಳನ್ನು ಬಿಡಬೇಕಾಗುತ್ತದೆ. ಈ ದುಷ್ಕಾರ್ಯಗಳು ನಮಗೆ ತಾತ್ಕಾಲಿಕವಾದ ಜಯ, ಸುಖ ಮತ್ತು ಸಂತೋಷಗಳನ್ನು ಕೊಡುವಂಥವುಗಳಾದರೆ ಅವುಗಳನ್ನು ಬಿಡಲು ನಮಗೆ ಮನಸ್ಸಿರುವುದಿಲ್ಲ. ಉದಾಹರಣೆಗಾಗಿ ಹೇಳುವುದಾದರೆ ನಿಜವಾದ ದೇವರ ಭಕ್ತನಿಗೆ ಸುಳ್ಳು ಹೇಳಲಿಕ್ಕಾಗಲೀ, ಚಾಡಿ ಹೇಳುವುದಕ್ಕಾಗಲೀ, ಪರನಿಂದೆ ಮಾಡಲಿಕ್ಕಾಗಲೀ, ಕಳವು ಮಾಡಲಿಕ್ಕಾಗಲೀ, ಕಾಳಸಂತೆಯಲ್ಲಿ ಹೆಚ್ಚಿನ ಬೆಲೆ ಪಡೆದು ಭಕ್ಷ್ಯ ಆಹಾರ ಮಾರುವುದಕ್ಕಾಗಲೀ, ತಿಳುವಳಿಕೆ ಇಲ್ಲದವರನ್ನು ಮೋಸಗೊಳಿಸಿ ಅವರ ಆಸ್ತಿಪಾಸ್ತಿಗಳನ್ನು ಲಪಟಾಯಿಸಲಿಕ್ಕಾಗಲಿ, ರಕ್ತ ಹೀರುವ ಬಡ್ಡಿಯಲ್ಲಿ ಬಡವರಿಗೆ ಹಣ ಕೊಟ್ಟು ಅವರ ಮನೆಗಳನ್ನು ಸುಲಿಯುವುದಕ್ಕಾಗಲೀ ಆಗುವುದಿಲ್ಲ. ಇದೆಲ್ಲಾ ಭಕ್ತರ ನಡವಳಿಕೆಗೆ ವಿರುದ್ಧವಾದದ್ದು. ಈ ನಡವಳಿಕೆಗಳು ತಾತ್ಕಾಲಿಕವಾದ ಸುಖವನ್ನು ಮನುಷ್ಯನಿಗೆ ಕಲ್ಪಿಸಿ ಕೊಡುವುದಾದರೂ ಅನೇಕರು, ಅವುಗಳನ್ನು ಬಿಡಲು ಆಗುವುದಿಲ್ಲ. [illegible] ಮನುಷ್ಯನೇ ಬಿಟ್ಟು ಬಿಡುತ್ತಾನೆ.

ಈ ರೀತಿಯು ಸುಮಾರು ೬೦ ವರ್ಷಗಳಿಂದ ಮನುಷ್ಯನು [illegible] ಎಲ್ಲಾ ರೀತಿಯ ಸಂಪಾದನೆ ಮಾಡುವುದಕ್ಕೆ ದಾಪುಗಾಲು ಹಾಕುತ್ತಿರುವ ನಮ್ಮ ದೈವ ಸಮಾಜದ [illegible] ಆದರೆ ಈ ದಾರಿಯಲ್ಲಿ [illegible] ಫಲವು ಬರಬೇಕೆಂದರೆ ಹಿಂದಿನ [illegible] ಬೇಕಾಗುವುದು [illegible] ಗುವುದು. ಶ್ರದ್ಧಾಭಕ್ತಿಯಿಂದ ಕೂಡಿದ ಮನಸ್ಸಿಗೆ ಎಲ್ಲಾ ರೀತಿಯ ಶಾಂತಿ ಸಿಗುವುದು ಎಂಬುದಕ್ಕೆ ಸಹಸ್ರಾರು ನಿದರ್ಶನಗಳು ನಮ್ಮ ಪುರಾಣಗಳಲ್ಲಿ ಇತಿಹಾಸಗಳಲ್ಲಿ ಕಾಣಸಿಗುತ್ತವೆ.

ದ್ರೌಪದಿಯ ಮಾನಭಂಗ ಮಾಡಲು ಕೌರವ ದುರ್ಯೋಧನನ ಸಭೆಯಲ್ಲಿ ಅವಳ ಸೀರೆಯನ್ನು ದುಶ್ಶಾಸನನು ಎಳೆದಾಗ 'ದೇವರೇ ನನ್ನ ಮಾನವನ್ನು ಕಾಪಾಡು' ಎಂಬುದಾಗಿ ಅವಳು ಮೊರೆಯಿಡಲು ಪರಮಾತ್ಮನು ಅವಳ ಸೀರೆಯನ್ನೇ ಅಕ್ಷಯ ಮಾಡಿ, ಅವಳ ಸತೀ ಧರ್ಮವನ್ನು ಕಾಪಾಡಲಿಲ್ಲವೇ? ಪ್ರಹ್ಲಾದನು ಹಿರಣ್ಯಕಶ್ಯಪನ ಪ್ರಾಣವನ್ನು ಸಂಹರಿಸಲು ಪ್ರಾರ್ಥನೆಗಳಿಂದ ಪ್ರಸನ್ನನಾಗಲಿಲ್ಲವೇ? ಹುಟ್ಟು ಕುರುಡನಾದ ಆ ಹೇಳಲಿಸಿಗೆ, ಶಿವ ಮಹಾತ್ಮನ ದಯೆಯಿಂದ, ದಿವ್ಯದೃಷ್ಟಿ ಬರಲಿಲ್ಲವೇ? ಇಂತಹ ನಿದರ್ಶನಗಳು

ನಮ್ಮ ಪುರಾಣಗಳಲ್ಲಿ ಎಷ್ಟಿಲ್ಲ.

ಅವುಗಳನ್ನು ಹೇಳಿದರೆ ಈಗಿನ ವಿದ್ಯಾವಂತರಾದ ನಮ್ಮ ಮನಸ್ಸಿಗೆ ಅವು ಅಜ್ಜಿಕಥೆಗಳಾಗಿ ಕಾಣಬಹುದು. ನಮಗೆ ವ ನಂಬಿಕೆ ಬೇಕಾದರೆ, ಈಗಿನ ಕಾಲದಲ್ಲಿ ನಮ್ಮ ಅನುಭವಕ್ಕೆ ಬರುವಂತಹ ನಿದರ್ಶನಗಳು ಬೇಕಾಗುತ್ತವೆ. ನ್ಯಾಯವಾಗಿ ಪರಿಶೀಲಿಸಿದರೆ ಅಂತಹ ಉದಾಹರಣೆಗಳು ಬೇಕಾದಷ್ಟು ಈಗಲೂ ಕಾಣುತ್ತವೆ.

ಇಡೀ ಹಿಂದೂದೇಶದಲ್ಲಿ ಏಕಚಕ್ರಾಧಿಪತ್ಯವನ್ನು ಕಟ್ಟಿ ಅಪ್ರತಿಮ ಶಕ್ತಿ ಶೌರ್ಯದಿಂದ ರಾಜ್ಯಭಾರ ಮಾಡುತ್ತಿದ್ದ ಮೊಗಲಾಯಿ ಚಕ್ರವರ್ತಿಯ ಕಾಲದಲ್ಲಿ ಕೇವಲ ನೂರೈದು ಜನರ ಬೆಂಬಲ ಸಹ ಇಲ್ಲದೆ, ಕಾಡಿನಲ್ಲಿ ಅಲೆದಾಡುತ್ತಿದ್ದ ಶಿವಾಜಿಯು ಮಹಾರಾಷ್ಟ್ರ ಸಾಮ್ರಾಜ್ಯವನ್ನು ಸ್ಥಾಪಿಸಿದ ಚರಿತ್ರೆಯನ್ನು ಓದಿದರೆ ಯಾರಿಗೆ ತಾನೇ ದೈವಬಲದಲ್ಲೂ ದೈವಭಕ್ತಿಯಲ್ಲೂ ವಿಶ್ವಾಸ ಹುಟ್ಟಲಿಕ್ಕಿಲ್ಲ? ಅಷ್ಟು ದೂರ ಹೋಗುವುದೇಕೆ? ನಮ್ಮ ಈ ಜೀವಮಾನದಲ್ಲೇ ನಡೆದು ಬಂದು ಅತ್ಯದ್ಭುತವಾದ ಘಟನೆ ಎಂದರೆ ನಮ್ಮ ಹಿಂದೂದೇಶಕ್ಕೆ ಸ್ವರಾಜ್ಯ ಬಂದದ್ದು. ಕೇವಲ ಒಬ್ಬ ಬಡ ಮನುಷ್ಯ ಎಂದರೆ ಮಹಾತ್ಮ ಗಾಂಧೀಜಿ. ಹಿಂದೂ ದೇಶದ ಮೇಲೆ ರಾಜ್ಯಭಾರ ಮಾಡುತ್ತಿದ್ದವರಾದರೋ ಇಡೀ ಭೂಲೋಕದ ಮುಕ್ಕಾಲು ಅಂಶವನ್ನು ಆಳುತ್ತಿದ್ದ ನಾನಾ ತರದ ಶಸ್ತ್ರಾಸ್ತ್ರ ಧಾರಿಗಳಾದ ಸಾಮ್ರಾಟರು. ಹಿಂದೂದೇಶವೆಂದರೆ, ಅನೇಕ, ಒಂದಕ್ಕೊಂದು ವಿರೋಧವಾದ ಜಾತಿ ಮತಗಳಿಂದ ಕೂಡಿದ ದೇಶ. ಇವರಲ್ಲೂ ವಿದ್ಯಾವಂತರಲ್ಲಿ ಅನೇಕರು ಆಳರಸರ ಬಂಟರಾಗಿದ್ದುದಲ್ಲದೆ, ಮಹಾತ್ಮರಿಗೆ ವಿರೋಧಿಗಳಾಗಿದ್ದರು. ಆದರಲ್ಲೂ ಬ್ರಿಟಿಷರು ಅವರ ಬದ್ಧ ವೈರಿಗಳಾದ, ಜರ್ಮನಿ ಮತ್ತು ಜಪಾನಿಯರನ್ನು ಈ ಕಳೆದ ಮಹಾಯುದ್ಧದಲ್ಲಿ ಸದೆಬಡಿದು ವಿಜಯಿಗಳಾದ ಮೇಲೆ ಅವರ ಯುಕ್ತಿ ಸಹಾಯ ಕೂಡದ ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ಕೊಟ್ಟಾರೆಂದು ಯಾರು ತಾನೇ ಗ್ರಹಿಸಿದ್ದರು? ಮಹಾತ್ಮಗಾಂಧಿಯವರ ಈ ತರದ ವಿಜಯಕ್ಕೆ ಅವರಿಗೆ ದೇವರಲ್ಲಿದ್ದ ಭಕ್ತಿಯಲ್ಲದೆ ಬೇರೆ ಯಾವ ಕಾರಣವನ್ನು ಕೊಡಲು ಸಾಧ್ಯವಿದೆ?

ಮೊನ್ನೆ ತಾನೇ, ಮದ್ರಾಸಿನ ಮುಖ್ಯ ಮಂತ್ರಿಯಾದ ಶ್ರೀ. ರಾಜಗೋಪಾಲಚಾರಿಯವರು ಕ್ಷಾಮದಿಂದ ಪೀಡಿತರಾದ ಜನರನ್ನು ಸಮಾಧಾನಪಡಿಸುತ್ತಾ "ದೇವರಲ್ಲಿ ಮೊರೆ ಇಡಿ. ಭಕ್ತಿಯಿಂದ ಪೂಜಿಸಿರಿ" ಎಂದು ಸಾರಿದ ಕೂಡಲೇ ಐದಾರು ವರ್ಷಗಳಿಂದ ಮಳೆ ಇಲ್ಲದಿದ್ದ ರಾಯಲಸೀಮೆಯಂತಹ ದೇಶಕ್ಕೆ ಬೇಕಾದಷ್ಟು ಮಳೆಯಾದದನ್ನು ನಾವು ಕಾಣಲಿಲ್ಲವೇ? ಅಷ್ಟೇಕೆ? ಈಗ ಕೆಲವು ದಿವಸಗಳಿಂದ ನಮ್ಮ ಈ ಪುಟ್ಟ ದೇಶಕ್ಕೆ ಮಳೆಯ ಅಭಾವವು ಕಂಡು ಬರಲು, ಊರಿನಲ್ಲೂ, ನಾಡಿನಲ್ಲೂ ಜನರು ದೇವಸ್ಥಾನಗಳಲ್ಲಿ ಸೇರಿ ಸಾಮೂಹಿಕವಾಗಿ, ಪೂಜೆ ಪ್ರಾರ್ಥನೆಗಳನ್ನು ಸಮರ್ಪಿಸಲು, ದೇವರು ನಮ್ಮ ಕೋರಿಕೆಯನ್ನು ಸಲ್ಲಿಸಲಿಲ್ಲವೇ? ದೇವರಲ್ಲಿ ಭಕ್ತಿಯನ್ನು ಉತ್ತೇಜಿಸಲು ಇದಕ್ಕಿಂತಲೂ ಹೆಚ್ಚಿನ ನಿದರ್ಶನಗಳು ಬೇರೆ ಬೇಕೆ?

ನಾವು ಕಷ್ಟ ಬಂದರೆ ಮಾತ್ರ ದೇವರನ್ನು ಪೂಜಿಸಿ, ನಮ್ಮ ಕಾರ್ಯ ಕೈಗೂಡಿದ ಕೂಡಲೇ ದೇವರನ್ನು ಮರೆತು ನಮ್ಮ ಮನಸ್ಸೋ ಇಚ್ಛೆ ನಡೆಯಲು ಪ್ರಯತ್ನಿಸಬಾರದು. ದೈವಭಕ್ತಿಯು ಸದಾ ನಮ್ಮಲ್ಲಿ ಇದ್ದೇ ಇರಬೇಕು. ಅದಿದ್ದರೆ, ನಮ್ಮ ಅನೇಕ ದುರ್ಗುಣಗಳು ಅದಾಗಿಯೇ ಮಾಯವಾಗಿ ಹೋಗುತ್ತದೆ. ಯಾಕೆಂದರೆ, ದೇವರು ಎಲ್ಲೆಲ್ಲಿಯೂ ಇದ್ದಾನೆಂದ ಮೇಲೆ, ಅವನ ಕಣ್ಣನ್ನು ತಪ್ಪಿ ನಮಗೆ ಯಾವದೊಂದು ತರದ ಪಾಪದ ಕೆಲಸಗಳನ್ನು ಮಾಡಲು ಆಸ್ಪದದೊರೆಯುವುದಿಲ್ಲ ನಮ್ಮಲ್ಲಿರಬೇಕಾದ, ದಯಾದಾಕ್ಷಿಣ್ಯಗಳೂ, ಧಾನಧರ್ಮಗಳೂ, ಸ್ವಾಭಾವಿಕವಾಗಿ ಮೂಡಿ, ಸ್ವಾರ್ಥತೆಯಿಂದ ಬರುವ ಅನ್ಯಾಯಗಳೆಲ್ಲ ಮಾಯವಾಗುವುದು.

ಶ್ರೀ ರಾಮಕೃಷ್ಣ ಪರಮಹಂಸ ಮತ್ತು ಶ್ರೀ ವಿವೇಕಾನಂದರ ಆಗಮನದ ನಂತರ ಹಿಂದೂದೇಶದಲ್ಲಿ ಆಧ್ಯಾತ್ಮಿಕ ವಿಚಾರದಲ್ಲಿ ಒಂದು ನವಚೇತನವು ತಲೆದೋರಿತು. ಆದರೆ ಅವರ ಕೆಲವು ಕಾರ್ಯಗಳು ವಿದ್ಯಾವಂತರಲ್ಲಿ ಒಂದು ತರದ ಮನೋವಿಕಾಸವನ್ನುಂಟು ಮಾಡಿದಲ್ಲದೆ ಇವರ ಪ್ರಯೋಜನವು ಗ್ರಾಮಾಂತರಗಳಲ್ಲಿ ಇನ್ನೂ ಹೊಕ್ಕಿಲ್ಲ. ದೇಶದ ಕಲ್ಯಾಣವಾಗಬೇಕಾದರೆ ನಮ್ಮ ಗ್ರಾಮವಾಸಿಗಳಲ್ಲಿ ದೈವೀಕ ಭಕ್ತಿ ಹೆಚ್ಚಾಗಿ ಅವರ ಗುಣ ನಡತೆಗಳು ಬದಲಾಗಬೇಕು. ಈ ವಿಷಯದಲ್ಲಿ ಈಗಿನ ವಿದ್ಯಾವಂತರೆನ್ನಿಸಿಕೊಳ್ಳುವ ನಾವೂ ಮತ್ತು ಮುಂದುವರಿದ ಪಟ್ಟಣವಾಸಿಗಳೂ ತಿಳಿದೋ ತಿಳಿಯದೆಯೋ ಒಂದು ಅನ್ಯಾಯವನ್ನು ಮಾಡುತ್ತಿದ್ದೇವೆ. ಈ ನಮ್ಮ ನಡವಳಿಯು ಬಹಳ ಮಟ್ಟಿಗೆ ನಮ್ಮ ಮುಂದಾಳತನವನ್ನು ಆಶ್ರಯಿಸುತ್ತಿರುವ ನಾಡಿನ ಅನೇಕ ಮುಗ್ಧಜನರ ಭಕ್ತಿಯ ಬೆಳವಣಿಗೆಯನ್ನು ಕುಗ್ಗಿಸಿದೆ ಎಂದರೆ ತಪ್ಪಾಗಲಾರದು. ಅದು ಯಾವುದೆಂದರೆ ನಮ್ಮಲ್ಲಿ ಅನೇಕರು ದೇವರಲ್ಲಿ ಅತ್ಯಂತ ಭಕ್ತಿ ಶ್ರದ್ಧೆ ಇರುವವರಾದರೂ ಅವರು ತಾವು ಮಾಡುತ್ತಿರುವ ಕಾರುಬಾರುಗಳಲ್ಲೂ, ಆಡುವ ಮಾತುಗಳಲ್ಲೂ ಸಂಪೂರ್ಣ ನಾಸ್ತಿಕರಂತೆ ವರ್ತಿಸುತ್ತಾರೆ. ದೇವಸ್ಥಾನಗಳಿಗಾಗಲೀ ಜಾತ್ರೆಗಳಿಗಾಗಲೀ ಹೋಗುವದಕ್ಕೆ ಸಂಕೋಚಪಡುತ್ತಾರೆ. ಹೋಗುವದಾದರೂ ಯಾರೂ ಇಲ್ಲದ ಸಮಯದಲ್ಲಿ ಗುಪ್ತವಾಗಿ ಹೋಗಿ ಬಂದು ಬಿಡುತ್ತಾರೆ ಯಾರಾದರೂ ಭಕ್ತಿ ದೇವರ ಪೂಜೆ ಅಥವಾ ಸೇವೆ ವಿಷಯ ಹೇಳಿದರೆ ಅದರಲ್ಲೆಲ್ಲ ನನಗೆ ಭರವಸೆ ಇಲ್ಲ ಎನ್ನುತ್ತಾರೆ ಆದರೂ ಸ್ವಲ್ಪ ಜ್ವರ ಯಾ ತೊಂದರೆ ಬಂದರೆ ಗುಪ್ತವಾಗಿ ನೂರಾರು ರೂಪಾಯಿ ಪೂಜೆ ದಾನ ದಕ್ಷಿಣೆಗಳಿಗಾಗಿ ಖರ್ಚು ಮಾಡುತ್ತಾರೆ. ಆದುದರಿಂದ ನಮ್ಮಲ್ಲನೇಕರು ಈ ದೇವರ ಪೂಜೆ ಮಾಡುವುದು, ಜಾತ್ರೆಗಳಿಗೋ ತೀರ್ಥಸ್ಥಳಗಳಿಗೋ ಹೋಗುವುದು ಇವೆಲ್ಲ ನಾಗರಿಕರಲ್ಲದ ಮೂಢರ ಕೆಲಸ. ವಿದ್ಯಾವಂತರೂ ಐಶ್ವರ್ಯವಂತರೂ ಅದರ ಆಶಕ್ತಿಯಿಂತಿಲ್ಲ ಮೇಲೆ ಇರಬೇಕೆಂಬ ಒಂದು ಭಾವನೆಯನ್ನು ಹುಟ್ಟಿಸಿದ್ದಾರೆ. ಈ ತರದ ನಡವಳಿಯು ಅವರ ವೈಯಕ್ತಿಕ ದೃಷ್ಟಿಯಿಂದಲೂ, ಸಮಾಜದ ದೃಷ್ಟಿಯಿಂದಲೂ ಬಹಳ ಹಾನಿಕರ. ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನು ಮೂರನೇ ಅಧ್ಯಾಯದಲ್ಲಿ ಹೀಗೆ ಹೇಳಿದ್ದಾನೆ

Whatever the superior person does, that is followed by others. What he demonstrates by action, that people follow.

'One should not unsettle the understanding of the ignorant attached to action; the wise himself steadily acting; should engage the ignorant in all work"

ಆದುದರಿಂದ ನಮ್ಮ ನಡವಳಿಕೆಯು ಇತರರಿಗೆ ಮೇಲ್ಪಂಕ್ತಿ ಯಾಗುವಂತಿರಬೇಕಾದುದು ಯೋಗ್ಯವಲ್ಲವೆ?

ಬಾಲಚಮುಗಳಿಗೆ ಬುದ್ಧಿವಾದ

ತಾರೀಕು ೨೦-೯-೫೨ ರಲ್ಲಿ ಭಾರತದ ಸ್ಕೌಟು ಮತ್ತು ಗೈಡು ಸಂಸ್ಥೆಯ ಆರ್ಗನೈಜರಾದ ಪಂಡಿತ್ ಶ್ರೀ. ರಾಮಭಜ್ಪೈಯವರು ಮಡಿಕೇರಿಗೆ ಬಂದು, ಸೆಂಟ್ರಲ್ ಹೈಸ್ಕೂಲಿನ ಸ್ಕೌಟು ದಳವನ್ನು ಪರಿಶೀಲಿಸಿ, ಬಾಲಚಮುಗಳಿಗೂ ಮಂಗಳಿಗೂ ಈ ಕೆಳಗಿನ ಹಿತೋಕ್ತಿಗಳನ್ನು ನುಡಿದರು.

ನಾನು ಭಾಷಣ ಮಾಡುವುದಕ್ಕಾಗಲಿ ಅಥವಾ ಇನ್ನಿತರ ಉದ್ದೇಶದಿಂದಾಗಲಿ ಇಲ್ಲಿಗೆ ಬಂದವನಲ್ಲ. ನನ್ನ ಮುಖ್ಯ ಉದ್ದೇಶವೇನೆಂದರೆ ನಿಮ್ಮನ್ನು ನೋಡಲಿಕ್ಕಾಗಿ ಬಂದವನು. ಶಿಸ್ತಿನಿಂದ ನಿಮ್ಮನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತದೆ ನಿಮ್ಮ ಭಾಷೆ ನನಗೆ ತಿಳಿಯದುದಕ್ಕಾಗಿ ಕ್ಷಮಿಸಿ. ನೀವು ಮುಂದೆ ಅನೇಕ ಕೃತ್ಯಗಳನ್ನು ಕೈಕೊಳ್ಳುವವರು. ಗೈಕೊಂಡ ಕಾರ್ಯವನ್ನು ದಕ್ಷತೆಯಿಂದ ನಡೆಸಬೇಕಾಗುತ್ತದೆ. ಅಂಥಾ ಯೋಗ್ಯತೆಯನ್ನು ಈಗಲೇ ನೀವು ಪಡೆಯಬೇಕು. ನಿಮ್ಮ ಜೀವನದಲ್ಲಿ ಇದು ಸುಸಮಯ. ನಿಮ್ಮಲ್ಲಿ ಕೆಲವರು ದೇಶದ ಮುಂದಾಳುಗಳಾಗುವವರಿರಬಹುದು. ದೇಶಸೇವೆಯು ಪವಿತ್ರವಾದ್ದು. ಬಾಲಚಮುವಿಗೆ ಸೇರಿದವರು ಸೇವಾ ಕೆಲಸ ಮಾಡಲು ಕಲಿಯಬೇಕು. ಶಿಸ್ತನ್ನು ಮತ್ತು ಅಭ್ಯಾಸವನ್ನೂ ಗೈದುಹಿಡಿ ಯೆನ್ನು ಈಗಿನಿಂದಲೇ ನೀವು ರೂಢಿಗೆ ತರಬೇಕು. ಸ್ವತಂತ್ರ ಭಾರತದಲ್ಲಿ ವಿದ್ಯಾರ್ಥಿಗಳಾದ ನೀವು ನೋಡುವ ಅನೇಕ ರಚನಾತ್ಮಕ ಕೆಲಸಗಳಿವೆ. ಒಬ್ಬೊಬ್ಬರು ದಿನಕ್ಕೊಂದರಂತೆ ಒಂದೊಂದು ಒಳ್ಳೆ ಕಾರ್ಯವನ್ನು ಮಾಡಿದ್ದೇ ಆದರೆ ಅದರಿಂದ ದೇಶದ ಸೇವೆಗೆ ಎಷ್ಟೋ ಸಹಾಯಕಾರ ಮಾಡಿದಂತಾಗುವುದು. ಶರೀರ ಮತ್ತು ಮನಸ್ಸನ್ನು ಸ್ವಚ್ಛವಾಗಿಟ್ಟುಕೊಳ್ಳುವುದನ್ನು ಕಲಿಯಿರಿ. ನಿಮಗೆ ಶ್ರೇಯ ಸನ್ನು ಬಯಸುತ್ತೇನೆ ಎಂಬುದಾಗಿ ಹೇಳಿದ ನಂತರ ವಿದ್ಯಾರ್ಥಿಗಳಿಂದ ಅನೇಕ ತರದ ಆಟಗಳನ್ನು ಆಡಿಸಿದರು. ಮಕ್ಕಳ ಚಟುವಟಿಕೆಗಳನ್ನು ನೋಡಿ, ಬಹಳ ಆನಂದಪಟ್ಟರು.

Coorg Forest Department.

Sale Notice.

The right to fell and remove marked standing timber from nine coupes in Makut, Bhagamandala and Sampaje Ranges for a period of eighteen months from 1-11-1952 to 30-4-'54 will be sold in public auction on 30-10-'52 at 11 A.M. in the office of the Conservator of Forests, Coorg, Mercara.

For further particulars please apply to the Conservator of Forests, Coorg, Mercara.

ಟೆಂಡರ್ ನೋಟಿಸ.

ಮಡಿಕೇರಿ ಮಾರ್ಕೆಟಿಂಗ್ ಸಹಕಾರ ಸಂಘದ ದಾಸ್ತಾನು ಕಟ್ಟಡ ಕಟ್ಟಲು ಕಂಟ್ರಾಕ್ಟುದಾರರುಗಳು ಬೇಕಾಗಿದ್ದಾರೆ. ಕಟ್ಟಡದ ಪ್ಲಾನು ಮತ್ತು ಶರತ್ತುಗಳನ್ನು ಈ ಕೆಳಗಿನವರಿಂದ ಖುದ್ದು ಬಂದು ತಿಳಿದುಕೊಳ್ಳಬಹುದು. 30-10-52ರ ನಂತರ ಬರುವ ಟೆಂಡರುಗಳನ್ನು ಅಂಗೀಕರಿಸಲಾಗುವುದಿಲ್ಲ.

ಕೆ. ಸಿ. ನಂಜಪ್ಪ,
ಪ್ರೆಸಿಡೆಂಟರು
ಮಡಿಕೇರಿ ಮಾರ್ಕೆಟಿಂಗ್ ಸಹಕಾರ
2-1 ಸಂಘ ಲಿ, ಮಡಿಕೇರಿ.

ಕೃತಜ್ಞತಾ ವಂದನೆ.

ತಾರೀಕು ೧೯-೯-೫೨ರಲ್ಲಿ ಶಿವಾಧೀನರಾದ ನನ್ನ ಪತಿ ಪೊನ್ನಪ್ಪನವರ ವಿಯೋಗ ಕಾಲದಲ್ಲಿ ಪ್ರತ್ಯಕ್ಷ ಬಂದೂ, ಸಂತಾಪಸೂಚನೆ ಬರೆದೂ ನನ್ನ ಮತ್ತು ಮಕ್ಕಳ ದುಃಖದಲ್ಲಿ ಭಾಗಿಗಳಾದ ಬಂಧು ಮಿತ್ರರನ್ನು ಪ್ರತ್ಯೇಕ ಬರೆದು ವಂದಿಸುವುದು ಅಸಾಧ್ಯವಾದ ಕಾರಣ ಅವರೆಲ್ಲರಿಗೂ ಈ ಮೂಲಕ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಚೆಪ್ಪುಡೀರ ಸೀಲಪ್ಪ,
ರುದ್ರಬೀಡು, ಪೊನ್ನಂಪೇಟೆ.

— ನಿಮಗೆ ಅತ್ಯಂತ ಲಾಭದಾಯಕವಾಗಿ —

ವಿಮೆ ಮಾಡಲೂ ಅಥವಾ ಪ್ರತಿನಿಧಿಸಲೂ

ಇಂಡಿಯಾದ ಅತ್ಯಂತ ಹಳೆಯ ಮತ್ತು ಸುಭದ್ರತೆಯ ವಿಮಾ ಸಂಸ್ಥೆ.

ದಿ ಬಾಂಬೆ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

[ಸ್ಥಾಪನೆ 1871]

ವಿವರಗಳಿಗೆ ಬರೆಯಿರಿ:— ಬ್ರಾಂಚ್ ಸೆಕ್ರೆಟರಿ,

172-3 ನರಸಿಂಹರಾಜಾ ರಸ್ತೆ (P. B. 186),

12-6 ಬೆಂಗಳೂರು 2, ಅಥವಾ ಫೋನ್ ಮಾಡಿ-3624.

|| ಕ್ಷಯ ಸಂಬಂಧವಾಗಿ 'ಪ್ಲುರಿಸಿ' ಉಂಟಾಗುವುದೇ? ||

(ಲೇ:— ಡಾ|| ವಿ. ಆರ್. ಭಟ್, ಎಂ. ಬಿ. ಬಿ. ಎಸ್., ಟಿ. ಡಿ. ಡಿ.)

ಶ್ವಾಸಕೋಶಗಳು ಎದೆಗೂಡಿನೊಳಗೆ ಬಲ ಮತ್ತು ಎಡಬದಿಗಳಲ್ಲಿರುತ್ತವೆ. ಶ್ವಾಸೋಚ್ಛ್ವಾಸ ಕ್ರಿಯಾ ಕಾಲದಲ್ಲಿ ಸಹಜಾವಸ್ಥೆಯ ಸಮಯದ ಪ್ರಾಣದಲ್ಲಿ ಅವು ದಿನಕ್ಕೆ ೧೮ ಬಾರಿ ಉಬ್ಬುವವು ಮತ್ತು ತಗ್ಗುವವು; ಆಗ ಸಹಜವಾಗಿ ಶ್ವಾಸಕೋಶಗಳು ಚಲಿಸುತ್ತವೆ. ಈ ಚಲನವಲನವು ಸರಾಗವಾಗಿ ನಡೆಯುವಂತೆ ಶ್ವಾಸಕೋಶಗಳ ಹೊರಗೆ 'ಪ್ಲೂರಾ' ಎಂಬ ಸೂಕ್ಷ್ಮ ಪರೆಯು ಆವರಣವಾಗುತ್ತದೆ. ಎದೆಗೂಡಿಗೂ (Chest wall) ಒಳಗಿನ ಅಂತಃಪದರ ಸೂಕ್ಷ್ಮ ಪರೆಯ ಆವರಣವಿರುತ್ತದೆ. ಈ ಎರಡು ಪರೆಗಳು ಯಾವಾಗಲೂ ಒಂದಕ್ಕೊಂದು ಸಂಪರ್ಕವಾಗಿ ಇರುತ್ತವೆ. ಇದರಿಂದ ಸಹಜಾವಸ್ಥೆಯಲ್ಲಿ ಅದರಿಂದ ಘರ್ಷಣೆ (Friction) ಇಲ್ಲವೆ ನೋವು ಇರುವುದಿಲ್ಲ. ಈ 'ಪ್ಲೂರಾ' ಪರೆಗಳಿಗೆ ಉರಿಯು (Inflammation) ಉಂಟಾದಾಗ ಅದನ್ನು 'ಪ್ಲುರಿಸಿ' (Pleurisy) ಎನ್ನುವರು. ಉಸಿರಾಟ ಕಾಲದಲ್ಲಿ ಉರಿಯುಳ್ಳ ಈ ಪರೆಗಳು ಒಂದಕ್ಕೊಂದು ತಿಕ್ಕಿದಂತಾಗಿ ಆ ತಿಕ್ಕಾಟದಿಂದ ತೀವ್ರ ನೋವು ಉಂಟಾಗುತ್ತದೆ. ಪ್ರಾಣ ಉಸಿರನ್ನೆಳೆದ ಕೊನೆಯಲ್ಲಿ, ಇಲ್ಲವೆ ದೀರ್ಘ ಶ್ವಾಸವನ್ನೆಳೆದರೆ ಈ ನೋವು ಅತ್ಯಧಿಕವಾಗುತ್ತದೆ ಮತ್ತು ಎದೆಯಲ್ಲಿ ಅನುಕಿ ಹಿಡಿದ (Catching) ಅನುಭವವಾಗುತ್ತದೆ. ಅದೇ ರೀತಿ ಕೆಮ್ಮುವಾಗ ಮತ್ತು ಸೀನುವಾಗಲೂ ನೋವು ಜಾಸ್ತಿಯಾಗುತ್ತದೆ. ಹೆಚ್ಚಾಗಿ ನೋವು ಎದೆಯಲ್ಲಿ ಯಾವುದಾದರೂ ಒಂದೇ ಕಡೆ ಸಾಮಾನ್ಯವಾಗಿ ಪಾರ್ಶ್ವದಲ್ಲಿ ಕಾಣಬರುತ್ತದೆ, ಕೊಂಚ ಜ್ವರ ಮತ್ತು ಅಲ್ಪ ರೀತಿಯ ಕೆಮ್ಮು ಇರುತ್ತದೆ. ಈ ರೀತಿಯ 'ಪ್ಲುರಿಸಿ' ಯನ್ನು 'ಒಣಪ್ಲುರಿಸಿ' (Dry pleurisy) ಎನ್ನುತ್ತಾರೆ.

ಕೆಲಕಾಲದ ನಂತರ ಉರಿಯು ಜಾಸ್ತಿಯಾಗಿ ಎರಡು ಪರೆಗಳು ಮೊದಲಿನಂತೆ ಇರಲಾರದು ಇಲ್ಲವೆ ಒಂದಕ್ಕೊಂದು ಅಂಟಿಕೊಳ್ಳಬಹುದು. ಕೆಲವು ಬಾರಿ ಈ ಉರುಪಿನಿಂದ 'ಪ್ಲೂರಾ' ಪರೆಗಳಲ್ಲಿ ಸ್ವಾಭಾವಿಕವಾಗಿ ಕಂಡು ಬರುವ ಅನುಗಳ ನಡುವೆ 'ನೀರು' (Fluid) ಉಂಟಾಗಬಹುದು. ಇದನ್ನು ಒದ್ದೆ ಜಾತಿಯ ಪ್ಲುರಿಸಿ (Wet pleurisy) ಎನ್ನುವರು. ಇಂತಹ ಪ್ಲುರಿಸಿಯಲ್ಲಿ ಉರಿಯುಗೊಂಡ ಎರಡು ಪರೆಗಳು ಉಂಟಾದ ನೀರಿನಿಂದ ಒಂದಕ್ಕೊಂದರಿಂದ ಪ್ರತ್ಯೇಕಿಸಲ್ಪಟ್ಟು ಉಸಿರಾಟದ ಕಾಲದಲ್ಲಿ ತಿಕ್ಕಾಟಕ್ಕೆ ಆಸ್ಪದವಿರುವುದಿಲ್ಲ. ಹೀಗಾಗಿ ನೋವು ನಿಲ್ಲುತ್ತದೆ. ಆದರೆ ಪರೆಗಳ ನಡುವೆ ನೀರು ತುಂಬುವುದರಿಂದ ಶ್ವಾಸಕೋಶಗಳ ಇಲ್ಲವೆ ಹೃದಯದ ಚಲನವಲನಗಳಿಗೆ ಅಡ್ಡಿಯುಂಟಾಗಬಹುದು ಮತ್ತು ನೀರು ಹೆಚ್ಚಾಗಿ ತುಂಬಿದ್ದರೆ ವಿಶ್ರಾಂತಿ ಪಡೆಯುತ್ತಿರುವಾಗಲೂ ಇಲ್ಲವೆ ಒಂದಿಷ್ಟು ಶ್ರಮ ಕೈಕೊಂಡೊಡನೆ ಉಸಿರಾಟ ತೀವ್ರಗತಿಯಲ್ಲಿ ನಡೆಯಬಹುದು. ಇಂತಹ ಸಂದರ್ಭಗಳಲ್ಲಿ ನಾಡಿ ಬಡಿತದ ವೇಗವೂ ಜಾಸ್ತಿಯಾಗುತ್ತದೆ.

ಪ್ಲುರಿಸಿ ಒಣ ಇಲ್ಲವೆ ಒದ್ದೆ ಜಾತಿಯದ್ದು, ಪ್ಲೂರಾ ಪರೆಗೆ ಯಾವುದಾದರೂ ರೋಗಾಣುಗಳು ಸೋಂಕಿ ಉರಿಯು ಉಂಟಾಗುವುದರಿಂದ ತಲೆದೋರುತ್ತದೆ. ಹೆಚ್ಚಾಗಿ ಈ ಪೀಡೆಗೆ ಕಾರಣವಾಗುವ ರೋಗಾಣುಗಳೆಂದರೆ ಕ್ಷಯಾಣುಗಳು. ಆದುದರಿಂದ ಪ್ಲುರಿಸಿ ತಟ್ಟಿದ ರೋಗಿಗಳನ್ನು ಅವರ ಆ ಪೀಡೆ ವಾಸಿಯಾದ ನಂತರವೂ ಹಲವು ವರ್ಷಗಳ ಸನಕ ಪರೀಕ್ಷೆಗೊಳಪಡಿಸಬೇಕಾಗುತ್ತದೆ.

ಒದ್ದೆ ಜಾತಿಯ ಪ್ಲುರಿಸಿಯಲ್ಲಿ ಪ್ಲೂರಾ ಪರೆಗಳ ನಡುವೆ ತುಂಬಿದ ನೀರಿನಲ್ಲಿ ಕೀವು ಉಂಟುಮಾಡುವ ರೋಗಾಣುಗಳು ಸೋಂಕಿದಾಗ ಅದರಿಂದ ತುಂಬಿದ ನೀರಿನ ಅಂಶವೆಲ್ಲ ಹಸುರು ಬಣ್ಣದ ಕೀವಾಗಿ ಮಾರ್ಪಡುವುದು. ಕ್ಷಯ-ರೋಗಿಯಲ್ಲಿ ಇದು ಅತ್ಯಂತ ಬಿಕ್ಕಟ್ಟಿನ ತೊಡಕಿನ ಪರಿಸ್ಥಿತಿಯಾಗಿದೆ.

ತೀವ್ರಗತಿಯ ಉಸಿರಾಟ:— ವಿಶ್ರಾಂತಿ ಪಡೆಯುತ್ತಿರುವಾಗ ಇಲ್ಲವೆ ಒಂದಿಷ್ಟು ಶ್ರಮದ ಕೆಲಸ ಕೈಕೊಂಡೊಡನೆ ಇದು ಕಾಣಿಸಿಕೊಳ್ಳಬಹುದು. ರೋಗದ ಸೋಂಕು ಹಿಡಿದ ಶ್ವಾಸಕೋಶದ ಪದರು (Tissue) ರಕ್ತದಲ್ಲಿ ಆಮ್ಲಜನಕ (Oxygen) ಸೇರಿಸುವ ರಕ್ತದ ಶುದ್ಧೀಕರಣ ಕ್ರಿಯೆಯಲ್ಲಿ ಭಾಗವಹಿಸುವುದಿಲ್ಲ. ಆದುದರಿಂದ ರಕ್ತವನ್ನು ಶುದ್ಧಗೊಳಿಸುವ ಈ ಕ್ರಿಯೆಯನ್ನು ಶ್ವಾಸಕೋಶದ ಇತರ ಭಾಗಗಳು ವಹಿಸಿಕೊಳ್ಳಬೇಕಾಗುತ್ತದೆ. ಶ್ವಾಸಕೋಶಗಳ ಗತಿಯನ್ನು ವೇಗಗೊಳಿಸುವುದರಿಂದ ಮಾತ್ರ ಇದು ಅವುಗಳಿಗೆ ಸಾಧ್ಯ. ಹೀಗಾಗಿ ಉಸಿರಾಟದ ವೇಗ ಹೆಚ್ಚುತ್ತದೆ. ಶ್ವಾಸಕೋಶಗಳಲ್ಲಿಯ ಕ್ಷಯಾಣುಗಳ ಹೊಸೆಯಿಂದ ರಕ್ತದಲ್ಲಿ ಅವುಗಳ ಸಂಬಂಧವಾದ ವಿಷಗಳು ಹರಿಯುವುದರಿಂದಲೂ ಹೀಗಾಗುತ್ತದೆ.

ಬೆವರುವುದು:— ಜ್ವರವಿರುವಾಗಲೂ ವಿಶೇಷವಾಗಿ ಬೆವರು ಬರುತ್ತದೆ. ರಾತ್ರಿ ನಿದ್ದೆ ಹೋಗಿದಾಗ ಬೆವರು ಅತ್ಯಂತ ಹೆಚ್ಚಿಗೆ ಪ್ರಮಾಣದಲ್ಲಿ ಹೊರ ಸೂಸುವುದು. ಆದ್ದರಿಂದ ಇಂತಹ ಬೆವರನ್ನು ಹೆಚ್ಚಾಗಿ 'ರಾತ್ರಿ ಬೆವರು' (Night sweat) ಎನ್ನುತ್ತಾರೆ. ಹಗಲು ಹೊತ್ತಿನಲ್ಲಿಯೂ, ಹೆಚ್ಚಾಗಿ ರೋಗಿಗಳು ನಿದ್ದೆ ಹೋಗುವದರಿಂದ ಬೆವರು ಕಾಣಿಸಿಕೊಳ್ಳುತ್ತದೆ. ಒಳ್ಳೇ ಗಾಳಿ ಸಂಚಾರವಿರುವ ಕೋಣೆಯಲ್ಲಿ ಬೆವರು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕಂಡುಬರಬಹುದು ಇಲ್ಲವೇ ಕಾಣದಿರಲೂ ಬಹುದು. ಕೆಲವು ರೋಗಿಗಳಲ್ಲಿ ಅಲ್ಪಸ್ವಲ್ಪ ಮಾತ್ರ, ಕೆಲವರಲ್ಲಿ ಅಧಿಕ ಪ್ರಮಾಣದಲ್ಲಿ ಅದು ಕಂಡುಬರಬಹುದು.

ಆದರೆ ಬೆವರಿನ ಪ್ರಮಾಣದ ಮೇಲೆ ರೋಗದ ಗತಿಯನ್ನು ನಿರ್ಣಯಿಸಲು ಬರುವುದಿಲ್ಲ. ಕೆಲವೊಮ್ಮೆ ಉಟ್ಟ ವಸ್ತ್ರ ಮತ್ತು ಹಾಸಿಗೆಯ ವಸ್ತ್ರ ಕೂಡ ಬೆವರಿನಿಂದ ತೊಯ್ದು ಒದ್ದೆಯಾಗಬಹುದು. ಇಂತಹ ಸಂದರ್ಭದಲ್ಲಿ ರೋಗಿಯನ್ನು ಬೇರೆ ಒಣಗಿದ ವಸ್ತ್ರದಿಂದ ಚೆನ್ನಾಗಿ ಉಜ್ಜಬೇಕು ಮತ್ತು ಅವನು ಉಟ್ಟುಕೊಂಡಿದ್ದ ಹಾಗೂ ಹಾಸಿಗೆಯ ವಸ್ತ್ರಗಳನ್ನು ಬದಲಾಯಿಸಬೇಕು.

ಸ್ವರವು ಕರ್ಕಶವಾಗುವುದು:— ಇದು ಹಲವು ಕಾರಣಗಳಿಂದಿರುತ್ತದೆ. ರೋಗದ ಆರಂಭದ ದೆಸೆಯಲ್ಲಿ ಈ ಕರ್ಕಶ ಸ್ವರೂಪವು ಬದಲಾವಣೆ ತೋರುತ್ತಲೇ ಇರುತ್ತದೆ. ಬೆಳಿಗ್ಗೆ ನಿದ್ದೆಯಿಂದ ಎಚ್ಚೆತ್ತಾಗ ಅದು ಕಂಡುಬರುತ್ತದೆ. ಆ ವೇಳೆ ಕ್ರಮೇಣ ದಿನದ ಇತರ ಕಾಲಗಳಲ್ಲಿ ಸ್ವರವು ಸರಿಯಾಗುತ್ತ ಬರುತ್ತದೆ. ಇದು ಸಾಮಾನ್ಯವಾಗಿ ಸ್ವರವನ್ನು ಉತ್ಪಾದಿಸುವ ಸ್ವರತಂತುಗಳು ಬಾತುಹೋಗುವದರಿಂದ ಉಂಟಾಗುತ್ತದೆ. ಸ್ವರತಂತುಗಳಿಗೆ ಸಾಕಷ್ಟು ವಿಶ್ರಾಂತಿ ಕೊಟ್ಟರೆ ಎಂದರೆ ಹಿಂಗಳು ಗಟ್ಟಿಯಾಗಿ ಮಾತಾಡುವದನ್ನು ಮತ್ತು ಚಿಕ್ಕ ಸ್ವರದಲ್ಲಿ ಪಿಸುಗುಟ್ಟುವುದನ್ನೂ ನಿಷೇಧಿಸಿದರೆ ನಂತರ ಇದು ಸರಿಯಾಗಬಹುದು. ಕೆಲಕಾಲದ ನಂತರ ರೋಗವು ಬೆಳೆದ ಹಾಗೆಲ್ಲಾ, ಕ್ಷಯಾಣು ವಿಶಿಷ್ಟ ಕ್ಷತ ದಿನನಿತ್ಯ ಅಂಗಗಳ ಮೇಲಿಂದ ಹಾದು ಹೋಗುವುದರಿಂದ ಸ್ವರತಂತುಗಳಲ್ಲಿ ವ್ರಣಗಳು (Ulcers) ತಲೆದೋರಬಹುದು. ಸ್ವರದ ಈ ಕರ್ಕಶತೆಯು ಚಿಕಿತ್ಸೆಯಿಂದ ಕೆಲವು ಕಟ್ಟಿಗೆ ಗುಣವಾಗಬಹುದು. ಆದರೆ ಹೆಚ್ಚಾಗಿ ಅದು ಶಾಶ್ವತ ನೆಲಸುತ್ತದೆ. ವ್ರಣಗಳು ವಾಸಿಯಾದರೂ ಅವುಗಳ ಸಂಬಂಧವಾದ ಮಚ್ಚೆ (Scars) ಸ್ವರತಂತುಗಳ ಲಹರಿ (Vibrations)ಗೆ ತಡೆಯುಂಟುಮಾಡುವುದರಿಂದ ಹೀಗಾಗುತ್ತದೆ. ಕೆಲವೊಮ್ಮೆ ಸ್ವರದ ಕರ್ಕಶವಾಗುವಂತಹ ಲಕ್ಷಣ ಆರಂಭದಲ್ಲೇ ಕಂಡುಬಂದು ರೋಗಿಯು ಕೂಡಲೇ ವೈದ್ಯರನ್ನು ಕಾಣುವಂತೆ ನೆರವಾಗುತ್ತದೆ.

ಶಕ್ತಿಗುಂದುವಿಕೆ ಯಾನೆ ನಿಶ್ಶಕ್ತಿ— ರೋಗವು ಪ್ರಾರಂಭವಾಗುವಾಗ ಸಂಬಂಧಪಟ್ಟ ರೋಗಿಯು ತನ್ನ ದೈನಂದಿನ ಕೆಲಸದ ಕೊನೆಯಲ್ಲಿ ವಿಶೇಷ ಬಳಲುವಿಕೆ ಮತ್ತು ನಿಶ್ಶಕ್ತಿಗಳಿಗೆ ಒಳಗಾಗಬಹುದು. ಅವನಿಗೆ ಬಲು ಬೇಗನೆ ಆಯಾಸವಾಗುತ್ತದೆ. ನಿದ್ದೆಯ ನಂತರವೂ ಅವನಲ್ಲಿ ಪ್ರಸನ್ನತೆ ಕಂಡುಬರುವುದಿಲ್ಲ. ಮಕ್ಕಳಾದರೆ ಅವರು ಆಟದ ಕಡೆಗೆ ಗಮನ ಕೊಡದಿರುವುದು ಕಂಡುಬರಬಹುದು. ಹಲವು ಬೇರೆ ಅಸ್ವಸ್ಥಗಳಲ್ಲಿಯೂ ಈ ಲಕ್ಷಣಗಳು ಕಂಡುಬರಬಹುದು. ಆದರೆ ಕ್ಷಯ ರೋಗದಲ್ಲಿ ಅವು ವಿಶೇಷವಾಗಿ ಕಂಡುಬರುತ್ತವೆ.

ಜೀರ್ಣ ಸಂಬಂಧ ವಿಕಾರಗಳು:— ಕ್ಷಯ ರೋಗದ ಆರಂಭದಲ್ಲಿ ಮತ್ತು ಅದು ಹೆಚ್ಚಿಗೆ ಬೆಳೆದ ನಂತರ, ರೋಗಿಗೆ ಊಟದ ಕಾಲದಲ್ಲಿ ಹಸಿವೆ ಇರುವದಾಗಿ ಕಂಡು ಬಂದರೂ ಹಲವು ಬಗೆ ಬಗೆ ಆಹಾರಗಳನ್ನು ತಿನ್ನುವ ರುಚಿ ಇರುವದಿಲ್ಲ. ಕೆಲವೊಮ್ಮೆ ಜೀರ್ಣ ಸಂಬಂಧ ವಿಕಾರದಿಂದ ಉಂಡ ಆಹಾರ ವಾಂತಿಯಾಗುವುದೂ ಇದೆ. (ಆಹಾರ ಉಪಕ್ರಮಿಸಿದ ನಂತರ ಮೇಲಿಂದ ಮೇಲೆ ಕೆಮ್ಮು ಬರುವುದರಿಂದಲೂ ಆಹಾರ ವಾಂತಿಯಾಗುವುದಿದೆ. ಈ ವಾಂತಿಯು ಮೇಲೆ ಹೇಳಿದ ವಾಂತಿಗಿಂತ ಪ್ರತ್ಯೇಕ) ರೋಗವು ಬೆಳವಣಿಗೆ ಹೊಂದಿದ ಹಾಗೆಲ್ಲಾ ವಿಶೇಷತಃ ಕಫವನ್ನು ಉಗುಳುವ ಬದಲು ನುಂಗುವ ರೋಗಿಗಳಲ್ಲಿ, ಕಫದಲ್ಲಿರುವ ಕ್ಷಯಾಣುಗಳು ಜಠರದೊಳಗೆ ಸೇರಿ ಕರುಳಿಗೆ ಸೋಂ

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

(1921ರಲ್ಲಿ ಸ್ಥಾಪಿತವಾಗಿದೆ.)

ಅಧಿಕೃತ ಶೇರು ಬಂಡವಾಳ	ರೂ	10,00,000
ವಸೂಲಾದ ಶೇರು ಬಂಡವಾಳ	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ನಡೆಸಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೂ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಬಿಲ್ ಮತ್ತು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಾವೆಲರ್ಸ್ ಚೆಕ್ ಮತ್ತು ವಿಶ್ವಭಾರತಿ ಇನ್ಷೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿ ಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಬಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ...

ತಿ, ಇದರಿಂದ ಅತಿಸಾರವು (Darrhoi-ea) ತೊಡಗಬಹುದು. (ಮೇಲಿಂದ ಮೇಲೆ ನೀರಿನಷ್ಟು ತೆಳ್ಳಗೆ ಮಲವಿಸರ್ಜನೆಯಾಗುವುದು; ಇದರಲ್ಲಿ ರಕ್ತವಿರುವುದಿಲ್ಲ, ಕೆಲವೊಮ್ಮೆ ಮಲದಲ್ಲಿ ಶ್ಲೇಷ್ಮ (Mucus) ಕಂಡುಬರಬಹುದು ಇಲ್ಲವೆ ನೊರೆ ನೊರೆಯಾಗಿರಬಹುದು.) ಕೆಲವು ರೋಗಿಗಳಲ್ಲಿ ಅತಿಸಾರದ ಮತ್ತು ಮಲಬದ್ಧತೆ ಒಂದನ್ನೊಂದು ಹಿಂಬಾಲಿಸಬಹುದು.

ರಕ್ತಚಲನೆಯ ಬದಲಾವಣೆಗಳು:– ಕ್ಷಯಾಣುಗಳಿಂದ ಉಂಟಾಗುವ ವಿಷಗಳ ಕಾರಣದಿಂದ ಎದೆ ಬಡಿತದ ವೇಗ ಹೆಚ್ಚುವುದು; ಹೀಗಾಗಿ ನಾಡಿ ಬಡಿತವು ವೇಗವಾಗಿ ಸಾಗುವುದು. ಜ್ವರ ಇಲ್ಲದಿರುವಾಗಲೂ, ನಾಡಿ ಬಡಿತವು ಹೆಚ್ಚಾಗಿ ಕಂಡು ಬರಬಹುದು.

ರಕ್ತಹೀನತೆ:–ಕ್ಷಯಾಣುಗಳಿಂದುಂಟಾದ ವಿಷಗಳು ಎಲುಬೊಳಗಿನ ಮಜ್ಜೆ (Bone marrow) ಮತ್ತು ರಕ್ತ ಉಂಟಾಗುವ ಇತರ ಇಂದ್ರಿಯಗಳ ಮೇಲೆ ಅತ್ಯಂತ ಕೆಟ್ಟ ಪರಿಣಾಮವನ್ನುಂಟುಮಾಡುವುದರಿಂದ ರಕ್ತಹೀನತೆ ತಲೆದೋರುತ್ತದೆ. ರೋಗ ಬೆಳವಣಿಗೆ ಹೊಂದಿದ ಹಾಗೆಲ್ಲಾ ಇದು ವಿಶೇಷವಾಗಿ ಕಂಡು ಬರಬಹುದು.

ಮುಟ್ಟು ನಿಲ್ಲುವುದು:–ಕ್ಷಯರೋಗ ಸೋಂಕಿದ ಮಹಿಳೆಯರಿಗೆ ಮುಟ್ಟು ನಿಲ್ಲಬಹುದು. ಕ್ಷಯಾಣು ಸಂಬಂಧವಾದ ವಿಷಗಳು ಮತ್ತು ರಕ್ತಹೀನತೆ ಇವೆರಡು ಜೊತೆಗೂಡುವುದರಿಂದ ಹೀಗಾಗುವುದಿರಬಹುದು. ರೋಗದ ಸ್ಥಿತಿಯು ಸುಧಾರಿಸಿದ ಹಾಗೆಲ್ಲಾ ತಿರುಗಿ ಮುಟ್ಟು ಕ್ರಮವಾಗಿ ನಡೆಯಬಹುದು.

ಮೇಲೆ ಸೂಚಿಸಿದ ಹಾಗೂ ಈ ಮೊದಲು ಹೇಳಿದ ಎಲ್ಲಾ ಲಕ್ಷಣಗಳಲ್ಲಿ ಕೆಮ್ಮು, ಕಫ, ಉಗುಳಿನಲ್ಲಿ ನೆತ್ತರು, ಎದೆ ನೋವು ಮತ್ತು ಶೀಘ್ರಗತಿಯ ಉಸಿರಾಟ ಇವು ಮಾತ್ರ ಶ್ವಾಸಕೋಶ ಸಂಬಂಧವಾದ ಪರೆಯ ನಾಶದಿಂದ ತಲೆದೋರುತ್ತವೆ. ಇತರ ಎಲ್ಲಾ ಲಕ್ಷಣಗಳು ರಕ್ತ ಚಲಾವಣೆಯಲ್ಲಿ ಕ್ಷಯಾಣು ಸಂಬಂಧ ವಿಷಗಳು ಸೇರಿಕೊಂಡುದರಿಂದ ಉಂಟಾಗುತ್ತವೆ. ಶ್ವಾಸಕೋಶ ಸಂಬಂಧವಾದ ಕ್ಷಯದಲ್ಲಿ ಮೇಲೆ ಸೂಚಿಸಿದ ಎಲ್ಲಾ ಲಕ್ಷಣಗಳು ಒಟ್ಟಿಗೆ ಕಾಣಿಸಿಕೊಳ್ಳಬೇಕೆಂದಿಲ್ಲ. ಅದರಿಂದ ಎಲ್ಲಾ ಲಕ್ಷಣಗಳು ಕಾಣಿಸಿಕೊಳ್ಳುವವರೆಗೆ ವೈದ್ಯಕೀಯ ಚಿಕಿತ್ಸೆಗೆ ಕಾಯುವುದು ತರವಲ್ಲ. ಉಗುಳಿನಲ್ಲಿ ನೆತ್ತರು ಇಲ್ಲವೆ ತೂಕದಲ್ಲಿ ಇಳಿತ ಇಂತಹ ಯಾವುದಾದರೊಂದು ಪ್ರಧಾನ ಲಕ್ಷಣ ಕಂಡೊಡನೆ ಅದನ್ನು ವೈದ್ಯರಿಂದ ಪರೀಕ್ಷಿಸುವುದುತ್ತಮ. ಮೇಲೆ ಹೇಳಿದ ಲಕ್ಷಣಗಳಲ್ಲಿ ಪ್ರತಿಯೊಂದು ಪ್ರತ್ಯೇಕವಾಗಿ, ಬೇರೆ ಬೇರೆ ವ್ಯಕ್ತಿಗಳಲ್ಲಿ ಬೇರೆ ಬೇರೆ ಅವ್ಯವಸ್ಥೆಗಳ ಸಂಬಂಧವಾಗಿಯೂ ಕಾಣಿಸಿಕೊಳ್ಳಬಹುದು. ದೃಷ್ಟಾಂತಕ್ಕಾಗಿ ಉಗುಳಿನಲ್ಲಿ ರಕ್ತ, ಶ್ವಾಸಕೋಶದ ಪದರಿಗೆ 'ಅರ್ಬುದ' ಅಥವಾ ಕೆನ್ಸರ್ ರೋಗ ಉಂಟಾದುದರಿಂದಲೂ ಇರಬಹುದು. ಜ್ವರವು ಬೇರೆ ಹಲವು ಕಾರಣಗಳಿಂದ ಕಾಣಿಸಿಕೊಳ್ಳಬಹುದು. ಆದರೆ ಮೇಲೆ ಹೇಳಿದ ಲಕ್ಷಣಗಳು ಜೊತೆಯಾಗಿ ಕಂಡು ಬಂದರೆ ಇಲ್ಲವೆ ಪ್ರಧಾನ ಲಕ್ಷಣಗಳಲ್ಲಿ ಹಲವು ಒಬ್ಬನಲ್ಲಿ ಕಂಡುಬಂದರೆ ಕ್ಷಯ ರೋಗದ ಕುರಿತು ಅನುಮಾನ ಪಡಬೇಕಾಗುವುದು.

—000—

ಘೋಷಣೆಗಳಿಂದ ಸಮಸ್ಯೆಗಳು ಬಗೆಹರಿಯವು.

ಕಳೆದ ತಾ. ೨೭ರಂದು ಹೈದರಾಬಾದಿನ ಉಸ್ಮಾನಿಯಾ ಬಾಗದಲ್ಲಿ ಲಕ್ಷಕ್ಕಿಂತಲೂ ಜಾಸ್ತಿ ಸೇರಿದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಪ್ರಧಾನ ಮಂತ್ರಿ ಪಂಡಿತ ನೆಹರೂರವರು ಭಾಷಣ ಮಾಡುತ್ತಾ, ಜನರು ತೋರಿದ ಪ್ರೀತಿ ವಿಶ್ವಾಸಗಳಿಂದ ತನ್ನ ಪ್ರಯಾಣದ ಆಯಾಸವು ಮಾಯವಾಗಿದೆ. ಹಾರತುರಾಯಿಗಳನ್ನು ಹಾಕಿ ಪುರಸ್ಕಾರ ಮಾಡುವುದರಲ್ಲಿ ನನಗೆ ವಿಶ್ವಾಸವಿಲ್ಲ. ಕೆಲಸ ಮಾಡುವವರಲ್ಲಿ ನನ್ನ ವಿಶ್ವಾಸ ಹೆಚ್ಚು ಎಂದು ಹೇಳಿದರು.

ಸ್ವಾತಂತ್ರ್ಯ ಲಭಿಸಿದ ನಂತರ ನಿಮ್ಮ ಹಕ್ಕುಗಳ ಜತೆಗೆ ನಿಮ್ಮ ಮೇಲೆ ಬಿದ್ದಿರುವ ಕೆಲವೊಂದು ಹೊಣೆಗಳೂ ಕರ್ತವ್ಯಗಳೂ ಇರುವವು. ದೇಶವು ನಿರುದ್ಯೋಗದ ಸಮಸ್ಯೆಯನ್ನು ಬಿಡಿಸಬೇಕಾಗಿದೆ. ಇವು ಬರೀ ಘೋಷಣೆಗಳಿಂದ ಇಲ್ಲವೆ ಪ್ರತ್ಯೇಕತೆಯ ಭಾವನೆಯಿಂದ ಬಿಡಲಾರವು. ಎಲ್ಲ ರಾಜ್ಯಗಳೂ ಎಲ್ಲ ಧರ್ಮದ ಜನರೂ ತಮ್ಮ ಭೇದ ಭಾವಗಳನ್ನು ಮರೆತು ಒಕ್ಕಟ್ಟಿನಿಂದ ಕೆಲಸ ಮಾಡಿದರೆ ಇವುಗಳನ್ನು ಸಾಧಿಸುವುದು ಸಾಧ್ಯವಾಗುವುದು. ನಾವು ನಮ್ಮ ಬಾಂಧವರಿಗೆ ಅನ್ಯಾಯ ಬಗೆದರೆ ಜಗತ್ತಿನ ರಾಷ್ಟ್ರಗಳಲ್ಲಿ ನಾವು ತಲೆ ಎತ್ತಿ ನಿಲ್ಲುವದೆಂತು? ಹಿಂದಿನದೆಲ್ಲವನ್ನು ಮರೆತು ಬಿಟ್ಟು ಮಾಡಿದ ಕೃತಿಗೆ ಪ್ರಾಯಶ್ಚಿತ್ತವೆಂದು ಗಲಭೆಯಲ್ಲಿ ನಿರಾಶ್ರಿತರಾದವರಿಗೆ ಪರಿಹಾರ ನೀಡಲು ಸಹಾಯ ಮಾಡುವುದು ನಮ್ಮ ಕರ್ತವ್ಯವೆಂದು ಮುಂತಾಗಿ ಹೇಳಿದರು.

ಕೌಟುಂಬಿಕ ಸುಖ ಸಾಧಿಸಿ.

ಅಖಿಲ ಭಾರತ ಗೃಹವಿಜ್ಞಾನ ಪರಿಷತ್ತಿನ ದ್ವಿತೀಯಾಧಿವೇಶನವು ಈ ಬಾರಿ ಕಳೆದ ತಾ. ೨೩ರಲ್ಲು ಮದ್ರಾಸಿನಲ್ಲಿ ಸೇರಿದ ವೇಳೆ ಮದ್ರಾಸದ ಪ್ರಧಾನಿ ಶ್ರೀ ರಾಜಗೋಪಾಲಾಚಾರ್ಯರು ದೇಶದ ಬಾಲಿಕೆಯರನ್ನು ಕುರಿತು ಮಾತನಾಡುತ್ತಾ 'ಕೌಟುಂಬಿಕ ಸೌಖ್ಯವೇ ಗೃಹವಿಜ್ಞಾನವೆಂದೂ ಅದು ಬರೀ ಹೊಟ್ಟೆ ತುಂಬಿಸುವ ಶಾಸ್ತ್ರವಲ್ಲವೆಂದೂ ಸ್ಪಷ್ಟ ಉಪದೇಶವಿತ್ತರು.

ಅವರು ಮುಂದುವರಿಯುತ್ತಾ 'ಗೃಹವಿಜ್ಞಾನವು ನಿಜವಾಗಿಯೂ ದೊಡ್ಡ ಶಾಸ್ತ್ರ ಕುಟುಂಬದ ಸೌಖ್ಯವೇ ಗೃಹವಿಜ್ಞಾನವೆನ್ನಬಹುದು. ಬಟ್ಟೆಗಳನ್ನು ಒಗೆದು ಮಡಿ ಮಾಡುವುದಾಗಲೀ ಮಿತವ್ಯಯದಿಂದ ಅಡಿಗೆ ಮಾಡುವುದಾಗಲೀ ಗೃಹ ವಿಜ್ಞಾನವಾಗಲಾರದು. ಹೀಗೆ ಎ

ಮಾಹವಾಗಬೇಕು ಮತ್ತು ವೈವಾಹಿಕ ಜೀವನವನ್ನು ಹೇಗೆ ನಡೆಸಬೇಕು ಎಂಬುದನ್ನು ಕಲಿಯಬೇಕು, ವಿವಾಹ, ಕುಟುಂಬ ಮತ್ತು ಮಕ್ಕಳು ಇವುಗಳಿಗೆ ಸಂಬಂಧಿಸಿದ್ದೇ ಗೃಹವಿಜ್ಞಾನ. ಮನೆಯನ್ನು ನಡೆಸುವ ಹೊಣೆಗಾರಿಕೆಯು ತಮ್ಮ ಮೇಲೆ ಬಿದ್ದ ಕೂಡಲೇ ಅದನ್ನು ನಿರ್ವಹಿಸುವಂತೆ ಮನೆಯನ್ನು ಸುಖಮಯವಾಗಿಟ್ಟುಕೊಳ್ಳಲು ಸಮರ್ಥವಾಗುವಂತೆ ನಮ್ಮ ತರುಣ ತರುಣಿಯರಿಗೆ ಶಿಕ್ಷಣ ದೊರೆಯಬೇಕಾದುದು ಅಗತ್ಯ.

ಕೌಟುಂಬಿಕ ಸುಖದ ಶಾಸ್ತ್ರವನ್ನು ಶಾಲಾ ಕಾಲೇಜುಗಳಲ್ಲಿ ಕಲಿಸಬೇಕು ಎಂದು ನನ್ನ ಅಭಿಪ್ರಾಯವಿದೆ. ಈ ಗೃಹ ವಿಜ್ಞಾನ ಶಿಕ್ಷಣವು ತರುಣಿಯರಿಗೆ ಅಗತ್ಯವಿದ್ದಷ್ಟೇ ತರುಣರಿಗೂ ಅಗತ್ಯವಾಗಿದೆ. ಆದಾಗ್ಯೂ ಈ ಶಿಕ್ಷಣವನ್ನು ತರುಣಿಯರು ಅತ್ಯಗತ್ಯ ಪಡೆಯಬೇಕು ಎಂದು ನಾನು ಒತ್ತಿ ಹೇಳುತ್ತೇನೆ ಎಂದರು.

ಪ್ರಜಾ-ಸೋಶಲಿಸ್ಟ್ ವಿಲಿನೀಕರಣ

ಬೊಂಬಾಯಿನಲ್ಲಿ ತಾ. ೨೫ರಲ್ಲು ಸೇರಿದ ಸೋಶಲಿಸ್ಟ್ ಪಕ್ಷದ ಜನರಲ್ ಕೌನ್ಸಿಲು ಸೋಶಲಿಸ್ಟ್ ಮತ್ತು ಪ್ರಜಾಪಕ್ಷಗಳ ವಿಲಿನೀಕರಣಕ್ಕೆ ಒಪ್ಪಿಗೆ ಕೊಟ್ಟಿತು. ಆಚಾರ್ಯ ನರೇಂದ್ರದೇವರು ಅಧ್ಯಕ್ಷತೆ ವಹಿಸಿದ್ದರು. ಇದೇ ರೀತಿ ಸೋಶಲಿಸ್ಟ್ ಪಕ್ಷದೊಡನೆ ಪ್ರಜಾಪಕ್ಷವು ವಿಲೀನವಾಗುವುದಕ್ಕೆ ಸರ್ವಾನುಮತದಿಂದ ಒಪ್ಪಿಗೆ ಕೊಡುವ ಒಂದು ನಿರ್ಣಯವು ಪ್ರಜಾಪಕ್ಷದ ಕಾರ್ಯಸಮಿತಿಯ ಸಭೆಯಲ್ಲಿ ಸ್ವೀಕರಿಸಲ್ಪಟ್ಟಿತು. ಎರಡೂ ಪಕ್ಷಗಳ ಪ್ರತಿನಿಧಿಗಳ ಸಂಯುಕ್ತ ಸಭೆಯು ಮಾರುದಿನ ಸೇರಿತು. ಪ್ರಜಾ ಸೋಶಲಿಸ್ಟ್ ವಿಲಿನೀಕರಣವು ದೇಶವನ್ನು ಬಲಿಷ್ಠ ರಾಷ್ಟ್ರವನ್ನಾಗಿ ಮಾಡಿ ತನ್ಮೂಲಕ ದೇಶದ ಏಳಿಗೆಯನ್ನು ಸಾಧಿಸಲೆಂದು ಸಮಾಜದಲ್ಲಿ ಅಲ್ಲಲ್ಲಿ ತಲೆದೋರುವ ಕೊಳೆ ಕಶ್ಮಲಗಳು ತೊಳೆದುಹೋಗಿ ದೇಶವು ಸುಖಶಾಂತಿಯಿಂದ ತುಂಬಿ ತುಳುಕಲೆಂದೂ ಎರಡೂ ಪಕ್ಷಗಳು ಕೈಗೊಂಡ ನಿರ್ಣಯದಲ್ಲಿ ಹೇಳಲಾಗಿದೆ. ಈ ಹೊಸ ಪಕ್ಷದ ಅಧ್ಯಕ್ಷರಾಗಿ ಆಚಾರ್ಯ ಕೃಪಾಲಿನಿಯವರು ಆರಿಸಲ್ಪಟ್ಟಿರುವರು. ಶ್ರೀ ಅಶೋಕ ಮೆಹತಾರವರು ಪ್ರಧಾನ ಕಾರ್ಯದರ್ಶಿಗಳಾಗಿ ಆಯ್ಕೆಹೊಂದಿರುವರು. ಇಪ್ಪತ್ತು ಮಂದಿರುವ ಕಾರ್ಯಕಾರಿಮಂಡಳಿಯ ರಚನೆಯೂ ಆಗಿದೆ. ಜನತೆಯ ಸೇವೆಮಾಡಲು ಹೊಸ ಪಕ್ಷದ ನಿರ್ಮಾಣವಾಗಿದೆ ನಮ್ಮ ಉದ್ದೇಶಗಳು ಚೆನ್ನಾಗಿವೆ ಅವನ್ನು ಸಾಧಿಸಲು ನಮಗೆ ಜನರ ಸಹಕಾರ ಬೇಕಾಗಿದೆ ಎಂದು ಆಚಾರ್ಯ ಕೃಪಾಲಿನಿಯವರು ಸಾರ್ವಜನಿಕ ಸಭೆಯೊಂದರಲ್ಲಿ ಹೇಳಿದರು.

ಬಟ್ಟೆ ಬೆಲೆ ನಿಯಂತ್ರಣ ರದ್ದು.

ಈಗ ಮಿಲ್ ಬಟ್ಟೆಯ ಉತ್ಪಾದನೆಯು ಹೆಚ್ಚಿರುವುದರಿಂದ ಭಾರತ ಸರಕಾರವು ಧೋತಿ, ಸೀರೆ, ಮಲ್, ವಾಯಿಲ್, ಪಾಪ್ಲಿನ್, ಕ್ರೇಪ್ಸ್, ಡ್ರಿಲ್ ಮೊದಲಾದ ಬಟ್ಟೆಯ ಬೆಲೆ ನಿಯಂತ್ರಣವನ್ನು ರದ್ದುಗೊಳಿಸಲು ನಿರ್ಧರಿಸಿದೆ.

ಶ್ರೀ ಟಿ. ಎನ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್
ಫೆಡರೇಶನ್ ಲಿಮಿಟೆಡ್.,
ಹೆಡ್ ಆಫೀಸು:—ವೀರಾಜಪೇಟೆ.
ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ಕೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು,
2. 12ನೇ ನಂಬರಿನ ಒಂಟಿ ಮತ್ತು ಜೋಡು ಕೊಳವಿನ ಕೋವಿಗಳು.
3. 12, 16 ಮತ್ತು 20ನೇ ನಂಬರಿನ ತೋಟೆಗಳು, ಕೋವಿ ಮದ್ದು ಮತ್ತು ಕೇಪುಗಳು.
4. 9″ × 4″ ಮತ್ತು 8″ × 4″ ಕಬ್ಬಿಣದ ತೊಲೆಗಳು (Girders)
5. 8′ × 3′ × 24 (Gage) ಕಬ್ಬಿಣದ ತಗಡುಗಳು.
6. $1\frac{3}{4}$″ × $\frac{5}{16}$″ ಉಕ್ಕಿನ ಪಟ್ಟಿಗಳು (Spring steel flates)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಆವಶ್ಯವಿರುವ ಕೋವಿಗಳೂ, ತೋಟೆಗಳೂ, ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು 'Special purchase permit' ಪಡೆಯಬೇಕಾಗಿದೆ.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)
ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್.)

Edited Printed and Published by P. I. Bellappa at 'Kodagu' Press, Mercara, for Kodagu' Ltd.

Licence No. 60.
Licenced to Post without Prepayment.

Reg. No. M. 1880.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಖು ೨೪-೧೦-೧೯೫೨ನೇ ಶುಕ್ರವಾರ | ಸಂಚಿಕೆ ೨೦

ಭೂಲೋಕದ
॥ ಸರ್ವೋನ್ನತ ಪ್ರಾಸಾದ ॥
ನ್ಯೂಯೋರ್ಕ್ ನಗರದ ಎಂಪಾಯರ್ ಸ್ಟೇಟ್ ಕಟ್ಟಡದ ಅದ್ಭುತ ರಮ್ಯ ಚರಿತ್ರೆ.

ಕೆಲವೊಮ್ಮೆ ಕೆಂಪು ಮಳೆ ಬರುವ—ಮಂಜು ಕೆಳಕ್ಕೆ ಬೀಳದೆ ಮೇಲಕ್ಕೆ ಬೀಳುವ—ಮುದ್ರಿಪಾನ ಮಾಡದೆ ಸೌಖ್ಯ ವನ್ನು ಅಭ್ಯಾಸವಿದ್ದವರಿಗೆ ಮಾತ್ರ ಹ ವುಗಳು ಕಾಣ ಬರುವ—ಜಾಂಬವನದಲ್ಲಿ ಒಂದ ತರದ ನೈಜ ನಡತೆ ಅನುಭವವಾಗುವಂಥ—ಸ್ಥಳವನ್ನು ಸಂದರ್ಶಿಸಿರುವಿರೇನು ?

ಇದಿಲ್ಲವೂ, ನ್ಯೂಯಾರ್ಕ್ ನಗರದ ಎಂಪಾಯರ್ ಸ್ಟೇಟ್ ಕಟ್ಟಡದ ನಿರೀಕ್ಷ ಣಾಲಯದ ಮಟ್ಟದಲ್ಲಿ ಸಂಭವಿಸುತ್ತದೆ. ಮಾನವ ನಿರ್ಮಿತ ಕಟ್ಟಡಗಳಲ್ಲಿ ಜಗತ್ತಿನ ಅತ್ಯುನ್ನತ ಪ್ರಾಸಾದವಾದೀ ರಾಕ್ಷಸಾಕಾರದ ಕಟ್ಟಡದ ಮೇಲಿರುವ ಆ ನಿರೀಕ್ಷಣಾಲಯವು, ಈ ವರೆಗೆ, ಭೂಲೋಕದ ನಾನಾ ಭಾಗಗಳಿಂದ ಬಂದ ಸುಮಾರು ಹದಿನಾಲ್ಕು ಮಿಲಿಯ ಜನರಿಂದ ಸಂದರ್ಶಿಸಲ್ಪಟ್ಟಿದೆ; ಸಂದರ್ಶಕರಿಂದ ಒಂದು ವರ್ಷಕ್ಕೆ, ಇಪ್ಪತ್ತು ನಾಲ್ಕು ಮಿಲಿಯ ಡಾಲರು ಸಂಪಾದನೆಯಾಗುತ್ತದೆ.

ಬದಲಾಗುವ ವಾಯು ಪ್ರವಾಹಗಳೇ ಈ ನಿರೀಕ್ಷಣಾಲಯದ ಅನುಭವ ಚಮತ್ಕಾರಗಳಿಗೆ ಕಾರಣವಾಗಿವೆ. ಗಾಳಿಯಿಲ್ಲದ ದಿನದಲ್ಲಿ ಧೂಳಿನ ಲಹರಿಗಳದ್ದೊಂದು ಝೇಂಕಾರವು ಕೇಳಿಸುವುದುಂಟು. ಒಮ್ಮೊಮ್ಮೆ ಕೆಂಪು ಮಳೆಯು ಬೀಳುತ್ತಿದೆ; ಇದು, ನಗರದ ಹೊರಗಿನ ಕೆಂಪು ಮಣ್ಣಿನ ಕಣಗಳು ಗಾಳಿಯೊಡನೆ ಸೇರಿ ಉಂಟಾಗುವುದು ಎನ್ನುತ್ತಾರೆ. ಮಂಜು, ಮೇಲಕ್ಕೆ ಬೀಳುತ್ತಿದೆ; ಕೆಳಗಿಲ್ಲ ಇದಕ್ಕೂ ವಾಯು ಲಹರಿಗಳೇ ಕಾರಣವಾಗಿವೆ. ಆದರೆ ಎಲ್ಲಕ್ಕಿಂತಲೂ ವಿಚಿತ್ರವಾದುದೆಂದರೆ, ಬಿಳಿಯ ಮಳೆ! ಇದು ಅಪರೂಪವಾಗಿ, ಈ ಮಹಾ ಪ್ರಾಸಾದಕ್ಕೆ ಬಡಿವುದ; ಬಿಳಿ ಕಲೆಗಳನ್ನು ಬಿಟ್ಟು ಹೋಗುವುದು. ಈ ಬಿಳಿ ಮಳೆಯು ಹೇಗುಂಟಾಗುವುದೆಂಬುದನ್ನು ಈ ವರೆಗೆ ವಿವರಿಸಿದವರಿಲ್ಲ ಒಂದೆರಡು ಸಲ, ಬಾರ್ಲಿ ಹಿಟ್ಟಿನ ಬೆರೆತ ಮಳೆ ನೀರು ಅಲ್ಲಿ ಬಿದ್ದಿರುವುದುಂಟು!

ಮದ್ಯಪಾನ ಮಾಡದವರು, ನಿರೀಕ್ಷಣಾಲಯದಲ್ಲಿ 'ಹಾವು'ಗಳನ್ನು ಕಾಣಬಹುದು. ಕೆಲವೊಂದು ಹವಾಗುಣದಲ್ಲಿ ಬಲವಾದ ಗಾಳಿಯು ಒಂದು ತರದ ಬಿಸಿಲ್ಗುದುರೆಯನ್ನುಂಟುಮಾಡುವುದ; ಆಗ ಸಂದರ್ಶಕರು, ಹೊರಗಿಂದ ದೊಡ್ಡ ಹೆಬ್ಬಾವು ಗಾಳಿಯಲ್ಲಿ ಹರಿದಾಡಿಕೊಂಡು ತನ್ನೆಡೆಗೆ ಬರುವುದನ್ನು ಕಾಣುವರು ನೀವು ಆ ಕಟ್ಟಡದ ಯಾವ ಕಡೆಗೆ ಹೋದರೂ ಸೈ—ಆ ಹಾವು ನಿಮ್ಮನ್ನೇ ಕುರಿತು ಬರುತ್ತಿದೆ!

ಈ ಕಟ್ಟಡದ ಮೇಲೆ ಇನ್ನೊಂದು ವೈಚಿತ್ರ್ಯ ಕಂಡು ಬಂದಿದೆ. ನಿರೀಕ್ಷಣಾಲಯದ ಅಸಿಸ್ಟೆಂಟ್ ಮ್ಯಾನೇಜರ್ ಹೊಎಲ್ಬರ್ಟರವರೂ ಒಬ್ಬ ಕಾವಲುಗಾರನೂ, ಟೆರ್ರೇಸ್ ಮೇಲೆ, ಮೋಡ ಕವಿದೊಂದು ದಿನ ಮಾತಾಡಿಕೊಳ್ಳುತ್ತಿರುವಾಗ ಸುಮಾರು ಅರ್ಧ ಮೈಲು ದೂರದ ಆಕಾಶದಲ್ಲಿ ವಿಚಿತ್ರ ನೆಳಲನ್ನು ಕಂಡರು ಕೊನೆಗೆ, ತಮ್ಮದೇ ನೆರಳು ಅಷ್ಟು ದೂರದಲ್ಲಿ ಅಷ್ಟು ದೊಡ್ಡದಾಗಿ ಬಿದ್ದಿದೆಯೆಂಬುದನ್ನು ತಿಳಿದರು. ಇವರು ಕೈಚಳಕಗಳನ್ನು ಆಡಿಸಿದಂತೆ ಆ ನೆರಳುಗಳೂ ಆಡುತ್ತಿದ್ದವು.

ಉಷ್ಣವು ಕಡಿಮೆ ಇರುವ ದಿನದಲ್ಲಿ ಈ ನಿರೀಕ್ಷಣಾಲಯದಲ್ಲಿ, ವಿದ್ಯುತ್ತಿನ ಲಹರಿಗಳ, ಚುಂಬಿಸುವವರಲ್ಲಿ ಅನುಭವವಾದ ಒಂದು ಉಲ್ಲಾಸಕರ ಸ್ಪರ್ಶ ಕೊಡುತ್ತವೆ. ಅಲ್ಲಿ, ಆ ಕಾಲ ಕೊಟ್ಟ ಚುಂಬನವು, ವಿದ್ಯುತ್ ಲಹರಿಗಳ ಕಾರಣದಿಂದ ಮೈಯಲ್ಲಿ ರೋಮಾಂಚನವುಂಟುಮಾಡುತ್ತ, ಚಿರಸ್ಮರಣೀಯವೆನಿಸುವುದೆನ್ನುತ್ತಾರೆ.

ವಿದ್ಯುತ್ ತುಫಾನು ಇದ್ದಾಗ, ರಾತ್ರಿ ಕಾಲ ಈ ನಿರೀಕ್ಷಣಾಲಯಕ್ಕೆ ಹೋದರೆ, ಕೊಠಡಿಯ ಹೊರಗೆ ಕೈ ನೀಡಿ ನೀಲಿ ಬಣ್ಣದ ಜ್ವಾಲೆಗಳನ್ನು ಹಿಡಿಯಬಹುದು ಅವು ಬಿಸಿಯಿರುವುದಿಲ್ಲ ಅವುಗಳ ಸ್ಪರ್ಶ ಝುಂಕೆ ಭಾಸವಾಗುವುದು, ಅದರಿಂದಾದ ಗಂಧಕದ ಒಂದು ರೂಪ. ಹಗಲಲ್ಲಿ ಈ ಜ್ವಾಲೆ ಕಾಣಿಸಿಕೊಳ್ಳುವುದಿಲ್ಲ; ಆದರೆ, ಸಾವಿರ ಮೊಟ್ಟೆಗಳಷ್ಟು ಒಮ್ಮೆಯೇ ಹುರಿದಂತೆ ಶಬ್ದ ಮಾತ್ರ ಕೇಳಿಸುತ್ತದೆ.

ಈ ಸರ್ವೋನ್ನತ ಪ್ರಾಸಾದದ ಮೇಲೆ ನೀಲಿ ನೀವು ಸಿಡಿಲು ಬಡಿವುದನ್ನು ಚೆನ್ನಾಗಿ ಕಾಣಬಹುದು. ಈ ಪ್ರಸಾದಕ್ಕೆ ಸಿಡಿಲು ೫೦೦ ಸಲ ಬಡಿದಿದೆಯಂತೆ; ಒಮ್ಮೆ ಒಂದೇ ತಪಾಸಿನಲ್ಲಿ ಹದಿನೈದು ಸಲ ಬಡಿದಿದೆ. ಆದರೆ, ಕಟ್ಟಡದ ಉಕ್ಕಿನ ಚೌಕಟ್ಟುಗಳಿಂದ ಸಿಡಿಲಿನ ವಿದ್ಯುತ್ತು ಭೂಮಿಯೊಳಗಿಳಿದು ಹೋಗುವುದ; ಮತ್ತು ಈ ಕಟ್ಟಡದ ಸುಮಾರು ನಾಲು ಮೈಲು ಸುತ್ತುಮುತ್ತಲಿನ ಕಟ್ಟಡಗಳು ಈ ಕಟ್ಟಡದಿಂದಲೇ—ಸಿಡಿಲಿನಿಂದ ರಕ್ಷಿಸಲ್ಪಟ್ಟವೆ.

ಎಂಪಾಯರ್ ಸ್ಟೇಟ್ ಕಟ್ಟಡಕ್ಕೆ ಸಂಬಂಧಿಸಿದ ಅಂಕೆಸಂಖ್ಯೆಗಳು ಯಾರನ್ನಾದರೂ ವಿಸ್ಮಯಗೊಳಿಸದಿರಲಾರವು. ಇದು ಚದರಡಿಗೆ ತೊಂಭತ್ತು ಪೌಂಡು ಮೌಲ್ಯದ ಎರಡು ಎಕ್ರೆ ಸ್ಥಳದ ಮೇಲೆ ಕಟ್ಟಲ್ಪಟ್ಟಿದೆ. ನೆಲದಿಂದ ಕೊನೆಯ ಮಹಡಿಯ ವರೆಗೆ ೧೪೭೨ ಅಡಿ ಎತ್ತರವಿದೆ. ಒಳಗಿನ ಉಕ್ಕಿನ ಚೌಕಟ್ಟುಗಳೇ ಸುಮಾರು ೬೦,೦೦೦ ಟನ್ ಇರುತ್ತವೆ. (ಅಷ್ಟು ಉಕ್ಕಿನಿಂದ ನೂರು ಮೈಲುಗಳಿಗೆ ಎರಡು ದಾರಿಗಳುಳ್ಳ ರೈಲ್ವೇ ಹಾಕಿಸಬಹುದು)

ಈ ಒಂದು ಕಟ್ಟಡದೊಳಗೆ ಉಪಯೋಗಿಸಿರುವ ಚಂದ್ರಕಾಂತ ಶಿಲೆಯು ಎಷ್ಟೆಂದರೆ—ಫ್ರಾನ್ಸ್, ಇಟಲಿ, ಬೆಲ್ಜಿಯಮ್ ಮತ್ತು ಜರ್ಮನಿ ಈ ದೇಶಗಳೊಳಗಿನ ಚಂದ್ರಕಾಂತ ಶಿಲಾ ಗಣಿಗಳೊಳಗಿನ ಒಂದು ವರ್ಷದ ಉತ್ಪತ್ತಿಯೆಲ್ಲವೂ ಈ ಕಟ್ಟಡದೊಳಗೆ ನೆಲಕ್ಕೆ ಹಾಸುವ ಕಲ್ಲುಗಳಿಗೇ ಒದಗಿಸಲ್ಪಟ್ಟಿತಂತೆ.

ಇದರೊಳಗೆ ಇರುವ ಟೆಲಿಗ್ರಾಫ್ ಮತ್ತು ಟೆಲಿಫೋನ್ ತಂತಿಗಳನ್ನು ಅಳೆದರೆ ೩,೫೦೦ ಮೈಲುಗಳಷ್ಟು ಆಗುವುವು. ನೀರು ಮೊದಲಾದುವುಗಳ ಬಗ್ಗೆ ಉಪಯೋಗಿಸಿರುವ ನಳ್ಳಿಗಳು ಐವತ್ತು—ಮೈಲುಗಳಷ್ಟು. ರಸ್ತೆಯಿಂದ ೧೦೨ನೇ ಮಹಡಿಯ ವರೆಗೆ ಇರುವ ಒಟ್ಟು ಮೆಟ್ಟಲುಗಳು ೧೮೬೦ (ಆದರೆ, ಈ ಎಲ್ಲಾ ಮೆಟ್ಟಲುಗಳನ್ನು ಹತ್ತಿ ಹೋಗಬೇಕಾಗಿಲ್ಲ; ಅದು ಸಾಧ್ಯವೂ ಇಲ್ಲ. ಇದೇ ಕಟ್ಟಡದಲ್ಲಿ ೬೩ ವಿದ್ಯುತ್ 'ಲಿಫ್ಟು'ಗಳಿವೆ) ಮೇಲಿನ ಟವರಿನ ಮೇಲೊಂದರಲ್ಲೇ ಇರುವ ಬಲ್ಬುಗಳು ೩,೦೦೦. ಅವುಗಳಲ್ಲಿ ಸುಟ್ಟು ಹೋದವುಗಳಲ್ಲಿ ತೆಗೆದು ಹೊಸದನ್ನು ಇರಿಸಲು ಒಬ್ಬ ಮನುಷ್ಯನು ಪ್ರತಿ ದಿನ ಎಂಟು ಗಂಟೆ ಕೆಲಸ ಮಾಡುತ್ತಿರುವನು. ಮುನ್ನೂರಕ್ಕಿಂತಲೂ ಹೆಚ್ಚು ಮಂದಿ ಜನಗಳು ಅಲ್ಲಿ ಕಸ ಗುಡಿಸಿ ನೆಲ ಒರಸುತ್ತಾರೆ.

ಅಷ್ಟು ಉನ್ನತ ಕಟ್ಟಡದಲ್ಲಿರುವವರು ಮನುಷ್ಯರು ಮಾತ್ರವಲ್ಲ. ನೂರಾರು ಬಾವಲಿಗಳೂ ಹಾರಾಡುವುದುಂಟು. ಅದರ ವಿಚಿತ್ರವೆಂದರೆ, ಬಲವಾದ ಗಾಳಿಗೆ ಕೆಲವು ಕ್ರಿಮಿಕೀಟಾದಿಗಳೂ ಮೇಲಕ್ಕೊಯ್ಯಲ್ಪಟ್ಟು ಈ ಕಟ್ಟಡದೊಳಗೆ ಬರುವುದುಂಟಂತೆ. ಸುಮಾರು ಇನ್ನೂರು ಬಗೆಯ ಕ್ರಿಮಿಕೀಟಾದಿಗಳು ಅಲ್ಲಿ ಕಂಡುಬಂದಿವೆ.

ಕೆಲವೊಂದು ಪಕ್ಷಿಗಳು ಅತಿ ಎತ್ತರದಲ್ಲಿ ಹಾರಾಡುತ್ತ, ಈ ಕಟ್ಟಡದ ಪ್ರಾಸಾದಕ್ಕೆ ಬಲವಾದ ಗಾಳಿಯ ರಭಸದಿಂದ ಬಡಿದುಕೊಂಡು ಬಿದ್ದಿವೆ ೧೯೪೮ನೇ ಸೆಪ್ಟೆಂಬರದಲ್ಲೊಂದು ದಿನ ಹೀಗೆ ಬಡಿದು ಕೆಳಗಿನ ರಸ್ತೆಗಳಲ್ಲಿ ಬಿದ್ದ ಪಕ್ಷಿಗಳು ೫೦೦ಕ್ಕಿಂತಲೂ ಹೆಚ್ಚು. ಅತಿ ದೂರದ ದೇಶದಿಂದ ಹಾರಿಬಂದ ಕೆಲವು ಪಕ್ಷಿಗಳೂ ಆ ದುರಂತದಲ್ಲಿದ್ದುವು.

'ಬಿ-೨೫' ನಾಮಾಂಕಿತ ಬಾಂಬರ್ ವಿಮಾನದ ವೈಮಾನಿಕನೊಬ್ಬನು, ಒಮ್ಮೆ ಈ ಕಟ್ಟಡದ ೭೮ನೇ ಮಹಡಿಗೆ ಬಡಿದನು. ವಿಮಾನವು ಆ ಮಹಡಿಯ ಒಂದು ಕಡೆಯಿಂದ ಒಳಗೆ ನುಗ್ಗಿ ಇನ್ನೊಂದು ಕಡೆಯಿಂದ ಹೊರಬಿತ್ತು. ವಿಮಾನದ ಪೆಟ್ರೋಲ್ ಟ್ಯಾಂಕಿನಿಂದ ಹರಿದ ಪೆಟ್ರೋಲ್ ೭೮ನೇ ಮಹಡಿಯಲ್ಲಿ ಭಯಂಕರ ಬೆಂಕಿಯೆಬ್ಬಿಸಿತು. ಆದರೆ ಅದಕ್ಕಿಂತ ಎಳು ಮಹಡಿಗಳ ಮೇಲೆ, ಒಂದು ವೃತ್ತಪತ್ರಿಕೆಯೊದಿ ಕುಳಿತಿದ್ದ ಒಬ್ಬ ಆಫೀಸು ಪೇದೆಯು, ಇದಾವುದರ ಅರಿವೂ ಇಲ್ಲದೆ ತನ್ನ ವಾಚನದಲ್ಲೇ ತಲ್ಲೀನನಾಗಿದ್ದನಂತೆ ಇದರಿಂದ ಆ ಕಟ್ಟಡದ ಸಂಸ್ಥಾಪಕತೆಯು ಎಷ್ಟೆಂಬುದು ಸ್ಪಷ್ಟವಾಗುವುದು.

ಈ ಕಟ್ಟಡದ ಟವರು ಎಷ್ಟು ಮೇಲಿದೆಯೆಂದರೆ, ರಸ್ತೆಯ ಉಷ್ಣಕ್ಕಿಂತ ಅಲ್ಲಿ ಮೇಲೆ ಮೂರರಿಂದ ಒಂಭತ್ತು ಡಿಗ್ರಿ ಉಷ್ಣವು ಕಡಿಮೆಯಿರುತ್ತದೆ ಅಲ್ಲಿಮಾರುತ

ಬಹಿರಂಗ ಹರಾಜು.

ಇಂಡಿಯಾ ಕಾಫಿ ಬೋರ್ಡಿನ ಚೆಟ್ಟಳ್ಳಿ ಪರಿಶೋಧನಾ ಕೇಂದ್ರಕ್ಕೆ ಸೇರಿದ ಸುಮಾರು 2322 ಕಿತ್ತಳೆ ಗಿಡಗಳ 1952-53ನೇ ಸಾಲಿನ ಫಲವನ್ನು ತಾರೀಖು 31-10-52ರಲ್ಲಿ ಮಧ್ಯಾಹ್ನ 3 ಗಂಟೆಗೆ ಪರಿಶೋಧನಾ ಆಫೀಸಿನಲ್ಲಿ ಬಹಿರಂಗ ಹರಾಜು ಮಾಡಲಾಗುವದು. ಹರಾಜು ಪ್ರಾರಂಭವಾಗುವ ಕಡಿಮೆ 15 ನಿಮಿಷಕ್ಕೆ ಮೊದಲು ಪ್ರತಿ ಬಿಡ್ಡರು ರೂ. 100ನ್ನು ಡಿ ಯಿ. ಸ್ ಹಣವಾಗಿ ಡಿಪಾಜಿಟ್ಟು ಮಾಡಿರಬೇಕು. ಹೆಚ್ಚು ಬಿಡ್ಡು ಮಾಡಿದವರ ಬಿಡ್ಡು ಪರಿಶೋಧನಾ ಡೈರೆಕ್ಟರರ ಮಂಜೂರಾತಿಯನ್ನು ಪಡೆದ ನಂತರವೇ ಒಪ್ಪಲ್ಪಡುವದು. ಹೆಚ್ಚಿನ ಮೊಬಲಗಿಗೆ ಬಿಡ್ಡು ಮಾಡಿದವನ ವಿನಾ ಉಳಿದೆಲ್ಲ ಬಿಡ್ಡರುಗಳ ಡಿಪಾಜಿಟ್ ಹಣ ರೂ. 100ನ್ನು ಹರಾಜಿನ ನಂತರ ವಾಪಾಸು ಕೊಡಲಾಗುವದು. ಹೆಚ್ಚಿಗೆ ಬಿಡ್ಡು ಮಾಡಿದವರ ಬಿಡ್ಡು ಒಪ್ಪಲ್ಪಟ್ಟರೆ ಒಪ್ಪಲ್ಪಟ್ಟ ದಿನದಿಂದ ಐದು ದಿವಸಗಳೊಳಗೆ ಬಿಡ್ಡು ಮಾಡಿದ ಮೊಬಲಗಿನ ಅರ್ಧಾಂಶವನ್ನು ರೇಮಣಾತಿ ಕಟ್ಟಿ ತಾ. 1-12-52 ರೊಳಗೆ ಯಾ ಕಿತ್ತಳೆ ಹಣ್ಣನ್ನು ಕೊಯ್ಯಲು ಪ್ರಾರಂಭಿಸುವ ಇವೆರಡರಲ್ಲಿ ಯಾವುದು ಮೊದಲಾಗುವದೋ ಆ ತಾರೀಖಿನೊಳಗೆ ಉಳಿದ ಅರ್ಧ ಹಣವನ್ನು ಪಾವತಿ ಮಾಡುವದಾಗಿ ಒಪ್ಪಂದ ಪತ್ರ ಮಾಡಿ ಕೊಡಬೇಕು.

ಜೇಮ್ಸ್ ಕೊಲೆಕೊ
ಸುಪರಿಂಟೆಂಡೆಂಟ್,
ಕಾಫಿ ಪರಿಶೋಧನಾ ಉಪಕೇಂದ್ರ ಚೆಟ್ಟಳ್ಳಿ.

ತ್ತೆ ನೂರು ಮೈಲುಗಳ ವರೆಗಿನ ವೇಗದಲ್ಲಿ ಚಲಿಸುತ್ತದೆ. ಆದರೆ ಗಂಟೆಗೆ ೫೦ ಮೈಲುಗಳಿಗಿಂತ ಹೆಚ್ಚಿನ ವೇಗದಲ್ಲಿ ವಾಯು ಬೀಸಿದರೆ, ಸಂದರ್ಶಕರು ಮೇಲೆ ಬಾರದಂತೆ ಮುಚ್ಚಿಬಿಡುವರು. ಒಮ್ಮೊಮ್ಮೆ ಅತಿ ಬಲವಾದ ಗಾಳಿಯಲ್ಲಿ ಈ ಕಟ್ಟಡವು ತೂಗಾಡುವುದು ಎನ್ನುವವರಿದ್ದಾರೆ. ಅದು ಮಾತ್ರ ನಿಜವಲ್ಲ. ಏಕೆಂದರೆ ಇಂಜಿನಿಯರರ ಅಭಿಪ್ರಾಯದಂತೆ, ಈ ಕಟ್ಟಡವು ಒಂದುವರೆ ಅಂಗುಲಗಳಷ್ಟು ಬಾಗಬೇಕಾದರೆ ಗಂಟೆಗೆ ೯೦ ಮೈಲುಗಳ ವೇಗದ ಗಾಳಿಗೆ ಒಂಭತ್ತು ಗಂಟೆಗಳ ಕಾಲ ಬೀಸಬೇಕಾಗಬಹುದು.

ಟೆಲಿವಿಜನ್ ಇಲ್ಲಿಂದ ಬಿತ್ತರಿಸಲ್ಪಡುತ್ತಿದೆ. ಬ್ರೋಡ್ ಕಾಸ್ಟಿಂಗ್ ನಡೆಯುತ್ತಿದೆ

ನ್ಯೂಯಾರ್ಕ್ ನಗರದ ಅತೀ ಜನನಿಬಿಡ ಪ್ರದೇಶವಾದ ಫಿಫ್ತ್ ಎವೆನ್ಯೂ ಮತ್ತು ೩೪ನೇ ರಸ್ತೆಯ ಸಂಧಿಯಲ್ಲಿ ಈ ಕಟ್ಟಡವು ಇಪ್ಪತ್ತೊಂದು ವರ್ಷಗಳ ಹಿಂದೆ ಕಟ್ಟಲ್ಪಟ್ಟಿತು. ಈ ರಸ್ತೆ ಸಂಧಿಯಿಂದ ದಿನಕ್ಕೆ ೪೨,೦೦೦ಕ್ಕೂ ಮಿಕ್ಕಿ ವಾಹನಗಳು ೨೦೦,೦೦೦ ಮಿಕ್ಕಿ ಜನರೂ ನಿತ್ಯವೂ ಹಾದುಹೋಗುವರು. ಹೀಗಿದ್ದರೂ ಯಾರಿಗೂ ಯಾವ ಅಪಾಯವೂ ಆಗದಂತೆ ರಸ್ತೆಯ ಓಡಾಟಕ್ಕೆ ತೊಂದರೆಯಾಗದಂತೆ ಮೆಚ್ಚುವ ಅವಸ್ಥೆಯಲ್ಲಿ ಈ ಕಟ್ಟಡವು ಯಾರಿಗೂ ಅಪಾಯವಾಗದಂತೆ ಕಟ್ಟಲ್ಪಟ್ಟಿತೆಂಬುದು ಗಮನೀಯ. ಒಂದು ನೂರಎರಡು ಮಹಡಿಯ ಕಟ್ಟಡ ಕಟ್ಟಬೇಕಾದರೆ ನಮ್ಮ ದೇಶದಲ್ಲಿ ಕೆಲವರು ದಾರಿಹೋಕರಿಗೆ ಕೊಡುವ ಉಪಟಳವು ತಿಂಗಳುಗಟ್ಟಲೆ ಎಷ್ಟು!

ಆ ೧೦೨ ಮಹಡಿಗಳ ಕಟ್ಟಡದ ಸಾಮಾನುಗಳನ್ನು ತಂದು ದಾಸ್ತಾನಿಡಲು ಸ್ಥಳವೆಲ್ಲಿ? ಆ ಕಾರಣ ಉಕ್ಕು, ಸಿಮೆಂಟು ಇತ್ಯಾದಿ ಒದಗಿಸುವವರು ಆಯಾಕಾಲಕ್ಕೆ ತಕ್ಕಂತೆ ಉಪಕರಣಗಳನ್ನು ತಂದು ತಲ್ಪಿಸುವಂತೆ ಒಂದು ಅದ್ಭುತಕರ ಕಾಲನಿಯಾಮಕ ಪಟ್ಟಿ ತಯಾರಾಯಿತು. ಈ ಪಟ್ಟಿಯಂತೆ ಕೆಲಸಗಾರರು ತಮ್ಮ ಕೆಲಸ ಸಾಗಿಸುವಾಗ ದೂರ ದೂರದ ಕಡೆಗಳಿಂದ ಅವರಿಗೆ ಸಕಾಲದಲ್ಲಿ ದಿನ ದಿನಕ್ಕೆ ಬೇಕಾಗುವ ಸಾಮಾನು ಬಂದು ಮುಟ್ಟುವಂತೆ ಮಾಡಿದರು. ಆ ಕಾರಣ ಯಾವ ಸಾಮಾನನ್ನು ರಸ್ತೆಯ ಪಕ್ಕಗಳಲ್ಲಾಗಲೀ ಬಳಿಯ ಕಟ್ಟಡಗಳಲ್ಲಾಗಲೀ ರಾಶಿಮಾಡುವ ಅವಶ್ಯಕತೆ ಇರಲಿಲ್ಲ.

ಪಿಟ್ಸ್‌ಬರ್ಗ್‌ದಿಂದ ಉಕ್ಕು ಹೊರಟು ೮೦ ಗಂಟೆಗಳಲ್ಲಿ ಕಟ್ಟಡದ ಚೌಕಟ್ಟಿಗೆ ಸೇರಿ, ನಿಂತಿತು. ಇಪ್ಪತ್ತಮೂರು ವಾರಗಳಲ್ಲಿ ಉಕ್ಕಿನ— ಇಡೀ ಕಟ್ಟಡದ ಚೌಕಟ್ಟು ಸಿದ್ಧವಾಯಿತು. ಎಂಟನೇ ತಿಂಗಳ ಅಂತ್ಯದೊಳಗೆ, ಕಲ್ಲು ಮಣ್ಣು ಮೊದಲಾದ ಯಾವತ್ತೂ ಕೆಲಸವು ಪೂರ್ಣಗೊಂಡಿತು! ಕಳೆದ ವರ್ಷ ೮೫೦,೦೦೦ ಜನರು ಈ ಎಂಪಾಯರ್ ಸ್ಟೇಟ್ ಕಟ್ಟಡದ ನಿರೀಕ್ಷಣಾ ಸ್ಥಳವನ್ನು ಸಂದರ್ಶಿಸಿದರು. ಈ ಕಟ್ಟಡದ ಮೇಲೆ ನಿಂತು ಒಬ್ಬನು ಇಪ್ಪತ್ತೈದು ಮೈಲು ದೂರದಲ್ಲಿರುವ ಕೆಲವೊಂದು ವಿಶಿಷ್ಟ ಪ್ರದೇಶಗಳನ್ನು ಕಾಣಬಹುದು. ದೂರದರ್ಶಕ ಯಂತ್ರದಿಂದ, ಸಮುದ್ರದಲ್ಲಿ ೪೦ ಮೈಲು ದೂರದಲ್ಲಿ ಹೋಗುವ ಹಡಗಗಳನ್ನು ನೋಡಬಹುದು. ಈ ಸರ್ವೋತ್ಕೃಷ್ಟ ಕಟ್ಟಡದ ನಕ್ಷತ್ರ ಶಾಲೆಯಲ್ಲಿ ನಿಂತು ಅಲ್ಲಿಯ ವೈಚಿತ್ರ್ಯಗಳನ್ನು ಅನುಭವಿಸಿದವನೊಬ್ಬನು ಹೀಗೆಂದನು : ಸೂರ್ಯ ಚಂದ್ರರು ನಮ್ಮ ದರ್ಶನದ ನೆರೆಕರೆಯವರಾಗಿದ್ದಾರೆ.

ಪ್ರಭಾತ.

ಕಾರಾಗ್ರಹವಾಸಿಯಾಗಿರುವ ಗಡಿನಾಡಿನ ಸನ್ಯಾಸಿ.

ಐದು ವರ್ಷಗಳಿಂದ, ಪಾಕಿಸ್ಥಾನ ಸರಕಾರದ ದೆಸೆಯಿಂದ ಕಾರಾಗ್ರಹವಾಸಿಯಾಗಿರುವ ಖಾನ್ ಅಬ್ದುಲ್ ಗಫಾರ್ ಖಾನರನ್ನು ಪ್ರಥಮ ಸಲ, ಪತ್ರಿಕಾ ಪ್ರತಿನಿಧಿಗಳು ಕಳೆದ ವಾರ ಲಾಹೋರ್ ಜೈಲಿನಲ್ಲಿ ಭೇಟಿಯಾದರು. ಈ ಮೊದಲು ಇಂತಹ ಭೇಟಿಗೆ ಅನುಮತಿ ದೊರೆತಿರಲಿಲ್ಲ

ಖಾನರು ಪತ್ರಿಕಾ ಪ್ರತಿನಿಧಿಗಳೊಡನೆ ಹೇಳಿದ ಮಾತುಗಳು ಈ ರೀತಿ ಇವೆ.

'ಖ್ವಾಯದೆ ಆಜಮ್ ಜಿನ್ನಾರ ಜೀವಿತ ಕಾಲದಲ್ಲಿ ಮತ್ತು ಅನಂತರ ನಾನು ಎರಡು ಸಲ ಆಂತರಿಕ ವಿವಾದ ತೀರ್ಮಾನಕ್ಕೆ ಯತ್ನಿಸಿದ್ದೆ. ಆದರೆ ಕೆಲವು ಪಕ್ಷಪಾತಿಗಳು ನನ್ನ ಯತ್ನವನ್ನು ನಿಷ್ಫಲಗೊಳಿಸಿದರು.

'ಗಡಿನಾಡನ್ನು ವಾಯುವ್ಯ ಗಡಿಪ್ರಾಂತ ಎಂದು ಕರೆಯದೆ, ಫಾಕ್ತೂನಿಸ್ಥಾನವೆನ್ನಬೇಕೆಂಬುದು ನನ್ನ ಇನ್ನೊಂದು ಚಳವಳಿಯಾಗಿತ್ತು. ಪಂಜಾಬ—ಸಿಂಧ್—ಬಂಗಾಳಗಳು ಹೇಗೆ ತಮ್ಮ ಪ್ರಾಂತಗಳನ್ನು ನಾಮಕರಣ ಮಾಡಿರುವರೋ ಅದೇ ರೀತಿ ನಾನು ಈ ಪ್ರಾಂತದ ಹೆಸರು ಮಾತ್ರ ಬದಲಾಯಿಸಲು ಸೂಚಿಸಿದ್ದೆ.

'ಕಾರಾಗ್ರಹವಾಸದಿಂದ ನನಗೇನೂ ಚಿಂತೆ ಇರುವುದಿಲ್ಲ. ಏಕೆಂದರೆ, ನನ್ನ ಜೀವನದಲ್ಲಿ ಹೆಚ್ಚಿನಂಶವು ಕಾರಾಗೃಹದಲ್ಲೇ ಕಳೆದು ಅಭ್ಯಾಸವಾಗಿದೆ. ಆದರೆ, ನನಗೆ ಆಶ್ಚರ್ಯವಾಗುವುದೇನೆಂದರೆ—ಬ್ರಿಟಿಷರು ನನ್ನನ್ನು ಅವರ ವೈರಿಯೆಂದು, ಅವರನ್ನು ನಾನು ಹೊರಗಟ್ಟಲು ಯತ್ನಿಸುತ್ತಿರುವೆನೆಂದು ಕಾರಾಗ್ರಹದಲ್ಲಿರಿಸಿದರು. ಪಾಕಿಸ್ಥಾನವು ಅವರಿಗೆ ಸಹಾಯಕನಾಗುವಂಥ—ಜನಾಂಗೋದ್ಧಾರದ ಕಾರ್ಯದಲ್ಲಿ ನೆರವಾಗಲಿಚ್ಛಿಸುವ, ನನ್ನಂಥವನನ್ನು ಬಂಧಿಸಿರುವುದೇಕೆ ಎಂದು ಅರ್ಥವಾಗುವುದಿಲ್ಲ.

'ನನ್ನ ಮಗ ಮತ್ತು ಇತರ ನನ್ನ ಅನುಯಾಯಿಗಳನ್ನು ಅವರಿಗೊಗ್ಗದಂಥ ದೇರಾ ಇಸ್ಮಾಯಿಲ್‌ಖಾನದಲ್ಲಿ ಬಂಧಿಸಿದ್ದಾರೆ. ಅವರ ಬಿಡುಗಡೆ ಮಾಡಲಾಗದಿದ್ದರೆ. ಅವರನ್ನು ಬೇರೆ ಕಾರಾಗ್ರಹಕ್ಕಾದರೂ ವರ್ಗಾಯಿಸಲಾರರೇಕೆ?'

(ಗಫಾರ್ ಖಾನರ ವಯಸ್ಸು ಈಗ ೬೨ ವರ್ಷಗಳು. ಕಾರಾಗ್ರಹದಲ್ಲಿ ಖಾನರು ಹೆಚ್ಚಿನ ಸಮಯವನ್ನು ಪ್ರಾರ್ಥನೆಯಲ್ಲಿ, ಓದುವಿಕೆಗಳಲ್ಲೂ ಕಳೆಯುತ್ತಿದ್ದಾರೆ. ಅವರು ಚಿಂತೆ ತೋರದೆ, ಹರ್ಷವದನರಾಗಿಯೇ ಇರುವರೆಂದು ಪತ್ರಿಕಾ ಪ್ರತಿನಿಧಿಗಳ ಅಭಿಪ್ರಾಯ)

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ನ್ಯೂ ಜುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12ನೇ ನಂಬರಿನ ಒಂಟಿ ಮತ್ತು ಜೋಡು ಕೊಳವಿನ ಕೋವಿಗಳು.
3. 12, 16 ಮತ್ತು 20ನೇ ನಂಬರಿನ ತೋಟೆಗಳು, ಕೋವಿ ಮದ್ದು ಮತ್ತು ಕೇಪುಗಳು.
4. $9'' \times 4''$ ಮತ್ತು $8'' \times 4''$ ಕಬ್ಬಿಣದ ತೊಲೆಗಳು (Girders)
5. $8' \times 3' \times 24$ (Gage) ಕಬ್ಬಿಣದ ತಗಡುಗಳು.
6. $1\frac{3}{4}'' \times \frac{5}{16}''$ ಉಕ್ಕಿನ ಪಟ್ಟಿಗಳು (Spring steel flates)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಆವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು 'Special purchase permit' ಪಡೆಯಬೇಕಾಗಿದೆ.

ಎಂ. ಎಸ್. ಸೋಮಯ್ಯ (ಗೌ ಕಾರ್ಯದರ್ಶಿ)   ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್.)

ಸರಕಾರೀ ವೈದ್ಯರು ಖಾಸಗಿವೃತ್ತಿ ನಡೆಸಬಾರದು

ಭಾರತ ಸರಕಾರದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ ಕೌರ್ ಅವರು ಬೆಟ್ಟೈಲಿಯಲ್ಲಿ ದಂತ ಚಿಕಿತ್ಸಾಲಯವೊಂದರ ಉದ್ಘಾಟನೆ ನಡೆಸುವಾಗ ಮಾಡಿದ ಭಾಷಣದಲ್ಲಿ “ಸರಕಾರದಿಂದ ನೇಮಿತರಾದ ವೈದ್ಯರು ಖಾಸಗಿ ವೃತ್ತಿಯನ್ನು ನಡೆಸಬಾರದು. ಅವರು ಖಾಸಗಿಯಾಗಿ ವೃತ್ತಿ ನಡೆಸಿಕೊಂಡಿರುವುದರಿಂದ ಸರಕಾರೀ ಆಸ್ಪತ್ರೆಗಳ ಕಾರ್ಯಕಲಾಪಗಳು ಸುಸೂತ್ರವಾಗಿ ಸಾಗಲು ತಡೆಯುಂಟಾಗುತ್ತದೆ. ಸರಕಾರೀ ವೈದ್ಯರ ಸಂಬಳವನ್ನು ತಕ್ಕಷ್ಟು ಏರಿಸುವುದರ ಬಗ್ಗೆ ಕೇಂದ್ರ ಸರಕಾರದ ಮುಂದೆ ನಾನು ಸೂಚನೆ ತಂದಿರುತ್ತೇನೆ. ಆದುದರಿಂದ ಖಾಸಗಿ ವೃತ್ತಿಗೆ ತಿಲಾಂಜಲಿ ಕೊಡುವುದರಿಂದ ಅವರಿಗುಂಟಾಗುವ ನಷ್ಟ ತುಂಬಿಬರುವುದು. ರೋಗರುಜಿನಗಳಿಂದ ಪೀಡಿತರಾದವರ ಸೇವೆಯನ್ನೇ ತಮ್ಮ ಮುಖ್ಯ ಉದ್ದೇಶವನ್ನಾಗಿ ವೈದ್ಯರು ಇಟ್ಟುಕೊಳ್ಳಬೇಕು.” ಎಂದರು.

ಭೂದಾನ ಯಜ್ಞಕ್ಕೆ ಉದಾರದಾನ.

ಭದ್ರಾಚಲಪುರ್ ಶ್ರೀ ರಾಮದೇವಸ್ಥಾನದ ದೇವರ ಆಧೀನರಾದ ಶ್ರೀ ಕೊಂಡಪಲ್ಲಿ ರಾಮಚಂದ್ರರಾವ್ ಎಂಬವರು ವಾರಂಗಲ್ ಜಿಲ್ಲೆಯ ಏಲವಂಚ ತಾಲೂಕಿಗೆ ಸೇರಿದ ೫೦ ಎಕ್ರೆ ಸ್ಥಳವನ್ನು ಆಚಾರ್ಯ ವಿನೋಬಾ ಭಾವೆಯವರ ಭೂದಾನ ಯಜ್ಞಕ್ಕೆ ಉದಾರ ದಾನವಾಗಿ ಕೊಟ್ಟಿರುವರು

ಜಗತ್ತಿನ ಜನಸಂಖ್ಯೆಯಲ್ಲಿ ಶೇಕಡಾ ೨೦ರಷ್ಟು ಹೆಚ್ಚಳ.

ಎರಡನೆ ಜಾಗತಿಕ ಮಹಾಯುದ್ಧಕ್ಕೆ ಮೊದಲಿದ್ದುದಕ್ಕಿಂತ ಈಗ ಭೂಲೋಕದಲ್ಲಿ ಸುಮಾರು ೩೦೦ರಿಂದ ೪೦೦ ಮಿಲಿಯದಷ್ಟು ಜನರು ಹೆಚ್ಚಿರುವರೆಂದು ಜಾಗತಿಕ ಆರೋಗ್ಯ ಸಂಸ್ಥೆಯು ಲೆಕ್ಕಹಾಕಿದೆ. ೧೯೪೯ರಲ್ಲಿ ಜಗತ್ತಿನ ಜನಸಂಖ್ಯೆ ೨೩೭೮ ಮಿಲಿಯದಷ್ಟಾಗಿದೆ. ೧೯೩೭ರಲ್ಲಿ ಅದು ೨,೦೦೦ ಮಿಲಿಯದಷ್ಟಿತ್ತು. ಎಂದರೆ ಶೇಕಡಾ ೨೦ರಷ್ಟು ಹೆಚ್ಚಿದಂತಾಯಿತು. ಜಗತ್ತಿನ ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚಿಗೆ ಏಷ್ಯಾಖಂಡ ಒಂದರಲ್ಲೇ ಇದೆ. (೧,೨೫೩ ಮಿಲಿಯ); ಚೀನದ ಜನಸಂಖ್ಯೆ ೪೬೩ ಮಿಲಿಯ ಮತ್ತು ಭಾರತದ ಜನಸಂಖ್ಯೆ ೩೪೭ ಮಿಲಿಯವಿದ್ದು ಅವು ಜನಸಂಖ್ಯೆಯ ಮಟ್ಟಿಗೆ ಜಗತ್ತಿನಲ್ಲಿ ಪ್ರಥಮ ಶ್ರೇಣಿಯಲ್ಲಿವೆ.

ಟೆಂಡರ್ ನೋಟಿಸು.

ಮಡಿಕೇರಿ ಮಾರ್ಕೆಟಿಂಗ್ ಸಹಕಾರ ಸಂಘದ ದಾಸ್ತಾನು ಕಟ್ಟಡ ಕಟ್ಟಲು ಕಂಟ್ರಾಕ್ಟುದಾರರುಗಳ ಬೇಕಾಗಿದ್ದಾರೆ. ಕಟ್ಟಡದ ಪ್ಲಾನು ಮತ್ತು ಶರತ್ತುಗಳನ್ನು ಈ ಕೆಳಗಿನವರಿಂದ ಖುದ್ದು ಬಂದು ತಿಳಿದುಕೊಳ್ಳಬಹುದು. 30–10–52ರ ನಂತರ ಬರುವ ಟೆಂಡರುಗಳನ್ನು ಅಂಗೀಕರಿಸಲಾಗುವುದಿಲ್ಲ.

ಕೆಜ್. ಸಿ. ನಂಜಪ್ಪ,
ಪ್ರೆಸಿಡೆಂಟ್.
ಮಡಿಕೇರಿ ಮಾರ್ಕೆಟಿಂಗ್ ಸಹಕಾರ ಸಂಘ ಲಿ, ಮಡಿಕೇರಿ.

'ಕೊಡಗು' ಪತ್ರಿಕೆಯ ಏಜೆಂಟರು
ಶ್ರೀ ಚೋಕಿರ ಮೊಣ್ಣಪ್ಪನವರು.
ಸಾ ಪೊ: ಕ್ಲಿಗೆ

ಶ್ರೀ ಟಿ. ಎಸ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

"ಕಾಂಗ್ರೆಸಿಗೆ ಬೆಂಬಲವಿತ್ತು ನೆಹರೂರವರ ಕೈಯನ್ನು ಬಲಗೊಳಿಸಿರಿ"

ಶ್ರೀ ನಿಜಲಿಂಗಪ್ಪನವರ ಭಾಷಣ.

"ಕೇಂದ್ರ ಸರಕಾರದ ಪ್ಲಾನಿಂಗ್ ಕಮಿಷನಿನವರು ತಾವು ತಯಾರಿಸಿರುವ ಪಂಚವಾರ್ಷಿಕ ಯೋಜನೆಯಲ್ಲಿ ದಕ್ಷಿಣ ಹಿಂದೂಸ್ತಾನದ ಬಗ್ಗೆ ಸಾಕಷ್ಟು ಗಮನ ಕೊಟ್ಟಿರುವದಿಲ್ಲ. ದಕ್ಷಿಣ ಹಿಂದೂಸ್ತಾನದ ಬೇಡಿಕೆಗಳು ನೂರಾರಿದ್ದರೂ ಕೂಡ ಪಂಚವಾರ್ಷಿಕ ಯೋಜನೆಯು ಹೆಚ್ಚಾಗಿ ಉತ್ತರ ಹಿಂದೂಸ್ತಾನಕ್ಕೇ ಅನ್ವಯಿಸುವಂತಿದೆ. ಇದನ್ನು ಶೀಘ್ರ ಸರಿಪಡಿಸಿ ದಕ್ಷಿಣ ಹಿಂದೂಸ್ತಾನದಲ್ಲಿ ಆಗಬೇಕಾದ ಅತೀ ತುರ್ತಿನ ಉದ್ಯಮಗಳನ್ನೂ ನೀರಾವರಿ ಯೋಜನೆಗಳನ್ನೂ ಕೈಕೊಳ್ಳಬೇಕು." ಎಂದು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರಾದ ಶ್ರೀ ಎಸ್. ನಿಜಲಿಂಗಪ್ಪನವರು ತಾ. ೩೧ರ ಸಾಯಂಕಾಲ ಮಡಿಕೇರಿಯಲ್ಲಿ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಹೇಳಿದರು. ಸಾರ್ವಜನಿಕ ಸಭೆಯ ಅಧ್ಯಕ್ಷಸ್ಥಾನವನ್ನು ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎನ್. ಸೋಮಣ್ಣನವರು ವಹಿಸಿದ್ದರು. ಸಭೆಗೆ ಮುಖ್ಯಮಂತ್ರಿ ಶ್ರೀ ಸಿ. ಯಂ. ಪೂಣಚ್ಚನವರೂ, ಗೃಹಮಂತ್ರಿ ಶ್ರೀ ಮಲ್ಲಪ್ಪನವರೂ ಬಂದಿದ್ದರು. ಶ್ರೀ ನಿಜಲಿಂಗಪ್ಪನವರ ಜೊತೆಯಲ್ಲಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಾದ ಶ್ರೀ ಗುದ್ಲೆಪ್ಪ ಹಳ್ಳಿಕೇರಿಯವರೂ ಸದಸ್ಯರಾದ ಶ್ರೀ ಎನ್. ಎಸ್. ಕಿಲ್ಲೆಯವರೂ ಇದ್ದರು.

ಶ್ರೀ ನಿಜಲಿಂಗಪ್ಪನವರು ಮಾತನಾಡುತ್ತಾ, ಕಾಂಗ್ರೆಸು ಜಗತ್ತಿನ ಎಲ್ಲಾ ರಾಜಕೀಯ ಸಂಸ್ಥೆಗಳಲ್ಲಿ ಹೆಚ್ಚು ವಿಸ್ತೃತವೂ ಬಲವಾದ ಜನ ಬೆಂಬಲವುಳ್ಳದ್ದೂ ಆದ ತತ್ವಗಳನ್ನೊಳಗೊಂಡ ಸಂಸ್ಥೆಯೆಂದೂ ಪ್ರತೀ ಪ್ರಾಂತಗಳಲ್ಲಿ ಅಧಿಕಾರ ವಹಿಸಿರುವ ಕಾಂಗ್ರೆಸು ತನ್ನ ಶಕ್ತಿಗೆ ಮೀರಿ ಜನಹಿತ ಕೆಲಸ ಮಾಡುತ್ತಿದೆಯೆಂದೂ ಈ ಕಳೆದ ಕೆಲವು ವರ್ಷಗಳಿಂದ ಕೈಗಾರಿಕೆ, ನೀರಾವರಿ ಯೋಜನೆ ಮೊದಲಾದ ರಚನಾ ಕಾರ್ಯದಲ್ಲಿ ಕಾಂಗ್ರೆಸು ಸರಕಾರಗಳು ಸಾಧಿಸಿದ ಸಾಧನೆಯು ಪ್ರಶಂಸನೀಯವಾಗಿದೆಯೆಂದೂ ಹೇಳಿದರು.

ಕೊಡಗಿನ ಮತದಾರರು ಕಳೆದ ಚುನಾವಣೆಯಲ್ಲಿ ಕಾಂಗ್ರೆಸಿಗೆ ಒದಗಿಸಿಕೊಟ್ಟ ಅಪೂರ್ವ ಜಯಕ್ಕಾಗಿ ಅವರನ್ನು ವಂದಿಸುತ್ತಾ, ಕೊಡಗು ಪ್ರತ್ಯೇಕ ಪ್ರಾಂತವಾಗಿ ಬೇಕೆಂದು ಹೋರಾಡುತ್ತಿರುವ ಪಂಥದವರಿಗೆ ಉಚಿತವಾದ ಪಾಠ ಕಲಿಸಲಾಯಿತೆಂದೂ ಇಂದಿನ ಯುಗದಲ್ಲಿ ಈ ರೀತಿಯ ಸಂಕುಚಿತತೆಗೆ ಅವಕಾಶವಿಲ್ಲವೆಂದೂ ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ಭರತಖಂಡವು ಅಖಂಡ ರಾಷ್ಟ್ರವಾಗಿದೆಯೆಂದೂ ಕೊಡಗು ಮಾತ್ರ ಪ್ರತ್ಯೇಕ ಉಳಿಯುವ ಭಾವನೆ ಬೇಕೆಂದೂ ಹೇಳಿದರು. ಕೆಲವು ಜನರು ಕಾಂಗ್ರೆಸನ್ನು ಟೀಕಿಸುತ್ತಾ ಚೈನಾದ ಉದಾಹರಣೆಯನ್ನು ಎತ್ತಿಹೇಳುತ್ತಾರೆ. ಅದು ಅತೀ ಕ್ಷಿಪ್ರ ಸಮಯದಲ್ಲಿ ಅಸಾಧ್ಯವನ್ನು ಸಾಧಿಸಿದೆ ಎನ್ನುತ್ತಾರೆ. ಚೈನಾದ ಪುನರ್ಘಟನೆಯು ನಿನ್ನೆ ಮೊನ್ನೆಯದಲ್ಲ. ಕಳೆದ ೩೦ ವರ್ಷಗಳಿಂದಲೇ ಈ ರಚನೆ ಸಾಗಿಬಂದಿದೆ. ಇಂದು ಅಧಿಕಾರ ಹೊತ್ತಿರುವವರು ಬಹುಜನಾನುಮತದಿಂದ ಅದನ್ನು ಮುಂದರಿಸಿದ್ದಾರೆ. ಆದರೂ ಚೈನಾದಲ್ಲಿ ಎಲ್ಲವೂ ಆದರ್ಶವಾಗಿಲ್ಲ. ಅವರ ಕಷ್ಟ, ದುಃಖ, ಜಟಿಲ ಸಮಸ್ಯೆಗಳು ನೂರಾರಿವೆ. ಆದರೆ ಅವರು ಈ ವರೆಗೆ ನಡೆಸುತ್ತಿದ್ದ ಅಫೀಮು ವ್ಯಸನವನ್ನು ಕಡಿಮೆ ಮಾಡಿ ತಮಗೆ ಬೇಕಿರುವದಕ್ಕಿಂತಾ ಹೆಚ್ಚು ಆಹಾರ ಧಾನ್ಯ ಬೆಳೆಸಲು ಶಕ್ತರಾಗಿದ್ದಾರೆ. ಚೈನಾಕ್ಕೆ ಹೋಗಿ ಬರುವವರು ಅಲ್ಲಿರುವದೆಲ್ಲ ಆದರ್ಶ, ನಮ್ಮಲ್ಲಿ ಏನೂ ಆಗಿಲ್ಲವೆನ್ನುತ್ತಾರೆ. ಇದು ಹತ್ತಾರು ವರ್ಷಗಳಿಂದ ತನ್ನ ಹೆಂಡತಿಯು ಮಾಡಿ ಬಡಿಸಿದ ಅನ್ನವನ್ನು ಊಟಮಾಡುತ್ತಿದ್ದು ಒಂದು ದಿನ ನೆರೆಮನೆಯಲ್ಲಿ ಉಂಡು ಅವರ ಅಡಿಗೆಯೇ ಚೆನ್ನಾಗಿದೆಯೆಂದೂ, ತನ್ನ ಹೆಂಡತಿಗೆ ಅಡಿಗೆ ತಿಳಿಯದೆಂದೂ ಹೇಳಿದಂತಾಗಿದೆ. ಮದುವೆಯಾದ ಮಾರನೆದಿನವೇ ಜಗಜಟ್ಟಿಗಾಮನನ್ನು ಸೋಲಿಸಬಲ್ಲ ಬಲವನ್ನು ಪಡೆಯಬೇಕೆಂದು ಆಶಿಸಿದರಾಗದು. ಅಧಿಕಾರಕ್ಕೆ ಬಂದ ಮರು ದಿನವೇ ಭರತಖಂಡದ ಜನರ ಜೀವನ ಸುಖಮಯವಾಗಿ ಆಗದೆಂದೂ ಅದಕ್ಕೂ ಸಮಯಬೇಕು; ದುಡಿಮೆ ಬೇಕು, ಸಹಕಾರ ಬೇಕೆಂದೂ ಹೇಳಿದರು.

ಪಂಡಿತ ನೆಹರೂರಂಥ ಮಹಾವ್ಯಕ್ತಿಗಳ ಮುಂದಾಳ್ತನದಲ್ಲಿ ಭರತಖಂಡವು ಅಂತರಾಷ್ಟ್ರೀಯ ರಂಗದಲ್ಲಿ ಹೆಚ್ಚು ಗೌರವಾಸ್ಪದವಾಗಿದೆಯೆಂದೂ ಇಂದು ಭರತಖಂಡದ ವಾಣಿಯನ್ನು ಯಾವ ರಾಷ್ಟ್ರವೂ ನಿರ್ಲಕ್ಷತೆಯಿಂದ ಕಡೆಗಣಿಸುವಂತಿಲ್ಲವೆಂದೂ ಏಕೆಂದರೆ ಭಾರತದ ವಾಣಿಯು ಸತ್ಯದ, ಶಾಂತಿಯ ತಳಹದಿಯಲ್ಲಿ ನಿಂತಿರುವದೆಂದೂ ಅಂದರು.

ಕಾಂಗ್ರೆಸಿನ ಪರಿಶ್ರಮದಿಂದಾಗಿ ಪ್ರೌಢ ಮತದಾನ ಪದ್ಧತಿಯು ಹಿಂದೂದೇಶದಲ್ಲಿ ಜಾರಿಗೆ ಬಂದಿದೆಯೆಂದೂ ಅದರ ಪರಿಣಾಮವಾಗಿ ಭಾರತದ ಹೆಣ್ಮಕ್ಕಳಿಗೆ ಮತದಾನದ ಹಕ್ಕು ಬಂದಿದೆಯೆಂದೂ ಹಿಂದೂದೇಶದಲ್ಲಿ ಶೇಕಡ ೪೯ರಷ್ಟು ಹೆಂಗಸರೂ ೫೧ರಷ್ಟು ಗಂಡಸರೂ ಇರುವ ಕಾರಣ ಹೆಂಗಸರು ಮನಸ್ಸು ಮಾಡಿದರೆ ತಮ್ಮದೇ ಸರಕಾರ ಕಟ್ಟಿ ತಾವೇ ಮಂತ್ರಿಗಳಾಗಿ ಆಡಳಿತ ನಡೆಸಬಹುದಾಗಿದೆಯೆಂದೂ ಏಕೆಂದರೆ ಅವರು ಶೇಕಡಾ ೪೯ರಷ್ಟಿದ್ದರೂ ಯಾವ ಗಂಡಸೂ ತಮ್ಮ ಹೆಂಗಸರಿಗೆ ವಿರೋಧ ಓಟು ಹಾಕಲಾರನೆಂದೂ ಅದ್ದರಿಂದ ಅವರಿಗೆ ಬಹುಮತ ಸಿದ್ಧವೆಂದೂ ಹೇಳಿದರು. ಕಳೆದ ಚುನಾವಣೆಯಲ್ಲಿ ಭರತಖಂಡದ ಹೆಂಗಳೆಯರು ಸಂಪೂರ್ಣವಾಗಿ ಕಾಂಗ್ರೆಸಿಗೆ ಬೆಂಬಲವಿತ್ತಿದ್ದಾರೆಂದೂ ಕಾಂಗ್ರೆಸು ಅಧಿಕಾರಕ್ಕೆ ಬಂದದ್ದೇ ಅವರ ಬೆಂಬಲದಿಂದ ಬಂದಿದೆಯೆಂದೂ ಮುಂದೆಯೂ ಕೂಡ ಅದನ್ನೇ ತಾಳುವ ವಿವೇಕಿಗಳಾದ ಅವರು ತಮ್ಮ ಗಂಡಸರಿಗೆ ಯೋಗ್ಯ ಪಥದರ್ಶನ ಮಾಡಿಕೊಡುವರೆಂದೂ ಆಶಿಸಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದುದರಿಂದ ಪ್ರತಿಯೊಂದು ವಸ್ತುವಿನ ಉತ್ಪಾದನೆಯೂ ಹೆಚ್ಚಾಗಬೇಕು. ಹೊಟ್ಟೆ ಬಟ್ಟೆ ವಸತಿ ಸೌಕರ್ಯ ಶಿಕ್ಷಣ ಜೀವನವಿಟ್ಟು ಎಲ್ಲವೂ ಹೆಚ್ಚಬೇಕೆಂದೂ ಆದರೆ ಹಿಡಿತವಿಲ್ಲದೆ ಸಂತಾನವನ್ನು ಹೆಚ್ಚಿಸುವ ಉದ್ಯಮವನ್ನು ಕಡಿಮೆ ಮಾಡಬೇಕೆಂದೂ ಹೇಳಿದರು. ಸುಂದರ ಕೊಡಗನ್ನು, ಇಲ್ಲಿಯ ನದಿ ತೊರೆಗಳನ್ನು, ಬೆಟ್ಟಗುಡ್ಡಗಳನ್ನು ನೋಡುವಾಗ ಆನಂದವಾಗುತ್ತದೆಯೆಂದೂ ಇಲ್ಲಿಯ ಜನರು ಸಭ್ಯರೂ ಸುಸಂಸ್ಕೃತರೆಂದೂ ಆದರೆ ದೇಶದಲ್ಲಿರುವ ಎಲ್ಲರ ಸ್ಥಿತಿಯೂ ಆದರ್ಶವಾಗಿಲ್ಲವೆಂದೂ ಹೇಳಿದರು. ಭೂಮಾಲೀಕರು ಪ್ಲಾಂಟರಗಳು ಆತ ಕೂಲಿದಲ್ಲಿ ಆದರ್ಶವಾಗಿ ಸುಖಜೀವನ ನಡೆಸುತ್ತಿರಬಹುದಾದರೂ ಬಹುಸಂಖ್ಯೆಯಲ್ಲಿರುವ ಬಡವರ ಬವಣೆ ಹೊರಗಿನಂತೆಯೇ ಇಲ್ಲಿ ಇದೆ. ಕೆಲವರ ಸೌಖ್ಯವ ಗಿದ್ದರೆ ಸಾಲದು. ಸರಿಯಾಗಿ ಉಣ್ಣಲು ಉಡಲು ವಾಸಿಸಲು ಕಾಣದಿದ್ದ ಜನರ ಹಿತಸಾಧನೆಯೇ ಕಾಂಗ್ರೆಸಿನ ಗುರಿ ಎಂದು ಹೇಳಿದರು.

ದೇಶದಲ್ಲಿ ಅನೇಕ ಪಾರ್ಟಿ ಪಕ್ಷಗಳು ಈ ತಿಂಗಳ ಚುನಾವಣೆಯ ಕಾಲಕ್ಕೆ ತಲೆದೋರಿದವು. ಇಂದು ಹಲವು ಪಕ್ಷಗಳಿವೆ. ಅಧಿಕಾರಕ್ಕಾಗಿ ಕೆಲವು ರೂಪುಗೊಂಡಿದ್ದರೆ, ಪ್ರತಿಷ್ಠೆಗಾಗಿ ಕೆಲವು. ಆದರೆ ಈ ಎಲ್ಲಾ ಪಕ್ಷಗಳಿಗೆ ಮತದಾರರು ಸರಿಯಾದ ಬುದ್ಧಿ ಕಲಿಸಿದ್ದಾರೆ. ಕೆಲವರು ಹೊರದೇಶಗಳಿಗೆ ಹೋಗಿ ಸಮತಾವಾದ ಕಲಿತುಕೊಂಡು ಬಂದು ಇಲ್ಲಿ ಪ್ರಚಾರ ಮಾಡಲೆತ್ನಿಸುತ್ತಿದ್ದಾರೆ. ಅವರು ಸಮತಾವಾದ ತತ್ವವನ್ನು ಅರಗಿಸಿಕೊಂಡಿರುವರೋ ಎಂಬುದೇ ಸಂಶಯ. ಹೊರಗೆ ಹುಟ್ಟಿ ಅಲ್ಲಿ ಬೇರು ಬಿಟ್ಟ ಈ ತತ್ವಗಳು ನಮ್ಮ ದೇಶ ಪರಂಪರೆಗೂ ನಾಗರಿಕತೆಗೂ ಹೊಂದಿಕೊಳ್ಳದ ತತ್ವಗಳು. ಈ ತತ್ವಗಳನ್ನು ನಿಮ್ಮ ತಲೆಗೆ ತುಂಬಲು ಹಲವರು ಯತ್ನಿಸುತ್ತಾರೆ. ಆದ್ದರಿಂದ ಪ್ರತಿಯೊಬ್ಬನೂ ಈ ಪ್ರಚಾರಕರ ಕೈಗೊಂಬೆಗಳಾಗದೆ ತಮ್ಮ ವಿವೇಚನಾ ಬುದ್ಧಿಯನ್ನು ಉಪಯೋಗಿಸಿ ಸರಿದಾರಿಯಿಂದ ವರ್ತಿಸಬೇಕು. ಮಹಾತ್ಮಾಗಾಂಧೀಜಿಯವರು ಭಾರತಕ್ಕೆ ಸ್ವಾತಂತ್ರ್ಯ ಪಡೆದುಕೊಟ್ಟಿದ್ದಾರೆ. ಅವರು ಅನುಸರಿಸಿದ ಮಾರ್ಗ ಆದರ್ಶವಾದುದು. ಶತ್ರುವನ್ನು ಕೂಡ ಮಿತ್ರನಾಗಿ ಮಾರ್ಪಡಿಸುವ ಆ ಮಾರ್ಗದಿಂದಲೇ ಸರ್ವರ ಹಿತವಿದೆ. ಅದ್ದರಿಂದ ಕಾಂಗ್ರೆಸನ್ನು ಬಲಪಡಿಸಿ ನೆಹರೂರವರ ಕೈಗಳನ್ನು ದೃಢಗೊಳಿಸುವುದು ಪ್ರತಿಯೊಬ್ಬನ ಕರ್ತವ್ಯವೆಂದರು.

ನಂತರ ಕಾರ್ಯದರ್ಶಿ ಶ್ರೀ ಗುದ್ಲೆಪ್ಪ ಹಳ್ಳಿಕೇರಿಯವರೂ, ಶ್ರೀ ಎನ್. ಎಸ್. ಕಿಲ್ಲೆಯವರೂ ಭಾಷಣಮಾಡಿದರು. ಅಧ್ಯಕ್ಷರ ಸಮಾರೋಪ ಭಾಷಣದಿಂದ ಸಭೆ ಮುಕ್ತಾಯಗೊಂಡಿತು.

ಸ್ವೀಕಾರ

ಕರ್ಮವೀರ ದೀಪಾವಳಿ ಸಂಚಿಕೆ:—ರಾಯಲ್ ಆಕ್ಟಾವೊ ಆಕಾರದ ೧೦೪ ಪುಟಗಳಿರುವ ಈ ಸಚಿತ್ರ ಸುಂದರ ವಿಶೇಷ ಸಂಚಿಕೆಯು ಕನ್ನಡನಾಡಿನ ಉತ್ತಮ ವಾರ ಪತ್ರಿಕೆಗಳಲ್ಲಿ ಒಂದಾದ ಕರ್ಮವೀರದ ಅಂತಸ್ತಿಗೆ ಸರಿಯಾಗಿ ಇದೆ. 'ಶ್ರೀರಂಗ'ರ 'ಗಣರಾಜ್ಯ' ಏಕಾಂಕವೂ, ಶಿವರಾಮ ಕಾರಂತರ 'ಸಂಸ್ಕೃತಿಯ ಹೆಮ್ಮೆ ಸಾಲದು', ಕೆ. ಎಂ. ಪಣಿಕ್ಕರರ 'ಹಿಮಾಲಯ,' ನಾ. ಕಸ್ತೂರಿಯವರ 'ಆನಂದಪ್ರಚಾರ' ಮೊದಲಾದ ಲೇಖನಗಳೂ ಸಂಚಿಕೆಯ ಶೋಭೆಯನ್ನು ಹೆಚ್ಚಿಸಿವೆ. ಸಂಚಿಕೆಯು ಸಂಗ್ರಹ ಯೋಗ್ಯವಾಗಿದೆ.

ಕನ್ನಡಿಗ—ಕನ್ನಡಿಗ ಪತ್ರಿಕೆಯು ಈ ಸಲ ದೀಪಾವಳಿ ವಿಶೇಷಾಂಕವನ್ನು ಹೊರತಂದಿದೆ. ನೂರು ಪುಟಗಳಿಂದ ಕೂಡಿ, ಮಾಸ್ತಿ, ಕಾರಂತ, ಜಿ. ಎಸ್. ಶಿವರುದ್ರಪ್ಪ, ಗೋವಿಂದ ಪೈ, ಅಂಬಿಕಾತನಯದತ್ತ, ಪುತಿನ, ಕಣವಿ, ಸಿಂಪಿ ಮೊದಲಾದವರ ಲೇಖನ, ಕವನಗಳಿಂದ ಕೂಡಿದ ಈ ವಿಶೇಷಾಂಕದ ಬಣ್ಣದ ಸುಂದರ ಮುಖಚಿತ್ರ ಓದುಗರ ಕಣ್ಮನ ಸೆಳೆಯುತ್ತದೆ. ಸಂಪಾದಕರು ಶ್ರೀ. ಸೋಮಶೇಖರ ನಂದಗಾಂವ. ದೊರೆಯುವ ಸ್ಥಳ: ವಿಶ್ವಭಾರತ ಪ್ರಕಟಣಾಲಯ, ಹುಬ್ಬಳ್ಳಿ—

ಜೈಹಿಂದ್—ಡಾ. ಪಾಟೀಲರವರ ಸಂಪಾದಕತ್ವದಲ್ಲಿ ನಡೆಯುತ್ತಿರುವ ಜೈಹಿಂದ್ ಪತ್ರಿಕೆಯ ದೀಪಾವಳಿ ಸಂಚಿಕೆಯು ಆಕರ್ಷಣೀಯವಾಗಿದೆ. ಸುಂದರ ಮುಖಪತ್ರದಿಂದ ಕೂಡಿ, ಹರ್ಡೀಕರ್, ಶ್ರೀರಂಗ, ಲಿಂಗಣ್ಣ, ಗೋಕಾಕರ, ಚೆನ್ನಿಗರಾಮಯ್ಯ, ಸವಣೂರು ಮೊದಲಾದವರ ಲೇಖನ, ಕವನಗಳಿಂದ ಕೂಡಿದ ಈ ಸಂಚಿಕೆಯು ಸುಂದರವಾಗಿದೆ. ೧೦೪ ಪುಟಗಳಿದ್ದರೂ ಬೆಲೆ ೧-೮-೦ ಮಾತ್ರ. ಇದಲ್ಲದೆ ಸಂಪಾದಕರ ಮಾರ್ಗ ದರ್ಶನ...

Public Auction

A pregnant sindhi Cow will be sold by public auction on Monday the 17th November 1952 at 2- P. M. before the Chief Veterinary Officer, Coorg at- Kudige. The successful bidder should pay 25% of the bid amount on the spot. Further particulars about the cow to be auctioned can be had form the Artificial Insemination Officer, Kudige.

Chief Veterinary Officer,
Coorg.

ಕೊಡಗು

ತಾ. ೨೪-೧೦-೧೯೫೨ನೇ ಶುಕ್ರವಾರ

ಗಡಿನಾಡಿನ ಗಾಂಧಿ.

ಗಡಿನಾಡಿನ ಗಾಂಧಿಯವರ ಹೆಸರು ಪ್ರತಿ ಮನೆಯ ಮಾತಾಗಿದೆ. ಭಾರತ ಸ್ವಾತಂತ್ರ್ಯ ಸಂಗ್ರಾಮದ ಕಾಲಕ್ಕೆ ಆದರ್ಶ ರೀತಿಯ ಸೇವೆ ಸಲ್ಲಿಸಿ ಹಲವಾರು ಬಾರಿ ಸೆರೆಮನೆಗೆ ನಡೆದು ತಮ್ಮ ಅಹಿಂಸೆ, ನಿಷ್ಠೆ ಕರ್ತವ್ಯ ದಕ್ಷತೆ, ಸರಳ ಸ್ವಭಾವ, ಸತ್ಯ ಪ್ರಿಯತೆಗಳಿಂದಾಗಿ ಗಾಂಧೀಜಿಯ ಪ್ರತೀಕ ವೆನಿಸಿ 'ಗಡಿನಾಡಿನ ಗಾಂಧಿ'ಗಳಾದ ಇವರ ನೆನಹು ಪವಿತ್ರವಾದುದು. ಸ್ವಾಭಾವಿಕವಾಗಿ ಹಿಂಸೆ, ಯುದ್ಧ, ಘರ್ಷಣೆಗಳಲ್ಲಿ ತಲ್ಲೀನರಾಗಿರುವ ಪಠಾಣರನ್ನು ಅಹಿಂಸಾ ಪಥಕ್ಕೆ ತಂದು ಗಡಿನಾಡಿನಲ್ಲಿ ಅಸಾಧಾರಣ ಕ್ರಾಂತಿಯನ್ನು ಮಾಡಿದ ಈ ಜನ ನಾಯಕರು ಸರ್ವರಿಂದಲೂ ವಂದನಾರ್ಹರು. ಈ ರೀತಿಯ ಮಹಾತ್ಮರ ಅತುಳ ಪರಿಶ್ರಮದ ಕಾರಣದಿಂದ ಭಾರತಕ್ಕೆ ಸ್ವಾತಂತ್ರ್ಯ ದೊರೆಯಿತು. ಆದರೆ ಆ ಸ್ವಾತಂತ್ರ್ಯವನ್ನು ಭೋಗಿಸುವ ಹಕ್ಕು ಗಫಾರ್‌ಖಾನರಿಗೆ ಇಲ್ಲದಾಯಿತು.

ಭಾರತಕ್ಕೆ ಸ್ವಾತಂತ್ರ್ಯ ಒದಗಿಸಿ ಆ ಮೂಲಕ ಪಾಕಿಸ್ತಾನದ ಅಸ್ತಿತ್ವಕ್ಕೂ ಕಾರಣರಾದ ಗಫಾರ್‌ಖಾನರನ್ನು ಭಾರತದಿಂದ ಪಾಕಿಸ್ಥಾನದ ವಿಭಜನೆಯಾದೊಡನೆಯೇ ಪಾಕಿಸ್ಥಾನ ಸರಕಾರವು ಬಂಧಿಸಿ ಜೈಲಿನಲ್ಲಿರಿಸಿತು. ಅವರನ್ನು ಮಾತ್ರವಲ್ಲ; ಅವರ ಮಕ್ಕಳು ಮರಿಗಳನ್ನೂ ಜೈಲಿಗೆಸೆಯಿತು. ೧೯೪೭ರಿಂದ ಇಂದಿನ ವರೆಗೂ ಅವರು ಜೈಲಿನಲ್ಲಿಯೇ ಕೊಳೆಯುತಿದ್ದಾರೆ. ಯಾವುದೇ ತಪ್ಪಿಲ್ಲದ, ಅಹಿಂಸಾದ ಪ್ರತಿರೂಪರಾದ, ಬಹು ಜನರ ಹಿತಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿದ ಸತ್ಯಪ್ರಿಯ ಆದರ್ಶ ಪುರುಷರೊಬ್ಬರು ಯಾವುದೇ ವಿಚಾರಣೆಯಿಲ್ಲದೆ ಜೈಲಿನೊಳಗೆ ಇರಬೇಕಾದುದು ದುರ್ದೈವದ ಸಂಗತಿ.

ಪರಕೀಯರನ್ನು ದೇಶದಿಂದ ಹೊರದೂಡಲು ಸೆರೆಮನೆ ಸೇರಿದವರು ಸ್ವಾತಂತ್ರ್ಯ ದೊರೆತೂ ಸೆರೆಮನೆಯಲ್ಲಿರಬೇಕಾಗಿ ಬಂದುದು ಆಶ್ಚರ್ಯಕರ.

ಗಫಾರ ಖಾನರಿಗೆ ಈಗ ೬೧ ವಯಸ್ಸು. ಆರಡಿಯ ಕಟ್ಟಾಳು ಶರೀರನಾದರೂ ಈ ಸತತ ಜೈಲು ಜೀವನದಿಂದ ಆರೋಗ್ಯವು ಶಿಥಿಲವಾಗಿ ಆಗಾಗ್ಗೆ ಕಾಯಿಲೆ ಬೀಳುತಿದ್ದಾರೆ. ಎಷ್ಟೋ ಸಲ ಅವರನ್ನು ಆಸ್ಪತ್ರೆಗೆ ತರುವ ಸಂದರ್ಭ ಬಂದಿವೆ. ಇವರ ಬಿಡುಗಡೆಗಾಗಿ ನೆಹರೂ ಮೊದಲಾದವರೂ ಇರಾನ್, ಅರೇಬಿಯಾ ಮೊದಲಾದ ಮುಸ್ಲಿಂ ರಾಷ್ಟ್ರಗಳ ಮುಂದಾಳುಗಳೂ ಪಾಕಿಸ್ಥಾನ ಸರಕಾರಕ್ಕೆ ಅಪೀಲು ಮಾಡಿಕೊಂಡರೂ ಪ್ರಯೋಜನವಾಗಲಿಲ್ಲ. ಗಫಾರ್ ಖಾನರು ತಪ್ಪು ಮಾಡಿದ್ದರೆ ಅವರ ಮೇಲೆ ಖಟ್ಲೆ ಹಾಕಿ ವಿಚಾರ ನಡೆಸಬೇಕು. ಇದಿಲ್ಲದೆ ಈ ರೀತಿಯ ಬಂಧನವು ಅನಿಷ್ಟ ಪರಿಣಾಮವನ್ನು ತಾರದಿರದು.

ಗಫಾರ್‌ಖಾನರಂಥಾ ಮನುಷ್ಯರ ನೆರವು ಇಂದಿನ ಜಗತ್ತಿಗೆ ಅತ್ಯವಶ್ಯ. ಆದರೆ ಇಂದಿನ ವಿಕೃತ ಸರಕಾರ ಹಾಗೂ ಸಮಾಜದಲ್ಲಿ ಸದ್ಗುಣಿಗಳಿಗೂ, ಆದರ್ಶ ಪುರುಷರಿಗೂ ಸ್ಥಳವಿಲ್ಲ. ಮಹಾತ್ಮರಂಥವರನ್ನು ಗುಂಡಿಕ್ಕಿದ ಸಮಾಜಕ್ಕೂ ಗಫಾರ್ ಖಾನರಂಥವರನ್ನು ಸೆರೆಮನೆಯಲ್ಲಿಟ್ಟಂಥಾ ಸರಕಾರಕ್ಕೂ ಇಂದಿನ ಕಾಲವಾಗಿದೆ. ಆದರೆ 'ಸತ್ಯಮೇವ ಜಯತೇ ನಾ ಅನೃತಂ'.

ವರ್ತಮಾನ.

ಶ್ರೀ ಕಂಡ್ರತಂಡ ಎ. ಕಾರ್ಯಪ್ಪ ಮತ್ತು ಚಂಗಪ್ಪ ಇವರ ಸೇವಕ ಹರಿಜನರ ಮೊಣ್ಣನೆಂಬವರ ಮನೆಗೆ ಕಳೆದ ಮಾರ್ಚಿ ತಿಂಗಳಲ್ಲಿ ಶ್ರೀ ಪಳಂಗಂಡ ಕಾಳೈಯ್ಯನವರು ಬೆಂಕಿ ಹಚ್ಚಿದರೆಂಬ ಆರೋಪಣೆಯನ್ನು ಹೊರಿಸಿ ನಡೆಸಿದ ತಕ್ಸೀರಿನ ವಿಚಾರಣೆ ತಾರೀಕು ೯ ರಿಂದ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಿಯವರ ಕೋರ್ಟಿನಲ್ಲಿ ನಡೆದು ಶ್ರೀ ಕಾಳೈಯ್ಯನವರು ನಿರಪರಾಧಿಯೆಂದು ತೀರ್ಮಾನವಾಗಿದೆ.

ಮದ್ರಾಸು ಅಂತರ್‌ಕಾಲೇಜು ವಾಕ್‌ಸ್ಪರ್ಧೆಯಲ್ಲಿ ಭಾಗವಹಿಸಲು ಮಡಿಕೇರಿ ಸರಕಾರಿ ಕಾಲೇಜಿನಿಂದ ಶ್ರೀಗಳಾದ ನೆರಪಂಡ ಕುಶಾಲಪ್ಪ, ಕೋಟೆರ ಭೀಮಯ್ಯ (ಇವರು ಇಂಗ್ಲೀಷಿಗೆ) ಅಳಮೇಂಗಡ ಮುತ್ತಣ್ಣ ಮತ್ತು ಬಿ ಶಂಕರಭಟ್ಟ (ಇವರು ಕನ್ನಡಕ್ಕೆ) ಇವರುಗಳು ಆರಿಸಲ್ಪಟ್ಟಿರುವರು.

'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯ ಸಂಚಾಲಕರು ಕಾವೇರಿ ಜಾತ್ರೆಯ ಸಮಯದಲ್ಲಿ ಪಡಿಕೊಡಲಿಕ್ಕೂ, ದೇವಸ್ಥಾನದ ಉತ್ಕರ್ಷಕ್ಕೂ, ಎಂದು ಸಾವಿರ ರೂಪಾಯಿಗಳನ್ನು ಕೊಡಗು ಮುಜರಾಯಿ ಇಲಾಖೆಯವರಿಗೆ ದಾನ ಕೊಟ್ಟಿರುವರು.

ಕೊಡಗಿನ ಗೃಹಮಂತ್ರಿಗಳಾದ ಶ್ರೀ. ಕೆ. ಮಲ್ಲಪ್ಪನವರು ತಾ. ೨೫ ರಲ್ಲಿ ವೀರಾಜಪೇಟೆ ಹೊಸ ಮುನ್ಸಿಪಲ್ ಕೌನ್ಸಿಲಿನ ಉದ್ಘಾಟನೆಯನ್ನೂ, ಅದೇ ದಿನ ಅಲ್ಲಿಯ ಹೈಸ್ಕೂಲಿನ ಹೊಸ ರೇಡಿಯೋ ತೆರೆಯುವ ಸಮಾರಂಭವನ್ನೂ ನೆರವೇರಿಸುವರು.

ಅಖಿಲ ಭಾರತ ಕ್ಷಯರೋಗ ಸಂಸ್ಥೆಯ ಕಾರ್ಯದರ್ಶಿಯಾದ ಶ್ರೀ. ಬಿ. ಎಂ. ಕಾರ್ಯಪ್ಪನವರು ಪಾಶ್ಚಿಮಾತ್ಯ ದೇಶಗಳಲ್ಲಿ ಕ್ಷಯರೋಗ ನಿವಾರಣಾ ಕೆಲಸವನ್ನು ಸರಕಾರೇತರ ಕ್ಷಯರೋಗ ನಿರೋಧಕ ಸಂಸ್ಥೆಗಳು ಹೇಗೆ ಮಾಡುತ್ತಿರುವವೆಂಬುದನ್ನು ತಿಳಿಯಲು ನಾಲ್ಕು ತಿಂಗಳ ಪ್ರವಾಸ ಮಾಡಿ ಇಂಗ್ಲೆಂಡ್, ನಾರ್ವೆ, ಸ್ವೀಡನ್, ಡೆನ್ಮಾರ್ಕ್, ಅಮೇರಿಕಾ, ಕೆನಡಾ, ಫ್ರಾನ್ಸ್, ಜಿನೇವಾ, ರೋಮ್ ಮೊದಲಾದ ಸ್ಥಳಗಳನ್ನು ಸಂದರ್ಶಿಸಿ ವಾಪಾಸು ಬಂದಿರುವರು.

ಕಣ್ಣಿನ ಪರೀಕ್ಷೆ, ಚಿಕಿತ್ಸೆಗಳಲ್ಲಿ ಅತಿ ಪ್ರಸಿದ್ಧರಾದ ಡಾಕ್ಟರ್ ಮೋದಿಯವರನ್ನು ಕೊಡಗಿನಲ್ಲಿಯ ಕಣ್ಣುನೋವಿರುವವರ ಹಿತದೃಷ್ಟಿಯಿಂದ ಕೊಡಗು ಸರಕಾರವು ಆಹ್ವಾನಿಸಿದ್ದು ಅವರು ೧-೧೧-೫೨ರಿಂದ ೧೫ದಿನಗಳವರೆಗೆ ಕೊಡಗು ಸರಕಾರದ ಅತಿಥಿಯಾಗಿ ಮಡಿಕೇರಿಯಲ್ಲಿ ಇದ್ದು ರೋಗಿಗಳಿಗೆ ಮುಫತ್ತು ಚಿಕಿತ್ಸೆ ಮಾಡುವರು. ಹಾಗೆ ಚಿಕಿತ್ಸೆಗೆ ಬರುವವರು ಮೊದಲಾಗಿ ಸಿವಿಲ್ ಸರ್ಜನರಿಗೆ ಬರಕೊಳ್ಳಬೇಕೆಂದು ತಿಳಿದು ಬಂದಿದೆ.

ಅಖಿಲ ಭಾರತ ರೆಡ್‌ಕ್ರಾಸ್ ಸಂಘದ ಕೊಡಗು ಶಾಖೆಯ ಮಹಾಸಭೆಯು ತಾ. ೩೧-೧೦-೫೨ ರಲ್ಲಿ ಮಧ್ಯಾಹ್ನ ೧೨ ಗಂಟೆಗೆ ಶಾಸನ ಸಭಾ ಹಾಲ್‌ನಲ್ಲಿ ನಡೆಯುವುದು.

೧೯೫೨ ನೇ ಇಸವಿಯಲ್ಲಿ ೨೫ ಸೆಂಟುಗಳಿಗೆ ಮಿಗಿಲಾಗಿ ಹೊಸ ಭೂಮಿ ಮಾಡಿಸಿ ನೆಟ್ಟಿರುವವರೂ ಮತ್ತು ಬರುವ ವರ್ಷ ನೆಡಲಿಕ್ಕೆ ಸಿದ್ಧಪಡಿಸಿರುವವರೂ ಒಡನೆ ಕೊಡಗು ವ್ಯವಸಾಯ ಇಲಾಖಾ ಮುಖ್ಯಾಧಿಕಾರಿಗಳಿಗೆ ಅರ್ಜಿ ಹಾಕಿಕೊಳ್ಳಬೇಕೆಂದು ವ್ಯವಸಾಯ ಇಲಾಖೆಯು ಸರ್ವ ರೈತರಿಗೆ ಈ ಮೂಲಕ ತಿಳಿಯಪಡಿಸುತ್ತದೆ. ಅರ್ಜಿಯಲ್ಲಿ ಭೂಮಿಯಿರುವ ಸ್ಥಳ ರೂಪಿತ ಮಾಡಿದ ಭೂಮಿಯ ವಿಸ್ತೀರ್ಣ ಮತ್ತು ರೂಪಿತ ಮಾಡಲು ಆದ ಖರ್ಚು ಮೊದಲಾದುವುಗಳನ್ನು ನಮೂದಿಸಿದರೆ ಉತ್ತಮ. ಅವರವರು ಮಾಡಿಸಿದ ಕೆಲಸದ ಮೇರೆಯೂ ಮತ್ತು ಸರಕಾರದ ಹಣಕಾಸಿನ ಅನುಕೂಲತೆಯ ಮೇರೆಯೂ ಧನ ಸಹಾಯ ಮಾಡಲಾಗುವುದು.

ತಾ. ೬-೧೦-೫೨ ನೇ ಭಾನುವಾರ ದಿನ ಸೋಮವಾರಪೇಟೆಯಲ್ಲಿರುವ ಆನೆಕೆರೆಯನ್ನು ಸೋಮವಾರಪೇಟೆಯ ಪ್ರೌಢ ಶಾಲೆಯ ಮುಖ್ಯ ಉಪಾಧ್ಯಾಯರಾದ ಶ್ರೀ ಮಾನ್ ಬಿ. ಎಸ್. ವಿ. ಕೆ. ವಿಠಲರವರೂ, ಬಿ ಐ ಚಂಗಪ್ಪನವರೂ, ಮತ್ತು ಪ್ರೌಢ ಶಾಲೆಯ ೩೦ ಮಂದಿ ವಿದ್ಯಾರ್ಥಿಗಳೂ, ಸೇರಿ ಕೆರೆಯಲ್ಲಿದ್ದ ಹುಲ್ಲು ಪಾವಸೆ ಮುಂತಾದ ಕಲ್ಮಶಗಳನ್ನು ತೆಗೆದು ಶುಚಿಗೊಳಿಸಿ ಸಾರ್ವಜನಿಕರ ಹಿತವನ್ನು ಬಯಸಿ ಕೆಲಸ ಮಾಡಿರುತ್ತಾರೆ.

ತಾರೀಕು ೨೩-೯-೫೨ ರಲ್ಲು ಮಗ್ಗುಲ ಗ್ರಾಮಸ್ಥರಲ್ಲಿ ಹಲವರು ಸೇರಿ ಶ್ರೀ ಕಾವೇರಿ ದೇವಸ್ಥಾನಕ್ಕೆ ಒಲೆ ಒಂದರ ೫ ಯಾ ೧೦ ಸೇರು ಬತ್ತದಂತೆ ವಸೂಲು ಮಾಡಿ ಮಾರಿ ಬಂದ ೬೭ ರೂಪಾಯಿಗಳನ್ನು ಸದರಿ ದೇವಸ್ಥಾನದ ಪ್ರಸಿಡೆಂಟರ ಹೆಸರಿಗೆ ಮನಿಯಾರ್ಡರ್ ಮಾಡಿರುವರು.

ಇದೇ ಅಕ್ಟೋಬರ್ ತಾ. ೧೭ರಿಂದ ೧೯ರ ವರೆಗೆ ಶ್ರೀ ಕಾವೇರಿ ಆಶ್ರಮದಲ್ಲಿ ಶ್ರೀ ಕಾವೇರಿ ದೇವಿಯ ತೀರ್ಥಪೂಜೆಯ ಉತ್ಸವವು ನಡೆಯಿತು. ತಾ. ೧೭ ರಲ್ಲು ಶ್ರೀ. ಪಿ ಐ. ಬೆಳ್ಯಪ್ಪ ಎಂ. ಎಲ್. ಎ ಯವರ ಅಧ್ಯಕ್ಷತೆಯಲ್ಲು ಶ್ರೀ. ಎ. ಕೃಷ್ಣಮೂರ್ತಿ, ಬಿ. ಎ. ಬಿ ಟಿ. ಯವರ ಕಾವ್ಯವಾಚನವೂ ಶ್ರೀ. ಬಿ. ಸೂರ್ಯನಾರಾಯಣರಾವು ಎಂ. ಎ. ಬಿ ಟಿ. ಯವರ 'ಭಕ್ತಿ' ವಿಷಯ ಭಾಷಣವೂ ಮತ್ತು ಹರಿಕಥೆಯೂ ನಡೆಯಿತು. ತಾ. ೧೮ ರಲ್ಲು ಶ್ರೀ. ಪಳಂಗಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲು ಶ್ರೀ. ಎಸ್. ಎಸ್. ಕೃಷ್ಣರಾವು ಯಂ ಎ, ಬಿ. ಟಿ. ಯವರ 'ಧರ್ಮಜೀವನ' ವಿಷಯ ಭಾಷಣವೂ ಮತ್ತು ಡಾ ಪಂಜಪ್ಪ ಎಂ. ಬಿ. ಬಿ. ಎಸ್ ರವರ 'ಆರೋಗ್ಯ' ವಿಷಯ ಭಾಷಣವೂ, ಹರಿಕಥೆಯೂ ನಡೆಯಿತು. ತಾ. ೧೯ ರಲ್ಲು ದಿ. ಬ. ಕೆ. ಚಂಗಪ್ಪ ಬಿ. ಎ. ಸಿ. ಐ. ಇ. ಯವರ ಅಧ್ಯಕ್ಷತೆಯಲ್ಲಿ ಕೊಡಗು ರಿಜಿಸ್ಟ್ರಾರಾದ ಶ್ರೀ. ಪಿ. ಯಂ. ಚಂಗಪ್ಪನವರ 'ಶ್ರೀ ಕಾವೇರಿ' ವಿಷಯ ಭಾಷಣವೂ, ಸಂಗೀತ ಖಚೇರಿ ಮತ್ತು ಹರಿಕಥೆಯೂ ನಡೆಯಿತು.

ಕಳೆದ ಚುನಾವಣೆಯ ಸಂದರ್ಭದಲ್ಲಿ ಗೋಣಿಕೊಪ್ಪಲಲ್ಲಿ ಆದ ಮೋಟಂಗೋದರಲ್ಲಿ ಕಲ್ಲೆಸೆದು ತೊಂದರೆ ಮಾಡಿದರೆಂಬ ತಕ್ಸೀರು ಹಾಕಿ ಪ್ರತ್ಯೇಕ ಪಕ್ಷದ ಸುಮಾರು ಮೂವತ್ತು ಜನರ ಮೇಲೆ ಹೂಡಿರುವ ಮೊಕದ್ದಮ್ಮೆಯ ವಿಚಾರವು ತಾ. ೨೦ ರಲ್ಲಿ ಆಗದೆ ನವಂಬರ್ ತಾರೀಕು ೧೪ ಕ್ಕೆ ಮುಂದರಿಸಲಾಗಿದೆ. ಈ ಮಧ್ಯೆ ಪ್ರತಿವಾದಿಗಳಾದ ಮೇಲಿನ ೩೦ ಜನರು ಕೊಡಗಿನ ಕೋರ್ಟಿನಲ್ಲಿ ತಮಗೆ ಯೋಗ್ಯ ತೀರ್ಪು ದೊರೆಯುವ ಸಂಭವವಿಲ್ಲವೆಂದೂ ಆದ್ದರಿಂದ ಅದನ್ನು ನೆರೆಯ ಯಾವುದಾದರೂ ಕೋರ್ಟಿಗೆ ವರ್ಗಾಯಿಸಬೇಕೆಂದೂ ಮದ್ರಾಸು ಹೈಕೋರ್ಟಿಗೆ ಬರಕೊಂಡ ಮೇರೆ ಈ ಕೇಸನ್ನು ಸದ್ಯಕ್ಕೆ ವಿಚಾರಿಸಕೂಡದಾಗಿ ತಡೆ ಆಜ್ಞೆ (Stay order) ಕೊಟ್ಟಿರುವದಾಗಿ ವರ್ತಮಾನ.

ವೀರಾಜಪೇಟೆ ಮುನ್ಸಿಪಲ್ ಚುನಾವಣೆಯು ಸಮರ್ಪಕವಾಗಿ ನಡೆಯಲಿಲ್ಲವೆಂದು ಕಾಂಗ್ರೆಸಿಗೆ ವಿರೋಧನಿಂತ ಎಲ್ಲಾ ಉಮೇದುವಾರರೂ ಹಾಕಿರುವ ಚುನಾವಣಾ ಅರ್ಜಿಯ ವಿಚಾರಣೆಯು ನವಂಬರ್ ೧ನೇ ತಾರೀಕಿಗೆ ಮುಂದರಿಸಲ್ಪಟ್ಟಿದೆ.

ತಾರೀಕು ೨೨ ರಲ್ಲಿ ಸಿ. ಜಿ. ಎ. ನಂ ೧೦೦೪ರ ಟ್ಯಾಕ್ಸಿಯು ಮಡಿಕೇರಿಯಲ್ಲಿ ಪಾದಚಾರಿಯಾಗಿ ನಡೆಯುತ್ತಿದ್ದವನೊಬ್ಬನಿಗೆ ಡಿಕ್ಕಿ ಹೊಡೆದು ಆತನಿಗೆ ಜಖಂ ಆಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವನು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ. ಎಸ್. ನಿಜಲಿಂಗಪ್ಪನವರೂ, ಕಾರ್ಯದರ್ಶಿ ಶ್ರೀ. ಗುದ್ಲೆಪ್ಪ ಹಳ್ಳಿಕೇರಿಯವರೂ, ಸದಸ್ಯ ಶ್ರೀ. ಎಸ್ ಎಸ್ ಕಿಲ್ಲೆಯವರೂ ತಾ. ೨೧ ರಲ್ಲಿ ಗೋಣಿಕೊಪ್ಪ, ವೀರಾಜಪೇಟೆ ಮತ್ತು ಮಡಿಕೇರಿಗಳಲ್ಲಿ ಸಾರ್ವಜನಿಕ ಭಾಷಣಗಳನ್ನು ಮಾಡಿ ತಾ. ೨೭ ರಲ್ಲಿ ಹಿಂತೆರಳಿದರು.

ಕಮ್ಯೂನಿಸ್ಟ್ ಪಕ್ಷದವರಾಗಿ ಕೊಡಗಿನಲ್ಲಿ ಕೆಲಸ ಮಾಡುತ್ತಿದ್ದ ಶ್ರೀ. ಸಿ. ಎಂ. ದಾಮೋದರ ಇವರನ್ನು ಪಾರ್ಟಿಯಿಂದ ಹೊರತಳ್ಳಿರುವದಾಗಿ ತಿಳಿದುಬಂದಿದೆ.

(೧) ಮಡಿಕೇರಿಯಿಂದ ಹಾಸನಕ್ಕೂ (೨) ಹೆಬ್ಬಾಲೆ-ಮಡಿಕೇರಿ-ಸಿದ್ದಾಪುರ-ಮಡಿಕೇರಿಗೆ, (೩) ಕಾಕೋಟುಪರಂಬು-ವೀರಾಜಪೇಟೆಗೆ ಮತ್ತು (೪) ಸಂಪಾಜೆ, ಮಡಿಕೇರಿ, ಮಾದಾಪುರ, ಸುಂಟಿಕೊಪ್ಪ, ಮಾರ್ನಾಡು ಮಡಿಕೇರಿಗಾಗಿ ಸಂಪಾಜೆಗೆ ಈ ರೀತಿ ನಾಲ್ಕು ಬಸ್ ಲೈನುಗಳನ್ನು ಕೊಡಗು ಟ್ರಾನ್ಸ್‌ಪೋರ್ಟ್ ಅತಾರಿಟಿ ಯು ನಿಶ್ಚಯಿಸಿರುವದರಿಂದ ಖಾಯಿಶ್‌ದಾರರು ತಾ.೧-೧೨-೫೨ ರೊಳಗೆ ಅರ್ಜಿ ಬರಕೊಳ್ಳಬಹುದಾಗಿದೆ.

ತಾ. ೩-೧೦-೫೨ ರಿಂದ ೮-೧೧-೫೨ ರ ವರೆಗೆ ಫ್ರೇಜರ್‌ಪೇಟೆಯಲ್ಲಿ ಶ್ರೀ. ಗಣಪತಿದೇವರ ರಥೋತ್ಸವ, ಜಾನುವಾರುಗಳ ಜಾತ್ರೆ ನಡೆಯುತ್ತೆ. ಇದೇ ಸಮಯದಲ್ಲಿ ವಸ್ತು ಪ್ರದರ್ಶನವೂ ಇದೆ. ಗ್ರಾಮಕೈಗಾರಿಕೆಗಳ ಕೆಲಸ, ಗಾಜು, ಮಣಿ, ನೂಲಿನ ಕೆಲಸ ಅಲ್ಲದೆ ಹಣ್ಣುಗಳನ್ನೂ, ತರಕಾರಿಗಳನ್ನೂ ಸಹ ಪ್ರದರ್ಶನಕ್ಕೆ ಕಳುಹಿಸಬಹುದು

ದು. ಉತ್ತಮ ರಾಸುಗಳಿಗೂ ಓಡುವ ಮತ್ತು ಭಾರ ಎಳೆಯುವ ಎತ್ತುಗಳಿಗೂ ಉತ್ತಮ ಪ್ರದರ್ಶನ ವಸ್ತುಗಳಿಗೂ ಬಹುಮಾನ ಕೊಡಲ್ಪಡುತ್ತೆ. ತಾ. ೬ ರಲ್ಲಿ ಜಾನುವಾರು ಜಾತ್ರೆಯನ್ನು ಗ್ರಹಮಂತ್ರಿ ಶ್ರೀ. ಕೆ ಮಲ್ಲಪ್ಪನವರು ತೆರೆಯುವರು.

ಎ. ಎಸ್ ಸಿ. (ಯು ಟಿ.) ಯಲ್ಲಿದ್ದ (ಜಿ. ಸಿ. ಒ. ಮತ್ತು ಒ. ಆರ್) ಮಾಜಿ ಸ್ಯೆನಿಕರ, ಪ್ರಾಯ ೯ರಿಂದ ೧೧ ರ ವರೆಗಿರುವ ಬಾಲಕರಿಗೆ «ಕಿಂಗ್ ಜಾರ್ಜ್ ಸ್ಕೂಲು'ಗಳಲ್ಲಿ ಪ್ರವೇಶವು ದೊರೆಯುತ್ತದೆ. ಇಚ್ಛೆಯುಳ್ಳವರು ಈ ವಿಷಯಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಇದೇ ತಾರೀಕು ೨೫ ೧೦-೫೨ರ ಒಳಗೆ ಸೆಕ್ರೆಟರಿ, ಡಿ. ಎಸ್ ಎಸ್. ಆಂಡ್ ಎ ಬೋರ್ಡ್, ಮಡಿಕೇರಿ, ಇವರ ಆಫೀಸಿನಿಂದ ಖುದ್ದಾಗಿ ತಿಳಿದುಕೊಳ್ಳಬಹುದು.

ಕೊಡಗಿನಲ್ಲಿ ಇನ್ಷೂರೆನ್ಸ್ ಕಂಪೆನಿಯ ಇನ್ಸ್‌ಪೆಕ್ಟರುಗಳಾಗಿ ರೂ. ೧೫೦ ಸಂಬಳದಲ್ಲಿ ಕೆಲಸ ಮಾಡಲು ಕುತೂಹಲವುಳ್ಳ ಜನರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಕೂಡಲೆ ಹೆಚ್ಚಿನ ವಿಷಯಗಳನ್ನು ಮಡಿಕೇರಿ ಎಂಪ್ಲಾಯಿಮೆಂಟ್ ಆಫೀಸಿನಿಂದ ತಿಳಿದುಕೊಳ್ಳಬಹುದು.

ತಾರೀಕು ೧೬-೧೦-೫೨ ರಲ್ಲಿ ನಡೆದ ಅಖಿಲ ಕೊಡವ ವಿದ್ಯಾರ್ಥಿಯ ಮಹಾಸಭೆಯಲ್ಲಿ ಶ್ರೀ. ಕೋಳಿರ ಕುಟ್ಟಪ್ಪನವರನ್ನು ನಿಧಿಯ ಪ್ರೆಸಿಡೆಂಟರಾಗಿಯೂ ಶ್ರೀ. ಚೇನಂಡ ಅಪ್ಪಯ್ಯನವರನ್ನು ಗೌರವ ಕಾರ್ಯದರ್ಶಿಯಾಗಿಯೂ ೧೯೫೨-೫೩ರ ವರ್ಷಕ್ಕೆ ಆರಿಸಲಾಗಿದೆ.

ಕೊಡಗು ವ್ಯವಸಾಯ ಇಲಾಖೆ.

ಏಲಕ್ಕಿಗೆ ಬೀಳುವ ಹುಳ ಮತ್ತು ತಗಲುವ ರೋಗಗಳು

೧. ಏಲಕ್ಕಿಯ ಕಂಬಳಿ ಹುಳ.— ಈ ಹುಳಗಳು ಚಿಟ್ಟೆಯ ಮರಿಗಳು. ಇವುಗಳು ಪೂರ್ತಿ ಬೆಳೆದಾಗ ೧½ ಇಂಚಿನಿಂದ ೨ ಇಂಚುಗಳಷ್ಟು ಉದ್ದವಾಗಿರುತ್ತವೆ. ಈ ಕಂಬಳಿ ಹುಳಗಳು ಏಲಕ್ಕಿಯ ಎಲೆಗಳನ್ನು ಮತ್ತು ಸರಳವಾದ ಗಿಡಗಳ ಎಲೆಗಳನ್ನು ತಿಂದು ಬೆಳೆಯುತ್ತವೆ. ಹುಳಗಳು ಕ್ರಮವಾಗಿ ಕಾಲದಲ್ಲಿ ಎಲೆಗಳನ್ನು ತಿನ್ನುತ್ತವೆ. ಪೂರ್ಣವಾಗಿ ಬೆಳೆದ ನಂತರ ಕೋಶಾವಸ್ಥೆಯನ್ನು ಹೊಂದುತ್ತವೆ. … ಚಿಟ್ಟೆಗಳು ಹೊರಗೆ ಬಂದು ಗಿಡಗಳ ಮೇಲೆ ಮೊಟ್ಟೆಯನ್ನಿಡುತ್ತವೆ. ಈ ಹುಳಗಳು ಎಲೆಗಳನ್ನೆಲ್ಲಾ ತಿಂದು ಬಹಳ ನಷ್ಟವನ್ನು ಮಾಡುತ್ತವೆ. "ಪ್ಯಾರಿಸ್ ಗ್ರೀನ್" ಅಥವ "ಅಗ್ರೋಸೈಡ" ಎಂಬ ಕ್ರಿಮಿನಾಶಕವನ್ನು ಉಪಯೋಗಿಸಿ ಈ ಹುಳಗಳ ಉಪದ್ರವವನ್ನು ತಡೆಯಬಹುದು. ಹುಟ್ಟಿದ ಈ ಹುಳಗಳ ಹಾವಳಿಯನ್ನು ಸೋಮವಾರಪೇಟೆ ನಾಡಿನ ಬೆಟ್ಟ ಪ್ರದೇಶದ ತೋಟಗಳಲ್ಲಿ ಕಾಣಬಹುದು.

೨. ಏಲಕ್ಕಿಯ ಥ್ರಿಪ್ಸ್:— ಈ ಹುಳಗಳನ್ನು ಸಾಮಾನ್ಯವಾಗಿ ಎಲ್ಲಾ ತೋಟಗಳಲ್ಲಿಯೂ ಕಾಣಬಹುದು. ಈ ಹುಳಗಳು ಬಹಳ ಸಣ್ಣದಾಗಿದ್ದು ಕಪ್ಪು ಬಣ್ಣದಾಗಿರುತ್ತವೆ. ಚಿಕ್ಕದಾಗಿರುವಾಗ ಹಳದಿ ಬಣ್ಣದಾಗಿರುತ್ತವೆ. ಚಿಕ್ಕ ಮರಿ ಮತ್ತು ದೊಡ್ಡ ಹುಳಗಳು ಏಲಕ್ಕಿ ಹೂವಿನ ಮತ್ತು ಎಳೆಯ ಕಾಯಿಗಳ ರಸವನ್ನು ಹೀರಿ ಜಳ್ಳು ಅಥವಾ ಕಜ್ಜಿಕಾಯಿಗಳ ಗುಂಪನ್ನು ಮಾಡುತ್ತವೆ. ಹೂವಿನ ಕಾಲದಲ್ಲಿ ಒಂದು ತಿಂಗಳವರೆಗೆ ವಾರಕ್ಕೊಂದಾವರ್ತಿ "ಗೆಮೆಕ್ಸಿನ್" ಕ್ರಿಮಿನಾಶಕವನ್ನು ಹೊಡೆಯುವುದರಿಂದ ಹಾವಳಿಯನ್ನು ತಡೆಯಬಹುದು.

೩. ಕಾಂಡ ಕೊರೆಯುವ ಹುಳ:— ಈ ಹುಳಗಳ ಹಾವಳಿಯು ಎಲ್ಲಾ ಕಡೆಯಲ್ಲಿದ್ದರೂ ಹೆಚ್ಚಿನ ನಷ್ಟವು ಕಾಣುವುದಿಲ್ಲ. ಈ ಕ್ರಿಮಿಗಳು ಚಿಕ್ಕದಾಗಿದ್ದು ಹೂವಿನ ಅವಸ್ಥೆಯಲ್ಲಿ ಕಾಂಡವನ್ನು ಕೊರೆಯುವುದರಿಂದ ಗಿಡವು ಸಾಯುತ್ತದೆ. ಹುಳ ಬಿದ್ದ ಕಾಂಡಗಳನ್ನು ಕತ್ತರಿಸಿ ಸುಡಬೇಕು. ಈ ಹುಳಗಳು ಹಂಪಿನ ಬೀಜ ಮತ್ತು ಕಾಯಿಗಳನ್ನು ತಿನ್ನುತ್ತವೆ. ಹರಳು ಗಿಡಗಳನ್ನು ಏಲಕ್ಕಿ ತೋಟಗಳಲ್ಲಿ ಬೆಳಸಿ ಅವುಗಳ ಬೀಜ ಮತ್ತು ಕಾಯಿಗಳಲ್ಲಿ ಈ ಹುಳಗಳು ಕಾಣಿಸಿಕೊಂಡಾಗ ಅವುಗಳನ್ನು ಕಿತ್ತು ಸುಡುವುದರಿಂದ ಏಲಕ್ಕಿ ಗಿಡಗಳಿಗೆ ಈ ಹುಳಗಳು ಬರುವುದನ್ನು ಬಹು ಮಟ್ಟಿಗೆ ಕಡಿಮೆ ಮಾಡಬಹುದು.

4 ಕಾಯಿಗಳನ್ನು ಕೊರೆಯುವ ಹುಳ:— ಈ ಹುಳಗಳು ಕಪ್ಪಾಗಿದ್ದು ಉಟ್ಟೆ ಹುಳವಿನ ರೀತಿಯಲ್ಲಿರುತ್ತವೆ. ಈ ಹುಳಗಳು ಕಾಯಿಗಳನ್ನು ಕೊರೆದು ಒಳಗಿರುವ ಕಾಳುಗಳನ್ನು ತಿಂದು ಜಳ್ಳು ಮಾಡುತ್ತವೆ. ಕಾಯಿಗಳು ಎಳೆಯದಾಗಿರುವಾಗ ಥ್ರಿಪ್ಸ್ ಹುಳಗಳ ನಾಶಕ್ಕಾಗಿ ಮಾಡುವ ಔಷಧಿಯಿಂದಲೇ ಈ ಹುಳದ ಬಾಧೆಯು ಕಡಿಮೆಯಾಗುತ್ತವೆ

ರೋಗಗಳು

1 ಪಾತಿಯಲ್ಲಿ ತಗಲುವ ಬೇರು:— ಈ ರೋಗವನ್ನು ಎಲ್ಲಾ ಕಡೆಗಳಲ್ಲಿ ಯೂ ಕಾಣಬಹುದು. ಎಳೆಯ ನೇಲ್ಲಿಗಳು ಹಳದಿ ಬಣ್ಣದಿಂದ ಕೆಂಪು ವರ್ಣವಾದ ಕಂದು ಬಣ್ಣಕ್ಕೆ ತಿರುಗುತ್ತದೆ. ಈ ರೋಗವು ಎಲ್ಲಾ ಎಲೆಗಳಿಗೂ ತಗಲಿದಾಗ ಗಿಡವು ಸಾಯುತ್ತದೆ. ಆಗಿಂದಾಗ್ಗೆ ಪಾತಿಯನ್ನು 1% ಬೋರ್ಡೋ ದ್ರಾವಕದಿಂದ ಸ್ಪ್ರೇ ಮಾಡುವದರಿಂದ ರೋಗವನ್ನು ತಡೆಯಬಹುದು. ಪಾತಿಗಳಿಗೆ ಎಲ್ಲಾ ಕಡೆಗಳಿಂದಲೂ ನೆರಳನ್ನು ಕೊಡುವುದರಿಂದ ರೋಗವನ್ನು ತಡೆಯಬಹುದು. ನೆಡುವುದಕ್ಕಿಂತ ಮುಂಚಿತವಾಗಿ ಸಸಿಗಳನ್ನು 1% ಬೋರ್ಡೋ ದ್ರಾವಕದಲ್ಲಿ ಅದ್ದುವುದರಿಂದ ರೋಗದಿಂದ ಅಪಾಯವು ಕಡಿಮೆ ಯಾಗುತ್ತದೆ.

2 ಏಲಕ್ಕಿ ಗಿಡದ ಗೆಡ್ಡೆ ಕೊಳೆಯುವ ರೋಗ:— ಈ ರೋಗವು ಭೂಮಿಯ ಕೆಳ ಭಾಗದಲ್ಲಿ ಗೆಡ್ಡೆಗೆ ಬರುತ್ತದೆ. ಗಿಡವನ್ನು ಮೇಲಕ್ಕೆ ಎಳೆದಾಗ ಕತ್ತಿಯಿಂದ ಕತ್ತರಿಸಿದಂತೆ ಗೆಡ್ಡೆಯಿಂದ ಬೇರ್ಪಟ್ಟು ಮೇಲಕ್ಕೆ ಬರುತ್ತದೆ. ಈ ಭಾಗದಲ್ಲಿ ತಿಳಿಯಿಂದ್ರದ ಎಳೆಗಳನ್ನು ಕಾಣಬಹುದು. ರಂಜಕದ ಗೊಬ್ಬರವನ್ನು ಹಾಕುವುದರಿಂದ ರೋಗವು ಕಡಿಮೆಯಾಗುತ್ತದೆ.

ವ್ಯವಸಾಯ ಇಲಾಖೆ,
ಆಫೀಸರು.

ಬಾತ್ಮಿ.

ಅಂಡಮಾನ್.

ಈ ಶಿರೋನಾಮೆಯನ್ನು ನೋಡಿ ಸೋಮವಾರಪೇಟೆಯವನು ಅಂಡಮಾನ್ ದ್ವೀಪದ ವಿಷಯ ಯಾಕೆ ಬರೆಯುತಿದ್ದಾನೆಂದು ವಾಚಕರು ಚಕಿತ ಪಡಬಹುದು ಆದರೆ ಉತ್ತರ ಕೊಡಗಿನಲ್ಲಿ ಒಂದು ಅಂಡಮಾನ್ ಇದೆ. ಇದೇ ಸೂಲೆಬಿ ಗ್ರಾಮ. ಈ ಗ್ರಾಮಕ್ಕೆ ಸೇರಿದ ಕಿಕ್ಕರಳ್ಳಿ, ಮಂಕ್ಯ ಹೀಗೆ ಮೂರು ನಾಲ್ಕು ಉಪಗ್ರಾಮಗಳಿಂದ ಕೂಡಿದೆ ಈ ಗ್ರಾಮಗಳು ಗುಡ್ಡ ಬೆಟ್ಟಗಳಿಂದ ಸುತ್ತಲೂ ಆವರಿಸಿವೆ. ಈ ಗ್ರಾಮಕ್ಕೆ ಯೋಗ್ಯ ರಸ್ತೆಯೊಂದು ಬೇಕೆಂದು ಬಹಳ ವರ್ಷಗಳಿಂದಲೂ ಜನತೆಯು ಕೂಗು ಇದೆ. ಹಣವಿಲ್ಲವೆಂಬ ನೆಪವನ್ನು ಮುಂದಿಟ್ಟು ಹಿಂದಿನ ಸರಕಾರ ತಾತ್ಸಾರ ಮಾಡಿತು. ಈಗ ಜನತಾ ಸರಕಾರ ಆದರಲ್ಲೂ ಉತ್ತರ ಕೊಡಗಿನ ಗ್ರಾಮಗಳ ಅಭಿವೃದ್ಧಿಗಾಗಿ ೨೫ ಲಕ್ಷ ರೂಪಾಯಿಗಳನ್ನು, ಸಾವನಹಿಕ ವಿಕಾಸ ಯೋಜನೆಗಾಗಿ ಕೇಂದ್ರ ಸರಕಾರ ಮಂಜೂರು ಮಾಡಿದೆ ಈ ಸಾಮೂಹಿಕ ವಿಕಾಸ ಯೋಜನೆಯಲ್ಲಾದರೂ ನನ್ನ ಗ್ರಾಮಕ್ಕೊಂದು ಯೋಗ್ಯ ರಸ್ತೆ ಆಗವುದೆಂದು ಗ್ರಾಮಸ್ಥರು ತುಂಬಾ ಆಸೆಯಲ್ಲಿದ್ದರು. ಗ್ರಾಮಸ್ಥರ ಕನಸು ನನಸಾಗದೆ ಕನಸಾಗೇ ಉಳಿದಿದೆಯೆಂದು ಇತ್ತಲಾಗಿ ತಿಳಿಯಬರುತ್ತದೆ. ಸೂಲೆಬಿ, ಕಿಕ್ಕರಳ್ಳಿ, ಮಂಕ್ಯ ಗ್ರಾಮಸ್ಥರುಗಳು ಶನಿವಾರಸಂತೆ, ಆಸ್ಪತ್ರೆ, ಸಂತೆಗೆ ಇತರ ಎಲ್ಲಾ ಕೆಲಸಗಳಿಗೂ ಸೋಮವಾರಪೇಟೆಗೇ ಬರಬೇಕು. ಹತ್ತು ಹದಿನೈದು ಮೈಲು ದೂರ ಗುಡ್ಡ ಬೆಟ್ಟಗಳನ್ನು ಹತ್ತಿ ಇಳಿದು ಬರಬೇಕು. ಎಲ್ಲಾ ಸಾಮಾನುಗಳನ್ನೂ ತಲೆಹೊರೆಯಲ್ಲೇ ಸಾಗಿಸಬೇಕು. ಮೊನ್ನೆ ನಡೆದ ಒಂದು ಘಟನೆಗಾಗಿ ಈ ಬಾತ್ಮಿಯನ್ನು ಬರೆಯಬೇಕಾಗಿ ಬಂತು ಮೊನ್ನೆಯಾಗಿ ಒಂದು ಹೆಂಗಸಿಗೆ ಹೆರಿಗೆ ಆಗದೆ ಕಷ್ಟದಲ್ಲಿರುವಾಗ ಡಾಕ್ಟರನ್ನು ಕರೆಕೊಂಡು ಹೋಗಲು ಸೋಮವಾರಪೇಟೆಗೆ ಬಂದರಂತೆ. ಗ್ರಾಮದ ಹೆಸರು ಕೇಳಿ ಡಾಕ್ಟರು ನಿರಾಕರಿಸಿದಂತೆ. ಕೆಲವು ಸಮಯದ ನಂತರ ಹೆಂಗಸು ಮತ್ತು ಹುಟ್ಟಿದ ಮಗು ಮೃತಪಟ್ಟಿರಂತೆ. ಈ ಹೃದಯ ಬೇಧಕ ಘಟನೆಗೆ ಯಾರು ಜವಾಬ್ದಾರರು? ಯಾವ ಸರಕಾರದ ಅಧಿಕಾರಿಗಳೂ ಈ ಗ್ರಾಮಗಳಿಗೆ ಹೋಗುವುದೇ ಇಲ್ಲ ಬಹುಶಃ ಡಾಕ್ಟರು ಹೋಗಿದ್ದರೂ ಸೋಮವಾರಪೇಟೆಯಿಂದ ನಡೆದ ಕೊಂಡು ಹೋಗುವಷ್ಟರಲ್ಲಿ ತಾಯಿ ಮಗು ಮೃತಪಡುತಿದ್ದರು. ಸರಕಾರವು ಯೋಗ್ಯ ರಸ್ತೆಯೊಂದನ್ನು ಮಾಡಿದ್ದರೆ ಇಂಥ ಘಟನೆ ಸಂಭವಿಸುತ್ತಿರಲಿಲ್ಲ. ಇಂಥಾ ಅನೇಕ ಘಟನೆಗಳು ಈ ಗ್ರಾಮಗಳಲ್ಲಿ ನಡೆದಿವೆ. ಇಂಥಾ ಬಡಪಾಯಿ ಗ್ರಾಮಸ್ಥರುಗಳಿಗೆ ನೆರವು ಕೊಡುವುದು ಪ್ರಜಾ ಸರಕಾರದ ಧರ್ಮವಲ್ಲವೆ? ಸಾಮೂಹಿಕ ವಿಕಾಸ ಯೋಜನೆಯಲ್ಲಿ ಮಾದಾಪುರದಿಂದ ಗರ್ವಾಲೆ ಗ್ರಾಮಕ್ಕಾಗಿ ಸೂಲೆಬಿ ಸ್ಕೂಲು ವರೆಗೆ ಮಾತ್ರ ರಸ್ತೆ ಮಾಡುವದಾಗಿ ತಿಳಿದು ಗ್ರಾಮಸ್ಥರು ತುಂಬಾ ವ್ಯಸನದಲ್ಲಿದ್ದಾರೆ ಈಗಾಗಲೇ ಗ್ರಾಮದ ಕೆಲವು ಮುಂದಾಳುಗಳು ಸರಕಾರಕ್ಕೆ ಮಾಡಿ ಇಟ್ಟಿದ್ದಾರೆ. ಘನ ಸರಕಾರವು ದಯವಿಟ್ಟು ... ಕೆಲವು ... ಗಳ ಮಾತಿಗೆ ಬೆಲೆ ಕೊಡದೆ ಮಾದಾಪುರದಿಂದ ಗರ್ವಾಲೆಗಾಗಿ ಸೂಲೆಬಿ ಸ್ಕೂಲು ವರೆಗೆ ಒಂದು ರಸ್ತೆ ಮತ್ತು ಹರಗ ಗ್ರಾಮದ ರಸ್ತೆಯಿಂದ ಕಿಕ್ಕರಳ್ಳಿ ಗ್ರಾಮಕ್ಕಾಗಿ ಸೂಲೆಬಿ ಸ್ಕೂಲ ವರೆಗೆ ಒಂದು ರಸ್ತೆಯನ್ನು ಕೂಡಲೆ ಮಾಡಿಕೊಡಬೇಕಾಗಿ ಪ್ರಾರ್ಥನೆ.

H. M. C.

ಇಂಡಿಯಾ ಕಾಫಿ ಬೋರ್ಡ್

ಪರಿಶೋಧನಾ ಇಲಾಖೆ.

ಕೊಡಗಿನ ಚೆಟ್ಟಳ್ಳಿಯಲ್ಲಿರುವ ಕಾಫಿ ಪರಿಶೋಧನಾ ಸಬ್ ಸ್ಟೇಷನಿನಲ್ಲಿ ತಾ. 6-11-52ರಲ್ಲಿ "ಫೀಲ್ಡ್ ಡೇ" ಕಾರ್ಯಕ್ರಮವು ನಡೆಯುವದು. ಕಾಫಿಯ ವ್ಯವಸಾಯದ ಅಭಿವೃದ್ಧಿಗೆ ಯಾವ ರೀತಿಯ ಶಾಸ್ತ್ರೀಯ ವಿಧಾನಗಳನ್ನು ಅನುಸರಿಸಬಹುದೆಂಬುದನ್ನು ಪ್ರತ್ಯಕ್ಷವಾಗಿಯೂ ಈ ಕೆಳಗಿನ ವಿಚಾರಗಳನ್ನು ಸ್ಪಷ್ಟವಾಗಿಯೂ ಪ್ರದರ್ಶಿಸಲಾಗುವುದು.

(1 ಕಾಫಿ ದಂಟಿಗೆ ತಗಲುವ ಬೋರರ್ ಕಾಯಿಲೆಯನ್ನು ಜಯಪ್ರದವಾಗಿ ತಡೆಗಟ್ಟುವದು.

(2) ಹಸರು ತಿಗಣೆಯನ್ನು ತಡೆಗಟ್ಟುವದು.

(3) ಮಣ್ಣು ಸವೆದು ಹೋಗುವದನ್ನು ತಡೆಯಲು ಅನುಸರಿಸಿಯ ಮಟ್ಟ ನಿರ್ಮಿಸುವ ಕ್ರಮ.

ಕೊಡಗಿನ ಚೀಫ್ ಕಮಿಷನರಾದ ಲೆ. ಕ. ದಯಾಸಿಂಗ್ ಬೇದಿಯವರು ಬೆಳಗ್ಗೆ 10 ಗಂಟೆಗೆ "ಫೀಲ್ಡ್ ಡೇ" ಯನ್ನು ತೆರೆಯಲು ಒಪ್ಪಿದ್ದಾರೆ.

ಎಲ್ಲಾ ಪ್ಲಾಂಟರುಗಳಿಗೂ ಆಹ್ವಾನವಿದೆ.

ಎಸ್ ಹಾರ್ ಕವಿ ಟಿಯ ಅಜ್ಜಿಯ ಮೇರಿ
ಕಾಫಿ ಪರಿಶೋಧನಾ ಉಪ ಕೇಂದ್ರ, ಚೆಟ್ಟಳ್ಳಿ.

Coorg Forest Department.

Timber Sale

About 90,000 cft of Teak, Biti, Honne and other hard woods will be sold by auction at the Coorg Timber Depot, Hunsur, on Saturday the 8th November, 1952, at 10. 30 A. M.

For conditions of the sale apply to the Conservator of Forests, Coorg, Mercara.

—oOo—

ಮೂರನೇ ಕ್ಷಯರೋಗ ಸೀಲುಗಳ ಮಾರಾಟ

(ಹೊಸ ಡೆಲ್ಲಿಯಲ್ಲಿರುವ ಅಖಿಲ ಭಾರತ ಕ್ಷಯರೋಗ ಸಂಸ್ಥೆಯಿಂದ ನಡೆಸಲ್ಪಡುವಂಥಾದ್ದು.)

ಲಕ್ಷದೀಪದ ಉತ್ಸವವಾದ ಕಾವೇರಿ ಸಂಕ್ರಮಣವು ನೆನ್ನೆಯಾಗಿ ಕಳೆಯಿತು. ಈ ಸಂದರ್ಭದಲ್ಲಿ ಪವಿತ್ರ ತೀರ್ಥದಲ್ಲಿ ಮಿಂದು ಮುಂದಿನ ತಿಂಗಳುಗಳಲ್ಲಿ ಪವಿತ್ರ ಕಾರ್ಯಗಳಿಗಾಗಿ ಸಿದ್ಧರಾಗಿರುವ ಸಮಯವಿದು. ಈ ಸಂದರ್ಭ ಕ್ಷಯರೋಗದಿಂದ ನರಳುತ್ತಿರುವ ನೂರಾರು ಸೋದರ ಸೋದರಿಯರಿಗೆ ನೆರವು ನೀಡಲು ಆಲೋಚಿಸುವುದಿಲ್ಲವೇ?

"ಆಸ್ಪತ್ರೆಗಳಲ್ಲೂ ಮನೆಗಳಲ್ಲೂ ಈ ಕಾಯಿಲೆಯಿಂದ ನರಳುತ್ತಿರುವ ಸಾವಿರಾರು ಕ್ಷಯ ರೋಗಿಗಳಿಗೆ ಈ ಹಬ್ಬ, ಉತ್ಸವಗಳು ಅರ್ಥರಹಿತವಾದವುಗಳು. ಅವರಿಗೆ ಕ್ಷಯರೋಗ ಸೀಲುಗಳು, ಸಂತೋಷದ ಮತ್ತು ಆಶಯ ಸಂಕೇತಗಳು. ಅವರನ್ನು ಆರೋಗ್ಯದಲ್ಲಿರುವ ನಾವು ಮರೆಯಲಿಲ್ಲವೆಂದೂ ಅವರ ರೋಗನಿವಾರಣೆಗೆ ಪ್ರಯತ್ನ ಮಾಡುತ್ತಿರುವೆವೆಂದೂ ಇದರಿಂದ ತಿಳಿಯುವದು.

—ರಾಜಕುಮಾರಿ ಅಮೃತ ಕೌರ್.

ಕಳೆದ ಎರಡು ವರ್ಷಗಳಲ್ಲಿ ಈ ಸೀಲುಗಳ ಮಾರಾಟದಿಂದ ರೂ. 16,000 ಮಿಕ್ಕಿ ಸಂಗ್ರಹಿಸಿದ ಕೀರ್ತಿಯು ಕೊಡಗಿಗಿದೆ ಕೊಡಗಿನ ಕ್ಷಯ ರೋಗಿಗಳ ಚಿಕಿತ್ಸೆಗೆ ಸುಮಾರು 1200 ಹಾಸಿಗೆಗಳು ಬೇಕು. ಮೂರನೇ ಕ್ಷಯರೋಗ ಸೀಲ್ ಮಾರಾಟವು ಈಗ ಪ್ರಾರಂಭವಾಗಿದೆ. ಕ್ಷಯರೋಗದ ವಿರುದ್ಧದ ಈ ಯುದ್ಧದಲ್ಲಿ ಪಾಲುಗೊಳ್ಳಲು ಇದು ನಿಮಗೆ ಮತ್ತೊಂದು ಅನುವನ್ನು ಕೊಟ್ಟಿದೆ.

ಈ ಪವಿತ್ರ ದಿನಗಳಲ್ಲಿ ನಮ್ಮ ಭಾವನೆಯು ಕಾಯಿಲೆಯಿಂದ ನರಳುತ್ತಿರುವವರಿಗಾಗಿ ಈ ಸೀಲುಗಳ ರೂಪದಲ್ಲಿ ಮಾರ್ಪಡಲಿ. ಸಾಧ್ಯವಿದ್ದಷ್ಟು ಸೀಲುಗಳನ್ನು ಕೊಂಡುಕೊಳ್ಳಿರಿ. ಸೀಲು ಒಂದಕ್ಕೆ ಒಂದಾಣೆ ಮಾತ್ರ. ಇದು ಶಾಂತಿ, ಸಂತೋಷ ಮತ್ತು ಸಮಾಧಾನದ ಸಂಕೇತ.

ಹೊಸ ಸೀಲುಗಳಿಗಾಗಿ ಕೇಳಿರಿ.

ಸೀಲುಗಳು ಕೊಡಗು ಸಿವಿಲ್ ಸರ್ಜನರಿಂದಲೂ, ಸಂಸ್ಥಾನದ ಇತರ ಅಧಿಕೃತ ಏಜೆಂಟ ರಿಂದಲೂ ದೊರೆಯುತ್ತದೆ.

(ಈ ಜಾಹಿರಾತು ಸ್ಥಳವು ಸ್ಟೇಂಡಾರ್ಡ್ ವೇಕ್ಯೂಮ್ ಆಯಿಲ್ ಕಂಪೆನಿಯ ಕೃಪೆಯಿಂದ)

ಶ್ರೀ ಕಾವೇರಿ ಆಶ್ರಮ ತೀರ್ಥ ಪೂಜೆ.

ಡಿ. ಬಿ. ಕೆ. ಚಂಗಪ್ಪ ಇವರ ಭಾಷಣ.

ಈ ದಿನದ ಕಾರ್ಯಕ್ರಮಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿದಕ್ಕೆ ವಂದಿಸುತ್ತೇನೆ. ಶ್ರೀ ಕಾವೇರಿ ಆಶ್ರಮದವರು ಬಹಳ ಒಳ್ಳೆಯ ಕಾರ್ಯಗಳನ್ನು ಕೈಕೊಂಡಿದ್ದಾರೆ. ನನ್ನ ಕೈಕೆಳಗೆ ಹಲವಂದ ಆಶ್ರಮದವರು ಉದ್ಯೋಗ ಮಾಡುತ್ತಿದ್ದಾಗಲೇ ಅವರೊಬ್ಬ ಭಕ್ತರಾಗಿದ್ದರು. ಅವರಿಗೂ ನನಗೂ ಚೆನ್ನಾಗಿ ಪರಿಚಯವಿದೆ. ನಾನು ಒಬ್ಬ ಶ್ರೀ ಕಾವೇರಿ ಮಾತೆಯ ಭಕ್ತ. ನನ್ನ ಭಕ್ತಿಗೆ ಮುಖ್ಯ ಕಾರಣ ನನ್ನ ಶ್ರೀ ಮಾತೋಶ್ರೀಯವರು. ನನ್ನ ತಾಯಿ ದೇವರ ಭಕ್ತೆಯಾಗಿದ್ದಳು. ಆದ ಕಾರಣ ನನಗೂ ಭಕ್ತಿಯುಂಟಾಯಿತು. ಅದ್ದರಿಂದ ಸ್ತ್ರೀಯರೇ ಎಲ್ಲರಿಗೂ ಭಕ್ತಿಗೆ ಮೂಲ ಕಾರಣ. ನಾನು ಎಡೆಬಿಡದ ಇಪ್ಪತ್ತು ವರ್ಷ ತಲಕಾವೇರಿಯಲ್ಲಿ ತೀರ್ಥಸ್ನಾನ ಮಾಡಿರುತ್ತೇನೆ. ತುಲಾ ಸಂಕ್ರಮಣ ತೀರ್ಥೋದ್ಭವ ಕಾಲದಲ್ಲಿ ಕುಂಡಿಕೆಯಲ್ಲಿ ತೀರ್ಥ ಉದ್ಭವವಾಗುತ್ತದೆಯೋ ಎಂದು ಹಲವು ಸರ್ತಿ ಪರೀಕ್ಷಿಸಿ ನೋಡಿರುವೆನು. ಸತ್ಯವಾಗಿಯೂ ತೀರ್ಥೋದ್ಭವವಾಗುವುದನ್ನು ನಾನು ಕಣ್ಣಾರೆ ಕಂಡಿರುವೆನು. ಶ್ರೀ ಕಾವೇರಿ ಮಾತೆಯ ವಿಷಯ ಕೊಡಗಿನ ರಿಜಿಸ್ಟ್ರಾರಾದ ಶ್ರೀ ಪಿ. ಎಂ. ಚಂಗಪ್ಪನವರು ಒಂದು ಗಂಟೆಯ ವರೆಗೆ ಸ್ವಾರಸ್ಯವಾದ ಭಾಷಣ ಮಾಡಿರುವರು. ಅವರ ಭಾಷಣ ಇನ್ನೂ ಕೇಳಬೇಕೆಂದು ನನ್ನ ಮನಸ್ಸಿಗಾಗುತಿತ್ತು. ಅವರು ಶ್ರೀ ಕಾವೇರಿ ಮಾತೆಯು ನದೀ ಮೂಲಕ ಮಾಡುವ ಸೇವೆಯನ್ನೂ, ತೀರ್ಥದ ಮಹಿಮೆಯನ್ನೂ ಪಾರಮಾರ್ಥಿಕ ದೃಷ್ಟಿಯಿಂದ ಆಗುವ ಫಲವನ್ನೂ ನಮ್ಮೆಲ್ಲರ ಮನಸ್ಸಿಗೆ ಆನಂದವಾಗುವ ಹಾಗೆ ಅನೇಕ ವಿಷಯಗಳನ್ನು ವಿವರಿಸಿದರು. ಅವರು ನನ್ನ ಕಾಲದಲ್ಲಿ ಕೆಲವು ವಿಷಯಗಳನ್ನು ಎತ್ತಿ ಹೊಗಳಿದರು ಅದು ನನಗೆ ಸಲ್ಲತಕ್ಕದ್ದಲ್ಲ. ಮಹಾದೇವಿ ಶ್ರೀ ಕಾವೇರಿಗೆ ಸಲ್ಲತಕ್ಕದ್ದಾಗಿದೆ. ನಾನು ದೇವರ ಮುಂದೆ ನಿಂತು ಯಾವಾಗಲೂ ಹೀಗೆಂದು ಪ್ರಾರ್ಥಿಸುತ್ತಿರುವೆನು. ದೇವರೇ ನನ್ನ ಕೆಲಸ ಕಾರ್ಯಭಾರದಲ್ಲಿ ಯಾರಿಗೂ ನನ್ನಿಂದ ಕೆಡಕಾಗದಂತೆಯೂ ನೋವು ಉಂಟಾಗದಂತೆಯೂ ಮಾಡಬೇಕಾಗಿಯೂ ನನ್ನ ಕಡೆಯನ್ನು ಬೇರೆ ಕಾಪಾಡಬೇಕಾಗಿಯೂ ಯಾವಾಗಲೂ ನನ್ನನ್ನು ಒಳ್ಳೆದಾರಿಯಲ್ಲಿ ನಡೆಸಿಕೊಂಡು ಹೋಗಿ ಕಾಪಾಡಬೇಕಾಗಿಯೂ ಪ್ರಾರ್ಥಿಸುತ್ತಿರುವೆನು. ಹಾಗೆಯೇ ನನ್ನನ್ನು ಶ್ರೀ ಭಗವಂತನ ಕಾಪಾಡುತ್ತಾ ಬಂದಿರುತ್ತಾನೆ ನನಗೆ ಸಂಭವಿಸುತ್ತಿದ್ದ ಎಂಥಾ ಕಷ್ಟಕಾಲದಲ್ಲಿಯೂ ನಾನು ದೇವರನ್ನು ಮನಸ್ಸಾರೆ ನೆನೆಯುತ್ತಿರುವಾಗ ಅವನ ಅಪಾರ ದಯೆಯು ದೊರಕುತ್ತಿದ್ದುದು ನನ್ನ ಅನುಭವದಲ್ಲಿದೆ. ಸರ್ವರೂ ದೇವರನ್ನು ನೆನೆದು ಕೃತಾರ್ಥರಾಗಬೇಕು. ಒಳ್ಳೆ ಕಾರ್ಯಕಲಾಪಗಳನ್ನು ನಡೆಸುವವರಿಗೆ ಇಲ್ಲದ ಅಪಪ್ರಚಾರ ನಡೆಯುತ್ತದೆ. ಅದಕ್ಕೆಲ್ಲಾ ಶ್ರೀ ವಿಗ್ನಪಡದೆ ತಮ್ಮ ತಮ್ಮ ಉದ್ದೇಶವನ್ನು ನೆರವೇರಿಸಬೇಕು. ನನಗೆ ಶ್ರೀ ಕಾವೇರಿ ಆಶ್ರಮದಲ್ಲಿ ಶ್ರೀ ಕಾವೇರಿ ದೇವಿಯ ತೀರ್ಥ ಪೂಜೆಯಲ್ಲಿ ಕಿಕ್ಕಿರಿದು ನೆರೆದ ಜನಸ್ತೋಮ ನೋಡಿ ಬಹಳ ಆನಂದವಾಗಿದೆ. ಶ್ರೀ ಕಾವೇರಿ ಮಾತೆಯು ಆಶೀರ್ವದಿಸಿ ನಮ್ಮನ್ನೆಲ್ಲಾ ಕಾಪಾಡಲಿ.

—ಪಿ. ಹುಂ ಕರುಂಬಯ್ಯ,

ಸಮಾಜ ವಿಕಾಸ ಯೋಜನೆ.

ಲೇಖಕ-ಶ್ರೀ ಎಸ್. ಇನಾಮದಾರ, ಕಾಂಗ್ರೆಸ್ ಸೇವಾದಳ ಸಂಘಟಕ,
ಅ. ಭಾ. ಕಾಂ. ಕ. ಡಿಲ್ಲಿ.

ಸಮಾಜ ವಿಕಾಸ ಯೋಜನೆಗಳ ಕಾರ್ಯಾಚರಣೆಯು ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭವಾಗಬೇಕೆಂದು ಯೋಜನಾ ಆಯೋಗವು ನಿರ್ಧರಿಸಿದ ಮೇರೆಗೆ ಪ್ರಾಥಮಿಕ ನಿರೀಕ್ಷಣೆ ಹಾಗೂ ಸಮಾಜ ವಿಕಾಸ ಯೋಜನೆಗಳ ಪೂರ್ವಸಿದ್ಧತೆ ಪೂರ್ತಿಯಾಗಿ ಮುಗಿದ ಕ್ಷೇತ್ರಗಳಲ್ಲಿ ಗಾಂಧೀ ಜಯಂತಿಯ ದಿನ ಸಮಾಜ ವಿಕಾಸ ಯೋಜನೆಗಳ ಪ್ರಾರಂಭೋತ್ಸವವು ನೆರವೇರಿತು. ರಾಷ್ಟ್ರೀಯ ಪ್ರಗತಿ ಮತ್ತು ಸಂಪತ್ತಭಿವೃದ್ಧಿಯ ತಳಹದಿಯನ್ನು ಹಾಕಿದ ಶ್ರೇಯಸ್ಸು ಈ ಪ್ರಾರಂಭೋತ್ಸವಕ್ಕೆ ಬರಲಿ. ದೇಶದಲ್ಲಿಯ ದಾರಿದ್ರ್ಯವನ್ನು ಹೊಡೆದೋಡಿಸಿ ಸಂಪನ್ನತೆಯು ಎಲ್ಲೆಡೆಯಲ್ಲಿ ಹಬ್ಬುವಂತೆ ಮಾಡುವ ಈ ಮಹಾಕಾರ್ಯದಲ್ಲಿ ಪ್ರತಿಯೊಬ್ಬ ಭಾರತೀಯನೂ ನೆರವಾಗಲಿ. ತನ್ನ ಶಕ್ತಿ ಮೀರಿ ದುಡಿಯಲಿ ಮತ್ತು ಈ ರಾಷ್ಟ್ರೀಯ ಯೋಜನೆಯು ಯಶಸ್ವಿಯಾಗುವಂತೆ ಮಾಡಲಿ.

ಸಮಾಜ ವಿಕಾಸ ಯೋಜನೆಗಳ ಪರಿಜ್ಞಾನವು ಈಗ ಎಲ್ಲರಿಗೂ ಆಗಿದೆ. ಸಮಾಜ ವಿಕಾಸ ಯೋಜನೆಗಳ ಆಡಳಿತ ಸಂಸ್ಥೆಯವರು ಪ್ರಸಿದ್ಧಿಸಿದ ಪುಸ್ತಿಕೆಗಳಲ್ಲಿ ನಿರೂಪಿಸಿದ ರೀತಿಯ ಪ್ರಕಾರ ಈ ಯೋಜನೆಗಳ ಕಾರ್ಯಾಚರಣೆ ನಡೆಸಿರಿದೆ. ಈ ಯೋಜನೆಗಳ ಬಗ್ಗೆ ಕೆಲವೊಂದು ಸೂಚನೆಗಳನ್ನು ಈಗ ಮಾಡುವದು ಅಪ್ರಸ್ತುತವಾಗಲಿಕ್ಕಿಲ್ಲ.

ಯೋಜನೆಯ ರೂಪರೇಷೆಯು ಕರಡು ಸಮಾಜವಿಕಾಸ ಯೋಜನೆಯ. ಆಡಳಿತ ಸಂಸ್ಥೆಯವರು ಈಗ ಪ್ರಸಿದ್ಧಿಸಿದ ಪುಸ್ತಿಕೆಯಲ್ಲಿ ಸಮಾಜವಿಕಾಸ ಯೋಜನೆಗಳ ರೂಪರೇಷೆಗಳನ್ನು ಮಾತ್ರ ಕಾಣಿಸಲ್ಪಟ್ಟಿವೆ. ಈ ಯೋಜನೆಗಳ ತಳಹದಿಯಾಗಿರುವ ಸಾಧನಗಳನ್ನು ತಕ್ಕಮಟ್ಟಿಗೆ ವ್ಯಕ್ತಪಡಿಸಿದ ರೀತಿಯಲ್ಲಿ ಈ ಯೋಜನೆಗಳಲ್ಲಿ ಸೂಕ್ತವೆನಿಸುವ ಬದಲಾವಣೆ ಮಾಡಲು ಅವಕಾಶವಿರಿಯಬೇಕೆಂದು ತಿಳಿಸಬಯಸುವದು ದಾರಿಯಾಗಿದೆ. ಆದರಲ್ಲಿಯೂ ಸಮಾಜವಿಕಾಸ ಯೋಜನೆಗಳು ಯಶಸ್ವಿಯಾಗಲು ಜನರಲ್ಲಿ ಈ ಯೋಜನೆಗಳ ಬಗ್ಗೆ ಉತ್ಸಾಹ ತುಂಬಬೇಕಾದುದು ಅಗತ್ಯ. ಯೋಜನೆಗಳ ಕಾರ್ಯಾಚರಣೆಯ ಲ್ಲಿ ಪ್ರಾರಂಭದಿಂದಲೂ ಜನರು ಆಸಕ್ತಿ ವಹಿಸುವದಾದರೆ ಅವರಲ್ಲಿ ಯೋಜನೆಗಳ ಬಗ್ಗೆ ಆತ್ಮೀಯ ಭಾವನೆ ಹುಟ್ಟಿ ಉತ್ಸಾಹ ಕುಂದದೆ ಬರಬಹುದು. ಇದು ಶಕ್ಯವಾಗಲು ಯೋಜನೆಗಳ ರೂಪರೇಷೆಯು ಕರಡು ಸಿದ್ಧಪಡಿಸುವದರಲ್ಲಿಯೇ ಜನರು ಆಸಕ್ತಿ ವಹಿಸುವದಕ್ಕೆ ಅವಕಾಶವಿರುವದು ಇಷ್ಟ.

ಅಂಗಗಳ ಅನುಕ್ರಮ.

ಸಮಾಜ ವಿಕಾಸ ಯೋಜನೆಯ ರೂಪರೇಷೆಗಳನ್ನು ಈಗ ಪ್ರಸಿದ್ಧವಾದ ಕರಡಿನಲ್ಲಿ ಒಬ್ಬೇ ಅಚ್ಚುಕಟ್ಟಾಗಿಯೇ ಕಾಣಿಸಲಾಗಿದೆ. ಸಾಮಾಜಿಕ ಜೀವನದಲ್ಲಿ ಸಾಮೂಹಿಕ ಮನೋಭಾವನೆ, ಸಹಜೀವನದ ಸಾಗಿಸಲು ಇರಬೇಕೆಂದು ಅಪೇಕ್ಷಿಸುವ ಅಂಶಗಳನ್ನು ಅದರಲ್ಲಿ ಸಮಾವೇಶಗೊಳಿಸಿದ್ದು ಕಂಡುಬರುವದು. ಈ ಅಂಶಗಳನ್ನು ಕಾರ್ಯರೂಪಕ್ಕೆ ಇಳಿಸಲು ಕ್ರಮ ಕೈಕೊಳ್ಳುವಾಗ ಹಲವೊಂದು ಅಂಶಗಳ ಬಗ್ಗೆ ಒತ್ತುಕೊಡುವ ಮಹತ್ವ, ಹಾಗೂ ಅವುಗಳನ್ನು ಕೈಕೊಳ್ಳುವ ಕ್ರಮ ಇವುಗಳ ಬಗ್ಗೆ ಮಾತ್ರ ಭಿನ್ನಾಭಿಪ್ರಾಯ ಇರಲು ಅವಕಾಶವಿದೆ. ಯೋಜನೆಗಳ ಕಾರ್ಯಾಚರಣೆ. ವಿವರ, ಸಾಧನ, ಪರಸ್ಪರ ಸಂಬಂಧ, ಇವುಗಳನ್ನು ಸ್ಪಷ್ಟಗೊಳಿಸುವುದು ಚರ್ಚೆಯಿಂದ ಮಾತ್ರ ಸಾಧ್ಯ. ಈ ಉದ್ದೇಶದಿಂದ ಈ ಕ್ಷೇತ್ರದಲ್ಲಿ ಕಾರ್ಯಮಾಡಿದ ಹಾಗೂ ಮಾಡುತ್ತಿರುವ ಸರಕಾರೇತರ ಕಾರ್ಯಕರ್ತರನ್ನು ವಿಶ್ವಾಸದಲ್ಲಿ ತೆಗೆದುಕೊಳ್ಳುವದು ಯೋಗ್ಯ. ಜನತಾ ಕಲ್ಯಾಣ ರಾಜ್ಯಸ್ಥಾಪನೆಯೇ ಇಂಥ ಯೋಜನೆಗಳ ನಿರ್ದಿಷ್ಟವಾದ ಅಂತಿಮ ಗುರಿಯಾಗಿದೆ.

ಜನತಾ ಕಲ್ಯಾಣ ರಾಜ್ಯ.

ಜನರ ಜೀವನ ಮಟ್ಟವನ್ನು ಸುಧಾರಿಸುವದು, ಗರೀಬಿಯಿಂದ ಅವರ ಮುಕ್ತರಾಗುವದು, ರಾಜ್ಯದಲ್ಲಿ ಬಡತನ, ಅಜ್ಞಾನ, ರೋಗಗಳ ಪ್ರಮಾಣವು ತಗ್ಗುವಂತೆ ಮಾಡುವದು ಜನತಾ ಕಲ್ಯಾಣ ರಾಜ್ಯದ ಲಕ್ಷಣವಾಗಿದೆ. ರಾಜ್ಯದಲ್ಲಿಯ ಪ್ರತಿಯೊಬ್ಬ ನಾಗರಿಕನು ತನ್ನ ಕುಟುಂಬ ಪೋಷಣೆಗೆ ಯಾವದರೊಂದು ಉದ್ಯೋಗದಲ್ಲಿ ಕೆಲಸ ಮಾಡಲು ಅವಕಾಶ, ಮತ್ತು ಅವನು ಮಾಡುವ ಕೆಲಸದಿಂದ ದೊರೆಯುವ ಪ್ರತಿಫಲವು ಅವನ ಕುಟುಂಬದ ಪೋಷಣೆಗೆ ಅವಶ್ಯವಿದ್ದ ಅನ್ನ, ವಸ್ತ್ರ, ಹಾಗೂ ಔಷಧೋಪಚಾರ, ಶಿಕ್ಷಣ, ಮನೋರಂಜನೆ, ಇತ್ಯಾದಿಗಳಿಗೆ ಸಾಕಷ್ಟು ಇರಬೇಕು. ಯೋಜನಾ ಆಯೋಗದವರು ಸಿದ್ಧಪಡಿಸಿದ ಸಮಾಜ ವಿಕಾಸ ಯೋಜನೆಯು ಇಂಥ ಪರಿಸ್ಥಿತಿಯನ್ನು ನಿರ್ಮಿಸಲು ಸಹಾಯಕವಾದುದಾಗಿದೆ. ಯೋಜನೆಯು ಕ್ಷೇತ್ರವನ್ನು ವಿಸ್ತರಿಸಲು ಮಾರ್ಗದರ್ಶನ ಮಾಡಲು ಆಯುಕ್ತವಾಗ ಮಂತೆ ಮೊದಲು ಕೆಲವೊಂದು ಕ್ಷೇತ್ರಗಳಲ್ಲಿ ಈ ಯೋಜನೆಯ ಪ್ರಾಯೋಗಿಕ ಕೇಂದ್ರಗಳನ್ನು ಸ್ಥಾಪಿಸಬೇಕೆಂಬ ವಿಚಾರವು ಸರಿಯಾದುದು. ಯಾಕೆಂದರೆ ಒಂದು ಕ್ಷೇತ್ರದಲ್ಲಿ ಯೋಜನೆಯ ಕಾರ್ಯಾಚರಣೆಯಿಂದ ಕೆಲಸದಲ್ಲಿ ಬರುವ ತೊಂದರೆಗಳನ್ನು ಅರಿತುಕೊಳ್ಳುವ ಹಾಗೂ ಯೋಜನೆಯ ಕಾರ್ಯಕ್ಷೇತ್ರ ವಿಸ್ತರಿಸಿ ಕೆಲಸ ಪ್ರಾರಂಭಿಸಲು ಕಾರ್ಯಕರ್ತರಿಗೆ ಅನುಭವ ದೊರೆಯುವಂತಾಗಲು ಇದು ಸಹಾಯಕವಾಗುವದು.

ಸರಿಯಾದ ದೃಷ್ಟಿಕೋನ.

ಇಂಥ ಯೋಜನೆಗಳನ್ನು ಕೈಕೊಳ್ಳುವಾಗ ಕೆಳಗಿನ ಅಂಶಗಳು ಹೆಚ್ಚಿನ ಮಹತ್ವದವಿದ್ದು ಅವುಗಳ ಬಗ್ಗೆ ಕೂಲಂಕಷ ವಿಚಾರ ಮಾಡಬೇಕಾದ ಅಗತ್ಯವಿದೆ. ಯೋಜನೆಯ ಬಗ್ಗೆ ಇಟ್ಟುಕೊಳ್ಳಬೇಕಾದ ದೃಷ್ಟಿಕೋನ ಈ ಅಂಶಗಳಲ್ಲಿ ಅತ್ಯಂತ ಮಹತ್ವದ್ದು. ಸಮಸ್ಯೆಯನ್ನು ನೋಡುವ ದೃಷ್ಟಿಗನುಗುಣವಾಗಿ ಅದು ಭಿನ್ನವಾಗಿರುವದುಂಟು. ಬೇರೆ ಬೇರೆ ವ್ಯಕ್ತಿಗಳ ಸಾತ್ವಿಕ ಮನೋಭಾವನೆಯಂತೆ ಅವರು ಸಮಸ್ಯೆಯ ಬಗ್ಗೆ ತಳೆಯುವ ದೃಷ್ಟಿಕೋನವೂ ಭಿನ್ನವಾಗಿರುವದು ಸ್ವಾಭಾವಿಕ. ಜನತಾ ಕಲ್ಯಾಣ ಸಾಧನೆಯೇ ಯೋಜನೆಗಳ ಗುರಿಯಾಗಿದ್ದರೂ ಗುರಿಸಾಧಿಸುವ ಬಗ್ಗೆ ವ್ಯಕ್ತಿ ಅಥವಾ ಕೆಲವೊಂದು ವ್ಯಕ್ತಿಗಳ ಗುಂಪು ತಮ್ಮ ತಮ್ಮ ತಾತ್ವಿಕ ಭೂಮಿಕೆಗೆ ಅನುಗುಣವಾಗಿ ಭಿನ್ನವಾದ ದೃಷ್ಟಿಕೋನಗಳನ್ನು ಇಟ್ಟುಕೊಂಡಿರಬಹುದಾಗಿದೆ. ಸಮಸ್ಯೆಯನ್ನು ಬಿಡಿಸುವ ದೃಷ್ಟಿಕೋನವು ಸರಿಯಾದುದಾಗಿರದಿದ್ದರೆ ಸಮಸ್ಯೆಯನ್ನು ಬಿಡಿಸುವ ಹೊಣೆ ಹೊತ್ತವರಿಗೆ ತೃಪ್ತಿಕರವಾದ ರೀತಿಯಲ್ಲಿ ಸಮಸ್ಯೆಯನ್ನು ಬಿಡಿಸುವದು ಸಾಧ್ಯವಾಗದು.

ಸಮಸ್ಯೆಯನ್ನು ಬಿಡಿಸುವ ಬಗ್ಗೆ ಸರಿಯಾದ ದೃಷ್ಟಿಕೋನವಿಲ್ಲದೆ ಹೋಗಿದರೆ ಸಮಸ್ಯೆಯನ್ನು ಬಿಡಿಸುವ ಮಾರ್ಗದಲ್ಲಿ ಅನೇಕ ತೊಂದರೆಗಳು ಉದ್ಭವಿಸಿ ಅದನ್ನು ಯಶಸ್ವಿಯಾಗಿ ಬಿಡಿಸುವದೇ ಅಸಾಧ್ಯವಾಗಿ ಪರಿಣಮಿಸಬಹುದು. ಇಂದು ಸರಕಾರ ನಡೆಸುವ ಅಧಿಕಾರ ಸ್ಥಾನದಲ್ಲಿರುವವರು ಕಳೆದ ಕಾಲ್ಪನಿಕ ದೃಷ್ಟಿಕೋನಕ್ಕೆ ಸರಿಹೋಗುವಂಥ ವಿಕೇಂದ್ರೀಕರಣ, ಪ್ರಜಾಪ್ರಭುತ್ವ ಸಮ್ಮತ, ಜನರ ಒಪ್ಪಿಗೆಗೆ ಸರಿಹೋಗುವಂಥ ಧೋರಣೆಯನ್ನು ಸರಕಾರವು ಯಾವುದೇ ಸಮಸ್ಯೆ ಬಿಡಿಸಲು ತಳೆಯಬೇಕೆಂದು ಜನತೆಯು ಅಪೇಕ್ಷಿಸುವದು. ತಪ್ಪು ದೃಷ್ಟಿಕೋನದಿಂದ ಒಂದು ತಪ್ಪು ಹೆಜ್ಜೆ ಇಟ್ಟರೆ ಅದರಿಂದ ಸಾವಿರಾರು ತಪ್ಪುಗಳನ್ನು ಮಾಡುವ ಪ್ರಸಂಗ ಬರುವದು. ವಿದೇಶದ ಸಹಾಯದ ಮೇಲೆ ಅವಲಂಬಿಸದೆ ತನ್ನ ಕಾಲ ಮೇಲೆ ತಾನು ನಿಲ್ಲುವದು ನಮ್ಮ ದೇಶಕ್ಕೆ ಯೋಗ್ಯವೆನಿಸುವದು. ಎಲ್ಲ ಯೋಜನೆಗಳ ಕಾರ್ಯಾಚರಣೆಯಲ್ಲಿ ಸ್ವಾವಲಂಬನವು ನಮ್ಮ ಮಾರ್ಗದರ್ಶಕ ತತ್ವವಾಗಿರಬೇಕು. ಯೋಜನೆಗಳನ್ನು ಕಾರ್ಯರೂಪಕ್ಕಿಳಿಸುವ ಬಗ್ಗೆ ಶಕ್ಯವಿದ್ದಮಟ್ಟಿಗೆ ಸ್ಥಳೀಯ ಕಾರ್ಯಕರ್ತರನ್ನೇ ನೇಮಿಸುವದು ಅಗತ್ಯ. ಸ್ಥಳೀಯ ಕಾರ್ಯಕರ್ತರಿಲ್ಲದೆ ಯಾವ ಕೆಲಸವೂ ತೃಪ್ತಿಕರವಾಗಿ ನಡೆಯಲಾರದು. ಸಮಾಜ ವಿಕಾಸ ಯೋಜನೆಯು ಕ್ಷೇತ್ರದಲ್ಲಿ ತಾತ್ಪೂರ್ತಿಕವಾಗಿ ಕೆಲಸ ಮಾಡಲು ಬಂದ ಕಾರ್ಯಕರ್ತರು ಸ್ಥಳೀಯ ಜನರ ಮನಸ್ಸಿನ ಮೇಲೆ ಶಾಶ್ವತವಾಗಿ ಉಳಿಸುವಂಥ ಪರಿಣಾಮವನ್ನು ಮಾಡಲು ಶಕ್ತರಾಗಲಾರರು. ಇದಕ್ಕೆ ಹಲವಾರು ಕಾರಣಗಳೂ ಇವೆ. ಸ್ಥಳೀಯ ಜನರು ಯೋಜನೆಯಲ್ಲಿ ಆಸಕ್ತಿ ವಹಿಸದಿದ್ದರೆ ಸ್ಥಳೀಯ ಕಾರ್ಯಕರ್ತರು ಕೆಲಸ ಮಾಡಲು ಮುಂದೆ ಬರಲಾರರು. ವಾಸ್ತವವಾಗಿ ಸ್ಥಳೀಯ ಜನರಲ್ಲಿ ಯೋಜನೆಯ ಬಗ್ಗೆ ಆತ್ಮೀಯತೆ ಹುಟ್ಟಿಸುವದು ಅತ್ಯವಶ್ಯವಾದುದು.

ಪ್ರಚಾರ

ಜನರಲ್ಲಿ ತಮ್ಮ ಹಕ್ಕು ಹೊಣೆ, ಕರ್ತವ್ಯಗಳ ಜಾಗೃತಿಯುಂಟಾಗಲು ಶಿಕ್ಷಣ, ಅಥವಾ ಪ್ರಚಾರವು ಅಗತ್ಯವಾದುದೇನೋ ನಿಜ. ಆದರೆ ಪ್ರಚಾರಕ್ಕೆ ಒಂದು ಮಿತಿ ಇದೆ. ಒಂದು ವಸ್ತುವು ಉಪಯೋಗ್ಯವಾದುದಿರಬಹುದು. ಆದರೆ ಸಂಬಂಧಿಸಿದ ಜನರು ಅದನ್ನು ಪಡೆಯಲು ಇಚ್ಛಿಸದಿದ್ದರೆ ಅದು ನಿಷ್ಪ್ರಯೋಜಕವೆನಿಸುವದು. ಸ್ವಯಂಪ್ರೇರಣೆಯಿಂದ ಸ್ಥಳೀಯ ಜನರು ತಮ್ಮ ಧುರೀಣರ ಹಿರಿತನದಲ್ಲಿ ಕೆಲಸ ಮಾಡಲು ಮುಂದೆ ಸ್ವಾವಲಂಬನ ತತ್ವದ ತಳಹದಿಯ ಮೇಲೆ ಕೈಕೊಂಡ ಕಾರ್ಯವು ಯಾವಾಗಲೂ ಫಲಪ್ರದವಾಗುವದಲ್ಲದೆ ಸ್ಥಳೀಯ ಆರ್ಥಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗೆ ಹೊಂದಿಕೊಂಡಿರುವಂಥದ್ದಾಗುತ್ತದೆ. ಇಂಥಾ ಕಾರ್ಯದಿಂದ ಜನರಲ್ಲಿ ಜ್ಞಾನ, ಸಂಪತ್ತು ಬೆಳೆದು ವ್ಯಕ್ತಿ, ಸಮಾಜ ಮತ್ತು ರಾಷ್ಟ್ರೀಯ ಜೀವನವು ಉಚ್ಚಸ್ಥಿತಿಗೆ ಮುಟ್ಟುವದು.

ಇನ್ನು ಎರಡನೇ ಅಂಶವೆಂದರೆ ಉತ್ಸಾಹ. ಕೈಕೊಂಡ ಯೋಜನೆಯ ಬಗೆಗೆ ಜನರಲ್ಲಿ ಉತ್ಸಾಹ, ಅದನ್ನು ಯಶಸ್ವಿಗೊಳಿಸಬೇಕೆಂಬ ಪ್ರವೃತ್ತಿ, ಇಲ್ಲದೆ ಯೋಜನೆ ಸಂಸ್ಥೆ ಎಷ್ಟೇ ಅನುಕೂಲವಿದ್ದರೂ ಕೆಲಸದಲ್ಲಿ ಪ್ರಗತಿ, ಅಥವಾ ಯಶಸ್ಸು ದೊರೆಯಲಾರದು. ಸರಿಯಾದ ದೃಷ್ಟಿಕೋನದಿಂದ ಕಾರ್ಯಕರ್ತರಲ್ಲಿ ಉತ್ಸಾಹ ಪಡೆದೋರಬಹುದು. ಆದರೆ ಇಷ್ಟೇ ಸಾಲದು. ಪ್ರಕ್ರಿಯೆ ಸ್ವಂತ ಟೀಕೆ ಎಷ್ಟರಲ್ಲಿ ಸಹ ಹೃದಯವನ್ನು ಮುಟ್ಟುವಂತೆ ಅವನಲ್ಲಿ ಆಸ್ಥೆ ಹುಟ್ಟಿದೆ ಅವನ ಇಂದಿನ ಪ್ರವೃತ್ತಿನಾಗನು. ಅದರಿಂದ ತೀರ ಅಲ್ಪ ಪ್ರಮಾಣದಲ್ಲಿಯೇ ಆಗಲಿ ತಾತ್ಕಾಲಿಕ ಫಲದೊರೆಯುವಂತಾದರೆ ಜನರಲ್ಲಿ ಉತ್ಸಾಹವು ಹೆಚ್ಚುವದು.

ವಾಸ್ತವವಾಗಿ ಜನರಲ್ಲಿ ಉತ್ಸಾಹವನ್ನು ಹುಟ್ಟಿಸಲು ಅನುಕೂಲವಾದ ಪರಿಸ್ಥಿತಿಯನ್ನು ನಿರ್ಮಿಸುವದು ಕಾರ್ಯಕರ್ತರ ಕುಶಲತೆಯನ್ನೇ ಹೆಚ್ಚಾಗಿ ಅವಲಂಬಿಸಿರುವದು. ದೇಶದಲ್ಲಿ ಅಲ್ಪ ಮತ್ತು ಕೆಲಸದಲ್ಲಿ ಭಾಗವಹಿಸುವ ಪ್ರೋತ್ಸಾಹ ಕೊಡುವ ಪ್ರವೃತ್ತಿ ಇದ್ದೇ ಇದೆ. ಸರಕಾರದವರ ದೇಶದ [illegible] ಪಂಚವಾರ್ಷಿಕ ಯೋಜನೆ [illegible] ಇತರ ಯೋಜನೆಗಳ ಬಗ್ಗೆ [illegible] ಆಲೋಚನೆ ಮಾಡುತ್ತಿದ್ದರು [illegible] ಮನ ಪ್ರಶ್ನೆ [illegible] ಸಮರ್ಥ [illegible] ಜನರು ಈ ಯೋಜನೆಯಲ್ಲಿ [illegible] ದನ್ನು ತಿಳಿದುಕೊಳ್ಳುವ ಕುತೂಹಲವನ್ನು ತೋರುವದಿಲ್ಲವೆಂದೆನಿಸುವದು. ಇಂಥವರು ಈ ಯೋಜನೆಗಳ ಕಾರ್ಯಾಚರಣೆಯಲ್ಲಿ ಕೆಲಸ ಮಾಡುವದರಿಂದ ದೂರ ಉಳಿಯುತ್ತಾರೆ. ಜನರಲ್ಲಿ ಈ ಬಗೆಯ ಪ್ರವೃತ್ತಿ ಇರುವಾಗ ಈ ಯೋಜನೆಯ ಕಾರ್ಯಾಚರಣೆಯು ಕಠಿಣವಾದದ್ದೇ ಸರಿ. ಅಂತೆಯೇ ಯೋಜನೆಗಳನ್ನು ಸಿದ್ಧಪಡಿಸುವಲ್ಲಿ ತೊಡಗಿದವರೂ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸುವವರೆಂದು ಹೇಳಿಕೊಳ್ಳುವ ಜನರೂ ಜನರಲ್ಲಿ ಬೇರೂರಿದ ಈ ಪ್ರವೃತ್ತಿಯನ್ನು ಲಕ್ಷಿಸಬೇಕು. ಸರಕಾರೇತರ ಸಂಸ್ಥೆಗಳು ಮತ್ತು ಸಾರ್ವಜನಿಕ ಕಾರ್ಯಕರ್ತರು ಸರಕಾರಿ ಸಂಸ್ಥೆ ಹಾಗೂ ಅಧಿಕಾರಿಗಳಿಗಿಂತ ಜನರಲ್ಲಿ ಉತ್ಸಾಹ ಹುಟ್ಟಿಸಲು ಹೆಚ್ಚು ಯಶಸ್ವಿಗಳಾಗುವ

ಕೆಂಬುದು ಇಂದಿನ ವರೆಗಿನ ಅನುಭವದ ಪಾಠ. ಸಾರ್ವಜನಿಕರ ದುಡಿಮೆ, ಸಹಕಾರ, ಸಾಧನ ಸಂಪತ್ತು, ಇವುಗಳನ್ನು ಇಂಥ ಯೋಜನೆಗಳಿಗೆ ದೊರಕಿಸಬೇಕಿದ್ದರೆ ಜನರಲ್ಲಿ ಯೋಜನೆಗಳ ಬಗ್ಗೆ ಆಸಕ್ತಿ, ಉತ್ಸಾಹ, ಇವು ಹುಟ್ಟುವಂತೆ ನೋಡಿಕೊಳ್ಳಬೇಕು.

ಮೂರನೆಂ ಅಂತವೆಂದರೆ ವಿ.ತನ್ಯದು. ಭಾರತವು ಬಡ ದೇಶ. ದೇಶದಲ್ಲಿ ಅಭಿವೃದ್ಧಿ ಸಾಧಿಸಬೇಕಾದ ಹಳ್ಳಿಗಳ ಸಂಖ್ಯೆ ತೀರ ದೊಡ್ಡದು. ಆದುದರಿಂದ ಯಾವದೇ ಯೋಜನೆ ಅಥವಾ ಯೋಜನೆಯ ಅಂಗಗಳ ಬಗ್ಗೆ ಬಹಳ ಹಣ ವೆಚ್ಚ ಮಾಡುವಂತಿರಬಾರದು. ವಿಶೇಷವಾಗಿ ಯೋಜನೆಗಳ ಬಗ್ಗೆ ತಗಲುವ ಆವರ್ತ ವೆಚ್ಚವು ತೀರ ಕಡಿಮೆ ಇರಬೇಕು. ಸ್ವಯಂ ಪ್ರೇರಿತ ದುಡಿಮೆಗೆ ಉತ್ತೇಜನ ಕೊಟ್ಟು ಶಕ್ಯವಿದ್ದ ಮಟ್ಟಿಗೆ ಅದರ ಉಪಯೋಗ ಮಾಡಿಕೊಳ್ಳಬೇಕು. ಇದರಿಂದ ಯೋಜನೆಯ ವೆಚ್ಚವು ಕಡಿಮೆಯಾಗುವದಲ್ಲದೆ ಜನರಲ್ಲಿ ಇದು ನಾವು ಮಾಡಿದ ಕೆಲಸ. ಇದು ಚೆನ್ನಾಗಿರುವಂತೆ ನೋಡಿಕೊಳ್ಳುವದು ನಮ್ಮ ಹೊಣೆ ಎಂಬ ಭಾವನೆಯು ಜನರಲ್ಲಿ ಜಾಗೃತವಾಗುವದು.

ವಿದೇಶಗಳಲ್ಲಿಯ ಯೋಜನೆಗಳ ಅನುಕರಣ, ಮಾಂಗಣ, ಅಥವಾ ವೆಚ್ಚದ ಉಪಾಯ ಪದ್ಧತಿ ಇವು ನಮ್ಮ ದೇಶದಲ್ಲಿ ಉಪಯೋಗ ಬೀಳಲಾರವು. ಕೆಲವೊಂದು ಪ್ರದೇಶಗಳಲ್ಲಿ ಯೋಜನೆಗೆ ತಗಲುವ ವೆಚ್ಚದ ಅಂದಾಜಿನ ಒಂದು ಅಂಶದ ಭಾರವನ್ನು ಹೊರುವದು ಆಹ ಸ್ಥಳೀಯ ಜನರಿಗೆ ಅಸಾಧ್ಯವೆನಿಸುವದು ಸಂಭವನೀಯ ಸ್ಥಿತಿಯಾಗಿದೆ. ಪ್ರಾರಂಭದಲ್ಲಿ ಪ್ರತಿಯೊಂದು ಯೋಜನೆಯ ಬಗ್ಗೆ ಸರಕಾರವೇ ಕಲವೊಂದು ಹಣವನ್ನು ವೆಚ್ಚ ಮಾಡಬೇಕು. ಯೋಜನೆಯು ಪ್ರಗತಿ ಹೊಂದಿದಂತೆ ಜನರ ಆರ್ಥಿಕ ಸ್ಥಿತಿ ಸುಧಾರಿಸಿದಂತೆ ಜನರು ಯೋಜನೆಯ ವೆಚ್ಚದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಪಾಲಿನ ಹೊಣೆ ಹೊತ್ತು ಮುಂದೆ ಬರುವಂತೆ ನೋಡಿಕೊಳ್ಳುವದು ಯೋಗ್ಯ.

ಯೋಜನೆಯ ಕಾರ್ಯಾಚರಣೆಯ ಅಧಿಕಾರವ್ಯವಸ್ಥೆಯೂ ಮಹತ್ವದ ಅಂಶವೇ ಸರಿ. ಸಮಾಜ ವಿಕಾಸ ಯೋಜನೆಗಳ ಕಾರ್ಯಾಚರಣೆಯ ಬಗ್ಗೆ ಬೇರೆ ಬೇರೆ ಮಟ್ಟದ ಅಧಿಕಾರ ಮಂಡಳಿಗಳ ಏರ್ಪಾಟುಮಾಡಿದ್ದು ಯೋಜನೆಯ ಕರಡಿನಲ್ಲಿ ವಿವರಿಸಲಾಗಿದೆ. ಕಾರ್ಯಕರ್ತರಿಗೆ ಶಿಕ್ಷಣ ಕೊಡುವದು ಮಹತ್ವದ ಅಂಶವೆಂಬುದನ್ನೂ ಒಪ್ಪಿಕೊಳ್ಳಲಾಗಿದೆ. ಶಿಕ್ಷಣದಲ್ಲಿ ಮಹತ್ವದ ಅಂಶವೆಂದರೆ ಕಾರ್ಯಕರ್ತರಲ್ಲಿ ಯೋಜನೆಗಳ ಬಗ್ಗೆ ಸರಿಯಾದ ದೃಷ್ಟಿಕೋನ ಹಾಗೂ ಮನಸ್ಸಿನ ಪ್ರವೃತ್ತಿಯುಂಟಾಗುವಂತೆ ಮಾಡುವದೇ ಆಗಿದೆ. ಇದಾದ ನಂತರ ಕೆಲಸಗಾರರಲ್ಲಿ ಕಾರ್ಯಾಚರಣೆಯ ಕುಶಲತೆಯುಂಟಾಗುವಂತೆ ತರಬೇತಿ ಕೊಡುವದು ಬೇಕಾಗಿದೆ. ಈ ಎರಡು ವಿಷಯಗಳಲ್ಲಿ ಕಾರ್ಯಕರ್ತನಿಗೆ ಯೋಗ್ಯ ಶಿಕ್ಷಣ ದೊರೆತರೆ ಆವನು ಯಶಸ್ವೀ ಕಾರ್ಯಕರ್ತನಾಗುವದರಲ್ಲಿ ಸಂಶಯವಿಲ್ಲ. ಕನಿಷ್ಠ ಪಕ್ಷಕ್ಕೆ ಯೋಜನೆಗಳ ಕಾರ್ಯಾಚರಣೆ ಮಾಡುವ ಹೊಣೆ ಹೊತ್ತವರಾದರೂ ತಾವು ಕಾರ್ಯರೂಪಕ್ಕಿಳಿಸುವ ಯೋಜನೆಗಳ ಬಗ್ಗೆ ಸಂಪೂರ್ಣ ಜ್ಞಾನ, ಹಾಗೂ ಕಾರ್ಯರೂಪಕ್ಕಿಳಿಸುವ ಬಗ್ಗೆ ಸಂಪೂರ್ಣ ಶಿಕ್ಷಣ ಪಡೆದವರಾಗಿರಬೇಕು. ಕಾರ್ಯಕರ್ತನಿಗೆ ಶಿಕ್ಷಣಕೊಟ್ಟು ಅವನಲ್ಲಿ ಸೈನಿಕನ ಶಿಸ್ತು, ಕಾರ್ಯತತ್ಪರತೆ, ಕಾರ್ಯದ ನಿರ್ದಿಷ್ಟ ಸಂಪೂರ್ಣ ಜ್ಞಾನ ಬರುವಂತೆ ನೋಡಿಕೊಳ್ಳುವದೂ ಅಗತ್ಯವಿದೆ.

"ಜ್ಯೋತಿ: ದ"

— ೦()೦—

ಮಾರಾಟಕ್ಕಿದೆ.

ನಮ್ಮ ಬಾಪ್ತು ಮೂರ್ನಾಡು ಸಮೀಪ ಬಾಡಗ ಗ್ರಾಮದಲ್ಲಿರುವ ಅಂದಾಜು ೨೯ ಎಕ್ರೆ ಕಾಫಿ, ಕಿತ್ತಳೆ ವ್ಯವಸಾಯಕ್ಕೆ ಯೋಗ್ಯವಾದ ಬಾಣೆ ಜಾಗವೂ ಮತ್ತು ಅಂದಾಜು ೮ ಎಕ್ರೆ ಭೂಮಿಯೂ ಮೋಟಾರ್ ಸದಾ ನೀರಿರುವ ಕೆರೆಯೂ ಮಾರಾಟಕ್ಕಿವೆ. ಬೆಲೆ ರೂ. ೨೦,೦೦೦.

ಹೆಚ್ಚಿನ ವಿವರಗಳನ್ನು ಈ ಕೆಳಗಿನವರಿಂದ ತಿಳಿದುಕೊಳ್ಳಬಹುದು.

ಕೆ. ಪಿ. ಅಚ್ಚಪ್ಪ.
ಗಣೇಶ ಬಜಾರ್
ಮಡಿಕೇರಿ.

—

ಮಾ ರಾ ಟ ಕ್ಕಿ ದೆ.

ಚೆಟ್ಟಳ್ಳಿಯಲ್ಲಿರುವ ಇಂಡಿಯಾ ಕಾಫಿ ಪರಿಶೋಧನಾ ಶಾಖೆಯಲ್ಲಿ ಸುಮಾರು ಎಂಟು ವರ್ಷ ಪ್ರಾಯ ಉಳ್ಳ ಒಂದು ಜೊತೆ ಪುಷ್ಟಿಕರ ದೊಡ್ಡ ಗಾಡಿ ಎತ್ತುಗಳೂ ಒಂದು ರಬ್ಬರ್ ಚಕ್ರದ ಟೋಂಗಾ ಸಮೇತವಾಗಿಯೂ ಮಾರಾಟಕ್ಕಿವೆ. ಖರೀದಿದಾರರು ತಮ್ಮ ಟೆಂಡರುಗಳನ್ನು ಸೀಲ್ ಮಾಡಿದ ಲಕೋಟೆಯಲ್ಲಿ ನೂರು ರೂಪಾಯಿ ಡಿಪಾಸಿಟ್ ಹಣದೊಂದಿಗೆ ಎತ್ತುಗಳಿಗೆ ಬೇರೆಯಾಗಿಯೂ ಗಾಡಿ ಎತ್ತು ಎರಡಕ್ಕೂ ಜೊತೆಯಲ್ಲಿಯೂ ತಾ. ೧೫-೧೧-೫೨ ರೊಳಗೆ ಕಳುಹಿಸತಕ್ಕದ್ದು. ಟೆಂಡರ್ ಲಕೋಟೆಯ ಮೇಲೆ 'ಗಾಡಿ ಎತ್ತಿಗೆ ಟೆಂಡರು' ಎಂದು ನಮೂದಿಸಬೇಕು. ಟೆಂಡರುಗಳನ್ನು ತಾ. ೧೫-೧೧-೫೨ರ ಹಗಲು ೧೧ ಗಂಟೆಗೆ ತೆರೆಯಲಾಗುವುದು. ಈ ಕೆಳಗಿನ ವಿಳಾಸಕ್ಕೆ ಟೆಂಡರನ್ನು ಕಳುಹಿಸುವುದು.

ಸುಪರಿಂಟೆಂಡೆಂಟ್,
ಕಾಫಿ ಪರಿಶೋಧನಾ ಉಪ ಕೇಂದ್ರ, ಚೆಟ್ಟಳ್ಳಿ.

Edited, Printed and Published by P. I. Belliappa at
'Kodagu' Press, Mercara, for Kodagu L d.

BORGIA.

THE TREE KILLER AGAIN AVAILABLE.

We are pleased to announce that supplies of BORGIA TREE KILLER a famous and highly-efficient sodium arsenate preparation are now again available to our many clients who have ordered it in the past and whom we have had to disappoint until the completion of our new plant for the manufacture of this product. Deliveries are now available from ready stock at Rs. 8-12-0 per gallon; containers extra at cost. All orders will receive prompt attention.

HUNSUR WORKS,
HUNSUR P. O., MYSORE STATE.

"A" Class Pool Agents for the Indian Coffee Board; Coffee Curers; Suppliers and Dealers in raw and Roasted Coffee, Whole-sale and retail; Dealers in Cardamoms, Pepper and all other hill produce: Suppliers of all Estate Stores and requirements, including straight Fertilisers and Manure Mixtures: Sub-Agents for Coorg and Mysore for SOLIGNUM: Sole Distributors for Coorg and Mysore Planting area, for Albuquerque's SUN Brand Tiles: Stockists and distributors for Imperial Chemical Industries Ltd., Dunlop Rubber Co., Ltd., Geigy Insecticides, Burmah-Shell oil Storage and Distributing Co of India, Ltd: Engineering Workshop equipped to undertake repairs to moter transport and Estate machinery, particularly Pulphouse equipment.

ಬೋರ್ಗಿಯಾ.

ಮರಕೊಲ್ಲುವ ಔಷಧಿ ಈಗ ದೊರೆಯುತ್ತದೆ.

ಸೋಡಿಯಮ್ ಆರ್ಸೆನೇಟ್ ತಯಾರಿಯ ಅತೀ ಪರಿಣಾಮಕಾರಿಯಾದ ಬೋರ್ಗಿಯಾ ಮರಕೊಲ್ಲುವ ಔಷಧವು ಈಗ ಪುನಹ ದೊರೆಯುತ್ತದೆ. ಈ ಹಿಂದೆ ಆದಕ್ಕಾಗಿ ನಮಗೆ ಬರೆದ ನಮ್ಮ ಅನೇಕ ಗ್ರಾಹಕರಿಗೆ ಅದನ್ನು ತಯಾರಿಸುವ ನಮ್ಮ ಹೊಸ ಯಂತ್ರ ಸ್ಥಾಪನೆಯಾಗದೆ ನಿರಾಶರಾಗುವಂತೆ ಮಾಡಬೇಕಾಗಿ ಬಂದರೂ ಈಗ ಅದು ನಮ್ಮ ರೆಡಿ ಸ್ಟಾಕಿನಿಂದ ಗೆಲನಿಗೆ ರೂ. 8—12—0ರಂತೆ ದೊರೆಯುತ್ತದೆ. ಅದನ್ನು ಹಾಕಿ ಕೊಡುವ ಡಬ್ಬ ಪಾತ್ರೆಗಳಿಗೆ ಹೆಚ್ಚಿನ ಚಾರ್ಜು ಮಾಡಲಾಗುವದು. ಎಲ್ಲಾ ಆರ್ಡರುಗಳನ್ನೂ ತಕ್ಕ ಎಚ್ಚರಿಕೆಯಿಂದ ಗಮನಿಸಲಾಗುವದು.

ದಿ ಹುಣಸೂರು ವರ್ಕ್ಸ್,
ಹುಣಸೂರು ಪೋಸ್ಟ್, ಮೈಸೂರು.

ಇಂಡಿಯಾ ಕಾಫಿ ಬೋರ್ಡಿನ "ಎ" ತರಗತಿಯ ಪೂಲ್ ಏಜೆಂಟರು, ಕಾಫಿ ಶುದ್ಧ ಮಾಡುವವರು, ಸರಬರಾಯಿ ಮಾಡುವವರು, ಹಸಿ ಮತ್ತು ರೋಸ್ಟ್ ಮಾಡಿದ ಕಾಫಿಯ ರಖಂ ಮತ್ತು ಚಿಲ್ಲರೆ ವ್ಯಾಪಾರಸ್ಥರು, ಯಾಲಕ್ಕಿ ವ್ಯಾಪಾರಿಗಳು, ಒಳ್ಳೆ ಮೆಣಸು ಮತ್ತಿತರ ಬೆಟ್ಟ ಪ್ರದೇಶದ ಉತ್ಪನ್ನಗಳ ವ್ಯವಹಾರ ಮಾಡುವವರು, ತೋಟಗಳಿಗೆ ಸ್ಟೋರ್ಸ್ ಮತ್ತಿತರ ಬೇಡಿಕೆಗಳ ಗೊಬ್ಬರ ಮಿಶ್ರಣ, ಫರ್ಟಿಲೈಸರುಗಳನ್ನು ಸರಬರಾಯಿ ಮಾಡುವವರು, ಸೊಲಿಗ್ನಮ್ ಇದಕ್ಕೆ ಕೊಡಗು ಮತ್ತು ಮೈಸೂರಿಗೆ ಸೋಲ್ ಏಜೆಂಟರು, ಆಲ್ಬುಕರ್ಕರ ಸನ್ ಗುರ್ತಿನ ಹೆಂಚುಗಳನ್ನು ಕೊಡಗು ಮತ್ತು ಮೈಸೂರು ಪ್ಲಾಂಟಿಂಗ್ ಏರಿಯಾಕ್ಕೆ ಸರಬರಾಯಿ ಮಾಡುವವರು, ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ ಕಂಪೆನಿಯ, ಡನ್‌ಲಪ್ ರಬ್ಬರ್ ಕಂಪೆನಿಯ, ಜೇಗಿ ಕ್ರಿಮಿ ನಾಶಕಗಳ, ಇಂಡಿಯಾದ ಬರ್ಮಾಶೆಲ್ ಆಯಿಲ್ ಸ್ಟೋರೇಜ್ ಮತ್ತು ಡಿಸ್ಟ್ರಿಬ್ಯೂಟಿಂಗ್, ಕಂಪೆನಿಯ ಸ್ಟಾಕಿಸ್ಟರು ಮತ್ತು ವಿತರಣಗಾರರು, ಮೋಟಾರು ವಾಹನಗಳ, ತೋಟದ, ಪ್ರಾಮುಖ್ಯವಾಗಿ ಪಲ್ಪ್‌ಹೌಸ್ ಯಂತ್ರಗಳ ರಿಪೇರಿ ಮಾಡುವ ಇಂಜಿನೀಯರಿಂಗ್ ವರ್ಕ್ ಶಾಪಿನ ವ್ಯವಸ್ಥೆ ಮಾಡಿರುವವರು.

Licence No. 60.
Licenced to Post without Prepayment.

Reg. No. M. 1680.
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ಬಿ. ಬೆಳ್ಳಿಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಕು ೩೧-೧೦-೧೯೫೨ನೇ ಶುಕ್ರವಾರ | ಸಂಚಿಕೆ ೨೧

॥ ಮರೆಯುವ ಕಲೆ ॥

ಎಷ್ಟೋ ಮಂದಿ ಸ್ವಭಾವತಃ ಮರೆವಿಗಳಾಗಿರುವರು. ಅವರ ಸ್ಮರಣಶಕ್ತಿ ತೀವ್ರವಿರುವುದಿಲ್ಲ. ಹಲವು ಅತ್ಯಗತ್ಯದ ವಿಷಯಗಳನ್ನು ಮತ್ತು ಕೆಲಸಗಳನ್ನವರು ಮರೆತು ಬಿಡುವರು. ಮಾರ್ಗದಲ್ಲಿ ನಡೆಯುವಾಗ ಭೇಟಿಯಾದ ಮಹಾಶಯರು ನಮ್ಮನ್ನು ಗುರುತು ಪರಿಚಯ ದಿಂದಲೇ ಮಾತನಾಡಿಸಿದರು—ಅವರೊಡನೆ ಹಿಂದೆ ತಾವೆಂದು ಮಾತನಾಡಿದ್ದೆವೆಂದಾಗಲೀ ಅವರ ಹೆಸರೇನೆಂದೆ ಎಂದಾಗಲೀ ಪ್ರಯತ್ನಿಸಿದರೂ ನೆನಪಿಗೆ ಬರಲೊಲ್ಲದು. ಇಂಥ ವಿಚಿತ್ರಾವಸ್ಥೆಯನ್ನು ಪ್ರತಿನಿತ್ಯವೆಂಬಂತೆ ನಮ್ಮಲ್ಲಿ ಅನೇಕರು ಅನುಭವಿಸುತ್ತಿರಬಹುದ.

ಸ್ಮರಣ ಶಕ್ತಿಯು ಕಡಿಮೆ ಎಂಬುದಕ್ಕಾಗಿ ಅಳುವ ಜನರುಂಟು ಇದ್ದಾರೆ. ಒಬ್ಬರು ತಮ್ಮ ಮಿತ್ರರಿಗೆ ಮನೆಗೆ ಭೋಜನಕ್ಕೆ ಬರಬೇಕೆಂದು ಆಮಂತ್ರಣ ಕೊಟ್ಟರು. ಆದರೆ ಪೇಟೆಗೆ ಹೋದವರಿಗೆ ಇದು ಮರೆವೆಯಾಯಿತು. ಮಿತ್ರರು ಬಹಳ ಹೊತ್ತು ಕಾದು ನೋಡಿದರೂ ಇವರ ಸವಾರಿ ಮನೆಗೆ ಚಿತ್ತೈಸಲಿಲ್ಲ. ಹೀಗೆ ಕ್ಲೇಶ ಉಂಟಾಯಿತು. ಮತ್ತೊಬ್ಬರು ತಮ್ಮ ಸುಗುಣಿಯ ಜನ್ಮ ದಿನೋತ್ಸವ ಇಂದೆಂಬುದನ್ನು ಮರೆತರು. ಪತ್ನಿ ಇದರಿಂದ ಕೋಪಿತಗೊಂಡರು. ನಿಮ್ಮ ನಮ್ಮಂಥ ಸಾಮಾನ್ಯ ಜನರು ನಮ್ಮ ಕೈಯಲ್ಲಿ ಈಗ ಇದ್ದ ವಸ್ತುವನ್ನು ಎಲ್ಲಿ ಇಟ್ಟೆವೆಂದು ತಿಳಿಯದೆ ಪೇಚಾಡುವುದುಂಟು. ಪುಸ್ತಕ, ಕೊಡೆ ಮುಂತಾದ ವಸ್ತುಗಳು ಕಳೆದು ಹೋಗುವುದೇ ಮರೆವಿನ ಮಹಿಮೆಯಿಂದ. ಸದಾಕಾಲ ನೆನಪಿಡತಕ್ಕುದಾದ ಮಾತುಗಳನ್ನೆಷ್ಟೋ ಸಲಭದಲ್ಲಿ ಮರೆತು ಬಿಡುತ್ತೇವೆ. ಹಾಗೆಂದು ಮರೆತು ಬಿಡುವುದರಿಂದಲೇ ಹಿತವಿರುವ ಹಲವು ಸಂಗತಿಗಳು, ನೆನಪಿನಿಂದ ಜಾರುವುದಿಲ್ಲ! ಇದು ತುಂಬ ವಿಚಿತ್ರ—ಯಥಾರ್ಥ ಕಲಹ ವೈಮನಸ್ಯವಾದರೆ, ದುಃಖ, ನೋವು, ಬೇನೆ, ದ್ವೇಷ, ಮತ್ಸರ ಮುಂತಾದ ಕೆಟ್ಟ ಭಾವನೆಗಳನ್ನು ಪ್ರಚೋದಿಸುವ ಪ್ರತಿಯೊಂದನ್ನು ಮರೆತು ಬಿಡುವುದೊಳಿತು. ಅದರಲ್ಲೇ ಹಿತವಿದೆ.

ಮರೆಯುವುದು ಮನುಷ್ಯ ಮಾತ್ರದವರಿಗೆ ಸ್ವಾಭಾವಿಕವಾಗಿದೆ. ಮರೆವಿಗಾಗಿ ಪ್ರತ್ಯೇಕದ ಅಗತ್ಯವಿಲ್ಲ—ಸಮಯವೇ ಮರೆವುಂಟುಮಾಡುತ್ತದೆ. ಇಂಗ್ಲೀಷು ಗಾದೆಯೊಂದು, ಸಮಯವು ಸಂಜೀವಿನಿ ಎಂದು ಹೇಳುತ್ತದೆ. ಸಮಯ ನಮಗೆ ಹೊಸ ಅನುಭವಗಳನ್ನೂ ಸುಖ ಸ್ಮೃತಿಯನ್ನೂ ಉಂಟುಮಾಡುವುದಾದ್ದರಿಂದ, ದುಃಖದಾಯಿ ಘಟನೆಗಳು ಮರೆತು ಹೋಗುತ್ತವೆ. ನಮ್ಮ ಮನಸ್ಸು ಯಾವಾಗಲೂ ಸುಖಾಕಾಂಕ್ಷಿಯಾಗಿರುತ್ತದೆ. ಆದುದರಿಂದ, ಅವಕಾಶ ದೊರೆತ ಕಡೆಗೆಲ್ಲ ಸುಖ ಸ್ಮೃತಿಯನ್ನೇ ಅದು ತನ್ನಲ್ಲಿ ತುಂಬಿಕೊಳ್ಳುತ್ತದೆ. ಹಾಗೆಂದು, ಸ್ಮರಣ ಶಕ್ತಿಗೆ ಕೆಲವು ದುಃಖ ಘಟನೆಗಳನ್ನು ಮರೆತು ಬಿಡುವ ಸಾಮರ್ಥ್ಯ ಇಲ್ಲದಿರುವುದರಿಂದ— ನೆನಪು ಒಂದು ಬಾಧೆಯಾಗಿ ಪರಿಣಮಿಸುತ್ತದೆ. ಅದಕ್ಕೇ ಮರೆಯುವುದನ್ನು ಕಲೆ ಎಂದು ಭಾವಿಸಿ, ಮನಸ್ಸಿಗೆ ತರಬೇತಿ ಕೊಡಬೇಕು ಎನ್ನುವುದು.

ದುಃಖದ ಘಟನೆಯನ್ನು ಮರೆಯುವುದರಲ್ಲಿ ಸಾಫಲ್ಯಪಡೆಯದಿದ್ದರೂ, ಅದನ್ನು ಸ್ಮರಿಸುವ ವ್ಯರ್ಥ ಶ್ರಮಕ್ಕೆ ಮಾತ್ರ ಸರ್ವಥಾ ಕೈಹಾಕಲಾಗದು. ದುಃಖಪ್ರದ ಘಟನೆಯ ನೆನಪು ನಮ್ಮ ವ್ಯಕ್ತಿತ್ವದ ಮೇಲೆ ಆಘಾತ ಮಾಡಲು ಎಡೆಕೊಡಬಾರದು. ದುಃಖ ಸ್ಮೃತಿ ಸಾಮಾನ್ಯ ಸ್ಮೃತಿಯಷ್ಟು ಸೌಮ್ಯವಿರದೆ, ಮಸ್ತಿಷ್ಕದ ಸಮತೋಲವನ್ನು ಕೆಡಿಸಿ, ಮಾನಸಿಕ ಕ್ಲೇಶವನ್ನು ಉಲ್ಬಣಾವಸ್ಥೆಗೆ ಮುಟ್ಟಿಸುತ್ತದೆ. ನಮಗೆ ಯಾರಾದರೂ ಹಿಂದೊಮ್ಮೆ ದ್ರೋಹ ಮಾಡಿದ್ದರೆನ್ನೋಣ. ಅದರ ಸ್ಮರಣೆ ಈಗ ನಮ ಗಾದರೆ ಸಾಕು— ವೈಷಮ್ಯದಿಂದ ಮನಸ್ಸು ಬಿಸಿಗೊಂಡು ದ್ವೇಷಾಗ್ನಿ ಪ್ರಜ್ವಲಿತವಾಗುತ್ತದೆ. ಈ ವಿಷಯಂತ ಭಾವ ಮಾನಸಿಕ ಶಾಂತಿಗೆ, ಶಾರೀರಿಕ ಸ್ವಾಸ್ಥ್ಯಕ್ಕೆ, ಸ್ನಾಯುವಿನ ದಾರ್ಢ್ಯಕ್ಕೆ, ವ್ಯಕ್ತಿತ್ವದ ನೆಲಗಟ್ಟಿಗೆ ಆಘಾತವುಂಟುಮಾಡುವುದು ನಿಶ್ಚಯ.

ಮರೆಯಲು ಯೋಗ್ಯವಾದ ದುಃಖ ಸ್ಮೃತಿಗಳು ನಮ್ಮನ್ನು ಕ್ರೂರಿಗಳಾಗಿ, ವಿದ್ರೋಹಿಗಳಾಗಿ ಪರಿವರ್ತಿಸುತ್ತವೆ. ಮಾಯ್ಕಗೆ ಮಾಯ್ಕ ತೀರಿಸುವ ಉದ್ರೇಕದಿಂದ ಸದಾ ಹೊಂಚು ಹಾಕುತ್ತಿರಲು ನಮ್ಮನ್ನವು ಪ್ರೇರಿಸುತ್ತವೆ. ಆತ್ಮಗ್ಲಾನಿ ಹಾಗೂ ಆತ್ಮಶ್ಲಾಘನೆಯ ರೂಪದಲ್ಲಿ ಹೃದಯದ ಸದ್ಭಾವನೆಯನ್ನು ಕಮರಿಸುತ್ತವೆ. ಎಷ್ಟೋ ಮಂದಿ ತಿಳಿದೋ ತಿಳಿಯದೆಯೋ ಈ ಅನಪೇಕ್ಷಿತ ಭಾವನೆಗಳಿಗೆ ಮನಸ್ಸಿನಲ್ಲಿ ಆಶ್ರಯ ಕೊಡುತ್ತಾರೆ. ಇದರಿಂದ ನಮ್ಮ ಸ್ವಭಾವ ಹಾಗೂ ವ್ಯವಹಾರದಲ್ಲಿ ಅನಪೇಕ್ಷಿತ ಗೊಂದಲವೇರ್ಪಡುತ್ತದೆ. ಸಮಯ ದುಃಖ ಸ್ಮೃತಿಯಿಂದಾದ ಗಾಯವನ್ನು ತುಂಬುತ್ತದ ಹೌದು; ಆದರೆಷ್ಟೋ ಮಂದಿಗೆ ಈ ಗಾಯವನ್ನು ಪದೇ ಪದೇ ಮುಟ್ಟಿ ಕೆರೆದು, ನೋವನ್ನು ಅನುಭವಿಸುವುದೇ ಸಂತೋಷಪ್ರದವೆಂದು ತೋರುತ್ತದೆ.

ವಿಶಾಲಾನುಭವನ್ನು ಕಾರಣವಾದ ಕಲ್ಪಿತ ಭಾವನೆಗಳಿಂದ ಮುಕ್ತಿ ದೊರೆಯಲು ಒಂದೇ ಒಂದು ಮಾರ್ಗವೆಂದರೆ, ಮರೆವು. ಹಾಗೆಂದು ಒಂದು ಪ್ರಸಂಗವನ್ನು ಇದ್ದಕ್ಕಿದ್ದ ಹಾಗೆ ಮರೆತು ಬಿಡುವುದು ಸುಲಭವಲ್ಲ. ಮರೆಯುವುದನ್ನು ಕಲಿಯಬೇಕಾಗುತ್ತದೆ; ಅದನ್ನು ಅಭ್ಯಾಸ ಮಾಡಿಕೊಳ್ಳಬೇಕಾಗುತ್ತದೆ. 'ಕಟು ಅನುಭವಗಳನ್ನು ಮರೆಯಲಾರೆ' ಎನ್ನುವಾತ ತಪ್ಪು ಮಾಡುತ್ತಾನೆ. ಹೀಗೆ ಹೇಳಿ, ತನ್ನ ಮನಸ್ಸಿನ ಮೇಲೆ ಇಚ್ಛಾಶಕ್ತಿಯ ಪ್ರಭುತ್ವ ನಡೆಯುವುದಿಲ್ಲ ಎಂದವನು ಅಪರೋಕ್ಷವಾಗಿ ಸಿದ್ಧಪಡಿಸುತ್ತಾನೆ. ಇಚ್ಛಾಶಕ್ತಿಯನ್ನು ಬಲಪಡಿಸುವುದಕ್ಕೆ ನಿರಂತರ ಅಭ್ಯಾಸ ತುಂಬ ಸಹಕಾರಿಯಾಗಿದೆ.

ಒಬ್ಬ ಪ್ರಸಿದ್ಧ ವಿಜ್ಞಾನಿಗೆ ತನ್ನ ನೌಕರನ ಮೇಲೆ ಅತಿಶಯ ವಿಶ್ವಾಸವಿತ್ತು. ಎಷ್ಟೋ ಸಮಯದ ಬಳಿಕ, ಆ ನೌಕರ ಸದಾಕಾಲ ತನಗರಿಯದಂತೆ ಮೋಸಮಾಡುತ್ತಾ ಬಂದಿದ್ದನೆಂದು ವಿಜ್ಞಾನಿಗೆ ತಿಳಿಯಿತು. ಇದರಿಂದ ದುಃಖಿತನಾದ ವಿಜ್ಞಾನಿ ನೌಕರನನ್ನು ಒಡನೆಯೇ ಕೆಲಸದಿಂದ ತೆಗೆದು ಹಾಕಿದ. ಆದರೆ, ನೌಕರನಿಲ್ಲದೆ ವಿಜ್ಞಾನಿಯ ಕೆಲಸ ಸಾಗುವುದು ಕಷ್ಟವೆನಿಸಿತು. ಈ ಅನುಭವನನ್ನು ಬಣ್ಣಿಸುತ್ತಾ ವಿಜ್ಞಾನಿ ತನ್ನ ದಿನಚರಿಯಲ್ಲಿ ಈ ಮಾತು ಬರೆಯುತ್ತಾನೆ—'ಪೀಟರನನ್ನು (ಇದು ನೌಕರನ ಹೆಸರು) ಮರೆಯಬೇಕೆಂಬುದು ನೆನಪಿರಲಿ!'

'ಮರೆಯುವುದು ನೆನಪಿರಲಿ' ಎಂಬ ಸೊಲ್ಲು ಬಹಳ ಮಹತ್ವದಿಂದ ಕೂಡಿದೆ. ಮರೆಯುವಾಗ ನಾವು ಸ್ಮರಣಶಕ್ತಿಯ ತಿರುಗಾಮುರುಗಾ ಉಪಯೋಗ ಮಾಡುತ್ತೇವೆ. ಒಂದು ವಿಷಯದ ಸ್ಮರಣೆ ಜಾಗೃತವಾಗಬೇಕಾದರೆ, ಅದಕ್ಕೆ ಸಂಬಂಧಿಸಿದ ಎಲ್ಲ ಸಂಗತಿಯನ್ನು ಮನೋಪಟಲದ ಮೇಲೆ ಬಿಡದೆ ಮೂಡಿಸಲು ಪ್ರಯತ್ನ ಪಡುತ್ತೇವಷ್ಟೆ! ತದ್ವಿರುದ್ಧ ಸಡದರೆ ಸಾಕು, ನಿರಾಯಾಸವಾಗಿ ಮರೆತು ಬಿಡಬಲ್ಲೆವು. ಒಂದು ವೇಳೆ ಸಾಮಾನ್ಯ ಸಂಗತಿಯಂತೆ ಒಂದು ಘಟನೆ ಇನ್ನೂ ನೆನಪಿನಲ್ಲಿ ಉಳಿದರೂ, ಆ ಕಡೆ ಲಕ್ಷ್ಯ ಕೊಡದಿದ್ದರೆ, ಅದು ಅಪ್ರಿಯವೆನಿಸುತ್ತಿದೆ,

ನಮ್ಮ ಮನಸ್ಸಿನಲ್ಲೊಂದು ರಹಸ್ಯ ಸ್ಥಳದಲ್ಲಿ ವಿನೋದ ಘಟನೆಗಳ, ಹಾಸ್ಯಜನಕ ಪರಿಸ್ಥಿತಿ, ಮನೋರಂಜಕ ಮಾತುಕತೆಯ ಸ್ಮರಣೆಯನ್ನು ಮುಚ್ಚಿಡುವ ಅಭ್ಯಾಸ ಮಾಡಬೇಕು. ನಮಗೆ ಅಗತ್ಯವೆನಿಸಿದಾಗ, ಅವುಗಳನ್ನು ಹೊರತೆಗೆದು ಉಪಯೋಗಿಸುವಂತಿರಬೇಕು. ಇಲ್ಲಿ ಮುಚ್ಚಿಟ್ಟ ವಿಷಯಗಳಿಗೆ ನಮ್ಮ ಮನಃ ಶಕ್ತಿಯನ್ನು ತನ್ನೆಡೆಗೆ ಆಕರ್ಷಿಸಿ ಪ್ರಭಾವಿತವನ್ನಾಗಿ ಮಾಡುವ ಸಾಮರ್ಥ್ಯ ಇರಬೇಕು. ನಮ್ಮಲ್ಲಿ ಪ್ರತಿಯೊಬ್ಬರ ದೈನಂದಿನ ಅನುಭವಗಳಿಂದಲೇ ಈ ವಿಶೇಷ ಸಂಗ್ರಹವನ್ನು ಮಾಡಬಹುದು. ಮದುವೆಯ ಮೋಜು, ರಜಾ ದಿನದ ವಿನೋದ, ಸಿನೆಮಾ ಕಥೆ ಇತ್ಯಾದಿಗಳು ಮನೋರಂಜನೆಗೆ ಹೇಳಿದ ಸಾಮಗ್ರಿ.

ಮರೆಯಲು ಪ್ರಯತ್ನಿಸುವುದು ಪ್ರಕೃತಿಗೆ ವಿರುದ್ಧ ಕಾರ್ಯವಲ್ಲ. ಅದು ಕಾಲವಿಧಾನ. ಮರೆವು ಪ್ರಕೃತಿ ನಿಯಮಗಳಲ್ಲಿ ಒಂದು. ಒಂದು ಸ್ಮೃತಿಯನ್ನು ಗೃಹೀತ ಪೂರ್ವಕ ಮನಸ್ಸಿನಿಂದ ಹೊರತಳ್ಳಿ ಬಿಟ್ಟದ್ದೇ ಆದರೆ, ಮತ್ತೆಂದೂ ನಮ್ಮ ಬಳಿ ಸುಳಿಯಲು ಅದಕ್ಕೆ ಧೈರ್ಯವಾಗುವುದಿಲ್ಲ. ಪ್ರತಿಯೊಂದೂ ಅನುಭವವು ನಮ್ಮ ಹಿತಕ್ಕೇ ಆಗಿಲ್ಲವಾದರೆ, ಅದನ್ನು ಸಹಿಸುವುದು ಕಷ್ಟ. ಆದುದರಿಂದ ವ್ಯರ್ಥ ಸ್ಮೃತಿಯನ್ನು ಮರೆಯುವುದೇ ಬುದ್ಧಿವಂತಿಕೆ. ಸ್ಮರಣಶಕ್ತಿಯ ತುಂಬ ಸಂತೋಷ ಜನಕ ಘಟನೆಗಳಿರಲಿ—ಆ ಹೂದೋಟದಲ್ಲಿ ದುಃಖ ಸ್ಮೃತಿಯ ಹುಲ್ಲು—ಹಾವಸೆಗಳ ಸುಳಿವೂ ಇರದಿರಲಿ! "ನವಯುಗದಿಂದ"

ವಿಚಿತ್ರ.

ತಲೆಯ ಕೂದಲನ್ನು ಕತ್ತರಿಸಿದಂತೆ ಅದನ್ನು ನೆಲಕ್ಕೆ ಬೀಳಗೊಡದೆ ತನ್ನಲ್ಲಿಯೇ ಹಿಡಿದಿಟ್ಟುಕೊಳ್ಳುವ ಕತ್ತರಿಯೊಂದನ್ನು ಅಮೇರಿಕೆಯ ಓರ್ವ ಶೋಧಕನು ತಯಾರಿಸಿದ್ದಾನೆ.

ಇನ್ನೊಬ್ಬ ಅಮೇರಿಕನ್ನನು ಕೊಡೆಯನ್ನು ಹಿಡಿದುಕೊಳ್ಳುವಂಥ ಸೊಂಟಕ್ಕೆ ಹಾಕುವ ತೊಗಲಿನ ಪಟ್ಟಿಯೊಂದನ್ನು ತಯಾರಿಸಿದ್ದಾನೆ.

ಮತ್ತೊಬ್ಬನು, ಸಿಗರೇಟು ಸೇದುತ್ತಿರುವಾಗ ನಿದ್ದೆ ಬಂದೊಡನೆ ತಾನಾಗಿಯೇ ಸಿಗರೇಟು ನಂದಿಹೋಗುವಂತೆ ಮಾಡುವ ಸಿಗರೇಟ ಹೋಲ್ಡರ್ ಒಂದನ್ನು ಶೋಧಿಸಿದ್ದಾನೆ.

ಗುಂಡಿನೇಟು ಸಹಿಸುವ ಕವಚ.

ಬಂದೂಕಿನ ಗುಂಡುಗಳ ಹೊಡೆತವನ್ನು ತಾಳಿಕೊಳ್ಳಬಲ್ಲ ಕವಚಗಳನ್ನು ತಯಾರಿಸಲು ಬ್ರಿಟನ್ನಿನಲ್ಲಿಯ ಸಂಶೋಧಕರು ತುಂಬಾ ಸಾಹಸಪಡುತ್ತಿದ್ದಾರೆ. ಬ್ರಿಟಿಸ್ ಸೈನ್ಯಕ್ಕಾಗಿ ಆಗ ಬೇಕಾಗಿರುವ ಮಾದರಿಯ ೧ ಲಕ್ಷ ಕವಚಗಳನ್ನು ಸರಕಾರವು ಕರೆದಿದೆ. ಈ ಕವಚಗಳು ಅಮೇರಿಕೆಯಲ್ಲಿ ತಯಾರಾದವುಗಳಿದ್ದು ಅವು ಕೊರಿಯಾ ರಣರಂಗದಲ್ಲಿ ಸಾವಿರಾರು ಪ್ರಾಣಗಳನ್ನು ರಕ್ಷಿಸಿವೆಯೆಂದು ಹೇಳಲಾಗುತ್ತಿದೆ. ಈ ಕವಚಗಳು ಬಾಂಬು ಮೊದಲಾದವುಗಳೂ ಸ್ಫೋಟವಾದಾಗ ಅವುಗಳಿಂದ ಹಾರುವ ಗುಂಡು ಮೊದಲಾದವುಗಳ ತುಣುಕುಗಳಿಂದ ಮನುಷ್ಯನನ್ನು ರಕ್ಷಿಸುತ್ತವೆಯೆಂದು ಹೇಳಲಾಗುತ್ತಿದೆ.

ನಿಜವಾದ ವಿದ್ಯಾರ್ಥಿ.

ಲೇಖಕ:- ಶ್ರೀ ಸಿ. ಬಿ. ಅಪ್ಪಚ್ಚು, ಜೂನಿಯರ್ ಇಂಟರ್ ಮೀಡಿಯೆಟ್ ಮಡಿಕೇರಿ.

ವಿದ್ಯಾರ್ಥಿ ಎಂಬ ನಾಮವು ವಿದ್ಯಾ + ಅರ್ಥಿ ಎಂಬ ಪದಗಳ ಜೋಡಣೆಯಿಂದಾಗಿದೆ. ವಿದ್ಯೆಯನ್ನು ಅರ್ಜಿಸುವವನು ಯಾವನೋ ಅವನು ವಿದ್ಯಾರ್ಥಿ. ಸಾಮಾನ್ಯನೆ ಜನರಿಗೆ ಕಾಣುವಂತೆ ಓದುವಂತೆ ನಟಿಸಿ ಶಾಲೆಗೆ ಯಾ ಕಾಲೇಜಿಗೆ ಹೋಗುವರೆಲ್ಲ ನಿಜವಾಗಿಯೂ ವಿದ್ಯಾರ್ಥಿ ಎನಿಸಿಕೊಳ್ಳಬೇಕಾದರೆ ತಾನು ಓದಿದನ್ನು ಮನಸ್ಸಿನಲ್ಲಿಟ್ಟು ಅದನ್ನು ಕಾರ್ಯರೂಪಕ್ಕೆ ತರಬೇಕು. ವಿದ್ಯೆಯು ಪುಸ್ತಕ ಓದುವುದರಿಂದಲೇ ಬರುವುದು ಎನ್ನುವ ವಿಷಯವು ಖರೇ ಪೊಳ್ಳು. ಒಳ್ಳೆಯ ಬಟ್ಟೆ, ತಲೆಗೆ ಹೇರ್ ಆಯಿಲ್ ಹಾಕಿ ಬಾಚಿ ಟ್ರಿಂ ಆಗಿ ನಡೆಯುವುದು ವಿದ್ಯೆಯಲ್ಲ. ನಿಜವಾದ ವಿದ್ಯಾರ್ಥಿ ಎಂದರೆ ತಾನು ಪರರಿಗೆ ಪರರು ತನಗೆ ಎಂಬ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರಪಂಚದ ಕಲ್ಯಾಣಕ್ಕೆ ಸಹಕಾರಿಯಾಗುವುದು.

ಪೂರ್ವ ಕಾಲದಲ್ಲಿ ವಿದ್ಯೆಯು ಬಹು ವಿಧವಾಗಿ ಬೋಧಿಸಲ್ಪಡುತಿತ್ತು. ಪೂರ್ವ ವಿದ್ಯಾರ್ಥಿಗಳು ಗುರುಕುಲದಲ್ಲಿ ವಿದ್ಯೆಯನ್ನು ಕಲಿಯಬೇಕಿತ್ತು. ಗುರುವು ಹೇಳಿಕೊಟ್ಟ ಪ್ರತಿಯೊಂದು ಅಂಶವನ್ನು ಮನನಿಸುತ್ತಿದ್ದರು. ಅಂದಿನ ವಿದ್ಯಾರ್ಥಿಗಳಿಗೆ ಅಷ್ಟು ಜ್ಞಾಪಕಶಕ್ತಿ ಇತ್ತು. ಈಗ ಒಂದು ಸಂತೆ ಪಟ್ಟಿಗೂ ಕಾಗದ ಬರೆದೇ ಆಗಬೇಕು. ಉಪನಿಷತ್ತಿನಲ್ಲಿ ನಚಿಕೇತನು ಯಮದೇವರಲ್ಲಿ ಹೇಗೆ ವಿದ್ಯಾರ್ಜನೆ ಮಾಡಿದನು. ಮತ್ತು ಅವನು ಸಾಧಿಸಿದ ವಿದ್ಯೆಯ ಫಲವೇ ಅಗ್ನಿ ವಿದ್ಯೆ. ಇದರಿಂದ ಅವನು ಲೋಕಕ್ಕೆ ಮರಣದನಂತರ ಆತ್ಮದ ಚರಿತ್ರೆಯನ್ನು ಯಮನಿಂದ ಅರಿತು ಅದನ್ನು ಪ್ರಚುರಪಡಿಸಿದನು. ಇಂಥ ವಿದ್ಯಾರ್ಥಿಗಳೇ ನಿಜವಾಗಿಯೂ ಮಾನ್ಯರು.

ಆದರಿಂದ ಪ್ರಯೋಜನವಾಗಬಲ್ಲ ಜ್ಞಾನಶಕ್ತಿಯನ್ನು ಬೆಳೆಸಬಲ್ಲ ವಿದ್ಯಾರ್ಥಿಯೇ ನಿಜವಾದ ವಿದ್ಯಾರ್ಥಿ.

ವಿದ್ಯಾರ್ಥಿಜೀವನದಲ್ಲಿ ಹಲವು ಎಡರು ತೊಡರುಗಳು ಬರಬಹುದು. ಆದರೆ ಅವುಗಳಲ್ಲಿ ಯಾವ ಕ್ಷೇಮಕರವಾದದ್ದೊ ಪರಿಶೀಲಿಸಿ ಅದಕ್ಕೆ ಸೇರಬೇಕು. ಒಮ್ಮೆ ಕಲಿತ ದುರ್ಬುದ್ಧಿಯನ್ನು ಬಿಡಲು ಅಸಾಧ್ಯವಾಗುವುದು. ಕನ್ನಡ ನಾಣ್ಣುಡಿಯಂತೆ 'ಕೊಡಲಿಯಾದರೂ ಬಿಟ್ಟೇನು, ಕಲಿತದ್ದು ಬಿಡಲಾರೆ'. ಆದುದರಿಂದ ಪ್ರತೀಯೊಂದು ಸಂಗತಿಯನ್ನು ತನ್ನದಾಗಿ ಮಾಡಿಕೊಳ್ಳಬೇಕಾದರೆ ಕಾರ್ಯಕಾರಣ, ಸಂದರ್ಭ ಸನ್ನಿವೇಶಗಳನ್ನು ಅರಿತುಕೊಂಡು ಸೇರಿದರೆ ಒಳ್ಳೆಯದು, ಅಥವಾ ತಾನು ಅರಿಯದೆ ಸೇರಿದ ವಿಷಯದಲ್ಲಿ ಪಶ್ಚಾತ್ತಾಪ ಪಟ್ಟರೆ ಅದೇ ಒಂದು ಹಂತದ ಪರಿಹಾರವು. ಮತ್ತು ಅಂದಿನಿಂದ ವಿಸರ್ಜಿಸಿದ್ದೇ ಆದರೆ ಅದರಿಂದ ತನಗೂ, ಲೋಕಕ್ಕೂ ಕ್ಷೇಮವ ತರವೆಂಬುದನ್ನರಿಯಬೇಕು.

ಜಗದ್ವಂದ್ಯರಾದ ಬಾಪೂಜಿಯವರು ಚಿಕ್ಕಂದಿನಲ್ಲಿ ಮಾಂಸಹಾರ ಹೊಗೆಬತ್ತಿಗಳ ಸೇವನೆ ಮಾಡಿದ್ದು ನಿಜ. ಆದರೆ ತಾನು ಮಾಡಿದ್ದು ತಪ್ಪು ಎಂದು ಗೊತ್ತಾಗಿ ತನ್ನ ತಂದೆಯವರಲ್ಲಿ ಮುಚ್ಚುಮರೆಯಿಲ್ಲದೆ ಹೇಳಿ ಅದಕ್ಕೆ ಪಶ್ಚಾತ್ತಾಪಪಟ್ಟು ತಪ್ಪನ್ನು ಒಪ್ಪಿಕೊಂಡರು. ಅದು ನಿಜವಾದ ದೊಡ್ಡಗುಣ. ಮಾನವನು ಯಾವಾಗಲೂ ತಪ್ಪು ಮಾಡುವುದು ಸಹಜ. ಆದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಮಾನವಾದುದು ಬೇರೆ ಇಲ್ಲ. ಅವರ ಚಿಕ್ಕಂದಿನಲ್ಲಿ ಆ ಮನನಶಕ್ತಿ ಆತ್ಮಶಕ್ತಿಯಿರುವುದರಿಂದಲೇ ಇಂದು ಅವರು ಲೋಕಪ್ರಖ್ಯಾತರಾದರು. ಸ್ವರಾಜ್ಯವು ಇಂದು ಅವರ ಆತ್ಮಶಕ್ತಿಯ ಫಲ. ತನ್ನ ದೇಶವು ಸ್ವತಂತ್ರವಾಗಬೇಕ ತನ್ನಂತೆಯೇ ಪ್ರತಿಯೊಬ್ಬರೂ ಆತ್ಮಶಕ್ತಿಯನ್ನು ಉಜ್ವಲಗೊಳಿಸಿದ್ದೇ ಆದರೆ ಖಂಡಿತವಾಗಿ ಜಯಶ್ರೀ ಒಲಿಯೇ ಒಲಿಯುವಳೆಂಬುದನ್ನು ಲೋಕಕ್ಕೆ ತೋರಿಸಿಕೊಟ್ಟರು. ಅದು ನಿಜವಾದ ವಿದ್ಯಾರ್ಥಿಯ ದೇಶಸೇವೆ. ಅಬ್ರಹಾಂ ಲಿಂಕನ್ ಪ್ರಪಂಚದ ಮಾನ್ಯ ವ್ಯಕ್ತಿಗಳಲ್ಲಿ ಒಬ್ಬರು. ಇವರು ಅಮೇರಿಕದ ಮಹನೀಯರು. ಚಿಕ್ಕಂದಿನಲ್ಲಿಯೇ ದಯೆಯಲ್ಲಿ ಪ್ರಾಣಿಯು ಪ್ರಥಮದಲ್ಲಿ ಜ್ಞಾನವೃದ್ಧರಾಗಿದ್ದರು. ಇವರು ಒಮ್ಮೆ ತಾವು ನೋಡಿದ ಸಂಗತಿಯೆಂದರೆ ಗುಲಾಮರ ಮಾರಾಟ. ಮಾನವನಿಗೆ ಇದು ದೊಡ್ಡ ಕಳಂಕದ ವಿಷಯ. ಮಾನವರನ್ನೆ ಮಾನವರು ಮಾರುವುದೆಂದರೆ ಹೇಳಲಸಾಧ್ಯವಾದ ವಿಷಾದಘಟನೆ. ಇದನ್ನು ನೋಡಿ ಅವರು ತಾನೇನಾದರು ರಾಜಕೀಯದಲ್ಲಿ ಭಾಗವಹಿಸಿದಲ್ಲಿ ಆ ಪದ್ಧತಿಯನ್ನು ನಿಲ್ಲಿಸುವೆನೆಂದು ಪಣತೊಟ್ಟುಕೊಂಡರು. ಅದರಂತೆಯೇ ಅವರು ಆ ಪದ್ಧತಿಯನ್ನು ನಿಲ್ಲಿಸಿಬಿಟ್ಟರು. ಇದೇ ಅವರು ತನ್ನ ಜೀವನದಲ್ಲಿ ಸಾಧಿಸಿದ ವಿದ್ಯೆ.

ಯಾವನು ಇಂದು ಅರ್ಧನಗ್ನನಾಗಿ ಹರಿ ಹರನೆಂದು ಮಳೆಯಲ್ಲಿ ವಿಸ್ತಾರಗಳ ಜೋಪಡಿಯಲ್ಲಿ ಭೂಮಿಯಲ್ಲಿ ಕಷ್ಟಪಡುವನೋ ಅವನೇ ದೇಶದ ಪ್ರಗತಿಯ ವಿದ್ಯಾರ್ಥಿ. ಸ್ವಾರ್ಥತೆ ಇಲ್ಲದೆ ಮಾನವಪ್ರಪಂಚದ ಏಳಿಗೆಗೆ ಸಿಕ್ಕದೆ ಹರಿನಾಮವೇ ಶ್ರೇಷ್ಠ. ಜನತಾ ಸೇವೆಯು ಜನಾರ್ಧನ ಸೇವೆಯೆಂದು ದೇಶಕ್ಕಾಗಿ ಮತ್ತು ವ್ಯಕ್ತಿಗಳಿಗಾಗಿ ಆಹಾರವನ್ನು ಬೆಳೆಸುವನೋ ಅವನೇ ಇಂದಿನ ಕಾಮಧೇನು!

ಈಗಿನ ವಿದ್ಯಾಕ್ರಮವು ಬಹು ವಿಷಮ ಪರಿಸ್ಥಿತಿಯಲ್ಲಿದೆ. ಬರೇ ಪರೀಕ್ಷೆ ಎಂಬ ದೃಷ್ಟಿಯಿಂದ ಇಂದಿನ ವಿದ್ಯಾರ್ಥಿಯು ಪುಸ್ತಕಗಳನ್ನು ಉರು ಹೊಡೆದು ಬರೆಯುವನು. ಪರೀಕ್ಷಾ ಮಂದಿರದಿಂದ ಹೊರಗೆ ಬಂದನಂತರ ಆತನನ್ನು ಪ್ರಶ್ನಿಸಿದರೆ ಅವನಲ್ಲಿ ಯಾವ ಪುರುಷಾರ್ಥವೂ ಕಾಣಸಿಗದು. ಅದು ವಿದ್ಯಾಭ್ಯಾಸದ ಗತಿ! ಒಬ್ಬ ವಿದ್ಯಾರ್ಥಿಗೆ ಯಾವ ವಿಷಯದಲ್ಲಿ ಹೆಚ್ಚಾಗಿ ಅಭಿರುಚಿ ಇದೆಯೋ ಅವನನ್ನು ಕ್ರಮವಾಗಿ ಅದಕ್ಕೆ ಸೇರಿಸಿದಲ್ಲಿ ಅವನು ನಿಜವಾಗಿಯೂ ಅದರಲ್ಲಿ ಪ್ರತಿಭೆಯುಳ್ಳವನಾಗುವನು. ಲೆಕ್ಕಬಾರದ ವಿದ್ಯಾರ್ಥಿಯು ಲೆಕ್ಕವನ್ನೇ ತೆಗೆದುಕೊಂಡರೆ ಆತನಲ್ಲಿ ಅವನಿಗೆ ಎಷ್ಟು ಮಾರ್ಕು ಬರುವುದು? ಯಾವ ವಿಷಯದಲ್ಲಿ ತಾವು ಸೇರಿದ್ದೇವೋ ಅದರಲ್ಲಿ ಗಮನವಿಟ್ಟು ಕಲಿಕೆ ಮಾಡಿದ್ದೇ ಆದರೆ ಎಂದರೆ ಪರೀಕ್ಷೆಗಾಗಿ ಅಲ್ಲದೆ, ತನ್ನ ಜೀವನದ ಬೆಳಕಿಗಾಗಿ. ಆಗ ತಾವು ನಿಜವಾದ ವಿದ್ಯಾರ್ಥಿಗಳಾಗುವೆವು. ಆದರೆ ಅಂಥಾ ನಿಜವಾದ ವಿದ್ಯಾರ್ಥಿಯು ಲೋಕದಲ್ಲಿ ಸಿಕ್ಕುವುದು ವಿರಳ. ಆದರೆ ಅದನ್ನು ಸಾಧಿಸಬೇಕಾದ್ದು ನಮ್ಮ ಕರ್ತವ್ಯ. ದೇಶವು ಒಳ್ಳೆಯದಾಗಬೇಕು, ಅಸ್ಪೃಶ್ಯತೆ ಇಂತಹದು ಮಾನವನಲ್ಲಿ ಕಾಣಬಾರದು. ಪ್ರತಿಯೊಬ್ಬನೂ ತಾನು ಮಾಡಬೇಕಾದ ಕರ್ತವ್ಯವನ್ನು ಮಾಡಿದಲ್ಲಿ ದೇಶಕ್ಕೆ ಕಲ್ಯಾಣವಾಗುವುದು. ವಿದ್ಯಾರ್ಥಿಗಳು ತಾವು ಶಾಲೆಗೆ ಹೋಗುವುದು ಪಾಠ ಕಲಿಯಲಿಕ್ಕೆಂದು ತಿಳಿದುಕೊಳ್ಳದೆ ತನ್ನ ಜೀವನಕ್ಕೆ ತನ್ನ ದೇಶಕ್ಕೆ ಮಾಡಬೇಕಾದ ಕರ್ತವ್ಯವನ್ನು ತಿಳಿದುಕೊಳ್ಳಲು ಹೋಗುವೆನೆಂದರಿಯಬೇಕು. ಬೇರೆ ರಾಷ್ಟ್ರಗಳ ಪ್ರಜೆಗಳು ತನ್ನ ಸಹೋದರರೆಂದು ತಿಳಿಯಬೇಕು. ಎಂದರೆ ಮಾತ್ರ ಪ್ರಪಂಚವು ಸುಖದಿಂದಿರಬಲ್ಲದೇ ಹೊರತು ಸಂಕೋಚ ದೃಷ್ಟಿಯಿಂದ ತಾನು ದೊಡ್ಡವನಾಗಬೇಕು, ತಾನು ಐಶ್ವರ್ಯದಲ್ಲಿ ಮೆರೆಯಬೇಕು, ತನಗೆ ಅಧಿಕಾರ ಬರಬೇಕೆಂದು ಎಣಿಸದೆ ದೇಶವೇ ನನ್ನ ಮನೆ, ದೇಶದ ಪ್ರಜೆಗಳೆಲ್ಲರೂ ನನ್ನ ಸಹೋದರರು ಅಕ್ಕ, ತಂಗಿಯರು ಬಂಧುಗಳು ಎಂದು ತಿಳಿದು ತನ್ನ ಜೀವಮಾನವನ್ನು ಪರರಿಗಾಗಿ ಸವೆಯಿಸುವ ವ್ಯಕ್ತಿಯೇ ನಿಜವಾದ ವಿದ್ಯಾರ್ಥಿ. ಅಂಥಾ ವಿದ್ಯಾರ್ಥಿಯೇ ನಿಜವಾಗಿ ಧನ್ಯನು. ಇಂತಹ ಮಹನೀಯರೇ ಲೋಕದ ಜ್ಯೋತಿಗಳು, ಅವರ ಕೀರ್ತಿಯು ಆಚಂದ್ರಾರ್ಕವಾಗಿ ಲೋಕದಲ್ಲಿ ಅಮೃತ ಧಾರೆಯನ್ನು ಕರೆಯಬಲ್ಲವು.

ವಾರ್ತೆಗಳು.

ಕಳೆದ ಒಂದು ತಿಂಗಳಲ್ಲಿ ಪೂರ್ವ ಪಾಕಿಸ್ಥಾನದಿಂದ ಒಂದು ಲಕ್ಷ ಜನ ನಿರಾಶ್ರಿತರು ಪಶ್ಚಿಮ ಬಂಗಾಲಕ್ಕೆ ಬಂದಿರುವರೆಂದು ತಿಳಿಯುತ್ತದೆ. ಪಾಕಿಸ್ಥಾನದ ಪೊಲೀಸರು ಈ ನಿರಾಶ್ರಿತರನ್ನು ಒಂದೇ ಸವನೆ ಸುಲಿಯುತ್ತಿದ್ದಾರೆಂದು ಪಶ್ಚಿಮ ಬಂಗಾಲ ಸರಕಾರದ ವಕ್ತಾರನೊಬ್ಬನು ಹೇಳಿದನು.

ಹಿಂದೂಸ್ಥಾನದ ಬಂಗಾರದ ಉತ್ಪಾದನೆಯು ನಿಧಾನವಾಗಿ ಹೆಚ್ಚುತ್ತಿದ್ದು ಕಳೆದ ಆರು ತಿಂಗಳುಗಳಿಂದ ಪ್ರತಿ ತಿಂಗಳು ಸುಮಾರು ೧೦೦೦ ಔನ್ಸುಗಳಷ್ಟು ಉತ್ಪಾದನೆ ಹೆಚ್ಚಾಗುತ್ತಿದೆಯೆಂದು ವಿಶ್ವಸನೀಯವಾಗಿ ತಿಳಿಯುತ್ತದೆ. ಹಿಂದೂಸ್ಥಾನದಲ್ಲಿ ೧೯೫೨ ರಲ್ಲಿ ೧೩೯,೭೭೭ ಔನ್ಸು ಬಂಗಾರ ಉತ್ಪನ್ನವಾಗಿದ್ದರೆ ೧೯೫೩ ರಲ್ಲಿ ಅದು ೭೨,೨೨೨ ಔನ್ಸುಗಳಿಗೇರಿದೆ.

ಮಲಬಾರಿನಲ್ಲಿ ಇತ್ತೀಚೆಗೆ ನಡೆದ ಮುನ್ಸಿಪಲ್ ಚುನಾವಣೆಗಳಲ್ಲಿ ಸ್ಥಳೀಯ ಕಾಂಗ್ರೆಸ್ ಸಮಿತಿಯು ಮುಸ್ಲಿಂ ಲೀಗಿನೊಡನೆ ಮಾಡಿಕೊಂಡ ಒಡಂಬಡಿಕೆಯ ಬಗ್ಗೆ ಅ. ಭಾ. ಕಾಂಗ್ರೆಸ್ ಸಮಿತಿಯು ಪ್ರದೇಶ ಕಾಂಗ್ರೆಸ್ ಸಮಿತಿಯ ಸ್ಪಷ್ಟೀಕರಣವನ್ನು ಕೇಳಿದೆಯೆಂದು ತಿಳಿಯುತ್ತದೆ. ಸ್ಥಳೀಯ ಕಾಂಗ್ರೆಸ್ ಮುಸಲ್ಮಾನರು ತಮ್ಮನ್ನು ಹತ್ತಿಕ್ಕಿ ಲೀಗಿನೊಡನೆ ಕಾಂಗ್ರೆಸಿಗರು ಮೈತ್ರಿ ಮಾಡಿಕೊಂಡರೆಂದು ದೂರಿದ್ದರಿಂದ ಈ ಸ್ಪಷ್ಟೀಕರಣ ಕೇಳಲಾಗಿದೆಯೆಂದು ತಿಳಿಯುತ್ತದೆ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

೧೯೧೨ನೇ ಇಸವಿ ಕೋಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ತರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಬಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಕೊಡಗಿನ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ನಾರ್ದರ್ನ್ ಮತ್ತು ವಿಶ್ವಭಾರತಿ ಇನ್ಸೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಕೆ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಖಜಾಂಚಿ.

Edited, Printed and Published by P. I. Bellippa at 'Kodagu' Press, Mercara, for Kodagu' Ltd.

ಹೊಸ ಚೈನಾದ ಹೊಸ ಪ್ರಜಾಪ್ರಭುತ್ವ.

ಲೇ:- ಶ್ರೀ. ರಾಮಸ್ವರೂಪ.

ಚೈನಾದ ವಿಚಾರವಾಗಿ ಹಿಂದೂದೇಶದಲ್ಲಿ ಈಗ ಉತ್ಸಾಹದ ಹಾಗೂ ಪ್ರಶಂಸೆಯ ಹೊನಲಿನಿಂದ ಗಾಳಿಯು ಬೀಸುತ್ತಿದೆ. ವಿವಿಧ ಜನರು ವಿವಿಧ ಕಾರಣಗಳಿಗಾಗಿ ಪ್ರಶಂಸಿಸುತ್ತಿದ್ದಾರೆ. ಕೆಲವರು ಅದು ಸಮತಾವಾದದ ರಾಷ್ಟ್ರವೆಂದು ಹೊಗಳಿದರೆ ಕೆಲವರು ಅದು ಅಂತ್ಯವಾಗಿ ಬಂಡವಾಳದಾರರ ರಾಜ್ಯವೆಂದು ಹೊಗಳುತ್ತಾರೆ! ಇನ್ನು ಕೆಲವರು ಅದು ಬಂಡವಾಳವಾದ ಮತ್ತು ಸಮತಾವಾದಗಳ ಮಧ್ಯ ಮಾರ್ಗ ಹಿಡಿದ ರಾಷ್ಟ್ರವೆಂದೂ ಅಲ್ಲಿ ಬಂಡವಾಳದಾರ ರಾಷ್ಟ್ರದ ಅನ್ಯಾಯ ಕೃತ್ಯವಾಗಲೀ, ಸಮತಾವಾದ ರಾಷ್ಟ್ರದ ಯಾಂತ್ರಿಕ ಶಿಸ್ತಾಗಲೀ ಇಲ್ಲವೆಂದು ಮೆಚ್ಚುತ್ತಾರೆ. ಕೆಲವರು ಚೈನಾವು ಹೊಸದಾಗಿ ಚೇತನಗೊಂಡ ರಾಷ್ಟ್ರ ಎಂದು ಹೊಗಳುತ್ತಾರೆ. ಈ ರೀತಿಯ ಭಿನ್ನತೆಯ ಪರಸ್ಪರ ವಿರೋಧದ ಅಭಿಪ್ರಾಯಗಳು ಮೇಲಿಂದ ಮೇಲೆ ಪ್ರಕಟವಾಗುತ್ತಿರುವದನ್ನು ನೋಡಿದರೆ ಒಂದು ವಿಚಾರ ಮಾತ್ರ ಸ್ಪಷ್ಟವಾಗಿ ತಿಳಿಯುತ್ತದೆ. ಚೈನಾದಲ್ಲಿ ನಡೆಯುತ್ತಿರುವ ಘಟನೆಗಳು ಸರ್ವರ ದೃಷ್ಟಿಯನ್ನು ತಮ್ಮೆಡೆಗೆ ಆಕರ್ಷಿಸಿವೆ.

ಇಂಡಿಯಾ ಸರಕಾರವೂ ಕೂಡ ಚೈನಾದ ಬಗ್ಗೆ ಪ್ರಶಂಸೆಯಿಂದ ಕೂಡಿದ್ದರೂ ಈ ಪ್ರಶಂಸೆಗೆ ಸರಿಸಮಾನವಾಗಿ ಅಲ್ಲಿಯ ಪರಿಸ್ಥಿತಿಯ ಜ್ಞಾನವಿದ್ದಂತೆ ತೋರುವದಿಲ್ಲ. ಕೇಂದ್ರ ಸರಕಾರದ ಮಂತ್ರಿಯೊಬ್ಬರನ್ನು ಪತ್ರಿಕೋದ್ಯೋಗಿಯೊಬ್ಬರು ಸಂದರ್ಶಿಸಿದಾಗ ಅಮೇರಿಕಾದ ನಿಗ್ರೋಗಳ ವಿಚಾರ ಅವರು ತಮ್ಮ ಸಹಾನುಭೂತಿಯನ್ನು ವ್ಯಕ್ತ ಮಾಡಿದರಂತೆ. ನಿಗ್ರೋಗಳನ್ನು ಸುಲಿದು ಕೊಲ್ಲುವದು ರಾಷ್ಟ್ರೀಯ ಕಳಂಕವೆಂಬುದನ್ನು ಅವರೊಪ್ಪಿ ಪ್ರತಿ ವರ್ಷ ಅಂಥಾ ಒಂದೆರಡು ಘಟನೆಗಳಾಗುವದನ್ನೂ ಅವರು ಒಪ್ಪಿದರು. ಆದರೆ ಚೀನಾದಲ್ಲಿ ನಡೆಯುವ ಜಮೀನ್ದಾರರ ಸಾಮೂಹಿಕ ಕೊಲೆಯು ಅರಿವಿದೆಯೇ ಎಂದು ಕೇಳಿದಾಗ 'ಓ, ಆ ವಿಚಾರ ನಮಗೆ ತಿಳಿದಿಲ್ಲ'ವೆಂದು ಅವರು ಹೇಳಿದರಂತೆ. ಒಂದು ದೇಶವನ್ನು ಹೊಗಳುವ ಮೊದಲು ಅದರ ಒಳಗೆ ನಡೆಯುತ್ತಿರುವ ವಿವರಗಳನ್ನು ಅರಿಯಬೇಕಾದುದು ಅವರ ಕರ್ತವ್ಯವಾಗಿತ್ತು.

ಸಮತಾವಾದಿಗಳಲ್ಲದ ಚೈನಾ ಭಕ್ತರು ಚೈನಾವು ರಷ್ಯಾದಂತೆ ರಾಷ್ಟ್ರೀಕರಣವನ್ನಾಗಲೀ, ಸಾಮೂಹಿಕ ಕೃಷಿಯನ್ನಾಗಲೀ ಅನುಸರಿಸಿಲ್ಲವೆಂದೂ ದೇಶವು ಸಮ್ಮಿಶ್ರ ಪಕ್ಷಗಳಿಂದ ಆಳಲ್ಪಡುತ್ತಿದೆಯೆಂದೂ ಈ ಎರಡು ವಿಚಾರಗಳು ಸಮತಾವಾದೀ ತತ್ವಕ್ಕೆ ವಿರುದ್ಧವಿರುವ ಕಾರಣ ಚೈನಾವು ರಷ್ಯಾದ ಹೆಜ್ಜೆಯಲ್ಲೇ ನಡೆಯುತ್ತಿಲ್ಲವೆಂದೂ, ಚೀನಾದಲ್ಲಿ ನಡೆಯುತ್ತಿರುವದು ಹೊಸ ಶೋಧನೆ, ಹೊಸ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯು, ಅದು ಅಲ್ಲಿಯ ಜನತೆಯ ಸಂಸ್ಕೃತಿಗೂ ಜೀವನದ ಪರಿಪಾಟಿಗೂ ಯೋಗ್ಯವಾಗಿದೆಯೆಂದೂ ಹೇಳುತ್ತಾರೆ. ಇವರ ಅಭಿಪ್ರಾಯದಂತೆ ಚೈನ ಪಕ್ಷ ಸಹಕಾರದ ಸಮತಾವಾದವು [illegible] ಶಾಸನ ಕಾರ್ಯಕರ್ತರ ಮೂಲಕ ಜನತೆಯ ಆಡಳಿತ ನಡೆಸುತ್ತಿದೆಯೆಂದೂ, ವಿರೋಧಿಗಳ ಬಂಧನ ಕೊಲೆಯು ಮಾರ್ಕ್ಸಿಯ ಅತ್ಯಾಚಾರ ಇಲ್ಲವೆ ಚೈನಾದಂಥಾ ವಿಶಾಲ ರಾಷ್ಟ್ರದ ಆಡಳಿತ ಸಂಘಟನೆಯಲ್ಲಿ ಅನಿವಾರ್ಯವೆಂದೂ ಹೇಳಲಾಗುತ್ತಿದೆ.

ಚೈನಾದ ವಿಚಾರದ ಈ ಮಾಹಿತಿಯು ಪೂರ್ಣ ಸರಿಯಲ್ಲ. ಸಮತಾವಾದದ ಪೂರ್ಣ ಕಾರ್ಯವಿವರಗಳ ಮಾಹಿತಿ ಇಲ್ಲದ ಕಾರಣವೇ ಈ ತಪ್ಪಭಿಪ್ರಾಯಗಳಿಗೆ ಎಡೆಯಾಗಿದೆ. ಸಾಮ್ಯವಾದದ ಸಾಧನೆಯಲ್ಲಿ ಎರಡು ಪಥಗಳನ್ನು ಅನುಸರಿಸುವದು ಸಾಮಾನ್ಯವಾಗಿದೆ. ಈ ಎರಡರ ಗುರಿಯೂ ಲೆನಿನರು ಹೇಳಿದಂತೆ ಅಧಿಕಾರದ ಹಿಡಿತವಾಗಿದೆ. ಸಮತಾವಾದದ ಕ್ರಾಂತಿ ಜಯಪ್ರದವಾಗಬೇಕಾದರೆ ಅಧಿಕಾರವಿಲ್ಲದೆ ಸಾಧ್ಯವಿಲ್ಲ. ಈ ಎರಡು ಪಥಗಳಲ್ಲಿ ಒಂದು ರಷ್ಯಾದ ಹೊಸ ಆರ್ಥಿಕ ನೀತಿ, ಪೂರ್ವ ಯೂರೋಪಿನ ದೇಶಗಳಲ್ಲಿಯ ಜನತೆಯ ಪ್ರಜಾಪ್ರಭುತ್ವ ಚೈನಾದ ಹೊಸ ಪ್ರಜಾಪ್ರಭುತ್ವಗಳಾಗಿವೆ. ಸಮತಾವಾದದ ಮುಂದಿನ ಹೆಜ್ಜೆಯಾದ ಪೂರ್ಣ ಸಮತಾವಾದಕ್ಕೆ ಇದು ಪೂರ್ವಭಾವಿಯಾದ ಹೆಜ್ಜೆ. ಈ ವಿಷಯದಲ್ಲಿ ಚೈನಾದ ಮುಂದಾಳಾದ ಮಾವೋರವರು ಸ್ಪಷ್ಟವಾಗಿ—ಚೈನಾದ ಕ್ರಾಂತಿಯು ಎರಡು ವಿಧವಾಗಿ ವಿಂಗಡಿಸಲ್ಪಡಬೇಕು, ಒಂದನೆಯದು ಹೊಸಪ್ರಜಾಧಿಕಾರ ಎರಡನೆಯದು ಸಂಪೂರ್ಣ ಸಮತಾವಾದ—ಎಂದು ಹೇಳಿದ್ದಾರೆ. ಇನ್ನು ಮಿತ್ರ ಅನೇಕರು ನಮ್ಮ ರಾಯಭಾರಿ ಪಣಿಕ್ಕರರೂ ಕೂಡ ಪ್ರಥಮ ಹೆಜ್ಜೆಯಾದ ಹೊಸ ಪ್ರಜಾಪ್ರಭುತ್ವವನ್ನು ಮೆಚ್ಚಿ ಹೊಗಳಿದ್ದಾರೆ. ಆದರೆ ಇದು ಮುಂದಿನ ಸಮತಾವಾದದ ಸಾಧನೆಯ ಪ್ರಥಮ ಹೆಜ್ಜೆಯೆಂಬುದನ್ನು ತಿಳಿದವರು ವಿರಳ. ಮಾವೋರವರು ಹೇಳುವಂತೆ ಸಂಪೂರ್ಣ ಜಯಪ್ರದ ಕ್ರಾಂತಿಯಾಗಬೇಕಾದರೆ ಈ ಎರಡು ಮೆಟ್ಟಲುಗಳೂ ಹತ್ತಲ್ಪಡಬೇಕು. ಒಂದನ್ನು ಹತ್ತಿ ಮತ್ತೊಂದನ್ನು ಬಿಟ್ಟರೆ ಕ್ರಾಂತಿಯನ್ನು ಕಡೆಗಣಿಸಿದಂತೆ.

ಚೈನಾದ ಮುಂದಾಳುಗಳ ಅಭಿಪ್ರಾಯದಂತೆ ಅಲ್ಲಿರುವ ಈಗಿನ ಹೊಸ ಪ್ರಜಾಪ್ರಭುತ್ವಕ್ಕೂ ಹೊರಗಿನ ಪ್ರಜಾಪ್ರಭುತ್ವಕ್ಕೂ ಸಂಬಂಧವಿಲ್ಲ. ಚೈನಾದ ಪ್ರಜಾಪ್ರಭುತ್ವವು ಮಾವೋರವರು ಹೇಳುವಂತೆ ಜಗತ್ತಿನ ಸಾಮಾನ್ಯ ಜನ ಕ್ರಾಂತಿಯ ಒಂದು ಅಂಗ ಮಾತ್ರ. ಆದ್ದರಿಂದ ಚೈನಾದ ಹೊಸ ಪ್ರಜಾಪ್ರಭುತ್ವಕ್ಕೂ ನಮ್ಮ ಕಲ್ಪನೆಯ ಪ್ರಜಾಪ್ರಭುತ್ವಕ್ಕೂ ವ್ಯತ್ಯಾಸವಿದೆ. ಚೈನಾದ ಹೊಸ ಪ್ರಜಾಪ್ರಭುತ್ವದ ಜಯಕ್ಕೆ ಸಮತಾವಾದಿಗಳ ಪಥವನ್ನು ಅನುಸರಿಸದೆ ಸಾಧ್ಯವಿಲ್ಲ. ಕಮ್ಯೂನಿಸ್ಟರ ಶ್ಲೋಕ, ಕಾರ್ಯಕ್ರಮ ಮತ್ತು ರಷ್ಯಾದ ಮುಂದಾಳ್ತನವನ್ನು ಒಪ್ಪದೆ ಗತ್ಯಂತರವಿಲ್ಲ. ಈ ಪ್ರಜಾಪ್ರಭುತ್ವದ ಗುರಿಯು ಸಮತಾವಾದವಲ್ಲದೆ ಬೇರಿಲ್ಲ.

ಸಮತಾವಾದಿಗಳ ತತ್ವದಂತೆ ಕ್ರಾಂತಿಯೆಂದರೆ ಹಿಂಸಾಮಾರ್ಗದಿಂದ ತನ್ನ ಕ್ರಾಂತಿಯು ಜಯಪ್ರದವಾಗುವ ವರೆಗೆ ಅದು ತಮಗೆ ಸಹಾಯಕರೆಂದು ತೋರುವವರೆಲ್ಲರೊಡನೆ ಒಪ್ಪಂದ, ಸಂಧಾನಗಳಿಗೆ ಸಿದ್ಧವಿರುತ್ತದೆ. ಇಂಥಾ ಪ್ರಯತ್ನದಲ್ಲಿ ಸಮತಾವಾದಕ್ಕೆ ಸರಿಹೋಗದ ವ್ಯಕ್ತಿಸ್ವಾತಂತ್ರ್ಯ ಹಾಗೂ ನಿರ್ಬಾಧಕ ಚುನಾವಣಾ ತತ್ವಗಳಿಗೂ ಒಪ್ಪುವದುಂಟು. ಉದಾಹರಣೆಗೆ ೧೯೪೯ರ ಫೆಬ್ರವರಿಯಲ್ಲಿ ಜನತಾ ಪ್ರತಿನಿಧಿಗಳ ಸಮ್ಮೇಳನದಲ್ಲಿ ಚೀನಾದ ಲಿವುಶಾಚಿಯವರು ಭಾಷಣವನ್ನು ನೋಡಬಹುದು. 'ಚಿಯಾಂಗ್ ಕೈಶೇಕರ ಕಾಲದಲ್ಲಿ ಪ್ರಾಪ್ತ ಮಾಡಿದ ಪದ್ಧತಿಯಂತೆ ಮತ ಕೇಳುವ ಚುನಾವಣೆ ನಡೆಸುವದು ಜನರ ಪ್ರತಿಗಾಮಿ ಆಡಳಿತವನ್ನು ತೆಗೆದು ಹಾಕಲು ಅವಶ್ಯವಿದ್ದಾದರೂ ಈಗಿನ ಹೊಸ ಪ್ರಜಾಪ್ರಭುತ್ವದಲ್ಲಿ ಇಲ್ಲಿಯ ಪರಿಸ್ಥಿತಿಯ ದೃಷ್ಟಿಯಿಂದ ಅದು ಯೋಗ್ಯವಲ್ಲ. ಆದ್ದರಿಂದ ಆ ತತ್ವವನ್ನು ಪೂರ್ಣವಾಗಿ ಅನುಸರಿಸಲಾಗದು'' ಎಂದು ಅವರು ಹೇಳಿರುವರು.

ಅದರಂತೆ ಚೈನಾದ ಕಮ್ಯೂನಿಸ್ಟ ಪಕ್ಷದ ಘಟನೆಯಲ್ಲಿ ಕಮ್ಯೂನಿಸ್ಟ ಪಕ್ಷವು ಚೈನಾದ ಶ್ರಮಜೀವಿಗಳ ವ್ಯವಸ್ಥಿತ ಪ್ರತ್ಯಕ್ಷ ದಳವೆನ್ನಲಾಗಿದೆ. ಅದು ಈ ಪ್ರಕಾರ ಕೇವಲ ಶ್ರಮಜೀವಿಗಳ ಪಕ್ಷವಾದರೂ ಅದು ಚೈನಾದ ಇಡೀ ಜನತೆಯನ್ನೂ, ರಾಷ್ಟ್ರವನ್ನೂ ಪ್ರತಿನಿಧಿಸುವದೆಂದು ಹೇಳಿಕೊಳ್ಳಲಾಗುತ್ತಿದೆ. ಈ ಕಮ್ಯೂನಿಸ್ಟ ಪಕ್ಷವು ದೇಶದೊಳಗಿನ ಇತರ ಪಕ್ಷಗಳೊಡನೆ ಒಪ್ಪಂದ ಸ್ನೇಹಗಳನ್ನು ಬೆಳಸಿ ವಿರೋಧ ಪಂಗಡವು ಬೆಳೆಯದಂತೆ ಎಚ್ಚರಿಕೆ ವಹಿಸಿದೆ. ಇವರ ಪ್ರಚಾರ ಪ್ರಯತ್ನಗಳಿಗೆ ಬಗ್ಗದ ಜನರು ಕಲ್ಲೇಟು ಹೊಂದುತ್ತಾರೆ. ಈ ಹೊಸ ಪ್ರಜಾಪ್ರಭುತ್ವದಲ್ಲಿ ರೈತರು, ಮಜೂರರು, ಬಡವರು, ಉದ್ಯೋಗ ಮಾಡುವವರೆಲ್ಲರೂ ಗೆಳೆಯರೇ! ಕ್ರಾಂತಿಯ ವಿವಿಧ ಅವಸ್ಥೆಗಳ ಪ್ರಕಾರ ಈ ಜನತೆಯ ಬೆಲೆಯೂ ವ್ಯತ್ಯಾಸಗೊಳ್ಳುವದು. ವಿರೋಧ ಪಕ್ಷಗಳನ್ನು ಹಿಮ್ಮೆಟ್ಟಿಸಿ ಹೊಸ ಶ್ಲೋಕ, ಹೊಸ ಕಾರ್ಯಪಥವನ್ನು ಅನುಸರಿಸಲಾಗುವದು.

ಇವರ ಕಾರ್ಯಕಲಾಪದಲ್ಲಿ ಪ್ರಮುಖ ವಿಚಾರವೆಂದರೆ ಸಾಮಾನ್ಯ ಜನರ ಮುಂದಾಳ್ತನ. ಯಾರೊಡನೆ ಯಾವ ಒಪ್ಪಂದವಾದರೂ ಮುಂದಾಳ್ತನ ಜನಸಾಮಾನ್ಯರಿಗೆ ಸೇರಿದ್ದೆಂಬುದನ್ನು ತೋರ್ಪಡಿಸಿದರು. ಸ್ಟಾಲಿನರು ಹೇಳುವಂತೆ 'ಸಾಮಾನ್ಯ ಜನತೆಯ ಮುಂದಾಳ್ತನವನ್ನು ಒಪ್ಪದ ಯಾವ ಒಪ್ಪಂದವೂ ಯೋಗ್ಯವಲ್ಲ.' ಈ ಜನಸಾಮಾನ್ಯರ ಕ್ರಾಂತಿಯೇ ರಾಷ್ಟ್ರದ ಕ್ರಾಂತಿಯಾಗುವದು ಅದೇ ಸಮತಾವಾದವೆನಿಸುವದು. ಆಧಾರದ ಜನತಾ ಸರ್ವಾಧಿಕಾರ ರೂಪುಗೊಳ್ಳುವದು.

ಚೈನಾದ ಕಮ್ಯೂನಿಸ್ಟ ಪಕ್ಷವು ಈ ತತ್ವವನ್ನು ಒಪ್ಪಿ ಅದಕ್ಕಾಗಿ ಕೆಲಸ ಮಾಡುತ್ತಿದೆ. 'ಈ ಪ್ರಜಾಪ್ರಭುತ್ವದ ಸರ್ವಾಧಿಕಾರಕ್ಕೆ ಸೇರಿದವರು ಮಜೂರರು, ರೈತರು, ನಗರದ ಬಡಜನರಾದರೂ ಆ ಸಮೂಹದಲ್ಲಿ ಶ್ರಮಜೀವಿಗಳದೇ ಮೇಲ್ಗೈಯಾಗಿ ಅವರೇ ಸರ್ವಾಧಿಕಾರಿಗಳಾಗಬೇಕು.' ಎಂದು ಮಾವೋರವರು ಹೇಳಿರುವರು. ಅವರ ಅಭಿಪ್ರಾಯದಂತೆ ಸಾಮ್ರಾಜ್ಯಶಾಹಿಯ ಈ ಯುಗದಲ್ಲಿ ಬೇರೆ ಯಾವ ವರ್ಗವೂ ಕ್ರಾಂತಿಯನ್ನು ಜಯಪ್ರದಗೊಳಿಸಲಾರದು. ಆದ್ದರಿಂದ ಚೀನದ ಹೊಸ ಪ್ರಜಾಪ್ರಭುತ್ವದ ತಿರುಳೇನೆಂದು ಮಾರು ಅಂತಸ್ಥನಿಂದ ಮಾವೋರವರು ಹೀಗೆ ಹೇಳಿರುವರು. 'ಮಾರ್ಕ್ಸ್, ಎಂಜೆಲ್ಸ್, ಲೆನಿನ್ ಮತ್ತು ಸ್ಟಾಲಿನರ ತತ್ವಧಾರಿಗಳಾದ ಶಿಸ್ತಿನ ಪಕ್ಷ ಒಂದು, ಇಂಥಾ ಪಕ್ಷದ ಹಿಡಿತದಲ್ಲಿರುವ ಸೈನ್ಯ ಮತ್ತೊಂದು. ಮತ್ತು ಮೂರನೆಯದು [illegible] ಎಲ್ಲಾ ಕ್ರಾಂತಿಕಾರಕ ಪಕ್ಷಗಳ ಸಮ್ಮಿಶ್ರ ಶಕ್ತಿ' ಈ ಮೂರು ಅಂತರಂಗಗಳೇ ಹೊಸ ಪ್ರಜಾಪ್ರಭುತ್ವದ ಜೀವಾಳ. ಇದರಿಂದ ಚೈನಾದ ಪ್ರಜಾಪ್ರಭುತ್ವದ ಗುರಿಯೇನೆಂದು ವೇದ್ಯವಾಗುವದು.

ಬಂಡವಾಳವಾದದ ರಾಜ್ಯಕ್ಕೂ, ಸಮತಾವಾದದ ರಾಜ್ಯಕ್ಕೂ ವ್ಯತ್ಯಾಸವನ್ನು ವಿವರಿಸುತ್ತ ಲೆನಿನರು ಹೀಗೆ ಹೇಳಿದ್ದಾರೆ. ಬಂಡವಾಳವಾದ ರಾಜ್ಯದಲ್ಲಿ ಬಂಡವಾಳದಾರರು ಸಮತಾವಾದಿಗಳ ಭೇಟಿಯಾದರೆ ಸಮತಾವಾದಿಗಳ ರಾಜ್ಯದಲ್ಲಿ ಸಮತಾವಾದಿಗಳು ಬಂಡವಾಳದಾರರ ಭೇಟಿಯಾಡುತ್ತಾರೆ. ಮಾವೋರವರು ಈ ತತ್ವದಲ್ಲಿ ನಂಬಿಕೆ ಇಡುವರು. ಇಂದಿನ ಪರಿಸ್ಥಿತಿಯಲ್ಲಿ ಚೈನಾದಲ್ಲಿ ಎಲ್ಲಾ ವರ್ಗದವರೂ ಸಹಕರಿಸಿ ಕೆಲಸ ಮಾಡುತ್ತಿದ್ದರೂ ಮುಂದಿನ ಹೆಜ್ಜೆಯಲ್ಲಿ ಭೂಮಿ ಇರುವ, ಬಂಡವಾಳದಾರರ ಭೇಟಿ ನಡೆಯದಿರದು. ಈ ಭೇಟಿಗೆ ಚೈನಾದ ಆರು ಮಿಲಿಯ ಕುಟುಂಬಗಳ ಆಹುತಿಯಾಗಬಹುದೆಂದು ಲೆಕ್ಕ ಹಾಕಲಾಗಿದೆ.

ಆದ್ದರಿಂದ ಚೈನಾದ ಹೊಸ ಪ್ರಜಾಪ್ರಭುತ್ವದ ವಿಚಾರ ಸ್ಥೂಲವಾಗಿ ಹೇಳುವದಾದರೆ ಅದು ಜನತೆಯ ಪ್ರಜಾಪ್ರಭುತ್ವವೆಂದರೂ ಅದು ಕಮ್ಯೂನಿಸ್ಟ ಪಕ್ಷದ ಸರ್ವಾಧಿಕಾರವೆನ್ನಬೇಕು. ಅಲ್ಲಿ ಸಮ್ಮಿಶ್ರ ಸರಕಾರವಿದೆಯೆಂದರೂ ಅದು ಕೇವಲ ತೋರಿಕೆಗಾಗಿ. ಚೈನಾದ ಹೊಸ ಪ್ರಜಾಪ್ರಭುತ್ವವು ರೂಪುಗೊಂಡುದಾದರೂ ಕಮ್ಯೂನಿಸ್ಟ ಮಾರ್ಗಗಳಿಂದಲೇ. ಅದರ ಗುರಿಯಾದರೂ ಸಮತಾವಾದದ ಸ್ಥಾಪನೆಗಾಗಿಯೇ. ಅಂತರ್ಗತವಾಗಿ ಸರ್ವಾಧಿಕಾರ ನಡೆಯುತ್ತಿದ್ದರೂ ಹೊರಗೆ ಪ್ರಜಾಪ್ರಭುತ್ವದ ಸೋಗು ಇದೆ. ಈ ವಿಚಾರವನ್ನು ಚೈನಾದ ಮುಂದಾಳುಗಳು ಒಪ್ಪಿದರೂ ಅದನ್ನು ಮೆಚ್ಚುವ ಪ್ರಚಾರಕರು ಅಲ್ಲಿರುವದೆಲ್ಲವೂ ಆದರ್ಶವೆನ್ನುವದು ಆಶ್ಚರ್ಯದ ವಿಚಾರ.

—೭೭೯—

ಕೊಡಗು

ತಾ. ೩೧-೧೦-೧೯೪೭ನೇ ಶುಕ್ರವಾರ

ಆಹಾರ ಪದಾರ್ಥಗಳ ವಿನಿಯಂತ್ರಣ.

ಕಳೆದ ಜಾಗತಿಕ ಎರಡನೇ ಮಹಾ ಯುದ್ಧದ ಅಂತ್ಯದಲ್ಲಿ ಪ್ರಾರಂಭವಾದ ಆಹಾರ ಪದಾರ್ಥಗಳ ನಿಯಂತ್ರಣವು ಹಿಂದೂ ದೇಶದ ಹಲವು ಭಾಗಗಳಲ್ಲಿ ಇನ್ನೂ ಜಾರಿಯಲ್ಲಿದೆ. ಯುದ್ಧದ ಸಮಯದಲ್ಲಿ ಸಾಕಷ್ಟು ಆಹಾರ ಪದಾರ್ಥಗಳನ್ನು ಬೆಳೆಸಲು ಸಾಧ್ಯವಾಗದ್ದರಿಂದ ಉಂಟಾದ ಕೊರತೆಯಿಂದ ಈ ನಿಯಂತ್ರಣವನ್ನು ಜಾರಿಗೆ ತರಬೇಕಾಯಿತು. ಯುದ್ಧವು ಮುಗಿದ ನಂತರ ಈ ಕೊರತೆಯನ್ನು ಹೋಗಲಾಡಿಸಲು 'ಹೆಚ್ಚು ಬೆಳೆಯಿರಿ' ಎಂಬ ಚಳವಳಿವನ್ನು ದೇಶದ ಉದ್ದಗಲಕ್ಕೂ ಹೂಡಿದರೂ ಈ ಕೊರತೆಯನ್ನು ಸಂಪೂರ್ಣ ನಿವಾರಿಸುವದು ಇನ್ನೂ ಸಾಧ್ಯವಾಗಿರುವದಿಲ್ಲ. ಹಿಂದೂದೇಶದ ನಿವಾಸಿಗಳ ಜೀವನಕ್ಕಾಗಿ ಹೊರಗಿನಿಂದ ಆಹಾರ ಪದಾರ್ಥಗಳನ್ನು ತರಿಸಲೇಬೇಕಾಗುತ್ತದೆ. ಆದುದರಿಂದಲೇ ನಿಯಂತ್ರಣವನ್ನು ತೆಗೆದು ಹಾಕಬೇಕೋ ಯಾ ಬೇಡವೋ ಎಂಬ ಪ್ರಶ್ನೆಯು ತಜ್ಞರಲ್ಲಿಯೂ ಕೂಡ ಭಿನ್ನಾಭಿಪ್ರಾಯಕ್ಕೆ ಅವಕಾಶವನ್ನುಂಟುಮಾಡಿದೆ.

ನಿಯಂತ್ರಣದಿಂದಲೇ ಕಪ್ಪುಸಂತೆ, ಲಂಚಗುಳಿತನಗಳಿಗೆ ಎಡೆಯಾಗುತ್ತಿರುವದೆಂದೂ ಆದುದರಿಂದ ನಿಯಂತ್ರಣವನ್ನು ತೆಗೆದು ಹಾಕುವದು ಉತ್ತಮವೆಂದೂ ಮಹಾತ್ಮಾಗಾಂಧಿಯವರು ೧೯೪೭ ರಲ್ಲಿ ಸೂಚಿಸಿದ್ದರು. ಆದರೆ ಅಧಿಕಾರ ವರ್ಗದವರು ಆರ್ಥಿಕ ತಜ್ಞರ ಮುಖ್ಯವಾಗಿ ಉದ್ಯೋಗಸ್ಥರ ಅಭಿಪ್ರಾಯವನ್ನು ತೆಗೆದಲ್ಲಿ ನಿಯಂತ್ರಣವನ್ನು ತೆಗೆದುಹಾಕುವದರಿಂದ ದೇಶದ ಪರಿಸ್ಥಿತಿಯು ಮತ್ತಷ್ಟು ಕಷ್ಟಕ್ಕೀಡಾಗುವದೆಂದು ಯೋಚಿಸಿ ನಿಯಂತ್ರಣವನ್ನು ಮುಂದುವರಿಸಿದರು. ಆದರೂ ಪರಿಸ್ಥಿತಿಯು ಅಭಿವೃದ್ಧಿಗೊಳ್ಳಲಿಲ್ಲ. ಮಧ್ಯವರ್ತಿ ಸರಕಾರವು ವಿನಿಯಂತ್ರಣಕ್ಕೆ ಒಪ್ಪದಿದ್ದರೂ ಕೆಲವು ಪ್ರಾಂತ್ಯಗಳು ನಿಯಂತ್ರಣವನ್ನು ತೆಗೆದು ಹಾಕಲು ಒತ್ತಾಯಪಡಿಸುತ್ತಿದ್ದವು. ಮದ್ರಾಸು ಪ್ರಾಂತ್ಯದ ನುರಿತ ಆಡಳಿತಗಾರರಾದ ಶ್ರೀ. ರಾಜಗೋಪಾಲಾಚಾರಿಯವರು ಕೆಲವು ತಿಂಗಳುಗಳ ಹಿಂದೆ ನಿಯಂತ್ರಣವನ್ನು ತಮ್ಮ ಪ್ರಾಂತ್ಯದಲ್ಲಿ ತೆಗೆದು ಹಾಕಿದರು. ಇದರ ಪರಿಣಾಮವನ್ನು ಹಲವರು ಕುತೂಹಲದಿಂದ ಎದುರು ನೋಡುತ್ತಿದ್ದರು. ಅದು ಇಂದಿನ ವರೆಗೆ ಜಯಪ್ರದವಾಗಿ ನಡೆದಿರುವದಲ್ಲದೆ ಕೇಂದ್ರ ಸರಕಾರವೂ ಕೂಡ ಇದನ್ನು ಹಿಂಬಾಲಿಸುವಂತೆ ಮಾಡಿದೆಯೆಂದರೆ ತಪ್ಪಾಗಲಾರದು.

ಕಳೆದ ವಾರದಲ್ಲಿ ಬೊಂಬಾಯಿಯಲ್ಲಿ ನಡೆದ ಎಲ್ಲಾ ಪ್ರಾಂತ್ಯಗಳ ಆಹಾರ ಮಂತ್ರಿಗಳ ಪರಿಷತ್ತಿನಲ್ಲಿ ಈ ವಿಚಾರವಾಗಿ ಬಹು ದೀರ್ಘ ಚರ್ಚೆ ನಡೆದು ಆಹಾರ ಪದಾರ್ಥಗಳ ನಿಯಂತ್ರಣವನ್ನು ತೆಗೆದು ಹಾಕುವದು ಉತ್ತಮವೆಂದು ನಿರ್ಧರಿಸಿರುವರು. ಈ ತೀರ್ಮಾನವು ನವಂಬರ್ ತಾ. ೧ರಿಂದ ಜಾರಿಗೆ ಬರುವದೆಂದೂ ಪ್ರಕಟವಾಗಿದೆ.

ಇಡೀ ಹಿಂದೂಸ್ಥಾನದಲ್ಲಿ ೧೯೪೭ರಲ್ಲಿ ಮೂರು ಮಿಲಿಯ ಟನ್ನುಗಳಷ್ಟು ಆಹಾರ ಪದಾರ್ಥಗಳು ಕಡಿಮೆ ಬೀಳುವದೆಂದೂ ಆದರೆ ಈ ವರ್ಷದಲ್ಲಿ ೨೦ ಲಕ್ಷ ಟನ್ನು ಉಳಿಕೆಯಾಗುವದೆಂದೂ, ಬರುವ ವರ್ಷದಲ್ಲಿ ೨೫ ಲಕ್ಷ ಟನ್ ಹೊರಗಿನಿಂದ ತರಿಸಲಾಗುವದೆಂದೂ ಅಂದಾಜು ಮಾಡಲಾಗಿದೆ. ಇಷ್ಟರ ವರೆಗೆ ತಜ್ಞರು ಕೊಡುತ್ತಿದ್ದ ಅಂಕೆಸಂಖ್ಯೆಗಳು ಅಷ್ಟೊಂದು ಸಮರ್ಪಕವೂ, ನಿಜಸ್ಥಿತಿಯನ್ನು ಸೂಚಿಸುವಂಥಾವೂ ಆಗಿರಲಿಲ್ಲವೆಂದೂ, ಇಂಡಿಯಾ ಸರಕಾರದ ಪಂಚವಾರ್ಷಿಕ ಯೋಜನೆಯು ಪೂರ್ತಿ ಜಾರಿಯಲ್ಲಿ ಬಂದನಂತರ ೩ ಮಿಲಿಯ ಟನ್ನುಗಳಷ್ಟು ಆಹಾರ ಪದಾರ್ಥ ಕಡಿಮೆಯಾಗುವದೆಂದೂ ಅಂದಾಜು ಮಾಡಿದ್ದರೂ ಈಗ ಈ ಯೋಜನೆಯು ಪ್ರಾರಂಭವಾಗುತ್ತಿರುವ ಇಂದಿನ ಸ್ಥಿತಿಯಲ್ಲೇ ಆಹಾರದ ಕೊರತೆಯು ಮೂರು ಮಿಲಿಯ ಕ್ಕಿಂಥಾ ಕಡಿಮೆಯಾಗಿದೆಯೆಂದೂ ಕೇಂದ್ರ ಸರಕಾರದ ಆಹಾರ ಮಂತ್ರಿಯವರು ಸೂಚಿಸಿರುವರು. ಇವರ ಹೇಳಿಕೆಯಂತೆ ಈಗ ಸರಾಸರಿ ವರ್ಷಕ್ಕೆ ೨೫ ಲಕ್ಷ ಟನ್ನುಗಳ ಕೊರತೆ ಇದ್ದರೂ ಕೆಲವು ವರ್ಷಗಳಲ್ಲೇ ಹಿಂದೂದೇಶವು ಆಹಾರದ ಮಟ್ಟಿಗೆ ತನ್ನ ಕಾಲಿನ ಮೇಲೆ ನಿಲ್ಲುವ ಪರಿಸ್ಥಿತಿಯು ಬರುವದೆಂದು ಕಂಡುಬರುತ್ತದೆ.

ಕಳೆದ ಏಳೆಂಟು ವರ್ಷಗಳಿಂದ ನಿಯಂತ್ರಣದ ಆಶ್ರಯದಲ್ಲಿ ಜೀವನ ನಡೆಸುತ್ತಿದ್ದವರಲ್ಲಿ ಕೆಲವರು ನಿಯಂತ್ರಣವನ್ನು ತೆಗೆದು ಹಾಕುವದರಿಂದ ಅನಿಷ್ಟ ಪರಿಣಾಮಗಳಾಗುವವೆಂದು ಹೆದರುತ್ತಾರೆ. ಬಟ್ಟೆಯ ವಿನಿಯಂತ್ರಣದ ಕಾಲಕ್ಕೂ ಈ ರೀತಿಯ ಅಭಿಪ್ರಾಯಗಳಿದ್ದವು. ಹಿಂದೂದೇಶದಲ್ಲಿ ಇಲ್ಲಿಯ ಜನರಿಗೆ ಬೇಕಾಗುವಷ್ಟು ಬಟ್ಟೆ ತಯಾರಾಗುತ್ತಿಲ್ಲವೆಂದು ಹೇಳುತ್ತಿದ್ದರೂ ಬಟ್ಟೆಯ ನಿಯಂತ್ರಣವನ್ನು ತೆಗೆದು ಹಾಕಿದ ಕೆಲವು ತಿಂಗಳುಗಳಲ್ಲೇ ಬಟ್ಟೆಯ ಕೊರತೆಯ ದುಷ್ಪರಿಣಾಮವೇನೂ ದೇಶದಲ್ಲಿ ಉಂಟಾಗಿರುವದಿಲ್ಲ. ಬದಲು ಜನರಿಗೆ ಬೇಕಾದಷ್ಟು ಬಟ್ಟೆಗಳು ದೊರೆಯುತ್ತಿವೆ. ಅದೇ ರೀತಿ ಆಹಾರ ಪದಾರ್ಥಗಳ ವಿನಿಯಂತ್ರಣದಿಂದಲೂ ದೇಶಕ್ಕೆ ಪ್ರಯೋಜನವಲ್ಲದೆ ತೊಂದರೆಯಾಗಲಾರದು.

ಕೊಡಗು ಉಳುವರಿ ಪ್ರಾಂತ್ಯ. ಇಲ್ಲಿ ಬತ್ತದ ಬೆಲೆಯ ನಿಯಂತ್ರಣವನ್ನು ತೆಗೆಯುವದೆಂದರೆ ದೇಶದ ಅಭಿವೃದ್ಧಿಯನ್ನು ಸಾಧಿಸಿದಂತಾಗುವದು. ಬೆಲೆಯ ನಿಯಂತ್ರಣವಿರುವದರಿಂದ ಬತ್ತ ಬೆಳೆಸುವವನಿಗೆ ಹೆಚ್ಚಿನ ಉತ್ತೇಜನ ದೊರೆಯುತ್ತಿಲ್ಲ. ಅವನ ಖರ್ಚು ಹೆಚ್ಚಾಗಿದ್ದರೂ ಉತ್ಪತ್ತಿಯು ಹೆಚ್ಚಾಗಿರುವದಿಲ್ಲ. ಬದಲು ವಾಣಿಜ್ಯ ಕೃಷಿಗಳ ಬೆಲೆಯು ಏರಿ ಅದರಿಂದ ತುಂಬಾ ಉತ್ಪತ್ತಿ ಬರುತ್ತಿದೆ. ಉದಾಹರಣೆಗೆ ತಿರುವಾಂಕೂರಿನಲ್ಲಿ ಒಂದು ಎಕರೆ ಭೂಮಿಯಲ್ಲಿ ಬತ್ತದ ಉತ್ಪತ್ತಿಯು ವರ್ಷಕ್ಕೆ ಬರೆ ರೂ. ೨೦೦ ಇರುವಾಗ್ಗೆ ಅಷ್ಟೇ ಸ್ಥಳದಲ್ಲಿ ತೆಂಗಿನಕಾಯಿ ಬೆಳೆಸಿದವನಿಗೆ ರೂ. ೭೫೦ ದೊರೆಯುತ್ತದೆ. ಆದ್ದರಿಂದ ರೈತನು ಲಾಭದಾಯಕವಾದ ಈ ವಾಣಿಜ್ಯ ಕೃಷಿಗಳ ಕಡೆ ಮನವೀಯುವದು ಸ್ವಾಭಾವಿಕ. ಇದನ್ನು ತಡೆಯಲು ಬತ್ತದ ಬೆಲೆಯನ್ನು ನಿಯಂತ್ರಿಸದೆ ಇತರ ಸಾಮಗ್ರಿಗಳ ಬೆಲೆಯೊಂದಿಗೆ ಬತ್ತಕ್ಕೂ ಯೋಗ್ಯ ಬೆಲೆ ದೊರೆಯುವಂತೆ ಆಗಬೇಕು. ಉಳುವರಿ ಪ್ರಾಂತಗಳಲ್ಲಿ ಮಾತ್ರವಲ್ಲ; ಕೊರತೆ ಇರುವ ಭಾಗಗಳಲ್ಲೂ ಆಹಾರ ಪದಾರ್ಥಗಳ ಬೆಲೆ ನಿಯಂತ್ರಣವನ್ನು ತೆಗೆದು ಹಾಕಿದರೇನೇ ಅದನ್ನು ಬೆಳೆಸಲು ಸಾಕಷ್ಟು ಪ್ರೋತ್ಸಾಹ ದೊರೆಯುವದು. ಕೇಂದ್ರ ಸರಕಾರದ ಈ ವಿನಿಯಂತ್ರಣ ನೀತಿಯು ಯುಕ್ತವೂ ಸ್ವಾಗತಾರ್ಹವೂ ಆಗಿದೆ. ಈ ಮಾರ್ಗದಿಂದಲೇ ಹಿಂದೂದೇಶವು ಕೆಲವೇ ವರ್ಷಗಳಲ್ಲಿ ತನ್ನ ಅವಶ್ಯಕತೆಗೆ ಬೇಕಾದಷ್ಟು ಆಹಾರ ಪದಾರ್ಥಗಳನ್ನು ಬೆಳೆಸಿಕೊಳ್ಳಲು ಶಕ್ತಿಯುಳ್ಳದ್ದಾಗುವದು. ಈ ವಿನಿಯಂತ್ರಣ ಯೋಜನೆಯನ್ನು ಜಯಪ್ರದಗೊಳಿಸಲು ಎಲ್ಲರೂ ಸಹಕರಿಸಬೇಕಾದುದು ಅತ್ಯವಶ್ಯ.

ವರ್ತಮಾನ

ಅಂತರಾಷ್ಟ್ರೀಯ ಸಹಕಾರ ದಿನಾಚರಣೆಯು ತಾ. ೧-೧೧-೪೭ ರಲ್ಲಿ ದೇಶದಾದ್ಯಂತ ಆಚರಿಸಲ್ಪಡುವದು.

ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎನ್. ಸೋಮಣ್ಣನವರು ತಾ. ೩ ರಿಂದ ಪ್ರಾರಂಭವಾಗುವ ಜನತಾ ಸಭೆಗಾಗಿ ತಾ. ೨೯ರಲ್ಲಿ ಡೆಲ್ಲಿಗೆ ಹೋಗಿರುವರು.

ತಾ. ೮ ಮತ್ತು ೯ರಲ್ಲಿ ಡೆಲ್ಲಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಅಭಿವೃದ್ಧಿ ಕೌನ್ಸಿಲಿನ ಸಭೆಯಲ್ಲಿ ಭಾಗವಹಿಸಲು ಮುಖ್ಯ ಮಂತ್ರಿ ಶ್ರೀ ಪೂಣಚ್ಚನವರು ತಾ. ೬ರಲ್ಲಿ ಹೋಗುವರು.

ಕೊಡಗಿನ ವಿದ್ಯಾಮಂತ್ರಿ ಶ್ರೀ ಕೆ ಮಲ್ಲಪ್ಪನವರು ತಾ. ೨-೧೧-೪೭ ರಲ್ಲಿ ಪ್ರೇಜರ್‌ಪೇಟೆಯ ಬೈಚನಹಳ್ಳಿ ವಯಸ್ಕರ ಶಿಕ್ಷಣ ಕೇಂದ್ರದಲ್ಲಿ ಓದಿ ಅಕ್ಷರಸ್ಥರಾದವರಿಗೆ ಯೋಗ್ಯತಾ ಪತ್ರಗಳನ್ನು ಹಂಚುವರು. ತಾ. ೨೧-೧೦-೪೭ರಲ್ಲಿ ತೊರೆನೂರು ಶಾಲೆಯಲ್ಲಿ ಶ್ರೀ ಸಿ ಎನ್. ವೆಂಕಪ್ಪಯ್ಯನವರೂ, ತಿರಂಗಾಲದಲ್ಲಿ ಶ್ರೀ ಎಂ. ಎಂ. ಬೆಳ್ಯಪ್ಪನವರೂ ಯೋಗ್ಯತಾ ಪತ್ರ ಹಂಚುವರು.

ತಾರೀಕು ೨೬-೧೦-೪೭ ರಿಂದ ಕೊಡಗಿನ ಜಿಲ್ಲಾ ಜಡ್ಜರಾದ ಶ್ರೀ. ಎನ್. ಮುದ್ದಪ್ಪನವರು ರಜೆಯಲ್ಲಿ ಹೋಗಿರುವರು. ಅವರ ಬದಲು ಯಾರನ್ನೂ ಈ ವರೆಗೆ ನೇಮಿಸಿರುವದಿಲ್ಲ.

ಹಾಸನದಲ್ಲಿ ಅಧ್ಯಾಪಕಿಯಾಗಿದ್ದ ಶ್ರೀಮತಿ ಕಂಬಿರಂಡ ಎನ್. ಮಾಚಮ್ಮ ಬಿ. ಎ., ಬಿ. ಟಿ. ಇವರು ತಾ. ೨೭ ರಲ್ಲೂ ಲೇಟ್ ರೇಂಜರ್ ಕೊಂಗಂಡ ಪೊನ್ನಪ್ಪನವರ ಪತ್ನಿಯವರು ತಾ. ೨೭ರಲ್ಲೂ ಶಿವಾಧೀನರಾದರು.

ತಾ. ೯-೧೧-೪೭ ರಲ್ಲು ವೀರಾಜಪೇಟೆ ಕೊಡವ ಸಮಾಜದ ವಾರ್ಷಿಕ ಮಹಾಸಭೆಯು ಮಹಿಳಾಸಮಾಜ ಕಟ್ಟಡದಲ್ಲು ನಡೆಯುತ್ತದೆ. ಸದರಿ ದಿನ ಬೆಳಗ್ಗೆ ೯ ಗಂಟೆಯಿಂದ ಸಾರ್ವಜನಿಕರಿಗೆ ಆಟ ಓಟಗಳ ಸ್ಪರ್ಧೆಯನ್ನು ತಾಲೋಕು ಮೈದಾನದಲ್ಲಿ ಏರ್ಪಡಿಸಲಾಗಿದೆ.

ಅಮ್ಮತ್ತಿನಾಡು ಕಾವಾಡಿಗ್ರಾಮದ ನೆಲ್ಲಮಕ್ಕಡ ಕಾರ್ಯಪ್ಪನವರು ಸುಮಾರು ೩೧ ವರ್ಷಗಳ ವರೆಗೆ ಅಮ್ಮತ್ತಿಯಲ್ಲಿ ಇನ್ಸ್‌ಪೆಕ್ಟರ್‌ ... ಇದ್ದುಕೊಂಡು ಉಪಾಧ್ಯಾಯ ವೃತ್ತಿಯನ್ನು ನಡೆಸಿ ಈ ತಿಂಗಳು ೧೫ ರಲ್ಲಿ ತಮ್ಮ ಉದ್ಯೋಗದಿಂದ ನಿವೃತ್ತಿಹೊಂದಿದರು.

ಕೊಡಗು ಸರಕಾರಿ ಕಾಲೇಜಿನ ಹಳೆ ವಿದ್ಯಾರ್ಥಿಗಳೆಲ್ಲರ ರಿಜಿಸ್ಟರೊಂದನ್ನು ಇಡುವ ಏರ್ಪಾಡನ್ನು ಮಾಡಲಾಗಿದೆ. ಆದ್ದರಿಂದ ಹಳೇ ವಿದ್ಯಾರ್ಥಿಗಳು ತಮ್ಮ ಈಗಿನ ವಿಳಾಸವನ್ನು ಕಾಲೇಜಿನ ಸುದ್ದಿ ಶಾಖೆಯ ಲೆಕ್ಚರರಿಗೆ ಬರೆದು ತಿಳಿಸಬೇಕೆಂದು ತಿಳಿಸುತ್ತಾರೆ.

ದೇವಸ್ಥಾನದ ಮೇನೇಜರು ಭಾಗಮಂಡಲದಲ್ಲು ಜಾತ್ರೆಗೆ ಇದ್ದ ಕೋಣೆಯಲ್ಲು ಒಂದು ಕೊಡೆ ಸಿಕ್ಕಿದೆ. ಸದರಿ ಕೊಡೆಯಲ್ಲು ಮೂರು ಅಕ್ಷರಗಳ ನೆಯ್ಗೆ ಇದೆ. ಸದರಿ ಅಕ್ಷರಗಳ ಪಂಚಯಕೊಟ್ಟು ಮಡಿಕೇರಿಯಲ್ಲಿರುವ ಮೇನೇಜರಿಂದ ಕೊಡೆಯನ್ನು ಹೊಂದಿಕೊಳ್ಳಬೇಕಾಗಿ ತಿಳಿಸೋಣಾಗಿದೆ.

ಮಂಗಳೂರಿನ ಎಲೋಸಿಯಸ್ ಕಾಲೇಜಿನಲ್ಲಿ ಇಂಟರ್ ಮೀಡಿಯಟ್‌ನಲ್ಲಿ ಓದುತ್ತಿರುವ ಶ್ರೀ ನಡಿಕೇರಿಯಂಡ ಎಸ್. ನಂಜಪ್ಪನವರು ಕಾಲೇಜ್ ವಾಕ್‌ಸ್ಪರ್ಧೆಯಲ್ಲಿ ಪ್ರಥಮ ಬಂದು ಕಾಲೇಜ್ ಜೋಸೆಫ ಬಹುಮಾನವನ್ನು ಪಡೆದಿರುವರು. ಇವರು ವಿಶ್ವವಿದ್ಯಾಲಯ ಅಂತರ್ ಕಾಲೇಜ್ ವಾಕ್‌ಸ್ಪರ್ಧೆಗಾಗಿ ಇನಾರ್ಕ್ಯುಲಮಿಗೆ ಹೋಗುವರು.

ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರಾದ ಶ್ರೀ ಕಕ್ಕಿಲ್ಲಾಯರವರು ತಾ. ೨೭ರಲ್ಲಿ ಸೋಮವಾರಪೇಟೆಯಲ್ಲೂ, ೨೮ ರಲ್ಲಿ ಕುಟ್ಟ ಮತ್ತು ಗೋಣಿಕೊಪ್ಪಲುಗಳಲ್ಲೂ, ೨೯ರಲ್ಲಿ ವೀರಾಜಪೇಟೆಯಲ್ಲೂ, ೩೦ರಲ್ಲಿ ಮೂರ್ನಾಡು ಮತ್ತು ಮಡಿಕೇರಿಗಳಲ್ಲೂ ಭಾಷಣ ಮಾಡಿ ಲೋಕಸಭೆಯ ಕಾರ್ಯಕಲಾಪ, ಪಂಚವಾರ್ಷಿಕ ಯೋಜನೆ, ಸಮಾಜ ವಿಕಾಸ ಯೋಜನೆ, ಅಮೇರಿಕಾ ಬಂಡವಾಳದ ಹಿಡಿತ ಮೊದಲಾದುವುಗಳನ್ನು ವಿವರಿಸಿದರು.

ನವಂಬರ್ ೧ನೇ ತಾರೀಖಿನಿಂದ ಸುರುವಾಗಲಿರುವ ಡಾ. ಮೋದಿಯವರ ಉಚಿತ ನೇತ್ರ ಚಿಕಿತ್ಸಾ ಶಿಬಿರದ ಸೆಕ್ರೆಟರಿಯವರಾದ ಧನ್ವಂತರಿಯ ಶ್ರೀ ಯಂ. ಸುಬ್ಬರಾಯರು ತಾ. ೨೭ ರಲ್ಲಿ ಮಡಿಕೇರಿಗೆ ಬಂದಿರುವರು. ಡಾ. ಮೋದಿಯವರು ೩೦ನೇ ತಾರೀಖಿನಲ್ಲಿ ಬರುವವರಿದ್ದಾರೆ. ಕೊಡಗು ಸರಕಾರವು ಡಾಕ್ಟರರನ್ನೂ ಅವರ ಸಿಬ್ಬಂದಿಯನ್ನೂ ಸರಕಾರದ ಅತಿಥಿಗಳನ್ನಾಗಿ ಪರಿಗಣಿಸಿ ಅವರಿಗೆ ಬೇಕಾಗುವ ಎಲ್ಲಾ ಅನುಕೂಲಗಳನ್ನೂ ಒದಗಿಸಿ ಕೊಡುವುದಾಗಿ ತಿಳಿದು ಬಂದಿದೆ.

ತಾ. ೨೪-೧೦-೪೭ ರಲ್ಲು ಪೊನ್ನಂಪೇಟೆ ಪ್ರೌಢ ಶಾಲೆಯ ಯೂನಿಯನ್ನಿನ ಆಶ್ರಯದಲ್ಲಿ ಸಂಯುಕ್ತ ರಾಷ್ಟ್ರ ಸಂಘ ದಿನಾಚರಣೆಯು, ಪೂರ್ವಾಹ್ನ ಮೆರವಣಿಗೆ ವಾಕ್ಸ್ಪರ್ಧೆ, ಅಪರಾಹ್ನ ಶ್ರೀ. ಬಿ. ಎನ್. ಸುಬ್ಬಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ, ಸ್ಪರ್ಧೆಯಲ್ಲಿ ಗೆದ್ದ ಕುಮಾರಿ ಬಿ. ಎಸ್. ಅಕ್ಕಮ್ಮ, ಶ್ರೀ ಓ. ಟಿ. ಬಿದ್ದಪ್ಪ ಮತ್ತು ಯಂ. ಸಿ. ಜೀಜಾಬಾಯಿಯವರಿಗೆ ಬಹುಮಾನ ವಿತರಣೆ, ಶ್ರೀ ಎ. ಕೃಷ್ಣಮೂರ್ತಿಯವರಿಂದ ಸಂ. ರಾ. ಸಂಘದ ವಿಷಯ ಭಾಷಣ ಅನಂತರ ಶ್ರೀ. ಗಂಗಾಧರ ಶರ್ಮ ಇವರಿಂದ ಹರಿಕಥಾ ಕಾಲಕ್ಷೇಪ ಮೊದಲಾದ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ನಡೆಯಿತು.

ಮದ್ರಾಸು ವಿಶ್ವವಿದ್ಯಾನಿಲಯದ ಅಂತರ್ಕಾಲೇಜು ಹಾಕಿ ಪಂದ್ಯಾಟವು ತಾರೀಖು ೪ ರಿಂದ ಮಂಗಳೂರಿನಲ್ಲಿ ಪ್ರಾರಂಭವಾಗುತ್ತದೆ. ಕಳೆದ ವರ್ಷ ಯೂನಿವರ್ಸಿಟಿ ಕಪ್ಪನ್ನು ಗೆದ್ದ ಕೊಡಗು ಸರಕಾರಿ ಕಾಲೇಜಿನ ಟೀಮು ತಾ. ೪ ರಲ್ಲಿ ಮಂಗಳೂರು ಗವರ್ನಮೆಂಟ್ ಕಾಲೇಜ್ ಟೀಮಿನೊಡನೆಯೂ ಇದರಲ್ಲಿ ಗೆದ್ದವರು ತಾ. ೬ ರಲ್ಲಿ ಎಲೋಸಿಯಸ್ ಕಾಲೇಜು ಟೀಮಿನೊಡನೆಯೂ ಆಡುವರು. ಈ ಕೇಂದ್ರದಲ್ಲಿ ಗೆದ್ದ ಟೀಮುಗಳ ಕಡೇ ಆಟವು ತಾ. ೧೦ ಮತ್ತು ೧೧ ರಲ್ಲಿ ಮಡಿಕೇರಿಯಲ್ಲಿ ನಡೆಯುವುದು. ತಾ ೧೦ರಲ್ಲಿ ಕೊಚ್ಚಿನ್ ಸೇರಿದ ಉತ್ತರ ಮಲಬಾರು ಟೀಮಿಗೂ ದಕ್ಷಿಣ ಮಲಬಾರ್ ಟೀಮಿಗೂ ಆಟ ನಡೆದು ತಾ. ೧೧ರಲ್ಲಿ ಇವರಲ್ಲಿ ಜಯಶೀಲರಾದವರಿಗೂ ಮಂಗಳೂರು ಕೇಂದ್ರದಲ್ಲಿ ಜಯಶೀಲರಾದವರಿಗೂ ಫೈನಲ್ ಆಟ ನಡೆಯುವುದು.

ಕೊಡಗು ಸರಕಾರಿ ಕಾಲೇಜಿನ ಆಶ್ರಯದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಎಳನೇ ದಿನಾಚರಣೆಯು ತಾ. ೨೪ರಲ್ಲಿ ಕೊಡಗಿನ ಗೃಹ ಮಂತ್ರಿ ಶ್ರೀ ಕೆ. ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಿನ್ಸಿಪಲರಾದ ಶ್ರೀ ಅಚ್ಯುತನ್ ಪಿಳ್ಳೆಯವರೂ, ಲೆಕ್ಚರರಾದ ಸಿ ಪಾಲಿನ್, ಬಿ. ಸಿ ಪೊನ್ನಪ್ಪ, ಎಂ ಎ. ರಾಮಚಂದ್ರ, ಸತ್ಯನಾರಾಯಣರಾವ್, ಎಸ್ ರಾಜೀವಿ ಬಾಯಿ, ಮತ್ತು ವಿ ವೆಂಕಟರಮಣ ಇವರುಗಳೂ, ವಿದ್ಯಾರ್ಥಿಗಳಾದ ಶ್ರೀ ಎಸ್. ಪಿ. ಕುಶಾಲಪ್ಪ ಪಿ ಎಸ್. ಕಾವೇರಿ, ಎ, ಪಿ ಮುತ್ತಣ್ಣ ಮತ್ತು ಶಂಕರಭಟ್ಟ ಇವರುಗಳೂ ಭಾಷಣ ಮಾಡಿದರು. ಸಂಯುಕ್ತ ರಾಷ್ಟ್ರ ಸಂಘಕ್ಕೆ ಸಂಬಂಧಿಸಿದ ಚಿತ್ರಗಳ ಬೋಧಪ್ರದ ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು.

ಕೃತಜ್ಞತಾ ವಂದನೆ.

ತಾರೀಕು ೬-೧೦-೫೩ ರಲ್ಲಿ ನಿಧನ ಹೊಂದಿದ ನನ್ನ ಪತ್ನಿ ಮುತ್ತಮ್ಮನ ಅಕಾಲ ವಿಯೋಗದಿಂದ ನನಗುಂಟಾದ ಅಪಾರ ದುಃಖದ ಕಾಲದಲ್ಲಿ ಖುದ್ದಾಗಿ ಬಂದೂ ಪತ್ರ ಮುಖೇನವೂ ತಮ್ಮ ಸಂತಾಪವನ್ನು ಸೂಚಿಸಿ ನನ್ನ ದುಃಖದಲ್ಲಿ ಭಾಗಿಗಳಾದ ನನ್ನ ಬಂಧು ಬಳಗದವರಿಗೂ, ಮಿತ್ರರಿಗೂ ಪ್ರತ್ಯೇಕ ಪ್ರತ್ಯೇಕ ಬರೆದು ನನ್ನ ಕೃತಜ್ಞತೆಯನ್ನು ಅರ್ಪಿಸಲು ಅಶಕ್ತನಾದ ಕಾರಣ ಅವರೆಲ್ಲರಿಗೂ ಈ ಮೂಲಕ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಅರ್ಪಿಸುತ್ತೇನೆ

ದಾ. ಕಡೇಮಾಡ ಕರುಂಬಯ್ಯ.

For Sale.

Car-Austin. 16 Model 1948. In good condition with two spare springs, three new tyres, spare new battery. Done 25.000 miles. Price Rs. 7,000 or near offer. Apply,-

UTHAIYA.
Sidapur Estate,
Sidapur post, S. Coorg

ಓದುಗರ ಓಲೆಗಳು

ಮರೆನಾಡು ಜಾನುವಾರು ಆಸ್ಪತ್ರೆ.

ಈ ಆಸ್ಪತ್ರೆಯು ಈ ನಾಡಿನ ಬಂಗರಕೇರಿ ಗ್ರಾಮದ ಒಬ್ಬರ ಖಾಸಗಿ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ. ಇಲ್ಲಿರುವ ಸ್ಟಾಕ್ ಮೇನ್ಗಳು ಒಬ್ಬ ಯುವಕರು. ಈ ಆಸ್ಪತ್ರೆಯಲ್ಲಿ ಹಲ ಕೆಲವು ಔಷಧಿಗಳು ಮತ್ತು ಕೆಲವು ಖಾಲಿ ಬುಡ್ಡಿಗಳು ಮಾತ್ರ ಇವೆ. ಜಾನುವಾರುಗಳ ಖಾಯಿಲೆಗಳಿಗೆ ಔಷಧಿ ಇಲ್ಲದಿರುವುದಲ್ಲದೆ ಈ ಆಸ್ಪತ್ರೆಯಿಂದ ಕೆಲವು ಜನರಿಗೆ ಮಾತ್ರ ಸಿವಿಲ್ ಆಸ್ಪತ್ರೆಯಂತೆ ಔಷಧಿ ಕೊಡಲ್ಪಡುತ್ತದೆ. ಕೆಲವು ಸಮಯದ ಹಿಂದೆ ಒಬ್ಬರು ನಾಯಿಗೆ ಹೊಟ್ಟೆ ನೋವಿಗೆ ಔಷಧಿ ಕೇಳುವಾಗ ಸೋಡಾಹುಡಿ ಇಲ್ಲವೆ ಕೇಸ್ಟರ್ ಆಯಿಲ್ ಕೊಡಿ ಎಂದರು. ಮತ್ತೂ ನಟ ಕೆಲಸದ ಸಮಯದಲ್ಲಿ ದನಗಳಿಗೆ ಖಾಯಿಲೆ ಬಂದು ಇವರಲ್ಲಿಗೆ ಹೋಗಿ ಕೇಳುವಾಗ ಇಲ್ಲಿ ಔಷಧಿ ಇಲ್ಲ, ಪೊನ್ನಂಪೇಟೆಯಿಂದ ನೀವು ತಂದು ಕೊಟ್ಟರೆ ಮಾತ್ರ ನಾನು ಇಂಜಕ್ಷನ್ ಮಾಡಿಕೊಡುತ್ತೇನೆಂದೂ ಹೇಳಿ ಕಳುಹಿಸಿದರು. ಇದಲ್ಲದೆ ಈ ಆಸ್ಪತ್ರೆಯಲ್ಲಿ ಸಮಯ, ಶಿಸ್ತು ಇಲ್ಲ. ಇವರನ್ನು ಕಾಣಬೇಕಾದರೆ ವಿಶೇಷ ಪ್ರಯತ್ನವೇ ಆಗಬೇಕು. ಈ ಆಸ್ಪತ್ರೆಯು ಯಾವಾಗಲೂ ಮುಚ್ಚಿಯೇ ಇರುವುದು ಹೆಚ್ಚು. ತೆರೆಯುವುದು ಕಡಿಮೆ. ಮರೆನಾಡ ಪಶುವೈದ್ಯ ಶಾಲೆಯೆಂಬ ಬೋರ್ಡು ಮಾತ್ರ ಕಾಣುತ್ತದೆ. ಕೆಲವು ಸಮಯ ಈ ಆಸ್ಪತ್ರೆಯಲ್ಲಿ ಸಂಗೀತ ನಡೆಯುವುದೂ, ವಾಚನಾಲಯದಂತೆ ಕೆಲವು ಯುವಕರು ಸೇರಿಕೊಂಡು ಇರುವುದೂ ಇದೆ. ಇಲ್ಲಿ ನಿಯಮಿಸಲ್ಪಟ್ಟ ನೌಕರರು ಏನು ಕೆಲಸ ಮಾಡುತ್ತಾರೆ ಎಂದು ಹೇಳಬೇಕು. ಜನ ಉಪಕಾರಕ್ಕೆಂದು ಸರಕಾರದವರು ತೆರೆಸಿದ ರೈತರ ಬೆನ್ನೆಲುಬಾದ ಜಾನುವಾರುಗಳ ಆಸ್ಪತ್ರೆಯಿಂದ ಇಂದಿನ ಈ ಪರಿಸ್ಥಿತಿಯಲ್ಲಿ ಯಾವ ಪ್ರಯೋಜನವೂ ತೋರುವುದಿಲ್ಲ. ಇನ್ನಾದರೂ ಇವರು ಬೇಕಾಗುವ ಔಷಧಿಗಳನ್ನು ತರಿಸಿಕೊಂಡು ಸಮಯಕ್ಕೆ ಸರಿಯಾಗಿ ಆಸ್ಪತ್ರೆಯನ್ನು ನಿಜವಾದ ರೀತಿಯಲ್ಲಿ ನಡೆಸಿಕೊಂಡು ಬರುವರಾಗಿ ಆಶೆ.

'ನಾಡಿಗ'

ಪಟೇಲಗಾರಿಕೆ.

ಪಟೇಲಗಾರಿಕೆಯು ಹುಟ್ಟಿದಂದಿನಿಂದ ಇಂದಿನ ತನಕ ರಾಜರಂತೆ ವಂಶಪಾರಂಪರ್ಯವಾಗಿ ನಡೆದು ಬಂದಿದೆ. ಪಟೇಲರ ಹಿರಿಯ ಮಗನ ಹೆಸರೇ ಬರಲಿ ಅಥವಾ ಆ ಜಾಗೆಗೆ ಅವನು ಅರ್ಹನು ಆಗದಿದ್ದರೂ ಅವನ ಹಕ್ಕು. ಆತನ ಮರಣ ದಿನಕ್ಕೆ ಅವನ ಹಿರಿಯ ಮಗನ ಹಕ್ಕು. ಈ ಪದ್ಧತಿ ರಾಜಪ್ರಭುತ್ವದ ಕಾಲದಲ್ಲಿ ರಾಜಮಹಾರಾಜರುಗಳು ಜಿಕ್ಕಮಾಲೆಗಾಗಿ ಪ್ರಜಾಸರಕಾರ ಸ್ಥಾಪನೆಯಾಗಿ ದೇಶವು ಮುಂದೆ ಸಾಗುತ್ತಿರುವ ಈ ಕಾಲದಲ್ಲಿ ಕೂಡ ಈ ಹಿಂದಿನಂತೆ ಈಗಲೂ ನಡೆಯುತ್ತಿರುವ ಪಟೇಲಗಾರಿಕೆಯನ್ನು ರದ್ದು ಮಾಡಿ ಚುನಾಯಿತ ಪಟೇಲಗಾರಿಕೆಯನ್ನು ಏರ್ಪಡಿಸಲು ಸಮ್ಮಂಧಪಟ್ಟ ಅಧಿಕಾರಿಗಳು ಯೋಚಿಸಿ ಏರ್ಪಡಿಸುವರಾಗಿ ಆಶಿಸುತ್ತೇನೆ.

ಎಂ ಎಂ ಮಾಚಯ್ಯ.

ಕೊಡಗಿನ ಮಠದ ಭೂಮಿಗಳ ದುರವಸ್ಥೆ.

ಬ್ರಿಟಿಷರ ಆಳ್ವಿಕೆಯು ಮೊದಲು ಕೊಡಗು ದೇಶವನ್ನು ಅನೇಕ ಅರಸರು ಆಳಿ ಆಳಿದರು. ಹಿಂದಿನ ಅರಸರ ಆಳ್ವಿಕೆಯ ಕಾಲದಲ್ಲಿ ದೇಶದ ಕೆಲವೆಡೆ ಮಠಗಳನ್ನು ಸ್ಥಾಪಿಸಿ ಅವುಗಳು ಸರಿಯಾಗಿ ನಡೆಯುವಂತೆ ಎಷ್ಟೋ ಜಮೀನುಗಳನ್ನು ಉಂಬಳಿ ಮತ್ತು ಜಹಗೀರಾಗಿ ಕೊಟ್ಟು ನಿತ್ಯವೂ ಅನ್ನದಾನ ನಡೆಯುವಂತೆ ಏರ್ಪಾಡು ಮಾಡುತ್ತಿದ್ದರು. ಹಾಗೆ ಕೊಡಗು ಅರಸರ ಕಾಲದಲ್ಲಿ ಮಠಗಳಿಗೆ ಉಂಬಳಿಯಾಗಿ ಕೊಟ್ಟಿರುವ ಜಮೀನುಗಳು ಇಂದಿಗೂ ಉಂಬಳಿಯಾಗಿಯೇ ಇದೆ. ಪೂರ್ವದಲ್ಲಿ ದೂರ ಪ್ರಯಾಣಿಕರೂ, ಸನ್ಯಾಸಿಗಳೂ ಇಂಥಾ ಮಠಗಳನ್ನು ಆಶ್ರಯಿಸಿ ತಮ್ಮ ಪ್ರಯಾಣವನ್ನು ಸುಗಮವಾಗಿ ಸಾಗಿಸುತ್ತಿದ್ದರು. ನಿತ್ಯವೂ ಸರಿಯಾದ ಕ್ರಮದಲ್ಲಿ ಅನ್ನದಾನ ನಡೆಯುತ್ತಿತ್ತು. ಮಠಕ್ಕೆ ಸೇರಿದ ಜಮೀನುಗಳು ಸರಿಯಾಗಿ ವ್ಯವಸಾಯ ಮಾಡಲ್ಪಡುತ್ತಿದ್ದವು.

ಭೂಮಿ ಕಾಣಿ ಇಲ್ಲದವರನೇಕರು ಮಠದ ಭೂಮಿಗಳನ್ನು ಸರಿಯಾದ ಕ್ರಮದಲ್ಲಿ ವ್ಯವಸಾಯ ಮಾಡಿ ನಿರ್ದಿಷ್ಟವಾದ ಗುತ್ತಿಗೆಯನ್ನು ಮಠಾಧಿಪತಿಗಳಿಗೆ ನಿಯಮಿತ ಕಾಲದಲ್ಲಿ ಸಲ್ಲಿಸುತ್ತಿದ್ದರು. ಇದರಿಂದ ಭೂಮಿ ಇಲ್ಲದವರ ಜೀವನವೂ ಈ ಮಠದ ಭೂಮಿಗಳನ್ನು ಮಾಡಿ ಸಾಗಿಸುತ್ತಿದ್ದಲ್ಲದೆ ಇದ್ರಿ ಮಠಗಳಿಗೂ ಸರಿಯಾದ ಉತ್ಪತ್ತಿಯು ದೊರೆತ ಮಠಗಳು ಬಹಳ ಉತ್ತಮ ಸ್ಥಿತಿಯಲ್ಲಿದ್ದುವು.

ಪೂರ್ವಕಾಲದಲ್ಲಿ ಮಠಗಳಲ್ಲಿ ತುಂಬಾ ಧರ್ಮಕಾರ್ಯಗಳು ನಡೆಯುತ್ತಿದ್ದವು. ಈಗ ಕೆಲವು ಮಠಗಳ ಪರಿಸ್ಥಿತಿ ಶೋಚನೀಯವಾಗಿದೆ. ಅನ್ನದಾನವೇ ಇಲ್ಲ. ಕಾರಣ ಮಠದ ಭೂಮಿಗಳು ಸರಿಯಾದ ಕ್ರಮದಲ್ಲಿ ವ್ಯವಸಾಯ ನಡೆಯದೆ ಪಾಳು ಬಿದ್ದಿರುವುದು ಮತ್ತು ಮಠದ ಕೆಲವು ಭೂಮಿಗಳನ್ನು ಭೂಮಾಲೀಕರು ಕಡಿಮೆ ಗುತ್ತಿಗೆಗೆ ವಹಿಸಿಕೊಂಡು, ಅವು ಅವನ್ನು ತಮ್ಮ ಪಾರಿಗಾರರಿಗೆ ಬಿಟ್ಟು ಕೊಂಡು ಹೆಚ್ಚಿನ ಗುತ್ತಿಗೆಗೆ ಕೊಟ್ಟು ವ್ಯವಸಾಯ ಮಾಡಿಸಿಕೊಂಡು ಬರುವುದಾಗಿದೆ. ಇದರಿಂದ ಮಠಗಳಿಗಾಗಲೀ ಮಠದ ಭೂಮಿಗಳನ್ನು ಕಷ್ಟಪಟ್ಟು ಮಾಡುವವರಿಗಾಗಲೀ ಯಾವ ಪ್ರಯೋಜನವೂ ಇಲ್ಲ. ಇವರ ಹೆಚ್ಚಿನ ಲಾಭವು ಮಧ್ಯವರ್ತಿಗಳ ಪಾಲಿಗೆ ಸೇರುತ್ತಲಿದೆ. ಕೆಲವೆಡೆ ಮಠದ ಭೂಮಿಗಳನ್ನು, ಕಾಡು ಕಡಿದು ಧನಿಕರು ಭೋಗ್ಯ ಮಾಡಿಸಿಕೊಂಡು ಸ್ವಾಧೀನ ಮಾಡಿಕೊಂಡಿರುವುದೂ ಕಾಣುತ್ತಲಿದೆ. ಕೆಲವೆಡೆ ಎಂಬಾ ಜಮೀನುಗಳು ಪಾಳುಬಿದ್ದಿವೆ. ಆದರೆ ಇಂತಹ ಮಠಗಳಿಗೊಳಪಟ್ಟ ಜಮೀನುಗಳನ್ನು ಸರಕಾರವು ವಶಪಡಿಸಿಕೊಳ್ಳಲೇಬೇಕು. ಈಗಿನ ಪರಿಸ್ಥಿತಿಗಳಲ್ಲಿ ಸಾಧ್ಯವಿಲ್ಲದ ಪಕ್ಷದಲ್ಲಿ ನಮ್ಮಲ್ಲಿ ಅನೇಕರು ಭೂಮಿ ಕಾಣಿ ಇಲ್ಲದೆ ತಮ್ಮ ಜೀವನಕ್ಕೆ ತೊಂದರೆ ಪಡುವವರನೇಕರಿದ್ದಾರೆ. ಅಂತಹ ಬಡ ಕುಟುಂಬದವರಿಗೆ ಈ ಮಠಕ್ಕೆ ಸೇರಿದ ಭೂಮಿಗಳಲ್ಲಿ ಪಾಳುಬಿದ್ದಿರುವ ಮತ್ತು ಸರಿಯಾಗಿ ಸಾಗುವಳಿ ನಡೆಯುತ್ತಿಲ್ಲದ ಜಮೀನನ್ನು ಒಂದು ಸಂಸಾರಕ್ಕೆ ಮೂರು ಎಕ್ರೆ ಜಮೀನು ಮೂರು ಎಕ್ರೆ ಬಾಗದಂತೆ ವರ್ಷಕ್ಕೆ ನಿರ್ದಿಷ್ಟವಾದ ಗುತ್ತಿಗೆಯನ್ನು ಮಠಕ್ಕೆ ಸಲ್ಲಿಸುವಂತೆ ನಿರ್ಧರಿಸಿ ಹತ್ತು ಹದಿನೈದು ವರ್ಷಗಳ ವರೆಗೆ ಸಾಗುವಳಿ ಮಾಡಲು ಕೊಡುವಂತೆ ಈವತ್ತು ಈಗಿನ ಸರಕಾರ ಏರ್ಪಾಡು ಮಾಡುವುದರಿಂದ ಬಡ ಸಂಸಾರಿಕನ ಜೀವನವು ಸುಖ ಸಾಗುವುದಲ್ಲದೆ ಮಠಕ್ಕೂ ಹೆಚ್ಚಿನ ಉತ್ಪತ್ತಿ ದೊರೆತು ಮಠಗಳು ಮೊದಲಿನಂತೆ ಊರ್ಜಿತಗೊಳ್ಳುವ ಸಂಭವವಿರುವುದಲ್ಲದೆ ಭೂಮಿ ಇಲ್ಲದವರಿಗೆ ಭೂಮಿ ದೊರಕಿಸಿ ಕೊಟ್ಟು ಹೆಚ್ಚಿಗೆ ಬೆಳೆಯಿರಿ ಆಂದೋಲನಕ್ಕೆ ಸರಕಾರದ ಕರ್ತವ್ಯಕ್ಕೆ ಸರಿಯಾದ ಸಹಾಯವಾಗುವುದು.

ಹನುಮಂತರಾಜಯ್ಯ.

ಗೋಣಿಕೊಪ್ಪಲು ಮಾರ್ಕೆಟ್.

ದಕ್ಷಿಣ ಕೊಡಗಿನ ಈ ಪಟ್ಟಣದಲ್ಲಿ ಪ್ರತಿ ಭಾನುವಾರ ಮೈಸೂರು ಮಲಬಾರಿನ ಸರಕುಗಳ ಮತ್ತು ದನಗಳ ವ್ಯಾಪಾರ ನಡೆಯುವ ಭಾರಿ ಸಂತೆ ನಡೆಯುತ್ತದೆ.

ವರ್ಷ ಒಂದರ ಸುಮಾರು ನಾಲ್ಕೈದು ಸಾವಿರ ರೂಪಾಯಿ ಮಾರ್ಕೆಟ್ ಸುಂಕ ಇಲ್ಲಿ ದೊರೆಯುತ್ತಿದೆ. ಆದರೆ ಇಲ್ಲಿ ಬಟ್ಟೆ ಮತ್ತು ಮಾಂಸ ವ್ಯಾಪಾರಕ್ಕೆ ಮಾತ್ರ ಹೆಂಚು ಕಟ್ಟಡಗಳಿವೆ. ಆದರೆ ಈ ಕಟ್ಟಡಗಳೆಲ್ಲಾ ಬಹು ಹೀನಸ್ಥಿತಿಯಲ್ಲಿವೆ. ಇವಲ್ಲದೆ ಜೀವನ ಧಾರ ಸಾಮಾನು ಇಡಲು ನೂರಾರು ಹುಲ್ಲು ಚಾವಣಿಗಳಿವೆ. ಮಳೆಗಾಲದಲ್ಲಿ ಸಾಮಾನು ನೆನೆದು, ಕೊಳೆತು ಅನಾರೋಗ್ಯಕ್ಕೆ ಕಾರಣವಾದರೆ ಬಿಸಿಲುಗಾಲದಲ್ಲಿ ತರಕಾರಿ ಬಾಡಿ ಹೋಗುತ್ತದೆ.

ಈ ರೀತಿ ಯೋಗ್ಯ ಕಟ್ಟಡ ಇಲ್ಲದ ಪ್ರಯುಕ್ತ ನೋಟಿಫೈಡ್ ಏರಿಯಾ ಏರ್ಪಾಡನ್ನು ಈಗ ಮಾಡಲಾಗಿದೆ. ಈ ಕಮಿಟಿಯಲ್ಲಿ ಕಾರ್ಯತತ್ಪರತೆಯಿಂದ ನಾಡಿನ ಅಭಿವೃದ್ಧಿ ಬಯಸುವ ಪ್ರತಿನಿಧಿಗಳು ಮತ್ತು ಸದಸ್ಯರು ಇದ್ದಾರೆ. ಇವರು ಪುರದ ಹಿತಚಿಂತನೆಯ, ಒಳ್ಳೆ ಹೆಚ್ಚಿನ ತೊಂದರೆ ತೆಗೆಯಬೇಕಾಗಿದೆ. ವೀರಾಜಪೇಟೆ ಇನ್ನಿತರ ಸ್ಥಳಗಳ ಮಾರ್ಕೆಟಿನ ರೀತಿ ಈ ಪುರದಲ್ಲಿಯೂ ಮಾರ್ಕೆಟ್ ಕಟ್ಟಡ ಕಟ್ಟಲು ಸರಕಾರದಿಂದ ಸಾಲದ ರೂಪದಲ್ಲಿ ಅವಶ್ಯವಿರುವ ಹಣ ಕಡಿಮೆ ಬಡ್ಡಿ ದರದಲ್ಲಿ ಪಡೆದು ಮಾಡಬೇಕು. ಕೊಡಗಿನ ಅತಿ ದೊಡ್ಡ ಸಂತೆ ನಡೆಯುವ ಈ ಸ್ಥಳಕ್ಕೆ ಇಂಥಾ ಸಹಾಯ ಅಗತ್ಯ. ಇದರಿಂದ ಮತ್ತು ಪುರನಿವಾಸಿಗಳ ಸಹಕಾರದಿಂದ ಈ ಗೋಣಿಕೊಪ್ಪಲು ಪಟ್ಟಣದಲ್ಲಿ ಮಾರ್ಕೆಟ್ ಶೀಘ್ರವಾಗಿ ಈ ಹುಲ್ಲು ಚಾವಣಿಗಳೆಲ್ಲಾ ಮಾಯವಾಗಲು ನೋಟಿಫೈಡ್ ಏರಿಯಾದವರು ಶ್ರಮಿಸುವರೇ?

ಯಂ. ಬಿ. ಸೋಮಯ್ಯ.

ಮಧ್ಯ ಕೊರಿಯದಲ್ಲಿ ಹೋರಾಟ.

ತಾ. ೨೫ರ ಬೆಳಗ್ಗೆ ಕೊರಿಯನರು ಪುನಃ ಶತ್ರುಗಳ ಮೇಲೆ ಬಿದ್ದು ಕಾದಾಡಿದರು. ಆದರೆ 'ಟ್ರಿನ್ ಪಾಯಿಂಟ್' ಗುಡ್ಡದ ಬಳಿ ಎತ್ತರ ಪ್ರದೇಶದಿಂದ ಕಮ್ಯೂನಿಷ್ಟರು ಅವರನ್ನು ಓಡಿಸಿದರು.

ಈ ಯುದ್ಧವು ತಾ ೨೪ರಲ್ಲಿ ಆರಂಭವಾಗಿತ್ತು. ದಕ್ಷಿಣ ಕೊರಿಯನರು ಆ ಗುಡ್ಡವನ್ನು ತಾ ೨೪ರ ಮಧ್ಯಾಹ್ನದ ಯುದ್ಧದಲ್ಲಿ ವಶಪಡಿಸಿಕೊಂಡರು. ವಶಪಡಿಸಿಕೊಳ್ಳುವ ಮೊದಲು ಸಂಯುಕ್ತ ಜನಾಂಗಗಳ ವಿಮಾನಗಳು ಆ ಪ್ರದೇಶದ ಮೇಲೆ ೪೦,೦೦೦ ರಾತಲುಗಳಷ್ಟು ಸಿಡಿಮದ್ದನ್ನು ಸುರಿಸಿದುವು ಮಾತ್ರವಲ್ಲ ಬೆಂಕಿಯ ದ್ರಾವಕವನ್ನು ಸುರಿಸಿ ಚೈನೀಯರನ್ನು ಅವರ ದೃಢ ಭದ್ರಸ್ಥಳಗಳಿಂದ ಓಡಿಸಲು ಪ್ರಯತ್ನಿಸಿದರು.

ಆದರೆ ದಕ್ಷಿಣ ಕೊರಿಯನರ ಧಾಳಿಯ ಶಕ್ತಿಯು ಕಡಿಮೆಯಾಗುತ್ತ ಬಂದಿತು. ಕಾರಣ ಚೈನೀಯರು ಫಿರಂಗಿಗಳನ್ನು ಅವಿಚ್ಛಿನ್ನವಾಗಿ ಪ್ರಯೋಗಿಸಿದ ಕಾರಣ ದಕ್ಷಿಣ ಕೊರಿಯನರ ಧಾಳಿಯು ಸ್ವಲ್ಪ ನಿಧಾನವಾಯಿತು.

೫ ನೇ ವಿಮಾನ ದಳದ ಕೇಂದ್ರದಿಂದ ಬಂದ ವಾರ್ತೆಗನುಸಾರವಾಗಿ ಸಂಯುಕ್ತ ಜನಾಂಗಗಳ ೪ ವಿಮಾನಗಳು ೧ ವಾರದಲ್ಲಿ ಕೊರಿಯದ ಯುದ್ಧದಲ್ಲಿ ನಷ್ಟವಾದುವು. ಇದೇ ಸಮಯದಲ್ಲಿ ಕಮ್ಯೂನಿಷ್ಟರ ೩ ವಿಮಾನಗಳು ಯುದ್ಧದಲ್ಲಿಯೂ, ಬೇರೆ ಕಾರಣದಿಂದ ಎರಡು ವಿಮಾನಗಳೂ ನಾಶಹೊಂದಿವೆಯೆಂದೂ ತಿಳಿದುಬರುತ್ತದೆ. ಶತ್ರುಗಳ ೩ ವಿಮಾನಗಳು ಜಖಂಗೊಂಡಿವೆ. ಈ ವಾರ್ತೆಗಳು ಸಂಯುಕ್ತ ಜನಾಂಗಗಳ ಮಿಲಿಟರಿ ಖಾತೆಯವರಿಂದ ಪ್ರಕಟಿಸಲ್ಪಟ್ಟವುಗಳು.

ಕೊರಿಯ ಯುದ್ಧ.

ಮಿ. ಡೀನ್ ಎಕಿಸನ್ನರ ವಿವರ.

ಸಂಯುಕ್ತ ರಾಷ್ಟ್ರಗಳ ಜನರಲ್ ಎಸೆಂಬ್ಲಿಯ ರಾಜಕೀಯ ಸಮಿತಿಯ ಮುಂದೆ ಮಿ. ಡೀನ್ ಎಕಿಸನ್ನರು ಕೊರಿಯದ ಯುದ್ಧದ ಸಕಲ ವಿವರಗಳನ್ನು ತಿಳಿಸಿದ್ದಲ್ಲದೆ, ಸಂಯುಕ್ತ ಜನಾಂಗಗಳು ತಾತ್ಕಾಲಿಕ ರಾಜಿಗೆ ಪ್ರಯತ್ನ ನಡೆಸಿದರೆಂದೂ ಆದರೆ ಕಮ್ಯೂನಿಷ್ಟರು ಅದಕ್ಕೆ ವಿರೋಧವಾಗಿ ನಡೆಯುತ್ತಿದ್ದಾರೆಂದೂ ಸೂಚಿಸಿದರು. ಸಂಯುಕ್ತ ಜನಾಂಗಗಳ ಶರತ್ತದ ಮೇಲೆ ತಾತ್ಕಾಲಿಕ ರಾಜಿಗೆ ಒಪ್ಪಬೇಕೆಂದು ಬ್ರಿಟಿಷ್ ಪ್ರತಿನಿಧಿಗಳು ಕಮ್ಯೂನಿಷ್ಟರನ್ನು ಪ್ರಾರ್ಥಿಸಿಕೊಳ್ಳಬೇಕೆಂದೂ ಸೂಚಿಸಿದರು. ಸಂಯುಕ್ತ ಜನಾಂಗಗಳು ಶಾಂತಿಸ್ಥಾಪನೆಗೆ ಕೊರಿಯದಲ್ಲಿ ತುಂಬ ಪ್ರಯತ್ನ ಮಾಡಿರುವುದಾಗಿಯೂ, ಕಮ್ಯೂನಿಷ್ಟರು ಅದಕ್ಕೆ ವಿರೋಧವಾಗಿ ನಡೆದಿರುವರೆಂದೂ ಹೇಳಿದರು. ಕೊರಿಯದ ಕಮ್ಯೂನಿಸ್ಟ್ ಸೇನೆಗಳಿಗೆ ಉತ್ತರದಿಂದ ಸಹಾಯ ದೊರೆಯುತ್ತಿದೆಯೆಂದೂ ಹೇಳಿದರು.

ಡಾ. ಮೋದಿಯವರ ಉಚಿತ ನೇತ್ರ ಚಿಕಿತ್ಸೆ ಶಿಬಿರ ಮಡಿಕೇರಿ.

ಇದೇ ನವಂಬರ್ 1ನೇ ತಾರೀಖಿನಲ್ಲಿ ಮಡಿಕೇರಿಯಲ್ಲಿ ನೇತ್ರ ಚಿಕಿತ್ಸ ನಿಪುಣ ಡಾ. ಮೋದಿಯವರಿಂದ ಕಣ್ಣು ಪರೀಕ್ಷೆಗೆ ಆಪರೇಶನ್ ಮಾಡಿಸಿಕೊಳ್ಳುವವರು ಅನುಸರಿಸಬೇಕಾದ ನಿಯಮಗಳು:—

(1) ಎಲ್ಲಾ ನೇತ್ರರೋಗಿಗಳನ್ನು ನವಂಬರ್ 1ನೇ ತಾರೀಕಿನಲ್ಲಿ ಮಡಿಕೇರಿ ಸಿವಿಲ್ ಆಸ್ಪತ್ರೆಯಲ್ಲಿ ಪರೀಕ್ಷಿಸಲಾಗುತ್ತದೆ.

(2) ಮೋತಿ ಬಿಂದು (ಪೊರೆ) ತಿರಸು ಕಣ್ಣು (ಮೆಳ್ಳೆಗಣ್ಣು ಓರೆಗಣ್ಣು) ನೆಟ್ಟಗೆ ಮಾಡುವುದು, ಕಾಣಿಕೆ ಹುಣ್ಣು ದುರ್ಮಾಂಸ, ಕಾಚ ಬಿಂದು, ಕರಿ ಗುಡ್ಡೆಯ ಮೇಲಿನ ಹೂವು, ಅರಿ, ಕಣ್ಣಿನ ರೆಪ್ಪೆಗಳ ಬೇನೆ ಮುಂತಾದ ಎಲ್ಲಾ ತರದ ಕಣ್ಣಿನ ಆಪರೇಶನ್ ಮಾಡಲಾಗುವುದು.

(3) ಆಪರೇಶನ್ ಆದ ರೋಗಿಗಳು ಆಸ್ಪಿಟಲಿನಲ್ಲಿ 10-12 ದಿನಗಳಿರಬೇಕಾಗುವುದು.

(4) ಆಪರೇಶನ್ ಆಗತಕ್ಕವರು ತಮ್ಮ ಹಾಸಿಗೆ, ಹೊದಿಕೆ, ಊಟದ ತಟ್ಟೆ, ಚೆಂಬಿಗೆ, ಬಟ್ಟಲು, ಚಮಚ ದೀಪ ಆಹಾರ ಮತ್ತು ಉಪಚಾರಕರೊಡನೆ ಬರತಕ್ಕದ್ದು.

(5) ಕಣ್ಣಿಗೆ ಸ್ವಲ್ಪವೂ ಬೆಳಕು ಕಾಣದೇ ಇರತಕ್ಕವರು, ಕಣ್ಣು ಇಂಗಿದವರು ಬರಬೇಕಾಗಿಲ್ಲ.

(9) ಪ್ರತಿಯೊಬ್ಬ ನೇತ್ರರೋಗಿಯೂ ನವಂಬರ್ 1ನೇ ತಾರೀಖಿನ ದಿವಸ ಹಾಜರಾಗತಕ್ಕದ್ದು.

ತಾ. 27-10-52.

ಸಿವಿಲ್ ಸರ್ಜನ್,
ಮಡಿಕೇರಿ.

ಸೂಚನೆ:— ಮೋದಿಯವರು ನವಂಬರ್ 1ನೇ ತಾರೀಖಿನಿಂದ ಕಣ್ಣುಗಳ ಚಿಕಿತ್ಸೆ ಪ್ರಾರಂಭಿಸುವರು. ಆದುದರಿಂದ ಮಡಿಕೇರಿಯವರಿಗೆ 31-10-52ನೇ ತಾರೀಖಿನಲ್ಲಿ ಬರಬೇಕೆಂದು ಕಳುಹಿಸಿದ ನೋಟೀಸನ್ನು ರದ್ದುಪಡಿಸಿ ದಯವಿಟ್ಟು ನವಂಬರ್ 1ನೇ ತಾರೀಖಿನಲ್ಲಿ ಬರಬೇಕೆಂದು ಈ ಮೂಲಕ ಕೋರುತ್ತೇವೆ.

ಕೊಡಗು ಕೊ-ಆಪರೇಟಿವ್ ಎನ್‌ಕ್ವಯಿರಿ ಕಮಿಟಿ ಆಫೀಸು
ಮಡಿಕೇರಿ ತಾರೀಕು ೨೪-೧೦-೫೨

ಪಬ್ಲಿಕ್ ನೋಟೀಸು.

ಕೊಡಗಿನಲ್ಲಿ ಸಹಕಾರ ಸಂಸ್ಥೆಯು ಈಗ ಕೈಕೊಂಡಿರುವ ಎಲ್ಲಾ ಕಾರ್ಯಕಲಾಪಗಳನ್ನೂ ಪರಿಶೀಲಿಸಿ ಅವುಗಳು ಸಮುದಾಯದ ಪ್ರಕೃತದ ಅವಶ್ಯಕತೆಗಳಿಗೆ ಪ್ರಯೋಜನಕಾರಿಯಾಗಿವೆಯೋ? ಇಲ್ಲವಾದರೆ ಅವುಗಳನ್ನು ಈಗಿನ ಸ್ಥಿತಿಗನುಗುಣವಾಗಿ ಹೆಚ್ಚಿನ ಪ್ರಯೋಜನಕಾರಿಯಾಗುವಂತೆ ಯಾವ ರೀತಿಯಲ್ಲಿ ಸುಧಾರಿಸಬಹುದು. ಇನ್ನಿತರ ವಿಷಯಗಳನ್ನು ವಿಮರ್ಶಿಸಿ ಒಂದು ವರದಿಯನ್ನು ಸರಕಾರಕ್ಕೆ ಒಪ್ಪಿಸಲು ಸರಕಾರದವರು ಒಂದು ಕಮಿಟಿಯನ್ನು ಏರ್ಪಡಿಸಿರುವರು.

ಈ ಸಮಿತಿಯವರು ಈ ಸಮ್ಬಂಧದಲ್ಲಿ ಸಾರ್ವಜನಿಕರ ಸಲಹೆಗಳನ್ನು ಸಂಗ್ರಹಿಸಲು ಇಷ್ಟಪಡುವರು. ಸಾರ್ವಜನಿಕರಲ್ಲಿ ಯಾರೇ ಆದರೂ ಕೂಡ ಅವರ ಸಲಹೆಗಳನ್ನು ಕಮಿಟಿಯವರ ಮುಂದೆ (ರೂಬರೂ) ಕೊಡಲು ಇಷ್ಟಪಡುವವರು ದಯವಿಟ್ಟು ತಾರೀಕು ೧೫-೧೧-೫೨ರೊಳಗೆ ಈ ಕೆಳಗೆ ಸಹಿ ಮಾಡಿದವರಿಗೆ ಬರಹ ಮೂಲಕ ತಿಳಿಸಿದಲ್ಲಿ ಅವರ ಸಲಹೆಗಳನ್ನು ಸಾಧ್ಯವಾದಷ್ಟು ಬೇಗನೆ ಅವರಿಗೆ ಅನುಕೂಲತೆ ಇರುವ ಸ್ಥಳದಲ್ಲೇ ರೆಕಾರ್ಡ್ ಮಾಡಲು ತಕ್ಕ ಏರ್ಪಾಡು ಮಾಡಲಾಗುವುದು

ಯಂ ಶ್ರೀನಿವಾಸರಾವ್,
ಸೆಕ್ರೆಟರಿ,
ಕೊಡಗು ಕೊ-ಆಪರೇಟಿವ್
ಎನ್‌ಕ್ವಯರಿ ಕಮಿಟಿ.

ಬೇಕಾಗಿದ್ದಾರೆ.

ಶನಿವಾರಸಂತೆ ಸಹಕಾರಿ ನೇಯ್ಗೆ ಶಾಲೆಯು 26-10-52 ರಿಂದ ತೆರೆಯಲ್ಪಡುತ್ತದೆ. ನೇಯ್ಗೆ ಕೆಲಸ ಕಲಿಯಲು ಕುತೂಹಲವುಳ್ಳ ವಿದ್ಯಾರ್ಥಿಗಳು ಕೊಡಗು ವಿದ್ಯಾಧಿಕಾರಿಗಳಿಗೆ ಅರ್ಜಿಗಳನ್ನು ಬರೆದು ಕಳುಹಿಸಬೇಕು. ಕೆಲಸ ಕಲಿಯುವ ಹುಡುಗರಿಗೂ ಸಹ ಪ್ರವೇಶವಿದೆ. ಪ್ರಾಯ 16 ವರ್ಷದಿಂದ 25 ವರ್ಷದವರೆಗೆ ಇರುವ ಹರಿಜನ ತರುಣರೂ ಅರ್ಜಿಗಳನ್ನು ಹಾಕಿಕೊಳ್ಳಬಹುದು. 2 ವರ್ಷ ತರಬೇತು ಕೊಡಲಾಗುತ್ತದೆ. ತರಬೇತು ಸಮಯದಲ್ಲಿ ತಿಂಗಳೊಂದರ 20 ರೂ. ವೇತನ ಕೊಡಲಾಗುತ್ತದೆ. ಒಟ್ಟು 20 ವಿದ್ಯಾರ್ಥಿಗಳಿಗೆ ಪ್ರವೇಶವಿದೆ. 2 ವರ್ಷ ತರಬೇತಿನಲ್ಲಿ ಪಾಸಾದವರಿಗೆ ವಿದ್ಯಾಧಿಕಾರಿಗಳಿಂದ ಸರ್ಟಿಫಿಕೇಟು ಕೊಡಲಾಗುತ್ತದೆ.

ಈ ನೇಯ್ಗೆ ಶಾಲೆಯಲ್ಲಿ ನೇಯುವುದು, ನೂಲುವುದು, ಬಟ್ಟೆಗಳ ಮೇಲೆ ಅಚ್ಚುಹಾಕುವುದು, ನೂಲಿಗೆ ಬಣ್ಣ ಹಾಕುವುದು ಇತ್ಯಾದಿಗಳನ್ನು ಕಲಿಸುವ ಏರ್ಪಾಡು ಮಾಡಲಾಗುತ್ತದೆ. ಎಲ್ಲಾ ಕೋಮಿನವರ ಜನಾಂಗಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ. ಅರ್ಜಿಗಳನ್ನು ಸ್ವೀಕರಿಸುವ ಕಡೆಯ ತಾರೀಖು 5-11-52.

ಹೆಚ್ಚಿನ ವಿಷಯಗಳನ್ನು ಶನಿವಾರಸಂತೆ ವೀವಿಂಗ್ ಇನ್ಸ್‌ಟ್ರಕ್ಟರವರಿಂದ ತಿಳಿದುಕೊಳ್ಳಬಹುದು.

ಜಿ. ಗಣೇಶರಾವ್
ಜಿಲ್ಲಾ ವಿದ್ಯಾಧಿಕಾರಿ, ಮಡಿಕೇರಿ.

ಜಪಾನದ ಹಿರೋಶೀಮಾದಲ್ಲಿ ನವಂಬರ್ ೩ರಿಂದ ನಾಲ್ಕು ದಿನಗಳವರೆಗೆ ನಡೆಯಲಿರುವ ಜಾಗತಿಕ ಮಹಾಸಂಘದ ಏಶಿಯನ್ ಕಾಂಗ್ರೆಸ್ ಅಧಿವೇಶನಕ್ಕೆ ಬರಲು ಪಂಡಿತ ಹೃದಯನಾಥ ಕುಂಜರು [illegible] ಜಪಾನ್ ದೊರೆಯ ಪರಿಗೆ ಆಮಂತ್ರಣ ಬಂದಿದೆ.

ಗೃಹ ಕೈಗಾರಿಕೆಗಳ ಅಭಿವೃದ್ಧಿಗಾಗಿ ಭಾರತ ಸರಕಾರವು ೨೧ ಸದಸ್ಯರ ಒಂದು ಮಂಡಳಿಯನ್ನು ಶ್ರೀಮತಿ ಕಮಲಾದೇವಿಯವರ ಅಧ್ಯಕ್ಷತೆಯಲ್ಲಿ ನೇಮಿಸಿದೆ. ಮದರಾಸಿನಿಂದ ಶ್ರೀ ಎಂ. ಶ್ರೀನಿವಾಸ ಮಲ್ಯ, ಮಣಿಕರ್ ನ್ ನಟೇಶನ್, ಶ್ರೀ ನಂಜಭಾಷಿಣಿಯವರು ಸದಸ್ಯರಾಗಿರುವರು. ನವಂಬರ್ ೮ಕ್ಕೆ ಈ ಸಮಿತಿಯ ಸಭೆ ಡಿಲ್ಲಿಯಲ್ಲಿ ಸೇರುವುದು.

ಮದ್ರಾಸು ನಗರವು ಆಂಧ್ರ ಪ್ರಾಂತಕ್ಕೆ ಸೇರಬೇಕೆಂದು ಹಟಹಿಡಿದರೆ ಅದರಿಂದ ಆಂಧ್ರರಿಗೇ ಕೊಂಚ ಉಂಟಾದೀತು. ಮದ್ರಾಸು ನಗರದಲ್ಲಿ ಆಂಧ್ರರ ಸಂಖ್ಯೆಯು ಕಡಿಮೆ ಇರುವುದರಿಂದ ಮದ್ರಾಸು ನಗರವನ್ನು ಆಂಧ್ರರು ಕೇಳಲು ಸಾಧ್ಯವಿಲ್ಲವೆಂದು ಮದ್ರಾಸಿನ ಮುಖ್ಯಮಂತ್ರಿ ಶ್ರೀ. ರಾಜಗೋಪಾಲಾಚಾರ್ಯರು ಇಲ್ಲಿ ಹಿಂದೂ ಮತಾಭಿಮಾನ ಸಂಘದ ಹೊಸ ಕಟ್ಟಡದ ಪ್ರಾರಂಭೋತ್ಸವವನ್ನು ನಡೆಸುತ್ತ ಹೇಳಿದರು. ಮದ್ರಾಸು ನಗರದಲ್ಲಿ ಸೇಕಡ ೬೮ ಮಂದಿ ತಮಿಳರಾಗಿರುವರು. ತೆಲುಗರು ಕೇವಲ ಶೇಕಡ ೧೬ರಷ್ಟು ಇರುವರು. ಆದ್ದರಿಂದ ಅವರು ಮದ್ರಾಸನ್ನು ಪಡೆಯಲು ಸಾಧ್ಯವಿದೆಯೆ? ಎಂದವರು ಪ್ರಶ್ನಿಸಿದರು

ಅ. ಭಾ. ಕಾ. ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಪ್ರೊ. ಎನ್. ಎನ್. ಅಗರವಾಲರವರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳಿಗೆ ಒಂದು ಆಜ್ಞೆಯನ್ನು ಕಳಿಸಿದ್ದಾರೆ. ಕಾಂಗ್ರೆಸಿಗೆ ಪ್ರತಿನಿಧಿಗಳನ್ನು ಆರಿಸುವ ಈ ಸಮಯದಲ್ಲಿ ಶಿಸ್ತು ಜಾರಿ ಮಾಡುವುದು ಅಗತ್ಯವಿಲ್ಲವೆಂದಿದ್ದಾರೆ. ಕೆಲವೆಡೆಗಳಲ್ಲಿ ಶಿಸ್ತು ಜಾರಿ ಮಾಡುವ ವಿಷಯವು ಅವರ ಅವಗಾಹನೆಗೆ ಬಂದಿದೆಯಂತೆ. ಶಿಸ್ತು ಜಾರಿ ಮಾಡುವುದು ಅತ್ಯಗತ್ಯವಾಗಿ ಕಂಡುಬಂದಲ್ಲಿ ಅ. ಭಾ. ಕಾಂ. ಸಮಿತಿಯ ಅಪ್ಪಣೆ ಪಡೆದು ಶಿಸ್ತು ಜಾರಿ ಮಾಡಬೇಕೆಂದು ತಿಳಿಸಿದ್ದಾರೆ.

ದಿ ಬಾಂಬೆ ಮ್ಯೂಚುವಲ್ ಲೈಫ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.
[ಸ್ಥಾಪನೆ 1871]
31-12-51ಕ್ಕೆ ಮುಗಿದ ತ್ರೈವಾರ್ಷಿಕ ಪರಿಶೀಲನೆಯಿಂದ ವಾರ್ಷಿಕ ಬೋನಸ್ಸು ದರಗಳು.
ಎಂಡೋಮೆಂಟು ಹೊಸದರದ ಪಾಲಿಸಿಗಳಿಗೆ
ಪ್ರತಿ ಸಾವಿರಕ್ಕೆ .... ರೂ. 10/—
ಜೀವಾವಧಿ ಹೊಸದರದ ಪಾಲಿಸಿಗಳಿಗೆ
ಪ್ರತಿ ಸಾವಿರಕ್ಕೆ .... ರೂ. 12/—
ಏಜಂಟರು ಮತ್ತು ಸ್ಪೆಷಲ್ ಏಜೆಂಟರಾಗಲು ಅವಕಾಶವಿದೆ.
ವಿವರಗಳಿಗೆ ಬರೆಯಿರಿ:—ಬ್ರಾಂಚ್ ಸೆಕ್ರೆಟರಿ,
12-7 ಪೋಸ್ಟು ಬಾಕ್ಸ್ ನಂ. 186, ಬೆಂಗಳೂರು 2.

ನಮ್ಮ ಸಾಮಾಜಿಕ ಸಮಸ್ಯೆಗಳು.

ಲೇ:—ಶ್ರೀ. ಎಂ. ಎಸ್. ಸರದಾರ, ಬಿ. ಎ.
(ಆಕ್ಸ್‌ಫರ್ಡ) ಬಾರ್-ಎಟ್-ಲಾ, ಸೊಲ್ಲಾಪೂರ.

ಕರ್ನಾಟಕದ ಇಂದಿನ ಸಾಮಾಜಿಕ ಸಮಸ್ಯೆಗಳಾವವು? ಕರ್ನಾಟಕದ ಸಮಾಜ ಜೀವನವನ್ನು ಹಾಳು ಮಾಡುವಂಥ ಸಮಾಜ ಘಾತುಕ ನಡುವಳಿಗಳಾವವು? ಇಂದಿನ ದಿನಮಾನದಲ್ಲಿ ಸಮಾಜ ವಿಘಾತುಕತೆಯೆಂದರೇನ? ಇಂಥ ಪ್ರಶ್ನೆಗಳಿಗೆ ಮನಸಿಗೆ ಬಂದ ಹಾಗೆ ಉತ್ತರಿಸಲು ಬರುವದಿಲ್ಲ. ಸಮಾಜವು ಪ್ರಗತಿ ಪಥದಲ್ಲಿ ಸಾಗಿರುವಾಗ, ನಿನ್ನೆ ಸಮಾಜ ವಿಘಾತುಕವೆಂದು ಕಂಡು ಬಂದುದು, ಇಂದು ಹಾಗೆ ಕಾಣಲಿಕ್ಕಿಲ್ಲ. ಇಂದು ಸಮಾಜದಲ್ಲಿ ವಿಘಾತುಕವೆಂದು ತೋರಿ ಬಂದುದು ನಾಳೆ ಹಾಗೆ ಕಾಣಲಿಕ್ಕಿಲ್ಲ. ಇದಕ್ಕೆ ಒಂದೆರಡು ಸಣ್ಣ ಉದಾಹರಣೆಗಳನ್ನು ಪರಿಶೀಲಿಸಬಹುದು. ಈಗ ೫೦ ವರ್ಷಗಳ ಕೆಳಗೆ ಸಾಮಾನ್ಯವಾಗಿ ಚಹ ಕುಡಿಯುವದೊಂದು ಸಾಮಾಜಿಕ ದೋಷವೆಂದು ಪರಿಗಣಿಸಲಾಗುತ್ತಿದ್ದಿತು. ಈ ಸಾಮಾಜಿಕ ದೋಷದ ವಿರುದ್ಧ ಅನೇಕ ರೀತಿಯಿಂದ ಪ್ರಚಾರವೂ ಕೂಡ ನಡೆಯಿತು. ನಾನಿನ್ನೂ ಚಿಕ್ಕವನಿದ್ದಾಗ, ಅನೇಕ ಸಾರ್ವಜನಿಕ ಉಪನ್ಯಾಸಗಳನ್ನು ಕೇಳಿದ ನೆನಪುಂಟು. ಆಗ ಅನೇಕ ಭಾಷಣಕಾರರು ಈ ಕೆಟ್ಟ ಚಾಳಿಯನ್ನು ಅಜನ್ಮ ವೈರಿಯಂತೆ ಜರಿದು ಮಾತನಾಡುತ್ತಿದ್ದರು. ಮಠ ಮಾನ್ಯಗಳಲ್ಲಿ ನಡೆಯುತ್ತಿದ್ದ ಪುರಾಣ ಪುಣ್ಯ ಕಥೆಗಳನ್ನು ಹೇಳುತ್ತಿದ್ದ ಪುರಾಣಿಕರೂ, ಹಾಗೂ ಕೀರ್ತನ ಮಾಡುತ್ತಿದ್ದ ಶಾಸ್ತ್ರಿಗಳೂ ಕೂಡ ಈ ದೋಷವನ್ನು ಟೀಕಿಸುತ್ತಿದ್ದರು. ಚಹ ಕುಡಿಯುವದು ಕಳ್ಳು-ಸೇಂದಿಯಷ್ಟೇ ಅಪಾಯಕರ ಮತ್ತು ಕೆಟ್ಟದೆಂದು ತಿಳಿಯಲಾಗುತ್ತಿದ್ದಿತು. ಆದರೆ ಆ ದಿನಮಾನಗಳು ಬಹು ಹಿಂದೆ ಸರಿದವು. ಚಹ ಕುಡಿಯುವವನ್ನು ಎಷ್ಟೇ ಜರಿದರೂ ಅದರ ವಿರುದ್ಧ ಪ್ರಚಾರ ಕೈಕೊಂಡರೂ, ಇಡೀ ಹಿಂದೂಸ್ಥಾನದ ತುಂಬ ಅದೊಂದು ಸರ್ವ ಸಾಮಾನ್ಯ ಚಟವಾಗಿ ಹೋಗಿದೆ. ಯಾರೂ ಅದರ ಕೆಟ್ಟ ಪರಿಣಾಮದ ಬಗೆಗೆ ಇಂದು ವಿಚಾರ ಮಾಡುತ್ತಿಲ್ಲ. ಚಹವು ಇಂದು ಅತ್ಯಂತ ಒಳಪ್ರದೇಶವೆನಿಸುವ ಹಳ್ಳಿಗಾಡಿನ ಜೀವನದಲ್ಲಿ ಕೂಡ ಪ್ರವೇಶಿಸಿದೆ. ಸಾರ್ವಜನಿಕ ಅಭಿಪ್ರಾಯದ ಮೇರೆಗೆ ಚಹ ಕುಡಿಯುವದನ್ನು ಇಂದು ಸಮಾಜ ದೋಷವೆಂದು ಪರಿಗಣಿಸಲಾಗುವದಿಲ್ಲ.

ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಮೊದಲು ವಿದೇಶ ಪ್ರಯಾಣದ ವಿರುದ್ಧ ಭಯಂಕರ ಕೆಟ್ಟ ಅಭಿಪ್ರಾಯವಿದ್ದಿತು. ಸಮುದ್ರವನ್ನು ದಾಟುವದೆಂದರೆ ಬಹಳಷ್ಟು ಪಾಪ ಮಾಡಿದಂತೆ ಎಂದು ಭಾವಿಸಲಾಗಿದ್ದಿತು. ಇಡಿಯ ಹಿಂದೂಸ್ಥಾನದ ತುಂಬ ಆಗ ಸಮಾಜ ಸುಧಾರಣಾ ಪರಿಷತ್ತುಗಳು ಸೇರಿದಾಗ ಸಾರ್ವಜನಿಕರಾಗಿ ವಿದೇಶ ಪ್ರಯಾಣವು ಕೆಟ್ಟದ್ದಲ್ಲವೆಂದು ತಿಳಿಸಿ ಹೇಳಲು ಬಹಳ ಪ್ರಯತ್ನ ಮಾಡಬೇಕಾಗಿತ್ತು. ಶ್ರೀ ರಾನಡೆ, ಚಂದಾವರಕರ ಮತ್ತು ತೆಲಂಗರಂಥಾ ಮುಖಂಡರು ಈ ಸಾರ್ವಜನಿಕ ದುರಭಿಪ್ರಾಯವನ್ನು ನಾಶಮಾಡಲು ತಮ್ಮ ವಾಕ್ಪಟುತ್ವದ ವರ್ಚಸ್ಸನ್ನು ಉಪಯೋಗಿಸಬೇಕಾಯಿತು. ಶ್ರುತಿ ಮತ್ತು ಸ್ಮೃತಿಗಳ ಆಧಾರದಿಂದ ವಿದೇಶ ಪ್ರಯಾಣಕ್ಕೆ ಅನುಕೂಲವಾದ ಮತವನ್ನು ಎತ್ತಿ ಹೇಳಲಾಗುತ್ತಿತ್ತು. ಆದರೆ ಸನಾತನವಾದಿಗಳು ವಿದೇಶ ಪ್ರಯಾಣದಿಂದ ಜಾತಿ ಕೆಟ್ಟು ಹೋಗುತ್ತದೆಂಬ ಭಾವನೆಯನ್ನು ಉಳಿಸಿಕೊಂಡಿದ್ದರು. ಆದರೆ ಇಂದು ಬಹಳ ಬದಲಾವಣೆಯಾಗಿದೆ. ಇಂದಿನ ದಿನಮಾನಗಳಲ್ಲಿ ಯಾರೂ ಇಂಥ ವಿಚಾರ ಮಾಡುವ ಕಾಳಜಿ ತೆಗೆದುಕೊಳ್ಳುವದಿಲ್ಲ. ಆದರೆ ಸಾಮಾಜಿಕ ದೋಷಗಳೆಂದು ಕರೆಯಲ್ಪಡುವ ಇಂಥ ವಿಷಯಗಳು ಕೇವಲ ಮೂಢ ನಂಬಿಕೆ ಅಥವಾ ದುರಭಿಪ್ರಾಯಗಳಾಗಿದ್ದವು. ಆದ್ದರಿಂದ ವೈಜ್ಞಾನಿಕ ಪ್ರಗತಿ ಹಾಗೂ ವೇಳೆಯ ಗತಿಯು ಅವನ್ನು ನಾಶ ಮಾಡಿದವು. ಆದರೆ ನಾಗರಿಕ ಸಮಾಜವು ತಾಳಲಾರದಂಥ ಅನೇಕ ಮಂಗಲಸೂಚಕವಾದ ಸಾಮಾಜಿಕ ಲೋಪದೋಷಗಳುಂಟು. ನಮ್ಮ ಮುತ್ಸದ್ದಿತಂದರು ಈ ಲೋಪದೋಷಗಳನ್ನು ತೊಡೆದು ಹಾಕಲು ಪ್ರಯತ್ನಿಸಿದಂತೆ ನಮ್ಮ ಮೊಮ್ಮಕ್ಕಳು ಮರಿಮಕ್ಕಳು ಇನ್ನು ಮುಂದೆ ಕೂಡ ಹೋರಾಡಬೇಕಾದೀತು.

ಹಿಂದೂ ಸಮಾಜದಲ್ಲಿ (ಹಿಂದೂ ಶಬ್ದವನ್ನು ಇಂಡಿಯನ್ ಎಂಬರ್ಥದಲ್ಲಿ ಉಪಯೋಗಿಸಲಾಗಿದೆ) ಸಮಾಜ ದೋಷಗಳು ಪುರಾತನ ಕಾಲದಿಂದ ಬಂದ ರೂಢಿ ನಿಯಮಗಳ ಪರಂಪರೆ ಮತ್ತು ಅಂಧ ವಿಶ್ವಾಸದಿಂದ ಕೂಡಿದವುಗಳಾಗಿವೆ. ಬಹು ದೊಡ್ಡ ದೋಷಗಳೆನಿಸಬಹುದಾದ 'ಸತಿ' ಹೋಗುವುದು ಮತ್ತು ಚಿಕ್ಕ ಹುಡುಗರ ಲಗ್ನ ಮಾಡುವದಕ್ಕೆ ನಮ್ಮ ಧರ್ಮದಲ್ಲಿ ಮನ್ನಣೆಯಿದ್ದಿತು. ಆದರೆ ಸಮಾಜವು ಸುಧಾರಣೆಯಿಂದ ಸುಧಾರಣೆಗೆ ಪ್ರಗತಿಯಿಂದ ನಡೆದಂತೆ ಈ ಮೂಲಭೂತ ಲೋಪ-ದೋಷಗಳನ್ನು ಕೆಟ್ಟವೆಂದು ತೆಗಳಹತ್ತಿದರು. ಹಾಗೂ ಇವು ಮತ್ತು ಇಂಥ ಅನೇಕ ರೂಢಿ ನಿಯಮಗಳನ್ನು ಅನೇಕ ಶಾಸನ ಮತ್ತು ಅಧಿಕಾರದ ಮೂಲಕ ತೆಗೆದು ಹಾಕಲಾಯಿತು. ಆದರೆ ಇವು ಸಂಪೂರ್ಣ ಹೋಗಿವೆಯೋ? ಉತ್ತರವನ್ನು ನಕಾರಾರ್ಥದಲ್ಲಿಯೇ ಕೊಡಬೇಕು. 'ಸತಿ' ಎಂಬ ಪದ್ಧತಿಯು ಕೂಡ ಹಿಂದೂಸ್ಥಾನದ ಭೂಮಿಯಿಂದ ಸಂಪೂರ್ಣ ತಳ ಬೇರು ಕಿತ್ತು ಹೋದಂತಿಲ್ಲ. ಮೇಲಿಂದ ಮೇಲೆ ವರ್ತಮಾನ ಪತ್ರಗಳಲ್ಲಿ ಗಂಡ ಸತ್ತ ಕೂಡಲೇ ಅವನ ಹೆಂಡತಿಯಾದವಳು ಅವನ ಶವದ ಚಿತೆಯ ಮೇಲೆ ಸುಟ್ಟುಕೊಂಡು ಸತ್ತಳು ಎಂದು ಇನ್ನೂ ಓದುತ್ತಲೇ ಇದ್ದೇವೆ.

ಸಾರ್ವಜನಿಕ ಮುಖಂಡರು [illegible]ಗಿಂದ ಸಾಮಾಜಿಕ ಲೋಪದೋಷಗಳನ್ನು ಕಿತ್ತು ಹಾಕುವದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟ ವೇಳೆಯೊಂದಿತ್ತು. ರಾಜಾರಾಮ ಮೋಹನರಾಯ, ಈಶ್ವರಚಂದ್ರ ವಿದ್ಯಾಸಾಗರ, ಕೇಶವಚಂದ್ರಸೇನ, ದಯಾನಂದ ಸರಸ್ವತಿ, ರಾನಡೆ, ಅಭ್ಯಂಕರ, ತೆಲಂಗ, ಭಂಡಾರಕರ ಮುಂತಾದವರು ರಾಜಕೀಯ ಪ್ರಗತಿಯ ಜೊತೆಗೆ ಸಾಮಾಜಿಕ ಸುಧಾರಣೆಯೂ ಆಗಬೇಕು ಎಂಬ ವಿಚಾರದವರಿದ್ದರು. ಸಾಮಾಜಿಕ ಸುಧಾರಣೆಯಾಗದೆ ರಾಜಕೀಯ ಹೋರಾಟವು ಉಪಯೋಗಕ್ಕೆ ಬೀಳದು ಎಂಬ ಅಭಿಮತವಿತ್ತು. ಅಖಿಲ ಭಾರತ ಕಾಂಗ್ರೆಸಿನ ಜೊತೆಗೆ ಅಖಿಲ ಭಾರತ ರಾಷ್ಟ್ರೀಯ ಸಾಮಾಜಿಕ ಪರಿಷತ್ತು ನೆರೆಯುತ್ತಿದ್ದವು ಎಂಬ ವಿಷಯ ಅನೇಕ ಹಿರಿಯ ಓದುಗರಿಗೆ ತಿಳಿದ ವಿಷಯ. ಹಿಂದೂಸ್ಥಾನದಾದ್ಯಂತ ಹೋದ ಶತಮಾನದ ಅಂತ್ಯಭಾಗದಲ್ಲಿ ಸಾಮಾಜಿಕ ಸುಧಾರಣೆಗಾಗಿ ಅದೆಷ್ಟು ದೊಡ್ಡ ಹೋರಾಟ ನಡೆದಿತ್ತೆಂಬುದು ಅನೇಕರಿಗೆ ನೆನಪಿರಲು ಸಾಕು. ವಿವಿಧ ಜಾತಿ ಮತ ಪಂಥಗಳ ಸಂಘ ಸಂಸ್ಥೆಗಳೂ ಕೂಡ ಸಾಮಾಜಿಕ ದೋಷಗಳಾವವು? ಮತ್ತು ಸಮಾಜ ಸುಧಾರಣೆ ಹೇಗೆ ಮಾಡಬೇಕು? ಎಂಬುವ ವಿಷಯವನ್ನು ಚರ್ಚಿಸುತ್ತಿದ್ದವು. ಅವುಗಳ ಪ್ರಯತ್ನದ ಪ್ರತೀಕವೆಂದು ಅನೇಕ ಬದಲಾವಣೆಗಳೂ ಕೂಡ ಆದವು. ಸಾಮಾಜಿಕ ವಿಷಯದಲ್ಲಿ ವಿಮುಖವಾದ ಬ್ರಿಟಿಷ ಸರಕಾರದವರೂ ಕೂಡ, ಸಮಾಜಕ್ಕೆ ಒಪ್ಪಿಗೆಯಾದವು ಎಂದು ಕಂಡು ಬಂದವುಗಳನ್ನು ಸಂಧಾರಿಸಲು ಕಾಯಿದೆ ಮಾಡಲು ಮುಂದೆ ಬಂದಿತು. ಮಹಿಳಾ ಶಿಕ್ಷಣ, ಗಂಡ ಸತ್ತ ಹೆಣ್ಣು ಮಕ್ಕಳ ಪುನರ್ವಿವಾಹ, ಚಿಕ್ಕ ಹುಡುಗರ ವಿವಾಹ ನಿರ್ಬಂಧ ಮತ್ತು ಇಜ್ಜೋಡು ವಿವಾಹ ಪ್ರತಿಬಂಧ, ವರದಕ್ಷಿಣೆಯ ಪದ್ಧತಿ, ಲಗ್ನ ಖರ್ಚನ್ನು ಕಡಮೆ ಮಾಡುವದು, ಬೇರೆ ಬೇರೆ ಜಾತಿಗೆ ಸೇರಿದ ಹಿಂದುಗಳನ್ನು ಶುದ್ಧೀಕರಿಸುವದೇ ಮುಂತಾದ ಅನೇಕ ವಿಷಯಗಳ ಬಗೆಗೆ, ಸಮಾಜ ಸುಧಾರಣೆಯ ದೃಷ್ಟಿಯಿಂದ ಸಾರ್ವಜನಿಕ ಚರ್ಚೆ ಅನೇಕ ವರ್ಷಗಳಿಂದ ನಡೆಯುತ್ತ ಬಂದವು. ೧೮೯೩ನೇ ಇಸವಿಯಲ್ಲಿ ಲಾಹೋರದೊಳಗೆ ಸೇರಿದ ೭ನೇ ಅಖಿಲ ಭಾರತ ಸಾಮಾಜಿಕ ಪರಿಷತ್ತಿನಲ್ಲಿ, ಯಾರಾದರೂ ಸತ್ತಾಗ ದೊಡ್ಡ ಧ್ವನಿಯಿಂದ ಅಳುವುದೂ, ಎದೆ ಎದೆ ಬಡಿದುಕೊಳ್ಳುವುದೂ ಸಾಮಾಜಿಕ ದೋಷವೆಂದು ಗಂಭೀರ ಚರ್ಚೆ ನಡೆದು ಆ ಬಗ್ಗೆ ಗೊತ್ತುವಳಿ ತರಲಾಯಿತು. ಆದರಿಂದು ಇಂಥ ಸಾಮಾಜಿಕ ಪರಿಷತ್ತುಗಳು ಎಲ್ಲಿವೆ? ಸದ್ಯಕ್ಕೆ ಹೋರಾಡಲು ಸಾಮಾಜಿಕ ಲೋಪದೋಷಗಳೇ ಇಲ್ಲವೇ? ಇಂಥ ಮಹತ್ವದ ಪ್ರಶ್ನೆಗಳನ್ನು ಗಂಭೀರವಾಗಿ ಬಿಡಿಸಬೇಕಲ್ಲದೆ ಎಲ್ಲ ಸಾಮಾಜಿಕ ಕಾರ್ಯಕರ್ತರು ಮತ್ತು ಇಂದಿನ ದೇಶಾಭಿಮಾನಿಗಳೆಲ್ಲ ಉತ್ತರ ಕೊಡಬೇಕು

ನಮ್ಮ ಎಲ್ಲಾ ಸಾಮಾಜಿಕ ಲೋಪದೋಷಗಳು ಅಳಿದು ಹೋದವು ಎಂದು ಒಂದು ನಿಮಿಷ ಕೂಡ ಯಾವ ವಿಚಾರವಂತ ಮನುಷ್ಯನೂ ಅನ್ನಲಾರ. ಮಹಿಳಾ ಶಿಕ್ಷಣ ಹಾಗೂ ಅವರ ಇನ್ನಿತರ ದುರ್ಬಲತೆಗಳನ್ನು ಹೋಗಲಾಡಿಸುವಲ್ಲಿ ಕೆಲವು ಪ್ರಗತಿಯಾಗಿದೆ ಎಂಬ ವಿಷಯದಲ್ಲಿ ಸಂಶಯವೇ ಇಲ್ಲ. ಚಿಕ್ಕ ಬಾಲಕರ ಲಗ್ನ ನಿರ್ಬಂಧ ಕಾಯಿದೆ, ಹಿಂದೂ ದ್ವಿಪತ್ನೀ ಲಗ್ನ ಪ್ರತಿಬಂಧ ಕಾನೂನು, ಘಟಸ್ಫೋಟ ಕಾಯಿದೆ, ಹರಿಜನರು ದೇವಾಲಯ ಪ್ರವೇಶ ಮಾಡುವ ಕಾನೂನು ಇತ್ಯಾದಿಗಳು ಈಗಾಗಲೇ ಶಾಸನವಾಗಿ ಅಮಲಿನಲ್ಲಿ

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಪು:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್. ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12ನೇ ನಂಬರಿನ ಒಂಟಿ ಮತ್ತು ಜೋಡು ನಳಿಗೆಯ ಕೋವಿಗಳು.
3. 12, 16 ಮತ್ತು 20ನೇ ನಂಬರಿನ ತೋಟೆಗಳು, ಕೋವಿ ಮದ್ದು ಮತ್ತು ಕೇಪುಗಳು.
4. 9" × 4" ಮತ್ತು 8" × 4" ಕಬ್ಬಿಣದ ತೊಲೆಗಳು (Girders)
5. 8' × 3' × 24 (Gage) ಕಬ್ಬಿಣದ ತಗಡುಗಳು.
6. 1¾" × 5/16" ಉಕ್ಕಿನ ಪಟ್ಟಿಗಳು (Spring steel flates)
7. ಕಾಫಿ ಮತ್ತು ಕಿತ್ತಳೆ ತೋಟಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು 'Special purchase permit' ಪಡೆಯಬೇಕಾಗಿದೆ.

ಎಂ. ಎಸ್ ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್.)

...ದಿವೆ. ಆದರೆ ಅಷ್ಟೇ ಸಾಕೇ? ಇನ್ನು ಮುಂದೆ ಹೊಸ ಸುಧಾರಣೆಗಳಿಗಾಗಿ ಪ್ರಯತ್ನದ ಅವಶ್ಯಕತೆಯೇ ಇಲ್ಲವೇ? ಕೇವಲ ಕಾಯಿದೆ ಕಾನೂನುಗಳನ್ನು ಮಾಡುವುದರಿಂದ ಸಾಮಾಜಿಕ ಲೋಪದೋಷಗಳೆಲ್ಲ ನಾಶವಾಗಬಾರವು ಎಂಬುದು ಎಲ್ಲರಿಗೂ ಚೆನ್ನಾಗಿ ಗೊತ್ತಿದ್ದ ಸಂಗತಿಯಾಗಿದೆ. ಸಾಮಾಜಿಕ ಕಟ್ಟಿನ ಭಾವನೆಗಳು ಬೇಗನೆ ಮಾಸಲಾರವು. ಅನ್ಯ ಧಾರ್ಮಿಕ ಪದ್ಧತಿಗಳಿಗೆ ಹೊಂದಿಕೊಂಡಾಗಲಂತೂ ಅವನ್ನು ಹೋಗಲಾಡಿಸುವುದು ಇನ್ನೂ ಹೆಚ್ಚು ಕಷ್ಟಕರ. ಆದ್ದರಿಂದ ಈ ದೆಸೆಯಲ್ಲಿ ಶಾಶ್ವತ ಪ್ರಯತ್ನ ಅತ್ಯಂತ ಅವಶ್ಯಂಭಾವಿಯಾಗಿದೆ.

ಇತ್ತೀಚೆಗೆ ಸಾಮಾಜಿಕ ಸುಧಾರಣೆಗಳಿಗೆ ಲಕ್ಷ್ಯವೀಯದಿರುವುದು ನಿಜವಾಗಿಯೂ ದುರ್ದೈವದ್ದು. ಹಾಗೂ ಅತ್ಯಂತ ಕನಿಕರಪಡಬೇಕಾದ ವಿಷಯ. ಅದರಲ್ಲಿಯೂ ವಿಶೇಷವಾಗಿ ಸ್ವಾತಂತ್ರ್ಯದ ಸಾಹಸೀ ಉಪಕ್ರಮವಾದ ಬಳಿಕ ಪ್ರತಿಯೊಬ್ಬರೂ ತೆಪ್ಪಗೆ ಇದ್ದು ಬಿಡುವ ಪ್ರಸಂಗ ಕಂಡು ಬಂದಿದೆ. ರಾಜಕಾರಣಗಳು ತಾವು ಈ ಹಿಂದೆ ಸಲ್ಲಿಸಿದ ಸೇವೆಗೆ ಪ್ರತಿಫಲವನ್ನು ದೊರಕಿಸುವುದರಲ್ಲಿಯೇ ಮಗ್ನವಾಗಿಬಿಟ್ಟಿದ್ದಾರೆ. ರಾಜಕಾರಣವು ಯೋಗ್ಯ ಪ್ರತಿಫಲವನ್ನು ಕೊಡುತ್ತದೆ. ಆದರೆ ಸಾಮಾಜಿಕ ಕಾರ್ಯಕರ್ತರಿಗೆ ಮಾತ್ರ ಒಣ ಸಹಾನುಭೂತಿಪರ ಮಾತು ಮತ್ತು ಚೆನ್ನಾದ ದುಡಿತವೇ ಪ್ರತಿಫಲ. ನಿಂದೆ ಮತ್ತು ಅಪಜಯಗಳೇ ಅವರ ಪಾಲಿಗೆ ಬರುತ್ತವೆ. ಅಂದಬಳಿಕ ನಮ್ಮ ದೇಶಾಭಿಮಾನಿಗಳು ಹಾಗೂ ರಾಜಕಾರಣಿಗಳು ಈ ಮರುಭೂಮಿ ಮತ್ತು ಯಾವ ಉತ್ಪಾದನೆಯಿಲ್ಲದ ಕೆಲಸವನ್ನು ಹರಿಸಲು ಯಾಕೆ ಮುಂದೆ ಬಂದಾರು?

ಈ ಭೂಮಿಕೆಯು ನಮ್ಮನ್ನು ಕರ್ನಾಟಕದ ಸಾಮಾಜಿಕ ಸಮಸ್ಯೆಗಳತ್ತ ವಿಶಿಷ್ಟವಾಗಿ ಎಳೆದು ತಂದಿದೆ. ಇಡಿಯ ಭರತಖಂಡಕ್ಕೆ ಅನ್ವಯಿಸುವ ಸಾಮಾಜಿಕ ಲೋಪದೋಷಗಳಲ್ಲಿ ಅನೇಕ ಸರ್ವಸಾಮಾನ್ಯವಾದವುಗಳಿಗೆ ಕರ್ನಾಟಕವೂ ಪಾಲುಗೊಳ್ಳುವದು. ಆದರೆ ಅದಕ್ಕೆ ಹೆಚ್ಚಾಗಿ ಕನ್ನಡನಾಡಿಗೆ ವಿಶಿಷ್ಟವಾದ ಮತ್ತು ಪ್ರತ್ಯೇಕವಾಗಿ ಅದಕ್ಕಷ್ಟೇ ಅನ್ವಯಿಸುವ ಕಟ್ಟು ರೂಢಿ ನಿಯಮಗಳು ಇರಬಹುದಾಗಿದೆ. ಕನ್ನಡ ಸಮಾಜವು ಭಾರತದ ಇತರ ಸಮಾಜಗಳಂತೆ ಅನೇಕ ಜಾತಿ, ಮತ ಪಂಥಗಳಲ್ಲಿ ಹರಿದು ಹಂಚಿ ಹೋಗಿದೆ. ಪ್ರತಿಯೊಂದು ಜಾತಿಗೂ ತನ್ನವೇ ಆದ ಸಮಾಜಿಕ ಸಮಸ್ಯೆಗಳು ಬ್ರಾಹ್ಮಣರ ಸಮಸ್ಯೆಗಿಂತ ಭಿನ್ನವಾಗಿರಬಹುದು. ಒಕ್ಕಲಿಗರ ಸಾಮಾಜಿಕ ಸಮಸ್ಯೆಗಳು ದೇವಾಂಗದವರಿಗಿಂತ ಭಿನ್ನವಾಗಿರಬಹುದು. ಲಮಾಣಿ ಜನರ ಸಮಸ್ಯೆಗಳು ಒಡ್ಡರು, ಕುಂಚಿ ಕೊರವರು ಮುಂತಾದವರಿಗಿಂತ ಬೇರೆಯಾಗಿರಬಹುದು. ಮೊನ್ನೆ ಮೊನ್ನೆ ರೆವ್ಹರೆಂಡ, ಪಿ. ಕೆ. ಟೆನೋ ಅವರು ಹುಬ್ಬಳ್ಳಿಯಲ್ಲಿ ರೋಮನ್ ಕೆಥೋಲಿಕ್ ಸಮಾಜವು ವರದಕ್ಷಿಣೆಯ ಪದ್ಧತಿಯನ್ನು ತೆಗೆದುಹಾಕಬೇಕೆಂಬ ಸಮಸ್ಯೆಯನ್ನೆತ್ತಿ ಹೇಳಿದರು. ಈ ಪದ್ಧತಿಯು ರೋಮನ್ ಕೆಥೋಲಿಕ್‌ರಷ್ಟೇ ಏಕೆ, ಕರ್ನಾಟಕದ ಮುಂದುವರಿದ ಜಾತಿಯವರಲ್ಲಿ ಕೂಡ ಇನ್ನೂ ಇದೆ! ಹಿಂದೂ ಸಮಾಜವು ಸ್ತ್ರೀಶಿಶುಹತ್ಯೆಗಳ ದಾರುಣ ಚಿತ್ರವನ್ನು ಈಗಾಗಲೇ ಮರೆತುಬಿಟ್ಟಿದೆ. ಇಷ್ಟು ಹಾಗೂ ಇಂಥ ಲೋಪದೋಷಗಳು ಪ್ರತಿಯೊಂದು ಸಮಾಜದಲ್ಲಿ ಹಬ್ಬಿವೆ. ಆದರೆ ದುರ್ದೈವದ ಮಾತೆಂದರೆ ಸಾಮಾಜಿಕ ವಿವೇಕ ಜಾಗೃತಿ ಕಾಲಗರ್ಭದೊಳಕ್ಕಿಳಿಯಿಟ್ಟಿದೆ! ಮತ್ತು ಸಾಮಾಜಿಕ ಪ್ರಯತ್ನವು ಸರ್ವಸಾಮಾನ್ಯವಾಗಿ ಸತ್ತು ಹೋಗಿದೆ.

ಈ ವಿಷಯವಾಗಿ ನಾವು ಗಂಭೀರವಾಗಿ ಆಲೋಚಿಸುವದಾದರೆ ಮತ್ತು ಇಂದಿನ ಸಾಮಾಜಿಕ ಲೋಪದೋಷಗಳನ್ನು ಕಡಿದುಹಾಕಬೇಕೆಂದರೆ, ನಮ್ಮ ಮುತ್ತಜ್ಜರ ಕಾಲದಲ್ಲಿ ಇದ್ದವುಗಳಿಗಿಂತ ಈಗ ಹೆಚ್ಚಾಗಿರುವದನ್ನು ಕಾಣುತ್ತೇವೆ. ಉದಾಹರಣೆಗೆ ಲಾಭಾಂಶವನ್ನು ಪಡೆಯುವದು ತಪ್ಪು ಸಂತೆ, ಎಲ್ಲಾ ಕಡೆಗೂ ಅವರಿಸಿದ ಲಂಚಗೋರತನ, ನಮ್ಮ ಪ್ರತಿನಿತ್ಯದ ಜೀವನದಲ್ಲಿ ಕಂಡುಬರುವ ಎಲ್ಲಾ ತರಹದ ಸಾಮಾಜಿಕ ನಿರ್ಬಂಧಗಳೂ ಮೂಢವಾದದ್ದೂ, ಪಾಂಡಿತ್ಯ ಪ್ರಪಂಚದಲ್ಲಿ ಅವ್ಯವಸ್ಥೆ, ಕಾಯಿದೆ ಸುವ್ಯವಸ್ಥೆಯ ಬಗೆಗೆ ಅನಾದರ, ಹಿರಿಯದವರ ಕರ್ತವ್ಯಲೋಪಗಳು ಇತ್ಯಾದಿ ಇತ್ಯಾದಿ. ಇವೆಲ್ಲ ಇಲ್ಲಿಯವರೆಗೆ ಉಳಿದು ಬರುವ ಸಾಮಾಜಿಕ ಲೋಪದೋಷಗಳ ಪಟ್ಟಿಗೆ ಹೊಸದಾಗಿ ಸೇರಿಕೊಂಡಿವೆ. ಅಂದ ಬಳಿಕ ಇಂಥ ಸಾಮಾಜಿಕ ಲೋಪದೋಷಗಳು ನಮ್ಮ ಜೀವನವನ್ನು ಕೊರೆಯುತ್ತಿರುವಾಗ, ಸಮಾಜವು ಪ್ರಗತಿ ಹೊಂದುವದು ಹೇಗೆ ಸಾಧ್ಯ?

ಇದಕ್ಕೆ ಉಪಾಯವೇ ಇಲ್ಲವೇ? ಇದೆ! ಸಾರ್ವಜನಿಕ ಮುಖಂಡರು ಈ ಲೋಪದೋಷಗಳನ್ನು ನಿವಾರಿಸಲು ಕಂಕಣಬದ್ಧರಾಗಿ, ತಮ್ಮ ಶಕ್ತಿ ಸರ್ವಸ್ವವನ್ನೆಲ್ಲ ಹಾಕಿ ಸಂಘಟಿತ ಪ್ರಯತ್ನ ಮಾಡಬೇಕು. ಇದರಲ್ಲಿ ಕೆಲವು ಸಾಮಾನ್ಯವಾಗಿ ಎಲ್ಲಾ ಜಾತಿ–ಮತ–ಪಂಥದವರಿಗೆ ಮಾತ್ರ ಅನ್ವಯಿಸುವಂಥವು. ಈ ವಿಶಿಷ್ಟ ಜಾತಿಯವರು ತಮ್ಮತಮ್ಮ ಸ್ವಂತ ಸಾಮಾಜಿಕ ಲೋಪದೋಷಗಳನ್ನು ನಿರ್ಮೂಲಿಸಲು ಮುಂದಾಗಬೇಕು. ಮೊದಲಿನ ಜಾತೀಯ ಸಂಘಟನೆಗಳು ಸತ್ತುಹೋದಂತೆ ಕಾಣಿಸುತ್ತಿದೆ. ಅನೇಕ ಜಾತಿಗಳು ತಮ್ಮ ಸಾಮಾಜಿಕ ಸಂಘಟನೆಯನ್ನು ಮಾಡಿಕೊಂಡಿದ್ದವು. ಅವೆಲ್ಲ ಈಗ ಸತ್ತುಹೋಗಿವೆ. ಅವೆಲ್ಲ ಈಗ ತಪ್ಪು ಕಲ್ಪನೆಗೆ ಎಡೆಮಾಡಬಹುದೆಂಬ ಅಂಜಿಕೆಯಿಂದ ಹೋರಾಡಲು ಧೈರ್ಯ ಮಾಡದಾಗಿವೆ. ಜಾತ್ಯತೀತ ರಾಷ್ಟ್ರದ ಕಲ್ಪನೆಯಿಂದು ತಪ್ಪು ತಪ್ಪಾಗಿ ಅರ್ಥ ಮಾಡಲಾಗುತ್ತಿದೆ. ಹಾಗೂ ತಪ್ಪಾಗಿ ಗ್ರಹಿಸಲಾಗುತ್ತಿದೆ. ಪ್ರತಿಯೊಂದು ಸಮಾಜವೂ, ತನ್ನದೇ ಆದ ಸಮಾಜ ಸುಧಾರಣಾ ಉದ್ದೇಶವುಳ್ಳ ಸಂಘಟನೆಯನ್ನು ಏಕೆ ನಿರ್ಮಿಸಿಕೊಳ್ಳಬಾರದು? ಎಂಬುದಕ್ಕೆ ಕಾರಣ ಕೊಡಲಾಗುತ್ತಿಲ್ಲ.

ಇಂಥ ರಚನಾತ್ಮಕ ಕಾರ್ಯಕ್ಕೆ ಕೇವಲ ಸ್ವಾರ್ಥಸಾಧನಾ ರಾಜಕಾರಣಿಯು ಮಾತ್ರ ಇದಕ್ಕೆ ಕೊಡಕಾಗಿ ನಿಂತಿದ್ದಾನೆ. ಆದರೆ ಅವನಿದ್ದರೂ ಮಾಡುವ ಪ್ರಯತ್ನವನ್ನು ಮುಂದುವರಿಸಲೇಬೇಕು.

ಮೇಲೆ ನಮೂದಿಸಿದ ಸಾಮಾಜಿಕ ಲೋಪದೋಷಗಳ ಹೊರತಾಗಿ ಇತ್ತೀಚಿಗಿನ ಕಲ್ಪನೆಗಳಾದ ಸಾಮಾಜಿಕ ಸುಸ್ಥಿತಿ ಮತ್ತು ಸದ್ಭಾವನಾ ರಾಷ್ಟ್ರ ಎಂಬ ಮಾತಿನತ್ತ ಸಾರ್ವಜನಿಕರ ಲಕ್ಷ್ಯವು ಇತರ ಇಂಥ ಸಾಮಾಜಿಕ ಸಮಸ್ಯೆಗಳ ಜೊತೆಗೆ ಹರಿಬಿದ್ದಿವೆ. ಅವುಗಳ ಬಗೆಗೆ ನಾನಿಲ್ಲಿ ಸ್ಥೂಲವಾಗಿ ಹೇಳಬಯಸುವೆ. ಹಿಂದೂಸ್ತಾನವಿಂದು ಔದ್ಯಮಿಕ (ಇಂಡಸ್ಟ್ರಿಯಲಿಸ್ಟ್) ರಾಷ್ಟ್ರವಾಗಿ ದ್ರುತಗತಿಯಿಂದ ಪರಿವರ್ತನೆ ಹೊಂದುತ್ತಿರುವಾಗ, ಔದ್ಯೋಗಿಕ ಕಾರ್ಮಿಕರು ಹಾಗೂ ಕೂಲಿಕಾರರಲ್ಲಿ ರೂಢವಾಗುತ್ತಿರುವ ಲೋಪದೋಷಗಳ ಬಗೆಗೆ ಲಕ್ಷ್ಯ ಹಾಕಬೇಕಾಗಿದೆ. ಅವರಿಗೆ ಬೇಕಾಗುವ ಮನೆಮಾರುಗಳ ಬಗೆಗೆ ಅವ್ಯವಸ್ಥೆ, ಸಣ್ಣ ಹುಡುಗರನ್ನು ದುಡಿಸಿಕೊಳ್ಳುವುದು, ಕೂಲಿ ಕುಂಟುಂಬದ ಸಮಸ್ಯೆಗಳಿಂದಾಗಿ ಇನ್ನು ಕೆಲವು ಸಾಮಾಜಿಕ ಸಮಸ್ಯೆಗಳನ್ನು ಆಧುನಿಕ ಸಮಾಜವು ಬಿಡಿಸಲೇಬೇಕಾಗಿ ಬಂದಿದೆ. ಹಿಂದೂಸ್ಥಾನವು ಸದ್ಭಾವನಾಯುತ ರಾಷ್ಟ್ರವಾಗಲಿಕ್ಕೆ ಪ್ರಯತ್ನಪಡುತ್ತಿದೆ; ಹಾಗೂ ಅದು ತನ್ನ ಘಟನೆಯನ್ನು ಕೂಡ ಈ ಹಾದಿಯ ಮೇಲೆಯೇ ರಚಿಸಿಕೊಂಡಿದೆ.

ಅಂದ ಬಳಿಕ, ಇನ್ನು ಮುಂದೆ ಈ ಸಾಮಾಜಿಕ ಲೋಪದೋಷಗಳನ್ನು ಹೊಡೆದು ಹಾಕಲು ಶಾಸ್ತ್ರೀಯವಾಗಿ ಪ್ರಯತ್ನಿಸಬೇಕಾಗಿ ಬರುವದು. ಸುದೈವದಿಂದಲೋ ಅಥವ ದುರ್ದೈವದಿಂದಲೋ ಕರ್ನಾಟಕವು ಇನ್ನೂ ಅತ್ಯಂತ ಉಚ್ಚ ದರ್ಜೆಯ ಪ್ರಮಾಣದಲ್ಲಿ ಔದ್ಯೋಗಿಕ ಪ್ರಾಂತವಾಗಿಲ್ಲ. ಆದ್ದರಿಂದ ಅನೇಕ ಇಂಥ ತೊಡಕು ತೊಂದರೆಗಳಿಂದ ಮುಕ್ತವಾಗಿದೆ. ಆದರೆ ಅದೊಂದು ಪ್ರತ್ಯೇಕ ಪ್ರಾಂತವಾಗಿ ಔದ್ಯೋಗಿಕತೆಯೆಡೆಗೆ ಬಹು ದೊಡ್ಡ ಪ್ರಮಾಣದಲ್ಲಿ ಮುಂದುವರಿದಾಗ ಅನೇಕ ಹೊಸ ಹೊಸ ಸಮಸ್ಯೆಗಳಿಗೆ ಎಡೆಕೊಡುತ್ತದೆ. ಅವೆಲ್ಲ ಸಮಸ್ಯೆಗಳನ್ನಿಲ್ಲಿ ವಿಚಾರಿಸುವದು ಅನಾವಶ್ಯಕ. ಹೇಗಿದ್ದರೂ ಒಕ್ಕಲುತನವೆದುರೆ ಜೀವಿಸುವ ಜನಸಂಖ್ಯೆಯನ್ನು ಕಡೆಗಣಿಸಲಿಕ್ಕಾಗದು. ಮತ್ತು ಅವರ ಪ್ರಗತಿಯನ್ನು ನುಂಗಿ ನೀರು ಕುಡಿಯುವ ಸಾಮಾಜಿಕ ಸಮಸ್ಯೆಗಳನ್ನು ಬಿಡಿಸಬೇಕು. ಈ ಜನಸಮ್ಮೂಹವೆಲ್ಲ ಪ್ರಗಾಢ ಅಜ್ಞಾನ ಮತ್ತು ಮೂಢನಂಬಿಕೆಯಲ್ಲಿ ಮುಳುಗಿ ಬಿಟ್ಟಿದೆ. ಅವರ ಬಡತನ, ಸಾಲಶೂಲ, ನಿರಕ್ಷರ ಕುಕ್ಷಿತೆ, ಕೌಟುಂಬಿಕ ಯೋಜನೆಯ ಅಭಾವ, ಆರೋಗ್ಯ ಮತ್ತು ಕ್ಷೇಮಪಾಲನೆಯ ಬಗೆಗೆ ಅನಾಸ್ಥೆಗಳೇ ಮುಂತಾದವು ಅವರ ಭಯಂಕರ ರೋಗರುಜಿನಗಳಾಗಿವೆ. ಈ ಜನಜಂಗುಳಿಯ ಸಾಮಾಜಿಕ ಪರಿಸ್ಥಿತಿಯನ್ನು ಸುಧಾರಿಸುವದಕ್ಕಾಗಿ ಈಗಾಗಲೇ ಹಲವು ಶಾಸನಗಳನ್ನು ಮಾಡಲಾಗಿದೆ. ಆದರವು, ಈ ಸಮಸ್ಯೆಗಳ ತುದಿಯನ್ನು ಮಾತ್ರ ಮುಟ್ಟುತ್ತದೆ. ಸರ್ಕಾರ ಮತ್ತು ಅಧಿಕಾರೇತರ ಕಾರ್ಯ ಮತ್ತು ಪ್ರಯತ್ನ ನಮ್ಮೀ ಗ್ರಾಮೀಣ ಜನಸಂಖ್ಯೆಯ ಸಾಮಾಜಿಕ ಸಮಸ್ಯೆಗಳನ್ನು ಬಿಡಿಸಲಿಕ್ಕೆ ಅತ್ಯವಶ್ಯವಾಗಿ ಬೇಕಾಗಿವೆ. ಏರುತ್ತಿರುವ ಜನಸಂಖ್ಯಾ ಪ್ರಮಾಣದ ಮೇಲೆ ಹೇಗೆ ಹತೋಟಿ ಇಡುವದು? ಹುಟ್ಟುವ ಜನಸಂಖ್ಯೆಯನ್ನು ಕಡಿಮೆ ಮಾಡದೇ ಮೊದಲನೆಯ ಬಿಡಿಸಲಾರದ ಒಗಟಾಗಿದೆ. ಅನಕ್ಷರತೆಯನ್ನು ಹೋಗಲಾಡಿಸುವುದು ಇನ್ನೊಂದು ಅಂಥ ಬಹು ದೊಡ್ಡ ಸಮಸ್ಯೆಯಾಗಿದೆ. ಇವೆಲ್ಲ ಸಮಸ್ಯೆಗಳು ರಾಷ್ಟ್ರದ ಪ್ರತಿಯೊಂದು ಭಾಗಕ್ಕೆ ಅನ್ವಯಿಸುವ ಸಾಮಾನ್ಯ ಸಮಸ್ಯೆಗಳೇ ಆಗಿವೆ. ಆದ್ದರಿಂದ ಅವನ್ನು ಅಖಿಲ ಭಾರತ ತಳಹದಿಯ ಮೇಲೆ ವಿಚಾರಿಸಬೇಕು. ಇವೆಲ್ಲ ಪ್ರಶ್ನೆಗಳನ್ನು ಚರ್ಚಿಸಿ ಹೇಗೆ ಬಿಡಿಸಬೇಕೆಂಬುದನ್ನು ಇಂಥ ಲೇಖನದಲ್ಲಿ ಬಿಡಿಸಿ ಬರೆಯುವುದು ಅಶಕ್ಯಕೋಟಿಯೊಳಗಿನ ಮಾತು. ಇಲ್ಲಿಯವರೆಗೆ ನಾನು ವಿವೇಚಿಸಿದ ವಿಷಯವೆಂದರೆ ನಮ್ಮ ಸಾಮಾಜಿಕ ಸಮಸ್ಯೆಗಳ ರೀತಿನೀತಿಗಳನ್ನು ಕುರಿತು ಎಲ್ಲರ ಲಕ್ಷ್ಯವನ್ನು ಸೆಳೆಯುವದು ಹಾಗೂ ಈ ದಿಶೆಯಲ್ಲಿ ಸುಧಾರಣೆಯ ಪ್ರಯತ್ನವನ್ನೇತಕ್ಕೆ ಮಾಡಬೇಕು ಎಂಬ ನಿರ್ದೇಶವನ್ನು ಮಾಡುವದಾಗಿದೆ.

„ಕನ್ನಡಿಗ„

ವಾರ್ತೆ.

ಮುಂಬಯಿ ಸರಕಾರದ ಪಾನಪ್ರತಿಬಂಧಕ ಘೋಷಣೆಗೆ ಸಂಬಂಧಿಸಿದ ಗೊತ್ತುವಳಿಯೊಂದನ್ನು ಚರ್ಚಿಸಲು ಹಿಂದೀ ಕಾರ್ಮಿಕ ಸಂಘದ ವಿಶೇಷ ಸಾಧಾರಣ ಸಭೆ ಸೇರಲಿದೆ. ರಾಜ್ಯದ ಆರ್ಥಿಕ ಪರಿಸ್ಥಿತಿಯು ಸುಧಾರಿಸುವವರೆಗೆ ತಾತ್ಕಾಲಿಕವಾಗಿ ಮುಂಬಯಿ ಸರಕಾರವು ಪಾನಪ್ರತಿಬಂಧ ಕಾರ್ಯಕ್ರಮವನ್ನು ಹಿಂತೆಗೆದುಕೊಳ್ಳಬೇಕೆಂಬ ಈ ಗೊತ್ತುವಳಿಯಲ್ಲಿ ಸರಕಾರಕ್ಕೆ ಬಿನ್ನವಿಸಿಕೊಳ್ಳಲಾಗಿದೆ.

ಅಮೇರಿಕೆಯ ಒಂದು ಭಾರಿ ಜಿಲ್ಲೆಯ ಡಾಲ್ಡರು ಬ್ಲಿಟ್ಜ್ ಪತ್ರಿಕೆಯ ಶ್ರೀ. ಕರಂಜಿಯಾ ಇವರಿಗೆ ಬರೆದರೆಂದ ಹೇಳಲಾಗುತ್ತಿರುವ ಪತ್ರವು ಕರೆಂಟ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಆ ಬಗ್ಗೆ ಖೊಟ್ಟಿ ಕಾಗದ ಪತ್ರಗಳನ್ನು ಸಿದ್ಧಪಡಿಸಿದ ಆರೋಪದ ಮೇಲೆ ಬ್ಲಿಟ್ಜ್ ಪತ್ರಿಕೆಯ ಸಂಪಾದಕ ಶ್ರೀ. ಆರ್. ಕೆ. ಕರಂಜಿಯಾ ಮತ್ತು ಕರೆಂಟ್ ಪತ್ರಿಕೆಯ ಸಂಪಾದಕ ಶ್ರೀ. ಡಿ. ಎಫ್. ಕರಾಕಾ ಇವರನ್ನು ಬಂಧಿಸಿ ಅನುಕ್ರಮವಾಗಿ ೫೦ ಸಾವಿರ ಮತ್ತು ೧೦ ಸಾವಿರ ರೂ ಜಾಮೀನ ಮೇಲೆ ಬಿಡುಗಡೆ ಮಾಡಿದ್ದಾರೆ.

ಬಿಹಾರದಲ್ಲಿ ಭತ್ತದ ಬೆಳೆಯನ್ನು ರೋಗರುಜೆಗಳಿಂದ ರಕ್ಷಿಸಲು ವಿಮಾನದಿಂದ ಗಂಧಕದ ಪುಡಿಯನ್ನು ಸಿಂಪಡಿಸುವ ಕಾರ್ಯ ಪ್ರಾರಂಭವಾಗಿದೆ. ಬಿಹಾರ ರಾಜ್ಯದಲ್ಲಿ ಈ ಬಗೆಯ ಕಾರ್ಯ ಪ್ರಾರಂಭವಾದುದು ಇದೇ ಮೊದಲನೆಯದು ಕೇಂದ್ರ ಸರಕಾರವು ಕೊಟ್ಟ ಅಮೇರಿಕಾ ತಂಡವು ಈ ಪ್ರಯೋಗವನ್ನು ಅಲ್ಲಲ್ಲಿ ನಡೆಸಿದೆ.